START

KARNATAKA
STATE
ARCHIVES

ARS 3 APP 2013

ಬಸನ ಸಮಿತಿಯ ಪತ್ರದ ಸಂಖ್ಯೆ: ಬಸ/ಗ್ರಂಥಾಲಯ/2012-13 ದಿನಾಂಕ 18-2-2013

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ವಿವರ

ದಿನಾಂಕ 2.1.1911 ರಿಂದ 26.12.1932 ರ ವರೆಗೆ ಒಟ್ಟು 17 ಸಂಪುಟನ್ನು.

(Retakes of Mysore Star weekly News paper)

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಪಟ್ಟಿ

ಕ್ರಮ ಸಂ.	ವರ್ಷ	ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ದಿನಾಂಕ (ದಿಂದ ವರೆಗೆ)	ಪರಿಗ್ರಹಣ ಸಂಖ್ಯೆ
1	1911	2.1.1911 – 25.12.1911	N11.24
2	1912	1.1.1912 – 23.12.1912	N12.25
3	1914	5.1.1914 – 27.12.1914	N14.27
4	1915	3.1.1915 – 15.08.1915	N15.28
5	1916	2.1.1916 – 31.12.1916	N16.29
6	1917	7.1.1917 – 30.12.1917	N17.30
7	1918	6.1.1918 – 29.12.1918	N18.31
8	1919	9.2.1919 – 28.12.1919	N19.32
9	1920	4.1.1920 – 26.12.1920	N20.33
10	1921	9.1.1921 – 25.12.1921	N21.34
11	1922	1.1.1922 – 31.12.1922	N22.35
12	1923	14.1.1923 – 23.12.1923	N23.36
13	1923	21.1.1923 – 30.12.1923	N23.36
14	1924	6.1.1924 – 28.12.1924	N24.37
15	1925	4.1.1925 – 26.12.1925	N25.38
16	1926	2.1.1926 – 25.12.1926	N26.39
17	1929	5.1.1929 – 28.12.1929	N29.42
18	1932	4.1.1931 – 26.12.1932	N32.45

ಮೈಸೂರ್ ಸ್ಟಾರ್ ವಾರ ಪತ್ರಿಕೆಯು
ದಿನಾಂಕ 2-01-1926 ರಿಂದ
ಪ್ರಾರಂಭವಿದೆ

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ ನಕ್ಷತ್ರ ಮೋಹರಾಜೀಯಾತ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋನಾಭೀಷ್ಟದಶೀಲ ಸಾಕಲಿಕ ಸಾಧ್ಗುಣಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಶ್ರೀಮಂಬೆಳ್ಳಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೧೦-೦]

[ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೮ ನೆಯ ಇಸವಿ ಜನವರಿ ತಾರೀಖು ೭ ನೆಯ ಶನಿವಾರ. [ಸಂಚಿಕೆ ೧

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ

ವ್ಹಿ. ಎಸ್. ಕಾಪಸೆ, ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರ ಪಾಕ.

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧೀಃಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ, ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೆಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೆಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಹಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಸ್ರಾವ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜದ್ದಿನ ಅಲ್ಲ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ :—ಶತಪುಷ್ಪ ತಾಲಿಮಕಂದ, ಜವಾಕಂದ, ತಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ಬ್ರಿಸಾಂತರಜಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು ಹತ್ತಿಕಾಸ್ತ, ವಾಕೇರಿಭಾತಾ, ಗೋಖರು, ಅಡವೀ ಬೆಂಡಿ ಬೀಜ, ಅನ್ವತಸತ್ವ, ಇಸಬಗೋಲೊ, ಬಾನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾ ಮಳುಕಿ, ವಂಶಲೋಚನ, ವರಧಾರ, ಕೇಸರಿ, ಯಾಲಕ್ಕಿ ರುಲ್ಲ ಸಕ್ಕರಿ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕವಿದ್ದಿಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿಯ ೧ ಡಬ್ಬಿಯ ಕಿಮ್ಮತ್ತು ೫। ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪। ರೂ. ೬ ಡಬ್ಬಿಗಳನ್ನು ಕರಿಸಿಕೊಳ್ಳುವವರಿಗೆ ಒನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹಿಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ಬ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ಕುಲಿನ, ೪ ಲಖಮಸಿ ಗೇಲಾಭಾಯಿ ಹಿನ್ನರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತಿಗೇರಿ, ೭ ರಘುನಾಥಜಯರಾಮ ಪೋ. ಸೊಲ್ಲಾಪೂರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗುವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—39] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇನ್ಫ್ಲುಯೆನ್ಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

47

ಗೋಷಾಸ್ತ್ರೀಯರಿಗೂ ಕುಳಿತುಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪೌಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶ್ರೀ ಕ್ಷಯನಾಮಸಂವತ್ಸರದ ಅತ್ಯುತ್ತಮ

ಪಂಚಾಂಗ.

ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವದಿವಸ ಮಳೆಯು ಪ್ರವೇಶಿಸುವದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ, ಸ್ತ್ರೀಪುನ್ನಪುಂಸಕ, ರವಿಚಂದ್ರಯೋಗ, ಪತಿತಸ್ಥಾನಗಳನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ತಿಳುಹಿಸಲು ಇಲ್ಲಿ ಸಾಧ್ಯವಿಲ್ಲ. ಈ ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಗಿಂತಲೂ ಈವರ್ಷ ಬೆಲೆಯು ಬಹಳೇ ಕಡಿಮೆಮಾಡಿರುತ್ತೇವೆ. ಹಿಂದಣವರ್ಷಕ್ಕಿಂತಲೂ ಹೆಚ್ಚಿಗೆ ಪ್ರತಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. ಪಂಚಾಂಗ ಕ್ರಯದವಿವರ ಪ್ರತಿ ನೂರಕ್ಕೆ (೨೫) ರಿಂದ ೧೦೦ ವರಿಗೆ ರೂ. ೧೩-೦-೦ ರೂಪಾಯಿಗಳು. ೨೦೦ ರಿಂದ ೫೦೦ ವರಿಗೆ ರೂ. ೧೨-೦-೦. ೬೦೦ ರಿಂದ ೧೦೦೦ ವರಿಗೆ ರೂ. ೧೧-೦-೦ (೫) ಪಂಚಾಂಗಗಳು ತರಿಸಿಕೊಳ್ಳುವವರಿಗೆ ರೂ. ೧-೦-೦ ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ದೊರೆಯಲಿಕ್ಕಿಲ್ಲ. ಇಚ್ಛೆಯುಳ್ಳವರು ಬೇಗನೆ ಆರ್ಡರ್‌ಕೊಡಿರಿ. ಚಿಲ್ಲರೆ ಒಂದಕ್ಕೆ ನಾಲ್ಕಾಣೆ ಸ್ಟ್ಯಾಂಪನ್ನು ಕಳಿಸಿದರೆ ಕಳಿಸಿಕೊಡುತ್ತೇವೆ.

ಪಂಚಾಂಗಕರ್ತ—ಬ್ರ॥ಶ್ರೀ॥ ಸಿದ್ಧಾಂತಿ ಅಯ್ಯಕೃಷ್ಣಶಾಸ್ತ್ರಿಗಳು,
[illegible]

ಪಂಚಾಂಗಗಳು ದೊರೆಯುವ ಠಿಕಾಣಿ—
ರಸ್ತಾಪೂರು, ಗಿರ್ನಿ ಚೆನ್ನಬಸವಪ್ಪ ಅಂಡ್ ಬ್ರದರ್ಸ್.
[13—[illegible]] [illegible]

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ಗಳಿಗೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50—13] ಪೋ. ಬಾ. ೩೧೨, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯುಕ್ತಾನ್ವೇಷಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ಇರುವ ಬಾದ ಎಂಬ ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೇಳಿರುವ ಅಷ್ಟ ಶ್ಲೋಕ ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡೆಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥವೊಂದಕ್ಕೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಅಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
21 [illegible], ಮೈಸೂರು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷದ್ವಸತ್ಕೃತಾ ನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಶೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾಧ್ವುತ್ಕಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೧೦-೦]

[ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ಜನವರಿ ತಾರೀಖು ೨ ನೆಯ ಶನಿವಾರ. [ಸಂಚಿಕೆ ೧

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮಂ.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರ ಪಾಕ.

ಅಲ್ಪ ವಯಕ್ಕಾಗಿ ಕ್ಷೀಣತೆಯನ್ನು ಕಾಯ್ದು ಕೊಳ್ಳಬೇಡಿರಿ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ, ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಕಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ ಶಾಲಿಮಕಂದ, ಜಪಾಕಂದ, ತಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ಬ್ರಾಹ್ಮಾಂತರಜಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು ಹತ್ತಿಕಾಷ್ಠ, ಪಾಕೇರಿಭಾತಾ, ಗೋಖುರು, ಅಡವೀ ಬೆಂಡಿ ಬೀಜ, ಅಶ್ವತಸತ್ವ, ಇಸಬಗೋಲ, ಬನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರ, ಕೇಸರಿ, ಯಾಲಕ್ಕಿರುಲ್ಲಸಕ್ಕರಿ, ಈ ಜಿನಸುಗಳಲ್ಲಿ ದಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕವಿದ್ದ ಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒನೇ ಡಬ್ಬಿ ಫುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟಿನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೇಲಾಭಾಯ ಹಿನ್ಸ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ರಘುನಾಜಯರಾಮ ಪೋ. ಕೊಲ್ಹಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗುವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—39] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ಗಳಿಗೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—13] ಪೋ. ಬಾ. ೫೧೬, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ [illegible] ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡೆಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
21 [illegible], ಮೈಸೂರು.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

47

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶ್ರೀ ಕ್ಷಯನಾಮಸಂವತ್ಸರದ ಅತ್ಯುತ್ತಮ

ಪಂಚಾಂಗ.

ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವದಿವಸ ಮಳೆಯು ಪ್ರವೇಶಿಸುವದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ, ಸ್ತ್ರೀಪುನ್ನಪುಂಸಕ, ರವಿಚಂದ್ರಯೋಗ, ಪತಿತಸ್ಥಾನಗಳನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ತಿಳಿಸಲು ಇಲ್ಲಿ ಸಾಧ್ಯವಿಲ್ಲ. ಈ ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಗಿಂತಲೂ ಈವರ್ಷ ಬೆಲೆಯು ಬಹಳೇ ಕಡಿಮೆಮಾಡಿರುತ್ತೇವೆ. ಹಿಂದಣವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. ಪಂಚಾಂಗ ಕ್ರಯದವಿವರ ಪ್ರತಿ ನೂರಕ್ಕೆ (೨೫) ರಿಂದ ೧೦೦ ವರಿಗೆ ರೂ. ೧೩-೦-೦ ರೂಪಾಯಿಗಳು. ೨೦೦ ರಿಂದ ೫೦೦ ವರಿಗೆ ರೂ. ೧೨-೦-೦. ೬೦೦ ರಿಂದ ೧೦೦೦ ವರಿಗೆ ರೂ. ೧೧-೦-೦ (೫) ಪಂಚಾಂಗಗಳು ತರಿಸಿಕೊಳ್ಳುವವರಿಗೆ ರೂ. ೧-೦-೦ ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ದೊರೆಯಲಿಕ್ಕಿಲ್ಲ. ಇಷ್ಟವುಳ್ಳವರು ಬೇಗನೆ ಆರ್ಡರ್ ಕೊಡಿರಿ. ಚಿಲ್ಲರೆ ಒಂದಕ್ಕೆ ನಾಲ್ಕಾಣೆ ಸ್ಟಾಂಪನ್ನು ಕಳಿಸಿದರೆ ಕಳಿಸಿಕೊಡುತ್ತೇವೆ.

ಪಂಚಾಂಗಕರ್ತ—ಬ್ರ||ಶ್ರೀ|| ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷಶಾಲಾ, [illegible]

ಪಂಚಾಂಗಗಳು ದೊರೆಯುವ ವಿಳಾಸ—
ರಸ್ತಾಪೂರು, ಗಿರ್ನಿಚನ್ನಬಸವಪ್ಪ ಅಂಡ್ ಬ್ರದರ್ಸ್,
[12—9]. [illegible]

ಮೈಸೂರುಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ 1926 ನೇ ಇಸವಿಯ ಜನವರಿ ಮಾಹೆಯಲ್ಲಿ ನಡೆಯುವ ಶ್ರೀರಾಮದೇವರ ರಥೋತ್ಸವಕಾಲದಲ್ಲಿ ದನಗಳುನಿಲ್ಲುವ ಹೋರಿಮಾಳ ವಗೈರೆ ಸ್ಥಳಗಳಲ್ಲಿ ಬೀಳುವ ಗೊಬ್ಬರವನ್ನು ಜಮಾಯಿಸಿಕೊಳ್ಳುವ ಹಕ್ಕನ್ನು 1926 ನೇ ಇಸವಿ ಜನವರಿ 6 ನೇ ತಾರೀಖು ಮಂಗಳವಾರ ದಿವ 12 ಘಂಟೆಗೆ ಎಡತೊರೆ ತಾಲ್ಲೂಕುಕಛೇರಿಯಲ್ಲಿ ಮೈಸೂರು ಸಬ್ ಡಿವಿಜನ್ ಸಾಹೇಬರವರ ರೂಬರೂಬ್ ಬಹಿರಂಗವಾಗಿ ಹರಾಜು ನಡೆಸಲ್ಪಡುತ್ತೆ. ಇಷ್ಟವುಳ್ಳವರು ಹರಾಜಿನ ಷರತ್ತುಗಳನ್ನು ಮತ್ತು ಹೆಚ್ಚು ವಿಷಯಗಳನ್ನು ಎಡತೊರೆ ತಾಲ್ಲೂಕು ಆಫೀಸಿನಲ್ಲಿ ತಿಳಿಯಬಹುದು.

ತಾ॥ 22-12-25.
ಮೈಸೂರು,
[2—2]

G. NARAYANA RAO,
For Deputy Commissioner,
Mysore District.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜನವರಿ ತಾ॥ ೨ ನೆಯ ಶನಿವಾರ.

A WEEK OF CONFERENCES.

The Christmas week in India is one productive of a large number of conferences. At Cawnpore the Indian National Congress, the Khilafat Conference, the Volunteers' Conference, the Spiritualist Conference, the Libraries' Conferences were held. At Amroati the All Indian non-Brahmin Congress, the Anti-untouchability and the Social Conferences were held. At Madras the Theosophical Society held its Jubilee Convention to celebrate the 50th Anniversary of of the Society was held. At Aligarh the All India Muslin Educational Conference was held. The National Liberals met at Calcutta. This is by no means an exhaustive list. To attempt a review of the work of these various conferences is impossible here. But we would just note the tendencies and their bearing on the future of India. One thing is certain and common to all the seemingly irreconcilable bodies and that is they are all desirous of a change–a change which would bring about self-Government to India and with it many other advantages. They are discontented with their present condition and want to move ahead. That is a tendency which is wholesome and productive of very beneficial results. But the efficacy of this general tendency is greatly hampered by the disunited and separatist movements of the different bodies working towards the one common goal of raising the motherland to her just and rightful position. While there are real differences in the methods employed by the various bodies to reach the goal they are not such as to make joint action impossible provided each made a genuine and sympathetic effort to understand and appreciate the view point of the other. Prejudice is one of the biggest stumbling blocks on the way for such a work and just now we do not see symptous of throwing away this prejudice against the other side. When there is a respectable party following a different method to reach the same goal and that party is gaining in strength it would be worth the while of others to pause and think and do a bit of self-examination. For instance when one section of Indian politicians are crying for immediate Swaraj to be secured unconditionally which the Indian National Congress is making at present, there is the All India Non-Brahmin Congress which is also for Swaraj but which demands certain safeguards for those communities which have been thrown to the background by a system of society which was meant to favour only a few. For our part, much as we regret friction and schism among those striving for the redemption of the motherland, we welcome whole heartedly this big movement of the Indian plebiscite, which has spread over practically all the South Indian provinces. The All Indian Social Congress and the All India Anti-untouchability Conference were held this time along with the All India Non-Brahmin Congress at Amroati and not along with the Indian National Congress as usual. In the Swaraj to come no people will tolerate the division of society as per Manu's classification, or recognise the relative grades of the people inhabiting this land. Would it not be better then for all folk to recognise these new and powerful forces and so adjust their modes of life as to help the fulfilment of this liberalising movement and the establishment of not merely a national but also a democratic government. The rapid progress of the so-called untouchables during the recent years must be another eye-opener to all. The attitude of the enlightened section of the Hindus such as those residing in Kalpati agraharams of Palghat against the Ezhavas and Aryasamaj converts of Ezhavas moving in the public roads of Kalpathi would bode no good to the country or to themselves. It would so much of a bad example to the less educated section of the Hindu Community. There is again the problem of Hindu Muslim unity. We notice with real regret the amount of suspicion that the one has against the other. We would commend to all alike the wise words of Mrs. Sarojini Naidu President of the Indian National Congress calling upon the people to practice the divine qualities of mutual forbearance and to learn to reverence the beauty of each other's creeds and the splendour of each other's civilization. It is somewhat of a pity that Sir Abdur Rahim, member of the Bengal Council should have made a rather severe and bitter speech at Aligarh, though with no sufficient provocation. Much could be achieved in this direction if provocative utterances on either side are altogether avoided. We have only noticed a few of the pressing problems before the land, and we in Mysore have a lesson to learn from every one of the forcing factors we are observing in British India. We hope that the year 1926 will be availed of by the people of Mysore to promote its uniform progress in all directions and that it will bring in greater happiness and prosperity to the State than ever before.

ಸ್ವದೇಶದ ವೃತ್ತಾಂತಗಳು.

ಕೆಲ ಅನಿವಾರ್ಯದಶೆಯಿಂದ ಸ್ಟಾರ್‌ಪತ್ರಿಕೆಯು ಸಕಾಲದಲ್ಲಿ ಹೊರಡಲಿಲ್ಲವಾಗಿ ಚಂದಾದಾರರ ಕ್ಷಮೆಯನ್ನು ಕೋರುತ್ತೇವೆ.

ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರು ಸಂಪೂರ್ಣಗುಣವನ್ನು ಹೊಂದಿ ಹವಾಬದಲಾವಣೆಗಾಗಿ ಪುದಚೇರಿಗೆ ತಾ॥ 4 ರಲ್ಲಿ ಪ್ರಯಾಣಮಾಡುವವರಾಗಿರುವರು.

ಶ್ರೀಮನ್ ಮಹಾರಾಜರವರು ಮತ್ತು ಮಹಾಮಾತೃಶ್ರೀ ವಾಣಿವಿಲಾಸದವರು ಬೊಂಬಾಯಿನಲ್ಲಿ ಇನ್ನೂ ಕೆಲದಿನಗಳವರೆಗಿದ್ದು ಆನಂತರ ಕಾಶೀಕ್ಷೇತ್ರಕ್ಕೆ ಚಿತ್ತೈಸುವವರಾಗಿರುವರೆಂದು ತಿಳಿಯಬರುತ್ತದೆ.

ಚಕ್ರವರ್ತಿಯವರಿಂದ ಭಾರತೀಯರಿಗೆ ದಯೆಪಾಲಿಸಲ್ಪಟ್ಟಿರುವ ನೂತನವರ್ಷದ ಪ್ರಶಸ್ತಿಗಳಲ್ಲಿ ನಮ್ಮ ಸಂಸ್ಥಾನದ ರೈಲ್ವೆಗಳ ಟ್ರಾಫಿಕ್‌ಮ್ಯಾನೇಜರವರಾದ ಮಿ॥ ಅಬ್ದುಲ್ ಅಜೀಜ್ ಖಾನ್‌ರವರಿಗೆ "ಖಾನ್ ಬಹದ್ದೂರ್" ಪ್ರಶಸ್ತಿಯು ಲಭ್ಯವಾದುದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ.

ರಾಜಧಾನಿಯಲ್ಲೂ, ಇತರಕಡೆಗಳಲ್ಲೂ ಆಗಾಗ್ಗೆ ಮೋಡವಾಡುತ್ತ ತುಂತುರುಹನಿ ಬೀಳುತ್ತಿರುವುದರಿಂದ ಜ್ಯೋಯಿಸರ ಭವಿಷ್ಯದಂತೆ ದೊಡ್ಡಮಳೆಯು ಬರಬಹುದೆಂದು ತೋರುತ್ತದೆ. ಹಾಗೆ ಮಳೆಬಂದಲ್ಲಿ ಅದರಿಂದ ಅವರೆ ಮತ್ತು ತೊಗರಿ ಫಸಲುಗಳಿಗೂ, ಇನ್ನೂ ಕುಯ್ಯದಿರುವ ಭತ್ತದಬೆಳೆಗೂ ಬಹಳ ನಷ್ಟವಾಗುತ್ತದಲ್ಲದೆ ಬೇರೆಯಾವ ಪ್ರಯೋಜನವೂ ಇಲ್ಲವು.

ಹುಣಸೂರು ತಾ॥ ಬೆಟ್ಟದಪುರದಲ್ಲಿ ಶ್ರೀಸಿಡಿಲುಮಲ್ಲಿಕಾರ್ಜುನಸ್ವಾಮಿಯ ರಥೋತ್ಸವವೂ, ತತ್ಸಂಬಂಧವಾಗಿ ದನಗಳ ಪ್ರದರ್ಶನವೂ ಇದೇ ಜನವರಿ ತಾ॥ 31 ರಲ್ಲಿ ನಡೆಯುವುದಾಗಿಯೂ, ಉತ್ತಮರಾಸುಗಳಿಗೆ ಬಹುಮಾನಗಳು ಕೊಡಲ್ಪಡುವುದಾಗಿಯೂ, ದನಕರುಗಳಿಗೆ ಮೇವೂ ನೀರೂ ಸಮೃದ್ಧವಾಗಿರುವುವಲ್ಲದೆ, ಬಂದ ಜನರ ಊಟಕ್ಕೇರ್ಪಡಿಸಿರುವುದಾಗಿಯೂ ಆ ಸ್ಥಳವಾಸಿಯು ತಿಳಿಸಿರುತ್ತಾರೆ.

ಮ॥ ಗಳಾದ ರಾಜಧಾನಿಯ ಜನರಲ್ ಮರ್ಚೆಂಟ್ಸ್ ಮತ್ತು ಕಮಿಷನ್ ಏಜಂಟರುಗಳಾದ ಸುಬ್ಬಣ್ಣ ಸಂಗಪ್ಪ ಇವರು, ರಾಜಧಾನಿಯ ಶ್ರೀಕೃಷ್ಣಾಪ್ರೆಸ್ಸಿನವರು ಮತ್ತು ನಂಜನಗೂಡಿನ ಜನರಲ್ ಮರ್ಚೆಂಟ್ಸ್ ಮತ್ತು ಸೀಮೆಯೆಣ್ಣೆಯ ಏಜಂಟರು ಆದ ಪಿ ಪಾಪಣ್ಣ ಅಂಡ್ ಸನ್ಸ್‌ರವರು ನೇತ್ರಾನಂದಕರವಾಗಿ ಮುದ್ರಣಮಾಡಿಸಿ ವಿಶ್ವಾಸಪೂರ್ವಕವಾಗಿ ಕಳುಹಿಸಿಕೊಟ್ಟಿರುವ 1926 ನೇ ಇಸವಿಯ ಕ್ಯಾಲಂಡರುಗಳನ್ನು ನಾವು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಆಯುರ್ವೇದಕಾಲೇಜಿನ ಸೂಪರಿಂಟೆಂಡೆಂಟರಾದ ಡಾಕ್ಟರ್ ಕೆ. ಕೃಷ್ಣಯ್ಯಂಗಾರರ ಉದ್ಯೋಗದವಧಿಯು ಕಳೆದ ಡಿಶಂಬರ್ ತಿಂಗಳಲ್ಲಿ ಮುಗಿದುದರಿಂದ ಇನ್ನೂ 6 ತಿಂಗಳಕಾಲ ಹೆಚ್ಚಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ. ಇವರು ಅಲ್ಲೋಪತಿ ಮತ್ತು ಹೋಮಿಯೋಪತಿ ಚಿಕಿತ್ಸೆಗಳಲ್ಲಿ ಹೆಸರ್ಪಡೆದಿರುವಂತೆಯೇ ಆಯುರ್ವೇದವೈದ್ಯಚಿಕಿತ್ಸೆಯಲ್ಲೂ ಒಳ್ಳೇ ಹೆಸರನ್ನು ಪಡೆದು ರೋಗಿಗಳಲ್ಲಿ ಬಲ್ಲಿದರೂ ಬಡವರೂ ಎಂಬ ತಾರತಮ್ಯವನ್ನಿಡದೆ ಸಮಸ್ತರನ್ನೂ ಕರುಣೆಯಿಂದ ನೋಡುತ್ತ ಅವರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿರುವುದರಿಂದ, ಅವರ ಉದ್ಯೋಗದವಧಿಯು 6 ತಿಂಗಳಿಗೆ ಬದಲು ಒಂದುವರ್ಷದ ಮಟ್ಟಿಗಾದರೂ ಹೆಚ್ಚಿಸಲ್ಪಟ್ಟಿದ್ದಲ್ಲಿ ಜನರಿಗೆ ಬಹಳ ಉಪಕಾರವಾಗುತ್ತಿದ್ದಿತು.

ಸೊಂಡೂರು ಮಹಾರಾಜರು ಹರಿಹರಕ್ಷೇತ್ರಕ್ಕೆ ದಯೆಮಾಡಿಸಿದ್ದು ಅಲ್ಲಿಂದ ದಾವಣಗೆರೆಗೆ ಬಂದಿದ್ದಾಗ್ಗೆ ಆ ಊರಿನ ಪ್ರಾಣಿದಯಾಜ್ಞಾನಪ್ರಸಾರಕಮಂಡಲಿಯವರು ರಾಜರ ದರ್ಶನವನ್ನು ತೆಗೆದುಕೊಂಡು ಗೋರಕ್ಷಣೆಯ ವಿಚಾರದಲ್ಲಿ ಅವರಭಿಪ್ರಾಯವೇನೆಂದು ಕೇಳಲು "ನಮ್ಮ ರಾಜ್ಯದಲ್ಲಿ ಗೋಹತ್ಯ ನಡೆಯುವುದೇ ಇಲ್ಲ. ಬೇರೆಭಾಗದಿಂದ ಯಾರಾದರು ಕಟುಗರು ಗೋವುಗಳನ್ನು ಕೊಲ್ಲಲಿಕ್ಕೆ ಬಂದರೆ ಅವರಿಗೆ ಶಿಕ್ಷೆಯನ್ನು ಮಾಡುತ್ತೇವೆ; ಅಲ್ಲದೆ ಬೇರೆ ರಾಜ್ಯದಿಂದ ಗೋವುಗಳನ್ನು ತೆಗೆದುಕೊಂಡು ಅಕಸ್ಮಾತ್ತಾಗಿ ನಮ್ಮರಾಜ್ಯದ ಸರಹದ್ದಿಗೆ ಬಂದರೆ ಗೋವುಗಳನ್ನು ಬಿಟ್ಟುಕೊಡದೆ ಅವರುಗಳಿಗೆ ಅವುಗಳ ಬೆಲೆಯನ್ನು ಕೊಟ್ಟು ತೆಗೆದುಕೊಳ್ಳುತ್ತೇವೆ" ಎಂದುತ್ತರವನ್ನು ಕೊಟ್ಟುದಾಗಿ ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ. ಈ ಸೊಂಡೂರು ಚಿಕ್ಕಸಂಸ್ಥಾನವಾದರೂ ಅದರ ಗೋರಕ್ಷಣಾಭಿಮಾನವು ಸ್ತುತ್ಯವೂ, ಅನುಕರಣೀಯವೂ ಆಗಿರುತ್ತದೆ.

೪೦ನೇ ರಾಷ್ಟ್ರೀಯಮಹಾಸಭೆ.

ಅಧ್ಯಕ್ಷೆಯರಾದ ಸರೋಜಿನೀದೇವಿಯವರ ಭಾಷಣ.

"ಮಿತ್ರರುಗಳಿರಾ ! ನೀವು ನನಗೆ ಮಾಡಿದ ಅನುಪಮ ಗೌರವದಿಂದ ನನಗುಂಟಾದ ಮನೋಭಾವವನ್ನು ವ್ಯಕ್ತಗೊಳಿಸಲು ತಕ್ಕ ಶಕ್ತಿಸೌಂದರ್ಯಯುಕ್ತವಾದ ವಾಗ್ಜಾಲವನ್ನು ಮಾನವಭಾಷಾಗಣಗಳೆಲ್ಲೆಲ್ಲಿ ಶೋಧಿಸಿದರೂ ನಾನು ಪಡೆಯಲಾರೆನು. ಭಾರತೀಯರಲ್ಲೂ, ವಿದೇಶೀಯರಲ್ಲೂ ಶ್ರೇಷ್ಠರಾದ ಹಲವರು ಈ 40 ವರ್ಷಗಳಿಂದಲೂ ಸಮರ್ಥತೆಯಿಂದ ವಹಿಸಿ ನಿರ್ವಹಿಸಿದ ಈ ಮಹೋನ್ನತ ಅಧ್ಯಕ್ಷಪದವಿಗೆ ಸಂಬಂಧಪಟ್ಟ ಭಾರವನ್ನೂ ಬಾಧ್ಯತೆಯನ್ನೂ ಈ ದಿವಸ ನೈಪುಣ್ಯವಿರಹಿತಗಳಾದ ನನ್ನ ಬಾಹುಗಳ ಮೇಲೆ ಇರಿಸಿರುವಿರಿ. ನೀವು ಮಾಡಲು ಶಕ್ಯವಾದ ಗೌರವದಲ್ಲೆಲ್ಲಾ ಮಹೋನ್ನತಗೌರವವನ್ನೇ ನನಗೆ ತೋರಿಸಿರುವಿರೆಂದು ನಾನು ಚೆನ್ನಾಗಿ ಗ್ರಹಿಸಿರುವೆನು. ಭಾರತಸ್ತ್ರೀಯರು ದೇಶೀಯ ಭೌತಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ಭಾಗಿಗಳಾಗಲು ಪುರುಷರ ಹಾಗೆ ಸಮಾನ ಬಾಧ್ಯತೆಯನ್ನು ಹೊಂದಿರುತ್ತಾರೆಂಬ ವಿಷಯವನ್ನು ಮನಃಪೂರ್ವಕವಾಗಿ ಅನುಮೋದಿಸಿರುತ್ತೀವೆಂದು ಸ್ಪಷ್ಟಪಡಿಸಲು ಭಾರತಸ್ತ್ರೀಯರಿಗೆ ಉದಾರವಾಗಿ ಗೌರವವನ್ನು ತೋರಿಸುವುದಕ್ಕಾಗಿಯೇ ನೀವು ನನ್ನನ್ನು ಈ ಅಧ್ಯಕ್ಷಪದವಿಗೆ ಆರಿಸಿರುವಿರಲ್ಲದೆ, ಸ್ವದೇಶದಲ್ಲೂ, ವಿದೇಶದಲ್ಲೂ ನಾನು ಮಾಡಿದ ಅಲ್ಪ ಸೇವೆಯ ಪ್ರತಿಫಲವಾಗಿ ನನ್ನನ್ನು ಆರಿಸಿಲ್ಲವೆಂದು ನಾನು ಚೆನ್ನಾಗಿ ಬಲ್ಲೆನು. ವಿಷಮಸಮಸ್ಯೆಯಿಂದಲೂ, ಪರಿವರ್ತನಾತ್ಮಕಫಲದಿಂದಲೂ ನಿಂತಿರುವ ಈ ಸಮಯದಲ್ಲಿ ನೀವು ನನ್ನನ್ನು ಭೃತ್ಯಾಗ್ರಣಿಯೆಂದು ಎಣಿಸಿಕೊಳ್ಳುವುದರಲ್ಲಿ ಹೊಸದಾಗಿ ನೀವು ಈಗ ಯಾವಪದ್ಧತಿಯನ್ನೂ ನಿರ್ಪಡಿಸಿಲ್ಲವು. ಭಾರತದೇಶದ ಚರಿತ್ರೆಯಲ್ಲಿ ಸುಖಕರಪ್ರಕರಣದಲ್ಲಿ ಭಾರತಸ್ತ್ರೀಯರು ಆಕ್ರಮಿಸಿದ್ದ ಸ್ಥಾನವನ್ನೇ ಪ್ರಾಕ್ತನಾಚಾರಾನುಗುಣವಾಗಿ ಈದಿವಸ ಪುನಃ ನೀವು ನನಗೆ ವಹಿಸಿರುವಿರಿ. ಭಾರತದೇಶದಲ್ಲಿ ಸ್ತ್ರೀಯರು ಪಚನಾಗ್ನಿಗೂ, ಹೋಮಾಗ್ನಿಗೂ, ಜ್ಯೋತಿರಗ್ನಿಗೂ ಪ್ರತಿಬಿಂಬರಕ್ಷಣಶೀಲರಾಗಿರುವರು. ನಮ್ಮ ದೇಶಚರಿತ್ರೆಯನ್ನೂ, ಪ್ರಾಕ್ತನೈತಿಹಾಸವನ್ನೂ, ಅನುಪಮವಿವೇಕ ಭಕ್ತಿತ್ಯಾಗಗಳಿಂದ ಪ್ರಕಾಶಿಸಿದ ಪತಿವ್ರತಾಶಿರೋಮಣಿಗಳ ಅಕಳಂಕಸತೀತ್ವವನ್ನೂ ವಿಶದೀಕರಿಸಲು ನಾನು ಕೇವಲ ಅನರ್ಹಳೆಂಬ ವಿಷಯವನ್ನು ವಿಶೇಷ ಸಂತಾಪದಿಂದ ಗ್ರಹಿಸಿರುವೆನಾದರೂ ಮಹಾರಣ್ಯದಲ್ಲಿ ಸಂಚರಿಸುವ ಸಮಯದಲ್ಲಿ ಶ್ರೀ ಸೀತಾಮಹಾದೇವಿಯು ಅತ್ಯಧಿಕವಾಗಿ ಜಾಗರೂಕತೆಯನ್ನು ಹೊಂದಿದುದಕ್ಕೂ, ತನ್ನ ಪತಿಯ ಪ್ರಾಣವನ್ನುಳಿಸಿಕೊಳ್ಳಲು ಯಮನ ಹಿಂದೆಯೇ ಮೃತ್ಯುಸದನಕ್ಕೂ ಮಹಾಧೈರ್ಯದಿಂದ ಸಾವಿತ್ರೀದೇವಿಯು ಪ್ರವೇಶಿಸಿದುದಕ್ಕೂ ಕಾರಣವಾದ ಸನಾತನಭಕ್ತಿಯ ಅಗ್ನಿಕುಂಡದ ತೇಜಸ್ಸಿನಿಂದ ಪ್ರಜ್ವಲಿತವಾದ ಕಟ್ಟಿಗೆಗಳಲ್ಲಿ ಕೆಲವನ್ನಾದರೂ ನಾನು ಕೂಡ ನೀವು ನನಗೆ ವಹಿಸಿರುವ ಈ ಮಹೋನ್ನತಕಾರ್ಯನಿರ್ವಹಣಾರ್ಥವಾಗಿ ಹೊರಬಲ್ಲೆನೆಂದು ನಂಬುವೆನು.

ಹೊಸವರ್ಷವಿಧಾನವು.

ಬರುವ ವರ್ಷ ಜರುಗಿಸಬೇಕಾಗಿರುವ ಕೆಲಸವನ್ನೂ ಅನುಸರಿಸಬೇಕಾದ ವಿಧಾನವನ್ನೂ ಅಧ್ಯಕ್ಷಪದವಿಯನ್ನು ವಹಿಸಿದವರು ಈ ಸಭೆಯಲ್ಲಿ ವಿವರಿಸುವುದು ಸದಾಚಾರವಾಗೇರ್ಪಟ್ಟಿರುವುದು. ನಾನು ಸಭಾಮಧ್ಯದಲ್ಲಿ ನಿಂತಾಗ ಸಭ್ಯಜನರ ಚೈತನ್ಯದಿಂದ ಹುಟ್ಟಿದ ಪ್ರೋತ್ಸಾಹಬಲವು ಮಾತ್ರವೇ ಆ ಪ್ರಯತ್ನಶೀಲಳಾಗುವಂತಾದರೂ, ನನ್ನ ಹೃದಯಕ್ಕೆ ಆತ್ಮಾಸವೂ, ನನ್ನ ಪದಗಳಿಗೆ ವೀರ್ಯಪಕ್ಷವೂ ಹುಟ್ಟುವ ಭಾವದಲ್ಲಿ ಸ್ವಲ್ಪವನ್ನಾದರೂ ಸೂಚಿಸಲು ತಕ್ಕ ವಾಕ್ಯಗಳನ್ನು ತಡಕಲು ನಾನೀವರೆಗೆ ಜೀವಿತಕಾಲದಲ್ಲಾವಾಗಲೂ ಪ್ರಯತ್ನಿಸಲಿಲ್ಲವಾದರೂ ಈ ದಿವಸ ನಾನು ಆ ವಿಷಯದಲ್ಲಿ ನಿಷ್ಫಲವಾಗಿ ತಡವರಿಸಬೇಕಾಗಿ ಬಂದಿತು.

ಕೀರ್ತಿಶೇಷರ ಸ್ಮರಣ.

ಭಾರತದೇಶದ ಅತ್ಯಂತಮೂಲೆಯ ಪ್ರದೇಶಗಳಿಂದ ನಾವೆಲ್ಲರೂ ಯಾವ ಕಾರ್ಯಾಪೇಕ್ಷೆಯಿಂದ ಈ ಉತ್ತರನಗರದಲ್ಲಿ ಬಂದು ಸೇರಿರುತ್ತೇವೆಯೋ ಆ ಪ್ರಧಾನಕಾರ್ಯಾರಂಭಕ್ಕೆ ಮೊದಲು ಕೀರ್ತಿಶೇಷರಾದ ದೇಶನಾಯಕರಿಗೆ ಸಂತಾಪಕರವಾದ ಭಕ್ತಿಯನ್ನು ನಾವು ತೋರಿಸತಕ್ಕುದಾಗಿದೆ. ನಮ್ಮ ದೇಶದ ಜಾತೀಯಾಭಿಮಾನವು ಮೊಟ್ಟಮೊದಲು ಅಂಕುರಿಸುವಂತೆ ಮಾಡಿದ ಮಹನೀಯ ಸುರೇಂದ್ರನಾಥಬಾನರ್ಜಿಯವರು ಅರ್ಧಶತಮಾನದ ಹಿಂದೆ ಭಾರತೀಯರಿಗೆ ಉಂಟಾಗುತ್ತಿದ್ದ ಘೋರವಾದ ಅಕ್ರಮಗಳನ್ನು ಕುರಿತು ಅತ್ಯದ್ಭುತವಾಗಿ ಸಿಂಹಗರ್ಜನೆಮಾಡಿ ಬ್ರಹ್ಮಾಂಡಕಟಾಹವನ್ನು ಛಿದ್ರಮಾಡಿ ಇಂದು ಶಾಂತಿಪಥದಲ್ಲಿ ವಿಶ್ರಮಿಸುತ್ತಿರುವರು. ಸಮಸ್ತಪಂಡಿತಜನಮಂಡ್ಯಧೀವಿಶಾಲರಾದ ರಾಮಕೃಷ್ಣಭಂಡಾರ್ಕರವರು ಅತ್ಯಧಿಕ ಸಹನದಿಂದಲೂ, ಭಕ್ತಿಯಿಂದಲೂ ಪ್ರಾಚೀನವಾದ ಸಂಸ್ಕೃತವಿಜ್ಞಾನಜ್ಯೋತಿಯನ್ನು ಮರಳಿ ತೇಜೋಮಯವಾಗಿ ಮಾಡಿ ರಾಜಕೀಯ ಸಂಘರ್ಷಣದಿಂದ ಹುಟ್ಟಿದ ಮಹಾಪಾಯಕ್ಕೆ ತಿಲ್ಕದಂತೆ ಮಾಡಿದರು. ದೇಶಬಂಧು ಚಿತ್ತರಂಜನದಾಸರವರು ಸ್ವಪ್ನದರ್ಶಿಗಳಿಗೆಲ್ಲ ಸಾರ್ವಭೌಮರು. ಭಾರತಮಾತೃದಾಸ್ಯವಿಮುಕ್ತಿಗಾಗಿ ಅವರಿಗುಂಟಾದ ವಿಶೇಷಪರಿತಾಪದಿಂದ ವೈಷ್ಣವ ಪ್ರಪತ್ತಿಯನ್ನು ಕೂಡ ವಿನಿಯೋಗಿಸಿ ತದೇಕಚಿತ್ತರಾಗಿದ್ದರು. ಅನೇಕವೇಳೆ ನಿರ್ಲಕ್ಷ್ಯದಿಂದಲೂ, ವಿಜಯೌದಾರ್ಯದಿಂದಲೂ ತಾವು ಯಾರಕೂಡ ಕಾದಾಡಿದರೋ ಅಂತಹ ಮಹಾಸಮರ್ಥರಾದ ಪ್ರತಿಪಕ್ಷಿಗಳಿಗೆ ರಾಜಸಹಜವಾದ ಸಮಾಧಾನಸೂಚನಾರ್ಥವಾಗಿ ಕೈಚಾಚಿಯೇ ದೇಶಬಂಧು ದಾಸರವರು ಲೋಕಾಂತರವನ್ನು ಹೊಂದಿದರು.

ಮುಂದಣ ಕರ್ತವ್ಯವು.

ಆಂದೋಳಕರಗಳಾದ ಸಮಸ್ಯೆಗಳನ್ನು ಪರಿಷ್ಕರಿಸುವುದರಲ್ಲಿ ಅನುಕೂಲಮಾರ್ಗವನ್ನು ತೋರಿಸುವುದಕ್ಕೂ, ಕೊಂಚವಾದರೂ ಆಲಸ್ಯಕ್ಕೆ ಅವಕಾಶವಿಲ್ಲದಂತೆ ಪರಿಷ್ಕರಿಸಬೇಕಾಗಿರುವ ಬ್ರಹ್ಮಾಂಡಸಮಸ್ಯೆಗಳ ಸತ್ಯಧಾರಣಸ್ವಭಾವವನ್ನು ವಿವರಿಸುವುದಕ್ಕೂ ದೇಶಬಂಧುಯವರು ಈ ದಿವಸದ ಸಭೆಯಲ್ಲಿದ್ದಿದ್ದರೆ ನಮಗೆ ಅತ್ಯಂತ ಮನೋಧೈರ್ಯವುಂಟಾಗುತ್ತಿದ್ದಿತು. ದೇಶೀಯ ಅಂತರ್ದೇಶೀಯ ಪರಿಸ್ಥಿತಿಯು ಅದ್ಭುತವಾಗಿ ಸಂಘಟಿಸಿರುವುದರಿಂದಲೇ ನಮ್ಮ ಜಾತೀಯಜೀವನಸ್ಥೈರ್ಯಕ್ಕೆ ಮಬ್ಬುಹಿಡಿದು ಅಪೂರ್ವ ವಿಷತಮವಾದ ಕಷ್ಟಪರಂಪರೆಯಲ್ಲಿ ನಾವು ನಮಗೆ ತಿಳಿಯದೆಯೂ, ಸಂಕಲ್ಪವಿಲ್ಲದೆಯೂ ಸಿಕ್ಕಿಕೊಂಡು ತಟಸ್ಥರಾಗಿರುತ್ತೇವೆ. ಅವಿವೇಕದಿಂದ ನಮ್ಮಲ್ಲಿ ಹುಟ್ಟಿದ ಅನೈಕ್ಯವು ಪ್ರಬಲವಾಗಿ ಚಿರಕಾಲದಿಂದಲೂ ಸಾಮ್ರಾಜ್ಯವಿಧಾನಚಾಪಲ್ಯದಾಕ್ಷಿಣ್ಯಗಳಮೇಲೆ ಆಧಾರಪಟ್ಟುಕೊಂಡಿರುವುದರಿಂದ ಬಲಹೀನವೂ, ಹಾನಿಕರವೂ, ಸಂತಾಪಕರವೂ, ಅತಿನೀಚವೂ ಆದ ನಮ್ಮ ಅಸಹಾಯಸ್ಥಿತಿಯನ್ನು ನಾವು ಪರೀಕ್ಷಿಸಿದರೆ ಯಾವಾಗಲೂ ನಮ್ಮ ಕಣ್ಣುಗಳಲ್ಲಿ ಕಟ್ಟಿರುವ ಪರೆಯನ್ನು ಈಗಲಾದರೂ ತೊಲಗಿಸುವುದು ನಮ್ಮ ಮುಖ್ಯಕರ್ತವ್ಯವಾಗಿದೆ. ನಮ್ಮನ್ನು ಆವರಿಸಿರುವ ಬಹುರೂಪವಾದ ಆಪತ್ತಿನಿಂದ ವಿಮುಕ್ತರಾಗಲು ನಾವು ನಿರ್ಪಡಿಸಬೇಕಾದ ಪದ್ಧತಿಗಳಾವುವು ? ಅವಲಂಬಿಸಬೇಕಾದ ಸಾಧನಗಳೇನು? ಮಾನವಸಹಜವಾದ ನಮ್ಮ ಸ್ವಾತಂತ್ರ್ಯವನ್ನು ಹಾಳ್ಮಾಡುವಂತಹ ಭಯಂಕರವಾದ ಶಕ್ತಿಯನ್ನು ನಾವು ಪ್ರತಿಭಟಿಸುವುದು ಹೇಗೆ ? ಹತಶೇಷವಾಗುಳಿದಿರುವ ನಮ್ಮ ನೈತಿಕಭೌತಿಕದ್ರವ್ಯಾಧಿಕಾರವನ್ನು, ಪಾಪಭೀತಿಯು ಲೇಶವಾದರೂ ಇರದೆ ದುರಾಶೆಯಿಂದ ಇನ್ನುಮುಂದೆಯೂ ಸಾಮ್ರಾಜ್ಯದವರು ಅಪಹರಿಸದಂತೆ ನಾವು ನಿರೋಧಿಸುವುದು ಹೇಗೆ ? ಆರ್ಥಿಕ ವೈಜ್ಞಾನಿಕ ವಿಷಯಗಳಲ್ಲಿ ನಮಗೆ ಪ್ರಾಪ್ತವಾಗಿರುವ ಪರಾಧೀನತೆಯನ್ನು ತಿಳಿದು ಲಾಭವನ್ನು ಹೊಂದುವವರಾಗಿರುವ ಇತರ ವಿದೇಶೀಯರ ಕೃತ್ರಿಮದ್ರೋಹಕರಾಕ್ರಮಣವನ್ನು ನಿರೋಧಿಸುವುದು ಹೇಗೆ ? ಅಧಿನಿವೇಶಗಳಲ್ಲಿ ನಮ್ಮ ಸೋದರರಿಗೆ ಪ್ರಾಪ್ತವಾಗುತ್ತಿರುವ ಮಹಾವಿಪತ್ತನ್ನು ತಪ್ಪಿಸುವುದು ಹೇಗೆ ? ಸ್ವದೇಶದಲ್ಲಿಯ ಅಂತಃಕಲಹವನ್ನು ವೃದ್ಧಿಗೊಳಿಸುತ್ತಿರುವ ಶಕ್ತಿಯ ವಿಜೃಂಭಣೆಯನ್ನು ಅಡಗಿಸುವುದು ಹೇಗೆ ? ಆ ಆಪತ್ತುಗಳನ್ನು ವಿಮುಖಗೊಳಿಸುವುದು ಹೇಗೆ ?

ಅಸಹಾಯೋದ್ಯಮಫಲವು.

ಈ ಪ್ರಶ್ನೆಗಳಿಗೆಲ್ಲ ಪ್ರತ್ಯುತ್ತರವು ಗಾಂಧಿಮಹಾತ್ಮರು ಬೋಧಿಸಿದ ಶ್ರೇಷ್ಠವಾದ ತ್ಯಾಗಗೀತವೇ ಆಗಿರುತ್ತದೆ. ಜಾತೀಯ ಆತ್ಮಗೌರವವನ್ನು ಪುನಃ ಸಂಪಾದಿಸಲು ಆವಶ್ಯಕವಾದ ಶೌರ್ಯರಹಸ್ಯವನ್ನು ನಮಗೆ ಬೋಧಿಸುವುದಕ್ಕೆ ಮಹಾತ್ಮರು ಮಾಡಿದ ಪ್ರಯತ್ನವೆಲ್ಲವೂ ವಿಫಲವಾಗಿರುವುದು. ಧೀರರಾದ ನಮ್ಮ ಪೂರ್ವಿಕರ ಪ್ರಾಣಕ್ಕೆ ಪ್ರಾಣವಾಗಿದ್ದ ಅಪೂರ್ವವಿಶ್ವಾಸವನ್ನು ಅನೇಕಶತಮಾನಗಳಿಂದಲೂ ನಾವು ಅನುಸರಿಸುತ್ತಿಲ್ಲವಾದುದರಿಂದ, ಆ ಶ್ರೇಷ್ಠತಮವಾದುದು ಕಠಿನತಮವಾಗಿರುತ್ತದೆಂದು ನನ್ನ ಸಿದ್ಧಾಂತದ ಪ್ರಕಾರ ನಿಬಂಧನಗಳನ್ನು ಸ್ವಲ್ಪ ಕಾಲಕ್ಕಿಂತ ಹೆಚ್ಚಾಗಿ ಅನುಸರಿಸಲು ನಾವು ಅಶಕ್ತರೂ ಅನರ್ಹರೂ ಆಗಿರುವೆವು. ಅಸಹಾಯೋದ್ಯಮವನ್ನು ಕುರಿತು ಜಾತಿಯು ಯಾವ ತೀರ್ಪನ್ನು ಬರೆದರೂ ದೌರ್ಜನ್ಯರಹಿತವಾದ ಅಸಹಾಯೋದ್ಯಮವು ಪ್ರಶಂಸಮಾರುತದಂತೆ ದೇಶವೆಲ್ಲವನ್ನೂ ವ್ಯಾಪಿಸಿ ನಮ್ಮ ಜಾತೀಯಜೀವನಮೂಲಾಧಾರವನ್ನೇ ಅಲ್ಲಾಡಿಸುವುದೆಂದು ಒಪ್ಪಿಕೊಳ್ಳದಿರಲಾಗದು. ಇಂದು ಆ ಉದ್ಯಮವು ಪ್ರಶಾಂತವಾಗಿದ್ದರೂ, ಅದರ ಪ್ರತಿಧ್ವನಿಯು ಮುಂದವಾಗಿದ್ದರೂ, ಅದರಿಂದ ನಮ್ಮ ಆಧ್ಯಾತ್ಮಿಕಭೂಭಾಗಸ್ವರೂಪವು ಮಾತ್ರ ಪೂರ್ತಿಯಾಗಿ ವ್ಯಕ್ತವಾಗಿರುತ್ತದೆ. ಇದರ ಮೇಲೆ ನಾವು ನಿರ್ಪಡಿಸುವ ವಿಧಾನಗಳು ಗಾಂಧಿಮಹಾತ್ಮರ ಆಶಯಕ್ಕೆಷ್ಟು ವಿಲಕ್ಷಣವಾಗಿದ್ದರೂ ಈ ದೇಶದಲ್ಲಿ ಹುಟ್ಟಿರುವ ನೂತನಭಾವನೆಗೆ ಮಾತ್ರ ಅವು ವಿಲಕ್ಷಣವಾಗಿರಲಾರವು ಏಕೆಂದರೆ, ಕೆಲ ವರ್ಷಗಳಿಂದಲೂ ನಮ್ಮ ರಾಜಕೀಯಭಾವವು ಪೂರ್ತಿಯಾಗಿ ವ್ಯತ್ಯಸ್ತವಾಗಿದೆ. ನಮ್ಮ ರಾಜಕೀಯ ಭಾವಿಭಾಗ್ಯಸ್ಥಾನವು ಕೂಡ ವ್ಯತ್ಯಾಸವಾಗಿದೆ.

ರಾಷ್ಟ್ರೀಯಸಭೆಯಲ್ಲಿ ಭಿನ್ನಶಾಖೆಗಳು.

ನಮ್ಮ ಶಕ್ತಿಯೆಲ್ಲವೂ ದುರ್ಬಲವಾಗಿ ಚದರಿಹೋಗಿದೆ. ಭಾರತದೇಶವನ್ನು ಬಂಧಿಸಿರುವ ರಾಜಕೀಯಹಗ್ಗವನ್ನು ಕಿತ್ತುಹಾಕಲು ಮಾಡಬೇಕಾಗಿರುವ ಕಡೆಯ ಪ್ರಯತ್ನದಿಂದ ಈ ಶಕ್ತಿಯೆಲ್ಲವೂ ಪುನಃ ಏಕೀಭವಿಸಬೇಕಾಗಿದೆ. ಅದಕ್ಕಾಗಿ ಅಲೌಕಿಕವಾದ ರಾಜಕೀಯಧೌರಂಧರ್ಯವೈಚಿತ್ರ್ಯವು ಅವಸರವಾಗಿರುವುದು. ರಾಜಕೀಯಸ್ವಾತಂತ್ರ್ಯಕ್ಕೆ ಸಹಜವೂ, ಅತಿಮುಖ್ಯವೂ ಆದ ಸಂಪೂರ್ಣವಿಧಾನವನ್ನು ನಿರ್ಪಡಿಸಬೇಕಾಗಿದೆ. ಸಾಂಘಿಕ, ಆರ್ಥಿಕ, ಪಾರಿಶ್ರಾಮಿಕ, ವೈಜ್ಞಾನಿಕಾಭಿವೃದ್ಧಿಯನ್ನು ದೇಶಾನುಗುಣ್ಯವಾಗಿಯೂ, ನವಯುಗದ ಉತ್ತಮಆಶಾನುಗುಣ್ಯವಾಗಿಯೂ ಮಾಡುವ ಪ್ರಯತ್ನಗಳಿಗೂ ಅವಕಾಶವಿರಬೇಕು.

ಗ್ರಾಮಪುನರ್ನಿರ್ಮಾಣ–ಕಾರ್ಮಿಕಸಮಸ್ಯೆ.

ಈ ಶಾಖೆಗಳಲ್ಲೆಲ್ಲಾ ಚೆನ್ನಾಗಿ ಕೆಲಸ ಜರುಗಲು ಮಹಾಸಭೆಯವರು ವಿವಿಧಶಾಖೆಗಳನ್ನೇರ್ಪಡಿಸಬೇಕಾಗಿದೆ. ಭಿನ್ನಪ್ರಕೃತಿಯ ದೇಶೀಯರೆಲ್ಲರಿಗೂ ಉಪಯುಕ್ತವಾಗಿರುವಂತೆ ಅವನ್ನು ಪರಿಪಾಲಿಸಲು ನೈಪುಣ್ಯವುಳ್ಳ ಪ್ರತ್ಯೇಕ ಸ್ತ್ರೀಯರನ್ನೂ, ಪುರುಷರನ್ನೂ ಆಯಾ ಶಾಖೆಗಳಿಗೆ ಪಾಲಕಸಭ್ಯರನ್ನಾಗಿ ಮಾಡಬೇಕು. ಪ್ರಧಾನಶಾಖೆಗಳು ಹೆಚ್ಚಾಗಿರಬೇಕಲ್ಲದೆ, ಅವುಗಳ ವ್ಯಾಪ್ತಿಯೂ ವಿಶಾಲವಾಗಿರಬೇಕು. ದೇಶಬಂಧು ದಾಸರವರ ಭಾವಕ್ಕನುಗುಣವಾಗಿ ಗ್ರಾಮಪುನರ್ನಿರ್ಮಾಣವಿಧಾನವನ್ನು ಆಚರಣಯೋಗ್ಯವಾಗಿ ನಿರ್ಪಡಿಸುವುದು ಮುಖ್ಯವೆಂದು ನನಗೆ ತೋರುತ್ತದೆ. ಗೃಹಸ್ಥಾಶ್ರಮದಲ್ಲಿರುವವರು ಪ್ರಾಚೀನಕಾಲದಲ್ಲಿ ಹೇಗೆ ಮೂರು ಆಶ್ರಮದವರನ್ನೂ ಪೋಷಿಸುವ ಭಾರವನ್ನು ವಹಿಸಿಕೊಂಡಿದ್ದರೋ ಹಾಗೆ ಈಗಲೂ ಗೃಹಸ್ಥರು ದೇಶಸೇವೆಗಾಗಿ ಸ್ವಾರ್ಥತ್ಯಾಗಮಾಡಿರುವ ರಾಜಕೀಯ, ಸಾಂಘಿಕ, ನೈತಿಕ ಸನ್ಯಾಸಿಗಳನ್ನೂ, ವಾನಪ್ರಸ್ಥರಾದ ಬ್ರಹ್ಮಚಾರಿಗಳನ್ನೂ ಪೋಷಿಸುತ್ತಿರಬೇಕಾಗಿದೆ. ಭಾರತದೇಶದಲ್ಲೆಲ್ಲಾ ಆತ್ಮಗೌರವ ಆತ್ಮವಿಶ್ವಾಸಗಳನ್ನು ಬೋಧಿಸುವುದಕ್ಕೂ, ಅದಕ್ಕೆ ಮುಖ್ಯಾಧಾರವಾದ ಆಯುಧವಾಗಿರುವ ರಾಟೆಯುಪಯೋಗವನ್ನು ಬೋಧಿಸಿ ಮುಖ್ಯಾವಶ್ಯಕವಾದ ಅನ್ನವಸ್ತ್ರಗಳನ್ನು ಸಮೃದ್ಧಿಯಾಗಿ ಹೊಂದುವ ವೃತ್ತಿಯನ್ನು ಪ್ರಜೆಗಳೆಲ್ಲರೂ ಅನುಸರಿಸುವಂತೆ ಮಾಡಲಿಕ್ಕೂ, ಪ್ರಜೆಗಳು ಈಗ ಅನುಭವಿಸುತ್ತಿರುವ ದಾರಿದ್ರ್ಯ ಅಜ್ಞಾನವ್ಯಾಧಿ ನಾಮಕಪಿಶಾಚಗಳನ್ನು ಮಾರಣಮಾಡಿ ಈಗ ಕ್ಷುಧಾತುರರಾಗಿರುವ ಬೀದಿಯ ಜನರಿಗೆ ಸೌಖ್ಯವನ್ನುಂಟುಮಾಡಲಿಕ್ಕೂ, ಸರ್ವಸಂಗಪರಿತ್ಯಾಗಮಾಡಿರುವ ದೇಶಭಕ್ತರು ಕೆಲರು ಕೆಲಸಮಾಡಬೇಕಾಗಿದೆ. ಗ್ರಾಮಗಳಲ್ಲಿ ಇಂತಹ ಸೇವೆಯು ಎಷ್ಟು ಮುಖ್ಯವಾಗಿರುವುದೋ ಪಟ್ಟಣಗಳಲ್ಲೂ, ನಗರಗಳಲ್ಲೂ ಯಂತ್ರಶಾಲೆಗಳಲ್ಲಿ ಕೆಲಸಮಾಡುವವರು ಮೊದಲಾಗಿ ಕಾರ್ಮಿಕಜನರಲ್ಲಿ ಕಟ್ಟುಪಾಟನ್ನು ಮಾಡುವುದು ಕೂಡ ಅಷ್ಟೇ ಮುಖ್ಯವಾಗಿರುವುದು. ಈಗ ಅವರ ಸ್ಥಿತಿಯು ಬಹಳ ಸಂತಾಪಕರವಾಗಿರುವುದು. ಗ್ರಾಮಗಳಲ್ಲಿ ಹುಟ್ಟಿಬೆಳೆದವರು ಅಲ್ಲಿ ಜೀವನಾಧಾರವಿಲ್ಲದೆ ಹೊಟ್ಟೆಯಮೇಲೆ ಕೈಯಿಟ್ಟುಕೊಂಡು ಪಟ್ಟಣವನ್ನು ಸೇರಬೇಕಾಗಿ ಬಂದಿದೆ. ಗ್ರಾಮಗಳಂತೆಯೇ ಪಟ್ಟಣಗಳಲ್ಲಿ ಅವರನ್ನು ಹದ್ದುಮೀರದಂತೆ ಮಾಡಲು ಕಟ್ಟುಪಾಡುಗಳು ಇಲ್ಲದಿರುವುದರಿಂದಲೇ ಅವರು ದುರ್ವ್ಯಸನಗಳಿಗೂ, ದುರಾಕರ್ಷಣಗಳಿಗೂ ದಾಸರಾಗುತ್ತಿರುವರು. ಅವರಿಗೆ ಒಳ್ಳೇ ಮನೆಯನ್ನೂ, ಹೆಚ್ಚು ಸಂಬಳವನ್ನೂ, ನೀತಿಧರ್ಮಾವರ್ತನೆಯನ್ನೂ, ಆರೋಗ್ಯಪಾರಿಶುದ್ಧಿಯನ್ನೂ ನಾವು ಉಂಟುಮಾಡಿಕೊಡಬೇಕಾಗಿದೆ. ಯಜಮಾನರಿಗೂ ಕೆಲಸಗಾರರಿಗೂ ಸಹಕಾರವನ್ನುಂಟುಮಾಡುವುದು ಮುಖ್ಯತಮವು.

ಜಾತೀಯವಿದ್ಯೆ.

ವಿದ್ಯಾವಿಷಯದಲ್ಲಿ ದೇಶೀಯರ ಉಪೇಕ್ಷೆಯು ನನಗೆ ಬಹಳ ಸಂತಾಪವನ್ನುಂಟುಮಾಡುತ್ತಿದೆ. ನಮಗೆ ಪ್ರಾಪ್ತವಾಗಿರುವ ವಿದೇಶಪಾರತಂತ್ರ್ಯವು ನಮಗೆ ವಿಜ್ಞಾನಭಾವಕೌಶಲಾದಿಗಳು ಕೂಡ ದಾಸ್ಯಪ್ರವೃತ್ತಿಯನ್ನೇ ಉಂಟುಮಾಡುತ್ತಿವೆ. ಜಾತೀಯವಿದ್ಯಾಸಹಜವಿಖ್ಯಾತಸಂಪ್ರದಾಯಗಳಿಗೆ ನಾವು ವ್ಯತಿರೇಕವಾಗಿ ಹೋಗುತ್ತಿರುವೆವು. ಈಗ ಕಲಿಸಲ್ಪಡುತ್ತಿರುವ ವಿದ್ಯೆ ಕೇವಲ ಕೃತ್ರಿಮಾನುಕರಣವೇ ಆಗಿರುವುದರಿಂದ ಅದು ನಮ್ಮ ಜಾತೀಯವಿಜ್ಞಾನತತ್ವಕ್ಕೆ ಕೇವಲ ಭಿನ್ನವಾಗಿರುವುದಲ್ಲದೆ ಆತ್ಮವಿಕಾಸಕ್ಕೆ ಸಹಜವಾದ ಕಲ್ಪನಾಶಕ್ತಿಯನ್ನೂ, ನಿರ್ಮಾಣಶಕ್ತಿಯನ್ನೂ ನಾವು ಕಳೆದುಕೊಳ್ಳುತ್ತಿರುವೆವು. ಈ ಕಾರಣದಿಂದ ನಾವು ತೊಗಲಿನ ಬೊಂಬೆಯ ಸ್ಥಿತಿಗಿಳಿದಿರುತ್ತೇವೆ. ಪ್ರಾಗ್ದೇಶವಿಜ್ಞಾನಕ್ಕೆ ಸಹಜವಾಗಿಯೂ, ಮನೋಹರವಾಗಿಯೂ ಇರುವ ಪುನರ್ನಿರ್ಮಾಣಕೌಶಲವನ್ನೂ, ಪಾಶ್ಚಾತ್ಯಯುವಜನರಿಂದ ತಿಳಿಯಲ್ಪಡಬೇಕಾಗಿರುವ ಚಿತ್ರಕಳೆ, ಪ್ರಕೃತಿಶಾಸ್ತ್ರ, ವೇದಾಂತ, ಪ್ರಜಾಸಂಘ ಮೊದಲಾದವುಗಳಲ್ಲಿ ಉತ್ತಮಜ್ಞಾನವನ್ನೂ ನಮ್ಮ ಬಾಲಕಬಾಲಿಕೆಯರುಗಳಿಗೆ ಕಲಿಸುವ ವಿದ್ಯಾವಿಧಾನವನ್ನು ನಿರ್ಣಯಿಸುವುದು ಮುಖ್ಯತಮವಾಗಿದೆ.

ಸೈನಿಕವಿದ್ಯೆ.

ಸೈನಿಕವಿದ್ಯೆಯನ್ನು ಕೂಡ ಮುಖ್ಯವಾಗಿ ಕಲಿಸಬೇಕೆಂದು ನಾನು ಒತ್ತಿ ಹೇಳುತ್ತೇನೆ. ಕುರುಕ್ಷೇತ್ರಸಂಗ್ರಾಮಗೀತವು ಯಾರಿಗೆ ಜೋಗುಳಪಾಠವಾಗಿರುವುದೋ, ರಾಜಪುತ್ರವೀರವಿಹಾರಕೀರ್ತನವು ಯಾರಿಗೆ ನಾಟ್ಯಾಂಗವಾಗಿರುವುದೋ ಅಂತಹ ಭಾರತಕುಮಾರರು ತಮ್ಮ ಕುಟುಂಬದ ಮಾನಪ್ರಾಣಗಳನ್ನೂ, ತಮ್ಮ ಗೃಹವನ್ನೂ, ತಮ್ಮ ರೇವೆಗಳನ್ನೂ ಕಾಪಾಡಿಕೊಳ್ಳಲು ವಿದೇಶೀಯಸೈನಿಕರ ವಿಶ್ವಾಸದಮೇಲೆ ಆಧಾರಪಟ್ಟುಕೊಂಡಿರುವುದು ಬಹಳ ವಿಷಾದಕರವಾಗಿದೆ. ಕ್ರೂರಸ್ವಭಾವದವರೂ, ಅರಣ್ಯವಾಸಿಗಳೂ, ಅನಾಗರಿಕರೂ ಆದ ಮಾಸಾಯಿ, ಜೂಲು, ಅರಬು, ಅಫ್ರಿದಿ, ಗ್ರೀಕು, ಬಲ್ಗರು ಜಾತಿಯವರೆಲ್ಲರೂ ಆಯುಧಧಾರಣಸ್ವಾತಂತ್ರ್ಯವನ್ನು ಜನ್ಮಹಕ್ಕಾಗಿ ಸ್ಥಾಪಿಸಿಕೊಂಡಿರುವಾಗ್ಯೆ, ಪ್ರಪಂಚಕ್ಕೆಲ್ಲಾ ನಾಗರಿಕಭಿಕ್ಷೆಯನ್ನು ಕೊಟ್ಟ ನಾವು ಮಾತ್ರ ಈ ವಿಷಯದಲ್ಲಿ ಅಪಹೃತಸ್ವಾತಂತ್ರ್ಯರಾಗಿ, ನಿರ್ಬಂಧದಿಂದ ಭೀತರಾಗಿ ಭಾರತೀಯರು ಪೌರುಷಹೀನರೆಂದು ನಮ್ಮನ್ನು ಪರಿಗಣಿಸುತ್ತಿದ್ದರೂ ನಾವು ಪ್ರತ್ಯುತ್ತರವನ್ನು ಕೊಡಲಾರದಷ್ಟು ಮತ್ತು ನಮ್ಮ ಮನೆಯನ್ನೂ ದೇವಾಲಯವನ್ನೂ ಕಾಪಾಡಿಕೊಳ್ಳಲಾರದಷ್ಟು ಹೀನಸ್ಥಿತಿಗೆ ಇಳಿದಿರುವುದು ಅತ್ಯಂತ ಶೋಚನೀಯವು.

ಈ ವಿಷಯದಲ್ಲಿ ಈಗ ವಿಚಾರಣೆಯನ್ನು ಮಾಡುತ್ತಿರುವ ಸಂಘದವರು ಎಂತಹ ಸೂಚನೆಯನ್ನು ಕೊಟ್ಟರೂ, ಕಾಂಗ್ರೆಸ್ಸಿನವರು ಈಗಿರುವ ಶಾಂತಿಸೇನೆಯನ್ನು ಮೂಲಾಧಾರವಾಗಿಟ್ಟುಕೊಂಡು ಕಾಂಗ್ರೆಸ್ ಐಚ್ಛಿಕ ಜಾತೀಯ ಸೈನ್ಯವನ್ನು ನಿರ್ಮಿಸುವುದು ಅತ್ಯವಸರವು. ನೌಕಾದಳದಲ್ಲಿ ಕೆಲಸಮಾಡುವುದಕ್ಕೆ ಅವಶ್ಯವಾದ ವಿದ್ಯೆಯನ್ನು ಕಲಿಸಲು ಮತ್ತು ಶತ್ರುಗಳು ಯಾವಾಗಲಾದರೂ ದಂಡೆತ್ತಿಬಂದಲ್ಲಿ ರೇವೆ ಸ್ಥಳಗಳನ್ನು ಕಾಪಾಡಿಕೊಳ್ಳಲು ತಕ್ಕೇರ್ಪಾಟುಮಾಡುವುದಕ್ಕೆ ನಾವು ಪ್ರಯತ್ನಿಸುವುದು ಅವಸರವಾಗಿದೆ.

ವಿದೇಶದಲ್ಲಿರುವ ಭಾರತೀಯರು.

ಭಾರತೀಯರು ದೇಶೀಯವಿಷಯದಲ್ಲೇ ನಿಮಗ್ನರಾಗಿ ವಿದೇಶಗಳಲ್ಲಿರುವ ಭಾರತೀಯರ ಹಕ್ಕುಬಾಧ್ಯತೆಯನ್ನೂ, ಕಷ್ಟವನ್ನೂ ಗಮನಿಸುತ್ತಿಲ್ಲವೆಂಬ ಅಪಖ್ಯಾತಿಗೆ ನಾವು ಗುರಿಯಾಗದಂತೆ ನೋಡಿಕೊಳ್ಳಬೇಕಾಗಿದೆ. ಧನಾರ್ಜನ ನಿಮಿತ್ತವಾಗಿ ಧೈರ್ಯಸಾಹಸದಿಂದ ಸಮುದ್ರವನ್ನು ದಾಂಟಿ ಅಧಿನಿವೇಶಗಳಲ್ಲಿ ನೆಲಸಿರುವ ನಮ್ಮ ದೇಶೀಯ ಸೋದರರನ್ನು ಆ ದೇಶೀಯರು ಕಠಿನಶಾಸನಾದಿಗಳಿಂದ ಬಹಳವಾಗಿ ಬಾಧಿಸುತ್ತಿರುವರು. ಕೆನಿಯಾದಲ್ಲಿ ಭಾರತೀಯರನ್ನು ಕುರಿತು ಜರುಗಿಸಲ್ಪಟ್ಟ ಅಕ್ರಮವು ಇನ್ನೂ ತೊಲಗಲೇ ಇಲ್ಲವು. ಅಧಿನಿವೇಶದವರು ಆಗಾಗ್ಗೆ ನಮ್ಮ ಸೋದರರನ್ನು ಕುರಿತು ಮಾಡಿದ ಶಾಸನಗಳಲ್ಲೆಲ್ಲ ದಕ್ಷಿಣಾಫ್ರಿಕೆಯ ಯೂನಿಯನ್ ಪ್ರಭುತ್ವದವರು ಈಗ ಮಾಡಬೇಕೆಂದಿರುವ ಅಂಟೀ ಏಷಿಯಾಟಿಕ್ ಬಿಲ್ಲು ಅತಿ ಕ್ರೂರವಾಗಿಯೂ ದಾರುಣವಾಗಿಯೂ, ಅತ್ಯಧಿಕಕಾರ್ಪಣ್ಯಯುತವಾಗಿಯೂ ಇದ್ದು ಅಲ್ಲಿಯ ಭಾರತೀಯರನ್ನು ಭ್ರಷ್ಟಗೊಳಿಸತಕ್ಕುದಾಗಿದೆ. ಈಗ ಅಲ್ಲಿ ವಿಪತ್ತಿಗೆ ಗುರಿಯಾಗಿರುವ ನಮ್ಮ ಸೋದರರಿಗೆ ಕೂಡಲೆ ನಾವು ಬೆಂಬಲರಾಗಿ ನಿಲ್ಲಬೇಕಾಗಿರುತ್ತದಲ್ಲವೆ ? ಭಾರತದೇಶೀಯರು ದಕ್ಷಿಣಾಫ್ರಿಕೆಯ ಭಾರತೀಯರ ಹಕ್ಕನ್ನು ಕುರಿತು ಶ್ರದ್ಧೆಯನ್ನು ವಹಿಸಿ ಅವರ ಪ್ರಯತ್ನವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾರೆಂದು ಅಲ್ಲಿಂದ ಬಂದಿರುವ ರಾಯಬಾರಿಗಳ ದ್ವಾರಾ ನಾವು ಅವರಿಗೆ ತಿಳಿಸಬೇಕಾಗಿಲ್ಲವೆ ? ಈ ವಿಷಯದಲ್ಲಿ ನಮ್ಮ ಬಾಧ್ಯತೆಯನ್ನು ಇಷ್ಟು ಸ್ಪಷ್ಟವಾಗಿ ಇದುವರೆಗೆಂದೂ ನಾವು ಗ್ರಹಿಸಿರಲಿಲ್ಲವು. ಅದುಕಾರಣ ತತ್‌ಕ್ಷಣದಲ್ಲೇ ಕಾಂಗ್ರೆಸ್ಸಿನಲ್ಲಿ ಅಧಿನಿವೇಶಗಳ ಶಾಖೆಯನ್ನೇರ್ಪಡಿಸಿ ಆ ವಿಷಯದಲ್ಲಿ ಅನುಭವವುಳ್ಳವರನ್ನು ಆ ಶಾಖೆಗೆ ನಿಯಮಿಸಬೇಕಾಗಿರುತ್ತದೆ.

ರಾಜಕೀಯಬಂದಿಗಳು–ಪ್ರವಾಸಿಗಳು.

ಈ ಸಂದರ್ಭದಲ್ಲಿ ಪ್ರವಾಸಶಿಕ್ಷೆಗೆ ಗುರಿಯಾಗಿ ವಿದೇಶಗಳಲ್ಲಿರುವ ಭಾರತೀಯರ ವಿಷಯವು ಕೂಡ ಸ್ಮರಣೆಗೆ ಬಂದು ನನ್ನ ಮನಸ್ಸನ್ನು ಸಂತಾಪಗೊಳಿಸುತ್ತಿರುವುದು. ಅವರು ಅನುಭವಿಸುತ್ತಿರುವ ಮಾತೃದೇಶಸಂದರ್ಶನಾಭಿಲಾಷೆಯಿಂದ ಸಂತಪ್ತಮಾನಸರಾಗಿದ್ದರೂ ಶಾಸನವಿರುದ್ಧಕ್ಕೂ, ಪ್ರಕ್ರಿಯೆಯಿಂದ ದೇಶಸ್ವಾತಂತ್ರ್ಯಕ್ಕೂ ಅವರು ಪ್ರಯತ್ನಿಸುತ್ತಿದ್ದುದರಿಂದ ಅವರೀಗ ದೇಶಮಾತೆಯನ್ನು ಸಂದರ್ಶಿಸಲಾಗದಂತಿರುವರು. ಅವರಲ್ಲಿ ಅನೇಕರು ಯೌವನೋದ್ರೇಕದಿಂದ ಮಾಡಿದ ಆ ಅಪರಾಧಕ್ಕೆ ಮೀರಿದ ಪ್ರಾಯಶ್ಚಿತ್ತವನ್ನೇ ಅನುಭವಿಸುತ್ತಿರುವರು. ಅಂತಹವರೀಗ ದೇಶಸೇವಾವಿಧಾನದಲ್ಲಿ ನೂತನಾವಕಾಶದಿಂದ ಕೆಲಸಮಾಡಲು ಅನರ್ಹರಾಗಿರುತ್ತಾರೆ. ಬೀದಿಯವರಿಗೂ, ನಿಮ್ಮ ಜಾತಿಯವರಿಗೂ, ಪತಿತರಿಗೂ ಸೇವೆಮಾಡಲು ಅವರು ಬಹಳ ಅರ್ಹರಾಗಿರುತ್ತಾರೆ. (ಶೇಷ.)

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ 1926 ನೇ ಇಸವಿ ಜನವರಿ ಮಾಹೆಯಲ್ಲಿ ನಡಿಯುವ ಶ್ರೀರಾಮದೇವರ ರಥೋತ್ಸವಕ್ಕೆ ಬರತಕ್ಕ ದನಗಳ ಮತ್ತು ಅಂಗಡಿಗಳಮೇಲೆ ತೆರಿಗೆ ವಸೂಲ್ಮಾಡುವ ಹಕ್ಕನ್ನು ಚಾಲ್ತಿಸಾಲಿನ ಜಾತ್ರೆ ಪೂರ್ತಾ ಎಡತೊರೆ ತಾಲ್ಲೂಕು ಕಛೇರಿಯಲ್ಲಿ 1926 ನೇ ಜನವರಿ 5 ನೇ ತಾರೀಖು ಮಂಗಳವಾರ ದಿವಾ 12 ಘಂಟೆಗೆ ಮೈಸೂರು ಸಬ್ ಡಿವಿಜನ್ ಸಾಹೇಬರವರ ರೂಬರೂಬ್ ಹರಾಜುನಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಛಡಸವಾಲು ಮೂಲಕ ಪಡೆಯಬಹುದು. ಹರಾಜುಷರತ್ತುಗಳು ಮತ್ತು ಹೆಚ್ಚು ವಿಷಯಗಳನ್ನು ಎಡತೊರೆ ತಾಲ್ಲೂಕು ಆಫೀಸಿನಲ್ಲಿ ತಿಳಿಯಬಹುದು.

ತಾ|| 22-12-25.
ಮೈಸೂರು,
[2—2]

G. NARAYANA RAO,
For Deputy Commissioner,
Mysore District.

ನೋಟೀಸು

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ.—

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿದ್ದು ಹಾಲಿ ಫವತಿಯಾಗಿರುವ ತಾಳ್ಕಂಟಿ ಬಸಪ್ಪನವರ ಮಕ್ಕಳು ಮ|| ಟಿ. ಬಿ. ಗವೀಶಪ್ಪನವರು ತಮ್ಮ ಬಾಬತು ಸ್ವತ್ತುಗಳನ್ನು ಸ್ವತಃ ವಹಿವಾಟ್ ನಡಿಸಲಿಕ್ಕೆ ಅನಾನುಭವಸ್ಥರಾಗಿರುವದ್ದರಿಂದ ಅವುಗಳನ್ನೆಲ್ಲಾ ನನ್ನ ಸ್ವಾಧೀನಕ್ಕೆ ತೆಗೆದುಕೊಂಡು ನಾನು ಅವುಗಳ ಟ್ರಸ್ಟಿಯಾಗಿ ನಿಂತು ಅವರ ಮತ್ತು ಅವರ ಕುಟುಂಬದವರ ಉಪಯೋಗಕ್ಕಾಗಿ ಕೆಲವು ಕಂಡೀಷನ್‌ಗಳು ಒಳಪಡಿಸಿ ತಾ|| 3-12-1925 ರಲ್ಲು ನನ್ನ ಹೆಸರಿಗೆ ಟ್ರಸ್ಟ್‌ಡೀಡು ಬರಸಿ ರಿಜಸ್ಟರು ಮಾಡಿಸಿಕೊಟ್ಟು ಇವರ ಬಾಬ್ತು ಸ್ಥಿರಸ್ವತ್ತುಗಳ್ಯಾವತ್ತೂ ನನ್ನ ಸ್ವಾಧೀನಪಡಿಸಿರುತ್ತಾರೆ. ಈ ಕಾರಣದಿಂದ ಡಿಟೋ ಮ|| ಗವೀಶಪ್ಪನವರ ಬಾಬ್ತು ಸ್ಥಿರಸ್ವತ್ತುಗಳು ಸದರಿ ಟ್ರಸ್ಟುಡೀಡ್ ಅನುಸರಿಸಿ ನನ್ನ ಸ್ವಾಧೀನದಲ್ಲಿರುತ್ತಾಗಿ ಇವುಗಳನ್ನು ಡಿಟೋ ಗವೀಶಪ್ಪನವರು ಆಧಾರ, ದಾನ, ಕ್ರಯ, ಭೋಗ್ಯಾದಿ ಯಾವವಿಧವಾದ ಪರಾಧೀನಮಾಡಲು ಯಾವವಿಧವಾದ ಹಕ್ಕು ಇರುವದಿಲ್ಲ. ಇವರ ಬಾಬತು ಸ್ವತ್ತಿನ ಜವಾಬ್ದಾರಿಮೇಲೆ ಯಾರಾದರೂ ಸಾಲ ವಗೈರೆ ಕೊಟ್ಟಲ್ಲಿ ಆ ಸಾಲಗಳಿಗೆ ಇವರ ಸ್ವತ್ತುಗಳು ಈಡಾಗುವುದಿಲ್ಲ. ಅಲ್ಲದೆ ಆ ಸಾಲವು ಅವರಿಗೆ ಸಲ್ಲದೆ ಕಳೆದುಕೊಳ್ಳಬೇಕಾಗುತ್ತೆಂತಲೂ ಈ ಮೂಲಕ ತಿಳಿಸಿರುತ್ತೆ.

ಟಿ. ಆರ್. ಶಿವಪ್ಪ ಟ್ರಸ್ಟಿ,
ಗವೀಪುರಂ ಎಕ್‌ಸ್ಟೆನ್‌ಷನ್, ಬೆಂಗಳೂರು ಸಿಟಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

THE LAWYERS' CONFERENCE, TUMKUR.

The Secretary Law Association writes :—

All the Bar Associations in the State are addressed to nominate the President for the ensuing Conference to be held here in month of April 1926. The names of the nominies are expected to be received before the 5th January 1926. The fee for membership of the Receiption Committee has been fixed at any sum between Rs. 5 and Rs. 10 and the delegation fee is fixed at Rs. 2. All the lawyers in the State are requested to co-operate and enlist themselves as members to make the Conference a success.

D. RAMA RAO.

A POPULAR SURGEON.

Dr. D. S. Puttanna, B.A., F.R.C.S., (Edin.) arrived here on Thursday last and took charge of Sri Krishnarajendra Hospital as Medical Officer. There were it is understood a goodly number of his friends on the Bangalore City platform to bid him farewell. Within the last week since he handed over charge of the Victoria Hospital he had the honour of receiving a number of farewell entertainments at the hands of his numerous friends and wellwishers. The members of the Mysore Medical Association headed by Dr. B. Mahomad Usmon, Senior Surgeon in Mysore were At Home to meet Mr. Puttanna along with Mr. S. Subba Rao who returned from his European tour. And the members of the Devanga Sangha of which Mr. Puttanna is a patron, was entertained at a pleasant evening party just before his departure at the Sangha Hall in Bangalore City. Many of the distinguished friends and wellwishers of Mr. Puttanna also graced the occasion with their presence and among them were present Messrs P. G. D'Souza, Md. Abbas Khan, C. Hayavadana Rao, Rao Sahib H. Chennaya, Belur Srinivasa Iyengar, Appadorai Modaliyar, P. M. Basappa, G. Paramasivaya, M. C. Linge Gowda, P. S. Lakshminarasu, Drs. S. Subba Rao, B. K. Narayana Rao, S. Shanta, and Kazim besides the members of the Devanga Community. The programme of the evening included tea and music. Before the departure of the guests Mr. Puttanna thanked his fellow members of the Devanga Sangha for their kindness in having organised the evening's function. After distribution of flowers and pan-supari the programme came to an end with the expression of loyalty to their Highness the Maharaja and the Yuvaraja. Mr. Puttanna carries with him the good wishes of all who know him, friends or 'patients.'

WELLWISHER.

"WHAT CAN THIS MOVE BE?"

Day after day there is something either as editorials or as valued contributions from correspondents in the interesting columns of the esteemed Mysore Daily regarding the coming Dewan of Mysore. You have more than once expressed your opinion and what is needed in the interests of the people of Mysore. Sir A. R. Banergi has by his thoughtful financial policy raised Mysore from the depths of financial depression. He has in his resourceful brains what has to be done for the future prosperity of Mysore and those ideas of his mind have yet to be translated into realities. The people of Mysore have complete confidence and faith in his wisdom and impartiality.

While thus the public are in a peaceful state of mind, a bomb is thrown by the local daily of the 21st instant, shattering into bits such solid peace of mind. I should like to say with such emphasis as a sincere and feeling mind could command, that if an event like the one referred to by the Bangalore Correspondent of the Wealth of Mysore of the 21st instant were to happen, Mysoreans are finished—the hopes of the Mysore Kannadigas are at an end. The subjects of the State have been under the Madras Tamilians' influence for the last three quarters of a century and the oppressive atmosphere thereby created is felt even in the remote parts of the country. Let any one with an open mind examine the half yearly Civil List of the Gazetted officers and the lists of officials in the Secretariat, Comptrollers' office and other head-quarter offices. What does he see? I leave it to his eyes to witness the horrors contained in them. Blood is thicker than water! The invasion by the Tamil Intelligentia has already been far more than Mysore under the strongest frame of its own love, could any longer withstand. The wreck is there! The Youth of Mysore is ruined by the foreign invasion of super-intellegentia ie, M. As & M. L's-Kannada sympathy. Are not Mysoreans able to see the miserable plight of slavery into which they have fallen? How long will they be in a slumber? We must wake and fall at the feet of our gracious Sovereign to save us from the increasing troubles. There are other imaginary things ventilated in the columns of the Wealth of Mysore. Being unrealities I desist from discussing the unwarranted statements.

I venture to make an humble suggestion and it comes out of reverence, love and attachment to the Throne and the Person of H. H. the Maharaja. There is His Highness the Yuvaraja whose attainments and experiences entitling him to conduct executive administration of any heavy responsibility are second to none in India today. His Highness has plenty of energy and time to spare for the benefit of the country. Our country is suffering under super-brain effects. With an able executive Council His Highness the Yuvaraja under the loving guidance of His Highness the Maharaja will be the very proper Administrative Head of the State at this juncture and the people will feel happy and contented under such an arrangement. Will it be granted to them? I wish and I hope and it will be.

ONLOOKER.

ಬಹುಮಾನ.

ಪರಳೀವ್ಯಾಜ್ಯಪ್ರಕರಣದ ಸಲುವಾಗಿ ಶ್ರೀಜಗದಾಚಾರ್ಯಸ್ವಾಮಿ ವಿರೂಪಾಕ್ಷ ಒಡೆಯರವರು ಇದುವರೆಗೂ ಹೈದರಾಬಾದಿನಲ್ಲಿ ನಿಂತು ಪರಳೀವ್ಯಾಜ್ಯದ ಅರ್ಗ್ಯುಮೆಂಟು ನೆನ್ನೆ ದಿನ ಮುಗಿದದ್ದರಿಂದ ಈ ಹೊತ್ತಿನ ದಿವಸ ತಮ್ಮ ಚವುಡಯ್ಯದಾನಪುರಸಂಸ್ಥಾನಮಠಕ್ಕೆ ಹೊರಡುವ ಸಮಯದಲ್ಲಿ ಶ್ರೀಮಂತ ಬಾಪೂರಾವಸಾಹೇಬ ನಿರ್ಮಲದೇಶಮುಖ ಹೈಕೋರ್ಟುವಕೀಲ ಇವರು ಸದರಿ ಸ್ವಾಮಿಒಡೆಯರವರಿಗೆ ಒಂದು ಸಾವಿರ ರೂಪಾಯಿಗಳ ಕಿಮ್ಮತ್ತಿನ ವಜ್ರದ ಉಂಗುರವನ್ನು ಬಹುಮಾನಾರ್ಥವಾಗಿ ಸಮರ್ಪಿಸಿದರು. ಅದೇ ಸಮಯದಲ್ಲಿ ಶ್ಯಾಸನೂರಸಂಸ್ಥಾನದ ಪಂಡಿತ ಗುರುಬಸವಶಿವಾಚಾರ್ಯಸ್ವಾಮಿಗಳವರು ಶ್ರೀಒಡೆಯರ ವಿಷಯದಲ್ಲು ಮತ್ತು ಬಾಪೂರಾಯರು ಇನ್ನುಮುಂತಾದ ಕೆಲವು ಪ್ರಮುಖರ ವಿಷಯದಲ್ಲು ರಚಿಸಿದ ಕೆಲವು ಸಂಸ್ಕೃತ ಮತ್ತು ಕನ್ನಡಪದ್ಯಗಳನ್ನು ಒಳ್ಳೇ ರಸವತ್ತಾಗಿ ಹೇಳಿದರು. ಅನಂತರ ಅನೇಕಜನಸಮೂಹದೊಡನೆ ಉತ್ಸವದಿಂದ ಹೈದರಾಬಾದಸ್ಟೇಶನ್ನಕ್ಕೆ ಮಹಾಸವಾರಿಯು ದಯಮಾಡಿಸಿತು. ಪರಳೀವ್ಯಾಜ್ಯದ ಕಡೇಹುಕುಂ ಆದನಂತರ ತಮ್ಮ ಕಡಿಗೆ ಕಳಿಸುವೆವು.

ತಾ|| 19-12-1925. ತಮ್ಮ

ಎಸ್. ಚಂದ್ರಪ್ಪ ಸೇಗದಾರ್,
ಮೆಂಬರ್ ಸ್ಟ್ಯಾಂಡಿಂಗ್‌ಕಮಿಟಿ,
ಹೈದರಾಬಾದ್ ಸರ್ಕಲ್.

ಎಸ್. ಸೋಮೇಶ್ವರರಾವ್,
ಹೈಕೋರ್ಟು ವಕೀಲ್ ಮತ್ತು
ಸೆಕ್ರೆಟರಿ ಸ್ಟ್ಯಾಂಡಿಂಗ್‌ಕಮಿಟಿ,
ಹೈದ್ರಾಬಾದ್ ಸರ್ಕಲ್.

ಹೊಸಆಸ್ಪತ್ರೆಯ ಆರಂಭೋತ್ಸವ.

ನಾಗಮಂಗಲದ ತಾ|| ಬೆಳ್ಳೂರು ಸಾಹುಕಾರರುಗಳಲ್ಲಿ ಅಗ್ರಗಣ್ಯರು ಮತ್ತು ಧರ್ಮಿಷ್ಟರು ಆದ ಶ್ರೀಯುತ ಗಂಗಪ್ಪನವರು ಈ ಊರಿಗೆ ಮಂಜೂರಾಗಿರುವ ಆಸ್ಪತ್ರೆಗೆ 6000 ರೂ. ಬೆಲೆಬಾಳುವ ಕಟ್ಟಡವನ್ನು ಸರ್ಕಾರದವರು ಕೊಟ್ಟಿರುವ ಅಂದಾಜದಂತೆ ಕಟ್ಟಿಸಲು ವಾಗ್ದಾನಮಾಡಿರುತ್ತಾರೆ. ಈ ಕಟ್ಟಡದ ಶಂಕುಸ್ಥಾಪನೆಯು ಈ ತಾ|| 6ನೇ ಬುಧವಾರ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ್ ಸಾಹೇಬರವರಾದ ಮ|| ಎ.ವಿ. ರಾಮನಾಥನ್, ಬಿ.ಎ. ಯವರಿಂದ ನೆರವೇರಿಸಲ್ಪಡಲು ನಿಶ್ಚಯಿಸಲ್ಪಟ್ಟಿರುವುದರಿಂದ ಆ ಕಾಲಕ್ಕೆ ದಯಮಾಡಿಸುವ ಆಫೀಸರಿಗೂ ಖಾಸಗಿ ದೊಡ್ಡಮನುಷ್ಯರಿಗೂ ಈಗಾಗಲೇ ಕಟ್ಟಡಗಳನ್ನು ಬಿಡಿಸಿ ಇರುತ್ತಾರೆ. ಕೋಮುವಾರು ಭೋಜನಕ್ಕೂ ತಕ್ಕ ಏರ್ಪಾಟುಮಾಡುವವರಾಗಿರುತ್ತಾರೆ. ಈ ಧರ್ಮಿಷ್ಟರಿಗೆ ದೇವರು ಆಯುರಾರೋಗ್ಯವನ್ನು ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ಡಿ.ಪಿ. ಡಬ್ಲ್ಯು. ಸಬ್‌ಡಿವಿಜನ್ ಆಫೀಸರರಾದ ಮ|| ಸಿಂಗ್ರಾಚಾರ್‌ರವರು ಈ ಧರ್ಮಕಟ್ಟಡದ ವಿಚಾರದಲ್ಲಿ ಬಹಳ ಅಭಿಮಾನವಹಿಸಿರುತ್ತಾರೆ. ಸಾ|| ಗಂಗಪ್ಪನವರು ಅನೇಕ ಧರ್ಮಕೆಲಸಗಳಿಗೆ ಈ ರೀತಿ ದ್ರವ್ಯಸಹಾಯ ಮಾಡಿರುತ್ತಾರೆ. ಇಲ್ಲಿನ ಜಮೀನ್ದಾರ್ ಮತ್ತು ಚೇರ್ಮನ್ನರಾದ ರೆವಿನ್ಯು ಪಟೇಲ್ ಸುಬ್ಬರಾಯರು ಈ ಧರ್ಮಕಟ್ಟಡದ ವಿಚಾರದಲ್ಲಿ ಬಹಳ ಶ್ರದ್ಧೆವಹಿಸಿರುತ್ತಾರೆ.

ಸ್ಥಳವಾಸಿ.

ದಾವಣಗೆರೆಯ ಮಹಾಶಯರಲ್ಲಿ ವಿಜ್ಞಾಪನೆ.

ಪುರಾಭಿಮಾನಿಗಳೇ, ಮತ್ತು ಮಹನೀಯರೇ, ಕೇವಲ ಕರ್ಣಾಟಕದ ಕೇಂದ್ರಸ್ಥಾನಗಳಲ್ಲಿ ಒಂದಾದ ದಾವಣಗೆರೆಯಲ್ಲಿ ಇಂಗ್ಲಿಷ್ ಹೈಸ್ಕೂಲು ಸ್ಥಾಪಿಸಲ್ಪಟ್ಟಿರುವುದು ಸರಿಯಷ್ಟೆ. ಸದರಿ ಹೈಸ್ಕೂಲಿಗೆ ಕಟ್ಟಡವಿಲ್ಲದ ಕೊರತೆಯಿದ್ದಿತು. ಆದರೆ ಈಚೆಗೆ ಮ|| ಜಿಗಟೇರಿಶಿವರುದ್ರಪ್ಪ ಮುರಿಗೆಪ್ಪ ಇವರುಗಳ ಉದಾರಾಶ್ರಯದಿಂದ ಸರ್ಕಾರದವರು ಕಟ್ಟಡವನ್ನು ಕಟ್ಟುವುದಕ್ಕೆ ಅಪ್ಪಣೆ ಕೊಟ್ಟಪ್ರಕಾರ ಅದು ಪೂರೈಸುತ್ತ ಬಂದಿತು. 1926ನೇ ಜನವರಿಯಲ್ಲಿ ಪ್ರಾರಂಭೋತ್ಸವವು ನೆರವೇರುವುದೆಂದು ತೋರುತ್ತದೆ. ಈ ಸಮಾರಂಭದ ಕಾಲದಲ್ಲಿ ಶ್ರೀಮನ್ಮಹಾರಾಜರವರು ದಯಮಾಡಿಸುತ್ತಾರೆಂದು ಸುದ್ದಿ ಇತ್ತು. ಆದರೆ ನಮ್ಮ ದುರದೃಷ್ಟದಿಂದ ಶ್ರೀಮನ್ಮಹಾರಾಜರವರು ದಯಮಾಡಿಸುವ ಹಾಗೆ ಕಾಣುವುದಿಲ್ಲ. ಶ್ರೀಮನ್ಮಹಾರಾಜರವರು ದಯಮಾಡಿಸಿದ್ದರೆ ಅವರ ದಿವ್ಯಸನ್ನಿಧಿಯಲ್ಲಿ ನಮ್ಮ ಮೈಸೂರುದೇಶಕ್ಕೆ ಎರಡನೇ ಬೆಂಗಳೂರಂತಿರುವ ದಾವಣಗೆರೆಯಲ್ಲಿ 'ಇಂಟರ್‌ಮೀಡಿಯಟ್ ಕಾಲೇಜನ್ನು' ಸ್ಥಾಪಿಸಲಿಕ್ಕೆ ಅಪ್ಪಣೆ ಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳಬಹುದಾಗಿದ್ದಿತು. ಈಗಲಾದರೇನು, ಶ್ರೀಮದ್ಯುವರಾಜರವರು ಇಂಗ್ಲೆಂಡಿನಿಂದ ದಯಮಾಡಿಸಿದ್ದಾರೆ. ಅವರನ್ನು ನಮ್ಮ ಊರಿನ ಹೊಸಹೈಸ್ಕೂಲ್ ಪ್ರವೇಶೋತ್ಸವಕ್ಕೆ ಆಹ್ವಾನಿಸಿ ನಮ್ಮ ಮುಖ್ಯಕೊರತೆಯನ್ನು ಅರಿಕೆಮಾಡಿಕೊಂಡು ದಿವ್ಯಸನ್ನಿಧಿಯ ಸದುತ್ತರವನ್ನು ಪಡೆಯುವುದೇ ಯುಕ್ತವಾಗಿ ತೋರುತ್ತದೆ. ಕಾಲವು ಬಹಳ ಸಮೀಪಿಸಿತು. ಆದಕಾರಣ ಇನ್ನಾದರೂ ದಾವಣಗೆರೆಯ ಪುರಪ್ರಮುಖರು ಇತ್ತಕಡೆ ಲಕ್ಷ್ಯಕೊಡುವರೇ? ಕೇವಲ ಸಣ್ಣಪಟ್ಟಣಗಳಾದ ತುಮಕೂರು ಮುಂತಾದ ಸ್ಥಳಗಳಲ್ಲಿಯೂ ಕೊಲಿಜಿಯೆಟ್ ಹೈಸ್ಕೂಲುಗಳಿವೆ. ಆದರೆ ದೊಡ್ಡಪಟ್ಟಣವಾದ ದಾವಣಗೆರೆಯಲ್ಲಿ ಇಲ್ಲದಿರುವುದನ್ನು ನೋಡಿದರೆ ನಮ್ಮ ಊರಿನ ಮಹಾಜನರು ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಲಕ್ಷ್ಯಕೊಡುವುದಿಲ್ಲವೆಂದು ವ್ಯಕ್ತವಾಗುತ್ತದೆ. ಮಹಾಜನರೆ, ಇನ್ನಾದರೂ ವಿದ್ಯಾಭಿವೃದ್ಧಿಗೆ ಪ್ರಯತ್ನಿಸಿರಿ.

ಓರ್ವವಿದ್ಯಾರ್ಥಿ.

ವೀರಶೈವಸಜ್ಜನಸಮಾಜದ ಐಕ್ಯತೆಯು.

ತಾ|| 11-12-1925ನೇ ಶುಕ್ರವಾರ ಮುದ್ದೇಬಿಹಾಳದಲ್ಲಿ ನಡೆದ ಮ|| ಸಜ್ಜನ ಸಂಗನಬಸಪ್ಪನವರ ಪುತ್ರರ ಲಗ್ನಸಮಾರಂಭಕಾಲಕ್ಕೆ ವೀರಶೈವ ಸಜ್ಜನಸಮಾಜದವರೆಲ್ಲರೂ ಆಗಮಿಸಿದ್ದರು. ಈ ಸಮಯವರಿತು 1, 3, 5 ಈ ಮೂರೂ ಗಡಗಡವರನ್ನು ಒಂದಾಗಿ ಮಾಡಬೇಕೆಂದು ಸಮಾಜದ ಕಳಕಳಿಯುಳ್ಳ ಜನರಿಂದ ಹಸ್ತಪತ್ರಿಕೆಗಳು ಹಂಚಲ್ಪಟ್ಟವು. ಲಗ್ನಕ್ಕಾಗಿ ದೇಶಭಕ್ತ ಹರ್ಡೀಕರಮಂಜಪ್ಪನವರೂ ಬಂದಿದ್ದರು. ಆಗ ಮ|| ಮಹಾಂತಪ್ಪಸೂಡಿ ಮತ್ತು ಮ|| ರಾಜಪ್ಪ ಕೆರೂರ ಈ ಉಭಯತರು ದೇ. ಮಂಜಪ್ಪನವರಿಗೆ ಸಜ್ಜನಸಮಾಜದ ಐಕ್ಯತೆಯ ಬಗ್ಗೆ ತಿಳಿಸಿದರು. ಆಗ ಎಲ್ಲಜನರನ್ನೊಡಗೂಡಿಕೊಂಡು ಆಲೋಚನೆಮಾಡಿ, ದೇ. ಮಂಜಪ್ಪನವರು ಜನೈಕ್ಯತೆಯ ಬಗ್ಗೆ ಸರಸಾಗಿ ತಿಳಿಯಹೇಳಿದರು, ಮತ್ತು "ನಿಜವಾದ ಐಕ್ಯವಾಗಬೇಕಾದರೆ ಸಜ್ಜನರೆಂಬ ಅಭಿಧಾನವು ಒಂದ ಬಗೆಯನ್ನೂ, ಅವರ ಮುಖ್ಯಕರ್ತವ್ಯಗಳಾವುವೆಂಬುದನ್ನೂ, ಅವರಲ್ಲಿ ಪರಸ್ಪರ ಪ್ರೇಮವುಂಟಾಗುವ ರೀತಿಯನ್ನೂ ತಿಳಿಸುವ ಹೊಸದೊಂದು ಪುಸ್ತಕವನ್ನು ರಚಿಸಿ, ಪ್ರತಿಯೊಂದು ಹಳ್ಳಿಗೂ ಉಚಿತವಾಗಿ ಹಂಚಬೇಕು. ಈ ಕಾರ್ಯಕ್ಕಾಗಿ ಮೊದಲು ಕೆಲವು ಹಣವು ಅವಶ್ಯವಾಗಿ ಬೇಕು." ಈ ರೀತಿ ಸುಧಾರಣೆಯ ಮರ್ಮವನ್ನು ತಿಳಿಸಲು ಆಕ್ಷಣವೇ ಸಮಾಜಹಿತೇಚ್ಛುಗಳಾದ ಜನರಿಂದ 348 ರೂಪಾಯಿಗಳ ವಾಗ್ದಾನವಾಯಿತು. ಈ ಹಣವನ್ನು ಇಲಕಲ್ಲ ಮ|| ಮಹಾಂತಪ್ಪಸೂಡಿ ಇವರ ಕಡೆಗೆ ಇಡಬೇಕೆಂತಲೂ, ಶಕೆ ೧೮೪೮ರಲ್ಲಿ ಸಜ್ಜನಮಹಾಸಭೆಯನ್ನು ಬಾಗಲಕೋಟೆಯಲ್ಲಿ ಕೂಡಿಸಬೇಕೆಂತಲೂ, ಆ ಸಭೆಯಲ್ಲಿಯೇ ಹೊಸ ಕಾರ್ಯಕಾರಿಮಂಡಲವನ್ನು ನಿಯಮಿಸಬೇಕೆಂತಲೂ ಗೊತ್ತಾಗಿದೆ. ಹಣವನ್ನು ಕಳಿಸಿದವರ ಹೆಸರುಗಳೆಲ್ಲ ಮುಂದೆ ಹೊರಡುವ ರಿಪೋರ್ಟಿನಲ್ಲಿ ಪ್ರಸಿದ್ಧಮಾಡಲ್ಪಡುವುವು. ಈಗ ಸದ್ಯಕ್ಕೆ ಹಣಕೂಡಿಸುವ ಮತ್ತು ಬಾಗಲಕೋಟೆಯಲ್ಲಿ ಸಭೆಕೂಡಿಸುವ ಕೆಲಸಗಳಿಗಾಗಿ ಕೆಳಗೆ ಕಾಣಿಸಿದ ಆರುಜನ ಪಂಚರು ನಿಯಮಿಸಲ್ಪಟ್ಟಿದ್ದಾರೆ. ಮ|| ಗಳಾದ (1) ಮಹಾಂತಪ್ಪ ಸೂಡಿ ಇಲಕಲ್ಲ. (2) ರಾಜಪ್ಪ ಕೆರೂರು ಬಾಗಲಕೋಟೆ. (3) ಮಲ್ಲೇಶಪ್ಪ ಹಲಗೇರಿ ನರೇಗಲ್ಲ. (4) ಮುದ್ದಪ್ಪ ಸಜ್ಜನರ ಮುದ್ದೇಬಿಹಾಳ. (5) ಫಕೀರಪ್ಪ ಹಾಲಣ್ಣನವರ ರೋಣ. (6) ಫಕೀರಪ್ಪ ಮಾಸ್ತರ ಹುಬ್ಬಳ್ಳಿ. ಈ ಪ್ರಕಾರ ಸಜ್ಜನಸಮಾಜದ ಐಕ್ಯತೆಯ ಕಾರ್ಯವು ಹೊಸಸ್ಫೂರ್ತಿಯಿಂದ ನೆರವೇರಿತು. ಸಜ್ಜನಬಂಧುಗಳೆಲ್ಲರೂ ಈ ಶುಭಕಾರ್ಯಕ್ಕೆ ತನುಮನಧನಗಳಿಂದ ಸಹಾಯಮಾಡಿ ಇಹಪರ ಸುಖಗಳಿಗೆ ಭಾಗಿಗಳಾಗಬೇಕೆಂದು ವಿನಂತಿ.

ತಮ್ಮ ಸೇವಕ,
ಪರಪ್ಪ ನಂದವಾಡಗಿ, ಇಲಕಲ್ಲ.

ವೀರಶೈವಸಮಾಜದ ಮೇಲೆ ಹಕ್ಕುಬಾಧ್ಯತೆಯನ್ನು ನಡೆಯಿಸಿರುವ ಓರ್ವ ಜೋಯಿಸನು.

ಪರಳೀ ವೈದ್ಯನಾಥಲಿಂಗದ ರುದ್ರಾಭಿಷೇಕವನ್ನು ವೇದಾಧ್ಯಯನಪೂರ್ವಕವಾಗಿ ಮಾಡಲು ವೀರಶೈವಸಮಾಜಕ್ಕೆ ಅಧಿಕಾರವಿಲ್ಲವೆಂದು ಪರಳಿಯ ಕೆಲವು ಬ್ರಾಹ್ಮಣರು ನೈಜಾಮರಾಜರಲ್ಲಿ ನಡೆಸಿದ ವ್ಯಾಜ್ಯವನ್ನೂ, ಅದರ ಪರಿಣಾಮಸ್ಥಿತಿಯನ್ನೂ ಈ ಪತ್ರಿಕಾಮೂಲಕ ಸರ್ವ ವೀರಶೈವರೂ ತಿಳಿದೇ ಇರುವರು. ಅದಂತಿರಲಿ. ಮತ್ತೊಬ್ಬ ಬ್ರಾಹ್ಮಣನು ವೀರಶೈವಸಮಾಜದ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಲು ಬಂದಿರುವನು. ಕೆಳಗಿನ ವಿಷಯವನ್ನು ಸರ್ವ ವೀರಶೈವರೂ ಲಕ್ಷ್ಯಗೊಟ್ಟು ಓದತಕ್ಕದ್ದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿರುವ ಸಂಡೂರು ಸ್ಟೇಟಿಗೆ ಸೇರಿದ ಕಣಿವೆಹಳ್ಳಿ ಎಂಬ ಗ್ರಾಮದಲ್ಲಿ ಎರೆಹಳ್ಳಿ ವೀರಣ್ಣನೆಂಬ ವೀರಶೈವ ಸದ್ಗೃಹಸ್ಥರು ತಮ್ಮ ತಮ್ಮನ ಲಗ್ನವನ್ನು ವೀರಶೈವಮಠಸ್ಥರ ಕಡೆಯಿಂದ ಇದೇ ಸಂವತ್ಸರದ ಮಾರ್ಗಶೀರ್ಷ ಮಾಸದಲ್ಲಿ ತಮ್ಮ ಗೃಹದಲ್ಲಿ ನಡಿಸಿದರು. ಲಗ್ನಕಾಲಕ್ಕೆ ಆ ಗ್ರಾಮದ ನಾರಾಯಣಭಟ್ಟನೆಂಬ ಜೋಯಿಸನು ಬಂದು, ನಾನು ಈ ಗ್ರಾಮದ ಜೋಯಿಸನು, ನನಗೆ ಸೀದ ಕೊಡಬೇಕು. ಇದಲ್ಲದೆ 5 ರೂ. ನನಗೆ ಬಾಬುಬರಬೇಕು, ಇನ್ನೂ ಕೆಲವು ಬರತಕ್ಕ ಬಾಬುಗಳನ್ನೆಲ್ಲಾ ಕೊಡಬೇಕೆಂದು ತೊಂದರೆಪಡಿಸಿದನು ಲಗ್ನದ ಯಜಮಾನರು ಶಾಂತರೀತಿಯಿಂದ ಜೋಯಿಸನನ್ನು ಕುರಿತು "ನಿನ್ನ ಕಡೆಯಿಂದ ನಾವು ಲಗ್ನದ ಯಾವ ಕಾರ್ಯವನ್ನೂ ಮಾಡಿಸಿಲ್ಲ. ನಮ್ಮ ಮಠದ ಗುರುಗಳ ಕಡೆಯಿಂದ ಮಾಡಿಸಿರುವೆವು. ಅವರಿಗೆ ಲಗ್ನದಲ್ಲಿ ಬರತಕ್ಕ ಬಾಬನ್ನು ಸಲ್ಲಿಸುತ್ತಿರುವೆವು. ಆ ಬಾಬನ್ನು ನಿನಗೆ ಕೊಟ್ಟರೆ ನಮ್ಮ ಮಠಗುರುಗಳು ನನ್ನನ್ನು ಮಠದಿಂದ ಬಹಿಷ್ಕರಿಸಬಹುದು. ಹೀಗೆ ತೊಂದರೆಪಡಿಸುವುದು ವಿಹಿತವಲ್ಲ" ಎಂದು ಹೇಳಿದರು. ಆ ಜೋಯಿಸನು ಅಷ್ಟಕ್ಕೆ ಸುಮ್ಮನಾಗದೆ ವೀರಣ್ಣನವರಿಗೆ ಇಲ್ಲದಸಲ್ಲದ ಮಾತುಗಳಿಂದ ನೋಟೀಸನ್ನು ಕೊಟ್ಟು ಸಂಡೂರು ಸ್ಟೇಟಿನಲ್ಲಿರುವ ದಿವಾನ್ ಕೋರ್ಟಿನಲ್ಲಿ ತನ್ನ ಬಾಬು ಕೊಡಿಸಬೇಕೆಂದು ದಾವಾಹಂದಿರುವನು. ನೋಡಿರಿ, ವೀರಶೈವಸಮಾಜದ ಮೇಲೆ ಜೋಯಿಸನು ಹಕ್ಕುದಾರನಾಗಿ ಬಂದಿರುವನು! ಸದರಿ ವೀರಣ್ಣನವರು ಸ್ಟೇಟಿನ ಖುದ್ದು ಮಹಾರಾಜರ ಸನ್ನಿಧಿಯಲ್ಲಿಯೇ ಈ ವಿಷಯ ವಿಮರ್ಶೆಮಾಡಬೇಕೆಂದು ಮಹಾರಾಜರಿಗೊಂದು ಅರ್ಜಿಮಾಡಿಕೊಂಡಿರುವರು. ವರ್ಣಾಶ್ರಮಧರ್ಮಗಳಿಗೆ ಕುಂದುಬರದಂತೆ ಸರ್ವಸಮಾಜದವರನ್ನೂ ರಕ್ಷಿಸುವುದು ರಾಜಧರ್ಮವಲ್ಲವೆ? ಸಂಡೂರು ಧರ್ಮಪ್ರಭುಗಳು ವೀರಶೈವಸಮಾಜದ ಮೇಲೆ ಎಂದೂ ಇಲ್ಲದ ಮಿಥ್ಯಾರೋಪವಾದ ಜೋಯಿಸನ ಹಕ್ಕನ್ನು ದೂರೀಕರಿಸಿ, ತಮ್ಮ ಸ್ಟೇಟಿನಲ್ಲಿರುವ ವೀರಶೈವ ಪ್ರಜೆಗಳ ಪ್ರೀತಿಪಾತ್ರರಾಗದಿರಲಾರರೆಂದು ನಂಬಿರುವೆನು. ಆದರೆ, ಸರ್ವ ವೀರಶೈವರೂ ಮೇಲೆಹೇಳಿದ ವಿಷಯದ ಬಗ್ಗೆ ತಕ್ಕ ಸಲಕರಣೆಗಳನ್ನು ಒದಗಿಸಿ ಪ್ರತಿವಾದಿಯಾದ ವೀರಣ್ಣನವರಿಗೆ ತಿಳಿಸಿ ಕೀರ್ತಿಭಾಜನರಾಗಬೇಕೆಂದು ಕೋರುವ,

ಓರ್ವ ಸಮಾಜಬಂಧು.

ಸಾಧುಸದ್ಧರ್ಮವೀರಶೈವಸಂಘದ ಜನರಲ್ ಮೀಟಿಂಗು ಗುಂಡೇರಿ.

ಈ ಸಂಘದ ಜನರಲ್ ಮೀಟಿಂಗು 1925 ನೇ ಡಿಸೆಂಬರ್ 12-13-14 ನೇ ತಾ|| ಗಳಲ್ಲಿ ಹೊಳಲಕೆರೆ ತಾ|| ಗುಂಡೇರಿಗ್ರಾಮದಲ್ಲಿ ಶ್ರೀ ಶಿರಿಗೆರೆಸಂಸ್ಥಾನದ ಪಟ್ಟಾಧ್ಯಕ್ಷರಾದ ಶ್ರೀಗುರುಶಾಂತರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಅತಿವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಈ ಮೀಟಿಂಗಿಗೆ ಸಂಘದ ಪ್ರೆಸಿಡೆಂಟರು, ಹೊಳಲಕೆರೆ ತಾ|| ಅಮಲ್ದಾರರಾದ ಮ|| ಸಿ. ಕೃಷ್ಣರಾಯರು, ಸಂಘದ ಮೆಂಬರುಗಳು ಮತ್ತು ಪ್ರೇಕ್ಷಕರು ಸುಮಾರು 2,000 ಜನಗಳವರೆಗೆ ಸೇರಿದ್ದರು. ಸಭಾಮಂಟಪವು ತಳಿರುತೋರಣಗಳಿಂದಲೂ ಕದಲೀಸ್ತಂಭಗಳಿಂದಲೂ ದಿವ್ಯವಾಗಿ ಅಲಂಕರಿಸಲ್ಪಟ್ಟಿತ್ತು. 12 ನೇ ತಾ|| ಮಧ್ಯಾಹ್ನ 1 ಘಂಟೆಗೆ ಮೀಟಿಂಗು ಪ್ರಾರಂಭವಾಯಿತು. ಶ್ರೀಗಳವರು 1 ಘಂಟೆಗೆ ಸರಿಯಾಗಿ ಮಂಗಳವಾದ್ಯಗಳು ಘೋಷಿಸುತ್ತಿರುವಲ್ಲಿ ತಮ್ಮ ಬಿಡಾರದಿಂದ ವಿಜಯಂಗೈದು ಸಭಾಮಂಟಪವನ್ನು ಪ್ರವೇಶಿಸಿ ತಮಗೋಸ್ಕರವಾಗಿ ಏರ್ಪಡಿಸಿದ್ದ ಉಚಿತಾಸನದಲ್ಲಿ ಮಂಡಿಸಿದನಂತರ, ಬಾಲಕರು ದೇವತಾಪ್ರಾರ್ಥನೆ, ಶ್ರೀಗಳವರ ಶ್ರೀಮದ್ಗುರು [illegible] ಮಹಾಸ್ವಾಮಿಗಳವರ ಶ್ರೀಯುತಪ್ರಾರ್ಥನೆಯನ್ನು ಮಾಡಿದನಂತರ ಸ್ವಾಗತ ಸಂಘದವರವಾಗಿ ಗುಂಡೇರಿವಾಸಿಗರು ಮ|| ಹಾಲಪ್ಪನವರು ಶ್ರೀಗಳವರ ಮತ್ತು ಸಭಾಜನರ ಸುಸ್ವಾಗತವನ್ನು ಬಯಸಿ ಸ್ವಾರಸ್ಯವಾದ ಭಾಷಣವನ್ನುಮಾಡಿ ಈ ಗ್ರಾಮದಲ್ಲಿ ಜನರಲ್‌ಮೀಟಿಂಗು ನಡಿಸಿ ಈ ಮಹಾಜನಗಳ ಸೇವೆಯನ್ನು ಮಾಡಲು ಅವಕಾಶದೊರಕಿದುದಕ್ಕೆ ತಮಗೂ ತಮ್ಮ ಗ್ರಾಮಸ್ಥರಿಗೂ ಉಂಟಾದ ಸಂತೋಷವನ್ನು ವ್ಯಕ್ತಗೊಳಿಸಿದರು.

ತರುವಾಯ ಸಂಘದ ಪ್ರೆಸಿಡೆಂಟರಾದ ಮ|| ಬಿ. ಲಿಂಗಯ್ಯನವರು ಈ ಸಂಘದವರು 3 ವರ್ಷಗಳಿಂದಲೂ ನಡಿಸಿದ ಪ್ರೋಗ್ರೆಸ್ ಮತ್ತು ಜಮಾಖರ್ಚು ವಗೈರೆ ಕುರಿತು ರಿಪೋರ್ಟನ್ನು ಓದಿದರು. ಅದರ ಮುಖ್ಯಾಂಶವೇನೆಂದರೆ. (1) ವೀರಶೈವರಲ್ಲಿ ಅನೇಕ ಒಳಪಂಗಡಗಳಿವೆ. ಎಲ್ಲಾ ಪಂಗಡದವರು ಸಮಾನರು. ಪ್ರತಿಪಂಗಡಗಳಲ್ಲಿಯೂ ಸಂಘಗಳನ್ನು ಏರ್ಪಡಿಸುವದರಿಂದ ಸಮುದಾಯದಲ್ಲಿ ಒಡಕುಂಟಾಗಿ ಒಗ್ಗಟ್ಟಿಗೆ ನ್ಯೂನತೆಯುಂಟಾಗುತ್ತೆಂದು ಕೆಲವರು ಅಭಿಪ್ರಾಯಪಡುತ್ತಿದ್ದಾರೆ. ಆದರೆ ವೀರಶೈವರಲ್ಲಿ ಒಂದುಪಂಗಡ ಹೆಚ್ಚು ಮತ್ತೊಂದುಪಂಗಡ ಕಮ್ಮಿ; ಒಂದು ಪಂಗಡದವರು ಮಾತ್ರವೇ ಗುರುತ್ವಕ್ಕೆ ಅರ್ಹರು, ಬಾಕಿಯವರು ಅಲ್ಲವೆಂದು ಕೆಲವರು ದುರಭಿಪ್ರಾಯಗಳನ್ನು ಹುಟ್ಟಿಸಿ, ನಮ್ಮ ಪಂಗಡದವರು ಹೆಚ್ಚು ಜನಸಂಖ್ಯೆ ಇದ್ದಾಗ್ಯೂ ಇವರುಗಳ ಅಭಿವೃದ್ಧಿಯನ್ನು ಕೋರದೆ ಮುಂದಾಳುಗಳಾಗಿರತಕ್ಕವರು ಸ್ವಸಂಗಡದವರ ಹಿತವನ್ನೇ ಬಯಸುತ್ತಿರುವದರಿಂದ ನಮ್ಮವರು ಪ್ರೋತ್ಸಾಹವಿಲ್ಲದೆ ಮುಂದೆಬರಲು ಅವಕಾಶವಿಲ್ಲವಾಗಿ ಈ ಸಂಘವನ್ನು ಏರ್ಪಡಿಸಿರುತ್ತದೆಯೇ ವಿನಹಾ ಇತರ ಪಂಗಡಗಳವರಮೇಲೆ ಪೈಪೋಟಿನಡಸಬೇಕೆಂಬ ಉದ್ದೇಶದಿಂದಲ್ಲ, ಮತ್ತು ನಮ್ಮವರು ಈಗಿನ ಕಾಲಕ್ಕೆ ತಕ್ಕಂತೆ ವಿದ್ಯೆ, ನಾಗರೀಕತೆ ಮುಂತಾದವುಗಳಲ್ಲಿ ಹಿಂದುಳಿದಿರುವದರಿಂದ ಇದಕ್ಕೆ ಪ್ರಯತ್ನಮಾಡಿ ಸೌಜನ್ಯ, ಪರಸ್ಪರ ವಿಶ್ವಾಸವನ್ನುಂಟುಮಾಡುವಂತೆಯೂ, ವೀರಶೈವರಲ್ಲಿ ನಾನು ಹೆಚ್ಚು ಇತರರು ಕೀಳು ಎಂಬ ಅಹಂಭಾವವನ್ನು ಹೋಗಲಾಡಿಸಿ ವೀರಶೈವರೆಲ್ಲ ಸರ್ವಸಮಾನರು ಎಂಬ ಮತದ ನಿಜತತ್ವಗಳನ್ನೂ, ಬಸವಾದಿ ಪ್ರಮಥರ ನಿಜತತ್ವಗಳನ್ನೂ, ವಿಜ್ಞಾಪನಪತ್ರಿಕೆಗಳ ಮೂಲಕವಾಗಿ ಬರೆದು ಪ್ರಿಂಟುಮಾಡಿಸಿ ಸಮಾಜದಲ್ಲೆಲ್ಲ ವ್ಯಕ್ತಗೊಳಿಸಲಾಗಿದೆ. (2) ನಮ್ಮವರ ಗುರುಪೀಠದಲ್ಲೊಂದಾದ ಮತ್ತು ಅನೂಚಾನವಾಗಿ ಸರ್ಕಾರದಿಂದ ಇನಾಂಜಮೀನುಗಳನ್ನು ಅನುಭೋಗಿಸುತ್ತಿರುವ ಹೊಸದುರ್ಗ ತಾ|| ಸಾಣೆಹಳ್ಳಿ ಸಂಸ್ಥಾನಕ್ಕೆ ಈಗ 10-12 ವರ್ಷಗಳಿಂದಲೂ ಪಟ್ಟಾಧಿಕಾರಿಗಳು ಇಲ್ಲದೆ ಇದ್ದುದರಿಂದ ಸಂಘದವರು ಅಲ್ಲಿಗೆ ಹೋಗಿ ಯೋಗ್ಯರಾದ ಒಬ್ಬರಿಗೆ ಅಧಿಕಾರವನ್ನು ವಹಿಸಿಕೊಟ್ಟದ್ದಲ್ಲದೆ ಮಾಗಡಿ ತಾ|| ಹುಲಿಕಲ್‌ಗ್ರಾಮದ ಸಂತೆಮಠಕ್ಕೂ ಒಬ್ಬರು ಸ್ವಾಮಿಗಳನ್ನು ಮೊಕರರ್ರುಮಾಡಿಕೊಟ್ಟಿರುತ್ತಾರೆ. (3) ಚಿಕ್ಕಮಗಳೂರು ಸ್ಟೂಡೆಂಟ್ಸ್ ಹೋಂ ಫಂಡಿನ ವಿಚಾರದಲ್ಲಿ ಸ್ವಾಮಿಗಳವರಿಗೂ ಭಕ್ತಾದಿಗಳಿಗೂ ಉಂಟಾಗಿದ್ದ ವೈಮನಸ್ಸನ್ನು ಹೋಗಲಾಡಿಸಿ ಹಾಸ್ಟಲ್ ಅಭಿವೃದ್ಧಿಗಾಗಿ 10,000 ರೂ.ಗಳನ್ನು ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್‌ಮಾಡಿಸಿ ಈ ಸಂಘದ ಪ್ರೆಸಿಡೆಂಟರವರನ್ನೇ ಅಲ್ಲಿಯ ಕಮಿಟಿಗೆ ಸಲ್ಲಾಹಕರಾಗಿ ಏರ್ಪಾಟುಮಾಡಿದ್ದು. (4) ದಾವಣಗೆರೆ ತಾ|| ಆನಗೋಡು, ಬೇತೂರು, ಜಗಳೂರು ತಾ|| ಉಜ್ಜಪ್ಪ ಒಡೇರಹಳ್ಳಿ, ಬಳ್ಳಾರಿಜಿಲ್ಲಾ ಕೂಡ್ಲಿಗಿ ತಾ|| ಉಜ್ಜಯಿನಿ, ತೂಲಹಳ್ಳಿ ಮುಂತಾದ ಸ್ಥಳಗಳಲ್ಲಿ ಪ್ರೆಸಿಡೆಂಟರೂ, ಕೆಲವು ಮೆಂಬರುಗಳೂ ಸಂಚರಿಸಿ ಆಯಾ ಸ್ಥಳಗಳಲ್ಲಿದ್ದ ಶಿಲಾಶಾಸನ, ತಾಂಬ್ರಶಾಸನ ಮತ್ತು ಪುರಾತನಗ್ರಂಥಗಳನ್ನು ಶೇಖರಿಸಿ, ಓರಿಯಂಟಲ್ ಲೈಬ್ರರಿಗೆ ಕಳುಹಿಸಿಕೊಟ್ಟು ಅವರ ಅಭಿಪ್ರಾಯವನ್ನು ತರಿಸಿದ್ದಲ್ಲದೆ ನಮ್ಮವರ ಮೂಲಪೀಠವಾದ ಉಜ್ಜಯಿನಿ ಸಿಂಹಾಸನದ ಪೂರ್ವದ ಮುದ್ರಾಶಂಖುವನ್ನು ಶೇಖರಿಸಿದ್ದು. (5) ಸಂಘದ ಪೋಷಕರಾದ ಶ್ರೀ|| ಗುರುಶಾಂತರಾಜ ದೇಶಿಕೇಂದ್ರಮಹಾಸ್ವಾಮಿಗಳವರು ದಾವಣಗೆರೆ ಟವನ್ನಿನಲ್ಲಿ 18,000 ರೂ. ಗಳಿಗೆ ಕ್ರಯಕ್ಕೆ ಕೊಂಡು ಸಂಘಕ್ಕೆ ಉಚಿತಾರ್ಥವಾಗಿ ದಯಪಾಲಿಸಿರುವ ಕಟ್ಟಡದಲ್ಲಿ ಹಾಸ್ಟಲ್ ಏರ್ಪಾಡುಮಾಡಿ ಅಲ್ಲಿಗೆ ಪಾತ್ರೆ, ದೀಪ, ಫರ್ನೀಚರು ಮುಂತಾದ ಸೌಕರ್ಯಗಳನ್ನೊದಗಿಸಿಕೊಟ್ಟು ಸುಮಾರು 25-30 ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡಲು ಅನುಕೂಲಪಡಿಸಿಕೊಟ್ಟದ್ದಲ್ಲದೆ ಮ|| ದಿವಾನ್ ಸಾಹೇಬರವರನ್ನು ಹಾಸ್ಟಲಿಗೆ ಬರಮಾಡಿಕೊಂಡು ಗೌರವಿಸಿದ್ದು. (6) ಈ ಸಂಘವು ಸ್ಥಾಪಿತವಾಗಿ ಮೂರುವರ್ಷಗಳಾದವು. ಇದುವರೆಗೆ 531 ಜನ ಮೆಂಬರುಗಳು ಸೇರಿ 15,240 ರೂ. ಗಳ ಚಂದಾ ವಾಗ್ದಾನಮಾಡಿರುತ್ತಾರೆ. ಇವರ ಪೈಕಿ 200 ಜನರುಗಳಿಂದ 6490 ರೂ. ವಸೂಲಾಗಿ 1877 ರೂ. ಹಾಸ್ಟಲ್ ರಿಪೇರಿ ಮುಂತಾದ ಸಂಘದ ಕಾರ್ಯಾನುಕೂಲತೆಗಳಿಗಾಗಿ ಖರ್ಚಾಗಿರುತ್ತೆ. ಪುನಹ ಈದಿವಸ 65 ಜನ ಮೆಂಬರುಗಳು ಹೊಸದಾಗಿ ಸೇರಿ 1200 ರೂ. ಚಂದಾ ವಾಗ್ದಾನಮಾಡಿರುತ್ತಾರೆ. ಈ ಚಂದಾದಾರರೆಲ್ಲರೂ ದಯವಿಟ್ಟು ತಮ್ಮ ಚಂದಾಹಣವನ್ನು ಜಾಗ್ರತೆ ಪಾವತಿಮಾಡಿ ಸಂಘದ ಅಭಿವೃದ್ಧಿಗೆ ತುಂಬಾ ಸಹಾಯಮಾಡುತ್ತಾರಾಗಿ ನಂಬುತ್ತೇವೆ. ಈಗ 3 ವರ್ಷಗಳಿಂದಲೂ ನಮ್ಮವರಲ್ಲಿ 3 ಜನರು ಎಲ್ ಎಲ್.ಬಿ., ಯಲ್ಲೂ, 5 ಜನರು ಬಿ.ಎ., ತರಗತಿಯಲ್ಲೂ, 5 ಜನರು ಎಂಟ್ರೆನ್ಸಿನಲ್ಲಿಯೂ, 25 ಜನರು ಎಸ್. ಎಸ್. ಎಲ್. ಸಿ. ಯಲ್ಲೂ, 200 ಜನಗಳವರೆಗೆ ಇಂಗ್ಲೀಷು ಮತ್ತು ಕನ್ನಡ ಲೋವರ್‌ಸೆಕೆಂಡರಿಯಲ್ಲೂ ತೇರ್ಗಡೆಯಾಗಿರುತ್ತಾರಲ್ಲದೆ ಒಬ್ಬ ವಿದ್ಯಾರ್ಥಿನಿಯು ಮದರಾಸ್, ಎಸ್.ಎಸ್.ಎಲ್.ಸಿ., ಯಲ್ಲಿ ತೇರ್ಗಡೆಯಾಗಿರುವದು ತುಂಬಾ ಸಂತೋಷಪ್ರದವಾಗಿರುತ್ತೆ.

13 ಮತ್ತು 14 ನೇ ತಾರೀಖುಗಳಲ್ಲಿಯೂ ಬೆಳಿಗ್ಗೆ ಮಧ್ಯಾಹ್ನ ಸಭೆ ಸೇರಿ ಸಂಘದ ಅಭಿವೃದ್ಧಿ, ಮಠಸುಧಾರಣೆ, ವಿದ್ಯಾಭಿವೃದ್ಧಿ, ಸಂಸ್ಥಾನದ ಆಡಳಿತಗಳ ವಿಚಾರದಲ್ಲಿ ಅನೇಕ ಚರ್ಚೆಗಳು ನಡೆದು ಕೆಲವು ತೀರ್ಮಾನಗಳು ಮಾಡಲ್ಪಟ್ಟವು. ಇವುಗಳಲ್ಲಿ ಮುಖ್ಯವಾದವುಗಳು ಯಾವವು ಎಂದರೆ.—(1) ನಮ್ಮ ಸಂಸ್ಥಾನದ ಮಂತ್ರಿಶ್ರೇಷ್ಠರಾದ ರಾಜಮಂತ್ರಧುರೀಣ ಸರ್ ಆಲ್ಬಿಯನ್ ರಾಜಕುಮಾರ ಬಾನರ್ಜಿ, ಎಂ.ಎ., ಕೆ.ಟಿ., ಸಿ.ಎಸ್.ಐ.ಇ. ಯವರಿಗೂ, ರಿಟೈರ್ಡ್ ಕೌನ್ಸಿಲರ್ ರಾಜಸಭಾಭೂಷಣ ದಿವಾನ್ ಬಹದ್ದೂರ್, ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆ.ಟಿ., ಸಿ.ಐ.ಇ., ಯವರಿಗೂ ಶ್ರೀಮದಿಂಡಿಯಾ ಚಕ್ರವರ್ತಿಯವರು ನೈಟ್‌ಹುಡ್ ಎಂಬ ಘನತರವಾದ ಪ್ರಶಸ್ತಿಯನ್ನು ದಯಪಾಲಿಸಿದ್ದಕ್ಕಾಗಿ ಸಂಘದವರಿಗೆ ಉಂಟಾದ ಆನಂದವಾರ್ತೆಯನ್ನು ತಿಳಿಸಬೇಕೆಂತಲೂ (2) ಸಂಸ್ಥಾನದ ವಸೂಲಿ ವಿಚಾರದಲ್ಲಿ ಇದುವರೆಗೆ ವಸೂಲಾಗುತ್ತಿರುವ ವರ್ಷಾಸನದ ಕಾಣಿಕೆ 1-6-0 ಗೆ ಬದಲಾಗಿ ಮನೆಯೊಂದಕ್ಕೆ ಪ್ರತಿವರ್ಷವೂ 1-8-0 ಯಂತೆ ವಸೂಲ್ ಮಾಡಬೇಕೆಂತಲೂ, ಈ ವಸೂಲಿಯು ಸಂಸ್ಥಾನದವರ ಮೇಲ್ವಿಚಾರಣೆಗೊಳಪಟ್ಟು ಸಂಘದಮುಖೇನ ನಡೆಸಬೇಕೆಂತಲೂ, ಇದಕ್ಕೆ ಸರಿಯಾದ ಏರ್ಪಾಡನ್ನು ಪ್ರೆಸಿಡೆಂಟರು ಮಾಡಬೇಕೆಂತಲೂ (3) ಹೊಳಲಕೆರೆಯಲ್ಲಿ ಕಟ್ಟಬೇಕೆಂದು ನಿರ್ಧರಿಸಿದ್ದ ಹಾಸ್ಟಲ್ ಕಟ್ಟಡವನ್ನು ಜಾಗ್ರತೆ ಕಟ್ಟಿ ಪೂರೈಸಬೇಕೆಂತಲೂ ತೀರ್ಮಾನಿಸಲಾಯಿತು. ಸಂಘದ ಮ್ಯಾನೇಜಿಂಗ್ ಕಮಿಟಿಯ ಅವಧಿಯು ಮುಗಿದುಹೋಗಿರುವದರಿಂದ ಹೊಸಕಮಿಟಿಯು ಚುನಾವಣೆ ಮಾಡಲ್ಪಟ್ಟಿತು. ಗುಂಡೇರಿ ಗ್ರಾಮಸ್ಥರು ಈ ಮೀಟಿಂಗಿಗೆ ದಯಮಾಡಿಸಿದ ಜನರಿಗೆಲ್ಲಾ ಅತಿಥ್ಯ ವಗೈರೆ ನಡಿಸಿ 12 ಜನ ವಾಲಂಟಿಯರುಗಳನ್ನು ಗೊತ್ತುಮಾಡಿ ಮೀಟಿಂಗಿನ ಕಾರ್ಯವು ಸಮರ್ಪಕವಾಗಿ ನಡೆಯುವಂತೆ ಎಲ್ಲಾ ಸೌಕರ್ಯಗಳನ್ನೊದಗಿಸಿದ್ದು ತುಂಬಾ ಸ್ತೋತ್ರಾರ್ಹವಾಗಿರುತ್ತೆ. ಇದಕ್ಕಾಗಿ ಮುಂದಾಳುಗಳಾಗಿದ್ದ ಮ|| ಗಳಾದ ನಾಡಿಗಹಾಲಪ್ಪನವರು, ಶಾನಭೋಗ ರಾಮಪ್ಪನವರು, ಗೌಡಹಾಲಪ್ಪನವರು, ಹೊನ್ನವ್ವಳ ಶಿವಲಿಂಗಪ್ಪನವರು, ಹನುಮಪ್ಪನವರು, ಚಿಂಕೊಳಲ ಅಂಕಳಪ್ಪನವರು ಮುಂತಾದವರು ತುಂಬಾ ಮುತುವರ್ಜಿ ವಹಿಸಿ ಈ ಕಾರ್ಯವನ್ನು ಸಮರ್ಪಕವಾಗಿ ನೆರವೇರಿಸಿಕೊಟ್ಟದ್ದಕ್ಕೆ ಸಭಾದವರೆಲ್ಲರೂ ವಂದನೆಯನ್ನು ತಿಳಿಸಿ ಶ್ರೀಮನ್ಮಹಾರಾಜರವರ ಮತ್ತು ಕುಟುಂಬದವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಗೆ ದಯಮಾಡಿಸಿದ್ದ ದೊಡ್ಡಮನುಷ್ಯರುಗಳಿಗೆಲ್ಲ ಹಾರ ತುರಾಯಿ ಗಂಧತಾಂಬೂಲಾದಿಗಳನ್ನು ಕೊಟ್ಟು ಶ್ರೀಗಳವರಿಗೆ ಭಕ್ತಿಪೂರ್ವಕವಾದ ವಂದನೆಯನ್ನು ಅರ್ಪಿಸಿ ಸಭೆಯನ್ನು ಬರಖಾಸ್ತುಮಾಡಲಾಯಿತು.

ಓರ್ವ ಮೆಂಬರು.

ಆವಣಿಮಠ.

ಅವಂತೀಕ್ಷೇತ್ರವೆಂದು ಸುಪ್ರಸಿದ್ಧವಾದ ಆವಣೀಯೆಂದು ಕರೆಯಲ್ಪಡುವ ಈ ಸ್ಥಳದಲ್ಲಿ ಬಹು ಅನಾದಿಕಾಲದಿಂದಲೂ ಒಂದು ಮಠವು ಸ್ಥಾಪಿತವಾಗಿದೆ. ಈ ಅವಂತೀ ಕ್ಷೇತ್ರವಾದರೋ ವಾಲ್ಮೀಕಿ ಮಹರ್ಷಿಗಳು ತಪಸ್ಸುಮಾಡಿದ ಸ್ಥಳ. ಈ ಪೀಠವಾದರೋ ಯಾವ ಮೈಸೂರು ಸಂಸ್ಥಾನದವರು ಈವತ್ತಿಗೂ ನಾಳೆಗೂ ಬಹು ಹೆಮ್ಮೆಯಿಂದ ಹೊಗಳುತ್ತಿರುವ ಅಸದೃಶವಾದ ಯುಧಿಷ್ಠಿರಾನುಗತವಾದ ಸಿಂಹಾಸನವೋ ಅಂಥಾ ಸಿಂಹಾಸನವನ್ನು ಮೈಸೂರು ದೇಶದ ಆದಿ ಮಹಾರಾಜರುಗಳಿಗೆ ತಂದುಕೊಟ್ಟ ಸುಪ್ರಸಿದ್ಧರಾದ ವಿದ್ಯಾರಣ್ಯರಿಂದಲೇ ಸ್ಥಾಪಿಸಲ್ಪಟ್ಟುದಾಗಿದೆ. ಈ ಮಠದ ಗುರುಗಳ ಪೈಕಿ ಒಬ್ಬರು ನಂಜನಗೂಡು ಶ್ರೀನಂಜುಂಡೇಶ್ವರಸ್ವಾಮಿ ದೇವಾಲಯದ ಕಳಸಸ್ಥಾಪನೆಯನ್ನೂ ಸಹ ನೆರವೇರಿಸಿರುತ್ತಾರೆ. ಅಂಥಾ ಮಠವು ಈಗೀಗ ದೊಡ್ಡ ಅಧಿಕಾರಿಗಳ ಕೈಗು ಮತ್ತು ನ್ಯಾಯವಿಮರ್ಶೆಯಿಲ್ಲದ ಸ್ವಪ್ರಯೋಜನಾಪೇಕ್ಷಿಗಳ ಕೃತ್ರಿಮಸನ್ನಾಹಗಳಿಗು ಒಳಪಟ್ಟು ಅವ್ಯವಸ್ಥಿತಿಗೆ ಬಂದಿರುತ್ತದೆ.

ಈ ಪೀಠದ ಹಿಂದಿನಸ್ವಾಮಿಗಳು ಹೈದರಾಬಾದ್ ಪ್ರಾಂತ್ಯ ಸಂಚಾರಹೋಗಿದ್ದಾಗ್ಯೆ 1925ನೇ ಏಪ್ರಲ್ ಮಾಹೆಯಲ್ಲಿ ಆ ಪ್ರಾಂತ್ಯದಲ್ಲೇ ದಿವಂಗತರಾದರು. ಆದರೆ ಆ ಸ್ವಾಮಿಗಳು ಜೀವಿತರಾಗಿದ್ದಾಗಲೇ ಮುಂದಾಲೋಚನಾಪರರಾಗಿ ತಮ್ಮ ಅನುಯಾಯಿಗಳನ್ನು 1916ನೇಯ ಇಸವಿಯಲ್ಲಿಯೇ ತಮಗೆ ದೇಹಾಲಸ್ಯವಾಗಿದ್ದಾಗ್ಯೆ, ನೇಮಕಮಾಡಿ ಸದರಿ ಯುವಸ್ವಾಮಿಗಳಿಗೆ ಮಠದ ಶಿಷ್ಯವರ್ಗ ಪರಿಚಯವಾಗುವುದಕ್ಕೂ ಮತ್ತು ವಾಸಿಕೆಯಾಗುವುದಕ್ಕೂ ಅವರನ್ನು ಮೈಸೂರು ದೇಶದಲ್ಲಿ ಸಂಚಾರಮಾಡಿ ಅಲ್ಲಿ ಆಧ್ಯಾತ್ಮಿಕ ಮೌಕ್ತಿಕ ಮಾರ್ಗಗಳನ್ನು ಜನಗಳಿಗೆ ಉಪನ್ಯಾಸಮುಖೇನ ಬೋಧಿಸುವಂತೆ ಅಪ್ಪಣೆಮಾಡಿ, ಸಂಚಾರಕ್ಕೆ ಕಳುಹಿಸಿದರು. ಹೀಗಾದ ನಂತರ ಶ್ರೀಯವರು ಸ್ವಾರ್ಥಪರರಾದ ಮಠದ ಏಜಂಟರುಗಳು ಮಠದ ಸ್ವಾಸ್ಥ್ಯಗಳನ್ನೆಲ್ಲಾ ಹಾಳುಮಾಡಿದ್ದಲ್ಲದೆ ಅನೇಕವಾಗಿ ಸಾಲಹೊರಿಸಿದ್ದನ್ನು ತೀರಿಸಿ ಕ್ರಮಗೊಳಿಸುವುದಕ್ಕಾಗಿ ತಾವೂ ಸಂಚಾರದಲ್ಲೇ ಇದ್ದರು. ಹೀಗೆ ಶ್ರೀಯವರು ಕಾಲಾಧೀನರಾಗಿ ಯುವಗುರುಗಳು ಪೀಠವನ್ನು ಸ್ವೀಕರಿಸುವಷ್ಟರಲ್ಲಿಯೇ ಕೆಲವು ಕ್ಷುದ್ರಗೇಡಿಗಳು ಕೀರ್ತಿಶೇಷರಾದ ಗುರುಗಳ ಉದ್ದೇಶಕ್ಕೆ ಭಂಗತರಲು ಕೃತ್ರಿಮಸನ್ನಾಹಗಳನ್ನು ಮಾಡಿ ತಮ್ಮ ಕಡೆಯವರೊಬ್ಬರನ್ನು ನಿಯಮಿಸಿ, ತಂತಮ್ಮ ಸ್ವಾರ್ಥಪರತೆಯನ್ನು ಅನುಕೂಲಪಡಿಸಿಕೊಳ್ಳಲು ತಕ್ಕ ಮಸಲತ್ತುಗಳನ್ನು ಮಾಡಿ ಯುವಸ್ವಾಮಿಗಳು ಪೀಠಕ್ಕೆ ಬಾರದಿರುವುದಕ್ಕೆ ಯಷ್ಟುಬೇಕು ಅಷ್ಟು ಸಾಹಸಗಳನ್ನೂ ಮಾಡುತ್ತಿದ್ದಾರೆ.

ಈ ಪೀಠಾಧಿಪತ್ಯಕ್ಕೆ ಈಗಾಗಲೇ ಕೆಲವರು ಪ್ರಬಲ ಅಧಿಕಾರಿಗಳ ಮತ್ತು ದೊಡ್ಡಮನುಷ್ಯರುಗಳ ಶಿಫಾರ್ಸುಗಳಿಂದ ಬಹು ವೈಚಿತ್ರ್ಯವಾದ ಹಕ್ಕುಬಾಧ್ಯತೆಗಳನ್ನು ನಿರೂಪಿಸಿಕೊಂಡು ಅರ್ಜಿಗಳನ್ನು ಹಾಕಿಕೊಂಡಿರುತ್ತಾರೆ. ಹೀಗಿರಲಿಕ್ಕಾಗಿ ಅದರಲ್ಲಿ ಅನಗ್ನಿಕ ಮತ್ತು ಭೃತಕ ಅಧ್ಯಾಪಕರಾದ ಸನ್ಯಾಸಕ್ಕೆ ಅನರ್ಹರಾದವರು ಸಹಾ ಸೇರಿರುತ್ತಾರೆ. ಏತನ್ಮಧ್ಯದಲ್ಲಿ ಡಿಸ್ಟ್ರಿಕ್ಟು ಮುಜರಾಯಿ ಆಫೀಸರರಾದ ಡೆಪ್ಯುಟಿಕಮಿಷನರ್‌ಸಾಹೇಬರವರು ಈ ಮಠದ ವಿಚಾರದಲ್ಲಿ ಸಹಕಾರಿಯಾದ ಒಂದು ವಿಧಾಯಕವನ್ನು ಚುನಾಯಿಸದೆ ಇದಕ್ಕೆ ಪ್ರತಿಕಕ್ಷಿಗಳ ಅಭಿರುಚಿಗೆ ತಕ್ಕುದಾದ ಮತ್ತೊಂದನ್ನು ಚುನಾಯಿಸಿಕೊಂಡು ಗತಿಸಿದ ಗುರುಗಳು ಸದರಿ ಯುವ ಸ್ವಾಮಿಗಳನ್ನು ತಮ್ಮ ಅನುಯಾಯಿಗಳನ್ನಾಗಿ ನೇಮಿಸಿದ್ದಕ್ಕೆ ಶ್ರೀಮುಖವನ್ನೂ ಇತರ ಸಾಧಕಗಳಾದ ದಾಖಲೆಗಳನ್ನೂ ಗರ್ಭೀಕರಿಸಿ ಸರ್ಕಾರಕ್ಕೆ ರಿಪೋರ್ಟುಮಾಡದೆಯು, ಯಾ, ಈ ನಿಯಾಮಕ ವಿಚಾರದಲ್ಲಿ ಅನೇಕ ದೊಡ್ಡಮನುಷ್ಯರುಗಳಿಂದ ಪ್ರತ್ಯಕ್ಷ ಪ್ರಮಾಣಪೂರ್ವಕವಾಗಿಯು ಮತ್ತು ಅರ್ಜಿಗಳ ಮುಖಾಂತ್ರವು ಮಾಡಲ್ಪಟ್ಟ ಹೇಳಿಕೆಗಳನ್ನು ಮನಸ್ಸಿಗೆ ತಾರದೆ ಡೆಪ್ಯುಟಿ ಕಮಿಷನರವರು ತಮಗೆ ತಿಳಿದ ಕಾರಣಾಂತರಗಳನ್ನು ಮುಖ್ಯವಾಗಿಟ್ಟುಕೊಂಡು ಪೀಠವು ಖಾಲಿಯಾಗಿರುವಂತೆ ತಿಳಿಸಿರುತ್ತಾರೆ. ತಾವು ಗೊತ್ತುಮಾಡಿಕೊಂಡಿರುವ ರೂಲನ್ನೇ ಆಧಾರವಾಗಿಟ್ಟುಕೊಂಡು ಸುಮಾರು ನೂರುಜನಗಳನ್ನು ಸೇರಿಸಿಕೊಂಡು (ಇವರು ಮಠದ ಶಿಷ್ಯವರ್ಗಕ್ಕೆ ಸೇರಿದವರೋ ಅಲ್ಲವೋ ಅದಕ್ಕೆ ಆಧಾರವಿಲ್ಲ) ಮೀಟಿಂಗ್ ಮಾಡಿ ಅಂಥಾವರು ಕೊಟ್ಟ ಅಭಿಪ್ರಾಯಗಳನ್ನೇ ಮೇಲಿನಂತೆ ದೊಡ್ಡಮನುಷ್ಯರುಗಳು ಕೊಟ್ಟ ಅಭಿಪ್ರಾಯಗಳಿಗಿಂತಲೂ ಅಧಿಕವಾಗಿ ಭಾವಿಸಿ, ನಡವಳಿಕೆಗಳನ್ನು ನೆರವೇರಿಸುತ್ತಿದ್ದಾರೆ. ಈ ವಿಚಾರದಲ್ಲಿ ಬ್ರಹ್ಮಚಾರಿಗಳಿಗಿಂತಲೂ ಗೃಹಸ್ಥಾಶ್ರಮಿಗಳು ಯಾವ ವಿಧದಿಂದಲೂ ಕಮ್ಮಿಯಲ್ಲವೆಂಬುದು ಅನಾದಿಸಿದ್ಧವಾಗಿ ಅನುಮೋದಿಸಲ್ಪಟ್ಟ ವಿಚಾರವಾಗಿದ್ದಾಗ್ಯೂ ಈ ಪೀಠಕ್ಕೆ ಗೃಹಸ್ಥಾಶ್ರಮಿಗಳನ್ನು ನೇಮಿಸುವುದಕ್ಕಿಂತ ಬ್ರಹ್ಮಚಾರಿಗಳನ್ನು ನೇಮಿಸುವುದು ಉತ್ತಮವೆಂದು ಡೆಪ್ಯುಟಿಕಮಿಷನರ್‌ಸಾಹೇಬರವರು ಅಭಿಪ್ರಾಯಪಟ್ಟಿರುವುದು ತುಂಬಾ ಆಶ್ಚರ್ಯ ವಿಷಯವಾಗಿರುತ್ತೆ. ಸನ್ಯಾಸಾಶ್ರಮಕ್ಕೆ ಅನಗ್ನಿಕರಾದವರು ಅನರ್ಹರೆಂದು ತೀರ್ಮಾನಿಸಲ್ಪಟ್ಟ ವಿಷಯವಾಗಿದ್ದಾಗ್ಯೂ ಡೆಪ್ಯುಟಿ ಕಮಿಷನ್ ಸಾಹೇಬರವರು ತಮ್ಮ ನವೀನ ಅಭಿಪ್ರಾಯಕ್ಕೇನೇ ನೇರ ವಿರೋಧವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಿರುತ್ತಾರೆ. ಹೀಗೆ ಅರ್ಜಿಗಳು ಬಂದಿದ್ದರಲ್ಲಿ ಡೆಪ್ಯುಟಿಕಮಿಷನ್‌ಸಾಹೇಬರವರ ಪಂಗಡಕ್ಕೆ ಸೇರಿದವರೊಬ್ಬರಾಗಿರುತ್ತಾರೆಂದು ಮತ್ತು ಅದನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಅಲ್ಲಿಲ್ಲಿ ತಮಗೆ ಆಗುವುದಕ್ಕೆ ಸರ್ವರೂ ಅಭಿಪ್ರಾಯಪಡಬೇಕೆಂದು ಹೇಳಿಕೊಂಡು ಬರುತ್ತಿದ್ದಾರೆಂಬುದು ಈಚೀಚಿಗೆ ತಿಳಿದುಬರುತ್ತಿರುವುದು ಮತ್ತೊಂದು ಆಶ್ಚರ್ಯಕರವಾದ ವಿಷಯವಾಗಿರುತ್ತದೆ.

ಈಚೆಗೆ ಇವರು ನಡಿಸಿರುವ ಮೀಟಿಂಗಿನಲ್ಲಿ ಈ ಮಠಕ್ಕೆ ಅನುಯಾಯಿಗಳನ್ನು ನಿಯಾಮಕಮಾಡುವ ವಿಚಾರದಲ್ಲಿ ಶ್ರೀ ಶೃಂಗೇರಿಮಠದವರನ್ನು ಕೇಳುವಂತೆ ಠರಾವು ಮಾಡಿರುವುದಾಗಿ ತಿಳಿದುಬಂದಿದ್ದರ ಮೇಲೆ ಈ ವಿಚಾರವು ಅಖಂಡ ಆರ್ಯ ವರ್ಗಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಮುಂದಕ್ಕೆ ಎಲ್ಲ ವೈದಿಕರುಗಳಿಗೆ ಅಳಲವಾದೀತೋ ಎಂಬ ಭೀತಿಯು ಈಗಾಗಲೇ ಬಹುಜನಗಳಲ್ಲಿ ಉತ್ಪನ್ನವಾಗಿದೆ. ಇಂಥಾ ಮೀಟಿಂಗಿನಲ್ಲಿ ಅಗ್ರಾಸನಾಧಿಪತಿಗಳಾಗಿದ್ದ ಡೆಪ್ಯುಟಿಕಮಿಷನರವರು ಶ್ರೀ ಆದಿಶಂಕರಾಚಾರ್ಯರಿಂದಲು ಮತ್ತು ಅವರ ಶಿಷ್ಯಕೋಟಿಗಳಿಂದಲು ನಿರ್ಮಿತವಾದ ಮಠಗಳ ಪ್ರವರೋಚ್ಚಾರಣೆಯನ್ನು ತಿಳಿಯಲು ತೊಂದರೆ ತೆಗೆದುಕೊಂಡಿದ್ದಲ್ಲಿ ಈ ಆವಣಿಮಠದ ಮತ್ತು ಶೃಂಗೇರಿಮಠದ ಪ್ರವರಗಳು ಒಂದೇ ಆಗಿ ಸ್ವತಂತ್ರಪೀಠಗಳೆಂದು ಅವರಿಗೆ ಗೊತ್ತಾಗುತ್ತಿತ್ತು. ಹಾಗೆ ತೋರಿದ್ದಲ್ಲಿ ತೋರದೆ ಶ್ರೀ ಶೃಂಗೇರಿಮಠದ ಶ್ರೀ [illegible]

ಅಥವಾ ಅವರ ಪರಮಶಿಷ್ಯಾನುಗತರಿಂದಾಗಲೀ ಆದುದಲ್ಲ. ಹಾಲಿ ಕುಂಭಕೋಣದಲ್ಲಿರುವ ಕಾಂಚೀಕ್ಷೇತ್ರದ ಕಾಮಕೋಟಿ ಪೀಠದ ಶಿಷ್ಯ ಸನ್ಯಾಸಿಗಳಾದ ಶ್ರೀಭಾರತೀಕೃಷ್ಣತೀರ್ಥರೆಂಬುವರಿಂದ ಬಲಾತ್ಕಾರವಾಗಿ ಆಕ್ರಮಿಸಲ್ಪಟ್ಟ ಪೀಠವಾಗಿರುತ್ತೆ. ಪ್ರಯುಕ್ತ ಇಂಥಾ ಮಠದ ಸದಭಿಪ್ರಾಯವನ್ನು ನಿರೀಕ್ಷಿಸುವುದು ಸರ್ವಥಾ ನ್ಯಾಯ ಕಂಡುಬರುವುದಿಲ್ಲ. ಇಂಥಾ ವಿಚಾರಗಳು ಜನಸಾಮಾನ್ಯದಲ್ಲಿ ಆಲೋಚನೆಗೆ ತರುವುದಕ್ಕೆ ಬಹಳ ವಿಚಾರಾರ್ಹವಾದ್ದರಿಂದ ದೇವು ಟೀಕಮಾಷನರವರು ಸರ್ವೇಸಾಧಾರಣವಾಗಿ ಭಾವಿಸಿರುವಂತೆ ಮಠದ ಶಿಷ್ಯಕೋಟಿಯು ತಿಳಿದುಕೊಳ್ಳಲು ಸಾಧ್ಯವಿಲ್ಲ.

ಪ್ರಥಮತಃ ಮುಖ್ಯವಾಗಿ ಒಂದು ಮಠದ ಗುರುಗಳಿಗೆ ತಮ್ಮ ಅನುಯಾಯಿಗಳನ್ನು ನೇಮಿಸಿಕೊಳ್ಳುವುದಕ್ಕೆ ಅಧಿಕಾರವುಂಟೇ ಇಲ್ಲವೇ ಎಂಬುದನ್ನು ತೀರ್ಮಾನಿಸಬೇಕಾಗಿದೆ. ಹಾಗೆ ಅವರಿಗೆ ಇದ್ದ ಪಕ್ಷದಲ್ಲಿ ಯಾವ ಸರ್ಕಾರದವರಾಗಲೀ ಯಾ, ಇತರರಾಗಲೀ ಪ್ರವೇಶಿಸಲಿಕ್ಕೆ ಯತ್ನವೇಯಿಲ್ಲ. ಒಂದುವೇಳೆ ಇಲ್ಲದಪಕ್ಷಕ್ಕೆ ಗೌರ್ನಮೆಂಟಿಗೆ ಸಂಬಂಧವಾಗುವುದರಿಂದ ಯಾವ ಹಿಂದೂಗಳ ಮಠದ ವಿಚಾರದಲ್ಲಿ ಗಮನಿಸದೆ ತಟಸ್ಥರಾಗಿರಬೇಕಾಗುತ್ತೆ. ಎರಡನೆಯದಾಗಿ ಈ ಮಠದ ಶಿಷ್ಯವರ್ಗಕ್ಕೆ ಸೇರಿದವರಾಗಿ ಆ ಸ್ಥಳವಂದಿಗರಾಗಿದ್ದ ಮಾತ್ರಕ್ಕೆ ಬಹುಜನ ವಾಕ್ಯಕ್ಕಿಂತಲೂ ತಮ್ಮ ಅಭಿಪ್ರಾಯಗಳನ್ನು ಅನುಮೋದಿಸಲು ಸಾಧ್ಯವೆ? ಹಾಗಿದ್ದಲ್ಲಿ ಕೆಲವರು ಸೇರಿ ಚುನಾಯಿಸಿದವರನ್ನು ತಿರಸ್ಕರಿಸಿ ಮಹಾಜನರು ಮತ್ತೊಬ್ಬರನ್ನು ನೇಮಿಸಲು ಯಾಕೆ ಸಾಧ್ಯವಿಲ್ಲ? ಮೂರನೆಯದಾಗಿ ಸಂಸ್ಥಾನಕ್ಕೆ ಸೇರಿದ ಸ್ವಾಸ್ಥ್ಯಗಳು ಮತ್ತು ಶಿಷ್ಯವರ್ಗವು ಇತರ ಅನೇಕ ಪ್ರದೇಶಗಳಲ್ಲಿರುವಾಗ್ಯೆ ಸಂಸ್ಥಾನದ ಮೂಲಸ್ಥಳವನ್ನು ಆಧಾರವಾಗಿಟ್ಟುಕೊಂಡು ಆ ಸಂಸ್ಥಾನದ ಅಧಿಕಾರಿಗಳೇ ಚಳವಳಿಗಳನ್ನು ನಡೆಸಿದರೆ ಇತರೇ ಗೌರ್ನಮೆಂಟಿನವರೂ ಅದಕ್ಕೆ ಬದ್ಧರಾಗಿರಬೇಕಾದೀತೆ ಹೇಗೆ? ಇತರ ಗೌರ್ನಮೆಂಟಿನವರು ಇದೇರೀತಿಯಾಗಿ ಗುರುಗಳನ್ನು ಚುನಾಯಿಸಿದಲ್ಲಿ ಅಂಥಾ ಮಠಗಳ ಗತಿಯೇನಾಗಬೇಕು? ಈ ವಿಷಯಗಳನ್ನು ಚೆನ್ನಾಗಿ ಪರ್ಯಾಲೋಚಿಸಬೇಕಲ್ಲವೆ? ಮಸಲಾ ಆಧ್ಯಾತ್ಮಿಕ ಮೌಕಿಕವಿಚಾರದಲ್ಲಿ ಪರ್ಯಾಲೋಚಿಸಿದರೆ, ಮಠಗಳಲ್ಲಿ ನಡಿಯುತ್ತಿರುವ ಪೂಜೆಪುನಸ್ಕಾರಗಳೆಲ್ಲ ಸನ್ಯಾಸಿಗಳಿಂದಲೇ ನೆರವೇರಬೇಕಾಗಿರುವಲ್ಲಿ ಗೃಹಸ್ಥಾಶ್ರಮಿಗಳಿಂದಲೇ ನೆರವೇರುತ್ತಿವೆ. ತಮುಪರಿಪರ್ಯಂತ್ರ ಹಿಂದಿನ ಸನ್ಯಾಸಿಗಳ ಸಮಾಧಿಯು ಕಟ್ಟಲ್ಪಡಲಿಲ್ಲ. ಅವರ ಆರಾಧನೆಯೂ ನೆರವೇರಲಿಲ್ಲ ಮತ್ತು ಸದರಿ ಪೀಠದ ಇತರ ಪರಮಗುರುಗಳ ಆರಾಧನೆಗಳೂ ನಿಂತು ನಿಲಗಡೆಯಾಗಿವೆ. ಇವುಗಳು ನೆರವೇರಬೇಕಾದರೆ ತರತಮಲಸಂಜಾತರಾದ ಗುರುಗಳವರಿಂದಲೇ ನೆರವೇರಬೇಕೇ ವಿನಹ ಸಾಧಾರಣವಾಗಿ ಕಾವಿಧರಿಸಿದ ಇತರ ಸನ್ಯಾಸ ಸಾಮಾನ್ಯರುಗಳಿಂದ ನೆರವೇರತಕ್ಕದ್ದಲ್ಲ. ಎಷ್ಟೋ ಪುಣ್ಯಕರ್ಮಗಳನ್ನು ಮಾಡಿದಾಗ್ಯೂ, ಗೌರ್ನಮೆಂಟು ಅಪ್ಪಣೆಗಳನ್ನು ಹೊಂದಿದಾಗ್ಯೂ, ಇಂಥಾ ಶ್ರೇಷ್ಠತಮವಾದ ಅಧ್ಯಾತ್ಮಿಕಕಾರ್ಯಗಳನ್ನು ಮಾಡಲು ಅರ್ಹತೆಯುಂಟಾಗಲಾರದು. ಆದುಕಾರಣ ಸದರಿ ಯುವಸ್ವಾಮಿಗಳವರ ಹಕ್ಕುಬಾಧ್ಯತೆಗಳನ್ನು ನಿರಾಕರಿಸುವುದಾದರೆ ಅವ್ಯವಸ್ಥಿತರಾದ, ನಾಮಾವಶೇಷದಿಂದ ಸನ್ಯಾಸಿಗಳೆಂದೆನಿಸಿಕೊಂಡ ಮತಾನುಗಮನವಿಲ್ಲದ ಹೆಸರಿಗೆ ಮಾತ್ರ ಗುರುಗಳೆನ್ನಿಸಿಕೊಂಡವರು ಪೀಠಕ್ಕೆ ಕಳಂಕಂತಾಗುತ್ತೆ. ಹಾಲಿ ಭಾರತಭೂಮಿಯಲ್ಲಿ ಸನಾತನಧರ್ಮದ ದೀಪವು ಅಖಂಡವಾಗಿ ಪ್ರಜ್ವಲಿಸುವಂತೆ ಮಾಡುತ್ತಿರುವ ಈ ಮಠಗಳೇ ಇಂಥಾ ನಡವಳಿಕೆಗಳಿಂದ ನಶಿಸಿಹೋಗುವಕಾಲಕ್ಕೆ ಪ್ರಜೆಗಳ ಏಳಿಗೆಯು ಹ್ಯಾಗೆತಾನೇ ಉಂಟಾದೀತು!

ಈ ಕಾರಣಗಳಿಂದ ನಮ್ಮನ್ನಾಳುವ ಶ್ರೀಮನ್ಮಹಾರಾಜಾ ಸರ್ಕಾರದವರು ಈ ವಿಚಾರಗಳಲ್ಲಿ ವಿಮರ್ಶೆಯಿಂದಲೂ, ದೀರ್ಘಾಲೋಚನೆಯಿಂದಲೂ ನಡವಳಿಕೆಗಳನ್ನು ನಡಿಸಬೇಕಾಗಿದೆ. ಇವರ ತೀರ್ಮಾನವು ಗತಿಸಿದ ಗುರುಗಳ ಗೌರವಕ್ಕೆ ಅನುಗುಣವಾಗಿಯೂ, ಅವರ ನಿಯಾಮಕಕ್ಕೆ ಅನುಸಾರವಾಗಿಯೂ, ಶಿಷ್ಯಕೋಟಿಗಳ ಅಭಿಪ್ರಾಯಕ್ಕೆ ಸಮ್ಮತವಾಗಿಯೂ ಈ ಯುವಸ್ವಾಮಿಗಳ ಯೋಗ್ಯತೆಗೂ, ಅವರು ಮಾಡುತ್ತಿರುವ ದೇಶೋಪಕಾರ ಕಾರ್ಯಕ್ಕೂ ಅನುಗುಣವಾಗಿಯೂ ಇರುತ್ತದೋ ಮತ್ತು ಯಾವ ಆರ್ಯಾವರ್ತದ ಇತರ ಭಾಗಗಳಲ್ಲಿ ಇಲ್ಲಿನವರ ಇತ್ಯರ್ಥವನ್ನು ಎದುರುನೋಡುತ್ತಿದ್ದಾರೋ ಅಂಥಾ ಇತ್ಯರ್ಥವನ್ನು ನೆರವೇರಿಸಿ, ಗೌರವವನ್ನು ಸ್ಥಾಯಿಗೊಳಿಸಿ, ಮೈಸೂರುಸಂಸ್ಥಾನದ ಘನತೆಯನ್ನುಳಿಸಬೇಕಾದ ಕಾಲವು ಈಗ ಬಂದೊದಗಿರುತ್ತದೆ.

Basavangudi, } K. Narayanaswami Iyer,
Bangalore. } Editor of Truth.

ಪರಳೀ ಪ್ರಕರಣದ ಸಮಾಪ್ತಿಯು.

(ಶೇ|| ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಸಂಸ್ಕೃತಕಾಲೇಜು ಯಾದಗಿರಿ.)

ಮನುಷ್ಯನು ಹಗಲೆಲ್ಲ ದುಡಿದು ರಾತ್ರಿಯಲ್ಲಿ ವಿಶ್ರಾಂತಿಯನ್ನು ತೆಗೆದುಕೊಂಡರೆ ಪುನಃ ಕಾರ್ಯವನ್ನು ಮಾಡಲಿಕ್ಕೆ ಹೇಗೆ ಅವನಲ್ಲಿ ಉತ್ಸಾಹಶಕ್ತಿಯು ಹುಟ್ಟುತ್ತದೆಯೋ ಅದರಂತೆಯೇ ಎಡಬಿಡದೆ 1½ ತಿಂಗಳಿಂದ ನಡೆದ ಈ ಪ್ರಕರಣವು 10 ದಿನ ಮುದ್ದತ್ತು ಬಿದ್ದಿತಷ್ಟೆ? ಆದರೆ ತಾ|| 21-11-25 ನೇ ದಿನ ಪುನಃ ಮೂರುಜನ ಜಡ್ಜಿಗಳುಳ್ಳ ಉಮರಮಜಹಬಿ ಎಂಬುವ ಕೋರ್ಟಿನಲ್ಲಿ ಪ್ರಾರಂಭವಾಯಿತು, ಉಭಯ ಪಾರ್ಟಿಯ ಜನರಲ್ಲಿ ಒಳ್ಳೇ ಉತ್ಸಾಹವು ತೋರುತ್ತಿದ್ದಿತು. ವೀರಶೈವರ ಪರ ವಕೀಲರಾದ ರಾಯವಿಶ್ವೇಶ್ವರನಾಥ, ರಾಯಹೇಮಚಂದ್ರ, ಇವರಿಗೆ ಸಂಗ್ರಾಮಪ್ಪ ಉದ್ಗಿರಿ, ಮಹದೇವಯ್ಯ ಉದ್ಗಿರಿ, ನಾಗನಾಥರಾವ್ ಥಳ್ಕಿ, ಶರಣಯ್ಯ ಹೈಕೋರ್ಟುವಕೀಲ ಹೈದರಾಬಾದ, ಸೋಮೇಶ್ವರರಾವ್ ಹೈಕೋರ್ಟು ವಕೀಲ ಮೊದಲಾದ ಲಿಂಗಾಯತ ವಕೀಲರು ಸಹಾಯಮಾಡುತ್ತಿದ್ದರಲ್ಲದೆ, ವೀರಶೈವಪಂಡಿತರುಗಳಾದ ಧರ್ಮತತ್ವವಿಶಾರದರಾದ ಸೋಮನಾಥ ಶಾಸ್ತ್ರಿಗಳು ಗೊಗ್ಗಿಹಳ್ಳಿ (ಸಾಗರ ತಾಲ್ಲೂಕು) ಮತ್ತು ಧರ್ಮತತ್ವಚಿಂತಾಮಣಿ ಚಂದ್ರಶೇಖರಶಾಸ್ತ್ರಿಗಳು ಕಂಪಲಿ, ಅನೇಕ ಗ್ರಂಥಗಳನ್ನು ಪ್ರಸಿದ್ಧಮಾಡಿರುವ ಮಹಸ್ಸಾರು ಮಲ್ಲಿಕಾರ್ಜುನಶಾಸ್ತ್ರಿಗಳು, ಯಾದಗಿರಿ ಕಾಲೇಜಿನ ಪ್ರಿನ್ಸಿಪಾಲರಾದ ಚಂದ್ರಶೇಖರಶಾಸ್ತ್ರಿ ವ್ಯಾಕರಣತೀರ್ಥ ಹೊಳಲು ಇವರುಗಳು ಈ ಪ್ರಕರಣಕ್ಕೆ ಬೇಕಾದ ವೇದಾಗಮಪ್ರಮಾಣಗಳನ್ನು ಹುಡಿಕಿಕೊಡುವದೇ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದರು. ಬ್ರಾಹ್ಮಣರ ವತಿಯಿಂದಲೂ ಅನೇಕ ಜನ ಪಂಡಿತರೂ, 5-6 ಜನ ಪ್ರಸಿದ್ಧ ವಕೀಲರೂ ಕೆಲಸವನ್ನು ಮಾಡುತ್ತಿದ್ದರು. ಕೋರ್ಟಿನೊಳಗೆ ಪ್ರವೇಶಿಸಲಿಕ್ಕೆ ಎಷ್ಟೋ ಜನರು ಸ್ಥಳವಿಲ್ಲದೆ ನಿರಾಶರಾಗಬೇಕಾಗುತ್ತಿದ್ದಿತು. ಮೊದಲಿಗೆ ವೀರಶೈವರ ಮುಖ್ಯವಕೀಲರಾದ ವಿಶ್ವೇಶ್ವರನಾಥರಾಯರ ಆರ್ಗ್ಯುಮೆಂಟು ಪ್ರಾರಂಭವಾಯಿತು. ಅವರು ವೀರಶೈವರ ಅನೇಕ ರಿಕಾರ್ಡುಗಳ ಮತ್ತು ಪಂಡಿತರೇ ಮೊದಲಾದವರ ಸಾಕ್ಷಿಗಳ ಸಾರಾಂಶವನ್ನು ಹೇಳಲಿಕ್ಕೆ ಪ್ರಾರಂಭಮಾಡಿ ಅಂದದ್ದೇನೆಂದರೆ—ವೀರಶೈವರಾದ ಲಿಂಗೀಬ್ರಾಹ್ಮಣರು ಪರಂಪರೆಯಾಗಿ ವೇದಕಾಲದಿಂದಲೂ ಬಂದವರಾಗಿರುವರು. ಇವರಿಗೆ ಸಂಪೂರ್ಣವೇದಾಧಿಕಾರವಿರುವದು. ಇವರಿಗೆ ಗೋತ್ರ, ಸೂತ್ರ, ಪ್ರವರಗಳೂ ಇರುತ್ತವೆ. ಅಲ್ಲದೆ ಇವರು ಸಗೋತ್ರದಲ್ಲಿ ವಿವಾಹವನ್ನು ಮಾಡುವದಿಲ್ಲ. ಅಭಕ್ಷ್ಯಭಕ್ಷಣ ಅಪೇಯಪಾನ ಮೊದಲಾದವುಗಳನ್ನು ಮಾಡುವದಿಲ್ಲ. ಗಾಯತ್ರಿಯನ್ನು ದೀಕ್ಷೆಯಕಾಲದಲ್ಲಿ ಉಪಯೋಗಮಾಡಿಸದಾವಕಾಲದಲ್ಲಿ ಪಂಚಾಕ್ಷರಿಯನ್ನು ಜಪಿಸುತ್ತಾರೆ. ಇವರಿಗೆ ಷೋಡಶಸಂಸ್ಕಾರಗಳೂ ಆಗುತ್ತವೆ. ಉಪನಯನಕ್ಕೆ ಬದಲು ದೀಕ್ಷೆಯಾಗುತ್ತದೆ. ಇವರು ಲಿಂಗರೂಪೀಯಜ್ಞೋಪವೀತವನ್ನು ಧರಿಸುತ್ತಾರೆ. ಇವರ ಆಚಾರ್ಯರು ಬ್ರಹ್ಮಸೂತ್ರಗಳಿಗೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಬರೆದಿರುತ್ತಾರೆ. ದ್ವೈತಾದ್ವೈತಿಗಳಂತೆ ಇವರು ಶಕ್ತಿವಿಶಿಷ್ಟಾದ್ವೈತಿಗಳು ಇರುತ್ತಾರಲ್ಲದೆ, ವೇದಕ್ಕೆ ವಿರುದ್ಧಗಳಾದ ಮತಗಳನ್ನು ಖಂಡನೆಮಾಡಿ ಇವರ ಆಚಾರ್ಯ ಪರಂಪರೆಯವರು ಅನೇಕ ಸಿದ್ಧಾಂತಗ್ರಂಥಗಳನ್ನು ಬರೆದಿರುತ್ತಾರೆ. ಲಿಂಗೀಬ್ರಾಹ್ಮಣರ ಮತಸ್ಥಾಪನಾಚಾರ್ಯರಾದ ಜಗದ್ಗುರುಗಳು ಯುಗಯುಗಾಂತರಗಳಲ್ಲಿ ಅವತರಿಸಿದವರಾಗಿರುತ್ತಾರೆ. ಸಂಧ್ಯಾವಂದನೆಯ ಬದಲು ತ್ರಿಕಾಲದಲ್ಲಿ ಶಿವಲಿಂಗಾರ್ಚನೆಯನ್ನು ಮಾಡುತ್ತಾರೆ. ಇವುಗಳಲ್ಲದೆ ಈ ವೀರಶೈವರಲ್ಲಿ ಅನೇಕ ಉತ್ತಮ ಆಚರಣೆಗಳಿರುವದರಿಂದ ಯಾವ ಅಲಿಂಗೀಬ್ರಾಹ್ಮಣಪಂಗಡಗಳಿಗಿಂತಲೂ ಕಡಿಮೆ ಇರುವದಿಲ್ಲ. ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಂದಾದ (ಗರ್ವಾಲಿನ) ಜ್ಯೋತಿರ್ಲಿಂಗವು ವೀರಶೈವರ ಸ್ವಾಧೀನವಿರುವದಲ್ಲದೆ ಅಲ್ಲಿಯ ಇವರ ಗುರುಗಳಿಗೆ ರಾವಲ್ ಎಂಬುವ ಪದವಿಯು ಇರುತ್ತದೆ. ಬಸವೇಶ್ವರನು ವೀರಶೈವಮತಸುಧಾರಕನಾಗಿ ಅದನ್ನು ಅತ್ಯಂತ ಊರ್ಜಿತಸ್ಥಿತಿಗೆ ತಂದವನಲ್ಲದೆ, ಸ್ಥಾಪಿಸಿದವನಲ್ಲ; ತಾನು ಹುಟ್ಟಿದ ಮತಕ್ಕಿಂತಲೂ ಶ್ರೇಷ್ಠವಾದ ಮತವೆಂದು ಈ ಲಿಂಗೀಬ್ರಾಹ್ಮಣರ ಮತಕ್ಕೆ ಸೇರಿದವನು. ಎಷ್ಟೋ ಪ್ರಸಿದ್ಧದೇವಾಲಯಗಳು ವೀರಶೈವರ ಸ್ವಾಧೀನದಲ್ಲಿರುತ್ತವೆ. ಇಂಥ ಪವಿತ್ರವೈದಿಕಮತದವರು ಪರಳಿಯ ಜ್ಯೋತಿರ್ಲಿಂಗಕ್ಕೆ ಮಹಿಮ್ನೆಯಿಂದ ಅಭಿಷೇಕಮಾಡುತ್ತಾರೆಂಬುವದು ಕೇವಲಸುಳ್ಳು. ಮಹಿಮ್ನೆಯು ಒಂದು ಸ್ತೋತ್ರವಿರುವದಲ್ಲದೆ, ಅಭಿಷೇಕದ ಮಂತ್ರವಲ್ಲ. ಅಭಿಷೇಕದ ಮಂತ್ರವೆನ್ನುವವರನ್ನು ಹುಚ್ಚರ ಆಸ್ಪತ್ರೆಗೆ ಕಳಿಸಬೇಕಾಗುತ್ತದೆ.. ಯಾಕೆಂದರೆ, ಯಾವ ಧರ್ಮಗ್ರಂಥಗಳಲ್ಲಿಯೂ ಅಭಿಷೇಕದ ಅಂಗವೆಂದು ಹೇಳಿರುವದಿಲ್ಲ. ಈ ಮತದ ತತ್ವಗಳು ಬಹಳ ಉತ್ತಮವಾಗಿರುವವಲ್ಲದೆ ಉಳಿದ ಮತದವರಿಗೆ ಮಾರ್ಗದರ್ಶಕಗಳಾಗಿರುತ್ತವೆ. ಬ್ರಾಹ್ಮಣರ ತರ್ಫೆಯಿಂದ ಆದ 13 ಸಾಕ್ಷಿಗಳಲ್ಲಿ 9 ಜನ ಸಾಕ್ಷಿದಾರರು ಲಿಂಗಾಯತರು ಮಹಾರುದ್ರಾಭಿಷೇಕವನ್ನು ಮಾಡಿದರೆ ಏನೂ ಅಡ್ಡಿಯಿಲ್ಲವೆಂದು ಹೇಳಿರುತ್ತಾರೆ. ವೀರಶೈವರ ಧರ್ಮಗ್ರಂಥಗಳನ್ನು ಓದಿಲ್ಲವೆಂದು ಪ್ರತಿಯೊಬ್ಬ ಸಾಕ್ಷಿಗಾರನೂ ಹೇಳಿರುತ್ತಾನೆ. ಆದ್ದರಿಂದ ಒಟ್ಟು ಸಾರಾಂಶವೇನೆಂದರೆ — ಸನಾತನವಾಗಿ ವೇದಾಗಮಗಳನ್ನು ಮಾನಿಸುವಂಥ, ಲಿಂಗಲೋಪವಾದರೆ ಪ್ರಾಣವನ್ನೇ ಕೊಡುವಂಥ, ಕೇವಲ ಶಿವನನ್ನೇ ಆರಾಧಿಸುವಂಥ ಈ ವೀರಶೈವರು ವೇದಾಧಿಕಾರಿಗಳಲ್ಲವೆನ್ನುವದು ಕೇವಲ ಮತ್ಸರವೇ ಸರಿ. ವೇದಕಾಲದಿಂದ ವೀರಶೈವಮತದ ಅಸ್ತಿತ್ವವಿದ್ದರೂ 2-2½ ಸಾವಿರ ವರ್ಷಗಳಿಂದ ಇವರ ಇತಿಹಾಸವು ಸಿಗುತ್ತದೆ. ಈಪ್ರಕಾರವಾಗಿ ಅನೇಕ ಆಧಾರಗಳಿಂದ ಅವಿಚ್ಛಿನ್ನವಾಗಿ 7-8 ದಿನಗಳವರೆಗೆ ಆರ್ಗ್ಯುಮಾಡಿರುತ್ತಾರೆ. ಆಮೇಲೆ ಬ್ರಾಹ್ಮಣರ ವತಿಯಿಂದ ಗಿರಿರಾವ್ ಹೈಕೋರ್ಟು ವಕೀಲ ಇವರು ಆರ್ಗ್ಯುಮೆಂಟನ್ನು ಮಾಡಲಿಕ್ಕೆ ಪ್ರಾರಂಭಮಾಡಿ ಕೆಲವು ಜೊಳ್ಳು ಪೊಳ್ಳು ಕೋರ್ಟಿನ ಫೈಸಲುಗಳನ್ನೂ, ವೀರಶೈವಮತದ ತತ್ವವನ್ನು ತಿಳಿಯದೆ ಬರೆದ ಕೆಲವು ಇಂಗ್ಲೀಷ ಪುಸ್ತಕಗಳನ್ನೂ ಹಾಜರುಮಾಡಿದರು. ಮುಂದೆ ಬ್ರಾಹ್ಮಣರ ಸಾಕ್ಷಿಗಳಲ್ಲಿ ಹುರುಳಿಲ್ಲದ್ದನ್ನು ನೋಡಿ ಅದನ್ನು ಅಷ್ಟಕ್ಕೇ ಬಿಟ್ಟು ಲಿಂಗಾಯತರು ಹೊಸದಾಗಿ ಬ್ರಾಹ್ಮಣರೆನ್ನಿಸಿಕೊಳ್ಳಲಿಕ್ಕೆ ಅನುಕರಣಮಾಡುತ್ತಾರೆಂತಲೂ, ಈಗ ಜಗತ್ತಿನಲ್ಲಿ ಬ್ರಾಹ್ಮಣ ಮತ್ತು ಶೂದ್ರರೆಂಬ ಎರಡೇ ಜಾತಿಗಳಿರುತ್ತವೆಂತಲೂ ಬಹಳ ಆವೇಶಯುಕ್ತರಾಗಿ ಹೇಳಿದರು. ಆಗ ಒಬ್ಬ ಜಡ್ಜಿಯು, ಶಿವಾಜಿಯು ಯಾವವರ್ಣದವನೆಂದು ಪ್ರಶ್ನೆಮಾಡಿದರು. ಶೂದ್ರನಿದ್ದನೆಂದು ತೀವ್ರವಾಗಿ ಉತ್ತರ ಕೊಟ್ಟರು. ಮತ್ತೊಬ್ಬ ಜಡ್ಜಿಯು ಕೊಲ್ಹಾಪುರದ ಮಹಾರಾಜರು ಯಾವವರ್ಣದವರೆಂದು ಕೇಳಿದರು. ಅವರು ಕೂಡ ಶೂದ್ರರೇ ಇರುತ್ತಾರಾದಕಾರಣ ಅವರಿಗೆ ವೇದೋಕ್ತಮಂತ್ರಗಳಿಂದ ಬ್ರಾಹ್ಮಣರು ಲಗ್ನಮಾಡಲಿಲ್ಲವೆಂದು ಹೇಳಿದರು. ವೈಶ್ಯಕ್ಷತ್ರಿಯರೇ, ಇನ್ನಾದರೂ ಬುದ್ಧಿಗಲಿಯಿರಿ. ನೋಡಿದಿರಾ ಈ ಬ್ರಾಹ್ಮಣರ ಅಸೂಯೆಯನ್ನು? ಕ್ಷತ್ರಿಯರು ಮತ್ತು ವೈಶ್ಯರು ಇಲ್ಲೇಇಲ್ಲವಂತೆ! ಇವರು ಮಾಡುವ ಕೋಟಿಕ್ರಮವೇನೆಂದರೆ.—ಪರಶುರಾಮನು ಕ್ಷತ್ರಿಯರನ್ನು ಸಂಹಾರಮಾಡಿದ ಮೇಲೆ ಜಗತ್ತಿನಲ್ಲಿ ಕ್ಷತ್ರಿಯರೇ ಉಳಿಯಲಿಲ್ಲವಂತೆ! ಹಾಗಾದರೆ ರಾಮಚಂದ್ರನು ಯಾರು? ವೈಶ್ಯರು ಹೇಗೆ ಲೋಪವಾದರೆಂಬುವದನ್ನು ಈ ಭಂಟರು ಹೇಳಲೇ ಇಲ್ಲ. ಹೀಗೆಯೇ ಸಮಸ್ತ ಜಾತಿಗಳನ್ನೂ ನಿಂದಿಸುತ್ತ ತಮ್ಮ ಪೇಶ್ವಾಯಿಯ ಪಂಥವನ್ನು ಹೊಗಳುತ್ತ ಮುಗಿಸಿದರು. ಉತ್ತರವನ್ನು ಕೊಡುವದಕ್ಕೆಂದು ಪುನಃ ವೀರಶೈವರ ವಕೀಲರು ತಮ್ಮ ಜವಾಬಿನಲ್ಲಿ ಹೇಳಿದ್ದೇನೆಂದರೆ ಮೊದಲು 1903ರಲ್ಲಿ ಮುಂಬಯಿಯಲ್ಲಾದ ಹೈಕೋರ್ಟು ಫೈಸಲು ಲಿಂಗಾಯತರಿಗೆ ಸಂಬಂಧವಿಲ್ಲವೆಂದು ತೋರಿಸಿದರು. ಯಾತಕ್ಕೆಂದರೆ, ಇದು ಬ್ರಾಹ್ಮಣರ ವ್ಯಾಜ್ಯವಿದ್ದು ಅದರಲ್ಲಿ ಒಬ್ಬ ಬ್ರಾಹ್ಮಣನು ಕಾರಣವಿಲ್ಲದೆ ಲಿಂಗಾಯತರು ಶೂದ್ರರೆಂದು ಹೇಳಿರುತ್ತಾನೆ. ಹೀಗೆ ಉದಾಹರಣೆಯನ್ನು ತೆಗೆದುಕೊಂಡ ಫೈಸಲುಗಳು ಕಾಯಿದೆಯಾಗುವದಿಲ್ಲವೆಂತಲೂ, ಅದೇ ಮುಂಬಯಿಯ ಉದಾಹರಣೆಯನ್ನು ಮದ್ರಾಸ್ ಕೋರ್ಟಿನವರೂ ಉಳಿದ ಕೋರ್ಟಿನವರೂ ತೆಗೆದುಕೊಂಡಿರುವಕಾರಣ, ಕೆಲಸಕ್ಕೆ ಬಾರದವುಗಳೆಂತಲೂ ತೋರಿಸಿ ವೀರಶೈವರ ಪರವಾಗಿ ಫೈಸಲಾದ ಕೆಲವು ಹೈಕೋರ್ಟುಗಳ ಫೈಸಲನ್ನು ಹಾಜರುಮಾಡಿ ಮುಗಿಸುವಕಾಲಕ್ಕೆ ಹೇಳಿದ್ದೇನಂದರೆ—ವೇದಕಾಲದಿಂದಲೂ, ವ್ಯಾಸೋಕ್ತಪುರಾಣಗಳಿಂದಲೂ, ಮಹಾಭಾರತಾದಿ ಇತಿಹಾಸಗ್ರಂಥಗಳಿಂದಲೂ ಲಿಂಗೀ ಅಲಿಂಗೀ ಬ್ರಾಹ್ಮಣರ ಎರಡೂ ಪಂಥಗಳು ಸಮಾನವಾಗಿಯೇ ಬಂದಿರುತ್ತವೆಂತಲೂ, ಬ್ರಾಹ್ಮಣರಿಗಿರುವಂತೆ ಉಳಿದ ಎಷ್ಟೋ ಜಾತಿಯ ಹಿಂದುಜನರು ಲಿಂಗಾಯತಗುರುಗಳಿಗೆ ಅಂಕಿತರಾಗಿರುತ್ತರೆಂತಲೂ, ಈ ಪವಿತ್ರವಾದ ಮತದವರು ಕುರಿಯನ್ನು ಕಡಿದು ಯಜ್ಞಮಾಡುವದಿಲ್ಲ, ಆದರೆ ಪಂಚಯಜ್ಞಗಳೂ ಇವರಲ್ಲಿರುತ್ತವೆ; ಈಗಿನಕಾಲವು ಪೇಶ್ವೆಯರಾಜ್ಯವಲ್ಲವೆಂತಲೂ, ಪೇಶ್ವೆಯಕಾಲದಲ್ಲಿ ವೇದವನ್ನು ಬೇರೆ ಜನರು ಓದಿದರೆ ಕಿವಿಯಲ್ಲಿ ಸೀಸವನ್ನು ಕಾಯಿಸಿ ಹಾಕುತ್ತಿದ್ದರೆಂತಲೂ, ಪೇಶ್ವೆಯ ಪಂಥದಂತೆ ಹೋದರೆ, ಈಗ ರಸ್ತೆಯಲ್ಲಿ ಯಾರಾದರೂ ವೇದವನ್ನು ಹಿಡಿದುಕೊಂಡು ಹೋದರೆ, ಅವರಮೇಲೆ ಕ್ರಿಮಿನಲ್ ವ್ಯಾಜ್ಯ ಮಾಡಬೇಕಾದೀತೆಂತಲೂ ವೇದವು ಅಲಿಂಗೀಬ್ರಾಹ್ಮಣರಿಗೆ ಗುತ್ತಿಗೆಯಾಗಿರುವದಿಲ್ಲವೆಂತಲೂ ಈ ಲಿಂಗೀಬ್ರಾಹ್ಮಣರು ಯಾವಾಗಲೂ ವೇದವನ್ನು ಓದತಕ್ಕವರೆಂತಲೂ, ಬ್ರಾಹ್ಮಣರು ಕೇಳಿರುವ ಪ್ರಶ್ನೆಗಳಿಗೆ ವೇದೋಕ್ತ ಉದಾಹರಣಗಳನ್ನು ಕೊಟ್ಟು ಸಮರ್ಥನಮಾಡಿರುತ್ತಾರೆಂತಲೂ ಬಹಳ ಆವೇಶದಿಂದ ಮಾತನಾಡಿದರು. ಆ ಕಾಲಕ್ಕೆ ಕೋರ್ಟಿನಲ್ಲಿದ್ದ ಬ್ರಾಹ್ಮಣವಕೀಲರು ಒಬ್ಬೊಬ್ಬರೇ ಪಲಾಯನಸೂತ್ರವನ್ನು ಪಠಿಸಿದರು. ಇನ್ನೊಂದು ಆಶ್ಚರ್ಯಕರವಾದ ಸಂಗತಿಯೇನಂದರೆ, ವಕೀಲರು ಹೋಗುವದು ಒತ್ತಟ್ಟಿಗಿರಲಿ; ಪರಳಿಯ ಒಬ್ಬ ಬ್ರಾಹ್ಮಣನಾದರೂ ಕೋರ್ಟಿನಲ್ಲಿರಲಿಲ್ಲ. ಯಾಕಂದರೆ, ಶಾಸ್ತ್ರಾಧಾರದಲ್ಲಿ ವೀರಶೈವಪಂಡಿತರು ಹಿಂಜರಿಯಲಿಲ್ಲ. ಅದನ್ನು ಕಂಡು ಕೇವಲ ಹೈಕೋರ್ಟಿನ ಫೈಸಲಿನ ಮೇಲೆ ಕಾಲೂರಿನಿಂತಿದ್ದರು. ಆ ಫೈಸಲಿನ ಮೂಲವನ್ನೇ ಕಿತ್ತುಗೆಯಲು 20 ವರ್ಷಗಳಿಂದ ಬೊಂಬಾಯಿ ಕೋರ್ಟಿನ ಫೈಸಲಿನಿಂದ ಉಳಿದ ಕೋರ್ಟಿನವರು ಹೇಗೆ ಮೋಸಹೋಗಿರುವರೆಂಬುವದು ಜಡ್ಜಿಗಳಿಗೆ ತಿಳಿಯಬಂದಿತು. ಇನ್ನೊಂದು ಅಂಶಲಕೋಟಿಯ ವ್ಯಾಜ್ಯಕ ಸಂಬಂಧ ವೀರಶೈವರು ಉಡಿಯನ್ನು ಮಾಡಿಕೊಳ್ಳುತ್ತಾರಾದಕಾರಣ ಶೂದ್ರರೆಂದು ಬರೆದಿರುವದಕ್ಕೆ ಸಹ ಯೋಗ್ಯ ಉತ್ತರವನ್ನು ಕೊಟ್ಟರು. ಏನಂದರೆ, ಸಮಾಜದಲ್ಲಿ ಯಾವದಾದರೊಂದು ಪಂಗಡದವರು ಶಾಸ್ತ್ರವಿರುದ್ಧ ಆಚರಣೆಯನ್ನು ಮಾಡಿದರೆ, ಇದೊಂದೇ ಉದಾಹರಣೆಯಿಂದ ಶೂದ್ರರೆನ್ನುವದಕ್ಕೆ ಬರುವದಿಲ್ಲವೆಂತಲೂ, ಬ್ರಾಹ್ಮಣರಲ್ಲಿ ಶಾಸ್ತ್ರವಿರುದ್ಧ ಎಷ್ಟೋ ಆಚರಣೆಗಳು ಇದ್ದರೂ ಅವರು ಶೂದ್ರರಾಗಿಲ್ಲವೆಂತಲೂ ಹೇಳಿದರು. ಆದರೆ ಇದೇ ಬ್ರಾಹ್ಮಣರು ಭಕ್ತಿಯಿಂದ ಪೂಜಿಸುವ ಸ್ಮೃತಿಗಳಲ್ಲಿ ವಿಧವಾ ವಿವಾಹವು ಅನೇಕಕಡೆಗೆ ಹೇಳಿರುತ್ತದೆಂತಲೂ ಹೇಳಿ ಕೆಲವು ಪ್ರಮಾಣಗಳನ್ನು ತೋರಿಸಿದರು, ಮತ್ತು ಈ ಅಲಿಂಗೀಬ್ರಾಹ್ಮಣರು ಹೇಳುವ ಗೋತ್ರಕಾರರ ಉತ್ಪತ್ತಿಯು ಬಹಳ ಕೆಟ್ಟದ್ದಿರುತ್ತದೆಂತಲೂ ಪರಶುರಾಮನ ಕಾಲಕ್ಕೆ ಎಷ್ಟೋ ನೀಚ ಜಾತಿಯವರು ಬ್ರಾಹ್ಮಣರಾದರೆಂತಲೂ ಅಥರ್ವಣವೇದದಲ್ಲಿ ಒಬ್ಬ ಸ್ತ್ರೀಯಳಿಗೆ ಹತ್ತು ಜನ ಪತಿಗಳು ತೀರಿದರೆ ಹನ್ನೊಂದನೇ ಪತಿಯನ್ನು ಮಾಡಿಕೊಳ್ಳಬೇಕೆಂತಲೂ ಹೇಳಿರುವದನ್ನು ತೋರಿಸುತ್ತ ಅನೇಕ ವೀರಶೈವರ ಪ್ರಮಾಣಗ್ರಂಥಗಳನ್ನು ಪಂಡಿತರಿಂದ ತೋರಿಸುತ್ತ ಕಡೆಗೆ ಹೇಳಿದ್ದೇನಂದರೆ, ಈ ಪರಳೀಜ್ಯೋತಿರ್ಲಿಂಗವು ಸಾರ್ವಜನಿಕವಾದದ್ದರಿಂದ ಅಡ್ಡಿಮಾಡಲಿಕ್ಕೆ ಅಧಿಕಾರವಿಲ್ಲವೆಂತಲೂ, ಒಬ್ಬ ಬ್ರಾಹ್ಮಣನು ತನ್ನ ಮನೆಯಲ್ಲಿ ದೇವಾಲಯಮಾಡಿಕೊಂಡರೆ, ನಮ್ಮ ಅಡ್ಡಿ ಇದ್ದಿಲ್ಲವೆಂತಲೂ ಹೇಳಿದರು. ಒಟ್ಟು ವೀರಶೈವರ 110 ಗ್ರಂಥಗಳಯಾದಿಯನ್ನು ಕೋರ್ಟಿಗೆ ಪಂಡಿತರು ಹಾಜರುಮಾಡಿ 30 ಇಂಗ್ಲೀಷ ಪುಸ್ತಕಗಳನ್ನೂ, ಅನೇಕ ಸನದುಗಳನ್ನೂ ಹಾಜರುಮಾಡಿದರು. ಅಹೊತ್ತಿಗೆ ಈ ಪ್ರಕರಣದ ಕಾರ್ಯವು ಮುಗಿಯಿತು. ಇನ್ನು ಕೆಲದಿನಗಳಲ್ಲಿಯೇ ಪರಿಣಾಮವು ತಿಳಿಯುವದು.

ಶ್ರೀ ಸೀತಾರಾಘವವೈದ್ಯಶಾಲೆಯ

ಶ್ರೀಮದಕ್ಷಯಸಂವತ್ಸರದ ಪಂಚಾಂಗಗಳು.

ಈ ಪಂಚಾಂಗದಲ್ಲಿ ಅನೇಕ ಹೆಚ್ಚು ವಿಷಯಗಳು ಸೇರಿಸಲ್ಪಟ್ಟಿವೆ. ಆರ್ಯಭಟ್ಟಸಿದ್ಧಾಂತವೂ ಸೇರಿದೆ. ಸಂಸ್ಕೃತಶ್ಲೋಕಗಳಿಗೆಲ್ಲಾ ಕನ್ನಡದಲ್ಲಿ ಟೀಕು ಬರೆಯಲ್ಪಟ್ಟಿದೆ. ವಿದ್ವಾಂಸರುಗಳಿಂದ ಸರ್ವೋತ್ತಮವಾದುದೆಂದು ಒಪ್ಪಲ್ಪಟ್ಟಿದೆ.

ಪಂಚಾಂಗ 1 ಕ್ಕೆ ಕ್ರಯ 2 ಆಣೆ ಮಾತ್ರ.

ಡಜನ್ 1 ಕ್ಕೆ 1 ರೂ. 4 ಆ. ಟಪಾಲ್ ಖರ್ಚು ಬೇರೆ.

ನೂರರಮೇಲೆ ಕೊಳ್ಳುವವರಿಗೆ ಧಾರಾಳವಾದ ಕಮಿಷನ್ ಅಡ್ವಾನ್ಸಿನೊಡನೆ ಬರೆಯಿರಿ.

ದೊರೆಯುವ ಸ್ಥಳ:—

(1) ಮ|| ರಾ|| ಪಾಳ್ಯದ ವೆಂಕಟಾಚಲಪಂಡಿತರು,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

(2) ಶ್ರೀ ಸೀತಾರಾಘವವೈದ್ಯಶಾಲಾ ಬ್ರಾಂಚ್,
[4-1] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂದಾಸಿ	೦—೪—೦	೦—೯ ೦
ವ್ರತಪಂಚಕ	೦—೪ ೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೬ ನೆಯ ಇಸವಿ ಜನವರಿ ತಾ|| ೨ ರಿಂದ ೧೯೨೬ ನೆಯ ಇಸವಿ ಜನವರಿ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಪುಷ್ಯಬಹುಳ ತದಿಗೆಯಿಂದ ಪುಷ್ಯಬಹುಳ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾಸ
2	ಶನಿ	ತದಿ	14-32	ಆಶ್ಲೇ	41-58	19
3	[1]ಭಾನು	ಚೌತಿ	20-0	ಮಖಾ	48-27	20
4	ಸೋಮ	ಪಂಚ	24-57	ಪುಬ್ಬ	54-28	21
5	ಮಂಗಳ	ಷಷ್ಠಿ	29-15	ಉತ್ತ	59-36	22
6	ಬುಧ	ಸಪ್ತ	32-27	ಹಸ್ತ	60	23
7	[2]ಗುರು	ಅಷ್ಟ	34-32	ಹಸ್ತ	3-2	24
8	ಶುಕ್ರ	ನವ	35-10	ಚಿತ್ತ	5-42	25

(1) ಮಳೆನಕ್ಷತ್ರ-ಪೂರ್ವಾಷಾಢ ೩ ನೆಯ ಪಾದ. (2) ಮಳೆನಕ್ಷತ್ರ-ಪೂರ್ವಾಷಾಢ ೪ ನೆಯಪಾದ.

ಮೈಸೂರು : ಮೈ. ಶಿವರಾಮಯ್ಯನವರಿಂದ ಕ್ಯಾಸ್ಟ್ ಎಕ್ಸ್ಪ್ರೆಸ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗರರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯತ್ವ ನಕ್ಷತ್ರ ಮೋಹರಾಜೋಯಂ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾತಾಳುಲಂ | ಶ್ರೀನಂಜೇಶ್ವರಿಯಂಶಪಾಪುರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜನವರಿ ತಾರೀಖು ೯ ನೆಯ ಶನಿವಾರ. [ಸಂಚಿಕೆ ೨

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಆದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರ ಪಾಕ.

ಧಿಃಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿಮೈಥುನದಿಂದುಂಟಾದ) ಇಂದ್ರಿಯಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಶಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಆದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ ತಾಲಿಮಖಂಡ, ಜಪಾಕಂದ, ತಾಲ್ಮಲಿಕಂದ, ಅಸ್ಪಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಪಾಂತರಜಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಬೀದಾಣೆ, ಮರ್ದಾನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಸ, ವಾಕೇರಿಭಾಜಾ, ಗೋಖುರು, ಅಡವೀ ಬೆಂಡಿ ಬೀಜ, ಅಮೃತಸತ್ವ, ಇಸಬಗೋಲ, ಬುನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಳುಕಿ, ವಂಶಲೋಚನ, ವರಧಾರ, ಕೇಸರಿ, ಯಾಲಕ್ಕಿ ರುಲ್ಲಸಕ್ಕರಿ, ಈ ಜೀನಸುಗಳಲ್ಲಿ ದಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಸಕ್ಕರಿಮಿಶ್ರಿತ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೭ನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ಬ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ಕುಲಿನ, ೪ ಲಖಮಸಿ ಗೇಲಾಭಾಯ ಹಿಸ್ಸ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಕನ್ನುಖಗೌಡಾ ಪಾಟೀಲ ಅತ್ತಿಗೇರಿ, ೭ ಝೂಗಾಜಯರಾಮ ಪೋ. ಸೊಲ್ಲಾಪೂರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—40] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ಗಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೫ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸಪ ಅಂಡ್ ಕಂಪನಿ ಲಿಮಿಟೆಡ್,
[80—16] ಪೋ. ಬಾ. ೩೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯಷ್ಟಾಗ್ರಪಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡಿಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
22 [illegible], ಮೈಸೂರು.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯು ಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	48

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ. } ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಶ್ರೀ ಕ್ಷಯನಾಮಸಂವತ್ಸರದ ಅತ್ಯುತ್ತಮ

ಪಂಚಾಂಗ.

ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವದಿವಸ ಮಳೆಯು ಪ್ರವೇಶಿಸುವದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ, ಸ್ತ್ರೀಪುನ್ನಪುಂಸಕ, ರವಿಚಂದ್ರಯೋಗ, ಪತಿತಸ್ಥಾನಗಳನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ತಿಳುಹಿಸಲು ಇಲ್ಲಿ ಸಾಧ್ಯವಿಲ್ಲ. ಈ ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಗಿಂತಲೂ ಈವರ್ಷ ಬೆಲೆಯು ಬಹಳೇ ಕಡಿಮೆಮಾಡಿರುತ್ತೇವೆ. ಹಿಂದಣವರ್ಷಕ್ಕಿಂತಲೂ ಹೆಚ್ಚಿಗೆ ಪ್ರತಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. ಪಂಚಾಂಗ ಕ್ರಯದವಿವರ ಪ್ರತಿ ನೂರಕ್ಕೆ (೨೫) ರಿಂದ ೧೦೦ ವರೆಗೆ ರೂ. ೧೩-೦-೦ ರೂಪಾಯಿಗಳು. ೨೦೦ ರಿಂದ ೫೦೦ ವರೆಗೆ ರೂ. ೧೨-೨-೦. ೬೦೦ ರಿಂದ ೧೦೦೦ ವರೆಗೆ ರೂ. ೧೦-೦-೦ (೫) ಪಂಚಾಂಗಗಳು ತರಿಸಿಕೊಳ್ಳುವವರಿಗೆ ರೂ. ೧-೦-೦ ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ದೊರೆಯಲಿಕ್ಕಿಲ್ಲ. ಅಪೇಕ್ಷೆಯುಳ್ಳವರು ಬೇಗನೆ ಆರ್ಡರ್ ಕೊಡಿರಿ. ಚಿಲ್ಲರೆ ಒಂದಕ್ಕೆ ನಾಲ್ಕಾಣೆ ಸ್ಟಾಂಪನ್ನು ಕಳಿಸಿದರೆ ಕಳಿಸಿಕೊಡುತ್ತೇವೆ.

ಪಂಚಾಂಗಕರ್ತ—ಬ್ರ||ಶ್ರೀ|| ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷಪಾಠಶಾಲಾ, ರಾಯಚೂರು [illegible]

ಪಂಚಾಂಗಗಳು ದೊರೆಯುವ ವಿಳಾಸ—
ರಸ್ತಾಪೂರು, ಗುರ್ಜಿಚನ್ನಬಸವಪ್ಪ ಅಂಡ್ ಬ್ರದರ್ಸ್.
[12—10] [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜನವರಿ ತಾ|| ೯ ನೆಯ ಶನಿವಾರ.

A CRY IN THE WILDERNESS.

It has been repeatedly urged on the attention of the Government of His Highness the Maharaja that the claims of the candidates of the backward communities have been overlooked many a time in the matter of awarding of foreign scholarships. Even at the Budget Session of the Representative Assembly held in June, 1925, they were interpellated and some important information was elicited. It was stated that out of 43 foreign scholarships that were granted from the years 1910 to 1924, as many as 28 or nearly two-thirds were given to Brahmins. It was further said that all applications received by Government are referred to a committee for the selection of candidates for foreign scholarships and the decision of Government will always be based on their recommendations. At that time it was urged that no Lingayat candidate had been awarded any foreign scholarship at any time and the Government may be pleased to consider their claims favourably in future years at least. The sympathetic way in which the Government treated the subject then created some hopes in the minds of the members concerned, but they were shattered rudely by the recent events. A foreign scholarship for the study of Forest-Engineering has been given away to a Brahmin, though there were a number of non-Brahmin applicants. We are eager to know whether the Government have followed the usual procedure, which in the words of the Dewan is that "the committee considers the qualifications etc., of the several candidates who apply for scholarships and makes their recommendations to Government on which the decision of Government will be based." Even if the committee had lost sight of the claims of the non-Brahmin candidates; amongst whom there was a Lingayat candidate also, it was the duty of the Government to have given a chance to a non-Brahmin to reduce the Brahmin monopoly. The Government are fully aware that it is very rarely that duly qualified candidates are available from amongst the backward communities, and yet they easily brush aside the legitimate claims of such candidates when opportunities occur. In passing orders on the Miller Committee Report the Government expressed a hope "that the communities concered will devote special efforts to training an increasing number of their students for the Public Service so as to avail themselves of the opportunities now extended to them." It may be inconvenient for the Government to overlook the claims of the candidates of the backward communities for appointments in Service when they are fully qualified owing to the Order on the Miller Committee Report. But it is easier to cut off the chances at the very root by not affording them such facilities as the above. Who is to be blamed if the Government were to disappoint them repeatedly, inspite of their putting forward duly qualified candidates to avail themselves of the rare opportunities like the one under discussion? Do not the Government think that the heart of these unfortunately placed communities will sink by denying them their legitimate rights? We have stated in these columns once and again that the best intentions of His Highness the Maharaja are not capable of being translated into action under the existing constitution, unless the Executive Council is composed of members who are zealous in safeguarding and promoting the interests of the backward communities. Unless this is vouchsafed any number of nicely-worded Government Orders wuold be of no avail. The Government of His Highness the Maharaja are yet very recluctant to concede their just rights to the various backward communities, who form 98% of the population of the State. Yet the Brahmins have been raising an outcry as if they had been the victims of a flagrant act of oppression. The non-Brahmins are under a false sense of security and quite unaware of the attempts which are being made to explode mines under their rights. Will they wake up only when it is too late?

ಅರಣ್ಯರೋದನ.

ವೈದ್ಯ, ವಿದ್ಯುತ್, ಶಿಲ್ಪ ಮೊದಲಾದ ವಿದ್ಯೆಗಳಲ್ಲಿ ಪೂರ್ಣಪಾಂಡಿತ್ಯವನ್ನು ಪಡೆದು ಬರಲು ನಮ್ಮ ಮೈಸೂರು ಸರ್ಕಾರದವರು ಮಾಸಾಶನವನ್ನು ಕೊಟ್ಟು ವಿದ್ಯಾಸಂಪನ್ನರಾದ ದೇಶೀಯಯುವಕರನ್ನು ಅಮೇರಿಕೆ, ಜರ್ಮನಿ, ಇಂಗ್ಲೆಂಡು ಮೊದಲಾದ ಪಾಶ್ಚಾತ್ಯದೇಶಗಳಿಗೆ ಕಳುಹಿಸಿಕೊಡುತ್ತಿರುವರಷ್ಟೆ? ಹೀಗೆ ವೇತನಗಳು ಕೊಡಲ್ಪಡುವುದರಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರೋತ್ಸಾಹವು ದೊರೆಯುತ್ತಿಲ್ಲವೆಂದು ಪದೇಪದೆ ಸರ್ಕಾರದವರ ಗಮನಕ್ಕೆ ತರಲ್ಪಡುತ್ತಿದೆ. ಅಲ್ಲದೆ 1925 ನೆಯ ಜುನ್ ತಿಂಗಳಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನದಲ್ಲಿ, ಯಾವಯಾವವರ್ಗದ ವಿದ್ಯಾರ್ಥಿಗಳಿಗೆಷ್ಟೆಷ್ಟು ವೇತನಗಳು ಕೊಡಲ್ಪಟ್ಟುವೆಂದು ಪ್ರಶ್ನಿಸಲ್ಪಟ್ಟಿದ್ದುದಕ್ಕೆ, 1910 ರಿಂದ 1924 ರ ವರೆಗೆ ಕೊಡಲ್ಪಟ್ಟ 43 ಪರದೇಶವಿದ್ಯಾರ್ಥಿವೇತನಗಳಲ್ಲಿ 28 ಅಂದರೆ ⅔ ಭಾಗವು ಬ್ರಾಹ್ಮಣರಿಗೆ ಕೊಡಲ್ಪಟ್ಟಿದ್ದಿತಾಗಿ ಉತ್ತರವು ಕೊಡಲ್ಪಟ್ಟಿತು. ಅಲ್ಲದೆ ಸರ್ಕಾರದವರು ತಮಗೆ ಬರುವ ಅಭ್ಯರ್ಥಿಗಳ ಅಪ್ಲಿಕೇಷನ್ನುಗಳನ್ನು ಒಂದು ನಿಯತವಾದ ಕಮಿಟಿಗೆ ಕಳುಹಿಸಿಕೊಟ್ಟು ಅವರು ಒಪ್ಪುವಂತಹ ಅಭ್ಯರ್ಥಿಗಳಿಗೆ ತಾವು ವೇತನಗಳನ್ನು ಕೊಡುತ್ತಿರುವುದಾಗಿ ತಿಳುಹಿದರು. ಈ ಸಂದರ್ಭದಲ್ಲಿ ಕೆಲ ವೀರಶೈವಪ್ರತಿನಿಧಿಗಳು ತಮ್ಮ ಪಂಗಡದ ವಿದ್ಯಾರ್ಥಿಗಳಿಗೆ ಯಾವಕಾಲದಲ್ಲೂ ಪರದೇಶವೇತನವು ಕೊಡಲ್ಪಟ್ಟಿದ್ದಿಲ್ಲವಾದುದರಿಂದ ಮುಂದಾದರೂ ಅವರಿಗೆ ವೇತನವು ಕೊಡಲ್ಪಡುವಂತೆ ದಯಾಳು ಸರ್ಕಾರದವರು ಕೃಪೆಗೈಯ್ಯಬೇಕೆಂದು ಪ್ರಾರ್ಥಿಸಿಕೊಳ್ಳಲು ಸರ್ಕಾರದವರು ಮುಂದೆ ಉಪೇಕ್ಷಿಸದೆ ನೆರವೇರಿಸಿಕೊಡುವುದಾಗಿ ಆಶ್ವಾಸವನ್ನು ಕೊಟ್ಟರು. ಆದರೆ ಈ ಜನಾಂಗದವರ ಆಶೆಯೆಲ್ಲವೂ ಈಚೆಗೆ ನಡೆದ ಒಂದು ಪ್ರಕರಣದಿಂದ ಭಂಗಕಾರಿಯಾಗಿ ಪರಿಣಮಿಸಿರುವುದೆಂದು ತಿಳುಹಲು ವಿಷಾದವಾಗುತ್ತದೆ. ಸೀಮೆಗೆ ಹೋಗಿ ಫಾರೆಸ್ಟ್ ಇಂಜನಿಯರಿಂಗಿನಲ್ಲಿ ಪ್ರೌಢವಿದ್ಯಾಭ್ಯಾಸಂಗವನ್ನು ಮಾಡಲು ವೇತನವನ್ನು ಅಪೇಕ್ಷಿಸಿ ಬ್ರಾಹ್ಮಣರಷ್ಟೇ ಅಥವಾ ಅವರಿಗಿಂತಲೂ ಅಧಿಕವಾಗಿ ಯೋಗ್ಯತೆಯುಳ್ಳ ಬ್ರಾಹ್ಮಣೇತರವಿದ್ಯಾರ್ಥಿಗಳು ಅಪ್ಲಿಕೇಷನ್ನುಗಳನ್ನು ಹಾಕಿಕೊಂಡಿರುವಲ್ಲಿ, ಬ್ರಾಹ್ಮಣವಿದ್ಯಾರ್ಥಿಗೇ ವೇತನವು ಕೊಡಲ್ಪಟ್ಟಿತು. "ಕಮಿಟಿಯವರು ಅಭ್ಯರ್ಥಿಗಳ ಯೋಗ್ಯತಾದಿಗಳನ್ನು ಪರಿಶೀಲಿಸಿ ಚುನಾಯಿಸುವವರಿಗೆ ಸರ್ಕಾರದಿಂದ ವೇತನವು ಕೊಡಲ್ಪಡುವ ವಿಚಾರವು ನಿರ್ಧರಿಸಲ್ಪಡುವುದು." ಎಂದು ದಿವಾನರು ಅಪ್ಪಣೆಕೊಡಿಸಿದ್ದುದು ಈ ಸಂದರ್ಭದಲ್ಲಿ ಅನುಸರಿಸಲ್ಪಟ್ಟಿರುತ್ತದೆಯೇ? ಎಂಬುದನ್ನು ತಿಳಿಯಲು ಕುತೂಹಲರಾಗಿದ್ದೇವೆ. ಈ ವೇತನವನ್ನು ಹೊಂದಲು ತಕ್ಕ ಯೋಗ್ಯತೆಯುಳ್ಳ ಒಬ್ಬ ವೀರಶೈವರು ಅಭ್ಯರ್ಥಿಯಾಗಿದ್ದರು. ಒಂದುವೇಳೆ ಕಮಿಟಿಯವರು ಬ್ರಾಹ್ಮಣೇತರವಿದ್ಯಾರ್ಥಿಗಳನ್ನು ಮರೆತುಬಿಟ್ಟಿದ್ದರೂ, ಬ್ರಾಹ್ಮಣರ ಗುತ್ತಿಗೆಯನ್ನು ತಗ್ಗಿಸುವುದಕ್ಕಾದರೂ ಬ್ರಾಹ್ಮಣೇತರರಿಗೆ ಅದರಲ್ಲೂ ಈವರೆಗೆ ಸರ್ಕಾರ ವೇತನವನ್ನು ಪಡೆಯದಿರುವ ವೀರಶೈವರಿಗೆ ಕೊಡಬೇಕಾಗಿದ್ದುದು ಸರ್ಕಾರದವರ ಧರ್ಮವಾಗಿದ್ದಿತು. ಹಿಂದುಳಿದವರಲ್ಲಿ ತಕ್ಕ ಯೋಗ್ಯತಾಸಂಪನ್ನರಾದ ಅಭ್ಯರ್ಥಿಗಳು ದೊರಕುವುದು ದುರ್ಲಭವೆಂಬುದನ್ನು ಸರ್ಕಾರದವರು ಚೆನ್ನಾಗಿ ಬಲ್ಲರಾದರೂ, ಅಂತಹಯೋಗ್ಯತಾಸಂಪನ್ನರಾದವರೊಬ್ಬಿಬ್ಬರು ದೊರಕಿದ ವೇಳೆಯಲ್ಲಿ ಬಹು ಸರಸವಾಗಿ ನಿರಾಕರಿಸಿಬಿಡುವರು. ಮಿಲ್ಲರ್‌ಕಮಿಟಿಯ ವರದಿಯಮೇಲೆ ಸರ್ಕಾರದವರು ಅಪ್ಪಣೆ ಮಾಡುವಾಗ್ಗೆ "ಹಿಂದುಳಿದ ಜನಾಂಗದ ವಿದ್ಯಾರ್ಥಿಗಳು ಸರ್ಕಾರಿಯುದ್ಯೋಗಕ್ಕೆ ಸೇರುವುದಕ್ಕಾಗಿ ಕಲ್ಪಿಸಲ್ಪಟ್ಟಿರುವ ಸೌಲಭ್ಯವನ್ನು ಪಡೆಯಲು ಅರ್ಹರಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಆಯಾಪಂಗಡದವರು ವಿಶೇಷ ಪ್ರಯತ್ನ ಮಾಡುವವರಾಗಿ ನಿರೀಕ್ಷಿಸುತ್ತೇವೆ" ಎಂದು ಸರ್ಕಾರದವರು ಅಪ್ಪಣೆ ಕೊಡಿಸಿರುವರು. ಚರ್ಚಾಸ್ಪದವಾದ ಈಗಣಂತಹ ಅನುಕೂಲಸಮಯದಲ್ಲಿ ಅರ್ಹರಾದ ಹಿಂದುಳಿದ ವರ್ಗದವರು ಅಭ್ಯರ್ಥಿಗಳಾಗಿದ್ದಾಗ್ಯೂ ಸರ್ಕಾರದವರು ವೇತನವನ್ನು ಕೊಡದೆ ನಿರಾಶರನ್ನಾಗಿಮಾಡುತ್ತಲೇ ಬಂದರೆ ಯಾರನ್ನು ದೂಷಿಸಬೇಕೋ ನಮಗೆ ಬೇರೆ ತಿಳಿಯದು. ಅದೃಷ್ಟಹೀನರಾದ ಪಂಗಡದವರು ತಮಗೆ ನ್ಯಾಯವಾಗಿ ಸಲ್ಲಬೇಕಾದ ಹಕ್ಕುಗಳು ನಿರಾಕರಿಸಲ್ಪಟ್ಟಲ್ಲಿ ಹತಾಶರಾಗುವರೆಂದು ಸರ್ಕಾರದವರು ಯೋಚಿಸಬಾರದೆ? ಈಗಣ ರಾಜಕೀಯ ಪರಿಸ್ಥಿತಿಯಲ್ಲಿ ಹಿಂದುಳಿದ ಪಂಗಡದವರ ಕ್ಷೇಮಚಿಂತಕರು ರಾಜಕಾರ್ಯನಿರ್ವಾಹಕ ಕೌನ್ಸಿಲಿನ ಮೆಂಬರುಗಳಾಗಿದ್ದಹೊರತು ಹಿಂದುಳಿದವರು ಮುಂಬರಿಯಬೇಕೆಂಬ ಶ್ರೀಮನ್ಮಹಾರಾಜರವರ ಸದುದ್ದೇಶವು ನೆರವೇರಲು ಸಾಧ್ಯವಿಲ್ಲವೆಂದು ನಾವು ಅನೇಕ ವೇಳೆ ಈ ಪತ್ರಿಕೆಯಲ್ಲಿ ಪ್ರತಿಪಾದಿಸಿರುತ್ತೇವಲ್ಲದೆ ಈಗಲೂ ಪ್ರತಿಪಾದಿಸುವವರಾಗಿರುವೆವು. ಅದು ಕಾರ್ಯರೂಪವಾಗದ ಹೊರತು ಮೃದುಮಧುರಭಾಷೆಯ ಸರ್ಕಾರಿಯಪ್ಪಣೆಗಳಿಂದೇನೂ ಪ್ರಯೋಜನವಾಗುವುದಿಲ್ಲ. ಹಿಂದುಳಿದವರ ಪರಿಸ್ಥಿತಿಯು ಹೀಗಿದ್ದಾಗ್ಗೂ ಮುಂಬರಿದ ಬ್ರಾಹ್ಮಣರು ಸರ್ಕಾರಿಯುದ್ಯೋಗದ ಸೌಭಾಗ್ಯವನ್ನು ಕಳೆದುಕೊಂಡು ತೊಂದರೆಯನ್ನನುಭವಿಸುತ್ತಿರುವವರಂತೆ ಕೋಲಾಹಲವನ್ನು ಮಾಡುತ್ತಿರುವರು. ಆದರೆ ಹಿಂದುಳಿದವರು ತಮ್ಮ ಹಕ್ಕುಬಾಧ್ಯತೆಗೆ ಚ್ಯುತಿಯಿಲ್ಲವೆಂದು ತಪ್ಪಾಗಿ ತಿಳಿದುಕೊಂಡಿರುವರಲ್ಲದೆ, ತಮ್ಮ ಹಕ್ಕನ್ನು ಸಿಡಿಮದ್ದಿನಿಂದ ಹಾರಿಸಿಬಿಡಲು ನಡಿಸಲ್ಪಡುತ್ತಿರುವ ಪ್ರಯತ್ನಗಳನ್ನು ಸುತರಾಂ ಅರಿತವರಾಗಿಲ್ಲವಾದುದರಿಂದಲೂ, ಇಂತಹ ಪರಿಸ್ಥಿತಿಯಲ್ಲಿ ಮಾಡುವ ಮೊರೆಯೆಲ್ಲವೂ ಅರಣ್ಯರೋದನವಾಗಿ ಪರಿಣಮಿಸುವುದರಿಂದಲೂ ಇನ್ನು ಮೇಲಾದರೂ ಎಚ್ಚತ್ತುಕೊಳ್ಳುವರೆಂದು ನಿರೀಕ್ಷಿಸುತ್ತೇವೆ.

ಶ್ರೀಮದ್ಯುವರಾಜರವರು ಕೃಷ್ಣರಾಜಮಿಲ್ಲಿಗೆ ದಯೆಮಾಡಿಸಿದ್ದುದು.

ಶ್ರೀಮದ್ಯುವರಾಜರವರು ರಾಜಧಾನಿಯ ಶ್ರೀ ಕೃಷ್ಣರಾಜಮಿಲ್ಲಿಗೆ ಲಕ್ಷಗಟ್ಟಳೆ ಹಣವನ್ನು ಹಾಕಿ ಭಾಗದಾರರಾಗಿರುವುದರಿಂದ ಸೀಮೆಯಿಂದ ಹಿಂದಿರುಗಿ ದಯೆಮಾಡಿಸಿದ ಮೇಲೆ ಮಿಲ್ಲಿನ ವಿದ್ಯಮಾನಗಳನ್ನು ಪರೋಕ್ಷವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದು ಈ ತಾ|| 7 ನೆಯ ಗುರುವಾರ ಬೆಳಗಿನ 8½ ಗಂಟೆಗೆ ತಮ್ಮ ಪರ್ಸನಲ್ ಅಸಿಸ್ಟೆಂಟರಾದ ಮಿ|| ಮೇಕ್ರಿಯವರೊಡನೆ ಮೋಟಾರುಬಂಡಿಯಲ್ಲಿ ಮಿಲ್ಲಿಗೆ ದಯೆಮಾಡಿಸಿದ್ದರು. ಮಿಲ್ಲಿನ ಏಜಂಟರುಗಳಲ್ಲೊಬ್ಬರಾದ ಮ|| ಬಿ. ಸೀತಾರಾಮಾಚಾರ್ಯರವರು ಶ್ರೀಮದ್ಯುವರಾಜರವರನ್ನು ಮಹಾದ್ವಾರದಲ್ಲಿ ಮರ್ಯಾದಾಪುರಸ್ಸರವಾಗಿ ಇದಿರ್ಗೊಂಡು ಒಳಕ್ಕೆ ಕರೆದುಕೊಂಡು ಹೋದಮೇಲೆ ಶ್ರೀಮದ್ಯುವರಾಜರವರು ಮಿಲ್ಲಿನ ಯಂತ್ರಗಳು ಮೊದಲಾಗಿ ಪ್ರತಿಯೊಂದುಭಾಗವನ್ನೂ ಪರಾಮರ್ಶಿಸಿ ಪ್ರತಿನಿತ್ಯದಲ್ಲೂ ಎಷ್ಟು ಜನರು ಕೆಲಸಮಾಡುತ್ತಾರೆ, ಯಾವಯಾವಪದಾರ್ಥಗಳೆಷ್ಟೆಷ್ಟು ತಯಾರಾಗುತ್ತವೆ, ಯಾವಪದಾರ್ಥಕ್ಕೆ ಗಿರಾಕಿಹೆಚ್ಚಾಗಿದೆ, ಯಾವುದರಿಂದ ಲಾಭ ಬರುತ್ತದೆ, ಹತ್ತಿನೂಲಿನ ಕಚರಾ (ವೇಸ್ಟು) ಯಾವ ಕೆಲಸಗಳಿಗೆ ಉಪಯೋಗಿಸಲ್ಪಡುತ್ತದೆ, ದೊಡ್ಡ ಇಂಜೆನಿಯರಾದಿಯಾಗಿ ಸಣ್ಣ ಕೆಲಸದ ಹುಡುಗರವರೆಗೆ ಎಷ್ಟೆಷ್ಟು ಸಂಬಳ ಕೊಡಲ್ಪಡುತ್ತದೆ ಮೊದಲಾಗಿ ಅನೇಕ ವಿಷಯಗಳನ್ನು ಮ|| ಸೀತಾರಾಮಾಚಾರ್ಯರನ್ನು ಕೇಳಿ ತಿಳಿದುಕೊಂಡು ಸಂತೋಷಪಟ್ಟು ಮ|| ಸೀತಾರಾಮಾಚಾರ್ಯರನ್ನು ವಂದಿಸಿ ಮಿಲ್ಲಿನ ಪುರೋಭಿವೃದ್ಧಿ ವಿಚಾರದಲ್ಲಿ ತಮಗಿರುವ ಆಸಕ್ತಿಯನ್ನು ವ್ಯಕ್ತಗೊಳಿಸಿದರೆಂದು ತಿಳುಹಲು ಸಂತೋಷವಾಗುತ್ತದೆ. ಹೆಚ್ಚು ಹಣವನ್ನು ಹಾಕಿರುವವರು ಮುಖ್ಯವಾಗಿ ತಮ್ಮ ಪ್ರಜಾಕ್ಷೇಮವನ್ನು ಬಯಸುವವರು ಜನೋಪಯುಕ್ತವಾದ ಇಂತಹ ಮಿಲ್ಲು ಮೊದಲಾದ ಸಂಸ್ಥೆಗಳನ್ನು ಆಗಾಗ್ಗೆ ಸ್ವತಃ ಪರಾಮರ್ಶಿಸಿ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುತ್ತಿದ್ದರೆ ಅವುಗಳ ಕೆಲಸಗಳು ಸಮರ್ಪಕವಾಗಿ ನಡೆಯಲೂ, ಅವುಗಳ ವಿಚಾರದಲ್ಲಿ ಜನರಿಗಿರುವ ಅನುಮಾನ ಭೀತಿಗಳು ನಿವಾರಣೆಯಾಗಲೂ ಅವಕಾಶವಾಗುತ್ತದೆನ್ನುವುದರಲ್ಲಿ ಸಂದೇಹವಿಲ್ಲ.

ಸ್ವದೇಶದ ವೃತ್ತಾಂತಗಳು.

ಕಳೆದ ಬುಧವಾರ ರಾತ್ರಿ ರಾಜಧಾನಿಯಲ್ಲಿ ಒಳ್ಳೇ ಮಳೆಯಾಯಿತು; ಇನ್ನೂ ಮೋಡವಾಡುತ್ತಿದೆ.

ಈ ತಾ|| 14 ನೆಯ ಗುರುವಾರ ಸೂರ್ಯಗ್ರಹಣವು ಬೊಂಬಾಯಿಪ್ರಾಂತದಲ್ಲಿ ಬೆಳಗಿನ 10-51 ಘಂಟೆಗೆ ಸ್ಪರ್ಶವಾಗಿ 12-37 ಘಂಟೆಗೆ ಮೋಕ್ಷವಾಗುವುದು; ಮದ್ರಾಸುಪ್ರಾಂತ್ಯದಲ್ಲಿ 10-54 ಘಂಟೆಗೆ ಸ್ಪರ್ಶವಾಗಿ ಮಧ್ಯಾಹ್ನ 1-24 ಘಂಟೆಗೆ ಮೋಕ್ಷವಾಗುವುದು ಎಂದು ದೈವಜ್ಞರು ಹೇಳಿರುತ್ತಾರೆ.

ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಸಂಪದಭ್ಯುದಯಪತ್ರಿಕಾಸಂಪಾದಕರಮೇಲೆ ನಡೆಯುತ್ತಿರುವ ವಿವಾದದಲ್ಲಿ ಫಿರ್ಯಾದಿ ಮಿ|| ಅಲ್ಲಿಖಾನರ ಬಹುದೀರ್ಘವಾದ ಕ್ರಾಸ್ ಎಗ್ಜಾಮಿನೇಷನು ಈ ತಾ|| 6 ಮತ್ತು 7 ರಲ್ಲಿ ನಡೆದು ಮುಗಿದುದರಿಂದ ಬರುವ ತಾ|| 12 ನೆಯ ಮಂಗಳವಾರ ರೀಎಗ್ಜಾಮಿನೇಷನ್ನಿಗಾಗಿಡಲ್ಪಟ್ಟಿರುತ್ತದೆ.

ಮೈಸೂರು ಶ್ರೀಮನ್ಮಹಾರಾಜರವರಿಗೆ ಸುಗಂಧದ್ರವ್ಯಗಳನ್ನು ಒದಗಿಸುವ ರಾಜಧಾನಿಯ ಸಂತೇಪೇಟೆಯಲ್ಲಿರುವ ಮೆಸರ್ಸ್. ಜಾಫರ್‌ಮೊಹದೀನ್ ಸಾಹೇಬ್ ಅಂಡ್‌ಸನ್ ರವರು ಶ್ರೀಮನ್ಮಹಾರಾಜರವರ ಸುಂದರವಾದ ಛಾಯಾಚಿತ್ರದೊಡನೆ ಮುದ್ರಣಮಾಡಿಸಿ ಕಳುಹಿಸಿಕೊಟ್ಟಿರುವ 1926 ನೇ ಇಸವಿಯ ಕ್ಯಾಲಂಡರನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಕೆ. ಸಿದ್ಧರಾಮಪ್ಪನವರು ರಾಜಧಾನಿಯ ಅಡ್ವೋಕೇಟ್ ಮ|| ಮಿರ್ಲೆ ಸುಬ್ಬರಾಯರಮೇಲೆ ಮಾನನಷ್ಟಕ್ಕಾಗಿ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿರುವ ವಿವಾದದ ವಿಚಾರಣೆಯು ಕಳೆದ ತಾ|| 7 ರಲ್ಲಿ ನಡೆಯಬೇಕಾಗಿದ್ದುದು ಅಪರಾಧಿಯು ಅಸ್ವಸ್ಥತೆಯಿಂದ ಕೋರ್ಟಿಗೆ ಬರಲಿಲ್ಲವಾಗಿ ಈ ತಾ|| 25 ಕ್ಕೆ ಅಡ್ಜರನ್ ಮಾಡಲ್ಪಟ್ಟಿತು.

ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟರು ಒಂದು ಕಳುವಿನ ಮೊಕದ್ದಮೆಯನ್ನು ಕಳೆದ ಶನಿವಾರ ವಿಚಾರಣೆಮಾಡಿ ಅಪರಾಧಿಯು ನಿರ್ದೋಷಿಯೆಂದು ತೀರ್ಮಾನಿಸಿ, "ಈ ಮೊಕದ್ದಮೆಯು ಸಾಮಾನ್ಯವೂ ಸಂಪೂರ್ಣ ಬನಾವಟ್ಟೂ ಆದದ್ದು. ಇಂತಹ ಕಳ್ಳತನವನ್ನು ಕಂಡುಹಿಡಿಯಲುದ್ಯುಕ್ತನಾಗಿದ್ದ ಪೋಲೀಸು ಅಧಿಕಾರಿಯು ಅಪರಾಧಿಯನ್ನು ಸೆರೆಯಲ್ಲಿಟ್ಟು ಛಾರ್ಜ್‌ಷೀಟನ್ನು ಕೊಟ್ಟುದಕ್ಕಾಗಿ ಅವನ ವರ್ತನವು ಖಂಡಿಸಲ್ಪಡತಕ್ಕದಾಗಿದೆ." ಎಂದು ಬರೆದಿರುವರು.

ಬೆಂಗಳೂರುಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಕಮಿಷನರಾಗಿದ್ದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ಅಸ್ವಸ್ಥತೆಯಿಂದ ರಜವನ್ನು ತೆಗೆದುಕೊಂಡು ದಕ್ಷಿಣದೇಶಸಂಚಾರಕ್ಕೆ ಹೋಗಿದ್ದು ಬಂದು ಡಾಕ್ಟರ ಹೇಳಿಕೆಯಂತೆ ಸರ್ಕಾರಿಯುದ್ಯೋಗದಿಂದ ನಿವೃತ್ತರಾಗಲು ನಿರ್ಧರಿಸಿ ಸರ್ಕಾರದವರನುಮತಿಯನ್ನು ಪಡೆದು ಪೂರ್ವಭಾವಿಯಾಗಿ ರಜವನ್ನು ತೆಗೆದುಕೊಂಡಿರುವರು.

ರಾಜಧಾನಿಯ ಗೊಲ್ಲರುಶೇಷಣ್ಣನವರ ಬೀದಿಯಲ್ಲಿ ಚಿಲ್ಲರೆವ್ಯಾಪಾರಮಾಡುವ ಸಾಹುಕಾರ್ ಎನ್. ವೀರಣ್ಣನವರಿಗೂ, ಅವರ ಗತಿಸಿದ ನಾದನಿಗೂ ಗೃಹಕೃತ್ಯಸಂಬಂಧವಾದ ವಿವಾದದಲ್ಲಿ ಮ|| ವೀರಣ್ಣನವರಿಗೂ ಅವರ ತಮ್ಮನಿಗೂ ಸಿಟಿಮ್ಯಾಜಿಸ್ಟ್ರೇಟರು ಒಬ್ಬೊಬ್ಬರಿಗೆ 100 ರೂ. ಅರ್ಥದಂಡವನ್ನು ವಿಧಿಸಿದ್ದರು. ಆದರೆ ಇದರಮೇಲೆ ಮ|| ವೀರಣ್ಣನವರೂ ಅವರ ತಮ್ಮನೂ ಅಪೀಲುಮಾಡಿರುವಲ್ಲಿ ಮೇಲ್ಕಂಡ ಜುಲ್ಮಾನೆ ವಜಾ ಆಯಿತಲ್ಲದೆ ಇವರುಗಳಮೇಲೆ ನಡಿಯುತ್ತಿದ್ದ ಇತರ 4-5 ವಿವಾದಗಳೂ ವಜಾ ಆಯಿತೆಂದು ತಿಳಿಸಲು ಸಂತೋಷವಾಗುತ್ತದೆ. ವೀರಶೈವರಾದ ಮ|| ವೀರಣ್ಣನವರು ಒಳ್ಳೇ ಧನಿಕರಾಗಿಯೂ ಮಾತುಬಾರದೊಡ್ಡಮನುಷ್ಯರಾಗಿಯೂ ಇದ್ದು ದೊಡ್ಡಲೇವಾದೇವಿಯನ್ನು ಮಾಡುತ್ತಿದ್ದಾರೆ. ಇವರಮೇಲೆ ವಿವಾದವನ್ನು ನಡಿಸುತ್ತಿದ್ದ ಇವರ ನಾದನಿಯೂ ಆಕೆಯ 4-5 ವರ್ಷದ ಹೆಣ್ಣುಮಗಳೂ ಕೆಲದಿನಗಳಕೆಳಗೆ ಕಾಲವಾದರು.

ಕಳೆದ ಶನಿವಾರಸಾಯಂಕಾಲ ಕೊರಚರ ಚಿಕ್ಕರಾಮ, ಹೊಲೆಯರ ಪೂಜಗ ಮತ್ತು ವೆಂಕಟ ಎಂಬ ಹುಡುಗ ಈ ಮೂವರು ಬೆಂಗಳೂರು ತಾ|| ರಾಜನಗುಂಟದಲ್ಲಿ ಹೆಂಡದಂಗಡಿಗೆ ಹೋಗಿ ಚೆನ್ನಾಗಿ ಕುಡಿದು ಹಿಂದಿರುಗಿ ಚಿಕ್ಕನಾಯಕನಹಳ್ಳಿ ಬರುತ್ತಿರುವಾಗ್ಗೆ ಲಂಟಾನಾಪೊದೆಯಲ್ಲಿ ಅವಿತುಕೊಂಡಿದ್ದ 5 ಜನರು ಕೂಡಲೆ ಹೊರಗಡೆಗೆ ಬಂದು ಅವರಲ್ಲಿ ಚಿಕ್ಕಹನುಮಪ್ಪನೆಂಬುವವನ ಹೇಳಿಕೆಯಮೇರೆ ಆ ಮೂವರ ಮೇಲೆ 5-6 ಗುಂಡುಗಳು ಹೊಡೆಯಲ್ಪಡಲು ಎರಡುಗುಂಡುಗಳು ಕೊರಚರ ಚಿಕ್ಕರಾಮನಿಗೂ ಹೊಲೇರ ಪೂಜಗನಿಗೂ ತಗುಲಿ ಅವರಿಬ್ಬರೂ ಕೂಡಲೆ ನೆಲದಮೇಲೆ ಬಿದ್ದುಬಿಟ್ಟರು. ಆಗ ಅವರ ಜತೆಯಲ್ಲಿದ್ದ ಹುಡುಗನು ಓಡಿಹೋಗಿ ತಲೆಯನ್ನು ತಪ್ಪಿಸಿಕೊಂಡನು. ಈ ಗುಂಡಿನ ಶಬ್ದವನ್ನು ಕೇಳಿ ದಾರಿಯಲ್ಲಿ ಹೋಗುತ್ತಿದ್ದ ಜನರು ಬಂದು ಗುಂಡಿನೇಟನ್ನು ತಿಂದಿದ್ದ ಇಬ್ಬರನ್ನು ನೋಡಿ ಕೂಡಲೆ ಪಟೇಲನಿಗೆ ತಿಳಿಸಿ ಅವರನ್ನು ಮನೆಗೆ ಕರೆದುಕೊಂಡುಹೋಗಿ ಬಿಟ್ಟರು. ಈ ವಿಷಯವು ಪೊಲೀಸರಿಗೆ ವರದಿಯಾಗಿ ಅವರು ಬಂದು ಏಟನ್ನು ತಿಂದಿದ್ದ ಇಬ್ಬರನ್ನೂ ವಿಕ್ಟೋರಿಯಾಆಸ್ಪತ್ರೆಗೆ ಸಾಗಿಸಿ ಅಪರಾಧಿಗಳಲ್ಲಿ ಮೂವರನ್ನು ಸೆರೆಹಿಡಿದಿರುವರು. ಮುಖಂಡನು ತಲೆತಪ್ಪಿಸಿಕೊಂಡು ಹೋಗಿರುವನು. ಏಟನ್ನು ತಿಂದಿದ್ದವರಿಬ್ಬರೂ ಚಿಕಿತ್ಸೆಯಿಂದ ಗುಣವನ್ನು ಹೊಂದುತ್ತಿರುವರು. ಈ ಕೃತ್ಯವು ದ್ವೇಷದಿಂದ ಮಾಡಲ್ಪಟ್ಟುದಾಗಿ ಊಹಿಸಲ್ಪಟ್ಟಿದೆ.

ಹತ್ತನೇ ಅಖಿಲಭಾರತೀಯ ವೀರಶೈವಮಹಾಸಭಾ, ಮೈಸೂರು.

ಮೇಲ್ಕಂಡ ಮಹಾಸಭೆಯ ಸ್ವಾಗತಸಂಘದ ಮೆಂಬರುಗಳ ಮೀಟಿಂಗು ಈ ತಿಂಗಳು 3 ನೇ ತಾರೀಖಿನ ದಿವಸ ನಡೆದು ಮಹಾಸಭೆಯು ಇದೇ ಇಸವಿ ಏಪ್ರೆಲ್ ತಿಂಗಳಿನಲ್ಲಿ ನಡಿಯತಕ್ಕದ್ದೆಂದು ಹಿಂದೆಯೇ ತೀರ್ಮಾನವಾಗಿದ್ದಪ್ರಕಾರ ಇದುವರೆಗೆ ಮಹಾಸಭಾ ಖರ್ಚಿಗಾಗಿ ವಸೂಲಾಗಿರುವ ಮೊಬಲಗು 430 ರೂಪಾಯಿಗಳನ್ನು ಸೆಕ್ರೆಟರಿಗಳು ಮೈಸೂರ್‌ಬ್ಯಾಂಕಿನಲ್ಲಿ ಡಿಪಾಜಿಟ್ಟುಮಾಡಿರುತ್ತಾರಲ್ಲದೆ ಈ ವಾರದಲ್ಲೇ ಮೈಸೂರುಡಿಸ್ಟ್ರಿಕ್ಟಿನ ಕೆಲವು ತಾಲ್ಲೋಕುಗಳಿಗೆ ವಸೂಲಿ ಬಗ್ಗೆ ಹೊರಡುವವರಾಗಿರುತ್ತಾರೆ. ಆದ್ದರಿಂದ ವೀರಶೈವಜನಾಂಗದ ಎಲ್ಲಾ ಪ್ರಮುಖರು ತಮ್ಮ ಶಕ್ತ್ಯನುಸಾರ ಮಹಾಸಭೆಯ ಖರ್ಚಿಗಾಗಿ ಚಂದಾವನ್ನು ಕೊಟ್ಟು ಇದರಿಂದ ಉಂಟಾಗುವ ಕೀರ್ತಿಗೆ ಭಾಗಿಗಳಾಗುವರೆಂದು ನಂಬಿಕೆ.

ಮೈಸೂರು,	T. S. Siddappa,
ತಾ|| 8-1-1926	M. P. Bhogiah, Advocate.

ಸೆಕ್ರೆಟರಿಗಳು.

೪೦ನೇ ರಾಷ್ಟ್ರೀಯಮಹಾಸಭೆ.

ಅಧ್ಯಕ್ಷೆಯರಾದ ಸರೋಜಿನೀದೇವಿಯವರ ಭಾಷಣ.

(ಕಳೆದವಾರದ ಶೇಷ.)

ಪ್ರಚುರ ಶಾಖೆ.

ಪ್ರತಿಯುದ್ಯಮಕ್ಕೂ ಪ್ರಚುರಶಾಖೆಯು ಪ್ರಾಣಪದವಾಗಿರುತ್ತದೆ. ಅಂತಹ ಶಾಖೆಯು ನಮಗೆ ಇಲ್ಲದಿರುವುದರಿಂದ ಬಹಳ ಅಡಚಣೆಯಾಗಿದೆ. ದೇಶೀಯರ ಹಕ್ಕು, ಅವರಿಗಾಗಿ ಆಚರಿಸಲ್ಪಡುತ್ತಿರುವ ಅಕ್ರಮಗಳು, ಅವರ ಬಾಧ್ಯತೆಯವರು ದೇಶದಲ್ಲಿ ನಡೆಯಿಸುತ್ತಿರುವ ಆಂದೋಳನಗಳು ಮೊದಲಾಗಿ ಸಕಲ ವಿಷಯಗಳನ್ನು ಕುರಿತು ಅತ್ಯಧಿಕವಾಗಿ ಪ್ರಚಾರಮಾಡಲು ಕೂಡಲೇ ಪ್ರಚುರಶಾಖೆಯನ್ನೇರ್ಪಡಿಸಬೇಕಾಗಿದೆ. ರಾಜಕೀಯಾಂದೋಳನದಿಂದ ಇತರ ಶಾಖೆಯಲ್ಲಿ ಕೆಲಸಮಾಡಲು ಅಭ್ಯಂತರಪಡಿಸಿದವರೆಲ್ಲರೂ ತಮ್ಮ ಪ್ರತ್ಯೇಕವಿಜ್ಞಾನವನ್ನು ಈ ವಿಷಯದಲ್ಲಿ ಉಪಯೋಗಿಸಿ ನಮಗೆ ತೋರ್ಪಡಿಸಲು ಸಂಸಿದ್ಧರಾಗಿರುವರೆಂದು ನಾನು ನಂಬುತ್ತೇನೆ. ಗೃಹಪರಿಶ್ರಮವು ವಾಣಿಜ್ಯವು, ಲೋಹಮಾರ್ಗವು, ನೌಕಾವ್ಯಾಪಾರವು, ಸಹಕಾರಬ್ಯಾಂಕುಗಳು ಮೊದಲಾಗಿ ಪ್ರಜೋಪಯೋಗ್ಯವಾದ ಸಕಲ ವಿಷಯಗಳನ್ನೂ ಅವರು ತೋರ್ಪಡಿಸಿಕೊಡತಕ್ಕವರಾಗಿರುವರು. ಇದಕ್ಕೆ ದೇಶದಲ್ಲಿರುವ ಆಂಗ್ಲಭಾಷಾ-ದೇಶಭಾಷಾ ಪತ್ರಿಕೆಗಳೆಲ್ಲವೂ ನಮಗೆ ಸಹಾಯಮಾಡಬೇಕಾಗಿದೆ. ಪ್ರಪಂಚದ ಮುಖ್ಯ ಪಟ್ಟಣಗಳಲ್ಲೆಲ್ಲ ಭಾರತದೇಶವಿಷಯವನ್ನು ಸರಿಯಾಗಿ ತಿಳಿಯಪಡಿಸಲು ನಂಬಿಕೆಯಾದ ವಿದೇಶವಾರ್ತಾಸಂಘವು ಆವಶ್ಯಕವಾಗಿದೆ. ವಿದೇಶೀಯರಿಗೆ ಭಾರತೀಯರ ವಿಚಾರವಾಗಿ ಸದ್ಭಾವವನ್ನು ಹುಟ್ಟಿಸಲು ಆಯಾದೇಶಗಳಲ್ಲೇ ಸುಸ್ಥಾನದಿಂದ ಕೂಡಿದ ರಾಯಬಾರಿಸಂಘವು ಇರಬೇಕು.

ಹಿಂದುಮಹಮ್ಮದೀಯರ ಸಖ್ಯ.

ಈ ಸಮಸ್ಯೆಯು ಅತಿಸಂತಾಪಕರವಾಗಿಯೂ, ಕ್ಲಿಷ್ಟವಾಗಿಯೂ ಇರುವುದರಿಂದಲೇ ಬಹಳ ಸಂಶಯದಿಂದಲೂ, ವಿಚಾರದಿಂದಲೂ ಇದನ್ನು ಕುರಿತು ಪ್ರಸ್ತಾವಿಸುವವಳಾಗಿರುವೆನು. ಈ ಸಮಸ್ಯೆಯನ್ನು ಪೂರ್ತಿಗೊಳಿಸಲು ಕಂಕಣಬದ್ಧರಾಗಿರುವವರಲ್ಲಿ ನಾನೊಬ್ಬಳಾಗಿರುವುದರಿಂದಲೇ ನನ್ನ ಆಶಯವೆಲ್ಲವನ್ನೂ ಭಂಗಪಡಿಸತಕ್ಕ ಈ ಕಲಹವನ್ನು ನೋಡಿರುವ ನನ್ನ ಕಣ್ಣುಗಳಿಂದ ರಕ್ತಾಶ್ರುಗಳು ಸುರಿಯುತ್ತಿವೆ. ಮಹಮ್ಮದೀಯರು ಪೂರ್ತಿಯಾಗಿ ಬಿಟ್ಟುಹೋಗಿ ಎಲ್ಲ ವಿಷಯಗಳಲ್ಲೂ ಪ್ರತ್ಯೇಕ ಸಂಘವನ್ನೂ, ಪ್ರತ್ಯೇಕ ಪ್ರಾತಿನಿಧ್ಯವನ್ನೂ, ಪ್ರತ್ಯೇಕ ನಿಯೋಜಕವರ್ಗವನ್ನೂ, ಪ್ರತ್ಯೇಕ ಹಕ್ಕುಗಳನ್ನೂ ಕೋರುತ್ತಿರುವುದರಿಂದ ಹಿಂದುಗಳಿಗೆ ಕೋಪವು ಮತ್ತಷ್ಟು ಅಧಿಕವಾಗುತ್ತಿದೆ. ಇಂತಹ ವಿಭಾಗವು ಇಷ್ಟು ತ್ವರಿತದಲ್ಲಿ ಉಂಟಾಗುವುದರ ನ್ಯಾಯವಾದಕಾರಣವನ್ನು ತಿಳಿದುಕೊಳ್ಳಲು ನಾನು ಬಹಳವಾಗಿ ಪ್ರಯತ್ನಿಸಿದೆನು. ಸಮಷ್ಟಿನಿಯೋಜಕವರ್ಗಕ್ಕಾಗಲೀ, ವ್ಯಷ್ಟಿನಿಯೋಜಕವರ್ಗಕ್ಕಾಗಲೀ ಪ್ರತ್ಯೇಕ ಪ್ರಾತಿನಿಧ್ಯವೇರ್ಪಡುವುದು ಜಾತೀಯ ಸೌಸ್ಥ್ಯವಕ್ಕೆ ಭಂಗಕರವೆಂದೇ ನಾನು ತಿಳಿದಿರುವೆನಲ್ಲದೆ, ಈಗಣ ಸ್ಥಿತಿಯಲ್ಲಿ ಸಾಮರಸ್ಯವನ್ನುಂಟುಮಾಡಲು ಶಕ್ಯವಾದ ಸಾಧನವಾವುದೂ ನನಗೆ ಗೋಚರಿಸಲಿಲ್ಲವು. ಕಾರ್ಪಣ್ಯ, ಅನುಮಾನ, ಭಯ, ದ್ವೇಷ, ಅಪನಂಬಿಕೆ, ಅಸಹನ ಮೊದಲಾದವುಗಳು ಬಹಳ ಜಾಗ್ರತೆಯಲ್ಲಿ ರೇಗಿಸುತ್ತಿವೆಯಾದುದರಿಂದ ಇಂತಹ ಸ್ಥಿತಿಯಲ್ಲಿ ಗಾಢವಾದ ದೇಶಭಕ್ತಿದೀಕ್ಷಾಬದ್ಧರಾದವರ ವಿನಾ ಇತರರು ಈ ಸಮಸ್ಯೆಯನ್ನು ಪರಿಷ್ಕರಿಸಲಾರರು. ಆದುಕಾರಣ ಮಹಾದಾರುಣವಾದ ಈ ಸಮಸ್ಯೆಯನ್ನು ಪರಿಷ್ಕರಿಸಲು ಧೀಸಂಪನ್ನರಾದ ಹಿಂದುಮಹಮ್ಮದೀಯಪ್ರಮುಖರನ್ನು ನಿಯಮಿಸಬೇಕಾಗಿದೆ. ವೇದವನ್ನು ಮೂಲಾಧಾರವಾಗುಳ್ಳ ಹಿಂದುಮತಕ್ಕೆ ಪ್ರಾಶಸ್ತ್ಯವನ್ನುಂಟುಮಾಡಿರುವುದು ಸಹನೆಯೂ ಶಾಂತಿಯೂ ಆಗಿರುವುದರಿಂದ ಹಿಂದುಸೋದರರು ಮಹೋದಾರಭಾವದಿಂದ ಸತ್ಯವಾಕ್ಕನ್ನು ಗ್ರಹಿಸಿ ತದನುಗುಣವಾಗಿ ವರ್ತಿಸಬೇಕೆಂದು ಕೋರುತ್ತೇನೆ. ಭಾರತದೇಶದಲ್ಲಿ 7 ಕೋಟಿ ಮಂದಿ ಮಹಮ್ಮದೀಯರಿರುತ್ತಾರೆ. ಮತಾಂತರದವರ ಸಾಂಗ್ರಾಮಿಕ ಶಕ್ತಿಯಿಂದ ಅತ್ಯಂತ ಕಷ್ಟಪರಂಪರೆಗೆ ಗುರಿಯಾಗಿರುವ ಪ್ರಪಂಚದಲ್ಲಿನ ಮಹಮ್ಮದೀಯ ದೇಶಗಳ ದುರವಸ್ಥೆಗೆ ಭಾರತೀಯ ಮಹಮ್ಮದೀಯರೆಲ್ಲರೂ ವಿಗತಸ್ಪೃಹರಾಗಿಯೇ ಇರುವರು. ಸಿರಿಯಾ, ಈಜಿಪ್ಟು, ಇರಾಕು, ಅರೇಬಿಯಾ ಮೊದಲಾದ ಮಹಮ್ಮದೀಯ ರಾಜ್ಯಗಳ ದುರವಸ್ಥೆಗೆ ನೀವು ಚಿಂತಾಕ್ರಾಂತರಾಗಿದ್ದಾಗ್ಯೂ, ಮುಖ್ಯವಾಗಿ ಭಾರತದೇಶಸಮಸ್ಯೆಯಲ್ಲಿ ಅಶ್ರದ್ಧೆಯನ್ನು ಮಾಡಬಾರದು. ಭಾರತದೇಶವೇ ನಿಮಗೂ ಮಾತೃದೇಶವಾಗಿರುವುದರಿಂದ, ಆಕೆಯ ಸೇವೆಯು ನಿಮಗೂ ಪ್ರಥಮ ಕರ್ತವ್ಯವೆಂದು ನಾನು ಮಹಮ್ಮದೀಯ ಸೋದರರಿಗು ಕೂಡ ಬಿನ್ನವಿಸಿಕೊಳ್ಳುತ್ತೇನೆ.

ದೇವತಾರಾಧನೆ, ಸಾಂಘಿಕಾಚಾರ, ಮತಧರ್ಮ ಮೊದಲಾದವುಗಳನ್ನು ನೆರವೇರಿಸುವುದಕ್ಕೆ ಎಲ್ಲ ಮತದವರಿಗೂ ಸಂಪೂರ್ಣ ಸ್ವಾತಂತ್ರ್ಯವುಂಟೆಂದು ಹಿಂದುಗಳೂ, ಮಹಮ್ಮದೀಯರೂ ಅಂಗೀಕರಿಸತಕ್ಕದಾಗಿದೆ. ಎರಡು ಮತಗಳ ಸೌಂದರ್ಯವನ್ನೂ, ನಾಗರಿಕತೆಯನ್ನೂ ಪರಸ್ಪರವಾಗಿ ಎರಡು ಮತದವರೂ ಸರಿಯಾಗಿ ಗ್ರಹಿಸಿಕೊಳ್ಳಬೇಕು. ಉಭಯ ಮತಗಳ ಸ್ತ್ರೀಯರೂ ಸಹೋದರಭಾವದಿಂದ ಸಂಮಿಶ್ರಿತರಾಗಿದ್ದು ತಮ್ಮ ಮಕ್ಕಳುಗಳಲ್ಲೂ ಸಹೋದರ ಭಾವವನ್ನು ಅಭಿವೃದ್ಧಿಗೊಳಿಸಿದಲ್ಲಿ ನಮ್ಮ ಸ್ವಾರ್ಥಸಿದ್ಧಿಗೆ ಅನುಕೂಲವಾಗುವುದು.

ಸ್ವದೇಶ ಸಂಸ್ಥಾನಗಳು.

ಸಂಸ್ಥಾನಪಾಲಕರೊಡನೆಯೂ, ಅವರ ಪ್ರಜೆಗಳೊಡನೆಯೂ ನಾವು ಸೋದರಭಾವವನ್ನು ವೃದ್ಧಿಗೊಳಿಸಬೇಕು. ಪ್ರತಿಯೊಂದು ಸಂಸ್ಥಾನದವರು ಸಮಷ್ಟಿವಿಷಯದಲ್ಲಿ ಒಬ್ಬರಿಗೊಬ್ಬರು ಸಹಾಯಕರಾಗಿರಬೇಕು.

ಅಸಹಾಯೋದ್ಯಮವು.

ಇವೆಲ್ಲವೂ ಅನುಬಂಧ ವಿಷಯಗಳು. ಪ್ರಧಾನವಿಷಯವು ಸ್ವರಾಜ್ಯ ಸಂಪಾದನವೇ. ಕಾಂಗ್ರೆಸ್ಸಿನವರಲ್ಲಿ ಅನೇಕ ಮಂದಿಗಳು ಇನ್ನೂ ಅಸಹಾಯೋದ್ಯಮನಿಯಮಗಳಿಗೆ ಬದ್ಧರಾಗಿಯೇ ಇರುವರು. ಅವರು ಶಾಸನಸಭೆಗಳನ್ನು ಸಂಪೂರ್ಣವಾಗಿ ನಿರಾಕರಿಸಿ ಗಾಂಧಿಮಹಾತ್ಮರು ನಿರ್ಣಯಿಸಿರುವ ದೇಶಸೇವಾವಿಧಾನವನ್ನು ನೆರವೇರಿಸುತ್ತಿರುವರು. ಖದ್ದರು, ನಿಮ್ನಜಾತ್ಯುದ್ಧರಣ ಮೊದಲಾದ ವಿಷಯಗಳಲ್ಲಿ ಅವರು ಶ್ರದ್ಧೆಯಿಂದ ಕೆಲಸ ಮಾಡುತ್ತಿರುವರು. ಅಗ್ರವರ್ಣದವರ ದುರಭಿಮಾನದಿಂದ ನಮ್ಮೀ ಸೋದರರಪಕ್ಷವು ಬಹುಕಾಲದಿಂದ ಭಂಗಪಡಿಸಲ್ಪಟ್ಟಿರುವುದು.

ಎಲ್ಲಪಕ್ಷದವರಿಗೂ ಆಹ್ವಾನವು.

ಈಗ ನಿರಂಕುಶಾಧಿಕಾರಿಗಳನ್ನು ಪ್ರತ್ಯಕ್ಷವಾಗಿ ಪ್ರತಿಭಟಿಸುತ್ತಿರುವುದು ಸ್ವರಾಜ್ಯಪಕ್ಷವೊಂದೇ. ಈ ಪಕ್ಷವೇ ಈಗ ಬಹಳ ಕಟ್ಟುಪಾಟನ್ನು ಮಾಡಿಕೊಂಡಿರುತ್ತದೆ. ಕಾಂಗ್ರೆಸ್ ಮಹಾಸಭೆಯು ಎಲ್ಲಪಕ್ಷಗಳನ್ನು ಕೂಡ ಮನಃಪೂರ್ವಕವಾಗಿ ಆಹ್ವಾನಿಸುತ್ತಿರುವುದಲ್ಲದೆ, ಎಲ್ಲ ಪಕ್ಷದವರೂ ತಂತಮ್ಮ ನಂಬಿಕೆಗಳನ್ನು ಬಿಡದೆ ಕಾಂಗ್ರೆಸ್ಸಿನಲ್ಲಿ ಸೇರಿ ಎಲ್ಲರೂ ಏಕೀಭವಿಸಿ ಸರ್ವಜನಾನುಷ್ಠಾನಯೋಗ್ಯವಾದ ವಿಧಾನವನ್ನು ಏರ್ಪಡಿಸಲು ಇದು ಸಕಾಲವಲ್ಲವೆ?

1919ನೆಯ ವರ್ಷದ ಸಂಸ್ಕರಣಗಳು ಎರಡನೇ ಮರೀಚಿಕೆ (ಬಿಸಿಲು ಕುದುರೆ) ಯೆಂದೇ ಎಲ್ಲ ಪಕ್ಷದವರೂ ಅಂಗೀಕರಿಸಿಯೇ ಇದ್ದರು. ಅದರಿಂದ ಪ್ರಜೆಗಳಿಗೆ ಲಭಿಸಿದ ಹಕ್ಕೆಲ್ಲವೂ ಬರೇ ಮೋಹಕವಾಗಿದೆ. ಪ್ರಜೆಗಳಿಗುಂಟಾಗುತ್ತಿರುವ ಅಕ್ರಮವನ್ನು ಕುರಿತು ಮತ್ತು ಅಪೇಕ್ಷಿತವಾದ ಹಕ್ಕನ್ನು ಕುರಿತು ಅವರೆಲ್ಲರೂ ಏಕೀಭವಿಸಿಯೇ ಇರುತ್ತಾರೆ. ನನ್ನ ಅಭಿಪ್ರಾಯವು ಹೇಗಿದ್ದರೂ ಬೆಸೆಂಟರವರು ಕಾಮನುವೆಲ್ತು ಚಟ್ಟವನ್ನು ವಿಸ್ತಾರವಾಗಿ ವಿವರಿಸಿರುವುದು ಅಧಿನಿವೇಶಗಳ ಸ್ವಾತಂತ್ರ್ಯಗಳಿಗೆ ತಕ್ಕದಾಗಿರುವುದಾದರೂ ಸ್ವಪರಿಪಾಲನವನ್ನು ಹೊಂದುವ ವಿಚಾರದಲ್ಲಿ ಕೂಡ ಎಲ್ಲರೂ ಅಂಗೀಕರಿಸಿಯೇ ಇರುತ್ತಾರೆ. ಅದರಿಂದ ಕಡಿಮೆಯಾದ ಸ್ವಾತಂತ್ರ್ಯವನ್ನು ಹೊಂದಲು ನಾವು ಒಡಂಬಟ್ಟರೆ ನಮ್ಮ ಆತ್ಮಗೌರವಕ್ಕೆ ಭಂಗಬರುವುದು. ಈಗ ಪ್ರಭುತ್ವದವರ ಸರದಿಬಂದಿದೆ. ಅವರು ಕೂಡ ಸಮಾಧಾನಸೂಚನೆಯನ್ನು ಮಾಡಬೇಕಾಗಿದೆ. ಅವರು ವಂಚನೆಯಿಲ್ಲದೆ ಸದ್ಭಾವದಿಂದ ಉದಾರ ಸೂಚನೆಯನ್ನು ಕೊಟ್ಟಲ್ಲಿ ನಾವು ಕೂಡ ಈಗಣ ಪದ್ಧತಿಯನ್ನು ಬದಲಾಯಿಸಿಕೊಳ್ಳಬೇಕಾಗುವುದು. ವಸಂತಕಾಲದಲ್ಲಿ ಜರುಗುವ ಸಭೆಯಲ್ಲಿ ಅಂತಹ ಸಲಹೆಯಾವುದೂ ಕೊಡಲ್ಪಡದಿದ್ದಲ್ಲಿ ಕಾಂಗ್ರೆಸ್ ಸಭ್ಯರುಗಳಲ್ಲಿ ಶಾಸನ ಸಭಾಮೆಂಬರುಗಳಾಗಿರುವವರು ರಾಜೀನಾಮೆಯನ್ನು ಕೊಡಬೇಕೆಂದೂ, ದೇಶದಲ್ಲೆಲ್ಲಾ ಬ್ರಹ್ಮಾಂಡವಾಗಿ ಪ್ರಚಾರವನ್ನು ನಡಿಸಬೇಕೆಂದೂ ಕಾಂಗ್ರೆಸ್‌ಮಹಾಸಭೆಯವರು ಒಂದು ಪ್ರಕಟನವನ್ನು ಮಾಡಬೇಕು. ಆಗ ಪ್ರಬಲವಾದ ಕಾರ್ಯಭಾಗವು ನಡೆಯಿಸಲ್ಪಡತಕ್ಕದಾಗಿದೆ. ದೇಶೀಯರು ಎಂತಹ ತ್ಯಾಗವನ್ನಾದರೂ ಹೆದರದೆ ಮಾಡಬೇಕು; ಎಂತಹ ಕಷ್ಟಕ್ಕಾದರೂ ಹಿಂಜರಿಯದೆ ತಲೆಯನ್ನು ಕೊಡಬೇಕು. ಈ ರೀತಿಯಾದರೆ ಮಾತೃದೇಶದ ಸ್ವಾತಂತ್ರ್ಯಸಂಪಾದನೆಗೆ ಆಬಾಲಗೋಪಾಲರು ಮಹಾತ್ಯಾಗಮಾಡಿ ದಾಸ್ಯಶೃಂಖಲವನ್ನು ಭೇದಿಸಿ ಭಾವಿಭಾರತಸಂತತಿಗೆ ಶಾಂತಿಯನ್ನುಂಟುಮಾಡಬೇಕು. ಇಂತಹ ಸ್ವಾತಂತ್ರ್ಯಸಮರದಲ್ಲಿ ಹೇಡಿತನಕ್ಕಿಂತ ಅಧಿಕ ದೇಶದ್ರೋಹವು ಬೇರೊಂದಿಲ್ಲವು. ಅದು ಮಹಾಪಾತಕವು. ಅದಕ್ಕೆ ಪ್ರಾಯಶ್ಚಿತವಿಲ್ಲ. ಇದರ ಮಹಾಪರೀಕ್ಷಾಸಮಯದಲ್ಲಿ ನಿಶ್ಚಲವಾದ ವಿಶ್ವಾಸವನ್ನೂ ಸುಸ್ಥಿರವಾದ ಧೈರ್ಯವನ್ನೂ ಪರಮೇಶ್ವರನು ಅನುಗ್ರಹಿಸಲಿ.

"ಅಸತೋಮಾಸದ್ಗಮಯ ತಮಸೋಮಾಜ್ಯೋತಿರ್ಗಮಯ ಮೃತ್ಯೋರ್ಮಾಅಮೃತಂಗಮಯ" ಮಿಥ್ಯಾಪ್ರಪಂಚದಿಂದ ನಿತ್ಯಸತ್ಯಪಥಕ್ಕೂ, ಅಂಧಕಾರದಿಂದ ದಿವ್ಯಪ್ರಕಾಶಕ್ಕೂ, ಮೃತ್ಯುಸಾನಿಧ್ಯದಿಂದ ಅಮರಲೋಕಕ್ಕೂ ಹೋಗಬೇಕೆಂಬ ಪ್ರಾಚೀನ ಪ್ರಾರ್ಥನಾವಾಕ್ಯದಿಂದ ಕೈಗಳನ್ನು ಮೇಲೆಕ್ಕೆತ್ತಿ ಬದ್ಧಾಂಜಲಿಯಿಂದ ನಾನು ಆ ಪರಮೇಶ್ವರನನ್ನು ಪ್ರಾರ್ಥಿಸುವೆನು. ಎಂದು ದೇವಿಯವರು ಹೇಳಿದರು.

ರಾಷ್ಟ್ರೀಯಮಹಾಸಭೆಯಲ್ಲಾದ ತೀರ್ಮಾನಗಳು.

ಗತಿಸಿದ ನಾಯಕರಿಗೆ ದುಃಖಸೂಚಕ ತೀರ್ಮಾನ.

"ಭಾರತದೇಶನಾಯಕರಾಗಿದ್ದು ಚಿರಕಾಲ ದೇಶಸೇವೆಯನ್ನು ಮಾಡಿದ ದೇಶಬಂಧು ದಾಸರವರು, ಸರ್ ಸುರೇಂದ್ರನಾಥಬಾನರ್ಜಿಯವರು ಮೊದಲಾದವರು ಗತಿಸಿದುದಕ್ಕಾಗಿ ಮಹಾಸಭೆಯು ದುಃಖವನ್ನು ಪ್ರದರ್ಶಿಸುತ್ತದೆ." ಎಂಬ ತೀರ್ಮಾನವು ಅಧ್ಯಕ್ಷೆಯರಾದ ಸರೋಜಿನೀದೇವಿಯವರಿಂದ ಉಪಪಾದಿಸಲ್ಪಟ್ಟು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟಿತು.

ದಕ್ಷಿಣಾಫ್ರಿಕೆಯ ತೀರ್ಮಾನವು.

"ಈ ಕಾಂಗ್ರೆಸ್ಸು ದಕ್ಷಿಣಾಫ್ರಿಕೆಯ ರಾಯಬಾರಿಗಳಿಗೆ ಮನಃಪೂರ್ವಕವಾದ ಸ್ವಾಗತವನ್ನು ಮಾಡಿ ಆ ದೇಶದಲ್ಲಿ ಅವರಿಗೆ ಯಾವ ಭಂಗವುಂಟಾದರೂ ಬಲವಾಗಿ ಹೋರಾಡುವ ವೇಳೆಯಲ್ಲಿ ದಕ್ಷಿಣಾಫ್ರಿಕೆಯಲ್ಲಿರುವ ಭಾರತೀಯರಿಗೆ ಆವಶ್ಯಕವಾದ ಸಹಾಯವನ್ನು ಮಾಡುತ್ತದೆಂದು ಈ ಸಭೆಯು ನಂಬಿಕೆಯಿಂದ ಹೇಳುತ್ತದೆ. ಗ್ರಾಮಬಿಲ್ಲು; ವಲಸೆ, ರಿಜಿಸ್ಟ್ರೇಷನ್ ಬಿಲ್ಲುಗಳು ಮೊದಲಾದುವುಗಳು 1914ರಲ್ಲಿ ನಡೆದ ಸ್ಮಟ್ಸ್—ಗಾಂಧಿ ಒಡಂಬಡಿಕೆಗೆ ವಿರುದ್ಧವಾಗಿರುವುದರಿಂದ, ಟ್ರಾನ್ಸವಾಲು ಭಾರತೀಯರ ವಿಷಯವಾಗಿ 1893ರಲ್ಲಿ ಮಾಡಲ್ಪಟ್ಟ ರೀತಿಯಾಗಿ ಈ ವಿಷಯವು ಮಧ್ಯವರ್ತಿಗಳಿಂದ ಪರಿಷ್ಕರಿಸಲ್ಪಡಬೇಕೆಂದು ಈ ಕಾಂಗ್ರೆಸ್ಸು ಖಂಡಿತವಾಗಿ ಹೇಳುತ್ತದೆ. ತಕ್ಕ ಭಾರತೀಯ ಪ್ರತಿನಿಧಿಗಳಿಂದ ಕೂಡಿದ ರೌಂಡ್‌ಟೇಬಲ್‌ಸಮಾವೇಶವು ಈ ಪ್ರಶ್ನೆಯನ್ನು ಪರಿಷ್ಕರಿಸಬೇಕೆಂಬ ಸೂಚನೆಯನ್ನು ಈ ಕಾಂಗ್ರೆಸ್ಸು ಹೃದಯಪೂರ್ವಕವಾಗಿ ಅನುಮೋದಿಸಿ ಈ ಸೂಚನೆಯನ್ನು ಯೂನಿಯನ್ ಪ್ರಭುತ್ವದವರು ಕೂಡ ಅನುಮೋದಿಸುವರೆಂದು ನಂಬುತ್ತದೆ. ಪಂಚಾಯಿತೀ ಸೂಚನೆಯು ಗೆಲ್ಲಲಿಲ್ಲವಾಗಿ ಆ ಬಿಲ್ಲನ್ನು ಯೂನಿಯನ್ ಪಾರ್ಲಿಮೆಂಟಿನಲ್ಲಿ ಅಂಗೀಕರಿಸಿದಾಗ್ಗೂ ಇಂಪೀರಿಯಲ್ ಗೌರ್ನಮೆಂಟಿನವರು ಅದನ್ನು ಅಂಗೀಕರಿಸಕೂಡದೆಂದು ಈ ಕಾಂಗ್ರೆಸ್ಸು ಅಭಿಪ್ರಾಯಪಡುತ್ತದೆ." ಈ ತೀರ್ಮಾನವು ಗಾಂಧಿಮಹಾತ್ಮರಿಂದ ಉಪಪಾದಿಸಲ್ಪಟ್ಟು ಸರ್ವರಿಂದಲೂ ಅಂಗೀಕರಿಸಲ್ಪಟ್ಟಿತು.

ಬಂಗಾಳಾ ಆರ್ಡಿನಾನ್ಸು ತೀರ್ಮಾನವು.

"1818 (3)ನೇ ರೆಗ್ಯುಲೇಷನನ್ನು ದುರ್ವಿನಿಯೋಗಮಾಡಿ ಬಂಗಾಳಾ ಆರ್ಡಿನಾನ್ಸ್ ಚಟ್ಟವನ್ನು ನಿರಂಕುಶವಾಗಿ ಮಾಡಿ ಅರೆಸ್ಟು ಮಾಡಿಯೇ ಚಾರ್ಜು ಮಾಡದೆಯೂ, ವಿಚಾರಣೆಯಿಲ್ಲದೆಯೂ ಬಂಗಾಳಾಯುವಜನದೇಶಭಕ್ತರಲ್ಲಿ ಅನೇಕರನ್ನು ಇಳಿಸಿಕೊಂಡುದನ್ನು ಈ ಕಾಂಗ್ರೆಸ್ಸು ಖಂಡಿಸುತ್ತದೆ. ಇಷ್ಟೇ ಅಲ್ಲದೆ ಬಂಗಾಳಾ ಕಾರಾಗೃಹಕ್ಕೆ ಇವರುಗಳನ್ನು ಕಳುಹಿ

ಬಾಧೆಪಡಿಸಿ ಹಿಂಸಿಸುವ ವಿಚಾರವಾಗಿ ಶಾಸನಸಭೆಯಲ್ಲೂ ಇಲ್ಲೂ ಪ್ರಜೆಗಳು ನಿರಂತರವೂ ಇಟ್ಟುಕೊಳ್ಳುವ ಮೊರೆಯನ್ನು ಪ್ರಭುತ್ವದವರು ಲಾಲಿಸದಿರುವುದನ್ನು ಈ ಕಾಂಗ್ರೆಸ್ಸು ಖಂಡಿಸುತ್ತದೆ.'' ಎಂಬೀ ತೀರ್ಮಾನವು ಸೇನಗುಪ್ತರಿಂದ ಉಪಪಾದಿತವಾಗಿ ಜಯಕರರವರಿಂದ ಪುಷ್ಟೀಕರಿಸಲ್ಪಟ್ಟು ಅಂಗೀಕರಿಸಲ್ಪಟ್ಟಿತು.

ಸಿಕ್ಕುಗುರುದ್ವಾರತೀರ್ಮಾನವು.

ಗುರುದ್ವಾರಜಟ್ಟದ ಸಂಬಂಧದಲ್ಲಿ ಪರಿಷ್ಕಾರವು ಕುದುರಿತಾದರೂ, ಗುರುದ್ವಾರ ಖೈದಿಗಳು ಜಾಮೀನು ಕೊಡಲಿಲ್ಲವೆಂಬ ಸಾಂಕೇತಿಕ ಕಾರಣದಿಂದ ಈವರೆಗೆ ಗುರುದ್ವಾರಬಂದಿಗಳನ್ನು ಪಂಜಾಬು ಸರ್ಕಾರದವರು ಬಿಡದೇ ಇರುವುದಕ್ಕಾಗಿ ಈ ಕಾಂಗ್ರೆಸ್ಸು ಬಹಳ ವ್ಯಸನವನ್ನು ಪ್ರದರ್ಶಿಸುತ್ತದೆ. ಗುರುದ್ವಾರಬಂದೀವಾನರುಗಳನ್ನು ಅನಿಮಿತ್ತವಾಗಿ ಬಿಟ್ಟಹೊರತು ಗುರುದ್ವಾರಸಮಸ್ಯೆಯು ಸರಿಯಾಗಿ ಪರಿಷ್ಕಾರವಾಗುವುದಿಲ್ಲವೆಂದು ಈ ಕಾಂಗ್ರೆಸ್ಸು ಅಭಿಪ್ರಾಯಪಡುತ್ತದೆ.'' ಈ ತೀರ್ಮಾನವು ಲಾಲಾಲಜಪತರಾಯರವರಿಂದ ಉಪಪಾದಿಸಲ್ಪಟ್ಟು ಅಂಗೀಕರಿಸಲ್ಪಟ್ಟಿತು.

ಬರ್ಮಾಬಿಲ್ಲು ತೀರ್ಮಾನವು.

“ ಬರ್ಮಾದಲ್ಲಿ ತಪ್ಪಿತಸ್ಥರಾದವರನ್ನು ಹೊರಹೊರಡಿಸಲು ಮಾಡಿರುವ ಬಿಲ್ಲೂ, ಸಮುದ್ರಪ್ರಯಾಣಿಕರ ಮೇಲೆ ವಿಧಿಸಲ್ಪಡುವ ತೆರಿಗೆಯ ಬಿಲ್ಲೂ ಪೌರಸ್ವಸ್ವಾತಂತ್ರ್ಯಕ್ಕೆ ಭಂಗಕರವಾಗಿರುವುವೆಂದು ಈ ಕಾಂಗ್ರೆಸ್ಸು ತಿಳಿಯುತ್ತದೆ. ಮೊದಲನೆಯ ಬಿಲ್ಲು ನಿರಪರಾಧಿಗಳನ್ನು ಅಧಿಕಾರಿಗಳ ದಯಾಪಾತ್ರತೆಯಿಂದ ತಪ್ಪಿಸುವುದಾಗಿರುವುದಲ್ಲದೆ ಬರ್ಮಾದಲ್ಲಿ ವಸತಿಯನ್ನು ಕಲ್ಪಿಸಿಕೊಂಡಿರುವ ಭಾರತೀಯರಿಗೆ ನಷ್ಟಕರವಾಗಿರುತ್ತದೆ. ಆದುಕಾರಣ ಈ ಬಿಲ್ಲನ್ನು ವೈಸ್‌ರಾಯ್‌ರವರು ಅಂಗೀಕರಿಸಲಾಗದೆಂದು ಈ ಕಾಂಗ್ರೆಸ್ಸು ಅಭಿಪ್ರಾಯಪಡುತ್ತದೆ.'' ಈ ತೀರ್ಮಾನವು ಟಿ. ಪ್ರಕಾಶಂರವರಿಂದ ಸೂಚಿಸಲ್ಪಟ್ಟು ಅಂಗೀಕರಿಸಲ್ಪಟ್ಟಿತು.

ನೂಲುಚಂದಾಸಭ್ಯತ್ವತೀರ್ಮಾನವು.

“ ಅಖಿಲಭಾರತಕಾಂಗ್ರೆಸ್ ಸಂಘವು ಪಾಟ್ನಾದಲ್ಲಿ ಕೂಡಿದ್ದಾಗ್ಗೆ ಪ್ರತ್ಯಾಮ್ನಾಯ ಸಭ್ಯತ್ವತೀರ್ಮಾನವನ್ನು ಮಾಡಿ ಅಖಿಲಭಾರತ ತಂತುಕಾರಕ ಸಂಘವನ್ನು ಸ್ಥಾಪಿಸಲು ಸಂಬಂಧಪಟ್ಟ ತೀರ್ಮಾನದಲ್ಲಿ (ಬ) ಭಾಗವನ್ನು ಈ ಕಾಂಗ್ರೆಸ್ಸು ಪುಷ್ಟೀಕರಿಸುತ್ತದೆ.'' ಈ ತೀರ್ಮಾನವು ಮಹಾತ್ಮರಿಗಾಗಿ ಡಾಕ್ಟರ್ ಸತ್ಯಪಾಲರವರಿಂದ ಉಪಪಾದಿತವಾಗಿ ಅಂಗೀಕೃತವಾಯಿತು.

ರಾಜಕೀಯಕಾರ್ಯವಿಧಾನತೀರ್ಮಾನವು.

ಕಾಂಗ್ರೆಸ್ಸು ಕಡೆಯದಿನವಾದ ತಾ|| 28ರ ಸಾಯಂಕಾಲದಲ್ಲಿ ಸವರಣಗಳೆಲ್ಲವೂ ಆದಮೇಲೆ ರಾಜಕೀಯಕಾರ್ಯವಿಧಾನವಿಚಾರವಾಗಿ ಅಂಗೀಕರಿಸಲ್ಪಟ್ಟ ಪಂಡಿತ ಮೋತೀಲಾಲ ನೆಹರು ಇವರ ತೀರ್ಮಾನವು ಈ ಕೆಳಗೆಕಂಡಪ್ರಕಾರ ಇರುವುದು.—

ಸೆಪ್ಟಂಬರ್ ತಾ|| 2ರಲ್ಲಿ ಪಾಟ್ನಾದಲ್ಲಿ ಜರುಗಿದ ಅಖಿಲಭಾರತಕಾಂಗ್ರೆಸ್ಸುಸ್ಥಾಯಿಸಂಘಸಭೆಯು ಮಾಡಿದ ತೀರ್ಮಾನಗಳಲ್ಲಿ (ಬಿ) ಭಾಗವನ್ನು ಪುಷ್ಟೀಕರಿಸುವಲ್ಲಿ ಈ ಕಾಂಗ್ರೆಸ್ಸು ಈಪ್ರಕಾರವಾಗಿ ತೀರ್ಮಾನಿಸುತ್ತದೆ

ದೇಶಕ್ಷೇಮಕ್ಕೋಸ್ಕರ ಅವಸರವಾಗಿರುವ ರಾಜಕೀಯಕಾರ್ಯವಿಧಾನವೆಲ್ಲವನ್ನೂ ಈ ಕಾಂಗ್ರೆಸ್ಸು ವಹಿಸಿಕೊಂಡು ನಡೆಯಿಸಬೇಕಾಗಿದೆ ಇದಕ್ಕೆ ಕಾಂಗ್ರೆಸ್ಸು ಹಣವನ್ನೂ ಸಾಮಗ್ರಿಯನ್ನೆಲ್ಲವನ್ನೂ ವಿನಿಯೋಗಿಸಬೇಕಾಗುತ್ತದೆ. ಆದರೆ ಆ ತೀರ್ಮಾನದಪ್ರಕಾರ ಅಖಿಲಭಾರತ ತಂತುಕಾರಕಸಂಘಕ್ಕೆ ಸಂಬಂಧಪಟ್ಟಂತೆ ಒಂದು ಧನರಾಶಿಯನ್ನೇರ್ಪಡಿಸಿ ಅದನ್ನು ಪ್ರತ್ಯೇಕವಾಗಿಡಬೇಕಲ್ಲದೆ ಉಪಯೋಗಿಸಲಾಗದು.

“ದೇಶದಗೌರವವನ್ನೂ, ವಾಂಛಿತವನ್ನೂ ಸಫಲಗೊಳಿಸುವುದಕ್ಕೆ ಕಟ್ಟಕಡೆಗೆ ಶಾಸನೋಲ್ಲಂಘನವೇ ಸರಿಯಾದ ಅಸ್ತ್ರವೆಂದು ಈ ಕಾಂಗ್ರೆಸ್ಸು ತನ್ನ ವಿಶ್ವಾಸವನ್ನು ಮರಳಿ ತಿಳಿಸುತ್ತದೆ, ಆದರೆ ದೇಶವಿನ್ನೂ ಅದಕ್ಕೆ ಸಿದ್ಧವಾಗಿಲ್ಲವೆಂದು ತಿಳಿದಿರುತ್ತದೆ.''

“ ಆದುಕಾರಣ ರಾಜಕೀಯ ಕಾರ್ಯವಿಧಾನವನ್ನೆಲ್ಲಾ ಜರುಗಿಸಲು ಸ್ವಯಂಸಹಾಯವೇ ಮುಖ್ಯವೆಂದೂ, ಇದಕ್ಕಾಗಿ ದೇಶಾಭಿವೃದ್ಧಿಗೊಳಿಸಬೇಕೆಂದೂ, ಪ್ರಭುತ್ವದವರಾಗಲೀ, ಇತರರಾಗಲಿ ದೇಶವನ್ನು ಸ್ವರಾಜ್ಯವನ್ನಾಗಿ ಮಾಡುವಲ್ಲಿ ಅಡ್ಡಿಪಡಿಸುವವರನ್ನು ನಿರೋಧಿಸಲು ಇದೇ ಆಚರಣೀಯವಾದ ಧರ್ಮವೆಂದೂ ಈ ಕಾಂಗ್ರೆಸ್ಸು ತೀರ್ಮಾನಿಸುತ್ತದೆ.

1. “ ಇನ್ನುಮುಂದೆ ಈ ಕಾಂಗ್ರೆಸ್ಸು ರಾಜಕೀಯ ಕಾರ್ಯವಿಧಾನವನ್ನು ಈ ದೇಶದಲ್ಲಿ ಜರುಗಿಸುವುದಕ್ಕಾಗಿ ಈ ಕೆಳಗೆ ನಿರ್ಣಯಿಸುತ್ತದೆ. ಪ್ರಜೆಗಳಿಗೆ ಅವರಿಗಿರಬೇಕಾದ ರಾಜಕೀಯ ಹಕ್ಕುಗಳನ್ನು ತಿಳುಹಿಸಬೇಕು. ಆ ಹಕ್ಕನ್ನು ಸಂಪಾದಿಸಲು ಅವಶ್ಯಕವಾದ ಬಲವನ್ನೂ, ನಿರೋಧಶಕ್ತಿಯನ್ನು ಸಂಪಾದಿಸಲು ಕಾಂಗ್ರೆಸ್ಸುನಿರ್ಮಾಣಕಾರ್ಯವಿಧಾನವನ್ನು ಅನುಸರಿಸಿಯೂ, ಮುಖ್ಯವಾಗಿ ರಾಟೆಯನ್ನೂ ಖದ್ದರನ್ನೂ ಪ್ರಚಾರಮಾಡಿಯೂ, ಸರ್ವಮತೈಕವನ್ನೂ, ಅಸ್ಪೃಶ್ಯತಾನಿವಾರಣೆಯನ್ನೂ, ನಿಮ್ನಜಾತ್ಯುದ್ಧರಣವನ್ನೂ, ಮದ್ಯನಿಷೇಧವನ್ನೂ, ಗ್ರಾಮಪುನರ್ನಿರ್ಮಾಣವನ್ನೂ, ಸ್ಥಾನಿಕಸಂಘಗಳ ಆಕ್ರಮಣವನ್ನೂ, ಜಾತೀಯವಿದ್ಯಾವಿಧಾನವನ್ನೂ, ವ್ಯಾವಸಾಯಿಕಪಾರಿಶ್ರಾಮಿಕ ಕಾರ್ಯವಿಧಾನವನ್ನೂ ಕಾರ್ಮಿಕರಿಗೂ ಯಜಮಾನರಿಗೂ, ಭೂಸ್ವಾಮಿಗಳಿಗೂ, ರೈತರಿಗೂ, ತಿಳಿಯಪಡಿಸಿ ದೇಶಕ್ಕೊಂದು ಜಾತೀಯವಿದ್ಯಾ, ಆರ್ಥಿಕ, ಪಾರಿಶ್ರಾಮಿಕ, ವಾಣಿಜ್ಯಾಭಿವೃದ್ಧಿಯಲ್ಲಿ ಮನಸಿಟ್ಟು ಕೆಲಸಮಾಡಬೇಕು.

2. “ ಈ ದೇಶಕ್ಕೆ ಮುಖ್ಯವಾಗಿ ಮಾಡಬೇಕಾದ ಕೆಲಸವು ವಿದೇಶಗಳಲ್ಲಿ ಸರಿಯಾದ ವಾರ್ತೆಯನ್ನು ಪ್ರಚಾರಗೊಳಿಸುವುದೇ ಆಗಿದೆ.

3. ಅಸೆಂಬ್ಲಿಯಲ್ಲಿ 1924ನೇ ಫೆಬ್ರವರಿ ತಾ|| 18 ರಲ್ಲಿ ಇಂಡಿಪೆಂಡೆಂಟ್ (ಸ್ವತಂತ್ರ) ಸ್ವರಾಜ್ಯಪಕ್ಷವು ಸೇರಿ ಮಾಡಿದ ತೀರ್ಮಾನವನ್ನೇ ಪ್ರಭುತ್ವದವರು ಪುರಸ್ಕರಿಸಬೇಕಾದ ವಿಷಯದಲ್ಲಿ ದೇಶಪಕ್ಷವಾಗಿ ಕಾಂಗ್ರೆಸ್ಸು ಅಂಗೀಕರಿಸುತ್ತದೆ ಆದರೆ ಪ್ರಭುತ್ವದವರು ಈವರೆಗೆ ಅದಕ್ಕೆ ಪ್ರತ್ಯುತ್ತರವನ್ನು ಕೊಡದಿರುವುದರಿಂದ, ಅಸೆಂಬ್ಲಿಯಲ್ಲಿ ಸ್ವರಾಜ್ಯಪಕ್ಷವು ಪ್ರಭುತ್ವದವರನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಇದಕ್ಕೆ ಕಡೆಯುತ್ತರವನ್ನು ಕೊಡಬೇಕೆಂದು ಕೋರಿ, ಫೆಬ್ರವರಿಯೊಳಗೆ ತಮ್ಮ ನಿರ್ಣಯವನ್ನು ಪ್ರಕಟಿಸದಿದ್ದರೂ, ಹಾಗೆ ಪ್ರಕಟಿಸಿದುದು ತೃಪ್ತಿಕರವಾಗಿಲ್ಲವೆಂದು ಅದಕ್ಕಾಗಿ ನಿಯಮಿಸಲ್ಪಟ್ಟ ಸ್ಪೆಷಲ್ ಕಮಿಟಿಯು ನಿರ್ಣಯಿಸಿದರೂ ಸಭೆಯಿಂದಲೇ ಪ್ರಭುತ್ವದವರಿಗೆ ಆ ವಿಷಯವನ್ನು ತಿಳಿಸಿ, ಇನ್ನು ಶಾಸನಸಭೆಯಲ್ಲಿದ್ದು ಕೆಲಸಮಾಡಲಾಗುವುದಿಲ್ಲವೆಂದು ಪ್ರಕಟಿಸಿ ಅಸೆಂಬ್ಲಿಯಲ್ಲೂ ಸ್ಟೇಟ್‌ಕೌನ್ಸಿಲ್ಲಿನಲ್ಲೂ ಫೈನಾನ್ಸ್ ಬಿಲ್ಲಿಗೆ ಪ್ರತಿಕೂಲವಾಗಿ ಓಟುಕೊಟ್ಟು ತಮ್ಮ ಸ್ಥಾನವನ್ನು ಬಿಟ್ಟು ಬಂದುಬಿಡಬೇಕು. (ಈ ಸ್ಪೆಷಲ್ ಕಮಿಟಿಯಲ್ಲಿ ಕಾಂಗ್ರೆಸ್ ವರ್ಕಿಂಗ್‌ಕಮಿಟಿ ಮೆಂಬರುಗಳು ಅಖಿಲಭಾರತಕಾಂಗ್ರೆಸ್ಸುಸ್ಥಾಯಿಸಂಘವನ್ನು ನಿಯಮಿಸುವ ಮೆಂಬರುಗಳು ಮೆಂಬರರಾಗಿರುವರು.) ಆ ಸಮಯದಲ್ಲಿ ಯಾವ ಸಭೆಯು ಜರುಗುತ್ತಿದ್ದರೂ ರಾಷ್ಟ್ರೀಯಶಾಸನಸಭೆಯಲ್ಲಿರುವ ಸ್ವರಾಜ್ಯಪಕ್ಷಮೆಂಬರುಗಳೂ ಕೂಡ ತಮ್ಮ ಸ್ಥಾನಗಳನ್ನು ಬಿಟ್ಟು, ಶಾಸನಸಭೆಯನ್ನು ಬಿಟ್ಟವರೆಲ್ಲರೂ ಹಾಗೆ ಮಾಡಿದಮೇಲೆ ಸ್ಪೆಷಲ್‌ಕಮಿಟಿಗೆ ತಿಳಿಸಿ ಮುಂದೇನು ಮಾಡಬೇಕೆಂದು ಕೇಳತಕ್ಕದು. ಇನ್ನೂ ಬಿಡದಿದ್ದವರು ಸ್ಟೇಟ್‌ಬಜೆಟ್ಟನ್ನು ನಿರಾಕರಿಸುವುದಕ್ಕಾಗಲಿ ಹೊಸತೆರಿಗೆಯನ್ನು ನಿರೋಧಿಸುವುದಕ್ಕಾಗಲಿ ಸಭೆಗೆ ಹೋಗಬಹುದು. ಆದರೆ ತಮ್ಮ ಸ್ಥಾನವನ್ನು ಬಿಡಬೇಕೆಂದು ಕೋರುವುದಕ್ಕೆ ಮೊದಲು ಶಾಸನಸಭೆಯಲ್ಲಿರುವ ಸ್ವರಾಜ್ಯಪಕ್ಷದವರು ಪ್ರಕೃತದಲ್ಲಿ ಪಾರ್ಟಿನಿಬಂಧನೆಗೊಳಪಟ್ಟಿರುವವರೆಗೂ ಇತರ ಕೆಲಸಗಳನ್ನು ಮಾಡುತ್ತಿರಬಹುದು. ಯಾವ ಶಾಸನಸಭೆಯಲ್ಲಿದ್ದರೂ ಸರಿ, ಸ್ವರಾಜ್ಯಪಕ್ಷದವರು ಪ್ರತ್ಯೇಕವಾಗಿ ಅವಸರವಾದ ಕೆಲಸಕ್ಕೆ ಹೋಗಬೇಕಾದಲ್ಲಿ ಸ್ಪೆಷಲ್ ಕಮಿಟಿಯವರು ಹಾಗೆ ಹೋಗಲು ಅಪ್ಪಣೆಮಾಡುವರು. ಮೇಲಿನ 1ನೇ ಸಬ್‌ಕ್ಲಾಜಿನಲ್ಲಿ ಹೇಳಿರುವ ರಿಪೋರ್ಟು ಬಾರದಲೇ ಸ್ಪೆಷಲ್‌ಕಮಿಟಿಯು ಅಖಿಲಭಾರತಕಾಂಗ್ರೆಸ್ಸು ಸ್ಥಾಯಿಸಂಘವನ್ನು ಸೇರಿಸಿ ಕಾಂಗ್ರೆಸು ಸ್ವರಾಜ್ಯಪಕ್ಷಸಂಸ್ಥೆಯು ಕೂಡ ಸೇರಿ ದೇಶದಲ್ಲಿ ಮಾಡಬೇಕಾದ ಕಾರ್ಯವಿಧಾನವನ್ನು ನಿರ್ಣಯಿಸಬೇಕು. ಈ ಕಾರ್ಯವಿಧಾನವು ಮೇಲಿನ 1, 2 ಕ್ಲಾಜುಗಳಲ್ಲಿ ಹೇಳಲ್ಪಟ್ಟಿರುವ ವಿಧಿಯಲ್ಲಿ ತಿಳಿಸಲ್ಪಟ್ಟ ವಿಧಾನವನ್ನು ಓಟರುಗಳಿಗೆ ತಿಳಿಸಿಕೊಟ್ಟು ಈಸಾರಿ ಚುನಾವಣೆಯನ್ನು ಯಾವ ಪದ್ಧತಿಯಮೇಲೆ ಕಾಂಗ್ರೆಸು ನಡೆಯಿಸಬೇಕಾಗಿರುವುದನ್ನೂ, ಕಾಂಗ್ರೆಸ್‌ಸಭಿಕರು ಯಾವ ಯಾವ ರೀತಿಯನ್ನು ಅನುಸರಿಸಿ ಚುನಾವಣೆಯಲ್ಲಿ ಭಾಗಿಗಳಾಗಬೇಕಾದುದನ್ನೂ ನಿರ್ಣಯಿಸಬೇಕಾಗಿದೆ. ಆದರೆ ಪ್ರಭುತ್ವದವರು ಮೇಲೆ ಹೇಳಿದ ಪರಿಷ್ಕಾರಕ್ಕೆ ತೃಪ್ತಿಕರವಾಗಿ ಪ್ರತ್ಯುತ್ತರವನ್ನು ಕೊಡುವರೆಂದು ಕಾಂಗ್ರೆಸು ಅಭಿಪ್ರಾಯಪಡುವವರೆಗೂ ಪ್ರಭುತ್ವೋದ್ಯೋಗವನ್ನು ಅಂಗೀಕರಿಸದೇ ಇರಬೇಕು.

ವಿವಿಧ ರಾಷ್ಟ್ರೀಯ ಕಾಂಗ್ರೆಸ್‌ಸಂಘಕಾರ್ಯನಿರ್ವಾಹಕರು ರಾಷ್ಟ್ರೀಯ ಶಾಸನಸಭೆಗೂ, ಭಾರತಶಾಸನಸಭೆಗೂ ತಂತಮ್ಮ ರಾಷ್ಟ್ರದಿಂದ ಜಾಗ್ರತೆಯಲ್ಲಿ ಅಭ್ಯರ್ಥಿಗಳನ್ನು ಗೊತ್ತುಮಾಡಬೇಕು. ಅಸಂಬ್ಲಿ ತೀರ್ಮಾನದ ಮೇಲೆ ಪ್ರಭುತ್ವದವರು ಮಾಡುವ ತೀರ್ಮಾನವು ತೃಪ್ತಿಕರವಾಗಿದ್ದು ಅಂಗೀಕಾರಾರ್ಹವಾಗಿರುವುದೆಂದು ಸ್ಪೆಷಲ್ ಕಮಿಟಿಯು ನಿರ್ಣಯಿಸದಲ್ಲಿ ಕೂಡಲೆ ಅಖಿಲಭಾರತಕಾಂಗ್ರೆಸು ಸಂಘವು ಸಮಾವೇಶವಾಗಿ ಸ್ಪೆಷಲ್ ಕಮಿಟಿಯ ನಿರ್ಣಯವನ್ನು ಧೃಢಪಡಿಸಿಯೋ ತಿರಸ್ಕರಿಸಿಯೋ ಭವಿಷ್ಯತ್ತನ್ನು ನಿರ್ಣಯಿಸತಕ್ಕದಾಗಿದೆ. ಸ್ವರಾಜ್ಯಪಕ್ಷದವರು ಶಾಸನ ಸಭೆಯನ್ನು ಬಿಟ್ಟು ಬರುವವರೆಗೂ ಸ್ವರಾಜ್ಯಪಕ್ಷನಿರ್ಮಾಣ ನಿಬಂಧನಗಳೇ ಶಾಸನಸಭೆಯಲ್ಲಿ ಅನುಸರಿಸಲ್ಪಡುತ್ತಿರಬೇಕು. ಆದರೆ ಮಧ್ಯದಲ್ಲಿ ಅವಸರವಾಗಿ ತೋರಿದಲ್ಲಿ 3 ಮತ್ತು 4ನೇ ಸಬ್‌ಕ್ಲಾಜುಗಳಲ್ಲಿ ಹೇಳಿರುವ ಕೆಲಸಗಳನ್ನು ಪ್ರಾರಂಭಿಸಬೇಕಾದಲ್ಲಿ ವ್ಯತ್ಯಾಸವನ್ನು ಮಾಡಿಕೊಳ್ಳಬಹುದು. ಇದಕ್ಕೆ ಪ್ರಥಮತಃ ಬೇಕಾದ ವ್ಯಚ್ಚಕ್ಕೆ ತಗಲುವ ಹಣವನ್ನು ಅಖಿಲಭಾರತಕಾಂಗ್ರೆಸು ಸ್ಥಾಯಿಸಂಘವು ಕೊಡಬೇಕು. ಇನ್ನೂ ಹಣಬೇಕಾದಲ್ಲಿ ವರ್ಕಿಂಗ್‌ಕಮಿಟಿಯ ಧನವನ್ನು ಉಪಯೋಗಿಸಬಹುದು, ಅಥವಾ ಆ ಕಮಿಟಿಯ ಅಪ್ಪಣೆಯಿಂದ ಪ್ರಜೆಗಳಿಂದ ಚಂದಾತೆಗೆದುಕೊಳ್ಳಬಹುದು.

ಭಾಷಾತೀರ್ಮಾನವು.

“ ಕಾಂಗ್ರೆಸ್ಸು, ಅಖಿಲಭಾರತ ಕಾಂಗ್ರೆಸ್ಸುಸಂಘ, ವರ್ಕಿಂಗ್‌ಕಮಿಟಿ ಇವುಗಳ ಸಭೆಗಳಲ್ಲಿ ಹಿಂದೂಸ್ಥಾನಿಯಲ್ಲೇ ಕಾರ್ಯಕ್ರಮವನ್ನು ನಡಿಸಬೇಕು. ಆದರೆ ಹಿಂದೂಸ್ಥಾನಿಯಲ್ಲಿ ಮಾತಾಡಲಿಕ್ಕೆ ಅವಕಾಶವಿಲ್ಲದ ಸ್ಥಳದಲ್ಲಿ ಇಂಗ್ಲೀಷಿನಲ್ಲಿ ಮಾತನಾಡಬಹುದು. ರಾಷ್ಟ್ರೀಯ ಕಾಂಗ್ರೆಸ್ಸುಸಂಘದ ಕಾರ್ಯಕ್ರಮವು ರಾಷ್ಟ್ರಭಾಷೆಯಲ್ಲೇ ನಡಿಸಲ್ಪಡಬೇಕು. ಹಿಂದುಸ್ಥಾನಿಯನ್ನು ಕೂಡ ಉಪಯೋಗಿಸಬಹುದು.'' ಈ ತೀರ್ಮಾನವು ಅಧ್ಯಕ್ಷೆಯರಿಂದ ಉಪಪಾದಿಸಲ್ಪಟ್ಟು ಅಂಗೀಕರಿಸಲ್ಪಟ್ಟಿತು.

ವಿದೇಶಾಂಗಶಾಖಾ ನಿರ್ಮಾಣವು.

“ ವಿದೇಶದಲ್ಲಿರುವ ಭಾರತೀಯರ ಕ್ಷೇಮವನ್ನು ವಿಚಾರಿಸುವುದಕ್ಕಾಗಿ ಬ್ರಿಟಿಷ್‌ಸಾಮ್ರಾಜ್ಯದಲ್ಲೂ, ವಿದೇಶದಲ್ಲೂ ಇರುವವರ ಸ್ಥಿತಿಯನ್ನು ಕುರಿತು ಪ್ರಚಾರಪಡಿಸಬೇಕೆಂಬ ಉದ್ದೇಶದಿಂದ ಕಾಂಗ್ರೆಸಿಗೆ ಅಧೀನವಾಗಿ ವಿದೇಶಾಂಗಶಾಖೆಯನ್ನು ಸ್ಥಾಪಿಸಬೇಕಾಗಿದೆ.'' ಈ ತೀರ್ಮಾನವೂ ಅಧ್ಯಕ್ಷೆಯರಿಂದುಪಪಾದಿಸಲ್ಪಟ್ಟು ಅಂಗೀಕರಿಸಲ್ಪಟ್ಟಿತು.

ವಿವಿಧಮತ ಮಹಾಸಭೆ.

ಈ ಸಭೆಯ ಮೂರನೇ ಅಧಿವೇಶನವು ಮದ್ರಾಸಿನಲ್ಲಿ ಕಳೆದ ಡಿಸೆಂಬರ್ ತಾ|| 31 ರಿಂದ 3 ದಿವಸಗಳವರೆಗೆ ಶರ್ವಾನಂದಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದಿತು. ನಾನಾಭಾಗದಿಂದ ಅನೇಕ ವಿದ್ವಾಂಸರುಗಳು ಬಂದಿದ್ದರು. ಸಭಾಧ್ಯಕ್ಷರು ಆರಂಭೋಪನ್ಯಾಸದಲ್ಲಿ, “ ಮನುಷ್ಯನು ತನ್ನ ಅಲ್ಪತ್ವವನ್ನು ಗ್ರಹಿಸಿ ಘನತ್ವವನ್ನು ಹೊಂದಲು ಮಾಡುವ ಪ್ರಯತ್ನವೇ ಮತವು. ಎಲ್ಲ ಮತಗಳೂ ಮೋಕ್ಷವನ್ನೇ ಪ್ರಾಪ್ಯಸ್ಥಾನವನ್ನಾಗಿ ನಿರೂಪಿಸುವುವು. ಪ್ರತಿಯೊಂದುಮತಸ್ಥಾಪಕನು ಭಗವಂತನನ್ನು ದರ್ಶಿಸಿ ಅಪರೋಕ್ಷಜ್ಞಾನವನ್ನು ಪಡೆದೇ ತನ್ನ ಸಿದ್ಧಾಂತವನ್ನು ಒಂದು ಮತರೂಪವಾಗಿ ಲೋಕಕ್ಕೆ ಬೋಧಿಸಿರುವನು. ಈ ಸಭೆಯಲ್ಲಿ ವಿವಿಧಮತಗಳ ಮುಖ್ಯಾಂಶವನ್ನು ಕುರಿತು ಆಯಾ ಮತದ ಪ್ರತಿನಿಧಿಗಳು ಉಪನ್ಯಾಸ ಮಾಡುವರು. ಅವನ್ನು ಭಕ್ತಿಶ್ರದ್ಧೆಯಿಂದ ಕೇಳುವುದೇ ಈ ಸಭೋದ್ದೇಶವು. ಮತಖಂಡನಕ್ಕೆ ಇಲ್ಲಿ ಆಸ್ಪದವಿಲ್ಲ. ಉಪನ್ಯಾಸವನ್ನು ಕೇಳಿದಮೇಲೆ ಯಾರಿಗಾದರು ಸುಬೋಧೆಯಿಂದ ಯಾವುದಾದರು ಅನುಮಾನಹುಟ್ಟಿ ಅದನ್ನು ಪರಿಹರಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಕೇಳಿ ತಿಳಿದುಕೊಳ್ಳಬೇಕಲ್ಲದೆ ಮತಖಂಡನೋದ್ದೇಶದಿಂದ ಯಾರೂ ಪ್ರಶ್ನೆಮಾಡಕೂಡದು.” ಎಂದು ಅಧ್ಯಕ್ಷರು ಹೇಳಿದಮೇಲೆ ಉಪನ್ಯಾಸಗಳಿಗೆ ಆರಂಭವಾಯಿತು.

ಅದ್ವೈತಮತವು.

(ನಾಗಪಟ್ಟಣದ ಬ್ರಹ್ಮಶ್ರೀ ಕೆ. ರಾಮಸ್ವಾಮಿಶಾಸ್ತ್ರಿ ಬಿ.ಎ., ಬಿ.ಎಲ್., ರವರು ಉಪನ್ಯಸಿಸಿದರು.)

ಅದ್ವೈತಮತವನ್ನು ಶ್ರೀಶಂಕರಾಚಾರ್ಯರು ವಿಶೇಷವಾಗಿ ಪ್ರಚುರಪಡಿಸಿದರಲ್ಲದೆ ಹೊಸದಾಗಿ ಕಲ್ಪಿಸಲಿಲ್ಲವು. ಈ ಮತವು ಅನಾದಿಯಾಗಿದೆ. ಷೆಲ್ಲಿ, ಟೆನಿಸನ್ನು ಮೊದಲಾಗಿ ಅನೇಕ ಮಂದಿ ಪಾಶ್ಚಾತ್ಯರು ಕೂಡ ಅದ್ವೈತಮತಸಿದ್ಧಾಂತವನ್ನೇ ಪ್ರಚಾರಗೊಳಿಸಿರುವರು. ಅದ್ವೈತಮತಕ್ಕೆ ಭಾರತದೇಶವೇ ಜನ್ಮಭೂಮಿಯೆಂದು ಸ್ವಾಮಿ ವಿವೇಕಾನಂದರವರು ಹೇಳಿರುವರು. ಭಾರತೀಯರು ಅಂತಸ್ಸೌಂದರ್ಯಪ್ರಿಯರಲ್ಲದೆ ಬಾಹ್ಯಸೌಂದರ್ಯಪ್ರಿಯರಲ್ಲವೆಂದು ಚೇಂಬರ್ಲೇನುರವರು ಅಂದಿರುತ್ತಾರೆ. ಯೋಗವಾಸಿಷ್ಠವೆಂಬ ಗ್ರಂಥದಲ್ಲಿ ವಸಿಷ್ಠಮಹರ್ಷಿಯು ಅದ್ವೈತಮತವನ್ನು ಸಾಕಲ್ಯವಾಗಿ ವಿವರಿಸಿರುವರು. ಆಚಾರ್ಯಪರಂಪರೆಯಲ್ಲಿ ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಗೌಡಪಾದ, ಗೋವಿಂದಭಟ್ಟ, ಶ್ರೀಶಂಕರಾಚಾರ್ಯ, ವಿದ್ಯಾರಣ್ಯ, ಮಧುಸೂದ ಮೊದಲಾದ ಪ್ರಾಚೀನರೂ, ನವೀನರಲ್ಲಿ ಅಪ್ಪಯ್ಯದೀಕ್ಷಿತರೂ ಬಹಳ ಹೆಚ್ಚಾಗಿ ಪ್ರಸಂಶಿರುವರು. ದ್ರಾವಿಡಭಾಷೆಯಲ್ಲಿರುವ ತಿರುವಾಚಕಂ ತಾಯುಮಾನವರು ಎಂಬ ಗ್ರಂಥದಲ್ಲಿ ಅದ್ವೈತ ವಿಚಾರವು ಬಹು ಸವಿಸ್ತಾರವಾಗಿ ಬರೆಯಲ್ಪಟ್ಟಿದೆ. ಶ್ರೀಭಗವದ್ಗೀತೆಯ 5,10,13ನೇ ಅಧ್ಯಾಯಗಳಲ್ಲಿ ಅದ್ವೈತಸಿದ್ಧಾಂತಶ್ಲೋಕಗಳು ಬಹಳವಾಗಿವೆ. ಮ್ಯಾಕ್ಸ್‌ಮುಲ್ಲರು, ಸ್ವಾಮಿ ವಿವೇಕಾನಂದರು ಮತ್ತು ರವೀಂದ್ರನಾಥಟಾಕರರವರು ಅದ್ವೈತವನ್ನು ಪಾಶ್ಚಾತ್ಯದೇಶಗಳಲ್ಲಿ ಪ್ರಚಾರಗೊಳಿಸಿದರು. ಪ್ರಪಂಚದಲ್ಲಿರುವ ಎಲ್ಲ ಜಾತಿಗಳಿಗೂ ಮತಗಳಿಗೂ ಏಕಮತವನ್ನುಂಟುಮಾಡತಕ್ಕ ಉತ್ತಮಸಿದ್ಧಾಂತವಾಗಿರುವುದು ಅದ್ವೈತಸಿದ್ಧಾಂತವೇ. ಈ ಸಿದ್ಧಾಂತವು ಸಂಪೂರ್ಣವಾಗಿ ಹೇತುಬದ್ಧವಾಗಿದೆ; ದಶಶ್ಲೋಕಿಯಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಮುಕ್ತಿಯಲ್ಲಿ ಜೀವನ್ಮುಕ್ತಿ ವಿದೇಹಮುಕ್ತಿಯೆಂದು ಎರಡು ವಿಧವುಂಟು. ಈ ಭೌತಿಕಶರೀರದಲ್ಲಿದ್ದುಕೊಂಡೇ ಸಚ್ಚಿದಾನಂದಾತ್ಮಕವಾದ ಸ್ವಸ್ವರೂಪವನ್ನು ಸಂದರ್ಶಿಸುವಂತೆ ಮಾಡುವುದೇ ಜೀವನ್ಮುಕ್ತಿ ಅಥವಾ ಸದೇಹಮುಕ್ತಿ; ಭೌತಿಕದೇಹವನ್ನು ಬಿಟ್ಟು ಪರಬ್ರಹ್ಮನಲ್ಲಿ ಬೆರತುಹೋಗುವುದು ವಿದೇಹಮುಕ್ತಿ; ಅದಿಯೇ ಮೋಕ್ಷವು. ಪರಮೇಶ್ವರನಿಗೂ ಜೀವನಿಗೂ ಭೇದವಿಲ್ಲವು. ಆದರೆ ಮಾಯೆಯಿಂದ ಆವರಿಸಿಕೊಂಡು ಜೀವನು ತನ್ನ ಬ್ರಹ್ಮಸ್ವರೂಪವನ್ನು ತಿಳಿದುಕೊಳ್ಳಲಾರದೆ ತಾನು ಅಲ್ಪನೆಂದೂ, ಬದ್ಧನೆಂದೂ ಅಜ್ಞಾನದಿಂದ ತಿಳುಕೊಂಡಿರುವನು. ಮಣ್ಣಿಗೂ ಘಟಕ್ಕೂ, ಹತ್ತಿಗೂ ಬಟ್ಟೆಗೂ, ಹೇಗೆ ಭೇದವಿಲ್ಲವೋ ಹಾಗೆ ಜೀವನಿಗೂ ಬ್ರಹ್ಮನಿಗೂ ಭೇದವಿಲ್ಲವು. ಈ ಮಾಯೆಯನ್ನೂ ಅಜ್ಞಾನವನ್ನೂ ತೊಲಗಿಸುವುದಕ್ಕೆ ಜೀವನು ಸ್ವಸ್ವರೂಪವನ್ನು ತಿಳಿದುಕೊಳ್ಳಬೇಕಾಗಿದೆ. ಅದೇ ಮುಕ್ತಿ; ಅದೇ ಅದ್ವೈತಸಿದ್ಧಾಂತವು. ಎಂದು ಶಾಸ್ತ್ರಿಗಳು ಹೇಳಿದರು.

ಬೌದ್ಧಮತವು.

(ಶ್ರೀಯುತ ಜಿನರಾಜದಾಸರವರುಪನ್ಯಾಸ.)

ಕ್ರೈಸ್ತಮತಕ್ಕೆ ಪೂರ್ವವೇ 6ಶತಾಬ್ದಗಳಹಿಂದೆ ಬುದ್ಧದೇವನು ಅವತರಿಸಿದನು. ಆಗ್ಗೆ ಕಾಶೀಪಟ್ಟಣವು ಪ್ರಧಾನವಿದ್ಯಾಪೀಠವಾಗಿದ್ದಿತು. ಆ ಕಾಲದಲ್ಲೇ ದೇಶದಲ್ಲೆಲ್ಲಾ ಅಧಿಕವಾಗಿ ವೇದಾಂತ ಸಿದ್ಧಾಂತವು ವಿಸ್ತರಿಸಿದ್ದಿತು. ವೇದಾಂತಿಗಳು ಸತ್ಯವನ್ನು ಸರಿಯಾಗಿ ಗ್ರಹಿಸಿರಲಿಲ್ಲವು. ಹಿಂಸಾದೌರ್ಜನ್ಯಗಳು ಬಹಳ ಹೆಚ್ಚಾಗಿದ್ದುವು. ಭಗವದ್ಭಕ್ತರೆಂದೆನ್ನುತ್ತಿದ್ದವರು ಕೂಡ ದಯಾವಿರಹಿತರಾಗಿಯೇ ಇದ್ದರು. ಪರೋಪಕಾರಚಿಂತೆಯುಳ್ಳವರು ಸಾಕಷ್ಟಿರಲಿಲ್ಲವು. ನರಬಲಿಯೂ ಪಶುವಧೆಯೂ ಬಹಳ ಪ್ರಬಲವಾಗಿಯೇ ಇದ್ದುವು. ಸ್ವಾರ್ಥಪರರು ದುರ್ಬಲರನ್ನು ಬಹಳ ಕಷ್ಟಕ್ಕೆ ಗುರಿಮಾಡುತ್ತಿದ್ದರು. ಜನ್ಮವು ದುಃಖಭಾಜನವಾಗಿ ಪರಿಣಮಿಸಿದ್ದಿತು. ದೇವರಿದ್ದಾನೆಂದು ತಿಳಿಯದೇ ದೇವರನ್ನು ಕಷ್ಟಪಟ್ಟು ತಡಕತಕ್ಕ ಪುರೋಹಿತರು ಕೂಡ ಏರ್ಪಟ್ಟರು. ನಿತ್ಯನೈಮಿತ್ತಿಕ ಕರ್ಮಗಳು ಬಂದು ಸುತ್ತಿಕೊಂಡುವು. ದೈವಭಕ್ತಿಯಿರುವವರೂ ಇಲ್ಲದವರೂ ಕಷ್ಟವನ್ನು ಅನುಭವಿಸುತ್ತಿದ್ದರು. ಆದಾಗ್ಗ್ಯೂ ಕಷ್ಟಗಳಿಗೆ ಮುಖ್ಯಕಾರಣವೇನೆಂದು ಅವರು ಗ್ರಹಿಸಲಿಲ್ಲವು. ಶ್ರೀ ಬುದ್ಧಮೂರ್ತಿಯು ಇದನ್ನು ತಿಳಿದು ಜಗತ್ತಿನಲ್ಲಿ ಅವತರಿಸಿದನು. ದುಃಖಕ್ಕೆ ಮುಖ್ಯಕಾರಣವು ತೃಷ್ಣೆಯು. ಜಂತುಗಳೂ ಮಾನವರೂ ಆಶಾಬದ್ಧರಾಗಿರುವರು. ಸೃಷ್ಟಿಯಲ್ಲಿ ಆಶೆಯಿಲ್ಲದ ಪ್ರಾಣಿಯೇ ಇಲ್ಲವು. ಆದ್ದರಿಂದ ತೃಷೆಯನ್ನು ನಿರ್ಮೂಲಗೊಳಿಸಿದಲ್ಲಿ ಎಲ್ಲ ಬಾಧೆಯೂ ತಗ್ಗುವುದು. ಪ್ರವೃತ್ತಿಮಾರ್ಗ, ನಿವೃತ್ತಿಮಾರ್ಗವೆಂದು ಎರಡುವಿಧ ಮಾರ್ಗಗಳುಂಟು. ಪ್ರವೃತ್ತಿಮಾರ್ಗವೆಂದರೆ ಸಂಸಾರಲಂಪಟದಲ್ಲಿ ಸಿಕ್ಕಿಕೊಂಡಿರುವುದು. ನಿವೃತ್ತಿಮಾರ್ಗವೆಂದರೆ ವೈರಾಗ್ಯವು. ಅಹಿಂಸೆಯಿಂದಲೇ ನಿವೃತ್ತಿಮಾರ್ಗವುಂಟಾಗುವುದು. ಯಾವ ಪ್ರಾಣಿಗೂ ಕೇಡನ್ನು ಹಾರೈಸಬಾರದು, ಕಠಿನವಾಗಿ ಮಾತನಾಡಬಾರದು, ಹಾನಿಮಾಡಕೂಡದು. ಇದೇ ಅಹಿಂಸೆಯು. ಪ್ರಪಂಚದಲ್ಲಿ ಮಾನವರು ಸದ್ವರ್ತನಬದ್ಧರಾಗಿದ್ದರೆ ಮುಕ್ತರಾಗುವರು. ಅವರು ಯಾವಾಗಲೂ ಪ್ರಪಂಚಕ್ಕೆ ಶ್ರೇಯಸ್ಸನ್ನೇ ಕೋರುವರು. ಅಂತಹವರು ಯಾವಕಾಲದಲ್ಲೂ [illegible]. ಧರ್ಮಕ್ಕೆ ಅಭ್ಯಂತರವಿಲ್ಲವು. ಋಷಿಗಳು ಯಾವಾಗಲೂ ಪ್ರಜೆಗಳನ್ನು ಉದ್ಧರಿಸಲು ಪ್ರಯತ್ನಿಸುತ್ತಿರುವರು. ಅಹಿಂಸೆ, ಅಸ್ತೆ, ಬ್ರಹ್ಮಚರ್ಯ, ಪ್ರಿಯವಾದಿತ್ವವನ್ನು ಬಿಡದಿರುವುದು, ಮದ್ಯವಿರಹಣ ಇವು ಐದೂ ಪಂಚಶೀಲಗಳು. ಜೀವವು ಅಸ್ಥಿರವೆಂದು ತಿಳಿಯಬೇಕು. ಸತ್ಯಬಿಡಕೂಡದು. ವಿನಮ್ರನಾಗಿರಬೇಕು. ನ್ಯಾಯಮಾರ್ಗದಲ್ಲಿ ಧನವನ್ನಾರ್ಜಿಸಬೇಕು. ಪರೋಪಕಾರವನ್ನು ಮಾಡುತ್ತಿರಬೇಕು. ಸದ್ವರ್ತನಶೀಲನಾಗಿರಬೇಕು.

ಸನ್ಯಾಸಕ್ಕೆ ಅವಸರವಿಲ್ಲವು. ನಾಲ್ಕು ಆಶ್ರಮಗಳು ಕೂಡ ಬೇಕಾಗಿಲ್ಲವು. ಈರೀತಿಯಾಗಿ ನಡೆದುಕೊಂಡಲ್ಲಿ ಚಿತ್ತಶಾಂತಿಯುಂಟಾಗುವುದು. ಅದರಿಂದ ಜೀವನಿಗೆ ತನ್ನ ಸ್ವರೂಪವು ಸರಿಯಾಗಿ ತಿಳಿಯುವುದು. ಅದೇ ನಿರ್ವಾಣವು. ಜಾತಿವಿವರ್ಣ ವಿಚಿಕ್ಷವಿಲ್ಲವು. ಸ್ವಸ್ವರೂಪವು ಗೋಚರಿಸಿದ ಹೊರತು ಭಗವಂತನನ್ನು ತಿಳಿಯಲು ಅರ್ಹತೆಯುಂಟಾಗುವುದಿಲ್ಲವು. ಅದಕ್ಕೆ ಪೂರ್ವವೇ ಭಗವಂತನನ್ನು ಕುರಿತು ಆಲೋಚಿಸುವುದು ಅವಶ್ಯಕವು. ಸ್ವಸ್ವರೂಪ ಸಂದರ್ಶನವಾದನಂತರ ಎಲ್ಲ ಸಂಶಯವೂ ತೊಲಗಿಹೋಗುವುದು. ಪರೋಪಕಾರಚಿಂತೆಯಲ್ಲಿ ಕಲಹವುಂಟಾಗದೆ ಏಕಮತ್ಯವುಂಟಾಗುವುದು. ಸಂಪೂರ್ಣ ವೈರಾಗ್ಯ, ಪ್ರೇಮ, ವಿನಯಗಳಿಂದ ಕೂಡಿರಬೇಕು. ಇದಕ್ಕೆ ಕೆಲ ನಿಯಮಗಳಿವೆ. ಅವು ಹೇಗೆಬಂದವಗಳಾಗಿದ್ದರೂ ಚರ್ಚಿಸಲ್ಪಡಬೇಕಾದುದಿಲ್ಲವು. ನಿಯಮಗಳನ್ನು ಭಂಗಪಡಿಸುವುದರಿಂದಲೇ ಪಾಪಸಂಘಟಿಸುವುದು. ಪಾಪದಿಂದ ದುಃಖವುಂಟಾಗುವುದು. ಪವಿತ್ರತೆಯುಂಟಾದರೂ ಮನುಷ್ಯರು ಅಲ್ಪಶಕ್ತಿಯಿಂದ ಮಹಾಶಕ್ತನಾದ ಪರಮೇಶ್ವರನನ್ನು ನೋಡಲಾರರು. ನಿರ್ವಾಣದಿಂದ ಜೀವನು ಪ್ರತ್ಯೇಕವಾಗಿರುವನೇ ಇಲ್ಲವೇ ಎಂಬ ವಿಷಯವನ್ನು ಕೂಡ ವಿಶಾಂ ಈಗ ಚರ್ಚಿಸಬಾರದು. ಎಂದು ಭಗವಾನ್ ಬುದ್ಧನು ಬೋಧಿಸಿರುವನು. ಎಂದು ಜಿನರಾಜರವರು ಹೇಳಿದರು.

ಯೂದಮತವು.

(ಕೊಚ್ಚಿ ಶಾಸನಸಂಘದ ಮೆಂಬರರಾದ ಅಬ್ರಹಂ ಬಿ. ಸಲೇಂರವರು ಉಪನ್ಯಾಸವಮಾಡಿದರು.)

ಯೂದಮತಕ್ಕೆ ಅಬ್ರಹಂ ಎಂಬುವವನೇ ಮೂಲಪುರುಷನೆಂದು ಹೇಳಬೇಕು. ಆದ್ಯಾರಿನಲ್ಲಿ ಜರುಗಿದ ದಿವ್ಯಜ್ಞಾನಸಭೆಗೆ ನಾನು ಬಂದು ಅಲ್ಲಿ ಒಂದು ಹೀಬ್ರೂ ಶಾಖೆಯನ್ನೇರ್ಪಡಿಸಿದೆನು. ಪಾಲೆಸ್ತೈನಲ್ಲೂ ಜರುಸಲೆಮಿನಲ್ಲೂ ಯೂದದೇವಾಲಯವಿದೆ. ಯೂದಮತವೆಂದರೆ ದೈವವಾಕ್ಯವೆಂದೂ, ಯೂದರೆಂದರೆ ದೇವರಮಕ್ಕಳೆಂದೂ ಅರ್ಥವು. ನಮ್ಮ ಮತನಿಯಮವನ್ನು ಮನುಷ್ಯರಾರೂ ಬರೆಯಲಿಲ್ಲವು. ದೇವರೇ ಅದನ್ನು ತನ್ನ ಭಕ್ತರಿಗೆ ಹೇಳಲು ಅವರು ಲೋಕಕ್ಕೆ ಬೋಧಿಸಿದರು. ದೇವರನ್ನು ಆಶ್ರಯಿಸಿದವರೆಲ್ಲರೂ ಮುಕ್ತಿಯನ್ನು ಹೊಂದುವರೆಂಬುದು ನಮ್ಮ ನಂಬಿಕೆ. ನಮಗೆ ರಾಜಾಶ್ರಯವಿಲ್ಲವು. ಅನೇಕ ಮಂದಿ ರಾಜರು (ಕ್ರೈಸ್ತರು) ನಮ್ಮ ಮತವನ್ನು ಹಾಳ್ಮಾಡಲು ನಾನಾವಿಧವಾಗಿ ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲವು. ಈಗ ನಮ್ಮ ಮತದವರು ಪ್ರಪಂಚದಲ್ಲಿನ ಎಲ್ಲ ದೇಶದಲ್ಲೂ ಇರುವರು. 1. ಭಗವದುದ್ದೇಶವು. 2. ಮನುಷ್ಯನಕರ್ತವ್ಯವು. 3. ಮುಕ್ತಿ. ಎಂದು ಮೂರುಭಾಗಗಳಿರುತ್ತವೆ. ಮೆಸಪಟೋಮಿಯಾದಲ್ಲಿ ದೇವರು ಅಬ್ರಹಂನಿಗೆ ಪ್ರತ್ಯಕ್ಷವಾಗಿ ಬೋಧಿಸಿದ ವಾಕ್ಯಗಳನ್ನು ಆತನು ಚಕ್ಕಳದಮೇಲೆ ಬರದಿಟ್ಟನು. ಜರಮಯ್ಯನು ಕೂಡ ಅವರಂತೆಯೇ ಒಂದು ಗ್ರಂಥವನ್ನು ಬರೆದನು. ಅದು ಅದ್ಯಾರಗ್ರಂಥಾಲಯದಲ್ಲಿದೆ. 32 ಸಾಧನಗಳಿರುತ್ತವೆ. ಮನುಷ್ಯನ ಸ್ವಭಾವವು ಪಾಪವನ್ನೇ ಕೋರುವುದು. ಮಹಾಭಕ್ತನಾದ ಅಬ್ರಹಂ ಅಗ್ನಿಪ್ರವೇಶಮಾಡಲೆತ್ನಿಸಿದಾಗ ದೇವರು ಆತನನ್ನು ರಕ್ಷಿಸಿದನು. ನಮ್ಮ ಮತದ ಅನೇಕ ಜನರಿಗೆ ಭಗವದ್ದರ್ಶನವಾಗಿರುತ್ತದೆ. ಮತದ ನಿಯಮಗಳು ಬಹಳ ಕಠಿಣವಾಗಿರುತ್ತವೆ. ಉಡುಪನ್ನು ಧರಿಸುವ ಪದ್ಧತಿಯು ಬೇರೆ. ಹಿಂದುಗಳಲ್ಲಿ ದ್ವಿಜರು ಯಜ್ಞೋಪವೀತವನ್ನು ಧರಿಸುವಂತೆ ನಾವು ಪುಷ್ಪಹಾರವನ್ನು ಧರಿಸಬೇಕು. ನಮಗೂ ಮಂತ್ರವಿರುತ್ತದೆ. ಆಹಾರನಿಯಮ, ಇಂದ್ರಿಯನಿಗ್ರಹ, ವಿಧೇಯತೆ, ಆತ್ಮಶುದ್ಧಿ, ಬಾಹ್ಯಶುದ್ಧಿಯು ಸಹ ಇದ್ದೇಯಿರಬೇಕು. 10 ಪ್ರಧಾನನಿಬಂಧನಗಳು ಬೈಬಲ್ಲಿನಲ್ಲಿವೆ. ನಮಗೂ ಅವೆಯೇ ನಿಬಂಧನಗಳಲ್ಲದೆ 613 ಉಪನಿಬಂಧನಗಳೂ ಸೇರಿವೆ. ಭಗವಂತನನ್ನು ಸಂಪೂರ್ಣವಾಗಿ ಪ್ರೀತಿಸಬೇಕು. ಮನುಷ್ಯರೆಲ್ಲರನ್ನೂ ಪ್ರೀತಿಸಬೇಕು. ಪ್ರಾರ್ಥನ, ಪಶ್ಚಾತ್ತಾಪ, ಇಂದ್ರಿಯನಿಗ್ರಹ ಮೊದಲಾದವುಗಳು ಅತ್ಯಾವಶ್ಯಕವು. ದಿನದಲ್ಲಿ ಮೂರುವೇಳೆ ಪ್ರಾರ್ಥನೆಯನ್ನು ಮಾಡಬೇಕು. ಇವೇ ಮುಖ್ಯನಿಯಮಗಳು.” ಎಂದು ಸಲೇಂರವರು ಹೇಳಿದರು.

ಸಿಕ್ಕುಮತವು.

(ಪ್ರೊಫೆಸರ್ ಎಚ್. ಸಿ. ಕುಮಾರರವರ ಉಪನ್ಯಾಸ.)

ಈ ಮತಕ್ಕೆ ಗುರುನಾನಕನು ಸ್ಥಾಪಕನು. ನಾನಕಾನ ಎಂಬಲ್ಲಿ ನಾನಕನು ಜನ್ಮಿಸಿದನು. ಅಲ್ಲಿಯೇ ಈಚೆಗೆ ಘೋರವಾದ ದಾರುಣಹತ್ಯವು ನಡೆದಿರುವುದು. ನಾನಕನಿಂದಲೇ ಅದಕ್ಕೆ ನಾನಕಾನಾ ಎಂದು ಹೆಸರು. ಶ್ರೀರಾಮಾನುಜಾಚಾರ್ಯರು ಬೋಧಿಸಿದ ಭಕ್ತಿಯೇ ಮಹಾರಾಷ್ಟ್ರದಲ್ಲೂ ವ್ಯಾಪಿಸಿತು. ಅಲ್ಲಿ ತುಕಾರಾಂ ಭಕ್ತನು ಅದನ್ನು ಪ್ರಜ್ವಲಿಸಿದನು. ರಾಮಾನಂದನು ಸಂಯುಕ್ತರಾಷ್ಟ್ರದಲ್ಲಿ ಆ ಮತವನ್ನು ಪ್ರಕಾಶಪಡಿಸಿದನು. ಅಲ್ಲೇ ತುಲಸೀದಾಸನೂ ಕಬೀರದಾಸನೂ ಇದ್ದುದು. ಪಾಂಚಾಲದಲ್ಲಿ ಅದನ್ನು ಗುರುನಾನಕನು ಬೋಧಿಸಿದನು. ವಂಗರಾಷ್ಟ್ರದಲ್ಲಿ ಅದನ್ನು ಶ್ರೀ ಚೈತನ್ಯಸ್ವಾಮಿಯು ಬೋಧಿಸಿದನು. ಕಬೀರನ ಮತ್ತು ನಾನಕನ ಬೋಧನೆಯು ಒಂದೇವಿಧವಾಗಿದ್ದಿತು. ನಾನಕನಿಗೆ 500 ವರ್ಷಗಳ ಹಿಂದೆಯೇ ಮಹಮ್ಮದೀಯರು ಉತ್ತರದೇಶದಲ್ಲಿ ನೆಲಸಿದ್ದರಲ್ಲದೆ ಆಗ ಮಹಮ್ಮದೀಯ ವಿಜ್ಞಾನಕ್ಕೆ ಬಹಳ ಸಂಘರ್ಷಣವುಂಟಾಗಿದ್ದಿತು. ಅವೆರಡನ್ನೂ ಸಂಮಿಳಿತ ಮಾಡಲು ಕಬೀರನೂ ಗುರುನಾನಕನೂ ಬಹಳ ಪ್ರಯತ್ನಿಸಿದರು ಯಾವ ಮತಕ್ಕೂ ಅಗ್ರಹವಾಗದ ರೀತಿರೀತಿಯಲ್ಲಿ ಜನಸಾಮಾನ್ಯಕ್ಕೆ ಬೋಧಿಸುತ್ತಿದ್ದರು. ಜನಸಾಮಾನ್ಯಕ್ಕೆ ಸಂಸ್ಕೃತವು ಗೊತ್ತಾಗುತ್ತಿರಲಿಲ್ಲವಾದುದರಿಂದ ಗುರುನಾನಕನು ಪಂಜಾಬೀ ಭಾಷೆಯಲ್ಲಿ ಬೋಧಿಸುತ್ತಿದ್ದನು. ಆ ಬೋಧನಗಳೇ ಗುರುಗ್ರಂಥಾಸಾಹೇಬ ಎಂಬ ಹೆಸರನ್ನು ತಂದುವು. ಇತರ ದೇಶಗಳಲ್ಲಿ ಆಯಾ ಭಾಷೆಗಳಲ್ಲಿ ಕೂಡ ನಾನಕನು ಬೋಧಿಸಿದನು. ಗುರುನಾನಕನು ಭಾರತದೇಶದ ಕಾಶ್ಮೀರ, ಸಿಂಹಳ, ಅಸಾಂ, ಸಿಂಧು ಮೊದಲಾದ ಭಾಗಗಳಲ್ಲೇ ಅಲ್ಲದೆ ಪಾರ್ಶಿಯ, ಅರೇಬಿಯಾ, ಟರ್ಕಿ, ಚೈನಾ ಮೊದಲಾದ ವಿದೇಶದಲ್ಲು ಕೂಡ 15 ನೆಯ ಶತಾಬ್ದದಲ್ಲಿ ಹೋಗಿದ್ದನು. ಬಾಗ್ದಾದಿನಲ್ಲಿ ಈಗಲೂ ದೇವಾಲಯವಿದೆ. ಆತನು ಕಾನ್‌ಸ್ಟಾಂಟಿನೋಪಲಿಗೂ ಹೋಗಿದ್ದನು. ಆತನು ಹೊಸದಾಗಿ ಯಾವ ಸಿದ್ಧಾಂತವನ್ನೂ ಕಂಡುಹಿಡಿಯಲಿಲ್ಲವು. ಅವರಿಗೆ ವಾಡಿಕೆಯಲ್ಲಿದ್ದ ಸಿದ್ಧಾಂತವೆಲ್ಲವೂ ಸತ್ಯವೆಂದೇ ಸ್ಪಷ್ಟವಾಗಿ ತೋರಿಸಿಕೊಡುತ್ತಿದ್ದನು. ಆಗ ಹಿಂದುಗಳಿಗೂ ಮಹಮ್ಮದೀಯರಿಗೂ ವಿರೋಧವು ಬಹಳ ಹೆಚ್ಚಾಗಿದ್ದಿತು, ಆದುಕಾರಣ ಅದನ್ನು ಹೋಗಲಾಡಿಸಿ ಮೈತ್ರಿಯನ್ನುಂಟುಮಾಡಲು ಗುರುನಾನಕನು ಪ್ರಯತ್ನಿಸಿದನು. ಮೂಢಾಚಾರವನ್ನು ತೊಲಗಿಸುವುದರಲ್ಲಿ ಯಾರ ಮನಸ್ಸಿಗೂ ಬೇಸರವನ್ನುಂಟುಮಾಡುತ್ತಿರಲಿಲ್ಲ. ಪುಣ್ಯಕ್ಷೇತ್ರದರ್ಶನ, ಪುಣ್ಯನದೀ ಸ್ನಾನ, ಪೂಜೆ, ಪ್ರಾರ್ಥನ ಮೊದಲಾದುವು ಮುಕ್ತಿಗೆ ಉತ್ತಮಸಾಧನವು. ನರಕಕ್ಕೂ ಮರಣಕ್ಕೂ ಯಾರೂ ಭಯಪಡಬೇಕಾದುದು [illegible]. ಭಗವಂತನ [illegible] ಯೂ, ಸಂಚಿತವೂ, ಬ್ರಹ್ಮಾದಿ ಸಕಲ ದೇವತೆಗಳೂ ಭಯಕ್ಕೆ ವಶರಾದವರೇ. ಭಗವದನುಗ್ರಹಕ್ಕೆ ಪಾತ್ರರಾದವರು ಮಾತ್ರ ನಿರ್ಭೀತರಾಗಿರುವರು.” ಎಂದು ನಾನಕನು ಬೋಧಿಸಿದನು. ಗ್ರಂಥಸಾಹೇಬದಲ್ಲಿ ಸೂತ್ರಗಳೂ ಶ್ಲೋಕಗಳೂ ಇಲ್ಲವು. ಭಾವಗರ್ಭಿತವಾದ ಕೀರ್ತನಗಳೇ ಇವೆ. ಗ್ರಂಥಸಾಹೇಬದಲ್ಲಿ ಕಬೀರ ರಾಮಾನಂದಾದಿ ಭಕ್ತರ ಕೀರ್ತನವೂ ಇತರ ಸಿಕ್ಕರ ಕೀರ್ತನಗಳೂ ಇರುತ್ತವೆ. ನರಕಕ್ಕೂ ಮರಣಕ್ಕೂ ಭಯಪಡದಿರುವುದೇ ಮುಕ್ತಿ. ಭಗವಂತನ ಇಚ್ಛೆಯನ್ನು ಅನುಸರಿಸಿದ ಮಾಯೆಯೂ ಅಜ್ಞಾನವೂ ನಾಶವಾಗುವುವು. ಸತ್ಸಂಘ, ಸದ್ಗುರು, ಸನ್ಮಂತ್ರ ಈ ಮೂರು ಮುಕ್ತಿಸಾಧನಗಳು. ಇವುಗಳಿಂದಲೇ ನಾವು ಸತನಂತರಾಗುವುದು. ಭಗವಂತನಿಗೆ ಆತ್ಮಸಮರ್ಪಣಮಾಡಬೇಕೆಂದು ನಾನಕನು ಬೋಧಿಸಿದನು. ಅದನ್ನೇ ಗೀತೆಯಲ್ಲಿ ಶ್ರೀಕೃಷ್ಣಭಗವಂತನೂ, ಏಸುಕ್ರಿಸ್ತನೂ, ಮಹಮ್ಮದನೂ ಬೋಧಿಸಿರುವರು. ಭಗವಂತನು ದಯಾಮಯನೆಂದು ಎಲ್ಲ ಮತಗಳೂ ಬೋಧಿಸುವುವು. ಭಗವಂತನು ಪತಿಯೆಂದೂ, ಭಕ್ತನು ಪತ್ನಿಯೆಂದೂ ನಾನಕನು ಭಾವಿಸಿ ಆರೀತಿಯಾಗಿ ಅನುಸಂಧಾನಮಾಡಿ ಭಗವಂತನನ್ನು ಪ್ರಾರ್ಥಿಸುತ್ತಿದ್ದನಲ್ಲದೆ ಪ್ರಾರ್ಥನೆಯೇ ಮುಕ್ತಿಗೆ ಮುಖ್ಯಸಾಧನವೆಂದು ನಾನಕನು ಬೋಧಿಸಿದನು. ಶ್ರೀವೈಷ್ಣವಮತದಲ್ಲಿಯ ಭಕ್ತಿಪ್ರಪತ್ತಿಗಳನ್ನೇ ನಾನಕನು ಬೋಧಿಸುತ್ತಿದ್ದನು. ಭಗವಂತನು ಸರ್ವಶಕ್ತನು, ಸರ್ವಾಂತರ್ಯಾಮಿ ಸರ್ವನಿಯಾಮಕ ಎಂದು ನಾನಕನು ಸಿದ್ಧಿಯನ್ನು ಹೊಂದಿದಮೇಲೆ ನಾಂಧಾರೀಗಳೂ ಉದಾಸೀನರುಗಳೂ ಏರ್ಪಟ್ಟರು. 10 ನೇ ಗುರುವಾದ ಗುರುಗೋವಿಂದನಿಂದ ಅಕಾಲಿಗಳು ಏರ್ಪಟ್ಟರು. ನಾನಕನು ತನ್ನ ಮಕ್ಕಳಿಗೆ ಮತಾಧಿಕಾರವನ್ನು ಕೊಡದೆ ಶಿಷ್ಯರಿಗೆ ಕೊಟ್ಟುದರಿಂದ, ನಾನಕನ ಮಕ್ಕಳು ಉದಾಸೀನಮತವನ್ನೇರ್ಪಡಿಸಿದರು. ಅಕಾಲಿಗಳಿಗೆ 5 ಲಕ್ಷಣಗಳುಂಟು. ಅವರು ಸಂಸ್ಕರ್ತರು; ನಾಂಧಾರಿಗಳು; ಗೃಹಸ್ಥರು. ಉದಾಸೀನರು ವಿರಾಗಿಗಳು. ಅಕಾಲಿಗಳು ಶಾಖಾಹಾರಿಗಳಾದುದರಿಂದ ಗ್ರಂಥಸಾಹೇಬುಹಿಂಸೆಯನ್ನು ಪೂರ್ತಿಯಾಗಿ ನಿರೋಧಿಸಿದನು. ಸ್ವರ್ಣದೇವಾಲಯದಲ್ಲಿ 24 ಗಂಟೆಯಲ್ಲೂ ಸಂಕೀರ್ತನವಾಗುತ್ತಲೇ ಇರುತ್ತದೆ. ಗೃಹಸ್ಥರು ಪ್ರಾತಃಕಾಲದಲ್ಲೂ, ಸಾಯಂಕಾಲದಲ್ಲೂ, ಮಲಗುವಾಗಲೂ ದೇವರಪ್ರಾರ್ಥನೆಯನ್ನು ಮಾಡಬೇಕು; ದೇವಾಲಯಕ್ಕೆ ಹೋಗಬೇಕು. ವಿವಾಹವಿಧಿಯಲ್ಲಿ ಗಂಡಹೆಂಡಿರು ಗ್ರಂಥಸಾಹೇಬಗೆ ಪ್ರದಕ್ಷಿಣೆಮಾಡುವುದೇ ವಿವಾಹವು. ಪೂಜಾರಿಗಳು ಗ್ರಂಥಿಗಳೆಂದು ಕರೆಯಲ್ಪಡುವರು. ಸತ್ತವರು ದಹನಮಾಡಲ್ಪಡುವರು. ಯಜ್ಞೋಪವೀತವಿಲ್ಲವು. ಹೋಮವಿಲ್ಲವು. (ಸಶೇಷ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಬಿನಕನಹಳ್ಳಿಯಲ್ಲಾದ ಮಹದೇಶ್ವರಸ್ವಾಮಿಜಾತ್ರೆ.

ಶ್ರೀ ಜಗದ್ಗುರು ಜಯದೇವಮುರುಘರಾಜೇಂದ್ರಮಹಾಸ್ವಾಮಿಗಳ ಕೃಪಾಪಾತ್ರರಾದ ಚಿತ್ರದುರ್ಗದ ತಾ|| ಹಿರೇಗುಂಟನೂರು ಹೋಬಳಿ ಬಿನಕನಹಳ್ಳಿಗ್ರಾಮದ ವೀರಶೈವಪ್ರಮುಖಮಂಡಳಿಯವರು ಕಳೆದ ಮಾರ್ಗಶಿರ ಬಹುಳ 14 ನೇ ಸೋಮವಾರ ರಾತ್ರಿ ಸೊಂಡೇಕೊಳದ ಶ್ರೀ ವೀರಭದ್ರದೇವರನ್ನೂ, ಹುಲ್ಲೂರ್ ಶ್ರೀ ವೀರಭದ್ರದೇವರನ್ನೂ ಬರಮಾಡಿಕೊಂಡು ಸಾಯಂಕಾಲ 7 ಘಂಟೆಗೆ ಶ್ರೀ ದೇವರುಗಳ ಉತ್ಸವಗಳನ್ನು ಹೊರಡಿಸಿ, ನಂದೀಧ್ವಜ, ಕರಡಿಸಮ್ಮೇಳವಾದ್ಯಗಳೊಡನೆ ಮಹಾವೈಭವದಿಂದ ಮದ್ದುವಗೈರೆ ಸುಡುತ್ತ ಅಟ್ಟಹಾಸದಿಂದ ಮೆರವಣಿಗೆಯನ್ನು ಬೆಳಿಗ್ಗೆ 4 ಘಂಟೆಯವರಿಗೆ ಮಾಡಿ ಶ್ರೀಮಹದೇಶ್ವರನನ್ನು ಮಂಟಪಕ್ಕೆ ಬಿಜಯಂಗೈದು ಶ್ರೀ ಮಹಾಮಹದೇಶ್ವರನೂತನಪ್ರತಿಷ್ಠಾ ಅಭಿಷೇಕ ಪೂಜಾಮಹೋತ್ಸವವನ್ನು ಶಾಸ್ತ್ರರೀತಿಯಾಗಿ ನಡೆಯಿಸಿ, ತತ್‌ಶಾಂತಿಗಾಗಿ ಡಿಸೆಂಬರ್ ತಾ|| 15ನೇ ಮಂಗಳವಾರ ಬೆಳಿಗ್ಗೆ 7 ರಿಂದ ಸಾಯಂಕಾಲ 7 ಘಂಟೆವರೆಗೆ ಸಾವಿರಾರು ಭಕ್ತಮಹೇಶ್ವರರ ಆರಾಧನೆ ನಡೆಸಲ್ಪಟ್ಟಿತು. ಈ ಮಹಾಕಾರ್ಯಕ್ಕೆ ವಿಘ್ನವನ್ನಾಚರಿಸಲು ಹೊರಟ ಕೆಲವುಜನ ವೀರಶೈವಭಕ್ತರ ಅಡಚಣೆಯು ಶ್ರೀ ಮುರುಘೇಶನ ಕೃಪಾಬಲದಿಂದ ದೂರವಾಗಿ ಆ ಕಾರ್ಯವು ನಿರ್ವಿಘ್ನವಾಗಿ ನಡೆಸಲ್ಪಟ್ಟಿತು. ಈ ಮಹತ್ಕಾರ್ಯವನ್ನು ನಡೆಯಿಸಲು ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಮಹಾಶ್ರಮವನ್ನು ವಹಿಸಿಕೊಂಡು ಆದಿಯಿಂದಲೂ ಕಾರ್ಯದರ್ಶಿಗಳಾಗಿದ್ದ ವೇ|| ಮುರಿನ ಗುರುಪಾದಯ್ಯನವರು, ವಿಲೇಜ್ ಪಂಚಾಯಿತ ಮೆಂಬರು ಮ|| ಗುರುಪಾದಪ್ಪಗೌಡರವರು, ಮ|| ಎಲಿಮರಿಗಪ್ಪಗೌಡರು, ಸಾಹುಕಾರ್ ದುರ್ಗದ ಸಿದ್ಧಪ್ಪನವರು, ಮ|| ಯಜಮಾನ್ ನಂದೀ ಬಸಪ್ಪಗೌಡರವರು, ಮಾನಂಗಿ ಹನುಮಪ್ಪಗೌಡರು ಮೊದಲಾದ ವೀರಶೈವಪ್ರಮುಖರಿಗೆ ಶ್ರೀ ಜಗದ್ಗುರುಮುರುಘೇಶನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುವ,

ದೈವಭಕ್ತ.

ದೇವಸ್ಥಾನಜೀರ್ಣೋದ್ಧಾರ.

ಬೆಂಗಳೂರು ಡಿ|| ನೆಲಮಂಗಲದ ತಾ|| ಮದಲಕೋಟೆಗ್ರಾಮದಲ್ಲಿ ಬಹಳ ದಿವಸದಿಂದಲೂ ಶಿಥಿಲವಾಗಿದ್ದ ಶ್ರೀಗೋಪಾಲಕೃಷ್ಣಸ್ವಾಮಿದೇವಸ್ಥಾನವನ್ನು ಡಿಟೋ ಗ್ರಾಮದ ನಿರೇತಿಮ್ಮಯ್ಯನ ಮಗ ರಾ|| ಕೆಂಪರಂಗಯ್ಯನವರು ಕೇವಲ ಧನಿಕರಲ್ಲದಿದ್ದಾಗ್ಯೂ ಮುಕ್ತಿಮಾರ್ಗಾವಲಂಬಿಯಾಗಿ ಭಕ್ತಿಪುರಸ್ಸರವಾದ ಧರ್ಮಕಾರ್ಯದಲ್ಲಿ ಪ್ರವರ್ತಕರಾಗಿ ಮೇಲ್ಕಂಡ ಗೋಪಾಲಕೃಷ್ಣಸ್ವಾಮಿದೇವಸ್ಥಾನವನ್ನು ಮುಜರಾಯಿ ಸರಕಾರದವರ ಅಪ್ಪಣೆ ಪಡೆದು 1,500 ರೂಪಾಯಿಗಳವರಿವಿಗೆ ಕಾಮಗಾರಿಯನ್ನು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿ ನಮ್ಮನ್ನಾಳುವ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಮತ್ತು ನಮ್ಮ ಮೈಸೂರು ಶ್ರೀಮನ್ಮಹಾರಾಜಸಾಹೇಬ್ ಬಹದ್ದೂರ್‌ರವರ ಶ್ರೇಯಸ್ಸಾಪ್ರಾರ್ಥನೆಗೆ ಆಕರವಾಗಿರುವಂತೆ ಸಲೀಸು ದೇವರಸೇವೆಯನ್ನು ನಡಿಸುತ್ತಾ ಇರುತ್ತಾರೆ. ಇದೇ ವಿಚಾರದಲ್ಲಿ ಡಿಟೋ ಮದಲುಕೋಟೆ ಅಜುಬಾಜು ಗ್ರಾಮಸ್ಥರು ಇವರಿಗೆ ತಕ್ಕ ಬಹುಮಾನವನ್ನು ಸರ್ಕಾರದವರು ಅಪ್ಪಣೆ ಕೊಡಿಸಬೇಕೆಂದು ತಾಲ್ಲೂಕಿಗು ಮತ್ತು ಹುಜೂರಿಗು ವಿಜ್ಞಾಪನೆಮಾಡಿಕೊಂಡಿರುತ್ತಾರೆ. ಇದೂ ಅಲ್ಲದೆ ಸದರಿ ತಾಲ್ಲೂಕು ಅಮಲ್ದಾರ್‌ಸ್ವಾಮಿಯವರಾದ ಮತ್ತು ಪ್ರಜಾಹಿತಚಿಂತಕರಾದ ಮ|| ಕೃಷ್ಣರಾಯರವರು ಮತ್ತು ತಾಲ್ಲೂಕು ವೈಸ್‌ಪ್ರೆಸಿಡೆಂಟ್ ಮ|| ಸಿನರಹರಯ್ಯನವರು ಈ ವಿಚಾರದಲ್ಲಿ ಗಮನಕೊಟ್ಟು ಮೇಲ್ಕಂಡ ಕೆಂಪರಂಗಯ್ಯನಂಟವರನ್ನು ಪ್ರೋತ್ಸಾಹಿಸಿ ಸ್ಕಾಲರ್‌ಶಿಪ್ಪಿನ ವಗೈರೆ ಇನ್ನೂ ಧರ್ಮಕಾರ್ಯಗಳನ್ನು ಮಾಡುವುದರಲ್ಲಿ ತೃಪ್ತಿಕರವಾದ ಮನಸ್ಸು ಕೊಡುವಂತೆ ಶ್ರೀಮನ್ಮಹಾರಾಜ ಸರ್ಕಾರಕ್ಕೆ ಶಿಫಾರ್ಸು ಮಾಡುವವರಾಗಿರುವರೆಂದು ವರ್ತಮಾನವಿದೆ. ಈರೀತಿ ಧರ್ಮಕಾರ್ಯವನ್ನು ಮಾಡಿದವರಿಗೆ ಶ್ರೀಮನ್ಮಹಾರಾಜರವರ ಘನಸರ್ಕಾರದವರು ಪ್ರೋತ್ಸಾಹಕೊಟ್ಟಲ್ಲಿ ಇತರರೂ ಧರ್ಮಕಾರ್ಯಾಸಕ್ತರಾಗಲು ಪ್ರೋತ್ಸಾಹಿಸಿದಂತಾಗುತ್ತದೆ ಪ್ರಯುಕ್ತ ಸ್ಥಳಾಧಿಕಾರಿಗಳು ಕೆಂಪಯ್ಯನವರ ವಿಚಾರದಲ್ಲಿ ಅವರಿಗೆ ಶಿಫಾರ್ಸು ಮಾಡುವುದಕ್ಕಲ್ಲಿ ಮುಂದಾದರೂ ಮಾಡುವರೆಂದು ಅಪೇಕ್ಷಿಸುವೆ,

ಧರ್ಮಾಭಿಮಾನಿ.

ಕಾರಣವನ್ನು ತಿಳಿಸುವರೆ?

ತಾ|| 7-11-25 ನೇ ಸ್ಟಾರ್ ಪತ್ರಿಕೆಯಲ್ಲಿ “ ವೀರಶೈವತರುಣರಸಂಘದ ಪ್ರೋತ್ಸಾಹದಿಂದ ನಿಯಮಿಸಲ್ಪಟ್ಟಿದ್ದ ಮ|| ಕುಪ್ಪಯ್ಯಶಾಸ್ತ್ರಿಗಳು ತಾವು ಕೈಕೊಂಡ ಕೆಲಸವನ್ನು ಶ್ರದ್ಧಾಭಿಮಾನದಿಂದ ಮಾಡಲಿಲ್ಲವಾದುದರಿಂದಲೂ, ಹಣದ ಕೊರತೆಯಿಂದಲೂ ಅವರನ್ನು ಆ ಉದ್ಯೋಗದಿಂದ ತಪ್ಪಿಸಲ್ಪಟ್ಟಿರುವುದಾಗಿ ಸಂಘಾಧ್ಯಕ್ಷರು ತಿಳಿಸಿರುತ್ತಾರೆ” ಎಂಬ ಪ್ರಕಟನೆಯನ್ನು ತಾವು ಓದಿರಬಹುದು. ಸಂಘಾಧ್ಯಕ್ಷರಾದ ಮ|| ಜಿ. ರುದ್ರಪ್ಪನವರು ಈ ಸ್ಟಾರ್‌ಪತ್ರಿಕಾಕರ್ತರಿಗೆ ಕಳುಹಿಸಿರುವ ಮೇಲ್ಕಂಡ ತಿಳುವಳಿಕೆಯು ನಡೆದ ನಡೆವಳಿಕೆಯನ್ನು ಯಥಾರ್ಥವಾಗಿ ತಿಳಿಸದೆ ಇರುವುದರಿಂದಲೂ, ಸದರಿ ಪ್ರಕಟನೆಯಲ್ಲಿರುವ ವಿಷಯಗಳನ್ನು ನಾನು ಉಪೇಕ್ಷಿಸಿದ್ದರೂ ಕೆಲವುಮಂದಿ ಹಿತಚಿಂತಕರು “ ಇದರ ಯಾಥಾರ್ಥವನ್ನು ಪ್ರಕಟಿಸಿ” ರೆಂದು ನನಗೆ ಸೂಚಿಸಿದ್ದರಿಂದಲೂ ನಡೆದ ವಿದ್ಯಮಾನವನ್ನು ಸುಹೃದಯವಾಚಕವೃಂದದ ಮುಂದಿಟ್ಟಿರುವೆನು. ಮ|| ಜಿ. ರುದ್ರಪ್ಪನವರು ನಾನು “ ಶ್ರದ್ಧಾಭಿಮಾನದಿಂದ ಕೆಲಸಮಾಡಲಿಲ್ಲ” ವೆಂದು ಬರೆದಿರುತ್ತಾರೆ. ಆವರು ಈರೀತಿ ಬರೆಯಲಿಕ್ಕೆ ಕಂಡ ಅಥವಾ ಊಹಿಸಿದ ಕಾರಣಗಳನ್ನು ಮಾತ್ರ ಪ್ರಕಟಿಸಿಲ್ಲ. ಕಾರಣವಿಲ್ಲದೆ ಕಾರ್ಯವಿಲ್ಲ. ಕಾರಣವಿಲ್ಲದೆ ಬೇರೊಬ್ಬರ ಮರ್ಯಾದೆಗೆ ಭಂಗಬರುವಂತಹ ಮಾತನ್ನು ಆಡುವುದಾಗಲಿ ಬರೆಯುವುದಾಗಲಿ ಯುಕ್ತವಲ್ಲ. ಈಗಲು ನಾನು ಕೆಲಸವನ್ನು ತೃಪ್ತಿಕರವಾಗಿ ಮಾಡಲಿಲ್ಲವೆಂದು ಅವರು ಊಹಿಸಿರುವ ಕಾರಣಗಳನ್ನು ಪ್ರಕಟಿಸಿದರೆ ಅವಕ್ಕೆ ಸದುತ್ತರಗಳನ್ನು ಕೊಡಲು ಸಿದ್ಧನಾಗಿರುತ್ತೇನೆ. ಇದಲ್ಲದೆ “ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟಿದೆ” ಎಂದೂ ಬರೆದಿರುವರು. ನಾನು ಸ್ಕೂಲುಮಾಸ್ಟರು ಕೆಲಸದಲ್ಲಿದ್ದಾಗ ಮ|| ರುದ್ರಪ್ಪನವರು ನನ್ನನ್ನು ನೋಡಿದಾಗಲೆಲ್ಲಾ “ ನೀವು ಈ ಕೆಲಸವನ್ನು ಕೈಕೊಳ್ಳಿ ನಾನು ನಿಮಗೆ ಪ್ರತಿತಿಂಗಳಿಗೂ ಆಗುವ ಸಂಬಳ ಮತ್ತು ಪ್ರಯಾಣದ ವೆಚ್ಚಗಳನ್ನು ಕೊಡುತ್ತೇನೆ. ಅಲ್ಲದೆ ಕೆಲಸವು ಒಂದುವರ್ಷದವರೆಗಾದರೂ ನಿರ್ವಿಘ್ನವಾಗಿ ನಡೆಯುವಂತೆ ಏರ್ಪಡಿಸುತ್ತೇನೆ” ಇತ್ಯಾದಿ ಯಾಗಿ ಹೇಳಿ ನನಗೆ ನಂಬಿಕೆಯನ್ನುಂಟುಮಾಡಿ ಕಡೆಗೆ ನನ್ನ ಕೆಲಸಕ್ಕೆ ರಾಜೀನಾಮೆಕೊಡುವಂತೆ ಪ್ರೋತ್ಸಾಹಿಸಿದರು. ಆಮೇಲೆ ಒಂದು ತಿಂಗಳು ವ್ಯರ್ಥ ಕಾಲಹರಣವಾಯಿತು. ಅನಂತರ ಕೆಲಸಕ್ಕೆ ಪ್ರಾರಂಭಿಸಿದ 3 ತಿಂಗಳುಗಳೊಳಗಾಗಿ ನನ್ನ ಸಂಬಳ ಹಾಗೂ ಪ್ರಯಾಣದ ವೆಚ್ಚ ಇವುಗಳನ್ನು ಕ್ರಮವಾಗಿ ಕೊಡದೆ ನನ್ನ ಕೆಲಸಕ್ಕೆ ತೊಂದರೆಯನ್ನೂ ಮನಸ್ಸಿಗೆ ಸಂಕಟವನ್ನೂ ಉಂಟುಮಾಡಿದುದರಿಂದ ನಾನೇ ಕೆಲಸಕ್ಕೆ ರಾಜೀನಾಮೆ ಬರೆದುಕೊಟ್ಟು ನನ್ನ ಸ್ವತಂತ್ರವಾಗಿಯೇ ಯಥಾಪ್ರಕಾರ ಗ್ರಾಮಾಂತರಗಳಲ್ಲಿ ಉಪನ್ಯಾಸ ಹಾಗೂ ಕೀರ್ತನೆಗಳನ್ನು ಮಾಡುತ್ತಿರುವೆನು. ನಾನು ರಾಜೀನಾಮೆಯನ್ನು ಬರೆದುಕೊಟ್ಟಿರುವುದನ್ನು ಇವರ ಮಿತ್ರರನೇಕರೂ ಬಲ್ಲರು. ವಿಷಯವು ಹೀಗಿರುವಾಗ “ ಉದ್ಯೋಗದಿಂದ ತಪ್ಪಿಸಲ್ಪಟ್ಟಿದೆ” ಎಂದು ಇವರು ಬರೆದಿರುವುದು ಆಶ್ಚರ್ಯವನ್ನುಂಟುಮಾಡುತ್ತಿರುವುದು. ನಾನು ಸಂಚರಿಸಿದ ಸ್ಥಳಗಳಲ್ಲಿ ಮಾಡುತ್ತಿದ್ದ ಕೆಲಸದ ವಿಚಾರವನ್ನು ಅಲ್ಲಿಯ ಪ್ರಮುಖಜನರಿಗೆ ಬರೆದು ತಿಳಿದುಕೊಂಡು ಅನಂತರ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದರೆ ಸಮಂಜಸವಾಗಿತ್ತು. ಹಾಗಲ್ಲದೆ ನಾನು ಕೈಕೊಂಡ ಕೆಲಸಮಾಡಲಿಲ್ಲವಾಗಿ ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟಿರುತ್ತೇನೆಂದು ಮ|| ರುದ್ರಪ್ಪನವರು ಪತ್ರಿಕೆಯಲ್ಲಿ ಪ್ರಕಟಿಸಿರುವುದು ಯುಕ್ತವಾದುದಲ್ಲ. ಇದರಿಂದ ನನ್ನ ವಿಚಾರದಲ್ಲಿ ಜನರಿಗೆ ದುರಭಿಪ್ರಾಯ ಹುಟ್ಟುವುದರಿಂದ ಈಗಲಾದರೂ ಮ|| ರುದ್ರಪ್ಪನವರು ನನ್ನ ವಿಚಾರವಾಗಿ ತಾವು ಪ್ರಕಟಿಸಿರುವುದರ ಕಾರಣವನ್ನು ತಿಳಿಸುವವರಾಗಬೇಕು.

ಕೀರ್ತನಕಾರ ಬಿ. ಶಿವಮೂರ್ತಿಶಾಸ್ತ್ರಿ
ಉರುಫ್ ಬಿ. ಕುಪ್ಪಯ್ಯಶಾಸ್ತ್ರಿ, ತುಂಕೂರು.

ಬಳ್ಳಾರಿವೀರಶೈವತರುಣರಸಂಘದ ವಾಚನಾಲಯಸ್ಥಾಪನೆ.

ತಾ|| 20-12-25 ರ ಸಾಯಂಕಾಲ ಬಳ್ಳಾರಿಯಲ್ಲಿ ಶ್ರೀ ಪ್ಯಾಟಿ ಬಸವೇಶ್ವರದೇವಾಲಯದ ಪಕ್ಕದಲ್ಲಿರುವ ವೀರಶೈವತರುಣಸಂಘದ ಹಾಲಿನಲ್ಲಿ ಟ್ರೆಜರಿ ಡೆಪ್ಯುಟಿ ಕಲೆಕ್ಟರ್ ಮ|| ಭೋಗಶೆಟ್ಟರ ಬಸಪ್ಪನವರ ಅಧ್ಯಕ್ಷತೆಯಲ್ಲಿ ವಾಚನಾಲಯದ ಸ್ಥಾಪನೋತ್ಸವವು ನಡೆಯಿತು. ಸಮಾರಂಭಕ್ಕೆ ಅನೇಕ ವಕೀಲರು, ಶಾಸ್ತ್ರಿಗಳು, ವರ್ತಕಮಂಡಲಿಯವರು ಮತ್ತು ವಿದ್ಯಾರ್ಥಿಗಳು ಆಗಮಿಸಿದ್ದರು. ಈ ಸಂಘದ ಪ್ರೆಸಿಡೆಂಟರಾದ ಮ|| ಟಿ. ಯಚ್. ಎಂ. ಚಂದ್ರಶೇಖರಶಾಸ್ತ್ರಿ, ಬಿ.ಎ.,ಬಿ ಎಲ್. ಇವರೂ ಉತ್ಸಾಹಿ ತರುಣರೂ ಕೂಡಿ ಸಮಾಜಸೇವೆಯ ಒಳ್ಳೇ ಕೆಲಸಗಳನ್ನು ಮಾಡುತ್ತಾ ಇದ್ದು ಈಗ್ಗೆ ಕೆಲವು ದಿವಸಗಳ ಹಿಂದೆ ಇಲ್ಲಿಗೆ ಬಂದು ಅನೇಕ ಜನರ ಮೆಚ್ಚಿಗೆಗೆ ಪಾತ್ರರಾದ ವಿನೋದರತ್ನಾಕರ ಮ|| ವೀರಣ್ಣನವರಿಂದ 319 ರೂ. ಈ ಸಂಘದ ವಾಚನಾಲಯಕ್ಕೆ ಕೊಡಿಸಿದರು. ಇಲ್ಲಿ ಕೆಲವು ಮಹಾಜನರು ಕೆಲವು ಗ್ರಂಥಗಳನ್ನೂ, ಕೆಲವುಜನರು ವರ್ಗಣಿ ಚಂದಾ ಹಣವನ್ನೂ ಕೊಟ್ಟು ಪ್ರೋತ್ಸಾಹಿಸುತ್ತಾ ಇರುತ್ತಾರೆ. ಈ ಸಂಘದ ವಾಚನಾಲಯದಲ್ಲಿ ಈಗ ಸುಮಾರು 300 ಗ್ರಂಥಗಳು ಇರುತ್ತವೆ. ಈ ವಾಚನಾಲಯಕ್ಕೆ 5 ಕನ್ನಡ ವಾರಪತ್ರಿಕೆಗಳೂ, 3 ಕನ್ನಡ ಮಾಸಪತ್ರಿಕೆಗಳೂ ಬರುತ್ತವೆ. ಈ ಸಮಾರಂಭದ ಕಾಲಕ್ಕೆ ಮೊದಲು ದೇವಪ್ರಾರ್ಥನೆಯಾದಮೇಲೆ ಮ|| ಡಿಪ್ಯುಟಿಕಲೆಕ್ಟರ್ ಬಸಪ್ಪನವರು ವಾಚನಾಲಯವನ್ನು ಪ್ರಾರಂಭಿಸಿರುವೆನೆಂದು ಹೇಳಿದರು. ಈ ಸಂಘದ ಪ್ರೆಸಿಡೆಂಟರು ಕಾರ್ಯನಿರ್ವಾಹಕವರದಿಯನ್ನು ಓದಿ ಹೇಳಿದರು. ತದನಂತರ ಮ|| ಎಂ. ಎಚ್. ಎಂ. ನಂಜುಂಡಯ್ಯ, ಬಿ.ಎ., ಇವರು ವಾಚನಾಲಯಗಳು ಪುಸ್ತಕಭಾಂಡಾಗಾರದಿಂದ ಕೂಡಿ ವರ್ತಮಾನಪತ್ರಿಕೆ ಮಾಸಪತ್ರಿಕೆ ಮುಂತಾದವುಗಳನ್ನು ಒಳಗೊಂಡು ವಾಚಕರಿಗೆ ವಿಷಯಸಂಗ್ರಹಗಳನ್ನು ಹೆಚ್ಚಿಸಿ ಜ್ಞಾನೋದಯವನ್ನು ಉಂಟುಮಾಡುತ್ತವೆಂತಲೂ, ಜ್ಞಾನವೇ ಮನುಷ್ಯರಿಗೆ ಒಂದುತರಹದ ಚೈತನ್ಯವೆಂತಲೂ ಪ್ರತಿಯೊಬ್ಬನೂ ವಾಚನಾಲಯಗಳ ಉಪಯೋಗವನ್ನು ಮಾಡಿಕೊಂಡೇ ತರಬೇಕೆಂದೂ ಹೇಳಿ ಈ ವಿಷಯವನ್ನು ಪೂರೈಸಿಗೊಳಿಸಿದನಂತರ ವೀರಶೈವಸಮಾಜಸುಧಾರಣೆಗೆ ವಿದ್ಯಾಪ್ರಸಾರವೇ ಅವಶ್ಯಕವಾಗಿ ಇರುತ್ತದೆಂದು ಹೇಳಿದರು. ಕಡೆಗೆ ಮದ್ರಾಸು ಇಲಾಖೆಯಲ್ಲಿ ನಡೆಯುವ ವೀರಶೈವತರುಣರ ಸಮ್ಮೇಲನವು ಈ ವರ್ಷದಲ್ಲಿ ಇಲ್ಲಿ ನಡೆಯುವದು ಅತ್ಯಾವಶ್ಯಕವೆಂದು ಹೇಳಿ ತಮ್ಮ ಸ್ಥಾನವನ್ನು ಸ್ವೀಕರಿಸಿದರು. ತದನಂತರ ವೇ|| ನಾಗೇಶಶಾಸ್ತ್ರಿಗಳು ಮತ್ತು ವೇ|| ಪಿ. ಯಂ. ಮುರಿನಾಥಶಾಸ್ತ್ರಿಗಳು ವಾಚನಾಲಯದಿಂದ ಉಂಟಾಗುವ ಪ್ರಯೋಜನವನ್ನು ಹೇಳಿದರು. ಸಂಘದ ಪ್ರೆಸಿಡೆಂಟರಾದ ವೇ|| ಯಚ್. ಯಂ. ಚಂದ್ರಶೇಖರಶಾಸ್ತ್ರಿಗಳು ಕರ್ನಾಟಕದ ಏಕೀಕರಣಕ್ಕೆ ವೀರಶೈವರು ಪ್ರಯತ್ನಮಾಡಬೇಕೆಂತ ಹೇಳಿದಮೇಲೆ ಕಾರ್ಯದರ್ಶಿಯಾದ ಕವಿತಾಳದ ತ್ಯಾಂಕರುದ್ರಪ್ಪನವರು ಎಲ್ಲಾ ತರುಣರಿಗೆ ಉತ್ತೇಜನಕಾರುವ ಹಾಗೆ ಮಾತಾಡಿದರು. ಸಭಾಧ್ಯಕ್ಷರು ತಾವು ಆಂಧ್ರದೇಶದಲ್ಲಿ ಇದ್ದು ಬಹಳ ಕನ್ನಡಮಾತನಾಡಲಿಕ್ಕೆ ಹೆಚ್ಚು ಪರಿಶ್ರಮವಿಲ್ಲದಿದ್ದರೂ ಉತ್ಸಾಹದಿಂದ ಬರುವ ವರ್ಷದೊಳಗಾಗಿ ಚೆನ್ನಾಗಿ ಭಾಷಣವನ್ನು ಮಾಡುವೆನೆಂದು ತಿಳಿಸಿ ವಾಚನಾಲಯದ ಉಪಯೋಗದಲ್ಲಿ ಹೆಚ್ಚಿಗೆ ಇರುವುದೆಂದು [illegible] ಪ್ರೋತ್ಸಾಹಿಸಿದರಾಗಿ [illegible].

ಜಡೆಮ್ಮರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಕೆ. ಶಾಂತರುದ್ರಪ್ಪ, ಸೆಕ್ರೆಟರಿ,
ವೀರಶೈವತರುಣಸಂಘ, ಬಳ್ಳಾರಿ.

ಕಾನಕಾನಹಳ್ಳಿಯ ಪೋಲೀಸುಅಧಿಕಾರಿಗಳ ಬಗೆ.

ತಾ॥ 26-12-25 ನೇ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಮ॥ ಕೆ. ನಾರಾಯಣಸ್ವಾಮಿಅಯ್ಯರ್‌ರವರು ಕಾನಕಾನಹಳ್ಳಿ ಪೋಲೀಸು ಇನ್‌ಸ್ಪೆಕ್ಟರವರನ್ನೂ ತಾಲ್ಲೂಕು ಅಮಲ್ದಾರರವರನ್ನೂ ಫೇಟ್‌ಸನ್ಯಾಸಿಗಳೆಂದು ಹೊಗಳಿರುವರು. “ತುಂಬಲಕಾಯಿ ತಳ್ಳೆನೆಂದರೆ ಹೆಗಲುಮುಟ್ಟಿನೋಡಿಕೊಂಡಂತಾಯಿತು.” ಪೋಲೀಸು ಇನ್‌ಸ್ಪೆಕ್ಟರವರೂ ಅಮಲ್ದಾರರವರೂ ಲಂಚ ತೆಗೆದುಕೊಂಡಿರಾರೆಂದು ಸಂಪಾದಕನು “ವಿಶ್ವಕರ್ಣಾಟಕದಲ್ಲಿ” ಬರೆಯಿಲ್ಲ. ಆದರೆ ಮ॥ ಅಯ್ಯರ್‌ರವರ ಬರವಣಿಗೆಯನ್ನು ನೋಡಿದರೆ ಹಳ್ಳಿಗಾಡಿನ ಜನಗಳಾದ ನಮಗೆ ಒಂದು ವಿಧವಾಗಿತೋರುತ್ತೆ. ಅದೇನೆಂದರೆ—ಮೇಲ್ಕಂಡ ಆಫೀಸರುಗಳು “ನಮಗೆ ಕಾನಕಾನಹಳ್ಳಿ ಎಲ್ಲಾ ವಿಧದಲ್ಲೂ ಅನುಕೂಲವಾಗಿದೆ. ನಮ್ಮನ್ನು ಇಲ್ಲಿಯೇ ಇರಿಸಿಕೊಡುವಂತೆ ಅನುಕೂಲಮಾಡಿಕೊಡಿ” ಎಂದು ಮ॥ ಅಯ್ಯರ್‌ರವರಿಗೆ ಬರೆದುಕೊಂಡರೋ ಏನೋ ಎನ್ನುವಂತೆ ಕಾಣುತ್ತದೆ. ಈ ಊರಿಗೆ ಸುಮಾರು 35 ಮೈಲಿದೂರದಲ್ಲಿರುವ ಮ॥ ಅಯ್ಯರ್‌ರವರು ಈ ಊರಿನ ಸ್ಥಿತಿವಿಶೇಷಗಳನ್ನು ವೈರ್‌ಲೆಸ್‌ಟೆಲಿಗ್ರಾಫಿನ ಮೂಲಕ ಬರವಣಿಸಿಕೊಳ್ಳುವರೋ? ಈ ತಾಲ್ಲೂಕಿನ ಬಡಜನಗಳ ಗೋಳಾಟ ಹೇಳತೀರದು. ಮಾರಾಮಾರಿ ಖೂನಿ ಮೊದಲಾದ ಕ್ರೂರಕೃತ್ಯಗಳು ಹೆಚ್ಚುತ್ತಲೇ ಇವೆ. ಪೋಲೀಸರಿಗೆ ತಪ್ಪಿದೆ “ಕೆಳಗೆಬಿದ್ದರೂ ಮೀಸೆಮಣ್ಣಾಗಲಿಲ್ಲ” ಎನ್ನುವಂತೆ ಮರಳವಾಡಿ ಖೂನಿಯಲ್ಲಿ ಅಪರಾಧಿಗಳನ್ನು ಪತ್ತೆಮಾಡಿ ಶಿಕ್ಷೆಪಡಿಸಲು ಕೈಲಾಗದಿದ್ದರೂ ಸೆಷನ್ ಜಡ್ಜರು ಪೋಲೀಸಿನವರ ವಿಚಾರದಲ್ಲಿ ಒಳ್ಳೇ ಅಭಿಪ್ರಾಯಕೊಟ್ಟಿರುವರೆಂದು ಮ॥ ಅಯ್ಯರ್‌ರವರು ಬರೆದಿರುವರು. ಈ ಒಳ್ಳೇ ಅಭಿಪ್ರಾಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಪ್ರತಾಪಕೊಟ್ಟುಕೊಂಡರೆ ಅಪರಾಧಿಗಳಿಗೆ ಶಿಕ್ಷೆಮಾಡಿಸಿದಂತಾಯಿತೆ? ಬಡಜನಗಳ ರೋಧನವು ವೃಥಾಹೋಗುವುದಿಲ್ಲ.

ಮ॥ ಅಯ್ಯರ್‌ರವರು “ಲಂಚರುಷವತ್ತುಗಳನ್ನು ಕೊಟ್ಟು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದವರಿಗೆ ಈಗಿನ ಅಧಿಕಾರಿಗಳು ಯಮಧರ್ಮನಂತಿರುವರೆಂದು” ಬರೆದಿರುವರು. ಶಹಬಾಸ್ ಯಮಧರ್ಮ! ಶಹಬಾಸ್!! ಈ ಬರವಣಿಗೆಯಿಂದ ಇವರ ಹಿಂದಿನ ಅಧಿಕಾರಿಗಳು ಲಂಚಕೋರರು, ಈಗಿನವರು ಫೇಟ್ ಸನ್ಯಾಸಿಗಳು ಎಂದು ಭಾವನೆಯೋ? ನಾವು ಸದ್ಯಕ್ಕೆ ಲಂಚದವಿಚಾರ ಪ್ರಸ್ತಾಪಿಸುವುದಿಲ್ಲ. ಮೇಲ್ಕಂಡ ಅಧಿಕಾರಿಗಳು ಲಂಚತೆಗೆದುಕೊಳ್ಳುವರೆಂದು ಸಂಪಾದಕನು ವಿಶ್ವಕರ್ಣಾಟಕದಲ್ಲಿ ಸೂಚಿಸಿಲ್ಲ. ನಾವು ಹೀಗೆ ಹೇಳುವುದಿಲ್ಲ. ಆದರೆ ಬೋರೆಗೌಡನು ಕೊಡುವ ಕಂದಾಯಕ್ಕೆ ಪ್ರತಿಫಲವು ಖೂನಿ, ಮಾರಾಮಾರಿ, ಮರ್ಯಾದಸ್ಥರನ್ನೂ ಬಡವರನ್ನೂ ಹಿಂಸಿಸುವುದು, ಇವೇ ಮೊದಲಾದವುಗಳು ಆಗದಿದ್ದರೆ ಸಾಕು. “ದಿವಾನಸಾಹೇಬರವರಿಗೂ ಕೌನ್ಸಲರಿಗೂ ಅರ್ಜಿಗಳನ್ನು ಬರೆಯುವುದು ಕೆಲವರ ನಿತ್ಯವೃತ್ತಿಯೆಂದು ಮ॥ ಅಯ್ಯರ್‌ರವರು ಬರೆದಿರುವರು. ಈ ಅರ್ಜಿಗಳಲ್ಲಿ ಸುಳ್ಳಿದ್ದರೆ ಅರ್ಜಿದಾರರನ್ನು ಶಿಕ್ಷಿಸುವುದಿಲ್ಲವೇಕೆ? ಕುಂಗಿಲಂತಿರುವ ಬಡರೈತರಿಂದ ಬರೀಕಾಗದದ ತಳಕ್ಕೆ ಹೆಚ್ಚಿಟ್ಟಿನ ಗುರುತುಗಳನ್ನು ಒತ್ತಿಸಿಕೊಂಡು ಮರ್ಯಾದಸ್ಥರಮೇಲೆ ಇಲ್ಲದ ಸಲ್ಲದ ಆರೋಪಣೆಗಳನ್ನು ಹೊರಿಸಿ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆಯುವ ಅಯೋಗ್ಯರನ್ನು ಶಿಕ್ಷೆಮಾಡುವದಿಲ್ಲವೇಕೆ? ಈಚೆಗೆ ಒಂದು ಸೊತ್ತು ಸ್ವಾಧೀನದ ವಿಚಾರವಾಗಿ ಪೋಲೀಸಿನವರಲ್ಲಿ ಕೆಲವರು ಸದಾ ತಮ್ಮೊಂದಿಗೆ ತಿರುಗಾಡುತ್ತಿರುವ ಒಬ್ಬ ಪುಂಡನ ಪಕ್ಷವನ್ನು ವಹಿಸಿ ತೊಂದರೆ ಮಾಡಿದ ವಿಚಾರದಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದುಕೊಂಡದ್ದು ತಪ್ಪೋ? ಪೋಲೀಸಿನವರಲ್ಲಿ ಕೆಲವರು ಮಾಡುವ ಗಲಾಟೆಯನ್ನು ನೋಡುತ್ತಾ ಕೈಕಟ್ಟಿಕೊಂಡು “ಬುದ್ಧೀ ತಮ್ಮಪ್ಪಣೆಯಂತೆ” ಎನ್ನುತ್ತಿರಬೇಕೋ? ಆ ಓಬೀರಾಯನಕಾಲ ಹೋಯಿತು.

ಮ॥ ಅಯ್ಯರ್‌ರವರು ಟ್ರುತ್‌ಪತ್ರಿಕೆಯು ಜೀವದಿಂದಿದ್ದಾಗ ಬಗೆಯಿಲ್ಲದ ಆಫೀಸರುಗಳ ವಿಚಾರವಾಗಿ ಬರೆಯುತ್ತಿದ್ದ ಬರವಣಿಗೆಯ ರಭಸವು ಈಗ ಕುಂದಿರುವುದಕ್ಕೆ ಕಾರಣವೇನು? ಪ್ರತಿಫಲಾಪೇಕ್ಷೆಯಿಲ್ಲದೆ ಮ॥ ಅಯ್ಯರ್‌ರವರು ಈ ಊರಿಗೆ ಬರಲಿ; ನಿಜಾಂಶವನ್ನು ತಿಳಿದುಕೊಳ್ಳಲಿ. ಹೀಗೆಮಾಡಿದಲ್ಲಿ ಇಂತಹ ಪಕ್ಷಪಾತದ ಬರವಣಿಗೆಯನ್ನು ಮ॥ ಅಯ್ಯರ್‌ರವರು ಬರೆಯಲಾರರೆಂದು ಧೃವಪಡಿಸುವ, ಸಂಪಾದಕನಮಿತ್ರ.

ಕಡೂರು ತಾಲ್ಲೂಕು ಯಗಟಿಪುರದ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ವಿವಾದವಿಚಾರವಾಗಿ ವೀರಶೈವ ಪ್ರಮುಖರಲ್ಲಿ ವಿಜ್ಞಾಪನೆ.

ಕಳೆದ ಐದುವರ್ಷಗಳಿಗೆ ಮೇಲ್ಪಟ್ಟು ಪುರದಗ್ರಾಮದಲ್ಲಿರುವ ವೀರಶೈವ ಅರ್ಚಕರಿಗೂ, ಯಗಟಿ ಮತ್ತು ಯಳ್ಳಂಬಳಸೆಯಲ್ಲಿರುವ ಬ್ರಾಹ್ಮಣರಿಗೂ ರಥೋತ್ಸವಕಾಲದಲ್ಲಿ ಅಂದರೆ ಪ್ರತಿಸಂವತ್ಸರದ ಫಾಲ್ಗುಣಮಾಸದಲ್ಲಿ ಬರುವ ಮಘಾನಕ್ಷತ್ರದದಿವಸ ಶ್ರೀಸ್ವಾಮಿಯವರನ್ನು ರಥಕ್ಕೆ ಬಿಜಯಮಾಡಿಸುವಕಾಲದಲ್ಲಿ ವ್ಯಾಜ್ಯವು ಬೀಳುತ್ತದೆ. ಏನೆಂದರೆ, ಬ್ರಾಹ್ಮಣರು ಹನ್ನೊಂದುತಿಂಗಳು ಇಪ್ಪತ್ತೊಂಭತ್ತು ದಿವಸ ದೇವತಾಕಾರ್ಯ ಯಾವವನ್ನೂ ಮಾಡದೆ ದೇವಸ್ಥಾನದ ಬಳಿ ತಮ್ಮ ಸುಳಿವಿಲ್ಲದಿದ್ದಾಗ್ಯೂ ಕೊನೇ ದಿವಸ ಅದರಲ್ಲಿಯೂ 1-2 ಗಂಟೆಗಳಕಾಲ ಮಾತ್ರ ಪುರದಲ್ಲಿರುವ ಶ್ರೀಪ್ರಸನ್ನ ಮಲ್ಲಿಕಾರ್ಜುನಸ್ವಾಮಿಯವರು ಮೂರ್ತಿಭವಿಸಿರುವ ಗರ್ಭಗುಡಿಯೊಳಕ್ಕೆ ಪೂಜೆಗಾಗಿ ಪ್ರವೇಶಮಾಡಿ ಉತ್ಸವಸ್ವಾಮಿಯವರನ್ನು ಹೊತ್ತುಕೊಂಡು ಹೋಗಿ ರಥದಮೇಲೆ ವಿಜಯಮಾಡಿಸುವದೇಮಗ್ಗಿರೆ ಕಾರ್ಯಗಳು ಅವರ ಮಾಮೂಲು ಪದ್ಧತಿಯಂತೆ! ಎಷ್ಟು ಚೆನ್ನಾಗಿದೆ!! ಯಂಥಾಸಮಂಜಸವಾದ ವ್ಯಾಜ್ಯ!!! 11 ತಿಂಗಳು 29 ದಿವಸ ಮತ್ತು 30ನೇ ದಿವಸದ 22 ಗಂಟೆಗಳ ಕಾಲವೆಲ್ಲಾ ಶ್ರೀಸ್ವಾಮಿಯವರ ಸೇವಾಮಗ್ಗಿರೆ ಕಾರ್ಯಗಳನ್ನು ಅರ್ಚಕರೂ ಭಕ್ತರುಗಳೂ ಸೇರಿ ಖರ್ಚುಗಳನ್ನೆಲ್ಲಾ ತಾವೇ ವಹಿಸಿ ನಡಿಸಿಕೊಂಡು ಬಂದು ಮುಖ್ಯವಾಗಿರುವ ರಥೋತ್ಸವದ ಕೆಲಸವನ್ನು ಮಾತ್ರ ಇತರರು ನಡೆಸಕೊಡದೆನ್ನುವದು ಯಾವ ಧರ್ಮ? ಇದು ಎಲ್ಲಿಯಾದರೂ ಉಂಟೆ? ಈ ಹಾಳು ತರಲೆಯಿಂದ ಇವರಿಗೂ ಅರ್ಚಕರಿಗೂ ವಾಜ್ಯ ನಡಿಯುತ್ತ ಉತ್ಸವಕಾಲಕ್ಕೆ ನಡಿಯಬೇಕಾದ ಶ್ರೀಸ್ವಾಮಿಯ ಕಾರ್ಯಗಳು ಸರಿಯಾಗಿ ನಡೆಯದೆ, ಕುಂದಕವಾಗಿ ಸ್ವಾಮಿಸೇವೆಗೋಸ್ಕರವಾಗಿ ದೂರದಿಂದ ಬಂದಿದ್ದ ಭಕ್ತಾದಿಗಳಿಗೆ ಉಂಟಾಗುತ್ತಿರುವ ತೊಂದರೆಗಳು ಹೇಳತೀರದಂತಿರುತ್ತವೆ. ಹೋದವರ್ಷವಾದರೋ ನಡಿಯಬೇಕಾಗಿದ್ದ ಸ್ವಾಮಿ ಕಾರ್ಯಗಳು ಒಂದು ದಿವಸವೇ ಸುಸ್ತಿಯಾಗಿ ನಡಿಸಲ್ಪಟ್ಟಿತು. ಅದುವರೆಗೆ ದೇವರ ಹರಕೆಯಿಂದ ಉಪವಾಸವಿದ್ದು ಸೇವೆಮಾಡಿದವರ ಗತಿಯೇನಾಗಿರಬಹುದು? ಆಲೋಚಿಸಿ. ಈ ವಿಚಾರವಾದ ತೊಂದರೆಗಳನ್ನೆಲ್ಲ ಆಗ್ಗೆ ದಯೆ ಮಾಡಿದ ಸರ್ಕಾರೀ ಅಧಿಕಾರಿಗಳು ಪ್ರತ್ಯಕ್ಷವಾಗಿ ನೋಡುತ್ತಾರಾದರೂ ನ್ಯಾಯರೀತಿಯಾಗಿ ಶಾಶ್ವತ ಫೈಸಲ್‌ಮಾಡಲು ಯಾರಿಗೂ ದಯಬಂದಂತೆ ಕಾಣುವದಿಲ್ಲ. ಈ ಹಿಂದೆ ಈ ಡಿಸ್ಟ್ರಿಕ್ಟು ಡೆಪ್ಯೂಟೀಕಮಿಷನರಾಗಿದ್ದ ಜನರಲ್ ಡಿ. ದೇವರಾಜಅರಸಿನವರು ಈ ವ್ಯಾಜ್ಯವನ್ನೆಲ್ಲಾ ಪಕ್ಷಪಾತವಿಲ್ಲದೆ ನ್ಯಾಯಸಮ್ಮತವಾಗಿ ಮಾಡಿದ್ದ ಆರ್ಡರನ್ನು ಅವರ ತರುವಾಯ ಬಂದ ಡಿ॥ ಅಧಿಕಾರಿಗಳು ಅದನ್ನು ರದ್ದುಮಾಡಿ ತಮ್ಮವರ ಪರವಾಗಿ ಮುಶಾಖಿಮೂನದಿಂದ ಒಬ್ಬೊಬ್ಬರು ಒಂದೊಂದು ವಿಧವಾದ ಆರ್ಡರನ್ನು ಮಾಡುತ್ತಾ ಬಂದರು. ಇದರಿಂದ ದೇವರಕಾರ್ಯಕ್ಕೆ ವಿಘ್ನವೂ ಭಕ್ತಾದಿಗಳಿಗೆ ತೊಂದರೆಯೂ ಉಂಟಾಗಲು ಅವರೇ ಕಾರಣರೆಂದು ಯಾರು ಬೇಕಾದರೂ ಧಾರಾಳವಾಗಿ ಹೇಳಬಹುದಲ್ಲವೆ? ಒಂದು ರೂಪಾಯಿನಲ್ಲಿ ಹದಿನೈದಾಣೆ ಹನ್ನೊಂದುಪೈ ನಷ್ಟು ವೀರಶೈವರೂ ಬ್ರಾಹ್ಮಣೇತರರೂ ಈ ಸ್ವಾಮಿಯ ಭಕ್ತರಾಗಿದ್ದು ಒಂದು ಪೈನಷ್ಟು ಮಾತ್ರ ಈ ಬ್ರಾಹ್ಮಣರಿದ್ದು ವೃಥಾ ಕೀಟಲೆತೆಗೆದು ಬಹುಜನರಿಗೆ ತೊಂದರೆ ಉಂಟುಮಾಡುತ್ತಿರುವುದು ಸರಿಯಲ್ಲ. ಬ್ರಾಹ್ಮಣರು ಅರ್ಚಕರಾಗಿರುವ ದೇವಸ್ಥಾನದ ಗರ್ಭಗುಡಿಯೊಳಕ್ಕೆ ಇತರರ್‍ಯಾರನ್ನಾದರೂ ಹೋಗಗೊಡಿಸುತ್ತಾರೆಯೆ? ಎಂದಿಗೂ ಇಲ್ಲ. ಪುರಾತನಕಾಲದಿಂದಲೂ ವೀರಶೈವ ಅರ್ಚಕರು ಆರಾಧಿಸುತ್ತಿರುವ ದೇವಸ್ಥಾನದೊಳಕ್ಕೆ ತಾವು ಪ್ರವೇಶಮಾಡುತ್ತೇವೆನ್ನುವದು ಯಾವ ಧರ್ಮ, ಮತ್ತು ಸರಿಯೆನ್ಯಾಯವಲ್ಲವೆ? ಇದರಂತೆಯೇ ಹೈದರಾಬಾದು ಇಲಾಖಾ ಪರಳೀ ದೇವಸ್ಥಾನವಿಚಾರದಲ್ಲಿ ಅಲ್ಲಿ ನಡೆದ ವಿವಾದ ವಿಚಾರವನ್ನೂ ಆಯಾಯ ಮತಧರ್ಮದ ವಿಚಾರವನ್ನೂ ಕೇಳಿಯೂ ಕೂಡ ಈ ಬ್ರಾಹ್ಮಣ ಸಹೋದರರು ಸುಮ್ಮನಿರಬಾರದೆ? ಇನ್ನೂ ತಮ್ಮ ಶ್ರೇಷ್ಠತ್ವ ತೋರಿಸಬೇಕೆ? ಶಾಂತರಾಪದಲ್ಲಿ ಬಹಳ ಕ್ಷೇಮಕರವಲ್ಲವೆ? ಈ ವಿವಾದವು ಈಗ ಎರಡುವರ್ಷಗಳ ಕೆಳಗೆ ಹಜರತ್ ಮುಜರಾಯಿ ಕಮಿಷನರ್‌ರವರ ಕೋರ್ಟಿನಲ್ಲಿ ಡಿಸ್ಟ್ರಿಕ್ಟು ಡೆ॥ ಕಮಿಷನರ್‌ರವರು ಮಾಡಿದ್ದ ಅನ್ಯಾಯವಾದ ಆರ್ಡರಿನಮೇಲೆ ಅಪೀಲುಮಾಡಿರಲಾಗಿ ಅದನ್ನು ಪುನರ್‌ವಿಚಾರಣೆಮಾಡುವದಕ್ಕಾಗಿ ಡಿಸ್ಟ್ರಿಕ್ಟು ಡೆ॥ ಕಮಿಷನರ್ ಸಾಹೇಬರಿಗೆ ಹಾಕಿರುವರಾಗಿಯೂ, ಅದುವರೆಗೆ ಈಗ ಮಾಡಿರುವ ಡಿಸ್ಟ್ರಿಕ್ಟು ಡೆ॥ ಕಮಿಷನರವರ ಆರ್ಡರು ಜಾರಿಯಲ್ಲಿರಬೇಕಾಗಿ ಆರ್ಡರುಮಾಡಿರುತ್ತಾರಾಗಿಯೂ, ಈ ವಿಚಾರಣೆಯನ್ನು 1926 ನೇ ಜನವರಿ ಮಾಹೆ 10ನೇ ತಾರೀಖಿನ ದಿವಸ ಬೀರೂರಲ್ಲಿ ತರೀಕೆರೆ ತಾ॥ ರೆವಿನ್ಯೂ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರು ನಡಿಸುತ್ತಾರಾಗಿಯೂ ತಿಳಿಯುತ್ತೇನೆ. ಕಾರಣ ತರೀಕೆರೆ ಮತ್ತು ಕಡೂರು ಶಿವಮೊಗ್ಗಾ ಚೆನ್ನಗಿರಿ ತಾಲ್ಲೂಕುಗಳಲ್ಲಿರುವ ಸ್ವಾಮಿಭಕ್ತಮಹಾಶಯರು ತಮ್ಮ ಅನಿವಾರ್ಯಗಳಿದ್ದರೂ ಬಿಟ್ಟು ದೇವತಾಕಾರ್ಯದಮೇಲೂ ಮಹಾಭಿಮಾನದಮೇಲೂ ದೃಷ್ಟಿಯಿಟ್ಟು ಮೇಲ್ಕಂಡ ತಾರೀಖಿನದಿವಸ ಬೀರೂರಿಗೆ ಬಂದು ತಮ್ಮ ಕುಂದುಕೊರತೆಗಳನ್ನು ವಿಶದಪಡಿಸಿ ನ್ಯಾಯವಾದ ತೀರ್ಮಾನದೊಂದಿಗೆ ದೇವರಸೇವೆಗೂ ಸೇವೆಗಾಗಿ ಬರತಕ್ಕ ಭಕ್ತರಿಗೂ ಯಾವ ತೊಂದರೆಯಾಗದಂತೆ ಮಾಡಬೇಕಾಗಿ ಸರ್ಕಾರದವರನ್ನೂ, ತಮ್ಮಗಳನ್ನೂ ಪ್ರಾರ್ಥಿಸುತ್ತೇನೆ.

ತೊಂದರೆ ಅನುಭವಿಸಿದ ಒಬ್ಬ ಭಕ್ತ.

ಸ್ಕೂಲ್ಡೇಲಂಚುಗಳೆಂಬ ಅಲ್ಪಾಹಾರಗಳೂ, ವೀರಶೈವವಿದ್ಯಾರ್ಥಿಗಳೂ.

ವೀರಶೈವಮತವು ಅನಾದಿಯಿಂದಲೂ ಆಚಾರ, ವಿದ್ಯ ಮತ್ತು ನಿರ್ಲೋದ್ಯೋಗ ಈ ಮೂರರಿಂದ ಶ್ರೇಷ್ಠತ್ವವನ್ನು ಹೊಂದಿರುತ್ತದೆ. ಆಚಾರವಿಚಾರಕ್ಕೆ ಕಲಿಗಣನಾಥರು, ವೀರಶಂಕರದಾಸರು ಮೊದಲಾದವರೇ ಸಾಕ್ಷಿಯಾಗಿರುತ್ತಾರೆ. ವಿದ್ಯಕ್ಕೆ ಪಂಡಿತತ್ರಯ ಹರೀಶ್ವರಾದಿಗಳೇ ಸಾಕ್ಷಿಯಾಗಿರುತ್ತಾರೆ. ನಿರ್ಮಲೋದ್ಯೋಗಕ್ಕೆ ವೀರಶೈವರ ಅರುವತ್ತುನಾಲ್ಕು ಶೀಲಗಳೇ ಸಾಕ್ಷಿಯಾಗಿರುತ್ತವೆ. ವೀರಶೈವರಿಗೆ ಆಚಾರದಿಂದ ಪಾರಿಶುದ್ಧ್ಯವೂ, ವಿದ್ಯದಿಂದ ಪ್ರಬಲಶಕ್ತಿಯೂ, ಉದ್ಯೋಗದಿಂದ ಸಂಪತ್ತೂ ಬಂದಿರುತ್ತವೆ. ಪ್ರಕೃತದಲ್ಲಿ ಆಚಾರವಿಚಾರವಾಗಿ ಮಾತಾಡೋಣ. ಆಚಾರವು ವೀರಶೈವರಿಗೆ ಬಹಳ ಮುಖ್ಯವಾದದ್ದು. “ಆಚಾರಂ ದುರ್ವೃತ್ತಿಯಬಿಡುವುದು ಆಚಾರಂ ಸತ್ಕ್ರಿಯೆಯೊಳ್ನಿಲುವುದು” ಆಚಾರದಿಂದ ವೀರಶೈವರಿಗೆ ಶ್ರೇಷ್ಠತ್ವವು ಬಂದಿರುತ್ತದೆ. ಆಚಾರದಿಂದ ವೀರಶೈವರು ಅಪಾಯದಿಂದ ರಕ್ಷಿಸಲ್ಪಟ್ಟಿರುತ್ತಾರೆ.

ಪ್ರಕೃತಕಾಲದಲ್ಲಿ ಬಹುಪ್ರಭೇದದವರಲ್ಲಿ ಆಚಾರ ಕೆಡುತ್ತ ಅನರ್ಥಗಳಿಗೆ ಕಾರಣವಾಗುತ್ತಲಿದೆ. ಎಲ್ಲಿನೋಡಿದರೂ ಕಾಫೀಕ್ಲಬ್ಬುಗಳೂ, ಏಕಭೋಜನಗಳೂ, ಇನ್ನೂ ಹೀನವರ್ತನಗಳೂ ಹೆಚ್ಚುತ್ತಲಿವೆ. “Cosmopolitism” ಎಂಬ ನೆಪದಿಂದ ಇವುಗಳೆಲ್ಲವನ್ನೂ ಲೋಕದವರು ನಡೆಸುವದಕ್ಕೆ ಪ್ರಾರಂಭಮಾಡಿರುತ್ತಾರೆ. ಸ್ವಲ್ಪದರಲ್ಲಿ ಸಡಿಲಬಿಟ್ಟರೆ ದೊಡ್ಡದೊಡ್ಡದರಲ್ಲೂ ಸಡಿಲವಾಗುತ್ತದೆ. ಈದಿನ ತಿಂಡಿಯಲ್ಲಿ ಭೇದವಿಲ್ಲ; ನಾಳೇದಿನ ಭೋಜನದಲ್ಲಿ ಭೇದವಿಲ್ಲ; ಆಮೇಲೆ ದುರಾಹಾರದಲ್ಲಿ ಭೇದವಿಲ್ಲ; ಅನಂತರ ದುಷ್ಪಾನದಲ್ಲಿ ಭೇದವಿಲ್ಲ. ಈರೀತಿ ಹೋಗುತ್ತದೆ. ಸಣ್ಣದರಲ್ಲಿ ಎಚ್ಚರವಿದ್ದರೆ ದೊಡ್ಡ ಅಪಾಯಗಳು ಹತ್ತಿರಕ್ಕೆ ಬರುವದಿಲ್ಲ. ವೀರಶೈವರು ಈವರೆಗೂ ಇವುಗಳನ್ನೆಲ್ಲಾ ತಪ್ಪಿಸಿಕೊಂಡಿರುತ್ತಾರೆ. ಇದಕ್ಕೆ ಇವರ ಪೂರ್ವಾಚಾರ್ಯರು ಮಾಡಿಟ್ಟಿರುವ ಕಟ್ಟುಗಳೇ ಕಾರಣವಾಗಿರುತ್ತವೆ. ಮುಂದಾದರೂ ವೀರಶೈವರು ಇದೇರೀತಿಯಲ್ಲಿ ತಮ್ಮ ಆಚಾರಗಳನ್ನು ಕಾಪಾಡಿಕೊಂಡು ಬರಬೇಕು. ವೀರಶೈವರು ಅನ್ಯರಲ್ಲಿ ಭೋಜ್ಯವಸ್ತುಗಳನ್ನು ಸ್ವೀಕರಿಸುವದಿಲ್ಲವೆಂಬುದು ಲೋಕಪ್ರಸಿದ್ಧವಾಗಿದೆಯಷ್ಟೆ. ಅದರಂತೆ ಎಲ್ಲಾ ಸ್ಥಳಗಳಲ್ಲೂ ವೀರಶೈವರ ಭೋಜನಮಂದಿರಗಳೂ, ವೀರಶೈವರ ಮಿಠಾಯಿಅಂಗಡಿಗಳೂ, ವೀರಶೈವರ ಅಲ್ಪಾಹಾರದ “ಕ್ಲಬ್ಬು” ಗಳೂ ಏರ್ಪಟ್ಟಿರುತ್ತವೆ. ವೀರಶೈವನು ವೀರಶೈವನಾದವನಲ್ಲೇ ಧಾನ್ಯವನ್ನು ತೆಗೆದುಕೊಳ್ಳಬೇಕು, ಆಹಾರವನ್ನು ತೆಗೆದುಕೊಳ್ಳಬೇಕು, ಬಟ್ಟೆಗಳನ್ನು ತೆಗೆದುಕೊಳ್ಳಬೇಕು ಎಂಬುದೇ ಮೊದಲಾದ ಅರವತ್ತುನಾಲ್ಕು ಶೀಲದ ಪ್ರಕಾರ ವೀರಶೈವನು ವೀರಶೈವ “ಮಿಠಾಯಿ” ಅಂಗಡಿಗಳಿಗೇನೇ ಹೋಗಿ ಮಿಠಾಯಿಗಳನ್ನು ತೆಗೆದುಕೊಳ್ಳಬೇಕು. ತೈಲಪಕ್ವಕ್ಕೂ ಘೃತಪಕ್ವಕ್ಕೂ ಬಾಧಕವಿಲ್ಲವೆಂಬ ನಿಯಮವನ್ನು ಎಣಿಸಕೂಡದು. ಸ್ವಲ್ಪದರಲ್ಲಿ ಸಡಿಲಬಿಟ್ಟರೆ ದೊಡ್ಡ ಅನಾಚಾರಗಳು ಸಂಭವಿಸಿ, ಅಪಾಯಗಳಾಗುವವೆಂಬ ಭಯವು ಈ ಕಾಲದಲ್ಲಿ ಉಂಟು. ಇದನ್ನು ವೀರಶೈವರು ಎಚ್ಚರದಿಂದ ನೋಡಿಕೊಳ್ಳಬೇಕು.

ಈಗ ಎಲ್ಲಿನೋಡಿದರೂ “ಕ್ಲಬ್ಬು” ಗಳು ಮೊದಲಾದವುಗಳು ಜನರ ಮನಸ್ಸನ್ನಾಕರ್ಷಣೆಮಾಡಿ ಚಂಚಲಗೊಳಿಸುತ್ತಲಿವೆ. ಎಂದು ಮೇಲೆ ಸೂಚಿಸಿತಷ್ಟೆ. ಈಗ ವಿದ್ಯಾಶಾಲೆಗಳಲ್ಲಿ “ಸ್ಕೂಲ್ಡೇ” ಗಳೆಂಬ ಪ್ರದರ್ಶನಗಳು ಪ್ರಾರಂಭವಾಗಿ “ಲಂಚು” ಗಳು ಏರ್ಪಟ್ಟು, ಆಚಾರಕ್ಕೆ ಕೊಂಚ ಕುಂದಕಗಳನ್ನುಂಟುಮಾಡುತ್ತವೆಯೆಂದು ಹೇಳಬಹುದು. ಆದರೆ ವೀರಶೈವರು ಅದರಲ್ಲಿಯೂ ತಮ್ಮ ಆಚಾರವನ್ನು ಕೇವಲ ದೃಢವರ್ತನೆಯಿಂದ ಕಾಪಾಡಿಕೊಂಡು ಬರುತ್ತಾರೆ. ಇದು ಪೂರ್ವಾಚಾರ್ಯರ ಪ್ರಸಾದಬಲವೆಂದೇ ಹೇಳಬೇಕು. ಈವರ್ಷ ಗೌರ್ನಮೆಂಟು ಕಲಿಜೀಯೇಟು ಹೈಸ್ಕೂಲಿನಲ್ಲಿ “ಸ್ಕೂಲ್ಡೇ” ಏರ್ಪಟ್ಟು “ಲಂಚು” ಏರ್ಪಟ್ಟಿತು. ಎಲ್ಲರಿಗೂ “ಲಂಚು” ಏರ್ಪಟ್ಟು ತಾವು ಮಾತ್ರ ಅದಕ್ಕೆ ಉಪವಾಸವಿರಬೇಕೆಂದು ಸುಮಾರು ಎಂಭತ್ತರವರೆಗೂ ಸಂಖ್ಯೆಯುಳ್ಳ ವೀರಶೈವವಿದ್ಯಾರ್ಥಿಗಳು ಲಿಖಿತಮೂಲಕವಾಗಿ ಅರ್ಜಿಯನ್ನು ಕೊಟ್ಟು ಅದರಮೇಲೆ ಚರ್ಚೆಗಳು ನಡೆದು ಕೊಡುವದಿಲ್ಲವೆಂದು ತಿರಸ್ಕರಿಸಿದ್ದರಿಂದ ಅಗ್ರಹಗೊಂಡು ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ಸಾಹಸದಿಂದ ಮಾಡಿ ವೀರಶೈವಲಂಚನ್ನು [illegible]. ಈ ಸಂದರ್ಭದಲ್ಲಿ ವೀರಶೈವವಿದ್ಯಾರ್ಥಿಗಳು ತಮ್ಮ “ವೀರ” ಶಬ್ದಕ್ಕೆ ಸಾರ್ಥಕ್ಯವನ್ನುಂಟುಮಾಡಿದರು. ವೀರಶೈವರ “ಲಂಚು” ಸ್ಕೂಲಿನಲ್ಲಿ ಬೇರೆ ಕೊಟಡಿಯಲ್ಲಿ ನಡಿಸಲ್ಪಟ್ಟಿತು. ವೀರಶೈವ ಅಲ್ಪಾಹಾರಮಂದಿರದ ವೀರಣ್ಣನವರು ಪದಾರ್ಥಗಳನ್ನು ಬಹಳ ಸ್ವಾದ್ಯತರವಾಗಿ ಮಾಡಿದ್ದರು. ವಿದ್ಯಾರ್ಥಿಗಳೆಲ್ಲರೂ ಬಹಳ ಲವಲವಿಕೆಯಿಂದ ಕೆಲಸ ಮಾಡಿದರು. ವೀರಶೈವರ ಘನತೆಯು ಬಹಳ ಪ್ರಕಾಶವಾಗಿ ಕಾಣಿಸುತ್ತಿತ್ತು. ಎಲ್ಲಕಡೆಯೂ ಎಲ್ಲ ವೀರಶೈವರೂ ಇದೇರೀತಿ ಆಚರಿಸಿ ವೀರಶೈವಾಚಾರರಕ್ಷಣೆಯನ್ನು ಮಾಡಬೇಕೆಂದು ಕೋರುತ್ತೇನೆ. ಈ ಮೊದಲೇ ಮಲ್ಲೇಶ್ವರದ ಹೈಸ್ಕೂಲಿನಲ್ಲಿ ವೀರಶೈವರಿಗೆ ಪ್ರತ್ಯೇಕ “ಲಂಚು” ಏರ್ಪಡಿಸಿದ್ದರೆಂದು ಗೊತ್ತಾಯಿತು. ವೆಸ್ಲಿಯನ್ನು ಹೈಸ್ಕೂಲಿನಲ್ಲಿಯೂ ವೀರಶೈವರಿಗೆ ಪ್ರತ್ಯೇಕ “ಲಂಚು” ನಡೆಯುತ್ತದೆ ಎಂದು ತಿಳಿದುಬಂತು. ವೀರಶೈವರಲ್ಲಿ ಮಾತಾಪಿತೃಗಳು ತಮ್ಮ ಮಕ್ಕಳುಗಳನ್ನು ಕೈಬಿಡದೆ ಅವರಿಗೆ ಸದಾಕಾಲವೂ ಆಚಾರವನ್ನು ಬೋಧಿಸಿ ವಿದ್ಯವನ್ನೂ ಧನವನ್ನೂ ಕೊಡುವದರ ಜತೆಗೆ ಘನತೆಯನ್ನೂ ಕೊಡಬೇಕು.

ವೀರವೃತ್ತಿಯುಳ್ಳುದಾಗಿ ವೀರಶೈವ।
ವೀರಜನರು ಮೆರೆವರಾಗಿ ವೀರಶೈವ॥
ವೀರಕಾರ್ಯಗೆಯ್ಯುಕಪಟಿ ವೀರಶೈವ।
ವೀರವಿದ್ಯ ಪೊಳೆವುದರಿಂ ವೀರಶೈವ॥

ಜೇಂಗೆ ಬಸವಲಿಂಗಪ್ಪ,
ತಾ॥ 24-12-25. ಅರಳೇಪೇಟೆ, ಬೆಂಗಳೂರುಸಿಟಿ.

ಶ್ರೀ ಸೀತಾರಾಘವವೈದ್ಯಶಾಲೆಯ

ಶ್ರೀಮದಕ್ಷಯಸಂವತ್ಸರದ ಪಂಚಾಂಗಗಳು.

ಈ ಪಂಚಾಂಗದಲ್ಲಿ ಅನೇಕ ಹೆಚ್ಚು ವಿಷಯಗಳು ಸೇರಿಸಲ್ಪಟ್ಟಿವೆ. ಆರ್ಯಭಟ್ಟಸಿದ್ಧಾಂತವೂ ಸೇರಿದೆ. ಸಂಸ್ಕೃತಶ್ಲೋಕಗಳಿಗೆಲ್ಲಾ ಕನ್ನಡದಲ್ಲಿ ಟೀಕು ಬರೆಯಲ್ಪಟ್ಟಿದೆ. ವಿದ್ವಾಂಸರುಗಳಿಂದ ಸರ್ವೋತ್ತಮವಾದುದೆಂದು ಒಪ್ಪಲ್ಪಟ್ಟಿದೆ.

ಪಂಚಾಂಗ 1 ಕ್ಕೆ ಕ್ರಯ 2 ಆಣೆ ಮಾತ್ರ.
ಡಜನ್ 1 ಕ್ಕೆ 1 ರೂ. 4 ಆ. ಟಪಾಲ್ ಖರ್ಚು ಬೇರೆ.
ನೂರರಮೇಲೆ ಕೊಳ್ಳುವವರಿಗೆ ಧಾರಾಳವಾದ ಕಮಿಷನ್
ಅಡ್ವಾನ್ಸಿನೊಡನೆ ಬರೆಯಿರಿ.

ದೊರೆಯುವ ಸ್ಥಳ:—
(1) ಮ॥ ರಾ॥ ಪಾಳ್ಯದ ವೆಂಕಟಾಚಲಪಂಡಿತರು,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.
(2) ಶ್ರೀ ಸೀತಾರಾಘವವೈದ್ಯಶಾಲಾ ಬ್ರಾಂಚ್,
[4-2] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಸಂಚಿಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೬ ನೆಯ ಇಸವಿ ಜನವರಿ ತಾ॥ ೯ ರಿಂದ ೧೯೨೬ ನೆಯ ಇಸವಿ ಜನವರಿ ತಾ॥ ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೭ ನೆಯ ಕ್ರೋಧನನಾಮಸಂವತ್ಸರದ ಪುಷ್ಯಬಹುಳ ದಶಮಿಯಿಂದ ಮಾಘ ಶುದ್ಧ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ಮಕ
9	ಶನಿ	ದಶ	34-34	ಸ್ವಾತಿ	7-6	26
10	[1]ಭಾನು	ಏಕಾ	32-39	ವಿಶಾ	7-20	27
11	[2]ಸೋಮ	ದ್ವಾದ	29-42	ಅನೂ	6-24	28
12	ಮಂಗಳ	ತ್ರಯೋ	25-46	ಜ್ಯೇಷ್ಠ	4-28	29
13	[3]ಬುಧ	ಚತು	21-3	ಮೂಲ	1-44	30
14	[4]ಗುರು	ಅಮಾ	15-47	ಉಷಾ	54-37	1
15	[5]ಶುಕ್ರ	ಪಾಡ್ಯ	10-4	ಶ್ರವ	50-26	2

(1) ಮಳೆನಕ್ಷತ್ರ-ಉತ್ತರಾಷಾಢ ೧ ನೆಯ ಪಾದ, ಸರ್ವೈಕಾದಶಿ. (೨) ಸೋಮಪ್ರದೋಷ. (3) ಮಳೆನಕ್ಷತ್ರ-ಉತ್ತರಾಷಾಢ ೨ ನೆಯ ಪಾದ. (4) ಉತ್ತರಾಯಣಪುಣ್ಯಕಾಲ, ಸೂರ್ಯಗ್ರಹಣಂ. (೫) ಹೊಂಚಳಿಟ್ಟಿ ರಾಮಸ್ವಾಮಿರಥ, ಉಡುಪಿಯಲ್ಲಿ ಚೂರ್ಣೋತ್ಸವ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶ್ರೀಕೃತಾ । ಘನಪಥಕಳಿಕಾವತಾರಾ ಪಕ್ಷಜ್ಞ ಸದ್ವೃತ್ತ ಮೋಹರಾಜೀಯಾಸ್ ॥
ಶ್ರೀಮನ್ನೃಪಸ್ವಪಾಲನತ್ತಮಕರಾರೋಲಂಸುಧೀಪುಂಗವ । ಸ್ತೋತ್ರಮಾಧೀಪ್ಸದಶೀಲ ಪಾಲಿತ ಸಾಧುಜ್ಞಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ॥

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸ ೧೯೨೬ ನೆಯ ಇಸವಿ ಜನವರಿ ತಾರೀಖು ೧೬ ನೆಯ ಶನಿವಾರ. [ಸಂಚಿಕೆ ೩

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವಯಕ್ಕಾಗಿ ಕ್ಷೀಣತೆಯನ್ನು ಕಾಯ್ದು ಕೊಳ್ಳ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರ ಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಕಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶಕ ಖಾತ್ರಿಯ ವ ಜಿದ್ದಿನ ಅಲ್ಲ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ ತಾಲಿಮಕಂದ, ಜವಾಕಂದ, ಶಾಲ್ಮಲಿಕಂದ, ಅಸ್ಪಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಪಾಂಕರಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಸ್ತ, ವಾಕೇರಿಭಾತಾ, ಗೋಖುರು, ಅಡವೀ ಬೆಂಡಿ ಬೀಕು, ಅಶ್ವತ್ಥಸತ್ವ, ಇಸಬಗೋಲ, ಬುನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರ, ಕೇಶರಿ, ಯಾಲಕ್ಕಿರುಳ್ಳಸಕ್ಕರಿ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಹೂಕಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೇಲಾಭಾಯ ಹಿನ್ಸ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ಝೂಗಾಜಯರಾಮ ಪೋ. ಸೊಲ್ಲಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[60—41] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

49

ಗೋಷಾಸ್ತ್ರೀಯರಿಗೂ ತುಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ತಂಕಲ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಣಸಟ್ಟಿ ಕಳುಹಿಸಬಾರದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[30—15] ಪೋ. ಬಾ. ೩೧೦, ಮದರಾಸು.

(Registered Trade Mark)

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯಜ್ಞಾನ್ಯಸ್ತ್ರಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೇಳಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡೆಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
೨೩ [illegible], ಮೈಸೂರು

ಶ್ರೀ ಕ್ಷಯನಾಮಸಂವತ್ಸರದ ಅತ್ಯುತ್ತಮ
ಪಂಚಾಂಗ.

ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವದಿವಸ ಮಳೆಯು ಪ್ರವೇಶಿಸುವದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ, ಸ್ತ್ರೀಪುನ್ನಪುಂಸಕ, ರವಿಚಂದ್ರಯೋಗ, ಪತಿತಸ್ಥಾನಗಳನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ತಿಳುಹಿಸಲು ಇಲ್ಲಿ ಸಾಧ್ಯವಿಲ್ಲ. ಈ ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಗಿಂತಲೂ ಈವರ್ಷ ಬೆಲೆಯು ಬಹಳೇ ಕಡಿಮೆಮಾಡಿರುತ್ತೇವೆ. ಹಿಂದಣವರ್ಷಕ್ಕಿಂತಲೂ ಹೆಚ್ಚಿಗೆ ಕಾಪಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. ಪಂಚಾಂಗ ಕ್ರಯದಬಿವರ ಪ್ರತಿ ನೂರಕ್ಕೆ (೨೫) ರಿಂದ ೧೦೦ ವರಿಗೆ ರೂ. ೧೩-೦-೦ ರೂಪಾಯಿಗಳು. ೨೦೦ ರಿಂದ ೫೦೦ ವರಿಗೆ ರೂ. ೧೨-೦-೦. ೬೦೦ ರಿಂದ ೧೦೦೦ ವರಿಗೆ ರೂ. ೧೦-೦-೦ (೫) ಪಂಚಾಂಗಗಳು ತರಿಸಿಕೊಳ್ಳುವವರಿಗೆ ರೂ. ೧-೦-೦ ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ದೊರೆಯಲಿಕ್ಕಿಲ್ಲ. ಇಷ್ಟವುಳ್ಳವರು ಬೇಗನೆ ಆರ್ಡರ್‌ಕೊಡಿರಿ. ಚಿಲ್ಲರೆ ಒಂದಕ್ಕೆ ಹಾಫ್ ಆಣೆ ಸ್ಟ್ಯಾಂಪನ್ನು ಕಳಿಸಿದರೆ ಕಳಿಸಿಕೊಡುತ್ತೇವೆ.

ಪಂಚಾಂಗಕರ್ತ—ಬ್ರ॥ಶ್ರೀ॥ ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷಶಾಸ್ತ್ರಜ್ಞ, [illegible]

ಪಂಚಾಂಗಗಳು ದೊರೆಯುವ ವಿಳಾಸ—
ದಸ್ತಾಪುರ, ಗದ್ದಿಗೆಚೆನ್ನಬಸಪ್ಪ ಅಂಡ್ ಬ್ರದರ್ಸ್,
[12—11] [illegible]

ತಾಂಬೂಲ ಸಮಾರಂಭವು.

. ತಾ|| 10-1-1926 ನೇ ದಿವಸ ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ಮಿ|| ಕಂಬಳಿ ವಕೀಲ ಬಿ.ಎ, ಎಲ್‌ಎಲ್.ಬಿ., ಎಂ. ಎಲ್. ಸಿ. ಇವರಿಗೆ ಸರ್ಕಾರದಿಂದ ''ರಾವ ಬಹಾದ್ದೂರ'' ಎಂಬ ಬಹುಮಾನದ ಪದವಿಯು ಸಿಕ್ಕದ್ದಕ್ಕಾಗಿ ಇವರಿಗೆ ಶ್ರೀ ಮಲ್ಲಿಕಾರ್ಜುನ ಥಿಯೇಟರಿನಲ್ಲಿ ಹುಬ್ಬಳ್ಳಿ ಶಹರ ಮತ್ತು ತಾಲ್ಲೂಕ ಶಿಕ್ಷಣ ಪರಸ್ಪರ ಸಹಕಾರಿ ಸಂಘದವರು ಪಾನಸುಪಾರಿ ಸಮಾರಂಭವನ್ನು ಮಾಡಿದರು. ಸಾಯಂಕಾಲದ 5½ ಘಂಟೆಗೆ ರಾವಬಹಾದ್ದೂರ ಕಂಬಳಿ ಮತ್ತು ಸಂಘದ ವ್ಯವಸ್ಥಾಪಕ ಕಮಿಟಿಯವರು ಇವರೆಲ್ಲರ ಭಾವಚಿತ್ರಗಳನ್ನು ತೆಗೆಯುವದಾದ ಬಳಿಕ ಸಮಾರಂಭದ ಕೆಲಸಕ್ಕೆ ಪ್ರಾರಂಭವಾಯಿತು. ಅಧ್ಯಕ್ಷಸ್ಥಾನವನ್ನು ರಾವಬಹಾದ್ದೂರ ಬಿ. ಎಲ್. ಪಾಟೀಲ ಧಾರವಾಡ ಇವರು ಅಲಂಕರಿಸಿದ್ದರು. ಸಮಾರಂಭಕ್ಕೆ ಮುಖ್ಯವಾಗಿ ಈ ಭಾಗದ ಮೆ|| ಎಜ್ಯುಕೇಶನಲ್ ಇನ್ಸ್‌ಪೆಕ್ಟರ ಸಾಹೇಬರೂ ರಾವಬಹಾದ್ದೂರ ಕೊಪ್ಪೀಕರರವರೂ ಸಬಜಜ್ಜ ಗುತ್ತೀಕರರವರೂ ಈ ಭಾಗದ ಇನ್‌ಕಂಟ್ಯಾಕ್ಸ ಆಫೀಸರರವರೂ ಎಲ್ಲ ಮ್ಯುನಿಸಿಪಲ್ ಮೆಂಬರರೂ ಹುಬ್ಬಳ್ಳಿ, ಧಾರವಾಡ, ಗದಗ ಶಹರಗಳೊಳಗಿನ ಪ್ರಮುಖಜನರೂ ತಾಲೂಕಿನೊಳಗಿನ ಟೀಚರ ಸೊಸೈಟಿಯ ಎಲ್ಲ ಮೆಂಬರರೂ ಆಗಮಿಸಿದ್ದರು. ಒಟ್ಟಿಗೆ ಸಾವಿರಾರು ಜನರ ಸಂದಣಿಯಾಗಿತ್ತು.

ಟೀಚರ ಸೊಸೈಟಿಯ ಸೆಕ್ರೆಟರಿ ಜೇರ್‌ಮನ್ ಮತ್ತು ವ್ಯವಸ್ಥಾಪಕ ಕಮಿಟಿಯ ಜನರು ಸಮಯೋಚಿತವಾಗಿ ರಾವಬಹಾದ್ದೂರ ಕಂಬಳಿಯವರ ಸಾರ್ವಜನಿಕ ಕರ್ತವ್ಯದ ವಿಷಯವಾಗಿ ಮಾತಾಡಿದರು. ಶ್ರೀ|| ಶಿವಲಿಂಗಶಾಸ್ತ್ರಿ ಸಂಪಾದಕ ಕರ್ನಾಟಕ ಟಾಯಿಮ್ಸ ಇವರು ಮುಖಂಡರ ಕರ್ತವ್ಯಗಳನ್ನೂ ಮುಖಂಡರಲ್ಲಿರಬೇಕಾದ ಗುಣಗಳು ಕಂಬಳಿಯವರಲ್ಲಿ ಹೇಗೆ ಮೂರ್ತಿಮಂತವಾಗಿರುವವೆಂಬದನ್ನೂ ವಿಶದಪಡಿಸಿದರು. ರಾವಸಾಹೇಬ ಚನ್ನಬಸಪ್ಪ ಶಿರಹಟ್ಟಿ ಇವರು ಸಹಕಾರಿತೆಯ ಮಹತ್ವವನ್ನು ವರ್ಣಿಸಿ ಸಹಕಾರಿ ಸಂಘಗಳ ಇನ್ಸ್ಟಿಟ್ಯೂಟಕ್ಕೆ ರಾವಬಹಾದ್ದೂರ ಕಂಬಳಿಯವರೇ ಪ್ರೆಸಿಡೆಂಟರಿದ್ದದರಿಂದ ಸಹಕಾರಿ ಸಂಘಗಳ ಚಳವಳಿಯಲ್ಲಿ ಕಂಬಳಿಯವರ ಕರ್ತವ್ಯವನ್ನು ವ್ಯಕ್ತಪಡಿಸಿದರು. ಮಿ|| ಹರ್ಡೇಕರ ಲಿಂಗರಾಜ ಪ್ರೆಸ್ಸಿನ ಮಾಲಕ ಇವರು ಸಾರ್ವಜನಿಕ ಕೆಲಸಮಾಡುವ ಕಾಲಕ್ಕೆ ಸಣ್ಣಪುಟ್ಟ ತಪ್ಪುಗಳು ಮುಖಂಡರಿಂದ ಆಗೇಆಗುವವು. ಮನುಷ್ಯನು ಸಹಜವಾಗಿ ಓಡಾಡುತ್ತಿದ್ದರೂ ಹತ್ತೆಂಟು ಇರುವೆಗಳು ಅವನ ಕಾಲಕೆಳಗೆ ಸಿಕ್ಕಿ ಸತ್ತೇ ಸಾಯುವವು. ಇಂಥ ತಪ್ಪುಗಳು ಅನಿವಾರ್ಯವಾಗಿರುವವು. ಜನರು ಇವುಗಳಿಂದ ತಮ್ಮ ಮನಸ್ಸನ್ನು ಕಲುಷಿತವಾಗಗೊಡದೆ ಯೋಗ್ಯವಿಚಾರದಿಂದ ಮುಖಂಡರಿಗೆ ಬೆಂಬಲ ಕೊಡಬೇಕೆಂದು ಜನರಿಗೆ ಉಪದೇಶಪರ ಭಾಷಣಮಾಡಿದರು. ಇದೇ ಪ್ರಕಾರ ಹಲವು ಸದ್ಗೃಹಸ್ಥರ ಭಾಷಣಗಳಾದ ಬಳಿಕ ಅಧ್ಯಕ್ಷರವರು ಸರಕಾರದಿಂದ ಪದವಿಗಳು ಎಂಥವರಿಗೆ ಸಿಗುವವು ಪದವೀಧರರ ಉಪಯೋಗವನ್ನು ಜನರು ಹೇಗೆ ಮಾಡಿಕೊಳ್ಳಬೇಕು. ಬ್ರಾಹ್ಮಣೇತರ ಚಳವಳಿ ಮಾಡುವವರ ಮೇಲೆ ಎಂಥ ಲೋಕಾಪವಾದಗಳು ಬರುವವು. ಬ್ರಾಹ್ಮಣೇತರರ ಬೇಡಿಕೆಗಳು ಹೇಗೆ ಸಮಂಜಸವಾದವುಗಳೂ ಸ್ವರಾಜ್ಯ ಸಂಪಾದನೆಗೆ ಅವಶ್ಯವಾದವುಗಳೂ ಇರುವವೆಂಬದನ್ನು ಚೆನ್ನಾಗಿಯೇ ವ್ಯಕ್ತಪಡಿಸಿ, ಕಂಬಳಿಯವರು ಮಾಡಿದ ಸಾರ್ವಜನಿಕ ಕೆಲಸದ ಮಾನದಿಂದ ನೋಡಿದರೆ ಇದಕ್ಕಿಂತ ಹೆಚ್ಚಿನ ಪದವಿಯು ಶಿಗುವದು ಅವಶ್ಯವಾಗಿತ್ತು. ಅದು ತೀವ್ರವಾಗಿ ಶಿಗಬಹುದು ಎಂದು ಹೇಳಿದರು.

ಕಡೆಗೆ ರಾವಬಹಾದ್ದೂರ ಕಂಬಳಿಯವರು ಯಾವನೊಬ್ಬ ವ್ಯಕ್ತಿಯು ಎಷ್ಟೇ ಬುದ್ಧಿವಂತನಿರಲಿ ಎಷ್ಟೇ ಕರ್ತೃತ್ವಶಕ್ತಿಯುಳ್ಳವನಿರಲಿ ಜನರ ಬೆಂಬಲವೊಂದಿಲ್ಲದಿದ್ದರೆ ಅವನೊಬ್ಬನಿಂದ ಯಾವ ಕೆಲಸವೂ ಆಗುವದಿಲ್ಲ. ಅಂಥ ದಿವಸಗಳು ಹೋದವು. ಇನ್ನು ಬರಲಾರವು. ನನ್ನ ಕೆಲಸದಲ್ಲಿ ಯಶಸ್ಸು ಶಿಗಲಿಕ್ಕೆ ನನ್ನ ಸ್ನೇಹಿತರೂ ನೀವು ಬಹಳೇ ಕಾರಣರಾಗಿರುವಿರಿ. ಸಾರ್ವಜನಿಕ ಕರ್ತವ್ಯ ಮಾಡುವಾಗ ತತ್ವದ ಕಡೆಗೆ ದೃಷ್ಟಿಯಿಡಬೇಕಲ್ಲದೆ ವ್ಯಕ್ತಿಯ ಕಡೆಗಲ್ಲವೆಂಬದನ್ನು ಲಕ್ಷ್ಯದಲ್ಲಿಡಿರಿ. ಈ ಕಾರಣದಿಂದ ಮ್ಯುನಿಸಿಪಾಲಿಟಿಯ ಕೆಲಸದಲ್ಲಾಗಲಿ, ಬೇರೆ ಕೆಲಸಗಳಲ್ಲಾಗಲಿ ಎಷ್ಟೋ ನನ್ನ ಸ್ನೇಹಿತರ ಕೂಡ ಸಹ ನಿಷ್ಠುರನಾಗಿ ವರ್ತಿಸುವ ಪ್ರಸಂಗಗಳು ಬಂದವು. ಶಿಕ್ಷಕರ ವಿಷಯವಾಗಿ ನನ್ನಲ್ಲಿ ಬಹಳೇ ಸಹಾನುಭೂತಿಯಿರುವದು. ಸರಕಾರದವರು ಎಷ್ಟೇ ಪಗಾರವನ್ನು ಅವರಿಗೆ ಹೆಚ್ಚಿಸಿದರೂ ಮ್ಯುನಿಸಿಪಾಲಿಟಿಯು ಎಷ್ಟೇ ಬಡತನ ಸ್ಥಿತಿಯಲ್ಲಿದ್ದರೂ ಅವರ ಕಡೆಗೆ ನಾನು ಎಂದೂ ದುರ್ಲಕ್ಷ್ಯಮಾಡಲಿಲ್ಲ. ಈಗ ಸಮಾರಂಭಮಾಡಿದ ಹುಬ್ಬಳ್ಳಿ ಶಹರ ಮತ್ತು ತಾಲ್ಲೂಕ ಶಿಕ್ಷಕ ಸೊಸೈಟಿಯವರು ಒಳ್ಳೇ ಹುರುಪಿನಿಂದ ಕೆಲಸಮಾಡುವವರಿರುತ್ತಾರೆ. ಸಾರ್ವಜನಿಕ ಕೆಲಸವನ್ನು ಹೇಗೆ ಮಾಡಬೇಕೆಂಬದು ಇವರಿಗೆ ಚೆನ್ನಾಗಿ ಗೊತ್ತದೆ. ಇವರ ಸಂಬಂಧವು ನನಗೆ ಮೇಲಿಂದಮೇಲೆ ಬಂದಿರುತ್ತದೆ. ನನ್ನ ವಿಷಯದಲ್ಲಿ ಇವರ ಸಹಾನುಭೂತಿಯು ಎಷ್ಟಿರುವದೆಂಬದು ಇವತ್ತಿನ ದಿವಸ ಅವರು ಮಾಡಿದ ಉತ್ಸವದಿಂದ ತಮ್ಮೆಲ್ಲರಿಗೂ ಸಹಜವಾಗಿ ತಿಳಿಯುವಂತೆ ಅದೆ. ಇಂಥವರಿಂದ ಪಾನಸುಪಾರಿ ಮಾಡಿಸಿಕೊಳ್ಳಲಿಕ್ಕೆ ನನಗೆ ಒಳ್ಳೇ ಅಭಿಮಾನವೆನಿಸುತ್ತದೆ ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಬಳಿಕ ತಿಪ್ಪಾಚಾರಕ್ಕನುಸರಿಸಿ ಹಾರ ತುರಾಯಿ ಸುಗಂಧದ್ರವ್ಯಗಳನ್ನು ಅರ್ಪಿಸಿದ ಬಳಿಕ 9 ಘಂಟೆಯ ಸಮಯಕ್ಕೆ ಸಭೆಯ ಕಾರ್ಯವು ಮುಗಿಯಿತು. ಮಧ್ಯಮಧ್ಯದಲ್ಲಿ ಬಾಲಬಾಲಿಕೆಯರ ಗಾಯನವೂ ಸಂಭಾಷಣವೂ ನಡೆದದ್ದರಿಂದ ಸಭೆಯ ಕಾರ್ಯಕ್ಕೆ ಒಳ್ಳೇ ಕಳೆಯೇರಿತ್ತು. ಸೆಕ್ರೆಟರಿ.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಜನವರಿ ತಾ|| ೧೬ನೆಯ ಶನಿವಾರ.

H. H. THE MAHARAJA OF BARODA.

GOLDEN JUBILEE.

We feel happy to extend our greetings to the distinguished ruler of the sister State of Baroda who has had the unique good fortune to celebrate the Golden Jubilee of His Highness' reign on the 11th January 1926. The Gaekwar of Baroda whose accession to the throne forms a most romantic episode, having left the plough to the Palace in his 12th year, has ruled his State in a singularly able and bold manner for fifty years, and has earned a fitting name as one of the most progressive Rulers of India. His zeal for reform and progress has been no less than his statesmanship and administrative capacity. Little wonder then that the Gaekwar should be so popular in his State and that they should have celebrated his Golden Jubilee with such great *eclat* and rejoicings. His Highness was presented with a number of addresses on the occasion to which in an extempore speech he gave a most suitable and what is, from the point of view of India, a significant reply. His Highness likened the different communities to the variegated colours of a carpet which had an inner harmony and declared that nothing could prevent India from being a united nation. The only obstacle, His Highness said, was ignorance which he wanted to be obliterated. Further, he said that his zeal for reforms had not, in the least, decreased. His Highness has introduced, as is well-known, many progressive measures in the State. He exhorted them to improve their physique and to stop early marriages, an advice which is so much needed in our land. The Gaekwar admired the powers of assimilation of Indian people, and asked them to give up their social weakness, and grasp all that was best in foreign cultures. He asked the people to march boldly along, with unflincing courage, dropping all that was rusty and out of date. Wise words indeed, which the entire India has to take note of. There could be no hope for India unless it marches ahead which is only possible if those things that are acting as a dead weight are cast off. His Highness had good praise for the Indian civilisation, for nobody could mistake him to mean that it should lose its distinctive characteristics which are the pride of India. But if Indian civilisation is to become an effective factor for good to both India and the rest of the world it should assimilate the good points of foreign cultures. We hope that this address of His Highness the Gaekwar will set the minds athinking of that class of people in India who have a fetish that there is nothing for them to learn from the West and that a pure and simple reversion to old order of things is all that is necessary for India to become great once more. This atavistic policy is neither possible nor desirable. Would not the combination of the peculiar national virtues of simplicity, plain living, of godliness, of self-sacrifice and capacity to suffer with those prime virtues of the western nations such as organisation, quest for knowledge, enterprise and patriotism bring about the desired consummation, and lead us on to a happier state? We are glad that the Gaekwar has sounded this note for unity and progress at a time like this when it is needed most and indicated the lines on which the nation has to proceed to achieve the end. May we not pray that His Highness the Maharaja of Baroda will live long to guide his people and by his beneficent rule lead his State onward on the path of progress.

ಬರೋಡಾ ಗೋಲ್ಡನ್ ಜೂಬಲಿಯುತ್ಸವವು.

ಶ್ರೀಮನ್ಮಹಾರಾಜ ಸಯ್ಯಾಜಿರಾವ್ ಗಾಯಕವಾರರವರು ಬರೋಡಾಸಂಸ್ಥಾನವನ್ನು ಕಳೆದ ಅರ್ಧಶತಮಾನದಿಂದಲೂ ಪ್ರಜಾರಂಜಕವಾಗಿ ಪರಿಪಾಲಿಸುತ್ತಿರುವುದರ ಸಂತೋಷಾರ್ಥವಾಗಿ ಅಲ್ಲಿಯ ಪ್ರಜೆಗಳು ಕಳೆದ ತಾ|| 11ರಲ್ಲಿ ಶ್ರೀಮನ್ಮಹಾರಾಜರವರ ಗೋಲ್ಡನ್‌ಜೂಬಲಿಯುತ್ಸವವನ್ನು ಅತ್ಯಂತ ವೈಭವದಿಂದಲೂ, ರಾಜಭಕ್ತಿಯಿಂದಲೂ ನೆರವೇರಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿದರು. ಆ ದಿವಸ ರಾಜಧಾನಿಯು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟು ಶ್ರೀಮನ್ಮಹಾರಾಜದಂಪತಿಗಳ ಆಯುರಾರೋಗ್ಯವನ್ನು ಕುರಿತು ದೇವಾಲಯಗಳಲ್ಲೂ ಮಸೀತಿಗಳಲ್ಲೂ ಪ್ರಾರ್ಥನೆಯು ನಡೆಯಿಸಲ್ಪಟ್ಟಿತು. ಸಮಸ್ತ ವರ್ಣದವರೂ ಬಡಬಗ್ಗರಿಗೆ ಅನ್ನವಸ್ತ್ರದಾನಗಳನ್ನು ಯಥೇಷ್ಟವಾಗಿಮಾಡಿ ತಾವೂ ಸುಖಭೋಜನದಿಂದಲೂ ವಸ್ತ್ರಾಲಂಕಾರದಿಂದಲೂ ಸಂತೃಪ್ತರಾಗಿ ರಾಜವೀಧಿಯ ಇಕ್ಕೆಲದಲ್ಲೂ, ಮಾಡಗಳಮೇಲೂ ಕಿಕ್ಕಿರಿದು ನಿಂತಿದ್ದರು. ಶ್ರೀಮನ್ಮಹಾರಾಜದಂಪತಿಗಳು ದಿವ್ಯವಸ್ತ್ರಾಭರಣವಿಭೂಷಿತರಾಗಿ ಸಾಲಂಕೃತವಾದ ಮಹಾಗಜದಮೇಲಿನ ಅಂಬಾರಿಯಲ್ಲಿ ಕುಳಿತು ಚತುರಂಗಸೇನಾಪರಿವೃತರಾಗಿ ವಾದ್ಯವೈಭವಗಳಿಂದ ದಾರಿಯುದ್ದಕ್ಕೂ ಉತ್ಸವಗೊಂಡು ದೇವಲೋಕವನ್ನು ಮರೆಯಿಸುವಂತೆ ಶೃಂಗರಿಸಲ್ಪಟ್ಟಿದ್ದ ಲಕ್ಷ್ಮೀವಿಲಾಸಮಂದಿರದ ಉದ್ಯಾನದಲ್ಲೇರ್ಪಡಿಸಲ್ಪಟ್ಟಿದ್ದ ವಿಶಾಲವಾದ ಸಭಾಮಂಟಪಕ್ಕೆ ಚಿತ್ತೈಸಿ ವೇದಿಕೆಯಮೇಲೆ ಅಲಂಕರಿಸಲ್ಪಟ್ಟಿದ್ದ ಉಚಿತಾಸನಾಸೀನರಾದರು. ಅವರ ಉಭಯಪಾರ್ಶ್ವಗಳಲ್ಲೂ, ಹಿಂಭಾಗದಲ್ಲೂ ರಾಜಕುಟುಂಬದವರೂ, ಅಧಿಕಾರಿಗಳೂ, ಸರದಾರರುಗಳೂ ಕುಳಿತುಕೊಂಡರು. ಆಗ ಎಲ್ಲ ಸಂಘದವರಿಂದಲೂ ಬೇರೆಬೇರೆ ಭಾಷೆಗಳಲ್ಲಿ ಸನ್ಮಾನಪತ್ರಗಳು ಅರ್ಪಿಸಲ್ಪಟ್ಟವು. ನಮ್ಮ ಸಮಾನಸಂಸ್ಥಾನಾಧೀಶ್ವರರಾದ ಆ ಪ್ರಖ್ಯಾತ ಬರೋಡಾ ಗಾಯಕವಾರ ಮಹಾರಾಜರವರು ಅಪೂರ್ವತರವಾದ ಜೂಬಲಿಮಹೋತ್ಸವಗೊಂಡುದಕ್ಕಾಗಿ ನಾವು ನಮ್ಮಾನಂದೋದ್ಗಾರವನ್ನು ಮಾಡದೆ ಇರಲಾರೆವು. ಈ ಮಹಾರಾಜರು ತಮ್ಮ ಹನ್ನೆರಡನೆಯ ಬಾಲ್ಯವಯಸ್ಸಿನಲ್ಲೇ ಪಟ್ಟಾಭಿಷಿಕ್ತರಾಗಿ 50 ವರ್ಷಗಳಿಂದ ವಿಶೇಷ ಸಾಮರ್ಥ್ಯದಿಂದಲೂ, ಧೈರ್ಯದಿಂದಲೂ ರಾಜ್ಯಭಾರವನ್ನುಮಾಡಿ ಪ್ರವರ್ಧಮಾನರಾಗಿರುವ ಸಂಸ್ಥಾನಾಧೀಶ್ವರರುಗಳಲ್ಲೊಬ್ಬರೆಂದು ಖ್ಯಾತಿಗೊಂಡಿರುವರು. ಇವರಿಗೆ ರಾಜ್ಯಭಾರನಿರ್ವಹಣಸಾಮರ್ಥ್ಯವಿರುವಂತೆ ಸುಧಾರಣಾಸಕ್ತಿಯೂ ವಿಶೇಷವಾಗಿರುತ್ತದೆ. ಅದುಕಾರಣವೇ ಅವರು ಅಷ್ಟು ಪ್ರಜಾರಂಜಕರಾಗಿರುವುದರಲ್ಲಿ ಮತ್ತು ಈ ಗೋಲ್ಡನ್‌ಜೂಬಲಿಯು ಅತ್ಯಂತ ಅಟ್ಟಹಾಸದಿಂದಲೂ, ಸಂತೋಷದಿಂದಲೂ ಮಾಡಲ್ಪಟ್ಟುದಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲವು. ಮಹಾರಾಜರವರು ತಮಗೊಪ್ಪಿಸಲ್ಪಟ್ಟ ಅನೇಕ ಸನ್ಮಾನಪತ್ರಿಕೆಗಳಿಗೆ ಪೂರ್ವಸಿದ್ಧತೆಯಿಲ್ಲದೆಯೇ ಉತ್ತರವನ್ನು ಕೊಡುವಾಗ್ಗೆ, ಅಂತರ್ಗತಸ್ವಾರಸ್ಯವನ್ನೊಳಗೊಂಡಿರುವ ರತ್ನಗಂಬಳಿಯ ನಾನಾಬಣ್ಣಗಳಿಗೆ ಬೇರೆಬೇರೆ ವರ್ಣದವರನ್ನು ಹೋಲಿಸಿ, ಭಾರತೀಯರು ಸಂಯುಕ್ತಜನಾಂಗವಾಗಲು ಯಾವುದೂ ಪ್ರತಿಬಂಧಿಸುವುದಿಲ್ಲವಾದರೂ ಜನರ ಅವಜ್ಞತೆಯೊಂದು ಮಾತ್ರ ಪ್ರತಿಬಂಧಕವಾಗಿರುವುದರಿಂದ ಅದು ತೊಡೆದುಹೋಗಬೇಕೆಂದೂ, ಸುಧಾರಣೆಯ ವಿಚಾರದಲ್ಲಿ ತಮ್ಮ ಆಸಕ್ತಿಯು ಲೇಶಮಾತ್ರವೂ ಕಡಿಮೆಯಾಗಿಲ್ಲವೆಂದೂ, ದೇಹಶಕ್ತಿಗೆ ಪ್ರತಿಬಂಧಕವಾಗಿರುವ ಬಾಲ್ಯವಿವಾಹವನ್ನು ತಪ್ಪಿಸಬೇಕೆಂದೂ, ಭಾರತೀಯರ ಜಾತೀಯತಾಪ್ರಯತ್ನಶಕ್ತಿಯನ್ನು ತಾವು ಮೆಚ್ಚಿರುತ್ತೇವೆಂದೂ, ಸಾಮಾಜಿಕ ಸುಧಾರಣೆಯ ವಿಚಾರದಲ್ಲಿರುವ ತಮ್ಮ ಬಲಹೀನತೆಯನ್ನು ಜನರು ಬಿಟ್ಟು ಪಾಶ್ಚಾತ್ಯನಾಗರಿಕತೆಯಲ್ಲಿ ಅತ್ಯುತ್ತಮವಾದವುಗಳನ್ನು ಅನುಕರಿಸಬೇಕೆಂದೂ, ಹಳೇಕಂದಾಚಾರಗಳನ್ನು ಬಿಟ್ಟು ಧೈರ್ಯದಿಂದ ಮುಂದುವರಿಯಬೇಕೆಂದೂ, ತಮಗೆ ಪ್ರತಿಬಂಧಕಗಳಾದವುಗಳನ್ನೆಲ್ಲಾ ಧೈರ್ಯದಿಂದ ಮುಂದೆನುಗ್ಗಿ ನಿರ್ಮೂಲಗೊಳಿಸದಹೊರತು ಭರತಖಂಡವು ಅಭಿವೃದ್ಧಿಯಾಗುವ ಸಂಭವವಿಲ್ಲವೆಂದೂ, ಭಾರತೀಯರ ನಾಗರಿಕತೆಯು ಪ್ರಪಂಚಕ್ಕೇ ಆದರ್ಶಪ್ರಾಯವಾಗಿರುವುದರಿಂದ ಅದರ ಯೋಗ್ಯತೆಯನ್ನು ಹಾಳುಮಾಡಿಕೊಳ್ಳಲಾಗದೆಂದೂ, ಅದು ಪೌರ್ವಾತ್ಯಪಾಶ್ಚಾತ್ಯದೇಶಗಳೆರಡಕ್ಕೂ ಸಮಂಜಸವಾಗಿರಬೇಕಾದಲ್ಲಿ ಪಾಶ್ಚಾತ್ಯನಾಗರಿಕತೆಯಲ್ಲಿ ಉತ್ತಮವಾದ ಭಾಗವು ಸಂಗ್ರಹಿಸಲ್ಪಡಬೇಕೆಂದೂ ಅಪ್ಪಣೆ ಕೊಡಿಸಿದರು. ಶ್ರೀಮನ್ ಗಾಯಕವಾರಮಹಾರಾಜರವರ ಈ ಬೋಧೆಯು, ಭರತಖಂಡವು ತನ್ನ ಗತವೈಭವವನ್ನು ಸಂಪಾದಿಸಲು ಪೂರ್ವಾಚಾರಪುನರುದ್ಧಾರದವಿನಾ ಪಾಶ್ಚಾತ್ಯಾನುಕರಣವೇನೂ ಆವಶ್ಯಕವಿಲ್ಲವೆಂದು ವಾದಿಸುವ ಕೆಲ ಭಾರತಮಹಾಶಯರಿಗೆ ಬುದ್ಧಿವಿಕಾಸವನ್ನುಂಟುಮಾಡುವುದೆಂದು ನಿರೀಕ್ಷಿಸುತ್ತೇವೆ. ಅಂತಹವರ ಪ್ರಯತ್ನವು ಅಸಾಧ್ಯವಾಗಿರುವುದಲ್ಲದೆ ಅನಾವಶ್ಯಕವಾಗಿರುತ್ತದೆ. ನಿರಾಡಂಬರಜೀವನ, ದೈವಭಕ್ತಿ, ಸ್ವಾರ್ಥತ್ಯಾಗಾದಿ ಭಾರತೀಯ ಅಪೂರ್ವಗುಣಗಳೊಂದಿಗೆ, ರಚನಾಕ್ರಮ, ಜ್ಞಾನಾರ್ಜನಾಭಿಲಾಷೆ, ಸಾಹಸ, ದೇಶವಾತ್ಸಲ್ಯ ಇತ್ಯಾದಿ ಪಾಶ್ಚಾತ್ಯ ಮುಖ್ಯ ಸುಗುಣಗಳನ್ನು ಸಮಾವೇಶಗೊಳಿಸುವುದರಿಂದ ಉದ್ದಿಷ್ಟಫಲಪ್ರಾಪ್ತವಾಗಿ ನಾವು ಇನ್ನೂ ಹೆಚ್ಚು ಸುಖವನ್ನನುಭವಿಸುವುದಕ್ಕಾಗುವುದಿಲ್ಲವೆ? ಪ್ರಕೃತಸ್ಥಿತಿಯಲ್ಲಿ ಭಾರತೀಯರ ಏಕಮತ್ಯಕ್ಕೂ, ಅಭಿವೃದ್ಧಿಗೂ ತಕ್ಕ ಬುದ್ಧಿವಾದವನ್ನು ಗಾಯಕವಾರ ಮಹಾರಾಜರವರು ಹೇಳಿ ಅವನ್ನು ಸಂಪಾದಿಸುವ ಮಾರ್ಗವನ್ನು ತೋರಿಸಿಕೊಟ್ಟಿರುವುದು ಅತ್ಯಂತ ಸಂತೋಷಪ್ರದವಾಗಿದೆ. ಶ್ರೀಮನ್ ಬರೋಡಾ ಮಹಾರಾಜರವರು ದೀರ್ಘಾಯುಷ್ಮಂತರಾಗಿದ್ದು ತಮ್ಮ ಪೂರ್ಣ ಲೋಕಾನುಭವದಿಂದಲೂ, ಬುದ್ಧಿಶಕ್ತಿಯಿಂದಲೂ ಪ್ರಜೆಗಳನ್ನು ಪರಿಪಾಲಿಸುತ್ತ ತಮ್ಮ ಸಂಸ್ಥಾನವನ್ನು ಇತೋಪ್ಯತಿಶಯವಾಗಿ ಅಭಿವೃದ್ಧಿಗೊಳಿಸುವವರಾಗುವಂತೆ ಆ ದಯಾಮಯನಾದ ಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಬ್ರಿಟಿಷ್ ರೈಲ್ವೆಯ ಪ್ರಮಾದವು.

ಹೋದವರ್ಷ ಬ್ರಿಟಿಷ್ ರೈಲ್ವೆಪ್ರಯಾಣಿಕರಲ್ಲಿ ಒಂದು ಮರಣವು ಮಾತ್ರವಾಗಿದ್ದಿತು. ಇದಾದರೂ ಆ ಪ್ರಯಾಣಿಕನ ಹೃದಯಕೋಶವು ಬಹಳ ದುರ್ಬಲವಾಗಿದ್ದುದರಿಂದ ಸಂಭವಿಸಿತು. ಕಳೆದ 20 ವರ್ಷಗಳಲ್ಲೆಲ್ಲಾ 1901 ಮತ್ತು 1904 ರಲ್ಲಿ ಮಾತ್ರ ಎರಡೇ ಎರಡು ರೈಲ್ವೆ ಪ್ರಮಾದವುಂಟಾಗಿ ಇಬ್ಬರು ಸತ್ತಿದ್ದರು. ಅತ್ಯಂತ ಜನಭರಿತವಾಗಿರುವ ಬ್ರಿಟಿಷ್ ರಾಜ್ಯದಲ್ಲಿ 60 ಮೈಲಿಗೆ ಕಡಿಮೆ ಇಲ್ಲದ ವೇಗದಲ್ಲಿ ಹೋಗುವ ರೈಲ್ವೆಗಳಿಂದ 20 ವರ್ಷ ಕಾಲದಲ್ಲಿ ಇಬ್ಬರು ಪ್ರಯಾಣಿಕರು ಮಾತ್ರ ಮೃತರಾಗಿರುವುದು, ಜನಸಾಂದ್ರತೆಯು ಹೆಚ್ಚಾಗಿಲ್ಲದೆ ಗಂಟೆಯೊಂದಕ್ಕೆ 40 ಮೈಲಿಗೆ ಹೆಚ್ಚಿಲ್ಲದ ವೇಗದಿಂದ ಹೋಗುವ ಭರತಖಂಡದ ರೈಲ್ವೆಗಳಲ್ಲಿ ಪದೇ ಪದೇ ಅನೇಕ ಅನಾಹುತಗಳು ನಡೆದು ಬಹುಜನ ಪ್ರಯಾಣಿಕರು ಮೃತರಾಗುತ್ತಿರುವುದನ್ನು ನೋಡಿರುವ ಮತ್ತು ಕೇಳಿರುವ ಭಾರತೀಯರಿಗೆ ಪರಮಾಶ್ಚರ್ಯವಾಗಿ ತೋರುತ್ತದೆ. ಅಲ್ಲಿಯ ರೈಲ್ವೆಯವರು ಏನಾದರೂ ಅಪಾಯಸಂಭವಿಸಿದಲ್ಲಿ ನಷ್ಟಪಟ್ಟವರಿಗೆ ಹೆಚ್ಚಾದ ಪರಿಹಾರದ್ರವ್ಯವನ್ನು ತೆರಬೇಕಾಗಿರುವುದರಿಂದ, ಅನಾಹುತವು ಜರುಗದಂತೆ ಬಹು ಎಚ್ಚರಿಕೆಯಿಂದ ನಡೆಯಿಸುತ್ತಿರುವರು. ಆದರೆ ಈ ಭರತಖಂಡದಲ್ಲಿ ರೈಲ್ವೆ ಅನಾಹುತಕ್ಕೆ ಅಷ್ಟೊಂದು ಗಮನ ಕೊಡಲ್ಪಡದಿರುವುದರಿಂದಲೂ, ಒಂದುವೇಳೆ ಶಿಕ್ಷಿಸಲ್ಪಟ್ಟರೂ ಬಹುಸ್ವಲ್ಪವಾದ ಶಿಕ್ಷೆ ಕೊಡಲ್ಪಡುವುದರಿಂದಲೂ ರೈಲ್ವೆಯಾಡಳಿತದವರು ಎಚ್ಚರಿಕೆಯೂ ಭಯವೂ ಇಲ್ಲದೆ ಹೋಲಾಯಮಾನಮಾನಸರಾಗಿರುವುದರಿಂದ ವಿಶೇಷವಾದ ಅನಾಹುತವು ನಡೆಯಲು ಮುಖ್ಯಕಾರಣವಾಗಿದೆ.

ಇಬ್ನ್‌ಸದ್‌ದೊರೆ.

ಮಹಮ್ಮದೀಯರ ಪವಿತ್ರಸ್ಥಾನವಾದ ಹೆಡ್ಜಾಜಿನಮಕ್ಕಾ ಪಟ್ಟಣವು ರಾಜಪರಿಪಾಲನಕ್ಕೊಳಪಟ್ಟಿರಬೇಕೆಂದು ಕೆಲರೂ, ಪ್ರಜಾಸ್ವಾಮ್ಯಕ್ಕೊಳಪಟ್ಟಿರಬೇಕೆಂದು ಮತ್ತೆ ಕೆಲರೂ ಹೋರಾಡುತ್ತಿದ್ದು ಈಗ ಇಬ್ನ್‌ಸದ್‌ರವರು ಅದರ ದೊರೆಯಾಗಿರುವರೆಂದು ಪ್ರಕಟಿಸಲ್ಪಟ್ಟಿರುವುದಾಗಿ ತಿಳಿಯಬಂದಿದೆ. ಇದರಿಂದ ಪವಿತ್ರಸ್ಥಲವನ್ನು ರಕ್ಷಿಸುವ ಭಾರವು ಇಬ್ನ್‌ಸದ್‌ರವರ ಮೇಲೆ ಬಿದ್ದಂತಾಗಿರುವುದು. ಈಗಲೂ ಪ್ರಜಾಸ್ವಾಮ್ಯವನ್ನು ಅಪೇಕ್ಷಿಸುವವರು ಇದ್ದೇ ಇರುವರು. ಇಬ್ನ್‌ಸದ್‌ರವರು ಮಹಮ್ಮದೀಯರ ಅಭಿಪ್ರಾಯಾನುಸಾರವಾಗಿ ಪರಿಪಾಲನ ಮಾಡಬೇಕಾಗಿರುವುದರಿಂದ ಪ್ರಪಂಚದ ಮಹಮ್ಮದೀಯರ ಮಹಾಸಭೆಯನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಾಗಿ ವಾಗ್ದಾನಮಾಡಿರುವರು. ಇವರು ಮಹಮ್ಮದೀಯ ಪ್ರಪಂಚಕ್ಕೆ ಟ್ರಸ್ಟಿಯಾಗಿ ರಾಜ್ಯಭಾರವನ್ನು ಮಾಡುತ್ತಿರಬೇಕಾಗಿರುವುದರಿಂದ, ತಮ್ಮ ವಾಗ್ದಾನದಂತೆ ಕೂಡಲೆ ಮಹಮ್ಮದೀಯರ ಮಹಾಸಭೆಯನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಆ ರೀತಿ ನಡೆಯದಿದ್ದಲ್ಲಿ ದೊಡ್ಡ ಆಂದೋಳನವು ನಡೆದು ಮಹಾನರ್ಥವಾಗುವುದರಲ್ಲಿ ಸಂದೇಹವಿಲ್ಲವು. ಆದರೆ ಇಬ್ನ್‌ಸದ್‌ರವರು ಬಹಳ ದೂರದರ್ಶಿಗಳೂ, ರಾಜಕೀಯವಿಶಾರದರೂ ಆದುದರಿಂದ ಅನರ್ಥಕ್ಕೆ ಅವಕಾಶವನ್ನು ಕೊಡಲಾರರೆಂದು ಹೇಳಬಹುದಾಗಿದೆ.

ಸ್ವದೇಶದ ವೃತ್ತಾಂತಗಳು.

ಬೆಂಗಳೂರುದಂಡಿನ ಕ್ಯಾವಲ್ರಿ ರೋಡಿನಲ್ಲಿ 90 ವರ್ಷ ವಯಸ್ಸಿನ ವೃದ್ಧಬ್ರಾಹ್ಮಣಸ್ತ್ರೀಯು ಕಳೆದ ತಾ|| 13ರ ರಾತ್ರಿ ಭಾವಿಗೆಬಿದ್ದು ಸತ್ತುಹೋದಳು.

ಬೆಂಗಳೂರು ರೆಸಿಡೆಂಟರಬಂಗಲೆಯಲ್ಲಿ 200 ರೂ. ಬೆಲೆಯ ಬೆಳ್ಳೀ ಪದಾರ್ಥಗಳೂ ಇತರ ಸಾಮಾನುಗಳೂ ಕಳುವಾಗಿದ್ದುವು ಕಂಡುಹಿಡಿಯಲ್ಪಟ್ಟು ಇಬ್ಬರು ಸೆರೆಯಲ್ಲಿಡಲ್ಪಟ್ಟಿರುತ್ತಾರಂತೆ.

ನಂಜನಗೂಡು ತಾ|| ಕೌಲಂದೆಗೆಸೇರಿದ ಬಳಗಲಿಗ್ರಾಮದ ಬಸವನರಾಮ ಉರಫ್ ಹೆಳಕನೆಂಬುವವನು ಜೇಮಾರನಹಳ್ಳಿ ಮಲ್ಲಯ್ಯನಿಂದ ಹೊಲದಲ್ಲಿ ಕೊಂದುಹಾಕಲ್ಪಟ್ಟನೆಂದು ಪೊಲೀಸಿನವರು ತಿಳಿದು ವಿಚಾರಣೆಯನ್ನು ನಡೆಯಿಸುತ್ತಿರುವರು.

ಮೈಸೂರು ಮೆಡಿಕಲ್‌ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಮೈಲ್ವಾಹಗಂರವರು ತಮ್ಮುದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟಿರುವುದಾಗಿ ವರ್ತಮಾನವಿದೆ. ಇದು ನಿಜವಾಗಿದ್ದು ಸರ್ಕಾರದವರಿಂದ ಅಂಗೀಕರಿಸಲ್ಪಡುವುದಾದರೆ ಕಾಲೇಜು ತನ್ನ ಬಾಲ್ಯಾವಸ್ಥೆಯಲ್ಲೇ ಸಮರ್ಥರಾದ ಬೋಧಕರ ಸಹಾಯವನ್ನು ಕಳೆದುಕೊಳ್ಳುವುದು ಅತ್ಯಂತಶೋಚನೀಯವು.

ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಿ|| ಟಿ. ಎಸ್. ಅಲ್ಲಿಖಾನ್‌ರವರು ಸಂಪದಭ್ಯುದಯಪತ್ರಿಕಾ ಸಂಪಾದಕರಮೇಲೂ ಪ್ರೊಪ್ರೈಟರಮೇಲೂ ಮಾಡಿರುವ ಮಾನನಷ್ಟದ ವಿವಾದದಲ್ಲಿ ಫಿರ್ಯಾದಿ ಮಿ|| ಅಲ್ಲಿಖಾನ್‌ರವರ ಎಕ್ಸಾಮಿನೇಷನ್ನು ಈ ತಾ|| 12 ರಲ್ಲಿ ಆರಂಭವಾಗಿ ತಾ|| 13 ರಲ್ಲಿ ಮುಗಿದಿತು. ಈ ತಾ|| 18 ರಲ್ಲಿ ಅಪರಾಧಿಗಳು ತಮ್ಮ ಸ್ಟೇಟ್ಮೆಂಟನ್ನು ಕೊಡಲು ಮತ್ತು ತಾ|| 22 ಮತ್ತು 23 ರಲ್ಲಿ ಉಭಯಪಕ್ಷದ ಆರ್ಗ್ಯುಮೆಂಟು ನಡೆಯಲು ಗೊತ್ತುಮಾಡಲ್ಪಟ್ಟಿರುವುದು.

ಹುಬ್ಬಳ್ಳಿಯ ಮ್ಯುನಿಸಿಪಲ್‌ಕೌನ್ಸಿಲ್‌ಪ್ರೆಸಿಡೆಂಟರಾಗಿಯೂ, ಪ್ರಸಿದ್ಧ ವಕೀಲರಾಗಿಯೂ, ಬೊಂಬಾಯಿನ್ಯಾಯವಿಧಾಯಕಸಭಾ ಮೆಂಬರರಾಗಿಯೂ, ಇರುವ ಮ|| ಸಿದ್ದಪ್ಪ ಅಣ್ಣ ಕಂಬಳಿ, ಬಿ. ಎ., ಎಲ್‌ಎಲ್. ಬಿ., ಇವರಿಗೆ ರಾವ್ ಬಹದ್ದೂರ್ ಪ್ರಶಸ್ತಿಯು ಸಾರ್ವಭೌಮರವರಿಂದ ಲಭ್ಯವಾದುದಕ್ಕೋಸ್ಕರ ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ಅವರು ಹಿಂದುಳಿದ ಜನವರ್ಗದವರ ಅಭ್ಯುದಯಕ್ಕಾಗಿ ಹೆಚ್ಚು ಸಾಹಸಮಾಡಿ ಈಶ್ವರನ ಕೃಪೆಗೆ ಪಾತ್ರರಾಗಿ ಇತೋಪ್ಯತಿಶಯವಾದ ಪ್ರಶಸ್ತಿಯನ್ನು ಪಡೆಯುವವರಾಗಲೆಂದು ಕೋರುತ್ತೇವೆ.

ರಾಜಧಾನಿಯ ಮುಸ್ಲೀಂ ಫುಟ್‌ಬಾಲ್ ಕ್ಲಬ್ಬಿನವರೂ, ಮೈಸೂರು ಚಾಲಂಜ್‌ಯೂನಿಯನ್ನಿನವರೂ ಕಳೆದ ನವಂಬರ್ ತಾ|| 6 ರಲ್ಲಿ ಪಂದ್ಯದಮೇಲೆ ಆಟವಾಗುತ್ತಿರುವಾಗ್ಗೆ ಉಭಯರಿಗೂ ಕಲಹವಾಗಿ ಕೆಲ ಹಿಂದು ಆಟಗಾರರಿಗೂ, ನೋಟಕರಿಗೂ ಪೆಟ್ಟುಬಿದ್ದುದರಮೇಲೆ ಪೊಲೀಸರು 7 ಜನ ಮಹಮ್ಮದೀಯರನ್ನು ಹಿಡಿದು ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು. ಇದರ ವಿಚಾರಣೆಯು ಕಳೆದ ತಾ|| 12ರಲ್ಲಿ ನಡಿಯಬೇಕಾಗಿದ್ದುದು ಅಪರಾಧಿಗಳು ಕೋರ್ಟಿಗೆ ಬರಲಿಲ್ಲವಾಗಿ ಫೆಬ್ರವರಿ ತಾ|| 8ಕ್ಕೆ ಅಡ್ಜರ್ನ್ ಮಾಡಲ್ಪಟ್ಟಿದೆ. ಪ್ರಾಸೆಕ್ಯೂಷನ್ ಪರ 17 ಜನರು ಸಾಕ್ಷಿನುಡಿಯುವವರಾಗಿರುವರು.

. ಈಗ ಬೊಂಬಾಯಿನಲ್ಲಿರುವ ಶ್ರೀಮನ್ಮಹಾರಾಜರವರ ಮತ್ತು ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯ ಸ್ವಾರಿಯು ಇಷ್ಟರಲ್ಲೇ ಕಾಶೀಪಟ್ಟಣಕ್ಕೆ ಚಿತ್ತೈಸುವುದು. ಇತ್ತಲಾಗಿ ಶ್ರೀಮದ್ಯುವರಾಜರವರ ಸ್ವಾರಿಯು ಮದ್ರಾಸುಮಾರ್ಗವಾಗಿ ಕಾಶೀಪಟ್ಟಣಕ್ಕೆ ದಯೆಮಾಡಿಸುವುದು. ಅಲ್ಲಿ ಕೆಲ ದಿನಗಳವರೆಗಿದ್ದು ಶ್ರೀ ವಿಶ್ವೇಶ್ವರನ ಸೇವೆಯನ್ನು ತೀರಿಸಿಕೊಂಡು ಎಲ್ಲರೂ ಕಲಕತ್ತಾಪಟ್ಟಣಕ್ಕೆ ಹೋಗಿ ಅಲ್ಲಿ ಕೈ|| ಶ್ರೀ ಚಾಮರಾಜೇಂದ್ರಒಡೆಯರವರ ಸಮಾಧಿಯನ್ನು ಪರಾಂಬರಿಸಿಕೊಂಡು ಶ್ರೀಮದ್ಯುವರಾಜರವರು ಮಹಾಮಾತೃಶ್ರೀಯವರೊಡನೆ ಹಿಂದಿರುಗಿ ದಯೆಮಾಡಿಸುವರೆಂದೂ, ಶ್ರೀಮನ್ಮಹಾರಾಜರವರು ಮಾತ್ರ ಕಲಕತ್ತಾದಿಂದ ಹರದ್ವಾರಪ್ರಾಂತ ಚಿತ್ತೈಸುವರೆಂದೂ ಕೇಳುತ್ತೇವೆ.

ರಾಜಧಾನಿಯ ಚಾಮರಾಜಮೊಹಲ್ಲಾ ಸೀತಾವಿಲಾಸ ಸತ್ರದಲ್ಲಿರುವ ಬೀರುವಾಳು ಮ|| ವೀರರಾಜಅರಸಿನವರು ಕಳೆದ ಎರಡುತಿಂಗಳಿಂದಲೂ ವೈದ್ಯರಚಿಕಿತ್ಸೆಯಲ್ಲಿರುವ ತಮ್ಮ ತಾಯಿಯವರ ಸೇವೆಗಾಗಿ ನೇಮಕಮಾಡಿದ್ದ ಪರಿವಾರಜಾತಿಯ 8-9 ವರ್ಷ ವಯಸ್ಸಿನ ಕ್ಯಾತನೆಂಬ ಹುಡುಗನು ಕಳೆದ ತಾ|| 31ರಲ್ಲಿ ಸತ್ರವನ್ನು ಬಿಟ್ಟು ಹೊರಗೆಹೋದವನು ಈವರೆಗೂ ಬಂದಿಲ್ಲವಾದುದರಿಂದ, ಕಪ್ಪುಬಣ್ಣ, ಕಾಮಾಲೆರೋಗದಿಂದ ಕೆನ್ನೆಗಳೂದಿವೆ, ಕಣ್ಣು ಹಚ್ಚಗಿವೆ, ಕಾಲುಗಳು ಸಣ್ಣಗಿವೆ, ತಲೆಕೂದಲು ಕತ್ತರಿಸಲ್ಪಟ್ಟು ಬೋಳಾಗಿದೆ ಈ ಗುರ್ತುಗಳು ಮತ್ತು ಕಾಕಿಬನಿಯನ್ನು ಚಕ್ಕಿನಕೋಟು ಕಪ್ಪುಚಡ್ಡಿ ಕೆಂಪುನೂಲಿನ ಹಾಸನದ ಟೋಪಿ ಇವುಗಳನ್ನು ಧರಿಸಿರುವ ಮೇಲ್ಕಂಡ ಕ್ಯಾತನನ್ನು ಹುಡುಕಿ ತಮಗೆ ತಿಳಿಸಿದರೆ ಬಹುಮಾನವನ್ನು ಕೊಡುವುದಾಗಿ ಈಮೂಲಕ ತಿಳಿಸಿರುತ್ತಾರೆ.

ನಾಗಮಂಗಲ ತಾ|| ಬೆಳ್ಳೂರಿನಲ್ಲಿ ಅಲ್ಲಿಯ ಸಾಹುಕಾರ್ ಮ|| ಗಂಗಪ್ಪನವರು 6000 ರೂ. ಗಳ ವ್ಯಯದಿಂದ ಕಟ್ಟಿಸಲೆತ್ನಿಸಿರುವ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯು ಕಳೆದ ತಾ|| 6 ರಲ್ಲಿ ಮೈಸೂರು ಡೆಪ್ಯುಟಿಕಮಿಷನರವರಿಂದ ನಡೆಯಿಸಲ್ಪಟ್ಟಿತು. ಈ ಸಮಾರಂಭಕ್ಕೆ ರಾಜಧಾನಿಯಿಂದ ಆಸ್ಥಾನವಿದ್ವಾನ್ ವೇ|| ಎ. ಶಾಂತಿರಾಜಶಾಸ್ತ್ರಿಗಳು, ಮ|| ಗಳಾದ ಎಂ. ಸಿ. ಲಕ್ಷ್ಮೀಪತಯ್ಯ, ಬಿ.ಎ., ಯವರು, ಧರಣೇಂದ್ರಯ್ಯ, ಬಿ.ಎ., ಯವರು ನಾಗರಾಜಯ್ಯನವರು, ಪದ್ಮರಾಜಯ್ಯನವರು, ಅನಂತರಾಜಯ್ಯನವರು ಮೊದಲಾದ ದೊಡ್ಡಮನುಷ್ಯರುಗಳೂ, ಅಮಲ್ದಾರರು ಮೊದಲಾಗಿ ಸರ್ಕಾರಿಯಧಿಕಾರಿಗಳೂ ದಯೆಮಾಡಿಸಿದ್ದರು. ಧರ್ಮಕರ್ತರಾದ ಮ|| ಗಂಗಪ್ಪನವರ ಉದಾರಬುದ್ಧಿಯನ್ನು ಶ್ಲಾಘಿಸಿ ಬರೆದಿದ್ದ ಸನ್ಮಾನಪತ್ರಿಕೆಯನ್ನು ಮ|| ಎಂ. ಸಿ. ಲಕ್ಷ್ಮೀಪತಯ್ಯನವರು ಓದಿದ ತರುವಾಯ ಡೆ|| ಕಮಿಷನರವರು "ಜನರ ಆರೋಗ್ಯಭಾಗಕ್ಕೆ ಅತ್ಯವಶ್ಯಕವಾದ ಆಸ್ಪತ್ರೆಯುಪಯೋಗಕ್ಕಾಗಿ ಕಟ್ಟಡವನ್ನು ಮ|| ಗಂಗಪ್ಪನವರು ಕಟ್ಟಿಸಲೆತ್ನಿಸಿರುವುದು ಸ್ತುತ್ಯವೂ, ಇತರ ಶ್ರೀಮಂತರುಗಳಿಂದ ಅನುಕರಣೀಯವೂ ಆಗಿದೆ. ಈ ಧರ್ಮಕಾರ್ಯವಿಚಾರದಲ್ಲಿ ಸರ್ಕಾರದವರು ತಮ್ಮ ಸಂತೋಷವನ್ನು ತೋರ್ಪಡಿಸಿ ಇತರರೂ ಇಂತಹ ಧರ್ಮಕಾರ್ಯಗಳಲ್ಲಿ ನಿರತರಾಗುವಂತೆ ಪ್ರೋತ್ಸಾಹಿಸುತ್ತಾರೆಂದು ನಿರೀಕ್ಷಿಸುತ್ತೇನೆ. ತಲಕಾಡಿನ ಮ|| ಶಿವಲಿಂಗಪ್ಪನವರು ತಮ್ಮೂರಿನಲ್ಲಿ ಆಸ್ಪತ್ರೆಯನ್ನು ಕಟ್ಟಲು 5000 ರೂ. ಗಳನ್ನು ಕೊಡಲು ವಾಗ್ದಾನಮಾಡಿರುವುದು ಪ್ರಶಂಸನೀಯವಾಗಿದೆ.'' ಎಂದು ಮೊದಲಾಗಿ ಅಪ್ಪಣೆಕೊಡಿಸಿ ತಳಹದಿಯಕಲ್ಲುಸ್ಥಾಪನೆಮಾಡಿದಮೇಲೆ ಕಟ್ಟಡದ ಕೆಲಸಕ್ಕುಪಕ್ರಮವಾಯಿತು. ಆಹೂತರಾಗಿದ್ದ ದೊಡ್ಡಮನುಷ್ಯರುಗಳನ್ನೆಲ್ಲಾ ಮ|| ಗಂಗಪ್ಪನವರು ದಿವ್ಯವಾದ ಔತಣದಿಂದ ಸತ್ಕರಿಸಿ ತಮ್ಮೌದಾರ್ಯವನ್ನು ಪ್ರದರ್ಶಿಸಿದರು.

ವರ್ತಮಾನಸಂಗ್ರಹ.

ಮಹಾತ್ಮಗಾಂಧಿಯವರು ಖಾನ್ಪುರದಲ್ಲಿ ನಡೆದ ರಾಷ್ಟ್ರೀಯಮಹಾಸಭಾ ಕಾರ್ಯವನ್ನು ಪೂರೈಸಿಕೊಂಡು ಅಹಮದಾಬಾದಿಗೆ ಬಂದು ತಮ್ಮ ಸಬರಮತಿ ಆಶ್ರಮದಲ್ಲಿರುವರು, ಮತ್ತು ವೈದ್ಯರ ಅಪೇಕ್ಷೆಯಂತೆ ತಮ್ಮ ದೇಹಾರೋಗ್ಯಕ್ಕಾಗಿ ಇನ್ನೊಂದುವರ್ಷಕಾಲ ಎಲ್ಲೂ ಸಂಚರಿಸುವುದಿಲ್ಲವಾಗಿ ಸಂಕಲ್ಪಿಸಿರುವರಲ್ಲದೆ, ಆಶ್ರಮವನ್ನು ಸುವ್ಯವಸ್ಥೆಗೊಳಿಸಲು ಪ್ರಯತ್ನಿಸಿರುವರು.

ಪಾಟಿಯಾಲಾಮಹಾರಾಜರ ಮೋಟಾರುಬಂಡಿಯೊಂದು ಕಳೆದವಾರ ಮಹಾರಾಣಿಯವರ ನರಸುಗಳು, ಗೌಡಿಯರು ಮತ್ತೆ ಕೆಲವರನ್ನು ಕುಳ್ಳಿರಿಸಿಕೊಂಡು ದಿಲ್ಲಿ-ಅಂಬಾಲಾ-ಕಾಲ್ಕಾ ರೈಲ್ವೆಮಾರ್ಗವನ್ನು ದಾಟಿ ಬರುವಾಗ್ಗೆ ರೈಲುಬಂಡಿಗೆ ತಾಕು ಬಡಿದು ಉರುಳಿಕೊಂಡಿತು. ಈ ಅನಾಹುತದಿಂದ ಒಳಗೆ ಕುಳಿತಿದ್ದವರಲ್ಲಿ ಇಬ್ಬರು ನರಸುಗಳೂ, ನಾಲ್ವರುಗೌಡಿಯರೂ ಕೂಡಲೆ ಮೃತಪಟ್ಟರು; ಮತ್ತಿಬ್ಬರು ಗೌಡಿಯರೂ ಡ್ರೈವರೂ ಗಾಯವಡೆದರು.

ವೈಸ್‌ರಾಯ್‌ಲಾರ್ಡ್‌ರೀಡಿಂಗ್‌ರವರ ಪತ್ನಿಯವರು ಸಂಪೂರ್ಣ ಆರೋಗ್ಯವನ್ನು ಹೊಂದಿರುವುದರಿಂದ ದಂಪತಿಗಳು ಕಳೆದ ಶನಿವಾರ ಕಲಕತ್ತಾದಲ್ಲಿರುವ ರಾಜಭವನದಿಂದ ಸಕಲ ರಾಜಮರ್ಯಾದೆಯೊಡನೆ ರೈಲ್ವೆಸ್ಟೇಷನ್ನಿಗೆ ಬಂದು ರೈಲುಬಂಡಿಯನ್ನು ಹತ್ತಿ ದಿಲ್ಲಿಗೆ ಪ್ರಯಾಣಮಾಡಿದರು. ಅರಮನೆಯನ್ನು ಬಿಟ್ಟಾಗಲೂ ಸ್ಟೇಷನ್ನ ತಲುಪಿದಾಗಲೂ 31-31 ಗುಂಡುಗಳು ಹಾರಿಸಲ್ಪಟ್ಟುವು. ದಿಲ್ಲಿಯಲ್ಲಿ ಸರ್ಕಾರಿಯಧಿಕಾರಿಗಳೂ ಶಾಸನಸಭಾಮೆಂಬರುಗಳೂ ಇತರರೂ ಇದಿರ್ಗೊಂಡು ಮರ್ಯಾದಿಸಿ ಸುಖಾಗಮನವನ್ನು ಬಯಸಿದರು.

ಪ್ಯಾರಿಸ್‌ಪಟ್ಟಣವಾಸಿಯಾದ ಎಂ. ಊಲಿ ಎಂಬಾತನು ಉಪವಾಸವ್ರತವನ್ನು ಆಚರಿಸಬೇಕೆಂದು ಸಂಕಲ್ಪಿಸಿ ಒಂದು ಕೊಠಡಿಯೊಳಗೆ ಸೇರಿಕೊಂಡು ಅದರ ಬಾಗಿಲನ್ನು ಭದ್ರಪಡಿಸಿಕೊಂಡನು. ಈರೀತಿ ಹನ್ನೊಂದುದಿನಗಳು ಕಳೆಯುವುದರೊಳಗಾಗಿ ಆವನು ಕ್ಷುದ್ಬಾಧೆಯನ್ನು ತಡೆಯಲಾರದೆ ಗಾಜಿನ ಬಾಗಿಲನ್ನೊಡೆದುಹಾಕಿ ಹೊರಕ್ಕೆ ಬಂದು ಆಹಾರವನ್ನು ತೆಗೆದುಕೊಳ್ಳಲು ಆತುರಪಡುತ್ತಿದ್ದನು. ಆದರೆ ಉಪವಾಸದಿಂದ ದೇಹಶಕ್ತಿಯು ಕುಂದುಹೋಗಿ ನರಗಳು ನಿಶ್ಚೇತನವಾಗಿದ್ದುದರಮೇಲೆ ಡಾಕ್ಟರರನ್ನು ಬರಮಾಡಿಕೊಂಡು ತೋರಿಸುವಲ್ಲಿ ಅವರು ಪರೀಕ್ಷಿಸಿ ಆತನು ಬಹಳ ನಿತ್ರಾಣನಾಗಿರುವುದನ್ನು ಕಂಡು ಆಸ್ಪತ್ರೆಗೆ ಸಾಗಿಸಿ ಆಹಾರವನ್ನು ಕೊಟ್ಟು ಚೈತನ್ಯವನ್ನುಂಟುಮಾಡುತ್ತಿರುವರು.

ಬೊಂಬಾಯಿಸರ್ಕಾರದವರು ಅಲ್ಲಿಯ ಮಿಲ್ಲುಗಳಮೇಲೆ ಹಾಕಿದ್ದ ಸುಂಕವನ್ನು ತಪ್ಪಿಸಿಬಿಟ್ಟಿರುವರಾದರೂ, ಮಿಲ್ಲುಗಳಲ್ಲಿ ತಯಾರಾದ ಬಟ್ಟೆಗಳು ಮಾರಾಟವಾಗದೆ ಹಾಗೆಯೇ ನಿಂತುಹೋಗಿರುವುದರಿಂದ, ಮಿಲ್ಲಿನ ಯಜಮಾನರುಗಳು ಬಹಳ ನಷ್ಟವನ್ನು ಅನುಭವಿಸಿ ಮಿಲ್ಲುಗಳನ್ನು ಇನ್ನು ಮುಂದೆ ನಡೆಯಿಸಲಾರದೆ ಮುಚ್ಚುಬಿಡುತ್ತಿರುವರು. ಇದರಿಂದ ಈಗ 4-5 ಮಿಲ್ಲುಗಳಲ್ಲಿ ಕೆಲಸಮಾಡುತ್ತಿದ್ದ 20,000 ಜನರಿಗೆ ಜೀವನಕ್ಕಿಲ್ಲದಂತಾಗಿದೆ. ಮುಂದೆ ಇನ್ನೆಷ್ಟು ಮಿಲ್ಲುಗಳು ಮುಚ್ಚಲ್ಪಟ್ಟು ಎಷ್ಟು ಸಹಸ್ರ ಜನರ ಜೀವನಕ್ಕೆ ತೊಂದರೆಯಾಗುತ್ತದೋ ತಿಳಿಯದು. ದೇಶೀಯ ಮಿಲ್ಲುಗಳಮೇಲಿನ ಸುಂಕವನ್ನು ಕಡಿಮೆಮಾಡಿದಮಾತ್ರಕ್ಕೆ ಅವುಗಳ ಸ್ಥಿತಿಯು ಉತ್ತಮವಾಗುತ್ತಿಲ್ಲವಾದುದರಿಂದ, ಬಹಳ ಕಡಿಮೆ ಬೆಲೆಗೆ ವಿಕ್ರಯಿಸಲ್ಪಡುತ್ತಿರುವ ಪರದೇಶದ ಬಟ್ಟೆಯಮೇಲೆ ಸುಂಕವನ್ನು ಹೆಚ್ಚಿಸಿ ಅದರ ಸ್ಪರ್ಧೆಯನ್ನು ಕಡಿಮೆಮಾಡುವುದು ಅತ್ಯವಶ್ಯವಾಗಿದೆ.

ಅಮೇರಿಕೆಗೆ ಸೇರಿದ ಮೆಕ್ಸಿಕೋಪಟ್ಟಣಕ್ಕೆ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಬರುತ್ತಿದ್ದ ಒಂದು ರೈಲುಬಂಡಿಯನ್ನು ಕಳೆದವಾರ ಆಯುಧಪಾಣಿಗಳಾದ 20 ಜನ ಕಳ್ಳರು ತಡೆದು ನಿಲ್ಲಿಸಿ ಬಂಡಿಯೊಳಕ್ಕೆ ನುಗ್ಗಿ ಪ್ರಯಾಣಿಕರಲ್ಲಿ ಅನೇಕರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ ಅವರಲ್ಲಿದ್ದ ಹಣಕಾಸು ಬಟ್ಟೆಬರೆಗಳನ್ನೆಲ್ಲಾ ದೋಚಿಕೊಂಡು ಬಂಡಿಗೆ ಬೆಂಕಿಯನ್ನು ಹೊತ್ತಿಸಿಬಿಟ್ಟು ಇಂಜನ್‌ಬಂಡಿಯನ್ನು ಹತ್ತಿ ತಾವೇ ನಡೆಯಿಸಿಕೊಂಡು 3-4 ಸ್ಟೇಷನ್ನಿಗಳಿಂದಾಚೆಗೆ ಹೋಗಿ ಅದನ್ನು ಕಂಬಿಗಳಿಂದ ಕೆಳಕ್ಕುರುಳಿಸಿಬಿಟ್ಟು ಪಲಾಯನವಾದರು. ಬಂಡಿಯ ಕಾವಲಿಗಾಗಿದ್ದ ಸಿಪಾಯಿಗಳು ಕಳ್ಳರ ದಾಂಧಲೆಯನ್ನು ತಡೆದುಕೊಳ್ಳಲಾರದೆ ಪ್ರತಿಕ್ರಿಯೆಯನ್ನು ಮಾಡದೆ ಮೌನವಾಗಿದ್ದು ತಮ್ಮ ಪ್ರಾಣರಕ್ಷಣೆಮಾಡಿಕೊಂಡರು. ಪ್ರಯಾಣಿಕರಲ್ಲಿ 7 ಜನರು ಮಾತ್ರ ಗಾಯವಡೆದು ಜೀವದಿಂದುಳಿದುಕೊಂಡಿರುವರು. ಸುಟ್ಟುಹೋಗಿದ್ದ 20 ಶವಗಳು ಸಿಕ್ಕಿವೆ; ಇನ್ನೂ ಕೆಲ ಶವಗಳು ಬಂಡಿಯ ಕೆಳಗಡೆ ಬಿದ್ದಿರುವಾಗಿ ಊಹಿಸಲ್ಪಟ್ಟಿದೆ. ಈ ದಂಗೇಕೋರರು ತಂತಿಯಕಂಬಗಳನ್ನು ನಾಶಪಡಿಸಿದ್ದುದರಿಂದ ಕೂಡಲೆ ವರ್ತಮಾನಕೊಡಲು ಅವಕಾಶವಿರಲಿಲ್ಲವು. ಪೊಲೀಸರು ಈ ನರರಾಕ್ಷಸರನ್ನು ಕಂಡುಹಿಡಿಯಲು ಪ್ರಯತ್ನಿಸಿರುತ್ತಾರೆ.

ಮಾನನಷ್ಟಕ್ಕಾಗಿ ದಾವಾ.

ಮ|| ಬಿ. ಕೆ. ಗರುಡಾಚಾರರು ತಮಗುಂಟಾಗಿರುವ ಮಾನನಷ್ಟಕ್ಕಾಗಿ 12,000 ರೂ. ಗಳು ಬರಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್‌ಜಡ್ಜಿಯವರ ಕೋರ್ಟಿನಲ್ಲಿ ಮಿ|| ಅಬ್ಬಾಸ್‌ಖಾನ್‌ರವರು ಮೊದಲಾದವರ ಮೇಲೆ ಮಾಡಿರುವ ವಿವಾದದ ವಿಚಾರಣೆಯು ಕಳೆದ ತಾ|| 11 ರಲ್ಲಿ

ನಡೆದಿತು. ಆಗ ವಾದಿಯರಾದ ಮ|| ಗರುಡಾಚಾರರು ತಮ್ಮ ಚೀಫ್ ಎಕ್ಸಾಮಿನೇಷನಿನ್ನಲ್ಲಿ ಪ್ರತಿವಾದಿಗಳು ಚುನಾವಣೆಯ ಸಂಬಂಧವಾಗಿ ಸರ್ಕಾರಕ್ಕೆ ಕೊಟ್ಟಿರುವ ಅರ್ಜಿಯಲ್ಲಿ ಹೇಳಿರುವ ಸಂಗತಿಗಳು ನಿಜವಲ್ಲವೆಂದು ಮೊದಲಾಗಿ ಹೇಳಿದಮೇಲೆ ಪ್ರತಿವಾದಿಗಳ ವಕೀಲರು ಮಾಡಿದ ಕ್ರಾಸ್ ಎಕ್ಸಾಮಿನೇಷನ್ನಿ (ಪಾಟಿಸಾವಲಿ) ನಲ್ಲಿ ಹೇಳಿದುದೇನೆಂದರೆ.—

ನಾನು ಒಂದಾನೊಂದು ಕಾಲದಲ್ಲಿ ಡಿಸ್ಟ್ರಿಕ್ಟಾಫೀಸಿನಲ್ಲಿ 20-25 ರೂಪಾಯಿ ಸಂಬಳದ ಮೇಲೆ ಒಬ್ಬ ಕ್ಲಾರ್ಕಾಗಿ ಸೇರಿದ್ದೆನು, ಆದರೆ ಸಂಬಳವನ್ನು ತೆಗೆದುಕೊಳ್ಳುವವರೆಗೂ ಅಲ್ಲಿರಲಿಲ್ಲ. ನನ್ನ ಸ್ವಂತ ಜವಾಬ್ದಾರಿಯ ಮೇಲೆ ಇತರರ ಕೂಡ ಶ್ರೀಕೃಷ್ಣರಾಜೇಂದ್ರ ಮಿಲ್ಸ್, ಅಸ್ಬೆಸ್ಟಾಸ್ ಮೊದಲಾದ ಕಂಪೆನಿಗಳು ಮೈಸೂರು ಬ್ಯಾಂಕಿಗೆ ಕೊಡಬೇಕಾಗಿದ್ದ ಸಾಲಿಕ್ಕೆ ಹೊಣೆಯಾಗಿದ್ದೆನು. ಈ ಕಂಪೆನಿಗಳು ಕೊಡಬೇಕಾಗಿದ್ದ ಸಾಲದ ಮೊಬಲಗೆಷ್ಟೆಂಬುದು ನನಗೆ ತಿಳಿಯದು. ನಾನು ಮೈಸೂರು ಬ್ಯಾಂಕಿನಿಂದ 1 ಲಕ್ಷ ರೂಪಾಯಿಗೆ ಮೇಲ್ಪಟ್ಟು ಓವರ್‌ಡ್ರಾಮಾಡಿರುತ್ತೇನೆ. ಪ್ರೆಸಿಡೆಂಟಾಗಿ ಚುನಾಯಿಸಲ್ಪಡಲು ಮ|| ಹೈವದನರಾಯರು ಒಬ್ಬ ಕ್ಯಾಂಡಿಡೇಟಾಗಿ ನಿಂತಿದ್ದುದನ್ನು ನಾನು ತಿಳಿದಿದ್ದೆನಾದರೂ, ಮತ್ತಿನ್ಯಾರಾದರೂ ಪ್ರೆಸಿಡೆಂಟ್ ಚುನಾವಣೆಗೆ ಕ್ಯಾಂಡಿಡೇಟಾಗಿ ನಿಂತಲ್ಲಿ ಸಪೋರ್ಟು ಮಾಡುತ್ತೇನೆಂದು ಒಂದನೇ ಪ್ರತಿವಾದಿ ಮಿ|| ಅಬ್ಬಾಸ್‌ಖಾನರವರಿಗೆ 1923ರಲ್ಲಿ ನಡೆದ ಚುನಾವಣೆಯಕಾಲದಲ್ಲಿ ಕಾಗದವನ್ನು ಬರೆದಿದ್ದುಂಟು ಮತ್ತು ನನಗೊಂದು ಓಟನ್ನು ಕೊಡಬೇಕೆಂದು ಅವರನ್ನು ಕೇಳಿದ್ದೆನು. ವ್ಯಾಪಾರದಿಂದ ನನಗೆ ನಷ್ಟವೇನೂ ಸಂಭವಿಸಲಿಲ್ಲ. ಈ ದಾವಾದಲ್ಲಿ ಕಂಡ ವಿಷಯದಿಂದ ಒಬ್ಬ ಮನುಷ್ಯನಾದರೂ ನನ್ನನ್ನು ಬಹಳ ಹೀನವಾಗಿ ಕಂಡನೆಂದು ಹೇಳಲಾರೆನು. ಪ್ರತಿವಾದಿಗಳು ತಾವು ಸರ್ಕಾರಕ್ಕೆ ಕೊಟ್ಟಿರುವ ಅರ್ಜಿಯ ವಿಷಯವನ್ನು ಇತರರೊಡನೆ ಸೇರಿಕೊಂಡು ಪತ್ರಿಕೆಗಳಲ್ಲಿ ಪ್ರಕಟಿಸಿದರೆಂದು ನಾನು ಹೇಳಲಾರೆ. ಆರೀತಿ ಬೀದಿಯಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದರು, ಆದರೆ ಪ್ರತಿವಾದಿಗಳು ಅದಕ್ಕೆ ಜವಾಬ್ದಾರರೆಂದು ನಾನು ಹೇಳಲಾರೆನು. ದಿವಾನರು ಕೊಟ್ಟ ಗಾರ್ಡನ್‌ಪಾರ್ಟಿಗೆ ನಾನು ಕರೆಯಲ್ಪಟ್ಟಿದ್ದೆ. ಈ ದಾವಾದಲ್ಲಿ ಕಂಡ ವಿಷಯಗಳಿಂದ ನನ್ನ ಮನಸ್ಸಿಗುಂಟಾದ ವ್ಯಥೆಯಿಂದ 5-6 ತಿಂಗಳು ಖಾಯಿಲೆಬಿದ್ದು ಡಾಕ್ಟರ್ ಬಿ. ಕೆ. ನಾರಾಯಣರಾಯರಲ್ಲಿ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದೇನೆ. ಇದಕ್ಕಾಗಿ 12,000 ರೂ. ನಷ್ಟವನ್ನು ಕೊಡಿಸಬೇಕೆಂದು ದಾವಾಮಾಡಿರುವುದು. ನನಗೆಂಥ ಖಾಯಿಲೆಯೆಂದು ಡಾಕ್ಟರು ಪರೀಕ್ಷಿಸಿದ್ದು ನನಗೆ ತಿಳಿಯದು. ಒಂದನೇ ಪ್ರತಿವಾದಿಯು ತಾ|| 10-1-1925ರಲ್ಲಿ ಪ್ರೆಸಿಡೆಂಟಾಗಿ ಚುನಾವಣೆಯಾದಾರಭ್ಯ ನಾನು ಮ್ಯುನಿಸಿಪಲ್‌ಕೌನ್ಸಿಲಿನ ಒಂದು ಮೀಟಿಂಗಿಗೂ ಹೋಗದೆ ಈಗ್ಗೆ 3-4 ತಿಂಗಳಲ್ಲಿ ರಾಜೀನಾಮೆಯನ್ನು ಕೊಟ್ಟುಬಿಟ್ಟೆನು. 1924ರಲ್ಲಿ 3ನೇ ಡಿವಿಜನ್ನಿಗೆ ಒಬ್ಬ ಕೌನ್ಸಿಲರಾಗಲು ಕ್ಯಾಂಡಿಡೇಟಾಗಿ ನಿಂತು ನಾಮಿನೇಷನ್‌ಫಾರಂಮಿನಲ್ಲಿ ನಾನು ಚುನಾಯಿಸಲ್ಪಟ್ಟಲ್ಲಿ ಕೌನ್ಸಿಲರಾಗಿರುತ್ತೇನೆಂದೊಪ್ಪಿ ಬರೆದಿರುವುದುಂಟು. ಮ್ಯುನಿಸಿಪಲ್‌ಕಮಿಷನರು 3 ನೇ ಡಿವಿಜನ್ನಿಗೆ ಪೋಲಿಂಗ್ ಆಫೀಸರಾಗಿ ನೇಮಿಸಿದ್ದವರನ್ನು ನಾನು ತೆಗೆದುಬಿಟ್ಟು ರೆವಿನ್ಯೂ ಮ್ಯಾನೇಜರ್ ಮಿ|| ನರಸಿಂಗರಾಯರನ್ನೂ ಮ್ಯುನಿಸಿಪಲ್ ಇಂಜನಿಯರಾದ ಮಿ|| ರಾಮಚಂದ್ರರಾಯರನ್ನೂ 3ನೇ ಡಿವಿಜನ್ ಪೋಲಿಂಗ್ ಆಫೀಸರುಗಳನ್ನಾಗಿ ನಿಯಮಿಸಿದ್ದುದು ನಿಜ. ಪ್ರತಿವಾದಿಗಳು ಬರೆದಿದ್ದ ಅರ್ಜಿಯ ನಕಲನ್ನು ಸರ್ಕಾರದವರು ನನಗೆ ಕಳುಹಿಸಿಕೊಟ್ಟ ಕೂಡಲೆ ನಾನು ಮ್ಯುನಿಸಿಪಲ್ ಆಫೀಸ್ ಮ್ಯಾನೇಜರಿಗೆ ಬರೆದು ಮಿ|| ಇಂಗಲ್ಸ್‌ರವರಿಗೆ ಕೊಟ್ಟಿದ್ದ ಕಂಟ್ರಾಕ್ಟಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ತರಿಸಿಕೊಂಡೆನು. ಆಗ ನಾನು ಪ್ರೆಸಿಡೆಂಟಾಗಿರಲಿಲ್ಲ ಮತ್ತು ಆ ರಿಕಾರ್ಡುಗಳನ್ನು ಯಾವ ತಾರೀಖಿನಲ್ಲಿ ವಾಪಸ್ಸು ಕಳುಹಿಸಿಕೊಟ್ಟೆನೆಂದು ಹೇಳಲಾರೆ. (ಇಲ್ಲಿಗೆ ವಿಚಾರಣೆಯು ನಿಲ್ಲಿಸಲ್ಪಟ್ಟು ಬರುವ ಫೆಬ್ರವರಿ ತಾ|| 10ಕ್ಕೆ ಮರಳಿ ಕ್ರಾಸ್ ಎಗ್ಜಾಮಿನೇಷನ್ನಿಗಾಗಿ ಅಡ್ಜರ್ನ್ ಮಾಡಲ್ಪಟ್ಟಿತು.)

ಮಲೆನಾಡಿನ ಕ್ಷೇಮಚಿಂತನೆ.

ಸರ್ಕಾರದಿಂದ ನೇಮಕವಾದ ಕಮಿಟಿಯ ತೀರ್ಮಾನಗಳು.—1.

ಮೈಸೂರು ಸರ್ಕಾರದವರು ಮಲೆನಾಡಿನ ಪ್ರಜೆಗಳ ಸ್ಥಿತಿಗತಿ, ಅವರ ಜೀವನ, ಅವರ ಆದಾಯವೆಚ್ಚ, ಅವರ ಸಂಪತ್ತು ಅಥವಾ ದಾರಿದ್ರ್ಯ ಇತ್ಯಾದಿ ವಿಷಯಗಳನ್ನು ಪರೀಕ್ಷಿಸಿ ರಿಪೋರ್ಟುಮಾಡುವಂತೆ 1915 ನೇ ಫೆಬ್ರವರಿ ತಿಂಗಳಲ್ಲಿ ಹೈದರಾಬಾದ್ ನೈಜಾಂ ಕಾಲೆಜ್ಜಿನ ಪ್ರೊಫೆಸರ್ ಮಿ|| ಎಸ್. ಕೇಶವಯ್ಯಂಗಾರ್, ಎಂ.ಎ., ಯವರನ್ನು ನೇಮಕಮಾಡಿ ಅವರಿಗೆ ಅಧಿಕಾರಕೊಟ್ಟು ಶಿಬ್ಬಂದಿಯ ಸಮೇತ ಕಳುಹಿಸಿದರು. ಈ ಸ್ಪೆಷಲ್ ಆಫೀಸರು ಮಲೆನಾಡಿಗೆ ಸೇರಿದ ತೀರ್ಥಹಳ್ಳಿ, ಕೊಪ್ಪ, ಮಂಜರಾಬಾದು, ಈ ಮೂರು ತಾಲ್ಲೂಕುಗಳಿಗೆ ಸೇರಿದ ಐದು ಗ್ರಾಮಗಳಲ್ಲಿ ಪ್ರತಿ ಒಂದು ವಿಚಾರವನ್ನೂ ಕೂಲಂಕಷವಾಗಿ ವಿಚಾರಣೆ ಮಾಡಿದ್ದಲ್ಲದೆ ಬೇರೆ ಐದು ಗ್ರಾಮಗಳ ವಿಚಾರವಾಗಿಯೂ ತನಿಖೆಗಳನ್ನು ನಡಿಸಿರುತ್ತಾರೆ. ಇಷ್ಟೇ ಅಲ್ಲ. ಸಂಸ್ಥಾನದ ಸರಹದ್ದು ಪ್ರಾಂತ್ಯಗಳಲ್ಲಿ ಅವರು ಸಂಚಾರಮಾಡಿದಾಗ್ಗೆ ಇನ್ನು ನಾಲ್ಕು ಗ್ರಾಮಗಳ ಸ್ಥಿತಿಗತಿಯನ್ನು ಕುರಿತು ವಿಚಾರಮಾಡಿ ಹಲವು ವಿಷಯಗಳನ್ನು ಸಂಗ್ರಹಮಾಡಿದರು. ಈ ಆಫೀಸರವರು ನಡಿಸಿದ ತನಿಖೆಗಳ ಉದ್ದೇಶವೇನೆಂದರೆ, ಮಲೆನಾಡಿನಲ್ಲಿ ರೈತರಾದ ಪ್ರಜೆಗಳಿಗೆ ಇರತಕ್ಕ ಜಮೀನ್ ಬಾಬತು ಸಾಲಸೋಲಗಳನ್ನು ನಿವಾರಣೆಮಾಡುವುದಕ್ಕೆ ಯಾವರೀತಿಯಾದ ಜಮೀನ್ ಅಡಮಾನದ ಬ್ಯಾಂಕನ್ನು ರೂಪಿಸಬಹುದು ಎಂಬುದೇ ಸರ್ಕಾರದ ಮುಖ್ಯಾಶಯವಾಗಿತ್ತು.

ಮೇಲ್ಕಂಡ ಸ್ಪೆಷಲ್ ಆಫೀಸರವರು ಬರೆದೊಪ್ಪಿಸಿದ ರಿಪೋರ್ಟನ್ನು ಪರಿಶೀಲಿಸಿ ಸಲಹೆಗಳನ್ನು ತಿಳಿಸಬೇಕೆಂದು ಗವರ್ನಮೆಂಟಿನವರು 14 ಮಂದಿ ಅಧಿಕಾರಿಗಳಿಂದಲೂ, ಪ್ರಜಾಪ್ರಮುಖರಿಂದಲೂ ಕೂಡಿದ ಒಂದು ಪಂಚಾಯತಿಯನ್ನು ಕೌನ್ಸಿಲ್ ಮೆಂಬರಾದ ಮಿ|| ಕೆ. ಚಾಂಡಿಯವರ ಅಧ್ಯಕ್ಷತೆಯಲ್ಲಿ ಕಳೆದ ಸೆಪ್ಟಂಬರ್ ತಾ|| 8 ರಲ್ಲಿ ನೇಮಕಮಾಡಿದರು. ಈ ಕಮಿಟಿಯವರು ನವಂಬರ್ ತಿಂಗಳಲ್ಲಿ ಮೂರುದಿನ ಒಂದೇ ಸಮನಾಗಿ ಸೇರಿ, ಡಾ|| ಉಸ್ಮಾನ್, ಮಿ|| ಆರ್. ರಂಗರಾವ್ ಮಿ|| ಕೆ. ಎಚ್. ರಾಮಯ್ಯ ಎಂಬೀ ಅಧಿಕಾರಿಗಳನ್ನು ಬರಮಾಡಿಕೊಂಡು ಅವರ ಅಭಿಪ್ರಾಯಗಳನ್ನು ಪಡೆದು ಆಲೋಚನೆಮಾಡಿ ಒಂದು ರಿಪೋರ್ಟನ್ನು ಬರೆಸಿ ಡಿಸೆಂಬರ್ ತಾ|| 4-5 ರಲ್ಲಿ ಮತ್ತೆ ಸೇರಿ ಆ ರಿಪೋರ್ಟನ್ನು ಕುರಿತು ಆಲೋಚಿಸಿ ಒಪ್ಪಿಕೊಂಡು ರುಜುಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದರು. ಈ ರಿಪೋರ್ಟನ್ನು ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳ ಸಮೇತ ಸರ್ಕಾರದವರು ತಾ|| 7-1-26ರ ಗೆಜೆಟ್ಟಿನಲ್ಲಿ ಮಹಾಜನಗಳ ತಿಳುವಳಿಕೆಗೋಸ್ಕರ ಪ್ರಕಟಮಾಡಿಸಿರುತ್ತಾರೆ. ಸರ್ಕಾರದವರು ಇನ್ನೂ ಯಾವ ಹುಕುಮನ್ನೂ ಮಾಡಿರುವುದಿಲ್ಲ.

ಇದುವರೆಗೆ ನಡೆದಿರುವ ಅಭಿವೃದ್ಧಿಕಾರ್ಯಗಳು.

ಮಲೆನಾಡು ಪ್ರಾಂತ್ಯವು ಕ್ಷೀಣಗತಿಗೆ ಬರುತ್ತಿರುವ ವಿಚಾರವು ಶ್ರೀಮನ್ ಮಹಾರಾಜರವರ ಮತ್ತೂ ಸಂಸ್ಥಾನದ ದಿವಾನ್‌ರುಗಳಾದ ಸರ್ ಎಂ. ವಿಶ್ವೇಶ್ವರಯ್ಯನವರು ಮತ್ತು ಸರ್ ಎ. ಆರ್. ಬಾನರ್ಜಿಯವರುಗಳ ಗೋಚರಕ್ಕೆ ಬಂದು, ತಕ್ಕ ಪರಿಹಾರಗಳನ್ನು ಮಾಡಬೇಕಾದದ್ದು ಪರಮಾವಶ್ಯಕವೆಂದು ಅಪ್ಪಣೆಕೊಡಿಸಿದ್ದಾರೆ. ಪರಿಹಾರಕಾರ್ಯಗಳನ್ನು ನಡಿಸಲು ಗವರ್ನಮೆಂಟಿನವರು 1913-14 ನೇ ಸಾಲ್ ಲಾಗಾಯಿತು ಇದುವರೆಗೆ ಒಟ್ಟು 12,77,000 ರೂಪಾಯಿ ಸ್ಯಾಂಕ್ಷನ್ ಮಾಡಿದ್ದರ ಪೈಕಿ ನಾನಾ ಅಭಿವೃದ್ಧಿಕಾರ್ಯಗಳಿಗೋಸ್ಕರ ಒಟ್ಟು 9,14,748 ರೂಪಾಯಿ ಖರ್ಚಾಗಿರುತ್ತದೆ. ಇದರಲ್ಲಿ ಶಿಬ್ಬಂದಿ ಖರ್ಚಿಗಾಗಿ 4,07,537 ರೂಪಾಯಿ ವಿನಿಯೋಗವಾಗಿದೆ.

ಇದುವರೆಗೆ ನಡೆದಿರುವ ಅಭಿವೃದ್ಧಿಕಾರ್ಯಗಳ್ಯಾವವೆಂದರೆ—ಮಲೆನಾಡಿಗೆ ಸೇರಿದ 598 ಗ್ರಾಮಗಳಲ್ಲಿ 2,805 ಎಕರೆಗಳಲ್ಲಿ ಬೆಳೆದಿದ್ದ ಗಿಡಗೆಂಡೆಗಳನ್ನು ಕಡಿದು ಚೊಕ್ಕಟಮಾಡಿದೆ. 9,860 ರೂಪಾಯಿ ಮುಟ್ಟಿಸಿ 220 ಗ್ರಾಮಗಳಲ್ಲಿ 8,856 ಗಜಗಳ ಚರಂಡಿಗಳನ್ನು ತೆಗಿಸಿರುತ್ತೆ. ಅರವತ್ತು ಗ್ರಾಮಗಳನ್ನು ಸ್ಥಳಾಂತರ ಮಾಡಿ ಆರೋಗ್ಯಕರವಾದ ನಿವೇಶನಗಳಲ್ಲಿ ಕಟ್ಟಿಸಿದೆ. ಅರವತ್ತಾರು ಗ್ರಾಮಗಳಲ್ಲಿ ಜನರ ವಾಸದ ಮನೆಗಳನ್ನು ಗದ್ದೆ ಜಮೀನುಗಳ ಸಮೀಪದಿಂದ ಬಿಡಿಸಿ ದೂರ ಪ್ರದೇಶಗಳಲ್ಲಿ ಕಟ್ಟಿಸಲಾಗಿದೆ. 265 ಹೊಸಭಾವಿಗಳ ಕಾಮಗಾರಿ ಪ್ರಾರಂಭಿಸಿ 164 ಮುಗಿಸಲ್ಪಟ್ಟವು. ಹಳೆಯ ಮೂವತ್ತೆರಡು ಭಾವಿಗಳನ್ನೂ ಆರೋಗ್ಯಕರವಾಗಿ ಮಾಡಿಸಿದ್ದಾಯಿತು. ಹೊಸದಾಗಿ ಹತ್ತು ಆಸ್ಪತ್ರೆಗಳು ತೆರೆಯಲ್ಪಟ್ಟವು. ಹನ್ನೆರಡುಮಂದಿ ಶಿಡುಬು ಹಾಕತಕ್ಕವರನ್ನೂ ಹದಿನೆಂಟುಮಂದಿ ಸೂಲಗಿತ್ತಿಯರನ್ನೂ ತರಪೇತು ಮಾಡಿ ನೇಮಿಸಿದ್ದಾಗಿದೆ. 12,43,575 ಕ್ವೈನೈನ್ (ಜ್ವರಹಾರಿ) ಪುಡಿಯ ಪೊಟ್ಟಣಗಳನ್ನು ಬಟವಾಡೆ ಮಾಡಿದೆ. 989 ಪ್ರೈಮರಿ ಮತ್ತು ಗ್ರಾಂಟ್ ಸ್ಕೂಲುಗಳನ್ನೂ ಹದಿನೆಂಟು ಕಸಬುದಾರಿ ಪಾಠಶಾಲೆಗಳನ್ನೂ ಇಟ್ಟದ್ದಾಗಿದೆ. 75 ಕೋಆಪರೇಟಿವ್ ಸೊಸೈಟಿಗಳು ಏರ್ಪಾಡಾಗಿರುತ್ತವೆ. ಹೊಸದಾಗಿ 94 ಮೈಲಿ ರಸ್ತೆಗಳನ್ನು ಮಾಡಿಸಿದೆ. ಹೊಸದಾಗಿ ಮುನ್ನೂರಹತ್ತೊಂಭತ್ತು ಸಂಸಾರಗಳನ್ನು ತಂದು ನೆಲಸುವಂತೆ ಮಾಡಿ ಅವರಿಗೆ 753 ಎಕರೆ ಜಮೀನನ್ನೂ 7,765 ರೂಪಾಯಿ ಅಡ್ವಾನ್ಸುಗಳನ್ನೂ ಕೊಟ್ಟಿದೆ. ರೋಗಗಳ ಸರ್ವೆಯನ್ನು 24 ಗ್ರಾಮಗಳಲ್ಲಿ ನಡಿಸಿದ್ದಾಯಿತು. ಸ್ಯಾನಿಟೇಷನ್ ಮತ್ತು ಆರೋಗ್ಯಸೂತ್ರಗಳ ತಿಳುವಳಿಕೆಯನ್ನುಂಟುಮಾಡುವುದಕ್ಕೆ ಇಪ್ಪತ್ತೇಳು ಹಸ್ತಪ್ರತಿಗಳನ್ನು ಬರಸಿ ಅಚ್ಚುಹಾಕಿಸಿ 63,800 ಪ್ರತಿಗಳನ್ನು ಪ್ರಜೆಗಳಿಗೆ ಹಂಚಿಸಿದ್ದಾಗಿದೆ. ಎಂಟು ಆಸ್ಪತ್ರೆಗಳೂ, ಏಳು ಸಂಚಾರದ ಆಸ್ಪತ್ರೆಗಳೂ, ಐದು ಹೆಂಗಸರ ಆಸ್ಪತ್ರೆಗಳೂ, ನಾಲ್ಕು ಹೆರಿಗೆ ಆಸ್ಪತ್ರೆಗಳೂ, ಆರು ಆಯುರ್ವೇದ ಅಥವಾ ಯೂನಾನಿ ವೈದ್ಯಶಾಲೆಗಳೂ ಏರ್ಪಾಡುಮಾಡಲ್ಪಟ್ಟವು. ಎರಡೂವರೆ ಲಕ್ಷ ರೂಪಾಯಿ ಖರ್ಚುಮಾಡಿ ಹೊಸದಾಗಿ 470 ಭಾವಿಗಳನ್ನು ತೋಡಿಸಿದ್ದಾಗಿದೆ.

ಮಲೆನಾಡಿನಲ್ಲಿ ಅಡಮಾನ ಮತ್ತು ಸಾಲಗಳ ಪರಿಹಾರ.

ಮೇಲ್ಕಂಡ ಪಂಚಾಯತಿ ಮೆಂಬರುಗಳು ಮಲೆನಾಡಿನಲ್ಲಿ ರೈತಪ್ರಜೆಗಳ ಜಮೀನು ಆಧಾರ ಭೋಗ್ಯಾದಿಗಳ ವಿಚಾರವನ್ನೂ, ಅವರ ಸಾಲಸೋಲಗಳ ವಿಚಾರವನ್ನೂ, ಅವರ ಸ್ಥಿತಿಗತಿ ವರಮಾನ ಖರ್ಚುಗಳ ವಿಚಾರವನ್ನೂ ಕುರಿತು ಪರಿಶೋಧನೆಮಾಡಿ ರಿಪೋರ್ಟಿನಲ್ಲಿ ತಿಳಿಸಿರುವುದೇನೆಂದರೆ—ಸರ್ಕಾರದ ಹುಕುಂ ಪ್ರಕಾರ ಕೋಆಪರೇಟಿವ್ ಇಲಾಖೆಯ ಇಬ್ಬರು ಇನ್‌ಸ್ಪೆಕ್ಟರುಗಳು 1917ನೇ ಇಸವಿಯಲ್ಲಿ ಸಾಗರ ಮತ್ತು ನಗರ ಈ ಎರಡು ತಾಲ್ಲೂಕುಗಳಿಗೆ ಸೇರಿದ 70 ಗ್ರಾಮಗಳ (ಎರಡು ಹೋಬಳಿಗಳು) ಪ್ರಜೆಗಳ ಸ್ಥಿತಿಗತಿಯನ್ನು ತನಿಖೆ ಮಾಡಿದರು. ಆ ಗ್ರಾಮಗಳಲ್ಲಿ ಪ್ರಜೆಗಳು 5,03,665 ರೂಪಾಯಿನ ಸಾಲವಂದಿಗರಾಗಿರುತ್ತಾರೆ. ಅದರ ಭಾರವನ್ನು ತಪ್ಪಿಸುವುದಕ್ಕೆ ಮೂರುಲಕ್ಷ ರೂಪಾಯಿನತನಕ ಬೇಕಾಗುವುದು. ಸರಾಸರಿ ಹಾಕಿನೋಡಿದ್ದರಲ್ಲಿ ಪ್ರತಿಸಂಸಾರಕ್ಕೂ ಇರುವ ಆಸ್ತಿ 1,150 ರೂಪಾಯಿ; ಸಾಲೀಸಾಲ್ ವರಮಾನ 300 ರೂಪಾಯಿ; ಖರ್ಚು 294 ರೂಪಾಯಿ ಪ್ರತಿ ಸಂಸಾರಕ್ಕೂ ಇರುವ ಸಾಲದ ಹೊರೆಯನ್ನು ತಪ್ಪಿಸುವುದಕ್ಕೆ ಸರಾಸರಿ 144 ರೂಪಾಯಿನಂತೆ ಸಹಾಯವಾಗಬೇಕು. ತನಿಖೆಮಾಡಿದ 2,093 ಸಂಸಾರಗಳ ಪೈಕಿ 1,649 ಸಂಸಾರಗಳಿಗೆ (ಅಂದರೆ, ಶೇಕಡಾ 79 ರಷ್ಟು) ಸಾಲಸೋಲಗಳಿರುತ್ತವೆ, ಮತ್ತು ಈಚೆಗೆ ಎಕನಾಮಿಕ್ ಸರ್ವೆ ಆಫೀಸರು (ಮಿ|| ಎಸ್. ಕೇಶವಯ್ಯಂಗಾರ್ರು) ನಾಲ್ಕು ಗ್ರಾಮಗಳಲ್ಲಿ 287 ಸಂಸಾರಗಳ ವರಮಾನ ಖರ್ಚುಬಾಬುಗಳನ್ನು ಪರೀಕ್ಷೆಮಾಡಿರುತ್ತಾರೆ. ಆ ಪೈಕಿ 214 ಸಂಸಾರಗಳಿಗೆ ಜಮೀನು ಸ್ವಲ್ಪವೂ ಇಲ್ಲದೆಹೋದರೂ 66,700 ರೂಪಾಯಿ ಸಾಲಮಾಡಿಕೊಂಡಿದಾರೆಂದೂ, ಜಮೀನ್ ಉಳ್ಳ 73 ಸಂಸಾರಗಳಿಗೆ 1,23,960 ರೂಪಾಯಿ ಸಾಲವಿದೆಯೆಂದೂ ತಿಳಿದುಬರುತ್ತದೆ. ಸರ್ವೇಮಾಡಿದ ಐದುಗ್ರಾಮಗಳಲ್ಲೆಲ್ಲಾ ಅಡಮಾನವಾಗದೆ ಇರುವುದು ಒಂದೇ ಎಕರೆಯಷ್ಟು ತೋಟವೂ 10 ಎಕರೆಯಷ್ಟು ತರೀ ಜಮೀನೂ ಇರುವಂತೆ ಗೊತ್ತಾಯಿತು. ಉಳಿದ ನಾಲ್ಕುಗ್ರಾಮಗಳಲ್ಲಿ 175 ಸಂಸಾರಗಳಿಗೆ 93,000 ರೂಪಾಯಿ ಸಾಲಗಳಿರುತ್ತವೆ.

ದನಗಳ್ ಪ್ರದರ್ಶನ.

ಶ್ರೀರಂಗಪಟ್ಟಣದ ತಾಲ್ಲೂಕು ಕರೀಘಟ್ಟದ ಶ್ರೀ ಶ್ರೀನಿವಾಸಸ್ವಾಮಿಯವರ ರಥೋತ್ಸವ ಸಂದರ್ಭದಲ್ಲಿ ಈ ಬೆಟ್ಟದ ಕೆಳಭಾಗ ಲೋಕಪಾವನಿ ಮತ್ತು ಕಾವೇರಿನದಿಗಳ ಸಂಗಮಸ್ಥಳದ ಮೇಲ್ಭಾಗದಲ್ಲಿರುವ ವಿಸ್ತಾರವಾದ ತೋಪಿನಲ್ಲಿ 1926 ನೇ ಮಾರ್ಚಿ 1 ಮತ್ತು 2 ನೇ ತಾರೀಖುಗಳಲ್ಲಿ ದನಗಳ ಪ್ರದರ್ಶನ ನಡಿಯುತ್ತೆ. ಈ ತೋಪು ಬೆಂಗಳೂರು ಬನ್ನೂರು ರಸ್ತೆಯಲ್ಲಿರುವದರಿಂದಲೂ, ಈ ತೋಪಿಗೆ 2 ಮೈಲಿ ದೂರದಲ್ಲಿ ಶ್ರೀರಂಗಪಟ್ಟಣದ ರೈಲ್ವೆ ಸ್ಟೇಷನ್ ಇರುವದರಿಂದಲೂ ಗ್ರಾಮಾಂತ್ರಗಳ ಜನಗಳು ಬಂದು ಹೋಗುವದಕ್ಕೆ ಬಹಳ ಅನುಕೂಲವಾಗಿದೆ. ಈ ತೋಪಿನ ಕೆಳಭಾಗದಲ್ಲಿ ಕಾವೇರಿ ಮತ್ತು ಲೋಕಪಾವನಿ ನದಿಗಳಿರುವದರಿಂದಲೂ, ಈ ತೋಪಿನ ಆಜೂಬಾಜು ತರೀಜಮೀನುಗಳು ವಿಶೇಷವಾಗಿದ್ದು ಪಸಲು ಕಟಾವಾಗಿರುವದರಿಂದಲೂ ದನಗಳ ನೀರಿಗೂ ಮೇವಿಗೂ ಬಹಳ ಅನುಕೂಲವಾಗಿದೆ, ಮತ್ತು ಈ ತೋಪು ಒತ್ತಾಗಿರುವದರಿಂದ ದನಗಳು ನಿಲ್ಲಲು ನೆರಳಿಗೂ ಅನುಕೂಲವಾಗಿದೆ. ಮಾರ್ಚಿ 2 ನೇ ತಾರೀಖು ದಿವಸ ಉತ್ಕೃಷ್ಟವಾದ ರಾಸುಗಳಿಗೆ ಬಹುಮಾನ ಕೊಡಲ್ಪಡುತ್ತೆ. ಉತ್ತಮವಾದ ರಾಸುಗಳನ್ನಿಟ್ಟಿರುವವರು ಈ ಪ್ರದರ್ಶನಕ್ಕೆ ತಮ್ಮ ರಾಸುಗಳ ಸಮೇತ ದಯೆಮಾಡಿಸಬೇಕಾಗಿ ಕೋರಿದೆ.

ಶ್ರೀರಂಗಪಟ್ಟಣ, } T. KRISHNA RAO,
ತಾ|| 10-1-1926. } Amildar & President,
Taluk Board.

ವಿವಿಧಮತ ಮಹಾಸಭೆ.

(ಕಳೆದವಾರದ ಶೇಷ.)

ಮಹಮ್ಮದೀಯಮತವು.

(ಎಸ್. ಎಂ. ಫಾಸಿಲಯವರುಪನ್ಯಾಸ.)

ಮಹಮ್ಮದೀಯಮತವು ಪ್ರಪಂಚಕ್ಕೆ ಆದಿಮತವು. ಇದನ್ನು ಮಹಮ್ಮದನು ಸರ್ವತ್ರಪ್ರಸಾರಗೊಳಿಸಿದನೆಂದು ನನ್ನ ನಂಬಿಕೆಯು. ಮಹಮ್ಮದನು ಜನಿಸಿದ ವೇಳೆಯಲ್ಲಿ ಅರಬಿಯಾದೇಶದ ಜನರಾದ ಅರಬಿಯನರು ಬಹಳ ಘೋರಕೃತ್ಯವನ್ನು ಮಾಡುತ್ತಿದ್ದರು. ನೀತಿಯು ತಪ್ಪಿ ಅರಾಜಕತ್ವವು ಪ್ರಬಲಿಸಿದ್ದಿತು. ಆಗ ಮಹಮ್ಮದನು ಪ್ರಯತ್ನಪಟ್ಟು ಆ ದುಸ್ಥಿತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಿದನು. ಬಾಲ್ಯದಲ್ಲೇ ಆತನ ತಂದೆತಾಯಿಗಳು ಮೃತರಾದರು. ಮಹಮ್ಮದನು ಸರ್ವಜನರಂಜಕನಾಗಿದ್ದನು. ಒಬ್ಬ ಐಶ್ವರ್ಯವಂತನ ಮಗಳು ಆತನನ್ನು ವಿವಾಹಮಾಡಿಕೊಂಡಳು. ಆತನು ಮನುಷ್ಯರ ಸ್ವಭಾವವನ್ನು ಚೆನ್ನಾಗಿ ಅರಿತುಕೊಂಡು ತನ್ನ ಮತವನ್ನು ಪ್ರಸಾರಮಾಡಿದನು. ಭಗವಂತನ ಆಜ್ಞಾಪ್ರಕಾರ ದೇವರೊಬ್ಬನೇ ಎಂದು ನಂಬಿ ಸತ್ಕಾರ್ಯವನ್ನು ಮಾಡಬೇಕೆಂದು ಮಹಮ್ಮದನು ಜನರಿಗೆ ಬೋಧಿಸಿದನು. ಪ್ರಜೆಗಳು ಬಾಧಿಸಲು ಆತನು ಮೆಕ್ಕಾದಿಂದ ಮದೀನಾಕ್ಕೆ ಹೋದನು. ಆತನು 23 ವರ್ಷ ವಯಸ್ಸಿನವನಾಗಿದ್ದು ಅಲ್ಪಸ್ವಲ್ಪಕಾಲದಲ್ಲಿ ಪ್ರಜೆಗಳನ್ನು ಬಹಳಮಟ್ಟಿಗೆ ನೀತಿವಂತರನ್ನಾಗಿಯೂ ಸದ್ಗುಣಸಂಪನ್ನರಾಗಿಯೂ ಮಾಡಿದನು. ಪ್ರಜಾಪ್ರಭುತ್ವವನ್ನೇರ್ಪಡಿಸಿ ಸ್ತ್ರೀಯರ ಸ್ಥಿತಿಯನ್ನು ಉತ್ತಮಗೊಳಿಸಿದನು. ಎಲ್ಲ ಕಲೆಗಳನ್ನೂ ಹೆಚ್ಚಿಸಿದನು. ಮತಸಂಸ್ಕರ್ತರೊಳಗೆಲ್ಲಾ ಮಹಮ್ಮದನು ಅಗ್ರಗಣ್ಯನೆಂದು ಬ್ರಿಟಾನಿಕಾದಲ್ಲಿ ಬರೆಯಲ್ಪಟ್ಟಿದೆ. ಮಹಮ್ಮದೀಯರು ಇತರ ಮತಕರ್ತರನ್ನೂ ಗೌರವಿಸಬೇಕೆಂದು ಮಹಮ್ಮದನು ಬೋಧಿಸಿದನು. ಆತನು ಮತಬೋಧಕನಾಗಿದ್ದುದಲ್ಲದೆ ದೊಡ್ಡ ರಾಜನಾಗಿಯೂ ಇದ್ದನು. ನಾನು ದೇವರಲ್ಲದಿದ್ದಾಗ್ಯೂ ಭಗವದ್ದರ್ಶನವನ್ನು ಮಾಡಿದ ಮನುಷ್ಯನೆಂದು ಮಹಮ್ಮದನು ಹೇಳುತ್ತಿದ್ದನು. ಮಹಮ್ಮದನು ಸಕಲ ಭೋಗವನ್ನು ಪರಿತ್ಯಜಿಸಿ ವಿರಾಗಿಯಾಗಿ ಒಂದು ಕುಟೀರದಲ್ಲಿ ವಾಸಮಾಡುತ್ತ ಖರ್ಜೂರವನ್ನೂ ಜೇನನ್ನೂ ಸೇವಿಸಿಕೊಂಡು ತಪಸ್ವಿಯಾಗಿದ್ದನು.

ಸಲಾಂ ಅಂದರೆ ಶಾಂತಿ. ಇಸ್ಲಾಂ ಅಂದರೆ ಭಗವಂತನಲ್ಲೂ ಮಾನವನಲ್ಲೂ ಶಾಂತಿಯಿಂದಿರುವುದು. ಹಾಗಿಲ್ಲದಿದ್ದವನು ಮಹಮ್ಮದೀಯನಲ್ಲವು. ದೇವರು ತಂದೆ; ಸಕಲ ಮಾನವರೂ ಸಹೋದರರು. 5 ಮುಖ್ಯ ನಿಬಂಧನಗಳಿಂದ ಕೂಡಿದವನು ಭಗವಂತನೊಬ್ಬನೇ. ಮಹಮ್ಮದನು ಭಗವಂತನ ಆಜ್ಞಾಧಾರಕನು. ಅವನಿಗೆ 99 ನಾಮಗಳಿವೆ. ಅವುಗಳಲ್ಲಿ ರಬು, ರಹಿಮಾನ್, ರಹೀಂ, ಮಾಲಿಕ್ ಎಂಬವು ನಾಲ್ಕು ಮುಖ್ಯವಾದುವು. ರಬು ಎಂದರೆ ಸಂಪೂರ್ಣವೃದ್ಧಿ ಅಂದರೆ ಸೃಷ್ಟಿಕರ್ತ. ರಹಿಮಾನ್ ಅಂದರೆ [illegible] ಪ್ರೇಮ [illegible]. ರಹೀಂ ಅಂದರೆ [illegible]. ಮಾಲಿಕ್ ಎಂದರೆ [illegible] ಧಿಕಾರಿ ಎಂದರ್ಥ. ಮೊದಲನೆಯದು ಅಲ್ಲಾ ಎಂದರೆ, ಶಕ್ತಿಸಂಪನ್ನನಾದ ದೇವರು. ಆತನು ಸಕಲಲೋಕಪಾಲಕನು. ಆದುದರಿಂದ ಸಕಲ ಲೋಕವಾಸಿಗಳಾದ ಮಾನವರು ಸಹೋದರರೇ ಆಗಿರುವರು. ಎರಡನೆಯದು ನಮಾಜು ಅಂದರೆ ಪ್ರಾರ್ಥನ, ಎಂದರೆ ಆಧ್ಯಾತ್ಮಿಕ ಆಹಾರವು. ನಿತ್ಯಗಟ್ಟಲೆಯ ಕೆಲಸವನ್ನು ಮಾಡುತ್ತಲೆ ಕ್ಲುಪ್ತಕಾಲ ಐದು ವೇಳೆಯಲ್ಲಿ ಪ್ರಾರ್ಥನೆ ನಡೆಯಬೇಕಾಗಿದೆ. ಸಾಂಘಿಕಪ್ರಾರ್ಥನೆಯನ್ನು ಮಸೀದಿಯಲ್ಲಿ ಮಾಡುವುದುತ್ತಮವು. ಅದರಿಂದ ಸೋದರಭಾವವು ವೃದ್ಧಿಯಾಗುವುದು. ಮೂರನೆಯದು ಉಪವಾಸ. ಇದು ಭಗವಂತನ ಕೋಪವನ್ನು ತಗ್ಗಿಸುವುದಕ್ಕೂ ಶರೀರವನ್ನು ಕೃಶಗೊಳಿಸುವುದಕ್ಕೂ ಮಾಡತಕ್ಕದ್ದಾಗಿರದೆ ಆತ್ಮಶುದ್ಧಿಗಾಗಿಯೇ ಮಾಡತಕ್ಕದ್ದಾಗಿದೆ. ಧನವಂತರು ಉಪವಾಸವನ್ನು ಮಾಡಿ ಬಡಬಗ್ಗರಿಗೆ ಅನ್ನವಸ್ತ್ರಗಳನ್ನು ಕೊಡುವರು. ಧನಿಕನ ಧನವು ಬಡವರುಪಯೋಗಕ್ಕಾಗಿಯೇ ಇರುವುದು. ಧನಿಕನು ಭಗವಂತನ ಕೋಶಾಧಿಕಾರಿ. ಐದನೆಯದು ಹಾಜೀ ಅಂದರೆ ವಿಶ್ವಮಹಾಸಭಾ. ಇದೇ ನಾನಾದೇಶ ಸಂಘವು. ಯಾವ ಭೇದವೂ ಇಲ್ಲದೆ ಪ್ರಪಂಚವಾಸಿಗಳೆಲ್ಲರೂ ಏಕೀಭವಿಸುವರು. ಮಹಮ್ಮದೀಯಮತದಲ್ಲಿ ಸನ್ಯಾಸವಿಲ್ಲವು. ಸಂಸಾರವನ್ನು ತ್ಯಜಿಸಿ ಹೋಗಕೂಡದು. ಸಂಸಾರದಲ್ಲಿದ್ದುಕೊಂಡೇ ವಿಧಿಯನ್ನು ನೆರವೇರಿಸತಕ್ಕದ್ದಾಗಿದೆ. ಅತಿವ್ಯಾಪ್ತಿ ಕೂಡದು. ಮಿತಾಹಾರ, ಮಿತಭೋಗ ಮಾಡಬೇಕು. ಇದೇ ಮಹಮ್ಮದೀಯ ಮತವೇದಾಂತವೆಂದು ಫಾಸಿಲಿಯವರು ಬಹಳ ಚಮತ್ಕಾರವಾಗಿ ಹೇಳಿದರು.

ಖುರಾನನ್ನು ದೇವರು ಮಹಮ್ಮದನು ಸಮಾಧಿಯಲ್ಲಿರುವಾಗ್ಯೆ ಮಹಮ್ಮದನಿಗೆ ಬೋಧಿಸಿದನು. ಮಹಮ್ಮದನಿಗೆ ಓದುಬರಹ ಬರುತ್ತಿರಲಿಲ್ಲ. ಮಹಮ್ಮದನ ಮುಖದಿಂದ ಬಂದುದನ್ನು ಶಿಷ್ಯರು ಬರೆದುಕೊಂಡರು.

ತಿನ್ನತಕ್ಕವಸ್ತುಗಳೂ ತಿನ್ನಬಾರದ ವಸ್ತುಗಳೂ ಇವೆ. ಗೊರಸೆಯಿರತಕ್ಕ ಸಜೀವಜಂತುಗಳ ಮಾಂಸವನ್ನು ತಿನ್ನಬಹುದು. ಗೋವೂ ಆ ವರ್ಗಕ್ಕೇ ಸೇರಿದುದು. ಗೋವನ್ನು ತಿನ್ನದೆ ಇರಕೂಡದೆಂದು ಖುರಾನಿನಲ್ಲಿ ಹೇಳಿಲ್ಲವು. ಆದರೆ ನೆರೆಹೊರೆಯವರಿಗೆ ತೊಂದರೆಯಾಗಿದ್ದಪಕ್ಷದಲ್ಲಿ ಆ ಕೆಲಸವನ್ನು ಮಾಡಕೂಡದೆಂದು ಖುರಾನಿನಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಖುರಾನಿನಲ್ಲಿ ಮೋಹರಂ ವಿಚಾರವಿಲ್ಲವು. ಮಹಮ್ಮದೀಯಮತವು ಕತ್ತಿಯ ಬಲದಿಂದ ಪ್ರಸಾರಗೊಳಿಸಲ್ಪಟ್ಟಿತೆಂಬುದು ಅಸತ್ಯವು. ನಮ್ಮ ಮತದವರು ಇತರರನ್ನು ಬಲವಂತದಿಂದ ಮತಕ್ಕೆ ತೆಗೆದುಕೊಳ್ಳುವುದೂ ಮದ್ಯಪಾನಮಾಡುವುದೂ ಖುರಾನಿನಲ್ಲಿ ಹೇಳಲ್ಪಟ್ಟಿದೆಯೆಂದು ತಿಳಿಯಕೂಡದು. ಬಲವಂತದಿಂದ ಇತರರನ್ನು ಸೇರಿಸಿಕೊಳ್ಳಕೂಡದೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಮತವಿಷಯವನ್ನು ಇತರರಿಗೆ ಬೋಧಿಸಬೇಕು. ಅವರು ಮನಃಪೂರ್ವಕವಾಗಿ ಅಂಗೀಕರಿಸಿದಲ್ಲಿ ಸೇರಿಸಿಕೊಳ್ಳಬಹುದು. ಹಾಗಲ್ಲದೆ ಬಲವಂತದಿಂದ ಖಂಡಿತವಾಗಿ ಸೇರಿಸಿಕೊಳ್ಳಲಾಗದೆಂದು ಖುರಾನಿನಲ್ಲಿ ಸ್ಪಷ್ಟವಾಗಿದೆ. ಇತರ ಮತದವರು ಈ ಮತಕ್ಕೆ ಸೇರಲಿಷ್ಟಪಟ್ಟರೆ ಸೇರಿಸಿಕೊಳ್ಳಲ್ಪಡಲು ಯಾವ ಅಭ್ಯಂತರವೂ ಇಲ್ಲವು. ಬಹುಭಾರ್ಯತ್ವವನ್ನು ಕ್ರಿಸ್ತನೂ ಇತರ ಮತದವರೂ ಅಂಗೀಕರಿಸಿರುವರು. ನಾಲ್ವರಿಗಿಂತ ಹೆಚ್ಚಾಗಿ ಲಗ್ನಮಾಡಿಕೊಳ್ಳಲಾಗದು. ಆ ನಾಲ್ವರನ್ನೂ ಸಮಾನವಾಗಿ ಕಾಣಬೇಕೆಂದು ಖುರಾನಿನಲ್ಲಿ ಹೇಳಿದೆ. ಸ್ವರ್ಗವೂ ನರಕವೂ ಇವೆ. ಪಾಪಪುಣ್ಯಗಳಿವೆ. ಭೂಲೋಕವು ಸಾಧನಾಕ್ಷೇತ್ರವು. ಮೋಕ್ಷವು ಶಾಶ್ವತಸ್ಥಾನವು. ಮಹಮ್ಮದನು ತಂದೆತಾಯಿಯೂ ತಿಂಡಿಯೂ ಇಲ್ಲದ ಅನಾಥಬಾಲನಾಗಿದ್ದು ಕ್ರಮಕ್ರಮವಾಗಿ ದೊಡ್ಡ ಗುರುವಾಗಿಯೂ, ರಾಜನಾಗಿಯೂ, ಸೇನಾನಾಯಕನಾಗಿಯೂ ಆದನು. ಎಂದು ಉಪನ್ಯಾಸಕರು ಹೇಳಿದರು.

ದ್ವೈತಮತವು.

(ನೆಲ್ಲೂರಿನ ಸಿ. ವಿ. ನರಸಿಂಗರಾವ್ ಸಾಹೇಬ್, ಬಿ.ಎ., ಬಿ.ಎಲ್., ಇವರ ಉಪನ್ಯಾಸ.)

ಮುಕ್ತಿಯಿಂದ ಕೂಡ ಜೀವನು ಭಿನ್ನನಾಗಿರುತ್ತಾನೆ. ದ್ವೈತಕ್ಕೆ ವೇದವೂ ಉಪನಿಷತ್ತೂ ಆಧಾರವು. ಬ್ರಹ್ಮಸೂತ್ರವೂ ಭಗವದ್ಗೀತೆಯೂ ಆಧಾರಗಳಾಗಿವೆ. ದ್ವೈತವು ಬರೀ ಪೂರ್ವಾಚಾರ ಪರಾಯಣತ್ವವು. ವೇದವೇ ಪರಮಪ್ರಾಣವು. ಉಪನಿಷತ್ಕಾಲದಿಂದಲೂ ಅನ್ಯ (ದ್ವೈತವು) ಅನನ್ಯ (ಅದ್ವೈತವು) ಎಂದು ಎರಡುವಿಧಗಳಿವೆ. ಜೀವನಿಗೂ ದೇವರಿಗೂ ಭೇದವಿದೆಯೆಂಬುವವರು ಅನ್ಯರು; ಭೇದವಿಲ್ಲವೆನ್ನುವವರು ಅನನ್ಯರು. ಜೀವಾತ್ಮನೂ ಪರಮಾತ್ಮನೂ ಭಿನ್ನರು ಎಂಬುದಕ್ಕೆ ವೇದದಲ್ಲೂ, ಉಪನಿಷತ್ತಿನಲ್ಲೂ, ಭಗವದ್ಗೀತೆಯಲ್ಲೂ ಬಹಳ ಪ್ರಮಾಣಗಳಿವೆ. ಮೋಕ್ಷವು ಉತ್ತಮೋತ್ತಮವಾದ ಲೋಕವು. ಮೋಕ್ಷಲೋಕವರ್ಣನವು ಅಂದರೆ ವಿಷ್ಣುಲೋಕವರ್ಣನವು ಉಪನಿಷತ್ತಿನಲ್ಲಿ ಸಹ ಇದೆ. ವಿಷ್ಣುಲೋಕವಲ್ಲದೆ ಉಳಿದ ಲೋಕಗಳೆಲ್ಲ ನಾಶವಾಗುವುವು. ಭಗವಂತನಾದ ಮಹಾವಿಷ್ಣುವು ಸರ್ವವ್ಯಾಪಿ, ಸರ್ವನಿಯಾಮಕ, ಸರ್ವಕರ್ತ, ಸರ್ವಕಾರಯಿತ, ಫಲಪ್ರದಾತ, ಫಲಭೋಕ್ತ, ಪ್ರೇರಕೀ, ತ್ರಿಗುಣಾತೀತ, ಸೃಷ್ಟ್ಯಾದಿ ಅಷ್ಟಕರ್ತ ಎಂದು ಛಾಂದೋಗ್ಯದಲ್ಲಿರುತ್ತದೆ. ನಿವೃತ್ತಿಕರ್ಮದಿಂದ ಪರೋಕ್ಷಜ್ಞಾನವೂ, ಅದರಿಂದ ಅಪರೋಕ್ಷಜ್ಞಾನವೂ, ಅದರಿಂದ ಅಸಂಪ್ರಜ್ಞಾತಸಮಾಧಿಯೂ, ಅದರಿಂದ ಜನನಮರಣವಿರಹಿತವಾದ ಮೋಕ್ಷವೂ ಉಂಟಾಗುವುದು. ಕಾಮ್ಯಕರ್ಮದಿಂದ ಸ್ವರ್ಗಾದಿಲೋಕಕ್ಕೆ ಹೋಗಿ ಪುಣ್ಯವು ಮುಗಿಯುತಲೇ ಪುನಃ ಭೂಲೋಕದಲ್ಲಿ ಹುಟ್ಟುವರು. ಈ ಎರಡು ವಿಧಗಳಾದ ಕರ್ಮಗಳನ್ನು ಮಾಡುವವರು ಪಶುಪಕ್ಷಿ ಕ್ರಿಮಿಕೀಟ ಶಿಲಾವೃಕ್ಷಾದಿ ಜನ್ಮವನ್ನೆತ್ತುವರು. ಭಗವದ್ದ್ರೋಹಿಗಳೂ, ದೈವದೂಷಕರೂ, ನಾಸ್ತಿಕರೂ ನರಕಕ್ಕೆ ಹೋಗುವರು. ಮೋಕ್ಷದಿಂದ ಕೂಡ ಜೀವನು ಬೇರೆಬೇರೆಯಾಗಿದ್ದು ಸತ್‌ಚಿತ್ ಆನಂದಮಯವಾದ ಸ್ವಸ್ವರೂಪವನ್ನೂ, ಅನಂತಾನಂತ ಕಲ್ಯಾಣಗುಣಪರಿಪೂರ್ಣವಾದ ಭಗವತ್ಸ್ವರೂಪವನ್ನು ಅನುಭವಿಸುವರು. ಅವರು ಸ್ವೇಚ್ಛೆಯಾಗಿ ಸಕಲಲೋಕದಲ್ಲೂ ಸಂಚರಿಸುವರು.

ಸಂಕಲ್ಪಮಾತ್ರದಿಂದ ಸರ್ವಾಭೀಷ್ಟವೂ ಅವರಿಗೆ ಸಿದ್ಧಿಸುವುದು. ಒಂದಾವೃತ್ತಿಗೇ ಹೆಚ್ಚು ಸೌಖ್ಯವನ್ನು ಕೂಡ ಅನುಭವಿಸುವ ಶಕ್ತಿಯು ಮುಕ್ತಿಗೆ ಉಂಟಾಗುತ್ತದೆ. ಮುಕ್ತನು ಬಹುರೂಪದಿಂದ ಬಹುಸೌಖ್ಯವನ್ನು ಅನೇಕಕಾಲದವರೆಗೆ ಅನುಭವಿಸುವನು. ಮುಕ್ತಿಯಲ್ಲು ಕೂಡ ಆನಂದದ ತಾರತಮ್ಯವಿದೆ. ಭಗವಂತನಾದ ವಿಷ್ಣುವೇ ಸರ್ವಸ್ವವೆಂದು ಪ್ರೇಮಿಸುವುದೇ ಮುಕ್ತಿಗೆ ಪ್ರಧಾನಸಾಧನವು. ಉಳಿದುದೆಲ್ಲವೂ ಭಗವದ್ಭಕ್ತರಿಂದೂ, ಭಗವತ್ಸೇವಾಸಾಧಕರಿಂದೂ ಪ್ರೀತಿಸತಕ್ಕದು.

ಬಂಧವಿಮೋಚನೆಯನ್ನೇ ಸರ್ವಜೀವರೂ ಕೋರುವರು. ವಿಷ್ಣುಲೋಕಕ್ಕೆ ಹೋದಾಗ್ಗೆ ಜನನಮರಣರೂಪಕವಾದ ಬಂಧವು ತಪ್ಪುವುದಿಲ್ಲ. ಶ್ರವಣಮನನನಿದಿಧ್ಯಾಸಾದಿಗಳಿಂದಲೂ, ಧ್ಯಾನದಿಂದಲೂ, ಸ್ವವರ್ಣೋಚಿತ ಕರ್ಮವನ್ನೂ, ಕೋರಿಕೆಯನ್ನೂ, ಕರ್ತೃತ್ವವನ್ನೂ ಮಮಕಾರವಿಲ್ಲದ ಭಗವತ್ಪ್ರೇರಣೆಯಿಂದ ಭಗವತ್ಪ್ರೀತಿಗಾಗಿ ಮಾಡುತ್ತೇನೆಂದೂ ಭಗವದರ್ಪಣಬುದ್ಧಿಯಿಂದ ಮಾಡಿದಲ್ಲಿ ಭಗವಂತನಾದ ವಿಷ್ಣುವೇ ಸರ್ವೋತ್ತಮನೆಂದು ಭಾವಿಸಿದಲ್ಲಿ ಮುಕ್ತಿಯನ್ನು ಹೊಂದಬಹುದು. ಮುಕ್ತಿಯನ್ನು ಕುರಿತ [illegible] ಸಂಭವಿಸಿದವರು ನನಗೆ ಬರೆದಿದ್ದರಿಂದ ಇವರ [illegible] ಪ್ರಶ್ನಿಸಲು ನನಗೆ ಅವಕಾಶವಿಲ್ಲವಾಯಿತೆಂದು ಮ|| [illegible] ಹೇಳಿದರು.

ಪಾರ್ಶೀಮತವು.

ಒಳ್ಳೇ ಆಲೋಚನೆ, ಒಳ್ಳೇ ಮಾತು, ಒಳ್ಳೇ ಕೆಲಸ ಮಾಡುವವರ್‍ಯ ಆದರ್ಶಪ್ರಾಯರಾದ ಮನುಷ್ಯರು. ಅವರೇ ಮಹಾತ್ಮರು, ಮತ್ತು ಅವರೇ ಸಕಲ ಜನರನ್ನು ಆಶೀರ್ವದಿಸುವವರು.

ಆನಂದವು—ಭಗವಂತನಲ್ಲಿ ತನ್ನ ಆತ್ಮವನ್ನು ಲೀನಮಾಡಿ ಮಹಾತ್ಮನು ಯಾವಾಗಲೂ ಆನಂದದಲ್ಲಿರುತ್ತಾನೆ. ಜೀವನಿಗೂ ಶರೀರಕ್ಕೂ ಸಂಬಂಧವಿಲ್ಲವೆಂದು ಗ್ರಹಿಸಿ ಶರೀರಸಂಬಂಧದಲ್ಲಿ ವ್ಯಕ್ತಿತ್ವವನ್ನು ಲಕ್ಷಿಸದೆ ಮಹಾತ್ಮನು ತಾನು ನಿರಂತರವೂ ಆನಂದಮಯನಾಗಿಯೇ ಇದ್ದು ಇತರರನ್ನು ಕೂಡ ಆನಂದಮಯರನ್ನಾಗಿ ಮಾಡುವನು. ಪ್ರಪಂಚವಾಸಿಗಳೆಲ್ಲರನ್ನೂ ಮಹಾತ್ಮನು ಆಶೀರ್ವದಿಸುವನು; ಎಲ್ಲರಿಗೂ ಕ್ಷೇಮವನ್ನು ಕೋರುವನು. ಅದರಂತೆಯೇ ನಾವು ಕೂಡ ಕೋರಬೇಕು. ನಮಗೆ ಪ್ರಾಪ್ತವಾದ ಆನಂದವನ್ನೂ, ಜ್ಞಾನವನ್ನೂ, ಧನವನ್ನೂ ನಾವು ಇತರರಿಗೆ ಉಂಟುಮಾಡಿಕೊಡಬೇಕು. ಆನಂದವಾಹಿನಿಯು ಅಖಂಡಗೌತಮಿಯಂತೆ ನಿರಂತರದಲ್ಲೂ ಪ್ರವಹಿಸುತ್ತಿರಬೇಕು.

ಪವಿತ್ರಾಭಾವವು—ನಿಷ್ಕಾಪಟ್ಯವು ಮುಖ್ಯವಾಗಿರಬೇಕು. ದ್ವೇಷ, ಈರ್ಷ್ಯೆ, ಅಸೂಯ ಮೊದಲಾದವಿರಕೂಡದು. ಪ್ರೇಮವು ನಿರಂತರವೂ ಪ್ರವಹಿಸುತ್ತಿರಬೇಕು. ಅದಕ್ಕೆ ಮನಸ್ಸು ನಿರ್ಮಲವಾಗಿರಬೇಕು. ನಿರ್ಮಲಭಾವದಿಂದಿರಬೇಕು. ಎಲ್ಲ ಜೀವಿಗಳಲ್ಲೂ ಭಗವಂತನನ್ನು ನೋಡಬೇಕು. ಜಾತಿ, ಮತ, ವರ್ಣಭೇದವೂ, ಸ್ತ್ರೀಪುರುಷರ ಭೇದವೂ ಕಲ್ಪಿತಗಳು. ಎಲ್ಲರೂ ಸಮಾನರೆಂದು ಗ್ರಹಿಸಬೇಕು.

ಸತ್ಯ—ಸತ್ಯವನ್ನೇ ಯಾವಾಗಲೂ ಆಶ್ರಯಿಸಿರಬೇಕು. ಸತ್ಯವೇ ಶಕ್ತಿಯನ್ನು ಕೊಟ್ಟು ಕಾಪಾಡುವುದು. ಅಸತ್ಯವನ್ನು ಸಂಪೂರ್ಣವಾಗಿ ಬಿಡಬೇಕು. ಮನೋವಾಕ್ಕಾಯಕರ್ಮಗಳಲ್ಲೆಲ್ಲಾ ಸತ್ಯವನ್ನೇ ಆಶ್ರಯಿಸಿರಬೇಕು. ಇತರರಿಗೆ ಸೌಖ್ಯವನ್ನು ಉಂಟುಮಾಡಿದರೆ ನಮಗೆ ಭಗವಂತನು ಆನಂದವನ್ನುಂಟುಮಾಡುವನು. ಇದೇ ಪಾರ್ಶೀಮತವು. ಜೋರಾಷ್ಟ್ರನು ಬರೆದ ಮೂಲಗ್ರಂಥವು ದೇವರ ಕೀರ್ತನವಾಗಿದೆ. ಭಗವಂತನನ್ನು ದೇವತೆಗಳೂ, ಜೀವಿಗಳೂ ಪ್ರಾರ್ಥಿಸಿರುವರು. ಪಂಚಭೂತವು ದೇವರ ಪ್ರತಿಬಿಂಬವೆಂದು ತಿಳಿದು ತದಂತರ್ಯಾಮಿಯಾದ ಈಶ್ವರನನ್ನು ಧ್ಯಾನಿಸುವುದೇ ನಮ್ಮ ಪೂಜೆಯು. ನಮ್ಮಲ್ಲಿ ಸನ್ಯಾಸವುಂಟು. ಸರ್ವವನ್ನೂ ತ್ಯಜಿಸಿ ಕಾಡಿಗೆ ಹೋಗಲು ಆಕ್ಷೇಪವಿಲ್ಲವು. ಜೋರಾಷ್ಟ್ರನು 15 ವರ್ಷ ಕಾಡಿಗೆ ಹೋಗಿ ಜ್ಞಾನವನ್ನು ಸಂಪಾದಿಸಿಕೊಂಡು ಬಂದು ಲೋಕಕ್ಕೆ ಬೋಧಿಸಿದನು. ನಮ್ಮಲ್ಲಿ ನಾಲ್ಕು ವರ್ಣಗಳಿವೆ. ಆದರೆ ಹಿಂದೂಮತದಲ್ಲಿದ್ದಂತೆ ವಿಭಾಗಗಳಿಲ್ಲವು. ಯಾರಾದರೂ ಯಾವ ಧರ್ಮವನ್ನಾದರೂ ಅನುಸರಿಸಬಹುದು. ಪೂರ್ವದಲ್ಲಿ ಕೇವಲ ವಿರಾಗಿಗಳೂ, ಸನ್ಯಾಸಿಗಳೂ ಇದ್ದರಲ್ಲದೆ ವೈರಾಗ್ಯವನ್ನೂ, ಗಾರ್ಹಸ್ಥ್ಯವನ್ನೂ ಕೆಲವರು ಅವಲಂಬಿಸಿದ್ದರು. ದಾದಾಭಾಯಿ ನೌರೋಜಿಯವರು ಮೊದಲಾದವರು ಹಾಗಿದ್ದರು. ಇತರರನ್ನು ನಮ್ಮ ಮತಕ್ಕೆ ಸೇರಿಸಿಕೊಳ್ಳುವ ವಿಚಾರದಲ್ಲಿ ಎರಡು ಪಕ್ಷಗಳಾಗಿರುತ್ತವೆ. ಅವರಲ್ಲೊಬ್ಬರು ಅನುಕೂಲರಾಗಿಯೂ ಇನ್ನೊಬ್ಬರು ಪ್ರತಿಕೂಲರಾಗಿಯೂ ಇರುವರು. ಮಹಮ್ಮದೀಯರೂ, ಅಲೆಗ್ಜಾಂಡರನೂ ನಮ್ಮ ಮತಗ್ರಂಥಗಳನ್ನೆಲ್ಲಾ ನಾಶಪಡಿಸಿದರು. ಮತಕರ್ತನು ಬರೆದ ಗ್ರಂಥದಲ್ಲಿ ಕೂಡ ಬಹಳ ನಾಶವಾಗಿ ಕೊಂಚ ಉಳಿದಿರುತ್ತದೆ. ಪುನರ್ಜನ್ಮವನ್ನು ಕುರಿತು ಅಲ್ಲಲ್ಲಿ ಪ್ರಮಾಣವಿರುತ್ತದೆ. ಜೀವವು ಸ್ಥಿರವಾಗಿರುವುದಲ್ಲದೆ ನಾಶವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಶ್ಮಶಾನವು ಸಾಂಕೇತಿಕವು.

ಒಳ್ಳೇ ಪೂಜಾಂಗವು—ನಡುಕಟ್ಟು ಪ್ರಜಾಸೇವೆದೀಕ್ಷೆಯ ಸೂಚಕವು. ಅಗ್ನಿ ಆಲಯದಲ್ಲಿ ಯಾವಾಗಲೂ ದೀಪ ಧೂಪಗಳು ಜರುಗುತ್ತಿರಬೇಕು. ಅದು ಜೀವಪರಮಾತ್ಮಸಂಬಂಧ ಸೂಚನೆಯು. ಅಹಿಂಸೆಯು ಪ್ರಧಾನವಾಗಿ ವಿಧಿಸಲ್ಪಟ್ಟಿದ್ದರೂ ಶಾಕಾಹಾರವನ್ನು ತೆಗೆದುಕೊಳ್ಳುವವರು ಕೆಲ ಜನರು ಮಾತ್ರವೇ ಇರುತ್ತಾರೆ. ಎಲ್ಲ ಮತಗಳಲ್ಲೂ ಈಗ ಅದರಂತೇಯೇ ಕಾಣಬರುತ್ತದೆ. ಮತಕರ್ತನು ರೊಟ್ಟಿಯನ್ನು ಮಾತ್ರ ಸೇವಿಸುತ್ತಿದ್ದನು. ನೆಲದಮೇಲೆ ಮಲಗುವುದು ಹಾಲು ರೊಟ್ಟಿ ಹಣ್ಣುಗಳನ್ನು ಮಾತ್ರ ಸೇವಿಸುವುದು, ಜನರ ವಾಸಸ್ಥಳದಿಂದ ಎರಡು ಮೈಲಿಗೆ ದೂರದಲ್ಲಿದ್ದುಕೊಂಡಿರುವುದು ಮೊದಲಾದುವನ್ನು ಪೂರ್ವಿಕರು ಮಾಡುತ್ತಿದ್ದರು. ಆದರೆ ಈಗ ಅವರನ್ನು ಅನುಸರಿಸುವವರು ಎಲ್ಲೋ ಕೆಲಜನರಿರುತ್ತಾರೆ. ವಿವಾಹವು ಪರಮಪವಿತ್ರವು. ಗಾರ್ಹಸ್ಥ್ಯವು ಉತ್ತಮಧರ್ಮವೆಂದು ವಿಧಿಸಲ್ಪಟ್ಟಿರುತ್ತದೆ. ಸ್ತ್ರೀಯರಿಗೆ ಉನ್ನತಸ್ಥಾನವು ಕೊಡಲ್ಪಟ್ಟಿದೆ. ವಿವಾಹಸಂಬಂಧವು ಜೀವಸಂಬಂಧವಲ್ಲದೆ ಶರೀರಸಂಬಂಧವಲ್ಲವು. ಭಾರ್ಯಾಭರ್ತರಿಬ್ಬರೂ ಒಂದೇ ಜೀವವಾಗಿ ಭಾವಿಸಲ್ಪಡುವರು. ಅವರಲ್ಲೊಬ್ಬರು ಸತ್ತಲ್ಲಿ ಇಬ್ಬರನ್ನೂ ಒಟ್ಟುಗೂಡಿಸಿ ಉತ್ತರಕ್ರಿಯೆ ಮಾಡಲ್ಪಡುವುದು. ಪ್ರತಿಜೀವಿಯನ್ನೂ ಭಗವತ್ಸ್ವರೂಪವೆಂದು ನಾವು ನಂಬಿರುವೆವು. ದೇವರಲ್ಲಿ ಅವತಾರವಿಲ್ಲವು. ಮತಾಂತರ ವಿವಾಹವು ನಿಷಿದ್ಧವು. ಆರೀತಿ ವಿವಾಹಮಾಡಿಕೊಂಡವರು ಬಹಿಷ್ಕೃತರಾಗುವರು.

(ಸಶೇಷ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

BULLETION No. 2.

THE MYSORE LAWYERS' CONFERENCE TUMKUR.

In a meeting of the Receiption Committee held to day Mr. K. Rangaiengar was elected the chairman and a working committee consisting of eight members was constituted. The date of the conference will be fixed in the latter part of the first week of April, after consultation with the central committee. The various Bar associations that have not yet sent their nominations for the presidentship for the conference are requested to do so before the 15th instant, after which the final choice will be made.

Tumkur, } SECRETARY,
9th January 1926. } Mysore Lawyers' Conference.

GOVERNMENT MIDDLE SCHOOL, SULTANPET,

(Formerly S.R. Nanjundiah's Hindu A.V. School)
BANGALORE CITY.

It is proposed to celebrate the School Day this year during the first week of February 1926. In this connection, it is proposed to get the Memorial Stone, graciously granted by the Government, to commemorate the transfer of the School from late Mr. S. R. Nanjundiah to the Government, fixed up in a prominent place in the School Building. The old boys, the parents of the old and new boys, and the sympathisers of the School are requested to come forward with their liberal subscriptions and co-operate in all possible manner, to make the function a splendid success. The subscriptions may be kindly sent or paid in person, to Mr. K. L. Sastry, Honorary Treasurer, Sultanpet Middle School Day Committee. All the old boys are earnestly requested to send their addresses to the Hon. Secretary and make it convenient to be present on the occasion.

Bangalore City, } S. GURURAJA CHAR,
5—1—1926. } Hon. Secretary.

ಮದ್ರಾಸು ವೀರಶೈವಾಶ್ರಮ.

ಈ ಆಶ್ರಮವನ್ನು ನಂ. 333 ತಂಬುಚೆಟ್ಟಿಬೀದಿ ಮದ್ರಾಸು ಇದಕ್ಕೆ ಮೊದಲಿದ್ದ ಮನೆಯಿಂದ ಬದಲಾಯಿಸಿರುತ್ತೇವಾದ್ದರಿಂದ ಇನ್ನು ಮೇಲೆ ಮದ್ರಾಸು ವೀರಶೈವಾಶ್ರಮದ ವಿದ್ಯಾರ್ಥಿಗಳಿಗೆ ಈ ವಿಳಾಸಕ್ಕೆ ಪತ್ರವ್ಯವಹಾರ ಜರುಗಿಸುವುದಾಗಬೇಕು, ಮತ್ತು ಈ ಮೇಲ್ಕಂಡ ಹೊಸಮನೆಯು ಚಿಕ್ಕದಾಗಿರುವುದರಿಂದ ಹೆಚ್ಚುಮಂದಿ ವಿದ್ಯಾರ್ಥಿಗಳಿಗೆ ಸ್ಥಳವಿರದೆ ಭೋಜನಕ್ಕೆ ಬರಲಿಚ್ಛಿಸುವ ವಿದ್ಯಾರ್ಥಿಗಳಿಗೆ ಮಾತ್ರ ಸ್ಥಳ ದೊರೆಯುತ್ತದೆ. ಇಷ್ಟಪಟ್ಟವರು ಈ ಕೆಳಗಿನ ವಿಳಾಸಕ್ಕೆ ಬರೆದು ಜವಾಬುಹೊಂದಬಹುದು.

ಕಾರ್ಯದರ್ಶಿ.
ಎಂ. ಹೆಚ್. ಎಂ. ನಂಜುಂಡಯ್ಯ, ಬಿ.ಎ.,
ಮದ್ರಾಸು ವೀರಶೈವಾಶ್ರಮ.
333 ನಂ. ತಂಬುಚೆಟ್ಟಿ ಬೀದಿ ಮದ್ರಾಸು.

ಬಾಳೆಹೊನ್ನೂರುಪಟ್ಟಾಭಿಷೇಕದಲ್ಲಿ ನಡೆದ ಕಾಣಿಕೆ.

ಬಾಳೆಹೊನ್ನೂರುಪಟ್ಟಾಭಿಷೇಕಕಾಲದಲ್ಲಿ ಶ್ರೀಗಳವರಿಗೆ ಕಾಣಿಕೆ ಒಪ್ಪಿಸಿದ ಆಯಾಭಕ್ತಾದಿಗಳ ಹೆಸರುಗಳನ್ನೂ ಮೊಬಲಗುಗಳನ್ನೂ ನಮೂದಿಸಿ ಸ್ಟಾರ್ ಪತ್ರಿಕೆಯಲ್ಲಿ ಪ್ರಚುರಪಡಿಸಿರುವುದು ಸರಿಯಷ್ಟೆ. ಆದರೆ ಕೆಲವು ಪ್ರಾಂತ್ಯದ ಅಂದರೆ ಚೆನ್ನರಾಯಪಟ್ಟಣ, ತಿಪಟೂರು, ತುರುವೇಕೆರೆ ಈ ತಾಲ್ಲೂಕುಗಳಿಗೆ ಸೇರಿದ ಕೆಲವು ಗ್ರಾಮಗಳ ನುಗ್ಗೆಹಳ್ಳಿ, ನೊಣವಿನಕೆರೆ, ತುರುವೇಕೆರೆ ಈ ಗ್ರಾಮಗಳ ಭಕ್ತಾದಿಗಳಿಂದ ಒಪ್ಪಿಸಿದ ಕಾಣಿಕೆಗಳನ್ನು ನಮೂದುಮಾಡದಿರುವುದರ ಕಾರಣವು ತಿಳಿಯದಾಗಿದೆ. ಹತ್ತು ರೂ. ಗಳ ಮೊಬಲಗನ್ನು ಪ್ರಚುರಪಡಿಸಿರುವಲ್ಲಿ ಅದಕ್ಕಿಂತಲೂ ಹೆಚ್ಚಿನ ಮೊಬಲಗಾದ 15 ರೂ, 20 ರೂ, 25, ರೂ. ಇಂಥವುಗಳನ್ನು ನಮೂದಿಸದಿರುವುದು ಚೋದ್ಯವೇಸರಿ. ಇದು ಮಠದ ವ್ಯವಸ್ಥಾಪಕರ ಅವಗಾಹನೆಗೆ ಬಾರದೆ ಇದ್ದಿದ್ದರ ದೋಷವೋ, ವ್ಯಕ್ತಿದೋಷವೋ ? ಊಹಿಸಲಾಗದು.

ಒಬ್ಬ ಭಕ್ತ.

ಕೈ|| ಚೆನ್ನಮಲ್ಲಪ್ಪನವರು.

ಗುಬ್ಬಿ ತಾಲ್ಲೂಕು ಸಬ್‌ರಿಜಿಸ್ಟ್ರಾರ್ ಮಿ|| ಚೆನ್ನಮಲ್ಲಪ್ಪಶೆಟ್ಟರು ಈ ಮಾಹೆ 11 ನೇ ತಾರೀಖು ಸೋಮವಾರ ಶಿವಸಾಯುಜ್ಯವನ್ನು ಹೊಂದಿದರು. ಇವರು ಗುಬ್ಬಿಯ ಶ್ರೀಮಂತ ಶಿವರಾತ್ರ ಮನೆತನದವರು. ಸುಮಾರು 30 ವರ್ಷಗಳಿಂದಲೂ ಸಬ್‌ರಿಜಿಸ್ಟ್ರಾರರಾಗಿ (Sub-Registrar) ಮೈಸೂರು ಗೌರ್ನಮೆಂಟಿನಲ್ಲಿ ಸರ್ವಿಸ್‌ಮಾಡಿ 1923 ನೇ ಇಸವಿಯಲ್ಲಿ ಮೈಸೂರು ತಾಲ್ಲೂಕು ಸಬ್‌ರಿಜಿಸ್ಟ್ರಾರ್ ಆಗಿರುವಾಗ್ಯೆ ಲಕ್ವಹೊಡದು ಗುಣಹೊಂದಿ ಪುನಃ ನಾಗಮಂಗಲಕ್ಕೆ ವರ್ಗಾಯಿಸಲ್ಪಟ್ಟು ತಮ್ಮ ಜನ್ಮಸ್ಥಳವಾದ ಗುಬ್ಬಿಗೆ ಬಂದು ಸುಮಾರು ಒಂದುವರ್ಷವಾಯಿತು. ಆಗಲಿಂದಲೂ ಈ ತಾ|| 7ರ ವರೆಗೆ ಇಲ್ಲಿ ಸರ್ಕಾರಿ ಕೆಲಸಗಳನ್ನು ಬಹಳ ಚಟುವಟಿಕೆಯಿಂದ ನಿರ್ವಹಿಸುತ್ತಿದ್ದು ತಾ|| 8 ರಲ್ಲಿ ಅಸ್ವಸ್ಥತೆಯಾದ್ದರಿಂದ ರಜಾಪಡೆದುಕೊಂಡಿದ್ದರು. ಇವರು ಗುಣಾಢ್ಯರು, ಅಗರ್ಭಶ್ರೀಮಂತರು, ಪ್ರಸಿದ್ಧಮನೆತನದ ಲೇಟ್ ಬಿ. ಗಂಗಯ್ಯನವರ ಅಳಿಯಂದಿರು, ಬೆಂಗಳೂರು ಪಟ್ಟಣದಲ್ಲಿ ವಿದ್ಯಾಭ್ಯಾಸಮಾಡಿದವರು ಆಗಿದ್ದು ತಮ್ಮ ಸುನಡತೆಯಿಂದ ಬಹುಜನಗಳ ಪ್ರೀತಿವಿಶ್ವಾಸಕ್ಕೆ ಪಾತ್ರರಾಗಿದ್ದರು. ಇಂಥಾವರನ್ನು ಕಳೆದುಕೊಂಡದ್ದು ಈ ಪುರವಾಸಿಗಳಿಗು ಮತ್ತು ಇವರ ಇಷ್ಟಮಿತ್ರರಿಗು ತುಂಬಾವ್ಯಸನವುಂಟಾಗಿರುತ್ತದೆ. ಯಜಮಾನ ರೇವಣ್ಣ, ಗುಬ್ಬಿ.

ಮಹಾರುದ್ರಾಭಿಷೇಕ.

ಹರಪನಹಳ್ಳಿ ತಾ|| ಹಿರೇಕುರುವತ್ತಿಯಲ್ಲಿ ಮುಂದಿನ ಅಧಿಕಚೈತ್ರ ಮಾಸದಿಂದ ಪ್ರಾರಂಭವಾಗುವ ಮಹಾರುದ್ರಾಭಿಷೇಕದಲ್ಲಿ ತಾ|| 8-5-26ಕ್ಕೆ ಅತಿರುದ್ರ ಸಮಾಪ್ತಿಯಾಗುವ ಕೊನೇ ದಿವಸ ಮಹಾಪೂಜೆಯನ್ನು ಚಿಕ್ಕಮಗಳೂರು ಕಾಫಿಪ್ಲಾಂಟರು ಮಿ|| ಚಂದ್ರೇಗೌಡರು ಭಕ್ತಿಯಿಂದ ಸೇವಾನಡಿಸಲು ವಹಿಸಿ ಪ್ರೋತ್ಸಾಹಿಸಿದಂತೆ ನಂ. 54 ನೇ ಪೂಜೆಯನ್ನು ಬೆಂಗಳೂರು ಅರಲೇಪೇಟೆ ವೀರಶೈವಸಂಘದಪರವಾಗಿ ಮಿ|| ಯಜಮಾನ್ ಅಂಡ್ ಸನ್ಸರವರು, ಮತ್ತು ನಂ. 53ನೇ ದಿವಸದ ಮಹಾಪೂಜೆಯನ್ನು ಚಿಕ್ಕಮಗಳೂರು ಕಾಫಿಪ್ಲಾಂಟರು ಮಿ|| ಟಿ. ಚೆನ್ನಬಸಪ್ಪಶೆಟ್ಟರು ವಹಿಸಿರುವರು. ನಂ. 52 ನೇ ದಿವಸದ ಮಹಾಪೂಜೆಯನ್ನು ಬೆಂಗಳೂರು ಕಂಟೋನ್ಮೆಂಟು ಗೌರ್ನಮೆಂಟ್ ಕಂಟ್ರಾಕ್ಟರ್ ದೈರಿ ಫಾರಂ ಮಿ|| ಸಿ. ಕೆಂಚಪ್ಪನವರು ಅನುಮೋದಿಸಿ ಬರೆಸಿಕಳುಹಿಸಿರುವರು. ಅಲ್ಲದೆ ತುಮಕೂರು ಸಾಹುಕಾರ್ ಮಿ|| ಕರಮನ್ನೆ ಶಿದ್ಧಲಿಂಗಪ್ಪನವರು ಪ್ರಾರಂಭದ ಮಹಾರುದ್ರಪೂಜೆಯನ್ನು ಒಪ್ಪಿಕೊಂಡಿರುವರಲ್ಲದೆ, ಇತರ ಅನೇಕ ಪೂಜೆಗಳನ್ನು ನಮ್ಮ ಮೈಸೂರುಸೀಮೆಯ ವೀರಶೈವಮಹಾಜನಗಳೇ ಅರಿಸಿ ತೆಗೆದುಕೊಳ್ಳುತ್ತ ಇರುವರು. ನಮ್ಮ ಲಿಸ್ಟಿನಲ್ಲಿ ಕಂಡ ಸ್ವಲ್ಪ ಉಳಿದ ದೊಡ್ಡಪೂಜಾಗಳು ತ್ವರೆಮಾಡಿದರೆ ಅವರವರ ಯೋಗ್ಯತಾನುಸಾರ ಲಭ್ಯವಾದೀತೆಂದು ಪ್ರಕಟನಮಾಡಿದೆ.

ಮಹದೇವರಾವ್ [illegible].

ಮೈಸೂರು ರಾಷ್ಟ್ರೀಯ ಆಯುರ್ವೇದಿಯ ಸಮ್ಮೇಳನ, ಶಿವಮೊಗ್ಗಾ.

ಬೆಂಗಳೂರಿನಲ್ಲಿ ನಡೆಯುವ ದ್ವಿತೀಯ [illegible] ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಮೈಸೂರುಸೀಮೆ ಮತ್ತು [illegible] ಆಯುರ್ವೇದೀಯ ಸಮ್ಮೇಳನ [illegible]

ವೆಂದು ಪ್ರಕಟಮಾಡಿದ್ದೇವಷ್ಟೆ ? ಈ ಸಮ್ಮೇಳನವು ಬರುವ 1926 ನೇ ಇಸವಿ ಜನವರಿ ತಾರೀಖು 31 ರಲ್ಲಿ ಶಿವಮೊಗ್ಗದಲ್ಲಿ ನಡೆಯಿಸಲು ಏರ್ಪಾಡಾಗಿರುತ್ತೆ. ಈ ಸಭೆಗೆ ಮಹನೀಯರಾದ ಶ್ರೀಯುತ ಡಾ॥ ಶಂಕರ್ ದಿನಕರ್ ಜಶಾರ್, ಎಲ್. ಎಂ. ಅಂಡ್ ಎಸ್., ಬಾಗಲಕೋಟೆಯವರು ಅಧ್ಯಕ್ಷರಾಗಲು ಆದರದಿಂದ ಅಂಗೀಕರಿಸಿರುತ್ತಾರೆ. ಆ ಕಾಲಕ್ಕೆ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳಲ್ಲಿರುವ ಎಲ್ಲಾ ಆಯುರ್ವೇದಾಭಿಮಾನಿಗಳು ಸಹ ಇಲ್ಲಿಗೆ ದಯಮಾಡಿಸಿ ಕಾರ್ಯೋದ್ದೇಶವನ್ನು ಸಾಂಗವಾಗಿ ನೆರವೇರಿಸಬೇಕಾಗಿ ಕೋರುತ್ತೇವೆ.

ತಮ್ಮ ವಿಧೇಯ,
ಜಿ. ಎಲ್. ಎನ್. ಅಯ್ಯಂಗಾರ್, ಎಸ್. ಶೀತಾರಾಮಯ್ಯ,
ಸ್ವಾ॥ ಸ॥ ಪ್ರಧಾನ ಕಾರ್ಯದರ್ಶಿ. ಅಡ್ವೊಕೇಟ್,
ಸ್ವಾಗತಸಮಿತಿ ಅಧ್ಯಕ್ಷರು.

ಶಿವಮೊಗ್ಗ,
ತಾರೀಖು 25—12—1925.

ವಿ. ಸೂ.—ಈ ಸಭೆಗೆ ಬರುವ ವೈದ್ಯರು ಜನವರಿ ತಾರೀಖು 25 ರೊಳಗೆ ತಲಪುವಂತೆ ಉತ್ತರ ಬರೆಯಬೇಕು. ಅಲ್ಲದೆ ಇವರು ಪ್ರತಿಯೊಬ್ಬರೂ ಒಂದುರೂಪಾಯಿಮೇರೆ ಸಭ್ಯಧನವನ್ನು ಕಳುಹಿಸಿಕೊಡತಕ್ಕದ್ದೆಂದು ನಿಬಂಧನೆಯಾಗಿರುತ್ತೆ. ಸಭಾ ನಡೆಯುವವಿನ ಭೋಜನದ ಏರ್ಪಾಟು ಮಾಡಲ್ಪಡುತ್ತೆ.

ಕ್ಷಯಸಂ॥ ದಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ಮಾಡುವ ಬಗ್ಗೆ ಸಂಶಯನಿವಾರಣೆ.

ಅನೇಕ ಜನರು ಪ್ರಭವಾದಿ ಷಷ್ಠಿಸಂವತ್ಸರಗಳಲ್ಲಿ ಕಡೆಯದಾದ ಮತ್ತು ಸಂಧಿವರ್ಷವಾದ ಕ್ಷಯಸಂವತ್ಸರದಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ಮಾಡಬಾರದೆಂದು ಅಭಿಪ್ರಾಯಪಟ್ಟಿರುವದರಮೇಲೆ ಈ ವಿಷಯದಲ್ಲಿ ಅನೇಕರು ನಮ್ಮ ಅಭಿಪ್ರಾಯವನ್ನು ಕೇಳಿರುತ್ತಾರೆ. ಸಮಸ್ತರಿಗೂ ಸಂಶಯನಿವಾರಣಾರ್ಥವಾಗಿ ಈ ಕ್ಷಯಸಂ॥ ದಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ದೇಶಭೇದಾನುಸಾರವಾಗಿ ಸಂವತ್ಸರಾಂತ್ಯದಲ್ಲಿ ಇಷ್ಟು ತಿಂಗಳು ಬಿಟ್ಟು ಮಾಡಬೇಕೆಂಬುವ ವಿಷಯವನ್ನು ಶಾಸ್ತ್ರಶೋಧನೆಮಾಡಿ ಈ ಕೆಳಗೆ ಪ್ರಸಿದ್ಧಮಾಡಿದೆ. ಪ್ರಮಾಣ ಶ್ಲೋಕ॥ ವಿಂಧ್ಯಸ್ಯೋತ್ತರ ದಿಗ್ಭಾಗೇ ಷಣ್ಮಾಸಂ ವತ್ಸರಾಂತ್ಯಕೇ । ತಸ್ಯದಕ್ಷಿಣದೇಶೇತು ತ್ರಿಮಾಸಂವರ್ಜಯೇತ್ಸದಾ ॥ ಅಂಗವಂಗಕಳಿಂಗೇಷು ಮಾಸಷಟ್ಕಂ ವಿವರ್ಜಯೇತ್ । ಪ್ರಥಮಾದೌತು ಮಾನಸ್ಯ ತ್ರೈವತ್ಸರ್ಗಸುಗರ್ಹಿತಃ ॥ (೯೯ ನೇ ಶ್ಲೋಕದ ವ್ಯಾಖ್ಯಾನ ಪುಟ ೯ ರೇ. ಕಾಲಾಮೃತ) ಎಂದರೆ ವಿಂಧ್ಯಪರ್ವತದ ಉತ್ತರದಿಗ್ಭಾಗದವರು ೬೦ ಸಂ॥ ಗಳ ಅಂತ್ಯದಲ್ಲಿ ಒಂದು ಸಂವತ್ಸರ ಬಿಡತಕ್ಕದ್ದೆಂತಲೂ, ವಿಂಧ್ಯಪರ್ವತಕ್ಕೆ ದಕ್ಷಿಣದವರು (ಎಂದರೆ ನಮ್ಮ ದೇಶದವರು) ಅಂತ್ಯದಲ್ಲಿ ೩ ತಿಂಗಳು ಬಿಡತಕ್ಕದ್ದೆಂತಲೂ, ಅಂಗ, ವಂಗ, ಕಳಿಂಗ ದೇಶದವರು ೬ ತಿಂಗಳು ಬಿಡಬೇಕೆಂತಲೂ ಶಾಸ್ತ್ರಾಧಾರವಿರುವುದು. ನಮ್ಮ ದೇಶದವರು ಕ್ಷಯಸಂ॥ ದಲ್ಲಿ ಕಾರ್ತಿಕ ಮಾರ್ಗಶಿರ ಮಾಸಗಳಲ್ಲಿ ಅಸ್ತವಿರುವುದರಿಂದ ಈ ೩ ತಿಂಗಳನ್ನು ಬಿಟ್ಟು ಉಳಿದ ನಿಜ ಚೈತ್ರ, ವೈಶಾಖ, ಜ್ಯೇಷ್ಠ ಮಾಸಗಳಲ್ಲಿ ಯಾವ ಸಂಶಯವಿಲ್ಲದೆ ವಿವಾಹಾದಿ ಶುಭಕಾರ್ಯಗಳನ್ನು ಮಾಡತಕ್ಕದ್ದು.

ಧರ್ಮಾರ್ಥ ಜ್ಯೋತಿಷ್ಯಪಾಠಶಾಲಾ,
ಹರಪನಹಳ್ಳಿ,
ತಾ॥ 9-1-1926.
ತೆಲಗಿ ಹರಪನಹಳ್ಳಿಮಠದ
ಬ್ರ॥ ಶ್ರೀ॥ ಸಿದ್ಧಾಂತಿ
ಹೊಳೆಬಸವಶಾಸ್ತ್ರಿಗಳು.

ದುಃಖವಾರ್ತೆ.

ರಂಜೇರಿಗ್ರಾಮದ ಪ್ರಸಿದ್ಧ ಸಾಹುಕಾರ್ ಬೀಣೀಸೂರಂದಪ್ಪನವರು ಕಳೆದ ಮಾರ್ಗಶಿರ ಕೃಷ್ಣ 30 ರಲ್ಲಿ ಮೃತಪಟ್ಟರೆಂದು ತಿಳಿಸಲು ವ್ಯಸನವಾಗುತ್ತದೆ. ಇವರಿಗೆ ಮರಣಕಾಲದಲ್ಲಿ 58 ವರ್ಷವಯಸ್ಸಾಗಿತ್ತು. ಇವರು ದೊಡ್ಡ ಜಮೀನ್ದಾರರಾಗಿಯೂ, ಶ್ರೀಮಂತರಾಗಿಯೂ ಇದ್ದು ಅನೇಕ ಜನರಿಗೆ ಉಪಕಾರಿಗಳಾಗಿಯೂ ಇದ್ದರು. ಈ ಇಲಾಖೆಯಲ್ಲಿ ನಡೆಯುವ ಪುರಾಣ, ಗಣಾರಾಧನೆ ಮುಂತಾದ ಧರ್ಮಕಾರ್ಯಗಳು ಇವರ ಸಹಾಯದವಿನಾ ನಡೆಯುತ್ತಿರಲಿಲ್ಲವೆಂದರೆ ಅತಿಶಯೋಕ್ತಿಯಾಗದು. ಮನೆಯಲ್ಲಂತೂ ಜಡಗಣಾಧೀಶ್ವರರೇ ಮುಂತಾದವರ ಧರ್ಮಜಾಗ್ರತಿ ಮಂಗಳಕಾರ್ಯಗಳು ಸದಾ ನಡೆಯುತ್ತಲೇ ಇದ್ದವು. ಮರಣಕಾಲದಲ್ಲಿ ಹುಮನಾಬಾದ, ಕಲ್ಬುರ್ಗಿ, ಚಾಂಗಲೇರಿ, ಭಾವಿಗಿ ಸ್ಥಳಗಳಲ್ಲಿಯ ಶ್ರೀವೀರಭದ್ರ, ಶ್ರೀಶರಣಬಸವೇಶ, ಶ್ರೀವೀರಭದ್ರ, ಶ್ರೀಭದ್ರೇಶ್ವರ ದೇವಾಲಯಗಳಿಗೆ ದೀಪಾರಾಧನೆಗಾಗಿ 500 ರೂ. ನಂತೆ 2,000 ರೂ. ಗಳನ್ನು ಸ್ವಂತ ತಮ್ಮ ಕೈಯಿಂದ ತೆಗೆದಿಟ್ಟು ಕಾಣಿದ ಗುರು ಮತ್ತು ಮಾಹೇಶ್ವರವೃಂದಕ್ಕೆ 1,000 ಹೆಚ್ಚು ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟು, ಗೃಹದಲ್ಲಿಯ ಭ್ರಾತೃಪುತ್ರರಿಗೆ ಎಂದಿನಂತೆ ಧರ್ಮಕಾರ್ಯಾನುಕೂಲರಾಗಿರುವಂತೆ ಬೋಧಿಸಿ, ಗೃಹದ ವ್ಯವಸ್ಥೆಯನ್ನು ಸರಿಯಾಗಿನೋಡುವಂತೆ ತಮ್ಮ ಭ್ರಾತೃಕಲ್ಲಪ್ಪನವರಿಗೂ, ಶರೀರಸಂಬಂಧಿಗಳಾದ ಕಮಲಾಪೂರ ರಾಚಪ್ಪಗೌಡರಿಗೂ, ಮಹಾಗಾಂವ್ ಸಂಗಶೆಟ್ಟಿಗೌಡರಿಗೂ ಹೇಳಿ, ಮಾಕಾಡುಶಾಸ್ತ್ರಿಡುತಾ ಶಿವಸನ್ನಿಧಿಯಂ ಕುರಿತು ತೇರಳಿದರು. ಈ ವಾರ್ತೆಯನ್ನು ಕೇಳಿದ ಲಾತೂರು, ಹುಮನಾಬಾದ, ಕಲ್ಬುರ್ಗಿ ಪಟ್ಟಣಗಳ ವ್ಯಾಪಾರೀಮಂಡಳಿಯು ಆ ದಿವಸ ವ್ಯಾಪಾರವನ್ನು ಮಾಡದೆ ಅಂಗಡಿಗಳನ್ನು ಮುಚ್ಚಿಬಿಟ್ಟು ತಮಗಾದ ವ್ಯಸನವನ್ನು ತೋರ್ಪಡಿಸಿದರು. ಇಂತಹ ಪ್ರಸಿದ್ಧ ಹಾಗೂ ಧರ್ಮನಿಷ್ಠ ಪುರುಷರನ್ನು ಕಳೆದುಕೊಂಡದ್ದಕ್ಕಾಗಿ ಈ ಇಲಾಖೆಯವರಿಗೂ, ಮನೆಯವರಿಗೂ ವಿಶೇಷ ದುಃಖ ಉಂಟಾಗಿರುತ್ತದೆ. ಶ್ರೀಶಂಕರನು ಮುಂದೆ ಮನೆತನವನ್ನು ನಡೆಸುವವರಾದ ಶ್ರೀಮಂತ ಮಡಿವಾಳಪ್ಪ, ಶ್ರೀಮಂತ ಶರಣಪ್ಪನವರಿಗೆ ಸದ್ಬುದ್ಧಿ ಸನ್ಮಾರ್ಗವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ದಯಪಾಲಿಸುವಂತಾಗಲಿ.

ಓರ್ವ ಸ್ಥಳವಾಸಿ.

ಡಾಕ್ಟರ್ ಮಂಜುನಾಥ್, ಎಂ. ಎಸ್‌ಸಿ. (ಲಂಡನ್)
ಪಿ. ಹೆಚ್‌ಡಿ. (ಆಕ್ಸ್‌ಫರ್ಡ್.)

ಅರಮನೆ ಮೊಕ್ತೇಸರ್ ಮ॥ ಬಸವಲಿಂಗಪ್ಪನವರ ಮೊಮ್ಮಕ್ಕಳೂ, ಮ॥ ಅಮಲ್ದಾರ್ ಪಿ. ಲಿಂಗಯ್ಯನವರ ಮಕ್ಕಳೂ ಆದ ಶ್ರೀಯುತ ಮಂಜುನಾಥರವರು ಈಗ್ಗೆ 4½ ವರ್ಷಗಳ ಕೆಳಗೆ ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಿಂದ ಬಿ.ಎ., ತರಗತಿಯಲ್ಲಿ ತೇರ್ಗಡೆಯಾದಮೇಲೆ ಸೀಮೆಗೆ ಪ್ರಯಾಣಮಾಡಿದರು. ಅಲ್ಲಿ ಲಂಡನ್ ಯೂನಿವರ್ಸಿಟಿ ಕಾಲೇಜಿನಲ್ಲಿ ರಸಾಯನಶಾಸ್ತ್ರವನ್ನು (Chemistry) ತೆಗೆದುಕೊಂಡು ಅಭ್ಯಾಸಮಾಡಿ 1923 ನೇ ಇಸವಿಯಲ್ಲಿ ಎಂ. ಎಸ್‌ಸಿ. (M. Sc.) ಎಂಬ ಘನತರವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದನಂತರ ಆಕ್ಸ್‌ಫರ್ಡ್ ವಿದ್ಯಾನಿಲಯದಲ್ಲಿ ಈಗ 2 ವರ್ಷಗಳಿಂದಲೂ ಅಭ್ಯಾಸಮಾಡುತ್ತಿದ್ದು ಮೊನ್ನೆ ಪಿ. ಹೆಚ್‌ಡಿ. (P.hd.) ಎಂಬ ದೊಡ್ಡ ಡಾಕ್ಟರೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಅಲ್ಲದೆ ಇವರು ಪ್ಯಾರಿಸ್ ಮತ್ತು ಜರ್ಮನಿ ವಿಶ್ವವಿದ್ಯಾನಿಲಯಗಳಲ್ಲಿಯೂ ರಸಾಯನಶಾಸ್ತ್ರವನ್ನು ಅಭ್ಯಾಸಮಾಡಿ ಅಲ್ಲಿನ ಕೆಲ ಪರೀಕ್ಷೆಗಳಲ್ಲಿಯೂ ತೇರ್ಗಡೆಯಾಗಿರುತ್ತಾರೆ. ಇವರು ಯೂರೋಪ್‌ಖಂಡದಲ್ಲೆಲ್ಲಾ ದೀರ್ಘಕಾಲ ಸಂಚರಿಸಿ ಹೆಚ್ಚಾದ ಅನುಭವವನ್ನು ಹೊಂದಿರುತ್ತಾರೆ. ಇವರಿಗೆ ಇನ್ನೂ 24 ವರ್ಷವಯಸ್ಸು. ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಇಷ್ಟು ದೇಶಗಳನ್ನೆಲ್ಲಾ ಸಂಚರಿಸಿ ಹೆಚ್ಚಾದ ವಿದ್ಯಾವ್ಯಾಸಂಗಮಾಡಿರುವುದು ತುಂಬಾ ಸ್ತೋತ್ರಾರ್ಹವಾಗಿದೆ. ಇವರಂತೆ ಇಷ್ಟು ಹೆಚ್ಚಾದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವವರು ನಮ್ಮ ಮೈಸೂರುದೇಶದಲ್ಲಿಯೇ ಯಾರೂ ಇಲ್ಲವೆಂದೂ, ಇಡೀ ಇಂಡಿಯಾದೇಶದಲ್ಲಿಯೇ ಅತಿವಿರಳವೆಂದೂ ಹೇಳಿದರೆ ಅತಿಶಯೋಕ್ತಿ ಆಗದು. ಇವರು ನಮ್ಮ ವೀರಶೈವಸಮಾಜಕ್ಕೆ ಕೀರ್ತಿಯನ್ನುಂಟುಮಾಡಿ ಕಳಶಪ್ರಾಯರಾಗಿರುತ್ತಾರೆ. ಇವರು ಇದೇ ತಿಂಗಳು 10ನೇ ತಾರೀಖಿನಲ್ಲಿ ಹಡಗನ್ನು ಹತ್ತಿ 29ನೇ ತಾರೀಖಿಗೆ ಕೊಲಂಬೋಪಟ್ಟಣಕ್ಕೆ ಬಂದು ಅಲ್ಲಿಂದ ಅತಿಶೀಘ್ರದಲ್ಲಿಯೇ ನಮ್ಮ ದೇಶಕ್ಕೆ ಬರುವವರಾಗಿದ್ದಾರೆ. ಇವರು ಜಾಗ್ರತೆ ಸ್ವದೇಶಕ್ಕೆ ಬಂದು ದೇಶ ಸಮಾಜಸೇವೆಗಳನ್ನು ಕೈಕೊಂಡು ಕೀರ್ತಿವಂತರಾಗಲೆಂದು ಹಾರೈಸುತ್ತೇನೆ. ಇವರಿಗೆ ಸುಖಪ್ರಯಾಣವನ್ನೂ, ಆಯುರಾರೋಗ್ಯ ಐಶ್ವರ್ಯವನ್ನೂ ಕೊಡಲೆಂದು ಭಗವಂತನನ್ನು ಪ್ರಾರ್ಥಿಸುವ,

ಓರ್ವ ವೀರಶೈವ.

ಕಳ್ಳನು ಕಾಪಿನವನನ್ನು ತುಡುಕಿದನು.

ಬಾಳೆಹಳ್ಳಿಯ ಪೀಠಾಧಿಕಾರದ ವಟುವಿವೇಚನಮಂಡಲದಲ್ಲಿ ನಡೆದ ಸಲ್ಲದ ನಡೆವಳಿಗಳನ್ನು ನಾನು ಹೊರಗೆಡವಿದಕ್ಕಾಗಿ ಒಬ್ಬ ರಾ॥ ರಾ॥ ಬಿ. ನಂಜುಂಡಪ್ಪನವರೆಂಬ ಮಹಾಶಯರು ಕರ್ನಾಟಕ ಟಾಯಮ್ಸದಲ್ಲಿ ಮೂರು ಉದ್ಧಟ ಬರಹಗಳನ್ನು ಬರೆದಿರುವರು. ಈ ಲೇಖಕ್ಕೆ ಉತ್ತರವನ್ನು ಕೊಡದೆ ಉಳಿದರೆ ಕಳ್ಳನಾರು ಕಾಪಿನವನಾರು ? ಎಂಬುದು ತಿಳಿಯದೆ ಜನತೆಯಲ್ಲಿ ತಪ್ಪುತಿಳುವಳಿಕೆಯಾಗಬಹುದೆಂದು ಸ್ವಲ್ಪದರಲ್ಲಿಯೇ ಪ್ರತಿವಚನವನ್ನು ಬರೆಯಬೇಕಾಗಿದೆ. ರಾ॥ ಬಿ. ನಂಜುಂಡಪ್ಪನವರು ನನ್ನ ಮೇಲೆ ಹೊರಸಿದ ಮೊದಲನೆ ತಪ್ಪೆಂದರೆ ಸಭೆಯಲ್ಲಿ ಗುಪ್ತವಾಗಿ ನಡೆದ ಕಾರ್ಯವನ್ನು ಬೈಲಿಗೆಳೆದುದು. ಈ ತಪ್ಪು ನನ್ನ ಮಿತ್ರರಾದ ಮ॥ ನಂಜುಂಡಪ್ಪನವರ ಭ್ರಮೆಯಿಂದಲೇ ಅವರಿಗೆ ತೋರಿದೆ. ಸಭೆಯಲ್ಲಿ ನಡೆದ ಆಲೋಚನೆಗಳು ಮತ್ತು ಕಾರ್ಯಗಳು ಗುಪ್ತವಿರಬೇಕೆಂದು ಸರ್ಕಾರದ ಅಪ್ಪಣೆಯಿತ್ತೆಂದು ರಾ॥ ನಂಜುಂಡಪ್ಪನವರು ಅನ್ನುತ್ತಾರೆ. ಇದೇನು ಅವರ ಮತಿಭ್ರಮೆಯೊ, ಜನರನ್ನು ಭ್ರಮೆಗೊಳಿಸಬೇಕೆಂದು ಬರೆದ ಚದುರಗಾರಿಕೆಯೊ ? ತಿಳಿಯದು. ಸಭಾಮಂಡಲವನ್ನು ರಚಿಸಿದ ಪ್ರಭುತ್ವದವರ ಅಪ್ಪಣೆಯು ಇದು.—

The committee will examine the candidates as regards their parentage and educational and other qulifications and report to Government the name of the person whom they consider as most suited for the succession to the matt. The Muzrai Commisioner as chairman will convene the necessary meetings of the committee as early as possible and submit the proposals of the committee not later than 30th Septamber 1925. ಈ ನಿದೇಶದಲ್ಲಿ ಮಂಡಳದ ಆಲೋಚನೆಗಳು ಮುಸುಕಿನಲ್ಲಿ ಜರುಗಬೇಕೆಂದು ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು ಹುಡುಕಿದರೂ ಶಬ್ದಗಳು ತೋರುವುದಿಲ್ಲ. ನಮ್ಮ ರಾ॥ ಬಿ. ನಂಜುಂಡಪ್ಪನವರಿಗೆ ಆಂಗ್ಲಭಾಷೆಯು ಬರುವುದಿಲ್ಲೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಅವರು ತಮ್ಮ ಕಿವಿಯಲ್ಲಿ ಮಂತ್ರವನ್ನೂದಿದ ಮಹನೀಯರನ್ನು ಆಪ್ತರೆಂದು ನಂಬದೆ ಸ್ವಯಮೇವ ಓದಿ ತಿಳಿದುಕೊಂಡು ಈ ತೆರದ ತಪ್ಪು ಮಾಡುತ್ತಿದ್ದಿಲ್ಲ. ಆಂಗ್ಲಭಾಷೆಯ ಪರಿಚಯವಿಲ್ಲದರಿಂದಲೇ ನಮ್ಮ ಮಿತ್ರರು ನನ್ನಮೇಲೆ ಹೊರಿಸಲು ಎಣಿಸಿದ ಎರಡನೆಯ ತಪ್ಪು ನಿರಾಧಾರವಾಗಿ ಉರುಳಿಬಿದ್ದಿದೆ. ವಟುಗಳು ತಂದ ಯೋಗ್ಯತಾಪತ್ರಗಳಿಂದಲೇ ತೃಪ್ತನಾಗದೆ ನಾನು ಅವರನ್ನು ಪರೀಕ್ಷಿಸಿದುದು ಅಪರಾಧವೆಂದು ಅವರ ಅಂಬುವಣವು. ಬಿ. ನಂಜುಂಡಪ್ಪನವರಿಗೆ ತಾವು ಉಂಡ ನಂಜಿನಬಾಧೆಯಾಗದಿದ್ದರೆ "The committee will examine the candidates as regards their parentage and educational and other qualifications" ಎಂಬ ಪ್ರಭುತ್ವದವರ ಅಪ್ಪಣೆಯೊಳಗಿನ ಶಬ್ದಗಳ ಅರ್ಥವನ್ನು ಮುಂದಿಯಿಂದ ಓದಿಸಿಯಾದರು ತಿಳುಕೊಂಡು ಪತ್ರವನ್ನು ಬರೆಯುವ ಸುವಿವೇಕವು ತೋರುತ್ತಿತ್ತು. ಪ್ರಭುತ್ವದವರ ಅಪ್ಪಣೆಯಲ್ಲಿ ಯೋಗ್ಯತಾಪತ್ರಗಳನ್ನು ನೋಡಿ ಮಂಡಳದವರು ತೃಪ್ತರಾಗಬೇಕೆಂದಿಲ್ಲ. ವಟುಗಳನ್ನು ವಿದ್ಯಾವಿಷಯದಲ್ಲಿ ಪರೀಕ್ಷಿಸಬೇಕೆಂದಿದೆ. ಮಂಡಳದ ಉಳಿದ ಸದಸ್ಯರು ಯೋಗ್ಯತಾಪತ್ರಗಳಿಂದಷ್ಟೇ ತೃಪ್ತರಾಗುತ್ತಿದ್ದರೆ ಅದಕ್ಕೆ ಬೇರೆ ಕಾರಣಗಳು ಇರಬಹುದು. ಆ ಕಾರಣಗಳನ್ನು ವಿವೇಚನವಮಾಡುವುದು ನನ್ನ ಕಾರ್ಯವಲ್ಲ. ಜರ್ಮನ ಭಾಷೆಯ ವಿಷಯಕ್ಕೆ ನಾನು ಪರೀಕ್ಷಿಸುತ್ತಿದ್ದಾದರೆ ನಾನಾದರು ಯೋಗ್ಯತಾಪತ್ರಗಳಿಂದಲೇ ಮನವಂಕೆ ಮಾಡಿಕೊಳ್ಳುತ್ತಿದ್ದೆನು. ಇದೇ ಪರೀಕ್ಷಣದ ಬಗೆಯಲ್ಲಿ ರಾ॥ ನಂಜುಂಡಪ್ಪನವರು ವಿದ್ಯಾರ್ಥಿಗಳು ಅರಿಯದ ವಿಷಯವನ್ನು ಕೇಳಿ ಅವರನ್ನು ನಾನು ಗೊಂದಲದಲ್ಲಿ ಹಾಕಿದೆನೆಂದು ಬರೆದಿರುವರು. ನಾನು ಯಾವ ವಿಷಯದ ಮೇಲೆ ಪ್ರಶ್ನವನ್ನು ಹಾಕಿದೆನೆಂದು ಸ್ಪಷ್ಟವಾಗಿ ಬರೆದಿದ್ದರೆ ಚೆನ್ನಾಗುತ್ತಿತ್ತು. ವಿದ್ಯಾರ್ಥಿಗಳು ಗೊಂದಲದಲ್ಲಿ ಬಿದ್ದುದೇನೊ ನಿಜವು. ಆದರೆ ಅದು ನನ್ನ ದೋಷವಲ್ಲ. ಸಂಸ್ಕೃತವೈಯಾಕರಣರೆಂದೂ ಮತ್ತೇನೇನೊ ಎಂದೂ ಯೋಗ್ಯತಾಪತ್ರಗಳನ್ನು ಹೊಂದಿರುವೆವೆಂದು ಹೇಳಿದ ವಿದ್ಯಾರ್ಥಿಗಳನ್ನು ಧರ್ಮಗ್ರಂಥಗಳಲ್ಲಿ ಅತಿ ಸುಲಭವಾದ ಸಿದ್ಧಾಂತಶಿಖಾಮಣಿಯಲ್ಲಿ ಒಂದೆರಡು ಪ್ರಶ್ನ ಮಾಡಿದರೆ ನನ್ನ ದೋಷವೊ ? ಈ ಪ್ರಶ್ನಗಳನ್ನು ಸಹ ನಾನು ಒಮ್ಮಿಂದೊಮ್ಮೆ ಮಾಡಲಿಲ್ಲ. "ತಾವು ಧರ್ಮಗ್ರಂಥಗಳನ್ನೇನಾದರು ಓದಿರುವಿರೊ ?" ಎಂಬ ನನ್ನ ಪ್ರಶ್ನಕ್ಕೆ "ಅವರು ಹೌದು ಸಿದ್ಧಾಂತಶಿಖಾಮಣಿಯನ್ನು ಓದಿದ್ದೇವೆ" ಎಂದು ಹೇಳಿದಬಳಿಕ ನಾನು ಕೋಮಲಹೃದಯರಾದ ಇಬ್ಬರು ಸದಸ್ಯರ ಅನುಮತಿಯಿಂದ ಬಾಯಿಯಿಂದ ಒಂದೆರಡು ಪ್ರಶ್ನಗಳನ್ನು ಕೇಳಿದೆನು. ಈ ಪ್ರಶ್ನಗಳಿಂದ ವಟುಗಳು ಗೊಂದಲದಲ್ಲಿ ಬಿದ್ದರೆ ನಾನು ಮಾಡತಕ್ಕದ್ದೇನು ? ವಕೀಲಿಯ ಸನದು ಬೇಡಲಿಕ್ಕೆ ಬಂದಾತನು ಡಾಕ್ಟರ ಪರೀಕ್ಷೆಯ ಯೋಗ್ಯತಾಪತ್ರವನ್ನು ತಂದಂತೆ ಈ ವಟುಗಳ ಗತಿಯಾಗಿತ್ತು. ಧರ್ಮದ ಮುಖ್ಯಪೀಠಕ್ಕೆ ಅಧಿಕಾರಿಗಳಾಗಲಿಕ್ಕೆ ಬಂದವರಂತೆ ! ಸಿದ್ಧಾಂತಶಿಖಾಮಣಿಯಂತಹ ಪ್ರಥಮಪಾಠ್ಯ ಪುಸ್ತಕದಲ್ಲಿಯ ಪ್ರಶ್ನದಿಂದ ಗೊಂದಲದಲ್ಲಿ ಬೀಳುವರಂತೆ !!

ನಮ್ಮ ಮ॥ ರಾ॥ ನಂಜುಂಡಪ್ಪನವರ ಗೆಳೆಯರಾದ M. L. Naganna ಎಂಬುವವರ ಪತ್ರಕ್ಕೆ ಉತ್ತರವೆಂದು ನಾನು ಬರೆದು ಮೈಸೂರ ಸ್ಟಾರಿನಲ್ಲಿ ಪ್ರಕಟವಾದ ಪತ್ರಿಕೆಯಲ್ಲಿ ಧರ್ಮದ ಈಗಿನ ದುಃಸ್ಥಿತಿಯಿಂದ ಇಂತಿಷ್ಟು, ಅದರ ಯೋಗ್ಯತೆಯುಳ್ಳವರನ್ನು ಅರಸುವ ವಿಷಯವನ್ನು ಬರೆದಿರುವೆನು. ವಟುಗಳನ್ನು ಪರೀಕ್ಷಿಸಬಾರದೆಂದು ಮಂಡಳದವರು ನಿರ್ಧರಿಸಿದ್ದಿಲ್ಲ. ಪ್ರಭುತ್ವದವರ ಸ್ಪಷ್ಟವಾದ ಅಪ್ಪಣೆಯು ವಿರುದ್ಧವಾಗಿ ಹಾಗೆ ನಿರ್ಧರಿಸಲಿಕ್ಕೆ ಅವರಿಗೆ ಅಧಿಕಾರವೂ ಇದ್ದಿಲ್ಲ. ಪರೀಕ್ಷಿಸಲಿಕ್ಕೆ ನನಗೆ ಅಧ್ಯಕ್ಷರು ಪ್ರತಿಬಂಧವನ್ನೂ ಮಾಡಲಿಲ್ಲ. ಮಂಡಳದ ಸದಸ್ಯನೆಂಬುದರಿಂದ ವಟುಗಳನ್ನು ಪರೀಕ್ಷಿಸುವ ಅಧಿಕಾರವು ನನಗಿದ್ದುದರಿಂದ ಅಧ್ಯಕ್ಷರ ಅಪ್ಪಣೆಯನ್ನು ಬೇಡಲು ಕಾರಣವಿದ್ದಿಲ್ಲ. ವಿವೇಚನ ಮಂಡಲವನ್ನು ಸಂಘಟಿಸಿದ ಪ್ರಭುತ್ವದವರ ನಿದೇಶದಲ್ಲಿ "and submit the proposals of the committee" ಎಂದು ಇದ್ದುದರಿಂದ ಭಿನ್ನಾಭಿಪ್ರಾಯಗಳನ್ನಾದರು ಸೂಚಿಸುವ ಅಧಿಕಾರವು ಪ್ರತಿಯೊಬ್ಬನಿಗೆ ಇತ್ತು. ಆದರಿಂದ ನಾನು ನನ್ನ ಸ್ವತಂತ್ರವಾದ ಅಭಿಪ್ರಾಯವನ್ನು ಕೊಟ್ಟಿರುವೆನು. ಸಭೆಯಲ್ಲಿ ಅನುಚಿತವಾಗಿ ಮಾಡಿದ ದೋಷಾರೋಪದಿಂದಲೂ, ಏಕಪಕ್ಷೀಯವಾದ ನಡೆಯಿಂದಲೂ ಮಂಡಲದ ನಡೆವಳಿಕೆಯನ್ನು ಪ್ರಕಟಿಸುವುದು ನನ್ನ ಕರ್ತವ್ಯವಾಗಿತ್ತು. ಈ ಮಂಡಲವು ಪ್ರಭುತ್ವದವರಿಂದ ಸಂಘಟನೆಯನ್ನು ಹೊಂದಿದುದಾದರೂ ವೀರಶೈವಸಮಾಜದ ಕಾರ್ಯವನ್ನು ಕೊನೆಗಾಣಿಸಲಿಕ್ಕೆ ಉಂಟಾದುದಿತ್ತು. ಆದುದರಿಂದ ಅದರ ನಡೆವಳಿಕೆಗಳನ್ನು ಯಥಾರ್ಥವಾಗಿ ಬೈಲಿಗೆಳೆಯುವಾಗ ಅವಶ್ಯವಾಗಿ ಬರಯಬೇಕಾದ ಸಂದರ್ಭಗಳಿಂದ ವಟುಗಳು ನೊಂದುಕೊಳ್ಳಲು ಕಾರಣವಿಲ್ಲ. ರಾ॥ ರಾ॥ ಬಿ. ನಂಜುಂಡಪ್ಪನವರ ಮೊದಲನೆಯ ಬರಹಕ್ಕೆ ಉತ್ತರವು.

(ಸಶೇಷ.)

ಸಿದ್ಧರಾಮಪ್ಪ ಪಾವಟೆ.

ಶ್ರೀ ಸೀತಾರಾಘವವೈದ್ಯಶಾಲೆಯ

ಶ್ರೀಮದಕ್ಷಯಸಂವತ್ಸರದ ಪಂಚಾಂಗಗಳು.

ಈ ಪಂಚಾಂಗದಲ್ಲಿ ಅನೇಕ ಹೆಚ್ಚು ವಿಷಯಗಳು ಸೇರಿಸಲ್ಪಟ್ಟಿವೆ. ಆರ್ಯಭಟ್ಟಸಿದ್ಧಾಂತವೂ ಸೇರಿದೆ. ಸಂಸ್ಕೃತಶ್ಲೋಕಗಳಿಗೆಲ್ಲಾ ಕನ್ನಡದಲ್ಲಿ ಟೀಕು ಬರೆಯಲ್ಪಟ್ಟಿದೆ. ವಿದ್ವಾಂಸರುಗಳಿಂದ ಸರ್ವೋತ್ತಮವಾದುದೆಂದು ಒಪ್ಪಲ್ಪಟ್ಟಿದೆ.

ಪಂಚಾಂಗ 1 ಕ್ಕೆ ಕ್ರಯ 2 ಆಣೆ ಮಾತ್ರ.

ಡಜನ್ 1 ಕ್ಕೆ 1 ರೂ. 4 ಆ. ಟಪಾಲ್ ಖರ್ಚು ಬೇರೆ.

ನೂರರಮೇರೆ ಕೊಳ್ಳುವವರಿಗೆ ಧಾರಾಳವಾದ ಕಮಿಷನ್ ಅಡ್ವಾನ್ಸಿನೊಡನೆ ಬರೆಯಿರಿ.

ದೊರೆಯುವ ಸ್ಥಳ:—

(1) ಮ॥ ರಾ॥ ಪಾಳ್ಯದ ವೆಂಕಟಾಚಲಪಂಡಿತರು,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.
(2) ಶ್ರೀ ಸೀತಾರಾಘವವೈದ್ಯಶಾಲಾ ಬ್ರಾಂಚ್,
[4-3] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೪—೦
ಷಟ್‌ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೪—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೪—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಕೈ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೬ ನೆಯ ಇಸವಿ ಜನವರಿ ತಾ॥ ೧೬ರಿಂದ ೧೯೨೬ ನೆಯ ಇಸವಿ ಜನವರಿ ತಾ॥ ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಮಾಘಶುದ್ಧ ಬಿದಿಗೆಯಿಂದ ಮಾಘಶುದ್ಧ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ಮಾಸ
16	[1]ಶನಿ	ಬಿ-ಉ	4-10 54-6	ಧನಿ	46-9	3
17	ಭಾನು	ಚೌತಿ	52-28	ಶತ	42-2	4
18	[2]ಸೋಮ	ಪಂಚ	47-7	ಪೂಭಾ	38-20	5
19	[3]ಮಂಗಳ	ಷಷ್ಠಿ	42-1	ಉಭಾ	35-15	6
20	[4]ಬುಧ	ಸಪ್ತ	38-23	ರೇವ	32-52	7
21	[5]ಗುರು	ಅಷ್ಟ	35-30	ಅಶ್ವಿ	31-29	8
22	[6]ಶುಕ್ರ	ನವ	33-40	ಭರ	31-4	9

(1) ಮಳೆನಕ್ಷತ್ರ-ಉತ್ತರಾಷಾಢ ೩ನೆಯ ಪಾದ, ಮೌನಗೌರೀವ್ರತಂ (2) ಶ್ರೀಪಂಚಮಿ. (3) ಕುಮಾರಷಷ್ಠಿ. (4) ರಥಸಪ್ತಮಿ, ಸೂರ್ಯಚಂದ್ರವ್ರತಂ, ಮಳೆನಕ್ಷತ್ರ-ಉತ್ತರಾಷಾಢ ೪ನೆಯ ಪಾದ. (5) ಭೀಷ್ಮಾಷ್ಟಮಿ. (6) ಮಧ್ವನವಮಿ.

ಮೈಸೂರು : ಕೈ. ಬಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಾಭಿಕ್ಯಾ । ಘನಸಕಳಕೃತಾವಕಾರಾ ಸಕ್ಷಜ್ಞ ಸತ್ಕೃತ ಸೋಮರಾಜೀಯುಕ್ ।
ಶ್ರೀಮತ್ಕೃಷ್ಣನೃಪಾಲಸುತ್ತಮಕಳಾರೋಲಂಸುಧೀಪುಂಗವ । ಸ್ತೋಮಾಧೀಷ್ಟದೋಲ ಪಾಕಲಿತ ಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ । ಶ್ರೀಮಂತಶ್ರೀಯಂಸಮಾಪೂರಿಗೆ ಗೌರೀಶಾಸುಖಂಪೋಷ್ಯಲಂ ।

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜನವರಿ ತಾರೀಖು ೨೩ ನೆಯ ಶನಿವಾರ. [ಸಂಚಿಕೆ ೪

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಆದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವಯಸ್ಸಿಗಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರ ಪಾಕ.

ಧೀರರಾದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ತಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ :—ಶತಪುಷ್ಪ ಶಾಲಿಮಕಂದ, ಜಿಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಪಾಂತರಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಕತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಂಗ, ಅಡವೀ ಎಳ್ಳಿನ ಪಂಚಾಂಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದಣಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿ ಕಾಸ್ತ, ವಾಳೇರಿಭಾತಾ, ಗೋಖುರು, ಅಡವೀ ಬೆಂಡಿ ಬೇರು, ಅಶ್ವತಸತ್ವ, ಇಸಬಗೋಲ, ಬಿನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಿ ಮಸ್ತಕಿ, ವಂಶಲೋಚನ, ವರಧಾರ, ಕೇಸರಿ, ಯಾಲಕ್ಕಿ ರುಲ್ಲಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫॥ ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪॥ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒಸೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮೀನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ್ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೇಲಾಭಾಯಿ ಹಿನ್ನ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ರುಸ್ತಾಜಯರಾಮ ಪೋ. ಸೊಲ್ಲಾಪೂರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—42] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿಕೆ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಕಸಟ್ಟೆ ಕಳುಹಿಸಲಾರೆವು.

(Registered Trade Mark)

ದಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೩—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[80—16] ಪೋ. ಬಾ. ೩೯೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ [illegible] ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರಕಾರದವರು ಕೇಳಿದ್ದಿರುವ [illegible] ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡೆಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
26 [illegible], ಮೈಸೂರು.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣವದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

50

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶ್ರೀ ಕ್ಷಯನಾಮಸಂವತ್ಸರದ ಅತ್ಯುತ್ತಮ

ಪಂಚಾಂಗ.

ಈ ಪಂಚಾಂಗದಲ್ಲಿ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿ ದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ಇದಲ್ಲದೆ ಯಾವದಿವಸ ಮಳೆಯು ಪ್ರವೇಶಿಸುವದೋ ಅದರಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ, ಸ್ತ್ರೀಪುನ್ನಪುಂಸಕ, ರವಿಚಂದ್ರಯೋಗ, ಪತಿತಸ್ಥಾನಗಳನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಶ್ಚಯಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹ ಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಆದರೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ತಿಳುಹಿಸಲು ಇಲ್ಲಿ ಸಾಧ್ಯವಿಲ್ಲ. ಈ ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು. ತಮಗೆ ವರ್ಷಂಪ್ರತಿ ಕೊಡುತ್ತಿದ್ದ ಬೆಲೆಗಿಂತಲೂ ಈವರ್ಷ ಬೆಲೆಯು ಬಹಳ ಕಡಿಮೆಮಾಡಿರುತ್ತೇವೆ. ಹಿಂದಣವರ್ಷಕ್ಕಿಂತಲೂ ಹೆಚ್ಚಿಗೆ ಪ್ರತಿಗಳನ್ನು ತರಿಸಿಕೊಂಡು ಸಹಾಯಮಾಡಿರಿ. ಪಂಚಾಂಗ ಕ್ರಯದವರ ಪ್ರತಿ ನೂರಕ್ಕೆ (೨೫) ರಿಂದ ೧೦೦ ವರೆಗೆ ರೂ. ೧೩-೦-೦ ರೂಪಾಯಿಗಳು. ೨೦೦ ರಿಂದ ೫೦೦ ವರೆಗೆ ರೂ. ೧೨-೦-೦. ೬೦೦ ರಿಂದ ೧೦೦೦ ವರೆಗೆ ರೂ. ೧೦-೦-೦ (೫) ಪಂಚಾಂಗಗಳನ್ನು ತರಿಸಿಕೊಳ್ಳುವವರಿಗೆ ರೂ. ೧-೦-೦ ಇದಕ್ಕಿಂತಲೂ ಕಡಿಮೆಬೆಲೆಯಿಂದ ಯಾರಿಗೂ ದೊರೆಯಲಿಕ್ಕಿಲ್ಲ. ಅಪೇಕ್ಷಿಸುವವರು ಬೇಗನೆ ಆರ್ಡರ್ ಕೊಡಿರಿ. [illegible]

ಪಂಚಾಂಗಕರ್ತ—ಬ್ರ॥ಶ್ರೀ॥ ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು,
ಜ್ಯೋತಿಷ್ಯಪಾಠಶಾಲಾ, [illegible]

ಪಂಚಾಂಗಗಳು ದೊರೆಯುವ ಸ್ಥಳ.—
ರಣ್ಣಾಪೂರು, ಗಿರಿಮಲ್ಲಪ್ಪ ಬಸವಪ್ಪ ಅಂಡ್ ಬ್ರದರ್ಸ್.
[12—10] [illegible]

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಜನವರಿ ತಾ|| ೨೩ನೆಯ ಶನಿವಾರ.

OURSELVES.

There have been a number of inquiries regarding the notice issued to us through his conusel by Dewan Bahadur Sir K. P. Puttanna Chetty, C.I.E., calling upon us to disclose the name of the writer calling himself "ಯಥಾರ್ಥವಾದಿ" who it has been alleged has contributed in the columns of our paper a defamatory article. For our part, we deemed it desirable not to give any publicity to the correspondence that has gone on between us and Sir K. P. Pnttanna Chetty's conusel, but since rumours not consistent with facts or with our self-respect have been set afloat and seem to spread in explanation of the suspension of further proceedings by Sir K. P. Puttanna Chetty, we feel constrained in sheer self defence to publish the letters exchanged between us both in this connection. When first we heard that further proceedings were only dropped by Sir K. P. Puttanna Chetty because we had gone to Bangalore and had offered our apologies to him, we were not anxious to give much credence to the same. But as we have said the rumour is gaining ground, and our readers will find in another place a correspandent referring to the same and asking for infomation. Silence on such an occasion would be dangerous and here we are to say that the rumour is absolutely unwarranted. It is no part of our business to peep into what is behind such a rumour. Suffice it to say that our columns have always been used in the interests of the public, for the welfare and progress of the Lingayet Community and the people at large, and we have been doing it without fear or favour of anyone for all these years. With the indulgence and sympathy of our readers we hope in future also to continue to carry out our mission in the same manner. The correspondence speaks for itself and we have our readers to judge us for themselves.

K. Shankaranarayan Rau, M.A., B.L. Bangalore City,
Advocate. 8th Dec. 1925.

To
Y. Virupakshayya, Esq.,
Editor & Publisher,
"Mysore Star,"
Mysore.

Dear Sir,

I am instructed by Diwan Bahadur Sir K. P. Puttanna Chetty, to invite your attention to the malicious attacks upon him contained in a defamatory article published by you in the "Mysore Star" of th 5th instant, purporting to have been written by a Correspondent who has styled himself ಯಥಾರ್ಥವಾದಿ and to request you to furnish me with the real name and full address of the writer of the said article, within 7 days of the receipt of this Notice, as my client wants to take such action in the matter as he may be advised.

Yours faithfully,
(Sd.) K. SHANKARANAKAYAN RAU,
Advocate.

REPLY.

Y. Virupakshiah, Mysore,
Editor "Mysore Star" 10-12-1925.
To
K. Shankaranarayan Rau, Esq., M.A., B.L.
Advocate, Bangalore City.

Dear Sir,

In reply to your letter dated 8th Dec. 1925, I write to state that I would be very thankful to you if you can be so good as to let me know what exactly are the passages which your client takes objection to.

Your faithfully,
(Sd.) Y. VIRUPAKSHIAH.

K. Shankaranarayan Rau, M.A., B.L., Bangalore City.
Advocate. 17th Dec. 1925.
Y. Virupakshiah, Esq.,
Editor, The "Mysore Star,"
Mysore.

Dear sir,

I am in receipt of your letter No. 385, dated "10th November 1925," which is apparently an error for 10th December 1925, enquiring what exactly are the passages in the article complained of to which my client objects, I write to inform you that this detail is a matter of evidence more appropriate to be threshed out at a later stage rather than be discussed by the parties at the present stage. Moreover, your good sense and experience as the Editor and Publisher of a responsible newspaper ought to enable you to see what exactly are the imputations and insinuations contained in the correspondent's article which constitute defamation.

May I request you to be so good as to furnish me with the information required in my notice.

Yours faithfully,
(Sd.) K. SANKARANARAYAN RAU,
Advocate.

REPLY.

Y. Virupakshiah, Mysore,
Editor, "Mysore Star" 23rd Dec. 1925.
To
K. Sankaranarayana Rao, Esq., M.A., B.L.,
Advocate, Bangalore.

Dear Sir,

I am in receipt of your letter dated 17th December 1925. I write to state that my letter of the 10th instant enquiring after the defamatory passages in the article in question was sent to you because even with my experience as a journalist of some years standing I could not find anything in the said article which would constitute defamation. Since I have not received any further enlightenment on the subject to alter my former opinion and since it is not the policy of "Mysore Star" to disclose the names of its correspondents unless for very good reasons, I am sorry, I cannot comply with your request. If in spite of this, Sir K. P. Puttanna Chetty choses to take action, he will be held liable for all my expenses, losses and damages.

Yours faithfully,
(Sd.) Y. VIRUPAKSHIAH.

ಸ್ವವಿಷಯ.

ಯಥಾರ್ಥವಾದಿ ಎಂಬ ಹೆಸರನ್ನಿಟ್ಟುಕೊಂಡು ಈ ನಮ್ಮ ಪತ್ರಿಕೆಯಲ್ಲಿ ಅಪಮಾನಕರವಾದ ಲೇಖವನ್ನು ಬರೆದಿರುವ ಪತ್ರವ್ಯವಹಾರಕರ ನಿಜನಾಮವನ್ನು ತಿಳಿಸಬೇಕೆಂದು ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ.ಐ.ಇ., ಇವರು ಲಾಯರಮೂಲಕ ನಮಗೆ ಕೊಡಿಸಿರುವ ನೋಟೀಸಿನ ವಿಚಾರವೇನೆಂದು ಅನೇಕರು ನಮ್ಮನ್ನು ಕೇಳುತ್ತಿರುವರು. ಆದರೆ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರ ಲಾಯರಿಗೂ ನಮಗೂ ನಡೆದಿರುವ ಪತ್ರವ್ಯವಹಾರವನ್ನು ಬಹಿರಂಗಪಡಿಸಬಾರದೆಂಬುದು ನಮ್ಮ ಅಭೀಷ್ಟವಾಗಿರುತ್ತಾದರೂ, ಸರ್ ಕೆ. ಪಿ. ಪುಟ್ಟಣ್ಣಸೆಟ್ಟರು ಮುಂದಣಕಾರ್ಯಭಾಗವನ್ನು ನಡೆಯಿಸದೆ ಇರುವ ವಿಚಾರದಲ್ಲಿ ವಿಪರ್ಯಾಸವೂ, ಅನುಚಿತವೂ ಆದ ಸಂಗತಿಯು ಹರಡಲ್ಪಡುತ್ತಿರುವುದರಿಂದ ಆತ್ಮಗೌರವಸಂರಕ್ಷಣಾರ್ಥವಾಗಿ ನಮ್ಮುಭಯರಿಗೂ ನಡೆದಿರುವ ಪತ್ರವ್ಯವಹಾರವನ್ನು ನಿರ್ವಾಹವಿಲ್ಲದೆ ಈ ಕೆಳಗೆ ಪ್ರಕಟಿಸಿರುತ್ತೇವೆ. ನಾವು ಬೆಂಗಳೂರಿಗೆ ಹೋಗಿ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರ ಕ್ಷಮೆಯನ್ನು ಬೇಡಿದುದರಿಂದ ಅವರು ಮುಂದಣಕಾರ್ಯಭಾಗವನ್ನು ಮಾಡಲಿಲ್ಲವೆಂಬ ಸುದ್ದಿಯು ಹುಟ್ಟಿದ್ದುದನ್ನು ನಾವು ಮೊದಲೇ ತಿಳಿದಿದ್ದೆವಾದರೂ ಅದಕ್ಕೆ ಗಮನವನ್ನು ಕೊಟ್ಟಿರಲಿಲ್ಲವು. ಆದರೆ ಈ ನಿರಾಧಾರವಾದ ಸುದ್ದಿಯು ಎಷ್ಟರಮಟ್ಟಿಗೆ ಪ್ರಬಲಿಸಿರುವುದೆಂಬುದು ನಮ್ಮ ವಾಚಕಮಹಾಶಯರಿಗೆ ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿರುವ ಪತ್ರವ್ಯವಹಾರದಿಂದ ವ್ಯಕ್ತವಾಗುವುದು. ಪ್ರಕೃತಸಂದರ್ಭದಲ್ಲಿ ನಾವು ಮೌನವಾಗಿರುವುದರಿಂದ ಅನರ್ಥಸಂಭವಿಸುವುದಾದಪ್ರಯುಕ್ತ ಈ ಸುದ್ದಿಯು ಸುತರಾಂ ನಿರಾಧಾರವೂ, ಅನುಚಿತವೂ ಆದುದೆಂದು ಹೇಳದೆ ಇರಲಾಗುವುದಿಲ್ಲ ಮತ್ತು ಈ ಸುದ್ದಿಯ ಉತ್ಪಾದನದಕಾರಣವನ್ನು ನಾವು ಕಂಡುಹಿಡಿಯಬೇಕಾದುದಿಲ್ಲ. ಯಾರ ನಿಗ್ರಹಾನುಗ್ರಹಗಳಿಗೂ ಲಕ್ಷ್ಯಿಸದೆ ಯಾವಾಗಲೂ ವೀರಶೈವಸಮಾಜದ ಮತ್ತು ಸರ್ವಪ್ರಜೆಗಳ ಶ್ರೇಯೋಭಿವೃದ್ಧಿಯನ್ನೇ ನಾವು ಈವರೆಗೂ ಕೋರಿಕೊಂಡು ಬಂದಿರುವಂತೆ ಮುಂದಾದರೂ ನಮ್ಮ ವಾಚಕಮಹಾಶಯರ ಸಹಾಯ ಸಾನುಭೂತಿಯಿಂದ ನಮ್ಮ ಸತ್ಸಂಕಲ್ಪವನ್ನು ನಡೆಯಿಸುವವರಾಗಿರುವೆವೆಂದು ಹೇಳಿದರೆ ಸಾಕಾಗಿದೆ. ಪ್ರಕೃತವಿಷಯಸಂಬಂಧವಾದ ಈ ಕೆಳಗಣ ಪತ್ರವ್ಯವಹಾರದಿಂದ ನಿಜಸ್ಥಿತಿಯು ವ್ಯಕ್ತಪಡುವುದಾದಪ್ರಯುಕ್ತ ಗ್ರಾಹಕರೇ ತಥ್ಯಾಂಶವನ್ನು ನಿರ್ಧರಿಸತಕ್ಕುದಾಗಿದೆ.

ನೋಟೀಸು.

ಕೆ. ಶಂಕರನಾರಾಯಣರಾವ್, ಬೆಂಗಳೂರು ಸಿಟಿ,
ಎಂ.ಎ., ಬಿ.ಎಲ್., ತಾ|| ೮ ನೇ ಡಿಸೆಂಬರ್ 1925.
ಅಡ್ವೊಕೇಟ್.
ಮೈಸೂರ್ ಸ್ಟಾರ್ ಎಡಿಟರ್ ಮತ್ತು ಪಬ್ಲಿಷರ್ ಮ|| ವೈ. ವಿರೂಪಾಕ್ಷಯ್ಯನವರು, ಮೈಸೂರು, ಇವರಿಗೆ.—

ಅಯ್ಯಾ,

ಒಬ್ಬ ಪತ್ರವ್ಯವಹಾರಕರು ಯಥಾರ್ಥವಾದಿ ಎಂದು ಹೆಸರಿಟ್ಟುಕೊಂಡು ಬರೆದಿರುವುದಾಗಿ ಹೇಳುವ ಈ ತಾ|| ೫ ರ "ಮೈಸೂರು ಸ್ಟಾರಿ"ನಲ್ಲಿ ಪ್ರಕಟಿಸಿರುವ ಲೇಖವು ಅಸೂಯೆಯಿಂದ ಬರೆಯಲ್ಪಟ್ಟು ಅಪಮಾನಕರವಾಗಿರುವುದೆಂಬಂಶವನ್ನು ನಿಮ್ಮ ಗಮನಕ್ಕೆ ತರಬೇಕಾಗಿಯೂ, ನನ್ನ ಕಕ್ಷಿಗಾರರು ಈ ವಿಚಾರದಲ್ಲಿ ತಕ್ಕ ಸೂಚನೆಯನ್ನನುಸರಿಸಿ ಕಾರ್ಯಭಾಗವನ್ನು ನಡೆಯಿಸಬೇಕೆಂದಿರುವುದರಿಂದ ಈ ನೋಟೀಸು ತಲುಪಿದ 7 ದಿವಸಗಳಲ್ಲಿ ಮೇಲೆ ಹೇಳಿದ ಲೇಖವನ್ನು ಬರೆದವರ ಸಂಪೂರ್ಣ ಹೆಸರು ವಿಳಾಸವನ್ನು ನನಗೆ ತಿಳಿಸಬೇಕಾಗಿಯೂ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರ ಹೇಳಿಕೆಯ ಪ್ರಕಾರ ಈ ನೋಟೀಸನ್ನು ಕೊಟ್ಟಿರುವುದಾಗಿದೆ.

ತಮ್ಮ ವಿಶ್ವಾಸಿ,
(ರುಜು) ಕೆ. ಶಂಕರನಾರಾಯಣರಾವ್, ಅಡ್ವೊಕೇಟ್.

ಇದಕ್ಕೆ ಉತ್ತರ.

ವೈ. ವಿರೂಪಾಕ್ಷಯ್ಯ, ಮೈಸೂರು,
ಎಡಿಟರ್. 10—12—1925.
"ಮೈಸೂರು ಸ್ಟಾರ್"
ಮ|| ಕೆ. ಶಂಕರನಾರಾಯಣರಾವ್, ಎಂ.ಎ., ಬಿ.ಎಲ್.,
ಅಡ್ವೊಕೇಟ್, ಬೆಂಗಳೂರು ಸಿಟಿ, ಇವರಿಗೆ.

ಅಯ್ಯಾ,

ನಿಮ್ಮ 1925 ನೆಯ ಡಿಸೆಂಬರ್ ತಾ|| 8 ರ ಕಾಗದಕ್ಕೆ ಪ್ರತ್ಯುತ್ತರವನ್ನು ಕೊಡುವಲ್ಲಿ ನಿಮ್ಮ ಕಕ್ಷಿಗಾರರಿಗೆ ಯಾವ ನಿರ್ದಿಷ್ಟಭಾಗಗಳು ಆಕ್ಷೇಪಕರವಾಗಿವೆ ಎಂಬುದನ್ನು ದಯವಿಟ್ಟು ತಿಳಿಸುವವರಾಗಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,
(ರುಜು) ವೈ. ವಿರೂಪಾಕ್ಷಯ್ಯ.

ಕೆ. ಶಂಕರನಾರಾಯಣರಾವ್, ಬೆಂಗಳೂರು ಸಿಟಿ,
ಎಂ.ಎ., ಬಿ.ಎಲ್., ತಾ|| 17 ನೇ ಡಿಸೆಂಬರ್ 1925.
ಅಡ್ವೊಕೇಟ್.
ಮೈಸೂರು ಸ್ಟಾರ್ ಎಡಿಟರ್
ಮ|| ವೈ. ವಿರೂಪಾಕ್ಷಯ್ಯನವರು ಮೈಸೂರು, ಇವರಿಗೆ.

ಅಯ್ಯಾ,

1925ನೇ ಡಿಸೆಂಬರ್ ತಾ|| 10ಕ್ಕೆ ಬದಲಾಗಿ 1925ನೇ ನವಂಬರ್ ತಾ|| 10 ಎಂದು ತಪ್ಪುಬಿದ್ದಿರುವ ನಿಮ್ಮ 385ನೇ ನಂಬರ್ ಕಾಗದ ತಲುಪಿತು. ಯಾವನಿರ್ದಿಷ್ಟಭಾಗಗಳು ಆಕ್ಷೇಪಕರವಾಗಿವೆಯೆಂದು ನೀವು ಕೇಳಿರುತ್ತೀರಿ. ಈ ವಿಷಯವು ಮುಂದೆ ರುಜುವಾತಿನ ಕಾಲದಲ್ಲಿ ವಿಶದೀಕರಿಸಲ್ಪಡುವುದಾಗಿದೆಯೇ ಹೊರತು ಪ್ರಕೃತದಲ್ಲಿ ಕಕ್ಷಿಗಾರರಿಂದ ಚರ್ಚಿಸಲ್ಪಡತಕ್ಕುದಾಗಿಲ್ಲ. ಇದೂ ಅಲ್ಲದೆ ನೀವು ಉತ್ತರವಾದಿತ್ವವುಳ್ಳ ವೃತ್ತಪತ್ರಿಕೆಯ ಸಂಪಾದಕರಾಗಿಯೂ, ಪ್ರಕಾಶಕರಾಗಿಯೂ ಇದ್ದು ಅನುಭವಸ್ಥರಾಗಿರುವುದರಿಂದ, ಪತ್ರವ್ಯವಹಾರಕರ ಲೇಖದಲ್ಲಿ ಯಾವ ನಿರ್ದಿಷ್ಟಭಾಗವು ಅಪಮಾನಕರವಾಗಿದೆಯೆಂಬುದನ್ನು ತಿಳಿದುಕೊಳ್ಳಬಲ್ಲವರಾಗಿರುತ್ತೀರಿ.

ನನ್ನ ನೋಟೀಸಿನಲ್ಲಿ ಕೇಳಿರುವ ವಿಷಯವನ್ನು ದಯವಿಟ್ಟು ತಿಳಿಸುವವರಾಗಬೇಕು.

ತಮ್ಮ ವಿಶ್ವಾಸಿ,
(ರುಜು) ಕೆ. ಶಂಕರನಾರಯಣರಾವ್, ಅಡ್ವೊಕೇಟ್.

ಇದಕ್ಕೆ ಉತ್ತರ.

ಕೆ. ಶಂಕರನಾರಾಯಣರಾವ್, ಮೈಸೂರು,
ಎಂ.ಎ., ಬಿ.ಎಲ್., ತಾ|| 23ನೇ ಡಿಸೆಂಬರ್ 1925.
ಅಡ್ವೊಕೇಟ್.

ಅಯ್ಯಾ,

ನಿಮ್ಮ 1925ನೇ ಡಿಸೆಂಬರ್ ತಾ|| 17ರ ಕಾಗದ ತಲುಪಿತು. ಅನೇಕ ವರ್ಷಗಳ ನನ್ನ ಪತ್ರಿಕಾಸಂಪಾದಕೀಯಾನುಭವದಲ್ಲಿ ನೀವು ಹೇಳುವ ಲೇಖದಲ್ಲಿ ಅಪಮಾನಕರವಾದ ಲೇಖನವೇನೂ ಕಂಡುಬರಲಿಲ್ಲವಾದ ಪ್ರಯುಕ್ತ ಅದನ್ನು ತಿಳಿಸಬೇಕಾಗಿ ನಾನು ನಿಮಗೆ ತಾ|| 10ರಲ್ಲಿ ಕಾಗದವನ್ನು ಬರೆದಿರುವುದಾಗಿದೆ. ನನ್ನ ಮೊದಲಿನ ಅಭಿಪ್ರಾಯವನ್ನು ಬದಲಾಯಿಸಲು ನಿಮ್ಮಿಂದ ಹೆಚ್ಚು ತಿಳಿವಿಕೆಯು ಕೊಡಲ್ಪಟ್ಟಿಲ್ಲವಾದುದರಿಂದಲೂ, ಸರಿಯಾದ ಕಾರಣಗಳ ವಿನಾ ತನ್ನ ಪತ್ರವ್ಯವಹಾರಕರ ಹೆಸರನ್ನು ಹೊರಗೆಡುವುದು "ಮೈಸೂರು ಸ್ಟಾರ್" ಪತ್ರಿಕೆಯ ಧರ್ಮವಾಗಿಲ್ಲವಾದುದರಿಂದಲೂ ನಿಮ್ಮ ಕೋರಿಕೆಯನ್ನು ನೆರವೇರಿಸಲಾಗುವುದಿಲ್ಲವೆಂದು ತಿಳುಹಲು ವ್ಯಸನವಾಗುತ್ತದೆ. ಇದರ ಮೇಲೂ ನಿಮ್ಮ ಕಕ್ಷಿಗಾರರಾದ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರು ಕಾರ್ಯಭಾಗವನ್ನು ನಡೆಯಿಸುವುದಾದಲ್ಲಿ ನನ್ನ ಎಲ್ಲ ವಿಧವಾದ ವೆಚ್ಚಕ್ಕೂ ನಷ್ಟಕ್ಕೂ ಅವರು ಗುರಿಯಾಗಬೇಕಾಗುತ್ತದೆ.

ತಮ್ಮ ವಿಶ್ವಾಸಿ,
(ರುಜು) ವೈ. ವಿರೂಪಾಕ್ಷಯ್ಯ.

ಸ್ವದೇಶದ ವೃತ್ತಾಂತಗಳು.

ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡುಗಳ ಕಾಲಾವಧಿಯು 1926ನೆಯ ಜೂನ್ ತಿಂಗಳ ಕಡೆಯವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಕಡೂರಿಂದ ಚಿಕ್ಕಮಗಳೂರಿಗೆ ರೈಲ್ವೆಯನ್ನು ಹಾಕುವ ವಿಚಾರದಲ್ಲಿ ಸರ್ಕಾರದವರು ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ಕೂಡ ಪರ್ಯಾಲೋಚಿಸುತ್ತಿರುವರು.

ಬೆಂಗಳೂರು ಲಾಲ್ಬಾಗಿನಲ್ಲಿ ಪ್ರತಿವರ್ಷವೂ ನಡೆಯುವ ಫಲಪುಷ್ಪ ಮತ್ತು ಕೋಳಿಬಾತುಗಳ ಪ್ರದರ್ಶನವು ಹೊಸಲ ಬರುವ ಫೆಬ್ರವರಿ ತಾ|| 6 ರಿಂದ ಪ್ರಾರಂಭವಾಗುವುದು.

ಚೀಫ್ ಕೋರ್ಟಿನ ಚೀಫ್ ಜಡ್ಜಿಯವರು ಕಳೆದವಾರ ರಾಜಧಾನಿಗೆ ಬಂದು 3–4 ದಿನಗಳವರೆಗಿದ್ದು ಇಲ್ಲಿಯ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನು ಪರೀಕ್ಷಿಸಿಕೊಂಡು ದಯೆಮಾಡಿಸಿದರು.

ಶ್ರೀಮದ್ಯುವರಾಜರವರ ದ್ವಿತೀಯ ಕುಮಾರಿಯವರಾದ ಸುಜಯಕಾಂತಮ್ಮಣ್ಣಿಯವರ ವರ್ಧಂತ್ಯುತ್ಸವವು ಕಳೆದ ಭಾನುವಾರ ಶ್ರೀ ಚಾಮುಂಡೀವಿಹಾರದಲ್ಲಿ ಬಹಳ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ರಾಜಬಂಧುಗಳಿಗೆ ಔತಣವೂ ಸಾಯಂಕಾಲದಲ್ಲಿ ಮಕ್ಕಳಿಗೆ ಆಟಪಾಟವಿನೋದಗಳೂ ನಡೆದುವು.

ಮದ್ರಾಸು ಪಾರ್ಕುಟವನ್ನಿನಲ್ಲಿರುವ ಪ್ರಸಿದ್ಧ ಸಕ್ಕದ ವ್ಯಾಪಾರಿಗಳಾದ ಮೆಸರ್ಸ್. ಗುರುಬಸವ ಅಂಡ್ ಕೋಯವರು ಶೇಷಶಾಯಿ ಮಹಾವಿಷ್ಣುವಿನ ಮತ್ತು ಬಾಲಲೀಲಾಕೃಷ್ಣನ ಚಿತ್ರಗಳೊಡನೆ ಬಹು ಸುಂದರವಾಗಿ ಮುದ್ರಣಮಾಡಿಸಿರುವ 1926ನೆಯ ವರ್ಷದ ಕ್ಯಾಲಂಡರುಗಳನ್ನು ವಿನಯಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಅಡ್ವೋಕೇಟರೂ, ಮ್ಯುನ್ಸಿಪಲ್ ಕೌನ್ಸಿಲರೂ ಆದ ಮ|| ಸಿ. ನರಸಿಂಹಯ್ಯನವರ ಪುತ್ರಿಯು ಕಳೆದ ಮಂಗಳವಾರ ಪ್ಲೇಗುರೋಗಗ್ರಸ್ತರಾಗಿದ್ದು ಕಾಲವಾದರೆಂದು ಕೇಳಿ ವಿಷಾದಿಸುತ್ತೇವೆ. ರಾಜಧಾನಿಯಲ್ಲೆಲ್ಲೂ ಪ್ಲೇಗು ಜಾಡ್ಯವು ಇಲ್ಲವಾದುದರಿಂದ ಮೃತರಿಗೆ ಈ ರೋಗವು ಹೇಗೆ ಪ್ರಾಪ್ತವಾಯಿತೋ ತಿಳಿಯದು.

ಬೆಂಗಳೂರು ಸಿಟಿಯ ನಗರ್ತರ ಪೇಟೆಯವರು ನಾಟಕ ಸಿನಿಮಾ ಮೊದಲಾದವುಗಳ ನೋಟಿಸುಗಳನ್ನು ಹಂಚುವ ಬಂಡಿಗಳು ಇಕ್ಕಟ್ಟಾದ ಬೀದಿಗಳಲ್ಲಿ ಬರುವುದರಿಂದ ತಿರುಗಾಡುವ ಜನರಿಗೆ ಬಹಳ ತೊಂದರೆಯಾಗಿರುವಪ್ರಯುಕ್ತ ಇತಃಪರ ಆ ಬಂಡಿಗಳು ಬಾರದಂತೆ ಅಡ್ಡಿಪಡಿಸಬೇಕೆಂದು ಅಧಿಕಾರಿಗಳಿಗೆ ಅರ್ಜಿಗಳನ್ನು ಬರೆದಿರುವರಂತೆ!

ಮೈಸೂರು ಸಂಸ್ಥಾನದಿಂದ ನಡೆಯಿಸಲ್ಪಡುತ್ತಿರುವ ರೈಲ್ವೆಗಳಿಂದ 1926ನೇ ಜನುವರಿ ತಾ|| ೨ಕ್ಕೆ ಕಡೆಯಾದ ವಾರದಲ್ಲಿ 62,200 ರೂ. ಗಳು ಅಂದರೆ ಇದರ ಹಿಂದಣವಾರ ಉತ್ಪನ್ನವಾಗಿದ್ದುದಕ್ಕಿಂತ 300 ರೂ. ಗಳು ಹೆಚ್ಚಾಗಿಯೂ, ಹೋದ ವರ್ಷ ಇದೇ ಕಾಲದಲ್ಲಿ ಆಗಿದ್ದುದಕ್ಕಿಂತ 6295 ರೂ. ಹೆಚ್ಚಾಗಿಯೂ ಉತ್ಪನ್ನವಾಗಿರುತ್ತದೆ.

ಸಂಸ್ಥಾನದಲ್ಲಿ ದನಗಳ ತಳಿಯನ್ನು ಉತ್ತಮಗೊಳಿಸುವ ಅಭಿಪ್ರಾಯದಿಂದ ಇತಃಪರ ಅಮೃತಮಹಲ್ಲಿನ 200 ಬೀಜದ ಹೋರಿಗಳು ಪ್ರತಿ ಸಂವತ್ಸರದಲ್ಲೂ ಎಲ್ಲ ಗ್ರಾಮಗಳ ರೈತರುಗಳಿಗೆ ಉಚಿತವಾಗಿ ಹಂಚಿಕೊಡಲ್ಪಟ್ಟು ಅವುಗಳು 6–7 ವರ್ಷ ವಯಸ್ಸಿನವಾದಮೇಲೆ ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟು ವಿಕ್ರಯಿಸಲ್ಪಡುವ ವಿಚಾರದಲ್ಲಿ ವ್ಯವಸಾಯ ಶಾಖೆಯ ಡೈರೆಕ್ಟರವರು ಅಮೃತಮಹಲ್ ಸೂಪರಿಂಟೆಂಡೆರಕೂಡ ಪರ್ಯಾಲೋಚಿಸಿ ತಮ್ಮಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಅಪ್ಪಣೆಯಾಗಿದೆ.

ಭರತಖಂಡದ ವೈಸರಾಯರಾಗಿದ್ದ ಕ್ರಿ|| ಖರ್ಜನ್‌ರವರ ಪುತ್ರಿ ಅಲೆಕ್ಸಾಂಡ್ರಾ ಮೆಟ್ಕಾಫ್‌ರವರು ಪತಿಯೊಡನೆ ರಾಜಧಾನಿಗೆ ಬಂದು ಗೌರ್ನಮೆಂಟ್ ಹೌಸಿನಲ್ಲಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿರುವರು. ಶ್ರೀಮದ್ಯುವರಾಜರವರು ಈ ಅತಿಥಿ ದಂಪತಿಗಳನ್ನು ಅರಮನೆ ಶ್ರೀ ಚಾಮುಂಡೀಬೆಟ್ಟ ಕನ್ನಂಬಾಡಿ ಶ್ರೀರಂಗಪಟ್ಟಣ ಮೊದಲಾದ ಪ್ರೇಕ್ಷಣೀಯಸ್ಥಳಗಳಿಗೆ ಕರೆದುಕೊಂಡುಹೋಗಿ ಬಂದರು. ಈ ದಂಪತಿಗಳು ಇಲ್ಲಿಂದ ಉದಕಮಂಡಲಕ್ಕೆ ಪ್ರಯಾಣಮಾಡುವವರಾಗಿರುವರು.

ರಾಜಧಾನಿಯ ವೀರಶೈವವೃದ್ಧಪಿತಾಮಹರಾದ ಮ|| ಮೊಕ್ತೇಸರ್ ಬಸವಲಿಂಗಪ್ಪನವರ ಪೌತ್ರರೂ, ಅಮಲ್ದಾರ್ ಮ|| ಬಿ. ಲಿಂಗಯ್ಯನವರ ಪುತ್ರರೂ ಆದ ಡಾ|| ಮಂಜುನಾಥ ಎಂ.ಎಸ್‌ಸಿ., ಡಿ.ಪಿಎಚ್., ರವರು ಪಾಶ್ಚಾತ್ಯದೇಶಗಳಲ್ಲಿ ತಮ್ಮ ವಿದ್ಯಾವ್ಯಾಸಂಗವನ್ನು ಪೂರೈಸಿ ಘನತರವಾದ ಪ್ರಶಸ್ತಿಗಳನ್ನು ಪಡೆದುಕೊಂಡು ಸ್ವದೇಶವನ್ನು ಕುರಿತು ತೆರಳಿ ಈ ತಾ|| 29ರಲ್ಲಿ ಸಿಲೋನ್ ಪಟ್ಟಣವನ್ನು ತಲುಪುವವರಾಗಿರುವರೆಂಬ ಸಂಗತಿಯು ಕಳೆದವಾರ ಸ್ಟಾರಿನಲ್ಲಿ ಪ್ರಕಟವಾಗಿರುವ ಪತ್ರವ್ಯವಹಾರದಿಂದ ತಿಳಿಯಬರುತ್ತದೆ. ವರ್ಧಿಷ್ಣುಗಳಾದ ಡಾ|| ಮಂಜುನಾಥರವರ ಸುಖಾಗಮನವನ್ನು ಬಯಸಿ, ಅವರು ತಮ್ಮ ದೊಡ್ಡಪ್ಪನವರಾದ ಆ ಪ್ರಸಿದ್ಧ ಕೈ|| ಬಸವಯ್ಯನವರಂತೆ ತಮ್ಮ ಕುಟುಂಬಕ್ಕೂ ವೀರಶೈವಸಮಾಜಕ್ಕೂ ಕೀರ್ತಿಯನ್ನುಂಟುಮಾಡುವವರಾಗಲೆಂದು ಬಯಸುತ್ತೇವೆ. ಈ ಯುವಕರ ಭಾವಚಿತ್ರವು ಅನುಬಂಧವಾಗಿ ಕೊಡಲ್ಪಟ್ಟಿದೆ.

ಬೆಂಗಳೂರು ಸಿಟಿಯಿಂದ ದಂಡಿಗೆ ಒಬ್ಬಬ್ರಾಹ್ಮಣಸ್ತ್ರೀಯು ಒಂದು ಜಟಕಾ ಬಂಡಿಯಲ್ಲಿ ಕುಳಿತುಕೊಂಡು ಹೋಗುತ್ತಿರುವಾಗ್ಗೆ ದಾರಿಯಲ್ಲಿ ಒಂದು ಉಕ್ಕಡದಬಳಿ ಒಬ್ಬ ಮಹಮದೀಯನು ಬಂದು ಬಂಡಿಯಲ್ಲಿ ಇಣುಕಿನೋಡಿ ಆಕೆಯ ಬಳಿಯಲ್ಲಿದ್ದ ಗಂಟೇನೆಂದು ಕೇಳಿದನು. ಆಕೆಯು ಈಗತಾನೆ ರೈಲಿನಲ್ಲಿ ಬಂದೆ; ಮಕ್ಕಳಿಗೆ ತಿಂಡಿಯ ಸಾಮಾನನ್ನು ಈ ಗಂಟಿನಲ್ಲಿ ಕಟ್ಟಿ ತೆಗೆದುಕೊಂಡು ಹೋಗುತ್ತೇನೆಂದು ಎಷ್ಟು ಹೇಳಿದರೂ ಕೇಳದೆ ಅದನ್ನು ಬಿಚ್ಚಿ ತೋರಿಸಬೇಕೆಂದು ಮುಷ್ಕರ ಹಿಡಿದನು. ಆಗ ಆಕೆಯು ಬಹಳ ವ್ಯಸನಪಟ್ಟು ಆ ಗಂಟನ್ನು ಬಿಚ್ಚಿ ತೋರಿಸಿ ತಿಂಡಿಯೆಲ್ಲವನ್ನೂ ಮಾರ್ಗದಲ್ಲಿ ಬಿಸಾಡಿ ಈ ಹಾಳು ಜನರ ಕಾಟವೆಂದಿಗೆ ತಪ್ಪುತ್ತದೊ ಎಂದು ನಿಟ್ಟುಸುರನ್ನು ಬಿಟ್ಟು ಹೊರಟುಹೋದಳು. ಪ್ರಯಾಣಿಕರಿಗೆ ಈ ವಿಧವಾದ ತೊಂದರೆಯು ಬಹು ಸಾಮಾನ್ಯವಾಗಿ ಎಲ್ಲೆಲ್ಲೂ ಸಂಭವಿಸುತ್ತಲೇ ಇದೆ. ಇದಕ್ಕೆ ಮೇಲ್ಪಟ್ಟವರು ಗಮನಕೊಟ್ಟಹೊರತು ಗತ್ಯಂತರವಿಲ್ಲ.

ರಾಜಧಾನಿಯ ಶ್ರೀಮನ್ಮಹಾರಾಜ ಸಂಸ್ಕೃತಮಹಾಪಾಠಶಾಲೆಯ ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳು ಈ ತಾ|| ೨೦ನೆಯ ಬುಧವಾರ ಸಾಯಂಕಾಲ ಪಾಠಶಾಲಾಭವನದಲ್ಲಿ ನಡೆದ ಮಹಾಸಭೆಯಲ್ಲಿ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರಿಂದ ಅನುಗ್ರಹಿಸಲ್ಪಟ್ಟವು. ಆ ಸಮಯದಲ್ಲಿ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾದ ಮ|| ವಿ. ಸುಬ್ರಹ್ಮಣ್ಯಯ್ಯರ್, ಬಿ.ಎ. ಇವರು ಸಂಸ್ಕೃತ ವಿದ್ಯಾಭ್ಯಾಸ ಮತ್ತು ಅದರ ಕೃಷಿ ಎಂಬ ವಿಷಯದ ಮೇಲೆ ಕನ್ನಡದಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ತರುವಾಯ ಅಧ್ಯಕ್ಷರಾದ ಶ್ರೀಗಳವರು ಸಂಸ್ಕೃತವಿದ್ಯಾಮಹಿಮೆಯನ್ನ ಕುರಿತು ಬಹು ಶ್ಲಾಘ್ಯವಾಗಿ ಉಪನ್ಯಾಸ ಮಾಡಿ ಪಾರಿತೋಷಿಕಗಳನ್ನು ಹೊಂದಿದ ವಿದ್ಯಾರ್ಥಿಗಳನ್ನು ಕುರಿತು ಹಿತಬೋಧೆಯನ್ನು ಮಾಡಿದರು. ಈ ಸಮಾರಂಭಕ್ಕಾಗಿ ಪಾಠಶಾಲೆಯು ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದಿತಲ್ಲದೆ ಅನೇಕ ಅಧಿಕಾರಿಗಳೂ ವಕೀಲರುಗಳೂ ವಿದ್ಯಾಭಿಮಾನಿಗಳೂ ದಯೆಮಾಡಿಸಿದ್ದರು.

ಸಂಪದಭ್ಯುದಯಪತ್ರಿಕೆಯಮೇಲೆ ನಡೆಯುತ್ತಿರುವ ಮಾನನಷ್ಟದ ಕೇಸಿನಲ್ಲಿ ಒಂದನೆಯ ಅಪರಾಧಿ ಮ|| ಎಂ. ವೆಂಕಟಕೃಷ್ಣಯ್ಯನವರು ತಾವು ಕೆ. ಎ. ಎ. ಪ್ರೆಸ್ಸಿನ ಮತ್ತು ಸಂಪದಭ್ಯುದಯಪತ್ರಿಕೆಯ ಪ್ರೊಪ್ರೈಟರು ಮತ್ತು ಮ್ಯಾನೇಜರು ಆಗಿರುತ್ತೇವೆಂದೂ, ಈ ಪತ್ರಿಕೆಯಲ್ಲಿ ಕಂಡ ವಿಷಯಗಳಿಗೆ ಅದರ ಎಡಿಟರಾದ ಮ|| ಲಕ್ಷ್ಮಣರಾಯರು ಉತ್ತರವಾದಿಗಳೆಂದೂ, ಫಿರ್ಯಾದಿಗೂ ತಮಗೂ ಯಾವ ವಿಧವಾದ ಮನಸ್ತಾಪವಿಲ್ಲವೆಂದೂ, ೨ ನೇ ಅಪರಾಧಿ ಮ|| ಲಕ್ಷ್ಮಣರಾಯರು ಸಂಪದಭ್ಯುದಯ ಮೊದಲಾದ ಪತ್ರಿಕೆಗಳ ಪ್ರಿಂಟರ್, ಮತ್ತು ಪಬ್ಲಿಷರೆಂದೂ, ಸಂಪದಭ್ಯುಯಪತ್ರಿಕೆಯ ಎಡಿಟರೆಂದೂ, ವಿವಾದಾಸ್ಪದವಾದ ಲೇಖವು ಯಾವುದೊಂದು ದ್ವೇಷಾಸೂಯೆಯಿಂದ ಬರೆಯಲ್ಪಡದೆ ಜನೋಪಕಾರಕ್ಕಾಗಿ ಸದ್ಬುದ್ಧಿಯಿಂದ ಬರೆಯಲ್ಪಟ್ಟಿರುವುದೆಂದೂ, ಅಪಮಾನಕರವಾಗಿಲ್ಲವೆಂದೂ ಮೊದಲಾಗಿ ಸ್ಟೇಟ್ಮೆಂಟನ್ನು ಬರೆದು ಈ ತಾ|| 18 ರಲ್ಲಿ ಸಿಟಿ ಮ್ಯಾಜಿಸ್ಟ್ರೇಟರಿಗೊಪ್ಪಿಸಿರುವರು. ಇದರ ಆರ್ಗ್ಯುಮೆಂಟು ನೆನ್ನೆಯದಿವಸವೂ ಈ ದಿವಸವೂ ನಡೆಯಬೇಕಾಗಿದ್ದುದು ಅಪರಾಧಿ ಕಡೆಯ ಲಾಯರಾದ ಮ|| ಚಂದ್ರಶೇಖರಯ್ಯನವರು ಅಸ್ವಸ್ಥರಾಗಿರುವ ಪ್ರಯುಕ್ತ ಅಡ್ಜರ್ನ್ ಮಾಡಲ್ಪಟ್ಟಿರುತ್ತದೆ.

ವರ್ತಮಾನಸಂಗ್ರಹ.

ಮದ್ರಾಸಿನಲ್ಲೂ ಬಂಗಾಳಾದಲ್ಲೂ ಗೌರ್ನರಾಗಿದ್ದ ಲಾರ್ಡ್ ಕಾರ್ಮಿಕಲ್‌ರವರು ಈ ತಾ|| 16ರಲ್ಲಿ ಲಂಡನ್ ಪಟ್ಟಣದಲ್ಲಿ ವಿಧಿವಶರಾದರು.

ಧಾರವಾಡ ಡಿ|| ಬೈಲಹೊಂಗಲದಲ್ಲಿ ವಡ್ಡರು ವಾಸಮಾಡುವ ಗುಡಿಸಲುಗಳಿಗೆ ಅಗ್ನಿಪ್ರವೇಶವಾಗಿ 50 ಗುಡಿಸಲುಗಳು ನಾಶವಾದವು, ಮತ್ತು ಮೂರುಹುಡುಗರು ಸತ್ತರು.

ಬರುವ ಫೆಬ್ರವರಿ ತಾ|| 25, 26 ಮತ್ತು 27ರಲ್ಲಿ ಹಿಂದು ಮಹಾಸಭೆಯು ದಿಲ್ಲಿನಗರದಲ್ಲಿ ಜರುಗುವುದು. ಆ ಕಾಲದಲ್ಲಿ ಪ್ರಸಿದ್ಧ ಪೈಲ್ವಾನರು ಮೊದಲಾದವರ ಕುಸ್ತಿಗಳು ಪಂದ್ಯದ ಮೇಲೆ ನಡೆಯುವವಾಗಿರುವುವು.

ರಷ್ಯಾಚಕ್ರವರ್ತಿಯವರಾಗಿದ್ದ ಝಾರ್‌ರವರ ಅಮೋಘವಾದ ವಜ್ರಗಳು ಹರಾಜಿಗಿಡಲ್ಪಟ್ಟಿವೆ. ಇವುಗಳನ್ನು ಪರೀಕ್ಷಿಸಿ ಕೊಂಡುಕೊಳ್ಳಲು ಪ್ರಸಿದ್ಧರಾದ ಜವಾಹಿರವ್ಯಾಪಾರಿಗಳು ಪರಸ್ಥಳಗಳಿಂದ ಹೋಗಿರುತ್ತಾರೆ.

ಅನೇಕ ಶತಮಾನಗಳ ಹಿಂದೆ ಜೀವಿಸಿದ್ದ ಆಕ್ ಎಂಬ ಪಕ್ಷಿಗಳ ಮೊಟ್ಟೆಯಚಿಪ್ಪು 1912 ರಲ್ಲಿ 4,095 ರೂ. ಗಳಿಗೆ ವಿಕ್ರಯಿಸಲ್ಪಟ್ಟಿದ್ದಿತು. ಪ್ರಾಯಶಃ 100 ವರ್ಷದಲ್ಲಿದ್ದ ಪಕ್ಷಿಯ ಮೊಟ್ಟೆಯಚಿಪ್ಪು ಈಗ ದೊರಕಿ 4,160 ರೂ. ಬೆಲೆಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಜಪಾನ್ ದೇಶದ ಪರ್ವತಪ್ರಾಂತದಲ್ಲಿ ಹಾಕಲ್ಪಟ್ಟಿರುವ ಟ್ರಾಂಬಂಡಿಯು ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ತಿಟ್ಟಿನಿಂದ ಇಳಿದು ಬರುತ್ತಿರುವಾಗ್ಗೆ ಕಂಬಿಯಿಂದ ಜಾರಿ 200 ಅಡಿ ಆಳದಲ್ಲಿ ಉರುಳಿಬಿದ್ದಿತು. ಇದರಿಂದ ಪ್ರಯಾಣಿಕರಲ್ಲಿ 18 ಜನರು ಮೃತರಾಗಿ 20 ಜನರು ವಿಶೇಷ ಗಾಯವನ್ನು ಹೊಂದಿದರು.

ಬೆಳಗಾಂ ಡಿಸ್ಟ್ರಿಕ್ಟ್‌ಬೋರ್ಡಿನವರು 500 ಪ್ರಜಾಸಂಖ್ಯೆಯುಳ್ಳ ಪ್ರತಿಯೊಂದು ಗ್ರಾಮದಲ್ಲೂ ಪ್ರಾಥಮಿಕ ಪಾಠಶಾಲೆಯನ್ನೇರ್ಪಡಿಸಬೇಕೆಂದು ನಿರ್ಧರಿಸಿ, 500 ಪ್ರಜಾಸಂಖ್ಯೆಯುಳ್ಳ 500 ಗ್ರಾಮಗಳಿಗೆ 300 ಗ್ರಾಮಗಳಲ್ಲಿ ಆಗಲೇ ಪಾಠಶಾಲೆಗಳನ್ನೇರ್ಪಡಿಸಿರುವರಲ್ಲದೆ ಉಳಿದ ಗ್ರಾಮಗಳಲ್ಲಿ ಕೂಡಲೇ ಏರ್ಪಡಿಸುವವರಾಗಿರುವರು.

ಜಾರ್ಜ್ ಚಕ್ರವರ್ತಿಯವರ ದಿವಂಗತರಾದ ಮಾತೃಶ್ರೀ ಅಲೆಕ್ಸಾಂಡ್ರಾ ಮಹಾರಾಣಿಯವರ ಸ್ಮರಣಾರ್ಥವಾಗಿ ಯಾವುದಾದರೊಂದು ಕಾರ್ಯವನ್ನು ಮಾಡಬೇಕೆಂದು ಇಂಗ್ಲೆಂಡಿನ ಪ್ರಜೆಗಳು ಸಂಕಲ್ಪಿಸಿ ಒಂದು ಧನರಾಶಿಯನ್ನು ಕೂಡಿಸುತ್ತಿರುವರು. ಇದಕ್ಕೆ ಚಕ್ರವರ್ತಿಯವರು 15,000 ರೂ. ಗಳನ್ನೂ ಮೇರಿರಾಣಿಯವರು 6,800 ರೂ. ಗಳನ್ನೂ ಕೊಟ್ಟಿರುವರು.

ಮಧುರೆಯ ಪ್ರಸಿದ್ಧ ಮೀನಾಕ್ಷಿ ದೇವಾಲಯದಲ್ಲಿದ್ದ ಶ್ರೀ ವೀರಭದ್ರಸ್ವಾಮಿಯ ಸುಂದರದರಮೂರ್ತಿಯನ್ನು ಯಾರೋ ದುಷ್ಟರು ಭಿನ್ನಮಾಡಿರುವರು. ಆ ದೇವಸ್ಥಾನದ ಮೇಲ್ವಿಚಾರಕರಿಗೂ ಅರ್ಚಕರಿಗೂ ಮನಸ್ತಾಪವಿರುವುದರಿಂದ ಅರ್ಚಕರಲ್ಲಾರೋ ಈ ಕೃತ್ಯವನ್ನು ನಡಿಸಿರಬೇಕೆಂದೂಹಿಸಲ್ಪಟ್ಟಿದೆ ಮತ್ತು ಆ ನೀಚರನ್ನು ಕಂಡುಹಿಡಿದವರಿಗೆ ಬಹುಮಾನವು ಕೊಡಲ್ಪಡುವುದಾಗಿ ಪ್ರಕಟಿಸಲ್ಪಟ್ಟಿದೆ.

ಕೆನರಿದ್ವೀಪಗಳಲ್ಲಿ ಪ್ರಳಯಸ್ವರೂಪದ ಮಳೆಯು ಸುರಿದು ಗುಡ್ಡಗಳು ಕರಗಿ ಹರಿದುವು, ಸೇತುಗಳೂ ಮಾರ್ಗಗಳೂ ಟ್ರಾಂಬಂಡಿಗಳೂ ಕೊಚ್ಚಿಕೊಂಡು ಹೋದುವು. ಹಳ್ಳಿಗಳು ನಾಶವಾದುವು. ಬಾಳೆತೋಟಗಳು ಬುಡಮೇಲಾಗಿ ಬಂದು ಸಮುದ್ರಪಾಲಾದುವು. ಸಮಾಧಿಗಳು ಕರಗಿಹೋಗಿ ಶವಗಳ ಪೆಟ್ಟಿಗೆಗಳು ನೀರಿನಲ್ಲಿ ತೇಲಾಡುತ್ತಿದ್ದುವು. ಸಾವಿರಾರುಜನರು ನಿಲ್ಲಲು ನೆರಳೂ ತಿನ್ನಲು ಅನ್ನವೂ ಇಲ್ಲದೆ ತಪಿಸುತ್ತಿರುವರು.

ಜಪಾನ್ ರಾಜಧಾನಿಯಾದ ಟೋಕಿಯೋನಗರದಲ್ಲಿ ಅರಮನೆಗೆ ಸಂಬಂಧಪಟ್ಟ ಒಂದು ಉತ್ಸವವು ನಡೆಯುತ್ತಿರುವಾಗ್ಗೆ ಬ್ರೆಜಿಲ್‌ದೇಶದ ರಾಯಭಾರಿಯು ಮೋಟಾರುಬಂಡಿಯಲ್ಲಿ ಕುಳಿತು ಜನರಸಂದಣಿಯಲ್ಲಿ ನುಗ್ಗಿಹೋಗುವಾಗ್ಗೆ ಆತನಿಗೂ ಜನರಿಗೂ ಹೋರಾಟಗಳು ನಡೆದು ಪೋಲೀಸರಿಂದ ಶಮನಮಾಡಲ್ಪಟ್ಟಿತು. ಅರಮನೆಯುತ್ಸವದಲ್ಲಿ ಪ್ರತಿಭಟಿಸಿ ನಡೆದು ಅವಮರ್ಯಾದೆಯನ್ನು ಮಾಡಿದ ರಾಯಭಾರಿಯನ್ನು ಕೂಡಲೆ ಸ್ವದೇಶಕ್ಕೆ ಕರೆಯಿಸಿಕೊಳ್ಳಬೇಕೆಂದು ಅಲ್ಲಿಯ ವೃತ್ತಪತ್ರಿಕೆಗಳು ಅಭಿಪ್ರಾಯಪಟ್ಟಿರುತ್ತವೆ.

ಜನವರಿತಿಂಗಳಿನ ಆದಿಭಾಗದಲ್ಲಿ ಯೂರೋಪಿನಲ್ಲೆಲ್ಲಾ ವಿಶೇಷವಾದ ಮಳೆಯಿಂದಲೂ, ಪ್ರಚಂಡಮಾರುತದಿಂದಲೂ ಅಪಾರವಾದ ನಷ್ಟಕಷ್ಟಗಳು ಸಂಭವಿಸಿದುವು. ಅಲ್ಲದೆ ಈ ತಾ|| 15 ರಲ್ಲಿ ಫ್ರಾನ್ಸ್ ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಅಭೂತಪೂರ್ವವಾದ ಮಂಜುಸುರಿದು ಫಲಪುಷ್ಪಗಳಿಗೆ ಮಹಾನರ್ಥವುಂಟಾಯಿತು. ಯುಗೋಸ್ಲೇವಿಯಾದಲ್ಲಿ ಪ್ರಚಂಡಮಾರುತವು ಬೀಸಿ ಮರಗಳೂ ತಂತಿಯಕಂಭಗಳೂ ಬಿದ್ದುಹೋದುವು. ಮಂಜಿನಗೆಡ್ಡೆಯ ಭಾರವನ್ನು ತಡೆಯಲಾರದೆ ಅನೇಕ ಮನೆಗಳು ಉರುಳಿ ಪ್ರಾಣನಷ್ಟವು ಸಹ ಆಯಿತು.

ಬರ್ಲಿನ್ ಪಟ್ಟಣಕ್ಕೆ ಸೇರಿದ ಮೋಬಿಟ್ ಡಿಸ್ಟ್ರಿಕ್ಟಿನಲ್ಲಿ ಪೆಟ್ರೋಲಿಯಂ ಎಣ್ಣೆಯು ಹೊತ್ತಿಕೊಂಡು ಅದರ ರಭಸಕ್ಕೆ 4 ಅಂತಸ್ತಿನಮನೆಯು ಇಸ್ಪೀಟುಚೀಟಿಗಳಂತೆ ಮುರಿದು ಬಿದ್ದುಹೋಯಿತು, ಅದರ ಕೆಳಗಡೆ ಸಿಕ್ಕಿಹೋಗಿದ್ದ ಜನರಲ್ಲಿ 7 ಜನರು ಸತ್ತುಹೋದರು. ಮತ್ತು 20 ಜನರು ಗಾಯವಡೆದು ಹೊರಕ್ಕೆ ಸಾಗಿಸಲ್ಪಟ್ಟಿರುತ್ತಾರೆ. ಇನ್ನೂ ಅನೇಕರು ಸತ್ತುಬಿದ್ದಿರಬಹುದೆಂದೂಹಿಸಲ್ಪಟ್ಟಿವೆ. ಆ ಬೀದಿಯೆಲ್ಲವೂ ಹಾಳುಬಡಿಯುತ್ತಿದೆ. ಇನ್ನೊಂದು ಮನೆಯು ಬಿದ್ದುಹೋಗಿ ಅದರಲ್ಲಿ ವಾಸಿಸುತ್ತಿದ್ದ 25 ಕುಟುಂಬದವರ ಪೈಕಿ 40 ಜನರು ಹೊರಗೆಸಾಗಿಸಲ್ಪಟ್ಟರು. ಅವರಲ್ಲಿ 5 ಜನರು ಸತ್ತು 20 ಜನರಿಗೆ ಪ್ರಾಣಾಪಾಯವಾಗಿದೆ.

ಒರಿಸಾಪ್ರಾಂತದ 1,000 ಚದರಮೈಲಿ ವಿಸ್ತೀರ್ಣದಲ್ಲಿ ವಾಸಮಾಡುವ ಲಕ್ಷಾಂತರ ಜನರು ಬಹುಭಯಂಕರವಾದ ಕ್ಷಾಮಬಾಧೆಗೆಸಿಕ್ಕಿ ನರಳುತ್ತಿರುವರಾದುದರಿಂದ ಭಾರತ ಸೇವಾಶ್ರಮಸಂಘದವರು ಆ ಜನರಿಗೆ ಸಹಾಯಮಾಡುವುದಕ್ಕಾಗಿ ಸ್ವಾಮಿಸತ್ಯಾನಂದರವರ್ನು ಕಳುಹಿಸಿಕೊಟ್ಟಿರುವರು. ಅವರು ಸಾಕ್ಷಿಗೋಪಾಲರೈಲ್ವೆಸ್ಟೇಷನ್ನಿನಿಂದ 12 ಮೈಲದೂರದಲ್ಲಿ ಒಂದು ರಿಲೀಫ್ ಕೆಲಸಗಳ ಮುಖ್ಯಠಾಣವನ್ನು ಏರ್ಪಡಿಸಿರುತ್ತಾರೆ. ಆದರೂ ಜನರ ಕಷ್ಟವು ಮಿತಿಮೀರಿ ಹೆಚ್ಚುತ್ತಿದೆ. ಕೆಲವೆಡೆಯಲ್ಲಿ ಅನೇಕರು ಹೊಟ್ಟೆಗೆ ಅನ್ನವೂ ಚಳಿಗೆ ಮರೆಯಾಗಿ ಬಟ್ಟೆಯೂ ಇಲ್ಲದೆ ಸಾಯುವಸ್ಥಿತಿಯಲ್ಲಿರುವರು. ಆದ್ದರಿಂದ ದಯಾರ್ದ್ರಹೃದಯರು ಸಹಾಯಮಾಡಬೇಕೆಂದು ಮೇಲ್ಕಂಡ ಸಂಘದವರು ಪ್ರಾರ್ಥಿಸಿರುತ್ತಾರೆ.

ಶ್ರೀ ಸಿದ್ಧಲಿಂಗೇಶ್ವರರಥೋತ್ಸವ.

ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣಾವಿರಳ ಪರಂಜ್ಯೋತಿ ಪರಬ್ರಹ್ಮ ಪರಶಿವ ಲೀಲಾವತಾರ ಪ್ರಭುದೇವ ಪರಂಪರಾಗತ ಶ್ರೀ ಸಿದ್ಧಗಂಗಾ ಮಹಾಕ್ಷೇತ್ರಾಧ್ಯಕ್ಷ ಶ್ರೀಮನ್ನಿರಂಜನ ಉದ್ಧಾನಸ್ವಾಮಿಯವರಿಂದ.— ತಾ|| 10-12-1926 ನೇ ಬುಧವಾರ ಸ್ವಸ್ತಿವಾಚನಾದಿಕಾರ್ಯಗಳು ತಾ|| 11 ನೇ ಗುರುವಾರ ಧ್ವಜಾರೋಹಣಾದಿಕಾರ್ಯಗಳು ತಾ|| 12 ನೇ ಶುಕ್ರವಾರ ರಥಾಂಗಹೋಮ ರಥೋತ್ಸವವೂ ತಾ|| 13 ನೇ ಶನಿವಾರ ಹುಲಿವಾಹನವೂ ಮತ್ತು ನವರಂಗಪಾಲಕಿಯ ಉತ್ಸವವೂ ತಾ|| 14 ನೇ ಭಾನುವಾರ ಬೆಳ್ಳಿಪಾಲಕಿಯುತ್ಸವವೂ ತಾ|| 15 ನೇ ಸೋಮವಾರ ಬಿಲ್ವವೃಕ್ಷವಾಹನವೂ ತಾ|| 16 ನೇ ಮಂಗಳವಾರ ಅಶ್ವವಾಹನವೂ ಮತ್ತು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟೀಕಮಿಷನರ್ ಮ|| ರಾ|| ಕೆ. ಅನಂತರಾಮಯ್ಯ, ಬಿ.ಎ., ಯವರ ಅಧ್ಯಕ್ಷತೆಯಲ್ಲಿ ದನಗಳಪ್ರದರ್ಶನವೂ ತಾ|| 17 ನೇ ಬುಧವಾರ ಪಂಚಬ್ರಹ್ಮೋತ್ಸವವೂ ಶ್ರೀಸಿದ್ಧಗಂಗಾಮಹಾಕ್ಷೇತ್ರದಲ್ಲಿ ನಡೆಯುತ್ತವೆ. ಆದುದರಿಂದ ಸರ್ವರೂ ಆ ಕಾಲಕ್ಕೆ ಬಂದು ಈ ಮಹಾಕಾರ್ಯವನ್ನು ನೆರವೇರಿಸಿ ದರ್ಶನಾಶೀರ್ವಾದಕ್ಕೆ ಪಾತ್ರರಾಗಿ ನಮ್ಮ ಮನಸ್ಸಂತೋಷಪಡಿಸದೆ ಇರಲಾರರೆಂದು ನಂಬಿದ್ದೇವೆ.

ಉಪವಾಸ.

ಉಪವಾಸದಿಂದ ಶರೀರಕ್ಕೆ ಆಗುವ ಪ್ರಯೋಜನವನ್ನು ಕುರಿತು ಮಹಾತ್ಮ ಗಾಂಧಿಯವರು ಒಂದು ವ್ಯಾಸವನ್ನು ಎಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿರುವರು.

ಉಪವಾಸವು ಒಂದು ಚಿಕಿತ್ಸೆಯೆಂದು ನಂಬಿರುವ ನನ್ನ ಮಿತ್ರನಾದ ಒಬ್ಬ ವೈದ್ಯನು ನನ್ನ ಅನುಭವವನ್ನು ಒಂದು ವ್ಯಾಸರೀತಿಯಾಗಿ ಬರೆಯಬೇಕೆಂದು ಅಪೇಕ್ಷಿಸಿದನು. ಬಹಳ ಜನರಿಗೆ ಉಪವಾಸಕ್ರಮವು ಸರಿಯಾಗಿ ತಿಳಿಯದಿರುವುದರಿಂದಲೂ, ಕೆಲ ಜನರಿಗೆ ಈ ಉಪವಾಸಚಿಕಿತ್ಸೆಯಿಂದ ಕೆಲ ಬಾಧೆಯು ಕೂಡ ಆಗಿರುವುದರಿಂದಲೂ ನನ್ನ ಅನುಭವವನ್ನು ತಿಳಿಸಲು ಸಮ್ಮತಿಸಿದೆನು. ನಾನು ದೈಹಿಕಸಂಬಂಧದಲ್ಲಿಯೇ ಪ್ರತಿಸಾರಿಯೂ ಉಪವಾಸವನ್ನು ಮಾಡಿದವನಾಗಿಯೂ ಆಹಾರಸಂಸ್ಕರಣವನ್ನು ಪ್ರಧಾನವಾಗಿ ಕೋರುವವನಾಗಿಯೂ, ಉಪವಾಸವು ಚಿಕಿತ್ಸೆಯೆಂದು ನಂಬಿದವನಾಗಿಯೂ, ಉಪವಾಸದಿಂದ ಶರೀರಕ್ಕುಂಟಾಗುವ ವ್ಯತ್ಯಾಸವನ್ನು [illegible] ಅಲ್ಲನು. [illegible]

ರಿಂದಲೇ ಶರೀರವಿಷಯದಲ್ಲಿ ಏಕಾಗ್ರತೆಯಿಂದ ನಾನು ಇರಲಿಲ್ಲವು. ಆದರಿಂದ ನನ್ನ ಸೂಚನೆಯು ಪ್ರತ್ಯೇಕ ಪರಿಶೀಲನವೆಂದು ಹೇಳಲಾರೆನು. ಈಸಲ ನಾನು ಉಪವಾಸವನ್ನು ಮಾಡಿದಾಗ್ಗೆ ಡಾಕ್ಟರುಗಳಾದ ಅನ್ಸಾರಿಯವರೂ, ಅಬ್ದುರ್‌ರಹಿಮಾನ್‌ರವರೂ ನಿರಂತರವೂ ಬಹಳ ಶ್ರದ್ಧೆಯಿಂದ ನನ್ನನ್ನು ನೋಡಿಕೊಳ್ಳುತ್ತಿದ್ದರು. ಅವರಲ್ಲೊಬ್ಬರು ನನ್ನನ್ನು ಎಡೆಬಿಡದೆ ಇದ್ದವರು ಮಾತ್ರ ಪ್ರತ್ಯೇಕ ಪರಿಶೀಲನವಿಷಯವನ್ನು ತಿಳಿಸಲಿಲ್ಲರು.

1914 ರಲ್ಲಿ ಎರಡುವೇಳೆ ಉಪವಾಸವಿದ್ದೆನು. ಆಗ 14 ದಿವಸ ದಕ್ಷಿಣಾಫ್ರಿಕೆಯಲ್ಲಿ ಉಪವಾಸಮಾಡಿದೆನು. ಊಟಮಾಡಿದ ಮಾರನೆಯದಿನವೇ ನಾನು ಬಹಳದೂರ ನಡೆದೆನು. ಎರಡನೆಯದಿವಸದಲ್ಲೂ, ಮೂರನೆಯ ದಿವಸದಲ್ಲೂ 3 ಮೈಲಿದೂರ ನಡೆದೆನು. ಅದರಿಂದ ಬಾಧೆಯುಂಟಾಯಿತೆಂದು ನನಗೆ ತಿಳಿಯದು. ಅದರಿಂದ ನರಗುಕೂಡಿದ ಶರೀರಭಾಗದಲ್ಲಿ ಕೂಡಲೆ ನೋವು ಕಾಣಿಸಿಕೊಂಡಿತು. ಆ ನೋವು ನಡೆದುದರಿಂದುಂಟಾಯಿತೆಂದು ಕೂಡ ನಾನು ತಿಳಿದುಕೊಳ್ಳಲಾರದೆ ಹೋದೆನು. ಆಕಾರಣದಿಂದ ನೋವು ಕಡಿಮೆಯಾದಮೇಲೆ ಪುನಃ ನಡೆಯುತ್ತಲೇ ಇದ್ದೆನು. ಅಂತಹ ಸ್ಥಿತಿಯಲ್ಲೇ ನಾನು ದಕ್ಷಿಣಾಫ್ರಿಕೆಯಿಂದ ಆಂಗ್ಲದೇಶಕ್ಕೆ ಪ್ರಯಾಣಮಾಡಿದೆನು. ಆಂಗ್ಲದೇಶದಲ್ಲಿ ಡಾಕ್ಟರ್ ಜೀವರಾಜಮೆಹತಾಯವರು ನನ್ನನ್ನು ಪರೀಕ್ಷಿಸಿ "15 ದಿನಗಳವರೆಗೂ ನೀನು ಹಾಸಿಗೆಯನ್ನು ಬಿಟ್ಟು ಕದಲಕೂಡದು. ಹಾಗೆ ಎದ್ದರೆ ಜೀವಾವಧಿ ವಿಕಲಾಂಗನಾಗಬೇಕಾಗುತ್ತದೆ." ಎಂದು ಹೇಳಿದರು. ಆ ಕೂಡಲೆ ಮನಸ್ಸು ಇಳಿಬಿದ್ದಿತು. ಆರೋಗ್ಯವು ಕೆಟ್ಟಿತು. ಅದವರೆಗೂ ಅನಾಯಾಸವಾಗಿ ಒಂದೇಧಾಟಿಗೆ ದಿನಕ್ಕೆ 40 ಮೈಲಿಗಳವರೆಗೂ ನಡೆಯುತ್ತಿದ್ದೆನು. ದಿನಕ್ಕೆ 20 ಮೈಲಿಯು ನನಗೆ ಲೀಲಾಜಾಲವಾಗಿದ್ದಿತು. ನಾನು ಆಪ್ರಕಾರ ಉಪವಾಸಾನಂತರ ನಡೆದುದರಿಂದಲೇ ನನ್ನ ಆರೋಗ್ಯವು ಶಾಶ್ವತವಾಗಿ ಕೆಟ್ಟುಹೋಯಿತು. ಅದುವರೆಗೂ ನಾನು ಸಾಮಾನ್ಯವಾಗಿ ಆರೋಗ್ಯದಿಂದಲೇ ಇದ್ದೆನು. ಆಗ ನನಗೆ ಬಹಳ ಜಾಗ್ರತೆಯಾಗಿ ಪಾರ್ಶ್ವಶೂಲೆಯು ಪ್ರಾಪ್ತವಾಯಿತು. ಇದಕ್ಕೆ ಮೊದಲು ನನಗೆ ಕಠಿಣವಾದ ವ್ಯಾಧಿಯಾವುದೂ ಬಂದಿರಲಿಲ್ಲವು. ಆದುಕಾರಣ ಉಪವಾಸವನ್ನು ಮಾಡುತ್ತಿದ್ದ ದಿವಸಗಳಲ್ಲೂ, ಊಟಮಾಡಿದಮೇಲೂ ಎಷ್ಟು ದಿವಸ ಉಪವಾಸಮಾಡುವೆವೋ ಕನಿಷ್ಠಪಕ್ಷ ಅಷ್ಟು ದಿವಸದವರೆಗಾದರೂ ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳುವುದು ಅತ್ಯಾವಶ್ಯಕವು. ಈ ನಿಯಮವನ್ನು ಬಿಡದೆ ಅನುಸರಿಸಿದಲ್ಲಿ ಉಪವಾಸಚಿಕಿತ್ಸೆಯಿಂದ ಯಾವ ಅನರ್ಥವೂ ಉಂಟಾಗುವುದಿಲ್ಲ. ಆ ವಿಷಯದಲ್ಲಿ ಯಾರೂ ಭಯಪಡಬೇಕಾದುದಿಲ್ಲವು. ಸರಿಯಾಗಿ ಉಪವಾಸವನ್ನು ಮಾಡಿದಲ್ಲಿ ಶರೀರಕ್ಕೆ ಬಹಳ ಮೇಲಾಗುವುದೆಂಬುದೇ ನನ್ನ ನಂಬಿಕೆಯು. ಉಪವಾಸದಿಂದ ಶರೀರದಲ್ಲಿರುವ ಕಲ್ಮಷವೆಲ್ಲವೂ ತೊಲಗಿಹೋಗುವುದು. ಹಿಂದೆಯೂ ಈಗಲೂ ನಾನು ಉಪವಾಸದಿನಗಳಲ್ಲಿ ಉಪ್ಪನ್ನೂ ಸೋಡಾಬೈಕಾರ್ಬೊನೇಟನ್ನೂ ಕಲಸಿದ ನೀರನ್ನೇ ಕುಡಿಯುತ್ತಿದ್ದೆನು. ಅದಕ್ಕೆ ಮೊದಲು ಹಾಗೆ ಮಾಡುತ್ತಿರಲಿಲ್ಲವು. ಹಾಗಾದರೂ ಉಪವಾಸದಿನಗಳಲ್ಲಿ ನನಗೆ ಒಳ್ಳೆಯ ನೀರಿನಿಂದ ವಾಕರಿಕೆತೋರುವುದು. ಉಪ್ಪನ್ನೂ ಸೋಡಾವನ್ನೂ ಮಿಶ್ರಮಾಡುವುದರಿಂದ ಕೊಂಚಮಟ್ಟಿಗೆ ವಾಕರಿಗೆ ಕಡಿಮೆಯಾಗುವುದು. ನೀರನ್ನು ಹೆಚ್ಚಾಗಿ ಕುಡಿಯುವುದರಿಂದ ಅಂತರ್ದೇಹವು ಪರಿಶುಭ್ರವಾಗಿರುವುದು; ಬಾಯಿಯಲ್ಲಿ ತೇವವಿರುವುದು. 6 ಅಥವ 8 ಔನ್ಸು ನೀರಿಗೆ 5 ಗ್ರೇನು ಉಪ್ಪನ್ನೂ 5 ಗ್ರೇನು ಸೋಡಾವನ್ನೂ ಮಿಶ್ರಮಾಡಬೇಕು. ನಾನು ದಿನವೂ 8 ವೇಳೆ ನೀರನ್ನು ಕುಡಿಯುವುದರಿಂದ ಒಟ್ಟು 48 ಔನ್ಸು ನೀರನ್ನು ತೆಗೆದುಕೊಳ್ಳುತ್ತಿದ್ದೆನು. ¾ ಪೈಂಟು ಅಥವ 1½ ಪಾವು ನೀರಿನಲ್ಲಿ 40 ಗ್ರೇನು ಉಪ್ಪನ್ನೂ 40 ಗ್ರೇನು ಸೋಡಾವನ್ನೂ ಕಲಿಸಿ ಪ್ರತಿದಿನವೂ ಎನಿಮಾತೆಗೆದುಕೊಳ್ಳುತ್ತಿದ್ದೆನು. ಪ್ರತಿದಿನವೂ ಮಲಗಿಕೊಳ್ಳುವಾಗ್ಗೆ ನೀರಿನಲ್ಲಿ ಬಟ್ಟೆಯನ್ನು ನೆನಸಿ ಹೊಟ್ಟೆಯನ್ನು ಒರಸಿಕೊಳ್ಳುತ್ತಿದ್ದೆನು (ಸ್ಪಾಂಜ್ ಬ್ಯಾತ್). ಹೋದವೇಳೆ ಮತ್ತು ಈಸಲ ಕೂಡ ನನಗೆ ರಾತ್ರಿಯಲ್ಲಿ ಚೆನ್ನಾಗಿ ನಿದ್ರೆಬರುತ್ತಿದ್ದಿತು. ಹಗಲಿನಲ್ಲೂ ಒಂದುಗಂಟೆಯಕಾಲ ನಿದ್ರಿಸುತ್ತಿದ್ದೆನು. 3½ ದಿವಸ ಬೆಳಿಗ್ಗೆ 4 ಗಂಟೆಯಿಂದ ರಾತ್ರಿ 8 ಗಂಟೆಯವರೆಗೂ ಉಪವಾಸಕಾರಣದ ಸಮಸ್ಯೆಯನ್ನು ಕುರಿತು ಸ್ನೇಹಿತರ ಕೂಡ ಚರ್ಚಿಸುತ್ತಿದ್ದೆನು. ಪ್ರಶ್ನೆಗಳಿಗೆ ಜವಾಬನ್ನೂ ಪತ್ರಿಕೆಗಳಿಗೆ ಲೇಖನವನ್ನೂ ಬರೆಯುತ್ತಲೇ ಇದ್ದೆನು. ನಾಲ್ಕನೆಯದಿವಸ ವಿಶೇಷವಾಗಿ ತಲೆಯನೋವು ಬಂದಿತು. ಆ ದಿವಸ ಮಧ್ಯಾಹ್ನ ಯಾವ ಕೆಲಸವನ್ನೂ ಮಾಡಲಿಲ್ಲ. ಆ ಮಾರನೆಯದಿನ ನನಗೆ ಸಮಾಧಾನವಾಗಿ ತಲೆನೋವು ಬಹಳಮಟ್ಟಿಗೆ ಕಡಿಮೆಯಾಯಿತು. ಬಳಲಿಕೆ ಇಲ್ಲವಾಯಿತು. 6 ನೆಯದಿವಸ ಇನ್ನೂ ಖುಲಾಸೆಯಾಗಿದ್ದಿತು. ಏಳನೆಯ ದಿವಸ ಮೌನವ್ರತದಿವಸ. ಆ ದಿವಸ ಸಂಪೂರ್ಣವಿರಾಮವಾಗಿದ್ದುದರಿಂದ ಸ್ವಯವಾಗಿ ಉಪವಾಸವನ್ನು ಕುರಿತು ಈ ವ್ಯಾಸವನ್ನು ಬರೆದೆನು. ಕೈಯೇನೂ ನಡುಗಲಿಲ್ಲವು.

ಉಪವಾಸದಿವಸಗಳಲ್ಲಿ ನನಗೆ ಹಸಿವಿನಬಾಧೆಯು ಯಾವಾಗಲೂ ತೋರಲಿಲ್ಲವು. ಊಟಮಾಡಿದ ದಿವಸ ಕೂಡ ಅದರ ತೊಂದರೆಯೇನೂ ಉಂಟಾಗಲಿಲ್ಲ. ಎಂದಿನಗಿಂತಲೂ ಅರ್ಧಗಂಟೆ ನಿಧಾನವಾಗಿಯೇ ಊಟಮಾಡಿದೆನು. ಉಪವಾಸದಿವಸಗಳಲ್ಲಿ ಪ್ರತಿದಿವಸವೂ ಅರ್ಧಗಂಟೆಯಹೊತ್ತು ದಿಂಬನ್ನೊರಗಿ ಕುಳಿತುಕೊಂಡು ಎಂದಿನಂತೆ ಸರಾಗವಾಗಿ ರಾಟೆಯನ್ನು ತಿರುಗಿಸಿ ನೂಲನ್ನು ತೆಗೆಯುತ್ತಿದ್ದೆನು. ಪ್ರತಿದಿವಸವೂ ತ್ರಿಕಾಲದಲ್ಲಿ ಪ್ರಾರ್ಥನಸಭೆಯನ್ನು ಜರುಗಿಸುತ್ತಿದ್ದೆನು. ಕಡೆಯಲ್ಲಿ ಮೂರುದಿವಸ ಮಾತ್ರ ನನ್ನನ್ನು ಮಂಚದಮೇಲೆ ಮಲಗಿಸಿ ಸಭಾಪ್ರದೇಶಕ್ಕೆ ಕರೆದುಕೊಂಡು ಹೋಗಬೇಕಾಗಬಂದಿತು. ಕೊಂಚವೂ ಪ್ರಯತ್ನಪಡದೆ ಸಭೆಯಲ್ಲಿ ಕುಳಿತಿದ್ದೆನಲ್ಲದೆ ನಾನು ಅದಕ್ಕಾಗಿ ಪ್ರಯತ್ನಿಸಲಿಲ್ಲವು. ಹೊಟ್ಟೆಯ ನೋವು ನನಗೆ ಅಷ್ಟು ಹೆಚ್ಚಾಗಿ ಬರಲಿಲ್ಲವು. ಯಾವುದೋ ಒಂದು ಅಸಹ್ಯತೆ ಮಾತ್ರವುಂಟಾಗುತ್ತಿದ್ದು ನೀರನ್ನು ಗುಟುಗಿಸುತಲೆ ಕಡಿಮೆಯಾಗುತ್ತಿದ್ದಿತು. ಉಪವಾಸದಿವಸ ಕಿತ್ತಲೆಹಣ್ಣಿನರಸವನ್ನೂ ದ್ರಾಕ್ಷಾರಸವನ್ನೂ 6 ಔನ್ಸಿನವರೆಗೆ ಸೇವಿಸಿದೆನು. ಒಂದು ಕಿತ್ತಲೆಹಣ್ಣನ್ನು ಚಪ್ಪರಿಸಿ ಅನಂತರ ಎರಡುಗಂಟೆಯಮೇಲೆ ಪುನಃ ಹಾಗೆಯೇಮಾಡಿ ಅದರಮೇಲೆ 10 ದ್ರಾಕ್ಷಿಹಣ್ಣನ್ನು ಸೇವಿಸಿದೆನು. ತರುವಾಯ ಎನಿಮಾತೆಗೆದುಕೊಂಡೆನು. ಅಮೇಲೆ 6 ಔನ್ಸು ಆಡಿನಹಾಲನ್ನು 2 ಔನ್ಸು ನೀರಿನೊಡನೆ ಬೆರಸಿ ಚೆನ್ನಾಗಿ ಕಾಯಿಸಿ ಕುಡಿದು ಒಂದು ಕಿತ್ತಲೆಹಣ್ಣನ್ನೂ 10 ದ್ರಾಕ್ಷಿಹಣ್ಣನ್ನೂ ಚಪ್ಪರಿಸಿದೆನು. ಸಾಯಂಕಾಲದಲ್ಲೂ ಹಾಗೆಯೇ ಹಾಲನ್ನು ನೀರಿನಲ್ಲಿ ಮಿಶ್ರಮಾಡಿ ಕುಡಿದು ಯಥಾಪ್ರಕಾರ ಹಣ್ಣನ್ನು ಸೇವಿಸಿದೆನು. ಮಾರನೆಯದಿವಸ ಎರಡುವೇಳೆಯಿಂದಲೂ 18 ಔನ್ಸು ಹಾಲಿಗೆ 6 ಔನ್ಸು ನೀರನ್ನು ಮಿಶ್ರಮಾಡಿ ಕಾಯಿಸಿಕೊಟ್ಟರು. ಮೂರನೆಯದಿವಸ 24 ಔನ್ಸು ಹಾಲನ್ನೂ, ನಾಲ್ಕನೆಯದಿವಸ 30, ಐದನೆಯದಿವಸ 36, ಆರನೆಯದಿವಸ 42, ಏಳನೆಯ ದಿವಸ 48 ಔನ್ಸು ಹಾಲನ್ನು ಕುಡಿದೆನು. 48 ಔನ್ಸಿಗೆ 16 ಔನ್ಸು ನೀರನ್ನು ಬೆರಸಿಯೇ ಕುಡಿದುದು. ಈಗಲೂ ನೀರನ್ನು ಬೆರಸಿಯೇ ಕುಡಿಯುತ್ತಿರುವೆನಲ್ಲದೆ 6 ಔನ್ಸು ಹಾಲಿಗೆ 1 ಔನ್ಸು ನೀರನ್ನು ಮಾತ್ರ ಮಿಶ್ರಮಾಡುವುದು. ಮೂರುವೇಳೆ ಮಾತ್ರ ನೀರನ್ನು ಬೆರಸದೆ ಹಾಲನ್ನು ಕುಡಿದು ನೋಡುವಲ್ಲಿ ಹೊಟ್ಟೆಯು ಭಾರವಾಗಿ ಅದುದರಮೇಲೆ ಪುನಃ ನೀರನ್ನು ಬೆರಸಿ ತೆಗೆದುಕೊಳ್ಳಲುಪಕ್ರಮಿಸಿದೆನು.

ಈ ದಿವಸಕ್ಕೆ ಊಟಮಾಡಿ 12 ನೆಯ ದಿನವು. ಇಂದೇ ಈ ವ್ಯಾಸವನ್ನು ಬರೆದೆನು. ಈ ಹೊತ್ತಿನವರೆಗೆ ಫಲರಸವನ್ನೂ ಹಣ್ಣನ್ನೂ ಹಾಲನ್ನೂ ಮಾತ್ರ ತೆಗೆದುಕೊಳ್ಳುತ್ತಿದ್ದೆನೇ ಹೊರತು ರೊಟ್ಟಿಯನ್ನು ತಿನ್ನುತ್ತಿರಲಿಲ್ಲ. ಮೂರುದಿನಗಳಿಂದ ಕಿತ್ತಲೆಹಣ್ಣನ್ನೂ ದ್ರಾಕ್ಷಿಹಣ್ಣನ್ನೂ ಅಲ್ಲದೆ ದಾಳಿಂಬೆ ಅಥವ ಫರಂಗಿಹಣ್ಣನ್ನೂ ತಿನ್ನುತ್ತಿದ್ದೆನು. ಪ್ರತಿದಿವಸವೂ ಸಾಮಾನ್ಯವಾಗಿ ದಿನವೊಂದಕ್ಕೆ 48 ಔನ್ಸು ಹಾಲನ್ನು ಮಾತ್ರ ಕುಡಿಯುತ್ತಿದ್ದೆನಲ್ಲದೆ ಅಗಾಗ್ಗೆ 64 ಔನ್ಸಿನವರೆಗೂ ಕುಡಿಯುತ್ತಿದ್ದೆನು. ಅದಕ್ಕಿಂತ ಹೆಚ್ಚಾಗಿ ಸೇವಿಸುತ್ತಿರಲಿಲ್ಲ. ಯಾವಾಗಲಾದರು ಒಂದೊಂದು ಚಪಾತಿಯನ್ನಾಗಲಿ ಬಾರ್ಲಿ ಬ್ರೆಡ್ಡನ್ನಾಗಲಿ ತಿನ್ನುತ್ತಿದ್ದು ಒಂದು ತಿಂಗಳಿಂದಲೂ ಬರೀ ಹಣ್ಣು ಹಾಲನ್ನೂ ಸೇವಿಸುತ್ತಿದ್ದೆನು. ಅದುಕಾರಣ ನನಗೆ ಶರೀರಾರೋಗ್ಯವು ಬಹಳ ಚೆನ್ನಾಗಿದೆ.

ನಾನು ಜೈಲಿನಿಂದ ಬಂದಮೇಲೆ 112 ಪೌಂಡಿಗಿನ್ನ ಹೆಚ್ಚಾಗಿ ಯಾವಾಗಲೂ ತೂಗಲಿಲ್ಲವು. 7 ದಿವಸ ಉಪವಾಸಮಾಡಿದುದರಿಂದ 9 ಪೌಂಡು ತೂಕ ಕಡಿಮೆಯಾಯಿತು. ಅದರೂ ಪುನಃ ಅದಷ್ಟು ಇಂಚು ಮಿಂಚಾಗಿ ಪೂರ್ತಿಯಾಗಿರುವುದು. ಈಗ 103 ಪೌಂಡು ತೂಗುತ್ತಿರುವೆನು. ಮೂರು ದಿವಸಗಳಿಂದಲೂ ಬೆಳಿಗ್ಗೆ ಸಾಂಕಾಲ ಸಾಧನೆಮಾಡುತ್ತಿದ್ದೇನೆ. ನನಗೇನೂ ಆಲಸಟಿಯಾಗುವುದಿಲ್ಲ. ಸಮವಾದ ನೆಲದಮೇಲೆ ನಡೆದರೇನೂ ಬಾಧೆಯಾಗುವುದಿಲ್ಲವು. ಆದರೆ ಮೆಟ್ಟಿಲನ್ನು ಹತ್ತಿದರೆ ಮಾತ್ರ ಇನ್ನೂ ಕೊಂಚ ಆಯಾಸವಾಗುವುದು. ವಿರೇಚನವು ಕೂಡ ಬಹಳಮಟ್ಟಿಗೆ ಚೆನ್ನಾಗಿ ಆಗುತ್ತಿದೆ. ನಿದ್ರೆಯು ಚೆನ್ನಾಗಿ ಹತ್ತುತ್ತದೆ.

ಮೊದಲು 21 ದಿವಸವೂ ಈ ವೇಳೆ 7 ದಿವಸವೂ ಉಪವಾಸಮಾಡಿದುದರಲ್ಲಿ ನನಗೆ ಯಾವ ಶರೀರನಷ್ಟವೂ ಆಗಲಿಲ್ಲವೆಂಬುವುದು ನನ್ನ ಅಭಿಪ್ರಾಯವು. 7 ದಿವಸಗಳಲ್ಲೂ ಬಹಳ ಬಲವು ತಗ್ಗಿತೆಂಬ ಮತ್ತು ನಿಜವಾದರೂ ಮೊದಲು 3½ ದಿವಸ ಕೆಲಸಮಾಡುತ್ತಲೇ ಇದ್ದುದಕ್ಕೆ ಕಾರಣವು. ಇನ್ನೂ ಕೆಲದಿನಗಳು ವಿಶ್ರಾಂತಿತೆಗೆದುಕೊಂಡಲ್ಲಿ ಎಂದಿನಂತೆ ಶಕ್ತಿಯು ನನಗೆ ಪೂರ್ತಿಯಾಗಿ ಬರುವುದಲ್ಲದೆ ಕಚ್ಚಿಯಲ್ಲಿ ಕಡಿಮೆಯಾದ ಬಲವೂ ಪುನಃ ಬರುತ್ತದೆಂದು ನನ್ನ ನಂಬಿಕೆ.

ಉಪವಾಸಮಾಡುವವರು ಅಗತ್ಯವಾಗಿ ಗಮನಿಸಬೇಕಾದ ಮುಖ್ಯವಿಧಿ.

ಮಹಾತ್ಮರ ಅನುಭವಪೂರ್ವಕವಾದ ಉಪದೇಶ.

1. ಉಪವಾಸವನ್ನಾರಂಭಿಸಿದ ಮೊದಲಿನದಿವಸದಿಂದ ಕಡೆಯವರೆಗೂ ಶರೀರಕ್ಕೂ ಮನಸ್ಸಿಗೂ ಸಂಪೂರ್ಣವಿಶ್ರಾಂತಿಯನ್ನು ಕೊಡಬೇಕು.

2. ಆ ದಿವಸಗಳಲ್ಲಿ ಆಹಾರಪದಾರ್ಥಗಳನ್ನೂ, ಅವುಗಳ ರುಚಿಯನ್ನೂ ಎಷ್ಟುಮಾತ್ರಕ್ಕೂ ನೆನಸಕೂಡದು.

3. ಒಳ್ಳೆಯ ನೀರನ್ನು ಕಾಯಿಸಿ ಚೆನ್ನಾಗಿ ಶೋಧಿಸಿ ಒಂದುಪಾತ್ರೆಯಲ್ಲಿಟ್ಟಿದ್ದು ಕೊಂಚಕೊಂಚವಾಗಿ ಕುಡಿಯಬೇಕು. ಉಪ್ಪನ್ನೂ ಸೋಡಾವನ್ನೂ ಆ ನೀರಿನಲ್ಲಿ ಬೆರಸಿ ಕುಡಿದರೆ ಒಳ್ಳೆಯದು. ಅವುಗಳನ್ನು ಬೆರಸುವುದರಿಂದ ಕೆಡಕೇನೂ ಇಲ್ಲವು. ಸಾಧಾರಣವಾಗಿ ನಾವು ಕುಡಿಯುವ ನೀರಿನಲ್ಲಿ ಕೂಡ ಈ ಲವಣವು ಮಿಶ್ರವಾಗಿಯೇ ಇರುತ್ತದೆ.

4. ಪ್ರತಿದಿನವೂ ಸಣ್ಣಬಟ್ಟೆಯನ್ನು ಬಿಸಿನೀರಿನಲ್ಲಿ ಅದ್ದಿ ಅದರಿಂದ ಹೊಟ್ಟೆಯನ್ನು ತೊಳೆಯಬೇಕು.

5. ಪ್ರತಿದಿವಸದಲ್ಲೂ ಎನಿಮಾ ತೆಗೆದುಕೊಳ್ಳಬೇಕು; ಮಲದಲ್ಲಿ ವಿಶ್ರವಾಗಿ ಅತಿಧ್ಯಕವಾಗಿ ಜಾರಿಹೋಗುತ್ತದೆ.

6. ನಿರ್ಮಲವಾದ ಪ್ರದೇಶದಲ್ಲಿ ಗಾಳಿಯು ಚೆನ್ನಾಗಿ ಬೀಸುವಕಡೆ ಬಹಳಹೊತ್ತು ನಿದ್ರೆಮಾಡಬೇಕು.

7. ಪ್ರಾತಃಕಾಲದಲ್ಲಿ ಹೊರಗಡೆ ಬಿಸಿಲಿನಲ್ಲಿ ಕುಳಿತುಕೊಂಡಾಗಲಿ ಮಲಗಿಕೊಂಡಾಗಲಿ ತಣ್ಣೀರುಸ್ನಾನಮಾಡಬೇಕು. ಹಾಗೆ ಗಾಳಿಯೂ ಬಿಸಿಲೂ ಶರೀರಕ್ಕೆ ತಗುಲಿದಲ್ಲಿ ನೀರನ್ನು ಹುಯಿದುಕೊಂಡು ಸ್ನಾನಮಾಡುವುದರಿಂದ ಎಷ್ಟು ಪರಿಶುಭ್ರತೆಯುಂಟಾಗುವುದೋ ಅಷ್ಟು ಪರಿಶುಭ್ರತೆಯು ಇದರಿಂದುಂಟಾಗುವುದು.

8. ಉಪವಾಸವನ್ನು ಕುರಿತು ಆಲೋಚಿಸದೆ ಇತರ ವಿಷಯವನ್ನು ಕುರಿತು ಆಲೋಚಿಸುತ್ತಿರಬೇಕು.

9. ಯಾವ ಕಾರಣದಿಂದಾದರೂ ಉಪವಾಸವನ್ನು ಆರಂಭಿಸಿದಲ್ಲಿ ಭಗವಂತನನ್ನು ಕುರಿತೂ, ಭಗವಂತನು ಸೃಷ್ಟಿಸಿದ ಸಮಸ್ತ ಜೀವರಾಶಿಗಳನ್ನು ಕುರಿತೂ, ಭಗವಂತನಿಗೂ ನಮಗೂ ಇರತಕ್ಕ ಸಂಬಂಧವನ್ನು ಕುರಿತೂ ಧ್ಯಾನಮಾಡಬೇಕು. ಅದರಿಂದ ಅತ್ಯದ್ಭುತವಾದ ವಿಷಯವು ನಮಗೆ ಗೋಚರವಾಗುವುದು.

10. (1) ಮಲಬದ್ಧವಾದಲ್ಲಿ (2) ರಕ್ತಕಡಿಮೆಯಾದಲ್ಲಿ (3) ಜ್ವರಬಂದಲ್ಲಿ (4) ಅಜೀರ್ಣವಾದಲ್ಲಿ (5) ತಲೆನೋವುಂಟಾದಲ್ಲಿ (6) ಕೀಲುಗಳು ನೊಂದಲ್ಲಿ (7) ವಾತರಕ್ತವುಂಟಾದಲ್ಲಿ (8) ಕೋಪ ಮೊದಲಾದವು ಉಂಟಾದಲ್ಲಿ (9) ಆಲೋಚನೆ ನಿರುತ್ಸಾಹ ಮೊದಲಾದವು ಉಂಟಾದಲ್ಲಿ (10) ಹೆಚ್ಚಾಗಿ ಸಂತೋಷವಾದಲ್ಲಿ ತಪ್ಪದೆ ಉಪವಾಸಮಾಡಿದರೆ ಸುಖವಾಗುವುದೆಂದು ನಾನು ಸ್ವಾನುಭವದಿಂದ ನಿಸ್ಸಂಶಯವಾಗಿ ಬೋಧಿಸುವೆನು. ವೈದ್ಯರು ಕೊಡುವ ಔಷಧವನ್ನೂ, ಅಂಗಡಿಯಲ್ಲಿ ಮಾರುವ ಪೇಟೆಂಟ್ ಔಷಧವನ್ನೂ ಸೇವಿಸಬೇಕಾದುದಿಲ್ಲವು. ಕಷ್ಟಪಟ್ಟು ಕೆಲಸಮಾಡಿ ಧನವನ್ನು ಆರ್ಜಿಸಿ ಅದರಿಂದ ಚೆನ್ನಾಗಿ ಹಸಿವೆಯಾದಾಗ ಮಾತ್ರ ಉಣ್ಣಬೇಕು.

ಉಪವಾಸದ ಚಿಕಿತ್ಸೆ.

ಡಾಕ್ಟರ್ ರೈನಾಲ್ಡು ಎಫ್. ಇ. ಆಸ್ಟಿನ್‌ರವರ ಸ್ವಾನುಭವವು.

1911-1912 ನೇ ಸಂವತ್ಸರಗಳಲ್ಲಿ ಮೂರಾವರ್ತಿ ನಾನು ಉಪವಾಸಚಿಕಿತ್ಸೆಯನ್ನು ಜರುಗಿಸಿದೆನು. ಮೊದಲನೆಯಸಾರಿ 16 ದಿವಸ ಬರೇ ಜಲಾಹಾರವನ್ನು ಮಾಡಿಕೊಂಡಿದ್ದೆನು. ಬೆಳಿಗ್ಗೆ ನಿದ್ರೆಯಿಂದೆದ್ದ ಕೂಡಲೆ ಒಂದುಲೋಟಾ ತಣ್ಣೀರಿಗೆ 1 ಅಥವ ½ ಔನ್ಸು ಎಪ್ಸಂಸಾಲ್ಟನ್ನು ಹಾಕಿ ಕುಡಿಯುತ್ತಿದ್ದೆನು. ತೂಕದಲ್ಲಿ 21 ಪೌಂಡು ತಗ್ಗಿಹೋದೆನು. ಬಾಯಿನಲ್ಲಿ ಕೊಂಚ ಅಸಹ್ಯವೂ, ನಾಲಿಗೆಯಲ್ಲಿ ಅಂಟೂ ಆದುದರವಿನಾ ಮತ್ತಾವ ತೊಂದರೆಯೂ ಆಗಲಿಲ್ಲವು. ಬೆಳಿಗ್ಗೆ ನಿದ್ರೆಯಿಂದೆದ್ದಮೇಲೆ ಕೆಲ ನಿಮಿಷಗಳವರೆಗೆ ಬಹಳ ನೀರಸವಾಗಿದ್ದಿತು. ಹಗಲಿನಲ್ಲೂ ಸ್ವಲ್ಪಹೊತ್ತು ಕೂತುಕೊಂಡು ಎದ್ದುನಿಂತುಕೊಂಡಮೇಲೆ ತಲೆತಿರುಗುತ್ತಿದ್ದಿತು. ರಾತ್ರಿಯಲ್ಲಿ ಗಾಢನಿದ್ರೆ ಬರುತ್ತಿದ್ದಿತು. ನಾನು ಸ್ವಯಮಾಗಿ ಕೆಲಸವನ್ನುಮಾಡಿ ಪ್ರತಿದಿನ ಮಧ್ಯಾಹ್ನದಲ್ಲಿ ಒಬ್ಬ ಸ್ನೇಹಿತನಕೂಡ ಬೇಟೆಗೆ ಹೊರಟು 12 ಮೈಲಿ ನಡೆಯುತ್ತಿದ್ದೆನು. 16 ನೆಯ ದಿವಸ ನನ್ನಗಿಂತಲೂ 20 ವರ್ಷ ಕಡಿಮೆ ವಯಸ್ಸಿನ ಯುವಕನೊಂದಿಗೆ ಜೂಜುಕಟ್ಟಿಕೊಂಡು ಎರಡುಮೈಲಿದೂರ ನಡೆದೆನು. ಆಗ ಇಂಡಿಯಾದಲ್ಲೇ ಇದ್ದೆನು. ಸ್ಪೇಷಲ್ ಆಸ್ಪತ್ರೆಯಿಂದ ನನ್ನ ಬಂಗಲೆಗೆ 2 ಮೈಲಿದೂರ ನಿರಾಯಾಸವಾಗಿ ನಡೆದುಕೊಂಡು ಹೋಗುತ್ತಿದ್ದೆ. ಉಪವಾಸದಿಂದ ನನಗೆ ಅಶಕ್ತಿಯುಂಟಾಯಿತೆಂದು ನಾನು ಹೇಳಲಾರೆನು. 16 ದಿವಸಗಳವರೆಗೆ ಅನ್ನವನ್ನುತಿನ್ನದೆ ಇದ್ದಾಗ್ಯೂ ಸಹಜವಾಗಿ ನನ್ನ ಶಕ್ತಿಯು ಕಡಿಮೆಯಾಗಲಿಲ್ಲವೆಂದು ತಿಳಿಸುವುದಕ್ಕಾಗಿ ಈ ಸಂಗತಿಯನ್ನು ವಿವರಿಸಿರುತ್ತೇನೆ.

ಮತ್ತೆ ತಿಂಗಳಿಗೊಂದುಸಾರಿ ಪುನಃ ಉಪವಾಸಚಿಕಿತ್ಸೆಯನ್ನು ಆರಂಭಿಸಿದೆನು. ಈವೇಳೆ ಎಪ್ಸಂಸಾಲ್ಟ್‌ಬೆರಸಿದ ನೀರನ್ನು ಕುಡಿಯುವುದನ್ನು ಬಿಟ್ಟು ಪ್ರತಿದಿನ ಬೆಳಿಗ್ಗೆ ಎದ್ದಕೂಡಲೆ 1½ ಸೇರು ಬಿಸಿನೀರಿನಲ್ಲಿ ಎನಿಮಾಮಾಡಿಕೊಳ್ಳುತ್ತಿದ್ದೆನು. ಈಸಾರಿಯು ಕೂಡ ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತಿದ್ದೆನಾದರೂ ಮೊದಲುಸಾರಿಯಂತೆ ಆರೋಗ್ಯವು ಕಂಡುಬರಲಿಲ್ಲವು. 4 ದಿವಸಗಳಾದಮೇಲೆ ದೂರ ನಡೆಯಲು ಶಕ್ತಿ ಸಾಲಲಿಲ್ಲವು. ಬಾಯಲ್ಲಿ ದುರ್ವಾಸನೆಯು ಬಹಳವಾಯಿತು. ನಾಲಿಗೆಗೆ ಬಹಳವಾಗಿ ಅಂಟು ಸುತ್ತಿಕೊಳ್ಳುತ್ತಿದ್ದಿತು. ಹೈಡ್ರೋಜನ್ ಪೆರಾಕ್ಸೈಡ್ ದ್ರಾವಕವನ್ನು ನೀರಿಗೆ ಹಾಕಿ ಬಾಯಿಯನ್ನು ತೊಳೆದುಕೊಳ್ಳುತ್ತಿದ್ದೆನು. ಅದರಿಂದ ಬಾಯಿ ಕೊಂಚ ಸುಮಾರಾಯಿತು. ರಾತ್ರಿ ಸರಿಯಾಗಿ ನಿದ್ರೆ ಬರುತ್ತಿರಲಿಲ್ಲವು. ಈ ಕಾರಣದಿಂದ 10 ನೆಯ ದಿವಸವೇ ಅಹಾರವನ್ನು ತೆಗೆದುಕೊಂಡೆನು. ಅಮೇಲೆ 3 ದಿವಸಗಳಲ್ಲಿ ಬಾಯಿ ಯಥಾಪ್ರಕಾರಕ್ಕೆ ಬಂದಿತು. ಇನ್ನು ಕೆಲ ವಾರಗಳನಂತರ 3 ನೇ ಸಾರಿ ಪುನಃ ಪ್ರಾರಂಭಿಸಿ 10 ದಿವಸಮಾಡಿದೆನು. ಮೊದಲನೇಸಾರಿ ಮಾಡಿದಂತೆಯೇ ಎಪ್ಸಂಸಾಲ್ಟನ್ನು ಬೆರಸಿದ ನೀರನ್ನು ಕುಡಿಯುತ್ತಿದ್ದೆನು. ಎನಿಮಾ ಬಿಟ್ಟುಬಿಟ್ಟೆನು. ಇದರಿಂದ ಬಹಳ ಸೌಖ್ಯವಾಗಿ ಮೊದಲನೆಯಾವರ್ತಿ 16 ದಿವಸಮಾಡಿದಾಗ ಹೇಗಿದ್ದೆನೋ ಈ ಮೂರನೆಯಸಾರಿ ಕೂಡ ಹಾಗೆಯೇ ಇದ್ದೆನು. ಅದುಕಾರಣ ಉಪವಾಸವನ್ನು ಮಾಡುವವರು ಎನೀಮಾ ತೆಗೆದುಕೊಳ್ಳುವುದಕ್ಕೆ ಬದಲು ಎಪ್ಸಂಸಾಲ್ಟ್ ಬೆರಸಿದ ನೀರನ್ನು ಕುಡಿಯುವುದರಿಂದ ಬಹಳ ಪ್ರಯೋಜನವುಂಟೆಂದು ನಾನು ನಿಶ್ಚಯಿಸಿದೆನು. ಎಂದು ಡಾ|| ರೈನಾಲ್ಡು ಆಸ್ಟಿನ್‌ರವರು ಬರೆದಿರುವರು.

ವಿವಿಧಮತ ಮಹಾಸಭೆ.

(ಕಳೆದವಾರದ ಶೇಷ.)

ಕ್ರೈಸ್ತಮತವು.

ಮುಕ್ತಿಯೆಂದರೆ ವಿಷಯಾನುಭವವನ್ನು ಬಿಟ್ಟುಬಿಡುವುದಲ್ಲವು. ಅದುದರಿಂದ ಇಂದ್ರಿಯವ್ಯಾಪಾರವನ್ನು ನಾಶಗೊಳಿಸಬಾರದು. ಅದನ್ನು ನಾಶಗೊಳಿಸಿದರೆ ವ್ಯಕ್ತಿತ್ವವೇನಾಶವಾಗುವುದು. ಅವು ದೈವದತ್ತವು. ಅದುಕಾರಣ ಭಗವಂತನು ಯಾವಕಾರ್ಯನಿಮಿತ್ತವಾಗಿ ಇಂದ್ರಿಯಗಳನ್ನು ಕೊಟ್ಟಿರುವನೋ ಆ ಕಾರ್ಯಕ್ಕಾಗಿ ಅವುಗಳನ್ನುಪಯೋಗಿಸಬೇಕು. ಅವುಗಳನ್ನು ದುರ್ವಿನಿಯೋಗಮಾಡುವುದು ದೋಷವು. ಕುಟುಂಬವನ್ನು ಪರಿತ್ಯಜಿಸುವುದು ಮುಕ್ತಿಯಲ್ಲವು. ಕುಟುಂಬವು ಪರಮಪವಿತ್ರವಾಗಿದ್ದ ಹೊರತು ಸಾಧಾರಣವಾಗಿ ಸನ್ಯಾಸವು ಅನವಸರವು. ಗಾರಹಸ್ಥ್ಯವು ಮುಖ್ಯಧರ್ಮವು. ಸ್ತ್ರೀಸಂಗವನ್ನು ಪರಿತಜಿಸುವುದು ಮುಕ್ತಿಯಲ್ಲವಾಗಿರುವುದರಿಂದ ಅದನ್ನು ಭಗವನ್ನಿರ್ಣಯಾನುಸಾರವಾಗಿ ಜರುಗಿಸಬೇಕಾಗಿರುವುದಲ್ಲದೆ ಮಿತಿಮೀರಿದರೆ ದೋಷವಾಗುವದು. ರಾಜಕೀಯವನ್ನೂ, ಸಾಂಘಿಕವನ್ನೂ ತ್ಯಜಿಸುವುದೂ ಮುಕ್ತಿಯಲ್ಲವು. ನ್ಯಾಯಸಂರಕ್ಷಣೆಗೆ ಅದು ಆವಶ್ಯಕವು. ಭಗವಂತನು ಸರ್ವವ್ಯಾಪಿಯಾಗಿ ಪರಿಪಾಲಿಸುತ್ತಿರುವನಾದುದರಿಂದ ಅನ್ಯಾಯಮಾಡದೆ ನ್ಯಾಯದಿಂದ ಕೆಲಸಮಾಡಬೇಕು. ಅದುಕಾರಣ ಮುಕ್ತಿಯೆಂದರೆ ಪ್ರಪಂಚದಲ್ಲಿ ಕುಟುಂಬದಲ್ಲಿದ್ದುಕೊಂಡಿರುವುದೇ ವೈರಾಗ್ಯದಲ್ಲಿದ್ದಂತೆಯೇ. ದೇವರು ಸಕಲವನ್ನೂ ಒಳ್ಳೆಯದಕ್ಕಾಗಿ ಸೃಷ್ಟಿಸಿರುವನು. ಅವನ್ನು ಸದ್ವಿನಿಯೋಗಮಾಡದೆ ಮನುಷ್ಯನು ದುರ್ವಿನಿಯೋಗಿಸುವನು. ಅದಿಯೇ ಪಾಪವು. ಸ್ವಾರ್ಥಪರತ್ವದಿಂದಲೇ ಮನುಷ್ಯನು ಪಾಪವನ್ನು ಮಾಡುವುದು. ದೇವರಾಜ್ಞೆಯು ಪರೋಪಕಾರವಲದೆ ಸ್ವಾರ್ಥಪರತ್ವವಲ್ಲವು. ಮತಸ್ವೀಕಾರವೆಂದರೆ ಮನಸ್ಸಿನಲ್ಲಿ ದೇವರ ಅನುಗ್ರಹವನ್ನು ಸಂಕಲ್ಪಿಸುವುದಲ್ಲದೆ ಬಾಹ್ಯದಲ್ಲಿ ಮತಸ್ನಾನ ಮೊದಲಾದ ಕರ್ಮವನ್ನು ಮಾಡುವುದಲ್ಲವು. ಪರಮಪದದಿಂದ ಈ ಆಜ್ಞೆಯು ಜರುಗುವಂತೆ ಭೂಲೋಕದಲ್ಲಿಯು ಕೂಡ ಈ ಆಜ್ಞೆಯು ನೆರವೇರುವುದೆಂದು ಏಸುಕ್ರಿಸ್ತನು ಹೇಳಿರುವನು. ಒಬ್ಬನು ತನ್ನ ಮುಕ್ತಿಯನ್ನು ಮಾತ್ರವೇ ಕೋರುವುದು ಕೂಡ ಸ್ವಾರ್ಥಪರತ್ವವೇ ಆಗುವುದರಿಂದ ದೇವರು ಅದನ್ನು ಅನುಗ್ರಹಿಸನು. ಯಾರು ಅನನ್ಯಭಕ್ತಿಯಿಂದ ದೇವರನ್ನು ಮೆಚ್ಚಿಸುವುದಕ್ಕಾಗಿ ದೇವರ ರಾಜ್ಯವನ್ನು ಭೂಲೋಕದಲ್ಲಿ ಸ್ಥಾಪಿಸುವ ಪ್ರಯತ್ನದಲ್ಲಿ ಮಾನವಸೇವೆಯನ್ನು ಮಾಡುವರೋ ಅವರಿಗೆ ಭಗವಂತನು ನಿರ್ಹೇತುಕಜಾಯಮಾನಕಟಾಕ್ಷದಿಂದ ಮುಕ್ತಿಯನ್ನು ಕೊಡುವನು. ಹಾಗಲ್ಲದೆ ಮನುಷ್ಯರು ಇಷ್ಟಪಟ್ಟಲ್ಲಿ ಅದು ದೊರಕದು. ಏಸುಕ್ರಿಸ್ತನು ಮುಕ್ತಿಯನ್ನು ಕುರಿತು ಏನನ್ನೂ ಹೇಳಿಲ್ಲವು. ಆತನ ಶಿಷ್ಯರು ಮಾತ್ರ ಹೇಳಿರುವರು. ಭಗವಂತನ ಸಾಮ್ರಾಜ್ಯವನ್ನು ಕುರಿತು ಹೀಬ್ರುಪ್ರವಕ್ತರೂ ಕ್ರಿಸ್ತನೂ ಮಾತ್ರವೇ ಬೋಧಿಸಿರುವರಲ್ಲದೆ ಬೇರೆಯಾವ ಮತದವರೂ ಬೋಧಿಸಿಲ್ಲವು. ಸಮಸ್ತ ಕಾರ್ಯವನ್ನೂ ಭಗವಂತನೇ ನೆರವೇರಿಸುವನು. ದೇವರು ದಯಾಮಯನಾದ ತಂದೆಯು. ಪ್ರಪಂಚವಾಸಿಗಳ ಸೌಖ್ಯಕ್ಕಾಗಿಯೇ ನಿರಂತರವೂ ಪ್ರಯತ್ನಿಸುವನು. ತನ್ನ ಮಕ್ಕಳು ಕೃತಘ್ನರಾಗಿ ಪ್ರತಿಭಟಿಸಿದರೂ ದೇವರಿಗೆ ಅವರಮೇಲೆ ಆಗ್ರಹವಿಲ್ಲವು. ಆತನ ಪ್ರೇಮವು ಅಪಾರವಾದುದು. ಆತನ ಕ್ಷಮೆಯು ಅದ್ವಿತೀಯವಾದುದು. ಆತನು ಯಾವಾಗಲೂ ನಮ್ಮನ್ನುದ್ಧರಿಸಲು ಪ್ರಯತ್ನಿಸುತ್ತಿರುವನು. ಆತನಿಗೆ ನಮ್ಮ ವಿಚಾರದಲ್ಲಿ ಎಂದಿಗೂ ನಿರಾಶೆಹುಟ್ಟದು. ಭಗವಂತನ ರಾಜ್ಯವನ್ನು ಭೂಮಿಯಮೇಲೆ ಸ್ಥಾಪಿಸಬೇಕೆಂದು ಏಸುಕ್ರಿಸ್ತನು ಹೇಳಿದುದಕ್ಕಾಗಿ ಅವನನ್ನು ಗಲ್ಲಿಗೆ ಹಾಕಿದರು. ಭಗವಂತನಿಗಿಂತ ಪ್ರಿಯತಮವಾದವರು ಇಲ್ಲ. ಇತರರನ್ನು ಭಗವಂತನು ವಿಶೇಷವಾಗಿ ಪ್ರೀತಿಸುವನು. ಭಗವದಾಜ್ಞೆಯನ್ನು ನೆರವೇರಿಸುವುದಕ್ಕಾಗಿಯೇ ನಾನು ಗೃಹಸ್ಥಾಶ್ರಮವನ್ನು ಸ್ವೀಕರಿಸಿದೆನು. ಭಗವಂತನು ಸೃಜಿಸಿದ ಸರ್ವವಸ್ತುಗಳನ್ನು ಭಗವತ್ಸೇವೆಗೆ ವಿನಿಯೋಗಿಸಲು ನಾನುಪಯೋಗಿಸಿದೆನು. ಎಂದು ಕ್ರಿಸ್ತನು ಹೇಳಿರುವನು. ದೇವರ ಕರುಣವು ಕ್ರಿಸ್ತರಮೇಲೆ ಸಂಪೂರ್ಣವಾಗಿರುವುದು. ಕ್ರಿಸ್ತನು ಪ್ರೇಮವನ್ನು ಸಮಸ್ತ ಜೀವಿಗಳಿಗೂ ಬೋಧಿಸಿದನು. ಪ್ರೇಮವೆಂದರೆ ಸ್ವಾರ್ಥಪರತ್ವಕ್ಕಾಗಿ ಒಂದು ವ್ಯಕ್ತಿಯು ಇನ್ನೊಂದು ವ್ಯಕ್ತಿಯನ್ನು ಪ್ರೀತಿಸುವುದಲ್ಲವು. ಪ್ರತಿಫಲಾಪೇಕ್ಷೆಯಿಲ್ಲದೆ ಪ್ರತಿ ಜೀವಿಗಳಿಗೂ ಸಹಾಯ ಮಾಡುವುದೇ. ಇದೇ ಉತ್ತಮೋತ್ತಮವಾದ ಉಪದೇಶವು. ದೇವರನ್ನು ಪ್ರೀತಿಸುವುದಕ್ಕಿಂತ ಹೆಚ್ಚಾದ ಸುಗುಣವು ಯಾವುದೂ ಇಲ್ಲವು. ದೇವರನ್ನು ಮಾತ್ರವೇ ಪ್ರೀತಿಸುವಲ್ಲಿ ಉನ್ಮಾದವಿಲ್ಲದೆ ಚಿತ್ತವಿಕಾರವಾಗಿ ಪರಿಣಮಿಸುವುದು. ಪ್ರಪಂಚದ ಜೀವಿಗಳೆಲ್ಲರನ್ನು ಕೂಡ ಪ್ರೀತಿಸಬೇಕು. ಅಂದರೆ ದೈವಪ್ರಾರ್ಥನೆಯೂ, ಪರೋಪಕಾರವೂ ಅವಶ್ಯಕವು. ಜಾತಿ ಮತ ವರ್ಣ ಲಿಂಗಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಪ್ರೀತಿಸಬೇಕು. ಮನೋನೇತ್ರದಲ್ಲಿ ಕ್ರಿಸ್ತನನ್ನು ನೋಡಿದಲ್ಲಿ ಆತನು ಈಗಲೂ ಸಜೀವನಾಗಿರುವನೆಂದು ಸ್ಪಷ್ಟವಾಗಿ ತಿಳಿಯುವುದು. ಅವನು ನಮಗೆ ಉಪದೇಶಿಸುವನು. ಭಗವದಾಜ್ಞಾನುಸಾರವಾಗಿ ಜೀವನವನ್ನು ಮಾಡುವವರು ಮುಕ್ತಿಯನ್ನು ಹೊಂದುವರು. ಪರಲೋಕದ ವಿಚಾರವಾಗಿ ನನಗೇನೂ ತಿಳಿಯದು. ಪುನರ್ಜನ್ಮವಿಚಾರವಾಗಿಯೂ ನನಗೇನೂ ತಿಳಿಯದು. ನನ್ನ ಜೀವನವನ್ನು ಭಗವದಧೀನಮಾಡುವುದು ನನಗೆ ತಿಳಿಯುವುದು. ಪರಲೋಕವೆಂದರೆ ಭೌತಿಕವಲ್ಲವು. ಪುನರುದ್ಧಾರವೆಂದರೆ ಭೌತಿಕಶರೀರವಲ್ಲವು. ಜೀವಾತ್ಮನೇ ನಾನು ಎಂದರೆ ಈ ಶರೀರದಲ್ಲಿರುವ ಪ್ರಾಣಶಕ್ತಿಯೇ. ಪರಲೋಕವು ಕ್ರೈಸ್ತರೆಲ್ಲರಿಗೂ ಪ್ರಾಪ್ತವಾಗುವುದೆಂದು ನಾನು ಹೇಳುವೆನು. ದೇವರ ಆಜ್ಞಾನುಸಾರ ಈ ಲೋಕದಲ್ಲಿ ನಡೆದುಕೊಳ್ಳುವವರು ಯಾವ ಮತದವರಾದರೂ ಅವರೆಲ್ಲರಿಗೂ ಮುಕ್ತಿಯಾಗುವುದು. ಹಾಗೆ ನಡೆಯದಿದ್ದವರು ಕ್ರೈಸ್ತರಾಗಿದ್ದರೂ ಅವರಿಗೆ ಮುಕ್ತಿಯು ಸಿಕ್ಕುವುದಿಲ್ಲ. ಎಂದು ಒಬ್ಬ ಕ್ರೈಸ್ತರು ಉಪನ್ಯಾಸಮಾಡಿದರು.

ಶೈವಸಿದ್ಧಾಂತ.

ಪ್ರತಿ ಜೀವಿಯು ತ್ರಿಮೂರ್ತಿ ಕೂಡಿಗಳು ಕೂಡ ಸುಖವನ್ನೇ ಬಯಸುವುವು; ದುಃಖವನ್ನು ತೊಲಗಿಸಲು ಪ್ರಯತ್ನಿಸುವುವು. ಅದರೆ ಅದನ್ನು ತೊಲಗಿಸಲು ಜೀವಿಗಳೆಲ್ಲರಲ್ಲಾ ಮನುಷ್ಯನಿಗೆ ಹೆಚ್ಚಾದ ಶಕ್ತಿಯಿರುವುದು. ಈ ಸೌಖ್ಯಾಧಿಕ್ಯವನ್ನು ಹೊಂದುವುದಕ್ಕಾಗಿಯೂ, ಕಷ್ಟವನ್ನು ರೋಧಿಸುವುದಕ್ಕಾಗಿಯೂ ಮನುಷ್ಯನು ನಮಗೆ ಈಗ ಗೋಚರಿಸಿರುವ ನಾಗರಿಕತೆ ಎಂದು ಹೇಳಿಸಿಕೊಳ್ಳಲ್ಪಡುವ ಅಭಿವೃದ್ಧಿ ಕಾರ್ಯವನ್ನು ಮಾಡುತ್ತಿರುವನು. ಸ್ಟೀಮರು, ರೈಲು, ವಿದ್ಯಾಲಯ, ಯಂತ್ರಶಾಲೆ, ವೈದ್ಯಶಾಲೆ ಮೊದಲಾದವುಗಳೆಲ್ಲವೂ ಅದಕ್ಕಾಗಿಯೇ. ಸಾಮಾನ್ಯರಾದವರೆಲ್ಲರಿಗೂ ಮುಕ್ತಿಯ ವಿಚಾರದಲ್ಲಿ ಹುಟ್ಟುವ ಅಭಿಪ್ರಾಯವಿದೆಯೇ. ಅದರೆ ಲೋಕೇಶ್ವರನಿಗಾದರೂ ಈ ಸುಖವು ನಿರಂತರವಾಗಿರುವುದಿಲ್ಲ. ಅವನೆಷ್ಟು ಪ್ರಯತ್ನಿಸಿದರೂ ದುಃಖವನ್ನು ನಿರೋಧಿಸಲಾರನು. ಅದುಕಾರಣ ಮನುಷ್ಯನು ತಿಳಿದುಕೊಂಡಿರುವ ಈ ಸೌಖ್ಯವು ನಿಜವಾದ ಮುಕ್ತಿಯಲ್ಲವು. ವಿಷಯಸೌಖ್ಯಾನುಭವವು ಎಷ್ಟುಮಾತ್ರಕ್ಕೂ ಮುಕ್ತಿಯಾಗಲಾರದು. ಏಕೆಂದರೆ, ಈ ಸೌಖ್ಯವೆಲ್ಲವೂ ನಶ್ವರವಾದುದು. ಜನನಮರಣಕ್ಕೆ ಕಾರಣವೇನು? ಮರಣಾನಂತರವೇನಾಗುವುದು? ಎಂದು ಪ್ರಶ್ನಿಸಿದರೆ ಮರಣವಾದಮೇಲೇನಾದರೂ ಸರಿಯೆಂದು ನಾಸ್ತಿಕನು ಹೇಳುವನು. ಅದರೆ ಅದು ನಿಜವಲ್ಲ. ಜೀವನು ಯಾವಾಗಲೂ ಇರುವನು. ಶರೀರಮಾತ್ರ ನಾಶವಾಗುವುದು. ಅದ್ವೈತಿಗಳು ಒಬ್ಬ ಬ್ರಹ್ಮನವಿನಾ ಮತ್ತಾವುದೂ ಇಲ್ಲವೆಂದು ಹೇಳುವರು. ಎಲ್ಲವೂ ಮಾಯೆಯೆಂದು ಹೇಳುವುದು ಸಹೇತುಕವಾಗಿ ತೋರುವುದಿಲ್ಲವು. ಈರೀತಿಯಾಗಿ ಚಾರ್ವಾಕನು ದ್ವೈತಸಿದ್ಧಾಂತವು ಸಹೇತುಕವಲ್ಲವೆಂದು ತೋರಿಸುವನು. ದೇವರು ದಯಾಮಯನು. ಸರ್ವವ್ಯಾಪಿ, ಸರ್ವಶಕ್ತ. ಪ್ರಾಚೀನ ಋಷಿಗಳು ಪರಮೇಶ್ವರನನ್ನು ಶಿವನೆಂದೂ, ರುದ್ರನೆಂದೂ ಸಂಬೋಧಿಸಿರುವರು. ಉಪನಿಷತ್ತಿನಲ್ಲೂ ವೇದದಲ್ಲೂ ಹಾಗೆಯೇ ಕರೆಯಲ್ಪಟ್ಟಿರುವುದು. ಬ್ರಹ್ಮಶಬ್ದವು ಅಥರ್ವವೇದದಲ್ಲಿರುತ್ತದೆ. ಉಪನಿಷತ್ತಿನಲ್ಲಿ ಮಾತ್ರವೇ ಪರಮೇಶ್ವರನ ಪರವಾಗಿ ಹೇಳಲ್ಪಟ್ಟಿರುವುದು. ಪೂರ್ವಕಾಲದಲ್ಲಿ ಭಗವಂತನನ್ನು ಪ್ರತ್ಯಕ್ಷವಾಗಿ ನೋಡಿದವರುಂಟು. ಅವರು ತಮ್ಮ ಅನುಭವವನ್ನು ಸ್ಪಷ್ಟವಾಗಿಬರೆದಿರುವರು. ರುದ್ರನು ರಕ್ತವರ್ಣನು. ಅಗ್ನಿ ಸೂರ್ಯರು ತದಾಕಾರವು. ಉಮಾದೇವಿಯು ಶ್ಯಾಮಲವರ್ಣೆ. ಅದುದರಿಂದ ಭಗವಂತನು ಭಕ್ತರಿಗೆ ದರ್ಶನವನ್ನು ಕೊಟ್ಟಾಗಲೆಲ್ಲ ಅರ್ಧನಾರೀಶ್ವರನಾಗಿಯೇ ತೋರುವನು. ಇಂದ್ರಾದಿ ದೇವತೆಗಳು ಒಂದುಕಾಲದಲ್ಲಿ ಮಾನವರಾಗಿದ್ದವರೇ. ಅದುಕಾರಣ ಅವರು ಕೆಲವರಿಗೆ ಕುಲದೇವತೆಗಳಾಗಿದ್ದರಲ್ಲದೆ ಪಾಮರರು ಅವರನ್ನೇ ಪೂರ್ವದಲ್ಲೂ ಈಗಲೂ ಇಷ್ಟಾರ್ಥಸಿದ್ಧಿಗಾಗಿ ಆರಾಧಿಸುತ್ತಿರುವರಲ್ಲದೆ ಪರಮೇಶ್ವರನನ್ನು ಆರಾಧಿಸುತ್ತಿಲ್ಲವು. ಪಂಡಿತರು ಪರಮೇಶ್ವರನನ್ನು ತಿಳಿದಿರುವರಾದರೂ ಈ ಅಲ್ಪದೇವತೆಗಳನ್ನು ಆರಾಧಿಸದಿದ್ದವರಿಗೆ ಹಾನಿಯಾಗುತ್ತದೆಂಬ ಭಯದಿಂದ ಅವರು ಕೂಡ ಈ ಅಲ್ಪದೇವತೆಗಳನ್ನು ಆರಾಧಿಸುವವರಾದರು. ಪರಮಾತ್ಮನನ್ನು ಪ್ರತ್ಯೇಕವಾಗಿ ನಿರೂಪಿಸಲು ಬ್ರಹ್ಮ ಎಂಬ ಪದವು ಈಪ್ರಕಾರವಾಗಿ ಕಲ್ಪಿಸಲ್ಪಟ್ಟಿರುವುದಲ್ಲದೆ ಅದರಿಂದ ಪರಮೇಶ್ವರನಾದ ಶಿವನ ಆರಾಧನೆಗೆ ನಿರೋಧವುಂಟಾಗಿದೆ. ಪರಮೇಶ್ವರನು ಯಾವ ರೂಪವನ್ನು ಹೊಂದಿದರೂ ಭಕ್ತರಿಗೆ ಗೋಚರಿಸುವನು. ಉಪನಿಷತ್ತು ಏಕೇಶ್ವರಾರಾಧನೆಯನ್ನೇ ಬೋಧಿಸುವುದು. ರುದ್ರ, ಶಿವ, ಬ್ರಹ್ಮಶಬ್ದಗಳು ಮೂರು ಮಾತ್ರವೇ ಪರಮೇಶ್ವರವಾಚಕಗಳಾಗಿರುವುವು. ಪರಮೇಶ್ವರನಾದ ರುದ್ರನೂ ತ್ರಿಮೂರ್ತಿಗಳಲ್ಲೊಬ್ಬನಾದ ರುದ್ರನೂ ಒಂದೇ ಎಂದು ತಿಳಿಯಕೂಡದು. ಈ ತ್ರಿಮೂರ್ತಿಗಳು ಈಪ್ರಕಾರವಾಗಿ ಒಟ್ಟಿಗೆ ಕೂಡಿರುವ ದೇವತೆಗಳು. ಶಿವನೇ ಸೃಷ್ಟಿ ಸ್ಥಿತಿ ಸಂಹಾರವನ್ನು ಮಾಡುವವನು. ಉಷ್ಣಶಕ್ತಿ ಶೀತಲಶಕ್ತಿ ಎಂಬೆರಡಿರುವುವು. ಇವುಗಳಲ್ಲೊಂದು ಪ್ರಬಲವಾದರೆ ಪ್ರಳಯವಾಗುವುದು. ಇವೆರಡೂ ಸಮನಾಗಿರುವಾಗ್ಗೆ ಸೃಷ್ಟಿಸ್ಥಿತಿ ಕಾರ್ಯವು ಜರುಗುವುದು. ಉಷ್ಣಶಕ್ತಿಯು ಪ್ರಬಲಿಸಿದಾಗ್ಗೆ ಪ್ರಳಯವಾಗುವುದು. ಶೈವಸಿದ್ಧಾಂತದಲ್ಲಿ ಉಮಾದೇವಿಗೆ ವಿಷ್ಣು ಎಂಬ ಹೆಸರುಂಟು. ವಿಷ್ಣುವು ಕೂಡ ಮೇಘವರ್ಣನಾಗಿರುವುದರಿಂದ ಈ ಸಿದ್ಧಾಂತವು ಅನ್ವಯಿಸುವುದು. ಎಂದು ಒಬ್ಬ ಶೈವರು ಹೇಳಿದರು.

ಮೈಸೂರು ಗೌರ್ನಮೆಂಟ್ ಆಯುರ್ವೇದಿಕ್ ಕಾಲೇಜ್ ದ್ವಿತೀಯತ್ರೈಮಾಸಿಕ ಪರೀಕ್ಷಾ.

ನಾಲ್ಕನೇ ತರಗತಿ. ಪ್ರಸವಶಾಸ್ತ್ರ.

16-1-1926. 4 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಗರ್ಭನಿರ್ಧರವಾದ ಚಿಹ್ನೆಗಳಾವುವು? (10) II. ಜರಾಯುವನ್ನು ವರ್ಣಿಸಿ ಅದರ ಉಪಯೋಗವನ್ನು ತಿಳಿಸು. (10) III. ಆರನೇ ತಿಂಗಳಿನ ಕೊನೆಯಲ್ಲಿ ಗರ್ಭಗತವಾಗಿರುವ ಶಿಶುವಿನ ರೀತಿಯನ್ನು ವರ್ಣಿಸು (10) IV. ಶಿಶುವಿನ ತಲೆಯ ಮುಖ್ಯವಾದ ಅಸ್ಥಿಕತೆಗಳನ್ನು ತಿಳಿಸು (10) V. ಗರ್ಭಿಣಿಯರಲ್ಲಿ 'ಬೆಟ್ಟೊನ್ಸ್‌ಮರ್ಮರ್' ಅಥವಾ ಶಿತ್ತಿಯಿಂದ ಊದುವಹಾಗೆ ಕೇಳುವ ಶಬ್ದಕ್ಕೆ ಕಾರಣವೇನು? (10)

(Sd.) ಕೆ. ಕೃಷ್ಣಯ್ಯಂಗಾರ್, ಹೆಡ್ಮಾಸ್ಟರ್.

ಪ್ರಥಮಸಹಾಯ.

15-1-1926. 4 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಒಳರಕ್ತಸ್ರಾವವನ್ನು ಹೇಗೆ ಕಂಡುಹಿಡಿಯುತ್ತೀರಿ? (10) II. ಧಮನಿಗಳ ರಕ್ತಸ್ರಾವದಲ್ಲಿ ಮಾಡಬೇಕಾದ ಚಿಕಿತ್ಸೆ ಏನು? (10) III. ಭಂಗಗಳ ಚಿಕಿತ್ಸೆಯಲ್ಲಿ ಅನುಸರಿಸಬೇಕಾದ ನಿಯಮಗಳಾವುವು? (10) IV. ಅನೂಕಭಂಗದಲ್ಲಿ ಮುಖ್ಯವಾದ ಬಾಧಕವಾವುದು? (10) V. ಸುಟ್ಟ ಗಾಯಗಳ ಮುಖ್ಯ ಚಿಕಿತ್ಸೆಯನ್ನು ಸಂಕ್ಷೇಪವಾಗಿ ತಿಳಿಸು (10)

(Sd.) ಕೆ. ಕೃಷ್ಣಯ್ಯಂಗಾರ್, ಹೆಡ್ಮಾಸ್ಟರ್.

3 ನೇ ತರಗತಿ ಹೈಜೀನ್ (ಆರೋಗ್ಯಶಾಸ್ತ್ರ).

12-1-1926. 4 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಅಪರಿಶುದ್ಧವಾದ ಭೂಮಿಯಿಂದುಂಟಾಗುವ ಬಾಧಕಗಳಾವುವು? (10) II. ನೀರಿನಲ್ಲಿರುವ ಸೇಂದ್ರಿಯ ಕಲ್ಮಷಗಳನ್ನು ತಿಳಿಯುವಬಗೆ ಹೇಗೆ? (10) III. ಸಣ್ಣಗ್ರಾಮಗಳಿಗೆ ನೀರನ್ನು ಒದಗಿಸುವ ಕ್ರಮವು ಹೇಗೆ? (10) IV. ಅಕ್ಕಿ, ರಾಗಿ, ಜೋಳ, ಗೋಧಿ, ಹಾರಕ, ಉದ್ದು, ಹುರಳೀ, ಹೆಸರು, ಕಡಲೆ, ಅವರೆ ಇವುಗಳಲ್ಲಿರುವ ಸಾರಭಾಗಗಳನ್ನು ತಿಳಿಸಿ (10) V. ನಾವು ತೆಗೆದುಕೊಳ್ಳುವ ಆಹಾರವು ಯಾವ ಪರಿಮಾಣದಲ್ಲಿರಬೇಕು? (10)

(Sd.) ಕೆ. ಕೃಷ್ಣಯ್ಯಂಗಾರ್, ಹೆಡ್ಮಾಸ್ಟರ್.

3 ನೇ ತರಗತಿ ಶಾರೀರಧರ್ಮಶಾಸ್ತ್ರ.

12-1-1926. 4 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಶರೀರದ ರಕ್ತಪರಿಚಲನವನ್ನು ವರ್ಣಿಸು (10) II. ನಾಡಿಚಲನೆಯು ಹೇಗುಂಟಾಗುತ್ತದೆ? ಅದನ್ನು ವಿವರಿಸು (10) III. ಅನ್ನಜೀರ್ಣ ಸಂಯೋಗವಾಗುವುದೇನು? (10) IV. ಬೇರೆ ಬೇರೆ ಆಹಾರಪದಾರ್ಥಗಳಲ್ಲಿರುವ ಸಾರಭಾಗಗಳಾವುವು? ಮತ್ತು ನಮ್ಮ ಶರೀರದಲ್ಲಿ ಅವುಗಳ ಪರಿಣಾಮಗಳು ಹೇಗೆ? (10) V. ಹೃದಯಸ್ಪಂದನದ ಶಬ್ದಗಳು ಹೇಗುಂಟಾಗುತ್ತವೆ? (10)

(Sd.) ಕೆ. ಕೃಷ್ಣಯ್ಯಂಗಾರ್, ಹೆಡ್ಮಾಸ್ಟರ್.

ಅನಾಟಮಿ ಒಂದನೇ ತರಗತಿ.

11-1-1926. 4 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಮೆಟ್ರೈಎಲುಬಿನ ಕೆಳಗೆ ಇರುವ ಶುದ್ಧರಕ್ತನಾಳವನ್ನು ವರ್ಣಿಸು (10) II. ನಮ್ಮ ಶರೀರದಲ್ಲಿರುವ ಸ್ನಾಯುಗಳಿಗೆ ಹೇಗೆ ಹೆಸರುಗಳು ಕರೆಯಲ್ಪಟ್ಟಿವೆ? ಅವನ್ನು ಉದಹರಿಸು (10) III. ಫೊರಾಮಿನ್ ಮ್ಯಾಗ್ನಂ, ಸ್ಯಾಜಿಟಲ್ ಸಂಚರ್, ಅಸ್ ಹಯಾಡಿಸ್, ಗ್ಲೀನಾಯಿಡ್ ಕ್ಯಾವಿಟಿ, ಕೋಲಿಯಸ್ ಅಕಿಲ್ಸ್ ಇವುಗಳನ್ನು ವರ್ಣಿಸು (10) IV. ಸಂಧಿಗಳ ನಿರ್ಮಾಣವು ಹೇಗೆ? (10) V. ವಕ್ಷಗತ ದುಗ್ಧರಸ ನಾಳಿಯನ್ನು ವರ್ಣಿಸು (10)

(Sd.) ಕೆ. ಕೃಷ್ಣಯ್ಯಂಗಾರ್, ಹೆಡ್ಮಾಸ್ಟರ್.

ನಾಲ್ಕನೇ ತರಗತಿ ರಸರತ್ನಸಮುಚ್ಚಯ.

12-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಮೌಕ್ತಿಕದ ಗುಣ ಮತ್ತು ದುರ್ಗುಣಗಳನ್ನೂ ಬರೆಯಿರಿ (10)
II. ಸಮಸ್ತ ರತ್ನಶುದ್ಧಿ ಮತ್ತು ಭಸ್ಮಕ್ರಮವನ್ನು ಬರೆಯಿರಿ (10)
III. ಸುವರ್ಣ ಭಸ್ಮಕ್ರಮವನ್ನೂ ಅದರ ಗುಣವನ್ನೂ ಬರೆಯಿರಿ (10)
IV. ಉತ್ತಮ ಕಾಂತಲಕ್ಷಣವನ್ನೂ ಅದರ ಗುಣವನ್ನೂ ಬರೆಯಿರಿ (10) V. ತೈಲಪಾಕನ ವಿಧಿಯನ್ನು ಬರೆಯಿರಿ (10)

(Sd.) ಎ. ಸುಬ್ಬರಾಯ ಪಂಡಿತ್,
ಸೀನಿಯರ್ ಪಂಡಿತ್.

ಒಂದನೇ ತರಗತಿ ಅಷ್ಟಾಂಗಹೃದಯ-ಸೂತ್ರಸ್ಥಾನ.

15-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ವಿಷವು ಯಾವ ಯಾವ ಸ್ಥಾನದಲ್ಲಿ ಯಾವ ಯಾವ ವ್ಯಾಧಿಗಳನ್ನುಂಟುಮಾಡುತ್ತದೆ? ಮತ್ತು ಅದಕ್ಕೆ ಚಿಕಿತ್ಸೆಯೇನು? (10) II. ಮಧುರರಸದ ಕಾರ್ಯವನ್ನೂ ಅಮ್ಲವರ್ಗವನ್ನೂ ಸಹ ಬರೆಯಿರಿ. (10) III. ಓಜಸ್ಸಿನ ಲಕ್ಷಣವನ್ನೂ ಅದರ ವೃದ್ಧಿ ಕ್ಷಯದಿಂದುಂಟಾಗುವ ಗುಣದೋಷಗಳನ್ನೂ ಸಹ ಬರೆಯಿರಿ. (10) IV. ವಾತಾದಿ ದೋಷಗಳು ವ್ಯಾಧಿಯಲ್ಲಿ ತೋರಿಸತಕ್ಕ ಲಕ್ಷಣಗಳನ್ನು ಬರೆಯಿರಿ (10) V. ಅಜೀರ್ಣ ವ್ಯಾಧಿಗಳಿಗೆ ಚಿಕಿತ್ಸೆಯನ್ನು ಬರೆಯಿರಿ (10)

(Sd.) ಎ. ಸುಬ್ಬರಾಯ ಪಂಡಿತ್,
ಸೀನಿಯರ್ ಪಂಡಿತ್.

3 ನೇ ತರಗತಿ ಚರಕಸಂಹಿತಾ-ಚಿಕಿತ್ಸಾಸ್ಥಾನ.

11-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಸಂತತಾದಿ ಜ್ವರಗಳನ್ನು ಶಮನಮಾಡತಕ್ಕ ಐದು ಕಷಾಯಗಳನ್ನು ಬರೆಯಿರಿ. (10) II. ಸನ್ನಿಪಾತ ಜ್ವರಹರಗಳಾದ ಬೃಹತ್ಯಾದಿ ಮತ್ತು ಶಟ್ಯಾದಿ ವರ್ಗಗಳನ್ನು ಬರೆಯಿರಿ. (10) III. ರಕ್ತಪಿತ್ತಹರವಾದ ಭದ್ರಶ್ರೀಯಾದಿಗಣಗಳನ್ನು ಬರೆಯಿರಿ. (10) IV. ಗುಲ್ಮಹರವಾದ ಹಿಂಗ್ವಾದಿಚೂರ್ಣವನ್ನು ಬರೆಯಿರಿ. (10) V. ಪಿತ್ತಮೇಹನಾಶಕವಾದ ಹತ್ತು ಕಷಾಯಗಳನ್ನು ಬರೆಯಿರಿ. (10)

(Sd.) ಎ. ಸುಬ್ಬರಾಯ ಪಂಡಿತ್,
ಸೀನಿಯರ್ ಪಂಡಿತ್.

ಶಾರ್ಙ್ಗಧರಸಂಹಿತಾ 3 ನೇ ತರಗತಿ.

15-1-1925. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಲೇಖನ, ಗ್ರಾಹೀ, ಛೇದನ, ಭೇದನ, ಅಭಿಷ್ಯಂದಿಗಳೆಂದರೇನು? ಉದಾಹರಣೆಗಳನ್ನು ಬರೆಯಿರಿ. (10) II. ಆಲಸ್ಯ, ಜೃಂಭ, ಕ್ಷುತ, ಉದ್ಗಾರ, ಹಿಕ್ಕಾ ಇವುಗಳ ಲಕ್ಷಣಗಳೇನು? ಇವುಗಳು ಯಾವ ದೋಷಗಳಿಂದುಂಟಾಗುವುವು? (10) III. ಬಾಲಕರಿಗೆ ಔಷಧವನ್ನು ಯಾವ ಯಾವ ವಯಸ್ಸಿನಲ್ಲಿ ಎಷ್ಟೆಷ್ಟು ಉಪಯೋಗಿಸಬೇಕು? (10) IV. ಸ್ವರಸ, ಕಲ್ಕ, ಕ್ವಾಥ, ಹಿಮ, ಫಾಂಟಗಳ ಕಲ್ಪನಾಕ್ರಮಗಳನ್ನು ವಿಸ್ತಾರವಾಗಿ ಬರೆಯಿರಿ. (20)

(Sd.) ವಿ. ಬಿಳಿಗಿರಯ್ಯಂಗಾರ್, ಅಸಿಸ್ಟೆಂಟ್ ಪಂಡಿತ್.

ಒಂದನೇ ತರಗತಿ ಧನ್ವಂತರಿ ನಿಘಂಟು.

12-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಕುಂಕುಮಂ, ರೋಚನಾ, ಜಾತಿಪತ್ರೀ, ಕರ್ಪೂರ, ಕಸ್ತೂರಿ ಇವುಗಳ ಉತ್ಪತ್ತಿ ಹೇಗೆ? ಇವುಗಳನ್ನು ಔಷಧಾರ್ಥವಾಗಿ ಎಷ್ಟು ಕೊಡಬೇಕು? ಇವುಗಳ ಗುಣಗಳೇನು? (15) II. ಲಾಕ್ಷಾ, ಗಂಧಕಂ, ಗುಗ್ಗುಲು, ಕಂಪಿಲ್ಲ, ರಸಾಂಜನಂ ಇವುಗಳ ಉತ್ಪತ್ತಿಕ್ರಮ ಮತ್ತು ಗುಣಗಳನ್ನೂ ಬರೆಯಿರಿ. (15) III. ಭೃಂಗರಾಜ, ಶಿಗ್ರು, ಕದಲೀ, ಶೇಫಾಲಿಕಾ, ತಂಡುಲೀಯಕ ಇವುಗಳ ಗುಣಗಳನ್ನು ಮಾತ್ರ ಬರೆಯಿರಿ. (10) IV. ಮೇಧ್ಯ, ವೃಷ್ಯ, ಸ್ವೇದ್ಯ, ಬಲ್ಯ, ಸ್ತನ್ಯಜನನ, ಹಿಕ್ಕಾನಿಗ್ರಹ, ಛರ್ದಿಹರ, ಅನುಲೋಮನ, ಶೂಲಪ್ರಶಮನ, ಶೋಫಹರಗಳಾದ ಎರಡು ಎರಡು ಮೂಲಿಕೆಗಳನ್ನು ಬರೆಯಿರಿ (10)

(Sd.) ವಿ. ಬಿಳಿಗಿರಯ್ಯಂಗಾರ್, ಅಸಿಸ್ಟೆಂಟ್ ಪಂಡಿತ್.

ಎರಡನೇ ತರಗತಿ ಮಾಧವನಿದಾನಂ.

11-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಅಪತಂತ್ರಕ ಮತ್ತು ಅಪತಾನಕ; ತೂನೀ ಮತ್ತು ಪ್ರತೂನೀ; ಗೃಧ್ರಸೀ ಮತ್ತು ವಿಶ್ವಾಚೀ ಇವುಗಳ ಲಕ್ಷಣಗಳನ್ನೂ ಪರಸ್ಪರ ಭೇದವನ್ನೂ ವಿಸ್ತಾರವಾಗಿ ಬರೆಯಿರಿ. (10) II. ಕಫಶೂಲೆಯ ನಿದಾನ, ಲಕ್ಷಣಗಳನ್ನೂ, ಪರಿಣಾಮಶೂಲೆಯ ಸಾಮಾನ್ಯ ಲಕ್ಷಣವನ್ನೂ ಬರೆಯಿರಿ. (10) III. ಗುಲ್ಮವೆಂದರೇನು? ಇದರ ಪೂರ್ವರೂಪ, ರೂಪಗಳನ್ನೂ ಮತ್ತು ರಕ್ತಗುಲ್ಮದ ನಿದಾನ, ಲಕ್ಷಣಗಳನ್ನೂ ಬರೆಯಿರಿ. (10) IV. ಗಲಗಂಡ, ಗಂಡಮಾಲಾ, ಅಪಚೀ, ಅರ್ಬುದ ಇವುಗಳ ಲಕ್ಷಣಗಳನ್ನು ತಿಳಿಸಿರಿ. (10) V. ಸನ್ನಿಪಾತೋದರ ಮತ್ತು ಬದ್ಧಗುದೋದರ ಲಕ್ಷಣಗಳೇನು? ಮೂತ್ರಕೃಚ್ಛ್ರ, ಮೂತ್ರಾಘಾತ, ಅಶ್ಮರೀ, ಶರ್ಕರಾ ಇವುಗಳ ಪರಸ್ಪರ ಭೇದಗಳನ್ನು ವಿವರವಾಗಿ ತಿಳಿಸಿ. (10)

(Sd.) ವಿ. ಬಿಳಿಗಿರಯ್ಯಂಗಾರ್, ಅಸಿಸ್ಟೆಂಟ್ ಪಂಡಿತ್.

ನಾಲ್ಕನೇ ತರಗತಿ-ವಾಗ್ಭಟಶಲ್ಯಸ್ಥಾನ.

13-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ವಮನದ ಉಪಯೋಗದಲ್ಲಿ ಏನು ಚಿಕಿತ್ಸೆಮಾಡಬೇಕು? ನಾಡಿಗಳು ಅಂದರೆ ಪ್ರತಿಬಂಧಕ್ಕೆ ಚಿಕಿತ್ಸೆ ಹೇಗೆ? (15) II. [illegible] ಅನುವಾಸನವಸ್ತಿಯನ್ನೂ ರಾಸ್ನಾದಿ ನಿರೂಹವಸ್ತಿಯನ್ನೂ ವಿಸ್ತಾರವಾಗಿ ಬರೆಯಿರಿ. (15) III. ವಸ್ತಿಪ್ರಯೋಗವಾದಾಗ [illegible] ದರೆ ಚಿಕಿತ್ಸೆ ಹೇಗೆ? (10) IV. ಪಿತ್ತಪ್ರಕೋಪವಾದವರಿಗೆ [illegible] ವಸ್ತ್ರಾದಿಗಳಿಂದ ಸಿದ್ಧವಾದ ಬಸ್ತಿಯನ್ನು ಪ್ರಯೋಗಿಸಿದಾಗ ಉಂಟಾದ ವ್ಯಾಪತ್ತಿಗೆ ಚಿಕಿತ್ಸೆ ಹೇಗೆ? (10)

(Sd.) ವಿ. ಬಿಳಿಗಿರಯ್ಯಂಗಾರ್, ಅಸಿಸ್ಟೆಂಟ್ ಪಂಡಿತ್.

ಎರಡನೇ ತರಗತಿ ಸುಶ್ರುತಶಾರೀರ ಮತ್ತು ನಾಡೀವಿಜ್ಞಾನ.

13-1-1926. 3 ರಿಂದ 5 ಗಂಟೆ. ಮ್ಯಾಗ್ಜಿಮಂ 50.

I. ಪಿತ್ತಪ್ರಕೃತಿಯ ಲಕ್ಷಣವನ್ನೂ ಸಾತ್ವಿಕಕಾಯಲಕ್ಷಣಗಳನ್ನೂ ವಿಸ್ತಾರವಾಗಿ ಬರೆಯಿರಿ. (15) II. (1) ಗರ್ಭ ಎಂದರೇನು? ಅದರ ಬೆಳವಣಿಗೆ ಕ್ರಮ ಹೇಗೆ? (2) ಶರೀರದ ಸಂಧಿಗಳೆಷ್ಟುವಿಧವಾಗಿರುತ್ತವೆ? ಅವುಗಳೆಲ್ಲಿರುತ್ತವೆ? (15) III. ಪ್ರತಿ ತಿಂಗಳಿನಲ್ಲೂ ಗರ್ಭವು ಅಭಿವೃದ್ಧಿಯಾಗುವ ಕ್ರಮವು ಹೇಗೆ? (10) IV. ನಾಡಿಯನ್ನು ಪರೀಕ್ಷಿಸತಕ್ಕ ಕ್ರಮವನ್ನೂ ನಿಷಿದ್ಧಕಾಲಗಳನ್ನೂ, ಆರೋಗ್ಯ ನಾಡೀಲಕ್ಷಣಗಳನ್ನೂ, ಅಸಾಧ್ಯ ಸನ್ನಿಪಾತದ ನಾಡೀಲಕ್ಷಣಗಳನ್ನೂ ವರ್ಣಿಸಿ. (10)

(Sd.) ವಿ. ಬಿಳಿಗಿರಯ್ಯಂಗಾರ್, ಅಸಿಸ್ಟೆಂಟ್ ಪಂಡಿತ್.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ್ತರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

THE BOY SCOUT'S OF MYSORE.

A CONTRADICTION.

Rumour is current in some places that one of the Mysore Scouts who was in the Mysore Scout Camp at the Madras Jamboree during the last Xmas was drowned at sea and that, in spite of the best efforts of some other Scouts, he could not be brought back to life. As this is quite untrue, I give below a correct version of the accident and request you to kindly give publicity to this contradiction in your valuable paper so that the parents of Scouts and many others who are sympathisers and supporters of the Movement may know the truth about it.

The boy, Kempaiya, was a boarder in the local Adikarnataka Home and was a member of the Star Scout Troop, Basavangudi. He went to attend the Theosophical Jubilee Convention at Adyar. In spite of instructions to the contrary, he went to the sea at an odd hour at 3 P.M. in the company of another and while bathing, lost his depth and was taken away by the serf. His companion was saved by a lady (who perfers to remain anonymous) who saw him struggling in the water but unfortunately Kempaiya was beyond all human aid. This accident happened on the 26th December, three days before the Scout Jamboree began and to say that he went to the sea from the Scout Camp is not true. If he did, he would have been in the company of his Scoutmaster and other Scouts.

Strict instructions had been issued for those in the Scout Camp about bathing etc. and in fact there was no necessity or occasion for them to go to the sea, about a mile off, to bathe while there were nearly 200 taps in the Camp itself. Each Scoutmaster was charged with responsibility for his Scouts and Scoutmasters and Scouts always went together or when separate, the boys were under proper instructions. The strict discipline of the Scout Camp leaves no occasion for accidents, unless if it be in flagrant violation of it.

The boy was a Scout of the Boy Scouts of Mysore and the Association is sincerely sorry for the sad incident. The body was recovered after 3 days, and Mr. Shankaranarayana Rao, M.A., B.L., Chief Scout Commissioner, was present along with a number of others at the cremation which was most solemn and impressive.

These few lines are, I hope, sufficient to disabuse the public mind of any misunderstanding that they may have about this unfortunate fatality.

19th January 1926 C. SUBBA RAU,
Organising scout commissioner
Tippu Sultan's Palace, Bangalore City.

ಬುಕ್ಕಾಂಬುಧಿಸ್ಕೂಲಿನದುಸ್ಥಿತಿ

ತರೀಕೆರೆ ತಾ|| ಬುಕ್ಕಾಂಬುಧಿಯ ಗೌರ್ನಮೆಂಟ್ ಪ್ರೈಮರಿಸ್ಕೂಲು ಹಿಂದಣ ಹೆಡ್ಮಾಸ್ಟರ ಕಾಲದಲ್ಲಿ ಬಾಲಕರಸಂಖ್ಯೆಯು ಹೆಚ್ಚಾಗಿದ್ದು ಬಹಳ ಉತ್ತಮಸ್ಥಿತಿಯಲ್ಲಿತ್ತು. ಆದರೆ ಈಗಿರುವ ಹೆಡ್ಮಾಸ್ಟರ ಅಶ್ರದ್ಧೆ ಅನ್ಯಕಾರ್ಯಾದಿಗಳಿಂದ ಹುಡುಗರ ಸಂಖ್ಯೆಯು ತೀರ ಕಡಿಮೆಯಾಗಿ ಬಹಳ ಹೀನಸ್ಥಿತಿಯಲ್ಲಿರುತ್ತದೆಂದು ಬರೆಯಲು ಬಹಳ ವ್ಯಸನವಾಗಿರುತ್ತದೆ. ಹೆ|| ಮಾ|| ವೆಂಕಣ್ಣಯ್ಯನವರು ಬೇರೆ ಕಡೆಗೆ ವರ್ಗವಾಗಿದ್ದರೂ ಏನುಕಾರಣದಿಂದಲೋ ಇನ್ನೂ ಇಲ್ಲೇ ಇರುತ್ತಾರೆ. ದಯಾಳುಗಳಾದ ಕಡೂರು ಡಿ|| ಇನ್ಸ್ಪೆಕ್ಟರ್ ಸಾಹೇಬರು ಈ ಗ್ರಾಮದ ಬಡವಿದ್ಯಾರ್ಥಿಗಳ ಮೇಲೆ ಕೃಪೆಯಿಟ್ಟು ಸಮರ್ಥರಾದ ಹೆಡ್ಮಾಸ್ಟರನ್ನು ಕಳುಹಿಸಿಕೊಟ್ಟು ಸ್ಕೂಲು ಅಭಿವೃದ್ಧಿಗೆ ಬರುವಂತೆ ಮಾಡಬೇಕಾಗಿ ಪ್ರಾರ್ಥಿಸುವ,

ಗ್ರಾಮದ ವಿದ್ಯಾಭಿಮಾನಿ.

ಶ್ರೀಭ್ರಮರಾಂಬಾವಿಲಾಸಸಂಸ್ಕೃತಪಾಠಶಾಲಾ.

ಶ್ರೀಭ್ರಮರಾಂಬಾ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಮಹಾಕ್ಷೇತ್ರವಾದ [illegible] ವಿದ್ಯಾರ್ಥಿಗಳು ಸಂಸ್ಕೃತ, ಕನ್ನಡ ವಿದ್ಯಾಭ್ಯಾಸವನ್ನು ಮಾಡಲು [illegible] ದಿಂದ ಒಂದು ಧರ್ಮಾರ್ಥ [illegible] ಶ್ರೀ [illegible]

ಗಳ ಮತ್ತು ಸೋಸಲೆ ಯಜಮಾನ್ ಮ|| ಗುರುಶಾಂತಪ್ಪನವರ ಪ್ರೋತ್ಸಾಹದಿಂದ ಕಳೆದ ತಾ|| 10-12-1925 ರಲ್ಲಿ ಸ್ಥಾಪಿಸಲ್ಪಟ್ಟು ಮೈಸೂರಿನ ವೇ|| ಸುತ್ತೂರು ಶಾಂತವೀರಶಾಸ್ತ್ರಿಗಳು ಸಂಸ್ಕೃತ ಅಧ್ಯಾಪಕರಾಗಿ ನಿಯಮಿಸಲ್ಪಟ್ಟಿರುವರು. ಈಗ ಈ ಪಾಠಶಾಲೆಯಲ್ಲಿ 20 ವಿದ್ಯಾರ್ಥಿಗಳಿರುತ್ತಾರೆ. ಜ್ಯೋತಿಷವನ್ನೂ ಕನ್ನಡವನ್ನೂ ಹೇಳಲು ಬೇರೆ ಅಧ್ಯಾಪಕರುಗಳು ಇಷ್ಟರಲ್ಲೇ ನಿಯಮಿಸಲ್ಪಡುವವರಾಗಿರುವರು. ಇಲ್ಲಿ ಓದತಕ್ಕವರ ಅಶನವಸನಗಳಿಗೆ ಅನುಕೂಲಮಾಡಿಕೊಡಲ್ಪಟ್ಟಮೇಲೆ ಪರಸ್ಥಳಗಳಿಂದ 100 ವಿದ್ಯಾರ್ಥಿಗಳು ಬರುವವರಾಗಿರುತ್ತಾರೆ. ವೀರಶೈವಮತಪ್ರಚಾರಕ್ಕೆ ಮುಖ್ಯಸಾಧನವಾದ ಈ ಧರ್ಮಾರ್ಥಸಂಸ್ಕೃತಪಾಠಶಾಲೆಯನ್ನು ಪ್ರತಿಯೊಬ್ಬ ಮತಾಭಿಮಾನಿಯೂ ನಿರ್ವಂಚನೆಯಿಂದ ಧನಸಹಾಯಮಾಡುವುದರ ಮೂಲಕ ಶಾಶ್ವತಗೊಳಿಸಬೇಕೆಂದು ಪ್ರಾರ್ಥಿಸುವ,

ಒಬ್ಬ ಬಡವಿದ್ಯಾರ್ಥಿ.

ತುರುವೇಕೆರೆಪೇಟೆಯ ಯಜಮಾನಿಕೆ

ಸದರಿ ತುರುವೇಕೆರೆಯ ಯಜಮಾನಿಕೆ ವಿಷಯದಲ್ಲಿ ಚರ್ಚೆಹುಟ್ಟಿ ಯಜಮಾನಿಕೆಹಕ್ಕುದಾರರು ಸದ್ಯಕ್ಕೆ ಯಾರೂ ಇಲ್ಲದ್ದರಿಂದ ಹೆಸರಿಗೆ ಮಾತ್ರ “ಯಜಮಾನ” ಎಂಬ ವಿಶೇಷಣವನ್ನು ಸೇರಿಸಿ ರುಜುಮಾಡುತ್ತಿದ್ದ ಕೆಲವು ಜನಗಳು ಆರೀತಿ ಮಾಡಕೂಡದೆಂದು ತುರುವೇಕೆರೆಯ ವೀರಶೈವಮಹಾಜನಗಳು ಕೆಲವುದಿನಗಳಹಿಂದೆ ಸಭೆಸೇರಿ ತೀರ್ಮಾನಮಾಡಿದರು. ಆ ಸಭೆಯಲ್ಲಿ ಹಾಗೆ “ಯಜಮಾನ” ಎಂಬ ವಿಶೇಷಣದೊಡನೆ ರುಜುಮಾಡುತ್ತಿದ್ದವರು ಸಹ ಆ ತೀರ್ಮಾನಕ್ಕೆ ರುಜುಮಾಡಿ ಇನ್ನುಮುಂದೆ ಆ ರೀತಿ ರುಜುಮಾಡುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ಈಚೆಗೆ ಸುಮಾರು 15 ದಿವಸಗಳಲಾಗಾಯ್ತು ನಕ್ಕದ ವೀರಯ್ಯನವರಮಗ ನಂಜಪ್ಪಶೆಟ್ಟಿ ಎಂಬುವವರು ಸದರಿ “ಯಜಮಾನ” ಎಂಬಪದದೊಡನೆ ರುಜುಮಾಡುತ್ತಿರುವುದು ಆಶ್ಚರ್ಯವಾಗಿರುತ್ತೆ. ಹಿಂದೆ ಇವರು ಆರೀತಿ ರುಜುಮಾಡುತ್ತಿದ್ದವರಲ್ಲ. ಅಲ್ಲದೆ ಹಾಗೆ ರುಜುಮಾಡುತ್ತಿದ್ದವರನ್ನು ಇನ್ನುಮುಂದೆ ಆ ರೀತಿ ಮಾಡಕೂಡದೆಂದು ತೀರ್ಮಾನಮಾಡಿದ ಸಭೆಯಲ್ಲಿ ದಕ್ಷತೆಯನ್ನು ವಹಿಸಿದ್ದವರಲ್ಲೊಬ್ಬರಾಗಿದ್ದಾಗ್ಯೂ ಈಚೆಗೆ ಇವರೇ ಆರೀತಿ ರುಜುಮಾಡಲು ಉಪಕ್ರಮಿಸಿರುತ್ತಾರೆ. ಆದರೆ ಈ ಪ್ರಯತ್ನವು ನ್ಯಾಯವಲ್ಲವಾದ್ದರಿಂದಲೂ ಇನ್ನೂ ಪ್ರಾರಂಭ (Early stage) ದಲ್ಲಿರುವುದರಿಂದಲೂ ಇನ್ನುಮುಂದೆ ಆರೀತಿ ಮಾಡದೆ ಎಚ್ಚತ್ತುಕೊಳ್ಳಲು ಅವಕಾಶವಿರುವುದರಿಂದಲೂ ಮುಂದೆ ರುಜುಮಾಡಲಾರರೆಂದು ನೆನೆಸುತ್ತೇನೆ. ಸ್ಥಳವಾಸಿ.

ಹಾಸನದ 17ನೇ ಪಶುಪ್ರದರ್ಶನ.

ಈ 17ನೇ ಪಶುಪ್ರದರ್ಶನವು ತಾ|| 3-1-1926ರಲ್ಲಿ ಬಹಳ ವಿಜೃಂಭಣೆಯಿಂದ ಡೆಪ್ಯುಟಿಕಮಿಷನರ್ ಮ|| ನಾನಾಸಾಹಿಬರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಲ್ಲಲ್ಲಿ ದನಗಳಿಗೆ ಸಾಂಕ್ರಾಮಿಕಜಾಡ್ಯವು ಪ್ರಾಪ್ತವಾಗಿದ್ದಿತೆಂಬ ಸುದ್ದಿಯು ಹುಟ್ಟಿದ್ದುದರಮೇಲೆ ಈಸಲ ಇಲ್ಲಿ ಪ್ರದರ್ಶನವನ್ನು ನಡೆಯಿಸತಕ್ಕ ವಿಚಾರವಾಗಿ ಬಹಳ ಜಿಜ್ಞಾಸ ನಡೆದು, ಇಲ್ಲಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಪಶುವೈದ್ಯಚಿಕಿತ್ಸೆ ಮೊದಲಾದ ಏರ್ಪಾಟುಗಳನ್ನು ಸರಿಯಾಗಿಟ್ಟು ಬಹಳ ಎಚ್ಚರಿಕೆಯಿಂದ ನಡೆಸಿದಲ್ಲಿ ಯಾವ ಅಪಾಯವೂ ಸಂಭವಿಸುವುದಿಲ್ಲವೆಂದು ನಿರ್ಧರಿಸಿದುದರಮೇಲೆ ಡೆ|| ಕಮಿಷನರು ಸರ್ಕಾರಕ್ಕೆ ಬರೆದು ಅಪ್ಪಣೆಯನ್ನು ಪಡೆದು ಪ್ರದರ್ಶನವನ್ನು ನಿಲ್ಲಿಸದೆ ನಡೆಯಿಸತಕ್ಕದೆಂದು ತೀರ್ಮಾನಿಸಿ ಬೇಕಾದೇರ್ಪಾಟನ್ನು ಮಾಡಿಸಿದರು. 32,000 ಕ್ಕೆ ಕಡಿಮೆಯಿಲ್ಲದೆ ದನಗಳು ಬಂದಿದ್ದುವು. ಡಿಸ್ಟ್ರಿಕ್ಟ್‌ಪೊಲೀಸು ಅಧಿಕಾರಿಗಳು ಪ್ರದರ್ಶನದ ಮೈದಾನದಲ್ಲಿ ದನಗಳಿಗೂ ಜನರಿಗೂ ಯಾವ ತೊಂದರೆಯೂ ಆಗದಂತೆ ತಕ್ಕೇರ್ಪಾಟನ್ನಿಟ್ಟಿದ್ದರು. ಗುಬ್ಬಿ ಶ್ರೀಚೆನ್ನಬಸವೇಶ್ವರಸ್ವಾಮಿಕೃಪಾಪೋಷಿತನಾಟಕ ಕಂಪೆನಿಯವರು ಮೊದಲಾದವರು ಬಂದಿದ್ದು ತಮ್ಮ ಪ್ರಸಿದ್ಧನಾಟಕಪ್ರದರ್ಶನದಿಂದ ಜನರನ್ನು ಆನಂದಗೊಳಿಸಿದರು ನಾನಾವ್ಯಾಪಾರದಅಂಗಡಿಗಳು ಇಡಲ್ಪಟ್ಟಿದ್ದುವು. ತಾ|| 5-1-26 ರಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳು ಕೊಡಲ್ಪಟ್ಟುವು. ಈ ಸಲದ ಪ್ರದರ್ಶನವು ಸಾಂಕ್ರಾಮಿಕಜಾಡ್ಯದ ನೆಪದಿಂದ ನಿಲ್ಲಿಸಲ್ಪಡದೆ ಬಹಳ ಮುತುವರ್ಜಿಯಿಂದ ಮ್ಯುನಿಸಿಪಲ್‌ಪ್ರೆಸಿಡೆಂಟರಾದ ಮ|| ಎಚ್. ಬೋರಣ್ಣನವರು ಅತ್ಯಂತ ತೃಪ್ತಿಕರವಾಗಿ ನಡೆಸಿದುದು ಸ್ತೋತ್ರಾರ್ಹವಾಗಿದೆ.

ಒಬ್ಬ ಪ್ರೇಕ್ಷಕ.

ಇದು ನಿಜವೆ ?

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಸಂಬಂಧವಾಗಿ ಕೆಲ ಆಕ್ಷೇಪತರವಾದ ಬಾತ್ಮಿಯು ಮೈಸೂರ್ ಸ್ಟಾರ್‌ಪತ್ರಿಕೆಯಲ್ಲಿ ಕಂಡುಬಂದಿತಂತಲೂ, ಆ ಬಾತ್ಮಿದಾರರ ಹೆಸರನ್ನು ಕೊಡಬೇಕೆಂದು ಸರ್ ಶೆಟ್ಟರು ಸ್ಟಾರ್ ಎಡಿಟರವರನ್ನು ಲಾಯರ್ ನೋಟೀಸಿನಮೂಲಕ ಕೇಳಿದ್ದರೆಂತಲೂ ಕೆಲವು ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಸ್ಟಾರ್ ಎಡಿಟರವರು ಕೆಲವು ದಿನಗಳಹಿಂದೆ ಬೆಂಗಳೂರಿಗೆ ಬಂದು ಮೂರುದಿನಗಳು ಸರ್ ಶೆಟ್ಟರ ಮನೆಬಾಗಲನ್ನು ಕಾದು ಅವರ ಕ್ಷಮೆಯನ್ನು ಬೇಡಿಕೊಳ್ಳಲು, ಶೆಟ್ಟರು ಸ್ಟಾರ್ ಎಡಿಟರವರಮೇಲೆ ಕೋರ್ಟಿನಮೂಲಕ ಕಾರ್ಯಭಾಗವನ್ನು ನಡಿಸದೆ ಮನ್ನಿಸಿಬಿಟ್ಟರೆಂದು ಬೆಂಗಳೂರಿನಲ್ಲಿ ಬಹುವಾಗಿ ಸುದ್ದಿಹುಟ್ಟಿದೆ. ಇದು ನಿಜವಾಗಿದ್ದರೆ ಸದರಿ ಎಡಿಟರವರು ಇದು ತಮಗೆ ಅಹಿತವಾದ ವರ್ತಮಾನವೆಂದು ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಪಡಿಸದೆ ಬಿಟ್ಟಿದ್ದಾರೆಯೋ? “ಶ್ವಮೇವಸರ್ವಂಮಮದೇವದೇವ” ಎಂದು ಸಂಕಲ್ಪಿಸಿಕೊಂಡು ಹಗಲಿರಳು ಕೈಮುಗಿದುಕೊಂಡು ಬಾಗಿಲುಕಾಯಿದುಕೊಂಡಿರುವ ಹೀನಜನರ ಸ್ವಕಪೋಲಕಲ್ಪಿತವೋ ? ಯಾವುದಕ್ಕೂ ಸ್ಟಾರ್‌ಪತ್ರಿಕಾಕರ್ತರು ನಿಜಾಂಶವನ್ನು ತಿಳಿಸಿ, ಜನರ ಅನುಮಾನವನ್ನು ಪರಿಹರಿಸಬೇಕಾಗಿ ಪ್ರಾರ್ಥನೆ.

ಬೆಂಗಳೂರು,
ತಾ|| 19-1-1926. } ಸತ್ಯಾಭಿಮಾನಿ.

[ಈ ಸಂಬಂಧವಾಗಿ ಸರ್ ಪುಟ್ಟಣ್ಣಶೆಟ್ಟರು ಲಾಯರಮೂಲಕ ಕೊಡಿಸಿರುವ ನೋಟೀಸುಗಳೂ, ಅವುಗಳಿಗೆ ನಾವು ಕೊಟ್ಟಿರುವ ಪ್ರತ್ಯುತ್ತರಗಳೂ ನಮ್ಮ ಅಗ್ರಲೇಖದಲ್ಲಿ ಮುದ್ರಿಸಲ್ಪಟ್ಟಿವೆ. ಅವುಗಳ ಅವಲೋಕನದಿಂದ ಗ್ರಾಹಕರಿಗೆ ನಿಜಾಂಶವು ವ್ಯಕ್ತವಾಗುವುದು.—ಸಂಪಾದಕ.]

ಕಳಸಕಾನಹಳ್ಳಿ ತಾಲೂಕ್ ಹಾರೋಹಳ್ಳಿ

ಈ ಗ್ರಾಮದಲ್ಲಿ ಸುಬ್ಬಮ್ಮನವರು ಶ್ರೀ ಭೀಮೇಶ್ವರಸ್ವಾಮಿದೇವಾಲಯದಲ್ಲಿ ಅಮ್ಮನವರ ಪ್ರತಿಷ್ಠೆ ಮಾಡಿ ಆ ಅತ್ತಿಗುಪ್ಪೆಗ್ರಾಮದ ಬಳಿಯಿದ್ದ ತಮ್ಮ ಖುಷ್ಕಿಜಮೀನನ್ನು ದೇವರ ಹೆಸರಿಗೆ ಬರದು ಪತ್ರರಿಜಿಸ್ಟರ್‌ಮಾಡಿಸಿ ಈ ಜಮೀನಿನಿಂದ ಬರತಕ್ಕ ವರಮಾನವನ್ನೆಲ್ಲಾ ಅರ್ಚಕರು ತೆಗೆದುಕೊಂಡು ವರುಷಂಪ್ರತಿನಡೆಯುವ ನಾಲ್ಕು ಉತ್ಸವಗಳನ್ನು ಮಾತ್ರ ನಡೆಸಬೇಕೆಂದು ಪತ್ರದಲ್ಲಿ ನಮೂದುಮಾಡಿರುತ್ತಾರೆ. ಧರ್ಮಾರ್ಥಕರ್ತೆಯರ ಉದ್ದೇಶದಂತೆ ಸರ್ಕಾರದವರು ಆ ಜಮೀನನ್ನು ಹರಾಜ್‌ಮೂಲಕ ಗುತ್ತಿಗೆಕೊಟ್ಟು ಆ ಹಣವನ್ನು ಖಜಾನೆಯಲ್ಲಿ ಡಿಪಾಜಿಟ್‌ಮಾಡಿಕೊಂಡಿರುತ್ತಾರೆ. ಉತ್ಸವಗಳು ಸಾರೋದ್ಧಾರವಾಗಿ ನಡೆಯಲು ತಕ್ಕ ಏರ್ಪಾಡುಮಾಡಿಕೊಡಬೇಕೆಂತ ಗ್ರಾಮಸ್ಥರು ಸರ್ಕಾರದವರನ್ನ ಪ್ರಾರ್ಥಿಸುತ್ತಾರೆ. ಸುಬ್ಬಮ್ಮನವರು ಶ್ರೀ ಚಾಮುಂಡೇಶ್ವರಿದೇವರ ದೇವಾಲಯಕ್ಕೆ ಸಹಾಯಮಾಡಲು ವಾಗ್ದಾನಮಾಡಿರುತ್ತಾರೆ. ನಾರಣಮ್ಮನವರು ಸುಮಾರು ಐದುಸಾವಿರ ರೂಪಾಯಿ ಖರ್ಚುಮಾಡಿ ಶ್ರೀ ವಿಶ್ವೇಶ್ವರಸ್ವಾಮಿದೇವಾಲಯವನ್ನು ಕಟ್ಟಿಸುತ್ತಾರೆ. ಮೂಲದೇವರು ಮೈಸೂರಲ್ಲಿ ತಯಾರಾಗುತ್ತಾ ಇದೆ. ಜವಳಿಅಂಗಡಿ ಬಸವಣ್ಣನವರು ಶ್ರೀ ಮುರುಡಬಸವೇಶ್ವರಸ್ವಾಮಿದೇವಾಲಯವನ್ನು ಕಟ್ಟಿಸುತ್ತಿದ್ದಾರೆ. ಈ ದೇವಾಲಯದ ಸಮೀಪದಲ್ಲಿ ಶಿಥಿಲವಾಗಿರುವ ಕಟ್ಟೆ ಮತ್ತು ಯಕ್ಕಲಕಟ್ಟೆ ಸಹಾ ಕಟ್ಟಿಸಲು ಪ್ರಯತ್ನಪಟ್ಟಿದ್ದಾರೆ. ಈ ಕಟ್ಟೆಗಳಿಂದ ದೇವಾಲಯಕ್ಕೂ ಗೋವುಗಳಿಗೂ ರಸ್ತೆಯಲ್ಲಿ ಪ್ರಯಾಣಮಾಡತಕ್ಕ ಜನಗಳಿಗೂ ಬಹಳ ಪ್ರಯೋಜನವಾಗುತ್ತದೆ. ಮೇಲ್ಕಂಡ ಸುಬ್ಬಮ್ಮನವರ, ನಾರಣಮ್ಮನವರ ಮತ್ತು ಬಸವಣ್ಣನವರ ಧರ್ಮಕಾರ್ಯಗಳ ಮೇಲ್ಪಂಕ್ತಿಯನ್ನು ಈ ಗ್ರಾಮದಲ್ಲಿರುವ ಧನಿಕರು ಅನುಸರಿಸುವದಾದರೆ ಇಲ್ಲಿ ಬಹಳ ಹೀನಸ್ಥಿತಿಯಲ್ಲಿರುವ ಹಿಂದೂಸನಾತನ ಧರ್ಮಕಾರ್ಯಗಳೆಲ್ಲ ಸರಿಯಾದ ಸ್ಥಿತಿಗೆ ಬರುವದರಲ್ಲಿ ಲೇಶವೂ ಸಂಶಯವಿಲ್ಲ. ಶ್ರೀಚಾಮುಂಡೇಶ್ವರಿದೇವರ ಜಾತ್ರೆಯು ಪದ್ಧತಿಯಂತೆ ಇದೇ ಕ್ರೋಧನನಾಮ ಸಂ|| ಫಾಲ್ಗುಣ ಶುದ್ಧತ್ರಯೋದಶಿ ಫೆಬ್ರವರಿ ತಾರೀಖು 25 ರಲಾಗಾಯ್ತು ಫಾಲ್ಗುಣ ಬಹುಳ ತದಿಗೆ ಮಾರ್ಚಿ ತಾರೀಖು 2 ರವರೆಗೆ ಆರುದಿವಸ ಜಾತ್ರೆಯೂ, ದನಗಳ ಪರಿಷೆಯೂ ನಡೆಯುತ್ತವೆ. ನೀರಿಗೂ ನೆರಳಿಗೂ ಅನುಕೂಲವಾಗಿದೆ. ಈ ಗ್ರಾಮದ ಸುತ್ತುಮುತ್ತಣ ಗ್ರಾಮದ ಮಹಾಜನಗಳು ದೂರಪ್ರದೇಶಗಳಿಂದ ಬರತಕ್ಕಜನಗಳಿಗೆ ಶಕ್ತ್ಯನುಸಾರ ತಿಂಡಿಯೇರ್ಪಾಡುಮಾಡುವದಾಗಿ ಒಪ್ಪಿಕೊಂಡಿರುತ್ತಾರೆ. ಜಾತ್ರೆಯಲ್ಲಿ ಸೇರತಕ್ಕಜನಗಳ ಮತ್ತು ದನಗಳ ನೀರಿನ ಸೌಕರ್ಯಕ್ಕೋಸ್ಕರ ಆಗಲೆ ಚಿಕ್ಕವೀರಪ್ಪನವರು ಪದ್ಧತಿಯಂತೆ ಭಾವಿಗಳನ್ನು ತೆಗಿಸಿ ನೀರಿನ ಸೌಲಭ್ಯವನ್ನುಂಟುಮಾಡಿರುತ್ತಾರೆ.

ಪ್ರತ್ಯಕ್ಷದರ್ಶಿ.

ಚಿತ್ರದುರ್ಗದ ತಾ|| ಹಿರೇಗುಂಟನೂರು

ಈ ಊರು 300 ಮನೆಯೂ 1500 ಜನ ಪ್ರಜಾಸಂಖ್ಯೆಯೂ ಉಳ್ಳ ವಿಲೇಜ್‌ಪಂಚಾಯಿತಿಗೆ ಸೇರಿದ ಗ್ರಾಮವಾಗಿರುತ್ತೆ. ಈ ಗ್ರಾಮಕ್ಕೆ ಸರ್ಕಾರಿ ಬಾಯ್ಸ್‌ಸ್ಕೂಲೂ 2 ಜನ ಮಾಸ್ಟರೂ ಗರಲ್‌ಸ್ಕೂಲೂ 3 ಜನ ಮಾಸ್ಟರೂ ಇರುತ್ತಾರೆ. ಬ್ರಾಂಚ್‌ಪೋಸ್ಟಾಫೀಸು, ಪೋಲೀಸ್‌ಸ್ಟೇಷನ್, ಹೋಬಳಿ ಹೆಡ್‌ಕ್ವಾರ್ಟರ್ ಸ್ಥಳವಾಗಿರುವುದರಿಂದ ತಿಳುವಳಿಕೆಯುಳ್ಳ ಜನಭರಿತ ಸ್ಥಳವಾಗಿ ಹೊರಗಿನವರಿಗೆ ಕಾಣುತ್ತದೆ. ಒಳಗಡೆ ಇರತಕ್ಕ ಲೋಪಗಳು ಯಾರಿಂದ ಸರಿಯಾಗಬೇಕೋ ತಿಳಿಯದಾಗಿದೆ. ಬಾಯ್ಸ್‌ಸ್ಕೂಲ್‌ನಲ್ಲಿ 2 ಜನ ಮಾಸ್ಟರ್ ಇದ್ದು 5 ಜನ ಬಾಲಕರು ಗರಲ್‌ಸ್ಕೂಲಿನಲ್ಲಿ ಒಬ್ಬ ಮಾಸ್ಟರ್ ಸಿಂಗಿಂಗ್‌ಮಾಸ್ಟರ್ ಈ 2 ಜನಕ್ಕೆ 5 ಬಾಲಿಕೆಯರು ಈ ರೀತಿ ಹಾಜರಾಗುತ್ತಾ ಇದ್ದಾರೆ. ಮಾಸ್ಟರುಗಳು ಲೆಖ್ಖ ಯಾವರೀತಿ ಕಳುಹಿಸುತ್ತಾರೋ ಮೇಲ್ಪಟ್ಟ ಆಫೀಸರು ಯಾವರೀತಿ ಮಾಹೆವಾರಿ ನೋಡುತ್ತಾರೊ ತಿಳಿಯದಾಗಿದೆ. ಈಗಲಾದರೂ ಈ ಇಲಾಖೆ ಮೇಲ್ಪಟ್ಟಾಫೀಸರು ಖುದ್ದು ಪರಾಂಬರಿಸಿ ಲೋಪಗಳನ್ನು ಸರಿಪಡಿಸಿ ಅನ್ಯಾಯವಾಗಿ ಕೊಡುತ್ತಿರುವ ತಲಬು ಸಾರ್ಥಕವಾಗಿ ವಿನಿಯೋಗವಾಗುವಂತೆಮಾಡಿಸಿ ಆ ಭಾಗದ ಪುಣ್ಯಕ್ಕೆ ಈಡಾಗುತ್ತಾರೆಂದು ನಂಬಿರುತ್ತೇನೆ. ಚಾಲ್ತಿಸಾಲಿನಲ್ಲಿ ಈ ಹೋಬಳಿಗೆ ಮಳೆಯು ಬಾರದೆ ಸರಾಸರಿ ನಾಲ್ಕಾಣೆ ಫಸಲ್ ಸಹ ಆಗುವುದು ಕಷ್ಟವಾಗಿದೆ. ಈವರ್ಷ ಮಳೆಯು ಬಾರದ್ದರಿಂದ ಭೀಮಸಮುದ್ರದ ಕೆರೆಗೆ ನೀರುಬಾರದೆ ಬಹಳಜನ ಹಾತೊರೆಯುತ್ತಿದ್ದರು. ಆದರೆ ಈ ಕೆರೆಗೆ ಮುಖ್ಯವಾಗಿ ಸ್ಥಾಪಿಸಿರುವ ಶ್ರೀ ಭೀಮೇಶ್ವರಲಿಂಗಕ್ಕೆ ಭೀಮಸಮುದ್ರದ ಪಟೇಲ್ ಶ್ರೀಮಂತ ಮಲ್ಲಪ್ಪನವರು ಮಹಾರುದ್ರಾಭಿಷೇಕವನ್ನು ವಿಧಿಪೂರ್ವಕವಾಗಿ ನಡಿಸಿ ತತ್‌ಶಾಂತಿಗಾಗಿ ಮಹಾಗಣಾರಾಧನೆ ನಡಿಸಿದ್ದರಿಂದ ಶ್ರೀ ಮಹಾಸ್ವಾಮಿಯದಯದಿಂದ ಕೆರೆಗೆ ಅಕಸ್ಮಾತ್ತಾಗಿ ನಾಲ್ಕು ಅಡಿನೀರುಬಂದು ಜನರು ತುಂಬಾಸಂತೋಷಭರಿತರಾದರು. ಒಳ್ಳೆಯ ಕೆಲಸವನ್ನು ಮಾಡಿದರೆ ದೇವರು ಅನುಕೂಲ ಕೊಟ್ಟೇಕೊಡುತ್ತಾನೆಂದು ತಿಳಿದಿದ್ದರೂ ವಿದ್ಯಾಭ್ಯಾಸದಲ್ಲಿ ಹಿಂದುಳಿದಿರುವುದಕ್ಕೆ ಇಲ್ಲಿಯ ಮುಖ್ಯಜನರ ಅಶ್ರದ್ಧೆ ಕಾರಣವಾಗಿರುತ್ತೆ. ಈ ಗ್ರಾಮಕ್ಕೆ ವಿಲೇಜ್‌ಪಂಚಾಯ್ತಿಗೆ ಚಾಲ್ತಿಸಾಲಿಗೆ ಎಲೆಕ್ಷನ್‌ಮೂಲಕ ಚುನಾವಣೆ ಆಗಿ ಹೋದತಿಂಗಳಲ್ಲಿ ಗೌರ್ಮೆಂಟ್ ಮಂಜೂರಾತಿ ಪಡೆದಿದ್ದ ಜನರಲ್ಲೊಬ್ಬರಾದ ಈ ಗ್ರಾಮದ ಶ್ರೀಮಂತ ಲೇಟ್ ಪಟೇಲ್ ಬಸಪ್ಪನವರ ಮಾವಂದಿರಾದ ದೊಡ್ಡಬಸಪ್ಪಗೌಡರು ಸಹ ತಾ|| 28-11-25 ರಲ್ಲಿ ಶಿವಾಧೀನರಾದದ್ದು ತುಂಬಾವ್ಯಸನಕರವಾಗಿರುತ್ತೆ.

ಸ್ಥಳಾಭಿಮಾನಿ.

ಕಾಗಲ್ವಾಡಿ ಗ್ರಾಮದ ಸುಯೋಗ

ಈ ಗ್ರಾಮವು ಚಾಮರಾಜನಗರದ ತಾಲ್ಲೋಕಿಗೆ ಸೇರಿ ಸುಮಾರು 2500 ಪ್ರಜಾಸಂಖ್ಯೆಯನ್ನೊಳಗೊಂಡು ಹತ್ತಾರು ಹಳ್ಳಿಗಳಿಗೆ ಮಧ್ಯರಾಷ್ಟ್ರವಾಗಿರುವುದರಿಂದ ಡಿಸ್ಟ್ರಿಕ್ಟ್‌ಬೋರ್ಡಿನವರು ನೂತನವಾಗಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಿರುವುದು ಸುವರ್ಣಾವತಿ ನದಿಯ ಪೂರ್ವಕ್ಕೆ ಇರತಕ್ಕ ಹಳ್ಳಿಗಾಡಿನವರ ಪುಣ್ಯೋದಯವೇಸರಿ. ಮತ್ತು ಗ್ರಾಮಾಂತರಗಳಲ್ಲಿ ಶೋಚನೀಯ ಸ್ಥಿತಿಯಲ್ಲಿರತಕ್ಕ ಅಂಗ್ಲೇಯ ವಿದ್ಯೆಯನ್ನು ಪ್ರಚಾರಪಡಿಸಿ ವಿದ್ಯೆಯಲ್ಲಿ ಹಿಂದುಳಿದವರನ್ನು ಮುಂದಕ್ಕೆ ತರಲು ದಯಾಳು ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರು ಹೆಚ್ಚು ಶ್ರಮವನ್ನು ತೆಗೆದುಕೊಳ್ಳುತ್ತಿರುವುದಕ್ಕಾಗಿ ಗ್ರಾಮಾಂತರದವರೆಲ್ಲರೂ ತುಂಬಾ ಕೃತಜ್ಞರಾಗಿರುವರು. ಮಾನವನ ಸೌಖ್ಯಕ್ಕೂ ಮತ್ತು ಕೀರ್ತಿಗೂ ಮುಖ್ಯಸಾಧನಗಳಾದ ದೇಹಾರೋಗ್ಯ ಮತ್ತು ಅಮೂಲ್ಯವಾದ ತಿಳುವಳಿಕೆ ಇವುಗಳ ಆರ್ಜನೆಗಾಗಿ ಗ್ರಾಮದವರಿಗೆ ಕರುಣೆಯಿಂದ ಸರ್ಕಾರದವರು ಕಲ್ಪಿಸಿಕೊಡುತ್ತಾ ಇರುವ ಸೌಕರ್ಯ ಸೌಲಭ್ಯಗಳನ್ನು ಸಾರ್ಥಕಪಡಿಸಿಕೊಳ್ಳಬೇಕಾದುದು ನಮ್ಮಗಳ ಮುಖ್ಯ ಕರ್ತವ್ಯವಾಗಿರುತ್ತದೆ. ಮೇಲೆ ಹೇಳಿರುವ ಇಂಗ್ಲಿಷ್ ಸ್ಕೂಲಿನ ವಿಷಯವಾಗಿ ಚಾಮರಾಜನಗರದ ತಾಲ್ಲೋಕು ರೇಂಜ್ ಇನ್ಸ್‌ಪೆಕ್ಟರವರು ನಮ್ಮ ಈ ಕಾಗಲ್ವಾಡಿ ಗ್ರಾಮಕ್ಕೆ ದಯೆಮಾಡಿಸಿ ಈ ಗ್ರಾಮದ ಜನರಿಗೆಲ್ಲಾ ವಿದ್ಯಾಭ್ಯಾಸದ ವಿಷಯವಾಗಿ ತಿಳುವಳಿಕೆ ಕೊಟ್ಟು ನೂತನವಾಗಿ ಏರ್ಪಡಿಸಬೇಕೆಂದಿರುವ ಇಂಗ್ಲಿಷ್ ಪಾಠಶಾಲೆಗೆ ವಿದ್ಯಾರ್ಥಿಗಳನ್ನು ಸರಿಯಾಗಿ ಒದಗಿಸಿಕೊಡುವದಲ್ಲದೆ ಪಾಠಶಾಲೆಯ ಅಭಿವೃದ್ಧಿಗಾಗಿ ತಮ್ಮತಮ್ಮ ಯೋಗ್ಯತಾನುಸಾರ ಸಹಾಯ ಮಾಡುತ್ತೇವೆಂದು ಘಂಟಾಘೋಷವಾಗಿ ಹೇಳುವಷ್ಟು ವಿದ್ಯಾಕುತೂಹಲತೆಯನ್ನು ನಮ್ಮಗಳ ಮನಸ್ಸಿನಲ್ಲಿ ನೆಲೆಗೊಳಿಸಿದುದಕ್ಕಾಗಿ ಈ ಗ್ರಾಮದವರ ಪರವಾಗಿ ಇನ್ಸ್‌ಪೆಕ್ಟರವರನ್ನು ವಂದಿಸುತ್ತೇನೆ. ಈ ಕಾಗಲ್ವಾಡಿಗ್ರಾಮದ ಸುತ್ತಮುತ್ತಲೂ ಇರುವ ಹತ್ತಾರು ಹಳ್ಳಿಗಳಿಗೆ ಪ್ರಯೋಜನವಾಗುವಂತೆ ಈ ರೀತಿ ಸ್ಥಾಪಿಸಬೇಕೆಂದಿರುವ ಇಂಗ್ಲಿಷ್ ಸ್ಕೂಲಿಗೆ ಗ್ರಾಮಾಂತರಗಳ ಧರ್ಮಾಭಿಮಾನಿಗಳೂ, ವಿದ್ಯಾಪ್ರೋತ್ಸಾಹಕರೂ ಆದ ಮುಖಂಡರುಗಳು ತಮ್ಮಗೌರವಕ್ಕೆ ಅನುಸಾರವಾದ ಉತ್ತೇಜನವನ್ನು ಕೊಟ್ಟು ನಮ್ಮ ಅಭಿವೃದ್ಧಿಗಾಗಿಯೇ ಹೆಚ್ಚು ಮುತುವರ್ಜಿ ವಹಿಸುತ್ತಿರುವ ದಯಾಳು ಸರ್ಕಾರದವರ ಉದ್ದೇಶವು ಭಂಗವಾಗದಂತೆ ಕೆಲಸಮಾಡಿ ಅತ್ಯಂತ ಅಮೂಲ್ಯವಾದ ತಿಳುವಳಿಕೆಗೆ ಹೇತುವಾದ ವಿದ್ಯಾಪ್ರಯೋಜನವನ್ನು ಪಡೆಯುತ್ತಾರೆಂದು ನಂಬಿರುತ್ತೇನೆ. ಮೇಲೆ ಹೇಳಿರತಕ್ಕ ಪಾಠಶಾಲೆಯ ಡಿಪಾಜಿಟ್ ಫಂಡಿಗಾಗಿ ವಾಗ್ದಾನ ಮಾಡಿರತಕ್ಕ ವಿದ್ಯಾಭಿಮಾನಿಗಳ ತಪ್ಸೀಲ್ :—

ಮ|| ಗಳಾದ ವೈದ್ಯಪ್ಪನವರ ಮಕ್ಕಳು ವೆಂಕ್ಟಾಚಲೈಯ್ಯನವರು 50 ರೂ, ಹೊನ್ನಪ್ಪನವರು 50 ರೂ, ಮಾದೇಗೌಡರ ನಂಜುಂಡಪ್ಪನವರು 50 ರೂ, ಶ್ಯಾ. ರಾಮಣ್ಣನವರು 25 ರೂ, ಸುಬ್ರಹ್ಮಣ್ಯನವರು 25 ರೂ, ಹೆಚ್. ವಿ. ಸುಬ್ಬಾಯರು 25 ರೂ, ಬಿ|| ಸುಬ್ರಹ್ಮಣ್ಯನವರೂ ಮತ್ತು ಮೂಕಾಚಾರ್ಯರು 25 ರೂ, ಮಠದ ಶಿವಪ್ಪದೇವರು 15 ರೂ, ಕೆ. ಮಾದಪ್ಪ 15 ರೂ, ಶಿವನೈಯ್ಯಸಿದ್ಧನವರು 12 ರೂ, ಕಾ|| ಮಲ್ಲಪ್ಪನವರು 10 ರೂ, ಕೆ. ಬಿ. ಪುಟ್ಟಣ್ಣನವರು 10 ರೂ, ಸಿದ್ಧಲಿಂಗದೇವರ ಶಿವಪ್ಪನವರು 10 ರೂ. ಪುಟ್ಟಬಸಪ್ಪದೇವರು 10 ರೂ, ಹೊಸಬೀದಿ ಚಂದ್ರಶೇಖರಪ್ಪನವರು 10 ರೂ, ಡಿ|| ರಾಜಗೌಡರು 10 ರೂ, ಡಿ|| ಮಲ್ಲಪ್ಪನವರು 10 ರೂ, ಡಿ|| ಚನ್ನಬಸಪ್ಪನವರು 10 ರೂ, ಕಾಮಗೆರೆ ವೆಂಕಪ್ಪನವರು 8 ರೂ, ಗಂ|| ಮಲ್ಲಪ್ಪನವರು 8 ರೂ, ಶ್ರೀಕಂಠೈಯ್ಯನವರು 5 ರೂ, ವೆಂಕ್ಟನಾರಣಪ್ಪನವರು 5 ರೂ, ಶಿವನೈಯ್ಯಬಸಪ್ಪನವರು 5 ರೂ, ಶಿವನೇಗೌಡ್ರ ಪುಟ್ಟಮಾದಪ್ಪನವರು 5 ರೂ, ಡಿ|| ಕೆಂಪಪ್ಪನವರು 5 ರೂ, ಹೊ|| ಬಸವಲಿಂಗಪ್ಪನವರು 5 ರೂ, ಹೆಬ್ಬೂರು ಚನ್ನಮಲ್ಲೇದೇವರು 5 ರೂ, ಶಿವಪ್ಪನವರು 5 ರೂ, ಹೊಸಬೀದಿ ಸಿದ್ಧಪ್ಪನವರು 5 ರೂ, ಹೆಬ್ಬೂರು|| ಚನ್ನಮಲ್ಲಪ್ಪನವರು 5 ರೂ, ಹೊಸಬೀದಿ ವೀರಭದ್ರದೇವರು 2 ರೂ.

ಗ್ರಾಮಾಭಿಮಾನಿ.

ಶ್ರೀ ಸೀತಾರಾಘವವೈದ್ಯಶಾಲೆಯ

ಶ್ರೀಮದಕ್ಷಯಸಂವತ್ಸರದ ಪಂಚಾಂಗಗಳು.

ಈ ಪಂಚಾಂಗದಲ್ಲಿ ಅನೇಕ ಹೆಚ್ಚು ವಿಷಯಗಳು ಸೇರಿಸಲ್ಪಟ್ಟಿವೆ. ಆರ್ಯಭಟ್ಟಸಿದ್ಧಾಂತವೂ ಸೇರಿದೆ. ಸಂಸ್ಕೃತಶ್ಲೋಕಗಳಿಗೆಲ್ಲಾ ಕನ್ನಡದಲ್ಲಿ ಟೀಕು ಬರೆಯಲ್ಪಟ್ಟಿದೆ. ವಿದ್ವಾಂಸರುಗಳಿಂದ ಸರ್ವೋತ್ತಮವಾದುದೆಂದು ಒಪ್ಪಲ್ಪಟ್ಟಿದೆ.

ಪಂಚಾಂಗ 1 ಕ್ಕೆ ಕ್ರಯ 2 ಆಣೆ ಮಾತ್ರ.

ಡಜನ್ 1 ಕ್ಕೆ 1 ರೂ. 4 ಆ. ಟಪಾಲ್ ಖರ್ಚು ಬೇರೆ.

ನೂರರಮೇಲೆ ಕೊಳ್ಳುವವರಿಗೆ ಧಾರಾಳವಾದ ಕಮಿಷನ್ ಅಡ್ವಾನ್ಸಿನೊಡನೆ ಬರೆಯಿರಿ.

ದೊರೆಯುವ ಸ್ಥಳ :—

(1) ಮ|| ರಾ|| ಪಾಳ್ಯದ ವೆಂಕಟಾಚಲಪಂಡಿತರು,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

(2) ಶ್ರೀ ಸೀತಾರಾಘವವೈದ್ಯಶಾಲಾ ಬ್ರಾಂಚ್,
[4-4] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್‌ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

೧೯೨೬ ನೆಯ ಇಸವಿ ಜನವರಿ ತಾ|| ೨೩ ರಿಂದ ೧೯೨೬ ನೆಯ ಇಸವಿ ಜನವರಿ ತಾ|| ೨೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಮಾಘಶುದ್ಧ ದಶಮಿಯಿಂದ ಮಾಘಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ಮಾಸ
23	[1]ಶನಿ	ದಶ	33-2	ಕೃತ್ತಿ	31-52	10
24	[2]ಭಾನು	ಏಕಾ	33-41	ರೋಹಿ	33-56	11
25	ಸೋಮ	ದ್ವಾದ	35-32	ಮೃಗ	37-42	12
26	[3]ಮಂಗಳ	ತ್ರಯೋ	38-49	ಆರ್ದ್ರಾ	41-35	13
27	ಬುಧ	ಚತು	42-50	ಪುನ	47-3	14
28	ಗುರು	ಪೌರ್ಣ	47-57	ಪುಷ್ಯ	53-17	15
29	ಶುಕ್ರ	ಪಾಡ್ಯ	53-20	ಆಶ್ಲೇ	59-53	16

(1) ಮಳೆನಕ್ಷತ್ರ-ಶ್ರವಣ ೧ ನೆಯ ಪಾದ. (೨) ಭೀಷ್ಮೈಕಾದಶಿ, ಮುಡುಕತೊರೆಮಲ್ಲಿಕಾರ್ಜುನಸ್ವಾಮಿರಥ. (೩) ಮಳೆನಕ್ಷತ್ರ-ಶ್ರವಣ ೨ ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಂ |
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರೋಲಂಸುಧೀಪುಂಗವ | ಸ್ತೋಮಾಪೇಕ್ಷಿತಶೀಲ ಪಾಕಲಿತ ಸಾದ್ಗುಣ್ಯಾಲವಾಲಂವಲಂ |
ಶೀಮಾತೀತಯುತಪ್ರತಾಪವಿಪುಲಂ ಸದ್ವೃತ್ತಮಾತಾಳುಲಂ | ಶ್ರೀಮಂಚೆತ್ತೀಯಂತವಾಪುರಿಗೆ ಗೌರೀಶಾನುಕಂಪೋಜ್ವಲಂ |

[ವಾರ್ಷಿಕಚಂದಾ ೧-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸ ೧೯೨೬ ನೆಯ ಇಸವಿ ಜನವರಿ ತಾರೀಖು ೩೦ ನೆಯ ಶನಿವಾರ. [ಸಂಚಿಕೆ ೫

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ

ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಶಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇದೇ ಪ್ರಸಂಗದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ :—ಶತಪುಷ್ಪ ತಾಲಿಮಕಂದ, ಜಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಪಾಂತರಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣಿ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಸ್ತ, ವಾಕೇರಿಭಾತಾ, ಗೋಖುರು, ಅಡವೀ ಬೆಂಡಿ ಬೀಕು, ಅವ್ಯತಸತ್ವ, ಇಸಬಗೋಲೆ, ಬನಾಸೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರ, ಕೇಶರಿ, ಯಾಲಕ್ಕಿ ರುಲ್ಲಸಕ್ಕರಿ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಹಸಿ ಉಕ್ಕಿನ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫|| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪|| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಖಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖುಮಸಿ ಗೇಲಾಭಾಯಿ ಹಿನ್ನ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೇಳಕರ ಪೋ. ಕಾಂಚರೋಡ, ೬ ತಮ್ಮಣಗೌಡಾ ಪಾಟೀಲ ಅತ್ತಿಗೇರಿ, ೭ ಧುನಾಗಾಜಯರಾಮ ಪೋ. ಸೊಲ್ಲಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—43] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

51

ಗೋಷಾಸ್ತ್ರೀಯರಿಗೂ ಕುಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು

(Registered Trade Mark)

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಲೆಯ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಣಪಟ್ಟ ಕಳುಹಿಸಲಾಗುವುದು.

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦. ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಸುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[60—17] ಪೋ. ಬಾ. ೩೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೫-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯಜ್ಞಸ್ತುತಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಅಷ್ಟತ್ತು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡೆಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,

೨೫ ಚಾಮುಂಡಿಪುರಂ, ಮೈಸೂರು.

ವರ್ತಕರೇ ಇತ್ತ ಲಕ್ಷ್ಯಕೊಡಿರಿ ! ಸ್ವಲ್ಪ ಪ್ರತಿಗಳಿವೆ !! ತ್ವರೆ ಮಾಡಿರಿ !!!

ಕ್ಷಯ ಸಂವತ್ಸರದ ಚೈತ್ರಾದಿಯಾಗಿ ಪ್ರತಿ ೨೪ ಪಕ್ಷ (೧೫ ದಿವಸ) ಗಳಲ್ಲಿ ಉಂಟಾಗುವ ಯಾತತ್ತು ಮಾಲಿನ ತೇಜಿ ಮಂದಿ ನಿರ್ಣಯವೆಂಬ

ತಿಳುಕೊಳ್ಳದೆ ವ್ಯವಹಾರ ಮಾಡಬೇಡಿರಿ. } ವರ್ತಕರ ಮರ್ಮಗನ್ನಡಿ { ಮಾಡಿ ಹಾಳೀಗಾಗಬೇಡಿರಿ.

ಕ್ಷಯ ಸಂ|| ದಲ್ಲಿ ಪ್ರತಿಪಕ್ಷಗಳೊಳು ಹತ್ತಿ, ಅರಳಿ, ಅಡಿಕೆ, ಗೋಧಿ, ಜೋಳ, ರಾಗಿ, ಸಜ್ಜೆ, ಹೆಸರು, ಅಲಸಂದಿ, ಜಂಡ್ಲ, ಎಳ್ಳು, ನೂಲು, ಅಗಸೆ, ಮೆಣಸು, ಮೆಣಸಿನಕಾಯಿ, ಕೊಂಬಾಕು, ರೇಷ್ಮೆ, ಬಟ್ಟೆ, ಬೆಲ್ಲ, ಬೆಳ್ಳಿ, ಭಂಗಾರ, ಎಣ್ಣೆ, ಯಾಲಕ್ಕಿ, ಕಬ್ಬಿಣ, ಕಾಫಿ, ಅಂಟು, ಕಂಬಳಿ, ಬ್ಯಾಳಿ, ಛತ್ರ, ಅಕಳು, ಎಮ್ಮೆ, ಗೋಂಜೋಳ, ಮುತ್ತು, ದಾಲ್‌ಚಿನ್ನಿ, ಬೆಲ್ಲ, ಉಪ್ಪು, ಹುಣಸೆಹಣ್ಣು. ಸಾಸಿವೆ, ಉದ್ದು ಮುಂತಾದ ಪ್ರತಿಯೊಂದು ಜೀನಸುಗಳು ಯಾವದಿವಸದಿಂದ ಯಾವದಿವಸದವರೆಗೆ ತೇಜಿಯಾಗುತ್ತದೆ ಮಂದಿಯಾಗುತ್ತದೆಂಬುವ ವಿಷಯವನ್ನು ಪುರಾತನ ಕಾಲದಿಂದಲೂ ಗ್ರಂಥಶೋಧನೆಯಿಂದಲೂ ಪಾರಂಪರ್ಯದಿಂದಲೂ ಅನೇಕ ಜನ ಪಂಡಿತರಿಂದೊಡಗೂಡಿ ಚನ್ನಾಗಿ ಬರೆದು ಪ್ರಾಚ್ಯ ವರ್ತಕರಿಂದ ತಯಾರಿಸುತ್ತಾ ಬಂದು ಇಷಾರಸ್ ಪಡೆಕೊಂಡಿರುತ್ತದೆ. ಕ್ರೋಧನ ಸಂ|| ದ ಪೋಲೀಸುಕೆಲ್ಲ ಮೊದಲಿಗಾಗಿ ತರಿಸಿಕೊಳ್ಳುವವರಿಗೆ ೧ ಕ್ಕೆ ರೂ. ೧-೮-೦ ವಿ. ಪಿ. ಬೇರೆ.

ಪತ್ತೆ—ಮ್ಯಾನೇಜರ್ ಗ್ರಂಥಶೋಧನಾಲಯ ಆಫೀಸ್,
ಮು. ಪೋ. ಅಥಣಿ, ಬೆಳಗಾಂ ಜಿಲ್ಲೆ

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಜನವರಿ ತಾ|| ೩೦ ನೆಯ ಶನಿವಾರ

MEDICAL COLLEGE DAY.

H. H. THE YUVARAJA'S ADDRESS.

Presiding over the Medical College Day at Bangalore His Highness the Yuvaraja of Mysore delivered an address which was interesting, thoughtful and appealing. His Highness has always evinced the keenest interest in the social welfare of the people and, as His Highness himself stated, in Medical relief and sanitations. Being conversant with the needs of the State and having gained direct knowledge of methods of medical relief and sanitation prevailing in the west, His Highness was in a position to offer very valuable suggestions. His Highness emphasised the need for broadening the basis of training in the Medical College. In spite of the best efforts of the Medical College in India for so many years there was not one qualified doctor for 15,000 persons on an average. The excessive mortality among children called for making special provision for training women in courses of child welfare, following on the middle school education. His Highness suggested as a partial solution to the insanitory housing conditions in the slums of industrial centres and rural parts the zealous propaganda of senior medical students during their vacations. His Highness also laid emphasis on the need for research work especially in the field of finding phisiological actions of indegenous drugs and in solving the problems of tropical medicine and hygiene. His Highness noted that specialisation was a very marked feature in the West and that it would help both in the treatment of complicated diseases as as well as in training students if specialists of a high order were trained. Another feature which His Highness thought could be introduced with much benefit was the establishment of private cliniques or nursing homes. His Highness was aware of the difficulty in absorbing all the trained men into Government service, and hoped that a larger number of them would settle down in district and taluk headquarters, and even in bigger villages where they could create a demand for their talent and services, and where they would "rouse the fatalistic ryot from the sleep of his apathetic contentment and teach him the elements of personal and domestic hygiene by example precept and propaganda." We hope that His Highness' appeal will not go in vain. His Highness wished many more of the philanthropists in the State would turn their charities in aid of the College, and help it to carry on the noble mission of training men for the noblest of all professions "a profession which demands from its members the godly qualities of mercy, sympathy, abnegation of self and devotion to duty." We must congratulate the authorities of the Medical College in securing His Highness to preside over the function, and we only hope that they will try their best to work up to the expectations of His Highness, that the medical students will find in the address an inspiration for service and that the generous public will respond to the call liberally in the interest of the sick and suffering humanity.

ಮೆಡಿಕಲ್‌ಕಾಲೇಜಿನ ವಾರ್ಷಿಕೋತ್ಸವದಲ್ಲಿ ಯುವರಾಜರುಮಾಡಿದ ಭಾಷಣ.

ಈ ತಾ|| 27 ರಲ್ಲಿ ಬೆಂಗಳೂರಲ್ಲಿ ನಡೆದ ಮೆಡಿಕಲ್‌ಕಾಲೇಜಿನ ವಾರ್ಷಿಕೋತ್ಸವದಲ್ಲಿ ಸಭಾಪತಿಗಳಾಗಿದ್ದ ಶ್ರೀಮದ್ಯುವರಾಜರವರು ಬಹು ಸ್ವಾರಸ್ಯವೂ, ಭಾವಗರ್ಭಿತವೂ, ಚಿತ್ತಾಕರ್ಷಕವೂ ಆದ ಭಾಷಣವನ್ನು ಮಾಡಿದರು. ವೈದ್ಯಸಹಾಯ ಮತ್ತು ಆರೋಗ್ಯಾನುಕೂಲಗಳ ವಿಚಾರವಾಗಿ ಹೇಳಿರುವುದರಿಂದಲೇ ಶ್ರೀಮದ್ಯುವರಾಜರವರು ಪ್ರಜೆಗಳ ಸಾಂಘಿಕಾಭಿವೃದ್ಧಿಯಲ್ಲಿ ಎಷ್ಟು ಆಸಕ್ತಿಯುಳ್ಳವರಾಗಿರುವರೆಂಬುದು ವ್ಯಕ್ತವಾಗುತ್ತದೆ. ಶ್ರೀಮದ್ಯುವರಾಜರವರು ಪಾಶ್ಚಾತ್ಯದೇಶದಲ್ಲಿ ಕಲ್ಪಿಸಲ್ಪಟ್ಟಿರುವ ವೈದ್ಯಸಹಾಯ ಮತ್ತು ಆರೋಗ್ಯಾನುಕೂಲಗಳನ್ನು ಸ್ವತಃ ತಿಳಿದಿರುವರಾದುದರಿಂದ ಈ ದೇಶದಲ್ಲಿಯ ಕುಂದಕಭಾಗವನ್ನು ಅರಿತುಕೊಂಡು ತನ್ನಿವಾರಣಾರ್ಥವಾಗಿ ಅಮೋಘವಾದ ಸಲಹೆಯನ್ನು ಕೊಡುವವರಾದರು. ಮೆಡಿಕಲ್‌ಕಾಲೇಜಿನಲ್ಲಿ ಬೋಧನಾಕ್ರಮವನ್ನು ಇನ್ನೂ ವಿಸ್ತರಿಸಬೇಕೆಂದು ಒತ್ತಿಹೇಳಿದರು. ಭರತಖಂಡದ ಮೆಡಿಕಲ್‌ಕಾಲೇಜುಗಳು ಅನೇಕವರ್ಷಗಳಿಂದಲೂ ಬಹುಸಾಹಸಪಟ್ಟಾಗ್ಯೂ ಸರಾಸರಿ 15,000 ಜನರಿಗೆ ತಕ್ಕ ಯೋಗ್ಯತೆಯುಳ್ಳ ಒಬ್ಬ ಡಾಕ್ಟರನು ದೊರಕುವುದು ದುರ್ಲಭವಾಗಿರುತ್ತದೆ. ಮಕ್ಕಳ ಮರಣವು ಹೆಚ್ಚಾಗುತ್ತಿರುವುದರಿಂದ ಮಿಡ್ಲ್‌ಸ್ಕೂಲ್‌ವರೆಗೆ ವ್ಯಾಸಂಗಮಾಡಿರುವ ಸ್ತ್ರೀಯರಿಗೆ ಮಕ್ಕಳ ಪೋಷಣಾಕ್ರಮವು ಬೋಧಿಸಲ್ಪಡಲು ತಕ್ಕೇರ್ಪಾಟು ಮಾಡಲ್ಪಡುವುದು ಅತ್ಯಾವಶ್ಯಕವೆಂದೂ, ಮೆಡಿಕಲ್‌ಕಾಲೇಜಿನ ಪ್ರೌಢತರಗತಿಯ ವಿದ್ಯಾರ್ಥಿಗಳು ರಜಾಕಾಲದಲ್ಲಿ ಕೈಗಾರಿಕೆಯ ಸ್ಥಳಗಳಿಗೂ ಗ್ರಾಮಾಂತರಗಳಿಗೂ ಹೋಗಿ ಅನಾರೋಗ್ಯಕರವಾದ ವಾಸಸ್ಥಳಗಳನ್ನು ಆರೋಗ್ಯಕರವಾಗಿಟ್ಟುಕೊಳ್ಳುವಂತೆ ಜನರಿಗೆ ಬೋಧಿಸಿದಲ್ಲಿ ಬಹಳಮಟ್ಟಿಗೆ ಪ್ರಯೋಜನವಾಗುವುದೆಂದೂ ಅಪ್ಪಣೆಕೊಡಿಸಿದರಲ್ಲದೆ, ಉಷ್ಣವಲಯದ ಔಷಧಿಗಳಿಗೂ ಆರೋಗ್ಯಕ್ಕೂ ಅನುಗುಣವಾದ ಗಿಡಮೂಲಿಕೆಗಳ ಪ್ರಯೋಜನವನ್ನು ಕಂಡುಹಿಡಿಯುವುದು ಬಹಳ ಆಗತ್ಯವೆಂದು ಒತ್ತಿಹೇಳಿದರು. ಪಾಶ್ಚಾತ್ಯದೇಶದಲ್ಲಿ ವಿಶೇಷವಾದ ನೈಪುಣ್ಯವನ್ನು ಪಡೆಯುವುದು ಬಹು ಪ್ರಾಮುಖ್ಯವಾಗಿರುತ್ತದೆ. ಮತ್ತು ಅದರಿಂದ ತೊಡಕಾದ ರೋಗಗಳನ್ನು ಗುಣಪಡಿಸಲೂ, ವಿದ್ಯಾರ್ಥಿಗಳಿಗೆ ಬೋಧಿಸಲೂ ಬಹಳ ಸಹಾಯಕವಾಗುವುದೆಂದೂ, ಉಪಚಾರಾಲಯಗಳನ್ನು ಸ್ಥಾಪಿಸುವುದರಿಂದ ಮಹೋಪಕಾರವಾಗುತ್ತದೆಂದೂ ವೈದ್ಯವಿದ್ಯೆಯನ್ನು ಕಲಿತವರೆಲ್ಲರೂ ಸರ್ಕಾರಿಯುದ್ಯೋಗಕ್ಕೆ ಸೇರಲು ಸಾಧ್ಯವಿಲ್ಲವಾದುದರಿಂದ, ಅವರಲ್ಲನೇಕರು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳ ಮುಖ್ಯಪಟ್ಟಣಗಳಿಗೂ ದೊಡ್ಡಗ್ರಾಮಗಳಿಗೂ ಹೋಗಿ ನೆಲೆಸಿದಲ್ಲಿ ತಮ್ಮ ವಿದ್ಯಾಬುದ್ಧಿಯನ್ನು ಪ್ರದರ್ಶಿಸುವುದಕ್ಕೂ, ತಮ್ಮ ಪ್ರಕೃತಸ್ಥಿತಿಯಲ್ಲೇ ತೃಪ್ತರಾದ ರೈತರುಗಳಿಗೆ ಆರೋಗ್ಯವಿಚಾರವನ್ನು ಬೋಧಿಸಿ ಅವರೆಚ್ಚೆತ್ತುಕೊಳ್ಳುವಂತೆ ಮಾಡುವುದಕ್ಕೂ ಅವಕಾಶವಾಗುವುದೆಂದೂ ಅಪ್ಪಣೆಕೊಡಿಸಿದರು. ಶ್ರೀಮದ್ಯುವರಾಜರವರ ಈ ಕೋರಿಕೆಯು ನಿರರ್ಥಕವಾಗಲಾರದೆಂದು ಭಾವಿಸುತ್ತೇವೆ. ಭೂತದಯೆ, ಸ್ವಾರ್ಥತ್ಯಾಗ, ದೇವರಸೇವೆ ಇತ್ಯಾದಿ ಗುಣವಿಶಿಷ್ಟವಾದ ಮತ್ತು ಇತರ ಕಸಬುಗಳಿಗಿನ್ನ ಉತ್ಕೃಷ್ಟವಾದ ವೈದ್ಯವಿದ್ಯಾಸಂಸ್ಥೆಗೆ ಅಂದರೆ ಕಾಲೇಜಿಗೆ ನಮ್ಮ ಸಂಸ್ಥಾನದ ಧರ್ಮಿಷ್ಠರು ಸಹಾಯಮಾಡಬೇಕಾಗಿ ಕೋರಿದರು. ಈ ವಾರ್ಷಿಕೋತ್ಸವದ ಸಭಾಪತಿತ್ವವನ್ನು ಶ್ರೀಮದ್ಯುವರಾಜರವರು ವಹಿಸುವ ಸುಯೋಗವುಂಟಾದುದಕ್ಕಾಗಿ ಮೆಡಿಕಲ್ ಕಾಲೇಜಿನ ಅಧಿಕಾರಿಗಳನ್ನು ನಾವು ಅಭಿನಂದಿಸಿ ಅವರು ಶ್ರೀಮದ್ಯುವರಾಜರವರ ನಿರೀಕ್ಷಣೆಯನ್ನು ಸಾರ್ಥಕಪಡಿಸುವರೆಂದೂ, ಧರ್ಮಾತ್ಮರುಗಳು ರೋಗಿಗಳಮೇಲೆ ಕರುಣೆಯಿಟ್ಟು ಈ ವಿದ್ಯಾಸಂಸ್ಥೆಗೆ ಧಾರಾಳವಾಗಿ ಸಹಾಯಮಾಡುವರೆಂದೂ ಪ್ರತೀಕ್ಷಿಸುತ್ತೇವೆ.

ವೈಸ್‌ರಾಯರು ಬದೋಡಾಕ್ಕೆ ಆಗಮಿಸಿದ್ದುದು.

ಭರತಖಂಡದ ವೈಸ್‌ರಾಯರುಗಳು ತಮ್ಮುದ್ಯೋಗಕಾಲಾವಧಿಯ ಕಡೆಯಲ್ಲಾಗಲಿ ಮಧ್ಯದಲ್ಲಾಗಲಿ ಭರತಖಂಡದ ದೇಶೀಯಸಂಸ್ಥಾನಗಳನ್ನು ಸಂದರ್ಶಿಸಿ ಅಲ್ಲಿಯ ಸ್ಥಿತಿಗತಿಗಳ ಪ್ರತ್ಯಕ್ಷಾನುಭವವನ್ನು ಮಾಡಿಕೊಂಡು ಮಹಾರಾಜರುಗಳಿಂದ ಸನ್ಮಾನಿತರಾಗಿ ತೆರಳುವುದು ಪದ್ಧತಿಯಾಗಿರುತ್ತದೆ. ಅದರಂತೆ ಈಗಿನ ವೈಸ್‌ರಾಯರಾದ ಲಾರ್ಡ್ ರೀಡಿಂಗ್‌ರವರು ಮೈಸೂರು, ಹೈದರಾಬಾದು ಮೊದಲಾದ ದೇಶೀಯಸಂಸ್ಥಾನಗಳಿಗೆ ದಯಮಾಡಿಸಿದ್ದ ವೇಳೆಯಲ್ಲಿ ಬದೋಡಾಸಂಸ್ಥಾನಕ್ಕೆ ಹೋಗಿರಲಿಲ್ಲವಾದುದರಿಂದ, ಆ ಸಂಸ್ಥಾನಾಧೀಶ್ವರರಾದ ಶ್ರೀಮಂತ ಗಾಯಕವಾರ ಮಹಾರಾಜರವರ ಆಹ್ವಾನದ ಮೇಲೆ ಪತ್ನೀಪರಿವಾರದೊಡನೆ ಕಳೆದವಾರ ಬದೋಡಾಕ್ಕೆ ಚಿತ್ತೈಸಿದ್ದರು. ಶ್ರೀಮನ್ ಮಹಾರಾಜರವರು ರಾಜಧಾನಿಯನ್ನು ಮನೋಹರವಾಗಿ ಶೃಂಗರಿಸಿ ವೈಸ್‌ರಾಯ್ ದಂಪತಿಗಳನ್ನು ಸಕಲ ರಾಜಮರ್ಯಾದೆಯಿಂದಿದಿರ್ಗೊಂಡು ಪ್ರಸಿದ್ಧ ಪೈಲ್ವಾನರ ಕುಸ್ತಿ, ಟಗರು ಮತ್ತು ಆನೆಗಳ ಕಾಳಗ ಮೊದಲಾದ ಆಟಪಾಟಗಳಿಂದಲೂ, ದಿವ್ಯವಾದ ಔತಣದಿಂದಲೂ, ಸಂಗೀತಶ್ರವಣದಿಂದಲೂ ಸತ್ಕರಿಸಿ ಸಂತುಷ್ಟಿಗೊಳಿಸಿದರು. ಈ ಸಮಾರಂಭದಲ್ಲಿ ರೆಸಿಡೆಂಟರು, ಮಹಾರಾಜಕುಮಾರಿಯವರಾದ ಕೂಚ್‌ಬಿಹಾರ್ ಮಹಾರಾಣಿಯವರು, ಸಾವಂತವಾಡಿ ಮಹಾರಾಜರು, ಶ್ರೀಯುತ ರಾಜಕುಮಾರ ದೇಶರಾಜ ಅರಸಿನವರು ಮೊದಲಾದವರು ಭಾಗಿಗಳಾಗಿದ್ದರು. ಔತಣಾನಂತರ ಅತಿಥಿಗಳಾದ ವೈಸ್‌ರಾಯದಂಪತಿಗಳ ಶ್ರೇಯಃಪ್ರಾರ್ಥನೆ ಮಾಡುವಾಗ್ಗೆ ''ಭರತಖಂಡಕ್ಕೆ ತಾವು ಮಾಡಿರುವ ಉಪಕಾರವು ಅಗಣಿತವಾಗಿರುವುದು. ಈ ದೇಶವು ತನ್ನ ಋಣವನ್ನು ತೀರಿಸಿಕೊಳ್ಳಲಾರದುದಾಗಿದೆ. ಸಂಸ್ಥಾನಕ್ಕೂ, ಸಾಮ್ರಾಜ್ಯಕ್ಕೂ ಇರುವ 150 ವರ್ಷಗಳ ಸಂಬಂಧಾತಿಶಯದಿಂದ ನಾನು ನನ್ನ ರಾಜ್ಯವನ್ನು ನವೀನಪದ್ಧತಿಯಿಂದ ಪರಿಪಾಲಿಸುತ್ತಿರುವೆನು. ಪ್ರಜೆಗಳ ಅಭ್ಯುದಯವೇ ನನ್ನ ಅಭ್ಯುದಯ. ನನ್ನ ಪ್ರಜೆಗಳಿಗೆ ಶಾಂತಿಯಿಂದ ಕಟ್ಟುನಿಟ್ಟಾದ ನಿಬಂಧನೆಗಳನ್ನೂ, ಆಡಳಿತವನ್ನೂ ಅನುಗ್ರಹಿಸುತ್ತಿರುವೆನು. ಸಮಸ್ತರಿಗೂ ವಿದ್ಯೆಯು ಲಭಿಸುವಂತೇರ್ಪಡಿಸಿರುವೆನು. ವಿದ್ಯಾಲಾಭದಿಂದುಂಟಾಗುವ ಮಾರ್ಪಾಟನ್ನು ಗುರುತಿಸಿ ನಾನು ಸಾಂಘಿಕಮಾರ್ಪಾಟನ್ನು ಮಾಡುತ್ತಿರುವೆನು. ಪರಿಶ್ರಮಗಳಿಗೆ ಬೇಕಾದ ಪ್ರೋತ್ಸಾಹವನ್ನು ಕೊಡುತ್ತಿದ್ದೇನೆ. ಸಾಮ್ರಾಜ್ಯದಲ್ಲಿ ನನ್ನದು ಕೂಡ ಅಭಿವೃದ್ಧಿಯನ್ನು ಹೊಂದಿದ ರಾಜ್ಯವೆಂದು ಹೇಳಿಕೊಳ್ಳುವುದರಲ್ಲಿ ಹೆಮ್ಮೆಪಡುತ್ತೇನೆ. ಬ್ರಿಟಿಷ್‌ಸಾಮ್ರಾಜ್ಯದಲ್ಲಿ ಉಂಟಾಗುತ್ತಿರುವ ಮಾರ್ಪಾಟುಗಳೊಳಗೆ ಸಂಸ್ಥಾನಾಧೀಶರುಗಳನ್ನೂ, ಸಂಸ್ಥಾನಗಳ ಸ್ಥಾನಗಳನ್ನೂ ಮರೆಯಲಾಗದು. ನನ್ನ ಸಂಸ್ಥಾನಕ್ಕೆ ಸೇರಿದ್ದ ಸಾಮಂತರಾಜರುಗಳು ಶತಮಾನದ ಹಿಂದೆ ನಿಮ್ಮಧೀನಗೊಳಿಸಲ್ಪಟ್ಟರು. ನನ್ನ ಪರಿಪಾಲನಕ್ರಮವನ್ನೂ ನನ್ನ ಭಕ್ತಿಯನ್ನೂ ತಿಳಿದವರಾದ ನೀವು ನೂರುವರ್ಷಗಳ ಹಿಂದೆ ಬ್ರಿಟಿಷ್‌ಪ್ರಭುತ್ವಕ್ಕೆ ಮೊದಲು ನನ್ನ ಸಂಸ್ಥಾನಕ್ಕಿದ್ದ ಗೌರವಸ್ವಾತಂತ್ರ್ಯಗಳನ್ನು ಕೊಡಿಸಿ ಸಾಮಂತಸಂಸ್ಥಾನಗಳನ್ನು ನನ್ನ ಸ್ವಾಧೀನಪಡಿಸಿಕೊಡಬೇಕು.'' ಎಂದು ಮೊದಲಾಗಿ ಪ್ರಾರ್ಥಿಸಿ ಬದೋಡಾಗಾಯಕವಾರ ಮಹಾರಾಜರು ಭಾಷಣ ಮಾಡಿದರು. ಇದಕ್ಕೆ ಪ್ರತ್ಯುತ್ತರವನ್ನು ಕೊಡುವಾಗ್ಗೆ ''ದಂಪತಿಗಳಾದ ನಮಗೆ ನೀವು ವಿಶೇಷ ಆದರಾತಿಶಯದಿಂದ ಮಾಡಿದ ಆತಿಥ್ಯಕ್ಕಾಗಿ ನಾನು ಪರಮಸಂತೋಷದಿಂದ ನಿಮ್ಮನ್ನು ವಂದಿಸುತ್ತೇನೆ. ನೀವು ನಮ್ಮ ಪ್ರಶಂಸೆಯನ್ನು ಮಾಡಿರುವುದಕ್ಕಾಗಿ ನಾನು ಕೃತಜ್ಞನಾಗಿರುವೆನು. ನಾನು ಇತರ ದೇಶೀಯಸಂಸ್ಥಾನಾಧೀಶರುಗಳನ್ನು ಸಂದರ್ಶಿಸಿದ ವೇಳೆಯಲ್ಲಿ ನೀವೂ ನಿಮ್ಮ ಸಂಸ್ಥಾನವೂ ಬಿಟ್ಟುಹೋದುದರಿಂದ ನನ್ನ ಆನಂದಕ್ಕೆ ಕೊರತೆಯುಂಟಾಗಿದ್ದಿತು. ಆದರೆ ನನ್ನ ಉದ್ಯೋಗದ ಪರಿಸಮಾಪ್ತಿವೇಳೆಯಲ್ಲಾದರೂ ನಿಮ್ಮ ರಾಜ್ಯವನ್ನು ಸಂದರ್ಶಿಸಿ ನಿಮ್ಮ ಕೂಡ ಸಂಭಾಷಿಸುವ ಭಾಗ್ಯವುಂಟಾದುದಕ್ಕಾಗಿ ಸಂತೋಷಿಸುತ್ತೇನೆ. ನಿಮ್ಮ ರಾಜ್ಯದ ಚಾರಿತ್ರಿಕಪ್ರಾಮುಖ್ಯತೆಯನ್ನು ಕುರಿತು ನಿಮಗೆ ಹೇಳಬೇಕಾದುದಿಲ್ಲವು. ಗೌರವಪ್ರದವಾಗಿ ಬ್ರಿಟಿಷ್ ಪ್ರಭುತ್ವದೊಡನೆ ಮೈತ್ರಿಯಿಂದಿರುತ್ತೀರಿ. ನಿಮ್ಮ ರಾಜ್ಯದಲ್ಲಿ ನವೀನಪದ್ಧತಿಯು ಅನುಸರಿಸಲ್ಪಟ್ಟಿರುವುದು ನನ್ನ ಪ್ರಶಂಸೆಗೂ ಪ್ರತ್ಯೇಕ ಆದರಣೆಗೂ ಪಾತ್ರವಾಗಿರುತ್ತದೆ. ನಿಮ್ಮ ಉತ್ಸವಸಮಯದಲ್ಲೇ ನಾನು ಬಂದಿರುವುದು ಮತ್ತಿಷ್ಟು ಸಂತೋಷದಾಯಕವಾಗಿದೆ. ನಿಮಗೆ ದೀರ್ಘಾಯುರಾರೋಗ್ಯವನ್ನೂ ನಿಮ್ಮ ಸಂಸ್ಥಾನದ ಕ್ಷೇಮಕ್ಕಾಗಿಯೂ, ಪ್ರಜೆಗಳ ಅಭಿವೃದ್ಧಿಗಾಗಿಯೂ ನಿಮಗೆ ಬಲಸ್ಥೈರ್ಯಗಳನ್ನೂ ದಯೆಪಾಲಿಸಲೆಂದು ಈಶ್ವರನನ್ನು ಪ್ರಾರ್ಥಿಸುತ್ತೇನೆ. ನಿಮ್ಮ ಪ್ರಜೆಗಳು ನಿಮ್ಮ ಪರಿಪಾಲನೆಯಿಂದಲೂ, ನೀವು ಕಲ್ಪಿಸುತ್ತಿರುವ ಸೌಕರ್ಯಗಳಿಂದಲೂ ಚಿರಕಾಲ ಸೌಖ್ಯವಾಗಿರಲೆಂದು ಕೋರುವೆನು. ಸಾಮ್ರಾಜ್ಯಪ್ರಭುತ್ವಕ್ಕೂ, ನಿಮ್ಮ ಪ್ರಭುತ್ವಕ್ಕೂ ಇರುವ ಪೂರ್ವಸಂಬಂಧವನ್ನು ನಾನು ಹೇಳಬೇಕಾದುದಿಲ್ಲವು. ಶತಮಾನದಿಂದಲೂ ಬ್ರಿಟಿಷ್ ಪ್ರಭುತ್ವದೊಡನೆ ಸಂಬಂಧವುಂಟಾಗಿ ಇದು ಬಹಳ ರಾಜಭಕ್ತಿಯಿಂದ ಕೂಡಿರುವುದೆಂದು ಹೇಳಿದರೆ ಸಾಕಾಗಿದೆ. ಸಿಪಾಯಿದಂಗೆಯಕಾಲದಲ್ಲಿ ನಿಮ್ಮ ಭಕ್ತಿಯನ್ನು ಪ್ರದರ್ಶಿಸಿದಿರಿ. ಗುಜರಾತಿನಲ್ಲಿ ಶಾಂತಿಭಂಗವಾಗದಂತೆ ಮಾಡಿದಿರಿ. ಸಾಮ್ರಾಜ್ಯದ ಕಷ್ಟವು ನಿಮ್ಮದೆಂದು ಭಾವಿಸಿ ಯೂರೋಪುಮಹಾಸಂಗ್ರಾಮಕ್ಕೆ ನಿಮ್ಮ ಭಟರನ್ನು ಕಳುಹಿಸಿಕೊಟ್ಟುದಲ್ಲದೆ ಬೊಂಬಾಯಿನಲ್ಲಿರುವ ನಿಮ್ಮ ಭವನವನ್ನು ಯುದ್ಧವೈದ್ಯಶಾಲೆಯುಪಯೋಗಕ್ಕಾಗಿ ಬಿಟ್ಟುಕೊಟ್ಟಿರಿ, ಮತ್ತು 6 ಲಕ್ಷ ರೂಪಾಯಿಗಳ ಚಂದಾ ಎತ್ತಿದಿರಿ. ನೀವು ನಿಮ್ಮ ರಾಜ್ಯಾಂಗದ ರಾಜಕೀಯ ಮತ್ತು ಸಾಂಘಿಕ ವಿಚಾರಗಳಲ್ಲಿ ಮಾಡಿದ ಸುಧಾರಣೆಯು ಪ್ರಶಂಸನೀಯವಾಗಿದೆ. ನಿಮ್ಮ ಕಾರ್ಯವೆಲ್ಲವೂ ಬಹು ದೀರ್ಘಾಲೋಚನೆಯಿಂದ ಮಾಡಲ್ಪಟ್ಟಿರುವುದಲ್ಲದೆ ಭಾವಿಸೌಖ್ಯವನ್ನು ಕುರಿತು ಆವಶ್ಯಕವಾದ ಸುಧಾರಣೆಗಳನ್ನು ಮಾಡಿರುತ್ತೀರಿ. ತಳಹದಿಯು ಗಟ್ಟಿಯಾಗಿದ್ದಹೊರತು ಅದರ ಮೇಲಣ ಕಟ್ಟಡವು ಭದ್ರವಾಗಿರುವುದಿಲ್ಲವೆಂಬುದನ್ನು ನೀವು ಚೆನ್ನಾಗಿ ಪರ್ಯಾಲೋಚಿಸಿರುವಿರಿ. ಶಾಂತಿಯಿಲ್ಲದೆ ಯಾವ ಸೌಕರ್ಯವನ್ನುಂಟುಮಾಡಲು ಅವಕಾಶವಿಲ್ಲವೆಂಬುದನ್ನು ನೀವು ಬಲ್ಲವರಾಗಿರುವುದರಿಂದಲೇ ಅದನ್ನು ಸಾಧಿಸಲು ಕಟ್ಟುನಿಟ್ಟಾಗಿ ಪಾಲಕವರ್ಗವನ್ನು ಕ್ರಮಗೊಳಿಸಿರುವಿರಿ. ಸಾಂಘಿಕ, ಆರ್ಥಿಕ ಸೌಖ್ಯವಿಲ್ಲದೆಯೂ, ವಿದ್ಯೆಯಿಲ್ಲದೆಯೂ ಪ್ರಜೆಗಳು ನಿಜವಾದ ಸೌಖ್ಯವನ್ನು ಹೊಂದಲಾರರೆಂಬುದನ್ನು ನೀವು ಗ್ರಹಿಸಿ ಉಚಿತವಾದ ನಿರ್ಬಂಧವಿದ್ಯೆಯನ್ನು ಅನುಷ್ಠಾನಕ್ಕೆ ತಂದಿರಿ. ಹೀಗೆ ಮಾಡಿರುವುದರಿಂದ ನಿಮಗೆ ಪ್ರಜೆಗಳಮೇಲಿರುವ ಅನುರಾಗವು ವ್ಯಕ್ತವಾಗುತ್ತದೆ. ಪ್ರಪಂಚದಲ್ಲಿ ತಾನು ಮಾಡಿದ ಕಾರ್ಯದ ಫಲವನ್ನು ಕೂಡಲೆ ಅನುಭವಿಸುತ್ತಾನೆಂಬುದು ಯಾವಾಗಲೂ ನಿಜವಾಗಲಾರದು. ಏಕೆಂದರೆ ಅನೇಕರು ಮಾಡಿದ ಕೆಲಸದ ಸೌಖ್ಯವೂ, ಅದರಿಂದುಂಟಾದ ಲಾಭವೂ ಕಾಲಾಂತರದಲ್ಲಿ ಅವರಿಗೆ ಲಭಿಸುವುದು. ಆದರೆ ನೀವು ಮಾಡಿದ ಕೆಲಸವು ನಿಮ್ಮ ಕಾಲದಲ್ಲೇ ಫಲಿಸಿ ಸೌಖ್ಯವನ್ನುಂಟುಮಾಡಿರುವುದು ನಿಮ್ಮ ಪುರಾಕೃತಸುಕೃತವೇ ಸರಿ. ನೀವು ಅರ್ಧಶತಮಾನದ ಪರಿಪಾಲನೆಯಲ್ಲಿ ನಿಮ್ಮ ಧರ್ಮವನ್ನು ಸಂಪೂರ್ಣವಾಗಿ ನಿರ್ವಹಿಸಿರುವಿರಿ. ಬ್ರಿಟಿಷ್ ಇಂಡ್ಯಾ ಆಡಳಿತದಲ್ಲಿ ಮಾಡಲ್ಪಡುವ ಬದಲಾವಣೆಗಳಲ್ಲಿ ಸಂಸ್ಥಾನಾಧೀಶ್ವರರನ್ನು ಮರೆಯಲಾಗದೆಂದು ಹೇಳಿರುವಿರಿ. ಬ್ರಿಟಿಷ್ ಇಂಡ್ಯಾದಲ್ಲಿ ಸಂಸ್ಕರಣಪಟ್ಟವು ಆಚರಣೆಗೆ ತರಲ್ಪಡುವಾಗ್ಗೆ ಸಂಸ್ಥಾನಗಳಲ್ಲಿಯ ಮಾರ್ಪಾಟಿನಕಡೆಗೆ ಹೆಚ್ಚುಗಮನಕೊಡಲ್ಪಡಲಿಲ್ಲವು. ಆದರೂ ಸಂಸ್ಥಾನಗಳಿಗೂ, ಕೇಂದ್ರಪ್ರಭುತ್ವದವರಿಗೂ ಇರುವ ರಾಜಕೀಯವಿಷಯವನ್ನು ಗೌರವಪ್ರದವಾಗಿ ಪರಿಗಣಿಸುತ್ತೇನೆಂದು ಸಾರ್ವಭೌಮರವರು ಅಪ್ಪಣೆಕೊಡಿಸಿರುವರು. ಸಂಸ್ಥಾನಾಧಿಪತಿಗಳು ಸಭೆಸೇರಿ ತಮ್ಮ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಚಾರವಾಗಿ ಸಾಮ್ರಾಜ್ಯ ವ್ಯವಹಾರದಲ್ಲಿ ತಕ್ಕ ಸಲಹೆಯನ್ನು ಕೊಡಲು ಅವಕಾಶವಿರುವುದು. ಇನ್ನುಮುಂದೆ ಭರತಖಂಡದಲ್ಲಿ ಏನಾದರೂ ರಾಜ್ಯಾಂಗಸುಧಾರಣೆಯಾಗುವುದಾದಲ್ಲಿ ತಮ್ಮ ಸಂಸ್ಥಾನಕ್ಕೆ ಬಾಧೆಯಾಗುವಂತೆ ಮಾಡಲ್ಪಡುವುದೆಂದು ಭಯಪಡಬೇಕಾದುದಿಲ್ಲ. ಸಂಸ್ಥಾನಗಳ ವಿಚಾರದಲ್ಲಿ ಬಹಳ ಎಚ್ಚರಿಕೆ ತೆಗೆದುಕೊಳ್ಳಲ್ಪಡುವುದೆಂಬ ನಂಬಿಕೆಯು ನನಗುಂಟು. ಭರತಖಂಡವು ಸ್ವರಾಜ್ಯಸಂಪಾದನೆಯ ಪ್ರಾರಂಭದಲ್ಲಿದೆ. ಸ್ವರಾಜ್ಯಪ್ರಾಪ್ತವಾದಮೇಲೆ ಸಂಸ್ಥಾನಗಳು ಹೇಗಿರುವುವೆಂಬುದನ್ನು ಹೇಳಲಾಗುವುದಿಲ್ಲ. ಆದರೂ ಸಂಸ್ಥಾನಗಳ ಹಕ್ಕನ್ನು ಮಾತ್ರ ಮರೆಯಲು ಅವಕಾಶವಿಲ್ಲವು. ನೀವು ನಿಮ್ಮ ರಾಜ್ಯಸಂಬಂಧವಾಗಿ ಹೇಳಿದ ವಿಷಯವನ್ನು ಕುರಿತು ಈಗಲೂ ಆಲೋಚನೆಯು ನಡೆಯುತ್ತಿರುವುದರಿಂದ ಏನನ್ನೂ ಹೇಳಲಾರೆನು. ಆದರೆ ಈ ವಿಷಯದಲ್ಲಿ ನಾನೂ, ನನ್ನ ಪ್ರಭುತ್ವದವರೂ ವಿಶೇಷ ಸಾನುಭೂತಿಯಿಂದ ಆಲೋಚಿಸಿರುತ್ತೇವೆಂದು ಮಾತ್ರ ಹೇಳಬಲ್ಲೆನು.'' ಎಂದು ವೈಸ್‌ರಾಯರು ಅಪ್ಪಣೆಕೊಡಿಸಿದರು. ಈ ಉಭಯಭಾಷಣಗಳಲ್ಲಿ ಪರಸ್ಪರಪ್ರಶಂಸೆ ಮಾಡಲ್ಪಟ್ಟಿರುವುದರ ಹೊರತು ಸಂಸ್ಥಾನಕ್ಕೆ ಚಿರಸ್ಮರಣೀಯವಾದ ಉಪಕಾರವೇನೂ ವೈಸ್‌ರಾಯರಿಂದ ಎಸಗಲ್ಪಡದಿರುವುದು ವಿಚಾರಾಸ್ಪದವಾಗಿದೆ. ಇವರ ಅಧಿಕಾರದ ಯೌವನಾವಸ್ಥೆಯಲ್ಲಿ ಸಂದರ್ಶಿಸಿದಾಗಲೇ ಯಾವ ದೇಶೀಯ ಸಂಸ್ಥಾನಗಳಿಗೂ ಉಪಕಾರವು ಮಾಡಲ್ಪಡದಿರುವಾಗ್ಗೆ ಅಧಿಕಾರಾಂತ್ಯಾವಸ್ಥೆಯಲ್ಲಿ ಅವರಿಂದ ಉಪಕಾರವನ್ನು ನಿರೀಕ್ಷಿಸುವುದು ಗೊಡ್ಡಾಕಳಿಂದ ಕ್ಷೀರವನ್ನು ನಿರೀಕ್ಷಿಸಿದಂತೆಯೇ ಸರಿ. ವೈಸ್‌ರಾಯರು ಬದೋಡಾದಲ್ಲಿ ಶಾಸ್ತ್ರವಿದ್ಯಾಲಯದ ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ಮಾಡುವಾಗ್ಗೆ ಮಾಡಿದ ಭಾಷಣವು ಉಪಯುಕ್ತವಾಗಿರುವುದರಿಂದ ಇಲ್ಲಿ ಕೊಡಲ್ಪಟ್ಟಿದೆ.

''ಶಾಸ್ತ್ರಪರಿಚಯದಿಂದುಂಟಾಗುವ ಪ್ರಯೋಜನವನ್ನು ತಿಳಿಸತಕ್ಕದಾದುದರಿಂದಲೂ, ಮಹಾರಾಜರವರು ವಿದ್ಯಾಭಿವೃದ್ಧಿಯನ್ನು ಮಾಡುವ ವಿಷಯದಲ್ಲಿ ಅವರಿಗಿರುವ ಉತ್ಸಾಹವು ಸಂತೋಷಪ್ರದವಾಗಿರುವುದರಿಂದಲೂ ನಾನು ಈ ಶಂಕುಸ್ಥಾಪನಕಾರ್ಯವನ್ನಂಗೀಕರಿಸಿದೆನು. ಈ 50 ವರ್ಷಾವಧಿಯಲ್ಲಿ ನವೀನಶಾಸ್ತ್ರಯುಗವು ಪ್ರಾರಂಭವಾಗಿರುವುದೆಂದು ತಿಳಿದುಕೊಳ್ಳುತ್ತಿರುವೆನು. ಪ್ರಕೃತಿಯು ಈಗೀಗ ತನ್ನ ರಹಸ್ಯವನ್ನು ಬಹಿರಂಗಪಡಿಸುತ್ತಿರುವುದು. ಪ್ರಪಂಚಜ್ಞಾನವು ದಿನೇದಿನೇ ವೃದ್ಧಿಯಾಗುತ್ತಿರುವುದು. ಆಶಾಪ್ರಪಂಚವು ತಾಂಡವವನ್ನಾಡುತ್ತಿರುವುದು. ನಮ್ಮವರಲ್ಲಿ ಎಷ್ಟೋ ಮಹಾನುಭಾವರು ಹೊಸ ಸಿದ್ಧಾಂತವನ್ನೂ, ನವೀನ ನಿರ್ಮಾಣವನ್ನೂ ಮಾಡುತ್ತಿರುವರು. ಯಾವದೇಶವು ಇಂತಹ ನಿರ್ಮಾಣಕಾರ್ಯಕ್ಕೆ ಅವಕಾಶವನ್ನು ಕೊಡುವುದಿಲ್ಲವೋ ಅದು ಪ್ರಪಂಚಕ್ಕೆ ಉಪಯೋಗವಾದ ಜೀವಿತವನ್ನು ನಡಿಸಲಾರದು. ಶಾಸ್ತ್ರವು ದೇಹಪರಿಶ್ರಮವಾದ ವ್ಯವಸಾಯಕ್ಕೆ ಕಾರಣವು. ಶಾಸ್ತ್ರವೇ ಗಮನಾಗಮನ ಸದುಪಾಯಕ್ಕೂ, ಆರೋಗ್ಯಕ್ಕೂ, ಶುಭ್ರತೆಗೂ ಮೂಲಾಧಾರವಾಗಿರುವುದು. ಇದೇ ಪರಿಶ್ರಮಕ್ಕೂ ಮೂಲವು. ಇದಿಲ್ಲದೆ ಅವುಗಳ ಅಭಿವೃದ್ಧಿಯಾಗದು. ಇನ್ನುಮುಂದೆ ಶಾಸ್ತ್ರಜ್ಞಾನವಿಲ್ಲದೆ ಪ್ರಪಂಚದಲ್ಲಿ ಜೀವನಮಾಡುವುದು ಬಹಳ ಕಷ್ಟವಾಗುವುದು. ನಾನು ಹೇಳಿದ ರೀತಿಯಲ್ಲಿ ಶಾಸ್ತ್ರಕ್ಕೆ ಈ ಕಟ್ಟಡವು ಎಷ್ಟು ಉಪಯೋಗವಾದುದೆಂಬುದನ್ನು ತಾವೆಲ್ಲರೂ ಬಲ್ಲಿರಿ. ಮಹಾರಾಜರು ಇಂತಹ ಕಾರ್ಯವನ್ನು ಮಾಡಿದುದಕ್ಕಾಗಿ ನನ್ನ ಸಂತೋಷವನ್ನು ತಿಳಿಸುತ್ತೇನೆ. ಪ್ರಜಾಸಾಮಾನ್ಯದ ಕಷ್ಟಕ್ಕೆ ಅಜ್ಞಾನವೇ ಕಾರಣವೆಂದು ತಾವು ತಿಳಿದಿರುವಿರಿ. ಜ್ಞಾನವೇ ಅದಕ್ಕೆ ಔಷಧವು. ನೈತಿಕ ಸಾಂಘಿಕಾಭಿವೃದ್ಧಿಗೆ ಅದೇ ಕಾರಣವು. ಸಾಮಾನ್ಯವಿದ್ಯೆಗೇ ಅಲ್ಲದೆ ಪ್ರೌಢವಿದ್ಯೆಗೂ ಸಹಾಯವನ್ನು ಮಾಡುತ್ತಿರುವರು. ವಿದ್ಯೆಯ ಸರ್ವಶಾಖೆಗಳನ್ನೂ ಪೋಷಿಸುತ್ತಿರುವರು. ಅವರ ಪುಸ್ತಕಭಂಡಾರದಲ್ಲೂ ವಸ್ತುಪ್ರದರ್ಶನಾಲಯದಲ್ಲೂ ಅನೇಕ ವಿಷಯಗಳನ್ನು ತಿಳಿದುಕೊಳ್ಳಲವಕಾಶವಿದೆ. ಅವರನ್ನು ಹೊಗಳತಕ್ಕುದಾಗಿಲ್ಲ. ಅವರ ಯಾವಚ್ಛಕ್ತಿಯನ್ನೂ ಪ್ರಜಾಕ್ಷೇಮಕ್ಕಾಗಿಯೇ ಉಪಯೋಗಿಸುತ್ತಿರುವರು.'' ಎಂದು ವೈಸ್‌ರಾಯರವರು ಹೇಳಿ ಶಂಕುಸ್ಥಾಪನೆಯನ್ನು ಮಾಡಿದರು.

ಸ್ವದೇಶದ ವೃತ್ತಾಂತಗಳು.

ಬೊಂಬಾಯಿನಲ್ಲಿದ್ದ ಶ್ರೀಮನ್ ಮಹಾರಾಜರವರು ಪರಿವಾರಸಮೇತ ಬದೋಡಾಸಂಸ್ಥಾನಕ್ಕೆ ಹೋಗಿದ್ದು ಈಗ ಗೋಕರ್ಣಕ್ಕೆ ಬಂದಿರುವುದಾಗಿಯೂ ಅಲ್ಲಿಂದ ಶಿವರಾತ್ರಿಯ ಸಮಯಕ್ಕೆ ಕಾಶಿಗೆ ಚಿತ್ತೈಸುವುದಾಗಿಯೂ ವರ್ತಮಾನವಿದೆ.

ರಾಜಧಾನಿಯ ಮ್ಯುನಿಸಿಪಲ್‌ಪ್ರೆಸಿಡೆಂಟರನ್ನು ಸರ್ಕಾರದವರೇ ನಿಯಮಿಸುವುದರಿಂದ ಚೀಫ್‌ಆಫೀಸರುದ್ಯೋಗಸ್ಥಾನವನ್ನು ತಪ್ಪಿಸಿಬಿಟ್ಟು ಒಬ್ಬ ಸಾಮಾನ್ಯರೆವಿನ್ಯೂ ಅಧಿಕಾರಿಯನ್ನು ನಿಯಮಿಸಿಕೊಳ್ಳಬೇಕೆಂದು ಕೌನ್ಸಿಲಿನವರು ಪರ್ಯಾಲೋಚಿಸುತ್ತಿರುವುದಾಗಿ ಕೇಳುತ್ತೇವೆ.

ನರಸಿಂಹರಾಜಪುರದ ಮುನಸೀಫರಾದ ಮಿ|| ಮುಹಮ್ಮದ್ ಮುಸ್ತಫಾ, ಬಿ.ಎ., ಎಲ್‌ಎಲ್.ಬಿ., ಇವರು 1 ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ, ಮ|| ಕೆ. ಬಸವರಾಜ ಅರಸ್, ಎಂ.ಎ., ಎಲ್‌ಎಲ್.ಬಿ., ಇವರು ನರಸಿಂಹರಾಜಪುರದ ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ತುಮಕೂರಿಗೆ ೩-೪ ಮೈಲಿ ದೂರದಲ್ಲಿರುವ ಸಿದ್ಧಗಂಗಾಕ್ಷೇತ್ರದಲ್ಲಿ ಶ್ರೀಸಿದ್ಧಲಿಂಗೇಶ್ವರಜಾತ್ರೆಯು ತಾ|| 10-12-26 ರಿಂದ ಆರಂಭವಾಗುವುದೆಂದು ಕಳೆದವಾರದ ಪತ್ರಿಕೆಯಲ್ಲಿ ಹಸ್ತದೋಷದಿಂದ ಪ್ರಕಟವಾಗಿರುತ್ತಾದಪ್ರಯುಕ್ತ ಬರುವ ಫೆಬ್ರವರಿ ತಾ|| 10 ರಿಂದ ಆರಂಭವಾಗುತ್ತದೆಂದು ತಿಳಿಯತಕ್ಕದು.

ಕಳೆದ ಸೋಮವಾರದಿಂದ ರಾಜಧಾನಿಯಲ್ಲೂ, ಇತರಕಡೆಯಲ್ಲೂ ಮೋಡಮುಸುಕಿಕೊಂಡು ಆಗಾಗ್ಗೆ ತುಂತುರುಮಳೆಯಾಗುತ್ತಿದ್ದು ನೆನ್ನೆಯಿಂದ ನಿಂತಿರುತ್ತದೆ. ಬೆಂಗಳೂರು ಮತ್ತು ಕೆಲಸ್ಥಲಗಳಲ್ಲಿ ಕೊಂಚ ಹೆಚ್ಚಾಗಿಯೇ ಬಂದಿತೆಂದು ತಿಳಿಯಬಂದಿದೆ. ಇದರಿಂದ ರಾಗಿಯನ್ನು ತುಳಿಸುವವರಿಗೆ ಬಹಳ ಅಡಚಣೆಯಾಗಿ ನಷ್ಟವೂ ಆಗಿರುವುದು.

ರಾಜಧಾನಿಯಲ್ಲಿರುವ ಬೊಮ್ಮಯ್ಯನ ಸತ್ರದಮೇಲ್ವಿಚಾರಣೆಯನ್ನು ಮಾಡುವುದಕ್ಕಾಗಿ ರಾಜಧಾನಿಯ ಕುಂಚಟಿಗರುಗಳಾದ ಸಾಹುಕಾರ್ ಮ|| ದೊಡ್ಡಮುದ್ದಪ್ಪನವರು ಮತ್ತು ಕಂಟ್ರಾಕ್ಟರ್ ಮ|| ಎಂ. ಸಿ. ಮಲ್ಲಯ್ಯನವರು 1924 ನೇ ಮೆ ತಾ|| 1 ರಿಂದ 5 ವರ್ಷಕಾಲದವರೆಗೆ ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುವರು.

ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ 52 ಬಾಲಪಾಠಶಾಲೆಗಳನ್ನು ಸರ್ಕಾರಿಯ ಸ್ಕೂಲುಗಳನ್ನಾಗಿ ಮಾರ್ಪಡಿಸಲು ಪ್ರಥಮತಃ 7,800 ರೂ. ಗಳು ಖರ್ಚಾಗುವುದೆಂದೂ ಅನಂತರ ಪ್ರತಿವರ್ಷದಲ್ಲೂ 7,500 ರೂ. ವ್ಯಯವಾಗುವುದೆಂದೂ ವಿದ್ಯಾಭ್ಯಾಸದ ಇ|| ಜನರಲ್‌ರವರು ಬರೆದಿದ್ದುದರಮೇಲೆ, ಡಿ|| ಬೋರ್ಡಿನವರ ಸಮ್ಮತಿಯಿಂದ ಮಾರ್ಪಡಿಸಬಹುದೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ಕಳೆದ ತಾ|| 21 ರಲ್ಲಿ ಬೆಂಗಳೂರು ಬಸವನಗುಡಿಯಲ್ಲಿ ತಾಯಿ ಇಲ್ಲದ 12 ವರ್ಷವಯಸ್ಸಿನ ಪಾರ್ವತಮ್ಮನೆಂಬ ಹುಡುಗಿಯು ತನ್ನ ತಮ್ಮನೊಡನೆ ಮನೆಯೊಳಗೆ ಪೋಷಕರು ಹೊರಗೆ ಹೋಗಿರುವವೇಳೆಯಲ್ಲಿ ಒಲೆಯಮುಂದೆ ಆಡುತ್ತಿರುವಾಗ್ಗೆ ಬಟ್ಟೆಗೆ ಬೆಂಕಿಯುಹೊತ್ತುಕೊಂಡು ಮೈಯಲ್ಲಾ ಸುಟ್ಟುಹೋಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಉಪಚರಿಸಲ್ಪಟ್ಟಾಗ್ಯೂ ಗುಣವನ್ನು ಹೊಂದದೆ ಸತ್ತುಹೋಯಿತು.

ಇನ್ಕಂಟ್ಯಾಕ್ಸ್ ಡೆಪ್ಯುಟಿಕಮಿಷನರಾಗಿದ್ದ ಮ|| ಬಿ. ಟಿ. ಕೇಶವಯ್ಯಂಗಾರರು ಬೆಂಗಳೂರುಸಿಟಿ ಮ್ಯುನಿಸಿಪಲ್ ಆಕ್ಟಿಂಗ್ ಕಮಿಷನರಾಗಿ ನಿಯಮಿಸಲ್ಪಟ್ಟಿರುವುದರಿಂದ ಕೋಲಾರದ ಗಣಿಗಳಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿದ್ದ ಸೀನಿಯರ್ ಅಸಿಸ್ಟೆಂಟ್‌ಕಮಿಷನರ್ ಮಿ|| ಎಸ್. ಅಬ್ದುಲ್ ವಾಜಿದ್, ಬಿ.ಎ., ಇವರು ಆಕ್ಟಿಂಗ್ ಇನ್ಕಂಟ್ಯಾಕ್ಸ್ ಡೆಪ್ಯುಟಿಕಮಿಷನರಾಗಿ ನಿಯಮಿಸಲ್ಪಟ್ಟಿರುವರು.

ಮದ್ರಾಸಿನ ಸಚಿತ್ರದವ್ಯಾಪಾರಿಗಳಾದ ಮೆಸರ್ಸ್. ಟಿ. ಸಿ. ನಾಗಲಿಂಗಪ್ಪ ಅಂಡ್‌ಕೋಯವರು ಪ್ರಕಟಿಸಿರುವ ಸಚಿತ್ರಕ್ಯಾಲಂಡರುಗಳನ್ನೂ, ಗುಬ್ಬೀ ಶ್ರೀಚೆನ್ನಬಸವೇಶ್ವರಸ್ವಾಮಿಯ ಕೃಪಾಪೋಷಿತನಾಟಕಮಂಡಲಿಯವರು ಪ್ರೊಪ್ರೈಟರ್ ವಿನೋದರತ್ನಾಕರ ಮ|| ವೀರಣ್ಣನವರ, ಗಂಗೋದ್ಭವದ ಮತ್ತುಮಂಡಳಿಯ ನಾಟಕಶಾಲೆಯ ಭಾವಚಿತ್ರಗಳಿಂದ ಮುದ್ರಿಸಿರುವ ಕ್ಯಾಲಂಡರನ್ನೂ ವಿಶ್ವಾಸಪೂರ್ವಕವಾಗಿ ಸ್ವೀಕರಿಸುವರುತ್ತೇವೆ.

ಸಿರ್ಯಾಪಟ್ಟಣದ ಡಿಪೋದಲ್ಲಿ ತಾ|| 15-2-26 ರಲ್ಲೂ, ಹುಣಸೂರು ಡಿಪೋದಲ್ಲಿ ತಾ|| 16-2-26 ರಲ್ಲೂ ಮಂಚೇಗೌಡನಹಳ್ಳಿಯ ಡಿಪೋದಲ್ಲಿ ತಾ|| 17 ಮತ್ತು 18-2-26 ರಲ್ಲೂ, ಹಂಪಾಪುರದ ಡಿಪೋದಲ್ಲಿ ತಾ|| 19-2-26 ರಲ್ಲೂ ಮೈಸೂರು ಉಡ್‌ಯಾರ್ಡಿನಲ್ಲಿ ತಾ|| 20-2-26 ರಲ್ಲೂ ನಂಜನಗೂಡು ಡಿಪೋದಲ್ಲಿ ತಾ|| 22-2-26 ರಲ್ಲೂ ಚಾಮರಾಜನಗರದ ಡಿಪೋದಲ್ಲಿ ತಾ|| 23-2-26ರಲ್ಲೂ ನಾಟಾಗಳು ಹರಾಜುಮಾಡಲ್ಪಡುವುವು.

ಮೈಸೂರು ರೈಲ್ವೆಯ ಚೀಫ್‌ಇಂಜನಿಯರಾದ ಮ|| ಕೆ. ಶ್ರೀನಿವಾಸಯ್ಯಂಗಾರರಿಂದ 5,000 ರೂಪಾಯಿಗಳೂ, ದೊಡ್ಡಬಳ್ಳಾಪುರದ ರಿಟೈರ್ಡ್ ಹೆಡ್ಮಾಸ್ಟರಾದ ಮ|| ಕೊಂಗಾಡಿಯಪ್ಪನವರ ಹಳೇ ವಿದ್ಯಾರ್ಥಿಗಳಿಂದ ಮತ್ತು ವಿಶ್ವಾಸಿಗಳಿಂದ 1,000 ರೂ. ಗಳೂ, ಕಾಂತರಾಜಪುರದ ಮ|| ಬಿ. ನಂಜಪ್ಪನವರಿಂದ 1,000 ರೂ. ಗಳೂ ಮೈಸೂರು ವಿಶ್ವವಿದ್ಯಾಲಯಕ್ಕೆ ಪುದುವಟ್ಟಾಗಿ ಕೊಡಲ್ಪಟ್ಟಿರುವುದು ವಿಶ್ವವಿದ್ಯಾಲಯದ ಕೌನ್ಸಿಲಿನವರಿಂದ ಅಂಗೀಕರಿಸಲ್ಪಟ್ಟಿರುತ್ತದೆ.

ಸೂಪರಿಂಟೆಂಡಿಂಗ್ ಉದ್ಯೋಗದಿಂದ ನಿವೃತ್ತಿಯನ್ನು ಹೊಂದಿ ಬೆಂಗಳೂರು ಬಸವನಗುಡಿಯಲ್ಲಿ ವಾಸಿಸುತ್ತಿದ್ದ ಮ|| ವಾಸುದೇವಹರಿಕರವಿಯವರು ವೃದ್ಧಾಪ್ಯದಶೆಯಿಂದ ಕಳೆದ ಶನಿವಾರ ಸ್ವರ್ಗವಾಸಿಯಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರಿಗೆ 78 ವರ್ಷವಯಸ್ಸಾಗಿದ್ದಿತು, ಮತ್ತು ಮೈಸೂರು ಸ್ಪೆಷಲ್‌ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರಾಗಿರುವ ಮ|| ಕರವಿಯವರೂ ಡಿಸ್ಟ್ರಿಕ್ಟ್ ಹೆಲ್ತಾಫೀಸರಾಗಿರುವ ಡಾಕ್ಟರ್ ಕರವಿಯವರೂ ಸೇರಿ ನಾಲ್ವರು ಪುತ್ರರಿರುವರು.

ರಾಜಧಾನಿಯ ಲಾಯರ್ ಮ|| ಟಿ. ರಂಗರಾವ್, ಬಿ. ಎ., ಎಲ್‌ಎಲ್.ಬಿ., ಇವರೂ, ಮತ್ತಿಬ್ಬರೂ ಒಬ್ಬರಿಗೊಬ್ಬರು ಹೊಡೆದಾಡಿ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹತ್ತಿದ್ದರು. ಪೋಲೀಸರು ಇದರ ವಿದ್ಯಮಾನವನ್ನು ತಿಳಿದು ಬಿ ಷೀಟನ್ನು ಕೊಟ್ಟುದರಮೇಲೆ ಮ್ಯಾಜಿಸ್ಟ್ರೇಟರು ಕೇಸನ್ನು ವಜಾಮಾಡಿದರು. ಫಿರ್ಯಾದಿಯು ಇದರಮೇಲೆ ಡಿಸ್ಟ್ರಿಕ್ಟ್‌ಜಡ್ಜಿಯವರಿಗೆ ಅಪೀಲ್‌ಮಾಡಿಕೊಂಡಿರಲು ಅವರು ಫಿರ್ಯಾದಿಯ ವಿಚಾರಣೆಯಿಲ್ಲದೆ ವಜಾಮಾಡಿದುದು ತಪ್ಪೆಂದು ಹೇಳಿ ಸ್ಪೆಷಲ್ ಮ್ಯಾಜಿಸ್ಟ್ರೇಟರು ಈ ಕೇಸನ್ನು ನಡಿಸಬೇಕಾಗಿ ತೀರ್ಮಾನಿಸಿದರು. ಇದು ತಾ|| 27ರಲ್ಲಿ ನಡಿಯಬೇಕಾಗಿದ್ದುದು ಕೆಲ ಅಪರಾಧಿಗಳು ಬರಲಿಲ್ಲವಾಗಿ ಮುಂದಕ್ಕೆ ಅಡ್ಜರ್ನ್‌ಮಾಡಲ್ಪಟ್ಟಿತು.

ನಂಜನಗೂಡಿನ ಸನಾತನಧರ್ಮಸಭೆಯವರು ಸಂಗೀತವಿದ್ಯಾಪ್ರದರ್ಶನದಿಂದ ಮಹಾಜನಪ್ರೋತ್ಸಾಹಕ್ಕೆ ಪಾತ್ರರಾದ ಮತ್ತು ಮೋಹೀಜಾನೆ ಅಕೌಂಟೆಂಟ್ ಮ|| ಎಂ. ಎ. ಮಾದಪ್ಪನವರ ತಿಮ್ಮಂದಿರೂ, ಅರಮನೆ ಗ್ಯಾರೇಜಿನ ಕ್ಲಾರ್ಕ್ ಮ|| ಬಿ. ಲಿಂಗಪ್ಪನವರ ಸೋದರ ಅಳಿಯಂದಿರೂ ಆದ ಕೇವಲ ಸಣ್ಣವಯಸ್ಸಿನ ಬಸವರಾಜು ಅವಳಿಜವಳಿ ಸಹೋದರರಿಗೆ ಕಳೆದ ತಾ|| ೨೪ ರಲ್ಲಿ ಜರುಗಿದ ಬಹಿರಂಗಸಭೆಯಲ್ಲಿ ಅಧ್ಯಕ್ಷರಾಗಿದ್ದ ರಾಜಕವಿಭೂಷಣ ಮ|| ಎಚ್. ಲಿಂಗರಾಜಅರಸಿನವರ ಹಸ್ತದಿಂದ ಸುವರ್ಣಪದಕಗಳನ್ನು ಕೊಡಿಸಿದರು. ಆ ಕಾಲದಲ್ಲಿ ಅಧ್ಯಕ್ಷರು ಕಾಲೋಚಿತವಾದ ಭಾಷಣವನ್ನು ಮಾಡಿ ಆ ಬಾಲಸಂಗೀತಗಾರರಿಗೆ ಹಿತೋಪದೇಶವನ್ನುಮಾಡಿ ಅವರ ಶ್ರೇಯಸ್ಸನ್ನು ಕೋರಿದರು.

ದಕ್ಷಿಣಾಫ್ರಿಕೆಯರಾಯಭಾರಿಗಳಾಗಿ ಬಂದಿರುವ ಗಾಡ್‌ಫ್ರಿ ಮತ್ತು ಫಾಥರ್‌ರವರು ಈ ತಾ|| ೨೬ ರಲ್ಲಿ ಬೆಂಗಳೂರಿಗೆ ಬಂದು ಕೋಟೆಯಲ್ಲಿರುವ ಟಿಪ್ಪುಸುಲ್ತಾನರ ಅರಮನೆಯಲ್ಲಿ ಗಾರ್ಡಿಯನ್ ಪತ್ರಿಕಾಸಂಪಾದಕರಾದ ಮಿ|| ಥಾಮಸ್‌ರವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಸಭೆಯಲ್ಲಿ ದಕ್ಷಿಣಾಫ್ರಿಕೆಯಲ್ಲಿರುವ ಭಾರತೀಯರ ದುಸ್ಥಿತಿಯನ್ನು ಹೃದಯದ್ರಾವಕವಾಗಿ ಹೇಳಿ ಭರತಖಂಡದ ಗೌರವವನ್ನು ಕಾಪಾಡಿಕೊಳ್ಳುವ ವಿಚಾರದಲ್ಲಿ ಪ್ರತಿಯೊಬ್ಬನೂ ನಿರ್ವಂಚನೆಯಿಂದ ಸಹಾಯಮಾಡಬೇಕೆಂದು ಕೋರಿದರು. ಅದೇವಿಚಾರವಾಗಿ ಮ|| ಕೆ. ಟಿ. ಭಾಷ್ಯಂ ಮೊದಲಾದವರು ಭಾಷಣಗಳನ್ನು ಮಾಡಿದಮೇಲೆ, ರೌಂಡ್‌ಟೇಬಲ್‌ಕಾನ್ಫರೆನ್ಸಿನ ಆವಶ್ಯಕತೆಯನ್ನು ಯೂನಿಯನ್ ಪ್ರಭುತ್ವದವರಿಗೆ ತಿಳಿಸುವಂತೆಯೂ, ದಕ್ಷಿಣಾಫ್ರಿಕೆಯ ಆಕ್ಟ್ 65 ನೇ ಸೆಕ್ಷನ್ ಪ್ರಕಾರ ಆ ಬಿಲ್ಲನ್ನು ತಿರಸ್ಕರಿಸುವಂತೆಯೂ ಸಾಮ್ರಾಜ್ಯಪ್ರಭುತ್ವದವರಿಗೆ ತಿಳಿಸುವಂತೆ ಭಾರತಪ್ರಭುತ್ವದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿಯೂ, ಭಾರತೀಯರ ಗೌರವವನ್ನು ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ತನುಮನಧನದಿಂದ ಸಹಾಯಮಾಡಬೇಕಾಗಿಯೂ ನಿರ್ಧಾರಮಾಡಲ್ಪಟ್ಟಿತು.

ವರ್ತಮಾನಸಂಗ್ರಹ.

ಅಮೇರಿಕೆಯ ಕೆಲ ಲಕ್ಷಾಧೀಶ್ವರರೂ, ಪ್ರಸಿದ್ಧ ಪುರುಷರೂ ಸೇರಿ 380 ಜನರು ದೇಶಪರ್ಯಾಟನೆಗಾಗಿ ಹೊರಟು ಈಗ ಬೊಂಬಾಯಿಗೆ ಬಂದಿರುತ್ತಾರೆ.

ಬೊಂಬಾಯಿನ ನಿಮ್ನ ಜನಾಂಗದ ಎಲ್ಲ ಪಂಗಡದ ಪ್ರಮುಖರು ತಾ|| 27 ರಲ್ಲಿ ಗೌರ್ನರ ದರ್ಶನಕ್ಕೆ ಪಾತ್ರರಾಗಿ ತಮ್ಮಗಳಿಗೆ ಪ್ರತ್ಯೇಕಪ್ರಾತಿನಿಧ್ಯತತ್ವವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡರು.

ಮಹಾತ್ಮಗಾಂಧಿಯವರು 3-4 ದಿವಸಗಳವರೆಗೆ ಜ್ವರರೋಗಪೀಡಿತರಾಗಿದ್ದು ಡಾಕ್ಟರ್ ದೇಶಮುಖರವರ ಹೇಳಿಕೆಯ ಮೇರೆಗೆ ಕ್ವೈನಾಮಾತ್ರೆಗಳನ್ನು ಸೇವಿಸಿದಮೇಲೆ ಮೊನ್ನೆಯಿಂದಲೂ ಜ್ವರವಿಲ್ಲದೆ ಸ್ವಸ್ಥವಾಗಿರುವರು.

ನಿರುದ್ಯೋಗಿಗಳ ಸಂಖ್ಯೆಯು ಗ್ರೇಟ್‌ಬ್ರಿಟನ್ನಿನಲ್ಲಿ ಜನವರಿ ತಾ|| 18 ರಲ್ಲಿ ಕಳೆದವರ್ಷ ಇದೇ ಕಾಲದಲ್ಲಿದ್ದುದಕ್ಕಿನ್ನ 53,833 ಕಡಿಮೆಯಾಗಿದ್ದಿತು. ಹೊಸದಾಗಿ ರಿಜಿಸ್ಟರಾದ ಸಂಖ್ಯೆಯು ಅದರ ಹಿಂದಣ ವಾರಕ್ಕಿನ್ನ 5500 ಕಡಿಮೆಯಾಗಿದ್ದಿತು.

— ಪಂಜಾಬಿಗೆ ಸೇರಿದ ಅಕೋಲಾದಲ್ಲಿ ಮೂವರು ಸಿಕ್ಕರು. ಕತ್ತಿ ಬಂದೂಕಗಳನ್ನು ಹಿಡಿದುಕೊಂಡು ದಾರಿಯಲ್ಲಿ ತಿರುಗಾಡುವ ಜನರನ್ನು ಅಡ್ಡಕಟ್ಟಿ ಹೊಡೆದು ಅವರಲ್ಲಿದ್ದ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು. ಅವರನ್ನು ಹಿಡಿದುಕೊಟ್ಟವರಿಗೆ 150 ರೂಪಾಯಿ ಬಹುಮಾನವು ಕೊಡಲ್ಪಡುವುದಾಗಿ ಪೋಲೀಸರು ಪ್ರಕಟಿಸಿರುವರು. —

ಬಾವಲಾ ಕೊಲೆಪಾತಕರನ್ನು ಇಂದೂರಿನಲ್ಲಿ ಹಿಡಿದು ವಿಚಾರಣೆಗೆ ಗುರಿಮಾಡಿದ ಬೊಂಬಾಯಿನಗರದ ಪೋಲೀಸ್ ಸೂಪರಿಂಟೆಂಡೆಂಟ್ ಜಸ್ಟಿಸ್‌ರವರು ಈ ಕೊಲೆಯ ವಿದ್ಯಮಾನವನ್ನು ವೈಸ್‌ರಾಯರವರಲ್ಲಿ ನಿವೇದಿಸಲು ದಿಲ್ಲಿಗೆ ಹೋಗಿರುವುದಾಗಿಯೂ, ನರೇಂದ್ರಮಂಡಲದವರು ಇಂದೂರು ಸಂಸ್ಥಾನದಲ್ಲಿ ಸಾನುಭೂತಿಯುಳ್ಳವರಾಗಿ ಕೊಲೆಯ ನಿಜಸ್ಥಿತಿಯನ್ನು ಕಂಡುಹಿಡಿಯಲೆತ್ನಿಸಿರುವರೆಂದೂ ಒಂದು ಪತ್ರಿಕೆಯು ತಿಳಿಸುತ್ತದೆ.

ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾದ ಅಮರಾವತಿಯ ಜನರಾವ್ ದೇಶಮುಖರನ್ನು ಕಳೆದ ತಾ|| ೨೪ರಲ್ಲಿ ಒಬ್ಬ ಮಹಮ್ಮದೀಯ ಹುಡುಗನು ಹೊಡೆದು ಮೈಮೇಲೆ ಗಾಯಮಾಡಿ ಓಡಿಹೋದನು. ಈ ಜನರಾವ್ ದೇಶಮುಖರವರು ಕಳೆದ ಸೆಪ್ಟಂಬರಿನಲ್ಲಿ ಪಿರಾಲ ಎಂಬಲ್ಲಿ ಕೊಂದುಹಾಕಲ್ಪಟ್ಟ ರಾಮರಾವ್ ದೇಶಮುಖರ ಬಂಧು. ಈ ಕೊಲೆಯನ್ನು ಮಾಡಿದ ಕೆಲ ಮಹಮ್ಮದೀಯರಿಗೆ ಶಿಕ್ಷೆವಿಧಿಸಲ್ಪಟ್ಟುದರ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಜನರಾಯರಿಗೆ ಈ ದುರವಸ್ಥೆ ಪ್ರಾಪ್ತವಾಯಿತೆಂದೂಹಿಸಲ್ಪಟ್ಟಿದೆ.

ಹೈದರಾಬಾದು ನೈಜಾಂರವರ ಫಜುಲ್ಲಾನಾಥವನದಲ್ಲಿ ಕೆಲವುದಿನಗಳ ಹಿಂದೆ ಬಹು ಸಾಹಸದ ಕಳ್ಳತನವು ನಡೆದಿತು. ಬಹು ಬೆಲೆಯ ವಜ್ರಖಚಿತವಾದ ಎರಡು ಪುರಾತನ ಚದುರಂಗ ಕಾಯಿಗಳು ಮಾಯವಾಗಿದ್ದುದು ಪೋಲೀಸರಿಗೆ ತಿಳುಹಲ್ಪಟ್ಟುದರಮೇಲೆ ಅವರು ಬಂದು ಆ ಭವನದ ಕಾವಲುಗಾರರಲ್ಲಿ ಸಂಶಯಪಟ್ಟು ಸಮಯನಿರೀಕ್ಷಣೆಯಲ್ಲಿದ್ದು, ಈ ಕೃತ್ಯವು ನಡೆದಾರಭ್ಯ ಒಬ್ಬ ಕಾವಲುಗಾರನು ಕೆಲಸಕ್ಕೆ ಬಾರದಿದ್ದುದರಿಂದ ಅವನ ವಾಸಸ್ಥಳವಾದ ಬಿದಾರು ಡಿ|| ಕೋಹಿರುಗ್ರಾಮಕ್ಕೆ ಹೋಗಿ ಅವನನ್ನು ಹಿಡಿದು ವಿಚಾರಿಸುವಲ್ಲಿ ವಜ್ರಗಳು ವಿಕ್ರಯಿಸಲ್ಪಡದೆ ಮೂಸಿಹೊಳೆಯಲ್ಲಿ ಬಚ್ಚಿಡಲ್ಪಟ್ಟಿದ್ದ ಕೆಲವೂ, ಮನೆಯಲ್ಲಿದ್ದ ಕೆಲವೂ ದೊರಕಿದುವು.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಪರಶುರಾಮಪುರದ ಹೋಬಳಿ ಕೊರ್ಲಕುಂಟೆಯಲ್ಲಿ ನಡೆದ ಪರಶುರಾಮಪುರದ ಮ|| ಗ|| ದೊಡ್ಡಪ್ಪನವರ ಅಣ್ಣಂದಿರಮಕ್ಕಳು ಹೊಟ್ಟಪ್ಪನಹಳ್ಳಿ ಸ್ಕೂಲ್ಮಾಸ್ತರ್ ಹಲಗೌಡರು ಮತ್ತು ತಿಪ್ಪೀರಣ್ಣನವರು ಕೊರ್ಲಕುಂಟೆ ಮ|| ಗಾರೆಮನೆ ಚನ್ನಮಲ್ಲಪ್ಪನವರ ಮಗಳು ಸೌ|| ತಿಪ್ಪಮ್ಮ ಮ|| ನಾಗಲಿಂಗಪ್ಪನವರ ಮಕ್ಕಳು ರಾಮಲಿಂಗಪ್ಪನವರು ಇವರುಗಳ ಲಗ್ನದಲ್ಲಿ ರೂ. 2-8-0. ಹಳೆಸೊರಬದ ಪಟೇಲ್ ಮ|| ಭಂಗಾರಪ್ಪಗೌಡರಿಂದ ಸ್ಟಾರ್‌ಪತ್ರಿಕೆಯ ಪ್ರೋತ್ಸಾಹಕ್ಕಾಗಿ ರೂ. 1-0-0.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಜಯಂತಿಗಳು.

ವೀರಶೈವ ಮತಸ್ಥಾಪಕರಾದ ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ ಈ ಜಗದ್ಗುರು ಭಗವತ್ಪಾದಾಚಾರ್ಯರುಗಳ ಜಯಂತಿಗಳನ್ನು ಮಹಾಶಿವರಾತ್ರಿಯಲ್ಲಿ ಭರತಖಂಡದ ಯಾವತ್ತು ವೀರಶೈವರು ಮಾಡಬೇಕಾಗಿ ಅನನ್ಯಭಾವದಿಂದ ಬೇಡುತ್ತೇನೆ.

ಸಿದ್ದಪ್ಪ ವೀರಪ್ಪ ಸಿಂಧೂರ,
ಚನ್ನವೀರೇಶವಾಚನಮಂದಿರದ ಸೆಕ್ರೆಟರಿ.

ಶೋಚನೀಯವಾದ ಮೃತ್ಯು.

ಬಳ್ಳಾರಿ ಜಿಲ್ಲಾ ಕಂಪ್ಲಿಯಲ್ಲಿ ಸುಪ್ರಸಿದ್ಧ ಮನೆತನದವರಾಗಿ ಜಾಜೀ ಹಂಪಣ್ಣನವರ ಮಗ 28 ವರ್ಷವಯಸ್ಸಿನ ಸಿಂಗನಬಸಪ್ಪನವರು ಮಾರ್ಗಶಿರಮಾಸದಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಇವರು ಚಿಕ್ಕವಯಸ್ಸಿನವರಾಗಿದ್ದಾಗ್ಯೂ ಬಹಳ ವಿದ್ಯಾಭಿಮಾನಿಗಳಾಗಿದ್ದು ಒಬ್ಬಿಬ್ಬ ಸಂಸ್ಕೃತವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಂಡು ಪೋಷಿಸುತ್ತಿದ್ದರಲ್ಲದೆ ಅತಿಥಿಅಭ್ಯಾಗತರನ್ನು ನಿತ್ಯದಲ್ಲೂ ಮೃಷ್ಟಾನ್ನದಿಂದ ತೃಪ್ತಿಗೊಳಿಸುತ್ತಿದ್ದರು. ಪಾಠಶಾಲಾಪಂಡಿತರುಗಳಿಗೆ ಭೂದಾನ ಸುವರ್ಣದಾನಮಾಡಿ ಸುಪ್ರಖ್ಯಾತರಾಗಿದ್ದರು. ಇಂಥ ಮತಾಭಿಮಾನಿಗಳನ್ನು ಕಳೆದುಕೊಂಡುದಕ್ಕಾಗಿ ಈ ಪ್ರಾಂತದ ವೀರಶೈವರು ಬಹಳವಾಗಿ ಚಿಂತಿಸಿ ಮೃತರ ಆತ್ಮಕ್ಕೆ ನಿರಂತರ ಶಾಂತಿಯನ್ನೂ ಅವರ ಕುಟುಂಬಕ್ಕೆ ದುಃಖ ಸಮಾಧಾನವನ್ನೂ ಕೋರುತ್ತಾರೆ. ವಿದ್ಯಾರ್ಥಿ.

ಅಕ್ಷಯಸಂವತ್ಸರದಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ಮಾಡುವ ವಿಚಾರವು.

ಕ್ಷಯಸಂವತ್ಸರವು ಅಪ್ಶೈರುಸಂವತ್ಸರವಾಗಿದ್ದು ಆ ಸಂವತ್ಸರದಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ಮಾಡಬಾರದೆಂದು ಕೆಲವರು ಅಭಿಪ್ರಾಯಪಟ್ಟ ಮೇರೆಗೆ ಜನತೆಯಲ್ಲಿ ತಪ್ಪು ತಿಳುವಳಿಕೆಯಾಗುವದೆಂದು ಶಾಸ್ತ್ರಾರ್ಥಮಾಡಿ ಬರೆದಿರುತ್ತೇವೆ. ಸಂವತ್ಸರಾಂತ್ಯದಲ್ಲಿ ಮೂರುತಿಂಗಳು ಬಿಡಬೇಕೆಂದು ಋಷಿಗಳ ಮತವಿದ್ದಾಗ್ಯೂ ಅಂತ್ಯದಲ್ಲಿ ಒಂದುತಿಂಗಳು ಅಂದರೆ, ಫಾಲ್ಗುಣಮಾಸವನ್ನು ಬಿಡಲಿಕ್ಕೆ ಅನೇಕ ಶಾಸ್ತ್ರಾಧಾರಗಳಿರುತ್ತವೆ. ಮುಖ್ಯವಾಗಿ ಅಸ್ತದೋಷಾದಿಗಳಿಂದ ಕಾರ್ತಿಕಮಾಸಾದಿಯಾಗಿ ವಿವಾಹಮಾಡಲು ಪ್ರಶಸ್ತವಿಲ್ಲದ್ದರಿಂದ ನಿಜಚೈತ್ರ ವೈಶಾಖ ಜ್ಯೇಷ್ಠ ಮಾಸಗಳಲ್ಲಿ ವಿವಾಹಾದಿ ಶುಭಕಾರ್ಯಗಳನ್ನು ಮಾಡಲಿಕ್ಕೆ ಪ್ರಶಸ್ತವಾಗಿರುವದು.

ಬ್ರ|| ಶ್ರೀ|| ಸಿದ್ಧಾಂತಿ ವೀರಭದ್ರಶಾಸ್ತ್ರಿ, ಹಿರೇಮಠ, ಹಿರೇಕೆರೂರು.

ಓರ್ವ ಮೊದಲಿಯಾರರು ಮಾಂಸತಿನ್ನುವುದನ್ನು ತ್ಯಜಿಸಿಬಿಟ್ಟರಂತೆ!

ಬೆಂಗಳೂರಿನ ಶ್ರೀಶಾರದಾನಿಲಯದ ಧರ್ಮವಾಚನಶಾಲೆಯ ಲೈಬ್ರೇರಿಯನ್ ಮ|| ಬಿ. ಕಮಲನಾಥಮೊದಲಿಯಾರ್ ಎಂಬುವವರು ಮಾಂಸತಿನ್ನುವುದನ್ನು ಬಿಟ್ಟಿರುವುದಾಗಿಯೂ, ತಮ್ಮ ಬಂಧುವರ್ಗದವರ ಮನೆಗಳಿಗೆ ಹೋಗಿ ಮಾಂಸಭಕ್ಷಣೆಯನ್ನು ಬಿಡಬೇಕೆಂಬುದಾಗಿ ಪ್ರಾರ್ಥಿಸಿಕೊಳ್ಳುತ್ತಿರುವುದಾಗಿಯೂ, ಈಗಾಗಲೇ ಇವರ ಅನೇಕ ಸ್ನೇಹಿತರು ಮಾಂಸಹಾರವನ್ನು ಬಿಟ್ಟಿರುವುದಲ್ಲದೆ ತಮ್ಮ ಮನೆಯಲ್ಲಿಯ ಹಿರಿಕಿರಿಯವರಿಗೆ ಮಾಂಸಭಕ್ಷಣೆಯಿಂದಾಗುವ ಕೆಡಕನ್ನು ತಿಳುಹಿಸಿ ಬಿಡಿಸುತ್ತಿರುವರೆಂಬುದಾಗಿಯೂ, ಆಗಾಗ್ಗೆ ಬೇರೆಬೇರೆ ಸ್ಥಳಗಳಿಗೆ ಹೋಗಿ ಮಾಂಸಭಕ್ಷಣದಿಂದಾಗುವ ಅನರ್ಥಗಳನ್ನು ವಿವರಿಸಿ ಸಾಧ್ಯವಾದಮಟ್ಟಿಗೂ ಯಾರೂ ಮಾಂಸಾಹಾರವನ್ನು ಮಾಡದೆ ನೈಸರ್ಗಿಕವಾದ ಆಹಾರವನ್ನೇ ಉಪಯೋಗಿಸುವಂತೆ ಬೋಧಿಸುತ್ತಿರುವುದಾಗಿಯೂ ನಮಗೆ ಒಂದು ರಿಪೋರ್ಟನ್ನು ಬರೆದಿರುವರು. ಈ ವಿಷಯವು ಸ್ತುತ್ಯಾರ್ಹವಾಗಿದೆ! ಮಾಂಸಭಕ್ಷಕರಾದ ಜನಗಳು ಇನ್ನಾದರೂ ಇವರ ಮೇಲ್ಪಂಕ್ತಿಯನ್ನು ಅನುಸರಿಸುವುದು ಉತ್ತಮವಲ್ಲವೆ?

ಎ. ಮುಪ್ಪಣ್ಣ, ಜೊತೆಕಾರ್ಯದರ್ಶಿ.
ಪ್ರಾಣದಯಾಜ್ಞಾನಪ್ರಸಾರಕಸಂಘ, ದಾವಣಗೆರೆ.

ಧರ್ಮೋದ್ಧಾರಕ್ಕಾಗಿ ಪ್ರಾರ್ಥನೆ.

ಕಡೂರ್ ತಾಲ್ಲೂಕು ಯಗಟಿಪುರದ ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ದೇವಸ್ಥಾನದ ವಿವಾದದ ವಿಚಾರದಲ್ಲಿ ಸಮಸ್ತ ವೀರಶೈವಮಹಾಜನರಲ್ಲಿ ಅರಿಕೆಮಾಡಿಕೊಳ್ಳುವದೇನೆಂದರೆ—ಈ ಸಂಬಂಧವಿವಾದದ ವಿಚಾರಣೆಯು ಕಳೆದ ತಾರೀಖು 10-1-26 ರಲ್ಲಿ ಬೀರೂರು ಮುಕ್ಕಾಂನಲ್ಲಿ ತರೀಕೆರೆ ತಾ|| ರೆ|| ಅ|| ಕಮಿಷನರ್ ಸಾಹೇಬರವರಲ್ಲಿ ನಡೆಯುವದಾಗಿ ತಾರೀಖು 9-1-26ನೆಯ ಇದೇ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಚಾರ ಗೊತ್ತಾಗಿರಬಹುದು. ಆ ದಿವಸ ಈ ಪ್ರಾಂತ್ಯದ ವೀರಶೈವರ ಪರ ಕೆಲವುಜನ ಪ್ರಮುಖ ಮಹಾಶಯರು ವಿಚಾರ ನಡೆಯುವದಾಗಿ ಹಾಜರಾಗಿದ್ದರು. ಆದರೆ ಬ್ರಾಹ್ಮಣರು ಗೊತ್ತಾಗಿದ್ದ ಮೇರಿಗೆ ಯಾರೂ ಆ ದಿವಸ ಹಾಜರಾಗಲಿಲ್ಲವಾದಪ್ರಯುಕ್ತ ಮೇಲ್ಕಂಡ ಸಾಹೇಬರವರು ಈ ವಿಚಾರಣೆಯನ್ನು ಅಡ್ಜರ್ನ್ ಮಾಡಿ ಮುಂದಿನ ಫೆಬ್ರವರಿ ಮಾಹೆ ಮೊದಲನೆ ವಾರದಲ್ಲಿ ಇದೇ ಬೀರೂರು ಮುಕ್ಕಾಂನಲ್ಲಿ ವಿಚಾರಣೆಮಾಡುವದಾಗಿ ಅಪ್ಪಣೆಕೊಡಿಸಿರುತ್ತಾರೆ. ವಿಚಾರಣೆ ತಾರೀಖು ತಿಳಿಸಿರುವುದಿಲ್ಲ. ತಾರೀಖು ತಿಳಿಸಿದನಂತರ ಬರೆಯುತ್ತೇನೆ. ಆ ದೇಟಿಗೆ ಮತಾಭಿಮಾನಿಗಳು ದಯವಿಟ್ಟು ಬಂದು ನಿರ್ಬಲರಾಗಿರುವ ಈ ಅರ್ಚಕರಿಗೆ ಬೆಂಬಲರಾಗಿ ನಿಂತು ಮತಧರ್ಮೋದ್ಧಾರವಾಗುವಲ್ಲಿ ಸಹಾಯಮಾಡಬೇಕಾಗಿ ದೈನ್ಯೋಕ್ತಿಯಿಂದ ಪ್ರಾರ್ಥಿಸುತ್ತೇನೆ.

ದೇಹಪ್ರಮೆಯನ್ನು ಹೊಂದಿದ ಮತಾಭಿಮಾನಿ.

ಶ್ರೀಮದತಿರುದ್ರಮಹೋತ್ಸವಸೇವಾಸಂಘ

ಹರಪನಹಳ್ಳಿ ತಾಲ್ಲೋಕ್ ಹಿರೆಕುರವತ್ತಿಯಲ್ಲಿ ಅಧಿಕಚೈತ್ರಶುದ್ಧಪಾಡ್ಯದಿಂದ ತಾ|| 15-3-26 ರಿಂದ ತಾ|| 8-5-26 ರವರೆಗೆ ೫೫ ದಿವಸಗಳು ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವಮುರುಘರಾಜೇಂದ್ರ ಮಹಾಸ್ವಾಮಿಗಳ ಅನುಗ್ರಹದಂತೆ ನಡೆಯಲು ಕೈಕೊಂಡ ಶ್ರೀಮದತಿರುದ್ರಪಂಚಸಮಾಪ್ತಿ ಮಹಾಸೇವೆಯನ್ನೂ ದೊಡ್ಡದೊಡ್ಡ ಪೂಜಾಭಾಗಗಳನ್ನೂ ನಡಸಲು ಮೈಸೂರ್ ಸೀಮೆಯ ಪ್ರಮುಖಮಹಾಶಯರು ಒಪ್ಪಿರುತ್ತಾರೆ. ಇನ್ನು ಉಳಿದ ದೊಡ್ಡ ಸೇವೆಗಳಿಗೂ ನಿತ್ಯಗಟ್ಲೆ ಸೇವೆಗಳಿಗೂ ದೇಶಮಧ್ಯದಲ್ಲಿ ಪ್ರೋತ್ಸಾಹಿಸಲು ಕೋರಿರುತ್ತೇವೆ. ನಮ್ಮ ಸಂಸ್ಥೆಗೆ ಪ್ರಸಿಡೆಂಟರಾಗಿದ್ದ ಹೊಳಲಿನ ದೊಡ್ಡಮನೆಚೆನ್ನಬಸಪ್ಪನವರು ಇನ್‌ಫ್ಲುಂಜಾ ಬಾಯಿಲೆಯಲ್ಲಿ ಶಿವೈಕ್ಯರಾದ್ದರಿಂದ ಸದರಿ ಪ್ರಸಿಡೆಂಟರ ಸ್ಥಾನಕ್ಕೆ ಹಾವೇರಿ ತಾಲ್ಲೋಕ್ ಕಾಟೇನಹಳ್ಳಿಯಲ್ಲಿರುವ ಜಮಿನ್‌ದಾರ್ ಮತ್ತು ಸಾಹುಕಾರ್ ಶ್ರೀಯುತ ನೆಲವಿಗಿಮುರಿಗೆಪ್ಪ ಬಿನ್ ಕಲ್ಯಾಣಪ್ಪನವರನ್ನು ಶ್ರೀ ಸದ್ಗುರು ಮುಂತಾಗಿ ಸರ್ವಾನುಮತಿಯಿಂದ ನೇಮಿಸಿಕೊಂಡಿರುತ್ತೇವೆ. ಈ ಮಹಾಶಯರು ದೈವಭಕ್ತಿಯುತರಾಗಿರುವಂತೆಯೇ ಜನಾನುರಾಗಿಗಳಾಗಿಯೂ ದೇಶಸೇವಾಧುರೀಣರಾಗಿಯೂ ಇರುವರು.

ಮಹದೇವರಾವ್ ಗುಜರ್,
ಕಾರ್ಯದರ್ಶಿ, ಶ್ರೀಮದತಿರುದ್ರಮಹೋತ್ಸವಸೇವಾಸಂಘ.

ಗ್ರಾಮರಕ್ಷಣಸಭಾ, ಶ್ರೀರಂಗಪಟ್ಟಣದ ತಾ|| ಕ್ಯಾತನಹಳ್ಳಿ.

ಮೇಲ್ಕಂಡ ಸಭೆಯವರು 1926 ನೇ ಫೆಬ್ರವರಿ 14 ನೇ ತಾ|| ಭಾನುವಾರ ಒಕ್ಕಲಿಗರಸಂಘದ ವೈಸ್‌ಪ್ರಸಿಡೆಂಟ್ ಮ|| ಬಿ. ಕೆಂಪಣ್ಣನವರ ಅಧ್ಯಕ್ಷತೆಯಲ್ಲಿ ಒಕ್ಕಲಿಗರ ಮಹಾಸಭೆಯನ್ನೂ, 15ನೇ ತಾರೀಖು ಸೋಮವಾರ ಮೈಸೂರುಸೀಮೆಯ ಕೋ-ಆಪರೇಟೀವ್ ಸೊಸೈಟಿಗಳ ರಿಜಸ್ಟ್ರಾರ್‌ರವರಾದ ಶ್ರೀಯುತ ಕೆ. ಹೆಚ್. ರಾಮಯ್ಯನವರ ಕುಟುಂಬ ಸೌ|| ರೇವಮ್ಮನವರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಮಹಾಸಭೆಯನ್ನೂ ಇದೇ ಕ್ಯಾತನಹಳ್ಳಿಗ್ರಾಮದಲ್ಲಿ ನಡೆಯಿಸುವುದರಿಂದ ನಮ್ಮ ಒಕ್ಕಲಿಗ ಕುಲಬಾಂಧವರೆಲ್ಲರು ಮತ್ತು ಇವರ ಹಿತೈಷಿಗಳು ಸಭೆಗೆ ತಪ್ಪದೆ ದಯೆಮಾಡಿಸಿ ನಮ್ಮ ಕುಲದೇಳಿಗೆಯ ವಿಷಯದಲ್ಲಿ ಪ್ರಮುಖಕುಲಾಭಿಮಾನಿಗಳು ಹೇಳುವ ಅಮೋಘವಾದ ಸಲಹೆಗಳನ್ನು ಅವಗಾಹನೆಗೆ ತಂದುಕೊಂಡು ಅದರಂತೆ ವರ್ತಿಸುವುದರಮೂಲಕ ಕುಲಾಭಿವೃದ್ಧಿಯಲ್ಲಿ ಭಾಗಿಗಳಾಗಿ ಪ್ರೋತ್ಸಾಹಿಸಬೇಕೆಂತ ಪ್ರಾರ್ಥಿಸುವ,

ತಮ್ಮಗಳ ವಿಧೇಯ.
ಚಿಕ್ಕತಿಮ್ಮೇಗೌಡ, ಗೌರವಕಾರ್ಯದರ್ಶಿ.

ವಿ. ಸೂ:—ಊಟಉಪಚಾರಗಳಿಗೆ ತಕ್ಕ ಏರ್ಪಾಟನ್ನು ಮಾಡಿರುತ್ತೆ. ಈ ಗ್ರಾಮವು ಫ್ರೆಂಚರಾಕ್ಸ್ ರೈಲ್ವೆ ಸ್ಟೇಷನ್ನಿಗೆ 1½ ಮೈಲಿ ದೂರದಲ್ಲಿರುತ್ತೆ. ಸ್ಟೇಷನ್ನಿಂದ ಸಲೀಸು ಮಾರ್ಗವಿದೆ.

ವೀರಶೈವ ತರುಣರ ಸಂಘವೂ, ಮ|| ಕುಪ್ಪಯ್ಯ ಶಾಸ್ತ್ರಿಗಳೂ.

ವೀರಶೈವತರುಣರ ಸಂಘದ ಪರವಾಗಿ ಕೆಲಸಮಾಡುತ್ತಿದ್ದ ಮ|| ರಾ|| ಕುಪ್ಪಯ್ಯ ಶಾಸ್ತ್ರಿಗಳು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟಿರುವುದರ ವಿಚಾರವಾಗಿ 9-1-1926 ನೇ ಮರ್ಕ್ಯುಂ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಇವರನ್ನು ವೀರಶೈವರ ತರುಣರ ಸಂಘದ ಉಪನ್ಯಾಸಕೆಲಸದಿಂದ ತಪ್ಪಿಸಿದುದಕ್ಕಾಗಿ ಇವರು ಕಾರಣವನ್ನು ಕೇಳಿದ್ದಾರೆ. ಇವರ ಕಾರಣವು ಅವರಿಗೆ ಗೊತ್ತಿಲ್ಲದೆ ಇಲ್ಲ. ಇವರು ಹೋಗಿದ್ದ ಕೆಲವು ಸ್ಥಳಗಳ ದೊಡ್ಡಮನುಷ್ಯರ ಹೇಳಿಕೆಯಿಂದಲೂ ನನ್ನ ಸ್ವಂತ ಅನುಭವದಿಂದಲೂ ಇವರೂ ಶ್ರದ್ಧಾಭಿಮಾನದಿಂದ ಕೆಲಸಮಾಡುತ್ತಿಲ್ಲವೆಂದು ತಿಳಿದು ಬಂದುದರಮೇಲೆ ಇವರನ್ನು ಪ್ರಶ್ನಿಸಲಾಗಿ ತಮ್ಮ ಸ್ವಂತ ಅನಾನುಕೂಲದಿಂದ ಕೆಲಸಮಾಡಲು ಸಾಧ್ಯವಿಲ್ಲವೆಂದು ಹೇಳಿಬಿಟ್ಟು ಇವರಿಗೆ ಸಲ್ಲಬೇಕಾದ ಹಣವೆಲ್ಲವನ್ನೂ ಪಡೆದು ಇನ್ನೇನೂ ಬರಬೇಕಾದ್ದಿಲ್ಲವೆಂದು ಒಪ್ಪಿ ಕ್ರಮವಾದ ರಸೀತಿಯನ್ನು ಇವರು ಬರೆದು ಕೊಟ್ಟಿರುತ್ತಾರೆ. ಇವರು ಮಿಷನ್ ಸ್ಕೂಲಿನಲ್ಲಿ ಕೆಲಸಮಾಡುತ್ತಿದ್ದು ಸರಿಬೀಳದೆ ಕೆಲಸವನ್ನು ಬಿಟ್ಟುಬಂದು ನನ್ನನ್ನು ಬಹಳವಾಗಿ ಆಶ್ರಯಿಸಿದ್ದರಮೇಲೆ ಇವರಿಗೆ ಯಾವ ವಿಧದಿಂದಲಾದರೂ ಉಪಕಾರಮಾಡಬೇಕೆಂದು ಉದ್ದೇಶಿಸಿ ಇವರನ್ನು ಮೇಲ್ಕಂಡ ಸಂಘದ ಉಪನ್ಯಾಸಕರನ್ನಾಗಿ ಏರ್ಪಾಡುಮಾಡಿದ್ದಕ್ಕೆ ತಕ್ಕ ಪ್ರತಿಫಲವೇ ಇವರ ಬರವಣಿಗೆಯಿಂದ ನನಗೆ ದೊರೆತಂತಾಯಿತು. ಹೆಚ್ಚಿಸಂದೇನು! ಇವರು ಬರೆದಿರುವುದೆಲ್ಲಾ ನಿಜವಾದದ್ದು ಎಂದು ತ್ರಿಕರಣಪುರಸ್ಸರವಾಗಿ ದೇವರ ಮುಂದೆ ಸತ್ಯವಾಗಿ ಹೇಳುತ್ತೇನೆಯೆ ಎಂದು ತಮ್ಮ ಅಂತರಾತ್ಮನನ್ನು ಕೇಳಿಕೊಳ್ಳಲಿ. ನನಗೆ ಯಾವ ಸಾಕ್ಷ್ಯವೂ ಬೇಕಿಲ್ಲ; ಯಾವ ದಾಖಲೆಯೂ ಬೇಕಿಲ್ಲ. ಸಮಾಜದ ಹಣಕ್ಕೆ ತಕ್ಕ ಪ್ರತಿಫಲವು ಸಮಾಜಕ್ಕೆ ದೊರೆಯುವಂತೆ ಮಾಡಬೇಕೆಂದು ಪ್ರಯತ್ನಪಟ್ಟದ್ದಕ್ಕೆ ಈ ಉಪನ್ಯಾಸಕರಿಗೆ ಈ ರೀತಿಯಾದ ಕೋಪತಾಪಗಳುಂಟಾಯಿತು. ಕೀರ್ತನಕಾರರೆಂದು ಹೇಳಿಕೊಳ್ಳುವ ಇವರು ಈಗಾಗಲೆ ಇಷ್ಟರಮಟ್ಟಿನ ದೂಷಣೆಗೆ ಹೊರಟಿರುವುದು ಸಖೇದಾಶ್ಚರ್ಯವಾಗಿರುತ್ತದೆ. ಇವರಂತೆ ಚಮತ್ಕಾರವಾದ ಬರವಣಿಗೆಯನ್ನು ಬರೆಯಬಹುದಾಗಿದ್ದರೂ ಇದರಿಂದ ಪ್ರಯೋಜನವಿಲ್ಲವೆಂದು ತಿಳಿದು ಇಷ್ಟಕ್ಕೇ ಈ ವಿಷಯವನ್ನು ಮುಗಿಸಿ ಇವರು ಇನ್ನುಮುಂದೆ ಬರೆಯುವ ಲೇಖನಗಳಿಗೆ ಗಮನಕೊಡುವುದಿಲ್ಲವೆಂಬಂಶವನ್ನು ತಿಳಿಸಿರುತ್ತೇನೆ.

ಜಿ. ರುದ್ರಪ್ಪ,
ವೀರಶೈವ ತರುಣರ ಸಂಘ.

ಧಾರವಾಡ ಜಿಲ್ಲೆಯ ವಾಲ್ಮೀಕಿ ಬಾಂಧವರ 1ನೇ ಪರಿಷತ್ತು ಹಾಗೂ ಅಖಿಲಕರ್ನಾಟಕ 5 ನೇ ಮಹಾಸಭೆಯ ಆಲೋಚನಾ ಕಮಿಟಿಯು.

ಪ್ರಿಯಕರ್ನಾಟಕ ವಾಲ್ಮೀಕಿಬಾಂಧವರೇ, ಈ 20 ನೇ ಶತಮಾನದಲ್ಲಿ ಕರ್ನಾಟಕದ ಪ್ರತಿಯೊಂದು ಸಮಾಜದವರು ಆರ್ಥಿಕ ಸಾಮಾಜಿಕ ಧಾರ್ಮಿಕ ರಾಜಕೀಯ ವಿಷಯಗಳಲ್ಲಿ ಪ್ರಗತಿಯನ್ನು ತೀವ್ರವಾಗಿ ಹೊಂದುತ್ತಾ ಇದ್ದು ಹಿಂದಕ್ಕೆ ಈ ಯಾವತ್ತು ವಿಷಯಗಳಲ್ಲಿಯೂ ಪ್ರಸಿದ್ಧಿಯನ್ನು ಹೊಂದಿದ್ದ ನಮ್ಮ ಸಮಾಜವು ದಿನದಿನಕ್ಕೆ ಹೀನಸ್ಥಿತಿಗೆ ಹೋಗುವದನ್ನು ನೋಡಿ ನಮ್ಮ ಸಮಾಜದ ಮುಂದಾಳುಗಳಾದ ಮಹನೀಯರು ಶ್ರಮಪಟ್ಟು, 1 ಅತ್ತೀಗೇರಿ, 2 ಬೇವೂರ, 3 ರೋಣ, 4 ಹಿರೇಹಾಳ ಹೀಗೆ 4 ಮಹಾಸಭೆಗಳನ್ನು ಮಾಡಿರುವರು. ಆದರು ಕೂಡ ನಮ್ಮ ಸಮಾಜವು ಇನ್ನೂ ಗಾಢನಿದ್ರೆಯಿಂದ ಎಚ್ಚರಾಗದೆ ಇರುವದು ದುರ್ದೈವವೆನ್ನಬೇಕಾಗಿದೆ. ಇದಕ್ಕೆ ಮುಖ್ಯಕಾರಣವೇನೆಂದರೆ, ನಮ್ಮ ಸಮಾಜದ ದೊಡ್ಡದೊಡ್ಡ ಜಾಹಗೀರದಾರರು, ಸಂಸ್ಥಾನಿಕರು, ಪಾಳೇಗಾರರು ದೂರಸಿದ್ದು ಮೌನವ್ರತವನ್ನು ಧಾರಣಮಾಡಿದ್ದರಿಂದಲೇ ನಮ್ಮ ಸಮಾಜದ ಪ್ರಗತಿಯು ಅಗದೀಮಂದವಾಗಿರುವದೆಂಬುದನ್ನು ಹೇಳಲು ಕಾರಣವಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕಾಗಿಯೇ 1926 ನೇ ಇಸವಿ ಫೆಬ್ರವರಿ ತಾ|| 7-8 ರವಿವಾರ ಸೋಮವಾರ ಹೀಗೆ ಎರಡುದಿವಸ ರಾಣೇಬೆನ್ನೂರ ತಾಲ್ಲೂಕ ಬ್ಯಾಡಗಿ ಶಹರದಲ್ಲಿ ಸದರಿ ಪರಿಷತ್ತುಗಳನ್ನು ಮೆಹರಬಾನ ಡಿ. ಡಿ. ಕಲಿಕೈರ ಸಾ|| ಬ|| ಭದ್ರಾಪೂರ ದೊರೆಗಳವರ ಅಧ್ಯಕ್ಷತೆಯಲ್ಲಿ ಕೂಡಿಸುವದರಲ್ಲಿ ಬರುವದು. ಅಗ್ರೇಸರರಾದ ಶ್ರೀಸೀತಾರಾಮರಾವ ದೊರೆಗಳವರು. ದೇಸಾಯಿ ಬೇವೂರ, ಎಸ್. ಎಫ್. ಕೋಟೂರ ಬಿ.ಎ.ಜಿ., ತಾ. ಸೇಮೊ ಹುಬ್ಬಳ್ಳಿ ಮತ್ತು ಚಿತ್ರದುರ್ಗ ಪಾಳ್ಯಗಾರ ಚಿನ್ನಓಬಯ್ಯನವರು ಮೈಸೂರು ತಾ. ಕೌ|| ಮೆಂಬರರು ಹಾಗೂ ಅನೇಕ ಸನ್ಮಾನನೀಯರಾದ ಮಹನೀಯರು ಬರುವರು. ಇದಲ್ಲದೆ ತೀರ ಹಿಂದುಳಿದ ಸಮಾಜಗಳ ಉದ್ಧಾರಕ ಜೀವಾಳರೆಂದೆನಿಸಿದ ಶ್ರೀಯುತ ಡಿ. ಎಲ್. ಪಾಟೀಲ, ಬಿ.ಎ., ಎಲ್‌ಎಲ್.ಬಿ., ಹಾಯಕೋರ್ಟ ವಕೀಲ ಧಾರವಾಡ ಡಿ. ಲೊ. ಬೊ. ವ್ಹಾಯಿಸ್ ಪ್ರೆಸಿಡೆಂಟ್ ಮತ್ತೂ ಕರ್ನಾಟಕದ ಕುರುಬರಸಂಘದ ಜನರಲ್ ಸೆಕ್ರೆಟರಿ ಶ್ರೀ ಬಿ. ಎಫ್. ಜಲ್ಲಣ್ಣನವರ ಇವರು ಹಾಗೂ ಇತರೇ ಅನೇಕ ಪ್ರಸಿದ್ಧ ಪುರುಷರೂ ಬರುವರು. ಈ ಸಭೆಯಲ್ಲಿ ನಮ್ಮ ಸಮಾಜದ ಹಿತಕ್ಕಾಗಿ ಅನೇಕ ಮಹತ್ವದ ವಿಷಯಗಳು ನಿರ್ಣಯಿಸುವದರಲ್ಲಿ ಬರುವದು. ಕಾರಣ ಯಾವತ್ತರೂ ಸದರೀ ತಾರೀಖಿಗೆ ತಪ್ಪದೇ ಬರಬೇಕಾಗಿ ಪ್ರಾರ್ಥಿಸುವೆವು. ಇಲ್ಲಿ ಯಾವತ್ತರಿಗೂ ಊಟದ ಹಾಗೂ ಎಲ್ಲ ತರದ ವ್ಯವಸ್ಥೆಯೂ ಸಂಘದಿಂದಲೇ ಮಾಡಲ್ಪಡುವದು.

ಬ್ಯಾಡಗಿ ಶಹರವು ರೈಲ್ವೆಸ್ಟೇಷನ್‌ದಿಂದ 1½ ಮೈಲಿ ಇದ್ದು ವಾಹನಗಳ ವ್ಯವಸ್ಥೆಯು ಇರುವದು.

ಬ್ಯಾಡಗಿವಾಲ್ಮೀಕಿಸಂಘದ

ಕಾರ್ಯದರ್ಶಿಗಳು.	ಸ್ವಾಗತ ಸಂಘಾಧ್ಯಕ್ಷರು
ಬಾಳಪ್ಪಾ ಹಂಜಿನಹಾಳ	ಬಂಕಾಪೂರ ಬಾದೀಶಮಹಾಲವಾಲ್ಮೀಕ
ಕುಲಕರ್ಣೀ ಹಾಂಸಭಾವಿ	ಮಠಕುಲ ಗುರುಗಳು ಶ್ರೀ ಹನುಮಂತ
ವಗ್ಗೈರೇರು	ಗೌಡರು ಸಂಸ್ಥಾನ ಅತ್ತೀಗೇರಿ

ದಾವಣಗೆರೆ ದೇವಿಜಾತ್ರೆಯಲ್ಲಿ ಹಿಂಸೆಯು ನಿಲ್ಲಿಸಲ್ಪಡುವುದು.

ನಮ್ಮನ್ನಾಳುವ ದಯಾಳು ಸರ್ಕಾರದವರು ಮೈಸೂರು ಸೀಮೆಯ ದೇವಿಜಾತ್ರೆಗಳಲ್ಲಿ ಪಶುಬಲಿ ನಿರೋಧಿಸುವ ಬಗ್ಗೆ ಜನಸಮ್ಮತದಿಂದ ಸರ್ವಪ್ರಯತ್ನ ಮಾಡುತ್ತಿರುವುದು ಜೀವದಯಾಕಾರ್ಯೋಪಾಸಕರಿಗೆ ತುಂಬಾ ಸಂತೋಷಪ್ರದವಾಗಿದೆ. ತಾ|| 12-1-26 ನೇ ಮಂಗಳವಾರ ಶ್ರೀ ದುರ್ಗಾಂಬಾ ದೇವಸ್ಥಾನದಲ್ಲಿ ಸಾಯಂಕಾಲ 6 ಘಂಟೆಗೆ ಸರ್ಕಾರದವರಿಂದಲೇ ಸಭಾ ಕೂಡಿಸಲ್ಪಟ್ಟಿತ್ತು. ಈ ಸಭೆಗೆ ಅಮಲ್ದಾರರೂ, ಪೋಲೀಸ್ ಇನಸ್ಪೆಕ್ಟರವರೂ ಅಲ್ಲದೆ ಅನೇಕ ದೊಡ್ಡಮನುಷ್ಯರೂ ಬಂದಿದ್ದರು. ಜಾತ್ರೆಯಲ್ಲಿ ಪ್ರಾಣಿಗಳ ಬಲಿಯನ್ನು ಕೊಡುವ ನೂರಾರು ಜನರೂ ಬಂದಿದ್ದರು. ಅಮಲ್ದಾರರು ಸಭೆಯ ಉದ್ದೇಶವನ್ನು ತಿಳಿಯಿಸಿದ ಬಳಿಕ ದಾವಣಗೆರೆಯ ಪ್ರಸಿದ್ಧ ಅಡ್ವೋಕೇಟ್ ಮತ್ತು ನ್ಯಾಯವಿಧಾಯಕಸಭೆಯ ಮೆಂಬರು ಆದ ಮ|| ರಾ|| ಡಿ. ಎಚ್. ಚಂದ್ರಶೇಖರಯ್ಯ, ಬಿ.ಎ., ಎಲ್‌ಎಲ್.ಬಿ., ಯವರು ಈ ವಿಚಾರವಾಗಿ ಗಂಭೀರವಾದ ಭಾಷಣವನ್ನು ಮಾಡಿದರು. ಸಕಲ ಧರ್ಮಗಳಿಗಿಂತಲೂ ಅಹಿಂಸಾಧರ್ಮವೇ ಉತ್ತಮವೆಂಬುದಾಗಿ ವೇದವು ಘೋಷಿಸುತ್ತಿರುವುದೆಂಬುದಾಗಿಯೂ, ಕೆಲವು ಅಲ್ಪಸುಖಿಗಳಾದ ಸ್ವರ್ಗಕಾಮಿಗಳಿಂದ ಯಜ್ಞಗಳೂ ಪಶುವಧೆಗಳೂ ನಿಯಮಿಸಲ್ಪಟ್ಟವೆಂದೂ ಜನಗಳಲ್ಲಿ ಕಾಲಕ್ರಮೇಣ ತಿಳುವಳಿಕೆ ಹೆಚ್ಚುತ್ತಿರುವ ಈ ಕಾಲದಲ್ಲಿ ಇಂತಹ ಕ್ರೂರಕೃತ್ಯಗಳನ್ನು ಮಾಡುತ್ತಿರುವುದು ಕೇವಲ ಅಮಾನುಷವೆಂತಲೂ ದಯಾಳುಗಳಾದ ಸರ್ಕಾರದವರೇ ನಮ್ಮಲ್ಲಿರುವ ಅಜ್ಞಾನವನ್ನು ಕಳೆದು ದೇಶದ ಏಳಿಗೆಗೆ ಪ್ರಯತ್ನಿಸುತ್ತಿರುವುದು ನಮ್ಮಗಳ ಭಾಗ್ಯೋದಯವೆಂತಲೂ ಕುರಿ, ಕೋಳಿ, ಕೋಣ ಮೊದಲಾದ ಪ್ರಾಣಿಗಳ ವಧೆಯನ್ನು ನಿಲ್ಲಿಸಿ ಸಾತ್ವಿಕಪೂಜಾನಿರತರಾಗುವುದು ತುಂಬಾ ಶ್ರೇಯಸ್ಕರವೆಂತಲೂ ಒತ್ತಾಯವಾಗಿ ಹೇಳಿದರು. ಉಪನ್ಯಾಸಕ್ಕಾಗಿಯೇ ಆಮಂತ್ರಣಕೊಡಲ್ಪಟ್ಟ ಬೆಂಗಳೂರು ಗೋರಕ್ಷಕಮಂಡಲಿಯ ಕಾರ್ಯದರ್ಶಿಗಳಾದ ಶ್ರೀಯುತ ಗುಂಡೂರಾವ್ ಖಾದ್ರಿಯವರು ಆಮೇಲೆ ಆವೇಶಪೂರಿತವಾದ ಉಪನ್ಯಾಸವನ್ನು ಮಾಡಿದರು. ಇತರ ಸರ್ಕಾರದಲ್ಲಿ ಸ್ವಪ್ನಪ್ರಾಯವಾದ ಜೀವದಯಾ ವಿಚಾರವನ್ನು ಈ ಮೈಸೂರು ಸರ್ಕಾರದವರು ಕೈಕೊಂಡಿರುವುದೂ ಜೀವಬಲಿಯನ್ನು ಕೊಡುವ ಜನರೇ ಸನ್ಮಾರ್ಗಪ್ರವರ್ತಕರಾಗುವ ಅಪೇಕ್ಷೆಯಿಂದ ತಂಡೋಪತಂಡವಾಗಿ ಸಭೆಗೆ ಬರುತ್ತಿರುವುದೂ ತನಗೆ ವಿಶೇಷ ಆನಂದವನ್ನುಂಟುಮಾಡುತ್ತದೆಂಬುದಾಗಿಯೂ ಪಶುಬಲಿ ಎಂಬುದು ಜಗದಂಬಾ ಎಂಬ ಹೆಸರಿಗೇ ಅಪಕೀರ್ತಿಯನ್ನು ಪ್ರಕಟಿಸುತ್ತಿರುವುದೆಂಬುದಾಗಿಯೂ ಕೇವಲ ನಾಲಿಗೆಯ ರುಚಿಗಾಗಿ ದೇವತೆಯ ಸನ್ನಿಧಿಯಲ್ಲಿ ರಾಕ್ಷಸಕೃತ್ಯವನ್ನು ಮಾಡುವುದು ಹಿಂದೂಧರ್ಮದ ಲಕ್ಷಣವಲ್ಲವೆಂದೂ ಬುದ್ಧದೇವನು, ಇಪ್ಪತ್ತುನಾಲ್ಕು ತೀರ್ಥಂಕರರು, ಮಧ್ವಾಚಾರ್ಯರು, ಶ್ರೀ ಬಸವೇಶ್ವರರು ಮುಂತಾದ ಅಹಿಂಸಾತತ್ವಬೋಧಕರ ಜನ್ಮಸ್ಥಾನವಾದ ಈ ಪವಿತ್ರಭೂಮಿಯಲ್ಲಿ ಇಂತಹ ಅಮಾನುಷಕೃತ್ಯವು ಇಂದಿನವರೆವಿಗೂ ನಡೆಯುತ್ತಿರುವುದು ಕೇವಲ ಶೋಚನೀಯವಾದುದೆಂದೂ, ಇನ್ನೂ ಅನೇಕ ಶಾಸ್ತ್ರಾಧಾರಗಳಿಂದಲೂ ಪುರಾಣ ಪುಣ್ಯಕಥೆಗಳಿಂದಲೂ ಈ ಕೃತ್ಯವು ಕೇವಲ ಹೇಯವಾದುದೆಂದೂ ಸರ್ವರ ಮನಸ್ಸು ಕರಗುವಂತೆ ಉಪದೇಶಮಾಡಿದರು. ಬರುವ ಫಾಲ್ಗುಣಮಾಸದಲ್ಲಿ ಜರುಗುವ ಶ್ರೀ ದುರ್ಗಾಂಬಾ ಜಾತ್ರೆಯಲ್ಲಿ ಕುರಿ, ಕೋಳಿ, ಕೋಣ ಮೊದಲಾದ ಪ್ರಾಣಿಗಳ ವಧೆಯನ್ನು ನಿಲ್ಲಿಸುವುದಾಗಿ ಠರಾವು ಆಯಿತು. ದೇವಿಜಾತ್ರೆಯು ಯಾವಯಾವ ಸ್ಥಳದಲ್ಲಿ ನಡೆಯುತ್ತದೆಯೋ ಆ ಸ್ಥಳದವರು ದಾವಣಗೆರೆಯವರಂತೆ ಜಾತ್ರೆಯ ಕಾಲದಲ್ಲಿ ಪ್ರಾಣಿಗಳ ವಧೆಯನ್ನು ಮಾಡದೆ ಕೇವಲ ಸಾತ್ವಿಕರೀತಿಯಿಂದಲೇ ಜಾತ್ರೆಯನ್ನು ಅತಿ ವೈಭವದಿಂದ ನೆರವೇರಿಸಿ ಪ್ರಾಣಿಗಳನ್ನು ರಕ್ಷಿಸಿದ ಪುಣ್ಯಕ್ಕೆ ಭಾಗಿಗಳಾಗುವುದು ಉತ್ತಮವಲ್ಲವೆ?

ಎ. ಮುಪ್ಪಣ್ಣ,
ಜೊತೆಕಾರ್ಯದರ್ಶಿ, ಪ್ರಾಣದಯಾಜ್ಞಾನಪ್ರಸಾರಕಸಂಘ.

ಶ್ರೀಶಿವಯೋಗಮಂದಿರದಲ್ಲಿ ಜಾತ್ರೆಯು.

ಗಂಗಾಸ್ನಾನಾಧಿಕಂಪುಣ್ಯಂ ದರ್ಶನಾಚ್ಛಿವಯೋಗಿನಃ |
ಸರ್ವತೀರ್ಥಾಭಿಷೇಕೇಭ್ಯೋತತ್ಸಂಭಾಷಣಮುತ್ತಮಂ ||

(ಶಿವಧರ್ಮಸಂಹಿತೆ)

ಅಯ್ಯಾ, ವೀರಶೈವಭಾಂಧವರೇ, ನೀವೆಲ್ಲರೂ ಬಹುಕಾಲಗಳಿಂದ ನಡೆದುಬಂದ ಮಹಾಶಿವರಾತ್ರಿಯ ಮಹತ್ವವನ್ನು ಪರಿಪಾಲಿಸುವ ಬಗೆಯನ್ನು ತಿಳಿದವರಾಗಿರುತ್ತೀರಿ. ಈ ಯೋಗದಲ್ಲಿಯೇ ಲೌಕಿಕಪಾರಮಾರ್ಥಿಕ ಲಾಭವು ನಮ್ಮವರಿಗೆಲ್ಲ ದೊರೆಯಬೇಕೆಂಬ ಸದುದ್ದೇಶದಿಂದಲೇ ಎಂದಿನಂತೆ ಈ ವರ್ಷವಾದರೂ ಬಹುಬಗೆಯಿಂದ ಜಾತ್ರೆಯು ಕೂಡಿಸಲ್ಪಡುವದು. ಆ ಕಾಲಕ್ಕೆ ನಡೆಯತಕ್ಕ ಮುಖ್ಯ ಸಂಗತಿಗಳ ವಿವರವು.—ಕರ್ನಾಟಕ ಮತ್ತು ಬೇರೆಬೇರೆ ಪ್ರಾಂತಗಳಿಂದ ಧರ್ಮಪರಾಯಣರೂ, ಶಾಸ್ತ್ರಜ್ಞರೂ ಕಲಾಕೋವಿದರೂ, ಪ್ರಸಿದ್ಧವ್ಯಾಖ್ಯಾನ ಮತ್ತು ಕೀರ್ತನಕಾರರೂ ಬರುವರು. ಒಕ್ಕಲಿಗರಿಗೆ ಅನುಕೂಲವಾಗಬೇಕೆಂದು ಜಮಖಂಡಿ, ಚಿಂಚಲಿ ಕುರವತ್ತಿ, ಶಿರಹಟ್ಟಿ ಜಾತ್ರೆಗಳಂತೆ ಉತ್ತಮವಾದ ಎತ್ತುಗಳ ಪ್ರದರ್ಶನವೂ ವ್ಯವಹಾರಗಳೂ ಬಹುದೊಡ್ಡ ಪ್ರಮಾಣದಿಂದ ಸಾಗುವಂತೆ ವ್ಯವಸ್ಥೆ ಮಾಡಲ್ಪಟ್ಟಿರುವದು. ಒಕ್ಕಲಿಗರ ಉಪಯೋಗದ ದೆಶೆಯಿಂದ ಹೊಸಪದ್ಧತಿಯ ಒಕ್ಕಲತನದ ಸಾಮಾನುಗಳನ್ನು ಉಪಯೋಗಿಸುವದನ್ನು ತೋರಿಸುವದಕ್ಕಾಗಿ ಒಂದು ಕೃಷಿಪ್ರದರ್ಶನವು ಕೂಡಿಸಲ್ಪಡುವದು. ಮತ್ತು ಉತ್ತಮವಾಗಿ ಸಾಕಿದ ಎತ್ತು ಹೋರಿಗಳಿಗೆ ನಿರೀಕ್ಷಕಮಿಟಿಯವರು ಇನಾಮು ಹಂಚುವರು. ಇದೂ ಅಲ್ಲದೆ ನಮ್ಮ ಸಮಾಜದವರಾಗಲೀ ಕರ್ನಾಟಕದ ಬೇರೆ ಯಾವ ಜನಾಂಗದವರಾಗಲೀ ಕೈಗಾರಿಕೆಯಲ್ಲಿ ನಿಪುಣರಿದ್ದವರು ಸ್ವತಃ ತಯಾರಿಸಿದ ಸಾಮಾನುಗಳನ್ನೂ ಕಸೂತಿ ಹೆಣಿಕೆಯ ಬಟ್ಟೆಗಳನ್ನೂ ಕಟ್ಟಿಗೆ ಕಬ್ಬಿಣ ಮುಂತಾದವುಗಳಿಂದ ಮಾಡಿದ ದರ್ಶನೀಯ ಸಾಮಾನುಗಳನ್ನೂ ಪಂಚಸೂತ್ರಗಳನ್ನೊಳೈಸಿ ಮಾಡಿದ ಲಿಂಗ, ಭಸ್ಮ ಮುಂತಾದ ಎಲ್ಲ ಬಗೆಯ ಕೌಶಲ್ಯದ ಸಾಮಾನುಗಳನ್ನೂ ಎಲ್ಲ ಕಡೆಯಿಂದ ಬರಮಾಡಿಕೊಂಡು ಒಂದು ಕೈಗಾರಿಕೆಯ ವಸ್ತುಪ್ರದರ್ಶನವನ್ನು ಮಾಡುವದು ನಿರ್ಣಯಿಸಲ್ಪಟ್ಟಿದೆ. ಅವುಗಳಲ್ಲಿ ಉತ್ತಮವೆಂದು ನಿರ್ಣಯಿಸಲ್ಪಟ್ಟ ವಸ್ತುವಿಗೆ ತಕ್ಕ ಇನಾಮುಗಳನ್ನೂ ಉತ್ತೇಜನಗಳನ್ನೂ ಕೊಡುವದರಲ್ಲಿ ಬರುವದು. ಬಾಂಧವರೇ, ಮೇಲಿನ ಶ್ಲೋಕದ ಭಾವವನ್ನಾದರೂ ವಿಚಾರಿಸಿ ದಕ್ಷಿಣಕಾಶಿಯೆನಿಸಿದ ಶ್ರೀಮಹಾಕೂಟೇಶ್ವರನ ಮತ್ತು ತಪೋಧನರ ದರ್ಶನ ಆಶೀರ್ವಾದಗಳನ್ನು ಪಡೆದು ಧರ್ಮನಿರತರೂ ಕಲಾಕೋವಿದರೂ ವ್ಯವಹಾರಚತುರರೂ ಆಗಿರೆಂದು ಕೋರಿ ನಿಯಮಿತಕಾರ್ಯಕ್ರಮವನ್ನು ವಿವರಿಸುತ್ತೇನೆ.

ಮಹಾಶಿವರಾತ್ರಿ ತಾ|| ೧೧-೨-೧೯೨೬ (ಗುರುವಾರ ಮಾಘ ಬ|| ೧೪) ಸಾಯಂಕಾಲ ೪-೫ ಘಂಟೆ ವರೆಗೆ ಹೆಣ್ಣುಮಕ್ಕಳದೆಶೆಯಿಂದ ಪುರಾಣವು, ಉಳಿದವರದೆಶೆಯಿಂದ ಶಿವಾನುಭವವು; ರಾತ್ರಿ ೭-೧೦ ಘಂಟೆವರೆಗೆ ಎಲ್ಲರದೆಶೆಯಿಂದ ಬೇರೆಬೇರೆಯಾಗಿ ಪಾದಪೂಜೆಯು. ರಾತ್ರಿ ೧೨-೫ ಘಂಟೆವರೆಗೆ ಸನ್ಮಾನ್ಯರ ಕೀರ್ತನ ಮತ್ತು ಭಜನ; ಬೆಳಗಿನ ೫ ರಿಂದ ಉತ್ಸಾಹದ ಉತ್ಸವವು.

ತಾ|| ೧೨-೨-೨೬ ಶುಕ್ರವಾರ (ಮಾಘ ಬ|| ೧೫) ಹಗಲು ೨-೫ ಘಂಟೆ ವರೆಗೆ ಪ್ರಸಿದ್ಧ ವ್ಯಾಖ್ಯಾನಕಾರರ ಮತ್ತು ಶಿವಯೋಗಸಾಧಕರ ವ್ಯಾಖ್ಯಾನಗಳು. ಸಾಯಂಕಾಲ ೫-೭ ಘಂಟೆವರೆಗೆ ರಥೋತ್ಸವವು. ರಾತ್ರಿ ೭-೯ ಘಂಟೆವರೆಗೆ ವ್ಯಾಖ್ಯಾನಗಳು, ೧೧-೨ ಘಂಟೆವರೆಗೆ ಪ್ರಸಿದ್ಧಕೀರ್ತನಕಾರರ ಕೀರ್ತನ.

ತಾ|| ೧೩-೨-೨೬ ಶನಿವಾರ (ಫಾಲ್ಗುಣ ಶು|| ೧) ಮುಂಜಾನೆ ೮-೧೦ ಘಂಟೆವರೆಗೆ ಶೇತಕೀಪ್ರದರ್ಶನ. ಹಗಲು ೧-೩ ಘಂಟೆವರೆಗೆ ಇನಾಮು ಪಡೆಯಲಿಕ್ಕೆ ಬಂದ ಎತ್ತು ಹೋರಿಗಳ ಪರೀಕ್ಷೆಯು ಮಂದಿರದ ಹೋರಿಗಳ ಲೀಲಾಮಾಡುವದು. ಹಗಲು ೩-೮ ಘಂಟೆವರೆಗೆ ಜಾತ್ರೆಯ ಸಮಾಗಿನ ಸಭೆ ಕೈಗಾರಿಕೆಯ ಸಾಮಾನುಗಳಿಗೂ ಎತ್ತುಗಳಿಗೂ ಹೋರಿಗಳಿಗೂ ಇನಾಮು ಹಂಚುವದು; ಮುಂದಿನವರ್ಷದ ಜಾತ್ರೆಯ ಕಮಿಟಿಯನ್ನೂ ಕಾರ್ಯಕ್ರಮಗಳನ್ನೂ ಗೊತ್ತುಮಾಡುವದು.

ಟೀಪು:—(೧) ಹೆಣ್ಣುಮಕ್ಕಳದೆಶೆಯಿಂದ ವಿಶೇಷ ಕಾಳಜಿಯಿಂದ ಬೇರೆಯಾಗಿ ಮಾಡಲ್ಪಡುವದು. (೨) ಕೈಗಾರಿಕೆಯ ಸಾಮಾನುಗಳನ್ನು ಟಪಾಲದ್ವಾರ ಅಗರ ರೇಲ್ವೆಯಿಂದ ಮಿ|| ಹುಣಸೀಮರ ಹೆಡ್‌ಮಾಸ್ತರ ಬದಾಮಿ ಇವರ ಹೆಸರಿನಿಂದ ತಾರೀಖು ೮-೨-೨೬ ಇಸವಿಯೊಳಗಾಗಿ ತಮ್ಮ ಅಡ್ರಸ್‌ಗಳನ್ನು ಸ್ಪಷ್ಟವಾಗಿ ಬರೆದುಕಳಿಸಬೇಕು. (೩) ಎತ್ತು ಹೋರಿಗಳನ್ನು ಮಾರಾಟಕ್ಕೆ ತರುವವರು ತಾರೀಖು ೧೦-೨-೨೬ ಇಸವಿಯೊಳಗಾಗಿ ಮಂದಿರಕ್ಕೆ ಬರಬೇಕು. ಅವರವರಿಗೆ ಇಳಿಯುವ ಸ್ಥಳವ್ಯವಸ್ಥೆಯು ಮಾಡಲ್ಪಡುವದು. (೪) ಇಳಿಯುವ ಸ್ಥಳ ಭೋಜನದ ಅನುಕೂಲವಿಲ್ಲೆಂದು ಎಷ್ಟೋ ಜನರು ಬರುವಂತೆ ಕಾಣುವದಿಲ್ಲ. ಇದನ್ನು ಬಯಸುವವರು, ಸಕುಟುಂಬವಾಗಿ ಬರುವವರು ತಾರೀಖು ೫-೨-೧೯೨೬ ಇಸವಿ ಒಳಗಾಗಿ ಕೆಳಗೆ ಸಹಿ ಮಾಡಿದವರಿಗೆ ಟಪಾಲದಿಂದ ತಿಳಿಸಿದರೆ ತಕ್ಕ ವ್ಯವಸ್ಥೆಯು ನಿಮ್ಮ ಹೆಸರುಗಳಿಂದ ಮಾಡಲ್ಪಡುವದು. (೫) ಧರ್ಮ—ಧರ್ಮದ ಸಾಮಾನ್ಯತತ್ವಗಳು ಅಷ್ಟಾವರಣಮಹತ್ವ, ಕೈಗಾರಿಕೆ, ಒಕ್ಕಲತನ, ಸ್ತ್ರೀಶಿಕ್ಷಣ, ಶಿಶುಸಂಗೋಪನ ಇವುಗಳ ಸುಧಾರಣೆ ಮಾಡುವ ಮುಖ್ಯಸ್ಥನ ಆವಶ್ಯಕತೆ ಮೊದಲಾದ ವಿಷಯಗಳಮೇಲೆ ವ್ಯಾಖ್ಯಾನ ಕೊಡುವವರು ತಮ್ಮ ವಿಷಯಗಳ ಸಂಬಂಧವನ್ನು ಸುವಾಚ್ಯ ಅಕ್ಷರಗಳಿಂದ ಬರೆದು ತಾರೀಖು ೮-೨-೨೬ ಇಸವಿಯೊಳಗಾಗಿ ಮಿ|| ಸಿದ್ಧವೀರಯ್ಯ. ಪುರಾಣಿಕಮಠ ಮಾಸ್ತರ ಗುಳೇದಗುಡ್ಡ ಇವರ ಕಡೆಗೆ ಕಳಿಸಬೇಕು.

ಉತ್ತಮ ವ್ಯಾಖ್ಯಾನಕಾರರಿಗೆ ಬಹುಮಾನಗಳು ಕೊಡಲ್ಪಡುವವು.

ಶಿವಬಸಪ್ಪ ಆದಪ್ಪ ಮಾಗಿ, ಮ್ಯಾನೇಜರ.

ಶ್ರೀಶಿವಗಂಗಾಕ್ಷೇತ್ರದಲ್ಲಿ ನಡೆದ ಮೈಸೂರು ಆರ್ಯವೈಶ್ಯ ಮಹಾಜನಗಳ ಕಾನ್ಫರೆನ್ಸು.

ಬೆಂಗಳೂರು ಡಿ|| ನೆಲಮಂಗಲ ತಾ|| ನಲ್ಲಿರುವ ಶ್ರೀಶಿವಗಂಗಾಕ್ಷೇತ್ರವು ದಕ್ಷಿಣ ಇಂಡಿಯಾದೇಶದಲ್ಲಿ - ದಕ್ಷಿಣಕಾಶಿ - ಎಂದು ಬಹುಪ್ರಖ್ಯಾತಗೊಂಡಿದೆ. ಮಕರಸಂಕ್ರಮಣದಲ್ಲಿ ಅಲ್ಲಿ ನಡೆಯುವ ಯಾತ್ರೆಯು ಪರಮಫಲದಾಯಕವಾಗಿರುತ್ತದೆ. ಇಂಡಿಯಾದೇಶದ ಸಮಸ್ತ ಭಾಗಗಳಿಂದಲೂ ಸಹಸ್ರಾರು ಜನರು ಯಾತ್ರಾರ್ಥಿಗಳಾಗಿ ಪ್ರತಿವರ್ಷವೂ ಬರುತ್ತಾರೆ. ಅಲ್ಲಿ ಸೇರತಕ್ಕ ಆರ್ಯವೈಶ್ಯಮಹಾಜನಗಳಿಗೆ ತ್ಯಾಮಗೊಂಡ್ಲು ಸಾಹುಕಾರ್ ರಾಜಾಮುನಯ್ಯಶೆಟ್ಟರು ಪ್ರತಿವರ್ಷವೂ ಸಂತರ್ಪಣೆಯನ್ನು ಮಾಡಿಸುತ್ತಾರೆ. ಈ ವರ್ಷ ತ್ಯಾಮಗೊಂಡ್ಲು ಆರ್ಯವೈಶ್ಯಸಂಘದವರಿಂದ ಏರ್ಪಡಿಸಲ್ಪಟ್ಟ ಈ ಮಹಾಸಭೆಯು ಶ್ರೀಶಿವಗಂಗಾಕ್ಷೇತ್ರದಲ್ಲಿ ಮ|| ಸಾಹುಕಾರ್ ರಾಜಾಸೀತಾರಾಮಶೆಟ್ಟರ ಛತ್ರದಹಾಲಿನಲ್ಲಿ 1926 ನೇ ಜನವರಿ ತಾ 14 ನೇ ಗುರುವಾರ ಪ್ರಾರಂಭವಾಯಿತು. ಸಭಾಮಂಟಪವು ದಿವ್ಯವಾಗಿ ಧ್ವಜಪತಾಕೆಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಮೈಸೂರು, ಬೆಂಗಳೂರು, ತುಮಕೂರು, ಕೋಲಾರ, ಹಾಸನ, ಶಿವಮೊಗ್ಗ, ಕಡೂರು, ಚಿತ್ರದುರ್ಗ, ಹಿಂದೂಪುರ, ಅರಕಲಗೂಡು, ಶಿರಾ, ಮದ್ದಗಿರಿ, ತ್ಯಾಮಗೊಂಡ್ಲು, ನೆಲಮಂಗಲ, ಮಾಗಡಿ, ಪಾವುಗಡ ಮೊದಲಾದ ಸ್ಥಳಗಳಿಂದ 700 ಮಂದಿ ಡೆಲಿಗೇಟರುಗಳು ದಯಮಾಡಿಸಿದ್ದರು. 400 ಮಂದಿ ಸ್ತ್ರೀಯರು ಪ್ರೇಕ್ಷಕರಾಗಿ ಸೇರಿದ್ದರು. ಬೆಳಿಗ್ಗೆ 10 ಗಂಟೆಗೆ ಮೈಸೂರು ಆರ್ಯವೈಶ್ಯಮಹಾಸಭಾಮೆಂಬರುಗಳು ಉತ್ಸವಪೂರ್ವಕವಾಗಿ ಇದಿರುಗೊಳ್ಳಲ್ಪಟ್ಟು ಸತ್ಕರಿಸಲ್ಪಟ್ಟರು. ಮಧ್ಯಾಹ್ನ 4 ಗಂಟೆಗೆ ಕಾನ್ಫರೆನ್ಸು ಪ್ರಾರಂಭವಾಯಿತು. ಆಹ್ವಾನಸಂಘದ ಸೆಕ್ರೆಟರಿಯವರಾದ ಮಿ|| ರಾಮಲಕ್ಷ್ಮಣಶೆಟ್ಟರವರ ಪ್ರಾರ್ಥನೆಯಂತೆ ಅರಕಲಗೂಡು ಶ್ರೀಮಂತರಾದ ಮ|| ನಂಜುಂಡಶೆಟ್ಟರು ಅಗ್ರಾಸನವನ್ನು ಅಲಂಕರಿಸಿದರು. ದೇವತಾಪ್ರಾರ್ಥನೆಯಾದನಂತರ ಸಭಾಕಾರ್ಯಗಳು ಪ್ರಾರಂಭಿಸಲ್ಪಟ್ಟುವು.

ಬೆಂಗಳೂರಿನಲ್ಲಿರುವ ಮೈಸೂರುಆರ್ಯವೈಶ್ಯಮಹಾಸಭಾ ಹೆಡ್ಡಾಫೀಸ್ ಸೆಕ್ರೆಟರಿಯವರಾದ ಮ|| ಅಡ್ವೋಕೇಟ್ ಕುಸುಮಾ ಸುಬ್ಬರಾಯಿಶೆಟ್ಟರವರು ಆರ್ಯವೈಶ್ಯಕುಲಾಭಿವೃದ್ಧಿ, ವೇದೋಕ್ತಕರ್ಮವಿಚಾರಗಳು, ವೈಶ್ಯಬಾಲಕರ ವಿದ್ಯಾಭಿವೃದ್ಧಿ ಇವುಗಳನ್ನು ಕುರಿತು ಬಹುದೀರ್ಘಭಾಷಣವನ್ನು ಮಾಡಿದರು. ಮ|| ಅಡ್ವೋಕೇಟ್ ಎನ್. ವಿ. ನಾರಾಯಣಮೂರ್ತಿ ಬಿ.ಎ., ಬಿ.ಎಲ್., ರವರು ಪ್ರತಿಯೊಬ್ಬ ವೈಶ್ಯಯುವಕನು ಸಂಸ್ಕೃತ, ಇಂಗ್ಲಿಷು ಮತ್ತು ಕನ್ನಡಭಾಷೆಗಳಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಹೊಂದಿ ಮತ್ತು ದೇಶಸೇವೆ, ಕುಲಸೇವೆಮಾಡಲು ತಕ್ಕ ಶಕ್ತಿಯನ್ನು ಸಂಪಾದಿಸುವ ವಿಚಾರವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಮ|| ಪಿ. ವೆಂಕಟನಾರಾಯಣಶೆಟ್ಟರು ಸಂಘಗಳು ಸಭೆಗಳು ಇವುಗಳಿಂದಾಗುವ ಪ್ರಯೋಜನ, ವೈಶ್ಯರಲ್ಲಿರಬೇಕಾದ ಏಕಮತ್ಯ, ಕುಲಧರ್ಮಗಳು ಈ ವಿಚಾರವಾಗಿ ಯುಕ್ತಿಯುಕ್ತವಾದ ಉಪನ್ಯಾಸಮಾಡಿದರು. ಅನಂತರ ಕೆಲವು ವಿಚಾರಗಳು ಬಹುದೀರ್ಘವಾಗಿ ಚರ್ಚಿಸಲ್ಪಟ್ಟುವು. ಅಧ್ಯಕ್ಷರು ಸಭಿಕರನ್ನು ಶ್ಲಾಘಿಸಿ ತಮ್ಮ ಭಾಷಣಕ್ಕೆ ಪ್ರಾರಂಭಿಸಿದರು. ಕುಲಾಭಿವೃದ್ಧಿ, ವಿದ್ಯಾಭಿವೃದ್ಧಿ, ಏಕಮತ, ಕುಲಸೇವೆ, ದೇಶಸೇವೆ ಈ ವಿಚಾರಗಳನ್ನು ವಿವರವಾಗಿ ಸಭಿಕರಿಗೆ ತಿಳಿಸಿ ತಮ್ಮ ಅಂತ್ಯಭಾಷಣವನ್ನು ಮುಗಿಸಿದರು. ಅಧ್ಯಕ್ಷರಿಗೆ ಹಾರಾ ತುರಾಯಿಗಳು ಅರ್ಪಿಸಲ್ಪಟ್ಟನಂತರ ಮಂಗಳವಾದ್ಯದೊಡನೆ ಸಭೆಯು ಮುಗಿಯಿತು. ತಾ|| 15-1-26ನೇ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಕಾನ್ಫರೆನ್ಸು ಪುನಃ ಪ್ರಾರಂಭವಾಯಿತು. ಆ ದಿವಸ ಅಧ್ಯಕ್ಷಸ್ಥಾನವನ್ನು ಮ|| ಎನ್. ವಿ. ನಾರಾಯಣಮೂರ್ತಿ, ಬಿ.ಎ., ಬಿ.ಎಲ್., ರವರು ಅಲಂಕರಿಸಿದರು. ಬಾಲಿಕೆಯರಿಂದ ದೇವತಾಪ್ರಾರ್ಥನೆಯಾದನಂತರ ಸಭಾಕಾರ್ಯಗಳು ಪ್ರಾರಂಭಿಸಲ್ಪಟ್ಟುವು. ಈ ದಿವಸದ ಭಾಷಣಗಳು ತುಂಬಾ ಶ್ಲಾಘ್ಯವಾಗಿದ್ದುವು. ಬೆಂಗಳೂರಿನ ಅಡ್ವೋಕೇಟರಾದ ಮ|| ಕುಸುಮಾಸುಬ್ಬರಾಯಶೆಟ್ಟರು, ಬಿ.ಎ., ಎಲ್‌ಎಲ್.ಬಿ., ಯವರು ವೈಶ್ಯಮತಗ್ರಂಥಗಳ ವಿಚಾರವಾಗಿಯೂ, ಗಂಡಿನ ಅಡ್ವೋಕೇಟರಾದ ಮಿ|| ಟಿ. ಶ್ರೀನಿವಾಸಶೆಟ್ಟರು ಬಿ.ಎ., ಬಿ.ಎಲ್. ರವರು - ವೈಶ್ಯಮಕ್ಕಳಸಂಘ - ಎಂಬ ವಿಚಾರವಾಗಿಯೂ, ಅರಕಲಗೂಡು ಮ|| ನಂಜುಂಡಶೆಟ್ಟರವರು ಪರಸ್ಪರ ಸಹಾಯಕಸಂಘಗಳಿಂದಾಗುವ ಪ್ರಯೋಜನಗಳ ವಿಚಾರವಾಗಿಯೂ ತ್ಯಾಮಗೊಂಡ್ಲಿನಿಂದ ದಯೆಮಾಡಿಸಿದ್ದ ಮ|| ಪಿ. ವೆಂಕಟನಾರಾಯಣಶೆಟ್ಟರು - ವೈಶ್ಯರಕುಲೋನ್ನತಿ - ವಿಚಾರವಾಗಿಯೂ ಮ|| ಸಿ. ರಾಮಲಕ್ಷ್ಮಣಶೆಟ್ಟರು - ಈಗಿನಕಾಲದ ವೈಶ್ಯರ ಪರಿಸ್ಥಿತಿ - ಎಂಬ ವಿಚಾರವಾಗಿಯೂ, ಆರ್ಯವೈಶ್ಯ ಸಂಘದ ಪ್ರೆಸಿಡೆಂಟರಾದ ಮ|| ರಾಜಾಪರಸಯ್ಯಶೆಟ್ಟರವರು - ವೈಶ್ಯಬಾಲಕರ ಉಪನಯನ - ವಿಚಾರವಾಗಿಯೂ ಸ್ವಾರಸ್ಯವಾಗಿ ಭಾಷಣಗಳನ್ನು ಮಾಡಿದರು. ಅನಂತರ ಬಿಡದಿಯಿಂದ ಆಹ್ವಾನಿಸಲ್ಪಟ್ಟಿದ್ದ ವೇ|| ಬ್ರಂ|| ಸುಬ್ರಾಯಶಾಸ್ತ್ರಿಗಳವರು - ಆರ್ಯವೈಶ್ಯಮಹಾಜನಗಳ ವೇದೋಕ್ತನಿತ್ಯಕರ್ಮಾನುಷ್ಠಾನ - ವಿಚಾರವಾಗಿ ದೀರ್ಘವಾಗಿಯೂ ಹೃದಯಂಗಮವಾಗಿಯೂ ಉಪನ್ಯಾಸ ಮಾಡಿದರು. ಅಧ್ಯಕ್ಷರು ಎಲ್ಲಾ ವಿಚಾರಗಳನ್ನೊಳಗೊಂಡ ತಮ್ಮ ಅಂತ್ಯಭಾಷಣವನ್ನು ಸುಮಾರು ಒಂದುಗಂಟೆವರೆಗೆ ಎಲ್ಲರಿಗೂ ಬೋಧೆಯಾಗುವಂತೆ ತಿಳಿಸಿಮುಗಿಸಿದರು.

ಅಧ್ಯಕ್ಷರಿಗೆ ಹಾರತುರಾಯಿಗಳು ಅರ್ಪಿಸಲ್ಪಟ್ಟನಂತರ ಸಭಿಕರಿಗೆಲ್ಲಾ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟುವು. ಆಮೇಲೆ ತ್ಯಾಮಗೊಂಡ್ಲು ಗ|| ಗರ್ಲ್ಸ್‌ಸ್ಕೂಲಿನ ವಿದ್ಯಾರ್ಥಿನಿಯರಾದ ಶ್ರೀಮತಿ ಕೇಶಮ್ಮ, ಜಯಮ್ಮ, ಗೋಪಮ್ಮ ಇವರ ಸಂಗೀತಕಚೇರಿಯು ಸುಮಾರು ಅರ್ಧಗಂಟೆವರೆಗೂ ನಡೆಯಿತು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರ, ಶ್ರೀಮದ್ಯುವರಾಜರವರ, ಶ್ರೀಮನ್ ಜಯಚಾಮರಾಜ ಒಡೆಯರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಬರಖಾಸ್ತಾಯಿತು. ಅದೇ ರಾತ್ರಿ ಭೋಜನಾನಂತರ 10 ಘಂಟೆಗೆ ಒಂದು ಪಬ್ಲಿಕ್ ಹರಿಕಥಾಕಾಲಕ್ಷೇಪವನ್ನು ಆರ್ಯವೈಶ್ಯಸಂಘದವರು ಏರ್ಪಡಿಸಿದ್ದರು. ಪತಿವ್ರತಾಶಿರೋಮಣಿಯಾದ ಅನುಸೂಯಾಚರಿತ್ರೆಯನ್ನು ಕುಂಬಳಗೋಡು ಮ|| ನಂಜಪ್ಪಾಚಾರ್ಯರವರು ತುಂಬಾ ಸ್ವಾರಸ್ಯವಾಗಿ ಮಾಡಿದರು. ಸಭಾಂಗಣವು ಕಿಕ್ಕಿರಿಯುವಂತೆ ಜನರು ಸೇರಿದ್ದರು. ಪ್ರತಿವರ್ಷವೂ ಜನವರಿತಿಂಗಳ ಸಂಕ್ರಮಣಕಾಲದಲ್ಲಿ - ಮೈಸೂರು ಆರ್ಯವೈಶ್ಯಮಹಾಜನರ ಕಾನ್ಫರೆನ್ಸು - ಶಿವಗಂಗೆಯಲ್ಲಿ ನಡೆಸುವಂತೆ ಮಹಾಸಭೆಯವರಿಂದ ತೀರ್ಮಾನಿಸಲ್ಪಟ್ಟಿರುತ್ತೆ. ಮುಂದಿನವರ್ಷ ಇನ್ನೂ ಹೆಚ್ಚಿಗೆ ಪ್ರತಿನಿಧಿಗಳು ದಯಮಾಡಿಸಬೇಕೆಂದು ಸೆಕ್ರೆಟರಿಯವರು ಪ್ರಾರ್ಥಿಸುತ್ತಾರೆ.

ಸಿ. ರಾಮಲಕ್ಷ್ಮಣಶೆಟ್ಟಿ, ಕಾನ್ಫರೆನ್ಸ್ ಸೆಕ್ರೆಟರಿ.

ಶ್ರೀಜಗದಾಚಾರ್ಯ ಸ್ವಾಮಿವಿರೂಪಾಕ್ಷ ಒಡೆಯರವರು ಪುಣೆಯ ಪ್ರಾಚ್ಯವಿದ್ಯಾಸಂಶೋಧಕ ಮೊದಲನೇ ಸಭೆಯಲ್ಲಿ ತಾ|| 6ನೇ ನವಂಬರ 1919 ಇಸವಿ ದಿವಸ ಸಂಸ್ಕೃತದಲ್ಲಿ ಮಾಡಿದ ವ್ಯಾಖ್ಯಾನದ ಕನ್ನಡಭಾಷಾಂತರವು.

ಮೇಲೆ ತೋರಿಸಿದ ಪೂರ್ವಪಕ್ಷದ ಉತ್ತರಗಳು.
ಹಿಂದಿನಿಂದ ಮುಂದೆ ಸಾಗಿದ್ದು.

ಶ್ರೀರಾಮಾನುಜಾಚಾರ್ಯರು.

ಸರ್ವಜ್ಞ ಸರ್ವಶಕ್ತಿಮಾನನಾದ ಯಾವ ಶ್ರೇಷ್ಠವಸ್ತುವಿನಿಂದ ಸೃಷ್ಟಿಸ್ಥಿತಿ ಪ್ರಳಯಾದಿಗಳು ಪ್ರವರ್ತಿಸಲ್ಪಡುವವೋ ಅದೇ ಬ್ರಹ್ಮವೆಂಬದಾಗಿಯೂ, ಮತ್ತು ಅದೇ ಬ್ರಹ್ಮವೇ ಜೀವಭಾವದಿಂದ ಸರ್ವಶರೀರಗಳಲ್ಲಿ ಜೀವತ್ವವನ್ನು ಅನುಭವಿಸುತ್ತಿರುವದು. ಆ ಜೀವಾನುಭವದ ದೆಸೆಯಿಂದ ಜಗತ್ಕಾರಣೀಭೂತವಾದ ಬ್ರಹ್ಮಸಂಬಂಧಿಯಾದ ಸೂಕ್ಷ್ಮಭೂತರೂಪವಾದ - ಪ್ರಕೃತಿ - ಎಂಬ ಹೆಸರುಳ್ಳ ವಸ್ತುವಿದ್ದು ಅದರಲ್ಲಿ ಬ್ರಹ್ಮವು ಚೇತನವಾದ ಗರ್ಭವನ್ನು ಯೋಜಿಸುವದು. ಅನಂತರ ಪುಣ್ಯಪಾಪಗಳೆಂಬ ಬಂಧನವುಳ್ಳ ಜಡಪ್ರಕೃತಿಯ ಸಂಬಂಧದಿಂದ ಪ್ರಾಪ್ತವಾದ ನಾಮರೂಪಗಳಿಂದ ಹೊಂದಿದಂಥಾದ್ದೇ ಸಂಸಾರವಿದ್ದು ಈ ಸಕಾರಣಮಿಥ್ಯಾರೂಪವಾದ ಸಂಸಾರಬಂಧನದ ನಿವೃತ್ತಿಯು ಯಾವಾಗ್ಯೆ ಆ ಪರಬ್ರಹ್ಮವಸ್ತುವೊಂದೇ ಸರ್ವತ್ರವಿದ್ದು ಆ ವಸ್ತುವೇ ನಾನೆಂಬ ಏಕತ್ರಭಾವವು ಹುಟ್ಟುವದೋ ಅಂದಿಗೇನೇ ಆಗುವದು. ಇದರಂತೆ ಪ್ರಪಂಚವು ಅತ್ಯಂತ ಅಭಾವವನ್ನು ಹೊಂದದೆ ಕೇವಲ ಅದರ ನಿವೃತ್ತಿಮಾತ್ರವೇ ಮೋಕ್ಷವೆಂದೆನಿಸಿ ಏಕತ್ವಜ್ಞಾನದಿಂದ ಆ ಮೋಕ್ಷವು ಸಿದ್ಧಿಯಾಗುವದು.

ಶ್ರೀಮಧ್ವಾಚಾರ್ಯರು.

ಜೀವ ಮತ್ತು ಬ್ರಹ್ಮ ಇವೆರಡರ ಭೇದವು ಅಜ್ಞಾನದಿಂದ ಹುಟ್ಟುವದೋ ಸ್ವತಃಸಿದ್ಧವಾದದ್ದೋ? ಎಂದು ವಿಚಾರಮಾಡಿದಲ್ಲಿ - ಬ್ರಹ್ಮವು ಒಂದೇ ಇದ್ದು ಜೀವಭಾವವು ಭ್ರಮ (ಅಜ್ಞಾನ) ಮೂಲಕ ಹುಟ್ಟಿದ್ದೆಂದು ಯಾರು ಹೇಳುವರೋ ಅಂಥಾ - ಅದ್ವೈತ - ವಾದಿಗಳಿಗೆ ಅರ್ಥಾತ್ ಆ ಅಜ್ಞಾನಹೇತುವಾದಿಗಳಿಗೆ ಅನವಸ್ಥಾ, ಅನ್ಯೋನ್ಯಸಿದ್ಧಿ ಮತ್ತು ಚಕ್ರಿಕಾಪತ್ತಿ ಮೊದಲಾದ ದೋಷಗಳು ಸಂಭವಿಸುವವು. ಇನ್ನು ಉಪಾಧಿಯಿಂದ (ಮಾಯೆಯಿಂದ) ಅಥವಾ (ಶರೀರಾದಿಗಳಿಂದ) ಭೇದವು ಹುಟ್ಟುತ್ತದೆಂದಲ್ಲಿ ಅದು ಅಸಂಭವ. ಯಾಕಂದರೆ ಆ ಉಪಾಧಿಯು ಪೂರ್ವದಿಂದ ಪರಂಪರೆಯಾಗಿ ಬಂದ ಭೇದವನ್ನು ತಿಳಿಸಿಕೊಡುವದಷ್ಟೇ ಹೊರ್ತು ಹೊಸದಾಗಿ ಉತ್ಪನ್ನಮಾಡುವದಲ್ಲ. ಅಂದಮೇಲೆ ಮಾಯಾದಿಗಳಿಂದ ಭೇದವು ಹುಟ್ಟದೆ ಸ್ವತಃಸಿದ್ಧವಾಗದ್ದು. ಒಂದೇ ಜೀವಭಾವದ ಅಜ್ಞಾನದಿಂದ ಪರಿಕಲ್ಪಿಸಲ್ಪಟ್ಟಿರುವವು ಇವೆಲ್ಲವು. ಎಂದು ಅದ್ವೈತವಾದಿಗಳಾದ ನೀವು ಹೇಳುವಲ್ಲಿ ಅದಕ್ಕೆ ಯಾವ ಪ್ರಮಾಣವೂ ಇಲ್ಲ. ಆದ್ದರಿಂದ ಯಾವ ನಾರಾಯಣನ ಸ್ವಭಾವಸಿದ್ಧವಾದ ಮೋಕ್ಷವನ್ನು ಬ್ರಹ್ಮ, ಈಶ್ವರಾದಿ ದೇವತೆಗಳು ಕೂಡ ಹೊಂದಲು ಅಸಮರ್ಥರೋ ಅಂಥಾ ಮುಕ್ತಜೀವಗಳಿಗಿಂತ ಅನ್ಯನಾದ ಅಖಿಲಸಚ್ಛಕ್ತಿಯುಕ್ತ ಸರ್ವತ್ರಪ್ರೇರಕನಾದ ವಿಷ್ಣುದೇವನ ಪ್ರಸಾದದ ಹೊರ್ತು ಸ್ವತಃ ಚಿದಾನಂದಾದಿ ಗುಣವುಳ್ಳ ಜೀವನಿಗೆ ಅನಾದ್ಯವಿದ್ಯಾ ಅನುಕರ್ಮಾದಿ ನಿಮಿತ್ತವಾದೀ ದುಃಖಾದ್ಯನರ್ಥವು ಎಂದೂ ತಪ್ಪಲಾರದು ಮತ್ತು ಆ ಭಗವನ್ನಾರಾಯಣನ ಸಾಕ್ಷಾತ್ಕಾರವಿಲ್ಲದೆ ಎಂದೂ ಪ್ರಸನ್ನವಾಗಲಾರನು. ಅರ್ಥಾತ್ ಶಾಶ್ವತಸುಖವನ್ನು ಹೊಂದಲಾರದು.

ಶ್ರೀವಲ್ಲಭಾಚಾರ್ಯರು.

- ಆತ್ಮಾ ವಾ ಇದಮೇಕ ಏವಾಸೀತ್ ತದಾದೇವಸೋಮ್ಯ - ಇತ್ಯಾದಿ ಶ್ರುತಿವಾಕ್ಯಗಳಿಂದ ಸದಾದಿ ಶಬ್ದವು ಅದ್ವಿತೀಯಬೋಧಕವಿರುವದರಿಂದ ಹಾಗೂ ಪ್ರಾಣಿಗಳ ಕರ್ಮವು ಪರಿಪಕ್ವವಾಗಲು ಯಾವಾಗ್ಯೆ ಪ್ರಾಣಿಗಳ ಭೋಗಕ್ಕೋಸ್ಕರ ಜಗದುತ್ಪತ್ತಿಯು ಅಪೇಕ್ಷಿಸಲ್ಪಡುವದೋ ಅವಾಗ್ಯೆ ಅನೇಕ ದೀಪಗಳುಳ್ಳ ಮನೆಯಲ್ಲಿ ಕೆಲವು ದೀಪಗಳು ನಾಶವಾಗೋಣದರಿಂದ ಸೂಕ್ಷ್ಮವಾದ ಒಂದು ದೀಪವು ಮಾತ್ರ ಉಳಿಯಲು ಹ್ಯಾಗೆ ವಿರಲವಾದ ಪ್ರಕಾಶದಿಂದ ಕೂಡಿದ ಅಂಧಕಾರವು ಉತ್ಪನ್ನವಾಗುವದೋ ಅದರಂತೆ ಪ್ರಥಮವಿತ್ಯಾದಿರೂಪವಾದ ಈಶ್ವರೇಚ್ಛೆಯಿಂದ ತನ್ನ ಶಬ್ದವಾಚಕಶಕ್ತಿ ರೂಪಪರಿಣತಿಯಾಗುವದು. ಅದರಲ್ಲಿ ಅಖಂಡಿತನಾದ ಪರಮಪುರುಷನ ಅಂಶರೂಪಗಳಾದ ಜೀವಗಳ ವಿಯೋಗವಾಗುವದು. ಒಂದುವೇಳೆ ಸಂಭವವಿಲ್ಲದಾಗ್ಯೂ, ಜೀವಗತವಾದ ಆನಂದಾಂಶವು ನಾರಾಯಣನ ಉದರದಿಂದ ಹೊರಡುವ ಸಮಯದಲ್ಲಿಯೇ ಮುಚ್ಚಲ್ಪಟ್ಟಿರುವದಾದ್ದರಿಂದ ವಿಯೋಗವು ಸಂಭವಿಸುವದು. ಇನ್ನು ಆ ವಿಯೋಗನಾಶಾರ್ಥವಾಗಿ ರಾಧಿಕಾಪತಿಯಾದ ಮುರಲೀಧರನ (ಕೃಷ್ಣನ) ವಶಮಾಡಿಕೊಳ್ಳುವ ಆಚಾರವಾದ ಭಕ್ತಿಯೇ ಬೇಕಾದ್ದನ್ನು ಕೊಡುವ ಚಿಂತಾಮಣಿಸ್ವರೂಪವಾದ್ದರಿಂದ - ಸ್ನೇಹೋ ಭಕ್ತಿರಿತಿಪ್ರೋಕ್ತಸ್ತಯಾಮುಕ್ತಿರ್ನಚಾನ್ಯಥಾ - ಎಂಬ ಸಿದ್ಧಾಂತವು ಮಾಡಲ್ಪಟ್ಟಿರುವದರಿಂದ - ಪುಷ್ಟಿಪ್ರವಾಹ - ಮಾರ್ಗಪ್ರದರ್ಶಕವಾದ ರಾಸಲೀಲಾದಿ ಲಕ್ಷಣಗಳುಳ್ಳ ಭಜನೆ, ಆನಂದ, ಪ್ರೇಮ, ಸರ್ವಾರ್ಪಣ, ರಸಾಯನಪೂರ್ವಕವಾದ ಸಂಸಾರದುಃಖವಿಧ್ವಂಸಕ ಭಕ್ತಿಯೇ ಭಗವತ್ಪ್ರಾಪ್ತಿಗೆ ಮುಖ್ಯ ಸ್ವತಂತ್ರಸಾಧನವು. ಘೃತಾದಿಸ್ನಿಗ್ಧಪದಾರ್ಥಗಳಿಲ್ಲದ ಊಟವು ಹ್ಯಾಗೆ ಅರುಚಿಯೋ ಅದರಂತೆ ಭಾವಹೀನವಾದ ಕೇವಲ ಜ್ಞಾನವು ಬ್ರಹ್ಮಪ್ರಾಪ್ತಿ ಮಾಡಿಕೊಡುವದರಲ್ಲಿ ಅಸಮರ್ಥವಾದ್ದರಿಂದ ಸರ್ವಾರ್ಪಣರೂಪ - ಭಕ್ತಿ - ಹೀನವಾದ ಸಮಸ್ತಜ್ಞಾನವು ನಿರರ್ಥಕವಾದದ್ದು. ಆದ್ದರಿಂದ ಸರ್ವಸ್ವವನ್ನೂ ಕೃಷ್ಣಾರ್ಪಣಮಾಡುವದೇ ಹಿತವು. ಇದರಂತೆ - ಕೃಷ್ಣಾತ್ ಪರತರಂನಾಸ್ತಿದೈವಂ ವಸ್ತುತೋ ದೋಷವರ್ಜಿತಂ | ಇತಿ ಶ್ರೀಕೃಷ್ಣದಾಸಸ್ಯ ವಲ್ಲಭಸ್ಯ ಹಿತಂವಚಃ || ತವಾಸ್ಮಿರಾಧಿಕಾಕಾಂತ ಕರ್ಮಣಾಮನಸಾಗಿರಾ | ಕೃಷ್ಣಕಾಂತೇ ತವೈವಾಸ್ಮಿಯುವಾಮೇವಗತಿರ್ಮಮ || ಅಹಮುಕ್ತ್ಯಪರಾಧಾನಾಮಾಲಯಸ್ತ್ಯಕ್ತಸಾಧನಃ - ಎಂದು ಶ್ರೀ ವಲ್ಲಭಾಚಾರ್ಯರ ಸ್ವಪ್ನೋಕ್ತಿಗಳಿರುವವು.

ಶ್ರೀ ಶಂಕರಾಚಾರ್ಯರು.

- ಉತ್ಪತ್ತಿಂಚ ವಿನಾಶಂಚ ಭೂತಾನಾಮಾಗತಿಂ ಗತಿಂ | ವೇತ್ತಿವಿದ್ಯಾಮವಿದ್ಯಾಂಚ ಸವಾಚ್ಯೋಭಗವಾನಿತಿ || ಈ ಶ್ಲೋಕದಲ್ಲಿ ಹೇಳಿದಂತೆ ಸರ್ವಜ್ಞ ಸರ್ವಶಕ್ತಿಮಾನನಾದ ಭಗವಾನನೇ ಬ್ರಹ್ಮಶಬ್ದದಿಂದ ಹೇಳಲ್ಪಟ್ಟಿರುವನು. ಅದೇ ಬ್ರಹ್ಮವೇ ಸ್ಥೂಲಸೂಕ್ಷ್ಮಕಾರಣವಾದ ಪ್ರಪಂಚಕ್ಕೆ ಅವಧಿರೂಪವಾಗಿಯೂ ಬೇರೊಂದುರಹಿತವಾಗಿ (ಅರ್ಥಾತ್ ಸರ್ವಸ್ವೀ ತಾನೇತಾನಾಗಿ) - ತತ್ವಮಸ್ಯಾ - ದಿ ಮಹಾವಾಕ್ಯಗಳಿಂದೇಕೀಕರಿಸಿಕೊಂಡ ಬ್ರಹ್ಮವೇ ಜಡ ಅಸತ್ಯ ಅಹಂಕಾರಾದಿ ಸ್ವಭಾವಗಳಿಗೆ ವಿರುದ್ಧವಾದ ಸತ್ಯ, ಜ್ಞಾನ, ಆನಂದಾದಿ ಗುಣಗಳಿಂದ ಪ್ರಕಾಶಿಸುವದು. - ಅಯಂ ಪ್ರಪಂಚೋಮಿಥ್ಯೈವಸತ್ಯಂ ಬ್ರಹ್ಮಾಹಮವ್ಯಯಂ - ಜೀವಬ್ರಹ್ಮಭೇದವು ಉಪಾಧಿಮೂಲಕ ಹಾಗೂ ಕಲ್ಪನಾಮೂಲಕ ಬಂದಿರುವದು. ಅವುಗಳ ಅಭೇದವು ಸ್ವಾಭಾವಿಕ ಹಾಗೂ ಪಾರಮಾರ್ಥಿಕ ಉಳ್ಳದ್ದಿರುವದು. ಬ್ರಹ್ಮವು ನಿರ್ಗುಣವಾಗಿದ್ದು ಬ್ರಹ್ಮಭಿನ್ನವಾದ ಸಮಸ್ತ ಜಗತ್ತು ಮಿಥ್ಯಾರೂಪವಿರುವದು. - ಕಪ್ಪೆಚಿಪ್ಪಿನಲ್ಲಿ ಹ್ಯಾಗೆ ಏಕಕಾಲಕ್ಕೆ ಮುತ್ತುಮಣಿಗಳ ಭಾಸವಾಗುವದೋ ಅದರಂತೆ ಶುದ್ಧ ಚಿದ್ರೂಪಪ್ರಪಂಚರಹಿತ ಬ್ರಹ್ಮನಲ್ಲಿ ಅಧ್ಯಾರೋಪ ಅಪವಾದಗಳಿಂದ ಪ್ರಪಂಚವು ಆರೋಪಿಸಲ್ಪಟ್ಟಿರುವದು. ಆದ್ದರಿಂದ ಮೂಲ ಮಾಯಾಸಂಬಂಧರಹಿತವಾದ ಬಿಂಬಾಖ್ಯವೆಂಬ ಪರಮತತ್ವವು ಸತ್ವಪ್ರಧಾನಮಾಯೆಯಲ್ಲಿ ಪ್ರತಿಬಿಂಬಿಸಲ್ಪಟ್ಟು ಅಂತರ್ಯಾಮ್ಯಾಖ್ಯಬ್ರಹ್ಮವಾಗಿ ಉಪಾಧಿಸಂಯೋಗದಿಂದ ವಿಕಾರಹೊಂದುವಂಥಾದ್ದಾಗಿ ಸಂಸಾರದಲ್ಲಿ ಬಿದ್ದು ತಾಪತ್ರಯಗಳಿಂದ ಸಂತಪ್ತವಾಗಿ ನಿವೃತ್ತಿಯ ಉಪಾಯವನ್ನು ತಿಳಿಯದೇ ಪುನಃ ಪುನಃ ದುಃಖವನ್ನೇ ಅನುಭವಿಸುತ್ತಾ ಪರಿವರ್ತಿಸುತ್ತಿರುವದು. ಅವಿದ್ಯೋತ್ಪನ್ನವಾದದ್ದು ಅಭಿಮಾನ. ಅಭಿಮಾನದಿಂದ ಹುಟ್ಟಿರುವವು ರಾಗದ್ವೇಷಾದಿಗಳು. ಆ ರಾಗದ್ವೇಷಾದಿಗಳಿಂದಲೇ ಕರ್ಮೋತ್ಪತ್ತಿಯು. ಆ ಕರ್ಮಾನುಸಾರವಾಗಿಯೇ ಶರೀರೋಪಾಧಿಗಳ ಪ್ರಾಪ್ತಿಯು. ಆ ಉಪಾಧಿಸಂಬಂಧದಿಂದಲೇ ನಿತ್ಯಾನಂದನಾದ ಬ್ರಹ್ಮನಲ್ಲಿ ಕಲ್ಪಿಸಲ್ಪಟ್ಟೀ ದುಃಖಾದಿಗಳನ್ನು ಚಿಂತಿಸುತ್ತಾ ಸ್ವಯಂವಿಕಾರರಹಿತನಾಗಿ ಸ್ವೇಚ್ಛೆಯಿಂದ ಬಂದಂಥಾ ಅನ್ನಪಾನಾದಿಗಳಿಂದ ಸ್ವಶರೀರ ನಿರ್ವಾಹವನ್ನು ಅನಾಸಕ್ತಬುದ್ಧಿಯಿಂದ ಮಾಡುತ್ತಾ ಕರ್ಮಾನುಸಾರ ಪ್ರಾಪ್ತವಾದ ಶರೀರದ ಪತನವಾಗುವವರೆಗೂ ಅತ್ತಿತ್ತ ಸಂಚರಿಸಿ ಈ ಶರೀರವು ಬೀಳಲು ಹ್ಯಾಗೆ ಘಟನಷ್ಟವಾದಲ್ಲಿ ಕೊಡದೊಳಗಿದ್ದ ಆಕಾಶವು ಮಹಾಕಾಶರೂಪವಾಗಿ ತೋರುವದೋ ಅದರಂತೆ - ನತಸ್ಯಪ್ರಾಣಾ ಉತ್ಕ್ರಾಮಂತಿ ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ - ಎಂಬ ವಾಕ್ಯದಂತೆ ಪ್ರಾಣಗಳಿಗೆ ಉತ್ಕ್ರಮಿಸಿ ಎಲ್ಲಿಯೂ ಹೋಗಲಿಕ್ಕೆ ಬಾರದ್ದರಿಂದ ಆ ಬ್ರಹ್ಮನಲ್ಲೇ ಅಡಕವಾಗಲು ಅಗ್ಗಿ ಸ್ವಯಂ ಕೇವಲಾತ್ಮದಿಂದ ಆಕಾಶದಂತೆ ಏಕಸ್ವರೂಪವಾಗಿ ಹೋಗುವದು. - ಸೂರ್ಯೋದಯವಾದಲ್ಲಿ ಅಂಧಕಾರವು ಹ್ಯಾಗೆ ನಾಶವಾಗುವದೋ - ಅದರಂತೆ ಏಕಾಕಾರವಾದ ಬ್ರಹ್ಮಜ್ಞಾನದಿಂದ ಮಾಯೆಯನ್ನು ನಾಶಮಾಡಿ ಬ್ರಹ್ಮಭಾವನೆಯಿಂದ ಮುಕ್ತಿಯನ್ನು ಹೊಂದುವದು. ಆದ್ದರಿಂದ ಆ ಬ್ರಹ್ಮಭಾವವೇ ಮೋಕ್ಷವೆಂದು ಹೇಳುವೆವು.

ಭಾಷ್ಯಗಳ ತ್ಯಾಜ್ಯಾತ್ಯಾಜ್ಯ ವಿಚಾರ.

ಶ್ರೀರಾಮಾನುಜಾಚಾರ್ಯರಿಂದ, ಯಾವ ಪ್ರಕೃತಿಪರಮಾತ್ಮರ ಭಿನ್ನತ್ವ ತೋರಿಸಿ ಪುನಃ ಅವರ ಸಂಯೋಗವೇನು ತೋರಿಸಲ್ಪಟ್ಟಿರುವದೋ ಅದು - ಸ್ವಾಭಾವಿಕೀಜ್ಞಾನಬಲಕ್ರಿಯಾಚ - ಎಂಬ ಮೊದಲಾದ ವೇದವಾಕ್ಯಗಳು ಪ್ರಕೃತಿಯು ಬ್ರಹ್ಮನ ಸ್ವಭಾವಸಿದ್ಧವಾದದ್ದೆಂದು ಹೇಳುವದರಿಂದ ಸ್ವಭಾವಸಿದ್ಧಶಕ್ತಿಯ ಭಿನ್ನತ್ವವು ಅಸಂಭವವಿರುವದರಿಂದ ಅವರ ಪೃಥಕ್ತ್ವ ಸಂಯೋಜನೆ ಅಯೋಗ್ಯವಂತಲೂ, ಹಾಗೂ ತನ್ನ ಸ್ವಭಾವವು ತನ್ನಿಂದ ಬೇರೆಯಾದದ್ದೆಂದು ಹೇಳಲುಬಾರದ್ದರಿಂದಲೂ, ಪ್ರಕೃತಿಯು ಪರಮೇಶ್ವರನಿಂದ ವಿಚ್ಛಿನ್ನವಾದದ್ದೆಂದು ಹೇಳುವ ವಿಶಿಷ್ಟಾದ್ವೈತವಾದವು ವಿದ್ವನ್ಮನೋಹರವಾಗಲಾರದು.

ಶ್ರೀಮಧ್ವಾಚಾರ್ಯರು, ಮುಕ್ತಾವಸ್ಥೆಯಲ್ಲಿಯೂ ಜೀವ ಮತ್ತು ಈಶ್ವರನ ಯಾವ ಭೇದತೋರಿಸುವರೋ ಅದು ಲೌಕಿಕವ್ಯವಹಾರದಲ್ಲಿ ಪ್ರೇಮಾಸ್ಪದವಸ್ತುವಿನೊಡನೆ ಏಕಾಕಾರತ್ವವು ಸ್ವಲ್ಪ ಅನುಭವಸಿದ್ಧವಾಗಿ ಕಂಡುಬರುತ್ತದೆಂದಮೇಲೆ ಮುಕ್ತಿಸ್ಥಿತಿಯಲ್ಲಿಯೂ ಭೇದವು ನಿತ್ಯ ಉಳಿಯುವದೆಂಬ ಮಾತು ಹ್ಯಾಗೆ ಸಂಭವಿಸುವದು? ಅದ್ದರಿಂದ ಅನುಭವಾದಿ ಪ್ರಮಾಣಗಳಿಗೆ ವಿರುದ್ಧವಾದದ್ವೈತವಾದವೆಂದು ಕಂಡುಬರುವದು.

ಶ್ರೀವಲ್ಲಭಾಚಾರ್ಯರು ಲೌಕಿಕ ಪಾರಮಾರ್ಥಿಕಾದಿ ಸರ್ವವ್ಯವಹಾರಗಳನ್ನಿನ್ನೇನು ರಾಧಾಕೃಷ್ಣಾರ್ಪಣಮಾಡಿ ಆಚರಿಸಬೇಕೆಂದು ತೋರಿಸಿರುವರೋ, ಅವರ ಆ ವಾಗ್ವೈಭವವು ಅತಿಗಹನ ತತ್ವರಹಿತವಾದುದ್ದು ಹಾಗೂ ಚಿತ್ತಶುದ್ಧ್ಯೈಕಜ್ಞಾನಮಾರ್ಗದರ್ಶಕವಲ್ಲವಾದ್ದರಿಂದ ಅತಿ ಪ್ರವರ್ತಕವಾಗಿರುವದು.

ಶ್ರೀಶಂಕರಾಚಾರ್ಯರು ಬ್ರಹ್ಮನಲ್ಲಿಯೇ ಅಧ್ಯಾಸ ಆರೋಪಣ ಪೂರ್ವಕವಾಗಿ ಅಂತ್ಯದಲ್ಲಿ ಪ್ರಕೃತಿಯ ಅತ್ಯಂತ ನಾಶವನ್ನೇನು ಹೇಳುವರೋ ಅವರ ಅಭಿಪ್ರಾಯದಂತೆಯೇ ಜಡಪ್ರಕೃತಿಯ ಅತ್ಯಂತ ಅಭಾವ ಅಂಗೀಕಾರಮಾಡಿದಲ್ಲಿ ಬ್ರಹ್ಮನಿಗೆ ಅಬಾಧಿತವಾದ ಸರ್ವಶಕ್ತಿಯುಂಟೆಂದು ಹೇಳುವದು ಹ್ಯಾಗೆ ಸಂಭವಿಸುವದು? ಈ ಮಾಯೆಯ ಅತ್ಯಂತನಾಶವನ್ನು ಹೇಳುವದರಿಂದ ಜೀವನಂತೆ ಬ್ರಹ್ಮವೂ ಖಂಡಿತ ಶಕ್ತಿಯುತವಾಗದ್ದೆಂದು ಹೇಳುವ ಪ್ರಸಂಗಬರುವದು ಹಾಗೂ ನಿತ್ಯ ಶುದ್ಧನಾದ ಬ್ರಹ್ಮನಲ್ಲಿ ಅವಿದ್ಯಾಮೂಲಕವಾದ ಅಹಂಭಾವಕತ್ವಾದಿಗಳು ಹ್ಯಾಗೆ ಉತ್ಪನ್ನವಾಗುವವು? ನಿರ್ವಿಕಾರಬ್ರಹ್ಮನಲ್ಲಿ ಅಧ್ಯಾಸ ಆರೋಪಾದಿಗಳು ಹ್ಯಾಗೆ ಸಂಭವಿಸುವವು?

ಸರ್ವಪ್ರಪಂಚವೇ ಮಿಥ್ಯಾ ಎಂದು ಹೇಳುವಲ್ಲಿ ವ್ಯಾವಹಾರಿಕ ಆಲಸ್ಯಾದಿದುರ್ಗುಣಗಳು ಹೆಚ್ಚಿಗೆ ಬೆಳೆಯುವ ಪ್ರಸಂಗಬರುವದು, ಮತ್ತು ಜಗತ್ತೇ ಸುಳ್ಳೆಂದಮೇಲೆ ಜಗತ್ತಿನೊಳಗಿನವರಾದ ಶಂಕರಾಚಾರ್ಯರ ಉಪದೇಶವಾದರೂ - ಬಾಲಭಾಷೆ - ಯಂತೆ ಸುಳ್ಳೆಂದು ಹೇಳಬೇಕಾಗುವದು. ಇದರಂತೆ ಶಂಕರಾಚಾರ್ಯರನ್ನು ಬಹುದೋಷಗಳು ವಿರೋಧಿಸುವವು. ಅಸ್ತು.

ಈಗ ಸರ್ವಾಂಗಪರಿಪೂರ್ಣವಾದ, ನಿಗಮಾಗಮೋಪನಿಷತ್ ಷಡ್ದರ್ಶನಾದಿ ಸರ್ವಶಾಸ್ತ್ರಗಳಿಗೆ ಸಮ್ಮತವಾದ, ಲೋಕೋತ್ತರ ಬುದ್ಧಿಮಾನರಾದ ಶ್ರೀಪತಿಪಂಡಿತಾಚಾರ್ಯ (ಶ್ರೀಕರಾಚಾರ್ಯ) ರಿಂದ ರಚಿಸಲ್ಪಟ್ಟ - ಶ್ರೀಕರಭಾಷ್ಯ - ದಲ್ಲಿರುವ ಉತ್ತರಪಕ್ಷವನ್ನು ಸಂಕ್ಷೇಪವಾಗಿ ತೋರಿಸುವೆನು.

ಶ್ರೀಕರಾಚಾರ್ಯರು, ಜಗತ್ತಿಗೊಬ್ಬ ಕರ್ತನಿರುವನೋ ಇಲ್ಲೋ? ಎಂಬ ಪ್ರಶ್ನೆಕ್ಕೆ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಐದು ಕೃತ್ಯಗಳುಳ್ಳ ಓರ್ವ ಕರ್ತಾ ಅಥವ ಒಂದುವಸ್ತುವು (ಬ್ರಹ್ಮನು) ಉಂಟೆಂತಲೇ ಅವಶ್ಯ ತಿಳಿಯತಕ್ಕದ್ದು. ಈರೀತಿಯಾದ ಓರ್ವ ಕರ್ತನಿರುವ ಪಕ್ಷದಲ್ಲಿ - ಅಸದ್ವಾ ಇದಮಗ್ರ ಆಸೀತ್ - ಇತ್ಯಾದಿಗಳಿಂದ ಏನೊಂದು ಇದ್ದಿಲ್ಲೆಂಬವಾಗಿ ಶಾಸ್ತ್ರಕಾರರು ಹಾಗೆ ಹೇಳಿದರು! ಎಂದು ಕೇಳಿದಲ್ಲಿ ಆ - ಅಸತ್ - ಶಬ್ದವು ಬ್ರಹ್ಮನ ಅತಿಸೂಕ್ಷ್ಮತ್ವವನ್ನು ಹೇಳುತ್ತದೆಯೇ ಹೊರ್ತು ಶೂನ್ಯತ್ವವನ್ನು ಬೋಧಿಸುವದಿಲ್ಲ. ಯಾಕೆಂದರೆ, - ಸತೋವೈ ಸದಜಾಯತ - ಎಂಬ ಸತ್ ಶಬ್ದವುಳ್ಳ ಉತ್ತರವಾಕ್ಯವು ವಿರೋಧವು ದುರ್ನಿವಾರಣವಾದೀತು, ಮತ್ತು ಆಕಾಶಕುಸುಮಶಶವಿಷಾಣ, ವಂಧ್ಯಾಪುತ್ರ ಇವುಗಳೋಪಾದಿಯಲ್ಲಿ ಬ್ರಹ್ಮನಿಗೆ ಅತ್ಯಂತಾಭಾವ ಉಂಟಾಗಿ ಪರಸ್ಪರ ವ್ಯಾಘಾತವಿರೋಧ ಸಂಭವಿಸುವದು. ಈ ಜಗತ್ತಿನಲ್ಲಿ ಎಷ್ಟೋ ಜನರು ಅನೇಕ ಸಹಾಯಸಂಪತ್ತುಳ್ಳವರಾಗಿ ವಿಶೇಷ ಶ್ರಮವಹಿಸಿ ಏನಾದರೊಂದು ಕಾರ್ಯ ಮಾಡಿದರು ಸಹ ಅದರಿಂದ ಅವರ ಅಭೀಷ್ಟ ಕಾರ್ಯವು ಸಿದ್ಧಿಯಾಗದ್ದು ಕಂಡುಬರುವದರಿಂದಲೂ ಏನೊಂದು ಸಹಾಯವಿಲ್ಲದವನಿಗೆ ಕಾಲಾಂತರದಲ್ಲಿ ದುರ್ಘಟಕಾರ್ಯಸಿದ್ಧಿಯು ಕಂಡುಬರುವದರಿಂದಲೂ, ರಥ, ಗೋಪುರ, ಅರಮನೆ ಮೊದಲಾದ ಕಾರ್ಯಸಮೂಹಗಳೆಲ್ಲಾ ಚೇತನ (ಪುರುಷ) ಕರ್ತೃಕತ್ವಸಾಪೇಕ್ಷವಿರುವದರಿಂದಲೂ ಕೇವಲ ಜಡಭೂತಗಳ ಸಂಯೋಗ ಮಾತ್ರದಿಂದ ಯಾವ ರಚನೆಯೂ ಆಗಲಾರದು. ಇನ್ನು ಸಗಣಿ ಮೊದಲಾದವುಗಳಲ್ಲಿ ಗುಪ್ತಜೀವವು (ಅತಿಸೂಕ್ಷ್ಮಪ್ರಾಣವಾಯುವು) ಈಶ್ವರನಿಂದ ಸರ್ವತ್ರಸ್ಥಾಪಿಸಲ್ಪಟ್ಟಿರುವದರಿಂದ ಅಲ್ಲಲ್ಲೇ ಕ್ರಿಮಿಗಳ ಉತ್ಪತ್ತಿಯು ಕಂಡುಬರುವದು. ಇದರಂತೆ ಸರ್ವತ್ರ ನಿಯಾಮಕ ಕರ್ತೃವಿನ ಅಪೇಕ್ಷೆಯಿರುವದರಿಂದಲೇ ಸರ್ವಸಹಾಯಸಂಪನ್ನನಾದ ಮಹಾರಾಜನಿಗೂ ಆಧಿವ್ಯಾಧಿ ಜರಾಮರಣ ದರಿದ್ರತ್ವಾದಿಗಳು ಕಂಡುಬರುವವು. ಆದ್ದರಿಂದ ಜೀವಗಳಿಗೆ ಜನ್ಮಾಂತರದಲ್ಲಿ ಮಾಡಿದ ಪುಣ್ಯಪಾಪ ಕರ್ಮಾನುಸಾರವಾಗಿ ರಾಜನಂತೆ ಫಲದಾಯಕನಾದ ಸ್ಥೂಲಸೂಕ್ಷ್ಮ ಜಡಚೇತನಗಳ ಪ್ರಕಾಶಕನಾದ ಸತ್ಯಜ್ಞಾನಾನಂತ ಕಲ್ಯಾಣಗುಣಸಂಪತ್ತಿಗೆ ಆಶ್ರಯಭೂತನಾದ ಬ್ರಹ್ಮನೆಂಬ ವಸ್ತುವು ಉಂಟೆಂದು ಅವಶ್ಯ ನಂಬತಕ್ಕದ್ದು. ಮತ್ತು ಅನಾದಿ ಸ್ವಾಭಾವಿಕವಾದ ಮಾಯೆಯ ಪಾಶದಿಂದ ಬದ್ಧನಾದ ಭಯಂಕರ ಅಪಾರಸಂಸಾರದ ತಾಪತ್ರಯಗಳೆಂಬ ದುಃಖರೂಪಾಗ್ನಿಯಿಂದ ಸುಡುತ್ತಿರುವಂಥಾ ಅನೇಕ ಶರೀರಗಳ ಗಮನಾಗಮನ ಕಾಮಕ್ರೋಧಾದಿಗಳಿಂದ ಪರಂಪರೆಯಾಗಿ ಬಂದ ಸುಖದುಃಖಗಳ ಆಶ್ರಯಭೂತವಾದಂಥಾದ್ದೇ ಜೀವವು. ಯದ್ಯಪಿ ಜೀವವು ಬ್ರಹ್ಮಾಭಿನ್ನವಿದ್ದಾಗ್ಯೂ, - ಪರಾತ್ಪರಂ ಪುರುಷಮುಪೈತಿದಿವ್ಯಂ - ಇತ್ಯಾದಿ ವಾಕ್ಯಗಳಲ್ಲಿ ನಿಃಸಂದೇಹವಾಗಿ ಬ್ರಹ್ಮಪ್ರಾಪ್ಯವಿದ್ದು ಜೀವವು ಪ್ರಾಪಕವಾಗಿರುವದು. ಅರ್ಥಾತ್ ಜೀವನಿಗೆ ಬ್ರಹ್ಮಸಾಮೀಪ್ಯವು ಸಿಗಲು ಅಸಾಧ್ಯವುಂಟೆಂದು ಉಪದೇಶಮಾಡಿರುವರು. ಹ್ಯಾಗೆ ಭ್ರಮರವು ಹುಳವನ್ನು ತನ್ನಾಕಾರಮಾಡುವದೋ, ಮತ್ತು ಲೋಹರಸಾದಿಗಳಲ್ಲಿ ಸ್ವಾಭಾವಿಕ ಭೇದನಿವೃತ್ತಿಯಿಂದ ಅಗ್ನಿಸ್ವರೂಪವಾಗಿ ಕಾಣುವದೋ ಅದರಂತೆ ಜೀವನಿಗೆ ಅದ್ವಿತೀಯ ಬ್ರಹ್ಮಜ್ಞಾನದಿಂದ ಸ್ವಾಭಾವಿಕ ಮಲತ್ರಯವುಳ್ಳ ಮಾಯಾಪಾಶ ದುಃಖನಿವೃತ್ತಿಯಾಗಿ ಆ ಜೀವವು ಪರಶಿವೈಕ್ಯ ಮುಕ್ತಿಯನ್ನು ಹೊಂದುವದು.

ಪ್ರಕೃತಿಯ ವಿಚಾರ.

ಸೃಷ್ಟಿಯ ಪೂರ್ವಕಾಲದಲ್ಲಿಯೂ ಜಗದುಪಾದಾನಕಾರಣವಾದ ಪ್ರಕೃತಿಯು ನಿತ್ಯಸ್ಥಾಯಿಯಾಗಿರುವದರಿಂದ ಬ್ರಹ್ಮನು ಅದ್ವೈತನೆಂಬುವದು ಹ್ಯಾಗೆ ಎಂದು ವಿಚಾರಮಾಡಿದಲ್ಲಿ ಆ ಪ್ರಕೃತಿಯು ಈಶ್ವರನ ಶಕ್ತಿಯಾಗಿ ಅದು ಅಭಿನ್ನಸ್ವರೂಪವಾಗಿರುವದರಿಂದ - ಸೂಜಿಗಲ್ಲಿನಲ್ಲಿರುವ ಲೋಹಕರ್ಷಣದಂತೆಯೂ, ಅಗ್ನಿಯ ದಾಹಶಕ್ತಿಯಂತೆಯೂ ಆ ಪರಮಾತ್ಮನಿಂದ ಪ್ರಕೃತಿಯು ಅಭಿನ್ನವಾಗಿರುವದು. ಆದ್ದರಿಂದಲೇ ಶಾಸ್ತ್ರದಲ್ಲಿ - ತದಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ | ಪರಾಸ್ಯಶಕ್ತಿರ್ವಿವಿಧೈವಶ್ರೂಯತೆ - ಸ್ವಾಭಾವಿಕೀಜ್ಞಾನಬಲಕ್ರಿಯಾಚ - ಇತ್ಯಾದಿ ವೇದವಾಕ್ಯಗಳಲ್ಲಿ ಪರಶಕ್ತಿಯು ಈಶ್ವರನ ಸ್ವಭಾವವೆಂದು ತೋರಿಸುವದರಿಂದ ಮೋಕ್ಷಾಪೇಕ್ಷಿಗಳು ಅವೈದಿಕವಾದ ಜಗನ್ಮಿಥ್ಯಾಬೋಧಕ ಅದ್ವೈತವನ್ನು ಎಂದೂ ನಂಬಬಾರದು. ಇದರಂತೆ - ಜ್ಞಾಜ್ಞೌ ದ್ವಾವಜಾವೀಶಾನೀಶೌ, ನಕದಾಚಿದನೀದೃಶಂಜಗತ್, ಪಾದೋಸ್ಯವಿಶ್ವಾಭೂತಾನಿತ್ರಿಪಾದಸ್ಯಾಮೃತಂದಿವಿ - ಇತ್ಯಾದಿ ವೇದವಾಕ್ಯಗಳಿಂದ ಸಮುದ್ರದಲ್ಲಿ ಹುಟ್ಟುವ ಬುರುಗುತೆರೆಗಳಂತೆ ಎಲ್ಲಾ ಜಗತ್ತಿನ ಉತ್ಪತ್ತಿಸ್ಥಿತಿಲಯಗಳ ಕರ್ತೃತ್ವದಿಂದ ಮಹದಾಕಾಶಾಂತರ್ಭೂತನಾದ ವಾಯ್ವಾದಿಗಳಂತೆ ಜಗತ್ತು ಪರಮೇಶ್ವರಾಂತರ್ಭೂತವಿರುವದರಿಂದ ಪ್ರಕೃತಿಜೀವಗಳ ನಿತ್ಯತ್ವಪೂರ್ವಕ ತದಾತ್ಮಕವಿರುವದರಿಂದಲೂ ನನ್ನ ಸ್ವಭಾವವು ನನ್ನಿಂದ ಬೇರೆ ಉಂಟೆಂದು ಹೇಳಲು ಹ್ಯಾಗೆ ಬರಲಾರದೋ ಅದರಂತೆ ಪರಮಾತ್ಮನಿಂದ ಮಾಯೂ ಅಭಿನ್ನವಾಗಿರುವದು. ಆದರೆ ಕೆಲವರು ಮಾಯೂ ಅಭಿನ್ನವಾಗಿದ್ದು ಅದು ಪುನಃ ಸಂಯೋಗವಾಗದೆಂಬ ವೈಶಿಷ್ಟ್ಯಪ್ರತಿಪಾದಕ - ವಿಶಿಷ್ಟಾದ್ವೈತವಾದ ವನು ಮಾಡುವರೋ - ಆ ವಾದವು ಅಸಮಂಜಸವೇ ಸರಿ. ಈಶ್ವರಮಾಯಾಜೀವಗಳ ಪರಸ್ಪರ ಸಂಬಂಧ, - ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ - ಎಂಬದಾಗಿ ಬ್ರಹ್ಮನಿಗೆ ಸರ್ವಜ್ಞತ್ವ ಅಸಾಧಾರಣತ್ವಾದಿ ಧರ್ಮೋಪದೇಶವಿರುವದರಿಂದ ಶುದ್ಧಚಿದ್ರೂಪತ್ವವು ಸ್ವಾಭಾವಿಕ ಅವಿದ್ಯಾಪಾಶಾಬದ್ಧವಿರುವದರಿಂದ - ಜೀವನಿಗೆ - ಜಡತ್ವವು ಮಹದಾದಿ ಜಗದುಪಾದಾನಕಾರಣವಾದ್ದರಿಂದ ಸತ್ವ ರಜ ತಮೋಗುಣಾತ್ಮಕ - ಪ್ರಕೃತಿಗೆ - ಜಡರೂಪತ್ವವು. ಬ್ರಹ್ಮನು ಶುದ್ಧಚಿದ್ರೂಪನಿದ್ದಮೇಲೆ ಅವನಿಗೆ ಜಗದಾತ್ಮಕತ್ವವು ಜಡಪ್ರಪಂಚಕಲ್ಪನೆಯು ಹ್ಯಾಗೆ ಎಂದು ಕೇಳಿದಲ್ಲಿ - ಯಥೋರ್ಣನಾಭಿಃ ಸೃಜತೇಗೃಹ್ಣತೇಚ - ಎಂಬೀ ಮೊದಲಾದ ವಾಕ್ಯಗಳಿಂದ ಚೇತನವಾದ - ಜೇಡಹುಳದಿಂದ ಜಡವಾದ ಜಾಲವು ಹ್ಯಾಗೆ ಹುಟ್ಟುವದೋ ಅದರಂತೆ ಅಘಟಿತಘಟನಾಶಕ್ತಿಯು ತನ್ನಿಂದ ಪರಮಾತ್ಮನಿಗೇನು ಹೇಳತಕ್ಕದ್ದು. ವೇದವು - ಯತೋವಾಇಮಾನಿಭೂತಾನಿಜಾಯಂತೆ - ಎಂದು ನಿಮಿತ್ತಕಾರಣವನ್ನು - ಯತ್ಪ್ರಯಂತ್ಯಭಿಸಂವಿಶಂತಿ - ಎಂದು ಉಪಾದಾನ ಕಾರಣವೆಂಬದಾಗಿ ಅಭಿನ್ನನಿಮಿತ್ತೋಪಾದಾನವನ್ನು ಪರಮೇಶ್ವರನಿಗೆ ತೋರಿಸಿ - ಸರ್ವಂ ಖಲ್ವಿದಂಬ್ರಹ್ಮ - ತಜ್ಜಲಾನಿತಿಶಾಂತಉಪಾಸೀತ ಎಂಬದಾಗಿ ಜಡಚೇತನಗಳಾದ ಪ್ರಪಂಚಪರಮಾತ್ಮರ ಕಾರಣವನ್ನೂ ಐಕ್ಯವನ್ನೂ ತೋರಿಸುತ್ತದೆ. ಇದೇ ವೈದಿಕಸಿದ್ಧಾಂತವು.

ಎಲ್ಲಿ ಬ್ರಹ್ಮನಿಗೆ ಜಗತ್ಕಾರಣವನ್ನು ಹೇಳಿದಮೇಲೆ ಮೃಗಾದಿಗಳಂತೆ ನಿರ್ವಿಕಾರತ್ವವು ಬರುವುದಿಲ್ಲ. ಎಂದರೆ ಎಂದೂ ಬರಲಾರದೆಂದು ಹೇಳುವೆವು. ಯಾಕಂದರೆ ಮಾಯೆಯು ಈಶ್ವರನ ಸ್ವಭಾವವಾಗಿರುವದರಿಂದ ಆ ಮಾಯೆಯಿಂದಲೇ ಜಗದುಪಾದಾನ ಕಾರಣವಾಗಿರುವದರಿಂದ ವಿರೋಧ ಬರಲಾರದು. ಬಾಂಧವರೇ. ವೇದಾಂತದ ಇಂಗಿತವನ್ನು ತಿಳಿಯದೇ ಕೆಲವರು ಮೋಹಿತರಾಗಿ - ವೇದವೇದಾಂತಗಳ - ಅಪಾರ್ಥವನ್ನು ಕಲ್ಪಿಸಿ ಬ್ರಹ್ಮನಲ್ಲೇ - ಅಧ್ಯಾಸಾದಿ - ಇಂದ - ಕಪ್ಪಿಚಿಪ್ಪಿನಲ್ಲಿ ಏಕಕಾಲಕ್ಕೆ ಬೆಳ್ಳಿಯ ಭಾನವಾದಂತೆ - ಜೀವಭಾವವನ್ನು ಆರೋಪಿಸಿ ಬ್ರಹ್ಮನಿಗೆ ಜೀವತ್ವವು ಅವಿದ್ಯೆಯಿಂದ ಭ್ರಾಂತಿಮಾತ್ರ ಕಲ್ಪಿತವೆಂತಲೂ ಹಾಗೂ ಜಗತ್ತು ಮಿಥ್ಯೆ, ಎಂತಲೂ ವಾದಿಸುವರು. ಆದರೆ ಅದು ವಿಹಿತವಲ್ಲ. ಯಾಕಂದರೆ ಎಲ್ಲಾದರೂ ಅನೇಕ ಪದಾರ್ಥಗಳಿದ್ದಲ್ಲೇನೆ ಭ್ರಾಂತಿಯು ಉತ್ಪನ್ನವಾಗಿರುವದು. ಆದರೆ ಇಲ್ಲಿ ಬ್ರಹ್ಮಾತಿರಿಕ್ತವಸ್ತುವೇ ಇಲ್ಲದ್ದರಿಂದ ಭ್ರಾಂತಿ ಹುಟ್ಟುವ ಸಂಭವವೇ ಇಲ್ಲ. ಇನ್ನು ಎರಡನೇ ವಸ್ತುಸ್ವೀಕಾರಮಾಡಿದಲ್ಲಿ ಅದ್ವೈತಹಾನಿಯು ವಸ್ತ್ವಂತರಂಗೀಕಾರ ಮಾಡದಿದ್ದಲ್ಲಿ ಭ್ರಾಂತಿಯು ಸಂಭವಿಸಲಾರದು. - ಬ್ರಹ್ಮವಿದಾಪ್ನೋತಿಪರಂ - - ತಮೇವ ವಿದಿತ್ವಾ ಅತಿಮೃತ್ಯುಮೇತಿ - ಇತ್ಯಾದಿ ವೇದವಾಕ್ಯಗಳಲ್ಲಿ ಬ್ರಹ್ಮನಿಗೆ ತನುಃಪರತ್ವವೂ ಆ ಬ್ರಹ್ಮಜ್ಞಾನದಿಂದ ಜೀವಗಳಿಗೆ ಮುಕ್ತಿಹೇತುವೂ ಉಪದೇಶಿಸಲ್ಪಟ್ಟಿರುವದು. ಆದ್ದರಿಂದ ಬ್ರಹ್ಮನಲ್ಲೇ ಜೀವತ್ವಕಲ್ಪನವು ಅಸಮಂಜಸವಾಗಿರುವದು.

ಪ್ರಪಂಚಮಿಥ್ಯಾವಾದ ಖಂಡನವು.

ಸ್ವಪ್ನದಂತೆ ಪ್ರಪಂಚವು ಮಿಥ್ಯಾ ಎಂದು ಹೇಳುವದು ವಿಹಿತವಲ್ಲ. ಯಾಕಂದರೆ ಪ್ರಪಂಚದಲ್ಲಿ ಅರ್ಥಸಿದ್ಧಿ, ಕ್ರಿಯಾಸಿದ್ಧಿಗಳು ಕಂಡುಬರುವದರಿಂದಲೂ, ವಿಧಿನಿಷೇಧ ನಿಯಮನ ಮಾಡುವ ಶಾಸ್ತ್ರ ಮತ್ತು ಆಚಾರ್ಯರಿಂದ ಉಪದೇಶಿಸಲ್ಪಟ್ಟ ಕರ್ತವ್ಯಕರ್ಮವಿರುವದರಿಂದಲೂ ಹಾಗೂ - ನಾಭಾವಉಪಲಬ್ಧೇರ್ವೈಧರ್ಮ್ಯಾಚ್ಚನಸ್ವಪ್ನವದಿತಿ - ಎಂದು ಭಗವದ್ವೇದವ್ಯಾಸರಿಂದ - ಸ್ವಪ್ನೇಂದ್ರಜಾಲದಂತೆ - ಪ್ರಪಂಚಮಿಥ್ಯಾ ಎಂದು ಹೇಳುವ ವಾದವು ಅನೇಕರೀತಿ ನಿರಾಕರಿಸಲ್ಪಟ್ಟಿರುವದರಿಂದಲೂ - ಅಸತ್ಯಮಪ್ರತಿಷ್ಠಂತೆಜಗದಾಹುರನೀಶ್ವರಾಃ - ಎಂದು ಜಗನ್ಮಿಥ್ಯಾವಾದವು ಕೃಷ್ಣದೇವರಿಂದ ದೂರೀಕರಿಸಲ್ಪಟ್ಟಿರುವದರಿಂದಲೂ ಸರ್ವಥಾ ಈ ವಾದವು ವಿಹಿತವಲ್ಲ. ಇಷ್ಟೇ ಅಲ್ಲದೆ ನಿರ್ವಿಶೇಷಬ್ರಹ್ಮವುಂಟೆಂದು ಹೇಳುವಲ್ಲಿ ಪ್ರಮಾಣವೇನು ಎಂದು ಕೇಳಿದಲ್ಲಿ ವೇದಪ್ರಮಾಣವುಂಟೆಂದು ಹೇಳುವಲ್ಲಿ ಆ ವೇದವೂ ಜಗತ್ತಿನೊಳಗಿದ್ದದರಿಂದ ತತ್ಪ್ರತಿಪಾದ್ಯವಾದ ಬ್ರಹ್ಮನಿಗೂ ಮಿಥ್ಯಾತ್ವ ಸಂಭವಿಸುವದು. ವೇದವು ಅನಾದ್ಯನಂತವೆಂದು ಅಂಗೀಕಾರಮಾಡಿದಲ್ಲಿ ಅದ್ವೈತಹಾನಿಯು ಅನಂಗೀಕರಿಸಿದಲ್ಲಿ ಬ್ರಹ್ಮನ ಅಸ್ತಿತ್ವಕ್ಕೆ ಎರಡನೇ ಸತ್ಪ್ರಮಾಣಗಳಿಲ್ಲದ್ದರಿಂದ ಆ ಬ್ರಹ್ಮನಿಗೆ - ವಂಧ್ಯಾಪುತ್ರನಂತೇ - ಮಿಥ್ಯಾತ್ವವು ಬರುವದು. ಹಾಗೂ ಅಧ್ಯಾಸ ಸ್ವೀಕರಿಸದಿದ್ದಲ್ಲಿ ಮುಕ್ತಿಗೆ ಬಾಧಕವು ಯಾವದೂ ಇಲ್ಲದ್ದರಿಂದ ಹಾಗೂ ಅಧ್ಯಾಸ ಸ್ವೀಕರಿಸದಿದ್ದಲ್ಲಿ - ಮಾಯೂ - ಸ್ವಾಭಾವಿಕವಿರುವದರಿಂದ ವೇದವಾಕ್ಯಗಳ ವಿರೋಧವಾಗುವದು. ಇದರಂತೆ ಜಗನ್ಮಿಥ್ಯಾವಾದದಲ್ಲಿ ಬಹುವಿರೋಧ ಕಂಡುಬರುವದರಿಂದಲೂ ಮೋಕ್ಷಾದಿಗಳು ಸುಳ್ಳೆಂಬ ಪ್ರಸಂಗ ಬರುವದರಿಂದಲೂ ಜಗನ್ಮಿಥ್ಯಾವಾದವು ತ್ಯಾಜ್ಯವೇ ಸರಿ. ಆ ಜಗನ್ಮಿಥ್ಯಾವಾದವಾರಣಮಾಡಲುದ್ದಿಶ್ಯ ವೇದಾಂತದಲ್ಲಿ - ತದನನ್ಯತ್ವಮಾರಂಭಣಶಬ್ದಾದಿಭ್ಯಃ - ಎಂದು ತಜ್ಜನ್ಯ ಪ್ರಪಂಚಕ್ಕೆ ತತ್ಸ್ವರೂಪನಿರ್ದೇಶಕ ಸೂತ್ರವು ಹೇಳಲ್ಪಟ್ಟಿರುವದು. ಹಾಗೂ - ನಮಿಥ್ಯಾತ್ವಾಯಕಲ್ಪಂತೆ ಜಗತಃಶಿವರೂಪತಃ - ಎಂಬದಾಗಿ ಸ್ಮೃತ್ಯಂತರದಲ್ಲಿ ನಿರ್ದೇಶಿಸಲ್ಪಟ್ಟಿರುವದು. ಸದಾಶೇಷಿಶೇಷತ್ವ (ಸೇವ್ಯ ಸೇವಕ) ವ್ಯವಸ್ಥಾಪಕವಾದ ದ್ವೈತಪಾಂಚರಾತ್ರಾದಿಗಳಂತೆ ಅಂಗಾಂಗಿಭಾವದಿಂದ ನಾವು ಸಾವಯವವಾದಿಗಳಲ್ಲ. ಯಾಕೆಂದರೆ, ಜೀವನಂತೆ ಈಶ್ವರನಿಗೂ ಸುಖದುಃಖಭೋಗಪ್ರಸಂಗ ಬರುವದು. ಹ್ಯಾಗೆ ಶರೀರದ ಒಂದುಭಾಗಕ್ಕೆ ನೋವಾದಲ್ಲಿ ಸರ್ವಶರೀರವು ಬಾಧಿತವಾಗುವದೋ, ಅದರಂತೆ ಈಶ್ವರನಿಗೂ ದುಃಖಿತ್ವಪ್ರಸಂಗವು ಬರುವದು, ಮತ್ತು - ಆಕಾಶವತ್ ಸರ್ವಗತಶ್ಚ ಪೂರ್ಣಃ - ಎಂಬ ಅನೇಕ ವೇದವಾಕ್ಯಗಳ ವಿರೋಧ ಬರುವದು.

ಇನ್ನು ಘಟಪಟಾದಿಗಳಂತೆ ಅತ್ಯಂತ ಭೇದವಾದಿಗಳೂ ಅಲ್ಲ, ಮತ್ತು - ಸತ್ಯಕಾಮ್ಯ ಸತ್ಯಸಂಕಲ್ಪಃ - ಎಂಬ ಅನೇಕ ಶ್ರುತಿಸಿದ್ಧವಾದ ಸ್ವಾಭಾವಿಕ ಅನಂತಕಲ್ಯಾಣಗುಣಗಳ ಭಂಗಪ್ರಸಂಗ ಬರುವದರಿಂದ - ರಜ್ಜು ಸರ್ಪದಂತೆ - ಅತ್ಯಂತ ಮಿಥ್ಯಾವಾದಿಗಳೂ ಅಲ್ಲ. ಆದರೆ ನಾವು ಸರ್ವಶ್ರುತಿಗಳ ಏಕವಾಕ್ಯತೆಯುಳ್ಳ ಸ್ವಾಭಾವಿಕಭೇದಾಭೇದವಾದಿಗಳು. ಹ್ಯಾಗಂದರೆ — ದ್ವಾಸುಪರ್ಣಾ ಇತ್ಯಾದಿ ಮಂತ್ರಗಳಿಂದ ಸಂಸಾರದಶೆಯಲ್ಲಿ ಜೀವಬ್ರಹ್ಮಗಳ ಭೇದವೂ ತತ್ವಮಸ್ಯಾದಿ ವಾಕ್ಯಗಳಿಂದ ಮೋಕ್ಷದಶೆಯಲ್ಲಿ ಅಭೇದವೂ ಯುಕ್ತವೇ ಆಗಿರುವದು.

- ಶ್ರುತ್ಯೈಕದೇಶಪ್ರಾಮಾಣ್ಯಂ | ದ್ವೈತಾದ್ವೈತನುತಾದಿಷು | ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಿತೇ || ವೀರಶೈವೈಕಸಿದ್ಧಾಂತೆ ಸರ್ವಶ್ರುತಿ ಸಮನ್ವಯಃ | ವಿಶಿಷ್ಟೋಚ್ಯತೇಶಂಭುರ್ದ್ವಾಸುಪರ್ಣೇತಿ ಮಂತ್ರತಃ | ಶೇಷಶಬ್ದೇನ ಶಾರೀರೋಯಥಾಗ್ನೇರಿತಿಮಂತ್ರತಃ | ಅದ್ವೈತೋನಭವೇದ್ಯೋಗೋ ಯಥಾನದ್ಯಾದಿಭಿಸ್ತಥಾ ||

ಈರೀತಿ ಮೇಲೆ ವರ್ಣನೆಮಾಡಿದಂಥಾ ಬ್ರಹ್ಮನಿಗೆ - ಲಿಂಗಮಧ್ಯೇ ಜಗತ್ಸರ್ವಂಲಿಂಗ ಬಾಹ್ಯಾತ್ಪರಂಸ್ಮೃ - - ಜ್ಯೋತಿರ್ಲಿಂಗಂ ಸದಾಮಧ್ಯೇ ನಿತ್ಯಂ ಧ್ಯಾಯೇತ್ ಸದಾಯತಿಃ - - ತತ್ವಾತೀತಂ ತಮಾಸನೋಲಿಂಗಮಾಹುಃ - ಇತ್ಯಾದಿ ವಾಕ್ಯಗಳಿಂದ ಲಿಂಗರೂಪತ್ವ ಉಪದೇಶಮಾಡಿರುವದರಿಂದಲೂ ಹಾಗೂ - ಅಮೃತಸ್ಯದೇವಧಾರಣೋ ಭೂಯಾಸಂ - - ತತ್ಸವಿತುರ್ವರೇಣ್ಯೋ ಭರ್ಗೋದೇವಸ್ಯಧೀಮಹೀ - ಇತ್ಯಾದಿಗಳಲ್ಲಿ ಧಾರಣಭರ್ಗಶಬ್ದಾದಿಗಳಿಂದ ಶಿವಲಿಂಗಧಾರಣವು ತೋರಿಸಿರುವದರಿಂದ - ಲಿಂಗಂ ಶಿವೋಭವೇತ್ ಕ್ಷೇತ್ರಮಂಗಂ ಸಂಯೋಗ ಆಶ್ರಯ ತಸ್ಮಾಲ್ಲಿಂಗಾಂಗಸಂಯುಕ್ತೋ ಯೋಪಿ ಸೋಪಿ ಶ್ರುವಿಪ್ರಾಭವೇತ್ - ಎಂದು ಶಂಕರಸಂಹಿತೆಯಲ್ಲಿಯೂ ಮತ್ತು ಲಿಂಗಪುರಾಣದಲ್ಲಿಯೂ ಹೇಳಿರುವದು. ಹಾಗೂ - ಶಿವಧ್ಯಾನಪರೋಭೂತ್ವಾ ಶಿವಲಿಂಗಾಂಗಸಂಯುತಃ - - ಮುಖೇ ಮಂತ್ರೋಹೃದಿಧ್ಯಾನಂ ಮಸ್ತಕೇ ಲಿಂಗಧಾರಣಂ - - ಶಿಖಾಸೂತ್ರಂ ತಥಾ ಭಸ್ಮಚೇದ್ಬ್ರಾಹ್ಮಣಲಕ್ಷಣಂ - ಎಂದು ಮನುಗೌತಮಾದಿ ಸ್ಮೃತಿಗಳಲ್ಲಿ ಆ ಲಿಂಗಧಾರಣವು ವೈದಿಕವೆಂದು ವಿಧಾನಮಾಡಿರುವದರಿಂದ ಆ ಲಿಂಗಧಾರಣಮಾಡದೇ ಇದ್ದಲ್ಲಿ - ಯಥಾಶ್ವಚಾನಗಂ ಕಾಷ್ಠಮನರ್ಹಂ ಸರ್ವಕರ್ಮಸು | ತಥಾಲಿಂಗವಿಹೀನಸ್ತು ಸರ್ವಕರ್ಮಬಹಿಷ್ಕೃತಃ - ಎಂದು ದೋಷ ತೋರಿಸುವದರಿಂದಲೂ ಆ ಬ್ರಹ್ಮಸ್ವರೂಪವಾದ ಲಿಂಗಧಾರಣ ಪೂಜಾದಿಗಳು ವೈದಿಕವೆಂಬುವದು ನಿರ್ವಿವಾದವು.

ಇನ್ನು ಉಪಾಸನಾಸಿದ್ಧಿಗಾಗಿ ಲಿಂಗವು - ಇಷ್ಟ, ಪ್ರಾಣ, ಭಾವ - ವೆಂಬದಾಗಿ ಮೂರುಪ್ರಕಾರ - ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾತ್ - ಎಂಬದಾಗಿ ಬ್ರಹ್ಮಸೂತ್ರಗಳಲ್ಲಿ ಅನೇಕರೀತಿ ವಿಸ್ತಾರಮಾಡಲ್ಪಟ್ಟಿರುವದು. ಲಿಂಗಾಂಗಿಧರ್ಮದಲ್ಲಿ ಲಿಂಗಧಾರಣ, ವಿದ್ಯಾಧ್ಯಯನ, ಅಧ್ಯಾಪನ ವ್ರತಾಚರಣಾದಿ ಇಹಪರ ಸುಖಸಾಧನಗಳಾದ ಸಮಸ್ತಕಾರ್ಯಗಳಲ್ಲಿ ಸಮಸ್ತ ಸ್ತ್ರೀ ಪುರುಷರಿಗೂ ಸಮಾನ ಅಧಿಕಾರವು ಹೇಳಲ್ಪಟ್ಟಿರುವದು ಹ್ಯಾಗಂದರೆ.— - ಸ್ತ್ರಿಯೋಬಾಲಾಸ್ತಥಾವೃದ್ಧಾಃ ಖಂಜಕುಬ್ಜಾಂಧಪಂಗವಃ | ಮಲ್ಲಿಂಗಧಾರಣಾದೇವಮದ್ರೂಪಾ ಏವತೆ ಶಿವೆ - ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಶೂದ್ರಾಶ್ಚೆ ಚಾನ್ಯಜಾತಯಃ | ಲಿಂಗಧಾರಣಮಾತ್ರೇಣ ಶಿವಏವನಸಂಶಯಃ - ಎಂದು ಪಾರಮೇಶ್ವರಾಗಮದಲ್ಲಿ ಉಪದೇಶಿಸಿದಂತೆಯೇ ಇವತ್ತಿಗೂ ಆ ಧರ್ಮದಲ್ಲಿ ಪ್ರಚಾರವಿರುವದು. ಲಿಂಗಧಾರಣ ಧ್ಯಾನಾದಿಗಳಿಂದ ಒಂದೇ ಜನ್ಮದಲ್ಲಿ ಮುಕ್ತನಾಗುವನೆಂದು ವಿಶ್ವಾಸವಿರುವದರಿಂದ ಆಗಾಮಿ ಜನ್ಮವಾದವು (ಪುನರ್ಜನ್ಮ) ಇವರಿಗೆ ಸಮ್ಮತವಿಲ್ಲ.

ಬಾಂಧವರೇ. ಈಗಿನಕಾಲದಲ್ಲಿ ಕೆಲವರು ಏನೋ ಒಂದು ಸ್ತ್ರೀಶಿಕ್ಷಣಾದಿ ಪ್ರಚಾರಮಾಡಿ ತೋರಿಸಿ ನಾವು ಸುಧಾರಕರೂ ಹೊಸಶೋಧಕರೂ ರಾಷ್ಟ್ರೋದ್ಧಾರಕರೂ ಎಂದು ಅಭಿಮಾನವನ್ನು ವಹಿಸುವರೋ ಅವರ ಈಕೃತಿಗಿಂತಲೂ ಅಧಿಕ ರಾಷ್ಟ್ರೋನ್ನತಿ ಕಾರಣಭೂತವಾದ - ವಿಶ್ವಬಂಧುತ್ವ, ಪ್ರೇಮಭೂತದಯಾ, ಸಮಾನಾಧಿಕಾರ, ವರ್ಣಜಾತಿಗಳೆಂಬ ದುಷ್ಟಭಾವನೆಗಳ ಉನ್ಮೂಲನ ಸ್ವದೇಶವ್ರತಾದಿ - ಅನೇಕ ಕಾರ್ಯಸಂಗ್ರಹವು ಸಾವಿರಾರುವರ್ಷಗಳಗಿಂತ ಪೂರ್ವದಲ್ಲೇ ಕಾರುಣ್ಯ, ಕಲ್ಯಾಣ, ಕೈವಲ್ಯಗಳೆಂಬ ಮೂರು ಸಂಪತ್ತಿನ ಪ್ರತಿಪಾದಕಗಳಾದ ಅಷ್ಟಾವರಣ, ಪಂಚಾಚಾರ ಪರಶಿವರೂಪವಾದ ಇಷ್ಟಲಿಂಗಧಾರಣ ನಿಷ್ಠಾಪರರಾದ ಲಿಂಗಾಂಗಿಧರ್ಮಪ್ರವರ್ತಕಾಚಾರ್ಯರೆನಿಸಿದ ಸಂಪೂರ್ಣ ವೇದಜ್ಞರಾಗಿ ಸರ್ವಜ್ಞರಾದ - ರೇಣುಕ, ಶಿವದೇವ, ಏಕೋರಾಮ, ಮರುಳಸಿದ್ಧ, ಅಗಸ್ತ್ಯಾದಿ ಪೂರ್ವಾಚಾರ್ಯರಿಂದ ನಿರ್ದೇಶಿಸಲ್ಪಟ್ಟಿರುವದು. ಆದ್ದರಿಂದ ಇಂಥಾ ಭವ್ಯದಿವ್ಯ ಔದಾರ್ಯ ಆಚಾರ ವಿಚಾರಗಳಿಂದ ಪರಮಪವಿತ್ರವಾದ ವಿಶೇಷಾದ್ವೈತತತ್ವಾಲಂಕೃತ ಸನಾತನವಾದ ಲಿಂಗಾಂಗಿಧರ್ಮವೇ ಸಾರ್ವತ್ರಿಕ ಸಮಸ್ತ ಪೃಥ್ವಿಯನ್ನು ವ್ಯಾಪಿಸುವ ಸುದಿನವನ್ನು ಜಗದೀಶ್ವರನು ಶೀಘ್ರವೇ ತರಲೆಂದು ಅನನ್ಯಭಾವನೆಯಿಂದ ಪ್ರಾರ್ಥಿಸುವೆನು.

ಬಾಂಧವರೇ, ಇದುವರೆಗೂ ಪೂರ್ವಪಕ್ಷ ಪರಪಕ್ಷ ನಿರಾಕರಣಪೂರ್ವಕ ತೋರಿಸಲ್ಪಟ್ಟ ಶ್ರೀಕರಭಾಷ್ಯ ವಿಷಯವನ್ನು ನಿರ್ಮತ್ಸರದಿಂದಲೂ ನಿಷ್ಪಕ್ಷಪಾತದಿಂದಲೂ ನಿಮ್ಮ ನಿಮ್ಮ ಮನಸ್ಸಿನಲ್ಲಿಯೇ ನೀವು ಸ್ವಲ್ಪ ವಿಚಾರಮಾಡಿದಿರೆಂದರೆ ಅಥವಾ ಆ ಭಾಷ್ಯವನ್ನು ಸ್ವತಃ ಅವಲೋಕನಮಾಡಿದಿರೆಂದರೆ ಶ್ರೀಕರಾಚಾರ್ಯರ ವಿಚಾರವಿವೇಚನಪದ್ಧತಿಯು ಹ್ಯಾಗೆ? ಅವರ ಅಗಾಧಜ್ಞಾನವು ಹ್ಯಾಗಿರುವದು ಮತ್ತು ಅವರ ತತ್ವಶೋಧವು ಹ್ಯಾಗೆ? ಎಂಬ ವಿಷಯದಲ್ಲಿ ಅವರ ಶ್ರೇಷ್ಠತ್ವವು ಸ್ವತಃ ನಿಮಗೆ ತಿಳಿಯುವದೆಂದು ಸೂಚಿಸಿ ನಿಮ್ಮೆದುರಿಗೆ ಇಂಥಾ ತತ್ವಸಿದ್ಧಾಂತ ಪ್ರತಿಪಾದನಮಾಡಲಿಕ್ಕೆ ಇಂದೂರ ರಾಜರಾಜೇಶ್ವರ ಶ್ರೀ ಸವಾಯಿ ತುಕೋಜೀರಾವ ಮಹಾರಾಜದರ್ಬಾರ ಪ್ರೋತ್ಸಾಹ ಸಾಹಾಯ್ಯ ಪೂರ್ವಕ ಅವರ ಪ್ರತಿನಿಧಿಯಾಗಿ ಇಲ್ಲಿಗೆ ಬಂದು ಏನೊಂದು ವ್ಯಾಖ್ಯಾನಮಾಡಿದೆನೋ ಆ ವಿಷಯಕವಾದ ಸರ್ವಶ್ರೇಯಸ್ಸು ಶ್ರೀಮನ್ಮಹಾರಾಜರಿಗೇ ಇರುವದು ಹಾಗೂ ಈ ಉದಾರಚರಿತವುಳ್ಳ ಮಹಾರಾಜರು ಸಂಸ್ಕೃತಭಾಷಾ ವಿಷಯದಲ್ಲಿ ಅತೀವ ಗೌರವವನ್ನು ವಹಿಸುವರು. ಆದ್ದರಿಂದ ಇವರಿಗೆ ಅನಂತಧನ್ಯವಾದಗಳನ್ನರ್ಪಿಸಿ ಇತರ ಎಲ್ಲಾ ಭಾರತೀಯ ನರೇಶ್ವರರು ಇವರಂತೆ ಪವಿತ್ರವಾದ ಸಂಸ್ಕೃತಭಾಷೆಯನ್ನು ಅಭಿವೃದ್ಧಿಗೊಳಿಸುವ ಮನಸ್ಕರಾಗಲೆಂತ ಅಪೇಕ್ಷಿಸಿ ಲೇಖವು ವಿಶೇಷ ವಿಸ್ತಾರವುಳ್ಳದ್ದಾಗುವದೆಂದು ಇಲ್ಲಿಗೇನೇ ಸಮಾಪ್ತಿ ಮಾಡುವೆನು.

ತವ್ಯ
ಪಂಡಿತ ಗುರುಬಸವಶಿವಾಚಾರ್ಯಸ್ವಾಮಿಗಳು,
ತಾ|| 1-12-25. ಸಂಸ್ಥಾನ ಕ್ಯಾಸನೂರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

೧೯೨೬ ನೆಯ ಇಸವಿ ಜನವರಿ ತಾ|| ೩೦ ರಿಂದ ೧೯೨೬ ನೆಯ ಇಸವಿ ಫೆಬ್ರವರಿ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಮಾಘ ಬಹುಳ ಬಿದಿಗೆಯಿಂದ ಮಾಘ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ಮಾಸ
30	[1]ಶನಿ	ಬಿದಿ	58-56	ಮಖಾ	60	17
31	ಭಾನು	ತದಿ	60	ಮಖಾ	6-29	18
1	ಸೋಮ	ತದಿ	3-51	ಪುಬ್ಬ	12-30	19
2	[2]ಮಂಗಳ	ಚೌತಿ	7-56	ಉತ್ತ	17-41	20
3	ಬುಧ	ಪಂಚ	10-59	ಹಸ್ತ	21-52	21
4	ಗುರು	ಷಷ್ಠಿ	12-46	ಚಿತ್ತ	24-52	22
5	[3]ಶುಕ್ರ	ಸಪ್ತ	13-18	ಸ್ವಾತಿ	26-36	23

(1) ಮಳೆನಕ್ಷತ್ರ-ಶ್ರವಣ ೩ ನೆಯ ಪಾದ. (2) ಮಳೆನಕ್ಷತ್ರ-ಶ್ರವಣ ೪ ನೆಯ ಪಾದ. (3) ಮಳೆನಕ್ಷತ್ರ-ಧನಿಷ್ಠ ೧ ನೆಯ ಪಾದ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲೀಚ್ಛಿಕಾ | ಘನಪಥಕೃತಾವತಾರಾ ಪಕ್ಷಜ್ಞ ಸತ್ಕೃತ್ತ ಮೋಹರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರ್ಯೋಲಂಸುಧೀಪುಂಗವ | ಸ್ತೋಮಾಭೀಷ್ಟದಲೀಲ ಪಾಠಕಿತ ಸಾಧ್ವಾಲವಾಲಂಪಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ತೆಯಂಸದಾಪುರಿಗೆ ಗೌರೀಶಾನುಕಂಪೋಜ್ಜಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಫೆಬ್ರವರಿ ತಾರೀಖು ೬ ನೆಯ ಶನಿವಾರ. [ಸಂಚಿಕೆ ೬

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗನ್ಮಾನ್ಯವಾದ ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರ ಪಾಕ.

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿ.

ಧಿಃಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ) ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಕಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶಕದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ ತಾಲಿಮಕಂದ, ಜಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೀಷ್ಟಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವಿಪಾಂತರಚಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶತಬೀಜ, ಸಾಗಬೀಜ, ಚಾರಬೀಜ, ಭೋಕರೀಬೀಜ, ನವಲೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ತಕಾವಂ, ಮಗಜ ಆಲದಹಾಲು, ಹತ್ತಿಕಾಸ್ತ, ವಾಕೇರಿಭಾತಾ, ಗೋಖುರು, ಅಡವೀ ಬೆಂಡಿ ಬೇರು, ಅಮೃತಸತ್ವ, ಇಸಬಗೋಲ, ಬುನಾನೆಲ್ಲಿಕಾಯಿ, ಸಲಾಜಿತ, ಜಾಜಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರ, ಕೇಶರಿ, ಯಾಲಕ್ಕಿರುಲ್ಲ ಸಕ್ಕರಿ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಿಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲೆಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲೆಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲೆ ಕೂಕವಿಸ್ಕಿಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲೆಯ ೧ ಡಬ್ಬಿಯು ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹಿಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ್ ಕ್ಲಾರ್ಕ ಪೋ. ತುಲಿಸ, ೪ ಲಖುಮಸಿ ಗೇಲಾಭಾಯಿ ಹಿಸ್ಸೆ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೇಳಕರ ಪೋ. ಕಾಂಚರೋಡ, ೬ ಶಿವಮ್ಮ ಬಿಗೌಡಾ ಪಾಟೀಲ ಅತ್ತಿಗೇರಿ, ೭ ಧ್ಯಾನಾಜಯರಾಮ ಪೋ. ಸೊಲ್ಲಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—44] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಲ್ಲಿನ ಸಾಧಾರಣ ನಶ್ಯದ ಸಂಚಿಗೆ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಕಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[80—18] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	52

SHREE SITHARAGHAVA VAIDYASALA

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಶ್ರೀಶಂಕರಾಚಾರ್ಯರು ಬ್ರಹ್ಮನಲ್ಲಿಯೇ ಅಧ್ಯಾಸ ಆರೋಪಣ ಪೂರ್ವಕವಾಗಿ ಅಂತ್ಯದಲ್ಲಿ ಪ್ರಕೃತಿಯ ಅತ್ಯಂತ ನಾಶವನ್ನೇನು ಹೇಳುವರೋ ಅವರ ಅಭಿಪ್ರಾಯದಂತೆಯೇ ಜಡಪ್ರಕೃತಿಯ ಅತ್ಯಂತ ಅಭಾವ ಅಂಗೀಕಾರಮಾಡಿದಲ್ಲಿ ಬ್ರಹ್ಮನಿಗೆ ಅಬಾಧಿತವಾದ ಸರ್ವಶಕ್ತಿಯುಂಟೆಂದು ಹೇಳುವದು ಹ್ಯಾಗೆ ಸಂಭವಿಸುವದು ? ಈ ಮಾಯೆಯ ಅತ್ಯಂತನಾಶವನ್ನು ಹೇಳುವದರಿಂದ ಜೀವನಂತೆ ಬ್ರಹ್ಮವೂ ಖಂಡಿತ ಶಕ್ತಿಯುತವಾಗದ್ದೆಂದು ಹೇಳುವ ಪ್ರಸಂಗಬರುವದು ಹಾಗೂ ನಿತ್ಯ ಶುದ್ಧನಾದ ಬ್ರಹ್ಮನಲ್ಲಿ ಅವಿದ್ಯಾಮೂಲಕವಾದ ಅಹಂಭಾವತ್ವಾದಿಗಳು ಹ್ಯಾಗೆ ಉತ್ಪನ್ನವಾಗುವವು ? ನಿರ್ವಿಕಾರಬ್ರಹ್ಮನಲ್ಲಿ ಅಧ್ಯಾಸ ಆರೋಪಾದಿಗಳು ಹ್ಯಾಗೆ ಸಂಭವಿಸುವವು ?

ಸರ್ವಪ್ರಪಂಚವೇ ಮಿಥ್ಯಾ ಎಂದು ಹೇಳುವಲ್ಲಿ ವ್ಯಾವಹಾರಿಕ ಆಲಸ್ಯಾದಿದುರ್ಗುಣಗಳು ಹೆಚ್ಚಿಗೆ ಬೆಳೆಯುವ ಪ್ರಸಂಗಬರುವದು, ಮತ್ತು ಜಗತ್ತೇ ಸುಳ್ಳೆಂದಮೇಲೆ ಜಗತ್ತಿನೊಳಗಿನವರಾದ ಶಂಕರಾಚಾರ್ಯರ ಉಪದೇಶವಾದರೂ - ಬಾಲಭಾಷೆ - ಯಂತೆ ಸುಳ್ಳೆಂದು ಹೇಳಬೇಕಾಗುವದು. ಇದರಂತೆ ಶಂಕರಾಚಾರ್ಯರನ್ನು ಬಹುದೋಷಗಳು ವಿರೋಧಿಸುವವು. ಅಸ್ತು.

ಈಗ ಸರ್ವಾಂಗಪರಿಪೂರ್ಣವಾದ, ನಿಗಮಾಗಮೋಪನಿಷತ್ ಷಟ್‌ದರ್ಶನಾದಿ ಸರ್ವಶಾಸ್ತ್ರಗಳಿಗೆ ಸಮ್ಮತವಾದ, ಲೋಕೋತ್ತರ ಬುದ್ಧಿಮಾನರಾದ ಶ್ರೀಪತಿಪಂಡಿತಾಚಾರ್ಯ (ಶ್ರೀಕರಾಚಾರ್ಯ) ರಿಂದ ರಚಿಸಲ್ಪಟ್ಟ - ಶ್ರೀಕರಭಾಷ್ಯ - ದಲ್ಲಿರುವ ಉತ್ತರಪಕ್ಷವನ್ನು ಸಂಕ್ಷೇಪವಾಗಿ ತೋರಿಸುವೆನು.

ಶ್ರೀಕರಾಚಾರ್ಯರು, ಜಗತ್ತಿಗೊರ್ವ ಕರ್ತನಿರುವನೋ ಇಲ್ಲೋ ಎಂಬ ಪ್ರಶ್ನೆಕ್ಕೆ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಐದು ಕೃತಿಗಳುಳ್ಳ ಓರ್ವ ಕರ್ತಾ ಅಥವ ಒಂದುವಸ್ತುವು (ಬ್ರಹ್ಮನು) ಉಂಟೆಂಬದೇ ಅವಶ್ಯ ತಿಳಿಯತಕ್ಕದ್ದು. ಈರೀತಿಯಾದ ಓರ್ವ ಕರ್ತನಿರುವಪಕ್ಷದಲ್ಲಿ - ಅಸದ್ವಾ ಇದಮಗ್ರ ಆಸೀತ್ - ಇತ್ಯಾದಿಗಳಿಂದ ಏನೊಂದು ಇಲ್ಲಲ್ಲೆಂಬವಾಗಿ ಶಾಸ್ತ್ರಕಾರರು ಹ್ಯಾಗೆ ಹೇಳಿದರು ? ಎಂದು ಕೇಳಿದಲ್ಲಿ ಆ - ಅಸತ್ - ಶಬ್ದವು ಬ್ರಹ್ಮನ ಅತಿಸೂಕ್ಷ್ಮತ್ವವನ್ನು ಹೇಳುತ್ತದೆಯೇ ಹೊರ್ತು ಶೂನ್ಯತ್ವವನ್ನು ಬೋಧಿಸುವದಿಲ್ಲ. ಯಾಕೆಂದರೆ, - ತತೋವೈಸದಜಾಯತ - ಎಂಬ ಸತ್ ಶಬ್ದವುಳ್ಳ ಉತ್ತರವಾಕ್ಯವು ವಿರೋಧವು ಮೂಲಕಾರಣವಾದೀತು, ಮತ್ತು ಆಕಾಶಕುಸುಮಶಶವಿಷಾಣ, ವಂಧ್ಯಾಪುತ್ರ ಇವುಗಳೋಪಾದಿಯಲ್ಲಿ ಬ್ರಹ್ಮನಿಗೆ ಅತ್ಯಂತಾಭಾವ ಉಂಟಾಗಿ ಪರಸ್ಪರ ಶ್ರುತಿವಿರೋಧ ಸಂಭವಿಸುವದು. ಈ ಜಗತ್ತಿನಲ್ಲಿ ಎಷ್ಟೋ ಜನರು ಅನೇಕ ಸಹಾಯಸಂಪನ್ನರಾಗಿ ವಿಶೇಷ ಶ್ರಮವಹಿಸಿ ಏನಾದರೊಂದು ಕಾರ್ಯ ಮಾಡಿದರು ಸಹ ಅದರಿಂದ ಅವರ ಅಭೀಷ್ಟ ಕಾರ್ಯವು ಸಿದ್ಧಿಯಾಗದ್ದು ಕಂಡುಬರುವದರಿಂದಲೂ ಏನೊಂದು ಸಹಾಯವಿಲ್ಲದವನಿಗೆ ಕಾಲಾಂತರದಲ್ಲಿ ದುರ್ಘಟಕಾರ್ಯಸಿದ್ಧಿಯು ಕಂಡುಬರುವದರಿಂದಲೂ, ರಥ, ಗೋಪುರ, ಅರಮನೆ ಮೊದಲಾದ ಕಾರ್ಯಸಮೂಹಗಳೆಲ್ಲಾ ಚೇತನ (ಪುರುಷ) ಕರ್ತೃತ್ವಸಾಪೇಕ್ಷವಿರುವದರಿಂದಲೂ ಕೇವಲ ಜಡಭೂತಗಳ ಸಂಯೋಗ ಮಾತ್ರದಿಂದ ಯಾವ ರಚನೆಯೂ ಆಗಲಾರದು. ಇನ್ನು ಸಗಣೆ ಮೊದಲಾದವುಗಳಲ್ಲಿ ಗುಪ್ತಜೀವವು (ಅತಿಸೂಕ್ಷ್ಮಪ್ರಾಣವಾಯುವು) ಈಶ್ವರನಿಂದ ಸರ್ವತ್ರಸ್ಥಾಪಿಸಲ್ಪಟ್ಟಿರುವದರಿಂದ ಅಲ್ಲಲ್ಲೇ ಕ್ರಿಮಿಗಳ ಉತ್ಪತ್ತಿಯು ಕಂಡುಬರುವದು. ಇದರಂತೆ ಸರ್ವತ್ರ ನಿಯಾಮಕ ಕರ್ತೃವಿನ ಅಪೇಕ್ಷೆಯಿರುವದರಿಂದಲೇ ಸರ್ವಸಹಾಯಸಂಪನ್ನನಾದ ಮಹಾರಾಜನಿಗೂ ಆಧಿವ್ಯಾಧಿ ಜರಾಮರಣ ದರಿದ್ರತ್ವಾದಿಗಳು ಕಂಡುಬರುವವು. ಆದ್ದರಿಂದ ಜೀವಗಳಿಗೆ ಜನ್ಮಾಂತರದಲ್ಲಿ ಮಾಡಿದ ಪುಣ್ಯಪಾಪ ಕರ್ಮಾನುಸಾರವಾಗಿ ರಾಜನಂತೆ ಫಲದಾಯಕನಾದ ಸ್ಥೂಲಸೂಕ್ಷ್ಮ ಜಡಚೇತನಗಳ ಪ್ರಕಾಶಕನಾದ ಸತ್ಯಜ್ಞಾನಾನಂತ ಕಲ್ಯಾಣಗುಣಸಂಪತ್ತಿಗೆ ಆಶ್ರಯಭೂತನಾದ ಬ್ರಹ್ಮನೆಂಬ ವಸ್ತುವು ಉಂಟೆಂದು ಅವಶ್ಯ ನಂಬತಕ್ಕದ್ದು. ಮತ್ತು ಅನಾದಿ ಸ್ವಾಭಾವಿಕವಾದ ಮಾಯೆಯ ಪಾಶದಿಂದ ಬದ್ಧನಾದ ಭಯಂಕರ ಅಪಾರಸಂಸಾರದ ತಾಪತ್ರಯಗಳೆಂಬ ದುಃಖರೂಪಾಗ್ನಿಯಿಂದ ಸುಡುತ್ತಿರುವಂಥಾ ಅನೇಕ ಶರೀರಗಳ ಗಮನಾಗಮನ ಕಾಮಕ್ರೋಧಾದಿಗಳಿಂದ ಪರಂಪರೆಯಾಗಿ ಬಂದ ಸುಖದುಃಖಗಳ ಆಶ್ರಯಭೂತವಾದಂಥಾದ್ದೇ ಜೀವವು. ಯದ್ಯಪಿ ಜೀವವು ಬ್ರಹ್ಮಾಭಿನ್ನವಿದ್ದಾಗ್ಯೂ - ಪರಾತ್ಪರಂ ಪುರುಷಮುಪೈತಿದಿವ್ಯಂ - ಇತ್ಯಾದಿ ವಾಕ್ಯಗಳಲ್ಲಿ ನಿಃಸಂದೇಹವಾಗಿ ಬ್ರಹ್ಮಪ್ರಾಪ್ತಿಯಿದ್ದು ಜೀವವು ವ್ಯಾಪಕನಾಗಿರುವದು. ಅರ್ಥಾತ್ ಜೀವನಿಗೆ ಬ್ರಹ್ಮಸಾಮೀಪ್ಯವು ಸಿಗಲು ಅಸಾಧ್ಯವುಂಟೆಂದು ಉಪದೇಶಮಾಡಿರುವರು. ಹ್ಯಾಗೆ ಭ್ರಮರವು ಹುಳವನ್ನು ತನ್ನಾಕಾರಮಾಡುವದೋ, ಮತ್ತು ಲೋಹರಸಾದಿಗಳಲ್ಲಿ ಸ್ವಾಭಾವಿಕ ಭೇದನಿವೃತ್ತಿಯಿಂದ ಅಗ್ನಿಸ್ವರೂಪವಾಗಿ ಕಾಣುವದೋ ಅದರಂತೆ ಜೀವನಿಗೆ ಅದ್ವಿತೀಯ ಬ್ರಹ್ಮಜ್ಞಾನದಿಂದ ಸ್ವಾಭಾವಿಕ ಮಲತ್ರಯವುಳ್ಳ ಮಾಯಾಪಾಶ ದುಃಖನಿವೃತ್ತಿಯಾಗಿ ಆ ಜೀವವು ಐಶಿವೈಕ್ಯ ಮುಕ್ತಿಯನ್ನು ಹೊಂದುವದು.

ಪ್ರಕೃತಿಯ ವಿಚಾರ.

ಸೃಷ್ಟಿಯ ಪೂರ್ವಕಾಲದಲ್ಲಿಯೂ ಜಗದುಪಾದಾನಕಾರಣವಾದ ಪ್ರಕೃತಿಯು ನಿತ್ಯತ್ವಾನ್ನಿತ್ಯವಾಗಿರುವದರಿಂದ ಬ್ರಹ್ಮನು ಅದ್ವೈತನೆಂಬುವದು ಹ್ಯಾಗೆ ಎಂದು ವಿಚಾರಮಾಡಿದಲ್ಲಿ ಆ ಪ್ರಕೃತಿಯು ಈಶ್ವರನ ಶಕ್ತಿಯಾಗಿ ಅದು ಅಭಿನ್ನಸ್ವರೂಪವಾಗಿರುವದರಿಂದ - ಸೂಜಿಗಲ್ಲಿನಲ್ಲಿರುವ ಲೋಹಕರ್ಷಣದಂತೆಯೂ, ಅಗ್ನಿಯ ದಾಹಶಕ್ತಿಯಂತೆಯೂ ಆ ಪರಮಾತ್ಮನಿಂದ ಪ್ರಕೃತಿಯು ಅಭಿನ್ನವಾಗಿರುವದು. ಆದ್ದರಿಂದಲೇ ಶಾಸ್ತ್ರದಲ್ಲಿ - ತದಾಸ್ಯಶಕ್ತಿಂ ಸ್ವಗುಣೈರ್ನಿಗೂಢಾಂ | ಪರಾಸ್ಯಶಕ್ತಿರ್ವಿವಿಧೈವಶ್ರೂಯತೆ - ಸ್ವಾಭಾವಿಕೀಜ್ಞಾನಬಲಕ್ರಿಯಾಚ - ಇತ್ಯಾದಿ ವೇದವಾಕ್ಯಗಳಲ್ಲಿ ಪರಶಕ್ತಿಯು ಈಶ್ವರನ ಸ್ವಭಾವವೆಂದು ತೋರಿಸುವದರಿಂದ ಮೋಕ್ಷಾಪೇಕ್ಷಿಗಳು ಅದ್ವೈತಿಕವಾದ ಜಗನ್ಮಿಥ್ಯಾಬೋಧಕ ಅದ್ವೈತವನ್ನು ಎಂದೂ ನಂಬಬಾರದು. ಇದರಂತೆ - ಜ್ಞಾಜ್ಞೌದ್ವಾವಜಾವೀಶಾನೀಶೌ, ನಳದಾಚಿದನೀದ್ಯಶಂಜಗತ್, ಪಾದೋಸ್ಯವಿಶ್ವಾಭೂತಾನಿತ್ರಿಪಾದಸ್ಯಾಮೃತಂದಿವಿ - ಇತ್ಯಾದಿ ವೇದವಾಕ್ಯಗಳಿಂದ ಸಮುದ್ರದಲ್ಲಿ ಹುಟ್ಟುವ ಬುರುಗುತೆರೆಗಳಂತೆ ಎಲ್ಲಾ ಜಗತ್ತಿನ ಉತ್ಪತ್ತಿಸ್ಥಿತಿಲಯಗಳ ಕರ್ತೃತ್ವದಿಂದ ಮಹದಾಕಾಶಾಂತರ್ಭೂತನಾದ ವಾಯ್ವಾದಿಗಳಂತೆ ಜಗತ್ತು ಪರಮೇಶ್ವರಾಂತರ್ಭೂತವಿರುವದರಿಂದ ಪ್ರಕೃತಿ ಜೀವಗಳ ನಿತ್ಯತ್ವಪೂರ್ವಕ ತದಾತ್ಮ್ಯವಿರುವದರಿಂದಲೂ ನನ್ನ ಸ್ವಭಾವವೂ ನನ್ನಿಂದ ಬೇರೆ ಉಂಟೆಂದು ಹೇಳಲು ಹ್ಯಾಗೆ ಬರಲಾರದೋ ಅದರಂತೆ ಪರಮಾತ್ಮನಿಂದ ಮಾಯಾ ಅಭಿನ್ನವಾಗಿರುವದು. ಆದರೆ ಕೆಲವರು ಮಾಯಾ ಅಭಿನ್ನವಾಗಿದ್ದು ಅದು ಪುನಃ ಸಂಯೋಗವಾಗದೆಂಬ ವೈಶೇಷಿಕಮತವಾದಕ - ವಿಶಿಷ್ಟಾದ್ವೈತವಾದ ಏನು ಮಾಡುವರೋ - ಆ ವಾದವು ಅಸಮಂಜಸವೇ ಸರಿ. ಈಶ್ವರಮಾಯಾಜೀವಗಳ ಪರಸ್ಪರ ಸಂಬಂಧ. - ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ - ಎಂಬದಾಗಿ ಬ್ರಹ್ಮನಿಗೆ ಸರ್ವಜ್ಞತ್ವ ಅಸಾಧಾರಣತ್ವಾದಿ ಧರ್ಮೋಪದೇಶವಿರುವದರಿಂದ ಶುದ್ಧಚಿದ್ರೂಪತ್ವವು ಸ್ವಾಭಾವಿಕ ಅವಿದ್ಯಾಪಾಶಾಬದ್ಧವಿರುವದರಿಂದ - ಜೀವನಿಗೆ - ಜಡತ್ವವು ಮಹದಾದಿ ಜಗದುಪಾದಾನಕಾರಣವಾದ್ದರಿಂದ ಸತ್ವ ರಜ ತಮೋಗುಣಾತ್ಮಕ - ಪ್ರಕೃತಿಗೆ - ಜಡರೂಪತ್ವವು. ಬ್ರಹ್ಮನು ಶುದ್ಧಚಿದ್ರೂಪನಿದ್ದಮೇಲೆ ಅವನಿಗೆ ಜಗದಾತ್ಮಕತ್ವವು ಜಡಪ್ರಪಂಚಕಲ್ಪನೆಯು ಹ್ಯಾಗೆ ಎಂದು ಕೇಳಿದಲ್ಲಿ - ಯಥೋರ್ಣನಾಭಿಃ ಸೃಜತೇಗೃಹ್ಣತೇಚ - ಎಂಬೀ ಮೊದಲಾದ ವಾಕ್ಯಗಳಿಂದ ಚೇತನವಾದ - ಜೇಡಹುಳದಿಂದ ಜಡವಾದ ಜಾಲವು ಹ್ಯಾಗೆ ಹುಟ್ಟುವದೋ ಅದರಂತೆ ಅಘಟಿತಘಟನಾಶಕ್ತಿಯು ತನ್ನಿಂದ ಪರಮಾತ್ಮನಿಗೇನು ಹೇಳತಕ್ಕದ್ದು. ವೇದವು - ಯತೋವಾಇಮಾನಿಭೂತಾನಿಜಾಯಂತೆ - ಎಂದು ನಿಮಿತ್ತಕಾರಣವನ್ನು - ಯತ್ಪ್ರಯಂತ್ಯಭಿಸಂವಿಶಂತಿ - ಎಂದು ಉಪಾದಾನಕಾರಣವೆಂಬದಾಗಿ ಅಭಿನ್ನನಿಮಿತ್ತೋಪಾದಾನವನ್ನು ಪರಮೇಶ್ವರನಿಗೆ ತೋರಿಸಿ - ಸರ್ವಂ ಖಲ್ವಿದಂಬ್ರಹ್ಮ - ತಜ್ಜಲಾನಿತಿಶಾಂತಉಪಾಸೀತ ಎಂಬದಾಗಿ ಜಡಚೇತನಗಳಾದ ಪ್ರಪಂಚಪರಮಾತ್ಮರ ಕಾರಣವನ್ನೂ ಐಕ್ಯವನ್ನೂ ತೋರಿಸುತ್ತದೆ. ಇದೇ ವೈದಿಕಸಿದ್ಧಾಂತವು.

ಎಲ್ಲಿ ಬ್ರಹ್ಮನಿಗೆ ಜಗತ್ಕಾರಣವನ್ನು ಹೇಳಿದಮೇಲೆ ಮೃಗಾದಿಗಳಂತೆ ವಿಕಾರತ್ವವು ಬರುವುದಿಲ್ಲ. ಎಂದರೆ ಎಂದೂ ಬರಲಾರದೆಂದು ಹೇಳುವೆವು. ಯಾಕಂದರೆ ಮಾಯೆಯು ಈಶ್ವರನ ಸ್ವಭಾವವಾಗಿರುವದರಿಂದ ಆ ಮಾಯೆಯಿಂದಲೇ ಜಗದುಪಾದಾನ ಕಾರಣವಾಗಿರುವದರಿಂದ ವಿರೋಧ ಬರಲಾರದು. ಬಾಂಧವರೇ. ವೇದಾಂತದ ಇಂಗಿತವನ್ನು ತಿಳಿಯದೇ ಕೆಲವರು ಮೋಹಿತರಾಗಿ - ವೇದವೇದಾಂತಗಳ - ಅಪಾರ್ಥವನ್ನು ಕಲ್ಪಿಸಿ ಬ್ರಹ್ಮನಲ್ಲೇ - ಅಧ್ಯಾಸಾದಿ - ಇಂದ - ಕಪ್ಪಿಚಿಪ್ಪಿನಲ್ಲಿ ಏಕಕಾಲಕ್ಕೆ ಬೆಳ್ಳಿಯ ಭಾನವಾದಂತೆ - ಜೀವಭಾವವನ್ನು ಆರೋಪಿಸಿ ಬ್ರಹ್ಮನಿಗೆ ಜೀವತ್ವವು ಅವಿದ್ಯೆಯಿಂದ ಭ್ರಾಂತಿಮಾತ್ರ ಕಲ್ಪಿತವೆಂತಲೂ ಹಾಗೂ ಜಗತ್ತು ಮಿಥ್ಯೆ ಎಂತಲೂ ವಾದಿಸುವರು. ಆದರೆ ಅದು ವಿಹಿತವಲ್ಲ. ಯಾಕಂದರೆ ಎಲ್ಲಾದರೂ ಅನೇಕ ಪದಾರ್ಥಗಳಿದ್ದಲ್ಲೇನೆ ಭ್ರಾಂತಿಯು ಉತ್ಪನ್ನವಾಗಿರುವದು. ಆದರೆ ಇಲ್ಲಿ ಬ್ರಹ್ಮಾತಿರಿಕ್ತವಸ್ತುವೇ ಇಲ್ಲದ್ದರಿಂದ ಭ್ರಾಂತಿ ಹುಟ್ಟುವ ಸಂಭವವೇ ಇಲ್ಲ. ಇನ್ನು ಎರಡನೇ ವಸ್ತುಸ್ವೀಕಾರಮಾಡಲ್ಲಿ ಅದ್ವೈತಹಾನಿಯು ವಸ್ತ್ವಂತರಾಂಗೀಕಾರ ಮಾಡದಿದ್ದಲ್ಲಿ ಭ್ರಾಂತಿಯು ಸಂಭವಿಸಲಾರದು. - ಬ್ರಹ್ಮವಿದಾಪ್ನೋತಿಪರಂ - - ತಮೇವ ವಿದಿತ್ವಾ ಅತಿಮೃತ್ಯುಮೇತಿ - ಇತ್ಯಾದಿ ವೇದವಾಕ್ಯಗಳಲ್ಲಿ ಬ್ರಹ್ಮನಿಗೆ ತನುಃಪರತ್ವವೂ ಆ ಬ್ರಹ್ಮಜ್ಞಾನದಿಂದ ಜೀವಗಳಿಗೆ ಮುಕ್ತಿಹೇತುವೂ ಉಪದೇಶಿಸಲ್ಪಟ್ಟಿರುವದು. ಆದ್ದರಿಂದ ಬ್ರಹ್ಮನಲ್ಲೇ ಜೀವತ್ವಕಲ್ಪನವು ಅಸಮಂಜಸವಾಗಿರುವದು.

ಪ್ರಪಂಚಮಿಥ್ಯಾವಾದ ಖಂಡನವು.

ಸ್ವಪ್ನದಂತೆ ಪ್ರಪಂಚವು ಮಿಥ್ಯಾ ಎಂದು ಹೇಳುವದು ವಿಹಿತವಲ್ಲ. ಯಾಕಂದರೆ ಪ್ರಪಂಚದಲ್ಲಿ ಅರ್ಥಸಿದ್ಧಿ, ಕ್ರಿಯಾಸಿದ್ಧಿಗಳು ಕಂಡುಬರುವದರಿಂದಲೂ, ವಿಧಿನಿಷೇಧ ನಿಯಮನ ಮಾಡುವ ಶಾಸ್ತ್ರ ಮತ್ತು ಆಚಾರ್ಯರಿಂದ ಉಪದೇಶಿಸಲ್ಪಟ್ಟ ಕರ್ತವ್ಯಕರ್ಮವಿರುವದರಿಂದಲೂ ಹಾಗೂ - ನಾಭಾವಉಪಲಬ್ಧೇಃ ವೈಧರ್ಮ್ಯಾಚ್ಚನಸ್ವಪ್ನವದಿತಿ - ಎಂದು ಭಗವದ್ವೇದವ್ಯಾಸರಿಂದ - ಸ್ವಪ್ನೇಂದ್ರಜಾಲವಂತೆ - ಪ್ರಪಂಚಮಿಥ್ಯಾ ಎಂದು ಹೇಳುವ ವಾದವು ಅನೇಕರೀತಿ ನಿರಾಕರಿಸಲ್ಪಟ್ಟಿರುವದರಿಂದಲೂ - ಅಸತ್ಯಮಪ್ರತಿಷ್ಠಂತೆಜಗದಾಹುರನೀಶ್ವರಂ - ಎಂದು ಜಗನ್ಮಿಥ್ಯಾವಾದವು ಕೃಷ್ಣದೇವರಿಂದ ದೂರೀಕರಿಸಲ್ಪಟ್ಟಿರುವದರಿಂದಲೂ ಸರ್ವಥಾ ಈ ವಾದವು ವಿಹಿತವಲ್ಲ. ಇಷ್ಟೇ ಅಲ್ಲದೆ ನಿರ್ವಿಶೇಷಬ್ರಹ್ಮವುಂಟೆಂದು ಹೇಳುವಲ್ಲಿ ಪ್ರಮಾಣವೇನು ಎಂದು ಕೇಳಿದಲ್ಲಿ ವೇದಪ್ರಮಾಣವುಂಟೆಂದು ಹೇಳುವಲ್ಲಿ ಆ ವೇದವೂ ಜಗತ್ತಿನೊಳಗಿದ್ದದರಿಂದ ತತ್ಪ್ರತಿಪಾದ್ಯವಾದ ಬ್ರಹ್ಮನಿಗೂ ಮಿಥ್ಯಾತ್ವ ಸಂಭವಿಸುವದು. ವೇದವು ಅನಾದ್ಯನಂತವೆಂದು ಅಂಗೀಕಾರಮಾಡಿದಲ್ಲಿ ಅದ್ವೈತಹಾನಿಯು ಅನಂಗೀಕರಿಸಿದಲ್ಲಿ ಬ್ರಹ್ಮನ ಅಸ್ತಿತ್ವಕ್ಕೆ ಎರಡನೇ ಸತ್ಪ್ರಮಾಣಗಳಿಲ್ಲದ್ದರಿಂದ ಆ ಬ್ರಹ್ಮನಿಗೆ - ವಂಧ್ಯಾಪುತ್ರನಂತೆ - ಮಿಥ್ಯಾತ್ವವು ಬರುವದು. ಹಾಗೂ ಅಧ್ಯಾಸ ಸ್ವೀಕರಿಸದಿದ್ದಲ್ಲಿ ಮುಕ್ತಿಗೆ ಬಾಧಕವು ಯಾವದೂ ಇಲ್ಲದ್ದರಿಂದ ಹಾಗೂ ಅಧ್ಯಾಸ ಸ್ವೀಕರಿಸಿದಿದ್ದಲ್ಲಿ - ಮಾಯಾ - ಸ್ವಾಭಾವಿಕವಿರುವದರಿಂದ ವೇದವಾಕ್ಯಗಳ ವಿರೋಧವಾಗುವದು. ಇದರಂತೆ ಜಗನ್ಮಿಥ್ಯಾವಾದದಲ್ಲಿ ಬಹುವಿರೋಧ ಕಂಡುಬರುವದರಿಂದಲೂ ಮೋಕ್ಷಾದಿಗಳು ಸುಳ್ಳೆಂಬ ಪ್ರಸಂಗ ಬರುವದರಿಂದಲೂ ಜಗನ್ಮಿಥ್ಯಾವಾದವು ತ್ಯಾಜ್ಯವೇ ಸರಿ. ಆ ಜಗನ್ಮಿಥ್ಯಾವಾದವಾರಣಮಾಡಲುದ್ದಿಶ್ಯ ವೇದಾಂತದಲ್ಲಿ - ತದನನ್ಯತ್ವಮಾರಂಭಣಶಬ್ದಾದಿಭ್ಯಃ - ಎಂದು ತಜ್ಜನ್ಯಪ್ರಪಂಚಕ್ಕೆ ತತ್ಸ್ವರೂಪನಿರ್ದೇಶಕ ಸೂತ್ರವು ಹೇಳಲ್ಪಟ್ಟಿರುವದು. ಹಾಗೂ - ನವಿಧ್ಯಾತ್ಯಾಯಕಲ್ಪಂತೆ ಜಗತಃಶಿವರೂಪತಃ - ಎಂಬದಾಗಿ ಸ್ಮೃತ್ಯಂತರದಲ್ಲಿ ನಿರ್ದೇಶಿಸಲ್ಪಟ್ಟಿರುವದು. ಸದಾಶೇಷಿಶೇಷತ್ವ (ಸೇವ್ಯ ಸೇವಕ) ವ್ಯವಸ್ಥಾಪಕವಾದ ದ್ವೈತಪಾಂಚರಾತ್ರಾದಿಗಳಂತೆ ಅಂಗಾಂಗಿಭಾವದಿಂದ ನಾವು ಸಾಮರಸ್ಯವಾದಿಗಳಲ್ಲ. ಯಾಕೆಂದರೆ, ಜೀವನಂತೆ ಈಶ್ವರನಿಗೂ ಸುಖದುಃಖಭೋಗಪ್ರಸಂಗಬರುವದು. ಹ್ಯಾಗೆ ಶರೀರದ ಒಂದುಭಾಗಕ್ಕೆ ನೋವಾದಲ್ಲಿ ಸರ್ವಶರೀರವು ಬಾಧಿತವಂತಾಗುವದೋ, ಅದರಂತೆ ಈಶ್ವರನಿಗೂ ದುಃಖಿತ್ವಪ್ರಸಂಗವು ಬರುವದು, ಮತ್ತು - ಆಕಾಶವತ್ ಸರ್ವಗತಶ್ಚ ಪೂರ್ಣಃ - ಎಂಬ ಅನೇಕ ವೇದವಾಕ್ಯಗಳ ವಿರೋಧ ಬರುವದು.

ಇನ್ನು ಘಟಪಟಾದಿಗಳಂತೆ ಅತ್ಯಂತ ಭೇದವಾದಿಗಳೂ ಅಲ್ಲ, ಮತ್ತು - ಸತ್ಯಕಾಮಃ ಸತ್ಯಸಂಕಲ್ಪಃ - ಎಂಬ ಅನೇಕ ಶ್ರುತಿಸಿದ್ಧವಾದ ಸ್ವಾಭಾವಿಕ ಅನಂತಕಲ್ಯಾಣಗುಣಗಳ ಭಂಗಪ್ರಸಂಗ ಬರುವದರಿಂದ - ರಜ್ಜುಸರ್ಪದಂತೆ - ಅತ್ಯಂತ ಮಿಥ್ಯಾವಾದಿಗಳೂ ಅಲ್ಲ. ಆದರೆ ನಾವು ಸರ್ವಶ್ರುತಿಗಳ ಐಕಾನ್ವಯವುಳ್ಳ ಸ್ವಾಭಾವಿಕಭೇದಾಭೇದವಾದಿಗಳು. ಹ್ಯಾಗೆಂದರೆ—ದ್ವಾಸುಪರ್ಣಾ ಇತ್ಯಾದಿ ಮಂತ್ರಗಳಿಂದ ಸಂಸಾರದಶೆಯಲ್ಲಿ ಜೀವಬ್ರಹ್ಮಗಳ ಭೇದವೂ ತತ್ವಮಸ್ಯಾದಿ ವಾಕ್ಯಗಳಿಂದ ಮೋಕ್ಷದಶೆಯಲ್ಲಿ ಅಭೇದವೂ ಯುಕ್ತವೇ ಆಗಿರುವದು.

- ಶ್ರುತ್ಯೈಕದೇಶಪ್ರಾಮಾಣ್ಯಂ | ದ್ವೈತಾದ್ವೈತಮತಾದಿಷು | ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಿತೇ || ವೀರಶೈವೈಕಸಿದ್ಧಾಂತೆ ಸರ್ವಶ್ರುತಿ ಸಮನ್ವಯಃ | ವಿಶಿಷ್ಟೋ ಜೀವಶೇಶಂಭುದ್ವಾ ಸುಪರ್ಣೇತಿ ಮಂತ್ರತಃ | ಶೇಷವಜ್ಜೀವ ಶಾರೀರೋಯಥಾಗ್ನೇರಿತಿಮಂತ್ರತಃ | ಅದ್ವೈತೋನಭವೇದ್ಯೋಗೋ ಯಥಾನದ್ಯಾದಿಭಿಸ್ತಥಾ ||

ಈರೀತಿ ಮೇಲೆ ವರ್ಣನೆಮಾಡಿದಂಥಾ ಬ್ರಹ್ಮನಿಗೆ

- ಲಿಂಗಮುಖ್ಯಂ ಜಗತ್ಸರ್ವಂಲಿಂಗ ಬಾಹ್ಯಾತ್ಪರಂನಹಿ - - ಜ್ಯೋತಿರ್ಲಿಂಗಂ ಸದಾಮುಖ್ಯಂ ನಿತ್ಯಂ ಧ್ಯಾಯೇತ್ ಸದಾಯತಿಃ - - ತತ್ಸ್ವಾಜ್ಞೇಷ್ಟಂ ತದ್ವರ್ಣಮನೋಲಿಂಗಮಾಹುಃ - ಇತ್ಯಾದಿ ವಾಕ್ಯಗಳಿಂದ ಲಿಂಗರೂಪತ್ವ ಉಪದೇಶಮಾಡಿರುವದರಿಂದಲೂ ಹಾಗೂ - ಅಮೃತಸ್ಯದೇವಧಾರಣೋಭೂಯಾಸಂ - -ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿ - ಇತ್ಯಾದಿಗಳಲ್ಲಿ ಧಾರಣಭರ್ಗಶಬ್ದಾದಿಗಳಿಂದ ಶಿವಲಿಂಗಧಾರಣವು ತೋರಿಸಿರುವದರಿಂದ - ಲಿಂಗಂ ಶಿವೋಭವೇತ್ ಕ್ಷೇತ್ರಮುಂಗಂ ಸಂಯೋಗ ಆಶ್ರಯ ತಸ್ಮಾಲ್ಲಿಂಗಾಂಗಸಂಯುಕ್ತೋಯೋಽಸಿ ಸೋಽತಾ ಕೃತಿವಾಭವೇತ್ - ಎಂದು ಶಂಕರಸಂಹಿತೆಯಲ್ಲಿಯೂ ಮತ್ತು ಲಿಂಗಪುರಾಣದಲ್ಲಿಯೂ ಹೇಳಿರುವದು. ಹಾಗೂ - ಶಿವಧ್ಯಾನಪರೋಭೂತ್ವಾ ಶಿವಲಿಂಗಾಂಗಸಂಯುತಃ - -ಮುಖೇಮಂತ್ರೋಹೃದಿಧ್ಯಾನಂ ಮಸ್ತಕೇ ಲಿಂಗಧಾರಣಂ - - ಶಿಖಾಸೂತ್ರಂ ತಥಾ ಭಸ್ಮಚೇದ್ಬ್ರಾಹ್ಮಣಲಕ್ಷಣಂ - ಎಂದು ಮನುಗೌತಮಾದಿ ಸ್ಮೃತಿಗಳಲ್ಲಿ ಆ ಲಿಂಗಧಾರಣವು ವೈದಿಕವೆಂದು ವಿಧಾನಮಾಡಿರುವದರಿಂದ ಆ ಲಿಂಗಧಾರಣಮಾಡದೇ ಇದ್ದಲ್ಲಿ - ಯಥಾತ್ಮ ವಾನಗಂ ಶಾಪ ಮುನರ್ಹಂ ಸರ್ವಕರ್ಮಸು | ತಥಾಲಿಂಗವಿಹೀನಸ್ತು ಸರ್ವಕರ್ಮಬಹಿಷ್ಕೃತಃ - ಎಂದು ದೋಷ ತೋರಿಸುವದರಿಂದಲೂ ಆ ಬ್ರಹ್ಮಸ್ವರೂಪನಾದ ಲಿಂಗಧಾರಣ ಪೂಜಾದಿಗಳು ವೈದಿಕವೆಂಬುವದು ನಿರ್ವಿವಾದವು.

ಇನ್ನು ಉಪಾಸನಾಸಿದ್ಧಿಗಾಗಿ ಲಿಂಗವು - ಇಷ್ಟ, ಪ್ರಾಣ, ಭಾವ - ವೆಂಬದಾಗಿ ಮೂರುಪ್ರಕಾರ - ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾತ್ - ಎಂಬದಾಗಿ ಬ್ರಹ್ಮಸೂತ್ರಗಳಲ್ಲಿ ಅನೇಕರೀತಿ ವಿಶಾರಮಾಡಲ್ಪಟ್ಟಿರುವದು. ಲಿಂಗಾಂಗಿಧರ್ಮದಲ್ಲಿ ಲಿಂಗಧಾರಣ, ವಿದ್ಯಾಧ್ಯಯನ, ಅಧ್ಯಾಪನ ವ್ರತಾಚರಣಾದಿ ಇಹಪರ ಸುಖಸಾಧನಗಳಾದ ಸಮಸ್ತಕಾರ್ಯಗಳಲ್ಲಿ ಸಮಸ್ತ ಸ್ತ್ರೀ ಪುರುಷರಿಗೂ ಸಮಾನ ಅಧಿಕಾರವು ಹೇಳಲ್ಪಟ್ಟಿರುವದು ಹ್ಯಾಗಂದರೆ.— - ಸ್ತ್ರಿಯೋಬಾಲಾಸ್ತಥಾವೃದ್ಧಾಃ ಖಂಜಕುಬ್ಜಾಂಧಪಂಗವಃ | ಮಲ್ಲಿಂಗಧಾರಣಾದೇವಮದ್ರೂಪಾ ಏವತೇ ಶಿವೇ - ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಶೂದ್ರಾಯೇ ಚಾನ್ಯಜಾತಯಃ | ಲಿಂಗಧಾರಣಮಾತ್ರೇಣ ಶಿವಏವನಸಂಶಯಃ - ಎಂದು ಪಾರಮೇಶ್ವರಾಗಮದಲ್ಲಿ ಉಪದೇಶಿಸಿದಂತೆಯೇ ಇವತ್ತಿಗೂ ಆ ಧರ್ಮದಲ್ಲಿ ಪ್ರಚಾರವಿರುವದು. ಲಿಂಗಧಾರಣ ಧ್ಯಾನಾದಿಗಳಿಂದ ಒಂದೇ ಜನ್ಮದಲ್ಲಿ ಮುಕ್ತನಾಗುವನೆಂದು ವಿಶ್ವಾಸವಿರುವದರಿಂದ ಆಗಾಮಿ ಜನ್ಮವಾದವು (ಪುನರ್ಜನ್ಮ) ಇವರಿಗೆ ಸಮ್ಮತವಿಲ್ಲ.

ಬಾಂಧವರೇ. ಈಗಿನಕಾಲದಲ್ಲಿ ಕೆಲವರು ಏನೋ ಒಂದು ಸ್ತ್ರೀಶಿಕ್ಷಣಾದಿ ಪ್ರಚಾರಮಾಡಿ ತೋರಿಸಿ ನಾವು ಸುಧಾರಕರೂ ಹೊಸಶೋಧಕರೂ ರಾಷ್ಟ್ರೋದ್ಧಾರಕರೂ ಎಂದು ಅಭಿಮಾನವನ್ನು ವಹಿಸುವರೋ ಅವರ ಈಚ್ಛೆಗಿಂತಲೂ ಅಧಿಕ ರಾಷ್ಟ್ರೋನ್ನತಿ ಕಾರಣಭೂತವಾದ - ವಿಶ್ವಬಂಧುತ್ವ, ಪ್ರೇಮಭೂತದಯಾ, ಸಮಾನಾಧಿಕಾರ, ವರ್ಣಜಾತಿಗಳೆಂಬ ದುಷ್ಟಭಾವನೆಗಳ ಉನ್ಮೂಲನ ಸ್ವದೇಶವ್ರತಾದಿ - ಅನೇಕ ಕಾರ್ಯಸಂಗ್ರಹವು ಸಾವಿರಾರುವರ್ಷಗಳಿಗಿಂತ ಪೂರ್ವದಲ್ಲೇ ಕಾರುಣ, ಕಲ್ಯಾಣ, ಕೈವಲ್ಯಗಳೆಂಬ ಮೂರು ಸಂಪತ್ತಿನ ಪ್ರತಿಪಾದಕಗಳಾದ ಅಷ್ಟಾವರಣ, ಪಂಚಾಚಾರ ಪರಶಿವರೂಪವಾದ ಇಷ್ಟಲಿಂಗಧಾರಣ ನಿಷ್ಠಾಪರರಾದ ಲಿಂಗಾಂಗಿಧರ್ಮಪ್ರವರ್ತಕಾಚಾರ್ಯರೆನಿಸಿದ ಸಂಪೂರ್ಣ ವೇದಜ್ಞರಾಗಿ ಸರ್ವಜ್ಞರಾದ - ರೇಣುಕ, ಶಿವದೇವ, ಏಕೋರಾಮ, ಮರುಳಸಿದ್ಧ, ಅಗಸ್ತ್ಯಾದಿ ಪೂರ್ವಾಚಾರ್ಯರಿಂದ ನಿರ್ದೇಶಿಸಲ್ಪಟ್ಟಿರುವದು. ಆದ್ದರಿಂದ ಇಂಥಾ ಭವ್ಯದಿವ್ಯ ಔದಾರ್ಯ ಆಚಾರ ವಿಚಾರಗಳಿಂದ ಪರಮಪವಿತ್ರವಾದ ವಿಶೇಷಾದ್ವೈತತತ್ವಾಲಂಕೃತ ಸನಾತನವಾದ ಲಿಂಗಾಂಗಿಧರ್ಮವೇ ಸಾರ್ವತ್ರಿಕ ಸಮಸ್ತ ಪೃಥ್ವಿಯನ್ನು ವ್ಯಾಪಿಸುವ ಸುದಿನವನ್ನು ಜಗದೀಶ್ವರನು ಶೀಘ್ರವೇ ತರಲೆಂದು ಅನನ್ಯಭಾವನೆಯಿಂದ ಪ್ರಾರ್ಥಿಸುವೆನು.

ಬಾಂಧವರೇ. ಇದುವರೆಗೂ ಪೂರ್ವಪಕ್ಷ ಪರಪಕ್ಷ ನಿರಾಕರಣಪೂರ್ವಕ ತೋರಿಸಲ್ಪಟ್ಟ ಶ್ರೀಕರಭಾಷ್ಯ ವಿಷಯವನ್ನು ನಿರ್ಮತ್ಸರದಿಂದಲೂ ನಿಷ್ಪಕ್ಷಪಾತದಿಂದಲೂ ನಿಮ್ಮ ನಿಮ್ಮ ಮನಸ್ಸಿನಲ್ಲಿಯೇ ನೀವು ಸ್ವಲ್ಪ ವಿಚಾರಮಾಡಿದಿರೆಂದರೆ ಅಥವಾ ಆ ಭಾಷ್ಯವನ್ನು ಸ್ವತಃ ಅವಲೋಕನಮಾಡಿದಿರೆಂದರೆ ಶ್ರೀಕರಾಚಾರ್ಯರ ವಿಚಾರವಿವೇಚನಪದ್ಧತಿಯು ಹ್ಯಾಗೆ ? ಅವರ ಅಗಾಧಜ್ಞಾನವು ಹ್ಯಾಗಿರುವದು ಮತ್ತು ಅವರ ತತ್ವಶೋಧವು ಹ್ಯಾಗೆ? ಎಂಬ ವಿಷಯದಲ್ಲಿ ಅವರ ಶ್ರೇಷ್ಠತ್ವವು ಸ್ವತಃ ನಿಮಗೆ ತಿಳಿಯುವದೆಂದು ಸೂಚಿಸಿ ನಿಮ್ಮೆದುರಿಗೆ ಇಂಥಾ ತತ್ವಸಿದ್ಧಾಂತ ಪ್ರತಿಪಾದನಮಾಡಲಿಕ್ಕೆ ಇಂದೂರ ರಾಜರಾಜೇಶ್ವರ ಶ್ರೀ ಸವಾಯಿ ತುಕೋಜೀರಾವ ಮಹಾರಾಜದರ್ಬಾರರ ಪ್ರೋತ್ಸಾಹ ಸಾಹಾಯ್ಯ ಪೂರ್ವಕ ಅವರ ಪ್ರತಿನಿಧಿಯಾಗಿ ಇಲ್ಲಿಗೆ ಬಂದು ಏನೊಂದು ವ್ಯಾಖ್ಯಾನಮಾಡಿದೆನೋ ಆ ವಿಷಯಕವಾದ ಸರ್ವಶ್ರೇಯಸ್ಸು ಶ್ರೀಮನ್ಮಹಾರಾಜರಿಗೇ ಇರುವದು ಹಾಗೂ ಈ ಉದಾರಚರಿತವುಳ್ಳ ಮಹಾರಾಜರು ಸಂಸ್ಕೃತಭಾಷಾ ವಿಷಯದಲ್ಲಿ ಅತೀವ ಗೌರವವನ್ನು ವಹಿಸುವರು. ಆದ್ದರಿಂದ ಇವರಿಗೆ ಅನಂತಧನ್ಯವಾದಗಳನ್ನರ್ಪಿಸಿ ಇತರ ಎಲ್ಲಾ ಭಾರತೀಯ ನರೇಶ್ವರರು ಇವರಂತೆ ಪವಿತ್ರವಾದ ಸಂಸ್ಕೃತಭಾಷೆಯನ್ನು ಅಭಿವೃದ್ಧಿಗೊಳಿಸುವ ಮನಸ್ಕರಾಗಲೆಂತ ಅಪೇಕ್ಷಿಸಿ ಲೇಖವು ವಿಶೇಷ ವಿಸ್ತಾರವುಳ್ಳದ್ದಾಗುವದೆಂದು ಇಲ್ಲಿಗೇನೇ ಸಮಾಪ್ತಿ ಮಾಡುವೆನು.

ತಮ್ಮ,
ಪಂಡಿತ ಗುರುಬಸವಶಿವಾಚಾರ್ಯಸ್ವಾಮಿಗಳು,
ತಾ|| 1-12-25. ಸಂಸ್ಥಾನ ಕ್ಯಾಸನೂರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

೧೯೨೬ ನೆಯ ಇಸವಿ ಜನವರಿ ತಾ|| ೩೦ ರಿಂದ ೧೯೨೬ ನೆಯ ಇಸವಿ ಫೆಬ್ರುವರಿ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಮಾಘ ಬಹುಳ ಬಿದಿಗೆಯಿಂದ ಮಾಘ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ಮಾಸ
30	[1]ಶನಿ	ಬಿದಿ	58-56	ಮಖಾ	60	17
31	ಭಾನು	ತದಿ	60	ಮಖಾ	6-20	18
1	ಸೋಮ	ತದಿ	3-51	ಪುಬ್ಬ	12-30	19
2	[2]ಮಂಗಳ	ಚೌತಿ	7-56	ಉತ್ತ	17-41	20
3	ಬುಧ	ಪಂಚ	10-59	ಹಸ್ತ	21-52	21
4	ಗುರು	ಷಷ್ಠಿ	12-46	ಚಿತ್ತ	24-52	22
5	[3]ಶುಕ್ರ	ಸಪ್ತ	13-18	ಸ್ವಾತಿ	26-36	23

(1) ಮಳೆನಕ್ಷತ್ರ-ಶ್ರವಣ ೩ ನೆಯ ಪಾದ. (2) ಮಳೆನಕ್ಷತ್ರ-ಶ್ರವಣ ೪ ನೆಯ ಪಾದ. (3) ಮಳೆನಕ್ಷತ್ರ-ಧನಿಷ್ಠ ೧ ನೆಯ ಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರ್ಯಾ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾತೀಯಾಖ್ |
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಪಾಳಕಿತ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತ್ರ್ಯೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೧೦-೦] [ಲೈಬ್ರರಿಗೆ ೨-೧೦-೦]

REGISTERED NO. M. 124.

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಫೆಬ್ರುವರಿ ತಾರೀಖು ೬ ನೆಯ ಶನಿವಾರ. [ಸಂಚಿಕೆ ೬

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರ ಪಾಕ.

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದು ಕೊಳ್ಳಬೇಡಿರಿ.

ಧಿಃಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ಕಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯು ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ ತಾಲಿಮಕಂದ, ಜಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವಿಪಾಂತರಜಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನವಳೀಬೀಜ, ಚಿಕಣ ಪಂಚಾಂಗ, ಅಡವೀ ಎಳ್ಳಿನ ಪಂಚಾಂಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಬೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಸ್ತ, ವಾಕೇರಿಭಾತಾ, ಗೋಖರು, ಅಡವೀ ಬೆಂಡಿ ಬೇರು, ಅಶ್ವತಸತ್ವ, ಇಸಬಗೋಲ, ಬನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಳುಕಿ, ವಂಶಲೋಚನ, ವರಧಾರ, ಕೇಸರಿ, ಯಾಲಕ್ಕಿ, ರುಲ್ಲಸಕ್ಕರಿ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಿಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ [illegible] ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೭ನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೇಲಾಭಾಯ ಹಿನ್ನ ರೋಡ ಮುಂಬೈ, ೫ ವಿಷ್ಣು ಕೃಷ್ಣ ಕೇಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ಧೂಡಾಜಯರಾಮ ಪೋ. ಸೊಲ್ಲಾಪೂರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—44] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆ[illegible]ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಕಟ್ಟೆ ಕಳುಹಿಸಲಾಗದು.

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಅಣೆ.

ದಯಮಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[[illegible]—10] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಉಲ್ಲಾಸವಿರದೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣವದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	

SHREE SITHARAGHAVA VAIDYASALA

52

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ, 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರ್ಯಾ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

WANTED IMMEDIATELY.

(BROKERAGE BEING EIGHT ANNAS PER SHARE.)
Influential Convassing Agents to Secure
Shares for "**The Karnataka Commercial Bank Ltd.**
Registered Office; Old Post Office Road,
Mysore.
Capital Rs. Five Lakhs.
Divided into 20,000 shares of Rs. 25 each.
Payable on application Rs. 5 each.
on allotment Rs. 5 each.
and then on calls of Rs. 5 each after intervals of 3 months only.

This Company is formed to do all Banking businesses and mainly to show facilities to merchants and the public and to encourage good trade by way of timely help to them.

Please apply to—

4-2-1926 Messrs. P. RAMASWAMY, & Co.,
Managers.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಫೆಬ್ರವರಿ ತಾ|| ೬ ನೆಯ ಶನಿವಾರ.

ಮದ್ಯಪಾನನಿಷೇಧವು.

ಮದ್ಯಪಾನವು ಸಪ್ತವ್ಯಸನಗಳಲ್ಲಿ ಒಂದಾಗಿ ನಿರ್ಣಯಿಸಲ್ಪಟ್ಟು ಹಿಂದೂಧರ್ಮಶಾಸ್ತ್ರಗಳಲ್ಲಿ ಬಹಳವಾಗಿ ನಿಷೇಧಿಸಲ್ಪಟ್ಟಿರುವುದರಿಂದ ಅದನ್ನು ಸೇವಿಸುವವರು ಸಂಘದಿಂದ ಬಹಿಷ್ಕರಿಸಲ್ಪಡಬೇಕಾಗಿ ವಿಧಿಸಲ್ಪಟ್ಟಿರುವುದು. ಬುದ್ಧದೇವನು ಈ ಮದ್ಯಸೇವನೆಯನ್ನು ಬಹಳವಾಗಿ ಖಂಡಿಸಿರುವನು. ಕೊರಾನಿನಲ್ಲಿ ಮಹಮ್ಮದೀಯರು ಮದ್ಯಪಾನ ಮಾಡಕೂಡದೆಂದು ವಿಧಿಸಲ್ಪಟ್ಟಿರುತ್ತದೆ. ಆದುದರಿಂದ ಈ ಮದ್ಯಪಾನವನ್ನು ಭರತಖಂಡವು ಆದಿಕಾಲದಿಂದಲೂ ನಿಷೇಧಿಸತಕ್ಕ ದೇಶವಾಗಿದ್ದರೂ, ಅದರ ನಿಷೇಧವಿಲ್ಲದ ಪಾಶ್ಚಾತ್ಯದೇಶದ ಪ್ರಭುತ್ವಕ್ಕೊಳಪಟ್ಟಮೇಲೆ ಮತ್ತು ಆ ದೇಶದ ನಡೆನುಡಿಯು ಭಾರತೀಯರಿಂದ ಅನುಕರಿಸಲ್ಪಟ್ಟಮೇಲೆ ಈ ದೇಶದಲ್ಲಿ ಅದರ ಪ್ರಾಬಲ್ಯವು ಮಿತಿಮೀರಿಹೋಗಿರುವುದೆಂಬುದು ಹೇಳದೆಯೂ, ಖಂಡಿಸದೆಯೂ ಇರತಕ್ಕ ವಿಷಯವಾಗಿರುವುದಿಲ್ಲ. ಈ ಮದದ್ರವ್ಯಶಾಖೆಯನ್ನು ಪ್ರಭುತ್ವದವರು ಪ್ರತ್ಯೇಕವಾಗಿ ಏರ್ಪಡಿಸಿಕೊಂಡು, ಆ ಶಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಅಧಿಕ ವರಮಾನವಾಗುತ್ತಿರುವುದರಿಂದ ಅದನ್ನು ಬಿಡಲಾರದೆ ಮತ್ತು ದೇಶೀಯರು ಈ ಮದ್ಯಪಾನ ದುರಭ್ಯಾಸದಿಂದ ಎಷ್ಟು ಪತಿತರಾಗುತ್ತಿರುವರೆಂಬುದರ ಕಡೆಗೆ ಲಕ್ಷ್ಯಕೊಡದೆ ಅಥವಾ ಕೊಟ್ಟಿದ್ದೇವೆಂದು ಬಾಯಲ್ಲಿ ಹೇಳುತ್ತಿದ್ದರೂ ಅದರ ಸಂಪೂರ್ಣನಿಷೇಧಕ್ಕೆ ತಕ್ಕ ಕಾರ್ಯಭಾಗವನ್ನು ಮಾಡದೆ ಕಾಲಹರಣ ಮಾಡುತ್ತಿದ್ದಾರೆ. ಭರತಖಂಡದ ಪ್ರಭುತ್ವದವರ ಪಾಡೇ ಹೀಗಾಗಿರುವಾಗ್ಗೆ ಇನ್ನು ಅದಕ್ಕೆ ಅಧೀನಗಳಾದ ದೇಶೀಯ ಸಂಸ್ಥಾನಗಳು ಬಿಡುವುದುಂಟೆ? ಧನಾಶೆಯು ಯಾರನ್ನು ತಾನೆ ಬಿಟ್ಟಿರುವುದು ಮತ್ತು ಯಾವ ಕೆಲಸವನ್ನು ತಾನೆ ಮಾಡಿಸದಿರುವುದು? ನೈತಿಕ, ಸಾಂಘಿಕ ಮತ್ತು ಆರ್ಥಿಕ ನಷ್ಟಹೇತುವಾದ ಈ ದುರಭ್ಯಾಸವನ್ನು ತೊಲಗಿಸುವುದಕ್ಕಾಗಿ ದೇಶನಾಯಕರುಗಳೂ, ಮದ್ಯನಿಷೇಧಸಂಘಗಳೂ, ವೃತ್ತಪತ್ರಿಕೆಗಳೂ ಇವೆಲ್ಲಕ್ಕಿನ್ನ ಮಿಗಿಲಾಗಿ ಪ್ರಭುತ್ವದವರೂ ಪ್ರಬಲಪ್ರಯತ್ನವನ್ನು ಮಾಡಬೇಕಾಗಿದೆ. ಈ ಕಾರ್ಯವನ್ನು ಕೊನೆಗಾಣಿಸಲು ಮುಖ್ಯಸಂಘವಾಗಿ ಸ್ಥಾಪಿಸಲ್ಪಟ್ಟ ಮದ್ಯಪಾನನಿಷೇಧ ಸಮಿತಿಯ ಪ್ರಥಮಮಹಾಸಭೆಯು ಕಳೆದ ಜನವರಿ ತಾ|| 29 ರಲ್ಲಿ ದಿಲ್ಲಿಯ ಪಟ್ಟಣದಲ್ಲಿ ದಿವಾನ್ ಬಹದ್ದೂರ್ ನೊಚರ್ಲ ರಾಮಚಂದ್ರಪಂತಲು ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಮದ್ಯಪಾನದುರಭ್ಯಾಸವು ಕೈಗಾರಿಕೆಯ ಕೆಲಸಗಾರರಲ್ಲೂ, ಬಹುಕೀಳುಜಾತಿಯವರಲ್ಲೂ, ಉತ್ಕೃಷ್ಟಜಾತಿಯವರಲ್ಲಿ ಪಾಶ್ಚಾತ್ಯಾಚಾರ ವ್ಯಾಮೋಹದಲ್ಲಿ ಬಿದ್ದಿರುವವರಲ್ಲೂ ವಿಶೇಷವಾಗಿರುತ್ತದೆ. ವಿದ್ಯಾಭ್ಯಾಸವು ಅಭಿವೃದ್ಧಿಯಾದ ಹಾಗೆಲ್ಲಾ ಈ ದುರ್ವ್ಯಸನವು ಕಡಿಮೆಯಾಗುತ್ತದೆಂಬ ಭಾವನೆಗೆ ವಿರುದ್ಧವಾಗಿ ಪ್ರೌಢವಿದ್ಯಾಭ್ಯಾಸಮಾಡಿ ಪದವೀಧರರಾಗಿಯೂ, ನ್ಯಾಯವಾದಿಗಳಾಗಿಯೂ ಇರುವವರು ಸುರಾದೇವತೆಯ ಪರವಶರಾಗಿರುವರಲ್ಲದೆ ಇತರರನ್ನೂ ವಶಪಡಿಸುತ್ತಿರುವುದನ್ನೂ, ಎಷ್ಟೋ ದೊಡ್ಡದೊಡ್ಡ ಸಂಸಾರಗಳು ಹಾಳಾಗುತ್ತಿರುವುದನ್ನೂ ನಾವು ನಿತ್ಯದಲ್ಲೂ ನೋಡುತ್ತಿದ್ದೇವೆ. ಭಿಕ್ಷುಕರು ಸಹ ತಮ್ಮ ನಿತ್ಯಾರ್ಜನೆಯಲ್ಲಿ ಅರ್ಧಮುಕ್ಕಾಲುಪಾಲು ದುಡ್ಡನ್ನು ಮಿಗಿಸಿ ಮದ್ಯಸೇವನೆಯನ್ನು ಮಾಡುತ್ತಿರುವರು. ಧರ್ಮವಿರುದ್ಧವೂ, ನೀತಿಬಾಹ್ಯವೂ, ಅರ್ಥಮಾನಪ್ರಾಣಹಾನಿಕರವೂ ಆದ ಈ ಮದ್ಯಸೇವನೆಯನ್ನು ತಪ್ಪಿಸಲು ದೇಶಾಭಿಮಾನಿಗಳು ಸಂಘಗಳನ್ನೇರ್ಪಡಿಸಿಕೊಂಡು ಸಾಹಸಪಡುತ್ತಿರುವುದಲ್ಲದೆ ಪ್ರಭುತ್ವದವರು ತಮ್ಮಾದಾಯದಮೇಲೆ ದೃಷ್ಟಿಯನ್ನಿಡದೆ ಅದರ ಪ್ರೋತ್ಸಾಹವನ್ನು ಕಡಿಮೆಮಾಡದ ಹೊರತು ಈ ದುರ್ವ್ಯಸನವು ತಪ್ಪುವುದಿಲ್ಲವೆಂದು ಆಕ್ಷೇಪಿಸುತ್ತ ಬಂದುದರಮೇಲೆ ಪ್ರಭುತ್ವದವರು ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಮದ್ಯಪಾನನಿರೋಧಕ್ಕಾಗಿ ಕೆಲವುಪಾಯಗಳನ್ನು ಮಾಡಿರುವೆವೆಂದು ಪ್ರಕಟಿಸಿಕೊಳ್ಳುತ್ತಿರುವರು. ಮದದ್ರವ್ಯಗಳ ಬೆಲೆಯನ್ನು ಹೆಚ್ಚಿಸಿರುವುದು, ಅಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡುವುದು, ಮಾರತಕ್ಕ ಕಾಲವನ್ನು ಕ್ಲುಪ್ತಪಡಿಸುವುದು ಇತ್ಯಾದಿ ಕೆಲ ಕ್ಷುದ್ರೋಪಾಯಗಳನ್ನು ತೋರಿಸಿರುವರು. ಇವುಗಳಿಂದೆಲ್ಲ ಉದ್ದಿಷ್ಟಫಲ ಮಾತ್ರ ಲಭಿಸಿಲ್ಲ. ಬೆಣ್ಣೆಯನ್ನು ಕೊಕ್ಕರೆಯ ತಲೆಯಮೇಲಿಟ್ಟು ಅದು ಕರಗಿ ಅದರ ಕಣ್ಣನ್ನು ಮುಚ್ಚಿಸುವಂತೆ ಮಾಡುವುದರಿಂದ ಕೊಕ್ಕರೆಯನ್ನು ಹಿಡಿಯುವೆನೆಂದು ಪ್ರಯತ್ನಪಡುವಂತೆ ಈ ಉಪಾಯಗಳೆಲ್ಲ ಮದ್ಯಪಾನನಿರೋಧ ವಿಷಯದಲ್ಲಿ ಪರಿಹಾಸಾಸ್ಪದವಾಗಿ ಪರಿಣಮಿಸಿರುವುವು.

ಪ್ರಜೆಗಳನ್ನು ದುರ್ವ್ಯಯ ದುರ್ವರ್ತನಗಳಿಂದ ತಪ್ಪಿಸಿ, ಅವರಲ್ಲಿ ಸುನೀತಿಯನ್ನೂ, ಮಿತವ್ಯಯವನ್ನೂ, ದೇಹಾರೋಗ್ಯವನ್ನೂ, ಸತ್ಪ್ರವರ್ತನೆಯನ್ನೂ ವೃದ್ಧಿಗೊಳಿಸುವಂತೆ ಮಾಡಿದರೆ ಅದೇ ತಮ್ಮ ಕೋಶಾಭಿವೃದ್ಧಿಯೆಂಬ ಭಾವವು ಯಾವ ಪ್ರಭುತ್ವದವರಿಗೆ ಇರುತ್ತದೋ ಅವರು ಮದದ್ರವ್ಯಶಾಖೆಯ ವರಮಾನವನ್ನು ಪ್ರಜೆಗಳ ಕೊರಲನ್ನು ಕುಯ್ದು ಬಸಿದ ರಕ್ತಕ್ಕೆ ಸಮವನ್ನಾಗಿ ಭಾವಿಸುವುದೇ ಧರ್ಮವು. ರಷ್ಯಾಪ್ರಭುತ್ವದವರು ಯುದ್ಧಕ್ಕೆ ಮುಂಚೆಯೇ ಎಷ್ಟೋ ಕೋಟಿಗಟ್ಟಲೆಯ ವರಮಾನವಿದ್ದರೂ ಈ ಶಾಖೆಯನ್ನು ತೆಗೆದುಬಿಟ್ಟು, ಪ್ರಜೆಗಳಲ್ಲಿದ್ದ ಪಾನದುರ್ವ್ಯಸನಕ್ಕೆ ದೊಡ್ಡ ತಡೆಯನ್ನು ಹಾಕಿದರು. ಈಗ ಅಮೇರಿಕಾದ ಸಂಯುಕ್ತರಾಷ್ಟ್ರಪ್ರಭುತ್ವದವರೂ ಅಧಿಕಧನಾದಾಯನಷ್ಟಕ್ಕಾಗಿ ಸ್ವಲ್ಪವೂ ಚಿಂತಿಸದೆ ದೇಶಪ್ರಜಾಸೌಭಾಗ್ಯವನ್ನೇ ತಮ್ಮ ಮುಖ್ಯಾದಾಯವನ್ನಾಗಿ ಪರಿಗಣಿಸಿ ಮದ್ಯನಿಷೇಧಶಾಸನವನ್ನು ವಿಧಿಸಿ ಆಚರಣೆಗೆ ತಂದರು. ಚೈನಾರಾಜ್ಯದಲ್ಲಿ ಬಹುಕಾಲದಿಂದಲೂ ರೂಢಿಯಲ್ಲಿದ್ದ ಅಫೀಂ ಸೇವನೆಯು ಕಠಿಣಶಾಸನನಿರ್ಮಾಣದಿಂದ ತಪ್ಪಿಸಲ್ಪಟ್ಟಿತು.

ಮದ್ಯಪಾನನಿಷೇಧಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದ ದಿವಾನ್ ಬಹದ್ದೂರ್ ಎಂ. ರಾಮಚಂದ್ರರಾವ್‌ಪಂತಲು ಇವರು ಈ ಮದ್ಯಪಾನದುರ್ವ್ಯಸನದಿಂದುಂಟಾಗತಕ್ಕ ಮಹಾನರ್ಥವನ್ನೂ, ಇದರ ನಿಷೇಧಕ್ಕೆ ಪ್ರಪಂಚದ ಯಾವ್ಯಾವ ಭಾಗದಲ್ಲಿ ಯಾವ್ಯಾವ ಪ್ರಯತ್ನಗಳು ಮಾಡಲ್ಪಟ್ಟು ಎಷ್ಟರಮಟ್ಟಿಗೆ ಪ್ರಯೋಜನವಾಗಿರುತ್ತದೆಂಬುದನ್ನೂ ಸವಿಸ್ತಾರವಾಗಿ ತಿಳಿಸಿದರು. "ಮದ್ಯಪಾಯಿಗಳಕೂಡ ಯಾರೂ ಕಲೆತು ಊಟಮಾಡಬಾರದು, ಯಾವ ದೈವಪಿತೃಕಾರ್ಯವನ್ನೂ ಆಚರಿಸಬಾರದು, ವಿದ್ಯಾಭ್ಯಾಸಮಾಡಲಾಗದು. ಅಂತಹ ನೀಚರ ಸಂಬಂಧ ಬಾಂಧವ್ಯವನ್ನು ಬೆಳೆಸಬಾರದು. ಪತಿತನಾದ ಅವನು ಸಾಂಘಿಕಹಕ್ಕನ್ನು ಅನುಭವಿಸಲು ಅರ್ಹನಲ್ಲವು. ದೇಶದ್ರೋಹಿಯಾಗಿ ಪರಿಭಾವಿಸಲ್ಪಟ್ಟು ಸಮಸ್ತರ ಅಗೌರವಕ್ಕೂ ಪಾತ್ರನಾಗಿ ತಂದೆತಾಯಿಗಳಿಂದ ನಿರಾಕರಿಸಲ್ಪಡುವವನಾಗುವನು ಎಂದು ಮನುಧರ್ಮಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವುದು, ಕುರಾನಿನಲ್ಲಿಯೂ ನಿಷೇಧಿಸಲ್ಪಟ್ಟಿರುವುದು. ಲಂಡನ್ ನಗರದಲ್ಲಿ 1888 ರಾರಭ್ಯ ಆಂಗ್ಲೊಇಂಡಿಯನ್ ಟೆಂಪರೆನ್ಸ್ ಎಂಬ ಮದ್ಯಪಾನನಿಷೇಧಕಸಮಿತಿಯು ಏರ್ಪಟ್ಟು ಭರತಖಂಡದಲ್ಲಿ ನಿಷೇಧಿಸಲ್ಪಡುವುದು ಅತ್ಯಗತ್ಯವೂ ಅವಸರವೂ ಎಂದು ಪಾರ್ಲಿಮೆಂಟ್‌ಸಭೆಯಲ್ಲಿ ಚರ್ಚಿಸಲ್ಪಡುತ್ತಿರುವುದಲ್ಲದೆ, ಪ್ರಭುತ್ವಮಂತ್ರಿಮಂಡಲದವರಲ್ಲಿ ಬಿನ್ನೈಸಲ್ಪಡುತ್ತಿರುವುದು. ಯೂರೋಪು ಅಮೇರಿಕಾಖಂಡಗಳಲ್ಲಿಯ ವೈದ್ಯಶಾಸ್ತ್ರಜ್ಞರು ಈ ವಿಚಾರದಲ್ಲಿ ಪರಿಶೋಧಿಸಿ ಮದ್ಯಪಾನದಿಂದ ಸಂತಾನವು ದುರ್ಬಲವಾಗುವುದು; ಮದ್ಯಪಾನಾಧಿಕ್ಯದಿಂದ ಜನಸಂಖ್ಯೆಯು ಕ್ಷೀಣಿಸುವುದು ಎಂದು ಮೊದಲಾಗಿ ಸಿದ್ಧಾಂತಮಾಡಿರುವರು. ಮದ್ಯಪಾನವನ್ನು ನಿಷೇಧಿಸಿರುವವರೆಲ್ಲರೂ ಪಾರಿಶ್ರಾಮಿಕ ನೈತಿಕ ಸಾಂಘಿಕವಿಷಯಗಳಲ್ಲೆಲ್ಲಾ ಬಹಳ ಅಭಿವೃದ್ಧಿಯನ್ನು ಹೊಂದಿ ತಮ್ಮ ಹೆಂಡಿರು ಮಕ್ಕಳ ಸುಖಸಂಪತ್ತಿಗಾಗಿ ದ್ರವ್ಯವನ್ನು ವ್ಯಯಮಾಡಿ ಸಂಸಾರಸೌಖ್ಯವನ್ನು ಅನುಭವಿಸುತ್ತ ಸತ್ಸಂತಾನವೃದ್ಧಿಯನ್ನು ಮಾಡುತ್ತ ಕೃತಾರ್ಥರಾಗಿರುವರು. ಇದೆಲ್ಲವೂ ಅನುಭವವೇದ್ಯವೇ. ಹಾಗಲ್ಲದೆ ಈ ಮದ್ಯಪಾನದುರ್ವ್ಯಸನಕ್ಕೀಡಾಗಿರುವ ಕೂಲಿಕಾರರ, ಬೇಸಾಯಗಾರರ ಮತ್ತು ಇತರರ ಸ್ಥಿತಿಯಾದರೊ ಅತ್ಯಂತ ಪರಿತಾಪಕರವಾಗಿರುವುದರಿಂದ ಇದರ ನಿವಾರಣಾರ್ಥವಾಗಿ ಪ್ರಬಲಪ್ರಯತ್ನಮಾಡಲ್ಪಡುವುದು ಅತ್ಯಾವಶ್ಯಕವು. ಹೆಂಡ ಮತ್ತು ಸಾರಾಯಿ ಅಂಗಡಿಗಳಬಳಿ ಜನರಿದ್ದುಕೊಂಡು ಮದ್ಯಪಾನಮಾಡದಂತೆ ಆ ದುರ್ವ್ಯಸನಿಗಳಿಗೆ ಬೋಧಿಸಬೇಕೆಂದು ಮಹಾತ್ಮಗಾಂಧಿಯವರ ಸೂಚನೆಯಂತೆ ನಡೆಯಿಸಲ್ಪಟ್ಟದರಲ್ಲಿ ಆ ಮದ್ಯಪಾಯಿಗಳು ದುರಭ್ಯಾಸವನ್ನು ಬಿಡುವುದಕ್ಕೆಬದಲು ಅವರಿಗೆ ಬೋಧಿಸಿದವರು ಸರ್ಕಾರದ ಶಿಕ್ಷೆಗೆ ಗುರಿಯಾಗಬೇಕಾಗಿಬಂದಿತು. ಅದರಮೇಲೆ ಈ ಮದ್ಯಪಾನದ ಸಂಪೂರ್ಣನಿಷೇಧಕ್ಕಾಗಿ ಒಂದು ಶಾಸನವು ಮಾಡಲ್ಪಡಬೇಕೆಂದು ಸಾಮ್ರಾಜ್ಯಶಾಸನಸಭೆಯಲ್ಲಿ ಚರ್ಚಿಸಲ್ಪಟ್ಟಾಗ್ಗೆ, 1883 ನೆಯ ವರ್ಷಕ್ಕಿನ್ನ ಈಗ ಕುಡಿಯುವುದು ಕಡಿಮೆಯಾಗಿದೆಯೆಂದೂ, ಶೇಕಡ 2·68 ಗ್ಯಾಲನ್ನು ಖರ್ಚಾಗುತ್ತಿದೆಂದೂ, ಸಂಪೂರ್ಣನಿಷೇಧಮಾಡುವುದರಿಂದ ಮನುಷ್ಯನ ಸ್ವಾತಂತ್ರ್ಯಕ್ಕೆ ಭಂಗವನ್ನುಂಟುಮಾಡಿದಂತಾಗುತ್ತದೆಂದೂ ಅರ್ಥಿಕ ಮೆಂಬರಾದ ಸರ್ ಬ್ಯಾಸಿಲ್‌ಬ್ಲಾಕೆಟ್‌ರವರು ಹೇಳಿದರು. ಈ ನಿರ್ಬಂಧವಿಧಾನದಿಂದ ಪ್ರಭುತ್ವಾದಾಯಕಡಿಮೆಯಾಗುತ್ತದೆಂಬುದರಮೇಲೆ ಆರೀತಿ ನೆಪಹೇಳತಕ್ಕದಾಗಿದೆವಿನಾ ಮತ್ತೆಬೇರೆಯಿಲ್ಲವು. ಅದುಕಾರಣ ಭಾರತಪ್ರಭುತ್ವದವರು ಆಲಸ್ಯಮಾಡದೆ 20 ವರ್ಷಗಳಲ್ಲಿ ಎಕ್ಸೈಜು ಆದಾಯವಿಲ್ಲದಂತೆ ಮಾಡಲು ತತ್ಕಾಲೋಚನೆಮಾಡುವುದಕ್ಕಾಗಿ ಒಂದು ಕಮಿಟಿಯು ನಿಯಮಿಸಲ್ಪಡಬೇಕು. ಅಲ್ಲದೆ ಪಂಜಾಬಿನಲ್ಲಿ ಲೋಕಲ್ ಆಪ್ಷನ್ ಶಾಸನ ಅಂದರೆ ಸಳ್ಳೀಯ ಐಚ್ಛಿಕ ಶಾಸನವು 1924 ರಿಂದ ಆಚರಣೆಗೆ ಬಂದು ಕೆಲ ಮ್ಯುನಿಸಿಪಾಲಿಟಿಗಳಿಗೂ ಡಿ|| ಬೋರ್ಡುಗಳಿಗೂ ಅಂಗಡಿಗಳನ್ನು ಕಡಿಮೆಮಾಡುವ ಅಧಿಕಾರವು ಕೊಡಲ್ಪಟ್ಟಿರುತ್ತದೆ. ಅದರಂತೆ ಎಲ್ಲ ಕಡೆಯೂ ಸರ್ವತ್ರ ಆಚರಣೆಗೆ ತರಲ್ಪಡಬೇಕು. ಈ ಪ್ರಯತ್ನಗಳನ್ನೆಲ್ಲಾ ಸತತ ಪ್ರಬಲವಾಗಿ ನಡೆಯಿಸಲು ಒಂದು ಕೇಂದ್ರನಿಷೇಧಸಮಿತಿಯು ಇರತಕ್ಕದು ಅತ್ಯಾವಶ್ಯಕವು." ಎಂದು ಮೊದಲಾಗಿ ಸಭಾಧ್ಯಕ್ಷರು ಹೇಳಿದರು. ತರುವಾಯ ಕೆಲ ಉಪಯುಕ್ತನಿರ್ಧಾರಗಳು ಮಾಡಲ್ಪಟ್ಟುವು. ದಿ|| ಬ|| ರಾಮಚಂದ್ರರಾಯರು ಲೋಕಾನುಭವದಿಂದಲೂ, ರಾಜ್ಯಾಂಗ ಜೀವನಾನುಭವದಿಂದಲೂ ಈ ಮದ್ಯಪಾನನಿಷೇಧಸಮಸ್ಯೆಯನ್ನು ಬಹುಕಾಲದಿಂದ ವಿಮರ್ಶಿಸುತ್ತಿರುವರಲ್ಲದೆ ಮದ್ರಾಸಿನ ಶಾಸನಸಭೆಯಲ್ಲಿ ಶಾಸನವಾಗಲು ಬಹಳ ಸಾಹಸಮಾಡಿಯೂ ಮಾಡುತ್ತಲೂ ಇರುವುದರಿಂದ ಅವರ ಅಭಿಪ್ರಾಯವು ನಿರಾಕರಿಸಲ್ಪಡದೆ ಅಂಗೀಕರಿಸಲ್ಪಡತಕ್ಕದಾಗಿದೆ. ಮದ್ಯಪಾನನಿಷೇಧದಿಂದ ದ್ರವ್ಯೋತ್ಪತ್ತಿ ಕಡಿಮೆಯಾಗುತ್ತದೆಂಬುದರಮೇಲೆ ಸಂಪೂರ್ಣ ನಿರ್ಬಂಧದಿಂದ ಮನುಷ್ಯನ ಸ್ವಾತಂತ್ರ್ಯಕ್ಕೆ ಭಂಗವಾಗುತ್ತದೆಂದೂ, ಅಮೇರಿಕಾ ಮೊದಲಾದ ದೇಶಗಳಲ್ಲಿ ಉದ್ದಿಷ್ಟಫಲಪ್ರಾಪ್ತವಾಗಲಿಲ್ಲನೆಂದೂ ಪ್ರಭುತ್ವದವರು ಹೇಳತಕ್ಕುದಾಗಿದೆಯೇ ವಿನಾ ಅದು ಸಮಂಜಸವಾಗಿಲ್ಲವು. ಆದುಕಾರಣ ಭಾರತಪ್ರಭುತ್ವದವರು ತಮ್ಮ ಪ್ರಜೆಗಳ ಧರ್ಮಭ್ರಷ್ಟತೆಗೂ, ನೀತಿಬಾಹ್ಯತೆಗೂ, ದಾರಿದ್ರ್ಯಕ್ಕೂ, ಅಕಾಲಮರಣಕ್ಕೂ ಹೇತುವಾಗಿರುವ ಈ ಮದ್ಯಸೇವನೆಯ ನಿಷೇಧಕ್ಕಾಗಿ ಶಾಸನವನ್ನೇರ್ಪಡಿಸಿ ಅಮೇರಿಕನ್ನರಂತೆ ಸ್ವಾರ್ಥತ್ಯಾಗ ಪದ್ಧತಿಯನ್ನು ಸ್ಥಾಪಿಸಿ ದೇಶಸೌಭಾಗ್ಯವನ್ನು ಅಭಿವೃದ್ಧಿಗೊಳಿಸಿ ಶಾಶ್ವತಕೀರ್ತಿಭಾಜನರಾಗಲೆಂದು ಕೋರುತ್ತೇವೆ.

ಬಾವಲಾ ಕೊಲೆಯೂ ಇಂದೂರು ಮಹಾರಾಜರೂ.

ಬಾವಲಾ ಕೊಲೆಪಾತಕರು ಶಿಕ್ಷಿಸಲ್ಪಟ್ಟಮೇಲೆ ಈ ಘೋರಕೃತ್ಯಕ್ಕೆ ಮೂಲಕಾರಣರಾರೆಂಬುದನ್ನು ಪ್ರಭುತ್ವದವರು ಕಂಡುಹಿಡಿದು ಅವರು ಭೂಪಾಲರಾಗಿದ್ದರೂ ಮನ್ನಿಸದೆ ಕಠಿನತರವಾದ ಶಿಕ್ಷೆಗೆ ಗುರಿಮಾಡಬೇಕೆಂದು ವೃತ್ತಪತ್ರಿಕೆಗಳ ಮತ್ತು ಶಾಸನಸಭೆಗಳ ಮೂಲಕ ಪ್ರಾರ್ಥಿಸಲ್ಪಟ್ಟಿದ್ದಿತು. ಅಲ್ಲಿಗೆ ಈ ಭಯಾನಕ ಕಥಾನಾಯಕಿಯಾದ ಮಮತಜಂಬೇಗಮ್ಮಳು ವೈಸ್ರಾಯರಿಗೂ ಬ್ರಿಟಿಷ್ ಮಂತ್ರಿಮಂಡಲಕ್ಕೂ ಮೊರೆಯಿಟ್ಟುಕೊಂಡಿದ್ದಳು. ಇದರಮೇಲೆ ಈಗ ವೈಸ್ರಾಯರು ಈ ಕೊಲೆಗೆ ಸಂಬಂಧಪಟ್ಟ ವಿಶಿಷ್ಟಕಾಗದಪತ್ರಗಳನ್ನು ಬೊಂಬಾಯಿ ಸಿ. ಐ. ಡಿ. ಪೋಲೀಸು ಸೂಪರಿಂಟೆಂಡೆಂಟ್ ಜಫ್ರಿಸ್‌ರವರ ಮೂಲಕ ದಿಲ್ಲಿಗೆ ತರಿಸಿಕೊಂಡು ಎಲ್ಲವಿಷಯಗಳನ್ನೂ ಕೂಲಂಕಷವಾಗಿ ಕೇಳಿ ತಿಳಿದುಕೊಂಡು ಇಂದೂರು ರಾಜಧಾನಿಯಲ್ಲಿ ಮಹಾರಾಜಹೋಲ್ಕರರವರ ಮತ್ತು ಇತರರ ವಿಚಾರಣೆ ಮಾಡುವುದಕ್ಕಾಗಿ ಕೆಲ ಹೈಕೋರ್ಟಿನ ನ್ಯಾಯಾಧೀಶರುಗಳಿಂದಲೂ ದೇಶೀಯ ರಾಜರುಗಳಿಂದಲೂ ಕೂಡಿದ ಒಂದು ಕಮಿಷನ್ನನ್ನು ಗೊತ್ತುಮಾಡಿ, ಇಂದೂರು ಮಹಾರಾಜರವರು ಇಷ್ಟಪಟ್ಟಲ್ಲಿ ಕಮಿಷನ್ನಿನವರ ವಿಚಾರಣೆಗೊಳಪಡಬಹುದು; ಬಲವಂತವೇನೂ ಇಲ್ಲವೆಂದು ಪ್ರಕಟಿಸಿರುತ್ತಾರೆ. ವಿಚಾರಣೆಗೊಳಪಡದಿದ್ದಲ್ಲಿ ಪದಚ್ಯುತರಾಗಬಹುದೆಂದು ತಿಳುಹಲ್ಪಟ್ಟಿರುವುದಾಗಿ ವದಂತಿ ಹುಟ್ಟಿದೆ. ಈ ವಿಷಯವನ್ನು ತಿಳಿದು ಮಹಾರಾಜರವರಿಗೆ ನ್ಯಾಯಬೋಧಕರಾದ ಸರ್ ಪಿ. ಎಸ್. ಶಿವಸ್ವಾಮಯ್ಯರ್‌ರವರೂ, ಸರ್ ತೇಜಬಹದ್ದೂರ್ ಸಪ್ರೂಯವರೂ ಇಂದೂರಿಗೆ ಹೋಗಿ ಹೋಲ್ಕರ್ ಮಹಾರಾಜರ ಮತ್ತು ದಿವಾನ್ ಮ|| ನರಸಿಂಗರಾಯರ ಕೂಡ 8 ಗಂಟೆಯ ಕಾಲ ಈ ವಿವಾದದ ಸಂಬಂಧವಾಗಿ ಪರ್ಯಾಲೋಚಿಸಿ, ಮಹಾರಾಜರವರು ಕಮಿಷನ್ನಿನವರ ವಿಚಾರಣೆಗೊಳಗಾಗಬೇಕೆ ಬೇಡವೆ? ಎಂಬುದನ್ನು ನಿರ್ಧರಿಸಿ ವೈಸ್‌ರಾಯರಿಗೆ ಇಷ್ಟರಲ್ಲೇ ತಿಳಿಸುವವರಾಗಿರುವರೆಂದೂ, ಇಂಗ್ಲೆಂಡಿನಲ್ಲಿ ಸರ್ ಜಾರ್ನ್‌ಸೈಮನ್, ಸರ್ ಪ್ಯಾಟ್ರಿಕ್ ಹೇಸ್ಟಿಂಗ್ಸ್ ಮೊದಲಾಗಿ ಪ್ರಸಿದ್ಧ ನ್ಯಾಯವಾದಿಗಳು ಈ ಕೊಲೆಸಂಬಂಧದ ವಿದ್ಯಮಾನವನ್ನೆಲ್ಲಾ ಕೂಲಂಕಷವಾಗಿ ಪರ್ಯಾಲೋಚಿಸಿ ಮಹಾರಾಜರವರಿಗೆ ಯಾವವಿಧವಾದ ತೊಂದರೆಯು ಇಲ್ಲವೆಂದು ಮತ್ತು ಈ ವಿಚಾರದಲ್ಲಿ ಬ್ರಿಟಿಷ್ ಪ್ರಭುತ್ವದವರು ಮಹಾರಾಜರ ಮೇಲೆ ಕಾರ್ಯಭಾಗ ನಡೆಯಿಸಲು ಅವಕಾಶವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆಂದೂ ವರ್ತಮಾನವಿದೆ. ಈ ಕಮಿಷನ್ನಿಗೆ ಅಲಹಾಬಾದ್ ಹೈಕೋರ್ಟಿನ ಚೀಫ್‌ಜಡ್ಜರಾದ ಸರ್ ಗ್ರಿಂವುಡ್‌ಮಿಯರ್ಸ್‌ರವರೂ ಕಲಕತ್ತಾ ಹೈಕೋರ್ಟಿನ ಜಡ್ಜಿಯರೊಬ್ಬರೂ, ಇಬ್ಬರು ರಾಜರುಗಳಲ್ಲಿ ನರೇಂದ್ರಮಂಡಳದ ಅಧ್ಯಕ್ಷರಾದ ಪಾಟಿಯಾಲ ಮಹಾರಾಜರೊಬ್ಬರೂ ಆಗಿರುವರೆಂಬದಾಗಿಯೂ, ಬರೋಡಾ ಗಾಯಕವಾರ ಮಹಾರಾಜರು ಕಮಿಷನ್ನಿನಲ್ಲಿರಲು ತಿರಸ್ಕರಿಸಿದುದಾಗಿಯೂ ಪ್ರಬಲ ವರ್ತಮಾನವಿದೆ. ಇಂದೂರು ಸಂಸ್ಥಾನದ ಕೋಟ್ಯಧೀಶ್ವರರಾದ ಮತ್ತು ಶ್ರವಣಬೆಳಗೊಳದ ಜೈನಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದು ಪರಿಚಿತಸ್ಥರಾಗಿರುವ ಸರ್ ಹುಕುಂಚಂದ್ ಸರೂಪಚಂದ್‌ರವರು ವೃತ್ತಪತ್ರಿಕಾವಿಲೇಖಕನಕೂಡ ಪ್ರಸ್ತಾವಿಸುವಾಗ್ಗೆ, "ಮಹಾರಾಜರವರ ಪ್ರಸಾದವನ್ನು ಸಂಪಾದಿಸುವ ಯೋಚನೆಯಿಂದ ಯಾರೋ ದುರ್ಮಾರ್ಗಿಗಳು ಕೊಲೆಯನ್ನು ಮಾಡಿದುದಕ್ಕೆ ಮಹಾರಾಜರವರನ್ನು ಕಾರಣಭೂತರನ್ನಾಗಿ ಮಾಡಿ ಅವರ ವಿಚಾರಣೆಯನ್ನು ಒಂದು ಕಮಿಷನ್ನಿನ ಮೂಲಕ ವೈಸ್‌ರಾಯರು ಮಾಡಿಸುವುದು ಅನ್ಯಾಯವೂ, ಅಪಮಾನಕರವೂ ಆಗಿರುತ್ತದಲ್ಲದೆ ಈ ಸಂಸ್ಥಾನದ ಪ್ರಜೆಗಳಾದ ನಮ್ಮಗಳೆಲ್ಲರಿಗೂ ಅಸಮ್ಮತವಾಗಿದೆ. ಮಹಾರಾಜರವರು ನಿರಪರಾಧಿಗಳಾಗಿರುವುದರಿಂದ ಕಮಿಷನ್ನಿನವರ ವಿಚಾರಣೆಗೊಳಗಾಗತಕ್ಕದೂ ಅಲ್ಲ, ತಾವಾಗಿ ಪದಚ್ಯುತರಾಗತಕ್ಕದೂ ಅಲ್ಲ. ನನಗೆ ಅವಕಾಶವಿದ್ದಲ್ಲಿ ನನ್ನ ಸ್ವಂತವೆಚ್ಚದಿಂದ ರಾಯಭಾರನನ್ನು ವೈಸ್ರಾಯರವರಲ್ಲಿಗೂ, ಇಂಗ್ಲೆಂಡಿಗೂ ಕಳುಹಿಸಿಕೊಟ್ಟು ನಮ್ಮ ಹೋಲ್ಕರ್‌ಮಹಾರಾಜರನ್ನು ಯಾವಬಾಧೆಗೂ ಗುರಿಮಾಡದೆ ಬಿಟ್ಟುಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಿದ್ದೆನು. ಆದರೆ ಹೀಗೆ ಮಾಡಲು ಪ್ರತಿಬಂಧಿಸಲ್ಪಟ್ಟಿರುವೆನು." ಎಂದು ಹೇಳಿದರಂತೆ.

ಬಾವಲಾಕೊಲೆಯ ಸಂಬಂಧವಾಗಿ ವೈಸ್‌ರಾಯರು ಒಂದು ಕಮಿಷನ್ನ ಏರ್ಪಡಿಸಿ ತನ್ಮೂಲಕ ವಿಚಾರಣೆಯನ್ನು ನಡೆಸುವಲ್ಲಿ ಸಂಸ್ಥಾನದ ಪ್ರಜೆಗಳು ನಿರೋಧಕಸಭೆಗಳನ್ನಾಗಲಿ ಆಂದೋಳವನ್ನಾಗಲಿ ನಡೆಯಿಸಕೂಡದೆಂದು ಇಂದೂರು ಪ್ರಭುತ್ವದವರು ಪ್ರಕಟಿಸಿರುವರು. ಈ ವಿಚಾರದಲ್ಲಿ ಒಬ್ಬ ಪತ್ರಿಕಾವಿಲೇಖಕನು ದಿವಾನರನ್ನು ಕಂಡು ಕೇಳುವಲ್ಲಿ, "ಇಂತಹ ನಿರೋಧಕಸಭೆಗಳನ್ನೂ, ಆಂದೋಳನವನ್ನೂ ನಡೆಯಿಸುವುದು ಸಂಸ್ಥಾನಕ್ಕೆ ವಿರೋಧಪರಿಣಾಮಕಾರಕವಾಗಿರುವುದಲ್ಲದೆ, ಬ್ರಿಟಿಷ್ ಪ್ರಭುತ್ವದವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗೆ ವಿರುದ್ಧವಾಗಿರುವುದು. ಇಂದೂರಿನ ಪ್ರಮುಖಜನರು ಕಳೆದ ಭಾನುವಾರ ನಡೆಯಿಸಬೇಕೆಂದಿದ್ದ ಮಹಾಜನಸಭೆಯನ್ನು ಪೋಲೀಸರ ಕಾವಲನ್ನಿಟ್ಟು ಅಡ್ಡಿಪಡಿಸಬೇಕಾಯಿತು. ಸರ್ ಹುಕುಂಚಂದ್ ಸರೂಪಚಂದ್ ಮೊದಲಾದ ಪ್ರಮುಖಜನರು ವೈಸ್‌ರಾಯರಲ್ಲಿಗೆ ರಾಯಬಾರವನ್ನು ಕಳುಹಿದಲ್ಲಿ ಮಹಾರಾಜರವರ ಅಸಮಾಧಾನಕ್ಕೆ ಕಾರಣವಾಗುತ್ತದೆಂದು ಎಚ್ಚರಿಸಲ್ಪಟ್ಟರು" ಎಂದು ತಿಳಿಸಿದರು.

ಮಹಾರಾಜರವರು ತಮ್ಮ ಅಭಿಪ್ರಾಯವು ಈ ವಿಚಾರದಲ್ಲಿ ಹೇಗಿರುವುದಾದರೂ, ತಮ್ಮ ಕುಮಾರರಾದ ಯುವರಾಜರನ್ನು ವಿದ್ಯಾಭ್ಯಾಸಕ್ಕೆ ಇಂಗ್ಲೆಂಡಿಗೆ ಕಳುಹಲು ಸಿದ್ಧಗೊಳಿಸಿದ್ದ ಸಕಲ ಸನ್ನಾಹವನ್ನೂ ನಿಲ್ಲಿಸಿಬಿಟ್ಟಿರುವರು. ಈ ಯುವರಾಜರಿಗೆ ಈಗತಾನೆ 18 ನೇ ವರ್ಷ ವಯಸ್ಸು ನಡೆಯುತ್ತಿದೆ. ಈ ಯುವರಾಜರ ಇಂಗ್ಲೆಂಡಿನ ಪ್ರಯಾಣವು ಏಕಾಏಕಿ ನಿಲ್ಲಿಸಲ್ಪಟ್ಟುದರಿಂದ ಜನರು ನಾನಾವಿಧವಾಗಿ ಮಾತಾಡಿಕೊಳ್ಳುತ್ತಿರುವರು. ಎಂದು ಪತ್ರಿಕಾವಿಲೇಖಕನೊಬ್ಬನು ಬರೆದಿರುತ್ತಾನೆ. ಈ ಕಮಿಷನ್ನಿನ ವಿಚಾರಣೆಯ ಪರಿಣಾಮವನ್ನು ಜನರು ಬಹುಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಸ್ವದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಪಾರ್ಶಿಜನರ ಅಗ್ನಿದೇವಾಲಯದ ಪ್ರವೇಶೋತ್ಸವವು ಈ ತಾ|| 8 ರಲ್ಲಿ ನಡೆಯುವುದು.

ಕಳೆದವಾರ ನಮ್ಮ ಸೀಮೆಯ ಕೆಲವೆಡೆಗಳಲ್ಲಿ ಅಕಾಲವುಳೆಯಾಗಿ ಕೆರೆಕುಂಟೆಗಳಿಗೆ ನೀರು ಬಂದಿತೆಂದೂ, ರಾಗಿ ಹುರುಳಿ ಮೊದಲಾದ ಧಾನ್ಯವನ್ನು ತುಳಿಸುತ್ತಿದ್ದವರಿಗೆ ವಿಶೇಷ ನಷ್ಟವಾಯಿತೆಂದೂ ತಿಳಿಯಬಂದಿದೆ.

ರಾಜಧಾನಿಯಲ್ಲಿ ವಿಷಪ್ರಯೋಗದಿಂದ ಕೊಂದುಹಾಕಲ್ಪಟ್ಟಿದ್ದ 12 ಕಪಿಗಳ ಶವವನ್ನು ಬೈರಾಗಿಗಳು ನೆನ್ನೆಯದಿವಸ ಉತ್ಸವಪೂರ್ವಕವಾಗಿ ಸ್ಮಶಾನಕ್ಕೆ ತೆಗೆದುಕೊಂಡುಹೋಗಿ ಉತ್ತರಕ್ರಿಯಾದಿಗಳನ್ನು ವಿಧಿವತ್ತಾಗಿಮಾಡಿದರಂತೆ.

ಮ|| ಜಿ. ಕೆ. ಮಲ್ಲಪ್ಪನವರು ತಿಪಟೂರು ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಬಿದರಪ್ಪನವರು ಸಿಡ್ಲಘಟ್ಟದ ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾಗಿಯೂ ಆರಿಸಲ್ಪಟ್ಟಿರುವುದನ್ನು ಸರ್ಕಾರದವರು ಅನುಮೋದಿಸಿರುತ್ತಾರೆ.

ಯಡತೊರೆ ತಾಲ್ಲೂಕಿನಲ್ಲಿರುವ ಅರಮನೆಯ ಜಮೀನುಗಳನ್ನು ನೋಡುವುದಕ್ಕಾಗಿ ಶ್ರೀಮನ್ ಮಹಾರಾಜರವರ ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯವರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರು ಡೆಪ್ಯುಟಿಕಮಿಷನರ ಕೂಡ ಹೋಗಿದ್ದು ಬಂದರು.

ಮೈಸೂರು ಪ್ರಭುತ್ವದವರಿಂದ ನಡೆಯಿಸಲ್ಪಡುತ್ತಿರುವ ಎಲ್ಲ ರೈಲ್ವೆಗಳಿಂದಲೂ ಈ ಜನವರಿ ತಾ|| 16 ಕ್ಕೆ ಕಡೆಯಾದ ಒಂದು ವಾರದಲ್ಲಿ 58400 ರೂಪಾಯಿಗಳುತ್ಪತ್ತಿಯಾದುವು; ಇದರ ಹಿಂದಣವಾರದಲ್ಲಿ 65400 ರೂ. ಕಳೆದವರ್ಷ ಇದೇ ಕಾಲದಲ್ಲಿ 59978 ರೂ. ಉತ್ಪನ್ನವಾಗಿದ್ದಿತು.

ನಂಜನಗೂಡು ಶ್ರೀಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನಕ್ಕೆ ಸಂಬಂಧಪಟ್ಟ ಕೆಲ ಆಭರಣಗಳ ಬದಲಾವಣೆಯಾಗಿರುತ್ತದೆಂದು ಹುಟ್ಟಿರುವ ಸುದ್ದಿಯ ನಿಜಸ್ಥಿತಿಯನ್ನು ತಿಳಿಯುವುದಕ್ಕಾಗಿ ಮುಜರಾಯಿಕಮಿಷನರಾದ ಮ|| ಬಿ. ರಾಮಸ್ವಾಮಯ್ಯನವರು ಬಂದಿರುವುದಾಗಿ ಕೇಳುತ್ತೇವೆ.

ಶ್ರೀಮನ್ ಮಹಾರಾಜರವರೂ, ಮಹಾಮಾತೃಶ್ರೀಯವರೂ ಪರಿವಾರದೊಡನೆ ಗೋಕುಲಬೃಂದಾವನಕ್ಕೆ ದಯೆಮಾಡಿಸಿದ್ದು ಅಲ್ಲಿಂದ ಪ್ರಯಾಗಕ್ಕೆ ಚಿತ್ತೈಸಿರುವರು, ಮತ್ತು ತಾ|| 8 ರಲ್ಲಿ ಶ್ರೀಕಾಶೀಕ್ಷೇತ್ರಕ್ಕೆ ದಯೆಮಾಡಿಸಿ ಅಲ್ಲಿ 8–10 ದಿನಗಳವರೆಗಿದ್ದು ಕಲಕತ್ತಾಕ್ಕೆ ಚಿತ್ತೈಸುವವರಾಗಿರುವರೆಂದು ತಿಳಿಯಬರುತ್ತದೆ.

ರಾಜಧಾನಿಯ ಹಳ್ಳದಕೇರಿ ಮೊದಲಾಗಿ ದಕ್ಷಿಣಭಾಗದಲ್ಲಿ ಕಳೆದ 3 ದಿವಸಗಳಿಂದಲೂ ವಿದ್ಯುದ್ದೀಪಗಳು ಹೊತ್ತದೆ ಹಳ್ಳಗಳು ವಿಶೇಷವಾಗಿರುವ ಮಾರ್ಗಗಳಲ್ಲಿ ತಿರುಗಾಡುವ ಜನರಿಗೆ ಬಹಳ ತೊಂದರೆಯಾಗಿರುತ್ತದೆ. ಹೀಗಿದ್ದರೂ ಸರಿಪಡಿಸದೆ ಇರುವುದನ್ನು ನೋಡಿದರೆ ಆ ಶಾಖಾಧಿಕಾರಿಗಳ ಗಮನಕ್ಕೆ ಬಂದಂತೆ ತೋರುವುದಿಲ್ಲ.

ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ರಾಜರಾಜೇಶ್ವರಿಹಾಲಿನ ಪ್ರೊಪ್ರೈಟರುಗಳಾದ ಮ|| ಲಿಂಗೋಜಿರಾವ್ ಅಂಡ್ ಸನ್ಸ್‌ರವರೂ, ಶ್ರೀರಾಮಪೇಟೆಯಲ್ಲಿರುವ ಜವಳಿಕೋಟಿ ಸಾಹುಕಾರ್ ಎಂ. ಕೆ. ಮಾಧವರಾವ್ ಪವಾರ್‌ರವರು ದಯವಿಟ್ಟು ಕಳುಹಿಸಿಕೊಟ್ಟಿರುವ ಸುಂದರವಾದ ಸಚಿತ್ರಕ್ಯಾಲೆಂಡರುಗಳನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಇಂಜನೀಯರಾದ ಮ|| ಬಿ. ತಿರುಮಲಾಚಾರ್, ಬಿ. ಇ., ಯವರಿಗೆ ಜನವರಿ ತಾ|| 1 ರಿಂದ 3 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ ಟ್ರಸ್ಟ್‌ಬೋರ್ಡ್ ಇಂಜನಿಯರಾದ ಮ|| ವೈ. ರಾಮಸ್ವಾಮಿ ಬಿ.ಎ., ಸಿ.ಇ., ಯವರು ತಮ್ಮ ಕೆಲಸದೊಂದಿಗೆ ಮ್ಯುನಿಸಿಪಲ್ ಇಂಜನಿಯರ್ ಕೆಲಸವನ್ನು ನೋಡಿಕೊಳ್ಳುವುದಾಗಿ ಸರ್ಕಾರದಪ್ಪಣೆಯಾಗಿರುತ್ತದೆ.

ಅಮಲ್ದಾರರುಗಳಾದ ಮ|| ಎಸ್. ನಾರಾಯಣರಾಯರು ದಾವಣಗೆರೆಯಿಂದ ಹೊಳಲಕೆರೆಗೂ, ಆಕ್ಟಿಂಗ್ ಸಬ್‌ಡಿವಿಜನ್ ಆಫೀಸರಾಗಿದ್ದು ಅಮಲ್ದಾರರಾಗಿ ಹಿಂದಕ್ಕೆ ಕಳುಹಲ್ಪಟ್ಟಿರುವ ಮ|| ಟಿ. ಎಸ್. ಪೂರ್ಣಯ್ಯನವರು ದಾವಣಗೆರೆಗೂ, ಮ|| ವಿ. ಗೋಪಾಲರಾಯರು ಕಾನಕಾನಹಳ್ಳಿಯಿಂದ ಜಗಳೂರಿಗೂ, ಮಿ|| ಡಿ. ಸಾಲೊಮನ್‌ರವರು ಜಗಳೂರಿಂದ ಕಾನಕಾನಹಳ್ಳಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಸಯ್ಯಾಜಿರಾವ್‌ರೋಡಿನಲ್ಲಿ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲ್ ಪಕ್ಕದಲ್ಲಿರುವ ಜೈನಬಸ್ತಿ ಗುಡಿಯ ಮೇಲ್ವಿಚಾರಣೆಗಾಗಿ ಮ|| ಗಳಾದ ಶ್ರೀಮಂತ ವರ್ಧಮಾನಯ್ಯನವರು, ಟಿ. ಬಿ. ಚಂದ್ರಯ್ಯನವರು, ಅನಂತರಾಜಯ್ಯನವರು, ಜಿನಚಂದ್ರಪಂಡಿತರು ಮತ್ತು ಪಿ. ಶ್ಯಾಮಣ್ಣನವರು ಈ ಜನವರಿ ತಾ|| 15 ರಿಂದ 5 ವರ್ಷಗಳವರೆಗೆ ಧರ್ಮದರ್ಶಿಗಳಾಗಿ ಸರ್ಕಾರದಿಂದ ನಿಯಮಿಸಲ್ಪಟ್ಟಿರುವರು.

ಶ್ರವಣಬೆಳ್ಗೊಳದ ಜೈನಮಠಾಧ್ಯಕ್ಷರಾಗಿದ್ದ ಶ್ರೀಚಾರುಕೀರ್ತಿಪಂಡಿತಾಚಾರ್ಯಸ್ವಾಮಿಗಳು ಕೆಲಕಾಲದಿಂದ ಹೊಟ್ಟೆಯಶೂಲೆವ್ಯಾಧಿಗ್ರಸ್ತರಾಗಿದ್ದು ಈ ತಾ|| 26 ರಲ್ಲಿ ದೈವಾಧೀನರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ಇನ್ನೂ 44 ವರ್ಷವಯಸ್ಸಿನವರಾಗಿಯೂ, ವಿದ್ಯಾವಂತರಾಗಿಯೂ, ಸ್ವಧರ್ಮಾಭಿಮಾನಿಗಳಾಗಿಯೂ, ಲೋಕಪ್ರಿಯರಾಗಿಯೂ ಇದ್ದರು. ಇಂತಹವರ ಅಕಾಲಮರಣದಿಂದ ಜೈನಸಮಾಜಕ್ಕೆ ವಿಶೇಷನಷ್ಟವಾಯಿತೆಂಬುದರಲ್ಲಿ ಸಂದೇಹವಿಲ್ಲ.

ಬೆಂಗಳೂರುಸಿಟಿ ಮ್ಯುನಿಸಿಪಲ್ ಕೌನ್ಸಿಲರೂ, ಸ್ವರಾಜ್ಯವಾದಿಗಳೂ ಆದ ಮಿ|| ರಜಾಮಿಯವರು ಗೋರಕ್ಷಣಶಾಸನಕ್ಕೆ ತಮ್ಮನುಮತಿಯನ್ನು ಕೊಟ್ಟುದಕ್ಕಾಗಿ ಅವರನ್ನು ಕೆಲ ಮಹಮ್ಮದೀಯ ವೃತ್ತಪತ್ರಿಕೆಗಳೂ, ಸ್ವಮತೀಯರೂ ಖಂಡಿಸಿರುವರಲ್ಲದೆ ಸಾರ್ವಜನಿಕ ಮಹಮ್ಮದೀಯಸಭೆಯವರು ಒಂದು ಲೇಖವನ್ನು ಮಿ|| ರಜಾಮಿಯವರಿಗೆ ಬರೆದಿರುವರು. ಅದಕ್ಕೆ ಮಿ|| ರಜಾಮಿಯವರು, ಗೋರಕ್ಷಣೆಯಲ್ಲಿ ತಾವು ಸಾನುಭೂತಿಯನ್ನು ತೋರಿಸಿರುವುದು ಮಹಮ್ಮದೀಯ ಮತಧರ್ಮಕ್ಕೆ ವಿರೋಧವಾಗಿಲ್ಲವೆಂದು ಉತ್ತರವನ್ನು ಕೊಟ್ಟರಂತೆ.

ಭರತಖಂಡದ ವೃತ್ತಾಂತಗಳು.

ಕುಂಭಕೋಣದಲ್ಲಿ ಒಂದು ವಿಲಕ್ಷಣವಾದ ಶಿಶುವು ಜನಿಸಿದೆ. ತಲೆಯಿಲ್ಲ, ಅದರ ಬದಲಾಗಿ ಒಂದು ಮಾಂಸದ ಉಂಡೆಯೂ ಅದರಲ್ಲಿ ಕಣ್ಣುಗಳೆರಡೂ ಇವೆಯಂತೆ.

ಹೈದರಾಬಾದಿನಲ್ಲಿ ಪ್ಲೇಗು ಬಹಳ ಉಲ್ಬಣವಾಗಿರುತ್ತದೆಂದೂ, ಅದು ಆರಂಭವಾದಂದಿನಿಂದ ಈವರೆಗೆ 1576 ಜನರಿಗೆ ತಗುಲಿ 1127 ಮರಣವಾಗಿರುತ್ತದೆಂದೂ ಅಲ್ಲಿಯ ಪ್ಲೇಗ್ ಕಮಿಷನರು ವರದಿ ಮಾಡಿರುತ್ತಾರೆ.

ಕಳೆದ ತಾ|| 29 ರಲ್ಲಿ ಪಂಢರಪುರದಲ್ಲಿ ಬಿರುಗಾಳಿ ಸಮೇತವಾಗಿ ಮಳೆಯು ಬಂದಿತಲ್ಲದೆ ಬೇಲದಕಾಯಿ ಗಾತ್ರದ ಆಲಿಕಲ್ಲುಗಳು ಸುರಿದುದರಿಂದ ಮನೆಯ ಹೆಂಚುಗಳೊಡೆದುಹೋದುವು; ಗಿಡಗಳ ರಂಬೆಗಳು ಮುರಿದುಬಿದ್ದುವು. ಮಳೆಗೆ ಸಿಕ್ಕಿದ ಜನರ ತಲೆಗೆ ಪೆಟ್ಟುಬಿದ್ದು ಬಾಧೆಯಾಯಿತು. ಬೆಳೆಯುಂತು ಬಹುವಾಗಿ ನಷ್ಟವಾಯಿತು.

ನಿಜಾಮ ಮತ್ತು ಭೂಪಾಳದ ಸಂಸ್ಥಾನಿಕರು ಜನರನ್ನು ಮುಸಲ್ಮಾನಧರ್ಮಕ್ಕೆ ಮತಾಂತರಗೊಳಿಸಲು ಬದ್ಧಕಂಕಣರಾಗಿರುವುದರಿಂದ ಅದಕ್ಕಾಗಿ ತಕ್ಕ ವ್ಯವಸ್ಥೆಯನ್ನು ಮಾಡಿರುವರೆಂದು ಪ್ರಕಟವಾಗಿದೆ. 600 ಜನ ಮುಸಲ್ಮಾನರೂ, ಕುಲಗೇಡಿಗಳಾದ 80 ಮಂದಿ ಹಿಂದೀಯರೂ ಈ ಕೆಲಸಕ್ಕೆ ತೊಡಗಿರುವರು. ನಿಜಾಮ ಸರ್ಕಾರದವರು 6 ಲಕ್ಷ ರೂಪಾಯಿ ವೆಚ್ಚಮಾಡುವುದರಲ್ಲಿರುವರೆಂದೂ ತಿಳಿದುಬರುತ್ತದೆ. ಮುಸಲ್ಮಾನರ ರಾಜಧಾನಿಯಲ್ಲಿಯೂ ಮತಾಂತರವೆಂಬ ಅಂಟುರೋಗಕ್ಕೆ ಎಡೆಸಿಕ್ಕಿತೆ? ಕರ್ನಾಟಕಸ್ಥರು ಜಾಗರೂಕರಾಗಿರಲಿ!

ಖಿಲಾಫತ್ ದೊರೆ ಎಂದು ಹೆಸರಿಟ್ಟುಕೊಂಡು ನಾಲ್ಕೈದುವರ್ಷಗಳಿಂದಲೂ ಸಿಕ್ಕದೆ ತಲೆತಪ್ಪಿಸಿಕೊಂಡು ಹಾವಳಿಮಾಡುತ್ತಿದ್ದ ಮುಕ್ರಿ ಆಯಮದ್ ಎಂಬೊಬ್ಬ ಪ್ರಸಿದ್ಧ ದರೋಡೆಕೋರನನ್ನು ಪೋಲೀಸಿನವರು ವೇಷಮರಸಿಕೊಂಡುಹೋಗಿ ಬಹಳ ಉಪಾಯದಿಂದ ಕಳೆದವಾರ ಕಲ್ಲಿಕೋಟೆಯ ಬಳಿಯಣ ಒಂದು ಗುಡ್ಡಪ್ರದೇಶದಲ್ಲಿ ದಸ್ತಗಿರಿಮಾಡಿದರು. ಅವನನ್ನು ಹಿಡಿದುಕೊಟ್ಟರೆ, ಅಥವಾ ಅವನನ್ನು ಕೊಂದು ಅವನ ತಲೆಯನ್ನು ತಂದು ತೋರಿಸಿದರೆ ಬಹುಮಾನಕೊಡುವುದಾಗಿ ಸರ್ಕಾರದವರು ನಾಲ್ಕುವರ್ಷಗಳ ಹಿಂದೆಯೇ ಪ್ರಕಟಿಸಿದ್ದರು. ಅವನು ಆಗ್ಗೆ ಹಿಂದುಗಳನ್ನು ಹಿಡಿದು ಮೈಚರ್ಮವನ್ನು ಸುಲಿದುಬಿಡುತ್ತಿದ್ದನೆಂದೂ, ಇಲ್ಲವೇ ತುಂಡುತುಂಡಾಗಿ ಕತ್ತರಿಸಿಹಾಕುತ್ತಿದ್ದನೆಂದೂ ಹೇಳುತ್ತಾರೆ.

ಕಳೆದ ತಾ|| 28 ರ ರಾತ್ರಿ ಒಬ್ಬ ಹಿಂದೂ ಕುಲೀನಸ್ತ್ರೀಯು ರಂಗೂನಿನಿಂದ ಚಿಟಗಾಂಗಿಗೆ ಹಡಗಿನಲ್ಲಿ ಪ್ರಯಾಣಮಾಡುತ್ತ ಎರಡನೆಯ ತರಗತಿಯಲ್ಲಿ ಮಲಗಿಕೊಂಡಿರುವಾಗ್ಗೆ ಹಡಗಿನ ಐರೋಪ್ಯಇಂಜನೀಯರು ಆಕೆಯು ಮಲಗಿದ್ದ ಸ್ಥಳಕ್ಕೆ ಬಂದು ಆಕೆಯ ಮಾನಭಂಗಮಾಡಲೆತ್ನಿಸಿದಾಗ ಆಕೆಯು ದಿಗಿಲುಬಿದ್ದೆದ್ದು ಅವನ ಅಕೃತ್ಯಕ್ಕೆ ಅವಕಾಶಕೊಡದೆ ಬಾಗಿಲಬಳಿಬಂದು ಗಟ್ಟಿಯಾಗಿ ಕೂಗಿಕೊಂಡು ನಡುಗುತ್ತ ನಿಂತಿದ್ದಳು. ಇತರ ಪ್ರಯಾಣಿಕರು ರೋದನವನ್ನು ಕೇಳಿ ಕೂಡಲೆ ಬಂದು ಆಕೆಯ ಸ್ಥಿತಿಯನ್ನು ನೋಡಿ ಕನಿಕರಪಟ್ಟು ಧೈರ್ಯೋಕ್ತಿಯಿಂದ ಸಮಾಧಾನಪಡಿಸಿದರು. ತರುವಾಯ ಕ್ಯಾಪ್ಟನ್ನಿನ ವಿಚಾರಣೆಯಕಾಲದಲ್ಲಿ ಆಕೆಯು ಆ ಅತ್ಯಾಚಾರಿಯನ್ನು ಗುರ್ತಿಸಿ ನಡೆದ ವಿದ್ಯಮಾನವನ್ನು ಸವಿಸ್ತಾರವಾಗಿ ತಿಳಿಸಿದಳು.

ಮದ್ರಾಸಾಧಿಪತ್ಯಕ್ಕೆ ಸೇರಿದ ಕಡಲೂರು ಮೊದಲಾದ ಕಡೆ ಬಿರುಗಾಳಿಮಿಶ್ರವಾಗಿ ದೊಡ್ಡ ಮಳೆಯು ಬಂದು ನದೀನದಗಳಲ್ಲಿ ಪ್ರವಾಹವು ಮಿತಿಮೀರಿಬಂದು ನಿಂತಿದ್ದ ಪೈರುಗಳು ನಾಶವಾದುದಲ್ಲದೆ ರಸ್ತೆಗಳೂ ಸೇತುವೆಗಳೂ ಕೊಚ್ಚಿಹೋಗಿ ಮತ್ತು ಕೆಲವೆಡೆಗಳಲ್ಲಿ 32 ಮೈಲಿ ದೂರದವರೆಗೂ ನೆಲದ ಮೇಲೆ 4 ರಿಂದ 10 ಅಂಗುಲದವರೆಗೆ ನೀರು ನಿಂತಿದ್ದು ಜನರ ಮತ್ತು ಬಂಡಿಗಳ ತಿರುಗಾಟಕ್ಕೆ ಅಡಚಣೆಯಾಗಿದ್ದಿತು. ರೈಲುರಸ್ತೆಯು ಅನೇಕಕಡೆ ಕೊಚ್ಚಿಹೋಗಿದ್ದು ಬಂಡಿಗಳು 4–5 ಗಂಟೆ ನಿದಾನವಾಗಿ ಬರುತ್ತಿದ್ದವು. ಇದರಿಂದ ಧಾನ್ಯ ಮತ್ತು ದನಕರಗಳ ನಷ್ಟವು ಅಪಾರವಾಗಿ ಆಗಿರುವುದು. ಹಾಳಾಗಿರುವ ಸೇತುವೆಗಳು, ರಸ್ತೆಗಳು ಮೊದಲಾದವುಗಳನ್ನು ಸರಿಪಡಿಸಲು ವಿಶೇಷ ಖರ್ಚೂ, ಕಾಲವಿಳಂಬವೂ ಆಗುವುದಂತೆ.

ಶಿವಾಜಿ ಮಹಾರಾಜರವರು ಜನ್ಮಿಸಿ ಮುಂದಣವರ್ಷಕ್ಕೆ 300 ವರ್ಷಗಳು ತುಂಬುವುದರಿಂದ ಆ ಕಾಲದಲ್ಲಿ ಅವರ ವರ್ಧಂ

ಆಸ್ಟ್ರೇಲಿಯಾದ್ವೀಪದ ಗೌರ್ನರ್ ಜನರಲ್‌ರವರ ಸಂಚಾರಕ್ಕಾಗಿ ಒಂದು ಆಕಾಶಯಾನವು ಜಲಯಾನವಾಗಿಯೂ ಉಪಯೋಗಿಸಲ್ಪಡುವ ರೀತಿಯಲ್ಲಿ ಇಂಗ್ಲೆಂಡಿನಲ್ಲಿ ಕಟ್ಟಲ್ಪಡುತ್ತಿರುವುದು.

ಲಂಡನ್ ಪಟ್ಟಣದ ಪ್ರಾಣಿಪ್ರದರ್ಶನಾಲಯಕ್ಕೆ ಉದ್ದವಾದ ಕೆಲ ಮೀನುಗಳು ತಂದಿಡಲ್ಪಟ್ಟಿವೆ. ಇವು ನೀರಿನಕೆಸರಿನೊಳಗೆ ವಾಸಿಸುತ್ತಿದ್ದು ಮಳೆಬರುವುದನ್ನು ತಿಳಿದು ನೀರಿನ ಮೇಲ್ಭಾಗಕ್ಕೆ ಬಂದು ಬಹುವೇಗವಾಗಿ ಓಡಾಡುತ್ತವಂತೆ. ಹೀಗಾದ 24 ಗಂಟೆಯಮೇಲೆ ಮಳೆಯು ಬರುವುದರಿಂದ ಅವುಗಳು ವರ್ಷಸೂಚಕವೆಂದು ಕರೆಯಲ್ಪಡುತ್ತವೆ.

ದಕ್ಷಿಣಾಫ್ರಿಕೆಗೆ ಅಭಿಮುಖವಾಗಿ ಮಡಗಾಸ್ಕರ್ ದಡದ ಕಾಡಿನಲ್ಲಿ ಒಂದು ಪರ್ವತವೂ ಅದರ ಪಾದದಲ್ಲಿ ಒಂದು ನದಿಯೂ ಇರುತ್ತದೆ. ಈ ನದಿಯಲ್ಲಿ ಭಂಗಾರದ ರಜಕಣಗಳು ಮಳಲಿನೊಡನೆ ಮಿಶ್ರವಾಗಿ ಹರಿಯುತ್ತಿರುವುವು. ಕೆಲ ಕಪ್ಪುಜನರು ದೋಣಿಗಳಲ್ಲಿ ಬಂದು ಪರ್ವತಬಳಿ ಇಳಿದು ಭಂಗಾರವನ್ನು ತೆಗೆದು ದೋಣಿಗಳಲ್ಲಿ ತುಂಬಿಕೊಂಡು ಹೋಗುವುದನ್ನು ಕಂಡೆನು. ಇದೆಲ್ಲವೂ ನಾನು ಸ್ವಪ್ನದಲ್ಲಿ ಕಂಡ ವಿಷಯವಾಗಿದೆ. ಈ ಪರ್ವತವು ಕಂಡುಹಿಡಿಯಲ್ಪಟ್ಟು ಬಂಗಾರವು ತೆಗೆಯಲ್ಪಡುವ ಮಾರ್ಗವು ಗೊತ್ತುಮಾಡಲ್ಪಟ್ಟಲ್ಲಿ ಫ್ರಾನ್ಸಿನ ದಾರಿದ್ರ್ಯವು ಹಠವಾಗಿ ಋಣಮುಕ್ತವಾಗಲು ಅವಕಾಶವಾಗುತ್ತದೆ. ಎಂದು ರೈಮಾಂಡ್‌ಪಂಡಿತನು ಫ್ರೆಂಚ್‌ಪ್ರಭುತ್ವದವರಿಗೆ ಬರೆದು ತಿಳಿಸಿರುತ್ತಾನೆ. ಇದು ಸ್ವಪ್ನ ವಿಚಾರವಾದಾಗ್ಯೂ, ಯೂರೋಪಿನಲ್ಲಿ ಅನೇಕ ರಾಜಕೀಯ ಗಂಡಗಳೂ, ಜಪಾನಿನಲ್ಲಿ ಭೂಕಂಪವೂ ಆಗುತ್ತವೆಂದು ರೈಮಾಂಡ್‌ಪಂಡಿತನು ಸ್ವಪ್ನದಲ್ಲಿ ಕಂಡು ಭವಿಷ್ಯಹೇಳಿದ್ದುದು ನಿಜವಾದುದರಮೇಲೆ ಈಗ ಆತನು ಹೇಳಿರುವ ಸ್ವಪ್ನವಿಚಾರವೂ ನಿಜವಾಗಬಹುದೆಂದು ಫ್ರೆಂಚ್‌ಪ್ರಭುತ್ವದವರು ಊಹಿಸುತ್ತಾರೆ.

WANTED IMMEDIATELY.

(BROKERAGE BEING EIGHT ANNAS PER SHARE.)
Influential Convassing Agents to Secure
Shares for "**The Karnataka Commercial Bank Ltd**.
Registered Office; Old Post Office Road,
Mysore.
Capital Rs. Five Lakhs.
Divided into 20,000 shares of Rs. 25 each.
Payable on application Rs. 5 each.
on allotment Rs. 5 each.
and then on calls of Rs. 5 each after intervals of 3 months only.

This Company is formed to do all Banking businesses and mainly to show facilities to merchants and the public and to encourage good trade by way of timely help to them.

Please apply to—
4-2-1926 Messrs. P. RAMASWAMY, & Co.,
Managers.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಫೆಬ್ರುವರಿ ತಾ|| ೬ ನೆಯ ಶನಿವಾರ.

ಮದ್ಯಪಾನನಿಷೇಧವು.

ಮದ್ಯಪಾನವು ಸಪ್ತವ್ಯಸನಗಳಲ್ಲಿ ಒಂದಾಗಿ ನಿರ್ಣಯಿಸಲ್ಪಟ್ಟು ಹಿಂದೂಧರ್ಮಶಾಸ್ತ್ರಗಳಲ್ಲಿ ಬಹಳವಾಗಿ ನಿಷೇಧಿಸಲ್ಪಟ್ಟಿರುವುದರಿಂದ ಅದನ್ನು ಸೇವಿಸುವವರು ಸಂಘದಿಂದ ಬಹಿಷ್ಕರಿಸಲ್ಪಡಬೇಕಾಗಿ ವಿಧಿಸಲ್ಪಟ್ಟಿರುವುದು. ಬುದ್ಧದೇವನು ಈ ಮದ್ಯಸೇವನೆಯನ್ನು ಬಹಳವಾಗಿ ಖಂಡಿಸಿರುವನು. ಕೊರಾನಿನಲ್ಲಿ ಮಹಮ್ಮದೀಯರು ಮದ್ಯಪಾನ ಮಾಡಕೂಡದೆಂದು ವಿಧಿಸಲ್ಪಟ್ಟಿರುತ್ತದೆ. ಅದುಕಾರಣ ಈ ಮದ್ಯಪಾನವನ್ನು ಭರತಖಂಡವು ಆದಿಕಾಲದಿಂದಲೂ ನಿಷೇಧಿಸತಕ್ಕ ದೇಶವಾಗಿದ್ದರೂ, ಅದರ ನಿಷೇಧವಿಲ್ಲದ ಪಾಶ್ಚಾತ್ಯದೇಶದ ಪ್ರಭುತ್ವಕ್ಕೊಳಪಟ್ಟಮೇಲೆ ಮತ್ತು ಆ ದೇಶದ ನಡೆನುಡಿಯು ಭಾರತೀಯರಿಂದ ಅನುಕರಿಸಲ್ಪಟ್ಟಮೇಲೆ ಈ ದೇಶದಲ್ಲಿ ಅದರ ಪ್ರಾಬಲ್ಯವು ಮಿತಿಮೀರಿಹೋಗಿರುವುದೆಂಬುದು ಹೇಳದೆಯೂ, ಖಂಡಿಸದೆಯೂ ಇರತಕ್ಕ ವಿಷಯವಾಗಿರುವುದಿಲ್ಲ. ಈ ಮದದ್ರವ್ಯಶಾಖೆಯನ್ನು ಪ್ರಭುತ್ವದವರು ಪ್ರತ್ಯೇಕವಾಗಿ ಏರ್ಪಡಿಸಿಕೊಂಡು, ಆ ಶಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಅಧಿಕ ವರಮಾನವಾಗುತ್ತಿರುವುದರಿಂದ ಅದನ್ನು ಬಿಡಲಾರದೆ ಮತ್ತು ದೇಶೀಯರು ಈ ಮದ್ಯಪಾನ ದುರಭ್ಯಾಸದಿಂದ ಎಷ್ಟು ಪತಿತರಾಗುತ್ತಿರುವರೆಂಬುದರ ಕಡೆಗೆ ಲಕ್ಷ್ಯಕೊಡದೆ ಅಥವಾ ಕೊಟ್ಟಿದ್ದೇವೆಂದು ಬಾಯಲ್ಲಿ ಹೇಳುತ್ತಿದ್ದರೂ ಅದರ ಸಂಪೂರ್ಣ ನಿಷೇಧಕ್ಕೆ ತಕ್ಕ ಕಾರ್ಯಭಾಗವನ್ನು ಮಾಡದೆ ಕಾಲಹರಣ ಮಾಡುತ್ತಿದ್ದಾರೆ. ಭರತಖಂಡದ ಪ್ರಭುತ್ವದವರ ಪಾಡೇ ಹೀಗಾಗಿರುವಾಗ್ಗೆ ಇನ್ನು ಅದಕ್ಕೆ ಅಧೀನಗಳಾದ ದೇಶೀಯ ಸಂಸ್ಥಾನಗಳು ಬಿಡುವುದುಂಟೆ? ಧನಾಶೆಯು ಯಾರನ್ನು ತಾನೆ ಬಿಟ್ಟಿರುವುದು ಮತ್ತು ಯಾವ ಕೆಲಸವನ್ನು ತಾನೆ ಮಾಡಿಸದಿರುವುದು? ನೈತಿಕ, ಸಾಂಘಿಕ ಮತ್ತು ಆರ್ಥಿಕ ನಷ್ಟಹೇತುವಾದ ಈ ದುರಭ್ಯಾಸವನ್ನು ತೊಲಗಿಸುವುದಕ್ಕಾಗಿ ದೇಶನಾಯಕರುಗಳೂ, ಮದ್ಯನಿಷೇಧಸಂಘಗಳೂ, ವೃತ್ತಪತ್ರಿಕೆಗಳೂ ಇವೆಲ್ಲಕ್ಕಿನ್ನ ಮಿಗಿಲಾಗಿ ಪ್ರಭುತ್ವದವರೂ ಪ್ರಬಲಪ್ರಯತ್ನವನ್ನು ಮಾಡಬೇಕಾಗಿದೆ. ಈ ಕಾರ್ಯವನ್ನು ಕೊನೆಗಾಣಿಸಲು ಮುಖ್ಯಸಂಘವಾಗಿ ಸ್ಥಾಪಿಸಲ್ಪಟ್ಟ ಮದ್ಯಪಾನನಿಷೇಧ ಸಮಿತಿಯ ಪ್ರಥಮಮಹಾಸಭೆಯು ಕಳೆದ ಜನವರಿ ತಾ|| ೨೯ ರಲ್ಲಿ ದಿಲ್ಲಿಯ ಪಟ್ಟಣದಲ್ಲಿ ದಿವಾನ್ ಬಹದ್ದೂರ್ ಮೊಚರ್ಲ ರಾಮಚಂದ್ರಪಂತಲು ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಈ ಮದ್ಯಪಾನದುರಭ್ಯಾಸವು ಕೈಗಾರಿಕೆಯ ಕೆಲಸಗಾರರಲ್ಲೂ, ಬಹುಕೀಳುಜಾತಿಯವರಲ್ಲೂ, ಉತ್ಕೃಷ್ಟಜಾತಿಯವರಲ್ಲಿ ಪಾಶ್ಚಾತ್ಯಾಚಾರ ವ್ಯಾಮೋಹದಲ್ಲಿ ಬಿದ್ದಿರುವವರಲ್ಲೂ ವಿಶೇಷವಾಗಿರುತ್ತದೆ. ವಿದ್ಯಾಭ್ಯಾಸವು ಅಭಿವೃದ್ಧಿಯಾದ ಹಾಗೆಲ್ಲಾ ಈ ದುರ್ವ್ಯಸನವು ಕಡಿಮೆಯಾಗುತ್ತದೆಂಬ ಭಾವನೆಗೆ ವಿರುದ್ಧವಾಗಿ ಪ್ರೌಢವಿದ್ಯಾಭ್ಯಾಸಮಾಡಿ ಪದವೀಧರರಾಗಿಯೂ, ನ್ಯಾಯವಾದಿಗಳಾಗಿಯೂ ಇರುವವರು ಸುರಾದೇವತೆಯ ಪರವಶರಾಗಿರುವರಲ್ಲದೆ ಇತರರನ್ನೂ ವಶಪಡಿಸುತ್ತಿರುವುದನ್ನೂ, ಎಷ್ಟೋ ದೊಡ್ಡದೊಡ್ಡ ಸಂಸಾರಗಳು ಹಾಳಾಗುತ್ತಿರುವುದನ್ನೂ ನಾವು ನಿತ್ಯದಲ್ಲೂ ನೋಡುತ್ತಿದ್ದೇವೆ. ಭಿಕ್ಷುಕರು ಸಹ ತಮ್ಮ ನಿತ್ಯಾರ್ಜನೆಯಲ್ಲಿ ಅರ್ಧಮುಕ್ಕಾಲುಪಾಲುದುಡ್ಡನ್ನು ಮಿಗಿಸಿ ಮದ್ಯಸೇವನೆಯನ್ನು ಮಾಡುತ್ತಿರುವರು. ಧರ್ಮವಿರುದ್ಧವೂ, ನೀತಿಬಾಹ್ಯವೂ, ಅರ್ಥಮಾನಪ್ರಾಣಹಾನಿಕರವೂ ಆದ ಈ ಮದ್ಯಸೇವನೆಯನ್ನು ತಪ್ಪಿಸಲು ದೇಶಾಭಿಮಾನಿಗಳು ಸಂಘಗಳನ್ನೇರ್ಪಡಿಸಿಕೊಂಡು ಸಾಹಸಪಡುತ್ತಿರುವುದಲ್ಲದೆ ಪ್ರಭುತ್ವದವರು ತಮ್ಮಾದಾಯದಮೇಲೆ ದೃಷ್ಟಿಯನ್ನಿಡದೆ ಅದರ ಪ್ರೋತ್ಸಾಹವನ್ನು ಕಡಿಮೆಮಾಡದ ಹೊರತು ಈ ದುರ್ವ್ಯಸನವು ತಪ್ಪುವುದಿಲ್ಲವೆಂದು ಆಕ್ಷೇಪಿಸುತ್ತ ಬಂದುದರಮೇಲೆ ಪ್ರಭುತ್ವದವರು ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಮದ್ಯಪಾನನಿರೋಧಕ್ಕಾಗಿ ಕೆಲವುಪಾಯಗಳನ್ನು ಮಾಡಿರುವೆವೆಂದು ಪ್ರಕಟಿಸಿಕೊಳ್ಳುತ್ತಿರುವರು. ಮದದ್ರವ್ಯಗಳ ಬೆಲೆಯನ್ನು ಹೆಚ್ಚಿಸಿರುವುದು, ಅಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡುವುದು, ಮಾರತಕ್ಕ ಕಾಲವನ್ನು ಕ್ಲುಪ್ತಪಡಿಸುವುದು ಇತ್ಯಾದಿ ಕೆಲ ಕ್ಷುದ್ರೋಪಾಯಗಳನ್ನು ತೋರಿಸಿರುವರು. ಇವುಗಳಿಂದೆಲ್ಲ ಉದ್ದಿಷ್ಟಫಲ ಮಾತ್ರ ಲಭಿಸಿಲ್ಲ. ಬೆಣ್ಣೆಯನ್ನು ಕೊಕ್ಕರೆಯ ತಲೆಯಮೇಲಿಟ್ಟು ಅದು ಕರಗಿ ಅದರ ಕಣ್ಣನ್ನು ಮುಚ್ಚಿಸುವಂತೆ ಮಾಡುವುದರಿಂದ ಕೊಕ್ಕರೆಯನ್ನು ಹಿಡಿಯುವೆನೆಂದು ಪ್ರಯತ್ನಪಡುವಂತೆ ಈ ಉಪಾಯಗಳೆಲ್ಲ ಮದ್ಯಪಾನನಿರೋಧ ವಿಷಯದಲ್ಲಿ ಪರಿಹಾಸಾಸ್ಪದವಾಗಿ ಪರಿಣಮಿಸಿರುವುವು.

ಪ್ರಜೆಗಳನ್ನು ದುರ್ವ್ಯಯ ದುರ್ವರ್ತನಗಳಿಂದ ತಪ್ಪಿಸಿ, ಅವರಲ್ಲಿ ಸುನೀತಿಯನ್ನೂ, ಮಿತವ್ಯಯವನ್ನೂ, ದೇಹಾರೋಗ್ಯವನ್ನೂ, ಸತ್ಪ್ರವರ್ತನೆಯನ್ನೂ ವೃದ್ಧಿಗೊಳಿಸುವಂತೆ ಮಾಡಿದರೆ ಅದೇ ತಮ್ಮ ಕೋಶಾಭಿವೃದ್ಧಿಯೆಂಬ ಭಾವವು ಯಾವ ಪ್ರಭುತ್ವದವರಿಗೆ ಇರುತ್ತದೋ ಅವರು ಮದದ್ರವ್ಯಶಾಖೆಯ ವರಮಾನವನ್ನು ಪ್ರಜೆಗಳ ಕೊರಳನ್ನು ಕುಯ್ದು ಬಸಿದ ರಕ್ತಕ್ಕೆ ಸಮವನ್ನಾಗಿ ಭಾವಿಸುವುದೇ ಧರ್ಮವು. ರಷ್ಯಾಪ್ರಭುತ್ವದವರು ಯುದ್ಧಕ್ಕೆ ಮುಂಚೆಯೇ ಎಷ್ಟೋ ಕೋಟಿಗಟ್ಟಲೆಯ ವರಮಾನವಿದ್ದರೂ ಈ ಶಾಖೆಯನ್ನು ತೆಗೆದುಬಿಟ್ಟು, ಪ್ರಜೆಗಳಲ್ಲಿದ್ದ ಪಾನದುರ್ವ್ಯಸನಕ್ಕೆ ದೊಡ್ಡ ತಡೆಯನ್ನು ಹಾಕಿದರು. ಈಗ ಅಮೇರಿಕಾದ ಸಂಯುಕ್ತರಾಷ್ಟ್ರಪ್ರಭುತ್ವದವರೂ ಅಧಿಕಧನಾದಾಯನಷ್ಟಕ್ಕಾಗಿ ಸ್ವಲ್ಪವೂ ಚಿಂತಿಸದೆ ದೇಶಪ್ರಜಾಸೌಭಾಗ್ಯವನ್ನೇ ತಮ್ಮ ಮುಖ್ಯಾದಾಯವನ್ನಾಗಿ ಪರಿಗಣಿಸಿ ಮದ್ಯನಿಷೇಧಶಾಸನವನ್ನು ವಿಧಿಸಿ ಆಚರಣೆಗೆ ತಂದರು. ಜೈನಾರಾಜ್ಯದಲ್ಲಿ ಬಹುಕಾಲದಿಂದಲೂ ರೂಢಿಯಲ್ಲಿದ್ದ ಅಫೀಂ ಸೇವನೆಯು ಕಠಿಣಶಾಸನನಿರ್ಮಾಣದಿಂದ ತಪ್ಪಿಸಲ್ಪಟ್ಟಿತು.

ಮದ್ಯಪಾನನಿಷೇಧಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದ ದಿವಾನ್ ಬಹದ್ದೂರ್ ಎಂ. ರಾಮಚಂದ್ರರಾವ್‌ಪಂತಲು ಇವರು ಈ ಮದ್ಯಪಾನದುರ್ವ್ಯಸನದಿಂದುಂಟಾಗತಕ್ಕ ಮಹಾನರ್ಥವನ್ನೂ, ಇದರ ನಿಷೇಧಕ್ಕೆ ಪ್ರಪಂಚದ ಯಾವ್ಯಾವ ಭಾಗದಲ್ಲಿ ಯಾವ್ಯಾವ ಪ್ರಯತ್ನಗಳು ಮಾಡಲ್ಪಟ್ಟು ಎಷ್ಟರಮಟ್ಟಿಗೆ ಪ್ರಯೋಜನವಾಗಿರುತ್ತದೆಂಬುದನ್ನೂ ಸವಿಸ್ತಾರವಾಗಿ ತಿಳಿಸಿದರು. "ಮದ್ಯಪಾಯಿಗಳಕೂಡ ಯಾರೂ ಕಲೆತು ಊಟಮಾಡಬಾರದು, ಯಾವ ದೈವಪಿತೃಕಾರ್ಯವನ್ನೂ ಆಚರಿಸಬಾರದು, ವಿದ್ಯಾಭ್ಯಾಸಮಾಡಲಾಗದು. ಅಂತಹ ನೀಚರ ಸಂಬಂಧ ಬಾಂಧವ್ಯವನ್ನು ಬೆಳೆಸಬಾರದು. ಪತಿತನಾದ ಅವನು ಸಾಂಘಿಕಹಕ್ಕನ್ನು ಅನುಭವಿಸಲು ಅರ್ಹನಲ್ಲವು. ದೇಶದ್ರೋಹಿಯಾಗಿ ಪರಿಭಾವಿಸಲ್ಪಟ್ಟು ಸಮಸ್ತರ ಅಗೌರವಕ್ಕೂ ಪಾತ್ರನಾಗಿ ತಂದೆತಾಯಿಗಳಿಂದ ನಿರಾಕರಿಸಲ್ಪಡುವವನಾಗುವನು ಎಂದು ಮನುಧರ್ಮಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವುದು, ಕುರಾನಿನಲ್ಲಿಯೂ ನಿಷೇಧಿಸಲ್ಪಟ್ಟಿರುವುದು. ಲಂಡನ್ ನಗರದಲ್ಲಿ 1888 ರಾರಭ್ಯ ಆಂಗ್ಲೋಇಂಡಿಯನ್ ಟೆಂಪರೆನ್ಸ್ ಎಂಬ ಮದ್ಯಪಾನನಿಷೇಧಕಸಮಿತಿಯು ಏರ್ಪಟ್ಟು ಭರತಖಂಡದಲ್ಲಿ ನಿಷೇಧಿಸಲ್ಪಡುವುದು ಅತ್ಯಗತ್ಯವೂ ಅವಸರವೂ ಎಂದು ಪಾರ್ಲಿಮೆಂಟ್‌ಸಭೆಯಲ್ಲಿ ಚರ್ಚಿಸಲ್ಪಡುತ್ತಿರುವುದಲ್ಲದೆ, ಪ್ರಭುತ್ವಮಂತ್ರಿಮಂಡಲದವರಲ್ಲಿ ಬಿನ್ನೈಸಲ್ಪಡುತ್ತಿರುವುದು. ಯೂರೋಪು ಅಮೇರಿಕಾಖಂಡಗಳಲ್ಲಿಯ ವೈದ್ಯಶಾಸ್ತ್ರಜ್ಞರು ಈ ವಿಚಾರದಲ್ಲಿ ಪರಿಶೋಧಿಸಿ ಮದ್ಯಪಾನದಿಂದ ಸಂತಾನವು ದುರ್ಬಲವಾಗುವುದು; ಮದ್ಯಪಾನಾಧಿಕ್ಯದಿಂದ ಜನಸಂಖ್ಯೆಯು ಕ್ಷೀಣಿಸುವುದು ಎಂದು ಮೊದಲಾಗಿ ಸಿದ್ಧಾಂತಮಾಡಿರುವರು. ಮದ್ಯಪಾನವನ್ನು ನಿಷೇಧಿಸಿರುವವರೆಲ್ಲರೂ ಪಾರಿಶ್ರಾಮಿಕ ನೈತಿಕ ಸಾಂಘಿಕವಿಷಯಗಳಲ್ಲೆಲ್ಲಾ ಬಹಳ ಅಭಿವೃದ್ಧಿಯನ್ನು ಹೊಂದಿ ತಮ್ಮ ಹೆಂಡಿರು ಮಕ್ಕಳ ಸುಖಸಂಪತ್ತಿಗಾಗಿ ದ್ರವ್ಯವನ್ನು ವ್ಯಯಮಾಡಿ ಸಂಸಾರಸೌಖ್ಯವನ್ನು ಅನುಭವಿಸುತ್ತ ಸತ್ಸಂತಾನವೃದ್ಧಿಯನ್ನು ಮಾಡುತ್ತ ಕೃತಾರ್ಥರಾಗಿರುವರು. ಇದೆಲ್ಲವೂ ಅನುಭವವೇದ್ಯವೇ. ಹಾಗಲ್ಲದೆ ಈ ಮದ್ಯಪಾನದುರ್ವ್ಯಸನಕ್ಕೀಡಾಗಿರುವ ಕೂಲಿಕಾರರ, ಬೇಸಾಯಗಾರರ ಮತ್ತು ಇತರರ ಸ್ಥಿತಿಯಾದರೊ ಅತ್ಯಂತ ಪರಿತಾಪಕರವಾಗಿರುವುದರಿಂದ ಇದರ ನಿವಾರಣಾರ್ಥವಾಗಿ ಪ್ರಬಲಪ್ರಯತ್ನಮಾಡಲ್ಪಡುವುದು ಅತ್ಯಾವಶ್ಯಕವು. ಹೆಂಡ ಮತ್ತು ಸಾರಾಯಿ ಅಂಗಡಿಗಳಬಳಿ ಜನರಿದ್ದುಕೊಂಡು ಮದ್ಯಪಾನಮಾಡದಂತೆ ಆ ದುರ್ವ್ಯಸನಿಗಳಿಗೆ ಬೋಧಿಸಬೇಕೆಂದು ಮಹಾತ್ಮಗಾಂಧಿಯವರ ಸೂಚನೆಯಂತೆ ನಡೆಯಿಸಲ್ಪಟ್ಟುದರಲ್ಲಿ ಆ ಮದ್ಯಪಾಯಿಗಳು ದುರಭ್ಯಾಸವನ್ನು ಬಿಡುವುದಕ್ಕೆಬದಲು ಅವರಿಗೆ ಬೋಧಿಸಿದವರು ಸರ್ಕಾರದ ಶಿಕ್ಷೆಗೆ ಗುರಿಯಾಗಬೇಕಾಗಿಬಂದಿತು. ಅದರಮೇಲೆ ಈ ಮದ್ಯಪಾನದ ಸಂಪೂರ್ಣನಿಷೇಧಕ್ಕಾಗಿ ಒಂದು ಶಾಸನವು ಮಾಡಲ್ಪಡಬೇಕೆಂದು ಸಾಮ್ರಾಜ್ಯಶಾಸನಸಭೆಯಲ್ಲಿ ಚರ್ಚಿಸಲ್ಪಟ್ಟಾಗ್ಗೆ, 1883 ನೆಯ ವರ್ಷಕ್ಕಿನ್ನ ಈಗ ಕುಡಿಯುವುದು ಕಡಿಮೆಯಾಗಿದೆಯೆಂದೂ, ಶೇಕಡ ೫·68 ಗ್ಯಾಲನ್ನು ಖರ್ಚಾಗುತ್ತಿದೆಂದೂ, ಸಂಪೂರ್ಣನಿಷೇಧಮಾಡುವುದರಿಂದ ಮನುಷ್ಯನ ಸ್ವಾತಂತ್ರ್ಯಕ್ಕೆ ಭಂಗವನ್ನುಂಟುಮಾಡಿದಂತಾಗುತ್ತದೆಂದೂ ಆರ್ಥಿಕ ಮೆಂಬರಾದ ಸರ್ ಬ್ಯಾಸಿಲ್‌ಬ್ಲಾಕೆಟ್‌ರವರು ಹೇಳಿದರು. ಈ ನಿರ್ಬಂಧವಿಧಾನದಿಂದ ಪ್ರಭುತ್ವಾದಾಯಕಡಿಮೆಯಾಗುತ್ತದೆಂಬುದರಮೇಲೆ ಆರೀತಿ ನೆಪಹೇಳತಕ್ಕದಾಗಿದೆವಿನಾ ಮತ್ತೇಬೇರೆಯಿಲ್ಲವು. ಅದುಕಾರಣ ಭಾರತಪ್ರಭುತ್ವದವರು ಆಲಸ್ಯಮಾಡದೆ 20 ವರ್ಷಗಳಲ್ಲಿ ಎಕ್ಸೈಜು ಆದಾಯವಿಲ್ಲದಂತೆ ಮಾಡಲು ತತ್ಕಾಲೋಚನೆಮಾಡುವುದಕ್ಕಾಗಿ ಒಂದು ಕಮಿಟಿಯು ನಿಯಮಿಸಲ್ಪಡಬೇಕು. ಅಲ್ಲದೆ ಪಂಜಾಬಿನಲ್ಲಿ ಲೋಕಲ್ ಆಪ್ಷನ್ ಶಾಸನ ಅಂದರೆ ಸಳೀಯ ಐಚ್ಛಿಕ ಶಾಸನವು 1924 ರಿಂದ ಆಚರಣೆಗೆ ಬಂದು ಕೆಲ ಮ್ಯುನಿಸಿಪಾಲಿಟಿಗಳಿಗೂ ಡಿ|| ಬೋರ್ಡುಗಳಿಗೂ ಅಂಗಡಿಗಳನ್ನು ಕಡಿಮೆಮಾಡುವ ಅಧಿಕಾರವು ಕೊಡಲ್ಪಟ್ಟಿರುತ್ತದೆ. ಅದರಂತೆ ಎಲ್ಲ ಕಡೆಯೂ ಸರ್ವತ್ರ ಆಚರಣೆಗೆ ತರಲ್ಪಡಬೇಕು. ಈ ಪ್ರಯತ್ನಗಳನ್ನೆಲ್ಲಾ ಸತತ ಪ್ರಬಲವಾಗಿ ನಡೆಯಿಸಲು ಒಂದು ಕೇಂದ್ರನಿಷೇಧಸಮಿತಿಯು ಇರತಕ್ಕದು ಅತ್ಯಾವಶ್ಯಕವು." ಎಂದು ಮೊದಲಾಗಿ ಸಭಾಧ್ಯಕ್ಷರು ಹೇಳಿದರು. ತರುವಾಯ ಕೆಲ ಉಪಯುಕ್ತನಿರ್ಧಾರಗಳು ಮಾಡಲ್ಪಟ್ಟುವು. ದಿ|| ಬ|| ರಾಮಚಂದ್ರರಾಯರು ಲೋಕಾನುಭವದಿಂದಲೂ, ರಾಜ್ಯಾಂಗಜೀವನಾನುಭವದಿಂದಲೂ ಈ ಮದ್ಯಪಾನನಿಷೇಧಸಮಸ್ಯೆಯನ್ನು ಬಹುಕಾಲದಿಂದ ವಿಮರ್ಶಿಸುತ್ತಿರುವರಲ್ಲದೆ ಮದ್ರಾಸಿನ ಶಾಸನಸಭೆಯಲ್ಲಿ ಶಾಸನವಾಗಲು ಬಹಳ ಸಾಹಸಮಾಡಿಯೂ ಮಾಡುತ್ತಲೂ ಇರುವುದರಿಂದ ಅವರ ಅಭಿಪ್ರಾಯವು ನಿರಾಕರಿಸಲ್ಪಡದೆ ಅಂಗೀಕರಿಸಲ್ಪಡತಕ್ಕದಾಗಿದೆ. ಮದ್ಯಪಾನನಿಷೇಧದಿಂದ ದ್ರವ್ಯೋತ್ಪತ್ತಿ ಕಡಿಮೆಯಾಗುತ್ತದೆಂಬುದರಮೇಲೆ ಸಂಪೂರ್ಣ ನಿರ್ಬಂಧದಿಂದ ಮನುಷ್ಯನ ಸ್ವಾತಂತ್ರ್ಯಕ್ಕೆ ಭಂಗವಾಗುತ್ತದೆಂದೂ, ಅಮೇರಿಕಾ ಮೊದಲಾದ ದೇಶಗಳಲ್ಲಿ ಉದ್ದಿಷ್ಟಫಲಪ್ರಾಪ್ತವಾಗಲಿಲ್ಲವೆಂದೂ ಪ್ರಭುತ್ವದವರು ಹೇಳತಕ್ಕದಾಗಿದೆಯೇ ವಿನಾ ಅದು ಸಮಂಜಸವಾಗಿಲ್ಲವು. ಅದುಕಾರಣ ಭಾರತಪ್ರಭುತ್ವದವರು ತಮ್ಮ ಪ್ರಜೆಗಳ ಧರ್ಮಭ್ರಷ್ಟತೆಗೂ, ನೀತಿಬಾಹ್ಯತೆಗೂ, ದಾರಿದ್ರ್ಯಕ್ಕೂ, ಅಕಾಲಮರಣಕ್ಕೂ ಹೇತುವಾಗಿರುವ ಈ ಮದ್ಯಸೇವನೆಯ ನಿಷೇಧಕ್ಕಾಗಿ ಶಾಸನವನ್ನೇರ್ಪಡಿಸಿ ಅಮೇರಿಕನ್ನರಂತೆ ಸ್ವಾರ್ಥತ್ಯಾಗ ಪದ್ಧತಿಯನ್ನು ಸ್ಥಾಪಿಸಿ ದೇಶಸೌಭಾಗ್ಯವನ್ನು ಅಭಿವೃದ್ಧಿಗೊಳಿಸಿ ಶಾಶ್ವತಕೀರ್ತಿಭಾಜನರಾಗಲೆಂದು ಕೋರುತ್ತೇವೆ.

ಬಾವಲಾ ಕೊಲೆಯೂ ಇಂದೂರು ಮಹಾರಾಜರೂ.

ಬಾವಲಾ ಕೊಲೆಪಾತಕರು ಶಿಕ್ಷಿಸಲ್ಪಟ್ಟಮೇಲೆ ಈ ಘೋರಕೃತ್ಯಕ್ಕೆ ಮೂಲಕಾರಣರಾರೆಂಬುದನ್ನು ಪ್ರಭುತ್ವದವರು ಕಂಡುಹಿಡಿದು ಅವರು ಭೂಪಾಲರಾಗಿದ್ದರೂ ಮನ್ನಿಸದೆ ಕಠಿನತರವಾದ ಶಿಕ್ಷೆಗೆ ಗುರಿಮಾಡಬೇಕೆಂದು ವೃತ್ತಪತ್ರಿಕೆಗಳ ಮತ್ತು ಶಾಸನಸಭೆಗಳ ಮೂಲಕ ಪ್ರಾರ್ಥಿಸಲ್ಪಟ್ಟಿದ್ದಿತು. ಅಲ್ಲಗೆ ಈ ಭಯಾನಕ ಕಥಾನಾಯಕಿಯಾದ ಮುಮತಜಂಬೇಗಮ್ಮಳು ವೈಸ್ರಾಯರಿಗೂ ಬ್ರಿಟಿಷ್‌ಮಂತ್ರಿಮಂಡಲಕ್ಕೂ ಮೊರೆಯಿಟ್ಟುಕೊಂಡಿದ್ದಳು. ಇದರಮೇಲೆ ಈಗ ವೈಸ್ರಾಯರು ಈ ಕೊಲೆಗೆ ಸಂಬಂಧಪಟ್ಟ ವಿಶಿಷ್ಟಕಾಗದಪತ್ರಗಳನ್ನು ಬೊಂಬಾಯಿ ಸಿ. ಐ. ಡಿ. ಪೊಲೀಸು ಸೂಪರಿಂಟೆಂಡೆಂಟ್ ಜಫ್ರಿಸ್‌ರವರ ಮೂಲಕ ದಿಲ್ಲಿಗೆ ತರಿಸಿಕೊಂಡು ಎಲ್ಲವಿಷಯಗಳನ್ನೂ ಕೂಲಂಕಷವಾಗಿ ಕೇಳಿ ತಿಳಿದುಕೊಂಡು ಇಂದೂರು ರಾಜಧಾನಿಯಲ್ಲಿ ಮಹಾರಾಜಹೋಲ್ಕರವರ ಮತ್ತು ಇತರರ ವಿಚಾರಣೆ ಮಾಡುವುದಕ್ಕಾಗಿ ಕೆಲ ಹೈಕೋರ್ಟಿನ ನ್ಯಾಯಾಧೀಶರುಗಳಿಂದಲೂ ದೇಶೀಯ ರಾಜರುಗಳಿಂದಲೂ ಕೂಡಿದ ಒಂದು ಕಮಿಷನ್ನನ್ನು ಗೊತ್ತುಮಾಡಿ, ಇಂದೂರು ಮಹಾರಾಜರವರು ಇಷ್ಟಪಟ್ಟಲ್ಲಿ ಕಮಿಷನ್ನಿನವರ ವಿಚಾರಣೆಗೊಳಪಡಬಹುದು; ಬಲವಂತವೇನೂ ಇಲ್ಲವೆಂದು ಪ್ರಕಟಿಸಿರುತ್ತಾರೆ. ವಿಚಾರಣೆಗೊಳಪಡದಿದ್ದಲ್ಲಿ ಪದಚ್ಯುತರಾಗಬಹುದೆಂದು ತಿಳುಹಲ್ಪಟ್ಟಿರುವುದಾಗಿ ವದಂತಿ ಹುಟ್ಟಿದೆ. ಈ ವಿಷಯವನ್ನು ತಿಳಿದು ಮಹಾರಾಜರವರಿಗೆ ನ್ಯಾಯಬೋಧಕರಾದ ಸರ್ ಪಿ. ಎಸ್. ಶಿವಸ್ವಾಮಯ್ಯರ್‌ರವರೂ, ಸರ್ ತೇಜಬಹದ್ದೂರ್ ಸಪ್ರೂಯವರೂ ಇಂದೂರಿಗೆ ಹೋಗಿ ಹೋಲ್ಕರ್ ಮಹಾರಾಜರ ಮತ್ತು ದಿವಾನ್ ಮ|| ನರಸಿಂಗರಾಯರ ಕೂಡ 8 ಗಂಟೆಯ ಕಾಲ ಈ ವಿವಾದದ ಸಂಬಂಧವಾಗಿ ಪರ್ಯಾಲೋಚಿಸಿ, ಮಹಾರಾಜರವರು ಕಮಿಷನ್ನಿನವರ ವಿಚಾರಣೆಗೊಳಗಾಗಬೇಕೆ ಬೇಡವೆ? ಎಂಬುದನ್ನು ನಿರ್ಧರಿಸಿ ವೈಸ್‌ರಾಯರಿಗೆ ಇಷ್ಟರಲ್ಲೇ ತಿಳಿಸುವವರಾಗಿರುವರೆಂದೂ, ಇಂಗ್ಲೆಂಡಿನಲ್ಲಿ ಸರ್ ಜಾನ್‌ಸೈಮನ್, ಸರ್ ಪ್ಯಾಟ್ರಿಕ್ ಹೇಸ್ಟಿಂಗ್ಸ್ ಮೊದಲಾಗಿ ಪ್ರಸಿದ್ಧ ನ್ಯಾಯವಾದಿಗಳು ಈ ಕೊಲೆಸಂಬಂಧದ ವಿದ್ಯಮಾನವನ್ನೆಲ್ಲಾ ಕೂಲಂಕಷವಾಗಿ ಪರ್ಯಾಲೋಚಿಸಿ ಮಹಾರಾಜರವರಿಗೆ ಯಾವವಿಧವಾದ ತೊಂದರೆಯು ಇಲ್ಲವೆಂದು ಮತ್ತು ಈ ವಿಚಾರದಲ್ಲಿ ಬ್ರಿಟಿಷ್ ಪ್ರಭುತ್ವದವರು ಮಹಾರಾಜರ ಮೇಲೆ ಕಾರ್ಯಭಾಗ ನಡೆಯಿಸಲು ಅವಕಾಶವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆಂದೂ ವರ್ತಮಾನವಿದೆ. ಈ ಕಮಿಷನ್ನಿಗೆ ಅಲಹಾಬಾದ್ ಹೈಕೋರ್ಟಿನ ಚೀಫ್‌ಜಡ್ಜರಾದ ಸರ್ ಗ್ರಿಂವುಡ್‌ಮಿಯರ್ಸ್‌ರವರೂ ಕಲಕತ್ತಾ ಹೈಕೋರ್ಟಿನ ಜಡ್ಜಿಯರೊಬ್ಬರೂ, ಇಬ್ಬರು ರಾಜರುಗಳಲ್ಲಿ ನರೇಂದ್ರಮಂಡಳದ ಅಧ್ಯಕ್ಷರಾದ ಪಾಟಿಯಾಲ ಮಹಾರಾಜರೊಬ್ಬರೂ ಆಗಿರುವರೆಂಬದಾಗಿಯೂ, ಬರೋಡಾ ಗಾಯಕವಾರ ಮಹಾರಾಜರು ಕಮಿಷನ್ನಿನಲ್ಲಿರಲು ತಿರಸ್ಕರಿಸಿದುದಾಗಿಯೂ ಪ್ರಬಲ ವರ್ತಮಾನವಿದೆ. ಇಂದೂರು ಸಂಸ್ಥಾನದ ಕೋಟ್ಯಧೀಶ್ವರರಾದ ಮತ್ತು ಶ್ರವಣಬೆಳಗೊಳದ ಜೈನಮಹಾಸಭಾಧ್ಯಕ್ಷತೆಯನ್ನು ವಹಿಸಿದ್ದ ಪಂಚಿತಸ್ಥರಾಗಿರುವ ಸರ್ ಹುಕುಂಚಂದ್ ಸರೂಪಚಂದ್‌ರವರು ವೃತ್ತಪತ್ರಿಕಾವಿಲೇಖಕನಕೂಡ ಪ್ರಸ್ತಾವಿಸುವಾಗ್ಗೆ, "ಮಹಾರಾಜರವರ ಪ್ರಸಾದವನ್ನು ಸಂಪಾದಿಸುವ ಯೋಚನೆಯಿಂದ ಯಾರೋ ದುರ್ಮಾರ್ಗಿಗಳು ಕೊಲೆಯನ್ನು ಮಾಡಿದುದಕ್ಕೆ ಮಹಾರಾಜರವರನ್ನು ಕಾರಣಭೂತರನ್ನಾಗಿ ಮಾಡಿ ಅವರ ವಿಚಾರಣೆಯನ್ನು ಒಂದು ಕಮಿಷನ್ನಿನ ಮೂಲಕ ವೈಸ್‌ರಾಯರು ಮಾಡಿಸುವುದು ಅನ್ಯಾಯವೂ, ಅಪಮಾನಕರವೂ ಆಗಿರುತ್ತದಲ್ಲದೆ ಈ ಸಂಸ್ಥಾನದ ಪ್ರಜೆಗಳಾದ ನಮ್ಮಗಳೆಲ್ಲರಿಗೂ ಅಸಮ್ಮತವಾಗಿದೆ. ಮಹಾರಾಜರವರು ನಿರಪರಾಧಿಗಳಾಗಿರುವುದರಿಂದ ಕಮಿಷನ್ನಿನವರ ವಿಚಾರಣೆಗೊಳಗಾಗತಕ್ಕದೂ ಅಲ್ಲ, ತಾವಾಗಿ ಪದಚ್ಯುತರಾಗತಕ್ಕದೂ ಅಲ್ಲ. ನನಗೆ ಅವಕಾಶವಿದ್ದಲ್ಲಿ ನನ್ನ ಸ್ವಂತವೆಚ್ಚದಿಂದ ರಾಯಭಾರವನ್ನು ವೈಸ್ರಾಯರವರಲ್ಲಿಗೂ, ಇಂಗ್ಲೆಂಡಿಗೂ ಕಳುಹಿಸಿಕೊಟ್ಟು ನಮ್ಮ ಹೋಲ್ಕರ್‌ಮಹಾರಾಜರನ್ನು ಯಾವಬಾಧೆಗೂ ಗುರಿಮಾಡದೆ ಬಿಟ್ಟುಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಿದ್ದೆನು. ಆದರೆ ಹೀಗೆ ಮಾಡಲು ಪ್ರತಿಬಂಧಿಸಲ್ಪಟ್ಟಿರುವೆನು." ಎಂದು ಹೇಳಿದರಂತೆ.

ಬಾವಲಾಕೊಲೆಯ ಸಂಬಂಧವಾಗಿ ವೈಸ್‌ರಾಯರು ಒಂದು ಕಮಿಷನ್ನ ಏರ್ಪಡಿಸಿ ತನ್ಮೂಲಕ ವಿಚಾರಣೆಯನ್ನು ನಡೆಸುವಲ್ಲಿ ಸಂಸ್ಥಾನದ ಪ್ರಜೆಗಳು ನಿರೋಧಕಸಭೆಗಳನ್ನಾಗಲಿ ಆಂದೋಳನವನ್ನಾಗಲಿ ನಡೆಯಿಸಕೂಡದೆಂದು ಇಂದೂರು ಪ್ರಭುತ್ವದವರು ಪ್ರಕಟಿಸಿರುವರು. ಈ ವಿಚಾರದಲ್ಲಿ ಒಬ್ಬ ಪತ್ರಿಕಾವಿಲೇಖಕನು ದಿವಾನರನ್ನು ಕಂಡು ಕೇಳುವಲ್ಲಿ, "ಇಂತಹ ನಿರೋಧಕಸಭೆಗಳನ್ನೂ, ಆಂದೋಳನವನ್ನೂ ನಡೆಯಿಸುವುದು ಸಂಸ್ಥಾನಕ್ಕೆ ವಿರೋಧಪರಿಣಾಮಕಾರಕವಾಗಿರುವುದಲ್ಲದೆ, ಬ್ರಿಟಿಷ್ ಪ್ರಭುತ್ವದವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗೆ ವಿರುದ್ಧವಾಗಿರುವುದು. ಇಂದೂರಿನ ಪ್ರಮುಖಜನರು ಕಳೆದ ಭಾನುವಾರ ನಡೆಯಿಸಬೇಕೆಂದಿದ್ದ ಮಹಾಜನಸಭೆಯನ್ನು ಪೊಲೀಸರ ಕಾವಲನ್ನಿಟ್ಟು ಅಡ್ಡಿಪಡಿಸಬೇಕಾಯಿತು. ಸರ್ ಹುಕುಂಚಂದ್ ಸರೂಪಚಂದ್ ಮೊದಲಾದ ಪ್ರಮುಖಜನರು ವೈಸ್‌ರಾಯರಲ್ಲಿಗೆ ರಾಯಬಾರವನ್ನು ಕಳುಹಿದಲ್ಲಿ ಮಹಾರಾಜರವರ ಅಸಮಾಧಾನಕ್ಕೆ ಕಾರಣವಾಗುತ್ತದೆಂದು ಎಚ್ಚರಿಸಲ್ಪಟ್ಟರು" ಎಂದು ತಿಳಿಸಿದರು.

ಮಹಾರಾಜರವರು ತಮ್ಮ ಅಭಿಪ್ರಾಯವು ಈ ವಿಚಾರದಲ್ಲಿ ಹೇಗಿರುವುದಾದರೂ, ತಮ್ಮ ಕುಮಾರರಾದ ಯುವರಾಜರನ್ನು ವಿದ್ಯಾಭ್ಯಾಸಕ್ಕೆ ಇಂಗ್ಲೆಂಡಿಗೆ ಕಳುಹಲು ಸಿದ್ಧಗೊಳಿಸಿದ್ದ ಸಕಲ ಸನ್ನಾಹವನ್ನೂ ನಿಲ್ಲಿಸಿಬಿಟ್ಟಿರುವರು. ಈ ಯುವರಾಜರಿಗೆ ಈಗತಾನೆ 18 ನೇ ವರ್ಷ ವಯಸ್ಸು ನಡೆಯುತ್ತಿದೆ. ಈ ಯುವರಾಜರ ಇಂಗ್ಲೆಂಡಿನ ಪ್ರಯಾಣವು ಏಕಾಏಕಿ ನಿಲ್ಲಿಸಲ್ಪಟ್ಟುದರಿಂದ ಜನರು ನಾನಾವಿಧವಾಗಿ ಮಾತಾಡಿಕೊಳ್ಳುತ್ತಿರುವರು. ಎಂದು ಪತ್ರಿಕಾವಿಲೇಖಕನೊಬ್ಬನು ಬರೆದಿರುತ್ತಾನೆ. ಈ ಕಮಿಷನ್ನಿನ ವಿಚಾರಣೆಯ ಪರಿಣಾಮವನ್ನು ಜನರು ಬಹುಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಸ್ವದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಪಾರ್ಶಿಜನರ ಅಗ್ನಿದೇವಾಲಯದ ಪ್ರವೇಶೋತ್ಸವವು ಈ ತಾ|| 8 ರಲ್ಲಿ ನಡೆಯುವುದು.

ಕಳೆದವಾರ ನಮ್ಮ ಸೀಮೆಯ ಕೆಲವೆಡೆಗಳಲ್ಲಿ ಅಕಾಲಮಳೆಯಾಗಿ ಕೆರೆಕುಂಟೆಗಳಿಗೆ ನೀರು ಬಂದಿತೆಂದೂ, ರಾಗಿ ಹುರುಳಿ ಮೊದಲಾದ ಧಾನ್ಯವನ್ನು ತುಳಿಸುತ್ತಿದ್ದವರಿಗೆ ವಿಶೇಷ ನಷ್ಟವಾಯಿತೆಂದೂ ತಿಳಿಯಬಂದಿದೆ.

ರಾಜಧಾನಿಯಲ್ಲಿ ವಿಷಪ್ರಯೋಗದಿಂದ ಕೊಂದುಹಾಕಲ್ಪಟ್ಟಿದ್ದ 12 ಕಪಿಗಳ ಶವವನ್ನು ಭೈರಾಗಿಗಳು ನೆನ್ನೆಯದಿವಸ ಉತ್ಸವಪೂರ್ವಕವಾಗಿ ಸ್ಮಶಾನಕ್ಕೆ ತೆಗೆದುಕೊಂಡುಹೋಗಿ ಉತ್ತರಕ್ರಿಯಾದಿಗಳನ್ನು ವಿಧಿವತ್ತಾಗಿಮಾಡಿದರಂತೆ.

ಮ|| ಜಿ. ಕೆ. ಮಲ್ಲಪ್ಪನವರು ತಿಪಟೂರು ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಖಿದರಪ್ಪನವರು ಸಿಡ್ಲಘಟ್ಟದ ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾಗಿಯೂ ಆರಿಸಲ್ಪಟ್ಟಿರುವುದನ್ನು ಸರ್ಕಾರದವರು ಅನುಮೋದಿಸಿರುತ್ತಾರೆ.

ಯಡತೊರೆ ತಾಲ್ಲೂಕಿನಲ್ಲಿರುವ ಅರಮನೆಯ ಜಮೀನುಗಳನ್ನು ನೋಡುವುದಕ್ಕಾಗಿ ಶ್ರೀಮನ್ ಮಹಾರಾಜರವರ ಅಸಿಸ್ಟೆಂಟ್ ಪ್ರೈವೆಟ್ ಸೆಕ್ರೆಟರಿಯವರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರು ಡೆಪ್ಯುಟಿಕಮೀಷನರ ಕೂಡ ಹೋಗಿದ್ದು ಬಂದರು.

ಮೈಸೂರು ಪ್ರಭುತ್ವದವರಿಂದ ನಡೆಯಿಸಲ್ಪಡುತ್ತಿರುವ ಎಲ್ಲ ರೈಲ್ವೆಗಳಿಂದಲೂ ಈ ಜನವರಿ ತಾ|| 16 ಕ್ಕೆ ಕಡೆಯಾದ ಒಂದು ವಾರದಲ್ಲಿ 58400 ರೂಪಾಯಿಗಳುತ್ಪತ್ತಿಯಾದುವು; ಇದರ ಹಿಂದಣವಾರದಲ್ಲಿ 65400 ರೂ. ಕಳೆದವರ್ಷ ಇದೇ ಕಾಲದಲ್ಲಿ 59978 ರೂ. ಉತ್ಪನ್ನವಾಗಿದ್ದಿತು.

ನಂಜನಗೂಡು ಶ್ರೀಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನಕ್ಕೆ ಸಂಬಂಧಪಟ್ಟ ಕೆಲ ಆಭರಣಗಳ ಬದಲಾವಣೆಯಾಗಿರುತ್ತದೆಂದು ಹುಟ್ಟಿರುವ ಸುದ್ದಿಯ ನಿಜಸ್ಥಿತಿಯನ್ನು ತಿಳಿಯುವುದಕ್ಕಾಗಿ ಮುಜರಾಯಿಕಮೀಷನರಾದ ಮ|| ಬಿ. ರಾಮಸ್ವಾಮಯ್ಯನವರು ಬಂದಿರುವುದಾಗಿ ಕೇಳುತ್ತೇವೆ.

ಶ್ರೀಮನ್ ಮಹಾರಾಜರವರೂ, ಮಹಾಮಾತೃಶ್ರೀಯವರೂ ಪರಿವಾರದೊಡನೆ ಗೋಕುಲಬೃಂದಾವನಕ್ಕೆ ದಯಮಾಡಿಸಿದ್ದು ಅಲ್ಲಿಂದ ಪ್ರಯಾಗಕ್ಕೆ ಚಿತ್ತೈಸಿರುವರು, ಮತ್ತು ತಾ|| 8 ರಲ್ಲಿ ಶ್ರೀಕಾಶೀಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿ 8–10 ದಿನಗಳವರೆಗಿದ್ದು ಕಲಕತ್ತಾಕ್ಕೆ ಚಿತ್ತೈಸುವವರಾಗಿರುವರೆಂದು ತಿಳಿಯಬರುತ್ತದೆ.

ರಾಜಧಾನಿಯ ಹಳ್ಳದಕೇರಿ ಮೊದಲಾಗಿ ದಕ್ಷಿಣಭಾಗದಲ್ಲಿ ಕಳೆದ 3 ದಿವಸಗಳಿಂದಲೂ ವಿದ್ಯುದ್ದೀಪಗಳು ಹೊತ್ತದೆ ಹಳ್ಳಗಳು ವಿಶೇಷವಾಗಿರುವ ಮಾರ್ಗಗಳಲ್ಲಿ ತಿರುಗಾಡುವ ಜನರಿಗೆ ಬಹಳ ತೊಂದರೆಯಾಗಿರುತ್ತದೆ. ಹೀಗಿದ್ದರೂ ಸರಿಪಡಿಸದೆ ಇರುವುದನ್ನು ನೋಡಿದರೆ ಆ ಶಾಖಾಧಿಕಾರಿಗಳ ಗಮನಕ್ಕೆ ಬಂದಂತೆ ತೋರುವುದಿಲ್ಲ.

ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ರಾಜರಾಜೇಶ್ವರಿಹಾಲಿನ ಪ್ರೊಪ್ರೈಟರುಗಳಾದ ಮ|| ಲಿಂಗೋಜಿರಾವ್ ಅಂಡ್ ಸನ್ಸ್‌ರವರೂ, ಶ್ರೀರಾಮಪೇಟೆಯಲ್ಲಿರುವ ಜವಳಿಕೋಟಿ ಸಾಹುಕಾರ್ ಎಂ. ಕೆ. ಮಾಧವರಾವ್ ಪವಾರ್‌ರವರು ದಯವಿಟ್ಟು ಕಳುಹಿಸಿಕೊಟ್ಟಿರುವ ಸುಂದರವಾದ ಸಚಿತ್ರಕ್ಯಾಲಂಡರುಗಳನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಇಂಜನೀಯರಾದ ಮ|| ಬಿ. ತಿರುಮಲಾಚಾರ್, ಬಿ. ಇ., ಯವರಿಗೆ ಜನವರಿ ತಾ|| 1 ರಿಂದ 3 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದರಿಂದ ಟ್ರಸ್ಟ್‌ಬೋರ್ಡ್ ಇಂಜನಿಯರಾದ ಮ|| ವೈ. ರಾಮಸ್ವಾಮಿ ಬಿ.ಎ., ಸಿ.ಇ., ಯವರು ತಮ್ಮ ಕೆಲಸದೊಂದಿಗೆ ಮ್ಯುನಿಸಿಪಲ್ ಇಂಜನಿಯರ್ ಕೆಲಸವನ್ನು ನೋಡಿಕೊಳ್ಳುವುದಾಗಿ ಸರ್ಕಾರದಪ್ಪಣೆಯಾಗಿರುತ್ತದೆ.

ಅಮಲ್ದಾರರುಗಳಾದ ಮ|| ಎಸ್. ನಾರಾಯಣರಾಯರು ದಾವಣಗೆರೆಯಿಂದ ಹೊಳಲಕೆರೆಗೂ, ಆಕ್ಟಿಂಗ್ ಸಬ್‌ಡಿವಿಜನ್ ಆಫೀಸರಾಗಿದ್ದು ಅಮಲ್ದಾರರಾಗಿ ಜಿಂದಕ್ಕೆ ಕಳುಹಲ್ಪಟ್ಟಿರುವ ಮ|| ಟಿ. ಎಸ್. ಪೂರ್ಣಯ್ಯನವರು ದಾವಣಗೆರೆಗೂ, ಮ|| ಎ. ಗೋಪಾಲರಾಯರು ಕಾನಕಾನಹಳ್ಳಿಯಿಂದ ಜಗಳೂರಿಗೂ, ಮಿ|| ಡಿ. ಸಾಲೊಮನ್‌ರವರು ಜಗಳೂರಿಂದ ಕಾನಕಾನಹಳ್ಳಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಸಯ್ಯಾಜಿರಾವ್‌ರೋಡಿನಲ್ಲಿ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲ್ ಪಕ್ಕದಲ್ಲಿರುವ ಜೈನಬಸ್ತಿ ಗುಡಿಯ ಮೇಲ್ವಿಚಾರಣೆಗಾಗಿ ಮ|| ಗಳಾದ ಶ್ರೀಮಂತ ವರ್ಧಮಾನಯ್ಯನವರು, ಟಿ. ಬಿ. ಚಂದ್ರಯ್ಯನವರು, ಅನಂತರಾಜಯ್ಯನವರು, ಜಿನಚಂದ್ರಪಂಡಿತರು ಮತ್ತು ಪಿ. ಶ್ಯಾಮಣ್ಣನವರು ಈ ಜನವರಿ ತಾ|| 15 ರಿಂದ 5 ವರ್ಷಗಳವರೆಗೆ ಧರ್ಮದರ್ಶಿಗಳಾಗಿ ಸರ್ಕಾರದಿಂದ ನಿಯಮಿಸಲ್ಪಟ್ಟಿರುವರು.

ಶ್ರವಣಬೆಳ್ಗೊಳದ ಜೈನಮಠಾಧ್ಯಕ್ಷರಾಗಿದ್ದ ಶ್ರೀಚಾರುಕೀರ್ತಿಪಂಡಿತಾಚಾರ್ಯಸ್ವಾಮಿಗಳು ಕೆಲಕಾಲದಿಂದ ಹೊಟ್ಟೆಯಶೂಲೆವ್ಯಾಧಿಗ್ರಸ್ತರಾಗಿದ್ದು ಈ ತಾ|| 26 ರಲ್ಲಿ ದೈವಾಧೀನರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ಇನ್ನೂ 44 ವರ್ಷವಯಸ್ಸಿನವರಾಗಿಯೂ, ವಿದ್ಯಾವಂತರಾಗಿಯೂ, ಸ್ವಧರ್ಮಾಭಿಮಾನಿಗಳಾಗಿಯೂ, ಲೋಕಪ್ರಿಯರಾಗಿಯೂ ಇದ್ದರು. ಇಂತಹವರ ಅಕಾಲಮರಣದಿಂದ ಜೈನಸಮಾಜಕ್ಕೆ ವಿಶೇಷನಷ್ಟವಾಯಿತೆಂಬುದರಲ್ಲಿ ಸಂದೇಹವಿಲ್ಲ.

ಬೆಂಗಳೂರುಸಿಟಿ ಮ್ಯುನಿಸಿಪಲ್ ಕೌನ್ಸಿಲರೂ, ಸ್ವರಾಜ್ಯವಾದಿಗಳೂ ಆದ ಮಿ|| ರಜಾಮಿಯವರು ಗೋರಕ್ಷಣಶಾಸನಕ್ಕೆ ತಮ್ಮನುಮತಿಯನ್ನು ಕೊಟ್ಟುದಕ್ಕಾಗಿ ಅವರನ್ನು ಕೆಲ ಮಹಮ್ಮದೀಯ ವೃತ್ತಪತ್ರಿಕೆಗಳೂ, ಸ್ವಮತೀಯರೂ ಖಂಡಿಸಿರುವರಲ್ಲದೆ ಸಾರ್ವಜನಿಕ ಮಹಮ್ಮದೀಯಸಭೆಯವರು ಒಂದು ಲೇಖವನ್ನು ಮಿ|| ರಜಾಮಿಯವರಿಗೆ ಬರೆದಿರುವರು. ಅದಕ್ಕೆ ಮಿ|| ರಜಾಮಿಯವರು, ಗೋರಕ್ಷಣೆಯಲ್ಲಿ ತಾವು ಸಾನುಭೂತಿಯನ್ನು ತೋರಿಸಿರುವುದು ಮಹಮ್ಮದೀಯ ಮತಧರ್ಮಕ್ಕೆ ವಿರೋಧವಾಗಿಲ್ಲವೆಂದು ಉತ್ತರವನ್ನು ಕೊಟ್ಟರಂತೆ.

ಭರತಖಂಡದ ವೃತ್ತಾಂತಗಳು.

ಕುಂಭಕೋಣದಲ್ಲಿ ಒಂದು ವಿಲಕ್ಷಣವಾದ ಶಿಶುವು ಜನಿಸಿದೆ. ತಲೆಯಿಲ್ಲ, ಅದರ ಬದಲಾಗಿ ಒಂದು ಮಾಂಸದ ಉಂಡೆಯೂ ಅದರಲ್ಲಿ ಕಣ್ಣುಗಳೆರಡೂ ಇವೆಯಂತೆ.

ಹೈದರಾಬಾದಿನಲ್ಲಿ ಪ್ಲೇಗು ಬಹಳ ಉಲ್ಬಣವಾಗಿರುತ್ತದೆಂದೂ, ಅದು ಆರಂಭವಾದಂದಿನಿಂದ ಈವರೆಗೆ 1576 ಜನರಿಗೆ ತಗುಲಿ 1127 ಮರಣವಾಗಿರುತ್ತದೆಂದೂ ಅಲ್ಲಿಯ ಪ್ಲೇಗ್ ಕಮೀಷನರು ವರದಿ ಮಾಡಿರುತ್ತಾರೆ.

ಕಳೆದ ತಾ|| 29 ರಲ್ಲಿ ಫಂಡರಪುರದಲ್ಲಿ ಬಿರುಗಾಳಿ ಸಮೇತವಾಗಿ ಮಳೆಯು ಬಂದಿತಲ್ಲದೆ ಬೇಲದಕಾಯಿ ಗಾತ್ರದ ಆಲಿಕಲ್ಲುಗಳು ಸುರಿದುದರಿಂದ ಮನೆಯ ಹೆಂಚುಗಳೊಡೆದುಹೋದುವು; ಗಿಡಗಳ ರಂಭೆಗಳು ಮುರಿದುಬಿದ್ದುವು. ಮಳೆಗೆ ಸಿಕ್ಕಿದ ಜನರ ತಲೆಗೆ ಪೆಟ್ಟುಬಿದ್ದು ಬಾಧೆಯಾಯಿತು. ಬೆಳೆಯಂತು ಬಹುವಾಗಿ ನಷ್ಟವಾಯಿತು.

ನಿಜಾಮು ಮತ್ತು ಭೂಪಾಳದ ಸಂಸ್ಥಾನಿಕರು ಜನರನ್ನು ಮುಸಲ್ಮಾನಧರ್ಮಕ್ಕೆ ಮತಾಂತರಗೊಳಿಸಲು ಬದ್ಧಕಂಕಣರಾಗಿರುವುದರಿಂದ ಅದಕ್ಕಾಗಿ ತಕ್ಕ ವ್ಯವಸ್ಥೆಯನ್ನು ಮಾಡಿರುವರೆಂದು ಪ್ರಕಟವಾಗಿದೆ. 600 ಜನ ಮುಸಲ್ಮಾನರೂ, ಕುಲಗೇಡಿಗಳಾದ 80 ಮಂದಿ ಹಿಂದೀಯರೂ ಈ ಕೆಲಸಕ್ಕೆ ತೊಡಗಿರುವರು. ನಿಜಾಮು ಸರ್ಕಾರದವರು 6 ಲಕ್ಷ ರೂಪಾಯಿ ವೆಚ್ಚಮಾಡುವುದರಲ್ಲಿರುವರೆಂದೂ ತಿಳಿದುಬರುತ್ತದೆ. ಮುಸಲ್ಮಾನರ ರಾಜಧಾನಿಯಲ್ಲಿಯೂ ಮತಾಂತರವೆಂಬ ಅಂಟುರೋಗಕ್ಕೆ ಎಡೆಸಿಕ್ಕಿತೆ? ಕರ್ಣಾಟಕಸ್ಥರು ಜಾಗರೂಕರಾಗಿರಲಿ!

ಖಿಲಾಫತ್ ದೊರೆ ಎಂದು ಹೆಸರಿಟ್ಟುಕೊಂಡು ನಾಲ್ಕೈದುವರ್ಷಗಳಿಂದಲೂ ಸಿಕ್ಕದೆ ತಲೆತಪ್ಪಿಸಿಕೊಂಡು ಹಾವಳಿಮಾಡುತ್ತಿದ್ದ ಮುಕ್ರಿ ಅಯಮದ್ ಎಂಬೊಬ್ಬ ಪ್ರಸಿದ್ಧ ದರೋಡೆಕೋರನನ್ನು ಪೊಲೀಸಿನವರು ವೇಷಮರಸಿಕೊಂಡುಹೋಗಿ ಬಹಳ ಉಪಾಯದಿಂದ ಕಳೆದವಾರ ಕಲ್ಲಿಕೋಟೆಯ ಬಳಿಯಣ ಒಂದು ಗುಡ್ಡಪ್ರದೇಶದಲ್ಲಿ ದಸ್ತಗಿರಿಮಾಡಿದರು. ಅವನನ್ನು ಹಿಡಿದುಕೊಟ್ಟರೆ, ಅಥವಾ ಅವನನ್ನು ಕೊಂದು ಅವನ ತಲೆಯನ್ನು ತಂದು ತೋರಿಸಿದರೆ ಬಹುಮಾನಕೊಡುವುದಾಗಿ ಸರ್ಕಾರದವರು ನಾಲ್ಕುವರ್ಷಗಳ ಹಿಂದೆಯೇ ಪ್ರಕಟಿಸಿದ್ದರು. ಅವನು ಆಗ್ಗೆ ಹಿಂದುಗಳನ್ನು ಹಿಡಿದು ಮೈಚರ್ಮವನ್ನು ಸುಲಿದುಬಿಡುತ್ತಿದ್ದನೆಂದೂ, ಇಲ್ಲವೇ ತುಂಡುತುಂಡಾಗಿ ಕತ್ತರಿಸಿ ಹಾಕುತ್ತಿದ್ದನೆಂದೂ ಹೇಳುತ್ತಾರೆ.

ಕಳೆದ ತಾ|| 28 ರ ರಾತ್ರಿ ಒಬ್ಬ ಹಿಂದೂ ಕುಲೀನಸ್ತ್ರೀಯು ರಂಗೂನಿನಿಂದ ಚಿಟಗಾಂಗಿಗೆ ಹಡಗಿನಲ್ಲಿ ಪ್ರಯಾಣಮಾಡುತ್ತ ಎರಡನೆಯ ತರಗತಿಯಲ್ಲಿ ಮಲಗಿಕೊಂಡಿರುವಾಗ್ಗೆ ಹಡಗಿನ ಯುರೋಪ್ಯ ಇಂಜನೀಯರು ಆಕೆಯು ಮಲಗಿದ್ದ ಸ್ಥಳಕ್ಕೆ ಬಂದು ಆಕೆಯ ಮಾನಭಂಗಮಾಡಲೆತ್ನಿಸಿದಾಗ ಆಕೆಯು ದಿಗಿಲುಬಿದ್ದೆದ್ದು ಅವನ ಅಕೃತ್ಯಕ್ಕೆ ಅವಕಾಶಕೊಡದೆ ಬಾಗಿಲ ಬಳಿಬಂದು ಗಟ್ಟಿಯಾಗಿ ಕೂಗಿಕೊಂಡು ನಡುಗುತ್ತ ನಿಂತಿದ್ದಳು. ಇತರ ಪ್ರಯಾಣಿಕರು ರೋದನವನ್ನು ಕೇಳಿ ಕೂಡಲೆ ಬಂದು ಆಕೆಯ ಸ್ಥಿತಿಯನ್ನುನೋಡಿ ಕನಿಕರಪಟ್ಟು ಧೈರ್ಯೋಕ್ತಿಯಿಂದ ಸಮಾಧಾನಪಡಿಸಿದರು. ತರುವಾಯ ಕ್ಯಾಪ್ಟನ್ನಿನ ವಿಚಾರಣೆಯಕಾಲದಲ್ಲಿ ಆಕೆಯು ಆ ಅತ್ಯಾಚಾರಿಯನ್ನು ಗುರ್ತಿಸಿ ನಡೆದ ವಿದ್ಯಮಾನವನ್ನು ಸವಿಸ್ತಾರವಾಗಿ ತಿಳಿಸಿದಳು.

ಮದ್ರಾಸಾಧಿಪತ್ಯಕ್ಕೆ ಸೇರಿದ ಕಡಲೂರು ಮೊದಲಾದ ಕಡೆ ಬಿರುಗಾಳಿಮಿಶ್ರವಾಗಿ ದೊಡ್ಡ ಮಳೆಯು ಬಂದು ನದೀನದಗಳಲ್ಲಿ ಪ್ರವಾಹವು ಮಿತಿಮೀರಿಬಂದು ನಿಂತಿದ್ದ ಪೈರುಗಳು ನಾಶವಾದುದಲ್ಲದೆ ರಸ್ತೆಗಳೂ ಸೇತುವೆಗಳೂ ಕೊಚ್ಚಿಹೋಗಿ ಮತ್ತು ಕೆಲವೆಡೆಗಳಲ್ಲಿ 32 ಮೈಲಿ ದೂರದವರೆಗೂ ನೆಲದ ಮೇಲೆ 4 ರಿಂದ 10 ಅಂಗುಲದವರೆಗೆ ನೀರು ನಿಂತಿದ್ದು ಜನರ ಮತ್ತು ಬಂಡಿಗಳ ತಿರುಗಾಟಕ್ಕೆ ಅಡಚಣೆಯಾಗಿದ್ದಿತು. ರೈಲುರಸ್ತೆಯು ಅನೇಕಕಡೆ ಕೊಚ್ಚಿಹೋಗಿದ್ದು ಬಂಡಿಗಳು 4–5 ಗಂಟೆ ನಿದಾನವಾಗಿ ಬರುತ್ತಿದ್ದುವು. ಇದರಿಂದ ಧಾನ್ಯ ಮತ್ತು ದನಕರಗಳ ನಷ್ಟವು ಅಪಾರವಾಗಿ ಆಗಿರುವುದು. ಹಾಳಾಗಿರುವ ಸೇತುವೆಗಳು, ರಸ್ತೆಗಳು ಮೊದಲಾದವುಗಳನ್ನು ಸರಿಪಡಿಸಲು ವಿಶೇಷ ಖರ್ಚೂ, ಕಾಲವಿಳಂಬವೂ ಆಗುವುದಂತೆ.

ಶಿವಾಜಿ ಮಹಾರಾಜರವರು ಜನ್ಮಿಸಿ ಮುಂದಣವರ್ಷಕ್ಕೆ 300 ವರ್ಷಗಳು ತುಂಬುವುದರಿಂದ ಆ ಕಾಲದಲ್ಲಿ ಅವರ ವರ್ಧಂ

ಆಸ್ಟ್ರೇಲಿಯಾದ್ವೀಪದ ಗೌರ್ನರ್ ಜನರಲ್‌ರವರ ಸಂಚಾರಕ್ಕಾಗಿ ಒಂದು ಆಕಾಶಯಾನವು ಜಲಯಾನವಾಗಿಯೂ ಉಪಯೋಗಿಸಲ್ಪಡುವ ರೀತಿಯಲ್ಲಿ ಇಂಗ್ಲೆಂಡಿನಲ್ಲಿ ಕಟ್ಟಲ್ಪಡುತ್ತಿರುವುದು.

ಲಂಡನ್ ಪಟ್ಟಣದ ಪ್ರಾಣಿಪ್ರದರ್ಶನಾಲಯಕ್ಕೆ ಉದ್ದವಾದ ಕೆಲ ಮೀನುಗಳು ತಂದಿಡಲ್ಪಟ್ಟಿವೆ. ಇವು ನೀರಿನಕೆಸರಿನೊಳಗೆ ವಾಸಿಸುತ್ತಿದ್ದು ಮಳೆಬರುವುದನ್ನು ತಿಳಿದು ನೀರಿನ ಮೇಲ್ಭಾಗಕ್ಕೆ ಬಂದು ಬಹುವೇಗವಾಗಿ ಓಡಾಡುತ್ತವಂತೆ. ಹೀಗಾದ 24 ಗಂಟೆಯಮೇಲೆ ಮಳೆಯು ಬರುವುದರಿಂದ ಅವುಗಳು ವರ್ಷಸೂಚಕವೆಂದು ಕರೆಯಲ್ಪಡುತ್ತವೆ.

ದಕ್ಷಿಣಾಫ್ರಿಕೆಗೆ ಅಭಿಮುಖವಾಗಿ ಮಡಗಾಸ್ಕರ್ ದಡದ ಕಾಡಿನಲ್ಲಿ ಒಂದು ಪರ್ವತವೂ ಅದರ ಪಾದದಲ್ಲಿ ಒಂದು ನದಿಯೂ ಇರುತ್ತದೆ. ಈ ನದಿಯಲ್ಲಿ ಭಂಗಾರದ ರಜಕಣಗಳು ಮಳಲಿನೊಡನೆ ಮಿಶ್ರವಾಗಿ ಹರಿಯುತ್ತಿರುವುವು. ಕೆಲ ಕಪ್ಪುಜನರು ದೋಣಿಗಳಲ್ಲಿ ಬಂದು ಪರ್ವತಬಳಿ ಇಳಿದು ಭಂಗಾರವನ್ನು ತೆಗೆದು ದೋಣಿಗಳಲ್ಲಿ ತುಂಬಿಕೊಂಡು ಹೋಗುವುದನ್ನು ಕಂಡೆನು. ಇದೆಲ್ಲವೂ ನಾನು ಸ್ವಪ್ನದಲ್ಲಿ ಕಂಡ ವಿಷಯವಾಗಿದೆ. ಈ ಪರ್ವತವು ಕಂಡುಹಿಡಿಯಲ್ಪಟ್ಟು ಬಂಗಾರವು ತೆಗೆಯಲ್ಪಡುವ ಮಾರ್ಗವು ಗೊತ್ತುಮಾಡಲ್ಪಟ್ಟಲ್ಲಿ ಫ್ರಾನ್ಸಿನ ದಾರಿದ್ರ್ಯವು ಹತವಾಗಿ ಋಣಮುಕ್ತವಾಗಲು ಅವಕಾಶವಾಗುತ್ತದೆ. ಎಂದು ರೈಮಾಂಡ್‌ಪಂಡಿತನು ಫ್ರೆಂಚ್‌ಪ್ರಭುತ್ವದವರಿಗೆ ಬರೆದು ತಿಳಿಸಿರುತ್ತಾನೆ. ಇದು ಸ್ವಪ್ನವಿಚಾರವಾದಾಗ್ಗ್ಯೂ, ಯೂರೋಪಿನಲ್ಲಿ ಅನೇಕ ರಾಜಕೀಯ ಗಂಡಗಳೂ, ಜಪಾನಿನಲ್ಲಿ ಭೂಕಂಪವೂ ಆಗುತ್ತವೆಂದು ರೈಮಾಂಡ್‌ಪಂಡಿತನು ಸ್ವಪ್ನದಲ್ಲಿ ಕಂಡು ಭವಿಷ್ಯಹೇಳಿದ್ದುದು ನಿಜವಾದುದರಮೇಲೆ ಈಗ ಆತನು ಹೇಳಿರುವ ಸ್ವಪ್ನವಿಚಾರವೂ ನಿಜವಾಗಬಹುದೆಂದು ಫ್ರೆಂಚ್‌ಪ್ರಭುತ್ವದವರು ಊಹಿಸುತ್ತಾರೆ.

ತ್ಯುತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಜರುಗಿಸಲು ಮಹಾರಾಷ್ಟ್ರದವರು ತಕ್ಕೇರ್ಪಾಟನ್ನು ಮಾಡುವವರಾಗಿರುವರು. ಮಹಾರಾಜರವರ ಅಶ್ವಾರೋಹಣಪ್ರತಿಮೆಯನ್ನು ಅಮೃತಶಿಲೆಯಲ್ಲಿ 1 ಲಕ್ಷದ 80 ಸಾವಿರ ರೂ. ಗೆ ಮಾಡಿಕೊಡಲು ಬೊಂಬಾಯಿನ ಪ್ರಸಿದ್ಧಶಿಲ್ಪಿಗಳಾದ ಮಾತ್ರೆಯವರೊಪ್ಪಿಕೊಂಡಿರುವರು.

ಈ ತಾ|| 1 ರ ಬೆಳಗ್ಗೆ ದಿಲ್ಲಿಯನಗರದಲ್ಲಿ ಆಯುಧಪಾಣಿಗಳಾದ 8 ಜನ ಕಳ್ಳರು ಒಬ್ಬ ವಿಧವೆಯ ಮನೆಗೆ ನುಗ್ಗಿ ಅವಳ ಆಭರಣಗಳನ್ನೆಲ್ಲಾ ಕೊಡದಿದ್ದರೆ ಕೊಂದುಬಿಡುತ್ತೇವೆಂದು ಹೆದರಿಸಲು ಆಕೆಯು ಕೊಡದೆ ಬಹು ಗಟ್ಟಿಯಾಗಿ ಅರುಚಿಕೊಂಡಳು. ನೆರೆಹೊರೆಯವರು ಆ ಕೂಗನ್ನು ಕೇಳಿ ಕೂಡಲೆ ಓಡಿಬಂದು ಕಳ್ಳರಕೂಡ ಹೋರಾಡುವಲ್ಲಿ ಕಳ್ಳರಲ್ಲೊಬ್ಬನು ಸತ್ತನು ಮತ್ತೊಬ್ಬನು ಪೆಟ್ಟನ್ನು ತಿಂದು ಸಿಕ್ಕಿಬಿದ್ದನು. ಉಳಿದವರು ಪಲಾಯನವಾದರು. ಸಹಾಯಕ್ಕೆ ಬಂದ ನೆರೆಹೊರೆಯ ಜನರಲ್ಲಿ ಕೆಲರು ಕಳ್ಳರ ಗುಂಡಿನೇಟಿನಿಂದ ಗಾಯವಡೆದು ಆಸ್ಪತ್ರೆಚಿಕಿತ್ಸೆಯಲ್ಲಿರುವರು.

ಸಿಕಿಂದರಾಬಾದಿನ ಜೇಂಸ್ ಬೀದಿಯಲ್ಲಿ ಹೈದರಾಬಾದಿನ ದೇಶಮುಖ ಸುಬ್ಬಾರೆಡ್ಡಿಯವರು ಮೋಟಾರುಬಂಡಿಯನ್ನು ನಡೆಯಿಸಿಕೊಂಡು ಹೋಗುತ್ತಿರುವಾಗ್ಗೆ ಸದಾಶಿವನೆಂಬುವವನು ಮಧ್ಯಮಾರ್ಗದಲ್ಲಿ ಹೋಗುತ್ತಿದ್ದವನು ಮೋಟಾರು ಬರುವುದನ್ನು ನೋಡಿ ದಿಗ್ಭ್ರಾಂತನಾಗಿ ತಡವರಿಸುತ್ತ ರಡ್ಡಿಯವರು ಎಷ್ಟು ಸಾಹಸಪಟ್ಟರೂ ಅರಗಾಗದೆ ಹೋದುದರಿಂದ ಬಂಡಿಯು ಅವನನ್ನು ಕೆಳಕ್ಕೆ ಕೆಡವಿ ಅವನಮೇಲೆ ಹರಿದುಹೋಯಿತು. ಆ ಮನುಷ್ಯನು ಮೂರ್ಛಿತನಾಗಿದ್ದುದರಮೇಲೆ ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಉಪಚರಿಸಲ್ಪಡುತ್ತಿದ್ದಾಗ್ಯೂ ಪ್ರಾಣಾಪಾಯಸ್ಥಿತಿಯಲ್ಲಿರುವನು.

ಅಮೇರಿಕದ ಐಶ್ವರ್ಯವತಿಯರಲ್ಲಿ ಒಬ್ಬಳಾದ ಲಾಂಗ್ ಕ್ವಾತ್ ಎಂಬ ಸ್ತ್ರೀಯು ಮದ್ರಾಸಿನಲ್ಲಿ ಉಪನ್ಯಾಸಮಾಡುತ್ತಾ, "ಇಂಡಿಯಾದೇಶದ ಮಕ್ಕಳು ಬುದ್ಧಿಕುಶಲತೆಯುಳ್ಳವರು. ಈ ದೇಶದ ಸ್ತ್ರೀಯರಿಗೆ ಘೋಷಾಪದ್ಧತಿಯನ್ನು ತಪ್ಪಿಸಿ ವಿದ್ಯಾಭ್ಯಾಸವನ್ನು ಬಲಾತ್ಕಾರಪಡಿಸಿ, ಎಲ್ಲಾ ಅಭಿವೃದ್ಧಿಮಾರ್ಗಗಳಲ್ಲೂ ಪುರುಷರಿಗೆ ಸಮಾನಸ್ವಾತಂತ್ರ್ಯವನ್ನು ಸ್ತ್ರೀಯರಿಗೂ ಕೊಡುತ್ತಾ ಬನ್ನಿ. ಜನಸಾಮಾನ್ಯವು ವಿದ್ಯಾವಂತರಾಗುವವರೆಗೆ ನೀವು ಸ್ವತಂತ್ರರಾಗಿ ರಾಜ್ಯಭಾರಮಾಡಲಾರಿರಿ. ಬಲಾತ್ಕಾರವಿದ್ಯಾಭ್ಯಾಸದಿಂದ ಜಾತಿಪದ್ಧತಿಗಳು ಮಾಯವಾಗುವುವು.'' ಎಂದು ಹೇಳಿದರು. ಇವರ ಜತೆಯಲ್ಲಿ ಬಂದಿದ್ದ ಕೆಲ್ಲಿ ಎಂಬ ಮತ್ತೊಬ್ಬ ಸ್ತ್ರೀಯು ''ಇಂಡಿಯಾದೇಶದಲ್ಲಿ ಅಭಿವೃದ್ಧಿಗೆ ವಿಶೇಷವಾದ ಸಾಧನಸಂಪತ್ತುಗಳಿರುವವು. ಆತ್ಮವಿಚಾರಗಳಿಗೆ ಇಲ್ಲಿನಜನರು ತುಂಬಾ ಗಮನಕೊಡುತ್ತಿದ್ದಾರೆ. ಮಹಾತ್ಮಗಾಂಧಿಯವರು ಮತ್ತು ಸರೋಜನೀದೇವಿಯವರಂತಹ ಮಹಾವ್ಯಕ್ತಿಗಳಿರುವ ಈ ದೇಶದಲ್ಲಿ ಇನ್ನೂ ಅನೇಕಮಂದಿ ಮುಖಂಡಜನರಿರುವರು. ಬಡವರು ಬಲ್ಲಿದರೆಂಬ ಭೇದವಿಲ್ಲದೆ ಜನರು ದೈವಭಕ್ತಿಯುಳ್ಳವರಾಗಿದ್ದಾರೆ.'' ಎಂದು ಹೇಳಿದರು.

ವಿದೇಶದ ವೃತ್ತಾಂತಗಳು

ಮನುಷ್ಯನ ಹೃದಯವು 8 ರಿಂದ 12 ಔನ್ಸುವರೆಗೆ ತೂಗುತ್ತದಂತೆ.

ಈಗ್ಗೆ 2,000 ವರ್ಷಗಳ ಹಿಂದೆ ಗೌಲ್ ಜನರಿಂದ ಸಾಬೂನು ಕಂಡುಹಿಡಿಯಲ್ಪಟ್ಟಿತು. ಅವರು ಮೊತ್ತಮೊದಲು ಆಡಿನ ಕೊಬ್ಬಿಗೆ ಒಂದುಜಾತಿ ಮರದಬೂದಿಯನ್ನು ಬೆರಸಿಮಾಡಿದರು.

ತುತುಂಖಾಮ್‌ದೊರೆಯ ಸಮಾಧಿಯಿಂದ ಹೊರಕ್ಕೆತೆಗೆಯಲ್ಪಟ್ಟ ಶವದಪೆಟ್ಟಿಗೆಯು ಬರೇಭಂಗಾರದಿಂದ ಮಾಡಲ್ಪಟ್ಟು 8 ಜನರು ಎತ್ತಲಾರದಷ್ಟು ಭಾರವಾಗಿರುತ್ತದಲ್ಲದೆ 7,50,000 ರೂ. ಬೆಲೆ ಬಾಳುವುದಾಗಿದೆ. ಇದು ಕೈರೋರಾಜಧಾನಿಯಲ್ಲಿರುವ ಸರ್ವವಸ್ತು ಪ್ರದರ್ಶನಾಲಯಕ್ಕೆ ಸಾಗಿಸಲ್ಪಟ್ಟು ಇಡಲ್ಪಟ್ಟಿರುತ್ತದೆ.

ವಿರ್ಡ್ ಉದ್ಯಾನದಲ್ಲಿ ಈವಿನೊಂದಿಗೆ ಸರ್ಪವು ನಿಜವಾಗಿಯೂ ಮಾತನಾಡಿತೆ? ಎಂಬ ವಿಚಾರದಲ್ಲಿ ಆಂಸ್ಟರ್ಡಾಂ ಎಂಬಲ್ಲಿಯ ಪಾದ್ರಿಯು ಸಂಶಯಪಡುತ್ತಿದ್ದುದರಮೇಲೆ ಜಿಜ್ಞಾಸೆ ಹುಟ್ಟಿ ಅದರ ಇತ್ಯರ್ಥದ ಬಗೆಗೆ ಒಂದು ಸಭೆಯು ಸೇರಿದ್ದಿತು. ಆ ಸಭೆಯಲ್ಲಿ ವಾಗ್ವಾದವು ಉತ್ಕಟಾವಸ್ಥೆಗೆ ಬಂದು ಸಭಾಪತಿಯಾಗಿದ್ದ ಡಾಕ್ಟರ್ ಡೆಮೂರ್ ಎಂಬಾತನು ಮೂರ್ಛಿತನಾಗಿಬಿದ್ದು ಕೂಡಲೆ ಮೃತಿಹೊಂದಿದನು.

ಇಟಲಿಯ ಉತ್ತರಭಾಗದಲ್ಲಿರುವ ಸ್ಯಾನ್‌ಸಾಲ್ವೆಟರೆ ಎಂಬ ಗ್ರಾಮದಲ್ಲಿ ಭೂಕಂಪದಿಂದ ನೂರಾರು ಮನೆಗಳ ಗೋಡೆಗಳು ಬಿರುಕುಬಿಟ್ಟಿರುವುವು ಮತ್ತು ಮೂರುಜನರಿಗೆ ಅಪಾಯವಾಗಿರುವುದು. ಜನರು ಭೀತರಾಗಿ ಮನೆಗಳನ್ನು ಬಿಟ್ಟು ಬೈಲುಪ್ರದೇಶಕ್ಕೋಡಿಹೋಗಿರುವರು. ವಿಸುವಿಸ್ ಅಗ್ನಿಪರ್ವತದಿಂದ ಅಗ್ನಿಪ್ರವಾಹಶಿಲೆಯು 1905 ರಲ್ಲಿ ಹೊರಡುತ್ತಿದ್ದಂತೆ ಬಹುಭೀಕರವಾಗಿ ಸಿಡಿದು ಬೀಳುತ್ತಿರುವುದು. ಇದರಿಂದ ಅಲ್ಲಿಯ ಜನರು ಬಹುಭೀತರಾಗಿರುವರು.

ಲಂಡನ್ ಪಟ್ಟಣದಲ್ಲಿ 60,00,000 ರೂ. ವೆಚ್ಚದಿಂದ ಒಂದು ನಾಟಕಶಾಲೆಯು ಅಮೇರಿಕೆಯ ಪ್ರಸಿದ್ಧ ಕಂಪೆನಿಯವರಿಂದ ಕಟ್ಟಲ್ಪಟ್ಟಿರುತ್ತದೆ. ಇದರ ಆರಂಭೋತ್ಸವವು ಇಷ್ಟರಲ್ಲೇ ನಡೆಯಿಸಲ್ಪಟ್ಟು 25 ಜನರಿಂದ ಕೂಡಿದ ಬ್ಯಾಂಡು ಏರ್ಪಡಿಸಲ್ಪಡುವುದು ಮತ್ತು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೂ ಅಪೂರ್ವವೂ ಆದ 2,25,000 ಬೆಲೆಯ ಒಂದು ಪಿಯಾನೋರಾಗಮಾಲಿಕೆಯಪೆಟ್ಟಿಗೆಯಿಡಲ್ಪಡುವುದು. ಇದರಲ್ಲಿ ನಾಯಿಯ ಬೊಗಳುವಿಕೆಯೂ ಬೆಕ್ಕಿನ ಮಿಯಾವ್ ಶಬ್ದವೂ ಅನುಕರಿಸಲ್ಪಡುವುವು.

ಇಂಗ್ಲೆಂಡಿನಲ್ಲಿ ಕಾಡುಶಾಖಾಧಿಕಾರಿಗಳಿಂದ ಈ ವರ್ಷದಲ್ಲಿ 3,24,00,000 ಸಸಿಗಳು 18,000 ಎಕರೆಪ್ರದೇಶದಲ್ಲಿ ಹೊಸದಾಗಿ ನಡಲ್ಪಡುತ್ತಿರುವುವು. ಈ ಸಸಿಗಳು ತಕ್ಕಮಟ್ಟಿಗೆ ಮರವಾಗಿ ಬೆಳೆಯಲು 17 ರಿಂದ 20 ವರ್ಷಗಳಕಾಲ ಹಿಡಿಯುವುದೆಂದೂ, ಮೃದುವಾದ ತೊಲೆಗಳಾಗಲು 50-60 ವರ್ಷಕಾಲವಾಗುವುದೆಂದೂ ಗೊತ್ತುಮಾಡಲ್ಪಟ್ಟಿದೆ. ಈಗ ನಡಲ್ಪಟ್ಟಿರುವ ಸಸಿಗಳೆಲ್ಲವೂ ದೊಡ್ಡಮರಗಳಾದಮೇಲೆ ಹೊರಗಣಿಂದ ಈಗ ತರಿಸಲ್ಪಡುತ್ತಿರುವ ಮರಗಳಿಗಾಗಿ ವ್ಯಯವಾಗುವುದರಲ್ಲಿ 75,00,00,000 ರೂ. ಉಳಿಯುವುದಂತೆ.

ಲಂಡನ್ ನಗರದ ಪೋಲೀಸ್ ಕೋರ್ಟಿನಲ್ಲಿ ಅಗಲಿದ ಗಂಡಹೆಂಡರಿಗೆ ಮಗುವನ್ನು ಸಾಕುವ ವಿಚಾರದಲ್ಲಿ ವಿವಾದವು ನಡೆಯುತ್ತಿರುವಾಗ್ಗೆ ಮಗುವನ್ನು ಮೊದಲಿಂದಲೂ ಸಾಕುತ್ತಿದ್ದ ದಾದಿಯವಶಕ್ಕೆ ಕೊಡಬೇಕೆಂದು ತಂದೆಯು ಕೇಳಲು ಜಡ್ಜಿಯು ಮಗುವನ್ನು ತನ್ನಪಕ್ಕದಲ್ಲಿ ಕುಳ್ಳಿರಿಸಿಕೊಂಡು ಆ ದಾದಿಯ ವಶಕ್ಕೆ ಕೊಡಿಸುವುದಕ್ಕೆ ಪ್ರಯತ್ನಿಸಲು ಅದು ಹೋಗಲು ಒಪ್ಪದೆ ಅಳಲುಪಕ್ರಮಿಸಿತು. ಆಗ ಜಡ್ಜಿಯು ಅದರ ತಾಯಿವಶಕ್ಕೆ ಹೋಗುವಿಯಾ ಎಂದು ಕೇಳಲು ಅದು ಕೂಡಲೆ ತಾಯಿಯ ಹತ್ತಿರಕ್ಕೋಡಿಹೋಗಿ ಬಾಚಿತಬ್ಬಿಕೊಂಡಿತು. ಆಗ ಜಡ್ಜಿಯು ತಂದೆಯವಶಕ್ಕೆ ಮಗುವು ಹೋಗಲು ಸಮ್ಮತಿಸುವುದಿಲ್ಲವಾದುದರಿಂದ ಅದು ತಾಯಿಪೋಷಣೆಯಲ್ಲೇ ಇರಬೇಕೆಂದು ತೀರ್ಮಾನಿಸಿದನು.

ಭವಿಷ್ಯತ್ಫಲಗಳನ್ನು ಹೇಳುವವರು ಈಗ ಅನೇಕರಿರುತ್ತಾರೆ. ಪ್ರಪಂಚಕ್ಕೆ ಇಂತಿಂಥಾ ಕಾಲಗಳಲ್ಲಿ ಇಂತಿಂಥಾ ಅನಾಹುತಗಳಾಗುವವೆಂದು ಅನೇಕ ಜ್ಯೋತಿಷ್ಕರು ಹೇಳಿರುವರು. ಇವರ ಮಾತುಗಳೆಲ್ಲಾ ಬಹುಮಟ್ಟಿಗೆ ಸುಳ್ಳಾಗಿ ಇಲ್ಲವೇ ಅಲ್ಪವಿಷಯಗಳು ಪ್ರಮಾದಸಂಗತಿಗಳಾಗಿ ಗಣಿಸಲ್ಪಟ್ಟು ಇರುವವು. ಹಿಂದೆ ಇಂಗ್ಲೆಂಡಿನಲ್ಲಿ ದೊರೆಯಾಗಿದ್ದ ಕಿಂಗ್‌ಜಾರ್ಜ್ ಎಂಬುವವನ ಕಾಲದಲ್ಲಿ ಪೀಟರು ಎಂಬುವವನು ಪ್ರಪಂಚವು ಕೆಲವು ದಿನಗಳಲ್ಲಿ ಕೊನೆಗಾಣುವುದೆಂದು ಜನರಲ್ಲಿ ಭೀತಿಹುಟ್ಟಿಸಿದನು. ದೊರೆಯು ಈತನನ್ನು ಕಾರಾಗೃಹದಲ್ಲಿಡಿಸಿ, ಆತನು ಹೇಳಿದ್ದ ಪ್ರಳಯಕಾಲವು ಕ್ಷೇಮವಾಗಿ ಕಳೆದಮೇಲೆ ಆತನನ್ನು ಹೊರಗೆ ಕರೆಸಿ, ಕುದುರೆಯಕಾಲಿಗೆ ಕಟ್ಟಿಸಿ ಬೀದಿಗಳಲ್ಲಿ ಎಳೆಸಿ ಅನಂತರ ಊರು ಹೊರಗೆ ಗಲ್ಲಿಗೆಹಾಕಿಸಿದನಂತೆ!

ಸಿನೀಮಾ ಎಂಬ ಚಲನಚಿತ್ರಗಳಲ್ಲಿ ಕಳ್ಳತನ, ಖೂನಿ, ಕುಡಿತ, ದರೋಡೆ, ಜೂಜು, ಶಸ್ತ್ರಚಿಕಿತ್ಸೆ, ರೈಲ್ವೇ ಅನಾಹುತ ಮೊದಲಾದ ಭಯಾನಕರಸದಿಂದ ಕೂಡಿದ ನೋಟಗಳನ್ನೇ ಹೆಚ್ಚಾಗಿ ಉಪಯೋಗಿಸುವುದರಿಂದ, ಅವುಗಳನ್ನು ನೋಡುವ ಮಕ್ಕಳಲ್ಲಿ ಬಹುಮಟ್ಟಿಗೆ ಬುದ್ಧಿ ಬದಲಾವಣೆಯಾಗುವುದೆಂದೂ, ಮುಂದಿನ ಜನಾಂಗದವರಾಗಿ ಬೆಳೆಯುತ್ತಿರುವ ಮಕ್ಕಳ ಭಾವೋದ್ರೇಕಗಳಿಗೆ ಈ ಸಿನೀಮಾಗಳೇ ಮುಖ್ಯಕಾರಣಗಳೆಂತಲೂ ಇಂಥಾ ಆಕ್ಷೇಪಣೆಕರವಾದ ಚಿತ್ರಗಳನ್ನು ತೋರಿಸದಂತೆ ವಿಧಾಯಕವಾಗಬೇಕೆಂತಲೂ ಇಂಗ್ಲೆಂಡಿನಲ್ಲಿ ನಡೆದ ಒಂದು ಉಪಾಧ್ಯಾಯಿನಿಯರ ಸಮ್ಮೇಳನದಲ್ಲಿ ತೀರ್ಮಾನವಾಗಿರುತ್ತದೆ. ಕಳ್ಳತನ ಮೋಸ ಮುಂತಾದ ದುಷ್ಕೃತ್ಯಗಳು ಸಿನೀಮಾಗಳು ಪ್ರಾರಂಭವಾದಂದೀಚೆಗೆ ಬಹಳವಾಗಿ ಹೆಚ್ಚಿರುತ್ತವೆಂಬುದು ಹಲವರ ಅಭಿಪ್ರಾಯವಾಗಿದೆ.

ಗ್ರೇಟ್ ಬ್ರಿಟನ್ನಿನ ಯುವಸಾರ್ವಭೌಮ (ಪ್ರಿನ್ಸ್‌ಆಫ್ ವೇಲ್ಸ್) ರವರು ಕಳೆದ ತಾ|| 28 ರಲ್ಲಿ ಬೇಟೆನಾಯಿಗಳು ಮೊದಲಾಗಿ ಪರಿವಾರದೊಡನೆ ಲಿಟ್ಲ್‌ಪೆಲ್ಟನ್. ಎಂಬಲ್ಲಿ ಮೃಗಯಾವಿಹಾರಕ್ಕೆ ಹೋಗಿರುವಾಗ್ಗೆ ಅವರು ಕುಳಿತಿದ್ದ ಕುದುರೆಯು ಹಳ್ಳವನ್ನು ಹಾರುವಲ್ಲಿ ಆಯತಪ್ಪಿ ಕೆಳಗೆಬಿದ್ದು ಮೃತಪಟ್ಟಿತು. ಯುವರಾಜರು ಕೆಳಗೆಬಿದ್ದುದರಿಂದ ಅವರ ಎಡಭುಜದ ಚರ್ಮವು ಉಜ್ಜಿಹೋಗಿ ಮೂಳೆಗೆ ಕೊಂಚ ಪೆಟ್ಟುಬಿದ್ದಿತು. ಕೂಡಲೆ ಪರಿವಾರದವರು ಒಂದು ಯುವರಾಜರನ್ನು ಮೋಟಾರಿನಲ್ಲಿ ಕುಳ್ಳಿರಿಸಿ ಸಮೀಪದಲ್ಲಿದ್ದ ಊರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಉಪಚರಿಸಿದರು. ಯುವರಾಜರು ತಮ್ಮನ್ನು ನೋಡಲು ಬಂದಿದ್ದ ಜನರಿಗೆ ತಮಗೇನೂ ವಿಶೇಷಬಾಧೆಯಾಗಿಲ್ಲವೆಂದು ಹೇಳಿದರು. ಮತ್ತು ಲಂಡನ್ ನಗರಕ್ಕೆ ಅದೇರಾತ್ರಿ ಬಂದು ತಲುಪಿದರು. ಮಾರನೆಯದಿನ ಡಾಕ್ಟರುಗಳು ಎಕ್ಸ್‌ರೇ ಎಂಬ ಛಾಯಾಯಂತ್ರದಮೂಲಕ ಅವರ ಶರೀರವನ್ನು ಪರೀಕ್ಷಿಸಿ ಭುಜದ ಮೂಳೆಗೆ ಬಹುಸ್ವಲ್ಪಪೆಟ್ಟು ಬಿದ್ದಿರುತ್ತದೆಂದೂ, ಇನ್ನಾವ ಕೆಡಕುಗಳೂ ಇಲ್ಲವೆಂದೂ ಕೂಡಲೆ ನೆಟ್ಟಗಾಗುತ್ತದೆಂದೂ ನಿರ್ಧರಿಸಿದರು. ಈಗ ಯುವರಾಜರವರು ಸಂಪೂರ್ಣ ಗುಣವನ್ನು ಹೊಂದಿರುತ್ತಾರೆ.

ಹೆಡ್ಡಾಟ್ಯಾಕ್ಸಿಸ್ ಎಂಬ ಓರ್ವ ಪ್ರಖ್ಯಾತ ಸುಂದರಿಯು ವಿಯಾನಾಮಂತ್ರಿಯಾಗಿದ್ದ ಜೆಕೋಶೋವಾಕ್ ಎಂಬುವವನನ್ನು ವಿವಾಹಮಾಡಿಕೊಂಡಿದ್ದಳು. ಆ ಗಂಡನು ಯುದ್ಧ ಮುಗಿದ ತರುಣದಲ್ಲಿ ಮೃತನಾದನು. ಆ ಸುಂದರಿಯು ವೈಧವ್ಯಪ್ರಾಪ್ತವಾದ ಕೆಲತಿಂಗಳಮೇಲೆ ತನಗಿಂತಲೂ ವಯಸ್ಸಿನಲ್ಲಿ ೮ ವರ್ಷ ಚಿಕ್ಕವನಾದ ಬ್ಯಾರ್ಕ್‌ಟ್ಯಾಕ್ಸಿಸ್ ಎಂಬುವವನನ್ನು ಪುನರ್ವಿವಾಹಮಾಡಿಕೊಂಡಳು. ಆದರೆ ಕಳೆದ ವರ್ಷ ಉಭಯರೂ ಕಲಹಮಾಡಿಕೊಂಡು ಪರಸ್ಪರ ಅಗಲಿದ್ದರು. ಕಳೆದ ಕ್ರಿಸ್ತಮಸ್ಸಿನಲ್ಲಿ ಉಭಯರೂ ಅಕಸ್ಮಾತ್ತಾಗಿ ಒಂದು ಹೋಟಲಿನಲ್ಲಿ ಸಂಧಿಸಲು ಹೆಂಡಿತಿಯು ಗಂಡನನ್ನು ತನ್ನ ಕೂಡ ಬರುವಂತೆ ಒಡಂಬಡಿಸಿ ಹೆಲ್ರಾಫ್ ಎಂಬಲ್ಲಿಗೆ ಕರೆದುಕೊಂಡು ಹೋದಳು. ದಂಪತಿಗಳು ಒಂದುದಿವಸ ಉದ್ಯಾನದಲ್ಲಿ ಅಡ್ಡಾಡುತ್ತಿರುವಾಗ್ಗೆ ಹೆಂಡಿತಿಯ ಸಹೋದರನು ಬಂದು ತನ್ನನ್ನು ಬೈದು ತಲೆಯಮೇಲೆ ಚೆನ್ನಾಗಿಹೊಡೆದನೆಂದೂ, ಕೊಂಚಹೊತ್ತಿನಲ್ಲಿ ಹೆಂಡಿತಿಯ ತಂದೆತಾಯಿಗಳು 5 ಜನ ಸೇವಕರೊಡನೆ ಬಂದು ತನ್ನನ್ನು ಚೆನ್ನಾಗಿಪ್ರಹರಿಸಿದರೆಂದೂ, ಅವರ ಕೂಡ ಹೆಂಡಿತಿಯೂ ಸೇರಿಕೊಂಡಿದ್ದಳೆಂದೂ, ಪೆಟ್ಟಿನಿಂದುಂಟಾದ ನೋವಿನಿಂದ ನಡೆಯಲಾರದೆ ತೆವಳಿಕೊಂಡು ಸಮೀಪದಲ್ಲಿ ಸ್ಟೇಷನ್ ಮಾಸ್ಟರ ಮನೆಗೆ ಹೋಗಲು ಅವನ ಹೆಂಗುಸರೂ ಮಕ್ಕಳೂ ತನ್ನ ಗಾಯವನ್ನು ತೊಳೆದು ಅದಕ್ಕೆ ಒಟ್ಟಿಕಟ್ಟಿದರೆಂದೂ ಹೇಳಿ ಹೆಂಡಿತಿಯಮೇಲೂ ಅವಳ ಬಂಧುಗಳಮೇಲೂ ವಿವಾದವನ್ನು ಹೂಡಿರುತ್ತಾನೆ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಶ್ರೀ ಮಹದೇಶ್ವರಜಾತ್ರೆ.

ಹುಣಸೂರು ತಾ|| ಹಳೇಬೀಡು ಶ್ರೀ ಮಹದೇಶ್ವರಸ್ವಾಮಿಯ ಜಾತ್ರೆಯು ಇದೇ ಫೆಬ್ರವರಿ ತಾ|| 13 ರಿಂದ ತಾ|| 17 ರ ವರೆಗೆ 5 ದಿವಸ ನಡೆಯುವದಲ್ಲದೆ ಇದೇ ಸಮಯದಲ್ಲಿ ದನಗಳ ಪ್ರದರ್ಶನವೂ ನಡೆದು ಅವುಗಳಲ್ಲಿ ಉತ್ತಮವಾದವುಗಳಿಗೆ ಸರ್ಕಾರದವರಿಂದ ಬಹುಮಾನಗಳು ಕೊಡಲ್ಪಡುವವು. ದನಗಳ ಮೇವಿಗೂ ನೀರಿಗೂ ನೆರಳಿಗೂ ಅನುಕೂಲವಿದೆ. ರೋಗಬಾಧೆಯೇನೂ ಇಲ್ಲ. ತಾ|| 15-2-26 ನೇ ಸೋಮವಾರ ರಥೋತ್ಸವವು ನಡಿಯುವದು. ಈ ಉತ್ಸವಕ್ಕೆ ದೂರದೇಶಗಳಿಂದ ಸಾವಿರಾರು ಜನರೂ, ಎಲ್ಲಾವಿಧವಾದ ವ್ಯಾಪಾರಸ್ಥರೂ, ನಾಟಕದವರೂ ಬರುವವರಾಗಿರುತ್ತಾರಾದ್ದರಿಂದ ಯಾತ್ರಿಕರ ವ್ಯಾಪಾರಕ್ಕೂ ಆನಂದದಿಂದ ಕಾಲಕಳೆಯುವದಕ್ಕೂ ಅನುಕೂಲವಾಗಿರುತ್ತದೆ. ದೈವಭಕ್ತರು ದಯಿಮಾಡಿ ದೇವರ ದರ್ಶನಾನಂದದಿಂದ ಧನ್ಯರಾಗಬೇಕಾಗಿಯೂ, ದನಗಳನ್ನು ಸಾಕುವವರು ಮಾರಾಟಮಾಡಿ ಆದಾಯವನ್ನು ಪಡೆಯುವರಾಗಬೇಕಾಗಿಯೂ ಅಪೇಕ್ಷಿಸಲ್ಪಟ್ಟಿದೆ.

ಕಾರ್ಯದರ್ಶಿ,
ಅಪ್ಪಾಜಯ್ಯ, ಪಟೇಲ್, ತಾ|| ಬೋರ್ಡು ಮೆಂಬರು.

ದೇವೀಹಬ್ಬದಲ್ಲಿ ಪ್ರಾಣಬಲಿ ನಿಲ್ಲಿಸಲ್ಪಟ್ಟಿತು.

ಶಿವಮೊಗ್ಗ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲ್ಲೂಕು ದೊಡ್ಡೆತ್ತಿನಹಳ್ಳಿ ಗ್ರಾಮದ ಮಠಸ್ಥರು, ಶೆಟ್ಟರು, ಗೌಡರು, ಬುದ್ಧಿವಂತರು ಇನ್ನೂ ಮುಂತಾದ ಸರ್ವಮತಸ್ಥರೂ ಸವಿನಯಪೂರ್ವಕ ಅರಿಕೆಮಾಡಿಕೊಳ್ಳುವುದೇನೆಂದರೆ :—

ನಮ್ಮ ಗ್ರಾಮದಲ್ಲಿ ಎರಡುವರ್ಷಕ್ಕೊಂದಾವರ್ತಿ ದೇವೀಹಬ್ಬದಲ್ಲಿ ನಡೆಯತಕ್ಕ ಪಶುಗಳ ವಧೆಯನ್ನು ನಿಲ್ಲಿಸಬೇಕೆಂದು ಪ್ರಾಣಿದಯಾಜ್ಞಾನಪ್ರಸಾರಕಸಂಘ ದಾವಣಗೆರೆ, ಇವರ ಜಾಹೀರ್ ಪತ್ರಗಳಮುಖಾಂತರವೂ, ಶ್ರೀಮನ್ಮಹಾರಾಜನಿರಂಜನಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಾನದ ನಿರೂಪಪತ್ರಿಕೆಗಳ ಮುಖಾಂತರವೂ ತಿಳಿದು ನಮ್ಮೂರಲ್ಲಿ ಈ ವರ್ಷದ ಪುಷ್ಯಮಾಸದಲ್ಲಿ ನಡೆದ ದೇವೀಹಬ್ಬದಲ್ಲಿ ಸರ್ವರೂ ಸೇರಿ ಪ್ರಾಣಿಗಳ ವಧೆಯನ್ನು ನಿಲ್ಲಿಸಿ ಸೌಮ್ಯಪೂಜೆಯನ್ನು ನಡೆಸಬೇಕೆಂದು ಸರ್ವಾನುಮತದಿಂದ ನಿಶ್ಚೈಸಿ ಆ ಮೇರೆಗೆ ಸೌಮ್ಯಪೂಜೆ, ಪಂಚಾಮೃತಾಭಿಷೇಕ, ಶಿವಭಜನೆಗಳಿಂದ ನೆರವೇರಿಸಿರುವುದಲ್ಲದೆ ಇತಃಪರ ದನಗಳನ್ನು ಕಟುಕರಿಗೆ ಯಾರೂ ಮಾರದಂತೆ ಸಹ ಕಟ್ಟುಮಾಡಿಕೊಂಡಿರುತ್ತೇವೆ. ಬಲಿಗಾಗಿ ಬಿಡಲ್ಪಟ್ಟಿದ್ದ ಕೋಣಗಳು ವಿಕ್ರಯಿಸಲ್ಪಟ್ಟು ಆ ಮೊಬಲಗು ಪೂಜೆಗಾಗಿ ವಿನಿಯೋಗಿಸಲ್ಪಟ್ಟಿತು. ಇದರಂತೆ ನಮ್ಮ ನೆರೆ ಗ್ರಾಮವಾದ ಕಂಚನಹಳ್ಳಿ ಗ್ರಾಮದ ಮಹನೀಯರು ಸಹ ದೇವೀಹಬ್ಬವನ್ನು ಸೌಮ್ಯಪೂಜೆಯಿಂದ ನೆರವೇರಿಸಿರುತ್ತಾರೆ. ಇದರಂತಯೇ ಸರ್ವಗ್ರಾಮದವರೂ ನೆರವೇರಿಸಿ ಪುಣ್ಯಭಾಗಿಗಳಾಗಬೇಕಾಗಿ ಸವಿನಯಪ್ರಾರ್ಥನೆಗಳು.

ಶಿವಾಲಯಜೀರ್ಣೋದ್ಧಾರ.

ನಿಜಾಂ ಇಲಾಖಾ ಗುಲ್ಬರ್ಗಾ ಜಿಲ್ಲಾಕ್ಕೆ ಸೇರಿದ ಗುರುಮಠಕಲವೆಂಬ ಗ್ರಾಮಮಧ್ಯಬಾಜಾರದಲ್ಲಿರುವ ಶಿವಾಲಯವು ಜೀರ್ಣವಾಗಿರುವುದನ್ನು ಕಂಡು ಈ ಗ್ರಾಮದ ಮಾತುಬಾರಿ ವ್ಯಾಪಾರಸ್ಥರಾದ ವೈಶ್ಯರ ಆದಿನಾರಾಯಣಪ್ಪನೆಂಬ ದೈವಭಕ್ತರು ಈ ದೇವಸ್ಥಾನದ ಜೀರ್ಣೋದ್ಧಾರದಿಂದ ಅದರ ಅರ್ಚಕರಿಗೂ ಭಕ್ತಜನರಿಗೂ ಅನುಕೂಲವಾಗುತ್ತದೆಂಬುದರಮೇಲೆ ಕಾರ್ಯಕ್ಕುಪಕ್ರಮಿಸಿ ಅರ್ಧ ಮಟ್ಟಿಗೆ ಮುಗಿಸಿರುವರು. ಈ ಮಹನೀಯರ ಮೇಲುಪಂಗ್ತಿಯನ್ನು ಅನುಸರಿಸಿ ಇತರ ಮಾತುಬಾರಿ ವ್ಯಾಪಾರಸ್ಥರಾದ ಸಾಹುಕಾರ ವೀರಬಸವಯ್ಯ ಗುಮುಡಾಲ ಇವರು ಹಾಗೂ ಪಂಚಾಲವಂಶೀಕರಾದ ಬಡಿಗೆರ ಮೋನಪ್ಪ, ಉಪ್ಪಿನ ಮಲ್ಲಪ್ಪ, ವಾರ್ಧ ಬಸಪ್ಪ, ಗದ್ವಾಲ ಗಂಗಯ್ಯ, ಚತ್ರಸಿಂಗ, ರಾಮಚಂದ್ರಪಾಂಡುರಂಗ ಬಗಾಡೆ ಮೊದಲಾದ ಸದ್ಗೃಹಸ್ಥ ವರ್ತಕರುಗಳು ಈ ದೇವಾಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ಮನಸ್ಸಿಟ್ಟು ಯಥಾಶಕ್ತಿ ಸಹಾಯಮಾಡುತ್ತಿರುವದರಿಂದ ಈ ಕಾರ್ಯವು ಸ್ವಲ್ಪದಿನಗಳಲ್ಲೇ ಪೂರೈಸಬಹುದೆಂದು ತೋರುತ್ತದೆ. ಈ ಶಿವಾಲಯದ ಜೀರ್ಣೋದ್ಧಾರಮಾಡಲು ಪ್ರಥಮತಃ ಮನಸ್ಸುಮಾಡಿ ಸಹಾಯಮಾಡಿದ ವೈಶ್ಯರ ನಾರಾಯಣಪ್ಪನವರಿಗೂ, ಗುಮುಡಾಲ ವೀರಬಸವಯ್ಯನವರಿಗೂ, ಇವರ ಧರ್ಮವನ್ನು ಹಿಂಬಾಲಿಸಿದ ಇತರ ದೊಡ್ಡ ಮನುಷ್ಯರಿಗೂ ಪರಮೇಶ್ವರನು ಆಯುರಾರೋಗ್ಯ ಸಂಪತ್ತನ್ನೂ, ಇದರಂತೆಯೇ ಜೀರ್ಣವಾಗಿರುವ ರಾಮತೀರ್ಥಶಿವಾಲಯದ ದುರಸ್ತು ಮಾಡುವ ಸದ್ಬುದ್ಧಿಯನ್ನೂ ಕೊಡಲೆಂದು ಪ್ರಾರ್ಥಿಸುವ, ಓರ್ವ ದೈವಭಕ್ತ.

ಸೊಣವಿನಕೆರೆ ಶ್ರೀಮಹದೇಶ್ವರಸ್ವಾಮಿಯುತ್ಸವ.

ಈ ಸೊಣವಿನಕೆರೆಪೇಟೆಯಲ್ಲಿ ಆದಿಯಿಂದಲೂ ನಡೆಯುತಿಕೊಂಡು ಬರುತ್ತಿದ್ದ ಶ್ರೀಮಹದೇಶ್ವರಸ್ವಾಮಿಯವರ ಕಾರ್ಯವು ಈಗ್ಗೆ 7-8 ವರ್ಷಗಳಿಂದಲೂ ನಿಂತುಹೋಗಿತ್ತು. ಆದರೆ ಈ ಮಹಾಕಾರ್ಯವನ್ನು ನಿಲ್ಲಿಸಕೂಡದಲ್ಲವೆಂದು ಈ ಪೇಟೆವೀರಶೈವಸಮಾಜದವರು ಏರ್ಪಾಡುಮಾಡಿ ಅದರ ಖರ್ಚಿಗಾಗಿ ತಕ್ಕ ದ್ರವ್ಯವನ್ನು ಶೇಖರಿಸಿ ಕಳೆದ ಮಾಘ ಶುದ್ಧ ೧೩ ಸೋಮವಾರದಿಂದ

ಪೌರ್ಣಮಿವರೆಗೂ, ಅಷ್ಟೋತ್ತರನಾಮಾವಳಿಯಿಂದ ಪ್ರತಿದಿನ ಅರ್ಚನೆಯನ್ನೂ, ಭಕ್ತಮಾಹೇಶ್ವರರ ಸಂತರ್ಪಣೆಯನ್ನೂ, ೧೪ ಬುಧವಾರ ನಂದೀಧ್ವಜಮೇಳ ಉತ್ಸವವನ್ನೂ ಬಹಳ ವಿಜೃಂಭಣೆಯಿಂದ ನಡೆಯಿಸಿ ಮಧ್ಯಾಹ್ನ 12 ಗಂಟೆಗೆ ಶ್ರೀಕಾಡಸಿದ್ಧೇಶ್ವರಮಠದ ಸ್ವಾಮಿಗಳವರ ಮಹಾಪಾದಪೂಜೆಯನ್ನೂ ಸಾವಿರಾರು ಭಕ್ತಮಾಹೇಶ್ವರರ ಸಂತರ್ಪಣೆಯನ್ನೂ ನಡೆಸಿದರು. ಶಿಥಿಲವಾಗಿದ್ದ ಶ್ರೀಮಹದೇಶ್ವರಸ್ವಾಮಿಯವರ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಬೇಕೆಂಬದಾಗಿ ಶ್ರೀಸೋಮೇಕಟ್ಟೆಮಠದ ಚರವರ ಕರಿವೃಷಭದೇಶಿಕೇಂದ್ರ ಮಹಾಸ್ವಾಮಿಗಳು ಅಪ್ಪಣೆಕೊಡಿಸಿದಮೇರೆಗೆ ಅಲ್ಲಿ ನೆರೆದಿದ್ದ ವೀರಶೈವ ಭಕ್ತಮಾಹೇಶ್ವರರು 300 ರೂಪಾಯಿಗಳವರವಿಗೂ ವಾಗ್ದಾನಮಾಡಿ ಆ ದಿವಸವೇ ಕಂಟ್ರಾಕ್ಟ್ ಸಹ ಕೊಟ್ಟುಬಿಟ್ಟರು. ಶ್ರೀಸನ್ನಿಧಿಯ ಫೋಟೋ ಭಕ್ತರ ಅಪೇಕ್ಷೆಯಪ್ರಕಾರ ತೆಗೆಯಲ್ಪಟ್ಟಿತು. ಈ ಮಹಾಕಾರ್ಯವನ್ನು ಸಾಂಗವಾಗಿ ನೆರವೇರಿಸಿ ಗುರುವಿನ ಆಶೀರ್ವಾದಕ್ಕೂ ಸಮಾಜದವರ ಪ್ರೀತಿಗೂ ಪಾತ್ರರಾದ ಈ ಪೇಟೆ ಯಜಮಾನ್ ಸಿ. ಹುಚ್ಚಪ್ಪಶೆಟ್ಟರವರಿಗೂ ಇತರರಿಗೂ ಶ್ರೀಮಹದೇವನು ಆಯುರಾರೋಗ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ, ಓರ್ವ ಸಮಾಜಸೇವಕ.

ಮೃತ್ಯುಕಾಲದಲ್ಲಿಯೂ ಗೋರಕ್ಷಣಾಭಿಮಾನ!

ಅರಸೀಕೆರೆ ತಾಲೂಕು ಗಂಡಸಿಗ್ರಾಮದ ಮ|| ಉರುವಾಡಿ ರಂಗೇಗೌಡರು ಮೊನ್ನೆ ದೈವಾಧೀನರಾದರು. ಇವರು ಗೋರಕ್ಷಣೆಯ ವಿಷಯವಾಗಿ ಹೆಚ್ಚು ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ತಮ್ಮ ಗ್ರಾಮದಿಂದ ಕೊಲ್ಲುವುದಕ್ಕಾಗಿ ಬೆಂಗಳೂರಿಗೆ ಅನೇಕವಾಗಿ ಕಳುಹಿಸಲ್ಪಡುತ್ತಿದ್ದ ಗೋವುಗಳನ್ನು ಮಾರದಂತೆ ಪ್ರಯತ್ನಿಸುತ್ತಿದ್ದರು. ಇವರು ತಾವು ದೈವಾಧೀನರಾಗುವ ಕಾಲದಲ್ಲಿಯು ಸಹ ಗೋರಕ್ಷಣೆಯ ವಿಷಯವಾಗಿರುವ ತಮ್ಮ ಹೃದ್ಗತವನ್ನು ಕೆಳಗೆ ಹೇಳಿರುವಂತೆ ತೋರಿಸಿರುವರು.

"ಮಕ್ಕಳಿರಾ, ನಾನು ಗೋರಕ್ಷಣೆಯಲ್ಲಿ ಸದಾನಿರತನಾಗಿರುತ್ತೇನೆಂದು ದಾವಣಗೆರೆ ಪ್ರಾಣಿದಯಾಪ್ರಸಾರಕಸಂಘದವರಿಗೆ ಅಭಿವಚನವನ್ನಿತ್ತು ಅದರಂತೆ ಇದುವರೆವಿಗೂ ಆಚರಿಸಿದೆನು. ಈಗ ನನಗೆ ಮೃತ್ಯುಕಾಲವು ಸಮೀಪಿಸಿದೆ. ನನ್ನ ಮಕ್ಕಳಾದ ನೀವು ಸಹ ನನ್ನಹಾಗೆ ಗೋರಕ್ಷಣೆಯಲ್ಲಿ ಸದಾನಿರತರಾಗಿದ್ದು ಪ್ರಾಣಿದಯಾಜ್ಞಾನಪ್ರಸಾರಕಸಂಘದವರಿಗೆ ನಾನು ಕೊಟ್ಟಿರುವ ವಚನವನ್ನು ನೀವು ಪಾಲಿಸುವುದಾಗಿ ವಾಗ್ದಾನಮಾಡಿದರೆ ನಾನು ಸಂತೋಷದಿಂದ ಪ್ರಾಣವನ್ನು ಬಿಡುವೆನು." ಹೀಗೆಂಬದಾಗಿ ಹೇಳಿ ಮಕ್ಕಳಿಂದ ಮೇಲ್ಕಂಡ ವಿಷಯವಾಗಿ ವಾಗ್ದಾನವನ್ನು ತೆಗೆದುಕೊಂಡು ಪ್ರಾಣವನ್ನು ಬಿಟ್ಟಿರುವುದಾಗಿ ನಮಗೆ ತಿಳಿಯಬಂದಿರುತ್ತೆ. ಇದಲ್ಲವೆ ನಿಜವಾದ ಗೋರಕ್ಷಣಾಭಿಮಾನ! ಈ ಮಹನೀಯರ ಆತ್ಮಕ್ಕೆ ಶಾಂತಿಯನ್ನೀಯಲೆಂದು ದಯಾಮಯನಾದ ಭಗವಂತನಲ್ಲಿ ಪ್ರಾರ್ಥನೆ. ಮೇಲ್ಕಂಡ ಮಹಾಶಯರ ಗೋರಕ್ಷಣಾಭಿಮಾನವನ್ನು ಸರ್ವರೂ ನೋಡಿ ಅದರಂತೆ ತಾವಾದರೂ ಗೋರಕ್ಷಣೆಯ ವಿಷಯವಾಗಿ ಹೆಚ್ಚು ಲಕ್ಷ್ಯಕೊಟ್ಟು ಗೋವುಗಳನ್ನು ಕಾಪಾಡಿ ದೇಶಕ್ಕೆ ಶೋಭೆಯನ್ನೀಗಿಸಿ ಉತ್ತರೋತ್ತರ ಸುಖಪರಂಪರೆಗಳನ್ನು ಪಡೆಯುವುದು ಮೇಲಲ್ಲವೆ?

ಕಾರ್ಯದರ್ಶಿ,
ಪ್ರಾಣಿದಯಾಜ್ಞಾನಪ್ರಸಾರಕಸಂಘ.

ಯಾದಗಿರಿಯಲ್ಲಿ ಶೋಚನೀಯವಾದ ಮೃತ್ಯು.

ಕಳೆದ ತಿಂಗಳು ತಾ|| 7 ರ ದಿನ ಪ್ರಸಿದ್ಧ ವೀರಶೈವಕುಟುಂಬದಲ್ಲಿ ಜನಿಸಿದವರೂ ಆಗರ್ಭಶ್ರೀಮಂತರೂ, ವ್ಯಾಪಾರದಲ್ಲಿ ಅಗ್ರೇಸರತ್ವವನ್ನು ಹೊಂದಿದವರೂ, ದೈವಭಕ್ತಿತತ್ಪರರೂ ಆದ ಲಿಂಗೇರಿ ಕೋನಪ್ಪನವರು ಶಿವಾಧೀನರಾದರೆಂಬುವದನ್ನು ತಿಳಿಸಲಿಕ್ಕೆ ಬಹುವಿಷಾದವಾಗುತ್ತದೆ. ಮರಣಸಮಯದಲ್ಲಿ ಇವರ ವಯಸ್ಸು 58 ಇತ್ತು. ಇವರು ಯಾವಾಗಲೂ ವೀರಶೈವಮತಧರ್ಮದ ಅನೇಕ ಕಾರ್ಯಗಳನ್ನು ಬಹುಭಕ್ತಿಯಿಂದ ಸಾವಿರಾರುರೂಪಾಯಿಗಳನ್ನು ಖರ್ಚುಮಾಡಿ ಮಾಡುತ್ತಿದ್ದರು. ಪ್ರತಿವರ್ಷ ಶ್ರಾವಣಮಾಸದಲ್ಲಿ ಪ್ರತಿನಿತ್ಯದಲ್ಲಿಯೂ 200 ಜನರಿಗೆ ಸಂಪೂರ್ಣ ಒಂದು ತಿಂಗಳವರೆಗೆ ಅನ್ನಸಂತರ್ಪಣೆಯನ್ನು 30-40 ವರ್ಷಗಳಿಂದ ಮಾಡುತ್ತ ಬಂದಿದ್ದರಲ್ಲದೆ, ಎಷ್ಟೋ ಪುರಾಣ ಪುಣ್ಯಕಥೆಗಳನ್ನು ಸ್ವಂತ ವೆಚ್ಚದಿಂದ ಮಾಡಿಸಿದ್ದರು. ಇಂಥವರ ವಿಯೋಗದಿಂದ ಇಲ್ಲಿಯ ವೀರಶೈವರಿಗೆ ಬಹಳ ಹಾನಿಯಾಯಿತು. ಇವರಿಗೆ ಪುತ್ರಸಂತಾನವಿರುವದಿಲ್ಲ. ಆದ್ದರಿಂದ ತಮ್ಮ 3-4 ಲಕ್ಷರೂಪಾಯಿಗಳ ಆಸ್ತಿಯನ್ನು ತಮ್ಮ ಏಕಪುತ್ರಿಯವರೂ, ಇಲ್ಲಿಯ ಪ್ರಸಿದ್ಧ ಹೈಕೋರ್ಟುವಕೀಲರು ಮತ್ತು ಸಮಾಜಸೇವೆಯಲ್ಲಿ ಆಳಕಳಿಯುಳ್ಳವರು ಆದ ಎನ್. ರುದ್ರಪ್ಪನವರ ಪತ್ನಿಯವರೂ ಆದ ನೀಲಮ್ಮನವರ ಹೆಸರಿಗೆ ಮೃತ್ಯುಪತ್ರವನ್ನು ಬರೆದಿರುತ್ತಾರೆ. ಅದರ ಸಾರಾಂಶವೇನೆಂದರೆ.. ನಿಜಾಂ ಇಲಾಖೆಯ ವೀರಶೈವಬಡವಿದ್ಯಾರ್ಥಿಗಳಫಂಡಿಗೆ 5,000 ರೂಪಾಯಿಗಳನ್ನೂ ತಮ್ಮ ಅಣ್ಣಂದಿರಾದ ಶ್ರೀಯುತ ಸಿದ್ಧಪ್ಪನವರಿಗೆ 25,000 ರೂಪಾಯಿಗಳನ್ನೂ ಕೊಡಬೇಕೆಂತಲೂ, 8-10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಧರ್ಮಾರ್ಥಕ್ಕಾಗಿ ಕಟ್ಟಿಸುತ್ತಿರುವ ಬಿಲ್ಡಿಂಗನ್ನು ಪೂರೈಸಿ ಅದರಲ್ಲಿ ಧಾರ್ಮಿಕಕಾರ್ಯವು ನಿರಂತರವಾಗಿ ನಡೆಯಬೇಕೆಂತಲೂ, ಇದಕ್ಕೆಲ್ಲ ವ್ಯವಸ್ಥಾಪಕರು ತಮ್ಮ ಅಳಿಯಂದಿರಾದ ಎನ್. ರುದ್ರಪ್ಪ ಹೈಕೋರ್ಟ್ ವಕೀಲ ಇವರು ಇರಬೇಕೆಂತಲೂ, ರಿಜಿಷ್ಟರ್ ಮಾಡಿಸಿರುತ್ತಾರೆ. ಇವರ ಮನಸ್ಸಿನಲ್ಲಿ ಸ್ಥಿರವಾದ ಒಂದು ದೊಡ್ಡಧಾರ್ಮಿಕಕಾರ್ಯವನ್ನು ಮಾಡಬೇಕೆಂಬ ಅಪೇಕ್ಷೆಯು ಅಧಿಕವಾಗಿತ್ತು. ಆದರೆ ಇವರ ಆಕಸ್ಮಿಕಮೃತ್ಯುವಿಂದ ಅದು ಹಾಗೆಯೇ ಉಳಿಯಿತು. ಮುಂದಾದರೂ ಇವರ ಸಂಕಲ್ಪವನ್ನು ಪೂರೈಸುವದು ಇವರ ಧರ್ಮಕಾರ್ಯವ್ಯವಸ್ಥಾಪಕರ ಕಡೆಗೆ ಇರುತ್ತದೆ. ದೇವರು ಎಲ್ಲ ವಿಘ್ನಗಳನ್ನೂ ನಾಶಮಾಡಿ ಇವರಿಗೆ ಅಂಥ ಸದ್ಬುದ್ಧಿಯನ್ನು ಕೊಡಲೆಂದು ಹಾರೈಸುವ, ಓರ್ವ ನಾಗರಿಕ.

ಆಸ್ತಿಕಮಹನೀಯರಲ್ಲಿ ಒಂದು ವಿಜ್ಞಾಪನೆ.

ವೇದವು ಅನಾದಿಯಾದುದು. ಈ ವೇದವು ಗೀರ್ವಾಣಭಾಷೆಯಲ್ಲಿದೆ. ಈ ವೇದವೇ ಬ್ರಹ್ಮ ಕ್ಷತ್ರಿಯ ವೈಶ್ಯರೆಂಬ ದ್ವಿಜರ ಕರ್ಮಕ್ಕೆ ಮೂಲಾಧಾರವು. ಗರ್ಭಾದಾನಾದಿ ಷೋಡಶ ಕರ್ಮಗಳೂ, ಅವುಗಳನ್ನು ಮಾಡುವ ವಿಧಾನವೂ, ಅವಕ್ಕೆ ಸಂಬಂಧಪಟ್ಟ ಮಂತ್ರಗಳೂ ಸಂಸ್ಕೃತಭಾಷೆಯಲ್ಲಿಯೇ ಇರುವದರಿಂದ ಈ ಕರ್ಮಭೂಮಿಯಲ್ಲಿರುವ ಕರ್ಮಿಗಳಾದ ದ್ವಿಜರಿಗೆ ಸಂಸ್ಕೃತಭಾಷಾಜ್ಞಾನವು ಮುಖ್ಯ. ಸಂಸ್ಕೃತಭಾಷಾಜ್ಞಾನವಿಲ್ಲದೆ ಕರ್ಮಗಳಲ್ಲಿ ಶ್ರದ್ಧೆಯು ಕಡಮೆಯಾಗಬಹುದು. "ಕರ್ಮದಿಂದ ಜ್ಞಾನ, ಜ್ಞಾನದಿಂದ ಮೋಕ್ಷ" ಎಂಬುದು ಆದಿ ಶಂಕರಾಚಾರ್ಯರ ಮುಖ್ಯತತ್ವವಾಗಿದೆ. ಈ ವಿಷಯವನ್ನೆಲ್ಲಾ ಪರ್ಯಾಲೋಚಿಸಿ ಈಗ ವಿಜ್ಞಾಪಿಸಿಕೊಳ್ಳುವ ನಾನು ಶೃಂಗೇರಿ ಜಹಗೀರಿಯಲ್ಲಿ ಆರ್ಯವೈಶ್ಯಬಾಲಕರ ಅಭ್ಯುದಯಕ್ಕಾಗಿ ಒಂದು ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿರುತ್ತೇನೆ.

ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ |
ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಸ್ಸುಖಂ ||

ವಿದ್ಯವು ವಿನಯವನ್ನು ಕೊಡುತ್ತದೆ. ವಿನಯದಿಂದ ಯೋಗ್ಯನಾಗುತ್ತಾನೆ. ಯೋಗ್ಯತೆಯಿಂದ ದ್ರವ್ಯಸಂಪಾದಿಸುತ್ತಾನೆ. ಅಂಥ ಯೋಗ್ಯನಲ್ಲಿ ಸಿಕ್ಕಿದ ಧನವು ಸದ್ಧರ್ಮಮಾಡಲ್ಪಡುತ್ತದೆ. ಆ ಧರ್ಮದಿಂದ ಐಹಿಕಾಮುಷ್ಮಿಕ ಸುಖಗಳುಂಟಾಗುತ್ತವೆ. ಇವೆಲ್ಲಾ ನಮ್ಮ ಆರ್ಯರ ಮೂಲಭಾಷೆಯಾದ ಸಂಸ್ಕೃತಭಾಷಾಮಹಿಮೆಗಳು. ಈಗ ಸ್ಥಾಪಿಸಿರುವ ಶೃಂಗೇರಿ ಆರ್ಯವೈಶ್ಯಸಂಸ್ಕೃತಪಾಠಶಾಲೆಯಲ್ಲಿ ನಾಟಕಾಂತ ಸಾಹಿತ್ಯದವರಿವಿಗೂ ಪಾಠಹೇಳುವ ಏರ್ಪಾಡುಮಾಡಲ್ಪಟ್ಟಿದೆ. ಮುಂದೆ ತರ್ಕ, ವ್ಯಾಕರಣ, ಧರ್ಮಶಾಸ್ತ್ರೇತ್ಯಾದಿ ಶಾಸ್ತ್ರಪಾಠಕ್ಕೂ ಏರ್ಪಾಡುಮಾಡಲ್ಪಡುವುದು. ಸ್ಥಳೀಯ ಮತ್ತು ಪರಸ್ಥಳ ವೈಶ್ಯವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾಕಲಿಸಲ್ಪಡುವುದು. ಸೇರತಕ್ಕ ವಿದ್ಯಾರ್ಥಿಗಳು ಈ ಪಾಠಶಾಲಾ ವಿಳಾಸಕ್ಕೆ ವಿಜ್ಞಾಪಿಸಿಕೊಳ್ಳಬಹುದು. ಪಾಠಶಾಲಾಭಿವೃದ್ಧಿಗೆ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿರುವದು. ಈ ಪಾಠಶಾಲಾ ಸರ್ವಜವಾಬ್ದಾರಿಯು ಸ್ಥಾಪಕರಾದ ಬಿ. ಲಿಂಗಯ್ಯನವರದೇ ಆಗಿರುವದು. ಆಸ್ತಿಕರೆಲ್ಲರೂ ಈ ಪಾಠಶಾಲೆಗೆ ವಿದ್ಯಾದಾನಕ್ಕೆ ಸಹಾಯಮಾಡಿ ಬಾಲಕರನ್ನು ವಿದ್ಯಾವಂತರನ್ನಾಗಿಮಾಡಿ ಆ ಪುಣ್ಯಕ್ಕೆ ಭಾಗಿಗಳಾಗಬೇಕಾಗಿ ಸವಿನಯ ಪ್ರಾರ್ಥನೆಗಳು.

ಶೃಂಗೇರಿ ಬಗ್ಗ ಚಿಲಿಂಗಯ್ಯ.

ಕೈ|| ವಾ|| ದಮ್ಮೂರ ಮಹಂತಪ್ಪನವರು.

ಕೈ|| ವಾ|| ದಂ|| ಮಹಂತಪ್ಪನವರು ಮದ್ರಾಸಿನ ಶ್ರೀಮಂತ ಉಪ್ಪಿನ ರೇವಣಪ್ಪನವರ ಸೋದರಅಳಿಯಂದಿರು. ಇವರಿಗೆ ವಯಸ್ಸು ೩೬ ಆಗಿದ್ದಿತು. ಇವರು ತಮ್ಮ ಮಾವಂದಿರ ಗೃಹಕೃತ್ಯದ ವಿಚಾರಕರ್ತರಾಗಿದ್ದು ಪ್ರತಿಯೊಂದು ಕೆಲಸವನ್ನು ಸಮರ್ಪಕವಾಗಿ ಜರುಗಿಸುತ್ತಿದ್ದರು. ಆದರೆ ಶ್ರೀಪರಮಾತ್ಮನ ಲೀಲಾಮಯವಾದ ಈ ಪ್ರಪಂಚದಲ್ಲಿ ಮನುಷ್ಯನ ಜೀವಿತವು ಅಗೋಚರವಾದ ಸೂತ್ರಗಳಿಂದ ಆಡಿಸಲ್ಪಟ್ಟು ಒಂದಾನೊಂದು ಸಮಯದಲ್ಲಿ ಅದೃಶ್ಯವಾಗುವದು ಪ್ರತಿಯೊಬ್ಬನಿಗೂ ತಿಳಿದ ಅಂಶವಾಗಿರುತ್ತದೆ. ಈ ತಿಳುವಳಿಕೆಗೆ ಕೈ|| ವಾ|| ಮಹಂತಪ್ಪನವರ ಆಕಸ್ಮಾತ್ ಮರಣವು ಅಕ್ಷರಶಃ ದೃಷ್ಟಾಂತವಾಗಿರುತ್ತದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅದು ಹೇಗೆಂದರೆ, ಇವರಿಗೆ ಅದುವರೆಗೂ ಯಾವ ರೋಗವಾದರೂ ಅಥವಾ ಅದರ ಚಿಹ್ನವಾದರೂ ಇರಲಿಲ್ಲ. ಆದರೆ ಕಳೆದ ನವಂಬರ ತಾರೀಖು ೨೬ ಗುರುವಾರ ಪ್ರಾತಃಕಾಲ ಇವರು ಏಳುತ್ತಲೇ ತಮ್ಮ ಮನೆಯಲ್ಲಿದ್ದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಗಂಗಾವತಿಯ ಚೆನ್ನಬಸವಸ್ವಾಮಿಗಳಿಗೆ ನಮಸ್ಕಾರವಂಮಾಡಿ ಸ್ನಾನಶಿವಪೂಜಾದಿಗಳಂತೀರಿಸಿ ಫಲಹಾರವಂಗೈದು ಮಹಡಿಯಮೇಲೆ ತಮ್ಮ ಸ್ಥಾನದಲ್ಲಿ ಕುಳಿತು ವೇದಾಂತಗ್ರಂಥಗಳನ್ನು ಪರಿಶೀಲನೆಮಾಡುತ್ತಿದ್ದನಂತರ ಕೆಲವು ಮೀಮಾಂಸಶಾಸ್ತ್ರದ ಆಧ್ಯಾತ್ಮತತ್ತ್ವಗಳನ್ನು ಬರೆದರು. ಹೀಗೆ ೨ ಪುಟ ಬರೆಯುವಷ್ಟರಲ್ಲಿ ಪರಮಾತ್ಮನ ಅನುಜ್ಞೆಯಂಪಡೆದು ಬಂದಕಾಲನಪಾಶಕ್ಕೆ ಸಿಲುಕಿ ಆಕಸ್ಮಾತ್ ಕೆಲವು ಮರಣಸೂಚಕವಾದ ಅಂಗಚೇಷ್ಟೆಗಳಂ ಸೂಚಿಸಿ ತಕ್ಷಣವೇ ನೆಲಕ್ಕೆಬಿದ್ದು ಸುಮಾರು ೧೦ ಗಂಟೆಗೆ ಮರಣಹೊಂದಿದರು. ಪರಮಾತ್ಮನ ಆಜ್ಞೆಯು ಅನುಲ್ಲಂಘನೀಯವು; ಮಾನವೀಕೃತ ಚಿಕಿತ್ಸಾಪ್ರಯತ್ನಗಳು ನಿಷ್ಪ್ರಯೋಜನವಾದವು. ಕ್ಷಣಕಾಲದಲ್ಲೆ ತಮ್ಮ ಮೇಲ್ಕಂಡ ಪೂಜ್ಯಪಾದರ ಮುಖವನ್ನು ನೋಡುತ್ತಲೇ ತಮ್ಮ ಕಣ್ಣುಗಳನ್ನು ಮುಚ್ಚಿ ಗತಿಸಿಹೋದರು. ಮನುಷ್ಯರು ಸೂತ್ರದಬೊಂಬೆಗಳಂತಲೂ ಅವರ ಜೀವಿತದ ಪ್ರತಿಯೊಂದುಕಾರ್ಯವು ಪರಮಾತ್ಮನ ಇಚ್ಛೆಯಂತೆ ಜರುಗುತ್ತದೆಂದು ವಾಚಕರಮನಸ್ಸಿಗೆ ಇದರಿಂದ ಸ್ಪಷ್ಟವಾಗದಿರದು. ಅವರು ತಮ್ಮ ಕಟ್ಟಕಡೆಯ ಜ್ಞಾನಾವಸ್ಥೆಯಲ್ಲಿ ಬರೆದ ವೇದಾಂತವಿಷಯಗಳನ್ನು ನೋಡಿದರೆ ಅವರು ವೇದಾಂತತತ್ತ್ವವಿಷಯಗಳನ್ನೆಷ್ಟು ಮನವರಿಕೆಮಾಡಿಕೊಂಡಿದ್ದರೆಂದು ತಿಳಿಯುತ್ತದೆ.

ಇತಿ ಬುಧಜನವಿಧೇಯ, ಬೃಹಸ್ಪತಿ, ಬಿ.ಎ.

ಕಾನಕಾನಹಳ್ಳಿ ತಾಲ್ಲೂಕ್ ಹಾರೋಹಳ್ಳಿ.

ಈ ಊರಿನಲ್ಲಿ ರಾಮಣ್ಣನವರು ಕೋಟೆ ಶ್ರೀ ಕೃಷ್ಣಸ್ವಾಮಿ ದೇವಾಲಯದ ಹಳೇಕಟ್ಟಡವನ್ನು ತೆಗೆದುಹಾಕಿ ಹೊಸಕಟ್ಟಡಮಾಡಿಸಬೇಕೆಂದು ಉದ್ದೇಶಪಟ್ಟು ಮಹಾಜನಗಳಿಂದ ಸಹಾಯವು ಕಡಮೆಯಾದಾಗ್ಯೂ ತಾವು ಸುಮಾರು ನಾಲ್ಕುಸಾವಿರ ರೂಪಾಯಿಯನ್ನು ಖರ್ಚುಮಾಡಿ ಬಹಳ ಅಂದವಾಗಿ ದೇವಸ್ಥಾನವನ್ನು ಕಟ್ಟಿಸಿದನಂತರ ಮೂಲದೇವರುಗಳಲ್ಲದೆ ಇನ್ನೂ ಕೆಲವು ದೇವತಾವಿಗ್ರಹಗಳನ್ನು ತಯಾರ್ಮಾಡಿಸಿ ತರಿಸಿಟ್ಟುಕೊಂಡು ಪ್ರತಿಷ್ಠೆಮಾಡಿಸಿ ಆ ಸಂತೋಷವನ್ನು ನೋಡಬೇಕೆಂದು ಇರುವಷ್ಟರಲ್ಲಿಯೇ ಸ್ವರ್ಗಸ್ಥರಾದರು. ದೇವಾಲಯಕ್ಕೆ ಗಾರೆಕೆಲಸ ಮಾತ್ರ ಬಾಕಿ ಇತ್ತು. ತುಮಕೂರು ಶ್ರೀ ಸೀತಾಮನೋಹರನಾಟಕಕಂಪೆನಿಯು ಈ ಗ್ರಾಮಕ್ಕೆ ಹಿಂದೆ ಬಂದಿದ್ದಾಗ್ಗೆ ಮ್ಯಾನೇಜರ್ ಸೀತಾರಾಮಯ್ಯನವರು ದೇವರಸೇವೆಗೋಸ್ಕರ ಒಂದು ನಾಟಕವನ್ನು ಪ್ರದರ್ಶಿಸಿ ಉತ್ಪತ್ತಿಯಾದ ಮೊಬಲಗು ಸುಮಾರು ನಾಲ್ಕುನೂರು ರೂಪಾಯಿಗಳನ್ನು ಕೊಟ್ಟಿದ್ದರಿಂದ ಗಾರೆಕೆಲಸ ಸಹಾ ಪೂರೈಸಿತು. ಇನ್ನು ದೇವತಾಪ್ರತಿಷ್ಠೆಯಾಗತಕ್ಕದ್ದು ಮಾತ್ರ ಬಾಕಿ ನಿಂತಿದೆ. ಈ ಕಾರ್ಯಕ್ಕೆ ಕೋಟೆಯಲ್ಲಿರುವ ಶ್ರೀ|| ನರಸಪ್ಪನವರು ಮುಂದಾಳುಗಳಾಗಿ ನಿಂತುಕೊಂಡರೆ ನೆರವೇರುವದರಲ್ಲಿ ಯಾವ ಸಂಶಯವೂ ಇಲ್ಲ. ಈ ನರಸಪ್ಪನವರು ಕೋಟೆ ಶ್ರೀ ಆಂಜನೇಯಸ್ವಾಮಿದೇವಾಲಯದ ಹಿಂದೆ ಸುಮಾರು 500 ರೂಪಾಯಿ ಖರ್ಚುಮಾಡಿ ಒಂದು ಭಾವಿಯನ್ನು ತೆಗಿಸಿ ಕಲ್ಲುಕಟ್ಟಡ ಮಾಡಿಸಿರುತ್ತಾರೆ. ಈ ಭಾವಿಗೆ ರಾಟೆ ಹಾಕಿಸಿ ಸುತ್ತಲೂ ಇಟ್ಟಿಗೆ ಗೋಡೆ ಹಾಕಿಸಿದರೆ ಮಾಡಿದ ಕಾರ್ಯ ಸಾರ್ಥಕವಾಗುತ್ತದೆ. ಶ್ರೀ ಚಾಮುಂಡೇಶ್ವರೀದೇವರ ಜಾತ್ರೆಕಾಲದೊಳಗಾಗಿ ಈ ಕೆಲಸವು ಪೂರೈಸಬಹುದಾಗಿ ಕಾಣುತ್ತದೆ. ಸ್ಕೂಲ್‌ಮಾಸ್ಟರು ನಂಜುಂಡಯ್ಯನವರು ಮಿಡ್ಲ್‌ಸ್ಕೂಲ್ ಆವರಣದಲ್ಲಿ ಒಂದು ಭಾವಿಯನ್ನು ತೆಗಿಸಿ ಕಲ್ಲುಕಟ್ಟಡ ಮಾಡಿಸಿರುತ್ತಾರೆ. ಈ ಧರ್ಮದ ಭಾವಿಗಳಿಂದ ದೇವಸ್ಥಾನಗಳಿಗೂ ರಸ್ತೆ ಪ್ರಯಾಣಿಕರಿಗೂ ಪ್ರತಿವರ್ಷವೂ ಫಾಲ್ಗುಣ ಶುದ್ಧ ತ್ರಯೋದಶಿ ಲಾಗಾಯಿತು ಆರುದಿವಸ ನಡೆಯುವ ಶ್ರೀ ಚಾಮುಂಡೇಶ್ವರೀದೇವರ ದೊಡ್ಡ ಜಾತ್ರೆಗೆ ಬರುವ ಜನಗಳಿಗೂ, ದನಗಳಿಗೂ ಬಹಳ ಪ್ರಯೋಜನವಾಯಿತು. ಜಮೀನ್‌ದಾರ್ ಶ್ಯಾಮಣ್ಣನವರು ಪಾಠಶಾಲೆಗೋಸ್ಕರ ದಾನಮಾಡಿದ ಅರ್ಧಎಕರೆ ಜಮೀನಿನಲ್ಲಿ ಸರ್ಕಾರದವರು ಭಾರೀ ಕಟ್ಟಡವನ್ನು ಕಟ್ಟಿಸಿಕೊಟ್ಟು ಮಿಡಲ್‌ಸ್ಕೂಲ್ ಸಹಾ ದಯಪಾಲಿಸಿದರು. ಹಿಂದೆ ಸ್ಕೂಲ್‌ಡೇ ಮಹೋತ್ಸವವು ಸರ್ಕಲ್ ಇನ್ಸ್‌ಪೆಕ್ಟರ್ ಮ|| ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದಾಗ ಸದರಿ ಶ್ಯಾಮಣ್ಣನವರು ವಿದ್ಯಾರ್ಥಿಗಳ ವ್ಯಾಯಾಮಕ್ಕೋಸ್ಕರ ದಾನಮಾಡಿರುವ ಜಮೀನಿನ ಬಾಜು ಪೂರ್ವಭಾಗಕ್ಕೆ ಇನ್ನೂ ಅರ್ಧಎಕರೆ ಜಮೀನು ಕೊಡುತ್ತೇವೆಂತ ವಾಗ್ದಾನಮಾಡಿರುತ್ತಾರೆ. ಇವರು ಧರ್ಮಮಾಡಿದ ಭೂಮಿಯ ಮೇಲೆ ಗ್ರಾಮಕ್ಕೆ ಅಲಂಕಾರವಾದ ಕಟ್ಟಡವಾಗಿ ಮಿಡಲ್‌ಸ್ಕೂಲ್ ಸಹಾ ದೊರಕಿ ಈ ಸ್ಕೂಲಿನಲ್ಲಿ ವಿದ್ಯಾಭ್ಯಾಸಮಾಡಿದ ಯುವಕರು ವಿದ್ಯಾವಂತರಾಗಿ ಪರಸ್ಥಳಗಳಲ್ಲೂ ಗ್ರಾಮದಲ್ಲೂ ಸರ್ಕಾರದ ನೌಕರಿಗಳಿಗೆ ಸೇರಿ ಸುಖವಾಗಿರುತ್ತಾರೆ. ವಾಗ್ದಾನದಂತೆ ಮುಂದೆ ದಾನಮಾಡುವ ಜಮೀನಿನಲ್ಲಿ ವಿದ್ಯಾರ್ಥಿಗಳು ಆರೋಗ್ಯಭಾಗ್ಯವನ್ನು ಹೊಂದುವಂತಾಗುತ್ತದೆ. ದೇಹವೂ ಐಶ್ವರ್ಯವೂ ಶಾಶ್ವತವಲ್ಲದೆಹೋದರೂ ಧರ್ಮದ ಕೀರ್ತಿಯು ಮಾತ್ರ ಶಾಶ್ವತವಾಗಿರುತ್ತದೆ. ಗ್ರಾಮಾಭಿಮಾನಿಗಳಾಗಲಿ ವಿಲೇಜ್ ಪಂಚಾಯಿತಿಯವರಾಗಲಿ ಶ್ಯಾಮಣ್ಣನವರ ಶ್ರೇಷ್ಠವಾದ ಧರ್ಮವನ್ನು ಶಿಲೆಯಮೇಲೆ ಅಕ್ಷರಗಳಿಂದ ಕೆತ್ತಿಸಿ ಸ್ಕೂಲ್ ಆವರಣದಲ್ಲಿ ಸ್ಥಾಪಿಸುವವರಾಗಲೆಂದು ಈ ಗ್ರಾಮಸ್ಥರು ಕೋರುತ್ತಾರೆ.

ಸ್ಥಳಾಭಿಮಾನಿ.

ಶ್ರೀಜಗದ್ಗುರುಸಂಸ್ಥಾನ, ಶೃಂಗೇರಿ ಶ್ರೀಮಠ.

ನಂ. 1309.

ಶ್ರೀಮಠದ ಏಜಂಟರವರ ಆಫೀಸಿನಿಂದ—ಶೃಂಗೇರಿ ವೈಶ್ಯಮಂಡಲಿ ಕಾರ್ಯದರ್ಶಿಗಳಾದ ಮ|| ಭೂ. ಈಶ್ವರಶೆಟ್ಟರು, ಅಗರದಹಿರಿಯಣ್ಣಶೆಟ್ಟರು ಇವರುಗಳಿಗೆ.

ಉತ್ತರ

ನಿಮ್ಮಗಳ 26-10-25ನೇ ಬಿನ್ನಹಪತ್ರವಿಷಯದಲ್ಲಿ ತಣಿಖೆಯಿಂದ ಶ್ರೀ ಶ್ರೀಮಹಾಸ್ವಾಮಿಗಳವರು ದಯಪಾಲಿಸಿದ ಅಪ್ಪಣೆಯನ್ನು ಒಳಗೊಂಡು ಜಹಗಿರಿ ಡೆ|| ಅಮಲ್‌ದಾರರವರಿಗೆ ಜಾರಿಮಾಡಿಸಿರತಕ್ಕ 1308/31-12-25 ನೇ ನಂಬರ್ ಆರಡರನಕಲನ್ನು ನಿಮ್ಮ ತಿಳಿವಳಿಕೆಬಗ್ಗೆ ಇದರೊಂದಿಗೆ ರವಾನಿಸಿರುತ್ತೆ.

ಮೊಕ್ಕಾಂ,
ನಾಟ್ಟಿರೆಂಸಕೋಟೆ
31-12-25.

(Sd.) ಎಸ್. ಶ್ರೀಕಂಠಶಾಸ್ತ್ರೀ.
ಏಜೆಂಟ್.

ನಂ. 1038.

ಶ್ರೀಜಗದ್ಗುರುಸಂಸ್ಥಾನದ ಶೃಂಗೇರಿ ಶ್ರೀಮಠದ
ಏಜೆಂಟರವರ ಆ|| ನಿಂದ.

ಜಹಗೀರ್ ಮುಜಕ್ಕೂರು ಡೆ|| ಅಮಲ್‌ದಾರರವರಿಗೆ—ಶೃಂಗೇರಿ ವೈಶ್ಯಮಂಡಲಿಕಾರ್ಯದರ್ಶಿಗಳಾದ ಭೂ. ಈಶ್ವರಶೆಟ್ಟರು, ಅರಗದಹಿರಿಯಣ್ಣಶೆಟ್ಟರು 26-25 ತಾರೀಖಿನಲ್ಲಿ ನಮ್ಮಲ್ಲಿಗೆ ಬರದುಕೊಂಡಿರುವ ಮನವಿಯನ್ನು ಶ್ರೀ ಶ್ರೀಜಗದ್ಗುರುಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಶೃತಪಡಿಸಿ ಸದರಿ ಮನವಿಯಲ್ಲಿ ನಮೂದಾಗಿರುವ ಸಂಗತಿ ಹ್ಯಾಗೆ ನಡೆದಿರುವುದೆಂಬ ವಿಷಯಗಳಲ್ಲಿ ವಿವರವಾದ ನಿಮ್ಮ ವರದಿಯನ್ನು ಅಪೇಕ್ಷಿಸಿ ಇರುವಲ್ಲಿ ನಿಮ್ಮಿಂದ ಬರೆಯಲ್ಪಟ್ಟ 7-11-25—21-11-25 ನೇ ಮರ್ಕ್ಯಂ ಇಂಗ್ಲಿಷ್ ರಿಪೋರ್ಟುಗಳನ್ನು ಶ್ರೀ ಶ್ರೀಜಗದ್ಗುರುಮಹಾಸ್ವಾಮಿಗಳ ಸನ್ನಿಧಿಯಲ್ಲಿ ಶೃತಪಡಿಸಿದ್ದಾಯಿತು. ಶೃಂಗೇರಿ ಶ್ರೀವಿದ್ಯಾಶಂಕರಸ್ವಾಮಿಯವರ ರಥೋತ್ಸವ ಕಾಲದಲ್ಲಿ ಸದರೀ ರಥವನ್ನು ಲಾಗಾಯತಿನಿಂದಲೂ ಬ್ರಾಹ್ಮಣಮಂಡಲಿಯವರು ಮಾತ್ರವೇ ಎಳೆಯುವ ಸಾಂಪ್ರದಾಯವು ಏರ್ಪಟ್ಟುಬಂದು ಇದ್ದರೂ ಈಚೆಗೆ ಸುಮಾರು ೨೦ ವರ್ಷಗಳ ಹಿಂದೆ ಶೃಂಗೇರಿಯಲ್ಲಿ ಪ್ಲೇಗ್‌ವ್ಯಾಧಿಯು ಸಂಭವಿಸಿ ಶೃಂಗೇರಿ ನಗರನಿವಾಸಿಗಳೆಲ್ಲರೂ ಗ್ರಾಮವನ್ನುಬಿಟ್ಟು ಚದರಿಹೋಗಿ ಅತ್ಯಂತ ಖಿನ್ನಮನಸ್ಕರಾಗಿರಲು ಆ ಸಮಯದಲ್ಲಿ ಒದಗಿಬಂದ ಶ್ರೀವಿದ್ಯಾಶಂಕರಸ್ವಾಮಿಯವರ ರಥೋತ್ಸವಕಾಲದಲ್ಲಿ ಹಿಂದಿನ ಶ್ರೀ ಶ್ರೀಜಗದ್ಗುರುಮಹಾಸ್ವಾಮಿಗಳವರು ರೋಗಭೀತಿಯಿಂದ ಚಿಂತಾಕ್ರಾಂತರಾಗಿ ಇದ್ದ ಜನಗಳನ್ನು ಅನುಗ್ರಹಿಸಿ ಉತ್ಸವಕಾಲದಲ್ಲಿ ಬಂದು ಇದ್ದ ಬ್ರಾಹ್ಮಣಮಂಡಲಿಯವರೂ, ವೈಶ್ಯಮಂಡಲಿಯವರೂಕೂಡ ರಥವನ್ನು ಎಳೆಯುವುದರಮೂಲಕ ಭಗವತ್ಸೇವೆಯನ್ನುಮಾಡಲು ಅವಕಾಶಕೊಟ್ಟಂತೆಯೂ ಅದು ಮೊದಲು ಅದು ಆಚರಣೆಯಾಗಿ ಜಾರಿಯಲ್ಲಿ ಬಂದಿರುವಂತೆಯೂ ತಿಳಿದುಬರುವುದರಿಂದ ಇನ್ನುಮುಂದೆಯೂ ಎಲ್ಲಾ ರಥೋತ್ಸವಗಳಲ್ಲಿಯೂ ಒಂದುಭಾಗದಲ್ಲಿ ಬ್ರಾಹ್ಮಣಮಂಡಲಿಯವರೂ ಮತ್ತೊಂದುಭಾಗದಲ್ಲಿ ವೈಶ್ಯಮಂಡಲಿಯವರೂ ರಥದರಜ್ಜುವನ್ನು ಹಿಡಿದು ರಥವನ್ನು ಎಳೆಯುವುದರ ಮೂಲಕ ಭಗವಂತನ ಪ್ರಸಾದವನ್ನು ಸಂಪಾದಿಸಿಕೊಳ್ಳಲು ಅವಕಾಶವನ್ನು ಕೊಡತಕ್ಕದ್ದೆಂದು ಶ್ರೀ ಶ್ರೀಜಗದ್ಗುರುಮಹಾಸ್ವಾಮಿಗಳವರು ಅಪ್ಪಣೆಮಾಡಿ ಇರುತ್ತಾರಾಗಿ ಅದರಂತೆ ಜಾರಿಯಲ್ಲಿ ತರತಕ್ಕದ್ದು.

(Sd.) N. Sreekantasastry,
Agent Sringerimut.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಉಪೋದ್ಘಾತವು.

ಆಪ್ತಮಿತ್ರರ ಪ್ರೋತ್ಸಾಹದಿಂದ ಸ್ವಚರಿತ್ರೆಯನ್ನು ಬರೆಯಲು ನಾನು 4-5 ವರ್ಷಗಳಹಿಂದೆ ಸಮ್ಮತಿಸಿ ಗ್ರಂಥಾರಂಭಮಾಡಿದೆನು. ಒಂದು ಪುಟವನ್ನು ಬರೆಯುವುದರೊಳಗಾಗಿ ಬೊಂಬಾಯಿನಲ್ಲಿ ಅತ್ಯಾಚಾರನಡೆದಿತು. ಅದರಿಂದ ಆ ಬರವಣಿಗೆಯ ಕೆಲಸವಷ್ಟಕ್ಕೇ ನಿಂತಿತು. ಅನಂತರ ನನಗೆ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟು ನಾನು ಎರವಾಡಾ ಜೈಲಿಗೆ ಕಳುಹಲ್ಪಟ್ಟೆನು. ಅಲ್ಲಿ ಜಯರಾಮದಾಸರೂ ನನ್ನ ಜತೆಗೆ ಬಂದಿಯಾಗಿದ್ದರು. ಇತರ ಕೆಲಸಗಳನ್ನು ಬಿಟ್ಟು ಸ್ವಚರಿತ್ರೆಯನ್ನು ಬರೆದು ಮುಗಿಯಿಸಬೇಕೆಂದು ನನಗೆ ಅವರು ಕೂಡ ಹೇಳಿದರು. ನಾನು ಯಾವ ಕೆಲಸವನ್ನು ಮಾಡಬೇಕೆಂದು ಆಗಲೇ ನಿಶ್ಚಯಿಸಿರುತ್ತೇನೊ ಅದು ಮುಖ್ಯವಾಗಿರುವುದರಿಂದ ಅದನ್ನು ಬಿಟ್ಟು ಸ್ವಚರಿತ್ರೆಯನ್ನು ಬರೆಯಲಾರೆನೆಂದು ಅವರಿಗೆ ಹೇಳಿದೆನು. 6 ತಿಂಗಳು ಕಾರಾಗೃಹದಲ್ಲಿದ್ದುದರಲ್ಲಿ ಸ್ವಚರಿತ್ರೆಯನ್ನು ಕೂಡ ನಾನು ಅಲ್ಲಿ ಪೂರ್ತಿಗೊಳಿಸಬಹುದಾಗಿತ್ತು. ಹಾಗಾಗದಿದ್ದುದರಿಂದ ಅದು ಅಲ್ಲಿ ಮುಗಿಯಲಿಲ್ಲವು. ಇನ್ನೊಂದುವರ್ಷ ಇರುವುದರೊಳಗಾಗಿ ನಾನು ಅದನ್ನು ಮುಗಿಯಿಸಬೇಕೆಂದಿರುವಷ್ಟರಲ್ಲಿ ನನ್ನ ಬಿಡುಗಡೆಯಾಯಿತು. ಈಗ ಆನಂದಸ್ವಾಮಿಯವರು ನನ್ನನ್ನು ಪುನಃ ಪ್ರೋತ್ಸಾಹಿಸಿದರು. ದಕ್ಷಿಣಾಫ್ರಿಕೆಯ ಸತ್ಯಾಗ್ರಹಚರಿತ್ರೆ ಪೂರ್ತಿಯಾದುದರಿಂದ, ನವಜೀವನದಲ್ಲಿ ಸ್ವಚರಿತ್ರೆಯನ್ನು ಪ್ರಾರಂಭಿಸಬೇಕೆಂಬ ಆಸಕ್ತಿ ಹುಟ್ಟಿತು. ಅದನ್ನು ಪ್ರತ್ಯೇಕವಾಗಿ ಒಂದು ಗ್ರಂಥರೀತ್ಯಾಪ್ರಕಟಿಸಲು ಅನುಕೂಲಿಸುವಂತೆ ಬರೆಯಲು ಆನಂದಸ್ವಾಮಿಯವರು ನನ್ನನ್ನು ಕೋರಿದರು. ನನಗೆ ಅನುಕೂಲವಾಗದಿದ್ದುದರಿಂದ ವಾರಕ್ಕೊಂದುಪ್ರಕರಣವನ್ನು ಮಾತ್ರ ಬರೆಯಲಾಗುವುದು. ಅದನ್ನು ನವಜೀವನದಲ್ಲಿ ಪ್ರಕಟಿಸುತ್ತಿರಬಹುದು. ಎಂದು ನಾನು ಹೇಳಲು ಆನಂದಸ್ವಾಮಿಯವರು ಅದಕ್ಕೊಪ್ಪಿಕೊಂಡರು. ನಾನು ಅದನ್ನು ಬರೆಯಲು ಆರಂಭಿಸಿದೆನು. ದೈವಭೀತಿಯುತರಾದ ನನ್ನ ಮಿತ್ರರೊಬ್ಬರು ಮೌನವ್ರತದಿವಸ ಇದನ್ನು ಕುರಿತು ಹೀಗೆ ಪ್ರಶ್ನಿಸಿದರು.—"ಸ್ವಚರಿತ್ರೆಯನ್ನು ಬರೆಯುವ ಪದ್ಧತಿಯು ಪಾಶ್ಚಾತ್ಯದೇಶದಲ್ಲಲ್ಲದೆ ಭಾರತದೇಶದಲ್ಲಿ ಪ್ರಾಚೀನಕಾಲದಿಂದಲೂ ಇಲ್ಲ. ಈಗಲಾದರೂ ಪಾಶ್ಚಾತ್ಯವ್ಯಾಮೋಹಕ್ಕೊಳಗಾಗಲ್ಲದೆ ಭಾರತೀಯರಾರೂ ಸ್ವಚರಿತ್ರೆಯನ್ನು ಬರೆಯುವುದಿಲ್ಲವು. ಇಂತಹುದರಲ್ಲಿ ನೀವು ಬರೆಯಬೇಕಾದುದೇನು? ಈ ದಿವಸ ನೀವು ಅನುಮೋದಿಸಿದ ಸಿದ್ಧಾಂತವನ್ನೂ, ಅವಲಂಬಿಸಿದ ಪದ್ಧತಿಯನ್ನೂ ನಾಳೆದಿವಸ ನೀವೇ ತಿರಸ್ಕರಿಸಲಾಗುವುದಿಲ್ಲವೆ? ಹಾಗಾದಲ್ಲಿ ನಿಮ್ಮ ಮಾರ್ಗವನ್ನೂ ಮಾತನ್ನೂ ಪ್ರಮಾಣವಾಗಿಟ್ಟುಕೊಂಡು ಅರೀತಿಯಾಗಿ ಪ್ರವರ್ತಿಸಿದವರಿಗೆ ನೀವು ದುರ್ಭ್ರಮೆಯನ್ನು ಹುಟ್ಟಿಸಿದಂತಾಗುವುದಿಲ್ಲವೆ? ಅದುಕಾರಣ ನೀವು ಸ್ವಚರಿತ್ರೆಯನ್ನು ಬರೆಯಕೂಡದು. ಬರೆದರೂ ಇಷ್ಟು ಶೀಘ್ರವಾಗಿ ಬರೆಯಲಾಗದು." ಎಂದು ಆಮಿತ್ರರು ಹೇಳಿದರು. ಆ ಆಕ್ಷೇಪವು ಕೊಂಚಮಟ್ಟಿಗೆ ನನ್ನ ಮನಸ್ಸಿಗೆ ಹತ್ತಿತು. ನಾನು ಈಗ ಸಂಯಾದ ಸ್ವಚರಿತ್ರೆಯನ್ನು ಬರೆಯಲು ವ್ಯವಧಾನವಿಲ್ಲವು. ನನ್ನ ಜೀವಿತವೆಲ್ಲವೂ ಸತ್ಯಾನ್ವೇಷಣದಲ್ಲೇ ಇರುವುದರಿಂದ ಆ ವಿಷಯವನ್ನು ಮಾತ್ರ ವ್ಯಕ್ತಪಡಿಸಲಿಚ್ಛಿಸಿದೆನು. ಅದು ಸ್ವಚರಿತ್ರರೂಪದಲ್ಲೇ ಇರುವುದು. ಅದು ನನ್ನ ಅನುಭವಮಾತ್ರವೇ ಆಗಿರುವುದರಿಂದ ಅದರಿಂದ ಬಾಧಕವೇನೂ

ಇಲ್ಲವು. ಈ ಪ್ರಕಾರವಾಗಿ ನಾನು ಈ ಅನುಭವವನ್ನು ವರಸೆಯಾಗಿ ಪ್ರತ್ಯೇಕ ಸಂಬಂಧದಿಂದ ತಿಳಿಸುವುದರಿಂದ, ಓದುವವರಿಗೆ ಕೊಂಚ ಲಾಭವಾಗುತ್ತದೆಂದು ನಾನು ನಂಬುತ್ತೇನೆ. ರಾಜಕೀಯಸಂಬಂಧದಲ್ಲಿ ನನ್ನ ಪ್ರಯತ್ನವು ಈಗ ಭಾರತದೇಶವಾಸಿಗಳಿಗೆ ಮಾತ್ರವೇ ಅಲ್ಲದೆ ನಾಗರೀಕ ಪ್ರಪಂಚದಲ್ಲಿ ಸಕಲ ದೇಶದವರಿಗೆಲ್ಲ ಕೂಡ ತಿಳಿದೇ ಇದೆ. ಅದರಮೇಲೆ ನನಗೆ ಯಾವ ಗೌರವವೂ ಇಲ್ಲ. ಅದರಿಂದ ನನಗೆ ಲಭಿಸಿದ ಮಹಾತ್ಮ ಪ್ರಶಸ್ತಿಯಮೇಲೆ ನನಗೆ ಗೌರವವಿಲ್ಲವು. ಆ ಪ್ರಶಸ್ತಿಯು ಅನೇಕವೇಳೆ ಸಂತಾಪವನ್ನು ಸಹ ಉಂಟುಮಾಡಿದೆ. ಕೆಲವೇಳೆ ನನಗದು ದೊಡ್ಡಬಂಡೆಯೋಪಾದಿ ತೋರಿರುತ್ತದೆ. ಅದುಕಾರಣ ಅದನ್ನು ನಾನೀಗ ವಿವರಿಸಲಿಚ್ಛಿಸಿಲ್ಲವು.

ಆಧ್ಯಾತ್ಮಿಕವಿಷಯವಾಗಿ ನಾನು ಮಾಡಿದ ಪರಿಶೋಧನದಿಂದ ನನಗೆ ಬಹಳ ಶಕ್ತಿಯುಕೂಡ ಬಂದಿದೆ. ಅದರ ವಿಚಾರದಲ್ಲಿ ಯಾರಿಗೂ ತಿಳಿಯದಾದುದರಿಂದ, ಅದನ್ನು ನಾನು ಈಗ ವಿವರಿಸಲಿಚ್ಛಿಸಿರುವೆನು. ಆ ಶಕ್ತಿಯಿಂದಲೇ ನಾನು ರಾಜಕೀಯವಿಚಾರದಲ್ಲಿ ಕೆಲಸಮಾಡಲು ಸಮರ್ಥನಾದೆನು. ಅದು ಆಧ್ಯಾತ್ಮಿಕವಿಚಾರವಾಗಿರುವುದರಿಂದಲೇ ಆತ್ಮಪ್ರಶಂಸೆಗೆ ಅವಕಾಶವೇ ಇಲ್ಲ. ಅದರಿಂದ ನನ್ನ ಅಲ್ಪಶಕ್ತಿಯೇ ಮತ್ತಷ್ಟು ಸ್ಪಷ್ಟವಾಗುತ್ತಿರುವುದು. ನಾನು ಈ 30 ವರ್ಷಗಳಿಂದಲೂ ಯಾವುದನ್ನು ಕೋರಿದ್ದೆನೋ ಯಾವ ಕೋರಿಕೆಗಾಗಿ ಸಕಲಪ್ರಯತ್ನವನ್ನೂ ಮಾಡುತ್ತಿದ್ದೆನೋ ಅದು ಅಪರೋಕ್ಷವೇ ಅಂದರೆ ದೈವಸಾಕ್ಷಾತ್ಕಾರವೇ ಅಥವಾ ಮೋಕ್ಷವೇ ಆಗಿರುವುದು. ಅದೇ ನನ್ನ ಪರಮಾವಧಿ. ನನ್ನ ಪ್ರಯತ್ನವೆಲ್ಲವನ್ನು ಅದಕ್ಕಾಗಿಯೇ ಮನೋವಾಕ್ಕಾಯಕರ್ಮದಿಂದ ಎಲ್ಲದರಲ್ಲೂ ವಿನಿಯೋಗಿಸುತ್ತಿರುವೆನು. ನನ್ನ ಉಪವಾಸವೂ, ನನ್ನ ಲೇಖವೂ, ರಾಜಕೀಯದಲ್ಲಿ ಪ್ರಯತ್ನವೂ ನಾನು ಮಾಡುವ ಕಾರ್ಯಗಳೆಲ್ಲೆಲ್ಲಾ ಅದಕ್ಕಾಗಿಯೇ. ನನ್ನ ಪ್ರಯತ್ನದಲ್ಲಿ ಯಾವರಹಸ್ಯವೂ ಇಲ್ಲವು. ಎಲ್ಲವೂ ಬಹಿರಂಗವೇ. ಅದರ ಫಲವು ನನ್ನೊಬ್ಬನಿಗೇ ಅಲ್ಲದೆ ಎಲ್ಲರಿಗು ಕೂಡ ಲಭಿಸತಕ್ಕುದಾಗಿರುವುದು. ಆಧ್ಯಾತ್ಮಿಕಸಾಧನ ಪ್ರಯತ್ನದಲ್ಲಿ ಮಾತ್ರ ಅದರ ಶ್ರೇಷ್ಠತ್ವಕ್ಕೆ ಕೊರತೆಯಿಲ್ಲವು. ಕೆಲವಿಷಯವು ಭಕ್ತನಿಗೆ ಮತ್ತು ಪರಮೇಶ್ವರನಿಗೆ ವಿನಾ ಇತರರಿಗೆ ತಿಳಿಯದು. ಅದನ್ನು ಇತರರಿಗೆ ತಿಳುಹಲು ಅವಕಾಶವಿಲ್ಲವು. ನಾನು ವಿವರಿಸಬೇಕಾಗಿರುವ ಸಾಧನವು ಅಂತಹುದಲ್ಲ. ಅದು ಆಧ್ಯಾತ್ಮಿಕವು ಅಂದರೆ ನೈತಿಕವು. ಇವೆರಡೂ ಪರ್ಯಾಯ ಶಬ್ದಗಳೇ. ಮತವೂ ನೀತಿಯೂ ಒಂದೇ. ಈ ಸಾಧನವನ್ನು ಬಾಲಕರೂ, ಯುವಕರೂ, ವೃದ್ಧರೂ ಅವಲಂಬಿಸಬಹುದು. ಅದನ್ನು ನಾನು ಸವಿನಯದಿಂದಲೂ, ಮಮಕಾರರಾಹಿತ್ಯದಿಂದಲೂ ವಿವರಿಸಿದಲ್ಲಿ ಆಧ್ಯಾತ್ಮಿಕಸಾಧನಪರರಿಗೆ ಕೊಂಚ ಪ್ರಯೋಜನವಾಗುವುದು. ಈ ಸಾಧನದಲ್ಲಿ ವಿಸಿಲ್ಲದಿದ್ದರೂ ಅಲ್ಪಲಕ್ಷ್ಯವಾದರು ಕೂಡ ನನಗೆ ಸಿದ್ಧಿಯಾತೆಂದೇ ನಾನು ಹೇಳಬೇಕಾದುದಿಲ್ಲವು. ಶಾಸ್ತ್ರಪರಿಶೋಧಕನು ನಿಯಮಾನುಸಾರವಾಗಿ, ದೀಕ್ಷಾಬದ್ಧವಾಗಿ ಪರಿಶೋಧನೆಯನ್ನು ಮಾಡುವನಲ್ಲದೆ ಫಲಸಿದ್ಧಿಯನ್ನು ಲಕ್ಷಿಸುವುದಿಲ್ಲ. ನಾನು ಕೂಡ ಹಾಗೆಯೇ ಸಂಕಲ್ಪವಾಗಿಯಾಗಲಿ, ತೀವ್ರವಾಗಿಯಾಗಲಿ ಆತ್ಮಪರಿಶೋಧನವನ್ನು ಮಾಡಿದೆನು. ಮಾನಸವಿಕಾರವೆಲ್ಲವನ್ನೂ ಚೆನ್ನಾಗಿ ರಕ್ಷಿಸಿದೆನು. ಆದರೆ ಫಲಸಿದ್ಧಿಯಾಯಿತೆಂದು ಮಾತ್ರ ಹೇಳಲಾರೆನು. ನನ್ನ ಫಲವು ನಿರ್ದುಷ್ಟವೆಂದೂ, ಸ್ಥಿರವೆಂದೂ ನಾನು ಹೇಳಲಾರೆನು. ನನ್ನಷ್ಟಕ್ಕೆ ಅವು ನಿಶ್ಚಯವೆಂದೂ, ತಾತ್ಕಾಲದಲ್ಲಿ ಪರಿಷ್ಕಾರವೆಂದೂ ಮಾತ್ರ ಹೇಳಬಲ್ಲೆನು. ಆದುದರಿಂದ ಅದರ ಆಧಾರದಮೇಲೆ ನಾನು ಯಾವಕಾರ್ಯವನ್ನೂ ಮಾಡೆನು. ಪ್ರತಿಯೊಂದರಲ್ಲೂ ಸ್ವೀಕಾರ ತಿರಸ್ಕಾರ ವಿಧಾನವನ್ನು ನಾನು ಅನುಸರಿಸುತ್ತಲೇ ಇದ್ದೆನು. ನನ್ನ ಸಾಧನವು ನನಗೆ ಸಹೇತುಕವಾಗಿ ಕಂಡುಬಂದಾಗ ಫಲವನ್ನು ನಾನು ರೂಢಿಯಾಗಿ ವಿಶ್ವಾಸಿಸಬೇಕಾದದ್ದೇ.

ನಾನು ಕೇವಲ ಶಾಸ್ತ್ರವಾದವನ್ನೇ ಮಾಡುವುದಾದಲ್ಲಿ ಸ್ವಚರಿತ್ರೆಯನ್ನು ಬರೆಯಬಹುದು. ಆ ಸಿದ್ಧಾಂತವನ್ನು ಆಚರಣೆಗೆ ತಂದ ಸಂದರ್ಭದಲ್ಲೆಲ್ಲಾ ನಾನು ವಿವರಿಸುತ್ತಿದ್ದೆನಲ್ಲದೆ ನಾನು ಸತ್ಯಾನ್ವೇಷಣ ಚರಿತ್ರೆಯೆಂದು ಈ ವ್ಯಾಸಕ್ಕೆ ಹೆಸರಿಟ್ಟೆನು. ಅಹಿಂಸೆ, ಸ್ತ್ರೀ ಸಾಂಗತ್ಯಪರಿತ್ಯಾಗ ಮೊದಲಾಗಿ ಇತರ ವಿಷಯದಲ್ಲಿ ಜರುಗಿದ ಪರಿಶೋಧನವು ಕೂಡ ಈ ಚರಿತ್ರೆಯಲ್ಲಿ ವಿವರಿಸಲ್ಪಡುವುದು. ಆದರೆ ನನಗೆ ಮುಖ್ಯತಮವಾದುದು ಸತ್ಯವೇ. ಅದರೊಂದಿಗೆ ಅನೇಕ ಇತರ ಸಮಸ್ಯೆಗಳು ಕೂಡ ಸೇರಿರುತ್ತವೆ. ಸತ್ಯವೆಂದರೆ ಕೇವಲ ಮಾತೇ ಎಂದು ತಿಳಿಯತಕ್ಕುದಲ್ಲವು. ಸತ್ಯವೆಂದರೆ ಭಾವನಾಸಂಬಂಧ ಮಾತ್ರವೇ ಅಲ್ಲ. ನಿತ್ಯಸತ್ಯದಲ್ಲಿ ಭಗವಂತನು ಕೂಡುವುದಿಲ್ಲ. ಭಗವದಾವಿರ್ಭಾವವು ಅನಂತವಾಗಿದ್ದು ಅಭಿದಾನವನ್ನು ಅನಂತವಾಗಿ ಅವನನ್ನು ತಿಳಿದುಕೊಳ್ಳುವುದರಲ್ಲಿ ನನ್ನ ಚಿತ್ತವು ಕ್ಷಣಕಾಲ ಸ್ತಂಭಿತವಾಗಿರುವುದು. ನಾನು ಭಗವಂತನನ್ನು ಸತ್ಯಸ್ವರೂಪನೆಂದೇ ಆರಾಧಿಸುವೆನು. ಭಗವಂತನೊಬ್ಬನೇ ಸತ್ಯನು. ತದಿತರವೆಲ್ಲವೂ ಅಸತ್ಯವು. ನಾನು ಇನ್ನೂ ಭಗವಂತನ ದರ್ಶನ ಪಡೆದಿಲ್ಲವು. ಆದರೂ ದರ್ಶನಾಪೇಕ್ಷೆಯಾಗಿಯೇ ಇರುವೆನು. ಭಗವದ್ದರ್ಶನಕ್ಕಾಗಿ ಪ್ರಿಯತಮವಾದುದೆಲ್ಲವನ್ನು ಕೂಡ ತ್ಯಜಿಸಲು ನಾನು ಸಂಸಿದ್ಧನಾಗಿಯೇ ಇರುತ್ತೇನೆ. ಅದಕ್ಕಾಗಿ ನನ್ನ ಪ್ರಾಣತ್ಯಾಗವೇ ಅಗತ್ಯವಾಗಿದ್ದರು ಕೂಡ ನಾನು ಸಿದ್ಧನಾಗಿರುವೆನೇ ಹೊರತು ಈ ನಿತ್ಯ ಸತ್ಯ ಸಂದರ್ಶನವಾಗುವವರೆಗೂ ಭೌತಿಕ ಸತ್ಯವೇ ನನಗೆ ದಿವ್ಯಜ್ಯೋತಿಯಾಗಿಯೂ, ಕವಚವಾಗಿಯೂ, ಗುರಾಣಿಯಾಗಿಯೂ ಇರುವುದು. ಕತ್ತಿಯ ಅಲಗಿನಂತೆ ಈ ಮಾರ್ಗವು ಸಂಕುಚಿತವಾಗಿಯೂ, ತೀವ್ರವಾಗಿಯೂ, ನಿದಾನವಾಗಿಯೂ ಇದ್ದರೂ ನನಗಿದೇ ಸೌಮ್ಯವಾಗಿರುವುದು. ನಾನು ಈ ಮಾರ್ಗವನ್ನೇ ಸರಿಯಾಗಿ ಅನುಸರಿಸಿರುವುದರಿಂದಲೇ ನಾನು ಕೈಕೊಂಡ ಅಸಾಧ್ಯಕಾರ್ಯವೆಲ್ಲವೂ ಅಣುಪ್ರಾಯವಾಗಿ ತೋರುವುದು. ಇದನ್ನು ಅನುಸರಿಸಿರುವುದರಿಂದಲೇ ನಾನು ದುಃಖದಲ್ಲಿ ಮುಳುಗದೆ ಮುಂದುವರಿಯುತ್ತಿರುವುದು. ಈ ನನ್ನ ಪುರೋಗಮನದಲ್ಲಿ ನಿತ್ಯ ಸತ್ಯ ಸಂದರ್ಶನವು ಕೂಡ ಮಿಂಚಿನ ಪ್ರಾಯವಾಗಿ ನನಗೆ ತೋರುತ್ತಿರುವುದು. ಸರ್ವೇಶ್ವರನೇ ಸತ್ಯ ; ಉಳಿದುದೆಲ್ಲವೂ ಮಿಥ್ಯ ಎಂಬ ನಂಬಿಕೆಯು ನನಗೆ ಇನ್ನಷ್ಟು ಸ್ಥಿರವಾಗುತ್ತಿದ್ದಿತು. ಈ ನಂಬಿಕೆಯು ನನಗೆ ಹೇಗೆ ಸ್ಥಿರಪಟ್ಟಿತೋ ಆ ಸಾಧನಸಂಪತ್ತನ್ನು ನನ್ನ ಪ್ರಪಂಚ ಅಂದರೆ ಪತ್ರಿಕಾಪಾಠಕ ಪ್ರಪಂಚವು ಕೂಡ ಗ್ರಹಿಸತಕ್ಕುದಾಗಿದೆ. ನನ್ನ ಪರಿಶೋಧನವನ್ನೂ, ನನ್ನ ವಿಶ್ವಾಸವನ್ನೂ ನಂಬತಕ್ಕವರು ಕೂಡ ಹೊಂದುವರು. ನನಗೆ ಸಾಧ್ಯವಾದುದು ಚಿಕ್ಕ ಬಾಲಕರಿಗು ಕೂಡ ಸಾಧ್ಯವಾಗುವುದೆಂಬ ನಂಬಿಕೆಯು ನನಗೆ ಸಹೇತುಕವಾಗಿ ಸ್ಥಿರಪಟ್ಟಿರುತ್ತದೆ. ಸತ್ಯಾನ್ವೇಷಣಕ್ಕೆ ಸಾಧನಗಳು ಬಹು ಸುಲಭವಾಗಿಯೂ ಅತಿ ಕಷ್ಟವಾಗಿಯೂ ಇರುವುವು. ಸತ್ಯವಂತನಿಗೆ ಅವು ಅತಿ ಸುಲಭವು ; ಅಹಂಕಾರ ಮಮಕಾರ ಇರುವವನಿಗೆ ಅತಿಕಷ್ಟವು. ಸತ್ಯಾನ್ವೇಷಿಯು ಧೂಳಿನ ಕಣದೊಂದಿಗೆ ಅಡಗಿ ಕಡುವಿನಮ್ರನಾಗಿ ನಾನು, ನನ್ನದು ಅದನ್ನು ನಾನು ಮಾಡಿದೆನು ಮತ್ತು ಮಾಡಿಸಿದೆನು. ಎಂಬ ಭಾವವೆಲ್ಲವನ್ನೂ ಪೂರ್ಣಯಾಗಿ ತ್ಯಜಿಸಿ ಸರ್ವವೂ ಭಗವದಧೀನವೆಂಬ ನಂಬುಗೆಯು ಹುಟ್ಟಬೇಕು. ಪ್ರಪಂಚವು ರಜಕಣವನ್ನು ಹೊರಡಿಸುತ್ತದೆ. ಅಂತಹ ರಜಕಣದಲ್ಲಿ ಕೂಡಿಕೊಂಡಿರಲು ಸತ್ಯಸಾಧಕನು ಸಿದ್ಧನಾಗಿರಬೇಕು. ಆಗಲೇ ಕಿಡಿಪ್ರಾಯವಾಗಿರುವ ಭಗವದ್ದರ್ಶನವು ಲಭಿಸುವುದು. ವಸಿಷ್ಠ ವಿಶ್ವಾಮಿತ್ರರ ಸಂವಾದದಲ್ಲಿ ಈ ವಿಷಯವು ಸ್ಪಷ್ಟವಾಗಿ ಗೋಚರವಾಗಬಹುದು. ಕ್ರೈಸ್ತ ಮತ್ತು ಮಹಮ್ಮದೀಯ ಮತಗಳು ಕೂಡ ಈ ವಿಷಯವನ್ನು ಪೂರ್ಣಯಾಗಿ ಪ್ರತಿಪಾದಿಸಿರುವುವು.

ಈ ವ್ಯಾಸದಲ್ಲಿ ಅಹಂಭಾವ ಲೇಶಮಾತ್ರವೆಲ್ಲಿಯಾದರೂ ಗೋಚರವಾದಲ್ಲಿ ನನ್ನ ಪರಿಶೋಧನದಲ್ಲಿ ಲೋಪವಿರಬೇಕೆಂದೂ, ನನಗಾದ ಸ್ವಪ್ನದಲ್ಲಿ ಕಂಡ ಪ್ರತಿಭೆಯು ಭ್ರಾಂತಿಯೆಂದೂ ಪಾಠಕರು ನಿಶ್ಚಯಿಸಬೇಕು. ನನ್ನಂತಹ ಪಾಪಿಷ್ಠ ಜನರು ನಶಿಸಿದರೂ ಸರಿ ಸತ್ಯಕ್ಕೆ ಮಾತ್ರ ಅಖಂಡವಿಜಯವುಂಟಾಗಬೇಕು. ನನ್ನಂತಹ ಪಾಪಾತ್ಮರಾದ ಮಾನವರಚರ್ಯದ ಮೇಲಿಂದ ನಿತ್ಯ ಸತ್ಯ ಮಹಿಮಾನಂತನಾದವನಿಗೆ ಅಪಾದಿಸಕೂಡದು. ಈ ವ್ಯಾಸದಿಂದ ಪ್ರಯೋಜನವಾಗುವುದಿಲ್ಲವೆಂದು ಭಾವಿಸಬಾರದು. ಇತರರು ಸ್ವವಿಜ್ಞಾನುಸಾರವಾಗಿ ಆಧ್ಯಾತ್ಮಿಕ ಪರಿಶೋಧನ ಮಾಡುವುದಕ್ಕೆ ಇವು ಆಧಾರವೆಂದು ಮಾತ್ರ ಭಾವಿಸಬೇಕು. ಇವುಗಳ ಪ್ರಯೋಜನವಿಷ್ಟೇ ಸರಿಯೆಂದು ನಾನು ನಂಬುವುದಿಲ್ಲ. ನಾನು ಈ ವಿಷಯವನ್ನು ಕೂಡ ರಹಸ್ಯವೆಂದು ತಿಳಿದಿಲ್ಲವು. ನನ್ನ ದೋಷವನ್ನೂ, ಲೋಪವನ್ನೂ ಸ್ಪಷ್ಟವಾಗಿ ವಿವರಿಸಿರುವೆನು. ಸತ್ಯಾಗ್ರಹಶಾಸ್ತ್ರಪರಿಶೋಧನವನ್ನು ವಿವರಿಸುವುದೇ ನನ್ನ ಸಂಕಲ್ಪವಲ್ಲದೆ ನಾನು ಮಹನೀಯನೆಂದು ತಿಳಿಸಬೇಕೆಂಬುದು ನನ್ನ ಉದ್ದೇಶವಲ್ಲವು. ನನ್ನನ್ನು ಪರೀಕ್ಷಿಸುವುದರಲ್ಲಿ ಕೂಡ ನಾನು ಬಹಳ ಕಠಿಣವಾಗಿಯೇ ಇರುವೆನು. ಇತರರು ಕೂಡ ಹಾಗೆಯೇ ಪರೀಕ್ಷಿಸತಕ್ಕುದು. - ನನ್ನನ್ನು ಸೃಷ್ಟಿಸಿದ ಜಗದೀಶ್ವರನನ್ನೇ ನಾನು ತಿರಸ್ಕರಿಸಿದೆನು. ನಾನು ಪರಮ ಕೃತಘ್ನನು. ನನ್ನಂತಹ ಮಹಾಪಾಪಿಯಾದ ಮನುಷ್ಯಾಧಮನು ಆರಿರುವನು ? ಎಂದು ಸೂರದಾಸರು ಹೇಳಿರುವ ವಾಕ್ಯಗಳನ್ನೇ ನಾನೂ ಹೇಳಿರುವೆನು. ಮನುಷ್ಯರೆಲ್ಲರನ್ನೂ ನಿರಂತರದಲ್ಲೂ, ಅನುಕ್ಷಣದಲ್ಲೂ ಭಗವಂತನು ಕಾಪಾಡುತ್ತಿಲ್ಲವಾದರೆ ಮನುಷ್ಯನು ಜೀವಿಸಲಾರನು. ಆತನೇ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣಭೂತನೆಂದು ನಾನು ತಿಳಿದಿರುವೆನು. ಅಂತಹ ನನ್ನ ತಂದೆಯ ಪಾದದರ್ಶನವು ನನಗಿನ್ನೂ ಲಭಿಸದೆ ಇರುವುದರಿಂದ ನನಗೆ ಅಪಾರ ದುರಂತ ಸಂತಾಪವುಂಟಾಗಿರುತ್ತದೆ. ಕಾಮಕ್ರೋಧಾದಿ ಅರಿಷಡ್ವರ್ಗಗಳೇ ನನ್ನನ್ನು ನಿರೋಧಿಸುತ್ತಿರುವುವೆಂದು ಸಹ ತಿಳಿದಿರುವೆನು. ಆದರೆ ಅವನ್ನು ಇನ್ನೂ ಜಯಿಸಲಾರದವನಾಗಿರುವುದರಿಂದ ಉಪೋದ್ಘಾತವನ್ನು ಇಲ್ಲಿಗೆ ವಿರಮಿಸಿರುವೆನು. ಮುಂದಣ ಪ್ರಕರಣವನ್ನು ಅನಂತರ ಪ್ರಾರಂಭಿಸುವೆನು.

A LETTER ON COW AND MUSIC QUESTION.

To

MAHATMA MOHANDAS KARAMCHAND GANDHI,
Satyagrah Ashram, Ahmedabad.

Respected Son of Mother India,

I am an intense lover of Cow and as Secretary of the Pranidaya Gnyana Sangha Davangere I am working for its protection since the past one year. In furtherance of this sacred work my humble self prompts me to address a few lines for your kind consideration in the sincere hope that you will not hesitate to ventilate your clear and unambiguous opinion through the columns of your esteemed paper "Young India" for the guidance of the whole country.

It is within the knowledge of everyone of us how you undertook your memorable 21 days' fasting last year under most trying circumstances with a view to exert moral influence upon the two great communities of India, *viz.*, Hindus and Mussalmans, standing opposed to each other. The dire situation was then quickly realized by the great leaders in different parts of the country and they, in a conference convened for the purpose, adopted certain resolutions which were the means to solve the crucial problems of the two communities. But what is their practical achievement so far? Have they promoted mutual love and reconciliation between the two peoples to any appreciable extent? One of the resolutions, it will be remembered, declared that the killing of cows and the playing of music before mosques were the *natural rights* of the Muhammadans and Hindus respectively and in exercising such rights no community should seek protection from either the Government or any other local body. Another resolution called upon the two communities to stop cow-killing and music-playing before mosques for the sake of unity and good-will amongst themselves. I would here refrain from discussing the reasonableness or otherwise of the ideas containing in these resolutions of the Unity Conference. It is agreed on all hands—even you are not differing—that these resolutions are quite imperfect and as experience shows they are more honoured in the breach than in their observance. The recent communal riots at Aligarh, Sholapur, a neighbouring village of Calcutta, and other places amply bear out my observation and are a clear indication of the communal hatred growing deeper and more extensive. At the time of the sacred Hindu Ramaleela festival at Allahabad the Muslims contrary to the injunctions of the Unity Conference, sought the intervention of the Government and with their help actually stopped the music-playing before their mosque. But when a similar course is adopted as when the Representative Assembly of Mysore State passed a resolution urging upon the Government the prohibition of cow slaughter in the State, the Muslim brethren raised a huge outcry against it on the ground of its being against the principles of the Unity Conference. How strange and inconsistent? On another occasion although in due respect to Muslim feelings the Hindus at Sholapur stopped their procession 2 furlongs further from the mosque and proceeded only on the completion of their prayers, yet the Muhammadans burst into fury and caused serious damages.

Similarly the Hindus went mad over the killing of a cow by Muhammadans on Bakrid Day at a neighbouring village of Calcutta and broke into riots, of which you are personally aware. These and many other similar incidents would make it perfectly clear that the people have no faith in the mandates of the Unity Conference and they remain till to-day almost a dead letter. What is there in passing such pious resolutions if they are not to influence the lives and actions of the people?

Lip obedience without resulting in actual practice confers no good on anybody, but oftentimes hinders the natural adjustments of life. Hence if the desire of the leaders is to win *Swaraj* for the people, it seems to be their bounden duty first and foremost to clearly and unequivocally state the problems and issue peremptory dictates for the universal adoption of the country. Let all Hindus stop music-playing before mosques and let all Muslims stop cow-killing—such unconditional declarations would, I sincerely believe, settle the inner relations of the two communities in the most amicable manner. Why should we not pay heed to the clear verdict of the American Traveller, Mr. Savel Timand, who was in India at the time of the Unity Conference when he says: There can be neither peace nor unity in India as long as Muhammadans kill cows and Hindus play music before mosque! No sane-minded and sincere religionist, whether Hindu or Mussalman, could really hold that the playing of music or the killing of cow forms part of his essential religion. If cow-sacrifice had been sanctioned by Muhammadanism we could not have seen the prohibition of cow-slaughter by the great Muhammadan rulers, such as the Amir of Afghanistan, the Nizam of Hyderabad and the Begum of Bhopal, in some form or other. Further a Muhammadan Vakil of vast scholarship at Sitapur, Mr. Nazir Ahmed by name, has published a pamphlet in Urdu, *viz.*, "Islami Gorakshana," in which the author has in unmistakable terms established cow-protection on the authority of the sacred *Quoran*. It is apparent from this that ahimsa is as much part of Islam as of Hinduism. It cannot also be denied that the playing of music has no mandatory sanction anywhere in the vast Vedic literature and the Hindu Gods would not be displeased by its stoppage. Thus, on both sides if sentimentality is ignored, there would be large opportunity for mutual adjustments of relations. It is my sincere conviction that if the leaders have any belief in the unification of the two communities, thay should take up the work in strenuous zeal and make a clear declaration for the guidance of the two communities and the ultimate peace, progress and prosperity of Mother India.

Yours faithfully,
K. A. SREENIVASA SETTY,
Hon. Secretary.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯತ್ನಾಗ್ರಪಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡೆಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ. ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
26 ಹಳೇಅಗ್ರಹಾರ, ಮೈಸೂರು

೧೯೨೬ ನೆಯ ಇಸವಿ ಫೆಬ್ರುವರಿ ತಾ|| ೬ ರಿಂದ ೧೯೨೬ ನೆಯ ಇಸವಿ ಫೆಬ್ರುವರಿ ತಾ|| ೧೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೭ ನೆಯ ಕ್ರೋಧನನಾಮಸಂವತ್ಸರದ ಮಾಘ ಬಹುಳ ಅಷ್ಟಮಿಯಿಂದ ಮಾಘ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ಮಾಸ
6	ಶನಿ	ಅಷ್ಟ	12-30	ವಿಶಾ	27-5	24
7	ಭಾನು	ನವ	10-36	ಅನೂ	27-5	25
8	[1]ಸೋಮ	ದಶ	7-31	ಜ್ಯೇಷ್ಠ	24-43	26
9	ಮಂಗಳ	ಏ-ಉ	3-29 55-40	ಮೂಲ	22-5	27
10	ಬುಧ	ತ್ರಯೊ	53-36	ಪೂಷಾ	18-48	28
11	[2]ಗುರು	ಚತು	47-47	ಉಷಾ	15-0	29
12	[3]ಶುಕ್ರ	ಅಮಾ	41-48	ಶ್ರವ	10-57	1

(1) ಮಳೆನಕ್ಷತ್ರ-ಧನಿಷ್ಠ ೨ ನೆಯ ಪಾದ. (2) ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಬೆಳ್ಳಿ ಕೈಲಾಸವಾಹನ. (3) ಮಳೆನಕ್ಷತ್ರ-ಧನಿಷ್ಠ ೪ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿಕೃಪಾ | ಘನಪಥಳಕ್ಷಿತಾವಶಾರಾ ಪಕ್ಷ್ಯತ್ತಪತ್ರ ಮೋಹರಾಜೋಜಾಜ್ |
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಮಧೀಪುಂಗವ | ಸ್ತೋಮಾಭೀಷ್ಟದಶೀಲ ನಾಳಿಕ ಸಾದ್ಗುಣ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಕೀಯಂಸವಾಪುರೀಗೆ ಗೌರೀಶಾಸುಕಂಪೋಜ್ಜಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

REGISTERED NO. M. 124.

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಫೆಬ್ರುವರಿ ತಾರೀಖು ೧೩ ನೆಯ ಶನಿವಾರ. [ಸಂಚಿಕೆ ೬

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರ ಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ತಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ :—ಶತಪುಷ್ಪ, ಶಾಲಿಮಕಂದ, ಜವಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಪಾಂತರಜಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಂಗ, ಅಡವೀ ಎಳ್ಳಿನ ಪಂಚಾಂಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಶಟ್ಟಿಗೆ, ಶತಾವರಿ, ಮಗಜ ಅಲದಹಾಲು, ಹತ್ತಿಕಾಸ್ತ, ವಾಕೇರಿಭಾತಾ, ಗೋಖುರು, ಅಡವೀ ಬೆಂಡಿ ಬೇಕು, ಅನ್ನಹಸತ್ವ, ಇಸಬಗೋಲ, ಬುನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಳಕಿ, ವಂಶಲೋಚನ, ವರಧಾರ, ಕೇಶರಿ, ಯಾಲಕ್ಕಿರುಲ್ಲಸಕ್ಕರಿ, ಈ ಜಿನಸುಗಳಲ್ಲಿ ದಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಹಸುವಿನ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಡಬ್ಬಿ ಫುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ್ ಕ್ಲಾರ್ಕ ಪೋ. ಕುಲಿಸ, ೪ ಲಖಮಸಿ ಗೋಲಾಭಾಯ ಹನ್ಸ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ರಘುನಾಥರಾವ ಪೋ. ಕೊಲ್ಹಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗುವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—45] ಪತ್ರ—ಮಾಲೀಕ ವೈದ್ಯ ವ್ಹಿ. ಎಸ್. ಕಾಪಸೆ, ಮು ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೭—೦.
ಡಜನ್ ಗಳ್ಳೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—19] ಪೋ. ಬಾ. ೫೧೧, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಸಾರುಶೀಲಿಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕಶಕಲ್ಯಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

SREE SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

53

ಗೋಷಾಸ್ತ್ರೀಯರಿಗೂ ತೂಳಿತರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ, 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬½—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮ್ಯುನಿಸಿಪಲ್ ನೋಟೀಸ್.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವುದೇನಂದರೆ—

ಮೈಸೂರು ಚಾಮರಾಜಮೊಹಲ್ಲಾ ವಾಣೀವಿಲಾಸ ರೋಡಿನಲ್ಲಿರುವ ಮಾರ್ಕೆಟ್ ಮತ್ತು ಅದರ ಸುತ್ತಲಿನ ನಿವೇಶನವನ್ನು ಬಹಿರಂಗವಾಗಿ ಸ್ಥಳದ ಬಳಿ ತಾರೀಖು 26-2-1926 ನೇ ಶುಕ್ರವಾರ ಬೆಳಗ್ಗೆ 8½ ಘಂಟೆಗೆ ಸರಿಯಾಗಿ ಹರಾಜುಮಾಡಲ್ಪಡುತ್ತೆ. ಇಷ್ಟವುಳ್ಳವರು ಛಡದರಖಾಸ್ತಿನಿಂದ ತಾರೀಖು 19-1-26 ರ 155 ನೇ ನಂಬರು ನೋಟಿಫಿಕೇಷನ್ ಷರತ್ತುಗಳಿಗೆ ಒಳಪಟ್ಟು ಸ್ಥಳವನ್ನು ಪಡೆಯಬಹುದು. ಹೆಚ್ಚಿಗೆ ಸಂಗತಿ ತಿಳಿಯಲಪೇಕ್ಷಿಸುವವರು ಆಫೀಸ್ ಇರತಕ್ಕ ಕಾಲಗಳಲ್ಲಿ ಹಾಜರಾಗಿ ತಮಗೆ ಬೇಕಾದ ವಿಷಯವನ್ನು ತಿಳಿದುಕೊಳ್ಳಬಹುದು.

K. ABDUL AZIZ,
for President,
City Municipal Council, Mysore.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಫೆಬ್ರುವರಿ ತಾ|| ೧೩ನೆಯ ಶನಿವಾರ.

MR. ABDUR RAHMAN ON MUNICIPAL REGULATION.

Under the guise of ventilating his views on the proposed amendment of the Mysore Municipal Regulation, Mr. Abdur Rahman, President of the Bangalorre District Board and member of the Municipal Council has launched out on an attack on Mr. Abbas Khan, the President of the Bangalore City Municipal Council. He says that there should be no nominations to the Municipal Councial at all, as there is no need of guarding the interests of any community. But we do not know who told this critic that nominations were there only for guarding the communal interests. He wants them not to forget that the nominations are for securing representation of interests. At the same time he finds fault with the Government for nominating Mr. Abbas Khan continuonsly for the last 16 years, "as if there are no other Musulman gentleman available." So that, the discussion about the amendments in the Regulation disappeared. It is now only a question of the choice of persons. This illogically minded critic next asks why Mr. Abbas Khan should have been nominated when there were already two Musulman gentleman elected to the Council. The very fact that he has been nominated when there were already two of his own community men in the Council shows it was not for merely guarding communal interests. How far Mr. Rahman is anxious for the civic welfare and progress is evident from the fact that he desires to make experience a disqualification. Could he not have thought for a moment that Mr. Abbas Khan, though a nominated member was elected as the President of the Municipal Council and thus secured the confidence of the chosen representatives of the ratepayers themselves? It does strike extremely strange that Mr. Abdur Rahman, who is himself an elected President of the District Board should have deemed fit to make this thoughtless criticism. The other point of attack is with regard to the allowance drawn by the President of the Municipal Council which policy seems to have once been opposed by Mr. Abbas Khan himself. We do not know whether this is also a criticism of any of the proposed amendments. Anyway it does not look as though there is much of principle or policy in the criticism of Mr. Abdur Rahman, and we hope that no weight will be attached to the same. It should be our policy to welcome experienced workers into the field of civil and social service provided they are not otherwise dis-qualified. Let us hope that there will be greater wisdom and charity in the criticism of public men and public affairs.

A POSTAL COMPLAINT.

We regret to bring to the notice of the Postal Department the delay in the delivery of the issues of the *Mysore Star* to the addressees. Numerous are the complaints from our readers to this effect and we would be very thankful to the Postal Department if they could kindly issue necessary instructions in the matter.

ಮಿ|| ಅಬ್ದುರ್‌ರಹಿಮಾನ್‌ರವರೂ ಮ್ಯುನಿಸಿಪಲ್ ರೆಗ್ಯುಲೇಷನ್ನೂ.

ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ನಿಗೆ ಒಂದು ಸವರಣೆಯು ಸೂಚಿಸಲ್ಪಟ್ಟಿರುವುದರಮೇಲೆ ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರಾದ ಮಿ|| ಅಬ್ದುರ್‌ರಹಿಮಾನ್‌ರವರು ತಮ್ಮಭಿಪ್ರಾಯವನ್ನು ತಿಳಿಸುವ ನೆಪದಲ್ಲಿ ಬೆಂಗಳೂರು ಸಿಟಿಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮಿ|| ಅಬ್ಬಾಸ್‌ಖಾನ್‌ರವರನ್ನು ಖಂಡಿಸಲುಪಕ್ರಮಿಸಿರುವರು. ಯಾವ ಪಂಗಡದ ಹಿತರಕ್ಷಣಾವಶ್ಯಕತೆಯೂ ಇಲ್ಲವಾದುದರಿಂದ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ನಾಮಿನೇಟೆಡ್ ಮೆಂಬರುಗಳು ಇರಬೇಕಾದುದಿಲ್ಲವೆಂದು ಅವರು ವಾದಿಸುತ್ತಾರೆ. ಪಂಗಡಗಳ ಕ್ಷೇಮಚಿಂತನೆಗೋಸ್ಕರವಾಗಿ ನಾಮಿನೇಷನ್ ಮಾಡುವುದೆಂದು ಈ ಆಕ್ಷೇಪಕರಿಗೆ ಯಾರು ಹೇಳಿದರೋ ತಿಳಿಯದು. ಆಯಾ ಪಂಗಡಗಳ ಹಿತಸಾಧನೆಗಾಗಿ ಮೆಂಬರುಗಳು ನಾಮಿನೇಷನ್ ಮಾಡಲ್ಪಡುವರೆಂಬುದನ್ನು ಮರೆಯಲಾಗದೆಂದು ಹೇಳುವುದಲ್ಲದೆ ಬೇರೆ ಯಾವ ಮಹಮ್ಮದೀಯದೊಡ್ಡಮನುಷ್ಯರೂ ಸಿಕ್ಕುವುದಿಲ್ಲವೆಂದು ಭಾವಿಸಿ ಕಳೆದ 16 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಮಿ|| ಮಹಮ್ಮದ್‌ಅಬ್ಬಾಸ್‌ಖಾನ್‌ರವರನ್ನು ನಾಮಿನೇಷನ್ ಮಾಡುತ್ತಿರುವುದಕ್ಕಾಗಿ ಪ್ರಭುತ್ವದವರ ಮೇಲೆ ದೋಷಾರೋಪಣೆ ಮಾಡಿರುತ್ತಾರೆ. ಇದರಿಂದ ರೆಗ್ಯುಲೇಷನ್ನಿನ ಸವರಣೆಯ ವಿಚಾರವಾದ ಚರ್ಚೆಯು ಎಲ್ಲಿಯೋ ಮಾಯವಾದಂತಾಯಿತು. ವ್ಯಕ್ತಿಯನ್ನು ಆರಿಸುವ ವಿಚಾರವಾಗಿ ಈಗ ತಾನೆ ಪ್ರಶ್ನಿಸಲ್ಪಡತಕ್ಕುದಾಗಿದೆ. ಈ ನ್ಯಾಯವಿರುದ್ಧಾಭಿಪ್ರಾಯದ ಆಕ್ಷೇಪಕರು ಮ್ಯು|| ಕೌನ್ಸಿಲಿಗೆ ಇಬ್ಬರು ಮಹಮ್ಮದೀಯ ಮೆಂಬರುಗಳು ಮೊದಲೇ ಇರುವುದರಿಂದ ಪುನಃ ಮಿ|| ಅಬ್ಬಾಸ್‌ಖಾನ್‌ರವರನ್ನು ನಾಮಿನೇಷನ್ ಮಾಡಬೇಕಾದುದರ ಕಾರಣವೇನೆಂದು ಕೇಳಿರುತ್ತಾರೆ. ಸ್ವಮತಸ್ಥರಿಬ್ಬರು ಕೌನ್ಸಿಲಿನಲ್ಲಿದ್ದಾಗ್ಯೂ ಮಿ|| ಅಬ್ಬಾಸ್‌ಖಾನ್‌ರವರು ನಿಯಮಿಸಲ್ಪಟ್ಟಿರುವುದು ಪಂಗಡಗಳ ಹಿತಚಿಂತನೆಗಾಗಿಯಲ್ಲವೆಂಬುದು ಸುವ್ಯಕ್ತವಾಗುತ್ತದೆ. ಅನುಭವವು ಒಂದು ಅರ್ಹತೆಯಲ್ಲವೆಂದು ಹೇಳುವುದರಿಂದಲೇ ಮಿ|| ಅಬ್ದುರ್‌ರಹಿಮಾನ್‌ರವರು ಎಷ್ಟರಮಟ್ಟಿಗೆ ಪೌರಕಾರ್ಯಹಿತಚಿಂತಕರೆಂಬುದು ವ್ಯಕ್ತವಾಗುವುದು. ಮಿ|| ಅಬ್ಬಾಸ್‌ಖಾನ್‌ರವರು ನಾಮಿನೇಟೆಡ್ ಕೌನ್ಸಿಲರಾಗಿದ್ದಾಗ್ಯೂ ಕೌನ್ಸಿಲಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟುದರಿಂದ ಕಂದಾಯದಾರರ ಪ್ರತಿನಿಧಿಗಳ ಪೂರ್ಣವಿಶ್ವಾಸಕ್ಕೆ ಪಾತ್ರರಾಗಿರುವರೆಂಬುದನ್ನು ಮಿ|| ಅಬ್ದುರ್‌ರಹಿಮಾನ್‌ರವರು ಒಂದು ಕ್ಷಣಕಾಲವಾದರೂ ಯೋಚಿಸಬಾರದಾಗಿದ್ದಿತೆ? ಸ್ವತಃ ಡಿಸ್ಟ್ರಿಕ್ಟ್‌ಬೋರ್ಡಿನ ಎಲೆಕ್ಟೆಡ್ ಪ್ರೆಸಿಡೆಂಟರಾಗಿರುವ ಮಿ|| ಅಬ್ದುರ್‌ರಹಿಮಾನ್‌ರವರು ಈ ವಿಚಾರಶೂನ್ಯವಾದ ಆಕ್ಷೇಪವನ್ನು ಮಾಡಿರುವುದು ಪರಮಾಶ್ಚರ್ಯಕರವಾಗಿದೆ. ಮ್ಯುನಿಸಿಪಲ್ ಪ್ರೆಸಿಡೆಂಟರ ಅಲೋಯೆನ್ಸ್ ವಿಚಾರದಲ್ಲಿ ಮಿ|| ಅಬ್ಬಾಸ್‌ಖಾನ್‌ರವರು ಹಿಂದೊಂದಾವರ್ತಿ ಆಕ್ಷೇಪಿಸಿದ್ದವರು ಈಗ ತಾವೇ ಅಲೋಯೆನ್ಸ್ ತೆಗೆದುಕೊಳ್ಳುತ್ತಿದ್ದಾರೆಂಬುದು ಮಿ|| ಅಬ್ದುರ್‌ರಹಿಮಾನ್‌ರವರ ಮತ್ತೊಂದು ಆಕ್ಷೇಪಣೆಯಾಗಿದೆ. ಈಗ ಸೂಚಿತವಾಗಿರುವ ಸವರಣೆಯವಿಚಾರದಲ್ಲಿ ಇದೂ ಒಂದು ಆಕ್ಷೇಪವೆಂಬುದು ನಮಗೆ ಗೊತ್ತಾಗುವುದಿಲ್ಲವು. ಮುಖ್ಯವಾಗಿ ಮಿ|| ಅಬ್ದುರ್‌ರಹಿಮಾನ್‌ರವರ ಆಕ್ಷೇಪವು ಒಂದು ನೀತಿಯನ್ನಾಗಲಿ, ಕ್ರಮವನ್ನಾಗಲಿ ಅನುಸರಿಸಿರುವುದೆಂದು ತೋರುವುದಿಲ್ಲ ಮತ್ತು ಇದಕ್ಕೆ ಯಾವ ಮಹತ್ವವೂ ಕೊಡಲ್ಪಡತಕ್ಕುದಾಗಿಲ್ಲವೆಂದು ನೆನೆಸುತ್ತೇವೆ. ಪೌರಸಾಮಾಜಿಕಕಾರ್ಯಗಳಲ್ಲಿ ಅನರ್ಹರೆಂದು ತೋರಿದವರ ವಿನಾ ಪೂರ್ಣಾನುಭವಿಗಳ ಸಹಾಯವನ್ನು ಅಪೇಕ್ಷಿಸುವುದು ನಮ್ಮ ಮುಖ್ಯತತ್ವವಾಗಿರಬೇಕು. ಪೌರಕಾರ್ಯನಿರ್ವಾಹಕರನ್ನೂ, ಪೌರಕಾರ್ಯಗಳನ್ನೂ ಖಂಡಿಸುವುದರಲ್ಲಿ ವಿಶೇಷ ವಿವೇಕೌದಾರ್ಯವು ತೋರಿಸಲ್ಪಡುವುದಾಗಿ ನಿರೀಕ್ಷಿಸುತ್ತೇವೆ.

ಇಂದೂರು ಮಹಾರಾಜರ ವಿಚಾರಣೆ.

ಬಾವಲಾ ಕೊಲೆಯ ಮತ್ತು ಮಮತಜಂಬೇಗಂಳ ಅಪಹರಣದ ವಿಚಾರದಲ್ಲಿ ಇಂದೂರು ಮಹಾರಾಜರ ಸಂಬಂಧವಿರುವುದೆಂಬುದರ ನಿಜಾಂಶವನ್ನು ಕಂಡುಹಿಡಿಯುವುದಕ್ಕಾಗಿ ಭಾರತಪ್ರಭುತ್ವದವರಿಂದ ನಿಯಮಿಸಲ್ಪಡುವ ಕಮಿಷನ್ನಿನವರ ವಿಚಾರಣೆಗೆ ಮಹಾರಾಜರವರು ಒಳಪಡಬೇಕೆ ಬೇಡವೆ ಎಂಬುದನ್ನು ಸರ್ ಪಿ. ಎಸ್. ಶಿವಸ್ವಾಮಯ್ಯರ್‌ರವರೂ, ಸರ್ ತೇಜ್‌ಬಹದ್ದೂರ್ ಸಪ್ರೂರವರೂ ಚೆನ್ನಾಗಿ ಪರ್ಯಾಲೋಚಿಸಿ ಮಹಾರಾಜರವರು ಕಮಿಷನ್ನಿನವರಿಂದ ವಿಚಾರಿತರಾಗುವುದೇ ಯುಕ್ತವೆಂದು ನಿರ್ಧರಿಸಿರುವುದಾಗಿ ವರ್ತಮಾನವಿದೆ. ಈ ಕೊಲೆಯ ಮತ್ತು ಅಪಹರಣದ ಪ್ರಕರಣದಲ್ಲಿ ಇಂದೂರು ಮಹಾರಾಜರವರು ಲಕ್ಷಾಂತರ ರೂಪಾಯಿಗಳನ್ನು ಹಾಳ್ಮಾಡಿದರೆಂದೂ, ಸೀಮೆಯ ಬ್ಯಾರಿಸ್ಟರುಗಳ ಅಭಿಪ್ರಾಯವನ್ನು ಕೇಳುವುದಕ್ಕಾಗಿ ಬಹಳ ಹಣವನ್ನು ವೆಚ್ಚಮಾಡಿದರೆಂದೂ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟು ಮನಸ್ವೀ ವ್ಯಾಖ್ಯಾನಮಾಡಲ್ಪಟ್ಟು ಜನರ ಮನಸ್ಸು ಕೆಡಿಸಲ್ಪಡುತ್ತಿರುವುದು. ಈ ವಿಚಾರದಲ್ಲಿ ಈವರೆಗೆ ಲೇಶಮಾತ್ರ ದ್ರವ್ಯವ್ಯಯಮಾಡಲ್ಪಟ್ಟಿಲ್ಲವೆಂದೂ, ಸೀಮೆಯ ಬ್ಯಾರಿಸ್ಟರುಗಳ ಅಭಿಪ್ರಾಯ ಕೇಳಲ್ಪಟ್ಟಿಲ್ಲವೆಂದೂ ಮೊದಲಾಗಿ ಸಂಸ್ಥಾನದ ದಿವಾನರಾದ ಮ|| ಸಿ. ಎಂ. ನರಸಿಂಗರಾಯರು ವೃತ್ತಪತ್ರಿಕೆಗೆ ಬರೆದಿರುತ್ತಾರೆ. ಕೃತಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸಿದ ಅಪರಾಧಿಗಳಾರೂ ತಮ್ಮ ವಿಚಾರಣೆಯಲ್ಲಿ ಮಹಾರಾಜರ ಸಂಬಂಧವನ್ನು ಯಾವ ಸಂದರ್ಭದಲ್ಲೂ ಹೇಳಿಲ್ಲವಾದುದರಿಂದ ಅವರ ವಿಚಾರಣೆಯನ್ನು ಕಮಿಷನ್ನಿನವರ ಮೂಲಕ ಮಾಡಿಸಲು ಕಾರಣವೇ ಇರುವುದಿಲ್ಲವಾದಪ್ರಯುಕ್ತ ಪ್ರಭುತ್ವದವರು ಅವರನ್ನು ಬಲವಂತಪಡಿಸುವುದಾಗಲಿ, ಕಮಿಷನ್ನನ್ನು ನಿಯಮಿಸುವುದಾಗಲಿ ಧರ್ಮವಲ್ಲವೆಂದು ಮೊದಲಾಗಿ ವೃತ್ತಪತ್ರಿಕೆಗಳಲ್ಲಿ ಚರ್ಚೆಯು ನಡೆಯುತ್ತಿದೆ.

ಸ್ವದೇಶದ ವೃತ್ತಾಂತಗಳು.

ಬರುವ ಈಸ್ಟರ್ ರಜಾಕಾಲದಲ್ಲಿ ಗಣಿತಶಾಸ್ತ್ರಮಹಾಸಭೆಯು ಬೆಂಗಳೂರಿನಲ್ಲಿ ನಡೆಯಿಸಲ್ಪಡುವುದಾಗಿ ಯೋಚಿಸಲ್ಪಟ್ಟಿದೆ.

ಸರ್ ಪ್ರಶಸ್ತಿಯನ್ನು ಪಡೆಯಲು ದಿಲ್ಲಿಗೆ ದಯೆಮಾಡಿಸಿದ್ದ ದಿವಾನ್ ಸರ್ ಎ. ಬಾನರ್ಜಿಯವರು ಕಳೆದ ತಾ|| 8 ರ ಸಾಯಂಕಾಲ ಬೆಂಗಳೂರಿಗೆ ಹಿಂದಿರುಗಿ ಬಂದರು.

ಸಂಸ್ಥಾನದ ರೈಲ್ವೆಏಜಂಟರಾದ ಮಿ|| ಡೌವಿಲ್ಲರ್ಸ್‌ರವರಿಗೆ ಬರುವ ಏಪ್ರಿಲ್ ತಾ|| 1ರಿಂದ 1 ವರ್ಷಕಾಲ ಉದ್ಯೋಗದವಧಿಯು ಹೆಚ್ಚಿಸಲ್ಪಟ್ಟಿರುವುದಾಗಿ ವದಂತಿಯಿದೆ.

ಇಂಡಿಯಾ ಸರ್ಕಾರದ ರೈಲ್ವೆ ಸೀನಿಯರ್ ಇನ್‌ಸ್ಪೆಕ್ಟರು ಈ ಸೀಮೆಯ ರೈಲ್ವೆಸ್ಥಿತಿಯನ್ನು ಪರೀಕ್ಷಿಸುವುದಕ್ಕಾಗಿ ಈ ತಾ|| 21 ರಲ್ಲಿ ತರೀಕೆರೆ ಮಾರ್ಗವಾಗಿ ಶಿವಮೊಗ್ಗೆಗೆ ಹೋಗುವವರಾಗಿರುವರು.

ಮ|| ಗಳಾದ ಆದಿನಾರಾಯಣಸೆಟ್ಟರು, ಸಿ. ಶೇಷಾದ್ರಿ ಅಯ್ಯರ್‌ರು, ಮತ್ತು ಎಚ್. ಕೃಷ್ಣಾಚಾರರು ರಾಜಧಾನಿಯ ಬೆಂಚ್‌ಕೋರ್ಟಿನ ಎರಡನೇ ತರಗತಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಆರೋಗ್ಯವರ್ಧನಕ್ಕಾಗಿ ಪುದಚೇರಿಗೆ ದಯೆಮಾಡಿಸಿದ್ದ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರು ಇನ್ನು 4-5 ದಿವಸಗಳಲ್ಲಿ ಹಿಂದಿರುಗಿ ಬರುತ್ತಾರೆಂದೂ, ಈ ಫಾಲ್ಗುನಮಾಸದಲ್ಲಿ ತಮ್ಮ ದ್ವಿತೀಯಕುಮಾರಿಯ ವಿವಾಹಮಹೋತ್ಸವವನ್ನು ನೆರವೇರಿಸುವವರಾಗಿರುವರೆಂದೂ ಕೇಳುತ್ತೇವೆ.

ಮುನಸೀಫರುಗಳಾದ ಮ|| ಎಚ್. ಕೃಷ್ಣಸ್ವಾಮಿಯವರು ರಾಜಧಾನಿಯಿಂದ ತುಮಕೂರಿಗೂ, ಮ|| ರಾಮಚಂದ್ರಶಾಸ್ತ್ರಿಗಳು ನಂಜನಗೂಡಿನಿಂದ ರಾಜಧಾನಿಗೂ, ಮ|| ಎಚ್. ಕೆ. ವೀರಬಸವಯ್ಯನವರು ಶ್ರೀರಂಗಪಟ್ಟಣದಿಂದ ನಂಜನಗೂಡಿಗೂ ವರ್ಗಾಯಿಸಲ್ಪಡುವುದಾಗಿ ವರ್ತಮಾನವಿದೆ.

1926 ನೆಯ ಜನವರಿ ತಾ|| 23 ಕ್ಕೆ ಕಡೆಯಾದ ವಾರದಲ್ಲಿ ಮೈಸೂರುಸಂಸ್ಥಾನದಿಂದ ನಡಿಸಲ್ಪಡುವ ರೈಲ್ವೆಗಳಿಂದ 61,500 ರೂ. ಅಂದರೆ ಹೋದವರ್ಷ ಇದೇಕಾಲದಲ್ಲಿ ಆಗಿದ್ದುದಕ್ಕಿಂತ 559 ರೂ. ಇದೇ ವರ್ಷದ ಕಳೆದವಾರ ಆಗಿದ್ದುದಕ್ಕಿಂತ 3,100 ರೂ. ಹೆಚ್ಚಾಗಿ ಉತ್ಪನ್ನವಾಗಿರುತ್ತದೆ.

ಮಿ|| ಟಿ. ಎಸ್. ಅಲ್ಲಿಖಾನ್‌ರವರು ಸಂಪದಭ್ಯುದಯ ಪತ್ರಿಕೆಯಮೇಲೆ ಮಾಡಿರುವ ಮಾನನಷ್ಟದ ಕೇಸಿನಲ್ಲಿ ಫಿರ್ಯಾದಿಪರ ಆರ್ಗ್ಯುಮೆಂಟು ಕಳೆದ ತಾ|| 8 ರಲ್ಲೂ ಅಪರಾಧಿಗಳಪರ ಆರ್ಗ್ಯುಮೆಂಟು ತಾ|| 9 ರಲ್ಲೂ ನಡೆದುವು ಮತ್ತು ಅವುಗಳಮೇಲಿನ ಕೋರ್ಟು ಆರ್ಡರು ಈ ತಾ|| 15 ರಲ್ಲಿ ಹೇಳಲ್ಪಡುವುದು.

ಕಳೆದ ಮಂಗಳವಾರ ರೆವಿನ್ಯೂಕಮಿಷನರ್ ಮ|| ಸಿ. ಎಸ್. ಬಾಲಸುಂದರಂಅಯ್ಯರ್‌ರವರು ಬೆಂಗಳೂರು ಫ್ರೀಮೇಸನ್ ಲಾಡ್ಜಿನ ವರ್ಷಿಪ್‌ಫುಲ್‌ಮಾಸ್ಟರಾಗಿ ಪಟ್ಟಕಟ್ಟಲ್ಪಟ್ಟುದರ ಸಂತೋಷಾರ್ಥವಾಗಿ ಲಾಡ್ಜು ಮೆಂಬರುಗಳೆಲ್ಲರೂ ದಿವ್ಯವಾದೌತಣದಿಂದ ಸತ್ಕರಿಸಲ್ಪಟ್ಟು ನೂತನಪಟ್ಟಾಂಚಿತರ ಆಯುರಾರೋಗ್ಯವು ಬಯಸಲ್ಪಟ್ಟಿತು.

ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮ|| ಬಿ. ಕೆ. ಗರುಡಾಚಾರರು ಮಿ|| ಅಬ್ಬಾಸ್‌ಖಾನ್‌ರವರು ಮೊದಲಾಗಿ 6 ಜನ ಮ್ಯುನಿಸಿಪಲ್‌ಕೌನ್ಸಿಲರುಗಳಮೇಲೆ ಮಾಡಿರುವ ಮಾನನಷ್ಟದ ವಿವಾದವು ಈ ತಾ|| 10 ರಲ್ಲಿ ನಡಿಯಬೇಕಾಗಿದ್ದುದು ಜಡ್ಜಿಯವರ ಅಸ್ವಸ್ಥಯದೆಶೆಯಿಂದ ಬರುವ ಜೂನ್ ತಾ|| 1 ಕ್ಕೆ ಅಡ್ಜರ್ನ್ ಮಾಡಲ್ಪಟ್ಟಿತು.

ಶ್ರೀರಾಮಕೃಷ್ಣಪರಮಹಂಸರವರ ಪುಣ್ಯತಿಥಿಯು ಈ ತಾ|| 14 ರಲ್ಲಿ ರಾಜಧಾನಿಯಲ್ಲಿರುವ ಶ್ರೀರಾಮಕೃಷ್ಣಾಶ್ರಮದಲ್ಲಿ ನಡೆದು ತತ್ಸಂಬಂಧವಾದ ಉಪನ್ಯಾಸವು ಮಾರನೆಯ ದಿನ ಧರ್ಮಪ್ರಕಾಶ ಡಿ|| ಬನುಮಯ್ಯನವರ ಹೈಸ್ಕೂಲುಕಟ್ಟಡದಲ್ಲಿ ರಿಟೈರ್ಡ್ ಡಿ|| ಕಮಿಷನರ್ ಮ|| ಕೆ. ಮೈಲಾರಿರಾಯರ ಅಧ್ಯಕ್ಷತೆಯಲ್ಲಿ ಮಹಾರಾಜಾಕಾಲೇಜ್ ಪ್ರೊಫೆಸರಾದ ಮ|| ವೆಂಗಟೇಶಂ ಎಂ.ಎ., ಇವರಿಂದ ಮಾಡಲ್ಪಡುವುದು.

ತರೀಕೆರೆಯಲ್ಲಿ ಪ್ಲೇಗುರೋಗವು ಉಲ್ಬಣವಾಗಿದ್ದು ಕಳೆದ ತಾ|| 6 ರಲ್ಲಿ 9 ಜನರಿಗೆ ತಗುಲಿ 8 ಮರಣಗಳಾದುವು. ರೈಲ್ವೆ ಸ್ಟೇಷನ್ನಿನಲ್ಲಿ ಇಲಿ ಸತ್ತಿದ್ದುದರಿಂದ ಸ್ಟೇಷನ್ನು ಡಿಸ್‌ಇನ್‌ಫೆಕ್ಟ್‌ಮಾಡಲ್ಪಟ್ಟಿತು. ಕೊಪ್ಪ ತಾ|| ನಲ್ಲೂ, ಮೇಗುಂದಹೋಬಳಿಯಲ್ಲೂ ದನಗಳಿಗೆ ದೊಡ್ಡರೋಗಪ್ರಾಪ್ತವಾಗಿ ಈವರೆಗೆ 63 ದನಗಳು ಸತ್ತಿರುತ್ತವೆ. ಪಶುವೈದ್ಯಶಾಖೆಯಿಂದ ತಕ್ಕ ಪ್ರಯೋಜನವಾಗುತ್ತಿಲ್ಲವೆಂದು ರೈತರುಗಳು ದೂರುತ್ತಿರುವರಂತೆ.

ಅಖಿಲಕರ್ನಾಟಕ ಆಯುರ್ವೇದ ದ್ವಿತೀಯಮಹಾಸಭೆಯು ನಾಳೆಯದಿವಸ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಕೋಟೆಯ ದಕ್ಷಿಣಭಾಗದಲ್ಲಿರುವ ಶಂಕರಯ್ಯನವರ ಹಾಲಿನಲ್ಲಿ ಆರಂಭವಾಗಿ ಬೆಳಗಾವಿಯ ಪ್ರಸಿದ್ಧ ವೈದ್ಯರಾದ ಮ|| ಹನುಮಂತ ವೆಂಕಟೇಶ ಸವಣೂರ್, ಎಲ್. ಎಂ. ಅಂಡ್ ಎಸ್‌ರವರ ಅಧ್ಯಕ್ಷತೆಯಲ್ಲಿ ಜರುಗುವುದಲ್ಲದೆ ಆಯುರ್ವೇದವೈದ್ಯವಸ್ತುಪ್ರದರ್ಶನವು ದಿವಾನ್‌ಬಹದ್ದೂರ್ ರಾಜಧರ್ಮಪ್ರವೀಣ ಮ|| ಕೆ. ಚಂದ್ರಶೇಖರಯರ್‌ರವರಿಂದುಪಕ್ರಮಿಸಲ್ಪಡುವುದು. ಈ ಮಹಾಸಭೆಗೆ ನಾನಾದೇಶಗಳಿಂದ ವೈದ್ಯರುಗಳು ಪ್ರತಿನಿಧಿಗಳಾಗಿಯೂ ಪ್ರೇಕ್ಷಕರಾಗಿಯೂ ಬರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಬೆಂಗಳೂರು ಪಟ್ಟಣಕ್ಕೆ ಕುಡಿಯುವ ನೀರನ್ನೊದಗಿಸುವ ಹೆಸರುಗಟ್ಟದ ಕೆರೆಯಲ್ಲಿ 3-3½ ತಿಂಗಳಮಟ್ಟಿಗೆ ಸಾಕಾಗುವಷ್ಟು ನೀರಿರುವುದರಿಂದ 15-20 ಮೈಲಿದೂರದಲ್ಲಿರುವ ಎಲೆಮಲ್ಲಪ್ಪಶೆಟ್ಟರ ಕೆರೆಯನ್ನೊಡೆದು ಅದರ ನೀರನ್ನು ಹೆಸರುಘಟ್ಟದ ಕೆರೆಗೆ ಬಿಟ್ಟುಕೊಳ್ಳುವುದಕ್ಕಾಗಿ ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿಯವರು ಸಾವಿರಾರು ರೂಪಾಯಿಗಳನ್ನು ವ್ಯಯಮಾಡಲು ನಿರ್ಧರಿಸಿರುವರು. ಅಲ್ಲಿ ಈರೀತಿ ನೀರಿಗೆ ಅಭಾವವಾಗಿರುವುದರಿಂದ ಅತ್ಯಂತ ಮಿತವಾಗಿ ನೀರು ಬಳಸಲ್ಪಡುತ್ತಿರುವುದು ಸಹಜವಾಗಿರುವುದು. ಆದರೆ ಲಕ್ಷಾಂತರ ರೂಪಾಯಿಗಳನ್ನು ನುಂಗಿರುವ ಕನ್ನಂಬಾಡಿಜಲಾಶಯದ ಸಹಾಯವು ರಾಜಧಾನಿಗಿರುವುದಾದರೂ ಇಲ್ಲಿ ನೀರಿಗೆ ಬಡತನಬಂದಿರುವುದು ಸೋಜಿಗವಾಗಿದೆ.

ರಾಜಧಾನಿಯಲ್ಲಿ ವಾಸವಾಗಿರುವ ಇನಾಂದಾರರುಗಳು ಅಂದರೆ ಮ|| ಗಳಾದ ರಿಟೈರ್ಡ್ ಎಕ್ಸೈಸ್ ಕಮಿಷನರ್ ಎ. ಸುಬ್ರಹ್ಮಣ್ಯಯ್ಯರ್‌ರವರು, ರಿ|| ಅಮೃತಮಹಲ್ ಸೂಪರಿಂಟೆಂಡೆಂಟ್ ಲೋಕಹಿತೈಷಿ ಎಚ್. ನಂಜುಂಡರಾಜಅರಸಿನವರು, ರಿ|| ಸೂ|| ಇಂಜನೀರ್ ರಾವ್‌ಬಹದ್ದೂರ್ ರಾಜಶಿಲ್ಪಿವಿಶಾರದ ಬಿ. ಸುಬ್ಬರಾಯರು, ಅರಮನೆ ಮುಜರಾಯಿಬಕ್ಷಿ ರಾಜಕವಿಭೂಷಣ ಮ|| ಎಚ್. ಲಿಂಗರಾಜಅರಸಿನವರು, ಅ|| ಕಮಿಷನರ್ ಎಂ. ಎಸ್. ಬಾಳರಾಜಅರಸಿನವರು, ಅಡ್ವೊಕೇಟ್ ಎಂ. ಡಿ. ನಾರಣಯ್ಯಂಗಾರರು, ಗನ್ನಹಳ್ಳಿ ಜಹಗೀರ್ದಾರ್ ಮ|| ಕೃಷ್ಣರಾವ್ ವೆಂಕಟರಾವ್‌ರವರು, ಎಸ್. ನಂಜರಾಜಅರಸಿನವರು, ಎ. ವಿ. ಸಿದ್ದರಾಜಅರಸಿನವರು ಮೊದಲಾದ ದೊಡ್ಡ ಮನುಷ್ಯರುಗಳು ಲೋಕಹಿತೈಷಿ ಮ|| ಎಚ್. ನಂಜುಂಡರಾಜಅರಸಿನವರ ಬಂಗಲೆಯಲ್ಲಿ ಅವರ ಅಧ್ಯಕ್ಷತೆಯಲ್ಲೇ ಸಭೆಸೇರಿದ್ದು ತಮ್ಮ ಜಹಗೀರುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪರ್ಯಾಲೋಚಿಸಿ ಅವುಗಳ ಅಭಿವೃದ್ಧಿಗೆ ಬೇಕಾದೇರ್ಪಾಟನ್ನು ಮಾಡಿಕೊಳ್ಳುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸುವುದರ ಆವಶ್ಯಕತೆಯ ವಿಚಾರವಾಗಿ ಚರ್ಚೆಯನ್ನು ನಡೆಯಿಸಿ, ಮೈಸೂರು ಡಿಸ್ಟ್ರಿಕ್ಟ್ ಇನಾಂದಾರರ ಸಂಘವನ್ನು ಸ್ಥಾಪಿಸಿ ಅದಕ್ಕೆ ಮ|| ಗಳಾದ ಎಚ್. ನಂಜುಂಡರಾಜಅರಸಿನವರು ಅಧ್ಯಕ್ಷರಾಗಿಯೂ, ಮ|| ಬಿ. ಸುಬ್ಬರಾಯರು ಉಪಾಧ್ಯಕ್ಷರಾಗಿಯೂ, ಮ|| ಕೃಷ್ಣರಾವ್ ವೆಂಕಟರಾವ್ ಇವರು ಸೆಕ್ರೆಟರಿಯಾಗಿಯೂ ಮ|| ಗಳಾದ ಎ. ಸುಬ್ರಹ್ಮಣ್ಯಯ್ಯರ್‌ರವರು, ರಾಜಕವಿಭೂಷಣ ಎಚ್. ಲಿಂಗರಾಜಅರಸಿನವರು, ಎಂ. ಅನಂತರಾಜಯ್ಯನವರು ಮತ್ತೆ ಕೆಲವರು ಕಾರ್ಯನಿರ್ವಾಹಕ ಮೆಂಬರುಗಳಾಗಿಯೂ ಇರಬೇಕೆಂದು ನಿರ್ಧರಿಸಿದರು

ಭರತಖಂಡದ ವೃತ್ತಾಂತಗಳು.

ಬರ್ಮಾ ಸೀಮೆಯೆಣ್ಣೆಯ ಗಣಿಗಳಲ್ಲಿ ಕೆಲಸಮಾಡುವ 5,000 ಜನರು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವರು.

ಹಿಂದೂ ಮಹಾಸಭೆಯು ಬರುವ ಮಾರ್ಚಿ ತಾ|| 13, 14 ಮತ್ತು 15 ರಲ್ಲಿ ನಡೆಯುವುದಾಗಿ ಗೊತ್ತಾಗಿರುವುದು.

ಪೂನಾಪಟ್ಟಣದಲ್ಲಿ ಮಹಾರಾಷ್ಟ್ರ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಬೊಂಬಾಯಿನ ವಿಶ್ವವಿದ್ಯಾಲಯದಲ್ಲಿ ಅಂಗೀಕರಿಸಲ್ಪಟ್ಟಿತು.

ಬೊಂಬಾಯಿನ ಮ್ಯುನಿಸಿಪಾಲಿಟಿಯವರು ಬೊಂಬಾಯಿಪಟ್ಟಣದಲ್ಲಿ ಮಲೇರಿಯಾಜ್ವರನಿವಾರಣೋಪಾಯಗಳಿಗಾಗಿ 47,000 ರೂಪಾಯಿಗಳನ್ನು ವೆಚ್ಚಮಾಡಲು ನಿರ್ಧರಿಸಿರುವರು.

ಸೂರ್ಯಮಂಡಲದ ಕೆಲವು ಭಾಗಗಳಲ್ಲಿ ಉಷ್ಣವು ಕಡಿಮೆಯಾಗುತ್ತಿರುವುದರಿಂದ ಭೂಮಿಯಲ್ಲಿ ಅತಿವೃಷ್ಟಿ, ಅನಾವೃಷ್ಟಿಗಳು ಉಂಟಾಗುವುದಕ್ಕೆ ಕಾರಣವೆಂದು ಕೆಲ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

ಆಫ್ಘಾನ ಸಂಸ್ಥಾನದ ಅಮೀರರು ತಮ್ಮ ರಾಜ್ಯದಲ್ಲಿ ಹಿಂದೂ ಮುಸಲ್ಮಾನರಿಗೆ ಬೇರೆಬೇರೆ ಶಾಲೆಗಳಿರಬಾರದೆಂದೂ, ಹಣದಾಸೆಯಿಂದ ಯಾರನ್ನೂ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳಲಾಗದೆಂದೂ ವಿಧಿಸಿರುತ್ತಾರೆ.

ಮಹಾತ್ಮಗಾಂಧಿಯವರು ಆರೋಗ್ಯಸಂಪಾದನೆಗಾಗಿ ಬರುವ ತಿಂಗಳಲ್ಲಿ ಕೆಲವು ಪರ್ವತಪ್ರದೇಶಗಳಲ್ಲಿ ವಾಸಮಾಡುವುದಾಗಿ ನಿಶ್ಚಯಿಸಿರುವರು. ಇವರು ಈಗಲೂ ಹಣ್ಣು ಮತ್ತು ಹಾಲು ಇಷ್ಟುಮಾತ್ರ ಸೇವಿಸುತ್ತಿರುವರು.

ಅಜಾಗರೂಕತೆಯಿಂದ ಕಡಿಮೆ ಸ್ಟಾಂಪಿನ ಕಾಗದದಮೇಲೆ ಬರೆಯಲ್ಪಟ್ಟ ಪ್ರೋನೋಟುಗಳು ಈಗ ಕೋರ್ಟುಗಳಲ್ಲಿ ಅಂಗೀಕರಿಸಲ್ಪಡುತ್ತಿಲ್ಲವಾದಪ್ರಯುಕ್ತ ಅಂತಹ ಪ್ರೋನೋಟುಗಳು ಹಿಡಿಯಲ್ಪಡಬೇಕೆಂಬಗೆಗೆ ಒಂದು ಚಟ್ಟವು (ಬಿಲ್ಲು) ಭಾರತಪ್ರಭುತ್ವದವರಿಂದ ಸಾಮ್ರಾಜ್ಯಶಾಸನಸಭೆಯ ಅನುಮೋದನೆಗೆ ತರಲ್ಪಟ್ಟಿದೆ.

ನಾಲ್ವರು ವಂಗದೇಶದ ಯುವಕರು 4014 ಮೈಲಿ ಸೈಕಲ್ಲುಮೇಲೆ ಯಾತ್ರೆ ಮಾಡಿಕೊಂಡು ಬಂದುದಕ್ಕಾಗಿ ಪುರಜನರು ಅವರನ್ನು ಸುಸ್ವಾಗತಿಸಿದರು. ಆ ಯುವಕರು ತಮ್ಮ ಮಾರ್ಗದಲ್ಲಿ ಅಡವೀ ಪ್ರಯಾಣವನ್ನು ವರ್ಣಿಸುವಾಗ್ಗೆ ಹುಲಿ ಮೊದಲಾದ ಕ್ರೂರಮೃಗಗಳ ವಿಷಯವನ್ನೂ ಕುರಿತು ಉತ್ಸಾಹಜನಕವಾಗಿ ಹೇಳಿದರು.

ಆಲಿವರು ಕರಾಚಿಯಿಂದ ಲಂಡನ್ನಿಗೆ 5 ದಿನಗಳಲ್ಲಿ ಆಕಾಶಯಾನದಲ್ಲಿ ಪ್ರಯಾಣಮಾಡಲು ಪ್ರಯತ್ನವು ಸಂಪೂರ್ಣವಾಗಿ ಜರುಗುತ್ತಿದೆ. ಈವರೆಗೆ 2500 ಮೈಲಿ ಪ್ರಯಾಣಮಾಡಿರುವ ಯಂತ್ರವು ಪುನಃ ಒಳ್ಳೆಯಸ್ಥಿತಿಯಲ್ಲಿ ತರಲ್ಪಟ್ಟಿರುವುದು. ಇಂಡ್ಯಾದಲ್ಲಿ ತಿರುಗುವಾಗ್ಗೆ ಆಲಿವರ ಪತ್ನಿಯು ಕೂಡ ಹೋಗಿದ್ದರು. ಪ್ರಾಯಶಃ ಈ ತಿಂಗಳ ಕಡೆಯಲ್ಲಿ ಲಂಡನ್ನಿಗೆ ಹೊರಡಬಹುದು.

ದಕ್ಷಿಣಾಫ್ರಿಕೆಯ ಪ್ರಭುತ್ವದವರಿಂದ ಕಂಟ್ರಾಕ್ಟನ್ನು ಕೊಡಿಸುತ್ತೇವೆಂದು ಸುಳ್ಳುಹೇಳಿ ಆಗ್ರಾವರ್ತಕರಾದ ವಾನಿಲಾಲರವರಿಂದ 40,000 ರೂಪಾಯಿಗಳನ್ನು ತೆಗೆದುಕೊಂಡು ಮೋಸಪಡಿಸಿದ್ದ ಲೆಗ್ರಾಂಟ್‌ವೆಲ್ಸ್ ಮತ್ತು ನ್ಯೂವೇಲುಬೋಸ್ ಎಂಬಿಬ್ಬರನ್ನು ಕಲಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ವೆಲ್ಸನನ್ನು ಸೆಸನ್ಸು ವಿಚಾರಣೆಗೆ ಗುರಿಪಡಿಸಿ ಬೋಸನನ್ನು ಬಿಟ್ಟುಬಿಟ್ಟರು.

ಒಂದುವರ್ಷದ ಹಿಂದೆ ಇಂಗ್ಲೆಂಡಿಗೆ ಹೋಗಿದ್ದ ವಿಜಯನಗರದ ಮಹಾರಾಜದಂಪತಿಗಳು ತಮ್ಮ ಪ್ರವಾಸಕಾಲದಲ್ಲಿ ಜನಿಸಿದ ಕುಮಾರಿಯೊಡನೆ ಕಳೆದ ತಾ|| 3 ರಲ್ಲಿ ಸ್ವಸ್ಥಲವನ್ನು ಸುರಕ್ಷಿತವಾಗಿ ಸೇರಿದರು. ಪುರಜನರು ಊರನ್ನು ಮನೋಹರವಾಗಿ ಅಲಂಕರಿಸಿ ರಾಜಮರ್ಯಾದೆಯೊಡನೆ ಮಹಾರಾಜಕುಟುಂಬದವರನ್ನು ಇದಿರ್ಗೊಂಡು ಅವರ ಸ್ವಸ್ಥಲಾಗಮನದಿಂದ ತಮ್ಮಗಳಿಗುಂಟಾದ ಆನಂದವನ್ನು ಪ್ರದರ್ಶಿಸಿದರು.

ಭಾರತಸಂಸ್ಕರಣವನ್ನು ಕುರಿತು ವಿಚಾರಿಸುವುದಕ್ಕಾಗಿ ರಾಯಲ್ ಕಮಿಷನು ನಿಯಮಿಸಲ್ಪಟ್ಟ ವೇಳೆಯಲ್ಲಿ ತಮ್ಮ ಕ್ಷೇಮವನ್ನು ಕಾಪಾಡುವುದಕ್ಕಾಗಿ ಸ್ವದೇಶಸಂಸ್ಥಾನಾಧೀಶಸಂಘದವರು ನಿಯಮಿಸುವ ಕಮಿಟಿಯಲ್ಲಿ ಇರಬೇಕೆಂದು ಬರೋಡಾ ಸಂಸ್ಥಾನದ ದಿವಾನ್ ಸರ್ ಮನೂಭಾಯಿ ಮೆಹತಾಯವರನ್ನು ಕೇಳಿದುದಕ್ಕೆ ಅವರು ಅಂಗೀಕರಿಸಿದರು. ನವನಗರ್ ಮಹಾರಾಜರವರೂ ಈ ಕಮಿಟಿಯಲ್ಲಿ ಸಭ್ಯರಾಗಿರುವರು.

ಭಾರತದೇಶಕ್ಕೆ ನಾಟಕಪಿತಾಮಹರಾಗಿದ್ದು ಕೀರ್ತಿಶೇಷರಾದ ಗಿರೀಶಚಂದ್ರ ಘೋಷರ ವರ್ಧಂತ್ಯುತ್ಸವವು ಕಳೆದ ತಾ|| 9 ರಲ್ಲಿ ಕಲಕತ್ತಾ ಮೈನರ್ವಾ ನಾಟಕಶಾಲೆಯೊಳಗೆ ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿ ಕಲಕತ್ತಾದಲ್ಲಿರುವ ಉತ್ತರಭಾಗದ ಚೌಕದಲ್ಲಿ ಘೋಷ್‌ರವರ ಶಿಲಾಮೂರ್ತಿಯ ಪ್ರತಿಷ್ಠಾಪನೆಗಾಗಿ ಮೆಮೋರಿಯಲ್ ಕಮಿಟಿಯವರು ಕೂಡಲೇ ತಕ್ಕ ಪ್ರಯತ್ನಮಾಡಬೇಕೆಂದು ತೀರ್ಮಾನಿಸಲ್ಪಟ್ಟಿತು.

ಪೆಷಾವರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟ್ ಎಕಿನ್ಸ್‌ರವರು ಕಟ್ಲಾಂಗ್ ಎಂಬಲ್ಲಿ ಕುದುರೆ ಸ್ವಾರಿ ಮಾಡಿಕೊಂಡು ಹೋಗುತ್ತಿರುವಾಗ್ಗೆ ಬಂದೂಕನ್ನು ಹಿಡಿದುಕೊಂಡು ಹೋಗುತ್ತಿದ್ದ ಒಬ್ಬ ಮನುಷ್ಯನನ್ನು ನೋಡಿ ಅವನು ಸೆರೆಯಿಂದ ತಪ್ಪಿಸಿಕೊಂಡು ಹೋದವನೆಂದು ಅನುಮಾನಿಸಿ ಅವನನ್ನು ಹಿಡಿಯಲು ಪ್ರಯತ್ನಪಟ್ಟು ಹಿಂಬಾಲಿಸಿ ಹೋಗುತ್ತಿರುವಾಗ್ಗೆ, ಅವನು ಸಿಕ್ಕದೆ ಬಂದೂಕಿನಿಂದ ಗುರಿಕಟ್ಟಿ ಸಾಹೇಬರಿಗೆ ಹೊಡೆದು ಅವರನ್ನು ಕೊಂದುಬಿಟ್ಟನು. ಎಕಿನ್ಸ್ ಸಾಹೇಬರಿಗೆ 28 ವರ್ಷ ವಯಸ್ಸುಮಾತ್ರವಾಗಿದ್ದಿತು.

ಹೈದರಾಬಾದು ಸೀಮೆಯಲ್ಲಿ ಬಿದಾರ ಡಿಸ್ಟ್ರಿಕ್ಟಿಗೆ ಸೇರಿದ ನಲ್ಲಿಂಗ ಮತ್ತು ಅದರ ನೆರೆಗ್ರಾಮಗಳಿಗೆ ಒಂದು ನರಭಕ್ಷಕ ಹುಲಿಯು ಕಳೆದ ಎರಡುತಿಂಗಳಿಂದಲೂ ಸಂಚರಿಸುತ್ತ ಈವರೆಗೆ 16 ಜನರನ್ನು ಕೊಂದುಹಾಕಿರುವುದರಿಂದ ಗ್ರಾಮಸ್ಥರು ಭಯಗ್ರಸ್ಥರಾಗಿ ಹೊಲಗಳಿಂದ ಮಧ್ಯಾಹ್ನ 3-4 ಗಂಟೆಯೊಳಗೇ ಮನೆಗೆ ಬಂದುಬಿಡುತ್ತಿರುವರಲ್ಲದೆ ಒಬ್ಬೊಬ್ಬರೇ ತಿರುಗಾಡದೆ ಗುಂಪುಕೂಡಿಕೊಂಡು ಹೊರಗೆ ಹೋಗುತ್ತಿರುವರು. ಪೋಲೀಸಿನವರಿಗೆ ಮೊರೆಯಿಟ್ಟುಕೊಂಡರೂ ಏನನ್ನೂ ಮಾಡಲಿಲ್ಲ. ಆದರೆ ಸಮರ್ಥರಾದ ಬೇಂಟೆಗಾರರು ಬಂದು ಆ ಕ್ರೂರಮೃಗವನ್ನು ಸಂಹರಿಸಲು ಕಾದುಕೊಂಡಿರುವರಾದರೂ ಅದು ಸಿಕ್ಕದೆ ತಪ್ಪಿಸಿಕೊಂಡಿರುವುದಂತೆ.

ಜಬ್ಬಲ್‌ಪುರದ ವಿಲಿಗನ್ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಡಾ|| ಸ್ಲೇಟರ್ ಎಂಬಾಕೆಯು ಭಾರತೀಯರನ್ನು ಗೌರವದಿಂದ ನೋಡುವುದಿಲ್ಲವೆಂದು ಅನೇಕ ಭಾರತೀಯರು ಅಸಮಾಧಾನಪಟ್ಟುಕೊಂಡು ದೂರುಮಾಡಿರುತ್ತಾರಾಗಿ, ಆ ಆಸ್ಪತ್ರೆಗೆ ಡಿಸ್ಟ್ರಿಕ್ಟ್‌ಬೋರ್ಡಿನಿಂದ ಕೊಡಲ್ಪಡುತ್ತಿರುವ ಮಾಸಾಶನವು ಹೆಚ್ಚಿಸಲ್ಪಡಕೂಡದೆಂದು 14 ಜನ ಮೆಂಬರುಗಳು ವಾದಿಸಿದುದರ ಮೇಲೆ ತನಗೆ ಅಪಮಾನವಾಯಿತೆಂದು ಆಕೆಯು ಆ 14 ಜನರಿಂದ 25,000 ರೂಪಾಯಿಗಳ ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಜಬ್ಬಲ್‌ಪುರದ ಡಿ|| ಜಡ್ಜಿಯವರಲ್ಲಿ ವಿವಾದವನ್ನು ಹೂಡಿದ್ದರು. ಬೋರ್ಡುಮೀಟಿಂಗಿನಲ್ಲಿ ಮಾಡಲ್ಪಟ್ಟ ರೆಜ್ಯುಲೇಷನ್ನಿನಲ್ಲಿ ವಾದಿಯ ನಡತೆಯ ವಿಚಾರವಾಗಿ ಹೇಳಿರುವ ವಿಷಯವು ನಿಜವಲ್ಲದಿರುವುದಾದರೂ ಅಸೂಯೆಯಿಂದ ಹೇಳಲ್ಪಟ್ಟಿಲ್ಲವಾದುದರಿಂದ ವಾದಿಗೆ ಪರಿಹಾರದ್ರವ್ಯಸಲ್ಲಿಸತಕ್ಕುದಾಗಿಲ್ಲವೆಂದು ತೀರ್ಮಾನಿಸಿದರು.

ಅಖಿಲಭಾರತ ರೈಲ್ವೆ ಕೆಲಸಗಾರರ ಸಂಘದವರು ಲಂಡನ್ನಿನಲ್ಲಿರುವ ಭಾರತ ಕೂಲೀರಕ್ಷಕ ಸಂಘದವರಿಗೆ ಈ ಪ್ರಕಾರ ತಂತೀವಾರ್ತೆಯನ್ನು ಕಳುಹಿಸಿರುವರು.—ಬಂಗಾಳಾ-ನಾಗಪುರ ರೈಲ್ವೆ ಕೆಲಸಗಾರರು 20 ಸಾವಿರ ಮಂದಿ ಕರಗಪುರದಲ್ಲಿ ಬಹಳ ಆಂದೋಳನಮಾಡಿರುವರು. ಅನ್ಯಾಯವಾಗಿ ಬಹಳ ಜನರನ್ನು ಕೆಲಸದಿಂದ ತೆಗೆದುಬಿಟ್ಟಿರುವುದರಿಂದಲೂ, ಮೆಕನಾಕಿಲ್ ಇಂಜನೀಯರಿಂಗು ಆಫೀಸಿನಲ್ಲಿರುವ ಗುಮಾಸ್ತರನ್ನು ಅಮಾನುಷವಾಗಿ ಅವಮಾನಪಡಿಸಿರುವುದರಿಂದಲೂ ಬಹಳ ಅಸಂತೃಪ್ತಿಯುಂಟಾಗಿದೆ. ಅಧಿಕಾರಿಗಳಿಗೆ ರಾಯಬಾರಿಗಳ ಮೂಲಕ ಹೇಳಿಕೊಂಡರೂ ಪ್ರಯೋಜನವಿಲ್ಲವಾಯಿತು. ಕೆಲಸಗಾರರು ಸಭೆಸೇರಿ ಅವಮಾನಕ್ಕೆ ಕಾರಣಭೂತರಾದ ಉದ್ಯೋಗಸ್ಥರನ್ನು ಕೆಲಸದಿಂದ ತೆಗೆದುಬಿಡಬೇಕು, ಇಲ್ಲ ಬೇರೆ ಕಡೆಗೆ ವರ್ಗಾಯಿಸಬೇಕು ಅಥವಾ ಶಿಕ್ಷಿಸಬೇಕು. ಈರೀತಿ ಫೆಬ್ರುವರಿ ತಾ|| 20 ರೊಳಗೆ ಮಾಡದಿದ್ದಲ್ಲಿ ಕೆಲಸಕ್ಕೆ ಹೋಗದೆ ನಿಂತುಬಿಡುವುದಾಗಿ ತೀರ್ಮಾನಿಸಿರುತ್ತೇವೆ. ಆಂಗ್ಲೇಯಮಿತ್ರರಿಗೂ ಆಮಸ್ಟರ್ಡಾಮ್ಮಿನ ಅಂತರಾಷ್ಟ್ರೀಯ ಸಂಘಕ್ಕೂ ಈ ಅಭಿಪ್ರಾಯವನ್ನು ತಿಳಿಸಬೇಕು.

ಬಳ್ಳಾರಿಕೋಟೆಯ ನೆರೆಯಲ್ಲಿ ಒಂದು ಚಿರತೆಯು ಸೇರಿಕೊಂಡು ಕುರಿಆಡುಗಳನ್ನು ತಿಂದು ಬಹಳ ಹಾವಳಿಯನ್ನು ಮಾಡುತ್ತಿದ್ದಿತು. ಇದನ್ನು ಕೊಲ್ಲುವುದಕ್ಕಾಗಿ ಪನ್ನಾಮಹಾರಾಜರಾದ ಮಾಧವಸಿಂಗ್‌ರವರು ಅದು ಸುಳಿದಾಡುವ ಸ್ಥಳದಲ್ಲಿ ಒಂದು ಆಡನ್ನು ಕಟ್ಟಿಹಾಕಿಸಿ ಅದರಿಂದ ಕೊಂಚದೂರದಲ್ಲಿ ಒಂದು ಅಟ್ಟಣೆಯನ್ನು ಕಟ್ಟಿಸಿ ಮದ್ದುಗುಂಡುಸಮೇತ ಅನೇಕ ರಾತ್ರಿ ನಿರೀಕ್ಷಿಸಿಕೊಂಡಿದ್ದಾಗ್ಯೂ ಅದನ್ನು ಗುಂಡಿನಿಂದ ಹೊಡೆಯಲು ಆಯಸಿಕ್ಕಲಿಲ್ಲವಾಗಿ ನಿರಾಶರಾಗಿ ಅಟ್ಟನೆಯಿಂದಿಳಿದುಬಂದಮೇಲೆ ತಾ|| 4 ರಲ್ಲಿ ಆ ಚಿರತೆಯುಬಂದು ಕುರಿಯನ್ನು ಕೊಂದು ತಿನ್ನದೆ ಅಲ್ಲೇ ಬಿಟ್ಟುಹೊರಟುಹೋಗಿದ್ದು ಮಾರನೆದಿನರಾತ್ರಿ ಬಂದು ಅದನ್ನು ಹೊತ್ತುಕೊಂಡುಹೋಗುವಷ್ಟರಲ್ಲಿ ಗುಂಡಿನಿಂದ ಸುಡಲ್ಪಟ್ಟಿತು. ಅದು ಬಾಲದಿಂದ ಮೂತಿಯವರೆಗೆ 7 ಅಡಿ 4 ಅಂಗುಲ ಉದ್ದವಿದ್ದಿತು ಮತ್ತು ಅದರ ಬೆನ್ನಿನಮೇಲೆ ಒಂದು ಗುಂಡಿನೇಟಿನ ಗುರ್ತು ಸಹ ಇದ್ದಿತು. ಇದೇ ಮಾಧವಸಿಂಗ್‌ರವರು ಒಂದು ತಿಂಗಳಹಿಂದೆ ಒಂದು ಚಿರತೆಯನ್ನು ಕೊಂದಿದ್ದರು. ಇವರು ಈವರೆಗೆ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಒಟ್ಟು 65 ಚಿರತೆಗಳನ್ನೂ, ಕರ್ನೂಲ್ ಡಿ|| ನಲ್ಲಮಲೆಯಲ್ಲಿ 7 ಹುಲಿಗಳನ್ನೂ ಕೊಂದಿರುವರು.

ವಿದೇಶದ ವೃತ್ತಾಂತಗಳು

ಇಟಲಿಯ ಪ್ರೆಸಿಡೆಂಟರಾದ ಸಿಗ್ನಾರ್ ಮುಸಲೋನಿಯು ಜರ್ಮನಿಯ ವಿಷಯವಾಗಿ ವಿರುದ್ಧ ಭಾಷಣಮಾಡಿದುದರ ಮೇಲೆ ಮ್ಯೂನಿಚ್ಚಿನ ಅಂಗಡಿಯವರೂ, ಮನೆಯ ಯಜಮಾನಿಯರೂ ಇಟಲಿಯ ಕಿತ್ತಲೆಹಣ್ಣುಗಳನ್ನು ಕೊಳ್ಳಬಾರದೆಂದು ಕಟ್ಟುಮಾಡಿಕೊಂಡಿರುವರಲ್ಲದೆ, ಇಟಲಿಗೆ ಹೋಗತಕ್ಕ ಜರ್ಮನರು ರಾಜದ್ರೋಹಿಗಳೆಂದು ಬರೆದಿರುವ ಪ್ರಕಟನಪತ್ರಿಕೆಗಳು ಎಲ್ಲ ರೈಲ್ವೆಸ್ಟೇಷನುಗಳಲ್ಲೂ ಹಂಚಲ್ಪಟ್ಟಿವೆ.

ಜರ್ಮನಿಯಲ್ಲಿ ಕೊರ್ನ್‌ಹೋಫ್ ಎಂಬವನು ಉಪವಾಸವನ್ನು ಕೈಕೊಳ್ಳುವುದರಲ್ಲಿ ತಾನು ಜಗತ್ತಿನಲ್ಲಿ ಪ್ರಮುಖನೆಂದು ಹೇಳಿಸಿಕೊಳ್ಳುವುದಕ್ಕಾಗಿ ಈಗ ಈ ವ್ರತವನ್ನು ಸಾಧಿಸುತ್ತಿರುವನು. ಈಗಾಗಲೇ ಮೂವತ್ತೊಂದು ದಿನಗಳನ್ನು ನಿರಾಹಾರದಿಂದ ಕಳೆದನು. ಸದಾ ಧೂಮಪಾನವನ್ನು ಮಾಡುತ್ತಿರುವನು. ಇನ್ನೂ ಈತನು 12 ದಿವಸಗಳ ಉಪವಾಸಮಾಡಬಹುದೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರೆಂದು ತಿಳಿದುಬರುತ್ತದೆ.

ಗ್ರೇಟ್‌ಬ್ರಿಟನ್ನಿನಲ್ಲಿ ಕೆಲದಿನಗಳಿಂದಲೂ ಮಳೆಯು ಅತ್ಯಧಿಕವಾಗಿ ಬೀಳುತ್ತಿರುವುದರಿಂದ ಲಂಡನ್ ನಗರದ ಸುತ್ತುಮುತ್ತಲೂ, ಮಧ್ಯದಲ್ಲೂ ನದಿಗಳಲ್ಲಿ ಪೂರ್ಣಪ್ರವಾಹ ಬಂದು ಮಾರ್ಗಗಳಲ್ಲೆಲ್ಲಾ ನೀರುನಿಂತಿದೆ. ಹಡಗಗಳು ದಡಕ್ಕೆಬಂದು ತಗುಲಿಕೊಂಡು ಅಪಾಯವನ್ನುಹೊಂದಿ ಬಹುಪ್ರಯಾಸದಿಂದ ಜನರ ಪ್ರಾಣವುಳಿಸಲ್ಪಟ್ಟಿತು. ಥೇಂಸ್‌ನದಿಯ ಪ್ರವಾಹದಿಂದ ಅನಾಹುತವಾಗದಂತೆ ಬಹಳ ಎಚ್ಚರಿಕೆಯು ತೆಗೆದುಕೊಳ್ಳಲ್ಪಡುತ್ತಿರುವುದು.

ಸೀಮೆಯಲ್ಲಿ ಒಂದು ನಾಯಿಯು ನೆರೆಮನೆಯ ಹುಡುಗಿಯನ್ನು ಕಡಿದುಕೊಂಡುಬಿಟ್ಟಿತ್ತೆಂಬ ಅಪರಾಧಕ್ಕಾಗಿ ಕೋರ್ಟಿನ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು, ಅದು ಕ್ರೂರಮೃಗವೆಂದು ಸಾಕ್ಷಿಯ ಹೇಳಿಕೆಯಿಂದ ಗೊತ್ತಾಗಿ ಪಂಚಾಯಿತರು ಅಪರಾಧಿಯೆಂದು ಅಭಿಪ್ರಾಯ ಪಟ್ಟುದರಮೇಲೆ ಮರಣದಂಡನೆ ವಿಧಿಸಲ್ಪಟ್ಟು ವಿದ್ಯುಲ್ಲತಾಪ್ರಯೋಗದಿಂದ ಕೊಂದುಹಾಕಲ್ಪಟ್ಟು, ಅದರ ತಲೆಯು ಪರೀಕ್ಷಾರ್ಥವಾಗಿ ಶೋಧನಾಲಯಕ್ಕೆ ಕಳುಹಲ್ಪಟ್ಟಿತು.

ಅಂಗೋರಾ ಸರಕಾರದಲ್ಲಿ ಒಬ್ಬನು ಹೆಚ್ಚುಮಂದಿ ಸ್ತ್ರೀಯರನ್ನು ವರಿಸಬಾರದೆಂದು ಕಾನೂನು ಇದೆ. **ಕಾನ್‌ಸ್ಟಾಂಟಿನೋಪಲ್‌ನಲ್ಲಿಯ ಒಬ್ಬ ಧನಿಕನು ಸರಕಾರದ ಆಜ್ಞಾವಿರುದ್ಧವಾಗಿ ೫೬ ಮಂದಿ ಅಂತಃಪುರಹೆಂಗುಸರನ್ನು ಇಟ್ಟುಕೊಂಡಿದ್ದನು. ಅವರನ್ನೆಲ್ಲ ಬಿಟ್ಟುಬಿಡುವುದಕ್ಕೆ ಆಜ್ಞಾಪಿಸಲು ಆ ಧನಿಕನು ತನ್ನ ಸ್ತ್ರೀಯರೊಡನೆ ಭೋಜನಕ್ಕೆ ಕುಳಿತು ವಿಷಮಿಶ್ರವಾದ ಆಹಾರವನ್ನು ಅವರಿಗೂ ತಿನ್ನಿಸಿ, ತಾನೂ ತಿಂದು ಎಲ್ಲರೂ ಮೃತರಾದರು.**

ವೈಟ್‌ಸ್ಟಾರ್ ಮೆಜೆಸ್ಟಿಕ್ ಹಡಗಿಗೆ ಒಂದು ಭೋಜನಮಂದಿರವು ಸಂಯೋಜಿಸಲ್ಪಟ್ಟಿರುವುದು. ಇದು 11,360 ಚದ

ಮ್ಯುನಿಸಿಪಲ್ ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಚಾಮರಾಜಮೊಹಲ್ಲಾ ವಾಣೀವಿಲಾಸ ರೋಡಿನಲ್ಲಿರುವ ಮಾರ್ಕೆಟ್ ಮತ್ತು ಅದರ ಸುತ್ತಲಿನ ನಿವೇಶನವನ್ನು ಬಹಿರಂಗವಾಗಿ ಸ್ಥಳದ ಬಳಿ ತಾರೀಖು 26-2-1926 ನೇ ಶುಕ್ರವಾರ ಬೆಳಿಗ್ಗೆ 8½ ಘಂಟೆಗೆ ಸರಿಯಾಗಿ ಹರಾಜುಮಾಡಲ್ಪಡುತ್ತೆ. ಇಷ್ಟವುಳ್ಳವರು ಛಡದರಖಾಸ್ತಿನಿಂದ ತಾರೀಖು 19-1-26 ರ 155 ನೇ ನಂಬರು ನೋಟಿಫಿಕೇಷನ್ ಷರತ್ತುಗಳಿಗೆ ಒಳಪಟ್ಟು ಸ್ಥಳವನ್ನು ಪಡೆಯಬಹುದು. ಹೆಚ್ಚಿಗೆ ಸಂಗತಿ ತಿಳಿಯಲಪೇಕ್ಷಿಸುವವರು ಆಫೀಸ್ ಇರತಕ್ಕ ಕಾಲಗಳಲ್ಲಿ ಹಾಜರಾಗಿ ತಮಗೆ ಬೇಕಾದ ವಿಷಯವನ್ನು ತಿಳಿದುಕೊಳ್ಳಬಹುದು.

K. ABDUL AZIZ,
for President,
City Municipal Council, Mysore.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಫೆಬ್ರವರಿ ತಾ|| ೧೩ನೆಯ ಶನಿವಾರ.

MR. ABDUR RAHMAN ON MUNICIPAL REGULATION.

Under the guise of ventilating his views on the proposed amendment of the Mysore Municipal Regulation, Mr. Abdur Rahman, President of the Bangalorre District Board and member of the Municipal Council has launched out on an attack on Mr. Abbas Khan, the President of the Bangalore City Municipal Council. He says that there should be no nominations to the Municipal Coucial at all, as there is no need of guarding the interests of any community. But we do not know who told this critic that nominations were there only for guarding the communal interests. He wants them not to forget that the nominations are for securing representation of interests. At the same time he finds fault with the Government for nominating Mr. Abbas Khan continuonsly for the last 16 years, "as if there are no other Musulman gentleman available." So that, the discussion about the amendments in the Regulation disappeared. It is now only a question of the choice of persons. This illogically minded critic next asks why Mr. Abbas Khan should have been nominated when there were already two Musulman gentleman elected to the Council. The very fact that he has been nominated when there were already two of his own community men in the Council shows it was not for merely guarding communal interests. How far Mr. Rahman is anxious for the civic welfare and progress is evident from the fact that he desires to make experience a disqualification. Could he not have thought for a moment that Mr. Abbas Khan, though a nominated member was elected as the President of the Municipal Councial and thus secured the confidence of the chosen representatives of the ratepayers themselves? It does strike extremely strange that Mr. Abdur Rahman, who is himself an elected President of the District Board should have deemed fit to make this thoughtless criticism. The other point of attack is with regard to the allowance drawn by the President of the Municipal Council which policy seems to have once been opposed by Mr. Abbas Khan himself. We do not know whether this is also a criticism of any of the proposed amendments. Anyway it does not look as though there is much of principle or policy in the criticism of Mr. Abdur Rahman, and we hope that no weight will be attached to the same. It should be our policy to welcome experienced workers into the field of civil and social service provided they are not otherwise dis-qualified. Let us hope that there will be greater wisdom and charity in the criticism of public men and public affairs.

A POSTAL COMPLAINT.

We regret to bring to the notice of the Postal Department the delay in the delivery of the issues of the *Mysore Star* to the addressees. Numerous are the complaints from our readers to this effect and we would be very thankful to the Postal Department if they could kindly issue necessary instructions in the matter.

ಮಿ|| ಅಬ್ದುರ್‌ರಹಿಮಾನ್‌ರವರೂ ಮ್ಯುನಿಸಿಪಲ್ ರೆಗ್ಯುಲೇಷನ್ನೂ.

ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ನಿಗೆ ಒಂದು ಸವರಣೆಯು ಸೂಚಿಸಲ್ಪಟ್ಟಿರುವುದರಮೇಲೆ ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರಾದ ಮಿ|| ಅಬ್ದುರ್‌ರಹಿಮಾನ್‌ರವರು ತಮ್ಮಭಿಪ್ರಾಯವನ್ನು ತಿಳಿಸುವ ನೆಪದಲ್ಲಿ ಬೆಂಗಳೂರು ಸಿಟಿಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮಿ|| ಅಬ್ಬಾಸ್ ಖಾನ್‌ರವರನ್ನು ಖಂಡಿಸಲುಪಕ್ರಮಿಸಿರುವರು. ಯಾವ ಪಂಗಡದ ಹಿತರಕ್ಷಣಾವಶ್ಯಕತೆಯೂ ಇಲ್ಲವಾದುದರಿಂದ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ನಾಮಿನೇಟೆಡ್ ಮೆಂಬರುಗಳು ಇರಬೇಕಾದುದಿಲ್ಲವೆಂದು ಅವರು ವಾದಿಸುತ್ತಾರೆ. ಪಂಗಡಗಳ ಕ್ಷೇಮಚಿಂತನೆಗೋಸ್ಕರವಾಗಿ ನಾಮಿನೇಷನ್ ಮಾಡುವುದೆಂದು ಈ ಆಕ್ಷೇಪಕರಿಗೆ ಯಾರು ಹೇಳಿದರೋ ತಿಳಿಯದು. ಆಯಾ ಪಂಗಡಗಳ ಹಿತಸಾಧನೆಗಾಗಿ ಮೆಂಬರುಗಳು ನಾಮಿನೇಷನ್ ಮಾಡಲ್ಪಡುವರೆಂಬುದನ್ನು ಮರೆಯಲಾಗದೆಂದು ಹೇಳುವುದಲ್ಲದೆ ಬೇರೆ ಯಾವ ಮಹಮ್ಮದೀಯದೊಡ್ಡಮನುಷ್ಯರೂ ಸಿಕ್ಕುವುದಿಲ್ಲವೆಂದು ಭಾವಿಸಿ ಕಳೆದ 16 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಮಿ|| ಮಹಮ್ಮದ್‌ಅಬ್ಬಾಸ್‌ಖಾನ್‌ರವರನ್ನು ನಾಮಿನೇಷನ್ ಮಾಡುತ್ತಿರುವುದಕ್ಕಾಗಿ ಪ್ರಭುತ್ವದವರ ಮೇಲೆ ದೋಷಾರೋಪಣೆ ಮಾಡಿರುತ್ತಾರೆ. ಇದರಿಂದ ರೆಗ್ಯುಲೇಷನ್ನಿನ ಸವರಣೆಯ ವಿಚಾರವಾದ ಚರ್ಚೆಯು ಎಲ್ಲಿಯೋ ಮಾಯವಾದಂತಾಯಿತು. ವ್ಯಕ್ತಿಯನ್ನು ಆರಿಸುವ ವಿಚಾರವಾಗಿ ಈಗ ತಾನೆ ಪ್ರಶ್ನಿಸಲ್ಪಡತಕ್ಕುದಾಗಿದೆ. ಈ ನ್ಯಾಯವಿರುದ್ಧಾಭಿಪ್ರಾಯದ ಆಕ್ಷೇಪಕರು ಮ್ಯು|| ಕೌನ್ಸಿಲಿಗೆ ಇಬ್ಬರು ಮಹಮ್ಮದೀಯ ಮೆಂಬರುಗಳು ಮೊದಲೇ ಇರುವುದರಿಂದ ಪುನಃ ಮಿ|| ಅಬ್ಬಾಸ್‌ಖಾನ್‌ರವರನ್ನು ನಾಮಿನೇಷನ್ ಮಾಡಬೇಕಾದುದರ ಕಾರಣವೇನೆಂದು ಕೇಳಿರುತ್ತಾರೆ. ಸ್ವಮತಸ್ಥರಿಬ್ಬರು ಕೌನ್ಸಿಲಿನಲ್ಲಿದ್ದಾಗ್ಯೂ ಮಿ|| ಅಬ್ಬಾಸ್‌ಖಾನ್‌ರವರು ನಿಯಮಿಸಲ್ಪಟ್ಟಿರುವುದು ಪಂಗಡಗಳ ಹಿತಚಿಂತನೆಗಾಗಿಯಲ್ಲವೆಂಬುದು ಸುವ್ಯಕ್ತವಾಗುತ್ತದೆ. ಅನುಭವವು ಒಂದು ಅನರ್ಹತೆಯಲ್ಲವೆಂದು ಹೇಳುವುದರಿಂದಲೇ ಮಿ|| ಅಬ್ದುರ್‌ರಹಿಮಾನ್‌ರವರು ಎಷ್ಟರಮಟ್ಟಿಗೆ ಪೌರಕಾರ್ಯಹಿತಚಿಂತಕರೆಂಬುದು ವ್ಯಕ್ತವಾಗುವುದು. ಮಿ|| ಅಬ್ಬಾಸ್‌ಖಾನ್‌ರವರು ನಾಮಿನೇಟೆಡ್ ಕೌನ್ಸಿಲರಾಗಿದ್ದಾಗ್ಯೂ ಕೌನ್ಸಿಲಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟುದರಿಂದ ಕಂದಾಯದಾರರ ಪ್ರತಿನಿಧಿಗಳ ಪೂರ್ಣವಿಶ್ವಾಸಕ್ಕೆ ಪಾತ್ರರಾಗಿರುವರೆಂಬುದನ್ನು ಮಿ|| ಅಬ್ದುರ್‌ರಹಿಮಾನ್‌ರವರು ಒಂದು ಕ್ಷಣಕಾಲವಾದರೂ ಯೋಚಿಸಬಾರದಾಗಿದ್ದಿತೆ? ಸ್ವತಃ ಡಿಸ್ಟ್ರಿಕ್ಟ್‌ಬೋರ್ಡಿನ ಎಲೆಕ್ಟೆಡ್ ಪ್ರೆಸಿಡೆಂಟರಾಗಿರುವ ಮಿ|| ಅಬ್ದುರ್‌ರಹಿಮಾನ್‌ರವರು ಈ ವಿಚಾರಶೂನ್ಯವಾದ ಆಕ್ಷೇಪವನ್ನು ಮಾಡಿರುವುದು ಪರಮಾಶ್ಚರ್ಯಕರವಾಗಿದೆ. ಮ್ಯುನಿಸಿಪಲ್ ಪ್ರೆಸಿಡೆಂಟರ ಅಲೋಯನ್ಸ್ ವಿಚಾರದಲ್ಲಿ ಮಿ|| ಅಬ್ಬಾಸ್‌ಖಾನ್‌ರವರು ಹಿಂದೊಂದಾವರ್ತಿ ಆಕ್ಷೇಪಿಸಿದ್ದವರು ಈಗ ತಾವೇ ಅಲೋಯನ್ಸ್ ತೆಗೆದುಕೊಳ್ಳುತ್ತಿದ್ದಾರೆಂಬುದು ಮಿ|| ಅಬ್ದುರ್‌ರಹಿಮಾನ್‌ರವರ ಮತ್ತೊಂದು ಆಕ್ಷೇಪಣೆಯಾಗಿದೆ. ಈಗ ಸೂಚಿತವಾಗಿರುವ ಸವರಣೆಯವಿಚಾರದಲ್ಲಿ ಇದೂ ಒಂದು ಆಕ್ಷೇಪವೆಂಬುದು ನಮಗೆ ಗೊತ್ತಾಗುವುದಿಲ್ಲವು. ಮುಖ್ಯವಾಗಿ ಮಿ|| ಅಬ್ದುರ್‌ರಹಿಮಾನ್‌ರವರ ಆಕ್ಷೇಪವು ಒಂದು ನೀತಿಯನ್ನಾಗಲಿ, ಕ್ರಮವನ್ನಾಗಲಿ ಅನುಸರಿಸಿರುವುದೆಂದು ತೋರುವುದಿಲ್ಲ ಮತ್ತು ಇದಕ್ಕೆ ಯಾವ ಮಹತ್ವವೂ ಕೊಡಲ್ಪಡತಕ್ಕುದಾಗಿಲ್ಲವೆಂದು ನೆನೆಸುತ್ತೇವೆ. ಪೌರಸಾಮಾಜಿಕಕಾರ್ಯಗಳಲ್ಲಿ ಅನರ್ಹರೆಂದು ತೋರದವರ ವಿನಾ ಪೂರ್ಣಾನುಭವಿಗಳ ಸಹಾಯವನ್ನು ಅಪೇಕ್ಷಿಸುವುದು ನಮ್ಮ ಮುಖ್ಯತತ್ವವಾಗಿರಬೇಕು. ಪೌರಕಾರ್ಯನಿರ್ವಾಹಕರನ್ನೂ, ಪೌರಕಾರ್ಯಗಳನ್ನೂ ಖಂಡಿಸುವುದರಲ್ಲಿ ವಿಶೇಷ ವಿವೇಕೌದಾರ್ಯವು ತೋರಿಸಲ್ಪಡುವುದಾಗಿ ನಿರೀಕ್ಷಿಸುತ್ತೇವೆ.

ಇಂದೂರು ಮಹಾರಾಜರ ವಿಚಾರಣೆ.

ಬಾವಲಾಕೊಲೆಯ ಮತ್ತು ಮಮತಜಂಬೇಗಂಳ ಅಪಹರಣದ ವಿಚಾರದಲ್ಲಿ ಇಂದೂರು ಮಹಾರಾಜರ ಸಂಬಂಧವಿರುವುದೆಂಬುದರ ನಿಜಾಂಶವನ್ನು ಕಂಡುಹಿಡಿಯುವುದಕ್ಕಾಗಿ ಭಾರತ ಪ್ರಭುತ್ವದವರಿಂದ ನಿಯಮಿಸಲ್ಪಡುವ ಕಮೀಷನ್ನಿನವರ ವಿಚಾರಣೆಗೆ ಮಹಾರಾಜರವರು ಒಳಪಡಬೇಕೆ ಬೇಡವೆ ಎಂಬುದನ್ನು ಸರ್ ಪಿ. ಎಸ್. ಶಿವಸ್ವಾಮಯ್ಯರ್‌ರವರೂ, ಸರ್ ತೇಜ್ ಬಹದ್ದೂರ್ ಸಪ್ರೂಯವರೂ ಚೆನ್ನಾಗಿ ಪರ್ಯಾಲೋಚಿಸಿ ಮಹಾರಾಜರವರು ಕಮೀಷನ್ನಿನವರಿಂದ ವಿಚಾರಿತರಾಗುವುದೇ ಯುಕ್ತವೆಂದು ನಿರ್ಧರಿಸಿರುವುದಾಗಿ ವರ್ತಮಾನವಿದೆ. ಈ ಕೊಲೆಯ ಮತ್ತು ಅಪಹರಣದ ಪ್ರಕರಣದಲ್ಲಿ ಇಂದೂರು ಮಹಾರಾಜರವರು ಲಕ್ಷಾಂತರ ರೂಪಾಯಿಗಳನ್ನು ಪಾಳ್ಮಾಡಿದರೆಂದೂ, ಸೀಮೆಯ ಬ್ಯಾರಿಸ್ಟರುಗಳ ಅಭಿಪ್ರಾಯವನ್ನು ಕೇಳುವುದಕ್ಕಾಗಿ ಬಹಳ ಹಣವನ್ನು ವೆಚ್ಚಮಾಡಿದರೆಂದೂ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟು ಮನಸ್ವೀ ವ್ಯಾಖ್ಯಾನಮಾಡಲ್ಪಟ್ಟು ಜನರ ಮನಸ್ಸು ಕೆಡಿಸಲ್ಪಡುತ್ತಿರುವುದು. ಈ ವಿಚಾರದಲ್ಲಿ ಈವರೆಗೆ ಲೇಶಮಾತ್ರ ದ್ರವ್ಯವ್ಯಯಮಾಡಲ್ಪಟ್ಟಿಲ್ಲವೆಂದೂ, ಸೀಮೆಯ ಬ್ಯಾರಿಸ್ಟರುಗಳ ಅಭಿಪ್ರಾಯ ಕೇಳಲ್ಪಟ್ಟಿಲ್ಲವೆಂದೂ ಮೊದಲಾಗಿ ಸಂಸ್ಥಾನದ ದಿವಾನರಾದ ಮ|| ಸಿ. ಎಂ. ನರಸಿಂಗರಾಯರು ವೃತ್ತಪತ್ರಿಕೆಗೆ ಬರೆದಿರುತ್ತಾರೆ. ಕೃತಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸಿದ ಅಪರಾಧಿಗಳಾರೂ ತಮ್ಮ ವಿಚಾರಣೆಯಲ್ಲಿ ಮಹಾರಾಜರ ಸಂಬಂಧವನ್ನು ಯಾವ ಸಂದರ್ಭದಲ್ಲೂ ಹೇಳಿಲ್ಲವಾದುದರಿಂದ ಅವರ ವಿಚಾರಣೆಯನ್ನು ಕಮೀಷನ್ನಿನವರ ಮೂಲಕ ಮಾಡಿಸಲು ಕಾರಣವೇ ಇರುವುದಿಲ್ಲವಾದಪ್ರಯುಕ್ತ ಪ್ರಭುತ್ವದವರು ಅವರನ್ನು ಬಲವಂತಪಡಿಸುವುದಾಗಲಿ, ಕಮೀಷನ್ನನ್ನು ನಿಯಮಿಸುವುದಾಗಲಿ ಧರ್ಮವಲ್ಲವೆಂದು ಮೊದಲಾಗಿ ವೃತ್ತಪತ್ರಿಕೆಗಳಲ್ಲಿ ಚರ್ಚೆಯು ನಡೆಯುತ್ತಿದೆ.

ಸ್ವದೇಶದ ವೃತ್ತಾಂತಗಳು.

ಬರುವ ಈಸ್ಟರ್ ರಜಾಕಾಲದಲ್ಲಿ ಗಣಿತಶಾಸ್ತ್ರಮಹಾಸಭೆಯು ಬೆಂಗಳೂರಿನಲ್ಲಿ ನಡೆಯಿಸಲ್ಪಡುವುದಾಗಿ ಯೋಚಿಸಲ್ಪಟ್ಟಿದೆ.

ಸರ್ ಪ್ರಶಸ್ತಿಯನ್ನು ಪಡೆಯಲು ದಿಲ್ಲಿಗೆ ದಯೆಮಾಡಿಸಿದ್ದ ದಿವಾನ್ ಸರ್ ಎ. ಬಾನರ್ಜಿಯವರು ಕಳೆದ ತಾ|| 8 ರ ಸಾಯಂಕಾಲ ಬೆಂಗಳೂರಿಗೆ ಹಿಂದಿರುಗಿ ಬಂದರು.

ಸಂಸ್ಥಾನದ ರೈಲ್ವೆಏಜಂಟರಾದ ಮಿ|| ಡೌವಿಲ್ಸನ್‌ರವರಿಗೆ ಬರುವ ಏಪ್ರಿಲ್ ತಾ|| 1ರಿಂದ 1 ವರ್ಷಕಾಲ ಉದ್ಯೋಗದವಧಿಯು ಹೆಚ್ಚಿಸಲ್ಪಟ್ಟಿರುವುದಾಗಿ ವದಂತಿಯಿದೆ.

ಇಂಡಿಯಾ ಸರ್ಕಾರದ ರೈಲ್ವೆ ಸೀನಿಯರ್ ಇನ್ಸ್‌ಪೆಕ್ಟರು ಈ ಸೀಮೆಯ ರೈಲ್ವೆಸ್ಥಿತಿಯನ್ನು ಪರೀಕ್ಷಿಸುವುದಕ್ಕಾಗಿ ಈ ತಾ|| 21 ರಲ್ಲಿ ತರೀಕೆರೆ ಮಾರ್ಗವಾಗಿ ಶಿವಮೊಗ್ಗೆಗೆ ಹೋಗುವವರಾಗಿರುವರು.

ಮ|| ಗಳಾದ ಆದಿನಾರಾಯಣಸೆಟ್ಟರು, ಸಿ. ಶೇಷಾದ್ರಿ ಅಯ್ಯರ್ರು, ಮತ್ತು ಎಚ್. ಕೃಷ್ಣಾಚಾರರು ರಾಜಧಾನಿಯ ಬೆಂಚ್ ಕೋರ್ಟಿನ ಎರಡನೇ ತರಗತಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಆರೋಗ್ಯವರ್ಧನಕ್ಕಾಗಿ ಪುದಚೇರಿಗೆ ದಯೆಮಾಡಿಸಿದ್ದ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರು ಇನ್ನು 4-5 ದಿವಸಗಳಲ್ಲಿ ಹಿಂದಿರುಗಿ ಬರುತ್ತಾರೆಂದೂ, ಈ ಫಾಲ್ಗುನಮಾಸದಲ್ಲಿ ತಮ್ಮ ದ್ವಿತೀಯಕುಮಾರಿಯ ವಿವಾಹಮಹೋತ್ಸವವನ್ನು ನೆರವೇರಿಸುವವರಾಗಿರುವರೆಂದೂ ಕೇಳುತ್ತೇವೆ.

ಮುನಸೀಫರುಗಳಾದ ಮ|| ಎಚ್. ಕೃಷ್ಣಸ್ವಾಮಿಯವರು ರಾಜಧಾನಿಯಿಂದ ತುಮಕೂರಿಗೂ, ಮ|| ರಾಮಚಂದ್ರಶಾಸ್ತ್ರಿಗಳು ನಂಜನಗೂಡಿನಿಂದ ರಾಜಧಾನಿಗೂ, ಮ|| ಎಚ್. ಕೆ. ವೀರಬಸವಯ್ಯನವರು ಶ್ರೀರಂಗಪಟ್ಟಣದಿಂದ ನಂಜನಗೂಡಿಗೂ ವರ್ಗಾಯಿಸಲ್ಪಡುವುದಾಗಿ ವರ್ತಮಾನವಿದೆ.

1926 ನೆಯ ಜನವರಿ ತಾ|| 23 ಕ್ಕೆ ಕಡೆಯಾದ ವಾರದಲ್ಲಿ ಮೈಸೂರುಸಂಸ್ಥಾನದಿಂದ ನಡಿಸಲ್ಪಡುವ ರೈಲ್ವೆಗಳಿಂದ 61,500 ರೂ. ಅಂದರೆ ಹೋದವರ್ಷ ಇದೇಕಾಲದಲ್ಲಿ ಆಗಿದ್ದುದಕ್ಕಿಂತ 559 ರೂ. ಇದೇ ವರ್ಷದ ಕಳೆದವಾರ ಆಗಿದ್ದುದಕ್ಕಿಂತ 3,100 ರೂ. ಹೆಚ್ಚಾಗಿ ಉತ್ಪನ್ನವಾಗಿರುತ್ತದೆ.

ಮಿ|| ಟಿ. ಎಸ್. ಅಲ್ಲಿಖಾನ್‌ರವರು ಸಂಪದಭ್ಯುದಯಪತ್ರಿಕೆಯಮೇಲೆ ಮಾಡಿರುವ ಮಾನನಷ್ಟದ ಕೇಸಿನಲ್ಲಿ ಫಿರ್ಯಾದಿಪರ ಆರ್ಗ್ಯುಮೆಂಟು ಕಳೆದ ತಾ|| 8 ರಲ್ಲೂ ಅಪರಾಧಿಗಳಪರ ಆರ್ಗ್ಯುಮೆಂಟು ತಾ|| 9 ರಲ್ಲೂ ನಡೆದುವು ಮತ್ತು ಅವುಗಳಮೇಲಿನ ಕೋರ್ಟು ಆರ್ಡರು ಈ ತಾ|| 15 ರಲ್ಲಿ ಹೇಳಲ್ಪಡುವುದು.

ಕಳೆದ ಮಂಗಳವಾರ ರೆವಿನ್ಯೂಕಮೀಷನರ್ ಮ|| ಸಿ. ಎಸ್. ಬಾಲಸುಂದರಂಅಯ್ಯರ್‌ರವರು ಬೆಂಗಳೂರು ಫ್ರೀಮೇಸನ್ ಲಾಡ್ಜಿನ ವರ್ಷಿಪ್‌ಫುಲ್‌ಮಾಸ್ಟರಾಗಿ ಪಟ್ಟಕಟ್ಟಲ್ಪಟ್ಟುದರ ಸಂತೋಷಾರ್ಥವಾಗಿ ಲಾಡ್ಜು ಮೆಂಬರುಗಳೆಲ್ಲರೂ ದಿವ್ಯವಾದೌತಣದಿಂದ ಸತ್ಕರಿಸಲ್ಪಟ್ಟು ನೂತನಪಟ್ಟಾಂಚಿತರ ಆಯುರಾರೋಗ್ಯವು ಬಯಸಲ್ಪಟ್ಟಿತು.

ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮ|| ಬಿ. ಕೆ. ಗರುಡಾಚಾರರು ಮಿ|| ಅಬ್ಬಾಸ್‌ಖಾನ್‌ರವರು ಮೊದಲಾಗಿ 6 ಜನ ಮ್ಯುನಿಸಿಪಲ್‌ಕೌನ್ಸಿಲರುಗಳಮೇಲೆ ಮಾಡಿರುವ ಮಾನನಷ್ಟದ ವಿವಾದವು ಈ ತಾ|| 10 ರಲ್ಲಿ ನಡಿಯಬೇಕಾಗಿದ್ದುದು ಜಡ್ಜಿಯವರ ಅಸ್ವಸ್ಥಯದೆಸೆಯಿಂದ ಬರುವ ಜೂನ್ ತಾ|| 1 ಕ್ಕೆ ಅಡ್ಜರ್ನ್ ಮಾಡಲ್ಪಟ್ಟಿತು.

ಶ್ರೀರಾಮಕೃಷ್ಣಪರಮಹಂಸರವರ ಪುಣ್ಯತಿಥಿಯು ಈ ತಾ|| 14 ರಲ್ಲಿ ರಾಜಧಾನಿಯಲ್ಲಿರುವ ಶ್ರೀರಾಮಕೃಷ್ಣಾಶ್ರಮದಲ್ಲಿ ನಡೆದು ತತ್ಸಂಬಂಧವಾದ ಉಪನ್ಯಾಸವು ಮಾರನೆಯ ದಿನ ಧರ್ಮಪ್ರಕಾಶ ಡಿ|| ಬನುಮಯ್ಯನವರ ಹೈಸ್ಕೂಲುಕಟ್ಟಡದಲ್ಲಿ ರಿಟೈರ್ಡ್ ಡೆ|| ಕಮೀಷನರ್ ಮ|| ಕೆ. ಮೈಲಾರಿರಾಯರ ಅಧ್ಯಕ್ಷತೆಯಲ್ಲಿ ಮಹಾರಾಜಾಕಾಲೇಜ್ ಪ್ರೊಫೆಸರಾದ ಮ|| ವೆಂಗಟೇಶಂ ಎಂ.ಎ., ಇವರಿಂದ ಮಾಡಲ್ಪಡುವುದು.

ತರೀಕೆರೆಯಲ್ಲಿ ಪ್ಲೇಗುರೋಗವು ಉಲ್ಬಣವಾಗಿದ್ದು ಕಳೆದ ತಾ|| 6 ರಲ್ಲಿ 9 ಜನರಿಗೆ ತಗುಲಿ 2 ಮರಣಗಳಾದುವು. ರೈಲ್ವೆ ಸ್ಟೇಷನ್ನಿನಲ್ಲಿ ಇಲಿ ಸತ್ತಿದ್ದುದರಿಂದ ಸ್ಟೇಷನ್ನು ಡಿಸ್‌ಇನ್‌ಫೆಕ್ಟ್‌ಮಾಡಲ್ಪಟ್ಟಿತು. ಕೊಪ್ಪ ತಾ|| ನಲ್ಲೂ, ಮೇಗುಂದಹೋಬಳಿಯಲ್ಲೂ ದನಗಳಿಗೆ ದೊಡ್ಡರೋಗಪ್ರಾಪ್ತವಾಗಿ ಈವರೆಗೆ 63 ದನಗಳು ಸತ್ತಿರುತ್ತವೆ. ಪಶುವೈದ್ಯಶಾಖೆಯಿಂದ ತಕ್ಕ ಪ್ರಯೋಜನವಾಗುತ್ತಿಲ್ಲವೆಂದು ರೈತರುಗಳು ದೂರುತ್ತಿರುವರಂತೆ.

ಅಖಿಲಕರ್ನಾಟಕ ಆಯುರ್ವೇದ ದ್ವಿತೀಯಮಹಾಸಭೆಯು ನಾಳೆಯದಿವಸ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಕೋಟೆಯ ದಕ್ಷಿಣಭಾಗದಲ್ಲಿರುವ ಶಂಕರಯ್ಯನವರ ಹಾಲಿನಲ್ಲಿ ಆರಂಭವಾಗಿ ಬೆಳಗಾವಿಯ ಪ್ರಸಿದ್ಧ ವೈದ್ಯರಾದ ಮ|| ಹನುಮಂತ ವೆಂಕಟೇಶ ಸವಣೂರ್, ಎಲ್. ಎಂ. ಅಂಡ್ ಎಸ್ ರವರ ಅಧ್ಯಕ್ಷತೆಯಲ್ಲಿ ಜರುಗುವುದಲ್ಲದೆ ಆಯುರ್ವೇದವೈದ್ಯವಸ್ತುಪ್ರದರ್ಶನವು ದಿವಾನ್‌ಬಹದ್ದೂರ್ ರಾಜಧರ್ಮಪ್ರವೀಣ ಮ|| ಕೆ. ಚಂದ್ರಶೇಖರಯರ್‌ರವರಿಂದುಪಕ್ರಮಿಸಲ್ಪಡುವುದು. ಈ ಮಹಾಸಭೆಗೆ ನಾನಾದೇಶಗಳಿಂದ ವೈದ್ಯರುಗಳು ಪ್ರತಿನಿಧಿಗಳಾಗಿಯೂ ಪ್ರೇಕ್ಷಕರಾಗಿಯೂ ಬರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಬೆಂಗಳೂರು ಪಟ್ಟಣಕ್ಕೆ ಕುಡಿಯುವ ನೀರನ್ನೊದಗಿಸುವ ಹೆಸರುಘಟ್ಟದ ಕೆರೆಯಲ್ಲಿ 3-3½ ತಿಂಗಳಮಟ್ಟಿಗೆ ಸಾಕಾಗುವಷ್ಟು ನೀರಿರುವುದರಿಂದ 15-20 ಮೈಲಿದೂರದಲ್ಲಿರುವ ಎಲೆಮಲ್ಲಪ್ಪಶೆಟ್ಟರ ಕೆರೆಯನ್ನೊಡೆದು ಅದರ ನೀರನ್ನು ಹೆಸರುಘಟ್ಟದ ಕೆರೆಗೆ ಬಿಟ್ಟುಕೊಳ್ಳುವುದಕ್ಕಾಗಿ ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿಯವರು ಸಾವಿರಾರು ರೂಪಾಯಿಗಳನ್ನು ವ್ಯಯಮಾಡಲು ನಿರ್ಧರಿಸಿರುವರು. ಅಲ್ಲಿ ಈರೀತಿ ನೀರಿಗೆ ಅಭಾವವಾಗಿರುವುದರಿಂದ ಅತ್ಯಂತ ಮಿತವಾಗಿ ನೀರು ಬಳಸಲ್ಪಡುತ್ತಿರುವುದು ಸಹಜವಾಗಿರುವುದು. ಆದರೆ ಲಕ್ಷಾಂತರ ರೂಪಾಯಿಗಳನ್ನು ನುಂಗಿರುವ ಕನ್ನಂಬಾಡಿಜಲಾಶಯದ ಸಹಾಯವು ರಾಜಧಾನಿಗಿರುವುದಾದರೂ ಇಲ್ಲಿ ನೀರಿಗೆ ಬಡತನಬಂದಿರುವುದು ಸೋಜಿಗವಾಗಿದೆ.

ರಾಜಧಾನಿಯಲ್ಲಿ ವಾಸವಾಗಿರುವ ಇನಾಂದಾರರುಗಳು ಅಂದರೆ ಮ|| ಗಳಾದ ರಿಟೈರ್ಡ್ ಎಕ್ಸೈಸ್ ಕಮೀಷನರ್ ಎ. ಸುಬ್ರಹ್ಮಣ್ಯಯ್ಯರ್‌ರವರು, ರಿ|| ಅಮೃತಮಹಲ್ ಸೂಪರಿಂಟೆಂಡೆಂಟ್ ಲೋಕಹಿತೈಷಿ ಎಚ್. ನಂಜುಂಡರಾಜಅರಸಿನವರು, ರಿ|| ಸೂ|| ಇಂಜನೀರ್ ರಾವ್‌ಬಹದ್ದೂರ್ ರಾಜಶಿಲ್ಪಿವಿಶಾರದ ಬಿ. ಸುಬ್ಬರಾಯರು, ಅರಮನೆ ಮುಜರಾಯಿಬಕ್ಷಿ ರಾಜಕವಿಭೂಷಣ ಮ|| ಎಚ್. ಲಿಂಗರಾಜಅರಸಿನವರು, ಅ|| ಕಮೀಷನರ್ ಎಂ. ಎಸ್. ಬಾಳರಾಜಅರಸಿನವರು, ಅಡ್ವೊಕೇಟ್ ಎಂ. ಡಿ. ನಾರಣಯ್ಯಂಗಾರರು, ಗನ್ನಹಳ್ಳಿ ಜಹಗೀರ್ದಾರ್ ಮ|| ಕೃಷ್ಣರಾವ್ ವೆಂಕಟರಾವ್‌ರವರು, ಎಸ್. ನಂಜರಾಜಅರಸಿನವರು, ಎ. ವಿ. ಸಿದ್ದರಾಜಅರಸಿನವರು ಮೊದಲಾದ ದೊಡ್ಡ ಮನುಷ್ಯರುಗಳು ಲೋಕಹಿತೈಷಿ ಮ|| ಎಚ್. ನಂಜುಂಡರಾಜಅರಸಿನವರ ಬಂಗಲೆಯಲ್ಲಿ ಅವರ ಅಧ್ಯಕ್ಷತೆಯಲ್ಲೇ ಸಭೆಸೇರಿದ್ದು ತಮ್ಮ ಜಹಗೀರುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪರ್ಯಾಲೋಚಿಸಿ ಅವುಗಳ ಅಭಿವೃದ್ಧಿಗೆ ಬೇಕಾದೇರ್ಪಾಟನ್ನು ಮಾಡಿಕೊಳ್ಳುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸುವುದರ ಆವಶ್ಯಕತೆಯ ವಿಚಾರವಾಗಿ ಚರ್ಚೆಯನ್ನು ನಡೆಯಿಸಿ, ಮೈಸೂರು ಡಿಸ್ಟ್ರಿಕ್ಟ್ ಇನಾಂದಾರರ ಸಂಘವನ್ನು ಸ್ಥಾಪಿಸಿ ಅದಕ್ಕೆ ಮ|| ಗಳಾದ ಎಚ್. ನಂಜುಂಡರಾಜಅರಸಿನವರು ಅಧ್ಯಕ್ಷರಾಗಿಯೂ, ಮ|| ಬಿ. ಸುಬ್ಬರಾಯರು ಉಪಾಧ್ಯಕ್ಷರಾಗಿಯೂ, ಮ|| ಕೃಷ್ಣರಾವ್ ವೆಂಕಟರಾವ್ ಇವರು ಸೆಕ್ರೆಟರಿಯಾಗಿಯೂ ಮ|| ಗಳಾದ ಎ. ಸುಬ್ರಹ್ಮಣ್ಯಯ್ಯರ್‌ರವರು, ರಾಜಕವಿಭೂಷಣ ಎಚ್. ಲಿಂಗರಾಜಅರಸಿನವರು, ಎಂ. ಅನಂತರಾಜಯ್ಯನವರು ಮತ್ತೆ ಕೆಲವರು ಕಾರ್ಯನಿರ್ವಾಹಕ ಮೆಂಬರುಗಳಾಗಿಯೂ ಇರಬೇಕೆಂದು ನಿರ್ಧರಿಸಿದರು.

ಭರತಖಂಡದ ವೃತ್ತಾಂತಗಳು.

ಬರ್ಮಾ ಸೀಮೆಯೆಣ್ಣೆಯ ಗಣಿಗಳಲ್ಲಿ ಕೆಲಸಮಾಡುವ 5,000 ಜನರು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವರು.

ಹಿಂದೂ ಮಹಾಸಭೆಯು ಬರುವ ಮಾರ್ಚಿ ತಾ|| 13, 14 ಮತ್ತು 15 ರಲ್ಲಿ ನಡೆಯುವುದಾಗಿ ಗೊತ್ತಾಗಿರುವುದು.

ಪೂನಾಪಟ್ಟಣದಲ್ಲಿ ಮಹಾರಾಷ್ಟ್ರ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಬೊಂಬಾಯಿನ ವಿಶ್ವವಿದ್ಯಾಲಯದಲ್ಲಿ ಅಂಗೀಕರಿಸಲ್ಪಟ್ಟಿತು.

ಬೊಂಬಾಯಿನ ಮ್ಯುನಿಸಿಪಾಲಿಟಿಯವರು ಬೊಂಬಾಯಿ ಪಟ್ಟಣದಲ್ಲಿ ಮಲೇರಿಯಾಜ್ವರನಿವಾರಣೋಪಾಯಗಳಿಗಾಗಿ 47,000 ರೂಪಾಯಿಗಳನ್ನು ವೆಚ್ಚಮಾಡಲು ನಿರ್ಧರಿಸಿರುವರು.

ಸೂರ್ಯಮಂಡಲದ ಕೆಲವು ಭಾಗಗಳಲ್ಲಿ ಉಷ್ಣವು ಕಡಿಮೆಯಾಗುತ್ತಿರುವುದರಿಂದ ಭೂಮಿಯಲ್ಲಿ ಅತಿವೃಷ್ಟಿ, ಅನಾವೃಷ್ಟಿಗಳು ಉಂಟಾಗುವುದಕ್ಕೆ ಕಾರಣವೆಂದು ಕೆಲ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

ಅಫ್ಘಾನ ಸಂಸ್ಥಾನದ ಅಮೀರರು ತಮ್ಮ ರಾಜ್ಯದಲ್ಲಿ ಹಿಂದೂ ಮುಸಲ್ಮಾನರಿಗೆ ಬೇರೆಬೇರೆ ಶಾಲೆಗಳಿರಬಾರದೆಂದೂ, ಹಣದಾಸೆಯಿಂದ ಯಾರನ್ನೂ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳಲಾಗದೆಂದೂ ವಿಧಿಸಿರುತ್ತಾರೆ.

ಮಹಾತ್ಮ ಗಾಂಧಿಯವರು ಆರೋಗ್ಯಸಂಪಾದನೆಗಾಗಿ ಬರುವ ತಿಂಗಳಲ್ಲಿ ಕೆಲವು ಪರ್ವತಪ್ರದೇಶಗಳಲ್ಲಿ ವಾಸಮಾಡುವುದಾಗಿ ನಿಶ್ಚಯಿಸಿರುವರು. ಇವರು ಈಗಲೂ ಹಣ್ಣು ಮತ್ತು ಹಾಲು ಇಷ್ಟುಮಾತ್ರ ಸೇವಿಸುತ್ತಿರುವರು.

ಅಜಾಗರೂಕತೆಯಿಂದ ಕಡಿಮೆ ಸ್ಟಾಂಪಿನ ಕಾಗದದ ಮೇಲೆ ಬರೆಯಲ್ಪಟ್ಟ ಪ್ರೋನೋಟುಗಳು ಈಗ ಕೋರ್ಟುಗಳಲ್ಲಿ ಅಂಗೀಕರಿಸಲ್ಪಡುತ್ತಿಲ್ಲವಾದಪ್ರಯುಕ್ತ ಅಂತಹ ಪ್ರೋನೋಟುಗಳು ಹಿಡಿಯಲ್ಪಡದೇಲೆಂಬಗೆಗೆ ಒಂದು ಚಟ್ಟವು (ಬಿಲ್ಲು) ಭಾರತ ಪ್ರಭುತ್ವದವರಿಂದ ಸಾಮ್ರಾಜ್ಯಶಾಸನಸಭೆಯ ಅನುಮೋದನೆಗೆ ತರಲ್ಪಟ್ಟಿದೆ.

ನಾಲ್ವರು ವಂಗದೇಶದ ಯುವಕರು 4014 ಮೈಲಿ ಸೈಕಲ್ಲುಮೇಲೆ ಯಾತ್ರೆ ಮಾಡಿಕೊಂಡು ಬಂದುದಕ್ಕಾಗಿ ಪುರಜನರು ಅವರನ್ನು ಸುಸ್ವಾಗತಿಸಿದರು. ಆ ಯುವಕರು ತಮ್ಮ ಮಾರ್ಗದಲ್ಲಿ ಅಡವೀ ಪ್ರಯಾಣವನ್ನು ವರ್ಣಿಸುವಾಗ್ಗೆ ಹುಲಿ ಮೊದಲಾದ ಕ್ರೂರಮೃಗಗಳ ವಿಷಯವನ್ನೂ ಕುರಿತು ಉತ್ಸಾಹಜನಕವಾಗಿ ಹೇಳಿದರು.

ಆಲಿವರು ಕರಾಚಿಯಿಂದ ಲಂಡನ್ನಿಗೆ 5 ದಿನಗಳಲ್ಲಿ ಆಕಾಶಯಾನದಲ್ಲಿ ಪ್ರಯಾಣಮಾಡಲು ಪ್ರಯತ್ನವು ಸಂಪೂರ್ಣವಾಗಿ ಜರುಗುತ್ತಿದೆ. ಈವರೆಗೆ 2500 ಮೈಲಿ ಪ್ರಯಾಣಮಾಡಿರುವ ಯಂತ್ರವು ಪುನಃ ಒಳ್ಳೆಯಸ್ಥಿತಿಯಲ್ಲಿ ತರಲ್ಪಟ್ಟಿರುವುದು. ಇಂಡ್ಯಾದಲ್ಲಿ ತಿರುಗುವಾಗ್ಗೆ ಆಲಿವರ ಪತ್ನಿಯು ಕೂಡ ಹೋಗಿದ್ದರು. ಪ್ರಾಯಶಃ ಈ ತಿಂಗಳ ಕಡೆಯಲ್ಲಿ ಲಂಡನ್ನಿಗೆ ಹೊರಡಬಹುದು.

ದಕ್ಷಿಣಾಫ್ರಿಕೆಯ ಪ್ರಭುತ್ವದವರಿಂದ ಕಂಟ್ರಾಕ್ಟನ್ನು ಕೊಡಿಸುತ್ತೇವೆಂದು ಸುಳ್ಳುಹೇಳಿ ಆಗ್ರಾವರ್ತಕರಾದ ಪಾನಿಲಾಲರವರಿಂದ 40,000 ರೂಪಾಯಿಗಳನ್ನು ತೆಗೆದುಕೊಂಡು ಮೋಸಪಡಿಸಿದ್ದ ಲೆಗ್ರಾಂಟ್‌ವೆಲ್ಸ್ ಮತ್ತು ನ್ಯೂವೇಲುಜೋಸ್ ಎಂಬಿಬ್ಬರನ್ನು ಕಲಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ವೆಲ್ಸನನ್ನು ಸೆಷನ್ಸ ವಿಚಾರಣೆಗೆ ಗುರಿಪಡಿಸಿ ಜೋಸನನ್ನು ಬಿಟ್ಟುಬಿಟ್ಟರು.

ಒಂದುವರ್ಷದ ಹಿಂದೆ ಇಂಗ್ಲೆಂಡಿಗೆ ಹೋಗಿದ್ದ ವಿಜಯನಗರದ ಮಹಾರಾಜದಂಪತಿಗಳು ತಮ್ಮ ಪ್ರವಾಸಕಾಲದಲ್ಲಿ ಜನಿಸಿದ ಕುಮಾರಿಯೊಡನೆ ಕಳೆದ ತಾ|| 3 ರಲ್ಲಿ ಸ್ವಸ್ಥಲವನ್ನು ಸುರಕ್ಷಿತವಾಗಿ ಸೇರಿದರು. ಪುರಜನರು ಊರನ್ನು ಮನೋಹರವಾಗಿ ಅಲಂಕರಿಸಿ ರಾಜಮರ್ಯಾದೆಯೊಡನೆ ಮಹಾರಾಜಕುಟುಂಬದವರನ್ನು ಇದಿರ್ಗೊಂಡು ಅವರ ಸ್ವಸ್ಥಲಾಗಮನದಿಂದ ತಮ್ಮಗಳಿಗುಂಟಾದ ಆನಂದವನ್ನು ಪ್ರದರ್ಶಿಸಿದರು.

ಭಾರತಸಂಸ್ಕರಣವನ್ನು ಕುರಿತು ವಿಚಾರಿಸುವುದಕ್ಕಾಗಿ ರಾಯಲ್ ಕಮೀಷನು ನಿಯಮಿಸಲ್ಪಟ್ಟ ವೇಳೆಯಲ್ಲಿ ತಮ್ಮ ಕ್ಷೇಮವನ್ನು ಕಾಪಾಡುವುದಕ್ಕಾಗಿ ಸ್ವದೇಶಸಂಸ್ಥಾನಾಧೀಶಸಂಘದವರು ನಿಯಮಿಸುವ ಕಮಿಟಿಯಲ್ಲಿ ಇರಬೇಕೆಂದು ಬರೋಡಾ ಸಂಸ್ಥಾನದ ದಿವಾನ್ ಸರ್ ಮನೂಭಾಯಿ ಮೆಹತಾಯವರನ್ನು ಕೇಳಿದುದಕ್ಕೆ ಅವರು ಅಂಗೀಕರಿಸಿದರು. ನವಗರ್ ಮಹಾರಾಜರವರೂ ಈ ಕಮಿಟಿಯಲ್ಲಿ ಸಭ್ಯರಾಗಿರುವರು.

ಭಾರತದೇಶಕ್ಕೆ ನಾಟಕಪಿತಾಮಹರಾಗಿದ್ದು ಕೀರ್ತಿಶೇಷರಾದ ಗಿರೀಶಚಂದ್ರ ಘೋಷರ ವರ್ಧಂತ್ಯುತ್ಸವವು ಕಳೆದ ತಾ|| 9 ರಲ್ಲಿ ಕಲಕತ್ತಾ ಮೈನರ್ವಾ ನಾಟಕಶಾಲೆಯೊಳಗೆ ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿ ಕಲಕತ್ತಾದಲ್ಲಿರುವ ಉತ್ತರಭಾಗದ ಚೌಕದಲ್ಲಿ ಘೋಷ್‌ರವರ ಶಿಲಾಮೂರ್ತಿಯ ಪ್ರತಿಷ್ಠಾಪನೆಗಾಗಿ ಮೆಮೋರಿಯಲ್ ಕಮಿಟಿಯವರು ಕೂಡಲೇ ತಕ್ಕ ಪ್ರಯತ್ನಮಾಡಬೇಕೆಂದು ತೀರ್ಮಾನಿಸಲ್ಪಟ್ಟಿತು.

ಪೆಷಾವರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಪೊಲೀಸ್ ಸೂಪರಿಂಟೆಂಡೆಂಟ್ ಎಕಿನ್ಸ್‌ರವರು ಕಟ್ಲಾಂಗ್ ಎಂಬಲ್ಲಿ ಕುದುರೆ ಸ್ವಾರಿ ಮಾಡಿಕೊಂಡು ಹೋಗುತ್ತಿರುವಾಗ್ಗೆ ಬಂದೂಕನ್ನು ಹಿಡಿದುಕೊಂಡು ಹೋಗುತ್ತಿದ್ದ ಒಬ್ಬ ಮನುಷ್ಯನನ್ನು ನೋಡಿ ಅವನು ಸೆರೆಯಿಂದ ತಪ್ಪಿಸಿಕೊಂಡು ಹೋದವನೆಂದು ಅನುಮಾನಿಸಿ ಅವನನ್ನು ಹಿಡಿಯಲು ಪ್ರಯತ್ನಪಟ್ಟು ಹಿಂಬಾಲಿಸಿ ಹೋಗುತ್ತಿರುವಾಗ್ಗೆ, ಅವನು ಸಿಕ್ಕದೆ ಬಂದೂಕಿನಿಂದ ಗುರಿಕಟ್ಟಿ ಸಾಹೇಬರಿಗೆ ಹೊಡೆದು ಅವರನ್ನು ಕೊಂದುಬಿಟ್ಟನು. ಎಕಿನ್ಸ್ ಸಾಹೇಬರಿಗೆ 28 ವರ್ಷ ವಯಸ್ಸುಮಾತ್ರವಾಗಿದ್ದಿತು.

ಹೈದರಾಬಾದು ಸೀಮೆಯಲ್ಲಿ ಬಿಡಾರ ಡಿಸ್ಟ್ರಿಕ್ಟಿಗೆ ಸೇರಿದ ನಲ್ಲಿಂಗ ಮತ್ತು ಅದರ ನೆರೆಗ್ರಾಮಗಳಿಗೆ ಒಂದು ನರಭಕ್ಷಕ ಹುಲಿಯು ಕಳೆದ ಎರಡುತಿಂಗಳಿಂದಲೂ ಸಂಚರಿಸುತ್ತ ಈವರೆಗೆ 16 ಜನರನ್ನು ಕೊಂದುಹಾಕಿರುವುದರಿಂದ ಗ್ರಾಮಸ್ಥರು ಭಯಗ್ರಸ್ಥರಾಗಿ ಹೊಲಗಳಿಂದ ಮಧ್ಯಾಹ್ನ 3-4 ಗಂಟೆಯೊಳಗೇ ಮನೆಗೆ ಬಂದುಬಿಡುತ್ತಿರುವರಲ್ಲದೆ ಒಬ್ಬೊಬ್ಬರೇ ತಿರುಗಾಡದೆ ಗುಂಪುಕೂಡಿಕೊಂಡು ಹೊರಗೆ ಹೋಗುತ್ತಿರುವರು. ಪೊಲೀಸಿನವರಿಗೆ ಮೊರೆಯಿಟ್ಟುಕೊಂಡರೂ ಏನನ್ನೂ ಮಾಡಲಿಲ್ಲ. ಆದರೆ ಸಮರ್ಥರಾದ ಬೇಂಟೆಗಾರರು ಬಂದು ಆ ಕ್ರೂರಮೃಗವನ್ನು ಸಂಹರಿಸಲು ಕಾದುಕೊಂಡಿರುವರಾದರೂ ಅದು ಸಿಕ್ಕದೆ ತಪ್ಪಿಸಿಕೊಂಡಿರುವುದಂತೆ.

ಜಬ್ಬಲ್‌ಪುರದ ಎಲ್ಗಿನ್ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಡಾ|| ಸ್ಲೇಟರ್ ಎಂಬಾಕೆಯು ಭಾರತೀಯರನ್ನು ಗೌರವದಿಂದ ನೋಡುವುದಿಲ್ಲವೆಂದು ಅನೇಕ ಭಾರತೀಯರು ಅಸಮಾಧಾನಪಟ್ಟುಕೊಂಡು ದೂರುಮಾಡಿರುತ್ತಾರಾಗಿ, ಆ ಆಸ್ಪತ್ರೆಗೆ ಡಿಸ್ಟ್ರಿಕ್ಟ್‌ಬೋರ್ಡಿನಿಂದ ಕೊಡಲ್ಪಡುತ್ತಿರುವ ಮಾಸಾಶನವು ಹೆಚ್ಚಿಸಲ್ಪಡಕೂಡದೆಂದು 14 ಜನ ಮೆಂಬರುಗಳು ವಾದಿಸಿದುದರ ಮೇಲೆ ತನಗೆ ಅಪಮಾನವಾಯಿತೆಂದು ಆಕೆಯು ಆ 14 ಜನರಿಂದ 25,000 ರೂಪಾಯಿಗಳ ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಜಬ್ಬಲ್‌ಪುರದ ಡಿ|| ಜಡ್ಜಿಯವರಲ್ಲಿ ವಿವಾದವನ್ನು ಹೂಡಿದ್ದರು. ಬೋರ್ಡುಮೀಟಿಂಗಿನಲ್ಲಿ ಮಾಡಲ್ಪಟ್ಟ ರೆಜ್ಯುಲೇಷನ್ನಿನಲ್ಲಿ ವಾದಿಯ ನಡತೆಯ ವಿಚಾರವಾಗಿ ಹೇಳಿರುವ ವಿಷಯವು ನಿಜವಲ್ಲದಿರುವುದಾದರೂ ಅಸೂಯೆಯಿಂದ ಹೇಳಲ್ಪಟ್ಟಿಲ್ಲವಾದುದರಿಂದ ವಾದಿಗೆ ಪರಿಹಾರದ್ರವ್ಯಸಲ್ಲತಕ್ಕದಾಗಿಲ್ಲವೆಂದು ತೀರ್ಮಾನಿಸಿದರು.

ಅಖಿಲಭಾರತ ರೈಲ್ವೆ ಕೆಲಸಗಾರರ ಸಂಘದವರು ಲಂಡನ್ನಿನಲ್ಲಿರುವ ಭಾರತ ಕೂಲೀರಕ್ಷಕ ಸಂಘದವರಿಗೆ ಈ ಪ್ರಕಾರ ತಂತೀವಾರ್ತೆಯನ್ನು ಕಳುಹಿಸಿರುವರು.—ಬಂಗಾಳಾ-ನಾಗಪುರ ರೈಲ್ವೆ ಕೆಲಸಗಾರರು 20 ಸಾವಿರ ಮಂದಿ ಕರಗಪುರದಲ್ಲಿ ಬಹಳ ಆಂದೋಳನವಮಾಡಿರುವರು. ಅನ್ಯಾಯವಾಗಿ ಬಹಳ ಜನರನ್ನು ಕೆಲಸದಿಂದ ತೆಗೆದುಬಿಟ್ಟಿರುವುದರಿಂದಲೂ, ಮೆಕನಾಕಿಲ್ ಇಂಜನೀಯರಿಂಗು ಆಫೀಸಿನಲ್ಲಿರುವ ಗುಮಾಸ್ತರನ್ನು ಅಮಾನುಷವಾಗಿ ಅವಮಾನಪಡಿಸಿರುವುದರಿಂದಲೂ ಬಹಳ ಅಸಂತೃಪ್ತಿಯುಂಟಾಗಿದೆ. ಅಧಿಕಾರಿಗಳಿಗೆ ರಾಯಬಾರಿಗಳ ಮೂಲಕ ಹೇಳಿಕೊಂಡರೂ ಪ್ರಯೋಜನವಿಲ್ಲವಾಯಿತು. ಕೆಲಸಗಾರರು ಸಭೆಸೇರಿ ಅವಮಾನಕ್ಕೆ ಕಾರಣಭೂತರಾದ ಉದ್ಯೋಗಸ್ಥರನ್ನು ಕೆಲಸದಿಂದ ತೆಗೆದುಬಿಡಬೇಕು, ಇಲ್ಲ ಬೇರೆ ಕಡೆಗೆ ವರ್ಗಾಯಿಸಬೇಕು ಅಥವಾ ಶಿಕ್ಷಿಸಬೇಕು. ಈರೀತಿ ಫೆಬ್ರುವರಿ ತಾ|| 20 ರೊಳಗೆ ಮಾಡದಿದ್ದಲ್ಲಿ ಕೆಲಸಕ್ಕೆ ಹೋಗದೆ ನಿಂತುಬಿಡುವುದಾಗಿ ತೀರ್ಮಾನಿಸಿರುತ್ತೇವೆ. ಆಂಗ್ಲೇಯ ಮಿತ್ರರಿಗೂ ಆಮಸ್ಟರ್ಡಾಮ್ಮಿನ ಅಂತರಾಷ್ಟ್ರೀಯ ಸಂಘಕ್ಕೂ ಈ ಅಭಿಪ್ರಾಯವನ್ನು ತಿಳಿಸಬೇಕು.

ಬಳ್ಳಾರಿಕೋಟೆಯ ನೆರೆಯಲ್ಲಿ ಒಂದು ಚಿರತೆಯು ಸೇರಿಕೊಂಡು ಕುರಿಆಡುಗಳನ್ನು ತಿಂದು ಬಹಳ ಹಾವಳಿಯನ್ನು ಮಾಡುತ್ತಿದ್ದಿತು. ಇದನ್ನು ಕೊಲ್ಲುವುದಕ್ಕಾಗಿ ಪನ್ನಾಮಹಾರಾಜರಾದ ಮಾಧವಸಿಂಗ್‌ರವರು ಅದು ಸುಳಿದಾಡುವ ಸ್ಥಳದಲ್ಲಿ ಒಂದು ಆಡನ್ನು ಕಟ್ಟಿಹಾಕಿಸಿ ಅದರಿಂದ ಕೊಂಚದೂರದಲ್ಲಿ ಒಂದು ಅಟ್ಟಣೆಯನ್ನು ಕಟ್ಟಿಸಿ ಮದ್ದುಗುಂಡುಸಮೇತ ಅನೇಕ ರಾತ್ರಿ ನಿರೀಕ್ಷಿಸಿಕೊಂಡಿದ್ದಾಗ್ಯೂ ಅದನ್ನು ಗುಂಡಿನಿಂದ ಹೊಡೆಯಲು ಆಯಸಿಕ್ಕಲಿಲ್ಲವಾಗಿ ನಿರಾಶರಾಗಿ ಅಟ್ಟಣೆಯಿಂದಿಳಿದುಬಂದಮೇಲೆ ತಾ|| 4 ರಲ್ಲಿ ಆ ಚಿರತೆಯುಬಂದು ಕುರಿಯನ್ನು ಕೊಂದು ತಿನ್ನದೆ ಅಲ್ಲೇ ಬಿಟ್ಟುಹೊರಟುಹೋಗಿದ್ದು ಮಾರನೆದಿನರಾತ್ರಿ ಬಂದು ಅದನ್ನು ಹೊತ್ತುಕೊಂಡುಹೋಗುವಷ್ಟರಲ್ಲಿ ಗುಂಡಿನಿಂದ ಸುಡಲ್ಪಟ್ಟಿತು. ಅದು ಬಾಲದಿಂದ ಮೂತಿಯವರೆಗೆ 7 ಅಡಿ 4 ಅಂಗುಲ ಉದ್ದವಿದ್ದಿತು ಮತ್ತು ಅದರ ಬೆನ್ನಿನಮೇಲೆ ಒಂದು ಗುಂಡಿನೇಟಿನ ಗುರ್ತು ಸಹ ಇದ್ದಿತು. ಇದೇ ಮಾಧವಸಿಂಗ್‌ರವರು ಒಂದು ತಿಂಗಳಹಿಂದೆ ಒಂದು ಚಿರತೆಯನ್ನು ಕೊಂದಿದ್ದರು. ಇವರು ಈವರೆಗೆ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಒಟ್ಟು 65 ಚಿರತೆಗಳನ್ನೂ, ಕರ್ನೂಲ್ ಡಿ|| ನಲ್ಲಮಲೆಯಲ್ಲಿ 7 ಹುಲಿಗಳನ್ನೂ ಕೊಂದಿರುವರು.

ವಿದೇಶದ ವೃತ್ತಾಂತಗಳು

ಇಟಲಿಯ ಪ್ರೆಸಿಡೆಂಟರಾದ ಸಿಗ್ನಾರ್ ಮುಸಲೋನಿಯು ಜರ್ಮನಿಯ ವಿಷಯವಾಗಿ ವಿರುದ್ಧ ಭಾಷಣಮಾಡಿದುದರ ಮೇಲೆ ಮ್ಯೂನಿಚ್ಚಿನ ಅಂಗಡಿಯವರೂ, ಮನೆಯ ಯಜಮಾನಿಯರೂ ಇಟಲಿಯ ಕಿತ್ತಲೆಹಣ್ಣುಗಳನ್ನು ಕೊಳ್ಳಬಾರದೆಂದು ಕಟ್ಟುಮಾಡಿಕೊಂಡಿರುವರಲ್ಲದೆ, ಇಟಲಿಗೆ ಹೋಗತಕ್ಕ ಜರ್ಮನರು ರಾಜದ್ರೋಹಿಗಳೆಂದು ಬರೆದಿರುವ ಪ್ರಕಟನಪತ್ರಿಕೆಗಳು ಎಲ್ಲ ರೈಲ್ವೆಸ್ಟೇಷನುಗಳಲ್ಲೂ ಹಂಚಲ್ಪಟ್ಟಿವೆ.

ಜರ್ಮನಿಯಲ್ಲಿ ಕೊನ್ಗ್‌ಹೋಫ್ ಎಂಬವನು ಉಪವಾಸವನ್ನು ಕೈಕೊಳ್ಳುವುದರಲ್ಲಿ ತಾನು ಜಗತ್ತಿನಲ್ಲಿ ಪ್ರಮುಖನೆಂದು ಹೇಳಿಸಿಕೊಳ್ಳುವುದಕ್ಕಾಗಿ ಈಗ ಈ ವ್ರತವನ್ನು ಸಾಧಿಸುತ್ತಿರುವನು. ಈಗಾಗಲೇ ಮೂವತ್ತೊಂದು ದಿನಗಳನ್ನು ನಿರಾಹಾರದಿಂದ ಕಳೆದನು. ಸದಾ ಧೂಮಪಾನವನ್ನು ಮಾಡುತ್ತಿರುವನು. ಇನ್ನೂ ಈತನು 12 ದಿವಸಗಳ ಉಪವಾಸಮಾಡಬಹುದೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರೆಂದು ತಿಳಿದುಬರುತ್ತದೆ.

ಗ್ರೇಟ್‌ಬ್ರಿಟನ್ನಿನಲ್ಲಿ ಕೆಲದಿನಗಳಿಂದಲೂ ಮಳೆಯು ಅತ್ಯಧಿಕವಾಗಿ ಬೀಳುತ್ತಿರುವುದರಿಂದ ಲಂಡನ್ ನಗರದ ಸುತ್ತುಮುತ್ತಲೂ, ಮಧ್ಯದಲ್ಲೂ ನದಿಗಳಲ್ಲಿ ಪೂರ್ಣಪ್ರವಾಹ ಬಂದು ಮಾರ್ಗಗಳಲ್ಲೆಲ್ಲಾ ನೀರುನಿಂತಿದೆ. ಹಡಗಗಳು ದಡಕ್ಕೆಬಂದು ತಗುಲಿಕೊಂಡು ಅಪಾಯವನ್ನುಹೊಂದಿ ಬಹುಪ್ರಯಾಸದಿಂದ ಜನರ ಪ್ರಾಣವುಳಿಸಲ್ಪಟ್ಟಿತು. ಥೇಂಸ್‌ನದಿಯ ಪ್ರವಾಹದಿಂದ ಅನಾಹುತವಾಗದಂತೆ ಬಹಳ ಎಚ್ಚರಿಕೆಯೂ ತೆಗೆದುಕೊಳ್ಳಲ್ಪಡುತ್ತಿರುವುದು.

ಸೀಮೆಯಲ್ಲಿ ಒಂದು ನಾಯಿಯು ನೆರೆಮನೆಯ ಹುಡುಗಿಯನ್ನು ಕಡಿದುಕೊಂದುಬಿಟ್ಟಿತ್ತೆಂಬ ಅಪರಾಧಕ್ಕಾಗಿ ಕೋರ್ಟಿನ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು, ಅದು ಕ್ರೂರಮೃಗವೆಂದು ಸಾಕ್ಷಿಯ ಹೇಳಿಕೆಯಿಂದ ಗೊತ್ತಾಗಿ ಪಂಚಾಯಿತರು ಅಪರಾಧಿಯೆಂದು ಅಭಿಪ್ರಾಯ ಪಟ್ಟುದರಮೇಲೆ ಮರಣದಂಡನೆ ವಿಧಿಸಲ್ಪಟ್ಟು ವಿದ್ಯುಲ್ಲತಾಪ್ರಯೋಗದಿಂದ ಕೊಂದುಹಾಕಲ್ಪಟ್ಟು, ಅದರ ತಲೆಯು ಪರೀಕ್ಷಾರ್ಥವಾಗಿ ಶೋಧನಾಲಯಕ್ಕೆ ಕಳುಹಲ್ಪಟ್ಟಿತು.

ಅಂಗೋರಾ ಸರಕಾರದಲ್ಲಿ ಒಬ್ಬನು ಹೆಚ್ಚುಮಂದಿ ಸ್ತ್ರೀಯರನ್ನು ವರಿಸಬಾರದೆಂದು ಕಾನೂನು ಇದೆ. ಕಾನ್‌ಸ್ಟಾಂಟಿನೋಪಲ್‌ನಲ್ಲಿಯ ಒಬ್ಬ ಧನಿಕನು ಸರಕಾರದ ಆಜ್ಞಾವಿರುದ್ಧವಾಗಿ ೫೬ ಮಂದಿ ಅಂತಃಪುರಹೆಂಗುಸರನ್ನು ಇಟ್ಟುಕೊಂಡಿದ್ದನು. ಅವರನ್ನೆಲ್ಲ ಬಿಟ್ಟುಬಿಡುವುದಕ್ಕೆ ಆಜ್ಞಾಪಿಸಲು ಆ ಧನಿಕನು ತನ್ನ ಸ್ತ್ರೀಯೊಡನೆ ಭೋಜನಕ್ಕೆ ಕುಳಿತು ವಿಷಮಿಶ್ರವಾದ ಆಹಾರವನ್ನು ಅವರಿಗೂ ತಿನ್ನಿಸಿ, ತಾನೂ ತಿಂದು ಎಲ್ಲರೂ ಮೃತರಾದರು.

ವೈಟ್‌ಸ್ಟಾರ್ ಮೆಜೆಸ್ಟಿಕ್ ಹಡಗಿಗೆ ಒಂದು ಭೋಜನ ಮಂದಿರವು ಸಂಯೋಜಿಸಲ್ಪಟ್ಟಿರುವುದು. ಇದು 11,360 ಜನ

ರಡಿ ವಿಸ್ತೀರ್ಣವಿರುವುದಲ್ಲದೆ 31 ಅಡಿ ಎತ್ತರವಿರುತ್ತದೆ. 1,90,000 ಬಟ್ಟೆಯ ತುಂಡುಗಳಿವೆ; ಇವುಗಳಲ್ಲಿ 77,000 ಕೈ ಚೌಕಗಳೂ, 13,000 ದಿಂಬಿನಚೀಲಗಳೂ, 11,000 ಮೇಲು ಹಾಸಿಗೆಗಳೂ ಇರುತ್ತವಲ್ಲದೆ, 17 ಟನ್ ತೂಕವುಳ್ಳ 10,500 ಹೊದಿಯುವ ಬ್ಲೇಂಕೆಟುಗಳೂ, 29,000 ಗಾಜಿನ ಪದಾರ್ಥಗಳೂ 10,000 ಚಾಕುಚಂಚಾ ಮೊದಲಾದುವುಗಳೂ ಇರುತ್ತವೆ. ಮತ್ತು 120 ಟನ್ ಸಮುದ್ರದ ಬಿಸಿನೀರು ಹಿಡಿಯುವಂತಹ ಈಜುವ ಕೊಳಗಳೂ, 30 ಉಡುಪುಗಳನ್ನು ಧರಿಸುವ ಕೊಠಡಿಗಳೂ ಸುತ್ತಲೂ ಏರ್ಪಡಿಸಲ್ಪಟ್ಟಿರುತ್ತವೆ.

ಚಿಕಾಗೊ ಪಟ್ಟಣದ ಲಾರ್ಡ್ ಕಾರ್ನೊಲ್ಲಿಯಸ್‌ಪೀವರ್ ಬ್ರೂಕ್ ಎಂಬಾತನು ಈವರೆಗೆ 48 ಜನ ಸ್ತ್ರೀಯರನ್ನು ಮದುವೆಮಾಡಿಕೊಂಡು ಕಸಬುದಾರಿಗಂಡನೆಂದು ಪ್ರಖ್ಯಾತನಾಗಿ ಈವರೆಗೆ 30,00,000 ರೂಪಾಯಿಗಳನ್ನು ಲಗ್ನಮಾಡಿಕೊಂಡ ಹೆಂಗುಸರಿಂದ ಸಂಪಾದಿಸಿರುವನು. ವೆಲ್ಕೆಸ್ರಾಬ್ರೂಕ್ಸ್ ಎಂಬುವವನ ಮಗಳು ಅರ್ಥರ್‌ಬ್ರೂಕ್ಸ್ ಎಂದು ಹೆಸರಿಟ್ಟುಕೊಂಡಿದ್ದ ಇವನನ್ನು 1924 ರಲ್ಲಿ ಲಗ್ನವಾದಳು. ಇವನನ್ನು ಲಗ್ನವಾದ 3 ತಿಂಗಳಮೇಲೆ ಅವಳ ಪೋಷಕರುಗಳಿಂದ 37,500 ರೂ. ಗಳನ್ನೂ ಅವಳಿಂದಲೇ 15,000 ರೂ. ಗಳನ್ನೂ ಮೋಸದಿಂದ ತೆಗೆದುಕೊಂಡು ಅವಳನ್ನು ತ್ಯಜಿಸಿಬಿಟ್ಟನು. ಅದರ ಮೇಲೆ ಕೋರ್ಟಿನಲ್ಲಿ ವಿವಾದವು ನಡೆದು ಅವರ ದಾಂಪತ್ಯ ಪರಿತ್ಯಾಗಗೊಳಿಸಲ್ಪಟ್ಟಿತು.

ಜರ್ಮನಿಯ ಚಕ್ರವರ್ತಿಯಾಗಿದ್ದು ಪದಭ್ರಷ್ಟನಾಗಿರುವ ಕೇಜರನು ಈಗ ಹಾಲೆಂಡುದೇಶಕ್ಕೆ ಸೇರಿದ ಡೂರ್ನ್ ಎಂಬಲ್ಲಿರುತ್ತಾನೆ. ಈತನು ತನ್ನ ವರ್ಷವರ್ಧಂತ್ಯುತ್ಸವಕ್ಕೆ ಬಂಧುಬಳಗಗಳನ್ನು ಒಟ್ಟುಮಾಡಿಕೊಂಡು ಬಹಳ ಆಟ್ಟಹಾಸದಿಂದಲೂ, ವಿನೋದದಿಂದಲೂ ನೆರವೇರಿಸಿದನು. ಇತ್ತಲಾಗಿ ಜರ್ಮನಿಯಲ್ಲಿ ಜನರು ಕೈಜರನ ವರ್ಧಂತ್ಯುತ್ಸವ ವೈಭವವನ್ನು ಕೇಳಿ ಕುಪಿತರಾಗಿ ಆತನ ವಿಗ್ರಹವನ್ನು ಕಾಗದದಲ್ಲಿ ಮಾಡಿ ಪಟ್ಟಣದ ಮಧ್ಯಭಾಗದಲ್ಲಿ ನಿಲ್ಲಿಸಿ ಆತನ ನೀಚಕೃತ್ಯಗಳನ್ನೆಲ್ಲಾ ಪರಿಪರಿಯಾಗಿ ವರ್ಣನೆಮಾಡಿ ದೂಷಿಸಿ ಕಾಮನ ವಿಗ್ರಹವನ್ನು ದಹನಮಾಡುವಂತೆ ಸುಟ್ಟು ಭಸ್ಮಮಾಡಿ ತಮ್ಮಾಕ್ರೋಶವನ್ನು ತೀರಿಸಿಕೊಂಡರು. ಊರಿನ ಎಲ್ಲ ಭಾಗಗಳಲ್ಲೂ ಕೆಂಪುಧ್ವಜಪಟಗಳೇರಿಸಲ್ಪಟ್ಟು ಪ್ರಜೆಗಳ ದುಡ್ಡಿನಲ್ಲಿ ಒಂದು ಕಾಸೂ ದೊರೆಗೆ ಸಲ್ಲತಕ್ಕದಾಗಿರದೆ ಪ್ರಜಾಹಿತಕ್ಕಾಗಿಯೇ ವಿನಿಯೋಗಿಸಲ್ಪಡತಕ್ಕದಾಗಿದೆ. ಎಂದು ದಪ್ಪಕ್ಷರಗಳಲ್ಲಿ ಬರೆಯಲ್ಪಟ್ಟಿದ್ದಿತು. ಕೇಜರನ ಭಾವಚಿತ್ರದಿಂದ ಮುದ್ರಿಸಲ್ಪಟ್ಟಿದ್ದ ನೋಟುಗಳು ಲಕ್ಷಗಟ್ಟಲೆ ಸುಟ್ಟುಹಾಕಲ್ಪಟ್ಟವು. ಈ ಕೋಲಾಹಲದಲ್ಲಿ ಬಾಲ್ಶವಿಕರಿಂದ ಗುಂಡುಹಾರಿಸಲ್ಪಟ್ಟು ಗೊಂದಲವಾದುದರಮೇಲೆ ಪೊಲೀಸರು ಅನೇಕರನ್ನು ಹಿಡಿದು ಸೆರೆಯಲ್ಲಿಟ್ಟಿರುವರು.

BELLETIN NO. 3.

FOURTH MYSORE LAWYERS' CONFERENCE, TUMKUR.

The meeting of the Reception Committee for the Fourth Mysore Lawyers' Conference was held to day. The nominations from the various Law Associations in the State were read out and Mr. B. Narasinga Rao of Sreerangapatam, having secured 17 votes out of 22. was duly elected President. The date of the Conference will be fixed and notified in due course. The necessary forms will be sent to all the Associations and all the members of the bar in the State are requested ta enrol themselves as members early.

Tumkur,
11th February 26. Secretary.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಯುಗಾದಿಹಬ್ಬವನ್ನು ಯಾವಾಗ ಮಾಡಬೇಕು ?

ಮುಂದೆ ಚೈತ್ರಮಾಸಗಳು ಎರಡು ಬರುವುದರಿಂದ ಕೆಲವರು ನಿಜಚೈತ್ರದಲ್ಲಿ ಯುಗಾದಿಯ ಆಚರಣೆಯನ್ನು ಮಾಡಬೇಕೆಂದೂ, ಮತ್ತೆ ಕೆಲವರು ಅಧಿಕಚೈತ್ರದಲ್ಲಿಯೇ ಯುಗಾದಿಯ ಆಚರಣೆಯನ್ನು ಮಾಡಬೇಕೆಂದೂ ಹೇಳುತ್ತಿರುವರು. ಆದುದರಿಂದ ತಾವಾಗಲೀ, ತಮ್ಮ ಪತ್ರಿಕೆಯ ವಾಚಕರಾಗಲೀ ಯುಗಾದಿಯನ್ನು ಯಾವಾಗಮಾಡುವುದು ಶಾಸ್ತ್ರಸಮ್ಮತವಾದುದೆಂಬುದನ್ನು ದಯವಿಟ್ಟು ತಮ್ಮ ಘನವಾದ ಪತ್ರಿಕೆಯಮೂಲಕ ಸರ್ವರ ತಿಳುವಳಿಕೆಗಾಗಿ ಪ್ರಕಟಿಸುವರೆಂದು ನಂಬಿರುವ, ತಮ್ಮ

ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

ನಿಜಸ್ಥಿತಿ.

ತುರುವೇಕೆರೆಪೇಟೆಯ ಯಜಮಾನನೆಂದು ನಾನು ಸೈನುಮಾಡುತ್ತಿದ್ದೇನೆಂದು ವಗ್ಗೈರೆ ಸ್ಥಳವಾಸಿ ಎಂಬುವವರು ತಾ|| 23-1-26 ನೆಯ ಸ್ಟಾರ್ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಈ ತುರುವೇಕೆರೆಪೇಟೆಯ ಯಜಮಾನಿಕೆಯನ್ನು ನೋಡಿಕೊಂಡು ಹೋಗುವಂತೆ ಇಲ್ಲಿಯ ವೀರಶೈವರೂ ಇತರ ಥಣಸ್ಥರೂ ನನಗೆ ವಹಿಸಿಕೊಟ್ಟು ರಿಕಾರ್ಡುಮಾಡಿರುವರಲ್ಲದೆ ಈ ವಿಚಾರವನ್ನು ಶ್ರೀಮತ್ ರಂಭಾಪುರೀ ಮಹಾಸಂಸ್ಥಾನಕ್ಕೂ ಲಿಖಿತಮೂಲಕವಾಗಿ ಬಿನ್ನೈಸಿಕೊಂಡಿರುತ್ತಾರೆ. ನಾನು ಇದರ ಆಧಾರದ ಮೇಲೆ ಯಜಮಾನಿಕೆಯನ್ನು ನೋಡುತ್ತಿದ್ದೇನೆ ಹೊರತು ಸ್ವೇಚ್ಛೆಯಿಂದಲ್ಲ.

ತುರುವೇಕೆರೆಪೇಟೆಯ ಯಜಮಾನ್ ನಂಜಪ್ಪಶೆಟ್ಟಿ.

ಗ್ರಾಮರಕ್ಷಣಸಭಾ, ಕ್ಯಾತನಹಳ್ಳಿ. ಶ್ರೀರಂಗಪಟ್ಟಣದ ತಾ||

ಮೇಲ್ಕಂಡ ಸಭೆಯಪರವಾಗಿ ಈ ಗ್ರಾಮದಲ್ಲಿ ಇದೇ ಮಾಹೆ 14-15 ಕ್ಕೆ ನಡೆಸಲು ಏರ್ಪಡಿಸಿದ್ದ ಒಕ್ಕಲಿಗರ ಮಹಾಸಭೆಯು ಕಾರಣಾಂತರದಿಂದ ಅಂದರೆ ಹ|| ದೆ|| ಸಾ|| ರವರ ಆಗಮನ ನಿರೀಕ್ಷಣೆಯಿಂದ ತಪ್ಪಿ ಇದೇ ಮಾಹೆ 28 ನೇ ಭಾನುವಾರ ಮಧ್ಯಾಹ್ನ 12 ಘಂಟೆಗೆ ಸದರಿ ಡೆ|| ಕ|| ರವರಾದ ಮ|| ಎ. ವಿ. ರಾಮನಾಥನ್ ಬಿ.ಎ., ಯವರಿಂದ ಆರಂಭಿಸಲ್ಪಡುವುದು. ಮತ್ತು ಒಕ್ಕಲಿಗ ಸ್ತ್ರೀಯರ ಸಭೆಯು ಮಾರ್ಚಿ 1 ನೇ ತಾ|| ಸೋಮವಾರ ಮಧ್ಯಾಹ್ನ 1 ಗಂಟೆಯಿಂದ ಮೈಸೂರುಸೀಮೆಯ ಕೋ|| ಅ|| ಸೊಸೈಟಿಗಳ ರಿಜಿಸ್ಟ್ರಾರ್‌ರವರಾದ ಮ|| ಕೆ. ಎಚ್. ರಾಮಯ್ಯ, ಬಿ.ಎ., ಬಾರ್-ಅಟ್-ಲಾ ರವರ ಕುಟುಂಬ ಸೌ|| ರೇವಮ್ಮನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಆದ್ದರಿಂದ ಒಕ್ಕಲಿಗಕುಲಬಾಂಧವರಾದ ಸ್ತ್ರೀಪುರುಷರೂ ಅವರ ಹಿತೈಷಿಗಳೂ ತಪ್ಪದೆ ದಯಮಾಡಿಸಿ, ಸಭಾಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸುವ, ತಮ್ಮ ವಿಧೇಯ,

ಚಿಕ್ಕತಿಮ್ಮೇಗೌಡ, ಗೌರವ ಕಾರ್ಯದರ್ಶಿ.

ವೀರಶೈವಬಂಧುಗಳೇ ಎಚ್ಚರಿಕೆ.

ಹಿಂದೂ ಜನರಲ್ಲಿ ಸಮಾಜಸುಧಾರಣೆಯಿಲ್ಲದಿರುವುದರಿಂದಲೋ, ಐಕಮತ್ಯವಿಲ್ಲದಿರುವುದರಿಂದಲೋ, ಧರ್ಮಪ್ರಚಾರಕರೆನಿಸಿದ ಮಠಾಧಿಪತಿಗಳ ಕಾಟಸ್ಥ್ಯದಿಂದಲೋ ಭರತಖಂಡದಲ್ಲಿ ಎಲ್ಲೆಲ್ಲೂ ಹಿಂದೂ ಸಮಾಜಕ್ಕೆ ಒಂದಲ್ಲೊಂದು ಘೋರವಿಪತ್ತು ಬಂದೊದಗುತ್ತಲೇ ಇದೆ. ಕ್ರೈಸ್ತರಿಗಿಂತ ಮುಸಲ್ಮಾನರ ಹಾವಳಿ ಬಲವಾಗಿದೆ. ದಿನವೂ ಸಾವಿರಾರು ನಮ್ಮಜಾತಿಯ ಹಿಂದುಗಳು ಮುಸಲ್ಮಾನರಾಗುತ್ತಿದ್ದಾರೆ. ಬರೇ ಹತ್ತೇ ರೂಪಾಯಿನ ದುರಾಶೆಗೊಳಪಟ್ಟು ಜಾತಿಕೆಡುವ ದುರ್ಗತಿಗೆ ನಮ್ಮಜಾತಿಯವರು ಬಂದಿಳಿದಿದ್ದಾರೆ. ಐನೂರುವರ್ಷಗಳಿಂದಲೂ - ಆಗಾಖಾನಸಂಘ - ವೆಂಬ ಹೆಸರಿನ ಗುಪ್ತಸಂಘವು ಉತ್ತರಹಿಂದೂಸ್ಥಾನದಲ್ಲೂ, ಪಶ್ಚಿಮತೀರರಾಜ್ಯಗಳಲ್ಲೂ ಲಕ್ಷಾವಧಿ ಹಿಂದುಗಳನ್ನು ಜಾತಿಕೆಡಿಸಿದೆ. ಇದರಂತೆ ಹೈದರಾಬಾದ್ ನೈಜಾಮ್‌ರವರ ಪೋಷಣೆಗೊಳಪಟ್ಟ ಸಂಘಗಳು ಹೈದರಾಬಾದಿನಲ್ಲೂ ಉತ್ತರಹಿಂದೂಸ್ಥಾನದಲ್ಲೂ ಹಿಂದುಗಳನ್ನು ಇಸ್ಲಾಂಧರ್ಮಕ್ಕೆ ಸೇರಿಸುವ ಕಾರ್ಯದಲ್ಲಿ ಜಯಶೀಲವಾಗಿವೆ. ಇಡೀ ಹಿಂದೂಸ್ಥಾನವನ್ನೇ ಇಸ್ಲಾಂಧರ್ಮಕ್ಕೆ ಸೇರಿಸುವ ಮಹಾಪ್ರಯತ್ನವನ್ನು ಕೈಕೊಂಡು ಮುಸಲ್ಮಾನ್ ಮುಂದಾಳುಗಳು ಚಳವಳಿನಡಿಸುತ್ತಿದ್ದಾರೆ. ಇವರಂತೆ ಹಿಂದೂಗಳನ್ನು ಕ್ರೈಸ್ತಧರ್ಮಕ್ಕೆ ಸೇರಿಸುವ ಪ್ರಯತ್ನದಲ್ಲಿ ಅಮೇರಿಕದವರು ಐವತ್ತು ಕೋಟಿರೂಪಾಯಿ ವಿನಿಯೋಗ ಮಾಡಿ ದಿಗ್ವಿಜಯಪಡೆಯಬೇಕೆಂದಿದ್ದಾರೆ. ಪ್ರಕೃತ ಮುಸಲ್ಮಾನರ ಬಳಕೆ ಬಳಗಗಳು ನಮ್ಮಜಾತಿಯವರಲ್ಲಿ ವಿಶೇಷವಾಗಿದ್ದು, ಆ ಜನರು ಇವರ ಮೋಸಕ್ಕೊಳಗಾಗಿ ಗುಂಪುಗುಂಪಾಗಿ ಮುಸಲ್ಮಾನರಾಗುತ್ತಿದ್ದಾರೆ. ಈ ಮತಪ್ರಚಾರಕರ ಕೈವಾಡವು ಈಗ ವೀರಶೈವಸಮಾಜದಮೇಲೆ ಆರಂಭವಾಗಿದೆ. ಹೈದರಾಬಾದುಸೀಮೆಯ ಮುಸಲ್ಮಾನನೊಬ್ಬನು ನಾಲ್ಕಾರುಭಾಷೆಗಳಲ್ಲಿ ಹರಕುಮುರುಕಾಗಿಮಾತನಾಡುತ್ತ, ಮತ್ತು ಶಿವಶರಣರ ವಚನಗಳನ್ನು ಅಲ್ಲಲ್ಲಿ ಉದಹರಿಸುತ್ತ, ತಾನು ಚೆನ್ನಬಸವಣ್ಣನವರ ಅವತಾರವೆಂತಲೂ, ಹಿಂದಿನಮತಗಳೆಲ್ಲಾ ದೋಷಯುಕ್ತವಾದವುಗಳೆಂತಲೂ, ಲಿಂಗಧಾರಣೆ ಇಲ್ಲದಿದ್ದರೂ ತನ್ನ ಧರ್ಮಕ್ಕೆ (ಅಂದರೆ ಮುಸಲ್ಮಾನಮತಕ್ಕೆ) ಸೇರಿದ ಮಾತ್ರದಿಂದಲೇ ಮೋಕ್ಷ ದೊರೆಯುವುದೆಂತಲೂ ಬೋಧಿಸುತ್ತಾ ಅಜ್ಞಾನಿ ಜನರನ್ನು ಮೋಸಗೊಳಿಸುತ್ತಾ, ಕೆಲವು ಕೈಚಳಕಗಳಿಂದ ಜನರನ್ನು ಮರುಳುಗೊಳಿಸುತ್ತಾ, ಉತ್ತರಕರ್ಣಾಟಕದಲ್ಲಿ ತಿರುಗುತ್ತಲಿದ್ದಾನೆ. ಇವನಿಗೆ ದೊಡ್ಡದೊಡ್ಡ ಮುಸಲ್ಮಾನರ ಅಂತರಂಗಸಹಾಯವಿರುವುದೆಂದು ಹೇಳಬೇಕಾದ್ದಿಲ್ಲ. ಆದ್ದರಿಂದ ಚೆನ್ನಬಸವಣ್ಣನವರ ಅವತಾರಪುರುಷನೆಂದು ಹೇಳಿಕೊಳ್ಳುತ್ತಿರುವ ಈ ಮನುಷ್ಯನು ಈ ದೇಶದಲ್ಲಿ ಎಲ್ಲಿಯಾದರೂ ಬಂದದ್ದಾದರೆ, ವೀರಶೈವರಾಗಲಿ, ಇತರ ಯಾವ ಹಿಂದೂಸಮಾಜದವರೇ ಆಗಲಿ ಮರುಳಾಗಬೇಕಾದ್ದಿಲ್ಲವೆಂದು ಎಲ್ಲರಿಗೂ ಎಚ್ಚರಿಸಿದೆ.

ಸಮಾಜಹಿತೈಷಿ.

ಮೊಳಕಾಲ್ಮೂರು ಬೇಬಿವೀಕ್.

ಈ ವರ್ಷದ ಬೇಬಿವೀಕ್ ಮಹೋತ್ಸವವು ಎಂದಿನಂತೆ ಬಹಳ ವಿಜೃಂಭಣೆಯಿಂದ ಈ ಟವನಿನಲ್ಲಿ ಕಳೆದ ತಿಂಗಳು ತಾ|| 31 ನೇ ಭಾನುವಾರ ದಿವಸ ನಡಿಸಲ್ಪಟ್ಟಿತು. ಪ್ರತಿಸಲಕ್ಕಿಂತಲೂ ಈ ವರ್ಷ ಟವನ್ ಮುನಸಿಪಾಲಿಟಿಯವರು ಬಹಳ ಶ್ರದ್ಧೆವಹಿಸಿ ಕೆಲಸಮಾಡಿರುತ್ತಾರೆ. ಈ ಸಮಯದಲ್ಲಿ ಮುನಸಿಪಲ್ ಪ್ರೆಸಿಡೆಂಟ್‌ರವರು ರಜಾದಮೇಲೆ ಇದ್ದ ಕಾರಣ ಇಲ್ಲಿನ ಪಾಪ್ಯುಲರ್ ವೈಸ್‌ಪ್ರೆಸಿಡೆಂಟರೆಂದು ಹೆಸರನ್ನು ಪಡೆದಿರುವ ಮ|| ಸಾಹುಕಾರ್ ನೇರ್ಲಹಳ್ಳಿ ಚೆನ್ನಬಸಪ್ಪನವರು ಮುಂಚೆನಂತು ಈ ಕಾರ್ಯವನ್ನು ನೆರವೇರಿಸಿದರು. ಈಸಲದ ಪ್ರೋಗ್ರಾಮಿನಲ್ಲಿ 3 ವರ್ಷದ ಕೆಳಗೆ ಇರುವ ಶಿಶುಗಳ ಪೈಕಿ ಉತ್ತಮವಾದ ಶಿಶುಗಳಿಗೆ ಬೆಳ್ಳಿಯಬಟ್ಟಲುಗಳು, ಉಲ್ಲನ್ನು ಟೋಪಿಗಳು, ಆಟದ ಗೊಂಬೆಗಳು ಇವೇ ಮೊದಲಾದ 9 ಇನಾಮುಗಳನ್ನು ಮತ್ತು ಆದಿಕರ್ಣಾಟಕರ ಪೈಕಿ ತಮ್ಮ ಮನೆಯನ್ನು ಚೊಕ್ಕಟವಾಗಿಟ್ಟುಕೊಂಡವರಿಗೆ 2 ಇನಾಮುಗಳನ್ನು ಕೊಡಬೇಕೆಂದು ಈ ಮೊದಲೇ ಕಮಿಟಿಯಲ್ಲಿ ನಿರ್ಧರಿಸಿದ್ದ ಮೇರೆಗೆ ಏರ್ಪಾಟು ಮಾಡಲ್ಪಟ್ಟಿತ್ತು. ಇದೇ ಕಮಿಟಿಯ ಛೇರ್ಮನ್ ಮ|| ಯನ್. ಚೆನ್ನಬಸಪ್ಪನವರು, ಮಿಡ್ಲ್‌ಸ್ಕೂಲು ಹೆಡ್ಮಾಸ್ಟರಾದ ಮ|| ಶೇಷಪ್ಪನವರು ಮತ್ತು ಸಬ್‌ಅಸಿಸ್ಟೆಂಟ್ ಸರ್ಜನ್‌ರವರಾದ ಮ|| ಎಂ. ಸಿ. ನಂಜಪ್ಪನವರು ಜಡ್ಜಿಗಳಾಗಿದ್ದರು. ಮಧ್ಯಾಹ್ನದಲ್ಲಿ ಪ್ರತ್ಯೇಕವಾಗಿ ಹೆಂಗಸರಿಗೋಸ್ಕರ ಇಲ್ಲಿನ ಬ್ರಹ್ಮಸಮಾಜದ ಕಟ್ಟಡದಲ್ಲಿ ಉರ್ದು ಗರ್ಲ್ಸ್‌ಸ್ಕೂಲು ಹೆಡ್ಮಿಸ್ಟ್ರೆಸ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಕೂಡಿಸಲ್ಪಟ್ಟು ಶಿಶುಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಇಲ್ಲಿನ ಲೋಕಲ್ ಮಿಡ್‌ವೈಫ್‌ರವರು ಉಪನ್ಯಾಸವನ್ನು ಮಾಡಿದರು. ಅನಂತರ ಮಕ್ಕಳುಗಳ ಚುನಾವಣೆಯು ಮೇಲ್ಕಂಡ ಜಡ್ಜಿಗಳವರಿಂದ ನಡಿಸಲ್ಪಟ್ಟಿತು. ಸುಮಾರು 100 ಶಿಶುಗಳವರೆಗೂ ಪ್ರದರ್ಶನಕ್ಕೆ ಬಂದಿದ್ದುವು. ಇವುಗಳಲ್ಲಿ ಉತ್ತಮವಾದ 9 ಶಿಶುಗಳಲ್ಲದೆ ಇನ್ನೂ 10-12 ಶಿಶುಗಳನ್ನು ಮೇಲ್ಕಂಡ ಜಡ್ಜಿಗಳು ಚುನಾಯಿಸಿಕೊಂಡನಂತರ ಇಲ್ಲಿನ ಟವನ್‌ಹಾಲ್ ಕಟ್ಟಡದಲ್ಲಿ ಪ್ರಮುಖ ಪುರನಿವಾಸಿಗಳನ್ನೂ ಇತರ ದೊಡ್ಡಮನುಷ್ಯರುಗಳನ್ನೂ ಸೇರಿಸಿ ಇಲ್ಲಿನ ಫಾರೆಸ್ಟ್‌ರೇಂಜರಾದ ಮ|| ರಾ|| ಬಿ. ಗೋಪಾಲಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮ್ಮೇಳನವನ್ನು ನಡಿಸಿದ್ದರು. ವೈಸ್‌ಪ್ರೆಸಿಡೆಂಟ್ ಮ|| ಯನ್. ಚೆನ್ನಬಸಪ್ಪನವರು ಈ ಬೇಬಿವೀಕಿನ ಉದ್ದೇಶವನ್ನು ಕುರಿತು ಉಪನ್ಯಾಸವನ್ನು ಓದಿದರು. ಅನಂತರ ಸಬ್ ಅಸಿಸ್ಟೆಂಟ್ ಸರ್ಜನ್ನರಾದ ಮ|| ಯಂ. ಸಿ. ನಂಜಪ್ಪನವರು ಆರೋಗ್ಯವಿಚಾರವಾಗಿ ಸುಮಾರು 1 ಘಂಟೆಗೆ ಮೇಲ್ಪಟ್ಟು ಸಭಿಕರೆಲ್ಲರಿಗೂ ತೃಪ್ತಿಕರವಾಗುವಂತೆ ಉಪನ್ಯಾಸವನ್ನು ಮಾಡಿದರು. ಆಮೇಲೆ ಇಲ್ಲಿನ ತಾ|| ಸ್ಯಾನಿಟರಿ ಇನ್ಸ್‌ಪೆಕ್ಟರ್ ಮ|| ಯನ್. ಡಿ. ಸರೋಜಿಯವರು ಸ್ಯಾನಿಟೇಷನ್ ವಿಚಾರದಲ್ಲೂ, ಲೋಕಲ್ ಗರ್ಲ್ಸ್‌ಸ್ಕೂಲು ಹೆಡ್ಮಾಸ್ಟರ್ ಮ|| ಶಂಕರಪ್ಪನವರು ಮಕ್ಕಳ ಹಿತ ವಿಚಾರದಲ್ಲಿಯೂ ದೀರ್ಘೋಪನ್ಯಾಸಗಳನ್ನು ಮಾಡಿದರು. ಅನಂತರ ಉತ್ತಮವಾದ ಸುಮಾರು 20 ಮಕ್ಕಳಿಗೂ ಆದಿಕರ್ಣಾಟಕರ ಪೈಕಿ ಮನೆಯನ್ನು ಚೊಕ್ಕಟವಾಗಿಟ್ಟುಕೊಂಡಿದ್ದ ಇಬ್ಬರಿಗೂ ಅವರವರ ಯೋಗ್ಯತಾನುಸಾರ ಇನಾಮುಗಳು ಹಂಚಲ್ಪಟ್ಟವು. ಪ್ರೆಸಿಡೆಂಟರವರ ಅಧ್ಯಕ್ಷಭಾಷಣವಾದ ತರುವಾಯ ಇಲ್ಲಿನ ತಾ|| ಬೋರ್ಡ್ ವೈಸ್‌ಪ್ರೆಸಿಡೆಂಟ್ ಮ|| ಯಂ. ಹೆಚ್. ನಾರಾಯಣರಾಯರು ಸಭಾಧ್ಯಕ್ಷರಿಗೂ, ಮುನಸಿಪಾಲಟಿಯವರಿಗೂ, ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಯನ್. ಚೆನ್ನಬಸಪ್ಪನವರಿಗೂ, ಪುರಜನಗಳ ಪರವಾಗಿ ವಂದನೆಯನ್ನು ತಿಳಿಸಿದರು. ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೆ ಶ್ರೇಯಃಪ್ರಾರ್ಥನೆಮಾಡಿ ಸಭೆಯು ರಾತ್ರಿ 8 ಘಂಟೆಗೆ ಮುಕ್ತಾಯವಾಯಿತು. ಇದಲ್ಲದೆ ಈ ತಾಲ್ಲೂಕಿಗೆ ಮುಖ್ಯಗ್ರಾಮವಾದ ರಾಂಪುರದ ಗ್ರಾಮದಲ್ಲಿ ಈ ತಾಲ್ಲೂಕುಬೋರ್ಡು ವೈಸ್‌ಪ್ರೆಸಿಡೆಂಟರಾದ ಮ|| ಯಂ. ಹೆಚ್. ನಾರಾಯಣರಾಯರವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 25 ರಲ್ಲೂ, ದೇವಸಮುದ್ರದ ಗ್ರಾಮದಲ್ಲಿ ಕಳೆದ ತಾ|| 28 ರಲ್ಲೂ, ಸಬ್ ಅಸಿಸ್ಟೆಂಟ್ ಸರ್ಜನ್ ಮ|| ಯಂ. ಸಿ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 30 ರಲ್ಲಿ ನಾಗಸಮುದ್ರಗ್ರಾಮದಲ್ಲೂ ಬೇಬಿವೀಕ್ ಮಹೋತ್ಸವಗಳು ನಡಿಸಲ್ಪಟ್ಟವು. ಈ ಮಹೋತ್ಸವಗಳಲ್ಲಿ ಸಬ್ ಅಸಿಸ್ಟೆಂಟ್ ಸರ್ಜನ್ನರಾದ ಮ|| ಯಂ. ಸಿ. ನಂಜಪ್ಪನವರು ಆರೋಗ ಶಿಶುಸಂರಕ್ಷಣೆವಿಚಾರದಲ್ಲಿಯೂ, ತಾಲ್ಲೂಕು ಸ್ಯಾನಿಟರಿ ಇನ್ಸ್‌ಪೆಕ್ಟರಾದ ಮ|| ಯನ್. ಡಿ. ಸರೋಜಿಯವರು ಗ್ರಾಮಪಾಕೀಜವಿಚಾರದಲ್ಲಿಯೂ ಬಹಳ ಸ್ವಾರಸ್ಯವಾಗಿ ಉಪನ್ಯಾಸಗಳನ್ನು ಮಾಡಿದರು.

ಇತಿ, ಪ್ರೇಕ್ಷಕ.

ರಾವಸಾಹೇಬ ನೆಜ್ಜೂರುವಕೀಲ ಸದಾಶಿವಗೌಡರ ಅಭಿನಂದನ.

ಇಲ್ಲಿಯ ಲೋಕಲ್‌ಬೋರ್ಡು ವೈಸ್‌ಪ್ರೆಸಿಡೆಂಟರಾದ ಮ|| ರಾಮಚಂದ್ರನಾರಾಯಣಭಟ್ಕಳ ಇವರ ಅಧ್ಯಕ್ಷತೆಯಲ್ಲಿ ತಾ|| 29 ರಲ್ಲಿ ಸಿದ್ದಾಪುರದಲ್ಲಿ ಈ ಪ್ರಾಂತದ ರಹಿವಾಸಿಗಳ ಪ್ರಚಂಡಸಭೆ ಕೂಡಿತ್ತು. ಈ ಸಭೆಗೆ ಮಾಮ್ಲೇದಾರ ಸಾ|| ರು, ಡಾಕ್ಟರ ಸಾ|| ರು, ರೇಂಜರ ಸಾ|| ರು, ಗಾಗ್ಗೆಹಳ್ಳಿ ಶ್ರೀ|| ವೇ|| ಸೋಮನಾಥಶಾಸ್ತ್ರಿಗಳು ತಾಲ್ಲೂಕಿನ ಮತ್ತು ಎಲ್ಲಭಾಗಗಳಪುಢಾರಿಗಳು ಆಗಮಿಸಿದ್ದರು. ಸಾಗರ, ಸೊರಬ, ಶಿರ್ಶಿ, ಮುಂಡಗೋಡ ಕಡೆಯಿಂದಲೂ ಕೆಲವರು ಬಂದಿದ್ದರು. ಅಧ್ಯಕ್ಷರು ತಮ್ಮಭಾಷಣದಲ್ಲಿ ಬಹಳ ವರುಷಗಳ ಹಿಂದೆ ಮಳಲ್ಲಿಯ ಕೈ|| ಶಿವಲಿಂಗಯ್ಯಗೌಡರಿಗೆ - ರಾವಬಹಾದ್ದೂರ - ಪದವಿಯು ಸರಕಾರದಿಂದ ಕೊಡಲ್ಪಟ್ಟಿತ್ತೆಂದು ಕೇಳಿದ್ದೆವು. ಅನಂತರ ಇದುವರೆಗೆ ಆ ಗೌರವವು ಈ ಪ್ರಾಂತದಲ್ಲಿ ಯಾರಿಗೂ ಕೊಡಲ್ಪಟ್ಟಿದ್ದಿಲ್ಲ. ಅಂಥ ಬಹುಮಾನವನ್ನು ಈ ತಾಲ್ಲೂಕಿನವರಾದ ಒಬ್ಬ ಸಾರ್ವಜನಿಕ ಹಿತಕಾರ್ಯದಕ್ಷ ಮಹಾನುಭಾವರಿಗೆ ಸರಕಾರದವರು ಕೊಟ್ಟು ಸನ್ಮಾನಿಸಿದ್ದಕ್ಕಾಗಿ ಈ ದಿವಸ ಅವರ ಅಭಿನಂದನದ ಬಗ್ಗೆ ಈ ಸಭೆ ಕರೆಯಲ್ಪಟ್ಟಿರುತ್ತದೆ. ಶ್ರೀಯುತ ನೆಜ್ಜೂರು ಸದಾಶಿವಗೌಡರು ವಿದ್ಯಾವ್ಯಾಸಂಗದಲ್ಲಿ ಹಿಂದುಳಿದವರ್ಗದವರಾದಾಗ್ಯೂ ಬಾಲ್ಯದಲ್ಲಿ ಮೇಹನತ್ತಿನಿಂದ ಆಂಗ್ಲವಿದ್ಯಾರ್ಜನೆಮಾಡಿ ವಕೀಲಸನದುಪಡೆದು ಸಿರ್ಸಿ ಸಬ್ಬಜಜ್ಜ ಕೋರ್ಟವಕೀಲರಾಗಿ ಇತ್ತೀಚಿಗೆ ಗವರ್ನಮೆಂಟ ವಕೀಲರಾಗಿ ಕೆಲಸ ಮಾಡುತ್ತಿದ್ದು ಸ್ವಾರ್ಥದಕಡೆಗೆ ಲಕ್ಷ್ಯಕೊಡದೆ ಸಾರ್ವಜನಿಕ ಹಿತದಕಾರ್ಯಗಳಾದ ಮ್ಯುನಸಿಪಾಲಿಟಿ, ಲೋಕಲ್‌ಬೋರ್ಡು, ಸೇತಕಿ ಅಭಿವೃದ್ಧಿ, ಸಹಕಾರಿ, ಮುಂತಾದ ಸಂಸ್ಥೆಗಳಲ್ಲಿ ದಕ್ಷತೆಯಿಂದ ಕೆಲಸಮಾಡುತ್ತಾ ಈ ಪ್ರಾಂತದ ರಹಿವಾಸಿಗಳ ಹಿತವನ್ನು ಸಾಧಿಸುತ್ತಿರುವದಲ್ಲದೆ ಇನ್ನೂ ಅನೇಕ ಸಾಮಾಜಿಕ, ಧಾರ್ಮಿಕ ಸತ್ಕಾರ್ಯಭಾಗಿಗಳಾಗಿ ದುಡಿಯುತ್ತಿದ್ದಾರೆ. ನಿಜವಾಗಿ ನಿಸ್ಪೃಹತೆಯಿಂದ ಸಾರ್ವಜನಿಕಕಾರ್ಯಮಾಡತಕ್ಕವರು ಗೌರವಿಸಲ್ಪಡುವದು ಯೋಗ್ಯವಿದ್ದು ಸರಕಾರದಿಂದ ಇವರಿಗೆ - ರಾವಸಾಹೇಬ - ಪದವಿಯು ನ್ಯಾಯವಾಗಿ ಕೊಡಲ್ಪಟ್ಟಿರುತ್ತದೆ. ಈ ಸನ್ಮಾನವು ಇವರಿಗೆ ಮಾತ್ರವಲ್ಲ, ಇವರು ನಮ್ಮೊಳಗಿನವರಾದ್ದರಿಂದ ನಮಗು ಕೂಡಾ ಭೂಷಣವು. ಸರ್ಕಾರದಲ್ಲಿ ಮತ್ತು ರಹಿವಾಸಿಗಳಲ್ಲಿ ಉಭಯಕಡೆಯಲ್ಲಿಯೂ ಪ್ರೀತಿದೊರಕಿಸಿ ಲೋಕಕಲ್ಯಾಣಕಾರ್ಯಗಳನ್ನು ಜರಗಿಸುವದು ಚಿಕ್ಕಸಂಗತಿಯಲ್ಲ. ಅದಕ್ಕೆ ಬರೇ ವಿದ್ವತ್ತು ಇದ್ದಮಾತ್ರದಿಂದ ಸಾಗುವಂತಿಲ್ಲ. ಅಸ್ವಾರ್ಥತೆಯಿಂದಲೂ, ಜನಬಳಕೆಯಿಂದಲೂ ಅಂತಃಕರುಣಪೂರ್ವಕವಾಗಿ ದುಡಿದರೆ ಮಾತ್ರ ಸಾರ್ವಜನಿಕಕಾರ್ಯಗಳು ನೆರವೇರಿ ಜನತೆಯ ಕಲ್ಯಾಣವಾಗುವದು. ಹಾಗಿಲ್ಲದಿದ್ದರೆ ವಿಪರೀತಪರಿಣಾಮವು ಘಟಿಸುವದು. ಇಂಥ ಸದ್ಗುಣಗಳು ನಮ್ಮ ರಾವಸಾಹೇಬರಲ್ಲಿರುವದರಿಂದಲೇ ಸರಕಾರದ ಸನ್ಮಾನಕ್ಕೂ ನಮ್ಮ ಅಭಿನಂದನಕ್ಕೂ ಇವರು ಪಾತ್ರರಿರುವರು. ಈ ಪ್ರಾಂತದ ಅಶಿಕ್ಷಿತಬಾಂಧವರ ಹಿತಸಂವರ್ಧನಕಾರ್ಯಗಳನ್ನು ಇನ್ನೂ ಹೆಚ್ಚಾಗಿಗೈದು ಭಿನ್ನಭಿನ್ನಸಮಾಜಗಳೊಳಗಿನ ಘಾತಕಒಡಕುಗಳನ್ನು ಸರಿಪಡಿಸಿ ಐಕ್ಯವೃದ್ಧಿಗೊಳಿಸಿ ಇದಕ್ಕೂ ಹೆಚ್ಚಿನ ಸನ್ಮಾನವನ್ನು ಸರಕಾರದಿಂದ ಪಡೆದು ಜನಹಿತಕಾರಿಗಳಾಗಿ ಬಹುಕಾಲ ಬಾಳಲೆಂದು ವಗ್ಗೈರೆ ಹೇಳಿ ಜಗನ್ನಿಯಾಮಕನನ್ನು ಪ್ರಾರ್ಥಿಸಿ ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ರಾ|| ಸಾ|| ಸದಾಶಿವಗೌಡರಲ್ಲಿರುವ ಸದ್ಗುಣಗಳನ್ನು ವಿವರಿಸಿ ಮಾಮ್ಲೇದಾರ ಸಾ|| ರು, ವೇ|| ಶ್ರೀ ಸೋಮನಾಥಶಾಸ್ತ್ರಿಗಳು, ಶ್ರೀಯುತ ಕಾಗೋಡ ಶಿವಲಿಂಗಪ್ಪಗೌಡರು, ಶಿರ್ಶಿ ಕೋರಾವರ್ ಬಸಪ್ಪನವರು ಮುಂತಾದ ಮಹನೀಯರು ಗೌರವಪರಭಾಷಣಮಾಡಿದರು. ಕಟ್ಟಕಡೆಗೆ ರಾವಸಾಹೇಬ ಸದಾಶಿವಗೌಡರು - ಈ ಸಮಾರಂಭಕ್ಕೆ ಸಿದ್ದಾಪುರ ತಾ|| ನ ರಹಿವಾಸಿಗಳಲ್ಲದೆ ಶಿರ್ಶಿ, ಸಾಗರ, ಸೊರಬ, ಮುಂಡಗೋಡಕಡೆಯ ಕೆಲವು ಸದ್ಗೃಹಸ್ಥರು ತಮ್ಮ ಅಮೌಲ್ಯವೇಳೆಯನ್ನು ಖರ್ಚುಮಾಡಿ ಬಹುದೂರದಿಂದ ಬಂದುದಕ್ಕೆ ನನಗೆ ಕೌತುಕವಾಗಿದೆ. ಅಧ್ಯಕ್ಷಮಹಾಶಯರು, ಮಾಮ್ಲೇದಾರ ಸಾಹೇಬರು ಮುಂತಾದವರು ನನ್ನ ಗುಣಾಧಿಕ್ಯಗಳನ್ನು ಕುರಿತು ಹೊಗಳಿದ್ದು ಅವರ ದೊಡ್ಡಸ್ತಿಕೆಯ ಪ್ರದರ್ಶನವಾಗಿದೆ. ಅಂಥ ಪ್ರಶಂಸೆಗೆ ನಾನು ಪಾತ್ರನಲ್ಲ, ಆದರೆ ನಿಮ್ಮ ಭಾಷಣವು ನನಗೆ ಸದ್ಬೋಧವಾಗಿಯೂ ಉತ್ತೇಜನಪರವಾಗಿಯೂ ಇದೆ. ನಿಮ್ಮ ಅನುಜ್ಞೆಯಂತೆ ನನ್ನಿಂದಾದಷ್ಟರ ಮಟ್ಟಿಗೆ ಜನಹಿತಕಾರ್ಯಗಳನ್ನು ಮನಮುಟ್ಟಿ ನಿಃಸ್ವಾರ್ಥತೆಯಿಂದ ಮಾಡಲು ಶ್ರೀಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ. ಈವರೆಗೆ ನನ್ನಿಂದಾದದ್ದೆಂಬ ಲೋಕಹಿತಕಾರ್ಯಗಳಲ್ಲಿ ನಿಮ್ಮೆಲ್ಲರ ಬೆಂಬಲವಿತ್ತೆಂಬುದನ್ನು ನಾನು ಮರಿಯುವದಿಲ್ಲ. ನಿಮ್ಮ ಪ್ರತಿನಿಧಿಯಾದ್ದರಿಂದ ಈ ಬಹುಮಾನದ ಪದವಿಯು ದೊರಕಿರುವಪ್ರಯುಕ್ತ ಈ ಸನ್ಮಾನಕ್ಕೆ ತಾವು ಕೂಡಾ ಪಾಲುಗಾರರಿದ್ದೀರಿ. ಎಂದು ವಗ್ಗೈರೆ ಹೇಳಿ ತಮ್ಮ ವಿನಯಪರ ಸಮಂಜಸ ಭಾಷಣವನ್ನು ಪೂರ್ತಿಮಾಡಿದರು. ಅನಂತರ ಸರಕಾರದ ಆಭಾರ ಎಣಿಸುವ ವಗ್ಗೈರೆ ಠರಾವುಗಳು ಸರ್ವಸಮ್ಮತಿಯಿಂದ ಪಾಸಮಾಡಲ್ಪಟ್ಟವು. ರಾ|| ಸಾ|| ಸದಾಶಿವಗೌಡರಮೇಲೆ ತಿಪ್ಪಯ್ಯ ಮಾಸ್ತರರು ಸ್ವಂತ ರಚಿಸಿದ ಪದ್ಯಗಳನ್ನು ಮನೋಹರವಾಗಿಹಾಡಿ ಉಪಸ್ಥಿತರಿದ್ದು ಕೊನೆಗೆ ಸಾಮ್ರಾಜ್ಯಾಧಿಪತಿಗಳಾದ ಪಂಚಮ ಜಾರ್ಜಬಾದಶಹ ದಂಪತಿಗಳು ದೀರ್ಘಾಯುಗಳಾಗಿ ಬಹುಕಾಲ ರಾಜ್ಯವಾಳಲೆಂದು ಪ್ರಾರ್ಥಿಸಲ್ಪಟ್ಟಮೇಲೆ ಸಭೆವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ವೀರಶೈವರ ಸಿದ್ಧಾಂತವು.

ಲೇಖಾಂಕ ೧.

(ಲೇಖಕ—ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಹಿರೇಮಠ ಜೋಳಬು ಸಂಸ್ಕೃತಕಾಲೇಜು ಯಾದಗಿರಿ.)

ಛೇ ಹುಚ್ಚುಮುಂಡೆಯೇ ಇಷ್ಟಾದರೂ ಬುದ್ಧಿಯುಕ್ತಳಲಿ ಎಂದು ಹೇಳಿದರೆ ಇಲ್ಲ ಮುಖವಾಯ ಮಾಡಿಕೊಂಡ ಕಂಡಸಷ್ಟಾದರೂ ಬಿಟ್ಟೇನು ವಿಷಪಾನವನ್ನಾದರೂ ಮಾಡೇನು, ನನ್ನ ಕೆಟ್ಟಗುಣಗಳನ್ನು ಮಾತ್ರ ನಾನು ಬಿಡಲಾರೆನು. ಯಾಕೆಂದರೆ, ಹುಟ್ಟಿದಗುಣವು ಹುಗಿದರೂ ಹೋಗದು ಎಂದು ಗಾದೆಯು ಇರುವುದರಿಂದಲೂ, ಗಾದೆಯು ವೇದಕ್ಕೆ ಸಮಾನವೆಂದು ನನ್ನ ಹಿರಿಯರು ಹೇಳುವದರಿಂದಲೂ ಬಿಡಲಾಗುವದಿಲ್ಲವೆಂದು ವಾದಿಸುವ ಹಠಮಾರೀ ಸ್ತ್ರೀಯಳಂತೆಯೇ ಕೆಲವು ನಮ್ಮ ಬ್ರಾಹ್ಮಣಬಂಧುಗಳ ವರ್ತನವಾಗಿರುತ್ತದೆ. ಯಾಕೆಂದರೆ, ವೀರಶೈವರು ತಮ್ಮ ಸಿದ್ಧಾಂತಗಳನ್ನು ವೇದೋಪನಿಷತ್ ಪ್ರಮಾಣಗಳಿಂದ ಎಷ್ಟೋಸಾರಿ ತೋರಿಸಿದ್ದಾಯಿತು. ವೀರಶೈವಾಚಾರ್ಯರ ಭಾಷ್ಯಾದಿಸಿದ್ಧಾಂತಗ್ರಂಥಗಳನ್ನು ನೋಡದೆ ವೀರಶೈವರ ವಿಷಯಕ್ಕೆ ತಮ್ಮ ವಿಷವನ್ನು ಮೇಲಿಂದಮೇಲೆ ಕಾರುತ್ತಿರುವದನ್ನು ನೋಡಿದರೆ ಇವರ ಅಂತರಂಗವು ಹೇಗೆ ಇರುವದೆಂಬುವದಕ್ಕೆ ಅನೇಕ ಉದಾಹರಣೆಗಳೇ ಕಾರಣಗಳಾಗಿರುತ್ತವೆ. - ಪವಿತ್ರಂತೆವಿತತಂಬ್ರಹ್ಮಣಸ್ಪತೆ ಪ್ರಭುರ್ಗಾತ್ರಾಣಿಪರ್ಯೇಷಿ ವಿಶ್ವತ - ಎಂಬುವ ರುಗ್ವೇದದ ಮಂತ್ರಕ್ಕೆ ವೀರಶೈವರ ಆಚಾರ್ಯರು ಲಿಂಗಧಾರಣಪರ ಅರ್ಥವನ್ನು ಮಾಡಿರುತ್ತಾರಷ್ಟೆ. ಆದರೆ ಅದಕ್ಕೆ ಪರವಾದಿಗಳಾದ ಬ್ರಾಹ್ಮಣರು ಹೇಳುವದೇನೆಂದರೆ, ಆ ಮಂತ್ರವು ಸೋಮದೇವತಾಕವಾಗಿರುವಕಾರಣ ಲಿಂಗಧಾರಣಪರ ಅರ್ಥವಾಗುವದಿಲ್ಲವೆಂದು ವಾದಿಸುತ್ತಾರೆ. ಆದರೆ ಮಧ್ವಾಚಾರ್ಯರು ಸೋಮಯಾಗದಲ್ಲಿ ಹೇಳಿರುವದನ್ನು ಖಂಡಿಸಿ ತಪ್ತಮುದ್ರಾಧಾರಣಾದಿ ವಿಷಯಪರವಾಗಿ ಅರ್ಥವನ್ನು ಮಾಡಿರುತ್ತಾರೆ. ಭಟ್ಟೋಜಿದೀಕ್ಷಿತಾದಿಗಳು ತಪ್ತಮುದ್ರಧಾರಣವನ್ನೂ ಲಿಂಗಧಾರಣ ವಿಷಯವನ್ನೂ ಖಂಡಿಸಿ ಸೋಮಯಾಗದಲ್ಲಿ ಹೇಳಿರುವರು. ಇದರಂತೆ ಪ್ರತಿಯೊಬ್ಬ ಮತಸ್ಥಾಪನಾಚಾರ್ಯರು ವೇದಮಂತ್ರಗಳಿಗೆ ತಮ್ಮತಮ್ಮ ಮತಪರ ಅರ್ಥಮಾಡುವದು ಲೋಕರೂಢಿಯೂ ಜಗತ್ಪ್ರಸಿದ್ಧವೂ ಇರುತ್ತದೆ. ವೇದಮಂತ್ರಗಳಿಗೆ ಹೀಗೆಯೇ ಅರ್ಥಮಾಡಬೇಕೆಂಬುದನ್ನು ನಿರ್ಧರಿಸಲಿಕ್ಕೆ ಯಾರೂ ಸಮರ್ಥರಿರುವದಿಲ್ಲ. ಅನ್ಯಮತವನ್ನು ಖಂಡನೆಮಾಡಿ ಸ್ವಮತಸಿದ್ಧಾಂತಸ್ಥಾಪನೆಯನ್ನು ಮಾಡುವದು ಪ್ರತಿಯೊಬ್ಬರಿಗೂ ಸ್ವಭಾವಸಿದ್ಧವಾಗಿರುತ್ತದೆ. ಹೀಗೆ ಒಬ್ಬರಿಗೊಬ್ಬರು ಖಂಡನೆಯನ್ನು ಮಾಡಿದರೂ ಅವರ ಸಿದ್ಧಾಂತಕ್ಕೂ ಅವರ ಬ್ರಾಹ್ಮಣ್ಯಕ್ಕೂ ಯಾವ ಚ್ಯುತಿಯೂ ಇರುವದಿಲ್ಲ. ಅದರಂತೆ ವೀರಶೈವರ ಆಚಾರ್ಯರು ತಮ್ಮ ಮತಸ್ಥಾಪನೆಗಾಗಿ ಲಿಂಗಧಾರಣಪರ ಅರ್ಥಮಾಡಿರುವದನ್ನು ಅನ್ಯಮತಸ್ಥರು ಲಿಂಗಧಾರಣ ವಿಷಯವನ್ನು ಖಂಡನೆಮಾಡಿದರೂ ಇವರ ಲಿಂಗಧಾರಣ ವಿಷಯಕ್ಕೂ ವೈದಿಕತ್ವಕ್ಕೂ ಇವರ ಬ್ರಾಹ್ಮಣ್ಯದ ವಿಷಯಕ್ಕೂ ಯಾವ ಚ್ಯುತಿಯೂ ಇರುವದಿಲ್ಲ. ಹಾಗಿಲ್ಲದೆ ಇದ್ದಪಕ್ಷದಲ್ಲಿ ತ್ರಿಮತಸ್ಥರಾದ ಮಾಧ್ವ, ಶಂಕರ ರಾಮಾನುಜರ ಮತದವರ ಬ್ರಾಹ್ಮಣ್ಯಕ್ಕೂ ಕೂಡ ಹಾನಿಯುಂಟಾಗಬೇಕಾದೀತು. ಯಾಕೆಂದರೆ, ಉಳಿದ ಮತಸ್ಥಾಪನಾಚಾರ್ಯರು ಮೇಲೆಹೇಳಿದ ತ್ರಿಮತಸ್ಥ ಆಚಾರ್ಯರು ಮಾಡಿರುವ ವೇದಮಂತ್ರಗಳ ಅರ್ಥವನ್ನು ಖಂಡನೆಮಾಡಿರುವರು. ವೇದವಾಕ್ಯಗಳು ಎಲ್ಲರಿಗೂ ಅನುಕೂಲಿಸುವ ಪದ್ಧತಿಯುಳ್ಳವುಗಳಾಗಿರುವುದರಿಂದಲೇ ಉಪಬೃಂಹಣವಾಕ್ಯಗಳಿಂದಲೇ ವೇದವಾಕ್ಯದ ಮುಖ್ಯ ತಾತ್ಪರ್ಯವನ್ನು ಸ್ಪಷ್ಟೀಕರಿಸಬೇಕೆಂದು ವೇದವ್ಯಾಸರ ಮುಖ್ಯ ತಾತ್ಪರ್ಯವು ಪ್ರಸಿದ್ಧವೇ ಇರುತ್ತದೆ. ಆದರೂ - ತುಷ್ಯತುದುರ್ಜನಃ - ಎಂಬುವ ನ್ಯಾಯದಿಂದ ಬ್ರಾಹ್ಮಣರು ಖಂಡನೆಮಾಡುವ ಕೆಲವು ವಿಷಯಗಳಿಗೆ ಉತ್ತರ ಕೊಡುವದೇ ಈ ಲೇಖದ ಮುಖ್ಯಾಭಿಪ್ರಾಯವಾಗಿರುತ್ತದೆ. - ಪವಿತ್ರಂತೆ - ಮಂತ್ರವು ಸೋಮಯಾಗದಲ್ಲಿ ದಶಾಪವಿತ್ರವನ್ನು ಧರಿಸಿರುವ ವಿಷಯದಲ್ಲಿ ವಿನಿಯೋಗಿಸಿರುವುದರಿಂದ ಲಿಂಗಧಾರಣ ವಿಷಯಕವಾದ ಅರ್ಥವು ಹೇಗೆ ಯುಕ್ತವಾಗುವದೆಂಬುವುದೇ ಇವರ ಅಭಿಪ್ರಾಯವು, ಮತ್ತು ಯಾವ ಮಂತ್ರವು ಎಲ್ಲಿ ವಿನಿಯೋಗಿಸಲ್ಪಟ್ಟಿರುವುದೊ ಅಲ್ಲಿಯೇ ಉಪಯೋಗಿಸತಕ್ಕದ್ದು ಸೋಮಯಾಗಪ್ರಕರಣದಲ್ಲಿ ಪಠಿತವಾದ ಈ ಮಂತ್ರಕ್ಕೆ ಲಿಂಗಧಾರಣಪರತ್ವವು ಪ್ರಕರಣವಿರೋಧವಾಗುವದೆಂಬುದೇ ಇವರ ಪ್ರಶ್ನೆಯು. ಇದಕ್ಕೆ ಉತ್ತರವೇನೆಂದರೆ—ಯಾವ ಮಂತ್ರವು ಎಲ್ಲಿ ವಿನಿಯೋಗಿಸಲ್ಪಟ್ಟಿರುವದೊ ಆ ಮಂತ್ರವನ್ನು ಅಲ್ಲಿಯೇ ವಿನಿಯೋಗಿಸಬೇಕು; ಮತ್ತೊಂದರಲ್ಲಿ ವಿನಿಯೋಗಿಸಬಾರದು. ಎಂಬುವ ನಿರ್ಬಂಧವಿಲ್ಲ. ಚಯನಯಾಗದಲ್ಲಿ ವಿನಿಯೋಗಿಸಿದ ರುದ್ರಸೂಕ್ತವು ರುದ್ರಾಭಿಷೇಕದಲ್ಲಿ ವಿನಿಯೋಗಿಸಿರುವುದರಿಂದ ವಿನಿಯೋಗವೇನುವು ಒಂದೇ ಕಡೆಗೆ ಇರಬೇಕೆಂಬುವುದು ಯುಕ್ತವಲ್ಲ, ಮತ್ತು ಒಂದು ದೇವತಾವಿಷಯಕವಾದ ಮಂತ್ರವನ್ನು ಮತ್ತೊಂದು ದೇವತಾವಿಷಯದಲ್ಲಿ ಉಪಯೋಗಿಸಬಾರದು. ಎಂಬುವುದು ಕಲ್ಪಸೂತ್ರಾಭಿಪ್ರಾಯವು. ಆದಕಾರಣ ಅಗ್ನಿಚಯನವು ರುದ್ರದೇವತಾಕವಾದುದರಿಂದ ಅಲ್ಲಿ ವಿನಿಯೋಗಿಸಿದ ರುದ್ರಸೂಕ್ತವು ರುದ್ರದೇವತಾಕವಾದ ರುದ್ರಾಭಿಷೇಕದಲ್ಲಿ ವಿನಿಯೋಗಿಸುವದು ವಿರುದ್ಧವಲ್ಲ, ಎಂಬುವದು ಕಲ್ಪಸೂತ್ರಾಭಿಪ್ರಾಯವಿದ್ದರೂ, ಅಗ್ನಿದೇವತಾಕವಾದ ಅಗ್ನಿಮೂರ್ಧಾ್ನಾದಿ ಮಂತ್ರಗಳನ್ನು ವಾಸ್ತೋಷ್ಪತ್ಯಧಿದೇವತಾಕವಾದ ಗೃಹಯಜ್ಞದಲ್ಲಿ ಭಿನ್ನದೇವತಾಕವಾದ ಗೃಹಯಜ್ಞದಲ್ಲಿ ಭಿನ್ನದೇವತಾಕವಾದ ಮಂತ್ರವಿನಿಯೋಗವು ಭಿನ್ನದೇವತಾಕವಾದ ಕರ್ಮದಲ್ಲಿ ಉಪಯೋಗಿಸುವಂತೆ ಸೋಮಯಾಗ ಪ್ರಕರಣಪಠಿತವಾದ—'ಪವಿತ್ರಂತೆ' ಎಂಬುವ ಮಂತ್ರವನ್ನು ಲಿಂಗಧಾರಣಪರತ್ವದಲ್ಲಿ ಉಪಯೋಗಿಸುವದು ಕಲ್ಪಸೂತ್ರದ ಅಭಿಪ್ರಾಯಕ್ಕೆ ವಿರುದ್ಧವಲ್ಲ. 'ಬ್ರಹ್ಮಣಸ್ಪತೆ' ಎಂಬುವಲ್ಲಿ ಬ್ರಹ್ಮಶಬ್ದಕ್ಕೆ ಲಿಂಗಪರ ಅರ್ಥವನ್ನು ತಿರಸ್ಕರಿಸುವುದು ದಶಾಪವಿತ್ರದ ವಿನಿಯೋಗಕ್ಕೆ ಯೋಗ್ಯತೆಯುಂಟಾಗಲಾರದು. - ಯದ್ಮತ್ರವಿನಿಯುಕ್ತಂ - ಈ ನೇಮವಾದರೂ ಪ್ರಕೃತಾರ್ಥವನ್ನು ಬೋಧಿಸುವ ಶಬ್ದದಿಂದ ಕೂಡಿದ ಮಂತ್ರಗಳ ವಿನಿಯೋಗವನ್ನು ಬಿಟ್ಟು ಸರ್ವತ್ರ ಇರುವದಿಲ್ಲ. ಮತ್ತು ಪವಿತ್ರಶಬ್ದಕ್ಕೆ ಸೋಮಯಾಗದಲ್ಲಿ ಪಠಿತವಾದ ದಶಾಪವಿತ್ರ ಎಂಬುವ ಒಂದೇ ಅರ್ಥವಾದರೂ ನೇಮವಿಲ್ಲ. ಪ್ರಕರಣವಿರೋಧವೂ ಸಂಭವಿಸುವದಿಲ್ಲ. ಯಾಕಂದರೆ - ಸೋಮಃಪವತೇ ಜನಿತಾಮತೀನಾಂ ಜನಿತಾದಿವೋ ಜನಿತಾಪೃಥಿವ್ಯಾ ಜನಿತಾಸೂರ್ಯಸ್ಯ ಜನಿತೇಂದ್ರಸ್ಯ ಜನಿತೋತವಿಷ್ಣೋಃ - ಎನ್ನುವುದರಲ್ಲಿ ಜಡೀಭೂತವಾದ ಸೋಮಲತೆಗೆ ನಾರಾಯಣಾದಿ ಸಕಲ ಜನಕತ್ವವು ಅಸಂಭವವಾದದ್ದರಿಂದ - ಉಮಯಾಸಹಿತಃ ಸೋಮಃ - ಎನ್ನುವ ಉಪಬೃಹ್ಮಣ ವಚನಾನುಸಾರವಾಗಿ ಸೋಮಪದವು ಶಿವನಿಗೇ ಸಂಭವಿಸುವುದಾದ್ದರಿಂದ ಈ ಅರ್ಥವನ್ನು ಗ್ರಹಿಸುವುದರಿಂದಲೂ, ಸೋಮಯಾಗಪ್ರಕರಣಪಠಿತವಾದ 'ಪವಿತ್ರಂತೆ' ಎಂಬುವ ಮಂತ್ರಕ್ಕೆ ಲಿಂಗಧಾರಣವು ವಿರೋಧವಾಗಲಾರದು, ಮತ್ತು -ಅಯಂಸೋಮಃ ಕಪರ್ದಿನೇ- ಎಂಬುವ ಶ್ರುತಿಯಿಂದ ಸೋಮಯಾಗಕ್ಕೆ ಉತ್ಪತ್ತಿವಿಶಿಷ್ಟಶಿವಸಂಬಂಧಿತ್ವ ಬೋಧನದಿಂದಲೂ 'ರುದ್ರ ಆಹುತಃ' ಎಂಬುವ ಶ್ರುತಿಯಿಂದ ಸೋಮಪದದ ಸ್ಥಾನದಲ್ಲಿ ರುದ್ರಪದವನ್ನು ಇಟ್ಟಿರುವದರಿಂದಲೂ - ಅಹಂಹಿಸರ್ವಹವಿಷಾಂಭೋಕ್ತಾಚೈವ ಫಲಪ್ರದಃ ಸರ್ವದೇವತನುರ್ಭೂತ್ವಾ ಸರ್ವಾತ್ಮಾ ಸರ್ವಸಂಸ್ಥಿತಃ - ಎಂದು ಕೂರ್ಮಪುರಾಣದಲ್ಲಿ ವಚನವಿರುವದರಿಂದಲೂ ಶಿವನಿಗೆ ಸರ್ವಹವಿರ್ಭೋಕ್ತೃತ್ವ ಸರ್ವಕರ್ಮಫಲಪ್ರದಾಯಕತ್ವವು ಪ್ರತಿಪಾದಿಸಿರುವದರಿಂದ ಸೋಮಯಾಗಕ್ಕೆ ರುದ್ರದೇವತಾಕತ್ವವು ನಿಶ್ಚಿತವಾಗಿರೋಣದರಿಂದ ಆ ಪ್ರಕರಣದಲ್ಲಿ ಪಠಿತವಾದಂಥ ಪವಿತ್ರಂತೆ ಎಂಬುವ ಮಂತ್ರಕ್ಕೆ ಲಿಂಗಧಾರಣಪರತ್ವಪ್ರಕರಣವು ಎಂದಿಗೂ ವಿರೋಧವಾಗಲಾರದು. ಆದ್ದರಿಂದ ವೀರಶೈವಮತದ ಆಚಾರ್ಯರು ಲಿಂಗಧಾರಣಪರ ಅರ್ಥವನ್ನು ಸಿದ್ಧಮಾಡಿ ತೋರಿಸಿರುತ್ತಾರೆ. ಉಳಿದ ಮಂತ್ರಗಳ ವಿವೇಚನೆಯು ಮುಂದಿನ ಲೇಖಾಂಕದಲ್ಲಿ ಸವಿಸ್ತಾರವಾಗಿ ಮಾಡಲ್ಪಡುವುದು.

ಅರಿಸಿನ.

(ಸಂಸ್ಕೃತದಲ್ಲಿ ಹರಿದ್ರಾ, ನಿಶಾ ಎಂದೂ; ಹಿಂದೂಸ್ಥಾನಿಯಲ್ಲಿ ಹಲ್ದಿ ಎಂದೂ ಕರೆಯಲ್ಪಡುವುದು.)

(ವಸ್ತುಗುಣ ದೀಪಿಕೆಯ ಆಧಾರದಿಂದ)

ಅರಿಸಿನವು ಕಹಿಯಾಗಿರುವುದು, ಉಷ್ಣವನ್ನು ಹೆಚ್ಚಿಸಿ ಅದನ್ನು ತಗ್ಗಿಸುವುದು; ಶ್ಲೇಷ್ಮವನ್ನೂ ಮೇಹವನ್ನೂ ಹೋಗಲಾಡಿಸುವುದು; ಜಠರಾಗ್ನಿಯನ್ನು ಹೆಚ್ಚಿಸುವುದು: ರಕ್ತವನ್ನು ಶುಭ್ರಮಾಡುವುದು: ಆಹಾರವನ್ನು ಜೀರ್ಣಮಾಡುವುದು: ಕ್ರಿಮಿರೋಗ, ತಂದ್ರ, ಕೆಮ್ಮು, ಜ್ವರ, ವಿಷ, ಕುಷ್ಠ, ತುರಿಕೆ, ಮೇಹವ್ರಣ, ಕಫರೋಗ, ಮೂಲವ್ಯಾಧಿ. ಮೂತ್ರದ ನಂತರ ಬೆಳ್ಳಗೆ ಬೀಳುವ ಮೇಹರೋಗ, ಬಾಕು ಇವನ್ನು ಹೋಗಲಾಡಿಸುವುದು. ಹೃದಯಕ್ಕೂ ಹೊಟ್ಟೆಗೂ ಬಲಕೊಡುವುದು; ನೀರಾದ ಭೇದಿಯನ್ನು ಕಟ್ಟಿಸುವುದು: ಸುಖಪ್ರಸವವನ್ನು ಮಾಡಿಸುವುದು; ಮೂತ್ರವನ್ನು ಜಾರಿ ಮಾಡುವುದು; ಪಾಂಡು, ಕಾಮಿಲೆ ರೋಗವನ್ನು ಪರಿಹರಿಸುವುದು; ಕಣ್ಣಿಗೆ ಕಾಂತಿಯನ್ನುಂಟುಮಾಡುವುದು.

ಅರಿಸಿನದ ಕೊಂಬನ್ನು ಸ್ವಲ್ಪ ಸುಟ್ಟು ಅಗಿದರೆ ಹಲ್ಲುನೋವು ನಿಲ್ಲುವುದು. ಅರಿಸಿನ ಬೇರನ್ನು ಸುಟ್ಟು ಬೆಲ್ಲ ಸೇರಿಸಿ ತಿನ್ನುತ್ತಾ ಬಂದರೆ ಕೆಮ್ಮು ಕಮ್ಮಿಯಾಗುವುದು. ಮಕ್ಕಳ ಕೆಮ್ಮಿಗಂತೂ ಸಂಜೀವಿನಿ. ವಿದೇಶದಿಂದ ಬರುವ ಬಹು ಬೆಲೆಯುಳ್ಳ ಕಾಫ್‌ಮಿಕ್ಸ್ಚರ್‌ಗೆ ಈ ಸಣ್ಣ ಔಷಧವು ಸರಿಯಾಗಿರುವುದು. ಅರಿಸಿನ ಬೇರನ್ನು ನೀರಿನಲ್ಲಿ ತೇದು ಇದರ ಕೊಟ್ಟನ್ನು ಕಣ್ಣಿಗೆ ಹಚ್ಚುತ್ತಾ ಬಂದರೆ ಕಣ್ಣಿನ ರೋಗಗಳು ಮಾಯವಾಗುವುವು. ವ್ರಣಗಳಿಗೆ ಅರಿಸಿನವನ್ನು ಅರೆದು ಕಟ್ಟಿದರೂ ಅಥವಾ ಅರಿಸಿನವನ್ನು ನೀರಿನಲ್ಲಿ ಕದರಿ ಕಟ್ಟಿದರೂ, ಗಡ್ಡೆಗಳೂ ವ್ರಣಗಳೂ ದುಷ್ಟ ವ್ರಣಗಳೂ ಮಾಯವಾಗುವುವು. ಅರಿಸಿನ, ಅಫೀಮು, ಘಟಿಕ (ಕ್ರಮವಾದ ಶುದ್ಧಿಮಾಡಿ ಪದ್ಧತಿಯಿಂದ) ಕಣ್ಣಿಗೆ ಹಾಕಿದರೆ ಕಣ್ಣಿನ ಕೆಂಪೂ ತುರಿಕೆಯೂ ಗುಣವಾಗುವುದು. ಚೇಳು ಕಚ್ಚಿದ ಜಾಗದಲ್ಲಿ ಅರಿಸಿನ ಬೇರನ್ನು ಸುಟ್ಟು ಹೊಗೆಯನ್ನು ಕೊಟ್ಟರೆ ಚೇಳಿನ ವಿಷವು ಗುಣವಾಗುವುದು. ಹಸಿ ಅರಿಸಿನವನ್ನು ಅರೆದು ತಲೆಗೆ ಹಚ್ಚಿದರೆ ತಲೆಭಾರ ತಲೆತಿರುಗು ಗುಣವಾಗುವುವು. ಒಣ ಅರಿಸಿನದ ಕೊಂಬನ್ನು ಸುಟ್ಟು ಮೂಸಿ ನೋಡಿದರೆ ಅಪಸ್ಮಾರದ ಮೂರ್ಛೆಯು ತಗ್ಗುವುದು. ಒಂದು ಭಾಗ ಅರಿಸಿನ ಇಪ್ಪತ್ತು ಭಾಗ ಘಟಿಕ ಎರಡನ್ನೂ ಚೂರ್ಣಮಾಡಿ ಕಲಸಿ, ಕಿವಿಗೆ ಬೀಳುವ ಹಾಗೆ ಊದಿದರೆ ಬಹುಕಾಲದಿಂದಿರುವ ರಸಿಕೆ ಕೀವು ಸೋರುವುದನ್ನು ಕಟ್ಟುವುದು. ಅರಿಸಿನವನ್ನೂ ಚಾರವಾದ ಸುಣ್ಣವನ್ನೂ ಕಲಸಿ ಹಚ್ಚಿದರೆ ಸಣ್ಣಗಾಯಗಳು ಮಾಯುವುವು. ಮತ್ತು ಹುಣ್ಣಾಗದಂತಾಗುವುದು, ನೋವು ತಗ್ಗುವುದು. ನೀರಿನಲ್ಲಿ ಅರಿಸಿನವನ್ನೂ ಸುಣ್ಣವನ್ನೂ ಸೇರಿಸಿ ಕಟ್ಟಿದರೆ ಉಗುರುಸುತ್ತು ಮೊದಲಾದುವು ಕಮ್ಮಿಯಾಗುವುವು. ಆದರೆ ಈ ಕಟ್ಟನ್ನು ನೀರಿನಿಂದ ತೋಯಿಸುತ್ತಿರಬೇಕು. ಅರಿಸಿನವನ್ನು ಕಟ್ಟಿದರೂ, ಅರಿಸಿನವನ್ನು ನೀರಿನಲ್ಲಿ ಕದರಿ ಸುರಿದರೂ ವ್ರಣಗಳಲ್ಲಿರುವ ಹುಳುಗಳು ಸಾಯುವುವು. ಇತರ ಸಣ್ಣ ಜಂತುಗಳೂ ಹುಳುಗಳೂ ಸಾಯುವುವು. ಅರಿಸಿನದ ಹೊಗೆಯನ್ನಾಗಲಿ ಅರಿಸಿನ ಹಾಕಿದ ಬಿಸಿನೀರಿನ ಆವಿಯನ್ನಾಗಲಿ ಸ್ವೀಕರಿಸಿದರೆ ಕೆಮ್ಮು, ಶೀತ, ತಲೆಭಾರಗಳು ಗುಣವಾಗುವುವು. ಅರಿಸಿನ ಬೇರನ್ನು ಹಾಲಿನಲ್ಲಿ ಕದರಿ ಅದಕ್ಕೆ ಮೆಣಸಿನ ಕಾಳಿನ ಪುಡಿಯನ್ನು ಹಾಕಿ ದಿನಕ್ಕೆ ಎರಡು ಬಾರಿ ಕೊಟ್ಟರೆ ಜ್ವರಯುಕ್ತವಾದ ಕೆಮ್ಮೂ, ಶೀತವೂ ಕಮ್ಮಿಯಾಗುವುದು. ಅರಿಸಿನವನ್ನು ಚೆನ್ನಾಗಿ ಅರೆದು ಹಚ್ಚಿದರೆ ಕಜ್ಜಿ ಮೊದಲಾದ ಚರ್ಮ ರೋಗಗಳು ಮಾಯುವುವು. ಅರಿಸಿನದ ಕಷಾಯದಿಂದ ಕಣ್ಣನ್ನು ತೊಳೆದುಕೊಂಡು ಅಥವಾ ಒದ್ದೆ ಅರಿಸಿನ ಬಟ್ಟೆಯನ್ನು ಕಣ್ಣಿನ ಮೇಲೆ ಹಾಕಿಕೊಂಡರೂ ಅಥವಾ ಅದರಿಂದ ಕಣ್ಣನ್ನು ಒರಸಿಕೊಳ್ಳುತ್ತಿದ್ದರೂ ಕೆದರಿದ ಕಣ್ಣು ಸಮಾಧಾನಕ್ಕೆ ಬರುವುದು. ಹತ್ತಿಯ ಚೂರಿನ ಮೇಲಾಗಲೀ ಹಸಿಯ ನೂಲಿನಮೇಲಾಗಲೀ ಅರಿಸಿನಪುಡಿಯನ್ನಿಟ್ಟು ಕಟ್ಟುಕಟ್ಟಿದರೆ ಕಣ್ಣಿಗೆ ಏಟುತಗಲಿ ಕೆಂಪಾಗಿರೋಣವೂ ಅದರಿಂದಾದ ಬಾವೂ ನೀರುಸುರಿಯುವಿಕೆಯೂ ಕಟ್ಟುವುವು. ಹಸಿ ಅರಿಸಿನ ಕೊಂಬನ್ನು ತಂದು ಕಳ್ಳೀಗಿಡ (ಸಂ|| ವಜ್ರಕ್ಷೀರಿ; ತೆಲಗು ಬ್ರಹ್ಮಜೇಮುಡು) ದಲ್ಲಿ ರಂಧ್ರಮಾಡಿ ಅದರಲ್ಲಿ ಅರಿಸಿನದ ಕೊಂಬನ್ನಿಟ್ಟು ರಂಧ್ರವನ್ನು ಅದರ ಮರದ ಕಚ್ಚಿಗೆಯಿಂದ ಬಾಯಿ ಮುಚ್ಚಿ ಏಳು ದಿನಗಳು ಇಟ್ಟು ಎಂಟನೆಯ ದಿನ ಅರಿಸಿನಕೊಂಬನ್ನು ತೆಗೆದು ಆರಿಸಿ ಈ ಅರಿಸಿನಕೊಂಬನ್ನು ನೀರಿನಲ್ಲಿ ಗಂಧ ತೇದು ಹಚ್ಚುತ್ತಾ ಬಂದರೆ ಶ್ವೇತಕುಷ್ಠ, ಬಿಳೀಕಲೆಗಳು ಮಚ್ಚೆಗಳು ಗುಣವಾಗುವುವು.

ಆದರೆ ಅರಿಸಿನವನ್ನು ವಿಶೇಷವಾಗಿ ತಿಂದರೆ ಹೃದಯಕ್ಕೆ ಕೆಡುಕು ಉಂಟು. ಇಂದ್ರಿಯನಷ್ಟವನ್ನುಂಟುಮಾಡುವುದು. ಇದಕ್ಕೆ ಸಮಾಧಾನವೇನೆಂದರೆ, ನಿಂಬೇಹಣ್ಣು, ಕಿತ್ತಳೇಹಣ್ಣು, ಫರಂಗೀ ಹಲಸಿನಹಣ್ಣು ಸೇವಿಸುವುದೇ ಆಗಿದೆ. ಪ್ರಮಾಣ—ಅರಿಸಿನವನ್ನು ಹೊಟ್ಟೆಗೆ ಒಂದುಸಾರಿಗೆ ಇಪ್ಪತ್ತರಿಂದ ನಲ್ವತ್ತು ಗೋಧಿಕಾಳು ತೂಕ ಕೊಡಬಹುದು.

ಇಂಥಹ ಅನುಕೂಲ್ಯ ಗುಣಗಳುಳ್ಳದುದರಿಂದಲೇ ಈ ಅರಿಸಿನವು ಮಂಗಳ ದ್ರವ್ಯಗಳಲ್ಲಿ ಪ್ರಧಾನವಾಗಿ ಹಿಂದೂಗಳಲ್ಲಿ ಎಣಿಸಲ್ಪಟ್ಟಿರುವುದು. ಪ್ರಯಾಣ ಕಾಲಗಳಲ್ಲಿ ಅರಿಸಿನ ಬೇರುಗಳನ್ನು ಕಟ್ಟಿಕೊಂಡು ಹೊರಡುವರು. ಅರಿಸಿನದಿಂದೊಗೆದ ಬಟ್ಟೆಗಳು ಪ್ರತಿ ಒಂದು ವ್ರತ ನಿಯಮಗಳಲ್ಲಿಯೂ ಧಾರಣೆ ಮಾಡಲು ವಿಧಿಸಿರುವರು. ಅರಿಸಿನ ಬೇರನ್ನು ಕೈಗೆ ಕಂಕಣವಾಗಿ ಕಟ್ಟುವರು. ಹಿಂದೂ ಸ್ತ್ರೀಯರಿಗಂತೂ ಅರಿಸಿನಕ್ಕಿಂತಲೂ ಸೌಭಾಗ್ಯವಸ್ತುವು ಇನ್ನೊಂದಿಲ್ಲವು. ಈ ಅರಿಸಿನವು ಅನುಕೂಲ ಗುಣವುಳ್ಳ ಕಾರಣವೇ ಇದನ್ನು ಆರೋಗ್ಯಾಭ್ಯುದಯದಲ್ಲಿ ಮುಖ್ಯವಾಗಿ ಎಣಿಸಿ ಪ್ರತಿದಿನವೂ ಆಹಾರ ಸಾಮಗ್ರಿಗಳಲ್ಲಿ ಉಪಯೋಗಕ್ಕೆ ವಿಧಾನವಾಗಿ ತಂದಿರುವರು. ಅಥರ್ವಣವೇದದಲ್ಲಿ - ನಕ್ತಂ ಜಾತಸ್ಯೋಷಧೇ - ಎಂಬ ಪ್ರಕರಣದಲ್ಲಿ ಇದರ ಅದ್ಭುತವಾದ ಗುಣವು ವಿವರಿಸಲ್ಪಟ್ಟಿರುವುದು. ಬೆಲೆಯಲ್ಲಿ ಸುಲಭವಾದ ಗುಣದಲ್ಲಿ ಮೇಲಾದ ಇಂಥಹ ಒಂದೊಂದು ವನಸ್ಪತಿಗಳೇ ಆಯುರ್ವೇದ ವೈದ್ಯರಿಗೆ ಸುಫಲದಾಯಕಗಳಾಗಿರುವವು. ಈ ಮೆಲ್ಮೆಯನ್ನರಿಯದ ಈಗಿನ ನವನಾಗರಿಕರೆಂಬುವವರಿಗೆ ನಮ್ಮ ಸ್ತ್ರೀಯರು ಅರಿಸಿನವನ್ನುಪಯೋಗಿಸುವುದು ಅನಾಗರೀಕವಾಗಿತೆಂದು ಮುಖಕ್ಕೆ ಫೇಸ್ ಪೌಡರು ತಯಾರುಮಾಡಲ್ಪಟ್ಟಿತು. ಅಯ್ಯೋ! ಫೇಸ್ ಪೌಡರೇ! ಅರಿಸಿನದ ಸೌಮಂಗಲ್ಯ ಗುಣವೆಲ್ಲಿ? ಮುಖ್ಯವಾಗಿ ನಮ್ಮ ಪೂರ್ವಿಕರು ಏರ್ಪಡಿಸಿರುವ ವಿಧಾನಗಳು ಒಂದಿಲ್ಲ ಒಂದು ವಿಧವಾಗಿ ಲಾಭದಾಯಕವೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇತ್ತೀಚೆಗೆ ಪಾಶ್ಚಾತ್ಯವೈದ್ಯರಲ್ಲನೇಕರು ಅರಿಸಿನದ ಗುಣವನ್ನು ಪರಿಶೋಧಿಸಲು ಪ್ರಾರಂಭಿಸಿರುವರು.

ಧನ್ವಂತರಿ.

ಆಯುರ್ವೇದ ಸುಲಭಚಿಕಿತ್ಸೆಗಳು.

1. ಸುಟ್ಟಗಾಯಕ್ಕೆ :—ಮರಳುವ ಎಣ್ಣೆ ಅಥವಾ ಕುದಿಯುವನೀರು ಇಲ್ಲವೆ ಗಂಜಿ ಮೈಮೇಲೆ ಚೆಲ್ಲಿಬಿದ್ದು ಬೊಕ್ಕೆಯೆದ್ದು ಘಾಯವಾದರೆ ಬೆಣ್ಣೆಯಂತಿರುವ ಹೊಸಸುಣ್ಣ ಕೊಂಬರಿಯೆಣ್ಣೆ ಈ ಎರಡನ್ನು ಚೆನ್ನಾಗಿ ರಂಗಿಸಿ ಬೆಣ್ಣೆಯಂತೆಮಾಡಿ ೩-೪ ದಿನ ಆಗಾಗ ಹಚ್ಚಲು ಗುಣವಾಗುವುದು.

2. ಕೀರು ಇಳಿದ್ದಕ್ಕೆ :—ಜೀರಿಗೆಯನ್ನು ಮೊಸರಿನಲ್ಲಿ ಅರೆದು ನೀರಿನಮೇಲಿನ ಹಾಂಸೆ ಅಥವಾ ಪಾಚಿ ಇಲ್ಲವೆ ಅಂತರಗಂಗೆಸೊಪ್ಪು, ಇವುಗಳಲ್ಲಿ ಒಂದನ್ನು ಹಾಕಿ ತತ್ತಿಯಲ್ಲಿಟ್ಟು ಎಲೆಯನ್ನಿಟ್ಟು ಕಟ್ಟಿದರೆ ಮೇಲಕ್ಕೆ ಹೋಗಿ ನೋವು ಕಮ್ಮಿಯಾಗುವುದು. ವಿಶೇಷ ತಿರುಗಾಡಬಾರದು.

3. ಹಲ್ಲುಪುಡಿ :—ಒಣಶುಂಠಿ, ಬಿಳಿಕಾಚು, ಸ್ಫಟಿಕ, ಕಪಟಿ ಲೋಭಾನ, ಸೈಂಧವಲವಣ, ಅಳಲೆಕಾಯಿ, ಮಾಚಾಳಕಾಯಿ, ಸ್ವಲ್ಪ ಕರ್ಪೂರ ಇವುಗಳನ್ನು ಸಮಭಾಗ ಚೂರ್ಣ ಸೇರಿಸಿ ಪ್ರತಿದಿನವೂ ಹಲ್ಲಿಗೆಹಾಕಿ ತಿಕ್ಕಿಕೊಳ್ಳಬೇಕು. ಇದರಿಂದ ಎಲ್ಲಾ ಬಗೆಯ ಹಲ್ಲುವ್ಯಾಧಿಗಳು ಮಾಯವಾಗುವುವು.

4. ಇನ್ನೊಂದುವಿಧ ಹಲ್ಲುಪುಡಿ :—ಬಾದಾಮಿಸಿಪ್ಪೆ ಸುಟ್ಟಕರಿ, ಅಡಕೆ, ಸೈಂಧವಲವಣ, ಯಾಲಕ್ಕಿ, ಶುಂಠಿ, ಅಳಲೆಕಾಯಿ ಇವುಗಳನ್ನು ಚೂರ್ಣಮಾಡಿ ಸಮಭಾಗ ಸೇರಿಸಿ ಉಪಯೋಗಿಸಬೇಕು. ಧನ್ವಂತರಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ)

ಪ್ರಥಮಪ್ರಕರಣ.

ಗಾಂಧಿ ಕುಟುಂಬದವರು ಮೊದಲು ವಣಿಜ (ಅಂದರೆ ವರ್ತಕತನವನ್ನು ಕುಲವೃತ್ತಿಯಾಗುಳ್ಳವರು) ರಾಗಿದ್ದರೆಂದು ಕಂಡುಬರುತ್ತದೆ. ನನ್ನ ವೃದ್ಧಪ್ರಪಿತಾಮಹಪಿತಾಮಹರು ಮಾತ್ರ ವರಸೆಯಾಗಿ ಕಥೆವಾಡ ಸಂಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿಯೇ ಇದ್ದರು. ಉತ್ತಮಚಂದೀಗಾಂಧಿ ಉರಫ್ ಓತಗಾಂಧಿಯವರು ಬಹಳ ಸದ್ವರ್ತನರಾಗಿದ್ದುಕೊಂಡಿದ್ದರು. ಅವರು ಪೋರಬಂದರಿನಲ್ಲಿ ದಿವಾನರಾಗಿದ್ದು ಅಲ್ಲಿ ರಾಜಕೀಯವಿಚಾರದಲ್ಲಿ ಬಹಳ ಗೊಂದಲವಾದುದರಮೇಲೆ ಪ್ರಾಣರಕ್ಷಣಾರ್ಥವಾಗಿ ಜುನಗಡಿಗೆ ಹೊರಟುಹೋಗಬೇಕಾಗಿಬಂದಿತು. ಅವರು ಅಲ್ಲಿ ನವಾಬನಿಗೆ ಎಡಗೈಲಿ ಸಲಾಂ ಮಾಡಲು, ಅದನ್ನು ಒಬ್ಬನು ನೋಡಿ - ಏಕೆ ಹೀಗೆಮಾಡಿದೆ, ಇದು ನವಾಬರನ್ನು ಅವಮಾನಪಡಿಸುವುದಕ್ಕಲ್ಲವೆ? - ಎಂದು ಕೇಳಿದನು. ಇದು ಅವಮಾನಕ್ಕಾದುದಕ್ಕಲ್ಲ. ನನ್ನ ಬಲಗೈ ಈವರೆಗೂ ಪೋರುಬಂದರು ಸಂಸ್ಥಾನಾಧೀಶರ ಅಧೀನವಾಗಿರುವುದರಿಂದ ನನ್ನ ಸ್ವಾಧೀನದಲ್ಲಿರುವ ಎಡಗೈಯಿಂದ ಜುನಾಗಡ್‌ಸಂಸ್ಥಾನಾಧೀಪತಿಗಳಿಗೆ ಸಲಾಂ ಮಾಡಿದೆನು. ಎಂದು ಉತ್ತರವನ್ನು ಕೊಟ್ಟರು.

ಉತ್ತಮಚಂದ್‌ರವರು ಮೊದಲನೆಯ ಹೆಂಡತಿಯು ಕಾಲವಾಗಲು ಪುನಹ ಮದುವೆಮಾಡಿಕೊಂಡರು. ಮೊದಲನೆಯ ಹೆಂಡತಿಗೆ ನಾಲ್ವರೂ ಎರಡನೆಯ ಹೆಂಡತಿಗೆ ಇಬ್ಬರೂ ಗಂಡುಮಕ್ಕಳಿದ್ದರು. ಇವರುಗಳು ಹೀಗೆ ಸವತಿಯ ಮಕ್ಕಳೆಂದು ಚಿಕ್ಕತನದಲ್ಲಿ ನನಗೆ ತಿಳಿದಿರಲಿಲ್ಲವು. ಇವರು ಆರುಜನಗಳೂ ಏಕೋದರರೆಂದೇ ತಿಳಿದುಕೊಂಡಿದ್ದೆನು. ಎರಡನೆಯ ಹೆಂಡತಿಯ ಮಕ್ಕಳಲ್ಲಿ ಕರಂಚಂದ್ ಉರಫ್ ಕಾಬಾಗಾಂಧಿಯೇ ಜ್ಯೇಷ್ಠರು. ಅವರ ತಮ್ಮ ತುಲಸೀದಾಸ್ ಗಾಂಧಿ. ಪೋರಬಂದರಿನಲ್ಲಿ ಮೊದಲು ಕರಂಚಂದರೂ ಅನಂತರ ತುಲಸೀದಾಸರೂ ದಿವಾನರಾಗಿ ಕೆಲಸಮಾಡಿದರು. ಕರಂಚಂದ್‌ಗಾಂಧಿಯೇ ನನ್ನ ತಂದೆಯು. ಆ ಕಾಲದಲ್ಲಿ ರಾಜಾಸ್ಥಾನ ಸಂಘದ ಹೆಸರಿನಲ್ಲಿ ಒಂದು ಸಂಘವಿದ್ದಿತು. ಆ ಸಂಘವು ಸಂಸ್ಥಾನಾಧಿಪತಿಗಳ ವಿವಾದಗಳನ್ನು ಪರಿಷ್ಕರಿಸುವುದಾಗಿದ್ದಿತು. ಆ ಸಂಘವು ಈಗಿಲ್ಲವು. ನನ್ನ ತಂದೆಯು ಕೆಲಕಾಲ ರಾಜಕೋಟೆಯಲ್ಲೂ, ಅನಂತರ ವಂಕನೇರದಲ್ಲೂ ದಿವಾನರಾಗಿದ್ದರು. ಅವರು ಸಾಯುವವರೆಗೂ ರಾಜಕೋಟೆ ಸಂಸ್ಥಾನದವರು ಪಿಂಚನ್ನನ್ನ ಕೊಡುತ್ತಿದ್ದರು. ನನ್ನ ತಂದೆಯು ನಾಲ್ಕುಸಾರಿ ವಿವಾಹಮಾಡಿಕೊಂಡಿದ್ದರು. ಪತ್ನಿವಿಯೋಗವಾಗುತ್ತಿದ್ದುದರಿಂದ ನನ್ನ ತಂದೆಯು ಹಾಗೆ ನಾಲ್ಕುವೇಳೆ ಲಗ್ನಮಾಡಿಕೊಂಡುದುದು. ನಾಲ್ಕನೆಯ ಪತ್ನಿಯೇ ನನ್ನ ತಾಯಿ. ಆಕೆಯ ಹೆಸರು ಪುತಲೀಬಾಯಿ. ಆಕೆಗೆ ಒಬ್ಬ ಪುತ್ರಿಯೂ ಮೂವರು ಪುತ್ರರೂ ಹುಟ್ಟಿದರು. ನಾನೇ ಬಹಳ ಮೂರ್ಖ ಹುಡುಗನು. ನನ್ನ ತಂದೆಗೆ ಸ್ವನಗರಾಭಿಮಾನವು ಹೆಚ್ಚು. ಅವರು ಸತ್ಯನಿರತರು, ಧೈರ್ಯಶಾಲಿ ಮತ್ತು ಕೋಪಸ್ವಭಾವದವರು. ಅವರಿಗೆ ವಿಷಯಲೋಲತೆಯು ಕೂಡ ಸ್ವಲ್ಪ ಹೆಚ್ಚೆಂದೇ ಹೇಳಬೇಕು. ಏಕೆಂದರೆ, 40 ವರ್ಷ ಕಳೆದಮೇಲೂ ಅವರು ನಾಲ್ಕನೆಯ ಮದುವೆಯನ್ನು ಮಾಡಿಕೊಂಡರು. ಆದರೂ ಅವರ ಪ್ರವರ್ತನವು ನಿಷ್ಕಳಂಕವು. ಅವರು ಕೇವಲ ನಿಷ್ಪಕ್ಷಪಾತಿಯೆಂದು ಬಂಧುಗಳೂ, ಇತರರೂ ನನ್ನ ತಂದೆಯನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು. ಅವರಿಗೆ ಸಂಸ್ಥಾನಾಧಿಪತಿಗಳಮೇಲೆ ಬಹಳ ಅಭಿಮಾನವಿದ್ದಿತು. ಒಂದುವೇಳೆ ಒಬ್ಬ ಬ್ರಿಟಿಷ್ ಪ್ರಭುತ್ವದ ಪ್ರತಿನಿಧಿಯು (ಅಸಿಸ್ಟೆಂಟ್ ಪೊಲಿಟಿಕಲ್ ಏಜಂಟು) ನನ್ನ ತಂದೆಯಿದಿರಿಗೆ ರಾಜಕೋಟೆ ಸಂಸ್ಥಾನಾಧೀಶರನ್ನು ಕುರಿತು ನೀಚವಾಗಿ ಮಾತನಾಡಿದಾಗ ನನ್ನ ತಂದೆಯು ನಿರ್ಭಯನಾಗಿ ಪ್ರತ್ಯುತ್ತರವನ್ನು ಕೊಟ್ಟರು. ಅದರಿಂದ ಆ ಅಧಿಕಾರಿಗೆ ಕೋಪಬಂದು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂದು ನನ್ನ ತಂದೆಗೆ ಆಜ್ಞಾಪಿಸಿದನು. ಅದಕ್ಕೆ ಕಾಬಾಗಾಂಧಿಯು ಸಮ್ಮತಿಸಲಿಲ್ಲವಾಗಿ ಅವರನ್ನು ಅಧಿಕಾರಿಯು ಕೆಲಗಂಟೆಗಳಕಾಲ ನಿರ್ಬಂಧದಲ್ಲಿರಿಸಿದನು. ನನ್ನ ತಂದೆಯು ಅದಕ್ಕೂ ಹೆದರಲಿಲ್ಲ. ತರುವಾಯ ಅವರು ತಮ್ಮುದ್ಯೋಗದಿಂದ ತೆಗೆದುಹಾಕಲ್ಪಟ್ಟರು. ನನ್ನ ತಂದೆಗೆ ಧನಸಂಪಾದನೇಚ್ಛೆಯು ಇಲ್ಲದಿದ್ದುದರಿಂದ ಅವರು ಹೆಚ್ಚು ಆಸ್ತಿಯನ್ನು ಸಂಪಾದಿಸಲಿಲ್ಲವು.

ನನ್ನ ತಂದೆಯು ದೊಡ್ಡ ಪಂಡಿತರಲ್ಲದಿದ್ದರೂ ಅವರಿಗೆ ಅನುಭವವು ಹೆಚ್ಚಾಗಿದ್ದಿತು. ಅವರು ಆ ಕಾಲದಲ್ಲಿ ಗುಜರಾತೀ ಐದನೇಯತರಗತಿಯವರೆಗೆಮಾತ್ರ ಓದಿದ್ದರು. ಚರಿತ್ರೆಯೂ, ಭೂಗೋಳವೂ ಸ್ವಲ್ಪವಾದರು ಅವರಿಗೆ ತಿಳಿಯದು. ಆದರೂ ವಿಶೇಷಲೋಕಾನುಭವಿಗಳೊಡನೆ ರಾಜ್ಯಾಂಗ ವ್ಯವಹಾರದಲ್ಲಿ ವಿಶೇಷ ಸಮಸ್ಯೆಗಳನ್ನುಕೂಡ ಸುಲಭವಾಗಿ ಪರಿಷ್ಕರಿಸುತ್ತಿದ್ದರು. ಹಲಕೆಲಪ್ರಜೆಗಳಿಗೆ ಸಂಬಂಧಿಸಿದ ವ್ಯವಹಾರವನ್ನುಕೂಡ ಸಕಲಜನಸಮ್ಮತವಾಗಿ ನೆರವೇರಿಸಿಕೊಡುತ್ತಿದ್ದರು. ಮತಗ್ರಂಥಗಳನ್ನು ಅವರು ಶ್ರದ್ಧೆಯಿಂದ ಓದಿರಲಿಲ್ಲವಾದರೂ ಮತಾಚಾರಪರಾಯಣರಕೂಡ ಪ್ರತಿದಿನವೂ ದೇವಾಲಯಕ್ಕೆಹೋಗಿ ಪುರಾಣವನ್ನೂ ಮತವಿಷಯಕೋಪನ್ಯಾಸವನ್ನೂ ಕೇಳುವುದು ಮೊದಲಾದ ಕಾರ್ಯಗಳನ್ನುಮಾಡುತ್ತ ಭಕ್ತಿಜ್ಞಾನ ವೈರಾಗ್ಯವನ್ನು ಹೆಚ್ಚಾಗಿ ಸಂಪಾದಿಸಿದ್ದರು. ವೃದ್ಧಾಪ್ಯದಲ್ಲಿ ನಮ್ಮ ಕುಟುಂಬಕ್ಕೆ ಆಪ್ತನಾದ ಒಬ್ಬ ಬ್ರಾಹ್ಮಣನ ಪ್ರೋತ್ಸಾಹದಿಂದ ಶ್ರೀಭಗವದ್ಗೀತೆಯನ್ನು ಓದಲಾರಂಭಿಸಿದರು. ಪ್ರತಿದಿನವೂ ದೇವರಪೂಜಾಸಮಯದಲ್ಲಿ ಕೆಲಶ್ಲೋಕಗಳನ್ನು ಗಟ್ಟಿಯಾಗಿ ಓದುತ್ತಿದ್ದರು.

ನನ್ನ ತಾಯಿಯು ಅತ್ಯಂತ ಪವಿತ್ರಶೀಲಳು. ಆಕೆಗೆ ಭಗವದ್ಭಕ್ತಿಯು ಅತ್ಯಧಿಕವಾಗಿದ್ದಿತು. ಪ್ರತಿದಿನವೂ ನೈವೇದ್ಯವು ಆದ ಹೊರತು ಭೋಜನ ಮಾಡುತ್ತಿರಲಿಲ್ಲವು. ಆಕೆಯು ನಿತ್ಯದಲ್ಲು ವಿಷ್ಣುದೇವಾಲಯಕ್ಕೆ ತಪ್ಪದೆ ಹೋಗುತ್ತಿದ್ದರು. ಆಕೆಯು ಪ್ರತಿವರ್ಷದಲ್ಲೂ ಚಾತುರ್ಮಾಸ್ಯವ್ರತವನ್ನು ಬಿಡದೇ ಮಾಡುತ್ತಿದ್ದರು. ಆ ನಾಲ್ಕುತಿಂಗಳಲ್ಲಿ ಅಂದರೆ ಆಷಾಢಶುದ್ಧ ಪೌರ್ಣಮಿ ಮೊದಲು ಕಾರ್ತೀಕಶುದ್ಧ ಪೌರ್ಣಮಿಯೊಳಗೆ ಕೆಲದಿವಸ ಉಪವಾಸವೂ ಮತ್ತೆ ಕೆಲದಿವಸ ಏಕಭುಕ್ತವೂ ಈಪ್ರಕಾರವಾಗಿ ಆಹಾರನಿಯಮವನ್ನು ಜರುಗಿಸುತ್ತಿದ್ದರು. ಆಕೆಯು ಕಠಿಣವ್ರತಗಳನ್ನು ಹಿಡಿದು ನಿಯಮಭಂಗವಾಗದಂತೆ ಅವನ್ನು ಸಾಗಿಸುತ್ತಿದ್ದರು. ರೋಗಬಂದರುಕೂಡ ಆಕೆಯವರು ವ್ರತವನ್ನು ಬಿಡುತ್ತಿರಲಿಲ್ಲವು. ಅವರು ಒಂದಾವರ್ತಿ ಚಾಂದ್ರಾಯಣವ್ರತವನ್ನು ಆರಂಭಿಸಿದರು. ಆಗ ಅವರಿಗೆ ದೇಹಾಲಸ್ಯವುಂಟಾಯಿತು. ಹಾಗಾದರೂ ವ್ರತವನ್ನು ಬಿಡಲಿಲ್ಲ. ಚಾಂದ್ರಾಯಣ ವ್ರತವೆಂದರೆ ಅಮಾವಾಸ್ಯೆಯ ದಿವಸ ಶುಷ್ಕೋಪವಾಸ (ನಿರಾಹಾರ) ಮಾಡುವುದು. ಪಾಡ್ಯಮಿದಿವಸ ಒಂದು ತುತ್ತು ಬಿದಿಗೆಯದಿವಸ ಎರಡುತುತ್ತು, ಈ ರೀತಿಗೆ ಪೌರ್ಣಮಿದಿವಸ 15

ರದಿ ವಿಸ್ತೀರ್ಣವಿರುವುದಲ್ಲದೆ 31 ಅಡಿ ಎತ್ತರವಿರುತ್ತದೆ. 1,90,000 ಬಟ್ಟೆಯ ತುಂಡುಗಳಿವೆ; ಇವುಗಳಲ್ಲಿ 77,000 ಕೈಚೌಕಗಳೂ, 13,000 ದಿಂಬಿನಚೀಲಗಳೂ, 11,000 ಮೇಲುಹಾಸಿಗೆಗಳೂ ಇರುತ್ತವಲ್ಲದೆ, 17 ಟನ್ ತೂಕವುಳ್ಳ 10,500 ಹೊದಿಯುವ ಬೂರ್ಲೀಸುಗಳೂ, 29,000 ಗಾಜಿನ ಪದಾರ್ಥಗಳೂ 10,000 ಚಾಕುಚಂಚಾ ಮೊದಲಾದುವುಗಳೂ ಇರುತ್ತವೆ. ಮತ್ತು 120 ಟನ್ ಸಮುದ್ರದ ಬಿಸಿನೀರು ಹಿಡಿಯುವಂತಹ ಈಜುವ ಕೊಳಗಳೂ, 30 ಉಡುಪುಗಳನ್ನು ಧರಿಸುವ ಕೊಠಡಿಗಳೂ ಸುತ್ತಲೂ ಏರ್ಪಡಿಸಲ್ಪಟ್ಟಿರುತ್ತವೆ.

ಚಿಕಾಗೊ ಪಟ್ಟಣದ ಲಾರ್ಡ್ ಕಾರ್ನೊಲ್ಲಿಯಸ್‌ಬೀವರ್‌ಬ್ರೂಕ್ ಎಂಬಾತನು ಈವರೆಗೆ 48 ಜನ ಸ್ತ್ರೀಯರನ್ನು ಮದುವೆಮಾಡಿಕೊಂಡು ಕಸಬುದಾರಿಗಂಡನೆಂದು ಪ್ರಖ್ಯಾತನಾಗಿ ಈವರೆಗೆ 30,00,000 ರೂಪಾಯಿಗಳನ್ನು ಲಗ್ನಮಾಡಿಕೊಂಡ ಹೆಂಗುಸರಿಂದ ಸಂಪಾದಿಸಿರುವನು. ವೆಲ್ಕನ್ಸರಾಬ್ರೂಕ್ಸ್ ಎಂಬುವವನ ಮಗಳು ಆರ್ಥರ್‌ಬ್ರೂಕ್ಸ್ ಎಂದು ಹೆಸರಿಟ್ಟುಕೊಂಡಿದ್ದ ಇವನನ್ನು 1924 ರಲ್ಲಿ ಲಗ್ನವಾದಳು. ಇವನನ್ನು ಲಗ್ನವಾದ 3 ತಿಂಗಳಮೇಲೆ ಅವಳ ಪೋಷಕರುಗಳಿಂದ 37,500 ರೂ. ಗಳನ್ನೂ ಅವಳಿಂದಲೇ 15,000 ರೂ. ಗಳನ್ನೂ ಮೋಸದಿಂದ ತೆಗೆದುಕೊಂಡು ಅವಳನ್ನು ತ್ಯಜಿಸಿಬಿಟ್ಟನು. ಅದರ ಮೇಲೆ ಕೋರ್ಟಿನಲ್ಲಿ ವಿವಾದವು ನಡೆದು ಅವರ ದಾಂಪತ್ಯ ಪರಿತ್ಯಾಗಗೊಳಿಸಲ್ಪಟ್ಟಿತು.

ಜರ್ಮನಿಯ ಚಕ್ರವರ್ತಿಯಾಗಿದ್ದು ಪದಭ್ರಷ್ಟನಾಗಿರುವ ಕೇಜರನು ಈಗ ಹಾಲೆಂಡುದೇಶಕ್ಕೆ ಸೇರಿದ ಡೂರ್ನ್ ಎಂಬಲ್ಲಿರುತ್ತಾನೆ. ಈತನು ತನ್ನ ವರ್ಷವರ್ಧಂತ್ಯುತ್ಸವಕ್ಕೆ ಬಂಧುಬಳಗಗಳನ್ನು ಬರಮಾಡಿಕೊಂಡು ಬಹಳ ಅಟ್ಟಹಾಸದಿಂದಲೂ, ವಿನೋದದಿಂದಲೂ ನೆರವೇರಿಸಿದನು. ಇತ್ತಲಾಗಿ ಜರ್ಮನಿಯಲ್ಲಿ ಜನರು ಕೈಜರನ ವರ್ಧಂತ್ಯುತ್ಸವ ವೈಭವವನ್ನು ಕೇಳಿ ಕುಪಿತರಾಗಿ ಆತನ ವಿಗ್ರಹವನ್ನು ಕಾಗದದಲ್ಲಿ ಮಾಡಿ ಪಟ್ಟಣದ ಮಧ್ಯಭಾಗದಲ್ಲಿ ನಿಲ್ಲಿಸಿ ಆತನ ನೀಚಕೃತ್ಯಗಳನ್ನೆಲ್ಲಾ ಪರಿಪರಿಯಾಗಿ ವರ್ಣನೆಮಾಡಿ ದೂಷಿಸಿ ಕಾಮನ ವಿಗ್ರಹವನ್ನು ದಹನಮಾಡುವಂತೆ ಸುಟ್ಟು ಭಸ್ಮಮಾಡಿ ತಮ್ಮಾಕ್ರೋಶವನ್ನು ತೀರಿಸಿಕೊಂಡರು. ಊರಿನ ಎಲ್ಲ ಭಾಗಗಳಲ್ಲೂ ಕೆಂಪುಧ್ವಜಪಟಗಳೇರಿಸಲ್ಪಟ್ಟು ಪ್ರಜೆಗಳ ದುಡ್ಡಿನಲ್ಲಿ ಒಂದು ಕಾಸೂ ದೊರೆಗೆ ಸಲ್ಲುತಕ್ಕುದಾಗಿರದೆ ಪ್ರಜಾಹಿತಕ್ಕಾಗಿಯೇ ವಿನಿಯೋಗಿಸಲ್ಪಡತಕ್ಕುದಾಗಿದೆ. ಎಂದು ದಪ್ಪಕ್ಷರಗಳಲ್ಲಿ ಬರೆಯಲ್ಪಟ್ಟಿದ್ದಿತು. ಕೇಜರನ ಭಾವಚಿತ್ರದಿಂದ ಮುದ್ರಿಸಲ್ಪಟ್ಟಿದ್ದ ನೋಟುಗಳು ಲಕ್ಷಗಟ್ಟಲೆ ಸುಟ್ಟುಹಾಕಲ್ಪಟ್ಟುವು. ಈ ಕೋಲಾಹಲದಲ್ಲಿ ಬಾಲ್ಷೆವಿಕರಿಂದ ಗುಂಡುಹಾರಿಸಲ್ಪಟ್ಟು ಗೊಂದಲವಾದುದರಮೇಲೆ ಪೊಲೀಸರು ಅನೇಕರನ್ನು ಹಿಡಿದು ಸೆರೆಯಲ್ಲಿಟ್ಟಿರುವರು.

BELLETIN NO. 3.

FOURTH MYSORE LAWYERS' CONFERENCE, TUMKUR.

The meeting of the Reception Committee for the Fourth Mysore Lawyers' Conference was held to day. The nominations from the various Law Associations in the State were read out and Mr. B. Narasinga Rao of Sreerangapatam, having secured 17 votes out of 22. was duly elected President. The date of the Conference will be fixed and notified in due course. The necessary forms will be sent to all the Associations and all the members of the bar in the State are requested ta enrol themselves as members early.

Tumkur,
11th February 26. Secretary.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.——ಸಂಪಾದಕ.

ಯುಗಾದಿಹಬ್ಬವನ್ನು ಯಾವಾಗ ಮಾಡಬೇಕು?

ಮುಂದೆ ಚೈತ್ರಮಾಸಗಳು ಎರಡು ಬರುವುದರಿಂದ ಕೆಲವರು ನಿಜಚೈತ್ರದಲ್ಲಿ ಯುಗಾದಿಯ ಆಚರಣೆಯನ್ನು ಮಾಡಬೇಕೆಂದೂ, ಮತ್ತೆ ಕೆಲವರು ಅಧಿಕಚೈತ್ರದಲ್ಲಿಯೇ ಯುಗಾದಿಯ ಆಚರಣೆಯನ್ನು ಮಾಡಬೇಕೆಂದೂ ಹೇಳುತ್ತಿರುವರು. ಆದುದರಿಂದ ತಾವಾಗಲೀ, ತಮ್ಮ ಪತ್ರಿಕೆಯ ವಾಚಕರಾಗಲೀ ಯುಗಾದಿಯನ್ನು ಯಾವಾಗಮಾಡುವುದು ಶಾಸ್ತ್ರಸಮ್ಮತವಾದುದೆಂಬುದನ್ನು ದಯವಿಟ್ಟು ತಮ್ಮ ಘನವಾದ ಪತ್ರಿಕೆಯಮೂಲಕ ಸರ್ವರ ತಿಳುವಳಿಕೆಗಾಗಿ ಪ್ರಕಟಿಸುವರೆಂದು ನಂಬಿರುವ, ತಮ್ಮ

ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

ನಿಜಸ್ಥಿತಿ.

ತುರುವೆಕೆರೆಪೇಟೆಯ ಯಜಮಾನನೆಂದು ನಾನು ಸೈನುಮಾಡುತ್ತಿದ್ದೇನೆಂದು ವಗೈರೆ ಸ್ಥಳವಾಸಿ ಎಂಬುವವರು ತಾ|| 23-1-26 ನೆಯ ಸ್ಟಾರ್ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಈ ತುರುವೆಕೆರೆಪೇಟೆಯ ಯಜಮಾನಿಕೆಯನ್ನು ನೋಡಿಕೊಂಡು ಹೋಗುವಂತೆ ಇಲ್ಲಿಯ ವೀರಶೈವರೂ ಇತರ ಧಣಿಸ್ಥರೂ ನನಗೆ ವಹಿಸಿಕೊಟ್ಟು ರಿಕಾರ್ಡುಮಾಡಿರುವರಲ್ಲದೆ ಈ ವಿಚಾರವನ್ನು ಶ್ರೀಮತ್ ರಂಭಾಪುರೀ ಮಹಾಸಂಸ್ಥಾನಕ್ಕೂ ಲಿಖಿತಮೂಲಕವಾಗಿ ಬಿನ್ನೈಸಿಕೊಂಡಿರುತ್ತಾರೆ. ನಾನು ಇದರ ಆಧಾರದ ಮೇಲೆ ಯಜಮಾನಿಕೆಯನ್ನು ನೋಡುತ್ತಿದ್ದೇನೆ ಹೊರತು ಸ್ವೇಚ್ಛೆಯಿಂದಲ್ಲ.

ತುರುವೆಕೆರೆಪೇಟೆಯ ಯಜಮಾನ್ ನಂಜಪ್ಪಶೆಟ್ಟಿ.

ಗ್ರಾಮರಕ್ಷಣಸಭಾ, ಕ್ಯಾತನಹಳ್ಳಿ. ಶ್ರೀರಂಗಪಟ್ಟಣದ ತಾ||

ಮೇಲ್ಕಂಡ ಸಭೆಯಪರವಾಗಿ ಈ ಗ್ರಾಮದಲ್ಲಿ ಇದೇ ಮಾಹೆ 14-15 ಕ್ಕೆ ನಡೆಸಲು ಏರ್ಪಡಿಸಿದ್ದ ಒಕ್ಕಲಿಗರ ಮಹಾಸಭೆಯು ಕಾರಣಾಂತರದಿಂದ ಅಂದರೆ ಹ|| ದೆ|| ಸಾ|| ರವರ ಆಗಮನ ನಿರೀಕ್ಷಣೆಯಿಂದ ತಪ್ಪಿ ಇದೇ ಮಾಹೆ 28 ನೇ ಭಾನುವಾರ ಮಧ್ಯಾಹ್ನ 12 ಘಂಟೆಗೆ ಸದರಿ ಡೆ|| ಕ|| ರವರಾದ ಮ|| ಎ. ವಿ. ರಾಮನಾಥನ್ ಬಿ.ಎ., ಯವರಿಂದ ಆರಂಭಿಸಲ್ಪಡುವುದು. ಮತ್ತು ಒಕ್ಕಲಿಗ ಸ್ತ್ರೀಯರ ಸಭೆಯು ಮಾರ್ಚಿ 1 ನೇ ತಾ|| ಸೋಮವಾರ ಮಧ್ಯಾಹ್ನ 1 ಗಂಟೆಯಿಂದ ಮೈಸೂರುಸೀಮೆಯ ಕೋ|| ಆ|| ಸೊಸೈಟಿಗಳ ರಿಜಿಸ್ಟ್ರಾರ್‌ರವರಾದ ಮ|| ಕೆ. ಎಚ್. ರಾಮಯ್ಯ, ಬಿ.ಎ., ಬಾರ್-ಆಟ್-ಲಾ ರವರ ಕುಟುಂಬ ಸೌ|| ರೇವಮ್ಮನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಆದ್ದರಿಂದ ಒಕ್ಕಲಿಗಕುಲಬಾಂಧವರಾದ ಸ್ತ್ರೀಪುರುಷರೂ ಅವರ ಹಿತೈಷಿಗಳೂ ತಪ್ಪದೆ ದಯಮಾಡಿಸಿ, ಸಭಾಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸುವ, ತಮ್ಮ ವಿಧೇಯ,

ಚಿಕ್ಕತಿಮ್ಮೇಗೌಡ, ಗೌರವ ಕಾರ್ಯದರ್ಶಿ.

ವೀರಶೈವಬಂಧುಗಳೇ ಎಚ್ಚರಿಕೆ.

ಹಿಂದೂ ಜನರಲ್ಲಿ ಸಮಾಜಸುಧಾರಣೆಯಿಲ್ಲದಿರುವುದರಿಂದಲೋ, ಐಕಮತ್ಯವಿಲ್ಲದಿರುವುದರಿಂದಲೋ, ಧರ್ಮಪ್ರಚಾರಕರೆನಿಸಿದ ಮಠಾಧಿಪತಿಗಳ ಕಾಟಸ್ಥ್ಯದಿಂದಲೋ ಭರತಖಂಡದಲ್ಲಿ ಎಲ್ಲೆಲ್ಲೂ ಹಿಂದೂ ಸಮಾಜಕ್ಕೆ ಒಂದರಮೇಲೊಂದು ಘೋರವಿಪತ್ತು ಬಂದೊದಗುತ್ತಲೇ ಇದೆ. ಕ್ರೈಸ್ತರಿಗಿಂತ ಮುಸಲ್ಮಾನರ ಹಾವಳಿ ಬಲವಾಗಿದೆ. ದಿನವೂ ಸಾವಿರಾರು ನಿಮ್ನಜಾತಿಯ ಹಿಂದುಗಳು ಮುಸಲ್ಮಾನರಾಗುತ್ತಿದ್ದಾರೆ. ಬರೀ ಹತ್ತೇ ರೂಪಾಯಿನ ದುರಾಶೆಗೊಳಪಟ್ಟು ಜಾತಿಕೆಡುವ ದುರ್ಗತಿಗೆ ನಿಮ್ನಜಾತಿಯವರು ಬಂದಿಳಿದಿದ್ದಾರೆ. ಐನೂರುವರ್ಷಗಳಿಂದಲೂ "ಆಗಾಖಾನಿಸಂಘ"ವೆಂಬ ಹೆಸರಿನ ಗುಪ್ತಸಂಘವು ಉತ್ತರಹಿಂದೂಸ್ಥಾನದಲ್ಲೂ, ಪಶ್ಚಿಮತೀರರಾಜ್ಯಗಳಲ್ಲೂ ಲಕ್ಷಾವಧಿ ಹಿಂದುಗಳನ್ನು ಜಾತಿಕೆಡಿಸಿದೆ. ಇದರಂತೆ ಹೈದರಾಬಾದ್ ನೈಜಾಮರವರ ಪೋಷಣೆಗೊಳಪಟ್ಟ ಸಂಘಗಳು ಹೈದರಾಬಾದಿನಲ್ಲೂ ಉತ್ತರಹಿಂದೂಸ್ಥಾನದಲ್ಲೂ ಹಿಂದುಗಳನ್ನು ಇಸ್ಲಾಂಧರ್ಮಕ್ಕೆ ಸೇರಿಸುವ ಕಾರ್ಯದಲ್ಲಿ ಜಯಶೀಲವಾಗಿವೆ. ಇಡೀ ಹಿಂದೂಸ್ಥಾನವನ್ನೇ ಇಸ್ಲಾಂಧರ್ಮಕ್ಕೆ ಸೇರಿಸುವ ಮಹಾಪ್ರಯತ್ನವನ್ನು ಕೈಕೊಂಡು ಮುಸಲ್ಮಾನ್ ಮುಂದಾಳುಗಳು ಚಳವಳಿನಡಿಸುತ್ತಿದ್ದಾರೆ. ಇವರಂತೆ ಹಿಂದೂಗಳನ್ನು ಕ್ರೈಸ್ತಧರ್ಮಕ್ಕೆ ಸೇರಿಸುವ ಪ್ರಯತ್ನದಲ್ಲಿ ಅಮೇರಿಕದವರು ಐವತ್ತು ಕೋಟಿರೂಪಾಯಿ ವಿಮಾಸಲುಹಾಕಿ ದಿಗ್ವಿಜಯಪಡೆಯಬೇಕೆಂದಿದ್ದಾರೆ. ಪ್ರಕೃತ ಮುಸಲ್ಮಾನರ ಬಳಕೆಬಳಗಗಳು ನಿಮ್ನಜಾತಿಯವರಲ್ಲಿ ವಿಶೇಷವಾಗಿದ್ದು, ಆ ಜನರು ಇವರ ಮೋಸಕ್ಕೊಳಗಾಗಿ ಗುಂಪುಗುಂಪಾಗಿ ಮುಸಲ್ಮಾನರಾಗುತ್ತಿದ್ದಾರೆ. ಈ ಮತಪ್ರಚಾರಕರ ಕೈವಾಡವು ಈಗ ವೀರಶೈವಸಮಾಜದಮೇಲೆ ಆರಂಭವಾಗಿದೆ. ಹೈದರಾಬಾದುಸೀಮೆಯ ಮುಸಲ್ಮಾನನೊಬ್ಬನು ನಾಲ್ಕಾರುಭಾಷೆಗಳಲ್ಲಿ ಹರಕುಮುರುಕಾಗಿಮಾತನಾಡುತ್ತ, ಮತ್ತು ಶಿವಶರಣರ ವಚನಗಳನ್ನು ಅಲ್ಲಲ್ಲಿ ಉದಹರಿಸುತ್ತ, ತಾನು ಚೆನ್ನಬಸವಣ್ಣನವರ ಅವತಾರವೆಂತಲೂ, ಹಿಂದಿನಮತಗಳೆಲ್ಲಾ ದೋಷಯುಕ್ತವಾದವುಗಳೆಂತಲೂ, ಲಿಂಗಧಾರಣೆ ಇಲ್ಲದಿದ್ದರೂ ತನ್ನ ಧರ್ಮಕ್ಕೆ (ಅಂದರೆ ಮುಸಲ್ಮಾನಮತಕ್ಕೆ) ಸೇರಿದ ಮಾತ್ರದಿಂದಲೇ ಮೋಕ್ಷದೊರೆಯುವುದೆಂತಲೂ ಬೋಧಿಸುತ್ತಾ ಅಜ್ಞಾನಿ ಜನರನ್ನು ಮೋಸಗೊಳಿಸುತ್ತಾ, ಕೆಲವು ಕೈಚಳಕಗಳಿಂದ ಜನರನ್ನು ಮರುಳುಗೊಳಿಸುತ್ತಾ, ಉತ್ತರಕರ್ನಾಟಕದಲ್ಲಿ ತಿರುಗುತ್ತಲಿದ್ದಾನೆ. ಇವನಿಗೆ ದೊಡ್ಡದೊಡ್ಡ ಮುಸಲ್ಮಾನರ ಅಂತರಂಗಸಹಾಯವಿರುವುದೆಂದು ಹೇಳಬೇಕಾದ್ದಿಲ್ಲ. ಆದ್ದರಿಂದ ಚೆನ್ನಬಸವಣ್ಣನವರ ಅವತಾರಪುರುಷನೆಂದು ಹೇಳಿಕೊಳ್ಳುತ್ತಿರುವ ಈ ಮನುಷ್ಯನು ಈ ದೇಶದಲ್ಲಿ ಎಲ್ಲಿಯಾದರೂ ಬಂದದ್ದಾದರೆ, ವೀರಶೈವರಾಗಲಿ, ಇತರ ಯಾವ ಹಿಂದೂಸಮಾಜದವರೇ ಆಗಲಿ ಮರುಳಾಗಬೇಕಾದ್ದಿಲ್ಲವೆಂದು ಎಲ್ಲರಿಗೂ ಎಚ್ಚರಿಸಿದೆ.

ಸಮಾಜಹಿತೈಷಿ.

ಮೊಳಕಾಲ್ಮುರು ಬೇಬಿವೀಕ್.

ಈ ವರ್ಷದ ಬೇಬಿವೀಕ್ ಮಹೋತ್ಸವವು ಎಂದಿನಂತೆ ಬಹಳ ವಿಜೃಂಭಣೆಯಿಂದ ಈ ಟವನಿನಲ್ಲಿ ಕಳೆದ ತಿಂಗಳು ತಾ|| 31 ನೇ ಭಾನುವಾರ ದಿವಸ ನಡಿಸಲ್ಪಟ್ಟಿತು. ಪ್ರತಿಸಲಕ್ಕಿಂತಲೂ ಈ ವರ್ಷ ಟವನ್ ಮುನಿಸಿಪಾಲಿಟಿಯವರು ಬಹಳ ಶ್ರದ್ಧೆವಹಿಸಿ ಕೆಲಸಮಾಡಿರುತ್ತಾರೆ. ಈ ಸಮಯದಲ್ಲಿ ಮುನಿಸಿಪಲ್ ಪ್ರೆಸಿಡೆಂಟ್‌ರವರು ರಜಾದಮೇಲೆ ಇದ್ದ ಕಾರಣ ಇಲ್ಲಿನ ಪಾಪ್ಯುಲರ್ ವೈಸ್‌ಪ್ರೆಸಿಡೆಂಟರೆಂದು ಹೆಸರನ್ನು ಪಡೆದಿರುವ ಮ|| ಸಾಹುಕಾರ್ ನೇರ್ಲಹಳ್ಳಿ ಚೆನ್ನಬಸಪ್ಪನವರು ಮುಂದೆನಿಂತು ಈ ಕಾರ್ಯವನ್ನು ನೆರವೇರಿಸಿದರು. ಈಸಲದ ಪ್ರೋಗ್ರಾಮಿನಲ್ಲಿ 3 ವರ್ಷದ ಕೆಳಗೆ ಇರುವ ಶಿಸುಗಳ ಪೈಕಿ ಉತ್ತಮವಾದ ಶಿಸುಗಳಿಗೆ ಬೆಳ್ಳಿಯಬಟ್ಟಲುಗಳು, ಉಲ್ಲನ್ನು ಟೋಪಿಗಳು, ಆಟದ ಗೊಂಬೆಗಳು ಇವೇ ಮೊದಲಾದ 9 ಇನಾಮುಗಳನ್ನು ಮತ್ತು ಆದಿಕರ್ನಾಟಕರ ಪೈಕಿ ತಮ್ಮ ಮನೆಯನ್ನು ಚೊಕ್ಕಟವಾಗಿಟ್ಟುಕೊಂಡವರಿಗೆ 2 ಇನಾಮುಗಳನ್ನು ಕೊಡಬೇಕೆಂದು ಈ ಮೊದಲೇ ಕಮಿಟಿಯಲ್ಲಿ ನಿರ್ಧರಿಸಿದ್ದ ಮೇರೆಗೆ ಏರ್ಪಾಟು ಮಾಡಲ್ಪಟ್ಟಿತ್ತು. ಇದೇ ಕಮಿಟಿಯ ಛೇರ್ಮನ್ ಮ|| ರ್ಯ|| ಚೆನ್ನಬಸಪ್ಪನವರು. ಮಿಡ್ಲ್‌ಸ್ಕೂಲು ಹೆಡ್ಮಾಸ್ಟರಾದ ಮ|| ಕೇಶಪ್ಪನವರು ಮತ್ತು ಸಬ್‌ಅಸಿಸ್ಟೆಂಟ್ ಸರ್ಜನ್‌ರವರಾದ ಮ|| ಎಂ. ಸಿ. ನಂಜಪ್ಪನವರು ಜಡ್ಜಿಗಳಾಗಿದ್ದರು. ಮಧ್ಯಾಹ್ನದಲ್ಲಿ ಪ್ರತ್ಯೇಕವಾಗಿ ಹೆಂಗಸರಿಗೋಸ್ಕರ ಇಲ್ಲಿನ ಬ್ರಹ್ಮಸಮಾಜದ ಕಟ್ಟಡದಲ್ಲಿ ಉರ್ದುಗರ್ಲ್ಸ್‌ಸ್ಕೂಲು ಹೆಡ್ಮಿಸ್ಟ್ರೆಸ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಕೂಡಿಸಲ್ಪಟ್ಟು ಶಿಸುಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಇಲ್ಲಿನ ಲೋಕಲ್ ಮಿಡ್‌ವೈಫ್‌ರವರು ಉಪನ್ಯಾಸವನ್ನು ಮಾಡಿದರು. ಅನಂತರ ಮಕ್ಕಳುಗಳ ಚುನಾವಣೆಯು ಮೇಲ್ಕಂಡ ಜಡ್ಜಿಗಳವರಿಂದ ನಡಿಸಲ್ಪಟ್ಟಿತು. ಸುಮಾರು 100 ಶಿಶುಗಳವರೆಗೂ ಪ್ರದರ್ಶನಕ್ಕೆ ಬಂದಿದ್ದುವು. ಇವುಗಳಲ್ಲಿ ಉತ್ತಮವಾದ 9 ಶಿಶುಗಳಲ್ಲದೆ ಇನ್ನೂ 10-12 ಶಿಶುಗಳನ್ನು ಮೇಲ್ಕಂಡ ಜಡ್ಜಿಗಳು ಚುನಾಯಿಸಿಕೊಂಡನಂತರ ಇಲ್ಲಿನ ಟವನ್‌ಹಾಲ್ ಕಟ್ಟಡದಲ್ಲಿ ಪ್ರಮುಖಪುರನಿವಾಸಿಗಳನ್ನೂ ಇತರ ದೊಡ್ಡಮನುಷ್ಯರುಗಳನ್ನೂ ಸೇರಿಸಿ ಇಲ್ಲಿನ ಫಾರೆಸ್ಟ್‌ರೇಂಜರಾದ ಮ|| ರಾ|| ಬಿ. ಗೋಪಾಲಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮ್ಮೇಳನವನ್ನು ನಡಿಸಿದ್ದರು. ವೈಸ್‌ಪ್ರೆಸಿಡೆಂಟ್ ಮ|| ರ್ಯ|| ಚೆನ್ನಬಸಪ್ಪನವರು ಈ ಬೇಬಿವೀಕಿನ ಉದ್ದೇಶವನ್ನು ಕುರಿತು ಉಪನ್ಯಾಸವನ್ನು ಓದಿದರು. ಅನಂತರ ಸಬ್ ಅಸಿಸ್ಟೆಂಟ್ ಸರ್ಜನ್ನರಾದ ಮ|| ಯಂ. ಸಿ. ನಂಜಪ್ಪನವರು ಆರೋಗ್ಯವಿಚಾರವಾಗಿ ಸುಮಾರು 1 ಘಂಟೆಗೆ ಮೇಲ್ಪಟ್ಟು ಸಭೆಯವರೆಲ್ಲರಿಗೂ ತೃಪ್ತಿಕರವಾಗುವಂತೆ ಉಪನ್ಯಾಸವನ್ನು ಮಾಡಿದರು. ಆಮೇಲೆ ಇಲ್ಲಿನ ತಾ|| ಸ್ಯಾನಿಟರಿ ಇನ್ಸ್‌ಪೆಕ್ಟರ್ ಮ|| ರ್ಯ|| ಡಿ. ಸರೋದಯವರು ಸ್ಯಾನಿಟೇಷನ್ ವಿಚಾರದಲ್ಲೂ, ಲೋಕಲ್ ಗರ್ಲ್ಸ್‌ಸ್ಕೂಲು ಹೆಡ್ಮಾಸ್ಟರ್ ಮ|| ಶಂಕರಪ್ಪನವರು ಮಕ್ಕಳ ಹಿತ ವಿಚಾರದಲ್ಲಿಯೂ ದೀರ್ಘೋಪನ್ಯಾಸಗಳನ್ನು ಮಾಡಿದರು. ಅನಂತರ ಉತ್ತಮವಾದ ಸುಮಾರು 20 ಮಕ್ಕಳಿಗೂ ಆದಿಕರ್ನಾಟಕರ ಪೈಕಿ ಮನೆಯನ್ನು ಚೊಕ್ಕಟವಾಗಿಟ್ಟುಕೊಂಡಿದ್ದ ಇಬ್ಬರಿಗೂ ಅವರವರ ಯೋಗ್ಯತಾನುಸಾರ ಇನಾಮುಗಳು ಹಂಚಲ್ಪಟ್ಟುವು. ಪ್ರೆಸಿಡೆಂಟರವರ ಅಧ್ಯಕ್ಷರುಭಾಷಣವಾದ ತರುವಾಯ ಇಲ್ಲಿನ ತಾ|| ಬೋರ್ಡು ವೈಸ್‌ಪ್ರೆಸಿಡೆಂಟ್ ಮ|| ಯಂ. ಹೆಚ್. ನಾರಾಯಣರಾಯರು ಸಭಾಧ್ಯಕ್ಷರಿಗೂ, ಮುನಿಸಿಪಾಲಿಟಿಯವರಿಗೂ, ಮುನಿಸಿಫಲ್ ವೈಸ್‌ಪ್ರೆಸಿಡೆಂಟ್ ಮ|| ರ್ಯ|| ಚೆನ್ನಬಸಪ್ಪನವರಿಗೂ, ಪುರಜನಗಳ ಪರವಾಗಿ ವಂದನೆಯನ್ನು ತಿಳಿಸಿದರು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೆ ಶ್ರೇಯಃಪ್ರಾರ್ಥನೆಮಾಡಿ ಸಭೆಯು ರಾತ್ರೆ 8 ಘಂಟೆಗೆ ಮುಕ್ತಾಯವಾಯಿತು. ಇದಲ್ಲದೆ ಈ ತಾಲ್ಲೂಕಿಗೆ ಮುಖ್ಯಗ್ರಾಮವಾದ ರಾಂಪುರದ ಗ್ರಾಮದಲ್ಲಿ ಈ ತಾಲ್ಲೂಕುಬೋರ್ಡು ವೈಸ್‌ಪ್ರೆಸಿಡೆಂಟರಾದ ಮ|| ಯಂ. ಹೆಚ್. ನಾರಾಯಣರಾಯರವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 25 ರಲ್ಲೂ, ದೇವಸಮುದ್ರದ ಗ್ರಾಮದಲ್ಲಿ ಕಳೆದ ತಾ|| 28 ರಲ್ಲೂ, ಸಬ್ ಅಸಿಸ್ಟೆಂಟ್ ಸರ್ಜನ್ ಮ|| ಯಂ. ಸಿ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 30 ರಲ್ಲಿ ನಾಗಸಮುದ್ರಗ್ರಾಮದಲ್ಲೂ ಬೇಬಿವೀಕ್ ಮಹೋತ್ಸವಗಳು ನಡಿಸಲ್ಪಟ್ಟವು. ಈ ಮಹೋತ್ಸವಗಳಲ್ಲಿ ಸಬ್ ಅಸಿಸ್ಟೆಂಟ್ ಸರ್ಜನ್ನರಾದ ಮ|| ಯಂ. ಸಿ. ನಂಜಪ್ಪನವರು ಆರೋಗ ಶಿಶುಸಂರಕ್ಷಣೆವಿಚಾರದಲ್ಲಿಯೂ, ತಾಲ್ಲೂಕು ಸ್ಯಾನಿಟರಿ ಇನ್ಸ್‌ಪೆಕ್ಟರಾದ ಮ|| ರ್ಯ|| ಡಿ. ಸರೋದಯವರು ಗ್ರಾಮಪಾಕೀಜವಿಚಾರದಲ್ಲಿಯೂ ಬಹಳ ಸ್ವಾರಸ್ಯವಾಗಿ ಉಪನ್ಯಾಸಗಳನ್ನು ಮಾಡಿದರು.

ಇತಿ, ಪ್ರೇಕ್ಷಕ.

ರಾವಸಾಹೇಬ ನೆಜ್ಜೂರುವಕೀಲ ಸದಾಶಿವಗೌಡರ ಅಭಿನಂದನ.

ಇಲ್ಲಿಯ ಲೋಕಲ್‌ಬೋರ್ಡು ವೈಸ್‌ಪ್ರೆಸಿಡೆಂಟರಾದ ಮ|| ರಾ|| ಚಂದ್ರನಾರಾಯಣಭಟ್ಟರು ಇವರ ಅಧ್ಯಕ್ಷತೆಯಲ್ಲಿ ತಾ|| 29 ರಲ್ಲಿ ಸಿದ್ದಾಪುರದಲ್ಲಿ ಈ ಪ್ರಾಂತದ ರಹಿವಾಸಿಗಳ ಪ್ರಚಂಡಸಭೆ ಕೂಡಿತ್ತು. ಈ ಸಭೆಗೆ ಮಾಮ್ಲೇದಾರ ಸಾ|| ರು, ಡಾಕ್ಟರ ಸಾ|| ರು, ರೇಂಜರ ಸಾ|| ರು, ಗಾಗ್ಗೆಹಳ್ಳ ಶ್ರೀ|| ವೇ|| ಸೋಮನಾಥಶಾಸ್ತ್ರಿಗಳು ತಾಲ್ಲೂಕಿನ ಮತ್ತು ಎಲ್ಲಭಾಗಗಳಪುಢಾರಿಗಳು ಆಗಮಿಸಿದ್ದರು. ಸಾಗರ, ಸೊರಬ, ಶಿರ್ಶಿ, ಮುಂಡಗೋಡಕಡೆಯಿಂದಲೂ ಕೆಲವರು ಬಂದಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಹಳ ವರುಷಗಳ ಹಿಂದೆ ಮಸಳ್ಳಿಯ ಕೈ|| ಶಿವಲಿಂಗಯ್ಯಗೌಡರಿಗೆ "ರಾವಬಹಾದ್ದೂರ" ಪದವಿಯು ಸರಕಾರದಿಂದ ಕೊಡಲ್ಪಟ್ಟಿತ್ತೆಂದು ಕೇಳಿದ್ದೆವು. ಅನಂತರ ಇದುವರೆಗೆ ಆ ಗೌರವವು ಈ ಪ್ರಾಂತದಲ್ಲಿ ಯಾರಿಗೂ ಕೊಡಲ್ಪಟ್ಟಿದ್ದಿಲ್ಲ. ಅಂಥ ಬಹುಮಾನವನ್ನು ಈ ತಾಲ್ಲೂಕಿನವರಾದ ಒಬ್ಬ ಸಾರ್ವಜನಿಕ ಹಿತಕಾರ್ಯದಕ್ಷ ಮಹಾನುಭಾವರಿಗೆ ಸರಕಾರದವರು ಕೊಟ್ಟು ಸನ್ಮಾನಿಸಿದ್ದಕ್ಕಾಗಿ ಈ ದಿವಸ ಅವರ ಅಭಿನಂದನದ ಬಗ್ಗೆ ಈ ಸಭೆ ಕರೆಯಲ್ಪಟ್ಟಿರುತ್ತದೆ. ಶ್ರೀಯುತ ನೆಜ್ಜೂರು ಸದಾಶಿವಗೌಡರು ವಿದ್ಯಾವ್ಯಾಸಂಗದಲ್ಲಿ ಹಿಂದುಳಿದವರ್ಗದವರಾದಾಗ್ಯೂ ಬಾಲ್ಯದಲ್ಲಿ ಮೇಹನತ್ತಿನಿಂದ ಆಂಗ್ಲವಿದ್ಯಾರ್ಜನೆಮಾಡಿ ವಕೀಲಸನದುಪಡೆದು ಸಿರ್ಶಿ ಸಬ್‌ಜಡ್ಜ್ ಕೋರ್ಟವಕೀಲರಾಗಿ ಇತ್ತೀಚಿಗೆ ಗವರ್ನಮೆಂಟ ವಕೀಲರಾಗಿ ಕೆಲಸಮಾಡುತ್ತಿದ್ದು ಸ್ವಾರ್ಥದಕಡೆಗೆ ಲಕ್ಷ್ಯಕೊಡದೆ ಸಾರ್ವಜನಿಕ ಹಿತದಕಾರ್ಯಗಳಾದ ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡು, ಸೇತಕಿ ಅಭಿವೃದ್ಧಿ, ಸಹಕಾರಿ, ಮುಂತಾದ ಸಂಸ್ಥೆಗಳಲ್ಲಿ ದಕ್ಷತೆಯಿಂದ ಕೆಲಸಮಾಡುತ್ತಾ ಈ ಪ್ರಾಂತದ ರಹಿವಾಸಿಗಳ ಹಿತವನ್ನು ಸಾಧಿಸುತ್ತಿರುವದಲ್ಲದೆ ಇನ್ನೂ ಅನೇಕ ಸಾಮಾಜಿಕ, ಧಾರ್ಮಿಕ ಸತ್ಕಾರ್ಯಭಾಗಿಗಳಾಗಿ ದುಡಿಯುತ್ತಿದ್ದಾರೆ. ನಿಜವಾಗಿ ನಿಸ್ಪೃಹತೆಯಿಂದ ಸಾರ್ವಜನಿಕಕಾರ್ಯಮಾಡತಕ್ಕವರು ಗೌರವಿಸಲ್ಪಡುವದು ಯೋಗ್ಯವಿದ್ದು ಸರಕಾರದಿಂದ ಇವರಿಗೆ "ರಾವಸಾಹೇಬ" ಪದವಿಯು ನ್ಯಾಯವಾಗಿ ಕೊಡಲ್ಪಟ್ಟಿರುತ್ತದೆ. ಈ ಸನ್ಮಾನವು ಇವರಿಗೆ ಮಾತ್ರವಲ್ಲ, ಇವರು ನಮ್ಮೊಳಗಿನವರಾದ್ದರಿಂದ ನಮಗು ಕೂಡಾ ಭೂಷಣವು. ಸರ್ಕಾರದಲ್ಲಿ ಮತ್ತು ರಹಿವಾಸಿಗಳಲ್ಲಿ ಉಭಯಕಡೆಯಲ್ಲಿಯೂ ಪ್ರೀತಿದೊರಕಿಸಿ ಲೋಕಕಲ್ಯಾಣಕಾರ್ಯಗಳನ್ನು ಜರಗಿಸುವದು ಚಿಕ್ಕಸಂಗತಿಯಲ್ಲ. ಅದಕ್ಕೆ ಬರೇ ವಿದ್ವತ್ತು ಇದ್ದಮಾತ್ರದಿಂದ ಸಾಗುವಂತಿಲ್ಲ. ಅಸ್ವಾರ್ಥತೆಯಿಂದಲೂ, ಜನಬಳಿಕೆಯಿಂದಲೂ ಅಂತಃಕರುಣಪೂರ್ವಕವಾಗಿ ದುಡಿದರೆ ಮಾತ್ರ ಸಾರ್ವಜನಿಕಕಾರ್ಯಗಳು ನೆರವೇರಿ ಜನತೆಯ ಕಲ್ಯಾಣವಾಗುವದು. ಹಾಗಿಲ್ಲದಿದ್ದರೆ ವಿಪರೀತಪರಿಣಾಮವು ಘಟಿಸುವದು. ಇಂಥ ಸದ್ಗುಣಗಳು ನಮ್ಮ ರಾವಸಾಹೇಬರಲ್ಲಿರುವದರಿಂದಲೇ ಸರಕಾರದ ಸನ್ಮಾನಕ್ಕೂ ನಮ್ಮ ಅಭಿನಂದನಕ್ಕೂ ಇವರು ಪಾತ್ರರಿರುವರು. ಈ ಪ್ರಾಂತದ ಅಶಿಕ್ಷಿತಬಾಂಧವರ ಹಿತಸಂವರ್ಧನಕಾರ್ಯಗಳನ್ನು ಇನ್ನೂ ಹೆಚ್ಚಾಗಿಗೈದು ಭಿನ್ನಭಿನ್ನಸಮಾಜಗಳೊಳಗಿನ ಘಾತಕಒಡಕುಗಳನ್ನು ಸರಿಪಡಿಸಿ ಐಕ್ಯವೃದ್ಧಿಗೊಳಿಸಿ ಇದಕ್ಕೂ ಹೆಚ್ಚಿನ ಸನ್ಮಾನವನ್ನು ಸರಕಾರದಿಂದ ಪಡೆದು ಜನಹಿತಕಾರಿಗಳಾಗಿ ಬಹುಕಾಲ ಬಾಳಲೆಂದು" ವಗೈರೆ ಹೇಳಿ ಜಗನ್ನಿಯಾಮಕನನ್ನು ಪ್ರಾರ್ಥಿಸಿ ತಮ್ಮ ಭಾಷಣವನ್ನು ಮುಗಿಸಿದರು. ಅನಂತರ ರಾ|| ಸಾ|| ಸದಾಶಿವಗೌಡರಲ್ಲಿರುವ ಸದ್ಗುಣಗಳನ್ನು ವಿವರಿಸಿ ಮಾಮ್ಲೇದಾರ ಸಾ|| ರು, ವೇ|| ಶ್ರೀ ಸೋಮನಾಥಶಾಸ್ತ್ರಿಗಳು, ಶ್ರೀಯುತ ಕಾಗೋಡ ಶಿವಲಿಂಗಪ್ಪಗೌಡರು, ಶಿರ್ಶಿ ಕೋರವಾರ್ ಬಸಪ್ಪನವರು ಮುಂತಾದ ಮಹನೀಯರು ಗೌರವಪರಭಾಷಣಮಾಡಿದರು. ಕಟ್ಟಕಡೆಗೆ ರಾವಸಾಹೇಬ ಸದಾಶಿವಗೌಡರು "ಈ ಸಮಾರಂಭಕ್ಕೆ ಸಿದ್ದಾಪುರ ತಾ|| ನ ರಹಿವಾಸಿಗಳಲ್ಲದೆ ಶಿರ್ಶಿ, ಸಾಗರ, ಸೊರಬ, ಮುಂಡಗೋಡಕಡೆಯ ಕೆಲವು ಸದ್ಗೃಹಸ್ಥರು ತಮ್ಮ ಅಮೂಲ್ಯವೇಳೆಯನ್ನು ಖರ್ಚುಮಾಡಿ ಬಹುದೂರದಿಂದ ಬಂದುದಕ್ಕೆ ನನಗೆ ಕೌತುಕವಾಗಿದೆ. ಅಧ್ಯಕ್ಷಮಹಾಶಯರು, ಮಾಮ್ಲೇದಾರ ಸಾಹೇಬರು ಮುಂತಾದವರು ನನ್ನ ಗುಣಾಧಿಕ್ಯಗಳನ್ನು ಕುರಿತು ಹೊಗಳಿದ್ದು ಅವರ ದೊಡ್ಡಸ್ತಿಕೆಯ ಪ್ರದರ್ಶನವಾಗಿದೆ. ಅಂಥ ಪ್ರಶಂಸೆಗೆ ನಾನು ಪಾತ್ರನಲ್ಲ, ಆದರೆ ನಿಮ್ಮ ಭಾಷಣವು ನನಗೆ ಸದ್ಬೋಧವಾಗಿಯೂ ಉತ್ತೇಜನಪರವಾಗಿಯೂ ಇದೆ. ನಿಮ್ಮ ಅನುಜ್ಞೆಯಂತೆ ನನ್ನಿಂದಾದಷ್ಟರಮಟ್ಟಿಗೆ ಜನಹಿತಕಾರ್ಯಗಳನ್ನು ಮನಮುಟ್ಟಿ ನಿಃಸ್ವಾರ್ಥತೆಯಿಂದ ಮಾಡಲು ಶ್ರೀಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ. ಈವರೆಗೆ ನನ್ನಿಂದಾದದ್ದೆಂಬ ಲೋಕಹಿತಕಾರ್ಯಗಳಲ್ಲಿ ನಿಮ್ಮೆಲರ ಬೆಂಬಲವಿತ್ತೆಂಬುದನ್ನು ನಾನು ಮರಿಯುವದಿಲ್ಲ. ನಿಮ್ಮ ಪ್ರತಿನಿಧಿಯಾದ್ದರಿಂದ ಈ ಬಹುಮಾನದ ಪದವಿಯು ದೊರಕಿರುವಪ್ರಯುಕ್ತ ಈ ಸನ್ಮಾನಕ್ಕೆ ತಾವು ಕೂಡಾ ಪಾಲುಗಾರರಿದ್ದೀರಿ. ಎಂದು ವಗೈರೆ ಹೇಳಿ ತಮ್ಮ ವಿನಯಪರ ಸಮಂಜಸಭಾಷಣವನ್ನು ಪೂರ್ತಿಮಾಡಿದರು. ಅನಂತರ ಸರಕಾರದ ಆಭಾರ ಎಣಿಸುವ ವಗೈರೆ ಠರಾವುಗಳು ಸರ್ವಸಮ್ಮತಿಯಿಂದ ಪಾಸಮಾಡಲ್ಪಟ್ಟವು. ರಾ|| ಸಾ|| ಸದಾಶಿವಗೌಡರಮೇಲೆ ತಿಪ್ಪಯ್ಯ ಮಾಸ್ತರರು ಸ್ವಂತ ರಚಿಸಿದ ಪದ್ಯಗಳನ್ನು ಮನೋಹರವಾಗಿಹಾಡಿ ಈಶಸ್ತುತಿಗೈದು ಕೊನೆಗೆ ಸಾಮ್ರಾಜ್ಯಾಧಿಪತಿಗಳಾದ ಪಂಚಮ ಜಾರ್ಜಬಾದಶಹ ದಂಪತಿಗಳು ದೀರ್ಘಾಯುಗಳಾಗಿ ಬಹುಕಾಲ ರಾಜ್ಯವಾಳಲೆಂದು ಪ್ರಾರ್ಥಿಸಲ್ಪಟ್ಟಮೇಲೆ ಸಭೆವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ವೀರಶೈವರ ಸಿದ್ಧಾಂತವು.

ಲೇಖಾಂಕ ೧.

(ಲೇಖಕ—ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಹಿರೇಮಠ ಹೋಳು ಸಂಸ್ಕೃತಕಾಲೇಜು ಯಾದಗಿರಿ.)

ಛೀ ಹುಚ್ಚುಮುಂಡೆಯೇ ಇಷ್ಟಾದರೂ ಬುದ್ಧಿಯುಳ್ಳವಳಾಗು ಎಂದು ಹೇಳಿದರೆ ಇಲ್ಲ ಮದುವೆಯು ಮಾಡಿಕೊಂಡ ಗಂಡನನ್ನಾದರೂ ಬಿಟ್ಟೇನು

ವಿಷಪಾನವನ್ನಾದರೂ ಮಾಡೇನು, ನನ್ನ ಕೆಟ್ಟಗುಣಗಳನ್ನು ಮಾತ್ರ ನಾನು ಬಿಡಲಾರೆನು. ಯಾಕೆಂದರೆ, ಹುಟ್ಟಿದಗುಣವು ಹುಗಿದರೂ ಹೋಗದು ಎಂದು ಗಾದೆಯು ಇರುವುದರಿಂದಲೂ, ಗಾದೆಯು ವೇದಕ್ಕೆ ಸಮಾನವೆಂದು ನನ್ನ ಹಿರಿಯರು ಹೇಳುವದರಿಂದಲೂ ಬಿಡಲಾಗುವದಿಲ್ಲವೆಂದು ವಾದಿಸುವ ಹಠಮಾರೀ ಸ್ತ್ರೀಯಳಂತೆಯೇ ಕೆಲವು ನಮ್ಮ ಬ್ರಾಹ್ಮಣಬಂಧುಗಳ ವರ್ತನವಾಗಿರುತ್ತವೆ. ಯಾಕೆಂದರೆ, ವೀರಶೈವರು ತಮ್ಮ ಸಿದ್ಧಾಂತಗಳನ್ನು ವೇದೋಪನಿಷತ್ ಪ್ರಮಾಣಗಳಿಂದ ಎಷ್ಟೋಸಾರಿ ತೋರಿಸಿದ್ದಾಯಿತು. ವೀರಶೈವಾಚಾರ್ಯರ ಭಾಷ್ಯಾದಿಸಿದ್ಧಾಂತಗ್ರಂಥಗಳನ್ನು ನೋಡದೆ ವೀರಶೈವರ ವಿಷಯಕ್ಕೆ ತಮ್ಮ ವಿಷವನ್ನು ಮೇಲಿಂದಮೇಲೆ ಕಾರುತ್ತಿರುವದನ್ನು ನೋಡಿದರೆ ಇವರ ಅಂತರಂಗವು ಹೇಗೆ ಇರುವದೆಂಬುವದಕ್ಕೆ ಅನೇಕ ಉದಾಹರಣೆಗಳೇ ಕಾರಣಗಳಾಗಿರುತ್ತವೆ. "ಪವಿತ್ರಂತೆವಿತತಂಬ್ರಹ್ಮಣಸ್ಪತೆ ಪ್ರಭುರ್ಗಾತ್ರಾಣಿಪರ್ಯೇಷಿವಿಶ್ವತ" ಎಂಬುವ ಋಗ್ವೇದದ ಮಂತ್ರಕ್ಕೆ ವೀರಶೈವರ ಆಚಾರ್ಯರು ಲಿಂಗಧಾರಣಪರ ಅರ್ಥವನ್ನು ಮಾಡಿರುತ್ತಾರಷ್ಟೆ. ಆದರೆ ಅದಕ್ಕೆ ಪರವಾದಿಗಳಾದ ಬ್ರಾಹ್ಮಣರು ಹೇಳುವದೇನೆಂದರೆ, ಆ ಮಂತ್ರವು ಸೋಮದೇವತಾಕವಾಗಿರುವಕಾರಣ ಲಿಂಗಧಾರಣಪರ ಅರ್ಥವಾಗುವದಿಲ್ಲವೆಂದು ವಾದಿಸುತ್ತಾರೆ. ಆದರೆ ಮಧ್ವಾಚಾರ್ಯರು ಸೋಮಯಾಗದಲ್ಲಿ ಹೇಳಿರುವದನ್ನು ಖಂಡಿಸಿ ತಪ್ತಮುದ್ರಾಧಾರಣಾದಿ ವಿಷಯಪರವಾಗಿ ಅರ್ಥವನ್ನು ಮಾಡಿರುತ್ತಾರೆ. ಭಟ್ಟೋಜಿದೀಕ್ಷಿತಾದಿಗಳು ತಪ್ತಮುದ್ರಾಧಾರಣವನ್ನೂ ಲಿಂಗಧಾರಣವಿಷಯವನ್ನೂ ಖಂಡಿಸಿ ಸೋಮಯಾಗದಲ್ಲಿ ಹೇಳಿರುವರು. ಇದರಂತೆ ಪ್ರತಿಯೊಬ್ಬ ಮತಸ್ಥಾಪನಾಚಾರ್ಯರು ವೇದಮಂತ್ರಗಳಿಗೆ ತಮ್ಮತಮ್ಮ ಮತಪರ ಅರ್ಥಮಾಡುವದು ಲೋಕರೂಢಿಯೂ ಜಗತ್ಪ್ರಸಿದ್ಧವೂ ಇರುತ್ತದೆ. ವೇದಮಂತ್ರಗಳಿಗೆ ಹೀಗೆಯೇ ಅರ್ಥಮಾಡಬೇಕೆಂಬದನ್ನು ನಿರ್ಧರಿಸಲಿಕ್ಕೆ ಯಾರೂ ಸಮರ್ಥರಿರುವದಿಲ್ಲ. ಅನ್ಯಮತವನ್ನು ಖಂಡನೆಮಾಡಿ ಸ್ವಮತಸಿದ್ಧಾಂತಸ್ಥಾಪನೆಯನ್ನು ಮಾಡುವದು ಪ್ರತಿಯೊಬ್ಬರಿಗೂ ಸ್ವಭಾವಸಿದ್ಧವಾಗಿರುತ್ತದೆ. ಹೀಗೆ ಒಬ್ಬರಿಗೊಬ್ಬರು ಖಂಡನೆಯನ್ನು ಮಾಡಿದರೂ ಅವರ ಸಿದ್ಧಾಂತಕ್ಕೂ ಅವರ ಬ್ರಾಹ್ಮಣ್ಯಕ್ಕೂ ಯಾವ ಚ್ಯುತಿಯೂ ಇರುವದಿಲ್ಲ. ಅದರಂತೆ ವೀರಶೈವರ ಆಚಾರ್ಯರು ತಮ್ಮ ಮತಸ್ಥಾಪನೆಗಾಗಿ ಲಿಂಗಧಾರಣಪರ ಅರ್ಥಮಾಡಿರುವದನ್ನು ಅನ್ಯಮತಸ್ಥರು ಲಿಂಗಧಾರಣವಿಷಯವನ್ನು ಖಂಡನೆಮಾಡಿದರೂ ಇವರ ಲಿಂಗಧಾರಣ ವಿಷಯಕ್ಕೂ ವೈದಿಕತ್ವಕ್ಕೂ ಇವರ ಬ್ರಾಹ್ಮಣ್ಯದ ವಿಷಯಕ್ಕೂ ಯಾವ ಚ್ಯುತಿಯೂ ಇರುವದಿಲ್ಲ. ಹಾಗಿಲ್ಲದೆ ಇದ್ದಪಕ್ಷದಲ್ಲಿ ತ್ರಿಮತಸ್ಥರಾದ ಮಧ್ವ ಶಂಕರ ರಾಮಾನುಜರ ಮತದವರ ಬ್ರಾಹ್ಮಣ್ಯಕ್ಕೆ ಕೂಡ ಹಾನಿಯುಂಟಾಗಬೇಕಾದೀತು. ಯಾಕೆಂದರೆ, ಉಳಿದ ಮತಸ್ಥಾಪನಾಚಾರ್ಯರು ಮೇಲೆಹೇಳಿದ ತ್ರಿಮತಸ್ಥ ಆಚಾರ್ಯರು ಮಾಡಿರುವ ವೇದಮಂತ್ರಗಳ ಅರ್ಥವನ್ನು ಖಂಡನೆಮಾಡಿರುವರು. ವೇದವಾಕ್ಯಗಳು ಎಲ್ಲರಿಗೂ ಅನುಕೂಲಿಸುವ ಪದ್ಧತಿಯುಳ್ಳವುಗಳಾಗಿರುವುದರಿಂದಲೇ ಉಪಬೃಂಹಣವಾಕ್ಯಗಳಿಂದಲೇ ವೇದವಾಕ್ಯದ ಮುಖ್ಯ ತಾತ್ಪರ್ಯವನ್ನು ಸ್ಪಷ್ಟೀಕರಿಸಬೇಕೆಂದು ವೇದವ್ಯಾಸರ ಮುಖ್ಯತಾತ್ಪರ್ಯವು ಪ್ರಸಿದ್ಧವೇ ಇರುತ್ತದೆ. ಆದರೂ "ತುಷ್ಯತುದುರ್ಜನಃ" ಎಂಬುವ ನ್ಯಾಯದಿಂದ ಬ್ರಾಹ್ಮಣರು ಖಂಡನೆಮಾಡುವ ಕೆಲವು ವಿಷಯಗಳಿಗೆ ಉತ್ತರ ಕೊಡುವದೇ ಈ ಲೇಖನದ ಮುಖ್ಯಾಭಿಪ್ರಾಯವಾಗಿರುತ್ತದೆ. "ಪವಿತ್ರಂತೆ" ಮಂತ್ರವು ಸೋಮಯಾಗದಲ್ಲಿ ದಶಾಪವಿತ್ರವನ್ನು ಧರಿಸಿರುವ ವಿಷಯದಲ್ಲಿ ವಿನಿಯೋಗಿಸಿರುವುದರಿಂದ ಲಿಂಗಧಾರಣ ವಿಷಯಕವಾದ ಅರ್ಥವು ಹೇಗೆ ಯುಕ್ತವಾಗುವದೆಂಬುವುದೇ ಇವರ ಅಭಿಪ್ರಾಯವು. ಮತ್ತು ಯಾವ ಮಂತ್ರವು ಎಲ್ಲಿ ವಿನಿಯೋಗಿಸಲ್ಪಟ್ಟಿರುವುದೋ ಅಲ್ಲಿಯೇ ಉಪಯೋಗಿಸತಕ್ಕದ್ದು ಸೋಮಯಾಗಪ್ರಕರಣದಲ್ಲಿ ಪಠಿತವಾದ ಈ ಮಂತ್ರಕ್ಕೆ ಲಿಂಗಧಾರಣಪರತ್ವವು ಪ್ರಕರಣವಿರೋಧವಾಗುವದೆಂಬುದೇ ಇವರ ಪ್ರಶ್ನೆಯು. ಇದಕ್ಕೆ ಉತ್ತರವೇನೆಂದರೆ——ಯಾವ ಮಂತ್ರವು ಎಲ್ಲಿ ವಿನಿಯೋಗಿಸಲ್ಪಟ್ಟಿರುವದೋ ಆ ಮಂತ್ರವನ್ನು ಅಲ್ಲಿಯೇ ವಿನಿಯೋಗಿಸಬೇಕು, ಮತ್ತೊಂದರಲ್ಲಿ ವಿನಿಯೋಗಿಸಬಾರದು. ಎಂಬುವ ನಿರ್ಬಂಧವಿಲ್ಲ. ಚಯನಯಾಗದಲ್ಲಿ ವಿನಿಯೋಗಿಸಿದ ರುದ್ರಸೂಕ್ತವು ರುದ್ರಾಭಿಷೇಕದಲ್ಲಿ ವಿನಿಯೋಗಿಸಿರುವುದರಿಂದ ವಿನಿಯೋಗನೇಮವು ಒಂದೇ ಕಡೆಗೆ ಇರಬೇಕೆಂಬುವುದು ಯುಕ್ತವಲ್ಲ. ಮತ್ತು ಒಂದು ದೇವತಾವಿಷಯಕವಾದ ಮಂತ್ರವನ್ನು ಮತ್ತೊಂದು ದೇವತಾವಿಷಯದಲ್ಲಿ ಉಪಯೋಗಿಸಬಾರದು. ಎಂಬುವುದು ಕಲ್ಪಸೂತ್ರಾಭಿಪ್ರಾಯವು. ಆದಕಾರಣ ಅಗ್ನಿಚಯನವು ರುದ್ರದೇವತಾಕವಾದುದರಿಂದ ಅಲ್ಲಿ ವಿನಿಯೋಗಿಸಿದ ರುದ್ರಸೂಕ್ತವು ರುದ್ರದೇವತಾಕವಾದ ರುದ್ರಾಭಿಷೇಕದಲ್ಲಿ ವಿನಿಯೋಗಿಸುವದು ವಿರುದ್ಧವಲ್ಲ, ಎಂಬುವದು ಕಲ್ಪಸೂತ್ರಾಭಿಪ್ರಾಯವಿದ್ದರೂ, ಅಗ್ನಿದೇವತಾಕವಾದ ಅಗ್ನಿಮೂರ್ಧ್ನಾದಿ ಮಂತ್ರಗಳನ್ನು ವಾಸ್ತೋಷ್ಪತ್ಯಧಿದೇವತಾಕವಾದ ಗೃಹಯಜ್ಞದಲ್ಲಿ ಭಿನ್ನದೇವತಾಕವಾದ ಗೃಹಯಜ್ಞದಲ್ಲಿ ಭಿನ್ನದೇವತಾಕವಾದ ಮಂತ್ರವಿನಿಯೋಗವು ಭಿನ್ನದೇವತಾಕವಾದ ಕರ್ಮದಲ್ಲಿ ಉಪಯೋಗಿಸುವಂತೆ ಸೋಮಯಾಗ ಪ್ರಕರಣಪಠಿತವಾದ——'ಪವಿತ್ರಂತೆ' ಎಂಬುವ ಮಂತ್ರವನ್ನು ಲಿಂಗಧಾರಣಪರತ್ವದಲ್ಲಿ ಉಪಯೋಗಿಸುವದು ಕಲ್ಪಸೂತ್ರದ ಅಭಿಪ್ರಾಯಕ್ಕೆ ವಿರುದ್ಧವಲ್ಲ. 'ಬ್ರಹ್ಮಣಸ್ಪತೆ' ಎಂಬುವಲ್ಲಿ ಬ್ರಹ್ಮಶಬ್ದಕ್ಕೆ ಲಿಂಗಪರ ಅರ್ಥವನ್ನು ತಿರಸ್ಕರಿಸುವುದು ದಶಾಪವಿತ್ರದ ವಿನಿಯೋಗಕ್ಕೆ ಯೋಗ್ಯತೆಯುಂಟಾಗಲಾರದು. "ಯದ್ಯತ್ರವಿನಿಯುಕ್ತಂ" ಈ ನೇಮವಾದರೂ ಪ್ರಕೃತಾರ್ಥವನ್ನು ಬೋಧಿಸುವ ಶಬ್ದದಿಂದ ಕೂಡಿದ ಮಂತ್ರಗಳ ವಿನಿಯೋಗವನ್ನು ಬಿಟ್ಟು ಸರ್ವತ್ರ ಇರುವದಿಲ್ಲ. ಮತ್ತು ಪವಿತ್ರಶಬ್ದಕ್ಕೆ ಸೋಮಯಾಗದಲ್ಲಿ ಪಠಿತವಾದ ದಶಾಪವಿತ್ರ ಎಂಬುವ ಒಂದೇ ಅರ್ಥವಾದರೂ ನೇಮವಿಲ್ಲ. ಪ್ರಕರಣವಿರೋಧವೂ ಸಂಭವಿಸುವದಿಲ್ಲ. ಯಾಕಂದರೆ "ಸೋಮಃಪವತೇ ಜನಿತಾಮತೀನಾಂ ಜನಿತಾದಿವೋ ಜನಿತಾಪೃಥಿವ್ಯಾ ಜನಿತಾಸೂರ್ಯಸ್ಯ ಜನಿತೇಂದ್ರಸ್ಯ ಜನಿತೋತವಿಷ್ಣೋಃ" ಎನ್ನುವುದರಲ್ಲಿ ಜಡೀಭೂತವಾದ ಸೋಮಲತೆಗೆ ನಾರಾಯಣಾದಿ ಸಕಲ ಜನಕತ್ವವು ಅಸಂಭವವಾದದ್ದರಿಂದ "ಉಮಯಾಸಹಿತಃ ಸೋಮಃ" ಎನ್ನುವ ಉಪಬೃಹ್ಮಣ ವಚನಾನುಸಾರವಾಗಿ ಸೋಮಪದವು ಶಿವನಿಗೇ ಸಂಭವಿಸುವುದಾದ್ದರಿಂದ ಈ ಅರ್ಥವನ್ನು ಗ್ರಹಿಸುವುದರಿಂದಲೂ, ಸೋಮಯಾಗಪ್ರಕರಣಪಠಿತವಾದ 'ಪವಿತ್ರಂತೆ' ಎಂಬುವ ಮಂತ್ರಕ್ಕೆ ಲಿಂಗಧಾರಣವು ವಿರೋಧವಾಗಲಾರದು, ಮತ್ತು "ಅಯಂಸೋಮಃ ಕಪರ್ದಿನೇ" ಎಂಬುವ ಶ್ರುತಿಯಿಂದ ಸೋಮಯಾಗಕ್ಕೆ ಉತ್ಪತ್ತಿವಿಶಿಷ್ಟಶಿವಸಂಬಂಧಿತ್ವಬೋಧನದಿಂದಲೂ 'ರುದ್ರ ಆಹೂತಃ' ಎಂಬುವ ಶ್ರುತಿಯಿಂದ ಸೋಮಪದದ ಸ್ಥಾನದಲ್ಲಿ ರುದ್ರಪದವನ್ನು ಇಟ್ಟಿರುವದರಿಂದಲೂ "ಅಹಂಹಿಸರ್ವಹವಿಷಾಂಭೋಕ್ತಾಚೈವ ಫಲಪ್ರದಃ ಸರ್ವದೇವತನುರ್ಭೂತ್ವಾ ಸರ್ವಾತ್ಮಾ ಸರ್ವಸಂಸ್ಥಿತಃ" ಎಂದು ಕೂರ್ಮಪುರಾಣದಲ್ಲಿ ವಚನವಿರುವದರಿಂದಲೂ ಶಿವನಿಗೆ ಸರ್ವಹವಿರ್ಭೋಕ್ತೃತ್ವ ಸರ್ವಕರ್ಮಫಲಪ್ರದಾಯಕತ್ವವು ಪ್ರತಿಪಾದಿಸಿರುವದರಿಂದ ಸೋಮಯಾಗಕ್ಕೆ ರುದ್ರದೇವತಾಕತ್ವವು ನಿಶ್ಚಿತವಾಗಿರೋಣದರಿಂದ ಆ ಪ್ರಕರಣದಲ್ಲಿ ಪಠಿತವಾದಂಥ ಪವಿತ್ರಂತೆ ಎಂಬುವ ಮಂತ್ರಕ್ಕೆ ಲಿಂಗಧಾರಣಪರತ್ವಪ್ರಕರಣವು ಎಂದಿಗೂ ವಿರೋಧವಾಗಲಾರದು. ಆದ್ದರಿಂದ ವೀರಶೈವಮತದ ಆಚಾರ್ಯರು ಲಿಂಗಧಾರಣಪರ ಅರ್ಥವನ್ನು ಸಿದ್ಧಮಾಡಿ ತೋರಿಸಿರುತ್ತಾರೆ. ಉಳಿದ ಮಂತ್ರಗಳ ವಿವೇಚನೆಯು ಮುಂದಿನ ಲೇಖಾಂಕದಲ್ಲಿ ಸವಿಸ್ತಾರವಾಗಿ ಮಾಡಲ್ಪಡುವುದು.

ಅರಿಸಿನ.

(ಸಂಸ್ಕೃತದಲ್ಲಿ ಹರಿದ್ರಾ, ನಿಶಾ ಎಂದೂ; ಹಿಂದೂಸ್ಥಾನಿಯಲ್ಲಿ ಹಲ್ದಿ ಎಂದೂ ಕರೆಯಲ್ಪಡುವುದು.)

(ವಸ್ತುಗುಣ ದೀಪಿಕೆಯ ಆಧಾರದಿಂದ)

ಅರಿಸಿನವು ಕಹಿಯಾಗಿರುವುದು, ಉಷ್ಣವನ್ನು ಹೆಚ್ಚಿಸಿ ಅದನ್ನು ತಗ್ಗಿಸುವುದು; ಶ್ಲೇಷ್ಮವನ್ನೂ ಮೇಹವನ್ನೂ ಹೋಗಲಾಡಿಸುವುದು; ಜಠರಾಗ್ನಿಯನ್ನು ಹೆಚ್ಚಿಸುವುದು; ರಕ್ತವನ್ನು ಶುಭ್ರಮಾಡುವುದು; ಆಹಾರವನ್ನು ಜೀರ್ಣಮಾಡುವುದು; ಕ್ರಿಮಿರೋಗ, ತಂದ್ರ, ಕೆಮ್ಮು, ಜ್ವರ, ವಿಷ, ಕುಷ್ಠ, ತುರಿಕೆ, ಮೇಹವ್ರಣ, ಕಫರೋಗ, ಮೂಲವ್ಯಾಧಿ, ಮೂತ್ರದ ನಂತರ ಬೆಳ್ಳಗೆ ಬೀಳುವ ಮೇಹರೋಗ, ಬಾಕು ಇವನ್ನು ಹೋಗಲಾಡಿಸುವುದು. ಹೃದಯಕ್ಕೂ ಹೊಟ್ಟೆಗೂ ಬಲಕೊಡುವುದು; ನೀರಾದ ಭೇದಿಯನ್ನು ಕಟ್ಟಿಸುವುದು; ಸುಖಪ್ರಸವವನ್ನು ಮಾಡಿಸುವುದು; ಮೂತ್ರವನ್ನು ಜಾರಿಮಾಡುವುದು; ಪಾಂಡು, ಕಾಮಿಲೆ ರೋಗವನ್ನು ಪರಿಹರಿಸುವುದು; ಕಣ್ಣಿಗೆ ಕಾಂತಿಯನ್ನುಂಟುಮಾಡುವುದು.

ಅರಿಸಿನದ ಕೊಂಬನ್ನು ಸ್ವಲ್ಪ ಸುಟ್ಟು ಅಗಿದರೆ ಹಲ್ಲುನೋವು ನಿಲ್ಲುವುದು. ಅರಿಸಿನ ಬೇರನ್ನು ಸುಟ್ಟು ಬೆಲ್ಲ ಸೇರಿಸಿ ತಿನ್ನುತ್ತಾ ಬಂದರೆ ಕೆಮ್ಮು ಕಡಿಮೆಯಾಗುವುದು. ಮಕ್ಕಳ ಕೆಮ್ಮಿಗಂತೂ ಸಂಜೀವಿನಿ. ವಿದೇಶದಿಂದ ಬರುವ ಬಹು ಬೆಲೆಯುಳ್ಳ ಕಾಫ್‌ಮಿಕ್ಸ್ಚರ್‌ಗೆ ಈ ಸಣ್ಣ ಔಷಧವು ಸರಿಯಾಗಿರುವುದು. ಅರಿಸಿನ ಬೇರನ್ನು ನೀರಿನಲ್ಲಿ ತೇದು ಇದರ ಕೊಟ್ಟನ್ನು ಕಣ್ಣಿಗೆ ಹಚ್ಚುತ್ತಾ ಬಂದರೆ ಕಣ್ಣಿನ ರೋಗಗಳು ಮಾಯವಾಗುವುವು. ವ್ರಣಗಳಿಗೆ ಅರಿಸಿನವನ್ನು ಅರೆದು ಕಟ್ಟಿದರೂ ಅಥವಾ ಅರಿಸಿನವನ್ನು ನೀರಿನಲ್ಲಿ ಕದರಿ ಕಟ್ಟಿದರೂ, ಗಡ್ಡೆಗಳೂ ವ್ರಣಗಳೂ ದುಷ್ಟ ವ್ರಣಗಳೂ ಮಾಯವಾಗುವುವು. ಅರಿಸಿನ, ಅಫೀಮು, ಫಟಿಕ (ಕ್ರಮವಾದ ಶುದ್ಧಿಮಾಡಿ ಪದ್ಧತಿಯಿಂದ) ಕಣ್ಣಿಗೆ ಹಾಕಿದರೆ ಕಣ್ಣಿನ ಕೆಂಪು ತುರಿಕೆಯೂ ಗುಣವಾಗುವುದು. ಚೇಳು ಕಚ್ಚಿದ ಜಾಗದಲ್ಲಿ ಅರಿಸಿನ ಬೇರನ್ನು ಸುಟ್ಟು ಹೊಗೆಯನ್ನು ಕೊಟ್ಟರೆ ಚೇಳಿನ ವಿಷವು ಗುಣವಾಗುವುದು. ಹಸಿ ಅರಿಸಿನವನ್ನು ಅರೆದು ತಲೆಗೆ ಹಚ್ಚಿದರೆ ತಲೆಭಾರ ತಲೆತಿರುಗು ಗುಣವಾಗುವುದು. ಒಣ ಅರಿಸಿನದ ಕೊಂಬನ್ನು ಸುಟ್ಟು ಮೂಸಿ ನೋಡಿದರೆ ಅಪಸ್ಮಾರದ ಮೂರ್ಛೆಯು ತಗ್ಗುವುದು. ಒಂದು ಭಾಗ ಅರಿಸಿನ ಇಪ್ಪತ್ತು ಭಾಗ ಫಟಿಕ ಎರಡನ್ನೂ ಚೂರ್ಣಮಾಡಿ ಕಲಸಿ, ಕಿವಿಗೆ ಬೀಳುವ ಹಾಗೆ ಊದಿದರೆ ಬಹುಕಾಲದಿಂದಿರುವ ರಸಿಕೆ ಕೀವು ಸೋರುವುದನ್ನು ಕಟ್ಟುವುದು. ಅರಿಸಿನವನ್ನೂ ಖಾರವಾದ ಸುಣ್ಣವನ್ನೂ ಕಲಸಿ ಹಚ್ಚಿದರೆ ಸಣ್ಣಗಾಯಗಳು ಮಾಯುವುವು. ಮತ್ತು ಹುಣ್ಣಾಗದಂತಾಗುವುದು, ನೋವು ತಗ್ಗುವುದು. ನೀರಿನಲ್ಲಿ ಅರಿಸಿನವನ್ನೂ ಸುಣ್ಣವನ್ನೂ ಸೇರಿಸಿ ಕಟ್ಟಿದರೆ ಉಗುರುಸುತ್ತು ಮೊದಲಾದುವು ಕಡಿಮೆಯಾಗುವುವು. ಆದರೆ ಈ ಕಟ್ಟನ್ನು ನೀರಿನಿಂದ ತೋಯಿಸುತ್ತಿರಬೇಕು. ಅರಿಸಿನವನ್ನು ಕಟ್ಟಿದರೂ, ಅರಿಸಿನವನ್ನು ನೀರಿನಲ್ಲಿ ಕದರಿ ಸುರಿದರೂ ವ್ರಣಗಳಲ್ಲಿರುವ ಹುಳುಗಳು ಸಾಯುವುವು. ಇತರ ಸಣ್ಣ ಜಂತುಗಳೂ ಹುಳುಗಳೂ ಸಾಯುವುವು. ಅರಿಸಿನದ ಹೊಗೆಯನ್ನಾಗಲಿ ಅರಿಸಿನ ಹಾಕಿದ ಬಿಸಿನೀರಿನ ಆವಿಯನ್ನಾಗಲಿ ಸ್ವೀಕರಿಸಿದರೆ ಕೆಮ್ಮು, ಶೀತ, ತಲೆಭಾರಗಳು ಗುಣವಾಗುವುವು. ಅರಿಸಿನ ಬೇರನ್ನು ಹಾಲಿನಲ್ಲಿ ಕದರಿ ಅದಕ್ಕೆ ಮೆಣಸಿನ ಕಾಳಿನ ಪುಡಿಯನ್ನು ಹಾಕಿ ದಿನಕ್ಕೆ ಎರಡು ಬಾರಿ ಕೊಟ್ಟರೆ ಜ್ವರಯುಕ್ತವಾದ ಕೆಮ್ಮೂ, ಶೀತವೂ ಕಡಿಮೆಯಾಗುವುದು. ಅರಿಸಿನವನ್ನು ಚೆನ್ನಾಗಿ ಅರೆದು ಹಚ್ಚಿದರೆ ಕಜ್ಜಿ ಮೊದಲಾದ ಚರ್ಮ ರೋಗಗಳು ಮಾಯುವುವು. ಅರಿಸಿನದ ಕಷಾಯದಿಂದ ಕಣ್ಣನ್ನು ತೊಳೆದುಕೊಂಡು ಅಥವಾ ಒದ್ದೆ ಅರಿಸಿನ ಬಟ್ಟೆಯನ್ನು ಕಣ್ಣಿನ ಮೇಲೆ ಹಾಕಿಕೊಂಡರೂ ಅಥವಾ ಅದರಿಂದ ಕಣ್ಣನ್ನು ಒರಸಿಕೊಳ್ಳುತ್ತಿದ್ದರೂ ಕೆದರಿನ ಕಣ್ಣು ಸಮಾಧಾನಕ್ಕೆ ಬರುವುದು. ಹತ್ತಿಯ ಚೂರಿನ ಮೇಲಾಗಲೀ ಹಸಿಯ ನೂಲಿನಮೇಲಾಗಲೀ ಅರಿಸಿನಪುಡಿಯನ್ನಿಟ್ಟು ಕಟ್ಟುಕಟ್ಟಿದರೆ ಕಣ್ಣಿಗೆ ಏಟುತಗಲಿ ಕೆಂಪಾಗಿರೋಣವೂ ಅದರಿಂದಾದ ಬಾವೂ ನೀರುಸುರಿಯುವಿಕೆಯೂ ಕಟ್ಟುವುವು. ಹಸಿ ಅರಿಸಿನ ಕೊಂಬನ್ನು ತಂದು ಕಳ್ಳಿಗಿಡ (ಸಂ|| ವಜ್ರಕ್ಷೀರಿ; ತೆಲುಗು ಬ್ರಹ್ಮಜೆಮುಡು) ದಲ್ಲಿ ರಂಧ್ರಮಾಡಿ ಅದರಲ್ಲಿ ಅರಿಸಿನದ ಕೊಂಬನ್ನಿಟ್ಟು ರಂಧ್ರವನ್ನು ಅದರ ಮರದ ಕಟ್ಟಿಗೆಯಿಂದ ಬಾಯಿ ಮುಚ್ಚಿ ಏಳು ದಿನಗಳು ಇಟ್ಟು ಎಂಟನೆಯ ದಿನ ಅರಿಸಿನಕೊಂಬನ್ನು ತೆಗೆದು ಆರಿಸಿ ಈ ಅರಿಸಿನಕೊಂಬನ್ನು ನೀರಿನಲ್ಲಿ ಗಂಧ ತೇದು ಹಚ್ಚುತ್ತಾ ಬಂದರೆ ಶ್ವೇತಕುಷ್ಠ, ಬಿಳೀಕಲೆಗಳು ಮಚ್ಚೆಗಳು ಗುಣವಾಗುವುವು.

ಆದರೆ ಅರಿಸಿನವನ್ನು ವಿಶೇಷವಾಗಿ ತಿಂದರೆ ಹೃದಯಕ್ಕೆ ಕೆಡುಕು ಉಂಟು. ಇಂದ್ರಿಯನಷ್ಟವನ್ನುಂಟುಮಾಡುವುದು. ಇದಕ್ಕೆ ಸಮಾಧಾನವೇನೆಂದರೆ, ನಿಂಬೇಹಣ್ಣು, ಕಿತ್ತಲೇಹಣ್ಣು, ಫರಂಗೀ ಹಲಸಿನಹಣ್ಣು ಸೇವಿಸುವುವೇ ಆಗಿವೆ. ಪ್ರಮಾಣ——ಅರಿಸಿನವನ್ನು ಹೊಟ್ಟೆಗೆ ಒಂದುಸಾರಿಗೆ ಇಪ್ಪತ್ತರಿಂದ ನಲ್ವತ್ತು ಗೋಧಿಕಾಳು ತೂಕ ಕೊಡಬಹುದು.

ಇಂಥಹ ಅಮೂಲ್ಯ ಗುಣಗಳುಳ್ಳದುದರಿಂದಲೇ ಈ ಅರಿಸಿನವು ಮಂಗಳ ದ್ರವ್ಯಗಳಲ್ಲಿ ಪ್ರಧಾನವಾಗಿ ಹಿಂದೂಗಳಲ್ಲಿ ಎಣಿಸಲ್ಪಟ್ಟಿರುವುದು. ಪ್ರಯಾಣ ಕಾಲಗಳಲ್ಲಿ ಅರಿಸಿನ ಬೇರುಗಳನ್ನು ಕಟ್ಟಿಕೊಂಡು ಹೊರಡುವರು. ಅರಿಸಿನದಿಂದೊಗೆದ ಬಟ್ಟೆಗಳು ಪ್ರತಿ ಒಂದು ವ್ರತ ನಿಯಮಗಳಲ್ಲಿಯೂ ಧಾರಣೆ ಮಾಡಲು ವಿಧಿಸಿರುವರು. ಅರಿಸಿನ ಬೇರನ್ನು ಕೈಗೆ ಕಂಕಣವಾಗಿ ಕಟ್ಟುವರು. ಹಿಂದೂ ಸ್ತ್ರೀಯರಿಗಂತೂ ಅರಿಸಿನಕ್ಕಿಂತಲೂ ಸೌಭಾಗ್ಯವಸ್ತುವು ಇನ್ನೊಂದಿಲ್ಲವು. ಈ ಅರಿಸಿನವು ಅಮೂಲ ಗುಣವುಳ್ಳ ಕಾರಣವೇ ಇದನ್ನು ಆರೋಗ್ಯಾಭ್ಯುದಯದಲ್ಲಿ ಮುಖ್ಯವಾಗಿ ಎಣಿಸಿ ಪ್ರತಿದಿನವೂ ಆಹಾರ ಸಾಮಾಗ್ರಿಗಳಲ್ಲಿ ಉಪಯೋಗಕ್ಕೆ ವಿಧಾನವಾಗಿ ತಂದಿರುವರು. ಅಥರ್ವಣವೇದದಲ್ಲಿ "ನಕ್ತಂ ಜಾತಸ್ಯೋಷಧೇ" ಎಂಬ ಪ್ರಕರಣದಲ್ಲಿ ಇದರ ಅದ್ಭುತವಾದ ಗುಣವು ವಿವರಿಸಲ್ಪಟ್ಟಿರುವುದು. ಬೆಲೆಯಲ್ಲಿ ಸುಲಭವಾದ ಗುಣದಲ್ಲಿ ಮೇಲಾದ ಇಂಥಹ ಒಂದೊಂದು ವನಸ್ಪತಿಗಳೇ ಆಯುರ್ವೇದ ವೈದ್ಯರಿಗೆ ಸುಫಲದಾಯಕಗಳಾಗಿರುವವು. ಈ ಮೌಲ್ಯವನ್ನರಿಯದ ಈಗಿನ ನವನಾಗರಿಕರೆಂಬುವವರಿಗೆ ನಮ್ಮ ಸ್ತ್ರೀಯರು ಅರಿಸಿನವನ್ನುಪಯೋಗಿಸುವುದು ಅನಾಗರೀಕವಾಗಿತೆಂದು ಮುಖಕ್ಕೆ ಫೇಸ್ ಪೌಡರು ತಯಾರುಮಾಡಲ್ಪಟ್ಟಿತು. ಅಯ್ಯೋ! ಫೇಸ್ ಪೌಡರೇ! ಅರಿಸಿನದ ಸೌಮಂಗಲ್ಯ ಗುಣವೆಲ್ಲಿ? ಮುಖ್ಯವಾಗಿ ನಮ್ಮ ಪೂರ್ವಿಕರು ಏರ್ಪಡಿಸಿರುವ ವಿಧಾನಗಳು ಒಂದಿಲ್ಲ ಒಂದು ವಿಧವಾಗಿ ಲಾಭದಾಯಕವೆನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇತ್ತೀಚೆಗೆ ಪಾಶ್ಚಾತ್ಯವೈದ್ಯರಲ್ಲನೇಕರು ಅರಿಸಿನದ ಗುಣವನ್ನು ಪರಿಶೋಧಿಸಲು ಪ್ರಾರಂಭಿಸಿರುವರು.

ಧನ್ವಂತರಿ.

ಆಯುರ್ವೇದ ಸುಲಭಚಿಕಿತ್ಸೆಗಳು.

1. ಸುಟ್ಟಗಾಯಕ್ಕೆ:——ಮರಳುವ ಎಣ್ಣೆ ಅಥವಾ ಕುದಿಯುವನೀರು ಇಲ್ಲವೆ ಗಂಜಿ ಮೈಮೇಲೆ ಚೆಲ್ಲಿಬಿದ್ದು ಬೊಕ್ಕೆಯೆದ್ದು ಘಾಯವಾದರೆ ಬೆಣ್ಣೆಯಂತಿರುವ ಹೊಸಸುಣ್ಣ ಕೊಂಬರಿಯೆಣ್ಣೆ ಈ ಎರಡನ್ನು ಚೆನ್ನಾಗಿ ರಂಗಿಸಿ ಬೆಣ್ಣೆಯಂತೆಮಾಡಿ 3-4 ದಿನ ಆಗಾಗ ಹಚ್ಚಲು ಗುಣವಾಗುವುದು.

2. ಕೇರು ಇಳಿದ್ದಕ್ಕೆ:——ಜೀರಿಗೆಯನ್ನು ಮೊಸರಿನಲ್ಲಿ ಅರೆದು ನೀರಿನಮೇಲಿನ ಹಾಂಸೆ ಅಥವಾ ಪಾಚಿ ಇಲ್ಲವೆ ಅಂತರಗಂಗೆಸೊಪ್ಪು, ಇವುಗಳಲ್ಲಿ ಒಂದನ್ನು ಹಾಕಿ ಹತ್ತಿಯಲ್ಲಿಟ್ಟು ಎಲೆಯನ್ನಿಟ್ಟು ಕಟ್ಟಿದರೆ ಮೇಲಕ್ಕೆ ಹೋಗಿ ನೋವು ಕಡಿಮೆಯಾಗುವುದು. ವಿಶೇಷ ತಿರುಗಾಡಬಾರದು.

3. ಹಲ್ಲುಪುಡಿ:——ಒಣಶುಂಠಿ, ಬಿಳಿಕಾಚು, ಸ್ಫಟಿಕ, ಕವಡಿ ಬೊಭಾಸ, ಸೈಂಧವಲವಣ, ಅಳಲೇಕಾಯಿ, ಮಾಚಿಕಾಯಿ, ಸ್ವಲ್ಪ ಕರ್ಪೂರ ಇವುಗಳನ್ನು ಸಮಭಾಗ ಚೂರ್ಣ ಸೇರಿಸಿ ಪ್ರತಿದಿನವೂ ಹಲ್ಲಿಗೆಹಾಕಿ ತಿಕ್ಕಿಕೊಳ್ಳಬೇಕು. ಇದರಿಂದ ಎಲ್ಲಾ ಬಗೆಯ ಹಲ್ಲುವ್ಯಾಧಿಗಳು ಮಾಯವಾಗುವುವು.

4. ಇನ್ನೊಂದುವಿಧ ಹಲ್ಲುಪುಡಿ:——ಬಾದಾಮಿಸಿಪ್ಪೆ ಸುಟ್ಟಕರಿ, ಅಡಕೆ, ಸೈಂಧವಲವಣ, ಯಾಲಕ್ಕಿ, ಶುಂಠಿ, ಅಳಲೆಕಾಯಿ ಇವುಗಳನ್ನು ಚೂರ್ಣಮಾಡಿ ಸಮಭಾಗ ಸೇರಿಸಿ ಉಪಯೋಗಿಸಬೇಕು.

ಧನ್ವಂತರಿ.

ಮಹಾತ್ಮಗಾಂಧಿಯವರ ಸ್ವಚರಿತ್ರ

(ಸತ್ಯಾನ್ವೇಷಣ)

ಪ್ರಥಮಪ್ರಕರಣ.

ಗಾಂಧಿ ಕುಟುಂಬದವರು ಮೊದಲು ವಣಿಜ (ಅಂದರೆ ವರ್ತಕತನವನ್ನು ಕುಲವೃತ್ತಿಯಾಗುಳ್ಳವರು) ರಾಗಿದ್ದರೆಂದು ಕಂಡುಬರುತ್ತದೆ. ನನ್ನ ವೃದ್ಧಪ್ರಪಿತಾಮಹಪಿತಾಮಹರು ಮಾತ್ರ ವರಸೆಯಾಗಿ ಕಥೆವಾಡ ಸಂಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿಯೇ ಇದ್ದರು. ಉತ್ತಮಚಂದೀಗಾಂಧಿ ಉರಫ್ ಓತಗಾಂಧಿಯವರು ಬಹಳ ಸದ್ವರ್ತನರಾಗಿದ್ದುಕೊಂಡಿದ್ದರು. ಅವರು ಪೋರಬಂದರಿನಲ್ಲಿ ದಿವಾನರಾಗಿದ್ದು ಅಲ್ಲಿ ರಾಜಕೀಯವಿಚಾರದಲ್ಲಿ ಬಹಳ ಗೊಂದಲವಾದುದರಮೇಲೆ ಪ್ರಾಣರಕ್ಷಣಾರ್ಥವಾಗಿ ಜುನಗಡಿಗೆ ಹೊರಟುಹೋಗಬೇಕಾಗಿಬಂದಿತು. ಅವರು ಅಲ್ಲಿ ನವಾಬನಿಗೆ ಎಡಗೈಲಿ ಸಲಾಂ ಮಾಡಲು, ಅದನ್ನು ಒಬ್ಬನು ನೋಡಿ "ಏಕೆ ಹೀಗೆಮಾಡಿದೆ, ಇದು ನವಾಬರನ್ನು ಅವಮಾನಪಡಿಸುವುದಕ್ಕಲ್ಲವೆ?" ಎಂದು ಕೇಳಿದನು. "ಇದು ಅವಮಾನಪಡಿಸುವುದಕ್ಕಲ್ಲ. ನನ್ನ ಬಲಗೈ ಈವರೆಗೂ ಪೋರುಬಂದರು ಸಂಸ್ಥಾನಾಧೀಶರ ಅಧೀನವಾಗಿರುವುದರಿಂದ ನನ್ನ ಸ್ವಾಧೀನದಲ್ಲಿರುವ ಎಡಗೈಯಿಂದ ಜುನಾಗಡ್‌ಸಂಸ್ಥಾನಾಧಿಪತಿಗಳಿಗೆ ಸಲಾಂ ಮಾಡಿದೆನು." ಎಂದು ಉತ್ತರವನ್ನು ಕೊಟ್ಟರು.

ಉತ್ತಮಚಂದ್‌ರವರು ಮೊದಲನೆಯ ಹೆಂಡತಿಯು ಕಾಲವಾಗಲು ಪುನಹ ಮದುವೆಮಾಡಿಕೊಂಡರು. ಮೊದಲನೆಯ ಹೆಂಡತಿಗೆ ನಾಲ್ವರೂ ಎರಡನೆಯ ಹೆಂಡತಿಗೆ ಇಬ್ಬರೂ ಗಂಡುಮಕ್ಕಳಿದ್ದರು. ಇವರುಗಳು ಹೀಗೆ ಸವತಿಯ ಮಕ್ಕಳೆಂದು ಚಿಕ್ಕತನದಲ್ಲಿ ನನಗೆ ತಿಳಿದಿರಲಿಲ್ಲವು. ಇವರು ಆರುಜನಗಳೂ ಏಕೋದರರೆಂದೇ ತಿಳಿದುಕೊಂಡಿದ್ದೆನು. ಎರಡನೆಯ ಹೆಂಡತಿಯ ಮಕ್ಕಳಲ್ಲಿ ಕರಂಚಂದ್ ಉರಫ್ ಕಾಬಾಗಾಂಧಿಯೇ ಜ್ಯೇಷ್ಠರು. ಅವರ ತಮ್ಮ ತುಲಸೀದಾಸ್ ಗಾಂಧಿ. ಪೋರಬಂದರಿನಲ್ಲಿ ಮೊದಲು ಕರಂಚಂದರೂ ಅನಂತರ ತುಲಸೀದಾಸರೂ ದಿವಾನರಾಗಿ ಕೆಲಸಮಾಡಿದರು. ಕರಂಚಂದ್‌ಗಾಂಧಿಯೇ ನನ್ನ ತಂದೆಯು. ಆ ಕಾಲದಲ್ಲಿ ರಾಜಾಸ್ಥಾನ ಸಂಘದ ಹೆಸರಿನಲ್ಲಿ ಒಂದು ಸಂಘವಿದ್ದಿತು. ಆ ಸಂಘವು ಸಂಸ್ಥಾನಾಧಿಪತಿಗಳ ವಿವಾದಗಳನ್ನು ಪರಿಷ್ಕರಿಸುವುದಾಗಿದ್ದಿತು. ಆ ಸಂಘವು ಈಗಿಲ್ಲವು. ನನ್ನ ತಂದೆಯು ಕೆಲಕಾಲ ರಾಜಕೋಟೆಯಲ್ಲೂ, ಅನಂತರ ವಂಕನೇರದಲ್ಲೂ ದಿವಾನರಾಗಿದ್ದರು. ಅವರು ಸಾಯುವವರೆಗೂ ರಾಜಕೋಟಿ ಸಂಸ್ಥಾನದವರು ಪಿಂಚನ್ನನ್ನು ಕೊಡುತ್ತಿದ್ದರು. ನನ್ನ ತಂದೆಯು ನಾಲ್ಕುಸಾರಿ ವಿವಾಹಮಾಡಿಕೊಂಡಿದ್ದರು. ಪತ್ನಿವಿಯೋಗವಾಗುತ್ತಿದ್ದುದರಿಂದ ನನ್ನ ತಂದೆಯು ಹಾಗೆ ನಾಲ್ಕುವೇಳೆ ಲಗ್ನಮಾಡಿಕೊಂಡುದುದು. ನಾಲ್ಕನೆಯ ಪತ್ನಿಯೇ ನನ್ನ ತಾಯಿ. ಆಕೆಯ ಹೆಸರು ಪುತಲೀಬಾಯಿ. ಆಕೆಗೆ ಒಬ್ಬ ಪುತ್ರಿಯೂ ಮೂವರು ಪುತ್ರರೂ ಹುಟ್ಟಿದರು. ನಾನೇ ಬಹಳ ಮೂರ್ಖ ಹುಡುಗನು. ನನ್ನ ತಂದೆಗೆ ಸ್ವನಗರಾಭಿಮಾನವು ಹೆಚ್ಚು. ಅವರು ಸತ್ಯನಿರತರು, ಧೈರ್ಯಶಾಲಿ ಮತ್ತು ಕೋಪಸ್ವಭಾವದವರು. ಅವರಿಗೆ ವಿಷಯಲೋಲತೆಯು ಕೂಡ ಸ್ವಲ್ಪ ಹೆಚ್ಚಿಂದೇ ಹೇಳಬೇಕು. ಏಕೆಂದರೆ, 40 ವರ್ಷ ಕಳೆದಮೇಲೂ ಅವರು ನಾಲ್ಕನೆಯ ಮದುವೆಯನ್ನು ಮಾಡಿಕೊಂಡರು. ಆದರೂ ಅವರ ಪ್ರವರ್ತನವು ನಿಷ್ಕಳಂಕವು. ಅವರು ಕೇವಲ ನಿಷ್ಪಕ್ಷಪಾತಿಯೆಂದು ಬಂಧುಗಳೂ, ಇತರರೂ ನನ್ನ ತಂದೆಯನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು. ಅವರಿಗೆ ಸಂಸ್ಥಾನಾಧಿಪತಿಗಳಮೇಲೆ ಬಹಳ ಅಭಿಮಾನವಿದ್ದಿತು. ಒಂದುವೇಳೆ ಒಬ್ಬ ಬ್ರಿಟಿಷ್ ಪ್ರಭುತ್ವದ ಪ್ರತಿನಿಧಿಯು (ಅಸಿಸ್ಟೆಂಟ್ ಪೊಲಿಟಿಕಲ್ ಏಜಂಟು) ನನ್ನ ತಂದೆಯೆದಿರಿಗೆ ರಾಜಕೋಟಿ ಸಂಸ್ಥಾನಾಧೀಶರನ್ನು ಕುರಿತು ನೀಚವಾಗಿ ಮಾತನಾಡಿದಾಗ ನನ್ನ ತಂದೆಯು ನಿರ್ಭಯನಾಗಿ ಪ್ರತ್ಯುತ್ತರವನ್ನು ಕೊಟ್ಟರು. ಅದರಿಂದ ಆ ಅಧಿಕಾರಿಗೆ ಕೋಪಬಂದು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂದು ನನ್ನ ತಂದೆಗೆ ಆಜ್ಞಾಪಿಸಿದನು. ಅದಕ್ಕೆ ಕಾಬಾಗಾಂಧಿಯು ಸಮ್ಮತಿಸಲಿಲ್ಲವಾಗಿ ಅವರನ್ನು ಅಧಿಕಾರಿಯು ಕೆಲಗಂಟೆಗಳಕಾಲ ನಿರ್ಬಂಧದಲ್ಲಿರಿಸಿದನು. ನನ್ನ ತಂದೆಯು ಅದಕ್ಕೂ ಹೆದರಲಿಲ್ಲ. ತರುವಾಯ ಅವರು ತಮ್ಮುದ್ಯೋಗದಿಂದ ತೆಗೆದುಹಾಕಲ್ಪಟ್ಟರು. ನನ್ನ ತಂದೆಗೆ ಧನಸಂಪಾದನೇಚ್ಛೆಯು ಇಲ್ಲದಿದ್ದುದರಿಂದ ಅವರು ಹೆಚ್ಚು ಆಸ್ತಿಯನ್ನು ಸಂಪಾದಿಸಲಿಲ್ಲವು.

ನನ್ನ ತಂದೆಯು ದೊಡ್ಡ ಪಂಡಿತರಲ್ಲದಿದ್ದರೂ ಅವರಿಗೆ ಅನುಭವವು ಹೆಚ್ಚಾಗಿದ್ದಿತು. ಅವರು ಆ ಕಾಲದಲ್ಲಿ ಗುಜರಾತೀ ಐದನೇಯತರಗತಿಯವರೆಗೆಮಾತ್ರ ಓದಿದ್ದರು. ಚರಿತ್ರೆಯೂ, ಭೂಗೋಳವೂ ಸ್ವಲ್ಪವಾದರು ಅವರಿಗೆ ತಿಳಿಯದು. ಆದರೂ ವಿಶೇಷಲೋಕಾನುಭವಿಗಳೊಡನೆ ರಾಜ್ಯಾಂಗ ವ್ಯವಹಾರದಲ್ಲಿ ವಿಶೇಷ ಸಮಸ್ಯೆಗಳನ್ನುಕೂಡ ಸುಲಭವಾಗಿ ಪರಿಷ್ಕರಿಸುತ್ತಿದ್ದರು. ಹಲಕೆಲಪ್ರಜೆಗಳಿಗೆ ಸಂಬಂಧಿಸಿದ ವ್ಯವಹಾರವನ್ನುಕೂಡ ಸಕಲಜನ ಸಮ್ಮತವಾಗಿ ನೆರವೇರಿಸಿಕೊಡುತ್ತಿದ್ದರು. ಮತಗ್ರಂಥಗಳನ್ನು ಅವರು ಶ್ರದ್ಧೆಯಿಂದ ಓದಿರಲಿಲ್ಲವಾದರೂ ಮತಾಚಾರಪರಾಯಣರಕೂಡ ಪ್ರತಿದಿನವೂ ದೇವಾಲಯಕ್ಕೆಹೋಗಿ ಪುರಾಣವನ್ನೂ ಮತವಿಷಯಕೋಪನ್ಯಾಸವನ್ನೂ ಕೇಳುವುದು ಮೊದಲಾದ ಕಾರ್ಯಗಳನ್ನುಮಾಡತ್ತ ಭಕ್ತಿಜ್ಞಾನ ವೈರಾಗ್ಯವನ್ನು ಹೆಚ್ಚಾಗಿ ಸಂಪಾದಿಸಿದ್ದರು. ವೃದ್ಧಾಪ್ಯದಲ್ಲಿ ನಮ್ಮ ಕುಟುಂಬಕ್ಕೆ ಆಪ್ತನಾದ ಒಬ್ಬ ಬ್ರಾಹ್ಮಣನ ಪ್ರೋತ್ಸಾಹದಿಂದ ಶ್ರೀಭಗವದ್ಗೀತೆಯನ್ನು ಓದಲಾರಂಭಿಸಿದರು. ಪ್ರತಿದಿನವೂ ದೇವರಪೂಜಾಸಮಯದಲ್ಲಿ ಕೆಲಶ್ಲೋಕಗಳನ್ನು ಗಟ್ಟಿಯಾಗಿ ಓದುತ್ತಿದ್ದರು.

ನನ್ನ ತಾಯಿಯು ಅತ್ಯಂತ ಪವಿತ್ರಶೀಲಳು. ಆಕೆಗೆ ಭಗವದ್ಭಕ್ತಿಯು ಅತ್ಯಧಿಕವಾಗಿದ್ದಿತು. ಪ್ರತಿದಿನವೂ ನೈವೇದ್ಯವು ಆದ ಹೊರತು ಭೋಜನ ಮಾಡುತ್ತಿರಲಿಲ್ಲವು. ಆಕೆಯು ನಿತ್ಯದಲ್ಲೂ ವಿಷ್ಣುದೇವಾಲಯಕ್ಕೆ ತಪ್ಪದೆ ಹೋಗುತ್ತಿದ್ದರು. ಆಕೆಯು ಪ್ರತಿವರ್ಷದಲ್ಲೂ ಚಾತುರ್ಮಾಸ್ಯವ್ರತವನ್ನು ಬಿಡದೇ ಮಾಡುತ್ತಿದ್ದರು. ಆ ನಾಲ್ಕುತಿಂಗಳಲ್ಲಿ ಅಂದರೆ ಆಷಾಢಶುದ್ಧ ಪೌರ್ಣಮಿ ಮೊದಲು ಕಾರ್ತೀಕಶುದ್ಧ ಪೌರ್ಣಮಿಯೊಳಗೆ ಕೆಲದಿವಸ ಉಪವಾಸವೂ ಮತ್ತೆ ಕೆಲದಿವಸ ಏಕಭುಕ್ತವೂ ಈಪ್ರಕಾರವಾಗಿ ಅಪಾರನಿಯಮವನ್ನು ಜರುಗಿಸುತ್ತಿದ್ದರು. ಆಕೆಯು ಕಠಿಣವ್ರತಗಳನ್ನು ಹಿಡಿದು ನಿಯಮಭಂಗವಾಗದಂತೆ ಅವನ್ನು ಸಾಗಿಸುತ್ತಿದ್ದರು. ರೋಗಬಂದರುಕೂಡ ಆಕೆಯವರು ವ್ರತವನ್ನು ಬಿಡುತ್ತಿರಲಿಲ್ಲವು. ಅವರು ಒಂದಾವರ್ತಿ ಚಾಂದ್ರಾಯಣವ್ರತವನ್ನು ಆರಂಭಿಸಿದರು. ಆಗ ಅವರಿಗೆ ದೇಹಾಲಸ್ಯವುಂಟಾಯಿತು. ಹಾಗಾದರೂ ವ್ರತವನ್ನು ಬಿಡಲಿಲ್ಲ. ಚಾಂದ್ರಾಯಣ ವ್ರತವೆಂದರೆ ಅಮಾವಾಸ್ಯೆಯ ದಿವಸ ಶುದ್ಧೋಪವಾಸ (ನಿರಾಹಾರ) ಮಾಡುವುದು. ಪಾಡ್ಯಮಿದಿವಸ ಒಂದು ತುತ್ತು ಬಿದಿಗೆಯದಿವಸ ಎರಡುತುತ್ತು, ಈ ರೀತಿಗೆ ಪೌರ್ಣಮಿದಿವಸ 15

ಪುನಹ ಪಾಡ್ಯಮಿಯಲ್ಲಿ 14, ಬಿದಿಗೆಯಲ್ಲಿ 13 ಈ ಮೇರೆಗೆ ಚತುರ್ದಶಿದಿವಸ 1, ಅಮಾವಾಸ್ಯೆದಿವಸ ಉಪವಾಸಮಾಡಬೇಕು. ಈ ಮಧ್ಯೆ, ಏಕಾದಶಿಯಲ್ಲಿ ಶುಷ್ಕೋಪವಾಸ ಈರೀತಿಯಾಗಿ ಈ ನಾಲ್ಕು ತಿಂಗಳುಗಳಲ್ಲಿ ನಡಿಯಬೇಕು. ನನ್ನ ತಾಯಿಯವರು ಚಾತುರ್ಮಾಸದಲ್ಲಿ ದಿನಬಿಟ್ಟುದಿನ ಉಪವಾಸವಿರುವ ನಿಯಮವನ್ನಿಟ್ಟುಕೊಂಡಿದ್ದರು. ಒಂದೇ ಸಮನಾಗಿ ಎರಡುಮೂರುದಿವಸಗಳುಕೂಡ ಆಕೆ ನಿರಲಕ್ಷ್ಯವಾಗಿ ಉಪವಾಸಮಾಡುತ್ತಿದ್ದರು. ಒಂದಾವರ್ತಿ ಚಾತುರ್ಮಾಸದಲ್ಲಿ ಸೂರ್ಯನು ಕಾಣಿಸಿಕೊಳ್ಳದಿದ್ದದಿವಸ ಊಟಮಾಡದಿರುವ ನಿಯಮವನ್ನಿಟ್ಟುಕೊಂಡಿದ್ದರು. ಆಗ ಮಳೆಗಾಲದಿಸೆಯಿಂದ ಕೆಲದಿವಸ ಸೂರ್ಯನು ಕಾಣಿಸಿಕೊಳ್ಳುತ್ತಿರಲಿಲ್ಲವು. ಆ ಕಾಲದಲ್ಲಿ ಆಕಸ್ಮಿಕವಾಗಿ ಸೂರ್ಯನು ಕಾಣಿಸಿಕೊಂಡು ಥಟ್ಟನೆ ಮರೆಯಾಗುತ್ತಿದ್ದನು. ನಾವೆಲ್ಲರೂ ಚಿಕ್ಕಮಕ್ಕಳಾಗಿದ್ದುದರಿಂದ ಕಣ್ಣುಬಿಟ್ಟುಕೊಂಡು ನೋಡುತ್ತಿದ್ದು ಸೂರ್ಯನು ಕಾಣಿಸಿಕೊಂಡಕೂಡಲೆ ಓಡಿಹೋಗಿ ನನ್ನ ತಾಯಿಗೆ ತಿಳಿಸುತ್ತಿದ್ದೆವು. ಆಕೆಯುಕೂಡ ಅವಸರವಸರವಾಗಿ ಬರುತ್ತಿದ್ದರು. ಒಂದುವೇಳೆ ಆಕೆಯು ಹೊರಕ್ಕೆ ಬರುವುದರೊಳಗಾಗಿ ಸೂರ್ಯನು ಮೋಡದೊಳಗೆ ಮಾಯವಾದನು. -ಹೋಗಲಿ ಈದಿವಸ ನಾನು ಭೋಜನಮಾಡುವುದು ಸೂರ್ಯದೇವನಿಗಿಷ್ಟವಿಲ್ಲ. ಅದುಕಾರಣ ನನಗೆ ದರ್ಶನಕೊಡದೆಹೋದನು. ಒಂದುದಿವಸ ಊಟವಿಲ್ಲದಿದ್ದರೇನಾಯಿತು?" ಎಂದು ಆಕೆಯು ಮುಗುಳುನಗೆಯಿಂದ ಹೇಳುತ್ತ ಮನೆಯೊಳಕ್ಕೆಹೋಗಿ ತನ್ನ ಕೆಲಸ ಮಾಡತೊಡಗಿದರು. ಆಕೆಗೆ ಒಳ್ಳೇ ವಿವೇಕಸಂಪನ್ನತೆಯಿದ್ದಿತು. ಅಲ್ಲದೆ ರಾಜಕೀಯ ವಿಷಯದಲ್ಲಿಕೂಡ ಒಳ್ಳೇ ಪರಿಜ್ಞಾನವಿದ್ದಿತು. ಆಕೆಯು ಬಹಳ ವಿವೇಕಶಾಲಿನಿ ಎಂದು ರಾಜಕುಟುಂಬದ ಸ್ತ್ರೀಯರುಕೂಡ ಆಕೆಯನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು. ನಾನು ಕೆಲಸದವನೆಂದು ಭಾವಿಸಿಕೊಂಡು ರಾಜಾಂತಃಪುರಕ್ಕೆ ಹೋಗುತ್ತಿದ್ದನು. ಆಗ ನನ್ನತಾಯಿಯು ರಾಜರ ಮಾತೃಶ್ರೀಯವರೊಡನೆ ಚರ್ಚಿಸುತ್ತಿದ್ದರು.

ನಾನು ಆ ಸಾಧ್ವಿಮಣಿಯ ಗರ್ಭದಲ್ಲಿ 1869 ನೇ ಅಕ್ಟೋಬರ್ ತಾ|| 2 ರಲ್ಲಿ ಸುದಾಮಪುರಿ ಎಂಬ ಪೋರುಬಂದರದಲ್ಲೇ ಹುಟ್ಟಿದೆನು. ನನ್ನ ಶೈಶವವುಕೂಡ ಅಲ್ಲೇ ಜರುಗಿತು. ಬಾಲ್ಯಾವಸ್ಥೆಯಲ್ಲಿ ನನಗೆ ಅಲ್ಲೇ ಅಕ್ಷರಾಭ್ಯಾಸವನ್ನುಮಾಡಿಸಿ ಮಠಕ್ಕೆ ಕಳುಹಿದರು. ಅದು ನನಗೆ ಚೆನ್ನಾಗಿ ಜ್ಞಾಪಕವಿದೆ. ಮಗ್ಗಿಯನ್ನೂ, ಲೆಖ್ಖವನ್ನೂ ಕಲಿಯುವುದು ನನಗೆ ಬಹಳ ಕಷ್ಟವಾಗಿದ್ದಿತು. ಆ ಕಾಲದಲ್ಲಿ ಇತರ ಸಹಾಧ್ಯಾಯರಕೂಡ ನಾನೂ ಸೇರಿ ಉಪಾಧ್ಯಾಯರನ್ನು ನಿಂದಿಸುತ್ತಿದ್ದುದರ ವಿನಾ ಮತ್ತಾವುದೂ ನನಗೆ ಜ್ಞಾಪಕವಿಲ್ಲ. ಈ ವಿಚಾರದಲ್ಲಿ ನನಗೆ ಆವಾಗ ಬಹಳ ಬುದ್ಧಿ ಕಡಿಮೆಯಾಗಿದ್ದಿತೆಂದು ತೋರುತ್ತದೆ. (ಎಂಗ್ ಇಂಡ್ಯಾ ತಾ|| 10-12-25).

ಎರಡನೆಯ ಪ್ರಕರಣ.

ಬಾಲ್ಯದಶೆ.

ನನ್ನ ತಂದೆಯು ರಾಜಸ್ಥಾನಸಂಘಸಭ್ಯರಾಗಿರಲು ಪೋರ್ಬಂದರಿನಿಂದ ರಾಜಕೋಟೆಗೆ ಹೋಗುವವೇಳೆಗೆ ನನಗೆ 7 ವರ್ಷ ವಯಸ್ಸಾಗಿದ್ದಿತು. ರಾಜಕೋಟೆಯಲ್ಲಿ ನನ್ನನ್ನು ಒಂದು ಪ್ರಾಥಮಿಕ ಪಾಠಶಾಲೆಗೆ ಸೇರಿಸಿದರು. ಅಲ್ಲಿಯ ಉಪಾಧ್ಯಾಯರ ಹೆಸರು ಮೊದಲಾದ ವಿಷಯಗಳು ನನಗೆ ಚೆನ್ನಾಗಿ ಜ್ಞಾಪಕವಿದೆ. ನನ್ನ ಅಭ್ಯಾಸವನ್ನು ಕುರಿತು ಬರೆಯಬೇಕಾದುದೇನೂ ಇಲ್ಲವು. ಜ್ಞಾನವಿಕಾಸವು ಸಾಮಾನ್ಯವು. ಆ ಪಾಠಶಾಲೆಯಿಂದ ಮಾಧ್ಯಮಿಕ ಪಾಠಶಾಲೆಗೂ, ಅಲ್ಲಿಂದ ಹೈಸ್ಕೂಲಿಗೂ ಹೋದೆನು. ನಾನು ವಿದ್ಯಾರ್ಥಿಯಾಗಿರುವಾಗಲು ಕೂಡ ಯಾವಾಗಲೂ ಉಪಾಧ್ಯಾಯರೊಂದಿಗಾಗಲಿ ವಿದ್ಯಾರ್ಥಿಗಳೊಂದಿಗಾಗಲಿ ಸುಳ್ಳು ಹೇಳಿದುದಿಲ್ಲವು. ನನಗೆ ವಿರಾಮವು ಬಹಳವಾಗಿದ್ದಿತಾದರೂ ನಾನು ಯಾರಜತೆಯಲ್ಲಿ ಸೇರುತ್ತಿರಲಿಲ್ಲವು. ಪಾಠಶಾಲೆಗೆ ಹೋಗುವುದು ತಪ್ಪಿದರೆ ಪಾಠವನ್ನೋದುವುದು. ಇದರ ವಿನಾ ಯಾರ ಜತೆಯಲ್ಲಿ ಹೋಗುತ್ತಿರಲಿಲ್ಲವು. ಪ್ರಾತಃಕಾಲದಲ್ಲಿ ಸರಿಯಾಗಿ ಗಂಟೆಹೊಡೆಯುವ ಹೊತ್ತಿಗೆ ಪಾಠಶಾಲೆಯಲ್ಲಿ ಸಿದ್ಧವಾಗಿದ್ದು ಪುನಃ ಸಾಯಂಕಾಲ ಗಂಟೆಹೊಡೆಯುತಲೆ ಮನೆಗೆ ಬರುತ್ತಿದ್ದೆನು. ಪ್ರತಿದಿನವೂ ಅದೇ ಪದ್ಧತಿ. ಯಾರಾದರೂ ಚೆನ್ನಹಕಾರೆಂದು ನಾನು ಮನೆಗೆ ಓಡುಹೋಗುತ್ತಿದ್ದನಲ್ಲದೆ ಮೆಲ್ಲಗೆ ಹೋಗುತ್ತಿರಲಿಲ್ಲವು. ಯಾರಾದರೂ ನನ್ನನ್ನು ಹಾಸ್ಯಮಾಡುತ್ತಾರೇನೋ ಎಂದು ನನಗೆ ಭಯವಿದ್ದಿತು.

ಹೈಸ್ಕೂಲಿನಲ್ಲಿ ಮೊದಲನೆಯ ವರ್ಷವೇ ಸ್ಕೂಲು ಇನ್ಸ್ಪೆಕ್ಟರ್ ಗೈಲ್ಸರವರು ಸ್ಕೂಲು ಪರೀಕ್ಷೆಗಾಗಿ ಬಂದರು. ಐದು ಮಾತುಗಳ ಅಕ್ಷರ ಯೋಜನೆಯ (ಸ್ಪೆಲ್ಲಿಂಗ)ನ್ನು ಬರಿಯೆಂದು ಹೇಳಿದರು. ಅವುಗಳಲ್ಲಿ 'ಕೆಟಲ್' ಎಂಬದೊಂದು ಮಾತು. ನಾನು ಅದನ್ನು ತಪ್ಪಾಗಿ ಬರೆದಿದ್ದೆನು. ಉಪಾಧ್ಯಾಯನು ನನ್ನ ಪಕ್ಕದಲ್ಲಿ ನಿಂತಿದ್ದು ನೋಡಿ ಕಾಲಿನ ಬೂಟ್ಸು ಜೋಡಿಸಿಕೊಂಡು ನನಗೆ ಸಂಜ್ಞೆ ಮಾಡಿದನು. ನಾನು ಅದನ್ನು ಗ್ರಹಿಸಲಿಲ್ಲವು. ಪಕ್ಕದಲ್ಲಿದ್ದ ವಿದ್ಯಾರ್ಥಿಯು ಬರೆದಿದ್ದುದನ್ನು ನೋಡಿ ಆ ಪ್ರಕಾರವಾಗಿ ಬರೆಯೆಂದು ಉಪಾಧ್ಯಾಯನು ಸಂಜ್ಞೆ ಮಾಡಿದರೂ ಅದನ್ನು ಗ್ರಹಿಸಿಕೊಳ್ಳುವಷ್ಟು ಬುದ್ಧಿಯಿರಲಿಲ್ಲವು. ಆದರೆ ಉಪಾಧ್ಯಾಯನು ಪರಿಶೀಲಿಸುತ್ತಿದ್ದನೆಂದು ಮಾತ್ರ ನಾನು ತಿಳಿದಿದ್ದೆನು. ನನ್ನ ವಿನಾ ಉಳಿದ ಹುಡುಗರೆಲ್ಲರೂ ಎಲ್ಲ ಮಾತುಗಳನ್ನೂ ತಪ್ಪಿಲ್ಲದೆ ಬರೆದಿದ್ದರು. ಆನಾಲೆ ಉಪಾಧ್ಯಾಯನು ನನಗೆ ಸ್ಪಷ್ಟವಾಗಿ ಹೇಳಿದುದರ ವಿನಾ ಇನ್ನೊಬ್ಬರು ಬರೆದುದನ್ನು ನೋಡಿ ಬರೆಯುವ ಪದ್ಧತಿ ನನಗೆ ಬರುತ್ತಿದ್ದಿಲ್ಲ. ಉಪಾಧ್ಯಾಯನು ಈ ರೀತಿಯಾಗಿ ದುರ್ಬೋಧೆಯನ್ನು ಮಾಡಿದಾಗ್ಯೂ ನನಗೆ ಆತನಲ್ಲಿದ್ದ ಗೌರವವು ಕಡಿಮೆಯಾಗಲಿಲ್ಲವು. ಅನಂತರ ಇನ್ನೂ ಕೆಲ ದೋಷಗಳು ಕೂಡ ತಿಳಿಬಂದರೂ ನನಗೆ ಆತನಲ್ಲಿ ಎಥಾಪ್ರಕಾರ ಗೌರವವಿದ್ದಿತು. ಏಕೆಂದರೆ ದೊಡ್ಡವರ ಆಜ್ಞಾಪ್ರಕಾರ ನಡೆದುಕೊಳ್ಳುವುದು ಮಾತ್ರವೇ ನನಗೆ ತಿಳಿದಿದ್ದಿತೇ ವಿನಾ ಅವರ ತಪ್ಪನ್ನು ಕಂಡುಹಿಡಿಯುವುದು ನನಗೆ ತಿಳಿದಿರಲಿಲ್ಲವು.

ಆದಿನಗಳಲ್ಲಿ ಓದುವ ಪುಸ್ತಕಗಳ ವಿನಾ ಇತರ ಗ್ರಂಥಗಳನ್ನು ಓದುವ ಇಷ್ಟವಿರಲಿಲ್ಲ. ನಾನು ಉಪಾಧ್ಯಾಯನನ್ನು ಮೋಸಪಡಿಸುತ್ತಾನೆಂದು ತಿಳಿದು ಉಪಾಧ್ಯಾಯನು ನನಗೆ ಸೂಚಿಸುತ್ತಿದ್ದುದು ನನಗಿಷ್ಟವಿರಲಿಲ್ಲವೇ ಹೊರತು ಪಾಠವನ್ನು ಓದುವುದರಲ್ಲಿ ಮಾತ್ರ ಅಶ್ರದ್ಧೆ ಮಾಡುತ್ತಿರಲಿಲ್ಲವು. ಪಠ್ಯಪುಸ್ತಕಗಳನ್ನೇ ಸರಿಯಾಗಿ ಓದದಿದ್ದವನು ಇತರ ಪುಸ್ತಕಗಳನ್ನು ಹೇಗೋದುವನು? ಹೀಗಿರುವಲ್ಲಿ ಶ್ರವಣಪಿತೃಭಕ್ತಿ ನಾಟಕವೆಂಬ ಪುಸ್ತಕವು ನನಗೆ ಗಂಟುಬಿದ್ದಿತು. ಅದನ್ನು ನನ್ನ ತಂದೆಯು ಕೊಂಡುಕೊಂಡಿದ್ದರು. ಅದನ್ನು ಮಾತ್ರ ಬಹುಶ್ರದ್ಧೆಯಿಂದ ಓದಿದೆನು. ಆ ಸಮಯದಲ್ಲೇ ಬೊಂಬೆ ಆಟದವರು ನಮ್ಮ ಮನೆಗೆ ಬಂದು ಕೆಲ ಬೊಂಬೆಗಳಿಂದ ನಾಟಕವನ್ನು ಆಡಿ ತೋರಿಸಿದರು. ವೃದ್ಧರೂ, ಕುರುಡರೂ ಆದ ತಂದೆತಾಯಿಗಳನ್ನು ಕಾವಡಿಯಲ್ಲಿ ಕುಳ್ಳಿರಿಸಿಕೊಂಡು ತೀರ್ಥಯಾತ್ರೆಗಾಗಿ ಶ್ರವಣನು ಹೊತ್ತುಕೊಂಡು ಹೋಗುತ್ತಿರುವ ಹಾಗೆ ಒಂದು ಪಟವನ್ನು ಸಹ ನನಗೆ ತೋರಿಸಿದರು. ಆ ನಾಟಕವೂ ಆ ಪಟವೂ ನನ್ನ ಮನಸ್ಸಿನಲ್ಲಿ ಚೆನ್ನಾಗಿ ನಾಟಿಕೊಂಡುವು. ಶ್ರವಣನು ಸತ್ತುಹೋಗಲು ಅವನ ತಂದೆತಾಯಿಗಳ ವ್ಯಸನದ ಹಾಡು ನನಗೆ ಮರೆಯುವಂತಿರಲಿಲ್ಲವು. ಆ ಹಾಡನ್ನು ನಾನು ವೀಣೆಯಲ್ಲಿ ಬಾಜಿಸುತ್ತಿದ್ದೆನು. ಆ ವೀಣೆಯನ್ನು ನನ್ನ ತಂದೆಯು ನನಗೆ ತೆಗೆದುಕೊಟ್ಟಿದ್ದರು.

ಒಂದು ನಾಟಕಸಂಘದವರು ನಮ್ಮೂರಿನಲ್ಲಿ ಹರಿಶ್ಚಂದ್ರನಾಟಕವನ್ನು ಆಡಿದರು. ಆ ನಾಟಕವನ್ನು ನೋಡಲು ನನ್ನ ತಂದೆಯ ಅಪ್ಪಣೆಯನ್ನು ತೆಗೆದುಕೊಂಡು ಹೋಗಿ ನೋಡಿದೆನು. ಅದು ನನ್ನ ಮನಸ್ಸನ್ನು ಬಹಳವಾಗಿ ಆಕರ್ಷಿಸಿತು. ಅದನ್ನು ಎಷ್ಟುಸಲ ನೋಡಿದರೂ ನನಗೆ ತೃಪ್ತಿಯುಂಟಾಗದೆ ಪ್ರತಿಸಾರಿಯೂ ಹೋಗಲು ದೊಡ್ಡವರು ಹೋಗಗೊಡುವರೆ? ನನ್ನಲ್ಲಿ ನಾನೇ ಅನೇಕಸಾರಿ ಹರಿಶ್ಚಂದ್ರವೇಷವನ್ನು ಅಭಿನಯಿಸುತ್ತಿದ್ದೆನು. ಎಲ್ಲರೂ ಹರಿಶ್ಚಂದ್ರನಂತೆ ಸತ್ಯವ್ರತರಾಗಕೂಡದೇಕೆ? ಎಂಬ ಪ್ರಶ್ನೆಯು ನನಗೆ ನಿರಂತರವೂ ಹುಟ್ಟುತ್ತಿದ್ದಿತು. ಹರಿಶ್ಚಂದ್ರಚರಿತ್ರೆಯು ನಿಜವಾಗಿ ಜರುಗಿತೆಂಬ ನಂಬಿಕೆಯು ನನಗೆ ಆಗ ಪೂರ್ತಿಯಾಗಿ ಹುಟ್ಟಿತು. ನಾನು ಕೂಡ ಎಷ್ಟು ಕಷ್ಟವು ಪ್ರಾಪ್ತವಾದರೂ ಸುಳ್ಳುಮಾತಾಡಬಾರದೆಂಬ ದೃಢಾಭಿಪ್ರಾಯವು ನನಗೆ ಆಗಲೇ ಹುಟ್ಟಿದ್ದಿತು. ಹರಿಶ್ಚಂದ್ರನ ಕಷ್ಟಗಳನ್ನು ನೆನೆಸಿಕೊಂಡು ವ್ಯಸನಪಡುತ್ತಿದ್ದೆನು. ಈವಾಗ ಆಲೋಚಿಸಿದಲ್ಲಿ ಹರಿಶ್ಚಂದ್ರಚರಿತ್ರೆಯು ಕವಿಸೃಷ್ಟಿಯೇ ಆಗಿರುವುದೆಂದು ತೋರುತ್ತದೆಯೇಹೊರತು ಬಾಲ್ಯದಲ್ಲಿ ಅಂತಹ ಅನುಮಾನ ಹುಟ್ಟಿರಲಿಲ್ಲವು. ಹರಿಶ್ಚಂದ್ರನಾಟಕವನ್ನೂ ಶ್ರವಣನಾಟಕವನ್ನೂ ಈ ದಿವಸ ಓದಿದರೂ ನನಗೆ ಮೊದಲಿನಂತೆಯೇ ದುಃಖವು ಬಾರದೇ ಇಲ್ಲವು. (ಎಂಗ್ ಇಂಡ್ಯಾ 17-12-1925).

ಮೂರನೆಯ ಪ್ರಕರಣ.

ಬಾಲ್ಯವಿವಾಹವು.

ಈ ಪ್ರಕರಣವನ್ನು ಬರೆಯಲು ನನಗೆ ಇಷ್ಟವಿಲ್ಲದಿದ್ದಾಗ್ಯೂ ಬರೆಯದಿರಲಾಗದು. ಬರೆಯದಿದ್ದರೆ ನಾನು ಅಸತ್ಯವಾದಿಯಾಗುವೆನು. ನನಗೆ 13 ನೆಯ ವರ್ಷವಯಸ್ಸಿನಲ್ಲೇ ವಿವಾಹವಾಯಿತೆಂದು ಬರೆಯಲು ನನಗೆ ಬಹಳ ಸಂತಾಪಕರವಾಗಿದ್ದರೂ ಬರೆಯದಿದ್ದರೆ ತಪ್ಪದು. ಈಗ ನನ್ನ ಸಂರಕ್ಷಣೆಯಲ್ಲಿರುವ ಇಷ್ಟು ವಯಸ್ಸಿನ ಯುವಕರ ಸ್ಥಿತಿಯನ್ನು ನನ್ನ ಬಾಲ್ಯದಶೆಗೆ ಹೋಲಿಸಿದುದಾದರೆ ಅವರ ಅದೃಷ್ಟಕ್ಕೆ ಸಂತೋಷವೂ ನನ್ನ ಅದೃಷ್ಟಕ್ಕೆ ಸಂತಾಪವೂ ನನಗುಂಟಾಗುತ್ತದೆ. ಅಂತಹ ಅಜ್ಞಾನದಶೆಯಲ್ಲಿ ಬಾಲಕರಿಗೆ ವಿವಾಹವನ್ನು ಮಾಡಲು ನೈತಿಕಕಾರಣವೇನೂ ನನಗೆ ಕಂಡುಬರುವುದಿಲ್ಲ.

13 ನೆಯ ವರ್ಷವಯಸ್ಸಿನಲ್ಲಿ ನನಗೆ ಮದುವೆಯೇ ಆಯಿತಲ್ಲದೆ ನಿಶ್ಚಿತಾರ್ಥಮಾತ್ರವಲ್ಲ. ಕಥಿವಾಡದಲ್ಲಿ ನಿಶ್ಚಿತಾರ್ಥವು ಮೊದಲು ಜರುಗಿ ಕೆಲ ಕಾಲಾನಂತರ ವಿವಾಹವು ನಡೆಯುವ ಪದ್ಧತಿಯೊಂದುಂಟು. ನಿಶ್ಚಿತಾರ್ಥವೆಂದರೆ ವಧೂವರರ ಸಂರಕ್ಷಕರು ಹೆಣ್ಣನ್ನು ಕೊಟ್ಟು ತಂದುಕೊಳ್ಳುವುದನ್ನು ಗೊತ್ತುಮಾಡುವುದು. ಹಾಗೆ ನಿಶ್ಚಯಿಸಿದಮೇಲೆ ವಿವಾಹವು ಜರುಗಿದನಂತರ ನನ್ನ ಮಗನು ಸತ್ತುಹೋದಲ್ಲಿ ನನ್ನ ಮಗಳಿಗೆ ವೈಧವ್ಯಬಾಧೆಯಿಲ್ಲವು. ಮತ್ತೊಬ್ಬನಿಗೆ ಕೊಟ್ಟು ವಿವಾಹಮಾಡಬಹುದು. ಹೀಗೆ ಮುಹೂರ್ತವನ್ನು ನಿಶ್ಚಯಿಸುವಲ್ಲಿ ವಧೂವರರನ್ನ ಕೇಳದೆಯೇ ಮಾಡುವರು. ಅವರಿಗೆ ತಿಳಿಯದಂತೆಯೇ ತಂದೆತಾಯಿಗಳು ನಿಶ್ಚಯಿಸುವರು. ನನಗೆ ಮೂರಾವರ್ತಿ ನಿಶ್ಚಿತಾರ್ಥವಾಯಿತು. ಆದರೆ ಆ ಕನ್ಯೆಯನ್ನು ನೋಡದೇನೆ ನಡೆದಿತು. ಮೊದಲನೆಯಾವರ್ತಿ ನಿಶ್ಚಿತಾರ್ಥವಾದನಂತರ ವಿವಾಹವಾಗುವುದಕ್ಕೆ ಮುಂದೆ ಆ ಕನ್ನೆಯು ಸತ್ತುಹೋಯಿತು. ಎರಡನೆಯವೇಳೆ ಪುನಃ ನಿಶ್ಚಿತಾರ್ಥ ಜರುಗಿತು. ಆಗಲೂ ಹಾಗೆಯೇ ನಡೆದಿತು. ಮೂರನೆಯವೇಳೆ ನನ್ನ ಏಳನೆಯ ವಯಸ್ಸಿನಲ್ಲಿ ನಿಶ್ಚಿತಾರ್ಥವು ಜರುಗಿದಹಾಗೆ ಜ್ಞಾಪಕವು. ಅದಕ್ಕೆ ಮೊದಲು ಜರುಗಿದ ನಿಶ್ಚಿತಾರ್ಥದ ವಿಷಯವನ್ನು ದೊಡ್ಡವರು ಹೇಳಿದುದರಿಂದ ಗೊತ್ತಾದುದರವಿನಾ ನನಗೇನೂ ಜ್ಞಾಪಕವಿಲ್ಲವು. ನನ್ನ ವಿವಾಹಸಂಗತಿಯು ಮಾತ್ರ ನನಗೆ ಚೆನ್ನಾಗಿ ಜ್ಞಾಪಕವಿದೆ.

ನಾವು ಮೂವರು ಅಣ್ಣತಮ್ಮಂದಿರು. ನನ್ನ ದೊಡ್ಡಣ್ಣನಿಗೆ ಆಗಲೇ ಮದುವೆಯಾಗಿದ್ದಿತು. ನನ್ನ ಚಿಕ್ಕಣ್ಣನು ನನಗಿಂತಲೂ 2-3 ವರ್ಷ ಮಾತ್ರ ದೊಡ್ಡವನು. ನನ್ನ ಚಿಕ್ಕಪ್ಪನ ಮಗನೋ ದೊಡ್ಡಪ್ಪನ ಮಗನೋ ನನಗಿಂತಲೂ 1 ವರ್ಷ ದೊಡ್ಡವನು. ನನಗೂ, ನನ್ನ ಚಿಕ್ಕಣ್ಣನಿಗೂ, ನನ್ನ ಚಿಕ್ಕಪ್ಪ-ದೊಡ್ಡಪ್ಪನ ಮಗನಿಗೂ ಒಂದೇ ಕಾಲದಲ್ಲಿ ಮದುವೆಮಾಡಲು ದೊಡ್ಡವರು ನಿಶ್ಚಯಿಸಿದರು. ಈ ವಿವಾಹಗಳನ್ನು ಜರುಗಿಸುವಲ್ಲಿ ಹಿರಿಯರು ತಮ್ಮ ಸದುಪಾಯವನ್ನು ಮಾತ್ರ ನೋಡಿಕೊಂಡರು. ಎರಡುಮೂರು ಮದುವೆಗಳನ್ನು ಒಂದೇ ಆವರ್ತಿ ಮಾಡಿದರೆ ವೆಚ್ಚವು ಕಡಿಮೆಯಾಗುತ್ತದೆಂದು ಯೋಚಿಸಿದರೇ ಹೊರತು ವಧೂವರರನ್ನು ಕೇಳುವುದರ ಪ್ರಯೋಜನವನ್ನು ಮಾತ್ರ ಅವರು ಆಲೋಚಿಸಲಿಲ್ಲವು.

ಹಿಂದುಗಳಲ್ಲಿ ಮದುವೆಯ ಮನೆಯಲ್ಲಿ ಹಣದ ವಿನಾ ಮಾತಿಲ್ಲವು. ಮದುವೆ ಹೆಣ್ಣಿನವರೂ ಗಂಡಿನವರೂ ಸ್ವಲ್ಪಮಟ್ಟಿಗೆ ಮದುವೆ ಸನಿಯದಲ್ಲೇ ಮನೆಮಠಗಳನ್ನು ಅಲಂಕರಿಸಿಕೊಳ್ಳುವರು. ಕೆಲ ತಿಂಗಳ ಮುಂಚಿತವಾಗಿ ಮದುವೆಯ ಕೆಲಸಕ್ಕಾರಂಭಿಸುವರು. ಇತರ ಕೆಲಸಗಳನ್ನೆಲ್ಲಾ ಮಾನಸಿಕ ಮಾಡುವರು. ವಿಶೇಷವಾಗಿ ಧನವ್ಯಯ ಮಾಡುವರು. ಬಟ್ಟೆಗೂ ನಗಗಳಿಗೂ ಭಕ್ಷ್ಯಭೋಜ್ಯಾದಿಗಳಿಗೂ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡುವರು. ಊಟವುಪಚಾರಾದಿಗಳಲ್ಲಿ ಒಬ್ಬರೊಬ್ಬರನ್ನು ಮೀರಿಸಲು ಸ್ಪರ್ಧಿಸುವರು. ಸ್ತ್ರೀಯರಿಗೆ ಕಂಠಮಾಧುರವಿಲ್ಲದಿದ್ದರೂ ಕಾಲನಿಯಮವಿಲ್ಲದೆ ಮದುವೆಯ ಹಾಡುಗಳನ್ನು ಹೇಳುತ್ತಲೇ ಇರುವರು. ನೆರೆಹೊರೆಯವರಿಗೆ ಬಹಳ ತೊಂದರೆಯಾದಾಗ್ಯೂ ನಾಳೆ ತಮ್ಮ ಮನೆಯಲ್ಲೂ ಶುಭಕಾರ್ಯವು ಜರುಗದೇ ಇರುವುದಿಲ್ಲವಾದುದರಿಂದ ಅವರು ಸಹಿಸಿಕೊಂಡು ಸುಮ್ಮನೆ ಇರುವರು.

ಮೂವರಿಗೂ ಮೂರುಸಾರಿ ಮದುವೆಮಾಡಿ ಕಷ್ಟವನ್ನನುಭವಿಸುವುದಕ್ಕೆ ಬದಲು ಒಂದೇಕಾಲದಲ್ಲಿ ಮೂರುಮದುವೆಯನ್ನೂ ಮಾಡುವುದು ಒಳ್ಳೆಯದೆಂದು ನಮ್ಮ ಹಿರಿಯರು ನಿಶ್ಚಯಿಸಿದರು. ಹಾಗೆ ಮಾಡುವುದರಿಂದ ಖರ್ಚು ತಗ್ಗುವುದು; ವೈಭವವು ಹೆಚ್ಚುವುದು. ಮೂರುಮದುವೆಯನ್ನೂ ಬೇರೆಬೇರೆ ಮಾಡಿದಲ್ಲಿ ಮೂರರಿಂದಲೂ ಮೂರುಸಾವಿರದ ಪ್ರಕಾರ ಒಂಭತ್ತು ಸಾವಿರ ಖರ್ಚಾಗುವುದು. ಒಟ್ಟಿಗೆ ಮಾಡಿದಲ್ಲಿ 5-6 ಸಾವಿರ ರೂಪಾಯಿ ಖರ್ಚಿನಿಂದ ಮಿತಿಮೀರಿ ಹೋಗುವುದು, ಮತ್ತು ಮೂರುಸಾವಿರ ಖರ್ಚು ಕಡಿಮೆಯಾಗುವುದು. ಮದುವೆಯು ಬಹಳ ಅಟ್ಟಹಾಸದಿಂದಾಯಿತೆಂದು ಊರಿನವರೆಲ್ಲಾ ಆಡಿಕೊಳ್ಳುವರು. ನನ್ನ ತಂದೆಯೂ, ನನ್ನ ಚಿಕ್ಕಪ್ಪನೂ ವೃದ್ಧರಾಗಿದ್ದರು. ನಮ್ಮಗಳ ಮದುವೆಯೇ ನಮ್ಮ ಮನೆಯಲ್ಲಿ ಕಡೆಯ ಶುಭಕಾರ್ಯವು. ಅದುಕಾರಣ ಮೂರು ಮದುವೆಗಳನ್ನೂ ಮಹಾವೈಭವದಿಂದ ಏಕಕಾಲದಲ್ಲಿ ಜರುಗಿಸಲು ನಿಶ್ಚಯಿಸಿದರು. ಕೊಂಚಕಾಲ ಮುಂದಾಗಿಯೇ ಮದುವೆ ಕೆಲಸಕ್ಕಾರಂಭವಾಯಿತು. ಈ ಕೆಲಸಗಳನ್ನು ನೋಡಿ ನಾನು ಮದುವೆಯ ಸಂಗತಿಯನ್ನು ತಿಳಿದೆನು. ಮದುವೆಯೆಂದರೆ ಹೊಸಜರತಾರಿ ಬಟ್ಟೆಯನ್ನುಟ್ಟುಕೊಳ್ಳುವುದು, ವಾದ್ಯವಾಗುವುದು. ಉತ್ಸವವಾಗುವುದು ರುಚಿಯಾದ ಪದಾರ್ಥಗಳು ಮಾಡಲ್ಪಡುವುವು, ಆಡಿಕೊಂಡಿರಲು ಹೊಸ ಹುಡುಗರು ದೊರಕುವರು. ಎಂದು ಮಾತ್ರವೇ ನನಗೆ ಆಗ ತಿಳಿದಿದ್ದಿತೇ ವಿನಾ ಮತ್ತೇನೂ ತಿಳಿದಿರಲಿಲ್ಲವು. ಆ ವಯಸ್ಸಿನಲ್ಲಿ ಸ್ತ್ರೀಸಂಭೋಗಾಪೇಕ್ಷೆಯು ಹುಟ್ಟಿರಲಿಲ್ಲವು. ಅನಂತರ 5-6 ವರ್ಷಗಳು ಕಳೆದಮೇಲೆ ನನ್ನ ವಿಕಾಶವು ಅಂಕುರಿಸಿತು. ನಾನು ಹೇಳಬೇಕಾದ ಮುಖ್ಯವಿಷಯವಿನ್ನೂ ಮುಂದಿದೆ. ಇವೆಲ್ಲವೂ ಅವಾಂತರ ಸಂಗತಿಯೇ. ನನ್ನನ್ನೂ, ನನ್ನ ಚಿಕ್ಕಣ್ಣನನ್ನೂ ರಾಜಕೋಟೆಯಿಂದ ಪೋರ್ಬಂದರಿಗೆ ಕರೆದುಕೊಂಡುಹೋದರು.

ನನ್ನ ತಂದೆಯು ದಿವಾನನಾಗಿದ್ದರು. ಅವರು ಕೂಡ ರಾಜಸೇವಕರು. ಅದುಕಾರಣ ರಾಜಾನುಗ್ರಹಕ್ಕೆ ಪಾತ್ರರಾಗಿದ್ದುದರಿಂದಲೇ ರಾಜನು ನನ್ನ ತಂದೆಯನ್ನು ಕ್ಷಣಮಾತ್ರವೂ ಬಿಟ್ಟಿರುತ್ತಿರಲಿಲ್ಲ. ಅದುಕಾರಣ ಮುಹೂರ್ತದಿವಸದವರೆಗೂ ನನ್ನ ತಂದೆಯು ಬರಲಿಕ್ಕೆ ವ್ಯವಧಾನವಿಲ್ಲದಿದ್ದಿತು. ರಾಜಕೋಟೆಯಿಂದ ಪೋರ್ಬಂದರಿಗೆ ಬಂಡಿಯಮೇಲೆ ಸಾಮಾನ್ಯವಾಗಿ 5 ದಿವಸದ ಪ್ರಯಾಣವಾಗುವುದು. ಅರಮನೆಯ ಟಪ್ಪಾಲು ಕುದುರೆಗಳನ್ನಿಟ್ಟುಕೊಂಡಿದ್ದುದರಿಂದ ಮೂರುದಿವಸಗಳೊಳಗಾಗಿ ಬರಲು ಅನುಕೂಲವಾಯಿತಾದರೂ ಮೂರನೇ ಮೊಕ್ಕಾಮಿನಲ್ಲಿ ಬಂಡಿಯು ಮಗುಚಿಕೊಂಡು ನನ್ನ ತಂದೆಗೆ ಬಲವಾದ ಪೆಟ್ಟು ಬಿದ್ದಿತು. ಅಲ್ಲಿಂದ ಡೋಲಿಯಲ್ಲಿ ಮದುವೆಯ ಮನೆಗೆ ಬಂದರು. ಇದರಿಂದ ಅವರಿಗೂ ನಮಗೂ ಉತ್ಸಾಹವು ಕೊಂಚ ಕಡಿಮೆಯಾಯಿತು. ಏನಾದರೇನು ಮದುವೆಯು ಮಾತ್ರ ನಡೆದೇತೀರಬೇಕಲ್ಲದೆ ನಿಲ್ಲಕೂಡದೆಂದರು. ಪುನಃ ಶುಭಮುಹೂರ್ತವು ದೊರಕುವುದು ದುರ್ಲಭ. ಮದುವೆಯ ಸಂಭ್ರಮದಲ್ಲಿ ತಂದೆಗುಂಟಾದ ಬಾಧೆಯ ವಿಷಯವನ್ನು ನಾನು ಸಂಪೂರ್ಣವಾಗಿ ಮರೆತು ವಿವಾಹ ಸಂತೋಷಸಾಗರದಲ್ಲಿ ಮುಳುಗಿಹೋಗಿದ್ದೆನು.

ತಾಯಿತಂದೆಗಳಲ್ಲಿ ನನಗೆ ಬಹಳ ಭಕ್ತಿ ಇದ್ದಿತಾದರೂ ಮನುಷ್ಯನ ಸಹಜ ಸಂತೋಷವಿಚಾರಾದಿ ಮನೋವಿಕಾರಗಳನ್ನು ಯಾರು ಗೆಲ್ಲಬಲ್ಲರು? ತಾಯಿತಂದೆಗಳ ಸೇವೆಗಾಗಿ ಎಲ್ಲ ಸಂತೋಷವನ್ನೂ ಬಿಟ್ಟುಬಿಡತಕ್ಕದ್ದೆಂಬ ವಿಷಯವನ್ನು ನಾನು ಆಗ ಗ್ರಹಿಸಿರಲಿಲ್ಲವು. ಅದುಕಾರಣ ನನ್ನ ಭೋಗಲಾಲಸತ್ವಕ್ಕಾಗಿ ನನ್ನನ್ನು ಶಿಕ್ಷಿಸಿಕೊಳ್ಳುವುದಕ್ಕಾಗಿಯೇ ಮತ್ತೊಂದು ವಿಷಯವು ಕೂಡ ಜರುಗಿತು. ಅದು ಆಗಳಿಂದಲೂ ನನ್ನ ಮನಸ್ಸಿನಲ್ಲಿ ಕುದಿಯುತ್ತಲೇ ಇದ್ದಿತು. ಅದನ್ನು ಕುರಿತು ಮೇಲೆ ವಿವರಿಸಿರುವೆನು. ಇಂದ್ರಿಯನಿಗ್ರಹ ಶಕ್ತಿಯಿಲ್ಲದ ವಸ್ತುಗಳನ್ನು ಮಾತ್ರ ಪರಿತ್ಯಜಿಸುವುದಕ್ಕಾಗಿ ಸುಸ್ಥಿರವಾದ ತ್ಯಾಗವು ಹುಟ್ಟದು. ಇಂದ್ರಿಯಗಳ ಪ್ರಾಬಲ್ಯಕ್ಕೆ ಬಲಿಯಾದವನು ತ್ಯಜಿಸಿದ ವಸ್ತುಗಳನ್ನೇ ಪುನಃ ಸ್ವೀಕರಿಸುವನು. ಅದುಕಾರಣ ಇಂದ್ರಿಯಗಳನ್ನೂ, ಮನಸ್ಸನ್ನೂ ನಿಗ್ರಹಿಸಬೇಕಲ್ಲದೆ, ತಾತ್ಕಾಲಿಕವಾದ ವಿಷಯಭೋಗವನ್ನು ಪರಿತ್ಯಜಿಸುವುದರಿಂದ ಶಾಶ್ವತ ಲಾಭವುಂಟಾಗುವುದೆಂದು ನಿಷ್ಕುಲಾನಂದರು ಒಂದು ಹಾಡನ್ನು ಹೇಳಿದರು. ಆ ಹಾಡನ್ನು ನಾನು ಹೇಳುವಾಗಲೂ ಕೇಳುವಾಗಲೂ ಸಂತಾಪಕರವಾದ ನನ್ನ ವಿಷಯವು ನನ್ನ ಸ್ಮರಣೆಗೆ ಬಂದು ಲಜ್ಜಿತನನ್ನಾಗಿ ಮಾಡುತ್ತಲೇ ಇದ್ದಿತು.

ಪೆಟ್ಟು ಬಿದ್ದಿದ್ದರೂ ಲಕ್ಷಿಸದೆ ನನ್ನ ತಂದೆಯು ಧೈರ್ಯದಿಂದ ವಿವಾಹಮಹೋತ್ಸವದಲ್ಲಿ ಸಂಪೂರ್ಣಭಾಗಿಯಾಗಿದ್ದರು. ಆ ಮದುವೆಯಮನೆಯಲ್ಲಿ ಅವರು ಮಾಡಿದ ಕೆಲಸಗಳೆಲ್ಲವೂ ಈಗಲೂ ನನ್ನ ಕಣ್ಣುಗಳಲ್ಲಿ ಕಟ್ಟಿದಂತಿದೆ. ಸಣ್ಣವಯಸ್ಸಿನಲ್ಲಿ ನನಗೆ ಮದುವೆ ಮಾಡಿದ್ದಕ್ಕಾಗಿ ನನ್ನ ತಂದೆಯನ್ನು ನಾನು ದೊಡ್ಡವನಾದಮೇಲೆ ನಿಂದಿಸುತ್ತೇನೆಂಬ ಜ್ಞಾನವು ನನಗೆ ಆ ಮದುವೆಯ ದಿವಸ ಲೇಶಮಾತ್ರವೂ ಇರಲಿಲ್ಲ. ಆಗ ಎಲ್ಲವೂ ಸರಿಯಾಗಿದ್ದಿತೆಂದೂ, ನ್ಯಾಯವಾಗಿದ್ದಿತೆಂದೂ ನನಗೆ ತೋರಿ ಬಹಳ ಸಂತೋಷದಿಂದಿದ್ದೆನು. ವಧುವಿನ ಉತ್ಸಾಹವೂ ಅಪರಿಮಿತವಾಗಿದ್ದಿತು. ಆ ದಿವಸ ನಾನು ಎಲ್ಲಿ ಕುಳಿತಿದ್ದೆನು, ಸಪ್ತಪದಿ ಹೇಗೆ ಜರುಗಿತು, ನಾನೂ ನನ್ನ ಭಾರ್ಯೆಯೂ ಒಬ್ಬರ ಬಾಯಿನಲ್ಲೊಬ್ಬರು ಹೇಗೆ ಕಲ್ಲುಸಕ್ಕರೆಯನ್ನು ಹಾಕಿಕೊಳ್ಳುತ್ತಿದ್ದೆವು ಇತ್ಯಾದಿ ವಿಷಯಗಳು ನನಗೆ ಚೆನ್ನಾಗಿ ಜ್ಞಾಪಕವಿದೆ. ಆ ಮೊದಲಿನದಿವಸದ ರಾತ್ರಿಯೇ ಬಾಲ್ಯವಯಸ್ಸಿನವರಾದ ನಮ್ಮಿಬ್ಬರನ್ನೂ ಸಂಸಾರಸಾಗರದಲ್ಲಿ ಹಾಕಿಬಿಟ್ಟರು. ನನ್ನ ದೊಡ್ಡ ಅತ್ತಿಗೆಯು ಆ ರಾತ್ರಿ ನಾನು ಮಾಡಬೇಕಾದುದನ್ನು ನನಗೆ ಚೆನ್ನಾಗಿ ಬೋಧಿಸಿದಳು. ನನ್ನ ಹೆಂಡತಿಗೆ ಯಾರುಬೋಧಿಸಿದರೋ ನನಗೆ ತಿಳಿಯದು. ನಾನು ಆ ವಿಷಯವಾಗಿ ನನ್ನ ಹೆಂಡತಿಯನ್ನೂ ಈವರೆಗೂ ಪ್ರಶ್ನಿಸಲಿಲ್ಲ. ಮುಂದಾದರೂ ಕೇಳುವುದಿಲ್ಲ. ಆ ರಾತ್ರಿ ನಮ್ಮಿಬ್ಬರಿಗೂ ನಾಚುಗೆಯು ಬಹಳವಾಗಿದ್ದಿತು. ಎಷ್ಟು ಸಂಬೋಧಿಸಿದರು ಕೂಡ ಆ ಹೊಸಹುಡುಗಿಯೊಡನೆ ಚೆನ್ನಾಗಿ ಮಾತನಾಡಲು ನನಗೆ ಬಹಳ ನಾಚುಗೆಯುಂಟಾಗಿದ್ದಿತು. ಆದರೆ ಈ ವಿಷಯದಲ್ಲಿ ಒಬ್ಬರು ಕಲಿಸಿಕೊಡಬೇಕಾದ ಕಾರ್ಯವೇನೂ ಇಲ್ಲ. ಪೂರ್ವಜನ್ಮವಾಸನೆಯಿಂದ ಎಲ್ಲವೂ ಪರಿಚಯವಾಗುವುದು. ಕ್ರಮೇಣ ನಮ್ಮಿಬ್ಬರಿಗೂ ನಾಚುಗೆಯು ಬಿಟ್ಟುಹೋಯಿತು. ಧಾರಾಳವಾಗಿ ಮಾತನಾಡುವವರಾದೆವು. ನಾವಿಬ್ಬರೂ ಸಮವಯಸ್ಸಿನವರೇ ಆದರೂ ನಾನು ಹೆಂಡತಿಯಮೇಲೆ ನನ್ನ ಅಧಿಕಾರವನ್ನು ನಡೆಯಿಸತೊಡಗಿದೆನು. ಈ ವಿಚಾರವಾಗಿ ಮುಂದೆ ಪ್ರಸ್ತಾಪಿಸುವೆನು. (ಎಂಗ್ ಇಂಡ್ಯಾ 24-12-25.)

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯಥಾಗ್ರಹಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡಿಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ. ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ.—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
27 ಹಳೇಅಗ್ರಹಾರ, ಮೈಸೂರು

೧೯೨೬ ನೆಯ ಇಸವಿ ಫೆಬ್ರವರಿ ತಾ|| ೧೩ ರಿಂದ ೧೯೨೬ ನೆಯ ಇಸವಿ ಫೆಬ್ರವರಿ ತಾ|| ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಫಾಲ್ಗುಣ ಶುದ್ಧ ಪಾಡ್ಯಮಿಯಿಂದ ಫಾಲ್ಗುಣ ಶುದ್ಧ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
13	ಶನಿ	ಪಾಡ್ಯ	35-46	ಧನಿ	6-44	2
14	ಭಾನು	ಬಿದಿ	30-2	ಶತ	2-41	3
15	[1]ಸೋಮ	ತದಿ	24-49	ಉಭಾ	55-26	4
16	ಮಂಗಳ	ಚೌತಿ	20-5	ರೇವ	52-49	5
17	ಬುಧ	ಪಂಚ	16-15	ಅಶ್ವಿ	51-5	6
18	[2]ಗುರು	ಷಷ್ಠಿ	19-21	ಭರ	50-26	7
19	ಶುಕ್ರ	ಸಪ್ತ	11-30	ಕೃತ್ತಿ	50-54	8

(1) ಮಳೆನಕ್ಷತ್ರ-ಧನಿಷ್ಠ ೪ನೆಯ ಪಾದ, ಮಾರಿಹಿಡಿ. (2) ಮಳೆನಕ್ಷತ್ರ- ಶತಭಿಷ ೧ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞ ಪತ್ರಿಕಾ ನೋಽಪರಾಜತೇಯಂ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರೋಲಂಸುಧೀಪುಂಗವ | ಸ್ತೋತ್ರಮಾಧೀಕೃತಚೋಲ ನಾಶಕಿತ ಸಾಧ್ವಸ್ತಾಲಕಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾತಾಕುಲಂ | ಶ್ರೀಮಂಚಿತ್ತಕೀಯುಂಕಹಾಪುರೀಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಫೆಬ್ರವರಿ ತಾರೀಖು ೨೦ ನೆಯ ಶನಿವಾರ. [ಸಂಚಿಕೆ ೮

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಆದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರ ಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ತಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇದೇ ಪ್ರಸಂಗದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ ತಾಲಿಮಖಂಡ, ಜವಾಕಂಡ, ಕಾಲ್ಮಲಿಕಂದ, ಅಶ್ವಗಂಧ, ಶ್ರೀಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಸಾಂತರಜಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶತಬೀಜ, ಸಾಗಬೀಜ, ಟಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ, ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಸ್ತ, ವಾಳೇರಿಭಾತಾ, ಗೋಖುರು, ಅಡವೀ ಬೆಂಡಿ ಬೇಕು, ಅಶ್ವಕಸ್ತ್ರ, ಇಸಬಗೋಲೆ, ಬುನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಳುಕಿ, ವಂಶಲೋಚನ, ವರಧಾರ, ಕೇಶರಿ, ಯಾಲಕ್ಕಿ ರುಲ್ಲ ಸಕ್ಕರಿ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಿಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೫| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒಣೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಿನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ಬ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೇಲಾಭಾಯಿ ಹಿಸ್ಸ ರೋಡ ಮುಂಬೈ, ೫ ವಿಷ್ಣು ಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶಿವನ್ನಗೌಡಾ ಪಾಟೀಲ ಅತ್ತಿಗೇರಿ, ೭ ಧುಣಾಜಿ ಜಯರಾಮ ಪೋ. ಸೊಲ್ಹಾಪೂರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[60—46] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಶೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.



(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[illegible] ಪೋ. ಬಾ. ೩೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೧— ೪—೦	೦— ೯—೦
[illegible]ಚರಿತ್ರೆ	೦— ೫—೦	೦—೧೦—೦
[illegible]	೦— ೪—೦	೦— ೯—೦
ವ್ರತಸಂಚಿಕ	೦— ೪—೦	೦— ೯—೦
ಗುರುಶಂಕರೇಶ್ವರ[illegible]	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
[illegible]ಮಂಜರಿ	೦— ೮—೦	೦—೧೩—೦
[illegible]	೧— ೦—೦	೧— ೬—೦
ಆಧುನಿಕ [illegible] ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ [illegible]	೧— ೦—೦	೧— ೬—೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA
VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	54

ಗೋಪಾಸ್ತ್ರೀಯರಿಗೂ ಕಲೀತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ವೈದ್ಯ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಕ್ಷಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಪ್ರಸಿದ್ಧಪತ್ರಿಕೆ.

ಹೊಳೇನರಶೀಪುರದ ಟವನ್ನಿನಲ್ಲಿ ತಾ|| 21-2-26ರ ಲಾಗಾಯ್ತು ತಾ|| 3-3-26ರ ವರಿವಿಗೆ ನಡಿಯುವ ಶ್ರೀಲಕ್ಷ್ಮೀನರಸಿಂಹಸ್ವಾಮಿಯವರ ರಥೋತ್ಸವಕಾಲದಲ್ಲಿ ದನಗಳ ಪ್ರದರ್ಶನವು ತಾ|| 27-2-26 ನೇ ಶನಿವಾರ ಪ್ರಾರಂಭವಾಗಿ ತಾ|| 4-3-26 ನೇ ಗುರುವಾರ ಸಾಯಂಕಾಲದವರಿವಿಗೂ ನಡೆಯಬೇಕೆಂದು ನಿಷ್ಕರ್ಷೆಮಾಡಿರುತ್ತೆ. ಪ್ರದರ್ಶನಕ್ಕೆ ಬರುವ ರಾಸುಗಳಮೇಲೆ ತಲೆ 1 ಕ್ಕೆ 0-1-0 ಯಂತೆ ಸುಂಕ ವಸೂಲ್ ಮಾಡುತ್ತೆ. ಈರೀತಿ ತರತಕ್ಕ ರಾಸುಗಳಪೈಕಿ ಅತ್ಯುತ್ತಮವಾದ ರಾಸುಗಳಿಗೆ ಬಹುಮಾನವನ್ನು ಕೊಡಲಾಗುತ್ತೆ. ಪ್ರದರ್ಶನವು ಹೊಳೇನರಶೀಪುರದ ಟವುನ್ ತಾಲ್ಲೋಕ್ ಕಛೇರಿಯ ಹಿಂಭಾಗ, ಮಗ್ಗಲುಬಾಗ ಮತ್ತು ಹೇಮಾವತಿ ನದೀದಡದಲ್ಲಿ ಉದ್ದಕ್ಕೂ, ಅರಕಲಗೂಡು ರಸ್ತೆಯ ಉಭಯಪಕ್ಕದಲ್ಲಿರುವ ಮೈದಾನದಲ್ಲಿ ನಡೆಯಲು ಗೊತ್ತುಮಾಡಿರುತ್ತೆ.

ರೈತಾಪಿಜನಗಳಿಗೆ ರಾಸುಗಳನ್ನು ಸಾಕುವ ವಿಷಯದಲ್ಲಿ ಪ್ರೋತ್ಸಾಹಕೊಡಬೇಕೆಂಬುದೇ ಪ್ರದರ್ಶನದ ಮುಖ್ಯ ಉದ್ದೇಶವಾಗಿದೆ. ಬರುವ ರಾಸುಗಳಿಗೆ ನೀರಿಗೆ ಧಾರಾಳವಾಗಿ ಅನುಕೂಲವಿರುತ್ತೆ.

ಜೆ. ಶ್ರೀಕಂಠರಾವ್,
ಪ್ರಸಿಡೆಂಟ್, ಟವುನ್ ಮ್ಯುನಿಸಿಪಾಲಿಟಿ.
ಹೊಳೇನರಶೀಪುರ.

ತಾ|| 14-2-1926.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಫೆಬ್ರವರಿ ತಾ|| ೨೦ನೆಯ ಶನಿವಾರ.

ECHOES FROM "THE MANCHESTER GUARDIAN."

The following comment of the *Manchester Guardian* on the mournings of a South Indian Brahmin official is extremely interesting. The official does not stand by himself. He represents the type that we see around us, the conservative, reactionary monopolist who does every thing to maintain his old time position against the inroad of democracy and against the introduction of a more equitable order of things. The old order has therefore to die necessarily a slow death, for, no matter what herculean efforts these diehards make they cannot stem the tidal vave of democracy that is sweeping over the land.

The impressions of the *Manchester Guardian* are real and portray exactly the development of conditions in South India under the British Raj. The Brahmins who from a priestly class developed into a close intellectual aristocracy as the journal says throve well in the new atmosphere under the British rule, and got strongly entrenched in Public Service. He gambles in politics, and comes round the mass of voters and, what is more, sets up division among the non-Brahmin candidates and secures for himself an ascendency stronger than before. But these tactics have not been latterly so successful and we see the result in Madras Bombay and to an extent in Mysore. It is somewhat pleasing and encouraging to find that there are some disinterested foreign journals who see things in the correct perspective. We hope that our quarrelling friends would see the justice of this new movement.

The following is the letter of the Brahmin official with the comment of the *Manchester Guardian*.—

WORKING OF THE REFORMS.

THE BRAHMINS' LOT.

A correspondent sends "The Manchester Guardian" the following extract from the letter of a Brahmin official in Southern India:

My poor sons are able to get on smoothly through the grace of God in the midst of non-Brahmin administration. The British Government was encouraging Brahmins in the last century in consideration of their intelligence and education and their loyalty. They are now in a depressed condition thinking as to what to do for their future, as in their thirst for British education and encouragement they have lost all their propeties and deserted their homes. Non-Brahmins with below average education are now encouraged and the Brahmin minority is put down in all ways, socially and officially. The Brahmin villages abound in passed candidates who do not know what to do. I assure you that, excepting a few Brahmins here and there who have lost their senses, the majority are always loyal to the British Government, and appreciate the benefit of its administration. If you are pleased to peruse the 11th skandam of the Sri Bhagavatam ypu will observe that the Government will pass into the hands of Sudras towards the end of Kaliyuga. The lowwest castes are now forcibly and even against their will allowed to go through Brahmin quarters and to join all social functions. I beg to add and venture to assert that in a few years hence the word "Brahmin" will have to be expunged from the Census Report.

Commenting on the above "The Manchester Guardian" writes:—

There are still many who doubt whether the Iddian voter enfranchised under the Montagu reforms will ever learn to make his will effective. They fear that in practice he can do little more than hand over a blank cheque to professional politicians of the English educated class, who will write on it what they please. That this has not everywhere been the actual result may be seen from a letter written by an old-fashioned South Indiah Brahmin official which we publish elsewhere. What has actually happened in South India is something as follows. The Brahmins developed from being a priestly caste into an hereditary intellectual aristocracy. Uunder the British Raj they throve exceedingly. They were in the best position to take advantage of the offer of a Western education; they took it, and consequently secured a virtual monopoly of all posts in Govetnment service from the highest to the lowest, except for the few which the British reserved for themselves. Entrenched within the bureaucracy, and further fortified by ancient religious sanctions, their ascendancy under the British Raj was never seriously challenged till the Montagu reforms came into force. The Brahmins had supported the Montagu scheme, and those who were not Brahmins had opposed it bitterly on the assumption that the Brahmins would know spells wherewith to bind the non-Brahmin voter and that all the power won from the British would therefore merely go to reinforce the Brahmin ascendancy. But the event has shown that these assumptions were groundless. The non-Brahmin voter felt that the shoe which pinched him worst was not alien rule but the Brahmin ascendancy, and he returned a party whose one policy was to get rid of that ascendancy. The work has been put in hand, and perhaps, as is apt to happen where ascendancy has to be overthrown by the beginnings of democracy, more than a little injustice may have been done to individuals. Be that as it may, the fact remains that in at least one Indian province the newly enfranchised middle-class voter has shown that he knows how to make his weight felt.

ಮ್ಯಾಂಚೆಸ್ಟರ್ ಗಾರ್ಡಿಯನ್ನಿನ ಪ್ರತಿಧ್ವನಿ.

ಓರ್ವ ದಾಕ್ಷಿಣಾತ್ಯಬ್ರಾಹ್ಮಣ ಉದ್ಯೋಗಸ್ಥನ ಸಂತಾಪವನ್ನು ಕುರಿತು ಮ್ಯಾಂಚೆಸ್ಟರ್ ಗಾರ್ಡಿಯನ್ ಆಂಗ್ಲಪತ್ರಿಕೆಯು ಮಾಡಿರುವ ಈ ಕೆಳಗಣ ವ್ಯಾಖ್ಯಾನವು ಬಹುಸ್ವಾರಸ್ಯವಾಗಿರುತ್ತದೆ. ಈ ಉದ್ಯೋಗಿಯು ತನ್ನ ಸಂಕಟವನ್ನು ಮಾತ್ರ ಹೇಳಿಕೊಳ್ಳುವಲ್ಲಿ ತೃಪ್ತನಾಗಿಲ್ಲವು. ಪ್ರಜಾಧಿಪತ್ಯಸಾಧನದ ತೀವ್ರಗಮನಕ್ಕೂ, ರಾಜಕೀಯಸಂಬಂಧವಾದ ಪ್ರತಿಯೊಂದು ವಿಚಾರವು ಸರ್ವಸಮಾನವಾಗಿ ಮಾಡಲ್ಪಡುವುದಕ್ಕೂ ಪ್ರತಿಬಂಧಕವಾಗಿ ತನ್ನ ಪೂರ್ವಕಾಲದ ಪ್ರತಿಷ್ಠೆಯನ್ನುಳಿಸಿಕೊಳ್ಳಲು ತಕ್ಕ ಸಾಹಸವನ್ನು ಮಾಡುತ್ತ ನಮ್ಮನ್ನಾವರಿಸಿಕೊಂಡಿರುವ ಅನುದಾರಪಕ್ಷದವರ ಪ್ರತಿನಿಧಿಯಾಗಿ ವಾದಿಸುತ್ತಿರುವನು. ಈ ಅಸೂಯಾಳಿಗಳು ವಿಶ್ವಪ್ರಯತ್ನಪಟ್ಟಾಗ್ಯೂ ದೇಶವನ್ನೇ ಆವರಿಸುತ್ತಿರುವ ಪ್ರಜಾಧಿಪತ್ಯದ ಪ್ರಚಂಡ ಅಲೆಯನ್ನು ತಡೆಯಲು ಅವರಿಗೆ ಸಾಧ್ಯವಿಲ್ಲವಾದುದರಿಂದ, ಪೂರ್ವದ ದುಷ್ಟಪದ್ಧತಿಯು ನಿಧಾನವಾಗಿಯಾದರೂ ನಾಶವಾಗಲೇಬೇಕಾಗಿದೆ.

ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕಾಭಿಪ್ರಾಯವು ವಾಸ್ತವ್ಯವಾಗಿರುವುದಲ್ಲದೆ, ಬ್ರಿಟಿಷ್ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಹಿಂದುಸ್ಥಾನದ ಪ್ರಕೃತಸ್ಥಿತಿಯ ಅಭಿವೃದ್ಧಿಯನ್ನು ದರ್ಪಣದೋಪಾದಿಯಲ್ಲಿ ತೋರಿಸತಕ್ಕದಾಗಿದೆ. ಈ ಪತ್ರಿಕೆಯು ಹೇಳುವಂತೆ ವೈದಿಕವೃತ್ತಿಯ ಬ್ರಾಹ್ಮಣರು ಮೇಧಾವಿ ಶ್ರೀಮಂತರುಗಳಾಗಿ ಬೆಳೆದು ಬ್ರಿಟಿಷರ ಆಳ್ವಿಕೆಯ ನೂತನವಾತಾವರಣದಲ್ಲಿ ಚೆನ್ನಾಗಿ ಅಭಿವೃದ್ಧಿಗೆಬಂದಿರುವರು, ಮತ್ತು ಸರ್ಕಾರಿ ಉದ್ಯೋಗದಲ್ಲಿ ಬೇರೂರಿಕೊಂಡಿರುವರು. ಬ್ರಾಹ್ಮಣನು ರಾಜಕೀಯವಿಚಾರದಲ್ಲಿ ಪಂದ್ಯವಾಡುವನು ಮತ್ತು ಓಟರ ಸಮೂಹವನ್ನು ತನ್ನ ವಶಮಾಡಿಕೊಂಡು ಬ್ರಾಹ್ಮಣೇತರ ಅಭ್ಯರ್ಥಿಗಳಲ್ಲಿ ಒಬ್ಬರಮೇಲೊಬ್ಬರನ್ನೆತ್ತಿಕಟ್ಟಿ ಮೊದಲಿಗಿಂತಲೂ ತನ್ನ ಪ್ರಾಶಸ್ತ್ಯವನ್ನು ಭದ್ರಪಡಿಸಿಕೊಳ್ಳುವನು. ಆದರೆ ಈಚೆಗೆ ಆ ವಿಧವಾದಪ್ರಯತ್ನವು ಮದ್ರಾಸು, ಬೊಂಬಾಯಿನಲ್ಲೂ ತಕ್ಕಮಟ್ಟಿಗೆ ಮೈಸೂರಿನಲ್ಲೂ ಅಷ್ಟು ಫಲಕಾರಿಯಾಗುತ್ತಿಲ್ಲವು. ವಸ್ತುಸ್ಥಿತಿಯನ್ನು ಮರೆಮಾಚದೆ ಯಥಾವತ್ತಾಗಿ ಹೇಳುವಂತಹ ಅನ್ಯದೇಶದ ಪತ್ರಿಕೆಗಳಿರುವುದು ಬಹಳ ಸಂತೋಷಪ್ರದವೂ, ಉತ್ತೇಜನಕರವೂ ಆಗಿರುತ್ತದೆ.

ಬ್ರಾಹ್ಮಣ ಉದ್ಯೋಗಿಯ ಲೇಖವು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕಾಭಿಪ್ರಾಯದೊಡನೆ ಈ ಕೆಳಗೆ ಕೊಡಲ್ಪಟ್ಟಿದೆ.—

ನೂತನಸಂಸ್ಕರಣಪ್ರಯೋಗ.

ಬ್ರಾಹ್ಮಣರ ಅದೃಷ್ಟ.

ದಾಕ್ಷಿಣಾತ್ಯಬ್ರಾಹ್ಮಣ ಉದ್ಯೋಗಿಯ ಲೇಖದ ಮುಖ್ಯಾಂಶವು ಒಬ್ಬ ವಿಲೇಖಕನಿಂದ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಈ ಪ್ರಕಾರವಾಗಿ ಪ್ರಕಟಿಸಲ್ಪಟ್ಟಿರುವುದು.—

ಬ್ರಾಹ್ಮಣೇತರರ ರಾಜ್ಯಾಡಳಿತದಲ್ಲಿ ದೇವರ ಅನುಗ್ರಹದಿಂದ ನನ್ನ ಮಕ್ಕಳು ನಿರ್ವಹಿಸಿಕೊಂಡಿರಲು ಸಮರ್ಥರಾಗಿರುತ್ತಾರೆ. ಬ್ರಾಹ್ಮಣರ ಬುದ್ಧಿ, ವಿದ್ಯೆ ಮತ್ತು ರಾಜಭಕ್ತಿ ಇವುಗಳಿಗೆ ಮೆಚ್ಚಿ ಬ್ರಿಟಿಷ್ ಪ್ರಭುತ್ವದವರು ಕಳೆದ ಶತಮಾನದಲ್ಲಿ ಬ್ರಾಹ್ಮಣರನ್ನು ಪ್ರೋತ್ಸಾಹಿಸುತ್ತಿದ್ದರು. ಇವರು ಆಂಗ್ಲವಿದ್ಯೆ ಮತ್ತು ಪ್ರೋತ್ಸಾಹಗಳ ಆಕಾಂಕ್ಷೆಯಿಂದ ತಮ್ಮ ಆಸ್ತಿಗಳನ್ನೆಲ್ಲಾ ಹಾಳ್ಮಾಡಿಕೊಂಡು ಮತ್ತು ಜನ್ಮಸ್ಥಳಗಳನ್ನು ಬಿಟ್ಟು ಮುಂದೇನು ಮಾಡಬೇಕೆಂಬ ಯೋಚನೆಯಲ್ಲಿ ಬಹಳ ಹೀನಸ್ಥಿತಿಗೆ ಬಂದಿರುತ್ತಾರೆ. ಸಾಮಾನ್ಯ ವಿದ್ಯಾಬುದ್ಧಿಯುಳ್ಳ ಬ್ರಾಹ್ಮಣೇತರರು ಈಗ ಪ್ರೋತ್ಸಾಹಿಸಲ್ಪಡುತ್ತಿರುವರು ಮತ್ತು ಅಲ್ಪಸಂಖ್ಯಾಕರಾದ ಬ್ರಾಹ್ಮಣರು ಸಾಮಾಜಿಕವಿಚಾರದಲ್ಲೂ, ಅಧಿಕಾರದಲ್ಲೂ ಎಲ್ಲ ವಿಧದಲ್ಲೂ ಅಡಗಿಸಲ್ಪಟ್ಟಿರುವರು. ಬ್ರಾಹ್ಮಣರ ಗ್ರಾಮಗಳಲ್ಲಿ ವಿದ್ಯಾಪ್ರಶಸ್ತಿಗಳನ್ನು ಪಡೆದಿರುವ ಯುವಕರು ತುಂಬಿಕೊಂಡು ಮುಂದೇನುಮಾಡಬೇಕೆಂಬುದನ್ನು ಅರಿಯದಿರುವರು. ಅಲ್ಲಲ್ಲಿರತಕ್ಕ ಬುದ್ಧಿಗೆಟ್ಟ ಕೆಲ ಬ್ರಾಹ್ಮಣರ ವಿನಾ ಉಳಿದ ಬಹುಭಾಗದವರೆಲ್ಲರೂ ಬ್ರಿಟಿಷ್ ಪ್ರಭುತ್ವಕ್ಕೆ ಯಾವಾಗಳೂ ಬಹಳ ರಾಜಭಕ್ತಿಯಿಂದ ನಡೆದುಕೊಳ್ಳುತ್ತಿರುವರೆಂದು ಮತ್ತು ಅವರಾಳ್ವಿಕೆಯಿಂದುಂಟಾಗಿರುವ ಉಪಕಾರವನ್ನು ಸ್ಮರಿಸುತ್ತಿರುವರೆಂದು ನಾನು ಕಂಠೋಕ್ತವಾಗಿ ಹೇಳುವೆನು. ಶ್ರೀ ಭಾಗವತದಲ್ಲಿ 11 ನೆಯ ಸ್ಕಂದವನ್ನು ನೋಡಿದ್ದೆಯಾದರೆ ಕಲಿಯುಗಾಂತ್ಯದಲ್ಲಿ ರಾಜ್ಯಾಡಳಿತವು ಶೂದ್ರರ ಕೈವಶವಾಗುವುದೆಂದು ಹೇಳಲ್ಪಟ್ಟಿರುವುದು ನಿಮಗೆ ಗೊತ್ತಾಗುವುದು. ಅತ್ಯಂತ ಕನಿಷ್ಠಜಾತಿಯವರು ಈಗ ಬಲವಂತವಾಗಿಯೂ, ಅವರ ಮನಸ್ಸಿಗೆ ವಿರೋಧವಾಗಿಯೂ ಬ್ರಾಹ್ಮಣರ ಕೇರಿಗೆ ನುಗ್ಗಿಸಲ್ಪಡುತ್ತಿರುವರಲ್ಲದೆ ಸಾಮಾಜಿಕವಿಷಯಗಳಲ್ಲಿ ಬೆರಸಲ್ಪಡುತ್ತಿರುವರು. ಇನ್ನು ಕೆಲ ವರ್ಷಗಳ ತರುವಾಯ ಜನಪರಿಗಣಿತಿಯ ವರದಿಯಿಂದ ಬ್ರಾಹ್ಮಣಶಬ್ದವೇ ಅಳಿಸಲ್ಪಡಬೇಕಾಗುತ್ತದೆಂದು ಖಂಡಿತವಾಗಿಯೂ ಹೇಳುತ್ತೇನೆ.

ಈ ಲೇಖದಮೇಲೆ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಈಪ್ರಕಾರವಾಗಿ ವ್ಯಾಖ್ಯಾನಮಾಡಿರುತ್ತದೆ:—

ಮಾಂಟಗುಸಂಸ್ಕರಣದಪ್ರಕಾರ ಓಟಿಂಗ್ ಅಧಿಕಾರವನ್ನು ಪಡೆದ ಭಾರತೀಯನು ತನ್ನಿಷ್ಟಪ್ರಕಾರ ಸದ್ವಿನಿಯೋಗಮಾಡಬೇಕೆಂಬುದನ್ನು ಎಂದಿಗೂ ಕಲಿಯಲಾರನೆಂದು ಅನುಮಾನಿಸುವವರು ಈಗಲೂ ಅನೇಕರಿರುತ್ತಾರೆ. ಅವನು ಖಾಲಿ ಚೀಟಿಯನ್ನು ಇಂಗ್ಲಿಷ್ ವಿದ್ಯಾವಂತರಲ್ಲಿ ಕಸಬುದಾರಿ ರಾಜಕೀಯವೃತ್ತಿವಂತರ ಕೈಗೆ ಕೊಡುವನು. ಅವರು ಅದರಮೇಲೆ ತಮಗಿಷ್ಟಬಂದರೀತಿಯಲ್ಲಿ ಬರೆಯುವರೆಂಬ ಶಂಕೆಯಿದೆ. ಇದು ಸಾರ್ವತ್ರಿಕ ನಡಿಯುತ್ತಿಲ್ಲವೆಂಬುದು ನಾವು ಬೇರೊಂದುಕಡೆಯ (ಮೇಲ್ಭಾಗದ) ಲ್ಲಿ ಪ್ರಕಟಿಸಿರುವ ದಕ್ಷಿಣ ಇಂಡ್ಯಾದೇಶಸ್ಥನಾದ ವೃದ್ಧಾಚಾರದ ಬ್ರಾಹ್ಮಣಾಧಿಕಾರಿಯ ಲೇಖದಿಂದ ವ್ಯಕ್ತವಾಗುತ್ತದೆ. ದಕ್ಷಿಣ ಇಂಡ್ಯಾದಲ್ಲಿ ವಾಸ್ತವ್ಯವಾಗಿ ಏನು ನಡೆದಿರುತ್ತದೆಂಬುದು ಮುಂದೆ ಹೇಳಿರುವ ಪ್ರಕಾರವಾಗಿರುವುದು. ಬ್ರಾಹ್ಮಣರು ತಮ್ಮ ವೈದಿಕವೃತ್ತಿಯಿಂದ ವಂಶಾನುಗತ ಮೇಧಾವಿಗಳಾಗಿರುವರು; ಮತ್ತು ಬ್ರಿಟಿಷರ ಚಕ್ರಾಧಿಪತ್ಯದಲ್ಲಿ ಅತ್ಯಂತ ಉಛ್ರಾಯಸ್ಥಿತಿಗೆ ಬಂದರು. ಪಾಶ್ಚಾತ್ಯವಿದ್ಯೈಸೌಕರ್ಯವನ್ನು ಹೊಂದಲು ಅವರಿಗೆ ಬಹಳ ಅನುಕೂಲವಿದ್ದಿತು. ಅವರು ಆ ಅನುಕೂಲವನ್ನು ಹೊಂದಿ ಬ್ರಿಟಿಷರು ತಮ್ಮ ಸ್ವಂತಕ್ಕಾಗಿ ಕಾದಿಟ್ಟುಕೊಂಡುದರವಿನಾ ಉಳಿದ ಎಲ್ಲ ಚಿಕ್ಕದೊಡ್ಡ ಸರ್ಕಾರೀ ಕೆಲಸಗಳನ್ನು ಗುತ್ತಿಗೆ ಹಿಡಿದುಕೊಂಡರು. ಸರ್ಕಾರಿಯಧಿಕಾರಪ್ರಾಬಲ್ಯದ ಜತೆಗೆ ಆರ್ಷದಿಂದ ಬಂದ ಕುಲಪ್ರಾಶಸ್ತ್ಯವು ಸೇರಿಕೊಂಡು ಬ್ರಿಟಿಷ್ ಪ್ರಭುತ್ವದಲ್ಲಿ ಅವರ ಪ್ರಾಬಲ್ಯಕ್ಕೆ, ಮಾಂಟಗುಸಂಸ್ಕರಣವು ಅನುಷ್ಠಾನಕ್ಕೆ ಬರುವವರೆಗೂ ಲೇಶಮಾತ್ರವೂ ಚ್ಯುತಿಯಿರಲಿಲ್ಲವು. ಈ ಮಾಂಟಗುಸಂಸ್ಕರಣಕ್ಕೆ ಬ್ರಾಹ್ಮಣರು ಉತ್ತೇಜನವನ್ನು ಕೊಟ್ಟಿದ್ದರು, ಆದರೆ ಬ್ರಾಹ್ಮಣೇತರ ಓಟರುಗಳನ್ನು ತಮ್ಮ ಕಡೆಗೊಲಿಸಿಕೊಳ್ಳುವ ಮಾರ್ಗವನ್ನು ಬ್ರಾಹ್ಮಣರು ಚೆನ್ನಾಗಿ ಬಲ್ಲವರಾಗಿರುತ್ತಾರೆಂಬ ಮತ್ತು ಬ್ರಿಟಿಷರಿಂದ ಲಬ್ಧವಾಗಿರುವ ಸಾಮರ್ಥ್ಯವೆಲ್ಲವೂ ಬ್ರಾಹ್ಮಣರ ಔನ್ನತ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆಂಬ ಅಭಿಪ್ರಾಯದಿಂದ ಬ್ರಾಹ್ಮಣೇತರರು ಮಾತ್ರ ಸಂಸ್ಕರಣವನ್ನು ವಿರೋಧಿಸಿದ್ದರು. ಆದರೆ ಸದ್ಯಃಸ್ಥಿತಿಯಿಂದ ಅವರ ಆ ಊಹೆಯೆಲ್ಲವೂ ವ್ಯರ್ಥವಾಗಿ ಪರಿಣಮಿಸಿರುವುದು. ಬ್ರಾಹ್ಮಣೇತರ ಓಟರು ತನಗೆ ಪ್ರತಿಬಂಧಕವಾಗಿರುವುದು ಬ್ರಾಹ್ಮಣರ ಉಛ್ರಾಯಸ್ಥಿತಿಯಲ್ಲದೆ ಪರದೇಶೀಯರ ರಾಜ್ಯಾಡಳಿತವಲ್ಲವೆಂಬುದನ್ನು ಅರಿತುಕೊಂಡು ಆ ಔನ್ನತ್ಯವನ್ನು ತಗ್ಗಿಸಲೇರ್ಪಟ್ಟಿರುವ ಪಕ್ಷವನ್ನು ವಹಿಸುವವನಾಗಿರುವನು. ಈಗ ಕೈಗೊಳ್ಳಲ್ಪಟ್ಟಿರುವ ಪ್ರಜಾಧಿಪತ್ಯಪ್ರಾರಂಭೋದ್ಯಮದಿಂದ ಬ್ರಾಹ್ಮಣರ ಔನ್ನತ್ಯವನ್ನು ಕಡಿಮೆಮಾಡುವುದರಲ್ಲಿ ಕೆಲ ವ್ಯಕ್ತಿಗಳಿಗೆ ಕೊಂಚ ಅನ್ಯಾಯವುಂಟಾಗಿರಬಹುದು. ಅದು ಹಾಗಿರಲಿ. ಕನಿಷ್ಠಪಕ್ಷ ಒಂದು ದೇಶೀಯಸಂಸ್ಥಾನದಲ್ಲಾದರೂ ನೂತನಸಂಸ್ಕರಣದ ಪ್ರಕಾರ ಓಟಿಂಗ್ ಅಧಿಕಾರವನ್ನು ಪಡೆದಿರುವವನು ತನ್ನ ಶಕ್ತಿಯೆಷ್ಟಿರುತ್ತದೆಂಬುದನ್ನು ತೋರಿಸುವಮಟ್ಟಿಗಾದರೂ ತಿಳಿದುಕೊಂಡಿರುವನು.

ಬಾವಲಾಕೇಸೂ ಇಂದೂರು ಮಹಾರಾಜರೂ

ಬಾವಲಾಕೊಲೆಯು ನಡೆದಮೇಲೆ ಪ್ರಾಯಶಃ 1 ವರ್ಷ ಕಳೆದಾಗ್ಯೂ ಬೊಂಬಾಯಿನ ಪ್ರಜೆಗಳಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟ ಆಂದೋಳನವು ಕಡಿಮೆಯಾಗಲಿಲ್ಲವು. ಧನವಂತನೂ, ಮ್ಯುನಿಸಿಪಲ್ ಕೌನ್ಸಿಲರೂ ಆಗಿದ್ದ ಬಾವಲಾನು ಒಂದು ದಿವಸ ಮಂತಾಜಬೇಗಮ್ಮಳ ಜತೆಗೆ ಮೋಟಾರುಬಂಡಿಯಲ್ಲಿ ಕುಳಿತು ಸಂಚಾರಹೊರಟಾಗ ಕೆಲ ಪಟಾನರು ಇಂದೂರುಸಂಸ್ಥಾನದಿಂದ ಬಂದು ಮೋಟಾರಿನಲ್ಲಿದ್ದ ಬಾವಲಾನನ್ನು ಕೊಂದುಹಾಕಿ ವಿಚಾರಣೆಯು ನಡೆದಮೇಲೆ ಕೆಲರು ಶಿಕ್ಷಿಸಲ್ಪಟ್ಟ ಸಂಗತಿಯು ಎಲ್ಲರಿಗೂ ತಿಳಿದೇ ಇರುತ್ತದೆ.

ಇಂದೂರು ಮಹಾರಾಜರವರು.

ದೋಷಿಗಳನ್ನು ಶಿಕ್ಷಿಸಿದ ನ್ಯಾಯಮೂರ್ತಿಯುಕೂಡ ಇಂದೂರು ಮಹಾರಾಜರಿಗೆಷ್ಟರಮಟ್ಟಿಗೆ ಸಂಬಂಧವಿರುತ್ತದೆಂಬುದನ್ನು ಹೇಳಿಲ್ಲವು. ಆದರೆ ಒಂದು ಸಂಗತಿಯನ್ನು ಮಾತ್ರ ತಿಳಿಸಿರುವರು. ಅಪರಾಧಿಗಳು ಸ್ವಲಾಭಕ್ಕಾಗಿ ಮಾಡದೆ ಬೇರೆಯವರ ಪ್ರೇರಣೆಗಾಗಿಯೂ, ಲಾಭಕ್ಕಾಗಿಯೂ ಮಾಡಿದ ಕೃತ್ಯವೆಂದು ಹೇಳಿರುವರು. ಅಪರಾಧಿಗಳಲ್ಲಿ ಬಹಳ ಜನರು ಇಂದೂರಿನಲ್ಲಿ ದೊಡ್ಡ ಉದ್ಯೋಗದಲ್ಲಿದ್ದವರೆಂದೂ, ಈ ಕೊಲೆಗೆ ಕಾರಣಭೂತಳಾದ ಮುಮತಜ್ ಬೇಗಮ್ಮಳು ಮಹಾರಾಜರ ಬಳಿ ಕೊಂಚಕಾಲವಿದ್ದು ಈಚೆಗೆ ಅವರನ್ನು ಬಿಟ್ಟುಬಂದುದರಿಂದ ಇಂದೂರು ಮಹಾರಾಜರೇ ಸ್ವಲ್ಪಮಟ್ಟಿಗೆ ಈ ಕೊಲೆಗೆ ಕಾರಣರೆಂದೂ ಅನೇಕರು ಅಭಿಪ್ರಾಯಪಡುವರು. ಆದರೆ ಹೀಗೆಯೇ ಸರಿಯೆಂದು ನಿರ್ಧರವಾಗಿಲ್ಲವು.

ಈ ಮಧ್ಯೆ ಮಹಾರಾಜರವರಿಗೆ ಎಷ್ಟರಮಟ್ಟಿಗೆ ಸಂಬಂಧವಿದೆ ಎಂದು ತಿಳಿದುಕೊಳ್ಳುವುದಕ್ಕಾಗಿ ಸರ್ಕಾರದವರು ಒಂದು ಕಮಿಷನ್ನನ್ನು ಗೊತ್ತುಮಾಡಲು ಯೋಚಿಸಿರುವರು. ಈ ಕಮಿಷನ್ನಿನಲ್ಲಿ 5 ಜನ ಮೆಂಬರಿರುವರು. ಅವರಲ್ಲಿ ಇಬ್ಬರು ದೇಶೀಯಸಂಸ್ಥಾನಾಧಿಪತಿಗಳೂ, ಇಬ್ಬರು ಹೈಕೋರ್ಟ್ ನ್ಯಾಯಮೂರ್ತಿಗಳೂ, 5 ನೆಯವರು ಇಂಡಿಯಾ ಪ್ರಭುತ್ವದ ದೊಡ್ಡ ಅಧಿಕಾರಿಯೂ ಆಗಿರುವರು. ಮಹಾರಾಜರವರು ಇಷ್ಟಪಟ್ಟಲ್ಲಿ ಈ ಕಮಿಷನ್ನಿನವರು ಅವರ ಸಾಕ್ಷಿ ತೆಗೆದುಕೊಳ್ಳುವರು, ಇಲ್ಲವಾದಲ್ಲಿ ಪ್ರತ್ಯೇಕವಾಗಿ ನ್ಯಾಯಮೂರ್ತಿಯಿದಿರಿಗೆ ಕೇಸು ಜರುಗುವುದು. ಇದುವರೆಗೂ ಮಹಾರಾಜರು ತಮ್ಮ ಉದ್ದೇಶವನ್ನು ತಿಳಿಸಿಲ್ಲವು. ಬಹುಶಃ ಕಮಿಷನ್ನಿನವರಿಂದಲೇ ವಿಚಾರಿಸಲ್ಪಡಲು ಅಂಗೀಕರಿಸಿರಬಹುದೆಂದು ತೋರುತ್ತದೆ. ಒಂದುವೇಳೆ ಕಮಿಷನ್ನಿನವರು ವಿಚಾರಿಸುವುದಾದರೆ ಎಲ್ಲಿ ವಿಚಾರಣೆಯು ನಡೆಯಬೇಕೆಂಬ ಪ್ರಶ್ನೆ ಹುಟ್ಟುವುದೋ, ಇಂದೂರು ಪಟ್ಟಣದಲ್ಲಿ ಜರುಗುವುದೋ.?

ಇಂದೂರು ಪ್ರಜೆಗಳು.

ಮಹಾರಾಜರು ಹೇಗಿದ್ದರೂ ಇಂದೂರು ಪ್ರಜೆಗಳಿಗೆ ಮಾತ್ರ ರಾಜರಮೇಲಿನ ಪ್ರೇಮವು ಲೇಶಮಾತ್ರ ಕಡಿಮೆಯಾಗಿಲ್ಲವು. ಬಾವಲಾಕೊಲೆಯ ವಿಚಾರದಲ್ಲಿ ಇಂದೂರು ಮಹಾರಾಜರಿಗೇನೂ ಸಂಬಂಧವಿಲ್ಲವೆಂದು ಅನೇಕ ವಿಧವಾಗಿ ಸಭೆಗಳನ್ನು ಮಾಡಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು. ಈ ಸಭೆಗಳ ತೀರ್ಮಾನವು ಸರ್ಕಾರದವರಿಗೆ ವ್ಯತಿರಿಕ್ತವಾಗಿರುವುದರಿಂದ ದಿವಾನರು ಈ ವಿಷಯವನ್ನು ಕುರಿತು ಸಭೆಗಳನ್ನು ಮಾಡಕೂಡದೆಂದು ಆಜ್ಞಾಪಿಸಿದರು. ಪ್ರಜೆಗಳಿಗೆ ಮಾತ್ರ ಸರ್ಕಾರದವರು ಪ್ರವೇಶಿಸುವುದು ಇಷ್ಟವಿಲ್ಲವು. ಎನ್. ಸಿ. ಕೇಲ್ಕರ್‌ರವರು ಈವರೆಗೆ ಈ ಸಂಗತಿಯಮೇಲೆ ಯಾವ ಅಭಿಪ್ರಾಯವನ್ನೂ ಕೊಡದಿದ್ದವರು, ಕಳೆದವಾರ ತಮ್ಮ "ಕೇಸರಿ" ಪತ್ರಿಕೆಯಲ್ಲಿ ಮಹಾರಾಜರಿಗೆ ಒಳ್ಳೇ ಸೂಚನೆಯನ್ನು ಕೊಟ್ಟಿರುವರು. ಇವರಿಗೆ ರಾಜರೊಡನೆ ಅನೇಕ ವಿಷಯಗಳಲ್ಲಿ ವಿರುದ್ಧಾಭಿಪ್ರಾಯ ವಿದ್ದಾಗ್ಯೂ ತಮ್ಮ ರಾಜಭಕ್ತಿಯನ್ನು ಮಾತ್ರ ಬಿಟ್ಟಿಲ್ಲ. ಇವರು ರಾಜರು ಕಷ್ಟದಶೆಯಲ್ಲಿರುವಾಗ್ಗೆ ಮಹಾರಾಷ್ಟ್ರರೆಲ್ಲರೂ ಒಟ್ಟುಗೂಡಿ ರಾಜರಿಗೆ ಸಹಾಯಮಾಡಬೇಕೆಂದೆಚ್ಚರಿಸಿರುವರು. ಸ್ವದೇಶರಾಜರ ವಿಷಯದಲ್ಲಿ ಸರ್ಕಾರದವರು ಕಾರ್ಯಭಾಗನಡಿಸುವುದಾದಲ್ಲಿ ತಾವು ಎಲ್ಲ ವಿಷಯದಲ್ಲೂ ಸ್ವದೇಶರಾಜರಿಗೇ ಸಹಾಯಮಾಡುತ್ತೇನೆಂದು ಹೇಳಿರುವರು. ಆಂಗ್ಲಚರಿತ್ರೆಯಲ್ಲಿ ಇಂತಹ ಕೇಸುಗಳು ಅನೇಕವಾಗಿ ಥಾಮಸ್ ಆಥ್‌ಬೆಕೆಟ್ಟು ಮಾದ್ರಿ ಜರುಗಿರುವುದಾದರೂ ಅಲ್ಲಿ ಯಾವ ರಹಸ್ಯಕಾರ್ಯವೂ ನಡಿಸಲ್ಪಟ್ಟಿಲ್ಲವೆಂದೂ ಆಂಗ್ಲೇಯರೂ, ಪರದೇಶಸ್ಥರೂ ಭರತಖಂಡದಲ್ಲಿ ಅನೇಕ ತಪ್ಪನ್ನು ಮಾಡಿದ್ದಾಗ್ಯೂ ಸರ್ಕಾರದವರು ಯಾವ ಕಾರ್ಯಭಾಗವನ್ನೂ ಮಾಡದೆ, ಸ್ವದೇಶಸಂಸ್ಥಾನಾಧೀಶರು ಯಾವುದನ್ನೊ ಮಾಡಿದಾಗ ಮಾತ್ರ ಸರ್ಕಾರದವರು ಇಷ್ಟು ಕಾರ್ಯಭಾಗವನ್ನು ನಡಿಸುವುದು ತಪ್ಪೆಂದು ಬರೆದಿರುವರು. ರಾಜರವರಿಗೆ ಕೊಟ್ಟ ಸಲಹೆಯೇನೆಂದರೆ— ನಿಜವಾಗಿ ರಾಜಪುತ್ರನ ಧೈರ್ಯವನ್ನು ತೋರಿಸಲಿಕ್ಕೆ ಇದೇ ಸಮಯವೆಂದು ಹೇಳಿರುವರು. ಏರ್ಪಡಿಸಿದ ಕಮಿಷನ್ನಿನ ಮುಂದೆ ಹೋಗಿ ಯಥಾರ್ಥವನ್ನು ತಿಳಿಸಿ ನಿರ್ದೋಷಿಯೆಂದೆನಿಸಿಕೊಂಡು ದಿಟ್ಟವಾಗಿ ರಾಜ್ಯಕ್ಕೆ ಬರಬೇಕೆಂದೂ, ಇಲ್ಲವಾದರೆ ಹಾಗೆಯೇ ದಿಲ್ಲಿಯಿಂದಲೇ ರಾಜ್ಯತ್ಯಾಗಮಾಡಿದಲ್ಲಿ ತಪ್ಪಿಲ್ಲವೆಂದರು. ಅದುಕಾರಣ ಎಲ್ಲ ವಿಷಯದಲ್ಲೂ ಮಹಾರಾಜರಿಗೆ ಸಹಾಯಮಾಡಿ ನಿಜವು ಹೊರಪಡುವವರೆಗೂ ಎಷ್ಟು ಕಷ್ಟಬಂದರೂ ಮಹಾರಾಷ್ಟ್ರರೆಲ್ಲರೂ ತಮ್ಮ ರಾಜರಪಕ್ಷವನ್ನು ಹಿಡಿದಿರಬೇಕೆಂದು ಎಚ್ಚರಿಸಿರುವರು.

ಮಹಾರಾಜರು ಕಮಿಷನ್ನು ಏರ್ಪಡುವುದಕ್ಕೆ ಮುಂಚೆಯೇ ತಮ್ಮಿಷ್ಟಿಗೆ ತಾವೇ ರಾಜ್ಯವನ್ನು ತ್ಯಜಿಸುವರೆಂಬ ವದಂತಿಯಿದೆ. ಮಹಾರಾಜರ ಕುಮಾರರು ಇಂಗ್ಲೆಂಡಿಗೆ ಈಗ ಹೋಗಬೇಕಾಗಿದ್ದಿತಾದರೂ ಆ ಪ್ರಯಾಣವನ್ನು ಮಾನಸಿಕ ಮಾಡಿರುವರು. ಮಹಾರಾಜರ ಸೈನ್ಯದಲ್ಲಿ ಸುಮಾರು 4500 ಮಂದಿಯಿರುವರು. ಅದರಲ್ಲಿ ಅಶ್ವದಳ, ಕಾಲ್ಭಟರು, ವಿಮಾನದಳ ಮೊದಲಾದವು ಇರುವುವು. ಈ ಮಧ್ಯೆ ಅಂದರೆ ಎರಡು ದಿವಸಗಳಹಿಂದೆ ಅಪ್ಪಣೆಮಾಡಿದಪ್ರಕಾರ ಅವರ ವಶದಲ್ಲಿದ್ದ ಮದ್ದುಗುಂಡುಸಾಮಗ್ರಿಗಳನ್ನು ಸೇನಾಧಿಪತಿ ವಶಮಾಡಲ್ಪಡಲೇರ್ಪಾಟಾಯಿತು. ಇದರಿಂದ ಮಹಾರಾಜರು ಕಮಿಷನ್ ಇದಿರಿಗೆ ನಿಂತಾರೆಂದು ಕೊಂಚಮಟ್ಟಿಗೆ ಊಹಿಸಬಹುದು. ಕಮಿಷನ್ನಿನವರಾಗಲಿ ಮತ್ತೆ ಬೇರೆ ಸರ್ಕಾರಿಯುದ್ಯೋಗಸ್ಥರಾಗಲಿ, ಇಂದೂರಿಗೆ ಬಂದ ಉದ್ರೇಕಪೀಡಿತರಾದ ಸೈನಿಕರಾಗಲಿ, ಪ್ರಜೆಗಳಾಗಲಿ ಅವರಿಗೆ ಹಾನಿಮಾಡಲು ಅವಕಾಶವಿಲ್ಲದಂತೆ ದಿವಾನರುಯೇರ್ಪಡಿಸಿರುವರು. ದಿವಾನರು ದೊಡ್ಡವಕೀಲರುಗಳನ್ನು ಬರಮಾಡಿಕೊಂಡು ಅವರ ಸಲಹೆಯನ್ನು ತೆಗೆದುಕೊಳ್ಳುತ್ತಿರುವರು. ಇಂದೂರು ಸಂಸ್ಥಾನದ ವಕೀಲರಾಗಿರುವ ಸರ್ ಶಿವಸ್ವಾಮಿಅಯ್ಯರ್‌ರವರಿಗೆ ತಿಂಗಳಿಗೆ 6,000 ರೂ. ಸಂಬಳ ದೊರೆಯುವುದಂತೆ. ಇವರು ಈ ಮಧ್ಯೆ ಇಂದೂರಿನಲ್ಲಿರಲಿಲ್ಲವು. ಈವರೆಗೆ ವೈಸ್‌ರಾಯರ ಕಾರ್ಯನಿರ್ವಾಹಕ ಕೌನ್ಸಿಲ್‌ಸಭ್ಯರಾಗಿದ್ದ ಸರ್ ತೇಜ್ ಬಹದ್ದೂರು ಸಪ್ರುಯವರಿಗೆ ದಿನ 1 ಕ್ಕೆ 1,000 ರೂ. ಕೊಟ್ಟು ಅವರ ಸಲಹೆಯನ್ನು ಕೇಳುತ್ತಿರುವರು. ಇಷ್ಟೇ ಅಲ್ಲದೆ ಕೊಲ್ಲಾಪುರಸಂಸ್ಥಾನಕ್ಕೆ ಈವರೆಗೆ ದಿವಾನರಾಗಿದ್ದ ರಘುನಾಥರಾವ್ ಸಬ್ನೀಸ್‌ರವರನ್ನೂ ಬರೋಡಾದಿವಾನರಾದ ಮನುಭಾಯಿ ಮೆಹತಾಯವರನ್ನೂ ಕರೆಯಿಸಿಕೊಂಡು ಅವರುಗಳ ಸಲಹೆಯನ್ನು ತೆಗೆದುಕೊಳ್ಳುತ್ತಿರುವರು. ಇಂದೂರು ಮಹಾರಾಜರವರು ಈ ತಿಂಗಳ ತಾ|| 10 ರಲ್ಲಿ ಸರ್ಕಾರಕ್ಕೆ ಯಾವ ಸಂಗತಿಯನ್ನೂ ತಿಳಿಸಬೇಕಾಗಿದ್ದಿತಾದರೂ ಈವರೆಗೂ ಕಮಿಷನ್ ವಿಷಯವಾಗಿ ಅವರ ಉದ್ದೇಶವನ್ನು ತಿಳಿಸಿಲ್ಲವು. ಒಂದೆರಡುದಿನಗಳಲ್ಲಿ ತಿಳಿಸಬಹುದು. ಅದುಕಾರಣ ಕೇಸು ಹೇಗೆ ಪರಿಣಮಿಸುವುದೆಂದು ಹೇಳಲಿಕ್ಕಿಲ್ಲವು. ಇಲ್ಲಿ ಪ್ರಜೆಗಳಿಗೆ ಈ ವಿಷಯವು ಬಹಳ ಕಳವಳವನ್ನುಂಟುಮಾಡಿದೆ. ಎಂದು ಬೊಂಬಾಯಿಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸ್ವದೇಶದ ವೃತ್ತಾಂತಗಳು.

ರಾಜಕೋಟೆಯಲ್ಲಿ ನಡೆಯುವ ಕಾಶ್ಮೀರ್ ಮಹಾರಾಜರವರ ವಿವಾಹಮಹೋತ್ಸವದಲ್ಲಿ ವಧೂವರರಿಗೆ ನಮ್ಮ ಶ್ರೀಮನ್ ಮಹಾರಾಜರವರ ಪರವಾಗಿ ವಸ್ತ್ರಾಭರಣಗಳನ್ನೋದಿಸಲು ಅರಮನೆಯ ಅಧಿಕಾರಿಗಳು ತೆಗೆದುಕೊಂಡು ಹೋಗಿರುತ್ತಾರೆ.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲು ಟ್ರಸ್ಟಿಗಳಲ್ಲೊಬ್ಬರಾಗಿದ್ದ ಮ|| ಬಿ. ಬಸವಾರಾಧ್ಯರು ಆ ಉದ್ಯೋಗವನ್ನು ಬಿಟ್ಟುದರಿಂದ ಶ್ರೀರಂಗಪಟ್ಟಣದ ಮುನಸೀಫರಾದ ಮ|| ಎಚ್. ಕೆ. ವೀರಬಸವಯ್ಯನವರು ಟ್ರಸ್ಟಿಯಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಚಳಿಯು ಕಡಿಮೆಯಾಗಿ ಬಿಸಲಿನತಾಪವು ಹೆಚ್ಚಾಗುತ್ತಿದೆ. ನೀರಿನ ಅಭಾವದಿಂದಲೋ, ಮತ್ತಾವ ಕಾರಣದಿಂದಲೋ ಮಟ್ಟಮಧ್ಯಾನ್ಹದವೇಳೆ ನಲ್ಲಿಗಳಲ್ಲಿ ನೀರು ನಿಲ್ಲಿಸಲ್ಪಡುತ್ತಿರುವುದರಿಂದ ಪರಸ್ಥಳದ ಜನರು ಕುಡಿಯಲು ನೀರಿಲ್ಲದೆ ಬಾಯಾರಿಕೆಯಿಂದ ಬಹು ತಾಪತ್ರಯ ಪಡುತ್ತಿರುವರು. ಅದುಕಾರಣ ಆ ಶಾಖಾಧಿಕಾರಿಗಳು ಬೇರೆ ವೇಳೆಗಳಲ್ಲಿ ನಿಲ್ಲಿಸಿ ಒಳ್ಳೇ ಮಧ್ಯಾಹ್ನದಲ್ಲಿ ನೀರನ್ನು ಬಿಡುವಂತೆ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.

ಮೈಸೂರುಸಂಸ್ಥಾನದ ಪರಸ್ಪರಸಹಾಯಸಂಘಗಳ ರಿಜಿಸ್ಟ್ರಾರವರಾದ ಮ|| ಕೆ.ಎಚ್. ರಾಮಯ್ಯ, ಎಂ.ಎ., ಬ್ಯಾರಿಸ್ಟರ್‌ರವರು ತಮ್ಮ ಜ್ಯೇಷ್ಠಪುತ್ರಿ ಸೌ|| ಯಶೋದಮ್ಮನನ್ನು ರಾಜಧಾನಿಯಲ್ಲಿ ಅಡ್ವೋಕೇಟರೂ, ಮ್ಯುನಿಸಿಪಲ್ ಕೌನ್ಸಿಲರೂ, ರಿಟೈರ್ಡ್ ಸಬ್‌ಜಡ್ಜಿಯವರಾದ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರ ಕುಮಾರರೂ ಆದ ಮ|| ಹೆಚ್. ಸಿ. ದಾಸಪ್ಪ, ಬಿ.ಎ., ಎಲ್‌ಎಲ್.ಬಿ., ಇವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ಬರುವ ಮಾರ್ಚ್ ತಾ|| 4 ರಲ್ಲಿ ಬೆಂಗಳೂರಿನಲ್ಲಿ ನಡೆಯಿಸುವವರಾಗಿರುವರು. ಮ|| ರಾಮಯ್ಯನವರ ಅಂತಸ್ತಿಗೆ ತಕ್ಕ ಜಾಮಾತೃವುದೊರೆತುದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಬೆಂಗಳೂರು ಕಾರಾಗೃಹದಲ್ಲಿ ಬಂದಿಗಳಾಗಿರುವ ಥೋಂಡಿರಾವ್, ಲಕ್ಷ್ಮಣರಾವ್ ಮತ್ತು ಶಂಕರರಾವ್ ಈ ಮೂವರು ಕಳೆದ ತಾ|| 29-11-1924 ರಲ್ಲಿ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯದೇವಸ್ಥಾನದ ಸಮೀಪದಲ್ಲಿರುವ ಒಂದುಮನೆಗೆ ನುಗ್ಗಿ ಪದಾರ್ಥಗಳನ್ನು ಅಪಹರಿಸಿಕೊಂಡು ತಮಗೆ ಅಡ್ಡಿಯಾಗಿಬಂದ ವೃದ್ಧಬ್ರಾಹ್ಮಣನನ್ನು ಹೊಡೆದು ಕೊಂದರೆಂಬ ಅಪರಾಧದಮೇಲೆ ಮೈಸೂರು ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಕಳೆದ ತಾ|| 17-2-26ರಲ್ಲಿ ರಾಜಧಾನಿಯಲ್ಲಿ ವಕೀಲರಾಗಿರುವ ಮ|| ಬಿ.ಎಸ್. ಪುಟ್ಟಸ್ವಾಮಿ ಬಿ.ಎ.,ಬಿ.ಎಲ್., ರವರು ಅಪರಾಧಿಗಳಿಂದ ಫೀಜನ್ನು ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಅವರಪರ ವಾದಿಸಿ ಅವರುಗಳು ನಿರ್ದೋಷಿಗಳೆಂದು ಸ್ಥಾಪಿಸಿದುದರಮೇಲೆ ಜ್ಯೂರಿಗಳ ಏಕಾಭಿಪ್ರಾಯದಿಂದ ದೋಷಮುಕ್ತರಾದರೆಂದು ಗೊತ್ತಾಗುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮಿ|| ಟಿ. ಎಸ್. ಅಲ್ಲಿಶಾರ್ವರವರು ಸಂಪದಭ್ಯುದಯಪತ್ರಿಕೆಯ ಪ್ರೊಪ್ರೈಟರಾದ ಮ|| ಎಂ. ವೆಂಕಟಕೃಷ್ಣಯ್ಯನವರಮೇಲೂ, ಪತ್ರಿಕಾಸಂಪಾದಕರಾದ ಮ|| ಎಂ. ಎಸ್. ಲಕ್ಷ್ಮಣರಾಯರಮೇಲೂ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ಮಾಡಿದ್ದ ವಿವಾದದಲ್ಲಿ ಮ್ಯಾಜಿಸ್ಟ್ರೇಟರು ಉಭಯಪಕ್ಷದ ಆರ್ಗ್ಯುಮೆಂಟನ್ನು ಕೇಳಿ ಕಳೆದ ತಾ|| 15ರಲ್ಲಿ ಮ|| ವೆಂಕಟಕೃಷ್ಣಯ್ಯನವರನ್ನು ದೋಷಮುಕ್ತರನ್ನಾಗಿಮಾಡಿದರು, ಮತ್ತು ಪಿನಲ್ ಕೋಡ್ 500 ನೇ ಸೆಕ್ಷನ್ ಪ್ರಕಾರ ತಪ್ಪುಮಾಡಿರುತ್ತೀರೆಂದು ಎರಡನೇ ಅಪರಾಧಿಮೇಲೆ ಛಾರ್ಜು ಮಾಡಿದರು. ಎರಡನೆಯ ಅಪರಾಧಿಯು ದೋಷಮುಕ್ತತೆಗಾಗಿ ತನ್ನ ಕಡೆಯ ಸಾಕ್ಷಿ ವಿಚಾರಣೆ ಮಾಡಬೇಕಾಗಿದೆ. ಫಿರ್ಯಾದಿಯನ್ನು ಪುನಃ ಪಾಟಿಸವಾಲ್ಮಾಡಲು ಈ ತಾ|| 27 ಕ್ಕೆ ಅಡ್ಜರ್ನ್ ಮಾಡಲ್ಪಟ್ಟಿದೆ.

ರಾಜಧಾನಿಯ ಪೌರಸಾಮಾಜಿಕ ಸಂಘದವರು ಶಿಶುಗಳ ರಕ್ಷಣ ಮತ್ತು ಪ್ರದರ್ಶನಗಳನ್ನು ಕಳೆದ ಸೋಮವಾರ ಒಂದನೆಯ ಕೌನ್ಸಿಲರಾದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರ ಅಧ್ಯಕ್ಷತೆಯಲ್ಲಿ ಆರಂಭಿಸಿ ಗುರುವಾರದ ವರೆಗೂ ಟವುನ್ ಹಾಲಿನಲ್ಲಿ ನಡೆಯಿಸಿದರು. ಶಿಶುಗಳ ಪೋಷಕರುಗಳಿಗೆ ಅವುಗಳ ಸಂರಕ್ಷಣೆಯ ವಿಚಾರವಾಗಿ ಡಾಕ್ಟರುಗಳಿಂದಲೂ ಇತರ ಅನುಭವಸ್ಥರಿಂದಲೂ ತಿಳುವಳಿಕೆಯು ಕೊಡಲ್ಪಟ್ಟಿತು. ಮತ್ತು ಆರೋಗದೃಢಕಾಯಗಳಾಗಿ ಬೆಳೆದಿರುವ ಮಕ್ಕಳಿಗೆ ಬಹುಮಾನಗಳು ಕೊಡಲ್ಪಟ್ಟವು. ಈ ಪ್ರದರ್ಶನವನ್ನು ನೋಡಲು ಜನರು ಮುಖ್ಯವಾಗಿ ಸ್ತ್ರೀಯರು ಬರುವುದಕ್ಕಾಗಿ ಪ್ರೋತ್ಸಾಹಗಳು ಕಲ್ಪಿಸಲ್ಪಟ್ಟಿದ್ದುವು. ಈ ಪ್ರಯತ್ನವು ಸ್ತುತ್ಯವಾದುದಾದರೂ, ಮಕ್ಕಳ ಮುಖ್ಯ ಜೀವನಾಧಾರವಾದ ಗೋಕ್ಷೀರವು ನೀರು ಮಿಶ್ರವಿಲ್ಲದೆ ಬಡವರಿಗೆ ಸುಲಭ ಬೆಲೆಗೆ ದೊರಕುವಂತೆ ಮಾಡುವುದು ಅತ್ಯವಸರವೂ ಅವಶ್ಯವೂ ಆಗಿರುವುದರಿಂದ ಪೌರಸಾಮಾಜಿಕಸಂಘದವರು ಅದಕ್ಕೆ ತಕ್ಕ ಪ್ರಯತ್ನಮಾಡುವವರಾಗಬೇಕೆಂದು ಸೂಚಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಕಾಶ್ಮೀರಸಂಸ್ಥಾನದಲ್ಲಿ ಹೊಸದಾಗಿ ರಾಜ್ಯಪಟ್ಟಾಭಿಷಿಕ್ತರಾದ ರಾಜಾಹರಿಸಿಂಗರವರು ರಾಜ್ಯಸಿಂಹಾಸನಾರೂಢರಾದ ಕಾಲದಲ್ಲಿ ವೇಶ್ಯಾನರ್ತನಕ್ಕಾಗಿ ಒಂದುಲಕ್ಷ ರೂಪಾಯಿ ಖರ್ಚುಮಾಡಿದರಂತೆ!

ಬೊಂಬಾಯಿನಲ್ಲಿ 50 ಸಾವಿರ ವೇಶ್ಯೆಯರೂ 900 ಅವರ ಮನೆಗಳೂ ಇರುವುದಾಗಿ ತಿಳಿದುಬಂದಿದೆ. ಈ ಮನೆಗಳನ್ನು ಟೌನಿನಿಂದ ತೆಗೆದು ಬೇರೆಕಡೆಗೆ ಹಾಕಬೇಕು ಅಥವಾ ಪ್ರತ್ಯೇಕವಾದ ಸ್ಥಳದಲ್ಲಿ ಏರ್ಪಡಿಸಬೇಕು ಎಂದು ಅಲ್ಲಿನ ಸ್ತ್ರೀಸಮಾಜದವರೆಲ್ಲ ದೊಡ್ಡ ಸಭೆಸೇರಿ ನಿಶ್ಚಯಿಸಿ ಈ ಪ್ರಸ್ತಾವವನ್ನು ಸರ್ಕಾರಕ್ಕೂ ಮ್ಯುನಿಸಿಪಾಲಿಟಿಗೂ ವಿಜ್ಞಾಪಿಸಿಕೊಳ್ಳಬೇಕಾಗಿ ಗೊತ್ತುಮಾಡಿದರು.

ಮೆಟ್ಟೂರುಬಳಿ ಕಾವೇರಿನದಿಗೆ ಅಣೆಕಟ್ಟನ್ನು ಕಟ್ಟಲು ಮುಂದಿನ ಸಾಲಿನಲ್ಲಿ ಮದ್ರಾಸ್ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡುವವರಾಗಿರುವರು. ಈ ಹಣವನ್ನು ಇಂಡಿಯಾ ಸರ್ಕಾರದವರಿಂದ ಸಾಲವಾಗಿ ಪಡೆಯುವರು. ಪೈಕಾರ ಎಂಬಲ್ಲಿಯೂ ಮತ್ತೊಂದು ಅಣೆಕಟ್ಟನ್ನು ಕಟ್ಟಲು ಆ ಸಾಲಿನಲ್ಲಿ ಪ್ರತ್ಯೇಕವಾಗಿ ಹತ್ತುಲಕ್ಷ ರೂಪಾಯಿಗಳನ್ನು ಖರ್ಚುಮಾಡುವರು.

ವಿಲ್ಲಿಪುತ್ತೂರು ಎಂಬ ಸ್ಥಳದಲ್ಲಿ ಒಬ್ಬ ಯೋಗಿಯು ಸ್ವೇಚ್ಛೆಯಿಂದ ಭೂಮಿಯಲ್ಲಿ ಸಜೀವವಾಗಿ ಹೂಳಲ್ಪಟ್ಟು ಮಣ್ಣಿನಿಂದ ಮುಚ್ಚಲ್ಪಟ್ಟಿದ್ದನು. 4 ದಿನಗಳಮೇಲೆ ಪೋಲೀಸರು ಈ ಸಂಗತಿಯನ್ನು ತಿಳಿದು ಸಮಾಧಿಯನ್ನು ಕಿತ್ತುನೋಡುವಲ್ಲಿ ಯೋಗಿಯು ಪ್ರಾಣದಿಂದಿದ್ದು ಮೇಲಕ್ಕೆದ್ದುಬಂದನು. ಇದರಿಂದ ಸಮಸ್ತರಿಗೂ ಪರಮಾಶ್ಚರ್ಯವಾಯಿತು. ಪೋಲೀಸಿನವರು ನಡೆದ ಸಂಗತಿಯನ್ನು ವಿಚಾರಿಸಿಕೊಂಡು ಇನ್ನುಮುಂದೆ ಈ ರೀತಿ ಮಾಡುವುದಿಲ್ಲವೆಂದು ಯೋಗಿಯಿಂದ ಬರೆಯಿಸಿಕೊಂಡು ಅವನನ್ನು ಬಿಟ್ಟುಬಿಟ್ಟರು.

ಪ್ರತಿವರ್ಷವೂ ಹಿಂದುಸ್ಥಾನದಿಂದ ಪರದೇಶಕ್ಕೆ ವ್ಯಾಪಾರನಿಮಿತ್ತವಾಗಿ ೬ಲಕ್ಷ ದನಗಳು ಸಾಗಿಹೋಗುತ್ತಿರುವುವು. ಮಾಂಸನಿಮಿತ್ತವಾಗಿ ೫೦ ಲಕ್ಷ ದನಗಳು ಹತವಾಗುತ್ತಿರುವುವು. ಒಟ್ಟು ೫೬ ಲಕ್ಷ ದನಗಳು ಪ್ರತಿವರ್ಷವೂ ಹಿಂದೂಸ್ಥಾನದ ಕೈಬಿಟ್ಟುಹೋಗುತ್ತವೆಂದು ಹೇಳಲಾಗಿದೆ. ಹೀಗಾದು

ದರಿಂದಲ್ಲವೆ ಒಂದಕ್ಕೆ ನಾಲ್ಕರಷ್ಟು ಬೆಲೆಯನ್ನು ಕೊಟ್ಟರೂ ಅಪ್ಪಟಾ ಹಾಲು ತುಪ್ಪವು ಸಿಕ್ಕದಿರುವುದು ? ಮತ್ತು ಹಿಂದೂಸ್ಥಾನದ ಕೃಷಿಜೀವನವು ದಿನೇದಿನೇ ಶೋಚನೀಯಾವಸ್ಥೆಯನ್ನು ಹೊಂದುತ್ತಿರುವುದು ?

ಬರೋಡಾಸಂಸ್ಥಾನದ ಸೇನಾಧಿಪತಿ ಹೆಸ್ಕೆತ್‌ರವರ ಹೆಂಡಿತಿಯ ಶವವು ಕುದುರೆ ಪಂದ್ಯ ನಡೆಯುವ ಬೈಲಿನ ನಿರ್ಜನ ಪ್ರದೇಶದಲ್ಲಿರುವ ಒಂದು ಬಾವಿಯಲ್ಲಿ ತೇಲುತ್ತಿದ್ದಿತು. ಆಕೆಯ ಮೈಮೇಲಿದ್ದ ವಸ್ತ್ರಾಭರಣಗಳೆಲ್ಲವೂ ಸರಿಯಾಗಿದ್ದುವು. ಆಕೆಯನ್ನು ನಿರ್ಬಂಧಿಸಿ ಹೊಡೆದ ಗುರುತೇನೂ ಕಂಡುಬರಲಿಲ್ಲ. ಆ ಸುತ್ತಲಪ್ರದೇಶದಲ್ಲಿ ದುರ್ಮಾರ್ಗರು ಇದ್ದುದಾಗಿ ತಿಳಿಯಬಂದುದರಿಂದ ಕೊಂಚ ಅನುಮಾನಕ್ಕೆ ಆಸ್ಪದವಾಗಿದೆ. ಇದರ ಹಿಂದಣದಿವಸ ಸಾಯಂಕಾಲ ಆಕೆಯು ಜಿಂಖಾನಾ ಕ್ಲಬ್ಬಿನಲ್ಲಿ ಬಹಳ ಸಂತೋಷವಾಗಿದ್ದರಂತೆ.

ಇಂಡಿಯಾದೇಶವು ವ್ಯವಸಾಯ ದೇಶವಾದರೂ ಚೀನಾ ಜಪಾನ್ ದೇಶಗಳಂತೆ ಉತ್ಕೃಷ್ಟವಾದ ಫಸಲನ್ನು ಬೆಳೆಯುತ್ತಾ ಇಲ್ಲ. ನೂತನ ವ್ಯವಸಾಯಮುಟ್ಟುಗಳನ್ನು ಉಪಯೋಗಿಸಿಕೊಂಡು ಶಾಸ್ತ್ರೀಯ ಮಾರ್ಗಗಳನ್ನು ಅನುಸರಿಸದಿರುವುದೇ ಇದಕ್ಕೆ ಕಾರಣ. ಆದುದರಿಂದ ನೀರು ಎತ್ತುವ ಸಾಧನಗಳೇ ಮುಂತಾದವುಗಳನ್ನು ಇಂಗ್ಲಿಷ್ ಜನರು ಇಂಡಿಯಾದೇಶದ ಪರಸ್ಪರ ಸಹಾಯಸಂಘಗಳಿಗೆ ಒದಗಿಸಿ ತನ್ಮೂಲಕ ಅವುಗಳ ಉಪಯೋಗವನ್ನು ಹೆಚ್ಚಿಸಿದರೆ, ಜನರ ಸ್ಥಿತಿಯು ಅಭಿವೃದ್ಧಿಗೆ ಬಂದು, ಅವರು ಬ್ರಿಟಿಷ್ ಸಾಮಾನುಗಳನ್ನು ಹೆಚ್ಚಿಸಿ ಕೊಳ್ಳುವರೆಂದೂ, ಆದುದರಿಂದ ಇಂಡಿಯಾ ದೇಶೀಯರ ಉಪಪತ್ತಿಯನ್ನು ಹೆಚ್ಚಿಸುವುದರಿಂದ ಬ್ರಿಟಿಷರ ಇಂಡಿಯಾದ ವ್ಯಾಪಾರವನ್ನು ವರ್ಷಕ್ಕೆ 15 ಕೋಟಿ ಸವರಿನ್‌ಗಳ ವರೆಗಾದರೂ ಹೆಚ್ಚಿಸಬಹುದೆಂದೂ ಜಾನ್‌ಸ್ಟನ್ ಎಂಬುವವರು ಹೇಳಿರುತ್ತಾರೆ.

1920 ನೇ ಸಾಲಿನಲ್ಲಿ ಬೊಂಬಾಯಿ ಆಧಿಪತ್ಯದಲ್ಲಿ ಪ್ರತಿ 1000 ಪ್ರಜಾಸಂಖ್ಯೆಗೆ 27 ಜನರಂತೆ ಮೃತಪಟ್ಟಿರುವರು. ಇದು 1922 ನೆ ಸಾಲಿನಿಂದ ಬಹುಮಟ್ಟಿಗೆ ಹೆಚ್ಚಾಗಿದೆ. 1924 ನೆ ಸಾಲಿನಲ್ಲಿ ಆ ಆಧಿಪತ್ಯದಲ್ಲಿ ಒಂದು ವರ್ಷದೊಳಗಿನ ಪ್ರತಿ 1000 ಮಕ್ಕಳಲ್ಲಿ 19 ಜನರಂತೆ ಮೃತರಾದರು. ಆದರೆ ಬೊಂಬಾಯಿಪಟ್ಟಣ ಒಂದರಲ್ಲಿ ಅಂತಹ ಪ್ರತಿ 1000 ಮಕ್ಕಳಲ್ಲಿ 423 ರಂತೆ ಸಣ್ಣ ಮಕ್ಕಳು ಮೃತರಾಗಿರುವರು. ಈ ಅಪಾರವಾದ ಮರಣಸಂಖ್ಯೆಗೆ ಸಾಕಾದಷ್ಟು ನೀರಿನ ಸರಬರಾಯಿ ಇಲ್ಲದಿರುವುದು, ಗ್ರಾಮ ಸಾರವು ಸಲೀಸು ಹೊರಗೆ ಹೋಗುವಂತೆ ಸಾಕಾದಷ್ಟು ಬಚ್ಚಲುಗಳಿಲ್ಲದಿರುವುದು, ಕಕ್ಕಸುಗಳಲ್ಲಿ ಮಂಕರಿ ಯಾ ತೊಟ್ಟಿ ಪದ್ಧತಿಯನ್ನು ಇನ್ನೂ ಇಟ್ಟಿರುವುದು, ಮನೆಗಳು ಬಹಳ ಒತ್ತಾಗಿರುವುದು, ಮನೆಗಳಲ್ಲಿ ಯುಕ್ತವಾದುದಕ್ಕಿಂತ ಹೆಚ್ಚು ಮಂದಿ ವಾಸವಾಗಿರುವುದು ಇವೇ ಮುಖ್ಯ ಕಾರಣಗಳೆಂದು ಅಲ್ಲಿನ ಆರೋಗ್ಯಶಾಖೆಯ ಡೈರೆಕ್ಟರು ಹೇಳಿರುತ್ತಾರೆ.

ವಿದೇಶದ ವೃತ್ತಾಂತಗಳು

ಅಮೇರಿಕಾದಲ್ಲಿ ವಿಲಿಂಗ್‌ಡನ್ ಎಂಬಾತನು 1911 ನೆಯ ಇಸವಿಯಲ್ಲಿ ಒಂದು ಜೂಜಿನ ಕುದುರೆಯನ್ನು ತೆಗೆದುಕೊಂಡಿದ್ದನು. ಅದು ಈಗ 6 ||| ಲಕ್ಷ ರೂಪಾಯಿಗೆ ವಿಕ್ರಯಿಸಲ್ಪಟ್ಟಿದೆ.

ಉತ್ತರಅಮೇರಿಕೆಗೆ ಸೇರಿದ ಮೆಕ್ಸಿಕೊ ರಾಜ್ಯದಲ್ಲಿ ರೋಮನ್ ಕೆಥೊಲಿಕ್ ಪಾದ್ರಿಗಳು ಇತಃಪರ ಬ್ರಹ್ಮಚಾರಿಗಳಾಗಿರದೆ ವಿವಾಹವನ್ನು ಮಾಡಿಕೊಂಡೇ ತೀರಬೇಕೆಂದು ಶಾಸನವು ಮಾಡಲ್ಪಟ್ಟಿರುವುದರಿಂದ, ಆ ಪಾದ್ರಿಗಳು ಅದಕ್ಕೊಪ್ಪದೆ ಆಂದೋಳನಮಾಡಿದುದರಮೇಲೆ ಅನೇಕರು ಸೆರೆಯಲ್ಲಿಡಲ್ಪಟ್ಟಿರುವರು.

ಪ್ರೊಫೆಸರ್ ಬಿ. ಎಚ್. ಸೆಟೋಲ್ ಎಂಬಾತನು ಒಂದು ಭಾಷಣದಲ್ಲಿ ಹೇಳಿರುವ ಮುಖ್ಯವಿಷಯವೇನೆಂದರೆ :—ಬಾಲಕರ ಶರೀರವು 14 ನೆಯ ವರ್ಷದಿಂದ 18 ನೆಯ ವರ್ಷದವರೆಗೂ, ಬಾಲಿಕೆಯರ ಶರೀರವು 11 ನೆಯ ವರ್ಷದಿಂದ 13 ನೆಯ ವರ್ಷದವರೆಗೂ ಬೆಳೆಯುವ ಕಾಲವಾದುದರಿಂದ ಆಗ ಅವರ ಆಹಾರ ವಿಷಯದಲ್ಲಿ ಹೆಚ್ಚು ಲಕ್ಷ್ಯಕೊಡಬೇಕು. ಅವರ ಭವಿಷ್ಯಜ್ಜೀವನವು ಆಕಾಲ ಮತ್ತು ಆ ಹಾರದಮೇಲೆ ಅವಲಂಬಿಸಿದೆ.

ಯುರೋಪಿನ ರಾಜ್ಯದಲ್ಲಿ ಯುದ್ಧಕ್ಕೆ ಆಯತವಾದ ಏರೋಪ್ಲೇನ್‌ಗಳೆಂಬ ಆಕಾಶವಿಮಾನಗಳನ್ನು ಪೋಟಾಪೋಟಿಯಿಂದ ಹೆಚ್ಚಿಸಿಕೊಳ್ಳುತ್ತಲಿರುವರು. 1925 ನೇ ಜೂನ್ ತಿಂಗಳ ಅಂತ್ಯಭಾಗದಲ್ಲಿ ಇಟಲಿ 1500 ; ಫ್ರಾನ್ಸ್ 5500 ; ಬ್ರಿಟಿಷ್ 1050 ; ಜರ್ಮನಿ 1300 ; ಅಮೇರಿಕೆ 1400 ; ಈರೀತಿ ವಿಮಾನಗಳನ್ನು ಇಟುಕೊಂಡಿದ್ದರು. ಫ್ರಾನ್ಸ್ ಸರ್ಕಾರದವರು ತಮ್ಮ ಯಂತ್ರಗಳ ಸಂಖ್ಯೆಯನ್ನು ಹೆಚ್ಚಿಸುತ್ತಿರುವರೆಂದೂ, ಬ್ರಿಟಿಷ್ ಸರ್ಕಾರದವರು ನಾನಾಕಾರಣಗಳಿಂದ ತಮ್ಮ ವಿಮಾನಗಳ ಸಂಖ್ಯೆಯನ್ನು ಕಡಿಮೆಮಾಡುತ್ತಿರುವರೆಂದೂ ತಿಳಿಯಬರುತ್ತದೆ.

ಆಫ್ರಿಕಾಖಂಡದ ಈಜಿಪ್ತುದೇಶವು ಅತ್ಯಂತ ಪುರಾತನ ನಾಗರೀಕತೆಯುಳ್ಳ ದೇಶ. ಅಲ್ಲಿ ಭೂಗತವಾಗಿರುವ ಅನೇಕ ಆಶ್ಚರ್ಯವಸ್ತುಗಳು ಸಿಕ್ಕಿಯೂ, ಸಿಕ್ಕುತ್ತಲೂ ಇರುವವು. ಇವುಗಳನ್ನು ಶೇಖರಿಸಿ ಇಡುವುದಕ್ಕಾಗಿ, ಒಂದು ವಿಚಿತ್ರ ವಸ್ತುಸಂಗ್ರಹಶಾಲೆಯನ್ನು ಕೈರೋನಗರದಲ್ಲಿ ಕಟ್ಟಿಸಲು ಅಮೇರಿಕದ ಕೋಟ್ಯಧೀಶ್ವರರಾದ ಮೆ|| ಜಾನ್ ರಾಕ್‌ಫೆಲರ್ (ಜೂನಿಯರ್) ರವರು ಒಂದುಕೋಟಿ ಡಾಲರುಗಳನ್ನು ಉಚಿತವಾಗಿ ಕೊಟ್ಟಿರುವರು. ಈಜಿಪ್ಟಿನ ಫೂಯದ್‌ದೊರೆಯವರು ಈ ಮೊಬಲಗನ್ನು ತಮ್ಮ ಮತ್ತು ತಮ್ಮ ಪ್ರಜೆಗಳ ಪರವಾಗಿ ಸ್ವೀಕರಿಸಿರುತ್ತಾರೆ.

ಇಂಗ್ಲೆಂಡಿನ ಸರ್ಬಿಟನ್ ಎಂಬಲ್ಲಿ ೧೯ ವರ್ಷ ವಯಸ್ಸಿನ ಯುವತಿಯೊಬ್ಬಳು ದೇಶಪದ್ಧತಿಪ್ರಕಾರ ತನ್ನ ಮನ ಒಪ್ಪಿದ ಒಬ್ಬ ಯೌವನಸ್ಥನನ್ನು ವಿವಾಹವಾಗುವುದಕ್ಕೆ ಒಡಂಬಟ್ಟು ತನ್ನ ತಾಯಿಯ ಅಭಿಪ್ರಾಯವನ್ನು ಕೇಳಿದಳು. ಆ ಯೌವನಸ್ಥನಿಗೆ ಇರುವ ವಾರಕ್ಕೆರಡು ಸವರನ್‌ಗಳ ವರಮಾನವು ಗಂಡಹೆಂಡಿತಿಯರ ಜೀವನಕ್ಕೆ ಸಾಲದೆಂದು ಹೇಳಿ ತಾಯಿಯಾದವಳು ತನ್ನ ಸಮ್ಮತಿಯನ್ನು ಕೊಡಲಿಲ್ಲ. ಆ ದೇಶದಲ್ಲಿ ಹೊಸದಾಗಿ ಜಾರಿಯಲ್ಲಿ ಬಂದಿರುವ ಇನ್‌ಫೆಂಟ್ಸ್ ಆಕ್ಟ್ ಪ್ರಕಾರ ಯುವತಿಯು ತಾಯಿಯ ಸಮ್ಮತಿಗಾಗಿ ಕೋರ್ಟಿನಲ್ಲಿ ದಾವಾ ತಂದಳು. ಮ್ಯಾಜಿಸ್ಟ್ರೇಟರು ತಾಯಿಯ ಅಭಿಪ್ರಾಯವೇ ಯುಕ್ತವಾದುದೆಂದು ಹೇಳಿ ತೀರ್ಮಾನ ಕೊಟ್ಟಿರುವರು.

ಯುರೋಪಿನ ಪಶ್ಚಿಮ ರಾಜ್ಯಗಳಲ್ಲಿ ಅಪರಾಧಿಗಳು ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕೆ ತಮ್ಮ ಸ್ವರೂಪನ್ನೇ ಬದಲಾಯಿಸಿಕೊಳ್ಳುವಷ್ಟು ಚತುರರಾಗಿರುವರು. ಮುಖಭಾವವನ್ನೂ ಅಂಗದ ಯಾವ ವಿಶೇಷ ಗುರುತನ್ನೂ ಸಂಪೂರ್ಣವಾಗಿ ಬದಲಾಯಿಸಬಲ್ಲ ಶಕ್ತರಾದ ವೈದ್ಯರು ಆ ದೇಶಗಳಲ್ಲಿರುವುದರಿಂದ, ದೊಡ್ಡದೊಡ್ಡ ಅಪರಾಧಗಳನ್ನು ಮಾಡಿದವರು ಈ ವೈದ್ಯರ ಸಹಾಯದಿಂದ, ತಮ್ಮ ಸ್ವರೂಪನ್ನು ಬದಲಾಯಿಸಿಕೊಂಡು, ಎಷ್ಟೇ ಶಕ್ತರಾದ ಪೋಲೀಸಿನವರಿಂದಲೂ ಗುರ್ತಿಸಲ್ಪಡುತ್ತಿಲ್ಲ. ಇಂಗ್ಲೆಂಡಿನಲ್ಲಿ ಸೆರೆಹಿಡಿಯಲ್ಪಟ್ಟ ಕಳ್ಳನೊಬ್ಬನ ಜೇಬಿನಲ್ಲಿ ಆತನ ಅಂಗಚಹರೆಯನ್ನು ಬದಲಾಯಿಸಿದ್ದ ವೈದ್ಯನ ೯೦ ಸವರಿನ್‌ಗಳ ಬಿಲ್ ಸಿಕ್ಕಿತಂತೆ. ಈ ಅಪರಾಧಿಯು ಹಿಂದೆ ಎಷ್ಟೋವೇಳೆ ಶಿಕ್ಷೆಹೊಂದಿದ್ದರೂ ಪೋಲೀಸಿನವರು ಅವನನ್ನು ಗುರ್ತಿಸಲಿಲ್ಲ.

ಅಮೇರಿಕೆಯಲ್ಲಿ ಮುಂದಿನ ಜೂನ್ ತಿಂಗಳಲ್ಲಿ ನಡೆಯುವ ವಸ್ತುಪ್ರದರ್ಶನಾಲಯದಲ್ಲಿ ಇಂಡಿಯಾ ದೇಶದ ಪ್ರಸಿದ್ಧ ಕಟ್ಟಡವಾದ ತಾಜಮಹಲ್‌ನಂತೆ ಒಂದು ಕಟ್ಟಡವನ್ನು ೧೦ ಲಕ್ಷ ಡಾಲರುಗಳ ಖರ್ಚಿನಿಂದ ಕಟ್ಟುವವರಾಗಿರುವರು. ಇಂಡಿಯಾದಲ್ಲಿರುವ ಕಟ್ಟಡವನ್ನು ಕಟ್ಟಲು ೨೦ ಸಂವತ್ಸರಗಳು ಹಿಡಿಯಿತು. ಅದನ್ನು ಕಟ್ಟಿದ ಶಿಲ್ಪಿಯು ಬೇರೊಂದನ್ನು ಕಟ್ಟದ ಹಾಗೆ ಮೊಗಲ್ ಚಕ್ರವರ್ತಿಯು ಆತನನ್ನು ದುರ್ಮರಣಕ್ಕೆ ಗುರಿಮಾಡಿದನೆಂದೂ, ಆದರೂ ಅದರ ಪ್ರತಿಸ್ವರೂಪವನ್ನು ಪಡೆದಿರುವಂಥ ಕಟ್ಟಡವನ್ನು ತಾವು ಕ್ಷಿಪ್ರಕಾಲದಲ್ಲಿಯೇ ತಯಾರ್ಮಾಡುವುದಾಗಿಯೂ ಅಮೇರಿಕೆಯಲ್ಲಿ ಅದನ್ನು ಕಟ್ಟಬೇಕೆಂದಿರುವ ಸಾಸರ್ ಎಂಬುವವರು ಹೇಳಿರುತ್ತಾರೆ. ಅಮೇರಿಕೆಯ ಕಟ್ಟಡವು ಇಂಡಿಯದ ತಾಜಮಹಲಿನ ಮಾದರಿಯನ್ನು ಅನುಸರಿಸಿರುವುದಲ್ಲದೆ, ಇದರಂತೆ ಬೆಲೆಬಾಳುವ ಪದಾರ್ಥಗಳಿಂದ ಕೂಡಿರುವುದಿಲ್ಲ.

ಅಮೇರಿಕೆಯಲ್ಲೊಬ್ಬನು ಜೀವವಿಮೆ (ಲೈಫ್ ಇನ್ಶೂರು) ಯನ್ನು ಮಾಡಿದ್ದನು. ಆತನ ಮರಣಾನಂತರದಲ್ಲಿ ಅವನ ಪತ್ನಿಗೆ 45 ಸಾವಿರ ರೂಪಾಯಿಗಳು ದೊರೆಯುವುದಾಗಿದ್ದಿತು. ಹೆಂಡಿತಿಯು ಶೀಘ್ರವಾಗಿ ಆ ಹಣವನ್ನು ಪಡೆಯಬೇಕೆಂದಿಚ್ಛಿಸಿ ಈಗ ಸ್ವಲ್ಪದಿನಗಳಲ್ಲಿ ವಿಷವನ್ನುಹಾಕಿ ಗಂಡನನ್ನು ಕೊಂದಳು. ಅಯೋವಾದಲ್ಲಿ ಒಬ್ಬಳು ಸ್ತ್ರೀಯು ತನ್ನ 15 ದಿನಗಳ ಮಗುವು ಹೆಚ್ಚಾಗಿ ಅಳುತ್ತಿದ್ದುದರಿಂದ ಅದನ್ನು ಚಾಕಿನಿಂದ ತಿವಿದು ಕೊಂದಳು. ಓಹಿಯೋ ಎಂಬಲ್ಲಿ ಒಬ್ಬಳು ಸ್ತ್ರೀಯು ತನ್ನ ಎರಡು ತಿಂಗಳ ಮಗುವನ್ನು ಕುದಿಯುವ ಕಡಾಯಿಯ ನೀರಿನಲ್ಲಿ ಬೇಯಿಸಿಕೊಂದಳು. ಇಲಿನೋಯಿಸ್ ಎಂಬಲ್ಲಿ ಒಬ್ಬ ಯುವಕನು ತನ್ನ ವೃದ್ಧತಂದೆಯಮೇಲೆ ಕೋಪಿಸಿಕೊಂಡು ಚೂರಿಯಿಂದ ತಿವಿದು ಕೊಂದನು. ಚಿಕಾಗೋ ಎಂಬಲ್ಲಿ ಕೆಲವು ವಿದ್ಯಾರ್ಥಿಗಳು ಒಬ್ಬ ಚಿಕ್ಕವಿದ್ಯಾರ್ಥಿಯನ್ನು ಪುಸಲಾಯಿಸಿ ಕಾಡಿಗೆ ಕರೆದುಕೊಂಡುಹೋಗಿ ಆಟಕ್ಕೋಸ್ಕರ ಆ ಹುಡುಗನ ಕಪಾಲವನ್ನು ಕತ್ತರಿಸಿ ಚೂರುಚೂರುಮಾಡಿದರು ! ದಕ್ಷಿಣಡಾಕೋಟಾ ಎಂಬಲ್ಲಿ ಇಬ್ಬರು ಹೆಂಗುಸರು ಬ್ಯಾಂಕಿಗೆ ನುಗ್ಗಿ ಅಲ್ಲಿದ್ದ ಬ್ಯಾಂಕ್ ಮ್ಯಾನೇಜರನ ಮೂಗಿನಮೇಲೆ ಒಬ್ಬಳು ಪಿಸ್ತೂಲಿನಿಂದ ಗುಂಡು ಹೊಡೆದು ಹಣವನ್ನು ದೋಚಿಕೊಂಡರು. ಅಮೇರಿಕೆಯ ಒಬ್ಬ ಹೆಂಗುಸು ತನ್ನ ಕೂದಲು ಕತ್ತರಿಸಿದುದು (ಕ್ರಾಪ್‌ಕಟಿಂಗ್) ಸರಿಹೋಗದೆ ವಿಕಾರವಾಯಿತೆಂದು ಆತ್ಮಹತ್ಯವನ್ನು ಮಾಡಿಕೊಂಡಳು. ಇವು ಕೆಲವು ಉದಾಹರಣೆಗಳು. ಇಂತಹ ಕೃತ್ಯಗಳು ದಿನಬೆಳಗಾದರೆ " ಈಶ್ವರಭೂಮಿ " ಯಾದ ಅಮೇರಿಕೆಯಲ್ಲಿ ಎಷ್ಟೋ ನಡೆಯುತ್ತವೆ. ಪ್ರಾಣವೆಂದರೆ ಲಕ್ಷ್ಯವಿಲ್ಲ.

ನಂಜನಗೂಡು ಹೈಸ್ಕೂಲ್‌ಕಟ್ಟಡ ಫಂಡು.

ತಾ|| 12—2—1926 ರ ವರೆಗೆ ಬಂದಿರುವ ಚಂದಾವಿವರ.

1. ಇದಕ್ಕೆ ಮೊದಲು ಬಂದಿರುವುದು	ರೂ. 6302—8—3
2. ಗುಂಡ್ಲುಪೇಟೆ ತಾಲ್ಲೂಕುಬೋರ್ಡಿನಿಂದ	1000—0—0
3. ಮ|| ನಗರ್ಲೆ ಪುಟ್ಟಮಾದಪ್ಪನವರಿಂದ	1000—0—0
4. ಮ|| ಕುದೇರು ಪುಟ್ಟಸ್ವಾಮಿಶೆಟ್ಟರಿಂದ	100—0—0
5. ಕುದೇರಿನಲ್ಲಿ ಆದ ಚಿಲ್ಲರೆವಸೂಲಿ	50—0—0
6. ಚಾಮರಾಜನಗರತಾಲ್ಲೂಕುಬೋರ್ಡಿನಿಂದ	500—0—0
7. ಚಾಮರಾಜನಗರಮ್ಯುನಿಸಿಪಾಲಿಟಿಯಿಂದ	500—0—0
ಒಟ್ಟು	9452—8—3

ಕೆ. ವೆಂಕಟಸ್ವಾಮಯ್ಯ, ಆನರರಿ ಸೆಕ್ರೆಟರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಮಂಗನಹಾವಳಿ.

ತರೀಕೆರೆ ತಾ|| ಬುಕ್ಕಾಂಬುದಿಗ್ರಾಮದ ಸಮೀಪದಲ್ಲಿ ಒಂದು ಮಂಗನು ಸೇರಿಕೊಂಡು 30 ವರ್ಷಕ್ಕೆ ಮೇಲ್ಪಟ್ಟಿರತಕ್ಕ 3 ಜನ ಗಂಡಸರನ್ನು ಪರಚಿ ಪ್ರಾಣಾಪಾಯಗೊಳಿಸುವಷ್ಟರಲ್ಲಿ ಬೇರೆಜನರ ಗಲಭೆಯಾಗಲು ಬಿಟ್ಟು ಓಡಿಹೋಯಿತು. ಗಾಯಹೊಂದಿದವರು ಬುಕ್ಕಾಂಬುದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಈ ಮಂಗನು ಒಂದು ವರ್ಷದಲಾಗಾಯ್ತು, ಮನುಷ್ಯರನ್ನು ಹಿಡಿದು ಪರಚಿ ಗಾಯಮಾಡಿರುವದಲ್ಲದೆ, ಜಿಂತುಕೊಳಲೆಂಬ ಊರಿನಲ್ಲಿ ಒಂದುಮನೆಯೊಳಗೆ ತೊಟ್ಟಿನಲ್ಲಿ ಮಲಗಿದ್ದ ಒಂದುವರ್ಷದ ಕೂಸನ್ನು ನಿರ್ಮೂಲವಾಗಿ ತಿಂದುಬಿಟ್ಟು, ಇತ್ತಲಾಗಿ ಬಂದಿರುತ್ತದೆಂದು ಇಲ್ಲಿಯ ಜನರು ಹೇಳುತ್ತಾರೆ. ಬುಕ್ಕಾಂಬುದಿ-ಶಿವನೆ ರೋಡಿನಲ್ಲೂ, ಸುತ್ತಮುತ್ತಲಿನ ತೋಟದಲ್ಲೂ ಜನರು ತಿರುಗಾಡುವುದಕ್ಕೆ ಪೂರಾ ಭಯಪಡುತ್ತಿದ್ದಾರೆ. ಆದಪ್ರಯುಕ್ತ ನಮ್ಮ ಘನಸರ್ಕಾರದವರು ಈ ಮಂಗನನ್ನು ಹಿಡಿಸುವುದಕ್ಕೆ ತಕ್ಕ ಏರ್ಪಾಡುಮಾಡುತ್ತಾರೆಂದು ನಂಬಿರುತ್ತೇನೆ. ಪ್ರಜಾಹಿತೈಷಿ.

ದಾವಣಗೆರೆ ಪ್ರಾಣಿದಯಾಜ್ಞಾನಪ್ರಸಾರಕಸಂಘದ ಅಧ್ಯಕ್ಷರ ಸನ್ನಿಧಾನಕ್ಕೆ.

ದಾವಣಗೆರೆ ತಾಲ್ಲೂಕು ಮಾಯಕೊಂಡದ ಹೋಬಳಿ ರಾಮಗೊಂಡನಹಳ್ಳಿ ಪಟೇಲರು ಬುದ್ಧಿವಂತರು ಸಹ ಬರೆದುಕೊಂಡ ವಿಜ್ಞಾಪನಪತ್ರವೇನಂದರೆ—ತಮ್ಮ ಸಂಘದಪರವಾಗಿ ಬಂದ ಮ|| ರಾ|| ಮಳಲಕೆರೆ ಸತ್ಯಪ್ಪನವರು ಈ ದಿವಸ ನಮ್ಮ ಗ್ರಾಮಕ್ಕೆ ಬಂದು ತಮ್ಮ ಸಂಘದಿಂದ ಹೊರಟಿರುವ ಪ್ರಕಟನಾಪತ್ರಿಕೆಗಳನ್ನು ಮತ್ತು ಗೋಸಂರಕ್ಷಣೆ ಗೋಮಾತೆ ಪಶುಪಕ್ಷಿಗಳ ವಿಜ್ಞಾಪನೆಯ ವಿಶಿಷ್ಟ ಪುಸ್ತಕಗಳನ್ನು ತಂದು ಓದಿ ಅದರ ಸಾರಾಂಶವನ್ನು ತಿಳಿಯುವಂತೆ ಬೋಧಮಾಡಲು ನಮ್ಮ ಗ್ರಾಮದಲ್ಲಿ ಈ ಕಾಲದಲ್ಲಿ ಹಾಲುಮತಸ್ಥರು ಮಾಡುವ ಮಾಳಪಕ್ಷವು ಹಿಂಸಾಯುಕ್ತವಾದುದನ್ನು ತ್ಯಜಿಸಿ ಸೌಮ್ಯಪೂಜಾ ಅಂದರೆ ಮೃಷ್ಟಾನ್ನಭೋಜನದಿಂದಲೂ ಪಂಚಾಮೃತದಿಂದಲೂ ಪಿತೃಪಕ್ಷವನ್ನು ನೆರವೇರಿಸಿದ್ದಾಯಿತು. ಇದನ್ನೆಲ್ಲಾ ನಾವುಗಳು ಸಮಕ್ಷಮ ನೋಡಿದ್ದರಿಂದ ನಮ್ಮಗಳಿಗೆ ಬಹಳ ಆನಂದವಾಯಿತು. ಇದಕ್ಕೆಲ್ಲಾ ಕಾರಣಭೂತವಾದ ತಮ್ಮ ಸಂಘಕ್ಕೆ ಎಷ್ಟು ವಂದನೆಮಾಡಿದರೂ ತೀರದು. ಅಲ್ಲದೆ ಮುಂದೆ ನಮ್ಮ ಗ್ರಾಮದಲ್ಲಿ ದೇವಿಜಾತ್ರೆಯನ್ನು ಮಳಲಕೆರೆ ಗ್ರಾಮದಂತೆಯೇ ಸೌಮ್ಯಪೂಜೆ ಪಂಚಾಮೃತದಿಂದ ಚರಗ ಮತ್ತು ಶಿವಭಜನೆ ಸಹ ಮಾಡಬೇಕೆಂದು ನಮ್ಮಗಳಿಗೆ ಮನಃಪೂರ್ವಕವಾಗಿ ಸಂತೋಷವಾಗಿರುತ್ತೆ. ಮತ್ತು ತಮ್ಮಸಂಘದ ಆಜ್ಞಾಪ್ರಕಾರ ದನಗಳನ್ನು ಕಟುಗರಿಗೆ ಮಾರದಂತೆ ಕಟ್ಟುಮಾಡಿಕೊಂಡಿರುತ್ತೇವೆ. ಇದಕ್ಕೆ ಸಹಾಯವಾಗಿ ತಮ್ಮ ಸಂಘದಲ್ಲಿರುವ ಪುಸ್ತಕಗಳನ್ನೂ ಪ್ರಕಟನಾಪತ್ರಿಕೆಗಳನ್ನೂ ಸಹ ನಮ್ಮ ಗ್ರಾಮಕ್ಕೆ ಕಳುಹಿಸಿಕೊಡುತ್ತಾರೆಂದು ನಂಬಿದ್ದೇವೆ.

ಸಂವತ್ಸರಾದಿ (ಯುಗಾದಿ) ಯ ಹಬ್ಬವನ್ನು ಯಾವಾಗ ಆಚರಿಸಬೇಕು ?

ಮುಂದೆ ಬರುವ ಕ್ಷಯ ಸಂ|| ದಲ್ಲಿ ಅಧಿಕಚೈತ್ರ, ನಿಜಚೈತ್ರಗಳೆಂದು 2 ಮಾಸಗಳು ಬಂದಿರುವುದರಿಂದ ಕೆಲವರು ಸಂವತ್ಸರಾದಿಯ ಹಬ್ಬವನ್ನು ಅಧಿಕಚೈತ್ರಮಾಸ ಶು|| 1 (ಎಂದರೆ ಮಾರ್ಚಿ 15 ನೇ ತಾ|| ಸೋಮವಾರ) ದಲ್ಲಿ ಆಚರಿಸಬೇಕೆಂದೂ, ಬೇರೆ ಕೆಲವರು ನಿಜಚೈತ್ರ ಶು|| 1 ದಲ್ಲಿ (ಎಂದರೆ ಏಪ್ರಿಲ್ 13 ನೇ ತಾ|| ಮಂಗಳವಾರ) ಆಚರಿಸಬೇಕೆಂದೂ ಅಭಿಪ್ರಾಯಪಡುತ್ತಾರೆ. ದ್ರಾವಿಡದೇಶ, ವಂಗದೇಶ ಇತ್ಯಾದಿ ಪ್ರಾಂತಗಳಲ್ಲೆಲ್ಲಾ ಸೂರ್ಯಸಿದ್ಧಾಂತರೀತ್ಯ ಕಾಲನಿರ್ಣಯವು ಮಾಡಲ್ಪಡುವುದರಿಂದ ಸೌರಮಾನದ ಪ್ರಕಾರ ರವಿಯು ಮೇಷರಾಶಿಯನ್ನು (ಅಶ್ವಿನಿ 1 ನೇ ಪಾದವನ್ನು) ಯಾವಾಗ ಪ್ರವೇಶಮಾಡುವನೋ ಆ ಸಮಯವೇ ವರ್ಷಾದಿಯಾಗಿ ಪರಿಗಣಿಸಲ್ಪಟ್ಟು ಅಂದೇ ತದ್ದೇಶೀಯರು ಯುಗಾದಿಯ ಹಬ್ಬವನ್ನು ಆಚರಿಸುವುದುಂಟು. ಸದರಿ ಸಿದ್ಧಾಂತದಪ್ರಕಾರ ಪಂಚಾಂಗಗಣಿತಮಾಡುವರು ಮೇಷಸಂಕ್ರಮಣದ ದಿನದವರಿವಿಗೂ ಗತವತ್ಸರದ ತಿಥ್ಯಾದಿ ಸ್ಫುಟಭೋಗವನ್ನು ಇಟ್ಟುಕೊಂಡು ಮಾಡಿಕೊಳ್ಳುತ್ತಾರೆ. ತಿಥಿಧ್ರುವಕಿಯ ದಿನಗಳು ಎಷ್ಟು ಇರುತ್ತವೋ ಚೈತ್ರಾದಿ ಅಷ್ಟುದಿನಗಳಿಗೆ ಹಿಂದಿನ ವತ್ಸರವು ಪೂರ್ತಿಯಾಗುತ್ತದೆಂದು ತಿಳಿದುಕೊಳ್ಳುತ್ತಾರೆ. ಬರುವ ಕ್ಷಯ ಸಂ|| ದಲ್ಲಿ ನಿಜಚೈತ್ರ ಶು|| 1 ರಲ್ಲಿ ಸೂರ್ಯನು ಅಶ್ವಿನಿ ನಕ್ಷತ್ರವನ್ನು ಘ 21-8 ರಲ್ಲಿ ಪ್ರವೇಶಮಾಡುವನಾದಕಾರಣ ಸೌರಮಾನ ಪ್ರಕಾರ ನಿಜಚೈತ್ರ ಶು|| ಪ್ರತಿಪದವೇ ವರ್ಷಾದಿಯಾದಂತಾಯಿತು. ಆದರೆ ನಮ್ಮ ಕರ್ನಾಟಕದಲ್ಲಿ ಚಾಂದ್ರಮಾನರೀತ್ಯಾ ಕಾಲಗಣನೆಯನ್ನು ಮಾಡುವುದರಿಂದ ನಮ್ಮ ಸಿದ್ಧಾಂತಪ್ರಕಾರ ದೇಶಭೇದಾನುಸಾರವಾಗಿ ಅಧಿಕಚೈತ್ರ ಶು|| 1 ದಲ್ಲೇ ಹೊಸವರ್ಷದ ಹಬ್ಬವನ್ನುಮಾಡಬೇಕು. ಸಾಧಾರಣವಾಗಿ ಯಾವವಿಷಯಕ್ಕಾದರೂ ಅಧಿಕಮಾಸವನ್ನು ವರ್ಜಿಸಬೇಕೆಂದು ನಮ್ಮಲ್ಲಿ ಸಾಂಪ್ರದಾಯವುಂಟು. ಆದರೆ ಇದು ಸಂವತ್ಸರಾದಿನಿರ್ಣಯಕ್ಕೆ ಅನ್ವಯಿಸುವುದಿಲ್ಲೆಂದು ಆರ್ಯಸಿದ್ಧಾಂತಜ್ಞರ ಅಭಿಪ್ರಾಯವಿರುತ್ತದೆ. ಇದೇ ವಿಷಯದಲ್ಲಿ, ದಕ್ಷಿಣದೇಶದಲ್ಲಿ ಪ್ರಸಿದ್ಧ ಗಣಿತಜ್ಞರೆಂದು ಹೆಸರ್ಗೊಂಡಿರುವ ಕೀರ್ತಿಶೇಷರಾದ ದಿವಾನ್ ಬಹದ್ದೂರು ಎಲ್. ಡಿ. ಸ್ವಾಮಿ ಕಣ್ಣುಪಿಳ್ಳೆ, ಎಂ.ಎ., ಬಿ.ಎಲ್. ಎಲ್‌ಎಲ್.ಬಿ., ಸಿ.ಐ.ಇ. ಯವರು ಈಗ ಸ್ವಲ್ಪ ಕಾಲಗಳ ಹಿಂದೆ ಹೊಸದಾಗಿ ಪ್ರಕಟವಾಗಿರುವ "Panchang & Horoscope" ಎಂಬ ಗ್ರಂಥದಲ್ಲಿ ಈರೀತಿ ಸ್ಪಷ್ಟೀಕರಿಸಿರುತ್ತಾರೆ. - ವತ್ಸರಾರಂಭವೆಂದರೆ ಸಂವತ್ಸರದ ಪ್ರಾರಂಭ ದಿವಸವು ಎಂದರೆ ಚಾಂದ್ರಮಾನದ ಪ್ರಕಾರ ಚೈತ್ರ ಶು|| ಪ್ರತಿಪದವು. ಇದು ಮೇಷಸಂಕ್ರಾಂತಿಗಿಂತಲೂ ಸ್ವಲ್ಪಹಿಂದೆ ಬರುವುದುಂಟು. ಅಧಿಕಚೈತ್ರವಿದ್ದಲ್ಲಿ ಆ ಮಾಸದ ಶುದ್ಧ ಪ್ರತಿಪದವೇ ವತ್ಸರಾದಿಯಾಗುತ್ತದೆ" ಮತ್ತು ಆರ್ಯಸಿದ್ಧಾಂತಾನುಯಾಯಿಗಳಾದ ಆಂಧ್ರದೇಶೀಯರು ಸಹಾ ಯುಗಾದಿಹಬ್ಬವನ್ನು ಅಧಿಕಚೈತ್ರ ಶು|| 1 ಎಂದರೆ ಮಾರ್ಚಿ 15 ನೇ ತಾ|| ಸೋಮವಾರವೇ ಮಾಡುತ್ತಾರಾದಕಾರಣ ಕನ್ನಡಿಗರೂ ಅಂದೇ ಮಾಡುವುದು ಶಾಸ್ತ್ರಸಮ್ಮತವೆಂದು ನನ್ನ ಅಲ್ಪಮತಿಗೆ ತೋರುತ್ತದೆ.

(ಕ್ಷಯ ಸಂ|| ದಲ್ಲಿ ಗ್ರಹಣಗಳುಂಟಾಗುವವೇ ?)

ಕರ್ನಾಟಕದ ಕೆಲ ಪಂಚಾಂಗಗಳಲ್ಲಿ ಮುಂದೆಬರುವ ಸಂ|| ದಲ್ಲಿ ಗ್ರಹಣಗಳೇ ಇಲ್ಲವೆಂದು ಬರೆದಿರುವಬಗ್ಗೆ ಅನೇಕರು ನನ್ನ ತೀರ್ಥರೂಪರಾದ ತೆಲಿಗಿ ಹರಪನಹಳ್ಳಿಮಠದ ಬ್ರ|| ಶ್ರೀ|| ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳನ್ನು ಪ್ರಶ್ನಿಸಿರುತ್ತಾರೆ. ಗಣಿತದರೀತ್ಯಾ ಕ್ಷಯ ಸಂ|| ಮಾರ್ಗಶಿರ ಶು|| 15 ಯಲ್ಲಿ (ಡಿಸೆಂಬರು 19 ನೆ ತಾ|| ಭಾನುವಾರ) ಚಂದ್ರಗ್ರಹಣವೂ, ಜ್ಯೇಷ್ಠ ಬ|| 30 ಯಲ್ಲಿ (ಜುಲೈ 9ನೇ ಶುಕ್ರವಾರ) ಸೂರ್ಯಗ್ರಹಣವೂ ಸಂಭವಿಸುತ್ತವಾದರೂ ಅವು ನಮ್ಮ ದೇಶದಲ್ಲಿ ಕಾಣಿಸಿಕೊಳ್ಳದೆ ಪ್ರಪಂಚದ ಕೆಲಭಾಗಗಳಲ್ಲಿಮಾತ್ರ ಕಾಣಿಸಿಕೊಳ್ಳುವುವರಿಂದ ಕ್ಷಯ ಸಂ|| ದಲ್ಲಿ ಗ್ರಹಣಗಳಿಲ್ಲವೆಂದು ಹೇಳಬಹುದು.

ಟಿ. ಹೆಚ್. ಎಂ. ಸದಾಶಿವಯ್ಯ,
ಜ್ಯೋತಿಶ್ಶಾಸ್ತ್ರ [illegible]

ಸಕ್ಕರೆ ಉಪಯೋಗದಲ್ಲಿ ಒಂದು ಸಂದೇಹ.

ದಾವಣಗೆರೆಯ ಪ್ರಾಣಿದಯಾಜ್ಞಾನಪ್ರಸಾರಕಮಂಡಲಿಯವರು ಮತ್ತು ಮ|| ಮಂಜಪ್ಪ ಹರ್ಡೇಕರ್, ಇವರುಗಳು ಜಾವಾ ಸಕ್ಕರೆಯಲ್ಲಿ ಪ್ರಾಣಿಗಳ ರಕ್ತ ಮತ್ತು ಎಲುಬಿನಪುಡಿ ಮುಂತಾದ ಅಪವಿತ್ರಪದಾರ್ಥಗಳ ಸಂಬಂಧವಿದೆಯೆಂದು ಬರೆಯುತ್ತಾರೆ. ಆದರೆ ಜಾವಾ ಸಕ್ಕರೆ ಎಂಬುದು ಯಾವುದು ? ಆ ಸಕ್ಕರೆಯಲ್ಲಿ ನಮ್ಮ ಹಿಂದುಸ್ಥಾನದಲ್ಲಿ ಯಾವಯಾವ ನಮೂನೆ ಸಕ್ಕರೆ ಮತ್ತು ಸಕ್ಕರೆ ಪದಾರ್ಥಗಳು ತಯಾರಾಗುತ್ತೆಂಬುದು ಅನೇಕರಿಗೆ ಗೊತ್ತಿಲ್ಲವಾದ ಸಂಗತಿಯಾದ್ದರಿಂದ, ಹಳ್ಳಿಗಾಡಿನವರಿಗೆ ತುಂಬಾ ಸಂದೇಹವಾಗಿದೆ. ಇದರಿಂದ ಎಲ್ಲಾ ವಿಧವಾದ ಸಕ್ಕರೆಯನ್ನುಪಯೋಗಿಸುವುದಕ್ಕೂ ಹಿಂದೆಗೆಯುವರಲ್ಲದೆ, ಮನೆಯಲ್ಲಿ ನಡೆಯತಕ್ಕ - ಹಬ್ಬ - ವಗೈರೆ ವಿಶೇಷ ಕಾಲದಲ್ಲಿ ಸಕ್ಕರೆಯನ್ನು ಉಪಯೋಗಿಸಲು ಭಯಪಡುತ್ತಾರೆ. ಪ್ರಯುಕ್ತ ಮೇಲ್ಕಂಡ ಮಂಡಲಿಯವರಾಗಲಿ, ಮ|| ಮಂಜಪ್ಪ ಹರ್ಡೇಕರ್ ಇವರಾಗಲಿ, ಮತ್ತೆ ತಿಳಿದ ಯಾರಾದರಾಗಲಿ ಈ ಕೆಳಗಿನ ಅಭಿಪ್ರಾಯಕ್ಕೆ ಸಮಂಜಸವಾದ ತಿಳುವಳಿಕೆ (ಉತ್ತರ) ಬರೆಯಬೇಕಾಗಿ ಅರಿಕೆ—

(1) ಮೋರಿಸ್ ಎಂಬ ಹೆಸರಿನ ಬಿಳೀಸಕ್ಕರೆ (ಪಂಚಾರ) ಇದೇ ವಿಶೇಷಬಳಕೆಯಲ್ಲಿದ್ದು, ಮಿಠಾಯಿ, ಕಾಫಿ, ಚಾ, ಮುಂತಾದ ಪದಾರ್ಥಕ್ಕೆ ಉಪಯೋಗಿಸುತ್ತಾರೆ. ಇದೇ ನಮ್ಮ ಮೈಸೂರುಸಂಸ್ಥಾನದಲ್ಲಿ ಹೆಚ್ಚು ಉಪಯೋಗ, ಇದು ಒಳ್ಳೇ ಶುಭ್ರವಾಗಿಯೂ, ಮಿಂಚಾಗಿಯೂ, ಧಬ್ಬರವೆಯಂತೆಯೂ ಇರುವುದು ಸರ್ವವಿದಿತವಾಗಿದೆ. (2) ಕೋಲಾರ ಬಿಳೀಬೂರಾ ಬಿಳುಪಾಗಿಯೂ, ತರಿ ಇಲ್ಲದೆ ನುಣ್ಣಗೆ ಇರತಕ್ಕ ಪುಡಿಸಕ್ಕರೆಯಾಗಿದೆ. (3) ಕಲ್ಲುಸಕ್ಕರೆ ಬಿಲ್ಲೆ, ಮತ್ತು ಬಣ್ಣಕಟ್ಟಿದ ಕೆಂಪು, ಇವುಗಳು. ಈ ಮೇಲ್ಕಂಡ ಮೂರುತರಹಾ ಸಕ್ಕರೆ ಈಕಡೆ ಹೆಚ್ಚು ಬಳಕೆಯಲ್ಲಿರುತ್ತವೆ. ಇವುಗಳಲ್ಲಿ ಅಪವಿತ್ರಪದಾರ್ಥಗಳು ಮಿಶ್ರಿತವೆ ? ಯಾವುದರಲ್ಲಿ ಮಿಶ್ರ ? ಯಾವುದರಲ್ಲಿ ಇಲ್ಲ ? ಇವುಗಳಲ್ಲಿ ನಿತ್ಯನೈಮಿತ್ತಿಕಪೂಜೆಗಳಲ್ಲೂ, ಹಬ್ಬಗಳೇ ಇತ್ಯಾದಿ ಶುಭಕಾರ್ಯಗಳಲ್ಲೂ, ಯಾವುದನ್ನು ಉಪಯೋಗಿಸಬಹುದು ? ವೈದಿಕವಿರೋಧವಾದದ್ದು ಯಾವುದು ? ಎಂಬಿವೇ ಮುಂತಾದ ಸಂದೇಹನಿವೃತ್ತಿಗಾಗಿ ಸರಿಯಾದ ಉತ್ತರವನ್ನು ಪತ್ರಿಕಾಮೂಲಕ ಪ್ರಚುರಪಡಿಸಬೇಕಾಗಿ ಕೋರಿಕೆ.

ಓರ್ವ ಆಚಾರಾಭಿಮಾನಿ.

ಒಬ್ಬ ಸಾಧುವಿನ ಮೃತ್ಯು.

ಚಿತ್ರದುರ್ಗತಾಲ್ಲೂಕು ಹಿರೇಗುಂಟನೂರಲ್ಲಿ ಬ್ರಾಹ್ಮಣವರ್ಗದಲ್ಲಿ ಜನಿಸಿ ವಿದ್ಯಾವಂತರಾಗಿ ತಮ್ಮ ಸುಮಾರು 20ನೇ ವರ್ಷವಯಸ್ಸಿನಲ್ಲಿ ಯೋಗಾಭ್ಯಾಸಮಾಡಿ ಆರೂಢಪಥಹಿಡಿದು ಜನಿಸಿದ ವರ್ಗವನ್ನು ಬಿಟ್ಟು ಜಿತೇಂದ್ರಿಯಾಗಿದ್ದುಕೊಂಡು ಬಡವರೂ ಬಲ್ಲಿದರೂ ಎಂಬ ತಾರತಮ್ಯವಿಲ್ಲದೆ ಪ್ರತಿಯೊಬ್ಬರನ್ನೂ ಒಂದೇಭಾವದಿಂದ ಕಾಣುತ್ತ ಸರ್ವರಲ್ಲಿಯೂ ವಿಳಿತರಾಗಿ ಕೆಲಕೆಲವು ಮಹತ್ಕಾರಣಗಳನ್ನುತೋರಿಸುತ್ತ ತಮ್ಮ ಸುಮಾರು 45ನೇ ವಯಸ್ಸಿನವರಿವಿಗೆ ಸಾತ್ವಿಕವೃತ್ತಿಯಿಂದ ಎಲ್ಲಾವರ್ಗದವರಲ್ಲಿಯೂ ಶಿವಾಧಿಕ್ಯವನ್ನೇ ಪ್ರಚುರಪಡಿಸುತ್ತಿದ್ದ ಶ್ರೀಸಾಧುಗಳು ತಾ|| 31-1-26 ರಲ್ಲಿ ಶಿವೈಕ್ಯರಾದರು. ಆದರೆ ಯಾವ ವರ್ಗದಲ್ಲೂ ಭೇದವೆಣಿಸದೆ ಇದ್ದದ್ದರಿಂದ ಯಾವ ವರ್ಗದವರು ಸಂಸ್ಕಾರಮಾಡಬೇಕೆಂಬ ಸಂಶಯ ಹುಟ್ಟಿ ಯಾರೂ ಸಿದ್ಧರಿಲ್ಲವಾಗಿ ಇಲ್ಲಿನ ಪಟೇಲ್ ಶಾನುಭೋಗರು ಸಂಸ್ಕಾರಕ್ಕೆ ಆದಿದ್ರಾವಿಡರಿಗೆ ಅಪ್ಪಣೆ ಮಾಡುವುದರೊಳಗೆ ಯೋಗಾಭ್ಯಾಸದ ಮಹಿಮೆಯಿಂದಲೋ ಈಶ್ವರಪ್ರೇರಣೆಯಿಂದಲೋ ಈ ಗ್ರಾಮಕ್ಕೆ ಅಕಸ್ಮಾತ್ತಾಗಿ ಮಾಯಕೊಂಡದ ಗುಜರ್ ನರಸೋಜಿರಾವ್ ಇವರು ದಯೆಮಾಡಿಸಿ ಮೃತಿವಿಚಾರಕೇಳಿ ಬಹಳ ಪಶ್ಚಾತ್ತಾಪಗೊಂಡು ಪಟೇಲ್ ಶ್ಯಾನುಭೋಗರ ಅನುಮತಿಪಡೆದು ಸ್ವಂತಖರ್ಚಿನಿಂದ ಶ್ರೀಮೃತರ ಕಳೇಬರವನ್ನು ಹೊಸಕಾವಿವಸನ ಮತ್ತು ತುಲಸಿ ರುದ್ರಾಕ್ಷಿಸರ ವಿಭೂತಿ ಗಂಧ ಅಕ್ಷತೆ ಪುಷ್ಪಾದಿಗಳಿಂದ ಅಲಂಕರಿಸಿ ತಾಳಮೇಳ ಕಹಳೆ ಮೊದಲಾದ ವಾದ್ಯವೈಭವದೊಡನೆ ಪೂಜಿಸಿ ಆ ಕಾಲಕ್ಕೆ ಬಂದ ಜಂಗಮ ಜೋಗಿ ಆದಿಯಾಗಿ ಪ್ರತಿಯೊಬ್ಬರಿಗೂ ದಕ್ಷಿಣೆ ಕೊಡುತ್ತ ಮಹಾವೈಭವದೊಡನೆ ಸೇರಿದ 200-300 ಜನರೊಂದಿಗೆ ಕಳೇಬರವನ್ನು ಮೆರವಣಿಗೆಯಿಂದ ಶಾಸ್ತ್ರರೀತಿಯಾಗಿ ಸಮಾಧಿಮಾಡಿಸಿದರು. ಇದಲ್ಲವೆ ಸಾಧುಮಹಿಮೆ! ಅನಾಥರಾಗಿ ಶಿವೈಕ್ಯರಾದ ಶ್ರೀಸಾಧುಗಳ ಸಂಸ್ಕಾರವಿಷಯದಲ್ಲಿ ಬಹಳ ಭಕ್ತಿಯಿಂದ ದೇಹಶ್ರಮ ಅರ್ಥಶ್ರಮ ವಹಿಸಿದ ಮ|| ಗುಜರ್ ನರಸೋಜಿರಾವ್ ಇವರಿಗು ಮತ್ತು ಆ ಕಾಲಕ್ಕೆ ಸರಿಯಾಗಿ ಒದಗಿಬಂದು ಪೂಜಾವಗೈರೆ ನಡಿಸಿದ ಗಾರೆಹಟ್ಟಿ ಮ|| ಫೋಳಪ್ಪ ಪಂಡಿತ ಇವರಿಗೂ ಗ್ರಾಮದಲ್ಲಿ ಇವರ ಕೆಲಸಕ್ಕೆ ಕುಮಕ್ ಮಾಡಿದ ಶೈವಭಕ್ತರಿಗೂ ಶ್ರೀಪರಮೇಶ್ವರನು ಶ್ರೇಯಸ್ಸನ್ನುಂಟುಮಾಡಲೆಂದು ಪ್ರಾರ್ಥಿಸುವ, ಸಾಧುಭಕ್ತ.

ಎಲೆಕ್ಷನ್ನಿನ ಫಲಿತಾಂಶ.

ಬಳ್ಳಾರಿಜಿಲ್ಲಾ ಹೊಸಪೇಟೆ ತಾಲ್ಲೂಕುಬೋರ್ಡು ಮೆಂಬರುಗಳ ಎಲೆಕ್ಷನ್ ತಾ|| 23-1-26 ರಲ್ಲಿ ಪ್ರಾರಂಭವಾಯಿತು. ತಾ|| 30-1-26 ರಲ್ಲಿ ಬ್ಯಾಲೆಟ್ ಪೇಪರುಗಳನ್ನು ಪರಿಶೋಧಿಸಲಾಗಿ ಈ ಕೆಳಗೆ ನಮೂದಿಸಿದ ಜನರು ಮೆಂಬರುಗಳಾಗಿ ಆರಿಸಲ್ಪಟ್ಟರು.—ಹೊಸಪೇಟೆ ಸರ್ಕಲ್ಲಿನಿಂದ 3 ಸೀಟುಗಳಿಗಾಗಿ ನಿಂತಿದ್ದ 9 ಜನರಲ್ಲಿ 1. ಮ|| ಪತ್ತಿಕೊಂಡ ನಾಗಪ್ಪಶೆಟ್ಟಿ ಮುನ್ಸಿಪಲ್ ಕೌನ್ಸಿಲ್ ಚೇರಮನ್ನರವರು, 2. ಮ|| ಕುದ್ರಿ ಮೋತಿ ಸಿದ್ಧಲಿಂಗಯ್ಯನವರು ಮುನ್ಸಿಪಲ್ ಕೌನ್ಸಿಲ್ ವೈಸ್ ಚೇರಮನ್ನರವರು, ಮತ್ತು 3. ಮ|| ಗುಗ್ರಿದೊಡ್ಡಪ್ಪ ಬೆಂಚ್ ಮ್ಯಾಜಿಸ್ಟ್ರೇಟ್‌ರವರು, ನಾರಾಯಣದೇವರಕೇರಿ ಸರ್ಕಲ್ಲಿನಿಂದ 1 ಸೀಟಿಗಾಗಿ ನಿಂತಿದ್ದ 3 ಜನರಲ್ಲಿ 1. ಮ|| ಮುಪಗಲ್ ವೀರಭದ್ರಪ್ಪನವರು. ಕಂಪ್ಲಿ ಸರ್ಕಲ್ಲಿನಿಂದ 2 ಸೀಟಿಗಾಗಿ ನಿಂತಿದ್ದ 3 ಜನರಲ್ಲಿ 1. ಮ|| ಗೌಡ್ರು ವೆಂಕೋಬರಾವುರವರು; 2. ಕಾಮರೆಡ್ಡಿ ತಿಮ್ಮಪ್ಪನವರು, ಗಾದಿಗನೂರು ಸರ್ಕಲ್ಲಿನಿಂದ 2 ಸೀಟುಗಳಿಗಾಗಿ ನಿಂತಿದ್ದ 5 ಜನರಲ್ಲಿ 1. ಮ|| ಎ. ಡಿ. ತಾಂಡವಮೊದಲಿಯಾರ್ರು ಹೊಸಪೇಟೆ; 2. ಮ|| ಕಾಕುಬಾಳು ರೆಡ್ಡಿ ಜೆಂಬನಗೌಡ್ರು; ಕೂಡ್ಲಿಗಿ ಸರ್ಕಲ್ಲಿನಿಂದ 2 ಸೀಟುಗಳಿಗಾಗಿ ನಿಂತಿದ್ದ 4 ಜನರಲ್ಲಿ 1. ಮ|| ಕೊಟ್ರ ಬಸಪ್ಪನವರು; 2. ಮ|| ರೆಡ್ಡಿ ವೀರಭದ್ರಗೌಡ್ರು; ಕೊಟ್ಟೂರು ಸರ್ಕಲ್ಲಿನಿಂದ 3 ಸೀಟುಗಳಿಗಾಗಿ ನಿಂತಿದ್ದ 8 ಜನರಲ್ಲಿ 1. ಮ|| ಕನ್ನಿಹಳ್ಳಿ ಬಸವಲಿಂಗನಗೌಡ್ರು; 2. ಮ|| ಪತ್ತಿಕೊಂಡ ಸಣ್ಣಪ್ಪಶೆಟ್ಟಿ ಹೊಸಪೇಟೆ, ಮತ್ತು 3. ಮ|| ಅಯ್ಯನಹಳ್ಳಿ ಕೆಟ್ಟರುದ್ರಪ್ಪನವರು, ಹೊಸಳ್ಳಿ ಸರ್ಕಲ್ಲಿನಿಂದ 2 ಸೀಟುಗಳಿಗಾಗಿ ನಿಂತಿದ್ದ 3 ಜನರಲ್ಲಿ 1. ಮ|| ಬೆಳ್ಳಿಕಟ್ಟೆ ಕೆ. ಕಟ್ಟಪ್ಪನವರು, 2. ಮ|| ಚೆನ್ನಬಸವನಗೌಡ್ರು ರೆಡ್ಡಿ ಅಯ್ಯನಹಳ್ಳಿ. ಚೋರುನೂರು ಸರ್ಕಲ್ಲಿನಿಂದ 1 ಸೀಟಿಗಾಗಿ ನಿಂತಿದ್ದ 1. ಮ|| ಜೋಯಿಸ ರಾಮಾಚಾರ್ರು ಈ ಪ್ರಕಾರವಾಗಿ ಮಹಾಜನಗಳು ಸರ್ವಜನಸಮ್ಮತದಿಂದ ಮೆಂಬರುಗಳಾಗಿ ಆರಿಸಿ ಬಂದಿರುತ್ತಾರೆಂದು ತಿಳಿಸಲು ಅತ್ಯಾನಂದವಾಗುತ್ತದೆ. ಸದರಿ ಮೆಂಬರುಗಳು ಸ್ವಾರ್ಥತ್ಯಾಗ ಮಾಡಿ ತಮ್ಮ ಉದ್ದೇಶವನ್ನು ಜನಗಳಲ್ಲಿ ಆಡಿತೋರಿಸಿದಂತೆ ಕಾರ್ಯತಃ ಮಾಡಿತೋರಿಸಿ ಪ್ರಜೆಗಳಿಗೆ ಉತ್ತರೋತ್ತರ ಹಿತವನ್ನು ಮಾಡುತ್ತ ಅಸ್ಪೃಶ್ಯ [illegible] ಯಶೋಭಾಗಿಗಳಾಗಬೇಕೆಂದು [illegible] ಪ್ರಾರ್ಥಿಸುವ, ತಮ್ಮ ಶ್ರೇಯೋಭಿಲಾಷಿ.

ದುಃಖವಾರ್ತೆ.

ನಮ್ಮ ವೀರಶೈವಮಂಡಲಿಯಲ್ಲಿ ಸಂಸ್ಕೃತಪಂಡಿತರಾಗಿಯೂ, ವೇದಾಧ್ಯಯನಸಂಪನ್ನರಾಗಿಯೂ ಕವಿತಾಶಕ್ತಿಯುಳ್ಳವರಾಗಿಯೂ ಇದ್ದ ಮಾಗಡಿ ವೇ. ಎಸ್. ವೀರಪ್ಪಶಾಸ್ತ್ರಿಗಳವರು, ಕಳೆದ ಶಿವರಾತ್ರಿದಿವಸ ಶ್ರೀಶಿವಯೋಗಮಂದಿರದಲ್ಲಿ ನಡೆಯತಕ್ಕ ಶಿವಯೋಗಸಮಾರಂಭಕ್ಕಾಗಿ ಅಲ್ಲಿಗೆ ಹೊರಡಲಿಚ್ಛೈಸಿ ಶ್ರೀಶಿವಯೋಗಿಕುಮಾರದೇಶಿಕೇಂದ್ರಮಹಾಸ್ವಾಮಿಯವರ ಮಹತ್ಕಾತಿಶಯಗಳನ್ನು ಕುರಿತು - ನವರತ್ನಸ್ತೋತ್ರಮಾಲಾ - ಎಂಬ ಪದ್ಯಗಳನ್ನು ರಚಿಸಿ, ತಾ|| 6 ನೇ ಶನಿವಾರ ಸಾಯಂಕಾಲ ಪುರಪ್ರಮುಖರ ಮತ್ತು ಸದ್ಭಕ್ತರ ಸಮಕ್ಷಮ ತಾವು ರಚಿಸಿದ್ದ ಪದ್ಯಗಳನ್ನು ಹೇಳಿ ತದರ್ಥಗಳನ್ನು ಸುಹೃದಯರ ಮನಸ್ಸಿಗೆ ಆನಂದವಾಗುವಂತೆ ಬೋಧಿಸಿದ್ದರಲ್ಲದೆ, ಶಿವಯೋಗಮಂದಿರದ ಮಹತ್ಕಾತಿಶಯಗಳನ್ನೂ ಮಹಾಸ್ವಾಮಿಯವರ ದಿವ್ಯತಪೋಪ್ರಭಾವವನ್ನೂ ಅಭ್ಯಾಸಮಾಡತಕ್ಕ ಮರಿಗಳ ಯೋಗಾಭ್ಯಾಸಕ್ರಿಯೆಗಳನ್ನೂ ರಾತ್ರಿ 10 ಗಂಟೆಪರಿಯಂತರ ಹೇಳಿ ಸಭಿಕರ ಮನಸ್ಸನ್ನು ಸಂತೋಷಗೊಳಿಸಿ ತಾವು ಕೂಡ ಆನಂದಪರವಶರಾಗಿ ಸಭಿಕರು ತೆರಳಿದನಂತರ ಸ್ನಾನ ಶಿವಾರ್ಚನಾದಿಗಳನ್ನು ಪೂರೈಸಿಕೊಂಡು 12 ಗಂಟೆಸಮಯಕ್ಕೆ ಶಯನಮಾಡಿದರು. ಬೆಳಗಿನಝಾವ 4 ಗಂಟೆಸಮಯದಲ್ಲಿ ಅಕಸ್ಮಾತ್ತಾಗಿ ಎದುರುಬಿಕ್ಕಳಿಕೆ ಹುಟ್ಟಿ ಒಂದುಗಂಟೆಕಾಲ ಶರೀರಕ್ಕೆ ಅಲಸ್ಯತೋರಿ 5 ಗಂಟೆ ಸಮಯದಲ್ಲಿ ಭೌತಿಕಶರೀರವನ್ನು ಬಿಟ್ಟು ಶಿವಸಾಯುಜ್ಯಪದವಿಯನ್ನು ಹೊಂದಿದರು. ತಾ|| 7 ನೇ ಭಾನುವಾರ ಲಿಂಗದೇಹವು ಉತ್ಸವಪೂರ್ವಕವಾಗಿ ಸ್ಮಶಾನಕ್ಕೆ ತೆಗದುಕೊಂಡುಹೋಗಲ್ಪಟ್ಟು ವಿಧಿವತ್ತಾಗಿ ಸಮಾಧಿಕ್ರಿಯೆಗಳೆಲ್ಲವೂ ನಡೆಸಲ್ಪಟ್ಟುವು. ಈ ವಿದ್ವಾಂಸರಿಗೆ ಅನಿರೀಕ್ಷಿತವೂ ಆಶ್ಚರ್ಯಕರವೂ ಆದ ಮರಣಪ್ರಾಪ್ತವಾದುದಕ್ಕಾಗಿ ಸಮಾಜಬಾಂಧವರೆಲ್ಲರೂ ದುಃಖವೆಂಬ ಸಮುದ್ರದಲ್ಲಿ ಮುಳುಗಿದವರಾಗಿರುತ್ತಾರೆ. ಇವರು ಈ ವೀರಶೈವಮತಕ್ಕಾಗಿ ಬಹಳ ದೇಹಶ್ರಮವಹಿಸಿ ಗ್ರಂಥಶೋಧನೆಯನ್ನುಮಾಡಿ ಅನೇಕ ಮತಗ್ರಂಥಗಳನ್ನು ರಚಿಸಿ ಪ್ರಿಂಟುಮಾಡಿಸಿರುವರಲ್ಲದೆ, ಬಡವಿದ್ಯಾರ್ಥಿಗಳಿಗೆ ಸಂಸ್ಕೃತ ಅಧ್ಯಯನ ಜ್ಯೋತಿಷ ಮೊದಲಾದ ವೈದಿಕ ವಿದ್ಯೆಗಳನ್ನು ಹೇಳಿ ಅಲ್ಲಲ್ಲಿ ವೈದಿಕರನ್ನು ಹೆಚ್ಚಿಸಿದ್ದಲ್ಲದೆ ಈಚೆಗೆ ಈ ಮತದ ಧರ್ಮ, ಆಚಾರ, ತತ್ವಗಳ ಪ್ರಚಾರದ ಬಗ್ಗೆ 'ವೀರಶೈವಧರ್ಮಸಂಗ್ರಹ' ವೆಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು. ಇಂಥಾ ಗುಣಾಢ್ಯರೂ ಸಮಾಜಸುಧಾರಕರು ಆದ ವಿದ್ವಾಂಸರನ್ನು ಕಳೆದುಕೊಂಡದ್ದು ಈ ಮತದ ದುರದೃಷ್ಟವೆಂದೇ ಹೇಳಬೇಕು. ಮೃತರ ಆತ್ಮಕ್ಕೆ ನಿರಂತರಶಾಂತಿಯನ್ನೂ ಅವರ ಕುಟುಂಬಕ್ಕೆ ಧೈರ್ಯವನ್ನೂ ದೇವರು ಅನುಗ್ರಹಿಸಲೆಂದು ಕೋರುವ,

ಪ್ರತ್ಯಕ್ಷದರ್ಶಿ.

ಹೋಳೀಕೋತ್ಸವದಿಂದಾಗುವ ತೊಂದರೆಗಳು.

ಪ್ರತಿವರ್ಷ ಫಾಲ್ಗುಣ ಶುದ್ಧ ಪೌರ್ಣಮಿ ದಿವಸ ನಡೆಯುವ ಹೋಳೀಕೋತ್ಸವದ (ಕಾಮದಹನದ) ನ್ನು ಪ್ರಾಚೀನಕಾಲದಿಂದಲೂ ನಡೆದು ಬಂದಂತೆ ಊರಿಗೆ ಇಲ್ಲವೆ ಪೇಟೆಗಳಿಗೊಂದೊಂದು ಕಡೆಯಲ್ಲಿ ಸದ್ವರ್ತನ ಸದಾಚಾರಗಳ ಪದ್ಧತಿಯ ಹದ್ದನ್ನು ಮೀರದೆ ನಮ್ಮ ದಯಾಳು ಸರ್ಕಾರದವರು ವಿಧಿಸಿರುವ ರೂಲ್ಸನ್ನು ಧಿಕ್ಕರಿಸದೆ ಸರ್ವರ ನೆಮ್ಮದಿಗೂ ಭಂಗಬರದೆ ಹಾಯಾಗಿ ನಡೆಯಿಸುವುದಕ್ಕೆ ಪ್ರತಿಯಾಗಿ ಈಗೀಗ ಬರಬರುತ್ತಾ ಊರಿಗೆ ಒಂದುಕಡೆ ಎಂಬುವುದು ಹಾಗಿರಲಿ ಈ ದಾವಣಗೆರೆ ಟವನ್ನಿನಲ್ಲಾದರೋ ಒಂದೊಂದು ಪೇಟೆಯಲ್ಲಿಯೇ 3-4 ಕಡೆಗಳಲ್ಲಿ ಆ ದಿವಸ ದಹನಕ್ಕೆ ಆರಂಭಿಸಿ ಪುಂಡುಪೋಕರಿಗಳೆಲ್ಲಾ ಸೇರಿ ಅವರವರ ತಂತಮ್ಮ ಕೃತಿಯನ್ನು ಹೆಚ್ಚು ಮಾಡಲೋಸುಗ ಒಬ್ಬರಿಗೊಬ್ಬರು ನಾನು ಮುಂದು ತಾನುಮುಂದು ಎಂದು ದುರಹಂಕಾರದಿಂದ ನೀಚಭಾಷೆಗಳನ್ನುಚ್ಚರಿಸುತ್ತ ಇಪ್ಪತ್ತು ಮುವ್ವತ್ತು ಜನಗಳು ತಂಡೋಪತಂಡವಾಗಿ ಕಳಗಳಿಗೂ ಮನೆಯ ಹಿತ್ತಲುಗಳಿಗೂ ನುಗ್ಗಿ ಬಡಬಗ್ಗರು ಸಂಗ್ರಹಿಸಿಟ್ಟುಕೊಂಡಿರುವ ಸವುದೆ ಬೆರಣೆ ಮರಮುಟ್ಟುಗಳು ಅಲ್ಲದೆ ನೆರೆಹೊರೆಯವರ ಮನೆಯಮುಂದಿನ ಚಪ್ಪರ ವಗೈರೆ ಯಾವಾದೇನು ಕೈಗೆ ಸಿಕ್ಕಿದುದನ್ನು ಬಿಡದಂತೆ ತಂದು ತಂದು ಆ ಅಗ್ನಿಗೆ ಹಾಕುತ್ತಿರುವರು. ಆ ಸಮಯದಲ್ಲಿ ಒಬ್ಬಿಬ್ಬರು ಕಂಡು ಅಡ್ಡಿಮಾಡಿದರು ಕೂಡ ಅಂತಹವರನ್ನು ಲಕ್ಷ್ಯಮಾಡದೆ ಅವರಿಗೆ ಯಾವುದಾದರೊಂದುತೆರನಾಗಿ ತೊಂದರೆಪಡಿಸಿ ಹತ್ತಿರ ಬರದಂತೆ ಮಾಡಿ ಹೊತ್ತಿ ಉರಿಯುವ ಅಗ್ನಿಯನ್ನು ನೋಡಿ ನೋಡಿ ಚೀರಾಡುತ್ತಾ ಏನೊಂದೂ ಲಕ್ಷವಿಲ್ಲದೆ ಕ್ರೂರಮೃಗಗಳಂತಿರುವರು. ಈ ವೇಳೆಯಲ್ಲಿ ಇಂತಹವರಿಂದ ಇಷ್ಟು ತೊಂದರೆಪಡಲ್ಪಾಕೆ ಫಿರ್ಯಾದೆ ಮಾಡಿದರಾಯಿತೆಂದರೆ ಅಂತಹ ಸಮರಾತ್ರಿಯಲ್ಲಿ ಫಿರ್ಯಾದಿಯಕಡೆ ಸಾಕ್ಷಿಹೇಳುವವರಾರು ಸಿಕ್ಕುವರು ? ಇದಂತಿರಲಿ. ಇಂತೀ ಗುಟ್ಟನ್ನು ತಿಳಿದ ಈ ಪುಂಡುಪೋಕರಿಗಳು ಫಿರ್ಯಾದಿಯು ಟವನ್ನಿಗೆ ಹೋಗಿಬರುವುದರೊಳಗಾಗಿ ಫಿರ್ಯಾದಿಯ ಮನೆಗೆ ನುಗ್ಗಿದರೂ ನುಗ್ಗಬಹುದು, ಇಲ್ಲವೇ ಮತ್ತಾವತರನಾದ ತೊಂದರೆಯನ್ನಾದರೂ ಮಾಡಬಹುದು. ಇಷ್ಟೇ ಅಲ್ಲ, ಇದರ ವಿಪರೀತಸ್ಥಿತಿಯನ್ನು ಒಂದೊಂದು ಕಡೆ ಕಣ್ಣಾರೆ ನೋಡಿದರೆ ತಿಳಿಯುವದಲ್ಲದೆ ಹೇಳುವದಕ್ಕಸಾಧ್ಯವೇ ಸರಿ. ಆದರೆ ಇಂತೀ ಹೇಳತೀರದಷ್ಟು ತೊಂದರೆಯನ್ನುಂಟುಮಾಡುವಕಾಲವಾದರೋ ಈಗ ಅತಿ ಸಮೀಪಿಸಿರೋಣದರಿಂದ, ಇನ್ನುಮೇಲಾದರೂ ಈತೆರನಾದ ತೊಂದರೆಗಳಿಗೆ ಅವಕಾಶವಿಲ್ಲದಂತಿರುವದಕ್ಕೋಸ್ಕರ ನಮ್ಮ ದಯಾಳು ಸರ್ಕಾರದವರು ಆ ದಿವಸ ಸರಿಯಾದ ಪೋಲೀಸ್ ಸಿಬ್ಬಂದಿಯನ್ನಿಡಬೇಕಲ್ಲದೆ ಲೈಸನ್ಸು ಇಲ್ಲದೆ ಯಾರೊಬ್ಬರೂ ಕಾಮದಹನವನ್ನು ಮಾಡಲಾಗದೆಂದು ಕಟ್ಟಪ್ಪಣೆ ವಿಧಿಸಿ ಸರ್ವಪ್ರಜಾನೆಮ್ಮದಿಯನ್ನು ಕಾಪಾಡಬೇಕೆಂದು ಬೇಡುತ್ತೇನೆ. ಓರ್ವ ಪ್ರಜಾಹಿತೈಷಿ.

ಮೈಸೂರಿನಲ್ಲಿ ಗೋಸಂರಕ್ಷಣೆ.

(ಲೇಖಕರು—ಮಿ|| ಎಸ್. ಎನ್. ರಮಣ, ಮ್ಯುನಿಸಿಪಲ್‌ಕೌನ್ಸಿಲರ್ ಮತ್ತು ಡಿ|| ಬೋರ್ಡು ಮೆಂಬರು, ಬೆಂಗಳೂರು.)

ದೇಶದಲ್ಲಿ ಅನೈಕಮತ್ಯಕ್ಕೆ ಕಾರಣವಾದ ಗೋರಕ್ಷಣ ಸಮಸ್ಯೆಯು ಉತ್ತರದೇಶದಿಂದ ಬಂದು ನಮ್ಮ ಮೈಸೂರಿನಲ್ಲೂ ಹರಡಿಗುವುದು ನಮ್ಮ ದುರದೃಷ್ಟವೆಂದೇ ಹೇಳಬೇಕಾಗಿದೆ. ಗೋರಕ್ಷಣಾರ್ಥವಾಗಿ ಈಗ್ಗೆ 2 ವರ್ಷಗಳ ಹಿಂದೆ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಮತ್ತು ಚಮನ್‌ಲಾಲ್ ಡಂಗೋಜಿಸೇಟರ ಚಾಲಕತ್ವದಲ್ಲಿ ಸಭೆಯನ್ನು ಸ್ಥಾಪಿಸಿದವರು ತಮ್ಮ ದಿಷ್ಟ ಕಾರ್ಯವು ನಿರ್ವಿಘ್ನವಾಗಿ ನಡೆಯಲು ಯಾವ ಮಾರ್ಗವನ್ನು ಅನುಸರಿಸಬೇಕೆಂದು ಮಹಮ್ಮದೀಯರ ಕೂಡ ಆಲೋಚನೆಯನ್ನು ಮಾಡಲಿಲ್ಲ. ಅದಕ್ಕೆ ಬದಲು ಮಹಮ್ಮದೀಯರು ಗೋವಧೆಯನ್ನು ಬಿಟ್ಟುಬಿಡಬೇಕೆಂದು ಉಪನ್ಯಾಸಗಳಮೂಲಕ ಬೋಧಿಸಲ್ಪಡುತ್ತಿರುವರು.

ಮಹಮ್ಮದೀಯರೊಬ್ಬರೇನೆಯೇ ದನವಿನಮಾಂಸಹಾರಿಗಳು ? ಹಿಂದುಗಳಲ್ಲಿ ಆದಿಕರ್ನಾಟಕರೂ ಆದಿದ್ರಾವಿಡರೂ ದನವಿನಮಾಂಸವನ್ನು ಮಹಮ್ಮದೀಯರಿಗಿನ್ನ ವಿಶೇಷವಾಗುಪಯೋಗಿಸುವರು. ಮೈಸೂರುಸೀಮೆಯಲ್ಲಿ ಮಹಮ್ಮದೀಯರು ಹಿಂದುಗಳಷ್ಟೇ ಗೋರಕ್ಷಣಾಭಿಮಾನಿಗಳಾಗಿರುವರೆಂಬುದು ಎಲ್ಲರೂ ತಿಳಿದ ವಿಷಯವಾಗಿದೆ. ಮಹಮ್ಮದೀಯರು ಗೋರಕ್ಷಣೆಯನ್ನು ಹಿಂದುಗಳಂತೆ ಪುಣ್ಯಪ್ರದವೆಂದು ತಿಳಿಯದೆ ಬಹುಕೃಷಿಕರುಗಳ ಮುಖ್ಯ ಜೀವಸಾಧಾರವೆಂದುಭಾವಿಸಿ ಮಾಡುತ್ತಿರುವುದಾಗಿದೆ. ಪ್ರತಿಯೊಬ್ಬ ದೇಶಾಭಿಮಾನಿಯೂ ಬೇಸಾಯಾಭಿವೃದ್ಧಿದೃಷ್ಟಿಯಿಂದ ಗೋರಕ್ಷಣೆಯನ್ನು ಸರ್ವತ್ರ ಪ್ರಸಾರಮಾಡುವುದು ಅತ್ಯಾವಶ್ಯಕ. ಮೈಸೂರುಸೀಮೆಯ ಮಹಮ್ಮದೀಯರು ಕಳೆದಕ್ಷಾಮಕಾಲದಲ್ಲಿ ತಮ್ಮ ಹಸುಗಳನ್ನೂ ಎತ್ತುಗಳನ್ನೂ ಹುಲ್ಲುನೀರೂ ಸಮೃದ್ಧವಾಗಿರುವ ಮಲೆನಾಡಿಗೆ ಮೇಯಿಗಾಗಿ ಕಳುಹಿಸಲಿಲ್ಲವೆ ? ಸಾಧಾರಣಕಾಲದಲ್ಲಿ ನೂರಾರುರೂಪಾಯಿಗಳು ಬಾಳಬಹುದಾದ ಒಂದು ಜತೆಯ ಎತ್ತನ್ನು ಹತ್ತಿಪ್ಪತ್ತುರೂಪಾಯಿಗಳಿಗೆ ವಿಕ್ರಯಿಸಿದ ಮಹಮ್ಮದೀಯರು ನಿಂದಿಸಲ್ಪಡಬೇಕೋ, ಅವುಗಳನ್ನು ಬಹುಹೀನಕ್ರಯಕ್ಕೆ ಕೊಂಡುಕೊಂಡು ಸೇನೆಯ ಸೋಲ್ಜರ ಆಹಾರಾರ್ಥವಾಗಿ ಕಂಟ್ರಾಕ್ಟರುಗಳಿಗೆ ಪುನಃ ಮಾರಿದ ಹಿಂದುಗಳು ನಿಂದಿಸಲ್ಪಡಬೇಕೋ ? ಕಳೆದ ಕ್ಷಾಮಕಾಲದಲ್ಲಿ ಎಷ್ಟೋ ಗೋವುಗಳು ನಿರರ್ಥಕವಾಗಿ ಕೊಲ್ಲಲ್ಪಟ್ಟಾಗ ಗೋರಕ್ಷಣಸಭಾಮೆಂಬರುಗಳ ಉತ್ಸಾಹವೆಲ್ಲಿ ಹೋಗಿದ್ದಿತು ? ಅಂತಹ ದುರ್ದಶೆಯ ಕಾಲದಲ್ಲಿ ಉತ್ಸಾಹವು ಮಾಯವಾಗಿ ಬಡಮಹಮ್ಮದೀಯರು ಮಾತ್ರ ದನವಿನಮಾಂಸ ತಿನ್ನುತ್ತಾರೆಂದು ಅವರಮೇಲೆ ದೋಷವು ಹೊರಿಸಲ್ಪಡುವುದು. ಅಂತಹ ಸಮಯದಲ್ಲಿ ಆ ಸಭೆಯವರು ದ್ರವ್ಯವ್ಯಯಮಾಡಿ ಗೋವುಗಳನ್ನು ಕೊಂಡು ಸಾಕುತ್ತಿದ್ದು ಆನಂತರ ಬೇಸಾಯಗಾರರಿಗೆ ಅವನ್ನು ಮಾರಬಹುದಾಗಿದ್ದಿತಲ್ಲವೆ ?

ಪ್ರತಿವರ್ಷವಲ್ಲೂ 50,000 ಗೋವುಗಳು ಪರದೇಶಕ್ಕೆ ಸಾಗಿಸಲ್ಪಡುತ್ತಿರುವುವು, ಮತ್ತು ಇದರಿಂದ ತಲೆಯೊಂದಕ್ಕೆ ಕನಿಷ್ಠಪಕ್ಷ 100 ರೂ. ನಂತೆ ಲೆಖ್ಖ ಹಾಕಿದರೂ ½ ಕೋಟಿ ರೂ. ಆಗುವುದು. ಅವು ಬೇಸಾಯಗಾರರಿಗೆ ವಿಕ್ರಯಿಸಲ್ಪಟ್ಟವೋ, ಕಟುಗರಿಗೆ ವಿಕ್ರಯಿಸಲ್ಪಟ್ಟವೋ ಎಂಬುದು ಇನ್ನೂ ವ್ಯಕ್ತವಾಗಿಲ್ಲವು. ಇದರಿಂದ ವಿಕ್ರಯಿಸಿದ ಪ್ರಾಯಶಃ ಹಿಂದುಗೇನೂ ಪ್ರಯೋಜನವಿಲ್ಲವು. ಆದರೆ ಸರ್ಕಾರಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂತೆಗಳಿಂದಲೂ ಜಾತ್ರೆಗಳಿಂದಲೂ ಆದಾಯವಾಗುತ್ತದೆ. ದೇವಸ್ಥಾನಗಳಿಗೆ ದ್ರವ್ಯೋತ್ಪತ್ತಿಯಾಗುವುದರಿಂದ ದ್ರವ್ಯಸಹಾಯವಿಲ್ಲದ ಸಭೆಯವರು ವಯಸ್ಸಾದ ಮತ್ತು ಅಶಕ್ತವಾದವುಗಳನ್ನು ಕೊಂಡು ಬೈಲಿನಲ್ಲಿ ಸ್ವೇಚ್ಛೆಯಾಗಿ ಮೇದು ಸಾಯಲಿಕ್ಕೆ ಬಿಡಲು ಯತ್ನವಿಲ್ಲವಾಗಿದೆ. ಈ ಸಭೆಯವರು ದೇವಸ್ಥಾನಗಳ ಸಹಾಯವನ್ನು ಪಡೆಯುವುದಾದಲ್ಲಿ ಗೋವುಗಳ ಸಂರಕ್ಷಣೆಯನ್ನು ಬಹಳವಾಗಿ ಮಾಡಬಹುದು.

ಪಶುವೈದ್ಯಶಾಖೆಗೆ ಹೆಚ್ಚು ದ್ರವ್ಯಸಹಾಯ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದೂ ಒಂದು ಗೋರಕ್ಷಣೆಯ ವಿಧಾನವಾಗಿದೆ. ಪ್ರತಿವರ್ಷದಲ್ಲೂ ಸಾವಿರಾರು ಹಸುಗಳು ರೋಗದಿಂದ ಸಾಯುತ್ತವೆ. ಈ ಮೂಗುಪ್ರಾಣಿಗಳನ್ನು ಹರಾಜುಮಾಡದೆ ಬಡರೈತರುಗಳಿಗೆ 5 ವರ್ಷಕಾಲ ಉಚಿತವಾಗಿ ಕೊಟ್ಟಿದ್ದು ಅವು ರೈತರುಪಯೋಗಕ್ಕೆ ಬಾರದಂತಾದಮೇಲೆ ಹಿಂದಕ್ಕೆ ತೆಗೆದುಕೊಳ್ಳುವಹಾಗೆ ಅಮೃತಮಹಲ್ ಇಲಾಖೆಯವರಿಗೆ ಅಪ್ಪಣೆಮಾಡುವಂತೆ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕು. ಹೀಗೆ ಮಾಡಲ್ಪಟ್ಟಲ್ಲಿ ಈ ಪ್ರಾಣಿಗಳುಪಯೋಗವು ಸಂಸ್ಥಾನದ ಪ್ರತಿಯೊಂದು ಕುಟುಂಬಕ್ಕೂ ಗೊತ್ತಾಗುವ ಸಂಭವವಿರುತ್ತದೆ, ಮತ್ತು ಉಪಯುಕ್ತ ಕೆಲಸಗಳಿಗಾಗಿ ಸಂರಕ್ಷಿಸಲ್ಪಡುವುವು.

ಮೇಲ್ಕಂಡ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸ್ವಾಭಾವಿಕವಾದ ಕಷ್ಟಗಳಿರುವುವು. ಪ್ರತಿಯೊಂದು ಗ್ರಾಮಕ್ಕೂ ಗೋಮಾಳವಿಲ್ಲವು. ಪ್ರತಿಯೊಬ್ಬ ಗ್ರಾಮಸ್ಥನಿಗೂ ಗೋವು ಅವಶ್ಯವಾಗಿರುವುದಿಲ್ಲವು. ಮ್ಯುನಿಸಿಪಾಲಿಟಿಯಿರತಕ್ಕ ಸ್ಥಳಗಳಲ್ಲಿ ಗೋಮಾಳವು ಸ್ವಲ್ಪಪ್ರಾಯವು. ನೆರೆಯ ಬಂಜರುಪ್ರದೇಶವನ್ನು ಹುಲ್ಲುಗಾವಲನ್ನಾಗಿ ಮಾಡುವುದಕ್ಕೆ ಮ್ಯುನಿಸಿಪಾಲಿಟಿಗೆ ಅಧಿಕಾರವನ್ನು ಕೊಡಲು ಯೋಗ್ಯೋಪಾಯಗಳು ಸೂಚಿಸಲ್ಪಟ್ಟಲ್ಲಿ ಮತ್ತು ಪ್ರತಿಯೊಬ್ಬ ಗ್ರಾಮಸ್ಥನಿಗೂ ತಕ್ಕ ಸೌಕರ್ಯವು ಕಲ್ಪಿಸಲ್ಪಟ್ಟಲ್ಲಿ ಈ ಗೋರಕ್ಷಣಸಮಸ್ಯೆಯು ತಾನಾಗಿ ಪೂರ್ತಿಯಾಗುವುದು. ಆದುಕಾರಣ ಇದಕ್ಕಾಗಿ ಅಂದರೆ ಗೋರಕ್ಷಣೆಗಾಗಿ ಪ್ರತ್ಯೇಕ ಶಾಸನವು ಮಾಡಬೇಕಾದಾವಶ್ಯಕತೆಯಿಲ್ಲವು.

ಗೋವುಗಳ ಸಾಮಾನ್ಯಪ್ರಯೋಜನಗಳಲ್ಲದೆ, ಮತಧರ್ಮವಿಚಾರವೊಂದಿರುವುದು, ಹಿಂದುಮಹಮ್ಮದೀಯರು ಉಭಯರೂ ಮೇಲೆ ಹೇಳಲ್ಪಟ್ಟ ಸೂಚನೆಗಳಂತೆ ವಿಶಾಲಬುದ್ಧಿಯಿಂದ ನಡೆಸಿದುದಾದರೆ ಗೋರಕ್ಷಣೆಯು ಖಂಡಿತವಾಗಿ ನಡೆಯುವುದು. ಈ ವಿಚಾರವು ಬಹಳ ಸೂಕ್ಷ್ಮವಾಗಿರುವುದರಿಂದ, ಮಹತ್ಮಜಿಯವರು ಹೇಳುವ ಪ್ರಕಾರ ಪರಸ್ಪರ ಒಡಂಬಡಿಕೆಯಿಂದ ಸರಿಪಡಿಸಿಕೊಳ್ಳುವುದರಿಂದಲೂ, ಪ್ರತಿಯೊಂದು ಮನೆಗೂ ಹೋಗಿ ದನವಿನ ಮಾಂಸಹಾರ ಮಾಡಕೂಡದೆಂದೂ, ಗೋರಕ್ಷಣಪ್ರಯತ್ನವಿಚಾರದಲ್ಲಿ ತೊಂದರೆಪಡಿಸಕೂಡದೆಂದೂ ಮೂಢನಾದ ಹಿಂದುಗಾಗಲಿ, ಮಹಮ್ಮದೀಯನಿಗಾಗಲಿ, ಆದಿದ್ರಾವಿಡನಿಗಾಗಲಿ ಬೋಧಿಸುವುದರಿಂದಾಗುವಷ್ಟು ಪ್ರಯೋಜನವು ಶಾಸನನಿರ್ಮಾಣದಿಂದ ಅಥವಾ ವೇದಿಕೆಯಮೇಲಣ ಉಪನ್ಯಾಸಗಳಿಂದ ಆಗುವುದಿಲ್ಲವು.

ಭರತಖಂಡದ ಮೊದಲನೆಯ ಮೊಗಲ್ ಚಕ್ರವರ್ತಿಯಾದ ಬಾಬರನು ತನ್ನ ಮಗನಿಗೆ ಹೇಳಿದ ಕಡೆಯುಪದೇಶವು ಪ್ರಕೃತಸಂದರ್ಭದಲ್ಲಿ ಬೋಧಪರವಾಗಿರುವುದು. ಈ ಅಂತ್ಯೋಪದೇಶವು ಭೂಪಾಲಸಂಸ್ಥಾನದ ಪುಸ್ತಕಭಂಡಾರದಲ್ಲಿ ಬಹುಶ್ರದ್ಧೆಯಿಂದ ಜೋಪಾನಪಡಿಸಲ್ಪಟ್ಟಿರುತ್ತದೆ. ಬಾಬರನು ತನ್ನ ಮಗನಿಗೆ ಕೊಟ್ಟ ಮಹೋಪದೇಶವನ್ನು ಸ್ವಹಸ್ತಾಕ್ಷರದಲ್ಲಿ ಪರ್ಷಿಯನ್ ಅರಾಬಿಕ್‌ಲಿಪಿಯಲ್ಲಿ ಬರೆದಿರುವನು. ಅದರ ತಾತ್ಪರ್ಯವೇನೆಂದರೆ—

- ನನ್ನಪುತ್ರನೆ, ಭಾರತದೇಶವು ನಾನಾಪ್ರಕಾರ ಮತಗಳಿಂದ ತುಂಬಿರುತ್ತವೆ. ಈ ದೇಶದ ಚಕ್ರಾಧಿಪತ್ಯವು ನಿನ್ನ ವಶವಾಗಲು ದೇವರನುಗ್ರಹಿಸುವದಕ್ಕಾಗಿ ಅವನನ್ನು ವಂದಿಸುತ್ತೇನೆ. ಈ ನಾನಾಮತಗಳ ದ್ವೇಷದಿಂದ ನಿನ್ನ ಮನಸ್ಸನ್ನು ನಿರ್ಲಿಪ್ತವಾಗಿಟ್ಟುಕೊಳ್ಳುವಲ್ಲಿ ಎಚ್ಚರವಾಗಿರು. ಭಾರತೀಯರ ಮನಸನ್ನು ಜೈಸಿ ಔದಾರ್ಯರಜ್ಜುವಿನಿಂದ ಅವರನ್ನು ಬಂಧಿಸುವುದಕ್ಕಾಗಿ ಗೋವಧೆಯನ್ನು ಮುಖ್ಯವಾಗಿ ಮಾಡಬೇಡ. ನಿನ್ನ ಅಧೀನದಲ್ಲಿರುವ ದೇವಸ್ಥಾನಗಳನ್ನೂ ಪ್ರಾರ್ಥನಾಮಂದಿರಗಳನ್ನೂ ಅಪರಿಶುದ್ಧಗೊಳಿಸಬೇಡ. ರೈತರು ದೊರೆಯೊಂದಿಗೂ, ದೊರೆಯು ರೈತರೊಂದಿಗೂ ಪ್ರೀತರಾಗಿದ್ದರೆ ರಾಜ್ಯವು ಶಾಂತಿಮಯವಾಗಿರುವುದೆಂಬ ದೃಢನಂಬುಗೆಯಿಂದ ರಾಜ್ಯಪರಿಪಾಲನೆಮಾಡುವ ಸಂಕಲ್ಪವುಳ್ಳವನಾಗು. ಇಸ್ಲಾಮಿನ ಅಭಿವೃದ್ಧಿಯು ಯಾವಾಗಲೂ ಜುಲುಮ್ಮಿನಿಂದ ಆಗದೆ ಔದಾರ್ಯವೆಂಬ ಖಡ್ಗದಿಂದ ಆಗತಕ್ಕದ್ದಾಗಿದೆ. ಸುನ್ನಿ ಮತ್ತು ಷಿಯ್ಯಾಗಳ ವ್ಯತ್ಯಾಸದತಡೆಗೆ ಲಕ್ಷ್ಯವಿಡಬೇಡ, ಹಾಗಲ್ಲದಿದ್ದಲ್ಲಿ ಇಸ್ಲಾಂಮತವು ಬಹಳ ದುರ್ಬಲವಾಗುವುದು. ಸರಿಯಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ ನಿನ್ನಶರೀರವನ್ನು ದುಷ್ಟರೋಗಾದಿಗಳಿಲ್ಲದೆ ಕಾಪಾಡಿಕೊಂಡಿರುವಂತಹ ನಾಲ್ಕು ಭಾಗಗಳನ್ನಾಗಿ ನಾನಾಮತಗಳನ್ನು ಭಾವಿಸಿಕೊಂಡಿರು. ನೀನು ಮಾಡುವ ಕೆಲಸಗಳಲ್ಲೆಲ್ಲಾ ಶುದ್ಧವಾಗಿರುವುದಕ್ಕಾಗಿ ಆ ಪ್ರಸಿದ್ಧ ತೈಮೂರನ ಕಾರ್ಯಗಳು ಯಾವಾಗಲೂ ನಿನ್ನ ದೃಷ್ಟಿಪಥದಲ್ಲಿರಲಿ.

ಮೊದಲನೆಯ ಮೌಲಾಖಾನರೂಮನು ಅಮೋಘವಾದ ವಿವೇಕನಿಧಿಯನ್ನು ಬಿಟ್ಟುಹೋಗಿರುವನು. ಅವುಗಳಲ್ಲಿ ಈ ಕೆಳಗೆಕಂಡ ಬುದ್ಧಿವಾದವು ಮಹತ್ವವಾದ ಗೋರಕ್ಷಣವಿಚಾರದಲ್ಲಿ ಮಹಮ್ಮದೀಯರು ಹಿಂದುಗಳೊಡನೆ ಸಹಕರಿಸುವುದರ ಕಾರಣವನ್ನು ವ್ಯಕ್ತಗೊಳಿಸುತ್ತದೆ. ಮನಸ್ಸು ನಿನ್ನ ಸ್ವಾಧೀನದಲ್ಲಿರಲಿ. ಅದೇ ಮಹಾಕ್ಷೇತ್ರ. ಸಾವಿರ [illegible] ಗಳಿಗಿನ್ನ ಮನಸ್ಸು [illegible].

ಬೆಂಗಳೂರು ನೀರುಸರಬರಾಯಿಯ ವಿಷಯದಲ್ಲಿ ಪ್ರಸಿದ್ಧಪತ್ರಿಕೆ.

ಈ ವಿಷಯದಲ್ಲಿ ಹಿಂದಿನ ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿದ ತಾರೀಖು ಲಾಗಾಯಿತು ಎಂದರೆ 1925 ನೇ ಇಸ್ವಿ ಅಕ್ಟೋಬರ್ 17 ನೇ ತಾರೀಖು ಲಾಗಾಯಿತು ನೀರಿನ ಸರಬರಾಯಿಯ ವಿಷಯದಲ್ಲಿ ಸ್ಥಿತಿಗಳು ಉತ್ತಮಸ್ಥಿತಿಗೆ ಬಂದಿರುವುದಿಲ್ಲ. ಇನ್ನೂ ಅಸಮರ್ಪಕವಾಗಿಯೇ ಇರುತ್ತದೆ. ದೊಡ್ಡ ತುಮಕೂರು ಕೆರೆಯನ್ನು ಖಾಲಿಮಾಡಿದ್ದರಿಂದ ಹೆಸರುಘಟ್ಟದ ಕೆರೆಯ ನೀರಿನ ಮಟ್ಟವು 1925 ನೇ ಇಸ್ವಿ ನವಂಬರ್ 3 ನೇ ತಾರೀಖಿನ ದಿನ 50'-[illegible]" ಕ್ಕೆ ಬಂದಿದ್ದಿತು. ಎಂದರೆ ಹೆಚ್ಚಾಗಿ ಎರಡುತಿಂಗಳ ನೀರಿನ ಸರಬರಾಯಿಯು ಬಂದಂತಾಯಿತು. ನಿರೀಕ್ಷಿಸಿದಂತೆ ಅಕ್ಟೋಬರ್ ಮತ್ತು ನವಂಬರ್ ಮಾಹೆಗಳಲ್ಲಿ ಮಳೆಯೇ ಬರಲಿಲ್ಲ. ಆದಪ್ರಯುಕ್ತ ಮುಂದಿನ ಏರ್ಪಾಡುಗಳನ್ನು ಕೈಗೊಳ್ಳಬೇಕಾಗಿ ಬಂದಿತು. ಹೆಸರುಘಟ್ಟದ ಕೆರೆಯ ಮೇಲುಭಾಗದಲ್ಲಿದ್ದ ಎರಡು ಕೆರೆಗಳಲ್ಲಿ ಸ್ವಲ್ಪ ನೀರು ಇದ್ದುದರಿಂದ ಅವುಗಳನ್ನು ತೆಗೆದುಕೊಳ್ಳಲಾಯಿತು. ಅವುಗಳಲ್ಲೊಂದಾದ ಮಧುರೆಕೆರೆಯಲ್ಲಿ 7 ಅಡಿಗಳ ನೀರಿದ್ದಿತು. ಕೋಳತೂರು ಕೆರೆಯಲ್ಲಿ 5 ಅಡಿಗಳ ನೀರಿದ್ದಿತು. ಈ ಕೆರೆಗಳ ಕೆಳಗೆ ಸಾಗುವಳಿಯಾಗಿದ್ದ ಪೈರುಪಚ್ಚೆಗಳು ಇದ್ದುದರಿಂದ ಅವುಗಳನ್ನು ಕಾಪಾಡುವುದಕ್ಕೆ ಮಾತ್ರವಲ್ಲದೆ ಗ್ರಾಮಸ್ಥರ ಮತ್ತು ದನಗಳ ಉಪಯೋಗಕ್ಕಾಗಿ ಸದರೀ ಪ್ರತಿಯೊಂದು ಕೆರೆಯ ವಿಷಯದಲ್ಲಿಯೂ 1½ ಅಡಿಯಷ್ಟು ನೀರನ್ನು ಬಿಟ್ಟುಬಿಡಬೇಕಾದುದು ಯುಕ್ತವಾಗಿದ್ದಿತು. ಸದರೀ ಎರಡು ಕೆರೆಗಳನ್ನೂ ಖಾಲಿಮಾಡಿ ಹೆಸರುಘಟ್ಟದ ಕೆರೆಯೊಳಕ್ಕೆ ನೀರನ್ನು ಬಿಡಲಾಯಿತು. ಈ ಕೆರೆಗಳನ್ನು ಖಾಲಿಮಾಡಿದ ನಂತರ ಸದರೀ ಹೆಸರುಘಟ್ಟದ ಕೆರೆಯ ಮಟ್ಟವು 1925 ನೇ ಇಸ್ವಿ ನವಂಬರ್ 23 ನೇ ತಾರೀಖಿನ ದಿನ 51'-7" ನಷ್ಟು ಪರಮಾವಧಿ ಎತ್ತರಕ್ಕೆ ಏರಿದ್ದಿತು. ಸುಮಾರು 5 ಮೈಲಿಗಳಷ್ಟು ಫಾಸಲೆ ಸರಿಯಾಗಿಲ್ಲದೆ ಇರುವ ನಾಲಾ ಮುಖಾಂತರ ನೀರು ಹರಿಯುವುದರಲ್ಲಿ ಅಂದಾಜು ಮಾಡಿದ್ದಕ್ಕಿಂತಲೂ ಹೆಚ್ಚಾಗಿ ನೀರು ನಷ್ಟವಾದುದರ ದೆಸೆಯಿಂದ ನಿರೀಕ್ಷಣೆಗೆ ತಕ್ಕಷ್ಟುಮಟ್ಟಿಗೆ ಕೆರೆಯೊಳಕ್ಕೆ ನೀರು ಬರಲಿಲ್ಲ. ಮತ್ತು ಈ ಕಾಲದಲ್ಲಿ ಅಪೂರ್ವವಾಗಿ ಆವಿಯ ರೂಪವಾಗಿ ವಿಶೇಷವಾಗಿ ನೀರು ನಷ್ಟವಾದುದರಿಂದಲೂ ಹೆಚ್ಚಾಗಿ ನೀರು ಬಾರದಿರುವುದಕ್ಕೆ ಕಾರಣವಾಯಿತು. ಆದರೆ ಕೆರೆಯೊಳಕ್ಕೆ ಬಂದ ನೀರು ಏಪ್ರಿಲ್ ಮಾಹೆ ಅಖೈರುವರವಿಗೂ ಸರಬರಾಯಿಯಾಗುವುದು. 1926 ನೇ ಇಸ್ವಿ ಫೆಬ್ರವರಿ 1 ನೇ ತಾರೀಖಿನ ದಿನ ಕೆರೆಯ ನೀರಿನ ಮಟ್ಟವು 49'-1" ಆಗಿದ್ದಿತು. ಆ ಮಟ್ಟದಲ್ಲಿದ್ದ ಕೆರೆಯ ಆಳವು 565.82 ಲಕ್ಷ ಘನ ಅಡಿಗಳಷ್ಟು ಆಗಿದೆ. ಆವಿರೂಪವಾಗಿಯು ಮತ್ತು ಇತರ ವಿಧವಾಗಿಯು ನಷ್ಟವಾಗತಕ್ಕ ನೀರೂ ಸೇರಿ ಪ್ರಕೃತದಲ್ಲಿ ಕೆರೆಯಿಂದ ದಿನವೊಂದಕ್ಕೆ 40 ಲಕ್ಷ ಗ್ಯಾಲನ್ನುಗಳಷ್ಟು ಅಥವಾ 6,400 ಲಕ್ಷ ಘನ ಅಡಿಗಳಷ್ಟು ನೀರು ವೆಚ್ಚವಾಗುವುದೆಂದು ಭಾವಿಸಿದ ಪಕ್ಷದಲ್ಲಿ ಕೆರೆಯಲ್ಲಿ ದಾಸ್ತಾನವಾಗಿರುವ ನೀರು 90 ದಿವಸಗಳಿಗೆ ಅಂದರೆ ಏಪ್ರಿಲ್ ಮಾಹೆ ಅಖೈರುವರವಿಗೆ ಆಗುತ್ತದೆ. ಆದುದರಿಂದ ಮುಂದಿನ ಏರ್ಪಾಡುಗಳನ್ನು ಮಾಡತಕ್ಕದ್ದು ಅವಶ್ಯಕವಾದುದೆಂದು ಭಾವಿಸಲಾಗಿದೆ. ಬೇರೆ ಸ್ವತಂತ್ರವಾದ ಮಾರ್ಗದಿಂದ ನೀರನ್ನು ಫಿಲ್ಟರುಗಳಿಗೆ ಸೀದಾ ಪಂಪುಮಾಡುವುದಕ್ಕೆ ಏರ್ಪಾಡುಗಳನ್ನು ಮಾಡುತ್ತಲಿದೆ.

ಈಚೆಗೆ ಹೆಚ್ಚಾಗಿ ನೀರುಬಂದಿರುವ ಎಲೆಮಲ್ಲಪ್ಪನವರ ಕೆರೆಯಲ್ಲಿ ದಾಸ್ತಾನವಾಗಿರುವ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಉದ್ದೇಶ್ಯ ಮಾಡಲಾಗಿದೆ. ಈ ಕೆರೆಯು ಹೊಸಕೋಟೆ ರೋಡಿನಲ್ಲಿ 11 ನೇ ಮೈಲಿಬಳಿ ಇರುತ್ತದೆಯಲ್ಲದೆ ಕಂಬೈಂಡ್ ಜ್ಯೂಯಲ್ ಫಿಲ್ಟರುಗಳಿಂದ 12 ಮೈಲಿ ಫಾಸಲೆಯಲ್ಲಿರುತ್ತದೆ. ಈ ಕೆರೆಯಲ್ಲಿ ಈಗ ಹಾಲಿ 3,250 ಲಕ್ಷ ಗ್ಯಾಲನ್ನುಗಳಷ್ಟು ನೀರಿರುತ್ತದೆ. ಈ ನೀರು 80 ದಿವಸಗಳ ವರಿವಿಗೆ ಎಂದರೆ ಜುಲೈ ಅಖೈರ್‌ವರವಿಗೆ ಸಾಕಾಗುತ್ತದೆ. ಕೆರೆಯಿರುವ ಸ್ಥಳದಲ್ಲಿ ಪಂಪುಮಾಡತಕ್ಕ ಯಂತ್ರವನ್ನು ಸ್ಥಾಪಿಸುವುದಕ್ಕೂ ಜ್ಯೂಯಲ್ ಫಿಲ್ಟರುಗಳಿಗೆ ಕೊಳಾಯಿ ಲೈನನ್ನು ಹಾಕುವದಕ್ಕೂ ಪ್ರಯತ್ನಗಳನ್ನು ಈ ಮೊದಲೇ ಕೈಕೊಳ್ಳಲಾಗಿದೆ. ಈ ಕೆಲಸವು ಮುಗಿಯಲು ಒಂದೂವರೆ ತಿಂಗಳುಗಳಿಂದ ಎರಡು ತಿಂಗಳಕಾಲ ಹಿಡಿಯುವುದೆಂದು ನಿರೀಕ್ಷಿಸಲಾಗಿದೆ.

ಮುಂಗಾರುಮಳೆಗಳಲ್ಲಿ ಈ ಕೆರೆಗೆ ನೀರು ಬರುವುದು ಸರ್ವಸಾಮಾನ್ಯವಾಗಿರುತ್ತದೆ. ಹೀಗಾದ ಪಕ್ಷದಲ್ಲಿ ಹಿಂಗಾರು ಮಳೆಗಳು ಪ್ರಾರಂಭವಾಗುವವರವಿಗೂ ನೀರಿಗೆ ಕಷ್ಟವಾಗದಂತೆ ನಿರ್ವಹಿಸಬಹುದು. ಆಗ್ಯೆ ಹೆಸರುಘಟ್ಟದ ಕೆರೆಗೆ ನೀರು ಬರಲೇಬರಬೇಕು. ಮುಂದಿನ ಎಚ್ಚರಿಕೆ ಉಪಾಯವಾಗಿ ಖಾಲಿಮಾಡಲ್ಪಟ್ಟಂಥ ಹೆಸರುಘಟ್ಟದ ಕೆರೆಯಮೇಲಣ ಮೂರು ಕೆರೆಗಳ ಸ್ಥಿತಿಗಳು ಅನುಕೂಲವಾಗುವವರವಿಗೂ ಒಡೆಯಲ್ಪಟ್ಟು ಹಾಗೆಯೇ ಇರುತ್ತವೆ. ಹೀಗೆ ಮಾಡುವುದರಿಂದ ಬಿಡಾಯಿಸಲ್ಪಟ್ಟ ಜಲಾಶಯ ಪ್ರದೇಶದ ಸಂಪೂರ್ಣ ಪ್ರಯೋಜನವನ್ನು ಹೊಂದುವುದಕ್ಕೆ ಅವಕಾಶವಾಗುತ್ತದೆ.

ಆದಾಗ್ಯೂ ಈಗ ದೊರೆತಿರುವ ನೀರಿನ ಆಧಾರಗಳನ್ನು ಕಾಪಾಡತಕ್ಕದ್ದು ಆವಶ್ಯಕವಾಗಿರುವುದರಿಂದ ಸಾಧ್ಯವಾದಷ್ಟುಮಟ್ಟಿಗೆ ನೀರನ್ನು ಉಪಯೋಗಿಸುವುದು ಕಡಮೆಮಾಡುವುದಕ್ಕಾಗಿ ಕೇವಲ ಕ್ಲುಪ್ತವಾದ ಪರಿಮಾಣದಲ್ಲಿ ನೀರನ್ನು ಕೊಡಬೇಕಾಗಿರುತ್ತದೆ. ಈಪ್ರಕಾರವಾಗಿ ಪ್ರಕೃತಸ್ಥಿತಿಯನ್ನು ನಿರ್ವಹಿಸತಕ್ಕ ಬಗ್ಗೆ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಕೈಗೊಳ್ಳುತ್ತಿರುವುದಾಗಿದೆ. ಅಲ್ಲದೆ ಸರ್ಕಾರದವರು ಮಾಡುತ್ತಿರುವ ಪ್ರಯತ್ನಗಳಲ್ಲಿ ಅವರೊಂದಿಗೆ ಜನಗಳೂ ಸಹ ಮನಃಪೂರ್ವಕವಾಗಿ ಪರಸ್ಪರ ಸಹಾಯಕರಾಗಿರುವರೆಂದು ಮತ್ತು ಬೆಂಗಳೂರಿನಲ್ಲಿ ಬಲವಾದ ನೀರಿನ ಅಭಾವವನ್ನು ತಪ್ಪಿಸುವುದಕ್ಕಾಗಿ ನೀರನ್ನು ಕಡ್ಡಾಯವಾಗಿಯೂ ಮಿತವಾಗಿ ಉಪಯೋಗಿಸಿಕೊಳ್ಳುವರೆಂದು ನಂಬಲಾಗಿದೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

ಭರ್ತೃತ್ವವು.

ನನ್ನ ವಿವಾಹಸಮಯದಲ್ಲಿ ಪತಿಪತ್ನಿಯರ ಪ್ರೇಮ, ಮಿತವ್ಯಯ, ಬಾಲ್ಯವಿವಾಹ ಈ ವಿಚಾರಗಳನ್ನು ಕುರಿತು ಪ್ರಕಟಿಸಲ್ಪಟ್ಟಿದ್ದ ಕಿರುಪುಸ್ತಕಗಳು ದುಡ್ಡಿಗೊಂದರಂತೆಯೋ ಕಾಸಿಗೊಂದರಂತೆಯೋ (ಅದು ನನಗೆ ಚೆನ್ನಾಗಿ ಜ್ಞಾಪಕವಿಲ್ಲ.) ವಿಕ್ರಯಿಸಲ್ಪಡುತ್ತಿದ್ದುವು. ನನಗೆ ಅಂತಹವುಗಳು ಯಾವಾಗ ಗೋಚರವಾದರೂ ಮೊದಲಿಂದಲೂ ಕಡೆಯವರೆಗೂ ಅವನ್ನು ಓದಿ ಮನಸ್ಸಿಗೆ ಹಿಡಿಯದುದನ್ನು ಮರೆತುಬಿಡುವುದೂ, ಮನಸ್ಸಿಗೆ ಹತ್ತಿದುದನ್ನು ನಡೆಯಿಸುವುದೂ ನನ್ನ ವಾಡಿಕೆಯಾಗಿದ್ದಿತು. ಮರಣಾವಧಿ ಪತ್ನಿಯಲ್ಲಿ ಪ್ರೇಮಾನುರಾಗವನ್ನು ಬಿಡದೆ ಇಟ್ಟಿರುವುದು ಪತಿಯ ಧರ್ಮವೆಂದು ಕಿರುಪುಸ್ತಕದಲ್ಲಿ ಬರೆಯಲ್ಪಟ್ಟಿದ್ದುದು ನನ್ನ ಮನೋಭೂಮಿಯಲ್ಲಿ ಬಲವಾಗಿ ನಾಟಿಕೊಂಡಿತು. ನಾನು ಸತ್ಯಪ್ರಿಯನಾದುದರಿಂದ ಆಕೆಯ ಸಂಗಡ ನಾನು ಬೇರೊಂದುವಿಧವಾಗಿ ವರ್ತಿಸುವ ಮಾತೇ ಇಲ್ಲವು. ಅದಲ್ಲದೆ ಅಂತಹ ಚಿಕ್ಕವಯಸ್ಸಿನಲ್ಲಿ ಯಾರುತಾನೇ ತಮ್ಮ ಪತ್ನಿಯರಲ್ಲಿ ವಿಶ್ವಾಸವಿಲ್ಲದಿರಬಲ್ಲರು ?

ದಂಪತಿಗಳಿಬ್ಬರೂ ಪ್ರೇಮವಿಶ್ವಾಸದಿಂದ ಕೂಡಿರಬೇಕೆಂಬ ನೀತಿಯು ನನಗೊಂದು ಕಷ್ಟವನ್ನು ತಂದಿಕ್ಕಿತು. ನಾನು ನನ್ನ ಹೆಂಡತಿಯಲ್ಲಿ ವಿಶ್ವಾಸದಿಂದಿರುವಂತೆಯೇ ಆಕೆಯೂ ನನ್ನಲ್ಲಿ ವಿಶ್ವಾಸದಿಂದಿರಬೇಕೆಂಬುದು ನನ್ನ ಮನೋಗತವು. ಆ ವಿಧವಾದ ಅಭಿಪ್ರಾಯದಿಂದ ನನಗೆ ಅನುಮಾನ ಹುಟ್ಟಿತು. ಆಕೆಯು ನನ್ನಲ್ಲಿ ವಿಶ್ವಾಸದಿಂದಿರುವುದು ಧರ್ಮವೆಂಬುದರ ಬದಲು ಆಕೆಯು ವಿಶ್ವಾಸದಿಂದಿರುವಂತೆ ಮಾಡುವುದು ನನ್ನ ಧರ್ಮವೆಂದು ತೋರಿತು. ಇಂತಹ ತರ್ಕವನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಆಕೆಯನ್ನು ನೂರುವಿಧವಾಗಿ ಕಣ್ಣಿಟ್ಟು ಪರೀಕ್ಷಿಸುವವನಾದೆನು. ನಿಜವಾಗಿ ಆಕೆಯನ್ನು ಸಂಶಯಿಸಲು ಕಾರಣವೇ ಇರಲಿಲ್ಲ. ಆದರೆ ಅನುಮಾನಕ್ಕೆ ಕಾರಣವೇ ಆವಶ್ಯಕವಿಲ್ಲವಷ್ಟೆ ? ನಾನು ಆಕೆಯನ್ನು ಯಾವಾಗಲೂ ಲಕ್ಷ್ಯವಿಟ್ಟು ಪರೀಕ್ಷಿಸುತ್ತಿದ್ದುದರಿಂದ ಆಕೆಯು ನನ್ನಪ್ಪಣೆಯಿಲ್ಲದೆ ಎಲ್ಲಿಗೂ ಹೋಗಕೂಡದಾಗಿದ್ದಿತು. ಇದರಿಂದ ನಮ್ಮಲ್ಲಿ ಕಲಹವಂಕುರಿಸಲು ಕಾರಣವಾಯಿತು. ಈ ನಿರ್ಬಂಧವು ಆಕೆಗೆ ಸರಿಬೀಳದೆ ಬಹಳ ತೊಡಕಾಗಿ ತೋರಿತು. ಕಸ್ತೂರಿಬಾಯಿಯು ಈ ವಿಧಾನವನ್ನು ಸಹಿಸತಕ್ಕವಳಲ್ಲವು. ಯಾವಾಗ ಎಲ್ಲಿಗೆ ಹೋಗಬೇಕೆಂದು ತೋರುತ್ತದೆಯೋ ಆಗ ಅಲ್ಲಿಗೆ ತಪ್ಪದೆ ಹೋಗತಕ್ಕವಳು. ನಾನು ನಿರ್ಬಂಧದಲ್ಲಿಟ್ಟುದರಿಂದ ಆಕೆಯು ಹೆಚ್ಚು ಸ್ವಾತಂತ್ರ್ಯವನ್ನು ವಹಿಸುವಂತಾದುದರಮೇಲೆ ನನಗೆ ಮತ್ತಷ್ಟು ಕಷ್ಟವಾಗಿ ಪರಿಣಮಿಸಿತು. ವಿವಾಹವಾದ ಬಾಲ್ಯವಯಸ್ಸಿನ ನಾವಿಬ್ಬರೂ ಒಬ್ಬರಿಗೊಬ್ಬರು ನಿತ್ಯದಲ್ಲೂ ಮಾತನಾಡಿಕೊಂಡಿದ್ದೇ ಕಾಲಹರಣಮಾಡುತ್ತಿದ್ದೆವು. ನನ್ನ ನಿರ್ಬಂಧಕ್ಕೊಳಗಾಗದೆ ಕಸ್ತೂರಿಬಾಯಿ ಸ್ವತಂತ್ರಳಾಗಿ ಸಂಚರಿಸುವಂತಹ ಹಟವಾದಿಯೆಂದು ತಿಳಿದೆನು. ಅಂತಹ ಹಟವಾದಿಗಳನ್ನು ಗೆಳತಿಯರ ಮನೆಗೂ ದೇವಾಲಯಕ್ಕೂ ಹೋಗಕೂಡದೆಂದು ನಿರ್ಬಂಧಪಡಿಸಿದರೆ ಅವರೆಂತು ಸಹಿಸುವರು ? ನಾನು ಆಕೆಗೆ ನಿರ್ಬಂಧವನ್ನು ವಿಧಿಸಿದಮೇಲೆ ನನಗೆ ಆಕೆಯು ನಿರ್ಬಂಧವನ್ನು ವಿಧಿಸಲು ಆಕೆಗೆ ಹಕ್ಕಿಲ್ಲವೆ ? ಈ ವಿಚಾರವೆಲ್ಲವೂ ನನಗೆ ಈಗ ತೋರುತ್ತವೆ. ಆ ಕಾಲದಲ್ಲಿ ನಾನು ಪತ್ನಿಯಮೇಲೆ ಅಧಿಕಾರವನ್ನು ಮಾಡತಕ್ಕವನಾಗಿದ್ದವನು.

ನಮ್ಮ ಜೀವಿತವೆಲ್ಲವೂ ಹೋರಾಟದಲ್ಲೇ ಸರಿಯೆಂದು ವಾಚಕರು ತಿಳಿಯಬಾರದು ! ನನ್ನ ನಿರ್ಬಂಧವೆಲ್ಲವೂ ಪ್ರೇಮದಿಂದಲೇ ಉತ್ಪನ್ನವಾದುದು. ನನ್ನ ಹೆಂಡತಿಯನ್ನು ನಾನು ಆದರ್ಶಪ್ರಾಯಳನ್ನಾಗಿ ಮಾಡಲಿಚ್ಛಿಸಿದೆನು. ಪವಿತ್ರವಾದ ಜೀವನವನ್ನು ನಡಿಸಲು ನಾನು ಕಲಿಯುವುದನ್ನೇ ಕಲಿತು ನಾನು ಮಾಡುವುದನ್ನೇ ಮಾಡಿ ನನ್ನ ಪತ್ನಿಯು ನನ್ನ ಸಮಾನಳಾಗಿರಬೇಕೆಂಬುದೇ ನನ್ನ ಅಭಿಲಾಷೆಯು.

ಕಸ್ತೂರಿಬಾಯಿಗೆ ಅಂತಹ ಅಭಿಪ್ರಾಯವಿದ್ದಿತೋ ಇಲ್ಲವೋ ನನಗೆ ತಿಳಿಯದು. ಆಕೆಗೆ ಓದಲು ಬರುವುದಿಲ್ಲ. ಸ್ವಭಾವವಾಗಿ ಆಕೆಯು ಮೂರ್ಖಳಲ್ಲ. ಸ್ವತಂತ್ರಬುದ್ಧಿಯುಳ್ಳವಳು. ನನ್ನಕೂಡ ಮಾತ್ರ ಮಾತಾಡತಕ್ಕವಳಲ್ಲ. ತನ್ನ ಅಜ್ಞಾನವನ್ನು ಕಳೆದುಕೊಳ್ಳಬೇಕೆಂಬ ಇಚ್ಛೆಯಿಲ್ಲವು. ನಾನು ಓದುವುದನ್ನು ನೋಡಿ ತಾನು ಕೂಡ ಓದನ್ನು ಕಲಿಯಬೇಕೆಂದು ಆಕೆಯು ಯಾವಾಗಲೂ ಇಷ್ಟಪಟ್ಟವಳಲ್ಲ. ನಾನು ಆಕೆಯನ್ನು ನಿಷ್ಕಳಂಕಪ್ರೇಮದಿಂದ ಪ್ರೀತಿಸುತ್ತಿರುವೆನು. ಆದರೆ ನನ್ನ ಅಭಿಲಾಷೆಯೆಲ್ಲವೂ ಕೇವಲ ನನ್ನದುಮಾತ್ರವೇ. ಆಕೆಯೂ ಹಾಗೆಯೇ ನನ್ನನ್ನು ಪ್ರೀತಿಸಬೇಕೆಂದು ಕೋರಿದೆನು. ಆದರೆ ಅಂತಹ ಪ್ರೇಮವು ಪರಸ್ಪರವಿಲ್ಲದಿದ್ದರೂ ನನ್ನ ಪ್ರೇಮವು ಮಾತ್ರ ಕಡಿಮೆಯಾಗಿ ನಿರಾಶೆಯನ್ನುಂಟುಮಾಡತಕ್ಕದಾಗಿರಲಿಲ್ಲವು.

ನಾನು ಆಕೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದೆನೆಂದು ಹೇಳಬಲ್ಲೆ. ಪಾಠಶಾಲೆಯಲ್ಲಿರುವಾಗಲು ಕೂಡ ಆಕೆಯಮೇಲೆ ಜ್ಞಾನ. ಸಾಯಂಕಾಲವೆಷ್ಟುಬೇಗಬಂದು ಆಕೆಯಕೂಡ ಎಷ್ಟು ತ್ವರೆಯಾಗಿ ಸೇರುವೆನೋ ಎಂದು ಯೋಚಿಸುತ್ತಿದ್ದೆನು. ಎಡೆಬಿಟ್ಟಿರುವುದು ಬಹಳ ದುರ್ಭರವಾಗಿದ್ದುದರಿಂದ ಏನೇನೋ ಮಾತನಾಡುತ್ತಿದ್ದು ರಾತ್ರಿ ಬಹಳಹೊತ್ತಿನವರೆಗೂ ಆಕೆಯು ನಿದ್ರೆಹೋಗಗೊಡುತ್ತಿರಲಿಲ್ಲ. ಈ ಮಹಾಪ್ರೇಮದದೆಶೆಯಿಂದ ನನ್ನ ಧರ್ಮವನ್ನು ಮಾಡದೆ ಬಿಟ್ಟಿದ್ದುದಾಗಿದ್ದರೆ ನಾನು ಈವರೆಗೆ ರೋಗಕ್ಕೆ ತುತ್ತಾಗಿ ಅಕಾಲಮರಣವನ್ನು ಹೊಂದದಿಯೋ ಬದುಕಿದ್ದರೂ ಜೀವಚ್ಛವವಾಗಿಯೋ ಇರುತ್ತಿದ್ದೆನು. ಹಾಗಾಗದೆ ಪ್ರತಿದಿನ ಪ್ರಾತಃಕಾಲ ದಿನ ಕೆಲಸಗಳನ್ನು ವಿಧಿಪೂರ್ವಕವಾಗಿ ನಿರ್ವಹಿಸುತ್ತಿದ್ದೆನು. ಅಸತ್ಯಕ್ಕೂ ನನಗೂ ಬಹಳ ಅಂತವಿರುವುದು. ಅದುಕಾರಣವೇ ನಾನು ಅನೇಕ ದುರ್ಯೋಗಗಳಿಂದ ತಪ್ಪಿಸಿಕೊಳ್ಳುವವನಾದೆನು.

ಕಸ್ತೂರಿಬಾಯಿಗೆ ಓದುವುದಕ್ಕೆ ಬಾರದೆಂದು ಮೊದಲೇ ಹೇಳಿರುತ್ತೇನೆ. ಆಕೆಗೆ ಓದನ್ನು ಕಲಿಸಬೇಕೆಂಬ ಕುತೂಹಲವು ನನಗೆ ಬಹಳವಾಗಿದ್ದಿತು. ಆದರೆ ನನ್ನ ಮದಾತಿರೇಕದಿಂದ ವ್ಯವಧಾನವಿರಲಿಲ್ಲವು. ಒಂದು ವಿಷಯವೇನೆಂದರೆ ಆಕೆಗಿಷ್ಟವಿಲ್ಲದಿದ್ದುದರಿಂದ ಓದಬೇಕೆಂದು ಬಲವಂತಪಡಿಸಬೇಕಾಗಿದ್ದಿತು. ಅದೂ ರಾತ್ರಿವೇಳೆ ಜರುಗಬೇಕು. ದೊಡ್ಡವರಿದಿರಿಗೆ ಆಕೆಯ ಸಂಗಡವಿರಲು ಅವಕಾಶವಿಲ್ಲದಿರುವಾಗ್ಗೆ ಮಾತಾಡುವ ಸಂಭವವೇ ಇಲ್ಲವು. ಕಥೆವಾಡದಲ್ಲಿ ಆಗ (ಈಗಲೂ ತಕ್ಕಮಟ್ಟಿಗೆ) ಅನಾಗರಕವೂ ನಿರುಪಯೋಗವೂ ಆದ ಪರದಾಪದ್ಧತಿಯಿದ್ದಿತು. ಪರಿಸ್ಥಿತಿಯು ಕೂಡ ಬಹಳ ಅನನುಕೂಲವಾಗಿದ್ದಿತು. ಆದರೂ ಚಿಕ್ಕತನದಲ್ಲಿ ಕಸ್ತೂರಿಬಾಯಿಗೆ ವಿದ್ಯೆಯನ್ನು ಕಲಿಸಬೇಕೆಂದು ಪ್ರಯತ್ನಿಸಿ ಭಗ್ನಮನೋರಥನಾದೆನು. ನನಗೆ ಮದಾತಿಶಯವು ಹೋಗಿ ದೊಡ್ಡವನಾಗುವಷ್ಟರಲ್ಲಿ ಪ್ರಜಾಹಿತಕಾರ್ಯದಲ್ಲಿ ತೊಡಗಿದೆನಾದುದರಿಂದ ನನಗೆ ಅದಕ್ಕವಕಾಶವಾಗಲಿಲ್ಲವು. ಮನೆಯಲ್ಲಿ ಉಪಾಧ್ಯಾಯರನ್ನಿಟ್ಟು ವಿದ್ಯಾ ಕಲಿಸದೆ ಹೋದೆನು. ಅದುಕಾರಣ ಕಸ್ತೂರಿಬಾಯಿಗೆ ಈಗ ಗುಜರಾತಿಭಾಷೆಯಲ್ಲಿ ಕೊಂಚ ಅರ್ಥಮಾಡಿಕೊಳ್ಳುವ ಶಕ್ತಿಯೂ ಚಿಕ್ಕ ಶಬ್ದಗಳನ್ನು ಬರೆಯುವಷ್ಟು ಶಕ್ತಿಯೂ ಇದ್ದಿತು. ಆ ದಿನದಲ್ಲಿ ಆಕೆಗೆ ವಿದ್ಯಾಭಿಲಾಷೆಯನ್ನುಂಟುಮಾಡುವುದು ನನಗೆ ಸಾಧ್ಯವಿದ್ದಿತು. ಅಕುಟಿಲವಾದ ಪ್ರೇಮಕ್ಕೆ ಅಸಾಧ್ಯವಾದುದಾವುದೂ ಇಲ್ಲವಷ್ಟೆ ! ಮದಾತಿರೇಕದಿಂದ ಹುಟ್ಟುವದು ರೋಗವು ಪ್ರಾಪ್ತವಾಗದಂತೆ ನನ್ನನ್ನು ಕಾಪಾಡಿದ ಒಂದು ವಿಷಯವನ್ನು ಹೇಳಿದ್ದೆನು. ಈಗ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಪವಿತ್ರೋದ್ದೇಶವುಳ್ಳವನಾರಾದರೂ ಭಗವಂತನಿಂದ ಸಂರಕ್ಷಿಸಲ್ಪಡುವನೆಂದು ನನಗೆ ಅನೇಕ ದೃಷ್ಟಾಂತಗಳಿಂದ ವ್ಯಕ್ತಪಟ್ಟಿರುತ್ತದೆ. ಬಾಲ್ಯವಿವಾಹವೆಂಬ ದುರಾಚಾರದಿಂದುಂಟಾಗುವ ಕೇಡನ್ನು ಕೊಂಚವರೆಗೆ ಕಡಿಮೆಮಾಡುವ ಮತ್ತೊಂದು ಪದ್ಧತಿಯು ಹಿಂದೂಸಮಾಜದಲ್ಲಿ ಆಚರಣೆಯಲ್ಲಿರುತ್ತದೆ. ಚಿಕ್ಕತನದಲ್ಲಿ ಗಂಡಹೆಂಡಿರನ್ನು ತಂದೆತಾಯಿಗಳು ಬಹಳಕಾಲ ಒಂದು ಸ್ಥಳದಲ್ಲಿರಿಸುವುದಿಲ್ಲ. ಹುಡಿಗಿಯು ತನ್ನ ಚಿಕ್ಕ ವಯಸ್ಸಿನಲ್ಲಿ ತಂದೆತಾಯಿಗಳಕೂಡಲೇ ಇರುವಳು. ನಾವು ದಂಪತಿಗಳ ವಿಷಯವಾದರೂ ಹಾಗೆಯೇ ಇದ್ದಿತು. ಮದುವೆಯಾದ 5 ವರ್ಷಗಳ (13 ನೇ ವರ್ಷದಿಂದ 18 ನೇ ವರ್ಷದ) ವರೆಗೆ ನಾವು ಒಟ್ಟಿಗಿದ್ದುದು ಮೂರುವರ್ಷಕ್ಕಿಂತ ಹೆಚ್ಚಾಗಿಲ್ಲ. 6 ತಿಂಗಳು ನಾವಿಬ್ಬರೂ ಒಟ್ಟಿಗಿರುವಷ್ಟರಲ್ಲಿ ಕಸ್ತೂರಿಬಾಯಿಯನ್ನು ಕರೆದುಕೊಂಡುಹೋಗಲು ಆಕೆಯ ತಂದೆತಾಯಿಗಳು ಬಂದರು. ಆ ಕಾಲದಲ್ಲಿ ನನಗದೆಷ್ಟೋ ಕಷ್ಟವಾಗಿ ತೋರಿತು. ಅದೇ ನಮ್ಮಿಬ್ಬರನ್ನೂ ಸಂರಕ್ಷಿಸಿದುದು. 18ನೇ ವರ್ಷ ವಯಸ್ಸಿನಲ್ಲಿ ನಾನು ಇಂಗ್ಲೆಂಡಿಗೆ ಹೋಗಿದ್ದೆನು. ಅದು ನಮಗೆ ಕೆಲಕಾಲ ವಿಯೋಗವನ್ನುಂಟುಮಾಡಿದ್ದಾದರೂ ಒಳ್ಳೇ ಪರಿಣಾಮವನ್ನುಂಟುಮಾಡಿತು. ಇಂಗ್ಲೆಂಡಿನಿಂದ ಹಿಂದಿರುಗಿಬಂದಮೇಲು ಕೂಡ ನಾವಿಬ್ಬರೂ 6 ತಿಂಗಳಿಗಿನ್ನ ಹೆಚ್ಚಾಗಿ ಒಟ್ಟಿಗಿರಲಿಲ್ಲವು. ಏಕೆಂದರೆ ನಾನು ಕೂಡಲೆ ರಾಜಕೋಟೆಯಿಂದ ಬೊಂಬಾಯಿಗೆ ಹೋಗಬೇಕಾಗಿ ಬಂದಿತು. ಇದರಮೇಲೆ ನಾನು ದಕ್ಷಿಣಾಫ್ರಿಕೆಗೂ ಹೋಗಬೇಕಾಗಿ ಬಂದಿತು. ಅದರಿಂದ ನನಗೆ ವಿಷಯದ ಮತ್ತು ಭೋಗ ಪ್ರಪಂಚಜ್ಞಾ ತೋಚದಾಯಿತು.

ಶ್ರೀಮದ್ವೇದಾಗಮೋಪನಿಷತ್ಪ್ರತಿಪಾದಿತ ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀರೇಣುಕಾಚಾರ್ಯ ಪರಂಪರಾಗತ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ದಿವ್ಯಸನ್ನಿಧಿಯಿಂದ.

ಶ್ರೀಗುರುಭಕ್ತಿಪರಾಯಣರಾದ ಸಮಸ್ತ ವೀರಶೈವಶಿಷ್ಯಮಂಡಲಿಗೆ ಶುಭಾಶೀರ್ವಾದಪೂರ್ವಕ ಅಪ್ಪಣೆಕೊಡಿಸುವುದೇನೆಂದರೆ:—

ಭರತಖಂಡದಲ್ಲಿರತಕ್ಕ ಸಮಸ್ತ ವೈದಿಕಮತಗಳಿಗೆ ದೇವಭಾಷೆಯಾದ ಸಂಸ್ಕೃತವಿದ್ಯೆಯು ಪ್ರಾಣಸ್ವರೂಪವಾಗಿರುವದೆಂಬ ವಿಷಯವು ಸರ್ವರಿಗೂ ವೇದ್ಯವೇ ಇದೆ. ಜಗನ್ಮಾನ್ಯವಾದ ಈ ಸಂಸ್ಕೃತವಿದ್ಯೆಯು ವೀರಶೈವಮತದಲ್ಲಿ ಪೂರ್ವಕಾಲದಲ್ಲಿ ಅತ್ಯಂತ ಪ್ರಬಲಸ್ಥಿತಿಯಲ್ಲಿದ್ದಿತೆಂಬ ವಿಷಯವು ಈ ಮತಸ್ಥಾಪನಾಚಾರ್ಯರ ಭಾಷ್ಯಾದಿಗಳಿಂದಲೂ ಅನೇಕ ಪ್ರಕಾಂಡಪಂಡಿತರಿಂದ ರಚಿಸಲ್ಪಟ್ಟ ಗ್ರಂಥರತ್ನಗಳಿಂದಲೂ ಸ್ಪಷ್ಟವಾಗಿ ವೇದ್ಯವಾಗುತ್ತದೆ. ಆದರೆ ಇತ್ತೀಚೆಗೆ ಕೆಲವು ಕಾರಣಗಳಿಂದ ಈ ವಿದ್ಯೆಯು ಈ ಮತದಲ್ಲಿ ಕ್ಷೀಣವಾಗುತ್ತ ಬಂದಿರುವ ಪ್ರಯುಕ್ತ ಈ ಅಮೃತಭಾಷೆಯ ಪ್ರಚಾರಕ್ಕಾಗಿ ಜಗನ್ನಿಯಂತೃಗಳಾದ ಶ್ರೀಜಗದ್ಗುರು ಪಂಚಾಚಾರ್ಯಭಗವತ್ಪಾದರ ಪ್ರೇರಣೆಯಮೇರೆಗೆ ಇದೇ ಕ್ರೋಧನಸಂವತ್ಸರ ಮಾರ್ಗಶೀರ್ಷ ಶುದ್ಧ ೭ಯಲ್ಲಿ ನೆರವೇರಿದ ಮಹಾಪಟ್ಟಾಧಿಕಾರಸಮಾರಂಭದ ಸಮಯದಲ್ಲಿ ಮಾಹೇಶ್ವರ ವಟುಗಳ ವಿದ್ಯಾರ್ಜನೆಗಾಗಿ ಒಂದು ಸಂಸ್ಕೃತಕಾಲೇಜನ್ನು ಸ್ಥಾಪಿಸುವದು ಅತ್ಯವಶ್ಯಕವಾದದ್ದೆಂದು ಅಪ್ಪಣೆಯಂ ದಯಪಾಲಿಸಲು ತತ್‌ಕ್ಷಣದಲ್ಲಿಯೇ ಪರಮತಪೋನಿಧಿಗಳಾದ ಶ್ರೀಮದುಜ್ಜಯಿನೀಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಶ್ರೀ|| || ಗಳವರು ಪೂರ್ಣಕೃಪೆಯನ್ನಿಟ್ಟು 11,000 ರೂಪಾಯಿಗಳನ್ನು ವಾಗ್ದಾನರೂಪವಾಗಿ ಆಶೀರ್ವದಿಸಿದಪ್ರಕಾರ ಈಗ ತಮ್ಮ ದೇಶಸಂಚಾರದಲ್ಲಿ ಕಾಣಿಕಾರೂಪವಾಗಿ ಬರುವ ಹಣವನ್ನೆಲ್ಲ ನಮ್ಮ ಸನ್ನಿಧಿಗೆ ಕಳುಹಿಸುತ್ತಲಿದ್ದಾರೆ. ಆ ಸಮಯದಲ್ಲಿ ವಿದ್ಯಾಭಿಮಾನಿಗಳಾದ ಅನೇಕ ಜನ ವೀರಶೈವರು ತಮ್ಮತಮ್ಮ ಶಕ್ತಿಮೀರಿ ವಾಗ್ದಾನವನ್ನು ಮಾಡಿದ್ದಾರೆ. ಈ ಮಹಾಕಾರ್ಯವು ಯಾವಯಾವರೀತಿ ನಡೆಯಬೇಕೆಂಬ ವಿಷಯವನ್ನು ಇದೇ ಕ್ರೋಧನಸಂವತ್ಸರ ಫಾಲ್ಗುಣ ಶುದ್ಧ ೧೪ ಶುಕ್ರವಾರ (ತಾ|| 26-2-1926 ರಲ್ಲಿ ನೆರವೇರುವ ಶ್ರೀರಥೋತ್ಸವದ ಸಮಯದಲ್ಲಿ ಆಲೋಚಿಸುವುದಕ್ಕಾಗಿ ನಿಯಾಮಕಮಾಡಿರುವದರಿಂದ ವಿದ್ಯಾಭಿಮಾನಿಗಳಾದ ನೀವುಗಳೆಲ್ಲರೂ ಆ ಕಾಲಕ್ಕೆ ಬಂದು ಸದರಿ ವಿಷಯವನ್ನು ಪೂರ್ಣವಾಗಿ ಪರ್ಯಾಲೋಚಿಸಿ ಈ ಮಹಾಕಾರ್ಯವು ಶೀಘ್ರವಾಗಿ ನೆರವೇರುವ ಪ್ರಯತ್ನವನ್ನುಮಾಡಿ ಕೀರ್ತಿಶಾಲಿಗಳಾಗಬೇಕೆಂದು ಆಶೀರ್ವದಿಸುತ್ತೇವೆ. ಶ್ರೀಜಗದ್ಗುರು ಪಂಚಾಚಾರ್ಯ ಸಂಸ್ಕೃತಕಾಲೇಜಫಂಡಿಗಾಗಿ ವಾಗ್ದಾನಮಾಡಿದ ವೀರಶೈವರು ಬೆಂಗಳೂರಲ್ಲಿರುವ ಮೈಸೂರು ಬ್ಯಾಂಕಿನಲ್ಲಾಗಲಿ ಅಥವ ಇತರ ಪಟ್ಟಣಗಳಲ್ಲಿರುವ ಮೈಸೂರು ಬ್ಯಾಂಕಿನ ಬ್ರಾಂಚ್ ಆಫೀಸುಗಳಲ್ಲಾಗಲಿ ನಮ್ಮ ಹೆಸರಿನಿಂದ ಜಮಮಾಡಿಸಿ ಆ ರಶೀದಿಯನ್ನು ನಮ್ಮ ಸನ್ನಿಧಿಗೆ ಕಳುಹಿಸಿಕೊಟ್ಟು ಜಗದ್ವಿಖ್ಯಾತವಾದ ಕೀರ್ತಿಗೂ ಶ್ರೀಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದಕ್ಕೂ ಪಾತ್ರರಾಗಿ ಅಮೃತಭಾಷೆಗೆ ಸಹಾಯಮಾಡಿದುದರಿಂದ ಅಮೃತಪಾನಮಾಡಿದ ಫಲವನ್ನು ಅನುಭವಿಸುವ ಯೋಗವುಳ್ಳ ಪೀಠಾಭಿಮಾನಿಗಳಿಗೆ ಅಪ್ಪಣೆ ಕೊಡಿಸುವದೇನದೆ.

ಶ್ರೀರಂಭಾಪುರೀಸಂಸ್ಥಾನ,
ಪೋ|| ಬಾಳೆಹೊನ್ನೂರು, ಡಿ|| ಕಡೂರು.
ತಾ|| 15-2-1926. } ಇತ್ಯಾಶಿಷಃ.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯಥಾರ್ಥಸ್ಥಿತಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ

ಡಿಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ —

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
27 ಹಳೇಅಗ್ರಹಾರ, ಮೈಸೂರು

೧೯೨೬ ನೆಯ ಇಸವಿ ಫೆಬ್ರವರಿ ತಾ|| ೨೦ ರಿಂದ ೧೯೨೬ ನೆಯ ಇಸವಿ ಫೆಬ್ರವರಿ ತಾ|| ೨೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಕ್ರೋಧನನಾಮಸಂವತ್ಸರದ ಫಾಲ್ಗುಣ ಶುದ್ಧ ಅಷ್ಟಮಿಯಿಂದ ಫಾಲ್ಗುಣ ಶುದ್ಧ ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
20	ಶನಿ	ಅಷ್ಟ	10-54	ರೋಹಿ	52-40	9
21	ಭಾನು	ನವ	11-31	ಮೃಗ	55-38	10
22	[1]ಸೋಮ	ದಶ	13-31	ಆರ್ದ್ರಾ	60	11
23	ಮಂಗಳ	ಏಕಾ	16-41	ಆರ್ದ್ರಾ	0-25	12
24	ಬುಧ	ದ್ವಾದ	20-53	ಪುನ	5-40	13
25	[2]ಗುರು	ತ್ರಯೋ	25-48	ಪುಷ್ಯ	11-40	14
26	ಶುಕ್ರ	ಚತು	31-10	ಆಶ್ಲೇ	18-10	15

(1) ಮಳೆನಕ್ಷತ್ರ-ಶತಭಿಷ ೨ನೆಯ ಪಾದ. (2) ಮಳೆನಕ್ಷತ್ರ-ಶತಭಿಷ ೩ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ವೀನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶ್ರೀಕೃಪಾ | ಘನಪಥಕೃತಾವತಾರಾ ಪಕ್ಷ್ಯಜ್ಞನಕ್ಷತ್ರ ಮೋಹರಾಜೇಯಾರ್ |
ಶ್ರೀಮತ್ಕೃಷ್ಣನೃಪಾಲಸುತ್ತಮಕರಾರೋಲಂಬುಧೀಪುಂಗವ | ಸ್ತೋತ್ರಮಾಥೀಶ್ವದಶೀಲ ನಾಕಲಿತ ಸಾಧ್ವಾಲ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಫೆಬ್ರವರಿ ತಾರೀಖು ೨೭ ನೆಯ ಶನಿವಾರ. [ಸಂಚಿಕೆ ೯

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರ ಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೆಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೆಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ತಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಋತುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇದೇ ಪ್ರಸಂಗದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ, ಶಾಲಿಮಕಂದ, ಜಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವಿಪಾಂತರಜಾತಕಂದ, ಕವಚಬೀಜ, ಸಮುದ್ರಶೋಕದ ಬೀಜ, ಕತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಂಗ, ಅಡವೀ ಎಳ್ಳಿನ ಪಂಚಾಂಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಪೇತಮಿಶ್ರಿ ತಾಲೀಮಖಾನಾ, ಬೀಜಬಂದು, ಹರಣಿ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಷ್ಠ, ವಾಳೇರಿಭಾತಾ, ಗೋಖರು, ಅಡವೀ ಬೆಂಡಿ ಬೇರು, ಅಮೃತಸತ್ವ, ಇಸಬಗೋಲೆ, ಬನಾಸಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರ, ಕೇಶರಿ, ಯಾಲಕ್ಕಿ ರುಲ್ಲಸಕ್ಕರಿ, ಈ ಜೀನಸುಗಳಲ್ಲಿ ದಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧ ಮಾಡಿಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೭ನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚ ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಾನ ಇಬ್ರಾಹೀಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ವಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೇಲಾಭಾಯ ಹಿನ್ಸ ರೋಡ ಮುಂಬೈ, ೫ ವಿಷ್ಣು ಕೃಷ್ಣ ಕೇಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ರಘುನಾಥಜಯರಾಮ ಪೋ. ಕೊಲ್ಹಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗುವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—47] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು ಪೋ. ಮಿರಜ

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

55

ಗೋಷಾಸ್ತ್ರೀಯರಿಗೂ ಚುರುಕಾಗಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ. }
ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ವೀನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್‌ಆಫೀಸ್, ಮೈಸೂರು.

ಡಾಕ್ಟರ್ ಜೇ. ಬೀ. ಯವರ ಸುಗಂಧ ನಶ್ಯದ ಪುಡಿ.



(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ. [illegible]

[illegible] ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
[illegible] ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

[illegible] ತಮ್ಮ ಹೆಸರನ್ನು, ಅಡ್ರೆಸ್ಸನ್ನು [illegible] [illegible].

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[illegible] [illegible]

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೧— ೪—೦	೦— ೯—೦
ಚಾರುಶೀಲಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಚರಿತೆ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೪—೦
ಸಟೀಕ [illegible] ಶಬ್ದಮಂಜರಿ	೦— ೮—೦	೦—೧೪—೦
ಸಟೀಕಾ ಶತಕತ್ರಯ	೧— ೦—೦	೧— ೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧— ೦—೦	೧— ೬—೦

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಫೆಬ್ರವರಿ ತಾ|| ೨೭ನೆಯ ಶನಿವಾರ.

THE LATE MR. K. S. CHENNABASAPPA.

It is with very deep regret that we have to record the unfortunate and sudden demise under tragic circumstances of Sowcar K. S. Chennabasappa of Kabbaballi. It would appear that when travelling in a motor bus from Gundlupet to Nanjangud on Sunday the 21st. instant the bus ran against the overhanging branch of an avenue tree with the fatal result that Mr. Chennabasappa who occupied the front seat by the side of the driver was instantaneously killed! He was yet in the prime of life, being about 45 years of age. The sad news sent a thrill of horror not only among his kith and kin and those who had the honour of personal acquaintance with him but among those who had heard of him and his charities. It was more than 12 years ago that the late Sowcar realised that education of the masses was the sovereign remedy for all the ills of the rural population and he provided in the name of his revered father the late Mr. K. Siddalingappa a decent building costing Rs. 6000, or more for a Govt. School at Kabbaballi with an endowment of Rs. 3500, to meet part of the pay of an English teacher who was also provided with free quarters in the school premises. Later on, he provided another building for a Govt. Girls' school in the village. Apart from creating facilities for the education of boys and girls in his village he was mainly responsible for improving its sanitation by the opening up of the congested areas, and laying out of broad roads and an extension by influencing the villagers to contribute free labour. All this he did before the village improvement scheme was inaugurated in the State and to-day Kabbahalli takes a front rank among the model villages in the State. Gradually Mr. Channabasappa's patriotism extended beyond his village and he was the first gentleman in the State to offer an endowment to the Mysore University immediately after its establishment. It was but a couple of years ago that the late Sowcar, seeing the backwardness of his own Community–Veerasaivas–came forward with a munificent offer of Rs. 45,000 for providing a Veerasaiva Students' Hostel in the capital of the State. What is more he has spent more than Rs. 15000, on its repairs and for establishment of a library etc. Be it noted that this generous gift was unsolicited and it met with the warm appreciation of no less a Prince than H. H. the Yuvaraja of Mysore who on the occasion of laying the foundation stone of Sri Jagadguru Jayadeva Murugharajendra Veerasaiva Hostel at Bangalore commended the example of the late generous-hearted Sowcar Chennabasappa to the wealthy members of the Veerasaiva Community. His charities met with a due and well-merited recognition at the hands of our beloved Sovereign H. H. the Maharaja who presented him with 1st class medal and killaths and also honoured him with the privilege of *kasahara* at the Durbars. Sowcar K. S. Chennabasappa's Veerasaiva Students' Hostel near the Railway Station at Mysore is a standing monument of the glory of its late founder whose parental affection for the boarders of the institution knew no bounds. It is the deplorable lot of this ill-fated community to bemoan the untimely death of such a noble and generous patron of the Veerasaiva students. His burning zeal for the educational progress of his community manifested itself in more ways than one and there were clear indications in his attitude that he intended to do much more for the service of the community which, we may say, is very backward in education.

In his private life he was well-known for his simplicity, sincerity, amiability, honesty and enlightened views. He was not only an ornament to his community but an inspiring example to the wealthy men of all the communities. He was a member of the Taluk Board, the District Board and the Representative Assembly for the last 10 years. His charities were not confined to the community in which he was born. He used to give liberally to every good cause. His most recent act of charity is his gift of Rs. 1500 to the High School Building Fund at Nanjangud.

He leaves behind him his widow, a minor son and a minor daughter and a large circle of relations and friends besides the entire Veerasaiva Community to bemoan his loss. His premature death is an irreparable calamity to his family and the community and, we would add, to the District and the State. We offer our heartfelt condolences to the bereaved members of his family and pray that Lord Mahadeva may grant them peace and strength of mind to bear the sorrow with courage. The ways of providence are indeed inscrutable. May his soul rest in peace.

ಕೈ|| ಕಬ್ಬಹಳ್ಳಿ ಚೆನ್ನಬಸಪ್ಪನವರು.

- ಪಾಪೀಚಿರಾಯುಸ್ಸುಕೃತೀಗತಾಯುಃ -

ಅರುವತ್ತುಸಾವಿರ ರೂಪಾಯಿಗಳವರೆಗೂ ವೆಚ್ಚಮಾಡಿ ರಾಜಧಾನಿಯ ರೈಲ್ವೆಸ್ಟೇಷನ್ನಿನ ಸಮೀಪದಲ್ಲಿ ವೀರಶೈವಾಶ್ರಮವನ್ನು ಸ್ಥಾಪಿಸಿ ವೀರಶೈವ ಸಮಾಜದ ಚಿರಕೃತಜ್ಞತೆಗೆ ಪಾತ್ರರಾದ ಶ್ರೀಮಂತ ಕಬ್ಬಹಳ್ಳಿ ಎಸ್. ಚೆನ್ನಬಸಪ್ಪನವರು ಈ ಫೆಬ್ರವರಿ ತಾ|| 21ನೆಯ ಭಾನುವಾರ ಸಾಯಂಕಾಲ ಶಿವಸಾಯುಜ್ಯವನ್ನು ಹೊಂದಿದರೆಂದು ನಮ್ಮ ವಾಚಕವರ್ಗಕ್ಕೆ ತಿಳುಹಲು ಬಹಳವಾಗಿ ವಿಷಾದಿಸುತ್ತೇವೆ. ಆ ದಿವಸ ಇವರು ಗುಂಡ್ಲುಪೇಟೆಯಿಂದಹೊರಟು ಮೋಟಾರುಬಂಡಿಯಲ್ಲಿ ಅದನ್ನು ನಡೆಯಿಸುವವನ (ಡ್ರೈವರ) ಪಕ್ಕದಲ್ಲಿ ಕುಳಿತು ನಂಜನಗೂಡಿಗೆ ಬರುತ್ತಿರುವಾಗ್ಗೆ ಮಧ್ಯದಾರಿಯಲ್ಲಿ ಸಾಲುಮರಕ್ಕೆ ಮೋಟಾರ್ ತಾಕುಬಿಡದು ಮರದ ಕೊಂಬೆಯು ಚೆನ್ನಬಸಪ್ಪನವರ ಹಣೆಗೆ ಬಡಿದು ಮುಖಜಜ್ಜಿ ತಲೆಯೊಡದುಹೋಗಿ ತಕ್ಷಣದಲ್ಲೇ ಮೃತರಾದರೆಂದು ತಿಳಿಯಬರುತ್ತದೆ. ಅನಿರೀಕ್ಷಿತವೂ, ಅಕಾಲವೂ ಆದ ಅವರ ಮರಣವಾರ್ತೆಯು ವಿದ್ಯುಲ್ಲತೆಯೋಪಾದಿಯಲ್ಲಿ ಸ್ವಸ್ಥಳ ಪರಸ್ಥಳಗಳ ಬಂಧುಬಳಗದವರಿಗೂ, ಆಪ್ತೇಷ್ಟರಿಗೂ, ಕಂಡುಕೇಳಿದವರಿಗೂ ಮುಟ್ಟಿ ಸಮಸ್ತರನ್ನೂ ಶೋಕಸಾಗರದಲ್ಲಿ ಮುಳಿಗಿಸಿತು, ಮತ್ತು ಸಾವಿರಾರುಜನರು ಗ್ರಾಮಾಂತರಗಳಿಂದ ಶವವಿದ್ದೆಡೆಗೆ ಬಂದು ಶ್ರೀಮಂತರ ಗುಣವರ್ಣನೆಯಿಂದ ತಮ್ಮ ದುಃಖಪ್ರದರ್ಶನ ಮಾಡುತ್ತಿದ್ದರು. ಈಗ್ಗೆ 12 ವರ್ಷಗಳ ಕೆಳಗೆ ಶ್ರೀಮಂತರು ಸಮಸ್ತದಾನಗಳಲ್ಲೆಲ್ಲಾ ವಿದ್ಯಾದಾನವು ಶ್ರೇಷ್ಠವೂ ಶಾಶ್ವತವೂ ಆದುದೆಂದೂ, ಹಳ್ಳಿಗಾಡಿನವರು ವಿದ್ಯಾವಂತರಾದ ಹೊರತು ಅವರ ಅಜ್ಞಾನನಿವಾರಣೆಯಾಗುವುದಿಲ್ಲವೆಂದೂ ಅರಿತು ತಮ್ಮ ತಂದೆಯವರಾದ ಕೈ|| ಸಿದ್ಧಲಿಂಗಪ್ಪನವರ ಜ್ಞಾಪಕಾರ್ಥವಾಗಿ ಕಬ್ಬಹಳ್ಳಿಯಲ್ಲಿ 6000 ರೂ. ವ್ಯಯದಿಂದ ಒಂದು ಪಾಠಶಾಲೆಯನ್ನು ಕಟ್ಟಿಸಿ ಆಂಗ್ಲವಿದ್ಯಾಬೋಧಕರ ಮಾಸಾಶನಕ್ಕಾಗಿ 3500 ರೂ. ಗಳ ಪುದುವಟ್ಟುಹಾಕಿದುದಲ್ಲದೆ ಬೋಧಕರ ವಾಸಕ್ಕಾಗಿ ಸಾಲುಮನೆಗಳನ್ನೂ ಕಟ್ಟಿಸಿಕೊಟ್ಟರು. ಇದಾದ ಕೆಲದಿನಗಳನಂತರ ತಮ್ಮ ಗ್ರಾಮದಲ್ಲಿ ಸರ್ಕಾರೀ ಬಾಲಿಕಾಪಾಠಶಾಲೆಯನ್ನಿಡಲು ಮತ್ತೊಂದು ಕಟ್ಟಡವನ್ನು ಕಟ್ಟಿಸಿದರು. ತಮ್ಮ ಗ್ರಾಮದ ಬಾಲಕಬಾಲಿಕೆಯರ ವಿದ್ಯಾಭ್ಯಾಸಕ್ಕಾಗಿ ತಕ್ಕ ಸೌಲಭ್ಯವನ್ನು ಕಲ್ಪಿಸಿದುದಲ್ಲದೆ ನಮ್ಮ ಸಂಸ್ಥಾನದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಾರಂಭವಾಗುವುದಕ್ಕೆ ಬಹಳ ಮುಂಚಿತವಾಗಿಯೇ ಕಬ್ಬಹಳ್ಳಿ ಗ್ರಾಮದಲ್ಲಿ ದೊಡ್ಡಮಾರ್ಗಗಳನ್ನು ಕಲ್ಪಿಸಿ ಒತ್ತಾದ ಮನೆಗಳನ್ನೊಡೆದು ದೂರದೂರವಾಗಿ ಕಟ್ಟುವಂತೆ ಜನರನ್ನು ಪ್ರೋತ್ಸಾಹಿಸಿ ಸಂಸ್ಥಾನದ ಮಾದರಿ ಗ್ರಾಮಗಳಲ್ಲೆಲ್ಲಾ ಕಬ್ಬಹಳ್ಳಿಯು ಪ್ರಥಮಸ್ಥಾನವನ್ನು ಹೊಂದುವಂತೆ ಮಾಡಿದರು. ತರುವಾಯ ಮೈಸೂರು ವಿಶ್ವವಿದ್ಯಾಲಯಕ್ಕೆ ಅದು ಆರಂಭವಾದ ತರುಣದಲ್ಲಿ ಪ್ರಥಮತಃ ಪುದುವಟ್ಟನ್ನು ಹಾಕಿದರು. ರಾಜಧಾನಿಯಲ್ಲಿ ವ್ಯಾಸಂಗಮಾಡುವ ತಮ್ಮ ವೀರಶೈವಸಮಾಜದ ವಿದ್ಯಾರ್ಥಿಗಳ ಅಶನವಸನಕ್ಕೆ ಯೋಗ್ಯವಾದ ಸ್ಥಳವಿಲ್ಲದೆ ವಿದ್ಯಾರ್ಥಿಗಳು ಪಡುತ್ತಿದ್ದ ತೊಂದರೆಯನ್ನು ಕಣ್ಣಾರನೋಡಿ ತನ್ನಿವಾರಣಾರ್ಥವಾಗಿ 45,000 ರೂಪಾಯಿಗಳಿಗೆ ರೈಲ್ವೆಸ್ಟೇಷನ್ ಬಳಿ ವೈಸ್‌ರಾಯ್‌ರೋಡಿನಲ್ಲಿ ಒಂದು ವಿಶಾಲವಾದ ಕಟ್ಟಡವನ್ನು ಕೊಂಡು 15,000 ರೂ. ಗಳಿಂದ ಅದನ್ನು ವಿದ್ಯಾರ್ಥಿಗಳ ವಾಸಕ್ಕನುಕೂಲವಾಗಿ ಸರಿಪಡಿಸಿ ಒಂದು ಪುಸ್ತಕಭಂಡಾರವನ್ನೇರ್ಪಡಿಸಿರುವರು. ಕೈ|| ಚೆನ್ನಬಸಪ್ಪನವರು ಅಪ್ರಾರ್ಥಿತವಾಗಿ ಮಾಡಿದ ಮಹೋದಾರ ಧರ್ಮವು ಶ್ಲಾಘ್ಯವಾಗಿರುವುದಲ್ಲದೆ ಇತರ ಶ್ರೀಮಂತರಿಗೆ ಮಾರ್ಗದರ್ಶಕವಾಗಿರುವುದೆಂದು ಶ್ರೀಮದ್ಯುವರಾಜರವರು ಬೆಂಗಳೂರಲ್ಲಿ ಕಟ್ಟಲ್ಪಟ್ಟಿರುವ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ವೀರಶೈವಾಶ್ರಮದ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡುವಾಗ್ಗೆ ಅಪ್ಪಣೆಕೊಡಿಸಿರುತ್ತಾರೆ.

ಕೈ|| ಚೆನ್ನಬಸಪ್ಪನವರು ಧರ್ಮಿಷ್ಠರು ಮಾತ್ರವಾಗಿರದೆ ನಿಗರ್ವಿಗಳೂ, ನಿಸ್ಪೃಹರೂ, ದಯಾವಂತರೂ, ನಾಗರಿಕರೂ ಆಗಿದ್ದು ಕಳೆದ 10 ವರ್ಷಗಳಿಂದಲೂ ತಾಲ್ಲೂಕು ಮತ್ತು ಡಿಸ್ಟ್ರಿಕ್ಟುಬೋರ್ಡುಗಳಿಗೂ, ಪ್ರಜಾಪ್ರತಿನಿಧಿಸಭೆಗೂ ಮೆಂಬರಾಗಿ ರಾಜ ಪ್ರಜಾಸೇವೆಮಾಡಿ ಸಮಸ್ತವರ್ಣದವರ ಮೆಚ್ಚುಗೆಗೆ ಪಾತ್ರರಾಗಿದ್ದರು ಮತ್ತು ಅವರಿಗೆ ಶ್ರೀಮನ್ಮಹಾರಾಜರವರಿಂದ 1 ನೇ ತರಗತಿಯ ಕಿಲ್ಲತ್ತೂ ಮೆಡಲೂ ಖಾಸಾಹಾರದ ಮರ್ಯಾದೆಯೂ ಅನುಗ್ರಹಿಸಲ್ಪಟ್ಟಿದ್ದುವು. ಇವರಲ್ಲಿದ್ದ ಸ್ವಮತಾಭಿಮಾನವು ಅಸಾಧಾರಣವಾಗಿದ್ದಿತೆಂಬುದಕ್ಕೆ ಅವರು ಸ್ವಜನವಿದ್ಯಾಭಿವೃದ್ಧಿ ಕಾಂಕ್ಷೆಯಿಂದ ಮಾಡಿರುವ ದಾನವೇ ಸಾಕ್ಷಿಯಾಗಿದೆ. ಅವರು ಇನ್ನು ಕೆಲಕಾಲ ಜೀವಿಸಿರುವಂತೆ ಜಗದೀಶನು ಅನುಗ್ರಹಿಸಿದ್ದರೆ ತಮ್ಮ ಆಶ್ರಮದಲ್ಲಿ ಅನಾಥವಿದ್ಯಾರ್ಥಿಗಳ ಉಚಿತಭೋಜನಕ್ಕೇರ್ಪಾಟು ಮಾಡುವವರಾಗಿದ್ದರು. ಧರ್ಮಾತ್ಮರನ್ನು ಪಾಪಭೂಯಿಷ್ಟವಾದ ಭೂಲೋಕವು ಪ್ರೀತಿಸುವುದಕ್ಕಿಂತಲು ಪರಶಿವನು ಪ್ರೀತಿಸುವುದೇ ಹೆಚ್ಚು. ಅದಕ್ಕಾಗಿಯೇ ಇಂತಹವರು ಬೇಗಬೇಗನೆ ಶಿವಸನ್ನಿಧಿಗೆ ಬರಮಾಡಿಕೊಳ್ಳಲ್ಪಡುವರು. ಇಂತಹ ಧರ್ಮಾತ್ಮರನ್ನು ಕಳೆದುಕೊಳ್ಳುವವರೇ ಹತಭಾಗ್ಯರು. ಶ್ರೀಮಂತ ಚೆನ್ನಬಸಪ್ಪನವರಿಗೆ ಅವಸಾನಕಾಲದಲ್ಲಿ ಸುಮಾರು 45 ವರ್ಷವಯಸ್ಸಾಗಿದ್ದಿತು. ಆದರೂ ಅವರು ತಮ್ಮ ಮಧ್ಯವಯಸ್ಸಿನೊಳಗಾಗಿಯೇ ಎಂತಹ ವಿದ್ಯಾವಂತರಿಗೂ ಸಾಧ್ಯವಲ್ಲದ ಪಾರಮಾರ್ಥಿಕದೃಷ್ಟಿಯಿಟ್ಟು ಮಾಡಿದ ಧರ್ಮಕಾರ್ಯದಿಂದ ಅವರು ಭೌತಿಕದೇಹವನ್ನು ತ್ಯಜಿಸಿಬಿಟ್ಟರೂ ಅಜರಾಮರವಾದ ಕೀರ್ತಿಶರೀರವನ್ನು ನಮ್ಮ ಮಧ್ಯದಲ್ಲಿ ಬಿಟ್ಟುಹೋಗಿರುವರು. ಕೈ|| ಚೆನ್ನಬಸಪ್ಪನವರಿಗೆ ಒಬ್ಬ ಧರ್ಮಪತ್ನಿಯೂ, ಬಾಲ್ಯವಯಸ್ಸಿನ ಪುತ್ರನೂ ಪುತ್ರಿಯೂ ಇರುವರು. ಈ ಪುತ್ರಿಯನ್ನು ಬಿ. ಎ., ತರಗತಿಯಲ್ಲಿ ಓದುವ ಶ್ರೀಮಂತ ಕುಮಾರನಿಗೆ ಕೊಟ್ಟು ಕಳೆದ ವರ್ಷ ಅತ್ಯಂತವಿಜೃಂಭಣೆಯಿಂದ ವಿವಾಹಮಹೋತ್ಸವವನ್ನು ಮಾಡಿ ಅದರ ಜ್ಞಾಪಕಾರ್ಥವಾಗಿ ತಮ್ಮ ವೀರಶೈವಾಶ್ರಮದ ಪುಸ್ತಕಭಂಡಾರಕ್ಕೆ 500 ರೂಪಾಯಿಗಳನ್ನು ಕೊಟ್ಟರು. ಕೈ|| ಚೆನ್ನಬಸಪ್ಪನವರು ತಮ್ಮ ಕುಟುಂಬದಲ್ಲಿ ಹಿಂದೆ ಯಾರೂ ಪಡೆದುಕೊಳ್ಳದಿದ್ದ ಶಾಶ್ವತ ಕೀರ್ತಿಯನ್ನು ಸಮಾಜದ ಮಧ್ಯದಲ್ಲಿ ಪಡೆದುಕೊಂಡುದಕ್ಕೆ ಅವರ ಅಮೂಲ್ಯವಾದ ಮತಾಭಿಮಾನವನ್ನೂ ಧಾರ್ಮಿಕಬುದ್ಧಿಯನ್ನೂ ಜಗದೀಶ್ವರನು ಅನುಗ್ರಹಿಸಿದುದೇ ಕಾರಣವು. ಶಿವಾನುಗ್ರಹಕ್ಕೆ ಪಾತ್ರರಾಗಿ ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳತಕ್ಕ ಪುಣ್ಯವು ಸಾಮಾನ್ಯರೆಲ್ಲರಿಗೂ ಲಭಿಸುವುದುಂಟೆ ? ಚೆನ್ನಬಸಪ್ಪನವರ ಸನ್ಮಾರ್ಗಪ್ರವರ್ತನವು ಸಜ್ಜನರಿಗೆಲ್ಲ ಅನುಸರಣೀಯವಾದುದು. ಜಗದೀಶನು ಕೈ|| ಚೆನ್ನಬಸಪ್ಪನವರಿಗೆ ಶಾಶ್ವತ ಶಿವಸಾಯುಜ್ಯವನ್ನೂ, ಅವರ ವಿಯೋಗದುಃಖಕ್ಕೆ ಗುರಿಯಾದ ಧರ್ಮಪತ್ನಿಗೂ ಪುತ್ರಪುತ್ರಿಯರಿಗೂ ಮನಸ್ಸಮಾಧಾನವನ್ನೂ ಅನುಗ್ರಹಿಸಲೆಂದು ಕೋರಿ ಈ ಮೂಲಕ ನಮ್ಮ ಅನುತಾಪವನ್ನು ನಿವೇದಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಈಗ ಕಲಕತ್ತಾದಲ್ಲಿರುವ ಶ್ರೀಮನ್ಮಹಾರಾಜರವರ ಸ್ವಾರಿಯು ಬರುವ ಮಾರ್ಚಿ ತಾ|| 6-7 ರಲ್ಲಿ ರಾಜಧಾನಿಗೆ ಚಿತ್ತೈಸುವುದಾಗಿ ವರ್ತಮಾನವಿದೆ.

ದಿಲ್ಲಿಯಲ್ಲಿ ವೈಸ್‌ರಾಯರ ಹಸ್ತದಿಂದ ಪ್ರಶಸ್ತಿಯ ಬಹುಮಾನವನ್ನು ಸ್ವೀಕರಿಸಿ ಹರದ್ವಾರಪ್ರಾಂತ ಹೋಗಿದ್ದ ಸರ್ ಕೆ. ಪಿ. ಪುಟ್ಟಣಸೆಟ್ಟರು ಕಳೆದವಾರ ಬೆಂಗಳೂರಿಗೆ ಸುರಕ್ಷಿತವಾಗಿ ದಯಮಾಡಿಸಿದರು.

ರಾಜಧಾನಿಯ ಮ|| ಗಳಾದ ಎ. ಡಿ. ರಾಜಾರಾಂ ಕಂಪೆನಿಯ ಮ|| ಗೋವಿಂದರಾಜು ಮೊದಲಿಯಾರರು ತಮ್ಮ ಕುಮಾರಿಯ ವಿವಾಹವನ್ನು ಈ ತಾ|| 25 ನೆಯ ಗುರುವಾರ ಬಹಳ ವೈಭವದಿಂದಮಾಡಿದರು. ರಾಜಧಾನಿಯ ಅಧಿಕಾರಿಗಳು ಮೊದಲಾಗಿ ಎಲ್ಲ ದೊಡ್ಡಮನುಷ್ಯರೂ ಬರಮಾಡಲ್ಪಟ್ಟಿದ್ದು ಫಲಪುಷ್ಪತಾಂಬೂಲ ವಿನಿಯೋಗದಿಂದ ಸತ್ಕರಿಸಲ್ಪಟ್ಟರು.

ಮೈಸೂರ ಡಿ|| ಪೊಲೀಸು ಸೂಪರಿಂಟೆಂಡೆಂಟರ್ ಮ|| ಕೆ. ಸಿದ್ಧರಾಮಪ್ಪನವರು ರಾಜಧಾನಿಯ ಅಡ್ವೊಕೇಟ್ ಮ|| ವಿರ್ಲೆ ಸುಬ್ಬರಾಯರಮೇಲೆ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ವಿವಾದದಲ್ಲಿ ಫಿರ್ಯಾದಿಪರ ಸಾಕ್ಷಿಯ ವಿಚಾರಣೆಯು ಕಳೆದ ಶುಕ್ರವಾರ ನಡೆದು ಬರುವ ಮಾರ್ಚಿ ತಾ|| 8 ಕ್ಕೆ ಅಡ್ಜರ್ನ್‌ಮಾಡಲ್ಪಟ್ಟಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ದೊಡ್ಡಕೆರೆಯ ಕೆಳಗಿರುವ ಹೊಸಮಠದ ಶ್ರೀಬಸವಲಿಂಗದೇಶಿಕೇಂದ್ರಸ್ವಾಮಿಗಳು ತಮ್ಮ ಮಠದಾವರಣದಲ್ಲಿ ನೂತನವಾಗಿ ಕಟ್ಟಿಸಿರುವ ದೇವಾಲಯದಲ್ಲಿ ಶ್ರೀಬಸವೇಶ್ವರಮೂರ್ತಿಪ್ರತಿಷ್ಠೆಯನ್ನೂ, 20 ವಟುಗಳಿಗೆ ಶಿವದೀಕ್ಷೆಯನ್ನೂ ಕಳೆದ ತಾ|| 15 ರಲ್ಲಿ ವಿಧ್ಯುಕ್ತವಾಗಿ ಮಾಡಿಸಿ ಸ್ಥಳಪರಸ್ಥಳಗಳಿಂದ ದಯೆಮಾಡಿಸಿದ್ದ ವಿರಕ್ತ ಮತ್ತು ಗುರುಸ್ಥಲ ಮಠಾಧಿಕಾರಿಗಳನ್ನು ತಕ್ಕ ಉಡುಗರೆಯಿಂದಲೂ ವೃಷ್ಟಾನ್ನಭೋಜನದಿಂದಲೂ ತೃಪ್ತಿಗೊಳಿಸಿದರೆಂದು ತಿಳಿಯುತ್ತೇವೆ.

ಕೋಲಾರದ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮೀಷನರ್ ಮ|| ಜೆ. ರುದ್ರಪ್ಪ ಎಂ.ಎ., ಬಾರ್-ಅಟ್-ಲಾ ಇವರ ಪುತ್ರಿಯ ಲಗ್ನವು ಬೆಂಗಳೂರಲ್ಲಿ ಕಳೆದ ತಾ|| 22 ನೆಯ ಭಾನುವಾರ ಬಹಳ ವಿಜೃಂಭಣೆಯಿಂದ ನಡೆದಿತು. ದಿವಾನರಾದಿಯಾಗಿ ಸರ್ಕಾರಿಯಧಿಕಾರಿಗಳೂ, ಲಾಯರುಗಳೂ, ಮ್ಯು|| ಕೌನ್ಸಿಲರುಗಳೂ, ವರ್ತಕರೂ, ಇತರ ದೊಡ್ಡಮನುಷ್ಯರೂ ವಿಶೇಷವಾಗಿ ಬಂದಿದ್ದು ಮ|| ರುದ್ರಪ್ಪನವರಿಂದಲೂ ಅವರ ಅಣ್ಣನವರಾದ ಮ್ಯು|| ಕೌನ್ಸಿಲರ್ ಮ|| ಜೆ. ಸಿದ್ಧವೀರಪ್ಪನವರಿಂದಲೂ ಗಂಧಪುಷ್ಪತಾಂಬೂಲಾದಿ ವಿನಿಯೋಗದಿಂದ ಸತ್ಕರಿಸಲ್ಪಟ್ಟರು.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲು ಸ್ಥಿತಿಯು ಆರ್ಥಿಕ ಸಹಾಯವಿಲ್ಲದೆ ಬಹಳ ದುರ್ದಶೆಯಲ್ಲಿರುವುದರಿಂದ ಅದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿರುತ್ತದೆ. ಈ ಮಧ್ಯೆ ಸ್ಕೂಲುಗಳ ಇನ್ಸ್‌ಪೆಕ್ಟರು ಪರಿಪುಷ್ಟವಾಗಿರುವ ಶಾರದಾವಿಲಾಸಪಾಠಶಾಲೆಯು ಮರಿಮಲ್ಲಪ್ಪನವರ ಹೈಸ್ಕೂಲಿನೊಡನೆ ಸಮಾವೇಶಗೊಳಿಸಲ್ಪಟ್ಟಲ್ಲಿ ಅನುಕೂಲವಾಗಿ ನಡಿಯುತ್ತದೆಂದು ಅಭಿಪ್ರಾಯಪಟ್ಟಿರುವುದಾಗಿ ಕೇಳುತ್ತೇವೆ. ಇದರಿಂದ '' ಮಾರಮ್ಮನಿಗೆ ಗಂಡನಿಲ್ಲ, ವೀರೇದೇವರಿಗೆ ಹೆಂಡತಿಯಿಲ್ಲ '' ಎಂಬ ಗಾದೆಯು ಸ್ಮರಣೆಗೆ ಬರುತ್ತದೆ.

ಕೈ|| ಕಬ್ಬಹಳ್ಳಿ ಚೆನ್ನಬಸಪ್ಪನವರು ಪ್ರಯಾಣಮಾಡುತ್ತಿದ್ದ ಮೋಟಾರುಬಸ್ಸಿನಲ್ಲಿ 18 ಜನರು ಕುಳಿತಿದ್ದರೆಂದೂ, ಅವರಲ್ಲಿ 10 ಜನರಿಗೆ ಪೆಟ್ಟುಬಿದ್ದು ಒಬ್ಬ ಹೆಂಗುಸಿನ ತೋಳು ಸಂಪೂರ್ಣವಾಗಿ ಮುರಿದುಹೋಗಿ ಆಕೆಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳೆಂದೂ, ಈ ಸಮಾಚಾರವು ಭಾನುವಾರ ರಾತ್ರಿ ಡಿ|| ಪೊಲೀಸು ಸೂಪರಿಂಟೆಂಡೆಂಟರಿಗೆ ತಿಳಿದಮೇಲೆ ಅವರೂ, ಡೆ|| ಕಮೀಷನರೂ, ನಂಜನಗೂಡು ಸಬ್‌ಡಿವಿಜನ್ ಆಫೀಸರೂ ಅಪಾಯಸಂಭವಿಸಿದ ಸ್ಥಳಕ್ಕೆ ಹೋಗಿ ವಿದ್ಯಮಾನವನ್ನೆಲ್ಲಾ ವಿಚಾರಿಸಿಕೊಂಡು ಬಂದರೆಂದೂ, ರಾಜಧಾನಿಯಲ್ಲೋದುತ್ತಿದ್ದ ಕೈ|| ಚೆನ್ನಬಸವಪ್ಪನವರ ಕುಮಾರನೂ, ವೀರಶೈವಾಶ್ರಮದ ವಿದ್ಯಾರ್ಥಿಗಳೂ ಅದೇ ರಾತ್ರಿ ಮೋಟಾರುಬಂಡಿಗಳಲ್ಲಿ ಹೋಗಿದ್ದರೆಂದೂ ತಿಳಿಯಬಂದಿದೆ.

ರಾಜಧಾನಿಯಲ್ಲಿ ಕಳೆದ 20-22 ವರ್ಷಗಳಿಂದಲೂ ಕಾರಣಾಂತರದಿಂದ ಅನಾಯಕವಾಗಿದ್ದ ಶ್ರೀ ಅರಮನೆಜಪದಕಟ್ಟೆ ಮಠದ ಪಟ್ಟಾಧಿಕಾರಮಹೋತ್ಸವವು ತಾ|| 25 ರಲ್ಲಿ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಈ ನೂತನಸ್ವಾಮಿಗಳವರಲ್ಲಿ ದೊಡ್ಡವರಿಗೆ ಶ್ರೀಸದಾಶಿವಶಿವಾಚಾರ್ಯಸ್ವಾಮಿಗಳೆಂದೂ, ಚಿಕ್ಕವರಿಗೆ ಶ್ರೀ ಚಂದ್ರಶೇಖರಸ್ವಾಮಿಗಳೆಂದೂ ನಾಮಕರಣಮಾಡಲ್ಪಟ್ಟಿತು. ರಾಜಧಾನಿಯ ವೀರಶೈವರಲ್ಲಿ ಗಣ್ಯರಾದ ಶಿಷ್ಯರುಗಳೆಲ್ಲರೂ ಮಹೋತ್ಸವಕ್ಕೆ ದಯೆಮಾಡಿದ್ದು ಫಲವನ್ನೂ ಗುರುಕಾಣಿಕೆಯನ್ನೂ ಒಪ್ಪಿಸಿ ಉಭಯ ಶ್ರೀಗಳವರಿಂದ ಆಶೀರ್ವಾದವನ್ನು ಪಡೆದು ತೆರಳಿದರು. ಪರಸ್ಥಳದಿಂದ ಕೆಲ ಮಠಪತಿಗಳೂ, ಶಿಷ್ಯರುಗಳೂ ಬಂದಿದ್ದರು. ಅನಾಯಕವಾಗಿದ್ದ ಶ್ರೀಜಪದಕಟ್ಟೆ ಮಠವನ್ನು ಸನಾಯಕವಾಗಿ ಮಾಡುವಲ್ಲಿ ಬಹಳ ಶ್ರಮವನ್ನೂ ಅಭಿಮಾನವನ್ನೂ ವಹಿಸಿದ ಅರಮನೆಯ ಮುಜರಾಯಿ ಡೆಪ್ಯುಟಿ ಕಾಜಳವಿ ಮ|| ಎಚ್. ಲಿಂಗರಾಜಅರಸಿನವರಿಗೆ ಸಮಾಜದವರಿಂದ ವಂದನೆಯರ್ಪಿಸಲ್ಪಟ್ಟಿತು.

ಭರತಖಂಡದ ವೃತ್ತಾಂತಗಳು.

ರೇಷ್ಮೆಹುಳುಗಳಿಗೆ ರೋಗವು ತಗಲದಂತೆ ಸಿಡಿಬುಹಾಕಲ್ಪಡುವುದಂತೆ. ಇದು ಅನುಕೂಲವಾದಲ್ಲಿ ರೇಷ್ಮೆಹುಳಸಾಕುವವರಿಗೆ ಮಹೋಪಕಾರವಾಗುವುದು.

ಇಂಜನೀರ್ ರಾಮಪತಿರಾಯಿ ತನ್ನ ಕೂಡ ಬೊಂಬಾಯಿಗೆ ಬರಲು ತಿರಸ್ಕರಿಸಿದ ಕಮಲಾ ಎಂಬ ವೇಶ್ಯಾಯುವತಿಯನ್ನು ಕೊಂದುದಕ್ಕಾಗಿ 5 ವರ್ಷ ಕಠಿಣಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟನು.

ಮದ್ರಾಸ್ ಚೀಫ್‌ಕೋರ್ಟಿನ ಜಡ್ಜಿಗಳಲ್ಲೊಬ್ಬರಾಗಿದ್ದು ನಿವೃತ್ತಿಯನ್ನು ಹೊಂದಿದ್ದ ಟಿ. ವಿ. ಶೇಷಗಿರಿಅಯ್ಯರ್‌ರವರು ಕಳೆದ 1½ ತಿಂಗಳಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 24 ರಲ್ಲಿ ವಿಧಿವಶರಾದರು.

ಬೊಂಬಾಯಿನಲ್ಲಿ ಒಬ್ಬ ಜ್ಯೂಜಾತಿಯ ಯುವತಿಯು ತನ್ನನ್ನು ವರಿಸಿದ್ದ ಡಾಕ್ಟರು ಮದುವೆಮಾಡಿಕೊಳ್ಳುವುದಿಲ್ಲವೆಂದು ಹೇಳಿದುದರಮೇಲೆ ಉಟ್ಟಿದ್ದ ಬಟ್ಟೆಗೆ ದೀಪವನ್ನು ಹೊತ್ತಿಸಿಕೊಂಡು ಆತ್ಮಹತ್ಯೆಮಾಡಿಕೊಂಡಳು.

ಬಂಗಾಳಾ ಗೌರ್ನರಾದ ಲಾರ್ಡ್‌ಲಿಟ್ಟನ್‌ರವರು ಬರುವ ಜೂನ್ ತಾ|| 10 ರಿಂದ 4 ತಿಂಗಳಕಾಲ ರಜದಮೇಲೆ ಹೋಗುವುದರಿಂದ ಅವರು ಬರುವವರೆಗೆ ಸರ್ ಅಬ್ದುಸ್ಸಿಹೀಮ್‌ರವರು ಆಕ್ಟಿಂಗ್ ಗೌರ್ನರಾಗಿ ಚಕ್ರವರ್ತಿಯವರಿಂದ ನಿಯಮಿಸಲ್ಪಟ್ಟಿರುವರು.

ಬಂಗಾಳಕ್ಕೆ ಸೇರಿದ ಸಿರಾಗಂಜ್ ಎಂಬಲ್ಲಿ ಆಯುಧಪಾಣಿಗಳಾದ 60 ಜನ ಕಳ್ಳರು ಒಂದು ರಾತ್ರಿ ಒಬ್ಬ ಶ್ರೀಮಂತನ ಮನೆಗೆ ನುಗ್ಗಿ ಒಳಗಿದ್ದವರನ್ನೆಲ್ಲಾ ಹಗ್ಗದಿಂದ ಕಂಬಗಳಿಗೆ ಕಟ್ಟಿಹಾಕಿ ಕಬ್ಬಿಣದ ಪೆಟ್ಟಿಗೆಯ ಬೀಗದಕೈಯನ್ನು ಕೊಡೆಂದು ಯಜಮಾನನನ್ನು ಎಷ್ಟು ಕೇಳಿದರೂ ಕೊಡಲಿಲ್ಲವಾಗಿ, ಅವನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ ಪೆಟ್ಟಿಗೆಯನ್ನೊಡೆದು ಒಳಗಿದ್ದ 50,000 ರೂ. ನ ನಗನಾಣ್ಯಗಳನ್ನು ದೋಚಿಕೊಂಡು ಹೋಗುವಾಗ್ಗೆ ತಮ್ಮನ್ನು ಹಿಂಬಾಲಿಸಿದ ಗ್ರಾಮಸ್ಥರನ್ನು ಗುಂಡಿನ ಶಬ್ದದಿಂದ ಚದರಿಸಿ ಓಡಿಹೋದರು.

ಕಲಕತ್ತಾದ ಪ್ರವಾಸಚಂದ್ರಸಿಂಹನೆಂಬ ಒಬ್ಬ ಸ್ವರಾಜ್ಯವಾದಿಯು ತನ್ನ 7 ವರ್ಷದ ಮಗನಿಗೂ 5 ವರ್ಷದ ಮಗಳಿಗೂ ವಿಷಮಿಶ್ರವಾದ ಹಾಲನ್ನು ಕೊಟ್ಟು ಸಾಯಿಸಿ ತಾನೂ ವಿಷಪಾನಮಾಡಿ ಸತ್ತನು. ಇನ್ನೊಂದುಮಗುವು ಕೂಡ ಪ್ರಾಣಾಪಾಯಸ್ಥಿತಿಯಲ್ಲಿರುವುದು. ಈತನು ಅಸಹಾಯೋದ್ಯಮ ದಿವಸಗಳಲ್ಲಿ ಕಾರಾಗೃಹವಾಸಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದನು. ಜೀವಿಸಿರಲು ತನಗಿಷ್ಟವಿಲ್ಲವೆಂದೂ, ದೇವರಲ್ಲಿ ನಂಬುಗೆಯಿಲ್ಲವೆಂದೂ. ಅಂಗಡಿಯಲ್ಲಿ ವಿಷಮದ್ದನ್ನು ತಾನೇ ಸ್ವಬುದ್ಧಿಯಿಂದ ಕೊಂಡುಕೊಂಡುಬಂದು ಉಪಯೋಗಿಸಿದೆನೆಂದೂ ಒಂದು ಕಾಗದದಲ್ಲಿ ಬರೆದು ತನ್ನ ಜೇಬಿನಲ್ಲಿಟ್ಟುಕೊಂಡಿದ್ದನು, ಮತ್ತು ಈ ಉದ್ದೇಶದಿಂದಲೇ ತನ್ನ ಹೆಂಡಿತಿಯನ್ನು ಮುಂದಾಗಿ ತವರಮನೆಗೆ ಕಳುಹಿಸಿಬಿಟ್ಟಿದ್ದನು.

ಸೇಲಂ ಡಿಸ್ಟ್ರಿಕ್ಟಿಗೆ ಸೇರಿದ ತುಂಬಲ ಎಂಬಲ್ಲಿ ಕಳೆದ ಭಾನುವಾರರಾತ್ರಿ ಅಲಮೆಸುದಿನ್ ಸಾಹೇಬನೆಂಬ ಮಹಮ್ಮದೀಯನು ತನ್ನ ಮನೆಯ ಜಗಲಿಯಮೇಲೆ ತನ್ನ ಸ್ನೇಹಿತರೊಡನೆ ಮಲಗಿರುವಾಗ್ಗೆ ಯಾರೋ ಅವನಿಗೆ ಗುರಿಕಟ್ಟಿ ಗುಂಡಿನಿಂದಹೊಡೆದು ಪ್ರಾಣಾಪಾಯವನ್ನುಂಟುಮಾಡಿದುದರಮೇಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟಾಗ್ಯೂ ಗುಣವನ್ನುಹೊಂದದೆ ಸತ್ತುಹೋದನು. ಇವನು ಮರಣಕಾಲದಲ್ಲಿ ಮ್ಯಾಜಿಸ್ಟ್ರೇಟರ ಸಮಕ್ಷಮದಲ್ಲಿ ತನ್ನ ದ್ವೇಷಿಗಳಾದ ರೆಡ್ಡಿಗಳು ಈ ಕೃತ್ಯವನ್ನು ಮಾಡಿದರೆಂದು ಹೇಳಿದನು. ಇವನಿಗೂ ಆ ರೆಡ್ಡಿಗಳಿಗೂ ಗಳುವಿನ ಕಂಟ್ರಾಕ್ಟು ವಿಚಾರದಲ್ಲೂ, ಆ ಗ್ರಾಮದ ಮ್ಯಾಜಿಸ್ಟ್ರೇಟ್ ಉದ್ಯೋಗವನ್ನು ಹೊಂದುವ ವಿಚಾರದಲ್ಲೂ ಪರಸ್ಪರ ದ್ವೇಷವಿದ್ದಿತೆಂದು ತಿಳಿಯಬಂದಿದೆ.

ಟ್ರಿವ್ಯಾಂಡರಮ್ಮಿನಲ್ಲಿ ಕಳೆದ ಶನಿವಾರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಒಬ್ಬ ಅಕ್ಕಸಾಲಿಗನ ಮನೆಯು ಬೆಂಕಿಯಿಂದ ಹೊತ್ತಿಕೊಳ್ಳಲಾಗಿ ಅಕ್ಕಪಕ್ಕದ ಮನೆಗಳವರು ಭಯಗ್ರಸ್ತರಾಗಿ ನೋಡುತ್ತಿರುವಷ್ಟರಲ್ಲಿ ಶಂಕರಯ್ಯರ್ ಎಂಬ ಬ್ರಾಹ್ಮಣಯುವಕನು ಧೈರ್ಯದಿಂದ ಮನೆಯಮೇಲೆ ಹತ್ತಿ ಮೇಲುಹೊದ್ದಿಕೆಯನ್ನು ತೆಗೆಯುತ್ತಿರುವಾಗ್ಗೆ ಸರಗಳು ಮುರಿದು ಕೆಳಗೆ ಒಂದು ಕೊಠಡಿಯೊಳಕ್ಕೆ ಬಿದ್ದುಬಿಟ್ಟನು. ಇದನ್ನು ಯಾರೂ ನೋಡಲಿಲ್ಲವು ಮತ್ತು ಹೊತ್ತಿಕೊಂಡ ಮರಮುಟ್ಟುಗಳು ಅವನಮೇಲೆ ಬೀಳುತ್ತಿರಲಾಗಿ ಅವನು ಎಷ್ಟು ಕೂಗಿಕೊಂಡರೂ ಯಾರಿಗೂ ಕೇಳಿಸಲಿಲ್ಲವು. ಇದರಿಂದ ಅವನು ಹೊರಕ್ಕೆ ಬರಲೆತ್ನವಾಗಲಿಲ್ಲವಾಗಿ ಜ್ವಾಲೆಯಲ್ಲಿ ಸಿಕ್ಕಿ ಸುಟ್ಟುಹೋದನು. ಸುಟ್ಟಮಾಂಸದ ವಾಸನೆಯಿಂದ ಜನರು ಒಳಗೆ ನುಗ್ಗಿ ನೋಡುವಲ್ಲಿ ಅವನ ಶವವು ಸಿಕ್ಕಿತು.

ಈ ಫೆಬ್ರವರಿ ತಾ|| 25 ರಲ್ಲಿ ಜರುಗಿದ ಕಾಶ್ಮೀರಮಹಾರಾಜ ಸರ್ ಹರಿಸಿಂಗ್‌ರವರ ಪಟ್ಟಾಭಿಷೇಕಮಹೋತ್ಸವ ಸಂಬಂಧವಾಗಿ ಕಳೆದ 15 ದಿನಗಳಿಂದಲೂ ಉತ್ಸವವು ಜರುಗುತ್ತಿದ್ದಿತು. ಈ ಮಹೋತ್ಸವ ಸಂತೋಷಾರ್ಥವಾಗಿ ಬಡಬಗ್ಗರಿಗೂ, ವಿದ್ಯಾರ್ಥಿಗಳಿಗೂ, ಆಸ್ಪತ್ರೆಯ ರೋಗಿಗಳಿಗೂ ಮಿಠಾಯಿ ಹಣ್ಣುಹಂಪಲುಗಳು ಹಂಚಲ್ಪಟ್ಟುವು. ದೇವಾಲಯಗಳಲ್ಲೂ ಮಸೀದಿಗಳಲ್ಲೂ ದೇವರ ಪ್ರಾರ್ಥನೆಯು ಮಾಡಲ್ಪಟ್ಟಿತು. ಮಕ್ಕಳುಗಳಿಂದ ಆಟಪಾಟಗಳು ಮಾಡಿಸಲ್ಪಟ್ಟು ಬಹುಮಾನಗಳು ಹಂಚಲ್ಪಟ್ಟುವು. ಜನರ ವಿನೋದಾರ್ಥವಾಗಿ ನಾಟಕಗಳೂ, ಕುಸ್ತಿಗಳೂ ಮಾಡಿಸಲ್ಪಟ್ಟುವು. ಇವುಗಳಿಗೆಲ್ಲಾ ಪ್ರಾಯಶಃ 30,00,000 ರೂ. ಮೇಲೆಯೇ ವೆಚ್ಚವಾಗಿರುವುದು. 10 ದಿನಗಳವರೆಗೆ ಸೈನಿಕರ ಅಂಗಸಾಧನೆ ಮೊದಲಾದ ವಿನೋದಗಳು ಜರುಗಿದುವು. ಈ ಮಹೋತ್ಸವದಲ್ಲಿ ಭರತಪುರ, ಅಲ್ವಾರು, ಪಾಟಿಯಾಲಾ, ಪನ್ನಾ, ಧೋಲ್ಪುರ, ಧರಂಪುರ ಈ ಸಂಸ್ಥಾನಾಧೀಶ್ವರರುಗಳು ಭಾಗಿಗಳಾಗಿದ್ದರು. ತಾ|| 24ರಲ್ಲಿ ಕಾಶ್ಮೀರರಾಜಧಾನಿಯು ತಳಿರುತೋರಣಾದಿಗಳಿಂದಲೂ ಸಾರಣೆಕಾರಣೆಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದು ಅರಮನೆಯಲ್ಲಿ ದೊಡ್ಡದರ್ಬಾರು ನಡೆದಿತು. ರಾತ್ರಿ ಊರೆಲ್ಲೆಲ್ಲ ದೀಪೋತ್ಸವವು ನಡೆದು ಮದ್ದಿನವಿನೋದವು ಜರುಗಿತು. ಕಾಶ್ಮೀರಕ್ಕೆ ಸೇರಿದ ಜಮ್ಮು, ಶ್ರೀನಗರ, ಗಿಲ್‌ಹೆಟ್ ನಗರಗಳಲ್ಲಿ ಅತಿಥಿಸತ್ಕಾರಗಳು ನಡೆದುವು. ಮಾರ್ಚಿ ತಾ|| 9 ವರಗೂ ವಿರೋಪ್ಯಾತಿಥಿಗಳಿಗಾಗಿ ಆಟಪಾಟ ವಿನೋದಗಳು ನಡೆಯಲು ಪ್ರತ್ಯೇಕ ಏರ್ಪಾಟು ಮಾಡಲ್ಪಟ್ಟಿರುವುದು. ಈ ಮಹೋತ್ಸವದಿಂದ ಸಮಸ್ತವರ್ಣದವರೂ ಆನಂದಿಸುತ್ತಿರುವರು.

ಬೊಲಾರಮ್ಮಿನಲ್ಲಿ ಒಬ್ಬ ಅಂಗಡಿಯವನು ಒಂದುದಿವಸ ಕೆಲ ಹುಡುಗರು ತನ್ನ ಅಂಗಡಿಯಲ್ಲಿ ಚಿಲ್ಲರೆ ದುಡ್ಡನ್ನು ಮಡಗಿರುವುದನ್ನು ನೋಡಿ ಅಂಗಡಿಯ ಮುಂಗಡೆ ಸುಳಿದಾಡುತ್ತಿದ್ದುದರಮೇಲೆ ಆ ಸ್ಥಳಬಿಟ್ಟುಹೋಗುವಂತೆ ಗದ್ದರಿಸಿ ಹೇಳಿದನು. ಆ ಹುಡುಗರಲ್ಲೊಬ್ಬನು ತಮ್ಮ ಮನೆಗೆ ಹೋಗಿ ತಾಯಿಗೆ ತಿಳಿಸಿದನು. ಆಗ ರುಕ್ಮಿಣಿ ಮತ್ತು ಆಂಡಾಳು ಎಂಬಿಬ್ಬರು ಹೆಂಗುಸರು ಅಂಗಡಿಯಬಳಿ ಬಂದು ಅಂಗಡಿಯವನನ್ನು ಹೀನಾಮಾನವಾಗಿ ಬೈದು ಕೆಳಗಿಳಿದುಬಾ ತಕ್ಕಶಿಕ್ಷೆಮಾಡುತ್ತೇವೆಂದು ಹೇಳಿ ಅವನನ್ನು ಅಂಗಡಿಯಿಂದ ಹೊರಕ್ಕೆಳದುಕೊಂಡು ಹೊಡೆಯತೊಡಗಿದರು. ಆಗ ಅವನು ನೀವು ಹೆಂಗುಸರಾದುದರಿಂದ ನಿಮ್ಮ ಮೇಲೆ ಕೈಮಾಡಲಿಕ್ಕಿಲ್ಲವೆಂದು ಹೇಳಲು ಆ ಬಜಾರಿಯರು, ನೀನು ಮಹಾಗಂಡುಸು ! ನಾವೇನು ನಿನಗೆ ಕಡಿಮೆಯಾಗಿರುವುದೆಂದು ಮೊದಲಾಗಿ ಹಂಗಿಸಿ ಕೆಳಕ್ಕೆ ಡಿವಿ ಕಾಲಿನಿಂಪೊದೆದು ಹೊರಟುಹೋದರು. ಆ ನಂತರ ಅವನು ಆ ಬಜಾರಿಯರಿಬ್ಬರಮೇಲೂ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದುಮಾಡಿರಲಾಗಿ, ಮಾಜಿಸ್ಟ್ರೇಟನು ಫಿರ್ಯಾದಿಪರ ಸಾಕ್ಷಿಗಳಿಂದ ನಡೆದ ವಿದ್ಯಮಾನವನ್ನು ದೃಢಪಡಿಸಿಕೊಂಡು '' ಗಂಡುಸು ಹೆಂಗುಸರಿಂದ ಏಟನ್ನುತಿಂದು ಬಿಡಿಸಿಕೊಳ್ಳುವುದು ಅವನಿಗೆ ಬಹಳ ಅಪಮಾನಕರವು. ಫಿರ್ಯಾದಿಯು ಅವರ ಕೈಯಲ್ಲಿ ಏಟನ್ನುತಿಂದು ಬಿಡಿಸಿಕೊಂಡನೆಂದು ನಾಚಿಗೆಯಿಲ್ಲದೆ ಸುಳ್ಳುಫಿರ್ಯಾದುಮಾಡಿ ತನ್ನ ಸ್ನೇಹಿತರ ಮತ್ತು ಪರಿಚಿತಸ್ಥರ ಅವಹೇಳನಕ್ಕೆಂದೂ ಗುರಿಯಾಗುತ್ತಿರಲಿಲ್ಲ ಅಲ್ಲದೆ ಅಪರಾಧಿಗಳು ಸಾಕ್ಷಿಯನ್ನು ಕೋರಲಿಲ್ಲ '' ವೆಂದು ಅಭಿಪ್ರಾಯಪಟ್ಟು ಇಬ್ಬರು ಬಜಾರಿಯರಿಗೂ ತಲೆಯೊಂದಕ್ಕೆ 15 ರೂಪಾಯಿನಂತೆ ಅರ್ಥದಂಡವನ್ನು ವಿಧಿಸಿದನು.

ವಿದೇಶದ ವೃತ್ತಾಂತಗಳು

2½-3 ಸೇರಿನವರೆಗೆ ನೀರನ್ನು ಕಾಯಿಸಲು ಸಾಕಾಗುವಷ್ಟು ಉಷ್ಣವು 1 ದಿವಸದಲ್ಲಿ ಒಬ್ಬ ಯೌವನಸ್ಥನ ಶರೀರದಿಂದುತ್ಪನ್ನವಾಗುತ್ತದಂತೆ.

ರುಮೇನಿಯಾದಲ್ಲಿ ಚುನಾವಣೆಯ ಸಂಬಂಧ ಜಗಳವಾಗಿ ಮೂರುಮಂದಿ ಕೊಲ್ಲಲ್ಪಟ್ಟರು, ಮತ್ತು 20 ಜನರು ಗಾಯಪಟ್ಟು ನರಳುತ್ತಿರುವರು.

ಇಂಗ್ಲೆಂಡಿನಲ್ಲಿ ಸಂಸಾರದ ಖರ್ಚು ಕಳೆದ ಘೋರಯುದ್ಧವು ಪ್ರಾರಂಭವಾದಾಗ್ಯೆ ಇದ್ದುದಕ್ಕಿಂತ ಈಗ ಶೇಕಡ 73 ರಷ್ಟು ಹೆಚ್ಚಿರುವುದೆಂದೂ, ಕಳೆದವರ್ಷ ಇದು ಶೇಕಡ 79 ರಷ್ಟು ಹೆಚ್ಚಿದ್ದಿತ್ತೆಂದೂ ಗೊತ್ತಾಗುತ್ತದೆ.

ನೈರೋಬಿಯಲ್ಲಿ ಕಳೆದಶನಿವಾರ ರಾತ್ರಿ ದೊಡ್ಡ ಅಗ್ನಿಪ್ರಮಾದವಾಗಿ ರಾಜವೀದಿಯಲ್ಲಿ 4 ದಿಕ್ಕಿನ ಮನೆಗಳೂ ಸುಟ್ಟುಹೋದುವು. ಜ್ವಾಲೆಯು 20 ಅಡಿ ಅಗಲದ ಮಾರ್ಗವನ್ನು ದಾಟಿ 100 ಗಜದವರೆಗೆ ವ್ಯಾಪಿಸಿದ್ದಿತು. ಕೆನಿಯಾಅಬ್ಸರ್ವರ್ ಎಂಬ ಪತ್ರಿಕೆಯ ಮುದ್ರಣಾಲಯವೂ ಅಗ್ನಿಗೆ ಆಹುತಿ ಆಯಿತು.

ಆಸ್ಟ್ರೇಲಿಯಾದಲ್ಲಿ ಅಗ್ನಿದೇವತೆಯು ಕೋಪಿಸಿಕೊಂಡು ಸಾವಿರಾರು ಮನೆಮಠಗಳನ್ನು ಸುಟ್ಟು ಭಸ್ಮಮಾಡಿ ನೂರಾರು ಪ್ರಾಣನಷ್ಟವನ್ನುಂಟುಮಾಡಿತು. ನಿರ್ಗತಿಕರ ಸಹಾಯಾರ್ಥವಾಗಿ 22,50,000 ರೂಪಾಯಿನ ಚಂದಾ ಕೂಡಿಸಲು ಪ್ರಯತ್ನಿಸಲ್ಪಟ್ಟಿದೆ. ಇದಕ್ಕೆ ಈವರೆಗೆ 12,00,000 ರೂ. ಕೂಡಿರುತ್ತದೆ.

ಪರ್ಷಿಯಾರಾಜ್ಯದ ನೋರ್ಚ್ ಎಂಬ ಊರಿನಲ್ಲಿ 146 ವರ್ಷದ ಒಬ್ಬ ವೃದ್ಧಳೂ 117 ವರ್ಷದ ಆಕೆಯ ಮಗನೂ ಜೀವಂತರಾಗಿರುವರು. ಪ್ರಪಂಚದಲ್ಲೆಲ್ಲಾ ಅತ್ಯಂತ ವೃದ್ಧನಾದವನು ಜರೋಗಾ ಎಂಬ ತುರ್ಕಿದೇಶಸ್ಥನು. ಈತನಿಗೆ ಈಗ 150 ವರ್ಷ ವಯಸ್ಸಾಗಿರುವುದು. ಇವನು ತನ್ನ 142 ನೇ ವರ್ಷದಲ್ಲಿ ಕಡೆಯ ಮದುವೆಯಾಗಿರುವನು.

ಕಳೆದ ಜರ್ಮನ್ ಯುದ್ಧದಲ್ಲಿ ಜರ್ಮನರ ಟಾರ್ಪೆಡೋ ಎಂಬ ಹಡಗಿನ ಸಿಡಿಮದ್ದಿನಿಂದ ಮುಳುಗಿದ್ದ ಲೋರೆನ್ ಎಂಬ ಹಡಗಿನಲ್ಲಿ ಸುಮಾರು 50 ಲಕ್ಷ ಪವನುಗಳ ಭಂಗಾರವಿದ್ದಿತು. ಬ್ರಿಟಿಷ್ ನಾವಿಕರು ಸುಮಾರು 14 ಸಾವಿರ ಪವನುಗಳ ವೆಚ್ಚದಿಂದ ಪ್ರಾಣನಷ್ಟವೊಂದೂ ಇಲ್ಲದೆ, ಮುಳಗಿಹೋಗಿದ್ದ ಚಿನ್ನವೆಲ್ಲವನ್ನೂ ಮೇಲಕ್ಕೆ ತೆಗೆದಿರುತ್ತಾರೆ.

ತುರ್ಕಿ ಸರ್ಕಾರದವರು ಪಾಶ್ಚಾತ್ಯರ ಪದ್ಧತಿಯನ್ನನುಸರಿಸಿದ ಸಾಮಾಜಿಕ ನಡೆನುಡಿಗಳನ್ನು ಆಚರಣೆಯಲ್ಲಿ ತರಲು ಒಂದು ಶಾಸನವನ್ನು ಮಾಡಬೇಕೆಂದಿರುವರು. ಸ್ತ್ರೀಯನ್ನು ತ್ಯಜಿಸುವುದಕ್ಕೆ ಪುರುಷನಿಗೆ ಇರುವ ಕಾರಣಗಳೇ ಸ್ತ್ರೀಯು ಪುರುಷನನ್ನು ತ್ಯಜಿಸುವುದಕ್ಕೂ ಸಾಕಾಗಿವೆ. ಗಂಡುಸರು ಏಕಪತ್ನೀವ್ರತಸ್ಥರಾಗಿರಬೇಕೆಂದೂ, ಬಹು ಪತ್ನೀತ್ವವು ಶಿಕ್ಷಾರ್ಹವೆಂದೂ ಗೊತ್ತಾಗಿದೆ. ಮುಹಮ್ಮದೀಯ ಸ್ತ್ರೀಯರು ಕ್ರೈಸ್ತರನ್ನು ಮದುವೆಯಾಗಕೂಡದೆಂದು ನಿರ್ಬಂಧ ಕಲ್ಪಿಸಲ್ಪಟ್ಟಿದೆ.

ಅಮೇರಿಕೆಯ ಯುನೈಟೆಡ್ ಸಂಸ್ಥಾನಗಳಲ್ಲಿ ನಿಷಾಪದಾರ್ಥವನ್ನು ಜನರಿಗೆ ಮಾರಕೂಡದೆಂದು ವಿಧಿಯಿದೆ. ವೈದ್ಯರು ಮಾತ್ರ ಅವಶ್ಯಬಿದ್ದಾಗ ರೋಗಿಗಳಿಗೆ ಸ್ವಲ್ಪಮಟ್ಟಿಗೆ ಉಪಯೋಗಿಸಲು ಅವಕಾಶಪಡೆದಿರುವರು. ಈ ನೆಪದಲ್ಲಿ ಮಾದಕ ಪದಾರ್ಥಗಳು ಬಹಳವಾಗಿ ಕರ್ಚಾಗುತ್ತಿರುವವೆಂದು ತೋರಪಟ್ಟುದರಿಂದ ಸರ್ಕಾರದವರು ದೇಶದಲ್ಲೆಲ್ಲಾ ಶೇಖರವಾಗಿರುವ ಸುಮಾರು 30 ಕೋಟಿ ಡಾಲರುಗಳ ಮಾದಕವಸ್ತುಗಳನ್ನು ತಾವೇ ಕೊಂಡು ಇಟ್ಟುಕೊಂಡು ವೈದ್ಯರಿಗೆ ಮಾರಬೇಕೆಂಬ ಯೋಜನೆ ನಡೆಯುತ್ತಿರುವುದು.

ಪೋಲೀಸಿನವರ ಅಪ್ಪಣೆಯನ್ನು ಮೀರಿ ತಮ್ಮ ಮೋಟಾರುಬಂಡಿಗಳನ್ನು ಅತಿ ವೇಗವಾಗಿ ಓಡಿಸಿಕೊಂಡು ಹೋಗುವವರನ್ನು ಶಿಕ್ಷಿಸಲು, ಪೋಲೀಸಿನವರಿಗೆ ಐದು ಅಡಿಗಳ ಉದ್ದವೂ ಚೂಪಾದ ಮೊಳೆಗಳಿಂದ ತುಂಬಿಯೂ ಇರುವ ಕಟ್ಟಿಗೆಗಳನ್ನು ತುರ್ಕೀ ಸರ್ಕಾರದವರು ಒದಗಿಸಿಕೊಟ್ಟಿರುವರು. ಅತಿವೇಗವಾಗಿ ಹೋಗುವ ಮೋಟಾರುಗಳ ಮುಂದೆ ಈ ಕಟ್ಟಿಗೆಗಳನ್ನು ಎಸೆಯುವುದರಿಂದ, ರಬ್ಬರ್‌ಟೈರುಗಳು ಸಿಡಿದು, ಮೋಟಾರುಗಳು ತಾವಾಗಿ ನಿಲ್ಲುವವಲ್ಲದೆ ಯಜಮಾನನ ಅವಿಧೇಯತೆಗೆ ತಕ್ಕ ನಷ್ಟವೂ ಆಗುವುದು.

ಗ್ರೇಟ್‌ಬ್ರಿಟನ್ನಿನಲ್ಲಿ ಏಸೆಕ್ಸಿಗೆ ಸೇರಿದ ಮಾಲ್ಡನ್ನಿನಲ್ಲಿ ಸಿ ಆಲ್ ಜೆ. ವಿಲ್ಮೈರ್ ಎಂಬ 15 ವರ್ಷವಯಸ್ಸಿನ ವಿದ್ಯಾರ್ಥಿಯಿರುವನು. ಇವನು 6 ಅಡಿ 5½ ಅಂಗುಲ ಎತ್ತರವೂ, 280 ಪೌಂಡ್ ತೂಕವೂ, 45 ಅಂಗುಲ ಎದೆಯ ಅಳತೆಯೂ ಉಳ್ಳವನಾಗಿರುವನು, ಮತ್ತು ತನ್ನ ವಯಸ್ಸಿನ ಇಬ್ಬರು ಹುಡುಗರನ್ನು ತನ್ನ ಎಡಗೈಬಲಗೈಗಳಿಂದ ಬಹು ಲೀಲಾಜಾಲವಾಗೆತ್ತಿ ಹಿಡಿದುಕೊಂಡು ತಿರುಗುವನು. 15 ವರ್ಷವಯಸ್ಸಿನಲ್ಲೇ ಇಂತಹ ಅದ್ಭುತಾಕೃತಿಯಲ್ಲಿರುವ ಇವನು ಒಳ್ಳೇ ಪ್ರಾಯಸಮರ್ಥನಾದಮೇಲೆ ದಾನವರನ್ನು ಮೀರಿಸಬಹುದಲ್ಲವೆ!

ಸ್ಪೇನ್‌ದೇಶದಲ್ಲಿ ಬಿಲ್ಬೋವಾದಿಂದ ಮ್ಯಾಡ್ರಿಡ್ಡಿಗೆ ಸುರಂಗದಮಾರ್ಗವಾಗಿ ವೇಗದಿಂದ ಹೋಗುತ್ತಿದ್ದ ಪ್ರಯಾಣಿಕರ ರೈಲುಬಂಡಿಯು ಮುಂದೆ ನಿಧಾನವಾಗಿ ಹೋಗುತ್ತಿದ್ದ ಮತ್ತೊಂದುಬಂಡಿಗೆ ತಾಕುಬಡಿಯಲಾಗಿ ಗೂಳಿಯ ಕಾಳಗವನ್ನು ನೋಡುವುದಕ್ಕಾಗಿ ಹೋಗಿದ್ದ ಜನರು ಕಿಕ್ಕಿರಿದು ಕುಳಿತಿರುವವರಲ್ಲಿ 70 ಜನರಿಗೆ ಗಾಯವಾಗಿರುವುದು ಮತ್ತು 30 ಜನರಿಗೆ ಪ್ರಾಣಾಪಾಯ ಸಂಭವಿಸಿರುವುದು. ಎರಡು ಬಂಡಿಗಳೂ ಸುರಂಗದ ಕತ್ತಲೆಯಲ್ಲಿ ಹೋಗುತ್ತಿದ್ದುದರಿಂದ ಪ್ರಯಾಣಿಕರು ಬಹಳ ದಿಗಿಲುಬಿದ್ದು ಕೋಲಾಹಲವನ್ನು ಮಾಡುತ್ತಿದ್ದರು.

ಸೀಮೆಯ ಒಬ್ಬ ರೈತನಲ್ಲಿ 20 ಹಸುಗಳಿರುವುವು ಮತ್ತು ಅವುಗಳ ಹಾಲನ್ನು ಕರೆಯಲು ಇಬ್ಬರು ಗೌಳಿಗರು ನಿಯಮಿಸಲ್ಪಟ್ಟಿರುವರು. ಅವರಲ್ಲೊಬ್ಬನು ಹಾಲನ್ನು ಕರೆಯುವಾಗ ಹಸುಗಳು ಬಹಳ ಗಂಭೀರವಾಗಿದ್ದು ಹಾಲನ್ನು ಹೆಚ್ಚಾಗಿ ಕೊಡುತ್ತಿರುವುದನ್ನು ನೋಡಿ, ಯಜಮಾನನು ಅದರ ಕಾರಣವನ್ನು ತಿಳಿಯಲು ಪ್ರಯತ್ನಪಟ್ಟಾಗ, ಆ ಗೌಳಿಗನು ಹಾಲು ಕರೆಯುವವೇಳೆಯಲ್ಲಿ ಬಹಳ ಸಂತೋಷದಿಂದಿದ್ದು ಹಾಡನ್ನು ಇಂಪಾಗಿ ಹೇಳುತ್ತಿರುವುದರಮೇಲೆ ಹಸುಗಳು ಒದೆಯದೆ ಮತ್ತು ಬಾಲವನ್ನು ಬೀಸದೆ ಬಹು ಗಂಭೀರವಾಗಿ ಸಂಗೀತವನ್ನು ಕೇಳುತ್ತಿರುವುದೇ ಕಾರಣವೆಂದು ತಿಳಿದು ಗ್ರಾಮಫೋನನ್ನು ತರಿಸಿ ಹಾಲುಕರೆಯುವಾಗ ನುಡಿಸಿದುದರಮೇಲೆ ಹಸುಗಳೆಲ್ಲವೂ ಹಾಡುಗಳನ್ನು ಕೇಳುತ್ತ ಸ್ತಬ್ಧವಾಗಿದ್ದು 1 ಕ್ಕೆ 5 ರಷ್ಟು 10 ರಷ್ಟು ಹಾಲನ್ನು ಹಿಂಡಲುಪಕ್ರಮಿಸಿದವಂತೆ. ಇಲ್ಲಿಯ ಗೌಳಿಗರು ಹಸುಗಳನ್ನು ಹೊಡೆದು ಗಾಸಿಪಡಿಸದೆ ಸರ್ವಸಾಮಾನ್ಯವಾಗಿ ದೊರೆಯುವ ಗ್ರಾಮಾಫೋನ್‌ಯಂತ್ರಗಳ ಹಾಡುಗಾರಿಕೆಯಿಂದ ಸಂತೈಸಿ ಹೆಚ್ಚುಹಾಲನ್ನು ಕರೆದುಕೊಳ್ಳಬಾರದೇಕೆ?

ಯುಗಾದಿಹಬ್ಬಾಚರಣೆಯ ಸಂಶಯಪರಿಹಾರವು.

(೧)

ಬರುವ ಕ್ಷಯಸಂವತ್ಸರದಲ್ಲಿ ಚೈತ್ರಮಾಸವು ಅಧಿಕಮಾಸವಾಗಿರುವದರಿಂದ ಸಂವತ್ಸರಾದಿ ಯುಗಾದಿಹಬ್ಬವನ್ನು ಅಧಿಕಚೈತ್ರಮಾಸದಲ್ಲಿ ಮಾಡಬೇಕೆ? ನಿಜಚೈತ್ರಮಾಸದಲ್ಲಿ ಮಾಡಬೇಕೆ? ಎಂಬ ಸಂಶಯವು ಬಹುಜನರಿಗೆ ಉಂಟಾಗಿರುವುದಾಗಿ ಸ್ಟಾರ್ ಪತ್ರಿಕೆಯಿಂದ ತಿಳಿಯಬರುವುದರಿಂದ ನಾವು ಶಾಸ್ತ್ರಶೋಧನೆಮಾಡಿ ಈ ಕೆಳಗೆ ಪ್ರಚಾರಮಾಡಿರುತ್ತೇವೆ. ಯಾವ ಸಂವತ್ಸರದಲ್ಲಿ ಚೈತ್ರಮಾಸವು ಅಧಿಕಮಾಸವಾಗುತ್ತದೋ ಆ ಸಂವತ್ಸರ ಅಧಿಕಚೈತ್ರ ಶುಕ್ಲ ಪ್ರತಿಪದ್ದಿವಸದಲ್ಲಿ ತೈಲಾಭ್ಯಂಗನಸ್ನಾನ, ಪಂಚಾಂಗಶ್ರವಣ ಮೊದಲಾದ್ದನ್ನು ಮಾಡಬೇಕೆಂದು ಶಾಸ್ತ್ರನಿರ್ಣಯವಿರುತ್ತೆ. ಸ್ಮೃತ್ಯರ್ಥಸಾಗರೆ ಶ್ಲೋ॥ ಚೈತ್ರಮಾಸೋಧಿಕಮಾಸ ಪ್ರಾಪ್ತೌ ತುಮಲಮಾಸ ಏವಪ್ರತಿಪದಭ್ಯಂಜನಾದಿಕಂ ಕೃತ್ವಾ ಪಂಚಾಂಗಸ್ಥ ರಾಜಮಂತ್ರ್ಯಾದಿಫಲಂ ಶ್ರೋತವ್ಯಂಮಲಾನ್ಯ ನಿಜಚೈತ್ರೆಯತ್ಕೃತ್ಯಂ ತದವಸ್ಥಾನುಷ್ಠೇಯಂ" ಈರೀತಿಯಾಗಿ ಶಾಸ್ತ್ರನಿರ್ಣಯವೇನೋ ಅಧಿಕಚೈತ್ರಮಾಸದಲ್ಲಿ ಮಾಡಬೇಕೆಂದು ಇರುತ್ತೆ. ಹಬ್ಬವು ಶುಭಕಾರ್ಯಗಳಲ್ಲಿ ಸೇರಿರುತ್ತದೆಂತಲೂ, ಅಧಿಕಮಾಸದಲ್ಲಿ ಶುಭಕಾರ್ಯಗಳನ್ನು ಮಾಡಬಾರದೆಂಬ ಶಾಸ್ತ್ರಾಧಾರವನ್ನು ಹಿಡಿದು ನಿಜಚೈತ್ರಮಾಸದಲ್ಲಿ ಯುಗಾದಿ ಹಬ್ಬವನ್ನು ಮಾಡಬೇಕೆಂತಲೂ ಕೆಲವರ ಅಭಿಮತವಾಗಿರುತ್ತೆ. ಒಟ್ಟಿನ ಮೇಲೆ ಅಧಿಕಚೈತ್ರಶುಕ್ಲ ಪ್ರತಿಪದ್ದಿವಸ ಅಭ್ಯಂಗನಸ್ನಾನ, ಪಂಚಾಂಗಶ್ರವಣ ಮೊದಲಾದ್ದನ್ನು ಮಾಡಬೇಕು. ನಿಜಚೈತ್ರಶುಕ್ಲ ಪ್ರತಿಪದ್ದಿವಸದಲ್ಲಿ ಕೂಡ ಹಬ್ಬವನ್ನು ಮಾಡಬಹುದು.

ತೆಲಗಿಹರಪನಹಳ್ಳಿ ಮಠದ ಬ್ರಹ್ಮಶ್ರೀ ಸಿದ್ಧಾಂತಿ,
ಹೋಲಬಸವಶಾಸ್ತ್ರಿ.

(೨)

ಈ ಸಂವತ್ಸರದಲ್ಲಿ ಚೈತ್ರಮಾಸಗಳು ಎರಡು ಬಂದಿರುವದರಿಂದ ಯಾವ ಚೈತ್ರದಲ್ಲಿ ಅಭ್ಯಂಗಸ್ನಾನ ಪಂಚಾಂಗಶ್ರವಣಾದಿಕಾರ್ಯಗಳನ್ನು ಮಾಡಬೇಕೆಂಬುವದು ಜನಸಮೂಹದಲ್ಲಿ ಚರ್ಚಾಸ್ಪದವಾಗಿರುತ್ತದೆ. ಈ ಚರ್ಚೆಗೆ ಅಸ್ಪದವಿಲ್ಲದಂತೆ ಶಾಸ್ತ್ರಪ್ರಾಮಾಣ್ಯದಿಂದಲೂ, ಸ್ವಾಭಿಪ್ರಾಯದಿಂದಲೂ ಈ ಕೆಳಗೆ ನಿರ್ಣಯಮಾಡಲಾಗಿದೆ. ಧರ್ಮಸಿಂಧುವಿನ ೫೮ನೇ ಪುಟದಲ್ಲಿ—"ಚೈತ್ರಮಲಮಾಸತ್ವೇವತ್ಸರಾರಂಭನಿಮಿತ್ತಕಂ ತೈಲಾಭ್ಯಂಗಂ | ಸಂಕಲ್ಪೇ ನೂತನವತ್ಸರನಾಮಕೀರ್ತನಾದ್ಯಾರಂಭಂಚ ಮಲಮಾಸಪ್ರತಿಪದ್ಯೇವಕುರ್ಯಾತ್" ಅರ್ಥ:—ಚೈತ್ರವು ಅಧಿಕಮಾಸವಾಗಿದ್ದರೆ ಅಧಿಕಚೈತ್ರಪ್ರತಿಪದೆಯಲ್ಲಿಯೇ ವತ್ಸರಾರಂಭನಿಮಿತ್ತವಾದ ತೈಲಾಭ್ಯಂಗಸ್ನಾನವನ್ನು ಆಚರಿಸತಕ್ಕದ್ದು. ಶಿವಪೂಜಾದಿಗಳನ್ನಾಚರಿಸುವಾಗ ಸಂಕಲ್ಪದಲ್ಲಿ ನೂತನಸಂವತ್ಸರದ ಹೆಸರನ್ನೇ ತೆಗೆದುಕೊಳ್ಳಬೇಕು. ಎಂದು ಉದಾಹೃತವಾಗಿರುತ್ತದೆ. ನಿರ್ಣಯಸಿಂಧು ಪುಟ ೫೪ ರಲ್ಲಿ—ಶ್ಲೋ॥ "ವತ್ಸರಾದೌವಸಂತಾದೌಬಲಿರಾಜ್ಯೇತಥೈವಚ | ತೈಲಾಭ್ಯಂಗಮಕುರ್ವಾಣೋನರಕಂಪ್ರತಿಪದ್ಯತೇ" ಅರ್ಥ:—ಸಂವತ್ಸರಾದಿಯಲ್ಲಿಯೂ, ವಸಂತಋತುವಿನ ಆದಿಯಲ್ಲಿಯೂ, ಬಲಿಪಾಡ್ಯಮಿಯಲ್ಲಿಯೂ ತೈಲಾಭ್ಯಂಗಸ್ನಾನವನ್ನಾಚರಿಸದಿದ್ದರೆ ನರಕಪ್ರಾಪ್ತಿಯಾಗುತ್ತದೆ. ಎಂದು ಬರೆಯಲ್ಪಟ್ಟಿದೆ. ಈ ಎರಡು ಗ್ರಂಥಗಳ ಪ್ರಮಾಣಗಳನ್ನು ಅವಲೋಕಿಸಿ ಆಲೋಚಿಸಿದಲ್ಲಿ, ಸಂಕಲ್ಪಮಾಡುವಾಗ ನೂತನಸಂವತ್ಸರದ ಹೆಸರನ್ನು ಉಚ್ಚರಿಸಬೇಕು. ಅಧಿಕಮಾಸದಲ್ಲಿಯ ತಿಥಿನಕ್ಷತ್ರಾದಿಗಳನ್ನವಲೋಕಿಸಲು ಕ್ಷಯಸಂವತ್ಸರದ ನವೀನ ಪಂಚಾಂಗವನ್ನವಲೋಕಿಸಲೇಬೇಕು. ಅಂದಲ್ಲಿ ಪಂಚಾಂಗಸಂಬಂಧವಾದ (ಪಂಚಾಂಗಪೂಜನಶ್ರವಣಾದಿ) ಕಾರ್ಯಗಳನ್ನು ಹ್ಯಾಗೆ ನಿಲ್ಲಿಸಲಿಕ್ಕಾಗುವದು? ವರ್ಷಪ್ರತಿಪದೆಯಲ್ಲಾಚರಿಸುವ ಅಭ್ಯಂಗಸ್ನಾನವನ್ನಂತೂ ಅವಶ್ಯವಾಗಿ ಆಚರಿಸಲೇಬೇಕು. ಆಚರಿಸದಿದ್ದರೆ ನರಕಪ್ರಾಪ್ತಿಯಾಗುತ್ತದೆ. ಎಂದು ನಿರ್ಣಯಸಿಂಧುಕಾರನಸ್ಪಷ್ಟೋಕ್ತಿಯಿರುತ್ತದೆ. ಅರ್ಥಾತ್-ಅಧಿಕಚೈತ್ರದ ಪ್ರತಿಪದೆಯಲ್ಲಿಯೇ ವರ್ಷಾದಿ (ಯುಗಾದಿ) ಯ ಅಭ್ಯಂಗಸ್ನಾನವನ್ನಾಚರಿಸಿ, ಪದ್ಧತಿಪ್ರಕಾರ ಮಾಡಲ್ಪಡುವ ಕಾರ್ಯಗಳನ್ನೆಲ್ಲಾ ಮಾಡಿ ಪಂಚಾಂಗಪೂಜಾ, ಪಂಚಾಂಗಫಲಶ್ರವಣಾದಿಗಳನ್ನು ಅವಶ್ಯವಾಗಿ ಆಚರಿಸಲೇಬೇಕು. ಎಂಬ ವಿಚಾರವು ಪ್ರತಿ ಒಬ್ಬರಿಗೂ ಸ್ಫುಟವಿರದು. ಶ್ಲೋ॥ "ಚೈತ್ರೇಮಲಿಮ್ಲುಚೇಪ್ರೋಕ್ತೇ ಅಧಿಮಾಸಾಬ್ದಭೂಪತಿಃ | ಪಿತೃದೇವವ್ರತಾನಾಂಚಮುತ್ತರೇಮಾಸಿಕಾರಯೇತ್" ಅರ್ಥ:—ಚೈತ್ರವು ಅಧಿಕಮಾಸವಾಗಿದ್ದರೆ ಅಧಿಕಮಾಸಪ್ರತಿಪದೆಯ ವಾರಾಧಿಪತಿಯೇ ರಾಜನಾಗುವನು. ಪಿತೃಕಾರ್ಯಗಳನ್ನೂ, ದೇವರಕಾರ್ಯಗಳನ್ನೂ, ಇತರ ವ್ರತಾದಿಗಳನ್ನೂ ನಿಜಚೈತ್ರದಲ್ಲಿ ಮಾಡಬೇಕು. ಎನ್ನುವ ಪ್ರಮಾಣಾನುಸಾರ ದೇವೀನವರಾತ್ರ್ಯುತ್ಸವ, ರಾಮನವರಾತ್ರ್ಯುತ್ಸವಾದಿ ಕಾರ್ಯಗಳನ್ನು ನಿಜಚೈತ್ರದಲ್ಲಿ ಮಾಡಬೇಕು. ವತ್ಸರಾರಂಭದ (ರೂಢನಾಮ ಯುಗಾದಿಯ) ಸಮಸ್ತ ಕಾರ್ಯಗಳನ್ನೂ ಅಧಿಕಚೈತ್ರದಲ್ಲಿಯೇ ಆಚರಿಸಬೇಕು.

ಪಂಚಾಂಗಕರ್ತ ಬ್ರ॥ ಶ್ರೀ॥ ಸಿದ್ಧಾಂತಿ ರುದ್ರಾರಾಧ್ಯಶಾಸ್ತ್ರಿ,
ಪಾಠಶಾಲಾಧ್ಯಾಪಕ, ಮಹಾಗಾಂವ್.

(೩)

ಶ್ರೀಮದಕ್ಷಯಸಂವತ್ಸರದಲ್ಲಿ ಯುಗಾದಿಹಬ್ಬವು ಅಧಿಕಚೈತ್ರದಲ್ಲಿ ಮಾಡತಕ್ಕದ್ದೆ? ನಿಜಚೈತ್ರದಲ್ಲಿ ಮಾಡತಕ್ಕದ್ದೆ? ಎಂಬ ಸಂಶಯ ಹುಟ್ಟಿದೆ. ಅಧಿಕಚೈತ್ರವು ವರ್ಜಮಾಸವಾದಾಗೂ ಯುಗಾದಿಹಬ್ಬ ಮಾತ್ರ ಅಧಿಕಚೈತ್ರಮಾಸದಲ್ಲಿಯೇ ಮಾಡಬೇಕೆಂದು ಉಕ್ತವಾಗಿರುತ್ತದೆ. ಮತ್ತು ಗಣನಾರಂಭಕ್ಕೆ ಅಧಿಕಚೈತ್ರ ಶುಕ್ಲಪ್ರತಿಪತ್ ಸೋಮವಾರವಾದಪ್ರಯುಕ್ತ ವತ್ಸರಾಧಿಪತಿ ಚಂದ್ರನೆಂದು ನಿರ್ಧರಿಸಬೇಕಾಗಿರುವುದು. ಅಧಿಕಮಾಸವು ಯಾವ ಶುಭಕಾರ್ಯಗಳಿಗೂ ಅರ್ಹವಲ್ಲವಾದರೂ ವತ್ಸರಾದಿಯಾದ ಆ ದಿವಸದಲ್ಲಿ ತೈಲಾಭ್ಯಂಗನ, ನಿಂಬಕುಸುಮಭಕ್ಷಣ, ಪಂಚಾಂಗಶ್ರವಣ ಮುಂತಾದ ಅಬ್ದಾದಿಕೃತ್ಯವನ್ನು ಮಾಡಬೇಕೆಂದು ಜ್ಯೋತಿಸ್ಸಾರದಲ್ಲಿ—"ಅಥ ಪ್ರತಿಪದಿಚೈತ್ರೇಶುಕ್ಲಪಕ್ಷೇಭವೇತ್ತಾಂ ಕಥಮಪಿಯದಿವಾರೌದ್ವೌತದಾಭೂಪತಿಃ ಸ್ಯಾತ್ | ಪ್ರಥಮ ಇತಿಮುನೀಂದ್ರೈಃಕೀರ್ತಿತೋಗರ್ಗಮುಖ್ಯೈಃಗುಣವತಿಸತಿದಾಂಬೇರಾಜ್ಯಭಾಗ್ಯೇಷ ಏವ" ಎಂಬದಾಗಿಯೂ ಸಿದ್ಧಾಂತಶಿರೋಮಣಿಯಲ್ಲಿ—"ಯಸ್ಮಿನ್ನಬ್ದೇತುಚೈತ್ರೋಧಿಕ ಇತಿ ಕಥಿತೋವತ್ಸರಾದಿಸ್ತದಾದ್ಯೌ ವಿಜ್ಞೇಯೋವಾಸರೇಶೋದಯಸಮಯಗೋವಾರಪೋಬ್ದಾಧಿಪಸ್ಥಃ ॥ ನಾಬ್ದಾದಿಶುದ್ಧಚೈತ್ರಪ್ರತಿಪದಪಿನತದ್ವಾರಪೋಬ್ದಾಧಿಪೋಪಿಪ್ರೋಕ್ತಂ ಸರ್ವಂ ಮುನೀಂದ್ರೈಃ ಶ್ರುತಿಸುಪ್ರತಿಸುವಚಸ್ಸಂಹಿತಾಶ್ಲೋಕಮೇವ" ಎಂಬದಾಗಿಯೂ ಪುಲಶ ಸಂಹಿತೆಯಲ್ಲಿ—"ಯಸ್ಮಿನ್ನಬ್ದೇಯದಾಚೈತ್ರಃ ಅಧಿಮಾಸೋಭವೇತ್ತದಾ | ಅಬ್ದನಾಥಂಪ್ರಶಂಸಂತಿ ಗರ್ಗಶಕ ಪದೇವಲಾಃ ॥" ಎಂಬದಾಗಿಯೂ, ಮಯೂಖದಲ್ಲಿ—"ಮಲಿಮ್ಲುಚೇಚ್ಚೈತ್ರಮಾಸಸ್ಸಂಸರ್ಪೋವಾಯದಾಭವೇತ್ | ತದಾವಾರೇಶ್ವರೋರಾಜಾವತ್ಸರಾದೌಪ್ರಕೀರ್ತಿತಾಃ" ಎಂಬದಾಗಿಯೂ ಸಾರಸ್ವತಸಂಹಿತೆಯಲ್ಲಿ—"ಸಂವತ್ಸರೇಚಾತ್ರವಸಂತಸಂಜ್ಞಕೇಮಾಸೇಮಲಾಖ್ಯೇಕ್ಷತದನ್ಯಸಂಜ್ಞಕೇ ॥ ಮಾಸೋಭವೇತ್ತತ್ರಶುಭೇಷ್ಟಿಪೂರ್ವೈಃ ಶ್ರೋತವ್ಯಮಾದೌ ನೃಪಮಂತ್ರಿಸತ್ಫಲಂ" ಎಂಬದಾಗಿಯೂ ತತ್ತ್ವನಿರ್ಣಯದಲ್ಲಿ—"ಕ್ರಮೇಣಯತ್ರಮಾಸಸ್ಯ ಮಧುನಾಮಮಲಿಮ್ಲುಚಃ | ಶ್ರೋತವ್ಯಮಾದ್ಯೆಪುರುಷೈಃ ರಾಜಮಂತ್ರ್ಯಾದಿಸತ್ಫಲಂ" ಎಂಬದಾಗಿಯೂ, "ವತ್ಸರಾದೌವಸಂತಾದೌಬಲಿರಾಜ್ಯೇತಥೈವಚ ತೈಲಾಭ್ಯಂಗಮಕುರ್ವಾಣೋನರಕಂಪ್ರತಿಪದ್ಯತೆ" ಎಂಬದಾಗಿಯೂ ಇನ್ನು ಅನೇಕ ಗ್ರಂಥಗಳಲ್ಲಿ ಮಹರ್ಷಿಗಳು ಇದೇ ಪ್ರಕಾರವಾಗಿ ಅಧಿಕಚೈತ್ರ ಶುಕ್ಲಪ್ರತಿಪತ್ತಿನಲ್ಲಿಯೇ ವತ್ಸರಾದಿಕೃತ್ಯವನ್ನೂ ಹಬ್ಬವನ್ನೂ ಮಾಡಬೇಕೆಂದು ನಿಶ್ಚಯಿಸಿರುತ್ತಾರೆ. ಇದೇ ಪ್ರಕಾರವಾಗಿ ಕಳೆದ ಸರ್ವಧಾರಿ ಸಂವತ್ಸರ ಮತ್ತು ಪ್ಲವಂಗ ಸಂವತ್ಸರಗಳಲ್ಲಿಯೂ ಚೈತ್ರಮಾಸವು ಅಧಿಕವಾಗಿ ಅಧಿಕಚೈತ್ರ ಶುಕ್ಲಪ್ರತಿಪತ್ತಿನ ದಿನವೇ ಅಬ್ದಾದಿಕೃತ್ಯವನ್ನು ಮಾಡಲಾಗಿರುತ್ತೆ. ಅದರಂತೆ ಈ ಅಕ್ಷಯಸಂವತ್ಸರದಲ್ಲಿ ಬರುವ ಅಧಿಕಚೈತ್ರ ಶುಕ್ಲಪ್ರತಿಪತ್ತಿನಲ್ಲಿಯೇ ವತ್ಸರಾರಂಭವಾದ ಪ್ರಯುಕ್ತ ಅಬ್ದಾದಿ ಕೃತ್ಯವನ್ನು ಅಧಿಕಚೈತ್ರಶುಕ್ಲ ಪ್ರತಿಪತ್ ಸೋಮವಾರವೇ ನಡಿಸಬೇಕೆಂದು ಶಾಸ್ತ್ರಾಧಾರವೂ, ಶಿಷ್ಟಾಚಾರವೂ ಪೂರ್ವಿಕರ ಮತವೂ ಆಗಿರುವುದೆಂದು ನಿರ್ಣೀತವಾಗಿರುತ್ತದೆ.

ಇತಿ, ಎ. ಸಚ್ಚಿದಾನಂದ ಜೋಯಿಸ, ಸಿದ್ಧಾಂತಿ, ಮೈಸೂರು.

ಸ್ವೀಕಾರ.

ಕ್ರೈ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ರಾಜಧಾನಿಯ ಶ್ರೀ ಅರಮನೆಜಪದಕಟ್ಟೆಮಠದ ಪಟ್ಟಾಧಿಕಾರ ಮಹೋತ್ಸವದಲ್ಲಿ ಆಶೀರ್ವದಿಸಲ್ಪಟ್ಟದ್ದು ೩ ರೂ. (೨) ರಾಜಧಾನಿಯ ಮ॥ ವೈ. ಶಿವಪ್ಪನವರ ಮನೆಯಲ್ಲಿ ನಡೆದ ಚೆನ್ನಪಟ್ಟಣದ ಯಜಮಾನ್ ಮ॥ ಮಲ್ಲಿಕಾರ್ಜುನಪ್ಪನವರ ಕುಮಾರ್ತೆಯ ವಿವಾಹದಲ್ಲಿ ರೂ. 1.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಉಚಿತಧರ್ಮ.

ಚಾಮರಾಜನಗರದ ತಾಲ್ಲೋಕು ಕುದೇರಿನಲ್ಲಿರುವ ಮ॥ ರಾ॥ ಕೆ. ಎ. ವೀರಣ್ಣನವರು ಮತ್ತು ಇವರ ಸಹೋದರರಾದ ಮ॥ ಶಾಂತವೀರಪ್ಪನವರು ಸುಮಾರು ಎರಡುತಿಂಗಳಹಿಂದೆ ತಮ್ಮ ಗ್ರಾಮದಲ್ಲಿ ಒಂದು ಬಾಲಿಕಾಪಾಠಶಾಲಾ ಕಟ್ಟಡಕ್ಕಾಗಿ ಒಂದು ಸಾವಿರ ರೂಪಾಯಿ ಬೆಲೆಬಾಳತಕ್ಕ ನಿವೇಶನವನ್ನೂ, ಕಟ್ಟಡದವೆಚ್ಚಕ್ಕಾಗಿ 2000 ರೂಪಾಯಿಗಳನ್ನೂ ಕೊಟ್ಟಿರುವರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಈವಾಗ ಪುನಃ ನಂಜನಗೂಡಿನಲ್ಲಿ ಹೊಸದಾಗಿ ಸ್ಥಾಪಿಸಲ್‌ಪಟ್ಟ ಪ್ರೌಢವಿದ್ಯಾಶಾಲೆಯ ಅಭಿವೃದ್ಧಿಗಾಗಿ ಧನಾರ್ಜನೆಗೋಸ್ಕರ ದಯಮಾಡಿಸಿದ್ದ ಮ॥ ರಾ॥ ಸಬ್‌ಡಿವಿಜನ್ ಸಾಹೇಬರವರಿಗೆ ಈ ಸಹೋದರರಿಬ್ಬರೂ ಉದಾರಮನಸ್ಸಿನಿಂದ ಬಹಳ ಸಂತೋಷವಾಗಿ 1500 ರೂಪಾಯಿಗಳನ್ನು ಕೊಟ್ಟು, ಸದರಿ ಮೊಬಲಗಿನಿಂದ, ಶಿವಾಧೀನರಾದ ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಮೇಲ್ಕಂಡ ಶಾಲೆಯಲ್ಲಿ ಒಂದು "ಸೈನ್ಸ್‌ಹಾಲನ್ನು" ಕಟ್ಟಿಸಬೇಕೆಂದು ಸಬ್‌ಡಿವಿಜನ್ ಸಾಹೇಬರವರನ್ನು ಕೇಳಿಕೊಂಡಮೇರೆಗೆ ಸದರಿಯವರು ಬಹಳ ಸಂತೋಷಪಟ್ಟು ನಡೆಸಿಕೊಡುವುದಾಗಿ ಒಪ್ಪಿಕೊಂಡರು ಎಂಬ ವಿಷಯವನ್ನು ತಿಳುಹಿಸಲು ಬಹಳ ಸಂತೋಷಪಡುತ್ತೇನೆ.

ವಿದ್ಯಾಭಿಮಾನಿ.

ಜಯಂತ್ಯುತ್ಸವವು.

ಶ್ರೀಜಗದ್ಗುರುಗಳಾದ ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತ್ಯುತ್ಸವವು ಬಳ್ಳಾರಿಯಲ್ಲಿ ಪ್ರತಿವರ್ಷಪದ್ಧತಿಯಪ್ರಕಾರ ಕಳೆದ ಮಹಾಶಿವರಾತ್ರಿಯ ದಿವಸ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಆ ದಿವಸ ಸಂಜೆಯ ೫ ಘಂಟೆಗೆ ಮೇಲ್ಕಂಡ ಪೂಜ್ಯಪಾದರುಗಳ ಲಿಂಗೋತ್ಪತ್ತಿಭಾವಪಟವು ಪಲ್ಲಕ್ಕಿಯಲ್ಲಿ ಮೂರ್ತಿಗೊಳಿಸಲ್ಪಟ್ಟು ವೈದಿಕರ ವೇದಘೋಷದಿಂದಲೂ ಶ್ರೀಮಜ್ಜಗದ್ಗುರುಗಳಾದ ಪಂಚಾಚಾರ್ಯರ ಜಯಜಯಕಾರದಿಂದಲೂ ವಾದ್ಯಗಳ ಮಂಗಲಧ್ವನಿಯಿಂದಲೂ ವೀರಶೈವತರುಣರ ಸಂಘದಿಂದ ಹೊರಟು ಪಟ್ಟಣ ಮುಖ್ಯಬೀದಿಗಳಲ್ಲಿ ಉತ್ಸವಮಾಡಲ್ಪಟ್ಟಿತು. ಮಾರ್ಗದಲ್ಲಿ ಬ್ರಾಹ್ಮಣರು ವೈಶ್ಯರು ಮುಂತಾದವರ್ಣದವರು ಅಲ್ಲಲ್ಲಿಗೆ ಫಲಪುಷ್ಪಗಳನ್ನೊಪ್ಪಿಸಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಪೂಜ್ಯಪಾದರುಗಳ ಕೃಪಾಕಟಾಕ್ಷದಿಂದ ಈಗ 3 ವರ್ಷದ ಕೆಳಗೆ ಈ ಊರಲ್ಲಿ ವೀರಶೈವತರುಣಸಂಘವು ಸ್ಥಾಪನೆಯಾಗಿ ಚೆನ್ನಾಗಿ ನಡೆದುಕೊಂಡುಬರುತ್ತದೆ. ಈ ಜಯಂತ್ಯುತ್ಸವವನ್ನು ವೀರಶೈವತರುಣಸಂಘದವರು ನಡೆಯಿಸಿ ಪೂಜ್ಯಪಾದರುಗಳ ಕೃಪೆಗೆ ಪಾತ್ರರಾಗಿರುತ್ತಾರೆ. ಇದೇರೀತಿ ಸಮಸ್ತ ವೀರಶೈವರೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳನ್ನು ಆಯಾಯ ಮಿತಿಗಳಲ್ಲಿ ನಡೆಯಿಸಿ ಶ್ರೀಮದಾಚಾರ್ಯರ ಕೃಪೆಗೆ ಪಾತ್ರರಾಗಿ ತಮ್ಮ ಗುರುಭಕ್ತಿಯನ್ನು ಸಾರ್ಥಕಗೊಳಿಸಬೇಕಾಗಿ ಕೋರುತ್ತೇನೆ.

ಕವುತಾಳದ ಶಾಂತರುದ್ರಪ್ಪ ಸೆಕ್ರೆಟರಿ,
ವೀರಶೈವತರುಣಸಂಘ, ಬಳ್ಳಾರಿ.

ಕಾಲಕ್ಕೆತಕ್ಕಂತೆ ನಡೆದುಕೊಳ್ಳುವುದು.

ಮೈಸೂರುದೇಶದ ಪ್ರಜೆಗಳ ಸುಖಕ್ಕಾಗಿ ಸರ್ಕಾರದವರು ಸೆಲ್ಫ್‌ಗೌರ್ನ್‌ಮೆಂಟಿನೇರ್ಪಾಟನ್ನಿಟ್ಟಿರುತ್ತಾರೆ. ಇದರ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಪ್ರಜೆಗಳಲ್ಲಿ ಬಹುಮಂದಿ ಪ್ರಮುಖರು ನಿರ್ಪಾಡಾಗಿರುವರು. ಇವರಲ್ಲಿ ಕರ್ತವ್ಯವನ್ನು ತಿಳಿದು ದೇಶಸೇವೆಯಲ್ಲಿ ತನುಮನಧನಗಳನ್ನೊಪ್ಪಿಸಿ ಸರ್ಕಾರದವರ ಕೃಪೆಗೂ, ಪ್ರಜೆಗಳ ಕೃತಜ್ಞತೆಗೂ ಪಾತ್ರರಾಗುತ್ತಿರುವವರು ಅತಿ ವಿರಳ. ಪರೋಪಕಾರಕ್ಕಾಗಿ ಒಂದು ಪೈ ಕೂಡ ಖರ್ಚುಮಾಡದವರಾಗಿಯೂ, ಕಾರ್ಯನಿರ್ವಾಹಶಕ್ತಿಯಿಲ್ಲದವರಾಗಿಯೂ ಇದ್ದಾಗ್ಯೂ ಹಣವಂದಿಗರು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ದೊಡ್ಡಸ್ತಿಕೆಯು ಅವಶ್ಯಕವಾದ್ದೆಂಬ ಕಾರಣದಮೇಲೆ ಮತ್ತು ತಮಗಿರತಕ್ಕ ದಾಕ್ಷಿಣ್ಯದ ಬಲದಮೇಲೆ ಪ್ರಜೆಗಳಿಂದ ಓಟುಗಳನ್ನು ಪಡೆದುಕೊಳ್ಳುವರು. ಹಣವಂದಿಗರಿಗೆ ಕ್ಷಾಮಬಾಧೆಯಿಂದ ಪೀಡಿತರಾಗಿರುವ ಮೈಸೂರುದೇಶದ ಬಡಪ್ರಜೆಗಳು ಬಹು ಸುಲಭವಾಗಿ ಒಳಗಾಗುವರೆಂಬ ವಿಚಾರವು ಮೈಸೂರುದೇಶದ ವಾಚಕಮಹಾಶಯರಿಗೆ ತಿಳಿಯದ ವಿಷಯವಲ್ಲ. ಎಲೆಕ್ಷನ್ ಕಾಲಗಳಲ್ಲಿ ಪುನಃ ಓಟುಗಳು ಬರತಕ್ಕ ಮಾಯಾಜಾಲದ ಮಾರ್ಗಗಳನ್ನು ಗೊತ್ತುಮಾಡಿಕೊಂಡು ತಮಗಿರತಕ್ಕ ಅನುಕೂಲದ ಬಲದಮೇಲೆ ತಮ್ಮ ಮಾಯಾಬಲೆಗೆ ಬೀಳುವ ಕೆಲವು ಮುಖಂಡರ ಮೇಲೆ ತಮ್ಮ ವರ್ಚಸ್ಸನ್ನೆಲ್ಲಾ ಬೀರಿ ವೇಷಕ್ಕೆ ತಕ್ಕಂತೆ ಭಾವಭಂಗಿಗಳನ್ನು ತೋರಿಸಿ ತಮಗೆ ಸರ್ಕಾರದ ದೊಡ್ಡ ದೊಡ್ಡ ಅಧಿಕಾರಿಗಳ ಶಿಫಾರ್ಸ್ ಇರುತ್ತೆ, ನಿಮಗೆ ಬೇಕಾದ ಕೆಲಸಗಳನ್ನು ಮಾಡಿಸಿಕೊಡುವದಾಗಿ ಹೇಳುವದರ ಜೊತೆಗೆ ದೊಡ್ಡ ದೊಡ್ಡ ಆಫೀಸರುಗಳು ಸರ್ಕೀಟ್ ಬಂದಕಾಲದಲ್ಲಿ ಹೊಸಗೃಹಪ್ರವೇಶ ಮದುವೆಯ ಸಮಾರಂಭ ಇತ್ಯಾದಿ ಶುಭಕಾರ್ಯಗಳ ನೆಪದಲ್ಲಿ ದೊಡ್ಡ ದೊಡ್ಡವರಿಗೆ ಮಾಡಿದ ಟೀಪಾರ್ಟಿ, ಹುವ್ವು, ಗಂಧ ಇತ್ಯಾದಿ ಉದಾಹರಣೆಗಳನ್ನು ಹೇಳಿಕೊಂಡು ನಂಬಿಕೆ ಹುಟ್ಟಿಸಿ ಇದರ ಬಲದಮೇಲೆ ಓಟುಗಳನ್ನು ಪಡೆದುಕೊಂಡು ಉಪಕಾರ ಮತ್ತು ಅಪಕಾರ ಮಾರ್ಗಗಳ್ಯಾವೆಂಬುದನ್ನು ಕೂಡ ಯೋಚಿಸುವ ವಿವೇಚನೆಯಿಲ್ಲದೆ, ಉಪಕಾರಿಗಳಾಗುವದಕ್ಕೆ ಬದಲಾಗಿ ಅಪಕಾರಿಗಳಾಗುತ್ತಿರುವರು. ಓಟಿನಲ್ಲಿ ಇಂಥವರು ಪ್ರಜಾಕಂಟಕರಾಗಿಯೂ ರಾಜ್ಯದ್ರೋಹಿಗಳಾಗಿಯೂ ಇರುವರು. ಇಂಥಹ ಅನೇಕಮಂದಿಗಳು ತಾವು ಕೈಕೊಂಡಿರುವ ಕೆಲಸದಲ್ಲಿ ನಿರ್ವಾಹಶಕ್ತಿ ಪ್ರಾಮಾಣಿಕತೆ ಇತ್ಯಾದಿ ಸುಗುಣರಹಿತವಾದ ವಿಚಾರವನ್ನು ಪ್ರಜೆಗಳಲ್ಲಿ ಬುದ್ಧಿವಂತರಾದವರು ಸರ್ಕಾರದವರ ಗಮನಕ್ಕೆ ತಂದಾಗ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಸ್ವಭಾವವಾದ್ದೇ ಸರಿ, ಇಲ್ಲವಾದರೆ ಪ್ರಜೆಗಳಿಗೆ ಸಮಾಧಾನವೆಂತಾಗುವುದು!

ದೇಶಾಭಿಮಾನಿ.

ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಜಯಂತ್ಯುತ್ಸವ ಬಳ್ಳಾರಿಜಿಲ್ಲಾ ಕೂಡ್ಲಿಗಿ.

ಈಗ್ಗೆ ೨ ತಿಂಗಳಕೆಳಗೆ ಈ ಊರಿನಲ್ಲಿ ಸ್ಥಾಪಿತವಾಗಿರುವ ವೀರಶೈವಸಂಘದವರ ನೇತೃತ್ವದಲ್ಲಿ ತಾ॥ 11-2-26 ರಲ್ಲಿ ವೀರಶೈವಪ್ರಮುಖರು ಮ॥ ಪಟೇಲ್ ಹುಚ್ಚುವೀರನಗೌಡರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀಜಗದಾಚಾರ್ಯರಾದ ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯರುಗಳ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಮಹಾಪರ್ವಕಾಲವಾದ ಅದೇ ದಿವಸ ಕಾರ್ಯಕ್ರಮದಂತೆ ಬೆಟ್ಟದಮೇಲಿರುವ ಶ್ರೀ ಸಿದ್ಧೇಶ್ವರಲಿಂಗಕ್ಕೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಗಳಿಂದ ವಿಧ್ಯುಕ್ತವಾಗಿ ಪೂಜಾಕಾರ್ಯಗಳನ್ನು ನೆರವೇರಿಸಿ ಲಿಂಗೋದ್ಭವರಾದ ಆಚಾರ್ಯರುಗಳ ಭಾವಚಿತ್ರಗಳನ್ನು ಪುಷ್ಪಮಾ[illegible] ಅಲಂಕರಿಸುತ್ತಿದ್ದ ಭವ್ಯಮಂಟಪದಲ್ಲಿ ಮೂರ್ತಿಗೊಳಿಸಿ ಯಥಾವಿಧಿಯಾಗಿ ಪೂಜಾಕ್ರಮಗಳಾದನಂತರ ಶ್ರೀಜಗದಾಚಾರ್ಯರ ಅವತಾರ, ಅವರ ಅಗಾಧಮಹಿಮೆ ಮತ್ತು ವೀರಶೈವಮತದ ಪ್ರಾಚೀನತ್ವ ಇವುಗಳ ವಿಷಯದಲ್ಲಿ ಮ॥ ಜೆ. ವೀರಪ್ಪನವರೂ, ಭಕ್ತಿಯ ವಿಷಯದಲ್ಲಿ ವೇ॥ ಲೋಕಲ್‌ಬೋರ್ಡು ಪ್ರೆಸಿಡೆಂಟ್ ಟಿ. ಕೊಟ್ರಬಸವಯನವರೂ, ಮಾನವಧರ್ಮದ ವಿಷಯದಲ್ಲಿ ಮ॥ ಎಸ್. ಸಿದ್ಧವೀರಪ್ಪನವರೂ ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿದರು. ಅನಂತರ ಮ॥ ಪಾಟೀಲ್ ಲೋಕೇಶ್ವರಗೌಡರಿಂದ ಏರ್ಪಡಿಸಲ್ಪಟ್ಟಿದ್ದ ಭಜನಾಸಂಘದವರಿಂದ ಕರ್ಣಾನಂದಕರವಾದ ಶಿವಭಜನೆಯೂ, ಸಂಗೀತವಿದ್ವಾನ್ ಕೆ. ಯಂ. ನಾಗಯ್ಯನವರಿಂದ ಸುಶ್ರಾವ್ಯಸಂಗೀತವೂ ನಡೆದು ಆ ರಾತ್ರಿಯೆಲ್ಲಾ ಶಿವಕಥಾಶ್ರವಣ ಇತ್ಯಾದಿ ಸದ್ಗೋಷ್ಠಿಯಿಂದ ಜಾಗರಣೆಯನ್ನು ಮಾಡಿ ಉಷಃಕಾಲಕ್ಕೆ ಶ್ರೀಜಗದ್ಗುರುಗಳವರ ಭಾವಚಿತ್ರಗಳನ್ನು ರಥಾರೋಹಣಮಾಡಿಸಿ ಜಯಘೋಷದಿಂದಲೂ ಮಂಗಳವಾದ್ಯಗಳಿಂದಲೂ ಶ್ರೀ ಬಸವೇಶ್ವರ ದೇವಾಲಯಕ್ಕೆ ಉತ್ಸವದೊಡನೆ ಕೊಂಡೊಯ್ದು ಮಂಗಳಾರತಿಯನ್ನು ಮಾಡಿಸಿ, ಉತ್ಸವವು ಮಂಟಪಕ್ಕೆ ಹಿಂದಿರುಗಿ ಬಂದಿತು. ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ನೆರವೇರಿದನಂತರ ಶ್ರೀಜಗದ್ಗುರುಗಳವರ ಹೆಸರಿನಿಂದ ಒಂದು ವಾಚನಾಲಯವೂ ಪುಸ್ತಕಭಂಡಾರವೂ ಸ್ಥಾಪಿಸಲ್ಪಟ್ಟು ವರ್ಗಣಿಯು ಕೂಡಿಸಲ್ಪಟ್ಟಿತು. ಫಲಪುಷ್ಪಪ್ರಸಾದಗಳು ಹಂಚಲ್ಪಟ್ಟು ಶ್ರೀಜಗದಾಚಾರ್ಯರ ಅಪಾರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಜಯಂತ್ಯುತ್ಸವದ ಪವಿತ್ರಕಾರ್ಯವನ್ನು ಕೈಕೊಂಡ ಸಮಸ್ತ ಮಹನೀಯರಿಗೂ ಪೂಜ್ಯಪಾದರಾದ ಆಚಾರ್ಯರು ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಸ್ಕೂಲ್ಡೇ ಎಂಬ ಉತ್ಸವಗಳೂ, ವೀರಶೈವ ವಿದ್ಯಾರ್ಥಿಗಳೂ.

ವೀರಶೈವಮತವು ಅನಾದಿಸಂಸಿದ್ಧವಾದದ್ದೂ, ಆಚಾರಶಿಷ್ಟವಾದದ್ದೂ, ವಿದ್ಯಾವಿಭೂಷಿತವಾದದ್ದೂ ಎನಿಸಿಕೊಂಡಿರುತ್ತದೆ. ಈ ಮತದಲ್ಲಿ ಪೂರ್ವದಿಂದಲೂ ಅನಂತಪಂಡಿತರೂ ಆಚಾರ್ಯರೂ ಇದ್ದುಕೊಂಡು ಈ ಮತದ ಪ್ರಾಶಸ್ತ್ಯವನ್ನು ಚೆನ್ನಾಗಿ ಬೆಳಗಿರುತ್ತಾರೆ. ಅನೇಕ ಐಶ್ವರ್ಯವಂತರಿದ್ದುಕೊಂಡು ಮತವನ್ನು ಪೋಷಿಸಿದ್ದಾರೆ ಮತ್ತು ಅಪಾಯಗಳಿಂದ ತಪ್ಪಿಸಿದ್ದಾರೆ. ಧಾತು ಈಶ್ವರ ಸಂವತ್ಸರದ ಬರದಲ್ಲಿ ಅನ್ನಾಭಾವದಿಂದ ಈ ಮತದ ಅನೇಕರು ಕೆಟ್ಟುಹೋಗುತ್ತಿದ್ದರು. [illegible] ಶರಣಾಗ್ರಣಿಗಳಾದ ಎಳೆ ಮಲ್ಲಪ್ಪಶೆಟ್ಟರು ಮೈಸೂರುದೇಶಕ್ಕೂ, ಸಕ್ಕರೆ ಕರಡಪ್ಪನವರು ಬಳ್ಳಾರಿ ಪ್ರಾಂತಕ್ಕೂ ಅಪಾರವಾಗಿ ಅನ್ನದಾನಮಾಡಿ ಈ ಮತವನ್ನು ಉದ್ಧಾರಮಾಡಿದರು. ಈಚೆಗೂ ಅನೇಕ ವಿಧದಲ್ಲಿ ಮಹಾಪುರುಷರು ಜನಿಸಿ ಮತೋದ್ಧಾರವಂ ಮಾಡಿರುತ್ತಾರೆ. ಮೈಸೂರಲ್ಲಿ ಕ್ರೈ॥ ವೀರಸಂಗಪ್ಪನವರು ವೀರಶೈವಮತಕ್ಕೆ ಪರರಿಂದ ಬಂದಿದ್ದ ಹೇಯವನ್ನು ನಾಶಮಾಡಿ ಮತಪ್ರಾಶಸ್ತ್ಯವನ್ನು ಕಾಪಾಡಿದರು. ಮುಂಬಯಿ ಪ್ರಾಂತ್ಯದಲ್ಲಿ ಕ್ರೈ॥ ಲಿಂಗಪ್ಪ ಜಯಪ್ಪನವರು ಸೆರೆಮನೆಯಲ್ಲಿ ವೀರಶೈವ ಬಂದಿಗಳಿಗೆ ಲಿಂಗವನ್ನು ತೆಗೆಸಿ ಹಾಕುತ್ತಿದ್ದ ದುಷ್ಟಪದ್ಧತಿಯನ್ನು ತಪ್ಪಿಸಿ ಮತಾಚಾರವನ್ನು ರಕ್ಷಿಸಿದರು. ಈಗ ಈ ಮತಾಚಾರಕ್ಕೆ ಅನೇಕ ಕುಂದಕಗಳು ಬರುತ್ತಲಿವೆ. ಕಾಫಿಕ್ಲಬ್ಬುಗಳು, ಸ್ಕೂಲ್ಡೇಗಳೆಂಬ ಸಮಾರಂಭಗಳು ಮೊದಲಾದವುಗಳು ಹೆಚ್ಚಿ ಆಚಾರಕ್ಕೆ ಕುಂದಕಬರುತ್ತಲಿದೆ. ಈಗ ವೀರಶೈವರು ಬಹಳವಾಗಿ ಹೋರಾಡಿ ತಮ್ಮ ನಿರ್ಮಲಾಚಾರಗಳನ್ನು ಕಾಪಾಡಿಕೊಳ್ಳಬೇಕಾಗಿದೆ. ಘೃತಪಕ್ವಕ್ಕೂ ತೈಲಪಕ್ವಕ್ಕೂ ಭೇದವಿಲ್ಲವೆಂಬ ಭಾವನೆಯಿಂದ ಬೇರೆ ಜಾಗಗಳಿಗೆ ಹೋಗಿ ಪದಾರ್ಥ ಸ್ವೀಕಾರವನ್ನು ಮಾಡಕೂಡದು. ವೀರಶೈವರ ಕಾಫಿ ಕ್ಲಬ್ಬು ಮೊದಲಾದವುಗಳಿಗೆ ಹೋಗಿ ಪದಾರ್ಥಸ್ವೀಕಾರ ಮಾಡಬೇಕು. "ಸ್ಕೂಲ್ಡೇ" ಎಂಬ ಸಮಾರಂಭಗಳ ವಿಚಾರದಲ್ಲೂ ವೀರಶೈವರು ಎಚ್ಚರದಿಂದ ನಡೆಯಬೇಕು. ಬೆಂಗಳೂರು ಗೌರ್ನಮೆಂಟು ಕಲಜಿಯೆಟ್ ಹೈಸ್ಕೂಲಿನಲ್ಲಿ ಮೊನ್ನೆನಡದ ಸ್ಕೂಲ್ಡೇಯಲ್ಲಿ ವೀರಶೈವವಿದ್ಯಾರ್ಥಿಗಳು ಪ್ರತ್ಯೇಕ ಲಂಚನ ಏರ್ಪಾಟುಮಾಡಿಕೊಂಡಿದ್ದರು, ಅಂದರೆ ಅಲ್ಪಾಹಾರದ ಏರ್ಪಾಟು ಮಾಡಿಕೊಂಡಿದ್ದರು. ಈ ವಿಷಯದಲ್ಲಿ ವೀರಶೈವವಿದ್ಯಾರ್ಥಿಗಳು ವಿಶೇಷ ಶ್ರಮವನ್ನು ವಹಿಸಿ ಆಚಾರರಕ್ಷಣೆಯನ್ನು ಮಾಡಿದರು.

ಅದೇ ರೀತಿಯಲ್ಲಿ ಬೆಂಗಳೂರು ಮಲ್ಲೇಶ್ವರದ ಗೌರ್ನಮೆಂಟು ಹೈಸ್ಕೂಲಿನಲ್ಲೂ 1926 ನೆ ಫೆಬ್ರವರಿ 20 ರಲ್ಲಿ "ಸ್ಕೂಲ್ಡೇ" ನಡೆದಾಗ ವೀರಶೈವವಿದ್ಯಾರ್ಥಿಗಳು ವಿಶೇಷ ಶ್ರಮವನ್ನು ವಹಿಸಿ ಪ್ರತ್ಯೇಕ "ಲಂಚನ" ಏರ್ಪಾಟುಮಾಡಿದ್ದರು. ಶಿವಯ್ಯನವರೆಂಬ ಸೂಪಕಾರರಿಂದ ಭಕ್ಷ್ಯಗಳನ್ನು ತಯಾರುಮಾಡಿಸಿದ್ದರು. ಕೆಲವು ವೀರಶೈವ ದೊಡ್ಡಮನುಷ್ಯರನ್ನು ಕರೆಸಿಕೊಂಡಿದ್ದರು. ಅಲ್ಪಾಹಾರಮಂದಿರವನ್ನು ಅಲಂಕರಿಸಿದ್ದರು. "ವೀರಶೈವರ ಲಂಚು" ಎಂಬದಾಗಿ ಮಂದಿರದ ದ್ವಾರದಲ್ಲಿ ಲೇಖನವನ್ನು ಬರೆದಿದ್ದರು. ವಿದ್ಯಾರ್ಥಿಗಳು ಕೇವಲ ಆಚಾರಪಾರಿಶುದ್ಧ್ಯವನ್ನು ಪ್ರಕಾಶಗೊಳಿಸಿದರು. ಎಲ್ಲಾ ಕಡೆಯೂ ವೀರಶೈವಹಿರಿಯರು ತಮ್ಮ ವೀರಶೈವತರುಣರಿಂದ ವೀರಶೈವಾಚಾರರಕ್ಷಣೆಯನ್ನು ಮಾಡಿಸಬೇಕಾಗಿರುತ್ತದೆ.

ಪ॥ ವೀರಶೈವಪಥವೆ ಜಗವೆ ಶ್ರೇಷ್ಠವಾದದೂ |
ವೀರಶೈವರೆಲ್ಲ ಕಟ್ಟನಿಂದ ನಡೆವುದೂ ||

ಜೇರಗೆ ಬಸವಲಿಂಗಪ್ಪ,
ಅರಳೇಪೇಟೆ, ಬೆಂಗಳೂರು ಸಿಟಿ.

ಶೋಚನೀಯ ನಿಧನವು.

ಪರಲೋಕಪ್ರಕರಣವು ಈ ಪತ್ರಿಕಾಪಾಠಕರಿಗೆ ವಿದಿತವಾಗಿರುವದಷ್ಟೆ. ಈ ಪ್ರಕರಣದ ಲಿಂಗಿ ಅಲಿಂಗಿ ಬ್ರಾಹ್ಮಣರ ಮಧ್ಯಸ್ಥರಾಗಿ ನಿಯಮಿಸಲ್ಪಟ್ಟ ಹೈಕೋರ್ಟು ಜಡ್ಜಿ ಶ್ರೀಯುತ ರಾಯಬಾಲಮುಕುಂದ, ಬಿ.ಎ., ಯವರ ಜೀವಯಾತ್ರೆಯು ಇದೇ ಫೆಬ್ರವರಿ 5 ನೆಯ ತೇದಿಯಲ್ಲಿ ಪರಿಸಮಾಪ್ತಿಯಾಯಿತೆಂದು ತಿಳಿಸಲು ಬಹುದುಃಖವೆನಿಸುತ್ತದೆ. ನ್ಯಾಯೈಕಪಾಲನ ಧುರೀಣರಾದ ಇವರ ಮರಣದುಃಖಪ್ರದರ್ಶನಾರ್ಥವಾಗಿ ಒಂದು ಘಂಟೆಯ ಹೊತ್ತು ಹೈದರಾಬಾದಿನ ಹೈಕೋರ್ಟು ಮುಚ್ಚಲ್ಪಟ್ಟಿದ್ದುದರಿಂದ ಇವರ ಪ್ರಭುತ್ವಜೀವನವೆಷ್ಟು ಪ್ರಶಂಸನೀಯವಾದುದೋ ಮಹಾಶಯರೂಹಿಸಬಹುದು. ಇವರು ಬಿ.ಎ., ಡಿಗ್ರಿಯನ್ನು ಹೊಂದಿದ ಬಳಿಕ ನೂರು ರೂಪಾಯಿಗಳ ವೇತನದಿಂದ ಪ್ರಥಮದಲ್ಲಿ ಉನ್ನತ ನ್ಯಾಯಸ್ಥಾನದಲ್ಲಿಯೇ ಪ್ರವೇಶಿಸಿ ಕ್ರಮಕ್ರಮವಾಗಿ ರಿಜಿಸ್ಟ್ರಾರರಾಗಿಯೂ, ಔರಂಗಾಬಾದುಜಿಲ್ಲಾ ಸೂಬಾ ವಿದ್ಯಾಧಿಕಾರಿಗಳಾಗಿಯೂ, ಗುಲ್ಬರ್ಗಾ ಸೆಷನ್ ಜಡ್ಜಿಗಳಾಗಿಯೂ ಕಡೆಗೆ ಹೈಕೋರ್ಟು ಜಡ್ಜರಾಗಿಯೂ ಪ್ರತಿಮಾಸದಲ್ಲಿ ಹದಿನೈದುನೂರು ರೂಪಾಯಿಗಳ ಸಂಬಳವನ್ನು ಹೊಂದುತ್ತ ತಮ್ಮ ನಿಯಮಿತೋದ್ಯೋಗ ಕಾಲ (ಸರ್ವಿಸ್) ಪೂರ್ಣವಾದ ಬಳಿಕ ಆಗಾಗ್ಗೆ ಪ್ರತ್ಯೇಕ ವಿಚಾರಸಂಘಗಳಲ್ಲಿ ಪಂಚರಾಗಿ ನಿಯಮಿಸಲ್ಪಡುತ್ತಿದ್ದರು. ಆದುದರಿಂದಲೇ ಇವರು ಜೀವಿತಾಂತದಲ್ಲಿ ಪರಳೀ ಲಿಂಗಿ ಅಲಿಂಗಿಬ್ರಾಹ್ಮಣರ ವ್ಯಾಜ್ಯದಲ್ಲಿ ಬೇಸರವಿಲ್ಲದೆ ಮೂರು ನಾಲ್ಕು ತಿಂಗಳವರಿವಿಗೂ ನಿಷ್ಪಕ್ಷಪಾತಬುದ್ಧಿಯಿಂದ ಪರಿಶೀಲಿಸಿ ಲಿಂಗಿಬ್ರಾಹ್ಮಣಮತಶ್ರೇಷ್ಠತ್ವವನ್ನು ಶ್ರೀ ನಿಜಾಂ ಪ್ರಭುಗಳವರಿಗೆ ಎಲ್ಲಾ ಸಮೂಲಕ ತಿಳಿಸಿ ನಿಜಾಂರವರ ಅನುಮತಿಯಾಗುವದಕ್ಕಿಂತ ಮುಂಚೆಯೇ ಪರಲೋಕಗಮನವಾದುದಕ್ಕೆ ವೀರಶೈವಸಮಾಜವೇಕೆ [illegible] ದುಃಖಾಶ್ರುಗಳನ್ನು ಸ್ರವಿಸಿತು. ಫೆಬ್ರವರಿ 7 ನೇ ತಾರೀಖಿನ ದಿವಸ ಹೈದರಾಬಾದು ವಿವೇಕವರ್ಧಿನೀ ಹಾಲಿನಲ್ಲಿ ಉನ್ನತ ನ್ಯಾಯಸಭಾಧಿಕಾರಿಗಳಾದ ನವಾಬು ನಿಜಾಮ್ಯಾರುಜಂಗು ಬಹದ್ದೂರ್‌ರವರ ಅಧ್ಯಕ್ಷತೆಯಲ್ಲಿ ಅನೇಕ ವಕೀಲರೂ ಇತರ ಪ್ರಮುಖರೂ ಸಭೆ ಸೇರಿ ನ್ಯಾಯಕೋವಿದರಾದ ಇವರು ತಮ್ಮ 63 ನೆಯ ವರ್ಷದಲ್ಲಿ ಮರಣವಾದುದಕ್ಕೆ ದುಃಖಪ್ರದರ್ಶನ ಮಾಡಿದರು. ಇವರು ಗತಿಸುವದಕ್ಕಿಂತ ಪೂರ್ವದಲ್ಲಿಯೇ ಒಂದು ಮರಣಶಾಸನವನ್ನು ಬರೆದಿದ್ದರು. ಅದರಲ್ಲಿ "ನನ್ನ ಜೀವಿತಪೂರ್ಣಪ್ರೇಮವು ಆದಿ ಹಿಂದೂಜಾತಿಯಲ್ಲಿ ಅಧಿಕವಾಗಿದೆ. ಇವರಲ್ಲಿ ಬ್ರಾಹ್ಮಣಸಂಘವು ಯಾವಪ್ರಕಾರವಾಗಿ ಪ್ರವರ್ತನೆಮಾಡಿತೋ ಅದು ನನಗೆ ಅಯಿಷ್ಟವಾದುದು. ಆದರೆ ಇವರಲ್ಲಿಯೂ ಅಗ್ರಜಾತಿಯವರಲ್ಲಿಯೂ ನಾನು ಸ್ವಲ್ಪ ಭೇದವನ್ನಾದರೂ ಕಲ್ಪಿಸಲಿಲ್ಲ. ಎಲ್ಲರೂ ಭಗವಂತನಿಂದ ಸಮಾನವಾಗಿ ಸೃಷ್ಟಿಸಲ್ಪಟ್ಟಿರುವರಷ್ಟೆ. ನಾನಿದೇಭಾವದಿಂದ ಪಂಚಮರ ಸಂಘಾಧ್ಯಕ್ಷತ್ವವನ್ನು ವಹಿಸಿದ್ದೆನು ಮತ್ತು ಮನಃಪೂರ್ತಿಯಾಗಿ ಇವರ ಸಂಘಾಭಿವೃದ್ಧಿಗೆ ಸಾನುಭೂತಿಯನ್ನು ತೋರಿಸಿದೆನು. ಅದುಕಾರಣ ಮರಣಾಂತರದಲ್ಲಿ ನನ್ನ ಶವವನ್ನು ಪಂಚಮರ ವಶಕ್ಕೆ ದಹನಸಂಸ್ಕಾರಾರ್ಥವಾಗಿ ಕೊಡಬೇಕಲ್ಲದೆ ನನ್ನ ಸ್ಥಿರಾಸ್ತಿಯಿಂದ ಪಂಚಮೋದ್ಧರಣ ಸಂಘಕ್ಕೆ ಸಾವಿರ ರೂಪಾಯಿಗಳನ್ನು ಕೊಡಬೇಕು. ಇದರಲ್ಲಿ ನನ್ನ ವಂಶಿಕರಿಗೆ ಯಾವ ಸಂಬಂಧವಿಲ್ಲ." ಎಂದು ಬರೆದುದನ್ನು ಇವರ ಮಕ್ಕಳಾದ ಬಾಲಕಿಷನ್, ಶ್ರೀಕಿಷನ್, ರಾಧಾಕಿಷನ್ ಎಂಬುವರು ಪ್ರಿಂಟುಮಾಡಿಸಿ ಹಂಚಿದರಲ್ಲದೆ ಅದರಂತೆ ಪಂಚಮರಿಂದಲೇ ಶವದಹನಸಂಸ್ಕಾರವನ್ನು ಮಾಡಿಸಿದರು. ಇವರ "ಮರಣಶಾಸನವು" ಪಂಚಮೋದ್ಧಾರಕಾಭಿಲಾಷಿಗಳಿಗೆಲ್ಲರಿಗೂ ಆದರ್ಶಪ್ರಾಯವಾಗಿರುವನು. ನಿಶ್ಚಯವಾಗಿ ನೋಡಿದ್ದಾದರೆ, ಇಲ್ಲಿಯವರೆಗೆ ಯಾವಜಾತಿಯ ನಾಯಕನಾಗಲೀ ಈ ರೀತಿಯಾಗಿ ಪಂಚಮಜಾತಿಗೆ ಪ್ರೇಮಪ್ರದರ್ಶನಮಾಡಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕೀರ್ತಿಶೇಷರಾದ ಶ್ರೀ ರಾಯಬಾಲಮುಕುಂದರ ಆತ್ಮಕ್ಕೂ ಜನಕನಾಜ್ಞಾಪರಿಪಾಲಕರಾದ ಇವರ ಮಕ್ಕಳಿಗೂ ಶಾಂತಿಯನ್ನು ಪರಮೇಶ್ವರನು ಪ್ರಸಾದಿಸುವದಾಗಿ ಪ್ರಾರ್ಥಿಸುವೆನು.

ಹೈದರಾಬಾದ್ ಚಿದಿರೇಮಠದ ವೀರಭದ್ರಶರ್ಮ,
ಶ್ರೀ ಕ್ಷೇತ್ರಕಾಶೀ.

ದಿವಾನ್‌ಬಹದ್ದೂರ್ ಮೆಣಸಿನಕಾಯಿ ಶಾಂತವೀರಪ್ಪನವರ ಮೇಲೆ ಕೊಟ್ಟ ಲಾಯರು ನೋಟೀಸಿಗೆ, ಅವರಿಂದಬಂದ ಕ್ಷಮಾಪಣೆ ಪತ್ರವು.

ಕಳೆದ ಅಕ್ಟೋಬರ್ 31 ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾದ ಮ॥ ರಾ॥ ಪಾವಟೆ ಸಿದ್ಧರಾಮಪ್ಪನವರು ಬಿ.ಎ., ಎಲ್.ಎಲ್. ಬಿ. ಹೈಕೋರ್ಟು ವಕೀಲರು, ಇವರ ಲೇಖನದಲ್ಲಿ ಪಟುವಿವೇಚನ ಮಂಡಲದಲ್ಲಿ ನಡೆದ ವಿದ್ಯಮಾನಗಳೆಲ್ಲವೂ ಚರ್ಚಿಸಲ್ಪಟ್ಟಿದ್ದವಷ್ಟೆ. ಮಂಡಲದ ಸದಸ್ಯರಲ್ಲೊಬ್ಬರಾದ ದಿವಾನ್‌ಬಹದ್ದೂರ್ ಮೆಣಸಿನಕಾಯಿ ಶಾಂತವೀರಪ್ಪನವರು, ರಿಟೈರ್ಡ್ ಡಿಪ್ಯುಟಿಕಲೆಕ್ಟರ್ ಇವರು ಮ॥ ರಾ॥ ಪಾವಟೆ ವಕೀಲರ ಮತವನ್ನು ಖಂಡಿಸುವ ಭರದಲ್ಲಿ ಪಟುಗಳಲ್ಲೊಬ್ಬರಾದ ವೇ॥ ತೆಲಗಿ ಹರಪನಹಳ್ಳಿಮಠದ ಸದಾಶಿವಯ್ಯನವರ ಬಗ್ಗೆ ಈ ಕೆಳಗೆ ಕಂಡ ದೋಷಾರೋಪಕವಾಕ್ಯವನ್ನು ಆಡಿದಂತೆ ಸದರಿ ಲೇಖದಿಂದ ಕಂಡುಬರುತ್ತದೆ. "ಇವರು (ಮ॥ ಪಾವಟೆಯವರು) ಹುಬ್ಬಳ್ಳಿಯ ಮೂರುಸಾವಿರಮಠದ ಮ್ಯಾನೇಜಿಂಗು ಕಮಿಟಿಯ ಛೇರ್‌ಮನ್ನರಿರುವರು. ತಮ್ಮ ಮಠಕ್ಕೆ ಸದಾಶಿವಯ್ಯನವರನ್ನು ಗೊತ್ತುಪಡಿಸಿದರೆ ಅವರ ಯೋಗ್ಯತೆಯು ಹಿಡಿಮೆಯಾಗುವದೆಂದು ಹುಬ್ಬಳ್ಳಿಯ ಭಕ್ತರು ಆರಿಸಲಿಲ್ಲ. ಅಂಥವರನ್ನು ಬಾಳೆಹಳ್ಳಿ ಪೀಠಕ್ಕೆತಂದು ಅದರ ಯೋಗ್ಯತೆಯನ್ನು ಕೀಳುಪಡಿಸಲಿಕ್ಕೆ ಸದಾಶಿವಯ್ಯನವರನ್ನು ಸೂಚಿಸುತ್ತಿರುವರು."

ಮೇಲ್ಕಂಡ ಆರೋಪವು ನಿರಾಧಾರವಾಗಿರುವುದರಿಂದಲೂ, ಹುಬ್ಬಳ್ಳಿಯ ಮೂರುಸಾವಿರಮಠದ ಪಟುಚುನಾವಣೆಗೂ, ವೇ॥ ಸದಾಶಿವಯ್ಯನವರಿಗೂ ಯಾವಸಂಬಂಧವೂ ಇಲ್ಲದೇ ಇರುವುದರಿಂದಲೂ, ಸದರಿ ಮಿಥ್ಯಾರೋಪವು ವೇ॥ ಸದಾಶಿವಯ್ಯನವರಿಗೆ ಅವಮಾನಕಾರಕವಾಗಿದ್ದು, ಅವರ ಯೋಗ್ಯತೆಗೆ ಕುಂದನ್ನುಂಟುಮಾಡುವ ಕಾರಣದಿಂದಲೂ, ಸದರಿ ದಿವಾನ್‌ಬಹದ್ದೂರರವರು ಸದರಿ ವಿಷಯವಾಗಿ ತಮ್ಮ ಅಭಿಪ್ರಾಯವನ್ನು, ಇಲ್ಲವೇ ತಮ್ಮ ಆರೋಪಕ್ಕೆ ಸರಿಯಾದ ಕಾರಣಗಳನ್ನು ಪ್ರಕಟಿಸದೇ ಹೋದುದರಿಂದಲೂ, ಸದರಿ ಆರೋಪದಲ್ಲಿ ಆರೋಪಕರ ದುರುದ್ದೇಶವು ವ್ಯಕ್ತವಾಗುವಂತಿದ್ದುದರಿಂದಲೂ, ವೇ॥ ಸದಾಶಿವಯ್ಯನವರ ಪರವಾಗಿ ಮ॥ ರಾ॥ ಸಿ. ಬಾಲಾಜಿರಾಯರು, ಬಿ.ಎ., ಬಿ.ಎಲ್., ಹೈಕೋರ್ಟು ವಕೀಲರು, ಬಳ್ಳಾರಿ. ಇವರು ಕಳೆದ ನವಂಬರ್ 21 ನೇ ತಾರೀಖಿನಲ್ಲಿ ಸದರಿ ದಿವಾನ್‌ಬಹದ್ದೂರರಿಗೆ ಮಾನನಷ್ಟದ ದಾವಾದಬಗ್ಗೆ ರೂ. 10,000 ಮೊತ್ತಕ್ಕೆ ಲಾಯರು ನೋಟೀಸನ್ನು ಕೊಟ್ಟಿದ್ದರು. ಸದರಿ ನೋಟೀಸಿಗೆ ದಿ॥ ಬ॥ ರವರು ಡಿಸೆಂಬರು 1 ನೇ ತಾರೀಖಿನಲ್ಲಿ ಕೊಟ್ಟ ಉತ್ತರದ ಸಾರಾಂಶವೇನಂದರೆ:—

"ಕಮಿಟಿಯಲ್ಲಿ ನಾನು ನುಡಿದಿರುವೆನೆಂದು ಬರೆಯಲ್ಪಟ್ಟಿರುವ ವಾಕ್ಯವನ್ನು ಓದಿ ನನಗೆ ಪರಮಾಶ್ಚರ್ಯವೆನಿಸಿತು. ಸದರಿ ವಾಕ್ಯವನ್ನಾಗಲಿ, ಇಲ್ಲವೇ ಅದರ ಅರ್ಥವನ್ನು ಸೂಚಿಸುವ ಬೇರೆ ಯಾವವಾಕ್ಯವನ್ನಾಗಲಿ, ನಾನು ನುಡಿದೇಯಿಲ್ಲವು. ಸಂದರ್ಭವು ಅಸಂಬದ್ಧವಾಗಿ ನಿರೂಪಿಸಲ್ಪಟ್ಟಿರುವುದು. ನನ್ನ ನಿಜಾಭಿಪ್ರಾಯವನ್ನು ವ್ಯಕ್ತಗೊಳಿಸುವ ಮಾತುಗಳು ಹಾರಿಸಲ್ಪಟ್ಟು, ನಿಂದಾರೋಪಕಾರಕ ಪದಗಳು ಕೆಲವು ನನ್ನವೆಂದು ಪ್ರಕಟಿಸಲ್ಪಟ್ಟಿರುವವು. ನಾನು ಸದರಿ ಸಂದರ್ಭದಲ್ಲಿ ಸದಾಶಿವಯ್ಯನವರನ್ನಾಗಲಿ, ಬೇರೆ ಯಾರನ್ನಾಗಲಿ, ಅವಮಾನಗೊಳಿಸಲು ಪ್ರಯತ್ನಪಡಲಿಲ್ಲ. ಕಮಿಟಿಯಲ್ಲಿ ಜರುಗಿದ ವಿದ್ಯಮಾನಗಳಬಗ್ಗೆ ಮಾಡಲ್ಪಟ್ಟಿರುವ ಅಸತ್ಯಪ್ರಕಟಣೆಗಳು, ನನ್ನ ಸಮಾಜದಲ್ಲಿ ಒಳ್ಳೇ ಪ್ರತಿಷ್ಠೆಯನ್ನು ಪಡೆದು ಹೆಸರ್ಗೊಂಡಿರುವ ಹಿರಿಯ ಪದವೀಧರರನ್ನು ನೋಯಿಸಿರುವುದರಿಂದ ನಾನು ವಿಶೇಷವಾಗಿ ವ್ಯಸನಪಡುತ್ತೇನೆ." ಇತ್ಯಾದಿಯಾಗಿ ಬರೆದು, ಪಟುಗಳ ಯೋಗ್ಯತೆಗಳ ಚರ್ಚೆಯಬಗ್ಗೆ ಕಮಿಟಿಯ ಮೆಂಬರುಗಳಿಗಿದ್ದ ಹಕ್ಕುಗಳನ್ನು ವಿವರಿಸಿರುತ್ತಾರೆ. ಮಂಡಲದ ಕಾರ್ಯಕ್ರಮಗಳು ಗುಪ್ತವಾಗಿಡಬೇಕೆಂದು ನಿರ್ಧರಿಸಲ್ಪಟ್ಟಿದ್ದವೆಂದು ಬರೆದು ಅವುಗಳನ್ನು ಬಯಲಿಗೆಳೆದ ಸದಸ್ಯರಬಗ್ಗೆ ಟೀಕಿಸಿರುತ್ತಾರೆ. ಕಡೆಗೆ ತಾವು ವೇ॥ ಸದಾಶಿವಯ್ಯನವರಬಗ್ಗೆ ಕೊಟ್ಟ ಅಭಿಪ್ರಾಯಗಳ ವಿಷಯವಾಗಿ ಬರೆದು, "ತಮಗೆ ತಿಳಿದಮಟ್ಟಿಗೆ ಮ॥ ಸದಾಶಿವಯ್ಯನವರನ್ನು ಕಮಿಟಿಯವರು ಚುನಾಯಿಸದೇ ಇದ್ದುದಕ್ಕೆ ಅವರು ಸಂಸ್ಕೃತವನ್ನು ಅಭ್ಯಾಸ ಮಾಡಿಲ್ಲದಿದ್ದುದೇ ಕಾರಣವೆಂದ" ತಿಳಿಸಿರುತ್ತಾರೆ.

ಸದಾಶಿವಯ್ಯನವರ ಹಿತಚಿಂತಕ.

ದಾವಣಗೆರೆ ಹೈಸ್ಕೂಲ್ ವಾರ್ಷಿಕೋತ್ಸವವು.

ಪ್ರಪಂಚದಲ್ಲಿ ದೇಶಾಭಿಮಾನಿಗಳ ಮತ್ತೂ ಮಹಾರಾಜರ ಜನ್ಮದಿವಸವನ್ನು ಸುದಿನವೆಂದು ಗಣಿಸುವದು ವಾಡಿಕೆಯಾಗಿಯೆಯಷ್ಟೇ. ಅದರಂತೆ ವಿದ್ಯಾಲಯಗಳ ವಾರ್ಷಿಕೋತ್ಸವಗಳೂ ಸಹ ಸುದಿನಗಳೇ ಆಗಿವೆ. ನಮ್ಮ ದಾವಣಗೆರೆಯಲ್ಲಿ ಇಂಗ್ಲಿಷ್ ಹೈಸ್ಕೂಲು ಸ್ಥಾಪನೆಯಾಗಿ 8 ವರ್ಷಗಳಾದವು. ವರ್ಷವರ್ಷಕ್ಕೂ ನಮ್ಮ ಸ್ಕೂಲಿನ ಅಭಿವೃದ್ಧಿಯು ಹೆಚ್ಚುತ್ತಲೇ ಇರುವುದು. ಪದ್ಧತಿಯಂತೆ ಈ ವರ್ಷದ ವಾರ್ಷಿಕೋತ್ಸವವನ್ನು ಫೆಬ್ರವರಿ 13, 14, 15 ನೇ ತಾರೀಖುಗಳಲ್ಲಿ ಅತಿ ವಿಜೃಂಭಣೆಯಿಂದ ನಡೆಯಿಸಿದರು. ಮೊದಲನೇ ಎರಡು ದಿವಸಗಳಲ್ಲಿ ಕಾರ್ಯಕ್ರಮದ ಪ್ರಕಾರ ಆಟಪಾಟಗಳು ನಡೆದುವು. ಮನುಷ್ಯನ ಅಭಿವೃದ್ಧಿಗೆ ರೂಢಮೂಲವಾದ ಮತ್ತು ಆಯುರಾರೋಗ್ಯಾಭಿವೃದ್ಧಿಗೆ ಕಾರಣಗಳಾದ ಆಟಪಾಟಗಳಿಗೆ ಹೆಚ್ಚು ಲಕ್ಷ್ಯಕೊಡುವುದು ಸಹಜವಷ್ಟೆ. ಆಟಪಾಟಗಳಲ್ಲಿ ಜಯಪ್ರದರಾದ ವಿದ್ಯಾರ್ಥಿಗಳಿಗೆ ಅವರವರ ಕುಶಲತೆಗೆ ತಕ್ಕಂತೆ ಬಹುಮಾನಗಳು ಕೊಡಲ್ಪಟ್ಟವು. ಕೊನೆಯದಿವಸ ಮಧ್ಯಾಹ್ನದಲ್ಲಿ ರಸಾಯನಶಾಸ್ತ್ರವಸ್ತುಪ್ರದರ್ಶನಗಳನ್ನು ಬಹು ಚಮತ್ಕಾರವಾಗಿ ವಿದ್ಯಾರ್ಥಿಗಳೇ ಮಾಡಿ ತೋರಿಸಿದರು. ಸಾಯಂಕಾಲದಲ್ಲಿ ಸಭೆಯು ಸೇರಿತು. ಇಲ್ಲಿಯ ಸುಪ್ರಸಿದ್ಧ ವಕೀಲರಾದ ಮ॥ ಬಿ. ವೆಂಕಟರಾಮಣ್ಣ, ಬಿ.ಎ., ಬಿ.ಎಲ್., ಇವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಭಾಮಂಟಪವು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟು ಅನೇಕ ವಿದ್ವಾಂಸ ಮತ್ತೂ ವಿದ್ಯಾರ್ಥಿಗಳೆಂಬ ರತ್ನಗಳಿಂದ ಶೋಭಾಯಮಾನವಾಗಿ ತೋರುತ್ತಿದ್ದಿತು. ನಮ್ಮ ನೂತನ ಹೆಡ್ಮಾಸ್ಟರಾದ ಮಿ॥ ಶಿವರಾಮಯ್ಯ, ಎಮ್.ಎ., ಎಲ್.ಟಿ., ಯವರು ಸ್ವಾಗತಸಂಭಾಷಣವಾಗಿ "ಈ ಊರಿನ ವಿದ್ಯಾರ್ಥಿಗಳು ಯಾವುದಾದರೊಂದು ಕೆಲಸ ಮಾಡುವುದರಲ್ಲಿ ಮುಂದಾಳುಗಳು. ಆದರೆ ವಿದ್ಯಾರ್ಥಿಗಳ ತಂದೆತಾಯಿಗಳು ವಿದ್ಯಾರ್ಥಿಗಳ ಅಭ್ಯಾಸದ ವಿಷಯದಲ್ಲಿ ತಿಲಾಂಶವಾದರೂ ಲಕ್ಷ್ಯ ಕೊಡುವುದಿಲ್ಲ. ಇದೊಂದು ವಿಷಾದಕರವಾದ ಸಂಗತಿಯೇ ಸರಿ. ಈ ಊರಿನಲ್ಲಿ ತಂದೆತಾಯಿಗಳ ಸಂಘ ಎಂದರೆ ವಿದ್ಯಾರ್ಥಿಗಳ ವಿಷಯದಲ್ಲಿ ಗಮನಕೊಡಬೇಕೆಂದು ಬೋಧನೆಮಾಡುವ ಪೇರೆಂಟ್ಸ್ ಅಸೋಸಿಯೇಷನ್ ಏರ್ಪಾಡಾಗದ ಹೊರತು ವಿದ್ಯಾಭಿವೃದ್ಧಿಗೆ ಬೇರೆ ಮಾರ್ಗವೇ ಇಲ್ಲ. ಇಂಟರ್‌ಮೀಡಿಯಟ್ ಕಾಲೇಜ್ ಸ್ಥಾಪನೆಯಾಗದೇ ಇರುವುದಕ್ಕೆ ಇದೊಂದು ತಡೆಯಾಗಿರುವುದು. ಲೋವರ್‌ಸೆಕೆಂಡರಿ ತರಗತಿಗಳಿಂದ ಹೈಸ್ಕೂಲಿಗೆ ಸಾಕಾದಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಬರುವುದಿಲ್ಲ. ಇದೆಲ್ಲಕ್ಕೂ ತಂದೆತಾಯಿಗಳ ಅಶ್ರದ್ಧೆಯೇ ಕಾರಣವೆಂದು ತೋರುತ್ತದೆ. ಇನ್ನುಮುಂದೆ ತಂದೆತಾಯಿಗಳು ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಗಮನವನ್ನು ಕೊಡುವರೆಂದು ನಾನು ನಂಬಿದ್ದೇನೆ." ಹೀಗೆಂದು ಭಾಷಣಮಾಡಿದರು. ಅನಂತರ ಮ॥ ಬಿ. ಹನುಮಂತರಾವ್, ಬಿ.ಎ., ಯವರು ಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಪರವಾಗಿ ಮನೋಹ್ಲಾದಕರವಾದ ಭಾಷಣವನ್ನು ಮಾಡಿದರು. ಕಾಯಿದ ಕೌನ್ಸಿಲ್ ಮೆಂಬರರಾದ ಮ॥ ಡಿ. ಎಚ್. ಚಂದ್ರಶೇಖರಯ್ಯ, ಬಿ.ಎ., ಎಲ್.ಎಲ್.ಬಿ., ಯವರು ತಾವು ಹೆಡ್ಮಾಸ್ಟರರ ಸಲಹೆಗೆ ಅನುಕೂಲವನ್ನು ಕಲ್ಪಿಸಲು ಪ್ರಯತ್ನಿಸುವೆನೆಂದು ಮತ್ತೂ ಇಷ್ಟರಲ್ಲಿಯೇ ಈ ಊರಿನಲ್ಲಿ ಇಂಟರ್‌ಮೀಡಿಯಟ್ ಕಾಲೇಜು ಸ್ಥಾಪನೆಯಾಗುವ ಸಂಭವವಿದೆಯೆಂದು ಭಾಷಣಮಾಡಿದರು. ಕೊನೆಗೆ ಅಧ್ಯಕ್ಷರ ಅಮೋಘವಾದ ಭಾಷಣವಾಯಿತು. ಇವರು ವಿದ್ಯಾರ್ಥಿಗಳಿಗೆ ಅತಿ ಅವಶ್ಯಕವಾದ ಕೆಲವು ಬುದ್ಧಿಯ ಮಾತುಗಳನ್ನು ಎಲ್ಲಾ ವಿಷಯಗಳನ್ನೂ ಕ್ರೋಢೀಕರಿಸಿ ಹೃದಯಂಗಮವಾಗಿ ಭಾಷಣವನ್ನು ಮಾಡಿದರು. ಮೈಸೂರು ರಾಷ್ಟ್ರಗೀತೆಯು ಹಾಡಲ್ಪಟ್ಟಮೇಲೆ ಸಭಾಧ್ಯಕ್ಷರಿಗೆ ಪುಷ್ಪತಾಂಬೂಲಾದಿಗಳು ಅರ್ಪಿಸಲ್ಪಟ್ಟು ಸಭೆಯು ಮುಗಿಸಲ್ಪಟ್ಟಿತು. ರಾತ್ರಿ ವಿದ್ಯಾರ್ಥಿಗಳು ಕನ್ನಡದಲ್ಲಿ ತಮಗಿರುವ ಅಭಿರುಚಿಯನ್ನು ತೋರಿಸುವುದಕ್ಕೋಸ್ಕರ ಭೋಜಕಾಳಿದಾಸ ಎಂಬ ನಾಟಕವನ್ನು ಅಭಿನಯಿಸಿದರು. ನಾಟಕವು ಬಹಳ ನೇತ್ರಾನಂದವನ್ನುಂಟುಮಾಡಿತು. ಮ॥ ನರಸಿಂಹುಲು, ಬಿ.ಎ., ಇವರು ಕಲಿಸಿದ ಷೇಕ್ಸ್‌ಪಿಯರ್ ಕೃತ ಮ್ಯಾಕ್‌ಬೆತ್ ಎಂಬ ನೀತಿಪ್ರದರ್ಶಕವಾದ ಇಂಗ್ಲಿಷ್ ನಾಟಕವನ್ನು ವಿದ್ಯಾರ್ಥಿಗಳು ಬಹಳ ಚೆನ್ನಾಗಿ ಅಭಿನಯಿಸಿದರು. ಈ ವರ್ಷ ಹೈಸ್ಕೂಲ್ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಇದರಲ್ಲಿ ಅವಿಶ್ರಾಂತರಾಗಿ ಕೆಲಸಮಾಡಿದ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಸ್ತೋತ್ರಾರ್ಹರೇ ಸರಿ.

N. Murigappa.

ಶ್ರೀಶಿವಯೋಗಮಂದಿರದಲ್ಲಿ ನಡೆದ ಶಿವರಾತ್ರೆ.

ಶ್ರೀಶಿವಯೋಗಮಂದಿರವು ಸ್ಥಾಪಿತವಾದ 1909 ರಿಂದ ಪ್ರತಿವರ್ಷ ಶ್ರೀಮಂದಿರದಲ್ಲಿ ಶ್ರೀಪುರುಷರ ಬೇರೆಬೇರೆ ಸಂಮೇಲನಗಳೂ, ಪ್ರಸಿದ್ಧ ವ್ಯಾಖ್ಯಾತರುಗಳ ಭಾಷಣಗಳೂ, ಶಿವಕೀರ್ತನೆಯೂ, ಪಾದಪೂಜೆಯೂ, ವೈದಿಕಶಾಲೆಯೂ, ಸಾಧಕರಪರೀಕ್ಷೆಯೂ, ರಥೋತ್ಸವವೂ ತಪ್ಪದೆ ನಡೆಯುತ್ತಿರುವವು. ಅದರಂತೆ ಶ್ರೀಮಂದಿರದಿಂದ ಪ್ರತಿವರ್ಷ ಸಾದ್ಯಂತ ರಿಪೋರ್ಟು ಛಾಪಿಸಲ್ಪಟ್ಟು ಹಂಚಲ್ಪಡುತ್ತಿರುವದು. ಟ್ರಸ್ಟಿಜನರೂ, ಮ್ಯಾನೇಜಿಂಗ್ ಕಮಿಟಿಯಜನರೂ ತಕ್ಕ ವ್ಯವಸ್ಥೆಯನ್ನು ಇಡುತ್ತಿರುವರು. ಅಲ್ಲಿನ ದರ್ಶನಕ್ಕಾಗಿ ಬರುವ ಜನರು ಶಾಲೆಯ ಉತ್ತಮತರದ ಸಾಧಕರ ಯೋಗಾಭ್ಯಾಸ, ಶಾಲೆಯಸ್ಥಿತಿ, ಧರ್ಮಜಾಗೃತಿ ಮುಂತಾದ ಕೆಲಸಗಳನ್ನು ನೋಡಿ ಉತ್ತಮೋತ್ತಮ ಅಭಿಪ್ರಾಯಗಳನ್ನು ಬರೆದಿರುವದು ಸಹ ಕಾಲಕಾಲಕ್ಕೆ ವಾರ್ಷಿಕ ರಿಪೋರ್ಟಿನಲ್ಲಿ ಮುದ್ರಿಸಲ್ಪಡುತ್ತಿರುವುದು. ಮಂದಿರದಿಂದ ಖರೀದಿಮಾಡಿದ ವ ಅದಕ್ಕೆ ದಾನವಾಗಿಸಿಕ್ಕಿದ ಭೂಮಿಗಳ ವ್ಯವಸ್ಥೆ ಉತ್ತಮ ಇದ್ದು ಗೋಪಾಲನ ಸಹ ಚೆನ್ನಾಗಿ ನಡೆವದೆ. ಸದರೀ ಮಂದಿರಕ್ಕೆ 7-8 ಸಾವಿರ ರೂಪಾಯಿ ವಾರ್ಷಿಕ ಉತ್ಪನ್ನವಿದ್ದು 1½ ಲಕ್ಷ ಬೆಲೆಬಾಳುವಸ್ಥಾವರ ಆಸ್ತಿಯುಂಟು. ಇಷ್ಟು ಶ್ರಮಪಟ್ಟು ಕೇವಲ ಧರ್ಮಜಾಗೃತಿಗಾಗಿ ಗುರುಗಳನ್ನು ಉತ್ತಮರನ್ನಾಗಿ ಮಾಡುವ ಪಾರಮಾರ್ಥಿಕ ಕೆಲಸಕ್ಕೆಕೊಂಡು ಜೋಳಿಗೆ ಮತ್ತು ಬೆತ್ತಕ್ಕೆ ಅಪ್ಪನೆಕೊಟ್ಟು ಹಗಲಿರುಳು ಎನ್ನದೆ ಅವಿಶ್ರಾಂತ ಶ್ರಮಪಡುವ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳಿಗೆ ಈ ಜಗತ್ತಿನಲ್ಲಿ ಧನ್ಯರು. ನಮ್ಮ ಜನಾಂಗವು ಅವರಿಗೆ ಆಜನ್ಮ ಋಣಿಯಾಗಿರುವರು. [illegible] ಅವರ ಉಪಕಾರ ತೀರಿಸುವದಾಗದು. ಅವರ ಈ ಮೇಲುಪಂಕ್ತಿಯನ್ನು ಎಲ್ಲ ಸಿಂಹಾಸನಾಧಿಪತಿಗಳೂ, ದೊಡ್ಡ ದೊಡ್ಡ ವಿರಕ್ತ ಜಗದ್ಗುರುಗಳೂ ಅನುಸರಿಸಿದರೆ ಕ್ಷಿಪ್ರದಲ್ಲಿಯೇ ನಮ್ಮ ಜನರು ಮುಂದಕ್ಕೆ ಬರುವುದರಲ್ಲಿ ಸಂಶಯವಿಲ್ಲ. ಪರೋಪಕಾರಕ್ಕಾಗಿ ಅವರು ತಮ್ಮ ಆತ್ಮವನ್ನೇ ಅರ್ಪಣಮಾಡಿರುವರು. ಜಗದೀಶನು ಅವರಿಗೆ ದೀರ್ಘಾಯುಷ್ಯವನ್ನು ಕೊಡಲಿ. ಅವರಿಂದ ಇನ್ನೂ ಅನೇಕಮಹತ್ವದ ಕಾರ್ಯಗಳಾಗುವದರಲ್ಲಿ ಸಂದೇಹವಿಲ್ಲ. ಅವರಲ್ಲಿ ಭೂತದಯೆ ಮನೆಮಾಡಿಕೊಂಡಿರುವದು. ಪರೋಪಕಾರವೇ ಅವರ ಬಂಧು, ಧರ್ಮವೇ ಅವರ ಮನೆ. ಈರೀತಿ ಅವರು ನಡೆಯುವದನ್ನು ನೋಡಿ ಸಜ್ಜನರು ಅವರಿಗೆ ನಮಿಸುವರು; ಪರಮಾಯರು ಆದರಿಸುವರು. ಸ್ವಾರ್ಥಸಾಧಕರೂ, ಡಂಭಾಚಾರಿಗಳೂ, ದುರುಳ ವೇಷಾಂತಿಗಳೂ ಅವರನ್ನು ನೋಡಿ ಗೂಗೆಗಳಂತೆ ಗೂಡುಸೇರಿರುವರು. ಇರಲಿ, ಅವರು ಹಿಡಿದಕೆಲಸ ಸುಕೃತವೆ. ಅದಕ್ಕೆ ಶಿವನು ಮೆಚ್ಚುವನು. ಇದಕ್ಕೆ ಸಂದೇಹವಿಲ್ಲ. ಈ ವರ್ಷ ಮಹಾಶಿವರಾತ್ರಿಯ ಕಾಲಕ್ಕೆ 6000-7000 ಸಾವಿರ ಜನರು ಕೂಡಿದ್ದರು. ಒಕ್ಕಲತನದ ಪ್ರದರ್ಶನವಾಯಿತು. ದನಗಳಿಗೆ ಅಂದರೆ ಉತ್ತಮೋತ್ತಮವಾದ [illegible] ಕಮಿಟಿಯವರ ಅಭಿಪ್ರಾಯದಂತೆ ಇನಾಮುಗಳು ಸಿಕ್ಕಿದುವು. ಕೃಷಿಕರಿಗೆ [illegible] ಸಾಮಾನುಗಳು ಬಂದಿದ್ದು ಅವುಗಳಲ್ಲಿ ಪಾಸಾದವುಗಳಿಗೆ ಸರ್ಟಿಫಿಕೇಟೂ ಇನಾಮೂ ದೊರೆತವು. ಹಿರೇಹಾಳ ವೀರಯ್ಯನವರ ವ ಬಸವಲಿಂಗಸ್ವಾಮಿಗಳ ಕೀರ್ತನೆಗಳಾದವು. ವೀರಶೈವಮತದ [illegible] ಸಭೆಗಳಿಗೆ [illegible] ಓ.ಬಿ.ಇ. [illegible] ಅಧ್ಯಕ್ಷರಾಗಿದ್ದರು. [illegible]

ತುರ್ಕಿ ಸರ್ಕಾರದವರು ಪಾಶ್ಚಾತ್ಯರ ಪದ್ಧತಿಯನ್ನನುಸರಿಸಿದ ಸಾಮಾಜಿಕ ನಡೆನುಡಿಗಳನ್ನು ಆಚರಣೆಯಲ್ಲಿ ತರಲು ಒಂದು ಶಾಸನವನ್ನು ಮಾಡಬೇಕೆಂದಿರುವರು. ಸ್ತ್ರೀಯನ್ನು ತ್ಯಜಿಸುವುದಕ್ಕೆ ಪುರುಷನಿಗೆ ಇರುವ ಕಾರಣಗಳೇ ಸ್ತ್ರೀಯು ಪುರುಷನನ್ನು ತ್ಯಜಿಸುವುದಕ್ಕೂ ಸಾಕಾಗಿವೆ. ಗಂಡುಸರು ಏಕಪತ್ನೀವ್ರತಸ್ಥರಾಗಿರಬೇಕೆಂದೂ, ಬಹು ಪತ್ನೀತ್ವವು ಶಿಕ್ಷಾರ್ಹವೆಂದೂ ಗೊತ್ತಾಗಿದೆ. ಮಹಮ್ಮದೀಯ ಸ್ತ್ರೀಯರು ಕ್ರೈಸ್ತರನ್ನು ಮದುವೆಯಾಗಕೂಡದೆಂದು ನಿರ್ಬಂಧ ಕಲ್ಪಿಸಲ್ಪಟ್ಟಿದೆ.

ಅಮೇರಿಕೆಯ ಯುನೈಟೆಡ್ ಸಂಸ್ಥಾನಗಳಲ್ಲಿ ನಿಷಾಪದಾರ್ಥವನ್ನು ಜನರಿಗೆ ಮಾರಕೂಡದೆಂದು ವಿಧಿಯಿದೆ. ವೈದ್ಯರು ಮಾತ್ರ ಅವಶ್ಯಬಿದ್ದಾಗ ರೋಗಿಗಳಿಗೆ ಸ್ವಲ್ಪಮಟ್ಟಿಗೆ ಉಪಯೋಗಿಸಲು ಅವಕಾಶಪಡೆದಿರುವರು. ಈ ನೆಪದಲ್ಲಿ ಮಾದಕ ಪದಾರ್ಥಗಳು ಬಹಳವಾಗಿ ಖರ್ಚಾಗುತ್ತಿರುವವೆಂದು ಹೊರಪಟ್ಟುದರಿಂದ ಸರ್ಕಾರದವರು ದೇಶದಲ್ಲೆಲ್ಲಾ ಶೇಖರವಾಗಿರುವ ಸುಮಾರು 30 ಕೋಟಿ ಡಾಲರುಗಳ ಮಾದಕವಸ್ತುಗಳನ್ನು ತಾವೇ ಕೊಂಡು ಇಟ್ಟುಕೊಂಡು ವೈದ್ಯರಿಗೆ ಮಾರಬೇಕೆಂಬ ಯೋಚನೆ ನಡೆಯುತ್ತಿರುವುದು.

ಪೋಲೀಸಿನವರ ಅಪ್ಪಣೆಯನ್ನು ಮೀರಿ ತಮ್ಮ ಮೋಟಾರುಬಂಡಿಗಳನ್ನು ಅತಿ ವೇಗವಾಗಿ ಓಡಿಸಿಕೊಂಡು ಹೋಗುವವರನ್ನು ಶಿಕ್ಷಿಸಲು, ಪೋಲೀಸಿನವರಿಗೆ ಐದು ಅಡಿಗಳ ಉದ್ದವೂ ಚೂಪಾದ ಮೊಳೆಗಳಿಂದ ತುಂಬಿಯೂ ಇರುವ ಕಟ್ಟಿಗೆಗಳನ್ನು ತುರ್ಕೀ ಸರ್ಕಾರದವರು ಒದಗಿಸಿಕೊಟ್ಟಿರುವರು. ಅತಿವೇಗವಾಗಿ ಹೋಗುವ ಮೋಟಾರುಗಳ ಮುಂದೆ ಈ ಕಟ್ಟಿಗೆಗಳನ್ನು ಎಸೆಯುವುದರಿಂದ, ರಬ್ಬರ್‌ಟೈರುಗಳು ಸಿಡಿದು, ಮೋಟಾರುಗಳು ತಾವಾಗಿ ನಿಲ್ಲುವವಲ್ಲದೆ ಯಜಮಾನನ ಅವಿಧೇಯತೆಗೆ ತಕ್ಕ ನಷ್ಟವೂ ಆಗುವುದು.

ಗ್ರೇಟ್‌ಬ್ರಿಟನ್ನಿನಲ್ಲಿ ಎಸೆಕ್ಸಿಗೆ ಸೇರಿದ ಮಾಲ್ಡನ್ನಿನಲ್ಲಿ ಸಿ ಆಲ್ ಜೆ. ವಿಲ್ಟ್ಶೈರ್ ಎಂಬ 15 ವರ್ಷವಯಸ್ಸಿನ ವಿದ್ಯಾರ್ಥಿಯಿರುವನು. ಇವನು 6 ಅಡಿ 5½ ಅಂಗುಲ ಎತ್ತರವೂ, 280 ಪೌಂಡ್ ತೂಕವೂ, 45 ಅಂಗುಲ ಎದೆಯ ಅಳತೆಯೂ ಉಳ್ಳವನಾಗಿರುವನು, ಮತ್ತು ತನ್ನ ವಯಸ್ಸಿನ ಇಬ್ಬರು ಹುಡುಗರನ್ನು ತನ್ನ ಎಡಗೈಬಲಗೈಗಳಿಂದ ಬಹು ಲೀಲಾಜಾಲವಾಗೆತ್ತಿ ಹಿಡಿದುಕೊಂಡು ತಿರುಗುವನು. 15 ವರ್ಷವಯಸ್ಸಿನಲ್ಲೇ ಇಂತಹ ಅದ್ಭುತಾಕೃತಿಯಲ್ಲಿರುವ ಇವನು ಒಳ್ಳೇ ಪ್ರಾಯಸಮರ್ಥನಾದಮೇಲೆ ದಾನವರನ್ನು ವಿಾರಿಸಬಹುದಲ್ಲವೆ!

ಸ್ಪೇನ್‌ದೇಶದಲ್ಲಿ ಬಿಲ್ಬೋವಾದಿಂದ ಮ್ಯಾಡ್ರಿಡ್ಡಿಗೆ ಸುರಂಗದಮಾರ್ಗವಾಗಿ ವೇಗದಿಂದ ಹೋಗುತ್ತಿದ್ದ ಪ್ರಯಾಣಿಕರ ರೈಲುಬಂಡಿಯು ಮುಂದೆ ನಿಧಾನವಾಗಿ ಹೋಗುತ್ತಿದ್ದ ಮತ್ತೊಂದುಬಂಡಿಗೆ ತಾಕುಬಡಿಯಲಾಗಿ ಗೂಳಿಯ ಕಾಳಗವನ್ನು ನೋಡುವುದಕ್ಕಾಗಿ ಹೋಗಿದ್ದ ಜನರು ಕಿಕ್ಕಿರಿದು ಕುಳಿತಿರುವವರಲ್ಲಿ 70 ಜನರಿಗೆ ಗಾಯವಾಗಿರುವುದು ಮತ್ತು 30 ಜನರಿಗೆ ಪ್ರಾಣಾಪಾಯ ಸಂಭವಿಸಿರುವುದು. ಎರಡು ಬಂಡಿಗಳೂ ಸುರಂಗದ ಕತ್ತಲೆಯಲ್ಲಿ ಹೋಗುತ್ತಿದ್ದುದರಿಂದ ಪ್ರಯಾಣಿಕರು ಬಹಳ ದಿಗಿಲುಬಿದ್ದು ಕೋಲಾಹಲವನ್ನು ಮಾಡುತ್ತಿದ್ದರು.

ಸೀಮೆಯ ಒಬ್ಬ ರೈತನಲ್ಲಿ 20 ಹಸುಗಳಿರುವುವು ಮತ್ತು ಅವುಗಳ ಹಾಲನ್ನು ಕರೆಯಲು ಇಬ್ಬರು ಗೌಳಿಗರು ನಿಯಮಿಸಲ್ಪಟ್ಟಿರುವರು. ಅವರಲ್ಲೊಬ್ಬನು ಹಾಲನ್ನು ಕರೆಯುವಾಗ್ಗೆ ಹಸುಗಳು ಬಹಳ ಗಂಭೀರವಾಗಿದ್ದು ಹಾಲನ್ನು ಹೆಚ್ಚಾಗಿ ಕೊಡುತ್ತಿರುವುದನ್ನು ನೋಡಿ, ಯಜಮಾನನು ಅದರ ಕಾರಣವನ್ನು ತಿಳಿಯಲು ಪ್ರಯತ್ನಪಟ್ಟಾಗ, ಆ ಗೌಳಿಗನು ಹಾಲು ಕರೆಯುವವೇಳೆಯಲ್ಲಿ ಬಹಳ ಸಂತೋಷದಿಂದಿದ್ದು ಹಾಡನ್ನು ಇಂಪಾಗಿ ಹೇಳುತ್ತಿರುವುದರಮೇಲೆ ಹಸುಗಳು ಒದೆಯದೆ ಮತ್ತು ಬಾಲವನ್ನು ಬೀಸದೆ ಬಹು ಗಂಭೀರವಾಗಿ ಸಂಗೀತವನ್ನು ಕೇಳುತ್ತಿರುವುದೇ ಕಾರಣವೆಂದು ತಿಳಿದು ಗ್ರಾಮಫೋನನ್ನು ತರಿಸಿ ಹಾಲುಕರೆಯುವಾಗ ನುಡಿಸಿದುದರಮೇಲೆ ಹಸುಗಳೆಲ್ಲವೂ ಹಾಡುಗಳನ್ನು ಕೇಳುತ್ತ ಸ್ತಬ್ಧವಾಗಿದ್ದು 1 ಕ್ಕೆ 5 ರಷ್ಟು 10 ರಷ್ಟು ಹಾಲನ್ನು ಹಿಂಡಲುಪಕ್ರಮಿಸಿದವಂತೆ. ಇಲ್ಲಿಯ ಗೌಳಿಗರು ಹಸುಗಳನ್ನು ಹೊಡೆದು ಗಾಸಿಪಡಿಸದೆ ಸರ್ವಸಾಮಾನ್ಯವಾಗಿ ದೊರೆಯುವ ಗ್ರಾಮಾಫೋನ್‌ಯಂತ್ರಗಳ ಹಾಡುಗಾರಿಕೆಯಿಂದ ಸಂತೈಸಿ ಹೆಚ್ಚುಹಾಲನ್ನು ಕರೆದುಕೊಳ್ಳಬಾರದೇಕೆ?

ಯುಗಾದಿಹಬ್ಬಾಚರಣೆಯ ಸಂಶಯಪರಿಹಾರವು.

(೧)

ಬರುವ ಕ್ಷಯಸಂವತ್ಸರದಲ್ಲಿ ಚೈತ್ರಮಾಸವು ಅಧಿಕಮಾಸವಾಗಿರುವದರಿಂದ ಸಂವತ್ಸರಾದಿ ಯುಗಾದಿಹಬ್ಬವನ್ನು ಅಧಿಕಚೈತ್ರಮಾಸದಲ್ಲಿ ಮಾಡಬೇಕೆ? ನಿಜಚೈತ್ರಮಾಸದಲ್ಲಿ ಮಾಡಬೇಕೆ? ಎಂಬ ಸಂಶಯವು ಬಹುಜನರಿಗೆ ಉಂಟಾಗಿರುವುದಾಗಿ ಸ್ಟಾರ್ ಪತ್ರಿಕೆಯಿಂದ ತಿಳಿಯಬರುವುದರಿಂದ ನಾವು ಶಾಸ್ತ್ರಶೋಧನೆಮಾಡಿ ಈ ಕೆಳಗೆ ಪ್ರಚಾರಮಾಡಿರುತ್ತೇವೆ. ಯಾವ ಸಂವತ್ಸರದಲ್ಲಿ ಚೈತ್ರಮಾಸವು ಅಧಿಕಮಾಸವಾಗುತ್ತದೋ ಆ ಸಂವತ್ಸರ ಅಧಿಕಚೈತ್ರ ಶುಕ್ಲ ಪ್ರತಿಪದ್ದಿವಸದಲ್ಲಿ ತೈಲಾಭ್ಯಂಗಸ್ನಾನ, ಪಂಚಾಂಗಶ್ರವಣ ಮೊದಲಾದ್ದನ್ನು ಮಾಡಬೇಕೆಂದು ಶಾಸ್ತ್ರನಿರ್ಣಯವಿರುತ್ತೆ. ಸ್ಮೃತ್ಯರ್ಥಸಾಗರೇ ಶ್ಲೋ|| ಚೈತ್ರಮಾಸೋಧಿಕಮಾಸ ಪ್ರಾಪ್ತೌತುಮಲಮಾಸ ಏವಪ್ರತಿಪದ ಭ್ಯಂಜನಾದಿಕಂಕೃತ್ವಾಪಂಚಾಂಗಸ್ಯಾ ರಾಜಮಂತ್ರ್ಯಾದಿಫಲಂ ಶ್ರೋತವ್ಯಂಮಲಾನ್ಯ ನಿಜಚೈತ್ರಯತ್ಕೃತ್ಯಂತದವಸ್ಥಾನುಷ್ಠೇಯಂ” ಈರೀತಿಯಾಗಿ ಶಾಸ್ತ್ರನಿರ್ಣಯವೇನೋ ಅಧಿಕಚೈತ್ರಮಾಸದಲ್ಲಿ ಮಾಡಬೇಕೆಂದು ಇರುತ್ತೆ. ಹಬ್ಬವು ಶುಭಕಾರ್ಯಗಳಲ್ಲಿ ಸೇರಿರತ್ತದೆಂತಲೂ, ಅಧಿಕಮಾಸದಲ್ಲಿ ಶುಭಕಾರ್ಯಗಳನ್ನು ಮಾಡಬಾರದೆಂಬ ಶಾಸ್ತ್ರಾಧಾರವನ್ನು ಹಿಡಿದು ನಿಜಚೈತ್ರಮಾಸದಲ್ಲಿ ಯುಗಾದಿಹಬ್ಬವನ್ನು ಮಾಡಬೇಕೆಂತಲೂ ಕೆಲವರ ಅಭಿಮತವಾಗಿರುತ್ತೆ. ಒಟ್ಟಿನಮೇಲೆ ಅಧಿಕಚೈತ್ರಶುಕ್ಲ ಪ್ರತಿಪದ್ದಿವಸ, ಅಭ್ಯಂಗಸ್ನಾನ, ಪಂಚಾಂಗಶ್ರವಣ ಮೊದಲಾದ್ದನ್ನು ಮಾಡಬೇಕು. ನಿಜಚೈತ್ರಶುಕ್ಲ ಪ್ರತಿಪದ್ದಿವಸದಲ್ಲಿ ಕೂಡ ಹಬ್ಬವನ್ನು ಮಾಡಬಹುದು.

ಕೆಲಗಿಹರಪನಹಳ್ಳಿ ಮಠದ ಬ್ರಹ್ಮಶ್ರೀ ಸಿದ್ಧಾಂತಿ,
ಹೋಟಿಬಸವಶಾಸ್ತ್ರಿ.

(೨)

ಈ ಸಂವತ್ಸರದಲ್ಲಿ ಚೈತ್ರಮಾಸಗಳು ಎರಡು ಬಂದಿರುವದರಿಂದ ಯಾವ ಚೈತ್ರದಲ್ಲಿ ಅಭ್ಯಂಗಸ್ನಾನ ಪಂಚಾಂಗಶ್ರವಣಾದಿಕಾರ್ಯಗಳನ್ನು ಮಾಡಬೇಕೆಂಬುವದು ಜನಸಮೂಹದಲ್ಲಿ ಚರ್ಚಾಸ್ಪದವಾಗಿರುತ್ತದೆ. ಈ ಚರ್ಚೆಗೆ ಅಸ್ಪದವಿಲ್ಲದಂತೆ ಶಾಸ್ತ್ರಪ್ರಾಮಾಣ್ಯದಿಂದಲೂ, ಸ್ವಾಭಿಪ್ರಾಯದಿಂದಲೂ ಈ ಕೆಳಗೆ ನಿರ್ಣಯಮಾಡಲಾಗಿದೆ. ಧರ್ಮಸಿಂಧುವಿನ ೫೮ನೇ ಪುಟದಲ್ಲಿ—“ಚೈತ್ರಮಲಮಾಸತ್ವೇವತ್ಸರಾರಂಭನಿಮಿತ್ತಂ ತೈಲಾಭ್ಯಂಗಂ | ಸಂಕಲ್ಪಾದೌನೂತನವತ್ಸರನಾಮಕೀರ್ತನಾದ್ಯಾರಂಭಂಚ ಮಲಮಾಸಪ್ರತಿಪದ್ಯೇವಕುರ್ಯಾತ್” ಅರ್ಥ:—ಚೈತ್ರವು ಅಧಿಕಮಾಸವಾಗಿದ್ದರೆ ಅಧಿಕಚೈತ್ರಪ್ರತಿಪದೆಯಲ್ಲಿಯೇ ವತ್ಸರಾರಂಭನಿಮಿತ್ತವಾದ ತೈಲಾಭ್ಯಂಗಸ್ನಾನವನ್ನು ಆಚರಿಸತಕ್ಕದ್ದು. ಶಿವಪೂಜಾದಿಗಳನ್ನಾಚರಿಸುವಾಗ ಸಂಕಲ್ಪದಲ್ಲಿ ನೂತನಸಂವತ್ಸರದ ಹೆಸರನ್ನೇ ತೆಗೆದುಕೊಳ್ಳಬೇಕು. ಎಂದು ಉದಾಹೃತವಾಗಿರುತ್ತದೆ. ನಿರ್ಣಯಸಿಂಧು ಪುಟ ೫೧ ರಲ್ಲಿ—ಶ್ಲೋ|| “ವತ್ಸರಾದೌವಸಂತಾದೌಬಲಿರಾಜ್ಯೇತಥೈವಚ | ತೈಲಾಭ್ಯಂಗಮಕುರ್ವಾಣೋನರಕಂಪ್ರತಿಪದ್ಯತೇ” ಅರ್ಥ:—ಸಂವತ್ಸರಾದಿಯಲ್ಲಿಯೂ, ವಸಂತಋತುವಿನ ಆದಿಯಲ್ಲಿಯೂ, ಬಲಿಪಾಡ್ಯಮಿಯಲ್ಲಿಯೂ ತೈಲಾಭ್ಯಂಗಸ್ನಾನವನ್ನಾಚರಿಸದಿದ್ದರೆ ನರಕಪ್ರಾಪ್ತಿಯಾಗುತ್ತದೆ. ಎಂದು ಬರೆಯಲ್ಪಟ್ಟಿದೆ. ಈ ಎರಡು ಗ್ರಂಥಗಳ ಪ್ರಮಾಣಗಳನ್ನು ಅವಲೋಕಿಸಿ ಆಲೋಚಿಸಿದಲ್ಲಿ, ಸಂಕಲ್ಪ ಮಾಡುವಾಗ ನೂತನಸಂವತ್ಸರದ ಹೆಸರನ್ನು ಉಚ್ಚರಿಸಬೇಕು. ಅಧಿಕಮಾಸದಲ್ಲಿಯ ತಿಥಿನಕ್ಷತ್ರಾದಿಗಳನ್ನವಲೋಕಿಸಲು ಕ್ಷಯಸಂವತ್ಸರದ ನವೀನ ಪಂಚಾಂಗವನ್ನವಲೋಕಿಸಲೇಬೇಕು. ಅಂದಲ್ಲಿ ಪಂಚಾಂಗಸಂಬಂಧವಾದ (ಪಂಚಾಂಗಪೂಜನಶ್ರವಣಾದಿ) ಕಾರ್ಯಗಳನ್ನು ಹ್ಯಾಗೆ ನಿಲ್ಲಿಸಲಿಕ್ಕಾಗುವದು? ವರ್ಷಪ್ರತಿಪದೆಯಲ್ಲಾಚರಿಸುವ ಅಭ್ಯಂಗಸ್ನಾನವನ್ನಂತೂ ಅವಶ್ಯವಾಗಿ ಆಚರಿಸಲೇಬೇಕು. ಆಚರಿಸದಿದ್ದರೆ ನರಕಪ್ರಾಪ್ತಿಯಾಗುತ್ತದೆ. ಎಂದು ನಿರ್ಣಯಸಿಂಧುಕಾರನಸ್ಪಷ್ಟೋಕ್ತಿಯಿರುತ್ತದೆ. ಅರ್ಥಾತ್-ಅಧಿಕಚೈತ್ರದ ಪ್ರತಿಪದೆಯಲ್ಲಿಯೇ ವರ್ಷಾದಿ (ಯುಗಾದಿ) ಯ ಅಭ್ಯಂಗಸ್ನಾನವನ್ನಾಚರಿಸಿ, ಪದ್ಧತಿಪ್ರಕಾರ ಮಾಡಲ್ಪಡುವ ಕಾರ್ಯಗಳನ್ನೆಲ್ಲಾ ಮಾಡಿ ಪಂಚಾಂಗಪೂಜಾ, ಪಂಚಾಂಗಫಲಶ್ರವಣಾದಿಗಳನ್ನು ಅವಶ್ಯವಾಗಿ ಆಚರಿಸಲೇಬೇಕು. ಎಂಬ ವಿಚಾರವು ಪ್ರತಿ ಒಬ್ಬರಿಗೂ ಸ್ಪಷ್ಟವಿರದು. ಶ್ಲೋ|| “ಚೈತ್ರೇಮಲಿಮ್ಲುಚೇಪ್ರೋಕ್ತೇ ಅಧಿಮಾಸಾಬ್ದಭೂಪತಿಃ | ಪಿತೃದೇವವ್ರತಾನಾಂಚಮುತ್ತರೇಮಾಸಿಕಾರಯೇತ್” ಅರ್ಥ:—ಚೈತ್ರವು ಅಧಿಕಮಾಸವಾಗಿದ್ದರೆ ಅಧಿಕಮಾಸಪ್ರತಿಪದೆಯ ವಾರಾಧಿಪತಿಯೇ ರಾಜನಾಗುವನು. ಪಿತೃಕಾರ್ಯಗಳನ್ನೂ, ದೇವರಕಾರ್ಯಗಳನ್ನೂ, ಇತರ ವ್ರತಾದಿಗಳನ್ನೂ ನಿಜಚೈತ್ರದಲ್ಲಿ ಮಾಡಬೇಕು. ಎನ್ನುವ ಪ್ರಮಾಣಾನುಸಾರ ದೇವೀನವರಾತ್ರ್ಯುತ್ಸವ, ರಾಮನವರಾತ್ರ್ಯುತ್ಸವಾದಿ ಕಾರ್ಯಗಳನ್ನು ನಿಜಚೈತ್ರದಲ್ಲಿ ಮಾಡಬೇಕು. ವತ್ಸರಾರಂಭದ (ರೂಢನಾಮ ಯುಗಾದಿಯ) ಸಮಸ್ತಕಾರ್ಯಗಳನ್ನೂ ಅಧಿಕಚೈತ್ರದಲ್ಲಿಯೇ ಆಚರಿಸಬೇಕು.

ಪಂಚಾಂಗಕರ್ತ ಬ್ರ|| ಶ್ರೀ|| ಸಿದ್ಧಾಂತಿ ರುದ್ರಾರಾಧ್ಯಶಾಸ್ತ್ರಿ,
ಪಾಠಶಾಲಾಧ್ಯಾಪಕ, ಮಹಾಗಾಂವ್.

(೩)

ಶ್ರೀಮದಕ್ಷಯಸಂವತ್ಸರದಲ್ಲಿ ಯುಗಾದಿಹಬ್ಬವು ಅಧಿಕಚೈತ್ರದಲ್ಲಿ ಮಾಡತಕ್ಕದ್ದೆ? ನಿಜಚೈತ್ರದಲ್ಲಿ ಮಾಡತಕ್ಕದ್ದೆ? ಎಂಬ ಸಂಶಯ ಹುಟ್ಟಿದೆ. ಅಧಿಕಚೈತ್ರವು ವರ್ಜಮಾಸವಾದಾಗೂ ಯುಗಾದಿಹಬ್ಬ ಮಾತ್ರ ಅಧಿಕಚೈತ್ರಮಾಸದಲ್ಲಿಯೇ ಮಾಡಬೇಕೆಂದು ಉಕ್ತವಾಗಿರುತ್ತದೆ. ಮತ್ತು ಗಣನಾರಂಭಕ್ಕೆ ಅಧಿಕಚೈತ್ರ ಶುಕ್ಲಪ್ರತಿಪತ್ ಸೋಮವಾರವಾದಪ್ರಯುಕ್ತ ವತ್ಸರಾಧಿಪತಿ ಚಂದ್ರನೆಂದು ನಿರ್ಧರಿಸಬೇಕಾಗಿರುವುದು. ಅಧಿಕಮಾಸವು ಯಾವ ಶುಭಕಾರ್ಯಗಳಿಗೂ ಅರ್ಹವಲ್ಲವಾದರೂ ವತ್ಸರಾದಿಯಾದ ಆ ದಿವಸದಲ್ಲಿ ತೈಲಾಭ್ಯಂಗನ, ನಿಂಬಕುಸುಮಭಕ್ಷಣ, ಪಂಚಾಂಗಶ್ರವಣ ಮುಂತಾದ ಅಬ್ದಾದಿಕೃತ್ಯವನ್ನು ಮಾಡಬೇಕೆಂದು ಜ್ಯೋತಿಸ್ಸಾರದಲ್ಲಿ—“ಅಥಪ್ರತಿಪದಚೈತ್ರೇಶುಕ್ಲಪಕ್ಷೇಭವೇತ್ತಾಂ ಕಥಮಪಿಯದಿವಾರೌದ್ವೌತದಾಭೂಪತಿಃ ಕಃ || ಪ್ರಥಮ ಇತಿಮುನೀಂದ್ರೈಃ ಕೀರ್ತಿತಃ ಕೋಗರ್ಗಮುಖ್ಯೈರ್ಗುಣವತಿಸತಿದಾಂಭೇರಾಜ್ಯಭಾಗ್ದೇಷ ಏವ” ಎಂಬದಾಗಿಯೂ ಸಿದ್ಧಾಂತಶಿರೋಮಣಿಯಲ್ಲಿ—“ಯಸ್ಮಿನ್ನಬ್ದೇತುಚೈತ್ರೋಧಿಕ ಇತಿ ಕಥಿತೋವತ್ಸರಾದಿಸ್ತದಾದ್ಯೋ ವಿಜ್ಞೇಯೋವಾಸರೋಕೋದಯಸಮಯಗೋವಾರಪೋಬ್ದಾಧಿಪಸ್ಸ || ನಾಬ್ದಾದಿಶ್ಶುದ್ಧಚೈತ್ರಪ್ರತಿಪದಪಿನತದ್ವಾರಪೋಬ್ದಾಧಿಪೋಪಿಪ್ರೋಕ್ತಂಸರ್ವಂಮುನೀಂದ್ರೈಃ ಶ್ರುತಿಸ್ಮೃತಿಸುವಚಸ್ಸಂಹಿತಾಶ್ಚೇನವೇವ” ಎಂಬದಾಗಿಯೂ ಪುಲಹ ಸಂಹಿತೆಯಲ್ಲಿ—“ಯಸ್ಮಿನ್ನಬ್ದೇಯದಾಚೈತ್ರಃ ಅಧಿಮಾಸೋಭವೇತ್ತದಾ | ಅಬ್ದನಾಥಂಪ್ರಶಂಸಂತಿ ಗರ್ಗಕಶಪದೇನಲಾಃ ||” ಎಂಬದಾಗಿಯೂ, ಮಯೂಖದಲ್ಲಿ—“ಮಲಿಮ್ಲುಚೆಸ್ಸ್ಯಾತ್ಚೈತ್ರಮಾಸಸ್ಸಂಸರ್ಪೋವಾಯದಾಭವೇತ್ | ತದಾವಾರೇಶ್ವರೋರಾಜಾವತ್ಸರಾದೌಪ್ರಕೀರ್ತಿತಃ” ಎಂಬದಾಗಿಯೂ ಸಾರಸ್ವತಸಂಹಿತೆಯಲ್ಲಿ—“ಸಂವತ್ಸರೇಚಾತ್ರಸಂತಸಂಜ್ಞಕೇಮಾಸೇಮಲಾಖ್ಯಸ್ಸತದನ್ಯಸಂಜ್ಞಕಃ || ಮಾಸೋಭವೇತ್ತತ್ರಶುಭೇಷ್ವಶಸ್ತ್ಯೋ ಶ್ರೋತವ್ಯಮಾದೌ ನೃಪಮಂತ್ರಿಸತ್ಫಲಂ” ಎಂಬದಾಗಿಯೂ ತತ್ವನಿರ್ಣಯದಲ್ಲಿ—“ಕ್ರಮೇಣಯತ್ರಮಾಸಸ್ಯ ಮಧುನಾಮಮಲಿಮ್ಲುಚಃ | ಶ್ರೋತವ್ಯಮಾದ್ಯೆಪುರುಷೈಃ ರಾಜಮಂತ್ರ್ಯಾದಿಕಸ್ಫಲಂ” ಎಂಬದಾಗಿಯೂ, “ವತ್ಸರಾದೌವಸಂತಾದೌಬಲಿರಾಜ್ಯೇತಥೈವಚ ತೈಲಾಭ್ಯಂಗಮಕುರ್ವಾಣೋನರಕಂಪ್ರತಿಪದ್ಯತೆ” ಎಂಬದಾಗಿಯೂ ಇನ್ನು ಅನೇಕ ಗ್ರಂಥಗಳಲ್ಲಿ ಮಹರ್ಷಿಗಳು ಇದೇ ಪ್ರಕಾರವಾಗಿ ಅಧಿಕಚೈತ್ರ ಶುಕ್ಲಪ್ರತಿಪತ್ತಿನಲ್ಲಿಯೇ ವತ್ಸರಾದಿಕೃತ್ಯವನ್ನೂ ಹಬ್ಬವನ್ನೂ ಮಾಡಬೇಕೆಂದು ನಿಶ್ಚಯಿಸಿರುತ್ತಾರೆ. ಇದೇ ಪ್ರಕಾರವಾಗಿ ಕಳೆದ ಸರ್ವಧಾರಿ ಸಂವತ್ಸರ ಮತ್ತು ಪ್ಲವಂಗ ಸಂವತ್ಸರಗಳಲ್ಲಿಯೂ ಚೈತ್ರಮಾಸವು ಅಧಿಕವಾಗಿ ಅಧಿಕಚೈತ್ರ ಶುಕ್ಲಪ್ರತಿಪತ್ತಿನ ದಿನವೇ ಅಬ್ದಾದಿಕೃತ್ಯವನ್ನು ಮಾಡಲಾಗಿರುತ್ತೆ. ಅದರಂತೆ ಈ ಅಕ್ಷಯಸಂವತ್ಸರದಲ್ಲಿ ಬರುವ ಅಧಿಕಚೈತ್ರ ಶುಕ್ಲಪ್ರತಿಪತ್ತಿನಲ್ಲಿಯೇ ವತ್ಸರಾರಂಭವಾದ ಪ್ರಯುಳ್ಳ ಅಬ್ದಾದಿ ಕೃತ್ಯವನ್ನು ಅಧಿಕಚೈತ್ರಶುಕ್ಲ ಪ್ರತಿಪತ್ ಸೋಮವಾರವೇ ನಡಿಸಬೇಕೆಂದು ಶಾಸ್ತ್ರಾಧಾರವೂ, ಶಿಷ್ಟಾಚಾರವೂ ಪೂರ್ವಿಕರ ಮತವೂ ಆಗಿರುವುದೆಂದು ನಿರ್ಣೀತವಾಗಿರುತ್ತದೆ.

ಇತಿ, ಎ. ಸಚ್ಚಿದಾನಂದ ಜೋಯಿಸ, ಸಿದ್ಧಾಂತಿ, ಮೈಸೂರು.

ಸ್ವೀಕಾರ.

ಶ್ರೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ರಾಜಧಾನಿಯ ಶ್ರೀ ಅರಮನೆಪಡದಕಟ್ಟೆಮಠದ ಪಟ್ಟಾಧಿಕಾರ ಮಹೋತ್ಸವದಲ್ಲಿ ಅರ್ಪಿಸಲ್ಪಟ್ಟದ್ದು ೩ ರೂ. (೨) ರಾಜಧಾನಿಯ ಮ|| ಶ್ರೈ. ಶಿವಪ್ಪನವರ ಮನೆಯಲ್ಲಿ ನಡೆದ ಚೆನ್ನಪಟ್ಟಣದ ಯಜಮಾನ್ ಮ|| ಮಲ್ಲಿಕಾರ್ಜುನಯ್ಯನವರ ಕುಮಾರಿಯ ವಿವಾಹದಲ್ಲಿ ರೂ. 1.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಉಚಿತಧರ್ಮ.

ಚಾಮರಾಜನಗರದ ತಾಲ್ಲೋಕು ಕುದೇರಿನಲ್ಲಿರುವ ಮ|| ರಾ|| ಕೆ. ಪಿ. ವೀರಣ್ಣನವರು ಮತ್ತು ಇವರ ಸಹೋದರರಾದ ಮ|| ಶಾಂತವೀರಪ್ಪನವರು ಸುಮಾರು ಎರಡುತಿಂಗಳಹಿಂದೆ ತಮ್ಮ ಗ್ರಾಮದಲ್ಲಿ ಒಂದು ಬಾಲಿಕಾಪಾಠಶಾಲಾ ಕಟ್ಟಡಕ್ಕಾಗಿ ಒಂದು ಸಾವಿರ ರೂಪಾಯಿ ಬೆಲೆಬಾಳತಕ್ಕ ನಿವೇಶನವನ್ನೂ, ಕಟ್ಟಡದವೆಚ್ಚಕ್ಕಾಗಿ 2000 ರೂಪಾಯಿಗಳನ್ನೂ ಕೊಟ್ಟಿರುವರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಈವಾಗ ಪುನಃ ನಂಜನಗೂಡಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಪ್ರೌಢವಿದ್ಯಾಶಾಲೆಯ ಅಭಿವೃದ್ಧಿಗಾಗಿ ಧನಾರ್ಜನೆಗೋಸ್ಕರ ದಯಮಾಡಿಸಿದ್ದ ಮ|| ರಾ|| ಸಬ್‌ಡಿವಿಜನ್ ಸಾಹೇಬರವರಿಗೆ ಈ ಸಹೋದರರಿಬ್ಬರೂ ಉದಾರಮನಸ್ಸಿನಿಂದ ಬಹಳ ಸಂತೋಷವಾಗಿ 1500 ರೂಪಾಯಿಗಳನ್ನುಕೊಟ್ಟು, ಸದರಿ ಮೊಬಲಗಿನಿಂದ, ಶಿವಾಧೀನರಾದ ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಮೇಲ್ಕಂಡ ಶಾಲೆಯಲ್ಲಿ ಒಂದು “ಸೈನ್ಸ್ ಹಾಲನ್ನು” ಕಟ್ಟಿಸಬೇಕೆಂದು ಸಬ್‌ಡಿವಿಜನ್ ಸಾಹೇಬರವರನ್ನು ಕೇಳಿಕೊಂಡಮೇರೆಗೆ ಸದರಿಯವರು ಬಹಳ ಸಂತೋಷಪಟ್ಟು ನಡೆಸಿಕೊಡುವುದಾಗಿ ಒಪ್ಪಿಕೊಂಡರು ಎಂಬ ವಿಷಯವನ್ನು ತಿಳುಹಿಸಲು ಬಹಳ ಸಂತೋಷಪಡುತ್ತೇನೆ.

ವಿದ್ಯಾಭಿಮಾನಿ.

ಜಯಂತ್ಯುತ್ಸವವು.

ಶ್ರೀಜಗದ್ಗುರುಗಳಾದ ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತ್ಯುತ್ಸವವು ಬಳ್ಳಾರಿಯಲ್ಲಿ ಪ್ರತಿವರ್ಷಪದ್ಧತಿಯಪ್ರಕಾರ ಕಳೆದ ಮಹಾಶಿವರಾತ್ರಿಯ ದಿವಸ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಆ ದಿವಸ ಸಂಜೆಯ ೫ ಘಂಟೆಗೆ ಮೇಲ್ಕಂಡ ಪೂಜ್ಯಪಾದರುಗಳ ಲಿಂಗೋತ್ಪತ್ತಿಭಾವಪಟವು ಪಲ್ಲಕ್ಕಿಯಲ್ಲಿ ಮೂರ್ತಿಗೊಳಿಸಲ್ಪಟ್ಟು ವೈದಿಕರ ವೇದಘೋಷದಿಂದಲೂ ಶ್ರೀಮಜ್ಜಗದ್ಗುರುಗಳಾದ ಪಂಚಾಚಾರ್ಯರ ಜಯಜಯಕಾರದಿಂದಲೂ ವಾದ್ಯಗಳ ಮಂಗಲಧ್ವನಿಯಿಂದಲೂ ವೀರಶೈವತರುಣರ ಸಂಘದಿಂದ ಹೊರಟು ಪಟ್ಟಣ ಮುಖ್ಯಬೀದಿಗಳಲ್ಲಿ ಉತ್ಸವಮಾಡಲ್ಪಟ್ಟಿತು. ಮಾರ್ಗದಲ್ಲಿ ಬ್ರಾಹ್ಮಣರು ವೈಶ್ಯರು ಮುಂತಾದವರ್ಣದವರು ಅಲ್ಲಲ್ಲಿಗೆ ಫಲಪುಷ್ಪಗಳನ್ನೊಪ್ಪಿಸಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಪೂಜ್ಯಪಾದರುಗಳ ಕೃಪಾಕಟಾಕ್ಷದಿಂದ ಈಗ 3 ವರ್ಷದ ಕೆಳಗೆ ಈ ಊರಲ್ಲಿ ವೀರಶೈವತರುಣಸಂಘವು ಸ್ಥಾಪನೆಯಾಗಿ ಚೆನ್ನಾಗಿ ನಡೆದುಕೊಂಡುಬರುತ್ತದೆ. ಈ ಜಯಂತ್ಯುತ್ಸವವನ್ನು ವೀರಶೈವತರುಣಸಂಘದವರು ನಡೆಯಿಸಿ ಪೂಜ್ಯಪಾದರುಗಳ ಕೃಪೆಗೆ ಪಾತ್ರರಾಗಿರುತ್ತಾರೆ. ಇದೇರೀತಿ ಸಮಸ್ತ ವೀರಶೈವರೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳನ್ನು ಆಯಾಯ ಮಿತಿಗಳಲ್ಲಿ ನಡೆಯಿಸಿ ಶ್ರೀಮದಾಚಾರ್ಯರ ಕೃಪೆಗೆ ಪಾತ್ರರಾಗಿ ತಮ್ಮ ಗುರುಭಕ್ತಿಯನ್ನು ಸಾರ್ಥಕಗೊಳಿಸಬೇಕಾಗಿ ಕೋರುತ್ತೇನೆ.

ಕವುತಾಳದ ಶಾಂತರುದ್ರಪ್ಪ ಸೆಕ್ರೆಟರಿ,
ವೀರಶೈವತರುಣಸಂಘ, ಬಳ್ಳಾರಿ.

ಕಾಲಕ್ಕೆತಕ್ಕಂತೆ ನಡೆದುಕೊಳ್ಳುವುದು.

ಮೈಸೂರುದೇಶದ ಪ್ರಜೆಗಳ ಸುಖಕ್ಕಾಗಿ ಸರ್ಕಾರದವರು ಸೆಲ್ಫ್‌ಗೌರ್ನ್‌ಮೆಂಟನೇರ್ಪಾಟನ್ನಿಟ್ಟಿರುತ್ತಾರೆ. ಇದರ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಪ್ರಜೆಗಳಲ್ಲಿ ಬಹುಮಂದಿ ಪ್ರಮುಖರು ಏರ್ಪಾಡಾಗಿರುವರು. ಇವರಲ್ಲಿ ಕರ್ತವ್ಯವನ್ನು ತಿಳಿದು ದೇಶಸೇವೆಯಲ್ಲಿ ತನುಮನಧನಗಳನ್ನೊಪ್ಪಿಸಿ ಸರ್ಕಾರದವರ ಕೃಪೆಗೂ, ಪ್ರಜೆಗಳ ಕೃತಜ್ಞತೆಗೂ ಪಾತ್ರರಾಗುತ್ತಿರುವವರು ಅತಿ ವಿರಳ. ಪರೋಪಕಾರಕ್ಕಾಗಿ ಒಂದು ಪೈ ಕೂಡ ಖರ್ಚುಮಾಡದವರಾಗಿಯೂ, ಕಾರ್ಯನಿರ್ವಾಹಶಕ್ತಿಯಿಲ್ಲದವರಾಗಿಯೂ ಇದ್ದಾಗ್ಯೂ, ಹಣವಂದಿಗರು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ದೊಡ್ಡಸ್ತಿಕೆಯು ಅವಶ್ಯಕವಾದ್ದೆಂಬ ಕಾರಣದಮೇಲೆ ಮತ್ತು ತಮಗಿರತಕ್ಕ ದಾಕ್ಷಿಣ್ಯದ ಬಲದಮೇಲೆ ಪ್ರಜೆಗಳಿಂದ ಓಟುಗಳನ್ನು ಪಡೆದುಕೊಳ್ಳುವರು. ಹಣವಂದಿಗರಿಗೆ ಕ್ಷಾಮಬಾಧೆಯಿಂದ ಪೀಡಿತರಾಗಿರುವ ಮೈಸೂರುದೇಶದ ಬಡಪ್ರಜೆಗಳು ಬಹು ಸುಲಭವಾಗಿ ಒಳಗಾಗುವರೆಂಬ ವಿಚಾರವು ಮೈಸೂರುದೇಶದ ವಾಚಕಮಹಾಶಯರಿಗೆ ತಿಳಿಯದ ವಿಷಯವಲ್ಲ. ಎಲೆಕ್ಷನ್ ಕಾಲಗಳಲ್ಲಿ ಪುನಃ ಓಟುಗಳು ಬರತಕ್ಕ ಮಾಯಾಜಾಲದ ಮಾರ್ಗಗಳನ್ನು ಗೊತ್ತುಮಾಡಿಕೊಂಡು ತಮಗಿರತಕ್ಕ ಅನುಕೂಲದ ಬಲದಮೇಲೆ ತಮ್ಮ ಮಾಯಾಬಲೆಗೆ ಬೀಳುವ ಕೆಲವು ಮುಖಂಡರ ಮೇಲೆ ತಮ್ಮ ವರ್ಚಸ್ಸನ್ನೆಲ್ಲಾ ಬೀರಿ ವೇಷಕ್ಕೆ ತಕ್ಕಂತೆ ಭಾವಭಂಗಿಗಳನ್ನು ತೋರಿಸಿ ತಮಗೆ ಸರ್ಕಾರದ ದೊಡ್ಡದೊಡ್ಡ ಅಧಿಕಾರಿಗಳ ಶಿಫಾರ್ಸ್ ಇರುತ್ತೆ, ನಿಮಗೆ ಬೇಕಾದ ಕೆಲಸಗಳನ್ನು ಮಾಡಿಸಿಕೊಡುವದಾಗಿ ಹೇಳುವದರ ಜೊತೆಗೆ ದೊಡ್ಡ ದೊಡ್ಡ ಆಫೀಸರುಗಳು ಸರ್ಕೀಟ್ ಬಂದಕಾಲದಲ್ಲಿ ಹೊಸಗೃಹಪ್ರವೇಶ ಮದುವೆಯ ಸಮಾರಂಭ ಇತ್ಯಾದಿ ಶುಭಕಾರ್ಯಗಳ ನೆಪದಲ್ಲಿ ದೊಡ್ಡ ದೊಡ್ಡವರಿಗೆ ಮಾಡಿದ ಟೀಪಾರ್ಟಿ, ಹುವ್ವು, ಗಂಧ ಇತ್ಯಾದಿ ಉದಾಹರಣೆಗಳನ್ನು ಹೇಳಿಕೊಂಡು ನಂಬಿಕೆ ಹುಟ್ಟಿಸಿ ಇದರ ಬಲದಮೇಲೆ ಓಟುಗಳನ್ನು ಪಡೆದುಕೊಂಡು ಉಪಕಾರ ಮತ್ತು ಅಪಕಾರ ಮಾರ್ಗಗಳ್ಯಾವವೆಂಬುದನ್ನು ಕೂಡ ಯೋಚಿಸುವ ವಿವೇಚನೆಯಿಲ್ಲದೆ, ಉಪಕಾರಿಗಳಾಗುವದಕ್ಕೆ ಬದಲಾಗಿ ಅಪಕಾರಿಗಳಾಗುತ್ತಿರುವರು. ಓಟಿನಲ್ಲಿ ಇಂಥವರು ಪ್ರಜಾಕಂಟಕರಾಗಿಯೂ ರಾಜ್ಯದ್ರೋಹಿಗಳಾಗಿಯೂ ಇರುವರು. ಇಂಥಹ ಅನೇಕಮಂದಿಗಳು ತಾವು ಕೈಕೊಂಡಿರುವ ಕೆಲಸದಲ್ಲಿ ನಿರ್ವಾಹಶಕ್ತಿ ಪ್ರಾಮಾಣಿಕತೆ ಇತ್ಯಾದಿ ಸುಗುಣರಹಿತವಾದ ವಿಚಾರವನ್ನು ಪ್ರಜೆಗಳಲ್ಲಿ ಬುದ್ಧಿವಂತರಾದವರು ಸರ್ಕಾರದವರ ಗಮನಕ್ಕೆ ತಂದಾಗ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಸ್ವಭಾವವಾದ್ದೇ ಸರಿ, ಇಲ್ಲವಾದರೆ ಪ್ರಜೆಗಳಿಗೆ ಸಮಾಧಾನವೆಂತಾಗುವುದು!

ದೇಶಾಭಿಮಾನಿ.

ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಜಯಂತ್ಯುತ್ಸವ ಬಳ್ಳಾರಿಜಿಲ್ಲಾ ಕಡ್ಲಿಗಿ.

ಈಗ್ಗೆ ೩ ತಿಂಗಳಕೆಳಗೆ ಈ ಊರಿನಲ್ಲಿ ಸ್ಥಾಪಿತವಾಗಿರುವ ವೀರಶೈವಸಂಘದವರ ನೇತೃತ್ವದಲ್ಲಿ ತಾ|| 11-2-26 ರಲ್ಲಿ ವೀರಶೈವಪ್ರಮುಖರು ಮ|| ಪಟೇಲ್ ಹುಚ್ಚುವೀರನಗೌಡರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀಜಗದಾಚಾರ್ಯರಾದ ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯರುಗಳ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಮಹಾಪರ್ವಕಾಲವಾದ ಅದೇ ದಿವಸ ಕಾರ್ಯಕ್ರಮದಂತೆ ಬೆಟ್ಟದಮೇಲಿರುವ ಶ್ರೀ ಸಿದ್ಧೇಶ್ವರಲಿಂಗಕ್ಕೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಗಳಿಂದ ವಿಧ್ಯುಕ್ತವಾಗಿ ಪೂಜಾಕಾರ್ಯಗಳನ್ನು ನೆರವೇರಿಸಿ ಲಿಂಗೋದ್ಭವರಾದ ಆಚಾರ್ಯರುಗಳ ಭಾವಚಿತ್ರಗಳನ್ನು [illegible] ಅಲಂಕರಿಸಲ್ಪಟ್ಟ [illegible] ಮಂಟಪದಲ್ಲಿ [illegible] ಗೊಳಿಸಿ ಯಥಾವಿಧಿಯಾಗಿ ಪೂಜಾಕ್ರಮಗಳಾದನಂತರ ಶ್ರೀಜಗದಾಚಾರ್ಯರ ಅವತಾರ, ಅವರ ಆರಾಧನಮಹಿಮೆ ಮತ್ತು ವೀರಶೈವಮತದ ಪ್ರಾಚೀನತ್ವ ಇವುಗಳ ವಿಷಯದಲ್ಲಿ ಮ|| ಜೆ. ವೀರಪ್ಪನವರೂ, ಭಕ್ತಿಯ ವಿಷಯಗಳಲ್ಲಿ ವೇ|| ಲೋಕಲ್‌ಬೋರ್ಡ್ ಪ್ರೆಸಿಡೆಂಟ್ ಟಿ. ಕೊಟ್ರಬಸವಯ್ಯನವರೂ, ಮಾನವಧರ್ಮದ ವಿಷಯದಲ್ಲಿ ಮ|| ಎಸ್. ಸಿದ್ಧವೀರಪ್ಪನವರೂ ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿದರು. ಅನಂತರ ಮ|| ಪಾಟೀಲ್ ಲೋಕೇಶ್ವರಗೌಡರಿಂದ ಏರ್ಪಡಿಸಲ್ಪಟ್ಟಿದ್ದ ಭಜನಾಸಂಘದವರಿಂದ ಕರ್ಣಾನಂದಕರವಾದ ಶಿವಭಜನೆಯೂ, ಸಂಗೀತವಿದ್ವಾನ್ ಕೆ. ಯಂ. ನಾಗಯ್ಯನವರಿಂದ ಸುಶ್ರಾವ್ಯಸಂಗೀತವೂ ನಡೆದು ಆ ರಾತ್ರಿಯೆಲ್ಲಾ ಶಿವಕಥಾಶ್ರವಣ ಇತ್ಯಾದಿ ಸದ್ಗೋಷ್ಠಿಯಿಂದ ಜಾಗರಣೆಯನ್ನು ಮಾಡಿ ಉಷಃಕಾಲಕ್ಕೆ ಶ್ರೀಜಗದ್ಗುರುಗಳವರ ಭಾವಚಿತ್ರಗಳನ್ನು ರಥಾರೋಹಣಮಾಡಿಸಿ ಜಯಘೋಷದಿಂದಲೂ ಮಂಗಳವಾದ್ಯಗಳಿಂದಲೂ ಶ್ರೀ ಬಸವೇಶ್ವರ ದೇವಾಲಯಕ್ಕೆ ಉತ್ಸವದೊಡನೆ ಕೊಂಡೊಯ್ದು ಮಂಗಳಾರತಿಯನ್ನು ಮಾಡಿಸಿ, ಉತ್ಸವವು ಮಂಟಪಕ್ಕೆ ಹಿಂದಿರುಗಿ ಬಂದಿತು. ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ನೆರವೇರಿದನಂತರ ಶ್ರೀಜಗದ್ಗುರುಗಳವರ ಹೆಸರಿನಿಂದ ಒಂದು ವಾಚನಾಲಯವೂ ಪುಸ್ತಕಭಂಡಾರವೂ ಸ್ಥಾಪಿಸಲ್ಪಟ್ಟು ವರ್ಗಣಿಯು ಕೂಡಿಸಲ್ಪಟ್ಟಿತು. ಫಲಪುಷ್ಪಪ್ರಸಾದಗಳು ಹಂಚಲ್ಪಟ್ಟು ಶ್ರೀಜಗದಾಚಾರ್ಯರ ಪ್ರವಾರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಜಯಂತ್ಯುತ್ಸವದ ಪವಿತ್ರಕಾರ್ಯವನ್ನು ಕೈಕೊಂಡ ಸಮಸ್ತ ಮಹನೀಯರಿಗೂ ಪೂಜ್ಯಪಾದರಾದ ಆಚಾರ್ಯರು ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ.

ಸ್ಕೂಲ್ಡೆ ಎಂಬ ಉತ್ಸವಗಳೂ, ವೀರಶೈವ ವಿದ್ಯಾರ್ಥಿಗಳೂ.

ವೀರಶೈವಮತವು ಅನಾದಿಸಂಸಿದ್ಧವಾದದ್ದೂ, ಆಚಾರಶಿಷ್ಟವಾದದ್ದೂ, ವಿದ್ಯಾವಿಭೂಷಿತವಾದದ್ದೂ ಎನಿಸಿಕೊಂಡಿರುತ್ತದೆ. ಈ ಮತದಲ್ಲಿ ಪೂರ್ವದಿಂದಲೂ ಅನಂತಪಂಡಿತರೂ ಆಚಾರ್ಯರೂ ಇದ್ದುಕೊಂಡು ಈ ಮತದ ಪ್ರಾಶಸ್ತ್ಯವನ್ನು ಚೆನ್ನಾಗಿ ಬೆಳಗಿರುತ್ತಾರೆ. ಅನೇಕ ಐಶ್ವರ್ಯವಂತರಿದ್ದುಕೊಂಡು ಮತವನ್ನು ಪೋಷಿಸಿದ್ದಾರೆ ಮತ್ತು ಅಪಾಯಗಳಿಂದ ತಪ್ಪಿಸಿದ್ದಾರೆ. ಧಾತು ಈಶ್ವರ ಸಂವತ್ಸರದ ಬರದಲ್ಲಿ ಅನ್ನಾಭಾವದಿಂದ ಈ ಮತದ ಅನೇಕರು ಕೆಟ್ಟುಹೋಗುತ್ತಿದ್ದರು. ಪರಶಿವಕೃಪೆಯಿಂದ ಶರಣಾವತಾರಿಗಳಾದ ಎಲೆ ಮಲ್ಲಪ್ಪಶೆಟ್ಟರು ಮೈಸೂರುದೇಶಕ್ಕೂ ಸಕ್ಕರೆ ಕರಡಪ್ಪನವರು ಬಳ್ಳಾರಿ ಪ್ರಾಂತ್ಯಕ್ಕೂ ಅಪಾರವಾಗಿ ಅನ್ನದಾನಮಾಡಿ ಈ ಮತವನ್ನು ಉದ್ಧಾರಮಾಡಿದರು. ಈಚೆಗೂ ಅನೇಕ ವಿಧದಲ್ಲಿ ಮಹಾಪುರುಷರು ಜನಿಸಿ ಮತೋದ್ಧಾರವಂ ಮಾಡಿರುತ್ತಾರೆ. ಮೈಸೂರಲ್ಲಿ ಶ್ರೈ|| ವೀರಸಂಗಪ್ಪನವರು ವೀರಶೈವಮತಕ್ಕೆ ಪರರಿಂದ ಬಂದಿದ್ದ ಹೇಯವನ್ನು ನಾಶಮಾಡಿ ಮತಪ್ರಾಶಸ್ತ್ಯವನ್ನು ಕಾಪಾಡಿದರು. ಮುಂಬಯಿ ಪ್ರಾಂತ್ಯದಲ್ಲಿ ಶ್ರೈ|| ಲಿಂಗಪ್ಪ ಜಯಪ್ಪನವರು ಸೆರೆಮನೆಯಲ್ಲಿ ವೀರಶೈವ ಬಂದಿಗಳಿಗೆ ಲಿಂಗವನ್ನು ತೆಗೆಸಿ ಹಾಕುತ್ತಿದ್ದ ದುಷ್ಟಪದ್ಧತಿಯನ್ನು ತಪ್ಪಿಸಿ ಮತಾಚಾರವನ್ನು ರಕ್ಷಿಸಿದರು. ಈಗ ಈ ಮತಾಚಾರಕ್ಕೆ ಅನೇಕ ಕುಂದಕಗಳು ಬರುತ್ತಲಿವೆ. ಕಾಫಿ ಕ್ಲಬ್ಬುಗಳು, ಸ್ಕೂಲ್ಡೇಗಳೆಂಬ ಸಮಾರಂಭಗಳು ಮೊದಲಾದವುಗಳು ಹೆಚ್ಚಿ ಆಚಾರಕ್ಕೆ ಕುಂದಕಬರುತ್ತಲಿದೆ. ಈಗ ವೀರಶೈವರು ಬಹಳವಾಗಿ ಹೋರಾಡಿ ತಮ್ಮ ನಿರ್ಮಲಾಚಾರಗಳನ್ನು ಕಾಪಾಡಿಕೊಳ್ಳಬೇಕಾಗಿದೆ. ಘೃತಪಕ್ವಕ್ಕೂ ತೈಲಪಕ್ವಕ್ಕೂ ಭೇದವಿಲ್ಲವೆಂಬ ಭಾವನೆಯಿಂದ ಬೇರೆ ಜಾಗಗಳಿಗೆ ಹೋಗಿ ಪದಾರ್ಥ ಸ್ವೀಕಾರವನ್ನು ಮಾಡಕೂಡದು. ವೀರಶೈವರ ಕಾಫಿ ಕ್ಲಬ್ಬು ಮೊದಲಾದವುಗಳಿಗೆ ಹೋಗಿ ಪದಾರ್ಥಸ್ವೀಕಾರ ಮಾಡಬೇಕು. “ಸ್ಕೂಲ್ಡೇ” ಎಂಬ ಸಮಾರಂಭಗಳ ವಿಚಾರದಲ್ಲೂ ವೀರಶೈವರು ಎಚ್ಚರದಿಂದ ನಡೆಯಬೇಕು. ಬೆಂಗಳೂರು ಗೌರ್ನಮೆಂಟು ಕಲಜಿಯೆಟ್ ಹೈಸ್ಕೂಲಿನಲ್ಲಿ ಮೊನ್ನೆನಡೆದ ಸ್ಕೂಲ್ಡೇಯಲ್ಲಿ ವೀರಶೈವವಿದ್ಯಾರ್ಥಿಗಳು ಪ್ರತ್ಯೇಕ ಲಂಚಿನ ಏರ್ಪಾಟುಮಾಡಿಕೊಂಡಿದ್ದರು, ಅಂದರೆ ಅಲ್ಪಾಹಾರದ ಏರ್ಪಾಟು ಮಾಡಿಕೊಂಡಿದ್ದರು. ಈ ವಿಷಯದಲ್ಲಿ ವೀರಶೈವವಿದ್ಯಾರ್ಥಿಗಳು ವಿಶೇಷ ಶ್ರಮವನ್ನು ವಹಿಸಿ ಆಚಾರರಕ್ಷಣೆಯನ್ನು ಮಾಡಿದರು.

ಅದೇ ರೀತಿಯಲ್ಲಿ ಬೆಂಗಳೂರು ಮಲ್ಲೇಶ್ವರದ ಗೌರ್ನಮೆಂಟು ಹೈಸ್ಕೂಲಿನಲ್ಲೂ 1926 ನೆ ಫೆಬ್ರವರಿ 20 ರಲ್ಲಿ “ಸ್ಕೂಲ್ಡೇ” ನಡೆದಾಗ ವೀರಶೈವ ವಿದ್ಯಾರ್ಥಿಗಳು ವಿಶೇಷ ಶ್ರಮವನ್ನು ವಹಿಸಿ ಪ್ರತ್ಯೇಕ “ಲಂಚಿನ” ಏರ್ಪಾಟುಮಾಡಿದ್ದರು. ಶಿವಯ್ಯನವರೆಂಬ ಸೂಪಕಾರರಿಂದ ಭಕ್ಷ್ಯಗಳನ್ನು ತಯಾರುಮಾಡಿಸಿದ್ದರು. ಕೆಲವು ವೀರಶೈವ ದೊಡ್ಡಮನುಷ್ಯರನ್ನು ಕರೆಸಿಕೊಂಡಿದ್ದರು. ಅಲ್ಪಾಹಾರಮಂದಿರವನ್ನು ಅಲಂಕರಿಸಿದ್ದರು. “ವೀರಶೈವರ ಲಂಚು” ಎಂಬದಾಗಿ ಮಂದಿರದ ದ್ವಾರದಲ್ಲಿ ಲೇಖನವನ್ನು ಬರೆಸಿದ್ದನು. ವಿದ್ಯಾರ್ಥಿಗಳು ಕೇವಲ ಆಚಾರಪಾರಿಶುದ್ಧ್ಯವನ್ನು ಪ್ರಕಾಶಗೊಳಿಸಿದರು. ಎಲ್ಲಾಕಡೆಯೂ ವೀರಶೈವಹಿರಿಯರು ತಮ್ಮ ವೀರಶೈವತರುಣರಿಂದ ವೀರಶೈವಾಚಾರರಕ್ಷಣೆಯನ್ನು ಮಾಡಿಸಬೇಕಾಗಿರುತ್ತದೆ.

ಪ|| ವೀರಶೈವಪಥವೆ ಜಗದೆ ಶ್ರೇಷ್ಠವಾದದು |
ವೀರಶೈವರೆಲ್ಲ ಕಟ್ಟಿನಿಂದೆ ನಡೆವುದು ||

ಜೀರಗೆ ಬಸವಲಿಂಗಪ್ಪ,
ಅರಲೇಪೇಟೆ, ಬೆಂಗಳೂರು ಸಿಟಿ.

ಶೋಚನೀಯ ನಿಧನವು.

ಪರಲೀಪ್ರಕರಣವು ಈ ಪತ್ರಿಕಾಪಾಠಕರಿಗೆ ವಿದಿತವಾಗಿರುವದಷ್ಟೆ. ಈ ಪ್ರಕರಣದ ಲಿಂಗಿ ಅಲಿಂಗಿ ಬ್ರಾಹ್ಮಣರ ಮಧ್ಯಸ್ಥರಾಗಿ ನಿಯಮಿಸಲ್ಪಟ್ಟ ಹೈಕೋರ್ಟು ಜಡ್ಜಿ ಶ್ರೀಯುತ ರಾಯಬಾಲಮುಕುಂದ, ಬಿ.ಎ., ಯವರ ಜೀವಯಾತ್ರೆಯು ಇದೇ ಫೆಬ್ರವರಿ 5 ನೆಯ ತೇದಿಯಲ್ಲಿ ಪರಿಸಮಾಪ್ತಿಯಾಯಿತೆಂದು ತಿಳಿಸಲು ಬಹುದುಃಖವೆನಿಸುತ್ತದೆ. ನ್ಯಾಯೈಕಪಾಲನ ಧುರೀಣರಾದ ಇವರ ಮರಣದುಃಖಪ್ರದರ್ಶನಾರ್ಥವಾಗಿ ಒಂದು ಘಂಟೆಯ ಹೊತ್ತು ಹೈದರಾಬಾದಿನ ಹೈಕೋರ್ಟು ಮುಚ್ಚಲ್ಪಟ್ಟದ್ದರಿಂದ ಇವರ ಪ್ರಭುಸ್ವಜೀವನವೆಷ್ಟು ಪ್ರಶಂಸನೀಯವಾದುದೋ ಮಹಾಶಯರೂಹಿಸಬಹುದು. ಇವರು ಬಿ.ಎ., ಡಿಗ್ರಿಯನ್ನು ಹೊಂದಿದ ಬಳಿಕ ನೂರು ರೂಪಾಯಿಗಳ ವೇತನದಿಂದ ಪ್ರಥಮದಲ್ಲಿ ಉನ್ನತ ನ್ಯಾಯಸ್ಥಾನದಲ್ಲಿಯೇ ಪ್ರವೇಶಿಸಿ ಕ್ರಮಕ್ರಮವಾಗಿ ರಿಜಿಸ್ಟ್ರಾರರಾಗಿಯೂ, ಔರಂಗಾಬಾದುಜಿಲ್ಲಾ ಸುಬಾ ವಿದ್ಯಾಧಿಕಾರಿಗಳಾಗಿಯೂ, ಗುಲ್ಬರ್ಗಾ ಸೆಷನ್ ಜಡ್ಜಿಗಳಾಗಿಯೂ ಕಡೆಗೆ ಹೈಕೋರ್ಟು ಸಭ್ಯರಾಗಿಯೂ ಪ್ರತಿಮಾಸದಲ್ಲಿ ಹದಿನೈದುನೂರು ರೂಪಾಯಿಗಳ ಸಂಬಳವನ್ನು ಹೊಂದುತ್ತ ತಮ್ಮ ನಿಯಮಿತೋದ್ಯೋಗಕಾಲ (ಸರ್ವಿಸ್) ಪೂರ್ತಿಯಾದ ಬಳಿಕ ಆಗಾಗ್ಗೆ ಪ್ರತ್ಯೇಕ ವಿಚಾರಸಂಘಗಳಲ್ಲಿ ಪಂಚರಾಗಿ ನಿಯಮಿಸಲ್ಪಡುತ್ತಿದ್ದರು. ಆದುದರಿಂದಲೇ ಇವರು ಜೀವಿತಾಂತದಲ್ಲಿ ಪರಲೀ ಲಿಂಗಿ ಅಲಿಂಗಿಬ್ರಾಹ್ಮಣರ ವ್ಯಾಜ್ಯದಲ್ಲಿ ಬೇಸರವಿಲ್ಲದೆ ಮೂರು ನಾಲ್ಕು ತಿಂಗಳವರಿವಿಗೂ ನಿಷ್ಪಕ್ಷಪಾತಬುದ್ಧಿಯಿಂದ ಪರಿಶೀಲಿಸಿ ಲಿಂಗಿಬ್ರಾಹ್ಮಣರ ಶ್ರೇಷ್ಠತ್ವವನ್ನು ಶ್ರೀ ನಿಜಾಂ ಪ್ರಭುಗಳವರಿಗೆ [illegible] ಸಮೂಲಕ ತಿಳಿಸಿ ನಿಜಾಂರವರ ಅನುಮತಿಯಾಗುವದಕ್ಕಿಂತ ಮುಂಚೆಯೇ ಪರಲೋಕಗತರಾದುದಕ್ಕೆ ವೀರಶೈವಸಮಾಜವೇ [illegible] ದುಃಖಾಶ್ರುಗಳನ್ನು ಸ್ರವಿಸಿತು. ಫೆಬ್ರವರಿ 7 ನೇ ತಾರೀಖಿನ ದಿವಸ ಹೈದರಾಬಾದು ವಿವೇಕವರ್ಧಿನೀ ಹಾಲಿನಲ್ಲಿ ಉನ್ನತ ನ್ಯಾಯಸಭಾಧಿಕಾರಿಗಳಾದ ನವಾಬು ನಿಜಾಮ್ಯಾರಜಂಗು ಬಹದ್ದೂರ್‌ರವರ ಅಧ್ಯಕ್ಷತೆಯಲ್ಲಿ ಅನೇಕ ವಕೀಲರೂ ಇತರ ಪ್ರಮುಖರೂ ಸಭೆ ಸೇರಿ ನ್ಯಾಯಕೋವಿದರಾದ ಇವರು ತಮ್ಮ 68 ನೆಯ ವರ್ಷದಲ್ಲಿ ಮರಣವಾದುದಕ್ಕೆ ದುಃಖಪ್ರದರ್ಶನ ಮಾಡಿದರು. ಇವರು ಗತಿಸುವದಕ್ಕಿಂತ ಪೂರ್ವದಲ್ಲಿಯೇ ಒಂದು ಮರಣಶಾಸನವನ್ನು ಬರೆದಿದ್ದರು. ಅದರಲ್ಲಿ “ನನ್ನ ಜೀವಿತಪೂರ್ಣಪ್ರೇಮವು ಆದಿ ಹಿಂದೂಜಾತಿಯಲ್ಲಿ ಅಧಿಕವಾಗಿದೆ. ಇವರಲ್ಲಿ ಬ್ರಾಹ್ಮಣಸಂಘವು ಯಾವಪ್ರಕಾರವಾಗಿ ಪ್ರವರ್ತನೆಮಾಡಿತೋ ಅದು ನನಗೆ ಅಯಿಷ್ಟವಾದುದು. ಆದರೆ ಇವರಲ್ಲಿಯೂ ಅನ್ಯಜಾತಿಯವರಲ್ಲಿಯೂ ನಾನು ಸ್ವಲ್ಪ ಭೇದವನ್ನಾದರೂ ಕಲ್ಪಿಸಲಿಲ್ಲ. ಎಲ್ಲರೂ ಭಗವಂತನಿಂದ ಸಮಾನವಾಗಿ ಸೃಷ್ಟಿಸಲ್ಪಟ್ಟಿರುವರಷ್ಟೆ. ನಾನಿದೇಭಾವದಿಂದ ಪಂಚಮರ ಸಂಘಾಧ್ಯಕ್ಷತ್ವವನ್ನು ವಹಿಸಿದ್ದೆನು ಮತ್ತು ಮನಃಪೂರ್ತಿಯಾಗಿ ಇವರ ಸಂಘಾಭಿವೃದ್ಧಿಗೆ ಸಾನುಭೂತಿಯನ್ನು ತೋರಿಸಿದೆನು. ಆದುಕಾರಣ ಮರಣಾಂತರದಲ್ಲಿ ನನ್ನ ಶವವನ್ನು ಪಂಚಮರ ವಶಕ್ಕೆ ದಹನಸಂಸ್ಕಾರಾರ್ಥವಾಗಿ ಕೊಡಬೇಕಲ್ಲದೆ ನನ್ನ ಸ್ಥಿರಾಸ್ತಿಯಿಂದ ಪಂಚಮೋದ್ಧರಣ ಸಂಘಕ್ಕೆ ಸಾವಿರ ರೂಪಾಯಿಗಳನ್ನು ಕೊಡಬೇಕು. ಇದರಲ್ಲಿ ನನ್ನ ವಂಶಿಕರಿಗೆ ಯಾವ ಸಂಬಂಧವಿಲ್ಲ.” ಎಂದು ಬರೆದುದನ್ನು ಇವರ ಮಕ್ಕಳಾದ ಬಾಲಕಿಷನ್, ಶ್ರೀಕಿಷನ್, ರಾಧಾಕಿಷನ್ ಎಂಬುವರು ಪ್ರಿಂಟುಮಾಡಿಸಿ ಹಂಚಿದರಲ್ಲದೆ ಅದರಂತೆ ಪಂಚಮರಿಂದಲೇ ಶವದಹನಸಂಸ್ಕಾರವನ್ನು ಮಾಡಿಸಿದರು. ಇವರ ಮರಣಶಾಸನವು ಪಂಚಮೋದ್ಧಾರಕಾಭಿಲಾಷಿಗಳೆಲ್ಲರಿಗೂ ಆದರ್ಶಪ್ರಾಯವಾಗಿರುವದು. ನಿಶ್ಚಯವಾಗಿ ನೋಡಿದ್ದಾದರೆ, ಇಲ್ಲಿಯವರೆಗೆ ಯಾವಜಾತಿಯ ನಾಯಕನಾಗಲೀ ಈ ರೀತಿಯಾಗಿ ಪಂಚಮಜಾತಿಗೆ ಪ್ರೇಮಪ್ರದರ್ಶನಮಾಡಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕೀರ್ತಿಶೇಷರಾದ ಶ್ರೀ ರಾಯಬಾಲಮುಕುಂದರ ಆತ್ಮಕ್ಕೂ ಜನಕನಾಜ್ಞಾ ಪರಿಪಾಲಕರಾದ ಇವರ ಮಕ್ಕಳಿಗೂ ಶಾಂತಿಯನ್ನು ಪರಮೇಶ್ವರನು ಪ್ರಸಾದಿಸುವದಾಗಿ ಹಾರೈಸುವೆನು.

ಹೈದರಾಬಾದ್ ಚಿದಿರೇಮಠದ ವೀರಭದ್ರಶರ್ಮ,
ಶ್ರೀ ಕ್ಷೇತ್ರಪ್ರಕಾಶೀ.

ದಿವಾನ್‌ಬಹದ್ದೂರ್ ಮೊಣಸಿನಕಾಯಿ ಶಾಂತವೀರಪ್ಪನವರ ಮೇಲೆ ಕೊಟ್ಟ ಲಾಯರು ನೋಟೀಸಿಗೆ, ಅವರಿಂದಬಂದ ಕ್ಷಮಾಪಣೆ ಪತ್ರವು.

ಕಳೆದ ಅಕ್ಟೋಬರ್ 31 ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾದ ಮ|| ರಾ|| ಪಾವಟೆ ಸಿದ್ಧರಾಮಪ್ಪನವರು ಬಿ.ಎ., ಎಲ್‌ಎಲ್. ಬಿ. ಹೈಕೋರ್ಟು ವಕೀಲರು, ಇವರ ಲೇಖನದಲ್ಲಿ ಮಠವಿವೇಚನ ಮಂಡಲದಲ್ಲಿ ನಡೆದ ವಿದ್ಯಮಾನಗಳೆಲ್ಲವೂ ಚರ್ಚಿಸಲ್ಪಟ್ಟದ್ದಷ್ಟೆ. ಮಂಡಲದ ಸದಸ್ಯರಲ್ಲೊಬ್ಬರಾದ ದಿವಾನ್‌ಬಹದ್ದೂರ್ ಮೊಣಸಿನಕಾಯಿ ಶಾಂತವೀರಪ್ಪನವರು, ರಿಟೈರ್ಡ್ ಡಿಪ್ಯುಟಿಕಲೆಕ್ಟರ್ ಇವರು ಮ|| ರಾ|| ಪಾವಟೆ ವಕೀಲರ ಮತವನ್ನು ಖಂಡಿಸುವ ಭರದಲ್ಲಿ ವಟ್ಟುಗಳಲ್ಲೊಬ್ಬರಾದ ವೇ|| ತೆಲಿಗಿ ಹರಪನಹಳ್ಳಿಮಠದ ಸದಾಶಿವಯ್ಯನವರ ಬಗ್ಗೆ ಈ ಕೆಳಗೆ ಕಂಡ ದೋಷಾರೋಪಕವಾಕ್ಯವನ್ನು ಆಡಿದಂತೆ ಸದರಿ ಲೇಖದಿಂದ ಕಂಡುಬರುತ್ತದೆ. “ಇವರು (ಮ|| ಪಾವಟೆಯವರು) ಹುಬ್ಬಳ್ಳಿಯ ಮೂರುಸಾವಿರಮಠದ ಮ್ಯಾನೇಜಿಂಗು ಕಮಿಟಿಯ ಛೇರ್‌ಮನ್ನರಿರುವರು. ತಮ್ಮ ಮಠಕ್ಕೆ ಸದಾಶಿವಯ್ಯನವರನ್ನು ಗೊತ್ತುಪಡಿಸಿದರೆ ಅವರ ಯೋಗ್ಯತೆಯು ಕಡಿಮೆಯಾಗುವದೆಂದು ಹುಬ್ಬಳ್ಳಿಯ ಭಕ್ತರು ಆರಿಸಲಿಲ್ಲ. ಅಂಥವರನ್ನು ಬಾಳೆಹಳ್ಳಿ ಪೀಠಕ್ಕೆತಂದು ಅದರ ಯೋಗ್ಯತೆಯನ್ನು ಕೀಳುಪಡಿಸಲಿಕ್ಕೆ ಸದಾಶಿವಯ್ಯನವರನ್ನು ಸೂಚಿಸುತ್ತಿರುವರು.”

ಮೇಲ್ಕಂಡ ಆರೋಪವು ನಿರಾಧಾರವಾಗಿರುವುದರಿಂದಲೂ, ಹುಬ್ಬಳ್ಳಿಯ ಮೂರುಸಾವಿರಮಠದ ಪಟ್ಟಚುನಾವಣೆಗೂ, ವೇ|| ಸದಾಶಿವಯ್ಯನವರಿಗೂ ಯಾವಸಂಬಂಧವು ಇಲ್ಲದೇ ಇರುವುದರಿಂದಲೂ, ಸದರಿ ಮಿಥ್ಯಾರೋಪವು ವೇ|| ಸದಾಶಿವಯ್ಯನವರಿಗೆ ಅವಮಾನಕಾರಕವಾಗಿದ್ದು, ಅವರ ಯೋಗ್ಯತೆಗೆ ಕುಂದನ್ನುಂಟುಮಾಡುವ ಕಾರಣದಿಂದಲೂ, ಸದರಿ ದಿವಾನ್‌ಬಹದ್ದೂರರವರು ಸದರಿ ವಿಷಯವಾಗಿ ತಮ್ಮ ಅಭಿಪ್ರಾಯವನ್ನು, ಇಲ್ಲವೇ ತಮ್ಮ ಆರೋಪಕ್ಕೆ ಸರಿಯಾದ ಕಾರಣಗಳನ್ನು ಪ್ರಕಟಿಸದೇ ಹೋದುದರಿಂದಲೂ, ಸದರಿ ಆರೋಪದಲ್ಲಿ ಆರೋಪಕರ ದುರುದ್ದೇಶವು ವ್ಯಕ್ತವಾಗುವಂತಿದ್ದುದರಿಂದಲೂ, ವೇ|| ಸದಾಶಿವಯ್ಯನವರ ಪರವಾಗಿ ಮ|| ರಾ|| ಸಿ. ಬಾಲಾಜಿರಾಯರು, ಬಿ.ಎ., ಬಿ.ಎಲ್., ಹೈಕೋರ್ಟು ವಕೀಲರು, ಬಳ್ಳಾರಿ, ಇವರು ಕಳೆದ ನವಂಬರ್ 21 ನೇ ತಾರೀಖಿನಲ್ಲಿ ಸದರಿ ದಿವಾನ್‌ಬಹದ್ದೂರರಿಗೆ ಮಾನನಷ್ಟದ ದಾವಾದಬಗ್ಗೆ, ರೂ. 10,000 ಮೊತ್ತಕ್ಕೆ ಲಾಯರು ನೋಟೀಸನ್ನು ಕೊಟ್ಟಿದ್ದರು. ಸದರಿ ನೋಟೀಸಿಗೆ ದಿ|| ಬ|| ರವರು ಡಿಸೆಂಬರು 1 ನೇ ತಾರೀಖಿನಲ್ಲಿ ಕೊಟ್ಟ ಉತ್ತರದ ಸಾರಾಂಶವೇನೆಂದರೆ:—

“ಕಮಿಟಿಯಲ್ಲಿ ನಾನು ನುಡಿದಿರುವೆನೆಂದು ಬರೆಯಲ್ಪಟ್ಟಿರುವ ವಾಕ್ಯವನ್ನು ಓದಿ ನನಗೆ ಪರಮಾಶ್ಚರ್ಯವೆನಿಸಿತು. ಸದರಿ ವಾಕ್ಯವನ್ನಾಗಲಿ, ಇಲ್ಲವೇ ಅದರ ಅರ್ಥವನ್ನು ಸೂಚಿಸುವ ಬೇರೆ ಯಾವವಾಕ್ಯವನ್ನಾಗಲಿ, ನಾನು ನುಡಿದೇಯಿಲ್ಲವು. ಸಂದರ್ಭವು ಅಸಂಬದ್ಧವಾಗಿ ನಮೂದಿಸಲ್ಪಟ್ಟಿರುವುದು. ನನ್ನ ನಿಜಾಭಿಪ್ರಾಯವನ್ನು ವ್ಯಕ್ತಗೊಳಿಸುವ ಮಾತುಗಳು ಹಾರಿಸಲ್ಪಟ್ಟು, ನಿಂದಾರೋಪಕಾರಕ ಪದಗಳು ಕೆಲವು ನನ್ನವೆಂದು ಪ್ರಕಟಿಸಲ್ಪಟ್ಟಿರುವವು. ನಾನು ಸದರಿ ಸಂದರ್ಭದಲ್ಲಿ ಸದಾಶಿವಯ್ಯನವರನ್ನಾಗಲಿ, ಬೇರೆ ಯಾರನ್ನಾಗಲಿ, ಅವಮಾನಗೊಳಿಸಲು ಪ್ರಯತ್ನಪಡಲಿಲ್ಲ. ಕಮಿಟಿಯಲ್ಲಿ ಜರಿಗಿದ ವಿದ್ಯಮಾನಗಳಬಗ್ಗೆ ಮಾಡಲ್ಪಟ್ಟಿರುವ ಅಸತ್ಯಪ್ರಕಟಣೆಗಳು, ನಮ್ಮ ಸಮಾಜದಲ್ಲಿ ಒಳ್ಳೇ ಪ್ರತಿಷ್ಠೆಯನ್ನುಪಡೆದು ಹೆಸರ್ಗೊಂಡಿರುವ ಹಿರಿಯ ಪದವೀಧರರನ್ನು ನೋಯಿಸಿರುವುದರಿಂದ ನಾನು ವಿಶೇಷವಾಗಿ ವ್ಯಸನಪಡುತ್ತೇನೆ.” ಇತ್ಯಾದಿಯಾಗಿ ಬರೆದು, ವಟುಗಳ ಯೋಗ್ಯತೆಗಳ ಚರ್ಚೆಯಬಗ್ಗೆ ಕಮಿಟಿಯ ಮೆಂಬರುಗಳಿಗಿದ್ದ ಹಕ್ಕುಗಳನ್ನು ವಿವರಿಸಿರುತ್ತಾರೆ. ಮಂಡಲದ ಕಾರ್ಯಕ್ರಮಗಳು ಗುಪ್ತವಾಗಿಡಬೇಕೆಂದು ನಿರ್ಧರಿಸಲ್ಪಟ್ಟಿದ್ದವೆಂದು ಬರೆದು ಅವುಗಳನ್ನು ಬಯಲಿಗೆಳೆದ ಸದಸ್ಯರಬಗೆ ಟೀಕಿಸಿರುತ್ತಾರೆ. ಕಡೆಗೆ ತಾವು ವೇ|| ಸದಾಶಿವಯ್ಯನವರಬಗ್ಗೆ ಕೊಟ್ಟ ಅಭಿಪ್ರಾಯಗಳ ವಿಷಯವಾಗಿ ಬರೆದು, “ತಮಗೆ ತಿಳಿದಮಟ್ಟಿಗೆ ಮ|| ಸದಾಶಿವಯ್ಯನವರನ್ನು ಕಮಿಟಿಯವರು ಚುನಾಯಿಸದೇ ಇದ್ದುದಕ್ಕೆ ಅವರು ಸಂಸ್ಕೃತವನ್ನು ಅಭ್ಯಾಸ ಮಾಡಿಲ್ಲದಿದ್ದುದೇ ಕಾರಣವೆಂದ” ತಿಳಿಸಿರುತ್ತಾರೆ.

ಸದಾಶಿವಯ್ಯನವರ ಹಿತಚಿಂತಕ.

ದಾವಣಗೆರೆ ಹೈಸ್ಕೂಲ್ ವಾರ್ಷಿಕೋತ್ಸವವು.

ಪ್ರಪಂಚದಲ್ಲಿ ದೇಶಾಭಿಮಾನಿಗಳ ಮತ್ತೂ ಮಹಾರಾಜರ ಜನ್ಮದಿವಸವನ್ನು ಶುಭದಿನವೆಂದು ಗಣಿಸುವದು ವಾಡಿಕೆಯಾಗಿದೆಯಷ್ಟೇ. ಅದರಂತೆ ವಿದ್ಯಾಲಯಗಳ ವಾರ್ಷಿಕೋತ್ಸವಗಳೂ ಸಹ ಶುಭದಿನಗಳೇ ಆಗಿವೆ. ನಮ್ಮ ದಾವಣಗೆರೆಯಲ್ಲಿ ಇಂಗ್ಲಿಷ್ ಹೈಸ್ಕೂಲ್ ಸ್ಥಾಪನೆಯಾಗಿ ೩ ವರ್ಷಗಳಾದವು. ವರ್ಷವರ್ಷಕ್ಕೂ ನಮ್ಮ ಸ್ಕೂಲಿನ ಅಭಿವೃದ್ಧಿಯು ಹೆಚ್ಚುತ್ತಲೇ ಇರುವುದು. ಪದ್ಧತಿಯಂತೆ ಈ ವರ್ಷದ ವಾರ್ಷಿಕೋತ್ಸವವನ್ನು ಫೆಬ್ರವರಿ 13, 14, 15 ನೇ ತಾರೀಖುಗಳಲ್ಲಿ ಅತಿ ವಿಜೃಂಭಣೆಯಿಂದ ನಡೆಯಿಸಿದರು. ಮೊದಲನೇ ಎರಡು ದಿವಸಗಳಲ್ಲಿ ಕಾರ್ಯಕ್ರಮದ ಪ್ರಕಾರ ಆಟಪಾಟಗಳು ನಡೆದುವು. ಮನುಷ್ಯನ ಅಭಿವೃದ್ಧಿಗೆ ಮೂಲವಾದ ಮತ್ತು ಆಯುರಾರೋಗ್ಯಾಭಿವೃದ್ಧಿಗೆ ಕಾರಣಗಳಾದ ಆಟಪಾಟಗಳಿಗೆ ಹೆಚ್ಚು ಲಕ್ಷ್ಯಕೊಡುವುದು ಸಹಜವಷ್ಟೆ. ಆಟಪಾಟಗಳಲ್ಲಿ ಜಯಪ್ರದರಾದ ವಿದ್ಯಾರ್ಥಿಗಳಿಗೆ ಅವರವರ ಕುಶಲತೆಗೆ ತಕ್ಕಂತೆ ಬಹುಮಾನಗಳು ಕೊಡಲ್ಪಟ್ಟವು. ಕೊನೆಯದಿವಸ ಮಧ್ಯಾಹ್ನದಲ್ಲಿ ರಸಾಯನಶಾಸ್ತ್ರವಸ್ತುಪ್ರದರ್ಶನಗಳನ್ನು ಬಹು ಚಮತ್ಕಾರವಾಗಿ ವಿದ್ಯಾರ್ಥಿಗಳೇ ಮಾಡಿ ತೋರಿಸಿದರು. ಸಾಯಂಕಾಲದಲ್ಲಿ ಸಭೆಯು ಸೇರಿತು. ಇಲ್ಲಿಯ ಸುಪ್ರಸಿದ್ಧ ವಕೀಲರಾದ ಮ|| ಬಿ. ವೆಂಕಟರಾಮಣ್ಣ, ಬಿ.ಎ., ಬಿ.ಎಲ್., ಇವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಭಾಮಂಟಪವು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟು ಅನೇಕ ವಿದ್ವಾಂಸ ಮತ್ತೂ ವಿದ್ಯಾರ್ಥಿಗಳೆಂಬ ರತ್ನಗಳಿಂದ ಶೋಭಾಯಮಾನವಾಗಿ ತೋರುತ್ತಿದ್ದಿತು. ನಮ್ಮ ನೂತನ ಹೆಡ್ಮಾಸ್ಟರಾದ ಮ|| ಶಿವರಾಮ್, ಎಮ್.ಎ., ಎಲ್.ಟಿ., ಯವರು ಸ್ವಾಗತಸಂಘದಪರವಾಗಿ “ಈ ಊರಿನ ವಿದ್ಯಾರ್ಥಿಗಳು ಯಾವುದಾದರೊಂದು ಕೆಲಸ ಮಾಡುವುದರಲ್ಲಿ ಮುಂದಾಳುಗಳು. ಆದರೆ ವಿದ್ಯಾರ್ಥಿಗಳ ತಂದೆತಾಯಿಗಳು ವಿದ್ಯಾರ್ಥಿಗಳ ಅಭ್ಯಾಸದ ವಿಷಯದಲ್ಲಿ ತಿಲಾಂಶವಾದರೂ ಲಕ್ಷ್ಯ ಕೊಡುವುದಿಲ್ಲ. ಇದೊಂದು ವಿಷಾದಕರವಾದ ಸಂಗತಿಯೇ ಸರಿ. ಈ ಊರಿನಲ್ಲಿ ತಂದೆತಾಯಿಗಳ ಸಂಘ ಎಂದರೆ ವಿದ್ಯಾರ್ಥಿಗಳ ವಿಷಯದಲ್ಲಿ ಗಮನಕೊಡಬೇಕೆಂದು ಬೋಧನೆಮಾಡುವ ಪೇರೆಂಟ್ಸ್ ಆಸೋಸಿಯೇಷನ್ ಏರ್ಪಾಡಾಗದ ಹೊರತು ವಿದ್ಯಾಭಿವೃದ್ಧಿಗೆ ಬೇರೆ ಮಾರ್ಗವೇ ಇಲ್ಲ. ಇಂಟರ್‌ಮಿಡಿಯಟ್ ಕಾಲೇಜ್ ಸ್ಥಾಪನೆಯಾಗದೇ ಇರುವುದಕ್ಕೆ ಇದೊಂದು ತಡೆಯಾಗಿರುವುದು. ಲೋವರ್‌ಸೆಕೆಂಡರಿ ತರಗತಿಗಳಿಂದ ಹೈಸ್ಕೂಲಿಗೆ ಸಾಕಾದಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಬರುವುದಿಲ್ಲ. ಇದೆಲ್ಲಕ್ಕೂ ತಂದೆತಾಯಿಗಳ ಅಶ್ರದ್ಧೆಯೇ ಕಾರಣವೆಂದು ತೋರುತ್ತದೆ. ಇನ್ನುಮುಂದೆ ತಂದೆತಾಯಿಗಳು ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಗಮನವನ್ನು ಕೊಡುವರೆಂದು ನಾನು ನಂಬಿದ್ದೇನೆ.” ಹೀಗೆಂದು ಭಾಷಣಮಾಡಿದರು. ಅನಂತರ ಮ|| ಬಿ. ಹನುಮಂತರಾವ್, ಬಿ.ಎ., ಯವರು ಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಪರವಾಗಿ ಮನೋಹ್ಲಾದಕರವಾದ ಭಾಷಣವನ್ನು ಮಾಡಿದರು. ಕಾಯಿದೆ ಕೌನ್ಸಿಲ್ ಮೆಂಬರರಾದ ಮ|| ಡಿ. ಎಚ್. ಚಂದ್ರಶೇಖರಯ್ಯ, ಬಿ.ಎ., ಎಲ್‌ಎಲ್.ಬಿ., ಯವರು ತಾವು ಹೆಡ್ಮಾಸ್ಟರರ ಸಲಹೆಗೆ ಅನುಕೂಲವನ್ನು ಕಲ್ಪಿಸಲು ಪ್ರಯತ್ನಿಸುವೆನೆಂದು ಮತ್ತೂ ಇಷ್ಟರಲ್ಲಿಯೇ ಈ ಊರಿನಲ್ಲಿ ಇಂಟರ್‌ಮಿಡಿಯಟ್ ಕಾಲೇಜು ಸ್ಥಾಪನೆಯಾಗುವ ಸಂಭವವಿದೆಯೆಂದು ಭಾಷಣಮಾಡಿದರು. ಕೊನೆಗೆ ಅಧ್ಯಕ್ಷರ ಅಮೋಘವಾದ ಭಾಷಣವಾಯಿತು. ಇವರು ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದ ಕೆಲವು ಬುದ್ಧಿಯ ಮಾತುಗಳನ್ನೂ ಎಲ್ಲಾ ವಿಷಯಗಳನ್ನೂ ಕ್ರೋಢೀಕರಿಸಿ ಹೃದಯಂಗಮವಾಗಿ ಭಾಷಣವನ್ನು ಮಾಡಿದರು. ಮೈಸೂರು ರಾಷ್ಟ್ರಗೀತೆಯು ಹಾಡಲ್ಪಟ್ಟಮೇಲೆ ಸಭಾಧ್ಯಕ್ಷರಿಗೆ ಪುಷ್ಪತಾಂಬೂಲಾದಿಗಳು ಅರ್ಪಿಸಲ್ಪಟ್ಟು ಸಭೆಯು ಮುಗಿಸಲ್ಪಟ್ಟಿತು. ರಾತ್ರಿ ವಿದ್ಯಾರ್ಥಿಗಳು ಕನ್ನಡದಲ್ಲಿ ತಮಗಿರುವ ಅಭಿರುಚಿಯನ್ನು ತೋರಿಸುವುದಕ್ಕೋಸ್ಕರ ಭೋಜಕಾಳಿದಾಸ ಎಂಬ ನಾಟಕವನ್ನು ಅಭಿನಯಿಸಿದರು. ನಾಟಕವು ಬಹಳ ನೇತ್ರಾನಂದವನ್ನುಂಟುಮಾಡಿತು. ಮ|| ನರಸಿಮ್ಮಲು, ಬಿ.ಎ., ಇವರು ಕಲಿಸಿದ ಷೇಕ್ಸ್‌ಪಿಯರ್ ಕೃತ ಮ್ಯಾಕ್‌ಬೆತ್ ಎಂಬ ನೀತಿಪ್ರದರ್ಶಕವಾದ ಇಂಗ್ಲಿಷ್ ನಾಟಕವನ್ನು ವಿದ್ಯಾರ್ಥಿಗಳು ಬಹಳ ಚೆನ್ನಾಗಿ ಅಭಿನಯಿಸಿದರು. ಈ ವರ್ಷ ಹೈಸ್ಕೂಲ್ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಇದರಲ್ಲಿ ಅವಿಶ್ರಾಂತರಾಗಿ ಕೆಲಸಮಾಡಿದ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಸ್ತೋತ್ರಾರ್ಹರೇ ಸರಿ.

N. Murigappa.

ಶ್ರೀಶಿವಯೋಗಮಂದಿರದಲ್ಲಿ ನಡೆದ ಶಿವರಾತ್ರೆ.

ಶ್ರೀಶಿವಯೋಗಮಂದಿರವು ಸ್ಥಾಪಿತವಾದ 1909 ರಿಂದ ಪ್ರತಿವರ್ಷ ಶ್ರೀಮಂದಿರದಲ್ಲಿ ಸ್ತ್ರೀಪುರುಷರ ಬೇರೆಬೇರೆ ಸಮ್ಮೇಲನಗಳೂ, ಪ್ರಸಿದ್ಧವ್ಯಾಖ್ಯಾತರುಗಳ ಭಾಷಣಗಳೂ, ಶಿವಕೀರ್ತನೆಯೂ, ಪಾದಪೂಜೆಯೂ, ವೈದಿಕಶಾಲೆಯೂ, ಸಾಧಕರಪರೀಕ್ಷೆಯೂ, ರಥೋತ್ಸವವೂ ತಪ್ಪದೆ ನಡೆಯುತ್ತಿರುವವು. ಅದರಂತೆ ಶ್ರೀಮಂದಿರದಿಂದ ಪ್ರತಿವರ್ಷ ಸಾದ್ಯಂತ ರಿಪೋರ್ಟು ಛಾಪಿಸಲ್ಪಟ್ಟು ಹಂಚಲ್ಪಡುತ್ತಿರುವದು. ಟ್ರಸ್ಟಿಜನರೂ, ಮ್ಯಾನೇಜಿಂಗ್ ಕಮಿಟಿಯಜನರೂ ತಕ್ಕ ವ್ಯವಸ್ಥೆಯನ್ನು ಇಡುತ್ತಿರುವರು. ಅಲ್ಲಿನ ದರ್ಶನಕ್ಕಾಗಿ ಬರುವ ಜನರು ಶಾಲೆಯ ಉತ್ತಮತರದ ಸಾಧಕರ ಯೋಗಾಭ್ಯಾಸ, ಶಾಲೆಯಸ್ಥಿತಿ, ಧರ್ಮಜಾಗ್ರತೆ ಮುಂತಾದ ಕೆಲಸಗಳನ್ನು ನೋಡಿ ಉತ್ತಮೋತ್ತಮ ಅಭಿಪ್ರಾಯಗಳನ್ನು ಬರೆದಿರುವದು ಸಹ ಕಾಲಕಾಲಕ್ಕೆ ವಾರ್ಷಿಕ ರಿಪೋರ್ಟಿನಲ್ಲಿ ಮುದ್ರಿಸಲ್ಪಡುತ್ತಿರುವುದು. ಮಂದಿರದಿಂದ ಖರೀದಿಮಾಡಿದ ವ ಅದಕ್ಕೆ ದಾನವಾಗಿಸಿಕ್ಕಿದ ಭೂಮಿಗಳ ವ್ಯವಸ್ಥೆ ಉತ್ತಮ ಇದ್ದು ಗೋಪಾಲನ ಸಹ ಚೆನ್ನಾಗಿ ನಡೆದಿದೆ. ಸದರೀ ಮಂದಿರಕ್ಕೆ 7-8 ಸಾವಿರ ರೂಪಾಯಿ ವಾರ್ಷಿಕ ಉತ್ಪನ್ನವಿದ್ದು 1½ ಲಕ್ಷ ಬೆಲೆಬಾಳುವಸ್ಥಾವರ ಆಸ್ತಿಯುಂಟು. ಇಷ್ಟು ಶ್ರಮಪಟ್ಟು ಕೇವಲ ಧರ್ಮಜಾಗ್ರತೆಗಾಗಿ ಗುರುಗಳನ್ನು ಉತ್ತಮರನ್ನಾಗಿ ಮಾಡಿಸುವ ಪಾರಮಾರ್ಥಿಕ ಕೆಲಸಕ್ಕೆಕೊಂಡು ಜೋಳಿಗೆ ಮತ್ತು ಬೆತ್ತಕ್ಕೆ ಅಪ್ಪನೆಕೊಟ್ಟು ಹಗಲಿರುಳು ಎನ್ನದೆ ಅವಿಶ್ರಾಂತ ಶ್ರಮಪಡುವ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳೇ ಈ ಜಗತ್ತಿನಲ್ಲಿ ಧನ್ಯರು. ನಮ್ಮ ಜನಾಂಗವು ಅವರಿಗೆ ಆಜನ್ಮಋಣಿಯಾಗಿರುವದು ಮತ್ತು ಏಳೇಳುಜನ್ಮದಲ್ಲಿ ಅವರ ಉಪಕಾರ ತೀರಿಸುವದಾಗದು. ಅವರ ಈ ಮೇಲುಪಂಕ್ತಿಯನ್ನು ಎಲ್ಲ ಸಿಂಹಾಸನಾಧಿಪತಿಗಳೂ, ದೊಡ್ಡದೊಡ್ಡ ವಿರಕ್ತ ಜಗದ್ಗುರುಗಳೂ ಅನುಸರಿಸಿದರೆ ಕ್ಷಿಪ್ರದಲ್ಲಿಯೇ ನಮ್ಮ ಜನರು ಮುಂದಕ್ಕೆ ಬರುವುದರಲ್ಲಿ ಸಂಶಯವಿಲ್ಲ. ಪರೋಪಕಾರಕ್ಕಾಗಿ ಅವರು ತಮ್ಮ ಆತ್ಮವನ್ನೇ ಅರ್ಪಣಮಾಡಿರುವರು. ಜಗದೀಶನು ಅವರಿಗೆ ದೀರ್ಘಾಯುಷ್ಯವನ್ನು ಕೊಡಲಿ. ಅವರಿಂದ ಇನ್ನೂ ಅನೇಕಮಹತ್ವದ ಕಾರ್ಯಗಳಾಗುವದರಲ್ಲಿ ಸಂದೇಹವಿಲ್ಲ. ಅವರಲ್ಲಿ ಭೂತದಯೆ ಮನೆಮಾಡಿಕೊಂಡಿರುವದು. ಪರೋಪಕಾರವೇ ಅವರ ಬಂಧು, ಧರ್ಮವೇ ಅವರ ಮನೆ. ಈರೀತಿ ಅವರು ನಡೆಯುವದನ್ನು ನೋಡಿ ಸಜ್ಜನರು ಅವರಿಗೆ ನಮಿಸುವರು; ಪರಮಾತ್ಮರು ಆದರಿಸುವರು. ಸ್ವಾರ್ಥಸಾಧಕರೂ, ಡಂಭಾಚಾರಿಗಳೂ, ದುರುಳ ವೇದಾಂತಿಗಳೂ ಅವರನ್ನು ನೋಡಿ ಗೂಗೆಗಳಂತೆ ಗೂಡುಸೇರಿರುವರು. ಇರಲಿ, ಅವರು ಹಿಡಿದಕೆಲಸ ಸುಕೃತವದೆ. ಅದಕ್ಕೆ ಶಿವನು ಮೆಚ್ಚುವನು. ಇದಕ್ಕೆ ಸಂದೇಹವಿಲ್ಲ. ಈ ವರ್ಷ ಮಹಾಶಿವರಾತ್ರಿಯ ಕಾಲಕ್ಕೆ 6000-7000 ಸಾವಿರ ಜನರು ಕೂಡಿದ್ದರು. ಒಕ್ಕಲತನದ ಪ್ರದರ್ಶನವಾಯಿತು. ದನಗಳಿಗೆ ಅಂದರೆ ಉತ್ತಮಜೋಡಿಗಳಿಗೆ ಕಮಿಟಿಯವರ ಅಭಿಪ್ರಾಯದಂತೆ ಇನಾಮುಗಳು ಸಿಕ್ಕಿದುವು. ಕೈಗಾರಿಕೆಯ ಸಾಮಾನುಗಳು ಬಂದಿದ್ದು ಅವುಗಳಲ್ಲಿ ಚಾಪಾದವುಗಳಿಗೆ ಸರ್ಟಿಫಿಕೇಟೂ ಇನಾಮೂ ದೊರೆತವು. ಹಿರೇಹಾಳ ವೀರಯ್ಯನವರ ವ ಬಸವಲಿಂಗಶಾಸ್ತ್ರಿಗಳ ಕೀರ್ತನಗಳಾದವು. ವೀರಶೈವಮಠದ ಲಾವಣಿಪದಗಳಾದವು. ಕೆಲವು ಸಭೆಗಳಿಗೆ [illegible] ಸ್ವಾ||ಬ್ಯಾ|| ಡಿ.ಡಿ.ಸಿ. [illegible] ಇವರು ಅಧ್ಯಕ್ಷರಿದ್ದರು. ಕೆಲವು ಸಭೆಗಳಿಗೆ ಶ್ರೀಮಂತ [illegible]

ಮುಖರು ಹೈದರಾಬಾದ ಇವರಿದ್ದರು. ಪರಳಿ ರುದ್ರಾಭಿಷೇಕದ ಪ್ರಕರಣದಲ್ಲಿ ಹೈದರಾಬಾದಿನಲ್ಲಿ ಅತಿ ಉತ್ಸಾಹದಿಂದ ಕೆಲಸಮಾಡಿದ ರಾ|| ರಾ|| ಶರಣಯ್ಯ ಹೈಕೋರ್ಟು ವಕೀಲ ಇವರಿಗೆ ಶ್ರೀಶಿವಯೋಗಮಂದಿರದಿಂದ “ಸದ್ಧರ್ಮರಕ್ಷ”ವೆಂಬ ಬಿರುದನ್ನು ದಯಪಾಲಿಸಿದರು. ಇವರು ಸದರೀ ಪರಳೀ ಪ್ರಕರಣ ವ್ಯಾಜ್ಯದಲ್ಲಿ ಶ್ರೀಹಾನಗಲ್ಲ ಕುಮಾರ ಮಹಾಸ್ವಾಮಿಗಳು ಅನ್ನನೀರಿಲ್ಲದೆ ಹಗಲುರಾತ್ರಿ ಎನ್ನದೆ ಮಾಡಿದ ಸಾಹಸವನ್ನು ಬಹಳ ಸರಸಾಗಿ ವರ್ಣಿಸಿದರು. ಕೆಲವು ಮಂದಿರದ ಸಾಧಕರ ಉಪನ್ಯಾಸಗಳಾದವು. ಅದರಂತೆ ಶ್ರೀ ಮಹಾಂತಸ್ವಾಮಿಗಳ, ಸಂಪಗಾಂವಿ ಚರಮೂರ್ತಿಗಳ, ವಿಜಾಪೂರ ಬೆಳ್ಳಾವಶೀಲರ, ದಾವಣಗೇರಿ ನಂಜುಂಡಯ್ಯನವರ, ಬಂಗಾಲಕಡಿಯ ಜೈನಸ್ವಾಮಿಗಳು, ಶಿವಯೋಗಪ್ಪನವರು, ಶೆಟ್ಟರು ಡಿ. ಎ. ಇನ್ಸ್‌ಪೆಕ್ಟರು. ಜೆ. ಜ. ಹಿರೇಮಠ ಡಿ. ಆ. ಓವರ್ಸೀಯರು, ವಿ|| ಇಟಗಿ ಆ. ಓವರ್ಸೀಯರು, ಶ್ರೀ ಶಿವಮೂರ್ತಿಸ್ವಾಮಿ ಕಣಬರಗಿಮಠ ಮುಂತಾದವರ ಉತ್ತಮ ಉಪನ್ಯಾಸಗಳಾದವು. ಈ ವರ್ಷದ ರಿಪೋರ್ಟು ಓದಿ ಮಂಜೂರ್ಮಾಡಲ್ಪಟ್ಟಿತು. ರಾ|| ಸಾ|| ಕುಲಕರ್ಣಿ ಬಸವಲಿಂಗಪ್ಪನವರು ಮಾಮಲೇದಾರ ಬದಾಮಿ ಇವರು ದನಗಳ ಒಕ್ಕಲತನದ ಪ್ರದರ್ಶನಕ್ಕೆ ವಿಶೇಷ ಶ್ರಮವಹಿಸಿದರು. ಬಾಲಕ ಉಪನ್ಯಾಸಕರಲ್ಲಿ ಶಿವಶಂಕರಸ್ವಾಮಿ ಕಣಬರಗಿಮಠ ಇವರು ತಮ್ಮ ಬಾಲಭಾಷೆಯಲ್ಲಿ ಮಂಜುಳವಾಗಿ ಕೆಳಗೆ ಬರೆದಂತೆ ಭಾಷಣಮಾಡಿದರು. ಅದು ಬಹಳ ಉಪಯೋಗವುಳ್ಳದ್ದಿರುವದರಿಂದ ಅದರ ಸಾರಾಂಶವನ್ನು ಕೊಟ್ಟಿರುತ್ತೇವೆ. ಅವರ ಭಾಷಣಕ್ಕೆ ಸರ್ವರೂ ಆನಂದಭರಿತರಾಗಿ ಶ್ರೀಗಳು ಕಮಿಟಿಯಿಂದ 5 ರೂಪಾಯಿ ಇನಾಮು ಕೊಟ್ಟರು. ಅದನ್ನು ಆ ಬಾಲಕನು ಧರ್ಮಾರ್ಥಫಂಡಿಗೆ ಆಗಲೇ ಕೊಟ್ಟುಬಿಟ್ಟನು. ಸಾರಾಂಶ—ಶಿವಯೋಗಮಂದಿರದಲ್ಲಿ ನಾಲ್ಕುದಿವಸ ವ್ಯಾಖ್ಯಾನ, ಕೀರ್ತನೆ, ಪುರಾಣ, ದನಗಳ ಪ್ರದರ್ಶನ, ಒಕ್ಕಲತನದ ಉನ್ನತಿಯ ಕೆಲಸಗಳು, ಸಾಧುಗಳ ದರ್ಶನ, ಸಾಧಕರ ಭಾಷಣ ಮುಂತಾದ ಕೆಲಸಗಳು ನಡೆದವು. ಓರ್ವ ಪ್ರತ್ಯಕ್ಷದರ್ಶಿ.

ವಿದ್ಯೆಯ ಲಾಭಗಳು.

ಮಹಾಸ್ವಾಮಿಗಳೇ, ಅಧ್ಯಕ್ಷರೇ, ಸಭ್ಯಗೃಹಸ್ಥರೇ, ಈಹೊತ್ತು ನಿಯಮಿಸಿದ ವಿದ್ಯೆಯ ಲಾಭಗಳು ಈ ವಿಷಯದಮೇಲೆ ನಾನು ತುಸು ಭಾಷಣ ಮಾಡುವೆನು. ಅದರಲ್ಲಿ ಏನಾದರೂ ತಪ್ಪುಗಳಿದ್ದಲ್ಲಿ ಕ್ಷಮಿಸುವಿರೆಂದು ಬೇಡಿಕೊಳ್ಳುವೆನು. ವಿದ್ಯೆಗಳು 64 ಉಂಟು. ಮನುಷ್ಯನು ಅವುಗಳನ್ನು ಪೂರ್ಣಮಾಡುವದು ಅಶಕ್ಯವಿದೆ. ಕಾರಣ ದೇವರು ನಮ್ಮನ್ನು ಯಾವಸ್ಥಿತಿಯಲ್ಲಿ ಇಟ್ಟಿರುವನೋ ಅದನ್ನು ಲಕ್ಷ್ಯಕ್ಕೆ ತಂದು ತನ್ನ ಪ್ರಪಂಚಕ್ಕೂ, ಕಾರ್ಯಕ್ಕೂ, ಪರೋಪಕಾರಕ್ಕೂ, ಆತ್ಮೋನ್ನತಿಗೂ ಬೇಕಾಗುವಷ್ಟು ವಿದ್ಯೆಯನ್ನು ಬಾಲ್ಯಾರಭ್ಯ ಕಲಿಯುವದೇ ಪ್ರತಿಯೊಬ್ಬ ಮಾನವಪ್ರಾಣಿಯ ಕರ್ತವ್ಯವು. ಮುಂದೆ ಅದನ್ನು ಬೆಳಸುವದೂ ಲೋಕಕಲ್ಯಾಣಕ್ಕೆ ಕೊಡುಗುವದೂ ಅವರವರ ಸ್ಥಿತಿಗತಿಯಮೇಲೆ ಅವಲಂಬಿಸಿರುವದು. ಪ್ರಪಂಚಕ್ಕೆ ಬೇಕಾಗುವ ಪ್ರಚಲಿತ ವಿಷಯಗಳು, ಓದುಬರಹ, ಮಾತೃಭಾಷೆ, ರಾಜಭಾಷೆ ಧರ್ಮರಹಸ್ಯ, ಒಕ್ಕಲತನದ ವಿದ್ಯೆ, ದನಗಳ ಸಂಗೋಪನ, ಆರೋಗ್ಯ ಲಕ್ಷಣ, ರೋಗಚಿಕಿತ್ಸೆ, ದೇಶದಕಾಯಿದೆ ಕಾನೂನಗಳು, ನಮ್ಮ ಧರ್ಮಗಜ್ಞಾನ, ಗುರುಹಿರಿಯರ ಸೇವೆ ಮುಂತಾದ ವಿಷಯಗಳನ್ನು ನಾವು ಕಲಿಯಲೇಬೇಕು. ಈ ರೀತಿ ಕಲಿತು ನಮ್ಮ ಮನವನ್ನು ವಿಶಾಲಪಡಿಸಿ ಜಗದೀಶನು ಸೃಷ್ಟಿಸಿದ ಕಾರ್ಯಕ್ಕೆ ನಾವೆಲ್ಲರೂ ನಡಕಟ್ಟಿಕೊಂಡು ಒಂದೇ ಮನಸ್ಸಿನಿಂದ ದುಡಿಯಬೇಕು. ಪರೋಪಕಾರಮಾಡುವದನ್ನು ಮರೆಯಬಾರದು. ಪರಪೀಡೆಯನ್ನು ಮಾಡಬಾರದು. ನಾವು ಯಾರು, ನಮ್ಮ ಧರ್ಮವಾವದು, ನಮ್ಮ ಗುರುಗಳ್ಯಾರು, ನಾವು ಎಲ್ಲಿಂದ ಬಂದೆವು, ಈ ಜಗತ್ತಿನಲ್ಲಿ ನಾವು ಏನುಮಾಡಬೇಕಾಗಿದೆ ? ಎಂಬ ಮಹತ್ವದ ವಿಷಯಗಳನ್ನು ಗುರುಮುಖದಿಂದ ತಿಳಕೊಂಡು ಸುಶೀಲರಾಗಿ ರಾಜನಿಷ್ಠೆಯಿಂದ ವಿದ್ಯೆಕಲಿಯಬೇಕು. ತನಗಿಂತ ಮುಂದಾದವರನ್ನು ಕೂಡುವದಕ್ಕೂ, ಹಿಂದೆಬಿದ್ದವರನ್ನು ಮುಂದಕ್ಕೆ ತರುವದಕ್ಕೂ ಯಾವಾಗಲೂ ಪ್ರಯತ್ನಿಸಬೇಕು. ಸತ್ಯಮಾತಾಡುವದೂ, ಸದಾಚಾರಿಯಾಗುವದೂ, ಧರ್ಮದಲ್ಲಿ ಆಸಕ್ತಿಯಿರುವದೂ, ಗುರುಗಳಲ್ಲಿ ಹಿರಿಯರಲ್ಲಿ ವಿಧೇಯನಾಗಿರುವದೂ, ದೇವರಲ್ಲಿ ನಂಬಿಗೆಯಿಟ್ಟಿರುವದೂ, ರಾಜನಲ್ಲಿ ನಿಷ್ಠೆಯಿಂದಿರುವದೂ, ದೇಶದ ಕಾಯಿದೆ ಕಾನೂನಗಳಲ್ಲಿ ವಂಚನೆಯಿಲ್ಲದೆ ನಡೆಯುವದೂ ಬಹಳ ಉತ್ತಮಲಕ್ಷಣಗಳು. ಇವನ್ನು ಮರೆಯಕೂಡದು. ನಾವು ಈ ಮಂದಿರಕ್ಕೆ ಬರುವದರಿಂದ ನಮಗೆ ಈ ಮಂದಿರದ ಸೊಬಗು ಶ್ರೀಮಹಾಸ್ವಾಮಿಗಳ ದರ್ಶನ, ಸಾಧುಸತ್ಪುರುಷರ ಪುಣ್ಯಕಥೆಗಳು, ಶಿವಕೀರ್ತನಭಜನ ಮುಂತಾದವುಗಳನ್ನು ಕೇಳುವುದೂ ಲಭ್ಯವಾಗುವವು. ಅವು ನಮ್ಮ ಮುಂದಿನ ಪ್ರಪಂಚಕ್ಕೆ ಮತ್ತು ವಿದ್ಯೆಗೆ ಬಲು ಅನುಕೂಲವಾಗುವವು. ಇಷ್ಟು ನನ್ನ ಅಲ್ಪಮತಿಗೆ ತಿಳಿದಷ್ಟು ಹೇಳಿ ನನ್ನ ಭಾಷಣ ಮುಗಿಸುವೆನು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

ಹೈಸ್ಕೂಲು ವ್ಯಾಸಂಗ.

ನನಗೆ ವಿವಾಹವಾದಾಗ ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದೆನೆಂದು ಮೊದಲೇ ಹೇಳಿರುತ್ತೇನೆ. ನಾವು ಮೂವರು ಸಹೋದರರು ಒಂದೇ ಸ್ಕೂಲಿನಲ್ಲಿ ಓದುತ್ತಿದ್ದೆವು. ನನ್ನ ದೊಡ್ಡ ಅಣ್ಣನು ನನಗಿಂತಲೂ ಒಂದು ಹೆಚ್ಚಿನ ತರಗತಿಯಲ್ಲಿದ್ದನಲ್ಲದೆ ನನ್ನ ಕೂಡ ಮದುವೆಯಾದ ಚಿಕ್ಕಣ್ಣನು ಸಹ ನನ್ನ ಮೇಲಿನ ತರಗತಿಯಲ್ಲೇ ಇದ್ದನು. ವಿವಾಹದಿಂದ ನಾವಿಬ್ಬರೂ ಒಂದು ವರ್ಷವನ್ನು ಹಾಳುಮಾಡಿಕೊಂಡೆವು. ನಮ್ಮ ದೊಡ್ಡಣ್ಣನ ವಿಚಾರವಾದರೂ ಇನ್ನೂ ಅನ್ಯಾಯವಾಯಿತು. ಅಂದರೆ ಓದುವುದನ್ನು ಬಿಟ್ಟುಬಿಟ್ಟನು. ಅಂತಹವರು ಎಷ್ಟು ಜನರಿರುವರೋ ಭಗವಂತನಿಗೇ ವೇದ್ಯವು. ಪ್ರಸ್ತುತದಲ್ಲಿ ವಿವಾಹವಾದವರೂ ಓದುಕೊಂಡಿರುವರು.

ನಾನೂ ವ್ಯಾಸಂಗಮಾಡಿಕೊಂಡೇ ಇದ್ದನು. ನಾನು ಮುಗ್ಧನಾಗಿರಲಿಲ್ಲ. ಪಾಠಶಾಲೆಯಲ್ಲಿ ಉಪಾಧ್ಯಾಯರುಗಳೆಲ್ಲರೂ ನನ್ನನ್ನು ಪ್ರೀತಿಸುತ್ತಿದ್ದರು. ವಿದ್ಯಾರ್ಥಿಯ ವ್ಯಾಸಂಗವನ್ನೂ, ನಡತೆಯನ್ನೂ ಕುರಿತು ಪ್ರತಿವರ್ಷದಲ್ಲೂ ತಂದೆತಾಯಿಗಳಿಗೆ ಸರ್ಟಿಫಿಕೇಟು ಅಂದರೆ ಯೋಗ್ಯತಾಪತ್ರಿಕೆಯು ಕಳುಹಲ್ಪಡುತ್ತಿದ್ದಿತು. ನನ್ನ ವಿಚಾರವಾಗಿ ನನ್ನ ತಂದೆಯವರಲ್ಲಿಗೆ ಯಾವಾಗಲೂ ಕೆಟ್ಟ ಸರ್ಟಿಫಿಕೇಟು ಕಳುಹಲ್ಪಟ್ಟಿರಲಿಲ್ಲವು. ಎರಡನೇ ಸ್ಟಾಂಡರ್ಡ ದಾಟದಮೇಲೆ ನನಗೆ ಪಾರಿತೋಷಿಕಗಳು ಕೂಡ ಬಂದುವು. 5-6 ಸ್ಟಾಂಡರ್ಡಿನಲ್ಲಿದ್ದಾಗ್ಗೆ 4-6 ರೂಪಾಯಿಗಳ ವಿದ್ಯಾರ್ಥಿವೇತನವು ದೊರೆಯುತ್ತಿದ್ದಿತು. ಅದಕ್ಕೆ ನನ್ನ ಅದೃಷ್ಟವೇ ಕಾರಣವೆಂದು ಹೇಳಬೇಕಲ್ಲದೆ ನನ್ನ ಬುದ್ಧಿ ಕಾರಣವೆಂದು ಹೇಳಲಾರೆನು. ಏಕೆಂದರೆ, ಈ ವೇತನವು ಎಲ್ಲರಿಗೂ ಕೊಡಲ್ಪಡತಕ್ಕುದಲ್ಲ. ಕಥೆವಾಡದಲ್ಲಿ ಸೂರತ್ ಡಿವಿಜನ್ನಿನಿಂದ ಬಂದವರಲ್ಲಿ ಗಟ್ಟಿಗನಾದವನಿಗೆ ಮಾತ್ರ ಕೊಡಲ್ಪಡತಕ್ಕುದಾಗಿದ್ದಿತು. 40-50 ಮಂದಿಯುಳ್ಳ ತರಗತಿಯಲ್ಲಿ ಸೂರತಿನಿಂದ ಆಗ ಎಷ್ಟೋಮಂದಿ ಬಂದವರಿದ್ದರು.

ನನ್ನ ಬುದ್ಧಿವಿಶೇಷವನ್ನು ಕುರಿತು ನನಗೆ ಯಾವಾಗಲೂ ಅಷ್ಟು ಹೆಚ್ಚಿಗೆಯಿರಲಿಲ್ಲವೆಂದು ಜ್ಞಾಪಕ. ನನಗೆ ಪಾರಿತೋಷಿಕಗಳೂ, ವಿದ್ಯಾರ್ಥಿವೇತನಗಳೂ ದೊರಕಿದಾಗೆಲ್ಲ ನನಗೆ ಆಶ್ಚರ್ಯವಾಗುತ್ತಿದ್ದಿತು. ಆದರೆ ನನ್ನ ನಡವಳಿಕೆಯ ವಿಚಾರದಲ್ಲಿ ಮಾತ್ರ ಬಹಳ ಎಚ್ಚರಿಕೆಯಿಂದಿರುತ್ತಿದ್ದೆನು. ಯಾವಾಗಾದರೂ ನನ್ನ ನಡತೆಯಲ್ಲಿ ಕುಂದುಂಟಾದಾಗ ಮಾತ್ರ ನನ್ನ ಕಣ್ಣಲ್ಲಿ ನೀರು ಬರುತ್ತಿದ್ದಿತು. ನಾನು ತಿಳಿದೋ ತಿಳಿಯದೋ ತಪ್ಪು ಮಾಡಿದೆನೆಂದು ಉಪಾಧ್ಯಾಯನು ತಿಳಿದು ನನ್ನನ್ನು ಛೀಗುಟ್ಟಿದಾಗ ನನಗೆ ಅದೆಷ್ಟೋ ಕಷ್ಟವಾಗಿ ತೋರಿ ಸಹಿಸಲಶಕ್ಯವಾಗಿರುತ್ತಿದ್ದಿತು. ಒಂದುಸಾರಿ ಮಾತ್ರ ನನ್ನನ್ನು ಬೆತ್ತದಿಂದ ಹೊಡೆದನು. ಆ ಏಟನ್ನು ನಾನು ಲಕ್ಷಿಸುವವನಲ್ಲದಿದ್ದಾಗ್ಯೂ, ಅಂತಹ ಶಿಕ್ಷೆಗೆ ಗುರಿಯಾಗಬೇಕಾದ ಅಪರಾಧವನ್ನು ಮಾಡಿದನಲ್ಲ ಎಂದು ಬಹಳವಾಗಿ ಚಿಂತಿಸಿದೆನು; ಅಮೇಲೆ ಎಚ್ಚತ್ತುಕೊಂಡೆನು. ಇದು 1-2 ನೇ ತರಗತಿಯಲ್ಲಿರುವಾಗ್ಗೆ ನಡೆದ ಸಂಗತಿಯು. ನಾನು ಏಳನೇ ತರಗತಿಯಲ್ಲಿರುವಾಗ್ಗೆ ಮತ್ತೊಂದು ಸಂಗತಿಯು ಜರುಗಿತು. ಆಗ ದೋರಾಬ್ಜಿ ಎದಲ್ಜಿಯವರು ಹೆಡ್ಮಾಸ್ಟರಾಗಿದ್ದರು. ಅವರು ಸದ್ವರ್ತನದವರಾಗಿದ್ದುದರಿಂದ ಪಾಠಶಾಲೆಯನ್ನು ಕಟ್ಟುನಿಟ್ಟಾಗಿಟ್ಟುಕೊಂಡು ವಿದ್ಯಾರ್ಥಿಗಳ ಕೂಡ ಬಹಳ ವಿಶ್ವಾಸದಿಂದಿದ್ದರು. ಅವರು ಮೇಲಿನತರಗತಿಯ ವಿದ್ಯಾರ್ಥಿಗಳಿಗೆ ಶರೀರವ್ಯಾಯಾಮವನ್ನೂ, ಕ್ರಿಕೆಟ್ ಚೆಂಡಿನಾಟವನ್ನೂ ತಪ್ಪದೆ ಮಾಡಿಸುತ್ತಿದ್ದರು. ನನಗೆ ಅವೆರಡೂ ಸೇರವು. ನಿರ್ಬಂಧದಿಂದ ಮಾಡಿಸಲ್ಪಡುತ್ತಿದ್ದರೂ ನಾನು ಮಾತ್ರ ಕ್ರಿಕೆಟ್ಟನ್ನಾಗಲಿ ಫುಟ್‌ಬಾಲನ್ನಾಗಲಿ ಇತರ ಯಾವ ಆಟವನ್ನಾಗಲಿ ಆಡಿದ ಪಾಪವಿಲ್ಲ. ಅವುಗಳ ಗೋಜಿಗೆ ಹೋಗದಿರುವುದಕ್ಕೆ ನನ್ನ ನಾಚುಗೆಯೇ ಕಾರಣವು. ಅದು ತಪ್ಪೆಂದು ನನಗೆ ಈಗ ತೋರುತ್ತದೆ. ಶರೀರ ವ್ಯಾಯಾಮಕ್ಕೂ ವ್ಯಾಸಂಗಕ್ಕೂ ಏನೂ ಸಂಬಂಧವಿಲ್ಲವೆಂದು ನನಗೆ ಆಗ ದುರಭಿಪ್ರಾಯವಿದ್ದಿತು. ಮನಸ್ಸಿಗೆ ಶಿಕ್ಷಣವು ಎಷ್ಟು ಅವಸರವೋ ಶರೀರಕ್ಕೂ ಶಿಕ್ಷಣವು ಅಷ್ಟು ಅವಸರವು ಎಂದು ನನಗೆ ಈಗ ತೋರುತ್ತದೆ.

ಪಾಠಶಾಲೆಯಲ್ಲಿ ಆಟಕ್ಕೆ ಹೋಗದಿದ್ದ ಮಾತ್ರದಿಂದ ನನಗೆ ಯಾವ ನಷ್ಟವಾಗಲಿಲ್ಲವೆಂದು ಹೇಳುವೆನು. ಏಕೆಂದರೆ, ಬೈಲುಪ್ರದೇಶದಲ್ಲಿ ಬಹಳ ದೂರ ನಡೆದಲ್ಲಿ ಒಳ್ಳೆಯದೆಂದು ಪುಸ್ತಕದಲ್ಲಿರುವುದನ್ನೋದಿದ್ದೆನಾದುದರಿಂದ ಆರೀತಿ ನಡೆದುಕೊಳ್ಳುತ್ತಿದ್ದೆನು. ಈಗಲೂ ಅದೇ ರೀತಿ ನಡೆಯುತ್ತಿರುವೆನು. ಹೀಗೆ ನಡೆಯುತ್ತಿರುವುದರಿಂದಲೇ ನನ್ನ ಶರೀರಕ್ಕೆ ಕೊಂಚ ಪಟುತ್ವವುಂಟಾಗಿದೆ. ನನ್ನ ತಂದೆಗೆ ಉಪಚಾರಮಾಡಬೇಕೆಂಬ ಅಭಿಲಾಷೆಯು ನಾನು ಸ್ಕೂಲಿನಲ್ಲಿ ವ್ಯಾಯಮಾಡಲಿಷ್ಟಪಡದಿರಲು ಕಾರಣವಾಗಿದ್ದಿತು. ಪಾಠಶಾಲೆಯನ್ನು ಬಿಟ್ಟೊಡನೇ ಮನೆಗೆ ಬಂದು ನನ್ನ ತಂದೆಗೆ ಉಪಚಾರವನ್ನು ಮಾಡುತ್ತಿದ್ದೆನು. ಇದಕ್ಕೆ ನಿರ್ಬಂಧವ್ಯಾಯಾಮವು ಅಡ್ಡಬಂದಿತು. ನನ್ನ ತಂದೆಯ ಶುಶ್ರೂಷೆಮಾಡಬೇಕಾದ ಸಂದರ್ಭವನ್ನು ತಿಳಿಸಿ ವ್ಯಾಯಾಮಕ್ಕೆ ಬರಬೇಕೆಂಬ ನಿರ್ಬಂಧದಿಂದ ತಪ್ಪಿಸಿಕೊಡಬೇಕೆಂದು ಗಿಮಿಯವರನ್ನು ಪ್ರಾರ್ಥಿಸಿಕೊಂಡೆನು. ಆದರೆ ಫಲವಾಗಲಿಲ್ಲವು. ಆ ದಿವಸ ಶನಿವಾರವಾದುದರಿಂದ ಪಾಠಶಾಲೆಯು ಪ್ರಾತಃಕಾಲದಲ್ಲಿ ಮಾಡಲ್ಪಟ್ಟಿತು. ಆ ದಿವಸ ಸಾಯಂಕಾಲ 4 ಗಂಟೆಗೆ ವ್ಯಾಯಾಮಕ್ಕೆ ಹೋಗಬೇಕಾಗಿದ್ದಿತು. ನನ್ನಲ್ಲಿ ಗಡಿಯಾರವಿರಲಿಲ್ಲವಾದ್ದರಿಂದಲೂ, ಆಕಸ್ಮಿಕವಾಗಿ ಮೋಡ ಮುಸುಕಿಕೊಂಡಿದ್ದುದರಿಂದಲೂ ನಾನು ಪಾಠಶಾಲೆಗೆ ಹೋಗುವಷ್ಟರೊಳಗೆ ಯಾರೂ ಇಲ್ಲದೆ ಹೊರಟುಹೋಗಿದ್ದರು. ಮಾರನೆಯದಿನ ಗೈರ್‌ಹಾಜರ್‌ಪಟ್ಟಿಯನ್ನೋದುವಾಗ್ಗೆ ನಾನು ಯಾತಕ್ಕಾಗಿ ಬರಲಿಲ್ಲವೆಂದು ಗಿಮಿಯವರು ಕೇಳಿದರು. ನಾನು ನಡೆದ ಸಂಗತಿಯನ್ನು ತಿಳಿಸಿದೆನು. ನಾನು ಹೇಳಿದ ಕಾರಣವನ್ನು ಅವರು ಒಪ್ಪದೆ ನನಗೆ ಅರ್ಥದಂಡವನ್ನು ವಿಧಿಸಿದರು. (ಒಂದೋ ಎರಡೋ ಆಣೆ. ಅದು ನನಗೆ ಈಗ ಜ್ಞಾಪಕವಿಲ್ಲವು.) ಸುಳ್ಳು ದೋಷಾರೋಪಣೆಯು ನನ್ನಮೇಲೆ ಮಾಡಲ್ಪಟ್ಟಿತಾದುದರಿಂದ ಅದು ನನಗೆ ಸಹಿಸಲಶಕ್ಯವಾಗಿದ್ದಿತು. ನನ್ನ ನಿಷ್ಕಾಪಟ್ಯವನ್ನು ನಾನು ಹೇಗೆ ದೃಢಪಡಿಸುವುದು ? ಉಪಾಯವೇನು ? ಎಂದು ದುಃಖನಿಮಗ್ನನಾಗಿದ್ದೆನು. ಸತ್ಯವಾದಿಯು ಯಾವಾಗಲೂ ಜಾಗರೂಕನಾಗಿರಬೇಕೆಂದು ನನಗೆ ಆಗ ತೋರಿತು. ಪಾಠಶಾಲೆಯಲ್ಲಿ ನಾನು ಅಶ್ರದ್ಧೆಯಿಂದಿದ್ದುದಕ್ಕೆ ಅದೇ ಆದಿ ಅಂತ್ಯವು. ಕಡೆಗೂ ಅರ್ಥದಂಡವನ್ನು ಕೊಡದೆ ತಪ್ಪಿಸಿಕೊಂಡನೆಂದು ಜ್ಞಾಪಕವಿದೆ.

ಪಾಠಶಾಲೆಯಾದಮೇಲೆ ನನಗೆ ಕೆಲಸವಿರುತ್ತದೆಂದು ನನ್ನ ತಂದೆಯು ಹೆಡ್ಮಾಸ್ಟರಿಗೆ ಬರೆದಿದ್ದುದರ ಮೇಲೆ ವ್ಯಾಯಾಮಕ್ಕೆ ನಾನು ಬರದಂತೆ ಬಿಟ್ಟುಕೊಡಲ್ಪಟ್ಟೆನು. ವ್ಯಾಯಾಮವನ್ನು ಅಶ್ರದ್ಧೆಮಾಡಿದುದಕ್ಕಾಗಿ ನಾನು ನಷ್ಟಪಡದಿದ್ದರೂ, ಇನ್ನೊಂದು ವಿಷಯದಲ್ಲಿ ಆಲಸ್ಯದಿಂದಿ (ಬುದ್ಧಿಹೀನನಾಗಿ) ದ್ದುದರಿಂದ ಅದರ ಫಲವನ್ನು ಈಗ ಅನುಭವಿಸುತ್ತಿರುವೆನು. ಓದನ್ನು ಕಲಿಯುವಾಗ್ಗೆ ಚೆನ್ನಾಗಿ ಬರೆಯುವುದನ್ನು ಕಲಿಯಬೇಕಾದ ಪ್ರಮೇಯವಿಲ್ಲವೆಂದು ಯಾರು ಹೇಳಿದರೋ ತಿಳಿಯದಲ್ಲದೆ ನಾನು ಇಂಗ್ಲೆಂಡಿಗೆ ಹೋಗುವವರೆಗೂ ನನಗೆ ಆ ದುರಭಿಪ್ರಾಯವು ಹೋಗಲಿಲ್ಲವು. ಆದರೆ ಆಮೇಲೆ ನಾನು ದಕ್ಷಿಣಾಫ್ರಿಕೆಗೆ ಹೋದಾಗ ಅಲ್ಲಿ ಲಾಯರುಗಳೂ, ಇತರರೂ ಮುದ್ದಾಗಿ ಬರೆಯುವುದನ್ನು ನೋಡಿ ನಾಚುಗೆಗೊಂಡು ನನ್ನ ಅಶ್ರದ್ಧೆಯನ್ನು ಕುರಿತು ವಿಚಾರಮಾಡಬೇಕಾಗಿ ಬಂದಿತು. ಹಸ್ತಾಕ್ಷರವು ಚೆನ್ನಾಗಿಲ್ಲದಿರುವುದು ಕಲಿತ ವಿದ್ಯೆಗೊಂದು ಲೋಪವೆಂದು ನನಗೆ ಆಗ ತಿಳಿದಿತು. ತರುವಾಯ ಚೆನ್ನಾಗಿ ಬರೆಯಬೇಕೆಂದು ಪ್ರಯತ್ನಿಸಿದೆನಾದರೂ ಕಾರುಣ್ಯವು ಮೀರಿಹೋಗಿದ್ದಿತು. ಚಿಕ್ಕತನದಲ್ಲಿ ಮಾಡಿದ ಲೋಪವನ್ನು ಯಾವಾಗಲೂ ತಿದ್ದಿಕೊಳ್ಳಲಾರದೆ ಹೋದೆನು. ಅದುಕಾರಣ ಮಕ್ಕಳುಗಳಿಂದ ಅಕ್ಷರಗಳನ್ನು ಬರೆಯಿಸುವುದಕ್ಕೆ ಮೊದಲು ಅವರಿಗೆ ವಸ್ತುಲೇಖನವನ್ನು ಕಲಿಸಬೇಕೆಂದು ನನಗೆ ತೋರುತ್ತದೆ. ಬೇರೆ ಬೇರೆ ವಸ್ತುಗಳನ್ನೂ, ಪಕ್ಷಿಗಳನ್ನೂ ನೋಡಿ ಹೇಗೆ ಗುರ್ತಿಸುತ್ತಾರೋ ಹಾಗೆ ನೋಡಿದ ಅಕ್ಷರಗಳನ್ನು ಕೂಡ ಗುರ್ತಿಸುವಂತೆ ಮಕ್ಕಳಿಗೆ ಬೋಧಿಸಬೇಕು. ವಸ್ತುಗಳನ್ನು ಬರೆಯಲು ಕಲಿತಮೇಲೆ ಅವರಿಗೆ ಅಕ್ಷರವನ್ನು ಬರೆಯಲು ಕಲಿಸಬೇಕು. ಆಗ ಅವರು ಸ್ಥಿರವಾಗಿಯೂ ಚೆನ್ನಾಗಿಯೂ ಅಕ್ಷರವನ್ನು ಬರೆಯಬಲ್ಲರು.

ಹಿಂದಣ ಪಾಠಶಾಲೆಯ ದಿನಗಳಲ್ಲಿಯ ಬೇರೆ ಎರಡು ವಿಷಯ ಹೇಳಬೇಕಾಗಿದೆ. ನನ್ನ ವಿವಾಹದಿಂದ ನನಗೆ ಒಂದುವರ್ಷ ನಷ್ಟವಾಯಿತು. ಆ ನಷ್ಟಪರಿಹಾರಾರ್ಥವಾಗಿ ಉಪಾಧ್ಯಾಯನು ನನ್ನೊಬ್ಬನನ್ನು ಮಾತ್ರ ಒಂದು ತರಗತಿಯ ಮುಂದಕ್ಕೆ ಹಾಕಿದನು. ಸ್ವಭಾವವಾಗಿ ಕಷ್ಟಪಟ್ಟು ಓದುವ 5 ಬಾಲಕರಿಗು ಕೂಡ ಇಂತಹ ಸೌಕರ್ಯವು ತೋರ್ಪಡಿಸುತ್ತಿರಲಿಲ್ಲವು. ಅದುಕಾರಣ ನಾನು ಮೂರನೆಯ ತರಗತಿಯಲ್ಲಿ 6 ತಿಂಗಳುಮಾತ್ರ ಇದ್ದು ಪರೀಕ್ಷೆಯಾದನಂತರ 4 ನೆಯ ತರಗತಿಗೆ ಕಳುಹಲ್ಪಟ್ಟೆನು. ಆ ಕೂಡಲೆ ವ್ಯಾಸಂಗದ ವೆಚ್ಚವೂ ಹೆಚ್ಚಿತು. ಆ ಕಾಲದಲ್ಲಿ 4 ನೆಯ ತರಗತಿಯಿಂದಲೇ ಎಲ್ಲ ವಿಷಯಗಳೂ ಆಂಗ್ಲಭಾಷೆಯಲ್ಲೇ ಹೇಳಿಕೊಡಲ್ಪಡುತ್ತಿದ್ದಿತು. ನನಗೆ ಸಮುದ್ರಮಧ್ಯದಲ್ಲಿದ್ದಂತೆ ತೋರುತ್ತಿದ್ದಿತು. ರೇಖಾಗಣಿತವು ನನಗೆ ಹೊಸವಿಷಯವು. ಅದರ ಸಂಗತಿಯು ನನಗೆ ಚೆನ್ನಾಗಿ ತಿಳಿದಿರಲಿಲ್ಲವು. ಇದಲ್ಲದೆ ಆಂಗ್ಲಭಾಷೆಯಲ್ಲೇ ಹೇಳಿಕೊಡಲ್ಪಡುತ್ತಿದ್ದುದರಿಂದ ಮತ್ತಷ್ಟು ಕಷ್ಟತರವಾಗಿದ್ದಿತು. ಉಪಾಧ್ಯಾಯನು ಚೆನ್ನಾಗಿ ಹೇಳಿಕೊಡುತ್ತಿದ್ದನು. ಆದರೂ ನನಗೆ ಬೋಧವಾಗುತ್ತಿರಲಿಲ್ಲ. ಅನೇಕ ವಿಧದಲ್ಲಿ ನಿಸ್ಸತ್ತ್ವತೆಯಿಂದ ಎರಡುವರ್ಷಕಾಲದಲ್ಲಿ ಕಲಿಯುವುದನ್ನು ಒಂದುವರ್ಷದಲ್ಲೇ ಕಲಿಯಲು ಸಾಧ್ಯವೆಂದು ತಿಳಿದು 3 ನೆಯ ತರಗತಿಗೆ ಹೋಗಬೇಕೆಂದಿದ್ದೆನು. ಆದರೆ ಹೀಗೆ ಮಾಡುವುದರಿಂದ ನನಗೇ ಅಲ್ಲದೆ ನಾನೇಸೋ ಕಷ್ಟಪಟ್ಟು ಓದುತ್ತಾನೆಂದು ಮೇಲಣ ತರಗತಿಗೆ ಕಳುಹಿದ ಉಪಾಧ್ಯಾಯನಿಗು ಕೂಡ ಅವಮಾನವಾಗುವುದೆಂದು ತಿಳಿದು ಆ ತರಗತಿಯಲ್ಲೇ ಉಳಿದುಕೊಂಡೆನು. ರೇಖಾಗಣಿತದಲ್ಲಿ ಕೊಂಚಮಟ್ಟಿಗೆ ಬಹಳ ಕಷ್ಟಪಟ್ಟು ಕಲಿತುಕೊಂಡೆನು. ಆಗಳಿಂದಲೂ ಸುಲಭವಾಗಿ ತೋರಿತು. ಕೊಂಚಮಟ್ಟಿಗೆ ಬುದ್ಧಿಯನ್ನುಪಯೋಗಿಸಿದುದರಿಂದ ಹೆಚ್ಚು ಕಡಿಮೆ ಜ್ಯಾಮೆಟ್ರಿಯು ಸುಲಭವಾಗಿ ತೋರಿತು.

ಸಂಸ್ಕೃತವು ಮಾತ್ರ ಕಷ್ಟವಾಗಿ ತೋರಿತು. ಜಾಮೆಟ್ರಿಯನ್ನು ಬಾಯಿನಲ್ಲಿ ಹೇಳಬೇಕಾದುದಿಲ್ಲವು. ಸಂಸ್ಕೃತದಲ್ಲಿಮಾತ್ರ ವಿಶೇಷವೂ ಕಂಠಗತವಾಗಬೇಕೆಂದು ತಿಳಿದುಕೊಂಡಿದ್ದೆನು. ನಾಲ್ಕನೇತರಗತಿಯಿಂದಲೇ ಈ ಸಂಸ್ಕೃತವನ್ನು ಪ್ರಾರಂಭಿಸಿದೆನು. ಆರನೆಯತರಗತಿಗೆ ಬರುವಷ್ಟರಲ್ಲಿ ಕಷ್ಟವೇಕೆ ಪಡಬೇಕೆಂದು ಬಿಟ್ಟುಬಿಟ್ಟೆನು. ಉಪಾಧ್ಯಾಯರು ಬಾಲಕರಿಗೆ ಎಲ್ಲವೂ ಒಂದೇಸಾರಿಗೆ ಬರಬೇಕೆಂದು ತೊಂದರೆಪಡಿಸುತ್ತಿದ್ದರು. ಸಂಸ್ಕೃತ ಪಂಡಿತರಿಗೂ, ಪರ್ಷಿಯ ಪಂಡಿತರಿಗೂ ಭೇದವಿದ್ದಿತು. ಪರ್ಷಿಯ ಉಪಾಧ್ಯಾಯನು ಸೌಮ್ಯನು. ಪರ್ಷಿಯ ಭಾಷೆಯು ಸುಲಭವೆಂದೂ, ಅದರ ಬೋಧಕನು ಒಳ್ಳೆಯವನೆಂದೂ ಬಾಲಕರುಗಳು ಅಂದುಕೊಳ್ಳುತ್ತಿದ್ದರು. ಅದು ಸುಲಭವೆಂಬುದರಮೇಲೆ ಒಂದುದಿವಸ ಪರ್ಷಿಯ ತರಗತಿಯಲ್ಲಿ ಕುಳಿತುಕೊಂಡಿದ್ದೆನು. ಇದನ್ನು ನಮ್ಮ ಸಂಸ್ಕೃತ ಬೋಧಕನು ನೋಡಿ ಕೋಪಗೊಂಡು ನನ್ನ ಹತ್ತಿರಕ್ಕೆಬಂದು ಕರೆದು ನಿನ್ನದು ವಿಷ್ಣುವಂಶವೆಂಬುದನ್ನು ಮರೆತೆಯಾ ? ನಿನ್ನ ಮಾತೃಭಾಷೆಯನ್ನು ನೀನು ಕಲಿಯುವುದಿಲ್ಲವೆ ? ಅಂತಹ ಕಷ್ಟವೇನಾದರು ತೋರಿದರೆ ನನ್ನಲ್ಲಿ ಬರಬಾರದಾಗಿದ್ದಿತೆ ? ನನ್ನ ಶಕ್ತಿ ವಂಚನೆಯಿಲ್ಲದೆ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಹೇಳಿಕೊಡಬೇಕೆಂಬ ಅಭಿಲಾಷೆಯುಳ್ಳವನಾಗಿದ್ದೇನೆ. ಇಷ್ಟುಮಾತ್ರಕ್ಕೆ ಅಧೈರಪಡಬೇಡ. ಬಂದು ಸಂಸ್ಕೃತ ತರಗತಿಯಲ್ಲಿ ಕುಳಿತುಕೊ ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ನನಗೆ ಬಹಳ ತಲೆಬಗ್ಗಿಸುವಂತಾಯಿತು. ಬೋಧಕನ ಪ್ರೀತಿಮಾತುಗಳನ್ನು ತಿರಸ್ಕರಿಸಲಾರದೆ ಹೋದೆನು. ಕೃಷ್ಣಶಂಕರಪಂಡಿತರು ಮಾಡಿದುಪಕಾರವನ್ನು ನಾನು ಈಗಲೂ ಮರೆಯುವಂತಿಲ್ಲ. ಆಗ ಕೊಂಚವಾಗಿ ಸಂಸ್ಕೃತವನ್ನು ಅಭ್ಯಾಸಮಾಡಿದುದರಿಂದಲೇ ನಮ್ಮ ಪವಿತ್ರ ಗ್ರಂಥಗಳ ಆಧಿಕ್ಯವನ್ನು ತಿಳಿದುಕೊಳ್ಳುವುದು ಕಷ್ಟವಾಗಿರುವುದು. ನಾನು ಸಂಸ್ಕೃತವನ್ನು ಹೆಚ್ಚಾಗಿ ಕಲಿಯಲಿಲ್ಲವೆಂದು ನನಗೆ ನಿಜವಾಗಿ ವ್ಯಸನವಾಗಿದೆ. ಹಿಂದೂ ಮತದಲ್ಲಿ ಹುಟ್ಟಿದ ಬಾಲಕನಾಗಲಿ ಬಾಲಿಕೆಯಾಗಲಿ ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸಮಾಡಬೇಕೆಂದು ನಾನು ಆಮೇಲೆ ತಿಳಿದುಕೊಂಡೆನು.

ಭಾರತದೇಶದಲ್ಲಿ ಉನ್ನತವಿದ್ಯಾವಿಧಾನದಿಂದ ಹಿಂದೀ, ಸಂಸ್ಕೃತ, ಪರ್ಷಿಯ, ಅರಬ್ಬೀ, ಇಂಗ್ಲಿಷ್ ಭಾಷೆಗಳು ದೇಶಭಾಷೆಯಲ್ಲಿ ಕಲಿಸಲ್ಪಡಬೇಕೆಂದು ನಾನು ತಿಳಿದುಕೊಂಡೆನು. ಇಷ್ಟೊಂದು ಭಾಷೆಗಳೆಂದು ಭಯಪಡಕೂಡದು. ನಮ್ಮ ವಿದ್ಯೆಯೊಂದುಕ್ರಮ ವಿಧಾನವನ್ನು ಅನುಸರಿಸಿರುವ ಬಾಲಕರುಗಳಿಗೆ ವಿಷಯಗಳನ್ನು ಅನ್ಯಭಾಷೆಯಲ್ಲಿ ಕಲಿಯಬೇಕೆಂಬ ನಿರ್ಬಂಧವು ಇಲ್ಲದಿದ್ದಲ್ಲಿ ಈ ಭಾಷೆಗಳೆಲ್ಲವನ್ನೂ ಕಲಿಯುವುದು ಶ್ರಮವಾಗಿರದೆ ಸೌಖ್ಯಪ್ರದವಾಗಿರುವುದೆಂದು ನನಗೆ ಬಹಳ ನಂಬಿಕೆಯಿದೆ. ಒಂದು ಭಾಷೆಯನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿದಲ್ಲಿ ಉಳಿದ ಭಾಷೆಗಳು ಸುಲಭವು.

ನಿಜವಾಗಿ ಹಿಂದೀ, ಗುಜರಾತಿ ಸಂಸ್ಕೃತ ಭಾಷೆಗಳನ್ನು ಒಂದೇ ಭಾಷೆಯನ್ನಾಗಿ ನೆನಸಬೇಕು. ಹಾಗೆಯೇ ಪರ್ಷಿಯ ಅರಬ್ಬೀ ಭಾಷೆಗಳನ್ನು ಬೇರೊಂದು ಭಾಷೆಯನ್ನಾಗಿ ಪರಿಗಣಿಸಬೇಕು. ಪರ್ಷಿಯ ಭಾಷೆಯು ಅರಬ್ಬೀ-ಹೀಬ್ರೂ ಭಾಷೆಗಳ ಜಾತಿಗೆ ಸೇರದಿದ್ದರೂ ಮಹಮ್ಮದೀಯ ಮತದಲ್ಲಿ ಹುಟ್ಟಿದುದು. ಆದರೆ ಪರ್ಷಿಯ ಅರಬ್ಬೀ ಭಾಷೆಗಳಿಗೆಷ್ಟೋ ಸಂಬಂಧವಿರುತ್ತದೆ. ಹಿಂದೀ ಭಾಷೆಯು ವ್ಯಾಕರಣವನ್ನು ಅನುಸರಿಸಿಲ್ಲವಾದರೂ ಪರ್ಷಿಯ ಅರಬ್ಬೀ ಮಾತಿನಲ್ಲಿ ವಿಶೇಷವಾಗಿ ಸೇರಿಹೋಗಿರುವುದರಿಂದ, ಉರ್ದು ಭಾಷೆಯನ್ನು ನಾನು ಒಂದು ಪ್ರತ್ಯೇಕ ಭಾಷೆಯನ್ನಾಗಿ ನೆನೆಸುತ್ತೇನೆ. ಒಳ್ಳೇ ಗುಜರಾತಿ, ಹಿಂದೀ, ಬೆಂಗಾಲಿ, ಮರಾಟಿ ಭಾಷೆಗಳನ್ನು ತಿಳಿದುಕೊಂಡಿರಬೇಕೆನ್ನುವವನುಕೂಡ ಪರ್ಷಿಯ ಮತ್ತು ಅರಬ್ಬಿಯ ಭಾಷೆಗಳನ್ನು ಅಭ್ಯಾಸಮಾಡಬೇಕಾಗುತ್ತದೆ.

ಉಪನ್ಯಾಸಸಂಗ್ರಹ.

ಈ ಗ್ರಂಥವು ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಿಗೆ ಅತ್ಯಂತ ಉಪಯುಕ್ತವಾಗಿದೆ. ಮತ್ತು ಪ್ರತಿಯೊಬ್ಬ ಲಿಂಗಾಂಗಿಯಲ್ಲಿಯೂ ಇರುವುದಕ್ಕೆ ಯೋಗ್ಯವಾದ ಗ್ರಂಥವು. ಉಪನ್ಯಾಸಕರಿಗಂತೂ ವಿಶೇಷವಾಗಿ ಸಹಾಯಕವಾಗಿರುವುದು. ಮತ್ತು ಈ ಗ್ರಂಥದಲ್ಲಿ ಆಸ್ಥಾನ ವಿದ್ವಾನ್ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಬರೆಯಲ್ಪಟ್ಟ ಯತ್ನಾಗ್ರೃಹಿ ಕಮಿಟಿಯವರು ಪ್ರಕಟಿಸಿದ ವೀರಶೈವಸಿದ್ಧಾಂತಕ್ಕೆ ವಿರುದ್ಧವಾದ ಎಂಟು ವಿಷಯಗಳ ಖಂಡನವೂ, ಮೈಸೂರು ಸರ್ಕಾರದವರು ಕೊಟ್ಟಿರುವ ಇಪ್ಪತ್ತೇಳು ಪ್ರಶ್ನೆಗಳಿಗೆ ಉತ್ತರಗಳೂ ಸೇರಿಸಲ್ಪಟ್ಟಿವೆ.

ಡಿಮ್ಮಿ ಸೈಜು 400 ಪುಟಗಳುಳ್ಳ ಈ ಗ್ರಂಥದಬೆಲೆ 1 ರೂಪಾಯಿ ವಿ.ಪಿ. ಮೂಲಕ 1-7-0. ಗ್ರಂಥವು ದೊರೆಯುವ ಸ್ಥಳ—

ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿ,
28 ಹಳೇಅಗ್ರಹಾರ, ಮೈಸೂರು

೧೯೨೬ ನೆಯ ಇಸವಿ ಫೆಬ್ರವರಿ ತಾ|| ೨೭ ರಿಂದ ೧೯೨೬ ನೆಯ ಇಸವಿ ಮಾರ್ಚಿ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೭ ನೆಯ ಕ್ರೋಧನನಾಮಸಂವತ್ಸರದ ಫಾಲ್ಗುಣ ಶುದ್ಧ ಪೌರ್ಣಿಮೆಯಿಂದ ಫಾಲ್ಗುಣ ಬಹುಳ ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ಮಾಸ
27	[1] ಶನಿ	ಪೌರ್ಣ	36-30	ಮಖಾ	24-46	16
28	[2] ಭಾನು	ಪಾಡ್ಯ	41-27	ಪುಬ್ಬ	30-56	17
1	[3] ಸೋಮ	ಬಿದಿ	45-29	ಉತ್ತ	36-28	18
2	ಮಂಗಳ	ತದಿ	48-31	ಹಸ್ತ	40-54	19
3	[4] ಬುಧ	ಚೌತಿ	50-13	ಚಿತ್ತ	44-14	20
4	ಗುರು	ಪಂಚ	50-41	ಸ್ವಾತಿ	46-16	21
5	ಶುಕ್ರ	ಷಷ್ಠಿ	49-48	ವಿಶಾ	47-2	22

(1) ಕಾಮದಹನ, ಹೋಳೀಹಬ್ಬ. (2) ಮಳೆನಕ್ಷತ್ರ-ಶತಭಿಷ ೪ನೆಯ ಪಾದ. (3) ಕರೀಘಟ್ಟದ ಶ್ರೀನಿವಾಸಸ್ವಾಮಿ ರಥೋ. (4) ಮಳೆನಕ್ಷತ್ರ-ಪೂರ್ವಾಭಾದ್ರ ೧ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಲೌರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಿಶ್ರೀಕಾ | ಘನಪಥಶ್ರೀಲಾವಣ್ಯಾ ಪಶ್ಯತ ನಕ್ಷತ್ರ ತೋಚಿರಾಜೀಯಮ್ |
ಶ್ರೀಮತ್ಕೃಷ್ಣನೃಪಾಲಸುತ್ತಮಳಕಾಲೋಲಂಸುಧೀಭೃಂಗವ | ಸ್ತೋಮಾಳೀಮ್ಮದಜೀಲ ಪಾಲಿತ ಸಾಧ್ವಾಕ್ಯಾಲವಾಲಂ ವಲಂ |
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತ್ರೀಯುಂಸಾಪೂರಿಗೆ ಗೌರೀಶಾನುಶಿಳಂಜೀಜ್ಞಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸ್ತ ೧೯೨೬ ನೆಯ ಇಸವಿ ಮಾರ್ಚಿ ತಾರೀಖು ೧೩ ನೆಯ ಶನಿವಾರ. [ಸಂಚಿಕೆ ೧೧

REGISTERED NO. M. 124.

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿದರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರ ಪಾಕ.

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೇಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೇಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ತಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಕುಡುಕಾಲಿಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಲ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇದೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ :—ಶತಪುಷ್ಪ ಶಾಲಿಮಕಂದ, ಜಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೀಷ್ಠಕಂದ, ಮಧುಕಂದ, ಮುಸುಳೀಕಂದ, ಸೇವರೀಕಂದ, ದ್ವಿಪಾಂತರಚಾಕಂದ, ಕವಚಬೀಜ, ಸಮುದ್ರ ಶೋಕದ ಬೀಜ, ತಕಬೀಜ, ಸಾಗಬೀಜ, ಟಾಕಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣ ಪಂಚಾಗ, ಅಡವೀ ಎಳ್ಳಿನ ಪಂಚಾಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ ತಾಲೀಮಖಾನಾ, ಬೀಜಬಂದು, ಹರಡಿ ಮುಂಗಲಿಬೇದಾಣ, ಮರ್ದನ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಷ್ಠ, ವಾಳೇರಿಛಾಲಾ, ಗೋಖರು, ಅಡವೀ ಬೆಂಡಿ ಬೇರು, ಅಮೃತಸತ್ವ, ಅಸಬಗೋಲ, ಬುನಾನೆಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಸ್ತಕಿ, ವಂಶಲೋಚನ, ವರಖಾರ, ಕೇಶರಿ, ಯಾಲಕ್ಕಿ ದಾಲ್ಚಿನ್ನಿ ಸಕ್ಕರಿ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ಹಸುವಿನ ಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೋಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೫| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒನೇ ಡಬ್ಬಿ ಪುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮೀನ ಇಬ್ರಾಹಿಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ವಾಲೀಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ತುಲಿನ, ೪ ಲಖಮಸಿ ಗೋಪಾಳಭಾಯ ಹಿನ್ನ ರೋಡ ಮುಂಬೈ, ೫ ವಿಷ್ಣುಕೃಷ್ಣ ಕೆಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ಝೂಗಾಜಯರಾವ ಪೋ. ಸೋಲಾಪೂರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[50—49] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಿಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಕಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೬—೦.
ಡಜನ್ ಗಳಿಗೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

[illegible]:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[illegible]] ಪೋ. ಬಾ. ೩೮೧, ಮದ್ರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ।	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
[illegible]	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವೃಷಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರವಚನ	೦— ೮—೦	೦—೧೪—೦
ಸಟೀಕಾಕರ್ಣಾಟಕಶಬ್ದಮಂಜರಿ	೦— ೮—೦	೦—೧೪—೦
ಸಟೀಕಾ ಶತಕತ್ರಯ	೧— ೦—೦	೧— ೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟ ಕನ್ನಡ [illegible]	೧— ೦—೦	೧— ೬—೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಜೋಪುರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ರುಚಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA ARYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

57

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. ಆರಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲೌರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇಕೆಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಸೂಚನೆ.

☞ ಬರುವ ಸೋಮವಾರ ಯುಗಾದಿಹಬ್ಬವಾದಪ್ರಯುಕ್ತ, ಮುಂದಣ ತಾ|| 20-3-26 ರ "ಮೈಸೂರ್ ಸ್ಟಾರ್" ಪತ್ರಿಕೆಯು ಹೊರಡುವುದಿಲ್ಲವು.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಮಾರ್ಚಿ ತಾ|| ೧೩ನೆಯ ಶನಿವಾರ.

ನೂತನ ವರ್ಷವು.

ಕ್ರೋಧನಸಂವತ್ಸರವು ನಾಳೆಯದಿನ ಕೊನೆಗಂಡು ಅಕ್ಷಯಸಂವತ್ಸರವು ಸೋಮವಾರ ಪ್ರಾರಂಭವಾಗುವುದು. ಈ ದಿನವು ಚಾಂದ್ರಮಾನ ಸಂಪ್ರದಾಯದವರಿಗೆಲ್ಲ ಶುಭದಿನವು. ಜನರು ಅಭ್ಯಂಜನಸ್ನಾನ ಮಾಡಿ ನೂತನವಸ್ತ್ರಗಳನ್ನು ಧರಿಸಿ ಬಂಧುಗಳೊಡನೆ ಸುಖಭೋಜನವನ್ನು ಮಾಡಿ ಆಟಪಾಟ ವಿನೋದಗಳಿಂದ ವಿಹರಿಸುವರು. ಹೊಸವರ್ಷದ ಪಂಚಾಂಗಶ್ರವಣ ಮಾಡಿ ಮುಂದಣ ಫಲಾಫಲಗಳನ್ನು ತಿಳಿದುಕೊಳ್ಳುವರು. ವರ್ಣಭೇದವಿಲ್ಲದೆ ಸಮಸ್ತರೂ ಸಂವತ್ಸರಾದಿಯನ್ನು ಪವಿತ್ರದಿನವನ್ನಾಗಿ ಭಾವಿಸುವರು. ಸೃಷ್ಟಿವಿಕಾಸವು ಕೂಡ ಇದಕ್ಕೆ ಅನುಗುಣವಾಗಿಯೇ ಇರುವುದು. ವಸಂತಾಗಮಶುಭಸಮಯದಲ್ಲಿ ವೃಕ್ಷಗಳು ಚಿಗುರುವುವು. ಪ್ರಕೃತಿಯು ನೂತನಾಲಂಕಾರಶೋಭಿತವಾಗಿ ನವಲಾವಣ್ಯದಿಂದ ಬೆಳಗುವುದು. ಹೂಚಿಗುರುಗಳಿಂದ ಕೂಡಿದ ವೃಕ್ಷಗಳು ನೋಡುವುದಕ್ಕೆ ಕಣ್ಣಿನ ಹಬ್ಬವಾಗಿರುವುವು. ಸಮಸ್ತ ಕಷ್ಟವನ್ನೂ ಮರೆಯುವಂತೆ ಮಾಡುವುದು. ಕೋಗಿಲೆಗಳು ಚಿಗುರಿದ ವೃಕ್ಷಗಳ ಮೇಲೆ ಕುಳಿತು ಪಂಚಮಸ್ವರದಲ್ಲಿ ಮಧುರಧ್ವನಿಯನ್ನು ಮಾಡುವುವು. ಭ್ರಮರಗಳು ಮಧುಪಾನಾಸಕ್ತಿಯಿಂದ ಮಧುರಧ್ವನಿ ಮಾಡುತ್ತ ಶ್ರುತಿಸಮ್ಮೇಳನವನ್ನು ಮಾಡುವುವು. ಮಳೆಯೂ ಹಿಮವೂ ಹಿಂದಾಗಿ ಸೂರ್ಯಕಾಂತಿಯು ತನ್ನ ಸಹಜಶೋಭೆಯಿಂದ ಪ್ರಕಾಶಿಸುತ್ತ ಪ್ರಜೆಗಳಿಗೆ ಆನಂದವನ್ನುಂಟುಮಾಡುವುದು. ಬೇಸಾಯಕೆಲಸವು ಪೂರೈಸಿ ರೈತರು ವಿರಾಮದಿಂದ ದೇವರಸೇವೆ ವಿವಾಹಾದಿ ಶುಭಕಾರ್ಯಗಳಲ್ಲಿ ಕಾಲಕಳೆಯುವರು. ಸಂವತ್ಸರಾದಿಯು ಎಲ್ಲ ವಿಧದಿಂದಲೂ ಮಹೋತ್ಸಾಹಭರಿತವಾಗಿರುವುದು.

ಈ ಶುಭದಿವಸ ಬೇವಿನಹೂವನ್ನು ಬೆಲ್ಲಮಿಶ್ರವಾಗಿ ತಿನ್ನುವುದು ವಾಡಿಕೆಯಾಗಿದೆ. ಕಹಿ ಮತ್ತು ಸಿಹಿ ಇವೆರಡರ ಸಂಮಿಶ್ರದಿಂದ ಜಿಹ್ವೆಗೆ ಬಹಳ ತೃಪ್ತಿಯುಂಟಾಗುವುದು. ಮುಂದೆ ಬರತಕ್ಕ ಫಲವನ್ನು ಇದು ಸೂಚಿಸುತ್ತದೇನೋ ಎಂದು ತಿಳಿಯಬಹುದಾಗಿದೆ. ಕಾಲವು ಒಂದೇರೀತಿಯಾಗಿರುವುದಿಲ್ಲ. ಯಾವಾಗಲೂ ಸುಖವನ್ನು ಮಾತ್ರ ಮನುಷ್ಯನು ಅನುಭವಿಸುವುದಿಲ್ಲ. ಕಷ್ಟವು ಒಂದಾವರ್ತಿಯಾದರೂ ಪ್ರಾಪ್ತವಾಗುವುದು ಸ್ವಭಾವಸಿದ್ಧವಾದುದು. ಯಾವಾಗಲೂ ಕಷ್ಟಸುಖಸ್ಥಿತಿಯು ಸ್ಥಿರವಾಗಿರುವುದಿಲ್ಲ. ಸಿಹಿಯಂತೆ ಸುಖವು ಕೂಡ ಕ್ಷಣಭಂಗುರವು. ಸಿಹಿಯು ಸಹ ಹೆಚ್ಚಾದಲ್ಲಿ ಮುಖ ಚಟ್ಟಾಗುವುದು. ಬೇವುಬೆಲ್ಲಪ್ರಸಾದದಂತೆ ಕಷ್ಟಸುಖಗಳು ಕಲಸಿರುವುವು. ಗೋಪಾಲರಿಂದ ಭೂಪಾಲರವರೆಗೆ ಸಮಸ್ತರೂ ಕಷ್ಟಸುಖವನ್ನು ಹೊಂದುತ್ತಲೇ ಇರುವರು. ಯೌವನವೂ ಮುಪ್ಪೂ ಸಾಮಾನ್ಯವಾಗಿರುತ್ತವೆ. ಮೃತ್ಯುದೇವತೆಯು ತಾರತಮ್ಯವಿಲ್ಲದೆ ಸಮಸ್ತರನ್ನೂ ಸಾಗಿಸಿಕೊಂಡುಹೋಗುವುದು. ತಾತ್ಕಾಲಿಕಸೌಖ್ಯವು ಬುದ್ಬುದಪ್ರಾಯವು. ಸಾಮ್ರಾಜ್ಯವು ತಲೆಕೆಳಗಾಗುವುದು. ಸಮುದ್ರವು ಮರುಭೂಮಿಯಾಗುವುದು. ದೃಗ್ಗೋಚರವಾದುದೆಲ್ಲವೂ ನಾಶವಾಗತಕ್ಕುದೇ. ಇದರಲ್ಲಿ ನಿತ್ಯವಾದುದಾವುದೂ ಇಲ್ಲವು. ವಸಂತಋತುಸೌಖ್ಯವನ್ನು ಹೊಂದಿ ಭಕ್ತರು ಜಗದೀಶನ ಮಹಿಮೆಯನ್ನು ಕೊಂಡಾಡಿ ಸಂತುಷ್ಟರಾಗುವರು. ಜ್ಞಾನಿಗಳು ನಿಶ್ಚಲಹೃದಯರಾಗಿ ಬಾಹ್ಯವ್ಯಾಪಾರದಿಂದ ಮನಶ್ಚಾಂಚಲ್ಯವನ್ನು ಹೊಂದದೆ ಶಾಶ್ವತಾನಂದವನ್ನು ಹೊಂದುವರು. ಕಾಮುಕರು ವಸಂತಋತುವಿನಲ್ಲಿ ದಿವ್ಯಸೌಖ್ಯದಿಂದ ಪರವಶರಾಗಿ ಭೋಗಲಾಲಸರಾಗುವರು. ಅಂತಹವರಿಗೆ ವಸಂತಾಗಮನವು ಶಾಶ್ವತಾನಂದಸಂದಾಯಕವಾಗಿರದು. ಮನ್ಮಥನೂ ವಸಂತನೂ ಒಟ್ಟುಗೂಡಿ ಪ್ರಕೃತಿಯನ್ನು ಸರ್ವಸುಂದರವಾಗಿ ಮಾಡುವುವು. ಮೃಗಗಳು ಸಹ ಕಾಮೋದ್ರೇಕಭರಿತವಾಗಿರುವುವು. ಇನ್ನು ಮನುಷ್ಯನ ಪಾಡನ್ನು ಹೇಳಬೇಕಾದುದೇನಿದೆ?

ಈ ಕ್ರೋಧನಸಂವತ್ಸರದಲ್ಲಿ ಅದರ ನಾಮಕ್ಕೆ ತಕ್ಕಂತೆ ರಾಜಪ್ರಜೆಗಳಲ್ಲೂ, ತಂದೆಮಕ್ಕಳಲ್ಲೂ, ಜಾತಿಜಾತಿಗಳಲ್ಲೂ ಕ್ರೋಧವುಂಟಾಗಿ ತಕ್ಕಮಟ್ಟಿಗೆ ಅನರ್ಥವಾಗಿರುತ್ತದೆ. ಬಹುಕಡೆ ಮಳೆಯಿಲ್ಲದೆಯೂ, ಅನೇಕಕಡೆ ಸಕಾಲದಲ್ಲಿ ಬಾರದೆಯೂ ಬೇಸಾಯಕೆಲಸಗಳಿಗೆ ತುಂಬಾ ಅಡಚಣೆಯಾಗಿ ಮನುಷ್ಯರ ಮತ್ತು ದನಕರುಗಳ ತಿಂದಿಗೂ ಕುಡಿಯುವ ನೀರಿಗೂ ಅಭಾವವಾಗಿ ಜನರು ಮುಖ್ಯವಾಗಿ ಬಡಬಗ್ಗರು ಬಹಳ ತಾಪತ್ರಯಪಡುತ್ತಿರುವರು. ಕೆಲಕಡೆ ಮಾತ್ರ ಮಳೆಯಾಧಿಕ್ಯದಿಂದ ನದಿಗಳು ಮಿತಿಮೀರಿ ಪ್ರವಹಿಸಿ ಬಹಳ ಅರ್ಥಪ್ರಾಣಹಾನಿಯನ್ನುಂಟುಮಾಡಿದುವು. ಕ್ಷುದ್ರರೋಗಾದಿಗಳ ಬಾಧೆಯು ಮಾತ್ರ ಅಷ್ಟು ವಿಶೇಷವಾಗಿರಲಿಲ್ಲ. ಭರತಖಂಡದ ವೈಸ್‌ರಾಯರಾಗಿರುವ ಲಾರ್ಡ್‌ರೀಡಿಂಗರವರ ಉದ್ಯೋಗದವಧಿಯು ಈ ವರ್ಷದೊಂದಿಗೇ ಕೊನೆಗಂಡಿತೆಂದು ಹೇಳಬಹುದು. ಇವರ ಅಧಿಕಾರದ ಅವಧಿಯಲ್ಲಿ ಭರತಖಂಡಕ್ಕೆ ಅನರ್ಥವೇನೂ ಆಗದಿದ್ದರೂ, ಹೇಳಿಸಿಕೊಳ್ಳುವಂತಹ ಉಪಕಾರವಾವುದೂ ಆಗಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಕ್ರೋಧನಸಂವತ್ಸರದಲ್ಲಿ ಭಾರತದೇಶವನ್ನು ಪರದಾಸ್ಯವಿಮುಕ್ತಗೊಳಿಸಲು ತನುಮನೋಧನಗಳನ್ನು ಧಾರೆಯೆರದ ಆ ಜಗದ್ವಿಖ್ಯಾತ ದೇಶಬಂಧುದಾಸರವರು, ಹಿಂದುಳಿದ ವರ್ಗದವರ ಉದ್ಧಾರಕ್ಕಾಗಿ ತಮ್ಮ ಜೀವವನ್ನೇ ಸವಿಸಿದ ಪಿ. ತ್ಯಾಗರಾಯಶೆಟ್ಟರು, ಗ್ವಾಲಿಯರ್ ಮಹಾರಾಜರು, ಭಾರತಚಕ್ರವರ್ತಿಯವರ ಮಾತೃಶ್ರೀಯವರಾದ ಅಲೆಕ್ಸಾಂಡ್ರಾ ಮಹಾರಾಣಿಯವರು, ಧರ್ಮಿಷ್ಠರಾದ ಕಬ್ಬಳ್ಳಿ ಚೆನ್ನಬಸಪ್ಪನವರು ಮತ್ತೆ ಕೆಲರು ಮೃತ್ಯುಪಾಲಾದರು. ಇಂದೂರುಸಂಸ್ಥಾನಾಧೀಶ್ವರರಾದ ಹೋಲ್ಕರ್ ಮಹಾರಾಜರು ಸ್ತ್ರೀವ್ಯಾಮೋಹಪರವಶರಾಗಿ ರಾಜ್ಯಭ್ರಷ್ಟರಾದರು. ಅಂತು ಈ ಗತಿಸುವ ಕ್ರೋಧನಸಂವತ್ಸರವು ಎಲ್ಲ ಭಾಗದಲ್ಲೂ ಅಶುಭಕರವಾಗಿಯೇ ಇದ್ದಿತು.

ಈ ಸೋಮವಾರ ಉದಯಿಸುವ ಅಕ್ಷಯಸಂವತ್ಸರದಲ್ಲಿ ಚಂದ್ರನು ರಾಜನಾಗಿಯೂ, ಸೇನಾಧಿಪನಾಗಿಯೂ, ಅರ್ಘಾಧಿಪನಾಗಿಯೂ, ಮೇಘಾಧಿಪನಾಗಿಯೂ; ಕುಜನು ಮಂತ್ರಿಯಾಗಿಯೂ; ಶುಕ್ರನು ಸಸ್ಯಾಧಿಪನಾಗಿಯೂ; ಬುಧನು ಧಾನ್ಯಾಧಿಪನಾಗಿಯೂ; ರವಿಯು ರಸಾಧಿಪನಾಗಿಯೂ; ಗುರುವು ನೀರಸಾಧಿಪನಾಗಿಯೂ, ಗೋಪಾಲನು ಪಶುನಾಯಕನಾಗಿಯೂ ಇರುವರು. ಈ ಸಂವತ್ಸರದಲ್ಲಿ ಚೈತ್ರಮಾಸವು ಅಧಿಕಮಾಸವಾಗುವುದು ಮತ್ತು ಗ್ರಹಣಬರುವುದಿಲ್ಲವು. ಈ ನೂತನಸಂವತ್ಸರದ ಗ್ರಹಯೋಗಫಲವನ್ನು ನೋಡಲಾಗಿ ಅಧಿಕ ನಿಜಚೈತ್ರಮಾಸಗಳಲ್ಲಿ ಬಿತ್ತನೆಗೆ ಯೋಗ್ಯವಾದ ಖಂಡವೃಷ್ಟಿಯೂ, ವೈಶಾಖಮಾಸದಲ್ಲಿ ಸಸ್ಯಗಳಿಗುಪಯೋಗವಾದ ಮಳೆಯೂ, ಜ್ಯೇಷ್ಠಾಷಾಢಮಾಸಗಳಲ್ಲಿ ಅಲ್ಪವಾಗಿ ತುಂತುರುಮಳೆಯೂ, ಶ್ರಾವಣಮಾಸದಲ್ಲಿ ಸುವೃಷ್ಟಿಯೂ, ಭಾದ್ರಪದಮಾಸದಲ್ಲಿ ಕೆಲವೆಡೆ ಸುವೃಷ್ಟಿಯೂ, ಮತ್ತೆ ಕೆಲವೆಡೆ ಅನಾವೃಷ್ಟಿಯೂ, ಅಶ್ವಯುಜಮಾಸದಲ್ಲಿ ಒಳ್ಳೇಮಳೆಯೂ, ಕಾರ್ತಿಕಮಾಸದಲ್ಲಿ ಪುಣ್ಯಭೂಮಿಗಳಿಗೆ ಮಾತ್ರ ಸುವೃಷ್ಟಿಯೂ ಆಗುವುದು. ಆಷಾಢಶ್ರಾವಣಮಾಸಗಳಲ್ಲಿ ಗಂಗಾದಿ ಮಹಾನದಿಗಳಲ್ಲಿ ಪೂರ್ಣಪ್ರವಾಹವು ಬಂದು ಕಪ್ಪು ಬಿಳುಪು ಧಾನ್ಯಗಳು ಹೇರಳವಾಗಿಯೂ, ಇತರ ಧಾನ್ಯಗಳು ಅಲ್ಪವಾಗಿಯೂ ಫಲಿಸುವುವು. ಎಣ್ಣೆ, ತುಪ್ಪ, ಬೆಲ್ಲ, ಸಕ್ಕರೆ ಮೊದಲಾಗಿ ರಸವಸ್ತುಗಳ ಮತ್ತು ಧಾನ್ಯಗಳ ಬೆಲೆಯೇರುವುದು. ಚಿನ್ನ, ಬೆಳ್ಳಿ, ಹತ್ತಿ, ನೂಲು ಮೊದಲಾಗಿ ನೀರಸವಸ್ತುಗಳ ಬೆಲೆಯು ಇಳಿಯುವುದು. ಭಾದ್ರಪದಾಶ್ವಯುಜಮಾಸಗಳಲ್ಲಿ ಕುಜನು ವಕ್ರಿಯಾಗಿರುವುದರಿಂದ ಪ್ರಜೆಗಳಿಗೆ ಸಿಡುಬಿನಬಾಧೆಯೂ, ಯಮಕುಜರ ಪ್ರಾರ್ಥನೆಯಿಂದ ಪ್ರಜಾಕ್ಷೇಮವೂ ಉಂಟಾಗುವುವು. ತೃಣಜಲಸಮೃದ್ಧಿಯಾಗಿರುವುದರಿಂದಲೂ, ಗೋಪಾಲನು ಪಶುನಾಯಕನಾಗಿರುವುದರಿಂದಲೂ ಪಶುಗಳು ರೋಗರಹಿತವಾಗಿರುವುವು. ದೇಶಭೇದದಿಂದ ಕಾರುಬೆಳೆಯು 9 ವೀಸವೂ, ಹೈನುಬೆಳೆಯು 10 ವೀಸವೂ ಫಲಿಸುವುದು ಎಂದು ಜ್ಯೋತಿಷ್ಕರು ಗುಣಿಸಿ ಹೇಳಿರುವರು.

ಪ್ರಪಂಚದ ಸದ್ಯಃಸ್ಥಿತಿಗತಿಗಳನ್ನೂ, ಕಾಲಚಕ್ರದ ವಿದ್ಯಮಾನವನ್ನೂ ಅವಲೋಕಿಸಿದರೆ, ಬರುವ ವರ್ಷದಲ್ಲಾದರೂ ಶಾಂತಿಸುಭಿಕ್ಷಗಳು ಸಮಾಧಾನಕರವಾಗಿರುವುವೆ? ಎಂದು ಚಿಂತಿಸುವಂತಿರುವುದು. ಅಸೂಯೆ, ಅತೃಪ್ತಿ, ಅಸತ್ಯ, ಅನ್ಯಾಯ, ಅಪ್ರೀತಿ, ಅತ್ಯಾಶೆ, ಕೃತಘ್ನತೆ ಇತ್ಯಾದಿ ಅಮಂಗಲ ರಾಜಸತಾಮಸಗುಣಗಳೆಲ್ಲ ಅಂತ್ಯವಾಗಿ ಸತ್ಯ, ಸತ್ಸಂಕಲ್ಪ, ಶಾಂತಿ, ತೃಪ್ತಿ, ಪರಸ್ಪರಪ್ರೀತಿ, ಸೋದರವಾತ್ಸಲ್ಯ ಮೊದಲಾದ ಸದ್ಗುಣಗಳು ವೃದ್ಧಿಗೊಳ್ಳುವಂತಾದಲ್ಲದೆ ಕಲಿಮಲಿಗಳ ತಾಪವು ದೇಶಕ್ಕೆ ತಪ್ಪುವದಿಲ್ಲ. ಲೋಕಯಾತ್ರೆಯೇ ದುರ್ಭರದುಃಖಭೂಯಿಷ್ಠವಾದುದೆಂದು ಅದರ ಸ್ವಭಾವವನ್ನು ಅರಿತಿರುವ ಸಜ್ಜನರು ಕಮಲಪತ್ರದ ಮೇಲಣ ಜಲಕಣದಂತೆ ನಿರ್ಲಿಪ್ತವಾಗಿ ಶಾಂತಚಿತ್ತದಿಂದ ಆ ಯಾತ್ರೆಯನ್ನು ಸಾಗಿಸಿಕೊಳ್ಳಬಲ್ಲರು. ಜಗದೀಶನ ಕರುಣದಿಂದ ನೂತನವರ್ಷವು ಸರ್ವರಿಗೂ ಶುಭಸುಮತಿಸೌಖ್ಯಸಂಪತ್ಪ್ರದವಾಗಿರಲಿ.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯ ಸಂಪ್ರದಾಯಜ್ಯೋತಿಶ್ಶಾಲೆಯ ಬ್ರಹ್ಮಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯಸಚ್ಚಿದಾನಂದ ಜ್ಯೋತಿಷ್ಕರಿಂದಲು ಮತ್ತು ಆಸ್ಥಾನ ಜ್ಯೋತಿಷವಿದ್ವಾನ್ ಯಚ್ಚಾನ್ ಸಂಪತ್ಕೃಷ್ಣಜೋಯಿಸ್ಯರಿಂದಲೂ ಗುಣಿಸಲ್ಪಟ್ಟು ಪ್ರಕಟಿಸಲ್ಪಟ್ಟಿರುವ ಅಕ್ಷಯಸಂವತ್ಸರದ ಪಂಚಾಂಗಗಳ ಪ್ರತಿಗಳನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.

ದಿವಾನ್ ಸರ್ ಬಾನರ್ಜಿಯವರು ಕಳೆದ ಗುರುವಾರ ರಾಜಧಾನಿಗೆ ಬಂದಿದ್ದು ಖಾಸ್‌ಬಂಗಲೆಯಲ್ಲಿ ಬೆಳಗಿನ 10 ಗಂಟೆಸಮಯದಲ್ಲಿ ಶ್ರೀಮನ್ಮಹಾರಾಜರವರ ದರ್ಶನವನ್ನು ತೆಗೆದುಕೊಂಡು 11½ ಗಂಟೆಯವರೆಗೂ ಪ್ರಸ್ತಾವಿಸುತ್ತಿದ್ದು ಬೆಂಗಳೂರಿಗೆ ದಯಮಾಡಿಸಿದರು. ಇವರು ಏಪ್ರಿಲ್ ತಿಂಗಳ ಕಡೆಯಲ್ಲಿ ರಜೆಯ್ಮೇರಾಗಿ ಮಿ|| ಮಿರ್ಜಾಇಸ್ಮಾಯಿಲ್, ಸಿ. ಐ. ಇ. ಯವರು ಮೇ ತಾ|| 1 ರಲ್ಲಿ ಸಂಸ್ಥಾನದ ದಿವಾನಗಿರಿಯನ್ನು ವಹಿಸಿಕೊಳ್ಳುವರೆಂದು ಕೇಳುತ್ತೇವೆ.

ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟ್‌ಕೋರ್ಟಿನಲ್ಲಿ ನಡೆಯುತ್ತಿರುವ ಮಿ|| ಟಿ. ಎಸ್. ಅಲ್ಲಿಖಾನರವರ ಮಾನನಷ್ಟದ ವಿವಾದದಲ್ಲಿ ಫಿರ್ಯಾದಿಯ ಪಾಟಿಸವಾಲು ಈ ತಾ|| 11 ರಲ್ಲಿ ನಡೆಯಬೇಕಾಗಿದ್ದುದು, ಈ ವಿವಾದವನ್ನು ಬೇರೆಕೋರ್ಟಿನ ವಿಚಾರಣೆಗಾಗಿ ವರ್ಗಾಯಿಸಿಕೊಳ್ಳಲಪೇಕ್ಷಿಸಿ ಅಪರಾಧಿಯು ಅರ್ಜಿಕೊಟ್ಟುದರಮೇಲೆ ಅಡ್ಜರ್ನ್‌ಮಾಡಲ್ಪಟ್ಟಿತು. ಅರ್ಜಿಯ ಫಲಿತಾಂಶವು ಮುಂದೆ ತಿಳಿಯತಕ್ಕದಾಗಿದೆ.

ಮೈಸೂರುಡಿಸ್ಟ್ರಿಕ್ಟಿನ ವೀರಶೈವಸಮಾಜಕ್ಕೇ ಕಿರೀಟಪ್ರಾಯರಾಗಿದ್ದ ಆ ಮಹಾನುಭಾವ ಕೈ|| ಕಬ್ಬಳ್ಳಿ ಚೆನ್ನಬಸಪ್ಪನವರನ್ನು ಆಹುತಿಗೊಂಡ ಮೋಟಾರುಬಂಡಿಯನ್ನು ನಡಿಸುತ್ತಿದ್ದ ಕಾಳಿದಾಸ್ ಎಂಬುವವನನ್ನು ಗುಂಡ್ಲುಪೇಟೆಯ ಪೋಲೀಸಿನವರು ಹಿಡಿದು ನಂಜನಗೂಡು ಸ್ಪೆಷಲ್‌ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು. ಏನಾದರೇನು? ವೀರಶೈವಸಮಾಜದ ದುರ್ದೈವವು ಮಾತ್ರ ಪರಿಹರವಾಗುವಂತಿಲ್ಲವು!

ಕಾರ್ಕಾರ್‌ಹಳ್ಳಿಯ ಆಸ್ಪತ್ರೆಯಲ್ಲಿ ಕಳೆದ ಎರಡುವರ್ಷಗಳಿಂದ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಕೆಲಸಮಾಡಿ ಪ್ರಜಾಪ್ರೀತಿಗೆ ಪಾತ್ರರಾಗಿದ್ದು ಈಗ ಚನ್ನರಾಯಪಟ್ಟಣಕ್ಕೆ ವರ್ಗಪಟ್ಟಿರುವ ಡಾಕ್ಟರ್ ಬಿ. ಎಸ್. ನಾಗಭೂಷಣಂರವರಿಗೆ ಅವರ ಕೆಲಸವನ್ನು ಮೆಚ್ಚಿ ಕಾರ್ಕಾರ್‌ಹಳ್ಳಿ ಮ್ಯುನಿಸಿಪಾಲಿಟಿಯವರು ಒಂದು "ಸ್ಟೆತಸ್‌ಕೋಪ"ನ್ನು ಬಹುಮಾನಿಸಿ ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಬೇಕೆಂದು 10-3-26 ರಲ್ಲಿ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ನಿರ್ಧರಿಸಿರುವುದಾಗಿ ಒಬ್ಬರು ತಿಳಿಸಿರುತ್ತಾರೆ.

ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲಿನ ಕಮಿಷನರಾಗಿದ್ದು ಅಸ್ವಸ್ಥತೆಯದೆಶೆಯಿಂದ ರಜವನ್ನು ತೆಗೆದುಕೊಂಡಿದ್ದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ಕಳೆದ ಭಾನುವಾರ ಬೆಂಗಳೂರಲ್ಲಿ ಕಾಲವಾದರೆಂದು ತಿಳಿಸಲು ಬಹಳ ವಿಷಾದವಾಗುತ್ತದೆ. ಇವರು ರಾಜಧಾನಿಯಲ್ಲಿ ಪ್ರಸಿದ್ಧಕುಟುಂಬಕ್ಕೆ ಸೇರಿದವರಾಗಿ ತಮ್ಮ ವಿದ್ಯಾಬುದ್ಧಿಸಾಮರ್ಥ್ಯದಿಂದ ನಾನಾ ಶಾಖೆಗಳಲ್ಲಿ ಕೆಲಸಮಾಡಿ ಡೆ|| ಕಮಿಷನರುದ್ಯೋಗಕ್ಕೇರಿ ಲೋಕಪ್ರಿಯರಾಗಿದ್ದರು. ಈ ಗುಣಾಢ್ಯರ ಮರಣದಿಂದ ಅವರ ಕುಟುಂಬಕ್ಕೇ ಅಲ್ಲದೆ ಮಿತ್ರಮಂಡಲಿಗೆಲ್ಲಾ ಬಹಳ ಖೇದವಾಗಿರುತ್ತದೆ.

ಕೋಲಾರ ಡಿ|| ಮುಳಬಾಗಲು ತಾಲ್ಲೂಕಿನಲ್ಲಿರುವ ಆವನಿಮಠದ ಅಧಿಕಾರಿಗಳಾಗಿದ್ದ ಶ್ರೀವಿದ್ಯಾಶಂಕರಭಾರತಿಸ್ವಾಮಿಗಳು 1925 ನೇ ಏಪ್ರಿಲ್ ತಾ|| 11ರಲ್ಲಿ ಶಿವೈಕ್ಯರಾದುದರಿಂದ ಅವರ ಸ್ಥಾನಕ್ಕೆ ಬೇರೊಬ್ಬ ಸ್ವಾಮಿಗಳನ್ನು ನಿಯಮಿಸುವ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಮಠದ ಶಿಷ್ಯರುಗಳ ಮಹಾಸಭೆಯು ಬರುವ ಏಪ್ರಿಲ್ ತಾ|| 3 ನೇ ಶನಿವಾರ ಬೌರಿಂಗ್‌ಪೇಟೆಯಲ್ಲಿರುವ ಕಿಂಗ್‌ಎಡ್ವರ್ಡ್ ಹಾಲಿನಲ್ಲಿ ಸೇರುವುದರಿಂದ ಆ ಸಭೆಗೆ ಮಠದ ಶಿಷ್ಯರುಗಳು ಬರಬೇಕೆಂದು ಕೋಲಾರದ ಡೆ|| ಕಮಿಷನರು ಅಪೇಕ್ಷಿಸಿರುತ್ತಾರೆ.

ರಾಜಧಾನಿಯಲ್ಲಿ ಪ್ರಸಿದ್ಧ ಎಕ್ಸೈಸ್ ಕಂಟ್ರಾಕ್ಟರೂ, ದೊಡ್ಡವರ್ತಕರೂ ಆಗಿದ್ದ ಕುಂಚಿಟಿಗರ ಮ|| ಎ. ತಿಮ್ಮಯ್ಯನವರು 3-4 ತಿಂಗಳುಗಳಿಂದ ಶೋಭೆಯರೋಗಗ್ರಸ್ತರಾಗಿದ್ದು ಕಳೆದ ತಾ|| 4 ರಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಅವಸಾನಕಾಲದಲ್ಲಿ 52-53 ವರ್ಷವಯಸ್ಸಾಗಿದ್ದಿತೆಂದು ತೋರುತ್ತದೆ. ಇವರು ಬಹು ಧೈರ್ಯಶಾಲಿಗಳಾಗಿಯೂ, ವರ್ತಕಮಂಡಲಿಗೆ ಬೆಂಬಲರಾಗಿಯೂ ಇದ್ದುದರಿಂದ ಇವರ ಅಕಾಲಮರಣದಿಂದ ವರ್ತಕಮಂಡಲಿಗೆ ಬಹಳ ನಷ್ಟವಾಯಿತೆನ್ನುವುದರಲ್ಲಿ ಸಂದೇಹವಿಲ್ಲ. ಮೃತರ ಆತ್ಮಕ್ಕೆ ನಿರಂತರ ಶಾಂತಿಯೂ ಪತ್ನಿಪುತ್ರಾದಿಗಳಿಗೆ ಮನಸ್ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ಶ್ರೀಮನ್ಮಹಾರಾಜಸಹೋದರರೂ, ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯವರೂ ಕಾಶೀಮಹಾಕ್ಷೇತ್ರದಲ್ಲಿ ಶ್ರೀ ವಿಶ್ವೇಶ್ವರನ ಸೇವೆಯನ್ನು ಮಾಡಿ ಕಲಕತ್ತಾಕ್ಕೆ ಚಿತ್ತೈಸಿ ಅಲ್ಲಿ ಕೈ|| ಶ್ರೀಚಾಮರಾಜೇಂದ್ರಒಡೆಯರವರ ಸಮಾಧಿಯ ದರ್ಶನಪೂಜಾದಿಗಳನ್ನು ತೀರಿಸಿಕೊಂಡು ಮದ್ರಾಸು ಮಾರ್ಗವಾಗಿ ಕಳೆದ ಸೋಮವಾರ ಬೆಳಿಗ್ಗೆ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ಶ್ರೀರಂಗಪಟ್ಟಣದವರೆಗೆ ಬಂದು ಅಲ್ಲಿ ಶ್ರೀಮನ್ಮಹಾರಾಜಸಹೋದರರು ಮೋಟಾರುಬಂಡಿಯನ್ನು ಹತ್ತಿ ರಾಜಧಾನಿಗೆ ಚಿತ್ತೈಸಿದರು. ಮಹಾಮಾತೃಶ್ರೀಯವರು ಮೊದಲಾದವರು ರೈಲುಬಂಡಿಯಲ್ಲೇ ರಾಜಧಾನಿಗೆ ದಯಮಾಡಿಸಿದರು. ಸಿಲ್ದಾಣದಲ್ಲಿ ಮ್ಯುನಿಸಿಪಲ್‌ಪ್ರೆಸಿಡೆಂಟರು ಮೊದಲಾದವರು ಇದಿರ್ಗೊಂಡು ಮರ್ಯಾದಿಸಿದರು.

ರಾಜಧಾನಿಯ ರೈಲ್ವೆಸ್ಟೇಷನ್‌ರೋಡಿನಲ್ಲಿ ಕಾಳಮ್ಮನಗುಡಿಯ ಹಿಂಭಾಗದಲ್ಲಿರುವ ಅರಮನೆಯಕಟ್ಟಡಗಳ ಕಂಟ್ರಾಕ್ಟರಾದ ಅಕ್ಕಸಾಲಿಗರ ಮ|| ತಿಮ್ಮಯ್ಯಾಚಾರರ ಮಗ ಅಪ್ಪಾಜಪ್ಪನವರ 9 ವರ್ಷದ ಮಗನ ಮೈಮೇಲಿದ್ದ 300-400 ರೂ. ಬೆಲೆಯ ಆಭರಣವನ್ನು ಅಪಹರಿಸುವ ಆಸೆಯಿಂದ ಯಾರೋ ದುಷ್ಟರು ಈ ತಾ|| 11 ರ ಸಾಯಂಕಾಲ ಹುಡುಗನು ಮನೆಯಹೊರಗೆ ಬರುತ್ತಲೆ ಉಪಾಯಾಂತರದಿಂದ ಅವನನ್ನು ಕರೆದುಕೊಂಡುಹೋಗಿ ಅವನ ಕೈಕಾಲುಗಳನ್ನೂ, ಕುತ್ತಿಗೆಯನ್ನೂ ಮುರಿದು ಕೊಂದುಹಾಕಿ ಕುಕ್ಕರಹಳ್ಳಿಯಕೆರೆಯೊಳಗಣ ಗುಂಡಿಯಲ್ಲಿ ಬಿಸಾಡಿದ್ದರಂತೆ. ಹುಡುಗನು ಬಹಳಹೊತ್ತಿನವರೆಗೂ ಮನೆಗೆ ಬರಲಿಲ್ಲವಾಗಿ ಸಂಶಯಪಟ್ಟು ಅವನ [illegible]

ದಿಕ್ಕುಗಳಲ್ಲೂ ಹುಡುಕಿದುದರಮೇಲೆ ಕುಕ್ಕರಹಳ್ಳಿಕೆರೆಯೊಳಗಣ ಗುಂಡಿಯಲ್ಲಿ ಹಾಕಲ್ಪಟ್ಟಿದ್ದುದು ಗೊತ್ತಾಗಿ ಶವವು ಕೃಷ್ಣರಾಜಆಸ್ಪತ್ರೆಗೆ ಸಾಗಿಸಲ್ಪಟ್ಟು ಪರೀಕ್ಷಿಸಲ್ಪಟ್ಟುದರಮೇಲೆ ನೆನ್ನೆಯದಿನ ಸಾಯಂಕಾಲ ಸಂಸ್ಕರಿಸಲ್ಪಟ್ಟಿತು. ಆ ಹುಡುಗನ ತಂದೆತಾಯಿ ಬಂಧುಬಳಗದವರ ದುಃಖವನ್ನು ಹೇಳತೀರದುದಾಗಿದೆ. ಸಾವಿರಾರುಜನ ಸ್ತ್ರೀಪುರುಷರು ತಂಡತಂಡವಾಗಿ ಬಂದು ಮಗುವಿನ ಶವವನ್ನು ನೋಡಿ ದುಃಖಿಸುತ್ತಿದ್ದರು. ಮುದ್ದುಮಗುವಿನ ವಿಯೋಗದುಃಖಕ್ಕೆ ಗುರಿಯಾದ ತಂದೆತಾಯಿಗಳು ಕೊಂದ ನರರಾಕ್ಷಸರನ್ನು ಹಿಡಿದುಕೊಟ್ಟರೇನಾದರೂ ಪೋಲೀಸಿನವರು ತಕ್ಕ ಕ್ರಮಜರುಗಿಸಿ ಶಿಕ್ಷೆಗೆಗುರಿಮಾಡುವರೇನೋ? ಎಂದು ಜನರು ಮಾತನಾಡಿಕೊಳ್ಳುತ್ತಿದ್ದುದಾಗಿ ತಿಳಿಯಬರುತ್ತದೆ. ರಾಜಧಾನಿಯ ನಿವಾಸಿಗಳು ತಮ್ಮ ಧನ ಮತ್ತು ಪ್ರಾಣಸಂರಕ್ಷಣೆಯ ವಿಚಾರದಲ್ಲಿ ಇಷ್ಟು ಸಂಶಯಪಡುವುದನ್ನು ನೋಡಿದರೆ ಪೋಲೀಸಿನವರೇರ್ಪಾಟೂ, ಶ್ರದ್ಧೆಯೂ ಎಷ್ಟರಮಟ್ಟಿಗಿರುತ್ತದೆಂಬುದು ವ್ಯಕ್ತವಾಗುತ್ತದೆ.

ಮೈಸೂರುಸೀಮೆಯ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರಾದ ಮ|| ಕೆ. ಎಚ್. ರಾಮಯ್ಯ, ಬಿ.ಎ., ಬ್ಯಾರಿಸ್ಟರ್‌ರವರು ತಮ್ಮ ಜ್ಯೇಷ್ಠಕುವರಿ ಸೌ|| ಯಶೋಧರಮ್ಮನನ್ನು ಕೊಡಗಿನ ರಿಟೈರ್ಡ್ ಸಬ್‌ಜಡ್ಜಿಯರೂ, ಮೈಸೂರು ನ್ಯಾಯವಿಧಾಯಕಸಭೆಯ ಮತ್ತು ಬೆಂಗಳೂರುಸಿಟಿ ಮ್ಯುನಿಸಿಪಲ್‌ಕೌನ್ಸಿಲಿನ ಮೆಂಬರೂ ಆದ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರ ತೃತೀಯಕುಮಾರ ರಾಜಧಾನಿಯ ಅಡ್ವೊಕೇಟ್ ಮತ್ತು ಮ್ಯುನ್ಸಿಪಲ್‌ಕೌನ್ಸಿಲರ್ ಮ|| ಎಚ್. ಸಿ. ದಾಸಪ್ಪ, ಬಿ.ಎ., ಎಲ್‌ಎಲ್.ಬಿ., ಇವರಿಗೆ ಕೊಟ್ಟು ಕಳೆದ ತಾ|| 4 ನೆಯ ಗುರುವಾರ ಬೆಳಿಗ್ಗೆ ಬೆಂಗಳೂರಲ್ಲಿರುವ ತಮ್ಮ ಮೈತ್ರೇಯವಿಲಾಸದಲ್ಲಿ ವಿಧ್ಯುಕ್ತವಾಗಿ ಕನ್ಯಾದಾನಮಾಡಿದರು. ದಿವಾನರು, ಕೌನ್ಸಿಲರುಗಳು, ಚೀಫ್‌ಜಡ್ಜಿಯರು, ಮೊದಲಾಗಿ ಸರ್ಕಾರಿಯಧಿಕಾರಿಗಳೂ, ವಕೀಲರುಗಳೂ, ವರ್ತಕರುಗಳೂ, ಪರಸ್ಥಳಗಳಿಂದ ಬಂಧುಗಳೂ, ಮಿತ್ರರುಗಳೂ ಅನೇಕವಾಗಿ ಬಂದಿದ್ದು ಮ|| ಗಳಾದ ರಾಮಯ್ಯನವರಿಂದಲೂ ಚೆನ್ನಯ್ಯನವರಿಂದಲೂ ಯಥೋಚಿತವಾಗಿ ಸತ್ಕರಿಸಲ್ಪಟ್ಟು ದಂಪತಿಗಳ ದೀರ್ಘಾಯುರಾರೋಗ್ಯೈಶ್ವರ್ಯವನ್ನು ಬಯಸಿದರು. ತಾ|| 5 ರ ಸಾಯಂಕಾಲ ಮ|| ರಾಮಯ್ಯನವರು ತಮ್ಮ ಮೈತ್ರೇಯವಿಲಾಸದ ಹೊರ ಆವರಣದಲ್ಲಿ ಸರ್ಕಾರಿಯಧಿಕಾರಿಗಳಾದಿಯಾಗಿ 400-500 ಜನ ದೊಡ್ಡಮನುಷ್ಯರಿಗೆ ಅಲ್ಪಾಹಾರವನ್ನು ಬಹುವಿತರಣೆಯಿಂದ ಮಾಡಿಸಿ ಎಲ್ಲರನ್ನೂ ಸಂಗೀತಶ್ರವಣದಿಂದ ಆನಂದಗೊಳಿಸಿದರು. ಶ್ರೀಮನ್ಮಹಾರಾಜ ಜಗದ್ಗುರುಮುರುಘರಾಜೇಂದ್ರಮಹಾಸ್ವಾಮಿಗಳಿಂದ ದಂಪತಿಗಳಿಗೆ ಅಮೋಘವಾದ ಉಡುಗೆರೆಗಳು ಆಶೀರ್ವದಿಸಲ್ಪಟ್ಟುವಲ್ಲದೆ ಸರ್ಕಾರಿಯಧಿಕಾರಿಗಳಿಂದಲೂ, ಮ|| ಸಿ. ಆರ್. ರೆಡ್ಡಿಯವರು ಮೊದಲಾಗಿ ಮಿತ್ರಮಂಡಲಿಯವರಿಂದಲೂ ಸುವರ್ಣರಜತಪಾತ್ರೆಗಳು, ದುಕೂಲಗಳು, ಚಿತ್ರಪಟಗಳು ಮೊದಲಾಗಿ ಬಹುಬೆಲೆಯ ಪದಾರ್ಥಗಳು ಬಹುಮಾನಿಸಲ್ಪಟ್ಟುವು. ವಧೂವರರಿಬ್ಬರೂ ಪ್ರೌಢವಯಸ್ಕರಾಗಿಯೂ, ವಿದ್ಯಾವಿಭೂಷಿತರಾಗಿಯೂ ಇರುವುದು ಒಂದುವಿಶೇಷವೇಸರಿ. ಮ|| ರಾಮಯ್ಯನವರ ಮತ್ತು ರಾ|| ಸಾ|| ಚೆನ್ನಯ್ಯನವರ ಬಾಂಧವ್ಯವು ಕುಂದಣಕ್ಕೆ ರತ್ನಸೇರಿದಂತಿದೆ. ಈ ಉಭಯರ ಅತಿಥಿಸತ್ಕಾರವಿಶೇಷವು ಅನುಕರಣೀಯವೂ, ಶ್ಲಾಘ್ಯವೂ ಆಗಿರುವುದು. ಈ ನೂತನ ದಂಪತಿಗಳಿಗೆ ಸಮಸ್ತಸನ್ಮಂಗಳವುಂಟಾಗಲೆಂದು ಹರಸುತ್ತೇವೆ. ಈ ಮಹೋತ್ಸವಸಂಬಂಧವಾದ ಇಂಗ್ಲಿಷ್ ಪತ್ರವ್ಯವಹಾರವು ಬೇರೊಂದೆಡೆಯಲ್ಲಿ ಪ್ರಕಟಿಸಲ್ಪಟ್ಟಿದೆ.

ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಕೆಲ ಚರ್ಚಾಂಶಗಳು.

ನ್ಯಾಯವಿಧಾಯಕಸಭೆಯು ಫೆಬ್ರವರಿ 23 ನೇ ತಾ|| ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಬೆಂಗಳೂರಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನ್ ಸಾಹೇಬರಾದ ಸರ್ ಎ. ಆರ್. ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲ್ಪಟ್ಟಿತು.

ಸಬ್‌ರಿಜಿಸ್ಟ್ರಾರುಗಳ ಆಫೀಸುಗಳಲ್ಲಿ ಲಂಚ ರುಷವತ್ತುಗಳು ವಿಪರೀತವಾಗಿರುವುವೆಂದೂ, ಅವುಗಳನ್ನು ತಡೆದು ಅಲ್ಲಿ ನೆಲೆಸಿರತಕ್ಕ ಅನೀತಿಯನ್ನು ಕಡಿಮೆಮಾಡುವುದಕ್ಕೆ ಸರ್ಕಾರದವರು ಸಾಕಾದಷ್ಟು ಪ್ರಯತ್ನವನ್ನು ಮಾಡಿಲ್ಲವೆಂದೂ ಹೇಳಿದಾಗ, ಮ|| ಎ. ಆರ್. ತ್ಯಾಗರಾಜ ಅಯ್ಯರ್‌ವರು ಈ ಅನೀತಿಯನ್ನು ತಪ್ಪಿಸಲು ತಾವು ಆಗಿಂದಾಗ್ಗೆ ಮಾಡುತ್ತಿರುವ ಏರ್ಪಾಡುಗಳನ್ನು ತಿಳಿಸಿದರು. ದಿವಾನ್ ಸಾಹೇಬರು ಈ ಅನೀತಿಯು ತಪ್ಪಬೇಕಾದರೆ ಸಬ್‌ರಿಜಿಸ್ಟ್ರಾರ್ರುಗಳ ಸಂಬಳವನ್ನು ಹೆಚ್ಚಿಸಬೇಕೆಂಬ ಅಂಶವನ್ನು ಸ್ಪಷ್ಟಗೊಳಿಸಿದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ, ತಿಂಗಳಿಗೆ 1000 ರೂಪಾಯಿಗಳ ಸಂಬಳವನ್ನು ಹೊಂದುತ್ತಿರುವ ಯೂರೋಪಿಯನ್ ಅಧ್ಯಾಪಕರುಗಳಿಗೆ, ತಿಂಗಳಿಗೆ 150 ರೂಪಾಯಿಗಳ ಅಧಿಕ ಅಲೋಯನ್ಸನ್ನು ಸ್ಯಾಂಕ್ಷನ್ ಮಾಡಿದವಿಚಾರದಲ್ಲಿ ಸರ್ಕಾರದವರು ವೈಸ್-ಛಾನ್ಸೆಲರ್ ಸಾಹೇಬರ ಅಭಿಪ್ರಾಯವನ್ನು ಮಾತ್ರ ಕೇಳಿ, ಯೂನಿವರ್ಸಿಟೀ ಕೌನ್ಸಿಲ್ಲಿನ ಅಭಿಪ್ರಾಯವನ್ನು ವಿಚಾರ ಕೇಳಲಿಲ್ಲವೆಂದು ಪ್ರಶ್ನಿಸಿದುದಕ್ಕೆ, ಸಾಮಾನ್ಯವಾಗಿ ಇಂತಹ ಪ್ರಸಂಗಗಳಲ್ಲಿ, ಯೂನಿವರ್ಸಿಟೀ ಕೌನ್ಸಿಲ್ಲಿನ ಅಭಿಪ್ರಾಯವನ್ನು ಕೇಳುವುದು ವಾಡಿಕೆಯಾದರೂ ಮೇಲೆಹೇಳಿದ ಸಂದರ್ಭದಲ್ಲಿ ಸರ್ಕಾರದವರು ಯೂನಿವರ್ಸಿಟೀ ಕೌನ್ಸಿಲ್ಲಿನ ಅಭಿಪ್ರಾಯವನ್ನು ಕೇಳುವುದು ಅವಶ್ಯಕವಲ್ಲವೆಂದು ಭಾವಿಸಿದರು, ಎಂದು ಉತ್ತರವು ಕೊಡಲ್ಪಟ್ಟಿತು.

ಸಬ್ ಅಸಿಸ್ಟೆಂಟ್ ಸರ್ಜನರುಗಳ ಸಂಬಳವನ್ನು ಹೆಚ್ಚಿಸುವ ವಿಚಾರದಲ್ಲಿ ಏನು ಏರ್ಪಾಡುಗಳು ಮಾಡಲ್ಪಟ್ಟಿವೆ? ಎಂದು ಮೆ|| ಎಂ. ವೆಂಕಟಕೃಷ್ಣಯ್ಯನವರು ಪ್ರಶ್ನಿಸಿದುದುಕ್ಕೆ ಒಟ್ಟು ಮೆಡಿಕಲ್ ಇಲಾಖೆಯಲ್ಲೇ ಅನೇಕರುಗಳ ಸಂಬಳವನ್ನು ಹೆಚ್ಚಿಸಬೇಕಾಗಿರುವುದು. ಇದನ್ನು ತೃಪ್ತಿಕರವಾಗಿ ಮಾಡುವುದಕ್ಕೆ 1,40,000 ರೂಪಾಯಿಗಳ ಅಂದಾಜಾಮಾಡಲ್ಪಟ್ಟಿರುವುದು. ಈ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದು ಎಂಬ ಉತ್ತರವು ಕೊಡಲ್ಪಟ್ಟಿತು.

ಅನೇಕ ವರ್ಷಗಳ ಹಿಂದೆ ಕೆಲವು ಶ್ರೀಮಂತಮನೆತನದವರಿಗೆ ಅವರ ಸ್ಥಿರಸ್ವತ್ತಿನ ಆಧಾರದಮೇಲೆ ಸರ್ಕಾರದವರು ಸಾಲವನ್ನು ಕೊಟ್ಟಿರುವರು. ಈಚೆಗೆ ಆ ಮನೆತನದವರು ಸಾಲದ ಹಣವನ್ನು ಕೊಡಲಾರದವರಾಗಿರುವರು. ಇಂಥಾ ಸಂದರ್ಭಗಳಲ್ಲಿ ಸರ್ಕಾರದವರು ಆಧಾರವಾಗಿ ಇಡಲ್ಪಟ್ಟಿದ್ದ ಸ್ಥಿರಸ್ವತ್ತನ್ನೆಲ್ಲಾ ಮಾರಿದರೂ, ಸಾಲಕ್ಕೆ ಸಾಕಾದಷ್ಟು ಹಣವು ಪೂರೈಸದೆ ಇರುವುದು. ಈ ಕಾರಣದಿಂದ ಆ ಸಾಲವನ್ನು ಹೊಡೆದುಹಾಕುವ ವಾಡಿಕೆ ಇರುವುದು. ಈರೀತಿಯಾಗಿ ಈ ವರ್ಷವೂ ಕೆಲವು ಸಾಲಗಳನ್ನು ಹೊಡೆದುಹಾಕುವುದಕ್ಕೆ ಸದಸ್ಯರ ಒಪ್ಪಿಗೆಯನ್ನು ಸರ್ಕಾರದವರು ಕೇಳಿದರು. ಮ|| ಗಳಾದ ಅಬ್ಬಾಸ್‌ಖಾನರವರು, ಜೆ. ಪರಮಶಿವಯ್ಯನವರು ಮೊದಲಾದವರು ಸಾಲವನ್ನು ಹೀಗೆ ಹೊಡೆದುಹಾಕುವ ವಾಡಿಕೆಯನ್ನು ನಿರೋಧಿಸಿ, ಸಾಲವನ್ನು ಕೊಡುವಾಗಲೇ ಸಾಲಕ್ಕೆ ಸರಿಯಾದ ಆಧಾರವು ಸಾಲಗಾರನಲ್ಲಿರುವುದೇ ಎಂಬುದನ್ನು ಸರ್ಕಾರದವರು ಗಮನಿಸಬೇಕೆಂಬ ಅಂಶವನ್ನು ಸೂಚಿಸಿದರು. ಸರ್ಕಾರದವರು ತಾವು ಈ ವಿಷಯದಲ್ಲಿ ಎಷ್ಟು ಜಾಗರೂಕತೆಯನ್ನು ವಹಿಸಬೇಕೋ ಅಷ್ಟನ್ನು ವಹಿಸಿದರೂ ಅನಿರೀಕ್ಷಿತವಾದ ಕೆಲವು ಕಾರಣಗಳಿಂದ ಈ ಪರಿಸ್ಥಿತಿಯು ಉಂಟಾಗಿರುವುದೆಂದು ತಿಳಿಸಿದಮೇಲೆ, ಈ ಆಕ್ಷೇಪವು ವಾಪಸು ತೆಗೆದುಕೊಳ್ಳಲ್ಪಟ್ಟು, ಆ ಸಾಲವನ್ನು ಹೊಡೆದುಹಾಕುವುದಕ್ಕೆ ಸಭೆಯ ಒಪ್ಪಿಗೆಯು ದೊರೆಯಿತು.

ಮ|| ಬಿ. ನರಸಿಂಗರಾಯರು ಮಿಸ್ಟರ್ ಮಹಮದ್ ಅಬ್ಬಾಸ್‌ಖಾನರು ಮೊದಲಾದವರು ಚೀಫ್‌ಜಡ್ಜಿಗಳಿಗೆ 2,000 ರೂಪಾಯಿಗಳಿಂದ 2,500 ರೂಪಾಯಿಗಳಿಗೆ ಸಂಬಳವನ್ನು ಹೆಚ್ಚಿಸಿದ ವಿಷಯವನ್ನು ನಿರೋಧಿಸಿದರು. ಸರ್ಕಾರದ ಖರ್ಚನ್ನು ಕಟಾಯಿಸಬೇಕೆಂದು ನೇಮಿಸಲ್ಪಟ್ಟಿದ್ದ ಸ್ಪೆಷಲ್ ಫೈನಾನ್ಸ್ ಕಮಿಟಿಯವರು, ಚೀಫ್‌ಜಡ್ಜರ ಸಂಬಳವು 2,000 ರೂಪಾಯಿಗಳಿಗೆ ಹೆಚ್ಚು ಕೂಡದೆಂದು ಸಿಫಾರಸುಮಾಡಿದರೂ ಈಗ 500 ರೂಪಾಯಿಗಳ ಸಂಬಳವನ್ನು ಹೆಚ್ಚಿಸಿದುದು ಯೋಗ್ಯವಲ್ಲವೆಂದು ಇವರುಗಳು ಅಭಿಪ್ರಾಯಪಟ್ಟರು. ಮ|| ಡಿ. ಎಸ್. ಮಲ್ಲಪ್ಪನವರು ಈಗ ಚೀಫ್‌ಕೋರ್ಟಿನಲ್ಲೂ, ಇತರ ಕೋರ್ಟುಗಳಲ್ಲಿಯೂ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆಂದೂ, ಕೋರ್ಟಿನಲ್ಲಿ ನ್ಯಾಯವು ಕಾಲಮೀರಿ ದೊರಕುತ್ತಿರುವುದೆಂದೂ, ಕೆಲವು ಕೋರ್ಟುಗಳಲ್ಲಿ ನ್ಯಾಯವು ಶೀಘ್ರದಲ್ಲಿಯೇ ಕೊಡಲ್ಪಟ್ಟಂತಿದ್ದರೂ, ಅವುಗಳಲ್ಲಿ ಸರಿಯಾದ ನ್ಯಾಯವು ದೊರೆಯುತ್ತಿಲ್ಲವೆಂದೂ, ಹೇಳಿದರು.

ದಿವಾನ್‌ಸಾಹೇಬರು ಈಗಿನ ಚೀಫ್ ಜಡ್ಜಿಗಳಾದ ಮಿ|| ಆರ್. ಬಿ. ಪ್ಲಮರ್‌ರವರಿಗೆ 2,500 ರೂಪಾಯಿಗಳು ಹೇಗೆ ಕೊಡಲಾಯಿತೆಂಬುದನ್ನು ತಿಳಿಸುವುದರಲ್ಲಿ, ಇವರಿಗೆ ಚೀಫ್ ಜಡ್ಜಿಗಳಾಗುವುದಕ್ಕೆ ಮುಂಚೆ 1,750 ರೂಪಾಯಿಗಳು ಬರುತ್ತಿದ್ದವೆಂದೂ, ಶ್ರೀಮನ್ಮಹಾರಾಜರವರನ್ನು ಕೇಳಿಕೊಂಡಮೇಲೆ ಮಿ|| ಪ್ಲಮರ್‌ರವರಿಗೆ ಮಾತ್ರ 2,500 ರೂಪಾಯಿಗಳು ಕೊಡಲ್ಪಡಬೇಕಾಗಿ ತೀರ್ಮಾನವಾಯಿತೆಂದೂ ಅಪ್ಪಣೆಕೊಡಿಸಿದರು.

ಭದ್ರಾವತೀ ಕಬ್ಬಿಣದಕಾರ್ಖಾನೆಯ ಕೆಲವು ಅಂಶಗಳ ಹೆಚ್ಚಿನ ಖರ್ಚಿಗಾಗಿ ಒಪ್ಪಿಗೆಯು ಕೇಳಲ್ಪಟ್ಟಾಗ ಮ|| ಗಳಾದ ಅಬ್ಬಾಸ್‌ಖಾನರವರು, ಪರಮಶಿವಯ್ಯನವರು, ಡಿ. ಎಸ್. ಮಲ್ಲಪ್ಪನವರು, ರಾವ್‌ಸಾಹೇಬ್ ಚೆನ್ನಯ್ಯನವರು, ಮೊದಲಾದವರು ಈ ಕಾರ್ಖಾನೆಯಿಂದ ಯಾವ ಫಾಯಿದೆಯೂ ಇಲ್ಲದೆ ಸಂಸ್ಥಾನಕ್ಕೆ ಅತಿಶಯವಾದ ನಷ್ಟವು ಸಂಭವಿಸುತ್ತಿರುವುದೆಂದೂ, ಇದರಿಂದ ಸಂಸ್ಥಾನಕ್ಕೆ ಬಹಳ ಹಾನಿಯು ತಟ್ಟುತ್ತಿರುವುದೆಂದೂ, ಈ ಕಾರ್ಖಾನೆಯನ್ನು ನಿಲ್ಲಿಸುವ ಸಮಯವು ಬಂದಿರುವುದೆಂದೂ ಹೇಳಿದರು. ಇದಕ್ಕೆ ವಿರೋಧವಾಗಿ ಮ|| ಗಳಾದ ಪುಟ್ಟಣ್ಣಶೆಟ್ಟರು, ವೆಂಕಟೇಶಯ್ಯನವರು ಮೊದಲಾದವರು ಇಷ್ಟು ಹಣವನ್ನು ಖರ್ಚುಮಾಡಿ, ಈಗ ಆ ಕಾರ್ಖಾನೆಯನ್ನು ನಿಲ್ಲಿಸುವುದು ನಾಚಿಕೆಗೇಡಲ್ಲದೆ ಹಾನಿಕರವೆಂಬುದನ್ನೂ ತಿಳಿಸಿದರು. ಎರಡುಕಡೆಯವರೂ ಹೇಳಿದ ಅಭಿಪ್ರಾಯಗಳನ್ನು ವಿಮರ್ಶಿಸಿ, ದಿವಾನ್‌ಸಾಹೇಬರು ಅಪ್ಪಣೆಕೊಡಿಸಿದುದೇನೆಂದರೆ, ಈಗ 2-3 ವಾರಗಳಿಂದಲೂ ಈ ಕಾರ್ಖಾನೆಯಲ್ಲಿ ಆಶಾಜನಕವಾದ ಪರಿಸ್ಥಿತಿಯು ಉಂಟಾಗಿರುವುದು. ಈ ಕಾರ್ಖಾನೆಯನ್ನು ನಿಲ್ಲಿಸುವ ಸಲಹೆಯನ್ನು ಈಗ ತರುವುದು ಸರಿಯಿಲ್ಲ. ಈ ವಿಷಯವನ್ನು ಸರ್ಕಾರದವರು ಮುಂದಿನ ಬಜೆಟ್ ಅಧಿವೇಶನದ ಸಮಯಕ್ಕೆ ವಿಮರ್ಶಿಸುವರು. ಅದುವರೆಗೂ ಸದಸ್ಯರು ಶಾಂತಿಯುತರಾಗಿರಬೇಕೆಂದು ಪ್ರಾರ್ಥಿಸಿದ ಮೇರೆಗೆ ಆಕ್ಷೇಪಣೆಯು ವಾಪಸು ತೆಗೆದುಕೊಳ್ಳಲ್ಪಟ್ಟಿತು.

ಬಿ. ಪಿ.

BULLETIN NO. 4.

FOURTH MYSORE LAWYERS' CONFERENCE, TUMKUR.

The Secretary writes :—

At a meeting of the Working Committee held yesterday it was resolved to hold the Conference on the 8th and 9th (Thursday and Friday) April 1926. The various Bar Associations in the State are requested to send up their subjects to the Secretary before the end of this month. The members of the Working Committee have arranged to tour in the Province during this month to enlist delegates to the Conference. It is expected that the Law Associations in the State will kindly co-operate with them in making the Conference a success. The Secretary in his recent trip to Kolar has secured more than 10 delegates with a promise of some more gentlemen of the Bar to become delegates. The esthetic side of the function is arranged by a series of dramas to be enacted by the Hassan Amateur Dramatic Company, mainly consisting of the members of the Bar there.

Tumkur, 3-3-26.

ಲಂಬಾಣಿ ಜನಗಳ ಮೊದಲನೇ ಮಹಾಸಭೆ.

(THE FIRST LAMBANI CONFERENCE)

ಚಿತ್ರದುರ್ಗ ಡಿಸ್ಟ್ರಿಕ್ಟ್

ಹಿರಿಯೂರು ಟೌನಿನಲ್ಲಿ

ತಾ|| ೨೬-೩-೧೯೨೬ ನೇ ಶುಕ್ರವಾರದ ಬೆಳಿಗ್ಗೆ

ಮತ್ತು ೨೭-೩-೧೯೨೬ ನೇ ಶನಿವಾರ

ಸಾಯಂಕಾಲದವರಿವಿಗೆ.

ಅಧ್ಯಕ್ಷರು—ಚಿತ್ರದುರ್ಗ ಡಿ|| **ಡೆಪ್ಯೂಟಿಕಮಿಷನರವರಾದ** ಮ|| ರಾ|| ಎಸ್. ವೆಂಕಟರಂಗಂ, ಬಿ.ಎ., ಬಿ.ಎಲ್., ರವರು.

ಲೋವರ್‌ಸೆಕೆಂಡರೀಪರೀಕ್ಷೆಗೆ ಬರತಕ್ಕ ವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ಶಿಕಾರಿಪುರ ಸೆಂಟರು.

1926 ನೆಯ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರೀಪರೀಕ್ಷೆಗಾಗಿ ಶಿಕಾರಿಪುರ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಊಟಕ್ಕೂ ವಾಸಕ್ಕೂ ತಕ್ಕೇರ್ಪಾಟು ಇಲ್ಲಿಯ ವೀರಶೈವವಿದ್ಯಾವರ್ಧಕಸಂಘದವರಿಂದ ಮಾಡಲ್ಪಡುವ ಪ್ರಯುಕ್ತ ಬರತಕ್ಕವರು ತಮ್ಮ ಹೆಸರು ವಿಳಾಸವನ್ನು ಕೆಳಗೆ ಕಂಡವರಿಗೆ ಮುಂಚಿತವಾಗಿ ಬರೆಯಬೇಕಲ್ಲದೆ ಹಾಸಿಗೆ ಮತ್ತು ಕಂಬಿಗೆಯನ್ನು ಕೂಡ ತರಬೇಕು.

ಎಂ. ಶಿವಬಸಪ್ಪ,
ವಿ. ವಿ. ವರ್ಧಕಸಂಘದ ಜಾಯಿಂಟ್ ಸೆಕ್ರೆಟರಿ, ಶಿಕಾರಿಪುರ.

ದೊಡ್ಡಬಳ್ಳಾಪುರ ಸೆಂಟರ್.

ಈ ಸೆಂಟರಿಗೆ ಇಂಗ್ಲಿಷ್ ಮತ್ತು ಕನ್ನಡ ಲೋವರ್‌ಸೆಕೆಂಡರೀಪರೀಕ್ಷೆಗಾಗಿ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಮತ್ತು ಅವರಕೂಡ ಬರುವ ಮಾಸ್ಟರುಗಳ ವಾಸಕ್ಕೂ ಊಟಕ್ಕೂ ಪದ್ಧತಿಯಂತೆ ಮಹಂತನಮಠದ ಬಸವಾರಾಧ್ಯರು ತಮ್ಮ ಮಠದಲ್ಲೇರ್ಪಡಿಸಿರುವುದರಿಂದ ಬರತಕ್ಕವರು ಮುಂದಾಗಿ ಬರೆದು ತಿಳಿಸಬೇಕು.

ಡಿ. ದಕ್ಷಿಣಾಮೂರ್ತಿಶರ್ಮ,
ಮಹಂತನಮಠ, ದೊಡ್ಡಬಳ್ಳಾಪುರ.

ಧಾರವಾಡ ಸೆಂಟರು.

ಕಳೆದವರ್ಷಗಳಂತೆ ಈ ವರ್ಷವೂ ಶ್ರೀಮೃತ್ಯುಂಜಯಸ್ವಾಮಿಗಳ ಅಪ್ಪಣೆಮೇರಿಗೆ ಶ್ರೀಮನ್ಮಹಾರಾಜನಿರಂಜನಜಗದ್ಗುರು ಮುರುಘರಾಜೇಂದ್ರಸ್ವಾಮಿಗಳ ಧಾರವಾಡ ಹಾವೇರಿಪೇಟೆಯ ಶ್ರೀಬೋರ್ಡಿಂಗಿನಲ್ಲಿ ಮುಲ್ಕೀ ಮತ್ತು ಮೆಟ್ರಿಕ್ ಪರೀಕ್ಷೆಗಳಿಗಾಗಿ ಧಾರವಾಡಸೆಂಟರಿಗೆ ಬರತಕ್ಕ ಬಡ ವೀರಶೈವ ವಿದ್ಯಾರ್ಥಿಗಳ ಊಟಕ್ಕೇರ್ಪಾಟುಮಾಡಲ್ಪಟ್ಟಿರುವುದರಿಂದ ವಿದ್ಯಾರ್ಥಿಗಳು 1 ವಾರ ಮುಂಚಿತವಾಗಿ ತಮ್ಮ ಹೆಸರು ವಾಸಸ್ಥಳ ಒಳಭೇದ ಮೊದಲಾದ ವಿಷಯಗಳನ್ನು ಬರೆದು ತಿಳಿಸುವುದು. ಬರುವಾಗ್ಗೆ ಕಂಬಿಗೆ ಮತ್ತು ಹಾಸಿಗೆಗಳನ್ನು ತರಬೇಕು.

ಬಸಪ್ಪ ದೊಡ್ಡಫಕೀರಪ್ಪ, ಲಕಮನಹಳ್ಳಿ, ಚೇರ್ಮನ್.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಶ್ಯಾವಣಗಿ ಮ|| ಅಕ್ಕಮ್ಮನವರ ಗುರುಸಿದ್ಧಪ್ಪ ನಾಗಪ್ಪ ಇವರ ಮಗನ ವಿವಾಹದಲ್ಲಿ ದಾವಣಗೆರೆ ಮ|| ಯಜಮಾನ್ ಮೋಟ ದೊಡ್ಡಪ್ಪನವರು ಮ್ಯು. ವೈಸ್‌ಪ್ರೆಸಿಡೆಂಟ್ ಇವರ ಮೂಲಕ 1 ರೂ. (2) ಹೊನ್ನಾಳಿ ಮ|| ಯಜಮಾನ್ ಹೊನ್ನಶೆಟ್ಟಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಶಿವಗಂಗೆ ಶ್ರೀ ಮೇಲುಣಗಿ ಸಂಸ್ಥಾನದ ಏಜಂಟ್ ಸಿದ್ಧಬಸವಾರಾಧ್ಯರ ಮೂಲಕ 1 ರೂ. (3) ಕೃಷ್ಣರಾಜಸಾಗರದ [illegible] ಮ|| [illegible] ಪುತ್ರಿ ಚಿ|| ಸೌ|| [illegible] ಮ|| ಬಿ. ಬಸಪ್ಪನವರ ಪುತ್ರರು ಬಿ. ಬಸಪ್ಪ, ಬಿ.ಎಸ್‌ಸಿ., [illegible] ಕೊಟ್ಟು ನಡೆದ ವಿವಾಹಮಹೋತ್ಸವದಲ್ಲಿ 1 ರೂ. (4) [illegible] ಮ|| [illegible] ಮನೆಯಲ್ಲಿ ನಡೆದ ಲಗ್ನದಲ್ಲಿ 1 ರೂ. (5) [illegible] ಮ|| [illegible] ಸೌ|| [illegible] ಲಗ್ನದಲ್ಲಿ [illegible] ಮ|| ಡಿ. [illegible] ಮೂಲಕ 1 ರೂ. (6) [illegible]

ಹೊರು ಮ॥ ಛತ್ರಿ ಸೋಮಶೇಖರಪ್ಪನವರ ಮಕ್ಕಳು ಚನ್ನಬಸಪ್ಪನವರಿಗೂ ಕೊಳ್ಳೇಗಾಲ ತಾ॥ ಮಧುವನಹಳ್ಳಿ ಮ॥ ಬಿ. ದೇವಣ್ಣನವರ ಪುತ್ರಿ ಸೌ॥ ಭ್ರಮರಾಂಬೆಗೂ ನಡೆದ ಲಗ್ನದಲ್ಲಿ ಮೈಸೂರು ಮ॥ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸರವರ ಮೂಲಕ 1 ರೂ. (7) ದೊಡ್ಡಗುಣೆ ಮ॥ ತೋಟದಪ್ಪನವರ ಚಿಕ್ಕರುದ್ರಪ್ಪನವರ ಅಣ್ಣನವರ ಮಕ್ಕಳು ವೀರಪ್ಪನವರ ಲಗ್ನದಲ್ಲಿ 1 (8) ರೂ. ದೊಡ್ಡಗುಣೆ ಮ॥ ತೋಟದಪ್ಪನವರ ತಮ್ಮಂದಿರು ವೀರಭದ್ರಯ್ಯನವರ ಲಗ್ನದಲ್ಲಿ 1 ರೂ. (9) ಮಳವಳ್ಳಿ ತಾ॥ ಹಲಗೂರು ಡಿ॥ ಬೋರ್ಡುಮೆಂಬರ್ ಮ॥ ಚಿಕ್ಕಸುಬ್ಬಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ 1 ರೂ. ಮತ್ತು ಹಲಗೂರು ಮ॥ ವೀರಭದ್ರಪ್ಪನವರಮನೆಯಲ್ಲಿ ನಡೆದ ಲಗ್ನದಲ್ಲಿ 0-8-0. ಜುಂಲಾ 1-8-0 ದಳವಾಯಿ ಕೋಡಿಹಳ್ಳಿ ಸ್ಕೂಲ್ಮಾಸ್ಟರ್ ಮ॥ ಸುಬ್ಬಣ್ಣನವರ ಮೂಲಕ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

A WEDDING IN A HIGH CIRCLE IN BANGALORE.

On the 4th March 1926 the wedding of Mr. H. C. Dasappa, B.A., LL.B., Advocate in Mysore and third son of Rao Sahib H. Chennaya, Retired Sub-Judge of Coorg and President of the General Council, Vokkaligara Sangha, Bangalore, with Sou. Yasodharamma, eldest daughter of Mr. K. H. Ramaya, B.A., Bar-at-Law, Registrar of Cooperative Societies in Mysore and Vice-President of the said Sangha was celebrated with great *eclat* at the latter's house in Visveswarapuram. The wedding was remarkable in more than one way. The parties belong to the Community known as Vokkaligars or Agriculturists in Mysore and though generally speaking these people, owing to their occupation and life in rural parts are very backward in education, still, not only the fathers of the married couple but the bride and bridegroom have had the benefits of higher education. Again, the wedded couple are not mere children as is the case in most of the weddings among Hindus, the bride in this case being about 20 years and the bridegroom, a bachelor till now, being 31 years of age.

By 8 a.m. on the 4th March the time fixed for the muhurtam for the commencement of the religious ceremonies the bridegroom accompanied by his party arrived at the bride's residence and in the presence of a large concours of of relatives and friends of both the parties the couple were united in wedlock according to prescribed rites and received the blessings of their parents and of all persons present. The same evening there was a public reception and a Garden Party on the following evening at the bride's residence, known as 'Maitreya Vilas,' at which all the *elite* of Bangalore were present including Sir and Lady A. R. Banerji, Sir and Lady K. P. Puttanna Chetty, Mr. and Mrs. R. B. Plumber, Dr. B. N. Seal, Mr. K. R. Srinivasiengar, Mr. and Mrs. K. Chandy, Rao Bahadur Venkata Reddy of Hyderabad, Mr. Sunder Reddy, Vakil Madras, Justices C. S. Doreswamy Iyer and D. K. Rama Rao, Dewan Bahadur M. N. Krishna Rao, C. Srikanteswara Iyer, K. S. Chendrasekhara Iyer, P. Raghavendra Rao, Rao Bahadurs Messrs. M. Shama Rao, T. V. Armugam Moodr., K. S. Rangachary, and N. S. Tirumalai Iyengar, Messrs. P. F. Bowring, B. Ramaswamayya, V. R. Thyagaraja Iyer, Mr. and Mrs. K. Mathan, Mr. and Mrs. P. G. D'Souza, Mr. and Mrs. B. Nagappa, Messrs. B. Srinivasiengar, K. R. Seshachar, Savale Ramaswamy Moodr. of Madras, Mushir-ul-Mulk Mir. Hamsa Husein, S. P. Rajagopala Chari, Asstt. Private Secretary to H. H. the Maharaja, Md. L. Mecci, Drs. Md. Usman Mylwaganam, Subba Rao, A. M. Sen, S. Narain Rao, M. A. Sampatkumaran, Kunnikanan, David, M. Noronha, A. K. Pani, P. Parthasarathi, G. V. Mascarenhas, C. A. Santa, Amritraj, M. Srinivasa Rao, T. S. Nanjappa, Royan, Abboy Naidu, Fernandez, A Monteiro, B. Narasimha Iyengar, Paulchinnappa, Mr. and Mrs. G. H. Krumbiegal, Mrs. Simon. Messrs. B. V. Ramiengar, Mr. and Mrs. K. Shankaranarayana Rao, Md. Abbas Khan, Nawab Gulam Ahmed Kalami, M. Ramachandra Rao, Mrs. G. Paramasiviah, Mr. and Mrs. P. M. Basappa, M. G. Rama Rao, Sirdar M. N. Balaraj Urs, Messrs. U. P. Rajaye Hassan Madappa, B. Kempanna, Mr. and Mrs. B. Puttayya, Mr. and Mrs. H. C. Javaraya M. C. Mariappa, Mr. and Mrs. C. Ranganatha Rao Sahib, Rajasabhabhushana Karpur Srinivasa Rao, Capt. Thyagaraj, Capt. and Mrs. Iya, Mr. and Mrs. M. K. Govinda Pillai, Messrs. T. Satyaraj Chetty, T. Rayaloo Chetty, Col. Skipwith, Mr. V. Manickavelu Moodr., Mr. & Mrs. B.G. Appadore Moodr., Messrs. Md. Davood, C.A. Gani, F. Appaji Gowda, V. Papiah Naidu, C. M. Machaya, Mr. and Mrs. Madappa of Coorg, B. K. Garudachar, B. V. Krishniengar, B. Narasinga Rao, Kadaba Huchvire Gowda, Malur Vema Reddy, Bagepally Narain Reddy, Professor B. Venkatesa Char, M. L. Rajoo, Miss Lazarus, Miss L. D'Souza, Miss Samuels, Messrs. M. N. Subbanna, D. C. Kongadiappa, Chennaraj Urs, Pottaraja Urs, M. Viraj Urs, Yejman Basappa, A, K. Yegnanarayana Iyer, P. Mahadeviah, C. Mahadev Gowda of Sholapur, A.S. Setlur, Latif Saib, Mr. and Mrs. C. Lakshmana Gowda, Mr. Y. Rudrappa, Mr. and Mrs. Y. Virupakshiah of Mysore, Mr. N. Basappa, C. Chinnasawmy Chetty, Kantarajpur M. Nanjappa, T. Rachappa, M. Harianna, S. Sajjan Rao, M. Oosmankhan, B.H. Sanjivappa, Tubgere Nanjapaa, Sampatgiri Rao, S. K. Narasimiah, Karnik Krishanmurti Rao, Bagamane A. Deva Gowda, Bagamane A. Chennegowda, B. A. Baswe Gowda, Taliballi Uddegowda, Akkipet Thimmegowda, Chikkavirappa, Kotasubiah Chetty, M. Chengiah Chetty, Sowcar Netcallappa, Devar Rao Sheva Rao, B. D. Naidu, Ramalinga Moodr., Thiruvengadasawmy Moodr., M. L. Shamegowda, B. N. Vijayadeva, Gurappa Ramiah, Sankappa Banappa, Siddavirappa, R. Gopalasawmy Iyer and several others too numerous to mention.

The public reception and the Garden Party given by Mr. and Mrs. K. H. Ramayya at Mr. Ramayya's residence were a brilliant success, and Messrs. Ramayya and Chennaya were unremitting in their attentions to their guests, who thoroughly enjoyed the various entertainments and the sumptuos refreshments provided by the host.

Another remarkable feature of the wedding was that while at the reception the guests were entertained by Sangitha Vidwan Rachappa of Mysore at the Garden Party in addition to a fine band of Indian orchestra, the guests were treated to very fine vocal and instrumental music by Mrs. H. C. Thimmaya, one of the daughters-in-law of Mr. H. Chennaya and Misses K. H. Ramaya and his niece, and Misses Chennayya. Some of the Hindustani songs sung by the talented Mrs. Thimmaya were much appreciated by the guests.

The whole function came to a successful end on the 6th March when the bride and bridegroom went over to Mr. Chennaya's residence in Sankarapuram, where a cosmopolitan dinner had been arranged for the guests and relatives.

Numerous were the congratulatory messages and letters received by the bride and bridegroom and their parents from their friends, who were unable to attend the wedding and among whom were the following :—His Holiness Jagatguru Sri Mrugarajendraswamy of Chitledroog, Major Evans Gorden Capt. the Raja of Panagal, the Raja of Ramanad, Rao Bahadur A. B. Latthe, Dewan of Kolapur, Messrs. C. R. Reddy, A. Ramaswamy Moodr., Lokahitishi H. Nanjundaraj Urs, Khan Bahadur Abdul Aziz Khan, Khan Bahadur P. Pallanji, Dr. D. C. Puttanna, Messrs Kota Reddy of Karnool, P. Rama Reddy of Bellary, Dr. S. V. Arya, Lt. Col. W. L. Crawford, Rao Sahib M. Hampiah of Guntakal, Col. and Mrs. Barton, Rao Sahib C. Ramaswamy Iyengar of the Ramakrishna Students' Home, Madras the Rev. G. W. Sawday, Mr. and Mrs. Hardaker, Mr. and Mrs. Theobald, Mr. Cullis, J. S. H. Mrgan of Coorg, G. V. Rao of Waltair, P. R. Thimmappa Punja and P. R. Ramayya Punja of Mangalore, B. T. Sundararajan, Vakil, Madras, F. Dinshaw, Mr. and Mrs. J. Reddy of Madura, Mr. T. M. Babington, Mr. Sidiah of Ooty, Mr. Amirudin, Mr. and Mrs. H. F. Marker, Mr. K. V. Krishnaswamy of Mysore Mr. P. A. Nanjappa and Mr. Pooviah of Coorg, Messrs. Veerabasaviah, D'Souza of Mysore, K. Revanna of Sagar, Miss K. White, C. Madiah, Dr. Mrs. F. deCosta, Messrs. K. U. Venkatasubbasastri, A. B. Chengappa, K. Appiah, of Coorg, K. N. Ganapati, and Sri Swami Sukhananda of Sri Ramakrishna Ashrama, Haripad. Prof: David of Poona, Rev. E. S. Edwards and others.

The Married Couple were the recipients of several beautiful Wedding presents from their friends which included a remittance of Rs. 100 from His Holiness Sri Mrugarajendra Jagatguru of Chitlegroog, a diamond ring from Mrs. K. H. Ramayya, a gold ring from Mr. and Mrs. H. C. Javaraya, a silver visiting card case from Mr. and Mrs. H. C. Thimmaya, two silver cups from Mr. K. Matthan, a silver tumbler and cigarette tray from Siddegowd of Ooty, a pair of silver vases from Mr. and Mrs. M. K. Govinda Pillay, a fountainpen from Mr. C. R. Reddy, a silver cup from Mr. and Mrs. G. Ponamasiviah, a fountainpen from Mr. and Mrs. Ramalinga Reddy, a silver cup from Dr. P. Parthasarathy, a silver tumbler tray from Professor A. R. Wadia, two silver bowls from Mr. M. C. Malliah, two silver cups from Mr. and Mrs. A. B. Madappa, a silver tumbler from Mr. M. M. Machaya, a silver plate from Mr. M. N. Alikhan, a silver vessel frrm Mr. C. A. Machayya, a gold ring and a silver plate from Mr. B. Nagappa, a clock and calendar combination and a silver cup from Mr. S. K. Narasimiah, a lace cloth from Mr. Chinappa of Tumkur, a silver cup from Mr. M. N. Balaraj Urs, a lace cloth from Mr. M. Puttananjappa, a silver case from Dr. M. V. Gopalasawmy, a silver cup from Mr. R. Mahalingappa, a silver tumbler from Mr. B. Kempanna, 1 pair of gold links from Mr. Muniswamy, a silver tumbler from Mr. M. Ramaswamy, a silver cup from Mr. C. M. Cariappa, a gold wrist watch from Mr. T. S. Alikhan, a silver cup from Mr. Jayaramaswamy, a silver Mountedsawmy picture with frame and an ivory image each pair from Messrs. Bagamane Devagowda and his brothers, Taliballa Uddegowda. and Veerappa Heggade, a cashmere shawl from Mr. Bagamane A. Basvegowda, books from Venkataramaniah, a silver plate and case from Mr. L. Thammaya, silver cup from Amildar Ramayya, a sovereign from Mr. Maniyam Lingappa, a silver vessel from Mr. Chikanna, a silver plate from Mr. B. Puttaiya, a silver vessel from Miss Nunjamma, a sovereign faom Mr. Chennarayappa, a silver case and glass bowl from Mr. and Mrs. D'soza, 2 silver vessels from Mr. Venkatswamy Naidu, a sovereign and a silk piece from Mr. Hutchaveeragowda, a pair of gold bangles and a photo frame from Mr. M. C. Mariappa, a silver tumbler from Mr. Dasagowda of Gudlimane, a silver case from Angadi Marilingaiya, a silver tumbler from Madival Chennegouda, a silver case from Mr. B. Kempanna, a gold ring from Mr. Kollegal Chenne Gowda, a swami picture from Mr. D. Krishna Rao, a silver vessel from Mr. Thayappa, a silver cup from Mr. Suryanarayana Setty, a silver cup from Mr. Ramaswamy a brooch and a tie pin from Mrs. Sakamma, a muffler kerchief and tie from Messrs. Abdulkareem and Sons a tea set from Mr. Nur Amirodin Khoreshi besides money and cloth presents.

ಹುಲಿಗಳ ಹಾವಳಿ.

ತರೀಕೆರೆ ತಾಲ್ಲೂಕು ಬುಕ್ಕಾಂಬುದಿಯ ಸಮೀಪದಲ್ಲಿ ಈಗ್ಗೆ 2 ವರ್ಷಗಳಿಂದಲೂ ಹುಲಿಗಳು ಸೇರಿಕೊಂಡು ಸುಮಾರು 3,000 ರೂಪಾಯಿ ಬೆಲೆಬಾಳುವ ದನಕರುಗಳನ್ನು ಹಿಡಿದು ತಿಂದಿರುವುದಲ್ಲದೆ ಹಾಲಿ 2-3 ದಿನಕ್ಕೊಂದರಂತೆ ಭಾರಿಬೆಲೆಬಾಳುವ ಹೋರಿಗಳನ್ನು ಹಿಡಿದು ತಿನ್ನುತ್ತ ಇಲ್ಲಿಯ ಜನರಿಗೆ ಭಯವನ್ನೂ, ನಷ್ಟವನ್ನೂ ಉಂಟುಮಾಡುತ್ತಾ ಇವೆ. ಈ ಗ್ರಾಮದ ಸಮೀಪದಲ್ಲಿ ಅನೇಕ ಶಿಕಾರಿಯವರು ಇದ್ದರೂ ಏನೂ ಪ್ರಯೋಜನವಿಲ್ಲವಾಗಿದೆ. ಆದಪ್ರಯುಕ್ತ ನಮ್ಮ ಘನಸರ್ಕಾರದವರು ಮೇಲೆ ಕಂಡ ಹುಲಿ ಹಾವಳಿಯನ್ನು ತಪ್ಪಿಸಿ ಬಡರೈತರ, ಕಷ್ಟನಷ್ಟವನ್ನು ಹೋಗಲಾಡಿಸಿ ಕಾಪಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಒಬ್ಬ ಕಷ್ಟಕ್ಕೆ ಗುರಿಯಾದವನು.

ಶ್ರೀರೇವಣಸಿದ್ಧೇಶ್ವರನಾಟಕ.

ಗದಗ ಸ್ನೇಹವಿಲಾಸನಾಟಕ ಕಂಪನಿಯವರು ತಾ॥ 28-2-1926 ನೇ ಭಾನುವಾರ ಹೊಸಪೇಟೆಯಲ್ಲಿ "ಶ್ರೀಜಗದ್ಗುರು ರೇವಣಸಿದ್ಧೇಶ್ವರ ನಾಟಕ"ವನ್ನು ಯೋಗ್ಯ ಅಭಿನಯಗಳಿಂದ ಸರ್ವ ಪ್ರೇಕ್ಷಕರ ಮನಸ್ಸು ತೃಪ್ತಿಯಾಗುವಂತೆ ಆಡಿ ತೋರಿಸಿದರು. ಈ ನಾಟಕವು ಧರ್ಮೋದ್ದೀಪಕವಾಗಿಯೂ ಶಾಸ್ತ್ರಸಮ್ಮತವಾಗಿಯೂ, ರಸಾಲಂಕಾರಗಳಿಂದ ಸರ್ವರ ಚಿತ್ತಾಹ್ಲಾದಕರವಾಗಿಯೂ ಇರುತ್ತದೆ. ಇಂಥ ಕಥಾಶ್ರವಣವು ಇಹಪರಸಾಧಕವಾಗಿರುವದರಿಂದ ಇದು ಆಚಂದ್ರಾರ್ಕವಾಗಿ ಖಿಲವಾಗದಂತೆ ಇರಬೇಕೆಂದು ನಾವು ಜಗದೀಶನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. ಈ ಕಥೆಯನ್ನು ಪ್ರತಿ ಗ್ರಾಮದವರೂ ಕೇಳಿ ಧನ್ಯಜೀವಿಗಳಾಗದೆ ಇರಲಾರರೆಂದು ನಂಬಿರುವ,

ತಮ್ಮ ವೀರಶೈವಸಮಾಜಹಿತೈಷಿ.

ಧರ್ಮನ್ಯೂನತೆ.

ಗೋರಿಬಿದನೂರು ತಾಲ್ಲೂಕು ಮುದಗೆರೆಯ ಕೈ॥ ಸಾಹುಕಾರ್ ಗಂಗಪ್ಪನವರು ತಮ್ಮ ಅವಸಾನಕಾಲದಲ್ಲಿ ಈ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆಂದು ೫ ಸಾವಿರ ರೂಪಾಯಿಗಳನ್ನು ತೆಗೆದು ಮರಣಶಾಸನದಲ್ಲಿ ಬರೆಯಿಸಿ ೯ ವರ್ಷಗಳಾದುವು. ಮೊದಲಿದ್ದ ದೇವಸ್ಥಾನವನ್ನು ಕೆಡಹಿ, ದೇವರನ್ನು ಗಾಳಿ, ಮಳೆ, ಬಿಸಿಲುಗಳಿಗೆ ಗುರಿಮಾಡಿ 2 ವರ್ಷಗಳಾದುವು. ಅಂದಿನಿಂದಲೂ ಪೂಜೆಯೇ ಇಲ್ಲ. ವೀರಶೈವ ಪ್ರಜಾಬಾಹುಳ್ಯವುಳ್ಳ ಈ ಗ್ರಾಮದಲ್ಲಿದ್ದ ಒಂದು ದೇವಸ್ಥಾನಕ್ಕೂ ಈ ದುರ್ಗತಿ ಬಂದಿತು. ವಿಷಾದ ! ಈಗಲಾದರೂ ಮೃತರ ವಂಶೀಯರೂ, ಈ ಗ್ರಾಮದ ವೀರಶೈವಪ್ರಮುಖರೂ ಒಮ್ಮೆಲೆ ಕಾರ್ಯತತ್ಪರರಾಗಿ ಮೃತರ ಧರ್ಮವನ್ನು ಸಾಂಗಗೊಳಿಸಿ ಕೀರ್ತಿಭಾಜನರೂ ಭಗವತ್ಪ್ರೀತಿಪಾತ್ರರೂ ಆಗಬೇಕೆಂದು ಪ್ರಾರ್ಥನೆ.

ಓ. ಯಜ್ಞ. ಲಿಂಗಪ್ಪ.

ವೀರಶೈವ ವಕೀಲರು.

ವೀರಶೈವಜನಾಂಗದಲ್ಲಿ ದೊಡ್ಡಮನೆತನದವರಾದ ಹೊಳಲಕೆರೆ ತಾ॥ ದೊಗ್ಗನಹಾಳು ಗ್ರಾಮದ ಪಟೇಲರಾಗಿದ್ದು ಗತಿಸಿದ ಮ॥ ಚಂದಪ್ಪನವರ ತಮ್ಮಂದಿರು ಚಿತ್ರದುರ್ಗ ಡಿಸ್ಟ್ರಿಕ್ಟುಬೋರ್ಡು ಮೆಂಬರಾದ ಮ॥ ನಂದಿ ಬಸಪ್ಪನವರ ಮಕ್ಕಳು ಜಿ. ಚೆನ್ನಪ್ಪ, ಬಿ.ಎ., ಎಲ್‌ಎಲ್.ಬಿ., ಇವರು ಪೂನಾ ಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಮೇಲ್ಕಂಡ ಪ್ರಶಸ್ತಿಯನ್ನು ಪಡೆದು ಬೆಂಗಳೂರಲ್ಲಿ ಪ್ರಸಿದ್ಧ ಅಡ್ವೋಕೇಟರಲ್ಲಿ ಒಂದು ವರ್ಷದಿಂದ ಪ್ರಾಕ್ಟೀಸ್ ಮಾಡಿ ತುಂಬಾ ಅನುಭವವನ್ನು ಹೊಂದಿ ದಾವಣಗೆರೆಗೆ ಅಡ್ವೋಕೇಟರಾಗಿ ಬಂದು ತಾ॥ 1-3-1926 ರಲ್ಲಿ ಆಫೀಸು ಓಪನ್ ಮಾಡಿರುತ್ತಾರೆ. ಇವರು ಇಲ್ಲಿಗೆ ಹೊಸದಾಗಿ ಬಂದು ಎಲ್ಲಾ ಜನರ ಪ್ರೀತಿಯನ್ನ ಬಯಸಿ ಮುತುವರ್ಜಿಯಿಂದ ಕೆಲಸಮಾಡಲು ಕುತೂಹಲವುಳ್ಳವರಾಗಿದ್ದಾರೆ. ಅಭಿಮಾನಶಾಲಿಗಳಾದ ಸರ್ವರೂ ತಮ್ಮ ಯಾವತ್ತು ಕೇಸುಗಳಲ್ಲಿ ಬೇಕಾಗುವ ಸಹಾಯ ಮತ್ತು ಸಲಹೆಗಳನ್ನು ಇವರ ಆಫೀಸುಮೂಲಕ ಹೊಂದಬೇಕಾಗಿ ಕೋರುತ್ತೇನೆ.

ಹಿತಚಿಂತಕ,

Siddaramappa.

ವೀರಶೈವರ ದುರ್ದೈವ.

ಮಹಾಶಯರೇ ! ಆರ್ಯಾದೇಶದ ಕೆಲಭಾಗದ ವೀರಶೈವಜನಾಂಗವು ಈಗೀಗ ಸುಧಾರಿಸಿ ವಿದ್ವಾಂಸರು ಕಾಣಿಸುತ್ತಿರುವರೆಂದು ನನಗೊಂದು ತೆರನಾದ ಸಂತೋಷೋದಯವಾಗುತ್ತಿತ್ತು. ಆದರೆ ಉತ್ತರದೇಶದಲ್ಲಿ ೩೦-೩೫ ವರ್ಷಗಳಿಂದ ವಾಸವಾಗಿದ್ದು "ನ್ಯಾಯತೀರ್ಥ, ವೇದಾಂತತೀರ್ಥ, ಸಾಂಖ್ಯತೀರ್ಥ, ಸಾಹಿತ್ಯತೀರ್ಥ ವೈದ್ಯಭೂಷಣ, ಧರ್ಮಭೂಷಣ" ಮೊದಲಾದ ಸರ್ವಶಾಸ್ತ್ರ ಪದವೀಧರರಾದ ಬ್ರ॥ಶ್ರೀ ಪಂಡಿತ ಜಗದೀಶಶಾಸ್ತ್ರಿಗಳವರು ಹಿಂದಿನ ಕಾರ್ತಿಕಮಾಸದಲ್ಲಿ ಅಕಾಲಮೃತ್ಯುವಿಗೆ ಬಲಿಯಾದರೆಂಬುದು ನನಗೇ ಏಕೆ ಸರ್ವವೀರಶೈವ ಜಗತ್ತಿಗೇನೇ ಅತಿಶಯವಾದ ದುಃಖವನ್ನುಂಟುಮಾಡುವದಾಗಿದೆ. ಇವರು ಮಹಾವಿದ್ವಾಂಸರಾಗಿದ್ದು ಇಲ್ಲಿಯ ದೊಡ್ಡದೊಡ್ಡ ಪಂಡಿತರಿಂದ ಗೌರವಿಸಲ್ಪಡುತ್ತಿದ್ದು 40-45 ವರ್ಷದ ವಯಸ್ಸಿನಲ್ಲಿಯೇ ತಮ್ಮ ಜೀವನಯಾತ್ರೆಯನ್ನು ಸಮಾಪ್ತಿಗೊಳಿಸಿದ್ದು ಕೇವಲ ವೀರಶೈವರ ದುರ್ದೈವವೆಂದೇ ಹೇಳುತ್ತೇನೆ. ಇವರ ಕೆಲವು ಸಾಮಾನುಗಳೂ, ಕಿತಾಬುಗಳೂ ಕಲ್ಕತ್ತಾ [illegible] [illegible] ಬಾಕಿಯಿದ್ದಿರುವದಾಗಿಯು ಮತ್ತು [illegible] ಠಕ್ಕೆ ಮೊಬಲಗು ರೂಪಾಯಿಗಳು ಬ್ಯಾಂಕಿನಲ್ಲಿರುವದಾಗಿಯು ಅಲ್ಲಿಯ ಜನರು ಸೂಚಿಸುತ್ತಿರುವರೆಂದು ಮೊನ್ನೆ ಇಲ್ಲಿಂದ ತೀರ್ಥಪರೀಕ್ಷೆಗಾಗಿ ಕಲ್ಕತ್ತೆಗೆ ಹೋಗಿರುವ ಶಾಸ್ತ್ರಿಗಳೊಬ್ಬರು ತಿಳಿಸಿರುವರು. ಮೃತರ ಜ್ಞಾತಿಗಳಾದವರಿದನ್ನು ಗಮನಿಸುವದವಶ್ಯವು.

ಹೈದರಾಬಾದ್ ಚಿದಿರೆಮಠೀಯ ವೀರಭದ್ರಶರ್ಮ,
ಜಂಗಮವಾಡಿಮಠ, ಬನಾರಸ್ ಸಿಟಿ.

ಮರಡಿಹಳ್ಳಿ ರಡ್ಡಿ ಸಭೆ.

1926 ನೇ ಮಾರ್ಚಿ ಮಾಹೆ 4 ನೇ ಗುರುವಾರ ಬೆಳಿಗ್ಗೆ 9 ಘಂಟೆ ಸಮಯದಲ್ಲಿ ಈ ಡಿಸ್ಟ್ರಿಕ್ಟಿನ ರಡ್ಡಿಜನಾಂಗದವರು ಮರಡಿಹಳ್ಳಿ ಮಿಡಲ್ ಸ್ಕೂಲ್ ಹೆಡ್ಮಾಸ್ಟರಾದ ಮ॥ ಎ.ಜಿ. ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಈ ಊರಿನ ಗ್ರಾಮ ಚಾವಡಿಯಲ್ಲಿ ಸಭೆ ಸೇರಿದ್ದರು. ಸದರಿ ಸಭೆಗೆ ಮ॥ ಗಳಾದ ಮರಡಿಹಳ್ಳಿ ಪಟೇಲ್ ರಾಮಯ್ಯನವರು, ಬುರಜನರೊಪ್ಪದ ಪಟೇಲ್ ಸಣ್ಣತಿಪ್ಪಯ್ಯರಡ್ಡಿಯವರು, ತಾಲ್ಲೋಕು ಬೋರ್ಡು ಮೆಂಬರಾದ ರುದ್ರಪ್ಪನವರು, ಟಿ. ಪುಟ್ಟಪ್ಪನವರು, ಪಂಡಿತ ಡಿ. ಎಚ್. ಮಸ್ತಾನ್ ಸಾಹೇಬರು ಮುಂತಾದ ನೂರಾರುಮಂದಿ ಪ್ರಮುಖರು ಸೇರಿದ್ದರು. ಈ ಸಭೆಯಲ್ಲಿ ರಡ್ಡಿಜನಾಂಗದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಚಿತ್ರದುರ್ಗದಲ್ಲಿ ಒಂದು ಹಾಸ್ಟಲನ್ನು ಸ್ಥಾಪಿಸಬೇಕೆಂದೂ ಅದರ ಉಪಯೋಗಕ್ಕಾಗಿ ಪ್ರತಿಯೊಬ್ಬ ರಡ್ಡಿ ಕುಟುಂಬಿಯೂ ಒಂದುಕೊಳಗ ದವಸವನ್ನು ಪ್ರತಿ ಸುಗ್ಗಿಯಲ್ಲಿಯೂ ಕೊಡುತ್ತಾ ಬರಬೇಕೆಂದೂ, ಮುಂದಿನ ಮೇ ತಿಂಗಳಲ್ಲಿಯೇ ಒಂದು ಬಾಡಿಗೆ ಕಟ್ಟಡದಲ್ಲಿ ಹಾಸ್ಟಲನ್ನು ಪ್ರಾರಂಭಿಸಬೇಕೆಂದೂ ತೀರ್ಮಾನಗಳಾದುವು. ಸದರಿ ಹಾಸ್ಟಲಿನ ಉಪಯೋಗಕ್ಕಾಗಿ ಸಭೆಯವರಿಂದ ಚುನಾಯಿಸಲ್ಪಡುವ ಪ್ರೆಸಿಡೆಂಟರೂ, ವೈಸ್‌ಪ್ರೆಸಿಡೆಂಟರೂ, ಒಬ್ಬ ಸೆಕ್ರಿಟರಿಯೂ ಇರಬೇಕೆಂದು ನಿರ್ಧರವಾಯಿತು. ಬಳಿಕ ಸಭಾಧ್ಯಕ್ಷತೆಯನ್ನು ವಹಿಸಿದ್ದ ಮ॥ ರಾ॥ ಎ. ಜಿ. ಲಿಂಗಯ್ಯನವರು ತಮ್ಮ ಸ್ವಾರಸ್ಯವಾದ ಭಾಷಣದಿಂದ ಹಾಸ್ಟಲಿನ ಉದ್ದೇಶಗಳನ್ನು ತಿಳಿಸಿದರು. ಅನಂತರ ಜಯಘೋಷದೊಡನೆ ಸಭೆಯು ಮುಗಿಸಲ್ಪಟ್ಟಿತು.

ಸಜ್ಜನವಿಧೇಯ,
ಟಿ. ನಾರಾಯಣಪ್ಪ, ಮರಡಿಹಳ್ಳಿ.

ತರೀಕಂದಾಯ ರಿಮಿಷನ್ ಆಗಬೇಕು.

ಕೋಲಾರ್ ಡಿಸ್ಟ್ರಿಕ್ಟು ಬೌರಿಂಗಪೇಟೆ ತಾಲ್ಲೂಕಿನಲ್ಲಿ ಈಗ್ಗೆ ಮೂರುವರ್ಷಗಳ ಲಾಗಾಯಿತು ಕಾಲಕಾಲಕ್ಕೆ ಮಳೆಯಿಲ್ಲದೆ ತರಿ ಮತ್ತು ಖುಷ್ಕಿ ಬೆಳೆಗಳು ಸರಿಯಾಗಿ ಆಗದೆ ಇರುವುದರಿಂದಲೂ, ಕೆರೆಗಳಿಗೆ ನೀರು ಇಲ್ಲದೆ ಇರುವದರಿಂದಲೂ ಅನೇಕ ಬಡಪ್ರಜೆಗಳ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಇರುತ್ತಾರೆ. 24-25 ನೇ ಸಾಲಿನ ತರೀ ಕಂದಾಯವು ರಿಮಿಷನ್ ಇಲ್ಲದೆ ಪ್ರಜೆಗಳಿಂದ ಪೂರ್ತಿ ಪಾವತಿಯಾಗಿರುತ್ತೆ, ಮತ್ತು ಈ 25-26 ನೇ ಸಾಲಿನಲ್ಲಿಯೂ ಸಹ ಬೆಳೆಗಳಿಗೆ ಸಾಕಾಗುವಷ್ಟು ಮಳೆ ಆಗದೆ ಕೆರೆಗಳಿಗೆ ನೀರು ಇಲ್ಲದೆ ಬಿತ್ತಿರುವ ಪೈರುಗಳು ಒಣಗಿಹೋಗಿ ಸುತರಾಂ ಪೀಕ್ ಸುಖಿಯಾಗಿರುತ್ತೆ. ಈ ವಿಚಾರವಾಗಿ ಅನೇಕ ಪ್ರಜೆಗಳು ಸರ್ಕಾರಕ್ಕೆ ಅರ್ಜಿಗಳನ್ನು ಗುಜರಾಯಿಸಿಕೊಂಡಿರುತ್ತಾರೆ. ಅದಕ್ಕೆ ಇದುವರೆಗೂ ಘನ ಹೊಂದಿದ ಸರ್ಕಾರದವರು ಯಾವವಿಧವಾದ ಹುಕ್ಕುಮನ್ನೂ ದಯಪಾಲಿಸಿರುವುದಿಲ್ಲ. ಗ್ರಾಮಾಂತರಗಳ ಪ್ರಜೆಗಳಿಗೆ ಸಿಹಿನೀರು ಭಾವಿಗಳಲ್ಲಿ ನೀರು ಇಲ್ಲದೆಯೂ ಕೆಲವು ಗ್ರಾಮಗಳಿಗೆ ಸಿಹಿನೀರು ಭಾವಿಗಳೇ ಇಲ್ಲದೆಯೂ ಮತ್ತೆ ಕೆಲವು ಗ್ರಾಮಗಳಬಳಿ ಸಿಹಿನೀರು ಭಾವಿ ಕೆಲಸಗಳನ್ನು ಅಲ್ಪಸ್ವಲ್ಪ ಮಾಡಿಸಿ ಹತ್ತುವರ್ಷಗಳಾದಾಗ್ಯೂ ಇನ್ನೂ ಕೆಲಸಗಳು ಪೂರೈಸದೆ ಇರುವದ್ದರಿಂದಲೂ ಆಯಾ ಗ್ರಾಮನಿವಾಸಿಗಳು ಕುಡಿಯುವ ಸಿಹಿನೀರು ಇಲ್ಲದೆ ಎಷ್ಟು ಕಷ್ಟಕ್ಕೆ ಗುರಿಯಾಗಿರುವರೆಂಬ ಅಂಶವನ್ನು ಘನಹೊಂದಿದ ಸರ್ಕಾರದವರೇ ಯೋಚಿಸಿ ಈ ತಾಲ್ಲೂಕಿನ ಗ್ರಾಮಾಂತರ ಪ್ರಜೆಗಳ ಕುಡಿಯುವ ನೀರಿಗೆ ತಕ್ಕ ಸೌಕರ್ಯಗಳನ್ನು ಪಡಿಸಿಕೊಡಬೇಕಲ್ಲದೆ ಈ 25-26 ನೇ ಸಾಲಿನ ತರೀ ಕಂದಾಯದ ರಿಮಿಷನ್‌ಗೆ ಹುಕ್ಕುಂ ದಯೆಪಾಲಿಸಿ ಬಡಪ್ರಜೆಗಳ ಕಷ್ಟನಿವಾರಣೆಮಾಡಿಕೊಡಬೇಕಾಗಿ ಪ್ರಾರ್ಥಿಸುವ,

ಪ್ರಜಾಹಿತಚಿಂತಕ, ಎಂ. ಚೆನ್ನಬಸಪ್ಪ, ಬೌರಿಂಗಪೇಟೆ.

ಅಸದ್ಧ್ವನಿ.

ತಾರೀಖು 13-10-1925 ರ ಮೈಸೂರು ಸ್ಟಾರ್‌ಪತ್ರದಲ್ಲಿ ಬಾಳೆಹೊನ್ನೂರುಪೀಠದ ವಟುವಿಧಾಯಕಮಂಡಲದಲ್ಲಿ ನಡೆದ ಕೆಲವು ಸಂದರ್ಭಗಳನ್ನು ನಾನು ಪ್ರಕಟಿಸಿದೆನಷ್ಟೇ. ಅದರಲ್ಲಿ ಮ॥ ಸದಾಶಿವಯ್ಯನವರ ವಿಷಯದಲ್ಲಿ ದಿವಾನ್‌ಬಾಹದ್ದೂರ್ ಶಾಂತವೀರಪ್ಪನವರು ಆಡಿದರೆಂಬ ಸಂಗತಿಗಳನ್ನು ಅಲ್ಲಗಳೆದು, ಸದಾಶಿವಯ್ಯನವರ ವಕೀಲರಿಗೆ ದಿವಾನ್‌ಬಾಹದ್ದೂರರವರು ಬರೆದ ಪತ್ರದಮೇಲಿಂದ ಮ॥ ಸದಾಶಿವಯ್ಯನವರು ತೃಪ್ತರಾಗಲು ಹರಸುತ್ತಿದ್ದರೆ ನನ್ನದೇನೂ ಅಡ್ಡಿ ಇಲ್ಲ. ಆದರೆ ಈ ವಿಷಯದಲ್ಲಿ ಸ್ಟಾರ್‌ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಅವರ ಹಿತಚಿಂತಕರು ಬರೆದ ಪತ್ರವ್ಯವಹಾರದಿಂದ ಸದಾಶಿವಯ್ಯನವರ ವಿಷಯಕ್ಕೆ ದಿವಾನ್‌ಬಾಹದ್ದೂರರವರು ಆಡದ ಸಂದರ್ಭಗಳನ್ನು ನಾನು ಪ್ರಕಟಿಸಿದೆನೆಂದು ಧ್ವನಿಯಾಗುತ್ತದೆ. ಈ ಪತ್ರವ್ಯವಹಾರದಲ್ಲಿ ಹೊರಡುವ ಧ್ವನಿಗೆ ದಿವಾನ್‌ಬಾಹದ್ದೂರರವರು ಬರೆದ ಕ್ಷಮಾಪಣಪತ್ರವು (?) ಆಧಾರವಾಗಿದೆ ಎಂದು ತೋರುತ್ತದೆ. ನಾನು ದಿವಾನ್‌ಬಾಹದ್ದೂರರವರು ಆಡದ ಯಾವ ಸಂದರ್ಭವನ್ನೂ ಪ್ರಕಟಿಸಿಲ್ಲ. ದಿವಾನ್‌ಬಾಹದ್ದೂರರವರು ತಾವು ಆಡಿದ ಶಬ್ದಗಳನ್ನು ಸ್ಪಷ್ಟವಾಗಿ ಬರೆಯದೆ, (ಅವರು ತಾವು ಆಡಿದ ಮಾತುಗಳಲ್ಲಿ ಒಂದನ್ನಾದರೂ ಬರೆದಂತೆ ಕಾಣುವದಿಲ್ಲ) ನಾನು ಬರೆದ ಮಾತುಗಳನ್ನು ತಾವು ಆಡಿಲ್ಲವೆನ್ನುವಷ್ಟೇ ಬರೆಯುವದು ಸಮಾಧಾನಕರವಲ್ಲ. ಅದರಿಂದಲೇ ತೃಪ್ತರಾಗಿ ನನ್ನ ವಿಷಯಕ್ಕೆ ಜನರಲ್ಲಿ ತಪ್ಪುತಿಳುವಳಿಕೆಯಾಗುವ ಪತ್ರವ್ಯವಹಾರವನ್ನು ಮಾಡುವದು ಹಿತಚಿಂತಕರಿಗೂ ಸಲ್ಲದು.

ತಾರೀಖು 13-10-1925 ನೇ ಸ್ಟಾರ್ ಸಂಚಿಕೆಯಲ್ಲಿ ನಾನು ಬರೆದ ಒಂದೊಂದು ಸಂಗತಿಯೂ ನಿಜವೆಂದು ಖಂಡಿತವಾಗಿ ಹೇಳುತ್ತೇನೆ. ದುಂಡುಸುತ್ತು ಬರೆದ ದಿವಾನ್‌ಬಾಹದ್ದೂರರವರ ಪತ್ರವನ್ನು ಸಮಗ್ರವಾಗಿ ಹಿತಚಿಂತಕರು ಪ್ರಕಟಿಸಲಿ. ಅದನ್ನು ಹೆಜ್ಜೆ ಹೆಜ್ಜೆಗೆ ನಡೆದ ಸಭಾಕಾರ್ಯಕ್ರಮಗಳ ವಿದ್ಯಮಾನಗಳನ್ನೊಳಕೊಂಡ ನನ್ನ ಪತ್ರದೊಂದಿಗೆ ಸ್ಟಾರ್ ಪತ್ರಿಕಾವಾಚಕರು ಓದಿ ಸತ್ಯವನ್ನು ನಿರ್ಣಯಿಸಲಿ, ಅಥವ ತಮಗೆ ಯುಕ್ತಕಂಡ ಇತರ ರೀತಿಯಿಂದ ಸದಾಶಿವಯ್ಯನವರು ಇದರ ಸತ್ಯತೆಯನ್ನು ಪರೀಕ್ಷಿಸಲಿ.

ಕಳ್ಳನು ಕಾಪಿಸುವನನ್ನು ಹುಡುಕಿದನೆಂಬ ಪತ್ರವ್ಯವಹಾರದಲ್ಲಿ ಈ ಸಂದರ್ಭವನ್ನೆಲ್ಲಾ ವಿಶೇಷವಾಗಿ ಬರೆದಿದ್ದೆನು. ಆದರೆ ಆ ವ್ಯವಹಾರದ ಎರಡನೆಯ ಲೇಖಾಂಶವು ಸಂಪಾದಕರ ಕೈಗೆಬಿದ್ದಂತೆ ಕಾಣಲಿಲ್ಲ. ಮೊದಲನೆಯ ಲೇಖನದಲ್ಲಿಯೇ ದಿವಾನ್‌ಬಾಹದ್ದೂರರವರ ಪಕ್ಷದಿಂದ ಕರ್ನಾಟಕ ಟಾಯಿಮ್ಸಿನಲ್ಲಿ ನನ್ನಮೇಲೆ ಆದ ಟೀಕೆಯು ಬಹುಶಃ ಉತ್ತರವನ್ನು ಹೊಂದಿದ [illegible] ಲೇಖಾಂಶವನ್ನು ಮತ್ತೆ ಬರೆದು ಕಳುಹಲಿಲ್ಲ. [illegible] [illegible] [illegible] ಮದಲ್ಲಿ ಮತ್ತೊಂದು ಪ್ರತಿಯನ್ನು ಬರೆದು ಕಳುಹಲಿಲ್ಲ. ಈಗ ಈ ಹಿತಚಿಂತಕರ ಪತ್ರವ್ಯವಹಾರವೂ ಅದರ ಆಧಾರದಿಂದ ಬಸವರಾಜಪತ್ರದಲ್ಲಿ ಹೊರಟ ಸುದ್ದಿಯೂ ಜನರಲ್ಲಿ ತಪ್ಪುತಿಳಿವೆಯನ್ನುಂಟುಮಾಡಬಹುದು, ಎಂಬೀಕಾರಣದಿಂದ ಈ ಬರಹವನ್ನು ನಾನು ಪ್ರಕಟಿಸಬೇಕಾಗಿಬಂದಿತು.

ತಮ್ಮ ಸಿದ್ಧರಾಮಪ್ಪ.

ನೈಜಾಮ ಇಲಾಖಾ ಗುಲಬುರ್ಗಾ ಜಿಲ್ಲಾ ಸೇಡಂ ತಾಲೂಕ ಪೈಕಿ ಊಡಿಗಿ ಮತ್ತು ತೆಲಕೂರಲ್ಲಿ ಜೀವದಯಾಸಂಘಗಳ ಸ್ಥಾಪನೆಯು.

ಊಡಿಗಿಗ್ರಾಮದ ಮಾಲೀ ಪಾಟೀಲ ನಿಜಲಿಂಗಪ್ಪ ಇವರ ಕೋರಿಕೆ ಪ್ರಕಾರ ಗುರುಮಠಕಲ್ಲ ಶ್ರೀಮನ್ನಿರಂಜನ ಶಾಂತವೀರಮಹಾಸ್ವಾಮಿಗಳ ಶಿವರಾತ್ರಿಯ ಮಹಾಪೂಜೆಯು ಗೌಡರ ಮನೆಯಲ್ಲಿಯೇ ಅತ್ಯಂತ ವೈಭವದಿಂದ ನೆರವೇರಿತು. ಎರಡನೆಯದಿವಸ ಲೋಕೇಶ್ವರದೇವಸ್ಥಾನದಲ್ಲಿ ಮಹಾಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಜಂಗೀಸಭೆಯು ಕೂಡಿಸಲ್ಪಟ್ಟಿತು. ಸಭೆಗೆ ಚಿಟಗೇರಿ, ನೀಲಳ್ಳಿ, ಕೊಂಕನಳ್ಳಿ, ತೆಲಕೂರು, ಮೊಗಲಿ, ಮರಗೋಳ ಮೊದಲಾದ ಗ್ರಾಮಗಳಿಂದ ಪ್ರೇಕ್ಷಕರು ಬಂದಿದ್ದರು. ಪ್ರಥಮದಲ್ಲಿ ನೀಲಳ್ಳಿ ನಾಟಕಮಂಡಳಿಯವರು ಮಂಜುಳಧ್ವನಿಯಿಂದ ಶಿವಸ್ತೋತ್ರಗಳನ್ನು ಹಾಡಿದನಂತರ ಸಭಾಧ್ಯಕ್ಷರಾದ ಶಾಂತವೀರಮಹಾಸ್ವಾಮಿಗಳವರು ಅಹಿಂಸಾವಿಷಯದಲ್ಲಿ 3 ಘಂಟೆಯಕಾಲ ಪರಿಣಾಮಕಾರಕವಾದ ಭಾಷಣವನ್ನು ಮಾಡಿದರು. ದಯಾಹೀನರಿಂದ ಪ್ರಾಣಿಗಳಿಗಾಗುವ ಸಂಕಷ್ಟವನ್ನು ಹೇಳುತ್ತಿರುವಾಗ್ಗೆ ಪ್ರೇಕ್ಷಕರು ಅಶ್ರುಧಾರೆಯಿಂದ ಹಾಯ್‌ಹಾಯ್ ಅನ್ನುತ್ತಿದ್ದರು. ಸ್ವಾಮಿಗಳ ಭಾಷಣದಿಂದ ಜನರ ಮನಸ್ಸಿಗೆ ಉತ್ತಮಸಂಸ್ಕಾರವಾದಂತಾಗಿ ಆಗಲೇ ಸರ್ವರೂ ಪಾದಕ್ಕೆರಗಿ ಇನ್ನುಮುಂದೆ ನಮ್ಮ ನಮ್ಮ ಗ್ರಾಮಗಳಲ್ಲಿ ನಡೆಯುತ್ತಿರುವ ಸರ್ವಪ್ರಕಾರದ ಪ್ರಾಣಿಹಿಂಸೆಯನ್ನೂ ಅದಕ್ಕೆ ಸಂಬಂಧಪಟ್ಟ ದೇವಿಜಾತ್ರೆಗಳನ್ನೂ ಆಚಾರಕ್ಕೆ ವಿರೋಧವಾದ ಪರದೇಶೀ ಸಕ್ಕರೆಯ ಉಪಯೋಗವನ್ನೂ ನಿಶ್ಚಯವಾಗಿ ನಿಲ್ಲಿಸುತ್ತೇವೆಂದು ಪ್ರತಿಜ್ಞೆಯನ್ನು ಮಾಡಿದರು. ಆಮೇಲೆ ಕೆಳಗೆ ವಿವರಿಸಿದಪ್ರಕಾರ ಜೀವದಯಾಸಂಘವು ಸ್ಥಾಪಿಸಲ್ಪಟ್ಟಿತು. ಒಡನೆಯೇ ದೀನಬಂಧುವಾದ ಪರಶಿವನ ಜಯಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಆಹೊತ್ತಿನದಿವಸ ಊರಲ್ಲಿ ಜನರು ಎಲ್ಲಿನೋಡಿದರಲ್ಲಿ ಹಿಂಸಾವಿಷಯವನ್ನು ನಿಲ್ಲಿಸುವ ಆಲೋಚನೆಯನ್ನೇ ಮಾಡುತ್ತಿದ್ದರು. ಈ ಗ್ರಾಮದಲ್ಲಿ ಅದಂತೆ ತೆಲಕೂರಲ್ಲಿಯೂ ಸ್ವಾಮಿಗಳ ಪ್ರೇರಣೆಯಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿತು. ಮತ್ತು ಯಡಗಿ, ಕುಕ್ಕುಂದಿ, ನೀಲಳ್ಳಿ, ಕೊಂಕನಳ್ಳಿ, ಮುಳಖೇಡ, ಮೊಗಲಿ ಮೊದಲಾದ ಗ್ರಾಮಗಳಲ್ಲಿಯೂ ಹಿಂಸಾವಿಷಯವು ನಿಲ್ಲಿಸಲ್ಪಟ್ಟಿತೆಂದು ತಿಳುಹಿಸಲು ಅತ್ಯಂತ ಆನಂದವಾಗುತ್ತದೆ. ಸದರಿ ಊಡಿಗಿಯಲ್ಲಿ ಜೀವದಯಾಸಂಘವು ಸ್ಥಾಪಿಸಲ್ಪಟ್ಟಿತಷ್ಟೆ ? ಅದಕ್ಕೆ ಈ ದಯಾಪರರೇ ವ್ಯವಸ್ಥಾಪಕರಾಗಿರುವರು. ಮಠದ ಪಂಚಯ್ಯನವರು, ನಿಜಲಿಂಗಪ್ಪ ಮಾಲಿ ಪಾಟೀಲ, ಮಡಿವಾಳಪ್ಪ ಸರಡಗಿ, ಶರಣಪ್ಪ ಬಾಂಜ, ಶರಣಪ್ಪ ಯಾಲಕ್ಕಿ, ಬಸವಲಿಂಗಪ್ಪ ಬಾಂಜ, ಲಿಂಗಪ್ಪ ಅಣವಾರ, ಹನುಮಂತರಾವ ಮಾಲಿ ಪಾಟೀಲ ಸಾ॥ ಕೊಂಕನಳ್ಳಿ, ವೀರಭದ್ರಪ್ಪ ಸಾಹುಕಾರ ಸಾ॥ ನೀಲಳ್ಳಿ, ನಾಗಪ್ಪ ಪೋಲೀಸ ಪಾಟೀಲ ಸಾ॥ ಚಿಟಗೇರಿ, ಚಂದ್ರರಾವ ಕುಲಕರ್ಣಿ ಇವರೇ ಮೊದಲಾದ ಅನಾಥಪಾಲಕರು ತನು, ಮನ, ಧನಗಳಿಂದ ಸಹಾಯಮಾಡಿ ಬಡಪ್ರಾಣಿಗಳ ಕ್ಷೇಮಚಿಂತನೆಯನ್ನು ಮಾಡಲು ಸಿದ್ಧರಾದದ್ದು ಸರ್ವರಿಗೂ ಮಾರ್ಗದರ್ಶಕವಾಗಿದೆ. ಈಗ ಪ್ರಾಣಿಗಳಿಗೆ ಬಂದೊದಗಿದ ಘೋರದುಃಖವನ್ನು ದೂರಮಾಡಲು ಇದರಂತೆ ಇತರರೂ ಮನಃಪೂರ್ವಕವಾಗಿ ಪ್ರಯತ್ನಮಾಡಿ ಪುಣ್ಯಭಾಗಿಗಳಾಗಬೇಕೆಂದು ಕೋರುವ,

ತಮ್ಮ, ಭೀಮರಾವ.

ಶ್ರೀಮನ್ಮಹಾರಾಜನಿರಂಜನಜಗದ್ಗುರುಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳ ಉತ್ಸವ.

ಹೊಸದುರ್ಗ ತಾಲ್ಲೂಕು ಕಿಟ್ಟದಾಳುಗ್ರಾಮದ ಮ॥ ವೇ॥ ಗುರುಸಿದ್ಧಪ್ಪಯ್ಯನವರು ಬೃಹನ್ಮಠಕ್ಕೆ ಹೋಗಿ ಶ್ರೀಮನ್ಮಹಾರಾಜನಿರಂಜನಜಗದ್ಗುರುಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ತಮ್ಮ ಗ್ರಾಮಕ್ಕೆ ದಯಮಾಡಿಸಬೇಕೆಂದು ಬಹುವಿಧವಾಗಿ ಪ್ರಾರ್ಥನೆಮಾಡಿಕೊಂಡಿದ್ದು ಮಹಾಸಂಸ್ಥಾನಕ್ಕೆ ಮನವರಿಕೆಯಾಗಿ ಸದರಿಯವರ ಪ್ರಾರ್ಥನೆಯಂತೆ ತಾರೀಖು 21-2-26 ನೇ ಭಾನುವಾರ ಸಾಯಂಕಾಲ 5 ಘಂಟೆಗೆ ಶ್ರೀಗಳವರ ಸ್ವಾರಿಯು ಚಿತ್ತೈಸಿ ಅನೇಕ ಬಿರುದಾವಳಿಗಳಿಂದಲೂ ಮಂಗಳವಾದ್ಯಗಳಿಂದಲೂ ಮಹೋತ್ಸವವು ನಡೆದು ರಾತ್ರಿ 8 ಘಂಟೆಗೆ ಮುಹೂರ್ತಮಾಡಿಸಲ್ಪಟ್ಟಿತು. ಆ ಗ್ರಾಮವನ್ನು ಅಲಂಕರಿಸಿದ್ದರು. ಸಾವಿರಾರು ಪ್ರಜೆಗಳು ಸೇರಿದ್ದರು. ಶ್ರೀಮನ್ಮಹಾರಾಜಾ ಸರ್ಕಾರದವರು ಸ್ವಾಮಿಯ ಉತ್ಸವಕಾಲದಲ್ಲಿಯೂ ಕ್ಯಾಂಪ್ ಉಸ್ತುವರಿಗಾಗಿಯೂ ಪೋಲೀಸ್ ಶಿಬ್ಬಂದಿಯನ್ನು ದಯಪಾಲಿಸಿದ್ದರು. ಗುರುಸಿದ್ಧಪ್ಪನವರೊಬ್ಬರೇ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಕೋಟದಲ್ಲಿ ಸಂತರ್ಪಣೆ ನಡೆಸಿದರು. ಆ ಪೈಕಿ 300 ರೂ. ಬೆಲೆಬಾಳುವ ಒಂದು ಜಮೀನನ್ನು ಮಹಾಸಂಸ್ಥಾನಕ್ಕೆ ಭೂದಾನವಾಗಿ ಸಮರ್ಪಿಸಿರುತ್ತಾರೆ. ಶ್ರೀಸ್ವಾಮಿಗಳವರು ಸದರಿಯವರ ನೈಜವಾದ ಭಕ್ತಿ, ಗುರುಸೇವೆಗೆ ತುಂಬಾ ಸಂತುಷ್ಟರಾಗಿ ಆಶೀರ್ವಾದ ಮಾಡಿದರು. ಸದರಿ ಗುರುಸಿದ್ಧಯ್ಯನವರು ಶ್ರೀ ಮುರಿಗೇಶನ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವರಲ್ಲದೆ, ಆ ಗ್ರಾಮದ ಭಕ್ತರೂ ಅವರವರ ಭಕ್ತಿಯನ್ನು ಒಪ್ಪಿಸಿ ಗುರುಕಟಾಕ್ಷಕ್ಕೆ ಪಾತ್ರರಾಗಿರುತ್ತಾರೆ. ಕಂಚೀಪುರದ ವೀರಶೈವಭಕ್ತಾದಿಗಳು ಗ್ರಾಮವನ್ನು ಬಹುಸಂಭ್ರಮವಾಗಿ ಕದಳಿ, ಮಾವಿನತೋರಣಗಳಿಂದಲೂ, ಚಪ್ಪರಗಳಿಂದಲೂ ಶೃಂಗರಿಸಿ ಮಹಾಸಂಸ್ಥಾನದ ಅಡಿದಾವರೆಯಲ್ಲಿ ತಮ್ಮ ಗ್ರಾಮಕ್ಕೆ ದಯಮಾಡಿಸಬೇಕೆಂದು ವಿನಯಪೂರ್ವಕವಾಗಿ ಬಿನ್ನಹಮಾಡಿಕೊಂಡಿದ್ದರಿಂದ ಶ್ರೀಗಳವರಿಗೆ ಕೃಪೆಯುಂಟಾಗಿ 3-3-26 ನೇ ಬುಧವಾರ ಸಾಯಂಕಾಲ 5 ಘಂಟೆಗೆ ಇಸ್ತಕಬಾಲ್ ಸಮೇತ ಸಕಲ ಬಿರುದಾವಳಿಗಳಿಂದಲೂ ಮಂಗಳವಾದ್ಯಗಳಿಂದಲೂ ಸ್ವಾಮಿಗಳವರ ಸ್ವಾರಿಯು ಮಹೋತ್ಸವದೊಡನೆ ಬಿಜಯಂಗೈಸಿ ರಾತ್ರಿ 8 ಘಂಟೆಗೆ ಮುಹೂರ್ತ ಮಾಡಲ್ಪಟ್ಟಿತು. ಸ್ವಾಮಿಯ ಸಂದರ್ಶನಾರ್ಥವಾಗಿ ಸಾವಿರಾರು ಪ್ರಜೆಗಳು ಸೇರಿದ್ದರು. ಉತ್ಸವಕಾಲದಲ್ಲಿ ಕೋಲಾಹಲ ಧ್ವನಿಯಾಯಿತು. ಮುಹೂರ್ತವಾದ ಒಡನೆ ಮಹಾಸಂಸ್ಥಾನಮುಖೇನ ನಡೆದಿರುವ ವಿದ್ಯಾಭ್ಯಾಸದ ವಿಚಾರವಾಗಿ ಭಾಷಣ ನಡೆದು ತನ್ನ ಭಕ್ತಾದಿಗಳು ಭಕ್ತಿಪುರಸ್ಸರವಾಗಿ ನಡೆಯತಕ್ಕ ವಿಚಾರದಲ್ಲಿ ಸಂಸ್ಕೃತಶ್ಲೋಕವನ್ನು ಹೇಳಿ ಭಕ್ತರ ಮನಸ್ಸಿಗೆ ನಾಟುವಂತೆ ಸುಲಭಭಾಷಾಶೈಲಿಯಲ್ಲಿ ರಸವತ್ತಾಗಿ ಅಪ್ಪಣೆಕೊಡಿಸಿದ್ದರಿಂದ ಜಯಜಯಘೋಷವಾಯಿತು. ಕೊನೆಗೆ ಮಂಗಳ ನಡೆದು ಬಂದ ಭಕ್ತಾದಿಗಳಿಗೆಲ್ಲಾ ಮಹಾಸ್ವಾಮಿಗಳವರ ಆಶೀರ್ವಾದದ ಅಪ್ಪಣೆ ದಯಪಾಲಿಸಲ್ಪಟ್ಟಿತು. ಇದೆಲ್ಲವೂ ಕಂಚೀಪುರದ ವೀರಶೈವಭಕ್ತಾದಿಗಳ ಪುಣ್ಯಭಾಗ್ಯವೇ ಸರಿ. ಈಗ ಶ್ರೀಗಳ ಸ್ವಾರಿಯು ಹೊಸದುರ್ಗ ತಾಲ್ಲೂಕು ಕಂಚೀಪುರದಲ್ಲಿ ಮೊಕ್ಕಾಂ ಮಾಡಿರುತ್ತದೆ.

ಶ್ರೀಗಳವರ ಕೃಪಾಕಟಾಕ್ಷಕ್ಕೆ ಪಾತ್ರನಾದ,
C. M. Guraiah,
Headmaster.

ಶ್ರೀಜಗದ್ಗುರು ರೇಣುಕಾಚಾರ್ಯರ ರಥೋತ್ಸವವು.

ವೀರಶೈವ ಜಗತ್ತಿನ ಮುಕ್ತಿಸ್ಥಾನವೆನಿಸಿದ ಶ್ರೀಮದ್ರಂಭಾಪುರೀವೀರಸಿಂಹಾಸನಮಹಾಸಂಸ್ಥಾನಮಠದಲ್ಲಿ ಅನಾದಿಯಿಂದಲೂ ನಡೆದುಬಂದ ಶ್ರೀಮಜ್ಜಗದ್ಗುರುರೇಣುಕಶಿವಾಚಾರ್ಯರ ಜಯಂತಿಯು ರಥೋತ್ಸವಸಮಾರಂಭಕ್ಕೆ ಶ್ರೀಮಹಾಸಂಸ್ಥಾನದಿಂದ ಶ್ರೀಮುಖವನ್ನಪ್ಪಣೆಕೊಡಿಸಿದ್ದರಿಂದ ಶ್ರೀಜಗದಾಚಾರ್ಯಚರಣಸೇವಾಭಿಲಾಷಿಗಳಾದ ನಾನಾಪ್ರಾಂತಗಳ ಶ್ರೀಪಟ್ಟಚರಾಧಿಕಾರಿಗಳು, ಪಂಡಿತರು, ಕವಿಗಳು, ಶೆಟ್ಟರು, ಗೌಡರು, ಸಾವುಕಾರರು ಮುಂತಾದ ಅನೇಕ ಮಹಾಶಯರು ಸಕಾಲಕ್ಕೆ ಆಗಮಿಸಿದ್ದರು. ಪದ್ಧತಿಯಂತೆ ಉತ್ಸವಾರಂಭವಾಗಿ ಫಾಲ್ಗುಣ ಶು॥ ೧೪ ಶುಕ್ರವಾರ ಬೆಳಿಗ್ಗೆ ಶ್ರೀಮದಾಚಾರ್ಯಸ್ವಾಮಿಗೆ ಏಕಾದಶರುದ್ರಾಭಿಷೇಕಪೂರ್ವಕ ಸಹಸ್ರಬಿಲ್ವಾರ್ಚನೆಯೂ ಮಹಾಸಂತರ್ಪಣೆಯೂ ನಡೆದು ಮಧ್ಯಾಹ್ನ ಮಘಾನಕ್ಷತ್ರ ಪ್ರವೇಶಕಾಲದಲ್ಲಿ ವೈದಿಕರ ವೇದಘೋಷದಿಂದಲೂ ಭಕ್ತ ಮಾಹೇಶ್ವರರ ಸಮುದಾಯದ ಜಯಜಯಘೋಷದಿಂದಲೂ, ನಾನಾವಿಧಗಳಾದ ವಾದ್ಯಗಳಿಂದಲೂ, ಶ್ರೀಮದಾಚಾರ್ಯ ಭಕ್ತಿಯನ್ನು ಹೆಚ್ಚಿಸುವ ಶ್ರೀಬ್ರಹ್ಮರಥೋತ್ಸವವು ಬಹುವಿಜೃಂಭಣೆಯಿಂದ ನೆರವೇರಿತು. ಉಳಿದಾದ ಉತ್ಸವಗಳು ನಡೆಯುತ್ತಿದ್ದಂತೆಯೇ ಮರುದಿವಸ (ತಾ॥ 27-2-26) ರಲ್ಲಿ ಶ್ರೀಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಸನ್ನಿಧಾನದಲ್ಲಿ ಯಾವತ್ತು ಮಹಾಜನಗಳು ಸಭೆಸೇರಿದರು. ಮೊದಲು ತುಂಕೂರಿನ ಬಿ. ಶಿವಮೂರ್ತಿಶಾಸ್ತ್ರಿಗಳು ತಾವು ಭಕ್ತಿಯಿಂದ ರಚಿಸಿಕೊಂಡು ಬಂದಿದ್ದ ಶ್ರೀಜಗದ್ಗುರುಗಳ ಸ್ತುತಿಪರಗಳಾದ ಪದ್ಯಮಾಲಿಕೆಗಳನ್ನು ಪಠಿಸಿದನಂತರ ಸಮಯೋಚಿತಗಳಾದ ಕೆಲವರ ಭಾಷಣಗಳು ಜರುಗಿದವು. ಅಷ್ಟಕ್ಕೆ ವೇಳೆಯಾದ್ದರಿಂದ ಸಭಿಕರನ್ನು ಆಶೀರ್ವದಿಸಿ ಶ್ರೀಮಹಾಜಗದ್ಗುರುಗಳವರು ಅನುಷ್ಠಾನಕ್ಕೆ ದಯೆಮಾಡಿಸಿದರು. ಪುನಃ ಸಾಯಂಕಾಲಕ್ಕೆ ಸಭೆ ಸೇರಿತು. ಸದರಿ ಶಾಸ್ತ್ರಿಗಳ ಸುಶ್ರಾವ್ಯವಾದ ಕೀರ್ತನವೂ ಆಯಿತು. ತದನಂತರ ಶ್ರೀಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ವೈದಿಕವಿದ್ಯಾಪ್ರಸಾರಕ್ಕಾಗಿಯೂ, ಮತಸುಧಾರಣೆಗಾಗಿಯೂ ಸ್ಥಾಪಿಸಲ್ಪಡುವ ಶ್ರೀಜಗದ್ಗುರು ಪಂಚಾಚಾರ್ಯಸಂಸ್ಕೃತಕಾಲೇಜಿನ ವ್ಯವಸ್ಥೆಯ ಬಗ್ಗೆ ನಾನಾಪ್ರಾಂತಗಳ ವೀರಶೈವರು ತಮ್ಮತಮ್ಮ ಸಲಹೆಗಳನ್ನು ತಾ॥ 22-4-1926 ರ ರೊಳಗಾಗಿ ಶ್ರೀಮಹಾಸನ್ನಿಧಿಗೆ ಬಿನ್ನವಿಸಿಕೊಳ್ಳಬೇಕೆಂತಲೂ, ನಾನಾಪ್ರಾಂತಗಳ ಪ್ರಮುಖರು ಮುತವರ್ಜಿವಹಿಸಿ ಮೊಬಲಗನ್ನು ಮೈಸೂರು ಬ್ಯಾಂಕಿಗೆ ಜಮಾಹಿಡಿಸತಕ್ಕದ್ದೆಂತಲೂ ಅಪ್ಪಣೆಕೊಡಿಸಿದ್ದಕ್ಕೆ ಸಮಸ್ತರೂ ಅತ್ಯಾದರದಿಂದ ಸಮ್ಮತಿಸಿ ಸಂತುಷ್ಟರಾದರು. ಈ ವಿಷಯಕವಾಗಿ ನಾನಾಪ್ರಾಂತಗಳಿಂದ ಬಂದಿರತಕ್ಕ ಕೆಲವುಸಲಹೆಗಳು ಓದಲ್ಪಟ್ಟು ಅವು ಮುಂದಿನ ಕಮಿಟಿಯಲ್ಲಿ ವಿಮರ್ಶೆಯ ಬಗ್ಗೆ ಇಡಲ್ಪಟ್ಟವು. ತಾತ್ಕಾಲದ ಕಾರ್ಯವು ಸಂಪೂರ್ಣವಾದನಂತರ ಶ್ರೀಜಗದ್ಗುರುಗಳವರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಶ್ರೀಮಹಾಸ್ವಾಮಿಯ ನಿತ್ಯೋತ್ಸವಗಳೂ ಮಹಾಸಂತರ್ಪಣೆಯೂ ಕ್ರಮವಾಗಿನಡೆಯುತ್ತಾ ಬಂದವು. ಭಕ್ತಮಾಹೇಶ್ವರರ ಸಮುದಾಯವು ಶ್ರೀಜಗದ್ಗುರುಗಳವರ ಸೇವೆಯನ್ನುಮಾಡಿ ದರ್ಶನಾಶೀರ್ವಾದಗಳಿಂದ ಧನ್ಯರಾದರು. ಮಹಾಶಯರೇ, ನಮ್ಮೆಲ್ಲರ ಜನ್ಮಸಾಫಲ್ಯಕ್ಕೆ ಇದೊಂದು ಸಿದ್ಧಿ ಕಾಲವೆಂದು ಸಹಜಭಕ್ತಿಯಿಂದ ಸೂಚಿಸಿ ಈ ಲೇಖನವನ್ನು ಮುಗಿಸುವೆನು.

ಓರ್ವ ಪ್ರತ್ಯಕ್ಷದರ್ಶಿ.

ಶಿವಭಜನಾಮಹೋತ್ಸವ.

ನೈಜಾಂ ರಾಜ್ಯದಲ್ಲಿರುವ ರಾಯಚೂರು ಜಿಲ್ಲಾ ಮಾನವಿ ತಾಲ್ಲೂಕಕ್ಕೆ ಸೇರಿದ ನೀರಮಾನವಿ ಶ್ರೀಮಂತ ಹಂಪನಗೌಡರು ಜಗದ್ಧಿತಕ್ಕೋಸುಗ ಇದೇ ಕ್ರೋಧನ ಸಂ॥ ಮಾಘ ಬ॥ ೩ ಮೊದಲುಗೊಂಡು ಮಾಘ ಬ॥ ೧೪ ವರೆಗೆ ಶ್ರೀ ಜಂಬುಕೇಶ್ವರನ ದೇವಾಲಯದಲ್ಲಿ ಶಿವಾಚಾರರೀತ್ಯಾ ಶುಚಿರ್ಭೂತರಾದ ವೀರಶೈವ ಲಿಂಗಿಬ್ರಾಹ್ಮಣರಿಂದ ಹಗಲಿರಳು ಬಿಡದಹಾಗೆ ಮಾಡಿಸಲ್ಪಟ್ಟ ಶಿವಭಜನ ಮಹೋತ್ಸವವೂ, ಅಧ್ಯಕ್ಷಸ್ಥಾನವನ್ನು ವಹಿಸಿದ ಹಿರೇಹ್ಯಾಟ ಚರಪಟ್ಟಾಧ್ಯಕ್ಷರಾದ ಶ್ರೀ ಶಿವಾರ್ಯಸ್ವಾಮಿಗಳು ಮತ್ತು ಮಾನವಿ ಮುತ್ತಿನಪೆಂಡೆ ಮಠದ ಚರವರ್ಯರಾದ ವಿರೂಪಾಕ್ಷಸ್ವಾಮಿಗಳು ಇವರ ಕೃಪಾಬಲದಿಂದ ಕೂಡಿದ ವಿದ್ವಾಂಸಮಂಡಲಿಯೂ ಗಣದಾಸೋಹವೂ ನಿತ್ಯದಲ್ಲೂ ನಡೆದುವು. ಮಾಘ ಬಹುಳ ೭ ರಲ್ಲಿ ಭಕ್ತಿವಿಚಾರ, ಮಾಘ ಬಹುಳ ೮ ರಲ್ಲಿ ಗುರುಲಕ್ಷಣ, ಮಾಘ ಬಹುಳ ೯ ರಲ್ಲಿ ದೀಕ್ಷಾವಿಚಾರ, ಮಾಘ ಬಹುಳ ೧೦ ರಲ್ಲಿ ಮಂತ್ರಫಲ, ರಾಜಶಿವಯೋಗವಿಚಾರ, ಮಾಘ ಬಹುಳ ೧೧ರಲ್ಲಿ ಭ್ರಾಂತಿನಿರೂಪಣ ವಿಚಾರ, ಮಾಘ ಬ॥ ೧೩ ರಲ್ಲಿ ಶಿವಜೀವೈಕ್ಯವಿಚಾರ, ಮಾಘ ಬ॥ ೧೪ ರಲ್ಲಿ ಮಹಾಭಜನೆಯು ಸಕ್ರಮವಾಗಿ ನಡೆದುವಲ್ಲದೆ ನಿತ್ಯದಲ್ಲಿ ಕಾಲಕ್ರಮದಿಂದ ಬ್ರಹ್ಮಜಿಜ್ಞಾಸ 10 ಘಂಟೆಯಿಂದ 2 ಘಂಟೆವರಿಗೂ ಸ್ನಾನ, ಅನುಷ್ಠಾನ, ಗುರುದೇವತಾಪೂಜೆ, ಗಣಸಂತರ್ಪಣೆ, ಶಿವಕೀರ್ತನ ಅನಂತವಾದ ಗಳಿಂದ ಮಂಗಲೋತ್ಸವ ಮತ್ತು ಸಾಯಂಕಾಲ ಪುರಾಣಶ್ರವಣ. ಈ ಪ್ರಕಾರ ಪ್ರತಿದಿನದಲ್ಲಿ ಕಲ್ಲೂರು ವೇದಮೂರ್ತಿ ಸೂಗೂರು ಶಾಸ್ತ್ರಿಗಳಿಂದ ವೇದವೇದಾಂತೋದಾಹರಣೆಗಳೊಡನೆ ಸರಸವಾಗಿಯೂ ಗಂಭೀರವಾಗಿಯೂ ಹೇಳಲ್ಪಟ್ಟ ಶಿವಕೀರ್ತನೆಯಿಂದಲೂ, ಶಿಲಾಪುರದ ಅಡಿವಯ್ಯಸ್ವಾಮಿಗಳಿಂದ ಮನಸ್ಸಿನಲ್ಲಿ ನೆಲಸಿ ಪರಿಣಾಮವಾಗುವಂತೆ ಬೋಧಿಸಲ್ಪಟ್ಟ ಬ್ರಹ್ಮಜಿಜ್ಞಾಸದಿಂದಲೂ, ವೇ॥ ಚಾಗೇಕಲ್ಲು ಬ್ರಹ್ಮಶ್ರೀ ಸಿದ್ಧಾಂತಿ ಸಿದ್ಧರಾಮಶಾಸ್ತ್ರಿಗಳಿಂದ ವಿಧ್ಯುಕ್ತಪ್ರಕಾರವಾಗಿ ಮಾಡಿಸಲ್ಪಟ್ಟ ಹೋಮ, ನೂತನಬಸವೇಶ್ವರಸ್ಥಾಪನ ಮತ್ತು ಶ್ರೀರುದ್ರಾಭಿಷೇಕಾದಿ ಶಿವಕಾರ್ಯಗಳಿಂದಲೂ, ಸಂಗೀತವಿದ್ವಾಂಸರಾದ ಮರಿ ಹಂಪಯ್ಯನವರಿಂದ ಮಾಡಲ್ಪಟ್ಟ ಮೃದುಮಧುರಗಾನದಿಂದಲೂ, ಭಾಷಣಾದಿಗಳಿಂದಲೂ ಮೇಲ್ಕಂಡ ಅಧ್ಯಕ್ಷರಿಂದ ಹೇಳಲ್ಪಟ್ಟ ಪುರಾಣಶ್ರವಣದಿಂದಲೂ ಅತಿ ವಿಜೃಂಭಣೆಯಿಂದ ನಡೆದು ಮಾಘ ಬ॥ ೩೦ ಶುಕ್ರವಾರದಲ್ಲಿ ಮಹಾಗಣಾರಾಧನೆಯು ಜರುಗಿ ಸಂಧ್ಯಾಕಾಲದಲ್ಲಿ ಶ್ರೀ ಜಂಬುಕೇಶ್ವರನ ರಥೋತ್ಸವವು ಅನಂತವಾದ್ಯಗಳಿಂದಲೂ ಸ್ತ್ರೀಯರ ಕಲಶಕನ್ನಡಿಗಳಿಂದಲೂ ವೇದಘೋಷದಿಂದಲೂ ಸಮ್ಮುಖ ಬಸವೇಶ್ವರನಲ್ಲಿಗೆ ನಡೆದು ಪುನರಾಗಮನವು ನಿರಾತಂಕವಾಗಿ ಶ್ರೀ ಜಂಬುಕೇಶ್ವರನ ದೇವಾಲಯಕ್ಕೆ ಬಂದು ತಲುಪಿತು. ಈ ಮಹೋತ್ಸವಕಾರ್ಯದರ್ಶನಾಧಿಕ [illegible] ರಾಗುವವೆಂದು ಆಗಮಿಸಿದ ನಿಖಿಲಪ್ರಮುಖಜನಸ್ತೋಮದಿಂದಲೂ ಮಹಾರಾಜಶ್ರೀ ಹರವಿ ಮಾಲಿ ಪಟೀಲು ಬಸವನಗೌಡರು ಸರ್ವಕಾರ್ಯನಿರ್ವಾಹಕರಾಗಿ ನಿಂತು ಪರಮಭಕ್ತಿಯಿಂದ ಪ್ರತಿಯೊಂದು ಕಾರ್ಯಗಳ ಬಗ್ಗೆ ಸುಧಾರಣೆ ಉಳ್ಳವರಾಗಿ ತಾರತಮ್ಯವರಿತು ನಡೆದುದರಿಂದಲೂ ಈ ಮಹೋತ್ಸವವು ಅತಿ ವಿಜೃಂಭಣೆಯಿಂದ ದಂಘಟಿತವಾಗಿ ಸಾಂಗವಾದನಂತರ ಮಾರನೇ ದಿವಸ ಅಂದರೆ ಫಾಲ್ಗುಣ ಶು॥ ೧ ಶನಿವಾರದಿವಸ ಸರ್ವವಿದ್ವಾಂಸಮಂಡಲಿಗೂ ಮಹಾಸ್ವಾಮಿಗಳಿಗೂ ಅನೇಕ ಸಾಧುಗಳಿಗೂ ಪರಮಾನಂದವಾಗುವಂತೆ ಧರ್ಮಾತ್ಮರಾದ ಶ್ರೀಮಂತ ಹಂಪನಗೌಡರಿಂದ [illegible] ಸಂಭಾವನೆಯು ಮಾಡಲ್ಪಟ್ಟಿತು. [illegible] [illegible] ಪುಣ್ಯಕಾರ್ಯಗಳ ಮಾಡಿ ಧರ್ಮಕೀರ್ತಿಗಳಿಗೆ ಭಾಜನರಾಗಲೆಂದು [illegible] ಕೋರಿಕೆ. ಈ ಶಿವಭಜನಮಹೋತ್ಸವವು [illegible] [illegible] ಶ್ರೀಮಂತ ಹಂಪನಗೌಡರು [illegible] [illegible] [illegible] [illegible] [illegible] [illegible]

ಘಟನೆಯನ್ನು ಕೇಳಿ ನೋಡಿದ ಪರಮಭಕ್ತರಿಗೂ ಶ್ರೀ ಜಂಬುಕೇಶ್ವರನು ಸಕಲೈಶ್ವರ್ಯವನ್ನು ಕೊಟ್ಟು ಕಾಪಾಡಲೆಂದು ಕೈಯೆತ್ತಿ ಬೇಡುತ್ತೇನೆ.

ಪ್ರತ್ಯಕ್ಷದರ್ಶೀ.

ಯಡಿಯೂರುರಥೋತ್ಸವ.

ತುಮಕೂರು ಡಿ॥ ಯಡಿಯೂರು ಶ್ರೀಸಿದ್ಧಲಿಂಗೇಶ್ವರಸ್ವಾಮಿ ಜಾತ್ರೆ ಮತ್ತು ರಥೋತ್ಸವವು ಅಕ್ಷಯ ಸಂ॥ ಅಧಿಕಚೈತ್ರ ಶುದ್ಧ ೮ ಭಾನುವಾರ (ತಾ॥ 21-3-1926) ನಡೆಯುತ್ತದೆ. ಈಸಾರಿ ನೀರಿನ ವಸತಿಯೂ ಜನಾರೋಗ್ಯವೂ ಅನುಕೂಲವಾಗಿವೆ. ದನಕರುಗಳು ಸೇರುವುದು ಅಭಿವೃದ್ಧಿಯಾಗುತ್ತಾ ಬಂದುದರಿಂದ ಮಾರುವವರಿಗೂ ಕೊಳ್ಳುವವರಿಗೂ ಅನುಕೂಲ. ಹೈರೋಡಿನಿಂದ ದೇವಸ್ಥಾನದ ಬಳಿಗೆ ಬರುವ ಬಂಡಿರಸ್ತೆಯು ಹಳ್ಳಕೊರಕಲುಗಳಿಂದ ಕೂಡಿರುವುದರಿಂದ ರಾತ್ರಿಯ ಪ್ರಯಾಣಿಕರಿಗೆ ಬಹಳ ತೊಂದರೆ. ಸ್ಯಾನಿಟೇಷನ್‍ಗಾಗಿ ಖರ್ಚಾಗುತ್ತಿರುವ ಹಣವು ಸದ್ವಿನಿಯೋಗವಾಗುತ್ತಾಯಿಲ್ಲ. ಇದಕ್ಕಾಗಿ ಒಂದು ಕಮಿಟಿಯನ್ನೇರ್ಪಡಿಸಿ ರಸ್ತೆ, ಕಕ್ಕಸು ಮುಂತಾದ ಜನೋಪಯೋಗವಾದ ಕಾರ್ಯಕ್ಕೆ ವಿನಿಯೋಗಿಸುವಂತೆ ಮಾಡಿಸಿದರೆ ಉತ್ತಮವಾಗುವುದು. ಜಾತ್ರೆಕಾಲದಲ್ಲಿ ಮುಂದೆ (ಸಿರೋಭಾಗ ಸಂಪೂರ್ಣಕ್ಷೌರ) ತೆಗೆಯಿಸಿಕೊಳ್ಳುವ ಸುಮಾರು ಹತ್ತುಸಾವಿರ ಮಂದಿ ಸ್ನಾನಮಾಡುವ ಕದಂಬ (ಸಿಂಪಾ) ನದಿಯು ಬತ್ತುತ್ತಾ ಇದೆ. ಕಾರಣವೇನೆಂದರೆ ನದಿಯ ಮಗ್ಗುಲಲ್ಲಿ ತೋಟಮಾಡಿರುವ ಗುಬ್ಬಿ ತಾ॥ ಮತ್ತು ತುರುವೇಕೆರೆ ಸಬ್ ತಾ॥ ನಲ್ಲಿಗೆರೆ ವಗೈರೆ ಗ್ರಾಮಸ್ಥರು ನದಿಗೆ ಅಡ್ಡಗಟ್ಟೆ ಹಾಕಿ ಪ್ರವಾಹವನ್ನು ನಿಲ್ಲಿಸಿರುತ್ತಾರೆಂದು ವದಂತಿ ಇದೆ. ಸರಕಾರದವರು ಕೂಡಲೇ ಗಮನಕೊಟ್ಟು ಯಾತ್ರಾರ್ಥಿಗಳ ಕೃತಜ್ಞತೆಗೆ ಪಾತ್ರರಾಗಬೇಕಾಗಿದೆ. ಬಡಬಗ್ಗರಿಗೆ ಅನ್ನಹಾಕುವುದಕ್ಕಾಗಿ ಒಂದುನೂರು ರೂಪಾಯಿ ದೇವಸ್ಥಾನದ ಹಣದಿಂದ ಖರ್ಚಾಗುತ್ತಾ ಇದೆ. ಇದರಲ್ಲಿ ಪಾರುಪತ್ತೆಗಾರರು ಬ್ರಾಹ್ಮಣಸಂತರ್ಪಣೆಗೆಂದು 25 ರೂಪಾಯಿಗಳು ತೆಗೆದುಕೊಳ್ಳುತ್ತಾರೆ. ಈ ಜಾತ್ರೆಗೆ ಒಬ್ಬ ಬ್ರಾಹ್ಮಣನಾದರೂ ಬರುವುದಿಲ್ಲ. ಬ್ರಾಹ್ಮಣ ಸಂತರ್ಪಣೆಮಾಡಬೇಕೆಂದು ಸರ್ಕಾರದ ಅಪ್ಪಣೆಯೂ ಆಗಿರುವುದಿಲ್ಲ. ಸರಿಯಾದ ಧರ್ಮದರ್ಶಿಗಳು ನಿಯಮಿತರಾಗಿಲ್ಲವಾದುದರಿಂದ ಆಡಳಿತವೆಲ್ಲಾ ಪಾರುಪತ್ತೆಗಾರರ ಸ್ವೇಚ್ಛಾಪ್ರವರ್ತನೆಗೊಳಪಟ್ಟಿರುತ್ತದೆ. ದೇವಸ್ಥಾನದ ಪಾರುಪತ್ತೆಗಾರರು ಅನ್ಯಮತಸ್ಥರಾದುದರಿಂದ ಇಲ್ಲಿನ ಕಾರ್ಯಕ್ರಮಗಳು ಸರಿಯಾಗಿರುವುದಿಲ್ಲ. ಈ ಪಾರುಪತ್ತೆಗಾರರು ದೇವಸ್ಥಾನದ ಆವರಣದೊಳಗಿರುವ ಒಂದು ಕಲ್ಲುಮಂಟಪದೊಳಕ್ಕೆ ತಮ್ಮ ಮನೆಯಿಂದ ಬಾಗಿಲುಮಾಡಿಕೊಂಡು ಆವರಣದಲ್ಲಿಯೂ ಮಂಟಪದಲ್ಲಿಯೂ ಹೇಸಿಗೆಮಾಡುತ್ತಾ ಮಂಟಪದಲ್ಲಿ ಗುಂಡಿಮಾಡಿರುತ್ತಾರೆ. ಇದರಿಂದ ಮಂಟಪವು ಬಿದ್ದುಹೋಗುವಸ್ಥಿತಿಯಲ್ಲಿರುತ್ತದೆ. ಮಂಟಪದ ಹಕ್ಕುದಾರರು ಅನೇಕಸಾರಿ ಅರ್ಜಿಗಳನ್ನು ಬರೆದುಕೊಂಡಿರುತ್ತಾರೆ. ಈವರಿಗೂ ಯಾವ ಫಲವೂ ದೊರೆಯಲಿಲ್ಲ. ಲೇಟ್ ಡೆ॥ ಕ॥ ಮ॥ ಜೈಹಿರೋದ್ದೀನ್‍ಮಕ್ಕಾಸಾಹೇಬರವರು ದೇವಸ್ಥಾನದ ಇನ್ಸ್ಪೆಕ್ಷನ್ ಕಾಲದಲ್ಲಿ ಸದರಿ ಸ್ಥಳವನ್ನು ಪರಾಂಬರಿಸಿ ಪಾರುಪತ್ತೆಗಾರನಿಗೆ ಜುಲ್ಮಾನೆಹಾಕಿ ತಕ್ಷಣವೇ ಬಾಗಿಲುಮುಚ್ಚಬೇಕೆಂದು ದೇವಸ್ಥಾನದ ಇನ್ಸ್ಪೆಕ್ಷನ್ ಬುಕ್ಕಿನಲ್ಲಿ ಬರೆದಿರುತ್ತಾರೆ. ಹಿಂದಿನ ಅಮಲ್‍ದಾರರು ಪಾರುಪತ್ತೆಗಾರರ ದಾಕ್ಷಿಣ್ಯಕ್ಕೊಳಪಟ್ಟು ಮೇಲಿನವರ ಅಪ್ಪಣೆಯನ್ನು ಜಾರಿಗೆ ತರಲಿಲ್ಲ. ಈಗಿನ ಅಮಲ್‍ದಾರ್ರವರಿಗೆ ದೇವಸ್ಥಾನದ ಇನ್ಸ್ಪೆಕ್ಷನ್ ಬುಕ್ಕು ಗಮನಕ್ಕೆ ಬಂದಂತೆಯೇ ಕಾಣುವುದಿಲ್ಲ. ರಥೋತ್ಸವಕಾಲದಲ್ಲಿ ಪುಣ್ಯಾಹಗಣಪತಿ ಪೂಜೆ ಮುಂತಾದ ಕಾರ್ಯಗಳನ್ನು ಮಾಡತಕ್ಕ ವೀರಶೈವ ಮಠದ ಪುರೋಹಿತರಿಗೆ ಸಲ್ಲಬೇಕಾದ ಮೊಬಲಗನ್ನು ಪಾರುಪತ್ತೆಗಾರರು ಪಾವತಿಮಾಡುವುದೇ ಇಲ್ಲ. ಇತರ ನೌಕರಮಾನೇರು ಸಹಾ ತಮ್ಮ ತಲಬು ಸರಿಯಾಗಿ ಪಾವತಿಯಾಗುವುದಿಲ್ಲವೆಂದು ಗೊಣಗುಟ್ಟುತ್ತಾರೆ. ಪಾರುಪತ್ತೆಗಾರರು ಅನ್ಯಮತಸ್ಥರಾದುದರಿಂದ ಒಳಗಡೆಯಲ್ಲಿ ನಡೆಯುವ ಸೇವಾಸತ್ಕಾರಗಳನ್ನು ನೋಡಿಕೊಳ್ಳಲು ಆಗುವುದಿಲ್ಲ. ಇದೆಲ್ಲಾ ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೆ ತಿಳಿಯಬಂದು ಸದರಿ ಸಭೆಯಲ್ಲಿ ಭಾಷಣಮಾಡಿದಾಗ್ಗೆ ಸರಕಾರದವರು ಸರಿಯಾದ ಏರ್ಪಾಡುಮಾಡಿಕೊಡುವುದಾಗಿ ಅಪ್ಪಣೆಯಾದಂತೆ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಕುಣಿಗಲ್ ತಾ॥ ವೀರಶೈವ ಪ್ರಾಂತಿಕ ಸಭೆಯು ಕಳೆದ ಆಗಸ್ಟ್ ತಿಂಗಳಲ್ಲಿ ನಡೆದಾಗ್ಗೆ ಈ ದೇವಸ್ಥಾನದ ವ್ಯವಸ್ಥೆ ವಿಷಯಗಳು ಚರ್ಚೆಯಾಗಿ ಈ ದೇವಸ್ಥಾನಕ್ಕೆ ವೀರಶೈವ ಮಠದ ಪಾರುಪತ್ತೆಗಾರನನ್ನು ನಿಯಮಿಸಬೇಕೆಂದು ತೀರ್ಮಾನವಾಗಿ ಸರಕಾರಕ್ಕೆ ವರದಿಯಾದ್ದರ ಮೇಲೆ ಗೌರ್ನಮೆಂಟಿನವರೂ ಅನುಮೋದಿಸಿದರು. ಸರಕಾರದ ಆರ್ಡರಿನಂತೆ ಈಗಿನ ಅಮಲ್‍ದಾರರು ಅನುಷ್ಠಾನಕ್ಕೆ ತಾರದೆ, ಪಾರುಪತ್ತೆಗಾರರಿಂದ ನ್ಯಾಯವಿರುದ್ಧವಾದ ತಕರಾರುಗಳನ್ನು ಅಂಗೀಕರಿಸಿಕೊಂಡು ಅದನ್ನೇ ಪುಷ್ಟೀಕರಿಸಿ ಸರಕಾರಕ್ಕೆ ವರದಿಮಾಡಿರುತ್ತಾರೆ. ಇದರಿಂದ ತನಗೆ ಹಕ್ಕು ಸ್ಥಿರವಾಯಿತೆಂದು ಪಾರುಪತ್ತೆಗಾರರು ಹೇಳಿಕೊಳ್ಳುತ್ತಾರೆ. ಈ ದೇವಸ್ಥಾನವು ವೀರಶೈವರ ಮುಖ್ಯಯಾತ್ರಾಸ್ಥಳವಾಗಿಯೂ ಎಲ್ಲಾ ಉತ್ಪತ್ತಿಯೂ ವೀರಶೈವರ ದ್ರವ್ಯವಾಗಿಯೂ ಇರುತ್ತದೆ. ಇಂಥಾ ಸ್ಥಳದಲ್ಲಿ ಎಷ್ಟು ಅನರ್ಥಗಳು ನಡೆಯುತ್ತವೆಂಬುದನ್ನು ಪ್ರತಿಯೊಬ್ಬ ವೀರಶೈವನೂ ಗಮನಿಸಬೇಕಾಗಿದೆ. ಮುಖ್ಯವಾಗಿ ನ್ಯಾಯಪಕ್ಷಪಾತಿಗಳೂ ಮತಾಭಿಮಾನಿಗಳೂ ಆದ ನಮ್ಮ ತುಮಕೂರು ಅಡ್ವೊಕೇಟ್ ಮ॥ ಜಿ. ರುದ್ರಪ್ಪನವರು ಸರಕಾರದವರಲ್ಲಿ ಇಲ್ಲಿನ ವಿದ್ಯಮಾನಗಳನ್ನೆಲ್ಲಾ ಅರಿಕೆಮಾಡಿ ಕ್ರಮಪಡಿಸುತ್ತಾರೆಂದು ನಂಬಿ ನಿರೀಕ್ಷಿಸುವ,

ಒಬ್ಬ ಭಕ್ತ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

8 ನೆಯ ಪ್ರಕರಣ.

ಆತ್ಮಹತ್ಯೆನಡೆಯದಿದ್ದರೂ ಅಪ್ರಯತ್ನದಿಂದ ಒಂದುಪ್ರಯೋಜನಮಾತ್ರವಾಯಿತು. ಚುಟ್ಟದಚೂರನ್ನು ಸೇದುವುದನ್ನೂ, ಸಿಗರೇಟನ್ನು ಕೊಂಡುಕೊಳ್ಳಲು ಸೇವಕನ ಜೇಬಿನಿಂದ ದುಡ್ಡು ಕದಿಯುವುದನ್ನೂ ನಾವು ಬಿಟ್ಟುಬಿಟ್ಟೆವು. ಆತ್ಮಹತ್ಯಾಪ್ರಯತ್ನದಿಂದ ಆ ದುರ್ವ್ಯಸನವು ತಪ್ಪಿಹೋಯಿತು. ನಾನು ದೊಡ್ಡವನಾದಮೇಲೆ ಚುಟ್ಟ ಸಿಗರೇಟು ಸೇದುವ ಅಭಿಲಾಷೆಯೆಂದಿಗೂ ಹುಟ್ಟಲಿಲ್ಲವಷ್ಟೇ ಅಲ್ಲದೆ ಅದು ಬಹುನೀಚವೂ, ಅಸಹ್ಯವೂ, ಹಾನಿಕರವೂ ಎಂದು ತೋರಿ ದೂಷಿಸುವಂತಾಗಿರುವುದು. ಪ್ರಪಂಚದ ಅನೇಕ ಜನರು ಏತಕ್ಕಾಗಿ ಈ ಧೂಮಪಾನಮಾಡಲಪೇಕ್ಷಿಸುವರೆಂಬುದರ ಕಾರಣವನ್ನು ಇಂದಿಗೂ ಗ್ರಹಿಸಲಾರೆನು. ಈಗ ರೈಲುಬಂಡಿಯಲ್ಲಿ ಬಹುಮಂದಿ ಚುಟ್ಟ ಸಿಗರೇಟನ್ನು ಸೇದುವರಾದುದರಿಂದ ನಾನು ಅವರಕೂಡ ಕೂತಿರಲಾರೆನು. ಏಕೆಂದರೆ, ಆ ಧೂಮದಿಂದ ನನ್ನ ಉಸಿರುಕಟ್ಟಿಹೋಗುತ್ತದೆ.

ಸ್ವರ್ಣಾಪಹಾರ.

ನಾನು 12-13 ನೇ ವರ್ಷವಯಸ್ಸಿನವನಾಗಿರುವಾಗಲೇ ಈ ಚುಟ್ಟದ ಕಳ್ಳತನಮಾಡಿದೆನು. 15 ವರ್ಷವಯಸ್ಸಿನವನಾದಾಗ ಅದಕ್ಕಿಂತಲೂ ದೊಡ್ಡ ಕಳ್ಳತನವನ್ನು ಮಾಡಿದೆನು. ನನ್ನ ಅಣ್ಣನು ಮಾಂಸಾಹಾರಕ್ಕಾಗಿ [illegible] ಹೊಂದಿದ್ದನು. ಅದಕ್ಕಾಗಿ ಅವನು 25 ರೂಪಾಯಿಸಾಲ ಕೊಡಬೇಕಾಗಿದ್ದಿತು. ಅದನ್ನು ತೀರಿಸುವ ಬಗೆ ಹೇಗೆ? ಅವನಲ್ಲಿ ಒಂದುಘನವಾದ ಕಡಗವಿದ್ದಿತು. ಅದರಲ್ಲಿ ಒಂದುತುಂಡನ್ನು ಕತ್ತರಿಸಿಕೊಂಡು ವಿಕ್ರಯಿಸಿ ಬಂದ ರೂಪಾಯಿನಿಂದ ಸಾಲತೀರಿಸಬೇಕಾಗಿಬಂದಿತು. ನಾನು ಆ ಅಭಿಪ್ರಾಯವನ್ನು ಅನುಮೋದಿಸಿದೆನು. ಅದರಂತೆ ಆ ಬಂಗಾರದ ಮುರುಕನ್ನು ಮಾರಿಬಂದ ದುಡ್ಡಿನಿಂದ ಬಾಕಿಸಾಲವನ್ನು ತೀರಿಸಿದೆವು. ಆದರೆ ಅದು ನನಗೆ ಬಹಳ ದುಷ್ಕೃತ್ಯವಾಗಿತೋರಿತು. ಇನ್ನು ಎಂದೆಂದಿಗೂ ಕಳ್ಳತನ ಮಾಡಕೂಡದೆಂದೂ, ಈ ಸಂಗತಿಯನ್ನು ನನ್ನ ತಂದೆಗೆ ತಿಳಿಸಬೇಕೆಂದೂ ನಾನು ನಿರ್ಧರಿಸಿಕೊಂಡೆನು. ಆದರೆ ನನಗೆ ಅಷ್ಟು ಧೈರ್ಯವಿರಲಿಲ್ಲವು. ನಾನು ಹಾಗೆ ಹೇಳಿದರೆ ತಂದೆಯು ನನ್ನನ್ನು ದಂಡಿಸುತ್ತಾರೆಂಬ ಭಯದಿಂದಲ್ಲವು. ಏಕೆಂದರೆ, ನನಗೆ ಅಂತಹ ಭಯವೇ ಇರಲಿಲ್ಲವು. ಅಲ್ಲದೆ ನನ್ನ ತಂದೆಯು ಯಾವಾಗಲೂ ಹೊಡೆದುದಿಲ್ಲವು. ಆದರೆ ಅವರ ಮನಸ್ಸಿಗೆ ಬಹಳವ್ಯಾಕುಲವಾಗುತ್ತದೆಂಬ ಭಯಮಾತ್ರ ನನಗಿದ್ದಿತು. ನಿಜವನ್ನು ಹೇಳಿದ ಹೊರತು ಪಾಪಪರಿಹಾರವಾಗುವುದಿಲ್ಲವೆಂದು ನನ್ನ ಅಭಿಪ್ರಾಯವು.

ತಂದೆಗೆ ಪತ್ರಬರೆದುದು.

ಬಾಯಿಮಾತಿನಲ್ಲಿ ಹೇಳಲಾರದೆ ಕಾಗದದಮೇಲೆ ಕ್ಷಮಾಪಣೆಯನ್ನು ಕೋರಿ ಎಲ್ಲ ಸಂಗತಿಯನ್ನೂ ಸಂಪೂರ್ಣವಾಗಿ ಬರೆದುಕೊಡಬೇಕೆಂದು ನಿರ್ಧರಿಸಿ ಆಪ್ರಕಾರ ಬರೆದು ನಾನೇ ಸ್ವಯವಾಗಿ ತಂದೆಗೆ ಕೊಟ್ಟೆನು. ನಿಶ್ಚಯಸಂಗತಿಯೆಲ್ಲವನ್ನೂ ಪೂರ್ತಿಯಾಗಿ ಬರೆದು ಕಠಿಣವಾಗಿ ಶಿಕ್ಷಿಸಬೇಕೆಂದು ಕೇಳಿಕೊಂಡಿದ್ದೆನು. ನಾನು ಮಾಡಿದ ತಪ್ಪಿಗೆ ತಾವು ವ್ಯಾಕುಲಪಡಕೂಡದೆಂದು ಪ್ರಾರ್ಥಿಸಿದ್ದೆನು. ಇನ್ನು ಮುಂದೆ ನಾನು ಎಂದಿಗೂ ಕಳ್ಳತನವನ್ನು ಮಾಡುವುದಿಲ್ಲವೆಂದು ಬರೆದಿದ್ದೆ. ಆಗ ನನ್ನ ತಂದೆಯು ಮೂಲವ್ಯಾಧಿಯಿಂದ ಬಹಳ ಬಾಧೆಪಡುತ್ತ ಒಂದುಮಂಚದಮೇಲೆ ಮಲಗಿದ್ದರು. ನಾನು ಅದಕ್ಕೆದುರಾಗಿ ಕೂತಿದ್ದು ಆ ಕಾಗದವನ್ನು ತಂದೆಗೆ ಕೊಟ್ಟೆನು. ಆಗ ನನ್ನ ಕೈಯೂ, ಶರೀರವೂ ಗಡಗಡನೆ ನಡುಗುತ್ತಿದ್ದುವು.

ಅಪಾರವಾದ ವ್ಯಸನವು.

ನನ್ನ ತಂದೆಯೆದ್ದು ಕುಳಿತುಕೊಂಡು ಕಾಗದವನ್ನು ಮೊದಲಿಂದ ಕಡೆಯವರೆಗೋದಿದರು. ಅವರ ಕಣ್ಣುಗಳಿಂದ ಪಟಪಟನೆ ನೀರುಸುರಿದಿತು. ಅವರು ಸ್ವಲ್ಪಹೊತ್ತು ಕಣ್ಣುಗಳನ್ನು ಮುಚಿಕೊಂಡು ಆಲೋಚಿಸಿ ನನ್ನ ಕಾಗದವನ್ನು ಹರಿದುಬಿಸಾಡಿ ಮರಳಿ ಮಲಗಿಕೊಂಡರು. ಅವರ ಪರಿತಾಪವನ್ನು ನೋಡಿ ನನಗೂ ದುಃಖಬಂದಿತು. ನಾನು ಗಟ್ಟಿಯಾಗಿ ಅತ್ತುಬಿಟ್ಟೆನು. ಆ ಸಂಗತಿಯು ನನಗೆ ಈಗಲೂ ಕಣ್ಣಿನಲ್ಲಿಕಟ್ಟಿದಂತಿದೆ. ನಾನು ಚಿತ್ರಗಾರನಾಗಿದ್ದಲ್ಲಿ ಅದನ್ನು ಸರಿಯಾಗಿ ಬರೆದಿಡುತ್ತಿದ್ದೆನು.

ಪಾಪವಿಮೋಚನೆ.

ಪ್ರೇಮಾಧಿಕ್ಯದಿಂದ ಹುಟ್ಟಿದ ನನ್ನ ತಂದೆಯ ದುಃಖದಿಂದಲೇ ನನ್ನ ಪಾಪವಿಮೋಚನೆಯಾಯಿತು. ನನ್ನ ಹೃದಯಕಲ್ಮಷವು ಹೋಯಿತು. ಆ ಪ್ರೇಮವು ಬರೀ ಅನುಭವೈಕವೇದ್ಯವೇ ಆಗಿದ್ದಿತು. ಅಹಿಂಸಾಧರ್ಮಕ್ಕೆ ನನಗೆ ಅದೊಂದು ಮುಖ್ಯೋಪದೇಶವಾಗಿದ್ದಿತು. ಆಗ ನಾನು ಅದು ಕೇವಲ ಪಿತೃಪ್ರೇಮವೆಂದೇ ತಿಳಿದಿದ್ದೆನಲ್ಲದೆ ಅದು ಬರೀ ಅಹಿಂಸೆಯೇ ಎಂದು ಈಗ ನಾನು ಗ್ರಹಿಸಿಕೊಂಡಿರುವೆನು. ಅಂತಹ ಅಹಿಂಸೆಯನ್ನು ಎಂತಹವರು ಕೂಡ ಅವಲಂಬಿಸಿದರೆ ಅದು ಎಲ್ಲವನ್ನೂ ಮಾರ್ಪಡಿಸುವುದು. ಅದರ ಶಕ್ತಿಯು ಅಪಾರವಾದುದು. ಇಂತಹ ದಿವ್ಯವಾದ ಪ್ರಶಾಂತಿಯು ನನ್ನ ತಂದೆಗೆ ಯಾವಾಗಲೂ ಇರಲಿಲ್ಲ. ಅದುಕಾರಣ ಅವರು ಕೋಪದಿಂದ ಬಯ್ಯುವರೋ, ಹೊಡಿಯುವರೋ, ತಮ್ಮ ತಲೆಯನ್ನು ಚಚ್ಚಿಕೊಳ್ಳುವರೋ ಎಂದು ನಾನು ತಿಳಿದಿದ್ದೆನು. ಆದರೆ ನಾನು ನಿಜವನ್ನು ಪೂರ್ತಿಯಾಗಿ ತಿಳಿದಿದ್ದುದರಲ್ಲಿ ಅವರಿಗೆ ಅಪಾರವಾದ ಮನಶ್ಶಾಂತಿಯುಂಟಾಗಿದ್ದಿತು. ನನ್ನ ಕ್ಷಮಾಪಣೆಯನ್ನು ಗ್ರಹಿಸಲು ನನ್ನ ತಂದೆಯೇ ಅರ್ಹರಾದ ಪ್ರಯುಕ್ತ ನಾನು ನಿಜವೆಲ್ಲವನ್ನೂ ತಿಳಿಸಿ ಇನ್ನು ಮುಂದೆ ಇಂತಹ ದುಷ್ಕೃತ್ಯವನ್ನು ಮಾಡುವುದಿಲ್ಲವೆಂದು ವಾಗ್ದಾನಮಾಡುವುದೇ ಪವಿತ್ರವಾದ ಪಶ್ಚಾತ್ತಾಪವಾದುದರಿಂದ ನನ್ನ ತಂದೆಗೆ ನನ್ನ ಮಾತಿನಲ್ಲಿ ನಂಬಿಕೆಯುಂಟಾಯಿತು, ಮತ್ತು ನನ್ನಮೇಲೆ ಅವರಿಗೆ ಪ್ರೇಮವುಕೂಡ ಹೆಚ್ಚಾಯಿತು.

9 ನೆಯ ಪ್ರಕರಣ.

ತಂದೆಯ ಮರಣವು ಮತ್ತು ನನಗುಂಟಾದ ಮಹಾವಮಾನವು.

ನನಗೆ 16ನೇ ವರ್ಷವಯಸ್ಸು ಪ್ರಾರಂಭವಾಯಿತು. ನನ್ನ ತಂದೆಯು ಮೂಲವ್ಯಾಧಿಯಿಂದ ಬಹಳ ಬಾಧೆಪಡುತ್ತಿದ್ದು ಮಂಚಬಿಟ್ಟು ಇಳಿಯುತ್ತಿರಲ್ಲಿಲ್ಲ. ನಾನೂ ನನ್ನ ತಾಯಿಯೂ ಒಬ್ಬ ವೃದ್ಧಸೇವಕನನ್ನು ತಂದೆಯ ಉಪಚಾರಕ್ಕಾಗಿ ನಿಯಮಿಸಿದ್ದೆವು. ಗಾಯಕ್ಕೆ ಕಟ್ಟನ್ನುಕಟ್ಟಿ ಔಷಧಿಯನ್ನು ಕೊಡುವುದು. ಅವಸರವಾದಾಗ ಮನೆಯಲ್ಲೇ ಔಷಧವನ್ನು ಮಾಡುವುದು ಮೊದಲಾದ ಕಾರ್ಯಗಳನ್ನು ನಾನೇ ಮಾಡುತ್ತಿದ್ದೆನು. ಪ್ರತಿದಿನವೂ ರಾತ್ರಿವೇಳೆ ನಾನು ನನ್ನ ತಂದೆಯ ಕಾಲುಗಳನ್ನು ಹಿಸಿಗಿ ಅವರಿಗೆ ನಿದ್ರೆಹತ್ತಿದಮೇಲೆ ಹೋಗಿ ಮಲಗಿಕೊಳ್ಳುತ್ತಿದ್ದೆನು. ನಾನು ಹಾಗೆ ಪೂರ್ಣಭಕ್ತಿಯಿಂದಲೂ, ಪ್ರೇಮದಿಂದಲೂ ಪಿತೃಸೇವೆಮಾಡುತ್ತಿದ್ದೆನು. ಈ ವಿಷಯದಲ್ಲಿ ನಾನು ಯಾವಾಗಲೂ ಅಶ್ರದ್ಧೆಮಾಡಿದವನೇ ಅಲ್ಲ. ದಿನಚರ್ಯವು ಪಾಠಶಾಲೆ ಪಿತೃಸೇವೆ ಎಂದು ಮೂರುಭಾಗಗಳನ್ನಾಗಿ ನನ್ನ ಕಾಲವನ್ನೆಲ್ಲಾ ವಿಭಾಗಿಸಿಕೊಂಡಿದ್ದೆನು. ತಂದೆಯು ಸಮ್ಮತಿಸಿದಮೇಲೆ ಮಾತ್ರ ಸಾಯಂಕಾಲದಲ್ಲಿ ಬೇಂಟಗೆ ಹೋಗುತ್ತಿದ್ದೆನು.

ಪತ್ನಿಯು ಗರ್ಭವತಿಯಾದುದು.

ಆಗಲೇ ನನ್ನ ಪತ್ನಿಯು ಮೊದಲನೇಸಾರಿಗೆ ಗರ್ಭಿಣಿಯಾಗಿದ್ದಳು. ಅದು ನನಗೆ ಬಹಳ ಅವಮಾನಕರವಾಗಿ ಕಂಡುಬಂದಿತು. ನಾನು ವಿದ್ಯಾರ್ಥಿಯಾಗಿದ್ದೂ ಸ್ತ್ರೀಸಂಭೋಗಬಿಡದಿದ್ದುದೊಂದು ಅವಮಾನವು. ಪಿತೃಭಕ್ತಿಯುಳ್ಳವರಲ್ಲೆಲ್ಲಾ ಶರ್ವಣನು ಅಗ್ರಗಣ್ಯನೆಂದು ನಾನು ಭಾವಿಸಿದ್ದೆನಾದರೂ ನನ್ನ ಕಾಮಾಂಧಕಾರಾಧಿಕ್ಯವು ತಂದೆತಾಯಿಗಳ ಸೇವೆಗೂ, ವಿದ್ಯಾಸಂಗಕ್ಕೂ ಅಡಚಣೆಯಾಗಿದ್ದುದು ಮತ್ತೊಂದು ಅವಮಾನವು. ಗರ್ಭಿಣಿಸ್ತ್ರೀಸಂಭೋಗಮಾಡಕೂಡದೆಂದು ವೈದ್ಯಶಾಸ್ತ್ರವೂ, ಧರ್ಮಶಾಸ್ತ್ರವೂ, ಲೋಕವ್ಯವಹಾರವೂ ಬೋಧಿಸುತ್ತಿದ್ದರೂ, ಆ ಕಾಲದಲ್ಲಿ ರಾತ್ರಿವೇಳೆ ನನ್ನ ತಂದೆಯ ಕಾಲುಗಳನ್ನು ಹಿಸುಗುತ್ತ ಕುಳಿತಿದ್ದವೇಳೆಯಲ್ಲೂ ನನ್ನ ಮನಸ್ಸು ನನ್ನ ಮಲಗುವ ಮನೆಯಕಡೆಗೇ ಎಳೆಯುತ್ತಿದ್ದಿತು. ನನ್ನ ತಂದೆಗೆ ನಿದ್ರೆಹತ್ತಿದಕೂಡಲೆ ಅಥವ ಅವರು ಹೋಗೆಂದು ಹೇಳಿದಕೂಡಲೆ ನಾನು ಅವರಿಗೆ ನಮಸ್ಕಾರಮಾಡಿ ಅತ್ಯಾತುರದಿಂದ ನನ್ನ ಮಲಗುವ ಮನೆಗೋಡಿ ಹೋಗುತ್ತಿದ್ದೆನು.

ವೈಷ್ಣವರಿಗೆ ಸಹಜವಾದ ಶೌಚವಿಧಿ.

ನನ್ನ ತಂದೆಯ ದೇಹಸ್ಥಿತಿಯು ದಿನದಿನಕ್ಕೆ ಬಹಳ ಶೋಚನೀಯವಾಗುತ್ತ ಬಂದಿತು. ಆಯುರ್ವೇದವೈದ್ಯರು, ಯುನಾನಿಹಕೀಮರು, ಅಲ್ಲದೇ ಕಾಯಿವೈದ್ಯರು ಇನ್ನೂ ಇತರರು ಬಂದು ಔಷಧವನ್ನು ಕೊಟ್ಟು ಪರೀಕ್ಷಿಸಿದರು. ಒಬ್ಬ ಆಂಗ್ಲವೈದ್ಯನುಕೂಡ ಔಷಧಿಕೊಟ್ಟು ಮೂಲವ್ಯಾಧಿಕ್ಕೆ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಹೇಳಿದನು. ಮನೆಯ ವೈದ್ಯನು ಅದಕ್ಕೆ ಸಮ್ಮತಿಸಲಿಲ್ಲ. ನನ್ನ ತಂದೆಯು ಬಹಳ ವೃದ್ಧರಾಗಿದ್ದುದರಿಂದ ಆ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆಮಾಡಕೂಡದೆಂದು ನಮ್ಮ ಮನೆಯ ವೈದ್ಯನ ಅಭಿಪ್ರಾಯವಾಗಿದ್ದಿತು. ಅವನು ಬಹಳ ಪ್ರಸಿದ್ಧನಾಗಿಯೂ, ಸಮರ್ಥನಾಗಿಯೂ ಇದ್ದುದರಿಂದ ಅವನ ಸೂಚನೆಯನ್ನು ಅಂಗೀಕರಿಸಿ ಶಸ್ತ್ರಚಿಕಿತ್ಸೆಯನ್ನು ನಮ್ಮವರು ನಿಲ್ಲಿಸಿದರು. ಶಸ್ತ್ರಚಿಕಿತ್ಸೆಗಾಗಿ ಕೊಂಡು ತಂದಿದ್ದ ಔಷಧವೆಲ್ಲವೂ ವ್ಯರ್ಥವಾಯಿತು. ಶಸ್ತ್ರಚಿಕಿತ್ಸೆಗೆ ಅಂಗೀಕರಿಸಿದ್ದಲ್ಲಿ ನನ್ನ ತಂದೆಯ ಗಾಯವು ಜಾಗ್ರತೆಯಲ್ಲಿ ವಾಸಿ ಆಗುತ್ತಿದ್ದಿತೆಂದು ನಾನು ತಿಳಿದುಕೊಂಡಿದ್ದೆನು. ಬೊಂಬಾಯಿನಲ್ಲಿದ್ದ ಒಬ್ಬ ಪ್ರಸಿದ್ಧ ಸರ್ಜನ್ನಿನಿಂದಲೇ ಶಸ್ತ್ರಚಿಕಿತ್ಸೆ ಮಾಡಿಸಲು ಆಲೋಚಿಸಲ್ಪಟ್ಟಿತ್ತು. ಕಡೆಗೆ ಅದು ನಡೆಯಲಿಲ್ಲವು. ಭಗವತ್ಸಂಕಲ್ಪವು ಬೇರೆಯಾಗಿದ್ದಿತು. ಮರಣವು ಸನ್ನಿಹಿತವಾದಾಗ ಅತ್ಯುತ್ತಮಸಾಧನವನ್ನು ಕುರಿತು ಯಾರುತಾನೆ ಆಲೋಚಿಸುವರು? ನನ್ನ ತಂದೆಯು ಬೊಂಬಾಯಿನಿಂದ ಪುನಹ ಸ್ವಗ್ರಾಮಕ್ಕೆ ಬಂದರು. ಇನ್ನು ಬದುಕುವುದಿಲ್ಲವೆಂದು ಅವರಿಗೆ ಅಧೈರ್ಯವುಂಟಾಯಿತು. ಕ್ರಮವಾಗಿ ಬಲವು ತಗ್ಗುತ್ತ ಹಾಸಿಗೆಯನ್ನು ಬಿಟ್ಟೇಳಲು ಸಹ ಶಕ್ತಿಯಿಲ್ಲವಾಯಿತು. ಆದರೂ ನನ್ನ ತಂದೆಯು ಹೇಗೋ ತಾವೇ ಎದ್ದು ಶೌಚಾದಿಗಳನ್ನು ತೀರಿಸಿಕೊಳ್ಳುತ್ತಿದ್ದರು. ಅವರಿಗೆ ವೈಷ್ಣವಸದಾಚಾರದಲ್ಲೂ ಶೌಚವಿಧಿಯಲ್ಲೂ ವಿಶೇಷ ಶ್ರದ್ಧಾಭಿಮಾನವಿದ್ದಿತು. ಅಷ್ಟು ಪರಿಶುಭ್ರತೆಯು ಅವಶ್ಯವಾಗಿದ್ದಲ್ಲಿ ಅಲ್ಲದೆ ಮಂಚದಿಂದೇಳಲು ಆಗದಿದ್ದಲ್ಲಿ ಇದ್ದಲ್ಲಿಯೇ ಸ್ನಾನ ಶೌಚಾದಿಗಳನ್ನು ತೀರಿಸಿಕೊಳ್ಳಬಹುದೆಂದು ಪಾಶ್ಚಾತ್ಯವೈದ್ಯಶಾಸ್ತ್ರಗಳು ನಮಗೆ ಬೋಧಿಸುತ್ತವೆ. ವೈಷ್ಣವರಿಗೆ ಅಂತಹ ಪರಿಶುಭ್ರತೆಯು ಮುಖ್ಯವಾದರೂ ಅಸ್ವಸ್ಥತೆಯಿಂದ ಅಷ್ಟು ಬಲಹೀನವಾಗಿರುವಾಗ್ಗೆ ನನ್ನ ತಂದೆಯು ಬಹಳ ಶ್ರಮಪಟ್ಟು ಮಾಡುತ್ತಿದ್ದುದು ನನಗೆ ಬಹಳ ಆಶ್ಚರ್ಯವಾಗಿ ಕಂಡುಬಂದಿತು.

ಅವಸಾನಕಾಲವು.

ಕಾಳರಾತ್ರಿ ಬಂದಿತು. ನನ್ನ ಚಿಕ್ಕಪ್ಪನು ಆಗ ರಾಜಕೋಟೆಯಲ್ಲಿದ್ದರು. ನನ್ನ ತಂದೆಯ ಕಾಯಿಲೆ ಹೆಚ್ಚಾಗಿರುವುದೆಂದು ತಿಳಿದು ಅವರು ರಾಜಕೋಟೆಗೆ ಬಂದರೆಂದು ನನಗೆಗೆ ಕೊಂಚ ಜ್ಞಾಪಕವಿದೆ. ನನ್ನ ತಂದೆಗೂ ಚಿಕ್ಕಪ್ಪನಿಗೂ ಸೋದರಪ್ರೀತಿಯು ಬಹಳವಾಗಿದ್ದಿತು. ನನ್ನ ಚಿಕ್ಕಪ್ಪನು ಹಗಲೂರಾತ್ರಿ ನನ್ನ ತಂದೆಯಬಳಿಯಿರುತ್ತಿದ್ದರು. ರಾತ್ರಿ ನಮ್ಮೆಲ್ಲರನ್ನು ಕಳುಹಿಸಿಬಿಟ್ಟು ಅವರು ಅಲ್ಲೇ ಮಲಗಿಕೊಳ್ಳುತ್ತಿದ್ದರು. ನನ್ನ ತಂದೆಯು ಇನ್ನು ಬದುಕುವುದಿಲ್ಲವೆಂದು ಎಲ್ಲರೂ ತಿಳಿದಿದ್ದರಾದರೂ, ಆ ರಾತ್ರಿಯೇ ಸತ್ತುಹೋಗುತ್ತಾರೆಂದು ಯಾರೂ ತಿಳಿದಿರಲಿಲ್ಲವು. ರಾತ್ರಿ 10½-11 ಗಂಟೆ ಸಮಯದಲ್ಲಿ ನಾನು ನನ್ನ ತಂದೆಯ ಕಾಲನ್ನು ಹಿಸುಗುತ್ತಿರುವಾಗ್ಗೆ ಚಿಕ್ಕಪ್ಪನು ಬಂದು ನೀನು ಹೋಗಿ ಮಲಗಿಕೊಳ್ಳುವಂತೆ ಹೇಳಿದರು. ನಾನು ಆತುರದಿಂದ ನನ್ನಕೊಠಡಿಗೋಡಿದೆನು. ನನ್ನ ಹೆಂಡತಿಯು ಮಲಗಿ ನಿದ್ರಿಸುತ್ತಿದ್ದಳು. ಇನ್ನು 6-7 ನಿಮಿಷಗಳ ತರುವಾಯ ಆಳುಬಂದು ಬಾಗಿಲನ್ನು ತಟ್ಟಿದನು. ನನಗೆ ಬಹಳ ದಿಗಿಲಾಯಿತು. "ಯಜಮಾನರಿಗೆ ಬಹಳ ಆಯಾಸವಾಗಿದೆ; ಎದ್ದು ಬನ್ನಿ" ಎಂದು ಹೇಳಿದನು. ಆಯಾಸಹೆಚ್ಚಾಗಿದೆಯೆಂದು ಕೇಳುತ್ತಲೆ ನನಗೆ ಸಂದೇಹವುಂಟಾಯಿತು. ದಿಗಿಲುಬೀಳಬೇಡವಾಗಿ ತಿಳಿಸೆಂದು ನಾನು ಹೇಳಿದೆನು. ಯಜಮಾನರು ಸತ್ತುಹೋದರೆಂದು ಅವನಂದನು.

ನನಗೆ ಆಗ ತಡೆಯಲಾರದಷ್ಟು ದುಃಖಬಂದಿತು. ಕಾಮಾಂಧಕಾರದಿಂದ ಕಣ್ಣು ಕಾಣದೆ ಹೆಂಡತಿಯ ಸಮೀಪಕ್ಕೆ ಓಡಿಹೋದ ಮಹಾಪಾಪಿಯೆಂದು ನನ್ನನ್ನು ನಾನೇ ಬಹಳವಾಗಿ ನಿಂದಿಸಿದೆನು. ಆ ಕಾಮಪಿಶಾಚವು ನನ್ನನ್ನು ಹಿಡಿದುಕೊಂಡಿರದಿದ್ದರೆ ನಾನು ಕಡೆಯವರೆಗೂ ನನ್ನ ತಂದೆಯ ಸಮೀಪದಲ್ಲೇ ಕಾದುಕೊಂಡಿರುತ್ತಿದ್ದೆನು. ಕಡೆಯಲ್ಲಿ ಸೇವೆಮಾಡುವ ಮಹಾಭಾಗ್ಯವು ನನ್ನ ಚಿಕ್ಕಪ್ಪನಿಗಲ್ಲದೆ ನನಗೆ ಲಭಿಸಲಿಲ್ಲವು. ಅವಸಾನಕಾಲವು ಪ್ರಾಪ್ತವಾಯಿತೆಂದು ನನ್ನ ತಂದೆಯು ತಿಳಿದು ಕಾಗದವನ್ನೂ ಕಡ್ಡಿಯನ್ನೂ ತರಬೇಕೆಂದು ಹೇಳಿದರು. ಅವನ್ನು ತೆಗೆದುಕೊಂಡು "ನಾನು ಇನ್ನು ಬದುಕುವುದಿಲ್ಲ. ಪ್ರಾಯಶ್ಚಿತ್ತಾದಿಗಳನ್ನು ಮಾಡಿಬಿಡುವುದು." ಎಂದು ಬರೆದು ತಿಳಿಸಿದರು. ತಮ್ಮ ಹತ್ತಿರವಿದ್ದ ತಾಯಿತವನ್ನೂ ಕತ್ತಿನಲ್ಲಿದ್ದ ಬಂಗಾರದಮಣಿಸರವನ್ನೂ ತೆಗೆದು ಬಿಸಾಡಿದರು. ಅದಾದ ಎರಡುನಿಮಿಷಗಳಲ್ಲಿ ಪ್ರಾಣವು ಹೋಯಿತು. ಈ ಸಂಗತಿಯನ್ನು ಆಳು ಹೇಳಿದ ಕೂಡಲೆ ನಾನು ತಂದೆಯ ಬಳಿಗೋಡಿ ಹೋದೆನು. ತಂದೆಯ ಪ್ರಾಣವು ಹೋಗುವಾಗಲು ಕೂಡ ಸ್ತ್ರೀಮೇಲಣ ವ್ಯಾಮೋಹವನ್ನು ನಾನು ಬಿಡಲಾರದೆ ಹೋದ ಮಹಾ ಅವಮಾನವನ್ನು ನಾನು ಎಂದಿಗೂ ಕಳೆದುಕೊಳ್ಳಲಾರದೆ ಹೋದೆನು. ನನಗೆ ತಂದೆಯ ವಿಚಾರದಲ್ಲಿ ವಿಶೇಷಭಕ್ತಿಯಿದ್ದರೂ ವಿಷಯ ವಿಹ್ವಲವು ಕೂಡ ಪ್ರಬಲವಾಗಿ ನನ್ನನ್ನು ಬಂಧಿಸಿದ್ದಿತೆಂದು ನಾನು ಯಾವಾಗಲೂ ತಿಳಿದುಕೊಂಡಿದ್ದೆನು. ನಾನು ಏಕಪತ್ನೀವ್ರತಶೀಲನಾಗಿದ್ದೆನೆಂದು ತಿಳಿದಿದ್ದೆನು. ಆ ಕಾಮಪಿಶಾಚವನ್ನು ಮಾರಣಮಾಡಲು ಬಹುಕಾಲಹಿಡಿದಿತು.

ಜನಿಸಿದ ಮಗು ಸತ್ತುಹೋಯಿತು.

ಮೊದಲನೆಯಾವರ್ತಿ ಹುಟ್ಟಿದ ಮಗುವು 3-4 ದಿನಗಳು ಮಾತ್ರ ಬದುಕಿದ್ದಿತು. ಅಂತಹ ಬಾಲ್ಯದಶೆಯ (16 ನೇ ವರ್ಷದ) ಲ್ಲಿ ಹುಟ್ಟಿದ ಮಗುವು ಬದುಕುವುದೇ? ಯುವಕಯುವತಿಯರು ನನ್ನ ಚರಿತ್ರೆಯಿಂದ ಈ ದುರ್ಗತಿಯನ್ನು ಗಮನಿಸಿ ಬುದ್ಧಿಕಲಿತುಕೊಳ್ಳುವವರಾಗಲಿ (ಎಂಗ್ ಇಂಡ್ಯಾ, ತಾ॥ 4-2-26).

೧೯೨೬ ನೆಯ ಇಸವಿ ಮಾರ್ಚಿ ತಾ॥ ೧೩ ರಿಂದ ೧೯೨೬ ನೆಯ ಇಸವಿ ಮಾರ್ಚಿ ತಾ॥ ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೭ ನೆಯ ಕ್ರೋಧನನಾಮಸಂವತ್ಸರದ ಫಾಲ್ಗುಣ ಬಹುಳ ಚತುರ್ದಶಿಯಿಂದ ಶಾಲಿವಾಹನಶಕ ೧೮೪೮ ನೆಯ ಅಕ್ಷಯಸಂವತ್ಸರದ ಅಧಿಕಚೈತ್ರ ಶುದ್ಧ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
13	[1]ಶನಿ	ಚತು	11-54	ಶತ	23-19	30
14	ಭಾನು	ಅಮಾ	6-11	ಪೂಭಾ	19-28	1
15	[2]ಸೋಮ	ಪಾ-ಉ	0-33 55-32	ಉಭಾ	16-13	2
16	ಮಂಗಳ	ತದಿ	52-16	ರೇವ	13-33	3
17	[3]ಬುಧ	ಚೌತಿ	49-23	ಅಶ್ವಿ	11-42	4
18	ಗುರು	ಪಂಚ	47-36	ಭರ	10-40	5
19	ಶುಕ್ರ	ಷಷ್ಠಿ	46-57	ಕೃತ್ತಿ	11-6	6

(1) ಮಳೆನಕ್ಷತ್ರ-ಪೂರ್ವಾಭಾದ್ರ ೪ ನೆಯಪಾದ, ಸರ್ವಾಮಾವಾಸ್ಯ. (೨) ಚಾಂದ್ರಸಂವತ್ಸರಾರಂಭ, [illegible]. (3) ಮಳೆನಕ್ಷತ್ರ-ಉತ್ತರಾಭಾದ್ರ ೧ ನೆಯ ಪಾದ.

ಮೈಸೂರು: ಶ್ರೀ. [illegible] ಅವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತ ಪ್ರಕಾಶಿತವು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕಕ್ಷಾವತಾರಾ [illegible] ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಧೀಶ್ವರಲೀಲ [illegible] ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾತಾಕುಲಂ | ಪ್ರೇಮಂ [illegible] ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಮಾರ್ಚಿ ತಾರೀಖು ೨೭ ನೆಯ ಶನಿವಾರ. [ಸಂಚಿಕೆ ೧೩

ಸತ್ಯದ ಜಗತ್ತು) ಮೊದಲು ಇದನ್ನು ಓದಿ ನಂಬಿಗೆ ಇಡಿರಿ (ಅದೇ ಏನು ನೋಡೋಣ.

ಸತ್ಯ ತಿಳಿವರೆ ಸುಖವನ್ನು ಹೊಂದುವಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ

೧೦೦೦ ರೂಪಾಯಿ ಇನಾಮು.

ಜಗಮಾನ್ಯವಾದ ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ
ವ್ಹಿ. ಎಸ್. ಕಾಪಸೆ, ಇವರ

ಅಲ್ಪ ವ್ಯಯಕ್ಕಾಗಿ ಕ್ಷೀಣತೆಯನ್ನು ಕಾಯ್ದುಕೊಳ್ಳಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರ ಪಾಕ.

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕ ಸೇವನೆಯಿಂದ ಎಲ್ಲ (ಧಾತುಜನ್ಯವಿಕಾರಗಳು ಧಾತುಕೋಶದಲ್ಲಿಯ ಉಷ್ಣತೆ ಮತ್ತು ಮುಷ್ಟಿ ಮೈಥುನದಿಂದುಂಟಾದ) ಇಂದ್ರಿಯ ಶಿಥಿಲತ್ವ, (ನಪುಂಸಕತ್ವ, ಸ್ವಪ್ನಾವಸ್ಥೆ ಮತ್ತು ಮೂತ್ರದೊಂದಿಗೆ) ಧಾತು ಹೋಗೋಣ, (ಸ್ತ್ರೀ ಸ್ಪರ್ಶವಾದ ಕೂಡಲೇ ವೀರ್ಯಸ್ಖಲನವಾಗೋಣ ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ) ಸಂತತಿಯಾಗದಿರೋಣ, ಮೆಂದುವಿನ ಅಶಕ್ತತೆ, ಕಾಲುಹರಿಯೋಣ, ಎದೆಯಲ್ಲಿ ನೋವು (ಹಾರ್ಟ ಡಿಸಿಜ), ಕಫಕ್ಷಯ, ಪಾಂಡುರೋಗ, ಮೂಲವ್ಯಾಧಿ, ನಿಸ್ತೇಜತೆ, ಎಲ್ಲ ತರದ (ಪರಮಾ ಮತ್ತು) ಗರ್ಮಿ, ರಸಾಯನ ಸೇವನೆಯಿಂದಾದ ವಿಕಾರಗಳು ಎಲ್ಲ ತರದ ತ್ವಚರೋಗ, ಜ್ವರದಿಂದುಂಟಾದ ಅಶಕ್ತತೆ ಜಾಗರಣೆಯಿಂದುಂಟಾದ ಬಾಧೆ, ವಿದ್ಯೆಯ ವ ಮೆಂದುವಿನ ಬಲದಿಂದ ಕೆಲಸ ಮಾಡುವವರ ಕ್ಷೀಣತೆ, ಕೈಕಾಲು ಸುಟ್ಟಂತೆ ಆಗೋಣ, ಉರಿಮೂತ್ರ ತಿಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರಾಭಂಗ (ಸಂತತಿ ನಷ್ಟವಾಗೋಣ), ಮೇಲಿಂದಮೇಲೆ (ಗರ್ಭಪಾತ) ಕುಸುಕಾಲಕ್ಕೆ ಹೊಟ್ಟೆಶೂಲಿ, ಗರ್ಭಾಶಯದ ವಿಕಾರ (ದಿಂದ ಸಂತತಿಯಾಗದಿರೋಣ) ಮುಂತಾದ ವೃದ್ಧ ಸ್ತ್ರೀ-ಪುರುಷರ ರೋಗಗಳು ಹೋಗಿ ವಿಶೇಷ ಹಸಿವೆಯಾಗುತ್ತದೆ. ಶೌಚಕ್ಕೆ ಸಾಫ ಆಗುತ್ತದೆ ರಕ್ತಶುದ್ಧಿಯಾಗುವದು. ವೀರ್ಯವೃದ್ಧಿಯಾಗಿ (ವೀರ್ಯವು ಘಟ್ಟಿಯಾಗುವದಲ್ಲದೆ) ಪುರುಷತ್ವವು ಹೆಚ್ಚುತ್ತದೆ. (ವೀರ್ಯಸ್ತಂಭನೆಯಾಗಿ ಕಾಮವಾಸನೆ ಹೆಚ್ಚಾಗುತ್ತದೆ.) ಈ ಪ್ರಕಾರ ಅವರ್ಣನೀಯ ಮತ್ತು ಕಾಯಂ ಧಾತುಪೌಷ್ಟಿಕ ವ ಅದರ ಸಂಬಂಧ ರೋಗನಾಶದ ಖಾತ್ರಿಯ ವ ಜಿದ್ದಿನ ಅಲ್ಪ ಬೆಲೆಯಿಂದ ಬಹಳ ಗುಣಕೊಡುವ ಪಾಕವನ್ನು ಇಡೀ ಪ್ರಪಂಚದಲ್ಲಿ ಈವರೆಗೆ ಯಾರೂ ಮಾಡಿಲ್ಲ. ಶರೀರ ಸಂಪತ್ತು ಕಾಯ್ದುಕೊಳ್ಳುವ (ಮತ್ತು ರತಿ) ಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ:—ಶತಪುಷ್ಪ, ಶಾಲಿಮಕಂದ, ಜಪಾಕಂದ, ಶಾಲ್ಮಲಿಕಂದ, ಅಶ್ವಕಂದ, ಶ್ರೀಷ್ಣಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವಿಪಾಂತರಚಾಕಂದ, ಕವಚಬೀಜ, ಸಮುದ್ರಶೋಕದ ಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರಿಬೀಜ, ನಿವಳೀಬೀಜ, ಚಿಕಣ ಪಂಚಾಂಗ, ಅಡವಿ ಎಳ್ಳಿನ ಪಂಚಾಂಗ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಬೇತಮಿಶ್ರಿ, ತಾಲೀಮಖಾನಾ, ಬೀಜಬಂದು, ಹರಡಾ ಮುಂಗಲಿಬೇದಾಣೆ, ಮರ್ದನಿ ಕಟ್ಟಿಗೆ, ಶತಾವರಿ, ಮಗಜ ಆಲದಹಾಲು, ಹತ್ತಿಕಾಸ್ತ, ವಾಳೇರಿಭಾಜಾ, ಗೋಕುರು, ಅಡವಿ ಬೆಂಡಿ ಬೇರು, ಅಭ್ರಕಸತ್ವ, ಇಸಬಗೋಲ, ಬನಾಸಲ್ಲಿಕಾಯಿ, ಸಲಾಜಿತ, ಜಾಜಿಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರ, ಕೇಸರಿ, ಯಾಲಕ್ಕಿ ರುಲ್ಲಸಕ್ಕರಿ, ಈ ಜಿನಸುಗಳಲ್ಲಿ ದಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧ ಮಾಡಕೊಟ್ಟವರಿಗೆ (೧೦೦೦) ಸಾವಿರ ರೂಪಾಯಿ ಇನಾಮುಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಊಟವಾದ ಮೇಲೆ ೨ ತೊಲಿಯ ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕವಿದ್ದಿಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. (ಸ್ತ್ರೀವರ್ಜವಿಲ್ಲ.) ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿಯ ೧ ಡಬ್ಬಿಯ ಕಿಮ್ಮತ್ತು ೫| ರೂಪಾಯಿಗೆ ಸಿಗುವದು. ೩ ಡಬ್ಬಿಗಳಿಗೆ ೧೪| ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಒಂದೇ ಡಬ್ಬಿ ಫುಕಟ ಪೋ. ವ್ಹಿ. ಪಿ. ಖರ್ಚು ಬೇರೆ.

ಸ್ಥಳ ಸಂಕೋಚಕ್ಕಾಗಿ ತಾಜಾ ಸರಟಿಫಿಕೇಟನ್ನು ಮತ್ತು ಪ್ರಶಂಸಾಪತ್ರಗಳನ್ನು ಸ್ವಲ್ಪದರಲ್ಲಿಯೇ ಕೊಡುತ್ತೇವೆ.

೧ ಸಯ್ಯದ ಅಮಿನ ಇಬ್ರಾಹಿಮ ಪೋ. ಸೂಪರಿಂಟೆಂಡೆಂಟ ಸಾಂಗಲಿ, ೨ ಬೀ. ವ್ಹಿ. ಸಹಸ್ರಬುದ್ಧೆ ಪೋ. ಇನಸ್ಪೆಕ್ಟರ ಪೋ. ಮಾಲೇಗಾಂವ ಕ್ಯಾಂಪ, ೩ ದಯಾರಾಮ ಲಾಲಜಿ ಸಬ್ ಡಿಸ್ಟ್ರಿಕ್ಟ ಕ್ಲಾರ್ಕ ಪೋ. ಕುಲಿನ, ೪ ಲಖಮಸಿ ಗೋಕಾಭಾಯಿ ಹಿನ್ನರೋಡ ಮುಂಬೈ, ೫ ವಿಷ್ಣುಕೃಷ್ಣ ಕೇಳಕರ ಪೋ. ಕಾಂಚರೋಡ, ೬ ಶನ್ಮುಖಗೌಡಾ ಪಾಟೀಲ ಅತ್ತಿಗೇರಿ, ೭ ರುಘನಾಥಜಯರಾಮ ಪೋ. ಕೊಲ್ಹಾಪುರ.

೩ ಡಬ್ಬಿಗಳ ಸೇವನೆಯಿಂದ ಮನಸ್ಸಿನಂತೆ ಪೂರ್ಣ ಗುಣವಾಗವದು. (ಬಹಳ ದಿವಸದ ಧಾತುಕ್ಷೀಣತೆ ಇದ್ದಲ್ಲಿ ೬ ಡಬ್ಬಿ ಸೇವಿಸಬೇಕು.) ಗುಣದ ಬಗ್ಗೆ ಏನೊಂದೂ ಕಾಳಜಿ ಮಾಡಬೇಡಿರಿ. ಪಾಕವನ್ನು ಹವೆಯಲ್ಲಿಡಬೇಕು.

ತಮ್ಮ ವಿಳಾಸವನ್ನು ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಸ್ಪಷ್ಟವಾಗಿ ಬರೆಯಬೇಕು.

[60—50] ಪತ್ತೆ—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು ಪೋ. ಮಿರಜ

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಸ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು [illegible] ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. [illegible]

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

[illegible] ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—36] ಪೋ. ಬಾ. ೩೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಗಾರುಡೀಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾ [illegible]ಶಬ್ದಮಂಜರಿ	೦—೮—೦	೦—೧೩—೦
ಸಟೀಕಾ [illegible]ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲೂಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	58

SHREE SITHARAGHAVA
VAIDYASALA

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‍ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್.

೧೯೨೬ನೆಯ ಇಸವಿ ಮಾರ್ಚಿ ತಾ|| ೨೭ನೆಯ ಶನಿವಾರ.

THE DEWAN-DESIGNATE OF MYSORE.

Mysore has always been held to be fortunate in having had a succession of capable and efficient Dewans, and the latest appointment to the premiership of the State after the retirement of Sir Albion Rajkumar Banerji is one than which there was no more popular announcements in recent years in Mysore. Mr. Mirza M. Ismail's career, as we have already noticed before in connection with his appointment as the Private Secretary to His Highness the Maharaja, has been a uniquely brilliant one, and he has attained his position not merely by a passionate devotion to the Sovereign but equally by his capacity for work. Doubtless his official career has not been so varied as in the case of his predecessors, but it would be wrong to say that he is going to take hold of the reigns of Government as a stranger. As Private Secretary he has been in full touch with the administration and it may as well be said that he has been administering in a way these few years. Mr. Mirza is possessed of exceptional virtues and we wonder if His Highness could have made a better choice than the present one to be the head of the administration. When the rest of the press and public were exercised over the appointment, we stated that His Highness knows what is best to be done and the matter may will be left there. To-day we are glad to find all people and all classes hailing the appointment with joy and jubilation. To his naturally serene countenance he adds such perfect and polished manners that one could find in him an ambassador fit enough for any court in the world. To his capacity for work and for taking work he brings in sound sober common sense and practical outlook that mark him out as a practical statesman. Free from attractive or alluring rhetoric he is yet eloquent in action. He has a wonderfully sympathetic and patient ear to every one, a very big asset in an administrator, which has won for him the admiration and affection of all the people he has come in contact with. One need not be surprised that such a man has won the complete confidence of His Highness. With the confidence of the Sovereign on the one hand, and the co-operation of the public, of which we may assure him, on the other, we have no doubts that Mr. Mirza's *regime* will be a very successful one. We do not deny that he will have to face the problems of the State from a different angle of view than hitherto and that the task before him in these times will by no means be a very easy one. But one thing is certain. No one is better fitted for the task than Mr. Mirza. He has a long term of office before him, being one of the youngest officers to be entrusted with the high office. We are not anxious that his career of usefulness should be limited to the Dewnship of Mysore. It would come as no surprise to us if after a certain time Mr. Mirza is translated to a place of still greater trust and wider responsibility elsewhere. His capacity, character and integrity are such that mark him out as a conspicuous figure wherever he may be. We congratulate Amin-ul-Mulk Mirza M. Ismail heartily on his appointment as Dewan and on his being the first Mussalman to be Dewan in the annals of historic Mysore. We earnestly hope that Providence will bestow on him all strength and happiness to perform the appointed task successfully and that he will be able to bring added glory and lustre to this fair province. We are grateful to our beloved Sovereign for having chosen as Premier so able and so trusted an officer, an appointment which has given the utmost satisfaction to all the subjects of His Highness.

ಮೈಸೂರಿನ ಹೊಸದಿವಾನರು.

ಸಮರ್ಥರೂ, ದಕ್ಷರೂ ಆದವರೇ ಪರಂಪರೆಯಾಗಿ ದಿವಾನಗಿರಿಗೆ ಬರುತ್ತಿರುವುದರಿಂದ ನಮ್ಮ ಮೈಸೂರುಸಂಸ್ಥಾನವು ಯಾವಾಗಲೂ ಬಹುಭಾಗ್ಯಶಾಲಿಯೆಂದು ಭಾವಿಸಲ್ಪಟ್ಟಿದೆ, ಮತ್ತು ಸರ್ ಅಲ್ಬಿಯನ್ ರಾಜಕುಮಾರ ಬಾನರ್ಜಿಯವರ ನಿವೃತ್ತಿಯ ಅನಂತರ ಸಂಸ್ಥಾನದ ಅಮಾತ್ಯಪದವಿಗೆ ಈಗ ನಿಯಮಿಸಲ್ಪಟ್ಟಿರುವವರಗಿನ್ನ ಪ್ರಜಾನುರಾಗಿಗಳಾದವರು ಇತ್ತೀಚೆಗೆ ನಿಯಮಿಸಲ್ಪಟ್ಟಿರಲಿಲ್ಲವು. ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರ ವರ್ತನವು, ಅವರು ಶ್ರೀಮನ್ಮಹಾರಾಜರವರ ಪ್ರೈವೆಟ್‌ಸೆಕ್ರೆಟರಿಯಾಗಿ ನೇಮಿಸಲ್ಪಟ್ಟ ವೇಳೆಯಲ್ಲಿ ನಾವು ಹೇಳಿರುವಂತೆ ಅಸಾಧಾರಣವಾಗಿರುವುದಲ್ಲದೆ ಈ ಮಹೋನ್ನತ ಅಮಾತ್ಯಪದವಿಯನ್ನು ಶ್ರೀಮನ್ಮಹಾರಾಜರವರ ಅಚ್ಛಿನ್ನ ಭಕ್ತರಾಗಿರುವುದರ ಮಾತ್ರದಿಂದಲ್ಲದೆ ತಮ್ಮ ಕಾರ್ಯದಕ್ಷತೆಯಿಂದಲೂ ಹೊಂದಿದುದಾಗಿರುತ್ತದೆ. ಇವರು ಹಿಂದಣ ದಿವಾನರುಗಳಂತೆ ಅನೇಕ ಉದ್ಯೋಗಗಳನ್ನು ಮಾಡಿದವರಾಗಿಲ್ಲದಿದ್ದರೂ, ಪ್ರಭುತ್ವಾಧಿಕಾರಸೂತ್ರವನ್ನು ಅನನುಭವಿಗಳಂತೆ ವಹಿಸುವವರಾಗಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಏಕೆಂದರೆ, ಇವರು ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾಗಿದ್ದು ರಾಜ್ಯಾಡಳಿತವನ್ನು ಚೆನ್ನಾಗಿಬಲ್ಲವರಾಗಿರುವರಲ್ಲದೆ, ಈವರೆಗೂ ಸ್ವತಃ ಕಾರ್ಯನಿರ್ವಾಹಮಾಡಿದವರಾಗಿರುತ್ತಾರೆ. ಮಿ|| ಮಿರ್ಜಾಇಸ್ಮಾಯಿಲ್‌ರವರು ಅಪೂರ್ವ ಯೋಗ್ಯತಾಸಂಪನ್ನರಾಗಿರುವುದರಿಂದ ಸಂಸ್ಥಾನದ ಮುಖ್ಯಾಧಿಕಾರಸ್ಥಾನಕ್ಕೆ ಇವರಗಿಂತಲೂ ಯೋಗ್ಯರಾದವರನ್ನು ಶ್ರೀಮನ್ಮಹಾರಾಜರವರು ನಿಯಮಿಸುವುದಾಗಿದ್ದಲ್ಲಿ ನಮಗೆ ಆಶ್ಚರ್ಯವೆನಿಸುತ್ತಿದ್ದಿತು. ಇತರ ಪತ್ರಿಕೆಗಳೂ, ಜನರೂ ದಿವಾನರನ್ನು ನಿಯಮಿಸುವ ವಿಚಾರವಾಗಿ ತಮ್ಮ ಮನಸ್ಸಿಗೆ ಬಂದಂತೆ ವ್ಯಾಖ್ಯಾನಮಾಡುತ್ತಿದ್ದ ವೇಳೆಯಲ್ಲಿ ಶ್ರೀಮನ್ಮಹಾರಾಜರವರು ಯಾರನ್ನು ನಿಯಮಿಸಿದಲ್ಲಿ ರಾಜ್ಯಭಾರವು ಸುಲಲಿತವಾಗಿ ನಡೆದು ಅಭಿವೃದ್ಧಿಗೆ ಬರುತ್ತದೆಂಬುದನ್ನು ಚೆನ್ನಾಗಿ ಬಲ್ಲವರಾಗಿರುವುದರಿಂದ ಆ ವಿಚಾರವನ್ನು ಅವರಿಗೇ ಬಿಟ್ಟು ಇತರರು ಮೌನವಾಗಿರುವುದುತ್ತಮವೆಂದು ನಾವು ಅಭಿಪ್ರಾಯಪಟ್ಟಿದ್ದೆವು. ಈಗ ಮಿ|| ಮಿರ್ಜಾಯವರು ದಿವಾನರಾಗಿ ನಿಯಮಿಸಲ್ಪಟ್ಟಿರುವುದಕ್ಕಾಗಿ ಅವರ ಶಾಂತಿ, ಸಮವರ್ತನೆ ಮೊದಲಾದ ಸದ್ಗುಣಗಳ ಪರಿಚಯವುಳ್ಳ ಸಮಸ್ತವರ್ಣದವರಿಗೂ ಪರಮಾನಂದವಾಗಿರುತ್ತದೆ. ಇವರು ಸ್ವಭಾವವಾಗಿ ಹಸನ್ಮುಖರಾಗಿರುವರಲ್ಲದೆ ನಯವಿನಯಾದಿ ಸದ್ಗುಣೋಪೇತರಾಗಿರುವುದರಿಂದ ಪ್ರಪಂಚದ ಯಾವ ರಾಜಸ್ಥಾನದಲ್ಲಾದರೂ ರಾಯಬಾರಿಯಾಗಿರಲು ತಕ್ಕವರೆಂದು ಹೇಳಲಭ್ಯಂತರವಿಲ್ಲವು. ಸ್ವತಃ ಕೆಲಸಮಾಡುವುದರಲ್ಲೂ, ಇತರರಿಂದ ಕೆಲಸಮಾಡಿಸುವುದರಲ್ಲೂ ಇವರು ತಮಗಿರುವ ಸಾಮರ್ಥ್ಯಕ್ಕೆ ತಕ್ಕಂತೆ ಸ್ವಸ್ಥಚಿತ್ತ ಮತ್ತು ವ್ಯಾವಹಾರಿಕ ಪರಿಜ್ಞಾನವುಳ್ಳವರಾಗಿರುವುದರಿಂದ ಸಾನುಭವರಾಜಕಾರ್ಯನಿರ್ವಾಹಕರೆಂದೆನ್ನಿಸಿಕೊಂಡಿರುವರು. ಇವರು ಮೋಹಗೊಳಿಸುವ ವಾಕ್ಚಾತುರ್ಯವಿಲ್ಲದವರಾಗಿದ್ದರೂ ಕಾರ್ಯಸಾಧನಚತುರರಾಗಿರುವರು. ಯಾವನೊಬ್ಬನು ಹೇಳುವುದನ್ನೂ ಸಾನುಭೂತಿಯಿಂದಲೂ, ಸಾವಧಾನದಿಂದಲೂ ಲಾಲಿಸುವ ಅತ್ಯಾಶ್ಚರ್ಯಕರವಾದ ಗುಣವುಳ್ಳವರಾಗಿರುವುದರಿಂದಲೇ ಇವರು ತಮ್ಮನ್ನು ಕಂಡು ಕೇಳಿದವರ ಸ್ತೋತ್ರಕ್ಕೂ ಪ್ರೀತಿಗೂ ಪಾತ್ರರಾಗಿರುತ್ತಾರೆ. ಇಂತಹ ಗುಣಾಢ್ಯರಾದವರು ಶ್ರೀಮನ್ಮಹಾರಾಜರವರ ವಿಶ್ವಾಸಕ್ಕೆ ಪಾತ್ರರಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಒಂದುಕಡೆ ಪ್ರಭುಗಳ ಭರವಸೆಯೂ, ಮತ್ತೊಂದುಕಡೆ ಪ್ರಜೆಗಳ ಸಹಕಾರವೂ ಇರುವುದರಿಂದ ಮಿ|| ಮಿರ್ಜಾಯವರ ರಾಜ್ಯಾಡಳಿತವು ಸಫಲವಾಗುತ್ತೆನ್ನುವುದರಲ್ಲಿ ಸಂದೇಹವೇ ಇಲ್ಲವು. ಈವರೆಗಿನ್ನ ಇನ್ನು ಮುಂದೆ ಮಹಾಕ್ಲಿಷ್ಟ ಸಮಸ್ಯೆಯನ್ನು ಇವರು ಪೂರ್ತಿಗೊಳಿಸಬೇಕಾಗಿರುತ್ತದಲ್ಲದೆ ಇವರ ಕಾರ್ಯನಿರ್ವಾಹವು ಖಂಡಿತವಾಗಿಯೂ ಸುಲಭವಾಗಿಲ್ಲವೆಂಬುದನ್ನು ನಾವು ಅಲ್ಲಗಳೆಯಲಾರೆವು. ಆದರೆ ಮಿ|| ಮಿರ್ಜಾಯವರಗಿನ್ನ ಈ ಅಮಾತ್ಯಪದವಿಗೆ ಉತ್ತಮರಾದವರು ಬೇರೊಬ್ಬರಿಲ್ಲವೆಂಬುದು ಖಂಡಿತ. ಇವರು ಇನ್ನೂ ಚಿಕ್ಕವಯಸ್ಸಿನವರಾದುದರಿಂದ ಈ ಮಹೋನ್ನತಪದವಿಯನ್ನು ಬಹುಕಾಲ ಅನುಭವಿಸಲು ಅವಕಾಶವಿರುತ್ತದೆ. ಇವರ ರಾಜಕಾರ್ಯನಿರ್ವಾಹಶಕ್ತಿಯೆಲ್ಲವೂ ನಮ್ಮ ಸಂಸ್ಥಾನದ ದಿವಾನಗಿರಿಯಲ್ಲೇ ಲೀನವಾಗಬೇಕೆಂಬುದು ನಮ್ಮ ಕುತೂಹಲವಲ್ಲವು. ಕೆಲಕಾಲಾನಂತರ ಸಂಸ್ಥಾನದ ಹೊರಗಡೆಯಲ್ಲಾದರೂ ಇದಕ್ಕಿನ್ನ ಮಹೋನ್ನತವೂ, ವಿಶೇಷ ಉತ್ತರವಾದಿತ್ವವೂ ಉಳ್ಳ ಪದವಿಯು ದೊರಕುವುದು ನಮಗೇನೂ ಆಶ್ಚರ್ಯವಾಗಿ ತೋರುವುದಿಲ್ಲ. ಇವರ ಕಾರ್ಯದಕ್ಷತೆ, ಪ್ರಾಮಾಣಿಕತೆ, ಸಚ್ಛೀಲಾದಿಗುಣಗಳಿಂದ ಇವರು ಎಲ್ಲಿದ್ದರೂ ಪ್ರಕಾಶಮಾನರಾಗಿರುವರು. ಅಮೀನ್-ಉಲ್-ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಈ ಮಹೋನ್ನತಪದವಿಗೆ ನಿಯಮಿಸಲ್ಪಟ್ಟಿರುವುದರಿಂದಲೂ, ಮೈಸೂರು ಚರಿತ್ರೆಯಲ್ಲೆಲ್ಲಾ ದಿವಾನಗಿರಿಗೆ ಬಂದವರಲ್ಲಿ ಇವರೇ ಮೊದಲನೆಯ ಮಹಮ್ಮದೀಯರಾಗಿರುವುದರಿಂದಲೂ ಇವರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಇವರು ತಮಗೆ ವಹಿಸಲ್ಪಟ್ಟಿರುವ ಈ ಘನೋದ್ಯೋಗವನ್ನು ಬಹಳ ದಕ್ಷತೆಯಿಂದಲೂ, ವಿಚಕ್ಷಣೆಯಿಂದಲೂ, ನಿಸ್ಪೃಹತೆಯಿಂದಲೂ ನಿರ್ವಹಿಸಿ ಈ ಸಂಸ್ಥಾನಕ್ಕೆ ಸತ್ಕೀರ್ತಿಯು ಬರುವಂತೆ ಮಾಡಿ ತಮ್ಮಲ್ಲಿ ಭರವಸೆಯನ್ನಿಟ್ಟಿರುವ ಶ್ರೀಮನ್ಮಹಾರಾಜರವರಿಗೂ, ಸಾನುಭೂತಿ ವಿಶ್ವಾಸವುಳ್ಳ ಪ್ರಜೆಗಳಿಗೂ ಸಂತೋಷವನ್ನುಂಟುಮಾಡಿ ಪೂರ್ಣಯಶಸ್ವಿಗಳಾಗುವಂತೆ ಅನುಗ್ರಹಿಸಲೆಂದು ದಯಾಮಯನಾದ ಪರಶಿವನನ್ನು ಅನನ್ಯಭಾವದಿಂದ ಬೇಡುತ್ತೇವೆ. ಅಲ್ಲದೆ ಸಮರ್ಥರೂ, ನಂಬುಗಸ್ಥರೂ ಆದ ಅಧಿಕಾರಿಯನ್ನು ತಮ್ಮ ಸಂಸ್ಥಾನದ ಅಮಾತ್ಯಪದವಿಗೆ ನಿಯಮಿಸಿ ತಮ್ಮ ಸಮಸ್ತ ಪ್ರಜಾವರ್ಗಕ್ಕೆ ಸಂಪೂರ್ಣಸಂತುಷ್ಟಿಯನ್ನುಂಟುಮಾಡಿದುದಕ್ಕಾಗಿ ನಮ್ಮ ಪ್ರಭುವರ್ಯ್ಯರಿಗೆ ನಾವು ಕೃತಜ್ಞರಾಗಿರುತ್ತೇವೆ.

AMIN-UL-MULK MIRZA MAHOMED ISMAIL, B.A., O.B.E., C.I.E., Dewan-Designate of Mysore.

ನೂತನ ದಿವಾನರಾದ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್, ಬಿ.ಎ., ಒ. ಬಿ. ಇ., ಸಿ. ಐ. ಇ. ಇವರು.

ಮಿ|| ಮಿರ್ಜಾಯವರು

ಪ್ರಸಿದ್ಧ ಪರ್ಷಿಯನ್ ಕುಟುಂಬಕ್ಕೆ ಸೇರಿದವರು. ಇವರ ತಾತಂದಿರು ನಮ್ಮ ಶ್ರೀಮನ್ಮಹಾರಾಜರವರ ತಾತಂದಿರಾದ ಕೈ|| ಮುಮ್ಮಡಿ ಕೃಷ್ಣರಾಜ ಒಡೆಯರವರ ಮಿತ್ರರೂ ಸಂಗಡಿಗರೂ ಆಗಿದ್ದರಲ್ಲದೆ, ಇವರ ತಂದೆಯವರಾದ ಲೇಟ್ ಆಗಾಜಾನ್‌ರವರು ಸಹ ಕೈ|| ಚಾಮರಾಜಒಡೆಯರವರಿಗೂ ಮಹಾರಾಣಿ ರೀಜಂಟರವರಿಗೂ, ಕೆಲಕಾಲ ಈಗಣ ಮಹಾರಾಜರವರಿಗೂ ಏಡಿಕಾಂಗ (ಅಂಗರಕ್ಷಕ) ರಾಗಿದ್ದರು. ಮಿ|| ಮಿರ್ಜಾಯವರು 1883 ರಲ್ಲಿ ಜನಿಸಿ, ಬೆಂಗಳೂರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಬಾಲ್ಯವಿದ್ಯಾಭ್ಯಾಸವನ್ನು ಮಾಡಿ ಅನಂತರ ಮೈಸೂರಿನ ರಾಯಲ್‌ಸ್ಕೂಲನ್ನು ಅಂದರೆ, ರಾಜಕುಮಾರರ ಪಾಠಶಾಲೆಯನ್ನು ಸೇರಿ 1896 ರಿಂದ 1901 ರ ವರೆಗೆ ಶ್ರೀಮನ್ಮಹಾರಾಜರವರ ಸಹಾಧ್ಯಾಯಿಗಳಾಗಿದ್ದು ಅಲ್ಲಿಂದ ಬೆಂಗಳೂರು ಸೆಂಟ್ರಲ್‌ಕಾಲೇಜನ್ನು ಸೇರಿ 1905 ರಲ್ಲಿ ಬಿ.ಎ., ಪ್ರಶಸ್ತಿಯನ್ನು ಪಡೆದರು. ಅದೇ ವರ್ಷ ಸರ್ಕಾರಿಯುದ್ಯೋಗಕ್ಕೆ ಸೇರಿ ಸ್ವಲ್ಪಕಾಲದವರೆಗೆ ಪೊಲೀಸು, ಅಕೌಂಟು ಮತ್ತು ಸರ್ವೇಶಾಖೆಗಳಲ್ಲಿ ಕೆಲಸಮಾಡಿ 1908 ರಲ್ಲಿ ಶ್ರೀಮನ್ಮಹಾರಾಜರವರ ಸಂಮುಖದ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ತೆಗೆದುಕೊಳ್ಳಲ್ಪಟ್ಟು 6 ವರ್ಷಗಳ ತರುವಾಯ ಹುಜೂರು ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟರು. 1922 ರಲ್ಲಿ ಕೌನ್ಸಿಲ್ ಮೆಂಬರರ ತರಗತಿ ಮತ್ತು ಮರ್ಯಾದೆಕೊಡಲ್ಪಟ್ಟು ಪ್ರೈವೆಟ್ ಸೆಕ್ರೆಟರಿಯಾಗಿ ಮಾಡಲ್ಪಟ್ಟರು. ಕಳೆದ 18 ವರ್ಷಗಳಿಂದಲೂ ಅಖಂಡವಾಗಿ ಪ್ರಭುಗಳ ಬಳಿಯಲ್ಲಿದ್ದುಕೊಂಡು ಮಹಾಸ್ವಾಮಿಯವರ ಮನೋಭಾವವನ್ನರಿತು ಸೇವೆಯನ್ನು ಮಾಡುತ್ತಿರುವ ಮಿ|| ಮಿರ್ಜಾಯವರ ಕಾರ್ಯದಕ್ಷತೆ, ನಿಸ್ಪೃಹತೆ, ಸ್ವಾಮಿಭಕ್ತಿ, ಸಚ್ಛೀಲ ಮೊದಲಾದ ಸದ್ಗುಣಗಳಿಗೆ ಮೆಚ್ಚಿ 1920ನೇ ಅಕ್ಟೋಬರ್ ತಿಂಗಳಲ್ಲಿ - ಅಮೀನ್-ಉಲ್-ಮುಲ್ಕ್ - ಎಂಬ ಪ್ರಶಸ್ತಿಯು ಶ್ರೀಮನ್ಮಹಾರಾಜರವರಿಂದ ದಯಪಾಲಿಸಲ್ಪಟ್ಟಿತು. ಒ. ಬಿ. ಇ., ಎಂಬ ಪ್ರಶಸ್ತಿಯು 1923 ನೇ ಜನವರಿಯಲ್ಲೂ, ಸಿ. ಐ. ಇ., ಎಂಬ ಪ್ರಶಸ್ತಿಯು 1924 ನೇ ಜೂನ್ ತಿಂಗಳಲ್ಲೂ ಆಂಗ್ಲಸಾರ್ವಭೌಮರವರಿಂದ ಕೊಡಲ್ಪಟ್ಟುವು.

ಕೈ|| ಟಿ. ಚಂದ್ರಶೇಖರಶಾಸ್ತ್ರಿಗಳು.

ಆಸ್ಥಾನವಿದ್ವಾನ್ ದಾವಣಗೆರೆಯ ತೆಲಗಿಮಠದ ಪಂಡಿತ ಚಂದ್ರಶೇಖರಶಾಸ್ತ್ರಿಗಳು ಬಹುಮೂತ್ರರೋಗಗ್ರಸ್ತರಾಗಿ ಕಳೆದ ತಾ|| 23ರಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಇವರು ಈಚೆಗೆ ಒಂದೆರಡುವೇಳೆ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ಸಮಕ್ಷ ತಮ್ಮ ಸಂಸ್ಕೃತ ಮತ್ತು ಕನ್ನಡ ವಿದ್ಯಾಪಾಂಡಿತ್ಯವನ್ನೂ ಕವಿತಾಪ್ರೌಢಿಮೆಯನ್ನೂ ಪ್ರದರ್ಶಿಸಿ ಮಹಾಸ್ವಾಮಿಯವರ ಅನುಗ್ರಹಕ್ಕೆ ಪಾತ್ರರಾಗಿ ಪಿಲ್ಲತ್ತುಗಳನ್ನು ಬಹುಮಾನಿಸಲ್ಪಟ್ಟಿದ್ದರಲ್ಲದೆ ಆಸ್ಥಾನವಿದ್ವಾಂಸಮಂಡಲಿಗೆ ಸೇರಿಸಲ್ಪಟ್ಟಿದ್ದರು. ಇವರು ಸಂಸ್ಥಾನದಲ್ಲೂ, ಬೊಂಬಾಯಾಧಿಪತ್ಯದಲ್ಲೂ, ನೈಜಾಂ ರಾಜ್ಯದಲ್ಲೂ ಅನೇಕಕಡೆ ಪುರಾಣಪಠನವನ್ನೂ ಧರ್ಮಬೋಧೆಯನ್ನೂ ಮಾಡುತ್ತ ವೀರಶೈವಮಂಡಲಿಗೆ ಮಹೋಪಕಾರಿಗಳಾಗಿದ್ದರಲ್ಲದೆ ಮತಸಂಬಂಧವಾಗಿ ಅನೇಕ ಗ್ರಂಥಗಳನ್ನೂ, ಅಥಣಿಯ ಮಹಾಶಿವಯೋಗೀಶ್ವರರ ಪುರಾಣವನ್ನೂ ರಚಿಸಿ ಸುಪ್ರಖ್ಯಾತರಾಗಿದ್ದರು. ಇಂತಹ ಉಭಯಭಾಷಾಪಂಡಿತರೂ, ಮಹಾವಾಚಾಳಿಗಳೂ, ಧೈರ್ಯಶಾಲಿಗಳೂ ಆಚಾರನಿಷ್ಠರೂ ಆದ ಶಾಸ್ತ್ರಿಗಳನ್ನು ಕಳೆದುಕೊಂಡುದು ವೀರಶೈವಮತದ ದುರ್ದೈವವೆಂದೇ ಹೇಳಬೇಕಾಗಿದೆ. ಇವರಿಗೆ ಅವಸಾನಕಾಲದಲ್ಲಿ 56–57 ವರ್ಷವಯಸ್ಸಾಗಿದ್ದಿತೆಂದು ತೋರುತ್ತದೆ. ಕೈ|| ಶಾಸ್ತ್ರಿಗಳ ಆತ್ಮಕ್ಕೆ ಶಾಶ್ವತಸುಖವೂ, ಅವರ ವಿಯೋಗದುಃಖಕ್ಕೆ ಗುರಿಯಾದ ಕುಟುಂಬಕ್ಕೆ ಮನಸ್ಸಮಾಧಾನವೂ ಉಂಟಾಗಲೆಂದು ನಾವು ಸಾನುತಾಪದಿಂದ ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ಗುಬ್ಬಿಯ ಶ್ರೀ ಚೆನ್ನಬಸವೇಶ್ವರನಾಟಕಸಭೆಯವರು ಬರುವ ಎಪ್ರಿಲ್‌ತಿಂಗಳ ಮೊದಲನೆಯ ವಾರದಲ್ಲಿ ಮಡಕೇರಿಯಲ್ಲಿ ತಮ್ಮ ಪ್ರಸಿದ್ಧನಾಟಕಗಳನ್ನು ಅಭಿನಯಿಸುವವರಾಗಿರುವರು.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅಕ್ಕಿಭೋಜ ಎಂಬ ಮದ್ಯದ ವಿಕ್ರಯವನ್ನು ತಪ್ಪಿಸಬೇಕೆಂದು ಕೆಲ ಪ್ರಜಾಪ್ರತಿನಿಧಿಗಳು ಪ್ರಾರ್ಥಿಸಿದ್ದುದರಮೇಲೆ 1926–27 ರಿಂದ ಸಂಸ್ಥಾನದ ಯಾವಭಾಗದಲ್ಲೂ ಅಕ್ಕಿಭೋಜಮದ್ಯವು ವಿಕ್ರಯಿಸಲ್ಪಡಕೂಡದೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ಗುಬ್ಬಿ ತಾಲ್ಲೂಕು ಕಾನ್‌ಫರೆನ್ಸು ಕಳೆದ ತಾ|| 22 ರಲ್ಲಿ ಸಬ್‌ಡಿವಿಜನ್ ಆಫೀಸರ್ ಮ|| ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನಡೆದು ತಾಲ್ಲೂಕಿನ ಕುಂದುಕೊರತೆಗಳ ವಿಚಾರವು ಚರ್ಚಿಸಲ್ಪಟ್ಟು ಕೆಲ ನಿರ್ಧಾರಗಳು ಮಾಡಲ್ಪಟ್ಟುವು.

ನೆನ್ನೆಯದಿವಸ ನಂಜನಗೂಡಿನಲ್ಲಿ ನಡೆದ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪಂಚರಥೋತ್ಸವಸಮಯದಲ್ಲಿ ಮಕ್ಕಳ ಪ್ರದರ್ಶನ, ವ್ಯವಸಾಯ ಮತ್ತು ನೇಯಿಗೆಯ ಕಸಬುಗಳ ಪ್ರದರ್ಶನ, ತಾಲ್ಲೂಕು ಕಾನ್‌ಫರೆನ್ಸು, ಬಹುಮಾನವಿನಿಯೋಗಾದಿಗಳು ಬಹಳ ಸಮರ್ಪಕತೆಯಿಂದ ನಡೆದುವು.

ಎರಡನೆಯ ಕೌನ್ಸಿಲರಾದ ಮಿ|| ಕೆ. ಚಾಂಡಿಯವರು ಈ ತಾ|| 20 ರಿಂದ 6 ವಾರಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಅರ್ಥಶಾಖಾ ಸೆಕ್ರೆಟರಿಯವರಾದ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮ|| ಎಂ. ಎನ್. ಕೃಷ್ಣರಾಯರು ಎರಡನೆಯ ಕೌನ್ಸಿಲರಾಗಿ ಬದಲು ನಿಯಮಿಸಲ್ಪಟ್ಟಿರುತ್ತಾರೆ.

ಚಾಮರಾಜನಗರ ತಾ|| ಬೂದಿಪಡಗದ ಕಾಡಿನಲ್ಲಿ ಒಂದು ದೊಡ್ಡ ಗಂಡುಹುಲಿಯು ಹಿಡಿಯಲ್ಪಟ್ಟು ರಾಜಧಾನಿಯ ಪ್ರಾಣಿಪ್ರದರ್ಶನಾಲಯಕ್ಕೆ ತರಲ್ಪಟ್ಟಿರುತ್ತದೆ. ಈ ಪ್ರಾಣಿಪ್ರದರ್ಶನಾಲಯದಲ್ಲಿರುವ ಎರಡು ಹೆಣ್ಣುಸಿಂಹಗಳು 3–3 ಮರಿಗಳನ್ನು ಹಾಕಿರುತ್ತವೆ. ಈ ಮರಿಗಳು ಕಾಯಪುಷ್ಟವಾಗಿದ್ದು ಸ್ವೇಚ್ಛೆಯಾಗಿ ವಿಹರಿಸಿಕೊಂಡಿರುವುದು ಪ್ರೇಕ್ಷಕರಿಗೆ ಆನಂದಕರವಾಗಿದೆ.

ಮಹಾಮಾತೃಶ್ರೀವಾಣಿವಿಲಾಸಸನ್ನಿಧಿಯವರೂ, ಶ್ರೀಮದ್ಯುವರಾಜರವರೂ ಪರಿವಾರದೊಡನೆ ಈ ತಾ|| 24 ರ ಬೆಳಗ್ಗೆ ಮೋಟಾರುಬಂಡಿಗಳಲ್ಲಿ ಉದಕಮಂಡಲಕ್ಕೆ ದಯಮಾಡಿಸಿದರು ಮತ್ತು ಚಿಕ್ಕಮಹಾರಾಣಿಯವರ ಸ್ವಾರಿಯು ಏರ್ಕಾಡಿಗೆ ಬರುವ ತಾ|| 3 ರಲ್ಲಿ ಚಿತ್ತೈಸುವುದು. ಶ್ರೀಮನ್ಮಹಾರಾಜರವರ ಸ್ವಾರಿಯೂ ಇಷ್ಟರಲ್ಲೇ ಉದಕಮಂಡಲಕ್ಕೆ ಚಿತ್ತೈಸುವುದಾಗಿ ತಿಳಿಯಬರುತ್ತದೆ.

ಕಬ್ಬಳ್ಳಿಯ ಸಾಹುಕಾರ್ ಕೆ. ಚೆನ್ನಬಸಪ್ಪನವರ ಅಕಾಲ ಮರಣಕ್ಕಾಗಿ ಅನುತಾಪಪತ್ರಗಳನ್ನು ಬರೆದಿರುವ ವಿದ್ಯಾಭ್ಯಾಸದ ಇ|| ಜನರಲ್‌ರವರಾದ ಮಿ|| ಕೆ. ಮೆಥ್ಯಾನ್‌ರವರು, ಸರ್ ಕೆ. ಪಿ. ಪುಟ್ಟಣ್ಣಸೆಟ್ಟರು, ಡಾಕ್ಟರ್ ಟಿ. ಎಸ್ ಸಿದ್ಧಪ್ಪನವರು, ಮ|| ಸಿ. ಆರ್. ಗೌಡರು ಮೊದಲಾದ ದೊಡ್ಡಮನುಷ್ಯರುಗಳಿಗೆ ಕೈ|| ಚೆನ್ನಬಸವಪ್ಪನವರ ಪುತ್ರರಾದ ಮ|| ಕೆ. ಸಿ. ಸುಬ್ಬಣ್ಣನವರು ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನು ಈ ಪತ್ರಿಕಾಮೂಲಕ ತಿಳಿಸುತ್ತಾರೆ.

ಶ್ರೀಮಜ್ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ವಾರಿಯು ಹೊಳಲ್ಕೆರೆಗೆ ಚಿತ್ತೈಸುತ್ತಿದ್ದಾಗ್ಗೆ ಮೋಟಾರುಬಂಡಿಯ ಅನಾಹುತದಿಂದ ಶ್ರೀಗಳವರ ದೇಹಕ್ಕೆ ಕೊಂಚ ಬಾಧೆಯಾಗಿದ್ದು ಚಿತ್ರದುರ್ಗದ ಡಿಸ್ಟ್ರಿಕ್ಟ್ ಮೆಡಿಕಲ್‌ಆಫೀಸರ್ ಮ|| ನಂಜುಂಡಯ್ಯನವರು ಮತ್ತು ಅ|| ಸರ್ಜನ್ ಮ|| ಲಕ್ಷ್ಮಣರಾಯರು ಬಹಳ ಶ್ರದ್ಧೆಯಿಂದ ಔಷಧೋಪಚಾರಮಾಡಿದುದರಮೇಲೆ ಮಹಾಸನ್ನಿಧಿಗೆ ಈಗ ಸಂಪೂರ್ಣಗುಣವಾಗಿರುವುದೆಂದು ತಿಳುಹಲು ಸಂತೋಷವಾಗುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮಿ|| ಟಿ. ಎಸ್. ಅಲ್ಲಿಖಾನ್‌ರವರು ಸಂಪದಭ್ಯುದಯಪತ್ರಿಕಾ ಸಂಪಾದಕರಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ವಿವಾದವನ್ನು ಬೇರೆ ಕೋರ್ಟಿಗೆ ವರ್ಗಾಯಿಸಿಕೊಡಬೇಕೆಂದು ಅಪರಾಧಿಯು ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಹಾಕಿಕೊಂಡಿದ್ದ ಅರ್ಜಿಯ ವಿಚಾರಣೆಯೂ, ಫಿರ್ಯಾದಿ ಮತ್ತು ಅಪರಾಧಿಪರ ಲಾಯರುಗಳ ಆರ್ಗ್ಯುಮೆಂಟೂ ನಡೆದು ಬೇರೆ ಕೋರ್ಟಿಗೆ ವರ್ಗಾಯಿಸಲು ಸಾಕಷ್ಟು ಕಾರಣವಿಲ್ಲವೆಂದು ಅರ್ಜಿಯು ತಿರಸ್ಕರಿಸಲ್ಪಟ್ಟು ಈ ವಿವಾದವು ಸಿಟಿಮ್ಯಾಜಿಸ್ಟ್ರೇಟರಲ್ಲೇ ನಡೆಯುವಂತಾದುದರಮೇಲೆ ಚೀಫ್ ಕೋರ್ಟಿಗೆ ಅಪೀಲ್ಮಾಡಲ್ಪಡುವುದಾಗಿರುವುದು.

ಧಾರವಾಡದಲ್ಲಿ ಪ್ರಸಿದ್ಧ ವಕೀಲರೂ, ಸ್ವಜನ ಸ್ವದೇಶ ಮತ್ತು ಸ್ವಭಾಷಾಭಿಮಾನಿಗಳೂ ಆಗಿರುವ ಮ|| ಗದಿಗಯ್ಯ ಹೊನ್ನಾಪುರಮಠ ಇವರ ಸಂಪಾದಕತ್ವದಿಂದ ನಡೆಯುತ್ತಿದ್ದು ಕೆಲ ಅನಿವಾರ್ಯದಶೆಯಿಂದ ನಿಂತುಹೋಗಿದ್ದ ಚಂದ್ರೋದಯ ಪತ್ರಿಕೆಯು ನವಚೇತನದಿಂದ ಪುನಃ ಆರಂಭಗೊಂಡಿರುತ್ತದೆಂದೂ, ಧಾರವಾಡದ ಕರ್ನಾಟಕ ಟೈಂಸ್‌ಪತ್ರಿಕೆಯ ಉಪಸಂಪಾದಕರಾಗಿದ್ದ ಮ|| ಗುಡಗುಂಟಿಯವರು ಬಿಜಾಪುರದಲ್ಲಿ ಮುಂದಾಳು ಎಂಬ ಸಾಪ್ತಾಹಿಕ ಪತ್ರಿಕೆಯನ್ನು ಆರಂಭಿಸಿ ಆ ಡಿಸ್ಟ್ರಿಕ್ಟಿನಲ್ಲಿ ಒಂದಾದರೂ ಕನ್ನಡಪತ್ರಿಕೆಯಿಲ್ಲದ ಕೊರತೆಯನ್ನು ಹೋಗಲಾಡಿಸಿರುವರೆಂದೂ ತಿಳುಹಲು ಸಂತೋಷಿಸುತ್ತೇವಲ್ಲದೆ ಈ ನೂತನಬಂಧುಗಳು ಚಿರಜೀವಿಗಳಾಗಿದ್ದು ಉದ್ದಿಷ್ಟಕಾರ್ಯಸಾಧನೆಯಿಂದ ಯಶಸ್ವಿಗಳಾಗಲೆಂದು ಮನಃಪೂರ್ವಕವಾಗಿ ಕೋರುವೆವು.

ಈ ತಾ|| 26 ರಲ್ಲಿ ರಾಜಧಾನಿಯಿಂದ ಮೇಲುಕೋಟೆಗೆ ಯಾತ್ರಿಕರನ್ನು ಕುಳ್ಳಿರಿಸಿಕೊಂಡು ಹೋಗುತ್ತಿದ್ದ ಎ. ಆರ್. ಬ್ರದರ್ಸ್‌ರವರ ಮೋಟಾರುಬಸ್ಸು ಶ್ರೀರಂಗಪಟ್ಟಣದ ಮಾರ್ಗದಲ್ಲಿ ಚಾಗನಕೆರೆ ಹುಚ್ಚೇಗೌಡರ ತೋಟದಬಳಿ ಇದಿರಾಗಿ ಬರುತ್ತಿದ್ದ ಎತ್ತಿನಬಂಡಿಗೆ ತಾಕುಬಿದುದರಿಂದ ಬಂಡಿಗೂ ಎತ್ತಿಗೂ ಅಪಾಯವಾದುದಲ್ಲದೆ ಮೋಟಾರನ್ನು ನಡಿಸುತ್ತಿದ್ದವನಿಗೂ ಪ್ರಯಾಣಿಕರಲ್ಲಿ ಯಡತೊರೆ ಬೆಂಚ್‌ಮ್ಯಾಜಿಸ್ಟ್ರೇಟರೊಬ್ಬರಿಗೂ ಪೆಟ್ಟುಬಿದ್ದಿರುವುದಾಗಿಯೂ, ಬಂಡಿಯ ಹೊರಗಡೆ ಮಡ್‌ಗಾರ್ಡಿನಮೇಲೆ ಕುಳಿತಿದ್ದ ಬಂಡಿಯನ್ನು ತೊಳೆಯುವ ಹುಡುಗನು ಪೆಟ್ಟನ್ನು ತಿಂದು ಸತ್ತುಹೋದುದಾಗಿಯೂ ಕೇಳುತ್ತೇವೆ. ದುಡ್ಡಿನಾಸೆಯಿಂದ ಮಿತಿಮೀರಿ ಜನಗಳನ್ನು ಕುಳ್ಳಿರಿಸಿಕೊಂಡು ಮನಸ್ವೀ ವೇಗವಾಗಿ ಮೋಟಾರನ್ನೋಡಿಸುವುದೂ ಇದನ್ನು ಪೊಲೀಸಿನವರು ಕಂಡರೂ ಕಾಣದಂತಿರುವುದೂ ಇಂತಹ ಅನಾಹುತಗಳಿಗೆ ಮುಖ್ಯಕಾರಣಗಳಾಗಿವೆ.

ಬೆಂಚ್‌ಮ್ಯಾಜಿಸ್ಟ್ರೇಟ್ ಕೋರ್ಟು ಮತ್ತು ಸ್ಪೆಷಲ್‌ಮ್ಯಾಜಿಸ್ಟ್ರೇಟ್‌ಕೋರ್ಟು ಇರುವ ಸ್ಥಳದಲ್ಲಿ ಅವುಗಳಿಗೆ ಸಾಕಷ್ಟು ಕೆಲಸವಿಲ್ಲದಿದ್ದರೆ ಬೆಂಚ್‌ಮ್ಯಾಜಿಸ್ಟ್ರೇಟ್ ಕೋರ್ಟನ್ನು ತೆಗೆದುಬಿಡಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರಾರ್ಥಿಸಲ್ಪಟ್ಟುದ್ದುದರಮೇಲೆ ಸರ್ಕಾರದವರು ಈ ವಿಚಾರವನ್ನು ಚೆನ್ನಾಗಿ ಪರ್ಯಾಲೋಚಿಸಿ 1926 ನೇ ಎಪ್ರಿಲ್ ತಾ|| 1 ರಿಂದ ಹಾಸನ ಡಿಸ್ಟ್ರಿಕ್ಟಿನಲ್ಲಿ ಹೊಳೇನರಸೀಪುರ, ಮತ್ತು ಸಕಲೇಶಪುರ ಈ ಸ್ಥಳಗಳಲ್ಲೂ; ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಈ ಸ್ಥಳಗಳಲ್ಲೂ; ಕಡೂರ ಡಿ|| ನಲ್ಲಿ ತರೀಕೆರೆಯಲ್ಲೂ; ತುಮಕೂರು ಡಿ|| ನಲ್ಲಿ ಮದ್ದಗಿರಿ ಮತ್ತು ತಿಪಟೂರು ಈ ಸ್ಥಳಗಳಲ್ಲೂ; ಶಿವಮೊಗ್ಗ ಡಿ|| ನಲ್ಲಿ ಸಾಗರ ಮತ್ತು ತೀರ್ಥಹಳ್ಳಿ ಈ ಸ್ಥಳಗಳಲ್ಲೂ ಇರುವ ಬೆಂಚ್‌ಮ್ಯಾಜಿಸ್ಟ್ರೇಟ್‌ಕೋರ್ಟುಗಳು ತೆಗೆದುಹಾಕಲ್ಪಡಬೇಕೆಂದೂ, ಈ ಕೋರ್ಟುಗಳಲ್ಲಿ ವ್ಯವಸ್ಥೆಯಾಗದೆ ಉಳಿದಿರುವ ಮೊಖದ್ದಮೆಗಳು ಆಯಾ ಸ್ಥಳಗಳಲ್ಲಿರುವ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನ ವಿಲೆಬಗ್ಗೆ ವಹಿಸಲ್ಪಡಬೇಕೆಂದೂ ಸರ್ಕಾರದಪ್ಪಣೆಯಾಗಿದೆ.

ಮುನಸೀಫರುಗಳಾದ ಮೆಸರ್ಸ್. ಎಚ್. ಎಂ. ಕೃಷ್ಣಸ್ವಾಮಿಯವರು ರಾಜಧಾನಿಯ 1 ನೇ ಕೋರ್ಟಿನಿಂದ ಕೋಲಾರ ಗೋಲ್ಡ್‌ಫೀಲ್ಡ್ಸಿಗೂ, ಎಚ್. ಕೆ. ವೀರಬಸವಯ್ಯನವರು ಶ್ರೀರಂಗಪಟ್ಟಣದಿಂದ ರಾಜಧಾನಿಯ ಅಡಿಷನಲ್ ಮುನ್ಸೀಫ್ ಕೋರ್ಟಿಗೂ, ಯು. ಡಿ. ನಾರಾಯಣಮೂರ್ತಿಯವರು ಅಡಿಷನಲ್ ಮುನಸೀಫ್ ಕೋರ್ಟಿನಿಂದ ಶ್ರೀರಂಗಪಟ್ಟಣಕ್ಕೂ, ಸಿ. ಸುಬ್ರಹ್ಮಣ್ಯಅಯ್ಯರ್‌ರವರು ಚೆನ್ನದಗಣೆಯಿಂದ ರಾಜಧಾನಿಯ 1 ನೇ ಮುನ್ಸೀಫ್‌ಕೋರ್ಟಿಗೂ, ಎಸ್. ರಾಮಚಂದ್ರಶಾಸ್ತ್ರಿಗಳು ನಂಜನಗೂಡಿನಿಂದ ತುಮಕೂರಿನ 1 ನೇ ಮು|| ಕೋರ್ಟಿಗೂ, ಬಿ. ರಾಮಣ್ಣನವರು ತುಮಕೂರಿನಿಂದ ರಾಜಧಾನಿಯ 2 ನೇ ಮು|| ಕೋರ್ಟಿಗೂ, ಡಿ. ರಾಘವೇಂದ್ರರಾಯರು ಚಿಕ್ಕಮಗಳೂರಿನಿಂದ ತುಮಕೂರಿನ 2 ನೇ ಮು|| ಕೋರ್ಟಿಗೂ, ಎಂ. ಎನ್. ಸುಬ್ಬಣ್ಣನವರು ದೊಡ್ಡಬಳ್ಳಾಪುರದಿಂದ ನಂಜನಗೂಡಿಗೂ, ಮಹಮ್ಮದ್ ಮುಸ್ತಫಾರವರು ನರಸಿಂಹರಾಜಪುರದಿಂದ ದೊಡ್ಡಬಳ್ಳಾಪುರಕ್ಕೂ, ಎನ್. ಶ್ಯಾಮಯ್ಯಂಗಾರರು ತುಮಕೂರು 1 ನೇ ಮು|| ಕೋರ್ಟಿನಿಂದ ಚಿಕ್ಕಮಗಳೂರಿಗೂ, ಕೆ. ಬಸವರಾಜಅರಸಿನವರು ರಾಜಧಾನಿಯ 2 ನೇ ಮು|| ಕೋರ್ಟಿನಿಂದ ನರಸಿಂಹರಾಜಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ.

ಈಗ ಅಸ್ವಸ್ಥರಾಗಿರುವ ಲಾರ್ಡ್‌ಸಿಂಹರವರು ತಮ್ಮ ದೇಹಾರೋಗ್ಯನಿಮಿತ್ತವಾಗಿ 6 ತಿಂಗಳಕಾಲ ಯುರೋಪ್ಯದೇಶಗಳಲ್ಲಿ ಸಂಚರಿಸಿಕೊಂಡು ಬರಲು ಬರುವ ಎಪ್ರಿಲ್ ತಾ|| 8 ರಲ್ಲಿ ಪ್ರಯಾಣಮಾಡುವವರಾಗಿರುವರು.

ಬ್ರೋಚ್‌ಪಟ್ಟಣವಾಸಿಯಾದ ಕನ್ನಲಾಲ್‌ಮುನ್ಷಿ ಎಂ. ಎ, ಎಲ್‌ಎಲ್.ಬಿ, ಎಂಬ ಭಾರ್ಗವಬ್ರಾಹ್ಮಣನು ಅಹಮ್ಮದಾಬಾದಿನ ಒಬ್ಬ ಶ್ರೀಮಂತ ಜೈನವಿಧವೆಯನ್ನು ವಿವಾಹಮಾಡಿಕೊಂಡನು. ಇದರಿಂದ ಅವನ ಬಂಧುಬಳಗದವರೂ ವೈದಿಕಮಂಡಲಿಯವರೂ ಅಸಮಾಧಾನಪಟ್ಟುಕೊಂಡು ಈ ನೂತನ ವಧೂವರರನ್ನು ಬಹಿಷ್ಕರಿಸಿರುವರಂತೆ.

ಇಂದೂರಿನ ಕೋಟ್ಯಧೀಶ್ವರರಾದ ಸರ್ ಹುಕುಂಚಂದ್ ಸರೂಪಚಂದ್‌ರವರು ಇಂದೂರಿಗೆ 70 ಮೈಲಿದೂರದಲ್ಲಿರುವ ಒಂದೂರಿಗೆ ವಿವಾಹಮಹೋತ್ಸವಕ್ಕಾಗಿ ಹೋಗಿದ್ದು ಹಿಂದಿರುಗಿ ಬರುವಾಗ ಕೆಲವೆಡೆ ಮೋಟಾರುಬಂಡಿಗಳ ಪ್ರಯಾಣವನ್ನು ಬದಲಾಯಿಸುವ ವೇಳೆಯಲ್ಲಿ 35,000 ರೂ. ನ ಬೆಲೆಯ ಕಂಠಾಭರಣವನ್ನು ಬಂಡಿಯಲ್ಲೇ ಮರೆತುಬಿಟ್ಟು ಬಂದಿದ್ದು ಈಗ ಅದನ್ನು ತಂದುಕೊಟ್ಟವರಿಗೆ 10,000 ರೂ. ಗಳನ್ನು ಬಹುಮಾನಿಸುವುದಾಗಿ ಪ್ರಸಿದ್ಧಪಡಿಸಿರುತ್ತಾರೆ.

ಕಲಕತ್ತಾಪಟ್ಟಣದ ಮ್ಯುನಿಸಿಪಲ್‌ಕಟ್ಟಡದಲ್ಲಿ ಕೌನ್ಸಿಲ್ ಮೀಟಿಂಗು ಆಗುವ ಕೊಠಡಿಯ ನೆಲವು ಅತ್ಯಂತ ನುಣುಪಾಗಿದ್ದುದರಿಂದ ಕಾಲುಜಾರಿಬಿದ್ದು ತನ್ನ ಬಲಗಾಲು ಊನವಾಗಿರುವುದೆಂದೂ, ಅದರ ಬಾಧೆಯಿಂದ 4 ತಿಂಗಳವರೆಗೆ ವಕೀಲಿಯನ್ನು ನಡೆಯಿಸಲು ಆಗಲಿಲ್ಲವಾಗಿ ಬಹಳ ನಷ್ಟ ಸಂಭವಿಸಿತಾದ ಪ್ರಯುಕ್ತ 10,000 ರೂಪಾಯಿನ ಪರಿಹಾರದ್ರವ್ಯವು ಬರಬೇಕೆಂದೂ ಮ್ಯುನಿಸಿಪಲ್ ಕೌನ್ಸಿಲರೂ ಹೈಕೋರ್ಟು ವಕೀಲರೂ ಆದ ನರೇಂದ್ರನಾಥಶೇಟ್‌ರವರು ಮ್ಯುನಿಸಿಪಲ್ ಕೌನ್ಸಿಲಿನಮೇಲೆ ಕಲಕತ್ತಾ ಹೈಕೋರ್ಟಿನಲ್ಲಿ ದಾವಾಮಾಡಿರುತ್ತಾರೆ. ಈ ವಿಚಾರವು ಪಂಚಾಯಿತರಿಂದ ಬಗೆಹರಿಸಲ್ಪಡುವುದಾಗಿ ವರ್ತಮಾನವಿದೆ.

ಬರೋಡಾ ಸಂಸ್ಥಾನದ ಗಾಯಕವಾಡಮಹಾರಾಜರ ಜೂಬಿಲಿಯುತ್ಸವವು ಕೆಲ ದಿನಗಳಿಗೆಳಗೆ ಅಲ್ಲಿಯ ಪ್ರಜೆಗಳಿಂದ ಅತ್ಯಂತ ವೈಭವದೊಡನೆ ನೆರವೇರಿಸಲ್ಪಟ್ಟಿತಷ್ಟೆ. ಈಚೆಗೆ ಅಲ್ಲಿಯ ಕಂದಾಯಕೌಳಿಗೆಗಳು ಹೆಚ್ಚಿಸಲ್ಪಟ್ಟುದರಿಂದ ತಮಗುಂಟಾಗಿರುವ ತೊಂದರೆಗಳನ್ನು ಕುರಿತು ಮೊರೆಯಿಟ್ಟುಕೊಂಡಾಗ್ಗೂ ಮಹಾರಾಜರವರು ಗಮನಿಸಿ ನಿವಾರಿಸದೆ ಸೀಮೆಗೆ ಪ್ರಯಾಣಸನ್ನದ್ಧರಾಗಲು ಪ್ರಜೆಗಳು ಪ್ರಕ್ಷುಬ್ಧರಾಗಿ ಮಹಾರಾಜರವರು ಹೊರಡುವ ದಿವಸ ಅಂಗಡಿಮುಂಗಟ್ಟುಗಳ ಬಾಗಿಲುಗಳನ್ನು ಮುಚ್ಚಿ ಮತ್ತು ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಹೋಗದೆ ಹರತಾಳವನ್ನು ಮಾಡಿದರಂತೆ. ವಯೋವೃದ್ಧರೂ ಜ್ಞಾನವೃದ್ಧರೂ ಆದ ಬರೋಡಾ ಮಹಾರಾಜರವರು ತಮ್ಮ ಪ್ರಜೆಗಳ ಪ್ರಾರ್ಥನೆಯನ್ನು ನಿರಾಕರಿಸಿ ಈ ಅಪರವಯಸ್ಸಿನಲ್ಲಿ ಪರದೇಶಗಮನಮಾಡಿದುದು ಉಚಿತವಾಗಿ ತೋರುವುದಿಲ್ಲವು.

ಇಂದೂರಿನ ಮಹಾರಾಜ ಹೋಲ್ಕರರವರು ಪದಚ್ಯುತರಾದ ಮೇಲೆ ಮಮತಜಬೇಗಂ ಅಮೃತಸರದ ದೊಡ್ಡಚರ್ಮವ್ಯಾಪಾರಿಯೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಅಬ್ದುಲ್‌ರಹಿಮಾನ್ ಎಂಬ ಮಹಮ್ಮದೀಯ ಯುವಕನನ್ನು ವಿವಾಹಮಾಡಿಕೊಂಡು ಸೀಮೆಗೆ ಹೋಗುವ ಪ್ರಯತ್ನದಲ್ಲಿದ್ದುದಾಗಿ ವರ್ತಮಾನವಿದ್ದಿತು. ಈಕೆಯ ಠಳುಕುಸೋಂಕಿದ ಮಹಾರಾಜನು ರಾಜ್ಯಭ್ರಷ್ಟನಾದನು; ಬೊಂಬಾಯಿನ ಶ್ರೀಮಂತ ಬಾವಲಾ ಯುವಕನು ಪರಲೋಕಗತನಾದನು; ಕೊಲೆಪಾತಕರು ನರಕಯಾತನೆಗೆ ಗುರಿಯಾದರು; ಅಮೃತಸರದ ವ್ಯಾಪಾರಿಯು ತಾನು ತೆರಬೇಕಾಗಿರುವ 3000 ರೂ. ನ ಸಾಲವನ್ನು ತೀರಿಸಲಾರದೆ ಹೋದುದರಿಂದ ಅವನ ಆಸ್ತಿಯು ಕೋರ್ಟಿನಿಂದ ಜಪ್ತಿಮಾಡಲ್ಪಟ್ಟಿತು. ಈಕೆಯ ಲಾವಣ್ಯದ ಬಲೆಗೆ ಇನ್ನೆಷ್ಟು ಪುರುಷಾಮೃಗಗಳು ಸಿಲ್ಕಿ ಎಂತೆಂತಹ ಕಷ್ಟಕ್ಕೆ ಗುರಿಯಾಗುವುವೋ ಮುಂದೆ ನೋಡಬೇಕಾಗಿದೆ.

ಗುಂಟೂರಿನ ಕಾರಾಗೃಹದಲ್ಲಿ ಬಂದಿಯಾಗಿರುವ ಒಬ್ಬ ಬ್ರಾಹ್ಮಣನಿಗೆ ಅವನ ಹೆಂಡತಿಯು ನಿತ್ಯದಲ್ಲೂ ಅನ್ನವನ್ನು ತೆಗೆದುಕೊಂಡುಹೋಗಿ ಕೊಟ್ಟು ಬರುತ್ತಿದ್ದಳು. ಆ ಬಂದಿಗಳ ಕಾವಲುಗಾರನಾಗಿದ್ದ 60 ವರ್ಷವಯಸ್ಸಿನ ಒಬ್ಬ ಮಹಮ್ಮದೀಯನು ಆಕೆಯಲ್ಲಿ ವ್ಯಾಮೋಹಿತನಾಗಿ ಒಂದುದಿವಸ ಸಾಯಂಕಾಲ ಆಕೆಯ ಮನೆಗೆ ಹೋಗಿ ನಿನ್ನ ಗಂಡನು ರಹಸ್ಯವಾಗಿ ಮಾತನಾಡಬೇಕಾಗಿರುವಪ್ರಯುಕ್ತ ನಿನ್ನನ್ನು ಕರೆದುಕೊಂಡು ಬರುವಂತೆ ಹೇಳಿದ್ದಾನಾದುದರಿಂದ ನೀನು ಕತ್ತಲೆಯಾದಮೇಲೆನನ್ನ ಕೂಡ ಗೋಪ್ಯವಾಗಿಬಂದಲ್ಲಿ ಕರೆದುಕೊಂಡು ಹೋಗುತ್ತೇನೆಂದು ಹೇಳಲು, ಆ ಬಡಪಾಯಿ ಅವನ ಮೋಸವನ್ನು ಅರಿಯದೆ ಬರುತ್ತೇನೆಂದು ಹೇಳಿ ಅವನ ಕೂಡ ಹೊರಟಳು. ಆ ಕಾವಲುಗಾರನು ಆ ಹೆಂಗುಸನ್ನು ಒಂದು ರಹಸ್ಯವಾದ ಸ್ಥಳಕ್ಕೆ ಕರೆದುಕೊಂಡುಹೋಗಿ ಆಕೆಯು ಎಷ್ಟು ಹೋರಾಡಿದರೂ ಬಿಡದೆ ಅವಳ ಮಾನಭಂಗವನ್ನು ಮಾಡಿದನು. ಅದರಿಂದ ಆಕೆಯು ಬಹಳವಾಗಿ ವ್ಯಸನಪಟ್ಟುಕೊಂಡು ಮನೆಗೆ ಬಂದು ನಡೆದ ವಿದ್ಯಮಾನವನ್ನೆಲ್ಲಾ ಸವಿಸ್ತಾರವಾಗಿ ಒಂದು ಕಾಗದದಲ್ಲಿ ಬರೆದು ಅದನ್ನು ತನ್ನ ರವಿಕೆಯಲ್ಲಿ ಬಚ್ಚಿಟ್ಟಿದ್ದು ಯಥಾಪ್ರಕಾರ ಗಂಡನಿಗೆ ಅನ್ನವನ್ನು ತೆಗೆದುಕೊಂಡು ಹೋದಾಗ ಆ ಕಾಗದವನ್ನು ಅವನಿಗೆ ಮುಟ್ಟಿಸಿದಳು. ಗಂಡನು ಅದನ್ನೋದುತ್ತಿರುವಾಗ್ಗೆ ಕಾರಾಗೃಹದ ಅಧಿಕಾರಿಯು ಅದನ್ನು ಕಿತ್ತುಕೊಂಡು ಸೂಪರಿಂಟೆಂಡೆಂಟಿಗೆ ಕೊಟ್ಟನು. ಆ ಸೂಪರಿಂಟೆಂಡೆಂಟನು ಆ ಬ್ರಾಹ್ಮಣಬಂದಿಯನ್ನು ಕರೆಯಿಸಿ ಸಂಗತಿಯನ್ನು ವಿಚಾರಿಸುತ್ತಿರುವಾಗ್ಗೆ ಅತ್ಯಾಚಾರನಡೆಯಿಸಿದ ಕಾವಲುಗಾರನು ಮರೆಯಲ್ಲಿ ನಿಂತುಕೊಂಡು ಎಲ್ಲವನ್ನೂ ಕೇಳುತ್ತಿದ್ದು ಅದೇ ಸಮಯದಲ್ಲಿ ಆ ಬ್ರಾಹ್ಮಣಬಂದಿಯ ಹೆಂಡತಿಯು ಗಂಡನಿಗೆ ಅನ್ನವನ್ನು ತೆಗೆದುಕೊಂಡುಬರಲು ಕಾವಲುಗಾರನು ತನ್ನ ಕೃತ್ಯವೆಲ್ಲವೂ ಇನ್ನು ಬೈಲಾಗುತ್ತದೆಂದು ಹೆದರಿ ತನ್ನ ಕೈಯಲ್ಲಿದ್ದ ಬಂದೂಕದಿಂದ ತನ್ನ ಶರೀರಕ್ಕೆ ಹೊಡೆದುಕೊಂಡು ಪ್ರಾಣಹತ್ಯಮಾಡಿಕೊಂಡನು.

ಮೈಸೂರುಸರ್ಕಾರಿಯಪ್ಪಣೆ.

ರೀಫಂಡು ಕೊಡತಕ್ಕ ಅಧಿಕಾರಿಗಳು.

ಕಾಲವಿಳಂಬವಿಲ್ಲದೆ ರೀಫಂಡುಗಳು ದೊರೆಯುವಂತೆ ಮಾಡುವುದಕ್ಕಾಗಿ ಕೆಲವು ಕ್ಲುಪ್ತವಾದ ಪರಿಮಿತಿಗಳೊಳಗೆ ರೀಫಂಡುಗಳನ್ನು ಮಂಜೂರ್ಮಾಡತಕ್ಕ ಬಗ್ಗೆ ಅಮಲ್ದಾರರುಗಳಿಗೆ ಅಧಿಕಾರವನ್ನು ಕೊಡಬೇಕೆಂಬ ವಿಷಯವು ಈಗ ಕೆಲವು ವರುಷಗಳಿಂದಲೂ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳಿಂದ ಸರ್ಕಾರದವರ ಗಮನಕ್ಕೆ ತರಲ್ಪಡುತ್ತಿವೆ. ಜಮೀನುಕಂದಾಯವನ್ನು ಪಾವತಿಮಾಡುವಲ್ಲಿ ಹೆಚ್ಚು ಹಣವು ಸಲ್ಲಿಸಲ್ಪಟ್ಟಿದ್ದ ಸಂದರ್ಭಗಳಲ್ಲಿ 1923ನೇ ಇಸವಿ ಅಕ್ಟೋಬರ್ ತಾ|| 16ನೆಯ ಸರ್ಕಾರಿ ಹುಕುಮಿನಪ್ರಕಾರ ಅಮಲ್ದಾರರುಗಳಿಗೆ 25 ರೂಪಾಯಿವರೆಗೂ ರೀಫಂಡು ಕೊಡುವ ಅಧಿಕಾರವನ್ನೂ, ಸಬ್‌ಡಿವಿಜನ್ ಆಫೀಸರುಗಳಿಗೆ 100 ರೂಪಾಯಿವರೆಗೂ ರೀಫಂಡುಮಾಡುವ ಅಧಿಕಾರವನ್ನೂ ಕೊಡಲಾಗಿದ್ದಿತು. ಸರ್ಕಾರಿ ಕೆಲಸವು ಜಾಗ್ರತೆಯಾಗಿ ನಡೆಯಲೆಂಬ ಉದ್ದೇಶದಿಂದ ಸಬ್‌ಡಿವಿಜನ್ ಆಫೀಸರುಗಳಿಗೂ ಅಮಲ್ದಾರರುಗಳಿಗೂ ಜಮೀನುಕಂದಾಯದಲ್ಲಿ ರೀಫಂಡುಗಳನ್ನೂ, ಮಾಫಿಗಳನ್ನೂ ಮಂಜೂರ್ಮಾಡತಕ್ಕ ಬಗ್ಗೆ ಹೆಚ್ಚಿಗೆಯ ಅಧಿಕಾರಗಳನ್ನು ಕೊಡಲು ಕೆಲವು ಸೂಚನೆಗಳನ್ನು [illegible] ಒಪ್ಪಿಸಿದರು. ಅವು ಯಾವುವೆಂದರೆ :—

(1) ಸಬ್ ಡಿವಿಜನ್ ಆಫೀಸರುಗಳ ಅಧಿಕಾರಗಳು.—[illegible] ಗಳನ್ನು ವಾಪಸು (ರೀಫಂಡ್) ಮಾಡುವ ಅಧಿಕಾರವನ್ನೂ, [illegible]

ಶರುಗಳು ಸಹ ನಡಿಸಬಹುದಾಗಿದೆ. ಅಲ್ಲದೆ ಸಂದೇಹಾಸ್ಪದವಾದ ಸಂದರ್ಭಗಳಲ್ಲೆಲ್ಲಾ ಸಬ್‌ಡಿವಿಜನ್ ಆಫೀಸರುಗಳು ಡೆಪ್ಯುಟಿಕಮಿಷನರುಗಳ ಸಲಹೆಯನ್ನು ತೆಗೆದುಕೊಳ್ಳತಕ್ಕದ್ದಾಗಿದೆ.

(2) ಅಮಲ್ದಾರರುಗಳಿಗೂ ಡೆಪ್ಯುಟಿ ಅಮಲ್ದಾರರುಗಳಿಗೂ ಈ ಕೆಳಗೆ ಕಂಡ ಅಧಿಕಾರಗಳನ್ನು ಕೊಡಬಹುದಾಗಿದೆ:—(i) (ಜಮೀನು ಕಂದಾಯ ಮತ್ತು ಸೆಸ್ಸುಗಳ ಬಾಬುಗಳಲ್ಲಿ) ಅಜಾಗರೂಕತೆಯಿಂದ ಮಾಡಿದ ವಸೂಲಾತಿಗಳನ್ನು ಲೆಕ್ಕದಿಂದ ವಜಾ ಮಾಡತಕ್ಕ ಮತ್ತು ಈ ಬಾಬುಗಳಲ್ಲಿ ಸರ್ಕಾರದವರಿಗೆ ಹಣ ಪಡೆಯಲು ಹಕ್ಕಿಲ್ಲದೆ ಇದ್ದು ಅಥವಾ ಸದರಿ ಹಕ್ಕು ನಿಂತುಹೋಗಿದ್ದ ಹಣವು ವಸೂಲಾಗಿದ್ದ ಸಂದರ್ಭಗಳಲ್ಲಿ ಪರಮಾವಧಿ 50 ರೂಪಾಯಿ ಪರಿಮಿತಿಯವರೆಗೆ ರೀಫಂಡುಗಳನ್ನು ಮಂಜೂರ್ಮಾಡತಕ್ಕ ಅಧಿಕಾರ. (ii) ತಮಗೆ ಮೇಲ್ಪಟ್ಟ ದರ್ಜೆಯ ಆಫೀಸರು ರೀಫಂಡನ್ನು ಕೊಡತಕ್ಕದ್ದೆಂದು ಹುಕುಂ ಮಾಡಿ ಸದರಿ ಹುಕುಮನ್ನು ತಮಗೆ ಕಳುಹಿಸಿಕೊಟ್ಟದ್ದರೆ ಸದರಿ ಹುಕುಮಿನ ಆಧಾರದಮೇಲೆ 500 ರೂಪಾಯಿವರೆಗೂ ರೀಫಂಡಾಗಿ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಮಂಜೂರಾತಿಯನ್ನು ಕೊಡತಕ್ಕ ಅಧಿಕಾರ. ರೀಫಂಡನ್ನು ಮಂಜೂರ್ಮಾಡಿ ಸಾದರಾದ ಹುಕುಮಿಗೆ ಸದರಿ ಮೇಲ್ಕಂಡ ಹುಕುಮಿನ ನಕಲೊಂದನ್ನು ಲಗತ್ ಮಾಡಬೇಕು. (iii) ಹಾಲಿ ಇರತಕ್ಕ ಪದ್ಧತಿಯಂತೆಯೇ ಎಲ್ಲಾ ಸಂದರ್ಭಗಳಲ್ಲಿಯೂ ಹಣವನ್ನು ಪಾವತಿಮಾಡಿದ ಮೂರು ವರುಷಗಳೊಳಗಾಗಿ ರೀಫಂಡುಗಳು ಸ್ಥಳೀಯ ಆಫೀಸರುಗಳಿಂದ ಮಂಜೂರ್ಮಾಡಲ್ಪಡಬೇಕು.

ಪ್ರಜಾಪ್ರತಿನಿಧಿಸಭೆಯಲ್ಲಿ ಮಾಡಿದ ಅರಿಕೆಗಳನ್ನೂ ನಾನಾ ಅಧಿಕಾರಿಗಳಿಗೆ ಮತ್ತಷ್ಟು ಕೆಲಸವನ್ನು ಹಂಚುವ ವಿಷಯದಲ್ಲಿ ರೆವಿನ್ಯೂ ಕಮಿಷನರವರು ಒಪ್ಪಿಸಿದ ಮೇಲ್ಕಂಡ ಸಲಹೆಗಳನ್ನೂ ಸರ್ಕಾರದವರು ಸಾವಧಾನವಾಗಿ ಪರ್ಯಾಲೋಚಿಸಿರುತ್ತಾರೆ. ಸಬ್‌ಡಿವಿಜನ್ ಆಫೀಸರುಗಳಿಗೂ, ಅಮಲ್ದಾರರುಗಳಿಗೂ ಡೆಪ್ಯುಟಿ ಅಮಲ್ದಾರರುಗಳಿಗೂ ಇದರಡಿ ನಮೂದಿಸಿರತಕ್ಕ ಹೆಚ್ಚಿಗೆಯ ಅಧಿಕಾರಗಳು ಇರತಕ್ಕದ್ದೆಂದು ಸರ್ಕಾರದವರು ಹುಕ್ಕುಂ ಮಾಡಿರುತ್ತಾರೆ:—

(1) ರೀಫಂಡುಗಳು.—ಅಮಲ್ದಾರರುಗಳೂ, ಡೆಪ್ಯುಟಿ ಅಮಲ್ದಾರರುಗಳೂ, ಸಬ್‌ಡಿವಿಜನ್ ಆಫೀಸರುಗಳೂ ಕೊನೆಬಾಬಿಗೆ ಜಮಾಕಟ್ಟಿಕೊಂಡ ಹರಾಜು ಮೊಬಲಗುಗಳ ವಿಚಾರದಲ್ಲಿ ಆಯಾ ಆಫೀಸರುಗಳು ಮಂಜೂರು ಮಾಡಲ್ಪಟ್ಟ ಅಧಿಕಾರವಿರುವ ಪರಮಾವಧಿ ಮೊಬಲಗಿನವರೆಗೂ ರೀಫಂಡುಗಳನ್ನು ಮಂಜೂರುಮಾಡಲು ಅವರಿಗೆ ಅಧಿಕಾರವಿರತಕ್ಕದ್ದು. ಪರಂತು ಹರಾಜನ್ನು ರದ್ದುಮಾಡಿದುದಕ್ಕೆ ಪ್ರತಿಯಾಗಿ ಅಪೀಲು ವಿಧಾಯಕಮಾಡಿರತಕ್ಕ ಅವಧಿಯು ಪೂರೈಸುವುದಕ್ಕೆ ಮುಂಚಿತವಾಗಿ ಸದರೀ ರೀಫಂಡುಗಳನ್ನು ಮಂಜೂರ್ಮಾಡಕೂಡದು. ಇದಲ್ಲದೆ ಸಂದೇಹಾಸ್ಪದವಾದ ಅಥವ ಮೂರುವರುಷದ ಕಾಲಪರಿಮಿತಿಯು ಪೂರೈಸಿಹೋಗಿರತಕ್ಕ ಸಂದರ್ಭಗಳೆಲ್ಲವನ್ನೂ ಹುಕುಮಿನ ಬಗ್ಗೆ ಎಂದಿನಂತೆ ಡೆಪ್ಯುಟಿಕಮಿಷನರವರಿಗೆ ವರದಿ ಮಾಡತಕ್ಕದ್ದು.

ಮಾಫಿಗಳು.—ಸರ್ಕಾರದವರ ಮಂಜೂರಾತಿಯ ಮೇರೆಗೆ ಸಾರ್ವಜನಿಕ ಕಾರ್ಯಗಳಿಗಾಗಿ ಸರ್ಕಾರಕ್ಕೆ ಸೇರಿಸಿಕೊಂಡ ಜಮೀನುಗಳ ಕಂದಾಯದ ಬಾಬತು ಸರ್ಕಾರದವರಿಗೆ ಬರಬೇಕಾದ ಬಾಕಿಗಳನ್ನು ಲೆಕ್ಕದಿಂದ ವಜಾ ಕೊಡತಕ್ಕ ಅಧಿಕಾರವು ಸಬ್‌ಡಿವಿಜನ್ ಆಫೀಸುಗಳಿರತಕ್ಕದ್ದು.

(3) ಅಜಾಗರೂಕತೆಯಿಂದ ವಸೂಲ್ಮಾಡಿದ ಮೊಬಲಗುಗಳನ್ನೂ, 100 ರೂಪಾಯಿಗೆ ಮೀರದ ಜಮೀನು ಕಂದಾಯದ ಖಿರದು ಬಾಬು ಮೊಬಲಗುಗಳನ್ನೂ ಲೆಕ್ಕದಿಂದ ವಜಾ ಕೊಡತಕ್ಕ ಬಗ್ಗೆ ಸಬ್‌ಡಿವಿಜನ್ ಆಫೀಸರುಗಳಿಗೆ ಅಧಿಕಾರವನ್ನು ಕೊಡಬೇಕೆಂಬ ವಿಷಯದಲ್ಲಿ ಹಾಲಿ ಇರತಕ್ಕ ನಿಬಂಧನೆಗಳನ್ನು ಪ್ರಕೃತದಲ್ಲಿ ಬದಲಾಯಿಸತಕ್ಕ ಅವಶ್ಯಕತೆಯೇನೂ ಇರುವುದಿಲ್ಲವೆಂಬುದು ಸರ್ಕಾರದವರ ಅಭಿಪ್ರಾಯವಾಗಿದೆ.

BULLETIN NO. 5.

FOURTH MYSORE LAWYERS' CONFERENCE, TUMKUR.

The Secretary writes:

All the lawyers in Maddagiri have enrolled themselves as members of the Reception Committee and have also promised to attend the conference. The bar associations in the State have not yet sent their delegation forms or the subjects to be discussed at the conference. It is expected that all the lawyers in the State will become members of the conference and contribute liberally towards its success. Messrs. K. Shankaranarayana Rao, M.A., B.L., Government Advocate and B. N. Vijayadeva M.A., Bar-at-law have also become members and are sure to attend the conference.

ಸ್ವೀಕಾರ.

ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಹೊಳೆನರಸೀಪುರದಲ್ಲಿರುವ ಮ॥ ಗೆಜ್ಜಳ್ಳಿ ನಾಗಪ್ಪನವರ ಮಗಳು ಸೌ॥ ಪಾರ್ವತಮ್ಮನನ್ನು ಹೊಳೆನರಸೀಪುರದಲ್ಲಿರುವ ಮ॥ ರಾಯಚೂರು ರುದ್ರಪ್ಪನವರ ಮಗ ಮಾದಪ್ಪನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಹಾಸನದ ಮರ್ಚೆಂಟ್ ಮ॥ ಹೆಚ್. ಗಂಗಪ್ಪನವರ ಮೂಲಕ 2 ರೂ. (2) ತುಮಕೂರು ಡಿ॥ ಹುಲಿಕುಂಟೆ ಪೋಸ್ಟ್ ತಡಕಲೂರು ಸ್ಕೂಲ್ಮಾಸ್ಟರ್ ಮ॥ ಹೆಚ್. ವೀರಭದ್ರಯ್ಯನವರ ತಮ್ಮನ ಲಗ್ನದಲ್ಲಿ 1 ರೂ.

ಲೋವರ್‌ಸೆಕೆಂಡರೀಪರೀಕ್ಷೆಗೆ ಬರತಕ್ಕ ವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ಮಳವಳ್ಳಿಸೆಂಟರು.

ಲೋವರ್‌ಸೆಕೆಂಡರೀಪರೀಕ್ಷೆಗಾಗಿ ಮಳವಳ್ಳಿಗೆ ಬರತಕ್ಕ ವಿದ್ಯಾರ್ಥಿಗಳಿಗೆ ಒಕ್ಕಲಿಗರ ಹಾಸ್ಟಲಿನಲ್ಲಿ ವೀರಶೈವರಿಂದ ಅಡುಗೆಮಾಡಿಸಿ ಭೋಜನ ಮಾಡಿಸಲು ಸ್ಥಳೀಯ ದೊಡ್ಡಮನುಷ್ಯರುಗಳಿಂದೇರ್ಪಡಿಸಲ್ಪಟ್ಟಿದೆ.

ಪಟೇಲ್ ಮೂಡ್ಲಗಿರಿಗೌಡ, ದೊಡ್ಡ ಮಾದೇಗೌಡ,
ಕರಡಿಹುಚ್ಚಪ್ಪ, ವಿ. ಇ. ಚಿಕ್ಕಣ್ಣ.

ಮೈಸೂರು ಸೆಂಟರು.

ಇದೇ ಏಪ್ರಿಲ್ ತಿಂಗಳಿನಲ್ಲಿ ನಡೆಯತಕ್ಕ ಲೋವರ್‌ಸೆಕೆಂಡರಿ ಪರೀಕ್ಷೆಗೆ ಮೈಸೂರ್ ಸೆಂಟರಿಗೆ ಬರತಕ್ಕ ವೀರಶೈವವಿದ್ಯಾರ್ಥಿಗಳ ಭೋಜನ ಮತ್ತು ವಾಸದ ಸೌಕರ್ಯಗಳಿಗೆ ಮೈಸೂರು ಶಿಲ್ದೆಮೊಹಲ್ಲಾ ಗುರುಬಾರ್ [illegible] ಪ್ಪನವರ [illegible] ಬಳಿ ಎ. ಸೋಮಶೇಖರಪ್ಪನವರು ಗಾರ್ಹುಮಾಡಿರುತ್ತಾರಾಗಿ ಬರತಕ್ಕ ವಿದ್ಯಾರ್ಥಿಗಳು ಮುಂಚಿತವಾಗಿ ಟಪಾಲ್ ಮೂಲಕ ತಿಳಿಸಬೇಕಾಗಿ ಸೂಚಿಸಿದೆ.

ಮೈಸೂರು ಎಂ. ಎಸ್. ಸಿದ್ದಪ್ಪ ಬ್ರದರ್ಸ್‌ರವರು.

ಬೆಂಗಳೂರು ಸೆಂಟರು.

1926 ನೇ ಏಪ್ರಿಲ್ ತಿಂಗಳಲ್ಲಿ ನಡೆಯುವ ಮೈಸೂರುಸೀಮೆಯ ಲೋವರ್‌ಸೆಕೆಂಡರಿಪರೀಕ್ಷೆಗಾಗಿ ಬೆಂಗಳೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಮತ್ತು ಅವರಕೂಡ ಬರತಕ್ಕ ಮಾಸ್ಟರುಗಳ ವಾಸಕ್ಕೂ, ಭೋಜನಕ್ಕೂ ಪದ್ಧತಿಪ್ರಕಾರ ಏರ್ಪಡಿಸಿದೆ. ಆದುದರಿಂದ ಬರತಕ್ಕವರು ಹಾಸಿಗೆಯನ್ನೂ ತಂಬಿಗೆಯನ್ನೂ ತಮ್ಮಕೂಡ ತರುವುದಲ್ಲದೆ ತಾವು ಬರತಕ್ಕ ದಿನವನ್ನು ಈ ಕೆಳಗಿನ ವಿಳಾಸದಾರನಾದ ನನಗೆ ಮುಂದಾಗಿ ತಿಳಿಸತಕ್ಕದ್ದು.

ಎಸ್. ಕಳ್ಳಪ್ಪ, ಊದುಬತ್ತಿಸಾಪ್, ಅವಿನ್ಯೂರೋಡು.
ಬೆಂಗಳೂರುಸಿಟಿ.

ತುಮಕೂರು ಸೆಂಟರು.

ಈ ಸೆಂಟರಿಗೆ ಲೋವರ್‌ಸೆಕೆಂಡರಿ ಪರೀಕ್ಷೆಗಾಗಿ ಬರತಕ್ಕ ಸಮಸ್ತ ವೀರಶೈವ ವಿದ್ಯಾರ್ಥಿಗಳಿಗು ಮತ್ತು ವಿದ್ಯಾರ್ಥಿನಿಯರುಗಳಿಗು ಮಾಮೂಲಿನಂತೆ ತುಮಕೂರು ವೀರಶೈವಮಹನೀಯರುಗಳಿಂದ ವಾಸಕ್ಕೂ ಮತ್ತು ಭೋಜನಕ್ಕೂ ಸರಿಯಾದ ವ್ಯವಸ್ಥೆ ಮಾಡಲ್ಪಟ್ಟಿರುತ್ತೆ. ಆದ್ದರಿಂದ ಬರಲಿಚ್ಛೆಯುಳ್ಳವರು ಈ ಕೆಳಗೆ ನಮೂದಿಸಿರುವವರ ಹೆಸರಿಗೆ ನಾಲ್ಕುದಿವಸ ಮುಂಚಿತವಾಗಿಯೇ ಅಪ್ಲಿಕೇಷನ್ ಮೂಲಕ ತಿಳಿಯಪಡಿಸತಕ್ಕದ್ದು.

ಜಿ. ಶಾಂತವೀರಯ್ಯ,
ವೀರಶೈವಸಮಾಜಸೇವಕ, ತುಮಕೂರು.

ಚಿತ್ರದುರ್ಗಸೆಂಟರು.

ಚಿತ್ರದುರ್ಗದ ಶ್ರೀಜಗದ್ಗುರುಜಯದೇವ ಹಾಸ್ಟಲದಲ್ಲಿ ಜಗದ್ಗುರು ಮಹಾಸಂಸ್ಥಾನದಿಂದ ಪದ್ಧತಿಪ್ರಕಾರ ಈ ಸೆಂಟರಿಗೆ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಯರಿಗೂ, ಅವರ ಸಂಗಡ ಬರತಕ್ಕ ಸ್ಕೂಲ್ ಮಾಸ್ಟರಿಗೂ ಪೋಷಕರುಗಳಿಗೂ ಊಟದ ಏರ್ಪಾಡು ಮಾಡಲ್ಪಡುತ್ತೆ. ಬರತಕ್ಕವರು ಎರಡುದಿವಸ ಮುಂಚಿತವಾಗಿಯೇ ಹಾಸ್ಟೆಲ್ ಸೆಕ್ರೆಟರಿಯವರಿಗೆ ಅಥವ ಏಜಂಟರಿಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು.

ಮುಕ್ಕಾಂ ಬೃಹನ್ಮಠ,
ತಾ॥ 23-3-1926. } C. R. Veerabhadrappa, for Agent.

ದಾವಣಗೆರೆ ಸೆಂಟರು.

1926 ನೇ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್‌ಸೆಕೆಂಡರಿಪರೀಕ್ಷೆಗಾಗಿ ದಾವಣಗೆರೆ ಸೆಂಟರಿಗೆ ಬರುವ ವೀರಶೈವವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಮತ್ತು ಮಾಸ್ಟರುಗಳ ಭೋಜನಕ್ಕೂ ವಾಸಕ್ಕೂ ಪದ್ಧತಿಯಮೇರೆಗೆ ಶ್ರೀವಿರಕ್ತಮಠದಲ್ಲಿ ಏರ್ಪಡಿಸಿರುತ್ತೆ. ಬರತಕ್ಕವರು ಮುಂಚಿತವಾಗಿ ತಿಳಿಸುವದಲ್ಲದೆ ಬರುವಾಗ ಹಾಸಿಗೆ ತಂಬಿಗೆಯನ್ನು ತಮ್ಮ ಸಂಗಡ ತರುವದು.

President
the Davangere Veerasaiva,
Vidyavardhaka Fund Sangha
Davangere.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಶ್ರೀಜಗದ್ಗುರುಮುರುಘರಾಜೇಂದ್ರ ಫ್ರೀಬೋರ್ಡಿಂಗ ಹಾವೇರಿಪೇಟೆ ಧಾರವಾಡ.

ಸದರಿ ಸಂಸ್ಥೆಯ ಸ್ವಯಂಸೇವಾಸಂಘದ ವಿದ್ಯಾರ್ಥಿಗಳು ಬೋರ್ಡಿಂಗಿನ ಸಲುವಾಗಿ ಬರುವ ಮೇ ತಿಂಗಳ ಸೂಟಿಯಲ್ಲಿ ತಮ್ಮ ನೆರೆಹೊರೆಯ ಗ್ರಾಮಗಳಲ್ಲಿ ಸಂಚರಿಸಿ ಧನಧಾನ್ಯಗಳ ಸಂಗ್ರಹಮಾಡಲಿಕ್ಕೆ ಬರತಕ್ಕವರಿದ್ದಾರೆ. ಅವರ ಸಂಗಡ ಸಂಸ್ಥೆಯ ಪಾವತಿ ಬುಕ್ಕುಗಳನ್ನು ಕಳಿಸುತ್ತದೆ. ಆದ್ದರಿಂದ ಸದರಿಯವರಿಗೆ ಸಮಾಜದವರು ಸ್ವಹಸ್ತಪರಹಸ್ತಗಳಿಂದ ಸಹಾಯಮಾಡಿ ಧನ್ಯರಾಗಬೇಕೆಂದು ಕೋರುತ್ತೇವೆ.

ತಾ॥ 5-3-1926. } ಬಸಪ್ಪಾ ದೊಡ್ಡಫಕೀರಪ್ಪಾ ಲಕಮನಹಳ್ಳಿ, ಚೇರಮನ್ನ.

ನೈಜಾಂವೀರಶೈವಫಂಡಿನ ಸೆಕ್ರೆಟರಿಗಳಿಗೆ ಸೂಚನೆಯು.

ಉಳಿದ ಪ್ರಾಂತದ ವೀರಶೈವರಂತೆ ನಿಜಾಂಪ್ರಾಂತದ ವೀರಶೈವರು ಕೂಡ ತಮ್ಮ ಪ್ರಾಂತ್ಯದ ಬಡವಿದ್ಯಾರ್ಥಿಗಳ ಸಲುವಾಗಿ ಒಂದು ಫಂಡನ್ನು ಮಾಡಿರುವರಷ್ಟೆ. ಆದರೆ ಅದರ ಯೋಗ್ಯವ್ಯವಸ್ಥೆಯು ಇಲ್ಲವೆಂದು ವ್ಯಸನದಿಂದ ಹೇಳಬೇಕಾಗುತ್ತದೆ. ಯಾಕಂದರೆ, ಈಗ ಎರಡುವರ್ಷಗಳಾದರೂ ಫಂಡಿನ ಜನರಲ್ ಕಮಿಟಿಯು ಕೂಡಿರುವುದಿಲ್ಲ. ಅದರ ಉತ್ಪನ್ನವೆಷ್ಟು: ಖರ್ಚು ಎಷ್ಟು? ಎಂಬುವದು ತಿಳಿಯದಾಗಿರುತ್ತದೆ. ಇಷ್ಟೇ ಅಲ್ಲ, ಅಲ್ಪಸ್ವಲ್ಪ ವೇತನವನ್ನು ಪಡೆಯುತ್ತಿದ್ದ ಬಡವಿದ್ಯಾರ್ಥಿಗಳನ್ನು ಕೇಳುವವರೇ ಇಲ್ಲ. ಕೆಲವರಿಗೆ ಮಂಜೂರಾದದ್ದನ್ನು ಸಹ ಕೊಟ್ಟಿರುವದಿಲ್ಲ, ಮತ್ತು ಅರ್ಜಿಯನ್ನು ಯಾರಿಗೆ ಮಾಡಿಕೊಳ್ಳಬೇಕೋ ತಿಳಿಯದಾಗಿದೆ. ಕಾರಣ ಸದರೀ ಫಂಡಿನ ಈಗಿನ ಸೆಕ್ರೆಟರಿಗಳು ಮೇಲ್ಕಂಡ ವಿಷಯಗಳಲ್ಲಿ ಸಮರ್ಪಕವಾಗುವಂತೆ ವ್ಯವಸ್ಥೆಯನ್ನು ಮಾಡಿ ಮೊಗಲಾಯಿ ರಾಜ್ಯದ ಜನರಲ್ಲಿಯೂ ಕಾರ್ಯದಕ್ಷತೆಯಿರುತ್ತದೆಂಬುನದನ್ನು ತೋರಿಸಬೇಕೆಂದು ಸವಿನಯಸೂಚನೆಯು ಇರುತ್ತದೆ.

ಓರ್ವ ಬಡವಿದ್ಯಾರ್ಥಿ.

ಮದರಾಸು ಲಾಕಾಲೇಜು ಕರ್ಣಾಟಕಸಭಾ.

ಇದೇ ಮಾರ್ಚಿ ತಾ॥ 5 ರಲ್ಲಿ ಮೇಲ್ಕಂಡ ಸಂಸ್ಥೆಯ ವಾರ್ಷಿಕಸಮಾರಂಭಸಂಬಂಧದಲ್ಲಿ ಕರ್ಣಾಟಕವಕ್ತೃತ್ವಕಲಾ ಪರೀಕ್ಷೆಯು ನಡೆದಿತು. ಲಾಕಾಲೇಜು ಪ್ರೊಫೆಸರಾದ ಮ॥ ಬಿ. ಎಲ್. ಎನ್. ರಾಯರವರು, ಹೈಕೋರ್ಟು ವಕೀಲರಾದ ಮ॥ ಅಡಿಗಾರವರು ಮತ್ತು ಪಂಡಿತ ಡಿ. ಅಳಸಿಂಗ್ರಾಚಾರ್ಯರು ಪರೀಕ್ಷಕರಾಗಿದ್ದರು. ಉಮೇದುವಾರರಲ್ಲಿ ಒಬ್ಬರಾದ ಮತ್ತು ಮದ್ರಾಸು ವೀರಶೈವಾಶ್ರಮದ ಸೆಕ್ರೆಟರಿಯವರಾದ ಮ॥ ಎಂ. ಎಚ್. ಎಂ. ನಂಜುಂಡಯ್ಯ, ಬಿ.ಎ., ಇವರು "ನಿರುದ್ಯೋಗ ಸಮಸ್ಯೆ" ಯ ಮೇಲೆ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿ ಸರ್ವರ ಮೆಚ್ಚುಗೆಗೆ ಪಾತ್ರರಾದರು. ಪರೀಕ್ಷಕರು ಏಕಾಭಿಪ್ರಾಯದಿಂದ ಸದರಿ ನಂಜುಂಡಯ್ಯನವರಿಗೆ ಪ್ರಥಮಸ್ಥಾನವನ್ನು ಕೊಟ್ಟದ್ದುದರಿಂದ ಕರ್ಣಾಟಕಸಭೆಯವರು ಸದರಿಯವರಿಗೆ ಒಂದು ಪದಕವನ್ನು ಮದ್ರಾಸ್ ಗೌರ್ನಮೆಂಟ್ ಸೆಕ್ರೆಟರಿಯವರಾದ ಮ॥ ಪಾಂಡುರಂಗರಾವ್, ಐ. ಸಿ. ಎಸ್., ರವರ ಹಸ್ತದಿಂದ ಬಹುಮಾನರೂಪವಾಗಿ ಕೊಡಿಸಿದರೆಂದು ತಿಳಿಸಲು ಹರ್ಷವಾಗುತ್ತದೆ.

ಪ್ರತ್ಯಕ್ಷದರ್ಶೀ.

ಚಿತ್ರದುರ್ಗಡಿಸ್ಟ್ರಿಕ್ಟಿನ ರೆಡ್ಡಿಜನಸಂಘ.

ಮೇಲ್ಕಂಡ ಸಂಘದವರು ತಾ॥ 10-3-1926 ರಲ್ಲಿ ಮರಡಿಹಳ್ಳಿಯಲ್ಲಿ ಇದೇ ತಿಂಗಳು 4 ನೇ ತಾರೀಖಿನಲ್ಲಿ ನಡೆದ ಮೀಟಿಂಗಿನಲ್ಲಿ ತೀರ್ಮಾನಿಸಿಕೊಂಡಂತೆ ಸಾಯಂಕಾಲ 5 ಗಂಟೆಯಲ್ಲಿ ಮ॥ ಮಿಡಲ್‌ಸ್ಕೂಲ್ ಹೆಡ್ಮಾಸ್ಟರಾದ ಎ. ಜಿ. ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಅನೇಕ ವಿಷಯಗಳನ್ನು ಚರ್ಚಿಸಿ ಕಾರ್ಯನಿರ್ವಾಹಕಸಭೆಯ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಿದರು. ಈ ಸಭಾಕಾರ್ಯವೆಲ್ಲಾ ಸಾಂಗವಾಗಿ ನಡೆದ ಬಳಿಕ ಸಭಾಧ್ಯಕ್ಷತೆಯನ್ನು ವಹಿಸಿದ್ದ ಮ॥ ಎ. ಜಿ. ಲಿಂಗಯ್ಯನವರು ಕಾರ್ಯನಿರ್ವಾಹಕಸಭೆಯವರ ಮುಖ್ಯಕರ್ತವ್ಯಗಳನ್ನು ವಿವರಿಸಿ ನೆರೆದಿದ್ದ ಸಭಿಕರಿಗೆ ವಂದನೆಗಳನ್ನರ್ಪಿಸಿದರು. ಈ ಸಭೆಗೆ ನೂರಾರುಮಂದಿ ರಡ್ಡಿಮಹಾಜನರು ಬಂದಿದ್ದರಲ್ಲದೆ ವೈಶ್ಯಮಂಡಲಿಯಲ್ಲಿ ಪ್ರಮುಖರಾದ ವಿ. ಡಿ. ಪುಟ್ಟಯ್ಯನವರೂ, ಆಯುರ್ವೇದಪಂಡಿತರಾದ ಮಿ॥ ಡಿ. ಎಚ್. ಮಸ್ತಾನ್ ಸಾಹೇಬರವರೂ ಈ ರಡ್ಡಿ ಜನರ ಪುರೋಭಿವೃದ್ಧಿ ಕಾರ್ಯದಲ್ಲಿ ಮುಂದಾಳುಗಳಾಗಿ ನಿಂತು ಸಹಾಯಮಾಡುತ್ತಿರುವದು ಸ್ತೋತ್ರಾರ್ಹವಾಗಿದೆ.

ಸಭಾಭಿಮಾನಿ.

ಆಯುರ್ವೇದವೈದ್ಯಮಹತ್ವಾತಿಶಯ.

ಈಗ್ಗೆ ಸುಮಾರು 4 ತಿಂಗಳ ಹಿಂದೆ ನನ್ನ ವಾಸಸ್ಥಳವಾದ ಹೆಗ್ಗಡದೇವನಕೋಟೆ ತಾ॥ ಬೀರ್ವಾಳುಗ್ರಾಮದಲ್ಲಿ ನನ್ನ ವೃದ್ಧ ತಾಯಿಯವರು ಒಂದುದಿವಸ ಆಯತಪ್ಪಿ 8 ಅಡಿ ಆಳವಿದ್ದ ಒಂದು ಮಣ್ಣುಗುಂಡಿಗೆ ಬೀಳಲಾಗಿ ಅವರ ಎಡಪಾರ್ಶ್ವದಕೊಡೆಗೆ ಪೂರಾಪೆಟ್ಟುಬಿದ್ದು ನಡೆಯಲು ಶಕ್ತಿಯಿಲ್ಲದಂತಾಗಲು ಮೈಸೂರು ಕೃಷ್ಣರಾಜಆಸ್ಪತ್ರೆಗೆ ಕರೆದುಕೊಂಡು ಬಂದು ತೋರಿಸಿದೆನು. ಡಾಕ್ಟರು ನೋಡಿ ಎಕ್ಸ್‌ರೆಯಂತ್ರದಲ್ಲಿ ಪರೀಕ್ಷಿಸಿ ಮೂಳೆ ಮುರಿದುಹೋಗಿದೆ ಎಂದು ಗೊತ್ತುಮಾಡಿ ರೋಗಿಯನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆಮಾಡುತ್ತ ಬಂದರು. ಅದರಿಂದ ಗುಣವಾಗದೆ ಬಾಧೆಯು ಹೆಚ್ಚಾಗುತ್ತ ಬಂದುದರಮೇಲೆ ಡಾಕ್ಟರನ್ನು ಕೇಳಲು, ರೋಗಿಗೆ ವಯಸ್ಸಾಗಿದೆ, ಆದ್ದರಿಂದ ಗುಣವಾಗುವದು ಅಸಾಧ್ಯವೆಂದು ಅವರು ಹೇಳಲು ರೋಗಿಯನ್ನು ಆಸ್ಪತ್ರೆಯಿಂದ ಕರೆದುಕೊಂಡುಬಂದು ಸೀತಾವಿಲಾಸ ಛತ್ರದಲ್ಲಿ ಔಷಧಾಲಯವನ್ನಿಟ್ಟಿರುವ ಪಂಡಿತ ಮ॥ ಲಕ್ಷ್ಮಣರಾಜುಯವರಿಗೆ ತೋರಿಸಿದೆನು. ಅವರು ಬಹಳ ಶ್ರದ್ಧೆಯಿಂದಲೂ ಅಭಿಮಾನದಿಂದಲೂ ಕೆಲವು ದಿನಗಳವರೆಗೆ ಚಿಕಿತ್ಸೆ ಮಾಡಿದುದರಮೇಲೆ ನಮ್ಮ ತಾಯಿಯವರು ಈಗ ಸಂಪೂರ್ಣಗುಣವನ್ನು ಹೊಂದಿ ಮೊದಲಿನಂತೆ ತಿರುಗಾಡಿಕೊಂಡಿರುವರು. ದೊಡ್ಡಡಾಕ್ಟರು ಅಸಾಧ್ಯವೆಂದು ಹೇಳಿದ ರೋಗವನ್ನು ಮ॥ ಲಕ್ಷ್ಮಣರಾಜುಯವರು ಗುಣಪಡಿಸಿದ್ದಕ್ಕಾಗಿ ನಾನು ಅವರಿಗೆ ಬಹಳ ಕೃತಜ್ಞನಾಗಿರುತ್ತೇನಲ್ಲದೆ ನಮ್ಮ ಆಯುರ್ವೇದವೈದ್ಯದ ಮಹತ್ವಾತಿಶಯವು ಎಷ್ಟರ ಮಟ್ಟಿಗಿದೆಯೆಂಬುದನ್ನು ಪ್ರತಿಯೊಬ್ಬರೂ ಗಮನಿಸಬೇಕಾಗಿ ಕೋರುತ್ತೇನೆ.

ವೀರರಾಜೇಅರಸು, ಜಮೀನ್ದಾರ್ ಬೀರ್ವಾಳುಗ್ರಾಮ.

ಶ್ರೀಭಾರತಜನಮನೋಲ್ಲಾಸಿನೀ ಕರ್ಣಾಟಕನಾಟಕಸಭಾ, ಮೈಸೂರು.

ಮೇಲ್ಕಂಡ ಸಂಘದವರು ಸುಮಾರು ಎರಡುತಿಂಗಳಿಂದಲೂ ಬೆಂಗಳೂರಿನಲ್ಲಿ ನಾಟಕಗಳನ್ನು ಅಭಿನಯಿಸುತ್ತಿದ್ದು ಕಳೆದ ತಾ॥ 6-3-1926 ರಲ್ಲಿ "ಕಂಸವಧಾ ಮತ್ತು ಯಮುಗರ್ವಭಂಗ" ನಾಟಕಗಳನ್ನಾಡಿ ಅನಂತಪುರಕ್ಕೆ ಪ್ರಯಾಣಮಾಡಿದರು. ಈ ಸಂದರ್ಭದಲ್ಲಿ, ಈ ಸಂಘವು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದರೂ ನೀತಿಬೋಧಕವಾದ ನಾಟಕಗಳನ್ನಭಿನಯಿಸುವುದು ಮಾತ್ರವಲ್ಲದೆ, ಕೈಲಾದಮಟ್ಟಿಗೂ ಸರ್ವರೂ ನೀತಿಮಾರ್ಗಾವಲಂಬಿಗಳಾಗಲು ಸಾಧ್ಯವಾದ ಪ್ರಯತ್ನಗಳೆಲ್ಲವನ್ನೂ ಮಾಡುತ್ತ ಧರ್ಮಕಾರ್ಯತತ್ಪರರಾಗಿರುವ ವಿಚಾರವನ್ನೂ, ಕರ್ಣಾಟಕನಾಟಕಕಲೆಯು ಪೂರ್ಣವಾದ ಅಭಿವೃದ್ಧಿಸ್ಥಿತಿಯನ್ನು ಹೊಂದುವಂತೆ ಮಾಡುವುದು ಮಹತ್ತಾದ ಕಾರ್ಯವೆಂಬುದನ್ನೂ, ಈ ವಿಚಾರಗಳಲ್ಲಿ ಈ ಸಂಘದ ಯಜಮಾನರುಗಳಾದ ಶ್ರೀಯುತ ಟಿ. ಎಸ್. ಗುರುಕಾರರವರೂ, ಅಭಿನಯಕಂಠೀರವ ಎಂ. ಎನ್. ಗಂಗಾಧರರಾಯರೂ ತಮ್ಮ ಪರಿವಾರಸಮೇತ ಆದರ್ಶಪ್ರಾಯರಾಗಿರುವರೆಂಬುದನ್ನೂ ಕುರಿತು ಮ॥ ಡಿ. ನರಸಿಂಹಶಾಸ್ತ್ರಿ, ಎಂ.ಎ., ಅವರು ಹೃದಯಂಗಮವಾದ ಭಾಷಣವನ್ನು ಮಾಡಿದರು. ಈ ಊರಿನಲ್ಲಿ ಈ ಸಂಘವು ಬಹುಸ್ವಲ್ಪ ಕಾಲ ಇದ್ದಿತಾದರೂ, ಆಂಜನೇಯಜ್ಯೋತಿರ್ಗ್ರಂಥಮುದ್ರಣಕ್ಕಾಗಿ "ಪ್ರಹ್ಲಾದ ಚರಿತ್ರೆ" ಯನ್ನಾಡಿ 250 ರೂ. ಗಳನ್ನೂ, ಗವಿಪುರದ ಶ್ರೀಪ್ರಳಯಕಾಲದ ವೀರಭದ್ರಸ್ವಾಮಿದೇವಾಲಯದ ಜೀರ್ಣೋದ್ಧಾರಕ್ಕಾಗಿ "ಶ್ರೀಶರಭಲೀಲಾ" ನಾಟಕವನ್ನಾಡಿ 125 ರೂ. ಗಳನ್ನೂ ಕೊಟ್ಟದ್ದು ಇವರಿಗೆ ಶ್ರೇಯಸ್ಕರವಾಗಿದೆ. ಬೆಂಗಳೂರು ಪುರಜನರು ಈ ಸಂಘದ ಯೋಗ್ಯತಾನುಸಾರವಾಗಿ ಘನವಾದ ಸುವರ್ಣಪದಕವನ್ನೂ ಯೋಗ್ಯತಾಪತ್ರಿಕೆಯನ್ನೂ ಬ್ರಹ್ಮಶ್ರೀ ವೇ॥ ಕರ್ಣಾಟಕ ಕವಿಕೇಸರಿ ಬೆಳ್ಳಾವೆ ನರಹರಿಶಾಸ್ತ್ರಿಗಳಿಂದ ಕೊಡಿಸಿ, ಈ ಸಭೆಯವರನ್ನು ಆಶೀರ್ವದಿಸಿ ಕಳುಹಿಸಿಕೊಟ್ಟರು. ಈ ಸಭೆಯವರು ನಾನಾ ದೇಶಗಳಲ್ಲಿ ಯಶೋವಂತರೂ ಧನವಂತರೂ ಆಗಿ ಪುನಃಪುನಃ ನಮ್ಮಲ್ಲಿಗೆ ಬರಲೆಂಬುದೇ ಈ ಪುರಜನರ ಅಪೇಕ್ಷೆಯಾಗಿದೆ.

ಬೆಂಗಳೂರನಿವಾಸಿ.

ನಗೂನಹಳ್ಳಿಯಲ್ಲಿ ಮಕ್ಕಳ ಪ್ರದರ್ಶನ.

ಶ್ರೀರಂಗಪಟ್ಟಣ ತಾ॥ ನಗೂನಹಳ್ಳಿಯಲ್ಲಿ ಮಕ್ಕಳ ಪ್ರದರ್ಶನೋತ್ಸವವು ಮೈಸೂರು ಡಿ॥ ಡೆಪ್ಯುಟಿಕಮಿಷನರ ಅಧ್ಯಕ್ಷತೆಯಲ್ಲಿ ಕಳೆದ ತಾ॥ 7 ನೇ ಭಾನುವಾರ ಬಹಳ ವಿಜೃಂಭಣೆಯಿಂದ ಜರುಗಿತು. ಇದಕ್ಕಾಗಿ ಊರೆಲ್ಲಾ ಶೃಂಗರಿಸಲ್ಪಟ್ಟಿದ್ದು ಒಂದು ದೊಡ್ಡ ಚಪ್ಪರಹಾಕಲ್ಪಟ್ಟಿತ್ತು. ಈ ಮಹೋತ್ಸವಕ್ಕೆ ಹಿರೋಡೆ ಸಬ್‌ಡಿವಿಜನ್ ಆಫೀಸರು, ಶ್ರೀರಂಗಪಟ್ಟಣದ ತಾ॥ ಅಮಲ್ದಾರರು, ಮೈಸೂರಿನಿಂದ ಮ॥ ಎಚ್. ನಂಜುಂಡರಾಜೇಅರಸಿನವರು ಮೊದಲಾಗಿ ಕೆಲವು ದೊಡ್ಡಮನುಷ್ಯರುಗಳು, ಚಂದಗಾಲ್ ಬೋರೇಗೌಡರು ಪ್ರಸಿದ್ಧ ಉಪನ್ಯಾಸಕರಾದ ಮ॥ ಎನ್. ಸಿದ್ಧಲಿಂಗಯ್ಯದೇವರು ಇನ್ನೂ ಅನೇಕ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಶ್ರೀರಂಗಪಟ್ಟಣದ ರಸ್ತೆಯಲ್ಲಿ ಬ್ರಹ್ಮಪುರದಿಂದ ನಗೂನಹಳ್ಳಿಯವರೆಗೆ ಗ್ರಾಮಸ್ಥರು 2,000 ರೂಪಾಯಿಗಳನ್ನು ಮುಟ್ಟಿಸಿ ಮಾಡಿಸಿರುವ ಹೊಸರಸ್ತೆಯಲ್ಲಿ ಡಿ॥ ಕ॥ ರವರನ್ನು ಮಂಗಳವಾದ್ಯಸಮೇತ ಕರೆದುಕೊಂಡು ಬಂದರು. ಪ್ರದರ್ಶನಕ್ಕಾಗಿ ಬಂದಿದ್ದ 1307 ಮಕ್ಕಳ ಅಳತೆ ತೂಕ ಮೊದಲಾದ ಪರೀಕ್ಷೆಯು ಡಾಕ್ಟರವರಿಂದ ಮಾಡಲ್ಪಟ್ಟು ಬಹುಮಾನಕ್ಕೆ ಯೋಗ್ಯವಾದವುಗಳು ಆರಿಸಲ್ಪಟ್ಟುವು. ಗರ್ಭಿಣಿಯರ ಮತ್ತು ಮಕ್ಕಳ ಪೋಷಣೆಯ ವಿಷಯವಾಗಿ ಡಾಕ್ಟರವರಿಂದಲೂ, ಮ॥ ಎಸ್. ಸಿದ್ಧಲಿಂಗಯ್ಯದೇವರು ಮೊದಲಾದವರಿಂದಲೂ ಬಹುಸ್ವಾರಸ್ಯವಾಗಿ ಉಪನ್ಯಾಸಗಳು ಮಾಡಲ್ಪಟ್ಟುವು. ಸದರಿಯ ಅಧ್ಯಕ್ಷರು ಇಂಥ ಪ್ರದರ್ಶನಗಳಿಂದ ಆಗತಕ್ಕ ಪ್ರಯೋಜನವನ್ನು ತಿಳಿಸಿ ಈ ಕಾರ್ಯವನ್ನು ಬಹಳ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಮಾಡಿದ ಕಮಿಟಿ ಚೇರ್ಮನ್ನರಾದ ಮ॥ ಎನ್. ಸಿದ್ಧಲಿಂಗಯ್ಯದೇವರನ್ನೂ ಮೆಂಬರುಗಳಾದ ಮ॥ ಗಳಾದ ಲಕ್ಷ್ಮಣರಾಯರು, [illegible] ಬೋರೇಗೌಡರು, ಎನ್. ಬಿ. ಪುಟ್ಟೇಗೌಡರು, ದೊ॥ ಬೋ॥ [illegible] ಎಸ್. ಶಿಂಗೇಗೌಡರು, ದೊ॥ [illegible] ಅವರುಗಳನ್ನೂ [illegible] 5 ಮಕ್ಕಳಿಗೆ ಮೊದಲನೆಯ ಬಹುಮಾನವಾಗಿ ಬೆಳ್ಳಿಕಪ್ಪುಗಳನ್ನೂ, 10 ಮಕ್ಕಳಿಗೆ ಎರಡನೆಯ ಬಹುಮಾನವಾಗಿ ಬೆಳ್ಳಿಬಟ್ಟಲುಗಳನ್ನೂ, 30 ಮಕ್ಕಳಿಗೆ ಮೂರನೆಯ ಬಹುಮಾನವಾಗಿ ಅಂಗಿಕುಲಾಯಿಗಳನ್ನೂ ಇವಲ್ಲದೆ ಆದಿದ್ರಾವಿಡರ ಮಕ್ಕಳಿಗೆ 6 ಬಹುಮಾನಗಳನ್ನೂ ದಯಪಾಲಿಸಿ ಗಂಧಪುಷ್ಪ ತಾಂಬೂಲಗಳನ್ನು ಸ್ವೀಕರಿಸಿ ಸರ್ವರಿಂದಲೂ ವಂದಿತರಾಗಿ ದಯಮಾಡಿಸಿದರು. ಈ ನಗೂನಹಳ್ಳಿಯಲ್ಲಿ ಇಂಥ ಉತ್ಸವವು ಹಿಂದೆ ಯಾವಾಗಲೂ ನಡೆದಿರಲಿಲ್ಲವು. ಈ ವೇಳೆ ಇಷ್ಟು ವಿಜೃಂಭಣೆಯಿಂದಲೂ, ಧಾರಾಳದಿಂದಲೂ ನಡೆಸಿದ್ದು ಈ ಗ್ರಾಮಸ್ಥರಿಗೆ ಬಹಳ ಭೂಷಣವಾಗಿದೆ.

ಪ್ರತ್ಯಕ್ಷದರ್ಶೀ.

ಕಲ್ಬುರ್ಗಿಯ ಶ್ರೀಶರಣಬಸವೇಶ್ವರಜಾತ್ರೆಯು.

ಪದ್ಧತಿಯಂತೆ ಶ್ರೀಶರಣಬಸವೇಶ್ವರಜಾತ್ರೆಯು ಮುಖಂಡರ ದಕ್ಷತೆಯಿಂದಲೂ, ಸ್ವಯಂಸೇವಕರ ಚಟುವಟಿಕೆಯಿಂದಲೂ, ಪೋಲೀಸರ ಸುವ್ಯವಸ್ಥೆಯಿಂದಲೂ ಅತಿ ವಿಜೃಂಭಣೆಯಿಂದ ಜರುಗಿತೆಂದು ತಿಳಿಸಲು ಸಂತೋಷವಾಗುತ್ತದೆ. ಶ್ರೀಶರಣನ ಜಾತ್ರೆಯು ಪ್ರತಿವರ್ಷ ಫಾಲ್ಗುಣ ಬ॥ ೫ ರಲ್ಲಿ ನಡೆಯುತ್ತಿದ್ದು, ಯಾತ್ರೆಗಾಗಿ ನೈಜಾಂಕರ್ಣಾಟಕದ ಎಲ್ಲಾ ಭಾಗದವರೂ, ಎಲ್ಲಾ ವರ್ಣದವರೂ ಬರುತ್ತಿರುವರೆಂದು ಹೇಳಿದರೆ ಅತಿಶಯೋಕ್ತಿಯಾಗದು. ಶ್ರೀಶರಣಬಸವೇಶ್ವರನೆಂಬ ಭಕ್ತಶಿರೋಮಣಿಯು 19 ನೇ ಶತಮಾನದ ಆದಿಭಾಗದಲ್ಲಿ ಅವತರಿಸಿ, ಅನೇಕ ಮಹಿಮಾಕೃತ್ಯಗಳನ್ನು ಜರುಗಿಸಿದ ಸತ್ಪುರುಷವರ್ಯನಾಗಿರುತ್ತಾನೆ. ಈ ಮಹಾತ್ಮನ ವಿಷಯದಲ್ಲಿ ನೈಜಾಂದೇಶದ ಸಮಗ್ರ ಹಿಂದೂಧರ್ಮದವರ ಭಕ್ತಿಯು ದೃಢತರವಾಗಿರುತ್ತದೆ. ಅಂತೇ ಆತನು ಶಿವಾಧೀನವಾದಂದಿನಿಂದ ಪ್ರತಿವರ್ಷ ರಥೋತ್ಸವವನ್ನು ಮಾಡಿ ತನ್ಮೂಲಕ ತಮ್ಮ ಭಕ್ತಿಯನ್ನು ತೋರ್ಪಡಿಸುತ್ತಿರುವರು.

ಈ ಸಂಸ್ಥಾನದ ಯಜಮಾನರಾದ ಶ್ರೀಯುತ ದೊಡ್ಡಪ್ಪಾ ಉರುಫ್ ಶರಣಬಸಪ್ಪಾ ಅಪ್ಪಾ ಇವರು ವಿದ್ಯಾವಂತರೂ, ಭಕ್ತಿವಂತರೂ, ಆಚಾರನಿಷ್ಠರೂ ಇರುವದರಿಂದ ಸಂಸ್ಥಾನಕ್ಕೆ ಒಂದು ಪ್ರಕಾರದ ಶೋಭೆಯುಂಟಾಗಿರುತ್ತದೆ. ಇದುವರೆಗೆ ಜಾತ್ರೆಯಕಾಲದಲ್ಲಿ ಪಲ್ಲಕ್ಕಿಯುತ್ಸವ, ಕುಂಭಪೂಜಾ, ದೇವಾಲಯಪ್ರದಕ್ಷಿಣೆ, ರಥಪ್ರದಕ್ಷಿಣೆ, ರಥೋತ್ಸವಾದಿ ಕಾರ್ಯಗಳೂ, ದಾಸೋಹವೂ ನಡೆಯುತ್ತಿದ್ದವು. ತಾವಾಗಿಬಂದ ಯಾತ್ರಿಕರಿಗೆ ಧರ್ಮಬೋಧವಾದರೆ ಉತ್ತಮವೆಂದು ಯೋಚಿಸಿ, ಯಜಮಾನರವರು ದೂರದೇಶದಿಂದ ಕೀರ್ತನಕಾರರನ್ನೂ ಉಪನ್ಯಾಸಕರನ್ನೂ ಬರಮಾಡಿಕೊಂಡು ಧರ್ಮಬೋಧೆ ಮಾಡಿಸುವ ಏರ್ಪಾಟನ್ನು 3-4 ವರ್ಷಗಳಿಂದಲೂ ನಡಿಸಿರುತ್ತಾರೆ. ಈ ವರ್ಷ ನಡಿಸಿದ ಕಾರ್ಯಕ್ರಮಗಳೆಂದರೆ—ಫಾಲ್ಗುಣ ಬ॥ 4 ರಲ್ಲಿ ಪದ್ಧತಿಯಂತೆ ಪಲ್ಲಕ್ಕಿಯುತ್ಸವ, ಬ॥ 5 ರಲ್ಲಿ ಕುಂಭಪೂಜಾ, ದೇವಾಲಯಪ್ರದಕ್ಷಿಣೆ, ರಥಪ್ರದಕ್ಷಿಣೆ, ರಥೋತ್ಸವ, ಬ॥ 6 ರಲ್ಲಿ ಮುಂಜಾನೆ ಕಲ್ಲೂರು ಸೂಗೂರಶಾಸ್ತ್ರಿಗಳ ಕೀರ್ತನ, ಸಾಯಂಕಾಲ ಸಂಗೀತ, ಮತಮರಿ ಹಂಪಯ್ಯನವರ ಹಾಡುಗಾರಿಕೆ ಬ॥ 7 ರಲ್ಲಿ ಮುಂಜಾನೆ ಬಂಡಪ್ಪಾ ಉರುಫ್ ಸದಾನಂದಶರಣೆ ಇವರ ಕೀರ್ತನ, ಸಾಯಂಕಾಲ ಸಾರ್ವಜನಿಕಸಭಾ ಈ ಪ್ರಕಾರ ಜರುಗಿಸಲ್ಪಟ್ಟವು. ಸಭೆಯಲ್ಲಿ ವಕ್ತೃತ್ವಶಾಲಿಗಳ ಭಾಷಣಗಳಾದವು. ಕೊನೆಯಲ್ಲಿ ಗುಲ್ಬರ್ಗಾದಲ್ಲಿ ವೀರಶೈವಬೋರ್ಡಿಂಗಾದರೆ ಉತ್ತಮವೆಂಬ ಸೂಚನೆಯು ಮಹಾಗಾಂವ್ ಪೋಲೀಸ್ ಪಾ॥ ಸಂಗಶೆಟ್ಟರವರಿಂದ ಮಾಡಲ್ಪಟ್ಟಮೇರೆಗೆ ಕೂಡಿದ ಜನರು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು. ಅದೇ ಸಮಯದಲ್ಲಿ ಕೆಲ ಉದಾರಿಗಳು ಯಜಮಾನರ ಸನ್ನಿಧಿಯಲ್ಲಿ 800 ರೂ. ವಾಗ್ದಾನವನ್ನುಮಾಡಿದರು. ಆ ದಿವಸ ರಾತ್ರಿಯಾದದ್ದರಿಂದ ಸಭಾ ವಿಸರ್ಜನಮಾಡಲ್ಪಟ್ಟಿತು. ರಾತ್ರಿ ಭೋಜನಾನಂತರ ವಿದ್ವಾಂಸರನ್ನು ಬರಮಾಡಿಕೊಂಡು ಯಜಮಾನರು ಅವರವರ ಯೋಗ್ಯತಾನುಸಾರ ಸಂಭಾವನೆಯಂ ಕೊಟ್ಟು ಮನ್ನಿಸಿದರು. ಮರುದಿವಸ ಸಾಯಂಕಾಲ ಬೋರ್ಡಿಂಗಿನ ದೆಶೆಯಿಂದ ಸಭಾ ಕೂಡಿಸಿ, ಕಾರ್ಯಕ್ರಮದ ಬಗ್ಗೆ ಚರ್ಚೆಯು ನಡೆದು ಪುನಃ ಬೋರ್ಡಿಂಗಿನ ದೆಶೆಯಿಂದ ಕ್ಷಯ ಸಂ॥ ಅಧಿಕಚೈತ್ರ ಶುಕ್ಲ 11 ಬುಧವಾರ ಸಾರ್ವಜನಿಕಸಭೆಯನ್ನು ಮಾಡುವ ಬಗ್ಗೆ ನಿರ್ಧರಿಸಲ್ಪಟ್ಟಿತು. ಅಂತೂ ಈ ಸಂವತ್ಸರದ ಜಾತ್ರೆಯು ಶ್ರೀಶರಣನ ಕೃಪೆಯಿಂದ ನಿರ್ವಿಘ್ನವಾಗಿಯೂ, ಯಾತ್ರಿಕರಿಗೆ ಹರ್ಷಪ್ರದವಾಗಿಯೂ ಪರಿಣಮಿಸಿತು. ಇದೇ ಪ್ರಕಾರ ಪ್ರತಿವರ್ಷ ನಡೆಯುವಂತಾಗಿ ಯಾತ್ರಿಕರ ಕಣ್ಮನಕರ್ಣಾನಂದ ಉಂಟಾಗುವಂತಾಗಲೆಂದು ಹಾರೈಸುವ,

ಓರ್ವ ಶ್ರೀಶರಣಬಸವೇಶ್ವರಭಕ್ತ.

ನಿಷ್ಟಲಶಿವಭಕ್ತಿ.

ಚಿಕ್ಕಮಗಳೂರುಟವನ್ ವಾಸಿಗಳಾದ ಜವಳಿಅಂಗಡಿ ಮ॥ ಡಿ. ವೀರಭದ್ರಪ್ಪಶೆಟ್ಟರು ನರಜನ್ಮದಲ್ಲಿ ಯಾವದಾದರೊಂದು ಪ್ರಯೋಜನಕಾರ್ಯವನ್ನು ಭಗವತ್ಸೇವಾರ್ಥವಾಗಿ ಮಾಡಬೇಕೆಂದು ಯೋಚಿಸಿ, ಇದೇ ಟವನ್ ಕೋಟೆಯಲ್ಲಿ ಶಿಥಿಲವಾಗಿ ಪೂಜಾಕಾರ್ಯವು ನಡೆಯದೆ ಬಹುದಿವಸಗಳಿಂದ ಪಾಳುಬಿದ್ದಿದ್ದ ಶ್ರೀಮಲ್ಲಿಕಾರ್ಜುನಸ್ವಾಮಿಯದೇವಾಲಯವನ್ನ ಜೀರ್ಣೋದ್ಧಾರಮಾಡಬೇಕೆಂದು ಪ್ರಯತ್ನಿಸಿ ಉದಾರಮನಸ್ಸಿನಿಂದ 4,000 ರೂಪಾಯಿ ವೆಚ್ಚಮಾಡಿ ಕಟ್ಟಡವನ್ನು ಪೂರೈಸಿ ಶಿವಲಿಂಗಪ್ರತಿಷ್ಠಾ ಕಾರ್ಯವನ್ನು ನೆರವೇರಿಸಬೇಕೆಂಬ ಸಂಕಲ್ಪದಿಂದಿರುವಾಗ "ಪಾಪೀಚಿರಾಯುಸ್ಸುಕೃತಿಗತಾಯುಃ" ಎಂಬೀ ನಾಣ್ನುಡಿಯಂತೆ ಮ॥ ವೀರಭದ್ರಪ್ಪಶೆಟ್ಟರವರಿಗೆ ಬಹಳ ಕಾಯಿಲೆ ಉಂಟಾಯಿತು. ಆ ಸಮಯದಲ್ಲಿ ಅವರು ಅಯ್ಯೋ ನಾನು ಕೈಗೊಂಡ ಕಾರ್ಯವು ಪೂರ್ತಿಯಾಗಿ ನೆರವೇರಲಿಲ್ಲ. ಶಂಕರಾ ನಿನ್ನಿಷ್ಟವೇ ನಿರಬಹುದು. ಎಂದು ವಿಧವಿಧವಾಗಿ ಹಂಬಲಿಸುತ್ತಾ, ಅವಸಾನಕಾಲದಲ್ಲಿ ತಮಗೆ ಇರುವ ಎರಡುಜನ ಪುತ್ರರನ್ನ ಕರೆದು ಮತ್ತಾವ ವಿಷಯವನ್ನೂ ಪ್ರಸ್ತಾಪಿಸದೆ, ತಾವು ಪ್ರಯತ್ನಿಸಿದ್ದ ಶಿವಲಿಂಗಪ್ರತಿಷ್ಠಾ ಕಾರ್ಯವನ್ನು ನೆರವೇರಿಸಬೇಕೆಂತಲೂ, ಪೂಜಾಕಾರ್ಯಗಳು ಶಾಶ್ವತವಾಗಿ ನಡೆಯುವದಕ್ಕೆ 3,000 ರೂಪಾಯಿಗನ್ನು ಸೇವಿಂಗ್ಸ್‌ಬ್ಯಾಂಕಿನಲ್ಲಿ ಇಡಬೇಕೆಂತಲೂ ತಿಳಿಸಿ ಈಗ್ಗೆ ನಾಲ್ಕುತಿಂಗಳ ಕೆಳಗೆ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ವಿಷಾದಿಸಬೇಕಾಗಿದೆ. ತಂದೆಯವರು ಸೂಚಿಸಿದಂತೆ ಇವರ ಜ್ಯೇಷ್ಠಪುತ್ರರಾದ ಮ॥ ರುದ್ರಪ್ಪಶೆಟ್ಟರು ಕಳೆದ ಕ್ರೋಧನ ಸಂ॥ ಫಾಲ್ಗುಣ ಬ॥ ೭ ಗುರುವಾರ ವಿಜೃಂಭಣೆಯಿಂದ ವೇದೋಕ್ತವಾಗಿ ಶಿವಲಿಂಗಪ್ರತಿಷ್ಠಾ ಕಾರ್ಯವನ್ನು ನೆರವೇರಿಸಿದರು. ಈ ಕಾರ್ಯಕ್ಕೆ ತಿಪಟೂರು ವೇ॥ ವಿರುಪಾಕ್ಷಶಾಸ್ತ್ರಿಗಳು, ಶಿವರುದ್ರಶಾಸ್ತ್ರಿಗಳು, ಚನ್ನವೀರಶಾಸ್ತ್ರಿಗಳು ಮತ್ತು ಶ್ರೀಮನ್ ನಿರಂಜನಮೂರ್ತಿಗಳಾದ ನಂದಿವೃಷಭರಾಜದೇಶಿಕೇಂದ್ರಸ್ವಾಮಿಗಳು ಶ್ರೀಶೈಲಪರ್ವತಶಾಖಾಮುಖವಾದ ಮಹಾಮಠದ ಪಟ್ಟಾಧ್ಯಕ್ಷ ವಸಂತದೇಶಿಕೇಂದ್ರಸ್ವಾಮಿಗಳು ಮತ್ತು ತಿಪಟೂರು ಮುದ್ವೀರದೇವರು ಇನ್ನೂ ಮುಂತಾದ ಗುರುವರ್ಗದವರು ದಯಮಾಡಿದ್ದರು. ಆ ದಿವಸ ನೆರೆದಿದ್ದ ಸ್ಥಳಪರಸ್ಥಳದ ಭಕ್ತಮಾಹೇಶ್ವರರುಗಳಿಗೆ ಸಂತರ್ಪಣೆ ದಕ್ಷಿಣೆ ತಾಂಬೂಲ ವಿನಿಯೋಗವು ನಡೆಯಿತು. ತಾ॥ ೯-೩-೨೬ ನೇ ಶುಕ್ರವಾರ ಪುನಹ ಮಲ್ಲಿಕಾರ್ಜುನಸ್ವಾಮಿಗೂ ವೀರಭದ್ರದೇವರಿಗೂ ರುದ್ರಾಭಿಷೇಕವೂ ಸಂತರ್ಪಣೆಯೂ ನಡೆದುವು. ಸಾಯಂಕಾಲ ನೂತನಶಿವಾಲಯದ ಸಮೀಪದಲ್ಲಿದ್ದ ಚಪ್ಪರದಲ್ಲಿ ಪ್ರತಿಷ್ಠಾ ಕಾರ್ಯ ನಡೆದ ಸಂತೋಷಾರ್ಥವಾಗಿ ಮ॥ ಡೆಪ್ಯುಟಿ ಕಮಿಷನರ್ ಸಾಹೇಬರು, ಟ್ರೆಜರಿ ಆಫೀಸರ್ [illegible] ಸಾಹೇಬರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಸಾಹೇಬರು ಇನ್ನು ಮುಂತಾದ ಮುಖ್ಯ ಆಫೀಸರ್‌ಗಳನ್ನೂ ಮುನಸಿಪಲ್‌ಪ್ರೆಸಿಡೆಂಟರು ವೈಸ್‌ಪ್ರೆಸಿಡೆಂಟರು ಲಾಯರುಗಳು ಕಾಫಿಪ್ಲಾಂಟರುಗಳು ವರ್ತಕರುಗಳು ಮುಂತಾದ ದೊಡ್ಡಮನುಷ್ಯರನ್ನೂ ಆಹ್ವಾನಿಸಿ ದೊಡ್ಡ ಸಭೆಯನ್ನ ಸೇರಿಸಿ ಈ ಊರಿಗೆ ಬಂದಿರುವ ಕೀರ್ತನಕಾರ್ ಮ॥ ಬಿ. ಎಸ್. ಶೇಷರಾಜುಯವರಿಂದ ಕಿರಾತಾರ್ಜುನೀಯವೆಂಬ ಶಿವಕಥೆಯನ್ನು ಮಾಡಿಸಿದರು. ಅನಂತರ ಮುನಸಿಪಲ್‌ಪ್ರೆಸಿಡೆಂಟ್ ಮ॥ ಬಿ. ಕೇಶವಯ್ಯನವರು, ಭಗವದ್ಭಕ್ತಿ ಮಾತಾಪಿತೃಭಕ್ತಿಯಿಂದ ಬಹುಧಾರಾಳವಾಗಿ ಮ॥ ರುದ್ರಪ್ಪಶೆಟ್ಟರು ಮಾಡಿದ ಮಹಾಕಾರ್ಯವನ್ನು ಕುರಿತು ಸ್ವಾರಸ್ಯವಾಗಿಭಾಷಣಮಾಡಿದರು. ಸದರಿ ರುದ್ರಪ್ಪಶೆಟ್ಟರು ತಮ್ಮ ತಂದೆಯವರು ಪ್ರಾರಂಭಿಸಿದ ಕಾರ್ಯವನ್ನು ಮತ್ತು ಅವರ ಗುರು ಲಿಂಗ ಜಂಗಮ ಭಕ್ತಿಗಳನ್ನು ಸ್ಮರಿಸಿಕೊಂಡು ನಿಜವಾದ ಭಕ್ತಿವಿಶ್ವಾಸದಿಂದ ತಮ್ಮ ಮನವಿಯನ್ನು ಸಭಿಕರಲ್ಲಿ ಸೂಚಿಸುವಥರ ಮೂಲಕ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದನಂತರ ನೆರೆದಿದ್ದ ಸಭಿಕರಿಗೆ ಗಂಧಪುಷ್ಪಫಲತಾಂಬೂಲಗಳನ್ನು ಹಂಚಿ ಸ್ವಾಮಿಗೆ ಮಹಾಮಂಗಳಾರತಿಯನ್ನು ನಡೆಸಿದನಂತರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಶನಿವಾರವೂ ಮಹಸ್ವಾಮಿಗೆ ರುದ್ರಾಭಿಷೇಕವೂ ಭಕ್ತಮಾಹೇಶ್ವರರಿಗೆ ಸಂತರ್ಪಣೆಯೂ ಬಹುವಿತರಣೆಯಿಂದ ನಡೆಯಿತು. ಮಹಾಶಯರೆ, ಇದಲ್ಲವೆ ದೈವಭಕ್ತಿ, ಗುರುಹಿರಿಯರಲ್ಲಿ ಭಕ್ತಿ ಮಾತಾಪಿತೃಭಕ್ತಿ! ಶ್ರೀಮನ್ ಮಹಾರಾಜನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರು ಮೇಲ್ಕಂಡ ಶಿವಲಿಂಗಪ್ರತಿಷ್ಠೆಯು ಸಾಂಗವಾಗಿ ನೆರವೇರಿದಬಗ್ಗೆ ಮಹಾದೇವನ ಮಹಿಮೆಯು ಪ್ರಜ್ವಲಿಸಲೆಂದು ಆಶೀರ್ವದಿಸಿ ಪತ್ರವನ್ನು ಸದರಿ ರುದ್ರಪ್ಪಶೆಟ್ಟರಿಗೆ ಅಪ್ಪಣೆ ಕೊಡಿಸಿರುವರು.

ಪ್ರತ್ಯಕ್ಷದರ್ಶೀ.

ವೇದಾಧ್ಯಯನವು ಹಾಗೂ ಬ್ರಾಹ್ಮಣರ ದುರ್ವಾದವು.

(ಲೇಖಕ—ಸ್ವಾಮಿವಿರೂಪಾಕ್ಷಒಡೆಯರು.)

ಬ್ರಾಹ್ಮಣರು ತಮ್ಮ ಸ್ವಾರ್ಥಬುದ್ಧಿಯಿಂದ ವೇದಗಳ ಅಧ್ಯಯನ ಅಧ್ಯಾಪನ ಕೃತಿಯು ತಮ್ಮ ಪಂಗಡದವರಿಗೇನೇ ನಿಯತವಾಗಿರುವದೆಂದು ವಾದಿಸುತ್ತಿರುವರು. ಆದರೆ ಇದು ಸರ್ವಥಾ ಅನ್ಯಾಯವಾದುದರಿಂದ ಪುರಾತನಕಾಲದಲ್ಲಿದ್ದ ಋಷಿಗಳ ಪದ್ಧತಿಯಂತೆ ಸರ್ವಮಾನವಪ್ರಾಣಿಗಳ ಸುಖಸಾಧನವಾಗಿಯೇ ವೇದಜ್ಞಾನವು ಲಭಿಸಿರುವದೆಂದು ಯೋಚಿಸಿಕೊಳ್ಳತಕ್ಕದ್ದು. ಹೀಗಿದ್ದಾಗ್ಯೂ ಕೆಲವು ಕಾಲದಿಂದ ಇದುವರಿವಿಗೂ ವೇದಗಳ ಅಧ್ಯಯನ ಅಧ್ಯಾಪನ ಕಾರ್ಯವು ನಮ್ಮದೊಂದು ಜಾತಿಗೇನೇ ಗುತ್ತಿಗೆಯಾಗಿ ಬಂದಿರುವದೆಂದು ಹೇಳುವ ದುರ್ವಾದವನ್ನು ಇನ್ನುಮೇಲಾದರೂ ಬ್ರಾಹ್ಮಣರು ಬಿಟ್ಟುಕೊಟ್ಟು ಸರ್ವರನ್ನೂ ವೇದಜ್ಞರನ್ನಾಗಿಮಾಡುವ ಪ್ರಯತ್ನಶೀಲರಾಗುವದು ಶ್ರೇಯಸ್ಕರವು. ಹೀಗಾಗದಿದ್ದ ಪಕ್ಷದಲ್ಲಿ ಇತರ ಜನಾಂಗವು ರೇಗಿಗೆದ್ದು ಆ ಬ್ರಾಹ್ಮಣವರ್ಗವನ್ನು ಸರ್ವರೀತಿಯಿಂದಲೂ ತಿರಸ್ಕರಿಸಿ ದೂರೀಕರಿಸದೆ ಬಿಡಲಾರದು. ಅಂದಮೇಲೆ ಇದರಿಂದ ದೇಶಕ್ಕೆ ಮುಂದೊದಗುವ ಉನ್ನತಿಗೆ ಮಹಾನರ್ಥವುಂಟಾಗುವ ಸಂಭವವಿರುವದು. ಇನ್ನು ಬ್ರಾಹ್ಮಣರು ಮೇಲೆ ತೋರಿದ ಸೌಮ್ಯದಿಂದ ಮಾಡಿರುವೀ-ಉಪದೇಶಕ್ಕೆ ಒಪ್ಪದಿದ್ದ ಪಕ್ಷದಲ್ಲಿ ತಮಗೆ ಜನ್ಮಸಿದ್ಧವಾದ ಬ್ರಾಹ್ಮಣ್ಯದ ಹಕ್ಕುಂಟೆಂತಲೂ, ತಮ್ಮದೊಂದು ಜಾತಿಯೇ ವೇದಾಧ್ಯಯನ ಅಧ್ಯಾಪನಕ್ಕೆ ಬದ್ಧವಾದದ್ದೆಂತಲೂ, ಇದರಂತೆ ವೇದಮಂತ್ರಗಳಲ್ಲಿ ಸ್ಥಿರಪಡಿಸಿರುವದೆಂಬುವದನ್ನು ವೇದಾಜ್ಞೆಯಮೂಲಕ ಸ್ಥಾಪಿಸಲು ಸಿದ್ಧರಾಗತಕ್ಕದ್ದು.

ಇನ್ನು ಈ ಶಾಸ್ತ್ರಾರ್ಥವಾದಕ್ಕೆ ಮೈಸೂರುಪ್ರಾಂತಿಕ ಅಥವಾ ಕರ್ಣಾಟಕಪ್ರಾಂತದ ಕಿಂಬಹುನಾ ಮಹಾರಾಷ್ಟ್ರಾದಿ ಯಾವ ದೇಶಗಳ ಬ್ರಾಹ್ಮಣಪಂಡಿತರಾಗಲಿ, ಆ ಬ್ರಾಹ್ಮಣರ ದುರ್ವಾದವನ್ನನುಕರಿಸುವ ಯಾವದೇ ಜಾತಿಯ ಪಂಡಿತರಾಗಲಿ ಶಾಸ್ತ್ರಾರ್ಥಕ್ಕೆ ಸಿದ್ಧರಾಗಿ ಅವರೊಡನೆ ಬರಬಹುದು. ಇನ್ನು ನಾನಾದರೂ ಪವಿತ್ರವಾದ ವೀರಶೈವಜನಾಂಗಕ್ಕೆ ವೇದಾಧ್ಯಯನ ಅಧ್ಯಾಪನ ಕೃತಿಯು ತ್ರಿಕಾಲದಲ್ಲಿಯೂ ಅಬಾಧಿತವಾದದ್ದೆಂದು ಮತ್ತು ಈ ಕೃತಿಯು ಪಾರಂಪರ್ಯವಾಗಿ ಇವರುಗಳಲ್ಲಿ ಸ್ಥಿರಗೊಳಿಸಲ್ಪಟ್ಟಿರುವದೆಂದು ಹಾಗೂ ವೇದಾಧ್ಯಯನ ಅಧ್ಯಾಪನಪ್ರಯೋಗಗಳಿಗೆ ವೀರಶೈವರು ಅರ್ಹರೆಂದು ಸಪ್ರಮಾಣ ಶಾಸ್ತ್ರಾರ್ಥದಿಂದ ಸಿದ್ಧಮಾಡಲು ಸಿದ್ಧನಿದ್ದೇನೆ.

ಈ ವಿಷಯಕವಾದ ವಾದವು ಮೈಸೂರುದೇಶದಲ್ಲಿ ವಿಶೇಷ ಪ್ರಬಲವಾಗಿರುವದರಿಂದ, ನಮ್ಮ ಮತ್ತು ಸದರಿ ಬ್ರಾಹ್ಮಣರ ಶಾಸ್ತ್ರಾರ್ಥವಾದವು ಘನವನ್ನೈದಿದ ಮೈಸೂರು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿಯೇ ನಡೆದು ಈ ವಾದದಲ್ಲಿ ಅವರೇ ಮಧ್ಯಸ್ಥರಾಗಿ ನಿರ್ಣಯವನ್ನು ಕೊಟ್ಟಲ್ಲಿ ಯಾವ ಪಕ್ಷದವರಿಗೂ ಸಂದೇಹವು ಬರಲಾರದು. ಯಾಕೆಂದರೆ, ನಮ್ಮ ಶ್ರೀಮನ್ ಮೈಸೂರು ಮಹಾರಾಜರವರು ಮಹಾತಾತ್ವಿಕರೂ, ವೇದೈಕನಿಷ್ಠರೂ, ಉದಾರಚರಿತರೂ, ಪ್ರಜಾಪ್ರೇಮಿಗಳೂ, ನಿಷ್ಪಕ್ಷಪಾತಿಗಳೂ, ಗುರುದೇವತಾಭಕ್ತಿಪರರೂ ಎಂಬದಾಗಿ ನಮ್ಮೆಲ್ಲರಿಗೂ ಅವರಲ್ಲಿ ಸಂಪೂರ್ಣವಾದ ವಿಶ್ವಾಸವೂ, ಅಭಿಮಾನವೂ ನೆಲೆಗೊಂಡಿರುವುದರಿಂದ ನಾವುಗಳೆಲ್ಲರೂ ಅವರು ಕೊಟ್ಟ ತೀರ್ಪನ್ನೇ ಅಂತಃಕರಣಪೂರ್ವಕವಾಗಿ ಒಪ್ಪುವೆವು.

ಈರೀತಿ ಶಾಸ್ತ್ರಾರ್ಥಮೂಲಕ ನಿರ್ಣಯವಾಗುವದರಿಂದ ಮೈಸೂರು ದೇಶದಲ್ಲಿ ಪ್ರಬಲವಾಗಿದ್ದ ವೇದಶಾಸ್ತ್ರಾಭ್ಯಾಸದ ವಾದವು ಸಂಪೂರ್ಣವಾಗಿ ತಗ್ಗಿ ಕೆಲವು ಸಂಕುಚಿತ ಸ್ವಾರ್ಥಬುದ್ಧಿಯುಳ್ಳ ಕರ್ಮಠಬ್ರಾಹ್ಮಣಪಂಡಿತರ ದುರ್ಬೋಧೆಗೆ ಒಳಪಟ್ಟು ನೂತನಶಿಕ್ಷಿತಪದವೀಧರರಾದ ಆಫೀಸರುಗಳೂ, ಕಮಿಷನರ್, ಕೌನ್ಸಿಲರ್ ಮೊದಲಾದ ವಿದ್ಯಾವಂತರಾದ ಪುಢಾರಿಗಳೂ ತಾವು ಎಷ್ಟೇ ವಿದ್ವಾಂಸರಾದಾಗ್ಯೂ ತಮ್ಮ ನಿಷ್ಪಕ್ಷಪಾತವಾದ ಮನವರಿಕೆಯನ್ನು ಮರೆಮಾಚಿ ಲೋಕಾಪವಾದಕ್ಕೀಡಾಗುವ ಹಾಗೂ ಪ್ರಜೆಗಳ ಹಿತಚಿಂತನೆಗೆ ವಿರೋಧವಾಗಿರುವ ಹುಕ್ಕುಂಗಳನ್ನೂ ಪ್ರತಿಜವಾಬುಗಳನ್ನೂ ಕೊಡುವ ದುರ್ಘಟಪ್ರಸಂಗವನ್ನು ತಪ್ಪಿಸಿಕೊಳ್ಳುವ ಸಮಯವು ಇಂಥಾ ಶಾಸ್ತ್ರಾರ್ಥ ನಿರ್ಣಯದಿಂದಲೇ ಎಂಬುದನ್ನು ಸರಕಾರದವರು ಲಕ್ಷ್ಯದಲ್ಲಿ ತಂದು ಇಂಥಾ ವಾದಕ್ಕೆ ಪ್ರೋತ್ಸಾಹಕೊಡುವದು ಅತ್ಯುತ್ತಮವೆಂದು ನಾನು ಸೂಚಿಸುವೆನು. ಹಾಗೂ ಶಾಸ್ತ್ರಾರ್ಥಕ್ಕೆ ನಾನು ಸಿದ್ಧನಿರುವೆನು.

ಇನ್ನು ಈತೆರದ ಕೋಲಾಹಲವು ನೈಜಾಂರಾಜ್ಯದಲ್ಲಿ ಬಹುಕಾಲದಿಂದಲೂ ನಡೆಯುತ್ತ ಬಂದದ್ದನ್ನು ಘನವನ್ನೈದಿದ ನೈಜಾಮರವರು ಚೆನ್ನಾಗಿ ಪರ್ಯಾಲೋಚಿಸಿ ಆಯಾಯ ಧಾರ್ಮಿಕಶಾಸ್ತ್ರೀಯವಾದಗಳನ್ನು ಆಯಾಯ ಪಂಗಡದ ಪಂಡಿತರಮೂಲಕವಾಗಿಯೇ ಇತ್ಯರ್ಥಮಾಡಿ ಪರಿಸಮಾಪ್ತಿಗೊಳಿಸುವ ವಿಚಾರವುಳ್ಳವರಾಗಿ ಪರಲೀ ರುದ್ರಾಭಿಷೇಕದಂಥ ಕೋಲಾಹಲವನ್ನು ಆಯಾಯ ಪಂಗಡದವರ ಶಾಸ್ತ್ರಾರ್ಥವಾದದಿಂದಲೇ ಶಾಂತಿಗೊಳಿಸಿ ನಿಷ್ಪಕ್ಷಪಾತಿಗಳೂ ಪ್ರಜಾಹಿತಚಿಂತಕರೂ ಎಂಬ ಕೀರ್ತಿಗೆ ಭಾಗಿಗಳಾದದ್ದು ಸರ್ವರಿಗೂ ಸಾಕ್ಷಿಭೂತವಾಗಿರುತ್ತದೆ. ಘನವನ್ನೈದಿದ ಮೈಸೂರು ಸರಕಾರದವರು ಸಹ ಇದನ್ನೇ ಅನುಸರಿಸುವರೆಂದು ಅಪೇಕ್ಷಿಸುವೆನು. ಯಾಕೆಂದರೆ, ಪೂರ್ವಕಾಲದ ರಾಜರುಗಳು ಇಂಥ ಧಾರ್ಮಿಕವಾದ ಪ್ರಸಂಗಗಳಲ್ಲಿ ಈರೀತಿಯಾದ ಪಂಡಿತರುಗಳ ಶಾಸ್ತ್ರಾರ್ಥವಾದಗಳಿಂದಲೇ ಧಾರ್ಮಿಕವಿಷಯಗಳನ್ನು ನಿರ್ಣಯಿಸಿ ಪ್ರಜಾಹಿತಚಿಂತಕರೆಂಬ ಅಜರಾಮರ ಕೀರ್ತಿಗೆ ಪಾತ್ರರಾಗಿ ಹೋದದ್ದು ನಮ್ಮ ಭಾರತೀಯರ ಪೂರ್ವೇತಿಹಾಸದಿಂದ ಕಂಡುಬರುವುದರಿಂದ ಈ ಶಾಸ್ತ್ರಾರ್ಥಮಾರ್ಗವೇ ಧಾರ್ಮಿಕವಿಷಯಗಳ ನಿರ್ಣಯಕ್ಕೆ ಶಾಂತಿಕರವಾದದ್ದೆಂಬದಾಗಿ [illegible] ಹೇಳುವೆನು.

ವೀರಶೈವಸಿದ್ಧಾಂತವು.

ಲೇಖಾಂಕ ೨.

(ಲೇಖಕ-ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಹಿರೇಮಠ ಹೋಳು ಸಂಸ್ಕೃತಕಾಲೇಜು ಯಾದಗಿರಿ.)

ನನ್ನ ಮೊದಲನೇ ಲೇಖಾಂಕದಲ್ಲಿ ಪವಿತ್ರಂತೆ ಎಂಬುವ ಋಗ್ವೇದಮಂತ್ರಕ್ಕೆ ಲಿಂಗಧಾರಣಪರ ಅರ್ಥವು ಹೇಗೆ ಸಮಂಜಸವಾಗುತ್ತದೆಂಬುವದನ್ನು ಸ್ಪಷ್ಟವಾಗಿ ವಿವರಿಸಿದ್ದು ವಾಚಕರ ಸ್ಮರಣೆಯಲ್ಲಿರಬಹುದು. ಮನುಷ್ಯನಿಗೆ ಪಿತ್ತವಿಕಾರವಾಗಲು ಜಗತ್ತಿನಲ್ಲಿರುವ ವಸ್ತುಗಳೆಲ್ಲ ಹಚ್ಚಗೇ ಕಾಣುವಂತೆ ವೀರಶೈವಧರ್ಮದ ವಿಷಯಕ್ಕೆ ಪಿತ್ತದಿಂದ ತುಂಬಿದ ಬ್ರಾಹ್ಮಣರಿಗೆ ಈ ಧರ್ಮದ ವಿಷಯಗಳು ವಿರುದ್ಧ ಕಾಣುವದು ಸ್ವಭಾವಸಿದ್ಧವಿರುತ್ತದೆ. ಯಾಕೆಂದರೆ, "ಓಂ ಊರ್ಧ್ವಾಯನಮಃ ಊರ್ಧ್ವಲಿಂಗಾಯನಮಃ ಇತ್ಯಾದಿ. ಏತತ್ಸೋಮಸ್ಯಸೂರ್ಯಸ್ಯಸರ್ವಲಿಂಗಗ್ಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಇದರಲ್ಲಿ ನಮಸ್ಕಾರ ಪರಾಮರ್ಶಕಪೂರ್ವಕ ಹೇಳಿರುವದರಿಂದ ಲಿಂಗಧಾರಣಪರ ಅರ್ಥಮಾಡುವದು ಪ್ರಕರಣವಿರೋಧವೆಂದು ಇವರ ಪ್ರಶ್ನೆಯು. ಒಂದುಪ್ರಕರಣದಲ್ಲಿ ವಿನಿಯೋಗಿಸಿದ ಮಂತ್ರಕ್ಕೆ ಮತ್ತೊಂದು ಪ್ರಕರಣದಲ್ಲಿ ಅದರ ವಿನಿಯೋಗವು ಸಂಭವವಿರುವದೆಂದು ಮೊದಲು ಪವಿತ್ರಂತೆ ಎಂಬುವ ಮಂತ್ರದ ವಿವೇಚನೆಯಲ್ಲಿ ಚೆನ್ನಾಗಿ ಉತ್ತರ ಹೇಳಲ್ಪಟ್ಟಿರುತ್ತದೆ. ಈ ಮಂತ್ರಕ್ಕೆ ಲಿಂಗಧಾರಣಪರ ಅರ್ಥಮಾಡುವದು ಅತ್ಯಂತ ಯೋಗ್ಯವಿರುತ್ತದೆ. ಯಾಕೆಂದರೆ, ಉಪಕ್ರಮ ಮತ್ತು ಉಪಸಂಹಾರಗಳಲ್ಲಿ ಶಿವಪರತ್ವವೇ ಇರುವದರಿಂದ ಮಧ್ಯದಲ್ಲಿ ಹೇಳಿದ ಚಂದ್ರಸೂರ್ಯರಿಗೆ ನಮಸ್ಕಾರವನ್ನು ಹೇಳುವದು ಸಂದರ್ಭವಿರೋಧವು ಸಂಭವಿಸುವದು. ಅದ್ದರಿಂದ ಸೋಮಸೂರ್ಯ ಶಬ್ದಗಳಿಗೆ ಕೆಳಗೆ ಬರೆದಂತೆ ಅರ್ಥವನ್ನು ಮಾಡಬೇಕು. ಹೇಗೆಂದರೆ—"ಉಮಯಾಸಹಿತೇದೇವಸೋಮ ಇತ್ಯುಚ್ಯತೇ ಬುಧೈಃ ಸಯೇನಕಾರಣಂ ನಾನ್ಯೋವಿಷ್ಣೋರಪಿಚವೈಶ್ರುತಿಃ" ಈ ಉಪಬೃಂಹಣ ಪ್ರಮಾಣದಿಂದ ಸೋಮಶಬ್ದಕ್ಕೆ ಶಿವಪರತ್ವವೂ, ಸೂರ್ಯಶಬ್ದಕ್ಕೆ ಸೂರ್ಯಮಂಡಲಾಂತರ್ವರ್ತಿತ್ವರೂಪಾರ್ಥವನ್ನು ಸೋಮಶಬ್ದವಾಚ್ಯನಾದ ಶಿವನಿಗೆ ಕಲ್ಪಿಸಿ ವಿಶೇಷಣ ವಿಶೇಷ್ಯಗತಿಯಿಂದ ಶಿವಪರತ್ವವನ್ನೇ ಪ್ರತಿಪಾದಿಸುವದು ಅವಶ್ಯವಿರುವದರಿಂದ ಈ ಮಂತ್ರಕ್ಕೆ ಲಿಂಗಧಾರಣವಿಷಯವನ್ನು ಹೇಳುವದು ಸಂದರ್ಭವಿರೋಧವಾಗಲಾರದು. "ಅಯಂಮೇಹಸ್ತೋಭಗವಾನ್ ಅಯಂಮೇಭಗವತ್ತರಃ। ಅಯಂಮೇವಿಶ್ವಭೇಷಜೋಯಗ್ಂ ಶಿವಾಭಿಮರ್ಶನಃ॥ ಅಯಂಮಾತಾ ಅಯಂಪಿತಾ ಅಯಂಜೀವಾತುರಾಗಮತ್। ಇದಂತವಪ್ರಸರ್ಪಣಂ ಸುಬಂಧವೇಹಿನಿರಿಹೀತಿ" ಈ ಮಂತ್ರಕ್ಕೆ ಸವಿತೃದೇವತಾಕತ್ವದಿಂದ ಶಿವಲಿಂಗದೇವತಾಕವಲ್ಲವೆಂದು ತೋರಿಸಿರುವದನ್ನು ನೋಡಿದರೆ ಪೂರ್ವಾಪರವಿಚಾರಶೂನ್ಯರೆಂದು ತಂದುಬರುತ್ತದೆ. ಯಾಕೆಂದರೆ, ಈ ಮಂತ್ರದಲ್ಲಿ ಉಕ್ತವಾಗಿರುವ ಭಗವಚ್ಛಬ್ದದಿಂದ ಪರಶಿವನೆಂಬುವ ಅರ್ಥವೇ ಸಿದ್ಧವಾಗುವದು. ಲಿಂಗಧಾರಣಚಂದ್ರಿಕಾ ಪುಟ 33ರಲ್ಲಿ "ಅಥೈನಂಭಗವಂತಂ ರುದ್ರಂಕುಮಾರಃ ಪಪ್ರಚ್ಛ ಅಥಕಾಲಾಗ್ನಿರುದ್ರಂಭಗವಂತಂ ಸನತ್ಕುಮಾರಃ ಪಪ್ರಚ್ಛೇತ್ಯಾದಿ" ಶ್ರುತಿಗಳಲ್ಲಿಯು ಮತ್ತು ಇತಿ "ಸಸ್ತೂಯಮಾನೋಸು ಭಗವಾನ್ ವೃಷಭಧ್ವಜಃ" ಎಂಬುವ ಹರಿವಂಶಾದಿಗಳಲ್ಲಿ ಭಗವಚ್ಛಬ್ದವನ್ನು ಪರಶಿವಪರವಾಗಿಯೇ ಉಪಯೋಗಿಸಿರುವರು. "ಆದಿತ್ಯೋಭಗವಾನ್ ಸೂರ್ಯೋನೀಲಗ್ರೀವಸ್ತ್ರಿಲೋಚನಃ ಅಧೀಯತೆಸಹಸ್ರಾಂಶುಸಾಮಗಾಧ್ವರ್ಯುಹೋತೃಭಿಃ" ಎಂಬುವ ಆದಿತ್ಯಪುರಾಣವಚನದಿಂದ ಭಗವಚ್ಛಬ್ದಪ್ರಯೋಗವು ಸವಿತೃದೇವತಾವಿಷಯದಲ್ಲಿ ಪ್ರಯೋಗಿಸಿರುವದರಿಂದ ಪರಶಿವಪರ ಅರ್ಥವು ಆಗುವದಿಲ್ಲವೆಂದು ಹೇಳುವದಾದರೂ ಯೋಗ್ಯವಿರುವದಿಲ್ಲ. ಯಾಕೆಂದರೆ, ಲಿಂಗಧಾರಣಚಂದ್ರಿಕಾ ಪುಟ 33 "ಯಯೇಷೋ ಅಂತರಾದಿತ್ಯೇಹಿರಣ್ಮಯಃ ಪುರುಷೋದೃಶ್ಯತೆ ಇತ್ಯಾರಭ್ಯ ಅಂಬಿಕಾಪತಯೆ ಉಮಾಪತಯೆ ಪಶುಪತಯೇನಮೋನಮಃ" ಇತ್ಯಂತವಾಗಿಹೇಳಿರುವ ತೈತರೀಯ ಉಪನಿಷತ್ ವಚನದಿಂದ ಮತ್ತು "ಸೌರಮಂಡಲಮಧ್ಯಸ್ಥಂ ಸಾಂಬಂ ಸಂಸಾರಭೇಷಜಂ" ಹಿಗೆಂದು ಮತ್ತು "ಮಂಡಲಾಂತರ್ಗತಹಿರಣ್ಮಯಂ ಭ್ರಾಜಮಾನವಪುಷಂಶುಚಿಸ್ಮಿತಂ" ಇತ್ಯಾದಿ ವಚನಗಳಿಂದ ಪರಶಿವನಿಗೆ ಆದಿತ್ಯಮಂಡಲ ಮಧ್ಯವರ್ತಿತ್ವವು ಪ್ರತಿಪಾದಿಸಿರುವದರಿಂದ ಆದಿತ್ಯನಿಗೂ ಶಿವನಿಗೂ ಅವಿಭಾಜ್ಯಮಾನವನ್ನು ತೋರಿಸುವದಕ್ಕಾಗಿ ಆದಿತ್ಯಗತಸ್ತ್ರಿಲೋಚನಃ ಎಂದು ಹೇಳುವದನ್ನು ಬಿಟ್ಟು ಆದಿತ್ಯಸ್ತ್ರಿಲೋಚನಃ ಎಂಬುವ ಉಕ್ತಿಯಂತೆ ಅಯಂಮೆಹಸ್ತೋಭಗವಾನ್ ಎಂಬುವ ಮಂತ್ರದಲ್ಲಿಯಾದರೂ ಹಸ್ತಶಿವಲಿಂಗಗಳಿಗೆ ಅವಿಭಾಜಮಾನ ಸಂಬಂಧವನ್ನು ತಿಳಿಸುವದಕ್ಕಾಗಿ ಹಸ್ತಗತ ಎಂದು ಹೇಳದೆ ಹಸ್ತೋಭಗವಾನ್ ಎಂದು ಹೇಳಿರುವದು ಯುಕ್ತವಾಗಿರುವದು. ಅಂದಮೇಲೆ ಕೇವಲ ಸವಿತೃದೇವತಾಕತ್ವವನ್ನು ಹೇಳುವದು ಸಹ ಸಂದರ್ಭವಿರೋಧವಾಗುವದು. ಅದಕಾರಣ ಲಿಂಗಧಾರಣಚಂದ್ರಿಕಾ ಪುಟ 34 ರಲ್ಲಿ "ಸಂಸ್ಕೃತ್ಯ ಗುರುಣಾದತ್ತಂ। ಷಡಧ್ವನ್ಯಾಸಪೂರ್ವಕಂ। ವಾಮಹಸ್ತಗತಂಲಿಂಗಂ। ಸಾವಧಾನೇನಪೂಜಯೇತ್। ಧಾರಯೇದ್ವಸ್ತುಹಸ್ತಾದೌ। ಲಿಂಗಾಕಾರಂ ಶಿವಂಸದಾ। ತಸ್ಯಹಸ್ತಸ್ಥಿತಂವಿದ್ಧಿ ಮತ್ಪದಂ ಸಂಪದಾಂ ಪದಂ" ಅಂದರೆ, ಷಡಧ್ವನ್ಯಾಸಪೂರ್ವಕವಾಗಿ ಸಂಸ್ಕಾರಮಾಡಿ ಗುರುವಿನಿಂದ ಕೊಡಲ್ಪಟ್ಟಲಿಂಗವನ್ನು ವಾಮಹಸ್ತದಲ್ಲಿರಿಸಿ ಶಾಂತಮನಸ್ಸಿನಿಂದ ಪೂಜಿಸಬೇಕು. ಲಿಂಗಾಕಾರನಾದ ಶಿವನನ್ನು ಹಸ್ತಾದಿಗಳಲ್ಲಿ ಯಾವಾಗಲೂ ಯಾವನು ಧರಿಸುವನೋ ಸಂಪತ್ತುಗಳಿಗೆ ಆಕರವಾದ ನನ್ನ ಸ್ಥಾನವು ಅವನ ಹಸ್ತಗತವೆಂದು ತಿಳಿ. ಈ ಪ್ರಕಾರವಾದ ವಾತುಲಾಗಮ-ವೀರಾಗಮಾದಿಗಳ ಉಪಬೃಂಹಣವಚನಾನುಸಾರವಾಗಿ ಹಸ್ತಾದಿಗಳಲ್ಲಿ ಅವಿಭಾಜ್ಯಸಂಬಂಧದಿಂದ ಧಾರಣವು ಸಂಭವಿಸುವದು. ಅದಕಾರಣ ಶಿವಪರತ್ವವು ವಿರೋಧವಾಗಲಾರದು. "ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ। ಸರ್ವವ್ಯಾಪೀಚಭಗವಾನ್ ತಸ್ಮಾತ್ ಸರ್ವಗತಃ ಶಿವಃ" ಎಂಬುವ ಶ್ವೇತಾಶ್ವತರೋಪನಿಷತ್ತಿನ ಈ ಶ್ಲೋಕವು ಕೇವಲ ಪರಮಾತ್ಮನ ವರ್ಣನೆಯ ವಿಷಯಕವಾದದ್ದರಿಂದ ಲಿಂಗಧಾರಣ ವಿಷಯಕವು ಅಲ್ಲವೆಂಬುವುದು ಕೇವಲ ಮೂಢತನವೇ ಸರಿ. ಯಾಕಂದರೆ, "ತಸ್ಯಾಭಿಧ್ಯಾನಾತ್ ಯೋಜನಾತ್ ತತ್ವಭಾವಾತ್" ಎಂಬುವ ಶ್ವೇತಾಶ್ವತರ ಉಪನಿಷತ್ತಿನ ಪೂರ್ವಮಂತ್ರದಲ್ಲಿ "ತಸ್ಯಾಭಿಧ್ಯಾನಾತ್" ಅಂದರೆ, ಜ್ಯೋತಿರ್ಲಿಂಗರೂಪವಾಗಿ ಅನುಸಂಧಾನಮಾಡುವದರಿಂದ ಯೋಜನಾತ್ ಅಂದರೆ, ಇಷ್ಟಲಿಂಗರೂಪವಾಗಿ ಧರಿಸುವದರಿಂದ ಎಂಬುವದನ್ನು ತೋರಿಸುವದರಲ್ಲಿ ಎಲ್ಲಿ ಧರಿಸತಕ್ಕದ್ದು ಎಂದು ಸಂದೇಹವು ಉಂಟಾದಲ್ಲಿ ಧಾರಣಾಧಿಕರಣವನ್ನು ತೋರಿಸುವದಕ್ಕಾಗಿ "ಸರ್ವಾನನ ಶಿರೋಗ್ರೀವಃ" ಎಂಬುವ ಮಂತ್ರವು ಪ್ರವೃತ್ತವಾಯಿತು. ಗುಹಾಶಯ ಎಂಬುವಲ್ಲಿ ಅಂತರ್ಲಿಂಗಧಾರಣಸ್ಥಲವನ್ನು ಹೇಳಿ ಬಹಿರ್ಲಿಂಗಧಾರಣಸ್ಥಾನವನ್ನು ತೋರಿಸದೆ ಇದ್ದರೆ ಸಂದರ್ಭವಿರೋಧವಾಗುವದು. ಪಕ್ಷಾಂತರ ತೋರಿಸದೆ ಇದ್ದರೆ "ಸರ್ವಾನನ ಶಿರೋಗ್ರೀವಃ" ಎಂಬುವ ಪದಗಳು ನಿರರ್ಥಕವಾಗಬೇಕಾಗುವವು. ಅದು ಹೇಗೆಂದರೆ, "ಸರ್ವಾನನ ಶಿರೋಗ್ರೀವಃ" ಈ ವಾಕ್ಯದಿಂದ ಶಿವನಿಗೂ ಆನನ ಶಿರೋಗ್ರೀವಗಳಿಗೂ ಅಭೇದವನ್ನು ಹೇಳುವಿರೋ, ತದ್ವ್ಯತಿರಿಕ್ತತ್ವವನ್ನು ಹೇಳುವಿರೋ? ಮೊದಲನೇ ಅರ್ಥವು ಅಂದರೆ ಅಭೇದವು ಆಗುವದಿಲ್ಲ. ಯಾಕಂದರೆ "ಸರ್ವಾತ್ಮಕಂ [illegible]" ಎಂಬುವ ವಾಕ್ಯದಿಂದ "ಸರ್ವಾನನ ಶಿರೋಗ್ರೀವಃ" ಎಂಬುವ ವಾಕ್ಯಕ್ಕೆ ಮಾತ್ರ ಅಭೇದವನ್ನು ಹೇಳುವದಾದರೆ [illegible] ಎಂಬುವ [illegible] [illegible] ಸರ್ವಾನನ ಶಿರೋಗ್ರೀವ

ವ್ಯಕ್ತಿತ್ವವನ್ನು ಹೇಳುವದಾದರೆ, ತಸ್ಮಾತ್ ಸರ್ವಗತಃಶಿವಃ ಎಂಬುವ ವಾಕ್ಯದಲ್ಲಿ ಹೇಳಿದ ಸರ್ವಗತಸ್ವರೂಪವು ಬ್ರಹ್ಮಲಿಂಗಕ್ಕೆ ಸಂಕೋಚವಾಗಬೇಕಾಗುವದು. ನಮ್ಮ ಮತದಲ್ಲಿಯಾದರೋ ಸರ್ವವಾಕ್ಯಗಳು ಸಾರ್ಥಕವಾಗುತ್ತವೆ. ಆದ್ದರಿಂದ ಸರ್ವಾನನ ಶಿರೋಗ್ರೀವಾಧಿಕರಣ ಲಿಂಗಧಾರಣವು ಸಂದರ್ಭವಿರೋಧವಾಗಲಾರದು. ಮತ್ತು - ಮುಹೇಮಂತ್ರಂ ಹೃದಿಧ್ಯಾನಂ ಮಸ್ತಕೇ ಲಿಂಗಧಾರಣಂ | ಶಿಖಾ ರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣ ಲಕ್ಷಣಂ - ಗೌತಮಸ್ಮೃತಿಯಲ್ಲಿರುವ ಈ ಶ್ಲೋಕವು ಆರಾಧ್ಯರಿಗೆ ಸಂಬಂಧವಿರುವದಲ್ಲದೆ ವೀರಶೈವರಿಗೆ ಸಂಬಂಧವಿಲ್ಲವೆಂದು ಈ ಬ್ರಾಹ್ಮಣ ನಾಮಧಾರಿಗಳು ಬಡಬಡಿಸುವರು. ಆದರೆ, ಗೌತಮಸ್ಮೃತಿಯಲ್ಲಿ, ಯಜ್ಞೋಪವೀತ ಲಿಂಗಧಾರಣ ಈ ಎರಡನ್ನು ಧರಿಸಿದವನು ಬ್ರಾಹ್ಮಣನೆಂದು ಹೇಳದೆ ಕೇವಲ ಮಂತ್ರಧ್ಯಾನ ರುದ್ರಾಕ್ಷಭಸ್ಮಗಳಿಂದ ಕೂಡಿ ಲಿಂಗ ಒಂದನ್ನೇ ಧರಿಸಿದವನು ಬ್ರಾಹ್ಮಣನು ಎಂದು ಹೇಳಿರುವದರಿಂದ ಆರಾಧ್ಯ (ಲಿಂಗ ಮತ್ತು ಜನಿವಾರವನ್ನು ಧರಿಸಿದ) ಬ್ರಾಹ್ಮಣನೆಂದು ಎಂಥ ಮಂದಬುದ್ಧಿಯುಳ್ಳವನಿಗಾದರೂ ಅರ್ಥವಾಗಲಾರದು. ಕೈವಲ್ಯೋಪನಿಷತ್ ಪುಟ 257 -ವಿವಿಕ್ತದೇಶೇಚ ಸುಖಾಸನಸ್ಥ | ಶುಚಿಸ್ಸಮಗ್ರೀವ ಶಿರಶ್ಶರೀರಃ - ಅತ್ಯಾಶ್ರಮಸ್ಥಃ ಎಂಬುವ ಮಂತ್ರದಿಂದ ಮತ್ತು ಉಪಬೃಂಹಣ ಬ | ಅಧ್ಯಾಯ 6 -ಭವಿಸಂಸರ್ಗರಹಿತೆ ವಿವಿಕ್ತೇಚ ಸುಖಾವಹೆ | ಸುಖಾಸನಸ್ಥಿತಃ ಸಿದ್ಧಃ | ಸಮಗ್ರೀವ ಶಿರೋಂಗವಾನ್ | ವಿರಜಾನಲಜಂಭಸ್ಮ | ಗೃಹೀತ್ವಾತ್ಯಂತಪಾವನಃ | ಅಗ್ನಿರಿತ್ಯಾದಿಭಿರ್ಮಂತ್ರೈಃ | ಸಪ್ತಭಿಸ್ತ್ವಾಭಿಮಂತ್ರಿತಂ | ಶರೀರೋದ್ಧೂಲನಂ ಕೃತ್ವಾ | ತ್ರಿಪುಂಡ್ರಸ್ಯತುಧಾರಣಂ | ರುದ್ರಾಕ್ಷಧಾರಣಂ ಚೈವ | ಷಡಕ್ಷರಜಪಸ್ತಥಾ | ಧೃತೇಷ್ಟಲಿಂಗಪೂಜಾಚ | ಸಂಸ್ಕಾರಾಃ ಪಂಚಕೀರ್ತಿತಾಃ | ಅತ್ಯಾಶ್ರಮ ಇತಿಖ್ಯಾತೇ ಮುನಿಭಿಃ ತತ್ವದಶಿಭಿಃ | ಎಂಬುವ ಪ್ರಮಾಣದಿಂದ ಬ್ರಹ್ಮವಿದ್ಯಾಧಿಕಾರಿಯನ್ನು ಹೇಳುವ ವಿಷಯದಲ್ಲಿ ಭಸ್ಮಧಾರಣ ರುದ್ರಾಕ್ಷಧಾರಣ ಪಂಚಾಕ್ಷರಮಂತ್ರಜಪ ಭಸ್ಮೋದ್ಧೂಲನ ಧರಿಸಿದ ಇಷ್ಟಲಿಂಗಪೂಜಾ ಈ ಐದು ಸಂಸ್ಕಾರವುಳ್ಳ ಅತ್ಯಾಶ್ರಮಿಯೇ ಅಧಿಕಾರಿಯೆಂದು ಬ್ರಹ್ಮನು ಆಶ್ವಲಾಯನಋಷಿಗೆ ಹೇಳಿರುವನು. ಇದರಲ್ಲಿ ಯಜ್ಞೋಪವೀತಧಾರಣವು ಬಾರದೇ ಇರುವದರಿಂದ ಇದು ಆರಾಧ್ಯರಪರವಾಗದೇ ಲಿಂಗಾಯತರೆಂದು ಪ್ರಸಿದ್ಧರಾಗಿರುವ ವೀರಶೈವರಿಗೆ ಅರ್ಥವಾಗುವದು. ಹಾಗೇ ಇರಲಿ, ನಮ್ಮ ಬ್ರಾಹ್ಮಣಬಂಧುಗಳು ಯಾವದಾದರೊಂದು ಸೊಟ್ಟಮಾರ್ಗವನ್ನು ಹಿಡಿದು ವಾದಿಸುವದು ಹಠವಾದಿತನವೇ ಸರಿ. ಉಳಿದ ಕೆಲವು ವಿಷಯಗಳನ್ನು ಮೂರನೇ ಲೇಖಾಂಕದಲ್ಲಿ ಬರೆಯುತ್ತೇನೆ. ವಾಚಕರು ಅವಶ್ಯವಾಗಿ ಓದತಕ್ಕದ್ದು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

10 ನೆಯ ಪ್ರಕರಣ.

ಕಿಂಚಿತ್ತು ಮತಸ್ವರೂಪಾವಲೋಕನ.

ನಾನು 6 ನೆಯ ವರ್ಷದಿಂದ 16 ನೆಯ ವರ್ಷದವರೆಗೆ ಪಾಠಶಾಲೆಯಲ್ಲಿ ಓದಿದೆನು. ಉಪಾಧ್ಯಾಯರು ಪ್ರಯತ್ನಪೂರ್ವಕವಾಗಿ ತಿಳಿಸಿದ ವಿಷಯಗಳ ಹೊರತಾಗಿ ಅವರ ಪ್ರಯತ್ನವಿಲ್ಲದೆ ನಾನು ಯಾವ ವಿಷಯವನ್ನೂ ಗ್ರಹಿಸದಿದ್ದಾಗ್ಯೂ ಇತರ ವಿಧವಾಗಿ ಕೆಲವಿಷಯಗಳನ್ನು ತಿಳಿದು ಕೊಂಡಿದ್ದೆನು. ಮತವೆಂದರೆ ಸ್ವಸ್ವರೂಪಸಂದರ್ಶನವೆಂದೇ ಅಂದರೆ ಆತ್ಮಜ್ಞಾನವೆಂದೇ ನನ್ನ ಅಭಿಪ್ರಾಯವು. ನನ್ನ ಮನೆತನದವರು ವೈಷ್ಣವ ಮತಾವಲಂಬಿಗಳಾಗಿದ್ದುದರಿಂದಲೇ ನಾನು ವಿಷ್ಣುದೇವಾಲಯಕ್ಕೆ ಹೋಗಬೇಕಾಗಿದ್ದಿತು. ಆದರೆ ಅಲ್ಲಿ ಶೃಂಗಾರಾಡಂಬರಾದಿಗಳು ನನಗೆ ಆಕರ್ಷಕವಾಗಿರಲಿಲ್ಲವು. ಅಲ್ಲಿಯ ಅರ್ಚಕರು ದುರ್ನೀತಿಪರರಾಗಿದ್ದರೆಂದು ಕೂಡ ಕೇಳಿದ್ದೆನು. ಅದರಿಂದ ನನಗೆ ಆಸಕ್ತಿಯು ಕಡಿಮೆಯಾಗಿದ್ದಪ್ರಯುಕ್ತ ಹವೇಲಿಯಲ್ಲಿ ನಾನೇನನ್ನೂ ಗ್ರಹಿಸಿಕೊಂಡಿರಲಿಲ್ಲವು.

ರಾಮನಾಮಸ್ಮರಣೆ.

ಸಣ್ಣವಯಸ್ಸಿನಿಂದಲೂ ನಮ್ಮ ಮನೆಯ ಕೆಲಸಮಾಡಿಕೊಂಡಿದ್ದ ರಂಭಾ ಎಂಬ ಮುದುಕಿಯು ನನ್ನನ್ನು ಸಲಹಿದಳು. ಆಕೆಯಿಂದ ನಾನು ಬಹಳ ವಿಷಯವನ್ನು ತಿಳಿದುಕೊಂಡೆನು. ಆಕೆಗೆ ನನ್ನಮೇಲೆ ಬಹಳ ಪ್ರೀತಿಯಿದ್ದಿತು. ಅದು ನನಗೆ ಈಗಲೂ ಸ್ಮರಣೆಗೆ ಬರುತ್ತಲೇ ಇದೆ. ದಯ್ಯಭೂತವೆಂದರೆ ನನಗೆ ಬಹಳ ಭಯವಾಗುತ್ತಿದ್ದಿತು. ರಾಮನಾಮಸ್ಮರಣೆಮಾಡಿದರೆ ಆ ಭಯವು ಹೋಗುತ್ತದೆಂದು ರಂಭೆಯು ನನಗೆ ಹೇಳುತ್ತಿದ್ದಳು. ಚಿಕ್ಕವನಾಗಿದ್ದುದರಿಂದ ನನಗೆ ಆಗ ರಾಮನಾಮ ಮಹಿಮೆಯಲ್ಲಿ ನಂಬುಗೆಯಿಲ್ಲದಿದ್ದರೂ ನಮ್ಮ ರಂಭೆಯ ಮಾತಿನಲ್ಲಿ ಬಹಳ ನಂಬಿಕೆಯಿದ್ದಪ್ರಯುಕ್ತ ನಾನು ಆಗ ರಾಮನಾಮಸ್ಮರಣೆಮಾಡಲಾರಂಭಿಸಿದೆನು. ಆಕೆಯ ಸದುಪದೇಶವು ವ್ಯರ್ಥವಾಗಲಿಲ್ಲವಲ್ಲದೆ ಈಗ ನನಗೆ ರಾಮನಾಮವು ತಾರಕವಾಗಿ ಪರಿಣಮಿಸಿರುತ್ತದೆ.

ಆ ಕಾಲದಲ್ಲಿ ನನ್ನ ಜ್ಞಾತಿಯೊಬ್ಬನು ಬಹಳ ಭಕ್ತಿಯಿಂದ ರಾಮಾಯಣವನ್ನು ಪೂಜಿಸುತ್ತಿದ್ದನು. ನಾನೂ ನನ್ನ ಸೋದರನೂ ರಾಮರಕ್ಷಾಸ್ತೋತ್ರವನ್ನು ಕಲಿಯಲು ಆತನು ಏರ್ಪಡಿಸಿದನು. ನಾವು ಅದನ್ನುಪಕ್ರಮಿಸಿದೆವು. ಪ್ರತಿದಿನ ಪ್ರಾತಃಕಾಲದಲ್ಲಿ ಸ್ನಾನಮಾಡಿ ಮುಖ್ಯವಾಗಿ ಆ ಸ್ತೋತ್ರವನ್ನು ಪಾಡುತ್ತಿದ್ದೆವು. ಪೋರಬಂದರಿನಲ್ಲಿ ನಾವಿರುವವರೆಗೂ ಆ ದೀಕ್ಷೆಯು ಸರಿಯಾಗಿ ನಡೆದಿತಾದರೂ ಅದರಲ್ಲಿ ನನಗೆ ಸ್ಥಿರವಾದ ನಂಬಿಕೆಯಿರಲಿಲ್ಲವಾಗಿ ರಾಜಕೋಟೆಗೆ ಬಂದಮೇಲೆ ಆ ದೀಕ್ಷೆಯು ಹೋಯಿತು. ಪೋರಬಂದರಿನಲ್ಲಿರುವಾಗ್ಗೆ ನನ್ನ ಜ್ಞಾತಿಯ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿಯೇ ನಾನು ಆ ಸ್ತೋತ್ರವನ್ನು ಪಠಿಸುತ್ತಿದ್ದೆನು. ಅದಲ್ಲದೆ ನಾನು ಅದನ್ನು ಬಹಳ ಸ್ಫುಟವಾಗಿ ಹೇಳುವವನೆಂಬ ಗರ್ವವು ಸಹ ನನಗಿದ್ದಿತು.

ರಾಮಾಯಣಪಾರಾಯಣದಿಂದ ಕುಷ್ಠರೋಗಬರುವುದಿಲ್ಲ.

ನನ್ನ ತಂದೆಗೆ ರೋಗಪ್ರಾಪ್ತವಾದ ಮೇಲೆ ನಾನು ಕೆಲಕಾಲದವರೆಗೆ ಪೋರಬಂದರಿನಲ್ಲಿದ್ದೆನು. ಆಗ ಪ್ರತಿದಿನ ಸಾಯಂಕಾಲ ಬಿಲ್ವೇಶ್ವರ ನಿವಾಸಿಯಾದ ಲಾಧಾ ಮಹಾರಾಜನೆಂಬ ಪರಮ ರಾಮಭಕ್ತನು ನಮ್ಮ ಮನೆಯಲ್ಲಿ ರಾಮಾಯಣವನ್ನೋದುತ್ತಿದ್ದನು. ಲಾಧಾ ಮಹಾರಾಜನಿಗೆ ಕುಷ್ಠರೋಗ ಪ್ರಾಪ್ತವಾಗಲು ಆತನು ಔಷಧವನ್ನು ತೆಗೆದುಕೊಳ್ಳದೆ ಬಿಲ್ವೇಶ್ವರನ ದೇವಾಲಯದಲ್ಲಿ ಪೂಜೆಮಾಡಿ ವಿಸರ್ಜಿಸಲ್ಪಟ್ಟ ಶಿವನಿರ್ಮಾಲ್ಯವಾದ ಬಿಲ್ವಪತ್ರೆಯನ್ನು ತನ್ನ ಗಾಯಕ್ಕೆ ಕಟ್ಟಿ ರಾಮಾಯಣವನ್ನೋದುತ್ತಿದ್ದುದರಿಂದಲೇ ಆತನ ಕುಷ್ಠರೋಗವು ವಾಸಿಯಾಯಿತೆಂದು ನಾನು ಕೇಳಿದ್ದೆನು. ಆತನು ನಮ್ಮ ಮನೆಯಲ್ಲಿ ರಾಮಾಯಣವನ್ನೋದುತ್ತಿರುವಾಗಲೇ ಆತನಿಗೆ ಕುಷ್ಠರೋಗವು ಸಂಪೂರ್ಣವಾಗಿ ವಾಸಿಯಾಯಿತು. ಆತನ ಕಂಠಸ್ವರವು ಬಹಳ ಮಾಧುರ್ಯವಾಗಿದ್ದುದರಿಂದ ರಾಮಾಯಣದ ಶ್ಲೋಕಗಳನ್ನು ಆತನು ಪರವಶನಾದಂತೆಯೇ ಮನೋಹರವಾಗಿ ಓದುತ್ತಿದ್ದನಲ್ಲದೆ ಶ್ಲೋಕಗಳನ್ನು ಕೂಡ ಪರವಶನಾಗಿ ಮಾಡುತ್ತಿದ್ದನು. ನನಗೆ ಆಗ 13 ವರ್ಷ ವಯಸ್ಸು ಮಾತ್ರವಾಗಿದ್ದರೂ ಆ ಪುರಾಣವನ್ನು ಕೇಳಿದಾಗ್ಗೆ ನನಗೆ ಮೈಮರೆತುಹೋಗುತ್ತಿದ್ದಿತು. ರಾಮಾಯಣದ ಮೇಲೆ ನನಗೆ ವಿಶೇಷ ಭಕ್ತಿಹುಟ್ಟಲು ಅದೇ ಮೂಲಕಾರಣವು. ಭಕ್ತಿಯನ್ನು ಹೆಚ್ಚಿಸುವಂಥ ಗ್ರಂಥಗಳೆಲ್ಲ ತುಲಸೀದಾಸ ರಾಮಾಯಣವು ಬಹಳ ಶ್ರೇಷ್ಠವಾದುದೆಂದು ಈಗ ನಾನು ನಂಬುತ್ತೇನೆ.

ಭಾಗವತಶ್ರವಣ.

ಇನ್ನು ಕೆಲದಿನಗಳಮೇಲೆ ನಾನು ರಾಜಕೋಟೆಗೆ ಬಂದೆನು. ಅಲ್ಲಿ ರಾಮಾಯಣಪುರಾಣಪಠನವಿರಲಿಲ್ಲವು. ಆದರೆ ಪ್ರತಿ ಏಕಾದಶೀ ದಿವಸ ಭಾಗವತವು ಓದಲ್ಪಡುತ್ತಿದ್ದಿತು. ನಾನುಕೂಡ ಶ್ರದ್ಧೆಯಿಂದ ಕೇಳುತ್ತಿದ್ದೆನಾದರೂ, ಆಗ ಪುರಾಣಿಕನು ಸಮರ್ಥನಾಗಿಲ್ಲದಿದ್ದುದರಿಂದ, ಅದು ನನಗಷ್ಟು ಆಕರ್ಷಣೀಯವಾಗಿರಲಿಲ್ಲವು. ತರುವಾಯ ಗುಜರಾತಿ ಭಾಷೆಯಲ್ಲಿ ಭಾಗವತವನ್ನು ನಾನು ಬಹಳ ಶ್ರದ್ಧೆಯಿಂದೋದಿದೆನು. ನಾನು ದಿಲ್ಲಿಯಲ್ಲಿ 21 ದಿವಸ ಉಪವಾಸವ್ರತವನ್ನಾಚರಿಸಿದಾಗ ಪಂಡಿತ ಮದನಮೋಹನಮಾಳವ್ಯರವರು ಮೂಲದಲ್ಲಿ (ಹಿಂದಿಯೋ, ಸಂಸ್ಕೃತವೋ ?) ಕೆಲಭಾಗವನ್ನು ನನಗೋದಿ ಹೇಳಿದರು. ಮಾಳವರವರಂತಹ ಮಹಾಭಕ್ತನಿಂದ ಚಿಕ್ಕವಯಸ್ಸಿನಲ್ಲೇ ಭಾಗವತವನ್ನು ಕೇಳುವ ಭಾಗ್ಯವು ನನಗುಂಟಾಗಿದ್ದರೆ ಆಗಲೇ ನನಗೆ ಅದರಮೇಲೆ ಬಹಳ ಭಕ್ತಿಯುಂಟಾಗುತ್ತಿದ್ದಿತು. ಆದರೆ ನನಗೆ ಅಂತಹ ಭಾಗ್ಯವುಂಟಾಗಿರಲಿಲ್ಲವೆಂದು ನನಗೆ ವ್ಯಸನವುಂಟಾಯಿತು. ಸಣ್ಣತನದಲ್ಲಿ ಕೇಳಿದ ವಿಷಯವು ಶಿಲಾಶಾಸನದಂತೆ ಮನಸ್ಸಿನಲ್ಲಿ ನಾಟಿರುವುದು. ಅಂತಹ ಉತ್ತಮವಾದ ಮತಗ್ರಂಥಗಳನ್ನು ನಾನು ನನ್ನ ಬಾಲ್ಯದಲ್ಲಿ ಹೆಚ್ಚಾಗಿ ಕೇಳುವ ಭಾಗ್ಯವು ನನಗುಂಟಾಗಿರಲಿಲ್ಲವು.

ಎಲ್ಲಮತಸಹನೆಯು.

ರಾಜಕೋಟೆಯಲ್ಲಿ ನನ್ನ ತಂದೆತಾಯಿಗಳು ವಿಷ್ಣುದೇವಾಲಯಗಳಿಗೂ ಶಿವದೇವಾಲಯಗಳಿಗೂ ಹೋಗುತ್ತಿದ್ದರು. ನನ್ನನ್ನೂ ಕಳುಹುತ್ತಿದ್ದುದರಿಂದ ನನಗೆ ಆಗಲೇ ಸರ್ವಮತಸಹನಭಾವವುಂಟಾಯಿತು. ಜೈನಮತಗುರುಗಳು ಕೂಡ ಆಗಾಗ್ಗೆ ನನ್ನ ತಂದೆ ಬಳಿಗೆ ಬರುತ್ತಿದ್ದರು. ನಾವು ಜೈನರಲ್ಲವಾದುದರಿಂದ ಅವರು ನಮ್ಮ ಮನೆಯಲ್ಲಿ ಊಟಮಾಡುವುದು ನಿಷಿದ್ಧವಾದರೂ ಅವರು ನಮ್ಮ ಮನೆಯಲ್ಲಿ ಭೋಜನಮಾಡುತ್ತಿದ್ದರು. ಅವರು ಮತವಿಷಯವನ್ನೂ, ಇತರ ವಿಷಯವನ್ನೂ ಕುರಿತು ನನ್ನ ತಂದೆಯೊಡನೆ ಸಂಭಾಷಿಸುತ್ತಿದ್ದರು. ಮಹಮ್ಮದೀಯರಲ್ಲೂ ಪಾರ್ಶಿಯವರಲ್ಲೂ ನನ್ನ ತಂದೆಗೆ ಸ್ನೇಹಿತರಿದ್ದರು. ಅವರು ಸಹ ಬಹಳ ಪ್ರೀತಿಯಿಂದ ನನ್ನ ತಂದೆಯೊಡನೆ ಮಾತನಾಡುತ್ತಿದ್ದವರೇ. ನನ್ನ ತಂದೆಯು ಅವರನ್ನು ಬಹಳವಾಗಿ ಗೌರವಿಸುತ್ತಿದ್ದರು. ನಾನು ನನ್ನ ತಂದೆಗೆ ಉಪಚಾರಮಾಡುತ್ತಿದ್ದೆನಾದುದರಿಂದ ವಿಶ್ವಾಸದಿಂದ ಅವರುಗಳ ಸಂಭಾಷಣೆಯನ್ನು ಕೇಳುತ್ತಿದ್ದೆನು. ಈ ಕಾರಣಗಳಿಂದೆಲ್ಲ ನನಗೆ ಸರ್ವಮತಸಹನೆಯು ಚೆನ್ನಾಗಿ ಕುದಿರಿತು.

ಕ್ರೈಸ್ತಮತ.

ಆಗ ಕ್ರೈಸ್ತಮತವನ್ನು ಕುರಿತು ನಾನು ಸರಿಯಾಗಿ ಕೇಳಿ ಸುಮ್ಮನಿರುತ್ತಿರಲಿಲ್ಲವು. ಆಗ ಆ ಮತವನ್ನು ಕುರಿತು ನನಗೆ ಕೊಂಚ ಅಸಹವು ಕೂಡ ಹುಟ್ಟಿದ್ದಿತು. ಆ ಕಾಲದಲ್ಲಿ ಕ್ರಿಸ್ತಮತಬೋಧಕರು ನಮ್ಮ ಪಾಠಶಾಲೆಯಲ್ಲಿ ಹಿಂದುಗಳನ್ನೂ ಹಿಂದೂ ದೇವತೆಗಳನ್ನೂ ನಿಂದಿಸಿ ಬೋಧಿಸುತ್ತಿದ್ದರು. ನಾನು ಅದನ್ನು ಸಹಿಸದವನಾಗಿದ್ದೆನು. ಒಂದಾವರ್ತಿ ಮಾತ್ರ ನಾನು ನಿಂತು ಕೇಳಿದೆನು. ಆಗ ಅವರು ಹಿಂದೂಮತವನ್ನು ದೂಷಿಸಹತ್ತಿದರು. ಆದರಿಂದ ನನ್ನ ಮನಸ್ಸು ಕೆಟ್ಟುಹೋಯಿತು. ಅಂದಿನಿಂದ ನಾನು ಯಾವಾಗಳೂ ನಿಂತು ಕೇಳಿದವನಲ್ಲವು. ಆ ಕಾಲದಲ್ಲೇ ಬಹಳ ಪ್ರಸಿದ್ಧನೂ ಧನಿಕನೂ ಆಗಿದ್ದ ಓರ್ವ ಹಿಂದುವನ್ನು ಕ್ರೈಸ್ತಮತಕ್ಕೆ ಸೇರಿಸಿಕೊಂಡರು. ಆಗ ಅವನು ಮಾಂಸವನ್ನು ತಿಂದನು; ಸಾರಾಯನ್ನು ಕುಡಿದನು. ಹಿಂದೂವೇಷವನ್ನು ತೆಗೆದುಹಾಕಿ ಪಾಶ್ಚಾತ್ಯವೇಷವನ್ನು ಧರಿಸಿದನೆಂದು ಸಹ ಕೇಳಿದ್ದೆನು. ಆಗಳಿಂದಲೂ ಆ ವೇಷದಲ್ಲೇ ಇರುವನು. ಈ ಸಂಗತಿಯನ್ನು ಕೇಳಿ ನನ್ನ ಮನಸ್ಸು ಕೆಟ್ಟುಹೋಯಿತು. ಹಾಳುಮಾಂಸವನ್ನು ತಿನ್ನಬೇಕೆಂದೂ, ಸಾರಾಯನ್ನು ಕುಡಿಯಬೇಕೆಂದೂ, ವೇಷವನ್ನು ಬದಲಾಯಿಸಬೇಕೆಂದೂ ಜನರನ್ನು ನಿರ್ಬಂಧಿಸುವ ಮತವು ಮತವೇ ಅಲ್ಲವೆಂದು ತಿಳಿದುಕೊಂಡೆನು. ಹೊಸದಾಗಿ ಕ್ರಿಸ್ತನಾದ ಆ ಹಿಂದುವು ಕೂಡ ತಾನು ಹುಟ್ಟಿದ ಹಿಂದೂಮತವನ್ನೂ ಹಿಂದುಗಳ ಆಚಾರವನ್ನೂ ನಿಂದಿಸಲಾರಂಭಿಸಿದನೆಂದು ಸಹ ಕೇಳಿದ್ದೆನು. ಈ ಕಾರಣಗಳಿಂದೆಲ್ಲ ನನಗೆ ಕ್ರೈಸ್ತಮತದಮೇಲೆ ಅಸಹ್ಯತೆಯುಂಟಾಗಿದೆ.

ಮನುಸ್ಮೃತಿಯಲ್ಲಿ ಸಂಶಯವು.

ನನಗೆ ಇತರ ಮತಗಳ ವಿಚಾರದಲ್ಲಿ ಸಹನೆಹುಟ್ಟಿದ ಮಾತ್ರದಿಂದಲೇ ಭಗವಂತನಲ್ಲಿ ನನಗೆ ಪೂರ್ಣ ವಿಶ್ವಾಸಹುಟ್ಟಿತೆಂದು ತಿಳಿಯಕೂಡದು. ನನ್ನ ತಂದೆಯ ಗ್ರಂಥಗಳಲ್ಲಿ ಮನುಸ್ಮೃತಿ ಸಹ ಇದ್ದಿತು. ಅದನ್ನು ನಾನು ಆಗ ನೋಡಿದೆನು. ಸೃಷ್ಟ್ಯಾದಿ ವಿಷಯವನ್ನು ಕುರಿತು ಮನುಸ್ಮೃತಿಯಲ್ಲಿ ವಿವರಿಸಲ್ಪಟ್ಟಿರುವ ರೀತಿಯು ನನಗೆ ಸರಿಬೀಳಲಿಲ್ಲವು. ಅದುಕಾರಣ ನಾಸ್ತಿಕವಿಚಾರವಾಗಿ ನನಗೆ ಕೊಂಚ ಅಭಿಮಾನಹುಟ್ಟಿತು. ನನ್ನ ಜ್ಞಾತಿಯೊಬ್ಬನು ಆಗ ಬದುಕಿದ್ದನು. ಅವನು ಬಹಳ ಬುದ್ಧಿಶಾಲಿಯೆಂದು ನಾನು ಅವನನ್ನು ಗೌರವಿಸುತ್ತಿದ್ದೆನು. ಈ ನನ್ನ ಸಂಶಯವನ್ನು ಆತನಿಗೆ ತಿಳಿಸಿದೆನಾದರೂ ಆತನು ಅದಕ್ಕೆ ತಕ್ಕ ಸಮಾಧಾನವನ್ನು ಮಾತ್ರ ಕೊಡಲಾರದೆ ಹೋದನು. “ನೀನು ಆ ವಿಷಯವನ್ನು ಕುರಿತು ಆಲೋಚಿಸಬಾರದು. ನೀನು ಚಿಕ್ಕವನು, ದೊಡ್ಡವನಾದಮೇಲೆ ಅವೆಲ್ಲವೂ ನಿನಗೇ ಗೊತ್ತಾಗುವವು” ಎಂದು ಆತನು ಉತ್ತರಕೊಟ್ಟನು. ಅದರಿಂದ ನಾನು ಸುಮ್ಮನಿದ್ದೆನಲ್ಲದೆ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲವು. ಆಹಾರವಿಚಾರವಾಗಿ ಮನುಸ್ಮೃತಿಯಲ್ಲಿ ವಿವರಿಸಲ್ಪಟ್ಟಿರುವ ನಿಬಂಧನೆಯು ಲೋಕಾಚಾರಕ್ಕೆ ವಿರೋಧವಾಗಿರುವಂತೆ ಸಹ ನನಗೆ ತೋರಿತು. ಅದಕ್ಕು ಸಹ ನನ್ನ ಜ್ಞಾತಿಯು ತಕ್ಕ ಸಮಾಧಾನವನ್ನು ಹೇಳಲಾರದೆಹೋದನು. ದೊಡ್ಡವನಾದಮೇಲೆ ನಿನಗೇ ತಿಳಿಯಬರುತ್ತದೆಂದು ಹೇಳಿ ಸುಮ್ಮನಾದನು.

ಅಹಿಂಸೆ.

ಆಗ ಮನುಸ್ಮೃತಿಯು ಅಹಿಂಸೆಯನ್ನು ಬೋಧಿಸುತ್ತದೆಂದು ನನಗೆ ತೋರಲಿಲ್ಲವು. ನಾನು ಮಾಂಸವನ್ನು ತಿಂದೆನೆಂದು ಇದಕ್ಕೆ ಮೊದಲೇ ಹೇಳಿರುವೆನು. ಮಾಂಸವನ್ನು ತಿನ್ನಬಹುದೆಂದು ಮನುಸ್ಮೃತಿಯಲ್ಲಿ ಬೋಧಿಸಲ್ಪಟ್ಟಿದೆಯೆಂದು ನನಗೆ ತೋರಿತು. ಹಾವು, ನಳ್ಳಿ, ಚೇಳು ಮೊದಲಾದವುಗಳನ್ನು ಕೊಲ್ಲುವುದು ದೋಷವಲ್ಲವೆಂದು ನನಗೆ ಆಗ ತೋರಿತು. ಆಗ ನಾನು ನಳ್ಳಿ ಮೊದಲಾದವುಗಳನ್ನು ಸಾಯಿಸಿದೆನೆಂದು ನನಗೆ ಜ್ಞಾಪಕವಿದೆ. ಅದು ನನ್ನ ಧರ್ಮವೆಂದೇ ನಾನು ತಿಳಿದಿದ್ದೆನು.

ನೀತಿ-ಸತ್ಯವು.

ಎಲ್ಲದಕ್ಕೂ ನೀತಿಯೇ ಮೂಲಾಧಾರವು ಎಂದು ನಾನು ಆಗ ಸ್ಪಷ್ಟವಾಗಿ ತಿಳಿದುಕೊಂಡಿದ್ದೆನು. ಅದುಕಾರಣ ನನಗೆ ಸತ್ಯವು ಪ್ರಧಾನವಾಗೇ ತಟ್ಟಿತು. ಕ್ರಮಕ್ರಮವಾಗಿ ನನ್ನ ನಂಬಿಕೆಯು ಪ್ರಬಲಿಸಿತು. ಸತ್ಯಶಬ್ದನಿರ್ವಚನವು ಅತಿ ವಿಶಾಲವೆಂದು ಸಹ ನನಗೆ ಗ್ರಾಹ್ಯವಾಯಿತು. “ಅಪಕಾರಿಗೆ ಉಪಕಾರವನ್ನು ಯಾವಾಗಳೂ ಎಸಗು ಸುಮತಿ” ಎಂಬ ಅರ್ಥಕೊಡುವ ವಾಕ್ಯವು ಕೂಡ ಚೆನ್ನಾಗಿ ನಾಟಿಕೊಂಡಿತು. ಅದರಿಂದ ನನ್ನ ವಿಚಾರದಲ್ಲಿ ನಾನು ಅನುಷ್ಠಾನವನ್ನು ಕೂಡ ಪ್ರಾರಂಭಿಸಿದೆನು.

ಉತ್ತಮವಾದ ಉಪದೇಶವಾಕ್ಯವು.

“ಕೈತುಂಬ ನೀರುಕೊಟ್ಟವನಿಗೆ ಹೊಟ್ಟೆತುಂಬ ಅನ್ನಹಾಕು. ಉಪಚರಿಸಿದವನನ್ನು ದ್ವಿಗುಣವಾಗಿ ಉಪಚರಿಸು. ಒಂದು ಕಾಸು ದಾನಮಾಡಿದವನಿಗೆ ಒಂದು ಭಂಗಾರದ ಕಾಸನ್ನು ಕೊಡು. ಪ್ರಾಣರಕ್ಷಣೆ ಮಾಡಿದವನಿಗೆ ನಿನ್ನ ಪ್ರಾಣವನ್ನಾದರೂ ಅರ್ಪಿಸಬೇಕು. [illegible] ಯನ್ನೂ ಕಾರ್ಯವನ್ನೂ ಭಕ್ತಿಯಿಂದ ಅನುಸರಿಸಬೇಕು. ಉಪಕಾರಕ್ಕೆ ಹತ್ತರಷ್ಟು ಅಧಿಕವಾಗಿ ಪ್ರತ್ಯುಪಕಾರ ಮಾಡಬೇಕು. ಮಾನವರೆಲ್ಲರೂ ಒಂದೇ ಎಂದು ಮಹನೀಯರು ಭಾವಿಸುವರು. ಅದುಕಾರಣ ಅಪಕಾರಮಾಡಿದವರಿಗೆ ಸಂತೋಷದಿಂದ ಉಪಕಾರವನ್ನು ಮಾಡಬೇಕು.”

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

ಲಗ್ನದ ಫಂಡು.

ಮ|| ಗಳಾದ 1. ಕೋಲಾರದಲ್ಲಿರುವ ಮಾಲೂರು ಮಲ್ಲೇಶಯ್ಯನವರ ಮಗಳ ಲಗ್ನವನ್ನು ಯಂ. ಸದಾಶಿವಯ್ಯನವರ ಮನೆಯಲ್ಲಿ ನಡೆಸಿದ ಕಾಲದಲ್ಲಿ ವಧೂವರರಿಂದ ಫಂಡಿಗಾಗಿ ತೆಗೆದದ್ದು ಬೆಂಗಳೂರು ಮುನಿಸಿಪಲ್ ಕೌನ್ಸಿಲರ್ ಎಚ್. ಭದ್ರಪ್ಪನವರ ಮೂಲಕ 10 ರೂ. 2. ಹುತ್ತೀದುರ್ಗದ ವೇ|| ಬಸವಲಿಂಗಾರಾಧ್ಯರ ಮಗ ಸಿದ್ದಲಿಂಗಾರಾಧ್ಯರೆಂಬ ವರನಿಗೂ ನಾಗಮಂಗಲದ ಸಿದ್ದಣ್ಣನವರ ಮಗಳು ಹೊನ್ನಮ್ಮನೆಂಬ ವಧುವಿಗೂ ನಡೆದ ಲಗ್ನದಲ್ಲಿ ವಧೂವರರಿಂದ ನಾಗಮಂಗಲದ ಆರೆಬಸವಣ್ಣನವರ ಮಗ ರುದ್ರಯ್ಯನವರ ಮೂಲಕ 3 ರೂ. 3. ಬೆಂಗಳೂರು ಅರಳೆಪೇಟೆ ವೈರಿ ರುದ್ರಪ್ಪನವರ ಮಗ ವೀರಭದ್ರಪ್ಪನವರ ಕುಮಾರಿ ಚಿ|| ಸೌ|| ರೇವಮ್ಮನಿಗೂ ಕರಾಚೂರು ವೀರಪ್ಪನವರ ಪುತ್ರ ಬಸವಣ್ಣನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ಫಂಡಿನ ಸೆಕ್ರೆಟರಿಯವರ ಹಸ್ತ 5 ರೂ. 4. ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಭೋಜಪ್ಪನವರ ಲಗ್ನದಲ್ಲಿ ಯಜಮಾನ್ ನಂಜುಂಡಪ್ಪನವರ ಮೂಲಕ 2 ರೂ. 5. ಅರಸೀಕೆರೆ ತಾ|| ಬುಕ್ಕಾಂಬುದಿ ಪುಟ್ಟಪ್ಪನವರ ಮಗಳಿಗೂ ಗುಬ್ಬಿ ವಾಣಿ ರುದ್ರಪ್ಪ, ಬಿ.ಎ., ಬಿ.ಎಲ್., ಅಡ್ವೋಕೇಟ್ ರವರಿಗೂ ನಡೆದ ಲಗ್ನದಲ್ಲಿ ವರನಕಡೆಯಿಂದ 5 ರೂ. ವಧುವಿನಕಡೆಯಿಂದ 4-8-0 ಜುಮ್ಲಾ 9-8-0 ರೂ. ಗಳು ಅಮ್ಮಾಕೆರೆ ಚನ್ನಪ್ಪ ಅಂಡ್ ಸನ್ಸ್ ರವರ ಮೂಲಕ 6. ಕೆಂಗೇರಿ ಯಜಮಾನ್ ದೊಡ್ಡಗಂಗಪ್ಪನವರ ಮಗ ಗಂಗಪ್ಪನವರ ಮಗ ಬಂಡೆಪ್ಪನವರಿಗೂ ಕಾನಕಾನಹಳ್ಳಿ ಬಡದಿ ಚಿಕ್ಕಣ್ಣಪ್ಪನವರ ಮಗ ಸಿದ್ದಪ್ಪನವರ ಪುತ್ರಿ ಸಿದ್ವೀರಮ್ಮನಿಗೂ ನಡೆದ ಲಗ್ನದಲ್ಲಿ ಬೆಂಗಳೂರು ಶಂ|| ಶಿವಪ್ಪನವರ ಮೂಲಕ 6 ರೂ. 7. ಕುಣಿಗಲ್ ತಾ|| ಹುಲಿಯೂರು ದುರ್ಗದಲ್ಲಿರುವ ಯಡಯೂರು ಸಿದ್ದಲಿಂಗಪ್ಪನವರ ಮಗಳು ಹೊನ್ನಮ್ಮನಿಗೂ ಗುಬ್ಬಿ ಶಿವರಾತ್ರಿ ಗುರುಮಲ್ಲಪ್ಪನವರ ಮಗ ಅಡವಿಯಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 5 ರೂ. ಡಿಟೋ ಗ್ರಾಮದ ಜವಳಿಅಂಗಡಿ ಶಿವಬಸವಯ್ಯನವರ ಮಗಳು ಪಾರ್ವತಮ್ಮನಿಗೂ ನಿಡಸಾಲೆ ರಾಚಪ್ಪನವರ ಕುಮಾರ ಶಿವರುದ್ರಪ್ಪನಿಗೂ ನಡೆದ ಲಗ್ನದಲ್ಲಿ 5 ರೂ. ಗಳು ಮತ್ತು ಮಾಗಡಿ ವೀರಶೆಟ್ಟಪ್ಪನವರ ಮಗಳು ಗಂಗಮ್ಮನಿಗೂ ಡಿಟೋ ಗ್ರಾಮದ ನಂಜಪ್ಪನವರ ಕುಮಾರ ಬಸಪ್ಪನಿಗೂ ನಡೆದ ಲಗ್ನದಲ್ಲಿ 5 ರೂ. ಜುಮ್ಲಾ 15 ರೂ. ಗಳು ಹುಚ್ಚಪ್ಪದೇವರ ಮೂಲಕ 8. ತೊಲಹಳ್ಳಿ ವೀರಭದ್ರಪ್ಪನವರ ಮಗ ಮತ್ತು ಮುರಿಗಪ್ಪನವರ ಸಹೋದರ ಇವರುಗಳ ಲಗ್ನದಲ್ಲಿ ಚನ್ನಗಿರಿ ರಿಟೈರ್ಡ್ ಅಮಲ್ದಾರ್ ಜಿ. ಮುರುಡಯ್ಯನವರ ಮೂಲಕ 5 ರೂ. 9. ಬೆಂಗಳೂರು ಸಿಟಿ ಜವಳಿ ವ್ಯಾಪಾರಿ ಮತ್ತು ಮುನಿಸಿಪಲ್ ಕೌನ್ಸಿಲರಾದ ಜಿ. ಸಿದ್ದವೀರಪ್ಪನವರ ಕುಮಾರಿ ಚಿ|| ಸೌ|| ಕುಮುತಮ್ಮನಿಗೂ ಸದರಿ ಬೆಂಗಳೂರು ಜಿ. ಮಲ್ಲಪ್ಪನವರ ಕುಮಾರ ಚಿ|| ನಂಜುಂಡಪ್ಪನಿಗೂ ನಡೆದ ಲಗ್ನದಲ್ಲಿ ಸೆಕ್ರೆಟರಿಯವರ ಹಸ್ತ 5 ರೂ. 10. ನೆಲಮಂಗಲದ ತಾ|| ಕಿತ್ತನಹಳ್ಳಿ ಬೀದಿ ಮನೆ ಸಾಹುಕಾರ್ ಚೆನ್ನಮಲ್ಲಪ್ಪನವರ ಮಗಳು ಚಿ|| ಸೌ|| ಗಂಗಮ್ಮನಿಗೂ ಕಾನಕಾನಹಳ್ಳಿ ತಾ|| ಹಾರೋಹಳ್ಳಿ ಹುಚ್ಚವೀರಯ್ಯನವರ ಕುಮಾರ ಚಿ|| ನಂಜುಂಡಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ರಾಜಶೇಖರ ಒಡೆಯರವರ ಮೂಲಕ 8 ರೂ. 11. ಮುಡಿಗುಂಡದ ಗುರುಕಾರ್ ಜೋತಪ್ಪನವರ ಕುಮಾರಿಯ ಋತುಶಾಂತಿ ಪ್ರಸ್ತದಲ್ಲಿ ಕ್ಯಾಪ್ಟನ್ ವಿಶ್ವನಾಥಯ್ಯನವರ ಮೂಲಕ 10 ರೂ. 12. ಮೈಸೂರು ಅರಮನೆ ಶ್ರೀ ಜಪದಕಟ್ಟೆ ಮಠದ ಪಟ್ಟಾಧಿಕಾರ ಮಹೋತ್ಸವಕಾಲದಲ್ಲಿ ಮೈಸೂರು ವೈ. ವಿರೂಪಾಕ್ಷಯ್ಯನವರ ಮೂಲಕ 5 ರೂ. 13. ಮೈಸೂರು ದೊಡ್ಡಪೇಟೆ ಯಜಮಾನ್ ಶಿವಪ್ಪನವರ ಮನೆಯಲ್ಲಿ ನಡೆಸಿದ ಚೆನ್ನಪಟ್ಟಣದ ಯಜಮಾನ್ ಮಲ್ಲಿಕಾರ್ಜುನಯ್ಯನವರ ಮಗಳ ಲಗ್ನದಲ್ಲಿ ವೈ. ವಿರೂಪಾಕ್ಷಯ್ಯನವರ ಮೂಲಕ 5 ರೂ. 14. ತುಮಕೂರು ತಾ|| ಹೊನ್ನುಡಿಕೆ ಯಜಮಾನ್ ಹೊನ್ನಶೆಟ್ಟಪ್ಪನವರ ಮಗ ಗುರುಲಿಂಗಯ್ಯನವರ ಲಗ್ನದಲ್ಲಿ ಶಿವಗಂಗೆ ಶ್ರೀ ಮೇಲಣಗವಿ ಸಂಸ್ಥಾನದ ಏಜಂಟರ ಮೂಲಕ 2 ರೂ. 15. ತುಮಕೂರು ತಾ|| ಜಕ್ಕನಹಳ್ಳಿಯಲ್ಲಿ ನಡೆದ ಮೂರುಲಗ್ನಗಳಲ್ಲಿ 6 ರೂ. ಗಳು ಸದರಿ ಜಕ್ಕನಹಳ್ಳಿ ಕಾಡಪ್ಪನವರ ಮಗ ಬಕೆಟ್ಟಪ್ಪನವರ ಮೂಲಕ ಜುಮ್ಲಾ 96-8-0.

ಜಿ. ಪರಮಶಿವಯ್ಯ, ಸೆಕ್ರೆಟರಿ,
ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್ ಸಂಘ, ಬೆಂಗಳೂರು.

೧೯೨೬ ನೆಯ ಇಸವಿ ಮಾರ್ಚಿ ತಾ|| ೨೭ ರಿಂದ ೧೯೨೬ ನೆಯ ಇಸವಿ ಏಪ್ರಿಲ್ ತಾ|| ೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯಸಂವತ್ಸರದ ಅಧಿಕ ಚೈತ್ರ ಶುದ್ಧ ತ್ರಯೋದಶಿಯಿಂದ ಅಧಿಕ ಚೈತ್ರ ಬಹುಳ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
27	[1]ಶನಿ	ತ್ರಯೋ	11-19	ಪುಬ್ಬ	49-29	14
28	ಭಾನು	ಚತು	16-39	ಉತ್ತ	55-12	15
29	[2]ಸೋಮ	ಪೌರ್ಣ	20-35	ಹಸ್ತ	59-58	16
30	[3]ಮಂಗಳ	ಪಾಡ್ಯ	23-22	ಚಿತ್ತ	60	17
31	ಬುಧ	ಬಿದಿ	24-57	ಚಿತ್ತ	3-6	18
1	ಗುರು	ತದಿ	25-15	ಸ್ವಾತಿ	5-23	19
2	ಶುಕ್ರ	ಚೌತಿ	24-15	ವಿಶಾ	6-25	20

(1) ಬೇಲೂರು ಕೇಶವಸ್ವಾಮಿರಥಃ. ತಿ. ನರಸೀಪುರದಲ್ಲಿ [illegible]ದೋತ್ಸವ, ಮೇಲುಕೋಟೆ ಚಲುವರಾಯಸ್ವಾಮಿರಥಃ, ಮಣಿನಕ್ಷತ್ರ-ಉತ್ತರಾಭಾದ್ರ ೪ ನೆಯಪಾದ. (2) ತಿ. ನರಸೀಪುರದಲ್ಲಿ ಗುಂಜಾನರಸಿಂಹಸ್ವಾಮಿರಥಃ, ಬಾಣಾವರದಲ್ಲಿ ಪಂಚಲಿಂಗೇಶ್ವರರಥಃ. (3) ಮಣಿನಕ್ಷತ್ರ-ರೇವತಿ ೧ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲೀಹೃತಾ | ಘನಪಥಕೃತಾವತಾರಾ ಪಙ್ಕಜನಕ್ಷತ್ರ ಮೋಹರಾಜೀಯಾ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರೋಲಂಬಧೀಪುಂಗವ | ಸ್ತೋತ್ರೋನಾಥೀತ್ವದಶೀಲ ಸಾರಕಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರಿತಯಂಶವಾಪುರಿರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಏಪ್ರಿಲ್ ತಾರೀಖು ೩ ನೆಯ ಶನಿವಾರ. [ಸಂಚಿಕೆ ೧೪

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಕ್ಷೀಣಜ್ವರ

SITHARAGHAVA
YASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

13

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಶಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ಗಳನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಆಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್-ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೧— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕಾ ಶತಕತ್ರಯ	೧— ೦—೦	೧— ೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧— ೦—೦	೧— ೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಛಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೬೧—೨೫] ಪೋ. ಬಾ. ೫೦. ಮದರಾಸು.

ದಾವಣಗೆರೆಯ ದೇವಿಜಾತ್ರೆಯಕಾಲದಲ್ಲಿ ರಕ್ತದಕಾಲುವೆ ಹರಿಯುವುದು ನಿಂತಿತು.

ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ದೇವಿಗುಡಿ ಇದ್ದು ಆ ದೇವಿಜಾತ್ರೆಯು ವರ್ಷಕ್ಕೊಂದುಸಾರಿಯೋ ಮೂರು ವರ್ಷಕ್ಕೊಂದುಸಾರಿಯೋ ನಡೆಯುತ್ತಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಅನೇಕ ಗ್ರಾಮದವರು ದೇವಿಜಾತ್ರೆಯನ್ನು ಕೇವಲ ಸಾತ್ವಿಕ ರೀತಿಯಿಂದ-ಭಜನೆ, ಕೀರ್ತನೆ ಮೊದಲಾದುವುಗಳಿಂದ ನೆರವೇರಿಸುತ್ತಲಿರುವರು. ಆದರೆ ಕೆಲವು ಗ್ರಾಮದವರು ಮೂಢನಂಬಿಕೆಯಿಂದ ದೇವಿಜಾತ್ರೆಯಕಾಲದಲ್ಲಿ ಸಹಸ್ರಾರು ಪ್ರಾಣಿಗಳನ್ನು ವಧಮಾಡುವರು. ಈ ಅಯೋಗ್ಯಕೃತ್ಯವನ್ನು ಆಚರಿಸುವ ಜಾತ್ರೆಗಳಲ್ಲಿ ದಾವಣಗೆರೆಯ ಜಾತ್ರೆಯೂ ಒಂದಾಗಿದ್ದಿತು. ಈ ದಾವಣಗೆರೆ ಜಾತ್ರೆಯು ಫೆಬ್ರವರೀ 24 ನೇ ತಾರೀಖು ಬುಧವಾರ ನೆರವೇರಿತು. ಅನೇಕರು ಮೂಢನಂಬಿಕೆಯಿಂದ [illegible] ಘೋರಕೃತ್ಯವನ್ನು [illegible] ತೀರದಾಗಿದ್ದಿತು. ದೇವಸ್ಥಾನದಸುತ್ತಲೂ ವಧಮಾಡಿದ ಪ್ರಾಣಿಗಳ ರಕ್ತವೇ ಕಾಲುವೆಯ ರೂಪವಾಗಿ ಹರಿಯುತ್ತಿದ್ದಿತೆಂದಮೇಲೆ ಎಷ್ಟು ಪ್ರಾಣಿಗಳು ಆಹುತಿಯಾಗುತ್ತಿದ್ದವೆಂಬುದನ್ನು ವಾಚಕರೇ ಊಹಿಸಿಕೊಳ್ಳಲಿ. ಅಯ್ಯೋ, ಪಾಪ ! ಆಗಿನ ಆ ಪ್ರಾಣಿಗಳ ದುಃಖವನ್ನು ಎಷ್ಟೆಂದು ಹೇಳಲಿಕ್ಕಾದೀತು. ಈ ದುಃಖವನ್ನು ನೋಡಿದ ಕಠಿಣಹೃದಯರಿಗೇ ಮನಸ್ಸು ಕರಗುತ್ತಿರುವಾಗ ಭೂತದಯಾಪರರ ವಿಷಯವನ್ನು ಹೇಳತಕ್ಕುದೇನಿದೆ ! ಇಂಥ ಕ್ರೂರಪದ್ಧತಿಯನ್ನು ಹೇಗಾದರೂಮಾಡಿ ತಪ್ಪಿಸಬೇಕೆಂದು ನಮ್ಮ ಸಂಘದವರೂ, ಊರ ಅನೇಕ ಸದ್ಗೃಹಸ್ಥರೂ ಜಾತ್ರೆಯು ಇನ್ನೂ ಎರಡು ಮೂರು ತಿಂಗಳಿರುವಾಗಲೇ ಎಲ್ಲಾ ಜನರನ್ನುಸೇರಿಸಿ ಪ್ರಾಣಹಿಂಸೆಯನ್ನು ಮಾಡುವುದು ಪಾಪವೆಂತಲೂ, ಮೂಢನಂಬಿಕೆಯಿಂದ ಭಯಂಕರವಾದ ಈ ಪಾಪಕೃತ್ಯವನ್ನಾಚರಿಸುವುದು ಯೋಗ್ಯವಲ್ಲವೆಂತಲೂ, ಅನೇಕ ಗ್ರಾಮದವರು ಈ ಸಂಘದವರ ಪ್ರಾರ್ಥನೆ ಪ್ರಕಾರ ತಮ್ಮ ಗ್ರಾಮಗಳಲ್ಲಿ ದೇವಿಜಾತ್ರೆಯಲ್ಲಿ ಆಗುವ ಹಿಂಸೆಯನ್ನು ನಿಲ್ಲಿಸಿ ಕೇವಲ ಸಾತ್ವಿಕ ರೀತಿಯಿಂದಲೇ ನೆರವೇರಿಸಿರುವಂತೆ ತಾವುಗಳಾದರೂ ಸಾತ್ವಿಕ ರೀತಿಯಿಂದಲೇ ಮಾಡಬೇಕೆಂತಲೂ ಜನಗಳಿಗೆಲ್ಲ ಆಗಿಂದಾಗ್ಗೆ ತಿಳುಹಿಸುತ್ತಿದ್ದರಲ್ಲದೆ ಇದಕ್ಕಾಗಿಯೇ ಪೂನಾದ ಜೈನವಿದ್ಯಾಲಯದ ಯತಿ ಶ್ರೀ. ತಿಲಕ ವಿಜಯಜಮಹಾರಾಜರವರನ್ನೂ ಹಿಂದೂಪುರದ ಅಭಯಕುಟೀರಾಶ್ರಮದ ಮ|| ರಾ|| ನಂಜುಂಡಪ್ಪನವರನ್ನೂ, ಹೈದರಾಬಾದಿನ ಜೀವರಕ್ಷಾಸಂಸ್ಥೆಯ ಭಜನಾ ಮಂಡಳಿಯವರನ್ನೂ ಎಂಟುದಿವಸ ಮುಂಚಿತವಾಗಿಯೇ ಕರೆಯಿಸಿಕೊಂಡು ಪ್ರಾಣಿಗಳ ವಿಷಯದಲ್ಲಿ ಎಲ್ಲರೂ ದಯವುಳ್ಳವರಾಗುವಂತೆ ಪ್ರತಿದಿವಸವೂ ಊರಲ್ಲೆಲ್ಲಾ ಭಜನೆಯನ್ನುಮಾಡುತ್ತ ಹೊರಡುತ್ತಿದ್ದರಲ್ಲದೆ ನಿತ್ಯವೂ ಒಂದೊಂದು ಸ್ಥಳದಲ್ಲಿ ಮೀಟಿಂಗುಗಳನ್ನು ಸೇರಿಸಿ ಜನರನ್ನೆಲ್ಲ ಬರಮಾಡಿಕೊಂಡು ಅವರ ಮನಸ್ಸು ಕರಗುವಂತೆ ಉಪನ್ಯಾಸಗಳನ್ನು ಹೇಳುತ್ತಿದ್ದರು. ಮತ್ತು ಪ್ರಾಣಿಗಳ ಹಿಂಸೆಯಿಂದಾಗುವ ಪಾಪವನ್ನೂ, ಪ್ರಾಣಿಗಳ ಕೊಲೆಮಾಡುವ ಭಯಂಕರಕೃತ್ಯವೇ ಮೊದಲಾದುವುಗಳನ್ನು ಜನಗಳ ಮನಸ್ಸಿಗೆ ಹಿಡಿಯುವಂತೆ ಮ್ಯಾಜಿಕ್‌ಲ್ಯಾಂಟರನ್ ಮೂಲಕ ತೋರಿಸುತ್ತಾ ಜನಗಳಿಗೆಲ್ಲ ಪ್ರಾಣಿಗಳಲ್ಲಿ ದಯೆಯು ಉತ್ಪನ್ನವಾಗುವ ಹಾಗೆ ಮಾಡುತ್ತಿದ್ದರು. ಹೀಗೆಲ್ಲಾ ಅನೇಕ ವಿಧವಾದ ಏರ್ಪಾಡುಗಳನ್ನು ಮಾಡಿದ್ದರಿಂದ ದೇವಿಜಾತ್ರೆಯಕಾಲದಲ್ಲಿ ದೇವಸ್ಥಾನದಮುಂದೆ ಒಂದು ಕುರಿಯನ್ನೂ ಕಡಿಯುವುದಿಲ್ಲವೆಂದು ಗೊತ್ತುಮಾಡಿಕೊಂಡು ಅದರಂತೆ ಆಚರಿಸಿ ಪ್ರಾಣಿಗಳ ಕೊಲೆಯಿಂದಾಗುವ ರಕ್ತಪ್ರವಾಹವನ್ನು ನಿಲ್ಲಿಸಿದರು. ಈ ಕಾರ್ಯದಲ್ಲಿ ಸಂಘದ ಮೆಂಬರುಗಳೂ, ದೇವಸ್ಥಾನದ ಪ್ರಮುಖರೂ, ಪುರಮಹಾಜನರೂ, ಅಮಲ್ದಾರ್‌ಸಾಹೇಬರವರೂ, ಪೋಲೀಸ್‌ಇನ್ಸ್‌ಪೆಕ್ಟರವರೂ, ಊರಿನ ಪ್ರತಿಯೊಂದು ಕೋಮಿನವರೂ, ಹೈಸ್ಕೂಲ್ ಸ್ಕೌಟ್ ಮಾಸ್ತರರೂ, ಸ್ಕೌಟ್ ಹುಡುಗರೂ, ಬಹು ಶ್ರಮನನ್ನು ವಹಿಸಿ ತುಂಬಾ ದಕ್ಷತೆಯಿಂದ ಜನಗಳಿಗೆಲ್ಲ ಸಮಾಧಾನಹೇಳಿ ಹಿಂಸೆಯು ನಡೆಯದಂತೆ ತಕ್ಕ ಏರ್ಪಾಡು ಮಾಡಿದರು.

ಯಾವ ಯಾವ ಸ್ಥಳಗಳಲ್ಲಿ ಹಿಂಸಾಯುಕ್ತವಾದ ದೇವಿಜಾತ್ರೆಯು ನಡೆಯುತ್ತದೆಯೋ ಆ ಸ್ಥಳದ ಮಹಾಶಯರು ಹಿಂಸೆಗೆ ಆಸ್ಪದಕೊಡದೆ, ಕೇವಲ ಸಾತ್ವಿಕರೀತಿಯಿಂದಲೇ ಆಚರಿಸಿ ಪುಣ್ಯಭಾಗಿಗಳಾಗುವುದು ಉತ್ತಮ. ಸಂಘದವರ ಪ್ರಾರ್ಥನೆಯಂತೆ ಈಗಾಗಲೇ ಮಳಲ್ಕೆರೆ, ದೊಡ್ಡೆತ್ತಿನಹಳಿ, ಈಚಘಟ್ಟ, ಕಾಳಘಟ್ಟ, ರಾಮಗೊಂಡನಹಳ್ಳಿ, ಗೊಲ್ಲಹಳ್ಳಿ, ಕಂಕನಹಳಿ, ಮೊಳಕಾಲ್ಮುರು, ಮತ್ತು ಹೆಗ್ಗೆರೆ ಮೊದಲಾದ ಗ್ರಾಮದವರು ಹಿಂಸೆಯನ್ನು ನಿಲ್ಲಿಸಿ ಸಾತ್ವಿಕರೀತಿಯಿಂದಲೇ ಜಾತ್ರೆಯನ್ನು ಆಚರಿಸಿರುವರು. ಮೇಲ್ಕಂಡ ಗ್ರಾಮದವರ ಮೇಲ್ಪಂಕ್ತಿಯನ್ನು ಅನುಸರಿಸಿ ಎಲ್ಲರೂ ಪುಣ್ಯಭಾಗಿಗಳಾಗಬೇಕಾಗಿ ಕೋರುತ್ತೇವೆ.

ತವನಪ್ಪನವರ ದೇವೇಂದ್ರಪ್ಪನವರು,
ಅಧ್ಯಕ್ಷರು.

ಪ್ರಾಣಿದಯಾಜ್ಞಾನಪ್ರಸಾರಕಸಂಘ,
ದಾವಣಗೆರೆ.

ಜೀವದಯಾಪ್ರಚಾರಕಸಂಘ, ತುಮಕೂರು.

ಪ್ರಕೃತದಲ್ಲಿ ಗೋವುಗಳೇ ಮೊದಲಾದ ಸಾಧು ಮತ್ತು ಮೂಕಪ್ರಾಣಿಗಳವಧೆಯು ನಾನಾವಿಧದಲ್ಲಿ ಹೆಚ್ಚುತ್ತಿರುವುದನ್ನು ನಿಲ್ಲಿಸಲು ಬೆಂಗಳೂರು, ದಾವಣಗೆರೆ, ಗದಗು, ಚೆನ್ನಪಟ್ಟಣ ಮೊದಲಾದ ಸ್ಥಳಗಳಲ್ಲಿ ಸಂಘಗಳು ಏರ್ಪಟ್ಟಿರುವಂತೆ ಇಲ್ಲಿಯೂ ಅಂಥಾ ಒಂದು ಸಂಘವು ಅತ್ಯವಶ್ಯಕವಾಗಿ ಸ್ಥಾಪಿಸಬೇಕೆಂಬುವದಾಗಿ ಈ ಊರಿನ ವರ್ತಕಮಂಡಲಿಯ ಆಲೋಚನೆಗೆ ಬಂದದ್ದು ಸ್ತುತ್ಯವಾದದ್ದೇ ಸರಿ. ಅದರಂತೆ ತಾ|| 16-3-26 ರಲ್ಲಿ ಈ ಊರು ಮಂಡಿಪೇಟೆಯ ಮ|| ಆ. ಕೆ. ಅಪ್ಪಣ್ಣಶೆಟ್ಟರವರ ಮಹಡಿಯ ಮೇಲೆ ಮಿ|| ಸಾಹುಕಾರ್ ಅಬ್ದುಲ್‌ನಬಿಖಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಮಹಾಜನಗಳೆಲ್ಲರೂ ಸಭೆಸೇರಿ ಜೀವದಯಾಪ್ರಚಾರಕಸಂಘ ಎಂಬ ಹೆಸರಿನಿಂದ ಒಂದು ಸಂಘವನ್ನು ಸ್ಥಾಪಿಸಿದರು. ಈ ಸಂಘವು ಚಿರಸ್ಥಾಯಿಯಾಗಿ ನಡಿಯಲು ತಾ|| 21-3-26 ರಲ್ಲಿ ಒಂದು ಜನರಲ್ ಮೀಟಿಂಗು ಗೌರ್ನಮೆಂಟ್ ಮಿಡಲ್‌ಸ್ಕೂಲ್ ಹಾಲಿನಲ್ಲಿ ಈ ಊರು ಮ್ಯುನಿಸಿಪಲ್ ಪ್ರೆಸಿಡೆಂಟ್ ಮ|| ಸಿ ಕೃಷ್ಣರಾವ್ ಬಿ.ಎ., ಬಿ.ಎಲ್., ಅಡ್ವೋಕೇಟ್‌ರವರ ಅಧ್ಯಕ್ಷತೆಯಲ್ಲಿ ಜರುಗಿ ಮಂಡೀ ವರ್ತಕರಾದ ಮ|| ಗಳಾದ ಡಿ. ಎಸ್. ಶ್ಯಾಮರಾಜಪ್ಪನವರು ಸಂಘದ ಪ್ರಸಿಡೆಂಟರಾಗಿಯೂ, ಅ. ಕೆ. ಧರಣಪ್ಪನವರು, ವೈಸ್‌ಪ್ರಸಿಡೆಂಟರಾಗಿಯೂ, ಪದ್ಮನಾಭಯ್ಯನವರು ಸೆಕ್ರೆಟರಿಯವರಾಗಿಯೂ, ಟಿ. ಎಂ. ವೀರಪ್ಪನವರು ಟ್ರೆಜರರಾಗಿಯೂ, ಅಡ್ವೋಕೇಟ್ ಜೆಫ್. ವೆಂಕಟರಾಮಯ್ಯನವರು, ಬಿ.ಎ., ಬಿ.ಎಲ್., ರವರು, ಅಡ್ವೋಕೇಟ್ ಎಸ್. ಕೆ. ಸೆಟ್ಲೂರರವರು, ಬಿ.ಎ., ಬಿ.ಎಲ್., ರವರು, ಬಿ. ಸಿದ್ಧಲಿಂಗಪ್ಪನವರು, ಯಜಮಾನ್ ಸಿದ್ದಪ್ಪನವರು, ಕರಿಮಣ್ಣೆ ಸಿದ್ದಲಿಂಗಪ್ಪನವರು, ಡಿ. ವೀರಣ್ಣನವರು, ಅಬ್ದುಲ್‌ಸತ್ತಾರ್‌ರವರು, [illegible] ಶೆಟ್ಟರು, ಸೋಮಶೇಖರಯ್ಯನವರು, ಬಿ. ಮಲ್ಲಪ್ಪನವರು, ಡಾ. [illegible]

ಪ್ಪನವರು ಮ್ಯಾನೇಜಿಂಗ್‌ಕಮಿಟಿ ಮೆಂಬರುಗಳಾಗಿಯೂ, ಮುನ್ಸಿಪಲ್ ವೈಸ್‌ಪ್ರೆಸಿಡೆಂಟ್ ಗುರುಚೆನ್ನಬಸಪ್ಪನವರು, ಜಿ. ಕೆ. ಗುರುಸಂಗಾರ್ಯರವರು ಮತ್ತು ಚೊಕ್ಕನಾಥರಾಜುಯವರು ಆಡಿಟ್ ಕಮಿಟಿ ಮೆಂಬರುಗಳಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. ಅಲ್ಲದೆ ಸಂಘದ ಕಾರ್ಯಗಳು ಸ್ಥಿರವಾಗಿ ನಡಿಯಲು ತಕ್ಕಷ್ಟು ಮೂಲಧನವನ್ನು ಶೇಖರಿಸುವದಕ್ಕಾಗಿ ಚಂದಾ ಏರ್ಪಟ್ಟು ಅದಕ್ಕಾಗಿ 1800 ರೂಪಾಯಿಗಳವರೆಗೂ ನೊಬಲಗು ಶೇಖರಿಸಲ್ಪಟ್ಟಿತು. ಇನ್ನೂ ಅನೇಕ ಮಹನೀಯರು ಈ ಸಂಘಕ್ಕೆ ಉದಾರವಾಗಿ ದ್ರವ್ಯಸಹಾಯ ಮಾಡತಕ್ಕವರಾಗಿರುತ್ತಾರೆ. ಇಷ್ಟರಲ್ಲಿ ಸಂಘವು ಸರ್ಕಾರದಲ್ಲಿ ರಿಜಿಸ್ಟರ್ ಆದನಂತರ ಸಂಘದ ಉದ್ದೇಶದಂತೆ ಸರ್ಕಾರದಿಂದ ಹೊಂದತಕ್ಕ ಸಹಾಯಗಳನ್ನು ಹೊಂದಿ ಗ್ರಾಮಾಂತರಗಳಲ್ಲಿಯೂ, ಜಾತ್ರೆಗಳಲ್ಲಿಯೂ, ಸಂತೆಗಳಲ್ಲಿಯೂ ಗೋವುಗಳೇ ಮೊದಲಾದ ಸಾಧು ಮತ್ತು ಮೂಕಪ್ರಾಣಿಗಳ ಹಿಂಸೆಯನ್ನು ನಿಲ್ಲಿಸಲು ಜನಗಳಿಗೆ ಬೋಧಿಸಿ, ತನ್ಮೂಲಕ ದೇಶದಲ್ಲಿ ಉಂಟಾಗಿರತಕ್ಕ ಪ್ರಾಣಿಹಿಂಸೆಯನ್ನು ಕೈಲಾದಮಟ್ಟಿಗೂ ನಿಲ್ಲಿಸಲು ಸಂಘದವರು ತುಂಬಾ ಪ್ರಯತ್ನಮಾಡಿ ಜನಗಳ ವಂದನೆಗೆ ಪಾತ್ರರಾಗುವರೆಂದು ನಂಬಿರುತ್ತೇನೆ. ಅಲ್ಲದೆ ಮಹಾಜನಗಳೆಲ್ಲರೂ ಈ ಸಂಘಕ್ಕೆ ಉದಾರವಾಗಿ ದ್ರವ್ಯಸಹಾಯಮಾಡಿ ಪುಣ್ಯಕ್ಕೆ ಭಾಗಿಗಳಾಗಬೇಕಾಗಿ ಕೋರುತ್ತೇನೆ.

ಪ್ರಾಣಿದಯಾಪರ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಏಪ್ರಿಲ್ ತಾ|| ೩ ನೆಯ ಶನಿವಾರ.

REFLECTIONS OF A RECLUSE.

Mr. S. S. Setlur was once a *persona grata* in political circles outside the Province and from distance commanded respect of his compatriots in Mysore. But latterly he has chosen for reasons best known to him to live in his own native Province in a manner not quite striking to the public eye except by way of snobbish appearances in journals. He has receded to the background politically, and has become a recluse; but he wants to make his existence felt by writing extensively to papers about Mysore and its administration. The way he has set about doing it is not by any means edifying. His recent articles about the Dewanship of Mysore seem somewhat too artificial and forced. Not content with the present situation he has chosen to rake up the past. In his series about Mysore Reforms in a recent article he reviews the *regime* of the late Sir M. Kantaraj Urs. No article is without the ego appearing prominently and in this he talks of the sermon he gave to Sir M. Kantaraj Urs when he met him at Bombay after taking the degree years ago, and that his sermon had borne frint as evidenced by his work in later years. Of real praise for his *regime* there is precious little. He makes no mention of the Education Memorandum nor of the wonderful stimulus he gave to the progress of the Adi Karnatakas and Adi Dravidas. Of the outstanding events of his *regime* he makes mention of only three, the flotation of the public debt at heavy interest, the Miller Report and the war measures. Not a word about the flotation being a success, but there is no omission about the heaviness of the interest. Among the unfortunate incidents, as he calls them, of his *regime* were the Miller Report, its sequel of press prosecutions and his handling of the State Finances. How could you expect the die-hard Brahmin, even though he is of the Congress, to lie quiet when the so-called crumbs of office are to be distributed with some equity among the different communities of the State? Office has no value from the point of view of the Congress but is it not everything from the point of view of the Brahmin? We do not know anything about the sequel of the Miller Report, namely, press prosecutions. But anyway Mr. S. S. Setlur has them and he can well keep them. But it cannot be denied that Mr. Setlur is most uncharitable when he states that the Ex-Dawan's handling of the State Finance was one of the unfortunate incidents. Mr. Setlur must know, as every man in the street in Mysore who has thought about the matter knows, that if Sir M. Kantaraj Urs experienced the utmost difficulty in handling the finances of the State it was never due to his incapacity but to the heavy legacy of ill—considered and costly schemes left to him by his predecessor. It is a monstrosity to suggest that Sir M. Kantaraj Ursus' handling of Finance was not successful. In the worst of times succeeding the war with its inflation of prices and increased cost of living, and with such a taxing legacy as above, Sir M. Kantaraj Urs had to start his *regime* and inspite of it he was able to grant extra allowances to the ministerial and low paid officials in the State. It is no exaggeration of statement that the schemes of Sir M. Visweswarayya landed the State into most unfortunate and uncomfortable predicament, a fact which Sir Albion R. Banerji has not himself kept a secret.

But the unkindest cut of all is when this old political phantom says that Sir M. Kantaraj Urs was, in the case of the Miller Report, led into an error of judgment "by more designing men who took advantage of his physical weakness and exploited his inborn sympathy for the oppressed and poor in general." Mr. Setlur may try to show off his disinterestedness by saying that Sir M. Kantaraj Urs had no communal feeling, but he would do little credit to his character, judgment and independence if he were to say that he was a tool in the hands of designing men. It is a new method of attacking Sir M. Kantaraj Urs' integrity which we were least prepared for, and one which none but the subtle Brahmanical brains of an erstwhile successful lawyer is capable of. Has Mr. Setlur the hardihood to suggest that Sir Leslie Miller, the late Chief Justice was also led into this error of judgment by designing men on account of his physical weakness? Then how many such have been led into this error of judgment, and who are the disigners? Is it Mr. Setlur and men of his ilk who have so successfully and so cunningly designed to reserve education for themselves, to monopolise knowledge and positions which come to people in consequence and to relegate the rest of the co-religionists, and their own brethren to a place of social inferiority or is it men who have sought to break this monopoly and to introduce some social justice in this land, some equitable distribution of gubernatorial gifts that are designers? Unfortunately for Mr. Setlur and his men, the rest of the people are not fools and are not going to swallow these statements any longer. A great statesman has said "you can fool some people for all time and all people for some time but you cannot fool all people for all time." Mr. Setlur wants to pander to the Ursus by saying that "for any Kshatriya to glory in the negative title of "non" is to deny his birth, and suggesting that they should not subscribe to the nomenclature non-Brahmana. Is Mr. Setlur serious that this kind of tickling and juggling is going to convince any sober man?

We have our own appreciation of the work and ability of Sir Albion. But we have not seen another so singularly keen as Mr. Setlur in singing hymns of praise at all seasons of Sir Albion. We are afraid that much of the real tribute is spoiled by such repetitions and overstatements. True to his task, he says that after Sir M. Kantaraj Urs' retirement His Highness at once relised that, to cope with such a *delicate* situation one of Sir Banerji's experience and outstanding ability was needed and appointed him (Italics ours), For a matter of that each time a Dewan retires, there is supposed to be a delicate situation. We would willingly have left the present generation and the succeeding generations to give their verdict about Sir M. Kantaraj Urs' *regime*. But when such aspersions are cast on one than whom there was no nobler, more sympathetic and truer friend of Mysore people, one who has done more to awaken the sleeping masses in a couple of years that what others have done in 10 times that time, we would certainly be failing in our duty if we did not raise our voice of protest and indignation, particularly when the soul that is sought to be criticised has departed from this world. We wish that the die hards even of the type of Mr. Setlur would not open their attacks on such departed patriots as Sir M. Kantaraj Urs' when tney could well avoid it. For onething, the game is long played out. For another, it does not improve the political situation.

ನಿಂದಾಸ್ತುತಿ.

ಮ|| ಎಸ್. ಎಸ್. ಸೆಟ್ಲೂರ್‌ರವರು ಒಂದು ಕಾಲದಲ್ಲಿ ಮೈಸೂರು ಸೀಮೆಯ ಹೊರಗಡೆಯಿದ್ದುಕೊಂಡು ರಾಜಕೀಯ ವಿಚಾರದಲ್ಲಿ ಬಹಳ ದೊಡ್ಡವರೆಂದು ಮೈಸೂರಿನಲ್ಲಿರುವ ತಮ್ಮ ಸ್ನೇಹಿತರುಗಳಿಂದ ಹೊಗಳಿಸಿಕೊಂಡು ಮರ್ಯಾದಿಸಲ್ಪಡುತ್ತಿದ್ದರು. ಆದರೆ ಕಡೆಯಲ್ಲಿ ಅವರು ತಮ್ಮ ಅಂತರಾತ್ಮಕ್ಕೆ ಮಾತ್ರ ಗೋಚರವಾದ ಕಾರಣದಮೇಲೆ ತಮ್ಮ ಜನ್ಮಸ್ಥಲವಾದ ಮೈಸೂರಿನಲ್ಲೇ ವಾಸಮಾಡಲು ನಿರ್ಧರಿಸಿ ಆಗಾಗ್ಗೆ ವೃತ್ತಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಗೋಚರವಾಗುವುದರ ವಿನಾ ಜನರ ಕಣ್ಣಿಗೆ ಬೀಳದ ರೀತಿಯಲ್ಲಿ ವಾಸಮಾಡುತ್ತಿರುವರು. ರಾಜಕೀಯ ವಿಚಾರದಲ್ಲಿ ಹಿಂಬರಿದು ಮೌನಶಾಲಿಗಳಾಗಿರುವವರಾದರೂ ಮೈಸೂರಿನ ಮತ್ತು ಅದರ ರಾಜ್ಯಾಡಳಿತದ ವಿಚಾರವಾಗಿ ವೃತ್ತಪತ್ರಿಕೆಗಳಿಗೆ ಲೇಖನಗಳನ್ನು ನಿರರ್ಗಳವಾಗಿ ಬರೆದು ತಾವಿನ್ನೂ ಜೀವಿಸಿರುವೆವೆಂಬುದನ್ನು ತೋರ್ಪಡಿಸುವವರಾಗಿರುವರು. ಹಾಗೆ ಮಾಡಲು ಅವರು ಹೊರಟಿರುವ ಮಾರ್ಗವು ಮಾತ್ರ ಯಾವಕಾರಣದಿಂದಲೂ ಗೌರವಾರ್ಹವಾಗಿಲ್ಲ. ಪ್ರಕೃತಸ್ಥಿತಿಯನ್ನು ನೋಡಿ ತೃಪ್ತರಾಗದೆ ಹಿಂದಣ ಸಂದರ್ಭಗಳನ್ನೆತ್ತಿ ಆಡಲುಪಕ್ರಮಿಸಿರುವರು. ಮೈಸೂರು ದಿವಾನಗಿರಿಯ ವಿಚಾರದಲ್ಲಿ ಇವರು ಈಚೆಗೆ ಬರೆದಿರುವ ಲೇಖನಗಳು ಸಹಜಾಭಿಪ್ರಾಯದಿಂದಲ್ಲದೆ ಬಲವಂತದಿಂದ ಬರೆಯಲ್ಪಟ್ಟಿರುವುದಾಗಿ ತೋರುತ್ತವೆ. ಮೈಸೂರಿನ ರಾಜಕೀಯಸುಧಾರಣೆಯ ವಿಚಾರವಾಗಿ ಅನೇಕ ಲೇಖನಗಳನ್ನು ಬರೆದು, ಅವುಗಳೊಂದರಲ್ಲಿ ಕೈ|| ಸರ್ ಎಂ. ಕಾಂತರಾಜ ಅರಸಿನವರ ಆಡಳಿತವನ್ನು ಪುನರ್ವಿಮರ್ಶೆ ಮಾಡಿರುತ್ತಾರೆ. ಸ್ವಪ್ರತಿಷ್ಠೆಯು ಪ್ರಾಮುಖ್ಯವಾಗಿಲ್ಲದಿರುವ ಇವರ ಲೇಖನವೇ ಇಲ್ಲ, ಲೇಖನದಲ್ಲಿ ವಿಶ್ವವಿದ್ಯಾಲಯದ ಪ್ರಶಸ್ತಿಯನ್ನು ಪಡೆದಮೇಲೆ ಕೈ|| ಕಾಂತರಾಜಅರಸಿನವರನ್ನು ತಾವು ಕಂಡು ಅವರಿಗೆ ಬುದ್ಧಿವಾದವನ್ನು ಹೇಳಿದುದನ್ನೂ, ಅದರ ಫಲವು ಅವರು ಕಡೆಯಲ್ಲಿ ಮಾಡಿದ ಕೆಲಸಗಳಿಂದ ವ್ಯಕ್ತವಾದುದನ್ನೂ ಕುರಿತು ಪ್ರಸ್ತಾವಿಸಿರುತ್ತಾರೆ. ಅವರ ಆಡಳಿತವನ್ನು ಪ್ರಶಂಸಿಸಿರುವುದರಲ್ಲಿ ಸ್ತುತ್ಯವಾದ ಭಾಗಗಳು ಬಿಟ್ಟುಹೋಗಿವೆ. ವಿದ್ಯಾಭ್ಯಾಸದ ಮೆಮೋರಾಂಡಂ ವಿಚಾರವಾಗಿಯೇ ಆಗಲಿ, ಆದಿಕರ್ಣಾಟಕರ ಮತ್ತು ಆದಿದ್ರಾವಿಡರ ಅಭಿವೃದ್ಧಿಗಾಗಿ ಅವರು ಕೊಟ್ಟ ಆಶ್ಚರ್ಯಕರವಾದ ಪ್ರೋತ್ಸಾಹ ವಿಚಾರವಾಗಿಯೇ ಆಗಲಿ ಏನನ್ನೂ ಹೇಳಿಲ್ಲ. ಅವರ ರಾಜ್ಯಾಡಳಿತದಲ್ಲಿ ನಡೆದ ವಿಚಾರಗಳೆಲ್ಲೆಲ್ಲ ಹೆಚ್ಚು ಬಡ್ಡಿಯಿಂದ ಸಾಲವನ್ನು ತೆಗೆದುದು, ಮಿಲ್ಲರ್ ರಿಪೋರ್ಟು ಮತ್ತು ಯುದ್ಧಸಂಬಂಧವಾದ ಕಾರ್ಯಭಾಗ ಈ ಮೂರು ವಿಚಾರಗಳನ್ನು ಮಾತ್ರ ಸೆಟ್ಲೂರ್‌ರವರು ತಮ್ಮ ಲೇಖನಗಳಲ್ಲಿ ತಿಳಿಸಿರುತ್ತಾರೆ. ಸಾಲದ ಪ್ರಯತ್ನವು ಕೈಗೂಡಿತೆಂಬ ವಿಚಾರವಾಗಿ ಒಂದು ಮಾತನ್ನಾಡದಿದ್ದರೂ, ಬಡ್ಡಿಯು ದುಬಾರಿ ಎಂಬುದನ್ನು ಮಾತ್ರ ಹೇಳದೆ ಬಿಟ್ಟಿಲ್ಲ. ಮಿಲ್ಲರ್ ರಿಪೋರ್ಟು, ಅದರ ಫಲಿತಾಂಶವಾದ ವೃತ್ತಪತ್ರಿಕೆಯ ಮೇಲೆ ನಡೆದ ವಿವಾದಗಳು ಮತ್ತು ಸಂಸ್ಥಾನದ ಆರ್ಥಿಕವಿಚಾರದಲ್ಲಿ ಕೈಹಾಕಿದುದು ಈ ಮೂರೂ ಕೈ|| ಅರಸಿನವರ ಆಡಳಿತದಲ್ಲಿ ನಡೆದ ದೌರ್ಭಾಗ್ಯವಿಚಾರಗಳಾಗಿವೆ ಎಂದು ಹೇಳಿರುವರು. ಸಂಸ್ಥಾನದ ಬೇರೆಬೇರೆ ಜನವರ್ಗಗಳಿಗೆ ಅವರ ಸಂಖ್ಯಾನುಗುಣವಾಗಿಲ್ಲದಿದ್ದರೂ ತಕ್ಕಮಟ್ಟಿಗೆ ಉದ್ಯೋಗಗಳನ್ನು ಹಂಚಿಕೊಟ್ಟುದನ್ನು ನೋಡಿ ಈ ಅಸೂಯಾಪರರಾದ ಬ್ರಾಹ್ಮಣರು ತಾವು ಕಾಂಗ್ರೆಸ್ ಭಕ್ತರಾಗಿದ್ದಾಗ್ಯೂ ಸಹಿಸಿಕೊಂಡಿರುವರೆಂದು ಹೇಗೆತಾನೆ ನಿರೀಕ್ಷಿಸುವುದು? ಕಾಂಗ್ರೆಸ್‌ಭಕ್ತರಾದುದರಿಂದ ಉದ್ಯೋಗವು ಗಣನೀಯವಲ್ಲವಾಗಿದ್ದರೂ ಬ್ರಾಹ್ಮಣರಾದುದರಿಂದ ಮಹತ್ತಾಗಿರುವುದಲ್ಲವೆ? ಮಿಲ್ಲರ್ ರಿಪೋರ್ಟಿನ ಫಲಿತಾಂಶವಾಗಿ ವೃತ್ತಪತ್ರಿಕೆಯ ಮೇಲೆ ನಡೆದ ಕಾರ್ಯಭಾಗದ ವಿಚಾರವಾವುದೋ ನಮಗೆ ತಿಳಿಯದು. ಮ|| ಸೆಟ್ಲೂರ್‌ರವರೇನಾದರೂ ತಿಳಿದಿದ್ದರೆ ಅದನ್ನು ತಾವೇ ಇಟ್ಟುಕೊಂಡಿರಲಿ. ಆದರೆ ಕೈ|| ಅರಸಿನವರು ಸಂಸ್ಥಾನದ ಆರ್ಥಿಕವಿಚಾರದಲ್ಲಿ ಕೈಹಾಕಿದುದು ದೌರ್ಭಾಗ್ಯವೆಂದು ಮ|| ಸೆಟ್ಲೂರ್‌ರವರು ಹೇಳಿರುವುದು ಮಾತ್ರ ಬಹಳ ಅನ್ಯಾಯ. ಕೈ|| ಅರಸಿನವರು ಸಂಸ್ಥಾನದ ಆರ್ಥಿಕವಿಚಾರದಲ್ಲಿ ಕೈಹಾಕಿದುದರಿಂದ ತೊಂದರೆಯನ್ನನುಭವಿಸಬೇಕಾಗಿಬಂದುದು ಅವರ ಹಿಂದಣ ದಿವಾನರು ಮುಂದಾಲೋಚನೆಯಿಲ್ಲದೆ ವಿಶೇಷ ದ್ರವ್ಯವ್ಯಯವಾಗತಕ್ಕ ಕಾರ್ಯಭಾಗಗಳನ್ನು ಆರಂಭಿಸಿಬಿಟ್ಟುಹೋಗಿದ್ದುದೇ ಮುಖ್ಯಕಾರಣ. ಅವರ ಅಸಮರ್ಥತೆಯಾಗಲಿ ಅಜ್ಞಾನವಾಗಲಿ ಖಂಡಿತವಾಗಿಯೂ ಕಾರಣವಲ್ಲವೆಂದು ಬೀದಿಯಲ್ಲಿ ತಿರುಗುವ ಮನುಷ್ಯನು ಕೂಡ ತಿಳಿದಿರುವಂತೆ ಮ|| ಸೆಟ್ಲೂರ್‌ರವರೂ ತಿಳಿದಿರಬೇಕಾಗಿದೆ. ಸರ್ ಎಂ. ಕಾಂತರಾಜ ಅರಸಿನವರು ಆರ್ಥಿಕವಿಚಾರದಲ್ಲಿ ಕೈಹಾಕಿದುದು ನಿಷ್ಫಲವಾಯಿತೆಂದು ಹೇಳುವುದು ಬಹಳ ಕ್ರೂರವೇ ಸರಿ. ಯುದ್ಧದ ಪ್ರತಿಫಲವಾಗಿ ಪದಾರ್ಥಗಳ ಬೆಲೆಯು ಪ್ರಿಯವಾಗಿ ಜೀವನದ ವೆಚ್ಚವು ಹೆಚ್ಚಿದ್ದ ಮತ್ತು ಮೇಲೆಹೇಳಿದ ದೊಡ್ಡಕಾರ್ಯಗಳು ಆರಂಭಿಸಲ್ಪಟ್ಟಿದ್ದ ಮಹಾದುಷ್ಕರ ಸಮಯದಲ್ಲಿ ಕೈ|| ಅರಸಿನವರು ರಾಜ್ಯಾಡಳಿತವನ್ನು ಆರಂಭಿಸಿದರಾದರೂ, ಸಂಸ್ಥಾನದ ಅಲ್ಪ ಸಂಬಳಗಾರರಿಗೆಲ್ಲ ಹೆಚ್ಚು ಅಲೋಯೆನ್ಸನ್ನು ಕೊಡಲು ಸಮರ್ಥರಾದರು. ಸರ್ ಎಂ. ವಿಶ್ವೇಶ್ವರಯ್ಯನವರು ಮನಸ್ಸಿನ ಮಂಡಿಗೆಯಂತೆ ಅಗಾಧವಾದ ಕಾರ್ಯಗಳನ್ನು ಕೈಕೊಂಡು ಆರಂಭಿಸಿದುದರಿಂದಲೇ ಸಂಸ್ಥಾನವು ಬಹಳ ಕಷ್ಟಕ್ಕೆ ಗುರಿಯಾಗಬೇಕಾಗಿ ಬಂದಿತೆಂದು ಹೇಳುವುದರಲ್ಲಿ ಅತಿಶಯೋಕ್ತಿಯೇನೂ ಇಲ್ಲವು. ಈ ವಿಚಾರವನ್ನು ಸರ್ ಎ. ಆರ್. ಬಾನರ್ಜಿಯವರು ಗೋಪ್ಯವಾಗಿಡದೆ ಎತ್ತಿ ಆಡಿರುತ್ತಾರೆ. ಕೈ|| ಅರಸಿನವರ ದೇಹದೌರ್ಬಲ್ಯವನ್ನೂ, ನಿಮ್ನಜನರಲ್ಲೂ ಬಡವರಲ್ಲೂ ಅವರಿಗೆ ಸ್ವಭಾವವಾಗಿದ್ದ ಸಾನುಭೂತಿಯನ್ನೂ ಚೆನ್ನಾಗಿ ಬಲ್ಲವರಾಗಿದ್ದ ಸ್ವಕಾರ್ಯಸಾಧಕರ ಕೈವಶರಾಗಿ ಮಿಲ್ಲರ್‌ಕಮಿಟಿ ರಿಪೋರ್ಟಿನ ವಿಚಾರದಲ್ಲಿ ಮಹಾ ಅನ್ಯಾಯವನ್ನು ಮಾಡಿದರೆಂದು ಮ|| ಸೆಟ್ಲೂರವರು ಬಹಳ ನಿರ್ಘೃಣರಾಗಿ ಹೇಳಿರುತ್ತಾರೆ. ಕೈ|| ಅರಸಿನವರಿಗೆ ಜಾತಿದ್ವೇಷವಿಲ್ಲವೆಂದು ಹೇಳುವುದರಿಂದ ತಾವು ನಿಷ್ಪಕ್ಷಪಾತಿಗಳೆಂದು ತೋರಿಸಲು ಮ|| ಸೆಟ್ಲೂರ್‌ರವರು ಪ್ರಯತ್ನಿಸುವವರಾಗಿದ್ದರೂ, ಕೈ|| ಅರಸಿನವರು ಸ್ವಕಾರ್ಯಸಾಧಕರ ಕೈಸೂತ್ರದ ಬೊಂಬೆಗಳಾಗಿದ್ದರೆಂದು ಹೇಳುವುದರಿಂದ ಅವರಿಗೆ ಸ್ವಬುದ್ಧಿಯಿರಲಿಲ್ಲವೆಂದು ಹೇಳಿದುದಾಗಿದೆ. ಈ ರೀತಿಯಲ್ಲಿ ಕೈ|| ಕಾಂತರಾಜಅರಸಿನವರ ಪ್ರಾಮಾಣಿಕತೆಯನ್ನು ಸ್ತುತಿರೂಪವಾಗಿ ನಿಂದಿಸುವ ಉಪಾಯವು ನಮ್ಮಿಂದ ನಿರೀಕ್ಷಿಸಲ್ಪಡದುದಾಗಿದೆ; ಹಿಂದೆ ಯಶಸ್ವಿಯಾದ ಬ್ರಾಹ್ಮಣ ಲಾಯರ ವಿನಾ ಬೇರೆಯವರ ಬುದ್ಧಿಗೆ ಹೊಳೆಯುವುದಿಲ್ಲ. ಗತಿಸಿದ ಸರ್ ಲೀಸ್ಲೆ ಮಿಲ್ಲರ್‌ರವರು ದೇಹದೌರ್ಬಲ್ಯದಿಂದ ಸ್ವಕಾರ್ಯಸಾಧಕರ ಪ್ರಯತ್ನ ವಿಶೇಷಕ್ಕೊಳಗಾಗಿ ತಪ್ಪುಮಾಡಿದರೆಂದು ಮ|| ಸೆಟ್ಲೂರ್‌ರವರು ಧೈರ್ಯದಿಂದ ಹೇಳಬಲ್ಲರೆ? ಹಾಗಿದ್ದಲ್ಲಿ ಎಷ್ಟು ಜನರು ಅಂತಹ ಅನ್ಯಾಯವನ್ನು ಮಾಡಿದರು ಮತ್ತು ಹಾಗೆ ಮಾಡಿಸಿದ ಸಂಚುಗಾರರಾರು? ಸಮಸ್ತ ಜನರಿಗೂ ಸಮಾನವಾಗಿ ಲಭ್ಯವಾಗಬೇಕಾದ ವಿದ್ಯೆ ಮತ್ತು ಉದ್ಯೋಗಗಳನ್ನು ತಾವು ಮಾತ್ರ ಮುಡುಪಾಗಿಟ್ಟುಕೊಂಡು ಇತರರನ್ನು ಅಜ್ಞಾನಾಂಧಕಾರಕೂಪದಲ್ಲಿಟ್ಟು ಬಹು ನೀಚವಾಗಿ ಕಾಣುತ್ತಿರುವ ಮ|| ಸೆಟ್ಲೂರ್‌ರವರೂ, ಅವರ ವರ್ಗದವರೂ ಸಂಚುಗಾರರೋ; ಒಂದೇ ವರ್ಗದವರು ಎಲ್ಲ ದೊಡ್ಡಸ್ತಿಕೆಯನ್ನೂ ಸರ್ಕಾರಿಯುದ್ಯೋಗವನ್ನೂ ತಮ್ಮೊಬ್ಬರ ಪ್ರಯೋಜನಾರ್ಥವಾಗಿ ಕಾದಿಟ್ಟುಕೊಂಡಿರುವುದನ್ನು ತಪ್ಪಿಸಿ ಎಲ್ಲವರ್ಗದವರೂ ಯಾವ ತಾರತಮ್ಯವೂ ಇಲ್ಲದೆ ಸಮಭಾಗವಾಗಿ ಅನುಭವಿಸುವಂತೆ ಪ್ರಯತ್ನಿಸುತ್ತಿರುವವರು ಸಂಚುಗಾರರೋ? ಅವರೇ ಹೇಳಲಿ. ಮ|| ಸೆಟ್ಲೂರ್‌ರವರ ಮತ್ತು ಅವರ ವರ್ಗದವರ ದೌರ್ಭಾಗ್ಯಕ್ಕೆ ಅವರು ಹೇಳುವುದನ್ನೆಲ್ಲಾ ಅರಿತುಕೊಳ್ಳಲಾರದಷ್ಟು ದಡ್ಡರಾಗಿ ಇತರ ವರ್ಗದವರಿಲ್ಲವು. "ಕೆಲ ಜನರನ್ನು ಸದಾಕಾಲ ಮತ್ತು ಎಲ್ಲಜನರನ್ನು ಕೆಲಕಾಲ ಭ್ರಮೆಗೊಳಿಸಬಹುದಲ್ಲದೆ ಎಲ್ಲ ಜನರನ್ನೂ ಸದಾಕಾಲದಲ್ಲಿ ಭ್ರಮೆಗೊಳಿಸಲಾಗುವುದಿಲ್ಲ" ಎಂದು ಒಬ್ಬವಿದ್ವಾಂಸನು ಹೇಳಿರುತ್ತಾನೆ. ಕ್ಷತ್ರಿಯರು ನಾನ್‌ಬ್ರಾಹ್ಮಣ ಎಂದು ಕರೆದುಕೊಳ್ಳುವುದರಿಂದ ತಮ್ಮ ದ್ವಿಜತ್ವವನ್ನೇ ಹಾಳುಮಾಡಿಕೊಳ್ಳುತ್ತಾರೆಂದು ಮ|| ಸೆಟ್ಲೂರ್‌ರವರು ಅವರನ್ನು ರೇಗಿಸಿರುವರಲ್ಲದೆ ಆರೀತಿ ಕರೆದುಕೊಳ್ಳಬಾರದೆಂದು ವಿವೇಕವನ್ನು ಬೋಧಿಸಿರುತ್ತಾರೆ. ಈ ವಿಧವಾದ ಕುಂಟುಯುಕ್ತಿ ಕುಯುಕ್ತಿಯಿಂದ ವಿಚಾರಶೀಲರ ಮನಸ್ಸನ್ನು ಆಕರ್ಷಿಸಲು ಸಾಧ್ಯವೆಂದು ಮ|| ಸೆಟ್ಲೂರ್‌ರವರು ತಿಳಿದಿರುವರೋ?

ಸರ್ ಆಲ್ಬಿಯನ್ ಆರ್. ಬಾನರ್ಜಿಯವರ ಉದ್ಯೋಗನಿರ್ವಾಹಸಾಮರ್ಥ್ಯದ ವಿಚಾರದಲ್ಲಿ ನಾವು ಸದಭಿಪ್ರಾಯವುಳ್ಳವರಾಗಿರುತ್ತೇವೆ. ಮ|| ಸೆಟ್ಲೂರ್‌ರವರ ವಿನಾ ಬೇರೊಬ್ಬರು ಮ|| ಬಾನರ್ಜಿಯವರನ್ನು ಪುನರುಕ್ತಿಯಿಂದ ಹೊಗಳುತ್ತಿರುವುದನ್ನು ನಾವು ಕಾಣೆವು. ಈ ವಿಧವಾಗಿ ಯಾವಾಗಲೂ ಆಡಿದುದನ್ನೇ ಆಡಿ ಸ್ತೋತ್ರಮಾಡುವುದರಿಂದ ಅದರ ಸ್ವಾರಸ್ಯವೇ ಕಡಿಮೆಯಾಗುತ್ತದೆಂದು ಹೇಳಬೇಕಾಗಿಲ್ಲ. ಬಹಳ ವಿಷಮಾವಸ್ಥೆಯಲ್ಲಿದ್ದ ರಾಜ್ಯಭಾರವನ್ನು ಸರ್ ಕಾಂತರಾಜಅರಸಿನವರ ನಿವೃತ್ತಿಯ ಅನಂತರ ನಿರ್ವಹಿಸಲು ಸರ್ ಬಾನರ್ಜಿಯವರಗಿನ್ನ ಸಮರ್ಥರಾದವರು ಬೇರೊಬ್ಬರಿಲ್ಲವೆಂದು ಶ್ರೀಮನ್ ಮಹಾರಾಜರವರು ತಿಳಿದು ಅವರನ್ನು ಅಮಾತ್ಯರನ್ನಾಗಿ ನಿಯಮಿಸಿದರೆಂದು ಹೇಳಿರುವರು. ಪ್ರತಿಯೊಬ್ಬ ದಿವಾನರು ನಿವೃತ್ತಿಯಾಗುವ ವೇಳೆಯಲ್ಲಿ ಇಂತಹ ಸೂಕ್ಷ್ಮಸ್ಥಿತಿಯು ಪ್ರಾಪ್ತವಾಗುವುದಾಗಿ ಭಾವಿಸಲ್ಪಟ್ಟಿದೆ. ಸರ್ ಎಂ. ಕಾಂತರಾಜಅರಸಿನವರ ರಾಜ್ಯಭಾರನಿರ್ವಹಣವಿಚಾರದಲ್ಲಿ ಈಗಣ ಜನರೂ ಅವರ ಸಂತತಿಯವರೂ ತಮ್ಮಭಿಪ್ರಾಯವನ್ನು ಕೊಡುವರೆಂದು ನಾವು ತಟಸ್ಥರಾಗಿರಬಹುದಾದರೂ ಅಜ್ಞಾನಾಂಧಕಾರಕೂಪದಲ್ಲಿ ಮುಳಗಿರುವ ಜನತೆಯನ್ನು ಉದ್ಧರಿಸಲು ಬೇರೊಬ್ಬರಿಗೆ ೨೦ ವರ್ಷಗಳಲ್ಲಿ ಸಾಧ್ಯವಾಗಿದ್ದುದನ್ನು ೨ ವರ್ಷಗಳಲ್ಲಿ ನಿರ್ವಹಿಸಿ ಮೈಸೂರು ದೇಶೀಯರಲ್ಲಿ ಅದ್ವಿತೀಯವಾದ ಪ್ರೀತಿ ವಿಶ್ವಾಸವನ್ನೂ ಸಾನುಭೂತಿಯನ್ನೂ, ಮೈತ್ರಿಯನ್ನೂ ಇಟ್ಟಿದ್ದವರ ಮುಖ್ಯವಾಗಿ ಸ್ವರ್ಗವಾಸಿಗಳಾಗಿರುವವರ ಮೇಲಿನ ದೋಷಾರೋಪಣೆಯನ್ನು ಖಂಡಿಸದಿದ್ದಲ್ಲಿ ನಾವುಗಳು ದ್ರೋಹಿಗಳಾಗುತ್ತೇವೆಯಾದುದರಿಂದ ಅದನ್ನು ಖಂಡಿಸಿ ಮ|| ಸೆಟ್ಲೂರವರಂತಹ ನಿರ್ಘೃಣರು ಸ್ವರ್ಗವಾಸಿಗಳಾದ ಸರ್ ಕಾಂತರಾಜಅರಸಿನವರಂತಹ ದೇಶಬಾಂಧವರನ್ನು ಇತಃಪರ ದೂಷಿಸದಿರಲೆಂದು ನಾವು ಕೋರುತ್ತೇವೆ. ದೂಷಣೆಯಿಂದ ಅವರ ಅಸೂಯೆ ಹೊರಪಡುತ್ತದಲ್ಲದೆ ರಾಜಕೀಯಸ್ಥಿತಿಯೇನೂ ಉತ್ತಮವಾಗುವುದಿಲ್ಲವೆಂದು ನಾವು ಖಂಡಿತವಾಗಿ ಹೇಳುವೆವು.

ಸ್ವದೇಶದ ವೃತ್ತಾಂತಗಳು.

ಮದರಾಸಿನ ಅಮೇರಿಕನ್ ವಾಚ್ ಕಂಪೆನಿಯವರ ಸಪ್ಲಿಮೆಂಟನ್ನು ಇದರಕೂಡ ಹಂಚಿದೆ.

ಸಂಸ್ಥಾನದ ಮುಂದಣ ದಿವಾನರಾದ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾಯವರು ಸಂಸಾರಸಮೇತ ಕಳೆದ ಬುಧವಾರ ಉದಕಮಂಡಲಕ್ಕೆ ದಯೆಮಾಡಿಸಿದುದಾಗಿ ತಿಳಿಯಬರುತ್ತದೆ.

ಪೋಲೀಸ್ ಸೂಪರಿಂಟೆಂಡೆಂಟ್ ಮ|| ಕೆ. ಸಿದ್ಧರಾಮಪ್ಪನವರು ರಾಜಧಾನಿಯ ಅಡ್ವೋಕೇಟ್ ಮ|| ವಿರ್ಲೆ ಸುಬ್ಬರಾಯರ ಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ವಿವಾದದ ವಿಚಾರಣೆಯು ಈದಿವಸ ನಡೆಯತಕ್ಕದಾಗಿದೆ.

ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಮಿ|| ಎನ್. ಎಸ್. ಸುಬ್ಬರಾಯರ ತಂದೆ ಪ್ಲೀಡರ್ ಮ|| ಎನ್. ಸುಬ್ಬರಾಯರು ವೃದ್ಧಾಪ್ಯದೆಸೆಯಿಂದ ರುಗ್ಣಶಾಯಿಗಳಾಗಿದ್ದು ಕಳೆದ ತಾ|| 31 ನೆಯ ಬುಧವಾರ ಬೆಳಿಗ್ಗೆ ಕಾಲಾಧೀನರಾದರೆಂದು ತಿಳುಪಲು ವಿಷಾದವಾಗುತ್ತದೆ.

ಕಳೆದವರ್ಷ ಲೋವರ್‌ಸೆಕೆಂಡರೀ ಪರೀಕ್ಷೆಯಲ್ಲಿ ಪ್ರಶ್ನಪತ್ರಿಕೆಗಳು ಬಹಳ ಕಠಿಣವಾಗಿದ್ದುವೆಂದು ಪ್ರಜಾಪ್ರತಿನಿಧಿಸಭೆಯಲ್ಲೂ ಇತರಕಡೆಯಲ್ಲೂ ಬಹಳ ಕೋಲಾಹಲ ಮಾಡಲ್ಪಟ್ಟಿದ್ದಿತಷ್ಟೆ. ಆದರೆ ಈ ವರ್ಷ ಇದೇ ಪರೀಕ್ಷೆಯ ಪ್ರಶ್ನಪತ್ರಿಕೆಗಳು ಬಹಳ ಸುಲಭವಾಗಿದ್ದುವೆಂದು ವಿದ್ಯಾರ್ಥಿಗಳು ಹರ್ಷಚಿತ್ತರಾಗಿರುವರು.

ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರಿಗೆ ಸಂಸ್ಥಾನದ ದಿವಾನಪದವಿಯು ಲಭ್ಯವಾದುದರ ಸಂತೋಷಪ್ರದರ್ಶನಾರ್ಥವಾಗಿ ಮೈಸೂರು ಪ್ಯಾಲೆಸ್ ಆಫೀಸಿನವರು ಕಳೆದ ಮಂಗಳವಾರ ಮಿ|| ಮಿರ್ಜಾಯವರನ್ನು ಅಲ್ಪಾಹಾರಾದಿ ವಿನೋದೋತ್ಸವಗಳಿಂದ ಸತ್ಕರಿಸಿದರು, ಮತ್ತು ಮುಖ್ಯಾಧಿಕಾರಿಗಳ ಸಮೇತ ಛಾಯಾಚಿತ್ರವು ತೆಗೆಯಲ್ಪಟ್ಟಿತು.

ಚಾಮರಾಜನಗರ ತಾ|| ಹೆಗ್ಗೊಟಾರ ವಾಸಸ್ಥರಾದ ಕುಳ್ಳಯ್ಯ ಮತ್ತು ಅವನ ಸಹೋದರ ಮಲ್ಲಯ್ಯನಿಗೂ ಒಂದು ಭೂಮಿಯ ವಿಚಾರದಲ್ಲಿ ಮನಸ್ತಾಪವುಂಟಾಗಿ ಒಂದು ದಿವಸ ಕುಳ್ಳಯ್ಯನು ಭೂಮಿಯನ್ನು ಉಳಿಸುತ್ತಿರುವಾಗ್ಗೆ ಅವನ ತಮ್ಮ ಮಲ್ಲಯ್ಯನು ತನ್ನ ಮಗ ಪುಟ್ಟಸ್ವಾಮಿಯೊಡನೆ ಹೊಲಕ್ಕೆ ಬಂದು ಕುಳ್ಳಯ್ಯನಸಂಗಡ ಕಲಹಮಾಡಿ ಅವನನ್ನು ಒಂದು ಕುಡುಗೋಲಿನಿಂದ ಹೊಡೆದು ಸಾಯಿಸಿಬಿಟ್ಟುದಾಗಿ ವರ್ತಮಾನಬಂದಿದೆ. ಇದೇ ಡಿಸ್ಟ್ರಿಕ್ಟಿನಲ್ಲಿ ನಡೆದ ಮೂರು ಕೊಲೆಗಳಲ್ಲಿ ಎರಡು ಕೊಲೆಗಳು ಸೆಷನ್ಸ್ ಜಡ್ಜರಿಂದ ವಿಚಾರಿಸಲ್ಪಟ್ಟು ಅಪರಾಧಿಗಳು ನಿರ್ದೋಷಿಗಳಾಗಿ ಬಿಡಲ್ಪಟ್ಟರು.

ರಾಜಧಾನಿಯ ಓರಿಯಂಟಲ್ ಲೈಬ್ರರಿಯ ಕ್ಯೂರೇಟರಾಗಿ ಬಹಳ ವರ್ಷಗಳವರೆಗಿದ್ದು ಉದ್ಯೋಗದಿಂದ ನಿವೃತ್ತರಾಗಿ ಮದ್ರಾಸಿನ ಅಡ್ಯಾರದಲ್ಲಿ ವಾಸವಾಗಿದ್ದ ಎ|| ಮಹದೇವಶಾಸ್ತ್ರಿ, ಬಿ.ಎ., ಇವರು ಆಚೆ ಭಾನುವಾರ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಇವರು ಮಹಾಸಾತ್ವಿಕರೂ, ನಿಗರ್ವಿಗಳೂ ಆಗಿದ್ದರಲ್ಲದೆ ಸಂಸ್ಕೃತದಲ್ಲಿ ಮಹಾಪಂಡಿತರಾಗಿದ್ದು ಉಪನಿಷತ್ತುಗಳನ್ನು ಆಂಗ್ಲಭಾಷೆಗೆ ಪರಿವರ್ತಿಸಿ ಅಮೇರಿಕಾ ಮೊದಲಾಗಿ ಪಾಶ್ಚಾತ್ಯದೇಶಗಳಲ್ಲಿ ಮಹಾಪ್ರಖ್ಯಾತರಾಗಿದ್ದರು. ಅಲ್ಲದೆ ಸಮಾಜಸಂಸ್ಕರಣ ವಿಚಾರದಲ್ಲಿ ಅನೇಕ ಉಪನ್ಯಾಸಗಳನ್ನು ಮಾಡಿಯೂ, ವ್ಯಾಸಗಳನ್ನು ಬರೆದೂ ಸುಪ್ರಸಿದ್ಧರಾಗಿದ್ದರು.

ಅರಮನೆಯ ಗ್ಯಾರೇಜಿನ ಕ್ಲಾರ್ಕ್ ಮ|| ಬಿ. ಲಿಂಗಪ್ಪನವರ ಸೋದರಅಳಿಯಂದರುಗಳಾದ 9-10 ವರ್ಷವಯಸ್ಸಿನ ಬಸವರಾಜು ಅವಳಿಜವಳಿ ಸಹೋದರರ ಸಂಗೀತವು ಈ ತಾ|| 1 ನೆಯ ಗುರುವಾರ ಸಾಯಂಕಾಲ ಖಾಸಬಂಗಲೆಯಲ್ಲಿ ಅರ್ಧಗಂಟೆಯಕಾಲ ಶ್ರೀಮನ್ ಮಹಾರಾಜರವರ ಸನ್ನಿಧಿಯಲ್ಲಿ ನಡೆದಿತೆಂದೂ, ಸರದಾರರುಗಳಾದ ಲಕ್ಷ್ಮೀಕಾಂತರಾಜ ಅರಸಿನವರು, ಗೋಪಾಲಕೃಷ್ಣಅರಸಿನವರು, ಗೋಪಾಲರಾಜಅರಸಿನವರು, ಪಾರವರು ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಎನ್. ಮಾಧವರಾಯರು ಮತ್ತೆ ಕೆಲ ದೊಡ್ಡಮನುಷ್ಯರುಗಳು ಈ ಸಂಗೀತಶ್ರವಣಕ್ಕೆ ಆಹ್ವಾನಿಸಲ್ಪಟ್ಟಿದ್ದರೆಂದೂ, ಬಾಲಕರ ಹಾಡುಗಾರಿಕೆಯಿಂದ ಶ್ರೀಮನ್ ಮಹಾರಾಜರವರ ಮನಸ್ಸಿಗೆ ಆನಂದವಾಯಿತೆಂದೂ ಕೇಳುತ್ತೇವೆ.

ಮೈಸೂರು ದಿವಾನರಾದ ಸರ್ ಎ. ಬಾನರ್ಜಿಯವರ ಮಾವನವರಾದ ಸರ್ ಕೃಷ್ಣಗುಪ್ತಗೋವಿಂದರವರು ಮಗಳ ಮನೆಯಲ್ಲೇ ಕೆಲದಿನಗಳವರೆಗಿದ್ದು ವೃದ್ಧಾಪ್ಯದೆಶೆಯಿಂದ ಅಸ್ವಸ್ಥತೆಯು ಹೆಚ್ಚಾಗಲಾಗಿ ಕಲಕತ್ತಾಪಟ್ಟಣಕ್ಕೆ ಕೆಲದಿನಗಳ ಹಿಂದೆ ಹೋಗಿದ್ದವರು ಕಳೆದ ತಾ|| ೨೯ ರಲ್ಲಿ ವಿಧಿವಶರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು 1851 ರಲ್ಲಿ ಡಾಕಾ ಡಿಸ್ಟ್ರಿಕ್ಟಿಗೆ ಸೇರಿದ ಭಾಟಾರ ಎಂಬಲ್ಲಿ ಜನಿಸಿದರು ಮತ್ತು ಇವರ ತಂದೆಯವರಾದ ಕಾಶಿನಾರಾಯಣಗುಪ್ತರವರು ಕೃಷ್ಣಗುಪ್ತರಿಗೆ ಭರತಖಂಡದಲ್ಲಿ ವಿದ್ಯಾಭ್ಯಾಸಂಗಮಾಡಿಸಿ ಅವರನ್ನು ಪ್ರೌಢವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಕಳುಹಿಕೊಟ್ಟರು. ಅಲ್ಲಿ ಅವರು ಇಂಡಿಯನ್ ಸಿವಿಲ್ ಪರೀಕ್ಷೆಗೆ ವ್ಯಾಸಂಗಮಾಡಿ 1873 ರಲ್ಲಿ ಉತ್ತೀರ್ಣರಾಗಿ ಭರತಖಂಡಕ್ಕೆ ಬಂದು ರೆವಿನ್ಯೂ ಎಕ್ಸೈಸ್ ಮೊದಲಾದ ಶಾಖೆಗಳಲ್ಲಿ ಕೆಲಸಮಾಡಿ ಕಡೆಯಲ್ಲಿ ಇಂಡ್ಯಾ ಕೌನ್ಸಿಲ್ ಮೆಂಬರಾಗಿ ತೆಗೆದುಕೊಳ್ಳಲ್ಪಟ್ಟಿದ್ದರು. ಇವರ ಕಾರ್ಯದಕ್ಷತೆ, ರಾಜಭಕ್ತಿ ಮೊದಲಾದ ಸದ್ಗುಣಗಳಿಗೆ ಸಾರ್ವಭೌಮರವರು ಮೆಚ್ಚಿ ಸರ್ ಪ್ರಶಸ್ತಿಯನ್ನು 1911ರಲ್ಲಿ ದಯೆಪಾಲಿಸಿದರು. ಕೈ|| ಗುಪ್ತರಿಗೆ ಮೂವರು ಪುತ್ರರೂ, ಏವರು ಪುತ್ರಿಯರೂ ಇರುವರು. ಮೃತರ ಆತ್ಮಕ್ಕೆ ನಿರಂತರ ಶಾಂತಿಯೂ, ಸರ್ ಬಾನರ್ಜಿದಂಪತಿಗಳು ಮೊದಲಾದ ಬಂಧುವರ್ಗಕ್ಕೆ ದುಃಖಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿನ ಗಿರ್ಗಾಂ ಪೋಲೀಸ್ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಒಬ್ಬ ಅಪರಾಧಿಯು ವಿಚಾರಣೆಗೊಳ್ಳುತ್ತಿರುವಾಗ್ಗೆ ಮ್ಯಾಜಿಸ್ಟ್ರೇಟರಮೇಲೆ ಪಾದರಕ್ಷೆಯನ್ನು ಬಿಸಾಡಿದ ತಪ್ಪಿಗಾಗಿ 18 ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ಮದ್ರಾಸ್ ಆಧಿಪತ್ಯದ ಗ್ರಾಮಾಂತರಗಳ ಅಭಿವೃದ್ಧಿಗಾಗಿ ಅಂದರೆ ಕುಡಿಯುವ ನೀರನ್ನು ಒದಗಿಸುವುದು, ಹೊಸ ರಸ್ತೆಗಳನ್ನು ಹಾಕುವುದು ಇವೇ ಮುಂತಾದ ಕೆಲಸಗಳಿಗಾಗಿ ಸ್ಥಳೀಯ ಸರ್ಕಾರಗಳಿಗೆ ೪೭ ಲಕ್ಷ ರೂಪಾಯಿಗಳನ್ನೂ, ಪ್ರಜಾರೋಗ್ಯದ ಸಲಕರಣೆಗಾಗಿ ೬½ ಲಕ್ಷ ರೂಪಾಯಿಗಳನ್ನೂ ಮದ್ರಾಸ್ ಸರ್ಕಾರದವರು ಸ್ಯಾಂಕ್ಷನ್ ಮಾಡಿರುವರು.

ಜಂಷೆದ್‌ಪುರದ ಬಳಿ ಎರಡು ಕಾಡಾನೆಗಳು ಒಂದು ಹಗಲು ಮತ್ತು ಒಂದುರಾತ್ರಿ ಘೋರವಾಗಿ ಕಾದಾಡಿ ಎರಡೂ ಮೃತಪಟ್ಟಿರುತ್ತವೆ. ಸೋತ ಆನೆಯು ಜಗಳವಾದ ಸ್ಥಳದಲ್ಲಿಯೇ ರಕ್ತಮಯವಾಗಿ ತನ್ನ ಎರಡು ದಂತಗಳನ್ನೂ ಕಳದುಕೊಂಡು ಸತ್ತುಬಿದ್ದಿದ್ದಿತು. ಗೆದ್ದ ಆನೆಯು ಆ ಸ್ಥಳಕ್ಕೆ ಸುಮಾರು ೧೦ ಮೈಲಿಗಳ ದೂರದಲ್ಲಿ ಸತ್ತುಬಿದ್ದಿತ್ತು, ಮತ್ತು ಅದರ ದೇಹದಲ್ಲಿ ಸೋತ ಆನೆಯ ಎರಡು ದಂತಗಳೂ ಭದ್ರವಾಗಿ ನಾಟಿಕೊಂಡಿದ್ದುವು.

ಪದಚ್ಯುತರಾದ ಇಂದೂರು ಮಹಾರಾಜರು ಪರಿವಾರದೊಡನೆ ಕಳೆದ ಮಂಗಳವಾರ ಬೊಂಬಾಯಿನಿಂದ ಸಿಟಿ ಆಫ್ ಪ್ಯಾರಿಸ್ ಎಂಬ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡಿದರು. ಇವರೊಡನೆ ಕಿರೀ ಮಹಾರಾಣಿಯೂ, ಆಕೆಯ ಮಗಳೂ, ಕ್ಯಾಪ್ಟನ್ ಜಾಧೇವ್‌ರವರೂ, ಡಾಕ್ಟರ್ ಗೋಸಾವಿಯವರೂ ಹೊರಟರು. ಮಹಾರಾಜರು ಅಸ್ವಸ್ಥರಾಗಿದ್ದುದರಿಂದ ಸಮುದ್ರದಡದಿಂದ ಹಡಗಿನೊಳಕ್ಕೆ ಡೋಲಿಯಲ್ಲಿ ಸಾಗಿಸಲ್ಪಟ್ಟರು. ಅನೇಕ ಮಹಾರಾಷ್ಟ್ರಜನರು ಹಡಗಿನ ಹೊರಗಡೆ ದರ್ಶನಕ್ಕಾಗಿ ಕಾದುಕೊಂಡಿದ್ದುದರಿಂದ ಮಹಾರಾಜರು ತಮ್ಮ ಬಂಡಿಯಿಂದ ಹೊರಗಡೆ ಬಂದು ದರ್ಶನಕೊಟ್ಟು ಒಳಕ್ಕೆ ಹೋಗಬೇಕಾಗಿ ಬಂದಿತಂತೆ. ಈ ಸಿಟಿ ಆಫ್ ಪ್ಯಾರಿಸ್ ಹಡಗಿನಲ್ಲಿ ಮಹಾರಾಜರು ಅವರ ಪತ್ನಿ ಪುತ್ರಿಯರೂ ಮತ್ತೊಬ್ಬರೂ ಕುಳಿತುಕೊಳ್ಳುವುದಕ್ಕಾಗಿ ತಕ್ಕೇರ್ಪಾಟನ್ನು ಸಾವಿರಾರು ರೂಪಾಯಿಗಳ ವೆಚ್ಚದಿಂದ ಹೊಸದಾಗಿ ಮಾಡಲ್ಪಟ್ಟಿರುವುದಲ್ಲದೆ ಮತ್ತು ಅವರು ಕುಳಿತಿರುವ ಬಂಡಿಯ ಹೊರಭಾಗದಲ್ಲಿ ಬಲವಾದ ಕಾವಲಿಡಲ್ಪಟ್ಟಿರುವುದಂತೆ.

ಬೊಂಬಾಯಾಧಿಪತ್ಯಕ್ಕೆ ಸೇರಿದ ಗೋಕಾರ್ ಎಂಬಲ್ಲಿ ಅರ್ಕಸಾಲೆಯವರು ತಮ್ಮ ಹವ್ಯಕವ್ಯಗಳನ್ನು ತಮ್ಮ ಜಾತಿಯ ಪುರೋಹಿತರಿಂದಲೇ ಮಾಡಿಸಿಕೊಳ್ಳುವ ವಿಚಾರದಲ್ಲಿ ಬ್ರಾಹ್ಮಣರು ತಾವೇ ಪೂರ್ವದಿಂದಲೂ ಪೌರೋಹಿತ್ಯವನ್ನು ಮಾಡುತ್ತಿರುವೆವಾದುದರಿಂದ ಸ್ವಜನರಿಂದ ಮಾಡಿಸಿಕೊಳ್ಳಲಾಗದೆಂದು ಅಡ್ಡಿಪಡಿಸುತ್ತಿರುವುದರಮೇಲೆ ಉಭಯರಿಗೂ ಮನಸ್ತಾಪ ಕಲಹಗಳು ನಡೆಯುತ್ತಲಿವೆ. ಈಚೆಗೆ ಒಂದುದಿವಸ ಕೆಲ ಅರ್ಕಸಾಲೆಯವರು ಸಮುದ್ರತೀರದಲ್ಲಿ ತಮ್ಮ ಕರ್ಮವನ್ನು ಸಜಾತಿಪುರೋಹಿತರಿಂದಲೇ ಮಾಡಿಸಿಕೊಳ್ಳುತ್ತಿರುವಾಗ್ಗೆ ಬ್ರಾಹ್ಮಣಪುರೋಹಿತರು ಕೆಲರು ಅಲ್ಲಿಗೆ ಹೋಗಿ ಅಡ್ಡಿಪಡಿಸಿದುದರ ಮೇಲೆ ಉಭಯರಿಗೂ ಬಡಿದಾಟವಾಯಿತು. ಪೋಲೀಸರು ಕೂಡಲೆ ಬಂದು ಅರ್ಕಸಾಲೆಯವರಲ್ಲಿ ಕೆಲರನ್ನು ಹಿಡಿದು ದೊಂಬಿಕಲಹದ ಛಾರ್ಜಿಗೆ ಗುರಿಮಾಡಿ ಮ್ಯಾಜಿಸ್ಟ್ರೇಟರ ವಿಚಾರಣೆಗೊಳಪಡಿಸಿರಲು ಅಪರಾಧಿಗಳಿಗೆ ಅರ್ಥದಂಡವು ವಿಧಿಸಲ್ಪಟ್ಟಿತು. ಅದರಮೇಲೆ ಬೊಂಬಾಯಿನ ಹೈಕೋರ್ಟಿಗೆ ಅಪೀಲುಮಾಡಿಕೊಂಡಿರುವಲ್ಲಿ ಅರ್ಕಸಾಲೆಯವರು ತಮ್ಮ ಕರ್ಮವನ್ನು ಸಜಾತಿಪುರೋಹಿತರಿಂದಲೇ ನಡೆಯಿಸಿಕೊಳ್ಳಬೇಕೆಂದು ಹಟಮಾಡಿದರಲ್ಲವೆ ಬ್ರಾಹ್ಮಣರಮೇಲೆ ದೊಂಬಿ ನಡಿಸುವುದಕ್ಕಲ್ಲವೆಂದು ತೀರ್ಮಾನಿಸಿ ಅವರನ್ನು ದೋಷಮುಕ್ತರನ್ನಾಗಿ ಮಾಡಿದರು. ತಮ್ಮ ಪೌರೋಹಿತ್ಯದ ಹಕ್ಕನ್ನು ಇತರರಮೇಲೆ ಸಾಧಿಸಲು ಸಾಹಸಪಡುತ್ತಿರುವ ಬ್ರಾಹ್ಮಣಬಂಧುಗಳು ಇನ್ನಾದರೂ ವಿವೇಕವನ್ನು ಕಲಿತು ಮೌನರಾಗಿರಬಾರದೆ?

ವಿದೇಶದ ವೃತ್ತಾಂತಗಳು

ಡಾಕ್ಟರ್ ರವೀಂದ್ರನಾಥಠಾಕೂರರವರ ದೇಹಸ್ಥಿತಿಯು ಶೋಚನೀಯವಾಗಿದ್ದು, ಈಗ ಆರೋಗ್ಯಮುಖವಾಗುತ್ತಿದೆಯಾಗಿ ತಿಳಿದುಬರುತ್ತದೆ.

ಲಾಹೋರಿನ ವಿಧವಾವಿವಾಹ ಸಹಾಯಕ ಸಭೆಯವರಿಂದ 1925 ನೇ ಜನವರಿಯಿಂದ 1926 ನೇ ಫೆಬ್ರವರಿವರೆಗೆ 450 ವಿಧವಾವಿವಾಹಗಳು ನಡೆಸಲ್ಪಟ್ಟಿವೆ.

ತಿರುಚಿನಾಪಳ್ಳಿಯ ಶ್ರೀರಂಗದೇವಸ್ಥಾನದಲ್ಲಿ ಪೂಜೆಯಾಗುತ್ತಿರುವಾಗ್ಗೆ 30 ವರ್ಷದ ಒಬ್ಬ ಯುವಕನು ಅಲ್ಲೇ ಕತ್ತಿಯಿಂದ ತನ್ನನ್ನು ತಾನೇ ತಿವಿದುಕೊಂಡನು.

ಪ್ರಿನ್ಸ್‌ಆಫ್‌ವೇಲ್ಸ್‌ರವರ ಕಿವಿಯಲ್ಲಿ ಏನೋ ಹುಣ್ಣಿದ್ದು ಬಹಳ ಬಾಧೆಕೊಡುತ್ತಿದ್ದುದರಿಂದ ಶಸ್ತ್ರಚಿಕಿತ್ಸೆ ಮಾಡಲ್ಪಟ್ಟುದರಮೇಲೆ ಗುಣಮುಖವಾಗಿ ನಿದ್ರೆಹತ್ತುತ್ತಿದೆಯೆಂದು ಪ್ರಕಟವಾಗಿದೆ.

ದಿವಂಗತ ದೇಶಬಂಧು ಚಿತ್ತರಂಜನದಾಸರವರ ಸ್ಮಾರಕವಾಗಿ ಅವರ ಭವನದಲ್ಲೇ ಹೆಂಗುಸರಿಗೋಸ್ಕರ 'ಚಿತ್ತರಂಜನಸೇವಾಸದನ' ವೆಂಬ ಔಷಧಾಲಯವು ಕಳೆದ ೨೪ ನೇ ತಾರೀಕಿನಲ್ಲಿ ತೆರೆಯಲ್ಪಟ್ಟಿತು.

ಡಿಲ್ಲಿಪಟ್ಟಣಕ್ಕೆ ಸೇರಿದ ಲೂನಾವಾಡ ಎಂಬಲ್ಲಿ ಬ್ರಾಹ್ಮಣರಿಗೂ ಹಿಂದೂ ಕ್ಷೌರಿಕರಿಗೂ ವೈಮನಸ್ಸುಂಟಾದುದರಿಂದ ಬ್ರಾಹ್ಮಣರು ಅವರನ್ನು ತ್ಯಜಿಸಿ ಮುಹಮ್ಮದಿಯ ಕ್ಷೌರಿಕರನ್ನು ಬರಮಾಡಿಕೊಳ್ಳುತ್ತಿರುವರೆಂದು ತಿಳಿದುಬರುತ್ತದೆ.

ಜೋಧಪುರ ಸಂಸ್ಥಾನದ ಅಧಿಕಾರಿಗಳಾರಾದರೂ ವೇಶ್ಯಾಗೃಹವನ್ನು ಪ್ರವೇಶಿಸಿದರೆ, ಅವರ ಒಂದು ತಿಂಗಳ ಸಂಬಳವನ್ನು ವಜಾಮಾಡುವಂತೆ ಅಲ್ಲಿಯ ಮಹಾರಾಜರು ನಿರ್ಧರಿಸಿರುವರಂತೆ. ಇತರ ಸಂಸ್ಥಾನದವರೂ ಏಕೆ ಅನುಸರಿಸಬಾರದು?

ಎಲಿಯಂಸ್ಮಿತ್ ಎಂಬ ಒಬ್ಬ ಆಂಗ್ಲೇಯನು ತನಗೆ 125 ವರ್ಷ ವಯಸ್ಸಾಗಿರುವುದರಿಂದ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲ ತಾನೇ ದೊಡ್ಡವನೆಂದೂ, ತಾನು 1801 ನೇ ಜನವರಿ ತಾ|| 3 ರಲ್ಲಿ ಬೆಲ್ಫಾಸ್ಟಿನಲ್ಲಿ ಜನಿಸಿದುದಕ್ಕೆ ಸರ್ಕಾರೀ ಕಾಗದಪತ್ರಗಳು ತನ್ನಲ್ಲಿರುತ್ತವೆಂದೂ ಹೇಳುತ್ತಿದ್ದಾನಲ್ಲದೆ ಈಗಲೂ ತನ್ನ ಪಿನ್ಷನ್ ಹಣವನ್ನು ತೆಗೆದುಕೊಳ್ಳಲು ಪ್ರತಿ ಶುಕ್ರವಾರ 1 ಮೈಲಿ ದೂರ ನಡೆದುಕೊಂಡು ಹೋಗುತ್ತಾನೆ.

ವರ್ಸೇಲ್ಸ್ ಎಂಬಲ್ಲಿ ಫ್ರಾಂಕ್ ಓಪೀಲ್ ಎಂಬ ಹುಡುಗನು ತನ್ನ ತಂದೆಯ ಮೋಟಾರನ್ನು ಓಡಿಸುತ್ತಾ ಮತ್ತೊಂದು ಮೋಟಾರಿಗೆ ಢಕ್ಕಾಕೊಡೆದು, ಅದರಲ್ಲಿದ್ದ ಗೆಸ್ಸೊಡಾಟ್ ಎಂಬುವನನ್ನು ದುರ್ಮರಣಕ್ಕೆ ಗುರಿಮಾಡಿದನು. ಇದಕ್ಕಾಗಿ ಹುಡುಗನ ಮೇಲೆ ಫಿರ್ಯಾದಾಗಿ ಆತನನ್ನು 3 ತಿಂಗಳ ಕಾರಾಗೃಹವಾಸಕ್ಕೂ, ಆತನ ತಂದೆಯು 4250 ಸವರನ್ನುಗಳ ದಂಡದ್ರವ್ಯಕ್ಕೂ ಗುರಿಮಾಡಲ್ಪಟ್ಟರು. ದಂಡವು ಮೃತನ ವಿಧವೆಗೆ ಕೊಡಲ್ಪಡುವುದು.

ದಕ್ಷಿಣ ಅಮೇರಿಕೆಯ ಬ್ರೆಜಿಲ್ ದೇಶಕ್ಕೆ ಸೇರಿದ ಒಂದು ಜಹಜಿನಲ್ಲಿ ಪ್ರಯಾಣಮಾಡುತ್ತಿದ್ದವರಲ್ಲಿ ಒಬ್ಬನು ಚುಟ್ಟಾ ಸೇದುತ್ತಿರುವಾಗ್ಗೆ, ಬೆಂಕಿಬಿದ್ದು, ಹಡಗೆಲ್ಲವೂ ಸಂಪೂರ್ಣವಾಗಿ ಹೊತ್ತಿಕೊಂಡಿತು. ಹಡಗು ತೀರಕ್ಕೆ 1500 ಮೈಲಿಗಳ ದೂರವಿದ್ದುದರಿಂದ ಸಹಾಯವ್ಯಾವುದೂ ದೊರೆಯದೆ, ಅದರಲ್ಲಿದ್ದವರ ಪೈಕಿ 80 ಮಂದಿ ಪ್ರಯಾಣಿಕರೂ ಹಡಗಿನ ಕ್ಯಾಪ್ಟನ್ ಮತ್ತು ಇಬ್ಬರು ಅಧಿಕಾರಿಗಳೂ ಮೃತಪಟ್ಟರು. 85 ಜನರು ಮಾತ್ರ ರಕ್ಷಿಸಲ್ಪಟ್ಟರು.

ಆರ್ಷ್ಫೈರ್ ಎಂಬಲ್ಲಿ ವೈಟ್ ಎಂಬಾತನ ಮನೆಗೆ ಒಂದು ರಾತ್ರಿ ಬೆಂಕಿಬಿದ್ದಿತು. ಆಗ ಅವನ ಮಕ್ಕಳು ಒಂದು ಕೊಠಡಿಯಲ್ಲಿ ಮಲಗಿದ್ದರು. ಯಜಮಾನನು ಮನೆಯ ಜನರನ್ನು ಹೊರಕ್ಕೆ ಕಳುಹಿಸಿ ಕೊಠಡಿಯಲ್ಲಿ ಮಲಗಿದ್ದ ಮಕ್ಕಳನ್ನು ಕರೆದುಕೊಂಡು ಬರಲು ಒಳಗೆ ನುಗ್ಗಿಹೋಗಿ ಒಬ್ಬ ಮಗನನ್ನು ಎತ್ತಿಕೊಂಡು ಹೊರಗೆಬಂದು ಮತ್ತೊಬ್ಬನನ್ನು ಕರೆದುಕೊಂಡುಬರಲು ಪುನಃ ಕೊಠಡಿಯೊಳಕ್ಕೆ ನುಗ್ಗಿದವನು ಹಿಂದಿರುಗಿ ಬರಲಿಲ್ಲವು. ಬೆಂಕಿಜ್ವಾಲೆಯು ಶಮನಮಾಡಲ್ಪಟ್ಟಮೇಲೆ ತಡಕುವಲ್ಲಿ ತಂದೆ ಮತ್ತು ಮಗನ ಶವಗಳು ಒಂದೇಕಡೆ ಬಿದ್ದಿದ್ದುದು ಕಂಡುಬಂದಿತು.

FOURTH MYSORE LAWYERS' CONFERENCE, TUMKUR.

The total number of delegates registered up to date is 330. Almost all Associations of the members of the bar have joined either as members of the R.C. or as delegates. Members of the Bar of places like Chikballapur, Closepet and Kolar Gold Fields have yet to join; only a few from the first named place have registered their names as delegates.

Lodging and Boarding arrangements are made for the members in the Collegiate High School and Hostel. Separate Boarding and Lodging arrangements are provided for Lingayet delegates in the newly constructed Veerasaiva Hostel at Tumkur. Arrangements for pleasure trips for members are made to places of historical interest near by such as Kaidala, Basthi Hills, Seebi, Devarayanadurga, and Siddaganga which are all near about Tumkur and Motor buses ply for hire to these places.

The Conference this year is expected to be a most well represented one and delegates numbering about 300 have promised to attend the Conference. The Subjects to be discussed in the Conference have been received by the various Law Associations in the State and the Working Committee is busy in arranging them in the order of their importance. Individual invitations are being posted to the members of the Bar throughout the State and if by inadvertence or ignorance any name is omitted it is requested that this may kindly be taken as a general invitation for members.

Secretary,
F. M. L. C.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

27-3-26 ನೆ ತಾರೀಖು ಮೈಸೂರ್ ಸ್ಟಾರ್ ಪತ್ರಿಕೆಯಲ್ಲಿ ಪ್ರಚಾರವಾಗಿರುವ ವಿರೂಪಾಕ್ಷ ಒಡೆಯರವರ ಪ್ರಾರ್ಥನೆಗೆ ಜವಾಬು.

ನೀವು ಕೆಲವುದಿನಗಳಿಂದೀಚೆಗೆ ಬ್ರಾಹ್ಮಣರಮೇಲೆ ಅಸೂಯಾಪ್ರದರ್ಶನಮಾಡಿ ಲೇಖನಗಳನ್ನು ಬರೆಯುತ್ತಾಯಿದ್ದೀರಿ. ಬ್ರಾಹ್ಮಣರು ಯಾವಾಗಲೂ ಶಾಂತರು, ದುಸ್ತರ್ಕಿಗಳಲ್ಲ ಎಂಬುವದು ಪ್ರಸಿದ್ಧವಾದದ್ದು. ಮೇಲೂ ನೀವು ತಿಳಿದವರೂ ಚಿತ್ತರ ಗುರುಗಳಾಗಿ ನಂಜನಗೂಡಿಗೆ ಬಂದಿದ್ದಾಗ ಬ್ರಾಹ್ಮಣರನ್ನು ನೀವು ಆಹ್ವಾಹನೆ ಮಾಡಿದ್ದನ್ನು ಬ್ರಾಹ್ಮಣರು ಲಕ್ಷ್ಯಮಾಡದೆ ಹೋದದ್ದೆ ಉದಾಹರಣೆಯಾಗಿದೆ. ಬ್ರಾಹ್ಮಣರು ಯಾವಾಗಲೂ ವೇದವನ್ನು ಯಥಾರೀತಿಯಾಗಿ ಸರಿಯಾದ ಪಾತ್ರದಲ್ಲಿ ವಿನಿಯೋಗ ಮಾಡುತ್ತಾರೆಯೆ ಹೊರತು ಅನ್ಯಥಾ ಮಾಡಲಾರರು. ಗುರುವಾದ ವಿಷಯವನ್ನು ಯಥಾ ಮರ್ಯಾದೆಯಿಂದ ತಿಳಿದುಕೊಳ್ಳಬೇಕೆ ವಿನಹ ಪಂಡಿತಮಾನಿಗಳಾದ ನೀವು ದುಡುಕಿ ಈರೀತಿ ವೃತ್ತಪತ್ರಿಕೆಗಳಲ್ಲಿ ಬರೆಯತಕ್ಕದ್ದು ಗೌರವವಲ್ಲ. ನಿಮಗೆ ಏನು ಸಂದೇಹವಿದ್ದರೂ ಅದನ್ನು ದಯವಿಟ್ಟು ಪೋಸ್ಟ್ ಸ್ಟಾಂಪಿನೊಡನೆ ನನ್ನ ಈ ಕೆಳಗಿನ ಅಡ್ರಸ್ಸಿಗೆ ಬರದರೆ ದೊಡ್ಡವರ ಅಜ್ಞಾನುಸಾರ ನಿಮ್ಮ ಸಂದೇಹ ನಿವೃತ್ತಿ ಮಾಡುತ್ತೇನೆ.

1-4-26.
Nanjangud.

V. Rangannah,
Nanjangud, Mysore Dt.

ನಾಟಕಶಾಲಾರಂಭೋತ್ಸವ.

ನಂಜನಗೂಡು ತಾ|| ಬಿದರಗೂಡು ಗ್ರಾಮದಲ್ಲಿರುವ ವೀರಶೈವ ತರುಣರು ಕ್ರೋ|| ಸಂ|| ಕಾ|| ಬಹುಳದಲ್ಲಿ "ಶ್ರೀವೀರಶೈವ ತರುಣಸಂಘ"ವೆಂಬ ಒಂದು ಸಂಘವನ್ನು ಸ್ಥಾಪಿಸಿದರು. ಇವರು ಪುರಾಣೇತಿಹಾಸಗಳಲ್ಲುಕ್ತವಾಗಿರುವ ಪುಣ್ಯಕಥೆಗಳನ್ನು ನಾಟಕರೂಪವಾಗಿ ಅಭಿನಯಿಸಿ ಆಬಾಲವೃದ್ಧರಿಗೂ ಬಹು ಸುಲಭವಾಗಿ ಮನಸ್ಸಿಗೆ ನಾಟಿ ಅದನ್ನು ಆಚರಣೆಗೆ ತರುವಂತೆ ಮಾಡಬೇಕೆಂಬ ಉದ್ದೇಶದಿಂದ ಸಂಘದವರು ಶ್ರೀಬಸವೇಶ್ವರದೇವಸ್ಥಾನದ ಬಳಿ ಅಭಿನಯಕ್ಕಾಗಿ ನಾಟಕಶಾಲೆಯನ್ನು ರಚಿಸಿ ಚೈತ್ರಶುದ್ಧ 3 ಮಂಗಳವಾರ (ತಾ|| 16-3-26) ದಿವಸ ಹತ್ತಿರವಿರತಕ್ಕ ಗ್ರಾಮಗಳಲ್ಲಿನ ವೀರಶೈವ ಪ್ರಮುಖರುಗಳೇ ಮೊದಲಾದ ಆಪ್ತೇಷ್ಟರನ್ನು ನಾಟಕಶಾಲೆಗೆ ಆಹ್ವಾನಿಸಿ ಅದಿನ ಸಾಯಂಕಾಲ ಗಂಧಪುಷ್ಪ ತಾಂಬೂಲಗಳಿಂದ ಸತ್ಕರಿಸಿ ಶಾಲಾರಂಭೋತ್ಸವವನ್ನು ನಡಿಸಿದರು. ಅಲ್ಲಿ ನೆರೆದಿದ್ದ ಸಭಿಕರಲ್ಲಿ ಶ್ರೀಯುತರುಗಳಾದ ಕೆಂಬಲ್ಲು ಪಟೇಲ್ ನಂಜಪ್ಪನವರು, ದೊರದ ಗ್ರಾಮದ ಛೇರ್ಮನ್ ಕೆಂಪಣ್ಣನವರು, ಸ್ಕೂಲು ಹೆಡ್ಮಾಸ್ಟರ್ ಬಸವರಾಜಪ್ಪನವರು ಇವರುಗಳಿಂದ ಬಹು ಸ್ವಾರಸ್ಯವಾದ ಉಪನ್ಯಾಸಗಳು ಮಾಡಲ್ಪಟ್ಟು ಸಂಘದವರಿಂದ ಸಭಿಕರುಗಳಿಗೆ ವಂದನೆಗಳು ಅರ್ಪಿಸಲ್ಪಟ್ಟು ಎಲ್ಲರೂ ಶ್ರೀಮನ್ಮಹಾರಾಜಸಹೋದರರುಗಳಿಗೆ ಶ್ರೀ ಜಗದೀಶನು ಸನ್ಮಂಗಳವನ್ನುಂಟುಮಾಡಲೆಂದು ಶ್ರೀಯಃಪ್ರಾರ್ಥನೆ ಮಾಡಿದಮೇಲೆ ಸಭೆಯು ಭರಖಾಸ್ತಾಯಿತು.

ಡಿ. ಮಹಾದೇವಪ್ಪ, ಬಿದರಗೂಡು.

ಕನ್ನಡಭಾಗದ ಗೆಜೆಟ್ಟಿನ ಚಂದಾದಾರರಿಗಿರತಕ್ಕ ಕೊರತೆ.

ಮೈಸೂರು ಸರ್ಕಾರದ ಗೆಜಟ್ಟು ಇಂಗ್ಲಿಷ್ ಮತ್ತು ಕನ್ನಡ ಭಾಗಗಳಾಗಿ ಬೇರೆಬೇರೆ ಪ್ರಕಟವಾಗುತ್ತಿದೆಯಷ್ಟೆ. ಆದರೆ ಇಂಗ್ಲಿಷ್ ಗೆಜಟ್ ಭಾಗದಲ್ಲಿರತಕ್ಕ ಅಂಶಗಳೆಲ್ಲವೂ ಕನ್ನಡ ಗೆಜಟ್ ಭಾಗದಲ್ಲಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಇಂಗ್ಲಿಷ್ ಗೆಜಟ್ ಭಾಗದಲ್ಲಿರತಕ್ಕ ವಿಷಯಗಳೆಲ್ಲವನ್ನೂ ಕನ್ನಡ ಭಾಗದ ಗೆಜಟಿಗೆ ಏಕೆ ಸಂಬಂಧಿಸಬಾರದು? ಹಾಗೆ ಸಂಬಂಧಿಸಿದ ಭಾಗದಲ್ಲಿ ಚಂದಾಹಣವನ್ನಾದರೂ ಜಾಸ್ತಿ ಮಾಡಬಾರದೇಕೆ? ಸರ್ಕಾರದ ಎಲ್ಲಾ ವಿಚಾರಗಳೂ ಪ್ರಜೆಗಳಿಗೆ ತಿಳಿಯಪಡಿಸುವುದರ ಉದ್ದಿಶ್ಯದಿಂದಲೇ ಗೆಜಟ್ಟು ಪ್ರಚುರಪಡಿಸಲ್ಪಡುವದಾಗಿದೆ. ಆದರೆ ಇಂಗ್ಲಿಷ್ ಓದುವ ಮಹಾನುಭಾವರಿಗೆ ಮಾತ್ರ ಮೆಹರ್ಬಾನ್ ಸರ್ಕಾರದವರ ಅಪ್ಪಣೆಗಳೆಲ್ಲವೂ ತಿಳಿಯತಕ್ಕದ್ದಾಗಿರುವುದರಿಂದ ಈ ಬಡ ಕನ್ನಡ ಓದುವವರಿಗೆ ಮಾತ್ರ ಹೆಚ್ಚಿಗೆ ತಿಳಿವಳಿಕೆಗೆ ಬರಲು ಮೆಹರ್ಬಾನ್ ಸರ್ಕಾರದವರು ದಯಪಾಲಿಸದೆ ಇರುವುದು ಕನ್ನಡಿಗರ ದೌರ್ಭಾಗ್ಯವೆಂದು ಹೇಳಬೇಕಾಗಿದೆ. ಈಗಲಾದರೂ ಮೆಹರ್ಬಾನ್ ಸರ್ಕಾರದವರು ಇಂಗ್ಲಿಷ್ ಗೆಜಟ್ಭಾಗದಲ್ಲಿರತಕ್ಕ ವಿಷಯಗಳೆಲ್ಲವನ್ನೂ ಕನ್ನಡ ಗೆಜಟ್ಟಿಗೆ ಟ್ರಾನ್ಸ್ಲೇಟ್ ಮಾಡಿಯಾದರೂ ಹಾಕುವುದಕ್ಕೆ ಅಪ್ಪಣೆಯಾಗಬೇಕು. ಇಲ್ಲವೆ ಹಾಗೆ ಹಾಕಿದ ಭಾಗದಲ್ಲಿ ಬೇರೆ ಅಲಾಹಿದಾ ಹೆಚ್ಚಿಗೆ ಚಂದಾಹಣವನ್ನಾದರೂ ಹೆಚ್ಚಿಸಿ ಆ ಮೂಲಕ ವಿಷಯಗಳೆಲ್ಲವನ್ನೂ ಪ್ರಚುರಪಡಿಸುವುದಕ್ಕೆ ಏರ್ಪಾಡುಮಾಡಿದಲ್ಲಿ ಕನ್ನಡಿಗರು ಸರ್ಕಾರದವರ ಅಪ್ಪಣೆಗಳನ್ನು ತಿಳಿದುಕೊಂಡು ಸಂತೋಷಚಿತ್ತರಾಗಲು ಅವಕಾಶವಾಗುತ್ತದೆಂದು ಪೂರ್ಣವಾಗಿ ನಂಬಿರುತ್ತೇನೆ.

ಕನ್ನಡಿಗರ ಅಭಿಮಾನಿ.

1926 ನೆಯ ಇಸವಿಯ ಮಳೆಯ ವಿಚಾರ.
ಶಿರಾಳಕೊಪ್ಪದ ಪ್ರಾಂತ.

ಈ 1926 ನೇ ಇಸವಿಯ ಮುಂಗಾರುಮಳೆಯು ಮಾರ್ಚಿ ತಿಂಗಳಲ್ಲಿ ಆರಂಭವಾಗುವುದು. ಸಾಧಾರಣವಾಗಿ 20-3-26 ರ ಸುಮಾರಿನಲ್ಲಿ ಮಳೆಯು ಪ್ರಥಮತಃ ಬೀಳಬಹುದು. ಏಪ್ರಿಲ್ ತಿಂಗಳಲ್ಲಿ ಸ್ವಲ್ಪ ಮಳೆ ಬಂದು ಮೇ 25 ರ ಸುಮಾರಿನಲ್ಲಿ ಬಿತ್ತುವ ಹದದ ಮಳೆ ಬರುವುದು. 17-6-26 ರಿಂದ ಮಲೆನಾಡುಮಳೆ (ಪಶ್ಚಿಮದಿಕ್ಕಿನ ಮಳೆ-ಹೆಗ್ಗಮಳೆ) ಆರಂಭವಾಗುವುದು. ಈ ಮಳೆ ಜುಲೈ ತಿಂಗಳಲ್ಲಿ ಚೆನ್ನಾಗಿ ಬರುವುದು. 15-7-26 ರಿಂದ ಮಳೆ ಹೆಚ್ಚಾಗಿ 25-7-26 ರ ವರೆವಿಗೂ ಸುರಿವುದು. ಆಗಸ್ಟ್ ತಿಂಗಳಲ್ಲಿಯೂ ತಕ್ಕಷ್ಟು ಮಳೆ ಬರುವುದು. ಹಿಂಗಾರುಮಳೆಯು ಸೆಪ್ಟಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಸಾಧಾರಣವಾಗಿ ಬರುವುದು. ಈವರ್ಷ ಭತ್ತದ ಬೆಳೆಗೆ ಮಳೆಯ ಕೊಂತೆಯಿಲ್ಲ. ಸಾಧಾರಣವಾಗಿ ಹಿಂಗಾರುಮಳೆಯಾಗುವುದರಿಂದಲೂ, ಜೂನ್ ಅಂತ್ಯದಲ್ಲಿ ಮಳೆ ಚೆನ್ನಾಗಿ ಬರುವುದರಿಂದಲೂ ಈ ವರ್ಷ ದಬ್ಬಣಸಾಲೆಯ ಭತ್ತವನ್ನು ನೀರಾವರಿ ಜಮೀನುಗಳಿಗೂ, ಮುಂಫಲದ ವಾರಾಂಗಳ ಭತ್ತವನ್ನು ಮೇಲುಪಾಲು ಜಮೀನುಗಳಿಗೂ ಬಿತ್ತುವುದು ಒಳ್ಳೆಯದು. ಆದರೆ ಜೂನ್ 30 ರೊಳಗಾಗಿ ಬಿತ್ತನೆಯ ಕೆಲಸವನ್ನು ಮುಗಿಸಿಕೊಂಡಿರಬೇಕು. ಕಬ್ಬಿನ ಪೈರಿಗೂ ಹಿಂಗಾರುಮಳೆಯಿಂದ ಪ್ರಯೋಜನವುಂಟು. ಮೇಲೆ ನಮೂದಿಸಿದ ದಿನಗಳಿಗೆ 4-5 ದಿನ ಹೆಚ್ಚು ಕಡಿಮೆಯಾದರೂ ಆಗಬಹುದು. ಹೋದವರ್ಷ ಇದೇ ರೀತಿಯಲ್ಲಿ ಬರೆದ ಭವಿಷ್ಯತ್ತಿನ ವಿಷಯವನ್ನು ಯಾರಾದರೂ ಪರಿಸೋಧಿಸಿದ್ದರೆ ಹೆಚ್ಚು ಕುಂದುಗಳನ್ನು ನನಗೆ ದಯವಿಟ್ಟು ತಿಳಿಸಿದಲ್ಲಿ ಕೃತಜ್ಞನಾಗಿರುವೆನು. ಈ ವಿಚಾರವು ವಾಯುಗುಣದ ಪರೀಕ್ಷೆಯಿಂದ ಬರೆದದ್ದಾಗಿದೆ. ಈ ಶಿರಾಳಕೊಪ್ಪ ಪ್ರಾಂತಕ್ಕೆ ಇದು ಹೆಚ್ಚಾಗಿ ಅನ್ವಯಿಸುವುದಾದರೂ ಇತರ ಪ್ರಾಂತಗಳಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಇದೇ ಮಾದರಿಯಲ್ಲಿ ನಡೆವುದು. ಈ ವರ್ಷವೂ ಇದರ ಫಲವನ್ನು ಪರೀಕ್ಷಿಸಬೇಕೆಂದು ಕೋರುವೆನು.

ಸಜ್ಜನವಿಧೇಯನಾದ,
ಕೆ. ಚೆನ್ನಮಲ್ಲಪ್ಪ, ಶಾಲೋಪಾಧ್ಯಾಯ, ಶಿರಾಳಕೊಪ್ಪ.

ಶ್ರೀಮದ್ವೀರಶೈವಶರಣಬಸವೇಶ್ವರಬೋರ್ಡಿಂಗಿನ ಸ್ಥಾಪನೆ.

ಈ ಮುಂಚೆ ಪ್ರಸಿದ್ಧಪಡಿಸಿದ ಪ್ರಕಾರ ತಾರೀಖು 24-3-1926 ರಲ್ಲಿ ಗುಲ್ಬರ್ಗಾದಲ್ಲಿ ಶ್ರೀಶರಣಬಸವೇಶ್ವರದೇವಸ್ಥಾನದ ಮುಂಭಾಗದಲ್ಲಿ ಗುಲ್ಬರ್ಗೆಯ ಭಾಗದ ವೀರಶೈವರ ಸಭೆಯು ಸೇರಿತ್ತು. ಈ ಭಾಗದ ವೀರಶೈವರ ವಿದ್ಯಾಭಿವೃದ್ಧಿಗೋಸ್ಕರ ಏರ್ಪಟ್ಟ ಈ ಮಹಾಸಭೆಗೆ ಶ್ರೀಯುತ ಮಂಜಪ್ಪ ಹರ್ಡೇಕರ್ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿದನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದುದರ ಮುಖ್ಯಾಂಶವೇನೆಂದರೆ—ಈ ನೈಜಾಮರಾಜ್ಯದಲ್ಲಿ ಸುಮಾರು ಒಂದೂಕಾಲು ಕೋಟಿ ಜನಸಂಖ್ಯೆಯಿದೆ. ಇದರಲ್ಲಿ ಒಂದು ಕೋಟಿ ಹಿಂದುಗಳೂ, 13 ಲಕ್ಷ ಮುಸಲ್ಮಾನರೂ, 12 ಲಕ್ಷ ಇತರ ಧರ್ಮದವರೂ ಇದ್ದಾರೆ. ಇಲ್ಲಿಯ ಹಿಂದುಗಳಲ್ಲಿ ಸುಮಾರು 7 ಲಕ್ಷ ವೀರಶೈವರೂ, 2½ ಲಕ್ಷ ಬ್ರಾಹ್ಮಣರೂ ಇದ್ದಾರೆ. ಈ ವೀರಶೈವರಲ್ಲಿ 6½ ಲಕ್ಷ ಜನರು ಗುಲ್ಬರ್ಗಾ ಸುಭೆಯಲ್ಲಿಯೇ ಇರುವದರಿಂದ ನಿಜಾಮರಾಜ್ಯದ ವೀರಶೈವರ ಎಲ್ಲ ಅಭಿವೃದ್ಧಿಯ ಕಾರ್ಯಗಳಿಗೂ ಇದೇ ಕೇಂದ್ರಸ್ಥಾನವಾಗಿದೆ. ಅದ್ದರಿಂದ ವಿದ್ಯಾಭಿವೃದ್ಧಿಗೆ ಇಲ್ಲಿಯೇ ಪ್ರಯತ್ನಿಸುವದು ಅವಶ್ಯಕವಾಗಿದೆ. ಈ ರಾಜ್ಯದಲ್ಲಿ ಸಾವಿರಕ್ಕೆ 290 ರಂತೆ ಬ್ರಾಹ್ಮಣರು ಅಕ್ಷರಸ್ಥರಾಗಿದ್ದರೆ, ಲಿಂಗಾಯತರು 4 ರಂತೆ ಮಾತ್ರ ಅಕ್ಷರಸ್ಥರಾಗಿದ್ದಾರೆ. ಆದರೆ ಹಿಂದುಳಿದ ಜನಾಂಗವೆಂದು ತಿಳಿಯಲ್ಪಡುತ್ತಿರುವ ಮಹಮ್ಮದೀಯ ಶೇಖ್ ಮತ್ತು ಸಯ್ಯದ್ ಪಂಗಡಗಳಲ್ಲಿ ಅನುಕ್ರಮವಾಗಿ 47 ಮತ್ತು 113 ಜನರು ಓದುಬರಹ ಬಲ್ಲವರಾಗಿದ್ದಾರೆ. ಇವರ ಮೇಲಿಂದ ಈ ಭಾಗದ ವೀರಶೈವರು ಮಹಮ್ಮದೀಯರಗಿಂತಲೂ ವಿದ್ಯೆಯಲ್ಲಿ ಹಿಂದುಳಿದಿದ್ದಾರೆಂಬುವದು ಸ್ಪಷ್ಟವಾಗುತ್ತದೆ. ನೈಜಾಮದೇಶದ ವೀರಶೈವರಿಗೆ ಹಿತವಾಗಬೇಕಾದರೆ ಅವರು ವಿದ್ಯೆಯಲ್ಲಿ ಮುಂದೆ ಬರಬೇಕೆಂತಲೂ, ವಿದ್ಯಾವಿಷಯಕ್ಕೆ ಅಲಕ್ಷ್ಯಮಾಡುವದರಿಂದ ಹಿತವಾಗದೆಂತಲೂ ಸ್ಪಷ್ಟವಾಗಿ ಒಳ್ಳೇ ಕಳಕಳಿಯಿಂದ ಹೇಳಿದರು. ಅಧ್ಯಕ್ಷರ ಭಾಷಣದಿಂದ ಸಭಿಕರಿಗೆ ಉತ್ಸಾಹವುಂಟಾಯಿತು. ತರುವಾಯ ಸೊಲ್ಲಾಪುರದ ಜಗದೇವ್ರಾವ್ ಡಾಕ್ಟರವರು, ಶ್ರೀಯುತ ನಾಗಪ್ಪಣ್ಣ ಕಾಡಾದಿ, ಶ್ರೀಯುತ ಬಂಡೆಪ್ಪ ಉರ್ಟೆ, ಸದಾನಂದ ಕೀರ್ತನಕಾರ ಲಾತೂರ್, ಶ್ರೀ ರುದ್ರಾರಾಧ್ಯಶಾಸ್ತ್ರಿಗಳು ಮಳಗಾಂವ್ ಇತ್ಯಾದಿ ಜನರು ಬೋರ್ಡಿಂಗಿನ ಆವಶ್ಯಕತೆಯನ್ನು ವಿಶದವಾಗಿ ತಿಳಿಸಿದರು. ಭಾಷಣಗಳಾದನಂತರ ಸರ್ವಾನುಮತದಿಂದ ಬೋರ್ಡಿಂಗಸ್ಥಾಪನೆಯಾಗಿ ಶ್ರೀ ದೊಡ್ಡಪ್ಪ ಅಪ್ಪಾಸಾಹೇಬ ಸಂಸ್ಥಾನ ಗುಲ್ಬರ್ಗ ಇವರ ಅಧ್ಯಕ್ಷತೆಗೆ ಒಳಪಟ್ಟ ಬೋರ್ಡಿಂಗಿನ ಕಾರ್ಯನಿರ್ವಾಹಕಸಂಘವೇರ್ಪಟ್ಟಿತು. ಆ ಬಳಿಕ ಅಧ್ಯಕ್ಷರು ವಿದ್ಯಾಭಿವೃದ್ಧಿಯ ಪುಣ್ಯಕಾರ್ಯಕ್ಕೆ ಎಲ್ಲ ಧರ್ಮದವರು ಮುಖ್ಯವಾಗಿ ವೀರಶೈವಮತದ ಧನಿಕರು ದ್ರವ್ಯಸಹಾಯವನ್ನು ಧಾರಾಳವಾಗಿ ಮಾಡಬೇಕೆಂದು ಉಪಸಂಹಾರಭಾಷಣವನ್ನು ಮಾಡಿದನಂತರ ಶ್ರೀ ದೊಡ್ಡಪ್ಪ ಅಪ್ಪಾಸಾಹೇಬ ಸಂಸ್ಥಾನ ಗುಲ್ಬರ್ಗ ಇವರು 1001 ರೂಪಾಯಿ ಶ್ರೀಯುತ ಬಂಡೆಪ್ಪ ನಾಗಪ್ಪಣ್ಣ ಕಾಡಾದಿಯವರು 2005 ರೂಪಾಯಿ ಈ ಪ್ರಕಾರ ಗುಲ್ಬರ್ಗ, ಶಹಬಾದ್, ಮಹಗಾಂವ್ ಮೊದಲಾದ ಸ್ಥಳಗಳ ಅನೇಕ ಉದಾರಿಗಳಾದ ವೀರಶೈವರಿಂದ ಸಭೆಯಲ್ಲಿಯೇ ಸಾಧಾರಣ 9000 ರೂಪಾಯಿಗಳ ಅಭಿವಚನವು ಕೊಡಲ್ಪಟ್ಟಿತು. ವಿದ್ಯಾಭಿಮಾನಿಗಳಾದ ಇಲ್ಲಿಯ ಪ್ರಸಿದ್ಧ ವಾಲ್ಚಂದಕುಠಾರಿ ವಕೀಲ ಮತ್ತು ಶ್ರೀಯುತ ಪಂಡಿತ ಜನಾರ್ದನರಾವ್ ವಕೀಲ ಈ ಜೈನ ಮತ್ತು ಬ್ರಾಹ್ಮಣಮತದ ದೊಡ್ಡಮನುಷ್ಯರು ಕೂಡ 101 ರೂಪಾಯಿಗಳನ್ನು ಕೊಟ್ಟರು. ಈ ಮೇರಿಗೆ ಎಲ್ಲ ಜನರ ಸಹಾಯದಿಂದ ಈ ಕಾರ್ಯವು ಪ್ರಾರಂಭವಾಗಿ ಹಣಕೂಡಿಸುವ ಕಾರ್ಯವು ಸಹ ನಡಿಯುತ್ತಲಿದೆ.

ಓರ್ವ ಪ್ರತ್ಯಕ್ಷದರ್ಶಿ.

ವೀರಶೈವರ ಪ್ರಾಂತಿಕಸಭೆಗಳು.

ಇತ್ತೀಚೆಗೆ ನಮ್ಮ ಸಮಾಜದ ಮುಂದಾಳುಗಳೂ, ಹಿತೈಷಿಗಳೂ ಆದ ಕೆಲವುಮಂದಿ ಮಹನೀಯರು ತಮ್ಮ ಪ್ರಯತ್ನವಿಶೇಷಗಳಿಂದ ಪ್ರಾಂತಿಕ ಸಭೆಗಳನ್ನು ಸೇರಿಸಿ ಆ ಮೂಲಕ ಆಯಾ ಪ್ರಾಂತ್ಯದ ತಮ್ಮ ಸಮಾಜ ಬಾಂಧವರ ಪುರೋಭಿವೃದ್ಧಿಯಕಡೆಗೆ ಗಮನಕೊಡುತ್ತಿರುವುದು ಕೇವಲ ಸ್ತುತ್ಯವಾದ ಸಂಗತಿಯಾಗಿದೆ. ನಮ್ಮ ಸಮಾಜದ ಹಲವುಮಂದಿಗಳು ಹಳ್ಳಿಪಳ್ಳಿಗಳಲ್ಲಿ ವಾಸಮಾಡುವವರಾಗಿದ್ದಾರೆ. ಇವರಲ್ಲಿ ಅನೇಕರು ವಿದ್ಯೆಯಲ್ಲಿಯೂ, ನಾಗರೀಕತೆಯಲ್ಲಿಯೂ, ಮತಧರ್ಮದ ವಿಷಯದಲ್ಲಿಯೂ ಏನನ್ನೂ ತಿಳಿಯದವರಾಗಿರುತ್ತಾರೆ. ನೆರೆಹೊರೆಯಲ್ಲಿ ವಾಸಮಾಡುವ ತಮ್ಮ ಸಮಾಜದ ಇತರರು ಯಾವ ಸ್ಥಿತಿಯಲ್ಲಿರುತ್ತಾರೆಂದು ತಿಳಿದುಕೊಳ್ಳುವಷ್ಟು ಚೈತನ್ಯವೂ ಇವರಿಗಿರುವುದಿಲ್ಲ. ಇಂಥಾವರು ಮಹಾಸಭಾ ಮುಂತಾದ ಸಭೆಗಳಿಗೆ ಹೋಗಿ, ಅಲ್ಲಿ ನಡೆಯಬಹುದಾದ ವಿಷಯಗಳನ್ನು ಗ್ರಹಿಸಿ, ಅವುಗಳನ್ನು ತಮ್ಮ ಸುತ್ತಮುತ್ತಣವರಿಗೆ ತಿಳಿಯಹೇಳಿ, ಅವರನ್ನು ಉತ್ತಮಸ್ಥಿತಿಗೆ ತರುವುದುತಾನೆ ಹೇಗೆ? ಮಹಾಸಭಾ ಮುಂತಾದ ದೊಡ್ಡದೊಡ್ಡ ಸಭೆಗಳಿಗೆ, ಒಂದೊಂದು ತಾಲ್ಲೋಕಿಗೆ ಇಬ್ಬರು ಅಥವಾ ಮೂವರು ಬರುವುದೇ ಕೇವಲ ಹೆಚ್ಚಿನ ಮಾತಾಗಿದೆ. ಅದರಲ್ಲೂ ಹಳ್ಳಿಗಾಡಿನವರ ದರ್ಶನವೇ ಕಡಿಮೆ. ಒಂದೊಂದು ಪ್ರಾಂತ್ಯದಿಂದ ಒಬ್ಬನೂ ಬರುವುದೇ ಇಲ್ಲ. ಇದೆಲ್ಲಕ್ಕೂ ನಮ್ಮವರ ಮೌಢ್ಯವೇ ಮುಖ್ಯಕಾರಣವಾಗಿದೆ. ವೀರಶೈವಮತದ ಅನೇಕ ಪಂಗಡಗಳ ಮತ್ತು ದೇಶದ ಜನಗಳು ಒಂದುಕಡೆಸೇರಲು ಅವಕಾಶವಿರುವುದರಿಂದಲೂ, ಅವರವರ ಕುಂದುಕೊರತೆಗಳು ಇತರರಿಗೆ ತಿಳಿದು ನ್ಯಾಯವಾದ ರೀತಿಯಲ್ಲಿ ಚರ್ಚಿಸಲ್ಪಟ್ಟು, ಕುಂದುಕೊರತೆಗಳನ್ನು ಮೇಲ್ಪಡಿಸಿಕೊಳ್ಳುವದಕ್ಕೆ ಅವಕಾಶವಿರುವುದರಿಂದಲೂ, ವೀರಶೈವಮತಾವಲಂಬಿಗಳಿಗೆ ವೀರಶೈವಮಹಾಸಭೆಯು, ಸಮಾಜದವರಿಂದ ಅನುಗ್ರಹಿಸಲ್ಪಟ್ಟ ಒಂದು ಅಮೌಲ್ಯವಾದ ವರವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂಥಾ ಸಹಾಯ ಸೌಲಭ್ಯಗಳನ್ನು ಹೊಂದುವ ಅವಕಾಶವನ್ನು ನಮ್ಮ ಸಮಾಜದ ಬಾಂಧವರನೇಕರು ಕಳೆದುಕೊಳ್ಳುತ್ತಲಿರುವರು. ಅಲ್ಲದೆ, ಇತ್ತೀಚೆಗೆ ಇಂಥಾ ಮಹಾಸಭೆಗಳು ಸೇರುವುದೂ ಅಪರೂಪವೇ ಆಗಿದೆ.

ಇಂಥಾ ಕಾಲದಲ್ಲಿ ಪ್ರಾಂತಿಕಸಭೆಗಳೇ ಮಹಾಸಭೆಯ ಪ್ರತಿನಿಧಿಗಳಾಗಿರುತ್ತವೆ. ಮಹಾಸಭೆಯು ಒಂದೊಂದುವೇಳೆ ಇಂಡಿಯಾದ ಒಂದೊಂದು ದೊಡ್ಡಪಟ್ಟಣದಲ್ಲಿ ನೆರೆಯುವುದರಿಂದ, ಅನೇಕರು ಅಂಥಾ ದೊಡ್ಡ ಸಭೆಗೆ ಹೋಗಲು ಅವಕಾಶವಾಗುವುದಿಲ್ಲ. ಪ್ರಾಂತಿಕಸಭೆಗಳಲ್ಲಿ ಹಳ್ಳಿಗಾಡಿನ ಮತ್ತು ಪಟ್ಟಣವಾಸಿಗಳಾದ ಸಮಾಜಬಾಂಧವರು ಕೂಡುವ ಸಂಭವವಿರುವದ್ದರಿಂದಲೂ, ಅನೇಕ ಉಪಯುಕ್ತ ಭಾಷಣಗಳೂ, ಸ್ಥಳೋಪಯುಕ್ತಗಳಾದ ನಿರ್ಧಾರಗಳೂ ನಡೆದು ಅವುಗಳನ್ನು ಅನುಷ್ಠಾನಕ್ಕೆ ತರುವಪ್ರಯತ್ನ ಮಾಡೋಣದರಿಂದಲೂ ನಮ್ಮ ಸಮಾಜದ ಹಿಂದುಳಿದಿರುವ ಸಹೋದರರಿಗೆ ಮಹೋಪಕಾರವಾಗುತ್ತದೆ. ಪ್ರಾಂತಿಕಸಭೆಗಳೆಂದರೆ ಆಯಾ ಪ್ರಾಂತ್ಯದ ಸಮಾಜದಬಾಂಧವರ ಪುರೋಭಿವೃದ್ಧಿಗಾಗಿಯೇ ಏರ್ಪಡಿಸುವ ಸಭೆಗಳಾಗಿರುತ್ತವೆ. ಆದುದರಿಂದ ಪ್ರತಿಯೊಂದು ಪ್ರಾಂತ್ಯಗ ಮಹಾಜನಗಳೂ ಇಂಥಾ ಪ್ರಾಂತಿಕ ಸಭೆಗಳನ್ನು ಕೂಡಿಸುವುದರಮೂಲಕ ನಮ್ಮ ಸಮಾಜ ಬಂಧುಗಳಲ್ಲಿ ಜಾಗ್ರತೆಯನ್ನುಂಟುಮಾಡುವುದು ಅತಿ ಮಹತ್ವದ ವಿಷಯವಾಗಿದೆ. ಕಳೆದ ಕ್ರೋಧನಸಂವತ್ಸರದಲ್ಲಿ, ಮೈಸೂರುದೇಶಕ್ಕೆ ಸೇರಿದ ತಿಪಟೂರು, ಮಾಗಡಿ, ಕುಣಿಗಲು, ತುಂಕೂರು, ಕ್ಲೋಸ್ಪೇಟೆ ಮುಂತಾದ ಕೆಲವು ತಾಲ್ಲೋಕ್ಗಳಲ್ಲಿ ಪ್ರಾಂತಿಕಸಭೆಗಳು ನಡೆದಿವೆ. ಈ ಪ್ರಾಂತ್ಯಗಳ ಮಹನೀಯರಂತೆಯೇ, ಇತರ ಪ್ರಾಂತ್ಯಗಳ ಸಮಾಜಾಭಿಮಾನಿಗಳಾದ ದೊಡ್ಡ ಮನುಷ್ಯರುಗಳೂ ಪ್ರಾಂತಿಕ ಸಭೆಗಳನ್ನು ಸೇರಿಸಿ, ಸಮಾಜಸೇವೆಯನ್ನು ಮಾಡುವುದರಮೂಲಕ ಕೀರ್ತಿಭಾಜನರಾಗಬೇಕಾಗಿದೆ. ವೀರಶೈವ ಬಂಧುಗಳೆ, ಈ ಪ್ರಪಂಚದಲ್ಲಿ ಮನುಷ್ಯಜನ್ಮವೇ ದುರ್ಲಭ. ಅದರಲ್ಲಿಯೂ ವೀರಶೈವನಾಗಿ ಜನ್ಮಿಸುವುದೆಂದರೆ ಸಾಮಾನ್ಯವಲ್ಲ. ಹೀಗಿರುವಲ್ಲಿ, ನೀವುಗಳು ಇಂಥಾ ಪವಿತ್ರವಾದ ಮತದಲ್ಲಿ ಜನ್ಮಧಾರಣೆಮಾಡಿ ಅದರಲ್ಲಿಯೂ ನಿಮ್ಮ ಸಮಾಜಬಾಂಧವರ ಸೇವಾತತ್ಪರರಾಗುವುದಾದರೆ ಆ ಪರಶಿವಮೂರ್ತಿಯ ಪೂರ್ಣಾಂತಃಕರಣಕ್ಕೆ ಪಾತ್ರರಾಗುವುದರಲ್ಲಿ ಸಂದೇಹವೇನಿರುತ್ತೆ? ಸಾಂಸಾರಿಕ ತಾಪತ್ರಯಗಳೂ, ದಾರಾಪುತ್ರಾದಿಗಳ ಮಹದ್ವ್ಯಸನವೂ, ಧನಾರ್ಜನೆಯ ಯೋಚನೆಯೂ, ಯಾವಾಗಲೂ ಅವರಿಸಿಯೇ ಇರುತ್ತವೆ. ಇವುಗಳನ್ನೇ ನೆಚ್ಚಿಕೊಂಡು ಪವಿತ್ರವಾದ ಜೀವನಮಾನವೆಲ್ಲಾ ಇವುಗಳಲ್ಲೇ ವಿನಿಯೋಗಿಸುವುದಾದರೆ, ಸಮಾಜಸೇವೆಗೆ ವಿರಾಮವೇ ದೊರೆಯುವುದಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವಬಂಧುವೂ, ಪ್ರಾಂತಿಕ ಸಭೆಗಳ ಅವಶ್ಯಕತೆಯು ಎಷ್ಟರಮಟ್ಟಿಗೆ ನಮ್ಮ ಸಮಾಜಕ್ಕೆ ಹಿತಕಾರಿ ಎಂಬುದನ್ನು ಪೂರ್ಣ ಲಕ್ಷ್ಯಕ್ಕೆ ತರಬೇಕಾಗಿದೆ. ಸಮಾಜಬಾಂಧವರೆ, ಪ್ರಾಂತಿಕಸಭೆಗಳಲ್ಲಿ ನಮ್ಮೆಲ್ಲರ ಅಭಿಯೋಜನಕ್ಕಾಗಿ ದೊರೆಯುವ ಅಮೂಲ್ಯ

ಕಾಲವನ್ನು ಪೋಲುಮಾಡದೆ, ಉಚಿತವಾದರೀತಿಯಲ್ಲಿ ಸಾರ್ಥಕಪಡಿಸಿಕೊಳ್ಳಬೇಕು. ಆ ಕಾಲದಲ್ಲಿ ನಮ್ಮ ಮತದ ಪ್ರಾಶಸ್ತ್ಯ, ಅದರ ಪೂರ್ವೋನ್ನತ್ಯ, ಇತಿಹಾಸ, ಈಗಿನಸ್ಥಿತಿ, ನಮ್ಮಗಳ ಆಚಾರವಿಚಾರಗಳಲ್ಲಿ ಮೇಲ್ಪಡಿಸುವಿಕೆ, ನಮ್ಮವರಲ್ಲಿ ವಿದ್ಯಾಪ್ರಸಾರಣೆ, ನಾಗರೀಕತೆ ಇತ್ಯಾದಿ ಉಪಯುಕ್ತ ವಿಷಯಗಳನ್ನು ಕುರಿತು ನೆರೆದಿರುವವರೆಲ್ಲರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಉಪನ್ಯಾಸಗಳನ್ನು ನಡೆಸಬೇಕು. ಹಾಗಲ್ಲದೆ ಸ್ವಾಗತಸಂಘದವರ ಮತ್ತು ಅಧ್ಯಕ್ಷರ ಭಾಷಣದಿಂದಲೂ, ಕೆಲವು ನಿರ್ಧಾರಗಳನ್ನು ಮಾಡುವುದರಿಂದಲೂ, ಸಭೆಯನ್ನು ಪೂರ್ತಿಮಾಡುವುದಾದರೆ, ಯಾವ ಪ್ರಯೋಜನವೂ ಹಿಂದುಳಿದಿರುವ ನಮ್ಮ ಸಮಾಜಬಾಂಧವರಿಗೆ ದೊರೆತಂತಾಗುವುದಿಲ್ಲ. ಪ್ರಾತಃಕಾಲ 7-30 ರಿಂದ 10-30 ರ ವರೆಗೆ ಸ್ವಾಗತಸಂಘದವರ ಮತ್ತು ಅಧ್ಯಕ್ಷರ ಭಾಷಣ ಮತ್ತು ಅತಿಮುಖ್ಯವಾದ ಕೆಲ ನಿರ್ಧಾರಗಳೂ, 2 ರಿಂದ 5 ರವರೆಗೆ ಸಮಾಜಾಭಿವೃದ್ಧಿಗೆ ಆವಶ್ಯಕವಾದ ಉಪನ್ಯಾಸಗಳೂ ನಡೆಯುವಂತಾಗಬೇಕು. ಹತ್ತಾರು ನಿರ್ಧಾರಗಳನ್ನುಮಾಡಿ ಒಂದನ್ನೂ ಅನುಸರಿಸದೆ ಬಿಡುವುದಕ್ಕಿಂತಲೂ ಅತ್ಯವಶ್ಯವಾಗಿ ತೋರುವ ಕೆಲವು ನಿರ್ಧಾರಗಳನ್ನೇ ಮಾಡಿ ಅವುಗಳು ಅನುಷ್ಠಾನಕ್ಕೆ ಬರುವಂತೆ ಮಾಡುವುದು ಸಭಾಪಾಲಕರ ಮುಖ್ಯ ಕರ್ತವ್ಯವಾಗಿದೆ. ಸಭೆಯ ಸ್ವಾಗತಸಂಘದವರು ಸಭೆಯು ಕೂಡುವುದಕ್ಕೆ ಕೆಲವುದಿನಗಳ ಮುಂಚೆಯೇ ಆಯಾ ಪ್ರಾಂತ್ಯದ ಸಮಾಜಬಂಧುಗಳಿಗೆ ತಿಳಿಯಪಡಿಸಿ ಆದಷ್ಟು ಹೆಚ್ಚಾಗಿ ಜನಗಳೂ ಕಲೆತು, ಸಭೆಯ ಪ್ರಯೋಜನವು ದೊರೆಯುವಂತಾಗಬೇಕು. ಪ್ರತಿಯೊಂದು ಪ್ರಾಂತ್ಯದವರೂ ಇಂಥಾ ಸಭೆಗಳನ್ನು ಕೂಡಿಸಲು ಪ್ರಯತ್ನಮಾಡಿದಲ್ಲಿ ಇವರಿಗೆ ಸಹಾಯ ಮತ್ತು ಪ್ರೋತ್ಸಾಹ ಮಾಡತಕ್ಕ ಮಹಾಶಯರು ನಮ್ಮಲ್ಲಿ ಅನೇಕರು ದೊರೆಯುವರು. ಪ್ರಿಯಬಾಂಧವರೆ, ನಿಮಗೆ ಐಶ್ವರ್ಯವನ್ನೂ, ಬುದ್ಧಿಯನ್ನೂ, ಆರೋಗ್ಯವನ್ನೂ ದಯಪಾಲಿಸಿರುವುದು ನಿಮ್ಮ ಸ್ವಾರ್ಥಕ್ಕಾಗಿಯೇ ಅಲ್ಲ; ನಿಮ್ಮ ಸ್ವಜನರ ಮತ್ತು ಸ್ವದೇಶದ ಸಹೋದರರ ಉನ್ನತಿಯ ಸಲುವಾಗಿ. ನೀವು ನಿಮ್ಮ ಸ್ವಾರ್ಥಕ್ಕಾಗಿಯೇ ಎಲ್ಲವನ್ನೂ ವಿನಿಯೋಗಿಸುತ್ತಾ ನಿಮ್ಮ ಸಮಾಜದ ಇತರ ಬಂಧುಗಳ ಕಡೆಗೆ ಲಕ್ಷ್ಯಕೊಡದ ಭಾಗದಲ್ಲಿ ನೀವು ಖಂಡಿತವಾಗಿಯೂ ಪರಶಿವನ ಕೃಪಾದೃಷ್ಟಿಯಿಂದ ಹೊರಗಾಗಬೇಕಾಗುತ್ತದೆ. ಮಹಾಶಯರೆ, ಇವುಗಳನ್ನೆಲ್ಲಾ ಲಕ್ಷ್ಯದಲ್ಲಿಟ್ಟು ನೀವು ಪ್ರಾಂತಿಕ ಸಭೆಗಳನ್ನು ಸೇರಿಸಲು ಪ್ರಯತ್ನಮಾಡಬೇಕು. ಹಳ್ಳಿಗಾಡಿನ ಮತ್ತು ಪಟ್ಟಣಗಳ ಸಮಾಜಬಾಂಧವರು ಇವುಗಳಲ್ಲಿ ಮಿಳಿತರಾಗಬೇಕು. ಉತ್ತಮವಾದ ಭಾಷಣಗಳೂ, ಅನುಷ್ಠಾನಕ್ಕೆ ತರಬಹುದಾದ ನಿರ್ಧಾರಗಳೂ ನಡೆಸಲ್ಪಡಬೇಕು. ಪರಸ್ಪರ ಪ್ರೇಮವು ಹೆಚ್ಚಬೇಕು. ಹೀಗೆಯೇ ಕೆಲವು ವರ್ಷಗಳು ನಡೆದಲ್ಲಿ ಪರಮಾತ್ಮನ ದಿವ್ಯಾನುಗ್ರಹದಿಂದಲೂ ನಿಮ್ಮೆಲ್ಲರ ಪ್ರಯತ್ನವಿಶೇಷಗಳಿಂದಲೂ ನಮ್ಮ ಸಮಾಜದವರೆಲ್ಲರೂ ತಕ್ಕಮಟ್ಟಿಗಾದರು ತಮ್ಮ ಸ್ಥಿತಿಗತಿಗಳನ್ನೂ, ನಡೆನುಡಿಗಳನ್ನೂ, ಆಚಾರವ್ಯವಹಾರಗಳನ್ನೂ ಮೇಲ್ಪಡಿಸಿಕೊಳ್ಳಲು ಶಕ್ತರಾಗುವರು. "ಸಂಘೇಶಕ್ತಿಃ ಕಲೌಯುಗೇ" ಎಂಬುದನ್ನು ನೀವು ಮರೆಯಬಾರದು. ಮಹಾಶಯರೆ, ಪ್ರಾಂತಿಕಸಭೆಗಳೇ ಈಗಿನಕಾಲದಲ್ಲಿ ಸಮಾಜದ ಪುರೋಭಿವೃದ್ಧಿಗೆ ಆಧಾರವು. ಇವುಗಳನ್ನು ಕ್ರಮವಾದ ರೀತಿಯಲ್ಲಿ ನಡಿಸದ ಹೊರತು, ನಮ್ಮಗಳ ಮೇಲ್ಮೆಯಾಗುವುದಿಲ್ಲ. ಆದುದರಿಂದ ಸಮಾಜದ ಮುಂದಾಳುಗಳೇ, ವೀರಶೈವಮತದ ಆದರ್ಶರತ್ನಗಳೇ, ನಿಮ್ಮ ಸಮಾಜದ ಹಿತಚಿಂತನೆಯಸಲುವಾಗಿ ಯಾವ ದುರಂತವಾದ ತೊಂದರೆಗಳು ಬಂದರೂ ಸಹಿಸಲು ಸಿದ್ಧರಾಗಿರಿ! ಸಮಾಜಾಭಿವೃದ್ಧಿಯೇ ನಿಮ್ಮ ನಿರಂತರ ಧ್ಯೇಯವಾಗಿರಲಿ!! ಪರಮಾತ್ಮನ ದಿವ್ಯಾನುಗ್ರಹವು ನಿಮ್ಮಮೇಲುಂಟಾಗಲಿ!!!

ಗ್ರಂದಿಗೆ ಬಿ. ನಂಜಪ್ಪ, ತಿಪಟೂರು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.
(ಸತ್ಯಾನ್ವೇಷಣ.)

11 ನೆಯ ಪ್ರಕರಣ.
ನನ್ನ ಇಂಗ್ಲೆಂಡಿನ ಪ್ರಯಾಣಸನ್ನಾಹ.

1887 ನೇ ಇಸವಿಯಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣನಾದೆನು. ಆಗ ಅಹಮುದಾಬಾದಿನಲ್ಲೂ, ಬೊಂಬಾಯಿನಲ್ಲೂ ಈ ಪರೀಕ್ಷೆಯು ನಡೆಯುತ್ತಿದ್ದಿತು. ದೇಶವು ಬಡಸ್ಥಿತಿಯಲ್ಲಿದ್ದುದರಿಂದ ಕಾಠೆವಾಡದ ವಿದ್ಯಾರ್ಥಿಗಳು ಸಮೀಪದ ಕೇಂದ್ರಸ್ಥಾನಕ್ಕೇ ಹೋಗುತ್ತಿದ್ದರು. ನಮ್ಮ ಕುಟುಂಬದವರು ಬಡವರಾಗಿದ್ದುದರಿಂದ ನಾನು ಸಮೀಪದಲ್ಲಿದ್ದ ಅಹಮುದಾಬಾದಿಗೆ ಪ್ರಯಾಣಮಾಡಿದೆನು. ರಾಜಕೋಟೆಯಿಂದ ಅಹಮುದಾಬಾದಿಗೆ ಜತೆಯಿಲ್ಲದೆ ನಾನು ಒಂಟಿಯಾಗಿ ಪ್ರಯಾಣಮಾಡಲು ಅದೇ ಮೊದಲು. ಪರೀಕ್ಷೆಯಲ್ಲಿ ಕೃತಾರ್ಥನಾದಮೇಲೆ ನಾವು ಪ್ರೌಢವಿದ್ಯಾಲಯದಲ್ಲಿ ಓದಬೇಕೆಂದು ಹಿರಿಯರು ಪ್ರೋತ್ಸಾಹಿಸಿದರು. ಭಾವನಗರದಲ್ಲೊಂದು ಕಾಲೇಜೂ, ಬೊಂಬಾಯಿನಲ್ಲಿ ಮತ್ತೊಂದು ಕಾಲೇಜೂ ಇದ್ದುವು. ಭಾವನಗರದ ಕಾಲೇಜಿನಲ್ಲಿ ವೆಚ್ಚವು ಕಡಮೆಯಾಗಿದ್ದುದರಿಂದ ಅಲ್ಲಿನ ಶ್ಯಾಮಲದಾಸ್ ಕಾಲೇಜಿಗೆ ಸೇರಿದೆನು. ಉಪಾಧ್ಯಾಯರ ಬೋಧೆಯನ್ನು ನಾನು ಗ್ರಹಿಸಲಾರದೆ ಹೋದೆನು. ಅದು ಅವರ ತಪ್ಪಲ್ಲ. ನಾನು ಹೊಸಬ; ಮೊದಲನೇ ಆರುತಿಂಗಳು ಮುಗಿಯುತಲೇ ರಜಾದಲ್ಲಿ ಊರಿಗೆ ಹೋದೆನು. ಮಾವುಜದೇವರವರು ವಿದ್ಯಾವಂತರೂ, ಸೂಕ್ಷ್ಮಬುದ್ಧಿವಂತರೂ ಆದ ಬ್ರಾಹ್ಮಣರು; ನಮ್ಮ ಕುಟುಂಬದ ಮಿತ್ರರು. ನನ್ನ ತಂದೆ ಸತ್ತಮೇಲು ಕೂಡ ನಮ್ಮ ಕುಟುಂಬದ ಕಷ್ಟಸುಖವನ್ನು ವಿಚಾರಿಸಿಕೊಳ್ಳುತ್ತಿದ್ದರು. ಇವರು ಒಂದು ದಿವಸ ನಮ್ಮ ಮನೆಗೆ ಬಂದು ನನ್ನ ವಿದ್ಯಾಭ್ಯಾಸದ ವಿಚಾರವಾಗಿ ನನ್ನ ತಾಯಿ ಕೂಡಲೂ ಅಣ್ಣನ ಕೂಡಲೂ ಪ್ರಸ್ತಾಪಿಸಿದರು. ನಾನು ಶ್ಯಾಮಲದಾಸ್ ಕಾಲೇಜಿನಲ್ಲಿ ಓದುತ್ತಿದ್ದೇನೆಂದು ತಿಳಿದು "ಕಾಲವು ಮಾರಿಹೋಗಿದೆ. ಉನ್ನತಪರೀಕ್ಷೆಯಲ್ಲಿ ಉತ್ತೀರ್ಣರಾದ ಹೊರತು ನಿಮ್ಮಲ್ಲಿ ಯಾರೂ ನಿಮ್ಮ ತಂದೆಯ ಸ್ಥಾನವನ್ನು ಆಕ್ರಮಿಸಲಾರರು. ಈ ಹುಡುಗನು ಇನ್ನೂ ಓದುತ್ತಿದ್ದಾನೆ. ಇವನು ನಿಮ್ಮ ತಂದೆ ಸ್ಥಾನವನ್ನಾಕ್ರಮಿಸುವಂತೆ ನೀವು ಪ್ರಯತ್ನಿಸಬೇಕು. ಈತನು ಪಟ್ಟಾಂಚಿತನಾಗ (ಡಿಗ್ರಿತೆಗೆದುಕೊಳ್ಳ) ಲು ಇನ್ನೂ 4 ವರ್ಷಕಾಲ ಹಿಡಿಯುವುದು. ಡಿಗ್ರಿ ತೆಗೆದುಕೊಂಡರು ಕೂಡ 60 ರೂ. ಸಂಬಳಕ್ಕೆ ಸೇರಲು ಅರ್ಹನಾಗುವನಲ್ಲದೆ ದಿವಾನ್ಪದವಿಯನ್ನು ಹೊಂದಲಾರನು. ನನ್ನ ಮಗನಂತೆ ಈತನು ನ್ಯಾಯವಾದಿ (ಲಾಯರು) ಆಗಲು ಇನ್ನೂ ಬಹಳಕಾಲ ಹಿಡಿಯುವುದು. ಆಗ್ಗೆ ಅನುಭವವೂ, ಸಾಮರ್ಥ್ಯವೂ ಇರುವ ನ್ಯಾಯವಾದಿಗಳೆಷ್ಟೋ ಜನರು ದಿವಾನ್ ಉದ್ಯೋಗವನ್ನು ಹೊಂದಲು ಪ್ರಯತ್ನಿಸುವರು. ನೀವು ಈತನನ್ನು ಇಂಗ್ಲೆಂಡಿಗೆ ಕಳುಹುದು ಉತ್ತಮವೆಂದು ನನ್ನ ಅಭಿಪ್ರಾಯವು. ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದುವುದು ಬಹಳ ಸುಲಭವೆಂದು ನನ್ನ ಮಗನು ಹೇಳುತ್ತಾನೆ. ಮೂರುವರ್ಷದಲ್ಲಿ ಹಿಂದಿರುಗಿ ಬರಬಹುದು. ವೆಚ್ಚವು 4-5 ಸಾವಿರ ರೂಪಾಯಿಗಿನ್ನ ಹೆಚ್ಚಾಗಿ ಆಗುವುದಿಲ್ಲ. ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಕೃತಾರ್ಥನಾಗಿ ಹಿಂದಿರುಗಿಬಂದು ಕೇಳಿದ ಮಾತ್ರಕ್ಕೇ ದಿವಾನುದ್ಯೋಗವು ಈತನಿಗೆ ಕೊಡಲ್ಪಡುವುದು. ಈ ವರ್ಷವೇ ನೀವು ಮೋಹನದಾಸನನ್ನು ಇಂಗ್ಲೆಂಡಿಗೆ ಕಳುಹಿಸಬೇಕೆಂದು ಸೂಚಿಸುತ್ತೇನೆ. ನನ್ನ ಮಗನಾದ ಕೇವಲರಾಮನಿಗೆ ಇಂಗ್ಲೆಂಡಿನಲ್ಲಿ ಎಷ್ಟೋ ಜನ ಸ್ನೇಹಿತರುಂಟು. ಅವನು ಇವನಿಗೆ [illegible] ಬರೆದುಕೊಡುವನು. ಮೋಹನದಾಸನು ಅಲ್ಲಿ ಸುಲಭವಾಗಿ ವಿದ್ಯಾಭ್ಯಾಸ ಮಾಡಬಹುದು." ಎಂದು ಮಾವುಜ ಈ ಮಾತನ್ನು ಹೇಳಿ ನನ್ನ ಕಡೆಗೆ ತಿರುಗಿಕೊಂಡು "ಇಲ್ಲೇ ವಿದ್ಯಾಭ್ಯಾಸ ಮಾಡಬೇಕೆಂಬಿಷ್ಟವೇ, ಇಂಗ್ಲೆಂಡಿಗೆ ಹೋಗಲಿಷ್ಟವೇ?" ಎಂದು ಕೇಳಿದರು. ಇಲ್ಲಿ ಓದುವುದು ನನಗೆ ಕಷ್ಟವಾಗಿದ್ದುದರಿಂದ ಮಾವುಜಯವರ ಸೂಚನೆಯನ್ನು ಆತುರದಿಂದ ಅನುಮೋದಿಸಿದೆನು. ಇದರಮೇಲೆ ವೈದ್ಯಪರೀಕ್ಷೆಗೇಕೆ ಓದಬಾರದೆಂದು ಕೇಳಿದರು. "ನಮ್ಮ ತಂದೆಯು ಆ ವೃತ್ತಿಯನ್ನು ಸಮ್ಮತಿಸಿರಲಿಲ್ಲವು. ಶವ ಹೆಣವನ್ನು ಕುಯುವುದು ಮೊದಲಾದ ಕೃತ್ಯವನ್ನು ವೈಷ್ಣವರು ಮಾಡಕೂಡದೆಂದು ಅವರು ಹೇಳುತ್ತಿದ್ದರು. ನ್ಯಾಯವಾದಿ ವೃತ್ತಿಯಲ್ಲೇ ಸೇರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು." ಎಂದು ನಮ್ಮಣ್ಣನು ಹೇಳಿದನು. "ನಿಮ್ಮ ತಂದೆಯಂತೆ ನನಗೆ ವೈದ್ಯವೃತ್ತಿಯಲ್ಲಿ ದ್ವೇಷಭಾವವಿಲ್ಲವು. ನಮ್ಮ ಶಾಸ್ತ್ರದಲ್ಲೂ ವೈದ್ಯವೃತ್ತಿಯನ್ನು ನಿಷೇಧಿಸಿಲ್ಲವು. ಅಲ್ಲದೆ ನೀನು ವೈದ್ಯಪರೀಕ್ಷೆಯಲ್ಲಿ ಕೃತಾರ್ಥನಾಗಿ ಬಂದರೂ ದಿವಾನುದ್ಯೋಗವನ್ನು ಹೊಂದಬಹುದು. ನೀನು ದಿವಾನನಾಗಬೇಕೆಂದು ನನ್ನ ಅಭಿಲಾಷೆಯು. ಆಗ ಈ ದೊಡ್ಡ ಕುಟುಂಬವನ್ನು ಕಾಪಾಡಲಾಗುವುದು. ಕಾಲವು ವ್ಯತ್ಯಾಸವಾಗುತ್ತಿದೆ. ಜೀವನವು ದಿನದಿನಕ್ಕೆ ಕಷ್ಟವಾಗುತ್ತದೆ. ಆದುದರಿಂದ ಬ್ಯಾರಿಸ್ಟರ್ ಪರೀಕ್ಷೆಗೋದುವುದು ಉತ್ತಮವು." ಎಂದು ಹೇಳಿದುದಲ್ಲದೆ ನನ್ನ ತಾಯಿಯನ್ನು ಕುರಿತು "ನಾನು ಹೊರಡುತ್ತೇನೆ. ನಾನು ಹೇಳಿದ ವಿಷಯವನ್ನು ಕುರಿತು ಚೆನ್ನಾಗಿ ಪರ್ಯಾಲೋಚಿಸಿ. ಪುನಃ ನಿಮ್ಮನ್ನು ನೋಡಲು ಬಂದಾಗ ಮೋಹನದಾಸನು ಇಂಗ್ಲೆಂಡಿಗೆ ಪ್ರಯಾಣಸನ್ನದ್ಧನಾಗಿರುವನೆಂದು ನಂಬುತ್ತೇನೆ. ನಾನು ಮಾಡಬೇಕಾದ ಸಹಾಯವನ್ನೆಲ್ಲಾ ಮಾಡುತ್ತೇನೆ." ಎಂದು ಅವರು ಹೇಳಿದರು.

ಮಾವುಜಯವರು ಅನುಮತಿಯನ್ನು ಪಡೆದುಹೋದರು. ನನ್ನ ವಿಚಾರತರಂಗಕ್ಕೆ ಪಾರವಿಲ್ಲವಾಯಿತು. ನಮ್ಮಣ್ಣನು ಆಲೋಚನಾಸಮುದ್ರದಲ್ಲಿ ಮುಳುಗಿದನು. ನನ್ನನ್ನು ಇಂಗ್ಲೆಂಡಿಗೆ ಕಳುಹಲು ಹಣವಾಗಬೇಕು. ಹಣವನ್ನು ಒದಗಿಸುವ ಬಗೆ ಹೇಗೆ? ಚಿಕ್ಕವಯಸ್ಸಿನವನಾದ ನನ್ನನ್ನು ಒಂಟಿಯಾಗಿ ದೂರದೇಶಕ್ಕೆ ಕಳುಹುವುದು ಉಚಿತವೆ? ಎಂದು ಅವರುಗಳು ಚಿಂತಿಸುವವರಾದರು. ನನ್ನನ್ನು ಬಿಟ್ಟಿರಲು ನನ್ನ ತಾಯಿಗೆ ಕಷ್ಟವಾಗಿ ತೋರಿತು. ಈ ಇಂಗ್ಲೆಂಡು ಪ್ರಯಾಣವನ್ನು ಕುಟುಂಬಕ್ಕೆ ದೊಡ್ಡವರಾದ ನಮ್ಮ ಚಿಕ್ಕಪ್ಪನು ಅಂಗೀಕರಿಸಬೇಕೆಂದು ನಮ್ಮ ತಾಯಿಯು ಹಟಹಿಡಿದಳು. ನಮ್ಮಣ್ಣನಿಗೆ ಮತ್ತೊಂದು ಯೋಚನೆ ಹುಟ್ಟಿತು. ಪೋರಬಂದರು ಸಂಸ್ಥಾನದಮೇಲೆ ನನಗೆ ಕೊಂಚ ಹಕ್ಕಿದೆ. ಏಜಂಟರಾದ ಲೇಲಿಕರವರಿಗೆ ನಮ್ಮ ಕುಟುಂಬದ ವಿಚಾರದಲ್ಲಿ ಗೌರವಭಾವವಿರುತ್ತದೆ. ನಮ್ಮ ಚಿಕ್ಕಪ್ಪನಮೇಲೂ ಅವರಿಗೆ ಅಭಿಮಾನವು ಹೆಚ್ಚಾಗಿರುತ್ತದೆ. ಈ ವೆಚ್ಚಕ್ಕೆ ಸಂಸ್ಥಾನದವರು ಕೊಂಚ ಸಹಾಯಮಾಡುವಂತೆ ಅವರು ಪ್ರಯತ್ನಿಸಬಲ್ಲರೆಂದು ನಮ್ಮಣ್ಣನು ಹೇಳಿದನು.

ನಾನು ಪೋರಬಂದರಿಗೆ ಹೊರಟೆನು. ಆಗ ರೈಲಿರಲಿಲ್ಲವು. ಐದುದಿವಸ ಎತ್ತಿನಬಂಡಿಯಲ್ಲಿ ಪ್ರಯಾಣಮಾಡಿದೆನು. ನಾನು ಅಂಜುಪುರಕನೆಂದು ಮೊದಲೇ ಹೇಳಿರುತ್ತೇನೆ. ಆದರೆ ಈ ಸಂದರ್ಭದಲ್ಲಿ ಆ ನನ್ನ ಅಂಜುಪುರಕತನವೆಲ್ಲಾ ಮಾಯವಾಗಿಹೋಯಿತು. ಧೋರಾಜವರೆಗೆ ಎತ್ತಿನಬಂಡಿಯಲ್ಲಿ ಹೋಗಿ ಅಲ್ಲಿಂದ ಪೋರಬಂದರಿಗೆ ಒಂಟೆಯಮೇಲೆ ಹೋದೆನು. ನನ್ನ ಚಿಕ್ಕಪ್ಪನನ್ನು ನೋಡಿ ಎಲ್ಲ ವಿಷಯವನ್ನೂ ತಿಳಿಸಿದೆನು. ಅವರು ಆಲೋಚಿಸಿ, "ಮತಾಚಾರಕ್ಕೆ ಭಂಗವಲ್ಲದ ರೀತಿಯಲ್ಲಿ ಇಂಗ್ಲೆಂಡಿನಲ್ಲಿರಲು ಅಸಂಭವವೆಂದು ಯೋಚಿಸುತ್ತೇನೆ. ಇಲ್ಲಿರುವ ದೊಡ್ಡ ಬ್ಯಾರಿಸ್ಟರುಗಳನ್ನು ನೋಡಿ ನನಗೆ ಕೊಂಚ ಸಂದೇಹವುಂಟಾಗಿದೆ. ಆಂಗ್ಲೇಯರ ಜೀವನಕ್ಕೂ ಅವರ ಜೀವಿನಕ್ಕೂ ಯಾವ ಭೇದವೂ ಕಂಡುಬರುವುದಿಲ್ಲ. ಎಂತಹ ಅಪರಿಶುದ್ಧವಾದ ಆಹಾರವನ್ನಾದರೂ ತೆಗೆದುಕೊಳ್ಳುತ್ತಾರೆ. ಚುಟ್ಟವನ್ನು ಸದಾ ಸೇದುತ್ತಿರುವರು. ಇದು ನಮ್ಮ ಕುಟುಂಬಸಂಪ್ರದಾಯಕ್ಕೆ ವಿರುದ್ಧವಾದುದು. ಆದರೆ ನಿನ್ನ ಉತ್ಸಾಹಕ್ಕೆ ನಾನು ಭಂಗಪಡಿಸುವುದಿಲ್ಲ. ನಾನು ಕೂಡಲೇ ತೀರ್ಥಯಾತ್ರೆಗೆ ಹೊರಡುವೆನು. ಬಹಳದಿವಸ ನಾನು ಬದುಕಿರುವುದು ಅಸಂಭವವು. ಮರಣವು ಸನ್ನಿಹಿತವಾಗುತ್ತಿರುವ ಈ ಸಮಯದಲ್ಲಿ ಸಮುದ್ರಪಾಟಿ ಇಂಗ್ಲೆಂಡು ಪ್ರಯಾಣಕ್ಕೆ ನಾನು ಹೇಗೆ ಸಮ್ಮತಿಯನ್ನು ಕೊಡುವುದು? ಆದರೆ ನಾನು ಅತಂಕಪಡಿಸುವುದಿಲ್ಲ. ನಿನ್ನ ತಾಯಿಯ ಅನುಮತಿಯೇ ಮುಖ್ಯವು. ಆಕೆಯು ಅಂಗೀಕರಿಸಿದಲ್ಲಿ ನಿನಗೆ ಶುಭವಾಗಲೆಂದು ಆಶೀರ್ವದಿಸುತ್ತೇನೆ. ನನ್ನ ಆಶೀರ್ವಾದವನ್ನು ಹೊಂದಿ ನೀನು ಹೊರಡಬಹುದು." ಎಂದು ಹೇಳಿದರು.

ನೀವು ಹೀಗೆ ಸಾನುಭೂತಿಯನ್ನು ತೋರಿಸುವಿರೆಂದು ನನಗೆ ಗೊತ್ತು. ನನ್ನ ತಾಯಿಯ ಅನುಮತಿಯನ್ನು ಪಡೆಯುತ್ತೇನೆ. ಆದರೆ ನೀವು ಲೇಲಿಯವರಿಗೆ ಶಿಫಾರಸುಮಾಡುತ್ತಿರಾ? ಎಂದು ಕೇಳಿದೆನು. "ನಾನು ಆ ಕೆಲಸವನ್ನು ಹೇಗೆಮಾಡಲಾದೀತು? ಆದರೆ ದೊರೆಯು ಒಳ್ಳೆಯವನು. ನಮ್ಮ ಕುಟುಂಬದ ವಿಚಾರವನ್ನು ಅವರಿಗೆ ತಿಳಿಸಿದಲ್ಲಿ ನಿನಗೆ ತಪ್ಪದೆ ಅವರು ಒಂದು ಕೆಲಸವನ್ನು ಕೊಡುವರು." ಎಂದು ಹೇಳಿದರು. ಇಂಗ್ಲೆಂಡಿಗೆ ಹೋಗುವುದು ಮತಸಂಪ್ರದಾಯಕ್ಕೆ ವಿರುದ್ಧವೆಂದು ನಮ್ಮ ಚಿಕ್ಕಪ್ಪನ ಅಭಿಪ್ರಾಯವಾಗಿದ್ದರೂ, ನನ್ನ ಪ್ರಯತ್ನಕ್ಕೆ ಪ್ರತ್ಯಕ್ಷವಾಗಿ ಪ್ರತಿಬಂಧಕ ತೋರಿಸಲು ಅವರು ಸಂಕೋಚಪಟ್ಟರು.

ಲೇಲಿಯವರಿಗೆ ಮುಂದಾಗಿ ಒಂದು ಕಾಗದವನ್ನು ಬರೆದು ಅನಂತರ ಅವರ ದರ್ಶನಕ್ಕಾಗಿ ಹೊರಟೆನು. ಮಹಡಿಯ ಮೆಟ್ಲನ್ನು ಹತ್ತುತ್ತ ಅವರು ನನ್ನನ್ನು ನೋಡಿ "ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದಮೇಲೆ ಬಂದು ನನ್ನನ್ನು ನೋಡು. ಈಗ ಯಾವ ಸಹಾಯಮಾಡಲೂ ಮಾರ್ಗವಿಲ್ಲ" ಎಂದರು. ಈ ಎರಡುಮಾತುಗಳನ್ನು ಆಡಿ ಅವರು ಮಹಡಿಯ ಮೇಲಕ್ಕೆ ಹತ್ತಿ ಹೊರಟುಹೋದರು. ಸಾಹೇಬರನ್ನು ನೋಡಲು ನಾನು ಎಷ್ಟೋ ಪ್ರಯಾಸಪಟ್ಟೆನು. ಅವರಿಗೆ ಸಲಾಮು ಮಾಡುವ ಕ್ರಮವನ್ನೂ ಅವರಿದಿರಿಗೆ ಹೇಳಬೇಕಾದ ಮಾತುಗಳನ್ನೂ, ತೋರಿಸಬೇಕಾದ ವಿಧೇಯತೆಯ ಕ್ರಮವನ್ನೂ ತಿಳಿದುಕೊಂಡಿದ್ದೆನು. ಬಗ್ಗಿ ಸಲಾಮು ಮಾಡಿದೆನು. ಆದರೂ ಪ್ರಯೋಜನವೇನೂ ಆಗಲಿಲ್ಲವು.

ನನ್ನ ಹೆಂಡತಿಯ ಮೇಲೆ ಆಲೋಚನೆ ಹೋಯಿತು. ನನ್ನ ಅಣ್ಣನು ಯಾವುದೋ ಒಂದು ವಿಧವನ್ನು ತೋರಿಸಿಕೊಡುವರೆಂದು ನನಗೆ ನಂಬುಗೆಯಿದ್ದಿತು. ಪೋರಬಂದರಿನಿಂದ ರಾಜಕೋಟೆಗೆ ಹಿಂದಿರುಗಿಬಂದು ನನ್ನ ಅಣ್ಣನಿಗೂ ತಾಯಿಗೂ ಎಲ್ಲ ಸಂಗತಿಯನ್ನೂ ತಿಳಿಸಿದೆನು. ಮಾವುಜಯವರೊಡನೆ ಆಲೋಚಿಸಿದೆನು. ಸಾಲವನ್ನಾದರೂ ಮಾಡಿ ನನ್ನನ್ನು ಇಂಗ್ಲೆಂಡಿಗೆ ಕಳುಹಿಸುವುದು ಉಚಿತವೆಂದು ಅವರು ಹೇಳಿದರು. ನನ್ನ ಹೆಂಡತಿಯ ಆಭರಣದ ವಿಚಾರವಾಗಿ ಹೇಳಿದೆನು. ಕಡೆಗೆ ಯಾವುದೋ ಒಂದು ವಿಧದಲ್ಲಿ ಹಣವನ್ನು ಜತೆಗೂಡಿಸುತ್ತೇನೆಂದು ನನ್ನ ಅಣ್ಣನು ಹೇಳಿದನು. ಆದರೆ ನಮ್ಮ ತಾಯಿಯು ಇನ್ನೂ ಸಮ್ಮತಿಸಿರಲಿಲ್ಲವು. ಇಂಗ್ಲೆಂಡಿನಲ್ಲಿ ಯುವಕರು ಕೆಟ್ಟುಹೋಗುವ ಮಾರ್ಗದಲ್ಲಿ ಸಂಚರಿಸುವರೆಂದು ಆಕೆಗೆ ಯಾರೋ ಹೇಳಿದ್ದರು. ಮಾಂಸ ತಿನ್ನುವುದು ಸಾರಾಯಿ ಕುಡಿಯುವುದು ಬಹಳ ಸುಲಭವೆಂದು ಸಹ ಹೇಳಿದ್ದರು. ಈ ವಿಚಾರವಾಗಿ ಆಕೆಯು ನನ್ನನ್ನು ಕೇಳಿದರು. ಅದಕ್ಕೆ ನಾನು "ನನ್ನಮೇಲೆ ನಿನಗೆ ವಿಶ್ವಾಸವಿಲ್ಲವೆ? ನಾನು ನಿನಗೆ ಸುಳ್ಳುಹೇಳುವುದಿಲ್ಲ. ಈ ದುರ್ವ್ಯಸನಕ್ಕೆ ನಾನು ಗುರಿಯಾಗುವುದಿಲ್ಲವೆಂದು ಪ್ರಮಾಣವಾಗಿ ಹೇಳುತ್ತೇನೆ. [illegible] ಮಾವುಜಯವರು ಅಂಗೀಕರಿಸುತ್ತಿದ್ದರೆ?" ಎಂದು ಹೇಳಿದೆನು. "ದೂರದೇಶದಲ್ಲಿ ನೀನಿದ್ದರೆ ಕೊಂಚ ಸಂಕೋಚಹುಟ್ಟುತ್ತದೆ. ನನಗೇನೂ ತೋರುವುದಿಲ್ಲ. ಬೇಚರ್ಜಿಸ್ವಾಮಿಯವರನ್ನು ಕೇಳುತ್ತೇನೆ." ಎಂದು ನನ್ನ ತಾಯಿ ಹೇಳಿದಳು. ಬೇಚರ್ಜಿಸ್ವಾಮಿಯವರು ಜೈನಸನ್ಯಾಸಿಗಳು; ನಮ್ಮ ಕುಟುಂಬಕ್ಕೆ ಆಪ್ತರು. ನನ್ನಿಂದ ಮೂರು ವಾಗ್ದಾನಗಳನ್ನು ಮಾಡಿಸಿಕೊಂಡು ನನ್ನನ್ನು ಇಂಗ್ಲೆಂಡಿಗೆ ಕಳುಹಿಸಬಹುದೆಂದು ಹೇಳಿದರು. ಸಾರಾಯಿ, ಮಾಂಸ, ಪರಸ್ತ್ರೀ ಇವುಗಳನ್ನು ಮುಟ್ಟುವುದಿಲ್ಲವೆಂದು ನಾನು ಅವರಿದಿರಿಗೆ ಪ್ರಮಾಣಮಾಡಿದೆನು. ಅನಂತರ ನಮ್ಮ ತಾಯಿಯು ನನ್ನ ಪ್ರಮಾಣವನ್ನು ಅಂಗೀಕರಿಸಿದರು. ಪಾಠಶಾಲೆಯಲ್ಲಿ ವಿದ್ಯಾರ್ಥಿಗಳು ನನಗೊಂದು ವಿನೋದೋತ್ಸವವನ್ನು ಮಾಡಿದರು. ರಾಜಕೋಟೆಯಿಂದ ಅದುವರೆಗೆ ಯಾರೂ ಸೀಮೆಗೆ ಹೋಗಿರಲಿಲ್ಲ. ನನ್ನನ್ನು ಗೌರವಿಸಿದುದಕ್ಕಾಗಿ ವಂದನೆಯನ್ನು ತಿಳಿಸಲು ಒಂದು ಉಪನ್ಯಾಸವನ್ನು ಬರೆದಿದ್ದೆನು. ನಾನು ಒಂದು ಮಾತನ್ನೂ ಆಡಲಾರದೆ ಹೋದೆನು. ದೊಡ್ಡವರ ಆಶೀರ್ವಾದವನ್ನು ಹೊಂದಿ ರಾಜಕೋಟೆಯಿಂದ ಬೊಂಬಾಯಿಗೆ ಪ್ರಯಾಣಮಾಡಿದೆನು.

12 ನೆಯ ಪ್ರಕರಣ.
ನನ್ನ ಇಂಗ್ಲೆಂಡು ಪ್ರಯಾಣವು.

ನಾನು ಇಂಗ್ಲೆಂಡಿಗೆ ಪ್ರಯಾಣಮಾಡಲು ನನ್ನ ತಾಯಿಯು ಆಶೀರ್ವಾದಪೂರ್ವಕವಾಗಿ ಅನುಜ್ಞೆಯನ್ನಿತ್ತಳು. ಅದರಿಂದ ನಾನು ಅಧಿಕೋತ್ಸಾಹದಿಂದ ಬೊಂಬಾಯಿಗೆ ಹೊರಟುಬಂದೆನು. ಆಗ್ಗೆ ನನ್ನ ಪತ್ನಿಯು ಹೆತ್ತು ಕೆಲತಿಂಗಳುಮಾತ್ರವಾಗಿದ್ದಿತು. ಆ ಎಳೇ ಮಗುವನ್ನೂ ಪತ್ನಿಯನ್ನೂ ಬಿಟ್ಟು ಸೀಮೆಗೆ ಪ್ರಯಾಣಮಾಡಿದೆನು. "ಜೂನ್ ಜುಲೈ ತಿಂಗಳುಗಳಲ್ಲಿ ಹಿಂದೂಸಾಗರವು ಬಹಳ ಉಗ್ರವಾಗಿದ್ದಿತು. "ನಿಮ್ಮ ತಮ್ಮನು (ಮಹಾತ್ಮರು) ಇದುವರೆಗೆಂದೂ ಸ್ಟೀಮರಿನಲ್ಲಿ ಪ್ರಯಾಣಮಾಡಿರಲಿಲ್ಲವು. ಅಲ್ಲದೆ ನವಂಬರ್ ತಿಂಗಳವರೆಗೆ ಹೊರಡಕೂಡದು. 2-3 ದಿನಗಳಹಿಂದೆ ಒಂದು ಸ್ಟೀಮರು ಗಾಳಿಯಾಧಿಕ್ಯದಿಂದ ಮುಳುಗಿಹೋಯಿತು" ಎಂದು ಬೊಂಬಾಯಿನಲ್ಲಿ ಕೆಲ ಸ್ನೇಹಿತರು ನಮ್ಮಣ್ಣನಿಗೆ ಹೇಳಿದರು. ಆದರಿಂದ ಆಗ ನಾನು ಹೊರಡಲು ನಮ್ಮಣ್ಣನು ಸಮ್ಮತಿಸಲಿಲ್ಲವು. ಬೊಂಬಾಯಿನಲ್ಲಿ ಒಬ್ಬ ಸ್ನೇಹಿತನ ಮನೆಯಲ್ಲಿ ನನ್ನ ವಾಸಕ್ಕೇರ್ಪಡಿಸಿ ನಮ್ಮ ಅಣ್ಣನು ರಾಜಕೋಟೆಗೆ ಹೋಗಿ ತನ್ನ ಕೆಲಸಕ್ಕೆ ಸೇರಿದನು. ನನ್ನ ಪ್ರಯಾಣದ ವೆಚ್ಚಕ್ಕೆ ಬೇಕಾದಷ್ಟು ಹಣವನ್ನು ಕಳುಹುತ್ತೇನೆಂದು ನಮ್ಮ ಭಾವನಕೂಡ ಹೇಳಿದನಲ್ಲದೆ ನನಗೆ ಬೇಕಾದ ಸಹಾಯವನ್ನು ಮಾಡಬೇಕೆಂದು ಸ್ನೇಹಿತರಿಗೆ ಹೇಳಿ ಹೊರಟನು. ಬೊಂಬಾಯಿನಲ್ಲಿ ನನಗೇನೋ ಹೊತ್ತು ಹೋಗುತ್ತಿರಲಿಲ್ಲ. ಸ್ಟೀಮರಿನಲ್ಲಿ ಹೋಗುತ್ತಿದ್ದಂತೆಯೇ ಕನಸು ಬೀಳುತ್ತಿದ್ದಿತು.

ಬಹಿಷ್ಕಾರ.

ಇಷ್ಟರೊಳಗೆ ನಮ್ಮ ಜಾತಿಯವರಲ್ಲಿ ನನ್ನ ಪ್ರಯಾಣದ ವಿಚಾರವಾಗಿ ಚರ್ಚೆಯು ಹುಟ್ಟಿತು. ಅವರೆಗೆ ನಮ್ಮ ಜಾತಿಯವ (ಬನಿಯಾಜನ) ರಲ್ಲಿ ಯಾರೂ ಇಂಗ್ಲೆಂಡಿಗೆ ಹೋಗಿರಲಿಲ್ಲವು. ನಾನು ಸೀಮೆಗೆ ಹೊರಡಲೆತ್ನಿಸಿದುದರಿಂದ ನನ್ನನ್ನು ಬಹಿಷ್ಕರಿಸಬೇಕೆಂದು ಕುಲದಲ್ಲಿ ಕೆಲರಿಗೆ ಆವೇಶವುಂಟಾಯಿತು. ಒಂದು ಸಭೆಸೇರಿತು. ಕುಲಸ್ಥರು ಬಹಳಜನ ಬಂದಿದ್ದರು ನನ್ನನು ಕರೆಸಿದರು. ನನಗೆ ಅಷ್ಟು ಧೈರ್ಯವು ಹೇಗೆ ಬಂದಿತೊ ನನಗೆ ತಿಳಿಯಲಿಲ್ಲವಾದರೂ ನಾನು ನಿರ್ಭಯವಾಗಿ ಸಭೆಗೆ ಹೋದೆನು. ಕುಲದ ಯಜಮಾನನಿಗೂ ನನ್ನ ತಂದೆಗೂ ಬಹಳ ವಿಶ್ವಾಸವಿದ್ದಿತು. ಆತನಿಗೂ ನಮಗೂ ಕೊಂಚದೂರ ಬಾಂಧವ್ಯಸಹವುಂಟು. ಆತನನ್ನು ಸೇಟೆಂದು ಕರೆಯುವರು. "ನೀನು ಸೀಮೆಗೆ ಹೋಗಕೂಡದೆಂದು ಕುಲದವರೆಲ್ಲರ ಅಭಿಪ್ರಾಯವಾಗಿದೆ. ಪರದೇಶಕ್ಕೆ ಹೋಗುವುದು ವರ್ಣಾಚಾರಕ್ಕೆ ವಿರುದ್ಧವು. ಅಲ್ಲಿಗೆ ಹೋದಮೇಲೆ ಸದಾಚಾರಕ್ಕೆ ಭಂಗವುಂಟಾಗದಂತಿರಲು ಅವಕಾಶವಿಲ್ಲವೆಂದು ಕೇಳಿರುತ್ತೇವೆ. ಅಲ್ಲಿ ಪಾಶ್ಚಾತ್ಯರೊಡನೆ ಕಲತು ತಿನ್ನುವುದೂ ಕುಡಿಯುವುದೂ ಮೊದಲಾದುದನ್ನು ಮಾಡದೆ ಇರಲಾಗದು." ಎಂದು ಸೇಟರು ಹೇಳಿದರು. "ಆಂಗ್ಲದೇಶಕ್ಕೆ ಹೋಗುವುದು ವರ್ಣಾಚಾರಕ್ಕೆಷ್ಟು ಮಾತ್ರವೂ ವಿರುದ್ಧವಲ್ಲವು. ನಾನು ಓದಲಿಕ್ಕಾಗಿಯೇ ಅಲ್ಲಿಗೆ ಹೋಗುವುದು. ನೀವು ಯಾವುದನ್ನು ಕುರಿತು ಬಹಳ ಭಯಪಡುತ್ತೀರೊ ಅವು ಮೂರನ್ನು ನಾನು ಮಾಡುವುದಿಲ್ಲವೆಂದು ಇದಕ್ಕೆ ಮೊದಲೇ ದೇವರಸಾಕ್ಷಿಯಾಗಿ ನಮ್ಮ ತಾಯಿಯಿದಿರಿಗೆ ಪ್ರಮಾಣಮಾಡಿರುತ್ತೇನೆ. ಅಲ್ಲದೆ ನಿಯಮಭಂಗವುಂಟಾಗದಂತೆ ಭಗವಂತನು ಕಾಪಾಡುತ್ತಾನೆಂದು ನಾನು ನಂಬಿರುತ್ತೇನೆ" ಎಂದು ನಾನು ಉತ್ತರಕೊಟ್ಟೆನು. "ಅಲ್ಲಿಗೆ ಹೋದಮೇಲೆ ಸದಾಚಾರವು ಎಷ್ಟು ಮಾತ್ರಕ್ಕೂ ನಡೆಯುವುದಿಲ್ಲವೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ನಿನ್ನ ತಂದೆಗೂ ನನಗೂ ಇದ್ದ ಸ್ನೇಹವನ್ನು ನೀನು ಬಲ್ಲೆಯಾದುದರಿಂದ ನನ್ನ ಮಾತನ್ನು ನೀನು ಲಾಲಿಸಬೇಕು" ಎಂದು ಸೇಟರು ಹೇಳಿದರು. "ಆ ಸ್ನೇಹವು ನನಗೆ ತಿಳಿದಿರುವುದು. ನೀವು ನನಗೆ ಪೂಜ್ಯರಾದರೂ ಈ ವಿಷಯದಲ್ಲಿ ಮಾತ್ರ ನಾನೇನೂ ಮಾಡಲಾಗುವುದಿಲ್ಲ. ನಾನು ಸೀಮೆಗೆ ಹೋಗದೆ ತಪ್ಪುವುದಿಲ್ಲ. ನನ್ನ ತಂದೆಗೆ ಪ್ರಿಯಸ್ನೇಹಿತರಾಗಿದ್ದ ಒಬ್ಬ ಬ್ರಾಹ್ಮಣ ವಿದ್ವಾಂಸನೂ, ನನ್ನ ತಾಯಿಯೂ, ನನ್ನ ಅಣ್ಣನೂ ಸಮ್ಮತಿಸಿರುವರು." ಎಂದು ನಾನು ಹೇಳಿದೆನು. "ಕುಲಸ್ಥರಮಾತನ್ನು ನೀನು ಲಕ್ಷಿಸುವುದಿಲ್ಲವೇ?" ಎಂದು ಸೇಟರು ಕೇಳಲು "ನಾನೇನು ಮಾಡಲಿ? ಕುಲಸ್ಥರು ಈ ವಿಷಯದಲ್ಲಿ ಪ್ರವೇಶಿಸಕೂಡದೆಂಬುದೇ ನನ್ನ ಅಭಿಪ್ರಾಯವು" ಎಂದು ನಾನು ಅಂದೆನು. ಆ ಮಾತನ್ನುಕೇಳಿ ಸೇಟರಿಗೆ ಬಹಳ ಕೋಪಬಂದಿತು. ಅವರು ಗಟ್ಟಿಯಾಗಿಕೂಗಿ ಬಯ್ಯಲುಪಕ್ರಮಿಸಿದರು. ನಾನು ಮರುಮಾತನ್ನಾಡದೆ ಕುಳಿತಿದ್ದೆನು. "ಈ ದಿವಸದಿಂದ ಈ ಹುಡುಗನನ್ನು ಬಹಿಷ್ಕರಿಸಿರುತ್ತೇನೆ. ಇವನಿಗೆ ಸಹಾಯಮಾಡುವವರೂ, ಇವನನ್ನು ಸಾಗಕಳುಹಲು ಸ್ಟೀಮರಿರುವ ರೇವಿಗೆ ಹೋಗುವವರೂ ತಲೆಯೊಂದಕ್ಕೆ 1-4-0 ರೂ. ನಂತೆ ಅಪರಾಧವನ್ನು ಕೊಡಬೇಕು." ಎಂದು ಸೇಟರು ಆಜ್ಞಾಪಿಸಿದರು. ನಾನು ಕೊಂಚವೂ ಹೆದರಲಿಲ್ಲ. ಸೇಟರ ಅಪ್ಪಣೆಯನ್ನುಪಡೆದು ನಾನೆದ್ದು ಬಂದುಬಿಟ್ಟೆನು. ನನ್ನ ಅಣ್ಣನಿಗೆ ಈ ಸಂಗತಿಯು ತಿಳಿದು ಅವನೇನಾದರೂ ಹೆದರಿಕೊಳ್ಳುವನೇನೊ ಎಂದೆಂದುಕೊಂಡೆನು. ಆದರೆ ಅವನು ಕೂಡ ಹೆದರಲಿಲ್ಲ. "ಕುಲದವರು ಬಹಿಷ್ಕಾರಹಾಕಿದರೂ ಭಯವಿಲ್ಲ. ನೀನು ಮುಖ್ಯವಾಗಿ ಸೀಮೆಗೆ ಪ್ರಯಾಣಮಾಡಬೇಕಲ್ಲದೆ ಬಿಡಕೂಡದು." ಎಂದು ನನ್ನ ಅಣ್ಣನು ನನಗೆ ಕಾಗದವನ್ನು ಬರೆದನು.

ಪ್ರಯಾಣವು.

"ಇನ್ನು ವಿಧಾನಮಾಡಲಾಗದು. ಇವರೆಲ್ಲರೂಸೇರಿ ನನ್ನ ಅಣ್ಣನಿಗೆ ಬಲವಂತಪಡಿಸಿದರೆ, ಆತನ ಮನಸ್ಸು ಬದಲಾಯಿಸುವುದೊ ಏನೊ!" ಎಂದು ನಾನು ಬಹಳವಾಗಿ ಪೇಚಾಡಿಕೊಂಡೆನು. ಸೆಪ್ಟಂಬರ್ ತಾ|| 4 ರಲ್ಲಿ ಒಂದು ಹಡಗು ಹೊರಡುವುದೆಂದೂ, ಸೀಮೆಯಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೋದುವ ಜುನಘಡದ ರಾಜಧಾನಿಯ ಒಬ್ಬ ಪ್ಲೀಡರು ಅದೇ ಹಡಗಿನಲ್ಲಿ ಹೊರಡುತ್ತಾನೆಂದೂ ನನಗೆ ತಿಳಿದುಬಂದಿತು. ಈ ಸಂಗತಿಯನ್ನು ನನ್ನನ್ನು ನೋಡಿಕೊಳ್ಳುವವನಾದ ಸ್ನೇಹಿತನಿಗೆ ತಿಳಿಸಿದೆನು. ಒಳ್ಳೇ ಜತೆದೊರಕಿರುವುದರಿಂದ ಜತೆಯಾಗಿ ಹೊರಡಬೇಕೆಂದು ಅವನಿಗೆ [illegible]. ನನ್ನ ಅಣ್ಣನಿಗೆ [illegible] ತಿಳಿಸಿದೆನು. [illegible] ಕಳುಹಬೇಕೆಂದು [illegible] ಕೇಳಿದೆನು.

ನನ್ನನ್ನು ಕುಲದವರು ಬಹಿಷ್ಕರಿಸುತ್ತಾರಾದುದರಿಂದ ನಾನು ಕೊಡುವುದಿಲ್ಲವೆಂದನು. ನಮ್ಮ ಕುಟುಂಬದವರಮೇಲೆ ಬಹಳ ಅಭಿಮಾನಶಾಲಿಯಾದ ಒಬ್ಬ ಸ್ನೇಹಿತನಲ್ಲಿಗೆಹೋಗಿ - ಸೀಮೆಗೆ ಹೊರಡಲು ಬೇಕಾಗುವಷ್ಟು ಹಣವನ್ನು ನೀವು ಕೊಟ್ಟಿದ್ದು ನನ್ನ ಅಣ್ಣನಿಂದ ನೀವು ಹಿಂದಿರಿಗಿ ಬರಮಾಡಿಕೊಳ್ಳುವುದು." ಎಂದು ಕೇಳಿದೆನು. ಆತನು ಬಹಳ ಸಂತೋಷದಿಂದೊಪ್ಪಿಕೊಂಡುದಲ್ಲದೆ ನನಗೆ ಬಹಳ ಪ್ರೋತ್ಸಾಹಪಡಿಸಿದನು. ಆ ಹಣವನ್ನು ಈಸಿಕೊಂಡಕೂಡಲೆ ಸ್ಟೀಮರ್ ಟಿಕಿಟ್ಟನ್ನು ಕೊಂಡುಕೊಂಡೆನು. ಇನ್ನು ಉಲ್ಲನ್‌ಬಟ್ಟೆಗಳು ಮೊದಲಾದ ಪದಾರ್ಥಗಳು ಬೇಕಾಗಿದ್ದವು. ಒಬ್ಬ ಸ್ನೇಹಿತನಿಗೆ ಆ ವಿಚಾರದಲ್ಲಿ ಒಳ್ಳೇ ಅನುಭವವಿದ್ದುದರಿಂದ ಅವನು ಬಟ್ಟೆ ಮೊದಲಾದುವನ್ನು ಸಿದ್ಧಪಡಿಸಿದನು. ಅವುಗಳಲ್ಲಿ ನನ್ನ ಮನಸ್ಸಿಗೆ ಕೆಲವು ಒಪ್ಪಿದುವು ಮತ್ತೆ ಕೆಲವೊಪ್ಪಲಿಲ್ಲ. ಆಗ ನೆಕ್‌ಟೈ ಎಂಬ ಕತ್ತಿನಪಟ್ಟಿಯು ಬಹಳ ಅಸಹ್ಯವಾಗಿತೋರಿತು. ತರುವಾಯ ನೆಕ್‌ಟೈಯನ್ನು ಬಿಡದೆ ಕಟ್ಟಿಕೊಂಡೇ ಇದ್ದೆನು. ಜಾಕೆಟ್ಟನ್ನು ತೊಟ್ಟುಕೊಳ್ಳಲು ನನಗೆ ಬಹಳ ನಾಚುಗೆಯಾಗಿದ್ದಿತು. ಹೇಗಾದರೇನು ನಾನು ಸೀಮೆಗೆ ಹೊರಡಬೇಕೆಂಬ ಕುತೂಹಲವು ಬಹಳವಾಗಿದ್ದುದರಿಂದ ಈ ಸಣ್ಣ ವಿಷಯಗಳನ್ನು ನಾನು ಅಷ್ಟು ದೊಡ್ಡದಾಗಿ ಎಣಿಸಲಿಲ್ಲವು. ತಿಂಡಿಯಪದಾರ್ಥವು ಎಥೇಚ್ಛವಾಗಿದ್ದಿತು. ಜುನಗಡದ ವಕೀಲನ ಹೆಸರು ತ್ರಿಯಂಬಕರಾಯ ಮುಜುಂದಾರ್ ಎಂದು. ಸ್ಟೀಮರಿನಲ್ಲಿ ಒಂದೇಕಡೆ ನನಗೂ ಆ ವಕೀಲರಿಗೂ ನನ್ನ ಸ್ನೇಹಿತರು ಸ್ಥಳಗಳನ್ನೇರ್ಪಡಿಸಿದರು. ಅವರಿಗೆ ಲೋಕಜ್ಞಾನವೂ, ಅನುಭವವೂ ಚೆನ್ನಾಗಿದ್ದಿತು. ನನಗಿಂತಲೂ ವಯಸ್ಸಿನಲ್ಲಿ ಕೊಂಚ ದೊಡ್ಡವರಾಗಿದ್ದರು. ನನಗೆ 18 ವರ್ಷ ವಯಸ್ಸಾಗಿದ್ದರೂ ಅನುಭವವೇನೂ ಇರಲಿಲ್ಲವು. - ಈ ಹುಡುಗನಿಗೆ ಯಾವ ತೊಂದರೆಯೂ ಆಗದಂತೆ ನಾನು ನೋಡಿಕೊಳ್ಳುವೆನು. ನೀವು ಭಯಪಡಬೇಡಿ." ಎಂದು ಮುಜುಂದಾರರವರು ನನ್ನ ಸ್ನೇಹಿತರಿಗೆ ಧೈರ್ಯಹೇಳಿದರು. ಸೆಪ್ಟಂಬರ್ ತಾ|| 4 ರಲ್ಲಿ ಬೊಂಬಾಯಿನಿಂದ ಸೀಮೆಗೆ ಹೊರಟೆನು.

13 ನೆಯ ಪ್ರಕರಣ.

ಲಂಡನ್‌ಪಟ್ಟಣವನ್ನು ತಲುಪಿದುದು.

ಸ್ಟೀಮರಿನಲ್ಲಿ ನನಗೆ ಸಮುದ್ರಯಾನ ಸಂಬಂಧವಾದ ಅಸ್ವಸ್ಥತೆಯೇನೂ ಉಂಟಾಗದಿದ್ದರೂ ಪ್ರಯಾಣವು ಬೇಗ ಸಾಗದಿದ್ದುದರಿಂದ ಮನಸ್ಸಿಗೆ ಬಹಳ ಬೇಗುದಿಯುಂಟಾಯಿತು. ಸ್ಟೀಮರಿನ ಸ್ಟುವಾರ್ಡನೊಡನೆ ಮಾತನಾಡಲು ಕೂಡ ನನಗೆ ಧೈರ್ಯವಿರಲಿಲ್ಲವು. ಆಂಗ್ಲಭಾಷೆಯಲ್ಲಿ ಮಾತಾಡಲು ನನಗೆ ಅಭ್ಯಾಸವಿರಲಿಲ್ಲ. ನನ್ನ ಬಂಡಿಯಲ್ಲಿದ್ದ ಪ್ರಯಾಣಿಕರಲ್ಲಿ ಮುಜುಂದಾರರ ವಿನಾ ಮಿಕ್ಕವರೆಲ್ಲ ಆಂಗ್ಲೇಯರೇ. ಅವರು ನನ್ನ ಬಳಿ ಬಂದು ಮಾತನಾಡಿದಾಗ ಅವರಭಿಪ್ರಾಯವೇನೆಂಬುದು ನನಗೆ ಗೊತ್ತಾಗುತ್ತಿರಲಿಲ್ಲ. ಒಂದೊಂದುವೇಳೆ ತಿಳಿದರೂ ಉತ್ತರವನ್ನು ಕೊಡಲಾರದವನಾಗಿದ್ದೆನು. ಮೊದಲು ಮನಸ್ಸಿನಲ್ಲಿ ಗುಣಿಸಿಕೊಂಡು ಅನಂತರ ಬಾಯಲ್ಲಿ ಹೇಳುವ ಸ್ಥಿತಿಯಲ್ಲಿದ್ದೆನು. ಊಟದವೇಳೆಯಲ್ಲಿ ಚೂರಿ ಚಂಚಗಳನ್ನು ನಾನುಪಯೋಗಿಸುವ ವಾಡಿಕೆಯಿರಲಿಲ್ಲವು. ಅವರು ಮಾಡಿದ ಪದಾರ್ಥಗಳಲ್ಲಿ ಯಾವುದು ಮಾಂಸಮಿಶ್ರವಾಗಿರುವುದು, ಯಾವುದು ಇಲ್ಲವೆಂದು ಕೇಳಲು ಧೈರ್ಯವಿಲ್ಲ. ಆದುದರಿಂದ ನಾನು ಯಾವಾಗಲೂ ಭೋಜನಶಾಲೆಯಲ್ಲಿ 10 ಜನರೊಡನೆಸೇರಿ ಭೋಜನಮಾಡಲಿಲ್ಲ. ನನ್ನ ಸ್ಥಳದಲ್ಲಿ ನಾನೊಬ್ಬನೇ ತಿನ್ನುತ್ತಿದ್ದೆನು. ಮುಖ್ಯವಾಗಿ ನಾನು ತಂದಿದ್ದ ತಿಂಡಿಪದಾರ್ಥವನ್ನೂ ಹಣ್ಣನ್ನೂ ಮಾತ್ರ ತಿನ್ನುತ್ತಿದ್ದೆನು. ಮುಜುಂದಾರರಿಗೆ ಈ ತೊಂದರೆಯೇ ಇರಲಿಲ್ಲವು. ಅವರು ಎಲ್ಲರೊಡನೆಯು ಕೂಡಿ ಊಟಮಾಡುತ್ತಿದ್ದರು. ಸ್ಟೀಮರಿನ ಪಡಸಾಲೆಯಲ್ಲಿ ಎಲ್ಲರೊಡನೆ ಮಿಶ್ರವಾಗಿ ತಿರುಗುತ್ತಿದ್ದರು. ನಾನು ಹಗಲಿನಲ್ಲಿ, ಕುಳಿತಿದ್ದ ಸ್ಥಳವನ್ನುಬಿಟ್ಟು ಕದಲುತ್ತಿರಲಿಲ್ಲ; ಸಾಯಂಕಾಲದಲ್ಲಿ ಜನಸಂದಣಿಯು ಕಡಿಮೆಯಾದಾಗಮಾತ್ರ ನಾನು ಪಡಸಾಲೆಯಲ್ಲಿ ತಿರುಗಾಡುತ್ತಿದ್ದೆನು. - ನೀನುಕೂಡ ಎಲ್ಲರೊಡನೆ ಸೇರಿಕೊಂಡಿರಬೇಕಲ್ಲದೆ ಒಂಟಿಯಾಗಿರಬಾರದು. ಅವರಕೂಡ ಮಾತಾಡಿಕೊಂಡಿರಬೇಕು. ನ್ಯಾಯವಾದಿ (ವಕೀಲಿ) ವೃತ್ತಿಯನ್ನು ಅವಲಂಬಿಸಲಿಚ್ಛಿಸಿರುವೆ ; ಮುಂದೆಹೇಗೆ? ನ್ಯಾಯವಾದಿಗಳು ಯಾವಾಗಲೂ ಹತ್ತುಜನರೊಡನೆ ಮಾತನಾಡುತ್ತಲೇ ಇರಬೇಕು. ತಪ್ಪಾದರೆ ಬಾಧಕವೇನು? ಆಂಗ್ಲಭಾಷೆಯು ನಮ್ಮ ಮಾತೃಭಾಷೆಯಲ್ಲವಾದುದರಿಂದ ತಪ್ಪು ಎಲ್ಲರಿಗೂ ಬರುವುದು. ಧೈರ್ಯದಿಂದ ಮಾತನಾಡುತ್ತಿರಬೇಕು." ಎಂದು ಮುಜುಂದಾರರು ನನಗೆ ಬಹಳವಾಗಿ ಬೋಧಿಸುತ್ತಿದ್ದರು. ಆದರೂ ನನ್ನ ಶಂಕೆಯುಮಾತ್ರ ಹೋಗಲಿಲ್ಲವು.

ಒಬ್ಬ ಆಂಗ್ಲೇಯನು ದಯವಿಟ್ಟು ನನ್ನಕೂಡ ಮಾತನಾಡಲಾರಂಭಿಸಿದನು. ಆತನು ನನಗಿಂತ ದೊಡ್ಡವನು. - ನೀನು ಸ್ಟೀಮರಿನಲ್ಲಿ ಏನನ್ನು ತಿನ್ನುತ್ತೀಯೇ, ನಿನ್ನ ಉದ್ಯೋಗವೇನು, ಎಲ್ಲಿಗೆ ಹೋಗುತ್ತೀಯೆ, ನಿನಗ್ಯಾಕಿಷ್ಟು ನಾಚುಗೆ, ಹತ್ತುಜನರೊಡನೆ ಸೇರಿ ಏತಕ್ಕಾಗಿ ಊಟಮಾಡುವುದಿಲ್ಲ?" ಎಂದು ಆತನು ಕೇಳಿದನು. ನಾನು ಮಾಂಸವನ್ನು ತಿನ್ನುವುದಿಲ್ಲವೆಂದು ಹೇಳಲು ಆತನು ನಕ್ಕು - ಬಿಸ್ಕೆ ಸಮುದ್ರವನ್ನು ಸೇರಿದಮೇಲೆ ಈ ನಿಯಮವು ಸಾಗದು. ಆಂಗ್ಲದೇಶದಲ್ಲಿ ಚಳಿಯು ವಿಪರೀತವಾಗಿರುವುದು." ಎಂದು ಆತನು ಅಂದನು. ಪೋರ್ಟ್ ಸೇಡನ್ನು ತಲುಪುವುದಕ್ಕೆ ಮೊದಲೇ ಈ ಸಂಭಾಷಣೆಯು ನಡೆದುದು. - ಆಂಗ್ಲದೇಶದಲ್ಲು ಕೂಡ ಮಾಂಸವನ್ನು ತಿನ್ನದೇ ಇರಬಹುದೆಂದು ನಾನು ಕೇಳಿದ್ದೇನೆ." ಎಂದು ನಾನು ಹೇಳಿದೆನು. - ಅದು ಬರೀ ಸುಳ್ಳು. ನಾನು ತಿಳಿದಮಟ್ಟಿಗೂ ಆ ದೇಶದಲ್ಲಿ ಅಂತಹವರಾರೂ ಇಲ್ಲವು. ನೀನು ಸಾರಾಯನ್ನು ಕುಡಿಯದಿದ್ದರೂ ಪರವಾ ಇಲ್ಲವು. ನಾನು ಆಂಗ್ಲೇಯನಾಗಿದ್ದರೂ, ನನಗದು ಸೇರದು. ಆದರೆ ಮಾಂಸವನ್ನು ತಿನ್ನದೆ ಹೋದರೆ ನೀನು ಆಂಗ್ಲದೇಶದಲ್ಲಿ ಬದುಕಿರಲಾರೆ." ಎಂದು ಆತನು ಹೇಳಿದನು. - ನಿಮ್ಮ ಬೋಧೆಗಾಗಿ ವಂದಿಸುತ್ತೇನೆ. ಆದರೆ ನಾನು ಮಾಂಸವನ್ನು ತಿನ್ನುವುದಿಲ್ಲವೆಂದು ನಮ್ಮ ತಾಯಿಗೆ ಪ್ರಮಾಣಮಾಡಿ ಹೇಳಿರುತ್ತೇನೆ. ಆ ಮಾತನ್ನುಳಿಸಿಕೊಳ್ಳುವುದಕ್ಕಾಗಿ ನನ್ನ ಸ್ವದೇಶಕ್ಕಾದರೂ ಹಿಂದಿರುಗಿಹೋಗುವೆನೇ ಹೊರತು ಮಾಂಸವನ್ನು ಎಷ್ಟುಮಾತ್ರಕ್ಕೂ ತಿನ್ನಲಾರೆನು." ಎಂದು ನಾನು ಹೇಳಿದೆನು.

ಇನ್ನು ಕೆಲದಿವಸಗಳಲ್ಲಿ ನಮ್ಮ ಹಡಗು ಬಿಸ್ಕೆ ಸಮುದ್ರವನ್ನು ಪ್ರವೇಶಿಸಿತು. ಆದರೆ ಮದ್ಯಮಾಂಸಗಳ ಆವಶ್ಯಕತೆಯು ನನಗೆಷ್ಟುಮಾತ್ರಕ್ಕೂ ಹುಟ್ಟಲಿಲ್ಲವು. ನಾನು ಮಾಂಸವನ್ನು ತಿನ್ನಲಿಲ್ಲವೆಂದು ಒಂದು ಸರ್ಟಿಫಿಕೇಟನ್ನು ತೆಗೆದುಕೊಂಡು ಬರಬೇಕೆಂದು ನಮ್ಮ ಜನರು ಹೇಳಿರುತ್ತಾರೆ. ಆದುದರಿಂದ ನನ್ನ ಆಂಗ್ಲೇಯಮಿತ್ರನನ್ನು ಕೇಳಿದೆನು. ಆತನು ಸಂತೋಷದಿಂದ ಬರೆದುಕೊಟ್ಟನು. ನಾನು ಅದನ್ನು ಕೆಲಕಾಲದವರೆಗೆ ಭದ್ರವಾಗಿ ಕಾಪಾಡಿದೆನು. ಮಾಂಸವನ್ನು ತಿನ್ನುತ್ತಿರುವವರು ಕೂಡ ತಿನ್ನಲಿಲ್ಲವೆಂದು ಸರ್ಟಿಫಿಕೇಟನ್ನು ಸಂಪಾದಿಸಿಕೊಳ್ಳುತ್ತಿದ್ದುದನ್ನು ನೋಡಿದನಂತರ ನನಗೆ ಅದರಮೇಲೆ ವಿಶ್ವಾಸ ಕಡಿಮೆಯಾಯಿತು. ನನ್ನ ಮಾತನ್ನು ನಂಬದಿರುವವರು ಸರ್ಟಿಫಿಕೇಟನ್ನು ಮಾತ್ರ ನಂಬುವರೆ ? ಎಂದು ನಾನು ಹೇಳಿದೆನು. ಒಂದು ಶನಿವಾರದಿವಸ (ಹಾಗೆ ನನಗೆ ಜ್ಞಾಪಕ) ಸೌತಾಂಪ್ಟನ್‌ರೇವನ್ನು ನಮ್ಮ ಹಡಗು ಸೇರಿತು. ನನ್ನ ಸ್ನೇಹಿತರಲ್ಲೊಬ್ಬನು ಬಿಳೀ ಫಲಾಟೀನು ಕರಾಯಿ ಕೋಟು ವೆಸ್ಟ್‌ಕೋಟುಗಳನ್ನು ನನಗೆ ಕೊಟ್ಟಿದ್ದನು. ಸ್ಟೀಮರಿನಿಂದಿಳಿಯುವಾಗ ಅವನ್ನು ಧರಿಸಿಕೊಂಡೆನು. ಆಗ ಬಿಳೀ ಉಡುಪೇ ಹೆಚ್ಚು ಚೆನ್ನಾಗಿರುತ್ತದೆಂದು ತಿಳಿದೆನಲ್ಲದೆ ಸ್ಟೀಮರಿನಲ್ಲಿ ಕಪ್ಪು ಉಡುಪನ್ನೇ [illegible] ಹಾಕಿಕೊಂಡೆನು. ಅದು ಸೆಪ್ಟಂಬರ್ ತಿಂಗಳ ಕಡೆಯವಾರವು. ಅಲ್ಲಿದ್ದವರಲ್ಲಿ ನಾನಲ್ಲದೆ ಬೇರೆ ಯಾರೂ ಅಂತಹ ಉಡುಪನ್ನು ಧರಿಸಿರಲಿಲ್ಲವು. ಬಹಳಜನರು ತಮ್ಮ ಸಾಮಾನನ್ನು ಗ್ರಿಂಡ್ಲೆ ಕಂಪನಿಯವರ ವಶಕ್ಕೆ ಕೊಟ್ಟುಹೋಗುತ್ತಿದ್ದುದರಿಂದ ನಾನೂ ಹಾಗೆಯೇ ಮಾಡಿದೆನು. ಬೀಗದ ಕೈಗಳ ಜೊಂಪಲನ್ನು ಸಹ ಆತನಿಗೆ ಕೊಟ್ಟೆನು. ಡಾಕ್ಟರ್ ಪಿ. ಜೆ. ಮೆಹತ, ದಲಪತರಾಂ ಶುಕ್ಲಾ, ರಣಜಿತಸಿಂಗು ಮಹಾರಾಜ, ದಾದಾಭಾಯಿ ನವರೋಜಿ ಇವರುಗಳ ಹೆಸರಿಗೆ ನನ್ನ ಸ್ನೇಹಿತರು ಬರೆದುಕೊಟ್ಟಿದ್ದ ಶಿಫಾರ್ಸು ಕಾಗದಗಳು ನನ್ನ ಬಳಿಯಲ್ಲೇ ಇದ್ದುವು. ಲಂಡನ್‌ನಗರದಲ್ಲಿ ವಿಕ್ಟೋರಿಯಾ ಹೋಟೆಲಿನೊಳಗೆ ಇಳಿಯಬೇಕೆಂದು ಹಡಗಿನಲ್ಲಿ ಒಬ್ಬನು ಹೇಳಿದ್ದನು. ಆದುದರಿಂದ ನಾನೂ, ಮುಜುಂದಾರರೂ ಆ ಹೋಟಲಿಗೆ ಹೋದೆವು. ನಾನೊಬ್ಬನೇ ಬಿಳೀ ಫಲಾಟೀನು ಉಡುಪನ್ನು ಧರಿಸಿದ್ದೆನು, ಮತ್ತಾರೂ ಧರಿಸಿರಲಿಲ್ಲವೆಂದು ನನ್ನ ಮನಸ್ಸಿಗೆ ಖಿನ್ನವಾಯಿತು. ನಾರನೆಯದಿನ ಭಾನುವಾರವಾದುದರಿಂದ ಗ್ರಿಂಡ್ಲೆ ಕಂಪೆನಿಯವರು ಆದಿವಸ ಕೊಡುವುದಿಲ್ಲವೆಂದು ಹೋಟಲಿನಲ್ಲಿ ತಿಳಿದುದರಿಂದ ನನಗೆ ಮತ್ತಷ್ಟು ಅಸಮಾಧಾನವಾಯಿತು.

ಸೌತಾಂಪ್ಟನಿಂದ ನಾನು ಡಾಕ್ಟರ್ ಮೆಹತಾಯವರಿಗೆ ತಂತಿವಾರ್ತೆಯನ್ನು ಕೊಡಲಾಗಿ ಭಾನುವಾರ ರಾತ್ರಿ 8 ಗಂಟೆಗೆ ಅವರು ನಮ್ಮ ಹೋಟಲಿಗೆ ಬಂದು ನನ್ನನ್ನು ಬಹಳವಾಗಿ ಆದರಿಸಿ ಫಲಾಟೀನು ಉಡುಪನ್ನು ನಾನು ಧರಿಸಿದ್ದುದನ್ನು ಅವರು ನೋಡಿ ನಕ್ಕರು. ನಾವು ಮಾತನಾಡುತ್ತಿರುವಾಗ, ಅವರ ಟೋಪಿಗೆಯನ್ನು ನಾನು ಕೈಗೆ ತೆಗೆದುಕೊಂಡು ಅದು ಎಷ್ಟು ಮೆತ್ತಗಿದೆಯೆಂದು ಸವರಿನೋಡುವ ಸಂಭ್ರಮದಲ್ಲಿ ಅದರ ರೇಶ್ಮೆಯು ಕೆದರಿಹೋಯಿತು. ಮೆಹತಾಯವರು ಕೊಂಚ ಕೋಪದೃಷ್ಟಿಯಿಂದ ನೋಡಿ ನನ್ನನ್ನು ಅಡ್ಡಿಪಡಿಸಿದರು. ಆದರೆ ನನ್ನ ದಶೆಯಿಂದ ಟೋಪಿಗೆ ಕೊಂಚ ನಷ್ಟವಾಯಿತು. ಇದು ಮೊದಲನೆಯ ಎಚ್ಚರಿಕೆ. ಪಾಶ್ಚಾತ್ಯದೇಶದ ನಡವಳಿಕೆಯನ್ನು ಕುರಿತು ಆಗಲೇ ಮೆಹತಾಯವರು ಚಮತ್ಕಾರವಾಗಿ ನನಗೆ ಮೊದಲನೆಯ ಪಾಠವನ್ನು ಬೋಧಿಸಿದರು. - ಇತರ ಪದಾರ್ಥಗಳನ್ನು ಮುಟ್ಟಬಾರದು. ಹೊಸದಾಗಿ ನೋಡಿದವರನ್ನು ಮೊದಲನೆಯಸಾರಿ ಯಾವ ಪ್ರಶ್ನೆಯನ್ನೂ ಕೇಳಕೂಡದು. ನಮ್ಮ ಭಾರತದೇಶದಲ್ಲಿ ಅಪರಿಚಿತಸ್ಥರಾದವರನ್ನು ಕೂಡ ಪ್ರಶ್ನೆ ಕೇಳುವಂತೆ ಇಲ್ಲಿ ಪ್ರಶ್ನಿಸುವುದು ಮರ್ಯಾದೆ ಅಲ್ಲವು. ಗಟ್ಟಿಯಾಗಿ ಮಾತಾಡಬಾರದು. ಒಬ್ಬರ ಕೂಡ ಮಾತನಾಡಬೇಕಾದಾಗ ನಮ್ಮ ದೇಶದಲ್ಲಿ ಮೊದಲು ಸರ್ ಎಂದು ಆರಂಭಿಸುವೆವು. ಇಲ್ಲಿ ಆಳುಕಾಲುಗಳು ತಮ್ಮ ಯಜಮಾನರನ್ನು ಸರ್ ಎಂದು ಸಂಬೋಧಿಸುವರಲ್ಲದೆ ಸಮಾನಸ್ಕಂಧರೆಂದಿಗೂ ಆರೀತಿ ಯಾರನ್ನೂ ಸಂಬೋಧಿಸುವುದಿಲ್ಲ." ಎಂದು ಮೊದಲಾಗಿ ಎಲ್ಲ ಪದ್ಧತಿಯನ್ನು ಅವರು ನನಗೆ ತಿಳಿಸಿದರು. ಹೋಟಲಿನಲ್ಲಿ ಖರ್ಚು ಹೆಚ್ಚಾಗುವುದರಿಂದ ಒಂದು ಕುಟುಂಬದವರ ಮನೆಯಲ್ಲಿ ವಾಸಮಾಡುವುದುತ್ತಮವೆಂದು ಸಹ ಹೇಳಿದರು. ಸೋಮವಾರ ಆ ವಿಚಾರವನ್ನು ಗೊತ್ತುಮಾಡಬೇಕೆಂದು ನಿರ್ಧರಿಸಿಕೊಂಡೆನು. ಹೋಟಲಿನ ವಾಸವು ನನಗೇ ಅಲ್ಲದೆ ಮುಜುಂದಾರರಿಗೂ ಕಷ್ಟವಾಗಿ ತೋರಿತು. ವೆಚ್ಚವು ಬಹಳ ಹೆಚ್ಚಾಗಿದ್ದಿತು. ನಮ್ಮ ಹಡಗಿನಲ್ಲೇ ಮಾಲ್ಟಾದಿಂದ ಬಂದ ಒಬ್ಬ ಸಿಂಧು ದೇಶದವನು ಕೂಡ ಆ ಹೋಟಲಿನಲ್ಲೇ ಇಳಿದಿದ್ದನು. ಆತನಿಗೆ ಲಂಡನ್‌ನಗರವು ಹೊಸದಲ್ಲವಾದುದರಿಂದ ಹೊರಗೆ ಸ್ಥಳವನ್ನು ವಿಚಾರಿಸುತ್ತೇನೆಂದು ನಮ್ಮಕೂಡ ಹೇಳಿದನು. ಸೋಮವಾರ ದಿವಸ ಗ್ರಿಂಡ್ಲೇ ಕಂಪೆನಿಯವರು ನಮ್ಮ ಸಾಮಾನುಗಳನ್ನು ಕಳುಹಿಸಿಕೊಡುತ್ತಲೆ ನಾನು ಹೋಟಲಿನವರಿಗೆ ಕೊಡಬೇಕಾದ ಹಣವನ್ನು ಕೊಟ್ಟುಬಿಟ್ಟೆನು. ಒಂದು ದಿವಸಕ್ಕೆ ನನಗೆ ಹೋಟಲಿನಲ್ಲಿ 45 ರೂಪಾಯಿಗಳ ಛಾರ್ಜು ಮಾಡಲ್ಪಟ್ಟಿತು. ಇಷ್ಟಾದರೂ ನಾನು ತಿಂದುದೇನೂ ಇಲ್ಲವು. ನನಗೆ ಅವು ಏನೂ ರುಚಿಸಲಿಲ್ಲ. ಇದ ಚೆನ್ನಾಗಿಲ್ಲವೆಂದುಹೇಳಿ ಬೇರೆ ತರಿಸಿಕೊಂಡುದಕ್ಕೆ ಅವರು ಎರಡಕ್ಕೂ ದುಡ್ಡನ್ನು ತೆಗೆದುಕೊಂಡರು. ಆವರೆಗೂ ನಾನು ಬೊಂಬಾಯಿನಿಂದ ತಂದಿದ್ದ ಹಣ್ಣುರೊಟ್ಟಿಯೇ ನನಗಾಧಾರವಾಗಿದ್ದುವು.

ಸಿಂಧೂದೇಶದ ಸ್ನೇಹಿತನು ಮನೆಯನ್ನು ಗೊತ್ತುಮಾಡಿದ್ದನು. ಸೋಮವಾರದಿವಸ ನಾವು ಆ ಮನೆಗೆ ಹೊರಟೆವು. ಅಲ್ಲು ಸಹ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲವು. ನನಗೆ ಯಾವಾಗಲೂ ಮನೆಯಕಡೆಗೇ ಬುದ್ಧಿಯೋಡುತ್ತಿದ್ದಿತು. ರಾತ್ರಿ ಮಲಗಿಕೊಂಡಾಗ ಎಲ್ಲ ಸಂಗತಿಯೂ ಜ್ಞಾಪಕಕ್ಕೆ ಬರುತ್ತಿದ್ದಿತು. ಯಾವಾಗಲೂ ಕಣ್ಣಿನಲ್ಲಿ ನೀರುಸುರಿಯುತ್ತಿದ್ದಿತು. ಆದರಿಂದ ನಿದ್ರೆಯು ಬರುತ್ತಿರಲಿಲ್ಲ. ಈ ರಹಸ್ಯವನ್ನು ಯಾರೊಂದಿಗೂ ಹೇಳಲು ಧೈರ್ಯಸಾಲದು; ಹೇಳಿದರೂ ಪ್ರಯೋಜನವಿರಲಿಲ್ಲ. ಈ ವಿಚಾರವನ್ನು ಬಿಟ್ಟುಬಿಡಲು ನನಗೆ ಉಪಾಯವುತೋರಲಿಲ್ಲ. ಪ್ರಜೆಗಳ ಆಚಾರವ್ಯವಹಾರವೂ ಅವರ ಮನೆಯೂ ನನಗೆ ಹೊಸದಾಗಿಯೇ ಇದ್ದುವು. ಆಂಗ್ಲೇಯರ ಪದ್ಧತಿಯು ನನಗೆ ಅಗಮ್ಯಗೋಚರವಾಗಿದ್ದಿತು. ಪ್ರತಿಯೊಂದು ಸಣ್ಣ ವಿಷಯವನ್ನೂ ತಿಳಿದುಕೊಳ್ಳಬೇಕಾಗಿಬಂದಿತು. ಇದರ ಮೇಲೆ ಮಾಂಸಾಹಾರವನ್ನು ಬಿಟ್ಟಿದ್ದುದು ಒಂದು ದೊಡ್ಡ ಕಷ್ಟವಾಗಿದ್ದಿತು. ನಾನು ತಿನ್ನಬಹುದಾದ ಪದಾರ್ಥವುಕೂಡ ನನಗೆ ರುಚಿಕರವಾಗಿರಲಿಲ್ಲ. ಈ ರೀತಿಯಾಗಿ ನನ್ನ ಕೆಲಸವು ಪೇಚಾಟಕ್ಕಿಟ್ಟುಕೊಂಡಿತು. ಆಂಗ್ಲದೇಶದಲ್ಲಿರಲಿಕ್ಕಿಲ್ಲ; ಆದರೆ ಭಾರತದೇಶಕ್ಕೆ ಹಿಂದಿರುಗಿ ಬರುವಂತಿಲ್ಲ. ಇಲ್ಲಿಗೇನೊ ಬಂದುಬಿಟ್ಟೆನು. ಇನ್ನು ಮೂರುವರ್ಷ ಹೇಗೊ ಕಣ್ಣುಮುಚ್ಚಿಕೊಂಡು ಕಳೆದುಬಿಡಬೇಕೆಂದು ನನ್ನ ಅಂತರಾತ್ಮವು ಬೋಧಿಸಲು ಹತ್ತಿತು.

(ಮಂ. ಕ. ಗಾಂಧಿ—ಎಂಗ್‌ಇಂಡ್ಯಾ 4-3-26.)

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

ಲಗ್ನದ ಫಂಡು.

ಮ|| ಗಳಾದ 1. ದಾವಣಗೆರೆ ಅಕ್ಕಮ್ಮನವರ ಗುರುಸಿದ್ಧಪ್ಪ ನಾಗಪ್ಪ ಇವರ ಮಗನ ಲಗ್ನದಲ್ಲಿ ದಾವಣಗೆರೆ ವೈಸ್‌ಪ್ರೆಸಿಡೆಂಟ್ ಮೋತಿ ದೊಡ್ಡಬಸಪ್ಪನವರ ಮೂಲಕ 5 ರೂ. 2. ಹಾಸನದ ಡಿ|| ಬೇಲೋಡು ಹಚ್ಚಳ್ಳಿ ಚೆನ್ನಬಸಪ್ಪಶೆಟ್ಟರ ಮಗಳು ಚಿ|| ಸೌ|| ಮುದ್ದೀರಮ್ಮನೆಂಬ ವಧುವಿಗೂ ಮುಳಪ್ಪನವರ ತಮ್ಮ ಮುಪ್ಪಿನಪ್ಪನೆಂಬವರನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ಫಂಡಿಗಾಗಿ ತೆಗೆದದ್ದು ಜೆ|| ಪುಟ್ಟತಾಮಪ್ಪನವರ ಮೂಲಕ 4-5-0 3. ಹೊಳೆನರಸೀಪುರದ ಗೆಜ್ಜಹಳ್ಳಿ ನಾಗಡಿನವರ ಮತ್ತು ರಾಯಚೂರು ರುದ್ರಪ್ಪ ಇವರುಗಳ ಮಕ್ಕಳ ಲಗ್ನದಲ್ಲಿ ಫಂಡಿಗಾಗಿ ತೆಗೆದದ್ದು ಹಾಸನದ ಆರಳಿಪೇಟೆ ಜೆ|| ಗಂಗಪ್ಪನವರ ಮೂಲಕ 15 ರೂ. 4. ಶಿರಾಳಕೊಪ್ಪದ ಅಪ್ಪಾಜಿರುದ್ರಪ್ಪನವರ ಮಗಳ ಸಿಸ್ತಿಕಾರ್ಯದಲ್ಲಿ 1 ರೂ. ಬೋರಗಿರುದ್ರಪ್ಪನವರ ಮನೆಯಲ್ಲಿ ನಡೆದ ಸಿಸ್ತಿಕಾರ್ಯದಲ್ಲಿ 1 ರೂ. ಕುಂಬಾರಮಲ್ಲಪ್ಪನವರ ಮಗಳ ಸಿಸ್ತಿಕಾರ್ಯದಲ್ಲಿ 1 ರೂ. ಜುಂಲಾ 4 ರೂಪಾಯಿಗಳು ಸೊರಬಾಗಿ ಶಿದ್ದಬಸಪ್ಪ ಅಂಡ್‌ಸನ್ಸ್ ಕಮಿಷನ್ ಏಜಂಟರ ಮೂಲಕ 4 ರೂ. 5. ಹೊಸದುರ್ಗದ ತಾ|| ಕೊಂಡಗಾನಹಳ್ಳಿಯಲ್ಲಿರುವ ಬಸಪ್ಪಶೆಟ್ಟರ ಸಹೋದರಿಯ ಲಗ್ನದಲ್ಲಿ 4 ರೂ. ಮತ್ತು ಮಠದ ದೊಡ್ಡಯ್ಯನವರ ಮಗನ ಲಗ್ನದಲ್ಲಿ 2 ರೂ. ಜುಂಲಾ 6 ರೂ. ಫಂಡಿಗಾಗಿ ತೆಗೆದದ್ದು ಶ್ರೀರಾಂಪುರದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಡಿ. ಶಿದ್ದವೀರಯ್ಯನವರ ಮೂಲಕ 6 ರೂ. 6. ಬೆಂಗಳೂರು ತಾ|| ಕೆಂಗೇರಿಯಲ್ಲಿರುವ ದೊಡ್ಡ ವೀರಭದ್ರಪ್ಪನವರ ಮಗ ಶಿವಪ್ಪಶೆಟ್ಟರ ಕುಮಾರ್ತಿ ಚಿ|| ಸೌ|| ರುದ್ರಮ್ಮನೆಂಬ ವಧುವಿಗೂ ಸದರಿ ಸ್ಥಳದ ಬೆಂಗಳೂರು ಅರಳೆಪೇಟೆ ದೇವರಜ ಮಾರ್ಕೆಟ್ ಕೋರಪ್ಪನವರ ಮಕ್ಕಳು ಪುಟ್ಟಕೋರಪ್ಪನವರ ಕುಮಾರ ಚಿ|| ರಾ|| ಪುಟ್ಟಕೋರಪ್ಪನೆಂಬ ವರನಿಗೂ ಕೆಂಗೇರಿಯಲ್ಲಿ ನಡೆದ ಲಗ್ನದಲ್ಲಿ ಫಂಡಿಗಾಗಿ ತೆಗೆದದ್ದು ವರನ ತಮ್ಮ ಗಂಗಪ್ಪನವರಿಂದ 5 ರೂ. ಮತ್ತು ವಧುವಿನ ಕಡೆ ಕೊಟ್ಟೆ ವೀರಪ್ಪನವರಿಂದ 5 ರೂ. ಜುಂಲಾ 10 ರೂ. ಗಳು 7. ತುಮಕೂರು ತಾ|| ಊರ್ಡಿಗೆರೆ ಸೋಗಪ್ಪನವರ ಮಕ್ಕಳು ವೀರಪ್ಪನವರ ಲಗ್ನದಲ್ಲಿ ವಧುವರರಿಂದ ಫಂಡಿಗಾಗಿ ತೆಗೆದದ್ದು 2 ರೂ. ಗಳು ಸದರಿ ಗ್ರಾಮದ ಶೆಟ್ಟರು ರುದ್ರಯ್ಯನವರಮೂಲಕ 8. ಗುಬ್ಬಿ ತಾ|| ದೊಡ್ಡಗುಣಿ ಡಿ|| ವೀರಪ್ಪನವರ ತಂಗಿ ಶಿದ್ಧರಾಮಕ್ಕನೆಂಬ ವಧುವಿನ ಲಗ್ನದಲ್ಲಿ ವಧುವಿನಕಡೆ ವೀರಪ್ಪನವರಿಂದ 2 ರೂ. ವರನಕಡೆ ಇವರ ಚಿಕ್ಕಪ್ಪಂದಿರಾದ ರುದ್ರಪ್ಪನವರಿಂದ 1 ರೂ. ಜುಂಲಾ 3 ರೂ. ಗಳು ಫಂಡಿಗಾಗಿ ತೆಗೆದು ಕಳುಹಿಸಿದ್ದು. 9. ಗುಬ್ಬಿ ತಾ|| ದೊಡ್ಡಗುಣಿಯಲ್ಲಿರುವ ಕೋಟಪ್ಪನವರ ತಮ್ಮನ ಲಗ್ನದಲ್ಲಿ ಫಂಡಿಗಾಗಿ ತೆಗೆದದ್ದು ಕೋಟಪ್ಪನವರಿಂದ 2 ರೂ ವಧುವಿನತಂದೆ ಸಿದ್ಧರಾಮಯ್ಯನವರಿಂದ 1 ರೂ. ಜುಂಲಾ 3 ರೂ. ಗಳು 10. ಮೈಸೂರು ಕಿಲ್ಲೆಮೊಹಲ್ಲಾದಲ್ಲಿರುವ ಬಿ. ಸಿ. ಸೋಮಶೇಖರಪ್ಪನವರ ಮಗ ಚಿ|| ಚನ್ನಬಸಪ್ಪನೆಂಬ ವರನಿಗೂ ಕೊಳ್ಳೇಗಾಲದ ತಾ|| ಮಧುವಿನಹಳ್ಳಿ ಸೈಕಲ್ ವ್ಯಾಪಾರಸ್ಥರಾದ ದೇವಣ್ಣನವರ ಕುಮಾರ್ತಿ ಚಿ|| ಸೌ|| ಭ್ರಮರಾಂಭ ಎಂಬ ಕನ್ಯೆಗೂ ಮಧುವಿನಹಳ್ಳಿಯಲ್ಲಿ ನಡೆಸಿದ ಲಗ್ನದಲ್ಲಿ ಫಂಡಿಗಾಗಿ ತೆಗೆದದ್ದು ವರನಕಡೆಯಿಂದ 3 ರೂ. ವಧುವಿನಕಡೆಯಿಂದ 2 ರೂ. ಜುಂಲಾ 5 ರೂ. ಗಳು ಮೈಸೂರು ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್‌ರವರ ಮೂಲಕ. 11. ಎಡೆಹಳ್ಳಿಯಲ್ಲಿ ನಡೆದ ಲಗ್ನದಲ್ಲಿ ಎಡೆಹಳ್ಳಿ ರುದ್ರೇಗೌಡರಿಂದಲೂ ಸೋಲೂರು ಹೊನ್ನಪ್ಪನವರಿಂದಲೂ ಫಂಡಿಗಾಗಿ ತೆಗೆದದ್ದು 2 ರೂ. ಗಳು ತುಮಕೂರು ತಾ|| ಸಿದ್ಧಗಂಗಾಕ್ಷೇತ್ರದ ಹೆಚ್. ಎಸ್. ಶಿವಣ್ಣನವರ ಮೂಲಕ 3 ರೂ. 12. ಕೃಷ್ಣರಾಜಸಾಗರದ ನಾರ್ತಬ್ಯಾಂಕ್ ಚಿಕ್ಕಾಯರಹಳ್ಳಿ ಪಟೇಲ್ ಶಂಭುಗೌಡರ ಪುತ್ರಿ ಚಿ|| ಸೌ|| ಕೆಂಪದೇವಮ್ಮನನ್ನು ಬೆಂಗಳೂರು ಬಿ. ಬಸಪ್ಪನವರ ಪುತ್ರರು ಬಿ. ಬಸಪ್ಪ, ಬಿ. ಎಸ್. ಸಿ., ಯವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಫಂಡಿಗಾಗಿ ತೆಗೆದು ಕಳುಹಿಸಿದ್ದು ಹೆಚ್. ಪುಟ್ಟಸ್ವಾಮಿಯವರ ಮೂಲಕ 10 ರೂ. 13. ಡಿಸ್ಟ್ರಿಕ್ಟುಬೋರ್ಡು ಮೆಂಬರಾದ ಚಿಕ್ಕಸುಬ್ಬಯ್ಯನವರ ಕುಮಾರ್ತಿ ಚಿ|| ಸೌ|| ಮಹದೇವಮ್ಮನೆಂಬ ವಧುವಿಗೂ ದಳವಾಯಿಕೋಡಿಹಳ್ಳಿ ಕಂಟ್ರಾಕ್ಟುದಾರರಾದ ಮಲ್ಲಪ್ಪನವರ ಕುಮಾರ ಚಿ|| ಚನ್ನಬಸಪ್ಪನೆಂಬ ವರನಿಗೂ ನಡೆದ ವಿವಾಹದಲ್ಲಿ ವಧುವಿನಕಡೆಯಿಂದ 3 ರೂ. ವರನಕಡೆಯಿಂದ 2 ರೂ. ಜುಂಲಾ 5 ರೂ. ಗಳು ಫಂಡಿಗಾಗಿ ತೆಗೆದದ್ದು. ದಳವಾಯಿಕೋಡಿಹಳ್ಳಿ ಸ್ಕೂಲುಮಾಸ್ಟರು ಸುಬ್ಬಣ್ಣನವರ ಮೂಲಕ. 14. ಬೆಂಗಳೂರು ಬಳ್ಳಾಪುರದಪೇಟೆ ವೇ|| ನಂಜಯ್ಯಶಾಸ್ತ್ರಿಗಳ ಮಕ್ಕಳು ಮ|| ರಾ|| ರುದ್ರಾರಾಧ್ಯರ ಲಗ್ನದಲ್ಲಿ ಫಂಡಿಗಾಗಿ ತೆಗೆದದ್ದು ಬಿ. ಯಜ್. ಕಪ್ಪಣ್ಣನವರ ಮೂಲಕ 2 ರೂ. ಒಟ್ಟು 77-5-0.

ಜ. ಪರಮಶಿವಯ್ಯ, ಸೆಕ್ರೆಟರಿ,
ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್ ಸಂಘ, ಬೆಂಗಳೂರು.

ಮಳವಳ್ಳಿ ತಾಲ್ಲೋಕು ಹಲುಸೂರು ಡಿಸ್ಟ್ರಿಕ್ಟ್‌ಬೋರ್ಡು ಮೆಂಬರ್ ಮ|| ಚಿಕ್ಕಸುಬ್ಬಯ್ಯನವರ ಮನೆಯಲ್ಲಿ ನಡೆದ ಸದರಿಯವರ ಕುಮಾರಿಯ ವಿವಾಹಪ್ರಸ್ತುತದಲ್ಲಿ ಮುದುಕುತೊರೆ ಶ್ರೀ ವೀರಶೈವಮತಸಂವರ್ಧಿನೀ ಮಹಾಸಭೆಯ ಆಜೀವಸಭಾಧ್ಯಕ್ಷರಾದ ಆಸ್ಥಾನ ಮಹಾವಿದ್ವಾನ್ ಕರ್ಣಾಟಕಭಾಷಾರತ್ನಂ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳ ಅಗ್ರತಾಂಬೂಲದ ಮರ್ಯಾದೆಗಾಗಿ ತೆಗೆದುಕಳುಹಿಸಿಕೊಟ್ಟ ಒಂದುರೂಪಾಯಿಯು ಸಂದಾಯವಾಗಿದೆ. ಪಿ. ಆರ್. ಕರಿಬಸವಶಾಸ್ತ್ರಿ.

ರಾಜಧಾನಿಯಲ್ಲಿರುವ ವೀರಶೈವರ ಅನಾಥಾಲಯಕ್ಕೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಿಸಲ್ಪಟ್ಟ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆಂದು ಅನಾಥಾಲಯದ ಪ್ರೆಸಿಡೆಂಟರು ಈ ಮೂಲಕ ತಿಳಿಸಲು ಅಪೇಕ್ಷಿಸುತ್ತಾರೆ.

ಅರಮನೆ ಶ್ರೀ ಜಪದಕಟ್ಟೆಮಠದಲ್ಲಿ ಪಟ್ಟಾಭಿಷೇಕಮಹೋತ್ಸವವಾದಾಗ್ಯೆ 2 ರೂ., ಮೈಸೂರು ಮರ್ಚೆಂಟು ಮ|| ಯಂ. ಸೋಮಯ್ಯನವರ ಮಗನ ವಿವಾಹದಲ್ಲಿ 5 ರೂ., ಮರಿಮಲ್ಲಪ್ಪನವರ ಹೈಸ್ಕೂಲ್ ಲೈಬ್ರೆರಿಯನ್ ಮ|| ಆರ್. ಮಾದಪ್ಪನವರ ಮಗನ ವಿವಾಹದಲ್ಲಿ 1 ರೂ., ಮೈಸೂರು ದಫೇದಾರ್ ಲಿಂಗಣ್ಣನವರ ತಮ್ಮಂದಿರು ಮ|| ಸುಬ್ಬಣ್ಣನವರ ಮಗಳ ಲಗ್ನದಲ್ಲಿ 1 ರೂ., ಮೈಸೂರು ಹಾಲಿನ ಪುಟ್ಟಣ್ಣನವರ ಮಕ್ಕಳು ಗುರುಪಾದಪ್ಪನವರ ಮಗಳ ಲಗ್ನದಲ್ಲಿ 1 ರೂ.. ಚಾಮರಾಜನಗರ ತಾ|| ಸೋಮವಾರಪೇಟೆ ಮ|| ರುದ್ರಪ್ಪನವರ ಮಗನ ಲಗ್ನದಲ್ಲಿ 1 ರೂ., ಚಿಕ್ಕ ಆಯರಹಳ್ಳಿ ಮ|| ಪಟೇಲ್ ಶಂಭುಗೌಡರ ಮಗಳ ಲಗ್ನದಲ್ಲಿ 2 ರೂ., ಜುಮ್ಲಾ 13 ರೂ.

೧೯೨೬ ನೆಯ ಇಸವಿ ಏಪ್ರಿಲ್ ತಾ|| ೩ ರಿಂದ ೧೯೨೬ ನೆಯ ಇಸವಿ ಏಪ್ರಿಲ್ ತಾ|| ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯಸಂವತ್ಸರದ ಅಧಿಕ ಚೈತ್ರ ಬಹುಳ ಪಂಚಮಿಯಿಂದ ಅಧಿಕ ಚೈತ್ರ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ಮಾಸ
3	¹ಶನಿ	ಪಂಚ	22-0	ಅನೂ	6-15	21
4	ಭಾನು	ಷಷ್ಠಿ	18-41	ಜ್ಯೇಷ್ಠ	5-2	22
5	ಸೋಮ	ಸಪ್ತ	14-20	ಮೂಲ	2-51	23
6	²ಮಂಗಳ	ಅಷ್ಟ	9-32	ಉಷಾ	56-32	24
7	ಬುಧ	ನ-ದ	4-2 54-20	ಶ್ರವ	52-29	25
8	ಗುರು	ಏಕಾ	52-9	ಧನಿ	8-16	26
9	ಶುಕ್ರ	ದ್ವಾದ	46-0	ಶತ	45-1	27

(1) ಮಳೆನಕ್ಷತ್ರ-ರೇವತಿ ೨ ನೆಯಪಾದ. (2) ಮಳೆನಕ್ಷತ್ರ-ರೇವತಿ ೩ ನೆಯಪಾದ.

ಮೈಸೂರು : ಮೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶ್ರೀಕಾ | ಘನಪಥಕೃತಾವತಾರಾ ಪಶ್ಯಜ್ಞನಕ್ಷತ್ರ ಶೋಭರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚಿತ್ರೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

REGISTERED NO. M. 124.

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಏಪ್ರಿಲ್ ತಾರೀಖು ೧೦ ನೆಯ ಶನಿವಾರ. [ಸಂಚಿಕೆ ೧೫

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಪ್ಲೂಯೆಂಜಾ
ಪ್ಲೇಗುಜ್ವರ

SITHARAGHAVA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

14

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,	ಹೆಡ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.	ಸೀತಾರಾಘವವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳೀಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕ್ರೌನ್ ಆಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—26] **ಪ್ರೋ. ಬಾ. ೩೧೦. ಮದರಾಸು**

ಮೈಸೂರು ಪೌರಸಾಮಾಜಿಕಸಂಘ.

30-3-26 ರ ಸಾಯಂಕಾಲ ಬೆಂಗಳೂರು ಡ್ಯಾಲಿ ಮೆಮೋರಿಯಲ್ ಹಾಲ್‌ನಲ್ಲಿನಡೆದ ಪೌರಸಾಮಾಜಿಕಸಂಘದ ವಾರ್ಷಿಕಸಭೆಯಲ್ಲಿ ಸೆಕ್ರೆಟರಿಯವರು ಓದಿದ 1923-24 ಮತ್ತು 1924-25 ನೇ ಸಾಲುಗಳ ರಿಪೋರ್ಟಿನ ಮುಖ್ಯಾಂಶಗಳು.—

ಈ ರಿಪೋರ್ಟಿಗೆ ಸೇರಿದ ಎರಡು ವರ್ಷಗಳಲ್ಲಿ ಸಂಘದ ಕಾರ್ಯಕ್ರಮವನ್ನನುಸರಿಸಿ 1. ನಿಮ್ನಜಾತಿಯಜನರ ಏಳಿಗೆ, 2. ನಿಷಾಸೇವನೆಯನ್ನು ತಪ್ಪಿಸುವುದು, 3. ವಿವಾಹ ಪದ್ಧತಿಗಳಲ್ಲಿ ತಿದ್ದುಪಾಡು, 4. ಪರಸ್ಪರ ಸೇವಾಸಮಿತಿ, 5. ಶಿಶು ಪ್ರದರ್ಶನ, 6. [illegible], 7. ಬಡವರಿಗೆ ಮನೆ [illegible] 11. [illegible] ಉದ್ದೇಶಗಳನ್ನು ಪ್ರಚುರಪಡಿಸುವುದು. ಈ ಕಾರ್ಯಗಳಿಗೆ ಗಮನಕೊಟ್ಟಿರುತ್ತದೆ.

1. ನಿಮ್ನಜಾತಿಯಜನರ ಏಳಿಗೆ.

ಈ ಭಾಗದಲ್ಲಿ ಹೆಚ್ಚಿಗೆ ಅಭಿವೃದ್ಧಿಯು ಕಂಡುಬಂದಿದೆ. ಬೆಂಗಳೂರು ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಉಕ್ಕಡದ ಪಾಳ್ಯದಲ್ಲಿ ಹಗಲುವೇಳೆ ಕೆಲಸಕ್ಕೆ ಹೋಗುವವರಿಗೆ ಒಂದು ರಾತ್ರಿ ಸ್ಕೂಲನ್ನು ಏರ್ಪಾಡುಮಾಡಿದೆ. ಇದಕ್ಕೆ ಬರುವ 30 ಮಂದಿ ವಿದ್ಯಾರ್ಥಿಗಳಿಗೆ ಇಬ್ಬರು ಬೋಧಕರಿರುವರು. ಸಂಘದ ಮೈಸೂರು ಶಾಖೆಯವರು ಅಲ್ಲಿನ ನಿಮ್ನಜನರ ಸ್ಕೂಲುಗಳಿಗೆ ಪುಸ್ತಕಗಳನ್ನೂ ಸ್ಲೇಟುಗಳನ್ನೂ ಕೊಳ್ಳಲು ದ್ರವ್ಯಸಹಾಯಮಾಡಿದ್ದಲ್ಲದೆ, ಆದಿಕರ್ಣಾಟಕರ ಮೊಹಲ್ಲೆಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿದರು. ಬೆಂಗಳೂರು ಆದಿದ್ರಾವಿಡ ಸಂಘದವರಿಗೆ ಪಾಠಶಾಲೆಯನ್ನೂ ಭಜನೆ ಮಂದಿರವನ್ನೂ ಕಟ್ಟಿಕೊಳ್ಳುವುದಕ್ಕೋಸ್ಕರ ಮುನಿಸಿಪಾಲಿಟಿಯವರು ಕೊಟ್ಟಿರುವ ಖಾಲಿ ನಿವೇಶನದಲ್ಲಿ ಹೆಂಚಿನ ಕಟ್ಟಡ ಕಟ್ಟಿಕೊಳ್ಳುವುದಕ್ಕಾಗಿ ದ್ರವ್ಯಸಹಾಯವನ್ನುಮಾಡಿದೆ. ಬಿನ್ನಿಕಂಪೆನಿಯ ಕಾರ್ಖಾನೆಗಳಲ್ಲಿರುವ ಆದಿದ್ರಾವಿಡ ಕೆಲಸಗಾರರಲ್ಲಿ ನಿಷಾಸೇವನೆಯನ್ನು ತಪ್ಪಿಸುವುದಕ್ಕಾಗಿ ಪ್ರಯತ್ನಪಡುತ್ತಿರುವ ಆದಿದ್ರಾವಿಡ ಟೆಂಪರೆನ್ಸ್ ಯೂನಿಯನ್‌ನವರಿಗೆ ಹಾರ್ಮೋನಿಯಂ ಮತ್ತು ತಬಲಾಗಳನ್ನು ಕೊಂಡುಕೊಳ್ಳಲು 50 ರೂಪಾಯಿಗಳನ್ನು ಕೊಟ್ಟಿದೆ. ಆದಿದ್ರಾವಿಡರಿಗೂ ಇತರ ತರಗತಿಯ ಹಿಂದುಗಳಿಗೂ ಇರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಅವರಲ್ಲಿ ಸಹೃದಯವನ್ನೂ ಪರಸ್ಪರ ಸಹಾಯವನ್ನೂ ಹರಡಲು ಮೆಂಬರುಗಳಾದ ಮೆ|| ಗೋಪಾಲಸ್ವಾಮಿ ಐಯ್ಯರೂ ಮೆ|| ಮುರುಗೇಶಂ ಪಿಳ್ಳೆಯವರೂ ತುಂಬಾ ಶ್ರಮವನ್ನು ವಹಿಸಿರುವರು. ಮಂಡ್ಯದಲ್ಲಿ ಉಭಯ ಮತೀಯರಿಗೂ ಉಂಟಾದ ಒಂದು ದೊಡ್ಡ ಜಗಳದಲ್ಲಿ ಸಮಾಧಾನವನ್ನುಂಟುಮಾಡಲು ಈ ದೊಡ್ಡಮನುಷ್ಯರು ತೆಗೆದುಕೊಂಡ ಶ್ರಮವು ಶ್ಲಾಘ್ಯಾರ್ಹವಾಗಿದೆ. ಬೆಂಗಳೂರು ಆದಿದ್ರಾವಿಡ ಮತ್ತು ಆದಿಕರ್ಣಾಟಕ ಬೋರ್ಡಿಂಗ್ ಹೋಮಿನಲ್ಲಿ ಹೈಸ್ಕೂಲು ತರಗತಿಗಳಲ್ಲಿ ಓದುವ 80 ಮಂದಿ ವಿದ್ಯಾರ್ಥಿಗಳಿರುವರು. ಇವರನ್ನು ನೈರ್ಮಲ್ಯ, ಪರಸ್ಪರಸಹಾಯ, ಸಮಾಜಸೇವೆ, ಮತ್ತು ಪ್ರಜಾಕರ್ತವ್ಯಗಳಲ್ಲಿ ತರಬೆಯತ್ತುಮಾಡಲು ಮೆ|| ಗೋಪಾಲಸ್ವಾಮಿ ಐಯ್ಯರವರು ನಿರತರಾಗಿರುವರು. ಸಮಾಜಸೇವೆಯಲ್ಲಿ ನಿರತರಾಗಬೇಕೆಂದು ತಿಳಿಯಹೇಳಿ, ಬೆಂಗಳೂರಿನಲ್ಲಿ ಆದಿಕರ್ಣಾಟಕರು ವಾಸಮಾಡುವ ಪಾಳ್ಯಗಳಿಗೆಹೋಗಿ, ಅಲ್ಲಿನಜನರ ಸ್ಥಿತಿಗತಿಗಳನ್ನು ಪರಿಶೀಲಿಸಿ, ಅವರಿಗೆ ಯುಕ್ತವಾದ ಸಹಾಯವನ್ನು ಮಾಡುವಂತೆ ಆ ವಿದ್ಯಾರ್ಥಿಗಳಿಗೆ ಬೋಧಿಸಿದ್ದರಮೇಲೆ ಅವರಲ್ಲಿ 20 ಮಂದಿ ಮುಂದಾಳುಗಳಾಗಿಬಂದು, ಈ ಕಾರ್ಯವನ್ನು ಕೈಗೊಳ್ಳುವುದಾಗಿ ವಾಗ್ದಾನಮಾಡಿ ತಮ್ಮಲ್ಲೇ ಒಂದುಕೂಟವನ್ನು ಏರ್ಪಡಿಸಿಕೊಂಡಿರುವರು. ಮೆ|| ಗಳಾದ ಕೆ. ಎಚ್. ರಾಮಯ್ಯನವರೂ, ಎ. ವಿ. ರಾಮನಾಥನ್‌ರವರೂ, ಜಹಿರುದ್ದೀನ್ ಮೆಕ್ಕೆಯವರೂ ತಮ್ಮ ಸಂಚಾರಕಾಲದಲ್ಲಿ ಅನೇಕ ನಿಮ್ನಜನರ ಕೇರಿಗಳಿಗೆ ದಯಮಾಡಿ, ವಿದ್ಯಾರ್ಜನೆಮಾಡುವಂತೆಯೂ, ಕೆಟ್ಟಪದ್ಧತಿಗಳನ್ನು ಬಿಡುವಂತೆಯೂ, ಅವರಿಗೆ ಬೋಧನೆಮಾಡಿ ಪ್ರೋತ್ಸಾಹವನ್ನು ಕೊಟ್ಟಿರುವರು.

2. ನಿಷಾಸೇವನೆಯನ್ನು ತಪ್ಪಿಸುವುದು.

ಮದ್ಯಪಾನವನ್ನು ನಿಷೇಧಿಸಿ ಬರೆಯುವ ಇಂಗ್ಲಿಷ್ ಪತ್ರಿಕೆಗಳನ್ನು ತರಿಸಿ ಅವುಗಳನ್ನು ಕನ್ನಡಕ್ಕೆ ತರ್ಜುಮೆಮಾಡಬೇಕೆಂದೂ, ಮದ್ಯಪಾನದಿಂದ ಉಂಟಾಗಿರುವ ಹಾನಿಯನ್ನು ತೋರಿಸುವ ಭೂತಕನ್ನಡಿಯ ಚಿತ್ರಗಳನ್ನು ತರಿಸಿ ಇವುಗಳನ್ನು ಅಲ್ಲಲ್ಲಿ ಪ್ರದರ್ಶಿಸಬೇಕೆಂದೂ, ಇದಕ್ಕಾಗಿ ನೇಮಕವಾಗಿದ್ದ ಸಬ್ ಕಮಿಟಿಯವರು ಸೂಚಿಸಿದ ಪ್ರಕಾರ, ಭೂತಕನ್ನಡಿ ಪಟಗಳನ್ನು ತರಿಸಿ, ಅವುಗಳನ್ನು ಸ್ಥಳೀಯ ವಿದ್ಯಮಾನಗಳಿಗೆ ಅನುಕೂಲವಾಗುವಂತೆ ಬದಲಾಯಿಸುತ್ತಿದೆ. ಇದು ಪೂರೈಸಿದಮೇಲೆ ಇವುಗಳ ಸಹಾಯದಿಂದ ಉಪನ್ಯಾಸಗಳನ್ನು ನಡೆಸಲಾಗುವುದು. ಎಕ್ಸೈಜ್ ಲೈಸೆನ್ಸಿಂಗ್ ಬೋರ್ಡಿಗೆ ಸಂಘದ ಮೆಂಬರುಗಳಾದ ಮೆ|| ಆರ್. ಗೋಪಾಲಸ್ವಾಮಯ್ಯರವರು ಮತ್ತು ಮೆ|| ಸಾಲಿಗ್ರಾಮ ನಾರಾಯಣರಾಯರವರು ಮೆಂಬರುಗಳಾಗಿ ಚುನಾಯಿಸಲ್ಪಟ್ಟಿದ್ದಾರೆ. ಸ್ಥಳದ ಜನರು ಇಷ್ಟಪಟ್ಟರೆ ಮಾತ್ರ ನಿಷಾ ಅಂಗಡಿಗಳನ್ನು ಇಡುವಂತೆ ಇವರು ಪ್ರಯತ್ನಪಡುತ್ತಿರುವರು, ಮತ್ತು ಇವರ ಪ್ರಯತ್ನದಿಂದ ಕೆಲವು ಶರಾಬ್ ಅಂಗಡಿಗಳು ಮುಚ್ಚಲ್ಪಟ್ಟಿರುತ್ತವೆ; ಇಲ್ಲವೆ ಕುಡುಕರಿಗೆ ಆಶೆ ಹುಟ್ಟದಂತೆ ಅವರ ವಾಸಸ್ಥಾನಗಳಿಗೆ ದೂರವಾಗಿ ಸಾಗಿಸಲ್ಪಟ್ಟಿವೆ.

3. ವಿವಾಹದ ಪದ್ಧತಿಗಳಲ್ಲಿ ತಿದ್ದುಪಾಡು.

ಈಗಿನ ವಿವಾಹ ಪದ್ಧತಿಗಳಲ್ಲಿ ಅಗತ್ಯವಾದ ಮಾರ್ಪಾಟುಗಳನ್ನು ಮಾಡುವದಕ್ಕೆ ಮುಂಚೆ ಜನರಲ್ಲಿ ತಿಳುವಳಿಕೆಯನ್ನು ಹೆಚ್ಚಿಸುವುದು ಅವಶ್ಯವಾಗಿ ಕಂಡುಬಂದು, ಇದಕ್ಕಾಗಿ ಉಪನ್ಯಾಸಗಳನ್ನು ಮಾಡಿಸುವುದು ಸಹಾಯತರವೆಂದು ಈ ಸಂಬಂಧವಾದ ಸಬ್ ಕಮಿಟಿಯವರು ಸಲಹೆಯನ್ನು ಕೊಟ್ಟಿರುವರು. ಅದರಂತೆ ಉಪನ್ಯಾಸಗಳು ನಡೆಯಬೇಕಾಗಿದೆ.

4. ಪರಸ್ಪರಸೇವಾಸಮಿತಿ.

ಆರೋಗ್ಯನಿಯಮಗಳಲ್ಲಿ ಅಭಿವೃದ್ಧಿ :—ಸಬ್ ಕಮಿಟಿಯವರು ಈ ಸಮಿತಿಯ ಪರಿಚಾರಿಕೆಯ ಸಂದುಗೊಂದುಗಳಲ್ಲಿ ತಿರುಗಿಯೂ ಕೆಲವು ವಾಸದ ಮನೆಗಳನ್ನು ನೋಡಿಯೂ ಅವಶ್ಯಕವಾದ ಕೆಲಸವೇನೆಂದು ಸೂಚಿಸಿಕೊಂಡು, ಸದರಿ ವಿಚಾರವನ್ನು ಹೆಲ್ತ್ ಆಫೀಸರಿಗೆ ತಿಳಿಸಿದರು. ಮೈಸೂರು ಕಮಿಟಿಯವರು ಬೆಸ್ತಗೇರಿಯ ನಿವಾಸಿಗಳಿಂದ 300 ರೂಪಾಯಿಗಳನ್ನು ಚಂದಾ ಎತ್ತಿ ಅದನ್ನು ತಮ್ಮ ಫಂಡಿನಿಂದ ಹಾಕಿಕೊಂಡು, ಅಲ್ಲಿ ರೂ. 309-6-1 ನ ವೆಚ್ಚದಿಂದ ಆ ಕೇರಿಯವರ [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಏಪ್ರಿಲ್ ತಾ॥ ೧೦ ನೆಯ ಶನಿವಾರ.

CRUSADE AGAINST BACKWARD CLASSES.

It is one of those curious though not ununderstandable features of our political life that no matter how keen is the fight between two Brahmin politicians about all matters there is a strange fellowship among them when the question of representation of backward communities in Public Service comes up. It does not matter how bitterly they fight between each other, they become solidly one in their campaign against equitable distribution of appointments. Take for instance, the unseemly wrangle between Mr. Hosakoppa Krishna Rao and Mr. S. S. Setlur in the columns of the *Hindu*. One cannot find two apponents more eager to run at each other's throats than these two eminent gentlemen. But what pleasant agreement there is between them when they attack the Miller Committee Report and the Order there on. It is a virtue to be admired in that class, for to that supreme capacity to unite solidly against every encroachment into their so-called special privileges is due their present strong and not-easily-dislodgeable position. We have noticed in our last issue the unchivalrous and the uncharitable and we may even say the unscrupulous attack of Mr. S. S. Setlur on Sir M. Kantaraj Urs' *regime*, and in particular of his remarks on the Miller Committee Report. Today we have to consider the opinion of that other redoubtable Brahmin champion Mr. H. Krishna Rao on the same question. He is also trying to find a big place in journals and one who has entered the lists against Mr. Setlur and not altogether without success. Mr. Krishna Rao in writing something about Mysore Reforms in the *Hindu* in its issue of the 8th April speaks of the communal hatred being as virulent as before and of the Government not doing anything to relieve the tension of the reproof of His Highness to militant non-Brahmins has yet made the situation worse, and that Government need not claim credit for things which they have not done. Here are statements by one who is expected to posses some sense of responsibility. So far as we can see there is no communal hatred anywhere on the side of the non-Brahmins. They want their just rights so far whitheld unjustly from them. The hatred comes in the case of those who, on account of a measure like the Miller Committee Report which goes to recognise partially the claims of non-Brahmins, feel that they are losing something very much and who might naturally have to hate the cursed people who lay claim to such rights. What are the ways in which Mr. Krishna Rao expects the Government to relieve the tension or reduce the virulence of the supposed hatred? He does not suggest the means. But we are left to conjecture the same, and probably he must have had in his mind the doing away with the Order on Miller Report. We are inclined to notice even such statements as these, because they give an index to the state of Brahmanical feeling as a whole in Mysore about the progress of the other classes, even after so many years from the passing of the Order on the Miller Report. They are determained not to reconcile themselves to the new and more equitable situation, and we see no reason why the rest of the suffering people should not be equally determined to win their full rights and why the issue should not be tried. The non-Brahmins are a patient lot and they do not mind a few years of delay in securing their full claims. One thing we may assure our Brahmin friends who may be under the delusion that they could by this kind of irresponsible talk get a reversal of the policy that such a thing is impossible for the present at any rate till there is proper and adequate representation of the backward communities in Public Service. We can afford to assert this fact for two reasons.—For one thing, the cause of the non- Brahmins is righteous. For the other the elements are too strong now to secure a reversal. What does Mr. Krishna Rao mean by the reproof of His Highness to militant non-Brahmins? From the manner in which Mr. Krishna Rao talks of the reproof it must have been of recent occurance. But so far as we know, His Highness' latest utterance in regard to a topic allied to the above issue was at the Shravanabelgola Jain Conference. The wisdom words of His Highness at that unique occasion are too fresh for people of Mr. Krishna Rao's type to forget. His Highness enjoined a solemn and sacred duty on the more educated towards the aspirations of the less educated. But a true representation of facts is alwayes not congeninal to one's own case, and that accounts for this somewhat striking departure from truth when Mr. Krishna Rao talks of reproof to militant non-Brahmtns. There were times, when in the freshness of Miller Report, there used to be plenty of criticism of the same and an equal output of rejoinders. But the pertinacity with which the campaign is carried on against the measure while eliciting our admiration at the same time makes us lose our faith in the intelligntia of the land. We are getting more and more confirmed in our idea that they are a most selfish lot having no regard to the larger interests of the land and infact to anything except themselves and that if any good were to come to our country it must be from those other classes representing industry, trade and labour which form the mainstay of a State.

ಸ್ವದೇಶದ ವೃತ್ತಾಂತಗಳು.

ಮೈಸೂರುಸೀಮೆಯ ಬಟ್ಟೆಕಾರ್ಯಾಲಯಗಳಲ್ಲಿ ತಯಾರಿಸಲ್ಪಡುವ ಎಲ್ಲ ಬಗೆಯ ಹತ್ತಿಯಬಟ್ಟೆಗಳಮೇಲೆ 1926 ನೇ ಏಪ್ರಿಲ್ ತಾ॥ 1 ರಿಂದ ಸುಂಕವನ್ನು ವಿಧಿಸಕೂಡದೆಂದು ಸರ್ಕಾರದಪ್ಪಣೆಯಾಗಿದೆ.

1926 ನೇ ಜೂನ್ ತಾ॥ 5ರಲ್ಲಿ ಭರತಖಂಡದ ಚಕ್ರವರ್ತಿಯವರ ಜನ್ಮದಿನೋತ್ಸವ ನಡೆಯುವುದರಿಂದ ಜೂನ್ ತಾ॥ 3ಕ್ಕೆ ಬದಲು ತಾ॥ 5ರಲ್ಲಿ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ, ಸ್ಕೂಲುಗಳಿಗೂ ರಜವು ಕೊಡಲ್ಪಡುವುದಾಗಿ ಪ್ರಕಟವಾಗಿದೆ.

ಶ್ರೀಮನ್ ಮಹಾರಾಣಿಯವರ ಸ್ವಾರಿಯು ಮೊದಲು ಗೊತ್ತಾಗಿದ್ದಂತೆ ಕಳೆದ ಭಾನುವಾರ ಮಿತಪರಿವಾರದೊಡನೆ ಎರ್ಕಾಡಿಗೆ ದಯೆಮಾಡಿಸಿತು. ಶ್ರೀಮನ್ ಮಹಾರಾಜರವರ ಸ್ವಾರಿಯು ಇಷ್ಟರಲ್ಲೇ ಉದಕಮಂಡಲಕ್ಕೆ ಚಿತ್ತೈಸುವುದು.

ಮೈಸೂರು ವಿಶ್ವವಿದ್ಯಾಲಯದ ರೆಜಿಸ್ಟ್ರಾರರಾದ ಮ॥ ವಿ. ಸುಬ್ರಹ್ಮಣ್ಯಅಯ್ಯರ್‌ರವರು 2 ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಮಹಾರಾಜಕಾಲೇಜಿನ ಪ್ರೊಫೆಸರಾದ ಮಿ॥ ಸುಲ್ತಾನ್ ಮೊಹಿದೀನ್‌ರವರು ಆಕ್ಟಿಂಗ್ ರೆಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

ರೆವಿನ್ಯೂ ಕಮಿಷನರ್ ಮ॥ ಬಾಲಸುಂದರಂಅಯ್ಯರ್‌ರವರು ರಜವನ್ನು ಪೂರೈಸಿಕೊಂಡು ಕೆಲಸದಮೇಲೆ ಬಂದುದರಿಂದ ಬದಲುನೋಡುತ್ತಿದ್ದ ಮ॥ ಬಿ. ರಾಮಸ್ವಾಮಯ್ಯನವರು 6 ತಿಂಗಳ ಫರ್ಲೋರಜ ಕೊಡಲ್ಪಟ್ಟಿರುವ ಮ॥ ಎ. ಆರ್. ತ್ಯಾಗರಾಜಅಯ್ಯರ್‌ರವರ ಬದಲು ಆಫಿಸಿಯೇಟಿಂಗ್ ಎಕ್ಸೈಸ್‌ಕಮಿಷನರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮಿ॥ ಟಿ. ಎಸ್. ಅಲ್ಲಿಖಾನರವರು ಸಂಪದಭ್ಯುದಯಪತ್ರಿಕೆಯ ಸಂಪಾದಕರಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ವಿವಾದದಲ್ಲಿ ಫಿರ್ಯಾದಿಯ ಪಾಟಿಸವಾಲು ಈ ತಾ॥ 8 ರಲ್ಲಿ ಮುಗಿದುದರಿಂದ ಅಪರಾಧಿಪರ ಸಾಕ್ಷಿಗಳ ವಿಚಾರಣೆಗಾಗಿ ಬರುವ ತಾ॥ 16 ಕ್ಕೆ ಅಡ್ಜರ್ನ್ ಮಾಡಲ್ಪಟ್ಟಿರುತ್ತದೆ.

ರಾಜಧಾನಿಯ ದೇವೀರಮ್ಮಣ್ಣಿಯವರ ಅಗ್ರಹಾರದ ಶ್ರೀವಿಘ್ನೇಶ್ವರದೇವಾಲಯದಲ್ಲಿ ಸ್ಥಾಪಿತವಾಗಿರತಕ್ಕ ಶ್ರೀರಾಮಸೇವಾಸಂಘದ ಕಾರ್ಯದರ್ಶಿಗಳು ಶ್ರೀರಾಮಗರ್ಭನವರಾತ್ರಮಹೋತ್ಸವವನ್ನು ಈ ಏಪ್ರಿಲ್ ತಾ॥ 13 ರಿಂದ ತಾ॥ 22 ರ ವರೆಗೆ ನಡೆಯಿಸಲು ನಿರ್ಧರಿಸಿ ಈ ರಾಮಸೇವಾಕಾರ್ಯಕ್ಕೆ ಭಕ್ತಾದಿಗಳು ಯಥೋಚಿತದ್ರವ್ಯಸಹಾಯಮಾಡಿ ಶ್ರೀರಾಮನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತಾರೆ.

ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರಾಗಿದ್ದು ನಿವೃತ್ತಿಯನ್ನು ಹೊಂದಿರುವ ಮತ್ತು ಮೈಸೂರು ವಿಶ್ವವಿದ್ಯಾಲಯದ ಫೆಲೋ ಆಗಿರುವ ಮಿ॥ ಎಚ್. ಜೆ. ಭಾಭಾ ಎಂ. ಎ., ಇವರ ಘನತೆಗೂ ಪಾಂಡಿತ್ಯಕ್ಕೂ ಮೆಚ್ಚಿ ನಮ್ಮ ವಿಶ್ವವಿದ್ಯಾಲಯದವರು ಮುಂದಣ ಪಟ್ಟಪ್ರದಾನಮಹೋತ್ಸವಕಾಲದಲ್ಲಿ ಅವರಿಗೆ 'ಡಾಕ್ಟರ್' ಎಂಬ ಪ್ರಶಸ್ತಿಯನ್ನು ಕೊಡಲು ಗೊತ್ತುಮಾಡಿರುವರು.

ಕೋಲಾರದ ಚಿನ್ನದಗಣಿಗಳಿಂದ ಅಂದರೆ ಮೈಸೂರು ಗಣಿಯಿಂದ 3,24,121 ರೂ. 4 ಆಣೆ, ಉರಿಗಾಂ ಗಣಿಯಿಂದ 2,77,500 ರೂ. ಚಾಂಪಿಯನ್ ಗಣಿಯಿಂದ 1,68,312 ರೂ. ನಂದಿದುರ್ಗಗಣಿಯಿಂದ 1,40,240 ರೂ. 4 ಆಣೆ, ಬಾಲಘಾಟ್‌ಗಣಿಯಿಂದ 1,52,453 ರೂ. 5 ಆಣೆ ಒಟ್ಟು 10,62,626 ರೂ. 13 ಆಣೆ ಬೆಲೆ ಬಾಳುವ ಭಂಗಾರವು ಕಳೆದ ತಿಂಗಳಲ್ಲಿ ತೆಗೆಯಲ್ಪಟ್ಟು ಬೊಂಬಾಯಿನ ಟಂಕಸಾಲೆಗೆ ಈ ತಾ॥ 6 ರಲ್ಲಿ ಸಾಗಿಸಲ್ಪಟ್ಟಿತು.

ಜನಪ್ರಿಯರಾದ ಡಾಕ್ಟರ್ ಬಿ. ಎಸ್. ನಾಗಭೂಷಣರವರು ಕಾರ್‌ಕಾರ್‌ಹಳ್ಳಿಯಿಂದ ವರ್ಗಪಟ್ಟು ಹೋಗುವ ಪ್ರಯುಕ್ತ ಪುರನಿವಾಸಿಗಳು ಈ ಏಪ್ರಿಲ್ ತಾ॥ 13 ರ ಸಾಯಂಕಾಲ ಅಲ್ಲಿಯ ಟ್ರಾವಲರ್ಸ್‌ಬಂಗಲೆಯ ಹೊರಆವರಣದಲ್ಲಿ ಅಲ್ಪಾಹಾರದಿಂದ ಡಾಕ್ಟರವರನ್ನು ಸತ್ಕರಿಸಿ ಬೆಂಗಳೂರು ಡಿ॥ ಬೋರ್ಡುಪ್ರೆಸಿಡೆಂಟ್ ಮಿ॥ ಬಿ. ಅಬ್ದುಲ್‌ರಹಿಮಾನ್‌ರವರ ಹಸ್ತದಿಂದ ಒಂದು ಭಂಗಾರದಪದಕವನ್ನು ಡಾಕ್ಟರವರಿಗೆ ಬಹುಮಾನಿಸಿ ತಮ್ಮಗಳಿಗೆ ಅವರ ಮೇಲಿರುವ ಪ್ರೀತಿವಿಶ್ವಾಸವನ್ನು ಪ್ರದರ್ಶಿಸುವವರಾಗಿರುವರು.

ಕಳೆದ ಮಂಗಳವಾರ ಬೆಂಗಳೂರಿನಲ್ಲಿ 1¼ ಅಂಗುಲದವರೆಗೂ, ಯಡತೊರೆ ಪ್ರಾಂತದಲ್ಲಿ 2-3½ ಅಂಗುಲದವರೆಗೂ ಮಳೆಯಾದುದಾಗಿಯೂ, ಇದರಂತೆ ಅನೇಕ ಕಡೆ ದೊಡ್ಡ ಮಳೆಯಾಗಿ ರೈತರು ಜೋಳವನ್ನು ಬಿತ್ತುತ್ತಿರುವುದಾಗಿಯೂ ತಿಳಿಯಬಂದಿದೆ. ಆದರೆ ರಾಜಧಾನಿಯಲ್ಲಿ ಮಾತ್ರ ಪ್ರತಿದಿನ ಸಾಯಂಕಾಲ ಗುಡುಗು ಮಿಂಚಿನಿಂದ ಮಳೆಯು ಆರ್ಭಟಿಸಿಕೊಂಡು ಬಂದು ನಾಲ್ಕಾರುಹನಿಗಳು ಉದುರಿ ಮಾಯವಾಗುತ್ತಿರುವುದರಿಂದ ದಗೆಯು ಸಹಿಸಲಶಕ್ಯವಾಗಿದೆ. ಇದರಿಂದ ರಾಜಧಾನಿಯಲ್ಲಿ ಡಂಗ್ಯೂಜ್ವರ, ನ್ಯುಮೋನಿಯಾ ಇತ್ಯಾದಿ ರೋಗಗಳು ಪ್ರಬಲವಾಗುತ್ತಿವೆ.

ನಾಟಕಾಭಿನಯದಲ್ಲಿ ಅನೇಕ ನವೀನಸುಧಾರಣೆಗಳನ್ನು ಮಾಡಿ ಸಂಸ್ಥಾನಕ್ಕೆ ಕೀರ್ತಿಯನ್ನು ತಂದು ನಾಟಕಶಿರೋಮಣಿ ಎಂಬ ಪ್ರಶಸ್ತಿಯನ್ನು ಪಡೆದಿದ್ದ ಮ॥ ಎ. ವಿ. ವರದಾಚಾರ್ಯರು ಕೆಲದಿನಗಳಿಂದ ಜಲೋದರರೋಗಗ್ರಸ್ತರಾಗಿದ್ದು ಕಳೆದ ಭಾನುವಾರರಾತ್ರಿ ಬೆಂಗಳೂರಲ್ಲಿ ವಿಧಿವಶರಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಈ ಪ್ರಖ್ಯಾತ ಅಭಿನೇತೃಗಳ ವಿಯೋಗದಿಂದ ಕರ್ಣಾಟಕನಾಟಕಪ್ರಪಂಚಕ್ಕೇ ಅಪಾರವಾದ ನಷ್ಟಸಂಭವಿಸಿತೆನ್ನುವುದರಲ್ಲಿ ಸಂದೇಹವಿಲ್ಲ. ಇವರಿಗೆ ಅವಸಾನಕಾಲದಲ್ಲಿ 57 ವರ್ಷವಯಸ್ಸಾಗಿದ್ದಿತು, ಮತ್ತು ತಮ್ಮನ ಮಕ್ಕಳ ವಿನಾ ಪತ್ನಿಪುತ್ರಾದಿಗಳಿಲ್ಲ.

ಬೆಂಗಳೂರಿನಲ್ಲಿ ವ್ಯಾಪಾರಮಾಡಿಕೊಂಡಿರುವ ಜಗ್ಗುಲಾಲ್ ಎಂಬ ಮಾರ್ವಾಡಿಯು ಒಂದು ಟ್ರಂಕಿನಲ್ಲಿ 7000 ರೂ. ವರೆಗೆ ಬೆಲೆಬಾಳುವ ಆಭರಣಗಳನ್ನಿಟ್ಟುಕೊಂಡು ಕಳೆದ ತಾ॥ 5 ರ ರಾತ್ರಿ ಬೆಂಗಳೂರಿನಿಂದ ಗುಂತಕಲ್ಲಿಗೆ ಹೋಗಲು ರೈಲುಬಂಡಿಯನ್ನು ಹತ್ತಿ ಪ್ರಯಾಣಮಾಡುತ್ತಿರುವಾಗ್ಗೆ ನಿದ್ರೆಬಂದು ಮಲಗಿಬಿಟ್ಟನು. ಮಾರನೆಬೆಳಿಗ್ಗೆ ಪಾಮಿಡಿ ಸ್ಟೇಷನ್ನಿಗೆ ಬಂಡಿಯು ಬಂದುನಿಂತಾಗ್ಗೆ ನಿದ್ರೆಯಿಂದೆದ್ದು ತನ್ನ ಟ್ರಂಕನ್ನು ನೋಡುವಲ್ಲಿ ಅದು ಇರಲಿಲ್ಲವಾಗಿ ಗುಂತುಕಲ್ಲಿಗೆ ಬಂದಮೇಲೆ ಪೋಲೀಸರಿಗೆ ನಡೆದ ಸಂಗತಿಯನ್ನು ತಿಳಿಸಿದನು. ಪೋಲೀಸರು ಕೂಡಲೆ ಪಾಮಿಡಿಸ್ಟೇಷನ್ನಿಗೆ ಬಂದು ವಿಚಾರಿಸುವಲ್ಲಿ ಕೆಲ ಕಳ್ಳರು ಆಭರಣದ ಟ್ರಂಕನ್ನು ತೆಗೆದುಕೊಂಡು ಗಾರ್ಲದಿನ್ನೆ ಸ್ಟೇಷನ್ನಿನಲ್ಲಿಳಿದುಹೋಗಿ ಸ್ಟೇಷನ್ನಿನಿಂದ ಕೊಂಚದೂರದಲ್ಲಿ ಪೆಟ್ಟಿಗೆಯನ್ನೊಡೆದುಹಾಕಿ ಬಿಸಾಡಿದ್ದುದೂ, ಅದರ ಸಮೀಪದಲ್ಲೇ ನೋಟುಗಳನ್ನು ಇಟ್ಟಿದ್ದ ಚೀಲಗಳು ಬಿದ್ದಿದ್ದುದೂ ಗೊತ್ತಾದುವು, ಮತ್ತು ದೊಡ್ಡಬಳ್ಳಾಪುರದ ಒಬ್ಬ ದರ್ಜಿಯವನ ಅಂಗಡಿಯಲ್ಲಿ ಕೆಲ ಆಭರಣಗಳನ್ನು ತೋರಿಸುತ್ತಿದ್ದ ಸಿದ್ಧಲಿಂಗಯ್ಯನೆಂಬುವವನನ್ನು ಪೋಲೀಸರು ಅನುಮಾನದಮೇಲೆ ಹಿಡಿದು ಶೋಧಿಸುವಲ್ಲಿ ಇನ್ನೂ ಅನೇಕ ಪದಾರ್ಥಗಳು ದೊರಕಿದುದರಮೇಲೆ ಸೆರೆಯಲ್ಲಿಟ್ಟಿರುವರು.

ಪೋಲೀಸ್ ಇ॥ ಜನರಲ್‌ರವರಾದ ಮಿ॥ ಪಿ. ಎಫ್. ಬೌರಿಂಗ್‌ರವರು ಅಜೆಸೋಮವಾರ ರಾಜಧಾನಿಗೆ ಬಂದಿದ್ದು ಈ ಡಿಸ್ಟ್ರಿಕ್ಟಿನಲ್ಲಿ ಈಚೆಗೆ ಮೋಟಾರುಬಸ್ಸುಗಳ ಅನಾಹುತದಿಂದ ಮರಣವು ಹೆಚ್ಚಾಗುತ್ತಿರುವುದರ ಮತ್ತು ಲೈಸನ್ಸು ಕೊಡುವುದರ ವಿಚಾರವಾಗಿ ಡೆಪ್ಯುಟಿಕಮಿಷನರು ಮತ್ತು ಡಿ॥ ಪೋಲೀಸ್ ಸೂಪರಿಂಟೆಂಡೆಂಟರುಗಳೊಡನೆ ಆಲೋಚನೆ ಮಾಡಿ ತಕ್ಕಸಲಹೆಗಳನ್ನು ಕೊಟ್ಟು ಹಿಂದಿರುಗಿದುದಾಗಿ ಕೇಳುತ್ತೇವೆ. ರಾಜಧಾನಿಯಲ್ಲಿ ಈಗ ಕೆಲದಿನಗಳಿಂದಲೂ ಕನ್ನ ಕಳುವು ವಿಶೇಷವಾಗಿ ಆಗುತ್ತಿದ್ದರೂ ಪೋಲೀಸಿನವರು ಗಮನವಿಟ್ಟು ಕಳ್ಳರನ್ನು ಕಂಡುಹಿಡಿದು ಶಿಕ್ಷೆಗೆ ಗುರಿಮಾಡುತ್ತಿಲ್ಲವಾದುದರಿಂದ ಕಳ್ಳರಿಗೆ ಮತ್ತಷ್ಟು ಧೈರ್ಯವು ಹೆಚ್ಚಾಗಿ ಜನಸಂಚಾರದ ವೇಳೆಯಲ್ಲೇ ಕಳ್ಳತನ ಮಾಡಲವಕಾಶವಾಗಿರುವುದೆಂದೂ, ಪದಾರ್ಥಗಳನ್ನು ಕಳೆದುಕೊಂಡವರು ಪೋಲೀಸಿಗೆ ಅರ್ಜಿಯನ್ನು ಕೊಟ್ಟರೆ, ಅವರನ್ನೇ ಬೆದರಿಸಿ ಅರ್ಜಿಯನ್ನು ವಾಪಸ್ಸುಮಾಡುತ್ತಿರುವುದಲ್ಲದೆ ಕೊಲೆ ಮೊದಲಾದ ದೊಡ್ಡ ವಿಷಯಗಳನ್ನು ಬಿಟ್ಟು ಕಳ್ಳತನದಂತಹ ಅಲ್ಪವಿಷಯಕ್ಕೆ ಗಮನಕೊಡಲಾಗುವುದಿಲ್ಲವೆಂದು ಹೇಳುತ್ತಾರೆಂದೂ ಜನರು ಆಡಿಕೊಂಡು ಪೋಲೀಸಿನವರ ವಿಚಾರದಲ್ಲಿ ಬಹಳ ಬೇಸರಪಟ್ಟುಕೊಂಡಿರುವುದಾಗಿ ವರ್ತಮಾನವಿದೆ. ಪೋಲೀಸ್ ಇ॥ ಜನರಲ್‌ರವರು ರಾಜಧಾನಿಗೆ ಬಂದಿದ್ದಾಗ್ಗೆ ಇಲ್ಲಿನ ಪೋಲೀಸು ಉಸ್ತುವಾರಿಯ ಏರ್ಪಾಟು ಹೇಗಿರುತ್ತದೆಂಬುದನ್ನು ವಿಚಾರಿಸಿದ್ದರೆ ಜನರ ಅಸಮಾಧಾನವು ಕಡಿಮೆಯಾಗುತ್ತಿದ್ದಿತೆಂದು ನಮಗೆ ತೋರುತ್ತದೆ. ಅವರು ಮತ್ತೊಂದುವೇಳೆ ರಾಜಧಾನಿಗೆ ಬಂದಾಗಲಾದರೂ ಜನರ ದೂರನ್ನು ಕೇಳಿ ಪರಿಹರಿಸಿಕೊಡುವವರಾಗಲೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ಬುದ್ಧದೇವನು ಜನ್ಮವೆತ್ತಿದ ಲಂಬಿನಿತೋಟದಲ್ಲಿ ಯಾರೂ ಪ್ರಾಣಿವಧೆಯನ್ನು ಮಾಡಕೂಡದೆಂದು ನೇಪಾಳಸಂಸ್ಥಾನದ ಮಹಾರಾಜರು ಅಪ್ಪಣೆಮಾಡಿರುವರು. ಅದೇ ತೋಟದಲ್ಲಿ ಪರಸ್ಥಳಗಳಿಂದ ಬರುವ ಬೌದ್ಧಭಿಕ್ಷುಗಳಿಗಾಗಿ ಒಂದು ಧರ್ಮಶಾಲೆಯನ್ನು ಮಹಾರಾಜರವರು ಕಟ್ಟಿಸಿರುವರು. ಬುದ್ಧದೇವನಿಗೆ ಒಂದುದೇವಾಲಯವನ್ನು ಅಲ್ಲಿ ಕಟ್ಟಿಸಬೇಕೆಂದು ಅಪ್ಪಣೆಯಾಗಿರುವುದಂತೆ.

ಬೆಲ್ಗ್ರೇಡ್‌ನಗರದಲ್ಲಿ ಕುದುರೆ ಜೂಜಿನಲ್ಲಿ ವಿಶೇಷ ಆಸಕ್ತನಾಗಿದ್ದ ತರುಣನೊಬ್ಬನು ಹುಚ್ಚು ಹಿಡಿದವನಾಗಿ, ಕಡೆಗೆ ತಾನೂ ಕುದುರೆಯೆಂದು ಭಾವಿಸಿಕೊಂಡು ಚಾಟಿಯಿಂದ ಹೊಡೆದುಕೊಳ್ಳುವುದು, ದೂರವಾಗಿ ಓಡುವುದು, ಹುಲ್ಲುಹುರುಳಿಗಳನ್ನು ಮೇಯುವುದು ಮುಂತಾಗಿ ಕುದುರೆಯ ಕೆಲಸಗಳನ್ನೆಲ್ಲಾ ಮಾಡುತ್ತಾ ಬಂದುದರಿಂದ ಈಗ ಹುಚ್ಚರ ಆಸ್ಪತ್ರೆಯಲ್ಲಿಡಲ್ಪಟ್ಟಿರುವನು.

ಬೊಂಬಾಯಿನಗರದಲ್ಲಿ ಈ ತಿಂಗಳು 4 ರಲ್ಲಿ ಸೇರಿದ್ದ ವೈದ್ಯರ ಒಂದುಸಭೆಯಲ್ಲಿ ಪ್ರೊಫೆಸರ್ ದೇಶಬಂಧು ಎಂಬುವವರು ತಮ್ಮ ಮಾನಸಿಕಶಕ್ತಿಯಿಂದ ಜನರ ನಾಡಿಗತಿಯನ್ನು 3 ನಿಮಿಷಗಳವರೆಗೂ, ಹೃದಯದ ಚಲನೆಯನ್ನು 18 ಸೆಕೆಂಡುಗಳವರೆಗೂ ನಿಲ್ಲಿಸಿ ವೈದ್ಯರನ್ನು ದಿಗ್ಭ್ರಮೆಗೊಳಿಸಿದರು. ಇದು ಹೇಗೆ ಸಾಧ್ಯವೆಂಬುವುದನ್ನು ವೈದರು ಇನ್ನೂ ತಿಳಿಯಲಾರದವರಾಗಿದ್ದಾರೆ.

ಈ ತಾ॥ 3-4 ರಲ್ಲಿ ಕಲ್ಕತ್ತೆಯ ಹ್ಯಾರಿಸನ್ ರಸ್ತೆಯಲ್ಲಿರುವ ಒಂದು ಮಸೀದಿಗೆ ಬೆಂಕಿಬೀಳಲು, ಹಿಂದುಗಳು ಅದನ್ನು ಹಾಕಿದರೆಂದು ಮುಸಲ್ಮಾನರು ಆವೇಶದಿಂದ ದೊಂಬಿ ಮಾಡಲಾಗಿ ಅವರಿಂದ ಪೆಟ್ಟುತಿಂದು ಮೃತಪಟ್ಟ 10 ಜನರ ಶವಗಳು ಇದುವರೆಗೆ ಸಿಕ್ಕಿರುತ್ತವೆ. ಇನ್ನು ಬಹುಮಂದಿಗೆ ತುಂಬಾ ಗಾಯಗಳಾಗಿರಬೇಕೆಂದು ಊಹಿಸಲಾಗಿದೆ. ಮಿಲಿಟರಿಸೈನಿಕರೂ, ಮಿಲಿಟರಿಮೋಟಾರುಗಳೂ ಬಂದು ದಂಗೆಯನ್ನು ಅಡಗಿಸಬೇಕಾಯಿತು.

ಕಲ್ಲೀಕೋಟೆಯಲ್ಲಿ ಧನಿಕನಾದ ಒಬ್ಬ ಮಾಪಿಳ್ಳೆಯು ತನ್ನ ಮಗಳನ್ನು 4000 ರೂಪಾಯಿಗಳ ಕನ್ಯಾಶುಲ್ಕಕ್ಕೆ ಮತ್ತೊಬ್ಬ ಮಾಪಿಳ್ಳೆಗೆ ಸುಮಾರು 4 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದನು. ಅಳಿಯನು ಮಾತಿನಪ್ರಕಾರ ಹಣವನ್ನು ಪಾವತಿಮಾಡದೆ ಕಾಲಹರಣ ಮಾಡುತ್ತಾ ಬಂದುದರಿಂದ ಮಾವನು ನಿಷೇಕಪ್ರಸ್ತ ಮಾಡಿಕೊಡದೆ, ಹುಡುಗಿಯನ್ನು ಮತ್ತೊಬ್ಬನಿಗೆ ಕೊಟ್ಟು ವಿವಾಹ ಮಾಡಿಬಿಟ್ಟನು. ಮೊದಲನೇ ಅಳಿಯನು ಈಗ ಮಾವ, ಹೆಂಡಿತಿ, ಷಡ್ಡಕ, ಸಾಕ್ಷಿಗಳು ಇವರೆಲ್ಲರಮೇಲೆ ಫಿರ್ಯಾದನ್ನು ಮಾಡಿರುತ್ತಾನೆ.

ಬಾಲ್ಕನ್ ಯುದ್ಧಗಳಲ್ಲಿ ಪ್ರಖ್ಯಾತನಾಗಿ ಅನೇಕ ಮೆಡಲುಗಳನ್ನು ಪಡೆದ ಒಬ್ಬ ದೊಡ್ಡ ಮಿಲಿಟರಿ ಅಧಿಕಾರಿಯು, ತನ್ನ ಹೆಂಡಿತಿಯೊಡನೆ ವಾಕ್ಕಲಹ ಮಾಡುತ್ತಾ, ತನ್ನ ದೊಡ್ಡಸ್ತಿಕೆಯನ್ನು ಆಕೆಗೆ ಮನಗಾಣಿಸಲು ತನಗೆ ದೊರೆತಿದ್ದ ಮೆಡಲುಗಳನ್ನೆಲ್ಲಾ ಆಕೆಯ ಇದಿರಿಗಿಟ್ಟು ತೋರಿಸಿದನು. ಕೃದ್ಧಳಾದ ಆಕೆಯು ಅವುಗಳನ್ನು ಎತ್ತೊಗೆದು, ಅವುಗಳನ್ನು ತನ್ನ ಗಂಡನಂತಹ ಸಾಮಾನ್ಯ ಮನುಷ್ಯನಿಗೆ ಕೊಟ್ಟ ಅಲೆಕ್ಸಾಂಡರ್ ದೊರೆಗೆ ವಿವೇಕವಿಲ್ಲವೆಂದು ಹೇಳಿಬಿಟ್ಟಳು. ಅಧಿಕಾರಿಯು ಇದಕ್ಕಾಗಿ ಕೋರ್ಟಿನಲ್ಲಿ ಫಿರ್ಯಾದು ಮಾಡಿದುದರಿಂದ ಹೆಂಡಿತಿಗೆ ರಾಜದ್ರೋಹಕ್ಕಾಗಿ ಮೂರು ವರ್ಷಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿತು.

ಇಟಲಿ ದೇಶದ ತರುಣಿಯೊಬ್ಬಳ ಚಿತ್ರವನ್ನು ನೋಡಿ ಭ್ರಾಂತನಾಗಿ, ಆಕೆಯು ಯಾರೆಂದೂ ಎಲ್ಲಿರುವಳೆಂದೂ ಪತ್ತೆಮಾಡಿ ಆಕೆಯನ್ನು ಮದುವೆಯಾಗಬೇಕೆಂದು ಅಪೇಕ್ಷೆಪಟ್ಟ ರುಡಾಲ್ಫ್ ರೇಮಂಡ್ಸೈ ಎಂಬ ಯೌವನಸ್ಥನು ದೇಶದೇಶಗಳಲ್ಲಿ ತಿರುಗಿ ಕಡೆಗೆ ಆಕೆಯು ಅಮೇರಿಕೆಯಲ್ಲಿರುವಳೆಂದು ತಿಳಿದು ಅಲ್ಲಿಗೆ ಹೋಗಿ ಎರಡು ವರ್ಷಗಳ ಕಾಲ ಕಷ್ಟಪಟ್ಟು, ಆಕೆಯನ್ನು ಕಂಡುಹಿಡಿದು, ಮದುವೆಯಾಗಬೇಕೆಂದು ಪ್ರಾರ್ಥಿಸಿದನು. ಆಕೆಯು ಮೊದಲೇ ಮತ್ತೊಬ್ಬನನ್ನು ವಿವಾಹವಾಗಿದ್ದುದರಿಂದ ಸಮ್ಮತಿಸಲಿಲ್ಲವಾಗಿ, ಅವನು ಪೀಡಿಸುತ್ತ ಬಂದುದರಮೇಲೆ ಇನ್ನುಮುಂದೆ ಯೌವನಸ್ಥನು ಆಕೆಯ ಗೊಡವೆಗೆ ಹೋಗಕೂಡದೆಂದು ಮ್ಯಾಜಿಸ್ಟ್ರೇಟರು ಅತನನ್ನು ಎಚ್ಚರಿಸಿರುತ್ತಾರೆ.

ಇಂಡಿಯಾದೇಶದಲ್ಲಿ ವ್ಯವಸಾಯವೃತ್ತಿಯನ್ನು ಅನುಸರಿಸುತ್ತಿರುವ ಪ್ರಜೆಗಳ ಅಂದರೆ ಗ್ರಾಮಾಂತರವಾಸಿಗಳ ಪ್ರಕೃತಸ್ಥಿತಿಗಳನ್ನು ಚೆನ್ನಾಗಿ ಪರೀಕ್ಷಿಸಿ ಜನರ ಕುಂದುಕೊರತೆಗಳನ್ನು ಹೋಗಲಾಡಿಸುವ ಮತ್ತು ಅವರ ಅಭಿವೃದ್ಧಿಗೆ ಮಾರ್ಗಗಳನ್ನು ಸೂಚಿಸುವ ಉದ್ದೇಶದಿಂದ ಒಂದು ಕಮಿಟಿಯನ್ನು ಶ್ರೀಮನ್ ಜಾರ್ಜ್ ಚಕ್ರವರ್ತಿಯವರು ನೇಮಕ ಮಾಡಿರುವರು. ಈ ಕಮಿಟಿಗೆ ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೌ ಎಂಬ ಶ್ರೀಮಂತರು ಅಧ್ಯಕ್ಷರಾಗಿರುವರು. ನಾಲ್ಕು ಜನ ದೇಶೀಯ ದೊಡ್ಡಮನುಷ್ಯರೂ ಐದುಮಂದಿ ಯುರೋಪಿಯನ್ ದೊಡ್ಡಮನುಷ್ಯರೂ ಈ ಕಮಿಟಿಯಲ್ಲಿ ಸದಸ್ಯರಾಗಿರುವರು. ಅಧ್ಯಕ್ಷರು ಇಂಗ್ಲೆಂಡಿನಲ್ಲಿ ಸುಮಾರು 37,000 ಎಕರೆಗಳ ವಿಸ್ತಾರವಾದ ಜಮೀನ್‌ದಾರರಾಗಿ ವ್ಯಾವಸಾಯಿಕ ವಿಷಯಗಳಲ್ಲಿ ವಿಶೇಷ ಪರಿಶ್ರಮ ಪಡೆದವರೆಂದು ನಂಬಲಾಗಿದೆ.

ಕಲ್ಕತ್ತಾದ ಬಳಿ ಒಂದು ಗ್ರಾಮದ ಗೋಪಾಲಚಂದ್ರ ಬಾನರ್ಜಿಯೆಂಬ ವೃದ್ಧನು ಚಿಕ್ಕವಯಸ್ಸಿನ ಹೆಂಗುಸನ್ನು ಮದುವೆಮಾಡಿಕೊಂಡಿದ್ದನು. ಆಕೆಯು ತನ್ನ ಗಂಡನ ತಮ್ಮನ ಮಗನೊಡನೆ ಪರಸ್ಥಳ ಓಡಿಹೋಗಲು ಪ್ರಯತ್ನಪಟ್ಟಿರಲು, ಗಂಡನು ಆಕೆಯನ್ನು ಹಿಂದಕ್ಕೆ ಕರೆತಂದು ಆಕೆಯ ತಲೆ ಕೂದಲನ್ನೆಲ್ಲಾ ಕತ್ತರಿಸಿಹಾಕಿ ಕೈಕಾಲುಗಳಿಗೆ ಹಗ್ಗವನ್ನು ಬಿಗಿದು ನಿರ್ಬಂಧದಲ್ಲಿಟ್ಟನು. ಇವನ ಹಿರೀಹೆಂಡಿತಿಯ ವಿಧವಾ ಮಗಳು ಕನಿಕರಪಟ್ಟು ಚಿಕ್ಕಮ್ಮನ ಕೈಕಟ್ಟನ್ನು ಬಿಚ್ಚಿದಳು. ಹೆಂಡತಿಯಾದವಳು ಕೂಡಲೆ ತನ್ನಬಟ್ಟೆಗೆ ಸೀಮೆಯೆಣ್ಣೆಯನ್ನು ಹೊಯ್ದು ಬೆಂಕಿ ಹೊತ್ತಿಸಿಕೊಂಡು ಮೃತಪಟ್ಟಳು. ಈಗ ಗಂಡನನ್ನು ಪೋಲೀಸಿನವರು ದಸ್ತಗಿರಿಮಾಡಿ, ಹಿಂಸೆಗಾಗಿ ವಿಚಾರಣೆ ನಡೆಸುತ್ತಿರುವರು. ಅತನ ತಮ್ಮನ ಮಗನನ್ನು ಗ್ರಾಮಸ್ಥರು ಹಿಡಿದು ನಾನಾವಿಧವಾಗಿ ಅಪಮಾನಪಡಿಸಿ ಊರಿನಿಂದ ಹೊರಡಿಸಿಬಿಟ್ಟರು. ಅನನ್ವಯವಾದ ವಿವಾಹ ಮಾಡಿಕೊಳ್ಳತಕ್ಕವರು ಇದರಿಂದ ಬುದ್ಧಿ ಕಲಿಯಬೇಕಲ್ಲವೇ ?

ಅಕ್ಷಯಸಂವತ್ಸರಫಲ.

(ಧಾರ್ವಾಡ ಡಿ॥ ಹಾವೇರಿ ತಾ॥ ಹೊಸರಿತಿ ಗ್ರಾಮದ ಜೋತಿರ್ಮಾರ್ತಾಂಡ ಶಂಕರಶಾಸ್ತ್ರಿಗಳ ಭವಿಷ್ಯವು.)

ಜೂನ್ ತಾ॥ 17 ರಲ್ಲಿ ಮಳೆಯು ಪ್ರಾರಂಭವಾಗುವುದು. ಚೆನ್ನಾಗಿ ಮಳೆ ಬೀಳುತ್ತದೆ. ಬೆಳೆಯು 9 ಆಣೆಯಿಂದ 12 ಆಣೆಯವರೆಗೆ ಆಗುವುದು. 35 ವರ್ಷಗಳ ಹಿಂದೆ ಆಗಿದ್ದಷ್ಟು ಮಳೆಯೇ ಈ ವರ್ಷವೂ ಆಗುತ್ತದೆ. ಸಮುದ್ರದಲ್ಲಿ ದೊಡ್ಡ ತುಫಾನುಗಳೇಳುವುವು. ವಾದಕಪದಾರ್ಥಗಳ ವಿಕ್ರಯದ ವಿಚಾರದಲ್ಲಿ ಕಠಿಣನಿಬಂಧನೆಗಳು ಮಾಡಲ್ಪಡುವುದರಿಂದ ಅವುಗಳ ಮಾರಾಟವು ಕಡಿಮೆಯಾಗುವುದು. ಚಿನ್ನದ ಮತ್ತು ಕೇಯಿಲೆಯ ದರದಲ್ಲಿ ಬಹಳ ನಾಪಾರ್ಟಾಗುವುದು, ನಾಟಕಶಾಲೆ ಮೊದಲಾದವುಗಳಿಗೆ ಅಗ್ನಿಪ್ರಮಾದಸಂಭವಿಸುವುದು. ನೀತಿಬಾಹ್ಯವಾದ ಕೆಲಸಗಳು ಬಹಳವಾಗಿ ನಡೆಯುವುವು. ಆರ್ಥಿಕ ಪಾರಿಶ್ರಾಮಿಕ ಪರಿಸ್ಥಿತಿಯು ಚೆನ್ನಾಗಿರುವುದಿಲ್ಲ. ಯುದ್ಧಪ್ರಯತ್ನವು ಚುರುಕಾಗಿ ಜರುಗುತ್ತದೆ. ಮತವ್ಯದ್ಯಸಂಸ್ಥೆಗಳೂ ವಿಶ್ವವಿದ್ಯಾಲಯಗಳೂ ವೃದ್ಧಿಹೊಂದುತ್ತವೆ. ಪ್ರಜೆಗಳಿಗೆ ಧನನಷ್ಟವು ಹೆಚ್ಚಾಗುವುದು. ವಿಶೇಷ ಘೋರಕೃತ್ಯಗಳು ಜರುಗುತ್ತವೆ. ಹತ್ಯ, ಪ್ರಮಾದ, ಆತ್ಮಹತ್ಯ ಮೊದಲಾದವುಗಳಿಂದ ಮರಣ ಹೆಚ್ಚಾಗುವುದು. ಈ ಸಂವತ್ಸರ ಮೊದಲ್ಗೊಂಡು 7 ವರ್ಷಗಳ ವರೆಗೆ ಜಲಶಕ್ತಿಪರಿಶೋಧನೆಯು ಜರುಗುವುದು. ದೊಡ್ಡನದಿಗಳಲ್ಲಿ ವಿದ್ಯುಚ್ಛಕ್ತಿಸಹಾಯದಿಂದ ಬಹಳ ಯಂತ್ರಶಾಲೆಗಳೇರ್ಪಡುವುವು. ತುಫಾನೂ, ನದಿಯ ಪ್ರವಾಹವೂ, ಸಮುದ್ರ ಉಕ್ಕುವುದೂ ಹೆಚ್ಚಾಗುತ್ತವೆ. ಕೊಕೆಯಿನ್ನಂತಹ ಹೊಸಪದಾರ್ಥವು ಕಂಡುಹಿಡಿಯಲ್ಪಟ್ಟು ಮನುಷ್ಯನ ಬಲವೃದ್ಧಿಯಾಗಿ ಕೊಡಲ್ಪಡುವುದು.

ಭರತಖಂಡದಲ್ಲಿ ಪೆಟ್ರೋಲಿಯಂ ಎಣ್ಣೆಯು ದೊರಕುವುದು. ದ್ಯೂತವೂ ಕುದುರೆಯ ಪಂದ್ಯವೂ ಅತ್ಯಧಿಕವಾಗುತ್ತವೆ. ಸಂಗೀತಕ್ಕೂ ಮತಕ್ಕೂ ಪ್ರೋತ್ಸಾಹವು ಹೆಚ್ಚುವುದು. ಬಂಗಾಳಾ ಆರ್ಡಿನಾನ್ಸು ತೆಗೆದುಹಾಕಲ್ಪಡಬಹುದು. ಪೂನಾದಲ್ಲಿ ಜೂನ್ನಲ್ಲಾಗಲಿ ಅಕ್ಟೋಬರಿನಲ್ಲಾಗಲಿ ನವಂಬರಿನಲ್ಲಾಗಲಿ ದೊಡ್ಡ ವ್ಯವಸಾಯ ಪ್ರದರ್ಶನವು ಜರುಗುವುದು. ಮಂತ್ರಿಗಳ ಬದಲಾವಣೆಯಾಗಬಹುದು. ರೆಸ್ಪಾನ್ಸಿವ್ ಸಹಾಯ ಪದ್ಧತಿಯನ್ನು ಕುರಿತು ತೀಕ್ಷ್ಣವಾಗಿ ವಾದವು ನಡೆದು ಕಡೆಯಲ್ಲಿ ಅದರ ಸ್ವರೂಪವು ಬದಲಾಯಿಸಬಹುದು.

ಚುನಾವಣೆ.

ಎಲ್ಲ ಪಕ್ಷದವರೂ ಚುನಾವಣೆಗೊಳ್ಳುವರು. ಆದರಿಂದ ನಾಯಕರುಗಳಲ್ಲಿ ಕಲಹವುಂಟಾಗುವುದು. ದೇಶಹಿತಕ್ಕೆ ಭಂಗಬರುವುದು. ಸ್ವದೇಶಿಖದ್ದರು ಪ್ರಯತ್ನಕ್ಕೆ ನಿರೋಧಹುಟ್ಟುವುದು. ಆಯುಧಗಳು ಅಪಹರಿಸಲ್ಪಡುವುವು. ಬಹಳ ಕಠಿಣ ಶಾಸನಗಳು ಅನುಷ್ಠಾನಕ್ಕೆ ತರಲ್ಪಡುತ್ತವೆ. ಅನೇಕಮಂದಿ ರಾಜಕೀಯ ವಿಚಾರವಾಗಿ ಶಿಕ್ಷಿಸಲ್ಪಡುವರು. ದೇಶದಲ್ಲಿ ಬಹಳ ಗೊಂದಲವಾಗುವುದು. ರಾಯಲ್‌ಕಮಿಷನ್ನೇರ್ಪಡುತ್ತದೆ. ಅದರಿಂದ ರಾಜಕೀಯವಾಗಿ ಕೊಂಚ ಲಾಭವಾಗುವುದು. ನಾನಾದೇಶಸಂಘಕ್ಕೆ ಬೊಂಬಾಯಿ, ಬಂಗಾಳ, ಆಸ್ಸಾಂ ರಾಷ್ಟ್ರಗಳಿಂದ ಪ್ರತಿನಿಧಿಗಳು ಚುನಾಯಿಸಲ್ಪಡುವರು. ಬೊಂಬಾಯಿ ಬ್ಯಾಂಕಿನಲ್ಲೂ, ಮ್ಯುನಿಸಿಪಾಲಿಟಿಯಲ್ಲೂ ಅಪೂರ್ವ ಸಂಗತಿಗಳು ಜರುಗುವುವು. ಸ್ತ್ರೀಯರ ಓಟನ್ನು ಕುರಿತು ಆಂದೋಳನವನ್ನು ಪ್ರಪಂಚದಲ್ಲೆಲ್ಲ ನಡೆಯಿಸುತ್ತಿರುವವರ ಕೋರಿಕೆಯು ನೆರವೇರುವುದು. ದಕ್ಕನು ವಿದ್ಯಾಸಂಘಕ್ಕೆ ಧನನಷ್ಟವಾಗುವುದು. ಹಿಂದು ಮಹಮ್ಮದೀಯ ಮೈತ್ರಿಯು ಕೊಂಚಮಟ್ಟಿಗೆ ಕುದುರುವುದು. ಬ್ರಾಹ್ಮಣ ಬ್ರಾಹ್ಮಣೇತರರ ವಿವಾದವು ಕಡಿಮೆಯಾಗುವುದು. ಪಂಜಾಬುಸಂಯುಕ್ತರಾಷ್ಟ್ರದಲ್ಲಿ ರಾಜಕೀಯ ನಾಯಕರುಗಳಲ್ಲಿ ಕೆಲರು ಸಾಯುವರು, ಮತ್ತೆ ಕೆಲರು ಕಷ್ಟಕ್ಕೆ ಗುರಿಯಾಗುವರು.

ಮಹಾತ್ಮರು.

ಮಹಾತ್ಮಗಾಂಧಿಯವರ ದೇಹಸ್ಥಿತಿಯು ಕೊಂಚಕೆಡುವುದು. ಅವರು ಮತವಿಷಯದಲ್ಲೇ ನಿಮಗ್ನರಾಗಿರುವರು. ಸಂಸ್ಥಾನಾಧಿಪತಿಗಳಲ್ಲಿ ಕೊಂಚ ಆಂದೋಳನವುಂಟಾಗುವುದು. ಮಳೆಗಾಲದಲ್ಲಿ ದಕ್ಷಿಣದೇಶೀಯ ಸಂಸ್ಥಾನಾಧಿಪತಿಯೊಬ್ಬರಿಗೆ ರಾಜಾಧಿಕಾರವು ಕೊಡಲ್ಪಡುವುದು.

ಕಾಂಗ್ರೆಸ್ಸಿನ ಅಧ್ಯಕ್ಷತೆ.

1926 ರಲ್ಲಿ ಬಹಳ ಉತ್ತಮನಾಯಕರೊಬ್ಬರು ಅಧ್ಯಕ್ಷರಾಗಿ ಆರಿಸಲ್ಪಡುವರು. ಅವರ ಹೆಸರಿನ ಮೊದಲನೆಯ ಅಕ್ಷರವು ಜೇ ಅಥವಾ ಎಂ ಆಗಿರುವುದು. ಅವರು ಬಹಳ ವಿವೇಕದಿಂದ ಕೆಲಸಮಾಡಿ ವಿಜಯವನ್ನು ಹೊಂದುವರು. ನ್ಯಾಷನಲ್ ಲಿಬರಲ್ ಫೆಡರೇಷನ್ನಿನ ಅಧ್ಯಕ್ಷರ ಹೆಸರಿನ ಮೊದಲನೆಯ ಅಕ್ಷರವು ಎಸ್ ಅಥವಾ ವಿ ಯಾಗಿರುವುದು, ಮಳೆಯು ಸಕಾಲದಲ್ಲಿ ಬರುವುದು, ಕಂಟಕವು ಸ್ವಲ್ಪವಾಗಿರುವುದು. ಪ್ಲೇಗು ತೀವ್ರವಾಗಿರುವುದಿಲ್ಲ. ವಂಗರಾಷ್ಟ್ರದಲ್ಲಿ ಗಲಭೆಯಾಗುವುದು. ಪ್ರಭುತ್ವದವರು ಅದನ್ನು ಅಡಗಿಸುವರು. ದೊಡ್ಡ ರೈಲುಪ್ರಮಾದವಾಗುವುದು. ಭೂಕಂಪ, ಅಗ್ನಿಪರ್ವತವು ಬಾಯಿಬಿಡುವುದು ಮೊದಲಾದವು ಗ್ರಹಕೂಟದಿಂದ ಜರುಗುವುವು. ಒಂದು ಚುಕ್ಕಿಯು ಯೂರೋಪುಖಂಡದಲ್ಲಿ ಕಾಣಿಸಿಕೊಂಡು ಸಮುದ್ರದಲ್ಲಿ ಪತನವಾಗುವುದು. ಆಲಿಕಲ್ಲುಮಳೆಯು ಅಧಿಕವಾಗಿ ಸುರಿಯುವುದು. ಸಾಯಂಕಾಲದಲ್ಲಿ ಒಂದು ಉಲ್ಕಾಪಾತವು ಜರುಗುವುದು. ಐರ್ಲೆಂಡು, ಪರ್ಷಿಯಾ, ಪೋಲೆಂಡು, ಆಸ್ಯಾಮೈನರ್, ಫ್ರಾನ್ಸು, ಇಟಲಿ, ಅರೇಬಿಯಾ, ಖಾಲ್ಡಿಯಾ, ಬಾಸ್ರಾ, ಸ್ವೀಡನ್ನು, ನಾರ್ವೆ, ರಷ್ಯಾ, ಲೆವೆಂಟು, ಆಡ್ರಿಯಾಟಿಕ್ ಸಮುದ್ರ, ಪೆಸಿಫಿಕ್ ಸಾಗರ, ಸೈಪ್ರೆಸ್, ಈಜಿಪ್ಟು, ಪಾಲೆಸ್ಟೈನ್, ಅಮೇರಿಕೆ, ತುರ್ಕಿ, ಪಂಜಾಬು, ಬಂಗಾಳ, ಸಂಯುಕ್ತರಾಷ್ಟ್ರ ಮೊದಲಾದ ದೇಶಗಳಲ್ಲಿ ಈ ಪ್ರಮಾದಗಳು ಜರುಗುವುವು. ನಾಯಕರ ಆಜ್ಞಾನುಸಾರ ಪ್ರಜೆಗಳು ಕೆಲಸಮಾಡುವರು. ರಾಜಕೀಯವಿಚಾರದಲ್ಲಿ ಕೊಂಚ ಮೇಲುಂಟಾಗುವುದು.

ವ್ಯಾಪಾರವು.

ಭರತಖಂಡದಲ್ಲಿ ವ್ಯಾಪಾರದಿಂದ ಲಾಭವಾಗುವುದು. ಗೋದಿ, ಜೋಳ ಮೊದಲಾಗಿ ಆಹಾರ್ಯಪದಾರ್ಥಗಳ ಬೆಲೆ ಹೆಚ್ಚುವುದು. ಹತ್ತಿನೂಲಿನ ಕಾರ್ಯಾಲಯಗಳಿಗೆ ಅಗ್ನಿಪ್ರಮಾದವಾಗುವುದು. ಹತ್ತಿಯ ಧಾರಣೆಯು ಬಹಳ ಹೆಚ್ಚುವುದು. ತಾ॥ 24-4-1926ರಲ್ಲಿ ಒಂದು ಗ್ರಹಕೂಟವಾಗುವುದು. ಅದರಿಂದ ಪಶುಗಳಿಗೆ ರೋಗವಧಿಕವಾಗುವುದು. ಅಗ್ನಿ, ಗಾಳಿ, ಮಳೆ ಮೊದಲಾದವುಗಳು ಅಧಿಕವಾಗುವುವು. 12-6-1926 ರಲ್ಲಿ ಮತ್ತೊಂದು ಗ್ರಹಕೂಟವಾಗುವುದು. ಆಗಲು ಕೊಂಚ ದೊಂಬಿಕಲಹಗಳೂ, ಹೊಡೆದಾಟ ಬಡಿದಾಟಗಳೂ, ಜಲಪ್ರಳಯ, ಭೂಕಂಪ ಮೊದಲಾದವುಗಳೂ ತುರ್ಕಿ, ಯೂರೋಪು, ಸ್ವಿಟ್ಜರ್ಲೆಂಡು, ಬೆಲ್ಜಿಯಂ, ಈಜಿಪ್ಟು, ಗ್ರೀಸು, ಅರೇಬಿಯಾ, ಪ್ರಷ್ಯಾ, ರಷ್ಯ, ಸ್ವೀಡನ್ ದೇಶಗಳಲ್ಲೂ ಮಧ್ಯಹಿಂದುಸ್ಥಾನದಲ್ಲೂ ಬಂಗಾಳಾಸಂಯುಕ್ತರಾಷ್ಟ್ರದಲ್ಲೂ ಸಂಭವಿಸುವುವು. 14-5-1926ರಲ್ಲಿ ಬೇರೊಂದು ಗ್ರಹಕೂಟವಾಗುವುದು. ಆಗ ಮೊರಾಕೋ, ಹಾರ್ವೆ, ಟ್ರಾನ್ಸ್‌ವಾಲು, ಬೊಂಬಾಯಿ, ಸೂರತು ನಗರಗಳಲ್ಲಿ ಕೊಂಚ ನಷ್ಟವು ಸಂಭವಿಸುವುದು. ತಾ॥ 4-11-1926 ರಲ್ಲಿ ಜರುಗುವ ಗ್ರಹಕೂಟದ ಸಂಬಂಧವಾಗಿ ಇಂಗ್ಲೆಂಡು, ಡೆನ್ಮಾರ್ಕು, ಜರ್ಮನಿ ಜಪಾನು ದೇಶಗಳಲ್ಲೂ, ಮದ್ರಾಸು ಪಟ್ಟಣದಲ್ಲೂ ರೋಗಪ್ರಾಪ್ತವಾಗುವುದು, 21-9-1926ರಲ್ಲಿ ಆಗುವ ಗ್ರಹಕೂಟದಿಂದ ನದೀತೀರದಲ್ಲೂ ಸಮುದ್ರತೀರದಲ್ಲೂ ಇರುವ ಪಟ್ಟಣಗಳಲ್ಲಿ ರಾಜಕೀಯಾಂದೋಳನವಾಗುವುದು. ಪೋರ್ಟ್ಸ್‌ಗಲ್ಲಿನಲ್ಲೂ, ಪಂಜಾಬಿನಲ್ಲೂ, ಷಾಜಿಪುಟ್ ಮತ್ತು ಕಾಶೀನಗರಗಳಲ್ಲೂ ಕಲಹಪ್ರಾಪ್ತವಾಗುವುದು.

ಸೂರ್ಯಗ್ರಹಣ.

9-6-1926ರಲ್ಲಿ ಆಸ್ಟ್ರೇಲಿಯಾ ಮತ್ತು ಉತ್ತರ ಅಮೇರಿಕಾದೇಶಗಳಲ್ಲಿ ಸೂರ್ಯಗ್ರಹಣವು ಕಾಣಿಸಿಕೊಳ್ಳುವುದು. 3-1-1927 ರಲ್ಲಿ ದಕ್ಷಿಣ ಅಮೇರಿಕೆಯಲ್ಲಿ ಮತ್ತೊಂದು ಸೂರ್ಯಗ್ರಹಣವು ಕಾಣಿಸಿಕೊಳ್ಳುವುದು.

ಪ್ರಕಟಣೆ

ಶ್ರೀಮಜ್ಜಗದಾಚಾರ್ಯ ಶ್ರೀಮದುರಗಣಂಗಳ ನಿಜಸಿಂಹಾಸನಾಧೀಶ ಚನಡಯ್ಯದಾನಪುರಸಂಸ್ಥಾನದ ಶ್ರೀಸ್ವಾಮಿ ವಿರೂಪಾಕ್ಷಒಡೆಯರವರು ಪರಲೋಕಪ್ರಕರಣದ ಸಲುವಾಗಿ ಪ್ರೊಫೆಸರ್ ಸ್ಥಳವನ್ನು ಬಿಟ್ಟು ದಯೆಮಾಡಿಸಿದವರು ಈಗ ಸಂಸ್ಥಾನಮಠದಲ್ಲಿಯೇ ವಾಸಮಾಡಿರುವರು. ಆದ್ದರಿಂದ ಇನ್ನು ಮುಂದೆ ಯಾರಾದರೂ ಪತ್ರವ್ಯವಹಾರಮಾಡುವವರು ಚನಡಯ್ಯದಾನಪುರಸಂಸ್ಥಾನ ತಾಲ್ಲೂಕು ರಾಣಿಬೆನ್ನೂರು ಜಿಲ್ಲಾ ಧಾರ್ವಾಡ ಈ ಪತ್ತೆಗೆ ಬರೆಯಬೇಕು.

ಎಸ್. ಹಾಲಪ್ಪ, ಆಸ್ಥಾನಧರ್ಮೋಪದೇಶಕ,
ಚನಡಯ್ಯದಾನಪುರಸಂಸ್ಥಾನ.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.——ಸಂಪಾದಕ.

ಮ॥ ಎ. ರಂಗಣ್ಣನವರು ಸಂಜನಗೂಡು.

ಇವರು ತಾ॥ 3-4-1926 ರ ಮೈಸೂರು ಸ್ಟಾರಿನಲ್ಲಿ 'ವಿರೂಪಾಕ್ಷಒಡೆಯರವರ ಪ್ರಾರ್ಥನೆಗೆ ಜವಾಬು' ಎನ್ನುವ ಲೇಖದಲ್ಲಿ 'ನಮಗೆ ಏನು ಸಂದೇಹವಿದ್ದರೂ ಅದನ್ನು ದಯವಿಟ್ಟು ಪೋಸ್ಟು ಸ್ಟಾಂಪಿನೊಡನೆ ನನ್ನ ಈ ಕೆಳಗಿನ ಅಡ್ರೆಸ್ಸಿಗೆ ಬರೆದರೆ ದೊಡ್ಡವರ ಆಜ್ಞಾನುಸಾರ ನಿಮ್ಮ ಸಂದೇಹನಿವೃತ್ತಿ ಮಾಡುತ್ತೇನೆ' ಎಂದು ಬರೆದಿರುತ್ತಾರೆ. ಸ್ವಾಮಿ ಒಡೆಯರವರ ಲೇಖವನ್ನು ಗೀರ್ವಾಣಭಾಷೆಯಲ್ಲಿ ಪ್ರಕಟಿಸಿಲ್ಲ, ಮತ್ತಾವ ಅನ್ಯಭಾಷೆಯಲ್ಲೂ ಇಲ್ಲ. ಲೇಖವು ತಿಳಿಗನ್ನಡದಲ್ಲಿಯೇ ಸ್ಪಷ್ಟವಾಗಿ ಪ್ರಕಟವಾಗಿದೆ. ಹೀಗಿರುವಲ್ಲಿ ಮ॥ ಎ. ರಂಗಣ್ಣನವರಿಗೆ ಯಾವಭಾಗದಲ್ಲಿ ಸಂದೇಹಬಂತೋ ? ಆಶ್ಚರ್ಯವೇ ಸರಿ. ರಂಗಣ್ಣನವರ ಲೇಖದಿಂದ, 'Begging the question' ಎಂದರೆ ಕೇಳಿದ ಪ್ರಶ್ನೆಗೆ ಸದುತ್ತರವನ್ನು ಕೊಡಲಾರದೆ ಪ್ರಶ್ನೆಯನ್ನೇ ಪ್ರಶ್ನಿಸುವಂತೆ ಕಾಣುತ್ತದೆ. ಸ್ವಾಮಿ ಒಡೆಯರವರು ತಮ್ಮ ಲೇಖದಲ್ಲಿ ಸೂಚಿಸಿರುವಂತೆ ಈ ಮಹನೀಯರಂಗಣ್ಣನವರು, ಒಂದು ಸಭೆಯನ್ನು ಸೇರಿಸಿ ಏಕೆ ತಮ್ಮ ಸಂದೇಹವನ್ನು ನಿವೃತ್ತಿಪಡಿಸಿಕೊಳ್ಳಬಾರದೋ ತಿಳಿಯದು.

ಓರ್ವ ವೀರಶೈವ.

ಶ್ರೀಬಸವೇಶ್ವರಜಯಂತಿಮಹೋತ್ಸವ.

ಸರ್ವಜನರಿಗೂ ಈ ಮೂಲಕ ವಿಜ್ಞಾಪಿಸಿಕೊಳ್ಳುವದೇನೆಂದರೆ——ಈ ಸಂವತ್ಸರವು ಅರುವತ್ತುವರ್ಷಗಳ ಸಂಧಿಯಾದ್ದರಿಂದಲೂ, ಕನಿಷ್ಠಮಂಬಿಸಿಗೆಯ ಕೊನೇವರುಷವಾಗಿ ಕ್ಷಯನಾಮಸಂವತ್ಸರವೆಂಬಭಿನಾಮಪಡೆದಿರುವದರಿಂದಲೂ ಅರಿಷ್ಟನಿವಾರಣೆಗಾಗಿ ಪ್ರತಿಯೊಬ್ಬನೂ ನಿಜಚೈತ್ರ ಶುದ್ಧ ಪ್ರಥಮ ಸೋಮವಾರದಿಂದ ಐದುಸೋಮವಾರಗಳಲ್ಲೂ ಬಸವಣ್ಣಗಳನ್ನು ಸ್ನಾನ ಪೂಜೆ ನೈವೇದ್ಯಗಳಿಂದ ತೃಪ್ತಿಗೊಳಿಸಿ ಊಟಮಾಡಬೇಕು. ಅಲ್ಲದೆ ಇದೇ ಸಂವತ್ಸರದ ವೈಶಾಖ ಶು॥ ೩ ಗುರುವಾರ ರೋಹಿಣಿನಕ್ಷತ್ರ (ತಾ॥ 13-5-26) ದಲ್ಲಿ ಶ್ರೀಬಸವೇಶ್ವರಜಯಂತ್ಯುತ್ಸವದಿನವಾದಪ್ರಯುಕ್ತ ಆ ದಿವಸ ಪ್ರತಿ ಗ್ರಾಮದಲ್ಲೂ ಗ್ರಾಮನೈರ್ಮಲ್ಯ, ಗೃಹ ದೇವಸ್ಥಾನ ಇವುಗಳ ಸಾರಣೆಕಾರಣೆ ಎಲ್ಲಾ ದೇವಸ್ಥಾನಗಳಲ್ಲೂ ಅಭಿಷೇಕ ಪೂಜಾ ಮಂಗಳಾರತಿ ನೈವೇದ್ಯ ಭಕ್ತಗಣಾರಾಧನೆ ವಗೈರೆ ನಡಿಸಿ ಗ್ರಾಮಶೃಂಗಾರದಿಂದ ಶ್ರೀಮಹಾಬಸವೇಶ್ವರದೇವರ ಮೆರವಣಿಗೆಯನ್ನು ತಾಳಮೇಳ ವಾದ್ಯ ಮಹಾವೈಭವದೊಡನೆ ನಡಿಸಿ ಅವರವರ ಭಕ್ತಿಪ್ರದರ್ಶನದಿಂದ ಮುಕ್ತಿ ಪಡೆಯಬೇಕಾಗಿಯೂ, ಇದೇ ದಿವಸ ಪ್ರತಿಗ್ರಾಮದಲ್ಲೂ ಸಭೆಸೇರಿ ಬಸವಣ್ಣ ಮತ್ತು ಗೋಮಾತೆಗಳಿಂದ ಮನುಷ್ಯರಿಗೆ ಉಂಟಾಗಿರತಕ್ಕ ಮಹದುಪಕಾರದ ವಿಚಾರದಲ್ಲಿ ತಿಳುವಳಿಕೆಯಾಗುವಂತೆ ಉಪನ್ಯಾಸಹೇಳಿ ಶ್ರೀಬಸವೇಶ್ವರಭಜನೆಮಾಡಿ ಗೋಮಾತೆ ಬಸವಣ್ಣಗಳನ್ನು ಕಟುಗರಪಾಲಾಗದಂತೆ ಬೋಧಿಸಿ ನಿಗಾಯಿಡಿಸುವುದು ಆಯಾ ಗ್ರಾಮಾಧಿಕಾರಿಗಳ ಮತ್ತು ಪ್ರಮುಖರ ಕೆಲಸವಾಗಿರುತ್ತದೆ. ಇದರಂತೆ ಜಾರಿಗೆ ತರಬೇಕಾಗಿ ಮಹಾಪುರುಷರೊಬ್ಬರು ಅಪ್ಪಣೆ ಕೊಡಿಸಿರುತ್ತಾರೆ. ಭಕ್ತಿಜ್ಞಾನದಯಾಪರರಾದ ಸರ್ವಮಹನೀಯರೂ ಈ ಮಹಾಕಾರ್ಯಗಳನ್ನು ಮಾಡಿ ಪುಣ್ಯಕ್ಕೆ ಭಾಗಿಗಳಾಗುತ್ತಾರಾಗಿ ನಂಬುವ,

ಶ್ರೀಬಸವೇಶ್ವರ ಭಕ್ತ.

ವೀರಶೈವ ಲೆ॥ ಕೌನ್ಸಿಲ್ ಮೆಂಬರುಗಳಲ್ಲಿ ವಿಜ್ಞಾಪನೆ

ವೀರಶೈವ ವಿದ್ಯಾರ್ಥಿಗಳು ತಂತಮ್ಮ ಹೈಸ್ಕೂಲ್ ದೇಶಗಳಲ್ಲಿ ಪ್ರತ್ಯೇಕವಾಗಿ ಲಂಚಿನ ಏರ್ಪಾಟನ್ನು ಮಾಡಿಸಿಕೊಂಡು ತಮ್ಮ ಧರ್ಮಾಭಿಮಾನವನ್ನು ವ್ಯಕ್ತಗೊಳಿಸುವುದರಮೂಲಕ ಮಠದ ಗೌರವಪ್ರತಿಷ್ಠೆಗಳನ್ನು ಕಾಯುತ್ತಿರುವುದು ಬಹುಸ್ತುತ್ಯವಾಗಿದೆ. ಈ ಪದ್ಧತಿಯು ವೀರಶೈವಜನಾಂಗದಲ್ಲಿ ಸರ್ವತ್ರ ಆಚರಣೆಯಲ್ಲಿ ಬರಬೇಕಾಗಿರುವುದು ಎಷ್ಟು ಅವಶ್ಯಕವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ವೀರಶೈವರ ಪ್ರತ್ಯೇಕವಾದ ಊಟ ಉಪಚಾರಾದಿಗಳಿಗೆ ಮೈಸೂರುದೇಶದ ಅನೇಕ ಆಸ್ಪತ್ರೆಗಳಲ್ಲಿ ಅನುಕೂಲವಿಲ್ಲದಿರುವುದರಿಂದ ಸಮಸ್ತ್ರಾರುಜನರು ಇನ್‌ಪೇಷಂಟ್ (Inpatient) ಗಳಾಗಿ ವೈದ್ಯೋಪಚಾರವನ್ನು ಹೊಂದಲು ಅವಕಾಶವಿಲ್ಲದಾಗಿದೆ. ಈ ಸಂಬಂಧವಾದ ನ್ಯೂನತೆಗಳನ್ನು ಹೋಗಲಾಡಿಸುವದು ವೀರಶೈವಪ್ರಮುಖರಾದ ನಿಮ್ಮಗಳ ಕರ್ತವ್ಯವಾಗಿದೆ. ಇದು ಹಾಗಿರಲಿ. ವೀರಶೈವರಿಗೆ ಪ್ರತ್ಯೇಕ ಲಂಚಿನ ಏರ್ಪಾಟುಗಳಾಗುವುದಾದರೆ ಅವುಗಳ ಉಪಯೋಗವನ್ನು ಹೊಂದುವುದು ಬಹುಸೋಜಿಗವಾಯಿತು. ಇದಕ್ಕೆ ಮೈಸೂರು ಸ್ಥಾನ

ವಿಧಾಯಕಸಭೆಯ ಮೆಂಬರರುಗಳಾದ ನಿಮ್ಮಗಳಿಗೆ ಮಾಡಿರುವ ಲಂಚಿನ ಏರ್ಪಾಟಿನಲ್ಲಿ ಒಬ್ಬ ದೊಡ್ಡ ಮನುಷ್ಯ ಮೆಂಬರರು ಭಾಗಿಗಳಾಗದೆ ಜನರಲ್ ಏರ್ಪಾಟಿನಲ್ಲಿ ಸೇರುತ್ತಾರೆಂದು ನಾನು ಕೇಳಿರುವುದು ಉದಾಹರಣೆಯಾಗಿರುತ್ತದೆ. ಇದು ನಿಜವಾಗಿದ್ದ ಪಕ್ಷದಲ್ಲಿ ದೊಡ್ಡ ಪ್ರಮಾದವೇ ಸರಿ. ಈಗಿನ ಕಾಲದಲ್ಲಿ ಚಿಕ್ಕವರನ್ನು ದೊಡ್ಡವರು ಅನುಕರಿಸಬೇಕಾದ ಸಂದರ್ಭವೊದಗಿರುವುದು ಕಾಲವೈಚಿತ್ರವಲ್ಲವೇ? ಆದರೆ ನನ್ನ ಅಭಿಪ್ರಾಯದಲ್ಲಿ ದೊಡ್ಡವರನ್ನು ಚಿಕ್ಕವರು ಅನುಕರಿಸುವುದು ಯುಕ್ತವಾಗಿರುವುದರಿಂದ ಆ ದೊಡ್ಡ ಮನುಷ್ಯ ಮೆಂಬರರು ವೀರಶೈವರಲಂಚಿನಲ್ಲಿ ಭಾಗಿಗಳಾಗಿ ಸರ್ವರಿಗೂ ಮಾರ್ಗದರ್ಶಕರಾಗದಿರರೆಂದು ನಂಬುತ್ತೇನೆ. ವೀರಶೈವ ಧರ್ಮಾಭಿಮಾನಿ.

ಪಟೇಲರುಗಳಲ್ಲಿ ನನ್ನ ವಿಜ್ಞಾಪನೆ.

ಮಹಾಶಯರೆ, ಮೆಹರ್ಬಾನ್ ಸರ್ಕಾರದವರು ತಮ್ಮಗಳನ್ನ ಒಂದು ಮನೆ ಇರತಕ್ಕ ಸ್ಥಳಗಳಿಗು ಸಹ ಪ್ರಜಾಪರಿಪಾಲನೆಗಾಗಿ ನೇಮಕಮಾಡಿರುವ ಸಂಗತಿಯೂ, ಶಾನುಭೋಗರುಗಳನ್ನ 6-7 ಗ್ರಾಮಗಳಿಗೊಬ್ಬರಂತೆ ನೇಮಕಮಾಡಿರುವ ವಿಷಯವೂ ತಮ್ಮಗಳಿಗೆಲ್ಲಾ ತಿಳಿದುದಾಗಿದೆ. ಅಂದರೆ ಸಂಸ್ಥಾನದಲ್ಲಿ ಶಾನುಭೋಗರ ಸಂಖ್ಯೆಗಿಂತ ಪಟೇಲರುಗಳಸಂಖ್ಯೆಯೇ ಜಾಸ್ತಿಯಾಗಿರುತ್ತದೆ. ಆದರೆ ಶಾನುಭೋಗರುಗಳ ಕಾನ್ಫರೆನ್ಸ್ ಪ್ರಾರಂಭವಾದಲಾಗಾಯತು ಈವರೆಗೂ ಸಕಾಲದಲ್ಲಿ ನಡೆಯುತ್ತಲೇ ಇರುತ್ತದೆ. ಇವರಂತೆಯೇ ಪಟೇಲರು ಮುಂದುವರಿಯಬೇಕಾಗಿ ಮಹಾನುಭಾವರಾದ ಕೈ॥ ಕಬ್ಬಳ್ಳಿ ಚೆನ್ನಬಸಪ್ಪನವರು ಶ್ರಮಪಟ್ಟು ನಾಡಿದ ಪಟೇಲರ ಮಹಾಸಭಾಧಿವೇಶನವೇ ಕೊನೆಯಾಯಿತು. ಈ ಮಹಾಪುರುಷರು ತಮ್ಮ ಜನ್ಮಸಾರ್ಥಕಕ್ಕೆ ಬೇಕಾದ ಪರೋಪಕಾರ ಕಾರ್ಯಗಳನ್ನು ಮಾಡುತ್ತಿದ್ದ ಹಾಗೆಯೇ ಪರಮಾತ್ಮನು ಇವರಿಗೆ ಅಲ್ಪಾಯುಷ್ಯವನ್ನು ಕೊಟ್ಟುದ್ದಕ್ಕೆ ವಿಷಾದಿಸುತ್ತೇನೆ. ಈಚೆಗೆ ಮಹಾಜನಗಳೆಲ್ಲರೂ ಮೈಮರೆತು ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು ಎಂಬ ಗಾದೆಯಂತೆ ತಮ್ಮಗಳಿಗೆ ಬೇಕಾದ ಕೆಲಸಗಳನ್ನು ಮರೆತಿರುವುದಕ್ಕಾಗಿ ಆಶ್ಚರ್ಯಪಡುತ್ತೇನೆ. ಇನ್ನು ನಮ್ಮ ನಮ್ಮಗಳಲ್ಲಿರತಕ್ಕ ಮೌಢ್ಯವು ಹೋಗಿ ನಾಗರೀಕತೆಯು ಬರುವಸಂಭವವೇ ಇಲ್ಲವಾಗಿದೆ. ನಮ್ಮಗಳಲ್ಲಿರತಕ್ಕ ಕುಂದುಕೊರತೆಗಳನ್ನೂ ಮೌಢ್ಯವನ್ನೂ ದೂರಮಾಡಿಕೊಂಡು ಶೀಲಸ್ವಭಾವ ನಾಗರೀಕತೆ ಮುಂತಾದ ಸುಗುಣಗಳನ್ನು ಕಲಿತುಕೊಳ್ಳುವುದು ಈ ಕಲಿಯುಗ ಮುಗಿದರೂ ಸಾಧ್ಯವಾಗುತ್ತದೆಯೋ ಹೇಗೋ! ನಾನು ಕಾಣೆನು. ಪಟೇಲರುಗಳಲ್ಲಿ ಸುಗುಣಗಳಿರತಕ್ಕ ಪುಣ್ಯಾತ್ಮರುಗಳು ಕೆಲವರಿರುತ್ತಾರೆ. ಉಳಿದವರೆಲ್ಲರೂ ಅವರಂತೆ ಇರಬೇಕಾಗಿ ಪ್ರಾರ್ಥನೆ. ಹಿಂದೆ ನಡೆಯುತ್ತಿದ್ದ ಪಟೇಲರುಗಳ ಕಾನ್ಫರೆನ್ಸ್‌ನ್ನ ಪುನಃ ಈಗ ಯಾವ ಮಹಾನುಭಾವರಾದರೂ ಆರಂಭಿಸಿ ಮುಂದುವರಿಯುವುದಕ್ಕೆ ಶ್ರಮಪಟ್ಟು ಆ ಮೂಲಕ ಪುಣ್ಯಭಾಗಿಗಳಾಗಿ ಸರ್ವಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಬೇಕು. ಇದರಿಂದ ಕುರುಡನಿಗೆ ಕಣ್ಣನ್ನೂ ದರಿದ್ರನಿಗೆ ಐಶ್ವರ್ಯವನ್ನೂ ಕೊಟ್ಟಂತೆ ಆಗುತ್ತದೆ. ಕಾನ್ಫರೆನ್ಸ್ ನಡೆಯುವುದಕ್ಕೆ ದಯವಿಟ್ಟು ಪುಣ್ಯಾತ್ಮರುಗಳು ಸಹಾಯಕರಾಗಿನಿಂತು ಏರ್ಪಾಡುಮಾಡಬೇಕಾಗಿ ವಿನಯದಿಂದ ಬೇಡಿಕೊಳ್ಳುತ್ತೇನೆ. ತಮ್ಮಗಳ ವಿಧೇಯ, ಪಟೇಲ್.

ಗುಂಡ್ಲುಪೇಟೆತಾಲ್ಲೂಕು ಕಾನ್ಫರೆನ್ಸ್.

ಈ ತಾಲ್ಲೂಕಿನ 10ನೇ ಸಮ್ಮೇಳನವು 30-3-1926 ರಲ್ಲಿ ಶ್ರೀಕೃಷ್ಣರಾಜೇಂದ್ರ ಟೌನ್‌ಹಾಲಿನಲ್ಲಿ ಡೆಪ್ಯುಟೀಕಮಿಷನರ್ ಮ॥ ಎ. ವಿ. ರಾಮನಾಥನ್. ಬಿ.ಎ., ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದಕ್ಕೆ ನಂಜನಗೂಡು ಸಬ್‌ಡಿವಿಜನ್ ಆಫೀಸರು, ವ್ಯವಸಾಯದ ಇಲಾಖೆಯ ಡೆಪ್ಯುಟೀ ಡೈರೆಕ್ಟರು, ರಿಟೈರ್ಡ್ ಪೊಲೀಸ್ ಸೂಪರಿಂಟೆಂಡೆಂಟರಾದ ಮ॥ ನರಸಿಂಹಶಾಸ್ತ್ರಿಗಳು, ಡಿಸ್ಟ್ರಿಕ್ಟ್ ಬೋರ್ಡು ವೈಸ್‌ಪ್ರೆಸಿಡೆಂಟರು, ಕೋ-ಆಪರೇಟಿವ್ ಸೊಸೈಟಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು, ತಾಲ್ಲೂಕು ಬೋರ್ಡು ಮುನಿಸಿಪಲ್ ಮತ್ತು ಪಂಚಾಯಿತಿ ಮೆಂಬರುಗಳಾದಿಯಾಗಿ ವಿಶಿಷ್ಟ ಜನರು ದಯಮಾಡಿಸಿದ್ದರು. ಪ್ರೆಸಿಡೆಂಟರು ಸಾಹುಕಾರ್ ಚೆನ್ನಬಸಪ್ಪನವರ ಅಕಾಲಮರಣದ ವಿಷಯವಾಗಿ ವ್ಯಸನವನ್ನು ತೋರಿಸಿ ಈ ತಾಲ್ಲೂಕಿನಲ್ಲಿ ನಡೆದಿರುವ ಒಳ್ಳೇ ಕೆಲಸಗಳನ್ನು ಸೂಚಿಸಿ ಮಾಡಿದ ಸಭಾಪ್ರಾರಂಭಭಾಷಣಾನಂತರ ಅಮಲ್ದಾರ್ ಮ॥ ರಾಮಸ್ವಾಮಯ್ಯನವರು ತಾಲ್ಲೂಕಿನ ಅಡ್ರೆಸ್ಸನ್ನು ಕನ್ನಡದಲ್ಲಿ ಓದಿದರು. ತರುವಾಯ ಈ ತಾಲ್ಲೂಕಿನ ವಿದ್ಯಾಭಿವೃದ್ಧಿ, ವಿಲೇಜು ಫಾರೆಸ್ಟುಗಳ ಅಭಿವೃದ್ಧಿ, ವ್ಯವಸಾಯ ಪರಸ್ಪರ ಸಹಾಯಸಂಘ ಈ ವಿಚಾರಗಳಲ್ಲಿ ಉಪನ್ಯಾಸಗಳಾದನಂತರ ಹಿಂದೆ ನಡೆದ ಕೆಲಸಗಳನ್ನು ಮತ್ತು ಈ ವರುಷ ನಡೆದಿರುವ ಕೆಲಸಗಳನ್ನು ಹೋಲಿಸಿ ಈ ವರುಷ ತೃಪ್ತಿಕರವಾಗಿ ಕೆಲಸ ನಡೆದಿದೆ ಎಂದು ವಗೈರೆ ಮ॥ ನರಸಿಂಹಶಾಸ್ತ್ರಿಗಳು ಉಪನ್ಯಾಸವನ್ನು ಮಾಡಿದರು.

ಆದಿಕರ್ನಾಟಕರ ವಿಚಾರವಾಗಿ ನಡೆಸಿದ ಏರ್ಪಾಡಿನಲ್ಲಿ 37 ಜನರಿಗೆ 103 ಎಕರೆ ಜಮೀನುಗಳನ್ನು ರಿಯಾಯಿತಿ ದರದಮೇರೆ ಕೊಟ್ಟಿದೆಯೆಂದೂ ಅನೇಕ ಬಾವಿಗಳನ್ನು ಇವರಿಗೆ ಒದಗಿಸಿ ಕೊಟ್ಟಿತೆಂದೂ, ಹಾರೋಲಾಳಿಯನ್ನು ಇವರಲ್ಲಿ ಕೆಲವರಿಗೆ ಮುಫತ್ತಾಗಿ ಕೊಟ್ಟು ನೇಯ್ಗೆಯನ್ನು ಅಭಿವೃದ್ಧಿಪಡಿಸಿತೆಂದೂ, ಬಾಚಹಳ್ಳಿಯಲ್ಲಿ ಒಂದು ಪಂಚಮಾ ಸಮ್ಮೇಳನವನ್ನು ನಡಿಸಿ ಇವರಿಗೆ ಕೊಟ್ಟ ಜಮೀನ್ ಸಾಗುವಳಿಗೆ ಅನುಕೂಲಿಸುವಂತೆ ಒಂದು ವ್ಯವಸಾಯದ ಕೋ-ಆಪರೇಟಿವ್ ಸೊಸೈಟಿ ಸ್ಥಾಪಿಸಲ್ಪಟ್ಟಿರುತ್ತೆಂದೂ ನಮೂದಿದೆ. ಫಾರೆಸ್ಟು ಪಂಚಾಯಿತಿಗಳೂ, ಗ್ರಾಮ ಮತ್ತು ಕೆರೆ ಪಂಚಾಯಿತಿಗಳೂ ಬಹು ಮುತವರ್ಜಿವಹಿಸಿ ಕೆಲಸನಡಿಸಿರುವ ವರದಿಗಳು ಆದನಂತರ ದವಸದ ಬ್ಯಾಂಕುಗಳು ವಗೈರೆ ಕೆಲವು ಕುಂದುಕೊರತೆಗಳು ಚರ್ಚೆಯಾಗಿ ಪ್ರೆಸಿಡೆಂಟರು ಬಹುಸ್ವಾರಸ್ಯವಾದ ಭಾಷಣಮಾಡಿ ಶ್ರೀಮನ್ಮಹಾರಾಜರವರಿಗೆ ಜಯಘೋಷದಿಂದ ವಂದನೆಗಳನ್ನು ಸಮರ್ಪಿಸಿ ಸಮ್ಮೇಳನವನ್ನು ಮುಕ್ತಾಯಮಾಡಿದರು. ರಾತ್ರಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡು ವೈಸ್‌ಪ್ರೆಸಿಡೆಂಟರವರು ಆರೋಗ್ಯವಿಚಾರವಾಗಿ ಮ್ಯಾಜಿಕ್‌ಲ್ಯಾಂಟರ್‌ಗಳನ್ನು ತೋರಿಸಿ ಉಪನ್ಯಾಸವನ್ನು ಮಾಡಿದರು.

ಮದ್ಯಮಾಂಸನಿಷೇಧಸಂಘ, ಬಳ್ಳಾರಿ.

ಪ್ರಿಯಬಾಂಧವರಿರಾ : ಪ್ರಪಂಚದಲ್ಲಿ ಪರಮಾತ್ಮನ ಸೃಷ್ಟಿಗೆ ಒಳಪಟ್ಟ ಪ್ರತಿಯೊಂದು ಪ್ರಾಣಿವರ್ಗದಲ್ಲಿಯೂ ಮಾನವಜನ್ಮವೇ ಶ್ರೇಷ್ಠವೆಂದು ಸಾರುತ್ತಿರುವಾಗ್ಗೆ ಇಂಥಾ ಮಾನವರು ಪ್ರತಿಯೊಂದು ಪ್ರಾಣಿವರ್ಗದಲ್ಲಿಯೂ ದಯೆ, ಕನಿಕರ, ವಿಶ್ವಾಸ, ಪ್ರೀತಿಗಳನ್ನಿಟ್ಟು ನೋಡುವುದೇ ಧರ್ಮವು. ಹೀಗಿರುವಲ್ಲಿ ಮಾನವರು ತಾವು ಬುದ್ಧಿಹೀನರಂತೆ ಪ್ರಾಣಿಗಳನ್ನು ಹಿಂಸೆಮಾಡುವದು ಅವರ ಅಧರ್ಮ ಕಾರ್ಯವಲ್ಲವೆ? ಇಂಥಾ ಅಧರ್ಮ ಕಾರ್ಯವನ್ನು ನೋಡಿ ಅದಷ್ಟುಮಟ್ಟಿಗೂ ದೂರೀಕರಿಸಬೇಕೆಂದು ವೇ॥ ಟಿ. ಹೆಚ್. ಯಂ. ಚಂದ್ರಶೇಖರಶಾಸ್ತ್ರಿ, ಬಿ.ಎ., ಬಿ.ಎಲ್., ವಕೀಲರು ಈ ಮೇಲ್ಕಂಡ ಸಂಘವನ್ನು ತಾ॥ 7-3-26ನೇ ಭಾನುವಾರ ಸ್ಥಾಪಿಸಿ ಅವರೇ ಅದಕ್ಕೆ ಪೋಷಕರಾಗಿ ನಿಂತಿರುವರಲ್ಲದೆ ಮ॥ ಸಿ. ಯಂ. ನಂಜುಂಡಯ್ಯನವರು ಉಪಪೋಷಕರಾಗಿರುತ್ತಾರೆ, ಮತ್ತು ಸಂಘದ ಪರವಾಗಿ ಕೆಲಸ ಮಾಡುತ್ತಾರೆ.

ಕಮಿಟಿ ಮೆಂಬರ್ರು—ಮಾದಿಗರ ದುರ್ಗಪ್ಪ, ಪೆರವಲಿ ನಾಗಪ್ಪ, ಚೆರುಕುತೋಟ ಓಬಳೇಶಪ್ಪ, ಗಾಂಡ್ಲಪರ್ತಿ ಮರೆಪ್ಪ, ಬೆಂಗಳೂರು ವೀರಪ್ಪ, ಬಳ್ಳಾರಿ ಪಲ್ಲೆಪ್ಪ, ಕುಮತೀ ನಾರಪ್ಪ, ಬೊಮ್ಮಪರ್ತಿ ಪೆದ್ದನ್ನ, ಚನ್ನಪಲ್ಲಿ ಅಶ್ವತ್ಥಪ್ಪ, ಕಾಟ್ನಿಕಾಲವ ನಾಗಪ್ಪ. ಈ ಸಂಘದ ಸ್ಥಾಪನೆಯ ದಿವಸವೇ ವೇ॥ ಟಿ. ಹೆಚ್. ಯಂ. ಚಂದ್ರಶೇಖರಶಾಸ್ತ್ರಿಗಳು, ಬಿ.ಎ., ಬಿ.ಎಲ್., ಇವರು ಪ್ರಾಣಿಹಿಂಸೆಯ ವಿಚಾರಕವಾದ ಉಪನ್ಯಾಸವನ್ನು ಪ್ರಶಂಸನೀಯವಾಗಿ ಮಾಡಿ ಪ್ರಾಣಿಯುದ್ಧಾರಕಾರ್ಯಕ್ಕೆ ಪ್ರತಿಯೊಬ್ಬರೂ ಬದ್ಧರಾಗಿರಬೇಕೆಂದು ಬೋಧಿಸಿದಮೇಲೆ ಸಂತೋಷಾರ್ಥವಾಗಿ ಸಭೆಯಲ್ಲಿ ನೆರೆದ ಪ್ರತಿಯೊಬ್ಬ ಶ್ರೋತೃಕನಿಗೂ ಮಿಠಾಯಿ ದಿನಸುಗಳು ಹಂಚಲ್ಪಟ್ಟವು. ಪಿ. ಯಂ. ನಂಜುಂಡಯ್ಯನವರು ಪ್ರಾಣಿಹಿಂಸಕವಾದ ಫೋಟೋಗಳನ್ನು ಪ್ರತ್ಯಕ್ಷತಃ ತೋರಿಸುತ್ತಾ ಇಂಥಾ ಹಿಂಸೆಯನ್ನು ಮಾಡಿದವರಿಗೆ ಇಂಥಾ ಪಾಪವೇ ಸಂಘಟಿಸುತ್ತದೆ ಎನ್ನುವ ವಿಚಾರವನ್ನು ಉಪನ್ಯಾಸಮಾಡಿದರು. ಆಮೇಲೆ ಸಿಂದಿಗಿ ಸಿದ್ಧಪ್ಪನವರು ಪ್ರತಿಯೊಬ್ಬ ಮನುಷ್ಯನ ಕನಸಿನಲ್ಲಿಯೂ ಸಹ ಬೋಧವಾಗುವಂಥ ಮಾತುಗಳಿಂದ ಉಪನ್ಯಾಸವನ್ನು ಮಾಡಿ ಪ್ರಾಣಿಹಿಂಸೆಗೆಲ್ಲಾ ವಿದ್ಯಾವಿಹೀನತ್ವವೇ ಕಾರಣವೆಂಬುದರ ದೃಷ್ಟಾಂತಗಳನ್ನು ಕೊಟ್ಟರು.

ಸಂಘದ ಕಾರ್ಯಕ್ರಮ.—1. ವಿದ್ಯಾಪ್ರಚಾರಮಾಡುವದು. 2. ಪಶುಪಕ್ಷಿ ಜಲಚರವೇ ಮೊದಲಾದ ಎಲ್ಲಾ ಪ್ರಾಣಿಗಳ ವಧೆಯನ್ನು ಮತ್ತು ತಿನ್ನುವುದನ್ನು ನಿಷೇಧಿಸುವುದು. 3. ಮದ್ಯಪಾನವನ್ನು ಮತ್ತು ಸಮಸ್ತ ಮಾದಕಪದಾರ್ಥಗಳ ಸೇವನೆಯನ್ನು ನಿಲ್ಲಿಸುವದು. 4. ವಾರವಾರಕ್ಕಾಗಲಿ ಕನಿಷ್ಟ ತಿಂಗಳಿಗೊಂದಾವರ್ತಿಯಾಗಲಿ ಉಪನ್ಯಾಸಗಳ ಮೂಲಕ ಮದ್ಯಮಾಂಸ ವಿಚಾರಗಳನ್ನು ಬೋಧಿಸಿ ಜ್ಞಾನವಂತರನ್ನಾಗಿ ಮಾಡುವದು. ಈ ಸಂಘದವರು ದಾವಣಗೆರೆಯ - ಪ್ರಾಣಿದಯಾಜ್ಞಾನಪ್ರಸಾರಕಸಂಘ - ದವರಿಗೆ ಅವರ ಸಹಾನುಭೂತಿಗಾಗಿ ಕೃತಜ್ಞರಾಗಿರುತ್ತಾರೆ.

ಇತಿ, ಬುಧಜನವಿಧೇಯ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಬದಲಾವಣೆ.

ಇಲಾಖಾ ಮೊಖ್ತೇಸರರ ಶಿಫಾರ್ಸಿನಂತೆ ಮಿಡ್ಲ್ ಮತ್ತು ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳಲ್ಲೂ, ಆಫೀಸುಗಳಲ್ಲೂ S. S. L. C. ಆದವರೇ ಇರಬೇಕೆಂತ ವಿಧಾಯಕಮಾಡಿರುತ್ತಾರೆ. ಇದು ಹೊಸಬರನ್ನು ನಿಯಮಿಸುವುದಕ್ಕೆ ಸಂಬಂಧಿಸಿದ್ದೆ? ಈಗಲೇ ಎಲ್ಲಾ ಟೀಚರುಗಳನ್ನೂ ಬದಲಾಯಿಸಲ್ಪಡಬೇಕೆ? ಎಂಬುದು ಪತ್ರಿಕಾಪ್ರಕಟನೆಗಳಲ್ಲಿ ಸ್ಪಷ್ಟವಿಲ್ಲ. ಆದರೆ ವೆರ್ನಾಕ್ಯುಲರ್ ಆದನಂತರ ಮೇಲೆ ವಿಧಿಸಿರುವ ಪರೀಕ್ಷೆಗಳಲ್ಲಿ ಅಲ್ಪಭಾಗದಲ್ಲಿ ವಿಮುಖರಾಗಿದ್ದರೂ 10, 15, 20 ವರ್ಷದ ಅನುಭವವನ್ನು ಹೊಂದಿದಕ್ತರಾಗಿರುವವರೆನ್ನೆಲ್ಲಾ ಪ್ರೈಮರಿ ಮತ್ತು ಇನ್. ಕ. ಸ್ಕೂಲುಗಳಲ್ಲಿನ ಪ್ರೈಮರಿ ಭಾಗಕ್ಕೂ ಬದಲಾಯಿಸುತ್ತಾರೆಂತ ಬಲವಾದ ಪ್ರವಾದಹರಡಿದೆ. ಏನೂ ಅನುಭವವಿಲ್ಲದ ಪೂರ್ವವಯಸ್ಸಿನವರಿಗಿಂತಲೂ ಸರ್ವೀಸ್‌ದಾರರಾಗಿ ಅಷ್ಟೇ ಯೋಗ್ಯತೆ ಇರುವ ಹಳಬರು ಸರ್ವವಿಧದಲ್ಲೂ ಉತ್ತಮರಲ್ಲವೆ? ಖಾಯಂದಾರರು ಟ್ರೈನಿಂಗಿಗೆ ಹೋದಾಗ ನಿಯಮಿಸುವ ಹೊಸಬರಿಂದ 10 ತಿಂಗಳು ಕೆಲಸ ಹೇಗೆ ನಡೆಯುತ್ತೆ ಎಂಬುದನ್ನು ವಿದ್ಯಾಭಿಮಾನಿಗಳೆಲ್ಲರೂ ಬಲ್ಲರು. ಅನುಭವಜನ್ಯಜ್ಞಾನವು ವ್ಯಾಸಂಗಜನ್ಯ ಜ್ಞಾನಕ್ಕಿಂತ ಕೀಳೆಂದು ಸರ್ವರೂ ಒಪ್ಪಬೇಕಾಗಿದೆ. ಈ ಲಾಗಾಯಿತು ಮೇಲಿನ ರೂಲು ಜಾರಿಯಲ್ಲಿ ಬಂದರೆ ತಾನಾಗಿ 8-10 ವರ್ಷದಲ್ಲಿ ಸರಿಹೋಗುವುದು. ಸೇರಿದ ಹೊಸಬರು ಅನುಭವಶಿಕ್ಷಣ ಪಡೆದೇಪಡೆಯುವರು. ಕೂಡಲೆ ಜಾರಿಯಲ್ಲಿ ತರತಕ್ಕದ್ದು ಬಾಲಕರ ವಿದ್ಯಾಭಿವೃದ್ಧಿಗೂ ಮಾಸ್ತರುಗಳ ಹಿತಕ್ಕೂ ಕುಂದುಕವಲ್ಲವೆ? ಇಷ್ಟಾಗಿ ಸಾಮಾನ್ಯತಃ S. S. L. C. ಮತ್ತು U. S. ಪರೀಕ್ಷೆಗಳಲ್ಲಿ ರಸಾಯನಶಾಸ್ತ್ರ, ಭೌತಿಕಶಾಸ್ತ್ರ, ಸಂಸ್ಕೃತ, ಬೀಜಗಣಿತ ಇತ್ಯಾದಿ ಅಪರಿಚಿತ ಮತ್ತು ವ್ಯಾಸಂಗಾನಂತರ ಬಳಕೆಯಲ್ಲಿಲ್ಲದ ಭಾಗಗಳಲ್ಲೇ ಫೇಲಾಗಿರತಕ್ಕವರಾಗಿರುತ್ತಾರೆ. ಈ ಭಾಗಗಳನ್ನು ಇವರು ಸ್ಕೂಲುಗಳಲ್ಲ ಪಾಠಹೇಳಿಕೊಡಬೇಕಾಗಿಲ್ಲ. ಹೀಗೆ ಅನವಸರವಾಗಿದರೂ ಥಟ್ಟನೆ ಅನುಭವಸ್ಥರನ್ನು ಅಕ್ಷರಾಭ್ಯಾಸಮಾಡಿಸಲು ನೇಮಿಸಿ ಹೈಸ್ಕೂಲುಗಳಿಂದ ಹೊರಬೀಳುವ ಹುಡುಗರನ್ನೂ ಮಿಡ್ಲ್ ಸ್ಕೂಲುಗಳಿಗೆ ತುಂಬುವುದು ಯುಕ್ತವೇ? ಮಾಡಿರುವ ಈ ರೂಲು ಕಾಲಕ್ಕೆ ನ್ಯಾಯವಾದುದೂ ಸರ್ವಸಮ್ಮತವೂ ಆಗಿದೆ. ಆದರೆ ಥಟ್ಟನೆ ಜಾರಿಗೆ ಬಂದರೆ ಅನಾನುಕೂಲವೇ ವಿನಃ ಅನುಕೂಲ ಏನೂ ಇಲ್ಲ. ಖಾಲಿಬೀಳುವ ಸ್ಥಾನಗಳಿಗೆಲ್ಲಾ ಸದಾ ಹೊಸಬರನ್ನು ನೇಮಿಸುವ ಏರ್ಪಾಟಿನಿಂದ ಸರ್ವೀಸ್‌ದಾರರು ಬಡ್ತಿ ಇಲ್ಲದೆ ವ್ಯಥೆಪಡುತ್ತಾ ಇರಬೇಕಾಗಿದೆ. ಕೊನೇತಲಬಿನ ಖಾಲಿಜಾಗಾಗಳ ಪ್ರಕಟನೆಯೇ ಇಲ್ಲ. ಇದು ಏನುಕ್ರಮವೋ ದೇವರಿಗೇ ಗೊತ್ತು. S S. L. C. ಆಗಿ ಒಂದೇ ಸಲ ಕೆಲಸಕ್ಕೆ ಸೇರಿರುವವರು 20, 25, 30, 35 ಈ ರೀತಿ ತಲಬು ಪಡೆಯುತ್ತಾ ಇದ್ದಾರೆ. ಸೇರುವವರಿಗೆ ಪ್ರೋತ್ಸಾಹ; ಇರತಕ್ಕವರಿಗೆ ನಿರುತ್ಸಾಹ. ಈ ಭಿನ್ನಭೇದಗಳಿಂದ ಮನನೊಂದ ಸರ್ವೀಸ್‌ದಾರರನ್ನೂ ಈಗ ಮೂಲಗೆ ಕೂರಿಸುವುದು ಕಾರ್ಯದಕ್ಷತೆಗೆ ಭಂಗವೆಂದರೆ ಅತಿಶಯೋಕ್ತಿ ಅಲ್ಲವಾಗಿದೆ. ಸರ್ಕಾರದವರು ಪರಿಶೀಲಿಸಬೇಕಾಗಿ ಪ್ರಾರ್ಥನೆ. ವಿದ್ಯಾಭಿಮಾನಿ,

ಆಚಾರ್ಯರ ಅನ್ಯಾಯ ಅಳತೆಗೆಟ್ಟಿತು.

ಹಾವೇರಿ ತಾಲ್ಲೂಕ ಪೈಕಿ ಕಿತ್ತೂರ ವರದಾನದಿಯ ದಂಡೆಯಮೇಲಿರುವ ಶ್ರೀಸಂಗಮೇಶ್ವರದೇವಸ್ಥಾನದ ವಹಿವಾಟದಾರ ಸಂಗಪ್ಪಾ ಬಿನ್ ಬಸಲಿಂಗಪ್ಪಾ ಮಠಪತಿ ಈತನ ಹೆಸರಲ್ಲೇ ಈ ಜಮೀನು ಇದ್ದು ಈ ಜಮೀನಿನಲ್ಲಿ ಸದರಿ ದೇವಸ್ಥಾನವೂ ಈ ದೇವಸ್ಥಾನದ 10-12 ಮೊಳ ಅಂತರದಲ್ಲಿ ಗುಡಿಯೆಡಕ್ಕೆ ದೇವರಿಗೆ ನೈವಿದ್ಯ ಪ್ರಸ್ತ ವಗೈರೆ ಮಾಡಲಿಕ್ಕೆ ಒಂದು ಉಗ್ರಾಣ ಮಠವೂ ಇರುವವು. ಈ ಮಠದಲ್ಲಿ ಮೊದಲಿನಿಂದ ಒಬ್ಬ ಮೂರ್ತಿಗಳು ದಾಸೋಗಮಾಡುತ್ತಾ ಬಂದಿರುತ್ತಾರೆ. ಈಗ ಸದ್ಯಕ್ಕೆ ಈ ಮಠದಲ್ಲಿ ಚನಬಸಯ್ಯ ಗುರು ಶಿವಪ್ಪಯ್ಯಸ್ವಾಮಿ ಎಂಬಾತನು ಇರುತ್ತಾನೆ. ಸದರೀ ದೇವಸ್ಥಾನದ ಜಮೀನನ್ನು 1861-62 ರಲ್ಲಿ ಸಂಗನಬಸಪ್ಪಾ ಬಿನ್ ಬಸಲಿಂಗಪ್ಪಾ ಮಠಪತಿ ಪವತಿ ಮುದಗಲ್ಲಾಚಾರ್ಯನೆಂದು ಕುಂಪಣಿಸರಕಾರದವರು ಈ ಆಚಾರ್ಯನಿಗೆ ಸನದು ಕೊಟ್ಟಿರುತ್ತಾರೆ. ಸಂಗನಬಸಪ್ಪಾ ಬಿನ್ ಬಸಲಿಂಗಪ್ಪಾ ಈತನ ವಂಶವು ಈವರೆಗೂ ಪವತಿ ಆಗಿಲ್ಲ. ಈಗ್ಯು ಕೂಡಾ ಈ ದೇವರ ನಿತ್ಯಪೂಜಾ ನಂದಾದೀವಿಗೆ ಯುಗಾದಿಪ್ರತಿಪದದಪೂಜಾ ಶಿವರಾತ್ರಿಪೂಜಾ ಮಾಡುವವರು ಇವರೇ. ಈ ಪೂಜೆಗಳಲ್ಲಿ ಯಾರಿಗೂ ಯಾವ ತರದ ಹಕ್ಕೂ ಇಲ್ಲ. ಮುದಗಲ್ಲಾಚಾರ್ಯರ ವಂಶದವರು ಈ ಕಿತ್ತೂರಗ್ರಾಮದಲ್ಲಿ ಯಾವ ಕಾಲಕ್ಕೂ ಇಲ್ಲ, ಈಗಾದರೂ ಈ ಗ್ರಾಮದಲ್ಲಿ ಇರುವದಿಲ್ಲ. ಇವರು ವೈಷ್ಣವರಿದ್ದು ಇವರಿಗೆ ಈ ದೇವರ ಪೂಜಾಸಂಬಂಧವಿಲ್ಲ. ಹೀಗಿದ್ದು ಈ ಆಚಾರ್ಯರಿಗೆ ಸರಕಾರದವರು ಆ ಕಾಲಕ್ಕೆ ಹೇಗೆ ಸನದು ಕೊಟ್ಟರೋ ತಿಳಿಯದು. ಈಗ್ಯು ಕೂಡಾ ಸಂಗನಬಸಪ್ಪ ಬಿನ್ ಬಸಲಿಂಗಪ್ಪ ಈತನ ವಂಶದವರೇ ಈ ಜಮೀನಿನ ವಹಿವಾಟುಮಾಡುತ್ತಿರುತ್ತಾರೆ. ಸಂಗನಬಸಪ್ಪಾ ಬಿನ್ ಬಸಲಿಂಗಪ್ಪಾ ಮಠಪತಿ ಪವತಿ ಮುದಗಲ್ಲಾಚಾರ್ಯನೆಂದು ಸರಕಾರದವರು ಸನದು ಕೊಟ್ಟಮೇಲೆ ಸದರಿ ಮುದಗಲ್ಲಾಚಾರ್ಯನು ಪವತಿ ಆದನಂತರ ಆತನ ಆಸ್ತಿಯಲ್ಲಾ ಈಗಿರುವ ಮಠಪತಿಯವರ ಸ್ವಾಧೀನ ಆಗಬೇಕಾಯಿತಲ್ಲವೆ? ಇದೇನು ಶಾಸ್ತ್ರಾಧಾರವೋ ಕಾಯಿದೆಯಾಧಾರವೋ ತಿಳಿಯದು. ವೀರಶೈವರಿಗೆ ವಿಪ್ರರು ಪವತಿ ವಹಿವಾಟದಾರರಾಗಲಿಕ್ಕೆ ಬರುತ್ತದೆಯೋ ಹೇಗೆಂಬುದನ್ನು ವಾಚಕರೇ ವಿಚಾರಿಸಲಿ. ಅದೊತ್ತಟ್ಟಿಗಿರಲಿ, ಈಗ ಸದ್ಯಕ್ಕೆ ದೇವಸ್ಥಾನದ ಸಮೀಪದಲ್ಲಿ ದಾಸೋಹಮಠವು ಇದ್ದು ಈ ಮಠದಲ್ಲಿ ಪರಸ್ಥಳದವರು ಮತ್ತು ಊರವರು ಗಣಾರಾಧನೆಮಾಡುವರು. ಹೀಗಿದ್ದು ಸದರೀ ಮಠ ಮತ್ತು ದೇವಸ್ಥಾನ ಇರುವ ಜಮೀನು 9 ಎಕರೆ ಇದ್ದು ಗುಡಿ ಮತ್ತು ಮಠದ ಎಡಬಲಕ್ಕೆ 8 ಎಕರೆ ಜಮೀನು ಯಾವ ಕಾಲಕ್ಕಾದರು ಪಡಾ ಇದ್ದು ಈ ಪಡಾದ ಜಮೀನಿನಲ್ಲಿ ಶ್ರೀಸಂಗಮನಾಥನ ಪೂಜಾವಿನಿಯೋಗದ ಉದ್ದಿಶ್ಯ ಉದ್ಯಾನವನ ಗೋಳಿಯಗಿಡ್ಡುಗೆ ವಗೈರೆ ಇರುತ್ತವೆ. ಈ ಸನದಿನ ಆಚಾರ್ಯರು ಈ ಜಮೀನು ನಮ್ಮ ತಾಬಾದಲ್ಲಿ ಅದೆ, ಈ ಜಮೀನಿನಲ್ಲಿ ಪಡಾ ಇಲ್ಲ, ಮತ್ತು ಉಗ್ರಾಣ ಮಠ ಇದ್ದಿಲ್ಲ; ಇದನ್ನು 2-3 ವರ್ಷದ ಮುಂದೆ ಹಾಕಿರುತ್ತಾರೆಂದೂ ಈ ಮಠವನ್ನು ಕೀಳಿಸಿಕೊಡಬೇಕೆಂದೂ ತಮ್ಮ ಜಾತಿಯ ದುರಾಭಿಮಾನದಿಂದ ಹಾವೇರಿ ಕೋರ್ಟಿನಲ್ಲಿ ದಾವಾತಂದಿರುತ್ತಾರೆ. ವಾಚಕರೆ, ಈ ಆಚಾರ್ಯರ ಅನ್ಯಾಯವನ್ನು ನೋಡಿದಿರಾ? ಯಾರಾದರು ಪರಸ್ಥಳದವರಿಗೆ ಅನುಕೂಲವಾಗಬೇಕಂತಾ ಧರ್ಮಶಾಲೆ ಉಗ್ರಾಣ ವಗೈರೆ ಕಟ್ಟಿಸಿ ಅನ್ನಛತ್ರ ಇಡುವುದುಂಟು. ಈ ಪುಣ್ಯಾತ್ಮನು ಮೊದಲಿದ್ದ ಉಗ್ರಾಣವನ್ನು ಕೀಳಿಸಿ ನೆಲಸಮಾನಮಾಡಬೇಕೆಂದು ಮಾಡಿರುತ್ತಾನೆ. ಈ ದೇವಸ್ಥಾನಕ್ಕೆ ಬರುವವರಿಗೂ ಈ ಮಠದಲ್ಲಿ ಗಣಾರಾಧನೆ ವಗೈರೆ ಮಾಡಿದ ಮಹನೀಯರಿಗೂ ಮುಂದೆ ಕೋರ್ಟಿನ ಮುದ್ದತ್ತನ್ನು ಇನ್ನೊಂದು ಲೇಖದಿಂದ ತಿಳಿಸುತ್ತೇನೆ. ಆ ಮುದ್ದತ್ತಿಗೆ ತಾವಾಗಿ ಬಂದು ತಮಗೆ ಗೊತ್ತಿದ್ದಮಟ್ಟಿಗೆ ನಿಜಸ್ಥಿತಿಯನ್ನು ಕೋರ್ಟಿನವರ ನಿದರ್ಶನಕ್ಕೆ ತಂದುಕೊಡಬೇಕೆಂದು ವಿನಂತಿ. ಸಮಾಜಸೇವಕ.

ಕರ್ನಾಟಕದ ಏಕೀಕರಣವೂ, ಹುರುಳಿಲ್ಲದ ಪ್ರಯತ್ನವೂ.

(ಲೇಖಕ—ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಸಂಸ್ಕೃತಕಾಲೇಜು ಯಾದಗಿರಿ.)

ಈಗಿನ ಕರ್ನಾಟಕದೇಶದ ವಾತಾವರಣವನ್ನು ನೋಡಿದ್ದಾದರೆ ಪ್ರತಿಯೊಂದು ವರ್ತಮಾನಪತ್ರದಲ್ಲಾಗಲಿ, ಮಾಸಪುಸ್ತಕದಲ್ಲಾಗಲಿ ಕರ್ನಾಟಕದ ಏಕೀಕರಣವೆಂಬುವ ಶಬ್ದವೇ ಕೇಳಬರುತ್ತಲಿದೆ. ಆದರೆ ಮೊದಲು ಏಕೀಕರಣಕ್ಕೆ ಯಾವಯಾವ ಸಾಧನಗಳು ಕಡಿಮೆ ಇರುವವೆಂದು ಆಲೋಚಿಸುವದು ಅತ್ಯಾವಶ್ಯಕವಿರುತ್ತದೆ. ಅದನ್ನು ಬಿಟ್ಟು - ಏಕೀಕರಣ ಏಕೀಕರಣ - ವೆಂದರೆ ಏನೂ ಆಗಲಾರದು. ಕನ್ನಡನಾಡಿನಲ್ಲಿರುವ ಜನಾಂಗಗಳು ಮೊದಲು ಒಕ್ಕಟ್ಟಾದರೆ ಏಕೀಕರಣವು ತನ್ನಷ್ಟಕ್ಕೆ ತಾನೇ ಸಿದ್ಧವಾಗುತ್ತದೆ. ಈಗ ಮುಖಂಡರಾಗಿ ಏಕೀಕರಣದ ಕಾರ್ಯವನ್ನು ಮಾಡತಕ್ಕವರು ಈ ವಿಷಯದಕಡೆಗೆ ಲಕ್ಷ್ಯವನ್ನು ಕೊಟ್ಟಿರುವುದಿಲ್ಲ. ಕರ್ನಾಟಕದಲ್ಲಿರುವ ಜನಾಂಗಗಳಲ್ಲಿ ವೀರಶೈವರು, ಬ್ರಾಹ್ಮಣರು ಮೊದಲಾದ ಸಮಾಜಗಳಲ್ಲಿ ಮೊದಲು ಐಕಮತ್ಯವಾಗುವುದು ಅತ್ಯಾವಶ್ಯಕವಿರುತ್ತದೆ. ಬ್ರಾಹ್ಮಣರು ಉಳಿದ ಮತಗಳ ಧಾರ್ಮಿಕವಿಷಯದಲ್ಲಿ ಮತ್ಸರಬುದ್ಧಿಯನ್ನು ತಾಳುವುದರಿಂದಲೇ ಅನೈಕ್ಯಕ್ಕೆ ಕಾರಣವಾಗಿರುವುದಲ್ಲದೆ ವೀರಶೈವರೂ ಬ್ರಾಹ್ಮಣರೂ ಅಜನ್ಮಶತ್ರುಗಳಂತೆ ಆಗಿರುತ್ತಾರೆ. ಈ ವಿಷಯಕ್ಕೆ ಬ್ರಾಹ್ಮಣಮುಖಂಡರು ಸ್ವಲ್ಪಾದರೂ ಲಕ್ಷ್ಯವನ್ನು ತೆಗೆದುಕೊಳುವುದಿಲ್ಲ; ಇಷ್ಟೇ ಅಲ್ಲ, ಶುದ್ಧಮನಸ್ಕರಾಗಿ ಕಾರ್ಯವನ್ನು ಮಾಡುವುದಿಲ್ಲ. ಬನವಾಸಿಯೇ ಮೊದಲಾದ ಪ್ರಕರಣದಲ್ಲಿ ಎಷ್ಟೋಸಾರಿ ಬ್ರಾಹ್ಮಣಮುಖಂಡರಿಗೆ ತಿಳಿಸಿದರು ಕೂಡ ಅಂತರಂಗವು ಶುದ್ಧಿ ಇಲ್ಲದ ಇವರು ತಮ್ಮ ಬಂಧುಗಳಿಗೆ ಬುದ್ಧಿಯನ್ನು ಹೇಳಲಿಲ್ಲ. ಹಾಗೆಯೇ ಮೇಲಿನಮಾತ್ರ ಉಪಚಾರದ ಮಾತುಗಳನ್ನು ಹೇಳುತ್ತ ದೊಡ್ಡಮನುಷ್ಯರಂತೆ ನಟನೆಯನ್ನು ಮಾಡುತ್ತಾರೆ. ಧಾರ್ಮಿಕ ಜಗಳವು ರಾಜಕೀಯವಿಚಾರದಲ್ಲಿ ಏತಕ್ಕೆ ಬೇಕೆಂದು ಕೆಲವರು ಹೇಳಬಹುದು. ಅದು ಶುದ್ಧ ತಪ್ಪೆಂದು ನಾವು ಹೇಳಬಲ್ಲೆವು. ಯಾಕೆಂದರೆ, ಹಿಂದೂ ಮುಸಲ್ಮಾನರಲ್ಲಿ ಯಾಕೆ ಐಕ್ಯವಾಗಲೊಲ್ಲದು? ಹಾಗಾದರೆ, ಅಲ್ಲಿಯೂ ಧಾರ್ಮಿಕವಿಷಯವು ಯಾತಕ್ಕೆ ಬೇಕು? ನಮ್ಮ ಬ್ರಾಹ್ಮಣಮುಖಂಡರು ಮಹಾತ್ಮರ ಅನುಯಾಯಿಗಳೆಂದು ಹೇಳಿಸಿಕೊಳ್ಳಲಿಕ್ಕೂ, ದೇಶಭಕ್ತರೆಂದು ಬರೆಯಿಸಿಕೊಳ್ಳಲಿಕ್ಕೂ ಹಿಂಜರಿಯುವುದಿಲ್ಲ. ಯಾವ ವಿಷಯದಲ್ಲಿ ಹೆಚ್ಚಾಗಿ ಜಗಳಗಳು ನಡದಿರುತ್ತವೆಯೋ ಆ ವಿಷಯಕ್ಕೆ ಸ್ವಲ್ಪಾದರೂ ಶುದ್ಧಾಂತಃಕರಣದಿಂದ ಕಾರ್ಯಮಾಡುವದಿಲ್ಲ. ಮಹಾತ್ಮರು ಅಸ್ಪೃಶ್ಯರಿಗು ಕೂಡ ಪ್ರತಿಯೊಂದು ಹಿಂದೂದೇವಾಲಯದಲ್ಲಿ ಪ್ರವೇಶವಿರಬೇಕೆಂದು ಹೇಳುತ್ತಾರೆ. ಮಹಾತ್ಮರ ಶಿಷ್ಯರೆಂದು ಹೇಳಿಸಿಕೊಳ್ಳುವ ಈ ಕರ್ನಾಟಕ ಬ್ರಾಹ್ಮಣಭಕ್ತರು ಏನೆಂದು ಹೇಳುವರು? ಶ್ರೇಷ್ಠವರ್ಣದವರೆನ್ನಿಸಿಕೊಳ್ಳುವ ವೀರಶೈವರು ಕೂಡ ಈ ಬ್ರಾಹ್ಮಣರ ದೇವಾಲಯದಲ್ಲಿ ಪ್ರವೇಶಿಸಿದರೆ ಅಪವಿತ್ರವಾಗುತ್ತದಂತೆ! ಅಂದಮೇಲೆ ಆತ್ಮಶುದ್ಧಿ ಇಲ್ಲದ ಇವರು ಹೇಗೆ ದೇಶಸೇವೆಯನ್ನು ಮಾಡುವದು? ಇನ್ನುಮೇಲಾದರೂ ನುಡಿಯಂತೆ ನಡೆಯನ್ನು ಕಲಿಯಬೇಕೆಂದು ಯಾರೂ ಹೇಳದೆ ಇರಲಾರರು. ಯಾಕೆಂದರೆ, ಬ್ರಾಹ್ಮಣರು ಎಷ್ಟೇ ವಿದ್ಯಾವಂತರಿರಲಿ ದೇಶಸೇವಕರಿರಲಿ ಒಂದಿಲ್ಲ ಒಂದು ಬಣ್ಣವು ಬದಲಾಗುತ್ತಲೇ ಇರುತ್ತದೆ. ಹೋದವಾರ ಸ್ಟಾರಿನಲ್ಲಿ ಮಿ॥ ಸೆಟ್ಲೂರರವರ ಉದಾಹರಣೆಯೇ ಸಾಕಾಗಿರುತ್ತದೆ. ಕರ್ನಾಟಕದ ಏಕೀಕರಣವು ಅತ್ಯಾವಶ್ಯಕವಿರುವದೇನೋ ನಿಜ. ಅದರ ವಿಷಯಕ್ಕೆ ವಿರುದ್ಧಾಭಿಪ್ರಾಯವು ಯಾರದೂ ಇರುವದಿಲ್ಲ. ಮೇಲಿಂದಮೇಲೆ ಬ್ರಾಹ್ಮಣರು ಧಾರ್ಮಿಕ ಬಾಬನಲ್ಲಿ ಉಳಿದ ಸಮಾಜದವರನ್ನು ಕೆಣಕುವುದೇ ಇಷ್ಟು ಅನೈಕ್ಯಕ್ಕೆ ಕಾರಣವಾಗಿರುತ್ತದೆಂಬುದರಕಡೆಗೆ ಕರ್ನಾಟಕ ಏಕೀಕರಣ ಮಾಡುವ ಮುಖಂಡರು ಲಕ್ಷ್ಯಕೊಟ್ಟು ನಿಜವಾದ ಐಕ್ಯವನ್ನುಂಟುಮಾಡಿ ಕರ್ನಾಟಕದ ಉದ್ಧಾರವನ್ನು ಮಾಡುವ ಯತ್ನವನ್ನು ಮಾಡಬೇಕು. ಇಲ್ಲದಿದ್ದರೆ ಹುರುಳಿಲ್ಲದ ಹುಲುಬು ಎಂದು ಯಾರೂ ಹೇಳದೆ ಇರಲಾರರು.

ಜಾಹೀರ ನೋಟೀಸ್.

ಬಳ್ಳಾರಿಜಿಲ್ಲಾ ಹೂವಿನಹಡಗಲಿ ತಾಲ್ಲೂಕು ಪೈಕಿ ಮೈಲಾರಗ್ರಾಮವಾಸಿಯಾದ ಛಕ್ರೇರ ಯಂಕಪ್ಪನವರಿಗೆ.

ಹಾಲ (ಕುರುಬ) ಮತಸ್ಥನಾದ ಈ ಕೆಳಗೆ ಸಹಿ ಮಾಡುವ ನಾನು ಈ ಮೂಲಕ ತಿಳಿಸುವುದೇನಂದರೆ.—

ನೀವು ಮೈಲಾರಲಿಂಗಸ್ವಾಮಿಯ ದೇವಸ್ಥಾನದ ಇನಾಮು ಜಮೀನುದಾಗೀನ ಮೊದಲಾದವುಗಳನ್ನೆಲ್ಲಾ ವತ್ತಿ ಇಟ್ಟು ನೀವು ಅಶಕ್ತರೆಂಬಬಗ್ಗೆ, ಮತ್ತು ಈ ದೇವಸ್ಥಾನದ ನಂದಾದೀಪಗಳನ್ನು ಕೂಡ ಸರಿಯಾಗಿ ನಡಸದೆ ದೇವಸ್ಥಾನವನ್ನು ಅತಿ ಹೀನದೆಶೆಗೆ ತಂದಬಗ್ಗೆ ಸರಕಾರಕ್ಕೆ ಶ್ರೀ ಮೈಲಾರಲಿಂಗಸ್ವಾಮಿಯ ಅರ್ಚಕರು ಛಕ್ರಾದಿಗಳೆಲ್ಲಾ ಅನೇಕ ಅರ್ಜಿಗಳನ್ನು ಮಾಡಿ ಚವಕಸಿ ಮಾಡಿದ ಪ್ರಕರಣದ ಕಾಲದಲ್ಲಿ ನಿಮ್ಮ ಜವಾಬಿಗಿದ್ದು, ಸದರಿ ಜವಾಬಿನಲ್ಲಿ ನೀವು ಕುರುಬರಿಗೆಲ್ಲಾ ಗುರುಗಳೆಂತಲು ಆ ಕುರುಬಜಾತಿಯವರಿಗೆ ಬಹಿಷ್ಕಾರ ಶುದ್ಧಿ ಮೊದಲಾದವುಗಳನ್ನೆಲ್ಲಾ ನೀವೇ ಮಾಡುವವರೆಂತಲು ವಗೈರೆ ನೀವು ಹೇಳಿರುತ್ತೀರಿ. ನೀವು ಛಕ್ರಮತದವರಾಗಿದ್ದು ಕುರುಬರಿಗೆ ಗುರುವಾಗಲು ಕಾರಣವೇನು? ಛಕ್ರೇರೆಂದರೆ, ದಕ್ಷಿಣ ಮಹಾರಾಷ್ಟ್ರ ಗ್ಯಾಜಟಿಯರ ಮೊದಲಾದ ಗ್ರಂಥಗಳಲ್ಲಿ ಶಿಳ್ಳೆಕ್ಯಾತರು ಮೊದಲಾದವರಿಗೆ ಅನ್ನುವರಂತೆ ಬರೆದಿದೆ. ಇಲ್ಲವೇ ಕ್ಷತ್ರಿಯಜಾತ್ಯ ಕುರುಬಮತಕ್ಕೆಂದಾದರೂ ಯಾವವಿಧದಿಂದಲೂ ಗುರುಗಳಾಗಲು ಅರ್ಹರಾಗಬಹುದೆ? ಕುರುಬರು ವೀರಶೈವಮತದನುಯಾಯಿಗಳಾಗಿರುವುದರಿಂದ ಈ ಮತಕ್ಕೆ ವೀರಶೈವ ಜಂಗಮರೇ ಗುರುಗಳಾಗಿರುವರು. ಅವರಿಂದಲೇ ಹನ್ನಕವ್ವಾದಿಗಳನ್ನೆಲ್ಲಾ ತೀರಿಸುತ್ತಿದ್ದು ಈರೀತಿ ಅಸಂಬಂಧ ಅವಾಚ್ಯಶಬ್ದಗಳನ್ನು ಹೇಳಿದ ಕಾರಣವೇನು? ತಿಳಿಯದೆ ಕುರುಬರೆಂದರೆ ದಿಕ್ಕಿಲ್ಲದ ಮಕ್ಕಳೆಂದು ನೀವು ಹೇಳಿದ್ದು ಸಿದ್ಧಾಂತವೆಂತಲೇ ತಿಳಿದಿರುವಿರಾ? ನೀವು ಮೈಲಾರಲಿಂಗದ ಹೆಸರುಹೇಳಿ ದೇವರ ದೀಪಾರಾಧನೆ ಕಾಣಿಕೆಮೊದಲಾದವುಗಳನ್ನು ದೇಶದ ಮೇಲೆ ಎತ್ತಲು ಬಂದಾಗ್ಗೆ ಕುರುಬಮತದವರನೇಕರಿಗೆ ಈ ಮೈಲಾರಲಿಂಗಸ್ವಾಮಿಯು ಮನೆ ದೇವರಾಗಿದ್ದು ಆ ದೇವರ ಮೇಲಿನ ವಾಂಛೆಯಿಂದ ದೀಪಾರಾಧನಾದಿಗಳನ್ನು ಸರಿಯಾಗಿ ನಡೆಸುತ್ತಿರಬಹುದೆಂದೂಹಿಸಿ ಮೈಸೂರು ಬೆಂಗಳೂರು ಮೊದಲಾದ ದೂರದೇಶದವರು ನಿಮ್ಮಗಳ ನಿಜಾಂಶವನ್ನರಿಯದೆ ಮರ್ಯಾದೆಯಿಂದ ನಿಮ್ಮ ಕಡಿಗೆ ಕೊಡುತ್ತ ಬಂದುದು ತಪ್ಪಾಗಿ ಈರೀತಿ ಹೇಳಲು ಕಾರಣವಾಗಿದ್ದರೆ ಇದು ನಿಮ್ಮ ಶುದ್ಧ ಅವಿವೇಕತನವನ್ನು ವ್ಯಕ್ತಪಡಿಸುತ್ತದೆ. ಈ ನೋಟೀಸು ಮುಟ್ಟಿದ ಒಂದು ವಾರದೊಳಗಾಗಿ ಇದಕ್ಕೆ ಸದುತ್ತರವನ್ನು ಕೊಟ್ಟು ಕುರುಬಮತದವರ ಜಾಹೀರ ಕ್ಷಮಾ ಬೇಡದಿದ್ದಲ್ಲಿ ನಿಮ್ಮಮೇಲೆ ಖಾಯಿದೆ ಪ್ರಕಾರ ಕ್ರಮ ನಡೆಸುವುದರಲ್ಲಿ ಬರುವದು. ಸಮಸ್ತ ಹಾಲುಮತಾನುಯಾಯಿಗಳೇ, ಈ ಮೈಲಾರದ ಛಕ್ರೇರು ದೇವಸ್ಥಾನಕ್ಕೆ ಬಾಧ್ಯರಲ್ಲವೆಂತಲೂ ಧಾರ್ವಾಡಜಿಲ್ಲಾ ರಾಣೆಬೆನ್ನೂರ ತಾಲ್ಲೂಕು ಪೈಕಿ ಚವಡಯ್ಯದಾನಪುರದ ಮಠದ ಶ್ರೀಮದುಮರಗಣಂಗಳ ನಿಜಸಿಂಹಾಸದ ಜಗದಾಚಾರ್ಯಸ್ವಾಮಿಗಳೇ ಬಾಧ್ಯರೆಂತಲೂ, ಈ ಛಕ್ರೇರು ಅವರಗಿಂತ ಪೂರ್ವದಲ್ಲಿ ಮೈಲಾರಲಿಂಗದೇವಸ್ಥಾನದ ಪಾರುಪತ್ಯಗಾರರೆಂತಲೂ ವಗೈರೆ ತರಾವಾಗಿ ಈ ಅವಿಶ್ವಾಸ, ಅವಿವೇಕ, ಅನ್ಯಾಯ, ಅನ್ಯನಸ್ಥಾದಿಗಳಿಂದ ಕೂಡಿದ ಈ ಛಕ್ರೇರ ಯಂಕಪ್ಪ, ಕರಿಯಲ್ಲಪ್ಪ ಇವರುಗಳು ದೇವಸ್ಥಾನದ ಟ್ರಸ್ಟಿ ಕೆಲಸ ನೋಡಲು ಸರ್ವಥೋಮುಖ ಅನರ್ಹರಿರುವವರಿಂದ ಇವರನ್ನು ತೆಗೆದುಹಾಕಿದೆ ಎಂತಾ ಠರಾವ ತಾ॥ 22-1-26 ನೇ ದಿವಸ ಹೇಳಲ್ಪಟ್ಟಿರುವದು. ಕಾರಣ ಮೈಸೂರು ಬೆಂಗಳೂರು ಮದರಾಸು ಮುಂಬೈ ಸಮಸ್ತ ಪ್ರಾಂತಗಳ ಹಾಲುಮತದವರೆಲ್ಲಾ ಈ ಛಕ್ರೇರುಗಳ ಹೇಳಿಕೆಯಿಂದ ಮೋಸಹೋಗದೆ ನಿಜಾಂಶವನ್ನು ತಿಳಿದು ವರ್ತಿಸತಕ್ಕದ್ದಾಗಿದೆ, ಮತ್ತು ಈತನು ಕುರುಬರಿಗೆ ಈರೀತಿ ತಾನು ಗುರುವೆಂತ ವಗೈರೆ ಅವಮಾನಕರವಾಗಿ ಹೇಳಿರುವ ಬಗ್ಗೆ ಈ ಹಾಲುಮತದವರೊಂದು ಸಭೆಕೂಡಿಸಿ ಮುಂದೆ ನಡೆಸತಕ್ಕ ಕಾರ್ಯಕ್ರಮಗಳನ್ನೆಲ್ಲಾ ಗೊತ್ತುಮಾಡಿ ಹಿಂದಿನಿಂದಾ ಸರ್ವರಿಗೂ ತಿಳಿಸುವೆನು. ಈ ಬಗ್ಗೆ ಸರ್ವ ಹಾಲುಮತದವರೂ ಬಹಳ ಜಾಗರೂಕರಾಗಿರಬೇಕಾಗಿ ನನ್ನ ಬಾಂಧವರಿಗೆ ಸವಿನಯಪ್ರಾರ್ಥನಾ.

ಎಸ್. ಹಾಲಪ್ಪ ರಿಟೈರ್ಡ್ ಮಾಸ್ತರ, ಸಂತೇಬೆನ್ನೂರು.

ಯುಗಟಿಪುರದ ಶ್ರೀ ಮಲ್ಲಿಕಾರ್ಜುನಸ್ವಾಮಿಯ ರಥೋತ್ಸವಭಂಗ.

ಈ ರಥೋತ್ಸವದ ವಿಚಾರದಲ್ಲಿ ಇಲ್ಲಿನ ವೀರಶೈವ ಅರ್ಚಕರಿಗೂ ಯುಗಟಿ ಮತ್ತು ಯಳಂಬಳಸೆ ಗ್ರಾಮದಲ್ಲಿರುವ ಬ್ರಾಹ್ಮಣರಿಗೂ ನಡಿಯುತ್ತಾ ಇದ್ದ ವಿವಾದವಿಚಾರವು ಇದೇ ಸ್ಟಾರ್‌ಪತ್ರಿಕಾಮುಖೇನ ವಾಚಕಮಹಾಶಯರಿಗೆಲ್ಲಾ ಗೊತ್ತೇ ಇರಬಹುದು. ಆದರೆ ಈ ವರುಷ ನಡಿಯಬೇಕಾಗಿದ್ದ ಶ್ರೀ ಸ್ವಾಮಿಕಾರ್ಯಗಳು ವೀರಶೈವ ಆಗಮಿಕರಿಂದ ವಿಧ್ಯುಕ್ತವಾಗಿ ಕಳೆದ ಫೆಬ್ರವರಿ ತಾ॥ 26 ರ ವರೆಗೆ ಸರಿಯಾಗಿ ನಡಿಸಲ್ಪಟ್ಟು ನಂತರ ಮೇಲ್ಕಂಡ ಗ್ರಾಮಗಳ ಬ್ರಾಹ್ಮಣರ ಅಸೂಯೆಯ ಅರ್ಜಿಯಮೇಲೆ ಡಿಸ್ಟ್ರಿಕ್ಟು ಡೆ॥ ಕಮಿಷನರ್ ಮಿ॥ ಹೆಬ್ಲೀಕರ್ ಸಾಹೇಬರವರ ಸವಾರಿಯು ಖುದ್ದು ದಯಮಾಡಿಸಿ ಕೇವಲ ಪಕ್ಷಪಾತವಾದ ಆರ್ಡರ್ ಮಾಡಿ ಮತ್ತು ಚಿಕ್ಕಮಗಳೂರಿಂದ ಬಂದಿದ್ದ ರಿಜರ್ವ್ ಪೊಲೀಸ್ ಮತ್ತು ಬೆಂಗಳೂರಿಂದ ಬರಮಾಡಿಕೊಂಡಿದ್ದ ಸ್ಪೆಷಲ್ ರಿಜರ್ವ್ ಪೊಲೀಸ್ ಸಿಬ್ಬಂದಿಯ ಭಯೋತ್ಪಾದನೆ ವಗೈರೆ ಹೆದರಿಕೆಯನ್ನು ಅರ್ಚಕರಿಗೆ ತೋರಿಸಿ ದೇವಸ್ಥಾನದ ಬಾಗಿಲ ಬೀಗದಕೈಯನ್ನು ಕಸುಕೊಳ್ಳಲು ಬಲವಂತಪಡಿಸಿ ಪೊಲೀಸ್ ದರ್ಪವನ್ನು ತೋರಿಸಲಿಕ್ಕೆ ಶುರುಮಾಡಿ ಒಬ್ಬ ಅರ್ಚಕನ ಕೆನ್ನೆಗೆ ಪೊಲೀಸ್ ತಾಲ್ಲೋಕು ಇನಿಸ್ಪೆಕ್ಟರು ಹೊಡದದ್ದರಿಂದ ಅರ್ಚಕರು ಹೆದರಿ ದೇವಸ್ಥಾನದ ಸರ್ವಸ್ವವನ್ನೂ ಬಾಗಿಲ ಬೀಗದಕೈ ಸಮೇತ ಸರ್ಕಾರದವರ ವಶಕ್ಕೆ ಒಪ್ಪಿಸಿಬಿಟ್ಟರು. ಅನಂತರ ರಥ ವಗೈರೆ ಯಾವದೂ ಕಟ್ಟದೆ ಇದ್ದಾಗ್ಯೂ ಮುಖ್ಯವಾದ ಜಾಂಡೆ ಹೊಡೆಯದೆ ಇದ್ದಾಗ್ಯೂ ಬ್ರಾಹ್ಮಣರಿಂದ ಕೇವಲ ಅಮಂಗಳವಾಗಿ ಸ್ವಾಮಿಯವರನ್ನು ತಾರೀಖು 27-2-26 ನೇ ಶನಿವಾರ ಮಧ್ಯಾಹ್ನ ರಥದಮೇಲಿಟ್ಟು ರಥಯಳಿಯದೆ ವಾಪಸ್ಸು ದೇವರನ್ನು ತಂದಿರುತ್ತಾರೆ. ಇದರಿಂದ ಜಾತ್ರೆಗೆ ಬಂದಿದ್ದ ಭಕ್ತರ ಸೇವೆಗೆ ಕೇವಲ ತೊಂದರೆಯುಂಟಾಗಿ ನೈವೇದ್ಯ ಮಂಗಳಾರತಿ ವಗೈರೆ ಪೂಜೆಗಳಿಗೆಲ್ಲಾ ವಿಘ್ನವುಂಟಾಗಿ ಬಂದಿದ್ದ ಭಕ್ತರೆಲ್ಲರೂ ಖಿನ್ನಮನಸ್ಸಿನಿಂದ ದುಃಖಪಡುತ್ತಾ ವಾಪಸು ಹೋದರು. ಆ ಮಾರನೆ ಉಬ್ಬಾನಕ್ಷತ್ರದ ದಿವಸ ಪದ್ಧತಿಯಂತೆ ಆಗಬೇಕಾಗಿದ್ದ ಗಂಗಾ ಉದ್ಭವವು ಇವರ ಅಕ್ರಮನಡವಳಿಕೆಯಿಂದ ಆಗದೆಯಿರುವ ಪ್ರಯುಕ್ತ ರಾಷ್ಟ್ರಕ್ಕೆ ಏನು ಕಷ್ಟಬರುವದೋ ಎಂದು ಜನರು ಪರಿತಪಿಸುತ್ತಿರುವರು. ಮುಂದಿನ ಎಲ್ಲಾ ಕೆಲಸಗಳನ್ನು ತಾವು ನಡಿಸುತ್ತೇವೆಂದು ಬ್ರಾಹ್ಮಣರೊಪ್ಪಿ ಆ ಬಗ್ಗೆ ಸರ್ಕಾರಕ್ಕೆ ಮುಚ್ಚಳಿಕೆ ಬರೆದುಕೊಟ್ಟಿರುವಪ್ರಕಾರ ಮಾಡದೆ ತಾ॥ 2-3-26 ನೇ ಮಂಗಳವಾರ ಮುಂದಿನ ಕೆಲಸಗಳನ್ನು ಮಾಡಲು ತಮ್ಮಿಂದ ಆಗುವುದಿಲ್ಲವೆಂದು ಹೇಳಿ ದೇವಸ್ಥಾನದ ಬಾಗಿಲ ಬೀಗದ ಕೈಯನ್ನು ಸರ್ಕಾರದವರ ವಶಕ್ಕೆ ಒಪ್ಪಿಸಿಬಿಟ್ಟರು. ತರುವಾಯ ತಾಲ್ಲೋಕು ಅಮಲ್‌ದಾರ್ ಸಾಹೇಬರು ವೀರಶೈವಅರ್ಚಕರನ್ನು ಕರದು ಮುಂದಿನ ಸ್ವಾಮಿಪೂಜೆನಡಿಸಿಕೊಂಡು ಹೋಗಬೇಕೆಂದು ತಿಳಿಸಲಾಗಿ ಅರ್ಚಕರು ನಾವು ನಡೆಯಿಸುವದಕ್ಕೆ ಬ್ರಾಹ್ಮಣರು ನಮ್ಮ ವೀರಶೈವಮತಧರ್ಮಕ್ಕೆ ವಿರುದ್ಧವಾದ ನಡವಳಿಕೆ ಮಾಡಿರುವದರಿಂದ ಇವರ ಕಿರುಕುಳವನ್ನು ಸಹಿಸಲಾರದೆ ಸದ್ಯಕ್ಕೆ ನಾವು ಪೂಜೆಮಾಡುವದಿಲ್ಲವಾಗಿ ಹೇಳಲು ಈ ಪ್ರಾಂತ್ಯಕ್ಕೆ ಭೂಕೈಲಾಸದಂತಿದ್ದ ಶ್ರೀ ಸ್ವಾಮಿಯವರ ದೇವಸ್ಥಾನಕ್ಕೆ ಬೀಗಹಾಕಿ ಸೀಲ್ ಮಾಡಿದ್ದರಿಂದ ಆರುದಿವಸಗಳವರಿಗೆ ಪೂಜೆ ನಿಂತಿತ್ತು. ಈ ವಿಚಾರವನ್ನು ಕೇಳಿದ ಯಾವ ಒಬ್ಬ ಭಕ್ತನಿಗೂ ಸಂಕಟವಾಗದೆ ಇರಲಾರದು. ನೋಡಿದಿರಾ! ಮತಾಭಿಮಾನದ ಅಧಿಕಾರಿಗಳ ಬೆಂಬಲದ ಧೈರ್ಯದಿಂದ ಸ್ವಾಮಿಕಾರ್ಯದಲ್ಲಿಯೂ ಅಭಿಮಾನವಿಲ್ಲದೆ ಯಾವಯಾವತೆರನಾದ ವಿಘ್ನಗಳು ಉಂಟಾಗುತ್ತಿರುವವು ಎಂಬೀ ವಿಚಾರವನ್ನು ಸರ್ವರೂ ಆಲೋಚಿಸತಕ್ಕದ್ದಾಗಿದೆ. ಈ ಸಮಾಚಾರವನ್ನು ತಿಳಿದ ಈ ಪ್ರಾಂತ್ಯದ ಕೆಲವುಜನ ಭಕ್ತರು ತಾಲ್ಲೋಕು ಅಮಲ್‌ದಾರ್ ಸಾಹೇಬರಲ್ಲಿಗೆ ಹೋಗಿ ಬೇರೆ ವೀರಶೈವರಿಂದ ಪೂಜೆ ನಡಸುತ್ತಿರಬೇಕಾಗಿ ಅರ್ಜಿಹಾಕಿ ಅವರ ಅಪ್ಪಣೆಯನ್ನು ಪಡದು ಬೀಗ ತೆಗಿಸಿ ಪೂಜೆ ನಡಿಸುತ್ತಾ ಇದ್ದಾರೆ. ಈ ವಿಧವಾದ ತೊಂದರೆಗಳಲ್ಲ ನಡಿಯುತ್ತಾ ಇದ್ದಾಗ್ಯು ನಮ್ಮ ವೀರಶೈವಪ್ರಮುಖಮಹಾಶಯರ ಗಮನಕ್ಕೆ ಬರುವಂತಿಲ್ಲ. ಅಸಹಾಯಕರಾಗಿರುವ ಅರ್ಚಕರು ದೂರುಹೇಳಿಕೊಳ್ಳಲಿಕ್ಕೆ ಅವರಿಗೆ ಶಕ್ತಿಯಿಲ್ಲ. ಈ ವಿಚಾರವೆಲ್ಲಾ ಸತ್ಯಸಂಧರಾಗಿರುವ ನಮ್ಮ ಧರ್ಮಪ್ರಭುಗಳವರ ನೋಟೀಸಿಗೆ ಬೀಳುವಂತಿಲ್ಲ. ಇಂಥಾ ಅವಿವೇಕವನ್ನೇನಾದರೂ ವೀರಶೈವರು ಮಾಡಿದ್ದಲ್ಲಿ ಇಷ್ಟುಹೊತ್ತಿಗೆ ಎಲ್ಲೆಲ್ಲೂ ಬೇಕಾದಷ್ಟು ಗಲಭೆ ಉಂಟಾಗುತ್ತಿತ್ತು. ಇದು ನಡೆದು ಒಂದುವರೆ ತಿಂಗಳಾಗುತ್ತ ಬಂದರೂ ಯಾರ ಗಮನಕ್ಕೂ ಬಂದಿಲ್ಲ. ನಮ್ಮ ಮಠಧರ್ಮಕ್ಕೂ ಸ್ವಾಮಿಪೂಜೆಗೂ ವಿಘ್ನವುಂಟಾಗಿ ತನ್ಮೂಲಕ ಆಗುತ್ತಿರುವ ತೊಂದರೆಯನ್ನು ನೋಡಿ ನನ್ನ ಸಂಕಟವನ್ನು ಸಹಿಸಲಾರದೆ ಘನವಾದ ಸ್ಟಾರ್ ಪತ್ರಿಕೆಯಲ್ಲಿ ಮಹಾಜನರ ಮತ್ತು ಆಳುವ ಮಹಾಸ್ವಾಮಿಯವರ ಅವಗಾಹನೆ ಬಗ್ಗೆ ಪ್ರಕಟಪಡಿಸಬೇಕಾಗಿ ಬೇಡುತ್ತೇನೆ. ಒಬ್ಬ ಸ್ವಾಮಿಭಕ್ತ.

ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ
11 ನೇ ವಾರ್ಷಿಕ ಕಮಿಟಿಯು
ಮು-ಹೂಲಿ, ಜಿಲ್ಲ ಬೆಳಗಾಂವ.

ಇದೇ ತಾ॥ 21ರವಿವಾರ ಮೊದಲೇ ಪ್ರಕಟಗೊಳಿಸಿದ ಪ್ರಕಾರ ಸಂಜೆ 5 ಘಂಟೆಯ ಸುಮಾರಕ್ಕೆ ಈ ವಾಚನಾಲಯದಲ್ಲಿ ಪುರಪ್ರಮುಖರೊಂದಿಗೆ 11 ನೇ ವಾರ್ಷಿಕ ಕಮಿಟಿಯು ನೆರೆಯಿತು. ಮೆಂಬರರು ಯಾವತ್ತರೂ ಹಾಜರಿದ್ದರು. ಮೊದಲು ವಾಚನಾಲಯದ ವಾರ್ಷಿಕರಿಪೋರ್ಟ ಓದಲ್ಪಟ್ಟಿತು. ಆಮೇಲೆ - ವಾಚನಾಲಯದಿಂದಾಗುವ ಲಾಭ - ಈ ವಿಷಯದಮೇಲೆ ಕೆಲವರ ಭಾಷಣಗಳಾಗಿ - ವೈದಿಕಮಹತ್ವ - ಈ ವಿಷಯದ ಮೇಲೆ ಇಲ್ಲಿಯ ಪಾಠಶಾಲೆಯ ವಿದ್ಯಾರ್ಥಿಗಳ ಭಾಷಣಗಳಾದವು. ಇಷ್ಟಾದಮೇಲೆ ಈ ವಾಚನಾಲಯದ ಸಾದ್ಯಂತ ವಿಷಯವನ್ನು ಯಾವತ್ತರಿಗೂ ತಿಳಿಸಬೇಕೆಂದು ಕಮಿಟಿಯಲ್ಲಿ ಕೆಲವರು ಸೂಚಿಸಲು ಸೆಕ್ರೆಟರಿಯವರು ಯಾವತ್ತೂ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಅದರ ಸಾರಾಂಶ. ಈ ವಾಚನಾಲಯವನ್ನು ಮೊದಲು ಶಿವಭಕ್ತಿಪರಾಯಣರಾದ ಮುನವಳ್ಳಿ ಕೈ॥ ಸೋಮಪ್ಪಣ್ಣ ಬಾಳಿಯವರು ಸ್ಥಾಪಿಸಿ ಇಲ್ಲಿರ್ಪ ತಮ್ಮ ವಿಸ್ತಾರವಾದ ಮನೆಯನ್ನು ಇದರ ವ್ಯವಸ್ಥೆಗಾಗಿ ಕೊಟ್ಟರು. ಅಲ್ಲಿಂದಾ ಇಲ್ಲಿಯವರೆಗೆ 10 ವರುಷವಾದರೂ ವಾಚನಾಲಯದ ಕಾರ್ಯವನ್ನು ಇಲ್ಲಿಯ ಬೃಹನ್ಮಠದ ವೇ॥ ಬ್ರ॥ ಶ್ರೀ॥ ಸಿ॥ ಶಿವಬಸವಶಾಸ್ತ್ರಿಗಳವರೇ ಯಥಾಪ್ರಕಾರ ನಡಿಸುತ್ತಬಂದಿರುವರಲ್ಲದೆ ಈ ವಾಚನಾಲಯದಿಂದ ಅನೇಕ ಸತ್ಕಾರ್ಯಗಳೂ ಸಮಾಜಕೆಲಸಗಳೂ ನಿರಾಯಾಸವಾಗಿ ನಡೆಯುತ್ತ ಬಂದಿರುವವು. ವಿದ್ಯಾರ್ಜನೆ ವಗೈರೆ. ಕಾರ್ಯಕ್ಕೆ ಧನಸಹಾಯ—ಈ ವಾಚನಾಲಯದಿಂದ ಇಲ್ಲಿಯ ಕನ್ನಡ ಪ್ರಾಥಮಿಕಶಾಲೆಯ ದೆಸೆಯಿಂದಲೂ ಇಲ್ಲಿ ಅಧ್ಯಯನ ಮಾಡುವ ಪರಸ್ಥಳದ ವಿದ್ಯಾರ್ಥಿಗಳ ದೆಸೆಯಿಂದಲೂ ಯಥಾನುಸಾರ ಧನಸಹಾಯಮಾಡಿರುವದಲ್ಲದೆ ಬೆಳಗಾಂವ ಗಿಲಗಿಂಚಿ ಹಾಯಸ್ಕೂಲಿಗೂ, ಶಿವಯೋಗಮಂದಿರಕ್ಕೂ, ಇಂಗ್ಲೀಷ ಕಲಿಯುವ ಪರಸ್ಥಳದ ವಿದ್ಯಾರ್ಥಿಗಳಿಗೂ ಸಹಾಯಮಾಡಿದೆ ಮತ್ತು ಇಲ್ಲಿ ಸ್ಥಾಪಿಸಿದ ಧರ್ಮಾರ್ಥ ವೈದಿಕ ಜ್ಯೋತಿಷ ಪಾಠಶಾಲೆಗೆ ಸಹಾಯಮಾಡಲ್ಪಡುತ್ತಿದೆ. ಬೇರೆ ಕೆಲಸಕ್ಕೆ ಧನಸಹಾಯ—ಊರೊಳಗೆ ಬಂದ ಇನ್‌ಫ್ಲುಯೆಂಜಾ, ಮಲೇರಿಯಾ ಇತ್ಯಾದಿ ರೋಗಗಳಿಗೆ ಯಥಾನುಸಾರ ಧರ್ಮಾರ್ಥ ಔಷಧದವ್ಯವಸ್ಥೆ ಮಾಡುತ್ತಬಂದಿರುವದು ಮತ್ತು ವಾರಲೋನ ವಾರಫಂಡ ಇಂಡಿಯನ್ ರಿಲೀಫ್ ಫಂಡ ಕುರುಡಕುಂಟರ ವ ಸೂಲಗಿತ್ತಿಯರ ಈ ಮೊದಲಾದ ಫಂಡಿಗು, ಊರೊಳಗಿನ ಸಾರ್ವಜನಿಕ ಕಾರ್ಯಗಳಿಗು ಕೂಡಾ ಧನಸಹಾಯಮಾಡಿರುವುದಾಗಿದೆ. ಗ್ರಂಥಸಂಗ್ರಹವೂ ಪ್ರಸಾರವೂ—ಈ ವಾಚನಾಲಯದಲ್ಲಿ ಸದ್ಯಸ್ಥಿತಿಗೆ ಸರಿಯಾಗಿ ಧಾರ್ಮಿಕ, ನೈತಿಕ, ವ್ಯವಹಾರಿಕ, ಪೌರಾಣಿಕ, ವೈದಿಕಜ್ಯೋತಿಷ್ಯ ವಗೈರೆ ಗ್ರಂಥಗಳ ಸಂಗ್ರಹವು ನಡೆದಿರುವದಲ್ಲದೆ ಕೆಲವು ಗ್ರಂಥಗಳು ಸಹ ಕೂಡಿರುವವು. ವಾರಪತ್ರಿಕೆ ಮಾಸಪತ್ರಿಕೆಗಳಂತೂ ತಪ್ಪದೆ ಬರುತ್ತಿರುವವು. ಇದಲ್ಲದೆ ತಾಡವಾಲೆಯ ಗ್ರಂಥಗಳ ಸಂಗ್ರಹವೂ, ಶೋಧನವೂ ನಡೆದಿವೆ. ಪಾಠಶಾಲೆಯ ಸ್ಥಾಪನೆಯಾದ 4 ವರುಷಗಳಿಂದ ತಯಾರಾಗುತ್ತಬರುವ ಪಂಚಾಂಗಗಳನ್ನು ಉದಾರಾಶ್ರಯದಾತೃಗಳಿಗೂ ಬೇರೆ ಸಭ್ಯಗೃಹಸ್ಥರಿಗೂ ಪ್ರತಿವರುಷ 2000 ಪ್ರತಿಗಳೂ ವೀರಶೈವವಿವಾಹವಿಧಿ, ಸಂಕ್ಷಿಪ್ತ ಶಿವಪೂಜಾವಿಧಿ, ದೇವೀಪೂಜಾವಿಧಿ ಈ ಗ್ರಂಥಗಳ ಸಾವಿರಾರು ಪ್ರತಿಗಳೂ ಮುಫತ್ತಾಗಿ ಹಂಚಲ್ಪಟ್ಟಿವೆ. ಪಾಠಶಾಲೆಯ ವಿದ್ಯಾರ್ಥಿಗಳು ಅಜುಬಾಜು ಗ್ರಾಮಗಳ ವೀರಶೈವರ ಮನೆಯಲ್ಲಿ ಜರುಗುವ ದೀಕ್ಷೆ ವಿವಾಹಾದಿ ಕಾರ್ಯಗಳನ್ನು ವಿಧ್ಯುಕ್ತವಾಗಿ ಜರುಗಿಸಿ ಬರುತ್ತಿರುವರು.

ಸಮಾಜೈಕ್ಯವೂ ದುಂದುಗಾರಿಕೆ ನಿಷೇಧವೂ.

ನಮ್ಮ ಗ್ರಾಮದಲ್ಲಿ ವೀರಶೈವರಲ್ಲಿರ್ಪ ಒಳಪಂಗಡಗಳ ವ್ಯಾಜ್ಯಗಳನ್ನು ತೆಗೆದುಹಾಕಿ ಪ್ರತಿಯೊಂದು ಪಂಗಡದ ವತಿಯಿಂದ ಒಬ್ಬೊಬ್ಬ ಮೆಂಬರನ್ನು ಚುನಾಯಿಸಿಕೊಂಡು ಈ ಮೆಂಬರುಗಳನ್ನು ಕೂಡಿಕೊಂಡು ಇಲ್ಲಿಯ ಬೃಹನ್ಮಠದ ಸ್ವಾಮಿಗಳ ಸನ್ನಿಧಿಯಲ್ಲಿ ಒಂದು ಪಂಚಾಯತಿಯನ್ನು ಸ್ಥಾಪಿಸಿದ್ದು ಈ ಕಮಿಟಿ ಮುಖಾಂತರ ಧರ್ಮದ ವ್ಯಾಜ್ಯಗಳನ್ನು ನಿಕಾಲಿ ಮಾಡುತ್ತಬಂದದ್ದರಿಂದ ಸಮಾಜದಲ್ಲಿ ಶಾಂತತೆಯೂ, ಐಕ್ಯವೂ, ಧರ್ಮದ ಜಾಗ್ರತೆಯೂ ನೆಲೆಗೊಂಡಿರುವದಕ್ಕೆ ಕಾರಣವಾಯಿತು. ಊರೊಳಗಿನ ಮಠಪತಿಗಣಾಚಾರ್ಯ ಸ್ಥಾವರಾರ್ಯ ವಗೈರೆ -ಬಾಬುದಾರರು ತಮ್ಮ ತಮ್ಮ ಕಾರ್ಯಗಳನ್ನು ಯಥಾಪ್ರಕಾರ ಜರಗಿಸುತ್ತಿರುವರಲ್ಲದೆ ಲಗ್ನಾದಿ ಕಾರ್ಯಗಳಲ್ಲಿಯ ದುಂದುಗಾರಿಕೆಯನ್ನು ತೆಗೆದುಹಾಕಿರುವರು. ಇದರಂತೆ ಇನ್ನುಳಿದಮತದವರಾದರೂ ನಡೆಯುತ್ತ ಬರುತ್ತಿರುವರು. ಈ ವಾಚನಾಲಯದ ಇಷ್ಟೆಲ್ಲ ಕಾರ್ಯವು ಯಾವದೊಂದು ಫಂಡಿನ ಸಹಾಯವಿಲ್ಲದೆ ಸ್ಥಲಪರಸ್ಥಲದ ಉದಾರಾಶ್ರಯದಾತರಿಂದ ಪ್ರತಿವರುಷ ಬರುವ ದ್ರವ್ಯದ ಸಹಾಯದಿಂದ ಜರುಗಿ ಈವರೆಗೆ 15220 ರೂಪಾಯಿಗಳ ವ್ಯಯವಾಗಿರುವದು. ಇದರಲ್ಲಿ 12501 ರೂಪಾಯಿ ಸಭ್ಯಗೃಹಸ್ಥರಿಂದ ಬಂದದ್ದು, ಮತ್ತು 505 ರೂಪಾಯಿ ಲಗ್ನಾದಿ ಶುಭಕಾರ್ಯಗಳಿಂದ ಬಂದದ್ದು. 125 ರೂಪಾಯಿ ಪಂಚಾಂಗ ವ ಧರ್ಮಗ್ರಂಥಗಳ ಮಾರಾಟದಿಂದ ಬಂದಿರುವದಲ್ಲದೆ ವೇ॥ ಬ್ರ॥ ಶ್ರೀ॥ ಸಿ॥ ಶಿವಬಸವಶಾಸ್ತ್ರಿಗಳವರ ಜ್ಯೋತಿಷ ವೈದಿಕಬಾಬಿನಿಂದ 2485 ರೂಪಾಯಿಗಳು ಬಂದಿರುವವು. ಈ ಪ್ರಕಾರ ಕಾರ್ಯವು ನಮ್ಮ ಈ ಸಣ್ಣಗ್ರಾಮದಲ್ಲಿ ನಿರಾಯಾಸವಾಗಿ ಸಾಗಿಬಂದದ್ದು ಜಗದ್ಗುರುವರ್ಯರ ಕೃಪೆಯಲ್ಲದೆ ಬೇರೆ ಇಲ್ಲ. ಇದರಂತೆ ಮುಂದಾದರೂ ಸಹಾಯಮಾಡುವ ಸಭ್ಯಗೃಹಸ್ಥರಿಗೆ ಜಗದ್ಗುರುವರ್ಯನು ಬಲವನ್ನುಕೊಡಲೆಂದು ಸೆಕ್ರೆಟರಿಗಳು ತಿಳಿಸಿದರು. ಮುಂದೆ ಯಾವತ್ತರೂ ಜಗದ್ಗುರು ವಿಶ್ವಾರಾಧ್ಯ ಗುರುವರ್ಯನನ್ನು ಸ್ತುತಿಸಿ ಮುಂದೆ 9 ಘಂಟೆಗೆ ಕಮಿಟಿ ವಿಸರ್ಜನೆಮಾಡಲ್ಪಟ್ಟಿತು.

ಜ-ವಿ-ವಾ-ಮೆಂಬರ ಮು-ಹೂಲಿ-ಜಿ-ಬೆಳಗಾಂವ.

ಮಹಾತ್ಮಗಾಂಧಿಯವರ ಸ್ವಚರಿತ್ರ.
(ಸತ್ಯಾನ್ವೇಷಣ.)

14 ನೆಯ ಪ್ರಕರಣ.

ಲಂಡನ್ ಪಟ್ಟಣದಲ್ಲಿ ವಾಸದೇರ್ಪಾಟು.

ನಾನು ವಿಕ್ಟೋರಿಯಾ ಹೋಟಲಿನಲ್ಲೇ ಇದ್ದೇನೆಂದು ತಿಳಿದು ಸೋಮವಾರದಿವಸ ಡಾಕ್ಟರ್ ಮೆಹತಾರವರು ಅಲ್ಲಿಗೆ ಬಂದರು. ನಾವು ಅಲ್ಲಿಂದ ಹೊರಟು ಹೋದೆವೆಂದು ಅಲ್ಲಿಯ ಕೆಲಸಗಾರರು ಮೆಹತಾಯವರಿಗೆ ತಿಳಿಸಿದರು, ಅಲ್ಲದೆ ನಮ್ಮ ಹೊಸ ವಾಸಸ್ಥಳದ ಗುರುತನ್ನು ಸಹ ಹೇಳಿದರು. ಅದರಮೇಲೆ ಮೆಹತಾರವರು ನಮ್ಮ ವಾಸಸ್ಥಳಕ್ಕೆ ಬಂದರು. ಹಡಗಿನಲ್ಲಿರುವಾಗ್ಗೆ ಸಮುದ್ರದನೀರಿನಿಂದಲೇ ಸ್ನಾನವನ್ನು ಮಾಡುತ್ತಿದ್ದೆನು. ಆ ನೀರಿನಲ್ಲಿ ಸಾಬೂನುಕರಗುವುದಿಲ್ಲ. ನಾನು ನಾಗರಿಕತೆಗಾಗಿ ಸಾಬೂನಿನಿಂದ ಮೈಯನ್ನುಜ್ಜಿ ಸ್ನಾನಮಾಡುತ್ತಿದ್ದೆನು. ಅದರಿಂದ ಮೈಕೊಳೆ ಹೋಗುವುದಕ್ಕೆ ಬದಲು ದೇಹವೆಲ್ಲಾ ಜಿಡ್ಡಾಗಿರಲಾರಂಭವಾಯಿತು. ಕ್ರಮೇಣ ತುರಿ ಪರಿಣಮಿಸಿತು. ಇದು ಸ್ವಯಂಕೃತಾಪರಾಧವೆಂದು ತಿಳಿದು ಡಾಕ್ಟರ್ ಮೆಹತಾರವರಿಗೆ ತಿಳಿಸಿದೆನು. ಅವರು - ಅಸಿಟಿಕ್ ಆಸಿಡ್ - ನ್ನು ಸವರಬೇಕೆಂದು ಹೇಳಿದರು. ಅದನ್ನು ಸವರುತ್ತಲೆ ಹೊಪ್ಪಳಿಯೆದ್ದಿತು. ಡಾಕ್ಟರ್ ಮೆಹತಾರವರು ಅದನ್ನು ಪರೀಕ್ಷಿಸಿದರು. ಅವರಿಗದು ಗೊತ್ತಾಗಲಿಲ್ಲವು. - ನಾವು ಈ ಆಂಗ್ಲದೇಶಕ್ಕೆ ಬಂದಿರುವುದು ವಿದ್ಯಾಭ್ಯಾಸಕ್ಕಾದರೂ ಇಲ್ಲಿಯ ಪ್ರಜೆಗಳ ಆಚಾರವ್ಯವಹಾರಗಳನ್ನು ಕೂಡ ಗ್ರಹಿಸಬೇಕಾಗಿರುವುದರಿಂದ ಆ ಕಾರ್ಯಕ್ಕೆ ಈ ವಾಸಸ್ಥಳವು ಉಪಯೋಗವಿಲ್ಲವು. ಯಾವುದೋ ಒಂದು ಕುಟುಂಬದವರೊಡನೆ ಮಿಶ್ರವಾಗಿರಬೇಕು. ಮೊದಲು ಕೆಲದಿನಗಳಲ್ಲಿ ಆ ಜನರ ಪದ್ಧತಿಯನ್ನು ತಿಳಿದುಕೊಳ್ಳಬೇಕು. ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಬಾ - ಎಂದು ಮೆಹತಾರವರು ಹೇಳಿದರು. ನನಗೆ ಬಹಳ ಸಂತೋಷವಾಯಿತು. ಅದೇ ಪ್ರಕಾರ ನನ್ನ ಸ್ನೇಹಿತನ ವಾಸಸ್ಥಳಕ್ಕೆ ನನ್ನ ಸಾಮಾನನ್ನು ತೆಗೆದುಕೊಂಡು ಹೋದೆನು. ಅವನು ನನ್ನನ್ನು ಸೋದರನಂತೆ ಬಹಳ ಪ್ರೀತಿಯಿಂದ ಆದರಿಸಿದನು. ಆಂಗ್ಲದೇಶೀಯರ ಪದ್ಧತಿಯನ್ನೂ ಆಚಾರವನ್ನೂ ನಾನು ಅಲ್ಲಿ ಅನುಸರಿಸಬೇಕಾದ ಕ್ರಮವನ್ನೂ ಹೇಳಿಕೊಟ್ಟನು ಆಂಗ್ಲಭಾಷೆಯಲ್ಲೇ ಮಾತನಾಡುವಂತೆ ಮಾಡಿದನು. ಆಹಾರ ಮಾತ್ರ ನನಗೆ ಸರಿಬೀಳಲಿಲ್ಲವು. ಕಾಯಿಪಲ್ಯಗಳಿಗೆ ಉಪ್ಪುಕಾರಹಾಕಲ್ಪಟ್ಟದ್ದಾಗ್ಯೂ ಅವು ನನಗೆ ರುಚಿಸಲಿಲ್ಲವು. ಊಟಕ್ಕಿಡುತ್ತಿದ್ದ ಆ ಮನೆಯಜಮಾನಿಗು ಸಹ ನನ್ನ ಭೋಜನದ ವಿಚಾರದಲ್ಲಿ ಏನೂ ತೋಚಲಿಲ್ಲವು. ಬೆಳಗಿನವೇಳೆಯಲ್ಲಿ ಓಟು ಮಾಲುಗಂಜಿಯನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೆನಲ್ಲದೆ ಮಧ್ಯಾಹ್ನವೂ ರಾತ್ರಿಯೂ ಏನೂ ಸೇರುತ್ತಿರಲಿಲ್ಲವು. ಇದರಿಂದ ಉಪವಾಸವೇಯಿರಬೇಕಾಗಿದ್ದಿತು. ಮಾಂಸವನ್ನು ತಿನ್ನಬೇಕೆಂದು ಆ ಸ್ನೇಹಿತನು ಬಹಳವಾಗಿ ಹೇಳುತ್ತಿದ್ದನಾದರೂ ನಾನು ನನ್ನ ಪ್ರಮಾಣದ ಸಂಗತಿಯನ್ನು ತಿಳಿಸಿ ತೆಗೆದುಕೊಳ್ಳುತ್ತಿರಲಿಲ್ಲವು. ಬಾಕಿ ಎರಡುವೇಳೆಯಲ್ಲು ರೊಟ್ಟಿ ಮತ್ತು ಪಚಡಿಯನ್ನು ಹಾಕುತ್ತಿದ್ದಳು. ನಾನು ಚೆನ್ನಾಗಿ ಊಟಮಾಡುವವನಾದುದರಿಂದ ಆಕೆಯು ಇಡುತ್ತಿದ್ದ ರೊಟ್ಟಿಯು ಸಾಲುತ್ತಿರಲಿಲ್ಲ. ಪುನಃ ಕೇಳಿ ಬಡಿಸಿಕೊಳ್ಳುವುದು ಮರ್ಯಾದೆಯಲ್ಲವೆಂದು ತಿಳಿದು ಆಕೆ ಮೊದಲಾವೃತ್ತಿ ಬಡಿಸಿದ 2-3 ರೊಟ್ಟಿಚೂರುಗಳನ್ನು ಮಾತ್ರ ತಿಂದು ಸುಮ್ಮನಿರುತ್ತಿದ್ದೆನು. ಅಲ್ಲಿ ಹಾಲನ್ನು ಕೊಡುವ ಪದ್ಧತಿಯಿಲ್ಲ. ನನ್ನ ಊಟದ ರೀತಿಯನ್ನು ನೋಡಲಾರದೆ ನನ್ನ ಮಿತ್ರನು ಒಂದುದಿವಸ ಬಹಳ ಕೋಪಗೊಂಡು - ನೀನು ನನಗೆ ಏಕೋದರನಾದ ತಮ್ಮನಂತಿರದಿದ್ದರೆ ನಿನ್ನನ್ನು ಸ್ವದೇಶಕ್ಕೆ ಕಳುಹಿಸಿಬಿಡುತ್ತಿದ್ದೆನು. ಇಲ್ಲಿಯ ಪರಿಸ್ಥಿತಿಯನ್ನು ತಿಳಿಯದೇನೆ ಓದಲು ಬರುವಾಗ್ಗೆ ನಿನ್ನ ತಾಯಿಯ ಹತ್ತಿರ ಪ್ರಮಾಣಮಾಡಿದ್ದ ಮಾತ್ರಕ್ಕೆ ಈಗ ಮಾಂಸವನ್ನೇಕೆ ತಿನ್ನಬಾರದು? ಆ ಪ್ರಮಾಣವು ನಿನ್ನನ್ನು ಬಾಧಿಸಲಾರದು. ಅದಕ್ಕಾಗಿ ಹೀಗೆ ಆಹಾರವನ್ನು ತೆಗೆದುಕೊಳ್ಳದಿರುವುದು ಶುದ್ಧ ದಡ್ಡತನವೇ. ಮೊದಲು ನೀನು ಮಾಂಸವನ್ನು ತಿಂದಿರುತ್ತೀಯೆ. ನಿನಗೆ ಅದು ಹಿತವಾಗಿದ್ದಿತೆಂದು ಕೂಡ ಹೇಳಿದ್ದೆ. ನಿಷ್ಕಾರಣವಾಗಿ ಆಗ ಮಾಂಸವನ್ನು ತಿಂದೆ. ಈಗ ತಿನ್ನಬೇಕಾದ ಆವಶ್ಯಕತೆಯಿರುವಾಗ್ಗೆ ತಿನ್ನುವುದಿಲ್ಲವೆಂದು ಪ್ರತಿಜ್ಞೆಮಾಡಿರುವೆ. ಇದರಿಂದ ನಿನಗೇನೂ ಪ್ರಯೋಜನವಾಗುವುದಿಲ್ಲ.- ಎಂದು ಆ ಸ್ನೇಹಿತನು ಹೇಳಿದನು. ನಾನು ಮಾತ್ರ ಕೇಳಲಿಲ್ಲವು. ಪ್ರತಿದಿವಸದಲ್ಲೂ ನಮಗೆ ಈ ವಿಚಾರದಲ್ಲಿ ಚರ್ಚೆಯು ನಡೆಯುತ್ತಲೇ ಇದ್ದಿತು. ಆತನ ವಾದವು ಪ್ರಬಲವಾದಂತೆಲ್ಲ ನನ್ನ ಪ್ರತಿಜ್ಞೆಯೂ ದೃಢವಾಗುತ್ತಿತ್ತು. ನಾನು ಪ್ರತಿದಿನದಲ್ಲೂ ಭಗವಂತನನ್ನು ಪ್ರಾರ್ಥಿಸುತ್ತಿದ್ದೆನು. ಆ ಕಾರಣದಿಂದ ನನ್ನ ಪ್ರತಿಜ್ಞೆಯು ಅಳ್ಳಾಡಲಿಲ್ಲವು. ನನಗೆ ಆಗ ಭಗವಂತನನ್ನು ಕುರಿತು ಸರಿಯಾಗಿ ತಿಳಿಯದಿದ್ದರೂ ನನ್ನ ದಾದಿಯಾದ ರಂಭೆಯು ಚಿಕ್ಕತನದಲ್ಲಿ ನಾಟಿದ ಒಳ್ಳೇ ಬೀಜದ ಫಲವೇ ಆ ವಿಶ್ವಾಸವಾಗಿದ್ದಿತು. ಒಂದುದಿವಸ ನನ್ನ ಸ್ನೇಹಿತನು ಬೊಂಥರವರು ಬರೆದ - ಥಿಯರಿ ಆಫ್‌ಯೂಟಿಲಿಟಿ - ಎಂಬ ಗ್ರಂಥವನ್ನು ಓದಲುಪಕ್ರಮಿಸಿದನು. ಆ ವಿಷಯವೇನೂ ನನಗೆ ಗೊತ್ತಾಗಲಿಲ್ಲವು. ನನ್ನ ಸ್ನೇಹಿತನು ಅದನ್ನು ಕುರಿತು ನನಗೆ ಬೋಧಿಸುವವನಾದನು. - ನನಗೆ ಈ ವಾದವು ತಿಳಿಯದು. ಅದನ್ನು ಗ್ರಹಿಸಲು ತಕ್ಕ ಶಕ್ತಿಯಿಲ್ಲವು. ಮಾಂಸವನ್ನು ತಿನ್ನುವುದೂ ಅಗತ್ಯವೆಂದು ನಾನು ಅಂಗೀಕರಿಸಿದೆನಾದರೂ ನಾನು ನನ್ನ ಪ್ರಮಾಣವನ್ನು ಅತಿಕ್ರಮಿಸಲಾರೆನು. ನಾನು ನಿನ್ನಕೂಡ ವಾದಿಸತಕ್ಕವನಲ್ಲ. ನೀನು ನನಗೆ ಒಳ್ಳೆಯದುದಕ್ಕಾಗಿ ಇಷ್ಟು ಒತ್ತಿಹೇಳುತ್ತಿದ್ದೀಯೋ ಎಂಬುದನ್ನು ಸಹ ಬಲ್ಲೆನು. ಆದರೂ ನಾನು ನನ್ನ ನಿಯಮವನ್ನು ಬಿಡಲಾರೆನು. ಅದು ಅಸಂಭವವು, ಮತ್ತು ಅನುಲ್ಲಂಘನೀಯವು- ಎಂದು ನಾನು ಹೇಳಿದೆನು. ನನ್ನ ಮಾತನ್ನು ಕೇಳಿ ಆತನು ಬಹಳ ಆಶ್ಚರ್ಯಪಟ್ಟನು. - ಹಾಗಾದರೆ ಸರಿ, ಈ ವಿಷಯವನ್ನು ಕುರಿತು ಇನ್ನು ನಾನು ವಾದಿಸುವುದಿಲ್ಲ - ಎಂದು ಆತನು ಹೇಳಿ ಪುಸ್ತಕವನ್ನು ಮುಚ್ಚಿಬಿಟ್ಟನು. ಪುನಃ ನನ್ನ ವಿಷಯವನ್ನು ಕುರಿತು ಆತನು ಯಾವಾಗಲೂ ನನ್ನ ಕೂಡ ಮಾತನಾಡಲಿಲ್ಲವು. ಆದರೆ ನನ್ನ ಭೋಜನದ ವಿಷಯದಲ್ಲಿ ಆತನಿಗೆ ಬಹಳ ಅಸಮಾಧಾನವಾಗಿದ್ದಿತು. ಆತನು ಚುಟ್ಟವನ್ನು ಸೇದುತ್ತಿದ್ದನು, ಮತ್ತು ಮದ್ಯಸೇವನೆಮಾಡುತ್ತಿದ್ದನು. ಆದರೆ ಅವನ್ನು ಕುರಿತು ನನ್ನಕೂಡ ಎಂದೂ ಹೇಳಲಿಲ್ಲವು. ಅವನ್ನು ಅಭ್ಯಾಸಮಾಡಲಾಗದೆಂದೇ ಆತನು ನನಗೆ ಹೇಳಿದನು. ಮಾಂಸವನ್ನು ತಿನ್ನದಿದ್ದಲ್ಲಿ ನೀರಸವಧಿಕವಾಗಿ ಆಂಗ್ಲದೇಶದಲ್ಲಿ ವಾಸಮಾಡಲು ಅವಕಾಶವಾಗದಂತಹ ಸ್ಥಿತಿಯಲ್ಲಿ ಪ್ರಾಪ್ತವಾಗುತ್ತದೋ ಎಂದು ಭಯಪಡುತ್ತಿದ್ದನು.

ಅವನ ವಾಸಸ್ಥಳವು ರಿಚ್ಮಂಡಿನಲ್ಲಿ. ಅವನ ಮನೆಯಲ್ಲಿ ಕೆಲದಿನಗಳಿದ್ದೆನು. ಆ ಕಾಲದಲ್ಲಿ ಲಂಡನ್ನಿಗೆ ವಾರಕ್ಕೊಂದೆರಡು ಸಲಕ್ಕಿನ್ನ ಹೆಚ್ಚಾಗಿ ಹೋಗಲವಕಾಶವಿರಲಿಲ್ಲವು. ಆದರಿಂದ ನನಗೊಂದು ಕುಟುಂಬದಲ್ಲಿ ವಾಸಮಾಡಲ್ಪೇರ್ಪಡಿಸಬೇಕೆಂದು ಡಾಕ್ಟರ್ ಮೆಹತಾಯವರೂ, ದಲ್ಪತಿ ರಾಂಶುಕ್ಲಾಯವರೂ ನಿಶ್ಚಯಿಸಿದರು. ವೆಸ್ಟ್‌ಕೆನ್ಸಿಂಗ್ಟನ್ನಿನಲ್ಲಿ ಒಂದು ಆಂಗ್ಲೋ ಇಂಡಿಯನ್ ಕುಟುಂಬದಲ್ಲಿ ಶುಕ್ಲಾರವರು ನನಗೆ ವಸತಿಯನ್ನೇರ್ಪಡಿಸಿದರು. ನಾನು ಅಲ್ಲಿಗೆ ಹೋದೆನು. ಆ ಮನೆಯ ಯಜಮಾನಿಯು ವಿಧವೆಯು. ನಾನು ಮಾಂಸವನ್ನು ತಿನ್ನುವುದಿಲ್ಲವೆಂದು ಆಕೆಗೆ ಹೇಳಿದೆನು. ಒಳ್ಳೇ ಏರ್ಪಾಟುಮಾಡಲ್ಪಡುವುದೆಂದು ತಿಳಿಯಬಂದಿತಾದರೂ ಅಲ್ಲಿಯು ಕೂಡ ನನಗೆ ಊಟವು ಉಪವಾಸಪ್ರಾಯವಾಗಿಯೇ ಇದ್ದಿತು. ಹಿಟ್ಟು ಮೊದಲಾದುವನ್ನು ಕಳುಹಿಸಿಕೊಡಬೇಕೆಂದು ನಮ್ಮ ಊರಿ (ರಾಜಕೋಟೆ) ಗೆ ಬರೆದಿದ್ದೆನಾದರೂ ಬಂದಿರಲಿಲ್ಲ. ಯಾವ ವಸ್ತುವೂ ರುಚಿಸುತ್ತಿರಲಿಲ್ಲವು. ಪಾಪ ಆ ಯಜಮಾನಿಯು ಪ್ರತಿದಿನವೂ ಇದು ಚೆನ್ನಾಗಿದೆಯೇ ಅದು ಚೆನ್ನಾಗಿದೆಯೇ ಎಂದು ಕೇಳುತ್ತಿದ್ದಳು. ಪುನಃಪುನಃ ಕೇಳಿ ಬಡಿಸಿಕೊಳ್ಳಲು ನನಗೆ ನಾಚಿಗೆಯು ಹೋಗಿರಲಿಲ್ಲವು. ಅವರು ಹಾಕಿದುದನ್ನು ತಿಂದು ಸುಮ್ಮನೆಯಿರುತ್ತಿದ್ದೆನು. ಆಕೆಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರು ಬೇರೆ ಒಂದು ರೊಟ್ಟಿಚೂರನ್ನು ಬಲವಂತದಿಂದ ನನ್ನ ಎಲೆಗೆ ಹಾಕುತ್ತಿದ್ದರು. ಆದರೆ ಅದು ನನಗೆ ಯಾವಲೆಕ್ಕ! ಒಂದು ದೊಡ್ಡ ರೊಟ್ಟಿ ಪೂರ್ತಿಯಾಗಿದ್ದ ಹೊರತು ಸಾಕಾಗುತ್ತಿರಲಿಲ್ಲ. ನಾನು ಇನ್ನೂ ಸರಿಯಾಗಿ ಓದಲುಪಕ್ರಮಿಸಿರಲಿಲ್ಲ. ಶುಕ್ಲಾಯವರು ವರ್ತಮಾನಪತ್ರಿಕೆಗಳನ್ನು ಓದುತ್ತಿದ್ದುದರಿಂದ ಅವನ್ನು ಓದಲುಪಕ್ರಮಿಸಿದೆನು. ಹಿಂದುಸ್ಥಾನದಲ್ಲಿ ನಾನೆಂದೂ ವೃತ್ತಪತ್ರಿಕೆಗಳನ್ನೋದಿದುದಿಲ್ಲ. ಆಂಗ್ಲದೇಶದಲ್ಲಿ ಅವುಗಳಮೇಲೆ ಅಭಿರುಚಿಹುಟ್ಟಿತು. ಡೆಯಿಲೀ ನ್ಯೂಸು, ಡೆಯಿಲೀ ಟೆಲಿಗ್ರಾಫ್, ಪಾಲು ಮಾಲು ಗೆಜೆಟ್ ಈ ಮೂರು ಪತ್ರಿಕೆಗಳನ್ನು ನಾನು ಪ್ರತಿದಿನವೂ ಒಂದು ಗಂಟೆಯಲ್ಲಿ ಓದಿ ಮುಗಿಸುತ್ತಿದ್ದೆನು. ಆನಂತರ [illegible]

ತಿರುಗಾಡುತ್ತಿದ್ದೆನು. ಮಾಂಸಮಿಶ್ರವಾದ ಆಹಾರವನ್ನು ವಿಕ್ರಯಿಸುವ ಅಂಗಡಿಗಳು ಪಟ್ಟಣದಲ್ಲಿರುತ್ತವೆಂದು ನಮ್ಮ ಮನೆಯ ಯಜಮಾನಿಯು ಹೇಳಿದ್ದರಿಂದ ಆಕಡೆ ತಿರುಗಿನೋಡುತ್ತಿರಲಿಲ್ಲವು. ಸಾಮಾನ್ಯವಾಗಿ ಅಂಗಡಿಗೆ ಹೋಗಿ ಹೊಟ್ಟೆತುಂಬ ರೊಟ್ಟಿಯನ್ನು ಕೊಂಡುಕೊಂಡು ತಿನ್ನುತ್ತಿದ್ದೆನಾದರೂ ತೃಪ್ತಿಯಾಗುತ್ತಿರಲಿಲ್ಲವು. ಒಂದುದಿವಸ ಫಾರಿಂಗ್ಡನು ಬೀದಿಯಲ್ಲಿ ಒಂದುಶಾಕಾಹಾರದ ಅಂಗಡಿಯು ಕಣ್ಣಿಗೆಬಿದ್ದಿತು. ಆಗ ಅದರಿಂದ ನನಗೆ ಹಿಡಿಯಲಾರದಷ್ಟು ಸಂತೋಷವಾಯಿತು. ಅಲ್ಲಿ ಶಾಕಾಹಾರಸಂಬಂಧವಾದ ಪುಸ್ತಕವು ಕೂಡ ವಿಕ್ರಯಿಸಲ್ಪಡುತ್ತಿದ್ದಿತು. "ಸಾಲ್ಟ್ಸ್ ಪ್ಲೀಫಾರ್ ವೆಜಿಟೇರಿಯಾನಿಜಂ" ಎಂಬ ಪುಸ್ತಕವನ್ನು 12 ಆಣೆಕೊಟ್ಟು ಕೊಂಡುಕೊಂಡು ತಿಂಡಿತಿನ್ನಲು ಒಳಕ್ಕೆ ಹೋದೆನು. ಆಂಗ್ಲದೇಶಕ್ಕೆ ಕಾಲಿಟ್ಟಮೇಲೆ ನಾನು ಹೊಟ್ಟೆತುಂಬ ಊಟಮಾಡಿದುದು ಆದಿವಸವೇ. ದೇವರಿಗೆ ಆಗ ನನ್ನಮೇಲೆ ದಯೆಹುಟ್ಟಿತು. ಆ ಪುಸ್ತಕವನ್ನು ನಾನು ಸಾಕಲ್ಯವಾಗಿ ಓದಿದೆನು. ಅದು ನನಗೆ ಚೆನ್ನಾಗಿ ಒಪ್ಪಿತು. ಅಷ್ಟರಲ್ಲಿ ನನಗೆ ಶಾಕಾಹಾರಸಂಬಂಧವಾದ ನಂಬಿಕೆಯು ಮತ್ತಷ್ಟು ದೃಢವಾಯಿತು. ಅದುವರೆಗೆ ನಾನು ಪ್ರಮಾಣಕ್ಕೋಸ್ಕರ ಮಾಂಸಾಹಾರವನ್ನು ಬಿಟ್ಟಿದ್ದೆನಾದರೂ ಮಾಂಸಾಹಾರವು ದುಷ್ಟವೆಂಬುದು ನನಗೆ ತೋರಲಿಲ್ಲವು. ಅದು ಆವಶ್ಯವೆಂದೇ ನಾನು ನಂಬಿ ಯಾವಾಗಲೂ ಅದಕ್ಕಾಗಿ ಬಲವಾದ ಪ್ರಯತ್ನಮಾಡಬೇಕೆಂದು ಕೂಡ ತಿಳಿದಿದ್ದೆನಾದರೂ ಸಾಲ್ಟಯವರ ಪುಸ್ತಕವನ್ನು ಓದಿದಮೇಲೆ ನನ್ನ ಅಭಿಪ್ರಾಯವು ಸಂಪೂರ್ಣವಾಗಿ ಬದಲಾಯಿಸಿ ಹೋಯಿತು. ಶಾಕಾಹಾರವೇ ಶ್ರೇಷ್ಠವೆಂದು ಚೆನ್ನಾಗಿ ದೃಢಪಟ್ಟಿತು.

[ಮೊದಲನೇ ಪುಟದ ಶೇಷ.]

ಬಹು ಗಲೀಜಾಗಿದ್ದ ಕೇರಿಯು ಈಗ ಶುಚಿಯಾಗಿಯೂ ಆರೋಗ್ಯಕರವಾಗಿಯೂ ಆಗುವುದಕ್ಕೆ ಅವಕಾಶವಾಯಿತು.

ರಾತ್ರಿ ಪಾಠಶಾಲೆಗಳು:—ಮಾಹೆಯಾನ 35 ರೂಪಾಯಿಗಳ ವೆಚ್ಚದಿಂದ ಸೇವಾಸಮಿತಿಯಲ್ಲಿ ಆರು ತರಗತಿಗಳನ್ನೂ, ಮಾಹೆಯಾನ 51 ರೂಪಾಯಿಗಳ ಖರ್ಚಿನಿಂದ ಕಲಾಸಪಾಳ್ಯ, ಅರಳೇಪೇಟೆ, ಗಂಗಮಚೇರಿಗಳಲ್ಲಿ ಮೂರು ಸ್ಕೂಲುಗಳನ್ನೂ, ಹಗಲುವೇಳೆ ಕೆಲಸಕ್ಕೆ ಹೋಗುವವರ ಪ್ರಯೋಜನಕ್ಕಾಗಿ ರಿಫೋರ್ಟರಿ ಸಾಲುಗಳೆರಡರಲ್ಲಿಯೂ ನಡೆಸಿಕೊಂಡು ಬರಲಾಯಿತು. ಈ ರಾತ್ರಿ ಪಾಠಶಾಲೆಗಳಲ್ಲಿ ಓದುವವರ ಸಂಖ್ಯೆಯು ಕ್ರಮವಾಗಿ 70, 24, 50 ಮತ್ತು 21 ಇದ್ದಿತು.

ಹೊಲಿಗೆಯ ತರಗತಿ:—ಮಿಸ್ ಸಿಲಿಜ್‌ರವರು ವಾರವಾರವೂ ನಡೆಸುತ್ತಿದ್ದ ಈ ಹೊಲಿಗೆಯ ತರಗತಿಗೆ ಸರಾಸರಿ ಹತ್ತುಮಂದಿ ಸ್ತ್ರೀಯರು ಹಾಜರಾಗುತ್ತಿದ್ದು, ಹೊಲಿಗೆ, ಬಟ್ಟೆಕತ್ತರಿಸುವುದು, ಸ್ತ್ರೀಯರ ಮತ್ತು ಮಕ್ಕಳ ಉಡಿಗೆತೊಡಿಗೆಗಳನ್ನು ಹೊಲಿಯುವುದು ಈ ಕೆಲಸಗಳನ್ನು ಕಲಿಯುತ್ತಿದ್ದರು. ಪದಾರ್ಥಗಳನ್ನು ಸಂಘದವರು ಸರಬರಾಯಿ ಮಾಡುತ್ತಿದ್ದರೂ, ತಯಾರಾದ ಬಟ್ಟೆಗಳನ್ನು ಸ್ತ್ರೀಯರೇ ತೆಗೆದುಕೊಂಡು ಹೋಗುತ್ತಿದ್ದರು.

ಹಾಲು ಹಂಚುವುದು ಮತ್ತು ಮಕ್ಕಳ ರಕ್ಷಣೆ:—ನಗರ್ತಪೇಟೆಯ ಸೇವಾಸಮಿತಿಯಲ್ಲಿ ನಾವು ಹಾಲನ್ನು ಹಂಚುತ್ತಿರುವ ಏರ್ಪಾಡು ಬಹಳ ಪ್ರಜಾರಂಜಕವಾಗಿದೆ. ಹಾಲನ್ನು ಪಡೆಯುತ್ತಿದ್ದ ಮಕ್ಕಳ ಸಂಖ್ಯೆಯು 1923-24 ರಲ್ಲಿ ಸರಾಸರಿ 24 ಇದ್ದು ಮಾರನೆವರ್ಷ 30 ಕ್ಕೆ ಹೆಚ್ಚಿತು. ಆ ಸಂವತ್ಸರಗಳಲ್ಲಿ ಕ್ರಮವಾಗಿ 1,544 ಮತ್ತು 1,850 ಮಕ್ಕಳಿಗೆ ಸ್ನಾನವು ಸಹ ಮಾಡಿಸಲ್ಪಟ್ಟಿತು. ಇವುಗಳಲ್ಲಿ ಮೊದಲನೇ ವರ್ಷ 390 ಮಕ್ಕಳೂ, ಎರಡನೇ ವರ್ಷ 500 ಮಕ್ಕಳೂ ಅಭ್ಯಂಗನಸ್ನಾನಮಾಡಿದವು. ನರ್ಸ್ (ದಾದಿಯು) ಈ ಎರಡು ವರ್ಷಗಳಲ್ಲಿ ಕ್ರಮವಾಗಿ 1,200 ಮತ್ತು 1,300 ಮನೆಗಳಿಗೆಹೋಗಿ ಮಕ್ಕಳು ಶುಚಿರ್ಭೂತರಾಗಿಯೂ ಆರೋಗ್ಯವಾಗಿಯೂ ಬೆಳೆಯಲು ತಕ್ಕ ಬುದ್ಧಿವಾದವನ್ನು ಹೇಳಿಬಂದಳು. ಮೊದಲು ವರ್ಷ ರೂ. 908-6-8 ಗಳೂ, ಎರಡನೇ ವರ್ಷ ರೂ. 983-14-0 ಗಳೂ ಹಾಲು ಹಂಚಿದ್ದಕ್ಕಾಗಿ ಖರ್ಚಾದುವು. ಶಿಬ್ಬಂದಿಯ ಖರ್ಚು ರೂ. 469 ಮತ್ತು ರೂ. 480 ಗಳಾಗಿತ್ತು. ಈ ಸಂವತ್ಸರದಲ್ಲಿ ದಾದಿಯು 39 ಹೆರಿಗೆಗಳನ್ನು ಮಾಡಿಸಿರುವಳು.

1924 ನೇ ಜನವರಿಯಲ್ಲಿ ನಡೆದ ಮಕ್ಕಳ ಪ್ರದರ್ಶನ ಕಾಲದಲ್ಲಿ ಸಂಘದ ಹಾಲಿನ ಶಾಲೆಯನ್ನು ವಾಣೀವಿಲಾಸ ಇನ್‌ಸ್ಟಿಟ್ಯೂಟ್‌ನಲ್ಲಿ ಹಂಗಾಮಿಯಾಗಿ ಇಟ್ಟು ನಡೆಸಲಾಯಿತು. ಆಗ ಬಡವರ ಮಕ್ಕಳಿಗಲ್ಲದೆ, ಪ್ರದರ್ಶನಕ್ಕೆ ಬಂದಿದ್ದ ಇತರ ಮಕ್ಕಳಿಗೂ ಹಾಲನ್ನು ಹಂಚಿಕೊಡಲಾಯಿತು. ಹೆಲ್ತ್ ಆಫೀಸರು ತಯಾರಿಸಿರುವ ಪ್ರದರ್ಶನದ ತಸ್ವೀರಿನ ಪುಸ್ತಕದಲ್ಲಿ ಈ ಹಾಲು ಹಂಚುವುದರ ತಸ್ವೀರನ್ನು ಸೇರಿಸಿದೆ.

ದಿವಂಗತರಾದ ಪ್ರಥಮ ರಾಜಕುಮಾರಿಯವರ ಉತ್ತರಕ್ರಿಯಾದಿಗಳು ನಡೆಯುವಾಗ್ಗೆ ಹಾಲಿಗಾಗಿಬರುವ ಬಡವರ ಮಕ್ಕಳಿಗೆ ಬಟ್ಟೆಗಳನ್ನು ಕೊಂಡುಕೊಡಲು ಬೆಂಗಳೂರು ಸಿಟಿ ಮುನಿಸಿಪಲ್ ಕಮಿಷನರವರು 50 ರೂಪಾಯಿಗಳನ್ನು ದಯಮಾಡಿ ಕಳುಹಿಸಿದ್ದರು. ಅದರಂತೆ 20-12-24 ರಲ್ಲಿ ಆ ಬಡಮಕ್ಕಳಲ್ಲಿ ಪ್ರತಿಯೊಂದಕ್ಕೂ ಒಂದು ಉಣ್ಣೆಯ ಶಾಲನ್ನೂ ಒಂದು ತಗಡಿನ ಆಟದ ಗಿಲಿಕೆಯ ಸಾಮಾನನ್ನೂ ಹಂಚಿದರು. ಉದಾರಿಗಳಾದ ಕೆಲವುಮಂದಿ ಸ್ತ್ರೀಯರಿಂದಲೂ ದೊಡ್ಡಮನುಷ್ಯರಿಂದಲೂ ಕಳುಹಿಸಲ್ಪಟ್ಟಿದ್ದ ಕೆಲವು ಉಣ್ಣೆಯ ಬನಿಯನ್ನುಗಳನ್ನೂ ಇದೇ ಸಂದರ್ಭದಲ್ಲಿ ಮಕ್ಕಳಿಗೆ ಕೊಡಲಾಯಿತು. ಸಂಘದ ಗೌರವಕಾರ್ಯದರ್ಶಿಯವರು ಆಗ ನೆರೆದಿದ್ದ ತಾಯಿಯರಿಗೆಲ್ಲಾ ಈ ಇನಾಮುಗಳನ್ನು ಕೊಡಬೇಕಾಗಿ ಬಂದ ಕಾರಣವನ್ನು ಕುರಿತು ವಿವರಿಸಿಹೇಳಿ, ದೈವಾಧೀನರಾದ ರಾಜಕುಮಾರಿಯವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯುವಂತೆ ಅವರು ಪ್ರಾರ್ಥಿಸಬೇಕೆಂತಲೂ, ಸಂಘಕ್ಕೆ ದ್ರವ್ಯಸಹಾಯಮಾಡಿದ ಶ್ರೀಮನ್ಮಹಾರಾಣಿ ವಾಣೀವಿಲಾಸಸನ್ನಿಧಾನದವರಿಗೂ, ಶ್ರೀಮನ್ಮಹಾರಾಜರವರಿಗೂ ಕೃತಜ್ಞರಾಗಿರಬೇಕೆಂತಲೂ ತಿಳಿಯಹೇಳಿದರು.

ಈ ಹಾಲಿನ ಶಾಲೆಗೆ ಸಿಟಿ ಮುನಿಸಿಪಾಲಿಟಿಯವರು ಮಾಹೆಯಾನಾ 30 ರೂಪಾಯಿಗಳನ್ನೂ, ಮೆ|| ಎ. ಮಾಧವಯಂಗಾರ್‌ರವರು ಮಾಹೆಯಾನಾ 10 ರೂಪಾಯಿಗಳನ್ನೂ ದಯಮಾಡಿ ಕೊಡುತ್ತಾಬಂದರು. ಇದಲ್ಲದೆ ಕೆಲವು ಮಂದಿ ಸ್ತ್ರೀ ಶಿರೋಮಣಿಗಳಿಂದಲೂ, ದೊಡ್ಡಮನುಷ್ಯರಿಂದಲೂ ಮಾಹೆಯಾನ ಇಪ್ಪತ್ತು ರೂಪಾಯಿಗಳನ್ನು ಚಂದಾ ರೂಪವಾಗಿ ಎತ್ತುತ್ತಾರೆ.

ಮೈಸೂರು ಸಿಟಿ ಕಮಿಟಿಯವರೂ ಹಾಲು ಹಂಚುವುದರಲ್ಲಿ ಶ್ರದ್ಧೆಯನ್ನು ತೋರಿಸಿರುವರು. ಇಪ್ಪತ್ತು ಮಕ್ಕಳಿಗೆ ದಿನವಹಿ ಹಾಲೂ ಸ್ನಾನವೂ ಸಿಗುವಂತೆ ಏರ್ಪಾಡು ಮಾಡಿರುವರು.

ಬಟ್ಟೆಬರೆಗಳನ್ನು ಕೊಡಿಸಿ ಬಡಮಕ್ಕಳಿಗೆ ಕೊಡಲಾಯಿತು. ಡಾಕ್ಟರ್ ಮಾಸ್ಕರ್ಹಾನ್ಸ್‌ರವರೂ ಅವರ ಪತ್ನಿಯವರೂ, ಡಾಕ್ಟರ್ ರಂಗಣ್ಣನವರೂ ಮಕ್ಕಳ ಆರೋಗ್ಯ ವಿಚಾರವನ್ನು ನೋಡಿಕೊಳ್ಳುತ್ತಿದ್ದರು. ಅವರು ವಾರವಾರಕ್ಕೂ ಮಕ್ಕಳನ್ನು ಶೋಧನಮಾಡುತ್ತಲೂ, ಅವರ ಕಾಯಿಲೆಗಳಿಗೆ ತಕ್ಕ ಔಷಧಗಳನ್ನು ಬರೆದುಕೊಡುತ್ತಲೂ ಇದ್ದರು.

ಪರಸ್ಪರಸಹಾಯ:—ಕಮಿಟಿಯವರು ಒಂದು ಪರಸ್ಪರಸಹಾಯ ಸಂಘವನ್ನು ಸ್ಥಾಪಿಸಿಕೊಂಡು ಷೇರುದಾರರಿಂದ 1923-24 ರಲ್ಲಿ ರೂ. [illegible] ಗಳನ್ನೂ, 1924-25 ರಲ್ಲಿ ರೂ. 800 ಗಳನ್ನೂ ಕೊಡಿಸಿದರು. ಸ್ವಲ್ಪಸ್ವಲ್ಪ ಮೊಬಲಗುಗಳನ್ನು ಕಡಿಮೆ ಬಡ್ಡಿಯದರದಮೇಲೆ ಬಡಜನರಿಗೆ ಈ ಸೊಸೈಟಿಯಿಂದ ಸಾಲ ಕೊಡುತ್ತಾ ಇದ್ದಾರೆ.

ಪೌರಸಾಮಾಜಿಕಸಂಘದ ಆಸ್ಪತ್ರೆ:—ಹೆರಿಗೆಯನ್ನು ನಡೆಸುವುದಕ್ಕೂ ಕಾಯಿಲೆಯಲ್ಲಿ ಉಪಚಾರವನ್ನುಮಾಡುವುದಕ್ಕೂ ಸೂಲಗಿತ್ತಿ (ಮಿಡ್‌ವೈಫ್) ಯರಿಗೂ ದಾದಿಯರಿಗೂ (ನರ್ಸ್‌ಗಳು) ಇರುವ ಆವಶ್ಯಕತೆಯನ್ನುನೋಡಿ, ಮಧ್ಯಮತರಗತಿಯ ಮನೆತನಗಳ ಸ್ತ್ರೀಯರನ್ನು ಶಾಸ್ತ್ರೀಯವಾದ ಸೂಲಗಿತ್ತಿ ವಿದ್ಯೆಯಲ್ಲಿಯೂ ದಾದಿಯರ ಕೆಲಸದಲ್ಲಿಯೂ ತಯಾರುಮಾಡಬೇಕೆಂದು ಡಾಕ್ಟರ್ ಸಿ. ಬಿ. ರಾಮರಾಯರು ಒಂದು ಸೂಚನೆಯನ್ನು ಕೊಟ್ಟರು. ಇದಕ್ಕೆ ಪ್ರಾರಂಭದಲ್ಲಿ 400 ರೂಪಾಯಿಗಳೂ ಅನಂತರ ಪ್ರತಿ ತಿಂಗಳಲ್ಲಿಯೂ 1500 ರೂಪಾಯಿಗಳೂ ಖರ್ಚಾಗಬಹುದೆಂತಲೂ ಎಣಿಸಲಾಯಿತು. ಎಂಟು ಡಿಸ್ಟ್ರಿಕ್ಟ್‌ಬೋರ್ಡಿನವರೂ ಎರಡು ಸಿಟಿ ಮುನಿಸಿಪಾಲಿಟಿಗಳೂಸೇರಿ ತಲಾ ಒಬ್ಬೊಬ್ಬ ಸ್ತ್ರೀಯನ್ನು ಈ ಆಸ್ಪತ್ರೆಗೆ ತರಬಿಯತ್ತಿಗಾಗಿ ಕಳುಹಿಸಬೇಕೆಂತಲೂ ಆಕೆಯ ಮತ್ತು ಆಸ್ಪತ್ರೆಯ ಖರ್ಚಿಗಾಗಿ ಅಂದರೆ ಮಾಹೆಯಾನ 35 ರೂಪಾಯಿಗಳನ್ನು ಅವರು ಕೊಡತಕ್ಕದೆಂತಲೂ ಗೊತ್ತಾಗಿದ್ದಿತು. ಅದರಂತೆ ಅವರಿಗೆಲ್ಲಾ ಸರ್ಕ್ಯುಲರ್ ಕಳುಹಿಸಿ ತಂತಮ್ಮ ಬಡ್ಜೆಟ್ಟನಲ್ಲಿ ಈ ಖರ್ಚನ್ನು ಕಾಣಿಸಬೇಕಾಗಿ ಕೋರಲಾಯಿತು. ಕೋಲಾರ, ಕಡೂರು, ತುಮಕೂರು ಡಿಸ್ಟ್ರಿಕ್ಟ್ ಬೋರ್ಡುಗಳವರು ಇದಕ್ಕೆ ಸಮ್ಮತಿಸಿದರು. ಎರಡು ಸಿಟಿಮುನಿಸಿಪಾಲಿಟಿಗಳೂ, ಮೈಸೂರು, ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡುಗಳೂ ಈ ಸಲಹೆಯನ್ನು ಅನುಮೋದಿಸಲಿಲ್ಲ. ಚಿತ್ರದುರ್ಗ, ಹಾಸನ ಮತ್ತು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡುಗಳಿಂದ ಉತ್ತರವಿನ್ನೂ ಬಂದಿರುವುದಿಲ್ಲ. ಹೆರಿಗೆ ಮತ್ತು ಮಕ್ಕಳ ಯೋಗಕ್ಷೇಮದ ವಿಚಾರದಲ್ಲಿ ಸಾಮಾನ್ಯವಾಗಿಯೂ, ಆಸ್ಪತ್ರೆ ವಿಷಯದಲ್ಲಿ ಮುಖ್ಯವಾಗಿಯೂ ಸಿಟಿ ಮುನಿಸಿಪಾಲಿಟಿಗಳ ವಿಶ್ವಾಸವನ್ನು ಪಡೆಯಲು ಪ್ರಯತ್ನಗಳು ಜರುಗುತ್ತಿವೆ. ಕೆಲವು ದಿನಗಳಹಿಂದೆ ಸೆಕ್ರಿಟೆರಿಯವರು ಕೆಲವುಮಂದಿ ಸಿಟಿ ಮುನಿಸಿಪಲ್ ಕೌನ್ಸಿಲರುಗಳನ್ನು ದಂಡಿನ ಸಾಮಾಜಿಕಸೇವಾಸಂಸ್ಥೆಗಳಿಗು ಮತ್ತು ಸಂಘದ ಹಾಲು ಹಂಚುವ ಸ್ಥಳಕ್ಕು ಕರೆದುಕೊಂಡುಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನೆಲ್ಲಾ ತೋರಿಸಿ ವಿವರಿಸಿ ಹೇಳಿದರು. ಅವರು ಇದನ್ನು ನೋಡಿ ತುಂಬಾ ತೃಪ್ತಿಯನ್ನು ಪ್ರದರ್ಶಿಸಿರುವುದರಿಂದ ನಾವು ಏರ್ಪಡಿಸಬೇಕೆಂದಿರುವ ಆಸ್ಪತ್ರೆಯ ವಿಷಯದಲ್ಲಿ ಕ್ಷಿಪ್ರದಲ್ಲಿಯೇ ಅವರ ಅನುರಾಗವನ್ನೂ ಸಹಾಯವನ್ನೂ ಪಡೆಯುವ ನಂಬಿಕೆಯುಂಟು. ಈ ಸಂಸ್ಥೆಗಳನ್ನು ಪರಾಮರ್ಶಿಸಬೇಕೆಂದು ಬೆಂಗಳೂರು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುಗಳನ್ನು ಪ್ರಾರ್ಥಿಸಿಕೊಂಡಿದೆ. ಎಲ್ಲಾ ಡಿಸ್ಟ್ರಿಕ್ಟ್‌ಬೋರ್ಡುಗಳಿಂದಲೂ ಮುನಿಸಿಪಾಲಿಟಿಗಳಿಂದಲೂ ಸದುತ್ತರಗಳು ಬಂದಮೇಲೆ ಆಸ್ಪತ್ರೆಯನ್ನು ಪ್ರಾರಂಭಿಸುವ ಯೋಚನೆ ಮಾಡಲಾಗುವುದು.

5. ನ್ಯಾಷನಲ್ ಬೇಬಿವೀಕ್—ಶಿಶು ಸಪ್ತಾಹ.

ಈ ಎರಡು ವರ್ಷಗಳಲ್ಲಿಯೂ ಈ ಸಂಘದವರು ಶಿಶುಸಪ್ತಾಹವನ್ನು ಸಂಸ್ಥಾನಾದ್ಯಂತ ಏರ್ಪಡಿಸಿದರು. ಮೊದಲನೇಸಾರಿ 1924 ನೇ ಜನವರಿಯಲ್ಲಿ ಬೆಂಗಳೂರು ಮತ್ತು ಮೈಸೂರುಸಿಟಿಗಳಲ್ಲೂ ಚಿನ್ನದಗಣಿಗಳಲ್ಲೂ ಎಲ್ಲಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರು ಟೌನ್‌ಗಳಲ್ಲೂ ಶಿಶುಸಪ್ತಾಹವನ್ನು ನೆರವೇರಿಸುವುದಕ್ಕಾಗಿ ಪ್ರತ್ಯೇಕ ಕಮಿಟಿಯೊಂದನ್ನು ಏರ್ಪಡಿಸಲಾಗಿದ್ದಿತು. ಬೆಂಗಳೂರಿನಲ್ಲಿ ಗರ್ಭಿಣೀಶಿಶುಸಂರಕ್ಷಣಾಸಭೆಯವರೂ ಮೈಸೂರಿನಲ್ಲಿ ಅಲ್ಲಿನ ನಮ್ಮ ಶಾಖಾಸಂಘದವರೂ, ಡಿಸ್ಟ್ರಿಕ್ಟ್‌ಗಳ ಡೆಪ್ಯುಟೀಕಮಿಷನರುಗಳೂ ಈ ಸಪ್ತಾಹವನ್ನು ನೆರವೇರಿಸಿದರು. ಪ್ರದರ್ಶನಕ್ಕೆ ಸಂಬಂಧಪಟ್ಟ ನೋಟೀಸ್ ಪಟಗಳೂ, ಭೂತಕನ್ನಡಿ ಪಟಗಳೂ ಹಸ್ತಪುಸ್ತಕಗಳೂ, ದೆಹಲಿಯ ಸೆಂಟ್ರಲ್ ಕಮಿಟಿಯವರಿಂದ ತರಿಸಲ್ಪಟ್ಟು ಕನ್ನಡಕ್ಕೆ ತರ್ಜುಮೆಮಾಡಿಸಿ ಎಲ್ಲಾ ಡೆಪ್ಯುಟೀಕಮಿಷನರುಗಳಿಗೆ ಹಂಚಲ್ಪಟ್ಟುವು.

ಬೆಂಗಳೂರು, ಮೈಸೂರು ನಗರಗಳ ಪ್ರದರ್ಶನಗಳಿಗೆ ಬಹು ಸಂಖ್ಯೆಯ ಜನರು ಬಂದಿದ್ದರು. ಈ ಸಂದರ್ಭದಲ್ಲಿಯೇ, ಶಿಶುಗಳ ಪ್ರದರ್ಶನ, ಆರೋಗ್ಯ ವಿಷಯವಾದ ಉಪನ್ಯಾಸಗಳು, ಲೇಖನಗಳಿಗೆ ಬಹುಮಾನಗಳನ್ನು ಹಂಚುವುದು ಇವೆಲ್ಲಾ ನಡೆದುವು. ಜನರು ತುಂಬಾ ಉತ್ಸಾಹಭರಿತರಾಗಿ, ಶಿಶುಸಪ್ತಾಹವು ಜಯಪ್ರದವಾಗಿ ನಡೆಯುವಂತೆಮಾಡಿದರು. ಸರ್ಕಾರದವರು ಕೊಟ್ಟ 1,600 ರೂಪಾಯಿಗಳೂಸೇರಿ ಒಟ್ಟು ರೂ. 19,346-3-9 ಗಳು ವಸೂಲಾಗಿ, ಸಂಸ್ಥಾನಕ್ಕೆಲ್ಲಾ ಒಟ್ಟು ರೂ. 16,344-10-6 ಗಳು ಖರ್ಚಾಯಿತು. ಶಿಶುಸಪ್ತಾಹದ ಚಿತ್ರಪುಸ್ತಕವೊಂದನ್ನು ತಯಾರಿಸಿ ದೆಹಲಿಗೆ ಕಳುಹಿಸಲಾಯಿತು.

1925 ನೇ ಜನವರಿಯಲ್ಲಿ ಸಪ್ತಾಹವು ತಕ್ಕಮಟ್ಟಿಗೆ ವಿಜೃಂಭಣೆಯಿಂದಲೇ ನಡೆಯಿತು. ಆಗಲೂ ಪ್ರದರ್ಶನಗಳೂ ಭಾಷಣಗಳೂ ಮುಖ್ಯಾಂಶಗಳಾಗಿದ್ದವು. ಉತ್ಸಾಹವು ಮೊದಲಿನಂತೆಯೇ ಇದ್ದುದರಿಂದ, ಸರ್ಕಾರದವರ ಅಥವಾ ಈ ಸಂಘದ ಸಹಾಯವನ್ನು ಅಪೇಕ್ಷಿಸದೆಯೇ ಸ್ಥಳೀಯಜನರು ಚಂದಾ ಹಾಕಿಕೊಂಡು ಸಪ್ತಾಹವನ್ನು ಪೂರೈಸಿದರು.

ಮಕ್ಕಳ ವಿಷಯದಲ್ಲಿ ಹೇಗೆ ಎಚ್ಚರತೆಗೆದುಕೊಳ್ಳಬೇಕೆಂಬುದನ್ನೂ ಶಿಶುಸಪ್ತಾಹದ ಆಚರಣೆಗಳನ್ನೂ ಕುರಿತು ಬೆಂಗಳೂರು ಮೈಸೂರು ನಗರಗಳ ಕೆಲವು ಬಾಲಿಕಾಪಾಠಶಾಲೆಗಳಲ್ಲಿ ಉಪನ್ಯಾಸಗಳನ್ನು ಕೊಡುವಂತೆ ಸಂಘದವರು ಏರ್ಪಡಿಸಿದ್ದಾರೆ. ಪ್ರಜಾಸೇವಾ ಧುರಂಧರರಾದ ಕೆಲವರು ವೈದ್ಯರು ಉಪನ್ಯಾಸಮಾಡಲು ಒಪ್ಪಿರುವರು. ವಾಣೀವಿಲಾಸ್ ಇನ್‌ಸ್ಟಿಟ್ಯೂಟ್, ಲಂಡನ್‌ಮಿಷನ್ ಗರ್ಲ್ಸ್ ಹೈಸ್ಕೂಲ್, ಮಹಾರಾಣಿ ಗರ್ಲ್ಸ್ ಹೈಸ್ಕೂಲ್, ಜನಾನಾ ನಾರ್ಮಲ್ ಸ್ಕೂಲುಗಳಲ್ಲಿ ವಾರಕ್ಕೊಂದಾವರ್ತಿ ಪಾಠಗಳು ನಡೆದಮೇಲೆ ಉಪನ್ಯಾಸಗಳನ್ನು ನಡೆಸುವಂತೆ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರು ಅವಕಾಶವನ್ನುಂಟುಮಾಡಿಕೊಟ್ಟಿರುವರು.

6. ಭಿಕ್ಷುಕರ ಹಾವಳಿ.

ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ಶೇಖರಿಸುತ್ತಿದ್ದಾರೆ. ದಂಡಿನಲ್ಲಿರುವ ವೃದ್ಧರ ಆಶ್ರಮಕ್ಕೂ, ನಿರ್ಗತಿಕರಾದ ಭಿಕ್ಷುಕರ ಆಶ್ರಮಕ್ಕೂಹೋಗಿ, ಅವುಗಳ ಆಡಳಿತವಿಚಾರವಾದ ವಾಸ್ತವಾಂಶಗಳನ್ನು ತಿಳಿದುಕೊಂಡುಬಂದರು. ಈ ಪಟ್ಟಣದಲ್ಲಿರುವ ಭಿಕ್ಷುಕರ ಸಂಖ್ಯೆಯನ್ನು ಗಣಿಸಲು ಸಂಘದವರು ಮುನಿಸಿಪಾಲಿಯವರ ಸಹಾಯವನ್ನು ಕೋರಿರುವರು. ಅನಾಥರೂ, ಅಶಕ್ತರೂ ಆದ ಭಿಕ್ಷುಕರಿಗೆ ಅನ್ನೋದಕಗಳನ್ನು ಕೊಡುತ್ತಿರುವ ಈ ಊರಿನ ಅಶಕ್ತಪೋಷಕ ಸಭೆಯವರೊಂದಿಗೆ ಕಲೆತು, ಕೆಲಸಮಾಡುವುದಕ್ಕೂ, ಭಿಕ್ಷುಕರಿಗೆ ಒಂದು ವಾಸಸ್ಥಾನವನ್ನು ನಿರ್ಮಿಸುವುದಕ್ಕೂ ತರದೂದು ನಡೆಯುತ್ತಿದೆ.

7. ಉಪನ್ಯಾಸಗಳು ಮತ್ತು ಸಂಘದ ಉದ್ದೇಶಗಳನ್ನು ಹರಡುವುದು.

ಸಂಘದಗೌರವ ಸದಸ್ಯರಾದ ಡಾಕ್ಟರ್ ಕಜಿನ್ಸ್‌ರವರು 9-10-23 ರಲ್ಲಿ "ಕುಶಲವಿದ್ಯೆಗಳ ಸಾಮಾಜಿಕಪ್ರಯೋಜನ" ವನ್ನು ಕುರಿತು ವಿಷಯಗರ್ಭಿತವಾದ ಉಪನ್ಯಾಸವನ್ನುಮಾಡಿದರು. ಆಗ್ಗೆ ಮುಷೀರ್-ಉಲ್-ಮುಲ್ಕ್ ಮೆ|| ಮಿರ್ ಹಂಜಾಹುಸೇನ್‌ರವರು ಅಗ್ರಾಸನವನ್ನು ವಹಿಸಿದ್ದರು. ಸಂಘದ ಪ್ರೆಸಿಡೆಂಟರಾದ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಮೈಸೂರ ಮಹಾರಾಜಕಾಲೇಜಿನಲ್ಲಿ ಲಾಹೋರಿನ ಆರ್ಯಸಮಾಜಕ್ಕೆಸೇರಿದ ಮೆ|| ರಿಷಿರಾಂ ಎಂಬುವವರು "ಸಾಮಾಜಿಕ ಪುನಸ್ಸಂಘಟನೆ" ಎಂಬಂಶವನ್ನು ಉಪನ್ಯಾಸಮಾಡಿದರು.

ಜನರಲ್ಲಿ ಸಂಘದ ಉದ್ದೇಶಗಳನ್ನು ತಿಳಿಸುವುದೂ ಅವರಲ್ಲಿ ಸಾಮಾಜಿಕ ಕ್ಷೇಮಚಿಂತನೆಯನ್ನೂ ಹೆಚ್ಚಿಸುವುದಕ್ಕೆ ಭೂತಕನ್ನಡಿಗಳಮೂಲಕ ಉಪನ್ಯಾಸಗಳನ್ನುಮಾಡುವುದೂ ಅವಶ್ಯವೆಂದು ಕಂಡುಬಂದಿದೆ. ಭೂತಕನ್ನಡಿಯ ಚಿತ್ರಪಟಗಳನ್ನು ತರಿಸಿ, ಸ್ಥಳೀಯ ವಿದ್ಯಮಾನಗಳಿಗೆ ತಕ್ಕಂತೆ ಅವುಗಳನ್ನು ಮಾರ್ಪಡಿಸಿಕೊಂಡು ಜನರಲ್ಲಿ ತಿಳುವಳಿಕೆಯನ್ನು ಹರಡಬೇಕೆಂದು ಯೋಚಿಸಿದೆ. ಈ ಸಂಘದ ಮೆಂಬರುಗಳಾದ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರೂ, ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರೂ ತಮ್ಮ ಸರ್ಕ್ಯೂಟ್ ಕಾಲದಲ್ಲಿ ಗ್ರಾಮಾಂತರಗಳಲ್ಲಿ ಅನುಕೂಲವಾದ ವಿಷಯಗಳನ್ನು ಕುರಿತು ಭೂತಕನ್ನಡಿಯ ಸಹಾಯದಿಂದ ಉಪನ್ಯಾಸಮಾಡಲು ಒಪ್ಪಿರುತ್ತಾರೆ. ಇವರ ಜತೆಯಲ್ಲಿ ಚಿತ್ರಗಳನ್ನು ತೆಗೆದುಕೊಂಡುಹೋಗಿ ಅವರ ಉಪನ್ಯಾಸಕಾಲಗಳಲ್ಲಿ ಅವುಗಳನ್ನು ತೋರಿಸಲು ಒಬ್ಬನನ್ನು ನೇಮಿಸಿಕೊಳ್ಳಬೇಕೆಂದಿದೆ. ಆ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಒಂದು ಕಮಿಟಿಯೂ ಗೊತ್ತಾಗಿ, ಚಿತ್ರಗಳನ್ನು ಕೊಳ್ಳಲು 500 ರೂಪಾಯಿಗಳು ಮಂಜೂರಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಜನರ ಗಮನವನ್ನು ಆಕರ್ಷಿಸುವುದಕ್ಕೋಸ್ಕರ ಗೌರವ ಸೆಕ್ರಿಟೆರಿಯವರಾದ ಮೆ|| ಬಿ. ಪುಟ್ಟಯ್ಯನವರು ಹೊಸದಾಗಿ ಪ್ರಚುರವಾಗುತ್ತಿರುವ "ಅರ್ಥಸಾಧಕ ಪತ್ರಿಕೆಗೆ" ಅನೇಕ ಲೇಖನಗಳನ್ನು ಬರೆದಿರುತ್ತಾರೆ.

8. ಮೆಂಬರುಗಳು ಮತ್ತು ಚಂದಾಹಣ.

1923-24 ರಲ್ಲಿ ರೂ. 2,126-11-9 ಗಳು ವಸೂಲಾಗಿ, ಸರ್ಕಾರದವರಿಂದ ಅಷ್ಟೇ ದ್ರವ್ಯಸಹಾಯವು ದೊರೆಯಿತು. 1924-25 ರಲ್ಲಿ ರೂ. 2,234-15-5 ಗಳು ವಸೂಲಾಗಿದೆ. ಇಷ್ಟು ಮೊಬಲಗನ್ನೇ ಸಹಾಯದ್ರವ್ಯವಾಗಿ ಕೊಡುವುದಕ್ಕೂ ಇನ್ನು ಮುಂದೆಯೂ 3 ವರ್ಷಗಳ ಕಾಲ ಇದೇ ರಿಯಾಯಿತಿಯನ್ನು ತೋರಿಸುವುದಕ್ಕೂ ಸರ್ಕಾರದವರನ್ನು ಪ್ರಾರ್ಥಿಸಲಾಗಿದೆ. ಸಂಘದ ಲೆಕ್ಕದಲ್ಲಿ ಈಗ ಮೈಸೂರು ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ ಆಗಿ ರೂ. 6000, ಕರೆಂಟ್ (ಚಾಲತಿ) ಡಿಪಾಜಿಟ್ ಲೆಕ್ಕದಲ್ಲಿ ರೂ. 1816-0-1, ನಗದು ಕೈಯಲ್ಲಿ ರೂ. 16 ಗಳೂ ಇರುತ್ತವೆ.

1923-24 ರಲ್ಲಿ ಇಬ್ಬರೂ, 1924-25 ರಲ್ಲಿ ಒಬ್ಬರೂ ಲೈಫ್ ಮೆಂಬರಾಗಿ ಸೇರಿದ್ದರಿಂದ ಈಗ 25 ಮಂದಿ ಲೈಫ್ ಮೆಂಬರುಗಳಿರುವರು. ಮಾಹೆಯಾನಾ 4 ಆಣೆಯಿಂದ 1 ರೂಪಾಯಿನವರೆಗೆ ಚಂದಾ ಕೊಡುತ್ತಿದ್ದ ಮೆಂಬರುಗಳು ಮೈಸೂರಿನವರೂ ಸೇರಿಕೊಂಡು 150 ಮಂದಿ ಇದ್ದರು. ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಇನ್ನೂ ಹೆಚ್ಚು ಪ್ರಯತ್ನಗಳು ನಡೆಯುತ್ತಿವೆ.

9. ಬಿಡುಗಡೆಹೊಂದಿದ ಖೈದಿಗಳ ಸಹಾಯಸಂಘ.

ಜೈಲಿನಿಂದ ಬಿಡುಗಡೆ ಹೊಂದುವ ಖೈದಿಗಳ ಸಹಾಯಕ್ಕಾಗಿ ಒಂದು ಸೊಸೈಟಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆ. ಈ ವಿಚಾರವಾದ ಕಾಗದಪತ್ರಗಳನ್ನು ಸಂಗ್ರಹಮಾಡಿ, ಕ್ಷಿಪ್ರದಲ್ಲಿಯೇ ಒಂದು ಪಬ್ಲಿಕ್ ಮೀಟಿಂಗನ್ನು ನಡೆಸಬೇಕೆಂದು ಯೋಚಿಸಲಾಗಿದೆ. ಗಲ್ಲಿಗೆ ಹಾಕುವ ಪುರಾತನ ಪದ್ಧತಿಗೆ ಬದಲಾಗಿ ವಿದ್ಯುಚ್ಛಕ್ತಿಯಿಂದ ಮರಣವನ್ನುಂಟುಮಾಡುವ ಪದ್ಧತಿಯನ್ನು ಕುರಿತು ಸೆಂಟ್ರಲ್‌ಜೈಲ್ ಸೂಪರಿಂಟೆಂಡೆಂಟ್‌ರೊಡನೆ ಪತ್ರವ್ಯವಹಾರವು ನಡೆಯುತ್ತಿದೆ. ಇದಕ್ಕಾಗಿ ಆಗಬಹುದಾದ ಖರ್ಚುವೆಚ್ಚಗಳ ಅಂದಾಜನ್ನು ಚೀಫ್ ಎಲೆಕ್ಟ್ರಿಕಲ್ ಎಂಜನೀಯರು ಜೈಲ್ ಸೂಪರಿಂಟೆಂಡೆಂಟರವರಿಗೆ ತಿಳಿಸಿರುವರು.

10. ಕೆಲಸಗಾರರ ತರಬಿಯತ್ತು.

ಸಮಾಜಸೇವೆಗಾಗಿ ಕೆಲಸಮಾಡುವವರು ಲಭಿಸುವುದು ಅತಿ ದುಸ್ತರವಾಗಿ ಕಂಡುಬರುತ್ತಿದೆ. ಬೊಂಬಾಯಿನಲ್ಲಿರುವ ಸೇವಾಸದನ ಮತ್ತು ಸೋಷಿಯಲ್ ಸರ್ವಿಸ್ ಲೀಗ್ ಗಳಂತಹ ಸಂಸ್ಥೆಗಳು ಬೆಂಗಳೂರಿನಲ್ಲಿ ಆತ್ಯಗತ್ಯವಾಗಿವೆ. ಆ ಸಂಸ್ಥೆಗಳಲ್ಲಿ ಎಲ್ಲಾ ವಿಧವಾದ ಪೌರಸಾಮಾಜಿಕ ಕೆಲಸಕಾರ್ಯಗಳನ್ನು ಹೆಚ್ಚು ಪ್ರಯೋಜನವಾಗುವರೀತಿ ಶ್ರದ್ಧೆಯಿಂದ ಕಲಿಸುತ್ತಾರೆ. ಅಂಥಾ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಕ್ಕೆ ತತ್ಪೂರ್ವ ಕೆಲವರನ್ನು ತರಬಿಯತ್ತು ಮಾಡಬೇಕಾದುದು ಆವಶ್ಯವಾಗಿದೆ. ಪುಣ್ಯವಶಾತ್ ಇಲ್ಲಿನ ಬಾಯ್ಸ್‌ಸ್ಕೌಟ್ ಅಸೋಸಿಯೇಷನ್‌ನವರು ತಮ್ಮ ಸೀನಿಯರ್ ಮೆಂಬರುಗಳ ಪೈಕಿ ಕೆಲವರನ್ನು ಸಮಾಜಸೇವೆಗೂ, ಅದನ್ನು ಹೇಗೆ ನಿರ್ವಹಿಸಬಹುದೆಂಬುದನ್ನು ತಿಳಿಸುವ ಗ್ರಂಥಾವಲೋಕನಕ್ಕೂ ತನ್ಮೂಲಕ ದಿನವಹಿ ಏನಾದರೊಂದು ಸತ್ಕಾರ್ಯವನ್ನು ಮಾಡಬೇಕೆಂಬ ಸ್ಕೌಟು ಧರ್ಮವನ್ನು ಪರಿಪಾಲಿಸುವುದಕ್ಕೂ ಒಂದು ಶಾಖೆಯನ್ನು ಏರ್ಪಡಿಸಿಕೊಂಡಿರುವರು. ಈ ಸಂಘದವರು ಸಮಾಜಸೇವೆಗೂ, ಗ್ರಂಥಾವಲೋಕನಕ್ಕೂ ಒದಗಿಸಿಕೊಡುವ ಅವಕಾಶಗಳನ್ನು ಈ ಸ್ಕೌಟ್ ಶಾಖೆಯವರು ಉಪಯೋಗಿಸಿಕೊಳ್ಳುವವರಾಗಿರುವರು. ಇವರ ಸಹಾಯದಿಂದ ಮುಂದೆ ಸಂಘದ ಉದ್ದೇಶಗಳಲ್ಲೆಲ್ಲಾ ಹೆಚ್ಚು ಕಾರ್ಯಸಾಧನೆಯನ್ನು ತೋರಿಸುವುದಕ್ಕೂ, ಕ್ಷಿಪ್ರದಲ್ಲಿಯೇ ಬೆಂಗಳೂರಿನಲ್ಲಿ ಒಂದು ಸೇವಾ ಸದನವನ್ನು ಸ್ಥಾಪಿಸುವುದಕ್ಕೂ ಸಾಧ್ಯವಾಗುವುದೆಂದು ನಂಬಲಾಗಿದೆ.

ಸಂಘದವರ ಖರ್ಚುವೆಚ್ಚಗಳು ಮೊದಲನೇ ವರ್ಷ 4,845 ರೂಪಾಯಿಗಳಾಗಬಹುದೆಂತ ನಿರೀಕ್ಷಿಸಿದ್ದರಲ್ಲಿ 4,659-4-10 ರೂ. ಗಳೂ, ಎರಡನೆಯ ವರ್ಷ 5,100 ರೂ ಗಳಾಗಬಹುದೆಂತ ನಿರೀಕ್ಷಿಸಿದುದಕ್ಕೆ 4,667-9-7 ರೂ. ಗಳೂ ಖರ್ಚಾಗಿರುತ್ತದೆ.

೧೯೨೬ ನೆಯ ಇಸವಿ ಏಪ್ರಿಲ್ ತಾ|| ೧೦ ರಿಂದ ೧೯೨೬ ನೆಯ ಇಸವಿ ಏಪ್ರಿಲ್ ತಾ|| ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯಸಂವತ್ಸರದ ಅಧಿಕ ಚೈತ್ರ ಬಹುಳ ದ್ವಾದಶಿಯಿಂದ ನಿಜ ಚೈತ್ರ ಶುದ್ಧ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾನ ಮೇಷ
10	ಶನಿ	ತ್ರಯೋ	40-9	ಪುಭಾ	40-5	28
11	ಭಾನು	ಚತು	34-49	ಉಭಾ	36-36	29
12	¹ಸೋಮ	ಅಮಾ	30-3	ರೇವ	33-42	30
13	²ಮಂಗಳ	ಪಾಡ್ಯ	26-7	ಅಶ್ವಿ	31-35	1
14	ಬುಧ	ಬಿದಿ	25-9	ಭರ	30-32	2
15	ಗುರು	ತದಿ	21-12	ಕೃತ್ತಿ	30-34	3
16	³ಶುಕ್ರ	ಚೌತಿ	20-33	ರೋಹಿ	31-45	4

(1) ಸರ್ವತ್ರಾಮಾವಾಸ್ಯೆ, ಅಮಾಸೋಮವ್ರತಂ. (2) ಮಳೆನಕ್ಷತ್ರ-ಅಶ್ವಿನಿ ೧ ನೆಯಪಾದ. (3) ಮಳೆನಕ್ಷತ್ರ-ಅಶ್ವಿನಿ ೨ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಾಧಿಕರಾಜಮಂಡಲಾಧಿಕೃತಾ | ಧನಪಪಕ್ಷಕ್ಷಾವಕಾನಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಳಕಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದೀಲ ಪಾಠಕರ ಸಾಧ್ವಸಾಧ್ಯಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಶಾಳಲಂ | ಶ್ರೀಮಂಜಿತ್ತೀಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಏಪ್ರಿಲ್ ತಾರೀಖು ೧೭ ನೆಯ ಶನಿವಾರ. [ಸಂಚಿಕೆ ೧೬

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣವಾಗದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA VAYDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

15

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೧ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ಗಳನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಶಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—27] ಪ್ರೋ. ಬಾ. ೫೧, ಮದರಾಸು.

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಜೆ. ಜೆ. ಎಂ. ಮಹಾದೇವಾರ್ಯ,
[13-1] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಆಯುರ್ವೇದ ಸುಲಭಚಿಕಿತ್ಸೆಗಳು.

ವಾಸಾವ ಲೇಹ.—ಆಡುಸೋಗೆ ಸೊಪ್ಪಿನ ರಸ 3½ ಸೇರು, ಸಕ್ಕರೆ 1½ ಸೇರು, ಹಿಪ್ಪಲೀ ಚೂರ್ಣ 6 ತೊಲೆ ಇವೆಲ್ಲವನ್ನೂ ಲೇಹ ಪಾಕಮಾಡಿ ತುಪ್ಪ ಸೇರಿಸಿ 20 ರಿಂದ 60 ಗ್ರೇನ್ ವರಿವಿಗೆ ಉಪಯೋಗಿಸಿದರೆ ಕ್ಷಯ, ಕಾಸ, ಶ್ವಾಸ, ಪಾರ್ಶ್ವಶೂಲೆ, ಜ್ವರ, ಎದೆಶೂಲೆ, ರಕ್ತಪಿತ್ತ, ಬಲಹೀನತೆ ಇವುಗಳೆಲ್ಲಾ ಪರಿಹಾರವಾಗುವುವು.

ಅಪಾಮಾರ್ಗ ತೈಲ.—ಒಳ್ಳೆಣ್ಣೆ 1 ಸೇರು, ಉತ್ತರಣೆಕ್ಷಾರ ಜಲ 4 ಸೇರು, ಉತ್ತರಣೆಕ್ಷಾರ 1 ಪಾವು ಎಲ್ಲವನ್ನೂ ತೈಲಪಕ್ವಮಾಡಿ ಉಪಯೋಗಿಸಿದರೆ ಕಿವುಡು ಮತ್ತು ಕರ್ಣನಾದ ಇವುಗಳು ಪರಿಹಾರವಾಗುವುವು.

ಕನಕತೈಲ.—ಒಳ್ಳೆಣ್ಣೆ 3 ಸೇರು, ದಾಲಚಿನ್ನಿ 3 ಸೇರು, ಜಾಯಿಕಾಯಿ 3 ತೊಲ, ಕರ್ಪೂರ 1 ತೊಲ, ಕರಿಉಮ್ಮತ್ತದ ಸೊಪ್ಪಿನರಸ 3 ಸೇರು ಇವನ್ನು ತೈಲಪಾಕಮಾಡಿ ಉಪಯೋಗಿಸಿದರೆ ಕೀಲುವಾಯು, ಶೀತವಾಯು ಮುಂತಾದುವು ಗುಣವಾಗುವುವು.

ಹಿಂಗ್ವಾಷ್ಟಕ ತೈಲ.—ಆಕ್ಟ್ರೆಳ್ಳೆಣ್ಣೆ ½ ಸೇರು, ಹಿಂಗು 1 ತೊಲ, ಬೆಳ್ಳುಳ್ಳಿ 3 ತೊಲ, ಸೈಂಧವ 3 ತೊಲ ಎಲ್ಲವನ್ನೂ ಸೇರಿಸಿ ತೈಲಪಕ್ವಕ್ಕೆ ಕಾಯಿಸಿ ಕರ್ಣಶೂಲೆಯಲ್ಲಿ 4-5 ಬೊಟ್ಟುಗಳನ್ನು ಕಿವಿಗೆ ಹಾಕಿದರೆ ಗುಣವಾಗುವುದು.

ಕರೀಮುಲಾಂ.—ಬಿಳೀ ಜೇನುಮೇಣ ½ ಸೇರು, ರುಮಾಮಸ್ತಕಿ ½ ತೊಲ, ಬೆಳ್ಳುಳ್ಳಿ 1 ಸೇರು, ಮುರದಾರಶೃಂಗಿ 1 ತೊಲ, ಜಂಗಾಲಪಚ್ಚೆ ½ ತೊಲ, ಚಂದ್ರ 2 ತೊಲ ಎಲ್ಲವನ್ನೂ ಹದನಾಗಿ ಕಾಯಿಸಿ ಇಟ್ಟುಕೊಂಡು ಉಪಯೋಗಿಸಿದರೆ ಸಮಸ್ತ ವಾಯು ಮತ್ತು ವ್ರಣಗಳು ಮಾಯುವುವು.

ಆರಗ್ವಧಾದಿಲೇಹ.—ಕಕ್ಕೆಮೇಣ ½ ಸೇರು, ಕಾಮಕಸ್ತೂರಿಬೀಜ ½ ಸೇರು, ಸೊನಾಮುಖಿ ½ ಸೇರು, ಅತಿಮಧುರ ½ ಸೇರು, ಒಣಶುಂಠಿ ½ ಸೇರು, ಜೀರಿಗೆ ½ ಸೇರು, ಸಂಸ್ಕಾರಚೂರ್ಣ ½ ಸೇರು, ಸಕ್ಕರೆ 3½ ಸೇರು, ಹಸುವಿನತುಪ್ಪ 1½ ಸೇರು.

ಕಾಲುತೊಲದಿಂದ ಒಂದು ತೊಲದವರೆಗೆ ಸೇವಿಸಿದರೆ ಸುಖವಾಗಿ ಭೇದಿಯಾಗಿ, ಅಜೀರ್ಣಶೂಲೆ, ಉದರ ಪರಿಹಾರವಾಗುವುವು.

ಏಲಾದಿ ಚೂರ್ಣ.—1. ಯಾಲಕ್ಕಿ, 2. ಲವಂಗ, 3. ಮೆಣಸು, 4. ಒಣಶುಂಠಿ, 5. ಹಿಪ್ಪಲಿ, 6. ನಾಗಕೇಸರಿ ಇವುಗಳನ್ನು ಸೂಕ್ಷ್ಮವಾಗಿ ಚೂರ್ಣಿಸಿ ಸಮಸಕ್ಕರೆ ಸೇರಿಸಿ 30-60 ಗ್ರೇನ್ ವರೆಗೆ ಸೇವಿಸಿದರೆ ರಾಜಯಕ್ಷ್ಮ, ಅರ್ಶಸ್ಸು, ಗ್ರಹಣಿ, ಗುಲ್ಮ, ರಕ್ತಪಿತ್ತ, ಕಾಸ, ಶ್ವಾಸ, ಅರುಚಿ, ಪ್ಲೀಹ, ಛರ್ದಿ ಇವುಗಳು ಪರಿಹಾರವಾಗುವುವು.

ಮೇಷಾದಿ ಚೂರ್ಣ.—ಹಿಪ್ಪಲಿ, ಮೆಣಸು, ಒಣಶುಂಠಿ, ಜೀರಿಗೆ, ಕರಿಜೀರಿಗೆ, ಲವಂಗ, ಅಳಲೆಕಾಯಿ, ಸಾಸ್ಮೆ, ಓಮು, ಕರಿಬೇವಿನಸೊಪ್ಪು, ಸೈಂಧವ, ಹಿಂಗು, ವಿಳಂಗ, ಜಾಯಿಕಾಯಿ, ಗಜಗದ ತಿರುಳು ಇವೆಲ್ಲವನ್ನೂ ಸಮಭಾಗದಿಂದ ಸೂಕ್ಷ್ಮವಾಗಿ ಚೂರ್ಣಿಸಿ 30-60 ಗ್ರೇನ್ ವರೆಗೆ ಸೇವಿಸಿದರೆ ರಕ್ತಾತಿಸಾರ, ಗ್ರಹಣಿ, ಭೇದಿ, ಅಜೀರ್ಣಗಳು ಪರಿಹಾರವಾಗುವುವು.

ಜೇನುತುಪ್ಪ.

ಆಯುರ್ವೇದ ವೈದ್ಯದಲ್ಲಿ ಜೇನುತುಪ್ಪವು ಎಷ್ಟು ಮುಖ್ಯವಾದುದೆಂಬ ವಿಚಾರವು ಹಿಂದುಗಳಿಗೆ ನೂತನವಾದ ವಿಚಾರವಲ್ಲ. ಭಸ್ಮ, ಕಷಾಯ, ಮಾತ್ರೆ, ಲೇಹ್ಯಾದಿಗಳನ್ನು ಉಪಯೋಗಿಸಬೇಕಾದಲ್ಲಿ ಜೇನುತುಪ್ಪವು ಅತಿಪ್ರಾಮುಖ್ಯತೆಯನ್ನು ವಹಿಸಿರುತ್ತದೆ. ಈಚೆಗೆ ಪಾಶ್ಚಾತ್ಯರು ಕೂಡ ಇದರ ಮಹತ್ವವನ್ನು ಶ್ಲಾಘಿಸಲಾರಂಭಿಸಿರುತ್ತಾರೆ. ರಸಾಯನಶಾಸ್ತ್ರಜ್ಞರು ಜೇನುತುಪ್ಪವನ್ನು ಪರೀಕ್ಷಿಸಿ ಇದರಲ್ಲಿ ಈ ಕೆಳಗೆ ಕಂಡ ಪದಾರ್ಥಗಳಿರುವುದಾಗಿ ಕಂಡುಹಿಡಿದಿರುತ್ತಾರೆ.—

ನೀರು	17.2	ಭಾಗ,	ಮಾಲಿಕ್ ಆಸಿಡ್	0.30	ಭಾಗ,
ಲೆವುಲೋಸ್	39.1	„	ಆಸಿಟಿಕ್ „	0.20	„
ಡೆಕ್ಸ್ಟ್ರೋಸ್	34.0	„	ಮೇಣ	0.90	„
ಡೆಕ್ಸ್ಟ್ರಿನ್	0.45	„	ಪ್ರೋಟೀನ್ಸ್	1.80	„
ಸುಕ್ರೋಸ್	0.40	„	ಲೋಹಲವಣಗಳು	0.75	„
ಫಾರ್ಮಿಕ್ ಆಸಿಡ್	1.10	„	ಮಿಕ್ಕಪದಾರ್ಥಗಳು	3.30	„
			ಒಟ್ಟು	100.00	„

ದೇಹಕ್ಕೆ ಅತ್ಯವಶ್ಯಕಗಳಾದ ಪದಾರ್ಥಗಳು ಇದರಲ್ಲಿರುವುದರಿಂದ ಇದು ಅಮೃತಸದೃಶವೆಂಬ ಭಾವನೆಯು ಅವರಲ್ಲಿಯೂ ಉತ್ಪನ್ನವಾಗುತ್ತಲಿದೆ. ನೋಡಿದಿರಾ, ಹಿಂದೂ ಸಪವಳಿಕೆಗಳ ಮಹತ್ವವನ್ನು ಪ್ರಪಂಚದಲ್ಲಿಯ ಇತರ ಜನಾಂಗಗಳು ನಾಗರೀಕತೆಯಲ್ಲಿ ಎಷ್ಟು ಮುಂದುವರಿದರೂ ಅಂತ್ಯದಲ್ಲಿ ಬರಬೇಕಾದದ್ದು ಪ್ರಾಚೀನ ಆರ್ಯರ ಸ್ಥಿತಿಗೆ ಮಾತ್ರವೇ. ಹಿಂದುಗಳು ಇದನ್ನು ಮರೆಯದೆ, ಪಾಶ್ಚಾತ್ಯ ವ್ಯಾಮೋಹದಲ್ಲಿ ಬೀಳದೆ, ಪೂರ್ವಾಚಾರಗಳನ್ನು ಮಾತ್ರವೇ ಅವಲಂಬಿಸುತ್ತಾ ಸಂತೋಷ ಮತ್ತು ಆರೋಗ್ಯದಿಂದ ಕೂಡಿರುವ ಆಯುರ್ವೇದಶಾಸ್ತ್ರದ ನಿಯಮಾವಲಂಬಿಗಳಾಗಿ ಚಿರಂಜೀವಿಗಳಾಗಿ ಜೀವಿಸುವಂಥವರಾಗಲಿ. ಶ್ರೀ. ಧ.

ಗ್ರಾಮರಕ್ಷಣಸಭಾ, ಕ್ಯಾತನಹಳ್ಳಿ.

ಮೇಲ್ಕಂಡ ಸಭೆಯವರಿಂದ 1926 ನೇ ಮೇ ಮಾಹೆಯಲ್ಲಿ ಈ ಗ್ರಾಮದಲ್ಲಿ ಪರಸ್ಥಳದಿಂದ ಬರುವ ಒಕ್ಕಲಿಗರ ವಿದ್ಯಾರ್ಥಿಗಳ [illegible] ಸೌಕರ್ಯಾರ್ಥವಾಗಿ ವಿದ್ಯಾರ್ಥಿನಿಲಯ (ಒಕ್ಕಲಿಗರ ಹಾಸ್ಟೆಲ್) ಒಂದನ್ನು ಪ್ರಾರಂಭಿಸುವುದರಿಂದ ಇಂಗ್ಲೀಷ್ ಮತ್ತು ಕನ್ನಡ [illegible] ವರೆಗೆ ಓದುವ [illegible] [illegible] ತಾ|| 25 [illegible]

ಬಹುದು. ಕೇವಲ ಬಡವರೆಂದು ಸಭೆಯವರಿಗೆ ತಿಳಿಯಬರುವ ವಿದ್ಯಾರ್ಥಿಗಳಿಗೆ ಮಾತ್ರ ಮುಫತ್ತು ಊಟಕೊಡಲಾಗುತ್ತೆ. ಅನುಕೂಲಸ್ಥರು ಸಭೆಯವರಿಂದ ಗೊತ್ತುಮಾಡುವಷ್ಟು ದಿವಸಿ ಯಾ ಮೊಬಲಗನ್ನು ವರ್ಷದಲ್ಲಿ 4 ಕಂತುಗಳಾಗಿ ಕೊಡಬಹುದು. ಹೆಚ್ಚಿಗೆ ವಿಷಯ ಮೊಖ್ತಾ ಅಥವಾ ಪತ್ರದ್ವಾರ ತಿಳಿದುಕೊಳ್ಳುವುದು. ಚಿಕ್ಕ ತಿಮ್ಮೆಗೌಡ, ಗೌರವಕಾರ್ಯದರ್ಶಿ,

ಗ್ರಾಮರಕ್ಷಣಸಭಾ, ಕ್ಯಾತನಹಳ್ಳಿ, ಫ್ರೆಂಚ್‌ರಾಕ್ಸ್ ಪೋಸ್ಟು.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಏಪ್ರಿಲ್ ತಾ|| ೧೭ ನೆಯ ಶನಿವಾರ.

MR. C. R. REDDY—AS VICE-CHANCELLOR.

The news of the appointment of Mr. C. R. Reddy, M.A., the Ex-Inspector General of Education in Mysore as Vice-Chancellor of the newly-founded Andhra University is a matter for real joy to all the people of the State who remember his powerful personality and his magnificent contribution to the educational progress of the State. His large sympathies and extraordinary abilities had won for him alike the affection and admiration of the people of Mysore. Mysore has never witnessed more touching scenes at the severance of the connection of an officer than those which appeared on Mr. Reddy's resignation of his appointment in Mysore. The eloquent tributes given to him at his departure from the State in all quarters are still fresh in the minds of the people. When he willingly gave up a place of so much power and patronage as that of the I. G. of Education and the prospects of rising higher still, nothing definitely could be predicated of Mr. Reddy's future career, though of course everyone knew that wherever he might be he would tower over the rest of the people amidst him and hold a conspicuous and a commanding place. From the moment of his departure from Mysore he has been a keen and energetic figure in Madras politics, and it cannot be denied that his participation in it is greatly responsible to the introduction of better methods of political warfare while it has also greatly enlivened the political life of Madras. In fact, his was the best brains in the Madras Legislative Council and if it did not secure him a place in the Government it was through no fault of his own. It is the happiest synchronising of events that Mr. C. R. Reddy's services could be available when the Andhra University was being founded. We congratulate the Chancellor and the Ministry and the University on the appointment and we congratulate Mr. Reddy on becoming its first Vice-Chancellor. There can be no two opinions on the fact that there could not have been a better choice. It was said at the time of his departure from Mysore that what was a great loss to the State would be a greater gain to the rest of India, and so has it been. Mr. Reddy has now the destiny of moulding the youth of Andhradesa in his hands—a unique privilege and a glorious opportunity. His intimate knowledge of the working of the various Universities of the world, his close acquaintance with the culture, both modern and ancient, of the East and the West, his critical and sympathetic study of the needs of the country, his unequalled knowledge of the psychology and the aptitudes of the youth, his genuine patriotism for India and for Andhradesa in particular and his broad sympathies combined with the rare gift of eloquence in English and in his own mother-tongue are sure to make his Vice-Chancellorship a brilliant success. There need be no doubts that the foundations of the new University will be truly and well laid so that it may become a model to the other Universities. Its potentialities are great for, it is not likely to suffer from any financial stringency. We wish that the Andhra University will have a long and glorious career and will bring to the national stream of culture and scholarship its unique and rich contribution, so that India may be all the richer and stronger for it. We wish Mr. C.R. Reddy all success in his new and noble task and that he will earn the lasting glory of shaping a University which would be capable of producing true heroes of our Motherland.

ಹಿಂದುಳಿದವರಮೇಲೆ ಅಭಿಯೋಗ.

ರಾಜಕೀಯವಿಚಾರವಾಗಿ ನಮ್ಮ ಬ್ರಾಹ್ಮಣಬಂಧುಗಳಲ್ಲಿ ಭಿನ್ನಾಭಿಪ್ರಾಯವು ಹುಟ್ಟಿದರೆ ಒಬ್ಬರಿಗೊಬ್ಬರು ಸಜಾತ್ಯಭಿಮಾನವನ್ನು ಸಹ ಇಡದೆ ವೃತ್ತಪತ್ರಿಕೆಗಳಲ್ಲಿ ಲೇಖಪ್ರತಿಲೇಖಗಳಿಂದ ವಾಗ್ವಾದಮಾಡುವುದು ಸರ್ವಸಾಮಾನ್ಯವಾಗಿರುವುದು. ಇದಕ್ಕೆ ನಮ್ಮ ಸೀಮೆಯಲ್ಲಿ ರಾಜಕೀಯವಿಶಾರದರೆಂದೂ, ದೇಶೋದ್ಧಾರಕರೆಂದೂ ತಮಗೆ ತಾವೇ ವಿಜೃಂಭಿಸುತ್ತಿರುವ ಮ|| ಗಳಾದ ಎಸ್. ಎಸ್. ಸೆಟ್ಲೂರ್‌ರವರೂ, ಹೊಸಕೊಪ್ಪದ ಕೃಷ್ಣರಾಯರೂ ನಮ್ಮ ಸಂಸ್ಥಾನದ ರಾಜಕೀಯವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಂದ ಹಿಂದೂಪತ್ರಿಕಾಮೂಲಕ ವಾಗ್ವಾದವನ್ನು ಮಾಡಿ ಕಂಠಹಿಡುಕೊಳ್ಳುತ್ತಿರುವುದು ನಿದರ್ಶನವಾಗಿದೆ. ಈ ವಿಚಾರದಲ್ಲಿ ಇವರಿಬ್ಬರಿಗಿಂತಲೂ ಪರಮಶತ್ರುತ್ವದಿಂದ ಕಾದಾಡುವವರು ಮತ್ತಾರೂ ಇಲ್ಲವೆಂದು ಹೇಳಬಹುದು. ಆದರೆ ಇಂತಹ ವಾಗ್ವೈರಿಗಳು ಸರ್ಕಾರಿಯುದ್ಯೋಗಗಳಲ್ಲಿ ಹಿಂದುಳಿದ ವರ್ಗದವರ ಪ್ರಜಾಸಂಖ್ಯಾನುಗುಣವಾಗಿ ಪ್ರಾತಿನಿಧ್ಯವು ಇರಬೇಕೆಂಬ ವಿಚಾರವು ಬಂದವೇಳೆಯಲ್ಲಿ ಮಾತ್ರ ಒಟ್ಟುಗೂಡಿ ಏಕಾಭಿಪ್ರಾಯದಿಂದ ಹಿಂದುಳಿದವರಮೇಲೆ ಅಭಿಯೋಗನಡಿಸುತ್ತಿರುವುದು ಪರಮಾಶ್ಚರ್ಯಕರವಾಗಿದೆ. ಈ ವರ್ಗದವರು ತಾವು ಬಲವತ್ತರವಾಗಿಯೂ, ಇತರರಿಂದ ಕದಲಿಸಲ್ಪಡಲು ಸುಲಭಸಾಧ್ಯವಲ್ಲದಂತೆಯೂ ಆಕ್ರಮಿಸಿಕೊಂಡು ಮುಡುಪಾಗಿ ಅನುಭವಿಸಿಕೊಂಡು ಬರುತ್ತಿರುವ ಸರ್ಕಾರಿಯುದ್ಯೋಗಾದಿ ಅಸಾಧಾರಣಸೌಲಭ್ಯಗಳಿಗೆ ಇತರರಿಂದ ಯತ್ಕಿಂಚಿತ್ ಭಂಗವುಂಟಾದಲ್ಲಿ ಎಲ್ಲರೂ ಒಂದಾಗಿ ಪ್ರತಿಭಟಿಸಿನಿಲ್ಲುವ ಅದ್ಭುತಸಾಮರ್ಥ್ಯವು ಮಾತ್ರ ಪ್ರಶಂಸನೀಯವಾಗಿದೆ. ಕೈ|| ಸರ್ ಎಂ. ಕಾಂತರಾಜಅರಸಿನವರ ರಾಜ್ಯಾಡಳಿತವನ್ನು ಮುಖ್ಯವಾಗಿ ಮಿಲ್ಲರ್ ಕಮಿಟಿ ರಿಪೋರ್ಟಿನಮೇಲಣ ಸರ್ಕಾರಿಯಪ್ಪಣೆಯನ್ನು ಮ|| ಎಸ್. ಎಸ್. ಸೆಟ್ಲೂರ್‌ರವರು ಬಹಳ ದೌಷ್ಟ್ಯದಿಂದ ಖಂಡಿಸಿ ಅವಮರ್ಯಾದೆಯಿಂದ ಹಿಂದೂಪತ್ರಿಕೆಯಲ್ಲಿ ಲೇಖಗಳನ್ನು ಬರೆಯುತ್ತಿರುವುದನ್ನು ಕುರಿತು ಆಚೆವಾರದ ಸ್ಟಾರ್‌ಪತ್ರಿಕೆಯಲ್ಲಿ ಪ್ರಸ್ತಾವಿಸಿರುತ್ತೇವೆ. ಇದೇ ವಿಚಾರವನ್ನು ಕುರಿತು ಬ್ರಾಹ್ಮಣರ ಮತ್ತೊಬ್ಬ ಮುಂದಾಳಾದ ಮ|| ಹೊಸಕೊಪ್ಪದ ಕೃಷ್ಣರಾಯರು ಏನುಹೇಳುತ್ತಾರೆಂಬುದನ್ನು ಈಗ ಪರ್ಯಾಲೋಚಿಸುವುದಾಗಿದೆ. ಇವರೂ ವೃತ್ತಪತ್ರಿಕೆಗಳಲ್ಲಿ ತಮ್ಮ ವಾಗಾಡಂಬರವನ್ನೂ, ರಾಜನೀತಿವಿಶಾರದತ್ವವನ್ನೂ ವಿಜೃಂಭಿಸಲು ಪ್ರಯತ್ನಿಸಿರುವರಲ್ಲದೆ ಮ|| ಸೆಟ್ಲೂರ್‌ರವರನ್ನು ಪ್ರತಿಭಟಿಸಿ ತಕ್ಕಮಟ್ಟಿಗೆ ಜಯಶಾಲಿಗಳೆನ್ನಿಸಿಕೊಂಡಿರುತ್ತಾರೆ. ಮೈಸೂರಿನ ರಾಜಕೀಯಸುಧಾರಣೆಯ ವಿಚಾರವಾಗಿ ಮ|| ಕೃಷ್ಣರಾಯರು ಈ ಏಪ್ರಿಲ್ ತಾ|| 8 ರ ಹಿಂದೂಪತ್ರಿಕೆಯಲ್ಲಿ ಬರೆಯುವಾಗ್ಗೆ, ವರ್ಣಮಾತ್ಸರ್ಯವು ಮೊದಲಿನಂತೆಯೇ ಉಲ್ಬಣವಾಗಿರುವುದೆಂದೂ, ಅಸೂಯಾಪರರಾದ ಬ್ರಾಹ್ಮಣೇತರರು ಶ್ರೀಮನ್ಮಹಾರಾಜರವರ ಎಚ್ಚರಿಕೆಯನ್ನು ಉಲ್ಲಂಘಿಸಿ ನಡೆಯುತ್ತಿರುವುದನ್ನು ಸರ್ಕಾರದವರು ತಿಳಿದೂ ನಿಲ್ಲಿಸದೆ ಇರುವುದರಿಂದಲೇ ಪರಿಸ್ಥಿತಿಯು ಇನ್ನೂ ವಿಷಮವಾಗುತ್ತಿರುವುದೆಂದೂ, ಸರ್ಕಾರದವರು ತಾವು ಮಾಡದಿರುವ ಪ್ರಯತ್ನಕ್ಕಾಗಿ ಗೌರವಪ್ರತಿಷ್ಠೆಗಳನ್ನು ಅಪೇಕ್ಷಿಸತಕ್ಕುದಲ್ಲವೆಂದೂ ಹೇಳಿರುತ್ತಾರೆ. ಇದು ಉತ್ತರವಾದಿತ್ವದ ವಾಸನೆಯುಳ್ಳವರೆಂದು ಭಾವಿಸಲ್ಪಟ್ಟಿರುವವರ ಹೇಳಿಕೆಯಾಗಿದೆ. ನಾವು ನೋಡಿರುವ ಮಟ್ಟಿಗೂ ಹಿಂದುಳಿದ ವರ್ಗದವರಿಗೆ ವರ್ಣದ್ವೇಷವಿರುವುದು ಎಲ್ಲೂ ಕಂಡುಬಂದಿಲ್ಲ, ಮತ್ತು ಅವರು ಹೋರಾಡುವುದು ಅನ್ಯಾಯವಾಗಿ ತಡೆಯಲ್ಪಟ್ಟಿರುವ ತಮ್ಮ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಹೊಂದುವುದಕ್ಕಾಗಿ ಅಲ್ಲದೆ ದ್ವೇಷಾಸೂಯೆಗಾಗಿ ಅಲ್ಲವು. ಮಿಲ್ಲರ್ ರಿಪೋರ್ಟಿನಂತಹ ಸಾಧನಗಳಿಂದ ಹಿಂದುಳಿದವರ್ಗದವರು ಸರ್ಕಾರಿಯುದ್ಯೋಗಗಳಲ್ಲಿ ತಕ್ಕಮಟ್ಟಿಗೆ ತಮ್ಮ ಹಕ್ಕುಬಾಧ್ಯತೆಗಳನ್ನು ಸಾಧಿಸಲವಕಾಶವಾಗುವುದರಿಂದ, ತಮಗೆ ನಷ್ಟವಾಗುತ್ತದೆಂದು ಬ್ರಾಹ್ಮಣರು ತಿಳಿದು ತಾವು ನಿರುಪಾಧಿಕವಾಗಿ ಅನುಭವಿಸಿಕೊಂಡುಬರುತ್ತಿರುವ ಸೌಲಭ್ಯಗಳನ್ನು ಅಪೇಕ್ಷಿಸುವ ನಿರ್ಭಾಗ್ಯಜನರನ್ನು ದೂಷಿಸುವುದರಿಂದ ಅಸೂಯೆಯು ಹುಟ್ಟುತ್ತದಲ್ಲದೆ ಬೇರೆಯಲ್ಲವು. ಈ ನಿರ್ಭಾಗ್ಯ ಹಿಂದುಳಿದವರ ಭ್ರಾಮಕವಾದ ಅಸೂಯೆಯನ್ನು ಯಾವರೀತಿ ಸರ್ಕಾರದವರು ಅಣಗಿಸಬೇಕೆಂದು ಮ|| ಕೃಷ್ಣರಾಯರವರು ನಿರೀಕ್ಷಿಸುವರು ? ಅವರು ಇದಕ್ಕೇನೊಂದುಪಾಯವನ್ನೂ ಹೇಳದಿರುವುದರಿಂದ ಮಿಲ್ಲರ್‌ಕಮಿಟಿಯ ರಿಪೋರ್ಟಿನಮೇಲಣ ಸರ್ಕಾರಿಯಪ್ಪಣೆಯು ನಾಮಾವಶೇಷಮಾಡಲ್ಪಡಬೇಕೆಂಬುದು ಅವರ ಮನೋಗತವಾಗಿರಬೇಕೆಂದು ನಾವು ಊಹಿಸಬೇಕಾಗಿದೆ. ಮಿಲ್ಲರ್‌ಕಮಿಟಿಯ ರಿಪೋರ್ಟಿನಮೇಲೆ ಸರ್ಕಾರಿಯಪ್ಪಣೆಯಾಗಿ ಎಷ್ಟೋ ವರ್ಷಗಳಾದಮೇಲೂ ಹಿಂದುಳಿದ ವರ್ಗದವರ ಪುರೋಭಿವೃದ್ಧಿಯ ವಿಚಾರದಲ್ಲಿ ಸಂಸ್ಥಾನದ ಬ್ರಾಹ್ಮಣರ ಮನೋಭಾವವು ಹೇಗಿರುತ್ತದೆಂಬುದು ಮ|| ಕೃಷ್ಣರಾವ್ ಪ್ರಭೃತಿಗಳ ಲೇಖಗಳಿಂದ ಸುವ್ಯಕ್ತವಾಗುವುದು. ಎಲ್ಲ ವರ್ಗದವರೂ ಸಮಾನವಾದ ಸರ್ಕಾರಿ ಉದ್ಯೋಗಸೌಲಭ್ಯಗಳನ್ನು ಹೊಂದುವುದು ಯುಕ್ತವೆಂದು ವಿದ್ಯಾಧಿಕರು ಒಪ್ಪದಿರಲು ನಿರ್ಧರಿಸಿಕೊಂಡಿರುವಾಗ್ಗೆ ನಿರ್ಬಂಧಿತರಾದ ವರ್ಗದವರು ತಮ್ಮ ಸೌಲಭ್ಯಗಳನ್ನು ಪೂರ್ಣವಾಗಿ ಹೊಂದಲೇಬೇಕೆಂದು ನಿರ್ಧರಿಸಿಕೊಂಡು ಆ ರೀತಿ ಏಕೆ ಪ್ರಯತ್ನಪಡಬಾರದೆಂಬುದರ ಕಾರಣವು ಗೊತ್ತಾಗಲಿಲ್ಲ. ಹಿಂದುಳಿದ ವರ್ಗದವರು ಬಹಳ ತಾಳ್ಮೆಯುಳ್ಳವರಾಗಿರುವರಲ್ಲದೆ ತಮ್ಮ ಪೂರ್ಣಹಕ್ಕನ್ನು ಸಂಪಾದಿಸುವಲ್ಲಿ ಕೆಲವರ್ಷಕಾಲ ನಿಧಾನವಾದರೂ ಲೆಕ್ಕಿಸತಕ್ಕವರಲ್ಲ. ಸರ್ಕಾರಿಯುದ್ಯೋಗದಲ್ಲಿ ಹಿಂದುಳಿದ ವರ್ಗದವರ ಪ್ರಾತಿನಿಧ್ಯವು ನ್ಯಾಯವಾಗಿ ತಕ್ಕಷ್ಟು ಇದ್ದಹೊರತು ಸರ್ಕಾರದವರು ಈಗ ಅನುಸರಿಸಿರುವ ನೀತಿಯನ್ನು ಬದಲಾಯಿಸಲು, ಈ ಹುರುಳಿಲ್ಲದ ಲೇಖಗಳಿಂದ ಸಾಧ್ಯವೆಂದು ಭ್ರಾಂತಿಪಟ್ಟುಕೊಂಡಿರುವ ನಮ್ಮ ಬ್ರಾಹ್ಮಣಬಂಧುಗಳಿಗೆ ಆ ಮಾರ್ಗವೆಂದಿಗೂ ಸಾಧ್ಯವಲ್ಲವೆಂದು ನಾವು ಒತ್ತಿ ಹೇಳುತ್ತೇವೆ. ನಾವು ಇಷ್ಟು ದೃಢವಾಗಿ ಹೇಳಲು ಎರಡು ಕಾರಣಗಳುಂಟು—ಅವುಗಳಲ್ಲೊಂದನೆಯದು ಹಿಂದುಳಿದವರ ಪ್ರಯತ್ನವು ಧರ್ಮವಾದುದು ; ಎರಡನೆಯದು ಈ ಪ್ರಯತ್ನದ ವಿರುದ್ಧಾಚರಣೆಯು ಬಹಳ ದುರ್ಬಲವಾದುದು. ಶ್ರೀಮನ್ಮಹಾರಾಜರವರು ಅಸೂಯಾಪರರಾದ ಹಿಂದುಳಿದವರಿಗೆ ಕೊಟ್ಟ ಎಚ್ಚರಿಕೆ ಎಂದು ಮ|| ಕೃಷ್ಣರಾಯರು ಹೇಳಿರುವುದರ ಕಾರಣವೇನು ? ಅಂತಹ ಸಂದರ್ಭವೇನಾದರು ಈಚೆಗೆ ನಡೆದಿರಬೇಕೆಂದು ಮ|| ಕೃಷ್ಣರಾಯರ ಮಾತಿನ ರೀತಿಯಿಂದ ಭಾಸವಾಗುತ್ತದೆ. ಒಂದುವೇಳೆ ಶ್ರವಣಬೆಳ್ಗೊಳದಲ್ಲಿ ಜರುಗಿದ ಜೈನಮಹಾಸಭೆಯಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಸಮಸ್ತ ಪ್ರಜೆಗಳನ್ನು ಕುರಿತು ಅಪ್ಪಣೆಕೊಡಿಸಿದ ವಿಷಯವನ್ನು ಪ್ರಕೃತ ಚರ್ಚಾಸ್ಪದವಿಷಯಕ್ಕೇನಾದರೂ ಅನ್ವಯಿಸಿ ಮ|| ಕೃಷ್ಣರಾಯರು ಹೇಳಿರಬಹುದು. ಆ ಸಂದರ್ಭದಲ್ಲಿ ಶ್ರೀಮನ್ ಮಹಾರಾಜರವರ ಅಮೃತವಾಣಿಯಿಂದ ಹೊರಟ ಮಹಾವಾಕ್ಯಗಳನ್ನೇ ಇಲ್ಲಿ ಉದ್ಧರಿಸಿರುತ್ತೇವೆ.—

“ ಒಟ್ಟಿನಲ್ಲಿ ದೇಶವೇ ವಾಸ್ತವಿಕವಾಗಿ ಮುಂದುವರಿಯಬೇಕಾದರೆ ಸರ್ವತೋಮುಖವಾಗಿ ಅಭಿವೃದ್ಧಿಯುಂಟಾಗಬೇಕೆಂಬುದನ್ನೂ, ಮತ್ತು ಅದು ಪ್ರತಿಯೊಂದು ಪಂಗಡದವರಿಗೂ ಲಭಿಸಬೇಕೆಂಬುದನ್ನೂ, ನಾವು ಮಂದಟ್ಟುಮಾಡಿಕೊಳ್ಳಬೇಕು. ಈಗ ಅಭಿವೃದ್ಧಿಸ್ಥಿತಿಯಲ್ಲಿರುವ ಪಂಗಡಗಳವರು, ತಾವು ಇನ್ನೂ ಮುಂದುವರಿಯುವುದರಲ್ಲಿ ಆಸಕ್ತಿಯನ್ನು ವಹಿಸುವುದು ಮಾತ್ರವೇ ಅಲ್ಲದೆ, ಸಮಾಜಪರಿಣಾಮಕ್ರಮದಲ್ಲಿ ಯಾವುದೋ ಒಂದು ಪರಿಹಾರ್ಯವಾದ ಕಾರಣದ ದೆಸೆಯಿಂದ ಹಿಂದುಳಿದಿರುವ, ಅಷ್ಟೊಂದು ಭಾಗ್ಯಶಾಲಿಗಳಲ್ಲದ ಇತರ ಪಂಗಡಗಳವರಿಗೆ, ಕರಾವಲಂಬನವನ್ನು ಕೊಟ್ಟು ಸಹಾಯಮಾಡುವುದೂ ಸಹ ಅವರ ಪವಿತ್ರಕರ್ತವ್ಯವಾಗಿರುವುದೆಂಬುದೇ ನಮ್ಮ ಸ್ವಂತ ಅಭಿಪ್ರಾಯವಾಗಿರುತ್ತದೆ. ”

ಮಹಾಸ್ವಾಮಿಯವರ ಈ ಬುದ್ಧಿವಾದಗಳು ಮ|| ಕೃಷ್ಣರಾಯರಂತಹವರುಗಳ ಮನಸ್ಸಿನಲ್ಲಿ ಅಚ್ಚಳಿಯದಿರಬಹುದಲ್ಲವೆ? ಅಲ್ಪವಿದ್ಯಾವಂತರ ಆಕಾಂಕ್ಷೆಯನ್ನು ಪೂರ್ಣಗೊಳಿಸುವುದು ಪೂರ್ಣವಿದ್ಯಾವಂತರ ಪವಿತ್ರತಮವಾದ ಕರ್ತವ್ಯವೆಂದು ಮಹಾಸ್ವಾಮಿಯವರು ತಮ್ಮ ಅಮೃತವಾಣಿಯಿಂದ ಅಪ್ಪಣೆಕೊಡಿಸಿರುವರು. ಯಾವಾಗಲೂ ನಿಜಸ್ಥಿತಿಯನ್ನು ಹೇಳುವುದರಿಂದ ಸ್ವಾರ್ಥಪರರ ಮನೋಗತಸಿದ್ಧಿಯಾಗುವುದಿಲ್ಲವಾದ ಪ್ರಯುಕ್ತ ಹಿಂದುಳಿದವರು ಶ್ರೀಮನ್ಮಹಾರಾಜರವರ ಎಚ್ಚರಿಕೆಯನ್ನು ನಿರ್ಲಕ್ಷಿಸಿ ನಡೆದರೆಂದು ಮ|| ಕೃಷ್ಣರಾಯರು ವ್ಯಾಜಾಂತರದಿಂದ ಹೇಳತಕ್ಕುದಾಗಿದೆ. ಮಿಲ್ಲರ್ ಕಮಿಟಿರಿಪೋರ್ಟಿನಮೇಲೆ ಸರ್ಕಾರಿಯಪ್ಪಣೆಯಾದ ತರುಣದಲ್ಲಿ ಖಂಡನ ಪ್ರತಿಖಂಡನಗಳು ಗಣನೆಯಿಲ್ಲದಷ್ಟು ನಡೆದುಹೋದುವು. ಹಿಂದುಳಿದ ವರ್ಗದವರನ್ನು ಮುಂಬರಿಸುವ ಸದುಪಾಯದ ವಿರುದ್ಧಾಚರಣೆಯು ನಮಗೆ ವಿಸ್ಮಯವನ್ನುಂಟುಮಾಡಿರುವುದಲ್ಲದೆ, ನಮ್ಮ ದೇಶದಲ್ಲಿ ಮುಂಬರಿದ ಈ ವಿದ್ಯಾಧಿಕರಲ್ಲಿ ನಾವಿಟ್ಟಿದ್ದ ನಂಬುಗೆಯನ್ನು ಹೋಗಲಾಡಿಸುತ್ತದೆ ಮತ್ತು ಈ ಜನರು ದೇಶಕ್ಕೆ ಹೆಚ್ಚು ಪ್ರಯೋಜನವಾಗಲೆಂಬ ವಿಶಾಲಬುದ್ಧಿಯಿಲ್ಲದೆ ಅತ್ಯಂತ ಸ್ವಾರ್ಥಪರರಾಗಿರುವ ಪ್ರಯುಕ್ತ ನಮ್ಮ ಸಂಸ್ಥಾನಕ್ಕೆ ಶ್ರೀಯಸ್ಸು ಅವರಿಂದುಂಟಾಗದೆ ಸಂಸ್ಥಾನದ ಕೈಗಾರಿಕೆ, ವ್ಯಾಪಾರ ಮತ್ತು ಕೂಲಿ ಈ ಕಸುಬದಾರಿಯ ವರ್ಗದವರಿಂದಲೇ ಲಭ್ಯವಾಗಬೇಕೆಂಬ ನಮ್ಮ ನಂಬುಗೆಯು ಸಂಪೂರ್ಣವಾಗಿ ದೃಢಪಡುತ್ತದೆ.

ಮಹಾಸ್ವಾಮಿಯವರ ದಿವ್ಯವಾಕ್ಯವನ್ನು ಉಲ್ಲಂಘಿಸಿ ನಡೆಯುವವರಾರೆಂಬುದನ್ನು ಮ|| ಕೃಷ್ಣರಾವ್ ಪ್ರಭೃತಿಗಳು ಈಗಲಾದರೂ ನಿರ್ಮತ್ಸರಬುದ್ಧಿಯಿಂದ ಹೇಳಲಿ. ಒಂದುವೇಳೆ ಹಿಂದುಳಿದವರು ಉಲ್ಲಂಘಿಸುತ್ತಾರೆಂದಿಟ್ಟುಕೊಂಡರೂ, ಅವರು ವಿದ್ಯಾಧಿಕರಲ್ಲದುದರಿಂದ ಅದು ಕ್ಷಮ್ಯವಾದುದು, ಆದರೆ ವಿದ್ಯಾಧಿಕರ ಉಲ್ಲಂಘನೆಯು ಮಾತ್ರ ಅಕ್ಷಮ್ಯವಾದುದೆಂದು ಹೇಳಬೇಕಾದುದಿಲ್ಲವು. ನಿಜಸ್ಥಿತಿಯು ಹೀಗಿದ್ದರೂ ಮ|| ಕೃಷ್ಣರಾಯರು ಮಾತ್ರ ಹಿಂದುಳಿದವರು ಮಹಾಪ್ರಭುಗಳ ಎಚ್ಚರಿಕೆಯನ್ನು ಅಲಕ್ಷಿಸುತ್ತಿರುವರಾದರೂ ಸರ್ಕಾರದವರು ತಕ್ಕ ಪ್ರತಿಕ್ರಿಯೆಯನ್ನು ಮಾಡದೆ ತಟಸ್ಥರಾಗಿರುವುದರಿಂದ ವರ್ಣದ್ವೇಷವು ಉತ್ಕಟಾವಸ್ಥೆಗೆ ಬಂದಿದೆಯೆಂದು ಹೇಳಿ ತನ್ಮೂಲಕ ಸರ್ಕಾರದವರನ್ನು ರೇಗಿಸಿ ಹಿಂದುಳಿದವರ ಭಾಗಕ್ಕೆ ಕಲ್ಪತರುವಂತಿರುವ ಮಿಲ್ಲರ್‌ಕಮಿಟಿರಿಪೋರ್ಟಿನ ಮೇಲಣ ಸರ್ಕಾರಿಯಪ್ಪಣೆಯನ್ನು ತೆಗಿಸಿಬಿಡಲು ಪ್ರಯತ್ನಿಸಿರುವರು. ಆದರೆ ನಮ್ಮ ಪ್ರಭುತ್ವದವರು ಈ ಕುತಂತ್ರವನ್ನು ತಿಳಿಯದಷ್ಟು ಮಂದಬುದ್ಧಿಯುಳ್ಳವರಾಗಿಲ್ಲ. ಶ್ರೀಮನ್ಮಹಾರಾಜರವರು ಯಾರನ್ನು ಮುಖ್ಯವಾಗಿ ಎಚ್ಚರಿಸಿರುವರೆಂಬುದನ್ನು ಮುಂಬರಿದ ವಿದ್ಯಾಧಿಕರು ಇನ್ನಾದರೂ ಜ್ಞಾಪಿಸಿಕೊಂಡು ಹಿಂದುಳಿದವರನ್ನು ವಿದ್ಯೆಯಲ್ಲೂ ಸರ್ಕಾರಿಯುದ್ಯೋಗದಲ್ಲೂ ಮುಂಬರಿಸಲು ತ್ರಿಕರಣಪೂರ್ವಕವಾಗಿ ಪ್ರಯತ್ನಿಸಿ ಮಹಾಸ್ವಾಮಿಯವರ ಅಮೃತವಾಕ್ಯವನ್ನು ಅಕ್ಷರಶಃ ಪರಿಪಾಲಿಸಿ ಅವರ ಮನ್ನಣೆಗೂ ಹಿಂದುಳಿದ ವರ್ಗದವರ ವಂದನೆಗೂ ಪಾತ್ರರಾಗುವ ಸದ್ಬುದ್ಧಿಯನ್ನು ಆ ದಯಾಮಯನಾದ ಪರಮೇಶ್ವರನು ಅವರಿಗೆ ಅನುಗ್ರಹಿಸಲೆಂದು ಬೇಡುತ್ತೇವೆ.

ಶ್ರವಣಬೆಳಗೊಳದ ಜೈನಮಠಾಧಿಕಾರ.

ಹಾಸನಡಿಸ್ಟ್ರಿಕ್ಟಿಗೆ ಸೇರಿದ ಚೆನ್ನರಾಯಪಟ್ಟಣತಾಲ್ಲೂಕಿನಲ್ಲಿ ಆ ಜಗದ್ವಿಖ್ಯಾತ ಶ್ರೀಗೋಮಟೇಶ್ವರಸ್ವಾಮಿಯ ಮಹಾಪುಣ್ಯಕ್ಷೇತ್ರವಾದ ಶ್ರವಣಬೆಳಗೊಳದಲ್ಲಿರುವ ಜೈನಮಠದ ಅಧಿಕಾರಿಗಳಾಗಿದ್ದ ಶ್ರೀಚಾರುಕೀರ್ತಿಪಟ್ಟಾಚಾರ್ಯಸ್ವಾಮಿಯವರು ಕಳೆದ ಜನವರಿ ತಾ|| 26 ರಲ್ಲಿ ನಿರ್ಯಾಣವನ್ನು ಹೊಂದಿದರು. ಆ ಸ್ವಾಮಿಯವರು ತಮ್ಮ ಉತ್ತರಾಧಿಕಾರಿಗಳನ್ನು ಗೊತ್ತುಮಾಡಿರಲಿಲ್ಲವಾದುದರಿಂದ ಈಗ ಆ ಪೀಠಾಧಿಕಾರಕ್ಕೆ ಪಟುವನ್ನು ಚುನಾಯಿಸುವ ವಿಚಾರವಾಗಿ ಶಿಷ್ಯರುಗಳಲ್ಲಿ ಭಿನ್ನಾಭಿಪ್ರಾಯಹುಟ್ಟಿ ಎರಡುಪಕ್ಷಗಳೇರ್ಪಟ್ಟು, ಅವುಗಳಲ್ಲಿ ಒಂದುಪಕ್ಷದವರು ಮಠಾಧಿಕಾರಕ್ಕೆ ಚಿಕ್ಕವಯಸ್ಸಿನವರೊಬ್ಬರನ್ನು ಆರಿಸಬೇಕೆಂದೂ, ಮತ್ತೊಂದುಪಕ್ಷದವರು ಮಠಧರ್ಮವನ್ನೂ, ಮಠದ ಗೌರವಪ್ರತಿಷ್ಠೆಯನ್ನೂ ಕಾಪಾಡುವಷ್ಟು ವಿದ್ಯಾಪಾಂಡಿತ್ಯಸಾಮರ್ಥ್ಯ, ಶಮದಮಾದಿಸದ್ಗುಣಸಂಪನ್ನರಾದವರನ್ನು ಬಹುಜನಸಮ್ಮತಿಯಿಂದ ಆರಿಸಬೇಕೆಂದೂ ಹೋರಾಡುತ್ತ, ಈ ಮಠವು ಮೈಸೂರುಪ್ರಭುತ್ವದ ಮುಜರಾಯಿ ಶಾಖಾಡಳಿತಕ್ಕೊಳಪಟ್ಟಿರುವುದರಿಂದ ಪ್ರಭುತ್ವದವರಿಗೆ ಮೊರೆಯಿಟ್ಟುಕೊಂಡಿರುವುದಾಗಿ ತಿಳಿಯಬರುತ್ತದೆ. ಶ್ರವಣಬೆಳಗೊಳದಲ್ಲಿ ನೆರೆದಿದ್ದ ಜೈನಮಹಾಸಭಾಸ್ವಾಗತಸಮಿತಿಯವರೊಪ್ಪಿಸಿದ ವಿಜ್ಞಾಪನಾಪತ್ರಿಕೆಗೆ ಶ್ರೀಮನ್ಮಹಾರಾಜರವರು ಉತ್ತರವನ್ನು ಕೊಡುವಾಗ್ಗೆ “ ಯಾರಹೆಸರಿನಮೇಲೆ ಇಂಡ್ಯಾದೇಶವು ಭರತವರ್ಷವೆಂದು ಕರೆಯಲ್ಪಟ್ಟಿದೆಯೋ ಆ ಭರತಚಕ್ರವರ್ತಿಯ ತಮ್ಮನೆಂಬುದಾಗಿ ಐತಿಹ್ಯವಿರುವ ಗೋಮಟಮುನೀಶ್ವರನ ದೆಸೆಯಿಂದ ಪವಿತ್ರವಾದ ಪುಣ್ಯಸ್ಥಳವು ಇದೇ ಆಗಿರುತ್ತದೆ ” ಎಂದು ಅಪ್ಪಣೆಕೊಡಿಸಿರುತ್ತಾರೆ. ಇಂತಹ ಚರಿತ್ರಾರ್ಹವೂ, ಲೋಕಪ್ರಖ್ಯಾತವೂ ಆದ ಮಹಾಪುಣ್ಯಸ್ಥಳದಲ್ಲಿ ಈ ಮಠವು ಸ್ಥಾಪಿತವಾಗಿರುವುದರಿಂದ ಇದು ಸಾಮಾನ್ಯವಾಗಿಂದೆ ಪ್ರಖ್ಯಾತಧರ್ಮಸಂಸ್ಥೆಯಾಗಿರುತ್ತದೆ. ಇಂತಹ ಧರ್ಮಸಂಸ್ಥೆಗಳು ಪ್ರಜಾನುರಾಗಕ್ಕೆ ಪಾತ್ರವಾಗಬೇಕಾಗಿದ್ದರೆ ಪ್ರಜೆಗಳ ಸರ್ವಾನುಮತದಿಂದ ಸಂಸ್ಕೃತ ಮತ್ತು ಕನ್ನಡಭಾಷಾಭಿಜ್ಞರಾಗಿಯೂ, ತಕ್ಕವಯೋಗುಣವುಳ್ಳವರಾಗಿಯೂ, ಸತ್ಕುಲಪ್ರಸೂತರಾಗಿಯೂ, ಧರ್ಮಾಚರಣೆಯುಳ್ಳವರಾಗಿಯೂ, ಸಮಾಜಹಿತಚಿಂತಕರಾಗಿಯೂ, ಶಮದಮಾದಿ ಗುಣಸಂಪನ್ನರಾಗಿಯೂ ಇರತಕ್ಕವರು ಅಧಿಕಾರಿಗಳಾಗಿ ಆರಿಸಲ್ಪಡಬೇಕು. ಅಂತಹವರೇ ಸರ್ವವಂದ್ಯರಾಗಿಯೂ, ಪೂಜ್ಯಸ್ಥಾನಕ್ಕೆ ಭೂಷಣರಾಗಿಯೂ ಇರುವರು. ಹಾಗಲ್ಲದೆ ಪಕ್ಷಾಭಿಮಾನದಿಂದಲೂ, ಹಟಸಾಧನೆಯಿಂದಲೂ ಯಾರೋ ಒಬ್ಬರನ್ನು ಮಹಾಶ್ರೀಮಂತರುಗಳ ಮೇಲೂ, ವಿದ್ವಾಂಸರುಗಳ ಮೇಲೂ ಧರ್ಮಾಧಿಕಾರವನ್ನು ನಡೆಯಿಸಲು ತಂದು ಕುಳ್ಳಿರಿಸಿದರೆ ಅವರಿಗೆ ಖಂಡಿತವಾಗಿಯೂ ಪೂಜ್ಯತೆಯುಂಟಾಗುವುದಿಲ್ಲ. ಯಾಕೆಂದರೆ ಈಗಿನ ಕಾಲಪರಿಸ್ಥಿತಿಯು ಸೂಕ್ಷ್ಮವಾಗುತ್ತಿರುವಂತೆ ಮೂಢಭಕ್ತಿಯು ಕಡಿಮೆಯಾಗಿ ಪ್ರೌಢಭಕ್ತಿಯು ಹೆಚ್ಚುತ್ತಿರುವುದರಿಂದ, ಯಾವವಿಧವಾದ ಉತ್ಕೃಷ್ಟಯೋಗ್ಯತೆಯಿಲ್ಲದಿದ್ದರೂ ನಮ್ಮ ಗುರುಗಳೆಂಬ ಅಭಿಮಾನವೊಂದರಿಂದಲೇ ಕಾಣಿಕೆ ಕಪ್ಪಗಳನ್ನಿತ್ತು ಮರ್ಯಾದಿಸುವ ಜನರ ಸಂಖ್ಯೆಯು ಕಡಿಮೆಯಾಗಿದೆ. ಆದ್ದರಿಂದ ಈಗ ಪಾರ್ಟಿಗಳಾಗೇರ್ಪಟ್ಟಿರುವ ಜೈನಬಂಧುಗಳು ಸ್ವಧರ್ಮಗೌರವಪ್ರತಿಷ್ಠೆಗಳಮೇಲೂ, ಮಠಾಭಿವೃದ್ಧಿಯಮೇಲೂ ದೃಷ್ಟಿಯಿಟ್ಟು ಒಗ್ಗಟ್ಟಾಗಿ ನಾವು ಮೇಲೆ ಹೇಳಿರುವಂತಹ ಸಕಲಗುಣಸಂಪನ್ನರಾದವರನ್ನು ತಮ್ಮ ಪ್ರಖ್ಯಾತ ಪೀಠಾಧಿಕಾರಿಗಳನ್ನಾಗಿ ಆರಿಸಿ ಕೃತಕೃತ್ಯರಾಗುವರೆಂದೂ, ನಮ್ಮ ಪ್ರಭುತ್ವದವರಾದರೂ ಅಂತಹವರನ್ನು ಆರಿಸಲು ಯೋಗ್ಯವಾದ ಒಂದು ಕಮಿಟಿಯನ್ನೇರ್ಪಡಿಸುವುದರ ಮೂಲಕ ಅನುಮೋದಿಸುವರೆಂದೂ ನಿರೀಕ್ಷಿಸುತ್ತೇವೆ. ಒಂದುವೇಳೆ ದೂರಾಲೋಚನೆಯಿಲ್ಲದೆ ಕಾರ್ಯವನ್ನು ನೆರವೇರಿಸಿ ಉತ್ತರತ್ರ ಅದರಿಂದ ಸಮಾಜಕ್ಕೆ ಘಾತವುಂಟಾದರೆ, ಆ ದುಷ್ಫಲಕ್ಕೆ ಅದರ ಮೂಲಚಾಲಕರೆಲ್ಲರೂ ಭಾಗಿಗಳಾಗಬೇಕಾಗುತ್ತದೆಂಬುದನ್ನುಮಾತ್ರ ನಮ್ಮ ಜೈನಬಂಧುಗಳು ಮರೆಯಬಾರದು.

ಶಿವಾನುಭವ.

(ತ್ರೈಮಾಸಪತ್ರಿಕೆ).

ಬಿಜಾಪುರದಲ್ಲಿ ಪ್ರಸಿದ್ಧವಕೀಲರೂ, ಸಮಾಜಸುಧಾರಕರೂ, ಪಂಡಿತರೂ, ವಚನಶಾಸ್ತ್ರಗ್ರಂಥಕರ್ತರೂ ಆದ ರಾವ್ ಸಾಹೆಬ್ ಫ. ಗು. ಹಳಕಟ್ಟಿ, ಬಿ.ಎ., ಎಲ್.ಎಲ್.ಬಿ., ಇವರ ಸಂಪಾದಕತ್ವದಿಂದ ಮೂರು ತಿಂಗಳಿಗೊಂದಾವರ್ತಿ ಪ್ರಕಟಿತವಾಗುತ್ತಿರುವ ‘ ಶಿವಾನುಭವ ’ ಪತ್ರಿಕೆಯ ಪ್ರಥಮಸಂಚಿಕೆಯನ್ನು ನಾವು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ವೀರಶೈವಮತಗ್ರಂಥಪ್ರಸಾರವು ಇತ್ತೀಚೆಗೆ ನಿಂತುಹೋಗಿ ತನ್ಮೂಲಕ ಮತಪ್ರಾಶಸ್ತ್ಯಕ್ಕುಂಟಾಗಿರುವ ಕುಂದಕವನ್ನು ಹೋಗಲಾಡಿಸಬೇಕೆಂಬ ಸದುದ್ದೇಶದಿಂದ ಸಂಸ್ಕೃತ ಮತ್ತು ಕನ್ನಡ ಮತಗ್ರಂಥಗಳನ್ನೂ, ಸಮಾಜದ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಇತಿಹಾಸಗಳನ್ನೂ ಪ್ರಕಟಿಸಿ ವೀರಶೈವಮತಪ್ರಾಶಸ್ತ್ಯವನ್ನು ಬೆಳಸಬೇಕೆಂಬುದೇ ಈ ತ್ರೈಮಾಸಪತ್ರಿಕಾಕರ್ತರ ಸಂಕಲ್ಪವಾಗಿರುವುದಕ್ಕಾಗಿ ನಾವು ಅವರನ್ನು ಅಭಿನಂದಿಸಿ, ಪ್ರತಿಯೊಬ್ಬ ವೀರಶೈವನೂ ಇದಕ್ಕೆ ಚಂದಾದಾರನಾಗಿ ಪತ್ರಕರ್ತರ ಸತ್ಸಂಕಲ್ಪವು ನೆರವೇರುವಂತೆ ಮಾಡಿ ತನ್ನ ಮತಾಭಿಮಾನವನ್ನು ವ್ಯಕ್ತಗೊಳಿಸಬೇಕೆಂದು ಕೋರುತ್ತೇವೆ. ಈ ಪತ್ರಿಕೆಯು ಡೆಮ್ಮಿ ಅಷ್ಟಪತ್ರದಾಕೃತಿಯಲ್ಲಿ ಸ್ವಚ್ಛವಾದ ಕಾಗದದಮೇಲೆ ಸ್ಫುಟಾಕ್ಷರಗಳಿಂದ ಮುದ್ರಿಸಲ್ಪಟ್ಟು ಪೋಷಕರಿಗೆ 10 ರೂ., ಆಶ್ರಯದಾತರಿಗೆ 5 ರೂ , ವರ್ಗಣಿದಾರರಿಗೆ 3 ರೂ. ಈ ಪ್ರಕಾರ ವಾರ್ಷಿಕಚಂದಾ ಗೊತ್ತುಮಾಡಲ್ಪಟ್ಟಿದೆ. ಪ್ರಥಮಸಂಚಿಕೆಯಲ್ಲಿ ವೀರಶೈವ ಕನ್ನಡ ವಾಙ್ಮಯದ ಕೆಲ ಹೆಗ್ಗುರುತುಗಳಿಗಾಗಿ ಬಸವೇಶ್ವರನ, ವಿಜಯನಗರದ ಅರಸರ ಮತ್ತು ಬಿದನೂರು ಅರಸರ ಕಾಲಗಳು, ಬಸವೇಶ್ವರನೈತಿಕವಿಚಾರಗಳು, ಶಿವಾನುಭವಶಾಸ್ತ್ರವಿಸ್ತಾರವು, ಕರ್ನಾಟಕದ ಮೊದಲನೆಯ ರಾಣಿ, ಬಸವೇಶ್ವರನ ವಚನಗಳು ಇಂತಿಷ್ಟು ವಿಷಯಗಳು ಕೊಡಲ್ಪಟ್ಟಿವೆ.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಇಂದುನಾಳೆಯಲ್ಲಿ ಉದಕಮಂಡಲಕ್ಕೆ ಚಿತ್ತೈಸುವುದಾಗಿ ಕೇಳುತ್ತೇವೆ.

ಶ್ರೀಮದ್ಯುವರಾಜರವರು ಈ ತಾ|| 24ರಲ್ಲಿ ಬೊಂಬಾಯಿನಿಂದ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವರೆಂದು ತಿಳಿಯುತ್ತೇವೆ.

ರಾಜಧಾನಿಯಲ್ಲಿ ಮಳೆಯಚಿನ್ಹೆಯು ಲೇಶಮಾತ್ರವೂ ಇಲ್ಲದೆ ಹಗಲಿನಲ್ಲಿ ಬಿಸಲು ಬಹಳವೇಗವಾಗಿ ಕಾಯುತ್ತ ರಾತ್ರಿಯಲ್ಲಿ ಹಿಮವು ಬೀಳುತ್ತಿರುವುದರಿಂದ ಜನರು ಜ್ವರ ಕೆಂಬಲು ಮೊದಲಾದ ಸಾಮಾನ್ಯರೋಗಪೀಡಿತರಾಗಿ ನರಳುತ್ತಿರುವರು.

ಹೊಳೇನರಸೀಪುರದ ವೀರಶೈವಮಂಡಲಿಯವರು ಶ್ರೀ ಉಮಾಮಹೇಶ್ವರ, ನಂದೀಶ್ವರ, ವಿಘ್ನೇಶ್ವರ ಈ ಉತ್ಸವಮೂರ್ತಿಗಳ ಪ್ರಾಣಪ್ರತಿಷ್ಠಾ ಮಹೋತ್ಸವವನ್ನು ಈ ತಾ|| 19 ನೆಯ ಸೋಮವಾರ ಅತಿ ವಿಜೃಂಭಣೆಯಿಂದ ನಡೆಯಿಸುವವರಾಗಿರುವರು.

ಒಂದು ದೊಡ್ಡ ಆಂಧ್ರಬ್ರಾಹ್ಮಣಮನೆತನದವರಾಗಿದ್ದು ಪ್ರಾಟಸ್ಟೆಂಟ್ ಕ್ರಿಶ್ಚಿಯನ್ ಮತಕ್ಕೆ ಸೇರಿಕೊಂಡಿರುವ ಮ|| ಎ. ರಂಗನಾಥಂ ಎಂಬುವವರನ್ನು ಬೆಂಗಳೂರಿನ ಆರ್ಯಸಮಾಜದವರು ನಾಳೆಯದಿವಸ ಶುದ್ಧಿಕರ್ಮದಿಂದ ವೈದಿಕಧರ್ಮಾವಲಂಬಿಗಳನ್ನಾಗಿ ಮಾಡುವವರಾಗಿರುವರು.

ಒಂದನೆಯ ಕೌನ್ಸಿಲರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು ಕುಟುಂಬಸಮೇತರಾಗಿ ಮೇಲುಕೋಟೆಯ ಜಾತ್ರೆಗೆ ಬಂದಿದ್ದಾಗ್ಗೆ ದೇವಸ್ಥಾನದಿಂದ ನಡೆಸಲ್ಪಟ್ಟ ವಿಶೇಷ ಸತ್ಕಾರಕ್ಕೆ ಸಂತೋಷಪಟ್ಟು ದೇವಸ್ಥಾನದ ಅಧಿಕಾರಿಗಳನ್ನು ಬಹಳವಾಗಿ ವಂದಿಸಿದರೆಂದು ಅಲ್ಲಿನವರೊಬ್ಬರು ತಿಳಿಸುತ್ತಾರೆ.

ಸರ್ ಎ. ಆರ್. ಬಾನರ್ಜಿಯವರು ತಮ್ಮ ಮಾವನವರಾದ ಕೈ|| ಸರ್ ಕೆ. ಜಿ. ಗುಪ್ತರವರ ಸ್ಮರಣಾರ್ಥವಾಗಿ 2,000 ಜನ ಬಡಬಗ್ಗರಿಗೆ ಕಳೆದ ಗುರುವಾರ ಬೆಂಗಳೂರು ಒಕ್ಕಲಿಗರ ವಿದ್ಯಾರ್ಥಿನಿಲಯದಲ್ಲಿ ಮೃಷ್ಟಾನ್ನವನ್ನು ಹಾಕಿಸಿದರು, ಮತ್ತು ಭೋಜನಕಾಲದಲ್ಲಿ ದಂಪತಿಸಮೇತರಾಗಿ ಹೋಗಿದ್ದು ನೋಡಿಕೊಂಡುಬಂದರು.

ಶ್ರೀರಂಗಪಟ್ಟಣ ತಾಲ್ಲೂಕುಬೋರ್ಡಿನಮೂಲಕ ಮೈಸೂರು ಡಿಸ್ಟ್ರಿಕ್ಟ್‌ಬೋರ್ಡುಮೆಂಬರಾಗಿ ಚುನಾಯಿಸಲ್ಪಟ್ಟಿದ್ದ ಪ್ಲೀಡರ್ ಮ|| ಬಿ. ನರಸಿಂಗರಾಯರು ತಾಲ್ಲೂಕುಬೋರ್ಡಿನ ಮೂರುಮೀಟಿಂಗುಗಳಿಗೆ ಹೋಗಿದ್ದುದಕ್ಕಾಗಿ, ತಾ|| ಬೋರ್ಡುಮೆಂಬರುತನವನ್ನೂ, ತನ್ಮೂಲಕ ಡಿ|| ಬೋರ್ಡುಮೆಂಬರುತನವನ್ನೂ ಕಳೆದುಕೊಂಡರೆಂದು ಕೇಳುತ್ತೇವೆ.

ಕಳೆದ ತಾ|| 10ಕ್ಕೆ ಕೊನೆಯಾದ ವಾರದಲ್ಲಿ ಬೆಂಗಳೂರಿನಲ್ಲಿ 1·84, ಆನಕಲ್ಲಿನಲ್ಲಿ 1·75, ಸಾಸಲಿನಲ್ಲಿ 2·40, ಡಾಬ್ಸ್‌ಪೇಟೆಯಲ್ಲಿ 2·20, ಕೋಲಾರದಲ್ಲಿ 2·43, ಮಾಲೂರಿನಲ್ಲಿ 1·64, ತುಮಕೂರಿನಲ್ಲಿ 2·29, ಸಿರಾದಲ್ಲಿ 1·80, ಕೊರಟಗೆರೆಯಲ್ಲಿ 2·14, ಬಳ್ಳಾವೆಯಲ್ಲಿ 2·55, ತಿರುಮಲೆಯಲ್ಲಿ 3·10, ಗುಂಡ್ಲುಪೇಟೆಯಲ್ಲಿ 3·10, ಗುಂಡ್ಲುಪೇಟೆಯಲ್ಲಿ 1·82, ಚಳ್ಳಕೆರೆಯಲ್ಲಿ 1·90 ಇಂಚು ಮಳೆಯಾಗಿರುವುದಾಗಿ ವರದಿಯಾಗಿದೆ.

ವಿದ್ಯಾಭ್ಯಾಸದ ಇ|| ಜನರಲ್‌ರವರಾದ ಮಿ|| ಕೆ. ಮೆಥ್ಥಾನ್‌ರವರು ಈ ತಾ|| 19 ರಿಂದ 1½ ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವ ಪ್ರಯುಕ್ತ ಪ್ರೈಮರಿ ಸ್ಕೂಲುಗಳ ಇನ್‌ಸ್ಪೆಕ್ಟರಾದ ಡಾಕ್ಟರ್ ಎಸ್. ಪಾಲಚಿನ್ನಪ್ಪನವರು ಇ|| ಜನರಲ್‌ರವರ ಆಫೀಸಿನ ಛಾರ್ಜಿನಲ್ಲೂ ಮ|| ಶ್ರೀನರಸಿಂಹಯ್ಯ, ಎಂ.ಎ., ಎಲ್.ಟಿ. ರವರು ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್ ಛಾರ್ಜಿನಲ್ಲೂ, ಸೈನ್ಸ್ ಇನ್‌ಸ್ಪೆಕ್ಟರಾದ ಮಿ|| ಕೆ. ಎನ್. ಕಿಣಿ, ಎಂ.ಎ., ರವರು ಸೆಕೆಂಡರಿ ಮತ್ತು ನಾರ್ಮಲ್ ಸ್ಕೂಲುಗಳ ಛಾರ್ಜಿನಲ್ಲೂ ಇರತಕ್ಕುದಾಗಿ ಅಪ್ಪಣೆಯಾಗಿದೆ.

ಮಹಮ್ಮದೀಯರು ರಂಜಾನ್ ಈ ಕುದ್ದಾಸಂಬಂಧವಾಗಿ ಕಳೆದ 1 ತಿಂಗಳಿಂದಲೂ ಏಕಭುಕ್ತವ್ರತವನ್ನು ಆಚರಿಸಿ ಕಳೆದ ತಾ|| 13 ರಲ್ಲಿ ಚಂದ್ರನದರ್ಶನಮಾಡಿ ಮಾರನೆಯದಿನ ವ್ರತವನ್ನು ವಿಸರ್ಜನೆಮಾಡಿ ಮೃಷ್ಟಾನ್ನಭೋಜನದಿಂದಲೂ ನೂತನವಸ್ತ್ರಧಾರಣೆಯಿಂದಲೂ ಸಂತುಷ್ಟರಾಗಿ ಈದಿಗಾಹ್ಗೆ ಹೋಗಿ ದೇವರಪ್ರಾರ್ಥನೆಯನ್ನು ತೀರಿಸಿಕೊಂಡು ಬಂದು ವಿನೋದದಿಂದ ಕಾಲಕಳೆದರು. ಈ ಜನರ ಸಂತೋಷಾರ್ಥವಾಗಿ ರಾಜಧಾನಿಯ ನಿಷತ್‌ಬಾಗಿನಲ್ಲಿ ಅರಮನೆಯ ಕಾನ್ಸರ್ಟ್ ಎಂಬ ವಾದ್ಯವೂ, ಮಾರ್ಕಟ್ಟಿನಬಳಿ ದೇಶೀಯಬ್ಯಾಂಡೂ ನಡೆಯಲೇರ್ಪಾಟಾಗಿದ್ದಿತು.

ರಾಜಧಾನಿಯ ನರಸಿಂಹರಾಜಬೂಲಿವಾರ್ಡಿನಲ್ಲಿ ಬಾದಿಗಾರ್ಡ್ಸ್ ಲೈನಿನ ಮುಂಗಡೆ ವಿದ್ಯುದ್ದೀಪಸ್ತಂಭದ ಹತ್ತಿರ ಅಂಚೆಯಕಾಗದವನ್ನು ಕೊಡುವ ಮನುಷ್ಯನ ಆಕೃತಿಯಲ್ಲಿ ಒಂದು ಪ್ರತಿಮೆಯು ಸೀಮೆಂಟ್‌ಗಾರೆಯಲ್ಲಿ ಮಾಡಲ್ಪಟ್ಟು ನಿಲ್ಲಿಸಲ್ಪಟ್ಟಿದೆ. ಕಣ್ಣು ಮೂಗು ಮೊದಲಾಗಿ ಅದರ ಅವಯವುಗಳು ತಿದ್ದಲ್ಪಟ್ಟಿರುವ ರೀತಿಯಿಂದಲೂ, ಕಂಕುಳಲ್ಲಿ ಕಾಗದದಪಟ್ಟಿಗೆಯೂ, ತೋಳಿನಲ್ಲಿ ಛತ್ರಿಯೂ ನೇತುಹಾಕಲ್ಪಟ್ಟಿರುದರಿಂವುದಲೂ ನಿಜವಾದ ಮನುಷ್ಯನೇ ನಿಂತಿರುವಂತೆ ಭ್ರಮೆಯಾಗುತ್ತದಲ್ಲದೆ ಅದನ್ನು ಮಾಡಿದ ಕಾರೇಗಾರನ ಕೌಶಲ್ಯವು ಪ್ರದರ್ಶನವಾಗುತ್ತದೆ.

ಬೆಂಗಳೂರಿನ ಹೆಸರುಘಟ್ಟದ ಕೆರೆಯಲ್ಲಿ ನೀರು ಸುತರಾಂ ಇಲ್ಲದೆ ಯಲೆಮಲ್ಲಪ್ಪಶೆಟ್ಟರ ಕೆರೆಯಿಂದ ಬಹುಸ್ವಲ್ಪವಾಗಿ ಒದಗಿಸಲ್ಪಡುತ್ತಿರುವಪ್ರಯುಕ್ತ ಬೆಂಗಳೂರಿನಲ್ಲಿ ಈ ತಾ|| 15 ರ ಆರಭ್ಯ ಬೆಳಗಿನ 6 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ನಲ್ಲಿಗಳಲ್ಲಿ ನೀರುಬಿಡಲ್ಪಡುತ್ತಿರುವುದು. ಜನರು ನಲ್ಲಿಯನೀರನ್ನು ಬಹಳ ಮಿತವಾಗಿ ಉಪಯೋಗಿಸಬೇಕೆಂದೂ, ಸಾಧ್ಯವಾದ ಮಟ್ಟಿಗೆ ಬಾವಿಯನೀರನ್ನು ಪಯೋಗಿಸಿ ತಮ್ಮ ಕೊರತೆಯನ್ನು ಕಡಿಮೆಮಾಡಿಕೊಳ್ಳಬೇಕೆಂದೂ ಬೆಂಗಳೂರಿನ ಮ್ಯುನಿಸಿಪಾಲಟಿಯವರು ಪ್ರಕಟಿಸಿರುತ್ತಾರೆ. ಯಲೆಮಲ್ಲಪ್ಪಶೆಟ್ಟರ ಕೆರೆಯಲ್ಲಿ ತಕ್ಕಮಟ್ಟಿಗಿರುವ ನೀರೂ ಮುಗಿದುಹೋಗಿ ಕೂಡಲೆ ಮಳೆಯು ಬಾರದಿದ್ದಲ್ಲಿ ಬೆಂಗಳೂರುನಿವಾಸಿಗಳು ಜೀವನ (ನೀರು) ಇಲ್ಲದೆ ವಲಸೆಹೋಗಬೇಕಾಗುವುದೇನೋ !

ಚಾಮರಾಜನಗರದ ಶ್ರೀವರ್ತಕವರ್ಧಿನೀ ಬ್ಯಾಂಕಿನ ಏಜಂಟರಾಗಿದ್ದ ಕೈ|| ಸಾಹುಕಾರ್ ಗುರುನಂಜಪ್ಪನವರು 40-50 ಸಾವಿರರೂಪಾಯಿಗಳವರೆಗೆ ವೆಚ್ಚಮಾಡಿ ಬಹಳ ಭದ್ರವಾಗಿಯೂ, ವಿಶಾಲವಾಗಿಯೂ ಕಟ್ಟಿಸಿರುವ ಧರ್ಮಸತ್ರದ ಪ್ರವೇಶೋತ್ಸವವನ್ನು ಮೇ ತಾ|| 16 ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಲು ಈಗ ಬ್ಯಾಂಕ್ ಏಜಂಟರಾಗಿರುವ ಮ|| ಪುಟ್ಟವೀರಪ್ಪನವರು ದೊಡ್ಡ ಏರ್ಪಾಟನ್ನು ಮಾಡಿರುವರೆಂದೂ, ಪರಸ್ಥಳದಿಂದ ಬರುವ ವೀರಶೈವರಿಗೆ ಸತ್ರದಲ್ಲಿ ಭೋಜನಕ್ಕೇರ್ಪಡಿಸುವುದಲ್ಲದೆ ಸತ್ರದಲ್ಲೇ ವೀರಶೈವವಿದ್ಯಾರ್ಥಿಗಳಿಗಾಗಿ ಒಂದು ಸಂಸ್ಕೃತಪಾಠಶಾಲೆಯನ್ನಿಡಿಸಿ ಬಡವಿದ್ಯಾರ್ಥಿಗಳ ಊಟಕ್ಕೇರ್ಪಡಿಸುವರೆಂದೂ ಕೇಳಿ ಸಂತೋಷಿಸುತ್ತೇವೆ, ಮತ್ತು ಈ ಧರ್ಮಕಾರ್ಯಗಳು ನಿರ್ವಿಘ್ನವಾಗಿ ನಡೆದು ಮುಂದಾಳಾಗಿ ನಿಂತಿರುವ ಮ|| ಪುಟ್ಟವೀರಪ್ಪನವರಿಗೆ ಯಶಸ್ಸುಬರಲೆಂದು ಹಾರೈಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಈ ತಾ|| ೬ರಲ್ಲಿ ಅಮೃತಸರದಿಂದ ಲಾಹೋರ್‌ಪಟ್ಟಣಕ್ಕೆ ಸಾಗಿಸಲ್ಪಡುತ್ತಿದ್ದ 118 ಹಣದ ಪೆಟ್ಟಿಗೆಗಳಲ್ಲಿ ಒಂದನ್ನು ಯಾರೋ ಮಧ್ಯದಾರಿಯಲ್ಲಿ ಒಡೆದು ಒಳಗಿದ್ದ 60,000 ರೂ. ನ ನೋಟುಗಳನ್ನು ತೆಗೆದುಕೊಂಡು ಪೆಟ್ಟಿಗೆಯನ್ನು ಯಥಾಪ್ರಕಾರ ಬೀಗಮುದ್ರೆಯಿಂದ ಭದ್ರಪಡಿಸಿದ್ದರಂತೆ.

ಕಳೆದ ತಾ|| 6ರ ರಾತ್ರಿ ವೆಲ್ಲೂರಿನಿಂದ 10 ಮೈಲಿದೂರದಲ್ಲಿರುವ ಮೇಲ್ವಿಶ್ರಮ ಎಂಬ ಗ್ರಾಮದಲ್ಲಿ ದೊಡ್ಡಮಳೆಯು ಸುರಿಯುತ್ತಿರುವಾಗ್ಗೆ ಅದರ ರಭಸವನ್ನು ತಡೆಯಲಾರದೆ 11 ಜನ ಮಹಮ್ಮದೀಯರು ಮಸೀದಿಯೊಳಗೆನಿಂತಿದ್ದರು. ಆ ಮಸೀದಿಯ ಶಿಖರಕ್ಕೆ ಸಿಡಿಲುಬಡಿದು ಕೆಳಗಡೆ ನಿಂತಿದ್ದ ಮಹಮ್ಮದೀಯರಿಗೆ ತಗುಲಿದುದರಿಂದ ಅವರಲ್ಲಿ 8 ಜನರು ಕೂಡಲೆ ಮೃತರಾದರು ; ಉಳಿದವರು ವಿಶೇಷ ಅಪಾಯವನ್ನು ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವರು. ಸತ್ತುಹೋದ ಜನರ ಜೇಬಿನಲ್ಲಿದ್ದ ರೂಪಾಯಿಗಳು ಕರಗಿ ಗಟ್ಟಿಯಾಗಿದ್ದವಲ್ಲದೆ ಮಸೀದಿಯಲ್ಲಿ ತೂಗುಹಾಕಲ್ಪಟ್ಟಿದ್ದ ದೀಪಗಳು ಕರಗಿಹೋಗಿದ್ದುವು.

ಹಿಂದೂ ಕುಟುಂಬಗಳಲ್ಲಿ ಅನೇಕವೇಳೆ ಸ್ತ್ರೀಯರು ಎಷ್ಟು ಚಿತ್ರಹಿಂಸೆಗೆ ಗುರಿಯಾಗುತ್ತಿರುವರೆಂಬುದಕ್ಕೆ ಆನಂದಬಾಯಿ ಎಂಬುವವಳು ಉದಾಹರಣೆಯಾಗಿದ್ದಾಳೆ. ಗೋಪಾಲ್ ಭಂಡ್ ಎಂಬ ಈಕೆಯ ಗಂಡನು ಇವಳನ್ನು ಒಂದಾವರ್ತಿ ರಕ್ತಕಾರುವಂತೆ ಹೊಡೆದಿದ್ದನು. ಮತ್ತೊಂದುವೇಳೆ ಇವಳು ಗಂಡನ ಹಿಂಸೆಯನ್ನು ತಡೆಯಲಾರದೆ ಮನೆಯನ್ನು ಬಿಟ್ಟಿದ್ದಳು. ಈಚೆಗೆ ಒಂದುದಿನ ರಾತ್ರಿ ಸ್ನಾನಕ್ಕೆ ಬಿಸಿನೀರನ್ನು ಕಾಯಿಸಲಿಲ್ಲವೆಂಬ ನೆಪದಮೇಲೆ ಗೋಪಾಲ್‌ಭಂಡನು ಕಾದ ಕಬ್ಬಿಣದಿಂದ ಆಕೆಯ ಮುಖದಮೇಲೂ ಕೈಕಾಲುಗಳಮೇಲೂ ಬರೆ ಎಳೆದಿರುವನು. ಈ ತಪ್ಪಿತಕ್ಕಾಗಿ ಬೊಂಬಾಯಿನ ಮೂರನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ಅವನಿಗೆ ಎರಡು ತಿಂಗಳ ಕಠಿಣಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಉತ್ತರಆರ್ಕಾಟ್ ಡಿಸ್ಟ್ರಿಕ್ಟಿಗೆ ಸೇರಿದ ಒಂದು ತಾಲ್ಲೂಕಿನ ಕ್ರೈಸ್ತ ತಹಸೀಲದಾರನು ಒಂದುಗ್ರಾಮದಲ್ಲಿ ಹಿಂದೂದೇವಾಲಯದ ಇದಿರಿಗಿರುವ ಪಾಳುಭೂಮಿಯನ್ನು ಆ ಗ್ರಾಮದ ನಿಮ್ನಜಾತಿಯ ಜನರಿಗೆ ಕೊಡಿಸಿಕೊಡಲು ಪ್ರಯತ್ನಪಟ್ಟು, ಅದು ದೇವಸ್ಥಾನಕ್ಕೆ ಸೇರಿದುದಾದುದರಿಂದ ಕೊಡತಕ್ಕುದಲ್ಲವೆಂದು ಗ್ರಾಮಸ್ಥರು ಮುಷ್ಕರಹಿಡಿದುದರಮೇಲೆ, ಆ ಕ್ರೈಸ್ತ ತಹಸೀಲದಾರನು ಕೋಪಿಸಿಕೊಂಡು ದೇವಾಲಯದ ಮುಂಗಡೆನಿಂತು ದೇವರನ್ನು ಸಂಬೋಧಿಸಿ ಅಪ್ಪಣೆಯನ್ನು

ಕೇಳಲು ಉತ್ತರ ದೊರೆಯಲಿಲ್ಲವಾಗಿ, ದೇವರನ್ನು ಹೊರಕ್ಕೆ ತರಿಸಿ ಪಾದರಕ್ಷೆಯಿಂದ ಹೊಡೆಯಿಸಿ ಕೈಕಾಲುಗಳನ್ನು ಮುರಿಸಿದುದಕ್ಕಾಗಿ ಅವನಮೇಲೆ ಫಿರ್ಯಾದು ನಡೆದಿರುವುದಾಗಿ ಪ್ರಕಟವಾಗಿದೆ.

ರಾಜಕೀಯ ಸಭೆಗಳಿಗೆ ಮೆಂಬರಾಗಲು ಅಭ್ಯರ್ಥಿಗಳಾಗಿ ನಿಲ್ಲುವವರು ತಂತಮ್ಮ ಪ್ರತಾಪಗಳನ್ನು ಹಸ್ತಪತ್ರಿಕೆಗಳ ಮೂಲಕ ಪ್ರಕಟಿಸುವುದು ವಾಡಿಕೆಯಲ್ಲಿರುವುದಷ್ಟೆ? ಆದರೆ ಸಿಕಿಂದಿರಾಬಾದಿನಲ್ಲಿ ರಾವ್‌ಬಹದ್ದೂರ್ ಸಿ. ವಿ. ಪದ್ಮರಾವ್ ಎಂಬ ಅಭ್ಯರ್ಥಿಯನ್ನು ಚುನಾವಣೆಮಾಡಿಸಬೇಕೆಂಬ ಇರಾದೆಯಿಂದ ಯಾರೋ ಒಬ್ಬರು ಆಶ್ಚರ್ಯಕರವಾದ ತೆಲುಗು ಹಸ್ತಪತ್ರಿಕೆಗಳನ್ನು ಹಂಚಿರುತ್ತಾರೆ. ಸ್ಥಳೀಯ ದೇವತೆಯು ಸ್ವಪ್ನದಲ್ಲಿಕಾಣಿಸಿಕೊಂಡು ಮ|| ರಾವ್‌ಯವರು ಚುನಾವಣೆಯಾಗುವುದು ತನ್ನ ಅಭಿಮತವೆಂದೂ, ಎಷ್ಟು ಖರ್ಚಾದರೂ ಎದೆಗುಂದದೆ ಈ ವಿಚಾರವನ್ನು ಒಳ್ಳೆಯ ಕಾಗದದಲ್ಲಿ ಅಚ್ಚುಹಾಕಿಸಿ ಹಂಚಬೇಕೆಂದೂ ಹೇಳಿರುವುದಾಗಿಯು, ಮತ್ತು ಮ|| ರಾವ್‌ಯವರಿಗೂ ತನಗೂ ಪರಿಚಯವಿಲ್ಲವಾಗಿಯು ಅದನ್ನು ಹಂಚಿರುವವರು ತಿಳಿಸಿರುತ್ತಾರೆ.

'ಮಹಾರಾಟಾ' ಪತ್ರಿಕೆಯು ಲಾಲಾಲಜಪತರಾಯರ ಮೇಲೆ ಮಾಡುವ ಟೀಕೆಯನ್ನು ಕುರಿತು ಲಾಲಾಜಿಯವರು ಈ ರೀತಿ ಪ್ರಕಟಿಸಿರುತ್ತಾರೆ.—'ಕಾನಪುರದಲ್ಲಿ ಕಾಂಗ್ರೆಸ್ಸು ನೆರೆದಾರಭ್ಯ 'ಮಹಾರಾಟಾ' ಪತ್ರಿಕೆಯು ತನ್ನ ಪ್ರತಿಯೊಂದು ಸಂಚಿಕೆಯಲ್ಲಿಯೂ ನನ್ನನ್ನು ವಕ್ರದೃಷ್ಟಿಯಿಂದ ಕಾಣುತ್ತಿದ್ದರೂ, ನಾನು ಈವರೆಗೆ ಯಾವ ಉತ್ತರವನ್ನೂ ಕೊಡಲಿಲ್ಲ; ಮುಂದೆ ಕೊಡುವಂತೆಯೂ ಇಲ್ಲ. ಮಹಾರಾಷ್ಟ್ರರೂ, ನಾನೂ ಸ್ನೇಹಿತರಾಗಿರುವೆವಲ್ಲದೆ, ಜಯಕರ ಮತ್ತು ಕೇಳ್ಕರರವರು ಬೇರೆ ಮಾರ್ಗವನ್ನು ಕೈಕೊಂಡರೆಂದು ನನಗೇನೂ ಅವರಲ್ಲಿ ದ್ವೇಷವಿಲ್ಲ. ಈಗಿನ ಮತಭೇದಗಳು ಕ್ಷಣಿಕಗಳಾದುದರಿಂದ ನಾವೆಲ್ಲರೂ ಒಟ್ಟುಗೂಡಿ ದೇಶಸೇವೆಗಾಗಿ ಬದ್ಧಕಂಕಣರಾಗಬೇಕಲ್ಲದೆ, ಮಿತ್ರರನ್ನು ದ್ವೇಷಿಸಿ ಅವರ ಮನನೋಯಿಸುವುದು ನನಗೆ ಸರಿತೋರುವುದಿಲ್ಲ. ಇದಿಷ್ಟೇ ಆ ಪತ್ರಿಕೆಯ ಲೇಖಗಳಿಗೆ ಉತ್ತರ.'

ಕಲ್ಕತ್ತದಲ್ಲಿ ಕಳೆದ ತಾ|| ೨ ರಲ್ಲಿ ಹಿಂದೂ ಮುಸಲ್ಮಾನರೊಳಗೆ ವೈಮನಸ್ಸು ಹುಟ್ಟಿ ಜಗಳಗಳಿಗಾರಂಭವಾಗಿ ಈ ತನಕ ಏನೂ ಶಾಂತಿಯೇ ಕಾಣಬರುವುದಿಲ್ಲ. ತಾ|| 2 ನೇ ದಿವಸ ಮಸೀದಿಯೊಂದರಲ್ಲಿ ಪ್ರಾರ್ಥನೆ ನಡೆಯುತ್ತಿದ್ದಾಗ, ಆರ್ಯಸಮಾಜದ ಮೆರವಣಿಗೆಯು ಭಜನೆಯೊಡನೆ ಆ ಮಾರ್ಗದಲ್ಲಿ ಹೋಗುತ್ತಿರಲು ಮುಸಲ್ಮಾನರು ಭಜನೆ ನಿಲ್ಲಿಸಬೇಕೆಂದು ಹೇಳಿದರು. ಇದನ್ನು ಮೆರವಣಿಗೆಯವರು ಅಲಕ್ಷಿಸಿದರು. ಕೂಡಲೇ ವಾಕ್ಕಲಹಕ್ಕೆ ಮೊದಲುಗೊಂಡು ಮುಷ್ಟಿಯುದ್ಧಕ್ಕಾರಂಭವಾಗಿ ದೊಣ್ಣೆ, ಸೋಡಾಬಾಟಲು, ಕಲ್ಲು ಮೊದಲಾದುವು ಇಚ್ಛಾನುಸಾರವಾಗಿ ಉಪಯೋಗಿಸಲ್ಪಟ್ಟು, 100 ಜನರು ಗಾಯಹೊಂದಿ ಒಬ್ಬನು ಮೃತಪಟ್ಟನು; ಪೋಲಿಸ್ ಡಿ|| ಕಮಿಷನರಿಗೂ ಗಾಯಗಳಾಗಿರುವುವು. ಅನೇಕ ಮುಖಂಡರ ಸ್ವಾರ್ಥತ್ಯಾಗದಿಂದ ರಾತ್ರಿ ಶಾಂತಿಮಯವಾಗಿತ್ತು. ತಾ|| 3 ರಲ್ಲಿ ಮಸೀದಿಯೊಂದಕ್ಕೆ ಹಿಂದುಗಳು ಬೆಂಕಿಹೊತ್ತಿಸಿದರೆಂದು ಪುನಃ ಹೊಡೆದಾಟಕ್ಕೆ ಪ್ರಾರಂಭವಾಗಿ ಕಟ್ಟಡಗಳಿಗೆ ಬೆಂಕಿ ಹೊತ್ತಿಸುವುದೇ ಮೊದಲಾದ ಹಲವುಬಗೆಯ ಲೂಟಿಗಳನ್ನುಮಾಡಿ, ಶಿವಾಲಯವೊಂದನ್ನು ಅಪವಿತ್ರಗೊಳಿಸಿ ಸುಟ್ಟುಹಾಕಬೇಕೆಂದಿದ್ದರು. ಇದು ಸಫಲವಾಗಲಿಲ್ಲ. 4 ನೇ ತಾರೀಕಿನ ದಿವಸದ ಜಗಳಕ್ಕೆ ಹಿಂದುಗಳೇ ಮೊದಲುಮಾಡಿದರೆಂದು ತಿಳಿದುಬರುತ್ತದೆ. ಅನೇಕ ಹಿಂದೂ ತಪ್ಪಿತಸ್ಥರು ಕೈದಿಯಾಗಿರುವರು. ಮ್ಯಾಜಿಸ್ಟ್ರೇಟರು ಒಂದುಕಡೆಯಲ್ಲಿ ಐದಕ್ಕಿಂತ ಹೆಚ್ಚುಜನರು ಸೇರಬಾರದೆಂದು ಆಜ್ಞೆಯನ್ನಿತ್ತಿರುವರು. ಒಬ್ಬ ಹಿಂದುವಿನ ಮನೆಯಲ್ಲಿ ಆಶ್ರಿತರಾಗಿದ್ದ 80 ಮನೆತನದವರನ್ನು ಪೋಲೀಸರು ಅವರವರ ಮನೆಗಳಿಗೆ ಸಾಗಿಸುತ್ತಿರುವಾಗ್ಯೆ ಕೆಲವರು ಅವರಮೇಲೆ ರೇಗಿದ್ದರು. ಇದರಿಂದ ಕೆಲವು ಸ್ತ್ರೀಯರಿಗೂ ಪೆಟ್ಟಾಗಿರುವುದು. ತಾ|| 3ನೇ ದಿವಸ ಅಲ್ಲಲ್ಲಿ ರಸ್ತೆಗಳಲ್ಲಿ ಸ್ವಯಂಸೇವಕರು ಕಾವಲಿದ್ದುದರಿಂದ ಪಟ್ಟಣವು ಶಾಂತಿಮಯವಾಗಿತ್ತು, ಆದರೆ ಡೆಪ್ಯುಟಿಕಮಿಷನರ ಅನುಜ್ಞೆಮೇರೆಗೆ ಸ್ವಯಂಸೇವಕರು ತಮ್ಮ ಕೆಲಸವನ್ನು ನಿಲ್ಲಿಸಿದುದರಿಂದ ಹೆಚ್ಚಿನ ತೊಂದರೆಯಾಗಿದೆಯೆಂದೂ, ಇನ್ನು ಮುಂದಾದರೂ ಸ್ವಯಂಸೇವಕರನ್ನು ನೇಮಿಸಬೇಕೆಂದೂ ಸೇನಗುಪ್ತರು ಡೆಪ್ಯುಟಿಕಮಿಷನರಿಗೆ ಪತ್ರವನ್ನು ಬರೆದಿರುವರು. 5 ನೇ ತಾರೀಕಿನದಿವಸ ಕಲ್ಕತ್ತೆಯಲ್ಲಿ ಶಾಂತಿಯುಂಟಾಗಿದ್ದಿತು. ಕೆಲವು ಅಂಗಡಿಗಳು ತೆರೆಯಲ್ಪಟ್ಟಿದ್ದುವು. ಆ ದಿವಸ ಮಧ್ಯಾಹ್ನದಮೇಲೆ ಮಾತ್ರ ಅನೇಕ ಹಿಂದೂ ಮುಸಲ್ಮಾನರ ಮನೆಗಳಲ್ಲಿ ಗಲಾಟೆಯುಂಟಾಗಿದ್ದಿತು. ಕೆಲವು ಮಹಮ್ಮದೀಯರು ಪೋಲೀಸು ಠಾಣವೊಂದನ್ನು ನೆಲಸಮಮಾಡುವುದರಲ್ಲಿದ್ದರು, ಆದರೆ ಅದು ಸಫಲವಾಗಲಿಲ್ಲ. ತಾ|| 5 ರ ತನಕ ಒಟ್ಟು 300 ಜನರು ಕೈದುಮಾಡಲ್ಪಟ್ಟರು. ಹೇಗೂ ಒಂದುದಿವಸ ಸ್ವಲ್ಪಹೊತ್ತು ಪಟ್ಟಣವು ಸ್ವಸ್ಥತೆಯಲ್ಲಿದ್ದರೂ ಕೂಡಲೇ ಗಲಾಟೆಯುಂಟಾಗಿ ಪ್ರತಿದಿವಸವೂ ಗಾಯಪಟ್ಟವರು ಆಸ್ಪತ್ರೆಯನ್ನು ಸೇರುತ್ತಲೇ ಇರುವರು. ಸೇನಗುಪ್ತರು ಸಾರ್ವಜನಿಕಸಭೆಕೂಡಿಸಿಯೂ, ಒಬ್ಬ ಮಾರವಾಡಿವ್ಯಾಪಾರಿಯು ವೈಸರಾಯರ ಪ್ರೈವೇಟ್ ಸೆಕ್ರೆಟರಿಗಳಿಗೆ ತಂತಿಬಿಟ್ಟೂ, ಇನ್ನೂ ಹಲವು ಪ್ರಮುಖರು ಬೇರೆಬೇರೆ ಉಪಾಯಗಳಿಂದಲೂ ಶಾಂತಿಸ್ಥಾಪನೆಯ ಸಂಬಂಧವಾಗಿ ಪ್ರಯತ್ನಿಸುತ್ತಲಿರುವರು. ಹೀಗಿದ್ದರೂ ತಾ|| ೮ ರಲ್ಲಿ ಕಲ್ಕತ್ತದಿಂದ ೫೦ ಮೈಲಿ ದೂರದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಶ್ರೀಮಂತನಮನೆಗೆ 35 ಮಂದಿ ಡಕಾಯಿತರು ಆಯುಧಪಾಣಿಗಳಾಗಿ ನುಗ್ಗಿ, ಗುಂಡುಹಾರಿಸಿ 3000 ರೂಪಾಯಿಗಳನ್ನು ದೋಚಿಕೊಂಡುಹೋದರು.

ವಿದೇಶದ ವೃತ್ತಾಂತಗಳು

ಪೋಲೀಸಿನವರು ಮೈಮೇಲೆ ಕೈಯಿಟ್ಟ ಕೂಡಲೆ ತಪ್ಪಿತಸ್ಥನು ಮೈಮರೆಯುವಂತೆ ಮಾಡುವ ಒಂದು ಅಪೂರ್ವ ಯಂತ್ರಸಾಧನವನ್ನು ಜರ್ಮನಿದೇಶದ ವೈದ್ಯುತಶಾಸ್ತ್ರಜ್ಞನೊಬ್ಬನು ಕಂಡುಹಿಡಿದಿರುವನು.

ಅಮೇರಿಕೆಯ ಕೆಲವು ಸ್ನೇಹಿತರು ಮಹಾತ್ಮಾಗಾಂಧಿಯವರಿಗೆ 453 ರೂಪಾಯಿಗಳನ್ನು ಕಳುಹಿಸಿರುವರು. ಇದನ್ನು ಹಿಂದೂಮುಸಲ್ಮಾನರ ಐಕ್ಯದ ಮತ್ತು ಅಸ್ಪೃಶ್ಯತಾನಿವಾರಣೆಯ ಕಾರ್ಯಗಳಿಗೆ ಉಪಯೋಗಿಸಬೇಕಾಗಿ ಅವರು ತಿಳಿಸಿರುವರು.

ಡಾಕ್ಟರ್ ಸಾಪೊರ್ಮಿರ್ ಕೆರ್ ಎಂಬುವವರು ಬಿಳಿಯಾನೆಯೊಂದನ್ನು ಹಿಡಿದು ತಂದಿರುವರೆಂದೂ, ಬೌದ್ಧಮತಾನುಯಾಯಿಗಳು ಇದನ್ನು ವಿಶೇಷ ಭಕ್ತಿಯಿಂದ ಕಾಣುತ್ತಿರುವರೆಂದೂ ಡಾಕ್ಟರ್ ಕೆರ್‌ರವರು ಈ ಆನೆಯನ್ನು ಲಂಡನ್ ಪಟ್ಟಣದ ಪ್ರಾಣಿಪ್ರದರ್ಶನಾಲಯಕ್ಕೆ ಬಹುಮಾನವಾಗಿ ಕೊಡಬೇಕೆಂದಿರುವರೆಂದೂ, ಸಾಧ್ಯವಾದರೆ ಪ್ರದರ್ಶನಕ್ಕಾಗಿ ಒಂದುಸಾರಿ ಪ್ರಪಂಚದ ಮೇಲೆಲ್ಲಾ ತೆಗೆದುಕೊಂಡು ಹೋಗಬೇಕೆಂದೂ ಇಚ್ಛೆಯುಳ್ಳವರಾಗಿರುವರಂತೆ.

ಉಕ್ಕಿನ ಹೊರಕವಚವುಳ್ಳದಾಗಿ ಶತ್ರುಗಳ ಗುಂಡಿನ ಪೆಟ್ಟಿನ ಭಯವಿಲ್ಲದೆ ಹಳ್ಳಕೊಳ್ಳಗಳನ್ನು ಲಕ್ಷಿಸದೆ ನುಗ್ಗಿಹೋಗಬಲ್ಲ ಟ್ಯಾಂಕ್ ಎಂಬ ಯುದ್ಧದ ಮೋಟಾರುಗಳ ಪೈಕಿ ಒಂದು ಹೊಸಮಾದರಿ ಯಂತ್ರವು ನೂತನವಾಗಿ ಕಂಡುಹಿಡಿಯಲ್ಪಟ್ಟಿರುವುದು. ಇದು ಒಬ್ಬ ಸಿಪಾಯಿಯಿಂದ ನಡೆಸಲ್ಪಡುವುದಲ್ಲದೆ, ಆತನೇ ಅದರಲ್ಲಿರುವ ಮೆಷಿನ್ ಗನ್‌ಗಳೆಂಬ ಸಣ್ಣ ಫಿರಂಗಿಗಳನ್ನೂ ಉಪಯೋಗಿಸಲು ಸಿದ್ಧವಾಗಿದೆಯಂತೆ. ಈ ಟ್ಯಾಂಕನ್ನು ಉಕ್ಕೆ ಹೊಡೆದ ಹೊಲದಲ್ಲಿ ಬಿಟ್ಟರೂ ಗಂಟೆಗೆ ೩೦ ಮೈಲಿಗಳ ವೇಗದಿಂದ ನುಗ್ಗಿ ಹೋಗುವುದೆಂದು ಪರೀಕ್ಷಿಸಲ್ಪಟ್ಟಿದೆ. ಇದನ್ನು ವ್ಯವಸಾಯಕ್ಕೆ ಉಪಯೋಗಿಸುವುದರಿಂದ ಉಳುಮೆಯ ಕೆಲಸವು ಬಹು ಬೇಗ ನಡೆಯುವುದೆಂದು ನಂಬಲಾಗಿದೆ.

ಕಾಕಸಸ್ ಪರ್ವತಗಳಲ್ಲಿ ವಾಸಿಸುವ ಮಹಮ್ಮದೀಯರಿಗೆ ಮದುವೆಗಾಗಿ ಹೆಚ್ಚು ಧನವ್ಯಯವಾಗುವುದರಿಂದ ಅನೇಕರು ಪರಸ್ತ್ರೀ ಅಪಹರಣದಲ್ಲಿಯೇ ನಿರತರಾಗಿರುವರು. ಈ ದುಷ್ಟಪದ್ಧತಿಯನ್ನು ಹೋಗಲಾಡಿಸಲು, ಸಾರ್ವಜನಿಕ ಸಭೆಯೊಂದು ಕೂಡಿ, ವಧೂವರರ ಸಮ್ಮತಿಯ ಮೇರೆಗೆ ಮದುವೆಯಾಗಬೇಕೆಂದೂ, ಕನ್ಯೆಯನ್ನು ಮದುವೆಯಾಗುವುದಾದರೆ 75 ರೂ. ಗಳು, ಮತ್ತು ವಿಧವಾ ವಿವಾಹವಾದರೆ 37½ ರೂ. ಗಳು ಮಾತ್ರ ಖರ್ಚು ಆಗಬೇಕೆಂದೂ, ಬಂಧುಬಳಗದವರ ಮತ್ತು ಗ್ರಾಮಸ್ಥರ ತೃಪ್ತಿಗಾಗಿ ಅರ್ಧಪವನು ಮತ್ತು ಒಂದು ಕುರಿ ಕೊಡಲ್ಪಡಬೇಕೆಂದೂ ಪರಸ್ತ್ರೀ ಅಪಹರಣಮಾಡಿದವರು 450 ರೂ. ಗಳನ್ನು ದಂಡತೆರಬೇಕೆಂದೂ, ಆಮಂತ್ರಣವಿಲ್ಲದೆ ಬರುವವರು ಮದುವೆ ಖರ್ಚಿಗಾಗಿ 1½ ರೂಪಾಯಿಗಳನ್ನು ಕೊಡಬೇಕೆಂದೂ ನಿರ್ಧರಿಸಿರುವರು.

ಇರಾಕ್ ದೇಶದಲ್ಲಿ ಬಾಗ್ದಾದ್‌ನಗರದ ಉತ್ತರ ದಿಕ್ಕಿನಲ್ಲಿ ಅತಿವೃಷ್ಟಿ ಸುರಿದಿರುವುದರಿಂದ, ಟೈಗ್ರಿಸ್ ನದಿಯ ಒಂದು ದಡವು ಕಿತ್ತುಹೋಗಿ ಬಾಗ್ದಾದ್‌ನಗರವನ್ನು ಆವರಿಸಿಕೊಂಡಿರುವ ಮರಳ್ಗಾಡೆಲ್ಲವೂ ಜಲಮಯವಾಗಿರುತ್ತದೆ. ಆ ನಗರಕ್ಕೆ ನೀರು ನುಗ್ಗದಂತೆ ಎರಡು ಮೈಲಿಗಳ ಉದ್ದವಾದ ಏರಿಯನ್ನು ಹಾಕಿರುವರು. ಇದೂ ಸಹ ನಿಲ್ಲುವಂತೆ ತೋರುವುದಿಲ್ಲ. ಪ್ರವಾಹವು ಊರೊಳಕ್ಕೆ ನುಗ್ಗಿದರೆ, ಸಹಸ್ರಾರು ಮನೆಗಳು ನಾಶವಾಗಿ ಬಹು ಕಷ್ಟ ಸಂಭವಿಸುವುದೆಂಬ ಭೀತಿ ಇರುತ್ತದೆ. ಅಲ್ಲಿನ ಒಂದು ರೈಲ್ವೆ ಸ್ಟೇಷನ್ನಿನಲ್ಲಿ ಈಗ ಐದು ಅಡಿ ನೀರು ಹರಿಯುತ್ತಿರುವುದರಿಂದ ಲಕ್ಷಾಂತರ ರೂಪಾಯಿಗಳ ಸರಕುಗಳು ನೀರಿನ ಪಾಲಾಗಿರುವವು. ಟೈಗ್ರಿಸ್ ನದಿಯ ಏರಿಯು 200 ಗಜಗಳ ವರೆಗೆ ಒಡೆದುಹೋಗಿ, ಪ್ರತಿ ನಿಮಿಷದಲ್ಲಿಯೂ 35 ಸಾವಿರ ಘನ ಅಡಿಗಳ ನೀರು ಊರಿನ ಕಡೆಗೆ ನುಗ್ಗುತ್ತಿರುವುದು. ಪಟ್ಟಣದ ಅನೇಕ ಭಾಗಗಳು ಪ್ರವಾಹಕ್ಕಿಂತ ಸುಮಾರು 15 ಅಡಿ ತಗ್ಗಿನಲ್ಲಿರುವುದರಿಂದಲೂ, ಇನ್ನೂ ನದಿಯ ಜಲಾಶಯದಲ್ಲಿ ಮಳೆಯಾಗುತ್ತಿರುವುದರಿಂದಲೂ, ನಷ್ಟವೂ ಕಷ್ಟವೂ ಇಷ್ಟಕ್ಕೇ ಕೊನೆಗಾಣುವದಿಲ್ಲವೆಂದು ತೋರುತ್ತದೆ. ಅರಮನೆಯು ನೀರಿನಿಂದ ಸುತ್ತಲ್ಪಟ್ಟಿರುವಪ್ರಯುಕ್ತ ರಾಣಿವಾಸದವರು ಸುರಕ್ಷಿತಪ್ರದೇಶಕ್ಕೆ ಸಾಗಿಸಲ್ಪಟ್ಟರು. ವನಪ್ರದೇಶದಲ್ಲಿದ್ದ ದೊರೆಗೆ ಈ ಸಮಾಚಾರವು ತಿಳುಹಲ್ಪಟ್ಟಿತು.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.—ಸಂ.

ಹಾಸನ ಡಿ|| ಬೇಲೂರು ತಾ|| ಬಿಕ್ಕೋಡುಮಠದಲ್ಲಿ ನಡೆದ ಶಿವದೀಕ್ಷಾ ಮಹೋತ್ಸವದಲ್ಲಿ ಬಿಕ್ಕೋಡುಮಠದ ಶ್ರೀಶಿವಬಸವಸ್ವಾಮಿಗಳವರ ಮೂಲಕ ೨ ರೂ., ಸೊರಬ ತಾ|| ಜಡೆಮಠದಲ್ಲಿರುವ ಶ್ರೀಚೆನ್ನವೀರಯ್ಯನವರ ಮನೆಯ ಲಗ್ನದಲ್ಲಿ ವೇ|| ಗಂಗಾಧರಶಾಸ್ತ್ರಿಗಳವರ ಮೂಲಕ ೨ ರೂ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ನಂದಿಗುಡಿಯಲ್ಲಿ ಉತ್ಸವ.

ನಂದಿಗುಡಿಯ ಶ್ರೀಗಳವರ ಮತ್ತು ಬಸವೇಶ್ವರದೇವರ ರಥೋತ್ಸವವು ಪ್ಲೇಗು ಮತ್ತು ದನಗಳ ಗಲಾಟೆಯಿಂದ ಕ್ರೋಧನಸಂ|| ಫಾಲ್ಗುಣ ಶುದ್ಧ ದಶಮಿಯಲ್ಲಿ ನಡೆಯದೆ ಹೋಳೀ ಆಚೆ ಹೋರಿಪರ್ಷೆಮಾತ್ರ ಸೇರಿತು. ಆದರೆ ಮುಂದೆ ಈರೀತಿ ನಡೆಯದೆ ನಂದಿಗುಡಿಯಲ್ಲೇ ಜರುಗುತ್ತಾದಪ್ರಯುಕ್ತ ಹೋರಿಪರ್ಷೆಯವರು ಪದ್ಧತಿಪ್ರಕಾರ ಬರತಕ್ಕದ್ದು.

ಮಠದ ಏಜಂಟ್ ಬಸ್ವಾರಾಧ್ಯ.

ಕುಂಕನಾಡಿನಲ್ಲಿ ತರುಣರಸಂಘಸ್ಥಾಪನೆ.

ಕಡೂರ ತಾ|| ಕುಂಕನಾಡಿನ ಹಿಂದುಳಿದ ವರ್ಗಗಳ ತರುಣರು ಕಳೆದ ತಾ|| 5 ರಲ್ಲಿ ಯಲ್ಲಮ್ಮದೇವರ ಗುಡಿಯಲ್ಲಿ ಮ|| ಪಟೇಲ್ ಶಿವಲಿಂಗಗೌಡರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನುಸೇರಿಸಿ ತರುಣರಸಂಘಸ್ಥಾಪನೆಯ ವಿಚಾರವಾಗಿ ಅಧ್ಯಕ್ಷರು ಮತ್ತು ಚಿಕ್ಕೇಗೌಡ, ಶಿವಲಿಂಗಪ್ಪ, ಸಿದ್ಧಪ್ಪ ಮೊದಲಾದ ತರುಣರು ಭಾಷಣಮಾಡಿದಮೇಲೆ ತರುಣರಸಂಘವನ್ನು ಸ್ಥಾಪಿಸಿ, ಈ ಸಂಘದಿಂದ ಬಡವಿದ್ಯಾರ್ಥಿಗಳ ಅಶನವಸನಗಳಿಗೆ ಒಂದು ಫಂಡನ್ನು ಕೂಡಿಸಬೇಕೆಂದು ನಿರ್ಧರಿಸಿದರು. ತರುವಾಯ ನೆರೆದಿದ್ದ ವಿದ್ಯಾರ್ಥಿಗಳು, ಗ್ರಾಮಸ್ಥರು ಮೊದಲಾದ ಸಭಿಕರಿಗೆ ಫಲಹಾರ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ತರುಣರಸಂಘಾಭಿಮಾನಿ.

ಶೋಚನೀಯಮೃತ್ಯು.

ಬೀರೂರಿನ ಶ್ರೀಮಂತ ಪತ್ರೆರುದ್ರಪ್ಪಯ್ಯನವರ ತಮ್ಮ ಬಸವಲಿಂಗಪ್ಪಯ್ಯನವರ ಪತ್ನಿ ನೀಲಮ್ಮನವರು ಕೆಲದಿವಸಗಳ ಹಿಂದೆ ಶಿವಸಾಯುಜ್ಯವನ್ನು ಹೊಂದಿದರು. ಆಗ್ಗೆ ಅವರಿಗೆ 55 ವರ್ಷವಯಸ್ಸಾಗಿತ್ತು. ಈ ನೀಲಮ್ಮನವರು ಗುರುಲಿಂಗಜಂಗಮಭಕ್ತಿಯುತರಾಗಿದ್ದು ಸತ್ಕಥಾಶ್ರವಣದಿಂದ ಕಾಲಕಳೆಯುತ್ತಿದ್ದರಲ್ಲದೆ ಅತಿಥಿಅಭ್ಯಾಗತರ ಸತ್ಕಾರವನ್ನು ಬಹುಭಕ್ತಿಯಿಂದಲೂ ವಿಶ್ವಾಸದಿಂದಲೂ ಮಾಡುತ್ತಿದ್ದರು. ಧರ್ಮಕಾರ್ಯನಿರತರಾಗಿದ್ದ ಕೈ|| ನೀಲಮ್ಮನವರ ಉತ್ತರಕ್ರಿಯಾದಿಗಳನ್ನು ಪತ್ರೆ ಯ|| ತ್ಯಾ|| ರುದ್ರಪ್ಪಯ್ಯನವರ ದತ್ತುಪುತ್ರ ರುದ್ರಾರಾಧ್ಯರು ಮ|| ಉಬ್ರಾಣಿಮಠದ ಶಿವಲಿಂಗಪ್ಪಯ್ಯನವರ ಮೇಲ್ವಿಚಾರಣೆಯಿಂದ ವಿಧ್ಯುಕ್ತವಾಗಿಮಾಡಿ ಭಕ್ತಮಾಹೇಶ್ವರರನ್ನು ಉಚಿತಸಂತರ್ಪಣೆಯಿಂದಲೂ, ಗೋದಾನದಿಂದಲೂ, ಸುವರ್ಣರಜತಪಾತ್ರೆ ವಸ್ತ್ರ ಛತ್ರ ಮೊದಲಾದವುಗಳ ದಾನಗಳಿಂದಲೂ ತೃಪ್ತಿಗೊಳಿಸಿದರು. ಈ ಧರ್ಮಿಷ್ಠೆಯರ ಮರಣದಿಂದ ಬೀರೂರಿನಲ್ಲಿ ಅನೇಕರಿಗೆ ಅಪಾರವ್ಯಸನವಾಗಿದೆ.

ಓರ್ವ ದುಃಖಭಾಗಿ.

ಶ್ರೀರಂಗಪಟ್ಟಣದ ತಾ|| ಕ್ಯಾತನಹಳ್ಳಿಯಲ್ಲಿ ನಡೆದ ಒಂದು ಮಹಾಸಂತರ್ಪಣೆ.

ಮೊದಲು ಪ್ರಸಿದ್ಧಪಡಿಸಿದ್ದಂತೆ ಈ ಗ್ರಾಮದ ಪಶ್ಚಿಮ ಭಾಗದಲ್ಲಿರುವ ಶ್ರೀಕೋಡಿಬಸವೇಶ್ವರದೇವಸ್ಥಾನವನ್ನೂ ಮಹಾದೇವನನ್ನೂ ಅಲಂಕರಿಸಿ, ದೇವಸ್ಥಾನದ ಮುಂದೆ ತಳಿರುತೋರಣಗಳಿಂದ ಚಪ್ಪರವನ್ನೂ, ಪಕ್ಕದಲ್ಲೇ ವಿಸ್ತಾರವಾದ ಪಾಕಶಾಲೆಯನ್ನೂ ನಿರ್ಮಿಸಿದ್ದರು. ತಾ|| 12-4-26ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ರುದ್ರಾಭಿಷೇಕವು ಮುಗಿದು ಮಹಾಮಂಗಳಾರತಿಯಾಗುವ ವೇಳೆಗೆ, ಆಹ್ವಾನಿಸಲ್ಪಟ್ಟಿದ್ದ ಮ|| ಗಳಾದ ಬೆಂಗಳೂರು ರಾವ್ ಸಾಹೇಬ್ ಎಚ್. ಚೆನ್ನಯ್ಯನವರು, ಕಾಂತರಾಜಪುರದ ಎಂ. ನಂಜಪ್ಪನವರು, ಸಂಘದ ಪರವಾಗಿ ಎಂ. ಸಿ. ಲಿಂಗೇಗೌಡರು, ತಲಕಾಡು ಮಾಯಿಗೌಡರು ಮತ್ತು ನಮ್ಮ ಲಿಂಗಾಯತ ಸಹೋದರರ ಪೈಕಿ, ಸ್ಥಳದ ದೊಡ್ಡಮನುಷ್ಯರುಗಳು, ಪರಸ್ಥಳದಿಂದ ಸದಾ ಭೇದಭಾವನೆ ಇಲ್ಲದೆ ಪ್ರಜೆಗಳ ಕ್ಷೇಮಚಿಂತನೆಯಲ್ಲಿ ಕೆಲಸಮಾಡುತ್ತಾ ಕಿಲ್ಲತ್ತುಗಳನ್ನು ಪಡೆದಿರುವ ಚಿಕ್ಕಾಯರಹಳ್ಳಿ ಪಟೇಲ್ ಶಂಭುಗೌಡರೇ ಮೊದಲಾದವರು ದಯಮಾಡಿಸಿದ್ದರಲ್ಲದೆ, ಸುತ್ತಮುತ್ತಣ ಗ್ರಾಮಾಂತರಗಳಿಂದ ಸುಮಾರು ನಾಲ್ಕು ಸಹಸ್ರಗಳಷ್ಟು ಸ್ತ್ರೀಪುರುಷರು ಬಂದಿದ್ದರು. ಸೇರಿದ್ದ ಮಹಾಜನರಿಗೆಲ್ಲಾ ಸ್ವಾಮಿಯ ತೀರ್ಥಪ್ರಸಾದವಿನಿಯೋಗವಾದಮೇಲೆ ಸಾಯಂಕಾಲ 4 ಗಂಟೆಯವರೆಗೂ ಮಹಾಸಂತರ್ಪಣೆಯು ನಡೆಯಿತು. ನಂತರ ಸಮೀಪದಲ್ಲೇ ಇದ್ದ ತೋಪಿನ ನೆರಳಿನಲ್ಲಿ ಸಭೆಯು ಕಿಕ್ಕಿರಿಯುವಂತೆ ಸೇರಿತ್ತು. ಈ ಸಭೆಗೆ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರು ಅಧ್ಯಕ್ಷರಾಗಬೇಕೆಂದು ಸೂಚಿಸಿದ್ದನ್ನು ಸರ್ವರೂ ಅನುಮೋದಿಸಿದರು. ಕೂಡಲೆ ಮ|| ತಲಕಾಡು ಮಾಯಿಗೌಡರಿಂದ ದೇವತಾಪ್ರಾರ್ಥನೆಯೊಡನೆ ಮಹಾಭಾರತದಲ್ಲಿನ ಕಿರಾತಾರ್ಜುನೀಯ ಭಾಗದ ಓದುಗಾರಿಕೆಯು ಪ್ರಾರಂಭಿಸಲ್ಪಟ್ಟಿತು. ಇವರ ಓದುಗಾರಿಕೆಯನ್ನು ಕೇಳಿ ನೆರೆದಿದ್ದವರೆಲ್ಲರೂ ಆನಂದಪರವಶರಾಗಿ ತಲೆದೂಗುತ್ತಾ ನಿದ್ರಾವಸ್ಥೆಯಲ್ಲಿರುತ್ತಾರೋ ಎಂಬಂತೆ ಬೆರಗಾಗಿ ಕುಳಿತಿದ್ದರು. ಈಮಧ್ಯೆ ನೆರೆದಿದ್ದ ಗ್ರಾಮಾಂತರಗಳ ಪ್ರಜೆಗಳೆಲ್ಲರಿಗೂ ತಕ್ಕ ಬುದ್ಧಿವಾದಗಳನ್ನು ಅಧ್ಯಕ್ಷರೂ ಮ|| ಗಳಾದ ಎಂ. ಸಿ. ಲಿಂಗೇಗೌಡರೂ, ಎಂ. ನಂಜಪ್ಪನವರೂ ಉಪನ್ಯಾಸರೂಪವಾಗಿ ಅಪ್ಪಣೆಕೊಡಿಸಿದುದು ಭಾವಗರ್ಭಿತವಾಗಿಯೂ, ಹೃದಯಂಗಮವಾಗಿಯೂ ಇದ್ದಿತು. ಕಡೆಯಲ್ಲಿ ಅಧ್ಯಕ್ಷರ ಅನುಭವಪೂರ್ವಕವಾದ ಭಾಷಣವು ಜನಗಳ ಮನಸ್ಸನ್ನು ಆಕರ್ಷಿಸುವಂತೆ ಇದ್ದಿತಲ್ಲದೆ, ಉಲ್ಲಾಸವನ್ನು ಉಂಟುಮಾಡುತ್ತಿದ್ದಿತು. ಈ ಮಹನೀಯರುಗಳು ಅಪ್ಪಣೆಕೊಡಿಸಿದ ಬುದ್ಧಿವಾದಗಳಂತೆ, ಮೂಢತನವೆಂಬ ಕೆಸರಿನಲ್ಲಿ ಹೊರಳಾಡುತ್ತಿರುವ ನಮ್ಮ ರೈತಪ್ರಜೆಗಳು ಕಾರ್ಯತಃ ನಡೆದುಕೊಳ್ಳುವುದಾದರೆ, ಶೀಘ್ರದಲ್ಲೇ ಅಜ್ಞಾನವೆಂಬ ಕಡಲನ್ನು ದಾಟಬಹುದಾಗಿದೆ ಎಂಬುದರಲ್ಲಿ ಸಂದೇಹವಿರಲಾರದು. ಅಂದರೆ ಪ್ರತಿಯೊಬ್ಬರ ಉಪನ್ಯಾಸದಲ್ಲೂ, ಮಾನವಜನ್ಮದಲ್ಲಿ ಯಾವ ಕಸಬನ್ನು ಮಾಡಿದರೂ ವಿದ್ಯೆಯು ಅವಶ್ಯಕವೆಂಬುದು ದೃಢೀಕರಿಸಲ್ಪಟ್ಟಿತು. ಇಷ್ಟೆಲ್ಲಾ ನಡೆದಮೇಲೆ ಪುನಃ ಸಭೆಯವರ ಅಪೇಕ್ಷೆಯಂತೆ ಓದುಗಾರಿಕೆಯು ಸಾಯಂಕಾಲ 7 ಗಂಟೆಯವರೆಗೂ ನಡೆದು ಕಡೆಯಲ್ಲಿ ರಾಜಕುಟುಂಬದವರ ಶ್ರೇಯಃಪ್ರಾರ್ಥನೆಯೊಡನೆ ಜಯಘೋಷದಿಂದ ಸಭೆಯು ಬರಖಾಸ್ತಾಯಿತು. ಈ ಸಂದರ್ಭದಲ್ಲಿ ಮ|| ಮಾಯಿಗೌಡರ ಓದುಗಾರಿಕೆಯನ್ನು ಕೇಳಿದ ಪ್ರತಿಗ್ರಾಮದವರೂ ಇವರ ಓದುಗಾರಿಕೆಯನ್ನು ತಮ್ಮ ಗ್ರಾಮದಲ್ಲಿ ಮಾಡಿಸಬೇಕು, ನಮ್ಮ ಗ್ರಾಮದಲ್ಲಿ ಮಾಡಿಸಬೇಕೆಂಬ ಕುತೂಹಲವು ಅತಿಶಯವಾಗಿದ್ದುದೂ ಅದರಂತೆ ಸದರಿ ಮಹನೀಯರನ್ನು ಕೇಳಿಕೊಳ್ಳುತ್ತಿದ್ದುದೂ ವಿಶೇಷಸಂಗತಿಯಾಗಿದ್ದಿತು. ಮ|| ಮಾಯಿಗೌಡರು ತಮ್ಮ ವಿರಾಮಕಾಲದಲ್ಲಿ ಜನಗಳ ಈ ಮನೋಭಾವವನ್ನು ನೆರವೇರಿಸಿಕೊಡುವುದರ ಮೂಲಕ ಮನುಷ್ಯನು ಪ್ರಯತ್ನದಿಂದ ಯಾವ ವಿದ್ಯೆಯನ್ನಾದರೂ ಅಭ್ಯಸಿಸಬಹುದೆಂಬುದನ್ನು ನಮ್ಮ ರೈತಪ್ರಜೆಗಳಿಗೆ ತೋರ್ಪಡಿಸುವರೆಂದು ನಂಬಿರುವ,

ಓರ್ವ ಪ್ರತ್ಯಕ್ಷದರ್ಶಿ.

ಸ್ತ್ರೀಪ್ರಬಂಧ.

ತಮ್ಮ ಸ್ಟಾರ್ ಪತ್ರಿಕೆಯಲ್ಲಿ ಹೋದ ಡಿಸೆಂಬರ ತಿಂಗಳಲ್ಲಿ, ವೀರಶೈವಸ್ತ್ರೀಯರು 'ಸ್ತ್ರೀಶಿಕ್ಷಣದ ಯೋಗ್ಯಪದ್ಧತಿ' ಅಥವಾ 'ಸ್ತ್ರೀಯರ ಅಧಿಕಾರ' ಈ ವಿಷಯಗಳಮೇಲೆ ಪ್ರಬಂಧವನ್ನು ಬರೆದು ಕಳಿಸಬೇಕೆಂದು ಪ್ರಸಿದ್ಧಮಾಡಿದಪ್ರಕಾರ ಕೆಳಗಿನ ವೀರಶೈವಸ್ತ್ರೀಯರ ಕಡೆಯಿಂದ ಪ್ರಬಂಧಗಳು ಬಂದಿರುತ್ತವೆ.

ಶ್ರೀಮತಿ ಗಿರಿಜಾಬಾಯಿ ಇಚ್ಚಂಗಿಮಠ (ಧಾರವಾಡ), ಸಿ. ಚೆನ್ನಬಸವಮ್ಮ (ಸುಗ್ಗನಹಳ್ಳಿ ಜಿ. ಬೆಂಗಳೂರು), ಸೌ|| ಭಾಗಿರಥಿಬಾಯಿ ಕೇಸಾಪ (ಸೊಲ್ಲಾಪೂರ), ಡಿ. ಸರ್ವಮಂಗಳಾದೇವಿ (ಶ್ರೀರಾಮಪೂರ), ಸೌ|| ಪಂಚವ್ವಾಬಾಯಿ ಸರದಾರ (ಸೊಲ್ಲಾಪೂರ), ಸೌ|| ಚಂದ್ರಭಾಗಾಬಾಯಿ ತಂಬಾಕೆ (ತಾಳಿಕೋಟೆ), ಸೌ|| ತ್ರಿವೇಣಿಬಾಯಿ ಇಸಾಪೂರೆ (ಬಾರ್ಶಿ), ಸೌ|| ಶಿವಗಂಗಾಬಾಯಿ ಪಾಟೀಲ (ಸೊಲ್ಲಾಪೂರ), ಸೌ|| ಶಾಂತಾಬಾಯಿ ಪುರವಂತ (ಸೊಲ್ಲಾಪೂರ). ಪ್ರಬಂಧಗಳು ಪರೀಕ್ಷಕರಕಡೆಯಿಂದ ಪರಿಶೋಧಿಸಲ್ಪಟ್ಟು ಬಂದಮೇಲೆ ಈ ತಿಂಗಳ (April) ಅಖೈರಿಗೆ ಬಕ್ಷೀಸದ ವಿಷಯ ಜಾಹೀರಮಾಡಲಾದೀತು.

ಸೆಕ್ರೆಟರಿ,
ವೀರಶೈವನಹಿಲಾಜ್ಞಾನಮಂದಿರ, ಸೊಲ್ಲಾಪೂರ.

ನೈಜಾಮಿನ ವೀರಶೈವರೇ ಇನ್ನಾದರೂ ಜಾಗ್ರತರಾಗಿರಿ.

ಭರತಖಂಡದ ವೀರಶೈವರ ನಿವಾಸಸ್ಥಾನಗಳಲ್ಲೆಲ್ಲ ಹಿಂದುಳಿದ ಗ್ರಾಮವೆಂದರೆ ನೈಜಾಂರಾಜ್ಯದಲ್ಲಿರುವ ರಾಯಿಚೂರು ಒಂದಾಗಿದೆ. ಇಲ್ಲಿಯ ವೀರಶೈವಜನಸಂಖ್ಯೆಯು 4,000 ಇರುತ್ತದೆ. ಇಂತಹ ಸ್ಥಳಕ್ಕೆ ಕೆಲದಿನಗಳ ಹಿಂದೆ ಮೈಸೂರಿನಿಂದ ಬಂದಿದ್ದ ನಾಟಕಮಂಡಳಿಯವರು "ಶರಭವಿಜಯ"ವೆಂಬ ನಾಟಕವನ್ನಾಡಲೆತ್ನಿಸಿದಾಗ, ಅದು ಮಹಾವಿಷ್ಣುವನ್ನು ಅಪಮಾನಪಡಿಸತಕ್ಕದ್ದಾದುದರಿಂದ ಅದನ್ನು ಆಡಕೂಡದೆಂದು ರಾಯಚೂರಿನ ಬ್ರಾಹ್ಮಣರೆಲ್ಲರೂ ಒಗ್ಗಟ್ಟಾಗಿ ಒಂದುಸಭೆಕೂಡಿಸಿ ಅದರಲ್ಲಿ ರೆಝೊಲ್ಯೂಷನ್ ಮಾಡಿ ಸರ್ಕಾರಕ್ಕೆ ತಿಳಿಸಿ ಅದರಂತೆ ನಾಟಕವನ್ನು ಬಂದಿಡಿಸಿದರು. ನಾಟಕಮಂಡಳಿಯವರು ಎಷ್ಟು ಪ್ರಯತ್ನಪಟ್ಟಾಗ್ಯೂ, ಈ ಸ್ಥಳದ ವೀರಶೈವರು ಮತಾಭಿಮಾನದಮೇಲೆ ಧೂಳನ್ನಿಟ್ಟು ಯಾವ ಪ್ರಯತ್ನವನ್ನೂ ಮಾಡದೆ ಮೌನವಾಗಿದ್ದರೆಂದು ಬರೆಯಲು ನಾಚಿಗೆಯಾಗುತ್ತದೆ. ಇದೇ ನಾಟಕಮಂಡಳಿಯವರು ಸ್ವಲ್ಪಕಾಲದ ಹಿಂದೆ ಬೆಂಗಳೂರಲ್ಲಿ ಇದೇ ಶರಭವಿಜಯವನ್ನು ಅಭಿನಯಿಸಿ 125 ರೂಪಾಯಿಗಳನ್ನು ಅಲ್ಲಿಯ ವೀರಭದ್ರದೇವಸ್ಥಾನಕ್ಕೆ ಉಚಿತವಾಗಿ ಕೊಟ್ಟರೆಂದು ಈ ಸ್ಟಾರ್‌ಪತ್ರಿಕೆಯಲ್ಲಿ ಓದಿದೆನು. ನಮ್ಮ ರಾಯಿಚೂರಿನ ವೀರಶೈವಬಂಧುಗಳಿಗೇಕೆ ಸ್ವಧರ್ಮರಕ್ಷಣೆಯಮೇಲೆ ವಾತ್ಸಲ್ಯಹುಟ್ಟಲಿಲ್ಲವೋ? ಇನ್ನಾದರೂ ಜಾಗ್ರತರಾಗಿ ಮತಧರ್ಮವನ್ನು ಕಾಪಾಡಿಕೊಳ್ಳುವವರಾಗಿ, ಇಲ್ಲವಾದಲ್ಲಿ ನಾವು ಬದುಕಿದ್ದರೂ ವ್ಯರ್ಥವೇಸರಿ.

ರಾಯಿಚೂರು, ವೀರಶೈವ.

ಉತ್ತರಾಧಿಕಾರಿಗಳನ್ನು ನೇಮಿಸಿದುದು.

ಬೇಲೂರು ತಾ|| ಬಿಕ್ಕೋಡುಮಠದ ಶ್ರೀನಿರಂಜನಮೂರ್ತಿ ವೃಷಭದೇಶಿಕೇಂದ್ರ ಶಿವಯೋಗೀಶ್ವರಮಹಾಸ್ವಾಮಿಗಳ ಕರಕಮಲೋದ್ಭವರಾದ ಶ್ರೀಶಿವಬಸವಸ್ವಾಮಿಗಳು ಕ್ರೋಧನಸಂ|| ಫಾಲ್ಗುಣ ಶು|| ೧೩ ಗುರುವಾರ ಬಿಕ್ಕೋಡುಮಠದಲ್ಲಿ ಪಂಚಬ್ರಹ್ಮಕಲಶಸ್ಥಾಪನೆಯಿಂದ 35 ವಟುಗಳಿಗೆ ಧರ್ಮಾರ್ಥದೀಕ್ಷಾಸಂಸ್ಕಾರವನ್ನು ಮಾಡಿಸಿ 2-3 ದಿವಸ ಗಣಾರಾಧನೆಯನ್ನು ವಿತರಣೆಯಿಂದ ನಡೆಸಿದರು. ಆಲೂರು, ಬೇಲೂರು, ಮಂಜರಾಬಾದು ಮುಂತಾದ ತಾಲ್ಲೂಕಿನ ಸಾವಿರಾರುಜನರು ಸಭಾಸೇರಿದ ಕಾಲದಲ್ಲಿ ಸ್ವಾಮಿಗಳು ತಮಗೆ 55 ವರುಷವಯಸ್ಸಾಗುತ್ತಾ ಬಂದುದರಿಂದ ತಮ್ಮನಂತರ ಮಠಕ್ಕೆ ಉತ್ತರಾಧಿಕಾರಿಗಳನ್ನು ಆರಿಸಲು ಪ್ರಯತ್ನ ನಡೆದು ಶ್ರೀವಿರಕ್ತಮೂರ್ತಿಗಳ ಶ್ರೀಪಟ್ಟಚರಮೂರ್ತಿಗಳ ಮತ್ತು ದೇಶದ ಮಹಾಜನರ ಸಮ್ಮತಿಯಿಂದ ಶ್ರೀ ಸಿದ್ಧಗಂಗಾಕ್ಷೇತ್ರದಲ್ಲಿ ವಿದ್ಯಾಶಿಕ್ಷಣ ಹೊಂದಿಬಂದಿದ್ದ ಸದ್ವಂಶೋತ್ಪನ್ನರೂ ಸಾಧನಚತುಷ್ಟಯಸಂಪನ್ನರೂ ಆದ ಹೆಬ್ಬಸಾಲೆ ನಂಜುಂಡಪ್ಪನವರನ್ನು ಗೊತ್ತುಮಾಡಿ ಪತ್ರವನ್ನು ಬರೆಸಿರುತ್ತಾರೆ. ಸಭಾಕಾಲದಲ್ಲಿ ಏಕಮತ್ಯ, ಧಾರ್ಮಿಕ, ನೈತಿಕ ವಿಚಾರವಾಗಿಯೂ ಸಮಾಜೋನ್ನತಿಗೆ ಮುಖ್ಯಸಾಧನವಾದ ವಿದ್ಯಾವಿಷಯಕವಾಗಿಯೂ ಭಾಷಣಗಳು ನಡೆದುವು. ಬೇಲೂರು ತಾಲ್ಲೂಕಿನಲ್ಲಿ ವೀರಶೈವ ಹಾಸ್ಟೆಲ್ ಕಟ್ಟಿಸಲು ಬೆಳ್ಳಾವಾರದ ಕಾ|| ಪ್ಲಾಂಟರ್ ಮತ್ತು ಪ್ರಜಾಪ್ರತಿನಿಧಿಸಭಾಮೆಂಬರು ಆದ ಮ|| ಬಿ. ಎಂ. ದೇವಪ್ಪಗೌಡರು ಪ್ರಮುಖರಾಗಿ ಚಂದಾಪಟ್ಟಿ ಮಾಡಿದ್ದಕ್ಕೆ ಸದರಿ ಶಿವಬಸವಸ್ವಾಮಿಗಳು 100 ರೂಪಾಯಿ ಕೊಡುವುದಾಗಿ ವಾಗ್ದಾನಮಾಡಿದ್ದಲ್ಲದೆ ಮೈಸೂರು ವೀ. ವಿ. ವರ್ಧಕಫಂಡಿಗೆ 5 ರೂ. ಗಳನ್ನೂ, ಮೈಸೂರು ಸ್ಟಾರ್ ಸ್ಥಿರತ್ವಕ್ಕೆ 2 ರೂ. ಗಳನ್ನೂ ಕಳುಹಿಸಿಕೊಟ್ಟರು. ತಮ್ಮ ಮಠದಲ್ಲಿ 4-6 ಮಂದಿ ಬಡವಿದ್ಯಾರ್ಥಿಗಳನ್ನಿಟ್ಟುಕೊಂಡು ವಿದ್ಯಾಹೇಳಿ ಕಾಪಾಡುತ್ತಿರುವರಲ್ಲದೆ ತಾವು ಜಪತಪೋನುಷ್ಠಾನಗಳಲ್ಲಿ ನಿರತರಾಗಿದ್ದುಕೊಂಡು ಮಠವನ್ನು ಅಭಿವೃದ್ಧಿಗೆ ತಂದು ಸಮಾಜಹಿತವನ್ನು ಮಾಡುತ್ತಿರುವುದು ಸ್ತುತ್ಯವೇಸರಿ. ಮುಂದೆ ಮಠವು ಅನಾಯಕವಾಗದಂತೆ ಯೋಗ್ಯರಾದ ವಿದ್ಯಾವಂತರನ್ನು ಮೊದಲೇ ನೇಮಕಮಾಡಿದುದು ಸರ್ವರಿಗೂ ಸಂತೋಷಪ್ರದವಾಗಿದೆ.

ಓರ್ವಭಕ್ತ.

ತಿಪಟೂರುಡಾಕ್ಟರವರ ವಿಚಾರ.

ಈ ಟವನ್ನು ಆಸ್ಪತ್ರೆಯ ಡಾಕ್ಟರವರಾಗಿದ್ದ ಶ್ರೀನಿವಾಸರಾಯರು ಆಸ್ಪತ್ರೆಗೆ ಔಷಧಿಗೋಸ್ಕರ ಬರುವ ಕಾಯಿಲೆಯವರನ್ನು ಏಕರೀತಿಯಾಗಿ ಭಾವಿಸದೆ ಪಕ್ಷಪಾತದಿಂದ ಕಾಣುವದಲ್ಲದೆ ಧಿಕ್ಕರಿಸಿ ಮಾತನಾಡುತ್ತಿದ್ದರು. ಇಂಥಾವರಿಗೆ ಒಬ್ಬೊಬ್ಬ ಮುನಿಸಿಲ್ ಮೆಂಬರುಗಳು ಮುನಿಸಿಪಲ್ ಹಣದಿಂದ 300 ರೂ. ಗಳನ್ನು ಇನಾಮ್ಕೊಳೇಷನ್ನು ಹಾಕಿದಮಾತ್ರಕ್ಕೆ ಬಹುಮಾನಕೊಡಬೇಕೆಂದು ಇದ್ದ ಸಮಾಚಾರವನ್ನು ಟವನ್ನುರೇಟ್ ಪೇಯರುಗಳು ತಿಳಿದು ಮುನಿಸಿಪಾಲಿಟಿ ಹಣದಿಂದ ಡಾಕ್ಟರವರಿಗೆ ಬಹುಮಾನ ಕೊಡಕೂಡದೆಂದು ಸಿಕವಾಕ್ಯತೆಯಿಂದ ನಿಷೇಧಿಸಲು ಆಗ ಬಹುಮಾನದ ವಿಚಾರವನ್ನು ಅರಣ್ಯಕ್ಕೆ ಅಟ್ಟಿಬಿಟ್ಟರು. ಈ ಟವನ್ನಿನಲ್ಲಿ ಸುಮಾರು 80 ಭಾವಿಗಳು ಇರುತ್ತವೆ. ಇಂಥಾ ಭಾವಿಗಳನ್ನು ಶೋಧಿಸಿದಲ್ಲಿ ಒಳ್ಳೇ ನೀರು ಸಿಕ್ಕುವ ಪದ್ಧತಿಯಂತೆ. ಮುನಿಸಿಪಾಲಿಟಿಯವರು ಕಾರೊನೇಷನ್ನು ತೋಡಿನಲ್ಲಿ ತೆಗೆಸುತ್ತ ಇರುವ ಭಾವಿಯಲ್ಲಿ 40 ಅಡಿ ಕೆಳಗೆ ನೀರು ಸಿಕ್ಕಿತು. ಆ ಸ್ಥಳದಲ್ಲಿ ಸಾಂಕ್ರಾಮಿಕಜಾಡ್ಯವಿಲ್ಲದೆ ಇದ್ದಾಗ್ಯೂ ಅದರ ನೀರನ್ನೂ ಮಣ್ಣನ್ನೂ ಡಾಕ್ಟರವರು ಸ್ಯಾನಿಟರಿ ಕಮಿಷನರಿಗೆ ಕಳಿಸಿರುತ್ತಾರೆ. ಈ ಭಾವಿಯಂತೆ ಅನೇಕ ಭಾವಿಗಳು ಇದ್ದಾಗ್ಯೂ ಅವುಗಳ ನೀರನ್ನೂ ಮಣ್ಣನ್ನೂ ಏಕೆ ಕಳಿಸಲಿಲ್ಲವೋ ಗೊತ್ತಿಲ್ಲ. ಪ್ರಾಯಶಃ ಮರೆತಿರಬಹುದು. ... ಇಲ್ಲವಾದ ಗಂಡಿಗೆ ಮೊಸರಿನಲ್ಲಿ ಕಲ್ಲಿತ್ತೆಂಬಗಾದೆಗೆ ಅನುಸಾರವಾಗಿದೆ). ಇಲ್ಲಿಂದ ಡಾಕ್ಟರವರು ಗೋವಿಂದನೆಂಬುವವನಿಗೆ ಇಂಜೆಕ್ಷನ್ನುಮಾಡಲು ತುಕ್ಕುಹಿಡಿದ ಸೂಜಿಯನ್ನು ನೋಡದೆ ಅಶ್ರದ್ಧೆಯಿಂದ ಉಪಯೋಗಿಸಲು ಇಂಚು ಸೂಜಿ ಮುರಿದುಕೊಂಡಿತು. ಅದನ್ನು ತೆಗೆಯುವುದಕ್ಕೋಸ್ಕರ ೨ ಇಂಚು ಚರ್ಮ ಕೊಯಿಸಿದರೂ ಸಿಕ್ಕಲಿಲ್ಲವು. ಪ್ರತಿದಿವಸ ಸಂಪಾದಿಸುವವನಾಡಿಕೊಳ್ಳುತ್ತಿದ್ದ ಆ ಬಡವನ ಅವಸ್ಥೆ ಹೇಳತೀರದ್ದಾಗಿದೆ. ಈತ ಅವನು ತುಮ್ಕೂರು ಆಸ್ಪತ್ರೆಗೆ ಸೂಜಿತೆಗೆಸಲು ಹೋಗಿರುತ್ತಾನೆ. ಇಲ್ಲಿನ ಪ್ರಜೆಗಳ ಅಭಿಲಾಷೆಯಂತೆ ಮೇಲ್ಕಂಡ ಡಾಕ್ಟರವರನ್ನು ತುಮ್ಕೂರಿಗೆ ವರ್ಗಾಯಿಸಿ ಇವರ ಸ್ಥಳಕ್ಕೆ ಮಿ|| ನಾಗರತ್ನಮೊದಲಿಯಾರರವರನ್ನು ಕಳಿಸಿರುತ್ತಾರೆ. ಈ ಹೊಸ ಡಾಕ್ಟರವರು ಪಕ್ಷಪಾತವಿಲ್ಲದೆ ಸಮಸ್ತ ಜನಗಳನ್ನೂ ಏಕರೀತಿಯಾಗಿ ಭಾವಿಸುತ್ತಾರೆಂದು ನಂಬುತ್ತೇನೆ.

ಖಂಡಿತವಾದಿ.

ಲಿಂಗಾಯಿತರು ದನಾಕಾಯಬೇಕೆಂದು ಅರ್ಥವಾಗುವುದಿಲ್ಲವೆ?

ತಳೆದ ಮಾರ್ಚಿ ತಾ|| 26 ರಲ್ಲು ನಂಜನಗೂಡಿನಲ್ಲಿ ನಡೆದ ದನಗಳ ಪರಿಷತ್ತಿನಲ್ಲಿ ಮೈ|| ಡಿ|| ಡೆ|| ಕ|| ಮು|| ಎ. ವಿ. ರಾಮನಾಥನ್‌ರವರು ಬಹುಮಾನಗಳನ್ನು ವಿನಿಯೋಗಮಾಡುವಾಗ್ಗೆ ಕೊಟ್ಟ ಭಾಷಣವು ವೀರಶೈವಮತೀಯರಿಗೆ ವಿಚಾರಾರ್ಹವೂ, ವಿಷಾದಕರವೂ ಆಗಿರುತ್ತದೆ. ನಂಜನಗೂಡು ಸಬ್‌ಡಿವಿಜನ್ನಿನಲ್ಲಿ ಲಿಂಗಾಯತ ಪ್ರಜೆಗಳು ಹೇರಳವಾಗಿರುತ್ತಾರೆ. ಅವರಿಗೆ ಬಸವನೇ ಮುಖ್ಯ ದೇವರು. ಹೀಗಿದ್ದರೂ ದನಗಳನ್ನು ಪೋಷಿಸಿ ಬೆಳಸುವುದರಲ್ಲಿ ಅವರಿಗೆ ಅಭಿಮಾನ ಕಡಿಮೆಯಾಗಿರುವದು ವಿಷಾದಕರವಾಗಿದೆ. ಎಂದು ಹೇಳಿದರು. ವೀರಶೈವರಿಗೆ ಬಸವನೇ ಮುಖ್ಯದೇವರೆಂದು ಇವರು ಯಾವ ಬೃಹಸ್ಪತ್ಯಾಚಾರ್ಯರಿಂದ ತಿಳಿದುಕೊಂಡರೋ ಕೇಳಬೇಕೆಂದು ಇದ್ದೆನು. ಆದರೆ ಇವರ ಅಧಿಕಾರದರ್ಪಕ್ಕೆ ಹೆದರಿ ಆಗ್ಗೆ ಸುಮ್ಮನಾದೆನು. ನನ್ನಂತೆಯೇ ಅನೇಕರಿಗೆ ಅಸಮಾಧಾನವು ಉಂಟಾಗಿತ್ತೆನ್ನುವುದು ಅಲ್ಲಿ ಸೇರಿದ್ದ ಜನರು ಆಡಿಕೊಳ್ಳುತ್ತ ಇದ್ದ ಮಾತುಗಳಿಂದ ವ್ಯಕ್ತವಾಯಿತು. ತಿಳಿಯದ ವಿಚಾರವನ್ನು ಅಧಿಕಾರದರ್ಪದಿಂದ ಆಡಿ ಜನರಿಗೆ ಮನೋವ್ಯಥೆಯನ್ನುಂಟುಮಾಡುವುದು ಯಾರಿಗೂ ಯುಕ್ತವಲ್ಲ, ಅದಂತಿರಲಿ. ಲಿಂಗಾಯಿತರು ದನಗಳನ್ನು ಸಾಕುವದಿಲ್ಲವೆಂದು ಹೇಳಿದರು. ಪ್ರಾಣಿದಯಾಪರತೆಯು ಎಲ್ಲ ಹಿಂದುಗಳಿಗೂ ಸೇರಿರುವುದಿಲ್ಲವೆ? ಇದಕ್ಕಾಗಿ ಅನೇಕರು ಗೋಸಂರಕ್ಷಣಸಂಘಗಳನ್ನೇರ್ಪಡಿಸಿಕೊಂಡು ಪಾಡುಪಡುತ್ತ ಇಲ್ಲವೆ? ಇದು ಇವರಿಗೂ ಇವರ ಜನರಿಗೂ ಸೇರಿದ್ದಲ್ಲವೆ? ಹೀಗಿದ್ದರೂ ಲಿಂಗಾಯಿತರಿಗೆ ಅಭಿಮಾನ ಕಡಿಮೆ ಎಂದು ಹೇಳಿರುವದರಿಂದ ಅವರು ದನಕಾಯಿದುಕೊಂಡಿರಬೇಕೆಂಬುದೇ ಇವರ ಅಭಿಪ್ರಾಯವಾಗುವದಿಲ್ಲವೆ? ಲಿಂಗಾಯಿತರಲ್ಲಿ ಎಷ್ಟು ವಿದ್ಯಾಸವಿಟ್ಟು ಇವರು ದನಕಾಯುವದನ್ನು ಎಚ್ಚರಿಸಿ ಉಪದೇಶಿಸಿರುತ್ತಾರೆ! ಲಿಂಗಾಯಿತರಲ್ಲಿ 1,000 ಕ್ಕೆ ಒಬ್ಬರಿಬ್ಬರು ಸರ್ಕಾರಿಗೆಜೆಟೆಡ್ ಆಫೀಸರಾಗಿ ಇರುವವರು ಸಿಕ್ಕುವಂತಿಲ್ಲ. ಹೀಗಿದ್ದಾಗ್ಯೂ ಇವರಿಗೆ ಸಹನೆ ಇಲ್ಲದೆ ಅವಕಾಶಸಿಕ್ಕಿತೆಂದು ಲಿಂಗಾಯಿತರು ದನಾಕಾಯಿರೆಂದು ಹೇಳಿದಂತೆ ಕಾಣುತ್ತೆ. ಹೀಗೆ ಅಪ್ಪಣೆಕೊಡಿಸಿದವರು ದೊಡ್ಡ ಡಿಸ್ಟ್ರಿಕ್ಟು ಡೆಪುಟಿಕಮಿಷನರ್ ಸಾಹೇಬರೂ, ವಿದ್ಯಾವಂತರೂ, ಇನ್ನೂ ದೊಡ್ಡ ಅಧಿಕಾರಕ್ಕೆ ಬರತಕ್ಕವರೂ ಆದವರೇ ಈರೀತಿ ದನಾಕಾಯಿರಿ ಎಂದು ಹೇಳಿದಾರೆಂದು ತಿಳಿಯದ ಜನರು ನಂಬಿ ಆರೀತಿಮಾಡದೆ ದಯವಿಟ್ಟು ವಿದ್ಯಾಭ್ಯಾಸಕ್ಕೆ ಪೂರ್ಣಗಮನಕೊಟ್ಟು ವಿದ್ಯಾವಂತರಾಗಿ ಇವರಲ್ಲೂ ಡೆ|| ಕ|| ರಾಗಿರುತ್ತಾರೆಂಬ ಹೆಸರುಪಡೆದು ಮತಕ್ಕೆ ಕೀರ್ತಿಬರುವಂತೆಮಾಡಲು ನಂಜನಗೂಡು ಸಬ್‌ಡಿವಿಜನ್ ವೀರಶೈವರು ಏರ್ಪಾಡುಮಾಡಬೇಕೆಂದು ಅವರುಗಳನ್ನು ಪ್ರಾರ್ಥಿಸುತ್ತೇನೆ.

ವೀರಶೈವ.

ನಿಜಾಂವೀರಶೈವಶಂಕರಸಂಸ್ಕೃತಕಾಲೇಜದ ವಾರ್ಷಿಕ ಪರೀಕ್ಷೆಯು.

ಯಾದಗಿರಿ ಧರ್ಮವೀರ ಸಜ್ಜನಶೆಟ್ಟಿ ಶಂಕರಣ್ಣನವರು ವೀರಶೈವರ ಧಾರ್ಮಿಕ ವಿದ್ಯಾಭಿವೃದ್ಧಿಗಾಗಿ 1 ಲಕ್ಷ ರೂಪಾಯಿಗಳನ್ನು ದಾನಮಾಡಿರುವರಷ್ಟೆ. ಅವರ ಅಪೇಕ್ಷೆಯಂತೆ ಕಾರ್ಯವು ಪ್ರಾರಂಭವಾಗಿ ಒಂದುವರ್ಷವಾಯಿತು. ಈಗ ಸದ್ಯಕ್ಕೆ ಸಿದ್ಧಾಂತಕೌಮುದೀ ನಾಟಕ, ಕಾವ್ಯ ಮೊದಲಾದ ಪಾಠಗಳು ನಡೆದಿರುತ್ತವೆ. ತಾ|| 9-4-24 ರಲ್ಲಿ ವಿದ್ಯಾರ್ಥಿಗಳ ವಾರ್ಷಿಕಪರೀಕ್ಷೆಯಾಯಿತು. ಸೊಲ್ಲಾಪುರದ ವೇ|| ಜಗದೀಶಶಾಸ್ತ್ರಿಗಳು ನಾಲ್ವಾರ ಇವರು ಪರೀಕ್ಷಕರಾಗಿದ್ದರು. ಪರೀಕ್ಷೆಗೆಕುಳಿತ ಹುಡುಗರಲ್ಲಿ 13 ಜನ ವಿದ್ಯಾರ್ಥಿಗಳು ಉತ್ತಮರೀತಿಯಿಂದ ಪಾಸಾಗಿರುತ್ತಾರೆ. ಪಾಸಾದ ವಿದ್ಯಾರ್ಥಿಗಳಿಗೆ ಕಾಲೇಜದ ಮೆಂಬರರಾದ ಶರಣಪ್ಪನವರು ರೊಟ್ನಡಗಿ ಇವರು ಇನಾಮುಗಳನ್ನು ಕೊಟ್ಟು ತಮ್ಮ ದಾತೃತ್ವವನ್ನು ವ್ಯಕ್ತಮಾಡಿದರಲ್ಲದೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನುಂಟುಮಾಡಿದರು. ಒಟ್ಟಿನಮೇಲಿಂದ ವಿಚಾರಮಾಡಿನೋಡಿದರೆ, ಈ ಸಂಸ್ಥೆಯು ಪ್ರಾರಂಭವಾಗಿ ಒಂದೇ ವರ್ಷವಾದರೂ ಒಳ್ಳೇ ಊರ್ಜಸ್ಥಿತಿಯಲ್ಲಿರುವುದು ಸಂತೋಷದ ಸಂಗತಿಯಾಗಿರುತ್ತದೆ. ಯಾಕಂದರೆ, ಧಾರ್ಮಿಕವಿದ್ಯೆಯ ಸಂಸ್ಥೆಗಳಿಂದ ಈ ಕಾಲದಲ್ಲಿ ನಾಲ್ಕೆಂಟು ವರ್ಷಗಳಲ್ಲದೆ ಏನೊಂದು ಫಲವು ಸಿಗುವದಿಲ್ಲವೆಂಬುವದು ಸ್ಪಷ್ಟವಿರುತ್ತದೆ. ಸದ್ಯಕ್ಕೆ ಕಲ್ಕತ್ತಾ ಸಂಸ್ಕೃತಕಾಲೇಜದ ಅಭ್ಯಾಸದ ಕ್ರಮವನ್ನೇ ಪ್ರಾರಂಭಮಾಡಿರುತ್ತಾರೆ. ಮುಂದೆ ಇಲ್ಲಿಂದಲೇ ವ್ಯಾಕರಣ ಸಾಹಿತ್ಯ ಮೊದಲಾದ ಪರೀಕ್ಷೆಗೆ ಕಳಿಸುವವ್ಯವಸ್ಥೆ ನಡೆದಿರುವದನ್ನು ನೋಡಿದರೆ ಈ ಸಂಸ್ಥೆಯು ವೀರಶೈವಸಮಾಜದಲ್ಲಿ ಮಾದರಿ ಸಂಸ್ಥೆಯಾಗುವದೆನ್ನುವದರಲ್ಲಿ ಸಂದೇಹವೇ ಇಲ್ಲ. ಈ ಕಾಲೇಜದ ಪ್ರಧಾನಾಧ್ಯಾಪಕರಾದ ವೇ|| ಚಂದ್ರಶೇಖರಶಾಸ್ತ್ರಿ ವ್ಯಾಕರಣತೀರ್ಥ ಹೊಳಲು ಇವರ ಕಾರ್ಯದಕ್ಷತೆಯೂ, ವಿದ್ವತ್ತೆಯೂ, ವಿದ್ಯಾರ್ಥಿಗಳಮೇಲಿರುವ ಪ್ರೇಮಾಭಿಮಾನಗಳೂ ಹೊಗಳತಕ್ಕಂಥವುಗಳಿರುತ್ತವಲ್ಲದೆ ಇವರು ಈ ಸಂಸ್ಥೆಗೆ ಭೂಷಣಪ್ರಾಯರಾಗಿರುತ್ತಾರೆ, ಮತ್ತು ಇಲ್ಲಿಯ ಅಧ್ಯಾಪಕರಾದ ಚೋಳಯ್ಯಶಾಸ್ತ್ರಿಗಳು ಕೂಡ ಪ್ರೇಮದಿಂದ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳತಕ್ಕವರಾಗಿರುತ್ತಾರೆ. ಈ ಸಂಸ್ಥೆಯ ವ್ಯವಸ್ಥಾಪಕರೂ, ಮೆಂಬರರೂ ಹೆಚ್ಚಿಗೆ ಕಾಳಜಿಯನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಇದಕ್ಕಿಂತಲೂ ಹೆಚ್ಚಿಗೆ ಅನುಕೂಲಮಾಡಿಕೊಟ್ಟು 4-5 ವರ್ಷಗಳಲ್ಲಿಯೇ ಉಳಿದ ಸಂಸ್ಕೃತಕಾಲೇಜುಗಳಂತೆ ಇತರ ಭಾಷೆಗಳನ್ನುಕೂಡ ಕಲಿಸಿ ಪುಣ್ಯಾತ್ಮರಾದ ಶಂಕರಣ್ಣನವರ ಸಂಕಲ್ಪವನ್ನು ಪೂರೈಸುವಂತೆಮಾಡಲೆಂದು ನಂಬಿರುವೆನು.

ಬಸವಂತರಾವ್, ವಕೀಲ, ಯಾದಗಿರಿ.

ನಂಜನಗೂಡದ ವಿ. ರಂಗಣ್ಣನವರ ಪ್ರಾರ್ಥನೆಗೆ ಪ್ರತ್ಯುತ್ತರ.

ತಾ|| 13-4-26 ನೇ ಸ್ಟಾರಪತ್ರಿಕೆಯಲ್ಲಿ ನಂಜನಗೂಡದ ವಿ. ರಂಗಣ್ಣ ಎಂಬುವವರು, ಬ್ರಾಹ್ಮಣರು ಯಾವಾಗಲೂ ಶಾಂತರು ದುಸ್ತರ್ಕಿಗಳಲ್ಲವೆಂಬುದಾಗಿ ತಮ್ಮ ಕಂಠಹರಿದುಕೊಳ್ಳುವಂತೆ ಚೀರಿರುವರು. ಆದರೆ ಇವರ ಚೀರಿಕೆಯು ಗಗನಕುಸುಮದಂತೆ ಮಿಥ್ಯವಾದುದೆಂಬುವುದಕ್ಕೆ ಜಗತ್ತಿನ ಮುಂದೆ ನಡೆದಿರುವ ಬ್ರಾಹ್ಮಣೇ ಕೋಲಾಹಲವೇ ಸಾಕ್ಷಿಯಾಗಿರುವದು. ಇನ್ನು ಇವರು ದುಸ್ತರ್ಕಿಗಳಲ್ಲವೆಂದು ಬರೆದುಕೊಂಡಿರುವಂತೆ ಸುತರ್ಕಿಗಳೆನ್ನುವುದಕ್ಕೆ ಒಂದಾದರೂ ಉದಾಹರಣೆ ತೋರಿಸಿದ್ದರೆ ಸರಿಯಾಗುತ್ತಿತ್ತು. ಮನುಷ್ಯನು ತನ್ನಷ್ಟಕ್ಕೆ ತಾನೇ ದೊಡ್ಡವನೆಂದುಕೊಳ್ಳುವುದು ಹಾಗೂ ಶಹಣೇನೆಂದುಕೊಳ್ಳುವದು ಹ್ಯಾಗೆ ಅವಿವೇಕದ ಮಾತಾಗಿರುವುದೋ ಹಾಗೆ ಈ ರಂಗಣ್ಣನ ಕಥೆಯಾಗಿರುವುದು. ಇನ್ನು ಶ್ರೀ ಜಗದಾಚಾರ್ಯ ಸ್ವಾಮಿ ವಿರೂಪಾಕ್ಷ ಒಡೆಯರವರು ನಂಜನಗೂಡಿಗೆ ಬರೇ ಒಬ್ಬ ಚಿತ್ರರ ಗುರುಗಳೆನಿಸಿಕೊಂಡು ಬರದೇ ವೀರಶೈವರ ಗುರುವೆನಿಸಿ ವೀರಶೈವಜನಾಂಗದಿಂದಲೂ ಇತರ ಅನೇಕ ಜಾತಿಯ ಜನಾಂಗದಿಂದಲೂ ಆಹ್ವಾನಿಸಲ್ಪಟ್ಟು ದಯಮಾಡಿದ್ದರು. ನಂಜನಗೂಡಿಗೆ ಜಗದಾಚಾರ್ಯರ ಆಗಮನದ ಸಮಯಕ್ಕೆ ಅಲ್ಲಿ ಆದ ಉತ್ಸವ ಆದರಾತಿಥ್ಯ ಪಾದಪೂಜಾದಿ ವಿನಿಯೋಗಗಳನ್ನು ಬ್ರಾಹ್ಮಣರಾದ ನೀವು ಕಂಡಿರಬಹುದು. ಈರೀತಿ ಕಣ್ಣಾರೆ ಕಂಡದ್ದನ್ನು ಮರೆಮಾಜಿ ಬರೆದದ್ದನ್ನು ನೋಡಿದರೆ ನಿಮ್ಮ ವಿಚಾರವು ಸುತರ್ಕದ್ದೋ ದುಸ್ತರ್ಕದ್ದೋ ಎಂಬುವುದು ಸ್ಪಷ್ಟವಾಗಿ ಕಂಡುಬರುವದು.

ಸ್ವಾಮಿ ಒಡೆಯರವರ ಪೀಠವು ಮೈಸೂರು ಮೊದಲಾದ ಯಾದವವಂಶೀಯರಾಜರುಗಳಿಗೆ ಹಿಂದಕ್ಕೆ ರಾಜಗುರು ಪೀಠವಾಗಿತ್ತೆಂಬ ಬಗ್ಗೆ ಆ ಮಠದಲ್ಲಿರುವ ಶಿಲಾಶಾಸನ ಅನೇಕ ತಾಂಬ್ರಶಾಸನ ಸನದುಗಳಿಂದಲು ಹಾಗೂ ಆಯಾಯ ಕಾಲಕ್ಕೆ ಆಯಾಯ ರಾಜರುಗಳಿಂದ ಕೊಡಲ್ಪಟ್ಟ ಸನದುಗಳಿಂದಲು ಸ್ಪಷ್ಟವಾಗಿರುವುದು. ಇಲೀ ಕಡೆಗೆ ಮಾತ್ರ ಕುಚೇಷ್ಟೆವರ್ಗದವರಾದ ಬ್ರಾಹ್ಮಣರು ಅದನ್ನೆಲ್ಲಾ ಅಪಹರಿಸಿಕೊಂಡು ಬಕಪಕ್ಷಿಗಳಂತೆ ಕೂತಿರುವರು. ನೀವು ಶಾಂತರೋ ವೀರಶೈವರು ಶಾಂತರೋ ಎಂಬುವದನ್ನು ನೀವೇ ವರಿಹಚ್ಚಿರಿ. ಈ ವಿಷಯಕವಾಗಿ ನಿಮಗೆ ಪ್ರತ್ಯಕ್ಷಪುರಾವೆ ಬೇಕಂದರೆ ಶ್ರೀಮನ್ ಮೈಸೂರ ಮಹಾರಾಜರವರಿಗೆ ಪೂರ್ವದಲ್ಲಿ ರಾಜ್ಯವು ಯಾವ ಜಂಗಮಒಡೆಯರ ಸ್ವಾಮಿ ಸಹಾಯದಿಂದ ಹಾಗೂ ಆ ರಾಜಮನೆತನಕ್ಕೆ ಒಡೆಯರೆಂಬ ನಾಮವು ಬಂದದ್ದು ನಿಮಗೆ ತಿಳಿಯಬೇಕಾದರೆ ರಾಜವಂಶೀಯರಾದ ಘನಪಂಡಿತ ರಾಜಕವಿಭೂಷಣ ಲಿಂಗರಾಜ ಅರಸರಿಂದ ಬರೆಯಲ್ಪಟ್ಟ ಯದುನೃಪವಿಜಯವನ್ನು ನೀವು ಓದಿದಲ್ಲಿ ನಿಮಗೆ ಸರ್ವವೂ ವಿದಿತವಾಗುವುದು.

ಸ್ವಾಮಿ ಒಡೆಯರವರು ಸಾರ್ವಜನಿಕ ವ್ಯಾಖ್ಯಾನಗಳ ದೆಸೆಯಿಂದ ಹಾಯಸ್ಕೂಲ್ ಹಾಲನ್ನು ಅಲ್ಲಿರತಕ್ಕ ಕುರ್ಚಿ ಮೊದಲಾದ ಸಾಮಾನು ಕೊಡುವ ಬಗ್ಗೆ ನಿಮ್ಮ ಕುಚೇಷ್ಟವರ್ಗದ ಬ್ರಾಹ್ಮಣ ಹೆಡ್ಮಾಸ್ತರರವರು ನಿಮ್ಮ ಬ್ರಾಹ್ಮಣರ ಸಲಹೆಯಿಂದ ತೋರಿಸಿದ ಅಶಾಂತತೆಯು ಎಷ್ಟರಮಟ್ಟಿಗಿತ್ತೆಂಬುವುದನ್ನು ನೀವೇ ನಿಮ್ಮ ಮನಸ್ಸಿನಲ್ಲಿ ವಿಚಾರಮಾಡಿರಿ. ಆಗಿನಕಾಲಕ್ಕೆ ನಂಜನಗೂಡಿನಲ್ಲಿ ನಿಮ್ಮ ಬ್ರಾಹ್ಮಣವರ್ಗದಮೇಲೆ ಇತರ ಜನಾಂಗವು ಯಂಥಾ ಕ್ರೋಧಾವೇಶದಲ್ಲಿ ತೊಡಗಿತ್ತು, ಹಾಗೂ ಆ ಕ್ರೋಧಾವೇಶವು ಯಾವ ಸ್ವಾಮಿ ಒಡೆಯರವರ ಪ್ರಭಾವದಿಂದಲೇ ಶಾಂತವಾಯಿತೆಂಬುವದು ನಿಮ್ಮ ಮನಸ್ಸಿಗೇನೇ ಸಾಕ್ಷಿಯಾಗಿರುವುದು. ಇನ್ನು ನಂಜನಗೂಡಿನಲ್ಲಿ ಒಡೆಯರವರ ಮುಕ್ಕಾಂ ಇದ್ದ ಕಾಲಕ್ಕೆ ನಿಮ್ಮ ಶಾಸ್ತ್ರೀಯ ಸಂದೇಹ ವಿಷಯಗಳನ್ನು ನಿವೃತ್ತಿಮಾಡಲು ಬ್ರಾಹ್ಮಣರಾದ ನಿಮ್ಮನ್ನು ಸರ್ವಜನಾಂಗವು ಆಹ್ವಾನಿಸಿದಾಗ ನೀವು ಸಾಮರ್ಥ್ಯವಿಲ್ಲದೇ ತಪ್ಪಿಸಿಕೊಂಡು ಈಗ ಹೇಳುತ್ತಿರುವ ನಿಮ್ಮ ಶಾಂತತೆಯ ಮಾತು ಕೈಲಾಗದ್ದರಿಂದ ನರಿಯು ದ್ರಾಕ್ಷಿಹಣ್ಣು ಹುಳಿಯೆಂದು ಹೇಳಿದಂತಿರುವದು.

ವೇದವನ್ನು ಬ್ರಾಹ್ಮಣರು ಮಾತ್ರ ಓದುವದು ಯಥಾಪಾತ್ರವೆಂದು ನೀವು ತಿಳುಕೊಂಡಿರುವುದು ನಿಮ್ಮ ನೈಸರ್ಗಿಕ ಸ್ವಾರ್ಥಬುದ್ಧಿಗೆ ಸರಿಯಾಗಿರುವುದು, ಮತ್ತು ನೀವು ಮಾತ್ರ ಬಹುಕಾಲದಿಂದಲೂ ನಿಮ್ಮ ಬ್ರಾಹ್ಮಣ ಜಾತಿಯೊಂದನ್ನೇ ವರ್ಣಿಸಿಕೊಂಡು ಇತರ ಜನಾಂಗವನ್ನು ಪರಿಪರಿಯಾಗಿ ಮನಸೋಕ್ತ ಸರ್ವಗ್ರಂಥಗಳಲ್ಲಿ ನಿಂದಿಸುತ್ತಾ ಬಂದಿರುವದು ನಿಮಗೆ ಮಾತ್ರ ಗೌರವವೆನಿಸಿರಬಹುದಲ್ಲವೇ? ನಿಮ್ಮ ಬ್ರಾಹ್ಮಣವರ್ಗದ ಆ ದುಡುಕನ್ನು ಇದುವರೆಗೂ ಯಾರೂ ಲಕ್ಷೀಕರಿಸದೆ ಇದ್ದುದೇ ನಿಮ್ಮ ಸ್ವಾರ್ಥಸ್ವೇಚ್ಛೆಗೆ ಕಾರಣವಾಗಿರುವುದು. ನೀವು ಕೇಳಿದ ವಿಷಯಕ್ಕೆ ಉತ್ತರ ಕೊಡುವಲ್ಲಿ ಪೋಸ್ಟದ್ವಾರಾ ಆಗುವ ಸ್ಟಾಂಪಿನ ವೆಚ್ಚವನ್ನು ಸಹಿಸಲಾರದಂಥಾ ಸಂಕುಚಿತಬುದ್ಧಿಯು ನಿಮ್ಮಲ್ಲಿ ಬೇರೂರಿರುವುದರಿಂದ ನೀವು ಇನ್ನು ಇಂಥಾ ದೊಡ್ಡಮಾತಿನಗೊಡವೆಗೆ ಹೋಗಕೂಡದೆಂದು ಸೂಚಿಸುವೆನು.

ಅಜ್ಜಯ್ಯಶಾಸ್ತ್ರಿ, ಸಂಸ್ಥಾನಕಾರಭಾರಿ
ಚವುಡಯ್ಯದಾನಪುರ. ತಾಲ್ಲೂಕು ರಾಣೇಬೆನ್ನೂರು ಜಿಲ್ಲಾ ಧಾರವಾಡ.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳ ಕಾನ್ಫರೆನ್ಸುಗಳು ಮತ್ತು ಮಿ|| ಶ್ರೀನರಸಿಂಹಶಾಸ್ತ್ರಿಗಳವರು.

ಕಳೆದ 2-3 ತಿಂಗಳಿಂದಲೂ ಈ ಡಿಸ್ಟ್ರಿಕ್ಟಿನ ತಾಲ್ಲೋಕುಗಳಲ್ಲಿ ಕಾನ್ಫರೆನ್ಸ್‌ಗಳು ನಡೆಯುತ್ತಾ ಇರುತ್ತವೆ. ಈ ಕಾನ್ಫರೆನ್ಸ್‌ಗಳ ಪೈಕಿ ಕೆಲವಕ್ಕೆ ಮಾತ್ರ ಹ|| ಡಿ|| ಡೆಪ್ಯುಟಿಕಮಿಷನರ್ ಸಾಹೇಬರವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಈ ಸಾಹೇಬರವರು ಅಧ್ಯಕ್ಷರಾಗುವಂಥಾ ಕಾನ್ಫರೆನ್ಸಿಗೆ ಮಿ|| ಶ್ರೀನರಸಿಂಹಶಾಸ್ತ್ರಿಗಳವರು ತಪ್ಪದೆ ಬೆಂಗಳೂರು ಮುಂತಾದ ದೂರಹಾಸಲೆ ಇರತಕ್ಕ ಸ್ಥಳಗಳಿಂದ ಬರುತ್ತಿರುವರು. ಇವರು ಎಕನಾಮಿಕ್ ಸೂಪರಿಂಟೆಂಡೆಂಟರಾಗಿಯೂ, ಪೋಲೀಸ್ ಸೂ|| ರಾಗಿಯೂ ಇದ್ದು ರಿಟೈರಾಗಿರುತ್ತಾರೆ. ನನಗೆ ತಿಳಿದಮಟ್ಟಿಗೆ ಇವರು ಯಾವ ಜಹಗೀರು, ಇನಾಮತಿ, ಅಥವ ವಿಶೇಷವಾದ ಜಮೀನನ್ನು ಹೊಂದಿರುವುದಿಲ್ಲ. ಕಾನ್ಫರೆನ್ಸಿಗೆ ಬಂದಾಗ ದೊಡ್ಡದಾಗಿ ಉಪನ್ಯಾಸವನ್ನು ಮಾಡುವುದಕ್ಕೆ ಶುರುಮಾಡಿ, ಮೊದಲು ಮೊದಲು ರೈತರುಗಳನ್ನು ಉದ್ಧಾರಮಾಡುವುದಕ್ಕಾಗಿಯೇ ತಾವು ಇನ್ನೂ ಜೀವಿಸಿರುತ್ತೇವೆಂಬುವಷ್ಟರಮಟ್ಟಿಗೆ ಹೇಳುತ್ತಾ ಇದ್ದು ಮಧ್ಯದಲ್ಲಿಯೇ ಬದಲಾವಣೆಮಾಡಿಕ್ಕೊಂಡು, ಹಾಲಿ ಲೆಜಸ್ಲೇಟಿವ್ ಕೌನ್ಸಿಲಿನಲ್ಲಿ ಮಾತ್ರ ಮೆಂಬರರಾಗಿರುವ ಒಬ್ಬರನ್ನು ವಿಶೇಷವಾಗಿ ತಾರೀಫ್‌ಮಾಡಿ ಅವರಿಂದಲೇ ಈ ಡಿಸ್ಟ್ರಿಕ್ಟು ಉಳಿದಿದೆ; ಅವರಿಲ್ಲದಿದ್ದರೆ ಸರ್ಕಾರದವರು ಡಿಸ್ಟ್ರಿಕ್ಟಾಮಲೆ ರೈತರನ್ನೆಲ್ಲಾ ಸಂಪೂರ್ಣವಾಗಿ ಮರೆತುಬಿಡುತ್ತಾ ಇದ್ದರು. ಆದರಿಂದ ರೈತರೆಲ್ಲರೂ ಬೇರೆ ಡಿಸ್ಟ್ರಿಕ್ಟಿಗೆ ಹೋಗಬೇಕಾಗುವ ಸಂಭವಬರುತ್ತಿತ್ತು. ಅದನ್ನೆಲ್ಲಾ ತಪ್ಪಿಸಿ ಮೆಂಬರರಾಗಿರುವ ಈ ದೊಡ್ಡಮನುಷ್ಯರು ಉಳಿಸಿ ನಿಮ್ಮನ್ನು ಕಾಪಾಡಿರುತ್ತಾರೆ ಎಂತು ಅರ್ಥವಾಗುವ ಹಾಗೆ ಒಂದೆರಡು ಕಡೆ ಮೆಂಬರ ಸಮಕ್ಷಮ ರೈತರು ಇನ್ನೂ ಮೌಢ್ಯದಲ್ಲಿರುತ್ತಾರೆಂದು ನಂಬಿಕ್ಕೊಂಡು, ಪರಿಪರಿಯಾಗಿ ಲೆಕ್ಚರನ್ನು ಕೊಟ್ಟಿರುತ್ತಾರೆ. ಇವರು (ಮಿ|| ನರಸಿಂಹಶಾಸ್ತ್ರಿಗಳು) ಇಷ್ಟರಮಟ್ಟಿಗೆ ಮುತವರ್ಜಿಯನ್ನು ವಹಿಸಿ ಯಾವಡಿಸ್ಟ್ರಿಕ್ಟಿಗೂ ಹೋಗದೆ ಈ ಮೈಸೂರುಡಿಸ್ಟ್ರಿಕ್ಟಿಗೆ ಮಾತ್ರ ಬಂದು ಅದರಲ್ಲಿ ಡೆಪ್ಯುಟಿಕಮಿಷನರು ಹೋಗತಕ್ಕ ಕಾನ್ಫರೆನ್ಸುಗಳಿಗೆ ಮಾತ್ರ ಹೋಗಿ ಮೆಂಬರಾಗಿರುವವರನ್ನು ಹೊಗಳುವ ಉಪನ್ಯಾಸವನ್ನು ಮಾಡುತ್ತಾ ಇರುವುದನ್ನು ನೋಡಿದರೆ ಏನೋ ಸಂದರ್ಭವಿರಬೇಕೆಂಬ ಅನುಮಾನವು ಬರುತ್ತದಲ್ಲವೆ? ಯಥಾಶಕ್ತಿ ನಮ್ಮ ಊಹೆಗೆ ತೋರುವುದೇನಂದರೆ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆ ಇವುಗಳಿಗೆ ಪುನಃ ಮೆಂಬರುಗಳನ್ನು ಚುನಾಯಿಸುವ ಕಾಲವು ಸಮೀಪಿಸುತ್ತಾ ಬಂದಿರುತ್ತೆ. ಹೀಗೆ ತಾಲ್ಲೋಕುಗಳಲ್ಲಿ ಹೋಗಿ ಮೇಲ್ಕಂಡ ಮೆಂಬರರನ್ನು ತಾರೀಫ್ ಮಾಡಿ, ಚುನಾವಣೆಗೆ ಓಟುಕೇಳುವುದಕ್ಕೆ ಹೋಗುವಾಗ್ಗೆ ಹಿಂದೆ ಕಾನ್ಫರೆನ್ಸ್‌ನಲ್ಲಿ ಹ|| ಡಿ|| ಡೆ|| ಕ|| ಸಾಹೇಬರ ಮುಂದೆ ರಿಟೈರ್ಡು ಪೋ|| ಸೂ|| ಮಿ|| ಶ್ರೀನರಸಿಂಹಶಾಸ್ತ್ರಿಗಳು ಹೇಳಿದ ದೊಡ್ಡಮನುಷ್ಯರು ಇವರೇ; ಇವರಿಗೇ ಓಟುಕೊಡಿ ಎಂದು ಮುಂತಾಗಿ ಹೇಳಲು ಅವಕಾಶವನ್ನು ಕಲ್ಪಿಸಿ ಮಾಡಿಕೊಳ್ಳುವಂತೆ ಕಾಣುವುದಲ್ಲದೆ, ಸದರೀ ಮೆಂಬರರ ಜಾಯಿಂಟಾಗಿ ಮಿ|| ಶ್ರೀನರಸಿಂಹಶಾಸ್ತ್ರಿಗಳವರು ಬಂದಿದ್ದರೆಂದು ಕಾಣುತ್ತೆ. ಇವರೇ ಸ್ವತಃ ರೈಲು ಛಾರ್ಜು, ಗಾಡಿಬಾಡಿಗೆ ಮುಂತಾದವು (ಭೋಜನ ವಿನಹ) ಇವರಿಗೆ ಖರ್ಚುಮಾಡಿಕ್ಕೊಂಡು ಬರಬೇಕಾದ ಕಾರಣವೇನಿತ್ತೆಂಬುದು ಅವರ ಇವರ ಇವರಿಗೆ ತಿಳಿಯದು. ಹ|| ಡಿ|| ಡೆಪ್ಯುಟಿಕಮಿಷನರ್ ಸಾಹೇಬರವರ ಧ್ಯಾಯದಲ್ಲಿ ಮು|| ರಾ|| ಶ್ರೀನರಸಿಂಹಶಾಸ್ತ್ರಿಗಳಂಥವರಿಗೆ ಭೋಜನಕ್ಕೆ [illegible] ಕೊರತೆಯೂ ಇರುವುದಿಲ್ಲ. [illegible] ಶಾಸ್ತ್ರಿ [illegible]

ಬೇಳೆ ಮುಂತಾದಭಕ್ಷ್ಯಭೋಜ್ಯಗಳು ಎಣೆಯಿಲ್ಲದೆ ದೊರೆಯುತ್ತವೆಂಬುದಕ್ಕೆ ನಾನು ಕಾರ್ಯಾರ್ಥವಾಗಿ ಸಾಹೇಬರು ಕ್ಯಾಂಪು ಮುಗಿಸಿಕೊಂಡು ಹೊರಟುಹೋದ ಬೆಳಿಗ್ಗೆ ಹೋದೆನು. ಅಲ್ಲಿ ರಾಶಿಯಾಗಿಬಿದ್ದಿದ್ದ ಬಾದಾಮಿ ಸಿಪ್ಪೆ, ನಿಂಬೆಹಣ್ಣಿನಸಿಪ್ಪೆ ಮತ್ತು ತೆಂಗಿನಕಾಯಿಕರಟ ಇವುಗಳನ್ನು ನೋಡಿ ಅಲ್ಲಿದ್ದ ಗಾಡಿಯವರನ್ನು ಕೇಳಲು ಸಾಹೇಬರ ಕ್ಯಾಂಪಿಗೆ ಸಪ್ಲೈಯಾಗಿ ಬಿಸಾಟಿದ್ದೆಂದು ಹೇಳಿದರು. ಉಳಿದ ಪದಾರ್ಥಗಳೆಷ್ಟಿರಬಹುದೆಂದು ನೀವೇ ಯೋಚಿಸಿರಿ. ಬಂದಿದ್ದ ರೈತರು ಅಲ್ಲಿ ಸುರಿದಿದ್ದ ತೆಂಗಿನಕಾಯಿಚಿಪ್ಪುಗಳನ್ನು ಕೈಗೆ ತೆಗೆದುಕೊಂಡಾದರೂ ಹೋಗಲಿಲ್ಲವೆಂದು ವ್ಯಸನವಾಯಿತು. ಇದನ್ನು ಮಿ॥ ಶ್ರೀನರಸಿಂಹಶಾಸ್ತ್ರಿಗಳು ಪ್ರಾಯಶಃ ಲೇಖನದಲ್ಲಿ ಹೇಳಲಿಲ್ಲವೆಂದು ತೋರುತ್ತೆ. ಕಾರಣಕ್ಕೆ ತಕ್ಕ ಸಂದರ್ಭಗಳು ಒದಗುತ್ತಾ ಇರುವುದನ್ನು ಅನುಸರಿಸಿಕೊಂಡು ಈ ಸಭೆಗಳ ಮೆಂಬರುಸ್ಥಾನಕ್ಕೆ ಓಟುಗಳಿಗಾಗಿ ಈಗಲಿಂದಲೂ ಪ್ರಯತ್ನಪಡುತ್ತಿರುವರು. ಇಂಥಾವುಗಳಿಗೆಲ್ಲಾ ಮನಕೊಡದೆ ನಿಜವಾಗಿಯೂ, ಮನಃಪೂರ್ವಕವಾಗಿಯೂ, ಬೂಟಾಟಿಗೆ ಇಲ್ಲದವರಾಗಿಯೂ, ರೈತರಾದ ನಮ್ಮ ಹಿತಚಿಂತನೆಯನ್ನು ಸರ್ವದಾ ಕೋರುವವರಿಗೇನೇ ಓಟು ಕೊಡಬೇಕೆಂಬದನ್ನು ಓಟರುಗಳು ಮರೆಯಬಾರದು. ರೈತ.

ಎಲ್ಲ ವೀರಶೈವಸಮಾಜಭಾಂಧವರಿಗೆ ವಿಜ್ಞಾಪನೆ.

ಶ್ರೀಮದಖಿಲಬ್ರಹ್ಮಾಂಡನಾಯಕನಾದ ಪರಶಿವನ ಪಂಚಮುಖೋದ್ಭವರಾದ ಶ್ರೀಮತ್ಪಂಚಾಚಾರ್ಯರಿಂದ ಸಂಸ್ಥಾಪಿಸಲ್ಪಟ್ಟ ಪಂಚಪೀಠಗಳಲ್ಲೊಂದಾಗಿಯೂ, ಹಿಂದುಗಳಿಗೆಲ್ಲಾ ಮುಖ್ಯವಾದ ಯಾತ್ರಾಸ್ಥಳವಾಗಿಯೂ, ಅತಿಪುರಾತನವೂ, ಎಲ್ಲ ಪುಣ್ಯಕ್ಷೇತ್ರಗಳಿಗಿಂತಲೂ ಶ್ರೇಷ್ಠವಾದದ್ದೂ ಆಗಿರುವ ಶ್ರೀಶೈಲಮಹಾಕ್ಷೇತ್ರವು ಯುಗಯುಗಾಂತರಗಳಿಂದಲೂ ಶ್ರೀಗಿರಿರಾಜ ಸೂರ್ಯಸಿಂಹಾಸನದ ವೀರಶೈವಜಗದ್ಗುರುಗಳ ಪೀಠಸ್ಥಾನವಾಗಿದ್ದು ಈಚೆಗೆ ಕಾಲಚಕ್ರಗತಿಯಿಂದ ಪುಷ್ಪಗಿರಿ ಶೈವಬ್ರಾಹ್ಮಣರಿಂದ ಆಕ್ರಮಿಸಲ್ಪಟ್ಟು ಅನುಭವಿಸಲ್ಪಟ್ಟುಕೊಂಡು ಬರುತ್ತಿರುವದಂತೆ. ನೋಡಿದಿರಾ! ಪುರಾತನಕಾಲದಿಂದಲೂ ನಮ್ಮ ವೀರಶೈವಜಗದ್ಗುರುಪೀಠಾಧಿಕಾರಿಗಳ ವಶವಾಗಿದ್ದು ಸ್ವಲ್ಪಕಾಲದಕೆಳಗೆ ಬ್ರಾಹ್ಮಣರ ವಶವಾಗಿರುವುದು ನಮ್ಮ ವೀರಶೈವರ ದುರದೃಷ್ಟವೆಂದೇ ಹೇಳಬಹುದಲ್ಲವೆ ? ಅಲ್ಲದೆ ಈ ವಿಷಯವನ್ನು ಕೇಳಿದ ಯಾವ ವೀರಶೈವ ಬಾಂಧವರಿಗೆತಾನೆ ವಿಷಾದಕರವಾಗದಿರದು ? ವೀರಶೈವರೇ, ನಾವೆಲ್ಲರೂ ತನುಮನೋಧನಂಗಳಿಂದ ಶ್ರೀಶೈಲಮಹಾಕ್ಷೇತ್ರದಲ್ಲಿ ನಮ್ಮ ಪೀಠವನ್ನು ಉಳಿಸುವುದು ಯೋಗ್ಯವಲ್ಲವೆ ? ಆ ಪುಣ್ಯಕ್ಷೇತ್ರದಲ್ಲಿ ನಮ್ಮ ವೀರಶೈವ ಧರ್ಮಾಧಿಕಾರವಿಲ್ಲದಿದ್ದರೆ ನಮಗೊಂದು ತರದ ಕಲಂಕವಲ್ಲವೆ ? ನಮ್ಮ ಗುರುಪೀಠದ ಮತ್ತು ಅಲ್ಲಿ ನಮ್ಮ ಧರ್ಮದ ಹಾನಿಯಾಗುವ ಕಾಲದಲ್ಲಿ ನಾವು ಕೇಳಿ ನೋಡಿ ಸುಮ್ಮನೆ ಕೂತುಕೊಂಡರೆ ವೀರಶೈವರೆನಿಸುವೆವೆ ? ಈ ವಿಷಯದಲ್ಲಿ ಹಿಂದಿನ ಶಿವಶರಣರ ಇತಿಹಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ಅವರು ಹ್ಯಾಗೆ ನಡೆದಿದ್ದರೆಂಬುದನ್ನು ವಿಚಾರಿಸಿರಿ. ಅವರು ವೀರಶೈವಧರ್ಮದಸಲುವಾಗಿ ಪ್ರಾಣದಮೇಲೆ ಸಹ ಆಸೆಯಿಲ್ಲದೆ ಪ್ರಯತ್ನಪಟ್ಟಿರಲ್ಲವೇ? ಅವರೇ ವೀರಶೈವರು, ನೀವಲ್ಲವೇನು ? ವೀರಶೈವರಾದರೆ, ವೀರಶೈವಧರ್ಮವನ್ನು ಉಳಿಸುವುದು ನಿಮ್ಮ ಕರ್ತವ್ಯವಲ್ಲವೆ ? ಆದ್ದರಿಂದ ನಮ್ಮ ಪ್ರಾಣಕ್ಕಿಂತಲೂ ಹೆಚ್ಚಾದ ಧರ್ಮವನ್ನು ಆ ಪವಿತ್ರಕ್ಷೇತ್ರದಲ್ಲಿ ಉಳಿಸುವುದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿರುತ್ತೆ. ಇದೇ ಅಭಿಪ್ರಾಯದಿಂದಲೇ ಸೂರ್ಯಸಿಂಹಾಸನವೆಂಬ ಪರ್ವತಪೀಠದ ಚರಪಟ್ಟಾಧ್ಯಕ್ಷರಾದ ಭಿಕ್ಷಾವರ್ತಿಮಹಾಸ್ವಾಮಿಗಳು ಪುಷ್ಪಗಿರಿ ಬ್ರಾಹ್ಮಣಮಠಾಧಿಕಾರಿಗಳಮೇಲೆ ಕರ್ನೂಲು ಡಿಸ್ಟ್ರಿಕ್ಟು ಕೋರ್ಟಿನಲ್ಲಿ ದಾವೆಯನ್ನು ತಂದಿರುತ್ತಾರೆಂಬುದನ್ನು ಕೇಳಿ ಯಾವ ವೀರಶೈವರಿಗೆತಾನೆ ಸಂತೋಷಕರವಾಗದಿರದು? ಇದಲ್ಲದೆ ಶ್ರೀಶೈಲದಲ್ಲಿ ಪ್ರತಿವರ್ಷವೂ ಶಿವರಾತ್ರಿಯ ಕಾಲದಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿಗೂ ಭ್ರಮರಾಂಬೆಗೂ ವಿವಾಹಮಹೋತ್ಸವನಡೆಯುತ್ತಿರುವುದು ಪ್ರಸಿದ್ಧವದೆ. ಆ ಕಾಲದಲ್ಲಿ ವೀರಶೈವರು, ಬ್ರಾಹ್ಮಣರು ಸಹ ಪುರೋಹಿತರಾಗಿದ್ದು, ಮಲ್ಲಿಕಾರ್ಜುನಸಂಬಂಧವಾದ ತಾಂಬೂಲ ಇತ್ಯಾದಿ ಮರ್ಯಾದೆಗಳನ್ನು ವೀರಶೈವರೂ ; ಭ್ರಮರಾಂಬಾಸಂಬಂಧವಾದ ತಾಂಬೂಲ ಇತ್ಯಾದಿ ಮರ್ಯಾದೆಗಳನ್ನು ಬ್ರಾಹ್ಮಣರೂ ತೆಗೆದುಕೊಳ್ಳತಕ್ಕ ಪದ್ಧತಿ ಇದುವರಿವಿಗೂ ನಡೆದುಬಂದಿತ್ತೆಂದು ಕೇಳುತ್ತೇವೆ. ಆದರೆ ಇದೇ 1926 ನೆಯ ಇಸವಿ ಫೆಬ್ರುವರಿ ತಿಂಗಳು ತಾರೀಖು 11 ರಲ್ಲಿ ನಡೆದ ಮಹಾಶಿವರಾತ್ರಿಯದಿವಸ ರಾತ್ರಿ 11 ಗಂಟೆವ್ಯಾಳ್ಯದಲ್ಲಿ ಶ್ರೀಶೈಲಮಹಾಕ್ಷೇತ್ರದಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿಯ ಭ್ರಮರಾಂಬೆಯ ವಿವಾಹಮಹೋತ್ಸವಕಾಲದಲ್ಲಿ ಜರುಗಿದ ಮಹಾಸಭೆಯಲ್ಲಿ ತ್ರಿಮತಸ್ಥ ಬ್ರಾಹ್ಮಣರು, ಲಿಂಗಾಯತಪಂಚಪೀಠಸ್ಥರಿಗೆ ತಾಂಬೂಲ ಇತ್ಯಾದಿ ಮರ್ಯಾದೆಗಳನ್ನು ಕೊಡುವುದಿಲ್ಲವೆಂಬುದಾಗಿಯೂ, ವೀರಶೈವಮತವು ವೇದಾಗಮೋಪನಿಷತ್‌ಶ್ರುತಿಸ್ಮೃತಿಪುರಾಣೇತಿಹಾಸಂಗಳಾಧಾರದಿಂದ ಬಂದಿಲ್ಲವೆಂಬುದಾಗಿಯೂ, ವೀರಶೈವರಿಗೆ ಬ್ರಾಹ್ಮಣ್ಯವಿಲ್ಲವೆಂಬುದಾಗಿಯೂ, ಶೂದ್ರರೆಂತ ನಿರಾಕರಿಸಿರುವರೆಂಬುದಾಗಿಯೂ ಕರ್ನೂಲುಜಿಲ್ಲೆಯ ವೀರಶೈವಸಮಾಜದವರಿಂದ ತಿಳಿಯಬರುತ್ತದೆ. ಆದಕ್ಕೆ ಕಲಹವುಂಟಾಗುವ ಸಂಭವತೋರಿದ್ದರಿಂದ ಸರ್ಕಾರದವರು ನಿಮ್ಮ ಎರಡುಪಂಗಡಗಳಲ್ಲಿಯೂ, ಯಾರು ಬ್ರಾಹ್ಮಣ್ಯವನ್ನು ಪುಷ್ಟೀಕರಿಸಿ ಸಿದ್ಧಮಾಡಿಕೊಂಡು ಬರುತ್ತೀರೋ, ಅವರಿಗೆ ಈ ತಾಂಬೂಲ ಇತ್ಯಾದಿ ಮರ್ಯಾದೆಯನ್ನು ಕೊಡಲಾಗುತ್ತದೆಂದು ಹೇಳಿ ತಮ್ಮ ವಶದಲ್ಲಿಟ್ಟುಕೊಂಡಿರುವರಂತೆ. ಆ ಬ್ರಾಹ್ಮಣ್ಯವನ್ನು ಸಿದ್ಧಮಾಡುವುದಕ್ಕೋಸ್ಕರ ಗೋದಾವರಿಜಿಲ್ಲೆಯಲ್ಲಿ ಸಭೆನಡಿಸಲಿಕ್ಕೆ ಬ್ರಾಹ್ಮಣರೂ, ಕರ್ನೂಲುಜಿಲ್ಲೆಯ ನಮ್ಮ ವೀರಶೈವಮಂಡಲಿಯವರೂ ನಿರ್ಣಯಮಾಡಿಕೊಂಡಿರುತ್ತಾರಂತೆ. ಆದುದರಿಂದ ಯಾವ ಪರಳಿವೈದ್ಯನಾಥಲಿಂಗದ ವಿವಾದವನ್ನು ಹಿಡಿದು ಶಾಸ್ತ್ರಾರ್ಥಮಾಡಿ ಪ್ರಖ್ಯಾತರಾಗಿರುವರೋ, ಆ ಶ್ರೀಮದ್ದಕ್ಷಿಣಕಾಶಿಸಿಂಹಾಸನಾಧೀಶ್ವರರಾದ ಚೌಡದಾನಪುರದ ವಿರೂಪಾಕ್ಷಒಡೆಯರವರು, ಹೈದರಾಬಾದ್ ಬಾಪುರಾವ್ ಹೈಕೋರ್ಟುವಕೀಲ್ ನಿರ್ಮಲದೇಶಮುಖರು, ಇನ್ನೂ ಮುಂತಾದ ಪಂಡಿತಮಹಾಶಯರುಗಳೆಲ್ಲರೂ, ಆ ಗೋದಾವರಿಜಿಲ್ಲೆಯ ಸಭೆಗೆ ದಯಮಾಡಿ ಯಾವ ಬ್ರಾಹ್ಮಣರು, ಈ ಸನಾತನವಾದ ವೀರಶೈವಪವಿತ್ರಮತವು ಶೂದ್ರಮತವೆಂತಲೂ, ಹೊಸದಾಗಿ ಕಲ್ಪಿಸಲ್ಪಟ್ಟಿರುವುದೆಂತಲೂ, ವೇದಗಳಲ್ಲಿಯೂ, ಪುರಾಣೇತಿಹಾಸಗಳಲ್ಲಿಯೂ, ವರ್ಣಿತವಾಗಿಲ್ಲವೆಂತಲೂ, ಸತ್ಯಕ್ಕೂ, ಧರ್ಮಕ್ಕೂ ಅಂಜದೆ ನುಡಿಯುತ್ತಿರುವರೋ ಅಂಥವರ ಸಂದೇಹಗಳೆಂಬ ಜೀಮೂತಾವಳಿಯನ್ನು ತಮ್ಮ ಸದ್ಬೋಧೆ ಸಲ್ಲೇಖಗಳೆಂಬ ಮಹಾಮಾರುತದಿಂದ ಚೆದರಿಹೋಗುವಂತೆ ಮಾಡಿ, ವೀರಶೈವಮಾರ್ತಾಂಡನು ಚಂಡಪ್ರಚಂಡತರದಿಂದ ದುರ್ನಿರೀಕ್ಷನಾಗಿ ಪ್ರಕಾಶಿಸುವಂತೆಮಾಡಿ ನಮ್ಮ ವೀರಶೈವಬ್ರಾಹ್ಮಣ್ಯವನ್ನು ಸ್ಥಿರಪಡಿಸಿಕೊಳ್ಳುವುದು ನಮ್ಮ ಮತಬಾಂಧವರೆಲ್ಲರ ಮತ್ತು ಪಂಡಿತಶ್ರೇಷ್ಠರ ಪರಮಕರ್ತವ್ಯವಿರುತ್ತದೆ. ಅಲ್ಲದೆ ಆಂಧ್ರದೇಶದಲ್ಲಿ ನಮ್ಮ ವೀರಶೈವಮಂಡಲಿಯು ಅಧಿಕವಾಗಿಲ್ಲದ್ದರಿಂದಲೂ, ವಿದ್ಯೆಯಲ್ಲಿ ಬಹಳವಾಗಿ ಹಿಂದುಳಿದಿರುವುದರಿಂದಲೂ ಬ್ರಾಹ್ಮಣರೊಂದಿಗೆ ಚರ್ಚೆಮಾಡುವ ಪಂಡಿತರು ದೊರೆಯದೆ ಇರುವಪ್ರಯುಕ್ತ ಉಳಿದ ಮೈಸೂರು, ನೈಜಾಂ, ಧಾರ್ವಾಡ ಮೊದಲಾದ ಕಡೆ ಇರುವ ನಮ್ಮ ಮಹಾಶಯರುಗಳೆಲ್ಲಾ ಇದಕ್ಕೆ ಮುಖ್ಯಕಾರಣರಾಗಿ ನಿಲ್ಲತಕ್ಕದ್ದಾಗಿದೆ. ಇಂದೂರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಚೌಡದಾನಪುರದ ವೇ॥ ವಿರೂಪಾಕ್ಷಒಡೆಯರವರು ತಾ॥ 27-3-26 ನೇ ಮೈಸೂರು ಸ್ಟಾರಿನಲ್ಲಿ ಬ್ರಾಹ್ಮಣರಕಡೆ ಯಾವದೇಶದ, ಯಾವಜಾತಿಯ ಪಂಡಿತರುಗಳೇ ಆಗಲಿ ತಮ್ಮ ಬ್ರಾಹ್ಮಣ್ಯವನ್ನು ಸಿದ್ಧಿಮಾಡಬಹುದು: ಅದಕ್ಕೆ ನಾನು ನಮ್ಮ ವೀರಶೈವ ಬ್ರಾಹ್ಮಣ್ಯವಂ ಸಿದ್ಧಮಾಡುತ್ತೇನೆಂಬುದಾಗಿ ಪ್ರಕಟಿಸಿರುವದು ತಿಳಿಯಬಂತು. ಇದಲ್ಲವೇ ನಮ್ಮ ವೀರಶೈವಜನ್ಮಸಾರ್ಥಕ್ಯದ ಮಹತ್ವವು! ಮಹಾಸ್ವಾಮಿಒಡೆಯರವರೇ ಪರಳೀಪ್ರಕರಣಕ್ಕೆ ತಾವು ಮುಖಂಡರಾಗಿ ನಿಂತು ಹೇಗೆ ಅದನ್ನು ಜೈಸಿ ಆ ಚಂದ್ರಾರ್ಕವಾದ ಕೀರ್ತಿಯನ್ನು ಹೊಂದಿದರೋ. ಅದರಂತೆ ತಾವೇ ಗೋದಾವರೀಜಿಲ್ಲೆಯಲ್ಲಿ ನಡೆಯುವ ಸಭೆಗೆ ದಯಮಾಡಿ ಮುಖಂಡರಾಗಿ ಬ್ರಾಹ್ಮಣ್ಯವಂ ಸಿದ್ಧಮಾಡಲಿಕ್ಕೆ ಕಂಕಣಬದ್ಧರಾಗಿ ನಿಂತು. ತಾವು ಹಿಡಿದ ಕೆಲಸವನ್ನು ಸಾರ್ಥಕ್ಯಗೊಳಿಸಿ ಜಯಪತ್ರಿಕೆಯನ್ನು ಹೊಂದಿ ತಮ್ಮ ಮಹಾಪಾಂಡಿತ್ಯಕ್ಕೆ ಸಾರ್ಥಕ್ಯವನ್ನುಂಟುಮಾಡಿಕೊಳ್ಳುತ್ತಾರೆಂಬುದಾಗಿ ತಮಗೆ ವಿನಂತಿಮಾಡಿಕೊಳ್ಳುತ್ತೇನೆ. ಶ್ಲೋಕ ॥ ಯತ್ಶಾಂಭವಮಹಾಧರ್ಮಂ ಸ್ಥಾಪನಾರ್ಥಂತ್ವಜೀಜನಃ । ಸಗಣೇಶ್ವರ ಮಾಪ್ನೋತಿಶಂಕರಸ್ಯಪ್ರಸಾದತಃ ॥ ಎಂದು ಶಿವಾಗಮದಲ್ಲಿ ಹೇಳಿದಂತೆ ನಮ್ಮ ಧರ್ಮವನ್ನು ಆ ಪವಿತ್ರಕ್ಷೇತ್ರದಲ್ಲಿ ಉಳಿಸುವುದರಿಂದ ಮೇಲಿನ ಶ್ಲೋಕದ ಅಭಿಪ್ರಾಯದಂತೆ ಗಣೇಶಪದವಿಗೆ ಪಾತ್ರರಾಗುತ್ತೇವೆ. ಕಾರಣ ಈ ಸುಸಮಯವನ್ನು ಕಳೆಯದೆ ಎಲ್ಲರೂ ಪ್ರಯತ್ನಪಟ್ಟು ಜಯವನ್ನು ಹೊಂದಿ ಇಹದಲ್ಲಿ ಸತ್ಕೀರ್ತಿಭಾಜನರೂ, ಪರದಲ್ಲಿ ಮುಕ್ತಿಭಾಜನರೂ ಆಗತಕ್ಕದ್ದೆಂದು ಎಲ್ಲಾ ವೀರಶೈವರಿಗೆ ವಿನಯಪೂರ್ವಕ ಬಿನ್ನೈಸಿಕೊಳ್ಳುತ್ತೇನೆ.

ವೀರಶೈವಸಮಾಜಾಭಿಮಾನಿ.

ಮಹಾತ್ಮಗಾಂಧಿಯವರ ಸ್ವಚರಿತ್ರ.

(ಸತ್ಯಾನ್ವೇಷಣ.)

15 ನೆಯ ಪ್ರಕರಣ.

ಆಂಗ್ಲದೇಶದಲ್ಲಿ ದೊಡ್ಡಮನುಷ್ಯನಂತೆ ನಟಿಸಿದುದು.

ದಿನದಿನಕ್ಕೆ ನನಗೆ ಶಾಕಾಹಾರದಲ್ಲಿ ನಂಬುಗೆಯು ಪ್ರಬಲವಾಗುತ್ತಬಂದಿತು. ಸಾಲ್ಟರವರ ಪುಸ್ತಕವನ್ನೋದಿದಮೇಲೆ ಆಹಾರಪದ್ಧತಿಯನ್ನು ಕುರಿತ ಪುಸ್ತಕಗಳನ್ನೋದಬೇಕೆಂಬ ಆಸಕ್ತಿಯು ನನಗೆ ಹೆಚ್ಚಾಯಿತು. ಅದುಕಾರಣ ಅವನ್ನು ಓದುತ್ತಬಂದೆನು. ಹೋವರ್ಡ್ ವಿಲಿಯಂಸ್‌ರವರು - ಎಥಿಕ್ಸ್ ಆಫ್ ಡಯಟ್ - ಎಂಬ ಗ್ರಂಥವನ್ನು ಬರೆದಿದ್ದರು. ಅದರಲ್ಲಿ ಮನುಷ್ಯನ ಆಹಾರವನ್ನು ಕುರಿತು ಸಕಲವಿಷಯವೂ ವಿವರಿಸಲ್ಪಟ್ಟಿದ್ದಿತು. ಪಿತಗಾರಸು, ಏಸುಕ್ರಿಸ್ತನ ಕಾಲಮೊದಲ್ಗೊಂಡು ಈವರೆಗೆ ಮತಕರ್ತರು ಪ್ರವರ್ತಕರು ಮೊದಲಾಗಿ ಆಸ್ತಿಕರೆಲ್ಲರೂ ಶಾಕಾಹಾರಿಗಳೆಂದೇ ಆ ಗ್ರಂಥದಲ್ಲಿ ವಿವರಿಸಲ್ಪಟ್ಟಿದ್ದಿತು. ಡಾಕ್ಟರ್ ಅನ್ನಾಕಿಂಗ್ಸ್ ಫರ್ಡರವರ ಹೆಂಡತಿಯು ಬರೆದ - ಪರ್‌ಫೆಕ್ಟ್‌ವೆ ಇನ್ ಡಯಟ್ - ಎಂಬ ಗ್ರಂಥದಲ್ಲು ಸಹ ಬಹಳ ಮುಖ್ಯವಿಷಯಗಳಿವೆ. ಡಾಕ್ಟರ್ ಅಲ್ಲಿನ್ಸ್‌ರವರು - ಹೆಲ್ತ್ ಅಂಡ್ ಹೈಜಿಯನ್ - ಎಂಬ ಪುಸ್ತಕವನ್ನು ಬರೆದಿರುವರು. ಅದೂ ಬಹಳ ಚೆನ್ನಾಗಿದೆ. ಅವರು ಶಾಕಾಹಾರಿಗಳು. ತಮ್ಮಲ್ಲಿಗೆ ಚಿಕಿತ್ಸೆಗಾಗಿ ಬಂದವರೆಲ್ಲರಿಗೂ ಶಾಕಾಹಾರವನ್ನೇ ವಿಧಿಸುತ್ತಿದ್ದರು. ಈ ಪುಸ್ತಕಗಳೆಲ್ಲವನ್ನೂ ಓದಿದುದರಿಂದಲೇ ಆಹಾರಪದ್ಧತಿಯನ್ನು ಪರೀಕ್ಷಿಸಲುಪಕ್ರಮಿಸಿದೆನು. ಆರೋಗ್ಯಾಪೇಕ್ಷೆಯಿಂದಲೇ ಪರಿಶೋಧನೆಗುಪಕ್ರಮಿಸಿದುದು. ನನ್ನ ಸ್ನೇಹಿತನಿಗೆ ತಿಂಡಿಯವಿಚಾರದಲ್ಲಿ ಭಯಹೋಗಲಿಲ್ಲ. ಮಾಂಸವನ್ನು ತಿನ್ನದಿರುವುದರಿಂದ ಬಹಳ ನೀರಸವಾದುದಲ್ಲದೆ ನನಗೆ ಬುದ್ಧಿಮಂದವಾಯಿತೆಂದು ಸಹ ಭಯಪಟ್ಟುಕೊಂಡೆನು. ಅದೂ ಅಲ್ಲದೆ ಆಂಗ್ಲೆಯರೊಡಗೂಡಿರುವಾಗ್ಗೆ ನಾನು ಚುರುಕಾಗಿ ನಡೆಯಲಾರೆನೆಂದು ಸಹ ಆತನು ತಿಳಿದುಕೊಂಡನು. ನಾನು ಶಾಕಾಹಾರ ಪುಸ್ತಕವನ್ನು ಓದುತ್ತಿದ್ದುದರಿಂದಲೇ ನನಗೆ ವಿಪರೀತಬುದ್ಧಿಯುಂಟಾಯಿತೆಂದು ಸಹ ಆತನಿಗೆ ತೋರಿತು. ನಾನು ನನ್ನ ವ್ಯಾಸಂಗವನ್ನು ಬಿಟ್ಟು ಆಹಾರವನ್ನು ಕುರಿತು ಪರಿಶೋಧನವನ್ನು ಮಾಡುವುದರಲ್ಲೇ ಕಾಲವನ್ನು ವೃಥಾ ಕಳೆಯುತ್ತೇನೆಂದು ಆತನು ಭಾವಿಸಿದನು.

ಒಂದು ದಿವಸ ನಾಟಕಶಾಲೆಗೆಹೋಗಲು ಆತನು ನನ್ನನ್ನು ಕರೆದನು. ಮೊದಲು ಹಲ್ಬರ್ನ್ ರೆಸ್ಟೊರೆಂಟ್ ಭೋಜನಶಾಲೆಯಲ್ಲಿ ಊಟಮಾಡಿದಮೇಲೆ ನಾಟಕಶಾಲೆಗೆ ಹೋಗುವುದೆಂದು ಆತನು ನಿಶ್ಚಯಿಸಿದನು. ಅದು ಬಹಳ ಒಳ್ಳೇ ಭೋಜನಶಾಲೆಯು. ನನಗೆ ಅದು ಬಹಳ ಅದ್ಭುತವಾದ ಅರಮನೆಯಂತೆ ತೋರಿತು. ವಿಕ್ಟೋರಿಯಾ ಹೋಟಲಿನಲ್ಲಿ ಊಟಮಾಡಿದಮೇಲೆ ಪುನಃ ಅಂತಹ ದೊಡ್ಡಹೋಟಲಿಗೆ ನಾನು ಹೋಗಿರಲಿಲ್ಲವು. ವಿಕ್ಟೋರಿಯಾ ಹೋಟಲಿನಲ್ಲಿ ನಾನು ಮುಳ್ಳಿನಮೇಲೆ ಇದ್ದಂತೆಯೇ ಇದ್ದೆನು. ಹಲ್ಬರ್ನ್ ರೆಸ್ಟೊರೆಂಟಿಗೆಹೋಗಿ ಬಹಳಜನ ದೊಡ್ಡಮನುಷ್ಯರ ಮಧ್ಯದಲ್ಲಿ ನಾನು ಕುಳಿತ್ತಿದ್ದೆನಾದುದರಿಂದ ಮೇಜಿನಮೇಲೆ ಇರಿಸಿದ್ದ ತಿನ್ನತಕ್ಕ ಪದಾರ್ಥಗಳಲ್ಲಿ ಮಾಂಸವುಮಿಶ್ರವಾಗಿದೆಯೋ ಇಲ್ಲವೇ ಎಂದು ನಾನು ಕೇಳಲು ಅವಕಾಶವಿರಲಿಲ್ಲವು. ಹಾಗೆ ಕೇಳುವುದು ಮರ್ಯಾದೆಯಲ್ಲವೆಂದು ಸ್ನೇಹಿತನು ಹೇಳಿದನು. ಆ ದಿವಸ ಅಲ್ಲಿ ಬಹಳ ಜನರು ಕುಳಿತುಕೊಂಡು ಊಟಮಾಡುತ್ತಿದ್ದರು. ಮೊಟ್ಟಮೊದಲು ಸೂಪು ಎಂಬ ಪದಾರ್ಥವನ್ನು ತಂದು ಮಡಗಿದರು. ನಾನೂ ನನ್ನ ಸ್ನೇಹಿತನೂ ಮಧ್ಯದಲ್ಲಿದ್ದ ಒಂದು ಮೇಜಿನಬಳಿ ಕುಳಿತಿದ್ದೆವು. ಆ ಸೂಪನ್ನು ಯಾತರಿಂದ ಮಾಡಿದ್ದರು ಎಂಬ ಸಂಶಯವು ನನಗೆ ಹುಟ್ಟಿತಾದರೂ ಅದನ್ನು ಕುರಿತು ನನ್ನ ಸ್ನೇಹಿತನನ್ನು ಕೇಳಲಿಕ್ಕಿಲ್ಲವಾದುದರಿಂದ ಬಡಿಸುವವನನ್ನು ಕರೆದೆನು. ಅದನ್ನು ನನ್ನ ಸ್ನೇಹಿತನು ನೋಡಿ ಏತಕ್ಕಾಗಿ ಕೂಗುತ್ತೀಯೇ ಎಂದು ಗಟ್ಟಿಯಾಗಿ ಕೇಳಿದನು. ಈ ಸೂಪಿನಲ್ಲಿ ಶಾಕಪದಾರ್ಥಗಳೇ ಸೇರಿವೆಯೆಂದು ಕೇಳುವುದಕ್ಕಾಗಿ ಎಂದು ಬಹಳ ಸಂಕೋಚದಿಂದ ಹೇಳಿದೆನು. - ನೀನು ದೊಡ್ಡಮನುಷ್ಯರ ಸಮೂಹದಲ್ಲಿರಲು ಅರ್ಹನಲ್ಲವು. ನೀನು ಇಲ್ಲಿ ಸರಿಯಾಗಿ ಊಟಮಾಡದಿದ್ದರೆ ಇನ್ನೊಂದು ಹೋಟಲಿಗೆಹೋಗಿ ಊಟಮಾಡಿಕೊಂಡು ನಾನು ಬರುವವರೆಗೂ ನಿರೀಕ್ಷಿಸಿಕೊಂಡಿರು - ಎಂದು ಆತನು ಕೋಪದಿಂದ ಹೇಳಿದನು. ಆದರೆ ಅದು ನನಗೆ ಸಂತೋಷಕರವಾಗಿಯೇ ಇದ್ದಿತು. ನಾನು ಹೊರಗೆ ಹೊರಟೆನು. ಅಲ್ಲಿಗೆಹೋಗಿ ನೋಡುವಲ್ಲಿ ಒಂದು ಶಾಕಾಹಾರದ ಹೋಟಲುಸಿಕ್ಕಿತಾದರೂ ರಾತ್ರಿ ಹೊತ್ತಾಗಿದ್ದುದರಿಂದ ಅದು ಮುಚ್ಚಲ್ಪಟ್ಟಿದ್ದಿತ್ತಾದಪ್ರಯುಕ್ತ ಆ ರಾತ್ರಿ ನನಗೆ ಊಟವಿಲ್ಲವಾಯಿತು. ತರುವಾಯ ನಾವಿಬ್ಬರೂಸೇರಿ ನಾಟಕವನ್ನು ನೋಡಲು ಹೋದೆವು. ಈ ವಿಷಯವನ್ನು ಕುರಿತು ಆತನು ಪುನಃ ಯಾವಮಾತನ್ನೂ ಆಡಲಿಲ್ಲ. ನಾನು ಹೇಳಬೇಕಾದುದಾವುದೂ ನನಗೆ ತೋರಲಿಲ್ಲ. ಇದೇ ನಮಗೆ ಹುಟ್ಟಿದ ಅಲ್ಪ ಮನಸ್ತಾಪವು. ಇದರಿಂದ ನಮ್ಮ ಸ್ನೇಹಭಂಗ ಬರಲಿಲ್ಲವು. ಆತನು ನನ್ನಮೇಲಣ ವಿಶೇಷವಾದ ಅನುರಾಗದಿಂದ ಹಾಗೆ ಮಾಡುತ್ತಿದ್ದಾನೆಂದು ನಾನು ತಿಳಿದಿದ್ದೆನಲ್ಲದೆ ನಮ್ಮಿಬ್ಬರಿಗೂ ಭಿನ್ನಾಭಿಪ್ರಾಯವು ಹೆಚ್ಚಿದ್ದಿತಾದರೂ ನನಗೆ ಆತನಲ್ಲಿ ಭಕ್ತಿಕೂಡ ಹೆಚ್ಚಿತ್ತು. ನಾನು ಮಾಂಸಾಹಾರವನ್ನು ವರ್ಜಿಸಿದ್ದೆನಾದರೂ ದೊಡ್ಡಮನುಷ್ಯರಮಧ್ಯೆ ಸರಿಯಾಗಿ ವಿಳಕವಾಗಿರುವವನೆಂದು ನನ್ನ ಸ್ನೇಹಿತನಿಗೆ ತೋರಿಸಬೇಕೆಂದು ನಿರ್ಧರಿಸಿದೆನು. ಅದಕ್ಕಾಗಿಯೇ ಆಂಗ್ಲದೇಶದ ದೊಡ್ಡಮನುಷ್ಯರ ಪದ್ಧತಿಯನ್ನು ಅನುಸರಿಸಿದೆನು. ಅದು ನನಗೆ ಬಹಳ ಕಷ್ಟಕೆಲಸವಾಗಿದ್ದಿತು.

ಮೊದಲು ಹೊಸ ಉಡುಪುಗಳು ಅವಶ್ಯವಾಗಿದ್ದುದರಿಂದಲೂ, ನಾನು ಬೊಂಬಾಯಿನಲ್ಲಿ ಹೊಲಿಸಿದ್ದುದು ಆ ದೇಶದ ಮರ್ಯಾದೆಗೆ ಅನುಕೂಲವಾಗಿಲ್ಲದಿದ್ದುದರಿಂದಲೂ ಆರ್ಮಿ ಅಂಡ್ ನೇವಿಸ್ಟೋರ್ಸ್ ಎಂಬ ಅಂಗಡಿಯಲ್ಲಿಹೊಸ ಉಡುಪುಗಳನ್ನು ಮಾಡಿಸಿದೆನು. 15 ರೂಪಾಯಿಗಳಷ್ಟು ಬೆಲೆಬಾಳುತ್ತಿರುವ ಒಂದು ಟೊಪ್ಪಿಗೆಯನ್ನು ಕೊಂಡುಕೊಂಡೆನು. ಆ ಕಾಲದಲ್ಲಿ ಅದಕ್ಕೆ ಬಹಳ ಬೆಲೆ. 150 ರೂಪಾಯಿಗಳನ್ನು ವೆಚ್ಚಮಾಡಿ ಬಾಂಡು ಬೀದಿಯಲ್ಲಿ ಸಂಜೆಯುಡುಪನ್ನು ಹೊಲಿಸಿದೆನು. ಲಂಡನ್ ನಗರದಲ್ಲಿ ಹೊಸಮಾದ್ರಿಗೆ ಬಾಂಡು ಬೀದಿಯು ಪ್ರಧಾನ ಸ್ಥಳವು. ಜೋಡೆಳೆಯ ಭಂಗಾರದ ಗಡಿಯಾರಸರಪಳಿಯನ್ನು ಕಳುಹಿಸಿಕೊಡುವಂತೆ ನಮ್ಮಣ್ಣನಿಗೆ ಬರೆಯಲು ಆತನು ಬಹಳ ದಯೆಯಿಂದ ಕಳುಹಿಸಿಕೊಟ್ಟನು. ನೆಕ್‌ಟೈಯನ್ನು ಅಂಗಡಿಗೆ ಹೋಗಿ ಕಟ್ಟಿಸಿಕೊಳ್ಳುವುದು ನಾಗರಿಕತೆಯಲ್ಲವೆಂದು ಅದನ್ನು ಕಟ್ಟುವ ಪದ್ಧತಿಯನ್ನು ಅರಿತುಕೊಂಡೆನು. ಭರತಖಂಡದಲ್ಲಿ ಕ್ಷೌರಿಕನು ಕ್ಷೌರವನ್ನು ಮಾಡುವಾಗ್ಗೆ ಮಾತ್ರ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಿದ್ದೆನು. ಆದರೆ ಲಂಡನ್ ನಗರದಲ್ಲಿ ಪ್ರತಿದಿನವೂ ಒಂದು ದೊಡ್ಡ ನಿಲುವುಗನ್ನಡಿಯಮುಂದೆ 10 ನಿಮಿಷಗಳಿಗೆ ಕಡಿಮೆಯಿಲ್ಲದೆ ನಿಂತುಕೊಂಡು ಸೊಗಸನ್ನು ನೋಡಿಕೊಳ್ಳುವುದರಲ್ಲಿ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಿದ್ದೆನು. ತಲೆಯಕೂದಲನ್ನು ಸರಿಮಾಡಿಕೊಳ್ಳಲೂ, ನೆಕ್‌ಟೈಯನ್ನು ಕಟ್ಟಿಕೊಳ್ಳಲೂ ಕನ್ನಡಿಯನ್ನು ನೋಡಿಕೊಳ್ಳಬೇಕಾಗಿದ್ದಿತು. ನನ್ನ ತಲೆಯಕೂದಲು ಒರಟಾಗಿದ್ದುದಪ್ರಯುಕ್ತ ಬ್ರಷ್ಷಿಂದ ಅದನ್ನು ಸರಿಪಡಿಸಿಕೊಳ್ಳುವುದು ಒಂದು ಬ್ರಹ್ಮವಿದ್ಯವಾಗಿದ್ದಿತು. ತಲೆಯಮೇಲೆ ಟೊಪ್ಪಿಗೆಯನ್ನು ಧರಿಸುವಾಗಲೂ, ಅದನ್ನು ತೆಗೆಯುವಾಗಲೂ ಒಂದುವೇಳೆ ತಲೆಯಕೂದಲನ್ನು ಸರಿಪಡಿಸಿಕೊಳ್ಳುವುದೇ ಒಂದು ಅಭ್ಯಾಸಬಿದ್ದುಹೋಗಿದ್ದಿತು. ಇದೂ ಅಲ್ಲದೆ ದೊಡ್ಡಮನುಷ್ಯರಸಂಗಡ ಕುಳಿತಿರುವಾಗ್ಗೆ ಪದೇಪದೇ ತಲೆಯಕೂದಲನ್ನು ಕೈಯಿಂದ ತಿದ್ದಿಕೊಳ್ಳುತ್ತಿರುವುದು ಒಂದು ನಾಗರೀಕತೆಯು.

ನೃತ್ಯವನ್ನೂ, ಫ್ರೆಂಚ್‌ಭಾಷೆಯಲ್ಲಿ ಮಾತನಾಡುವುದನ್ನೂ, ಉಪನ್ಯಾಸಮಾಡುವುದನ್ನೂ ಅಭ್ಯಾಸಮಾಡದವಿನಾ ನಾಗರೀಕತೆಯು ಪೂರ್ತಿಯಾಗುವುದಿಲ್ಲವೆಂದು ಕೇಳಿದ್ದೆನು. ಫ್ರೆಂಚ್‌ಭಾಷೆಯು ಫ್ರಾನ್ಸ್‌ದೇಶದಲ್ಲಿ ಮಾತ್ರವಲ್ಲದೆ ಐರೋಪ್ಯಖಂಡದಲ್ಲೆಲ್ಲ ವ್ಯಾವಹಾರಿಕಭಾಷೆಯಾಗಿದ್ದಿತು. ನಾನು ಆ ದೇಶದಲ್ಲಿ ಎಲ್ಲವನ್ನೂ ನೋಡಬೇಕೆಂದಿದ್ದೆನು. ನೃತ್ಯವನ್ನು ಕಲಿಯಲು ಒಂದು ಪಾಠಶಾಲೆಗೆ ಸೇರಿ ಒಂದು ಟರಂ ಅಂದರೆ ಸಾರಿಗೆ 45 ರೂಪಾಯಿಗಳ ಫೀ ಕೊಟ್ಟೆನು. ಮೂರುವಾರಗಳಲ್ಲಿ ಆರುಸಾರ್ತಿ ಹೇಳಿಸಿಕೊಂಡೆನು. ನಾನು ಪಿಯಾನವಾಗವನ್ನನುಸರಿಸಲಾರದವನಾಗಿದ್ದೆನಲ್ಲದೆ ತಾಳಕ್ಕನುಗುಣ್ಯವಾಗಿಯಾದರೂ ನರ್ತನಮಾಡಲಾರದೆ ಹೋದೆನು. - ಕೌಪೀನಸಂರಕ್ಷಣಾರ್ಥಂ ಅಯಂ ಪಟಾಟೋಪಃ - ಎಂದು ಹಿಂದೆ ಒಬ್ಬ ಸನ್ಯಾಸಿಯು ಹೇಳಿದ್ದ ಪ್ರಕಾರ ನಾನು ಕೂಡ ಮಾಡಲಾರಂಭಿಸಿದೆನು. ಕೌಪೀನವನ್ನು ಇಲಿಗಳು ಕಡಿಯದಿರುವುದಕ್ಕಾಗಿ ಆತನು ಬೆಕ್ಕನ್ನು ಸಾಕಿದನು. ಆ ಬೆಕ್ಕಿಗೆ ಹಾಲನ್ನು ಕುಡಿಯಿಸಲು ಒಂದು ಹಸುವನ್ನು ತಂದು ಸಾಕಿ ಅದರ ಉಪಚಾರಕ್ಕಾಗಿ ಒಬ್ಬ ಆಳನ್ನಿಟ್ಟನು. ಈ ಪ್ರಕಾರವಾಗಿ ಸನ್ಯಾಸಿಗೆ ಸಂಸಾರತಾಪತ್ರಯವು ಹೆಚ್ಚಿತು. ಅದರಂತೆಯೇ ನಾನು ನರ್ತನಕ್ಕೆ ಸಂಗೀತವು ಅವಶ್ಯವಾದುದರಿಂದ ಪಿಟೀಲನ್ನು ನುಡಿಸುವುದನ್ನು ಕಲಿಯಲೆತ್ನಿಸಿದೆನು. 45 ರೂಪಾಯಿಗಳನ್ನು ಕೊಟ್ಟು ಒಂದು ಪಿಟೀಲನ್ನು ಕೊಂಡುಕೊಂಡೆನು. ಅದನ್ನು ಹೇಳಿಕೊಡುವವನಿಗೂ ಕೊಂಚ ಹಣವನ್ನು ಕೊಟ್ಟೆನು. ಉಪನ್ಯಾಸಧೋರಣೆಯನ್ನು ಕಲಿತುಕೊಳ್ಳಲು ಮೂರನೆಯುಪಾಧ್ಯಾಯನನ್ನು ಗೊತ್ತುಮಾಡಿ ಕೊಂಚಹಣವನ್ನು ಕೊಟ್ಟೆನು. ‘ ಬೆಲ್ಸ್ ಸ್ಟಾಂಡರ್ಡ್ ಎಲೊಕ್ಯೂಷನಿಸ್ಟ್ ’ ಎಂಬ ಪುಸ್ತಕವನ್ನು ತೆಗೆದುಕೊಳ್ಳಬೇಕೆಂದು ಉಪಾಧ್ಯಾಯನು ಹೇಳಿದುದರಮೇಲೆ ಅದನ್ನು ಕೊಂಡುಕೊಂಡೆನು. ಪಿಟ್ಟರವರ ಉಪನ್ಯಾಸವನ್ನು ಮೊದಲು ಓದಲಾರಂಭಿಸಿದೆನು. ಅಷ್ಟರಲ್ಲಿ ಕಾಲಪುರುಷನು ಎಚ್ಚರಿಕೆಯನ್ನು ಕೊಡಲಾಗಿ ನನಗೆ ಸ್ಮೃತಿಯುಂಟಾಯಿತು.

ನಾನು ಯಾವಜ್ಜೀವವೂ ಆಂಗ್ಲದೇಶದಲ್ಲಿರುವವನಲ್ಲ. ಆದುದರಿಂದ ಈ ವಕ್ತೃತ್ವಕಲಾಭ್ಯಾಸವೇಕೆ ? ನರ್ತನವನ್ನು ಕಲಿತರೆ ನಾನು ಹೇಗೆ ದೊಡ್ಡಮನುಷ್ಯನಾಗುವುದು ? ಪಿಟೀಲನ್ನು ಭರತಖಂಡದಲ್ಲೇ ಕಲಿತುಕೊಳ್ಳಬಹುದು. ನಾನು ಇಲ್ಲಿಗೆ ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡಲು ಬಂದಿರುವೆನಾದುದರಿಂದ ಇನ್ನುಕೋರ್ಟಿನಲ್ಲಿ ಸೇರುವುದಕ್ಕೆ ಅರ್ಹತೆಯನ್ನು ಪಡೆಯಬೇಕಾಗಿದೆ. ನನ್ನ ನಡವಳಿಕೆಯಿಂದ ನನ್ನನ್ನು ದೊಡ್ಡಮನುಷ್ಯನನ್ನಾಗಿ ಜನರು ಭಾವಿಸತಕ್ಕದ್ದಾಗಿದೆ. ಹಾಗೆ ಗೌರವಿಸಿದರೇನೆ ನನ್ನ ಆಶಯವನ್ನು ನೆರವೇರಿಸಿಕೊಳ್ಳಬಹುದು. ಅದರಂತೆಯೇ ನನ್ನ ಸಂಗತಿಯೆಲ್ಲವನ್ನೂ ವಕ್ತೃತ್ವಕಲಾಶಾಲೋಪಾಧ್ಯಾಯನಿಗೆ ಬರೆದು ತಿಳಿಸಿದೆನು. ಅಲ್ಲಿಗೆ ವಕ್ತೃತ್ವದಲ್ಲಿ ಎರಡು ಮೂರು ಪಾಠವು ಜರುಗಿದ್ದಿತು. ಅದರಂತೆಯೇ ನಾಟ್ಯೋಪಾಧ್ಯಾಯನಿಗೂ ಕಾಗದವನ್ನು ಬರೆದಿದ್ದೆನು. ಪಿಟೀಲನ್ನು ಮಾರಿಬಿಡಲು ನಾನೇ ಸಂಗೀತಪಾಠಶಾಲೆಗೆ ಹೋದೆನು. ಸಂಗೀತವನ್ನು ಕಲಿಸುವವಳು ಒಬ್ಬ ಸ್ತ್ರೀ. ಆಕೆಯು ನನ್ನ ಕೂಡ ಒಳ್ಳೇ ಮಾತನಾಡುತ್ತಿದ್ದುದರಿಂದ ನನ್ನ ಸಂಗತಿಯನ್ನು ಆಕೆಗೆ ತಿಳಿಸಿದೆನು. ಈ ನನ್ನ ಅಭಿಪ್ರಾಯವನ್ನು ಮರೆತುಬಿಡುವಂತೆ ಬಹಳ ಪ್ರೋತ್ಸಾಹಿಸಿದಳು. ಈ ವ್ಯಾಮೋಹವು 2-3 ತಿಂಗಳವರೆಗೆಮಾತ್ರ ಇದ್ದಿತು. ಅನಂತರ ಅದು ಕಡಿಮೆಯಾಯಿತಾದರೂ, ವೇಷವನ್ನು ಅಂದರೆ ಉಡುಪನ್ನು ಮಾತ್ರ ಅನೇಕ ವರ್ಷಗಳವರೆಗೂ ನಾನು ಬಹಳವಾಗಿ ಮೋಹಿಸುತ್ತಿದ್ದೆನು. ಇದು ಹೀಗಿದ್ದರೂ ಆಗಲಿಂದಲೂ ನಾನು ವಿದ್ಯಾರ್ಥಿಯಾಗಿದ್ದೆನು.

೧೯೨೬ ನೆಯ ಇಸವಿ ಏಪ್ರಿಲ್ ತಾ॥ ೧೭ ರಿಂದ ೧೯೨೬ ನೆಯ ಇಸವಿ ಏಪ್ರಿಲ್ ತಾ॥ ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ನಿಜಚೈತ್ರ ಶುದ್ಧ ಪಂಚಮಿಯಿಂದ ನಿಜ ಚೈತ್ರ ಶುದ್ಧ ದಶಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
17	ಶನಿ	ಪಂಚ	21-5	ಮೃಗ	34-10	5
18	ಭಾನು	ಷಷ್ಠಿ	22-57	ಆದ್ರಾ	37-47	6
19	ಸೋಮ	ಸಪ್ತ	25-57	ಪುನ	2-37	7
20	[1] ಮಂಗಳ	ಅಷ್ಟ	30-1	ಪುಷ್ಯ	48-22	8
21	[2] ಬುಧ	ನವ	34-45	ಆಶ್ಲೇ	54-43	9
22	ಗುರು	ದಶ	40-2	ಮಖಾ	60	10
23	[3] ಶುಕ್ರ	ಏಕಾ	45-13	ಮಖಾ	1-32	11

(1) ಮಳೆನಕ್ಷತ್ರ-ಅಶ್ವಿನಿ ೨ ನೆಯಪಾದ. (2) ಶ್ರೀರಾಮನವಮಿ. (3) ಮಳೆನಕ್ಷತ್ರ-ಅಶ್ವಿನಿ ೪ ನೆಯಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಾಹಿತ್ಯಾ । ಧನಪತಕಳ್ಯಾಣವಾನಾ ಪಕ್ಷಜ್ಞ ನಕ್ಷತ್ರ ನೋಹರಾಜೇಯಾಸ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತ್ರೀಮಾಧೀಶ್ವಪದಾಲಿ ಪಾಳಕಿತ ಸಾಧ್ವಿಮ್ಯಾಲವಾಲಂವಳಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚೆತ್ತೀಯಂಸವಾಪುರಿಗೆ ಗೌರೀಶಾನುಕಂಪೋಜ್ವಲಂ ।

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಏಪ್ರಿಲ್ ತಾರೀಖು ೨೪ ನೆಯ ಶನಿವಾರ. [ಸಂಚಿಕೆ ೧೭

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ತಳೆತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

16

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.	ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಒಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೭—೦ ಅಣೆಯಂತೆಯೂ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೧— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕಾ ಶತಕತ್ರಯ	೧— ೦—೦	೧— ೬—೦
ಅಭಿನವ ಕಾಳಿದಾಸ ಶ್ರೀ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧— ೦—೦	೧— ೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—28] ಪೋ. ಬಾ. ೫೧೦. ಮದರಾಸು

ಬೇಸಿಗೆಕಾಲ ಬಂತಪ್ಪ.

ಈ ದಿನವೇ ತರಿಸಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಶುಕದೇವಾರ್ಯ,
[18-3] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಆಯುರ್ವೇದ ಸುಲಭಚಿಕಿತ್ಸೆಗಳು.

ರಾಜಧಾನಿಯಲ್ಲಿರುವ ಸರ್ಕಾರೀ ಆಯುರ್ವೇದವೈದ್ಯಶಾಲೆಯಲ್ಲಿ ತಯಾರಿಸಿ ನಿತ್ಯವೂ ಉಪಯೋಗಿಸಲ್ಪಡುವ ಔಷಧಗಳಲ್ಲಿ ಕೆಲವು ಸ್ಟಾರ್ ಪತ್ರಿಕಾ ವಾಚಕರುಪಯೋಗಾರ್ಥವಾಗಿ ಈ ಕೆಳಗೆ ಕೊಡಲ್ಪಟ್ಟಿವೆ.—

ಕಸ್ತೂರಿಮಾತ್ರೆ.

ಕಸ್ತೂರಿ ೨ ಹಣತೂಕ	ಹಿಪ್ಪಲಿ ೧ ತೊಲ
ಗೋರೋಜನ । ತೊಲ	ಮೆಣಸು ೧ ತೊಲ
ಕೇಸರಿ । ತೊಲ	ಸೋವು ೧ ತೊಲ
ಓಮು ೧ ತೊಲ	ಶುಂಠಿ ೧ ತೊಲ
ಕಟ್ಟುಕರೋಹಿಣಿ ೧ ತೊಲ	ಆಕಲ್‌ಕರೆ ೧ ತೊಲ
ಸಣ್ಣರಾಸ್ಮೆ ೧ ತೊಲ	ಬಿಳಗಾರ ೧ ತೊಲ
ಲವಂಗ ೧ ತೊಲ	ಇಂಗ್ಲೀಕ ೧ ತೊಲ
ಕೆಂಪುಗುಲಾಬೀ ೧ ತೊಲ	ಜದ್ವಾರ್ ೧ ತೊಲ

ಇವೆಲ್ಲವನ್ನೂ ವೀಳ್ಯದೆಲೆರಸದಿಂದ ಅರೆದು ಸಾಸುವೆಕಾಳಿನಷ್ಟು ಮಾತ್ರೆಕಟ್ಟಿ ಉಪಯೋಗಿಸಿದರೆ, ಸಮಸ್ತಶೀತ, ನೆಗಡಿ, ಕೆಮ್ಮು, ಸನ್ನಿ, ಹೃದಯದದೌರ್ಬಲ್ಯ, ಶ್ವಾಸ, ಪಕ್ಕೆಯಿಳತ, ಮುಂತಾದ ಶೀತವ್ಯಾಧಿಗಳು ಗುಣವಾಗುತ್ತದೆ.

ಜಯಂತಿಮಾತ್ರೆ.

ತಾಳೀಸಪತ್ರೆ ೧೨ ತೊಲ	ಮೆಣಸು ೧೨ ತೊಲ
ಹಿಪ್ಪಲಿ ೧೨ ತೊಲ	ಬಜೆ ೧೨ ತೊಲ
ವತ್ಸನಾಭಿ ೧೨ ತೊಲ	ಅಶ್ವಗಂಧಿ ೧೨ ತೊಲ
ಬೆಲ್ಲ ೨॥ ಸೇರು	ಬೇವಿನ ಎಲೆ ೧೨ ತೊಲ

ಈರೀತಿ ಎಲ್ಲವನ್ನೂ ಚೂರ್ಣಿಸಿ ನೀರಿನಿಂದ ಕಡ್ಲೆಕಾಳಿನಷ್ಟು ಮಾತ್ರೆಮಾಡಿ ಉಪಯೋಗಿಸಿದರೆ, ಜ್ವರ, ಕೆಮ್ಮು, ನೆಗಡಿ, ಶೀತವಾಯು. ಮತ್ತು ಮೈಕೈನೋವು ಗುಣವಾಗುವುವು. ಇದು ಇನ್‌ಫ್ಲುಯಂಜಾರೋಗಕ್ಕೆ ಒಳ್ಳೇ ಔಷಧಿ.

ವಿಷಜ್ವರಹರಮಾತ್ರೆ.

ತುಂಬೆಸೊಪ್ಪಿನರಸ ೧ ಸೇರು	ಲಕ್ಕಿಸೊಪ್ಪಿನರಸ ೧ ಸೇರು

ಈ ಎರಡನ್ನೂ ಕಾಯಿಸಿ ಲೇಹ್ಯಪಾಕಕ್ಕೆ ಹಿಂಗಿಸಬೇಕು. ಇದಕ್ಕೆ ವಸ್ತ್ರಗಾಳಿತಮಾಡಿದ ॥ ಸೇರು ಮೆಣಸಿನಪುಡಿಯನ್ನುಹಾಕಿ ಚೆನ್ನಾಗಿ ಅರೆದು ಅವರೇಕಾಳಿನಷ್ಟು ಮಾತ್ರೆಮಾಡಿ ದಿವಸಕ್ಕೆ ೨-೩ ಮಾತ್ರೆಗಳನ್ನು ಬಿಸಿನೀರಿನೊಂದಿಗೆ ಉಪಯೋಗಿಸಿದರೆ ಸಮಸ್ತ ವಿಷಜ್ವರಗಳೂ ಹರವಾಗುವುವು.

ಷಡೂಷಣಚೂರ್ಣ.

ಶುಂಠಿ	ಚವ್ಯ
ಹಿಪ್ಪಲಿ	ಚಿತ್ರಮೂಲ
ಮೆಣಸು	ಮೋಡಿ

ಇವೆಲ್ಲವನ್ನೂ ಸಮಭಾಗದಿಂದ ಚೂರ್ಣಿಸಿ ೨೦ ರಿಂದ ೬೦ ಗ್ರೇನ್‌ವರೆಗೆ ಜೇನುತುಪ್ಪದಿಂದ ಉಪಯೋಗಿಸಿದರೆ ವಾತ, ಸನ್ನಿಪಾತ, ಮಹೋದರ ಮಲಮೂತ್ರಬಂಧ, ಅಗ್ನಿಮಾಂದ್ಯ, ನೆಗಡಿ, ಕೆಮ್ಮು ಮತ್ತು ಮೂಲವ್ಯಾಧಿ ಪರಿಹಾರವಾಗುವುವು.

ಮಹಾಸಿಂಬಾದಿಚೂರ್ಣ.

ಬೇವಿನಸೊಪ್ಪು ೪ ಭಾಗ	ಓಮು ೧ ಭಾಗ
ತ್ರಿಫಲ ೩ ಭಾಗ	ಮೂರುಲವಣ ೩ ಭಾಗ
ತ್ರಿಕಟು ೩ ಭಾಗ	ಮೂರುಕ್ಷಾರ ೩ ಭಾಗ

ಇಷ್ಟನ್ನೂ ಒಟ್ಟುಗೂಡಿಸಿ ಚೂರ್ಣಮಾಡಿ ೩೦-೬೦ ಗ್ರೇನ್ ಜೇನುತುಪ್ಪದಲ್ಲಿ ಸೇವಿಸಿದರೆ ಏಕಾಹಿಕ-ದ್ವ್ಯಾಹಿಕ-ತ್ರ್ಯಾಹಿಕ-ಚಾತುರ್ಥಿಕ-ಸತತ-ಸಂತತ-ಧಾತುಗತ, ಮಜ್ಜಗತ ತ್ರಿದೋಷಜ್ವರ ಮುಂತಾದವು ಪರಿಹಾರವಾಗುವುವು.

ಕಿರಾತತಿಕ್ತಾದಿಚೂರ್ಣ.

ನೆಲಬೇವು ೧ ಭಾಗ	ಶುಂಠಿಚೂರ್ಣ ॥ ಭಾಗ
ಮರದ ಅರಿಶಿನ ೧ ಭಾಗ	ಮೆಣಸಿನಚೂರ್ಣ ॥ ಭಾಗ

ಸಕ್ಕರೆ ೨ ಭಾಗ

ಈರೀತಿಯಾಗಿ ಸೇರಿಸಿ ೨೦ ರಿಂದ ೬೦ ಗ್ರೇನ್‌ವರೆಗೆ ಜೇನುತುಪ್ಪದಿಂದ ಕಲಸಿ ೨ ಅಥವಾ ೩ ಸಲ ಕೊಟ್ಟರೆ ಮಲೇರಿಯಾಜ್ವರವು ನಿಲ್ಲುವುದು.

ಸುದರ್ಶನಚೂರ್ಣ.

ನೆಲಬೇವು ೯ ತೊಲ	ಮರದ ಅರಿಶಿನ ೧ ತೊಲ
ಬೇವು ೧ ತೊಲ	ಶುಂಠಿ ೧ ತೊಲ
ಕಟುಕರೋಹಿಣಿ ೧ ತೊಲ	ಲವಂಗ ೧ ತೊಲ
ಅಮೃತವಳ್ಳಿ ೧ ತೊಲ	ಕೊತ್ತಂಬರಿ ೧ ತೊಲ
ರಕ್ತಚಂದನ ೧ ತೊಲ	ಅಳಲೇಕಾಯಿ ೧ ತೊಲ
ಹಿಪ್ಪಲಿ ೧ ತೊಲ	[illegible] ೧ ತೊಲ
ಮೋಡಿ ೧ ತೊಲ	ಮೆಣಸು ೧ ತೊಲ

ಚಿತ್ರಮೂಲ ೧ ತೊಲ

ಇವುಗಳನ್ನು ಚೂರ್ಣಿಸಿ ವಸ್ತ್ರಗಾಳಿತಮಾಡಿ ೫ ರಿಂದ ೪೦ ಗ್ರೇನ್ ವರೆಗೆ ಜೇನುತುಪ್ಪದಲ್ಲಿ ಕಲಸಿ [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಏಪ್ರಿಲ್ ತಾ|| ೨೪ ನೆಯ ಶನಿವಾರ.

THE DEVIL'S EYE.

We have had to deal with the journalistic achievements of Mr. S. S. Setlur and Mr. H. Krishna Rao in our recent issues and their strange comradeship–for, they are two mighty foes–in the matter of condemning the Miller Committee Report and the non-Brahmin movement. We have now to congratulate that happy combination in getting a valuable supporter in the person of Mr. B. Narasinga Rao, pleader at Mysore and member of the Mysore Legislative Council. Not that this eminent person has shown his antipathy for the Miller Committee Report for the first time–for, he has not disguised it at any time previous–but he has, as we know, only recently started writing to journals exhibiting his attitude about the Miller Committee Report. In talking about new Dewan in the famous Brahmanical organ *The Wealth of Mysore*, the first thing that he speaks about is the unjust Order on the Miller Committee Report and that the new Dewan is expected to give up the principles that the Report stands for and to consider merit, efficiency and all the rest of the vague and worn out rubbish in making appointments. Apart from the merits of his contention, one would like to know whether it is proper for anyone to predicate the policy of the new Dewan when the latter has as yet not declared his policy or even indicated what it is like. Further, does not the fact that the Miller Committee Report is the first thing that catches the eye of this lawyer politician show that that is the one matter which is disturbing the mental equilibrium of men of the ilk of Mr. Narasinga Rao? It looks as though the minds of the Brahmin politicians of Mysore are obsessed altogether with the idea that the Miller Committee Report spells disaster to the Brahmins, a thing which the time-honoured priestly class so noted for their spiritual culture and ministrations should disdain and scoff at. But, of course, times have changed and clutching at money-bringing jobs is more sacred than performing religious duties and ministering to the spiritual needs of the fellow countrymen. This development of the Vaishya instinct among the so-called highest class is the cause of all the present day trouble. Curiously enough, this old politician not only makes the question of appointments to Public Service the first matter to refer to in writing about the new Dewan but the only matter of public importance, as though there are not other matters which need much greater and more urgent attention of the new Dewan. We are led to think that in the eyes of these so-called politicians there is nothing of greater importance in the State than the one which would in some slight way affect their self interest. It furnishes a significant commentary on their general outlook which cannot keep beyond their own hardened selves and the moment there is any popular measure with the object of securing greater social justice the devil's yey is on that and wants to make it ineffective and in operative. We do not know whether by this kind of display of his expectation he thinks he could gain his object. But we can assure him that his pills about merit and efficiency are a bit too hard for anybody to digest for merit and efficiency do not consist in double first classes. Why, the new Dewan himself is a splendid illustration of the fact that ranks and number of degrees are by no means the test of either merit or efficiency. If the degree qualification theory was accepted, probably the new Dewan, of whose merit and capacity all are agreed, should have been plodding an in some of the lower ranks of the Mysore Service. The suggestion of Mr. Narasinga Rao is preposterous at a juncture like this when it would be safest to leave the matters to the new Dewan himself. For our part, we would like the new Dewan to start his *regime* with as little embarassment as possible and not with extravagant and reactionary expectations of the kind noted above. But we cannot blame Mr. Narasinga Rao. He only typifies the mentality of the community he belongs to. He only adopts the tactics which have been adopted for centuries past and now improved upon under the impact of the new political life. Meantime, we may assure Mr. Narasinga Rao that this sort of tactics will not pay him or his people. It is a trick which is condemmed. And when so equitable a measure as the Miller Committee Report is concerned it is far too late in the day to expect a reversal of the essentially just principles underlying the measure, principles which would sooner go to enlighten and awaken the masses than all other efforts put together, principles which have for like reasons been accepted and acted upon by the two neighbouring Governments of Madras and Bombay. We are sincerely sorry that Mr. Narasiga Rao should have made such a poor and regrettable beginning in his attempt at contributing articles.

ಮಾರಿಯಕಣ್ಣು ಹೋತನಮೇಲೆ.

ರಾಜಕೀಯ ವಿಚಾರದಲ್ಲಿ ಪರಮಶತ್ರುತ್ವದಿಂದ ಹೋರಾಡುತ್ತಿರುವ ಮ|| ಗಳಾದ ಎಸ್. ಎಸ್. ಸೆಟ್ಲೂರ್‌ರವರೂ, ಹೊಸಕೊಪ್ಪದ ಕೃಷ್ಣರಾಯರೂ ಮಿಲ್ಲರ್‌ಕಮಿಟಿಯ ರಿಪೋರ್ಟನ್ನೂ, ಹಿಂದುಳಿದ ವರ್ಗದವರ ಪುರೋಭಿವೃದ್ಧಿಪ್ರಯತ್ನವನ್ನೂ ಖಂಡಿಸುವುದರಲ್ಲಿ ಏಕೀಭವಿಸಿ ವೃತ್ತಪತ್ರಿಕೆಗಳ ಮೂಲಕ ತಮ್ಮ ಪರಾಕ್ರಮವನ್ನು ತೋರಿಸುತ್ತಿರುವ ವಿಚಾರವನ್ನು ಕುರಿತು ನಮ್ಮ ಕಳೆದ ಸಂಚಿಕೆಗಳಲ್ಲಿ ಸವಿಸ್ತಾರವಾಗಿ ಪ್ರಸ್ತಾಪಿಸಿರುತ್ತೇವೆ. ರಾಜಧಾನಿಯಲ್ಲಿ ಪ್ಲೀಡರರಾಗಿರುವ ಮತ್ತು ಮೈಸೂರು ನ್ಯಾಯವಿಧಾಯಕಸಭಾ ಮೆಂಬರರಾದ ಮ|| ಬಿ. ನರಸಿಂಗರಾಯರು ಮೇಲ್ಕಂಡ ದೊಡ್ಡಮನುಷ್ಯರ ಸಹಾಯಾರ್ಥವಾಗಿ ಅವರ ಗುಂಪಿಗೆ ಸೇರಿದುದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕಾಗಿದೆ. ಈ ಮಹಾಪುರುಷರು ಮಿಲ್ಲರ್ ಕಮಿಟಿಯ ರಿಪೋರ್ಟಿನ ವಿಚಾರದಲ್ಲಿ ತಮಗಿರುವ ದ್ವೇಷಾಸೂಯೆಯನ್ನು ಬಹಿರಂಗಪಡಿಸಿರುವುದು ಇದೇ ಮೊದಲಲ್ಲವಾದರೂ, ತಮ್ಮಭಿಪ್ರಾಯವನ್ನು ಕುರಿತು ವೃತ್ತಪತ್ರಿಕೆಯಲ್ಲಿ ಬರೆಯುತ್ತಿರುವುದು ಮಾತ್ರ ಇತ್ತೀಚೆಗೆಂದು ತೋರುತ್ತದೆ. ಆ ಪ್ರಸಿದ್ಧ ಬ್ರಾಹ್ಮಣಾಭಿಮಾನಿ ಸಂಪದಭ್ಯುದಯಪತ್ರಿಕೆಯಲ್ಲಿ ಹೊಸ ದಿವಾನರ ವಿಚಾರವಾಗಿ ಬರೆಯುವಾಗ್ಗೆ ಮಿಲ್ಲರ್ ಕಮಿಟಿಯ ರಿಪೋರ್ಟಿನ ಮೇಲೆ ಹುಟ್ಟಿರುವ ಸರ್ಕಾರಿಯಪ್ಪಣೆಯು ಬಹಳ ಅನ್ಯಾಯವಾಗಿರುವುದರಿಂದ ಅದರಲ್ಲಿ ಕಂಡ ಪ್ರಕಾರ ಅಂದರೆ, ಪ್ರತಿಜಾತಿಯ ಪ್ರಾತಿನಿಧ್ಯತತ್ವದ ಮೇಲೆ ಸರ್ಕಾರಿಯುದ್ಯೋಗಗಳನ್ನು ಹಂಚದೆ ಪೂರ್ವದಲ್ಲಿದ್ದಂತೆ ಯಾವ ಜನರು ಸರ್ಕಾರಿಯುದ್ಯೋಗಕ್ಕೆ ಅರ್ಹರೆನಿಸಿಕೊಂಡಿರುವರೋ ಅವರಿಗೆ ಮಾತ್ರ ಕೊಡುವ ಏರ್ಪಾಟನ್ನು ಹೊಸ ದಿವಾನರು ಮಾಡಬೇಕೆಂದು ಹೇಳಿರುತ್ತಾರೆ. ಹೊಸ ದಿವಾನರು ತಾವು ಮುಂದೆ ಯಾವ ಕ್ರಮವನ್ನು ಅನುಸರಿಸುತ್ತೇವೆಂದು ಹೇಳದಿರುವಾಗ್ಗೆ, ಅವರು ಹೀಗೆಯೇ ನಡೆಯಬೇಕೆಂದು ಸಿದ್ಧಾಂತಗೊಳಿಸುವುದು ಯುಕ್ತವೆ, ಮತ್ತು ಹೀಗೆ ಹೇಳುವುದರಲ್ಲೂ ಮಿಲ್ಲರ್ ಕಮಿಟಿಯ ರಿಪೋರ್ಟನ್ನು ರಾಜನೀತಿಜ್ಞರೆಂದು ತಿಳಿದುಕೊಂಡಿರುವ ಈ ಲಾಯರು ಪ್ರಾಮುಖ್ಯವಾಗಿ ತೆಗೆದುಕೊಂಡಿರುವುದನ್ನು ನೋಡಿದರೆ, ಆ ರಿಪೋರ್ಟಿನಿಂದ ಮ|| ನರಸಿಂಗರಾಯರ ಗುಂಪಿಗೆ ಸೇರಿದವರ ಬುದ್ಧಿ ವಿಕಲ್ಪವಾಗಿರುತ್ತದೆಂದು ವ್ಯಕ್ತವಾಗುವುದಿಲ್ಲವೆ? ಸರ್ವದಾ ಜಪತಪೋನುಷ್ಠಾನ ನಿರತರಾಗಿ 'ಸರ್ವೇಜನಾಸ್ಸುಖಿನೋಭವಂತು' ಎಂದು ಹರಸುತ್ತ ಸಮಸ್ತ ಜನಾಂಗದವರಿಂದಲೂ ಗೌರವಿಸಲ್ಪಡುತ್ತಿದ್ದ ಬ್ರಾಹ್ಮಣರು ಲೌಕಿಕವ್ಯವಹಾರದಲ್ಲಿ ನಿಮಗ್ನರಾಗಿ ದ್ರವ್ಯಾಪೇಕ್ಷೆಯಿಂದ ಮಾಡಬಾರದ ಕೃತ್ಯಗಳನ್ನು ಅವಲಂಬಿಸಿರುವ ಪ್ರಯುಕ್ತ ಆ ತಮ್ಮ ಮರ್ಯಾದೆಯೆಲ್ಲವನ್ನೂ ಕಳೆದುಕೊಂಡಿದ್ದಾಗ್ಯೂ ಈ ಮಿಲ್ಲರ್‌ಕಮಿಟಿಯ ರಿಪೋರ್ಟು ತಮ್ಮ ಬ್ರಾಹ್ಮಣ್ಯಕ್ಕೆ ಕುಠಾರಪ್ರಾಯವಾಗಿರುತ್ತದೆಂದು ರಾಜನೀತಿಜ್ಞ ಬ್ರಾಹ್ಮಣರು ತಿಳಿದುಕೊಂಡಿರುವಂತೆ ತೋರುತ್ತದೆ. ಆದರೆ ಆ ನಿಜಬ್ರಾಹ್ಮಣವೃತ್ತಿಯು ಮಾಯವಾಗಿ ಧನಾಪೇಕ್ಷೆಯಿಂದ ವೈಶ್ಯವೃತ್ತಿಯೆಂದು ಪ್ರಾಪ್ತವಾಯಿತೋ ಅಂದೇ ಆ ಬ್ರಾಹ್ಮಣ್ಯಗೌರವಕ್ಕೆ ತಿಲತರ್ಪಣಬಿಟ್ಟುದಾಯಿತು, ಮತ್ತು ಈಗಿನ ತೊಂದರೆಗಳಿಗವಕಾಶವಾಯಿತು. ಈ ವೃದ್ಧರಾಜನೀತಿಜ್ಞರು ದಿವಾನರ ವಿಚಾರವಾಗಿ ಬರೆದಿರುವ ಲೇಖದಲ್ಲಿ ಸರ್ಕಾರಿಯುದ್ಯೋಗವಿಚಾರವು ಬಹು ಪ್ರಾಮುಖ್ಯವಾದುದರಿಂದ ಅದನ್ನು ದಿವಾನರು ಮೊದಲು ಗಮನಿಸಬೇಕೆಂದು ಹೇಳಿರುವುದು ಬಹಳ ಆಶ್ಚರ್ಯವಾಗಿರುತ್ತದೆ. ಯಾತಕ್ಕೆಂದರೆ, ಹೊಸದಿವಾನರು ಗಮನಿಸಬೇಕಾದ ಇದಕ್ಕಿಂತಲೂ ಅವಸರವೂ, ಅಗತ್ಯವೂ ಆದ ಬೇರೊಂದು ವಿಷಯವಿಲ್ಲವೆಂದು ವ್ಯಕ್ತವಾಗುತ್ತದೆ. ಬ್ರಾಹ್ಮಣರ ಸ್ವಾರ್ಥಕ್ಕೆ ಯತ್ಕಿಂಚಿತ್ತು ಭಂಗವನ್ನುಂಟುಮಾಡುವಂತಹ ವಿಚಾರಕ್ಕಿನ್ನ ನಮ್ಮ ಸಂಸ್ಥಾನದಲ್ಲಿ ಬೇರೊಂದು ವಿಚಾರವು ಪ್ರಾಮುಖ್ಯವಲ್ಲವೆಂದು ಈ ರಾಜನೀತಜ್ಞರು ತಿಳಿದುಕೊಂಡಿರುತ್ತಾರೆ. ಒಂದು ಕಾರ್ಯವು ಎಷ್ಟೋ ನಿಷ್ಪಕ್ಷಪಾತವೂ, ಸರ್ವಸಮಾನವೂ ಆಗಿದ್ದರೂ ತಾವು ನಿರುಪಾಧಿಕವಾಗಿ ವಂಶಪಾರಂಪರ್ಯದಿಂದ ಅನುಭವಿಸಿಕೊಂಡುಬರುತ್ತಿರುವ ಸೌಖ್ಯಕ್ಕೆ ಕಿಂಚಿತ್ತು ಭಂಗವನ್ನುಂಟುಮಾಡುವುದಾಗಿದ್ದಲ್ಲಿ ಮಾರಿಯಕಣ್ಣು ಹೋತನ ಮೇಲೆ ಬಿದ್ದಂತೆ ಅವರ ವಕ್ರದೃಷ್ಟಿಯು ಅದರಮೇಲೆ ಬಿದ್ದು ಅದನ್ನು ತುಳಿದು ಪಾತಾಳವನ್ನು ಕಾಣಿಸಲು ಪ್ರಯತ್ನಿಸುವರು. ಈ ವಿಧವಾದ ಪ್ರಯತ್ನದಿಂದ ಅವರಾಶೆಯು ಎಷ್ಟರ ಮಟ್ಟಿಗೆ ಸಿದ್ಧಿಸುವುದೋ ನಾವು ಬೇರೆ ತಿಳಿಯೆವು. ಯೋಗ್ಯತೆಯೂ, ನಿರ್ವಾಹಶಕ್ತಿಯೂ ಇಮ್ಮಡಿಯಾದ ಒಂದನೇ ತರಗತಿಗಳಲ್ಲಿಲ್ಲವಾದುದರಿಂದ, ಯೋಗ್ಯತೆಯ ಮತ್ತು ನಿರ್ವಾಹಶಕ್ತಿಯ ವಿಚಾರವಾಗಿ ಮ|| ನರಸಿಂಗರಾಯರು ಕೊಟ್ಟಿರುವ ಗುಳಿಗೆಯನ್ನು ನುಂಗುವುದು ಸ್ವಲ್ಪ ಕಷ್ಟವೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ವಿಶ್ವವಿದ್ಯಾಲಯದ ಪ್ರಶಸ್ತ್ಯಾವಳಿಯನ್ನು ಅಂದರೆ 2-3-4 ಡಿಗ್ರಿಗಳನ್ನು ಹೊಂದಿರುವವರು ಮಾತ್ರ ಉದ್ಯೋಗನಿರ್ವಾಹಶಕ್ತರೆಂಬುದು ತಪ್ಪುತಿಳುವಳಿಕೆಯೆನ್ನುವುದಕ್ಕೆ ಈಗಣ ಹೊಸದಿವಾನರು ಪ್ರಬಲವಾದ ನಿದರ್ಶನವಾಗಿರುತ್ತಾರೆ. ಉನ್ನತಪದವಿಗಳಿಗೆ ಹಾಗೆ ಡಿಗ್ರಿಗಳ ಯೋಗ್ಯತೆಯನ್ನೇ ಬಹು ಪ್ರಾಮುಖ್ಯವಾಗಿಟ್ಟುಕೊಂಡಿದ್ದಲ್ಲಿ ಮಹಾಸಮರ್ಥರೆಂದು ಸರ್ವರಿಂದಲೂ ಹೊಗಳಿಸಿಕೊಳ್ಳಲ್ಪಡುತ್ತಿರುವ ಹೊಸದಿವಾನರು ನಮ್ಮ ಸಂಸ್ಥಾನದ ಕೆಳತರಗತಿಯ ಉದ್ಯೋಗದಲ್ಲಿದ್ದುಕೊಂಡು ನರಳಬೇಕಾಗಿದ್ದಿತು. ಪ್ರಕೃತಸ್ಥಿತಿಯಲ್ಲಿ ಆವಾವ ಕೆಲಸವನ್ನು ಹೇಗೆ ಮಾಡಬೇಕೆಂಬುದನ್ನು ಹೊಸದಿವಾನರ ಪರ್ಯಾಲೋಚನೆಗೆ ಬಿಡುವುದು ಉತ್ತಮವಾಗಿರುವುದಾದುದರಿಂದ ಮ|| ನರಸಿಂಗರಾಯರು ಅಪಾಯಕರವಾದ ಸಲಹೆಯನ್ನು ಕೊಡತಕ್ಕುದಲ್ಲ. ನಾವಾದರೋ ಮ|| ನರಸಿಂಗರಾಯರು ಸೂಚಿಸುವಂತೆ ಮಹಾಕ್ಲಿಷ್ಟವಿಷಯಗಳ ಗೋಜಿಗೆ ಹೊಸದಿವಾನರು ಹೋಗದೆ ಸುಲಲಿತವಾಗಿ ರಾಜ್ಯಾಡಳಿತವನ್ನು ಆರಂಭಿಸುವವರಾಗಲೆಂದು ಕೋರುತ್ತೇವೆ. ಮ|| ನರಸಿಂಗರಾಯರು ತಮ್ಮ ವರ್ಗದವರ ಯೋಚನೆಯೆಂತಹದೆಂಬುದನ್ನು ಪ್ರದರ್ಶಿಸಿರುತ್ತಾರಾದುದರಿಂದ ಅವನ್ನು ನಿಂದಿಸಬೇಕಾಗಿಲ್ಲವು. ಅನೇಕ ಶತಮಾನಗಳಿಂದ ಅನುಸರಿಸಿಬಂದ ಚಮತ್ಕಾರವನ್ನು ತಾತ್ಕಾಲಿಕ ರಾಜಕೀಯ ವಿಚಾರಕ್ಕೆ ತಕ್ಕಂತೆ ಸುಧಾರಿಸಿಕೊಂಡಿರುತ್ತಾರೆ. ಆದರೆ ಈ ವಿಧವಾದ ಚಮತ್ಕಾರದಿಂದ ಮ|| ನರಸಿಂಗರಾಯರಿಗಾಗಲಿ ಅವರ ವರ್ಗದವರಿಗಾಗಲಿ ಯಾವ ಪುರುಷಾರ್ಥವೂ ಆಗುವುದಿಲ್ಲವೆಂದು ನಾವು ದೃಢವಾಗಿ ಹೇಳುತ್ತೇವೆ. ಎಷ್ಟು ಪ್ರತಿಭಟಿಸಿದರೂ ಜಗ್ಗದಿರುವಂತಹ, ಇತರ ಎಲ್ಲಪ್ರಬಲೋಪಾಯಗಳಿಗಿಂತಲೂ ಜನರನ್ನು ಜಾಗ್ರತರನ್ನಾಗಿಯೂ, ವಿವೇಕಿಗಳನ್ನಾಗಿಯೂ ಮಾಡುವಂತಹ, ಮದ್ರಾಸು ಮತ್ತು ಬೊಂಬಾಯಾಧಿಪತ್ಯಗಳಲ್ಲಿ ಅನುಸರಿಸಲ್ಪಟ್ಟಿರುವಂತಹ ಮಿಲ್ಲರ್‌ಕಮಿಟಿಯ ರಿಪೋರ್ಟನ್ನು ಹೋಗಲಾಡಿಸುವ ಪ್ರಯತ್ನವು ಕಾಲಾತೀತವಾಗಿರುವುದಲ್ಲದೆ ಅಸಾಧ್ಯವಾಗಿರುತ್ತದೆ. ಅದುಕಾರಣ ಮ|| ನರಸಿಂಗರಾಯರು ಈ ದುರ್ಬಲವೂ, ಪಶ್ಚಾತ್ತಾಪಕರವೂ ಆದ ಪ್ರಯತ್ನಮಾಡಿರುವುದಕ್ಕಾಗಿಯೂ, ಮಾರಿಕಣ್ಣು ಹೋತನಮೇಲೆ ಎಂಬಂತೆ ಇವರ ವರ್ಗದವರು ಅವಸ್ಥಾತ್ರಯದಲ್ಲೂ ಮಿಲ್ಲರ್‌ಕಮಿಟಿಯ ರಿಪೋರ್ಟನ್ನು ವಕ್ರದೃಷ್ಟಿಯಿಂದ ನೋಡುತ್ತ ಅದರ ನಿವಾರಣೆಗೆ ಪ್ರಯತ್ನಿಸುತ್ತಿರುವುದಕ್ಕಾಗಿಯೂ ನಾವು ವಿಷಾದಿಸುತ್ತೇವೆ.

ಒಂದು ಆನೆಯು ತನ್ನ ಹಗೆಯನ್ನು ತೀರಿಸಿಕೊಂಡುದುದು.

ವೆಲ್ಲೂರಿನಲ್ಲಿ ಸುಂದೇಶ್ವರಸ್ವಾಮಿಯ ಕುಂಭಾಭಿಷೇಕ ಮಹೋತ್ಸವನಡೆಯುತ್ತಿರುವಾಗ್ಗೆ ಅಲಂಕಾರಕ್ಕಾಗಿ ತಿರುಪತಿಯ ದೇವಸ್ಥಾನದಿಂದ ಒಂದು ಆನೆಯು ತರಿಸಲ್ಪಟ್ಟಿದ್ದಿತು. 12 ವರ್ಷವಯಸ್ಸಿನ ಒಬ್ಬ ಹುಡುಗನು ಪ್ರತಿದಿನವೂ ಆ ಆನೆಯ ಸೊಂಡಿಲನ್ನು ತಿವಿದು ಅದಕ್ಕೆ ಬಾಧೆಪಡಿಸುತ್ತಿರುವಲ್ಲಿ ಆನೆಯು ಅವನಮೇಲಿನ ಹಗೆಯನ್ನು ತೀರಿಸಿಕೊಳ್ಳಲು ಸಮಯನಿರೀಕ್ಷೆಯಲ್ಲಿದ್ದು, ಒಂದುದಿನ ರಾತ್ರಿ ದೇವತೋತ್ಸವಕ್ಕಾಗಿ ತನ್ನನ್ನು ಚೆನ್ನಾಗಿ ಅಲಂಕರಿಸಿ ಉತ್ಸವಹೊರಡುವ ಬೀದಿಯಲ್ಲಿ ತಂದು ನಿಲ್ಲಿಸಿರುವಾಗ್ಗೆ, ಗುಂಪಿನಲ್ಲಿ ನಿಂತಿದ್ದ ತನ್ನ ಹಗೆಯವನಾದ ಆ ಹುಡುಗನನ್ನು ಗುರ್ತಿಸಿ ಸೊಂಡಿಲಿನಿಂದ ಅವನ ದೇಹವನ್ನು ಸುತ್ತಿ ಹಿಡಿದುಕೊಂಡು ಸಮೀಪದಲ್ಲಿದ್ದ ಒಂದು ಮನೆಯಕಂಬಕ್ಕೆ ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಅಪ್ಪಳಿಸಿತು. ಆ ಹುಡುಗನು ಆ ಏಟನ್ನು ತಿಂದು ಪ್ರಾಣಾಪಾಯವನ್ನು ಹೊಂದಲಾಗಿ ಕೂಡಲೆ ಪೋಲೀಸರಿಂದ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಟ್ಟಾಗ್ಗೂ ಗುಣವನ್ನು ಹೊಂದದೆ ಮೃತನಾದನು.

ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ ನಡೆದ ಒಂದು ಅವಿವೇಕ

(ಬರೆದುಬಂದುದು.)

ಮೈಸೂರುದೇಶದಲ್ಲಿ ಸುಪ್ರಸಿದ್ಧ ವರ್ತಕರೂ, ಶ್ರೀಮಂತರೂ ಆಗಿರುವ ಸರ್ ಹಾಜಿ ಇಸ್ಮಾಯಿಲ್ ಸೇಟ್‌ರವರು ದಿವಾಳಿಯಾಗಲು ಮೈಸೂರು ಸಬ್‌ಕೋರ್ಟಿನಲ್ಲಿ ಅರ್ಜಿಹಾಕಿರುವಂತೆ ಒಂದು ತುಂಬಾ ವಿಷಾದಕರವಾದ ಪ್ರಕಟನೆಯು ಈ ತಿಂಗಳು 16 ನೇ ತಾರೀಖಿನ ಮೈಸೂರು ಗೌರ್ನಮೆಂಟ್ ಗೆಜೆಟ್ಟಿನಲ್ಲಿ ಮುದ್ರಿಸಲ್ಪಟ್ಟಿರುತ್ತದೆ ವಿಚಾರಮಾಡಿದುದರಲ್ಲಿ ಈ ಪ್ರಕಟನೆಯು ನಿರಾಧಾರವಾದುದೆಂತಲೂ, ಕೋರ್ಟಿನ ನೌಕರರ ಅವಿವೇಕ ಮತ್ತು ಅವಜ್ಞತೆಯಿಂದ ಈ ತಪ್ಪಾದ ಪ್ರಕಟನೆಯು ಗೆಜೆಟ್ಟಿಗೆ ಕಳುಹಿಸಲ್ಪಟ್ಟಿತೆಂತಲೂ ತಿಳಿಯಬಂದಿತು. ಆದರೆ ಸರ್ ಹಾಜಿಯವರಿಗೆ ಇದರಿಂದ ತುಂಬಾ ನಷ್ಟವುಂಟಾಗಿರುತ್ತದೆ. ಏಕೆಂದರೆ, ಇವರಾಗಾಗದವರು ಈ ಪ್ರಕಟನೆಯ ನಕಲುಗಳನ್ನು ಅಚ್ಚುಹಾಕಿಸಿ ಸರ್ ಇಸ್ಮಾಯಿಲ್‌ಸೇಟರವರು ಭಾರಿಯಾಗಿ ವ್ಯಾಪಾರ ನಡೆಸುತ್ತಿರುವ ಅನೇಕ ಹಿಂದೂದೇಶದ ವರ್ತಕಮಂಡಲಿಗೆ ಕಳುಹಿಸಿರುವುದಾಗಿ ವರ್ತಮಾನವಿದೆ. ಇದರಿಂದ ಸರ್ ಸೇಟರವರ ಘನತೆಗೂ, ವರ್ತಕತನಕ್ಕೂ ಬಹಳ ಕುಂದಕವುಂಟಾಗಿರುವುದಲ್ಲದೆ ಅಪಾರವಾದ ದ್ರವ್ಯನಷ್ಟವೂ ಉಂಟಾಗಿರುವುದರಲ್ಲಿ ಸಂದೇಹವಿಲ್ಲ. ಇಂತಹ ಅಕ್ರಮಗಳು ಮುಂದೆ ನಡೆಯದಿರುವುದಕ್ಕಾಗಿ ಸರ್ಕಾರದವರು ತಕ್ಕ ವಿಚಾರಣೆಯಿಂದ ತಪ್ಪಿತಸ್ಥರಾದ ನೌಕರರನ್ನು ನಿರ್ದಾಕ್ಷಿಣ್ಯದಿಂದ ಶಿಕ್ಷಿಸುತ್ತಾರೆಂದು ನಂಬಿದೆ. ಸರ್ ಹಾಜಿ ಇಸ್ಮಾಯಿಲ್‌ರವರು ತಮ್ಮ ಸಾಲಗಾರರಲ್ಲಿ ಒಬ್ಬನು ದಿವಾಳಿಕೋರನೆಂದು ತೀರ್ಮಾನಿಸತಕ್ಕ ಬಗ್ಗೆ ಮೇಲ್ಕಂಡ ಕೋರ್ಟಿಗೆ ಅರ್ಜಿಹಾಕಿದ್ದುದಾಗಿ ತಾ|| 22 ರ ಗೆಜೆಟ್ಟಿನ ಪ್ರಕಟನೆಯಿಂದ ತಿಳಿಯಬರುತ್ತದೆ. ಈ ವಿಧವಾದ ಅರ್ಜಿಯು ಅಪೂರ್ವವಾದುದರಿಂದ ಕೋರ್ಟಿನವರು ತಕ್ಕ ಎಚ್ಚರವನ್ನು ತೆಗೆದುಕೊಳ್ಳದೆ ಹೇಗೆ ಅಲಕ್ಷ್ಯಮಾಡಿದರೋ ಊಹಿಸಲು ಕಷ್ಟವಾಗಿದೆ. ಮುಖ್ಯವಾಗಿ ಸರ್ ಹಾಜಿಯವರಿಗೆ ಉಂಟಾಗಿರತಕ್ಕ ಅಪಾರವಾದ ನಷ್ಟಕಷ್ಟಗಳೂ, ಮನೋವ್ಯಥೆಯೂ, ಮಾನಹಾನಿಯೂ ಅಷ್ಟಿಷ್ಟೆಂದು ವರ್ಣಿಸಲಸಾಧ್ಯವು ಇಂತಹ ಘೋರಕೃತ್ಯಗಳು ಗೌರವಸ್ಥರೂ, ಶ್ರೀಮಂತರೂ ಆದಂತಹವರ ವಿಚಾರದಲ್ಲಿಯೇ ನ್ಯಾಯಸ್ಥಾನಗಳಲ್ಲಿ ನಡೆಯುತ್ತ ಬಂದರೆ ಇನ್ನು ಉಳಿದ ಬಡಬಗ್ಗರಪಾಡು ಈ ಅಧಿಕಾರಿಗಳ ಅಜಾಗರೂಕತೆಯಲ್ಲಿ ಏನಾಗುವುದೋ ಹೇಳುವುದಕ್ಕಾಗುವುದಿಲ್ಲ. ಇತ್ತೀಚೆಗೆ ಕೋರ್ಟುಗಳಲ್ಲಿ ಅಧಿಕಾರಿಗಳ ಅಲಕ್ಷ್ಯವೂ, ಸಣ್ಣ ನೌಕರರ ಹಾವಳಿಯೂ ಹೆಚ್ಚುತ್ತಾಬಂದಿರುವುದು ಶೋಚನೀಯವಾದ ಸಂಗತಿಯೇ ಸರಿ.

ಸ್ವದೇಶದ ವೃತ್ತಾಂತಗಳು.

ಮೈಸೂರು ಡೆಪ್ಯುಟಿಕಮಿಷನರ್ ಮ|| ಎ. ವಿ. ರಾಮನಾಥರವರು ರೆವಿನ್ಯೂ ಸೆಕ್ರೆಟರಿಯಾಗುವರೆಂಬ ವದಂತಿಯು ಈಗತಾನೆ ಹುಟ್ಟಿದೆ.

ನಾಳೆಯದಿನ ಕಾನಕಾನಹಳ್ಳಿಯ ಆದಿಕರ್ಣಾಟಕಕಾನ್ಫರೆನ್ಸು ಆ ಊರಿನ ಬಾಲಿಕಾಪಾಠಶಾಲೆಯ ಬಳಿ ಹಾಕಿರುವ ಚಪ್ಪರದಲ್ಲಿ ರೆವಿನ್ಯೂಕಮಿಷನರ್ ಮ|| ಸಿ. ಎಸ್. ಬಾಲಸುಂದರಂಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು, ಮತ್ತು ಆ ದಿನರಾತ್ರಿ ಡಿ|| ಮೆಡಿಕಲ್ ಆಫೀಸರ್ ಮ|| ಬಿ. ಎಸ್. ವರದರಾಜಯ್ಯಂಗಾರರಿಂದ ಮಾಯಾದೀಪದ ಚಿತ್ರಪಟಗಳು ಪ್ರದರ್ಶಿಸಲ್ಪಡುವುವು.

ರಾಜಸಭಾಭೂಷಣ ದಿವಾನ್ ಬಹದ್ದೂರ್ ಮ|| ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಸರ್ ಪ್ರಶಸ್ತಿಯು ಸಾರ್ವಭೌಮರವರಿಂದ ಕೊಡಲ್ಪಟ್ಟುದರ ಸಂತೋಷಸೂಚನಾರ್ಥವಾಗಿ ಬೆಂಗಳೂರು ಪುರನಿವಾಸಿಗಳು ಈ ದಿವಸ ಸಾಯಂಕಾಲ ಲಾಲ್‌ಬಾಗಿನಲ್ಲಿರುವ ಗಾಜಿನಮಂದಿರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಯಿಸಿ ಸರ್ ಸೆಟ್ಟರಿಗೆ ಅಭಿನಂದನಪತ್ರಿಕೆಯನ್ನು ಸುಂದರವಾದ ರಜತಪೆಟ್ಟಿಗೆಯಲ್ಲಿಟ್ಟು ಒಪ್ಪಿಸುವರು ಮತ್ತು ಸಂಗೀತಶ್ರವಣವೂ, ಮದ್ದಿನಸೋಟವೂ ನಡೆಯುವುವು.

ಗುಂಡ್ಲುಪೇಟೆಯ ಶ್ರೀರಾಮಮಂದಿರದಲ್ಲಿ ಈ ತಾ|| 21 ರಿಂದ 12 ದಿನಗಳವರೆಗೆ ರಾಮೋತ್ಸವವನ್ನು ನಡೆಯಿಸಿ ಬರುವ ಮೇ ತಾ|| 3 ರಲ್ಲಿ ರಾಮಪಟ್ಟಾಭಿಷೇಕಮಹೋತ್ಸವವನ್ನೂ ಮಾರನೆಯದಿನ ಆಂಜನೇಯೋತ್ಸವವನ್ನು ಜರುಗಿಸುವುದರಿಂದ ಶ್ರೀರಾಮಭಕ್ತರುಗಳು ಸಪರಿವಾರರಾಗಿ ಬಂದು ಸ್ವಾಮಿಸೇವೆಯಲ್ಲಿ ಭಾಗಿಗಳಾಗಬೇಕೆಂದೂ, ತಾ|| 1-3-1925 ರಿಂದ 24-3-1926 ರ ವರೆಗೆ 1393-2-5 ರೂ. ಚಂದಾಹಣವು ಬಂದು 1311-2-10 ರೂ. ವೆಚ್ಚವಾಗಿ 81-15-7 ರೂ. ಉಳಿದಿರುವುದೆಂದೂ ಮಂದಿರದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಈ ತಾ|| 27 ನೆಯ ಮಂಗಳವಾರ ಬೆಂಗಳೂರಲ್ಲಿ ಕರಗದ ಪರ್ಷೆಯು ನಡೆಯುವುದರಿಂದ ಆ ದಿವಸ ಬೆಂಗಳೂರಿಗೆ ಬರತಕ್ಕ ಹಳ್ಳಿಯ ರೈತಜನರಿಗೆ ಆ ಊರಿನ ಹೊಸತರಗುಪೇಟೆಯ ವರ್ತಕರುಗಳು ಊಟಮಾಡಿಸಲೇರ್ಪಡಿಸಿರುತ್ತಾರೆಂದು ಕೇಳುತ್ತೇವೆ. ಇದು ಸ್ತುತ್ಯವಾದ ಏರ್ಪಾಟೇ ಸರಿ. ಆದರೆ ಇಂತಹ ಅನ್ನದಾನದೇರ್ಪಾಟು ನಡೆದಿರುವಾಗಲೇ ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿರುವುದೂ, ಅದರಿಂದ ಪರಸ್ಥಳದ ಜನರು ಪರಷೆಗೆ ಬರಬೇಕಾದುದಿಲ್ಲವೆಂದು ಸರ್ಕಾರದವರು ಸಾರಿಸಿರುವುದೂ ಉತ್ಸಾಹಭಂಗಕಾರಿಯೆಂದು ಹೇಳಬೇಕಾದುದಿಲ್ಲವು.

ಶ್ರೀಮದ್ಯುವರಾಜರವರು ಕಳೆದಸೋಮವಾರ ಉದಕಮಂಡಲದಿಂದ ರಾಜಧಾನಿಗೆ ಮೋಟಾರುಬಂಡಿಯಲ್ಲಿ ಚಿತ್ತೈಸಿ ಮಾರನೆಯ ಬೆಳಗ್ಗೆ ಬಳಗೊಳಕ್ಕೆ ಮೋಟಾರುಬಂಡಿಯಲ್ಲಿ ಹೋಗಿ ಅಲ್ಲಿಂದ ರೈಲುಬಂಡಿಯನ್ನು ಹತ್ತಿ ಶಿವಮೊಗ್ಗೆಗೆ ದಯೆಮಾಡಿಸಿ ಅಲ್ಲಿ ಸ್ಕೌಟುಗಳ ರ್‍ಯಾಲಿ ಅಂದರೆ ಕೂಟವನ್ನು ಪರಾಮರ್ಶಿಸಿಕೊಂಡು ಬೀರೂರಿಗೆಬಂದು ಪೂನಾ ರೈಲುಬಂಡಿಯನ್ನು ಹತ್ತಿ ಬೊಂಬಾಯಿಗೆ ದಯಮಾಡಿಸಿದರು. ಅಲ್ಲಿಂದ ಈ ದಿವಸ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡಿ 6 ತಿಂಗಳುಕಾಲ ಅಮೇರಿಕೆ, ಜರ್ಮನಿ, ಫ್ರಾನ್ಸ್ ಮೊದಲಾದ ಪಾಶ್ಚಾತ್ಯದೇಶಗಳಲ್ಲಿ ಸಂಚರಿಸಿಕೊಂಡು ಬರುವವರಾಗಿರುವರು.

ರಾಜಧಾನಿಯ ಕಾರಂಜಿಕೆರೆಗೆ ಹೊಸದಾಗಿ ಕಟ್ಟಿಸ್ಪಟ್ಟು ಪ್ರತಿಷ್ಠೆಗೆ ಬಂದಿರುವ ಶ್ರೀ ಆಂಜನೇಯ ದೇವಸ್ಥಾನಕ್ಕೆ ಸಂಬಂಧಪಟ್ಟ ಪಾಠಶಾಲೆಯ ಸಮೀಪದ ಮಂಟಪದಲ್ಲಿ ಕಳೆದ 1-1½ ವರ್ಷದಿಂದಲೂ ವಾಸಮಾಡಿಕೊಂಡಿದ್ದ ಒಬ್ಬ ಭೈರಾಗಿಯು ಮೊನ್ನೆಯಿಂದ ಆ ಸ್ಥಳವನ್ನು ಬಿಟ್ಟು ಕಾರಂಜಿಕೆರೆಕೋಡಿಯ ಪಕ್ಕದಲ್ಲಿ ಒಂದು ಗೋಣಿಮರದ ಕೆಳಗೆ ಒಂದು ಕೊಡೆಯನ್ನು ನಿಲ್ಲಿಸಿಕೊಂಡು ಅದರ ಕೆಳಗಡೆ ವಾಸಮಾಡುತ್ತಿರುವನು. ಹೀಗೆ ಆ ಬಡಪಾಯಿ ಭೈರಾಗಿಗೆ ಏಕಾಏಕಿ ಸ್ಥಳಾಂತರದಿಂದ ದುರವಸ್ಥೆ ಪ್ರಾಪ್ತವಾದುದಕ್ಕಾಗಿ ಆ ಪ್ರಾಂತ ತಿರುಗಾಡುವವರು ನೋಡಿ ಮರುಗುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್‌ಬೋರ್ಡಿನ ಬಡ್ಜೆಟ್ ಮೀಟಿಂಗು ಈ ದಿವಸ ನಂಜನಗೂಡಿನಲ್ಲಿ ಡೆ|| ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯುವುದು. ನಂಜನಗೂಡಿನಿಂದ ಚಾಮರಾಜನಗರಕ್ಕೆ ರೈಲನ್ನು ಹಾಕಲು ಈ ಬೋರ್ಡಿನಿಂದ ದ್ರವ್ಯಸಹಾಯ ಮಾಡಲ್ಪಟ್ಟಿರುವುದರಿಂದ, ಈ ಬೋರ್ಡಿನ ಮೆಂಬರುಗಳನ್ನೆಲ್ಲ ಮೀಟಿಂಗಾದಮೇಲೆ ರೈಲ್ವೆಯವರು ಕೌಲಂದೆವರೆಗೆ ರೈಲುಬಂಡಿಯಮೇಲೆ ಕುಳ್ಳಿರಿಸಿಕೊಂಡು ಹೋಗಿ ಅಲ್ಲಿಂದ ಚಾಮರಾಜನಗರದವರೆಗಿನ ಮಾರ್ಗವನ್ನು ತೋರಿಸುವುದಕ್ಕಾಗಿ ಬಸ್ಸುಗಳ ಮೂಲಕ ಕರೆದುಕೊಂಡುಹೋಗಿ ಬರುವರು. ಅಲ್ಲಿ ಮೆಂಬರುಗಳ ಟೀ. ಮತ್ತು ಅಲ್ಪಾಹಾರಕ್ಕೆ ಏರ್ಪಾಟು ಮಾಡಲ್ಪಟ್ಟಿರುವುದಾಗಿ ಕೇಳುತ್ತೇವೆ.

ಈ ತಾ|| 22 ರ ಸಾಯಂಕಾಲ ರಾಜಧಾನಿಯಲ್ಲಿ ಮುಕ್ಕಾಲು ಅಂಗುಲದವರೆಗೆ ಮಳೆಯಾಯಿತು, ಮತ್ತು ಇನ್ನೂ ಬರುವ ಚಿಹ್ನೆಯಿದೆ. ಈ ಮಳೆಯು ಆಗ್ನೇಯದಿಕ್ಕಿನಿಂದ ಬಂದಿತಾದುದರಿಂದ ಆ ದಿಕ್ಕಿನ ಪ್ರದೇಶದಲ್ಲಿ ವಿಶೇಷವಾಗಿ ಆಗಿರಬಹುದೆಂದು ತೋರುತ್ತದೆ. ಬೆಂಗಳೂರಿನಲ್ಲೂ 1 ಅಂಗುಲದವರೆಗೆ ಆಗಿರುವುದಾಗಿಯೂ, ಕಾನಕಾನಹಳ್ಳಿ ಮೊದಲಾದ ಕೆಲ ಸ್ಥಳಗಳಲ್ಲಿ ದೊಡ್ಡ ಮಳೆಯಾಗಿ ಕೆರೆಕಟ್ಟೆಗಳಿಗೆ 3-4 ತಿಂಗಳ ನೀರು ಬಂದು ಕುಡಿಯುವ ನೀರಿನ ಅಭಾವ ತಪ್ಪಿರುವುದಾಗಿಯೂ, ಕ್ಲೋಸ್‌ಪೇಟೆ ಮತ್ತು ಮಳೂರು ಹೊಳೆಗಳಲ್ಲಿ ನೀರು ಹರಿಯುತ್ತಿರುವುದಾಗಿಯೂ ಕೇಳುತ್ತೇವೆ. ಈ ಅಶ್ವಿನಿ ಮಳೆಯ ಕೊನೇಪಾದವಾದರೂ ನಡೆಯದಿದ್ದಲ್ಲಿ ಜನರಿಗೂ ದನಕರುಗಳಿಗೂ ಬಹಳ ಕಷ್ಟಸಂಭವಿಸುತ್ತಿದ್ದಿತು. ಬರುವ ಮಂಗಳವಾರ ಹುಟ್ಟುವ ಭರಣಿಮಳೆಯು ಚೆನ್ನಾಗಿ ನಡೆಸುವುದೆಂದು ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯಲ್ಲಿರುವ ಸಾಹುಕಾರ್ ಕಬ್ಬಳ್ಳಿ ಚೆನ್ನಬಸಪ್ಪನವರ ವೀರಶೈವಹಾಸ್ಟಲಿನ ಮೇಲ್ವಿಚಾರಣೆಗಾಗಿ ಕೈ|| ಚೆನ್ನಬಸಪ್ಪನವರ ಕುಟುಂಬದವರಿಷ್ಟಪ್ರಕಾರ ವಿದ್ಯಾಭ್ಯಾಸದ ಇ|| ಜನರಲ್‌ರವರು ಒಂದು ಕಮಿಟಿಯನ್ನೇರ್ಪಡಿಸಿ, ಮಹಾರಾಜಾಕಾಲೇಜಿನ ಪ್ರೊಫೆಸರ್ ಮಿ|| ವಾಡಿಯರವರನ್ನು ಚೇರ್ಮನ್ನರಾಗಿಯೂ, ಮ|| ಗಳಾದ 1. ಮುಸಾಹೇಬ್ ಆರ್. ಪುಟ್ಟಣ್ಣ, ಬಿ.ಎ.,ಬಿ.ಎಲ್., ರವರು, 2. ಮುನಸೀಫ್ ಎಚ್. ಕೆ. ವೀರಬಸವಯ್ಯ, ಬಿ.ಎ., ಬಿ.ಎಲ್. ರವರು, 3. ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು, 4. ಎಲೆಕ್ಟ್ರಿಕ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಎ. ಆರ್. ರಾಮಭದ್ರಗೌಡರು, 5. ಲಾಯರ್ ಬಿ. ಪುಟ್ಟಸ್ವಾಮಿ, ಬಿ.ಎ., ಬಿ.ಎಲ್., ರವರು, 6. ಕಾಗಲ್ವಾಡಿ ಪುಟ್ಟಣ್ಣನವರು, 7. ಎಂ. ಪಿ. ಲಿಂಗಪ್ಪಯ್ಯನವರು, 8. ಎಚ್. ಬಸಪ್ಪನವರು, 9. ವೈ. ವಿರೂಪಾಕ್ಷಯ್ಯನವರು ಇಂತಿಷ್ಟು ಜನರನ್ನು ಕಮಿಟಿಯ ಮೆಂಬರುಗಳನ್ನಾಗಿಯೂ ನಿಯಮಿಸಿರುವುದಾಗಿ ಕೇಳುತ್ತೇವೆ. ಈ ಮೇಲ್ವಿಚಾರಕಕಮಿಟಿಯವರು ಹಾಸ್ಟಲಿನ ಆಡಳಿತವನ್ನೂ, ವಿದ್ಯಾರ್ಥಿಗಳ ಪುರೋಭಿವೃದ್ಧಿಯನ್ನೂ ಚೆನ್ನಾಗಿ ನೋಡಿಕೊಂಡು ಧರ್ಮಕರ್ತರ ಉದ್ದೇಶವನ್ನು ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಗ್ವಾಲಿಯರ್ ದೇಶೀಯಸಂಸ್ಥಾನದ ಪ್ರಭುತ್ವದವರು ಈ ವರೆಗೆ ನಡೆಸುತ್ತಿದ್ದ ಕುದುರೆಯಪಂದ್ಯವನ್ನು ಇತಃಪರ ನಿಲ್ಲಿಸಿಬಿಟ್ಟಿರುವರು.

ಹೌರಾಡಿಸ್ಟ್ರಿಕ್ಟ್ ಶಿವಪುರಗ್ರಾಮದಲ್ಲಿ 5 ರೂಪಾಯಿನ ನೋಟುಗಳನ್ನು ಸೃಷ್ಟಿಸುತ್ತಿದ್ದರೆಂಬ ಅಪರಾಧಕ್ಕಾಗಿ ಮೂವರು ಮನುಷ್ಯರು ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ.

ಹೈದರಾಬಾದು ರಾಜಧಾನಿಯಲ್ಲಿ ಈಚೆಗೆ ಒಂದು ದಿವಸ 4½ ಇಂಚು ಮಳೆಯಾಯಿತೆಂದೂ, ಆ ದಿವಸ ಬಿದ್ದ ಆಲಿಕಲ್ಲುಗಳೇಟಿಗೆ ಫಲ್ಕನಾಮಾ ಎಂಬ ಅರಮನೆಯ ಕಿಟಕಿಬಾಗಲುಗಳ ಗಾಜುಗಳೊಡೆದುಹೋಗಿ 35,000 ರೂ. ವರೆಗೆ ನಷ್ಟವಾಯಿತೆಂದೂ ತಿಳಿಯಬಂದಿದೆ.

ಕಟಾಯಿಸಂಸ್ಥಾನದ ರಾಜರೂ, ಅವರ ಸಹೋದರರೂ, ಕ್ಯಾಪ್ಟನ್ ಅಬ್ಬಾಟ್‌ರವರೂ ಜಾನ್ಸಿಯಿಂದ 30 ಮೈಲಿ ದೂರದಲ್ಲಿರುವ ಕಾಡಿನಲ್ಲಿ ಬೇಟೆಗೆ ಹೋಗಿದ್ದಾಗ್ಗೆ ಬಹು ಚೆನ್ನಾಗಿ ಕೊಬ್ಬಿ ಬೆಳೆದಿರುವ ಹೊಂಬಣ್ಣದ ಒಂದು ಸುಂದರವಾದ ಸಿಂಹವನ್ನು ಕೊಂದರು. ಆ ಕಾಡಿನಲ್ಲಿ ಕಳೆದ 60 ವರ್ಷಗಳಿಂದ ಒಂದು ಸಿಂಹವಾದರೂ ಬೇಟೆಮಾಡಲ್ಪಟ್ಟಿರಲಿಲ್ಲವಂತೆ.

ಲಾಹೋರುಪಟ್ಟಣದ ಮೋಚಂಗ್‌ಬೀದಿಯಲ್ಲಿರುವ ಸರ್ ಮಹಮ್ಮದ್ ಷಾಫಿಯವರ ಇಕ್‌ಬಾಲ್‌ಮಂಜಲಿ ಎಂಬ ಬಂಗಲೆಗೆ ಕಳೆದ ತಾ|| 16 ರ ಬೆಳಗಿನಝಾವದಲ್ಲಿ ಕೆಲಕಳ್ಳರು ಕಿಟಿಕಿಗಳ ಕನ್ನಡಿಗಳನ್ನೊಡೆದುಹಾಕಿ ಒಳಗೆ ನುಗ್ಗಿ 6-7 ಸಾವಿರ ರೂ. ಬೆಲೆಬಾಳುವ 40 ರೇಷ್ಮೆ ಜರತಾರಿ ಸೀರೆಗಳನ್ನು ಅಪಹರಿಸಿಕೊಂಡುಹೋದರು. ಪೋಲೀಸರು ಕಳ್ಳರನ್ನು ಪತ್ತೆಹಚ್ಚುತ್ತಿದ್ದಾರೆ.

ಬಡ್ಜ್‌ಬಡ್ಜಿನಲ್ಲಿ ದೊಡ್ಡವ್ಯಾಪಾರಿಯಾದ ಮಹೇಂದ್ರನಾಥನೆಂಬ ಶ್ರೀಮಂತನ ಮನೆಗೆ ಕಳೆದ ತಾ|| 14 ರ ರಾತ್ರಿ, ಕೆಲ ಕಳ್ಳರು ಆಯುಧಪಾಣಿಗಳಾಗಿ ಮನೆಯಬಾಗಿಲನ್ನು ತೆಗೆದು ಒಳಗೆ ನುಗ್ಗಿದರು. ಕೂಡಲೆ ಮನೆಯೊಳಗಿದ್ದವರು ಎಚ್ಚತ್ತು ಕಳ್ಳರನ್ನು ಪ್ರತಿಭಟಿಸಲು ಕಳ್ಳರು ಅವರನ್ನು ಚೆನ್ನಾಗಿ ಪ್ರಹರಿಸಿ ಹೆಂಗುಸರ ಮಾನಭಂಗವನ್ನು ಮಾಡಿ ಬಹಳ ನಗನಾಣ್ಯಗಳನ್ನು ದೋಚಿಕೊಂಡುಹೋದರು.

ಭಾರತಸಂಗೀತವಿದ್ಯಾಪ್ರಸಾರಕ್ಕಾಗಿ ಕಲಕತ್ತಾದಲ್ಲೇರ್ಪಟ್ಟಿರುವ ಸಂಗೀತವಿದ್ಯಾಲಯದ ಪಾರಿತೋಷಿಕ ಸಮಾರಂಭವು ಅಲ್ಲಿಯ ವಿಶ್ವವಿದ್ಯಾಲಯಸಂಘದ ಮಂದಿರದಲ್ಲಿ ವಿದ್ಯಾಭ್ಯಾಸದ ಡೈರೆಕ್ಟರಾದ ಮಿ|| ಓಟೆನ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಭಾರತಸಂಗೀತವಿದ್ಯಾಪ್ರೋತ್ಸಾಹಕ್ಕಾಗಿ ಸಂಗೀತದಲ್ಲಿ ಪ್ರಶಸ್ತಿಯನ್ನು ಕೊಡಲೇರ್ಪಡಿಸಬೇಕೆಂದು ವಿಶ್ವವಿದ್ಯಾಲಯದ ಪರ್ಯಾಲೋಚನೆಯಲ್ಲಿರುವುದಾಗಿ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ಸಮಸ್ತಪ್ರಾಣಿವರ್ಗಕ್ಕೂ ಮನಾನಂದವನ್ನುಂಟುಮಾಡುವ ಸಂಗೀತವಿದ್ಯಾಪ್ರಸಾರಕ್ಕೆ ತಕ್ಕ ಪ್ರೋತ್ಸಾಹವು ಕೊಡಲ್ಪಡುವುದು ಅತ್ಯಗತ್ಯವೂ ಅವಸರವೂ ಆಗಿರುತ್ತದೆ.

ವಿದೇಶದ ವೃತ್ತಾಂತಗಳು.

ಇಂಗ್ಲೆಂಡಿನ ನಿರುದ್ಯೋಗಿಗಳಾಗಿರುವ ಕೂಲಿಕಾರರ ಸಂಖ್ಯೆಯು ಕಳೆದವಾರ ಹಿಂದಿನವಾರಕ್ಕಿನ್ನ 36,000 ಜಾಸ್ತಿಯಾಗಿದ್ದಿತು, ಅಂದರೆ ಒಟ್ಟು 10,48,800 ಇದ್ದಿತು.

ಒಬ್ಬ ಸೈನ್ಯಾಧಿಕಾರಿಯು ತನ್ನ 14 ವರ್ಷ ವಯಸ್ಸಿನ ಮಗಳನ್ನು ನಿರ್ವಾಣವಾಗಿರಿಸಿ ಅವಳ ಫೋಟೋ ತೆಗೆದುಕೊಂಡ ತಪ್ಪಿತಕ್ಕಾಗಿ ನ್ಯಾಯಾಧೀಶನು ಅವನಿಗೆ 9 ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದನು.

ಜಾರ್ಜ್‌ಚಕ್ರವರ್ತಿಯವರ ದ್ವಿತೀಯಪುತ್ರ ಡ್ಯೂಕ್ ಆಫ್ ಯಾರ್ಕ್‌ರವರ ಧರ್ಮಪತ್ನಿಯವರು ಕಳೆದ ತಾ|| 21 ರ ರಾತ್ರಿ 2-40 ಗಂಟೆಯಲ್ಲಿ ಒಂದು ಪುತ್ರಿಕಾರತ್ನವನ್ನು ಪಡೆದರು. ಮಗುಬಾಣಂತಿಯರು ಆರೋಗ್ಯವಾಗಿರುತ್ತಾರೆ.

ದಕ್ಷಿಣಾಫ್ರಿಕೆಯಲ್ಲಿ ಕರಿಯಾಂಬಾ ಎಂಬ ಒಂದು ಜಾತಿಯ ಹಾವುಗಳಿರುತ್ತವೆ. ಇವು ಭರತಖಂಡದಲ್ಲಿರುವ ನಾಗರಹಾವುಗಳಿಗಿಂತಲೂ ಬಹಳ ಕ್ರೂರವಾಗಿರುವವಲ್ಲದೆ ಯಾವಾಗಲೂ ಎರಡೆರಡು ಒಟ್ಟಿಗಿದ್ದು ತಮ್ಮಲ್ಲಿ ಒಂದು ಕೊಂದುಹಾಕಲ್ಪಟ್ಟರೆ ಮತ್ತೊಂದು ತನ್ನ ಹಗೆಯನ್ನು ತೀರಿಸಿಕೊಂಡಹೊರತು ಸಮಾಧಾನವಾಗುವುದಿಲ್ಲವಂತೆ.

ಬ್ರಿಟಿಷ್ ಸ್ವಾಸ್ಥ್ಯಗಳಲ್ಲೆಲ್ಲಾದರೂ ಜನರು ದಂಗೆಯೇಳುವುದಾದರೆ ಅದನ್ನು ಕೂಡಲೆ ಅಣಗಿಸುವುದಕ್ಕಾಗಿ ಒಂದು ಹೊಸಮಾದರಿಯ ಆಕಾಶಯಾನಗಳು ನಿರ್ಮಿಸಲ್ಪಡುತ್ತಿವೆ. ಈ ಯಾನವು ಬೇಕಾದ ಆಯುಧಸಾಮಗ್ರಿಗಳಸಮೇತ 50 ಜನ ಶಿಪಾಯಿಗಳನ್ನು ಕುಳ್ಳಿರಿಸಿಕೊಂಡು ಗಂಟೆಯೊಂದಕ್ಕೆ 400 ಮೈಲಿ ವೇಗದಿಂದ ಪ್ರಯಾಣಮಾಡುತ್ತದಂತೆ.

ರೋಂಪಟ್ಟಣದ ಪ್ರಾಣಿಪ್ರದರ್ಶನಾಲಯದಲ್ಲಿ ಕ್ರೂರಮೃಗಗಳನ್ನು ಸಾಧುಮಾಡುವುದರಲ್ಲಿ ಬಹಳ ಧೈರ್ಯಶಾಲಿಯೂ, ಸಮರ್ಥನೂ ಎಂದು ಪ್ರಖ್ಯಾತನಾಗಿದ್ದ ಅಟ್ಟರ್‌ಗರ್ ಎಂಬುವವನು ಹುಲಿಗಳ ಬೋನಿನೊಳಕ್ಕೆ ಹೋಗಿ ಅವನ್ನು ಒಂದುಕಡೆಯಿಂದ ಮತ್ತೊಂದುಕಡೆಗೆ ಅಟ್ಟುವುದಕ್ಕಾಗಿ ಬೆನ್ನನ್ನು ತಿರುಗಿಸಿಕೊಂಡಿರುವಾಗ್ಗೆ ಒಂದು ಹುಲಿಯು ಅವನಮೇಲೆ ಬಿದ್ದು ಪಂಜಾದಿಂದ ಹೊಡೆದು ಕೆಳಕ್ಕೆಡಿವಿಬಿಟ್ಟಿತು. ಇದನ್ನು ಕಂಡು ಇತರರು ಬಂದು ಆ ಹುಲಿಯನ್ನು ಓಡಿಸುವಷ್ಟರೊಳಗೆ ಅದು ಅವನ ಮೈಯನ್ನು ಬಗೆದು ಕೊಂದುಹಾಕಿಬಿಟ್ಟಿತು.

ಡ್ರೋಮರಾಕೆಂಡ್ರ್ ಎಂಬಲ್ಲಿ ವಿಲಿಯಂಸ್ಮಿತ್ ಎಂಬ 125 ವರ್ಷವಯಸ್ಸಿನ ವೃದ್ಧನಿರುತ್ತಾನೆ. ಇವನು ಪ್ರಪಂಚದಲ್ಲೆಲ್ಲಾ ತಾನೊಬ್ಬನೇ ಅತ್ಯಂತ ವೃದ್ಧನೆಂದೂ, ವಾಟರ್ಲೂ ಯುದ್ಧವನ್ನು ತಾನು ನೋಡಿದ್ದೆನೆಂದೂ, ತಾನು ಏಕಾಕಿಯಾಗಿ ವಾಸಮಾಡಿಕೊಂಡು ಬಹಳ ಸಾಮಾನ್ಯ ಆಹಾರವನ್ನೂ ಅಪೂರ್ವವಾಗಿ ಮದ್ಯಸೇವನೆಯನ್ನೂ ಮಾಡುತ್ತ ನಿರ್ಮಲವಾದ ವಾಯುವನ್ನು ಸೇವಿಸುತ್ತಿರುವುದರಿಂದಲೇ ತಾನು ಇಷ್ಟುದೀರ್ಘಜೀವಿಯಾಗಿರುವುದಕ್ಕೆ ಕಾರಣವೆಂದೂ ಹೇಳುತ್ತಿರುವನು. ಚಕ್ರವರ್ತಿಯವರು ಈ ವೃದ್ಧನ ದೀರ್ಘಾಯುಷ್ಯಕ್ಕೆ ಸಂತೋಷಪಟ್ಟು 45 ರೂಪಾಯಿಗಳನ್ನು ಬಹುಮಾನವಾಗಿ ಕಳುಹಿಸಿಕೊಟ್ಟು ಅವನ ಅಭಿನಂದನವನ್ನು ಮಾಡಿರುತ್ತಾರೆ.

ಒಬ್ಬ ವಿರ್ಕ್ನೋವ್ಸ್ಕನು ಒಂದು ಕಾಡಿನಮಾರ್ಗವಾಗಿ ಮೋಟಾರುಬೈಸಿಕಲ್ಲಿನಲ್ಲಿ ಕುಳಿತು ಹೋಗುತ್ತಿರುವಾಗ್ಗೆ ತನ್ನ ತಲೆಯಸುತ್ತಲೂ ಬಲವಾದ ಏಟು ಬೀಳುತ್ತಿರುವುದನ್ನು ತಿಳಿದು ಬೈಸಿಕಲ್ಲನ್ನು ನಿಲ್ಲಿಸಿ ಕೈಯಿಂದ ತನ್ನ ತಲೆಯಮೇಲಿನ ಟಪ್ಪಿಗೆಯನ್ನು ಸವರಿ ನೋಡುತ್ತಿರುವಲ್ಲಿ ಒಂದು ರಣಹದ್ದು ತನ್ನ ಕೊಕ್ಕಿನಿಂದ ಅವನ ಕೈಯನ್ನು ಬಲವಾಗಿ ಕುಕ್ಕಿತು. ಅವನು ದಿಗ್ಭ್ರಾಂತನಾಗಿ ಆ ಏಟನ್ನು ಸುಧಾರಿಸಿಕೊಳ್ಳುವಷ್ಟರಲ್ಲಿ ಇದಿರಾಗಿ ಬರುತ್ತಿದ್ದ ಮೋಟಾರುಬಂಡಿಯಲ್ಲಿ ಕುಳಿತ್ತಿದ್ದವರು ಆ ಏಟನ್ನು ತಿಂದವನನ್ನು ರಣಹದ್ದು ತೊಂದರೆಪಡಿಸುತ್ತಿದ್ದುದನ್ನು ನೋಡಿ ಕೆಳಗಿಳಿದು ಹದ್ದನ್ನು ಹೊಡೆದು ಅದರ ಒಂದುರೆಕ್ಕೆಯನ್ನು ಕತ್ತರಿಸಿಹಾಕಿದರು. ಅದರ ಒಂದು ರೆಕ್ಕೆಯ ತುದಿಯಿಂದ ಇನ್ನೊಂದುರೆಕ್ಕೆಯ ತುದಿಯವರೆಗೆ 4 ಅಡಿ ಅಗಲವಿದ್ದಿತು.

ಜರ್ಮನಿಯಲ್ಲಿ ಒಬ್ಬ ಮನುಷ್ಯನು ಬೈಸಿಕಲ್‌ಸ್ವಾರಿಯನ್ನು ಮಾಡಿಕೊಂಡು ಹೋಗುತ್ತಿರುವಾಗ್ಗೆ ಒಂದು ಬಾತಿನ ಮೇಲೆ ಚಕ್ರವನ್ನು ಹರಿಸಿ ಕೊಂದುಬಿಟ್ಟುದಕ್ಕಾಗಿ 30 ರೂ. ಗಳನ್ನು ಪರಿಹಾರದ್ರವ್ಯವಾಗಿ ಕೊಡುತ್ತೇನೆಂದು ಸ್ವಾರನು ಬಹಳವಾಗಿ ಹೇಳಿದರೂ ಆ ಬಾತಿನ ಯಜಮಾನನು ಅದನ್ನು ಪ್ರದರ್ಶನಾಲಯದಲ್ಲಿಡಲು ಸಾಕುತ್ತಿದ್ದೆನಾದುದರಿಂದ 75 ರೂ. ಗಳನ್ನು ಕೊಡಬೇಕೆಂದು ಮುಷ್ಕರಹಿಡಿದನು. ಸವಾರನು ಅಷ್ಟು ಕೊಡಲೊಪ್ಪಲಿಲ್ಲವಾಗಿ, ಉಭಯರೂ ಹೋರಾಡುತ್ತಿರುವುದನ್ನು ಗ್ರಾಮಾಧಿಕಾರಿಯು ನೋಡಿ ವ್ಯಾಜ್ಯವನ್ನು ಬಗೆಹರಿಸಲು ಬಂದು ಸವಾರನಕೈಯಿಂದ 30 ರೂ. ಗಳನ್ನು ಬಾತಿನ ಯಜಮಾನನಿಗೆ ಕೊಡಿಸಿ ತನ್ನ ಕೈಯಿಂದ 45 ರೂ. ಗಳನ್ನು ಕೊಟ್ಟು ಉಭಯರನ್ನೂ ಸಮಾಧಾನಪಡಿಸಿ ಸತ್ತಬಾತನ್ನು ತಾನು ತೆಗೆದುಕೊಂಡನು.

ಮನ್ನಾಲೋವಾ ಎಂಬ ಜ್ವಾಲಾಮುಖಿಯಿಂದ ಅಗ್ನಿಕಣಗಳು ಹೊರಟು 18 ಮೈಲಿ ದೂರದಲ್ಲಿ ರಹೂಪಲೋವಾ ಎಂಬ ಗ್ರಾಮದಮೇಲೆ ಪ್ರವಹಿಸಿ ನೂರಾರುಮನೆಗಳನ್ನು ನಿರ್ನಾಮಗೊಳಿಸಿದುವು. ಇದರಿಂದ ಜನರ ಸ್ಥಿತಿಯೇನಾಯಿತೆಂಬುದು ಇನ್ನೂ ಗೊತ್ತಾಗಲಿಲ್ಲ. ಕನ್ನ ಎಂಬಲ್ಲಿ ನೂರಾರುಮನೆಗಳು ಕಿಡಿಗಳ 15 ಅಡಿ ಕೆಳಗೆ ಹೂತುಹೋಗಿವೆ. ಪರ್ವತವು ಕರಗಿ ನೀರಾಗಿ ಸಮುದ್ರಕ್ಕೆ ಹೋಗಿ ಬಿದ್ದುದರಿಂದ ಸಮುದ್ರದ ದಡದಿಂದ ನೂರಾರು ಅಡಿಯ ದೂರದವರೆಗೆ ನೀರು ಕಾದು ಕುದಿಯುತ್ತಿದ್ದಿತು. ಮನ್ನಾಪರ್ವತದಿಂದ ಹೊರಟ ಅಗ್ನಿಜ್ವಾಲೆಯು ಸಮುದ್ರದಮೇಲೆ 3,000 ಅಡಿ ಎತ್ತರದಲ್ಲಿ ಕವಿದುಕೊಂಡಿದ್ದುದನ್ನು ಹಡಗಿನಲ್ಲಿ ಪ್ರಯಾಣಮಾಡುತ್ತಿದ್ದವರು ನೋಡಿ ಭಯಗ್ರಸ್ತರಾದರು. ಹೂಪ್‌ಆಲೋವಾದ ವೃದ್ಧಜನರು ತಮ್ಮ ಮನೆಯನ್ನು ನಾಶಪಡಿಸದಂತೆ ಅಗ್ನಿದೇವತೆಯನ್ನು ಪ್ರಾರ್ಥಿಸುತ್ತಿದ್ದರು.

ಮ್ಯಾಂಚೆಸ್ಟರಿನ ಬಡಜನರ ನಿವಾಸಸ್ಥಳದಲ್ಲಿದ್ದ 74 ವರ್ಷ ವಯಸ್ಸಿನ ಓರ್ವ ವೃದ್ಧಳು ಕಾಲವಾದಳು. ಅವಳು ಮಲಗಿದ್ದ ಹಾಸಿಗೆಯ ಕೆಳಗೆ 60,000 ರೂಪಾಯಿನ ನಾಲ್ಕು ಬ್ಯಾಂಕು ಚೆಕ್ಕುಗಳೂ, ಬಂಗಾರದ ನಾಣ್ಯಗಳ ಒಂದು ಚೀಲವೂ ಚಂದಿಬಟ್ಟೆಗಳಲ್ಲಿ ಬಚ್ಚಿಡಲ್ಪಟ್ಟಿದ್ದುವು. ಅವುಗಳನ್ನು ಶೋಧಿಸುವಲ್ಲಿ ಒಟ್ಟು 6,00,000 ರೂಪಾಯಿಗಳು ದೊರಕಿದುವು. ಆಕೆಯ ತಂದೆಯು ಸಾಯುವಾಗ್ಗೆ 1,50,000 ರೂಪಾಯಿಗಳನ್ನು ತನ್ನ ಇಬ್ಬರು ಹೆಣ್ಣುಮಕ್ಕಳಿಗೆ ಬಿಟ್ಟುಹೋಗಿದ್ದನು. ಈಕೆಯ ಸಹೋದರಿಯು ಸತ್ತುಹೋದುದರಿಂದ ಆ ಹಣವೆಲ್ಲವೂ ಈಕೆಯೊಬ್ಬಳಿಗೇ ಬಂದಿತು. ಇವಳು ಬಡಬಗ್ಗರ ನೆರೆಯಲ್ಲಿ ಒಂದು ಸಾಮಾನ್ಯ ಮನೆಯಲ್ಲಿ ವಾಸವಾಗಿದ್ದಳಲ್ಲದೆ ಬಹು ಕೋಪಿಷ್ಠೆಯಾಗಿದ್ದುದರಿಂದ ಇವಳ ಹತ್ತಿರ ಯಾರೂ ಸುಳಿಯುತ್ತಿರಲಿಲ್ಲವಾದುದರಿಂದಲೂ, ಬಹಳ ಪಿಸುಣತನದಲ್ಲಿ ಜೀವನಮಾಡುತ್ತಿದ್ದುದರಿಂದಲೂ ಇಷ್ಟು ಹಣ ಶೇಖರವಾಗಲು ಕಾರಣವಾಯಿತು. ಇವಳಿಷ್ಟು ಧನಾಢ್ಯಳಾಗಿದ್ದರೂ ಮನೆಕಂದಾಯವನ್ನು ಸತಾಯಿಸದೆ ಸಲೀಸಾಗಿ ಕೊಡುತ್ತಿರಲಿಲ್ಲ.

ಥಾಮಸ್‌ಹಾರ್ಕರ್ ಎಂಬ 47 ವರ್ಷವಯಸ್ಸಿನ ಒಬ್ಬ ಕುಂಟನು ಡರ್ಹ್ಯಾಂಕಾರಾಗೃಹವಾಸಿಯಾಗಿದ್ದನು. ಅವನ 6 ತಿಂಗಳ ಅವಧಿಯು ಮುಗಿದಮೇಲೆ ಹೊರಟುಹೋಗುವಂತೆ ಅಲ್ಲಿಯಧಿಕಾರಿಗಳು ಎಷ್ಟು ವಿಧವಾಗಿ ಹೇಳಿದರೂ ಅವನು ಹೋಗುವುದಿಲ್ಲವೆಂದು ಮುಷ್ಕರಹಿಡಿದಿದ್ದುದರಮೇಲೆ ಆಳುಗಳು ಅವನನ್ನು ಎತ್ತಿಕೊಂಡು ಕಾರಾಗೃಹದ ಹೊರಗಡೆಗೆ ಸಾಗಿಸಿ ನೆಲದಮೇಲೆ ಕುಳ್ಳಿರಿಸಿಬಿಟ್ಟರು. ಆ ಕಳ್ಳನು ಪುನಃ ಕಾರಾಗೃಹವಾಸಕ್ಕೇ ಹೋಗಬೇಕೆಂದೆಳಸಿ ಅಲ್ಲಿಯಧಿಕಾರಿಯ ಮನೆಯ ಕಿಟಿಗಿಗಳ ಗಾಜನ್ನೊಡೆದುಹಾಕಿ, ಆ ತಪ್ಪಿತಕ್ಕಾಗಿ ಮ್ಯಾಜಿಸ್ಟ್ರೇಟರಿಂದ 2 ತಿಂಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು. ಇವನು ಸೇನೆಯಲ್ಲಿರುವಾಗ್ಗೆ ಇವನ ಕಾಲುಮುರಿದುಹೋಯಿತು. ಇವನ ಪೆನ್ಶನ್ನು ವಾರವೊಂದಕ್ಕೆ 30 ರೂ. ಇಂದ 15 ರೂ. ಗೆ ಕಡಿಮೆಮಾಡಲ್ಪಡಲಾಗಿ ಪೆನ್ಷನ್ನಿನಲ್ಲಿ ಒಂದು ಕಾಸನ್ನೂ ತೆಗೆದುಕೊಳ್ಳದೆ ತಿರಸ್ಕರಿಸಿಬಿಟ್ಟು ಹೊಟ್ಟೆಗಿಲ್ಲದಿದ್ದುದರಿಂದ ಕಾರಾಗೃಹವಾಸವನ್ನು ಅಪೇಕ್ಷಿಸುತ್ತಿರುವುದಾಗಿ ಊಹಿಸಲ್ಪಟ್ಟಿದೆ.

ಪ್ರಕಟನೆ.

ಈ ಮೂಲಕ ಸರ್ವಜನಗಳಿಗೂ ತಿಳಿಯಪಡಿಸುವುದೇನಂದರೆ:— 16-4-16 ನೇ ಶುಕ್ರವಾರ ಚೌಕಿಪೇಟೆಯಲ್ಲಿರುವ ಮಾರ್ವಾಡಿಯವರ ದೇವಸ್ಥಾನದ ಕಟ್ಟೆಯಮೇಲೆ ಒಂದು ಹೊಸಕಾಶ್ಮೀರಶಾಲು ಸಿಕ್ಕಿರುತ್ತೆ. ಕಳೆದುಕೊಂಡಿರತಕ್ಕವರು ಕೆಳಗಿನ ವಿಳಾಸದಾರನನ್ನು ಕಂಡು ತೆಗೆದುಕೊಳ್ಳಬಹುದು.

ಆನೆಕೊಂಡದ ಮುಷ್ಟಣ್ಣನವರು,
ಚೌಕಿಪೇಟೆ, ದಾವಣಗೆರೆ.

ಸ್ವೀಕಾರ.

ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಶಿವಗಂಗೆಯ ಮ॥ ಸಾಹುಕಾರ್ ಎಲ್. ರೇವಣ್ಣನವರಿಂದ ಅವರ ಮಗಳು ಸೌ॥ ರೇವಮ್ಮನಿಗೂ ಗುಬ್ಬಿಯ ಮ॥ ಗುಬ್ಬಿಶೆಟ್ಟಪ್ಪನವರ ಮಗ ರಾ॥ ಗುಬ್ಬಿಹುಚ್ಚಪ್ಪನಿಗೂ ನಡೆದ ಲಗ್ನದಲ್ಲಿ 1 ರೂ. (2) ನೈಜಾಂ ಪ್ರಾಂತದ ಮಖ್ತಲ್ ತಾ॥ ನೇರಡಿಗುಂಭದಲ್ಲಿರುವ ಶಿವಯೋಗಮಂದಿರದ ಸಾಧಕಸಂಘದವರಿಂದ ನೂತನ ದಿನೋತ್ಸವ ಸಂಬಂಧವಾಗಿ 2 ರೂ. (3) ಮೈಸೂರು ಮ॥ ನಂಜುಂಡಪ್ಪನವರ ವಿರೂಪಾಕ್ಷಪ್ಪನವರ ಪುತ್ರಿ ಸೌ॥ ಸರ್ವಮಂಗಳೆಗೂ ಟಿ. ನರಸೀಪುರದ ಮ॥ ದೆ. ನಂಜಪ್ಪನವರ ಪುತ್ರ ರಾ॥ ನಂಜುಂಡಸ್ವಾಮಿಗೂ ನಡೆದ ವಿವಾಹದಲ್ಲಿ ವಧೂವರರ ಕಡೆಯಿಂದ 2 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ತಿರಸ್ಕೃತಲೇಖಗಳು.

(1) ಓರ್ವ ಚಂದಾದಾರ—ನಿಮ್ಮ ನೂತನಚರಿತ್ರ ಮತ್ತು ನೂತನ ಚಂತ್ರಕರ್ತ ಎಂಬ ಲೇಖವು ಜನೋಪಯುಕ್ತವಾಗಿಲ್ಲವು. (2) ಓರ್ವ ಪಂಚಾಂಗಾವಲೋಕಿ—ಶ್ರೀಮದಕ್ಷಯಸಂವತ್ಸರದ ಒಂದಾನೊಂದು ಪಂಚಾಂಗದಲ್ಲಿ ನವನಾಯಕರ ಹೆಸರೂ, ಫಲವೂ ವ್ಯತ್ಯಸ್ತವಾಗಿರುವ ವಿಚಾರವಾಗಿ ಆ ಪಂಚಾಂಗಕರ್ತರಿಗೆ ನೀವೇ ಬರೆದು ನಿಮ್ಮ ಸಂಶಯ ಪರಿಹಾರ ಮಾಡಿಕೊಳ್ಳುವುದುತ್ತಮವು. (3) ಮತಿಗಟ್ಟ ಹಿರೇಮಠದ ರುದ್ರಪ್ಪಶಾಸ್ತ್ರಿಗಳು—ಜೋತಿಷ ವಿಚಾರವೆಂಬ ನಿಮ್ಮ ಲೇಖವು ಪ್ರಕಟನಪತ್ರಿಕೆಯಾಗಿರುವುದರಿಂದ ತಿರಸ್ಕರಿಸಲ್ಪಟ್ಟಿದೆ.

ವೀರಶೈವ ವಿದ್ವಾಂಸರೋ ಸ್ವಮತವಿಧ್ವಂಸಕರೋ?

ಒಂದೇ ಒಂದು ಜನ್ಮದಲ್ಲಿ ಯಜ್ಞಯಾಗಾದಿ ಕರ್ಮಗಳೇನೂ ಇಲ್ಲದೆ ಲಿಂಗಾರ್ಚನಾವ್ರತಮಾತ್ರದಿಂದ ಮುಕ್ತಿಯನ್ನು ಕೊಡತಕ್ಕ ವೀರಶೈವ ಮತದ ಪ್ರಾಶಸ್ತ್ಯಕ್ಕೂ ಅಭಿವೃದ್ಧಿಗೂ ಧರ್ಮಗ್ರಂಥಗಳೂ, ಅವುಗಳ ಕರ್ತರೂ ಪ್ರಚಾರಕರೂ ಆದ ವಿದ್ವಾಂಸರೂ ಕಾರಣರೆಂಬುದನ್ನು ಈ ಮತಾನುಯಾಯಿಗಳೆಲ್ಲರೂ ಬಲ್ಲವರಾಗಿರುತ್ತಾರೆ. ಇಂತಹ ಸರ್ವೋತ್ಕೃಷ್ಟ ವೀರಶೈವ ಮತದ ವಿದ್ವಾಂಸರುಗಳಲ್ಲೊಬ್ಬರಾದ ಮತ್ತು ಈ ಮತವನ್ನು ಅಭಿವೃದ್ಧಿಗೆ ತರಲು ಸಮರ್ಥರಾದ ಕಾವ್ಯತೀರ್ಥಪಂಡಿತ ಕಾಶೀನಾಥಶಾಸ್ತ್ರಿಗಳು ತಮ್ಮ ಪೂರ್ವಜನ್ಮದುಷ್ಕೃತಫಲವಿಶೇಷದಿಂದಲೋ ಏನೋ - ವೀರಶೈವಬ್ರಾಹ್ಮಣ ಸನ್ಯಾಸಾಶ್ರಮ ವಿಮರ್ಶ " ವೆಂಬ ಗ್ರಂಥವನ್ನು ಬರೆದು ಗುರುವರ್ಗದವರಿಗೂ ವಿರಕ್ತವರ್ಗದವರಿಗೂ ಕಲಹವನ್ನು ತಂದಿಕ್ಕಿ ವೀರಶೈವಮತವು ಈ ಕಲಹಾಗ್ನಿಯಿಂದ ದಹಿಸಿ ನಿರ್ನಾಮವಾಗುವಂತೆ ಮಾಡಿರುವ ವಿಚಾರವು ವೀರಶೈವರಿಗೆಲ್ಲ ಗೊತ್ತೇ ಇದೆ. ಈ ಅನರ್ಥಕಾರಿಯಾದ ಕಲಹಜ್ವಾಲೆಯನ್ನು ನಿಜಶಾಸ್ತ್ರಾರ್ಥವೆಂಬ ಜಲಸೇಚನೆಯಿಂದ ಶಾಂತಿಗೊಳಿಸಲು - ಕಾಶೀನಾಥಕೃತ ವೀರಶೈವಬ್ರಾಹ್ಮಣ ಸನ್ಯಾಸಾಶ್ರಮ ವಿಮರ್ಶಸ್ಯಖಂಡನಂ " ಎಂಬುದಾಗಿ ಒಂದು ಸಣ್ಣಪುಸ್ತಕವನ್ನು ಮೈಸೂರು ಆಸ್ಥಾನವಿದ್ವಾನ್ ವೇ॥ ಸಿರ್ಸಿ ಗುರುಶಾಂತಶಾಸ್ತ್ರಿಗಳು ಸಂಸ್ಕೃತದಲ್ಲಿ ಪ್ರಕಟಿಸಿರುವರು, ಮತ್ತು ಇದನ್ನೇ ಕನ್ನಡದಲ್ಲೂ ಪ್ರಕಟಿಸಿರುವುದಾಗಿ ಹೇಳಿರುವರು. ಆದರೆ ಆ ಕನ್ನಡಪುಸ್ತಕವು ನನಗೆ ಸಿಕ್ಕಲಿಲ್ಲವಾಗಿ ಅವರ ಸಂಸ್ಕೃತಲೇಖನವನ್ನೂ, ನನಗೆ ತಿಳಿದ ಮಟ್ಟಿಗೆ ಬರೆದಿರುವ ಅದರ ಅರ್ಥವನ್ನೂ ವೀರಶೈವಸಮಾಜಬಾಂಧವರ ತಿಳುವಳಿಕೆಗಾಗಿ ಇಲ್ಲಿ ಕೊಟ್ಟಿರುತ್ತೇನೆ, ಮತ್ತು ಗುರುವರ್ಗ ವಿರಕ್ತವರ್ಗಗಳ ಮಧ್ಯೆ ಹುಟ್ಟಿರುವ ಪರಸ್ಪರದ್ವೇಷಾಗ್ನಿಯನ್ನು ಶಮನಮಾಡಲು ಸನ್ಮಾರ್ಗದಲ್ಲಿ ಹೊರಟಂತಹ ವೇ॥ ಸಿರ್ಸಿ ಗುರುಶಾಂತಶಾಸ್ತ್ರಿಗಳು ಈಗ ಯಾವರೀತಿ ಪ್ರವರ್ತಿಸಿರುತ್ತಾರೆಂಬುದನ್ನು ಮುಂದೆ ವಿವರಿಸುತ್ತೇನೆ.—

ಶ್ರೀಮನ್ನಿರಂಜನ ಜಗದ್ಗುರು ಮುರುಘೇಂದ್ರ ದೇಶಿಕಃ ಪ್ರಸೀದತು.
ಮಹಿಶೂರನಗರೀ ನಿವಾಸಿನಾ ಸಿರಸಿ ಗುರುಶಾಂತಶಾಸ್ತ್ರಿಣಾ ವಿರಚಿತಂ
ಕಾವ್ಯತೀರ್ಥೋಪನಾಮಕ ಕಾಶೀನಾಥಕೃತ ವೀರಶೈವಬ್ರಾಹ್ಮಣ
ಸನ್ಯಾಸಾಶ್ರಮ ವಿಮರ್ಶಸ್ಯ ಖಂಡನಂ
ಶ್ರೀ ವೀರಶೈವಸಿದ್ಧಾಂತ ರಹಸ್ಯವಿದಾಂ ಪರಿತೋಷಾಯ
ಕ್ರೌನ್ ಎಲೆಕ್ಟ್ರಿಕ್ ಮುದ್ರಣಶಾಲಾಯಾಂ ಮುದ್ರಯಿತ್ವಾ
ಪ್ರಕಟಿತಮಿದಂ ಜೀಯಾತ್.

ಶ್ರೀ ಜಂಗಮಮೂರ್ತಯೇನಮಃ.

ಭೋ ಮಹಾಶಯಾಃ ಕತಿಪಯದಿನೇಭ್ಯಃ ಪ್ರಾಕ್ ಪಂಡಿತ ಕಾವ್ಯತೀರ್ಥ ಬಿರುದಾಂಕಿತೇನ ಕಾಶೀನಾಥಶಾಸ್ತ್ರಿಣಾ ನಿರಾಭಾರಿನಾಮಕಾಃ ಅತಿವರ್ಣಾಶ್ರಮಿಣಃ ಷಟ್ಸ್ಥಲಬ್ರಹ್ಮಿಶಬ್ದವಾಚ್ಯಾಃ ವಿರಕ್ತಾಸ್ಸರ್ವೇ ರೇಣುಕಾದಿ ಪಂಚಾಚಾರ್ಯಾಂತೇವಾಸಿನೋಪಿ ಕ್ರಿಸ್ತಶಕ ದ್ವಾದಶಶತಾಬ್ದಾದಾರಭ್ಯ. ರೇಣುಕಾದಿ ಪಂಚಾಚಾರ್ಯೇಷು ವಿದ್ಯಮಾನಂ ಶಾಸ್ತ್ರೀಯಂ ಗುರುತ್ವಂ ಸ್ವಕೀಯಂ ಶಿಷ್ಯತ್ವಂಚ ದೂರೀಕೃತ್ಯ, ಪಂಚಾಚಾರ್ಯೇಷು ಶಿಷ್ಯತ್ವಂ ಸ್ವೇಷು ಗುರುತ್ವಂಚ ಪ್ರಕಲ್ಪ್ಯ, ವರ್ತಂತೇ, ಇದಂಚ ಶಾಸ್ತ್ರಸರಣೀರತಿವಿರುದ್ಧಂ ಏತಾದೃಶದುರಭಿಪ್ರಾಯಃ ಕೇವಲಾಜ್ಞಾನಮೂಲಕ ಏವ ತಸ್ಮಾತ್ ವಿರುದ್ಧಾಮಿಮಾದೃಶೀಂಪದ್ಧತಿಂಪರಿತ್ಯಜ್ಯ, ಅತಿವರ್ಣಾಶ್ರಮಿಣಸ್ಸರ್ವೇ ಸನ್ಯಾಸಿನಃ ಪಂಚಾಚಾರ್ಯೇಷು ಪ್ರಾಗಿವ ಗುರುತ್ವಭಾವಂ ಸ್ವೇಷು ಶಿಷ್ಯಭಾವಂಚ ಪ್ರಕಟಯಂತಃ ಧನ್ಯಾ ಭೂಯಾಸುರಿತ್ಯಭಿಪ್ರಾಯಸೂಚಿಕಾ ವೀರಶೈವ ಬ್ರಾಹ್ಮಣ ಸನ್ಯಾಸಾಶ್ರಮವಿಮರ್ಶನಾಮಿಕಾ ಕಾಚನ ಪತ್ರಿಕಾ ವಿರಚ್ಯಪ್ರಕಟೀಕೃತಾಖಲು, ಅಸ್ಮಿನ್ವಿಷಯೇ ಯಥಾಶಕ್ತಿ ವಿಚಾರಯಾಮಃ—ಗುರುರ್ಲಿಂಗಂ ಚರಶ್ಚೈವ ಪ್ರಸಾದಃ ಪಾದವಾರಿಚ. ಭೂತಿರುದ್ರಾಕ್ಷಮಂತ್ರಾಶ್ಚ ಭಕ್ತಾಂಗಮಿತಿ ಕಥ್ಯತೇ ॥ ಅಷ್ಟಾವರಣಸಂಯುಕ್ತಃ ಪಂಚಾಚಾರಪರಾಯಣಃ ವೈದಿಕಂ ಕರ್ಮ ಕುರ್ವೀತ ಜ್ಞಾನೈಕಫಲಸಾಧನಂ ॥ ಇತಿ ವೀರಶೈವಸಿದ್ಧಾಂತರೀತ್ಯಾ ವೀರಶೈವಾನಾಮಷ್ಟಾವರಣಾನಾಂ ಪರಸ್ಪರವ್ಯಾವರ್ತಕತ್ವಂ ತೇಷು ಗುರೋಃ ಜಂಗಮಸ್ಯಚ ಭಿನ್ನಭಿನ್ನಲಕ್ಷಣವತ್ವಾತ್ ಪರಸ್ಪರಂಭೇದ ಏವ ವರ್ತತೇ.

ಕಿಂಚ - ವರ್ಣಾನಾಂ ಬ್ರಾಹ್ಮಣೋಗುರುಃ " ಇತ್ಯುಕ್ತಿಮನುಸೃತ್ಯ ಗುರವಃ ವರ್ಣಾಶ್ರಮಾವಪಂತ್ಯಜ್ಯ ದೀಕ್ಷೋಪದೇಶಾದಿಭಿಃ ಸ್ವಸ್ವಗೋತ್ರೋದ್ಭವಾನೇವ ಶಾಸತೋ ವರ್ತಂತೇ. ಜಂಗಮಸ್ತು ವರ್ಣಾಶ್ರಮಧರ್ಮರಹಿತತ್ವಾದೇವ ಅತಿವರ್ಣಾಶ್ರಮಿ ನಿರಾಭಾರೀ ಶಿವಯೋಗೀ ಷಟ್ಸ್ಥಲಬ್ರಹ್ಮೀ ಲಿಂಗಾರೂಢಃ ಇತ್ಯಾದಿ ಪರ್ಯಾಯಶಬ್ದೈಃ ವ್ಯಪದಿಶ್ಯತೇ. ಅತಿವರ್ಣಾಶ್ರಮಿಶಬ್ದವಾಚ್ಯೋಯಂ ಸ್ವಸ್ಯಜಂಗಮತ್ವಪ್ರಾಪ್ತೇಃ ಪೂರ್ವಂ ಪಂಚಾಚಾರ್ಯವಂಶಸ್ತಚ್ಛಿಷ್ಯೋಪಿಚ. ಯಥಾ ಲೋಕೇ ಪುತ್ರಸ್ಯ ಸನ್ಯಾಸಾಶ್ರಮಪ್ರಾಪ್ತ್ಯನಂತರಂ ಪಿತರಿ ಶಿಷ್ಯತ್ವಂ ಪುತ್ರೇಗುರುತ್ವಂಚ ತುರ್ಯಾಶ್ರಮಸ್ಯಸರ್ವೋತ್ಕೃಷ್ಟತ್ವಾತ್. ತಥಾಸಿದ್ಧಾಂತಸಿದ್ಧಜಂಗಮತ್ವಪ್ರಾಪ್ತ್ಯನಂತರಂ ಪಂಚಾಚಾರ್ಯೇಷುಶಿಷ್ಯತ್ವಂ ಸ್ವಸ್ಮಿನ್ ಗುರುತ್ವಂಚಸಿದ್ಧ್ಯತಿ. ವರ್ಣಾಶ್ರಮಯುಕ್ತೈಃ ಗುರುಭಿರತಿವರ್ಣಾಶ್ರಮಶಬ್ದವಾಚ್ಯಜಂಗಮಸ್ಯಾಧಿಕಾರಂ ನದಾತುಂ ಶಕ್ಯತೇ | ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥಶ್ಚ ಭಿಕ್ಷುಕಃ | ಅತಿವರ್ಣಾಶ್ರಮಿ ಚೇತಿಕ್ರಮಾಚ್ಛ್ರೇಷ್ಠಾ ವಿಚಕ್ಷಣಾಃ ॥ ಗೃಹಸ್ಥೋಪಿವನಸ್ಥಸ್ಯ ಯತೇರಪ್ಯಂಬುಜೇಕ್ಷಣ | ವಿದ್ಯೋತ್ಕರ್ಷಬಲೇನೈವ ಗುರುರ್ಭವತಿ ನಾನ್ಯಥಾ | ವಾನಪ್ರಸ್ಥಾಶ್ರಮಸ್ಥೋಪಿ ತಥಾ ಸನ್ಯಾಸಿನೋ ಹರೇ | ಅತಿವರ್ಣಾಶ್ರಮಿ ಪ್ರೋಕ್ತೋಗುರುಸ್ಸರ್ವಾಧಿಕಾರಿಣಾಂ | ನತಸ್ಯಾಪಿ ಭವೇಚ್ಛ್ರೇಷ್ಠೋ ಯಥಾಹಂಪುರುಷೋತ್ತಮ | ಅತಿವರ್ಣಾಶ್ರಮಿಸಾಕ್ಷಾತ್ ಗುರೂಣಾಂ ಗುರುರುಚ್ಯತೆ | ಇತ್ಯುಕ್ತರೀತ್ಯಾ ಜಂಗಮಸ್ಯಗುರುತ್ವಸಿದ್ಧೌ ಜಂಗಮೇಷು ವಿರಕ್ತೇಷು ಶಿಷ್ಯತ್ವಕಲ್ಪನಂ ಸ್ವಹೃದಯಾಂತರ್ವರ್ತಿ ಜಂಗಮಶಬ್ದವಾಚ್ಯವಿರಕ್ತವಿಷಯಕದ್ವೇಷಂ ಪ್ರಕಟಯತಿ.

ಕಿಂಚ ಕ್ರಿಯಾಸಾರೇ ಗುರುಜಂಗಮಯೋಸ್ಸಮಾವೇಶೇ ಪೂಜಾಕರಣ ಪೂರ್ವಕಂ ತೀರ್ಥಪ್ರಸಾದಾದಿಕಂ ಕಸ್ಮಾತ್ ಸ್ವೀಕಾರ್ಯಮಿತ್ಯಾಶಂಕಾಯಾಂ ಜಂಗಮಾದೇವ ಸ್ವೀಕಾರ್ಯಂ ನಗುರೋರಿತಿ ಸಿದ್ಧಾಂತಿತಂ ಅತಃ ಜಂಗಮಸ್ಯ ಆಧಿಕ್ಯಂವಾ ಗುರೋರ್ವಾ ಇತ್ಯೇತತ್ ಭವಂತಏವ ವಿವೇಚಯಂತು. ಕಿಂಚ ಅತಿವರ್ಣಾಶ್ರಮಿಣಾಂತು ಲಿಂಗಾಂಗಿನಸ್ಸರ್ವೇಪಿ ಯಥಾಭಕ್ತಾಃ ತಥಾ ನಗುರೂಣಾಂ ಕಿಂತು ತತ್ತದ್ಗೋತ್ರಮಾತ್ರಪ್ರವಿಷ್ಟಾ ಏವ—ಗುರೂಣಾಂ ಜಂಗಮಪಾದಪೂಜನಂ ತೀರ್ಥಸ್ವೀಕರಣಾದಿಕಂಚ ಶಾಸ್ತ್ರಸಿದ್ಧಂ ಸಾಂಪ್ರದಾಯಿಕಂಚ ಸುಪ್ರಸಿದ್ಧಂ. ಸಿದ್ಧಾಂತರೀತ್ಯಾ ಪಂಚಾಚಾರ್ಯೇಷು ಬ್ರಹ್ಮಚರ್ಯಾದ್ಯಾಶ್ರಮಚತುಷ್ಟಯಮಪ್ಯಸ್ತಿ. ಇದಾನೀಂತು ಬ್ರಹ್ಮಚರ್ಯಮಾತ್ರಂ ದೃಶ್ಯತೇ - ಚರಮೂರ್ತೇರ್ಗುರುತ್ವಂತು ಗುರೋರಪ್ಯಧಿಕಂ ಭವೇತ್ - ಇತಿವಚನಾನುಸಾರೇಣ ಪೂಜ್ಯಾದಪಿ ಪೂಜ್ಯತಮೇ ಅತಿವರ್ಣಾಶ್ರಮಿಶಬ್ದವಾಚ್ಯೇ ಜಂಗಮರೂಪೇ ವಸ್ತುನಿ ಶಿಷ್ಯತ್ವಾರೋಪಣಂ ವೀರಶೈವಸಿದ್ಧಾಂತಾಜ್ಞಾನವಿಲಸಿತಮಿತಿ ಪ್ರತಿಭಾತಿ. (ಸಶೇಷಃ)

(ಮೇಲಿನ ಸಂಸ್ಕೃತ ವಾಕ್ಯಗಳ ಭಾಷಾಂತರ.)

ಎಲೈ ಮಹಾಶಯರೇ!

ಕೆಲವು ದಿನಗಳ ಹಿಂದೆ ಪಂಡಿತಕಾವ್ಯತೀರ್ಥ ಬಿರುದಾಂಕಿತನಾದ ಕಾಶೀನಾಥಶಾಸ್ತ್ರಿಯಿಂದ - ನಿರಾಭಾರಿಗಳೆಂಬ ಹೆಸರನ್ನುಹೊಂದಿದ ಅತಿವರ್ಣಾಶ್ರಮಿಗಳಾದ ಷಟ್ಸ್ಥಲಬ್ರಹ್ಮಿ ಎಂಬ ಶಬ್ದದಿಂದ ವಾಚ್ಯರಾದ ಸಮಸ್ತ ವಿರಕ್ತರು ರೇಣುಕಾದಿ ಪಂಚಾಚಾರ್ಯರ ಶಿಷ್ಯರಾದಾಗ್ಯೂ ಕ್ರೈಸ್ತಶಕ 112 ನೇ ವರ್ಷದಿಂದ ಮೊದಲ್ಗೊಂಡು ರೇಣುಕಾದಿ ಪಂಚಾಚಾರ್ಯರಲ್ಲಿ ಇರುತ್ತಿದ್ದ ಶಾಸ್ತ್ರಸಮ್ಮತವಾದ ಗುರುತ್ವವನ್ನೂ, ತಮ್ಮದಾದ ಶಿಷ್ಯತ್ವವನ್ನೂ ದೂರೀಕರಿಸಿ, ಪಂಚಾಚಾರ್ಯರಲ್ಲಿ ಶಿಷ್ಯತ್ವವನ್ನೂ, ತಮ್ಮಲ್ಲಿ ಗುರುತ್ವವನ್ನೂ ಕಲ್ಪಿಸಿಕೊಂಡು ಇರುತ್ತಾರೆ. ಇದಾದರೋ ಶಾಸ್ತ್ರಮಾರ್ಗಕ್ಕೆ ಬಹುವಿರುದ್ಧವಾದುದು. ಇಂತಹ ಕೆಟ್ಟ ಅಭಿಪ್ರಾಯಕ್ಕೆ ಅತ್ಯಂತವಾಗಿ ತಿಳುವಳಿಕೆ ಇಲ್ಲದಿರುವುದೇ ಕಾರಣವು. ಆದುದರಿಂದ ವಿರೋಧವಾದ ಇಂತಹ ಮಾರ್ಗವನ್ನು ಬಿಟ್ಟು ಅತಿವರ್ಣಾಶ್ರಮಿಗಳಾದ ಎಲ್ಲ ಸನ್ಯಾಸಿಗಳು ಪಂಚಾಚಾರ್ಯರಲ್ಲಿ ಮೊದಲಿನಂತೆ ಗುರುತ್ವಭಾವವನ್ನೂ ತಮ್ಮಲ್ಲಿ ಶಿಷ್ಯಭಾವವನ್ನೂ ತೋರ್ಪಡಿಸುತ್ತ ಧನ್ಯರಾಗಲಿ" ಎಂಬ ಅಭಿಪ್ರಾಯವನ್ನು ಸೂಚಿಸುವ - ವೀರಶೈವಬ್ರಾಹ್ಮಣ ಸನ್ಯಾಸಾಶ್ರಮ ವಿಮರ್ಶ " ಎಂಬ ಹೆಸರುಳ್ಳ ಪತ್ರಿಕೆಯು ವಿರಚಿಸಲ್ಪಟ್ಟು ಪ್ರಕಟಗೊಳಿಸಲ್ಪಟ್ಟಿತಷ್ಟೆ? ಈ ವಿಷಯದಲ್ಲಿ ನಾವು ಶಕ್ತ್ಯನುಸಾರವಾಗಿ ವಿಚಾರಮಾಡುತ್ತೇವೆ. "ಗುರುರ್ಲಿಂಗಂ" ಹೀಗೆಂಬ ವೀರಶೈವಸಿದ್ಧಾಂತರೀತಿಯಿಂದ ವೀರಶೈವ ಅಷ್ಟಾವರಣಗಳಿಗೆ ಒಂದಕ್ಕೊಂದಕ್ಕೆ ವ್ಯತ್ಯಾಸವಿರುವದರಿಂದಲೂ, ಅವುಗಳಲ್ಲಿ ಗುರುವಿಗೂ, ಜಂಗಮನಿಗೂ ಬೇರೆಬೇರೆ ಲಕ್ಷಣಗಳಿರುವುದರಿಂದಲೂ ಪರಸ್ಪರ ಭೇದವೇ ಇರುತ್ತದೆ.

ಮತ್ತು - ವರ್ಣಾನಾಂ ಬ್ರಾಹ್ಮಣೋಗುರುಃ " ಎಂಬ ವಚನಾನುಸಾರವಾಗಿ ಗುರುಗಳು ವರ್ಣಾಶ್ರಮಗಳನ್ನು ಅನುಸರಿಸಿ, ತಂತಮ್ಮ ಗೋತ್ರದಲ್ಲಿ ಹುಟ್ಟಿದವರನ್ನೇ ದೀಕ್ಷೆ, ಉಪದೇಶ ಮೊದಲಾದವುಗಳಿಂದ ಶಿಕ್ಷಿಸುತ್ತಿರುತ್ತಾರೆ. ಜಂಗಮನಾದರೋ ವರ್ಣಾಶ್ರಮಧರ್ಮಗಳಿಂದ ಬಿಡಲ್ಪಟ್ಟವನಾದುದರಿಂದಲೇ ಅತಿವರ್ಣಾಶ್ರಮಿ, ನಿರಾಭಾರಿ, ಶಿವಯೋಗಿ, ಷಟ್ಸ್ಥಲಬ್ರಹ್ಮೀ, ಲಿಂಗಾರೂಢ ಇವು ಮೊದಲಾದ ಪರ್ಯಾಯಶಬ್ದಗಳಿಂದ ನಿರ್ದೇಶಗೊಳಿಸಲ್ಪಟ್ಟಿದ್ದಾನೆ. ಅತಿವರ್ಣಾಶ್ರಮಿ ಎಂಬ ಶಬ್ದದಿಂದ ವಾಚ್ಯನಾದ ಇವನು ತನಗೆ ಜಂಗಮಭಾವವು ದೊರಕುವುದಕ್ಕಿಂತ ಮೊದಲು ಪಂಚಾಚಾರ್ಯರ ವಂಶದಲ್ಲಿ ಹುಟ್ಟಿದವನೂ, ಅವರ ಶಿಷ್ಯನೂ ಆಗಿದ್ದನು. ನಾಲ್ಕನೆಯ ಆಶ್ರಮವು ಉಳಿದೆಲ್ಲ ಆಶ್ರಮಗಳಿಗಿಂತ ಶ್ರೇಷ್ಠವಾದುದರದೆಸೆಯಿಂದ ಲೋಕದಲ್ಲಿ ಮಗನು ಸನ್ಯಾಸವನ್ನು ಪರಿಗ್ರಹಿಸಿದ ಮೇಲೆ ತಂದೆಯಲ್ಲಿ ಶಿಷ್ಯಭಾವವೂ, ಮಗನಲ್ಲಿ ಗುರುಭಾವವೂ ಹೇಗೆ ಸಿದ್ಧವಾಗುತ್ತವೆಯೋ ಹಾಗೆ ವೀರಶೈವಾಗಮಸಂಸಿದ್ಧವಾದ ಜಂಗಮಭಾವವನ್ನು ಹೊಂದಿದನಂತರ ಪಂಚಾಚಾರ್ಯರಲ್ಲಿ ಶಿಷ್ಯತ್ವವೂ, ತನ್ನಲ್ಲಿ ಗುರುತ್ವವೂ ಸಿದ್ಧವಾಗುತ್ತವೆ. ವರ್ಣಾಶ್ರಮಬದ್ಧರಾದ ಗುರುಗಳು ಅತಿವರ್ಣಾಶ್ರಮ ಶಬ್ದವಾಚ್ಯವಾದ ಜಂಗಮತ್ವಾಧಿಕಾರವನ್ನು ಕೊಡಲಸಮರ್ಥರಾಗಿದ್ದಾರೆ. - ಬ್ರಹ್ಮಚಾರೀ ಗೃಹಸ್ಥಶ್ಚ.... " ಹೀಗೆ ಹೇಳಲ್ಪಟ್ಟಿರುವ ವಚನರೀತಿಯಿಂದ ಜಂಗಮನಿಗೆ ಗುರುತ್ವವು ಸಿದ್ಧವಾಗಿರುವಲ್ಲಿ, ಜಂಗಮರಾದ ವಿರಕ್ತರಲ್ಲಿ ಶಿಷ್ಯಭಾವವನ್ನು ಕಲ್ಪಿಸುವುದು ತನ್ನ ಮನಸ್ಸಿನೊಳಗಿರುವ ವಿರಕ್ತರಮೇಲಿನ ದ್ವೇಷವನ್ನು ಪ್ರಕಾಶಪಡಿಸುತ್ತದೆ.

ಮತ್ತು ಗುರುವು ಜಂಗಮನು ಈರ್ವರೂ ಒಂದೇಸ್ಥಳದಲ್ಲಿ ಸೇರಿದಾಗ್ಗೆ ಆ ಇಬ್ಬರಲ್ಲಿ ಯಾರ ತೀರ್ಥಪ್ರಸಾದ ಮೊದಲಾದವುಗಳು ಪೂಜಾಪೂರ್ವಕವಾಗಿ ಸ್ವೀಕರಿಸಲ್ಪತಕ್ಕದೆಂಬ ಶಂಕೆಯುಂಟಾಗಲು, ಜಂಗಮನ ಪಾದೋದಕಪ್ರಸಾದಾದಿಗಳನ್ನು ಸ್ವೀಕರಿಸಬೇಕು: ಗುರುವಿನ ಪಾದೋದಕ ಪ್ರಸಾದಾದಿಗಳನ್ನು ಸ್ವೀಕರಿಸಲ್ಪತಕ್ಕದಲ್ಲವೆಂದು ಕ್ರಿಯಾಸಾರಗ್ರಂಥದಲ್ಲಿ ಸಿದ್ಧಾಂತಗೊಳಿಸಲ್ಪಟ್ಟಿರುವುದರಿಂದ ಜಂಗಮನಿಗೆ ಶ್ರೇಷ್ಠತೆಯೋ? ಗುರುವಿಗೆ ಶ್ರೇಷ್ಠತೆಯೋ? ಈ ಸಂಗತಿಯನ್ನು ನೀವೇ ವಿವೇಚನಮಾಡತಕ್ಕದು. ಮತ್ತು ಅತಿವರ್ಣಾಶ್ರಮಿಗಳಿಗೆ ಲಿಂಗಧಾರಿಗಳೆಲ್ಲರೂ ಭಕ್ತರಾಗಿರುವಹಾಗೆ ಗುರುಗಳಿಗೆ ಲಿಂಧಾರಿಗಳೆಲ್ಲರೂ ಭಕ್ತರಾಗಿರುವುದಿಲ್ಲ. ತಮ್ಮ ತಮ್ಮ ಗೋತ್ರಒಂದರಲ್ಲಿ ಪ್ರವೇಶಿಸಿದವರೇ ಭಕ್ತರಾಗಿರುತ್ತಾರೆ. ಮತ್ತು ಗುರುಗಳು ಜಂಗಮರ ಪಾದಗಳನ್ನು ಪೂಜಿಸಿ ಅವರ ತೀರ್ಥಪ್ರಸಾದಾದಿಗಳನ್ನು ಸ್ವೀಕರಿಸತಕ್ಕುದು ಶಾಸ್ತ್ರಸಮ್ಮತವೂ, ಸಂಪ್ರದಾಯಸಿದ್ಧವೂ ಆಗಿರತಕ್ಕುದು ಚೆನ್ನಾಗಿ ಪ್ರಸಿದ್ಧವೇ ಆಗಿರುತ್ತದೆ. ಪಂಚಾಚಾರ್ಯರಲ್ಲಿ ಸಿದ್ಧಾಂತರೀತಿಯಿಂದ ಬ್ರಹ್ಮಚರ್ಯಮೊದಲಾದ ನಾಲ್ಕಾಶ್ರಮಗಳೂ ಇರುತ್ತವೆ. ಈ ಕಾಲದಲ್ಲಾದರೋ ಅವರಲ್ಲಿ ಬ್ರಹ್ಮಚರ್ಯವೊಂದೇ ಕಾಣಲ್ಪಡುತ್ತದೆ. - ಚರಮೂರ್ತೇರ್ಗುರುತ್ವಂತುಗುರೋರಪ್ಯಧಿಕಂಭವೇತ್ - ಹೀಗೆಂಬ ವಚನಾನುಸಾರದಿಂದ ಪೂಜ್ಯನಿಗಿಂತ ಅತ್ಯಂತ ಪೂಜ್ಯನಾದ ಅತಿವರ್ಣಾಶ್ರಮಿ ಶಬ್ದವಾಚ್ಯನಾದ ಜಂಗಮರೂಪವನ್ನು ಹೊಂದಿರುವ ವಸ್ತುವಿನಲ್ಲಿ ಶಿಷ್ಯತ್ವವನ್ನಾರೋಪಿಸುವುದು ವೀರಶೈವಸಿದ್ಧಾಂತವನರಿಯದಿರುವುದರಿಂದುಂಟಾಗಿರುವ ಚೇಷ್ಟೆಯೆಂದು ತೋರುತ್ತಿದೆ. (ಸಶೇಷ)

---

4 ನೆಯ ಕರ್ಣಾಟಕಪ್ರಾಂತೀಯ ಆಹ್ವಾನಮಂಡಲಿ, ಬಳ್ಳಾರಿ.

ಬಳ್ಳಾರಿಯಲ್ಲಿ - ಇದೇವರ್ಷ ಮೇ ತಿಂಗಳು 20, 21ನೇ ತಾರೀಖುಗಳಲ್ಲಿ ನಾಲ್ಕನೆಯ ಕರ್ಣಾಟಕಪ್ರಾಂತೀಯಮಹಾಸಭೆಯೂ, ಕರ್ಣಾಟಕ ಏಕೀಕರಣಸಭೆಯೂ ಜರುಗುವವು" ಅಭಿಮಾನಶಾಲಿಗಳು ದಯಮಾಡಿಸಬೇಕಾಗಿ ಪ್ರಾರ್ಥನೆ.

ಕೆ. ಗುರುರಾಜಾರಾವ್, ಕೃ. ತಿ. ಶ್ರೀನಿವಾಸಾಚಾರ್ಯರು,
ಡಿ. ಯಸ್. ಹನುಮಂತರಾಯರು, ಕಾರ್ಯದರ್ಶಿಗಳು.

ಸೂಚನೆ.

ಬ್ಯಾಡಗಿಯಲ್ಲಿರುವ ಶ್ರೀ ಶಿವಯೋಗೀಶ್ವರವೀರಶೈವಬೋರ್ಡಿಂಗನಲ್ಲಿ ಇಂಗ್ಲಿಷ್ 1 ನೇ ಇಯತ್ತೆಯಿಂದ 3 ನೇ ಇಯತ್ತೆಯವರೆಗಿನ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆಯು ಮಾಡಲ್ಪಡುವದು. ಈ ಬೋರ್ಡಿಂಗಿನಲ್ಲಿ ಒಟ್ಟು 26 ಹುಡುಗರು ಇರತಕ್ಕದ್ದೆಂದು ಗೊತ್ತುಮಾಡಿದೆ. ಸದ್ಯಕ್ಕೆ 16 ಜನ ವಿದ್ಯಾರ್ಥಿಗಳಿದ್ದಾರೆ. ಇನ್ನು 10 ಜಾಗೆಗಳು 4 ನೇ 5 ನೇ ಇಯತ್ತೆಯ ವಿದ್ಯಾರ್ಥಿಗಳ ಸಲುವಾಗಿ ಮಾತ್ರ ಕಾದಿಟ್ಟಿರುತ್ತವೆ. ಆದರೆ ನಮ್ಮ ಬೋರ್ಡಿಂಗಿನಲ್ಲಿ ಸೇರಬಯಸುವ ಮೇಲೆ ಕಾಣಿಸಿದ ಇಯತ್ತೆಯ ವಿದ್ಯಾರ್ಥಿಗಳು ಮೇ ತಿಂಗಳು 20 ನೇ ತಾರೀಖಿನೊಳಗಾಗಿ ನಮ್ಮ ಕಡೆಗೆ ತಪ್ಪದೆ ಅರ್ಜಿ ಕಳಿಸಬೇಕು, ಮತ್ತು ಅರ್ಜಿಯಸಂಗಡ ತಾವು ಬಡವರಿದ್ದ ಬಗ್ಗೆ ತಮ್ಮ ಊರಿನ ಸಭ್ಯಗೃಹಸ್ಥರ ಹಾಗು ಗ್ರಾಮಸ್ಥರ ಸರಟಿಫಿಕೇಟನ್ನು ಲಗತು ಇಡಬೇಕು.

ಚೇರಮನ್, ಶ್ರೀ॥ ಶಿ॥ ಫ್ರೀ ಬೋರ್ಡಿಂಗ, ಬ್ಯಾಡಗಿ.

ರಥೋತ್ಸವ.

ಚಳಿಯೂರು ತಾಲ್ಲೂಕು ಕಲ್ಲೇದೇವರಪುರದ ಶ್ರೀಕಲ್ಲೇಶ್ವರಸ್ವಾಮಿಯ ದೊಡ್ಡರಥೋತ್ಸವವು ಪ್ರಾಚೀನಪದ್ಧತಿಯಂತೆ ಇದೇ ನಿಜಚೈತ್ರ ಬ॥ ೫ ತಾ॥ (1-5-1926) ನೇ ಶನಿವಾರ ನಡೆಯುತ್ತದಲ್ಲದೆ ಈ ಜಾತ್ರೆಯಲ್ಲಿ ಮಾಮೂಲಿನಂತೆ ದನಗಳಪ್ರದರ್ಶನ ಸಹ ನಡೆಯುತ್ತೆ. ಇದರಲ್ಲಿ ಉತ್ತಮವಾದ ರಾಸುಗಳಿಗೆ ತಾ॥ ಅಮಲ್ದಾರ್ ಸಾಹೇಬರವರಿಂದ ಬಹುಮಾನಗಳು ಕೊಡಲ್ಪಡುತ್ತವೆ. ಸರಿಯಾದ ಜೋಡಿಗಳು ಸೇರಿದರೆ ಕುಸ್ತಿಯು ಸಹ ನಡೆಯುತ್ತದೆ. ಈ ಪ್ರದೇಶದಲ್ಲಿ ಯಾವ ವಿಧವಾದ ಸಾಂಕ್ರಾಮಿಕಜಾಡ್ಯವಿಲ್ಲದೆ ಸುಖವಾಗಿದೆ. ಸದ್ಭಕ್ತರೂ ವ್ಯಾಪಾರಸ್ಥರೂ, ಪ್ರೇಕ್ಷಕಮಹಾಜನರೂ ಬಂದು ಉತ್ಸವದಲ್ಲಿ ಭಾಗಿಗಳಾಗಿ ಶ್ರೀಸ್ವಾಮಿಯ ದರ್ಶನಸೇವಾದಿಗಳನ್ನು ಪೂರೈಸಿಕೊಂಡು ಹೋಗಬೇಕೆಂದು ಸವಿನಯಪ್ರಾರ್ಥನೆ. ಪುರನಿವಾಸಿ.

ಕುಹಕಲೇಖನಕ್ಕೆ ಜವಾಬು.

ತಾ॥ 3-4-26 ನೇ ಸ್ಟಾರ್‌ಪತ್ರಿಕೆಯಲ್ಲಿ ನಂಜನಗೂಡು ಟಿ. ರಂಗಣ್ಣನವರು ವಿರೂಪಾಕ್ಷಒಡೆಯರವರ ಪ್ರಾರ್ಥನೆಗೆ ಜವಾಬು ಎಂದು ಕುಹಕಲೇಖನವನ್ನು ಬರೆದಿರುತ್ತಾರೆ. ಲವಣವೆಂದರೆ ಸಗಣಿಯೆಂದು ತಿಳಿದುಕೊಂಡು ಊಟದಸಮಯದಲ್ಲಿ ಸಗಣಿಯನ್ನೆ ತಂದ ಭಟ್ಟರ ಮಗಳಷ್ಟು ರಂಗಣ್ಣನವರು ಪಂಡಿತಂಮನ್ಯರೆಂದು ಬ್ರಾಹ್ಮಣಪಂಡಿತರುಗಳನ್ನೇ ವಾಕ್ಯಾರ್ಥಕ್ಕೆ ಕರೆದಿರುವ ಜಗದಾಚಾರ್ಯ ಸ್ವಾಮಿ ವಿರೂಪಾಕ್ಷಒಡೆಯರು ಅರಿಯದೆ ಉತ್ತರಬೆಳೆಸುವ ಶ್ರಮವನ್ನು ವಹಿಸಿದುದಕ್ಕಾಗಿ ನಾನು ವಿಷಾದಿಸುತ್ತೇನೆ. ಈ ಘನವಿದ್ವಾಂಸರಾದ ರಂಗಣ್ಣನವರು ಇನ್ನುಮೇಲಾದರೂ ತನಗೆ ಬೇಕಾದ ಪ್ರಶ್ನೆಯನ್ನು ಅವರ ಸಮೀಪವಾಸಿಯಾದ ನನಗೆ ಹಾಕಿದಲ್ಲಿ ನಾನು ಅದಕ್ಕೆ ತಕ್ಕ ಜವಾಬನ್ನು ಕೊಡಲು ಸಿದ್ಧನಾಗಿರುವದರಿಂದ ಇನ್ನು ಮುಂದೆ ರಂಗಣ್ಣನವರು ಆ ಸಿಂಹವನ್ನು ಕೆಣಕಿ ತಮ್ಮ ಕುಲಗೌರವಕ್ಕೆ ನಾಶವನ್ನುಂಟುಮಾಡಿಕೊಳ್ಳದೆ ಹುಷಾರಾಗಿರಲೆಂದು ಈಮೂಲಕ ಎಚ್ಚರಿಸಿರುತ್ತೇನೆ, ಮತ್ತು ಅವರು ಕೇಳುವ ಪ್ರಶ್ನೆಗೆ ಉತ್ತರಕೊಡಲು ಸಿದ್ಧನಾಗಿರುತ್ತೇನೆ.

ಎಚ್. ಜಿ. ಮಹಾದೇವಪ್ಪ, ಫೋಟೋಗ್ರಾಫರ್, ನಂಜನಗೂಡು.

ನೂತನದಿವಸೋತ್ಸವವು.

ಈ ಅಕ್ಷಯಸಂವತ್ಸರದ ನಿಜಚೈತ್ರ ಶು॥ ಪ್ರತಿಪದ ತಿಥಿಯಲ್ಲಿ ನೈಜಾಂ ಪ್ರಾಂತದ ಮಖ್ತಲ್ ತಾಲ್ಲೂಕಿಗೆ ಸೇರಿದ ನೀರಡಗುಂಭಗ್ರಾಮದಲ್ಲಿ ಲೋಕಹಿತೈಷಿಗಳಾದ ಶ್ರೀಸಿದ್ಧಲಿಂಗಸ್ವಾಮಿಗಳವರು ಈ ಪ್ರಾಂತದ ವೀರಶೈವ ಸಮಾಜದ ಅಭಿವೃದ್ಧಿಗಾಗಿ ತಮ್ಮ ಮಠದಲ್ಲಿ ಪೂರ್ವದಿಂದ ಸ್ಥಾಪಿಸಿರುವ ಶಿವಯೋಗಮಂದಿರದಲ್ಲಿ ತೇರ್ಗಡೆಹೊಂದಿದ ಸಾಧಕಸಂಘದವರು ಪ್ರತಿವರ್ಷದಂತೆ ನೂತನದಿವಸದಲ್ಲಿ ಪೂಜಾದಿಮಂಗಲಕಾರ್ಯಗಳನ್ನು ತೀರಿಸಿ ಅತಿಭಕ್ತಿಯುತರಾಗಿ ಸ್ವಾಮಿಸಂದರ್ಶನಕ್ಕಾಗಿ ಆಗಮಿಸುತ್ತಿರುವ ಪುರಜನರ ಧರ್ಮಬೋಧೆಗಾಗಿ 4 ಘಂಟೆಯಲ್ಲಿ ಒಂದು ಚಿಕ್ಕಸಭೆಯನ್ನು ಮಖ್ತಲ್ ಬೃಹನ್ಮಠಾಧ್ಯಕ್ಷರಾದ ಸಿದ್ಧಲಿಂಗಚರವರ್ಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿ ಆ ಸಭೆಗೆ ಆಗಮಿಸಿದ ಶ್ರೋತೃಗಳಮನಾನಂದಕ್ಕಾಗಿ ಆದಿಯಲ್ಲಿ ಚಿಕ್ಕವಟುಗಳ ಶಿವಭಜನೆಯು ಮುಗಿಸಲ್ಪಟ್ಟು ತದನಂತರ ಸರ್ವಸಾಧಕಸಂಘದವರು ತಮ್ಮ ಅಸಾಧಾರಣವಾದ ಮೇಧಾಶಕ್ತಿಯಿಂದ ದೀಕ್ಷಾ, ಆಚಾರ, ಸ್ವಧರ್ಮ, ಸ್ತ್ರೀಶಿಕ್ಷಣ, ಬ್ರಹ್ಮಚರ್ಯ, ಸತ್‌ಸಹವಾಸ್ ಇತ್ಯಾದಿ ವಿಷಯಗಳನ್ನು ಪ್ರೌಢವಾಣಿಯಿಂದ ಹೇಳಿದ್ದಲ್ಲದೆ ಶ್ರೀಮಣಿಪುರಮಠಾಧ್ಯಕ್ಷರಾದ ಬಸವಲಿಂಗಚರವರ್ಯರನ್ನು ಅಧ್ಯಕ್ಷರ ಅನುಮತಿಯಮೂಲಕ ಚಾಲಕರನ್ನಾಗಿ ನೇಮಿಸಿರುವದರಿಂದ ಆ ಮೇಲ್ಕಂಡ ದೀಕ್ಷಾದಿ ವಿಷಯಗಳನ್ನು ಮತ್ತಷ್ಟು ಪುಷ್ಟೀಕರಿಸಿ ಸಭಿಕರ ಮನಸ್ಸಿನಮೇಲೆ ಪರಿಣಮಿಸುವಂತೆ ಹೇಳಿದರು. ಪುರನಿವಾಸಿಗಳಾದ ಎನ್. ವೀರಭದ್ರಪ್ಪ ಮತ್ತು ಕೆ. ಸಿದ್ಧಲಿಂಗಪ್ಪ ಪಾ. ಪಾ. ಈ ಉಭಯರೂ ಆರೋಗ್ಯದ ವಿಷಯದಲ್ಲಿ ಉಪನ್ಯಾಸ ಮಾಡಿ ತಮ್ಮ ಅಸಾಧಾರಣವಾದ ಬುದ್ಧಿಶಕ್ತಿಯನ್ನು ಹೊರಪಡಿಸಿದರು. ಇವರ ಪ್ರೋತ್ಸಾಹದ ಮೇರೆಗೆ ವೈ. ವೀರಸಂಗಪ್ಪನವರ ಸ್ಮಾರಕಕ್ಕಾಗಿ 2 ರೂಪಾಯಿಗಳು ತೆಗೆಯಲ್ಪಟ್ಟನಂತರ ಅಧ್ಯಕ್ಷರ ಅಪ್ಪಣೆಪ್ರಕಾರ ಶ್ರೋತೃಗಳ ಶ್ರೇಯೋಭಿವೃದ್ಧಿಗಾಗಿ ಮಂಗಲವನ್ನುಮಾಡಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಸಾಧಕಸಂಘವಾಸಿ.

ಶ್ರೀಲಕ್ಷ್ಮೀಕಾಂತವಿಲಾಸಕರ್ಣಾಟಕನಾಟಕಸಭಾ, ಮೈಸೂರು.

ಈ ನಾಟಕಸಭೆಯವರು ಸುಮಾರು ಒಂದು ತಿಂಗಳಿಂದಲೂ ಅನಂತಪುರದ ಎಡ್ವರ್ಡ್‌ನಾಟಕಶಾಲೆಯಲ್ಲಿ ತಮ್ಮ ಸುಪ್ರಸಿದ್ಧವಾದ ನಾಟಕಗಳನ್ನಭಿನಯಿಸಿ ಪ್ರಜಾರಂಜನೆಯನುಂಟುಮಾಡಿ ಗುಂತಕಲ್ಲಿಗೆ ಪ್ರಯಾಣಮಾಡಿದರು. ಇವರ ನಾಟಕಗಳು ಒಂದಕ್ಕಿಂತಲೂ ಒಂದು ಸೊಗಸಾಗಿರುತ್ತ ಈ ಊರಿಗೆಬಂದ ನಾಟಕಸಂಘಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದೆಂಬ ಖ್ಯಾತಿಯನ್ನು ಸಂಪೂರ್ಣವಾಗಿ ಪಡೆದುವು. ಧರ್ಮಕಾರ್ಯಾಸಕ್ತರೂ ಈ ಸಂಘದ ಪ್ರೊಪ್ರೈಟರವರುಗಳೂ ಆದ ಶ್ರೀಯುತ ಟಿ. ಎಸ್. ಗುರುಕಾರ್‌ರವರೂ, ಅಭಿನಯ ಕಂಠೀರವ ಶ್ರೀಯುತ ಎಂ. ಎನ್. ಗಂಗಾಧರರಾಯರೂ ಈ ಊರಿನಲ್ಲಿಯು ಸಹ ಕಳೆದ 12-4-26 ನೇ ಸೋಮವಾರ ಶ್ರೀರಾಮಾಂಜನೇಯರ ಯುದ್ಧವೆಂಬ ನಾಟಕವನ್ನಾಡಿ ಬಂದ ಉತ್ಪತ್ತಿಯಲ್ಲಿ 100 ರೂ. ಗಳನ್ನು ಇಲ್ಲಿನ ಶ್ರೀ ವಿದ್ಯಾಭಿವರ್ಧಿನಿಸಂಘದ ನೈಟ್‌ಸ್ಕೂಲುಗಳಿಗಾಗಿ ಕೊಟ್ಟದ್ದು ಸ್ತೋತ್ರಾರ್ಹವಾಗಿದೆ. ಕಳೆದ 14 ನೇ ಬುಧವಾರ ಇವರು ಸಂಪೂರ್ಣ ಶ್ರೀಮದ್ರಾಮಾಯಣವನ್ನಾಡಿದ ಸಂದರ್ಭದಲ್ಲಿ ಈ ಊರಿನ ಪುರಪ್ರಮುಖರು ಮ॥ ರಾ॥ ರಾವ್‌ಸಾಹೇಬ್ ಆದಿಮೂರ್ತಿರಾವುಗಾರು ಇವರ ಅಧ್ಯಕ್ಷತೆಯಲ್ಲಿ ಈ ಸಂಘದವರಿಗೆ ಮೆಡಲುಗಳೇ ಮೊದಲಾದ ಬಹುಮಾನಗಳನ್ನೂ, ಯೋಗ್ಯತಾಪತ್ರಗಳನ್ನೂ, ಅಭಿನಂದನ ಶ್ಲೋಕಗಳನ್ನೂ ಸಮರ್ಪಿಸಿ ಈ ಸಂಘದವರು ಇಷ್ಟು ಜಾಗ್ರತೆಯಾಗಿಯೇ ತಮ್ಮ ಊರನ್ನು ಬಿಡುವುದಕ್ಕಾಗಿ ತಮಗುಂಟಾದ ಅಸಮಾಧಾನವನ್ನು ಸೂಚಿಸಿ ಮುಂದೆ ಇವರಿಗೆ ಸರ್ವತ್ರ ದಿಗ್ವಿಜಯವಾಗಲೆಂದು ಜಯಘೋಷಮಾಡಿ ಹರಸಿ ಕಳುಹಿಸಿದರು. ಇವರ ನಾಟಕಗಳಿಗೆ ಗುಂತಕಲ್ಲಿನ ಎಲ್ಲಾ ಕಡೆಯಿಂದಲೂ ಆ ಸುತ್ತಮುತ್ತ ಸುಮಾರು 50-60 ಮೈಲಿಗಳ ದೂರದಿಂದಲೂ ಜನರು ಬರುತ್ತಿರುವರೆಂದು ಕೇಳಿ ಸಂತೋಷಿಸುತ್ತೇನೆ. ನಾಟಕಕಲೆ ಕುಂದುತ್ತಿರುವ ದುರ್ಧಶೆಯು ನಾಶವಾಗಲು ಈ ಸಂಘದ ಅಷ್ಟುಕಟ್ಟಿನ ಅಭಿನಯವು ಅನಿರ್ವಚನೀಯವಾಗಿದೆ.

ಓರ್ವ ಅನಂತಪುರವಾಸಿ.

ಶಿವೈಕ್ಯರಾದುದು.

ಶಿವಮೊಗ್ಗಾ ಡಿ॥ ಸಾಗರ ತಾ॥ ಆವಿನಹಳ್ಳಿಹೋಬಳಿ ಶ್ರೀಮನ್ಮಹಾಗುರುಸಂಸ್ಥಾನಕೆರೆಮಠದ ಶ್ರೀಪಟ್ಟದ ಮಹಾಂತಸ್ವಾಮಿಗಳವರು ಸುಮಾರು ಒಂದು ತಿಂಗಳಿಂದ ಅಸ್ವಸ್ಥರಾಗಿದ್ದು ತಮ್ಮ ಮರಣಕಾಲವು ಸಮೀಪಿಸಿದ್ದನ್ನು ತಿಳಿದುಕೊಂಡು 10-15 ದಿವಸ ಮುಂಚಿತವಾಗಿಯೇ ಶ್ರೀಮನ್ಮಹಾಕ್ಯಾಸನೂರಸಂಸ್ಥಾನ ಪಂಚಮಠದ ಪಟ್ಟದ ಪಂಡಿತ ಶ್ರೀಗುರುಬಸವ ಶಿವಾಚಾರ್ಯಮಹಾಸ್ವಾಮಿಗಳವರನ್ನು, ಗೌರಿಕೆರೆಸಂಸ್ಥಾನಪಂಚಮಠದ ಶ್ರೀಪಟ್ಟದ ವೀರರಾಜೇಂದ್ರ ಭಿಕ್ಷಾವರ್ತಿಮಹಾಸ್ವಾಮಿಯವರನ್ನು ಮತ್ತು ತಮ್ಮ ಕೇವಲ ಆಪ್ತೇಷ್ಟರನ್ನೂ ಕರೆಯಿಸಿಕೊಂಡು ಮುಂದೆ ನಡೆಸತಕ್ಕದ್ದನ್ನೆಲ್ಲಾ ತಿಳುಹಿಸಿ ಇದೇ ಅಧಿಕಚೈತ್ರ ಬ॥ 13 ಶನಿವಾರ ಸುಮಾರು 12 ಘಂಟೆಯ ರಾತ್ರಿಯಲ್ಲಿ ಪೂರ್ವಾಂಗಗಳಾದ ಅಪರಕ್ರಿಯೆಗಳನ್ನೆಲ್ಲಾ ಮಾಡಿಸಿಕೊಂಡು ಶ್ರೀಕ್ಯಾಸನೂರಮಹಾಸ್ವಾಮಿಗಳವರ ಪಾದಕಮಲದಮೇಲೆ ತಮ್ಮ ಮಸ್ತಕವನ್ನಿಟ್ಟು ತಾರಕೋಪದೇಶವಾದನಂತರ ಶಿವನಾಮೋಚ್ಚಾರದೊಡನೆ ಶಿವೈಕ್ಯರಾದರು. ಆಮೇಲೆ ಇವರು ಇದಕ್ಕೆ ಮೊದಲೇ ನಿಶ್ಚಯಿಸಿದ ಸ್ಥಳದಲ್ಲಿ ಉಳಿದ ಸಮಾಧಿಕ್ರಿಯೆಗಳೆಲ್ಲಾ ಶಾಸ್ತ್ರೋಕ್ತಸಾಂಗವಾಗಿ ನೆರವೇರಿಸಲ್ಪಟ್ಟನಂತರ ಸಮಸ್ತ ಗುರುಜಂಗಮರಿಗೂ ಮಹೇಶ್ವರವರ್ಗಕ್ಕೂ ಯಥೇಚ್ಛವಾಗಿ ದಾನದಕ್ಷಿಣೆಗಳು ಕೊಡಲ್ಪಟ್ಟವು. ಆ ಕಾಲಕ್ಕೆ ಸೇರಿದ್ದ ಶಿಷ್ಯಾಭಿಮಾನಿಗಳಾದ ಸಾಗರ ಆವಿನಹಳ್ಳಿ ಮತ್ತು ಸುತ್ತಮುತ್ತಲಗ್ರಾಮಗಳ ದೊಡ್ಡದೊಡ್ಡ ಶೆಟ್ಟಿ ಸಾಹುಕಾರ ಗೌಡರೇ ಮೊದಲಾದ ಅನೇಕ ಜನರಿಂದ ಶಿವೈಕ್ಯರಾದ ಶ್ರೀಮಹಾಸ್ವಾಮಿಗಳವರ ಲಿಂಗದೇಹವು ಛತ್ರಿ, ಚಾಮರ, ವಾದ್ಯ ಮೊದಲಾದ ವೈಭವದೊಡನೆ ಸಾಗಿಸಲ್ಪಟ್ಟು ಕ್ರಮವಾಗಿ ನಿಕ್ಷೇಪಗೊಳಿಸಲ್ಪಟ್ಟಿತು. ಇವರಿಗೆ ಅವಸಾನಕಾಲದಲ್ಲಿ 58 ವರ್ಷವಯಸ್ಸಾಗಿತ್ತು. ಇವರು ಸೊರಬದ ತಾ॥ ಹೊಳೆಮರೂರುಮಠದಲ್ಲಿ ವೀರಪ್ಪಯ್ಯನೆಂಬ ನಾಮಧೇಯದಿಂದ ವಿಭವ ಸಂ॥ ರದ ಭಾದ್ರಪದ ಶು॥ ೧೪ ದಿವಸ ಜನಿಸಿ ತಮ್ಮ 18ನೇ ವರ್ಷದಲ್ಲಿ ಈ ಗುರುಸಂಸ್ಥಾನಕೆರೆಮಠದ ಸ್ಥಿರಪಟ್ಟಾಧಿಕಾರವನ್ನು ಮಹಂತದೇವರೆಂಬಭಿನಾಮದಿಂದಹೊಂದಿ ಗುರುಕುಲವಾಸದಿಂದ ಯೋಗಾಭ್ಯಾಸವನ್ನುಮಾಡಿ ಅನೇಕ ಮಂತ್ರರಹಸ್ಯಗಳನ್ನು ತಿಳಿದು 38ನೇ ವರ್ಷದಲ್ಲಿ ಏಕಾದಶಮಹಾರುದ್ರರ ಪೂಜೆಯನ್ನೂ, 42ನೇ ವರ್ಷವಯಸ್ಸಿನಲ್ಲಿ ಶಿಥಿಲವಾದ ಈ ಮಠವನ್ನು ಹೊಸದಾಗಿಕಟ್ಟಿಸಿ ಮಠವಿದುರಿನ ಕೆರೆಯೇರಿಯ ಮಧ್ಯದಲ್ಲಿ ಶ್ರೀವಿಶ್ವನಾಥಲಿಂಗವನ್ನುಸ್ಥಾಪಿಸಿ ಮಹಾಸಂತರ್ಪಣೆಯನ್ನು ನಡಿಸಿದ್ದಲ್ಲದೆ 53 ನೇ ವರ್ಷವಯಸ್ಸಿನಲ್ಲಿ ಪುನಹ ಏಕಾದಶಮಹಾರುದ್ರರ ಪೂಜೆಯನ್ನೂ ಪ್ರಾಂತಿಕಸಭೆ ಮೊದಲಾದ ಮಹತ್ಕಾರ್ಯಗಳನ್ನೂ ಅತಿ ವಿಜೃಂಭಣೆಯಿಂದ ನೆರವೇರಿಸಿದರು. ಈ ಪಟ್ಟದ ಮಹಾಸ್ವಾಮಿಗಳವರು ಆಚಾರಶೀಲರಾಗಿಯೂ ಶಿವಾನುಭವಶಾಸ್ತ್ರಪ್ರಿಯರಾಗಿಯೂ, ತಪೋನಿಷ್ಠರಾಗಿಯೂ ಇದ್ದರಲ್ಲದೆ ಭಕ್ತರಶ್ರೇಯಃಪ್ರಾರ್ಥನೆ ಮಾಡಿಕೊಂಡು ಅವರಿಗೆ ಧರ್ಮಬೋಧೆಯನ್ನುಮಾಡಿ ಅವರನ್ನು ಕೃತಾರ್ಥರನ್ನಾಗಿಮಾಡುತ್ತ ಈ ಮಠಾಧಿಕಾರವನ್ನು 30 ವರ್ಷಗಳವರೆವಿಗೂ ಯಾವತರದ ಲೋಪವೂ ಇಲ್ಲದಂತೆ ಅತಿದಕ್ಷತೆಯಿಂದ ನಡೆಯಿಸಿ ತಮ್ಮ ದೇಹಯಾತ್ರೆಯನ್ನು ಮುಗಿಸಿದರು. ಇಂಥಾ ಪ್ರಖ್ಯಾತರಾದ ಶ್ರೀಗುರುಮೂರ್ತಿಯನ್ನು ಕಳೆದುಕೊಂಡದ್ದಕ್ಕಾಗಿ ಈ ಪ್ರಾಂತದವರೆಲ್ಲರೂ ಬಹಳ ಚಿಂತಿಸುತ್ತಿರುವರು.

ಓರ್ವ ಸದ್ಗುರುಭಕ್ತ.

ಶ್ರೀ ಕಾಶೀಕ್ಷೇತ್ರಯಾತ್ರೆಯು.

(ಗಂಡಹೆಂಡಿರ ಕಲಹದಲ್ಲಿ ಕೂಸು ಬಡವಾಯಿತು)

1926 ನೇ ಮಾರ್ಚಿ ತಿಂಗಳೊಳಗೆ ಶ್ರೀ ಕಾಶೀಕ್ಷೇತ್ರಯಾತ್ರೆಯ ಸಲುವಾಗಿ ಹಾಲಕೇರಿ, ರೋಣ, ಕನಕಗಿರಿ, ಕೊಪ್ಪ ಮೊದಲಾದ ಶ್ರೀಮನ್ನಿರಂಜನವಿರಕ್ತಮಹಾಸ್ವಾಮಿಗಳು ಅನೇಕ ಭಕ್ತಮಂಡಳಿಯೊಡನೆ ದಯಮಾಡಿಸಿ, ಅಲ್ಲಲ್ಲಿಗೆ ವಸತಿ ಮಾಡುತ್ತ ದಾರಿಯಲ್ಲಿರುವ ದೊಡ್ಡದೊಡ್ಡ ಕ್ಷೇತ್ರಗಳನ್ನೂ, ಪಟ್ಟಣಗಳನ್ನೂ ನೋಡುತ್ತ ಕಾಶಿಯನ್ನು ಮುಟ್ಟಿದರು. ಅಲ್ಲಿ ವೀರಶೈವಮತಕ್ಕೆ ಗುರುಪೀಠವೆನಿಸುವ ಪಂಚಸಿಂಹಾಸನಗಳೊಳಗೊಂದಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮುಖ್ಯಸ್ಥಾನವಾದ ಜಂಗಮವಾಡೀಮಠವಿರುವದೆಂದು ಸಮಸ್ತ ವೀರಶೈವರಿಗೆ ವಿದಿತವಿರುವದಷ್ಟೆ? ಆದರೆ ಯಾತ್ರಿಕರೂ, ಅತಿಥಿಗಳೂ ಆದ ಮೇಲಿನ ಶ್ರೀ ಚತುಷ್ಟಯರು ಯಾವ ಅನಾನುಕೂಲತೆಯಿಂದಲೋ ಮತ್ತಾವಕಾರಣಗಳಿಂದಲೋ ಆ ಜಂಗಮವಾಡಿಮಠದಲ್ಲಿ ಇಳಿದುಕೊಳ್ಳದೆ ಬೇರೊಂದುಕಡೆಯಲ್ಲಿದ್ದುಕೊಂಡು, ತಮ್ಮ ಭಕ್ತಮಂಡಳಿಗೆ 10-15 ದಿವಸಗಳ ಪರಿಯಂತರ ನಿರಂತರ ಗಂಗಾಸ್ನಾನಮಾಡಿಸಿ ವಿಶ್ವನಾಥ, ಅನ್ನಪೂರ್ಣ, ಕಾಲಭೈರವ ಮೊದಲಾದ ದೇವತೆಗಳ ದರ್ಶನಮಾಡಿಸಿಕೊಂಡು, ತರುವಾಯ ಹಿಮಾಲಯದ ಕಡೆಗೆ ದಯಮಾಡಿಸಬೇಕೆಂದಿರುವಷ್ಟರಲ್ಲಿ, ಚತುಃಶ್ರೀಗಳೊಳಗೆ ಒಬ್ಬೊಬ್ಬರ ಪ್ರಕೃತಿಯು ಬೇಸಿಗೆಯ ಬಿಸಲಿನತಾಪಕ್ಕೆ ತಡೆಯದಿದ್ದುದರಿಂದ ಮುಂದಕ್ಕೆ ಪ್ರಯಾಣ ಬೆಳಸದೆ, ಹಿಂದಿರುಗಿ ತಾ॥ 19-3-1926 ನೇ ದಿವಸ ಶ್ರೀ ಕಾಶೀಕ್ಷೇತ್ರವನ್ನು ಬಿಟ್ಟು ನಾಶಿಕ, ಉಜ್ಜಯಿನಿ, ತ್ರ್ಯಂಬಕೇಶ್ವರ ಮಾರ್ಗವಾಗಿ ಮುಂಬಯಿ ಪಟ್ಟಣಕ್ಕೆ ಪ್ರಯಾಣಮಾಡಿದರು. ಇಷ್ಟಾಗುವದರೊಳಗೆ ಕಾಶೀ ಜಂಗಮವಾಡಿಮಠದಲ್ಲಿರುವ ಕೆಲಕೆಲವು ಸಂಸ್ಕೃತ ವಿದ್ಯಾರ್ಥಿಗಳಿಗೆ ಸ್ಥಾನಭ್ರಷ್ಟವಾಗುವ ಪ್ರಸಂಗ ಬಂದೊದಗಿತು. ಯಾತಕಂದರೆ-ಹಾಲಕೇರಿ, ಅಬ್ಬಿಗೇರಿ ಪಾಠಶಾಲೆಗಳಿಂದ ಕೆಲವು ವಿದ್ಯಾರ್ಥಿಗಳು ಶಾಸ್ತ್ರಾಧ್ಯಯನ ಮಾಡಲಿಕ್ಕೆ ಕಾಶಿಗೆ ಹೋಗಿ, ಜಂಗಮವಾಡಿಮಠದಲ್ಲಿಯೇ ಇದ್ದು ಅಭ್ಯಾಸಮಾಡುತ್ತಿರುವರು. ಇವರಿಗೆ ಅಲ್ಲಿಯ ಆ ಮಠದ ಶ್ರೀಗಳಾದರೂ ಸರ್ವತರದಿಂದ ಸಹಾಯಮಾಡುತ್ತಿರುವರಲ್ಲದೆ ಒಪ್ಪತ್ತು ಭೋಜನಮಾಡಿಸುತ್ತಿರುವರು. ಹೀಗಿರುವಾಗ್ಗೆ ಹಾಲಕೇರಿ ಮೊದಲಾದ ಶ್ರೀಗಳವರು ಕಾಶಿಗೆ ಬಂದು ಬೇರೆಕಡೆಗೆ ಇರುವರೆಂಬ ಸುದ್ದಿಯನ್ನು ಕೇಳಿ; ಈವರೆಗೂ ಅವರ ಉದಾರಾಶ್ರಯದ ಕೆಳಗೆ ಅಭ್ಯಾಸಮಾಡಿದ ಆ ಹಾಲಕೇರಿ ವಿದ್ಯಾರ್ಥಿಗಳು ತಮ್ಮ ಸ್ವಾಮಿಗಳು ಬಂದಿರುವರೆಂಬ ಸಂತೋಷದಿಂದ ಅವರು ಇಳಿದುಕೊಂಡಲ್ಲಿಗೇ ದರ್ಶನಕ್ಕಾಗಿ ಪದೇಪದೇ ಹೋಗಿ ಬರುತ್ತಿದ್ದರು. ಇದನ್ನು ಸಹಿಸದೆ ಅಲ್ಲಿರುವ ಯಾರೋ ಪುಣ್ಯಪುರುಷರು ಆ ಬಡವಿದ್ಯಾರ್ಥಿಗಳನ್ನು ಮಠಬಿಡಿಸಿ ಹೊರಗೆ ಹಾಕಿಸುವ ಪ್ರಸಂಗ ತಂದುಕೊಟ್ಟರು. ಅದಕ್ಕೆ ಆ ಪರದೇಶಿಗಳಾದ ಹುಡುಗರು ನಿರುಪಾಯರಾಗಿ ಗೋಳಿಡುತ್ತ ಬಳಲುತ್ತ ತಮ್ಮ ಗುರುಪೀಠವನ್ನು ಬಿಟ್ಟು ದುರ್ಗಾಕುಂಡವೆಂಬಲ್ಲಿಗೆ ಬಂದು ಬಿದ್ದರು. ಕಷ್ಟಪಟ್ಟು ವಿದ್ಯೆ ಕಲಿಯಲಿಕ್ಕೆ ಪರದೇಶಕ್ಕೆ ಹೋದರು ಕೂಡ ಬಡವಿದ್ಯಾರ್ಥಿಗಳಿಗೆ ಈತರದ ಗೋಳಾಟವೇ? ಶಿವಶಿವ! ಎಂಥ ಭಯಂಕರಸ್ಥಿತಿಯಿದು!! ಇದಕ್ಕೆಲ್ಲಾ - ನಾವು ಹೆಚ್ಚು ನೀವು ಕಡಿಮೆ - ಎಂದು ಬಡಿದಾಡುವ ಗುರುಜಂಗಮರ ಕಲಹವೇ ಕಾರಣವಾಗಿರುವದು. ಇವರ ಕಲಹದಿಂದಲೇ ಹಿಂದಿನ ಪ್ರಮುಖರು ಈಗ ನಿಂದೆಗೆ ಪಾತ್ರರಾದರು. ಇವರ ಉಪದ್ವ್ಯಾಪದಿಂದಲೇ ಸದ್ಯಃ ಸಮಾಜದಲ್ಲಿ ಸದ್ದಿಲ್ಲದೆ ಅನೈಕ್ಯತೆಯುಂಟಾಗಿರುವದು. ಇವರ ಉಪದ್ವ್ಯಾಪದಿಂದಲೇ ಭಕ್ತಮಾಹೇಶ್ವರರೊಳಗಿದ್ದ ಭಕ್ತಿವಿಶ್ವಾಸಗಳೆಲ್ಲ ದಂಡವಾದವು. ಇವರ ಉಪದ್ವ್ಯಾಪದಿಂದಲೇ ದೃಢತರವಾದ ಸದ್ಧರ್ಮದ ಕಟ್ಟು ಕಳಚಿ ಕೆಳಗೆ ಬೀಳುತ್ತಿತು. ಇವರ ಉಪದ್ವ್ಯಾಪದಿಂದಲೇ ಸ್ವಧರ್ಮದಲ್ಲಿ ರಾಗ, ದ್ವೇಷ ಅಸೂಯಾದಿಗಳು ದಿನದಿನಕ್ಕೆ ಹೆಚ್ಚುತ್ತಿರುವವಲ್ಲದೆ ಸ್ವಧರ್ಮಗ್ರಂಥಗಳು ಸಹ ರೂಪಾಂತರವಾಗಿ ದ್ವೀಪಾಂತರಕ್ಕೆ ಹೋಗುತ್ತಿರುವವು. ಇವರ ಉಪದ್ವ್ಯಾಪದಿಂದಲೇ ಮುಂದಿನ ಪೀಳಿಗೆಯು ಏಳಿಗೆಯು ವಿಪರೀತವಾಗಿ ತಿಳಿದು ಹಾಳಾಗಹತ್ತಿತು. ಇನ್ನು ಕೆಲವುದಿವಸ ಹೀಗೇ ಈ ಉಪದ್ವ್ಯಾಪವು ಹಬ್ಬುತ್ತ ಹೋದರೆ ಈ ವೀರಶೈವ ಸಮಾಜವೆಂಬುದು ಸಹಜವಾಗಿ ಬಹು ಅನರ್ಥಕ್ಕೆ ಗುರಿಯಾಗುತ್ತ ಇಹಪರಸುಖಕ್ಕೆ ದೂರವಾಗಿ ಸಮಾಜಾಂತರದಿಂದ ಮರೆಯಾಗಿ ಹೋಗುತ್ತದೆ. ಆದ್ದರಿಂದ ಈಗಿನ ಗುರುಜಂಗಮರೆಂಬುವವರು ಮೊದಲಿನ ತಮ್ಮ ಗುರುಜಂಗಮರನ್ನು ನೆನೆದು ಈ ಕದನವನ್ನು ಬಿಟ್ಟುಬಿಡಬೇಕೆಂದು ಈ ಪುಟ್ಟಲೇಖವು ಹೇಳಿಕೊಳ್ಳುವದಲ್ಲದೆ ಬುದ್ಧಿವಂತರಾಗಬೇಕೆಂದು ಗದ್ದರಿಸುತ್ತದೆ. ಯಾಕಂದರೆ, ಒಮ್ಮೆ ಬಡಿದಾಡಿದ ಗಂಡಹೆಂಡಿರು ಪುನಃ ಪರಸ್ಪರಪ್ರೀತಿಯಿಂದ ಕೂಡಿದ್ದರೆ ತಮ್ಮ ಸುಖಕ್ಕೂ ಮಕ್ಕಳ ಸುಖಕ್ಕೂ ತೊಂದರೆಯಾಗಿ ಸಂಸಾರದ ಸಕಲ ಸಂಕಟಗಳಿಗೆ ಗುರಿಯಾಗುವಂತೆ, ಗುರುಜಂಗಮರೆಂಬುವವರು ಪರಸ್ಪರ ಬಡಿದಾಡಿ ಪುನಃ ಪ್ರೀತಿಯಿಂದ ತಮ್ಮೊಳಗೆ ತಾವೇ ಕೂಡಿಕೊಳ್ಳದಿದ್ದರೆ ತಮ್ಮ ಸುಖಕ್ಕೂ ಭಕ್ತರ ಸುಖಕ್ಕೂ ದೂರಾಗಿ ಮತಾಂತರದವರ ಹಾಸ್ಯಕ್ಕೆ ಗುರಿಯಾಗಿ, ಸದ್ಭಕ್ತರ ಮನೆಗೆ ಎರವಾಗಿ, ಇಹಪರಕ್ಕೂ ಮರೆಯಾಗಿ ಚರಿಸ್ಯಾಡುವರು. ಇವರಿಗೆ ಈ ಗತಿಯು ಇಂದಿಲ್ಲ ನಾಳೆಯಾದರೂ ಬಂದೇ ಬರಬಹುದು. ಆದ್ದರಿಂದ ಗುರುಜಂಗಮರೆಂಬ ಗಂಡಹೆಂಡಿರು ಈ ಮಠಕ್ಕೆ ನಿಜವಾದ ತಂದೆತಾಯಿಗಳಾಗಿದ್ದರೆ ಪರಸ್ಪರ ಪ್ರೀತಿಯಿಂದಿದ್ದುಕೊಂಡು, ತಮ್ಮಿಬ್ಬರನ್ನು ಸಂಸಮಾನರೆಂದು ತಿಳಿದುಕೊಂಡಿರುವ ಈ ಮಠವೆಂಬ ಮಗನಿಗೆ ಸನ್ಮಾರ್ಗವನ್ನು ತೋರಿಸಿ ಸದ್ಗತಿಯನ್ನು ಕೊಡುತ್ತ, ಮಠವೆಂಬ ಮಗನಿಂದ ಸರ್ವತ್ರ ಸಕಲ ಸಂಪತ್ತಿನ ಗೌರವವನ್ನು ಹೊಂದುತ್ತ ಶಿವಯೋಗ ಸುಖಸಾಮ್ರಾಜ್ಯದಲ್ಲಿರುವದು ಯೋಗ್ಯವಲ್ಲವೇ? ಇದನ್ನು ಬಿಟ್ಟು - ಹಸಿದುಬಂದ ಗಂಡನಿಗೆ ಉಣಲಿಕ್ಕದೆ ಬಡವಾದನೆಂದು ಮರುಗುವಸತಿಯ ಸ್ನೇಹ - ದಂತೆ ಬರಿಯ ಒಣಮಾತುಗಳಿಂದ ನಮ್ಮ ಮಠವು ಕ್ಷೀಣವಾಗುತ್ತ ನಡೆಯಿತೆಂದರೆ ಬಂತೇನು? ಗುರುಜಂಗಮರು ಗಂಡಹೆಂಡಿರೆಂಬ ಪಕ್ಕೆ ಅಲ್ಲಮನವಚನದಲ್ಲಿ ಹೀಗೆ ಹೇಳಿರುವದು.— - ಗಂಡಗಿಂತ ಹೆಂಡತಿ ಮುನ್ನವೇ ಹುಟ್ಟಿ ಗಂಡಗಿಂತ ಕಿರಿಯಳಾದಳು. ಆ ಗಂಡ ಹೆಂಡತಿಯ ಸೊಡಹುಟ್ಟಿದವಳೆಂದು ಸಂಯೋಗವಮಾಡಲಾಗಿ ಇವರಿಗೊಬ್ಬ ಮಗಹುಟ್ಟಿದನು. ಆ ಮಗುವ ತಾಯಿ ಮುದ್ದಾಡಲಾಗಿ ಆ ಮಗುವು ತಾಯ ತಕ್ಕೈಸಿಕೊಂಡಿತು. ಆ ತಾಯಿಮಗನಿಗೆ ಪತಿಭಕ್ತಿಯಂ ಮಾಡಲಾಗಿ ಗುಹೇಶ್ವರ ಲಿಂಗಕ್ಕೆ ಭಕ್ತಿ ಪರಿಣಾಮವಾಯಿತು " ಮತ್ತು ಪ್ರಭುಗೀತೆಯಲ್ಲಿ.— ಶ್ರೀಗುರುಃ ಪತಿರಾಖ್ಯಾತಃ ಶ್ರೀ ಸತೀರೂಪಭಾಕ್ತರುಃ | ಜಟಾವಲಯಸಂಯುಕ್ತಾ ಸ್ತ್ರೀಚಿನ್ಹಾ ಧಾರಿ ಜಂಗಮಃ ॥ ತದ್ವಯಸ್ಸಮಸ್ತಸಂಯೋಗಾಚ್ಚ ವ ಲಿಂಗಸಮುದ್ಭವಮ್ | ತತಃಸಿಕ್ತೋಃ ಪ್ರಸಾದಸ್ತುದೇಯಃ ಶ್ರೀಲಿಂಗರೂಪಿಣೇ ॥ ಯಾವ ಮಠಕ್ಕೆ (ಸಮಾಜಕ್ಕೆ) ಗುರುಜಂಗಮರ ಸಂಯೋಗದಿಂದ ಪರಮಾನಂದಪ್ರಾಪ್ತಿಯಾಗುತ್ತಿರುವದೋ ಆ ಮಠವು ಗುರುಜಂಗಮರ ವಿಯೋಗದಿಂದ ಈಗ ಪರಮಾವಧಿ ದುಃಖಸಾಗರದಲ್ಲಿ ಮುಳುಗುತ್ತಿರುವದು. ಆದ್ದರಿಂದ ಈ ಸಮಾಜದ ಸುಖದುಃಖಕ್ಕೆ ಮೂಲಕಾರಣರಾದ ಗುರುಜಂಗಮರು ಒಕ್ಕಟ್ಟಾದರೆ ವೀರಶೈವಮತವೆಂಬ ಶ್ರೇಷ್ಠ ಮಗನು ಇಕ್ಕಟ್ಟಿನಿಂದ ಪಾರಾಗುವನು. ಇಲ್ಲದಿದ್ದರೆ ಗಂಡಹೆಂಡಿರ ಕಲಹದಲ್ಲಿ ಕೂಸು ಬಡವಾದಂತೆ, ಗುರುಜಂಗಮರ ನಡುವೆ ಸಮಾಜವೇ ಬಡವಾಗುವದು. ಬರಬರುತ್ತ ಹೀಗೇ ಗಾಸಿಯಾಗುತ್ತಹೋದರೆ ಸಮಾಜವೆಂಬ ಮಲ್ಲಿಗೆಯ ಹೂವು ವಿಷಕಾರುತ್ತ ನಡೆಯುವದು. ಆದ್ದರಿಂದ ಅತ್ಯಂತ ಗಾಸಿಮಾಡದೆ ಮಗುವನ್ನು ಬಗಲೊಳು ಎತ್ತಿಕೊಂಡು ಮುದ್ದಿಟ್ಟು ಆನಂದಪಡುವದು ಉತ್ತಮ ತಂದೆತಾಯಿಗಳ ಲಕ್ಷಣವು, ಇಲ್ಲದಿದ್ದರೆ ವಿಲಕ್ಷಣವು.

ಬೀ. ಎಂ. ಮಠ. ಕೋಡಿಕೊಪ್ಪ, ನ್ಯೂ. ಇಂ. ಸ್ಕೂಲ, ವಿಜಾಪೂರ.

ಜಾಯಿಂಟ್‌ಸ್ಟಾಕ್ ಕಂಪೆನಿಗಳು.

ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್ ಮುಂತಾದ ದೇಶದಲ್ಲಿ ಆಗರ್ಭಶ್ರೀಮಂತರುಗಳು, ಲಾರ್ಡ್‌ಪ್ರಭುಗಳು, ಕೋಟ್ಯಧೀಶ್ವರರುಗಳು ಸೇರಿ ಅಲ್ಲಲ್ಲಿ ಜಾಯಿಂಟ್‌ಸ್ಟಾಕ್ ಕಂಪೆನಿಗಳನ್ನ ಏರ್ಪಾಡುಮಾಡಿ ದೊಡ್ಡದೊಡ್ಡ ಕೈಗಾರಿಕೆಗಳು, ವ್ಯಾಪಾರಗಳು, ಲೇವಾದೇವಿಬ್ಯಾಂಕುಗಳು, ಮಿಲ್ಲುಗಳು ರೈಲ್ವೆಗಳು ಮುಂತಾದವುಗಳನ್ನು ಸ್ಥಾಪಿಸಿ ಅವುಗಳಿಂದ ಷೇರುದಾರರುಗಳಿಗೂ ಪ್ರಯೋಜನವನ್ನುಂಟುಮಾಡಿಕೊಡುವುದಲ್ಲದೆ ದೇಶಕ್ಕೂ ಸೌಕರ್ಯಗಳನ್ನುಂಟುಮಾಡಿಕೊಂಡು ಬರುತ್ತ ಇರುವಂತೆಯೇ, ಇಂಡಿಯಾದೇಶಕ್ಕೆ ವ್ಯಾಪಾರಾರ್ಥವಾಗಿ ಅಲ್ಲಿಂದ ಬಂದಿರುವವರು ಸಹ ಕಂಪೆನಿಗಳನ್ನು ಏರ್ಪಾಡುಮಾಡಿ ನಡಿಸಿಕೊಂಡು ಬಂದರು. ಇವರನ್ನು ನೋಡಿ ಇಂಡಿಯಾದೇಶಸ್ಥರು ತಾವೂ ಅವರಂತೆಯೇ ಕಂಪನಿ ಏರ್ಪಡಿಸಿ ನಡೆಸುತ್ತಾ ಬಂದಿರುವರು. ಈ ಉಭಯರನ್ನೂ ನೋಡಿ ನಮ್ಮ ಮೈಸೂರಿನ ಕೆಲವರು 4-6 ವರ್ಷಗಳಿಂದೀಚೆಗೆ ಜಾಯಿಂಟ್‌ಸ್ಟಾಕ್ ಕಂಪನಿಗಳನ್ನು ಸೃಷ್ಟಿಸಿ ನಡೆಸಲು ಶುರುಮಾಡಿದರು. ಶ್ರೀಕೃಷ್ಣರಾಜೇಂದ್ರಮಿಲ್ಲಿನಂಥ 1-2 ಕಂಪೆನಿಗಳಲ್ಲಿ ಮೈಸೂರು ಸರ್ಕಾರದವರು ಮತ್ತು ಶ್ರೀಮನ್ಮಹಾರಾಜರವರು ಷೇರುತೆಗೆದುಕೊಂಡು ಪ್ರೋತ್ಸಾಹಿಸುತ್ತಿರುವುದರಿಂದ ಅವು ತಕ್ಕಮಟ್ಟಿಗೆ ನಡೆದುಕೊಂಡುಬರುತ್ತ ಇರುತ್ತವೆ. ಉಳಿದ ಕಂಪೆನಿಗಳ ಅವಸ್ಥೆಯನ್ನು ಹೇಳತೀರದು. ಸರ್ಕಾರೀ ದೊಡ್ಡ ಉದ್ಯೋಗಸ್ಥರು ರಿಟೈರಾದರೆಂದು ತಿಳಿದಕೂಡಲೆ ಲೋಕೋಪಕಾರಿಗಳೆಂದು ನಟಿಸುವ ಕೆಟ್ಟ ಬುದ್ಧಿಯವರು ಅವರಲ್ಲಿಗೆ ಹೋಗಿ ಜಾಯಿಂಟ್ ಕಂಪೆನಿಗಳಿಂದ ಯೂರೋಪುದೇಶದವರು ಎಷ್ಟು ಧನಸಂಪಾದನೆಮಾಡಿ ಖ್ಯಾತಿಗೆಬಂದಿದ್ದಾರೆ. ಅದರಂತೆ ಒಂದು ಜಾಯಿಂಟ್‌ಸ್ಟಾಕ್ ಕಂಪೆನಿಯನ್ನು ಸ್ಥಾಪಿಸಬೇಕೆಂದು ನನ್ನಂತಹ ಕೆಲವರೊಡನೆ ಯೋಚನೆಮಾಡಿ ಅವರಿಗೆಲ್ಲಾ ವಿಶದವಾಗಿ ಹೇಳಿ ಒಪ್ಪಿಸಿರುತ್ತೇನೆ. ತಾವು ಈ ಕಂಪೆನಿಗೆ ಛೇರ್ಮನ್ನರಾಗಲು ಒಪ್ಪಿಗೆಯನ್ನು ಕೊಡಿ. ಅದರಿಂದ ಎಷ್ಟರಮಟ್ಟಿಗೆ ವರಮಾನವಿರುತ್ತೊ ನಿಮಗೇ ತಿಳಿಯುತ್ತದೆ. ತಾವು ಸುಮ್ಮನೆ ನೂರಾರು ಷೇರುತೆಗೆದುಕೊಳ್ಳುವುದಾಗಿ ಹೇಳಿದರೆ ಸಾಕು. ಈಗ ದುಡ್ಡನ್ನು ಕೊಡಬೇಕಾಗಿಲ್ಲ. ಛೇರ್ಮನ್ನರ ಅಲೋಯನ್ಸು, ತಿಂಗಳ ಮತ್ತು ವಿಶೇಷ ಮೀಟಿಂಗುಗಳ ಫೀ ಮೊದಲಾದವುಗಳನ್ನೆಲ್ಲಾ ನೀವು ತೆಗೆದುಕೊಂಡಿರುವ ಷೇರಿಗೆ ವಜಾಹಾಕಿಕೊಳ್ಳುವಂತೆ ಮಾಡುತ್ತೇನೆ. ಹೀಗೆ ಕೊಂಚಕಾಲ ನಡೆಯುವದರಲ್ಲಿ ನಿಮ್ಮ ಷೇರುಮೊಬಲಗು ಭರ್ತಿಯಾಗುವಂತೆ ಮಾಡುತ್ತೇನೆ. ಷೇರುಮೊಬಲಗು ಗಂಟಾಗುವುದಲ್ಲದೆ, ನಿಮಗೂ ತಿಂಗಳು ತಿಂಗಳಿಗೆ ಅಲೋಯನ್ಸು ಸಹ ಬರುತ್ತೆ. ಮುಖ್ಯ ನಿಮ್ಮ ಹೆಸರನ್ನು ಸದಕ್ಕೆ ಕೊಟ್ಟು ನೋಡಿರಿ ಎಂದು ವಗೈರೆ ಸ್ತೋತ್ರಮಾಡಿದ ಕೂಡಲೆ ಪ್ರತಿ ತಿಂಗಳಲ್ಲೂ ಬರುತ್ತಿದ್ದ ಸಂಬಳದಲ್ಲಿ ಅರ್ಧಕಡಿಮೆ ಆಯಿತೆಂದು ಕೊರಗಿ ಅದನ್ನು ಭರತಿಮಾಡುವದು ಹೇಗೆಂದು ಯೋಚಿಸುತ್ತಿರುವವರು ಆತುರದಿಂದ ಪೂರ್ವಾಪರ ಯೋಚನೆ ಇಲ್ಲದೆ ಒಪ್ಪಿ ಆಗಲೇ ಸಿದ್ಧವಾಗಿರುವ ಆರ್ಟಿಕಲ್ ಆಫ್ ಅಸೋಸಿಯೇಷನ್ನಿಗೆ ರುಜುಮಾಡಿ ತಾವೇ ಖುದ್ದಾಗಿ ಹೋಗಿ ರಿಜಿಸ್ಟ್ರಾರಲ್ಲಿ ರಿಜಿಷ್ಟರುಮಾಡಿಸಲು ಹಾಜರ್ಯಾಗುವರು. ಗೌರ್ನಮೆಂಟಿನವರು ಸಹ ವಿಚಾರಮಾಡದೆ, ರಿಟೈರ್ಡ್‌ಆಫೀಸರು ಇದರಮೇಲೆ ಮಹಾರಾಜರಿಂದಲೂ, ಚಕ್ರವರ್ತಿಯವರಿಂದಲೂ ಬಿರುದುಗಳನ್ನು ಪಡೆದಿರುವವರು ಇಂಥಾವರೇ ಮುಖ್ಯಸ್ಥರಾಗುವಾಗ್ಗೆ ಬಹಳ ಚೆನ್ನಾಗಿ ನಡೆಯುತ್ತದೆಂದು ನಂಬಿ ರಿಜಿಷ್ಟರುಮಾಡಿಕೊಳ್ಳುತ್ತಾರೆ. ಹೀಗೆ ಸರ್ಕಾರದಲ್ಲಿ ರಿಜಿಷ್ಟರುಮಾಡಿರುತ್ತೆ, ಬಡ್ಡಿ ಶೇಕಡ 15-20 ರಂತೆ ಸಿಗುತ್ತದೆಂದು ಜನರು ನಂಬುವಂತೆ ಯಾಗುವಂತೆ ಏಜಂಟರುಗಳು ಹೇಳುವ ಜಾಹೀರಾತು ಮಾಡಿ ಮುಗ್ಧರಿಗೆ ಅದರ ದುಡ್ಡನ್ನು ಕೊಡುವಂತೆ ಒಪ್ಪಿಸಿ [illegible]

ಯಲ್ಲಿ ಕೊಡಬೇಕಾದ ಕ್ಲುಪ್ತವಾದ ಮೊಬಲಗನ್ನೂ ಕೊಟ್ಟು ಕೊಡಲಿ ಏಜಂಟರು ಹಿಗ್ಗಿ ಅಂತಹ ಮರಣ ಸಂತೋಷವನ್ನು ಹೊಂದಿ ಕಂಪೆನಿ ಡೈರೆಕ್ಟರುಗಳ ಮುಂದೆ ತಮ್ಮ ಪ್ರತಾಪವನ್ನು ಹೇಳಿ ಬೋನಸ್ಸನ್ನು ಹೊಂದುವರು. ಡೈರೆಕ್ಟರುಗಳಾದರೋ ಮುಂದೆ ಇದೇರೀತಿ ಪರಿಣಮಿಸುತ್ತದೆಂದು ಗೊತ್ತುಮಾಡಿಕೊಂಡು ಆರ್ಟಿಕಲ್ ಆಫ್ ಅಸೋಸಿಯೇಷನ್ನನ್ನು ತಯಾರ್ಮಾಡುವಾಗಲೇ ಕಂಡೀಷನ್‌ಗಳನ್ನು ಹಾಕಿ ಮ್ಯಾನೇಜಿಂಗ್‌ಡೈರೆಕ್ಟರಾಗುವವರೂ, ಕೆಲವು ಕಂಪೆನಿಗಳಿಗೆ ಸೆಕ್ರೆಟರಿಗಳೆಂದಾಗುವವರೂ 4-6 ವರ್ಷಗಳಲ್ಲಿ ಅಲ್ಲ, 15-20 ವರ್ಷಗಳವರಿವಿಗೂ ತಾವೇ ಮ್ಯಾನೇಜಿಂಗ್‌ಡೈರೆಕ್ಟರೂ ಸೆಕ್ರೆಟರಿಗಳೂ ಆಗಿರಬೇಕೆಂದೂ, ತಿಂಗಳಿಗೆ 200-300 ರೂ. ಗಳ ಮೇಲ್ಪಟ್ಟು ಅಲೋಯನ್ಸು ಕೊಡಬೇಕೆಂದೂ, ಮೀಟಿಂಗುಗಳಿಗಾಗಿ ಸೇರಿದಾಗ್ಗೆ ಡೈರೆಕ್ಟರುಗಳು ಮತ್ತು ಮ್ಯಾ|| ಡೈ|| ಇವರುಗಳು ಇಸಂ ಒಂದಕ್ಕೆ ಮೀಟಿಂಗಿಗೆ ಹಾಜರಾಗುವ ಪ್ರತಿದಿನಕ್ಕೂ 10-15 ರೂ. ಫೀ ಕೊಡಬೇಕೆಂದೂ, ರೈಲ್‌ಛಾರ್ಜು ತಿಂದಿ ಮುಂತಾದವುಗಳೆಲ್ಲಾ ಸಪ್ಲೈಯಾಗಬೇಕೆಂದೂ, ಮ್ಯಾ|| ಡೈ|| ರನ್ನು ಮಧ್ಯಕಾಲದಲ್ಲಿ ಬೇಡವೆಂದು ಹೇಳಿದಲ್ಲಿ ಅವರಿಗೆ ಪರಿಹಾರರೂಪವಾಗಿ 15-20 ಸಾವಿರರೂಪಾಯಿಗಳನ್ನೂ ಕೊಡಬೇಕೆಂದು ಮುಂತಾಗಿ ರೂಲ್ಸುಗಳು ಮಾಡಿಕೊಂಡು 10-15 ರೂ. ಬಾಡಿಗೆಕೂಡ ದೊರೆಯದ ಕಟ್ಟಡಗಳಿಗೆ 50-60 ರೂ. ಬಾಡಿಗೆಕೊಟ್ಟು ವಿಟ್ಟವಾಗಿ ಆಫೀಸುಮಾಡುವುದಕ್ಕೆ ಷುರುಮಾಡಿ, ತಾವುಗಳು ಉದ್ದೇಶಿಸಿದ ಕಾರ್ಯವನ್ನು ಮಾಡುವಂತೆ ನಟನೆಮಾಡುವುದಕ್ಕೆ ಪ್ರಾರಂಭಿಸಿ ಒಂದೆರಡುವರ್ಷಗಳು ನಡೆಸಿ ಆನಂತರ ಡೈರೆಕ್ಟರುಗಳಲ್ಲಿಯೇ ವ್ಯಾಜ್ಯವನ್ನು ಕಲ್ಪಿಸಿಕೊಂಡು ಷೇರುದಾರರುಗಳಿಗೆಲ್ಲಾ ಭೀತಿಯನ್ನುಂಟುಮಾಡಿ ಅವರುಗಳು ಕೊಟ್ಟಿರತಕ್ಕ ಮುಕ್ಕಾಲುಭಾಗದ ಷೇರು ಮೊಬಲಗು ಆಡಳತಕ್ಕೆ ಸಾಲದು, ಮತ್ತು ಬ್ಯಾಂಕಿನಲ್ಲಿ ಸಾಲಮಾಡಿರುತ್ತೆ, ಆದ್ದರಿಂದ ಷೇರು ಹೆಚ್ಚಿಸಬೇಕೆಂದು ಷುರುಮಾಡಿ ಷೇರುದಾರರಲ್ಲಿ ಕೆಲವರಿಗೆ ನೀವು ಇದಕ್ಕೆ ಒಪ್ಪಬೇಡಿರೆಂದು ಒಳಗೊಳಗೆ ಹೇಳಿಕೊಟ್ಟು, ಷೇರುದಾರರ ಸಹಾಯಬರಲಿಲ್ಲವಾದ್ದರಿಂದ ಕಂಪೆನಿ ಮುಚ್ಚಬೇಕೆಂತಲೂ, ಲಿಕ್ವಿಡೇಷನ್ನಿಗೆ ಅರ್ಜಿಹಾಕಬೇಕೆಂತಲೂ ಠರಾವು ಮಾಡಿಕೊಳ್ಳುವುದು ವಾಡಿಕೆಯಾಗಿದೆ. ಇದಾಗುವುದರೊಳಗಾಗಿ ಮ್ಯಾ|| ಡೈರೆಕ್ಟರು ಅದುವರಿವಿಗೆ ತಮಗೆ ಕಂಡಂತೆ ಸಲ್ಲುತ್ತಾಯಿದ್ದ ಅಲೋಯನ್ಸು, ಮೀಟಿಂಗು ಫೀ ಮುಂತಾದವುಗಳ ಜೊತೆಗೆ ತಮ್ಮ ಬುದ್ಧಿಶಕ್ತಿಗನುಗುಣವಾಗಿ ಏಜಂಟರಿಂದ ಕಮಿಷನ್ ಮುಂತಾದ ಅನೇಕ ಬಾಬುಗಳಿಂದ ಶೇಖರಿಸಿದ ದ್ರವ್ಯವನ್ನು ತಮ್ಮ ಹೆಂಡತಿಯ ಹೆಸರಿನಲ್ಲಿ ಗ್ರಾಮ, ಭೂಮಿ, ಬಂಗ್ಲೆಗಳನ್ನು ತೆಗೆದು, ತಾವುಮಾತ್ರ ಹರಕು ಬಟ್ಟೆಯನ್ನೂ, ಹರಕುಜೋಡನ್ನೂ ಹಾಕಿಕೊಂಡು ವೇಷವನ್ನುತಾಳಿ ಜೀವನಮಾಡುವರು. ಸಂತೋಷವನ್ನು ಹೊಂದಿ ಹಿಗ್ಗುತ್ತಾ ಇದ್ದ ಏಜಂಟರನ್ನು ನೋಡಿ ಕಂಪೆನಿ ವಿಚಾರವನ್ನು ಕೇಳಿದರೆ, ನಾನು ಆಗಲೇ ಕಂಪೆನಿ ಬಿಟ್ಟೆನು ಮೋಸವಾಯಿತು ತಿಳಿಯಲಿಲ್ಲ. ಇಷ್ಟೆಲ್ಲಾ ಆಗುವುದಕ್ಕೆ ಕಾರಣ ನೀವು ಸರಿಯಾದವರನ್ನು ಮ್ಯಾ|| ಡೈರೆಕ್ಟರನ್ನಾಗಿ ಗೊತ್ತುಮಾಡದೆ ಎಲ್ಲಾ ಅಧಿಕಾರವನ್ನು ಕೊಟ್ಟು ಕಳೆದುಬಿಟ್ಟಿರಿ. ನಿಮ್ಮಿಂದ ನಾನೂ ಕೆಟ್ಟೆ, ಷೇರುದಾರರಿಗೆ ಬುದ್ಧಿ ಇದ್ದರೆ ಹೀಗ್ಯಾಕೆ ಆಗುತ್ತಾ ಇತ್ತೆಂದು ಷೇರುದಾರರನ್ನೇ ನಿಂದಿಸಿ ಹೋಗುವರು. ಷೇರುದಾರರು ದುಡ್ಡುಕೊಟ್ಟು ಇಂಥಾ ಸಣ್ಣಜನರಿಂದ ಬುದ್ಧಿ ಇಲ್ಲವೆಂದೆನಿಸಿಕೊಳ್ಳಬೇಕಾಯಿತಲ್ಲಾ ಎಂದು ವ್ಯಸನಪಟ್ಟುಕೊಳ್ಳುವರು. ಹೀಗೆ ಕೆಲವುಕಾಲ ಕಳೆದನಂತರ ಲಿಕ್ವಿಡೇಟರ ಆಫೀಸಿನಿಂದ ಬಾಕಿ ಷೇರು ಮೊಬಲಗು ಮತ್ತು ಅದರ ಬಡ್ಡಿಗಾಗಿ ನೋಟೀಸ್ ಬರುವುದು. ಅದನ್ನು ನೋಡಿ ಷೇರುದಾರರು ಅವರಲ್ಲಿಗೆ ಹೋಗಿ ಹೇಳಿಕೊಂಡರೆ ಏನುಮಾಡುವುದು? ಕಂಪೆನಿಗಳೆಂದರೇನೆಂಬುವದನ್ನೇ ನೀವುಗಳು ತಿಳಿದುಕೊಳ್ಳದೆ ಷೇರುದಾರರೆನ್ನಿಸಿಕೊಳ್ಳಬೇಕೆಂಬ ಹೆಮ್ಮೆಗೆ ಷೇರು ತೆಗೆದುಕೊಳ್ಳುತ್ತೀರಿ. ಕಂಪೆನಿಯನ್ನು ಷುರುಮಾಡುವುದಕ್ಕೆ ಯಾರು ಪ್ರಯತ್ನಪಟ್ಟಿರು, ಅವರೆಂಥಾವರು? ಸರಿಯಾದವರನ್ನು ಮುಂದಕ್ಕೆ ತಳ್ಳಿ, ಹಿಂದೆ ಮರೆಯಾಗಿ ನಿಂತು ಸೂತ್ರವನ್ನಾಡಿಸುವವರ್ಯಾರೆಂಬುದನ್ನು ತಿಳಿಯಲು ಶಕ್ತಿಇಲ್ಲದ ಷೇರುದಾರರಿಗೆ ಆಗುವ ಪಾಡೆಲ್ಲಾ ಹೀಗೆಯೇ. ನಿಮ್ಮಂಥಾವರ ದುಡ್ಡಿನಿಂದ ತಾವು ದೊಡ್ಡಮನುಷ್ಯರೆಂದೆನಿಸಿಕೊಳ್ಳಬೇಕೆಂಬ ಮಹಾನುಭಾವರ ಮಾತಿಗೆ ಮರುಳಾದವರು ದ್ರವ್ಯನಷ್ಟಕ್ಕಾಗಿ ವ್ಯಥೆಪಡಲೇಬೇಕು. ಕಂಪೆನಿಯ ಲೀಗಲ್ ಅಡ್ವೈಜರು ಕೂಡ ಪುರೋಹಿತನ ಪಾರ್ಟಿಮಾಡಿದಲ್ಲಿ ಅಂಥಾ ಕಂಪೆನಿಗಳು ಮುಚ್ಚದೆ ಇರುತ್ತವೆಯೆ? ದುಡ್ಡುಕೊಟ್ಟು ಬುದ್ಧಿ ಕಲಿಯಬೇಕಾಗಿತ್ತು; ಕಲಿತುಕೊಂಡಿರಿ. ಮುಂದಾದರೂ ಎಚ್ಚರಿಕೆಯಾಗಿರಿ. ನಿಮ್ಮ ಆಪ್ತೇಷ್ಟರಿಗೂ ನೀವು ಕಲಿತ ಅನುಭವವನ್ನು ಆಗಾಗ್ಗೆ ಹೇಳಿ ಅವರನ್ನು ಎಚ್ಚರಿಸುತ್ತಾ ಬನ್ನಿರಿ. ದೇವರು ನಿಮ್ಮನ್ನು ಕಾಪಾಡಲಿ ಎಂದು ಹೇಳಿಕಳುಹಿಸುತ್ತಾರೆ. ಪೇಟೆಗೆ ಹೋಗಿ ಇಂಥಾ ಕಂಪೆನಿಯ ಷೇರುಗಳಿವೆ ಯಾರಾದರು ತೆಗೆದುಕೊಳ್ಳಿ. ಇಷ್ಟು ಕೊಟ್ಟಿದೆ. ಈಗ ನೀವು ಏನುಕೊಡುತ್ತೀರೆಂದು ಕೇಳಿದರೆ, ಕೆಲವು ಕಂಪೆನಿಗಳ ಹೆಸರನ್ನು ಹೇಳಿದಕೂಡಲೆ ಷೇರಿಗೆ 5 ರೂ. 8 ರೂ. 10 ರೂ. ಸಂತೆ ತೆಗೆದುಕೊಂಡು ಕೊಡಿರೆಂದು ಹೇಳುತ್ತಾರೆ. ಇನ್ನು ಕೆಲವು ಕಂಪೆನಿ ಹೆಸರನ್ನು ಹೇಳಿದರೆ, ಉಳಿದ ಷೇರು ಮೊಬಲಗನ್ನು ಕೊಟ್ಟು ಮೇಲೆ ಏನು ಕೊಡುತ್ತೀರೆಂದು ಕೇಳುತ್ತಾರೆ. ಸಾಲವೋ ಸೋಲವೋ ಮಾಡಿಕೊಟ್ಟು ದುಡ್ಡು ಹೋದರೂ ಹೋಗಲಿ ಎಂದರೆ ಆಗಲೇ ಬಾಕಿ ಷೇರು ಮೊಬಲಗಿಗೆ ಕೋರ್ಟಿನಿಂದ ಲಗ್ನಪತ್ರಿಕೆ ಬರುತ್ತದೆ. ಡಿಕ್ರಿಯಾಗಿ ಜಪ್ತಿ ಹರಾಜಿಗೆ ಬಂದಾಗ್ಗೆ ಮ್ಯಾ|| ಡೈ|| ರನ್ನಾದರು ನೋಡಿ ಹೇಳೋಣವೆಂದು ಹೋಗಿ ಹೇಳಿಕಳುಹಿಸಿದರೆ ನೋಡಲು ಅವಕಾಶವಿಲ್ಲ; ಬೇರೆ ಸ್ಕೀಂ ತಯಾರ್ಮಾಡುತ್ತಾ ಇರುತ್ತಾರೆಂದು ಬಾಗಿಲಿನಲ್ಲಿರುವವರೇ ಜವಾಬ್ ಹೇಳುತ್ತಾರೆ. ಕೆಟ್ಟುಬದುಕಿದವರನ್ನು ನಂಬಿದವರಿಗೆಲ್ಲಾ ಇದೇ ಪಾಡೆಂದು ವ್ಯಥೆಪಟ್ಟುಕೊಂಡು ಹೋಗಿ ಮನೆಯಲ್ಲಿದ್ದ ಒಡವೆ, ವಸ್ತ್ರಗಳನ್ನೂ ಪಾತ್ರೆಪದಾರ್ಥಗಳನ್ನೂ ಅಡವಿಟ್ಟು ಕೋರ್ಟಿನವರಿಗೆ ಒಂದಕ್ಕೆರಡಾಗಿ ಮೊಬಲಗು ಕೊಟ್ಟು ತಲೆಮೇಲೆ ಕೈ ಇಟ್ಟುಕೊಂಡು ಕುಳಿತಿರುವವರನ್ನು ನೋಡುತ್ತಾ ಇದ್ದೇವೆ. ನಾನು ಒಂದೆರಡು ಕಂಪನಿಗಳಲ್ಲಿ ಷೇರು ತೆಗೆದುಕೊಂಡಿರುತ್ತೇನೆ. ಮುಂದೆ ನನಗೆ ಯಾವರೀತಿ ಬರುತ್ತೆ ಎಂದು ಯೋಚಿಸುತ್ತಾ ಇದ್ದೇನೆ. ಕೇವಲ ವಿದ್ವಾಂತರು, ಡಿಗ್ರಿಗಳನ್ನು ಪಡೆದಿರುವವರು ಸಾವಿರಗಟ್ಟಲೆ ಸಂಬಳ ಪಡೆಯುತ್ತಾ ಇದ್ದವರು, ಇಂಥಾವರುಗಳು 4-6 ವರ್ಷಗಳ ಹಿಂದೆ ಒಂದು ಕಂಪೆನಿಯನ್ನು ಸ್ಥಾಪಿಸಿ, ಪ್ರಿಂಟಿಂಗು ಮುಂತಾದ ಕಾರ್ಯಗಳನ್ನು ಷುರುಮಾಡಿ ನಡೆಸಿಕೊಂಡುಬರುತ್ತಾ ಇರುವರು. ಈ ಕಂಪೆನಿಯ ಷೇರು 1 ಕ್ಕೆ 100 ರೂ. ಗಳಂತೆ ಷೇರು ಪೂರಾ ಪಾವತಿಯಾಗಿರುತ್ತೆ. ಈಗ ಅದೇ ಷೇರು 1 ಕ್ಕೆ 84 ರೂ. ಗಳಂತೆ ವಿಕರಿಗೆ ಬಂದಿರುವದಾದರೂ ತೆಗೆದುಕೊಳ್ಳುವವರಿಲ್ಲವಂತೆ. ಕಳೆದ ಫೆಬ್ರವರಿ ತಿಂಗಳೊಂದರಲ್ಲಿ ನಾಲ್ಕುಕೋಟಿಯೂ ಎಪ್ಪತ್ತೆಂಟುಲಕ್ಷ ರೂಪಾಯಿಗಳ ಬಂಡವಾಳವನ್ನೊಳಗೊಂಡಿದ್ದ 38 ಕಂಪೆನಿಗಳು ಬಂಗಾಳಾ ರಾಜ್ಯದಲ್ಲಿ ಮುಚ್ಚಲ್ಪಟ್ಟಿರುತ್ತವೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತೆಂದು ಕೇಳುತ್ತೇನೆ. ಕೆಲವು ಕಂಪೆನಿಗಳು ಪ್ರಾರಂಭವಾಗುವಾಗ್ಗೆ ತೋರಿಸುವ ಆಡಂಬರಗಳೂ, ವಕ್ಕಣೆಗಳೂ, ಯಾರ ಮನಸ್ಸನ್ನು ತಾನೆ ಆಕರ್ಷಿಸದಿರುವುವು? ಇವುಗಳು ದೀಪದ ಹುಳಗಳಂತೆ ಅಲ್ಲಲ್ಲಿ ಮಿಣಕ್, ಮಿಣಕೆಂದು ಹಾರಾಡಿ ತಣ್ಣಗಾಗುತ್ತಾ ಇರುತ್ತವೆ. ಮುಖ್ಯವಾಗಿ ಜನರು ಎಚ್ಚರಿಕೆಯಾಗಿರಬೇಕಾಗಿ ಕೋರಿ ಸದ್ಯಕ್ಕೆ ನಿಲ್ಲಿಸಿರುತ್ತೇನೆ. ಮತ್ತೊಂದಾವರ್ತಿ ಇದೇ ವಿಚಾರವಾಗಿ ಕೃತಪಡಿಸುತ್ತೇನೆ.

ಓರ್ವ ಷೇರುದಾರ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

16 ನೆಯ ಪ್ರಕರಣ.

ಬದಲಾವಣೆ.

ನಾನು ನರ್ತನಗಾನಾದಿಗಳನ್ನು ಕಲಿಯುತ್ತಿದ್ದವೇಳೆಯಲ್ಲಿ ಭೋಗಲಾಲಸನಾಗಿದ್ದೆನೆಂದು ಯಾರೂ ತಿಳಿಯಬಾರದು. ಆಗಲೂ ನಾನು ನನ್ನ ಶರೀರದ ವಿಚಾರವಾಗಿ ಯೋಚಿಸುತ್ತಿದ್ದೆನು. ಆತ್ಮಪರೀಕ್ಷೆಯನ್ನು ಮಾಡಿಕೊಳ್ಳುತ್ತಲೇ ಇದ್ದೆನು. ನಾನು ವ್ಯಯಮಾಡಿದ ಹಣದಲ್ಲಿ ಆಣೆ ಮತ್ತು ಕಾಸಿಗೆ ಸಹ ಲೆಕ್ಕವಿಟ್ಟಿದ್ದೆನು. ಟ್ರ್ಯಾಂಬಂಡಿ ಇತರ ಬಂಡಿ ಬಾಡಿಗೆ, ಅಂಚೆಕಾಗದದ ವೆಚ್ಚ, ವರ್ತಮಾನಪತ್ರಿಕೆಯ ಬೆಲೆ ಮೊದಲಾದವುಗಳನ್ನೆಲ್ಲಾ ಸಾಕಲ್ಯವಾಗಿಬರೆದು ಆಯಾದಿವಸ ರಾತ್ರಿ ಮಲಗಿಕೊಳ್ಳುವುದಕ್ಕೆ ಮೊದಲು ತಾಳೆ ನೋಡಿಕೊಳ್ಳುತ್ತಿದ್ದೆನು. ಆ ಪದ್ಧತಿ ಬಿಟ್ಟಿಲ್ಲವಾದುದರಿಂದಲೇ ಲಕ್ಷಾವಧಿ ಜನಗಳ ಧನವು ನನ್ನ ಕೈಯಿಂದ ವ್ಯಯವಾಗುತ್ತಿದ್ದರು ಕೂಡ ವ್ಯಯಮಾಡುವುದರಲ್ಲಿ ನಾನು ಬಹಳ ಎಚ್ಚರಿಕೆಯಿಂದಿರುವುದಾದರೂ ಬರಬೇಕಾದ ಬಾಕಿ ಹಣವನ್ನು ತೋರಿಸುವುದಕ್ಕೆ ಬದಲು ಎಲ್ಲ ವಿಧದ ಹಣದಲ್ಲಿ ಬಾಕಿ ಯುಳಿಯುವ ಮೊಬಲಗನ್ನು ತೋರಿಸುವುದರಲ್ಲಿ ನಾನು ಬಹಳ ಎಚ್ಚರಿಕೆಯುಳ್ಳವನು. ಈ ವಿಷಯವನ್ನು ಪ್ರತಿಯುವಕನೂ ಬಹಳ ಶ್ರದ್ಧೆಯಿಂದ ಗಮನಿಸಿ ಈರೀತಿಯಾಗಿ ತನ್ನ ಪರಕ್ಕೆ ಇತರರು ಕೊಟ್ಟ ಹಣಕ್ಕೂ ತಾನು ವ್ಯಯಮಾಡಿದ ಹಣಕ್ಕೂ ಆಗಾಗ್ಗೆ ಲೆಕ್ಕಬರೆದಿಡುವುದು ಬಹಳ ಒಳ್ಳೆಯದು. ಈರೀತಿಯಾಗಿ ನಾನು ಶ್ರದ್ಧೆಯಿಂದ ಇದ್ದುದಕ್ಕಾಗಿ ನನ್ನ ಆದಾಯವನ್ನು ಅನುಸರಿಸಿಯೇ ವೆಚ್ಚವನ್ನು ಮಾಡಲು ಅನುಕೂಲವಾಗಿದ್ದಿತು, ಮತ್ತು ನನ್ನ ವೆಚ್ಚವನ್ನಾದರೂ ಬಹಳಮಟ್ಟಿಗೆ ಕಡಿಮೆಮಾಡಿದ್ದೆನು. ಒಂದು ಕುಟುಂಬದವರ ಮನೆಯಲ್ಲಿ ನಾನು ವಾಸಮಾಡುತ್ತಿದ್ದುದರಿಂದ ಅವರಿಗೆ ಪ್ರತಿವಾರದಲ್ಲೂ ನಾನು ಹಣವನ್ನು ಕೊಡುವ ಪದ್ಧತಿಯನ್ನಿಟ್ಟಿದ್ದೆನು. ಅವರು ವಾರಕ್ಕೊಂದುವೇಳೆ ಬಿಲ್ಲನ್ನು ಕೊಡುತ್ತಿದ್ದರು. ಮರ್ಯಾದಸ್ಥರಾದ ಆ ಕುಟುಂಬದವರು ಯಾರ ಮನೆಗಾದರೂ ಔತಣಕ್ಕೆ ಹೋಗುವಾಗ್ಗೆ ನನ್ನನ್ನು ಕೂಡ ಕರೆದುಕೊಂಡು ಹೋಗುತ್ತಿದ್ದರು, ಮತ್ತು ನಾನು ಹೋಗಬೇಕಾದಾಗ ಅವರನ್ನು ಕರೆದುಕೊಂಡು ಹೋಗುತ್ತಿದ್ದೆನು. ಅವರು ನನ್ನನ್ನು ಕರೆದುಕೊಂಡು ಹೋಗುವಾಗಲೂ, ನಾನು ಅವರನ್ನು ಕರೆದುಕೊಂಡು ಹೋಗುವಾಗಲೂ ಬಂಡಿಬಾಡಿಗೆ ಮೊದಲಾದವಕ್ಕೆಲ್ಲಾ ನಾನೇ ಕೊಡುತ್ತಿದ್ದೆನು. ಯಾಕೆಂದರೆ ಅಂತಹ ವೆಚ್ಚವನ್ನೆಲ್ಲಾ ಗಂಡುಸರೇ ವಹಿಸಬೇಕಲ್ಲದೆ ಸ್ತ್ರೀಯರು ಕೊಡತಕ್ಕ ವಾಡಿಕೆಯು ಆ ಊರಲ್ಲಿರಲಿಲ್ಲ. ಹೀಗೆ ಔತಣಕ್ಕೆ ಹೋದ ದಿವಸದಲ್ಲೂ ಯಥಾಪ್ರಕಾರ ಅವರ ಬಿಲ್ಲಿನಹಣವನ್ನು ಕೊಡಬೇಕಾಗಿದ್ದುದಲ್ಲದೆ ಹೆಚ್ಚು ಖರ್ಚನ್ನು ನಾನೇ ವಹಿಸಬೇಕಾಗಿದ್ದುದರಿಂದ ಅಂತಹ ಕುಟುಂಬದಲ್ಲಿರಕೂಡದೆಂದು ನಿರ್ಧರಿಸಿದೆನು.

ಪ್ರತ್ಯೇಕವಾಗಿ ಕೊಠಡಿಯನ್ನು ಮಾಡಿಕೊಂಡು ವಾಸಿಸಿ ಅದರನುಭವ ಮಾಡಿಕೊಳ್ಳುವುದಕ್ಕಾಗಿ ಕೆಲಕಾಲ ಒಂದು ಬೀದಿಯಲ್ಲೂ ಮತ್ತೆ ಕೆಲ ಮತ್ತೊಂದು ಬೀದಿಯಲ್ಲೂ ವಾಸಮಾಡುವುದುತ್ತಮವೆಂದು ತಿಳಿದು ಕೆಲಸ ಮಾಡುವ ಸ್ಥಳಕ್ಕೆ ಅರ್ಧಗಂಟೆಕಾಲದೊಳಗೆ ನಡೆದುಕೊಂಡು ಹೋಗಬಹುದಾದಷ್ಟು ದೂರದಲ್ಲಿರುವ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡೆನು. ಇದರಿಂದ ಪ್ರತಿನಿತ್ಯದಲ್ಲೂ 9 ಮೈಲಿದೂರ ನಡೆದುಕೊಂಡು ಹೋಗುವಂತಾದುದಲ್ಲದೆ ಕಾಲಹರಣವೂ ಧನವ್ಯಯವೂ ಮಿಗತಾಯವಾದುವು. ಈಪ್ರಕಾರವಾಗಿ ಬಹಳದೂರ ಪ್ರತಿನಿತ್ಯದಲ್ಲೂ ನಡೆಯುತ್ತಿದ್ದುದರಿಂದಲೇ ಆಂಗ್ಲದೇಶದಲ್ಲಿ ನನಗೆ ಅಸ್ವಸ್ಥತೆಯುಂಟಾಗದಿದ್ದುದಲ್ಲದೆ ಬಹಳಮಟ್ಟಿಗೆ ದಾರ್ಢ್ಯವು ಕೂಡ ಉಂಟಾಗಿದ್ದಿತು. ಆ ಕುಟುಂಬವನ್ನು ಬಿಡಲು ನಿಶ್ಚಯಿಸಿದಾಗ ನಾನು ಮಲಗಿಕೊಳ್ಳಲಿಕ್ಕೆ ಒಂದು ಕೊಠಡಿ ಓದುವುದಕ್ಕೂ ಇತರ ಕೆಲಸಗಳಿಗೂ ಮತ್ತೊಂದು ಕೊಠಡಿ ಈಪ್ರಕಾರ ಎರಡು ಕೊಠಡಿಗಳನ್ನು ಗೊತ್ತುಮಾಡಿದೆನು. ಇದು ಎರಡನೆಯದಶೆ. ಮೂರನೆಯದಶೆಯನ್ನು ಕುರಿತು ಮುಂದೆ ವಿವರಿಸುತ್ತೇನೆ. ಈ ಕ್ರಮದಿಂದ ವೆಚ್ಚದಲ್ಲಿ ಬಹಳಮಟ್ಟಿಗೆ ಕಡಿಮೆಯಾಯಿತು. ಬ್ಯಾರಿಸ್ಟರ್ ಪರೀಕ್ಷೆಗೋದಲು ಪ್ರತಿದಿವಸ ಕೊಂಚಕಾಲ ವಿನಿಯೋಗಮಾಡಿದರೆ ಸಾಕಾಗಿದ್ದಿತಾದುದರಿಂದ ಉಳಿದಕಾಲವನ್ನು ಕಳೆಯುವುದು ಹೇಗೆಂದು ಯೋಚಿಸತೊಡಗಿದೆನು. ಆಂಗ್ಲಭಾಷೆಯಲ್ಲಿ ಪಾಂಡಿತ್ಯವು ಸಾಲದೆಂಬ ಕೊರತೆಯು ನನ್ನ ಮನಸ್ಸನ್ನು ಬಹಳವಾಗಿ ಬಾಧಿಸುತ್ತಿದ್ದಿತು. ‘ಮೊದಲು ಬಿ.ಎ., (ಗ್ರ್ಯಾಜುಏಟು) ಪರೀಕ್ಷೆಯನ್ನು ಕೊಟ್ಟು ಅನಂತರ ನನ್ನ ಹತ್ತರ ಬಾ’ ಎಂದು ಸರ್ ಫ್ರೆಡರಿಕ್‌ವೇಲಿಯವರು ಹೇಳಿದ್ದ ಮಾತನ್ನು ನಾನು ಮರೆತಿರಲಿಲ್ಲ. (ಆಗ್ಗೆ ಅವರಿಗಿನ್ನೂ ಸರ್ ಪ್ರಶಸ್ತಿಯು ಲಭ್ಯವಾಗಿರಲಿಲ್ಲ; ಆನಂತರ ಬಂದಿತು.) ಆದುಕಾರಣ ನಾನು ಆ ಬಿ.ಎ., ಪ್ರಶಸ್ತಿಯನ್ನು ಪಡೆಯುವುದಕ್ಕಾಗಿ ವ್ಯಾಸಂಗಮಾಡಲಪೇಕ್ಷಿಸಿದೆನು. ಆಕ್ಸ್‌ಫರ್ಡ್ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳನ್ನು ಕುರಿತು ಸ್ನೇಹಿತರನ್ನು ಕೇಳಲು ಬಹಳ ಹಣ ವೆಚ್ಚವಾಗುವುದಕ್ಕೂ ದೀರ್ಘಕಾಲ ಆಂಗ್ಲದೇಶದಲ್ಲಿರುವುದಕ್ಕೂ ಸಿದ್ಧನಾಗಿದ್ದರೆ ಓದಬಹುದೆಂದು ಹೇಳಿದರು. “ಕಠಿನವಾದ ಪರೀಕ್ಷೆಯಲ್ಲಿ ಕೃತಾರ್ಥನಾಗಬೇಕೆಂದಿದ್ದರೆ ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೋದುವುದುತ್ತಮ” ವೆಂದು ಒಬ್ಬ ಸ್ನೇಹಿತನು ಹೇಳಿದನು. ಅದರಿಂದ ನನಗೆ ವೆಚ್ಚವೇನೂ ಇಲ್ಲ. ಕಾಲವು ಚೆನ್ನಾಗಿ ಕಳೆಯುವುದು; ಲೋಕಜ್ಞಾನವು ಸಹ ಬರುವುದು ಎಂದು ಮೊದಲು ಸಂತೋಷದಿಂದ ಅಂಗೀಕರಿಸಿದೆನು. ಆದರೆ ಓದಬೇಕಾದ ಪುಸ್ತಕಗಳನ್ನು ನೋಡಿದಮೇಲೆ ಮಾತ್ರ ನನಗೆ ಬಹಳ ಭಯ ಹುಟ್ಟಿತು. ಲ್ಯಾಟಿನ್ನೂ, ನವೀನಭಾಷೆಯೂ ನಿರ್ಬಂಧವಾಗಿದ್ದುವು. ನಾನು ಲ್ಯಾಟಿನನ್ನು ಕಲಿಯುವುದು ಹೇಗೆ? ಎಂದು ಚಿಂತಿಸುತ್ತಿದ್ದೆನು. “ನ್ಯಾಯವಾದಿಗಳಿಗೆ ಲ್ಯಾಟಿನು ಬಹಳ ಉಪಯೋಗಕರವು. ಅದನ್ನು ಕಲಿತುಕೊಂಡರೆ ನ್ಯಾಯಶಾಸ್ತ್ರಗ್ರಂಥಗಳು ಚೆನ್ನಾಗಿ ಬೋಧವಾಗುವುವು. ರೋಮನ್ ಲಾ ಸಂಬಂಧವಾದ ಪರೀಕ್ಷಾಪತ್ರವು ಲ್ಯಾಟಿನ್ ಭಾಷೆಯಲ್ಲಿರುವುದು. ಲ್ಯಾಟಿನ್ ಭಾಷೆಬಂದವರಿಗೆ ಒಳ್ಳೇ ಪಾಂಡಿತ್ಯವುಂಟಾಗುವುದು” ಎಂದು ನನ್ನ ಸ್ನೇಹಿತನು ಬಹಳವಾಗಿ ಒತ್ತಿ ಹೇಳಿದನು. ಅದು ನನ್ನ ಮನಸ್ಸಿಗೆ ಬಹಳವಾಗಿ ನಾಟಿದುದರಿಂದ ಕಷ್ಟವಾದರೂ ಸರಿ ಲ್ಯಾಟಿನ್ ಓದಲೇಬೇಕೆಂದು ನಾನು ನಿಶ್ಚಯಿಸಿದೆನು. ನಾನು ಆಗಲೇ ಫ್ರೆಂಚ್‌ಭಾಷೆಯನ್ನು ಪ್ರಾರಂಭಿಸಿದ್ದೆನಾದುದರಿಂದ ಅದೇ ನವೀನಭಾಷೆಯಾಗಿ ಕೆಲಸಕ್ಕೆ ಬರುವುದೆಂದು ಊಹಿಸಿದೆನು. ಒಂದು ಪ್ರೈವೆಟ್ ಮೆಟ್ರಿಕ್ಯುಲೇಷನ್ ತರಗತಿಗೆ ಸೇರಿದೆನು. ಆರುತಿಂಗಳಿಗೊಂದಾವರ್ತಿ ಪರೀಕ್ಷೆಯು ನಡೆಯುವುದು. ಒಂದುತಿಂಗಳು ಕಳೆದು ಹೋಯಿತು. ಇನ್ನು ಐದುತಿಂಗಳ ಅವಧಿಯಿದ್ದಿತು. ಇದು ಬಹಳ ದುರ್ಘಟವೇ. ಆಗಿದ್ದರೂ ಆಂಗ್ಲದೇಶೀಯಪ್ರಮುಖನೆಂಬುದಾಗಿ ಹೇಳಿಸಿಕೊಳ್ಳಬೇಕೆಂದು ಮೊದಲು ನಾನು ಹೇಗೆ ಕೋರಿದೆನೋ ಹಾಗೆ ಬಹಳ ಶ್ರದ್ಧೆಯಿಂದ ಓದಲು ಕೂಡ ನಾನು ಕೋರಿದೆನು. ನಾನು ಒಂದುಕ್ಷಣವಾದರೂ ಸುಮ್ಮನೆ ಕಾಲಕಳೆಯದೆ ಓದಲು ಕಾಲನಿರ್ಣಯವನ್ನು ಮಾಡಿ 5 ತಿಂಗಳೊಳಗೆ ಲ್ಯಾಟಿನ್ನು ಫ್ರೆಂಚ್‌ಭಾಷೆಗಳನ್ನೂ ಇತರ ವಿಷಯಗಳನ್ನೂ ಪೂರ್ತಿಯಾಗಿ ತಿಳಿದುಕೊಳ್ಳಲು ತಕ್ಕ ಮೇಧಾಶಕ್ತಿಯೂ ಜ್ಞಾಪಕಶಕ್ತಿಯೂ ನನಗಿರಲಿಲ್ಲವು. ಆದುದರಿಂದ ನಾನು ಲ್ಯಾಟಿನ್ನಿನಲ್ಲಿ ವಿಫಲನಾಗಬೇಕಾಯಿತು. ನನಗೆ ಅದರಿಂದ ಕೊಂಚ ಯೋಚನೆ ಹುಟ್ಟಿತಲ್ಲದೆ ನಿರುತ್ಸಾಹವಾಗಲಿಲ್ಲ. ನನಗೆ ಲ್ಯಾಟಿನ್ನಿನಮೇಲೆ ಆಸೆಹುಟ್ಟಿದ್ದಿತು. ಇನ್ನೊಂದುಸಾರಿ 6 ತಿಂಗಳು ಓದಿದರೆ ಫ್ರೆಂಚ್‌ಭಾಷೆಯಲ್ಲುಕೂಡ ಪಾಂಡಿತ್ಯವಧಿಕವಾಗುವುದೆಂದು ತಿಳಿದೆನು. ಸಯನ್ಸುಭಾಗದಲ್ಲಿ ಬೇರೊಂದು ಹೊಸವಿಷಯವನ್ನು ಪ್ರಾರಂಭಿಸಬೇಕೆಂದು ನಾನು ಯೋಚಿಸಿದೆನು. ಮೊದಲನೇಸಾರಿ ಕೆಮಿಸ್ಟ್ರಿ ತೆಗೆದುಕೊಂಡೆನು. ಅದು ಬಹಳ ಒಳ್ಳೇ ವಿಷಯವಾಗಿದ್ದರೂ ಅನುಭವಪೂರ್ವಕವಾಗಿ ತಿಳಿಯಲವಕಾಶವಿಲ್ಲದಿದ್ದುದರಿಂದ ಅದು ನನಗೆ ರುಚಿಸಲಿಲ್ಲವು. ಭರತಖಂಡದಲ್ಲಿ ಕೆಮಿಸ್ಟ್ರಿಯು ನಿರ್ಬಂಧವಿಷಯವಾಗಿದ್ದುದರಿಂದ ಆಂಗ್ಲದೇಶದಲ್ಲೂ ಅದನ್ನೇ ಮೊದಲು ನಾನು ತೆಗೆದುಕೊಂಡೆನು. ಎರಡನೆಯಸಾರಿ ಹೀಟ್ ಮತ್ತು ಲೈಟ್ ಎಂಬ ವಿಷಯವನ್ನು ತೆಗೆದುಕೊಂಡೆನು. ಅದು ಬಹಳ ಸುಲಭ ವಿಷಯವೆಂದು ನನ್ನ ಸ್ನೇಹಿತನು ಹೇಳಿದ್ದನಲ್ಲದೆ ನನಗೂ ಹಾಗೆಯೇ ಕಂಡುಬಂದಿತು.

ಈ ವೇಳೆ ಪುನಃ ಆರುತಿಂಗಳು ಓದಲು ನಿಶ್ಚಯಿಸಿದೆನಲ್ಲದೆ ನನ್ನ ವೆಚ್ಚವನ್ನು ಇನ್ನೂ ಕಡಿಮೆ ಮಾಡಿದೆನು. ನನ್ನ ಅಣ್ಣನು ಬಹಳ ಕಷ್ಟಪಟ್ಟು ನನಗೆ ಮಾತ್ರ ತಪ್ಪದೆ ಹಣವನ್ನು ಕಳುಹುತ್ತಿದ್ದನು. ನನಗೋಸ್ಕರ ಕುಟುಂಬದವರೆಲ್ಲರೂ ಬಹಳ ಕಷ್ಟಪಟ್ಟುಕೊಂಡು ನನಗೆ ಮಾತ್ರ ಸರಿಯಾಗಿ ಕಳುಹುತ್ತಾರಲ್ಲ ಎಂದು ನನಗೆ ಇನ್ನಷ್ಟು ವ್ಯಸನವಾಯಿತು. ವಿದ್ಯಾರ್ಥಿವೇತನವನ್ನು ಹೊಂದಿದವರು ತಿಂಗಳಿಗೆ ಮೊದಲು 225 ರೂಪಾಯಿಗಳವರೆಗೆ ವ್ಯಯಮಾಡುತ್ತಿದ್ದರು. ಕೆಲ ಬಡವಿದ್ಯಾರ್ಥಿಗಳು ನನಗಿಂತಲೂ ಬಹಳ ಕಡಿಮೆಯಾಗಿಯೇ ವೆಚ್ಚಮಾಡುತ್ತಿದ್ದರು. ಒಬ್ಬ ವಿದ್ಯಾರ್ಥಿಯು ಬಡವರ ಬೀದಿಯಲ್ಲಿ ವಾರಕ್ಕೆ $1\frac{1}{2}$ ರೂಪಾಯಿ ಬಾಡಿಗೆಗೆ ಒಂದು ಕೊಠಡಿಯನ್ನು ತೆಗೆದುಕೊಂಡನು. ‘ಲಾಕ್‌ಹಾರ್ಟ್ಸ್ ಚೀಪ್‌ಕೋಕೋರೂಂ’ ಎಂಬ ಕಾಫಿ ಅಂಗಡಿಯಲ್ಲಿ ಒಂದು ಊಟಕ್ಕೆ ನಾಲ್ಕುದುಡ್ಡನ್ನು ಕೊಡುತ್ತಿದ್ದನು. ಅದಕ್ಕೆ ಅವರು ರೊಟ್ಟಿಯನ್ನೂ ಕೋಕೋಯನ್ನೂ ಅವನಿಗೆ ಕೊಡುತ್ತಿದ್ದರು. ಅವನ ಹಾಗೆ ನಾನೂ ಕೂಡ ಮಾಡಬೇಕೆಂದಿಚ್ಛಿಸಿದೆನು. ಆದರೆ ಅದು ನನಗೆ ಬಹಳ ಅಸಾಧ್ಯವಾದ ಕೆಲಸವಾಗಿದ್ದಿತಾದರೂ ಒಂದೇಕಡೆ ಕಾಲಕ್ಷೇಪಮಾಡಬಹುದಾಗಿದ್ದಿತು. ಎರಡನೆಯದಾಗಿ ಅಂತಹ ಅವಸರವೇನೂ ಇರಲಿಲ್ಲ. ನಾನೇ ಆಗಾಗ್ಗೆ ಹೋಗಿ ಮಲಗಿಕೊಳ್ಳುತ್ತಿದ್ದೆನು. ಅದರಿಂದ ತಿಂಗಳಿಗೆ 60-75 ರೂಪಾಯಿಗಳನ್ನು ಕೂಡಿಹಾಕಬಹುದೆಂದು ನಾನು ನಿಶ್ಚಯಿಸಿದೆನು. ಅದಕ್ಕೆ (ಸಿಂಪಲ್ ಲಿವಿಂಗ್) ಸಂಬಂಧಪಟ್ಟ ಪುಸ್ತಕವು ಕೂಡ ನನಗೆ ದೊರಕಿತು. ಆದುಕಾರಣ ನಾನು ಎರಡು ಕೊಠಡಿಗಳನ್ನು ಬಿಟ್ಟು ಬೇರೊಂದನ್ನು ಮಾಡಿಕೊಂಡೆನು. ಒಂದು ಸ್ಟೋವನ್ನು ಕೊಂಡುಕೊಂಡು ಬೆಳಗಿನವೇಳೆ ಅಡಿಗೆಯನ್ನು ಮಾಡಲು ಪ್ರಾರಂಭಿಸಿದೆನು. ಓಟು ಮೀಲು ಗಂಜಿಯನ್ನೂ ಕೋಕೋಗಾಗಿ ನೀರನ್ನೂ ಕಾಯಿಸಲು 20 ನಿಮಿಷ ಮಾತ್ರ ಹಿಡಿಯುತ್ತಿದ್ದಿತು. ಮಧ್ಯಾಹ್ನದಲ್ಲಿ ಮಾತ್ರ ಎಲ್ಲಿಯಾದರು ಅಲ್ಪಾಹಾರ ಮಾಡುತ್ತಿದ್ದೆನು. ರಾತ್ರಿವೇಳೆ ಮನೆಯಲ್ಲಿ ರೊಟ್ಟಿಯನ್ನೂ ಕೋಕೋಯನ್ನೂ ತೆಗೆದುಕೊಳ್ಳುತ್ತಿದ್ದೆನು. ಇದಕ್ಕಾಗಿ ದಿನವಹಿ 13 ಆಣೆ ವೆಚ್ಚವಾಗುತ್ತಿದ್ದಿತು. ಆಗ ಬಹಳ ಕಷ್ಟಪಟ್ಟು ಓದುತ್ತಿದ್ದೆನು. ನಿತ್ಯದಲ್ಲೂ ಬಹಳಹೊತ್ತು ಓದುವಂತಾದುದಕ್ಕೆ ಸೌಮ್ಯಜೀವನ ಪದ್ಧತಿಯೇ ಕಾರಣವು. ಈ ರೀತಿಯಾಗಿ ಪರೀಕ್ಷೆಯಲ್ಲಿ ಉತ್ತೀರ್ಣನಾದೆನು. ಹೀಗೆ ಬಹಳ ಉಪಾಯದಿಂದ ಜೀವಿಸುತ್ತಿದ್ದೆನೆನ್ನುವುದರಿಂದ ಬಹಳ ಕಷ್ಟಪಡುತ್ತಿದ್ದೆನೆಂದು ಯಾರೂ ಭಾವಿಸಕೂಡದು. ಈ ಪದ್ಧತಿಯಿಂದ ನನ್ನ ಮನಸ್ಸಿಗೆ ಬಹಳ ಆನಂದವೂ ಶರೀರಕ್ಕೆ ಬಹಳ ಆರೋಗ್ಯವೂ ಉಂಟಾದುವು. ನನ್ನ ಕುಟುಂಬದ ಆದಾಯಕ್ಕೆ ತಕ್ಕರೀತಿಯಲ್ಲಿ ನನ್ನ ವ್ಯಯವನ್ನು ಸರಿಪಡಿಸಿಕೊಂಡೆನು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡುಸಂಘ.

ಲಗ್ನದ ಫಂಡು.

1. ಮು|| ಗಳದ ಕ್ಲೋಸ್‌ಪೇಟೆ ತಾ|| ಬಿಡದಿಯಲ್ಲಿರುವ ಮೋಟಗಾನಹಳ್ಳಿ ಮಲ್ಲಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವಧೂವರರಿಂದ 4 ರೂ. ಡಿಟೋ ತಾ|| ಬಾಣಂದೂರಿನ ಪವಾಡಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ 2 ರೂ. ಜುಂಲಾ 6 ರೂ. ಗಳು ಬೆಂಗಳೂರು ದೊಡ್ಡಪೇಟೆ ಗ್ರಾಂ. ಅಂಗಡಿ ಗುರುಸಿದ್ಧಪ್ಪನವರ ಮೂಲಕ 6 ರೂ. 2. ಹಾಸನದ ಡಿ|| ಬೇಲೂರು ತಾ|| ಬಿಕ್ಕೋಡುಮಠದಲ್ಲಿ ನಡೆದ ಶಿವದೀಕ್ಷಾಮಹೋತ್ಸವದಲ್ಲಿ ಮಠದ ಶ್ರೀ ಶಿವಬಸವಸ್ವಾಮಿಗಳವರಿಂದ 5 ರೂ. 3. ನೆಲಮಂಗಲದ ತಾ|| ಶಿವಗಂಗೆಯ ಸಾಹುಕಾರ್ ಎಸ್. ಎಲ್. ರೇವಣ್ಣನವರ ಪುತ್ರಿ ಸೌ|| ರೇವಮ್ಮನಿಗೂ ಗುಬ್ಬಿಶೆಟ್ಟಪ್ಪನವರ ಪುತ್ರ ರಾ|| ಗುಬ್ಬಿ ತುಚ್ಚಪ್ಪನಿಗೂ ನಡೆಸಿದ ಲಗ್ನದಲ್ಲಿ ರೇವಣ್ಣನವರಿಂದ 10 ರೂ. ಮತ್ತು ಡಿಟೋ ಶಿವಗಂಗೆಯ ಶ್ರೀ ಮೇಲಣಗವಿ ಮಠದ ಏಜಂಟ್ ಹುಚ್ಚದೇವರಕೊಮಾರ ಶ್ರೀರುದ್ರಾರಾಧ್ಯರ ಸಹೋದರರ ಲಗ್ನದಲ್ಲಿ 2 ರೂ. ಜುಂಲಾ 12 ರೂ. ಗಳು ರುದ್ರಾರಾಧ್ಯರವರ ಮೂಲಕ 12.

ಜಿ. ಪರಮಶಿವಯ್ಯ, ಸೆಕ್ರಟರಿ,
ಮೈ. ವೀ. ವಿದ್ಯಾಭಿವೃದ್ಧಿ ಫಂಡ್‌ಸಂಘ ಬೆಂಗಳೂರು ಸಿಟಿ.

೧೯೨೬ ನೆಯ ಇಸವಿ ಏಪ್ರಿಲ್ ತಾ|| ೨೪ ರಿಂದ ೧೯೨೬ ನೆಯ ಇಸವಿ ಏಪ್ರಿಲ್ ತಾ|| ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ನಿಜಚೈತ್ರ ಶುದ್ಧ ದ್ವಾದಶಿಯಿಂದ ನಿಜಚೈತ್ರ ಶುದ ಬಹುಳ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
24	ಶನಿ	ದ್ವಾದ	49-56	ಪುಬ್ಬ	7-55	12
25	ಭಾನು	ತ್ರಯೋ	53-53	ಉತ್ತ	13-40	13
26	ಸೋಮ	ಚತು	56-52	ಹಸ್ತ	18-36	14
27	[1]ಮಂಗಳ	ಪೌರ್ಣ	58-13	ಚಿತ್ತ	22-23	15
28	ಬುಧ	ಪಾಡ್ಯ	58-26	ಸ್ವಾತಿ	24-57	16
29	ಗುರು	ಬಿದಿ	57-20	ವಿಶಾ	26-18	17
30	[2]ಶುಕ್ರ	ತದಿ	55-4	ಅನೂ	26-23	18

(1) ಚೈತ್ರಾಪೂರ್ಣಿಮಾ, ಮಳೆನಕ್ಷತ್ರ-ಭರಣಿ ೧ ನೆಯ ಪಾದ.
(2) ಮಳೆನಕ್ಷತ್ರ-ಭರಣಿ ೨ ನೆಯಪಾದ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಪ್ರತಿಗತರಾಜಮಂಡಲಚಿಹ್ನಿತಾ | ಭುಜಪತಕೃತಾವತಾರಾ ಪಕ್ಷಜ್ಞ ಸಜ್ಜೃತ್ತ ಮೋದದಾಯಿನೀಯಂ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾರೋಲಂಸುಧೀಪುಂಗವ | ಸ್ತೋತ್ರಮಾಧೀಷ್ಟದಶೀಲ ಪಾಠಕಚ ಸಾಧ್ವುಜ್ಞಾಲಪಾಲಂವಲಂ |
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾತಾಕುಲಂ | ಶ್ರೀಮಂಜತ್ತೆಯಿಂಪಾರೂರಿಗೆ ಗೌರೀಕಾಮುಕಂಪೂಜ್ಯಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸೆ. ೧೯೨೬ ನೆಯ ಇಸವಿ ಮೇ ತಾರೀಖು ೧ ನೆಯ ಶನಿವಾರ. [ಸಂಚಿಕೆ ೧೮

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇನ್ಫ್ಲುಯನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

17

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳೀಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. [illegible] ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು [illegible] ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ಕಂಪೋಸುಮಾಡಿ ಅಚ್ಚುಮಾಡಬೇಕಾದರೆ ೦-೧೨-೦ [illegible] ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು [illegible] ಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್‌ಆಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಕಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಛಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[80—29] ಪ್ರೋ. ಬಾ. ೫೧. ಮದರಾಸು

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಜೆ. ಜೆ. ಎಂ. ಮಹದೇವಾಚಾರ್,
ಹಡಗಲಿ (ಜಿಲ್ಲಾ ಬಳ್ಳಾರಿ).
[13—3]

ಆಯುರ್ವೇದ ಸುಲಭಚಿಕಿತ್ಸೆಗಳು.

ರಾಜಧಾನಿಯಲ್ಲಿರುವ ಸರ್ಕಾರೀ ಆಯುರ್ವೇದವೈದ್ಯಶಾಲೆಯಲ್ಲಿ ತಯಾರಿಸಿ ನಿತ್ಯವೂ ಉಪಯೋಗಿಸಲ್ಪಡುವ ಔಷಧಗಳಲ್ಲಿ ಕೆಲವು ಸ್ಟಾರ್ ಪತ್ರಿಕಾ ವಾಚಕರುಪಯೋಗಾರ್ಥವಾಗಿ ಈ ಕೆಳಗೆ ಕೊಡಲ್ಪಟ್ಟಿವೆ.—

ಆನಂದಭೈರವೀಮಾತ್ರೆ.

ಶು|| ಇಂಗ್ಲೀಕ ೧ ಭಾಗ — ಹಿಪ್ಪಲಿ ೨
ಶು|| ನಾಭ ೧ ಭಾಗ — ಮೆಣಸು ೨
ಶುಂಠಿ ೧ ಭಾಗ — ಶು|| ಬಿಳಿಗಾರ ೧

ಇಷ್ಟನ್ನು ಮಾದಿಲಹಣ್ಣಿನ ರಸದಿಂದ ನಾಲ್ಕುಯಾಮ ಮರ್ದಿಸಿ ಗುಲಗಂಜಿಯಷ್ಟು ಮಾತ್ರೆಮಾಡಿ ಉಪಯೋಗಿಸಿದರೆ ವಿಷಮಜ್ವರ, ಸನ್ನಿಜ್ವರಗಳು, ಕಾಸಶ್ವಾಸ, ಕ್ಷಯ, ಗುಲ್ಮ, ಪ್ರಮೇಹ, ಗ್ರಹಣೀ, ಅಜೀರ್ಣ ಇವುಗಳು ಗುಣವಾಗುವುವು.

ನಾಭಿಮಾತ್ರೆ.

ಶುದ ವತ್ಸನಾಭ ೧ ಭಾಗ — ಅತಿಮಧುರ ೨ ಭಾಗ
ಉದ್ದಿನಬೇಳೆ ೩ ಭಾಗ

ಇವುಗಳನ್ನು ಚೂರ್ಣಿಸಿ ನೀರಿನಿಂದ ಚೆನ್ನಾಗಿ ಅರೆದು ಒಂದು ಗ್ರೇನ್ ತೂಕದಷ್ಟು ಸಣ್ಣಮಾತ್ರೆಗಳನ್ನು ಮಾಡಿ ಉಪಯೋಗಿಸಿದರೆ ಅರ್ಧತಲೆನೋವು ಪರಿಹಾರವಾಗುವುದು.

ಪಥ್ಯಾದಿಚೂರ್ಣ.

ಅಳಲೆಕಾಯಿ — ಸೈಂಧವ
ಹೊಂಗೆಬೀಜ — ವಾಯುವಿಳಂಗ
ಬೇಳೆಸಾಸುವೆ — ಬಾವಂಚಿಬೀಜ
ಅರಿಶಿನ

ಇವುಗಳನ್ನೆಲ್ಲಾ ಸಮಭಾಗದಿಂದ ಚೂರ್ಣಿಸಿ ಹೊಂಗೆ ಎಣ್ಣೆಯಿಂದ ಕಲಸಿ ಮೈಗೆ ಹಚ್ಚಿದರೆ ಕಜ್ಜಿ, ತುರಿ, ಹುಳಕಡ್ಡಿ, ಮುಂತಾದ ಚರ್ಮರೋಗಗಳು ಗುಣವಾಗುವುವು.

ವಕುಳಾದಿಚೂರ್ಣ.

ಪಗಡೆಮರದ ಚಕ್ಕೆ ೧ — ದಾಲಚಿನ್ನಿ ||
ಗೊಬ್ಬಳಿಚಕ್ಕೆ ೧ — ಅಳಲೆಕಾಯಿ ||

ಈ ರೀತಿ ಚೂರ್ಣಿಸಿ ದಂತರೋಗದಲ್ಲಿ ಹಲ್ಲಿಗೆ ಉಜ್ಜುತ್ತಾಬಂದರೆ ಸಮಸ್ತ ದಂತರೋಗಗಳೂ ನಿವೃತ್ತಿಯಾಗುವುವು.

ಪ್ರಮೇಹಚೂರ್ಣ.

ಗರಿಕೆಬೇರು ೧ — ಅಣಿಲೆಗೆ ಬು ೧
ಆಷಾಢೀಬೇರು ೧ — ಶ್ರೀಗಂಧ ೧
ಅಮೃತಬಳ್ಳಿ ೧ — ಬಾಲಮೆಣಸು ||
ಪೆಟ್ಲುಪ್ಪು ||

ಇವೆಲ್ಲವನ್ನೂ ಸೂಕ್ಷ್ಮವಾಗಿ ಚೂರ್ಣಿಸಿ || ದಿಂದ ೧ ತೊಲದವರಿವಿಗೆ ಸೇವಿಸಿದರೆ ಪ್ರಮೇಹ, ಶುಕ್ರಮೇಹ ಮತ್ತು ಮೂತ್ರದ ಉರಿ ಪರಿಹಾರವಾಗುವುವು.

ತ್ರಿಫಲಾಚೂರ್ಣ.

ಅಳಲೇಕಾಯಿ ೧ ಸೇರು — ತಾರೇಕಾಯಿ ೨ ಸೇರು
ನೆಲ್ಲಿಚೆಟ್ಟು ೪ ಸೇರು

ಈ ರೀತಿಯಾಗಿ ಚೂರ್ಣಿಸಿ ೨೦ ರಿಂದ ೬೦ ಗ್ರೇನ್‌ವರಿವಿಗೆ ಜೇನುತುಪ್ಪದಿಂದ ಕೊಟ್ಟರೆ ಬಹುಮೂತ್ರ, ಶೋಫೆ, ಮಲಬದ್ಧ ಉದರ, ಅಗ್ನಿಮಾಂದ್ಯ, ಅರ್ಶಸ್ಸು ಮುಂತಾದ ರೋಗಗಳು ಗುಣವಾಗಿ ನೇತ್ರಪಾಟವವೂ, ಆರೋಗ್ಯವೂ ಹೆಚ್ಚಾಗುವುವು.

ಪಲಾಶಾದಿಚೂರ್ಣ.

ಮುತ್ತುಗದಬೀಜ ೧ ಸೇರು — ವಾಯುವಿಳಂಗ ೧ ಸೇರು
ಜೀರಿಗೆ ೧ ಸೇರು

ಇವೆಲ್ಲವನ್ನೂ ಚೂರ್ಣಿಸಿ ೨೦ ರಿಂದ ೪೦ ಗ್ರೇನ್‌ವರಿವಿಗೆ ಉಪಯೋಗಿಸಿದರೆ ಸಮಸ್ತ ಕ್ರಿಮಿಗಳು ಬಿದ್ದುಹೋಗುವುವು.

ವಿಭೀತಕಾದಿಚೂರ್ಣ.

ತಾರೇಕಾಯಿ ೬ ತೊಲ — ಶುಂಠಿ ೬ ತೊಲ
ಕೊನ್ನಾರಿಗೆಡ್ಡೆ ೬ ತೊಲ — ಗಂಟುಭಾರಂಗಿ ೬ ತೊಲ
ನೆಲ್ಲೀಚೆಟ್ಟು ೬ ತೊಲ — ಹಿಪ್ಪಲಿ ೬ ತೊಲ
ಅಳಲೇಕಾಯಿ ೬ ತೊಲ

ಇವುಗಳನ್ನು ಸೂಕ್ಷ್ಮವಾಗಿ ಚೂರ್ಣಿಸಿ ೩೦ ರಿಂದ ೬೦ ಗ್ರೇನ್‌ವರಿಗೆ ಸೇವಿಸಿದರೆ, ಕಾಸ, ಶ್ವಾಸ ಮತ್ತು ಬಿಕ್ಕಳಿಕೆ [illegible].

[illegible]ಚೂರ್ಣ.

[illegible] — [illegible] — ಹಿಪ್ಪಲಿ
[illegible] — ಮೆಣಸು — [illegible]

ಇವೆಲ್ಲವನ್ನೂ ಚೂರ್ಣಿಸಿ [illegible] ೧೦ ರಿಂದ ೪೦ ಗ್ರೇನ್‌ವರಿಗೆ ಸೇವಿಸಿದರೆ [illegible], [illegible], [illegible], [illegible], ಶ್ವಾಸ [illegible].

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಮೇ ತಾ|| ೧ ನೆಯ ಶನಿವಾರ.

IS SIR K. P. PUTTANNA CHETTY A LEADER OF THE NON-BRAHMINS?

It was a magnificent reception that was held at the Albert Victor Hall, Lalbagh, Bangalore on the 24th April 1926 to honour Sir K. P. Puttanna Chetty on the Knighthood which was conferred upon him some months back. For numbers and representativeness of the gathering that met on the occasion there could be few to equal it and none to excel. There was an elaborate programme to be gone through and well was it gone through. The presiding genius was no less than Sir M. Visweswariah. It was a long time since Mysore had heard Sir M. Visweswariah, and they were glad to hear him again. Sir M. Visweswarayya was both a capable and clever statesman, two virtues which are well reflected in this his latest utterance. In an otherwise glowing and fitting tribute Sir M. Visweswarayya has introduced a most misleading and mischeavous idea that Sir K. P. Puttanna Chetty "is a friend of the Brahmins and *a leader of the non-Brahmins*" (Italics ours). When this statement comes from the mouth of Sir M. Visweswarayya there need be no doubt that it is meant to convey the meaning it purports to and is deliberately made. We sincerely wish that the Chairman had not tried to put the people off the scent by stating that Sir K. P. P. Chetty was a leader of the non-Brahmins. We know that the revered Knight possesses many admirable virtues, which made him a most capable and efficient administrator, a reliable and active civic leader and an extremely genial and amiable gentleman. But when Sir M. Visweswarayya, who knows the affairs of Mysore and the work of Sir K. P. Puttanna Chetty hazards a surprising statement such as the one above, conferring on the Knight a position which he never occupied and does not now and never could in future we cannot willingly let go the compliment unchallenged, for, it is not free from mischief and danger to the non-Brahmin cause. One is always accustomed to use the expression "a leader of the non-Brahmins" to such men as Dr. T. M. Nair, Sir P. Thyagaraya Chetty and Mr. M. Basaviah and we are anxious to know whether Sir K. P. P. Chetty could ever lay claim to a position such as that held by any of the above revered leaders. Why abuse expressions and waste them undeservedly? That the eminent Knight is a friend of the Brahmins we are prepared to concede without a moments' hesitation. But the non-Brahmins of Mysore have at no time recognised Sir K. P. P. Chetty as their leader. They are not aware of any measure which he put forward when in Government for the special benefit of the non-Brahmins, nor of any such measure receiving his enthusiastic support during his unofficial career. In fact, we have been under the impression that it has been his great pride that he never allowed himself to be contaminated by the non-Brahmin movement. Sir M. Visweswarayya is right when he says that Sir K. P. P. Chetty is a friend of the Brahmins. We wish it could have been equally said that he is a friend of the non-Brahmins, let alone their leader. If his sympathies to the non-Brahmin cause were at all so real and genuine, it would have been impossible for him to become a friend of Brahmins. We are anxious to controvert this claim because left alone it may give a wrong idea to the general and the less-knowing public and the Government that Sir Chettiar's voice is the voice of the Mysore non-Brahmins; and the consequences therefrom would be dangerous and disastrous to the non-Brahmin cause. We know that there is not much love lost between Sir M. Visweswarayya and the non-Brahmin movement. Why should he lose an opportunity of giving it a knock on the head by making a friend of the Brahmins a leader of the non-Brahmins? Why should he not show off Sir K. P. P. Chetty as the leader of non-Brahmins so that the voice of the real leaders such as Rao Sahib H. Cheenaya, Messrs. Mahammd Abbas Khan and G. Paramasiviah may be at a discount in the counsels of the State? What matters it if verity is sacrificed for self-interest? Has it not been done for so many years and not without a great measure of success? Sir M. Visweswarayya should have known that this compliment was not supported by facts or figures of which he is so fond. We hope that the Government or the public will not mistake the opinion of Sir Chettiar to be that of the non-Brahmins. It is not without sincere regret that we have had to touch upon this phase of Sir K. P. P. Chettiar's life, which we may assure we would not have done if Sir M. Visweswarayya had not risked such a statement. But let us not be misunderstood as wanting in uor appreciation of his other exemplary qualities of head and heart, which have earned for him the name of the premier citizen of Mysore, a by on means cheap distinction. We wish the Knight long life and and all happiness to enjoy the high title conferred upon him by His Majesty.

ಸರ್ ಪುಟ್ಟಣ್ಣಸೆಟ್ಟರು ಹಿಂದುಳಿದವರ ನಾಯಕರೆ?

ದಿವಾನ್ ಬಹದ್ದೂರ್ ರಾಜಸಭಾಭೂಷಣ ಶ್ರೀಯುತ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಕೆಲ ತಿಂಗಳ ಕೆಳಗೆ ಸಾರ್ವಭೌಮರವರಿಂದ ಸರ್ ಪ್ರಶಸ್ತಿಯು ದಯೆಪಾಲಿಸಲ್ಪಟ್ಟುದರ ಸಂತೋಷಸೂಚನಾರ್ಥವಾಗಿ ಬೆಂಗಳೂರು ಪುರನಿವಾಸಿಗಳು ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 24 ರ ಸಾಯಂಕಾಲ ಅಲ್ಬರ್ಟ್ ವಿಕ್ಟರ್‌ಹಾಲ್ ಎಂಬ ಲಾಲಬಾಗಿನ ಗಾಜಿನ ಮಂದಿರದಲ್ಲಿ ಬಹಳ ಉತ್ಸಾಹದಿಂದ ನಡೆಸಿದ ಸನ್ಮಾನ ಸಮಾರಂಭೋತ್ಸವವು ಜನಸಂಖ್ಯೆಯಲ್ಲೂ, ಸಮಸ್ತ ಸಂಗಡಗಳ ಪ್ರತಿನಿಧಿತ್ವದಲ್ಲೂ ಅದ್ವಿತೀಯವಾಗಿದ್ದಿತು. ಸರ್ ವಿಶ್ವೇಶ್ವರಯ್ಯನವರ ಭಾಷಣವನ್ನು ಕೇಳಿ ಬಹಳ ದಿವಸಗಳಾಗಿದ್ದುದರಿಂದ ಅದನ್ನು ಪುನಃ ಕೇಳಲು ಸಭಿಕರು ಬಹಳ ಉತ್ಸಾಹಭರಿತರಾಗಿದ್ದರು. ಸರ್ ವಿಶ್ವೇಶ್ವರಯ್ಯನವರು ಬಹಳ ಸಮರ್ಥರು ಮತ್ತು ಕುಶಲರಾಜನೀತಿಜ್ಞರು ಎಂಬೆರಡು ಗುಣಗಳೂ ಇವರ ಈಗಣ ಭಾಷಣದಲ್ಲಿ ಚೆನ್ನಾಗಿ ಪ್ರತಿಬಿಂಬಿಸಿರುವುವು. ಇವರು ಸರ್ ಸೆಟ್ಟರ ಗುಣಕಥನವನ್ನು ಮಾಡುವಾಗ್ಗೆ "ಸರ್ ಸೆಟ್ಟರು ಬ್ರಾಹ್ಮಣರ ಮಿತ್ರರು ಮತ್ತು ಹಿಂದುಳಿದವರ ನಾಯಕರು" ಎಂದು ಅನುಚಿತ ಪ್ರಸಂಗಮಾಡಿದರು. ಸರ್ ಸೆಟ್ಟರವರು ಮಹಾಸಮರ್ಥಕಾರ್ಯನಿರ್ವಾಹಕರು, ಸ್ವಾಮಿಭಕ್ತರು, ನಿಸ್ಪೃಹರು, ಶಾಂತರು ಇತ್ಯಾದಿ ಅಪೂರ್ವ ಗುಣವಿಶಿಷ್ಟರೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಸಂಸ್ಥಾನದ ಸಕಲ ವಿದ್ಯಮಾನವನ್ನು ಮತ್ತು ಸರ್ ಸೆಟ್ಟರು ಮಾಡಿರುವ ಕಾರ್ಯಗಳನ್ನು ಚೆನ್ನಾಗಿ ಬಲ್ಲವರಾದ ಸರ್ ವಿಶ್ವೇಶ್ವರಯ್ಯನವರು ಹಿಂದೆಯೂ ಈಗಳೂ ಸರ್ ಸೆಟ್ಟರು ವಹಿಸದೆಯಿರುವ ಹಿಂದುಳಿದವರ ನಾಯಕತ್ವವನ್ನು ಈಗ ಸರ್ ಸೆಟ್ಟರಲ್ಲಿ ಆರೋಪಿಸಿ ಹೇಳಿರುವುದು ಹಿಂದುಳಿದವರ ಕಾರ್ಯಸಾಧನೆಗೆ ಭಂಗಕಾರಿಯಾಗಿರುವುದರಿಂದ ಅದನ್ನು ನಾವು ಖಂಡಿಸಬೇಕಾಗಿರುತ್ತದೆ. ಡಾಕ್ಟರ್ ಟಿ. ಎಂ. ನಾಯರ್, ಸರ್ ಪಿ. ತ್ಯಾಗರಾಯಸೆಟ್ಟಿ, ಮತ್ತು ಎಂ. ಬಸವಯ್ಯ ಈ ಮಹನೀಯರುಗಳಂತಹವರು ಹಿಂದುಳಿದವರ ನಾಯಕರೆಂದು ಕರೆಯುವುದು ವಾಡಿಕೆಯಾಗಿದೆ. ಇಂತಹುದರಲ್ಲಿ ಸರ್ ಪುಟ್ಟಣ್ಣಸೆಟ್ಟರು ಹಿಂದುಳಿದವರ ನಾಯಕರೆಂದು ಹೇಗೆತಾನೆ ಹೇಳಿಸಿಕೊಳ್ಳುವರು? ಸರ್ ಪುಟ್ಟಣ್ಣಸೆಟ್ಟರು "ಬ್ರಾಹ್ಮಣರ ಮಿತ್ರರು" ಎಂಬುದು ಅಕ್ಷರಶಃ ನಿಶ್ಚಯವು. ಹಾಗಿರುವುದರಿಂದಲೇ ಸರ್ ಸೆಟ್ಟರ ಜಗದ್ಗುರುಗಳ ಬೆಂಗಳೂರು ನಗರಪ್ರವೇಶಕ್ಕೆ ಅಡ್ಡಿಯನ್ನೊಡ್ಡಿದ್ದ ಮ|| ಕರ್ಪೂರಶ್ರೀನಿವಾಸರಾವ್ ಪ್ರಭೃತಿಗಳೇ ಈಗ ಸನ್ಮಾನ ಸಮಾರಂಭೋತ್ಸವಕಾರ್ಯದಲ್ಲಿ ಮುಂದಾಳುಗಳಾಗಿ ನಿಂತಿರುವುದು. ಅದುಕಾರಣ ಸರ್ ಸೆಟ್ಟರು ಬ್ರಾಹ್ಮಣಮಿತ್ರರಲ್ಲವೆಂದು ಯಾರೂ ಖಂಡಿತವಾಗಿ ಹೇಳುವುದಿಲ್ಲ. ಸರ್ ಸೆಟ್ಟರು ಸರ್ಕಾರಿಯುದ್ಯೋಗದಲ್ಲಿರುವಾಗ್ಗೆ ಹಿಂದುಳಿದವರಿಗುಪಯೋಗವಾದ ಯಾವ ಕಾರ್ಯವನ್ನೂ ಮಾಡಿಲ್ಲವಾದುದರಿಂದಲೂ, ಉದ್ಯೋಗದಿಂದ ನಿವೃತ್ತರಾದನಂತರವೂ ಅಂತಹ ಕಾರ್ಯಗಳಿಗೆ ಉತ್ತೇಜನವನ್ನು ಕೊಟ್ಟಿಲ್ಲವಾದುದರಿಂದಲೂ ಹಿಂದುಳಿದವರಾರೂ ಇವರನ್ನು ತಮ್ಮ ನಾಯಕರನ್ನಾಗಿ ಭಾವಿಸಿಲ್ಲವು. ಆದರೆ ಹಿಂದುಳಿದವರ ಪ್ರಯತ್ನವಿಶೇಷದಲ್ಲಿ ತಾವು ಭಾಗಿಯಾಗದಿರುವುದೇ ತಮ್ಮ ಪುಣ್ಯವೆಂದು ಸೆಟ್ಟರು ಭಾವಿಸಿರುವುದಾಗಿ ತಿಳಿಯುತ್ತೇವೆ. ಆದ್ದರಿಂದ ಸರ್ ಸೆಟ್ಟರು ಬ್ರಾಹ್ಮಣರ ಮಿತ್ರರೆಂದು ಸರ್ ವಿಶ್ವೇಶ್ವರಯ್ಯನವರು ಹೇಳಿರುವುದು ಯುಕ್ತವಾಗಿರುವುದಾದರೂ ಸರ್ ಸೆಟ್ಟರು ಹಿಂದುಳಿದವರ ಮಿತ್ರರೆಂದೂ, ಬ್ರಾಹ್ಮಣರ ನಾಯಕರೆಂದೂ ಹೇಳಿದ್ದರೆ ಸಮಂಜಸವಾಗಿರುತ್ತಿದ್ದಿತು. ಇವರು ಹಿಂದುಳಿದವರ ಪ್ರಯತ್ನದಲ್ಲಿ ನಿಜವಾದ ಸಹಾನುಭೂತಿಯುಳ್ಳವರಾಗಿದ್ದರೆ ಇವರೆಂದಿಗೂ ಬ್ರಾಹ್ಮಣರ ಸಖ್ಯರಾಗಿರಲು ಸಾಧ್ಯವಾಗುತ್ತಿರಲಿಲ್ಲವೆಂದು ನಾವು ಹೇಳಬೇಕಾಗಿಲ್ಲ. ಸರ್ ಸೆಟ್ಟರು ಹಿಂದುಳಿದವರ ನಾಯಕರಾದುದರಿಂದ ಅವರ ಅಭಿಪ್ರಾಯವೇ ಹಿಂದುಳಿದವರ ಅಭಿಪ್ರಾಯವೆಂದು ಸರ್ಕಾರದವರೂ, ವಿಶೇಷಜ್ಞರಲ್ಲದ ಜನರೂ ಭಾವಿಸಿಕೊಳ್ಳುವುದರಿಂದ ಹಿಂದುಳಿದವರ ಪ್ರಯತ್ನಕ್ಕೇ ಮಹಾನರ್ಥವಾಗುತ್ತದೆಂಬ ಶಂಕೆಯಿಂದ ನಾವು ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದುದನ್ನು ಖಂಡಿಸಬೇಕಾಗಿ ಬಂದಿತು. ಸರ್ ವಿಶ್ವೇಶ್ವರಯ್ಯನವರಿಗೆ ಹಿಂದುಳಿದವರ ಪ್ರಯತ್ನದಲ್ಲಿ ಸಾನುಭೂತಿಯು ಕಡಿಮೆಯಾಗಿಲ್ಲವಾದುದರಿಂದ, ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿಸಭೆಗಳಲ್ಲಿ ಹಿಂದುಳಿದವರ ಪುರೋಭಿವೃದ್ಧಿಗಾಗಿ ಹೋರಾಡುತ್ತಿರುವ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರು, ಮ|| ಗಳಾದ ಅಬ್ಬಾಸ್‌ಖಾನ್ ಮತ್ತು ಜಿ ಪರಮಶಿವಯ್ಯನವರು ಇವರುಗಳ ಅಭಿಪ್ರಾಯಕ್ಕೆ ಪ್ರತಿಬಂಧಕವಾಗುವಂತೆ ಬ್ರಾಹ್ಮಣಮಿತ್ರರು ಹಿಂದುಳಿದವರ ನಾಯಕರೆಂದು ನಿಷ್ಕಾರಣವಾಗಿ ಹೇಳಬಾರದಾಗಿದ್ದಿತು, ಮತ್ತು ಸರ್ ಸೆಟ್ಟರ ಅಭಿಪ್ರಾಯವೇ ಹಿಂದುಳಿದವರ ಅಭಿಪ್ರಾಯವೆಂದು ಸರ್ಕಾರದವರಾಗಲಿ ಜನರಾಗಲಿ ಖಂಡಿತವಾಗಿ ತಿಳಿಯಬಾರದು. ಸೆಟ್ಟರು ಬ್ರಾಹ್ಮಣರ ಮಿತ್ರರು ಮತ್ತು ಹಿಂದುಳಿದವರ ನಾಯಕರು ಎಂದು ಸರ್ ವಿಶ್ವೇಶ್ವರಯ್ಯನವರು ತಮ್ಮ ಅಧ್ಯಕ್ಷೋಪನ್ಯಾಸದಲ್ಲಿ ಹೇಳದಿದ್ದರೆ ನಾವೆಂದಿಗೂ ಖಂಡಿಸುತ್ತಿರಲಿಲ್ಲವೆಂದೂ, ಪೌರಾಗ್ರೇಸರರೆಂಬ ಸುಲಭಸಾಧ್ಯವಲ್ಲದ ಘನತೆಯನ್ನು ಪಡೆದಿರುವ ಸರ್ ಸೆಟ್ಟರ ಅಮೋಘವೂ, ಅನುಕರಣೀಯವೂ ಆದ ಸುಗುಣಗಳನ್ನು ನಾವು ಇತರರಿಗಿಂತಲೂ ಅತಿಶಯವಾಗಿ ಪ್ರಶಂಸಿಸಿ ಅವರು ದೀರ್ಘಾಯುರಾರೋಗ್ಯದಿಂದಿದ್ದು ಸಾರ್ವಭೌಮರವರಿಂದ ಲಭ್ಯವಾಗಿರುವ ಘನತರವಾದ ಸರ್ ಪ್ರಶಸ್ತಿಯನ್ನು ಅನುಭವಿಸಲೆಂದೂ ಮನಃಪೂರ್ವಕವಾಗಿ ಕೋರುತ್ತೇವೆ.

ಹಿಂದುಮಹಮ್ಮದೀಯರ ಕಲಹವು.

ಕಲಕತ್ತಾನಗರದ ಹಿಂದು ಮಹಮ್ಮದೀಯರುಗಳಲ್ಲಿ ಪ್ರಥಮತಃ ಮತಸಂಬಂಧವಾಗಿ ಕಲಹಹುಟ್ಟಿ ಈಗ ಅದು ನಾನಾಮುಖವಾಗಿ ಪರಿಣಮಿಸಿ ಅನೇಕ ಪ್ರಾಣಧನಮಾನಹಾನಿಯಾಗುತ್ತಿರುವುದರ ಮೂಲಕ ಮಹಾನರ್ಥವುಂಟಾಗಿರುವುದರಿಂದ, ಅದನ್ನು ಸರ್ವಪ್ರಯತ್ನದಿಂದಲೂ ಮಾನಸಿಕ ಮಾಡಬೇಕೆಂದು ಅಲ್ಲಿಯ ಪ್ರಜಾಪ್ರಮುಖರಾದ ಬಿ. ಚಕ್ರವರ್ತಿ ಸರ್ ಪ್ರಫುಲ್ಲಚಂದ್ರರಾಯಿ, ಜೆ. ಎಂ. ಸೇನಗುಪ್ತ, ಸರ್ ಪಿ. ಸಿ. ಮಿತ್ರ, ರಾಮಾನಂದ ಛಟರ್ಜಿ, ಜೆ. ಡಿ. ಬಿಸಾ, ಮದನಮೋಹನ ಬರ್ಮನ್, ಹರದಯಾಳುಸಿಂಗು ಸೋದೀ, ಮದನಮೋಹನಮಾಳವ್ಯ, ರಘುವೀರಸಿಂಗ್, ಸರ್ ಅಬ್ದುರ್‌ರಹೀಂ ಯಾಕೂಬ್, ಸಿ. ಆರಿಫ್, ದೋಸ್ತುಮಹಮ್ಮದ್, ಹಾಜಿ ಅಬ್ದುರ್ ಅಜೀಜ್, ಅಬ್ದುರ್‌ರಹೀಂ, ಉಸ್ಮಾನ್, ಹಾಜೀ ಮಹಮ್ಮದ್‌ಜಕರಿಯ, ಅಜೀಜುದ್ದೀನ್ ಮತ್ತು ಎಚ್. ಎಸ್. ಸುಹರ್ವಾಡಿ ಈ ದೊಡ್ಡಮನುಷ್ಯರುಗಳು ಕಲಕತ್ತಾ ಪುರನಿವಾಸಿಗಳನ್ನು ಈ ಕೆಳಗೆ ಕಂಡಪ್ರಕಾರ ಪ್ರಾರ್ಥಿಸಿಕೊಂಡಿರುತ್ತಾರೆ.—

ದೇವಾಲಯಗಳು, ಮಸೀದಿಗಳು ಮೊದಲಾಗಿ ಪೂಜಾಸ್ಥಾನಗಳನ್ನು ನಾಶಪಡಿಸುವ ದುಷ್ಕೃತ್ಯವನ್ನು ನಾವು ಬಹಳವಾಗಿ ನಿಂದಿಸುತ್ತೇವೆ. ನಿರಪರಾಧಿಗಳಾದವರನ್ನು ಸಹ ಹೊಡೆದು ಬಾಧೆಪಡಿಸುವುದು, ಅವರ ಸ್ವತ್ತುಗಳನ್ನು ಸೂರೆಮಾಡುವುದು ಮೊದಲಾದ ದೌರ್ಜನ್ಯವನ್ನು ನಾವು ಬಹಳ ಕಠಿಣವಾಗಿ ಖಂಡಿಸುತ್ತೇವೆ. ಕಲಕತ್ತಾದಲ್ಲಿ ಗೊಂದಲವು ಆರಂಭವಾದಂದಿನಿಂದ ಬಹಳಜನ ಹಿಂದುಗಳೂ ಮಹಮ್ಮದೀಯರೂ ಪ್ರಾಣಮಾನಧನನಷ್ಟಗಳಿಗೆ ಗುರಿಯಾಗಿ ಬಹಳ ಕಷ್ಟವನ್ನನುಭವಿಸಿದುದಕ್ಕಾಗಿ ನಾವು ಬಹಳ ಸಂತಾಪಪಡುತ್ತೇವೆ. ಈ ಪ್ರಕಾರ ಘೋರವಾಗಿಯೂ, ಅಕ್ರಮವಾಗಿಯೂ ಅಸಹಾಯರನ್ನು ಬಾಧಿಸುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಒಂದು ಮತದವನು ಮತ್ತೊಂದು ಮತದವನನ್ನು ಕೊಲ್ಲುವುದು ನರಹತ್ಯಮಹಾಪಾತಕವಾಗಿರುವುದಲ್ಲದೆ, ಹಾಗೆ ಕೊಲ್ಲಲ್ಪಟ್ಟವನ ಮತಸ್ಥರು ಕೊಂದವನ ಮತಸ್ಥರ ಮೇಲೆ ಹಗೆಯನ್ನು ತೀರಿಸಿಕೊಳ್ಳಲು ಪ್ರೋತ್ಸಾಹವನ್ನುಂಟುಮಾಡುವಂತೆ ಸಹ ಆಗುತ್ತದೆ. ಯಾವ ಸಂದಿಯಲ್ಲಿ ಒಂಟಿಯಾಗಿ ತನ್ನ ಕಣ್ಣಿಗೆ ಬಿದ್ದ ಅಸಹಾಯನಾದ ಅನ್ಯಮತಸ್ಥನನ್ನು ತಾನು ಹೇಗೆ ಕೊಂದನೋ ಹಾಗೆ ಯಾವ ಸಂದಿಯಲ್ಲೋ ಒಂಟಿಯಾಗಿ ಇತರಮತಸ್ಥರಿಗೆ ಸಿಕ್ಕಿದ ಸ್ವಮತಸ್ಥನನ್ನು ಅನ್ಯಮತಸ್ಥರು ಕೂಡ ಕೊಲ್ಲಲು ತಾನೇ ಕಾರಣಭೂತನಾಗುತ್ತಾನೆಂಬ ವಿಷಯವನ್ನು ಹಿಂದುಗಳೂ ಮಹಮ್ಮದೀಯರೂ ಚೆನ್ನಾಗಿ ತಿಳಿದುಕೊಳ್ಳಬೇಕು. ಹಿಂದುದೇವಾಲಯಗಳನ್ನು ಮಹಮ್ಮದೀಯರು ನಾಶಪಡಿಸಿದರೆ ಮಹಮ್ಮದೀಯರ ಮಸೀದಿಗಳನ್ನು ಹಿಂದುಗಳು ನಾಶಪಡಿಸದೆ ಬಿಡುವುದಿಲ್ಲ. ಬೇರೆ ಯಾವ ಮಹದಾಶಯವು ಇಲ್ಲದಿದ್ದರೂ ತನ್ನ ಮತಕ್ಕೆ ಸೇರಿದ ಪೂಜಾಸ್ಥಾನಗಳಿಗೂ ಮನುಷ್ಯರಿಗೂ ಮತಾಂತರದವರಿಂದ ಕೇಡುಂಟಾಗದಂತಿರುವುದಕ್ಕಾಗಿಯೇ ಆದರೂ ಇಂತಹ ದುರಾಗತವನ್ನು ಸ್ವಮತೀಯರು ಮಾಡದಂತೆ ನಿರೋಧಿಸುವುದಕ್ಕೆ ಹಿಂದುಗಳೂ ಮಹಮ್ಮದೀಯರೂ ಪ್ರಬಲಪ್ರಯತ್ನವನ್ನು ಮಾಡಬೇಕಾಗಿ ಕೋರುತ್ತೇವೆ. ಈವರೆಗೆ ಬಹಳ ಪ್ರಾಣನಷ್ಟವೂ ಧನನಷ್ಟವೂ ಆಗಿರುತ್ತವೆ; ಪರಸ್ಪರ ವಿರೋಧವು ಬಹಳವಾಗಿ ಪ್ರಬಲಿಸಿದೆ. ನೂರಾರು ಕುಟುಂಬದವರು ನಿರಾಧಾರರಾಗಿ ಅನ್ನವಿಲ್ಲದೆ ಕೊರಗುತ್ತಿರುವರು. ಅದುಕಾರಣ ಈ ಕುಟುಂಬದ ಕಲಹವನ್ನು ವಿರಮಿಸಬೇಕೆಂದು ನಾವು ಉಭಯಮತದವರನ್ನೂ ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ಕಲಕತ್ತಾನಗರವಾಸಿಗಳಾದ ಹಿಂದುಗಳು, ಮಹಮ್ಮದೀಯರುಗಳು, ಸಿಕ್ಕರು, ಕ್ರೈಸ್ತರು ಮೊದಲಾಗಿ ಎಲ್ಲಮತಸ್ಥರೂ ಇನ್ನು ಮೇಲಾದರೂ ಶಾಂತ್ಯವನ್ನು ವಹಿಸಿ ತಮ್ಮ [illegible]ಗಳಲ್ಲಿ ನಿರತರಾಗುವರೆಂದು ನಿರೀಕ್ಷಿಸುತ್ತೇವೆ. [illegible]ನದಲ್ಲಿ [illegible]ಗಳಿಂದಲೂ ನಿರಪರಾಧಿಗಳಾದ ಪ್ರಜೆಗ

ಳನ್ನು ಕತ್ತಿಯಿಂದಲೂ ದೊಣ್ಣೆಯಿಂದಲೂ ಹೊಡೆದು ಬಾಧೆಪಡಿಸುವುದೂ, ಕೊಲ್ಲುವುದೂ ಪಟ್ಟಣಕ್ಕೆ ಮಹಾಕಳಂಕವನ್ನುಂಟುಮಾಡತಕ್ಕುದಾಗಿದೆ. ಮತಕಲಹವನ್ನೂ, ಕಾರ್ಪಣ್ಯವನ್ನೂ ಅಣಗಿಸಲು ತಕ್ಕ ಪ್ರಯತ್ನಮಾಡದಿರುವುದು ಇವೆಲ್ಲಕ್ಕೂ ಮುಖ್ಯಕಾರಣವು. ಇನ್ನೆಷ್ಟುಮಾತ್ರಕ್ಕೂ ಆಲಸ್ಯಮಾಡದೆ ಆ ಪ್ರಯತ್ನವನ್ನು ಕೂಡಲೇ ನಡೆಸಬೇಕೆಂದು ಪ್ರಜಾಪ್ರೇಮಿಗಳನ್ನೂ, ಅಕ್ರಮವನ್ನು ಖಂಡಿಸುವವರಾದ ಭೂತದಯಾಪರರೆಲ್ಲರನ್ನೂ ನಾವು ದೈನ್ಯದಿಂದ ಪ್ರಾರ್ಥಿಸಿಕೊಳ್ಳುತ್ತೇವೆ. ಹಿಂದುಗಳನ್ನೊಡೆಯಲು ಮಹಮ್ಮದೀಯರೂ, ಮಹಮ್ಮದೀಯರನ್ನೊಡಿಯಲು ಹಿಂದುಗಳೂ ಗುಂಪುಗುಂಪಾಗಿ ಬರುತ್ತಾರೆಂದು ಇಲ್ಲಸಲ್ಲದ ಸುಳ್ಳುಸುದ್ದಿಯನ್ನು ಹುಟ್ಟಿಸಿಕೊಂಡು ಹೇಳಿ ಕೆಲ ಪ್ರಜೆಗಳಲ್ಲಿ ಕೋಪೋದ್ರೇಕವನ್ನುಂಟುಮಾಡುತ್ತಿರುವುದಕ್ಕಾಗಿ ಬಹಳವಾಗಿ ವ್ಯಸನಪಡುತ್ತೇವೆ. ಇನ್ನುಮುಂದೆ ಹೀಗೆ ಸುಳ್ಳುಸುದ್ದಿಯನ್ನು ಹುಟ್ಟಿಸಕೂಡದೆಂದೂ, ಆ ಸುದ್ದಿಗಳನ್ನು ಪ್ರಜೆಗಳು ನಂಬದೆ ಖಂಡಿಸಬೇಕೆಂದೂ ಪ್ರಾರ್ಥಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರ ಸ್ವಾರಿಯು ಮಿ|| ಮಿರ್ಜಾಯವರೊಡನೆ ಕಳೆದ ಗುರುವಾರ ರಾತ್ರಿ ಉದಕಮಂಡಲದಿಂದ ರಾಜಧಾನಿಗೆ ಚಿತ್ತೈಸಿತು.

ರಜದಮೇಲಿದ್ದ ಅಸಿಸ್ಟೆಂಟ್ ಕಮಿಷನರ್ ಮ|| ಆರ್. ಪಿ. ಮಲ್ಲಪ್ಪ, ಬಿ.ಎ.; ಎಲ್‌ಎಲ್.ಬಿ., ಇವರು ನೆನ್ನೆಯದಿವಸ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ನಿನ ಛಾರ್ಜನ್ನು ವಹಿಸಿಕೊಂಡರು.

ಕಳೆದ ಶನಿವಾರ ಸೀಮೆಗೆ ಪ್ರಯಾಣಮಾಡಿದ ಶ್ರೀಮದ್ಯುವರಾಜರ ಸಂಗಡ ಅವರ ಪರ್ಸನಲ್ ಅಸಿಸ್ಟೆಂಟರಾದ ಮಿ|| ಜೆ. ಎಂ. ಮೇಕ್ರೀಯವರೂ, ಮ|| ಎಫ್. ಸಿ. ದೇವರಾಜ ಅರಸಿನವರೂ, ಇಬ್ಬರು ಸೇವಕರೂ ಹೋಗಿರುವರು.

ಸರ್ ಎ. ಆರ್. ಬ್ಯಾನರ್ಜಿಯವರು ಈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾಗಿ ಪೂರ್ತಿಸಂಬಳದ ಮೇಲೆ 6 ತಿಂಗಳ ಕಾಲ ಪ್ರಿವಿಲೇಜ್ ರಜವನ್ನು ಅನುಭವಿಸಿದನಂತರ ತಿಂಗಳಿಗೆ 500 ರೂಪಾಯಿ ಪೆನ್ಷನ್ ಪಡೆಯುವಂತೆ ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿದೆ.

ಕೋಲಾರದ ಉರಿಗಾಂ ಗಣಿಯಲ್ಲಿ ಒಬ್ಬ ಮೇಸ್ತ್ರಿಯೂ ಇನ್ನೊಬ್ಬ ಕೂಲಿಯೂ ಮರದಕಂಬಗಳನ್ನು ಊರೆಕೊಟ್ಟು ನಿಲ್ಲಿಸುತ್ತಿರುವಾಗ್ಗೆ ನೆಲಕುಸಿದುಬಿದ್ದು ಪ್ರಾಣಾಪಾಯವನ್ನು ಹೊಂದಿ ಮೇಲಕ್ಕೆ ಸಾಗಿಸಲ್ಪಟ್ಟು ಉಪಚರಿಸಲ್ಪಟ್ಟಾಗ್ಯೂ ಗುಣವನ್ನು ಹೊಂದದೆ ಮೃತರಾದರು.

ರಾಜಧಾನಿಯಲ್ಲಿರುವ ಸಾಹುಕಾರ್ ಕಬ್ಬಳ್ಳಿ ಚೆನ್ನಬಸಪ್ಪನವರ ಹಾಸ್ಪಲಿನ ಮೇಲ್ವಿಚಾರಕಕಮಿಟಿಯ ಮೆಂಬರುಗಳೆಂದು ಕಳೆದವಾರದ ಸ್ಟಾರ್‌ಪತ್ರಿಕೆಯಲ್ಲಿ ತಿಳುಹಲ್ಪಟ್ಟಿದ್ದ 9 ಜನ ದೊಡ್ಡಮನುಷ್ಯರಲ್ಲದೆ ಮೈಸೂರುಡಿವಿಜನ್ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಕೆ. ಸಿದ್ಧರಾಮಪ್ಪ, ಬಿ.ಎ., ಯವರೂ, ಮೆಜಸ್ಟಿಕ್‌ಸಿನೆಮಾ ಪ್ರೊಪ್ರೈಟರುಗಳಲ್ಲೊಬ್ಬರಾದ ಮ|| ಎಂ. ಎಸ್. ನಂಜಪ್ಪನವರೂ ಕಮಿಟಿಯ ಮೆಂಬರುಗಳಾಗಿರುತ್ತಾರೆ.

ಈ ಸಲ ಕಲಕತ್ತಾ, ಬೊಂಬಾಯಿ, ಮದರಾಸು, ಬೆಂಗಳೂರು ಮತ್ತು ಕೊಲ್ಹಾಪುರ ಈ ಸ್ಥಳಗಳಲ್ಲಿ ನಡೆದ ಕುದುರೆಯ ಪಂದ್ಯಗಳಿಗೆ ನಮ್ಮ ಮೈಸೂರಿನಿಂದ ಮಕ್ಕೇಸರ್ ಮ|| ಆರ್. ಪುಟ್ಟಣ್ಣ, ಬಿ.ಎ.,ಬಿ.ಎಲ್., ರವರ ಮೇಲ್ವಿಚಾರಣೆಯಲ್ಲಿ ಕಳುಹಲ್ಪಟ್ಟಿದ್ದ ಶ್ರೀಮನ್ಮಹಾರಾಜರವರ ಕುದುರೆಗಳು 32 ಪಂದ್ಯಗಳಲ್ಲಿ 1 ಲಕ್ಷದ 2 ಸಾವಿರ ರೂಪಾಯಿಗಳನ್ನೂ ಅನೇಕ ಬೆಳ್ಳಿಬಂಗಾರದ ಬಟ್ಟಲುಗಳನ್ನೂ ಗೆದ್ದುಕೊಂಡುಬಂದಿರುವುವೆಂದು ಕೇಳುತ್ತೇವೆ.

ಈ ತಾ|| 16ರಿಂದ 19 ರ ವರೆಗೆ ಬಳ್ಳಾರಿಯಲ್ಲಿ ಜರುಗುವ ಕರ್ಣಾಟಕ ಸಮ್ಮೇಳನಗಳಲ್ಲೊಂದಾದ ಕರ್ಣಾಟಕಕೀರ್ತನಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಅರಮನೆಯ ಮುಜರಾಯಿಬಕ್ಷಿಯವರಾದ ರಾಜಕವಿ ಮ|| ಎಚ್. ಲಿಂಗರಾಜ ಅರಸಿನವರು ಅಭಿಮಾನದಿಂದೊಪ್ಪಿಕೊಂಡು ಈ ತಾ|| 16ರಲ್ಲಿ ತಮ್ಮ ಮಿತ್ರಮಂಡಲಿಯೊಡನೆ ದಯಮಾಡಿಸುವರೆಂದು ತಿಳಿಯಬರುತ್ತದೆ. ಈ ರಾಜಕವಿಕೃತಗ್ರಂಥಗಳು ಎಷ್ಟು ಜನಮನೋರಂಜಕವಾಗಿರುವುವೋ ಇವರ ಸಮ್ಮೇಳನಾಧ್ಯಕ್ಷೋಪನ್ಯಾಸವೂ ಅಷ್ಟು ಮನೋರಂಜಕವೂ, ಅನುಸ್ಮೇಯವೂ ಆಗಿರುವುದೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ದೊಡ್ಡ ಜವಳೀವ್ಯಾಪಾರಿಗಳೂ, ಮ್ಯುನಿಸಿಪಲ್‌ಕೌನ್ಸಿಲರೂ, ಮೈಸೂರು ಡಿ|| ಬೋರ್ಡು ಮೆಂಬರೂ ಆದ ಮಿ|| ಮಹಮ್ಮದ್‌ಸೇಟರವರ ತಾತಾಂದಿರಾದ ಮಿ|| ಷುಕೂರ್‌ಸೇಟರವರು ನೆನ್ನೆಯ ಬುಧವಾರರಾತ್ರಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಅವಸಾನಕಾಲದಲ್ಲಿ 104 ವರ್ಷವಯಸ್ಸಾಗಿದ್ದಿತು. ತಾತಂದಿರವಿಯೋಗದುಃಖಕ್ಕೆ ಪಾತ್ರರಾದ ಮಿ|| ಮಹಮ್ಮದ್‌ಸೇಟ್‌ಸಹೋದರರಿಗೆ ನಮ್ಮ ಅನುತಾಪವನ್ನು ಈ ಮೂಲಕ ತಿಳುಹಿಸಿ ಮೃತರ ಆತ್ಮಕ್ಕೆ ನಿರಂತರ ಶಾಂತಿಯುಂಟಾಗಲೆಂದು ಕೋರುತ್ತೇವೆ. ವಿಯೋಗದುಃಖಪ್ರದರ್ಶನಾರ್ಥವಾಗಿ ಷುಕೂರ್‌ಸೇಟ್ ಅಂಡ್ ಸನ್ಸ್‌ರವರ ಮತ್ತು ಅವರ ಬಂಧುವರ್ಗದವರ ಅಂಗಡಿಗಳು 3 ದಿವಸಗಳವರೆಗೆ ಮುಚ್ಚಲ್ಪಟ್ಟಿದ್ದುವು.

ಅಮೀರ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್, ಬಿ. ಎ., ಸಿ.ಐ.ಇ., ರವರು ನೆನ್ನೆಯದಿನ ಮಧ್ಯಾಹ್ನ 4 ಗಂಟೆಯ ಸಮಯದಲ್ಲಿ ಅರಮನೆಗೆ ಹೋಗಿ ಕರೀಕಲ್ಲುತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಪಾತ್ರರಾಗಿ ಅಮಾತ್ಯಪದವಿಯನ್ನು ವಹಿಸಿಕೊಳ್ಳಲು ಅನುಜ್ಞೆಯನ್ನು ಪಡೆದುಕೊಂಡು ಹೊರದ್ವಾರದಲ್ಲಿ ಕಾದಿದ್ದ ಸರ್ಕಾರಿಯ ರಥದಲ್ಲಿ ಕುಳಿತು ಇಬ್ಬರು ಅಂಗರಕ್ಷಕಸ್ವಾರರ ಮತ್ತು ಗಗ್ಗರಿಬಾಲ್ಯಗಳ ಸಮೇತರಾಗಿ ತಮ್ಮ ಬಿಡಾರಕ್ಕೆ ದಯಮಾಡಿಸಿ, ರಾತ್ರಿ 11 ಗಂಟೆಯ ರೈಲುಬಂಡಿಯಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು. ಡೆ|| ಕಮಿಷನರು, ಮ್ಯು|| ಪ್ರೆಸಿಡೆಂಟರು, ಹುಜೂರುಸೆಕ್ರೆಟರಿ ಮೊದಲಾಗಿ ಎಲ್ಲಶಾಖೆಯ ಮುಖ್ಯಾಧಿಕಾರಿಗಳೂ ರೈಲ್ವೆಸ್ಟೇಷನ್ನಿಗೆ ಹೋಗಿದ್ದು ದಿವಾನರನ್ನು ವಂದಿಸಿ ಬಂದರು. ಮಿ|| ಮಿರ್ಜಾಯವರು ಬೆಂಗಳೂರಲ್ಲಿ ಈ ದಿವಸ ಪೂರ್ವಾಹ್ನ ದಿವಾನರುದ್ಯೋಗವನ್ನು ವಹಿಸಿಕೊಳ್ಳುವರು.

ಭರತಖಂಡದ ವೃತ್ತಾಂತಗಳು.

ತಂಗಳಿ ಸಬ್‌ಡಿವಿಜನ್ನಿಗೆ ಸೇರಿದ ಅಂಬಾಗ್ ಎಂಬ ಗ್ರಾಮದಲ್ಲಿ ಕಳೆದ ತಾ|| 14ರಲ್ಲಿ ಒಂದು ಶಿವದೇವತೋತ್ಸವವಾಗುವಾಗ್ಗೆ 300 ಜನ ಮಹಮ್ಮದೀಯರು ದೊಣ್ಣೆಗಳನ್ನು ಹಿಡಿದುಕೊಂಡು ಹೋಗಿ ಹಿಂದುಗಳ ಕೂಡ ಕಲಹಮಾಡಿ ಪಾರ್ವತಿಪರಮೇಶ್ವರರ ವಿಗ್ರಹಗಳನ್ನು ನಾಶಪಡಿಸಿ ಅಂಗಡಿಗಳನ್ನು ಸೂರೆಮಾಡಿಕೊಂಡು ಹೋದರಂತೆ.

ಡಾಕಾಪಟ್ಟಣದಿಂದ 8 ಮೈಲಿ ದೂರದಲ್ಲಿರುವ ಮಿಲಧರವೆಂಬ ಗ್ರಾಮವಾಸಿಗಳಾದ ಹೇಮಲಗೋಪಿನಿ ಎಂಬ ಬಂಗಾಳಾ ಸ್ತ್ರೀಯೂ, ಆಕೆಯ ಮೂವರು ಸಹೋದರರೂ, ಜಗದೀಶನೆಂಬ ಒಬ್ಬ ವಿದ್ಯಾರ್ಥಿಯೂ ಕೆಲದಿನಗಳ ಕೆಳಗೆ ತಲೆಬಡುಕರ ಗುಂಪನ್ನು ಬೆದರಿಸಿ ಓಡಿಸಿದ್ದರು. ಅದರಲ್ಲೂ ಆ ಹೆಂಗುಸಿನ ಧೈರ್ಯಸಾಹಸವೇ ಆ ಕಳ್ಳರು ಪಲಾಯನವಾಗಲು ಮುಖ್ಯವಾಗಿದ್ದಿತು. ಇವರುಗಳ ಸಾಹಸಕ್ಕೆ ಸರ್ಕಾರದವರು ಮೆಚ್ಚಿಕೊಂಡು ಆ ಹೆಂಗುಸಿಗೆ 300 ರೂ., ಉಳಿದ ಪ್ರತಿಯೊಬ್ಬನಿಗೂ 150 ರೂ. ಬಹುಮಾನಗಳನ್ನು ಡಿವಿಜನಲ್ ಕಮಿಷನರ ಮೂಲಕ ಕೊಡಿಸಿದರು.

ಕೊಚ್ಚಿಯ ಶ್ರೀಜನಾರ್ದನದೇವಸ್ಥಾನದ ದೇವದಾಸಿ ಮೀನಾಬಾಯಿಯು ದೇವಸ್ಥಾನವನ್ನು ಪ್ರವೇಶಿಸಕೂಡದೆಂದು ಅದರ ಧರ್ಮದರ್ಶಿಗಳು ಅಡ್ಡಿಪಡಿಸಿದ್ದುದರಮೇಲೆ ಆಕೆಯು ತನ್ನ ದೇವಸ್ಥಾನದ ಪ್ರವೇಶವನ್ನು ತಡೆಯದಂತೆ ಅಪ್ಪಣೆ ಮಾಡಬೇಕೆಂದು ಸಬ್‌ಕೋರ್ಟಿನಲ್ಲಿ ದಾವಾಮಾಡಿ ಆರ್ಡರನ್ನು ಪಡೆದುಕೊಂಡಿದ್ದಳು. ಆ ಆರ್ಡರನ್ನು ಅನುಷ್ಠಾನಕ್ಕೆ ತರಕೂಡದೆಂದು ಧರ್ಮದರ್ಶಿಗಳು ಪ್ರಯತ್ನಪಟ್ಟಾಗ್ಯೂ ಪ್ರಯೋಜನವಾಗಲಿಲ್ಲವಾಗಿ ಎಲ್ಲರೂ ದೇವಸ್ಥಾನದಲ್ಲಿ ಸಭೆಸೇರಿ ಆ ದೇವದಾಸಿಯ ಪ್ರವೇಶಕ್ಕೆ ಅವಕಾಶಕೊಡಕೂಡದೆಂದು ಮ್ಯಾನೇಜರಿಗೆ ಆಜ್ಞೆಮಾಡಿ ದೇವಸ್ಥಾನದ ಹೊರಭಾಗದಲ್ಲಿ ಒಂದು ನೋಟೀಸನ್ನು ಸಹ ಹಚ್ಚಿಸಿದ್ದರು.

ತಿರಚೂರಿನಲ್ಲಿ ವಾರ್ಷಿಕ ದೇವತೋತ್ಸವವು ಕಳೆದ ತಾ|| 24 ರಲ್ಲಿ ಮುಕ್ತಾಯವಾಯಿತು. ಹಿಂದೆ ಯಾವಾಗಲೂ ಬಾರದಿದ್ದಷ್ಟು ಜನರು ಈ ವರ್ಷ ಬಂದಿದ್ದುದರಿಂದ ಉತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆದಿತಾದರೂ, ಈ ಉತ್ಸವಕ್ಕಾಗಿ ತರಿಸಲ್ಪಟ್ಟಿದ್ದ ಎರಡು ಆನೆಗಳು ಉತ್ಸವಸಮಯದಲ್ಲಿ ನಿಂತಿರುವಾಗ್ಗೆ ಒಂದಕ್ಕೊಂದು ಜಗಳವಾಡಿ ಗಾಯಪಟ್ಟುಕೊಂಡು ದಿಕ್ಕಾಪಾಲಾಗಿ ಓಡುತ್ತ ಜನರ ಸಂದಣಿಯಲ್ಲಿ ನುಗ್ಗಿದುವು. ಇವುಗಳಲ್ಲಿ ಒಂದರಕಾಲಿಗೆ ಒಬ್ಬ ಅರ್ಕಸಾಲೆಯ ಹೆಂಗುಸು ಸಿಕ್ಕಿ ತುಳಿಯಲ್ಪಟ್ಟು ಸತ್ತುಹೋದಳು ಮತ್ತೆ ಕೆಲರಿಗೆ ಪೂರಾ ಪೆಟ್ಟುಬಿದ್ದಿತು. ಅವರುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರಲ್ಲದೆ ಗಾಯವಡೆದ ಆನೆಯೂ ಚಿಕಿತ್ಸೆಮಾಡಲ್ಪಡುತ್ತಿರುವುದು.

ಹೈದರಾಬಾದಿಗೆ ಸೇರಿದ ಒಂದು ಕಾಡಿನಲ್ಲಿ ಒಬ್ಬ ಲಂಬಾಣಿಗರವನು ಸೌದೆಯನ್ನು ಆಯುತ್ತಿರುವಾಗ್ಗೆ ಹತ್ತಿರದ ಪೊದೆಯಲ್ಲಿದ್ದ ಒಂದು ಹುಲಿಯು ಅವನನ್ನು ಕಂಡು ರೇಗಿ ಪೊದೆಯಿಂದೀಚೆಗೆ ಬಂದು ಅವನಮೇಲೆ ಬೀಳಲುದ್ಯುಕ್ತವಾಯಿತು. ಆಗ ಆ ಲಂಬಾಣಿಯು ತನ್ನ ಕಂಬಳಿಯನ್ನು ಕೈಗೆ ಸುತ್ತಿಕೊಂಡು ಕೈಯನ್ನು ಅದರ ಬಾಯಿಗೆ ಚಾಚಿ ಧೈರ್ಯದಿಂದ ಅದರ ಕೂಡ ಹೋರಾಡುತ್ತಿರುವಾಗ್ಗೆ ಕೈಗೆ ಸುತ್ತಿದ್ದ ಕಂಬಳಿಯು ಬಿಚ್ಚಿಹೋದುದರಿಂದ ಹುಲಿಯು ಅವನ ಕೈಯನ್ನು ಚೆನ್ನಾಗಿ ಅಗಿದ್ದುಹಾಕಿತು. ಆದರೂ ಅವನು ಧೈರ್ಯಗುಂದದೆ ಮತ್ತಷ್ಟು ಆವೇಶದಿಂದ ಒಂದು ಕಲ್ಲನ್ನು ತೆಗೆದುಕೊಂಡು ಅದರ ತಲೆಯನ್ನು ಜಜ್ಜಿ ಕೊಂದುಬಿಟ್ಟನು. ಅನಂತರ ಜನರು ಬಂದುನೋಡಿ ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಅವನಿಗೆ ಗುಣಮುಖವಾಗಿದೆಯಂತೆ.

ಹೈದರಾಬಾದುದೇಶದಲ್ಲೆಲ್ಲೂ ಗೋವುಗಳ ಚಿತ್ರಪಟಗಳನ್ನು ಏಪ್ರಿಲ್ ತಾ|| 10 ರ [illegible] ಯಾರೂ ಮಡಗಕೂಡದೆಂದೂ, ಈಗ ಮಡಗಿರತಕ್ಕವರು 13 ದಿವಸಗಳೊಳಗಾಗಿ ನಾಶಪಡಿಸಬೇಕೆಂದೂ, ಆಜ್ಞೆಯನ್ನು ಉಲ್ಲಂಘಿಸಿ ನಡೆಯತಕ್ಕವರು 800 ರೂ. ಅರ್ಥದಂಡಕ್ಕೂ, 6 ತಿಂಗಳ ಕಾರಾಗೃಹವಾಸಕ್ಕೂ ಗುರಿಯಾಗುವರೆಂದೂ ನೈಜಾಂರವರು ಔರಂಗಾಬಾದಿನಲ್ಲಿ ಕಳೆದ ಏಪ್ರಿಲ್ ತಾ|| 10 ರ ದಿವಸ ಡಂಗೂರದ ಮೂಲಕ ಸಾರಿಸಿದರೆಂದು ಬೊಂಬಾಯಿನ ಪ್ರಾಂತಿಕಹಿಂದೂಮಹಾಸಭೆಯವರು ಪ್ರಕಟಿಸಿರುವುದಾಗಿ ವದಂತಿಯಿದೆ. ಇದು ಈಗಣ ಹಿಂದೂ ಮಹಮ್ಮದೀಯರ ಕಲಹಸಂಬಂಧವಾಗಿ ಯಾರೋ ಹುಟ್ಟಿಸಿರುವ ಸುದ್ದಿಯಾಗಿರಬೇಕು. ಒಂದುವೇಳೆ ನಿಜವಾಗಿದ್ದಲ್ಲಿ ಹಿಂದುಗಳ ಮನಸ್ಸನ್ನು ನೋಯಿಸತಕ್ಕ ಅಯೋಗ್ಯವಾದ ಅಪ್ಪಣೆಯು ಇದಕ್ಕಿಂತಲೂ ಬೇರೊಂದಿಲ್ಲವು.

ಮದ್ರಾಸಿನ ಹೈಕೋರ್ಟು ವಕೀಲರಾದ ವೀರರಾಘವಲುಚೆಟ್ಟಿಯವರ ಮನೆಗೆ ಕಳೆದ ತಾ|| 24ರಲ್ಲಿ ಒಬ್ಬ ಕಳ್ಳನು ಕಕ್ಷಿಗಾರನಂತೆ ಹೋಗಿ ಒಂದು ಮೊಖದ್ದಮೆಯನ್ನು ಕೊಡುವುದಕ್ಕಾಗಿ ಬಂದಿದ್ದೇನೆಂದು ಹೇಳಿ ಕುಳಿತ್ತಿದ್ದನು. ಇಷ್ಟರಲ್ಲಿ ವಕೀಲರು ಯಾತಕ್ಕಾಗಿಯೋ ಮನೆಯೊಳಕ್ಕೆ ಹೋಗಲು ಆ ವೇಷಧಾರಿ ಕಳ್ಳನು ವಕೀಲರ ಮಗುವಿನ ಬಂಗಾರದ ಕಂಠಾಭರಣವನ್ನು ಕಿತ್ತುಕೊಂಡು ಪಲಾಯನವಾದನು. ಒಳಕ್ಕೆ ಹೋಗಿದ್ದ ವಕೀಲರು ಕೊಂಚಹೊತ್ತಿನಲ್ಲಿ ಹೊರಗೆಬಂದು ಮಗುವಿನ ಕತ್ತಿನಲ್ಲಿ ಸರವಿಲ್ಲದಿದ್ದುದನ್ನು ನೋಡಿ ಗದ್ದಲಮಾಡಿದರು. ಅದನ್ನು ಕೇಳಿ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಬಂಡಿಯೊಡಿಯುವವನು ಆ ಕಳ್ಳನನ್ನು ಹಿಂಬಾಲಿಸಿ ಹಿಡಿದು ಪೊಲೀಸರ ವಶಮಾಡಿದನು. ಪೊಲೀಸರು ಆ ಕಳ್ಳನಲ್ಲಿದ್ದ ಇತರ ಪದಾರ್ಥಗಳನ್ನೂ ಬರಮಾಡಿಕೊಂಡು ಅವನನ್ನು ವಿಚಾರಣೆಗೆ ಗುರಿಪಡಿಸಿರುವರು.

ವಿದೇಶದ ವೃತ್ತಾಂತಗಳು

ಸೈನಿಕಆಕಾಶಯಾನವನ್ನು ನಡಿಸುತ್ತಿದ್ದವನು ಮೇಲಿನಿಂದ ಬಿದ್ದು ಸತ್ತುಹೋದನು. ಅವನ ಶವವು ಸಂಸ್ಕರಿಸಲ್ಪಡುವುದನ್ನು ಮೇಲಿನಿಂದ ನೋಡುತ್ತಿದ್ದ 21 ಸೈನಿಕಯಾನಗಳು ಅಂತರಿಕ್ಷದಲ್ಲಿ ಸುತ್ತುವರಿಯುತ್ತಿರುವಾಗ್ಗೆ ಒಂದು ಯಾನವು ಇನ್ನೊಂದಕ್ಕೆ ತಾಕುಬಡಿದು ಛಿದ್ರವಾಗೊಡೆದುಹೋಗಲಾಗಿ ಅದನ್ನು ನಡಿಸುತ್ತಿದ್ದವನೂ ಅವನ ಜತೆಗಾರನೂ ಸತ್ತುಹೋದರು. ಇನ್ನೊಂದು ಯಾನವನ್ನು ನಡಿಸುತ್ತಿದ್ದವನು 1,500 ಅಡಿ ಎತ್ತರದಿಂದ ನೆಲದಮೇಲೆ ಬಿದ್ದ ರಭಸಕ್ಕೆ ಮಣ್ಣಿನಲ್ಲಿ ಹೂತುಹೋಗಿದ್ದನು.

ಕಳೆದ ಅಕ್ಟೋಬರ್ ತಾ|| 2ರಲ್ಲಿ ನಾಟಿಂಗ್ಯಾಂ ಹತ್ತಿರದ ಒಂದು ಗ್ರಾಮವಾಸಿಯಾದ ಹಾಲುಮಾರುವವನ 26 ವರ್ಷ ವಯಸ್ಕಳಾದ ಮಗಳು ಒಂದು ಯಂತ್ರದಲ್ಲಿ ಮಾತುಗಳನ್ನು ಕೇಳುತ್ತಿದ್ದು ಹಾಗೆಯೇ ಸೋಪಾದಮೇಲೆ ಮೂರ್ಛೆಹೋದವಳಂತೆ ಬಿದ್ದುಬಿಟ್ಟಳು. ಅಂದಿನಿಂದ ಈವರೆಗೆ ಮಾತನಾಡುತ್ತಿಲ್ಲ ಮತ್ತು ಜ್ಞಾನಾಜ್ಞಾನದಿಂದಿರುವಳು. ಕೆಲವೇಳೆ ನಿಶ್ಚಂಚಲಳಾಗಿದ್ದು ಕೊಂಚಹೊತ್ತಿನಮೇಲೆ ಕಣ್ಣುಗಳನ್ನು ಬಿಟ್ಟು ತನ್ನ ಹಾಸಿಗೆಯ ಸುತ್ತಲೂ ಇರುವವರನ್ನು ನೋಡುವಳು. ಮೂಗಿನಸೊಳ್ಳೆಯಲ್ಲಿ ಒಂದು ಕೊಳವೆಯನ್ನಿಟು ಅದರ ಮೂಲಕ ಆಹಾರಕೊಡಲ್ಪಡುತ್ತಿರುವದು. ಇಷ್ಟಾದರೂ ಚೈತನ್ಯವು ಕಡಿಮೆಯಾಗದೆ ಹೆಚ್ಚುತ್ತಿದೆಯಂತೆ ಮತ್ತು ಅನೇಕ ಡಾಕ್ಟರು ಪರೀಕ್ಷಿಸಿ ಪ್ರಯತ್ನಿಸಿದರೂ ಗುಣಮಾಡಲಾರದೆ ಹೋಗಿರುವರಂತೆ.

ಯಂತ್ರಸಹಾಯದಿಂದ ನಡೆಯುವ ಆಕಾಶಯಾನಗಳು ನಿರ್ಮಿಸಲ್ಪಡುವುದಕ್ಕೆ ಪೂರ್ವ ವಾಯುತುಂಬಿದ ಬುಟ್ಟಿಗಳ ಕೆಳಗೆ ತೊಟ್ಟಿಲುಗಳನ್ನು ಕಟ್ಟಿ ಅವುಗಳಲ್ಲಿ ಒಬ್ಬೊಬ್ಬರು ಕುಳಿತು ಅಂತರಿಕ್ಷದಲ್ಲಿ ಸಂಚರಿಸಿ ಛತ್ರಿಯಸಹಾಯದಿಂದ ಕೆಳಕ್ಕಿಳಿಯುತ್ತಿದ್ದರು. ಅಂತಹ ಛತ್ರಿಗಳನ್ನು ಆಕಾಶಯಾನಗಳಿಗೆ ಕಟ್ಟಿದ್ದು ಆಕಾಶಯಾನವು ಕೆಟ್ಟುಹೋಗಿ ಭೂಮಿಯಮೇಲೆ ಬೀಳುವ ಸಂದರ್ಭದಲ್ಲಿ ಆ ಛತ್ರಿಯ ಸಹಾಯದಿಂದ ಕೆಳಕ್ಕಿಳಿದುಬರುವರು. ಕಳೆದ ಏಪ್ರಿಲ್ ತಾ|| 3ರಲ್ಲಿ ಎಲಿಯಟ್ ಲಿನ್ನ್ ಎಂಬ ಹೆಂಗುಸು ಆಕಾಶಯಾನದಲ್ಲಿ 2000 ಮೈಲಿ ಎತ್ತರದವರೆಗೂ ಹೋಗಿದ್ದು ಯಂತ್ರವು ಕೆಟ್ಟುಹೋಗಲಾಗಿ ಮುಚ್ಚಿದ್ದ ಛತ್ರಿಯು ಪಸರಿಸುವವರೆಗೂ ಕೊಂಚದೂರ ಒಂದು ಕಲ್ಲಿನಂತೆ ಕೆಳಕ್ಕೆ ಬೀಳುತ್ತಿದ್ದು ಅನಂತರ ಛತ್ರಿಯಸಹಾಯದಿಂದ ಸುರಕ್ಷಿತವಾಗಿ ಭೂಮಿಯಮೇಲೆ ಬಂದಿಳಿದಳು. ತನ್ನ ಈ ಸಾಹಸವು ಬಹಳ ಮನೋಹರವಾಗಿದ್ದಿತೆಂದೂ, 6 ಅಡಿ ಎತ್ತರದ ಗೋಡೆಯಮೇಲಿಂದ ದುಮ್ಮಿಕ್ಕುವುದರಂತಿದ್ದಿತೆಂದೂ ಪ್ರೇಕ್ಷಕರಿಗೆ ಹೇಳಿದಳಂತೆ.

ಕ್ಯಾಲಿಫೋರ್ನಿಯಾದಲ್ಲಿ ಜಾರ್ಜ್ ಗಾಯಿನ್ಸ್ ಎಂಬುವವನು ತನ್ನ ಹೆಂಡತಿಯು ವಿವಾಹಬಂಧವಿಮೋಚನೆಗಾಗಿ ಕೋರ್ಟಿಗೆ ಅರ್ಜಿಯನ್ನು ಹಾಕಿರುವಳೆಂದು ಕೇಳಿ ಕುಪಿತನಾಗಿ ಒಂದು ಮೋಟಾರಿನಲ್ಲಿ ಕುಳಿತು ತನ್ನ ಹೆಂಡತಿಯು ವಾಸವಾಗಿದ್ದ ಸ್ಥಳಕ್ಕೆ ಹೋಗಿ ಅವಳನ್ನೂ ಅವಳ ತಂಗಿಯನ್ನೂ ಗುಂಡಿನಿಂದ ಹೊಡೆದು ಸಾಯಿಸಿ, ಅಲ್ಲಿಂದ ಹೆಂಡತಿಯ ಪರವಾಗಿ ಕೋರ್ಟಿಗೆ ಅರ್ಜಿಯನ್ನು ಕೊಟ್ಟ ಲಾಯರನ್ನೂ ಅವನ ಹೆಂಡತಿಯನ್ನೂ ಕೊಂದನಂತರ 24 ಮೈಲಿ ದೂರದಲ್ಲಿದ್ದ ಒಬ್ಬ ತೋಟದ ಯಜಮಾನನು ಗಾಯಿನ್ಸ್ ಕೆಲವರ್ಷಗಳ ಹಿಂದೆ ಕುದುರೆಯನ್ನು ಕದ್ದಿದ್ದವನೆಂದು ಗುರ್ತಿಸಿದ್ದುದಕ್ಕಾಗಿ ಅವನ ಹೆಂಡತಿಯನ್ನೂ, [illegible] ಗುಂಡಿನಿಂದ ಸುಟ್ಟು ಮೋಟಾರು ಬಂಡಿಯಲ್ಲಿ ಕುಳಿತು ಓಡಿಹೋಗುವಾಗ್ಗೆ ಪೊಲೀಸರು ವಾಯುವಾರ್ತೆಯಿಂದ ಘೋರಕೃತ್ಯದ ವಿಚಾರವನ್ನು ತಿಳಿದು [illegible] ಬರುತ್ತಿರುವುದನ್ನು ಕಂಡು ತನ್ನ ತಲೆಗೆ ಗುಂಡನ್ನು ಹೊಡೆದುಕೊಂಡು ಸತ್ತನು. ಅವನ ಮೋಟಾರುಬಂಡಿಯು ಒಂದು ಹಳ್ಳಕ್ಕೆ ಉರುಳಿದ್ದಿತು.

ಒಬ್ಬ ಬಂದಿವಾನನು ನ್ಯಾಯಾಧೀಶನೊಡನೆ ವಾದಿಸುದುದು.

ಬೊಂಬಾಯಿನಗರವನ್ನು ಬಿಟ್ಟು ಹೊರಕ್ಕೆ ಹೊರಟು ಹೋಗಬೇಕೆಂದು ಪೋಲೀಸ್ ಕಮಿಷನರಿಂದ ಅಪ್ಪಣೆಮಾಡಲ್ಪಟ್ಟಿದ್ದ ಒಬ್ಬ ದುರ್ನೀತಿಯ ಮನುಷ್ಯನು ಅವರ ಆಜ್ಞೆಯನ್ನು ಉಲ್ಲಂಘಿಸಿ ಬೊಂಬಾಯಿಪಟ್ಟಣಕ್ಕೆ ಬರಲಾಗಿ ಪೋಲೀಸರು ಅವನನ್ನು ಹಿಡಿದು ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರು.

ಅಪರಾಧಿಯು ಮ್ಯಾಜಿಸ್ಟ್ರೇಟರನ್ನು ಕುರಿತು ಉದ್ಯೋಗವನ್ನು ಹುಡುಕ್ಕಿಕೊಂಡು ನಾನೇತಕ್ಕೆ ಬೊಂಬಾಯಿಗೆ ಹಿಂದಿರುಗಿ ಬರಬಾರದು; ನನ್ನ ಹೊಟ್ಟೆಯನ್ನು ಸಾಕಕೂಡದೆ?

ಮ್ಯಾಜಿಸ್ಟ್ರೇಟರು—ಆದರೆ ಲಾ ಆ ರೀತಿಯಾಗಿದೆ; ನಾನೇನನ್ನೂ ಮಾಡಲಿಕ್ಕೆ ಬರುವುದಿಲ್ಲ.

ಅಪರಾಧಿ—ಅದು ನ್ಯಾಯವಾದ ಲಾ ನೋ?

ಮ್ಯಾ—ನ್ಯಾಯವೋ ಅನ್ಯಾಯವೋ; ಅದು ಹಾಗಿದೆ.

ಅ—ನೀವು ಆ ಲಾ ಯನ್ನು ಬದಲಾಯಿಸಕೂಡದೆ?

ಮ್ಯಾ—ಇಲ್ಲ. ಅದು ನನ್ನ ಕೃತ್ಯವಲ್ಲ.

ಅ—ನಾನು ಯೋಗ್ಯಮನುಷ್ಯನು ಮತ್ತು ಸನ್ಮಾರ್ಗದಿಂದ ಜೀವಿಸಬೇಕಾಗಿದೆ.

ಪೋಲೀಸು ಅಧಿಕಾರಿ—ಈ ಮನುಷ್ಯನಿಗೆ ಹಿಂದೆ 20 ವೇಳೆ ಶಿಕ್ಷೆಯಾಗಿದೆ.

ಮ್ಯಾ—ಅದು ನಿಜವೇ, ನೀನು ಒಪ್ಪಿಕೊಳ್ಳುತ್ತೀಯಾ?

ಅ—ಹೌದು. ಆದರೆ ನಾನು ಕೆಟ್ಟವನಾಗಿದ್ದಾಗ್ಗೆ ಅದು ನಡೆದುದು. ತದಾರಾಭ್ಯ ನನ್ನ ಜನ್ಮವೇ ಬದಲಾಯಿಸಿದೆ (ಎಲ್ಲರೂ ನಗುವರು).

ಮ್ಯಾ—ನೀನು ಹಾಗಾದುದು ನನಗೆ ಸಂತೋಷ, ಆದರೆ ಲಾ ಪ್ರಕಾರ ನಾನು ನಡೆದುಕೊಳ್ಳಬೇಕಾಗಿದೆ. ಎಂದು ಹೇಳಿ ಒಂದುವರ್ಷ ಕಠಿಣಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದನು. ಅಪರಾಧಿಯು ಅದನ್ನು ಪ್ರತಿಭಟಿಸಿ ಮಾತಾಡಲಾಗಿ ಕೋರ್ಟಿನಿಂದ ಹೊರಕ್ಕೆಳೆದುಕೊಂಡು ಹೋಗಲ್ಪಟ್ಟನು.

ಕರ್ನಾಟಕ ವಿಶ್ವವಿದ್ಯಾನಿಲಯದ ಉಪಸಭೆ.

ಪ್ರಕಟನೆ.

ಇದೇ ಮೇ ತಿಂಗಳು ಬಳ್ಳಾರಿಯಲ್ಲಿ ಸಾಹಿತ್ಯಸಮ್ಮೇಳನದೊಂದಿಗೆ ಕರ್ನಾಟಕವಿಶ್ವವಿದ್ಯಾಪೀಠದ ಬಗ್ಗೆ ಸಮ್ಮೇಳನವೊಂದು ನಡೆಯಲಿರುವುದು. ಆ ಸಮ್ಮೇಳನದಲ್ಲಿ ವಿದ್ಯಾಪೀಠವೆಂತಹದಾಗಿರಬೇಕು, ಮತ್ತು ಸ್ಥಾಪನೆಯ ಮಾರ್ಗಗಳು ಯಾವುವು ಎಂಬ ವಿಷಯಗಳು ಚರ್ಚಿಸಲ್ಪಡುವುವು. ಈ ವಿಷಯದಲ್ಲಿ ಕ. ಪ್ರಾಂ. ಕಾಂಗ್ರೆಸ್ ಕಮಿಟಿಯವರು ಒಂದು ಪ್ರಶ್ನಮಾಲೆಯನ್ನು ಪ್ರಕಟಿಸಿರುವರು. ಆ ಪ್ರಶ್ನಮಾಲೆಯನ್ನೇ ಮೇಲ್ಕಂಡ ಉಪಸಭೆಯವರು ಅಂಗೀಕರಿಸಿರುವರು. ಕ. ಪ್ರಾಂ. ಕಾಂಗ್ರೆಸ್ ಕಮಿಟಿಗೆ ತಮ್ಮ ಉತ್ತರಗಳನ್ನು ಕಳುಹಿಸದಿರುವವರು ದಯೆಯಿಟ್ಟು ತಮ್ಮ ಉತ್ತರಗಳನ್ನು ಕೆಳಗಿನ ವಿಳಾಸಕ್ಕೆ ಮೇ ತಿಂಗಳು 10 ನೆಯ ತಾರೀಖಿನೊಳಗಾಗಿ ಕಳುಹಿಸಬೇಕು.

ಕಾರ್ಯದರ್ಶಿ,
ಕರ್ನಾಟಕ ವಿಶ್ವವಿದ್ಯಾನಿಲಯದ ಉಪಸಭೆ,
ಕರ್ನಾಟಕ ಸಾಹಿತ್ಯಪರಿಷತ್ತು, ಬೆಂಗಳೂರು ಸಿಟಿ.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಶಿವಮೊಗ್ಗಾ ಡಿ|| ತತ್ತೂರು ಮ|| ಶ್ರೀಕಂಠಗೌಡರ ಅಣ್ಣ ಕೈ|| ವೀರಪ್ಪಗೌಡರ ಧರ್ಮಪತ್ನಿ ಹಾಲಮ್ಮಾಜಿಯವರು ಗತಿಸಿದ ವೇಳೆ ನಡೆದ ಗಣಾರಾಧನೆಕಾಲದಲ್ಲಿ ತೆಗೆದ 2 ರೂ. ಮ|| ಶ್ರೀಕಂಠಗೌಡರಿಂದ ಬಂದದ್ದು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ?

ಕಾವ್ಯತೀರ್ಥೋಪನಾಮಕ ಕಾಶೀನಾಥಕೃತ ವೀರಶೈವಬ್ರಾಹ್ಮಣಸನ್ಯಾಸಾಶ್ರಮ ವಿಮರ್ಶಸ್ಯ ಖಂಡನಂ.

(ಹಿಂದಿನಿಂದ ಮುಂದರಿದುದು.)

ಕಿಂಚ - ಸಂಸ್ಕಾರಕತ್ವಾದ್ಗುರುಃ - ಇತಿ ಕೋಶೋಕ್ತ್ಯಾ ಸಂಸ್ಕಾರಕತ್ವ ಅಪೂರ್ವಕ ಕ್ರಿಯೋಪದೇಶಾಧ್ಯಯನಾಧಿಕಾರಸಂಪಾದಕತ್ವರೂಪಂ ಸಾಧಾರಣಗುರುತ್ವಮೇವ, ಪಂಚಾಚಾರ್ಯೇಷುವರ್ತತೇ. ಜಂಗಮೇಷುತು ಸಂಸಾರನಿವೃತ್ತಿಹೇತುಭೂತತತ್ವಜ್ಞಾನೋಪದೇಶಾದಿಕರ್ತೃತ್ವೇನ ನಿರತಿಶಯಂ ಗುರುತ್ವಮಸ್ತಿ. ಪರೀಕ್ಷ್ಯಲೋಕಾನ್ ಕರ್ಮಚಿತಾನ್, ಇತ್ಯಾರಭ್ಯ ತತ್ವತೋಬ್ರಹ್ಮವಿದ್ಯಾಂ ಇತ್ಯಾದ್ಯುದಾಹೃತಶ್ರುತಯಸ್ತು ಅತ್ಯಾಶ್ರಮಿ ಷಟ್ಸ್ಥಲಬ್ರಹ್ಮಿವಿರಕ್ತಾದ್ಯಪರಪರ್ಯಾಯನಿರತಿಶಯಗುರುತ್ವಪ್ರತಿಬೋಧಕಾಏವ. ಸಿದ್ಧಾಂತಶಿಖಾಮಣಿನಾಮಕಗ್ರಂಥವ್ಯಾಖ್ಯಾನಾವಸರೇ ಮಹಾವಿರಕ್ತೈರ್ಮರಿತೋಂಟದಾರ್ಯೈಃ ಗುರುಶಬ್ದಸ್ಯ ಭುವನಪ್ರಸಿದ್ಧಪಂಚಾಚಾರ್ಯಾ ಇತಿ ವ್ಯಾಖ್ಯಾನಕರಣಂ - ಯಥಾವೇಮಾನುಷೋಭಾವೋನಸಭವೇತ್ ಕ್ಷಿತಿಮಂಡಲೇ | ತಥಾಪ್ರಸಾದಂದೇವೇಶವಿದೇಹು ಕರುಣಾನಿಧೇ || ಇತ್ಯಾರಭ್ಯ || ಅಸ್ಪೃಶ್ಯಾನುಷಂ ಭಾವಂಲಿಂಗಾತ್ಪ್ರಾದುರ್ಭವಿಷ್ಯಸಿ - ಇತಿಪ್ರಮಾಣೇನ ತೇಷಾಂ ಪಂಚಾಚಾರ್ಯಾಣಾಂ ದಿವ್ಯಶರೀರತ್ವಾದಿನಿಬಂಧನಮೇವ. ನತು ತೇಷು ಸ್ವನಿರೂಪಿತಗುರುತ್ವಸ್ಥಾಪನಾರ್ಥಂ. ಪಂಚಾಚಾರ್ಯಾಃ ಭೂಲೋಕೇ ಅವತರಣಾತ್ಪ್ರಾಕ್‌ಶಿವಸಮೀಪವರ್ತಿನಃ ಪ್ರಮಥಪದವಾಚ್ಯಾಃಖಲು. ನತು ಶಿವೈಕ್ಯವಿಶಿಷ್ಟ ಜಂಗಮಶಬ್ದವಾಚ್ಯಾಃ-ತೇನ ಕಾವ್ಯತೀರ್ಥೇನ ಪ್ರಮಾಣೀಕೃತ ಮರಿತೋಂಟದಾರ್ಯಕೃತವೀರಶೈವಾನಂದಚಂದ್ರಿಕಾಯಾಂ ಪ್ರಥಮಕಾಂಡೇ - ಶಿಷ್ಯಾಸ್ಸಂಚಗುರುರ್ಮಾತಾಗುರೋರ್ಮಾತಾತುಜಂಗಮಃ | ಜಂಗಮಸ್ಯ ನಮಾತಾಸ್ತಿ ಆದಿನಾಥಸ್ತು ಜಂಗಮಃ || ಶಿಷ್ಯೋತ್ಪತ್ತಿರ್ಗುರೋಶ್ಚೈವ ಗುರೋತ್ಪತ್ತಿಸ್ತು ಜಂಗಮಾತ್ | ಜಂಗಮೋತ್ಪತ್ತಿಶೂನ್ಯತ್ವಾತ್ ತಚ್ಛೂನ್ಯೋಜಂಗಮೋಭವೇತ್ - ಇತ್ಯಾಕಾರಕಂಗುರೂಣಾಂ ಜಂಗಮಶಿಷ್ಯತ್ವಪ್ರತಿಪಾದಕಂ ವಚನಜಾತಂದೃಶ್ಯತೇ-ವರ್ಣಾಶ್ರಮಧರ್ಮಸಹಿತಾಃ ಇದಾನೀಂತನಾಃ ಪಂಚಾಚಾರ್ಯಾಃ ಕೇವಲಪರಮಾತ್ಮಧ್ಯಾನತತ್ಪರಾಃ ನಿವೃತ್ತವರ್ಣಾಶ್ರಮಧರ್ಮಾಃ ಅತಿವರ್ಣಾಶ್ರಮಿಶಬ್ದವಾಚ್ಯಾಯದಿ ತದಾಜಂಗಮಸಾದೃಶ್ಯಂ ಪ್ರಾಪ್ಯ - ಜಂಗಮೋಜಂಗಮಂದೃಷ್ಟ್ವಾನಪ್ರಣಾಮಂಕರೋತಿಯಃ | ಸಏವ ಜಂಗಮದ್ರೋಹೀ ಮದ್ರೋಹೀಚನಸಂಶಯಃ || ಇತ್ಯುಕ್ತಿಮನುಸೃತ್ಯ ತದ್ವತ್ ಪೂಜ್ಯತಮಾಭವೇಯುಃ ನೈವತಥಾದೃಶ್ಯತೇ. ಏವಂಸ್ಥಿತೇ ಅತಿವರ್ಣಾಶ್ರಮಿಶಬ್ದವಾಚ್ಯಜಂಗಮೈಃ ಪಂಚಾಚಾರ್ಯನಿರೂಪಿತಶಿಷ್ಯತ್ವವಿಶಿಷ್ಟೈಃ ಭವಿತವ್ಯಮಿತಿ ಪ್ರಲಪಿತಂ ಅಂಧಸ್ಯ ಜಾತ್ಯಂಧಯಷ್ಟಿಪ್ರದಾನಮನುಕರೋತಿ.

ಶಾಸ್ತ್ರೋಕ್ತಮಠಸ್ಥಲಸಮುತ್ಪನ್ನತ್ವ ಶಾಂತತ್ವ ನಿರ್ಮತ್ಸರ್ಯಾದಿಗುಣಯುಕ್ತಾಃ ಬ್ರಹ್ಮಚರ್ಯಾಶ್ರಮನಿಷ್ಠಾ ಗುರವಏವ ಪರಿಪಕ್ವಾಂತಃಕರಣಾ ಜಂಗಮತ್ವಪ್ರಾಪ್ತಿಯೋಗ್ಯಾ ಭವೇಯುಃ ಕಿಂತು ತಾದೃಶವೈರಾಗ್ಯಾವಲಂಬನೇ ಅಶಕ್ತಾಃ ಸಾಂಸಾರಿಕಸುಖಸಕ್ತಾ ಯದಿ ಸ್ವೀಯಮಧಿಕಾರಂ ಸ್ವವಂಶೋತ್ಪನ್ನಶಿಷ್ಯೇಷು ಸಂಸ್ಥಾಪ್ಯ ಗೃಹಸ್ಥಾಭವೇಯುಃ. ಆರೂಢಶಬ್ದವಾಚ್ಯಾಃ ಜಂಗಮಾಸ್ತು ಸ್ವಧರ್ಮವಿಭ್ರಷ್ಟಾಯದಿ (- ಆರೂಢೋ ನೈಷ್ಠಿಕಂಧರ್ಮಂ ಯಸ್ತು ಪ್ರಚ್ಯವತೇನರಃ | ಪ್ರಾಯಶ್ಚಿತ್ತಂನಪಶ್ಯಾಮಿಯೇನ ಶುದ್ಧ್ಯೇತ್ಸ ಆತ್ಮಹಾ -) ಇತ್ಯುಕ್ತರೀತ್ಯಾ ಪತಿತಾಭವೇಯುರೇವ ತಸ್ಮಾತ್ ಗುರ್ವಪೇಕ್ಷಯಾ ಜಂಗಮಾನಾಂ ಆಧಿಕ್ಯಮಪಹ್ನೋತುಮನೇಕವತ್ಸರಾನುಷ್ಠಿತತಪೋಮಹಿಮ್ನಾಪಿ ನಶಕ್ಯಮೇವೇತಿ ನಿರ್ವಿವಾದಃ. ಏತನ್ಮತಸಿದ್ಧಾಂತಸ್ವಾವರಣಾಂತಃಪ್ರವಿಷ್ಟ ಪರಸ್ಪರವ್ಯಾವೃತ್ತಗುರುಜಂಗಮಲಕ್ಷಣಪರಿಜ್ಞಾನವಾನ್ ಯದಿ ಕಾವ್ಯತೀರ್ಥಬಿರುದಃ ಕಾಶೀನಾಥಶಾಸ್ತ್ರೀ ಏವಂ ನಪ್ರಲಪೇತ್. ಪಂಚಮುದ್ರಾಧಾರಿಣೋ ವಿರಕ್ತಾಃ ಗಾರ್ಹಸ್ಥ್ಯಬ್ರಹ್ಮಚರ್ಯಾದ್ಯಾಶ್ರಮಯುಕ್ತಪಂಚಾಚಾರ್ಯಾನ್ ಶರಣಂಗತಾಃ ತದುಪದಿಷ್ಟಬ್ರಹ್ಮಜ್ಞಾನಿನಃ ಮುಕ್ತಾಭವಿತುಮರ್ಹಂತಿ ಇತಿಕಾವ್ಯತೀರ್ಥೋಕ್ತಿಃ ಗಗನಾರವಿಂದಮಕರಂದವಾರ್ತಾಮನುಸರತಿ.

ಕಿಂಚ ವಿರಕ್ತಾಃ ಶಾಸ್ತ್ರಸಿದ್ಧಂ ಸ್ವೀಯಂ ಶಿಷ್ಯತ್ವಂ ಪರಿತ್ಯಜ್ಯ. ಸ್ವೇಷು ಗುರುತ್ವಂ ಆರೋಪ್ಯ, ಕ್ರಿಸ್ತಶಕದ್ವಾದಶಶತಾಬ್ದಾನಂತರಂ ಸ್ವಯಮೇವ ಗುರವಃ ಪಂಚಾಚಾರ್ಯಾಃ ಮದಂತೇವಾಸಿನ ಇತಿ ಪ್ರಥಯಂತಿ. ಅಸ್ಯಚ ಅನ್ಯತ್ಕಾರಣಮಸ್ತಿ. ಇತ್ಯಾಕಾರಕಃ ಕಶ್ಚನ ಪಿಶಾಚಃವೀರಶೈವಸಮಾಜೇ ಕಾವ್ಯತೀರ್ಥೇನ ಪ್ರಾದರ್ಶಿ. ಏತತ್ಪಿಶಾಚೋಚ್ಚಾಟನಸಮರ್ಥ ವೀರಶೈವಸಿದ್ಧಾಂತನಾಮ ಮಹಾಮಂತ್ರವಿಶೇಷಃ ಜಾಗರೂಕಸ್ತಿಷ್ಠತಿ ತಥಾಚ ಸ್ವಾಯಂಭುವಾಗಮೇ - ಅಥತಚ್ಚರಲಿಂಗಸ್ಯಮಾಹಾತ್ಮ್ಯಂಶೃಣುಪಾರ್ವತಿ | ಆದೌತಚ್ಚರಲಿಂಗಂತು ನಿರಂಜನಮಿತಿಶ್ರುತಂ || ತ್ರೇತಾಯಾಂತುತದೇವಸ್ಯಾನ್ನಿರ್ಮಾಯಮಿತಿ ಕೀರ್ತಿತಂ | ದ್ವಾಪರೇ ನಿಷ್ಕಲಂಚೇತಿ ವಿಖ್ಯಾತಂಚ ತದೇವ ಹಿ || ಕಲೌ ಪ್ರಭುರಿತಿ ಖ್ಯಾತಂ ತಚ್ಚನಾಮಾನಿ ವೈಕ್ರಮಾತ್ | ಕಲೌತತ್ಪ್ರಭುದೇವಸ್ಯ ಪೀಠಂ ಕಲ್ಯಾಣಪತ್ತನೇ || ಶೂನ್ಯಸಿಂಹಾಸನಂ ಚೇತಿ ತದೇವ ಪ್ರಥಿತಂಭುವಿ | ಪ್ರಭೋರನ್ವಯಜಾತಾನಾಂ ಚರಾಣಾಂ ಲಕ್ಷಣಂಶೃಣು || ಕಲಕೋವಜ್ರರೂಪಸ್ತು ಗೋಪ್ಯಾನನ ಸಮುದ್ಭವಃ ಮೂಲಪ್ರಣವ ಸಂಯುಕ್ತೋಗಂಗಾತೋಯಪ್ರಪೂರಿತಃ || ಜಟಿನೋಮುಂಡಿನೋವಾಪಿಶಿಖಿನೋ ವಾಪಿ ಸಂತತಂ | ಭಿಕ್ಷಾಶಿನೋ ಭಯಾತೀತಾಃ ಕಾಷಾಯವಸನಾವೃತಾಃ || ದಂಡಕೌಪೀನಕಂಥಾದಿ ಪಂಚಮುದ್ರಾ ವಿರಾಜಿತಾಃ | ನಿಷ್ಕಾಮಾ ನಿರಹಂಕಾರಾ ನಿರುತ್ಸುಕಾ ನಿರಾಮಯಾಃ || ನಿಸ್ಸ್ಪೃಹಾ ನಿಜಲಿಂಗೈಕ್ಯಾ ನಿರಪೇಕ್ಷಾ ನಿರಾಕುಲಾಃ | ಸರ್ವಭೂತದಯಾ ಯುಕ್ತಾ ನಿರಾಭಾರಾ ಇತಿಸ್ಮೃತಾಃ || ಇತ್ಯಾದಿ ಪ್ರಮಾಣಸಹಸ್ರಸದ್ಭಾವೇಪಿ ತತ್ಸರ್ವಮನವಲೋಕ್ಯಾಯಂ ಕಾಶೀನಾಥಶಾಸ್ತ್ರೀ ಕುಮಾರ್ಗಪ್ರವಿಷ್ಟೋನ್ಮತ್ತಗಜ ಇವಾಗಾಧೇಗರ್ತೇಪತತಿ.

(ಸಶೇಷಃ.)

ಮತ್ತು - ಸಂಸ್ಕಾರಕತ್ವಾದ್ಗುರುಃ - ಹೀಗೆಂಬ ಅಮರಕೋಶವಚನವಿರುವುದರಿಂದ ಪಂಚಾಚಾರ್ಯರಲ್ಲಿ ಶಿಷ್ಯರಿಗೆ ಸಂಸ್ಕಾರವಮಾಡಿ ವೀರಶೈವಕರ್ಮಗಳನ್ನುಪದೇಶಿಸಿ ವೇದಾಧ್ಯಯನದಲ್ಲಧಿಕಾರವನ್ನುಂಟುಮಾಡಿಕೊಡುವ ಸಾಮಾನ್ಯಗುರುತ್ವವೇ ಇದೆ. ಜಂಗಮರಲ್ಲಾದರೋ ಜನನ ಮರಣಗಳ ನಿವೃತ್ತಿಗೆ ಕಾರಣವಾದ ತತ್ವಜ್ಞಾನೋಪದೇಶ ಮೊದಲಾದವುಗಳಲ್ಲಿ ಕರ್ತೃತ್ವವಿರುವುದರಿಂದ ಅತ್ಯತಿಶಯವಾದ ಗುರುತ್ವವಿದೆ. - ಪರೀಕ್ಷ್ಯಲೋಕಾನ್ ಕರ್ಮಚಿತಾನ್ - ಈ ವಚನ ಮೊದಲಾಗಿ - ತತ್ವತೋಬ್ರಹ್ಮವಿದ್ಯಾಂ - ಇತ್ಯಾದಿ ಉದಹರಿಸಲ್ಪಟ್ಟಿರುವ ಶ್ರುತಿಗಳಾದರೋ ಅತ್ಯಾಶ್ರಮಿ, ಷಟ್ಸ್ಥಲಬ್ರಹ್ಮಿ, ವಿರಕ್ತ ಮೊದಲಾದ ಬೇರೆಬೇರೆ ಹೆಸರುಗಳುಳ್ಳ ಜಂಗಮರಿಗೆ ಅತ್ಯತಿಶಯವಾದ ಗುರುತ್ವವಂ ಬೋಧಿಸುವವುಗಳಾಗಿರುತ್ತವೆ. ಮಹಾವಿರಕ್ತರಾದ ಮರಿತೋಂಟದಾರ್ಯರು ಸಿದ್ಧಾಂತಶಿಖಾಮಣಿ ಎಂಬ ಗ್ರಂಥಕ್ಕೆ ವ್ಯಾಖ್ಯಾನವಂ ಬರೆಯುವ ಸಮಯದಲ್ಲಿ ಗುರುಶಬ್ದಕ್ಕೆ - ಭುವನಪ್ರಸಿದ್ಧಪಂಚಾಚಾರ್ಯರು - ಎಂದು ವ್ಯಾಖ್ಯಾನಮಾಡಿರತಕ್ಕದು -ಯಥಾವೇ........ನಿಧೇ- ಇದು ಮೊದಲಾಗಿ - ಅಸ್ಪೃಶನ್ಯಾ............ಸಿ - ಎಂಬ ಪ್ರಮಾಣದಿಂದ ಆ ಪಂಚಾಚಾರ್ಯರಿಗೆ ದಿವ್ಯಶರೀರವುಳ್ಳತನವೇ ಮೊದಲಾದುದನ್ನು ಹೇಳುವುದಕ್ಕಾಗಲ್ಲದೆ ಅವರಲ್ಲಿ ತನ್ನಿಂದ (ಕಾಶಿನಾಥಶಾಸ್ತ್ರಿ) ನಿರೂಪಿಸಲ್ಪಟ್ಟಿರುವ ಗುರುತ್ವವಂ ಸ್ಥಾಪಿಸುವುದಕ್ಕಾಗಲ್ಲವು. ಪಂಚಾಚಾರ್ಯರು ಭೂಲೋಕಕ್ಕೆ ಬರುವುದಕ್ಕಿಂತ ಹಿಂದೆ ಶಿವನ ಸಮೀಪದಲ್ಲಿರುತ್ತ ಪ್ರಮಥರೆನಿಸಿಕೊಂಡಿದ್ದರಲ್ಲದೆ ಶಿವೈಕ್ಯ ವಿಶಿಷ್ಟ ಜಂಗಮಪದವಾಚ್ಯರಾಗಿರಲಿಲ್ಲವು. ಕಾವ್ಯತೀರ್ಥ ಬಿರುದಾಂಕಿತನಾದ ಆ ಕಾಶೀನಾಥಶಾಸ್ತ್ರಿಯಿಂದ ಪ್ರಮಾಣವಾಗಿ ಕೊಡಲ್ಪಟ್ಟಿರುವ ಮರಿತೋಂಟದಾರ್ಯವಿರಚಿತವಾದ ವೀರಶೈವಾನಂದಚಂದ್ರಿಕೆ ಎಂಬ ಗ್ರಂಥದ ಮೊದಲನೆಯ ಕಾಂಡದಲ್ಲಿರುವ - ಶಿಷ್ಯಾಸ್ಸಂಚಗುರು ....ಭವೇತ್ - ಎಂಬ ವಚನಸಮೂಹವು ಗುರುಗಳು ಜಂಗಮರ ಶಿಷ್ಯರು ಎಂಬರ್ಥವನ್ನು ಹೇಳತಕ್ಕುದಾಗಿದೆ ಎಂದು ಕಾಣುತ್ತದೆ. ವರ್ಣಾಶ್ರಮಧರ್ಮಗಳಿಂದ ಕೂಡಿದ ಈಗಿರುವ ಪಂಚಾಚಾರ್ಯರ್ಕರು ಪರಶಿವಧ್ಯಾನವೊಂದರಲ್ಲೇ ಆಸಕ್ತರೂ, ವರ್ಣಾಶ್ರಮಧರ್ಮಗಳಿಂದ ನಿವೃತ್ತರೂ, ಅತಿವರ್ಣಾಶ್ರಮಿಶಬ್ದವಾಚ್ಯರೂ ಆದರೆ ಆಗ ಜಂಗಮರೊಡನೆ ಸಮಾನರಾಗಿ - ಜಂಗಮೋ ಜಂಗಮಂದೃಷ್ಟ್ವಾ........ನಸಂಶಯಃ - ಹೀಗೆಂಬ ವಚನವನ್ನನುಸರಿಸಿ ಅವರ ಹಾಗೆ ಅತ್ಯಂತ ಪೂಜ್ಯರಾಗಬಹುದು. ಈಗಿನ ಪಂಚಾಚಾರ್ಯರು ಹಾಗಿರುವಂತೆ ಕಾಣಲ್ಪಡತಕ್ಕವರಾಗಿಲ್ಲವು.—ಈರೀತಿ ಇರುತ್ತಿರಲು ಅತಿವರ್ಣಾಶ್ರಮಿಗಳಾದ ಜಂಗಮರು ಪಂಚಾಚಾರ್ಯರಿಗೆ ಶಿಷ್ಯರಾಗಿರಬೇಕೆಂದು ಪ್ರಲಾಪಮಾಡತಕ್ಕದ್ದು (ಕುರುಡನಿಗೆ ಹುಟ್ಟುಕುರುಡನ ದಂಡಪ್ರದಾನವನ್ನನುಕರಿಸುತ್ತದೆ) ಹುಟ್ಟಿದಮೇಲೆ ಕಣ್ಣುಹೋದವನು ಹುಟ್ಟುಕುರುಡನ ಕೈಕೋಲನ್ನು ಹಿಡಿದು ನಡೆಯುವುದನ್ನನುಕರಿಸುತ್ತದೆ.

ಶಾಸ್ತ್ರೋಕ್ತವಾದ ಮಠಸ್ಥಲದಲ್ಲಿ ಹುಟ್ಟಿರುವಿಕೆ, ಶಾಂತತೆ ಅನ್ಯರಿಗುಂಟಾಗುವ ಶುಭವನ್ನು ನೋಡಿ ದ್ವೇಷಿಸದಿರುವಿಕೆ ಮೊದಲಾದ ಗುಣಗಳಿಂದ ಕೂಡಿ, ಬ್ರಹ್ಮಚರ್ಯಾಶ್ರಮಧರ್ಮನಿರತರಾದ ಗುರುಗಳೇ ಪರಿಪಾಕವಂ ಹೊಂದಿದಂತಃಕರಣಗಳುಳ್ಳವರಾದರೆ ಜಂಗಮರಾಗಲು ಯೋಗ್ಯರಾಗುವರು. ಅಂತಹ ವೈರಾಗ್ಯವನ್ನಾಶ್ರಯಿಸಲಸಮರ್ಥರಾಗಿ ಸಾಂಸಾರಿಕಸುಖದಲ್ಲಾಸಕ್ತರಾದರೆ ತಮ್ಮ ಅಧಿಕಾರವನ್ನು ತಮ್ಮ ವಂಶದಲ್ಲಿ ಹುಟ್ಟಿದ ಶಿಷ್ಯರಿಗೆ ಬಿಟ್ಟುಕೊಟ್ಟು ಮದುವೆಮಾಡಿಕೊಳ್ಳುವರು. ಆರೂಢರೆನಿಸಿದ ಜಂಗಮರಾದರೋ ತಮ್ಮ ಧರ್ಮದಿಂದ ತಪ್ಪಿದವರಾದರೆ, - ಆರೂಢೋ.... ....ಆತ್ಮಹಾ - ಹೀಗೆಂದು ಹೇಳಲ್ಪಟ್ಟಿರುವ ವಚನರೀತ್ಯಾ ಪತಿತರೇ ಆಗುವರು. ಆದುದರಿಂದ ಗುರುಗಳಿಗಿಂತ ಜಂಗಮರಿಗಿರುವ ಆಧಿಕ್ಯವನ್ನು ಮರೆಮಾಜಲು ಅನೇಕ ವರ್ಷಗಳವರೆಗೆ ತಪಸ್ಸನ್ನುಮಾಡಿ ಮಹಿಮೆಯನ್ನು ಸಂಪಾದಿಸಿದವನಿಂದಲೂ ಶಕ್ಯವಲ್ಲವೆನ್ನುವುದರಲ್ಲಿ ಯಾವ ವಿವಾದವೂ ಇಲ್ಲವು. ಕಾವ್ಯತೀರ್ಥ ಎಂಬ ಬಿರುದನ್ನು ಹೊಂದಿರುವ ಕಾಶೀನಾಥಶಾಸ್ತ್ರಿಯು ಈ ಮತದಲ್ಲಿ ರೂಢವಾಗಿರುವ ಅಪ್ಪಾವರಣದೊಳಗೆ ಸೇರಿರುವ ಒಂದಕ್ಕೊಂದಕ್ಕೆ ಹಾರತಮ್ಯವುಳ್ಳ ಗುರುಜಂಗಮರ ಲಕ್ಷಣವನ್ನು ತಿಳಿದವನಾಗಿದ್ದರೆ ಈರೀತಿ ಪ್ರಲಾಪವಂ ಮಾಡುತ್ತಿರಲಿಲ್ಲ. ಪಂಚಮುದ್ರೆಗಳನ್ನು ಧರಿಸಿದ ವಿರಕ್ತರು ಗಾರ್ಹಸ್ಥ್ಯ ಬ್ರಹ್ಮಚರ್ಯ ಮೊದಲಾದ ಆಶ್ರಮಧರ್ಮಗಳಿಂದೊಡಗೂಡಿದ ಪಂಚಾಚಾರ್ಯರ ಮರೆಹೊಕ್ಕು ಅವರಿಂದುಪದೇಶವಂ ಪಡೆದು ಬ್ರಹ್ಮಜ್ಞಾನಿಗಳಾಗಿ ಮುಕ್ತರಾಗುವದಕ್ಕೆ ಅರ್ಹರಾಗಿರುತ್ತಾರೆಂಬ ಕಾವ್ಯತೀರ್ಥನ ಮಾತು ಆಕಾಶಕಮಲದಲ್ಲಿ ಮಕರಂದವುಂಟಾಗಿದೆ ಎಂಬ ವಾಕ್ಯಕ್ಕೆ ಸಮಾನವಾಗಿದೆ.

ಮತ್ತು ವಿರಕ್ತರು ಶಾಸ್ತ್ರಸಿದ್ಧವಾದ ತಮ್ಮ ಶಿಷ್ಯಭಾವವನ್ನು ಬಿಟ್ಟು ತಮ್ಮಲ್ಲಿ ಗುರುತ್ವವನ್ನಾರೋಪಿಸಿಕೊಂಡು ಕ್ರಿ. ಶ. 112 ವರ್ಷಗಳು ಕಳೆದುಹೋದಮೇಲೆ ತಾವೇ ಗುರುಗಳೆಂದೂ, ಪಂಚಾಚಾರ್ಯರು ತಮ್ಮ ಶಿಷ್ಯರೆಂದೂ ಪ್ರಸಿದ್ಧರಾಗಿದ್ದಾರೆ. ಇದಕ್ಕೆ ಮತ್ತೊಂದು ಕಾರಣವಿದೆ ಎಂಬ ಒಂದು ದೆವ್ವವನ್ನು ಕಾಶೀನಾಥನು ವೀರಶೈವಸಮಾಜದಲ್ಲಿ ತೋರಿಸಿರುವನು. ಈ ದೆವ್ವವನ್ನು ಓಡಿಸುವದರಲ್ಲಿ ಶಕ್ತವಾದ ವೀರಶೈವಸಿದ್ಧಾಂತವೆಂಬ ಮಹಾಮಂತ್ರವಿಶೇಷವು ಎಚ್ಚರದಿಂದಿರುತ್ತದೆ. ತಥಾಚ, ಸ್ವಾಯಂಭುವಾಗಮದಲ್ಲಿ - ಅಥತಚ್ಚರ........ಇತಿಸ್ಮೃತಾಃ - ಇದು ಮೊದಲಾದನೇಕ ಪ್ರಮಾಣಗಳಿರುತ್ತಿದ್ದಾಗ್ಯೂ ಈ ಕಾಶೀನಾಥಶಾಸ್ತ್ರಿಯು ಅದೆಲ್ಲವನ್ನೂ ನೋಡದೆ ಕೆಟ್ಟಹಾದಿಯಲ್ಲಿ ನಡೆಯತಕ್ಕ ಹುಚ್ಚುಹಿಡಿದ ಆನೆಯಂತೆ ಆಳವಾದ ಹಳ್ಳದಲ್ಲಿ ಬಿದ್ದಿರುತ್ತಾನೆ.

(ಸಶೇಷ.)

ಗುಂಡ್ಲುಪೇಟೆಯ ಶ್ರೀರಾಮದೇವರ ರಥೋತ್ಸವ.

ಗುಂಡ್ಲುಪೇಟೆಯಲ್ಲಿ ಶ್ರೀರಾಮನವಮಿ ದಿವಸ ಶ್ರೀರಾಮದೇವರ ರಥೋತ್ಸವವು ಪದ್ಧತಿಯಮೇರಿಗೆ ಯಥಾವಿಧಿಯಾಗಿ ಬಹಳ ವಿಜೃಂಭಣೆಯಿಂದ ಈ ಸಾರಿಯೂ ನಡೆಯಿತು. ರಥೋತ್ಸವವಾದನಂತರ ಇದೇ ಊರಲ್ಲಿರುವ ಮ|| ಚಿಲ್ಲರೆ ಅಂಗಡಿ ಬಸಪ್ಪನವರು ಸುಮಾರು ಎರಡುಸಾವಿರ ಜನರಿಗೆ ತೃಪ್ತಿಯಾಗುವಂತೆ ಭೋಜನಮಾಡಿಸಿದ್ದಕ್ಕಾಗಿ ಸರ್ವರೂ ಬಹಳ ಸಂತೋಷಪಟ್ಟರು. ಈ ರೀತಿಯಾಗಿ ಧರ್ಮಕಾರ್ಯವನ್ನು ನೆರವೇರಿಸಿದ ಮ|| ಬಸಪ್ಪನವರಿಗೂ, ಇವರ ಕುಟುಂಬವರ್ಗದವರಿಗೂ ಶ್ರೀರಾಮನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ವಿ. ಕೆ. ನಂಜುಂಡಯ್ಯ,
ಕೂ. ರಂ. ವೆಂಕಟಶೆಟ್ಟಿ, } ಕಾರ್ಯದರ್ಶಿಗಳು.

ಶಿವಭಜನಾಮಹೋತ್ಸವ.

ಕಡೂರು ತಾ|| ಬಿದರೆ ಹೋ|| ಮಲ್ಲೇನಹಳ್ಳಿಯಲ್ಲಿ ವಿರಕ್ತಮಠದ ಪಂಚಾಕ್ಷರಪ್ಪಯ್ಯನವರು, ಪಟೇಲರು ಮೊದಲಾಗಿ ವೀರಶೈವಮಹನೀಯರು ತಾ|| 18-3-26 ರಿಂದ 24 ದಿವಸಗಳವರಿವಿಗೆ ಶಿವಭಜನೆಯನ್ನು ಅತಿಭಕ್ತಿಯಿಂದ ನಡಿಸಿ ತಾ|| 10-4-26 ರಲ್ಲಿ ವಡೇರಹಳ್ಳಿಯಿಂದ ಶ್ರೀ ಗಂಗಾಧರೇಶ್ವರಸ್ವಾಮಿಯನ್ನು ಮಠಕ್ಕೆ ಬರಮಾಡಿಕೊಂಡು ತುಮಕೂರು ಗುಬ್ಬಿ ಮೊದಲಾದ ಸ್ಥಳಗಳಿಂದ ಬಂದಿದ್ದ ಪಟ್ಟದಸ್ವಾಮಿಗಳವರಿಂದ ರುದ್ರಾಭಿಷೇಕ ಮೊದಲಾದ ಪೂಜೆಗಳು ನಡಿಸಲ್ಪಟ್ಟಮೇಲೆ ಶ್ರೀ ಗಂಗಾಧರೇಶ್ವರಸ್ವಾಮಿಯ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಮಾಡಿ ಬಂದಿದ್ದ ಸುಮಾರು 1200 ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಮಾಡಿಸಿ ವಿರಕ್ತ ಮತ್ತು ಪಟ್ಟದಸ್ವಾಮಿಗಳವರಿಗೆ ಯಥೋಚಿತವಾಗಿ ಮರ್ಯಾದೆಯನ್ನು ಮಾಡಿದರು. ಈ ಗ್ರಾಮವು ಬಹಳ ಚಿಕ್ಕದಾದರೂ ಇಲ್ಲಿಯ ವೀರಶೈವರು ಇಷ್ಟು ಭಕ್ತಿವಿಶ್ವಾಸದಿಂದ ಶಿವಭಜನೆಯನ್ನೂ ದೇವತೋತ್ಸವವನ್ನೂ ಅನ್ನಸಂತರ್ಪಣೆಯನ್ನೂ ನಡಿಸಿದುದಕ್ಕಾಗಿ ಶ್ರೀ ಗಂಗಾಧರೇಶ್ವರನು ಅವರಿಗೆ ಸನ್ಮಂಗಳವನ್ನು ಮಾಡಲಿ.

ದೈವಭಕ್ತ.

ಗುಬ್ಬಿನಾಟಕಕಂಪನಿ.

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಒಳಪಟ್ಟು ಉತ್ತರಹಿಂದೂಸ್ಥಾನದಲೆಲ್ಲ ತಮ್ಮ ನೀತಿಬೋಧಕವಾದ ನಾಟಕಗಳನ್ನು ಪ್ರದರ್ಶಿಸಿ ಕೀರ್ತಿಯನ್ನೂ ಅಮೋಘವಾದ ಬಿರುದಾವಳಿಗಳನ್ನೂ ಪಡೆದು ಬಂದಿರುವ ಗುಬ್ಬಿಥಿಯೇಟ್ರಿಕಲ್ ಕಂಪೆನಿಯವರು ಇದೇ ಮಡಕೇರಿಯಲ್ಲಿ ಕಳೆದ ಒಂದುತಿಂಗಳಿಂದಲೂ ತಮ್ಮ ಧರ್ಮಬೋಧಕವಾದ ನಾಟಕಗಳನ್ನು ಪ್ರದರ್ಶಿಸುತ್ತಾ ಇದ್ದಾರೆ. ಈ ಸಭೆಯವರು 14-4-26 ರಲ್ಲಿ - ಪ್ರಮೀಳಾ ನಾಟಕವನ್ನು - ಅಭಿನಯಿಸಿ 150 ರೂ. - ರೆಡ್‌ಕ್ರಾಸ್ ಸೊಸೈಟಿಗೂ - 21-4-26 ರಲ್ಲಿ - ಮಂದಾರವಲ್ಲಿಪರಿಣಯ - ವನ್ನು ಅಭಿನಯಿಸಿ 500 ರೂ. ಕೊಡಗುಸಭೆಯವರಿಗೂ ಕೊಟ್ಟರು. ಈ ಮೇಲ್ಕಂಡ ಸಭೆಯ ಪ್ರೊಪ್ರೈಟರ್ ವರ್ಸಟೈಲ್ ಕಮಡಿಯನ್ ಮ|| ವೀರಣ್ಣನವರಿಗೆ ಬಂಗಾರದಪದಕಗಳು ಕೊಡಲ್ಪಟ್ಟವು. ಇನ್ನು 2-3 ನಾಟಕಗಳನ್ನು ಮಾತ್ರ ಆಡಿ ಹುಣಸೂರು ಮಾರ್ಗವಾಗಿ ಮೈಸೂರಿಗೆ ಹೊರಡುವವರಾಗಿರುತ್ತಾರೆ. ಹೋದಕಡೆಯಲ್ಲೆಲ್ಲಾ ಧರ್ಮಕಾರ್ಯಗಳಿಗೆ ಸಹಾಯಮಾಡುತ್ತ ಕೀರ್ತಿಯನ್ನು ಪಡೆದಿರುವ ಮ|| ವೀರಣ್ಣನವರಿಗೂ, ಅವರ ಸಂಘದ ಮೆಂಬರುಗಳಿಗೂ ಸರ್ವತ್ರ ಯಶಸನ್ನು ಕೊಟ್ಟು ಭಗವಂತನು ಕಾಪಾಡಬೇಕಾಗಿ ಪ್ರಾರ್ಥನೆ.

M. Muthaiah, Planter.

ಮುಂಬೈಪ್ರಾಂತಿಕ ರಡ್ಡಿಸಮಾಜದ 8 ನೇ ಮಹಾಸಭೆಯು.

ಈ ಮಹಾಸಭೆಯು ಬೆಳಗಾಂವಿ ಜಿಲ್ಲಾ ಸವದತ್ತಿ ತಾ|| ಮುರಗೋಡ ಮಹಾಲ ಯರಗಟ್ಟಿ ಗ್ರಾಮದಲ್ಲಿ ಇದೇ ಮೇ ತಾ|| 15-16 ರಲ್ಲಿ ನಡೆಯುವದು. ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಮೈಸೂರು ಒಕ್ಕಲಿಗರ (ರಡ್ಡಿ) ಸಂಘದ ಕಾರ್ಯನಿರ್ವಾಹಕ ಕಮಿಟಿಯ ಮೆಂಬರರೂ, ಮೈಸೂರ ಕಾಯಿದೆ ಕೌನ್ಸಿಲ್‌ದ ಮೆಂಬರರೂ, ಮೈಸೂರ ವಿಶ್ವವಿದ್ಯಾಲಯದ (ಯುನಿವರ್ಸಿಟಿ) ಸಭಾಸದರೂ ಇತ್ಯಾದಿ ಆದ ರಾವಸಾಹೇಬ. ಎಚ್. ಚೆನ್ನಯ್ಯನವರು ರಿಟಾಯರ್ಡ ಸಬ್‌ಜಜ್ಜ (ಕೊಡಗುಪ್ರಾಂತ) ಈ ಮಹನೀಯರು ವಹಿಸಲಿಕ್ಕೆ ಒಪ್ಪಿಕೊಂಡಿದ್ದಾರೆ. ಈ ಮಹಾಸಭೆಯಲ್ಲಿ ರಡ್ಡಿ ಸಮಾಜಕ್ಕೆ ಸಂಬಂಧಿಸಿದ ವಿದ್ಯಾವರ್ಧಕ, ಸಾಮಾಜಿಕ, ನೈತಿಕ, ಧಾರ್ಮಿಕ, ಔದ್ಯೋಗಿಕ, ಸಹಕಾರವಿಷಯಕ ಮೊದಲಾದ ಮಹತ್ವದ ವಿಷಯಗಳು ಚರ್ಚಿಸಲ್ಪಡುವವು. ಈ ವಿಷಯಗಳ ಮೇಲೆ ಭಾಷಣಮಾಡುವವರು, ಅಥವಾ ಸೂಚನೆ ಠರಾವುಗಳನ್ನು ತರುವವರು 8 ದಿವಸ ಮುಂಚಿತವಾಗಿ ಜನರಲ್ ಸೆಕ್ರೆಟರಿಯವರಿಗೆ ತಿಳಿಸಬೇಕು. ಇದೇ ಸಮಯದಲ್ಲಿ ರಡ್ಡಿ ಎರಡನೇ ಮಹಿಳಾ ಪರಿಷತ್ತು ಕೂಡುವದು. ಆ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಮೈಸೂರ ವಿದ್ಯಾಶಾಲೆಯಲ್ಲಿ ಶಿಕ್ಷಕಿಯರಾದ ರಾ|| ಸಾ|| ಚೆನ್ನಯ್ಯನವರ ಕುಮಾರಿ ಲಕ್ಷ್ಮಮ್ಮನವರು, ಬಿ.ಎ., ಇವರು ವಹಿಸುವರು. ಈ ಸಭೆಯಲ್ಲಿ ಸ್ತ್ರೀ ಶಿಕ್ಷಣ, ಸ್ತ್ರೀ ಧರ್ಮನೀತಿ ಇತ್ಯಾದಿ ವಿಷಯಗಳು ಚರ್ಚಿಸಲ್ಪಡುವವು.

ಯಾವತ್ತೂ ಬಂಧುಭಗಿನಿಯರು ಈ ಮಹಾಸಭೆಗೇಗೆ ತಪ್ಪದೇ ಬರಬೇಕಾಗಿ ನಮ್ಮ ಅಗ್ರಹದ ವಿನಂತಿಯದೆ. ಸ್ವಾಗತಸಭೆಯ ಮೆಂಬರರು.

ವಿಶೇಷ ಸೂಚನೆ:—ಯರಗಟ್ಟಿಗ್ರಾಮವು ಬೆಳಗಾಂವಿ, ಬಾಗಲಕೋಟಿ ಲೈನರಸ್ತೆ ಮತ್ತು ಧಾರವಾಡ, ಸವದತ್ತಿ, ಗೋಕಾವಿ ರಸ್ತೆ ಈ ಮಾರ್ಗಗಳ ಕೂಟದಲ್ಲಿ ಅದೆ. ಈ ಮಾರ್ಗಗಳ ಮೇಲೆ ಸರ್ವೀಸ ಮೋಟಾರಗಳು ಯಾವಾಗಲೂ ಸಿಗುತ್ತವೆ. ರೇಲ್ವೆ ಮಾರ್ಗದಿಂದ ಬರುವವರು ಗೋಕಾಕರೋಡ, ಧಾರವಾಡ, ಬಾಗಲಕೋಟಿ ಈ ಮೂರರಲ್ಲಿ ತಮ್ಮ ಅನುಕೂಲತೆಯಂತೆ ಬೇಕಾದ ಸ್ಟೇಷನಕ್ಕೆ ಇಳಿಯಬಹುದು. ಸಭೆಗೆ ದಯಮಾಡಿಸುವವರು, ಹಾಸಿಗೆ ಹೊದಿಕೆ ತಂಬಿಗೆ ಮೊದಲಾದವುಗಳನ್ನು ದಯಮಾಡಿ ಸಂಗಡ ತರಬೇಕು. ಊಟದ ವ್ಯವಸ್ಥೆಯು ಉಚಿತವಾಗಿ ಮಾಡಲ್ಪಡುವದು.

ಮೈಸೂರಿನ ನೂತನ ದಿವಾನರಾದ ಮಿ|| ಮಿರ್ಜಾಯವರ ಅಭಿನಂದನ.

(I) ಧಾರವಾಡಜಿಲ್ಲಾ ನವಲಗುಂದದಲ್ಲಿ ತಾ|| 14-4-26 ನೇ ದಿವಸ ರಮಜಾನ ಕುತಬಾ ನಮಾಜದ ವೇಳೆಯಿಂದ ಇದ್ಗಾದಲ್ಲಿ ಸುಮಾರು ನಾಲ್ಕು ನೂರು ಮುಸಲ್ಮಾನ ಜನರು ಕೂಡಿದ್ದರು. ನಮಾಜ ವಗ್ಯೆರೆ ಯಾವತ್ತು ಕೆಲಸ ತೀರಿದನಂತರ ಮೈಸೂರ ಸ್ಟೇಟ್‌ದ ದಿವಾನರ ಜಾಗಾಕ್ಕೆ ನಮ್ಮ ಮುಸಲ್ಮಾನ ಸಮಾಜದ ಪೈಕಿ ಒಬ್ಬರಾದ ಮೆಹರ್ಬಾನ ಅಮೀನ-ಉಲ್ಮುಲ್ಕ್-ಮಿರ್ಜಾ ಎಂ. ಇಸ್ಮಾಯಿಲ್ ಸಾಹೇಬ್, ಬಿ.ಎ., ಸಿ.ಐ.ಇ., ಓ.ಬಿ.ಇ. ಇವರನ್ನು ನೇಮಿಸಿದ್ದಕ್ಕಾಗಿ ನಾವೆಲ್ಲರೂ ಮೈಸೂರ ಸಂಸ್ಥಾನದ ಶ್ರೀಮನ್ಮಹಾರಾಜರವರಿಗೆ ಅತ್ಯಂತ ಕೃತಜ್ಞತೆಯುಳ್ಳವರಾಗಿ ಅತ್ಯಾದರದಿಂದ ಅವರ ಆಭಾರವನ್ನು ಮನ್ನಿಸುತ್ತೇವೆ ಅಂತ ಸೈಯದ ಅಹಮ್ಮದ ಸಾಹೇಬ್ ಖಾತೀಬ್ ಇವರು ಸೂಚನೆ ತಂದದ್ದಕ್ಕೆ ಸೈಯದಗೌಸಸಾಹೇಬ್ ಖಾಜಿ ಇವರು ಅನುಮೋದನ ಕೊಟ್ಟಮೇಲೆ ಸರ್ವಾನುಮತದಿಂದ ಠರಾವ ಪಾಸಾಯಿತು.

(II) ಮೆಹರ್ಬಾನ ಅಮೀನ-ಉಲ್ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್‌ಸಾಹೇಬ್, ಬಿ.ಎ., ಸಿ.ಐ.ಇ., ಓ.ಬಿ.ಇ., ಇವರು ನಮ್ಮ ಮುಸಲ್ಮಾನ ಸಮಾಜದ ಪೈಕಿ ವಿದ್ವನ್ಮಣಿಗಳೂ, ಪರಮಶಾಂತರೂ ಇದ್ದು ಇವರಿಗೆ ಶ್ರೀಮನ್ಮಹಾರಾಜರ ಮೈಸೂರ ಸಂಸ್ಥಾನದ ಶ್ರೇಷ್ಠವಾದ ಮಂತ್ರಿಪಟ್ಟವು ದೊರೆತ ಮಹಾನಂದಕರವಾದ ವಾರ್ತೆಯನ್ನು ಕೇಳಿ ಈ ಸಭೆಯು ಸದರ ದಿವಾನಬಹಾದ್ದೂರ ಸಾಹೇಬರವರ ಅಭಿನಂದನವನ್ನು ಮಾಡುತ್ತದೆ ಮತ್ತು ಇವರಿಗೆ ಇನ್ನು ಇದಕ್ಕೂ ಹೆಚ್ಚಿನ ಪದವು ದೊರೆಯುತ್ತ ಹೋಗಲೆಂದು ದೇವರನ್ನು ಪ್ರಾರ್ಥಿಸುತ್ತದೆ. ಅಂತ ಮೆ|| ಇಬ್ರಾಹೀಮ ಸಾಹೇಬ್ ಖುದಾವಂದ ಇವರು ಸೂಚನೆ ತಂದದ್ದಕ್ಕೆ ಅಬ್ದುಲ್‌ಖಾದರ ಸಾಹೇಬ್ ಖಾಜಿ ಇವರು ಅನುಮೋದನ ಕೊಟ್ಟಮೇಲೆ ಸರ್ವಾನುಮತದಿಂದ ಠರಾವು ಪಾಸಾಯಿತು. ಸದರ ಠರಾವುಗಳನ್ನು ಶ್ರೀಮನ್ಮಹಾರಾಜರವರಿಗೂ, ಮೆ|| ಅಮೀನ ಉಲ್ಮುಲ್ಕ್ ಸಾಹೇಬರಿಗೂ ಪ್ರತ್ಯೇಕ ತಿಳಿಸುವದಕ್ಕೆ ಅಧ್ಯಕ್ಷರಿಗೆ ಈ ಸಭೆಯು ಅಧಿಕಾರಕೊಟ್ಟಿರುತ್ತದೆ.

ಈ ಪ್ರಕಾರ ಠರಾವು ಪಾಸಾದದ್ದಲ್ಲದೆ ಮೆ|| ಅಮೀನ-ಉಲ್ಮುಲ್ಕ್ ಸಾಹೇಬ ಬಹಾದ್ದೂರರವರ ಗುಣಗಳ ಹಾಗು ಕರ್ತವ್ಯ ಜಾಗರೂಕತೆಯ ವಿಷಯವಾಗಿ ಮಿ|| ಗೋಗಾಕ ಕಾರಕೂನರು ಎಲ್ಲ ಜನರಿಗೆ ಸ್ಪಷ್ಟವಾಗಿ ತಿಳಿಸಿದ ಬಳಿಕ ಖಾನಸಾಹೇಬ. ಎಂ. ಎ. ಖುದಾವಂದ ಇವರು ಸದರ ದಿವಾನಬಹಾದ್ದೂರ ಸಾಹೇಬರವರ ಚರಿತ್ರವನ್ನು ಹಾಗು ಮೈಸೂರ ಶ್ರೀಮನ್ಮಹಾರಾಜರವರ ಗುಣವರ್ಣನೆಯನ್ನು ಅಸ್ಖಲಿತವಾದ ವಾಣಿಯಿಂದ ಯಾವತ್ತು ಜನರ ಮನೋವೇಧಕವಾಗುವಂತೆ ವಿಸ್ತರಿಸಿ ಹೇಳಿದನಂತರ ಸದರಿ ಶ್ರೀಮನ್ಮಹಾರಾಜರವರಿಗೂ ಮೆ|| ಅಮೀನ-ಉಲ್ಮುಲ್ಕ್ ಸಾಹೇಬರವರಿಗೂ ಸರ್ವಶಕ್ತನಾದ ಪರಮೇಶ್ವರನು ಆಯುರಾರೋಗ್ಯಾಭಿವೃದ್ಧಿಯನ್ನು ದಯಪಾಲಿಸಲೆಂದು ಆತನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ಮೈಸೂರ ಸಂಸ್ಥಾನದ ಶ್ರೀಮನ್ಮಹಾರಾಜರವರ ಜಯಜಯಕಾರದೊಂದಿಗೆ ಸಭೆಯ ಕಾರ್ಯವು ಸಮಾಪ್ತಮಾಡಲ್ಪಟ್ಟಿತು.

ನವಲಗುಂದ ಜಿಲ್ಲಾ ಧಾರವಾಡ,
ತಾ|| 25—4—26. }

M. A. Khudavand,
ಪ್ರೆಸಿಡೆಂಟ್.
ಅಂಜುಮನ್ ಇಸ್ಲಾಮಿಯ.

ಮೈಸೂರು ಡಿ|| ತಾಲ್ಲೂಕುಕಾನ್ಫರೆನ್ಸ್‌ಗಳು ಮತ್ತು ಮಿ|| ಶ್ರೀನರಸಿಂಹಶಾಸ್ತ್ರಿಗಳವರು.

ಕಳೆದ ಏಪ್ರಲ್ ತಾ|| 17 ರ ತಮ್ಮ ಸ್ಟಾರ್‌ಪತ್ರಿಕೆಯಲ್ಲಿ ಮೇಲ್ಕಂಡ ವಿಚಾರವಾಗಿ ರೈತರೊಬ್ಬರು ಬರೆದು ಇರುವುದನ್ನು ನೋಡಿದೆನು. ಅವರು ಮ|| ಶ್ರೀನರಸಿಂಹಶಾಸ್ತ್ರಿಗಳ ವಿಚಾರದಲ್ಲಿ ಇನ್ನೂ ಕೆಲವು ವಿಚಾರಗಳನ್ನು ಬಿಟ್ಟು ಇರುತ್ತಾರೆ. ಆ ವಿಚಾರವನ್ನು ಮಾತ್ರ ಇಲ್ಲಿ ಬರೆದಿರುತ್ತೇನೆ. ಮ|| ಶಾಸ್ತ್ರಿಗಳನು ಕೋಲಾರಡಿಸ್ಟ್ರಿಕ್ಟ್ ಶಿಡ್ಲಘಟ್ಟತಾಲ್ಲೂಕಿಗೆ ಸೇರಿದ ಒಂದು ಹಳ್ಳಿಯಲ್ಲಿ ಹುಟ್ಟಿದವರು. ಇವರು ತಕ್ಕಮಟ್ಟಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಹೊಂದಿ ಪೋಲೀಸ್ ಇಲಾಖೆಗೆ ಸೇರಿ ಅಮಲ್ದಾರ್ ಕೆಲಸದಲ್ಲಿ ಬಹಳ ಮುತುವರ್ಜಿ ತೋರಿಸಿದುದರಮೇಲೆ ಇವರಿಗೆ ಸರ್ ಎಂ. ವಿಶ್ವೇಶ್ವರಯ್ಯನವರು ಇವರ ವಾಕ್‌ಚಾತುರ್ಯಕ್ಕೆ ಮರುಳಾಗಿ ಇವರಿಗೆ ಎಕನಾಮಿಕ್ ಸೂಪರಿಂಟೆಂಡೆಂಟ್ ಕೆಲಸವನ್ನು ಕೊಟ್ಟರು. ಅಲ್ಲಿಂದ ಅಸಿಸ್ಟೆಂಟ್ ಕಮಿಷನರ್ ಸ್ಥಾನಕ್ಕೇರಿ ಮೈಸೂರು ಡಿವಿಜನ್ನಿನ ಪೋಲೀಸ್ ಸೂಪರಿಂಟೆಂಡೆಂಟರಾದರು. ಟಿ. ನರಸೀಪುರದ ತಾಲ್ಲೂಕಿನಲ್ಲಿ ಆದ ಒಂದು ಖೂನಿ ಕೇಸಿನ ಸಂಬಂಧದಲ್ಲಿ ಇವರು ಹೆಚ್ಚುಗಲಾಟೆ ಇಲ್ಲದ ಫ್ರೆಂಚ್‌ರಾಕ್ಸ್ ಡಿವಿಜನ್ಗೆ ವರ್ಗಮಾಡಲ್ಪಟ್ಟರು. ಅಲ್ಲಿಯೇ ಇವರಿಗೆ ವಿಶ್ರಾಂತಿಸುಖವೂ ದೊರೆಯಿತು. ಅನಂತರ ಇವರು ಬೆಂಗಳೂರನ್ನು ಸೇರಿದರು. ಬ್ರಾಹ್ಮಣಮಠಸ್ಥರಿಗಾಗಿಯೇ ಅದರಲ್ಲಿಯೂ ತಮ್ಮ ಒಳಪಂಗಡಕ್ಕಾಗಿಯೇ ಒಂದು ಕೋ-ಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಬೇಕೆಂತ ಪ್ರಯತ್ನಪಟ್ಟರು. ಅದು ತುಂಬಾಸ್ವಾರ್ಥತೆಯ ಕೆಲಸವೆಂದು ಇವರಿಗೆ ಅವಕಾಶದೊರೆಯಲಿಲ್ಲ. ಆ ಮೇಲೆ ಇವರು ಈತರನಾದ ದೇಶಸೇವೆಗೆ ಹೊರಟು ಇರುವರು. ಇವರ ಮಕ್ಕಳೊಬ್ಬರು ಸ್ಪೆಷಲ್ ಶೇಕದಾರರಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಯಾವುದೊ ಮುನಿಸಿಪಾಲಿಟಿಯಲ್ಲಿಯೋ ಪಂಚಾಯಿತಿಯಲ್ಲಿಯೋ ಕಂದಾಯ ಬಾಕಿವಸೂಲಿ ಕೆಲಸದಲ್ಲಿ ಹಂಗಾಮಿಯಾಗಿ ನೇಮಿಸಲ್ಪಟ್ಟಿರುವರು. ಅವರ ಕೆಲಸವನ್ನು ಖಾಯಂಮಾಡಿಸಿಕೊಳ್ಳಬೇಕೆಂತ ಈರೀತಿ ದೇಶಸೇವಾಪಾಶನರನ್ನು ಹೂಡುತ್ತ ಇರುವುದಾಗಿ ಕೇಳುತ್ತೇನೆ. ಇನ್ನು ಕೆಲವರು ಹೇಳುವುದನ್ನು ಕೇಳಿದರೆ ಇವರಿಗೆ ಇದು ಒಂದೇ ಉದ್ದೇಶವಲ್ಲದೆ ಮುಂದಿನ ಚುನಾವಣೆಗೆ ತಮ್ಮ ಕಡೆಯವರೊಬ್ಬರನ್ನು ಮೈಸೂರು ಡಿಸ್ಟ್ರಿಕ್ಟಿಗೆ [illegible] ಅಲ್ಲಿ ತಕ್ಕ ಸುಖ ಕೊಟ್ಟುಕೊಂಡು ನಿರ್ವಾಹ ಮಾಡುತ್ತ ತಿರುಗುತ್ತಿರುವುದಾಗಿ ತಿಳಿಯಬರುತ್ತೆ. ನಾನೂ ಇವರ ಉಪನ್ಯಾಸವನ್ನು ಕೇಳಿದೆನು. ಜನರು ಐಕಮತ್ಯದಿಂದ ಇರಬೇಕೆಂದಾಗಲೀ, ಹೊಸ ಗ್ರಾಮಪಂಚಾಯಿತಿಯು ಏರ್ಪಡುತ್ತದೆ ಅದಕ್ಕೆ ಸಿದ್ಧರಾಗಬೇಕೆಂದಾಗಲೀ, [illegible] ಒಂದುವಾಕ್ಯವನ್ನು ನಾನು ಕಿವಿಯಿಂದ ಕೇಳಲಿಲ್ಲ. ಕುಂದುಕೊರತೆಗಳ ಚರ್ಚೆ ಮುಗಿದ ಮೇಲೆ ಅಂದರೆ ಕಾನ್ಫರೆನ್ಸಿನ ಕೊನೆಯಲ್ಲಿ ಈ ಶಾಸ್ತ್ರಿಗಳು ಎದ್ದುನಿಂತು, ಪ್ರಜೆಗಳಿರಾ, ನಿಮ್ಮನ್ನು ನಾನು ಇನ್ನೂ ಮರೆತಿಲ್ಲ. ಡೆಪ್ಯುಟೀ ಕಮಿಷನರ್ ಸಾಹೇಬರಲ್ಲಿ ನೀವು ಕೆಲವು ವಿಷಯಗಳನ್ನು ಹೇಳಲು ಮರೆತು ಇರುತ್ತೀರಿ, ಅವುಗಳು ಯಾವುವೆಂದರೆ—ಅರಳೆ, ತುಬಟ, ಹುಣಸೇಬೀಜ, ಸಣಬು, ಪಾಪಾಸಕಳ್ಳಿ, ಲಂಟಾನ ಮೊದಲಾದವುಗಳ ಉಪಯೋಗ ಕೆಲಸ ನಾಶವಗೈರೆ ವಿವರಿಸಿ ನಿಮ್ಮಪರವಾಗಿ ಇವರಿಗೆ ಅರಿಕೆ ಅರಿಕೆ ಅರಿಕೆ ಮಾಡುತ್ತೇನೆ ಎಂದು ಹೇಳಿ ಅಲ್ಲಿಂದ ಮುಂದೆ ಈ ಮಹನೀಯರು ಅಂದರೆ ಈ ಡೆಪ್ಯುಟಿಕಮಿಷನರ್ ಸಾಹೇಬರು ಇನ್ನೂ ಹೆಚ್ಚು ಹೆಚ್ಚಿನ ನೌಕರಿಗೆ ಏರಿ ಕೊನೆಗೆ ಈ ಸೀಮೆಯ ದಿವಾನ್‌ಸಾಹೇಬರೇ ಆಗುತ್ತಾರೆ ಎಂಬುದೇ ಇವರ ಭಾಷಣ. ಇವರ ಮಕ್ಕಳಿಗೆ ಶೇಕದಾರಿ ಖಾಯಂ ಆಗುವುದೇನೋ ಆಗುತ್ತೆ. ಆದರೆ ಈ ಮಹನೀಯರು ವಿದ್ಯೆಯಲ್ಲಿಯೂ, ನಾಗರೀಕತೆಯಲ್ಲಿಯೂ ತುಂಬಾ ಹಿಂದೆ ಬಿದ್ದಿರುವ ಕೋಲಾರಡಿಸ್ಟ್ರಿಕ್ಟಿಗಾದರೂ ಹೋಗಿದ್ದು ಅಲ್ಲಿನ ತಾಲ್ಲೂಕು ಕಾನ್ಫರೆನ್ಸುಗಳಲ್ಲಿ ಜನರಿಗೆ ತಿಳುವಳಿಕೆಕೊಟ್ಟು ಆ ಪ್ರಾಂತ್ಯ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿದ್ದರೆ ತಮ್ಮ ಜನ್ಮಭೂಮಿಗೆ ನಿಜವಾಗಿಯೂ ಸೇವೆಮಾಡಿದ ಫಲವು ಇವರಿಗೆ ದೊರೆಯುತಲಿದ್ದಿತು. ಹಾಗಲ್ಲದೆ ಇಂಥ ಬರಿಯಮಾತಿಗೆ ಮರುಳಾಗುವ ಕಾಲವು ಮೀರಿತು.

ಇನ್ನೊಬ್ಬ ರೈತ.

ವಡಿಗೇನಹಳ್ಳಿಯಲ್ಲಿ ನಡೆದಿರುವ ಅತ್ಯಾಚಾರ.

ಈ ಊರಿನಲ್ಲಿ ಶಿವಾಚಾರದ ವೈಶ್ಯರು ಹೆಚ್ಚು ಪ್ರಜಾಸಂಖ್ಯೆಯವರಾಗಿರುತ್ತಾರೆ. ಇವರ ಆಚಾರವ್ಯವಹಾರಗಳಲ್ಲಿ ಲಗ್ನಕಾರ್ಯ ಒಂದನ್ನು ಮಾತ್ರ ಇದುವರೆಗೂ ಅಲಿಂಗಿಬ್ರಾಹ್ಮಣರಿಂದ ಮಾಡಿಸುತ್ತಿದ್ದರು. ಉಳಿದ ಕಾರ್ಯಗಳು ಅಂದರೆ, ಹುಟ್ಟಿದಾಗಿನಿಂದ ಮರಣಾಂತ್ಯದವರೆಗೂ ಎಲ್ಲಾ ಕರ್ಮಗಳನ್ನು ಲಿಂಗಧಾರಿಬ್ರಾಹ್ಮಣರಿಂದ ಮಾಡಿಸಿಕೊಳ್ಳುತ್ತಿದ್ದರು. ಈಚೆಗೆ ಈ ಜನರಲ್ಲಿ ಹೆಚ್ಚು ಪ್ರಜಾಸಂಖ್ಯೆಯವರು ಇವರ ಕುಲದ ಮೂಲಪುರುಷನೂ ಶಿವನಕೃಪಾಪಾತ್ರನೂ ಪುರಾತನರ ಶ್ರೇಣಿಯಲ್ಲಿ ಒಬ್ಬನೂ ಆದ ಸಿರಿಯಾಳಶೆಟ್ಟಿಯ ಮಾರ್ಗವನ್ನ ತಾವು ಅನುಸರಿಸಬೇಕಾದದ್ದು ಧರ್ಮವೆಂದು ತಿಳಿದು ಅಲಿಂಗಿಬ್ರಾಹ್ಮಣರಿಂದ ಯಾವ ಕರ್ಮವನ್ನೂ ಮಾಡಿಸಿಕೊಳ್ಳದೆ ವಿಶಿಷ್ಟ ಶೈವಕರ್ಮಗಳನ್ನು ಲಿಂಗಾಯತರಿಂದಮಾಡಿಸಿಕೊಳ್ಳುತ್ತ ಇರುತ್ತಾರೆ. ಈ ವಿಷಯದಲ್ಲಿ ಈ ಊರಿನ ಮೇಲ್ಕಂಡ ಪಂಗಡದವರಲ್ಲಿ ವೀರಶೈವಮತದ ಶತ್ರುಗಳ ದುರ್ಭೋಧೆಯಿಂದ ಭಿನ್ನಾಭಿಪ್ರಾಯಹುಟ್ಟಿ ಲಿಂಗಾಯಿತರಮೇಲೆ ವಿಶೇಷವಾಗಿ ಆಗ್ರಹಪಡುತ್ತ ಈ ಊರಿನ ಪೇಟೆ ಚೌಕದಲ್ಲಿರುವ ಇವರ ಕೋಮಿನ ಪ್ರತಿಯೊಬ್ಬರಮೇಲೆ ಅಧಿಕಾರಕ್ಕೊಳಪಟ್ಟಿರುವ ಮಹಂತಿನಮಠದಲ್ಲಿ ತಮ್ಮ ವೈದಿಕಕರ್ಮಗಳಿಗಾಗಿ ಸುಮಾರು 50 ವರುಷಗಳಿಂದ ಇಟ್ಟಿರುವ ಲಿಂಗಾಯಿತರ ಸಂಸಾರವನ್ನ ಇವರಲ್ಲಿ ಕೆಲವರು ಹೊರಕ್ಕೆ ಹೊರಡಿಸಬೇಕೆಂಬ ದುರಭಿಪ್ರಾಯದಿಂದ ಈಗ್ಗೆ 5-6 ತಿಂಗಳುಗಳ ಹಿಂದೆ ಮಠದೊಳಕ್ಕೆ ನುಗ್ಗಿ ಮಠದ ಗೋಡೆಗಳನ್ನು ಹೊಡೆದು ಬಾಗಿಲುಗಳನ್ನು ಕಿತ್ತುಹಾಕಿ ಸ್ಥಾಪನೆಯಾಗಿದ್ದ ಲಿಂಗಮುದ್ರೆಕಲ್ಲುಗಳ ನ್ನೊಡೆದುಹಾಕಿ ದೊಂಬಿಮಾಡಲು, ಈ ವಿಷಯವನ್ನ ಈ ಮಠದ ಕೆಲವು ಮಹನೀಯರು ಬಹಳ ವ್ಯಸನಪಟ್ಟು ತಾಲ್ಲೂಕ್ ಅಮಲ್ದಾರ್ರವರಿಗೆ ವಿಜ್ಞಾಪಿಸಿಕೊಂಡುದರಮೇಲೆ ಮಠಕ್ಕೆ ದಯೆಮಾಡಿಸಿ ನಡೆದಿದ್ದ ಅಕ್ರಮಕಾರ್ಯಗಳನ್ನು ನೋಡಿ ಮುಂದೆ ಈರೀತಿ ದೊಂಬಿ ನಡೆಸಿದಲ್ಲಿ ತಕ್ಕ ಬಂದೋಬಸ್ತು ಪಡಿಸುವುದಾಗಿ ರಿಕಾರ್ಡುಮಾಡಿ ಹೊರಟುಹೋದರು. ಆಗಿದ್ದ ಅಮಲ್ದಾರ್ರವರು ವರ್ಗವಾಗಿ ಹೋದಕೂಡಲೆ ಹಿಂದೆ ದೊಂಬಿನಡೆಸಿದವರು ತಮ್ಮ ಅಭಿಪ್ರಾಯದಂತೆ ಉಳಿದವರು ಇರದೆ ಲಿಂಗಾಯಿತಮತಕರ್ಮಗಳನ್ನ ನಡೆಸುತ್ತ ಬಂದದ್ದರಿಂದ ತಮಗೆ ಸೈರಿಸದೆ ಕೋಪೋದ್ರೇಕದಿಂದ ಪುನಃ ಈಗ್ಗೆ 20 ದಿನಗಳ ಹಿಂದೆ ಅದೇ ಮಠಕ್ಕೆ ಗುಂಪುಕಟ್ಟಿಕೊಂಡು ನುಗ್ಗಿ ನಿಷ್ಕರುಣೆಯಿಂದ ಲಿಂಗಾಯಿತರು ವಾಸವಾಗಿದ್ದ ಕಟ್ಟಡದೊಳಕ್ಕೆ ನುಗ್ಗಿ ಹೆಂಗಸರು ಮಕ್ಕಳನ್ನು ಹೊರಕ್ಕೆತಳ್ಳಿ ಸಾಮಾನುಗಳನ್ನೆಲ್ಲಾ ಚೆಲ್ಲಾಡಿ ತಮ್ಮ ಗುರುಗಳೆಂಬ ಅಭಿಮಾನವನ್ನು ತೊರೆದು ಹಗ್ಗಗಳಿಂದ ಕಂಬಗಳಿಗೆ ಕಟ್ಟಿ ಮಾಡಬಾರದ ಚಿತ್ರಹಿಂಸೆಗಳನ್ನೆಲ್ಲಾ ಮಾಡಿದ್ದರಮೇಲೆ ಆ ಸಂಸಾರದವರು ಈಗ ಅದೇ ಮಠದ ಬೈಲಿನಲ್ಲಿ ವಾಸವಾಗಿರುತ್ತಾರೆ.

ಈ ವಿಷಯಗಳನ್ನು ದಯಾಳು ಸರ್ಕಾರದವರು ವಿಮರ್ಶೆಮಾಡಿ ಈ ಬಡಕುಟುಂಬವನ್ನು ಕಾಪಾಡಬೇಕೆಂದು ದಿವಾನ್‌ಸಾಹೇಬರವರಿಗೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ, ಪೋಲೀಸ್ ಸೂಪರೆಂಟ್‌ರವರಿಗೂ ತಂತೀಮೂಲಕ ಪ್ರಾರ್ಥಿಸಿಕೊಂಡದ್ದರಮೇಲೆ ಸುಮಾರು 7-8 ದಿನಗಳ ನಂತರ ಬ್ರಾಹ್ಮಣರಾದ ಸೂಪರಿಂಟೆಂಡೆಂಟ್ ಸಾಹೇಬರವರು ದಯಮಾಡಿಸಿ ಈ ತಾಲ್ಲೂಕಿನಲ್ಲಿರುವ ಬ್ರಾಹ್ಮಣ ಅಧಿಕಾರಿಗಳಲ್ಲಿ ವಿಚಾರಿಸಿ ಯಾವ ನ್ಯಾಯವಿಮರ್ಶೆಯನ್ನೂ ಮಾಡದೆ ಮೌನವಾಗಿ ಹೊರಟುಹೋದರು. ಪುನಃ ಸದರಿ ಸಂಸಾರದವರು ಶ್ರೀಮನ್ಮಹಾರಾಜರವರ ಪ್ರವೇಟ್ ಸೆಕ್ರೆಟರಿಯವರಿಗೆ ಅರ್ಜಿಯನ್ನ ಗುಜರಾಯಿಸಿಕೊಂಡರು. ತಹಲ್‌ವರೆಗೆ ಯಾವ ಹುಕುಂ ಆಗಿರುವುದಿಲ್ಲ. ಈ ದೊಂಬಿಯನ್ನ ನೋಡಿ ಕೆಲವು ದೊಡ್ಡಮನುಷ್ಯರು ಮುಂದೆ ತಮಗೂ ತಮ್ಮ ಸಂಸಾರಗಳಿಗೂ ಯಾವವೇಳೆ ಏನು ತೊಂದರೆ ಸಂಭವಿಸುತ್ತದೋ ಎಂಬ ಭಯದಿಂದಲೂ, ಈ ವಿಧವಾಗಿ ದೊಂಬಿ ಮಾಡಿರುವವರು ಹಣವಂದಿಗರೂ, ಜನವಂದಿಗರೂ, ನಿಷ್ಕರುಣಿಗಳೂ ಆಗಿರುವುದರಿಂದ ಸರ್ಕಾರದವರು ಹೆಚ್ಚು ನಿಗಾ ಇಡಬೇಕೆಂದು ದಿವಾನ್‌ಸಾಹೇಬರವರಿಗೂ, ಡೆಪ್ಯುಟಿಕಮಿಷನರವರಿಗೂ, ಅಸಿಸ್ಟೆಂಟ್ ಕಮಿಷನರವರಿಗೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ ಅರ್ಜಿಗಳ ಮೂಲಕ ಪ್ರಾರ್ಥಿಸಿಕೊಂಡಿರುತ್ತಾರೆ. ಆದರೂ ಸರ್ಕಾರದವರು ಇದುವರಿವಿಗೂ ಯಾವ ವಿಚಾರಣೆಯನ್ನ ನಡೆಸಿರುವುದಿಲ್ಲ. ಆ ಗುಂಪಿನವರು ಪದೇ ಪದೇ ಹಗಲು ರಾತ್ರಿ ಎನ್ನದೆ ಮಠದಲ್ಲಿರುವ ಸಂಸಾರಿಗಳನ್ನು ಬಹಳವಾಗಿ ಹಿಂಸಿಸುತ್ತಾ ಇರುತ್ತಾರೆ. ಅವರಿಗೆ ಯಾವ ಸಹಾಯವೂ ಇರುವುದಿಲ್ಲ. ಈ ಊರಿನ ಪೋಲೀಸ್ ದಫೇದಾರ್ರವರು ಬ್ರಾಹ್ಮಣರಾಗಿರುವುದರಿಂದ ಅವರಲ್ಲಿ ಏನು ಹೇಳಿಕೊಂಡಾಗ್ಯೂ ಫಲಿತಾಂಶವೇ ಇಲ್ಲ. ತಾಲ್ಲೂಕ್ ಇನ್ಸ್‌ಪೆಕ್ಟರವರು ಈ ಊರಿನ ಕಡೆ ನೋಡುವುದೇ ಇಲ್ಲ. ಅಮಲ್ದಾರ್ರವರಾದರೋ ಇದರ ಗೋಜಿಗೆ ಬರುವಂತಿಲ್ಲ. ಸರ್ಕಾರದ ಎಲ್ಲಾ ಅಧಿಕಾರಿಗಳಲ್ಲಿಯೂ ವಿಜ್ಞಾಪಿಸಿಕೊಂಡಾಗ್ಯೂ ಈ ಊರಿಗೆ ಮಾತ್ರ ಪರಮೇಶ್ವರನ ಕರುಣ ಏಕೆ ಹುಟ್ಟಲ್ಲವೂ ಗೊತ್ತಿಲ್ಲವಾಗಿದೆ. ಧರ್ಮಮಾರ್ಗದಲ್ಲಿ ನಡೆಯುವವರಿಗೆ ಇಷ್ಟು ತೊಂದರೆಗಳು ಉಂಟಾಗಿರುವುದು ಆಶ್ಚರ್ಯವೇ ಸರಿ. ಸರ್ಕಾರದವರು ಅದಷ್ಟು ಜಾಗ್ರತೆ ಈ ಊರಿನ ಈ ವಿಧವಾದ ಅನ್ಯಾಯಗಳನ್ನ ವಿಮರ್ಶೆಮಾಡಿ ಈ ಬಡಕುಟುಂಬದವರಿಗೆ ಉಂಟಾಗಿರುವ ತೊಂದರೆಗಳನ್ನ ಪರಿಹರಿಸಿಕೊಟ್ಟು ಕಾಪಾಡದೆಹೋದಲ್ಲಿ ಈ ಊರಿನ ಧರ್ಮಪ್ರಜೆಗಳ ನೆಮ್ಮದಿಗೆ ಭಂಗಬರುವುದರಲ್ಲಿ ಯಾವ ಅನುಮಾನವೂ ಕಾಣುವುದಿಲ್ಲ.

ಪ್ರತ್ಯಕ್ಷದರ್ಶಿ.

ಕಪ್ಪನಹಳ್ಳಿ ಶ್ರೀಶಿವಯೋಗಮಂದಿರದ ಸಂಕ್ಷಿಪ್ತಚರಿತ್ರೆ.

ಶ್ರೀಹಾನಗಲ್ ಕುಮಾರಸ್ವಾಮಿಗಳ ಕೃಪಾಬಲದಿಂದ ಕಪ್ಪನಹಳ್ಳಿ ಗ್ರಾಮದ [illegible] ಒಂದುಶಿವಯೋಗಮಂದಿರವು [illegible] ಎಂಬ ಸಂಗತಿಯು ಬಹುಜನರಿಗೆ ಗೊತ್ತಿರಬಹುದು. ಈ ಶಿವಯೋಗಮಂದಿರವಿರತಕ್ಕ ಸ್ಥಳವು ಒಂದುಕಾಲಕ್ಕೆ ವಿಜನವಾದ ಅರಣ್ಯಪ್ರದೇಶವಾಗಿಯೂ, ಶವಗಳನ್ನು ಸುಡತಕ್ಕ ಸ್ಮಶಾನಭೂಮಿಯಾಗಿಯೂ ಇದ್ದು ಒಂದುರೀತಿಯಿಂದ ಅಪವಿತ್ರವೂ, ಅನಿಷ್ಟವೂ, ಅಮಂಗಳವೂ, ಅತಿಭಯಂಕರವೂ ಆದ ಸ್ಥಳವಾಗಿದ್ದಿತು. ಆದರೆ ಇದೇ ಸ್ಥಳದಲ್ಲಿ ಕುಶಾವತಿ ಮತ್ತು ಕುಮುದ್ವತಿಗಳೆಂಬ ಎರಡು ಹೊಳೆಗಳು ಸಂಗಮವಾಗಿರುವುದರಿಂದಲೂ, ಸುಮಾರು ಈಗ್ಗೆ 150 ವರ್ಷಗಳಹಿಂದೆ ಮಹದೇವಪುರ (ಶಿಕಾರಿಪುರ) ದ ಓರ್ವ ಶಿವಭಕ್ತ ಕಿಲೇದಾರನಿಂದ ಪ್ರತಿಷ್ಠೆಮಾಡಿಸಲ್‌ಪಟ್ಟಿರುವ ಸಂಗಮಸಂಜುಂಡೇಶ್ವರಸ್ವಾಮಿಯದೇವಸ್ಥಾನವಿರುವುದರಿಂದಲೂ, ಸೊಬಗಿನಿಂದ ಕೂಡಿದ ನೈಸರ್ಗಿಕವಾದ ಅರಣ್ಯವಿರುವುದರಿಂದಲೂ ಈ ಸ್ಥಳವು ಮತ್ತೊಂದುರೀತಿಯಿಂದ ಶಾಂತವೂ, ಸಾತ್ವೀಕವೂ, ಮಂಗಳವೂ, ಮನೋಹರವೂ ಆದ ಕ್ಷೇತ್ರಸ್ಥಳವಾಗಿಯೂ ಇರುವುದು. ಹೀಗೆ ಈ ಸ್ಥಳದಲ್ಲಿ ಒಂದೇಕಡೆಗೆ ಶಾಂತಿಯೂ, ಅಶಾಂತಿಯೂ, ಪವಿತ್ರವೂ ಅಪವಿತ್ರವೂ, ರಾಕ್ಷಸವೂ, ಸಾತ್ವಿಕವೂ ಮೊದಲಾದ ದ್ವಂದ್ವಗಳು ಕೂಡಿಕೊಂಡು ಮೈತ್ರೀಭಾವದಲ್ಲಿದ್ದಂತೆ ಆಗ್ಗೆ ಕಾಣುತ್ತಿದ್ದಿತು.

ಈರೀತಿಯಾದ ಈ ಅಪ್ರಸಿದ್ಧಸ್ಥಳವು ವೀರಶೈವಮಹಾಸಭಾಸ್ಥಾಪನೆಯ ಪ್ರಥಮಾಚಾರ್ಯರೂ, ಶಿವಮತೋದ್ಧಾರಕಾರ್ಯಬದ್ಧಕಂಕಣರೂ, ಶಿವಯೋಗಸಾಧನಮನೋಮಗ್ನರೂ, ಮಹಿಮರೂ ಆದ ಶ್ರೀಸ್ವಾಮಿಗಳ ಕೃಪಾದೃಷ್ಟಿಗೆ ಹ್ಯಾಗೆ ಗೋಚರವಾಯಿತೋ ತಿಳಿಯದಾಗಿದೆ. ಬಹುತರಹ ಮಹಿಮರ ಜ್ಞಾನದೃಷ್ಟಿಗೆ ಜಗದ್ವ್ಯಾಪಕಶಕ್ತಿ ಇರುವುದೆಂಬ ಸಿದ್ಧಾಂತದ ಪ್ರಕಾರವೇ ಮಹಿಮರಾದ ಈ ಸ್ವಾಮಿಗಳ ದಿವ್ಯಚಿತ್ತಕ್ಕೆ ಈ ಸ್ಥಳವು ವೇದ್ಯವಾಗಿರಬೇಕು. ಹಾಗೂ ಮುಖ್ಯವಾಗಿ ಶ್ರೀಶಿವಯೋಗಿಗಳ ನಿತ್ಯಚರಣಸ್ಪರ್ಶದಿಂದ ಈ ಸ್ಥಳವೂ, ಶ್ರೀಶಿವಯೋಗಿಗಳ ನಿತ್ಯದರ್ಶನ ನಿತ್ಯಸಂಭಾಷಣಗಳಿಂದ ಇಲ್ಲಿಯ ಜನರೂ ಪುನೀತರಾಗುವ ಯೋಗವು ಸಹ ಆಗ್ಗೆ ಒದಗಿಬಂದಿತ್ತೆಂದು ತೋರುತ್ತದೆ.

ಹೀಗೆ ಗೊತ್ತುಮಾಡಲ್ಪಟ್ಟ ಈ ಸ್ಥಳಕ್ಕೆ 7-8 ವರ್ಷಗಳಹಿಂದೆ ಬೇಸಗೆಯಕಾಲದ ಒಂದುದಿವಸ ಒಳ್ಳೇಮಧ್ಯಾಹ್ನದಸಮಯಕ್ಕೆ ಶ್ರೀಸ್ವಾಮಿಗಳ ಸ್ವಾರಿಯು ಎತ್ತಕಡೆಯಿಂದಲೋ ಆಕಸ್ಮಿಕವಾಗಿ ದಯೆಮಾಡಿಸಲಾಯಿತು. ಗ್ರೀಷ್ಮಕಾಲದ ಆ ನಡುಹಗಲಿನ ಸಮಯವೆಂದರೆ, ಸರ್ವತ್ರ ಅಗ್ನಿವೃಷ್ಟಿಯಾಗುತ್ತಿರುವಂತೆ ಬಿಡುವಿಲ್ಲದೆ ಕಾಯುತ್ತಿರುವ ಬಿಸಿಲಿನಿಂದ ಕೂಡಿದ ಕಾಲವು. ವನಚರಪ್ರಾಣಿಗಳು ಮೊದಲು ಆ ಅತ್ಯುಷ್ಣವನ್ನು ಸಹಿಸಲಾರದೆ ಯಾವುದಾದರೊಂದೊಂದು ವೃಕ್ಷಾಶ್ರಯವನ್ನು ಹೊಂದಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವ ಸಮಯವು ಕಡುಬಿಸಿಯಾದ ಬಿಸಿಲಿನಹೊಡತಕ್ಕೆ ತಡೆಯಲಾರದೆ ಗಾಳಿಯುಸಹ ಕೇವಲ ತಾಟಸ್ಥ್ಯವನ್ನು ವಹಿಸಿದ್ದ ವೇಳೆಯು. ಇಂಥಾ ಸಮಯದಲ್ಲಿ ಶ್ರೀಸ್ವಾಮಿಗಳು, ಹೀಗೆ ಶ್ರಮಪಡಬೇಕೆಂಬುದರ ಬಗ್ಗೆ ಯಾವ ಆಗತ್ಯವೂ, ಬಲಾತ್ಕಾರವೂ ಇರಲಿಲ್ಲೆಂಬುದು ನಿಜವಿರುತ್ತದೆ. ಹಾಗೂ ಅವರು ಕೇವಲ ಸನಾ ಸಿಗಳಿದ್ದು ಅವರಿಗೆ ಯಾವುದೊಂದು ವೃಕ್ಷದ ಸ್ವಲ್ಪನೆರಳು ಸಿಕ್ಕಿದರೆ ಸಾಕು ಅದಷ್ಟರಿಂದಲೇ ಅವರ ನಿರ್ವಾಹವು ಸಾಗುವಂತಿದೆ ಎಂಬುದೂ ಸಹಜವಿರುತ್ತದೆ. ಆದರೂ ಸ್ವಾಮಿಗಳು ಹೀಗೆ ಅವಿಶ್ರಾಂತ ಶ್ರಮಪಡುತ್ತಿರುವುದೇತಕ್ಕೆಂದರೆ—ಅವರು ಕೇವಲ ತಮ್ಮೊಬ್ಬರ ಹಿತವು ಸಾಧಿಸಿದರೆ ಸಾಕೆಂದು ತಿಳಿಯುವಂಥ ಸಂಕುಚಿತ ಸ್ವಭಾವದ ಸಾಮಾನ್ಯರಂತಿರದೆ ಅವರು ಯಾವತ್ತೂ ಸಮಾಜದ ಕಲ್ಯಾಣವು ಆಗಬೇಕೆಂದು ಬಯಸತಕ್ಕಂಥ ಹಾಗೂ ಅದಕ್ಕಾಗಿ ತ್ರಿಕರಣಶುದ್ಧಿಯಿಂದ ಅಹೋರಾತ್ರಿ ಅವಿಶ್ರಾಂತಶ್ರಮಪಡತಕ್ಕಂಥ ವಿಶಾಲಹೃದಯದ ಭಕ್ತಬಾಂಧವರೂ ಧುರೀಣರೂ ಆಗಿರುತ್ತಾರೆ. ಆದ್ದರಿಂದಲೇ ಅವರ ಆಯುಸ್ಸಿನ ಯಾವತ್ತೂ ಮುಖ್ಯಭಾಗವು ಇದಕ್ಕಾಗಿಯೇ ವ್ಯಯವಾಗಿರುತ್ತದೆ. ಅವರ ಶರೀರವೆಲ್ಲವೂ ಇದಕ್ಕಾಗಿಯೇ ಸವೆದಿರುತ್ತದೆ. ವಾಕ್‌ಸಂಪತ್ತು ಬುದ್ಧಿಸಂಪತ್ತು ಪೂಜಾಸಂಪತ್ತು ಇತ್ಯಾದಿ ಅವರ ಸಂಪತ್ತೆಲ್ಲವೂ ಇದಕ್ಕಾಗಿಯೇ ಖರ್ಚಾಗಿರುತ್ತದೆ. ಇದರ ಸಲುವಾಗಿಯೇ ಅವರು ಇಂಥ ಎಷ್ಟೋ ಕಷ್ಟಗಳನ್ನು ಸಮಾಧಾನದಿಂದ ಸಹನಮಾಡಿರುತ್ತಾರೆ. ಅವರು ಎಷ್ಟೋ ರಾತ್ರಿಗಳಲ್ಲಿ ಈ ಮತಾಭಿವೃದ್ಧಿಗೆ ಸಂಬಂಧಪಟ್ಟ ಸದುಪಾಯಗಳನ್ನು ಯೋಚಿಸುತ್ತಿರುವಾಗ ಅವರಿಗೆ ಸಂಪೂರ್ಣ ಜಾಗರಣವಾಗಿರುತ್ತದೆ. ಇದಕ್ಕಾಗಿಯೇ ಅವರು ಸಕಲದೇಶಸಂಚಾರಮಾಡಿರುತ್ತಾರೆ. ಗುಡ್ಡ, ಬೆಟ್ಟಗಳಲ್ಲಿ ಅಲೆದಿರುತ್ತಾರೆ. ಗುಡಿ, ಗುಹೆಗಳಲ್ಲಿ ವಾಸಮಾಡಿರುತ್ತಾರೆ. ಸಾಧುಸಿದ್ಧರ ಸಮಾಗಮಮಾಡಿರುತ್ತಾರೆ. ಪಂಡಿತಪದವೀಧರರೊಂದಿಗೆ ಸಂಭಾಷಣ ಬೆಳೆಸಿರುತ್ತಾರೆ. ಪ್ರಾಚೀನಸದ್ಗ್ರಂಥಗಳ ಅವಲೋಕಮಾಡಿರುತ್ತಾರೆ. ಅವುಗಳನ್ನು ಶೋಧಿಸಿ ಬಯಲಿಗೆ ತಂದಿರುತ್ತಾರೆ. ಲಕ್ಷಾಂತರದವರಿವಿಗೂ ಗಳಿಸಿರುತ್ತಾರೆ. ಗಳಿಸಿದ್ದನ್ನೆಲ್ಲ ಸಮಾಜಕ್ಕಾಗಿಯೇ ಬಳಸಿರುತ್ತಾರೆ. ಇತಾದಿಯಾದ ಅವರ ಪರಹಿತಕಾರ್ಯಗಳೆಲ್ಲವನ್ನೂ ಹೇಳಿ ಮುಗಿಸುವುದು ಅಸಾಧ್ಯವಿರುತ್ತದೆ. ಒಟ್ಟಿನಮೇಲೆ ಹೇಳುವುದಾದರೆ, ಅವರ ಶ್ವಾಸೋಚ್ಛ್ವಾಸವು ಸಹ ದುರ್ಮೈವಿಯಾದ ಈ ಮತಾಭಿವೃದ್ಧಿಯಬೆಸೆಯಿಂದಲೇ ನಡೆದಿರುತ್ತದೆ ಎಂದು ಹೇಳಿದರೆ ಎಷ್ಟುಮಾತ್ರವೂ ಅತಿಶಯೋಕ್ತಿಯಾಗಲಾರದು. ಹೀಗೆ ಇವರು ಭಕ್ತರಬಾಂಧವವನ್ನು ಹಚ್ಚಿಕೊಳ್ಳದೆ ವ್ಯಾಕರಣತೀರ್ಥ, ಕಾವ್ಯತೀರ್ಥ ಇತ್ಯಾದಿ ತೀರ್ಥರಾಗಬೇಕೆಂದು ಮನಸ್ಸುಮಾಡಿದ್ದರೆ ಇಷ್ಟರಲ್ಲಿ ಇವರು ಇಂಥ ಎಷ್ಟೋ ತೀರ್ಥರಾಗಲಿಕ್ಕೆ ಬರುವಂತಿದ್ದಿತು. ಪುನಃ ವಿದ್ವಾಂಸರಾಗುವುದು ಅರ್ಥಾತ್‌ತೀರ್ಥರಾಗುವುದು ಎಲ್ಲರಿಗೂ ಭೂಷಣವೇಸರಿ. ಆದರೇನು ಸಕಲತೀರ್ಥಪದವೀಧರರಾದರೂ ಸಹಕಾರಸೌಜನ್ಯ, ಸರ್ವಸಮದೃಷ್ಟಿ ಇತ್ಯಾದಿ ಸದ್ಗುಣಗಳಿರದಿದ್ದರೆ ಇಂಥ ತೀರ್ಥರೆಲ್ಲರೂ, ಮೊಸಳೆ, ಮಂಡೂಕಗಳಿಂದ ಕೂಡಿದ ಯಾವುದೊಂದು ನದೀತೀರ್ಥ ಸಮಾನರೇಸರಿ. ಸ್ವಾಮಿಗಳು ಇಂಥಾ ತೀರ್ಥಪ್ರಶಸ್ತಿಗಳನ್ನು ಪಡೆದವರಲ್ಲದಿದ್ದರೂ, ಇವರ ದೂರದೃಷ್ಟಿ, ದಿವ್ಯಜ್ಞಾನ, ತಪೋನಿಷ್ಠೆ, ತಪೋಶಕ್ತಿ, ನಿರ್ಮೋಹತ್ವ, ನಿರಭಿಮಾನತ್ವ ಇತ್ಯಾದಿ ಸದ್ಗುಣೈಶ್ವರ್ಯ ಸಂಪನ್ನತೆಯಿಂದ ಇವರಲ್ಲಿ ಪರಮಪೂಜ್ಯತೆಯೂ, ಜಗನ್ಮಾನ್ಯತೆಯೂ ತಾವೇ ನೆಲೆಗೊಂಡಿರುತ್ತವೆ. ಇಂಥಾ ಪೂಜ್ಯರ ವಿಷಯದಲ್ಲಿಸಹ ನಿಂದಕವರ್ಗದವರು ತಮ್ಮ ಮನಸ್ಸಿಗೆಬಂದಂತೆ ನಿರರ್ಥಟೀಕಾಮಾಡುತ್ತಿರುವುದರಲ್ಲೂ, ಅವರ ಮೇಲೆ ಅಲ್ಲಸಲ್ಲದ ಆರೋಪಗಳನ್ನು ಹೊರಿಸುತ್ತಿರುವುದರಲ್ಲೂ ತಮ್ಮ ಪರದೂಷಣ ಪಾಂಡಿತ್ಯದ ಪ್ರದರ್ಶನಮಾಡುತ್ತಿರುವುದಾಗಿ ಕಂಡುಬರುತ್ತದೆ. ಇವರಿಗೆ ಇಂಥಾ ಪರದೂಷಣೆಯಿಂದಲೇ ಮನಸ್ಸಿಗೆ ಶಾಂತಿಯೂ, ಸಮಾಧಾನವೂ ಸಿಗುತ್ತದಾಗಿರಲಿಕ್ಕೆ ಸಾಕು. ಪಕ್ಷಿಗಳಲ್ಲಿ ಕಾಗೆಯೂ, ವೃಕ್ಷಗಳಲ್ಲಿ ಜಗಳಗಂಟೀ ಮರವೂ (ಇದೊಂದು ಜಾತಿಯ ಮರವಿದ್ದು ಇದರ ಕಟ್ಟಿಗೆಯು ಮನೆಯಲ್ಲಿ ಶೇರಿತೆಂದರೆ ಕಾರಣವಿಲ್ಲದೆ ಕಲಹಕ್ಕೆ ಪ್ರಾರಂಭವಾಗುವುದು) ಇರುವಹಾಗೆ ಮಾನವವರ್ಗದಲ್ಲಿ ಇಂಥ - ನಿಂದಕವರ್ಗವಾದಿಯು ಜಗದಾದಿಯಿಂದಲೂ ನಡೆದುಬಂದಿರುವಂತೆ ತೋರುತ್ತದೆ. [illegible] ಇದು ಇರತಕ್ಕದ್ದೆಯೂ [illegible]. [illegible] ಹೆಚ್ಚಿನ [illegible] ಈ ನಿಂದಕವರ್ಗದ [illegible] ಬಹಳ ಬೆಳೆದಿಕ್ಕೆ [illegible]. [illegible] ಹೋಗಿದ್ದರೆ, ಭೂಮಿಯ [illegible] ಬರುವೆನ್ನುವದ [illegible] ಅಲ್ಲದೆ ಇಲ್ಲ [illegible] ನವಳೆ [illegible] ಇದ್ದು [illegible] ಹಿಂಗೆ ನಿಂದಕವರ್ಗದ [illegible] ಇದ್ದುದರಿಂದಲೇ ಅವರ [illegible] ಅದಕ್ಕೆ ಸಾಕು. ಅದರೆ ಇಂಥ [illegible] ಶ್ರೀಸ್ವಾಮಿ

ಗಳಂಥವರ ಪಾದಧೂಳಿಯು ಯಾವುದೊಂದು ಕಾರ್ಯಾರ್ಥಕ್ಕೆ ಸಹ ಕಲಂಕವು ಹಚ್ಚಲಾರದೆಂದು ಸತ್ಯವನ್ನು ಸ್ಮರಿಸಿ ಹೇಳತಕ್ಕ ಅನಂತ ಜನರಲ್ಲಿ ನಾನೂ ಒಬ್ಬನಾಗಿಹೇನೆಂದು ತಿಳಿಸುವಾಗ ನನಗೆ ಬಹಳ ಸಮಾಧಾನವೆನಿಸುತ್ತದೆ. ಇರಲಿ ಈ ವಿಷಯಾಂತರವಾದ್ದಕ್ಕೆ ವಾಚಕರು ಕ್ಷಮಿಸಬೇಕು.

ಮೇಲೆ ಹೇಳಿರುವಂತೆ ಶ್ರೀಸ್ವಾಮಿಗಳು ದಯಮಾಡಿಸಿ ಸುತ್ತುಮುತ್ತಿನ ಪ್ರಮುಖಜನರನ್ನೆಲ್ಲಾ ಬರಮಾಡಿಕೊಂಡು ಅವರೊಂದಿಗೆ ಆಲೋಚನೆ ನಡಿಸಿ, ಪ್ರಕೃತದಲ್ಲಿ ನಮ್ಮ ವೀರಶೈವಧರ್ಮಕ್ಕೆ ಅವನತಿಯ ಕಾಲ ಒದಗಿರುವುದೆಂದೂ, ಪ್ರಯುಕ್ತ ಧರ್ಮೋದ್ಧಾರದ ದೆಶೆಯಿಂದ ಯತ್ನಮಾಡತಕ್ಕದ್ದು ಅಗತ್ಯವೂ, ಅತ್ಯವಸರವೂ ಇರುತ್ತದೆಯೆಂದೂ ಧರ್ಮವು ಕೆಡುವಂತಾದುದಕ್ಕೆ ಧರ್ಮಸ್ಥಾಪಕರೂ ಧರ್ಮರಕ್ಷಕರೂ ಆದ ಸದ್ಗುರುಗಳ ಅಭಾವವೇ ಮುಖ್ಯ ಕಾರಣವಿರುತ್ತದೆ ಎಂದೂ. ಆದಪ್ರಯುಕ್ತ ನಮ್ಮ ಗುರುವರ್ಗದ ವಟುಗಳಿಗೆ ಸದ್ಗುರುತ್ವದ ಶಿಕ್ಷಣಕೊಡುವುದಕ್ಕೋಸ್ಕರ ತಕ್ಕ ಶಿಕ್ಷಣಸಂಸ್ಥೆಗಳ ಸ್ಥಾಪನೆಮಾಡಬೇಕಾದ್ದು ಪ್ರಥಮಕರ್ತವ್ಯವಿರುತ್ತದೆಂದೂ ಈ ಉದ್ದೇಶದಿಂದಲೇ ಬಿಜಾಪುರಜಿಲ್ಲೆಯಲ್ಲೊಂದು ಶಿವಯೋಗಮಂದಿರಸ್ಥಾಪನೆಯಾಗಿರುತ್ತದೆಯೆಂದೂ, ಅದರಂತೆ ಇಲ್ಲಿಯೂ ಒಂದು ಶಿವಯೋಗಮಂದಿರಸ್ಥಾಪನೆಯಾಗಬೇಕೆಂಬ ತಮ್ಮ ಇಚ್ಛೆಯುಂಟೆಂದೂ, ಇದಕ್ಕಾಗಿ ನೀವೆಲ್ಲರೂ ನಿಮ್ಮ ತನುಮನಧನಗಳಿಂದ ಸಹಾಯಮಾಡತಕ್ಕದ್ದೆಂದೂ ಅಪ್ಪಣೆಮಾಡಿಸಿ ತಮ್ಮ ಉದ್ದೇಶವನ್ನು ವ್ಯಕ್ತಪಡಿಸಿದರು. ಅದಕ್ಕೆ ಇಲ್ಲಿಯ ಜನರು 'ಈ ನಮ್ಮ ದೇಶವು ಭಕ್ತಿವಂತದೇಶವಿದ್ದರೂ ಬಡದೇಶವಿರುತ್ತದೆ. ಭಕ್ತಿಗೆ ತಕ್ಕಷ್ಟು ಭಾಗ್ಯವು ನಮ್ಮಲ್ಲಿರುವುದಿಲ್ಲ. ಪ್ರಯುಕ್ತ ಶಿವಯೋಗಮಂದಿರದಂಥ ಒಂದು ದೊಡ್ಡ ಸಂಸ್ಥೆಯ ಆದಾಯವೆಚ್ಚಗಳನ್ನು ನಾವು ನಿರ್ವಹಿಸಲಾರೆವು. ಇಂಥ ನಮ್ಮ ಸಹಾಯದ ಭರವಸೆಯಮೇಲೆ ತಾವು ಇಲ್ಲಿ ಶಿವಯೋಗಮಂದಿರಸ್ಥಾಪಿಸುವುದಾದರೆ ತಮ್ಮ ಉದ್ದೇಶವು ಸುಸೂತ್ರಸಾರ್ಥಕವಾಗಲಾರದು' ಎಂದು ಸ್ಪಷ್ಟವಾಗಿ ತಿಳಿಸಿದರು.

ಇಷ್ಟಾಗುವುದರೊಳಗಾಗಿ ಮಧ್ಯಾಹ್ನವುಮಿಾರಿ ಎಷ್ಟೋ ಹೊತ್ತಾಗಿದ್ದಿತು. ಇಷ್ಟು ಹೊತ್ತಾಗಿದ್ದರೂ ಸ್ವಾಮಿಗಳಸ್ನಾನ ಪೂಜಾದಿಗಳು ಆಗಿರಲಿಲ್ಲ. ಕಂಠಪೂರ್ತಿ ತೃಪ್ತರಾಗಿಬಂದಿದ್ದ ನಮ್ಮಂಥವರಿಗೆ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವ ಪರವೆಯೂ ಆಗಿರಲಿಲ್ಲ. ಸಂದರ್ಭವಶಾತ್ ಅಂದು ಅವರಲ್ಲಿಯೂ ಸಂಗ್ರಹವೇನೂ ಇರಲಿಲ್ಲವೆಂಬಂತೆಯೂ ತೋರಿತು. ಸತ್ಪುರುಷರಿಗೆ ಅವರ ಸತ್ವಪರೀಕ್ಷೆಗಾಗಿ ಇಂಥ ಸಂದರ್ಭಗಳೆಷ್ಟೋ ಒದಗತಕ್ಕವಾಗಿರುತ್ತವೆ. ಇದಕ್ಕೆಲ್ಲ ಈಶ್ವರನ ಅಗಾಧಲೀಲೆಯೇ ಮುಖ್ಯಕಾರಣವು. ಅಷ್ಟರಲ್ಲಿ ಒಂದು ಚಮತ್ಕಾರವು ನಡೆಯಿತು. ಓರ್ವ ಶಿವಭಕ್ತ ಸಂಭಾವಿತ ಗೃಹಸ್ಥನು ತನ್ನ ಗಾಡಿಯನ್ನು ಹೂಡಿಕೊಂಡು ಎಲ್ಲಿಗೋ ಹೊರಟು ಅಡವಿಯಲ್ಲಿ ದಾರಿಯು ತಪ್ಪಿದ್ದರಿಂದ ಎಷ್ಟೋ ಹೊತ್ತಿನವರಿವಿಗೆ ಸುತ್ತಿಸುತ್ತಿ ಬೇಸತ್ತು ಕಡೆಗೆ ಸ್ವಾಮಿಗಳಿದ್ದಲ್ಲಿಗೇನೆ ಅನಿರೀಕ್ಷಿತವಾಗಿ ಬರಮಾಡಲ್ಪಟ್ಟನು. ಆತನು ಒಳ್ಳೇ ಶೀಲವಂತ ಶಿವಭಕ್ತನಿದ್ದನು, ಕೇವಲ ಗುರುಜಂಗಮಪ್ರೇಮಿಯಾಗಿದ್ದನು. ಇಂಥ ಈತನಿಗೆ ದಾರಿಯುತಪ್ಪಿ ದಿಗ್ಭ್ರಾಂತಿಯುಂಟಾಗಿದ್ದ ವೇಳೆಯಲ್ಲಿ ಹೀಗೆ ಅಪರಿಚಿತಸ್ಥಳದಲ್ಲಿ ಶ್ರೀಶಿವಯೋಗಿಗಳ ದರ್ಶನವಾದದ್ದರಿಂದ ಎಷ್ಟು ಆನಂದವೂ ಆಶ್ಚರ್ಯವೂ ಆಗಿರಬಹುದೆಂಬುದನ್ನು ವಾಚಕರೇ ಕಲ್ಪಿಸಬೇಕು. ಹೀಗೆ ಆನಂದಪರವಶನಾಗಿದ್ದ ಆ ಸದ್ಭಕ್ತನು ಸ್ವಾಮಿಗಳಿಗೆ ನಮಸ್ಕಾರಮಾಡಿ ತನ್ನಲ್ಲಿ ಮಡಿಯಿಂದಿರತಕ್ಕ ಸಾಮಗ್ರಿಗಳಿರುತ್ತವೆ. ತಾವು ಇಲ್ಲಿಯೇ ಈ ದಿವಸ ಸ್ನಾನಾದಿಗನ್ನು ತೀರಿಸಬೇಕು. ನಾನು ಯಾವತ್ತೂ ಸಜ್ಜುಗೊಳಿಸಿ ಕೊಡುತ್ತೇನೆಯೆಂದು ಬೇಡಿಕೊಂಡದ್ದರಮೇಲೆ ಇದೆಲ್ಲವೂ ಈಶ್ವರನ ಲೀಲೆಯು ಆಗಲಿಯೆಂದು ಅಪ್ಪಣೆಕೊಡಿಸಿ ಸ್ವಾಮಿಗಳು ಆ ಭಕ್ತನ ಬೇಡಿಕೆಯಂತೆ ತಮ್ಮ ನಿತ್ಯಕ್ರಿಯಾದಿಗಳನ್ನು ತೀರಿಸಿಕೊಂಡು ಈಚೆಗೆ ಬಂದಬಳಿಕ ಅಲ್ಲಿಗೆ ಬಂದಿದ್ದವರಿಗೆಲ್ಲ ಹೋಗುವುದಕ್ಕೆ ಅಪ್ಪಣೆಕೊಟ್ಟು ಕಳಿಸಿ ತಮ್ಮ ಬಳಿಯಲ್ಲಿದ್ದ ಮಹದೇವದೇಶಿಕರೆಂಬ ಓರ್ವ ಸಾಧಕರನ್ನು ಕರೆದು ನೀವೊಬ್ಬರೇ ಈ ಸ್ಥಳದಲ್ಲಿ ನಿಂತು ಅನುಷ್ಠಾನಮಾಡಿಕೊಂಡಿರುವಿರಾ? ಎಂದು ಪ್ರಶ್ನೆಮಾಡಿದರು. ಅದಕ್ಕೆ ಸಾಧಕರು ಗುರುವಾಜ್ಞೆಗೆ ಪ್ರತಿಯುಂಟೆ? ಎಂದು ಹೇಳಿ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು. ತರುವಾಯ ಸ್ವಾಮಿಗಳು ಹಾಗಾದರೆ ಈ ದಿವಸವೇ ಇಲ್ಲಿ ಈ ಶ್ರೀ ಶಿವಯೋಗಮಂದಿರದ ಸ್ಥಾಪನೆಮಾಡಿದಂತಾಯಿತು. ಇನ್ನುಮುಂದೆ ಈ ಶಿವಯೋಗಮಂದಿರದ ದೆಶೆಯಿಂದ ಯಾರೇ ಆಗಲಿ ಯಾರನ್ನೂ ಯಾವರೀತಿಯಿಂದಲೂ ಭಿಕ್ಷೆ ಕೇಳಬಾರದು. ಅವರಾಗಿ ಭಕ್ತಿಯಿಂದ ತಂದುಕೊಟ್ಟಲ್ಲಿ ಮಾತ್ರ ಏನನ್ನಾದರೂ ತೆಗೆದುಕೊಳ್ಳಬಹುದು. ಮುಂದೆ ಈಶ್ವರೇಚ್ಛೆಯಲ್ಲಿದ್ದಂತೆ ನಡೆಯಲಿ ಎಂದು ಅಪ್ಪಣೆಕೊಡಿಸಿ, ಆ ದಿವಸವೇ ಅವರು ಎತ್ತಕಡೆಗೋ ದಯಮಾಡಿದರು. ಆದರೆ ಸ್ವಾಮಿಗಳು ಹೀಗೆ ಹೊರಡುವಾಗ್ಯೆ ಇಲ್ಲಿರತಕ್ಕ ಸಾಧಕರ ವಿಷಯವಾಗಿ ಅವರ ವಾಸಕ್ಕೇನು; ಅವರ ಊಟೋಪಚಾರಕ್ಕೆ ಹೇಗೆ; ಅವರು ಓರ್ವರೇ ಈ ವಿಜನಪ್ರದೇಶದಲ್ಲಿರುವುದು ಸಾಧ್ಯವೆ? ಎಂಬ ಇತ್ಯಾದಿ ಯಾವ ಯೋಚನೆಯನ್ನಾಗಲಿ ವ್ಯವಸ್ಥೆಯನ್ನಾಗಲಿ ಮಾಡಲಿಲ್ಲವು: ಸರ್ವಸಂರಕ್ಷಕನಾದ ದೇವರು ಸರ್ವಾಂತರ್ಯಾಮಿಯಿದ್ದಾನೆಂಬ ಅವರ ದೃಢತರವಾದ ನಂಬುಗೆಯೇ ಆಗ್ಗೆ ಅವರನ್ನು ಇಂಥಾ ಯೋಚನೆಗೆ ಗುರಿಮಾಡಲಿಲ್ಲೆಂದು ನಾವು ಊಹಿಸಬಹುದು. ಈ ಪ್ರಕಾರ ಈ ಸಾಧಕರೊಬ್ಬರೇ ಇಲ್ಲಿರತೊಡಗಿದರು. ಇವರು ಹೊಳೆಯದಂಡೆಯ ಮೇಲಿದ್ದ ಒಂದು ದೊಡ್ಡ ಮಳೆಯಲ್ಲಿ ಗವಿಯ ಹಾಗೆ ಮಾಡಿಕೊಂಡು ಅಲ್ಲಿಯೇ ಯೋಗಸಾಧನತತ್ಪರರಾಗಿ ಕಾಲಕಳೆಯುತ್ತಲಿದ್ದರು. ಈ ಕಾಲದಲ್ಲಿ ನಿತ್ಯವೂ ರಾತ್ರಿಯಲ್ಲಿ ಹುಲಿ, ಹುಲ್ಲೆ, ನರಿ, ಕರಡಿಗಳೆಷ್ಟೋ ಬಂದು ಇವರ ಸಮಿಾಪದಲ್ಲಿಯೇ ನೀರುಕುಡಿದು ಹೋಗುತ್ತಲಿದ್ದವು. ಇತರ ಎಷ್ಟೋ ಮೃಗಗಳಾದರೂ ಇವರ ಹತ್ತಿರದಲ್ಲೇ ತಿರುಗಾಡುತ್ತಲಿದ್ದವು. ನಿತ್ಯವೂ ಅವರಿವರು ತಂದುಕೊಡುವ ಸ್ವಲ್ಪ ಹಾಲಿನಿಂದಲೇ ಇವರ ಎಷ್ಟೋ ದಿವಸಗಳ ನಿರ್ವಾಹವು ಸಾಗಬೇಕಾಯಿತು. ಆದರೆ ಇಂಥ ತೊಂದರೆಗಳೆಷ್ಟೊದಗಿದರೂ ಈ ಸಾಧಕರ ಚಿತ್ತವೃತ್ತಿಯು ಲವಲೇಶಮಾತ್ರವೂ ಚಲಿಸಲಿಲ್ಲವು. ಅದರಲ್ಲೂ ಆಗ್ಗೆ ಸಾಧಕರು ಕೇವಲ ಚಿಕ್ಕವಯಸ್ಸಿನವರಿದ್ದರು. ಇಂಥವರಲ್ಲಿ ಇಂಥ ವೈರಾಗ್ಯವೂ ಸಹನಶೀಲತೆಯೂ ನಿರ್ಭೀತಿಯೂ ಅಚಂಚಲಮನಶ್ಶಕ್ತಿಯೂ ಅಳವಟ್ಟಿದ್ದುದು ಅವರು ಬಾಲ್ಯಾರಭ್ಯ ನಿರಂತರವೂ ಸದ್ಗುರುಸಾನ್ನಿಧ್ಯದಲ್ಲಿದ್ದುಕೊಂಡು ಸಚ್ಛಿಕ್ಷಣಹೊಂದಿದುದರ ದಿವ್ಯಫಲವೇ ಸರಿ. ವಟುವರ್ಗಕ್ಕೆ ಪ್ರಾರಂಭದಲ್ಲಿ ಇಂಥ ದಿವ್ಯಶಿಕ್ಷಣವನ್ನೊದಗಿಸುತ್ತಿರುವುದಕ್ಕಾಗಿ ಸಮಾಜವು ಸ್ವಾಮಿಗಳಿಗೆ ಎಷ್ಟು ಧನ್ಯವಾದವನ್ನರ್ಪಿಸಿದರೂ ಸಾಲದುದಾಗಿದೆ. ಹೀಗೆ ಎಷ್ಟೋದಿವಸಗಳು ಕಳೆದಮೇಲೆ ಇಲ್ಲಿಯ ಜನರು ಭಕ್ತಿಜಾಗ್ರತರಾಗಿ ಮಂದಿರಕ್ಕೆ ತಮಗೆ ತಾವೇ ಏನನ್ನಾದರೂ ತಂದೊಪ್ಪಿಸತೊಡಗಿದರು. ಇದಕ್ಕಾಗಿ ಯಾರನ್ನು ಯಾರೂ ಕಾಡದಿದ್ದರೂ. ಬೇಡದಿದ್ದರೂ ತಮ್ಮಷ್ಟಕ್ಕೆ ತಾವೇ ಭಕ್ತಿಪ್ರೇರಕರಾಗಿ ಯಾರು ಹೊಲಗದ್ದೆಗಳನ್ನು ಕೊಟ್ಟರು, ಯಾರು ದನಕರುಗಳನ್ನು ಕೊಟ್ಟರು, ಯಾರೊಬ್ಬರು ಧನಧಾನ್ಯ ಪಾತ್ರೆ ಪಡಗಗಳನ್ನೇ ಕೊಟ್ಟರು, ಹೀಗೆ ಯಾವುದರ ಅಭಾವಕ್ಕೂ ಅಸ್ಪದವಿಲ್ಲದಂತೆ ನಡೆಯತೊಡಗಿತು. ಹೀಗೆ ಭಗವದನುಗ್ರಹದಿಂದ ಸಾಗುತ್ತಲಿರುವಾಗ ಮುಂದೆ ಒಂದೆರಡುವರ್ಷಗಳಲ್ಲಿಯೇ ಈ ಮಂದಿರಕ್ಕೆ ಸೂರಾರವರಿಂದ ಗೋವುಗಳ ಸಂಸ್ಥೆಯಾಯಿತು. ಫಲವತ್ತಾದ ನಾಲ್ಕುನೂರು ಎಕ್ರೆಯಷ್ಟು ಜಮೀನು ಪ್ರಾಪ್ತವಾಯಿತು. ನಾಲ್ಕೈದುಸಾವಿರ ರೂಪಾಯಿ ವೆಚ್ಚದಿಂದೊಂದು ದೊಡ್ಡ ಮಂದಿರವೂ ಇಲ್ಲಿ ನಿರ್ಮಾಣವಾಯಿತು. ಮಳೆಯಲ್ಲಿ ವಾಸಮಾಡುತ್ತಿದ್ದ ಸಾಧಕರು ಇಂಥ ಮಂದಿರದಲ್ಲಿ ವಾಸಮಾಡುವಂತಾಯಿತು. ಹೀಗೆ ಅಲ್ಪಾವಕಾಶದಲ್ಲಿ ಮಳೆಯು ಹೋಗಿ ಮಂದಿರವಾಯಿತು; ಸ್ಮಶಾನವು ಹೋಗಿ ಸ್ವರ್ಗವಾಯಿತು; ಅರಣ್ಯವು ಆನಂದದಾಯಕ ಸ್ಥಳವಾಯಿತು: ವನಮೃಗಗಳ ವಾಸಸ್ಥಳವು ಮಾನ್ಯ ಶಿವಯೋಗಿಗಳ ವಾಸಸ್ಥಳವಾಯಿತು. ನೋಡಿರಿ ಮಹಿಮರ ಮಹಿಮೆಯು ಎಷ್ಟು ಅತರ್ಕ್ಯವಾದುದಿರುತ್ತದೆ! ಹೀಗೆ ಶಿವಾನುಗ್ರಹದಿಂದ ಸಿದ್ಧವಾಗಿರುವ ಈ ಮಂದಿರದಲ್ಲಿ ಸದ್ಯಕ್ಕೆ ಶಿವಯೋಗಿಗಳ ಜಪತಪಾನುಷ್ಠಾನಗಳು ನಡೆದಿರುತ್ತವೆ. ಪ್ರವಾಸಿ ಪಾಂಥಸ್ಥರ ಹಾಗು ಸಾಧುಸಂತರ ಸಲುವಾಗಿ ನಿತ್ಯದಾಸೋಹದ ವ್ಯವಸ್ಥೆಯಾಗಿರುತ್ತದೆ. ಇಲ್ಲಿ ವರ್ಷಕ್ಕೊಮ್ಮೆ ಹೋಳಿಹುಣ್ಣಿಮೆಯ ಕಾಲಕ್ಕೆ ಜಾತ್ರೆಯೂ ಧಾರ್ಮಿಕಸಭೆಯೂ ನಡೆಯುತ್ತಲಿವೆ. ಆ ಕಾಲಕ್ಕೆ ದೂರದೂರದಿಂದ ಬರತಕ್ಕ ಪಂಡಿತರು, ಪದವೀಧರರು, ಪ್ರಸಿದ್ಧ ಪ್ರೇಕ್ಷಕರು, ಪಟ್ಟಚರಮೂರ್ತಿಗಳು, ಶಾಸ್ತ್ರಿಗಳು, ಕೀರ್ತನಕಾರರು, ಭಾಷಣಕಾರರು ಇತ್ಯಾದಿ ಜನರಿಂದ ಸಂಘಟಿತವಾಗಿ ಸರ್ವತ್ರ ಶಿವಲಾಂಛನದಿಂದ ಶಿವಮಯವಾಗಿ ಈ ಸ್ಥಳವು ಭೂಕೈಲಾಸವೋ ಎಂಬುವಹಾಗೆ ತೋರತಕ್ಕದ್ದಾಗಿರುತ್ತದೆ. ಪ್ರಯುಕ್ತ ದರ ಒಬ್ಬ ವೀರಶೈವನೂ ಆ ಕಾಲಕ್ಕೆ ಅತ್ಯವಶ್ಯವಾಗಿ ಈ ಕ್ಷೇತ್ರದರ್ಶನಮಾಡಿಕೊಳ್ಳತಕ್ಕದ್ದೆಂದು ನನ್ನ ಸವಿನಯ ವಿನಂತಿಯುಂಟು. ಹಾಗೂ ಶಿವಯೋಗಮಂದಿರದವರು ಭಿಕ್ಷೆಕೇಳಬಾರದೆಂಬ ಸಂಕಲ್ಪಬದ್ಧರಾಗಿರುವುದರಿಂದ ಅವರು ಯಾರನ್ನೂ ಭಿಕ್ಷೆಬೇಡತಕ್ಕವರಾಗಿರುವುದಿಲ್ಲ. ಆದರೆ ಇದರಿಂದ ತಮಗೆ ಬಹಳ ಹಗುರವಾಯಿತೆಂದು ಯಾರೂ ದಯಮಾಡಿ ತಿಳಿಯದೆ, ತಮಗೆ ತಾವೇ ತಿಳಿದು ತಮ್ಮ ಕೈಲಾದಮಟ್ಟಿಗೂ ಸಹಾಯಮಾಡಿ ಈ ಶಿವಯೋಗಮಂದಿರರೂಪೀ ಧರ್ಮಧ್ವಜಕ್ಕೆ ಸುಸ್ಥಿರತೆಯನ್ನುಂಟುಮಾಡತಕ್ಕದ್ದೆಂದೂ ಇದು ದರ ಒಬ್ಬ ವೀರಶೈವನ ಅವಶ್ಯ ಕರ್ತವ್ಯವಿದೆ ಎಂದೂ ಸೂಚಿಸಿ ಪ್ರಣವಸ್ವರೂಪಿಗಳಾದ ಶ್ರೀ ಸ್ವಾಮಿಗಳನ್ನು ಸ್ಮರಿಸಿ ಈ ಲೇಖನವನ್ನು ಮುಗಿಸುತ್ತೇನೆ. ತತ್ತೂರು ಶ್ರೀಕಂಠಗೌಡ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

17 ನೆಯ ಪ್ರಕರಣ.

ಭೋಜನವಿಷಯ.

ನಾನು ಬಲವಾಗಿ ಆತ್ಮಪರೀಕ್ಷೆಯನ್ನು ಮಾಡಿಕೊಂಡುದರಿಂದ ಬಾಹ್ಯಾಭ್ಯಂತರ ಸಂಸ್ಕರಣಾವಶ್ಯಕತೆಯು ನನಗೆ ಗೋಚರಿಸಹತ್ತಿತು. ನಾನು ನನ್ನ ವೆಚ್ಚವನ್ನು ಕಡಿಮೆಮಾಡಲುಪಕ್ರಮಿಸಿದುದರಿಂದ ಭೋಜನಪದ್ಧತಿಯನ್ನು ಕೂಡ ವ್ಯತ್ಯಾಸಮಾಡಲುಪಕ್ರಮಿಸಿದೆನು. ಶಾಕಾಹಾರವನ್ನು ಪ್ರಶಂಸಿಸಿ ಬರೆದ ಗ್ರಂಥಕರ್ತರು ಮತ, ವೈದ್ಯ, ಪ್ರಕೃತಿಶಾಸ್ತ್ರಾನುಗುಣವಾಗಿಯೂ, ಆಚರಣಾನುಗುಣ್ಯವಾಗಿಯೂ ಆಹಾರಸಮಸ್ಯೆಯನ್ನು ಕುರಿತು ಪ್ರಬಲವಾಗಿ ಪರೀಕ್ಷಿಸಿಯೇ ಬರೆದಿರುತ್ತಾರೆ. ಮನುಷ್ಯನು ಇತರ ಜಂತುಗಳಿಗಿನ್ನ ಶ್ರೇಷ್ಠನಾಗಿರುವುದರ ಫಲವು ಅಂತಹವುಗಳನ್ನು ಕೊಂದು ತಿನ್ನುವುದಲ್ಲ. ಪ್ರಬಲರು ದುರ್ಬಲರನ್ನು ಕಾಪಾಡುವುದು ಧರ್ಮವು. ಅದುಕಾರಣ ಮನುಷ್ಯರಿಗೆ ಮನುಷ್ಯರಲ್ಲಿ ಮಾತ್ರವಲ್ಲದೆ ಸಮಸ್ತಜೀವರಾಸಿಗಳಲ್ಲೂ ಪ್ರೇಮವಿರಬೇಕು. ಮನುಷ್ಯನು ಊಟಮಾಡುವುದು ರುಚಿಗಾಗಿರದೆ ಬದುಕುವುದಕ್ಕಾಗಿಯೇ ಎಂಬು ಅವರು ನೈತಿಕವಾಗಿ ನಿರ್ಧರಿಸಿರುವರು. ಬಹಳ ಜನರು ಮಾಂಸ, ಕೋಳಿಮೊಟ್ಟೆ ಮೊದಲಾದವುಗಳನ್ನು ತಿನ್ನುವುದನ್ನು ಬಿಟ್ಟಿರುವರು. ಮತ್ತೆ ಕೆಲವರು ಹಾಲನ್ನೂ, ಆದರಿಂದಾಗುವ ಮೊಸರು ಬೆಣ್ಣೆ ತುಪ್ಪ ಮೊದಲಾದವುಗಳನ್ನು ಸಹ ಸಂಪೂರ್ಣವಾಗಿ ತ್ಯಜಿಸಿರುವರು. ಮನುಷ್ಯನು ತನ್ನ ಅಂಗನಿರ್ಮಾಣಕ್ಕಾಗಿ ಅಪಕ್ವಪದಾರ್ಥಗಳನ್ನು ತಿನ್ನಬೇಕೆಂಬುದೇ ಭಗವತ್ಸಂಕಲ್ಪವಲ್ಲದೆ ಪಕ್ವಪದಾರ್ಥಗಳನ್ನು ತಿನ್ನಬೇಕೆಂಬುದಲ್ಲ. ಬಾಲ್ಯದಲ್ಲಿ ಹಲ್ಲು ಬರುವತನಕ ತಾಯಿಹಾಲನ್ನು ಕುಡಿಯಬೇಕು. ಆನಂತರ ಗಟ್ಟಿಪದಾರ್ಥಗಳನ್ನು ತಿನ್ನಬಹುದು ಎಂದು ಕೆಲರು ಹೇಳುತ್ತಾರೆ. ವೈದ್ಯಶಾಸ್ತ್ರರೀತಿಯಾಗಿ ಉಪ್ಪಿನಕಾಯಿ ಮೊದಲಾಗಿ ಮಸಾಲೆಪದಾರ್ಥಗಳು ವರ್ಜನೀಯವು. ಅನುಷ್ಠಾನಾನುಕೂಲವಾಗಿಯೂ. ಧನವಿಚಾರವಾಗಿಯೂ ನೋಡಿದರೂ ಶಾಕಾಹಾರಕ್ಕೆ ವೆಚ್ಚವು ಬಹಳ ಕಡಿಮೆಯಾಗುವುದೆಂದು ಅವರು ನಿರ್ಣಯಿಸಿರುವರು. ಈ ಗ್ರಂಥಗಳನ್ನು ಓದಿದುದರಿಂದ ಈ ವಿಷಯಗಳೆಲ್ಲ ನನಗೆ ಚೆನ್ನಾಗಿ ಮನದಟ್ಟಿಗಿರುವುವು. ಶಾಕಾಹಾರವನ್ನು ಮಾಡತಕ್ಕ ಭೋಜನಶಾಲೆಗಳಲ್ಲಿ ಈ ನಿಯಮವನ್ನನುಸರಿಸುವ ಬಹಳ ಜನರನ್ನು ನೋಡಿದೆನು. ಆಂಗ್ಲದೇಶದಲ್ಲಿ ಶಾಕಾಹಾರಪ್ರಸಾರಕ ಸಂಘವೊಂದು ಸಹ ಇದೆ. ಅವರು ಒಂದು ವಾರಪತ್ರಿಕೆಯನ್ನು ಹೊರಡಿಸುತ್ತಿರುವರು. ನಾನು ಆ ಸಂಘಕ್ಕೆ ಸೇರಿದೆನು ಮತ್ತು ಆ ಪತ್ರಿಕೆಗೊಬ್ಬ ಚಂದಾದಾರನಾದೆನು. ಕ್ಷಿಪ್ರದಲ್ಲಿಯೇ ಅದರ ಕಾರ್ಯನಿರ್ವಾಹಕಸಂಘಕ್ಕೆ ನಾನೊಬ್ಬ ಮೆಂಬರಾಗಿ ತೆಗೆದುಕೊಳ್ಳಲ್ಪಟ್ಟೆನು. ಅದರಲ್ಲಿ ನಿಷ್ಠರಾದ ಶಾಕಾಹಾರಿಗಳು ಬಹಳ ಜನರು ನನ್ನ ಪರಿಚಿತಸ್ಥರಾದರು. ನಾನು ಅದನ್ನೇ ಅಭ್ಯಾಸಮಾಡಲಾರಂಭಿಸಿದೆನು.

ನಮ್ಮೂರಿನಿಂದ ಬಂದಿದ್ದ ಹಸಿಟ್ಟು, ಉಪ್ಪಿನಕಾಯಿ ಮೊದಲಾದವುಗಳನ್ನು ತಿನ್ನುವುದನ್ನು ಬಿಟ್ಟೆನು, ಮತ್ತು ಅವುಗಳಮೇಲೆ ವಿರಕ್ತಿಯು ಸಹ ಹುಟ್ಟಿತು. ರಿಚ್ಮಂಡಿನಲ್ಲಿದ್ದಾಗ್ಗ ಬೆಯಿಸಿದ ಬಸಳೆಸೊಪ್ಪು ನನ್ನ ನಾಲಿಗೆಗೆ ಸಪ್ಪೆಯಾಗಿ ಕಂಡುಬಂದಿದ್ದುದು ಈಗ ಅದು ಬಹಳ ರುಚಿಯಾಗಿಕಂಡುಬಂದುದರಿಂದ ಅದಕ್ಕೆ ಮಸಾಲೆಹಾಕದೆಯೇ ಬೆಂದುದದನ್ನು ತಿನ್ನಲಾರಂಭಿಸಿದೆನು. ಈ ಪರೀಕ್ಷೆಯಿಂದ ರುಚಿಗೆ ಪ್ರಧಾನಸ್ಥಾನವು ಮನಸ್ಸಲ್ಲದೆ ನಾಲಿಗೆಯಲ್ಲವೆಂದು ನಾನು ತಿಳಿದುಕೊಂಡೆನು. ಧನವ್ಯಯವನ್ನು ತಗ್ಗಿಸುವವಿಚಾರವನ್ನು ಕೂಡ ನಾನು ಮರೆಯಲಿಲ್ಲವು. ಆ ಕಾಲದಲ್ಲಿ ಕೆಲರು ಕಾಫಿಯನ್ನೂ ಟೀಯನ್ನೂ ತ್ಯಜಿಸಿಬಿಟ್ಟು ಕೋಕೋವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಶರೀರಕ್ಕೆ ಪುಷ್ಟಿಯನ್ನು ಕೊಡುವಂತಹ ಪದಾರ್ಥಗಳನ್ನು ಮಾತ್ರ ತಿನತಕ್ಕುದೆಂದು ನಾನು ನಿಶ್ಚಯಿಸಿದುದರಿಂದ ನಾನು ಕೂಡ ಕಾಫಿ ಟೀ ಕುಡಿತವನ್ನು ಬಿಟ್ಟು ಕೋಕೋವನ್ನು ಮಾತ್ರ ಕುಡಿಯಲಾರಂಭಿಸಿದೆನು. ಶಾಕಾಹಾರಭೋಜನಶಾಲೆಯಲ್ಲಿ ಎರಡುತರಹವಿರುವುದು. ಒಂದುತರಹ ಧನವಂತರಿಗೆ. ಅದರಲ್ಲಿ ಅನೇಕ ಬಗೆಗಳು ಮಾಡಲ್ಪಡುವುವು. ಒಂದು ವೇಳೆಯೂಟಕ್ಕೆ 12 ಆಣೆಯಿಂದ 1½ ರೂಪಾಯಿವರೆಗೂ ದರವುಂಟು. ಎರಡನೆಯತರಗತಿಯದು ಬಡವರಿಗಾಗಿ. ಅಲ್ಲಿ ಮೂರುಪದಾರ್ಥಗಳೂ ಒಂದುರೊಟ್ಟಿಯೂ ಕೊಡಲ್ಪಡುವುವು. ಒಂದುಹೊತ್ತಿಗೆ 6 ಆಣೆ ಕೊಡಬೇಕು. ನಾನು ಮಿತವ್ಯಯದೀಕ್ಷೆಯನ್ನು ಅವಲಂಬಿಸಿದಮೇಲೆ 6 ಆಣೆಯನ್ನು ಕೊಟ್ಟು ಊಟಮಾಡಲುಪಕ್ರಮಿಸಿದೆನು.

ಕೆಲಕಾಲ ಗಂಜಿಯಂತಿರುವ ಪದಾರ್ಥವನ್ನು ತಿನ್ನದೆ ರೊಟ್ಟಿಯನ್ನೂ, ಹಣ್ಣನ್ನೂ ಮಾತ್ರ ತಿನ್ನುತ್ತಿದ್ದೆನು. ಇನ್ನು ಕೆಲಕಾಲ ಹಾಲು, ಬೆಣ್ಣೆ ಮೊಟ್ಟೆಗಳನ್ನು ಮಾತ್ರ ತಿನ್ನುತ್ತಿದ್ದೆನು. ಈಕಡೇ ಪದ್ಧತಿಯು 15 ದಿವಸಗಳು ಮಾತ್ರ ನಡೆದಿತು. ಗಂಜಿಯಿಲ್ಲದ ಪದಾರ್ಥವನ್ನು ತಿನ್ನಬಹುದೆಂದು ಬೋಧಿಸಿದ ಸಂಸ್ಕರ್ತನು ಮೊಟ್ಟೆಯನ್ನು ಬಹಳವಾಗಿ ಪ್ರಶಂಸಿಸಿದನು. ಮೊಟ್ಟೆಯು ಮಾಂಸವಲ್ಲವು. ಅದನ್ನು ತಿನ್ನುವುದರಿಂದ ಯಾವ ಜಂತುವನ್ನೂ ಬಾಧೆಪಡಿಸಿದಂತಾಗುವುದಿಲ್ಲವೆಂದು ನನಗೂ ತೋಚಿತು. ಇದರಿಂದ ನಾನು ಮಹನ್ಮೋಹಿತನಾದರೂ ನನ್ನ ಪ್ರಮಾಣವು ನನ್ನನ್ನು ಬಾಧಿಸುತ್ತಲೇ ಇದ್ದಿತು. ಮೊಟ್ಟೆಯನ್ನು ಸಹ ತಿನ್ನಕೂಡದೆಂದು ನನ್ನ ತಾಯಿಯು ಹೇಳಿದ್ದುದರಿಂದ, ಮೊಟ್ಟೆಯು ಮಾಂಸವಲ್ಲವೆಂದು ನಾನು ಏಕೆಕ್ಕಾಗಿ ಹೊಸ ವ್ಯಾಖ್ಯಾನವನ್ನು ಮಾಡಬೇಕು? ಎಂಬ ಯೋಚನೆಯು ನನಗೆ ಚೆನ್ನಾಗಿ ತೋಚಿದುದರಮೇಲೆ ಈ ಪದ್ಧತಿಯನ್ನು ಬಿಟ್ಟುಬಿಟ್ಟೆನು.

ಆಂಗ್ಲದೇಶದಲ್ಲಿ ಮಾಂಸವೆಂದರೇನು? ಎಂಬ ವಿಷಯಕ್ಕೆ ಮೂರು ವ್ಯಾಖ್ಯಾನಗಳು ನನಗೆ ತಿಳಿದುಬಂದುವು. ಮೃಗಪಕ್ಷಿಗಳ ಮಾಂಸವೇ ಮಾಂಸವೆಂಬುದು ಒಂದಭಿಪ್ರಾಯವು. ಈ ಅಭಿಪ್ರಾಯವನ್ನು ಅಂಗೀಕರಿಸಿದವರು ಮೊಟ್ಟೆಯನ್ನೂ ಮಿಾನನ್ನೂ ತಿನ್ನಲುಪಕ್ರಮಿಸಿ ಮಾಂಸವನ್ನು ಮಾತ್ರ ಬಿಟ್ಟುಬಿಟ್ಟರು. ಮತ್ತೆ ಕೆಲರು ಮಿಾನನ್ನು ತ್ಯಜಿಸಿ ಮೊಟ್ಟೆಯನ್ನು ಮಾತ್ರ ತಿನ್ನುತ್ತಿದ್ದರು. ಬೇರೆ ಕೆಲರು ಮಾಂಸ, ಮಿಾನು, ಮೊಟ್ಟೆ ಮೊದಲಾದ ಜಂತುಪದಾರ್ಥಗಳನ್ನು ಮಾತ್ರವಲ್ಲದೆ ಜಂತುಗಳಿಂದ ಹುಟ್ಟುವ ಮೊಟ್ಟೆ, ಹಾಲು ಮೊದಲಾದ ಪದಾರ್ಥಗಳನ್ನು ಕೂಡ ತ್ಯಜಿಸಬೇಕೆಂದು ಹೇಳುವರು. ಶಾಕಾಹಾರಭೋಜನಶಾಲೆಯಲ್ಲಿ ಅನೇಕ ಪದಾರ್ಥಗಳಿಗೆ ಮೊಟ್ಟೆಯು ಸೇರಿಸಲ್ಪಡುತ್ತಿದ್ದಿತು. ಅದರಿಂದ ನನ್ನ ಮನಸ್ಸಿಗೆ ಪುನಃ ಯೋಚನೆಯು ಹುಟ್ಟಿದುದರಿಂದ ನನಗೆ ರುಚಿಕರವಾಗಿದ್ದ ಪದಾರ್ಥಗಳಲ್ಲಿ ಅನೇಕವನ್ನು ನಾನು ಬಿಡಬೇಕಾಯಿತು. ಇದರಿಂದ ಮನಸ್ಸಿಗೆ ಕೊಂಚ ಕಷ್ಟವುಂಟಾಯಿತು. ಆದರೆ ನನ್ನ ಪ್ರಮಾಣವು ನನ್ನ ಮನಸ್ಸಿಗೆ ಸ್ಫುರಿಸಿದುದರಿಂದ ಈ ಜಿಹ್ವಾಚಾಪಲ್ಯವು ಮರೆತುಹೋಯಿತು. ಆರೋಗ್ಯಕರವಾದ ಪದಾರ್ಥಗಳನ್ನು ಮಾತ್ರ ನಾನು ತಿನ್ನಲವಕಾಶವಾಯಿತು. ಎರಡನೆಯ ಪ್ರಮಾಣವನ್ನು ಕುರಿತು ಪರೀಕ್ಷೆಯು ಇನ್ನು ಮೇಲೆ ಜರುಗಬೇಕಾಗಿರುವುದು. ಭಗವಂತನಿಂದ ಕಾಪಾಡಲ್ಪಡುವವನಿಗೆ ಯಾರು ಅಪಕಾರಮಾಡಬಲ್ಲರು?

ಪ್ರಮಾಣಮಾಡಿದವರು ತರುವಾಯ ತಮಗೆ ಅನುಕೂಲವಾದರೀತಿಯಲ್ಲಿ ಅದಕ್ಕೆ ಅರ್ಥವನ್ನು ಮಾಡುವರು. ಈ ಪದ್ಧತಿಯು ಎಲ್ಲ ದೇಶದಲ್ಲೂ ಉಂಟು. ಐಶ್ವರ್ಯವಂತರಲ್ಲೂ ಬಡವರಲ್ಲೂ ಅಂತಹವರಿರುತ್ತಾರೆ. ಇದಕ್ಕೆ ಕಾರಣವು ಸ್ವಾರ್ಥಪರತ್ವವೇ. ಆದರಿಂದ ಅವರು ಆತ್ಮವಂಚಕರೂ ದೈವವಂಚಕರೂ ಆಗುವರು. ಪ್ರಮಾಣವನ್ನು ಕೋರಿದವರ ಅಭಿಪ್ರಾಯವನ್ನೇ ಪ್ರಮಾಣವನ್ನು ಮಾಡಿದವರು ಪೋಷಿಸುವುದು ಉತ್ತಮಪದ್ಧತಿ. ದುರ್ಬಲನ ಅಭಿಪ್ರಾಯವನ್ನು ಪ್ರಬಲನು ಪೋಷಿಸುವುದು ಕೂಡ ಉತ್ತಮವು. ಈ ಎರಡು ಪದ್ಧತಿಗಳನ್ನು ಕೂಡ ಬಿಟ್ಟಲ್ಲಿ ಅಕ್ರಮವೂ ಕಲಹವೂ ಹುಟ್ಟುವುವು. ಸನ್ಮಾರ್ಗಿಯು ಒಬ್ಬನನ್ನು ಮಧ್ಯವರ್ತಿಯನ್ನಾಗಿ ಕೋರಬೇಕಾದ ಆಗತ್ಯವೇ ಇಲ್ಲ. ಅದುಕಾರಣ ಆಹಾರವನ್ನು ಕುರಿತು ನಮ್ಮ ತಾಯಿ ಮಾಡಿದ ಅರ್ಥವೇ ನನಗೆ ಅನುಸರಣೀಯವಲ್ಲದೆ, ವಿದ್ಯಾರ್ಥಿಕನೆಂಬ ಅಹಂಭಾವದಿಂದ ನಾನು ಮಾಡಿದ ಅರ್ಥವು ಅನುಸರಣೀಯವಲ್ಲವು. ಆಂಗ್ಲದೇಶದಲ್ಲಿದ್ದಷ್ಟು ಕಾಲದವರೆಗೂ ಆರೋಗ್ಯವೂ ಮಿತವ್ಯಯವೂ ನನಗೆ ಲಕ್ಷ್ಯವಾಗಿದ್ದುವು. ನಾನು ದಕ್ಷಿಣಾಫ್ರಿಕೆಗೆ ಹೋದಮೇಲೆ ಮತವಿಷಯವನ್ನು ಕೂಡ ಕಠಿಣವಾಗಿ ಪರೀಕ್ಷಿಸತೊಡಗಿದೆನು. ಅದನ್ನು ಕುರಿತು ಮುಂದೆ ವಿವರಿಸುವೆನು. ಒಟ್ಟಿನಮೇಲೆ ಶಾಕಾಹಾರಬೀಜವು ಆಂಗ್ಲದೇಶದಲ್ಲೇ ಅಂಕುರಿಸಿದುದು. ಒಂದುಮತದಲ್ಲಿ ಹುಟ್ಟಿದವನಗಿಂತ ಹೊಸದಾಗಿ ಸೇರಿದವನು ಅದರಲ್ಲಿ ಹೆಚ್ಚು ಅಭಿಮಾನಿಯಾಗಿರುವುದು ಸಹಜವು. ಆಂಗ್ಲದೇಶದಲ್ಲಿ ಶಾಕಾಹಾರವು ಹೊಸಪದ್ಧತಿಯಾಗಿದ್ದಿತು. ಅದುವರೆಗೂ ನನಗೆ ಸಹ ಮಾಂಸಾಹಾರದಲ್ಲಿ ವಿಶೇಷ ನಂಬಿಕೆಯಿದ್ದುದರಿಂದಲೇ ನನಗೂ ಶಾಕಾಹಾರಾಭಿಮಾನವು ನೂತನಪರಿವರ್ತನವೇ. ಆದರಿಂದ ಲಂಡನ್ ಪಟ್ಟಣದಲ್ಲಿ ನಾನು ವಾಸಮಾಡುತ್ತಿದ್ದ 'ಬೇಸುವಾಟರು' ಎಂಬ ಪೇಟೆಯಲ್ಲಿ ಒಂದು ಶಾಕಾಹಾರಸಂಘವು ಏರ್ಪಡುವಂತೆ ಮಾಡಿದೆನು. ಆದರ ಪೋಷಕಾರ್ಥವಾಗಿ ಸರ್ ಎಡ್ವಿನ್ ಆರ್ನಾಲ್ಡುಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶಾಕಾಹಾರಪತ್ರಿಕಾಸಂಪಾದಕರಾದ ಡಾಕ್ಟರು ಓಲ್ಡುಫೀಲ್ಡುರವರನ್ನು ಅಧ್ಯಕ್ಷರನ್ನಾಗಿಯೂ ಮಾಡಿದೆನು. ಆದರೆ ಆ ಸಂಘವು ಕೆಲಕಾಲಮಾತ್ರವಿದ್ದು ಅನಂತರ ಹಾಳಾಯಿತು. ಏಕೆಂದರೆ, ಒಂದುಪೇಟೆಯಲ್ಲೇ ಸ್ಥಿರವಾಗಿರಕೂಡದೆಂದು ನಾನು ನಿರ್ಧರಿಸಿದ್ದುದರಿಂದ ನಾನು ಅಲ್ಲಿಂದ ಬಿಟ್ಟು ಹೊರಟುಹೋದೆನು. ನಾನು ಹೋದಕೂಡಲೇ ಆ ಸಂಘವು ಕೂಡ ಹೋಯಿತು. ಆದರೆ ಈ ಅನುಭವನಿಂದ ಸಂಸ್ಥೆಗಳನ್ನೇರ್ಪಡಿಸಲು ನನಗೆ ಶಕ್ತಿಯುಂಟಾಯಿತು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ.

ಲಗ್ನದಫಂಡಿಗೆ ಬರತಕ್ಕ ಹಣದತಪಸೀಲು.—

ಮು|| ಗಳಾದ 1. ಸೊರಬ ತಾ|| ತತ್ತೂರಿನ ಶ್ರೀಕಂಠಗೌಡರ ಅಣ್ಣಂದಿರು ವೀರಪ್ಪಗೌಡರ ಪತ್ನಿ ಶಿವಾಧೀನರಾದ ಹಾಲಕಮ್ಮಾಜಿಯವರ ಗಣಾರಾಧನೆಯ ಕಾಲದಲ್ಲಿ 10 ರೂ. ಗಳು ಶ್ರೀಕಂಠಗೌಡರಿಂದ. 2. ತಿಬಟೂರು ತಾ|| ಮಡೆನೂರು ಮಠದ ಸಿದ್ಧಲಿಂಗಯ್ಯನವರ ಮಗಳ ಲಗ್ನದಲ್ಲಿ 2 ರೂ. ಗಳು ಬೆಂಗಳೂರು ಚಿಕ್ಕವೀರಶೆಟ್ಟರ ಬಸಪ್ಪನವರ ಮೂಲಕ. ಜುಮ್ಲಾ 12 ರೂ.

ಜಿ. ಪರಮಶಿವಯ್ಯ, ಸೆಕ್ರೆಟರಿ,
ಮೈ. ವೀ. ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

೧೯೨೬ ನೆಯ ಇಸವಿ ಮೇ ತಾ|| ೧ ರಿಂದ ೧೯೨೬ ನೆಯ ಇಸವಿ ಮೇ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯ ನಾಮಸಂವತ್ಸರದ ನಿಜಚೈತ್ರ ಬಹುಳ ಚೌತಿಯಿಂದ ನಿಜಚೈತ್ರ ಬಹುಳ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷಮಾಸ
1	ಶನಿ	ಚೌತಿ	51-38	ಜ್ಯೇಷ್ಠ	25-22	19
2	ಭಾನು	ಪಂಚ	47-10	ಮೂಲ	23-21	20
3	(1)ಸೋಮ	ಷಷ್ಠಿ	42-7	ಪೂಷಾ	20-32	21
4	ಮಂಗಳ	ಸಪ್ತ	36-30	ಉಷಾ	17-6	22
5	ಬುಧ	ಅಷ್ಟ	30-31	ಶ್ರವ	13-12	23
6	(2)ಗುರು	ನವ	24-20	ಧನಿ	9-2	24
7	ಶುಕ್ರ	ದಶ	18-16	ಶತ	4-53	25

(1) ಮಳೆನಕ್ಷತ್ರ-ಭರಣಿ ೩ ನೆಯ ಪಾದ. (2) ಮಳೆನಕ್ಷತ್ರ-ಭರಣಿ ೪ ನೆಯಪಾದ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶ್ರೀಕಾ | ಭುವನಚಕ್ರಶಾವಹಾರಾ ಪಕ್ಷ್ಮ ನಕ್ಷತ್ರ ಮೋಹರಾಜೀಯಾಶ್ |
ಶ್ರೀಮತ್ಕೃಷ್ಣನೃಪಾಲಸುತ್ತ ಮಳಶಾರೋಲುಂಸುಧೀಪುಂಗವ | ಸ್ತೋಮಾಭೀಷ್ಟದಾಲೀ ಪಾಳಕಿಶ ಸಾದ್ಗು ಕ್ಷ್ಯಾಲವಾಲಂವಲಂ |
ಸೀಮಾತೀಶಯುತಪ್ರತಾಪವಿಪುಲಂ ಸದ್ವೃತ್ತಮಾತಾಳುಲಂ | ಶ್ರೀಮಂಜೆತ್ತೀಯುಂಸಪಾಪುರಿಗೆ ಗೌರೀಶಾನುಕಂಪೋಜ್ವಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರೆರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಮೇ ತಾರೀಖು ೮ ನೆಯ ಶನಿವಾರ. [ಸಂಚಿಕೆ ೧೯

REGISTERED NO. M. 124.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಕ್ಷೀಣಜ್ವರ	

SREE SITHARAGHAVA AYURVEDA MYSORE
18

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.	ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಅಂತಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—30] ಪೋ. ಬಾ. ೫೧೧. ಮದರಾಸು.

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಚಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[13-4] ಹರಪನಹಳ್ಳಿ (ಬಳ್ಳಾರಿ ಜಿಲ್ಲೆ).

ಆಯುರ್ವೇದ ಸುಲಭಚಿಕಿತ್ಸೆಗಳು.

ರಾಜಧಾನಿಯಲ್ಲಿರುವ ಸರ್ಕಾರೀ ಆಯುರ್ವೇದವೈದ್ಯಶಾಲೆಯಲ್ಲಿ ತಯಾರಿಸಿ ನಿತ್ಯವೂ ಉಪಯೋಗಿಸಲ್ಪಡುವ ಔಷಧಗಳಲ್ಲಿ ಕೆಲವು ಸ್ಟಾರ್ ಪತ್ರಿಕಾ ವಾಚಕರುಪಯೋಗಾರ್ಥವಾಗಿ ಈ ಕೆಳಗೆ ಕೊಡಲ್ಪಟ್ಟಿವೆ.—

ನಾರಿಕೇಳಲವಣ.

೨|| ಸೇರು ಸೈಂಧವಲವಣವನ್ನು ಹಣ್ಣುತೆಂಗಿನಕಾಯಿ ಒಂದರಲ್ಲಿ ತೂತುಮಾಡಿ ತುಂಬಿ ಮಣ್ಣಿನಿಂದ ಮಂದವಾಗಿ ಲೇಪಮಾಡಿ ಒಣಗಿಸಿ ಒಂದು ಸಣ್ಣ ಪುಟಹಾಕಿ ನಂತರ ತೆಗೆದು ಚೂರ್ಣಿಸಿ ೧೦ ರಿಂದ ೩೦ ಗ್ರೇನ್‌ವರೆಗೆ ಹಿಪ್ಪಲೀಚೂರ್ಣದೊದಿಗೆ ಉಪಯೋಗಿಸಿದರೆ ಸಮಸ್ತ ಶೂಲೆಗಳೂ, ಪರಿಣಾಮಶೂಲೆಗಳೂ ಗುಣವಾಗುವುವು. ಇದು ಅಜೀರ್ಣವ್ಯಾಧಿಗಳಿಗೆ ಬಹಳ ಒಳ್ಳೇದು.

ಭಾಸ್ಕರಲವಣ.

ಸಮುದ್ರಲವಣ ೪ ತೊಲ	ತಾಳೀಸಪತ್ರ ೪ ತೊಲ
ಸೌವರ್ಚಲವಣ ೪ ತೊಲ	ನಾಗಕೇಸರಿ ೪ ತೊಲ
ಅಟ್ಟುಪ್ಪು ೪ ತೊಲ	ವಾಟೆಹುಳಿ ೪ ತೊಲ
ಕೊತ್ತಂಬರಿಬೀಜ ೪ ತೊಲ	ಮೆಣಸು ೨ ತೊಲ
ಹಿಪ್ಪಲೀ ೪ ತೊಲ	ಜೀರಿಗೆ ೨ ತೊಲ
ಮೋಡಿ ೪ ತೊಲ	ಶುಂಠಿ ೨ ತೊಲ
ತೇಜಪತ್ರೆ ೪ ತೊಲ	ದಾಳಿಂಬೆಬೀಜ ೮ ತೊಲ
ಕರೀಜೀರಿಗೆ ೪ ತೊಲ	ದಾಲಚಿನ್ನಿ ೧ ತೊಲ

ಏಲಕ್ಕಿ ೧ ತೊಲ

ಇವೆಲ್ಲವನ್ನೂ ಚೂರ್ಣಿಸಿ ಎಳಸಲ ನಿಂಬೆಹಣ್ಣಿನ ರಸದಲ್ಲಿ ಭಾವನೆಮಾಡಿ ಒಣಗಿಸಿದ ನಂತರ ೩೦ ರಿಂದ ೬೦ ಗ್ರೇನ್‌ವರೆಗೆ ಉಪಯೋಗಿಸಿದರೆ ಸಮಸ್ತ ಶೂಲೆಗಳು, ಅಗ್ನಿಮಾಂದ್ಯ, ಪಾಂಡು, ಕಾಮಾಲೆ, ಆರೋಚಕ ಇವುಗಳು ಪರಿಹಾರವಾಗುವುವು.

ಸರ್ಜಕ್ಷಾರಾದಿಚೂರ್ಣ.

ಸರ್ಜಕ್ಷಾರ	ಸೌವರ್ಚಲವಣ
ಯವಕ್ಷಾರ	ಅಟ್ಟುಪ್ಪು
ಬಳಗಾರ	ಸಮುದ್ರಲವಣ
ಸೈಂಧವಲವಣ	ಬಿಡಲವಣ

ಇವುಗಳನ್ನು ಸಮಭಾಗವಾಗಿ ತೆಗೆದುಕೊಂಡು ಚೂರ್ಣಿಸಿ ನಿಂಬೆಹಣ್ಣಿನ ರಸದಿಂದ ಚೆನ್ನಾಗಿ ಅರೆದು ಒಣಗಿಸಿ ೧೦ ರಿಂದ ೩೦ ಗ್ರೇನ್‌ವರಿವಿಗೆ ಉಪಯೋಗಿಸಿದರೆ ಶೂಲೆಗಳು, ಕಾಲಖಂಡದ ಉಪದ್ರವಗಳು, ಉದರ, ಅಗ್ನಿಮಾಂದ್ಯ, ಆರೋಚಕ, ಇವುಗಳು ಗುಣವಾಗುವುವು. ನೀರಿನೊಂದಿಗೆ ತೆಗೆದುಕೊಳ್ಳಬೇಕು.

ತ್ರಿಕಟುಕಾದಿಚೂರ್ಣ.

ಹಿಪ್ಪಲಿ	ರಾಸ್ಮೆ
ಮೆಣಸು	ಓಮು
ಶುಂಠಿ	ಕರಿಬೇವಿನಸೊಪ್ಪು
ಜೀರಿಗೆ	ಸೈಂಧವ
ಕರೀಜೀರಿಗೆ	ಹಿಂಗು
ಲವಂಗ	ವಿಳಂಗ
ಅಳಲೇಕಾಯಿ	ಜಾಜಿಕಾಯಿ

ಗೆಜ್ಜುಗದತಿರಳು

ಇವೆಲ್ಲವನ್ನೂ ಸಮಭಾಗದಿಂದ ಸೂಕ್ಷ್ಮವಾಗಿ ಚೂರ್ಣಿಸಿ ೩೦ ರಿಂದ ೬೦ ಗ್ರೇನ್‌ವರಿವಿಗೆ ಸೇವಿಸಿದರೆ ರಕ್ತಾತೀಸಾರ, ಗ್ರಹಣಿ, ಭೇದಿ ಮತ್ತು ಅಜೀರ್ಣ ಪರಿಹಾರವಾಗುವುವು.

ಅವಿಪತ್ತಿಕರಚೂರ್ಣ.

ಶುಂಠಿ	೬ ತೊಲ	ಯಾಲಕ್ಕಿ	೬ ತೊಲ
ಹಿಪ್ಪಲಿ	೬ ,,	ವಾಯುವಿಳಂಗ	೬ ,,
ಮೆಣಸು	೬ ,,	ಕೊಪ್ಪಾರಿಗೆಡ್ಡೆ	೬ ,,
ದಾಲಚಿನ್ನಿ	೬ ,,	ಪೆಲ್ಲಿಚೆಟ್ಟು	೬ ,,
ಲವಂಗ	೬ ,,	ಸಿಗೆಡೆ	೫೪ ,,

ಸಕ್ಕರೆ ೧೦೮ ತೊಲ

ಇವಿಷ್ಟನ್ನೂ ಚೂರ್ಣಿಸಿ | ರಿಂದ ೧ ತೊಲಾದವರೆಗೆ ಬಿಸಿನೀರಿನಲ್ಲಿ ಸೇವಿಸಿದರೆ ಚೆನ್ನಾಗಿ ಭೇದಿಯಾಗುವುದು. ಇದರಿಂದ ಶೂಲೆ, ಹೊಟ್ಟೆಯುಬ್ಬರ, ರಕ್ತಪಿತ್ತ ಮತ್ತು ಪಿತ್ತಬಾಧ್ಯಗಳು ಪರಿಹಾರವಾಗುವುವು.

ಮಹಾಗ್ನಿಮುಖಚೂರ್ಣ.

ಚಿತ್ರಮೂಲ	೧ ಭಾಗ	ಗಂಟುಭಾರಂಗಿ	೧
ಅತಿಬಜೆ	೧	ಓಮು	೧
ಬೆಂಗಳುಕೋಷ್ಟ	೧	ಶುಂಠಿ	೧
ಹಿಂಗುಪತ್ರಳು	೧	ಮೆಣಸು	೧
ಸೌವರ್ಚಲವಣ	೧	ಯವಕ್ಷಾರ	೧
ಬಜೆ	೧	ಹಿಪ್ಪಲಿಮೂಲ	೧
ಹಿಪ್ಪಲಿ	೧	[illegible]	೧
[illegible]	೧	ಅಳಲೇಕಾಯಿ	೧೨ ಭಾಗ

ಇವಿಷ್ಟನ್ನೂ ಚೂರ್ಣಿಸಿ | ರಿಂದ || ತೊಲದಷ್ಟು [illegible] ಮಲಬದ್ಧ, [illegible], [illegible], ಗ್ರಹಣಿ, [illegible], [illegible] [illegible], [illegible] [illegible] [illegible] ಪರಿಹಾರವಾಗುವುವು.

ಶ್ರೀ
ಬಸವಜಯಂತ್ಯುತ್ಸವವು.

ಬರುವ ವೈಶಾಖಶುದ್ಧ ಬಿದಿಗೆಗೆ ಸರಿಯಾದ ಮೇ ತಾ|| 13ನೆಯ ಗುರುವಾರ ಪರಮತಗಳ ಹಾವಳಿಯಿಂದ ಕ್ಷೀಣಿಸಿದ್ದ ವೀರಶೈವ ಮತವನ್ನು ಉದ್ಧರಿಸಿದ ದ್ವಿತೀಯಶಂಭು ಶ್ರೀ ಬಸವೇಶ್ವರನ ಜನ್ಮದಿನವಾಗಿರುವುದರಿಂದ ಆ ದಿವಸ ವೀರಶೈವಮತಸ್ಥರೆಲ್ಲರೂ ಆ ಪುಣ್ಯಶ್ಲೋಕಿಯ ಜನ್ಮದಿನೋತ್ಸವವನ್ನು ನವಭಕ್ತಿಗಳಿಂದ ಆಚರಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿ ಕೃತಕೃತ್ಯರಾಗುವರೆಂದು ನಿರೀಕ್ಷಿಸುತ್ತೇವೆ. ಈ ಜನ್ಮದಿನೋತ್ಸವಾಚರಣೆಯ ವಿಚಾರದಲ್ಲಿ ಸವಿಸ್ತಾರವಾಗಿ ಬರೆಯಲ್ಪಟ್ಟಿರುವ ಲೇಖಗಳು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟಿಸಲ್ಪಟ್ಟಿವೆ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಮೇ ತಾ|| ೮ ನೆಯ ಶನಿವಾರ.

ಮೈಸೂರು ರೆವಿನ್ಯೂಶಾಖಾವರದಿ.

ಕಳೆದ ಮಾರ್ಚಿ ತಿಂಗಳಲ್ಲಿ ಪ್ರಕಟಿಸಲ್ಪಟ್ಟ ಸಂಸ್ಥಾನದ ರೆವಿನ್ಯೂಶಾಖೆಯ 1924-25 ನೇ ವರ್ಷದ ವರದಿಯ ಪ್ರತಿಯೊಂದು ಈಗತಾನೆ ನಮ್ಮ ಕೈಸೇರಿರುತ್ತದೆ. ಸಂಸ್ಥಾನದ ಆಯತಿಯ ಮುಖ್ಯಶಾಖೆಯಾದ ಇದರ ವರದಿಯಲ್ಲಿ ಸಂಸ್ಥಾನದ ಅಭಿವೃದ್ಧಿ ಸಾಧಕವಾದ ಅನೇಕ ಕಾರ್ಯಗಳ ವಿವರಣೆಯೂ ಸಮಾವಿಷ್ಟವಾಗಿರುತ್ತದೆ. ಅನ್ಯೊಂದು ವಿಷಯಗಳಿಗೆ ಸಂಬಂಧಪಟ್ಟ ವಿಚಾರವೆಲ್ಲ ರೆವಿನ್ಯೂ ಕಮಿಷನರಿಗೆ ವಹಿಸಲ್ಪಟ್ಟಿರುವುದೇ ಹೀಗಾಗುವುದಕ್ಕೆ ಕಾರಣವಾಗಿದೆ. ಪ್ರಸಕ್ತ ವರ್ಷದಲ್ಲಿ ಸಂಸ್ಥಾನದಲ್ಲೆಲ್ಲ ಆದ ಮಳೆಯು ಹಿಂದಣವರ್ಷಕ್ಕಿಂತ ಬಹಳ ವಿಶೇಷವಾಗಿದ್ದಿತು. ಮುಂಗಾರುಮಳೆಯು ಸಕಾಲಿಕವಾಗಿಯೂ, ಸಾರ್ವತ್ರಿಕವಾಗಿಯೂ ಇದ್ದಿತು, ಆದರೆ ಹಿಂಗಾರುಮಳೆಯು ಮಾತ್ರ ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಸಾಕಾದಷ್ಟು ಆಗದೆ ತುಮಕೂರು ಮತ್ತು ಕೋಲಾರ ಡಿ|| ಗಳಲ್ಲಿ ಹಿಂದಣವರ್ಷಗಳಗಿಂತ ಹೆಚ್ಚು ಕುತೂಹಲವನ್ನುಂಟುಮಾಡಿದ್ದಿತು. 1924 ನೇ ಜುಲೈ ಮತ್ತು ಆಗಸ್ಟು ತಿಂಗಳುಗಳಲ್ಲಿ ನದಿಯ ಪ್ರವಾಹಗಳು ಅಭೂತಪೂರ್ವವಾಗಿಯೂ, ಮಿತಿಮೀರಿಯೂ ಬಂದುದರಿಂದ ಮೈಸೂರು, ಕಡೂರು, ಹಾಸನ ಮತ್ತು ಶಿವಮಗ್ಗ ಡಿ|| ಗಳಲ್ಲಿ ನದೀ ಪಕ್ಕದಲ್ಲಿರುವ ಗ್ರಾಮಗಳೂ, ವ್ಯವಸಾಯ ಮಾಡಲ್ಪಟ್ಟಿದ್ದ ಭೂಮಿಗಳೂ ನೀರಿನಲ್ಲಿ ಮುಳುಗಡೆಯಾದವು. ಪ್ರಾಯಶಃ 655 ಗ್ರಾಮಗಳೂ ಸಂಪೂರ್ಣವಾಗಿಯೋ, ಅರ್ಧವಾಗಿಯೋ ಮುಳುಗಿಹೋಗಿ 6070 ಮನೆಗಳಿಗೆ ಅಪಾಯವುಂಟಾಯಿತು. 77 ಕೆರೆಗಳೂ ಅನೇಕ ಕಾಲುವೆಗಳೂ ಒಡೆದುಹೋದುವು. 5,50,334 ರೂ. ಬೆಲೆಯ ಮನೆಮಠ ಮೊದಲಾದ ಪದಾರ್ಥಗಳು ಹಾಳಾದುದಲ್ಲದೆ 15744 ಎಕರೆ ಭೂಮಿಗೆ ನಷ್ಟವುಂಟಾಯಿತು. ಒಟ್ಟು ಚರಸ್ಥಿರಾಸ್ತಿಯಿಂದ 9 ಲಕ್ಷ ರೂ. ನಷ್ಟಸಂಭವಿಸುವುದಾಗಿ ನಿರೀಕ್ಷಿಸಲ್ಪಟ್ಟಿದ್ದಿತು. ಈ ತೊಂದರೆಯ ನಿವಾರಣಾರ್ಥವಾಗಿ ಸರ್ಕಾರದಿಂದ ತಕ್ಕೇರ್ಪಾಟುಗಳು ಕೂಡಲೆ ಮಾಡಲ್ಪಟ್ಟವಲ್ಲದೆ ಧರ್ಮಾತ್ಮರೂ ಕಾಲಕ್ಕೆ ತಕ್ಕ ಸಹಾಯವನ್ನು ಮಾಡಿದುದಕ್ಕಾಗಿ ಅವರುಗಳಿಗೆ ಸರ್ಕಾರದವರು ತಮ್ಮ ವಂದನೆಯನ್ನು ತಿಳಿಸಿರುವರು. ಪ್ರಸಕ್ತವರ್ಷದಲ್ಲಿ ಸಂಸ್ಥಾನದಲ್ಲೆಲ್ಲ ದನಗಳ ಒಟ್ಟು ಮರಣವು 121280 ರಿಂದ 82576 ಕ್ಕಿಳಿದಿರುವುದು ತೃಪ್ತಿಕರವಾಗಿರುವುದು. ಆದರೆ ಶಿವಮಗ್ಗ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಕಾಲುಜ್ವರದಿಂದ 10402 ರಾಸುಗಳು ಸತ್ತುಹೋದುದು ಮಾತ್ರ ವಿಷಾದಕರವಾಗಿದೆ. ದನಗಳ ರೋಗವನ್ನು ಅಣಗಿಸುವ ಕಾರ್ಯದಲ್ಲಿ ರೆವಿನ್ಯೂ ಮತ್ತು ಪಶುವೈದ್ಯಶಾಖೆಗಳ ಸ್ಥಳೀಯಾಧಿಕಾರಿಗಳಿಗೆ ಜನರು ಸಹಕಾರಿಗಳಿರಬೇಕೆಂದು ಪ್ರಭುತ್ವದವರು ಕೋರಿರುತ್ತಾರೆ.

ಈ ವರ್ಷದಲ್ಲಿ ಒಟ್ಟು ಹಿಡುವಳಿ ಭೂಮಿಯ ವಿಸ್ತೀರ್ಣವು ಕಳೆದ ವರ್ಷಕ್ಕಿಂತ 30609 ಎಕರೆಯಷ್ಟು ಜಾಸ್ತಿಯಾಗಿ ಅಂದರೆ 79,80,575 ಎಕರೆಯಾಗಿದ್ದಿತು ಮತ್ತು ಕಳೆದ ವರ್ಷ 59,35,773 ಎಕರೆ ಭೂಮಿಯಲ್ಲಿ ಬೆಳೆಯಿಡಲ್ಪಟ್ಟಿದ್ದುದು ಈ ವರ್ಷದಲ್ಲಿ 62,79,520 ಎಕರೆ ಭೂಮಿಯಲ್ಲಿಡಲ್ಪಟ್ಟಿದ್ದಿತು. ಪ್ರಸಕ್ತವರ್ಷದಲ್ಲಿ ಕಾಲಸ್ಥಿತಿಯು ಅನುಕೂಲವಾಗಿದ್ದುದರಿಂದ ಬತ್ತ, ರಾಗಿ ಮತ್ತು ಕಬ್ಬು ಈ ಬೆಳಸುಗಳು 8 ಆಣೆಗಿಂತಲೂ ಅಧಿಕವಾಗಿ ಬೆಳೆದಿರುತ್ತವೆ. ಕೆಲ ತಾಲ್ಲೂಕುಗಳಲ್ಲಿ ಬತ್ತ, ರಾಗಿ, ಜೋಳ, ಹುರುಳಿ ಮತ್ತು ಕಬ್ಬು 16 ಆಣೆಯಷ್ಟು ಬೆಳೆದಿರುವುದಾಗಿ ವರದಿಯಾಗಿದೆ. ಇದು ನಿಜವಾಗಿಯೂ ಸಂತೋಷಪ್ರದವು. ಹಿಂದಣವರ್ಷದಲ್ಲಿ 12002 ದರಖಾಸ್ತುಗಳು ಬಂದಿದ್ದುದಕ್ಕೆ ಈ ವರ್ಷದಲ್ಲಿ 17959 ದರಖಾಸ್ತುಗಳು ಬಂದಿದ್ದುವು. ಕಳೆದವರ್ಷ ವಿಲೆಯಾಗದೆ ನಿಂತಿದ್ದ 6134 ದರಖಾಸ್ತುಗಳೂ ಸೇರಿ ವಿಲೆಯಾಗಬೇಕಾಗಿದ್ದ ಒಟ್ಟು 24,093 ದರಖಾಸ್ತುಗಳಲ್ಲಿ 16,235 ವಿಲೆಯಾದುವು. ಕಳೆದೆರಡು ವರ್ಷಗಳಿಂದಲೂ ವಿಲೆಯಾಗದೆ ನಿಂತಿರುವ 708 ದರಖಾಸ್ತುಗಳ ವಿಲೆಯ ಬಗೆಗೆ ಹೆಚ್ಚು ಗಮನಕೊಡಲ್ಪಡಬೇಕೆಂದು ಸರ್ಕಾರದವರು ಎಚ್ಚರಿಸಿರುವರು. ಕೊನೆಮೊದಲಿಲ್ಲದಷ್ಟು ರೆವಿನ್ಯೂ ಅಧಿಕಾರಿಗಳ ಸಂಖ್ಯೆಯು ಹೆಚ್ಚಿಕೊಂಡಿದ್ದರೂ, ಪ್ರಜೆಗಳ ಪ್ರಾರ್ಥನೆಯ ತತ್ರಾಪಿ ಸರ್ಕಾರದ ಆಯತಿಯ ಅಭಿವೃದ್ಧಿಗೂ, ದೇಶದ ಸಾಂಪತ್ತಿಕಾಭಿವೃದ್ಧಿಗೂ ಸಾಧಕವಾದ ಭಾಗದಲ್ಲಿ ಔದಾಸೀನ್ಯವು ತೋರಿಸಲ್ಪಡುತ್ತಿರುವುದು ಅನ್ಯಾಯವು. ಇದಕ್ಕಾಗಿ ಸರ್ಕಾರದವರು ತಮ್ಮ ಅಸಮಾಧಾನವನ್ನು ಕಾಗದದಮೇಲೆ ತೋರಿಸುತ್ತಿರುವುದು ವಾಡಿಕೆಯಾಗಿದೆ. ರೆವಿನ್ಯೂ ಅಧಿಕಾರಿಗಳು ಎಂದಿನಂತೆ ತಮ್ಮ ದಾರಿಯನ್ನು ಬಿಡದೆ ನಡೆಯುವುದು ಅವರ ಕೆಲಸವಾಗಿಹೋಗಿದೆ. ಕಂದಾಯದ ವಸೂಲಿಯಲ್ಲಿ ತೋರಿಸುವಷ್ಟು ಚಟವಟಿಕೆಯನ್ನು ದರಖಾಸ್ತು ವಿಲೆ ಮಾಡುವ ವಿಚಾರದಲ್ಲಿ ಏತಕ್ಕೆ ತೋರಿಸಬಾರದು? ಇದರಿಂದ ರೈತರಿಗೂ ಅನುಕೂಲವಾಗಿ ಸರ್ಕಾರಕ್ಕೂ ಆದಾಯ ಹೆಚ್ಚುವುದಲ್ಲವೆ? ಈ ವರ್ಷದಲ್ಲಿ ಹಿಂದಣವರ್ಷದ ಬಾಕಿ ಸೇರಿ 1,37,51,107 ರೂಪಾಯಿಗಳು ಬರಬೇಕಾಗಿದ್ದುದರಲ್ಲಿ 1,22,46,484 ರೂ. ಸಂದಾಯವಾಗಿ 1,50,4,623 ರೂ. ಬಾಕಿ ನಿಂತಿತು. ಈಸಲದ ಹಣವಸೂಲಿಯು ಹಿಂದಣವರ್ಷಕ್ಕಿಂತ ಸಮರ್ಪಕವಾಗಿ ನಡೆದಿರುವುದು ಸಂತೋಷಪ್ರದವೆಂದು ಸರ್ಕಾರದವರು ಹೇಳಿರುವರು. ಪ್ರಸಕ್ತವರ್ಷದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿದ್ದ 35000 ರೂ. ನಲ್ಲಿ ಕೋಲಾರ ಮತ್ತು ತುಮಕೂರು ಈ ಎರಡು ಡಿಸ್ಟ್ರಿಕ್ಟುಗಳಿಗಾಗಿ ಉಪಯೋಗಿಸಲ್ಪಟ್ಟ 15,115 ರೂ. ಸೇರಿ ಒಟ್ಟು 22945 ರೂ. ವೆಚ್ಚವಾಗಿದ್ದಿತು. ಅನೇಕ ಡಿಸ್ಟ್ರಿಕ್ಟುಗಳಲ್ಲಿ ಗ್ರಾಮಾಭಿವೃದ್ಧಿಯ ಕೆಲಸಗಳು ಸಮರ್ಪಕವಾಗಿ ನಡೆದಿಲ್ಲವಾದುದರಿಂದ ಮುಂದೆ ಹೆಚ್ಚು ಕೆಲಸಗಳನ್ನು ನಡೆಸಬೇಕೆಂದು ಸರ್ಕಾರದವರು ತಿಳಿಸಿರುತ್ತಾರೆ. ಈ ವರ್ಷದಲ್ಲಿ 20,248 ತಕರಾರು ವಿವಾದಗಳಿದ್ದು 8,876 ವಿವಾದಗಳು ಮಾತ್ರ ವ್ಯವಸ್ಥಿತವಾಗಿ 9,039 ಹಾಗೆಯೇ ಉಳಿದುಹೋಗಿರುವುದಕ್ಕಾಗಿ ಪ್ರಭುತ್ವದವರು ತಮ್ಮ ಅಸಮಾಧಾನವನ್ನು ವ್ಯಕ್ತಗೊಳಿಸಿ ಬಾಕಿಯಲ್ಲಿರುವುವೆಲ್ಲವೂ ಕೂಡಲೆ ಬಗೆಹರಿಸಲ್ಪಡಬೇಕೆಂದು ಅಪ್ಪಣೆ ಮಾಡಿರುತ್ತಾರೆ. ಈ ತಕರಾರು ಅರ್ಜಿಗಳು ಕೂಡಲೆ ಬಗೆಹರಿಸಲ್ಪಡದಿದ್ದರೆ ರೈತರುಗಳಿಗೆ ತೊಂದರೆಯಾಗುವುದಲ್ಲದೆ ಕಂದಾಯವು ವಸೂಲಿಯಾಗದೆ ಬಾಕಿಯಲ್ಲಿ ನಿಲ್ಲಲು ಅವಕಾಶವಾಗುತ್ತಾದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಸ್ವಲ್ಪ ಕಠಿಣವಾಗಿ ವರ್ತಿಸಿದಲ್ಲಿ ಉತ್ತಮವು. ಪ್ರಸಕ್ತವರ್ಷದ ರೆವಿನ್ಯೂ ಆಡಳಿತವು ಒಟ್ಟಿನಲ್ಲಿ ಸಮರ್ಪಕವಾಗಿದೆಯೆಂದೂ, ಮೈಸೂರು, ಹಾಸನ, ಕಡೂರು ಮತ್ತು ಶಿವಮಗ್ಗ ಡಿಸ್ಟ್ರಿಕ್ಟುಗಳಲ್ಲಿ ನದಿಯಪ್ರವಾಹದಿಂದಲೂ, ಕೋಲಾರ ಮತ್ತು ತುಮಕೂರು ಡಿ|| ಗಳಲ್ಲಿ ನೀರಿನ ಅಭಾವದಿಂದಲೂ ನಷ್ಟಸಂಭವಿಸಿದಾಗ್ಯೂ ಒಟ್ಟು ಸಂಸ್ಥಾನಾಮಳೆ ರೈತರಿಗೆ ಅನುಕೂಲವಾಗಿದ್ದಿತೆಂದೂ ಪ್ರಭುತ್ವದವರು ಅಭಿಪ್ರಾಯಪಟ್ಟಿರುತ್ತಾರೆ.

ಸ್ವದೇಶದ ವೃತ್ತಾಂತಗಳು.

ಈ ತಾ|| 1 ಕ್ಕೆ ಕಡೆಯಾದ ವಾರದಲ್ಲಿ ತುಮಕೂರಿನಲ್ಲಿ 0.85, ಮೈಸೂರು ಡಿ|| ಮಾವತ್ತೂರಿನಲ್ಲಿ 1.02 ಮತ್ತು ಹಾಸನ ಡಿ|| ಹಳೇಬೀಡಿನಲ್ಲಿ 1.60 ಅಂಗುಲ ಮಳೆಯಾಗಿರುತ್ತದೆ.

ಎರಡನೇ ಕೌನ್ಸಿಲರು ಮಿ|| ಚಾಂಡಿಯವರು ಉದ್ಯೋಗದಮೇಲೆ ಬಂದುದರಿಂದ ಅವರ ಬದಲು ನೋಡುತ್ತಿದ್ದ ಮ|| ಎಂ. ಎನ್. ಕೃಷ್ಣರಾಯರು ಅರ್ಥಿಕಸೆಕ್ರೆಟರಿ ಕೆಲಸಕ್ಕೆ ಹಿಂದಿರುಗಿಹೋದರು.

ಮೈಸೂರು ಡಿಸ್ಟ್ರಿಕ್ಟ್‌ಕಾನ್ಫರೆನ್ಸು ಈ ತಾ|| 24 ನೇ ಸೋಮವಾರ ರಾಜಧಾನಿಯಲ್ಲಿ ನಡೆಯುವುದಾಗಿಯೂ, ಇದರ ಜತೆಯಲ್ಲಿ ಜರುಗುವ ವಸ್ತುಪ್ರದರ್ಶನವು ದಿವಾನ್ ಮಿ|| ಮಿರ್ಜಾಯವರಿಂದ ಆರಂಭಿಸಲ್ಪಡುವುದಾಗಿಯೂ ಕೇಳುತ್ತೇವೆ.

ಗುಂಡ್ಲುಪೇಟೆತಾಲ್ಲೂಕು ತೆರಕಣಾಂಬಿಯಲ್ಲಿ ಕಳೆದ ಗುರುವಾರ ಸುಲಿಗೆ ಅಂದರೆ ಡಕಾಯಿತಿನಡೆದಿತೆಂಬ ಸುದ್ದಿಯು ಬಂದುದರಮೇಲೆ ಮೈಸೂರುಡಿವಿಜನ್ ಪೊಲೀಸ್‌ಸೂಪರಿಂಟೆಂಡೆಂಟರು ಸ್ಥಳವಿಚಾರಣೆಗಾಗಿ ನೆನ್ನೆಯದಿನ ಬೆಳಿಗ್ಗೆ ಹೋದರು.

ಪುನರ್ವಿವಾಹಮಾಡಿಕೊಳ್ಳಲು ಸಮ್ಮತಿಪಡುವ ವಿತಂತುಗಳು, "ವಿಧವಾವಿವಾಹಸಹಾಯಕಸಂಘ" ದ ಬ್ರಾಂಚ್ ಆನರರಿ ಸೆಕ್ರೆಟರಿಯವರಾದ ರಾಜಧಾನಿಯಲ್ಲಿರುವ ಕೊಳ್ಳೇಗಾಲದ, ಮ|| ಎ. ಆರ್. ಶ್ರೀನಿವಾಸಯ್ಯಂಗಾರ್ರವರಿಗೆ ತಿಳಿಸಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಮೈಸೂರು ಸರ್ಕಾರದವರಿಂದ ನಡೆಸಲ್ಪಡುತ್ತಿರುವ ರೈಲ್ವೆಗಳಿಂದ 1-7-1925 ರಿಂದ 10-4-1926 ರ ವರೆಗೆ ಒಟ್ಟು 26,04,186 ರೂ. ಉತ್ಪನ್ನವಾಯಿತು. ಆ ವರ್ಷದಲ್ಲಿ ನಂಜನಗೂಡು ಮೇಲುಕೋಟೆ ಮತ್ತು ಶರಗಜಾತ್ರೆಗಳ ಸಂಬಂಧದಿಂದ ಅಷ್ಟು ಹೆಚ್ಚುತ್ಪನ್ನವಾದುದಾಗಿ ತಿಳುಸಲ್ಪಟ್ಟಿದೆ.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯಲ್ಲಿ 1½ ಅಂಗುಲದಷ್ಟು ಮಳೆಯಾಗಿ ಕಾರಂಜಿ ಮತ್ತು ದೊಡ್ಡ ಕೆರೆಗಳಿಗೆ ಸ್ವಲ್ಪ ನೀರು ಬಂದಿತು. ಬೆಂಗಳೂರಿನಲ್ಲೂ 1 ಅಂಗುಲದವರೆಗೆ ಮಳೆಯಾಗಿರುವುದು. ಈ ತಾ|| 12 ರಲ್ಲಿ ಆರಂಭವಾಗುವ ವೈಶಾಖಮಾಸದಲ್ಲೂ ಮಳೆಯು ಕಡಿಮೆಯೆಂದು ಗಣಿತಜ್ಞರು ಹೇಳಿರುವರು.

ಮೈಸೂರು ಪ್ರಜಾಪ್ರತಿನಿಧಿಸಭಾಧಿವೇಶನವು ರಾಜಧಾನಿಯ ಜಗನ್ಮೋಹನಪ್ರಾಸಾದಸಭಾಂಗಣದಲ್ಲಿ ಬರುವ ಜೂನ್ ತಾ|| 14 ನೆಯ ಸೋಮವಾರ ಮಧ್ಯಾಹ್ನ 12 ಗಂಟೆಯಲ್ಲೂ ಮೈಸೂರು ನ್ಯಾಯವಿಧಾಯಕಸಭಾಧಿವೇಶನವು ರಾಜಧಾನಿಯ ಪಬ್ಲಿಕ್ ಆಫೀಸ್‌ಕಟ್ಟಡದ ಸಭಾಂಗಣದಲ್ಲಿ ಜೂನ್ ತಾ|| 22 ನೆಯ ಮಂಗಳವಾರ ಮಧ್ಯಾಹ್ನ 12 ಗಂಟೆಯಲ್ಲೂ ಆರಂಭಗೊಂಡು ನಡೆಯುವುವು.

ದಿವಾನ್ ಮಿ|| ಮಿರ್ಜಾಯವರು ಪ್ರೈವೆಟ್ ಸೆಕ್ರೆಟರಿಯವರಾಗಿದ್ದಾಗ್ಗೆ ರಾಜಧಾನಿಯ ಪ್ರತಿಯೊಂದು ಭಾಗವನ್ನು ಆಗಾಗ್ಗೆ ಪರಾಮರ್ಶಿಸುತ್ತಿದ್ದಂತೆ ಈಗ ಬೆಂಗಳೂರಿನಲ್ಲೂ ಆಗಾಗ್ಗೆ ಕೆಲಕೆಲ ಭಾಗಗಳನ್ನು ಪರಾಮರ್ಶಿಸುತ್ತಿರುವುದಾಗಿ ತಿಳಿಯಬರುತ್ತದೆ. ಇವರು ಕೂಡಲೆ ರಾಜಧಾನಿಗೆ ಬಂದು ಬುಧವಾರ-ಗುರುವಾರದಲ್ಲಿ ಶ್ರೀಮನ್ ಮಹಾರಾಜರವರಕೂಡ ಉದಕಮಂಡಲಕ್ಕೆ ಹೊರಡುವರೆಂದು ಕೇಳುತ್ತೇವೆ.

ರಾಜಧಾನಿಯ ಸಂತೇಪೇಟೆಯಲ್ಲಿ ಗಂಧದಕಡ್ಡಿವ್ಯಾಪಾರ ಮಾಡುತ್ತಿರುವ ಎಂ. ಆರ್. ಜಟ್ಟಪ್ಪನವರು 325 ಪೌಂಡು ಗಂಧದಚೆಕ್ಕೆಯನ್ನು ಅದೇ ಸಂತೇಪೇಟೆಯಲ್ಲಿ ಹಸಿಟ್ಟುಮಾಡುವ ಯಂತ್ರಾಲಯಕ್ಕೆ ಗಂಧದಪುಡಿಮಾಡುವುದಕ್ಕಾಗಿ ಕೊಟ್ಟಿದ್ದರು. ಈ ಗಂಧದಚೆಕ್ಕೆಗೆ ಲೈಸನ್ಸು ತೆಗೆದುಕೊಳ್ಳಲ್ಪಟ್ಟಿರಲಿಲ್ಲವೆಂಬ ಅಪರಾಧಕ್ಕಾಗಿ ಪೊಲೀಸಿನವರು ಸದರಿ ಜಟ್ಟಪ್ಪನವರನ್ನು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು. ಕಳೆದ ತಾ|| 5 ರಲ್ಲಿ ಪೊಲೀಸಿನವರ ಕೆಲ ಸಾಕ್ಷಿಗಳ ವಿಚಾರಣೆಯು ನಡೆದು ಈ ತಾ|| 17 ಕ್ಕೆ ಅಡ್ಜರ್ನ್ ಮಾಡಲ್ಪಟ್ಟಿರುತ್ತದೆ.

ರಾಜಧಾನಿಯ ಶಿವಕಥಾಪಂಡಿತ ಬ್ರ|| ಶ್ರೀ|| ಶಿವಯ್ಯಶಾಸ್ತ್ರಿಗಳು ಕಳೆದ ಭಾನುವಾರದ ಮಧ್ಯಾಹ್ನ ಬೆಂಗಳೂರ ಸೆಂಟ್ರಲ್‌ಜೈಲಿನಲ್ಲಿ ಬಂದಿಗಳ ಸನ್ಮಾರ್ಗಪ್ರವರ್ತನೆಗಾಗಿ ಅಲ್ಲಿಯ ಸೂಪರಿಂಟೆಂಡೆಂಟ್ ಮ|| ಸಿ. ಮಾಚಯ್ಯನವರ ಅಧ್ಯಕ್ಷತೆಯಲ್ಲಿ ಸಾನಂದಗಣೇಶನಕಥಾಕಾಲಕ್ಷೇಪವನ್ನು ನೀತಿ ಮತ್ತು ರಾಜಭಕ್ತಿಯುಕ್ತವಾದ ಉಪಕಥೆಗಳೊಡನೆ ನಡೆಸಿದರು. ಶಾಸ್ತ್ರಿಗಳ ವಾಗ್ಝರಿಯನ್ನೂ ಬೋಧನಾಶಕ್ತಿಯನ್ನೂ ಬಹಳವಾಗಿ ಶ್ಲಾಘಿಸಿ, ಬಂದಿಗಳಿಗೆ ಶಿವಕಥಾಶ್ರವಣವನ್ನು ಮಾಡಿಸಿ ಅವರು ಇತಃಪರ ಸನ್ಮಾರ್ಗಿಗಳಾಗುವಂತೆ ಬೋಧಿಸಿದ್ದುದಕ್ಕಾಗಿ ಶಾಸ್ತ್ರಿಗಳನ್ನು ಮ|| ಮಾಚಯ್ಯನವರು ವಂದಿಸಿದರು.

ಸ್ಟೋರ್ಸ್‌ಪರ್ಚೇಜ್ ಕಮಿಟಿಯ ಸೆಕ್ರೆಟರಿಯಾಗಿದ್ದ ಅ|| ಕಮಿಷನರ್ ಮ|| ಎಂ. ಎಸ್. ರಾಮಚಂದ್ರರಾವ್, ಬಿ.ಎ., ಯವರು ದಿವಾನರ ಪ್ರೈವೆಟ್ ಸೆಕ್ರೆಟರಿಯಾಗಿಯೂ, ತುಮಕೂರು ಡಿ|| ಪೊಲೀಸ್ ಸೂಪರಿಂಟೆಂಡೆಂಟ್‌ರಾಗಿದ್ದ ಮ|| ಟಿ. ಎ. ಈಶ್ವರಂ ಬಿ.ಎ., ಯವರು ಸ್ಟೋರ್ಸ್‌ಪರ್ಚೇಜ್ ಕಮಿಟಿಯ ಸೆಕ್ರೆಟರಿಯಾಗಿಯೂ, ನಿಯಮಿಸಲ್ಪಟ್ಟಿರುತ್ತಾರೆ. ಹಿಂದಣ ದಿವಾನರ ಪ್ರೈವೆಟ್‌ಸೆಕ್ರೆಟರಿಯಾಗಿದ್ದ ಮ|| ಜೆ. ಸುಂದರರಾವ್ ಬಿ.ಎ., ಯವರು 1 ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುತ್ತಾರೆ. ಮ|| ಎಂ. ಎಸ್. ರಾಮಚಂದ್ರರಾಯರು ತಬೀಲಿ ಶಾಮರಾಯರ ಮಕ್ಕಳು. ಇವರು ಮಿ|| ಮಿರ್ಜಾ ಇಸ್ಮಾಯಿಲ್‌ರವರ ಸಹಾಧ್ಯಾಯಿಗಳಾಗಿದ್ದರು.

ಮಹಮ್ಮದೀಯ ಮತಸ್ಥರಾದ ದೀನ್‌ದಾರ್ ಸಿದ್ದಿಕ್ ಎಂಬುವವರು ಶ್ರೀಚೆನ್ನಬಸವೇಶ್ವರನ ಅವತಾರವೇ ತಾನೆಂದು ಹೇಳಿಕೊಂಡು ತಿರುಗುತ್ತ ಏನನ್ನೂ ಅರಿಯದ ವೀರಶೈವರನ್ನು ಮೋಸದಿಂದ ಜಾತಿಭ್ರಷ್ಟರನ್ನಾಗಿ ಮಾಡುತ್ತಿರುವುದೂ, ಇವರ ಮೋಸವನ್ನು ತಿಳಿದ ವೀರಶೈವರಿಂದ ಅಲ್ಲಲ್ಲಿ ತಕ್ಕ ಪ್ರಾಯಶ್ಚಿತ್ತವಾಗುತ್ತಿರುವುದೂ ಈ ಪತ್ರಿಕಾವಾಚಕರಿಗೆ ತಿಳಿದೇ ಇರುವುದು. ಈ ಮೋಸದ ಚೆನ್ನಬಸವೇಶ್ವರನು ತನ್ನ ಅವತಾರಮಾತ್ರದಿಂದ ತೃಪ್ತನಾಗದೆ "ಚೆನ್ನಬಸವೇಶ್ವರ" ಎಂಬ ಹೆಸರಿನಿಂದ ಒಂದುವಾರಪತ್ರಿಕೆಯನ್ನು ಆಂಗ್ಲ ಕನ್ನಡಭಾಷೆಯಲ್ಲಿ ಪ್ರಕಟಿಸಲುಪಕ್ರಮಿಸಿರುವನು. ಹಿಂದು ಮಹಮ್ಮದೀಯರ ಐಕಮತ್ಯಕ್ಕಾಗಿ ಈ ಪತ್ರಿಕೆಯು ಹೊರಡುವುದಾಗಿ ಹೇಳಲ್ಪಟ್ಟಿದೆ. ಈ ಚೆನ್ನಬಸವೇಶ್ವರ ನಾಮಧಾರ ದೀನ್‌ದಾರ್ ಸಿದ್ದಿಕ್‌ರವರು ತಾ|| 25-4-26 ರಲ್ಲಿ ತಿಪಟೂರಿಗೆ ಹೋಗಿ ಆತ್ಮಜ್ಞಾನವಿಚಾರವಾಗಿ ಉಪನ್ಯಾಸಮಾಡುವಾಗ್ಗೆ ನಂಜುಂಡಪ್ಪ ನೆಂಬಾತನು ಈ ವೇಷಧಾರಿ ಸ್ವಾಮಿಯನ್ನು ನಂಬಿ ದೀಕ್ಷೆಯನ್ನು ಹೊಂದಿ 'ಹರ್ಷ' ಸಾಹೆಬ್ ಎಂಬ ನಾಮವನ್ನಿಟ್ಟುಕೊಂಡಿರುವುದಾಗಿ ಚೆನ್ನಬಸವೇಶ್ವರಪತ್ರಿಕೆಯ ಪ್ರಥಮಸಂಚಿಕೆಯಲ್ಲೇ ಪ್ರಕಟವಾಗಿರುತ್ತದೆ. ಇದರಿಂದ ಹಿಂದೂಗಳು ತುರುಕರಲ್ಲಿ ಐಕ್ಯವಾಗುತ್ತಾರೆಂಬುದು ಅಕ್ಷರಶಃ ನಿಜವೆಂದು ಹೇಳಲು ಅಡ್ಡಂತರವಿರುವುದಿಲ್ಲ. ಇಂತಹ ಚೆನ್ನಬಸವೇಶ್ವರಪತ್ರಿಕಾವತರಣವು ನಮ್ಮ ಸೀಮೆಯಲ್ಲಿ ಯಾವ ವಿಧವಾಗಿ ಪರಿಣಮಿಸುತ್ತದೆಂಬುದನ್ನು ಸಹೃದಯವಿವೇಕಿಗಳೇ ಯೋಚಿಸತಕ್ಕದಾಗಿದೆ.

ಭರತಖಂಡದ ವೃತ್ತಾಂತಗಳು.

ರಾ|| ಬ|| ಕಂದಸಾಮಿಸೆಟ್ಟರು ಮದ್ರಾಸ್ ಸರ್ಕಾರದ ಮುಖ್ಯಮಂತ್ರಿಯಾದ ಪಾನಗಲರಾಜರಮೇಲೆ ಮಾಡಿದ್ದ ಮಾನನಷ್ಟದ ವಿವಾದದಲ್ಲಿ ರಾಜರಿಗೆ 3 ಪೈ ಅರ್ಥದಂಡವು ವಿಧಿಸಲ್ಪಟ್ಟಿತು.

ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಿದ್ದ ಕುರಪ್ಪುಮ್ಮಿನ ಜಮೀನ್ದಾರ್ ವಿ. ಎನ್. ಸೂರ್ಯನಾರಾಯಣರಾಜುಯವರು ನ್ಯೂಮೋನಿಯಾಜ್ವರರೋಗಪೀಡಿತರಾಗಿದ್ದು ಕಳೆದ ತಾ|| 24ರ ಬೆಳಿಗ್ಗೆ ಸತ್ತುಹೋದರು.

ರಂಗೂನಿಗೆ ಸೇರಿದ ಪಾಂಗ್ಡೆ ಎಂಬಲ್ಲಿ ಅಗ್ನಿಪ್ರವೇಶವಾಗಿ ಅಂಗಡಿಯಿಟ್ಟಿದ್ದ ಒಂದು ಜೋಪಡಿಯೂ 9 ಮನೆಗಳೂ 3 ಕಣಜಗಳೂ ಸುಟ್ಟುಹೋದುವು. ಇದರಿಂದ 3 ಲಕ್ಷ ರೂಪಾಯಿವರೆಗೆ ನಷ್ಟವಾಗಿರುವುದೆಂದೂಹಿಸಲ್ಪಟ್ಟಿದೆ.

ಮದ್ರಾಸ್ ಪಟ್ಟಣದ ಚಿಂತಾದ್ರಿಪೇಟೆಯಲ್ಲಿ 14 ವರ್ಷ ವಯಸ್ಸಿನ ಒಬ್ಬ ವಿದ್ಯಾರ್ಥಿಯು ಮನೆಯಲ್ಲಿ ಕ್ರೂರವಾಗಿ ದಂಡಿಸಲ್ಪಟ್ಟುದರಮೇಲೆ ನೈಟ್ರಿಕ್‌ಆಸಿಡ್ ಎಂಬ ದ್ರಾವಕವನ್ನು ಕೊಂಡುಕೊಂಡು ಬಂದು ಕುಡಿದು ಸತ್ತುಹೋದನು.

ಗತಿಸಿದ ಗ್ವಾಲಿಯರ್ ಮಹಾರಾಜರವರು ಮೃಗಯಾವಿಹಾರಕ್ಕಾಗಿ ಒಂದು ಮೋಟಾರುಬಂಡಿಯನ್ನು ಹೊಸದಾಗಿ ನಿರ್ಮಿಸಿ ಕಳುಹಲು ಅಪೇಕ್ಷಿಸಿದ್ದರು. ಅದು ಈಗ ತಾನೆ ಕಳುಹಲ್ಪಟ್ಟಿರುತ್ತದೆ ಮತ್ತು ಅದರ ಬೆಲೆ 45,000 ರೂ. ಆಗಿರುತ್ತದೆ.

ಕಳೆದವರ್ಷ 11,000 ಮೋಟಾರುಕಾರುಗಳೂ, 4000 ಲಾರಿಗಳೂ ಭರತಖಂಡಕ್ಕೆ ತರಿಸಲ್ಪಟ್ಟುವು. ಇವು ಇದರ ಹಿಂದಣವರ್ಷಕ್ಕಿಂತಲೂ 3,000 ಹೆಚ್ಚಾಗಿರುತ್ತವೆ. ಕಾರುಗಳು ತರಿಸಲ್ಪಡುವುದು ಅಷ್ಟು ವಿಶೇಷವಾಗಿಲ್ಲದಿದ್ದರೂ ಬಸ್ಸುಗಳ ಸಂಖ್ಯೆಯು ದ್ವಿಗುಣಕ್ಕಿನ್ನ ಹೆಚ್ಚಾಗಿದೆ.

ಬೊಂಬಾಯಿನಲ್ಲಿ ಎಡಿತ್ ಎನ್ಸಾರ್ ಎಂಬ ಅವಿವಾಹಿತ ಐರೋಪ್ಯಳು ಲೈಸೆನ್ಸ್ ಇಲ್ಲದೆ ಮೋಟಾರುಬಂಡಿಯನ್ನು ನಡಿಸುತ್ತ ಮತ್ತೊಂದು ಮೋಟಾರುಬಂಡಿಗೆ ತಾಕಿಸಿ ಅದರೊಳಗಿದ್ದ ಇಬ್ಬರು ಮಹಮ್ಮದೀಯರಿಗೆ ವಿಶೇಷ ಅಪಾಯವನ್ನುಂಟುಮಾಡಿದ ಅಪರಾಧಕ್ಕಾಗಿ 150 ರೂ. ನ ಅರ್ಥದಂಡ ವಿಧಿಸಲ್ಪಟ್ಟಳು.

ಷೋರನೂರಿನಬಳಿ ಇರುವ ಭಾರತನದಿಯಲ್ಲಿ ಪ್ರವಾಹಬಂದವೇಳೆಯಲ್ಲಿ ಕೆಳಗಡೆ ಇರುವ ಮಹಾದೇವಮಂಗಳದೇವಸ್ಥಾನಕ್ಕೆ ನೀರು ನುಗ್ಗದಿರುವಂತೆ ನದಿಯುದಡವನ್ನು ಎತ್ತರಿಸಿ ಕಲ್ಲಿನಿಂದ ಕಟ್ಟುತ್ತಿರುವಾಗ್ಗೆ ದಡವು ಕುಸಿದುಹೋಗಿ 9 ಜನ ಕೆಲಸಗಾರರು ಜಲಸಮಾಧಿಯನ್ನು ಹೊಂದಿ 5 ಜನರು ಪೂರಾ ಪೆಟ್ಟನ್ನುತಿಂದು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು.

ಭಾವನಗರಸಂಸ್ಥಾನದ ಆಡಳಿತವನ್ನು ನೋಡುತ್ತಿರುವ ಪ್ರಭಾಶಂಕರಪಟ್ಟಣಿಯವರು ಕಳೆದ ಏಪ್ರಿಲ್ ತಾ|| 5ರ ವರೆಗೆ ಸುರಕ್ಷಿತರಾಗಿದ್ದು ಆಕಸ್ಮಿಕವಾಗಿ ಅಸ್ವಸ್ಥರಾಗಿ ಬೊಂಬಾಯಿನಿಂದ ಡಾಕ್ಟರುಗಳನ್ನು ಕರೆಯಿಸಿ ಪರೀಕ್ಷೆಮಾಡಿಸಿಕೊಂಡು ಅವರುಗಳ ಹೇಳಿಕೆಪ್ರಕಾರ 7 ದಿನಗಳ ಉಪವಾಸವ್ರತವನ್ನು ಕೈಕೊಂಡಿರುವರು. 6 ನೆಯ ದಿವಸ ಹಣ್ಣಿನ ರಸವನ್ನು ಮಾತ್ರ ತೆಗೆದುಕೊಳ್ಳಬೇಕಾಗಿ ಡಾಕ್ಟರು ಹೇಳಿರುತ್ತಾರೆ.

ಕಳೆದ ತಾ|| 23 ರ ರಾತ್ರಿ ಮದ್ರಾಸ್ ಎಗ್ಮೋರ್ ರೈಲ್ವೆಸ್ಟೇಷನ್ನಿನ ಪ್ಲಾಟ್‌ಫಾರಮ್ಮಿಗೆ ಬಂದು ನಿಲ್ಲುವುದರಲ್ಲಿದ್ದ ಪ್ರಯಾಣಿಕರ ಬಂಡಿಯಿಂದ 16 ವರ್ಷ ವಯಸ್ಸಿನ ಒಬ್ಬ ವಿದ್ಯಾರ್ಥಿಯು ಜಗತಿಯಮೇಲಕ್ಕೆ ದುಮ್ಮಿಕ್ಕುವಾಗ್ಗೆ ಕಾಲು ಜಾರಿ ಬಂಡಿಯ ಹಂತಕ್ಕೂ ಜಗತಿಗೂ ಮಧ್ಯೆ ಬಿದ್ದು ಒಂದು ಕಾಲನ್ನು ಮುರಿದುಕೊಂಡನು. ಅವನು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಮುರಿದುಹೋದ ಕಾಲು ಕತ್ತರಿಸಿ ಹಾಕಲ್ಪಟ್ಟಿತು.

ಪುದುಕೋಟೆಯ ಅಗಸರು ಬಟ್ಟೆಗಳನ್ನು ಗುಂಡಾರ್ ಮತ್ತು ವೆಲ್ಲಾರ್ ನದಿಗಳಲ್ಲಿ ಒಗೆಯುತ್ತಿದ್ದು ಅವುಗಳಲ್ಲಿ ನೀರುಬತ್ತಿಹೋದರಿಂದ ಊರೊಳಗಿರುವ ಕೆರೆಯಲ್ಲಿ ಒಗೆಯಲು ಅಪ್ಪಣೆಕೊಡಿಸಬೇಕೆಂದು ಮ್ಯುನಿಸಿಪಾಲಟಿಯವರಿಗೂ ದಿವಾನರಿಗೂ ಬಿನ್ನೈಸಿಕೊಂಡಿದ್ದರು. ಆದರೆ ಅವರುಗಳಿಂದ ಸದುತ್ತರವು ದೊರೆಯದಿದ್ದುದರಮೇಲೆ ಊರಿನವರ ಬಟ್ಟೆಗಳನ್ನೊಗೆಯುವುದನ್ನು ನಿಲ್ಲಿಸಿಬಿಟ್ಟು ರೀಜಂಟರವರಿಗೆ ತಮ್ಮ ಕಷ್ಟವನ್ನು ವಿವರಿಸಿ ಪರಿಹರಿಸಿಕೊಡಬೇಕೆಂದು ಬರೆದುಕೊಂಡಿರುವರು.

ಕೂಚ್‌ಬಿಹಾರ್‌ಸಂಸ್ಥಾನದ ಬಾಲಮಹಾರಾಜರ ಮತ್ತು ಬಾಲಿಕಾರಾಜಕುಮಾರಿಯರವರ ಗಾರ್ಡಿಯನ್ನರಾಗಿರುವವರೂ ಮಹಾರಾಣಿಯವರ ಸೆಕ್ರೆಟರಿಯಾಗಿರುವವರೂ ಮಹಮ್ಮದೀಯರೇ ಆಗಿರುವುದು ಆ ಸಂಸ್ಥಾನದ ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿರುತ್ತದೆಂದೂ, ಆ ಇಬ್ಬರು ಮಹಮ್ಮದೀಯರ ಪೂರ್ವಚರಿತ್ರೆಯು ಸಮರ್ಪಕವಾಗಿಲ್ಲವೆಂದೂ, ಈ ಕಾರಣದಿಂದ ಆ ಇಬ್ಬರನ್ನೂ ಉದ್ಯೋಗದಿಂದ ನಿವೃತ್ತಿಗೊಳಿಸಿ ದೇಶದಿಂದ ಹೊರಕ್ಕೆ ಕಳುಹಬೇಕೆಂದು ಆ ಸಂಸ್ಥಾನದ ಪ್ರಜೆಗಳು ಬಂಗಾಳಾ ಗೌರ್ನರಿಗೂ ವೈಸ್‌ರಾಯರಿಗೂ ಅರ್ಜಿಬರೆದುಕೊಂಡಿರುವರಂತೆ.

ನಾಗೂಬಾಯಿ ಮಂಗೇಷ್ಕರ್ ಎಂಬೋರ್ವ ವೇಶ್ಯೆಯು ಗೋಪಾಲಮುಲಜೆ ಎಂಬುವವನ ಮೋಹದ ಸಖಿಯಾಗಿ 13 ವರ್ಷಗಳಕಾಲ ತಿಂಗಳೊಂದಕ್ಕೆ 400 ರೂ. ಪ್ರಕಾರ ಪ್ರತಿಫಲವನ್ನು ಪಡೆದುಕೊಂಡು ಅವನ ಕೂಡ ಜೀವಿಸುತ್ತಿದ್ದಳು. ಆ ಗೋಪಾಲಮುಲಜೆಯು ವೇಶ್ಯೆಯ ಮೋಹಜಾಲಕ್ಕೆ ಶಿಲ್ಕಿ ತನ್ನ ಧರ್ಮಪತ್ನಿಯನ್ನೂ ಆಕೆಯ ಇಬ್ಬರುಮಕ್ಕಳನ್ನೂ ಪರಿತ್ಯಜಿಸಿದ್ದನು. ಅವನು ಈಚೆಗೆ ಸತ್ತುಹೋಗಲಾಗಿ ಅವನ ಆಸ್ತಿಯಿಂದ ತನಗೆ ಜೀವನಾಂಶಕೊಡಿಸಬೇಕೆಂದು ಕೋರ್ಟಿನಲ್ಲಿ ವಿವಾದವನ್ನು ಹೂಡಿ ಡಿಕ್ರಿಯನ್ನು ಪಡೆದುಕೊಂಡಿದ್ದಳು. ಇದರಮೇಲೆ ಅಪೀಲಾಗಿ ಕೆಳಕೋರ್ಟಿನ ತೀರ್ಮಾನವು ತಪ್ಪಿಸಲ್ಪಟ್ಟು ವೇಶ್ಯೆಗೇನೂ ಜೀವನಾಂಶಸಲ್ಲತಕ್ಕುದಿಲ್ಲವೆಂದು ಇತ್ಯರ್ಥವಾಗಲು ವೇಶ್ಯೆಯು ಸೀಮೆಯಲ್ಲಿರುವ ಪ್ರಿವಿಕೌನ್ಸಿಲಿಗೆ ಅಪೀಲ್ಮಾಡಿದಳು. ಅಲ್ಲಿ ಈ ವೇಶ್ಯೆಗೆ ಅನುಕೂಲವಾಗಿ ಬಗೆಹರಿಸಲ್ಪಟ್ಟಿತಂತೆ.

ವಸಂತನೆಂಬುವವನು ತನ್ನ ಚಿಕ್ಕವಯಸ್ಸಿನ ಹೆಂಡಿತಿ ಲಕ್ಷ್ಮಿಯನ್ನು ಸುರೇಂದ್ರನೆಂಬುವವನಿಗೆ 150 ರೂಪಾಯಿಗಳಿಗೆ ವಿಕ್ರಯಿಸುವುದಕ್ಕಾಗಿ ದೈನಾಜಪುರಕ್ಕೆ ಕರೆದುಕೊಂಡುಬಂದು ವೀಳ್ಯದೆಲೆ ಮಾರುವವನ ಮನೆಯಲ್ಲಿರಿಸಿದನು. ಅಲ್ಲಿ ಗಂಡನೂ ಮತ್ತಿಬ್ಬರೂ ಲಕ್ಷ್ಮಿಯನ್ನು ಎಷ್ಟು ಒಡಂಬಡಿಸಿದರೂ ಅವಳು ಸುರೇಂದ್ರನ ಜತೆಗೆ ಹೋಗಲು ಇಷ್ಟಪಡಲಿಲ್ಲವಾಗಿ ಅವಳನ್ನು ಹಿಂಸಿಸಲುಪಕ್ರಮಿಸಿದರು. ಆಗಲೂ ಲಕ್ಷ್ಮಿಯು ಒಡಂಬಡದೆ ಮನೆಯಿಂದ ಹೇಗೋ ಹೊರಕ್ಕೆ ತಪ್ಪಿಸಿಕೊಂಡು ಬಂದು ದಾರಿಯಲ್ಲಿ ಇಬ್ಬರು ಪೊಲೀಸಿನವರ ಮೊರೆಹೊಕ್ಕು ನಡೆದ ಸಂಗತಿಯನ್ನು ತಿಳಿಸಿದಳು. ಅದರಮೇಲೆ ಪೊಲೀಸಿನವರು ಗಂಡಹೆಂಡಿತಿಯರಿಬ್ಬರನ್ನೂ ಪೊಲೀಸುತಾಣಕ್ಕೆ ಕರೆದುಕೊಂಡುಹೋಗಿ ಗಂಡನನ್ನೂ ಅವನ ಇಬ್ಬರು ಜತೆಗಾರರನ್ನೂ ಸೆರೆಯಲ್ಲಿಟ್ಟು ಹೆಂಡಿತಿಯನ್ನು ಆ ಊರಿನ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರನ ರಕ್ಷಣೆಯಲ್ಲಿ ಬಿಟ್ಟರು.

ಇಂದೂರುಸಂಸ್ಥಾನದ ವಿಷಯವಿಲಾಸನಾಟಕದ ಮುಖ್ಯನಾಯಕಿಯಾದ ಮುಮತಜಂಬೇಗಂಳಿಗೆ ಅವಳ ಮಾಯಾಬಲೆಗೆಸಿಲ್ಕಿ ಹತನಾದ ಬಾವಲಾ ಶ್ರೀಮಂತನು ಬರೆದಿದ್ದ ಮರಣಶಾಸನದ ಪ್ರಕಾರ ಸಲ್ಲಬೇಕಾದ 1 ಲಕ್ಷ ರೂ. ಗಳಲ್ಲಿ ಈವರೆಗೆ ಕೊಂಚಕೊಂಚವಾಗಿ ತೆಗೆದುಕೊಂಡಿರುವ 25,000ರೂ. ಹೊರತಾಗಿ ಉಳಿದ 75,000 ರೂ. ತನ್ನ ಹೆಣ್ಣುಮಗುವಿಗೆ ಸಲ್ಲಬೇಕೆಂದು ಹೇಳುತ್ತಿದ್ದುದಲ್ಲದೆ ತಾನು ಈಚೆಗೆ ವಿವಾಹಮಾಡಿಕೊಂಡಮೇಲೆ ತಾನೂ ತನ್ನ ಪತಿಯೂ ಅದರಂತೆಯೇ ಒಂದುಕಾಗದವನ್ನು ಬರೆದಿರುವರು. ಆದರೆ ಈಗ ದುಡ್ಡಿನ ಅಭಾವವಾದಪ್ರಯುಕ್ತ ಉಳಿದಿರುವ 75,000 ರೂ. ತನಗೆ ಬರಬೇಕೆಂದು ಮುಮತಜಂಳು ಅಪೇಕ್ಷೆಪಟ್ಟಿರುವುದರಮೇಲೆ ಇವಳ ತಾಯಿಯೂ ಆ ಮಗುವಿನ ಹೆತ್ತಮ್ಮನೂ ಆದ ವಜೀರ್ ಬೇಗಂಳು ಹೈಕೋರ್ಟಿಗೆ ಅರ್ಜಿಯನ್ನುಹಾಕಿ ಮುಮತಜಂಳಿಗೆ ಆ ಹಣವು ಸಲ್ಲದಂತೆ ಇಂಜಕ್ಷನ್‌ಮಾಡಿಸಿರುವಳು. "ಹಣವನ್ನುಳ್ಳವನನ್ನು ಕೂಡಿದರೂ ಋಣವಿರಬೇಕು" ಎಂಬ ಲೋಕೋಕ್ತಿಯು ಇನ್ನಾದರೂ ಮುಮತಜಂಳಿಗೆ ಗೋಚರವಾಗಬಹುದಲ್ಲವೆ!

ಪುದುಚೇರಿಯ ಸುಬ್ರಹ್ಮಣ್ಯಗೌಂಡರ್ ಮತ್ತಿಬ್ಬರು ಕಡಲೂರಿನ ಸುಂಕದಚಾವಡಿಯ ಕೆಲಸಗಾರರನ್ನು ವ್ಯಾಜಾಂತರದಿಂದ ಫ್ರೆಂಚ್ ಸರ್ಕಾರಕ್ಕೆ ಸೇರಿದ ಪಾಂಡುಚೆರಿಯ ಎಲ್ಲೆಕಟ್ಟಿನೊಳಕ್ಕೆ ಕರೆದುಕೊಂಡುಹೋಗಿ ಚೆನ್ನಾಗಿ ಹೊಡೆದು ಅವರ ಬಟ್ಟೆಬರೆ ದುಡ್ಡುಕಾಸುಗಳನ್ನು ಕಿತ್ತುಕೊಂಡು ಅವರ ಮೀಸೆಯನ್ನೂ ಜುಟ್ಟನ್ನೂ ಕತ್ತರಿಸಿ ಕಳುಹಿಸಿರುತ್ತಾರಾದುದರಿಂದ ಅವರನ್ನು ತಮ್ಮ ವಶಪಡಿಸಬೇಕೆಂದು ಬ್ರಿಟಿಷ್ ಸರ್ಕಾರದವರು ಫ್ರೆಂಚ್ ಸರ್ಕಾರದವರನ್ನು ಕೇಳಿದ್ದು ಆ ಸರ್ಕಾರದವರು ಬಿಟ್ಟುಕೊಡಲೊಪ್ಪಲಿಲ್ಲವಾಗಿ ಪೊಲೀಸಿನವರು ಕೇಸನ್ನು ಹಿಂದಕ್ಕೆ ತೆಗೆದುಕೊಂಡುಬಿಟ್ಟರು. ಆದರೆ ಸುಂಕದ ಶಾಖೆಯವರು ತೃಪ್ತರಾಗದೆ ಅಪರಾಧಿಗಳು ಸಿಕ್ಕದಿದ್ದಲ್ಲಿ ಭರತಖಂಡದಲ್ಲಿರುವ ಅವರ ಆಸ್ತಿಯು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತದೆಂದು ಕೋರ್ಟಿನ ಮೂಲಕ ಪ್ರಕಟಿಸಿರಲಾಗಿ ಅಪರಾಧಿಗಳು ಕೋರ್ಟಿಗೆ ಬಂದು ಈ ಕೃತ್ಯವನ್ನು ತಾವು ನಡೆಸಿದುದಿಲ್ಲವೆಂದೂ ಹೊಟ್ಟೆಕಿಚ್ಚಿನಿಂದ ಸುಳ್ಳುಕೇಸು ಮಾಡಿರುತ್ತಾರೆಂದೂ ವಾದಿಸಿದುದರಮೇಲೆ ಕಡಲೂರಿನ ಸೆಷನ್ಸ್‌ಜಡ್ಜಿಯವರು ಅಪರಾಧಿಗಳನ್ನು ಬಿಟ್ಟುಬಿಟ್ಟರು.

ವಿದೇಶದ ವೃತ್ತಾಂತಗಳು

ಮೆಗ್ರೈ ಎಂಬಲ್ಲಿ ಕಾರಾಗೃಹಕ್ಕೆ ಸಿಡಿಲು ಬಡಿದು ಒಳಗಿದ್ದ ಬಂದಿಗಳಲ್ಲಿ ಮೂವರು ಸತ್ತರು ಮತ್ತು 10 ಜನರು ಪೂರಾ ಅಪಾಯವನ್ನು ಹೊಂದಿದರು.

ಜಪಾನಿನ ಹಡಗೊಂದು ಹಾರೋಹುಪ್ರಿನ್‌ಮರು ಎಂಬ ದ್ವೀಪದಿಂದ ಕೊಂಚದೂರದಲ್ಲಿ ಬಿರುಗಾಳಿಯೇಟಿಗೆ ಮುಳುಗಿಹೋಗಿ ಅದರೊಳಗಿದ್ದ 250 ಜನರು ಮಾಯವಾಗಿರುವರು.

ಒಂದು ಸ್ಥಳದಿಂದ ಮತ್ತೊಂದುಸ್ಥಳಕ್ಕೆ ವರ್ತಮಾನವನ್ನು ಕಳುಹುವಂತೆ ಮನುಷ್ಯರ ಭಾವಚಿತ್ರ, ಹೆಬ್ಬೆರಳಿನ ಮುದ್ರೆ, ಕೈಬರಹ ಇತ್ಯಾದಿಗಳನ್ನು ಕಳುಹಲು ಒಬ್ಬ ಇಂಜನಿಯರು ಒಂದು ಯಂತ್ರವನ್ನು ಕಂಡು ಹಿಡಿದಿರುತ್ತಾನೆ. ಈಗ ಸದ್ಯದಲ್ಲಿ ಲಂಡನ್‌ನಗರದಿಂದ ಅಮೇರಿಕೆಯ ನ್ಯೂಯಾರ್ಕ್ ಪಟ್ಟಣಕ್ಕೆ ಕಳುಹಲು ತಕ್ಕ ಪ್ರಯತ್ನವನ್ನು ನಡಿಸಿರುವರು.

ಮೆಕ್ಸಿಕೋಪಟ್ಟಣದಲ್ಲಿ ಒಂದು ಸಿನಿಮಾ ಪ್ರದರ್ಶನಶಾಲೆಯ ಮಹಡಿಯಮೇಲೆ ಜನರು ಕಿಕ್ಕಿರಿದು ಕುಳಿತುಕೊಂಡು ನೋಡುತ್ತಿರುವಾಗ್ಗೆ ಮಹಡಿಯು ಮುರಿದು ಕೆಳಗಡೆ ಕುಳಿತಿದ್ದ ಜನರಮೇಲೆ ಬಿದ್ದು 5 ಜನರು ಸತ್ತರು ಮತ್ತು 93 ಜನರಿಗೆ ಪೂರಾ ಪೆಟ್ಟುಬಿದ್ದಿತು. ವಿನಿಪೆಗ್ ಎಂಬಲ್ಲಿಯೂ ಹೀಗೆಯೇ ಮಹಡಿಯು ಕುಸಿದು ಜನರಮೇಲೆ ಬಿದ್ದು 20 ಜನರಿಗೆ ಪೂರಾ ಗಾಯವಾಯಿತು.

ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳಾಗಿರುವ ಸಮಸ್ತವಿಧವಾದ 10 ಲಕ್ಷ ಕೆಲಸಗಾರರ ಜತೆಗೆ ಇನ್ನೂ 5 ಲಕ್ಷ ಜನರು ಸೇರಿ ಗೊಂದಲವೆದ್ದಿರುವರು. ಇದರಿಂದ ಪ್ರಜೆಗಳ ನೆಮ್ಮದಿಗೆ ಭಂಗವುಂಟಾಗುತ್ತದೆಂಬ ಶಂಕೆಯಿಂದ ಸರ್ಕಾರದವರು ಸೈನಿಕರ ಮತ್ತು ಪೊಲೀಸಿನವರ ಕಾವಲಿಟ್ಟು ಪ್ರತಿಯೊಂದುಕಸಬಿನ ಸಂಘದ ಮುಖಂಡರೊಡನೆ ಆಪ್ತಾಲೋಚನೆಯನ್ನು ನಡಿಸುತ್ತಿರುವರಲ್ಲದೆ ಪಾರ್ಲಿಮೆಂಟ್‌ಸಭೆಯಲ್ಲೂ ಇದರ ಪರಿಹಾರವನ್ನು ಕುರಿತು ಪರ್ಯಾಲೋಚಿಸುತ್ತಿರುವರು. ವೇತನದ ವಿಚಾರದಲ್ಲಿ ಕೆಲಸಗಾರರಿಗೂ ಅವರ ಯಜಮಾನರುಗಳಿಗೂ ಇರತಕ್ಕ ವ್ಯತ್ಯಾಸವನ್ನು ಪ್ರಭುತ್ವದವರು ಹೋಗಲಾಡಿಸಿ ಉಭಯರಿಗೂ ಕೂಡಲೆ ಸಮಾಧಾನವನ್ನುಂಟುಮಾಡದಿದ್ದಲ್ಲಿ ಪರಸ್ಪರ ಬಡಿದಾಟನಡೆಯುವ ಸಂಭವವುಂಟು.

ಆದಿಕರ್ಣಾಟಕಕಾನ್ಫರೆನ್ಸು ಮತ್ತು ಎಗ್ಜಿಬಿಷನ್ ಪ್ರಚುರಪತ್ರಿಕಾ.

ಚಿತ್ರದುರ್ಗದ ಡಿಸ್ಟ್ರಿಕ್ಟು ಆದಿಕರ್ಣಾಟಕಅಸೋಸಿಯೇಷನ್‌ನವರ ಪ್ರಾರ್ಥನೆಯಂತೆ ಮೆಹರ್ಬಾನ್ ನಮ್ಮ ಡೆಪ್ಯುಟಿ ಕಮಿಷನರ್‌ಸಾಹೇಬರವರು ಡಿಸ್ಟ್ರಿಕ್ಟ್ ಕಾನ್ಫರೆನ್ಸಿನ ಜತೆಯಲ್ಲಿ ಆದಿಕರ್ಣಾಟಕಕಾನ್ಫರೆನ್ಸ್ ಮತ್ತು ಎಗ್ಜಿಬಿಷನ್ ಸಹ ಬರುವ ಮೇ ತಾ|| 27 ರಲ್ಲಿ ಚಿತ್ರದುರ್ಗದ ಶ್ರೀಮಚ್ಚಾಮರಾಜೇಂದ್ರ ಮೆಮೋರಿಯಲ್ ಹಾಲಿನಲ್ಲಿ ನಡೆಯಲು ಅಪ್ಪಣೆಕೊಡಿಸಿರುತ್ತಾರೆ. ಈ ಕಾನ್ಫರೆನ್ಸಿನ ಖರ್ಚಿಗಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟುಬೋರ್ಡಿನಿಂದ 50 ರೂಪಾಯಿಗಳೂ, ಚಿತ್ರದುರ್ಗದ ಮ್ಯುನಿಸಿಪಾಲಿಟಿಯಿಂದ 30 ರೂಪಾಯಿಗಳೂ ಕೊಡಲ್ಪಟ್ಟಿವೆ. ಕಾನ್ಫರೆನ್ಸಿಗೆ ಬರತಕ್ಕ ಆ ಬಡಜನರ ಭೋಜನಕ್ಕಾಗಿ ದ್ರವ್ಯಸಹಾಯಮಾಡಬೇಕೆಂದು ಧರ್ಮಾತ್ಮರಾದ ಶ್ರೀಮಂತಜನರನ್ನು ಅಸೋಸಿಯೇಷನ್ನಿನವರು ಪ್ರಾರ್ಥಿಸಿರುತ್ತಾರೆ. ಕಾನ್ಫರೆನ್ಸು ಮತ್ತು ಎಗ್ಜಿಬಿಷನ್ ಸಹ ಅತ್ಯಂತ ವಿಜೃಂಭಣೆಯಿಂದ ಜರುಗಲು ಈ ಸೀಮೆಯ ಎಲ್ಲಾ ಗ್ರಾಮಾಂತರಗಳಲ್ಲಿ ವಾಸಿಸುವ ಆದಿಕರ್ಣಾಟಕಜನರು ಎಡಗೈ, ಬಲಗೈ ಎಂಬ ಭೇದಬುದ್ಧಿಯನ್ನು ಬಿಟ್ಟು ಪ್ರತಿ ಹಟ್ಟಿಯ ಪ್ರಮುಖರು (ಸ್ತ್ರೀಪುರುಷರಾದಿಯಾಗಿ) ತಮ್ಮಲ್ಲಿ ಅನೂಚಾನವಾಗಿ ನಡೆದು ಬಂದಿರತಕ್ಕ ಕಹಳೆ, ತಾಳ, ಮೇಳ, ಶಂಖು, ಜಾಗಟೆ, ತಪ್ಪಟೆ, ಉರುಮೆ ಮುಂತಾದ ವಾದ್ಯವಿಶೇಷಗಳೊಡನೆ ಮೇಲ್ಕಂಡ 27 ನೇ ತಾ|| ಪ್ರಾತಃಕಾಲವೇ ಚಿತ್ರದುರ್ಗಕ್ಕೆ ಬಂದುಸೇರುವಂತೆ ಮಾಡಬೇಕು. ಅಲ್ಲದೆ ಎಗ್ಜಿಬಿಷನ್‌ಗೆ ಕಳುಹಿಸಬೇಕಾದ ಜಮೀನುಗಳಲ್ಲಿ ತಾವು ಬೆಳೆದ ಸಮಸ್ತ ಧಾನ್ಯಗಳು, ಸ್ವಂತವಾಗಿ ತಯಾರಿಸಿದ ವ್ಯವಸಾಯದ ಮುಟ್ಟುಗಳು, ಕೈಗಾರಿಕೆ ವಸ್ತುಗಳಾದ ಕೈಮಗ್ಗದಲ್ಲಿ ನೇದ ಸ್ವದೇಶೀ ಬಟ್ಟೆಗಳು, ಚರ್ಮದಲ್ಲಿ ತಯಾರ್ಮಾಡಿದ ಹಗ್ಗ, ಬಾರು, ಮೆಟ್ಟು ಬೂಡ್ಸು, ಮನಿಪರ್ಸ್ ಮುಂತಾದ ಪ್ರತಿಯೊಂದು ನಾಜೋಕು ವಸ್ತುಗಳು, ವಿದ್ಯಾರ್ಥಿಗಳಿಂದ ತಯಾರಾದ ಬರವಣಿಗೆ, ಮ್ಯಾಪು, ಚಿತ್ರ, ಮಣ್ಣಿನ ಸಾಮಾನುಗಳು ಇವುಗಳನ್ನು ಎಗ್ಜಿಬಿಷನ್ ಸೆಕ್ರೆಟರಿಯವರಿಗೆ ಒಂದುವಾರ ಮುಂಚಿತವಾಗಿಯೇ ಕಳುಹಿಸಲು ಪ್ರತಿಯೊಬ್ಬ ಆದಿಕರ್ಣಾಟಕನು ಉತ್ಸಾಹಭರಿತನಾಗಿರಬೇಕೆಂದು ಸೂಚಿಸಿದೆ.

ಘನಹೊಂದಿದ ಚಿತ್ರದುರ್ಗದ ಮ್ಯುನಿಸಿಪಾಲಿಟಿಯವರು ಇಲ್ಲಿನ ಹೈಸ್ಕೂಲ್ ಕಟ್ಟಡದ ಹಿಂಭಾಗದಲ್ಲಿನ ಅತ್ಯಂತ ಬೆಲೆಬಾಳುವ ವಿಶಾಲವಾದ ಬೈಲುಪ್ರದೇಶವನ್ನು ಉಚಿತವಾಗಿ ದಯಪಾಲಿಸಿರುತ್ತಾರೆ. ಆ ಪ್ರದೇಶದಲ್ಲಿ ಆದಿಕರ್ಣಾಟಕರ ಸ್ಟೂಡೆಂಟ್ಸ್‌ಹೋಮಿಗಾಗಿ ಒಂದು ಭಾರೀ ಕಟ್ಟಡವು ಅತ್ಯವಶ್ಯಕವಾಗಿ ಕಟ್ಟಲ್ಪಡತಕ್ಕುದಾಗಿರುವದರಿಂದ ಅದರ ಶಂಕುಸ್ಥಾಪನಾಮಹೋತ್ಸವವು ಕಾನ್ಫರೆನ್ಸಿನ ದಿನವೇ ನಡೆಯಲು ಏರ್ಪಡಿಸಿದೆ. ನಮ್ಮ ದಯಾಳು ಡೆಪ್ಯುಟಿಕಮಿಷನರ್ ಶ್ರೀಮಾನ್ ಎಸ್. ವೆಂಕಟರಂಗಂ, ಬಿ.ಎ., ಬಿ.ಎಲ್., ರವರು ತಮ್ಮ ಅಮೃತಹಸ್ತದಿಂದ ಕಟ್ಟಡದ ತಳಹದಿಯನ್ನು ಹಾಕಲು ಅತ್ಯಂತ ವಿಶ್ವಾಸದಿಂದ ಒಪ್ಪಿರುತ್ತಾರೆ. ಆದ್ದರಿಂದ ಈ ಘನಕಟ್ಟಡಕ್ಕಾಗಿ ಈ ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ಗ್ರಾಮಗಳಲ್ಲಿನ ಆದಿಕರ್ಣಾಟಕರು ಅಸೋಸಿಯೇಷನ್ನಿನ ನಿಬಂಧನೆಯಂತೆ ಮನೆಯೊಂದಕ್ಕೆ ಒಂದು ರೂಪಾಯಿನಪ್ರಕಾರ ಪ್ರತಿಮನೆಯವರಿಂದಲೂ ಚಂದಾವಸೂಲ್‌ಮಾಡಿಕೊಂಡು ಆ ಪಟ್ಟಿ ಸಮೇತ ಸಕಾಲದಲ್ಲಿ ಚಿತ್ರದುರ್ಗಕ್ಕೆ ಬಂದು ಅಸೋಸಿಯೇಷನ್ನಿಗೆ ಹಣ ಪಾವತಿಮಾಡಿ ರಸೀದಿ ಪಡೆಯಬೇಕಾಗಿ ಕೋರಲ್ಪಟ್ಟಿದೆ. ಈ ಎಲ್ಲಾ ವಿಷಯಗಳನ್ನೂ ಪ್ರತಿಗ್ರಾಮದ ಪಟೇಲ್ ಶ್ಯಾನುಭೋಗರು, ಸ್ಕೂಲ್ ಮಾಸ್ಟರುಗಳು ಮತ್ತು ಪ್ರಮುಖಮಹಾಜನರು ದಯವಿಟ್ಟು ಆದೀನಜನರಿಗೆ ತಿಳಿಯಹೇಳಿ ಪ್ರೋತ್ಸಾಹಿಸಿ ಹೆಚ್ಚಾದ ಜನಸಮುದಾಯವು ಕಾನ್ಫರೆನ್ಸಿಗೆ ಬರುವಂತೆ ಮಾಡಿಸಬೇಕಾಗಿ ಪ್ರತಿ ಗ್ರಾಮಸ್ಥರನ್ನೂ ಪ್ರಾರ್ಥಿಸಲಾಗಿದೆ.

ಎಸ್. ಎ. ಹನುಮಂತರಾಜು, ಸೆಕ್ರೆಟರಿ,
ಆದಿಕರ್ಣಾಟಕ ಅಸೋಸಿಯೇಷನ್,
ಚಿತ್ರದುರ್ಗದ ಡಿಸ್ಟ್ರಿಕ್ಟ್.

ಜಾರ್ಜ ಆಚೀಡ್ಸ್ ಎಂಬ ಕಳ್ಳನು ಜೆಸ್ಲೋವಾಕಿಯ, ಜರ್ಮನಿ ಮತ್ತು ಆಸ್ಟ್ರೇಲಿಯ ಈ ಸ್ಥಳಗಳಲ್ಲಿ 113 ಕನ್ನ ಕಳುವನ್ನು 10 ತಿಂಗಳಲ್ಲಿ ಮಾಡಿ 4,05,000 ರೂ. ಇಂದ 4,50,000 ರೂ. ಗಳ ವರೆಗೆ ಅಪಹರಿಸಿರುತ್ತಾನೆ. ಪೊಲೀಸಿನವರು ಅವನನ್ನು ಹಿಡಿದು ಸೆರೆಯಲ್ಲಿಟ್ಟಿರುವರಲ್ಲದೆ ಅವನು ಕಳವು ಮಾಡಿದ್ದ ಪದಾರ್ಥಗಳನ್ನು ಅವುಗಳ ಸ್ವಂತಗಾರರು ಕಂಡು ಹಿಡಿಯುವುದಕ್ಕಾಗಿ ಪ್ರದರ್ಶನಾಲಯದಲ್ಲಿಟ್ಟಿರುವರು.

ಎರ್ಡಿಬರೋದಲ್ಲಿ ಒಬ್ಬ ಯುವಕನು ಮದ್ದುಗುಂಡು ಹಾಕಿ ಸಿದ್ಧಮಾಡಿದ್ದ ಒಂದು ಪಿಸ್ತೋಲನ್ನು ಮೇಜಾದೊಳಗೆ ಮಡಗಿ ಬೇರೊಂದು ಕೊಠಡಿಯಲ್ಲಿ ಓದುತ್ತಿರುವಾಗ್ಗೆ ಅವನ ತಾಯಿಯು ಬಂದು ಮೇಜಾವನ್ನು ತೆಗೆದು ಅದರೊಳಗಿದ್ದ ಪಿಸ್ತೂಲಿಗೆ ಮದ್ದುಗುಂಡು ಹಾಕಲ್ಪಟ್ಟಿರುವುದನ್ನು ತಿಳಿಯದೆ ಪಿಸ್ತೂಲನ್ನು ತೆಗೆದುಕೊಂಡು ತಿರುಗಿಸಿ ನೋಡುತ್ತ. ಅದರ ಕುದುರೆಯನ್ನು ಮುಟ್ಟುತ್ತಲೆ ಗುಂಡುಹಾರಿ ಅವಳ ಮೂಗಿನ ಬಳಿ ತಗುಲಿ ಮೃತಳಾದಳು.

ಸ್ಪೇನ್‌ದೇಶದಲ್ಲಿ ಇಬ್ಬರು ರೈತರು ಈಗ್ಗೆ 6 ವರ್ಷಗಳ ಹಿಂದೆ ಯಾವನೋ ಒಬ್ಬನನ್ನು ಕೊಂದರೆಂಬ ಅನುಮಾನದ ಮೇಲೆ ಅವರಿಬ್ಬರನ್ನೂ ಪೊಲೀಸಿನವರು ಸೆರೆಹಿಡಿದು ಅವರಿಗೆ ನಾನಾಹಿಂಸೆಯನ್ನು ಕೊಟ್ಟು ಕೊಲೆಮಾಡಿದ್ದುಂಟೆಂದು ಸಹ ನ್ನು ವಿಚಾರಣೆಯಲ್ಲಿ ಹೇಳಿಸಿ ಇಬ್ಬರು ರೈತರನ್ನೂ 18 ವರ್ಷಗಳ ಕಠಿಣಕಾರಾಗೃಹವಾಸಶಿಕ್ಷೆಗೆ ಗುರಿಮಾಡಿಸಿದ್ದರು. ಆದರೆ ಆ ಕೊಲೆಮಾಡಲ್ಪಟ್ಟಿದ್ದನೆಂದು ತಿಳಿಯಲ್ಪಟ್ಟಿದ್ದ ಮನುಷ್ಯನು ಬದುಕಿರುವುದು ಈಚೆಗೆ ಗೊತ್ತಾದುದರಮೇಲೆ ಪೊಲೀಸಿನವರು ಈ ಸಂದರ್ಭವನ್ನು ವಿಚಾರಿಸಯತ್ನಿಸಿರುವರು. ಪೊಲೀಸರ ಅಜಾಗರೂಕತೆಯಿಂದಲೂ, ಹಿಂಸೆಯಿಂದಲೂ ಎಷ್ಟು ಅನರ್ಥವಾಗುತ್ತದೆಂಬುದು ಇದರಿಂದ ವ್ಯಕ್ತಪಡುತ್ತದೆ.

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಲ್ಪಟ್ಟ ನೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಕೊಳ್ಳೇಗಾಲ ತಾ|| ಮಧುವನಹಳ್ಳಿ ಜಾಲಿಕಂಥಾಮಠದ ಶ್ರೀ ಬಸವಲಿಂಗದೇವರ ಕುಮಾರ ಮಲ್ಲಪ್ಪನಿಗೂ ಹಾಳ್ಯದ ಮ|| ಮುದ್ವೀರಪ್ಪನವರ ಕುಮಾರ್ತಿ ಚಿ|| ಸೌ|| ಶಿವರುದ್ರಮ್ಮನಿಗೂ ನಡೆದ ಲಗ್ನದಲ್ಲಿ ಮೈಸೂರು ಮ|| ಛಕ್ಕಿ ಸೋಮಶೇಖರಪ್ಪನವರ ಮೂಲಕ 1 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

WHO IS A LEADER?

Dear Editor,

The handsome tribute of Sir M. Visweswaraya to Sir K. P. Puttanna Chetty has inevitably provoked a controversy. It is a compliment paid by a great friend to another. It should have stopped there. The bounds of friendship were over reached and a region fraught with mischief was consciously or unconsciously trodden by the hero-worshipper. The Knight of the evening's congratulations has heaps of titles preceding and succeeding his name. Kings and Governments have conferred these titles in appreciation of Sir K. P. Puttanna Chetty's services and virtues. But one title which Sir M. Visweswaraya has gratuitously conferred upon him is not in the gift of kings or Governments to confer. It is the right of the people to call one their Leader, and such leadership involves heavy and boundless sacrifices. One has to fight several hard battles and scars of wounds received in these battles should be many before he becomes the Leader. This position cannot be reached except by considerable selfless work. The late Desabandhu C. R. Das and the late Dr. T. M. Nair were leaders. The late M. Basavayya was a local leader. Because they sacrifaced their personal interests and fought hard battles for the people. Pandit Motilal Nehru is a leader because with considerable self-sacrifice he is fighting hazardous battles for the sake of the people. There is no leadership unless certain good causes—causes in sore need of redress—on behalf of the aggrieved are esupoused without expecting a reward in return. It is hard fighting with clenched fists and not ease-loving business with profuse smiles and sympathies that wins leadership.

Sir K. P. Puttanna Chetty is not a leader of non-Brahmans as you boldly and promptly pointed out in the last issue of your valuable weekly and muchless is a leader of the Veerasaivas. As a high officer of the State he did, it cannot be denied, splendid work for which he was richly rewarded and retired with glory. Then he took care to be a staunch ally of successive heads of the administration except one. The reward for it was title after title and perhaps more are yet to come.

Leader of the non-Brahmans and leader of the Veerasaivas Sir K. P. P. never was and will never be. It is possible for him to rise higher in the estimations of Brahmins and to get promoted from "A friend of the Brahmins" to "The best friend of the Brahmins." His services to the non-Brahmins and to the Veerasaivas in particular can safely be summed up by the monosyllabic word "None." That his being a chairman of this Committee or a President of that Association—positions which are merely ornamental and cozy—do not entitle him to be called a "Leader." That he is not a leader of the backward classes can be denied without fear of contradiction. There is a recognized non-Brahman party in Mysore. Sir K. P. P. openly prides himself that he is not a member of that party and believes in his heart of hearts that his influence would wane if he identified himself with that party.

One wonders what Sir M. V. meant by calling the revered Knight a "leader of the Veerasaivas." Does the community regard him as a leader in the sense that he promoted the cause of the Veerasaiva religion as the late Yajaman Veerasangappa of Mysore, Warad Mallappa of Sholapur and Sakre Karadappa of Bellary of revered memory did at the risk of their lives and all? or, is he one of the great benefactors of the Community in the cause of its secular education like the late Sir Desai of Sirsingi, Rao Bahadur Gubbi Thotadappa, Shroff Shamanna and Sowcar K.S. Chennabasappa? or, did he toil, when in Service and after, like Rao Bahadur Rudregowda Artal or the late Rao Bahadur Gurusiddappa Gilganchi to advance the political interests of the Community? It is too well known that Sir K. P. P. is adored by Brahmins—a community that regards the Veerasaivas as their inveterate enemies—for the reason that he did not raise his little finger to introduce into the high ranks—or for that matter lower ranks even of the Public Service even a couple of educated and deserving Veerasaivas. The secret of the Brahmins' admiration of Sir K. P. P. lies in this.

The Veerasaivas in the State are for want of education unconscious of the political injuries they are suffering under. They are merged and rightly merged in the non-Brahmin party for political purposes. But there are educational, social and religious questions which require serious consideration and able handling to arrest further degeneration of the Community. But Sir K. P. P. is the last person to pay serious attention to these questions. His efforts lie in other directions. Leadership of Veerasaivas he cannot claim and if claimed it will be denied to him. If the Public think that the Presidentship of a lifeless Asssociation entitles him to the leadership of the Great Community they are sadly mistaken. Friendly enthusiasm of Sir M. V. has landed the Veerasaivas on a perilous coast of which they should take a warning. Veerasaivas in Mysore are without a leader so far as their present condition is concerned. They are so unfortunately situated that they are deprived of their natural right to elect their own leader and they are the victims by force of circumstances of the few tyrany."

"VERITAS"

ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ ?

ಕಾವ್ಯತೀರ್ಥೋಪನಾಮಕ ಕಾಶೀನಾಥಕೃತ ವೀರಶೈವಬ್ರಾಹ್ಮಣ ಸನ್ಯಾಸಾಶ್ರಮ ವಿಮರ್ಶಸ್ಯ ಖಂಡನಂ.

(ಹಿಂದಿನಿಂದ ಮುಂದರಿದುದು.)

ಕಿಂಚ ಪಟ್ಟಾಧಿಕಾರೀ ಚರಪತಿಃ ನಿರಾಭಾರೀತಿ ತ್ರಯೋಪಿಗುರ್ವಂಶೇವಾಸಿನ ಇತಿ ವೀರಶೈವಸದಾಚಾರಸಂಗ್ರಹೇ ಅಭಿಹಿತತ್ವಾತ್ ವಿರಕ್ತೇಷು ಪೂರ್ವಂ ಶಿಷ್ಯತ್ವಮೇವಾಸೀದಿತಿ ಕಾವ್ಯತೀರ್ಥೋಕ್ತಿಃ - ಬ್ರಹ್ಮಚಾರೀ ಪುನಸ್ತ್ರಿಧಾ - ಇತಿ ಬ್ರಹ್ಮಚಾರಿ ತ್ರೈವಿಧ್ಯಬೋಧಕವಚನಾಜ್ಞಾನಹೇತುಕೈವ. ಅತಿವರ್ಣಾಶ್ರಮಿಶಬ್ದವಾಚ್ಯನಿರಾಭಾರ್ಯಪೇಕ್ಷಯಾ - ಬ್ರಹ್ಮಚಾರೀಪುನಸ್ತ್ರಿಧೇತಿ - ತದುಕ್ತನಿರಾಭಾರಿಣಃ ಅರ್ಥಾಂತರತ್ವಾತ್. ಕಾವ್ಯತೀರ್ಥನಾಮಕಃ ಪೂರ್ವಾಪರಗ್ರಂಥಾನವಲೋಕನಪೂರ್ವಕಂ ಪರಸ್ಪರ ವಿರುದ್ಧಾರ್ಥಮುಪನ್ಯಸ್ಯ, ಕಾವ್ಯತೀರ್ಥ ಇತಿ ಸ್ವಕೀಯಂ ವೈದುಷ್ಯಸಾಧನಂ ನಾಮ ಗೋಮಂಡಲಾದಿಪದವತ್ ಯೌಗಿಕಾರ್ಥರಹಿತಕೇವಲರೂಢಿತಾಂ ನಯೇತ್. ಭೂಲೋಕೇ ಕರ್ಮಪಾಶಪ್ರಗ್ರಥಿತಾನ್ ಬ್ರಹ್ಮಾಂಡಕುಹರಪರಿವರ್ತಮಾನ ಕಾಲಘಟಿಯಂತ್ರಕುಂಡಿಕಾಯಮಾನಾನ್ ಸಂಸಾರಿಣಃ ಉಜ್ಜೀವಯಿತುಂ ಆಚಾರ್ಯರೂಪೇಣ ಅವತೀರ್ಣಾನಾಂ ಪಂಚಾಚಾರ್ಯಾಣಾಂ ಅತಿವರ್ಣಾಶ್ರಮಿತ್ವದ್ಯೋತಕಪಂಚಮುದ್ರಾಪ್ರದಾನದ್ವಾರಾ ಮುಕ್ತಿಪ್ರದಾನಾರ್ಥಂ ಸಾಕ್ಷಾಚ್ಛಿವಏವ ಕೃತಾದಿಯುಗತ್ರಯೇ ನಿರಂಜನಾದಿರೂಪೇಣ ಅವತೀರ್ಯ, ಅಸ್ಮಿನ್ಕಲಿಯುಗೇ ಪ್ರಭುರೂಪೇಣ ಅವತೀರ್ಣವಾನ್ ಇತ್ಯರ್ಥಪ್ರತಿಪಾದಕ ಪ್ರಮಾಣ ಶತಕಸ್ಯೇಪಿ ಕ್ರಿಸ್ತಶಕದ್ವಾದಶಶತಾಬ್ದಾ ನಂತರಂ ವಿರಕ್ತಾಃ ಸ್ವೇಷು ಗುರುತ್ವಮಾರೋಪ್ಯ, ಆಚಾರ್ಯಭಾವಂ ಪ್ರಕಟಯಂತೀತಿ ಕಾವ್ಯತೀರ್ಥೋಕ್ತಿಃ ಜಂಗಮಾನಾಂ ಅನಾದಿಸ್ಥಾಪಕನಿರುಕ್ತಪ್ರಮಾಣಾನವಲೋಕನನಿಬಂಧನಾಜ್ಞಾನಹೇತುಕೈವ.

ಕಿಂಚ ಏಕಏವ ಶಿವಸ್ಸಾಕ್ಷಾತ್ಸರ್ವಾನುಗ್ರಹಕಾರಕಃ | ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ || ಯಥಾ ಗುರೌ ತಥಾ ಲಿಂಗೇ ಭಕ್ತಿರ್ಮಾರ್ಗಃ ಪರಿವರ್ತತೇ | ಜಂಗಮೇಚ ತಥಾ ನಿತ್ಯಂ ಭಕ್ತಿಂ ಕುರ್ಯಾದ್ವಿಚಕ್ಷಣಃ | ಲಿಂಗಂಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮಕಾ | ಅಜಂಗಮೇಯಥಾ ಭಕ್ತಿಃ ಜಂಗಮೇಚ ತಥಾ ಸ್ಮೃತಾ || ಅಜಂಗಮಂತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಂ | ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಂ || ಅಚರೇಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ | ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ || ಶಿವಯೋಗಿನಿ ಯದ್ದತ್ತಂ ತದಕ್ಷಯಫಲಂಭವೇತ್ | ತಸ್ಮಾತ್ಸರ್ವಪ್ರಯತ್ನೇನ ತಸ್ಮೈ ದೇಯಂ ಮಹಾತ್ಮನೇ || ಯತ್ಫಲಂ ಲಭ್ಯತೇ ಜಂತುಃ ಪೂಜಯಾ ಶಿವಯೋಗಿನಃ | ತದಕ್ಷಯಮಿತಿ ಪ್ರೋಕ್ತಂ ಸಕಲಾಗಮಪಾರಗೈಃ | ನಾವಮನ್ಯೇತ ಕುತ್ರಾಪಿ ಶಿವಯೋಗಿನಮಾಗತಂ | ಅವಮಾನಾದ್ಭವೇತ್ತಸ್ಯ ದುರ್ಗತಿಶ್ಚ ನಸಂಶಯಃ || ಶಿವಯೋಗೀ ಶಿವಸ್ಸಾಕ್ಷಾದಿತಿ ಕೈಂಕರ್ಯಭಕ್ತಿತಃ | ಪೂಜಯೇದಾದರೇಣೈವ ಯಥಾ ಲಿಂಗಂ ಯಥಾ ಗುರುಃ || ಇತಿ ಕಾವ್ಯತೀರ್ಥೋದಾಹೃತಸಿದ್ಧಾಂತಶಿಖಾಮಣ್ಯುಕ್ತಪ್ರಮಾಣೇಸ್ಯೈವ ತ್ರಯಾಣಾಂ ಪೂಜ್ಯತ್ವೇ ತೌಲ್ಯೇ ಸಿದ್ಧೇಪಿ ತೇಷು ಪರಸ್ಪರನ್ಯೂನಾಧಿಕ್ಯಂ ಪ್ರಕಲ್ಪಯಿತುಂ ಪ್ರವೃತ್ತಸ್ಯ ಕಾವ್ಯತೀರ್ಥಸ್ಯ ಅಜ್ಞಾನಮಿಯತ್ತಾರಹಿತಮೇವ.

ಕಿಂಚ ಶಿವಾಂಶತ್ವೇನ ತ್ರಯಾಣಾಂ ತೌಲ್ಯೇಪಿ ಜಂಗಮ ಏವ ಶಿವಾಂಶಸ್ಯ ಪರಿಪೂರ್ಣತ್ವಾತ್ - ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಂ - ಇತಿ ಪ್ರಮಾಣೋಕ್ತರೀತ್ಯಾ ನಿತ್ಯನಿರ್ದೋಷತ್ವಶಾಂತತ್ವಾದಿ ಗುಣಸತ್ವಾಚ್ಚ ಗುರ್ವಪೇಕ್ಷಯಾ ಜಂಗಮಸ್ಯಾಧಿಕ್ಯಂ ನಿಷ್ಪ್ರತ್ಯೂಹಮೇವ. ವೀರಶೈವಾನುಷ್ಠೇಯಧರ್ಮಲೋಪಂ ವಿಮರ್ಶ್ಯ, ತತ್ಪರಿಹಾರಾಯ ಯತ್ನಮಕೃತ್ವಾ ತನ್ಮತೋದ್ಧಾರಕಜಂಗಮಾದಿಶಬ್ದವಾಚ್ಯಮಹಾಪುರುಷನಿಂದಾರ್ಥ ಮುದ್ಯತಸ್ಯ ಕಾವ್ಯತೀರ್ಥಸ್ಯ ವೀರಶೈವಸಿದ್ಧಾಂತಾಜ್ಞಾನಂ ಕೀದೃಶಮಿತಿ ತತ್ತ್ವವಿದೋ ವಿದಾಂಕುರ್ವಂತು. (ಸಶೇಷ)

ಪಟ್ಟಾಧಿಕಾರಿಯು, ಚರಪತಿಯು, ನಿರಾಭಾರಿಯು, ಈ ಮೂವರೂ ಗುರುಗಳ ಶಿಷ್ಯರೆಂದು ವೀರಶೈವಸದಾಚಾರಸಂಗ್ರಹವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿರುವುದರಿಂದ, ವಿರಕ್ತರಲ್ಲಿ ಮೊದಲು ಶಿಷ್ಯತ್ವವೇ ಇದ್ದಿತೆಂದು ಕಾವ್ಯತೀರ್ಥನುಹೇಳುವ ಮಾತು ಬ್ರಹ್ಮಚಾರಿಯ ತ್ರೈವಿಧ್ಯವನ್ನು ಹೇಳುವ - ಬ್ರಹ್ಮಚಾರೀಪುನಸ್ತ್ರಿಧಾ - ಎಂಬ ವಚನಾರ್ಥವನರಿಯದಿರುವದೇ ಕಾರಣವಾಗುಳ್ಳದ್ದಾಗಿದೆ. ಅತಿವರ್ಣಾಶ್ರಮಿಶಬ್ದವಾಚ್ಯನಾದ ನಿರಾಭಾರಿಗಿಂತ - ಬ್ರಹ್ಮಚಾರೀಪುನಸ್ತ್ರಿಧಾ - ಎಂಬ ವಚನದಿಂ ನಿರೂಪಿತವಾದ ನಿರಾಭಾರಿ ಶಬ್ದವು ಬೇರೆ ಅರ್ಥವುಳ್ಳದಾಗಿದೆ. ಕಾವ್ಯತೀರ್ಥನಾಮಧಾರಿಯು ಹಿಂದೆಮುಂದೆ ಇರುವ ಗ್ರಂಥಗಳನ್ನು ನೋಡದೆ, ಒಂದಕ್ಕೊಂದಕ್ಕೆ ವಿರೋಧವಾದ ಅರ್ಥವನ್ನು ಹೇಳಿ, ತನ್ನ ವೈದುಷ್ಯವನ್ನು ಸಾಧಿಸತಕ್ಕ ಕಾವ್ಯತೀರ್ಥ ಎಂಬ ತನ್ನ ಹೆಸರನ್ನು ಗೋಮಂಡಲ ಮೊದಲಾದ ಪದದಂತೆ ಯೋಗಾರ್ಥವಿಲ್ಲದ ಕೇವಲ ರೂಢ್ಯರ್ಥವುಳ್ಳತನವನ್ನು ಹೊಂದಿಸಬೇಕು. ಭೂಲೋಕದಲ್ಲಿ ಕರ್ಮಪಾಶಬದ್ಧರಾದ ಸಂಸಾರಿಗಳನ್ನು ಉದ್ಧರಿಸುವುದಕ್ಕಾಗಿ ಆಚಾರ್ಯರೂಪದಿಂದವತರಿಸಿದ ಪಂಚಾಚಾರ್ಯರಿಗೆ ಮುಕ್ತಿಯನ್ನೀಯುವುದಕ್ಕೋಸ್ಕರ ಪರಶಿವನೇ ಕೃತ, ದ್ವಾಪರಯುಗಗಳಲ್ಲಿ ನಿರಂಜನ ಮೊದಲಾದ ರೂಪದಿಂದ ವತರಿಸಿ, ಈ ಕಲಿಯುಗದಲ್ಲಿ ಪ್ರಭುರೂಪದಿಂದವತರಿಸಿದನೆಂಬರ್ಥವನ್ನು ಹೇಳುವ ಅನೇಕ ಪ್ರಮಾಣವಚನಗಳಿದ್ದರೂ, ಕ್ರಿ. ಶ. 113 ನೇ ವರ್ಷದ ಅನಂತರ ವಿರಕ್ತರು ತಮ್ಮಲ್ಲಿ ಗುರುತ್ವವನ್ನಾರೋಪಿಸಿಕೊಂಡು ಆಚಾರ್ಯಭಾವವನ್ನು ಪ್ರಕಟಿಸಿಕೊಳ್ಳುತ್ತಾರೆಂಬ ಕಾವ್ಯತೀರ್ಥನ ಮಾತು ಜಂಗಮರಿಗೆ ಅನಾದಿತ್ವವನ್ನು ಸ್ಥಾಪಿಸುವ ಪ್ರಮಾಣವಚನನಿಬಂಧನವನ್ನು ತಿಳಿಯದಿರುವುದೇ ಕಾರಣವಾಗಿದೆ.

ಮತ್ತು -ಏಕಏವ ಶಿವಸ್ಸಾಕ್ಷಾತ್ಸರ್ವಾನುಗ್ರಹಕಾರಕಃ........ಯಥಾ ಗುರುಃ- ಹೀಗೆಂದು ಕಾವ್ಯತೀರ್ಥನಿಂದುದಹರಿಸಲ್ಪಟ್ಟಿರುವ ಸಿದ್ಧಾಂತಶಿಖಾಮಣಿಯಲ್ಲಿ ಹೇಳಿರುವ ಪ್ರಮಾಣವಚನಗಳಿಂದಲೇ ಗುರು, ಲಿಂಗ, ಜಂಗಮರಿಗೆ ಪೂಜ್ಯತೆಯು ಸಮಾನವಾಗಿ ಸಿದ್ಧವಾಗಿದ್ದರೂ ಅವರಲ್ಲಿ ಹೆಚ್ಚು ಕಡಮೆಯ ಭಾವವನ್ನು ಕಲ್ಪಿಸಲು ತೊಡಗಿದ ಕಾವ್ಯತೀರ್ಥನ ಅಜ್ಞಾನವು ಅಳತೆಯಿಲ್ಲದುದೇ ಆಗಿದೆ.

ಮತ್ತು ಮೂವರಿಗೂ ಶಿವಾಂಶತ್ವವಿರುವದರಿಂದ ಸಾದೃಶ್ಯ ವಿದ್ದಾಗ್ಯೂ ಜಂಗಮನಲ್ಲೇ ಶಿವಾಂಶವು ಪರಿಪೂರ್ಣವಾಗಿರುವುದರಿಂದ - ನಿಷ್ಕಲಂ ನಿಷ್ಕ್ರಿಯಂಶಾಂತಂ ನಿರವದ್ಯಂನಿರಂಜನಂ - ಎಂಬ ಪ್ರಮಾಣವಚನದಿಂ ಹೇಳಲ್ಪಟ್ಟಿರುವ ರೀತಿಯಾಗಿ ಯಾವಾಗಲೂ ದೋಷವಿಲ್ಲದಿರುವಿಕೆ, ಶಾಂತತ್ವ, ಸುಗುಣಗಳುಳ್ಳದರಿಂದ ಜಂಗಮನಿಗೆ ಗುರುವಿಗಿಂತ ಅಧಿಕ್ಯವು ನಿರ್ವಿಘ್ನವಾಗಿಯೇ ಇರುತ್ತದೆ. ವೀರಶೈವರಲ್ಲಿರುವ ಅನುಷ್ಠಾನಾರ್ಹವಾದ ಧರ್ಮಗಳ ಕೊರತೆಯನ್ನು ವಿಚಾರಮಾಡಿ ಅದನ್ನು ಹೋಗಲಾಡಿಸುವುದರಲ್ಲಿ ಯತ್ನಿಸದೆ ಆ ವೀರಶೈವಮತವನ್ನುದ್ಧರಿಸುವ ಜಂಗಮ ಮೊದಲಾದಿಶಬ್ದಗಳಿಂದ ವಾಚ್ಯರಾದ ಮಹಾಪುರುಷರನ್ನು ನಿಂದಿಸುವುದಕ್ಕೋಸ್ಕರ ತೊಡಗಿದ ಕಾವ್ಯತೀರ್ಥನ ವೀರಶೈವಸಿದ್ಧಾಂತಾಜ್ಞಾನವೆಂತಹುದೆಂಬುದನ್ನು ನಿಜವನ್ನ ಬಲ್ಲವರು ತಿಳಿಯಲಿ. (ಸಶೇಷ)

ಭಗವಾನ್ ಶ್ರೀಬಸವೇಶ್ವರಜಯಂತ್ಯುತ್ಸವವು.

ಸಮಸ್ತ ವೀರಶೈವಮಹಾಜನರಲ್ಲಿ ವಿಜ್ಞಾಪನೆ.

ಇದೇ ವೈಶಾಖ ಶು|| ಬಿದಿಗೆ ತಾ|| 13-5-1926 ನೆಯ ಗುರುವಾರವು ಬಸವಜಯಂತಿಯ ಶುಭದಿನವಾಗಿರುವುದು ಸರ್ವರಿಗೂ ವೇದ್ಯವಿದೆಯಷ್ಟೆ. ಆ ದಿವಸ ಸರ್ವರೂ ವ್ಯಾಪಾರ ಮತ್ತು ವ್ಯವಸಾಯಗಳನ್ನು ನಿಲ್ಲಿಸಿ, ಶಿವಭಜನಾದಿಸತ್ಕಾಲಕ್ಷೇಪಮಾಡುತ್ತ ಈ ಕೆಳಗಿನ ಪ್ರೋಗ್ರಾಂಪ್ರಕಾರ ಉತ್ಸವಾದಿಗಳನ್ನು ಜರುಗಿಸಬೇಕಾಗಿ ಕೋರಿಕೆ. ಜನಾಂಗದಲ್ಲಿ ಶಾಂತಿ ಸಮಾಧಾನಗಳು ನೆಲೆಗೊಳ್ಳುವುದಕ್ಕಾಗಿಯೇ ಜಯಂತ್ಯಾದಿ ಹಬ್ಬಗಳು ಏರ್ಪಟ್ಟಿರುವುವಲ್ಲದೆ ನಾಚು, ಬಾಣಬಿರುಸು ಮೊದಲಾದ ಅನಾವ್ಯಯಗಳಿಗಾಗಲಿ, ಪರಸ್ಪರ ಜನಾಂಗದಲ್ಲಿ ಕಲಹವನ್ನುಂಟುಮಾಡುವುದಕ್ಕಾಗಲಿ ಏರ್ಪಟ್ಟಿಲ್ಲವೆಂಬಂಶವನ್ನು ಸರ್ವರೂ ಗಮನದಲ್ಲಿಟ್ಟು ಕರುಣಾಮೂರ್ತಿಯಾದ ಭಗವಾನ್ ಶ್ರೀಬಸವೇಶ್ವರನಜಯಂತ್ಯುತ್ಸವವನ್ನು ಶಾಂತತೆಯಿಂದಲೂ ಭಕ್ತಿಯಿಂದಲೂ ಪರಸ್ಪರ ಐಕಮತ್ಯದಿಂದಲೂ ನಡೆಸಬೇಕೆಂದು ಪ್ರಾರ್ಥನೆ.

(1) ಪ್ರಾತಃಕಾಲ 5 ಗಂಟೆಯಿಂದ ಶಿವಭಜನಾಸಮೇತ ಗ್ರಾಮಪ್ರದಕ್ಷಿಣೆ. (2) ಪ್ರಾತಃಕಾಲ 9 ಗಂಟೆಗೆ ಮೈತೊಳೆದು ಶೃಂಗರಿಸಿದ ಬಸವಣ್ಣ ಮತ್ತು ಗೋವುಗಳನ್ನು ವಾದ್ಯಸಮೇತ ಉತ್ಸವಗೊಳಿಸುವುದು. (3) ಮಧ್ಯಾಹ್ನ 3 ಗಂಟೆಯಿಂದ ಬಸವಣ್ಣ ಮತ್ತು ಗೋವುಗಳ ಪ್ರದರ್ಶನ ಮತ್ತು ಚುನಾವಣೆ ಹೊಂದಿದ ಸುಂದರರಾಸುಗಳಿಗೆ ರೇಷ್ಮೆ ಜೂಲುಗಳು, ಬೆಳ್ಳಿಬಂಗಾರದಕೋಡಣಸು ಹಣಿಪಟ್ಟಿ ಮತ್ತು ಮೆಡಲುಗಳು ಬಹುಮಾನವಾಗಿ ಕೊಡಲ್ಪಡುವುದು. (4) ಸಾಯಂಕಾಲ 5 ಗಂಟೆಯಿಂದ ದೇವಾಲಯದಲ್ಲಿ ಭಜನೆ, ಉಪನ್ಯಾಸ, ಕೀರ್ತನೆ, ಮತ್ತು ಫಲ ಪುಷ್ಪ ಗಂಧ ತಾಂಬೂಲಸಮಾರಂಭ ಮತ್ತು ದೀಪೋತ್ಸವ. (5) ಸಾಯಂಕಾಲ 7 ಗಂಟೆಯಿಂದ ಭಜನಾಸಮೇತ ಭಗವಾನ್ ಶ್ರೀಬಸವೇಶ್ವರನ ಪಾಲಕಿಯ ಮಹೋತ್ಸವವು.

ಬಸವಜಯಂತ್ಯುತ್ಸವಾಭಿಲಾಷಿಯಾದ
ಮುಪ್ಪಣ್ಣ, ಚೆನ್ನಬಸಪ್ಪ ಬೆಳ್ಳಿ, ದಾವಣಗೆರೆ.

(೨)

ಒಂದಾನೊಂದುಕಾಲದಲ್ಲಿ ಅಧೋಗತಿಯಲ್ಲಿದ್ದ ವೀರಶೈವಮತವನ್ನು ಯಾವ ಮಹನೀಯನು ಅಭಿವೃದ್ಧಿಗೆ ತಂದನೋ ಆ ಮಹನೀಯನಾದ ಶ್ರೀ ಬಸವೇಶ್ವರನ ಜಯಂತಿಯು ಇದೇ ವೈಶಾಖ ಶುದ್ಧ ಬಿದಿಗೆ (13-5-26) ಗುರುವಾರ ಜರುಗುತ್ತದೆ. ಆ ದಿವಸವನ್ನು ಸಮಸ್ತ ವೀರಶೈವರು ಹಬ್ಬದಂತೆ ಆಚರಿಸುವರಲ್ಲದೆ ಪದ್ಧತಿಯಂತೆ ಬಸವಣ್ಣಗಳನ್ನು ಗಾಡಿಗೂ, ಹೀಗಿಲಿಗೂ ಹೂಡದೆ ಪೂಜಿಸಿ, ಶೃಂಗರಿಸಿ ಊರಲ್ಲೆಲ್ಲಾ ಮೆರವಣಿಗೆ ಮಾಡುವುದು, ಶಿವಕಥೆ, ಶಿವಭಜನೆ, ಅನ್ನಸಂತರ್ಪಣೆ ಮೊದಲಾದುವುಗಳಿಂದ ಆ ದಿವಸವನ್ನು ಕಳೆದು ತಮ್ಮೊಳಗೆ ಬಸವೇಶ್ವರನಲ್ಲಿರುವ ಭಕ್ತಿಯನ್ನು ತೋರ್ಪಡಿಸುವುದು ಪದ್ಧತಿಯಾಗಿದೆ. ಇಂಥಾ ಶುಭದಿವಸದ ಸಾಲಾನ್ಯಸ್ತ್ರ ಕಳೆಯದೆ ಆ ಮಹಾಪುರುಷನು ಬೋಧಿಸಿದ 'ಜೀವ' [illegible]

ವಿಷಯಗಳನ್ನು ಸರ್ವರೂ ಗಮನಿಸಿ ಅದರಂತೆ ಆಚರಿಸುವವರಾಗಲೆಂಬ ಉದ್ದೇಶದಿಂದ ಮಹಾಮಹಿಮರಾದ ಬಸವಣ್ಣನವರ ಬೋಧೆಯನ್ನು ಕೆಳಗೆ ಬರದಿದೆ.—

ತಮ್ಮ,
ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

1. ದಯವಿಲ್ಲದ ಧರ್ಮವಾವುದಯ್ಯ | ದಯವಿರಬೇಕು ಸರ್ವಪ್ರಾಣಿಗಳಲ್ಲಿ | ದಯವೆ ಧರ್ಮದಮೂಲವಯ್ಯ | ಕೂಡಲಸಂಗಯ್ಯನಂಗಲ್ಲದೊಲ್ಲನಯ್ಯ |

2. ಕೊಲ್ಲುವನೇ ಮಾದಿಗನು | ಹೊಲಸತಿಂಬುವನೇ ಹೊಲೆಯ | ಕುಲವೇನೋ ಅವಂದಿರಕುಲವೇನೋ | ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗಮದೇವನ ಶರಣರೆಲ್ಲಾ ಕುಲಜರು ||

3. ಕಲಹಬೇಡ | ಕೊಲಹಬೇಡ | ಹುಸಿಯನುಡಿಯಬೇಡ | ಮುನಿಯಬೇಡ | ಅನ್ಯರಿಗೆ ಅಸಹ್ಯಪಡಬೇಡ | ತನ್ನಬಣ್ಣಿಸಬೇಡ | ಇದಿರಳಿಯಲುಬೇಡ | ಇದೆ ಅಂತರಂಗಶುದ್ಧಿ | ಇದೆ ಬಹಿರಂಗಶುದ್ಧಿ | ಇದೆ ನಮ್ಮ ಕೂಡಲಸಂಗನ ನೋಲೈಸುವುದು |

4. ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರಣ್ಣಾ | ಸತ್ಯವನುಡಿಯುವುದೇ ದೇವಲೋಕ | ಮಿಥ್ಯವನುಡಿಯುವುದೇ ಮರ್ತ್ಯಲೋಕ | ಆಚಾರವೇ ಸ್ವರ್ಗ ಅನಾಚಾರವೇ ನರಕ | ಕೂಡಲಸಂಗಮದೇವಾ ನೀವೇಪ್ರಮಾಣ ||

5. ಹುತ್ತವಬಡಿದಡೆ ಹಾವು ಸಾಯಬಲ್ಲುದೇನಯ್ಯ | ಅಘೋರತಪವಮಾಡಿದಡೇನು | ಅಂತರಂಗದ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯ | ಕೂಡಲಸಂಗಮದೇವ ||

6. ತನಗೆ ಮುನಿವರಿಗೆ ತಾಮುನಿಯಲೇಕಯ್ಯ | ತನಗಾದುದೇನು | ಅವರಿಗಾದ ಹೆಚ್ಚೇನು | ತನುವಿನಕೋಪ ತನ್ನ ಹಿರಿಯತನದ ಕೇಡು | ಮನದಕೋಪ ತನ್ನರಿವಿನಕೇಡು | ಮನೆಯೊಳಗಣಕಿಚ್ಚು | ಮನೆಯಸುಟ್ಟಲ್ಲದೆ | ನೆರೆಮನೆಯಸುಡುವುದು ಕೂಡಲಸಂಗಮದೇವ ||

7. ದಿಟವನುಡಿಯುವುದು | ನುಡಿದಂತೆ ನಡೆಯುವುದು | ಹುಸಿಯನುಡಿದು | ತಪ್ಪುವಪ್ರಪಂಚಿಯನೊಲ್ಲ ಕೂಡಲ ಸಂಗಮದೇವ ||

8. ಹಾವಿನಬಾಯಿಯ ಕಪ್ಪೆ ಹಸಿದು ಹಾರವನೊಣಕ್ಕೆ | ಆಸೆಮಾಡುವಂತೆ | ಶೂಲವನೇರುವ ಕಳ್ಳನು ಹಾಲುತುಪ್ಪವಕುಡಿದು ಮೇಲೇಸು ಕಾಲಬದಕುವನೋ | ಕೆಡುವ ಒಡಲನೆಚ್ಚಿ | ಕೆಡುಹುಸಿಯನೆ ಹುಸಿದು ಒಡಲಹೊರೆವರ | ಕೂಡಲಸಂಗಮದೇವ ನೊಲಿಯನು ಕಾಣಿರಣ್ಣಾ ||

ವೀರಶೈವವಿದ್ಯಾಭಿಮಾನಿ.

ಮೈಸೂರಿನಲ್ಲಿರುವ ಪೊಲೀಸ್ ಇನ್ಸ್‌ಪೆಕ್ಟರ್ ತಿಮ್ಮಪ್ಪಯ್ಯನವರ ಮಕ್ಕಳು ಟಿ. ಶಿವಪ್ಪನವರು ವಿದ್ಯಾಭಿಮಾನದಿಂದಲೂ ಸ್ವಮತಾಭಿಮಾನದಿಂದಲೂ ಮೈಸೂರು ವೀರಶೈವ ಅನಾಥಾಲಯದ ಪುಸ್ತಕಭಂಡಾರಕ್ಕೆ ಹೈಸ್ಕೂಲ್ ಮತ್ತು ಮಿಡಲ್‌ಸ್ಕೂಲ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಸುಮಾರು ಅರವತ್ತು ಇಂಗ್ಲಿಷ್ ಪುಸ್ತಕಗಳನ್ನು ಕೊಟ್ಟಿರುತ್ತಾರೆ. ಇದಕ್ಕಾಗಿ ಅನಾಥಾಲಯದವರ ನಾನು ಈ ಮಹನೀಯರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಯನ್ನು ಅರ್ಪಿಸುತ್ತೇನೆ.

ಎಸ್. ಬಿ. ಕೊಂಗಳಪ್ಪ,
ವೀರಶೈವ ಅನಾಥಾಲಯ ಮೈಸೂರು.

ನಾಟಕದವರಿಗಾದ ಬಹುಮಾನ.

ಕಳೆದ ಮಾರ್ಚಿ ತಿಂಗಳಲ್ಲಿ ಸಕಲೇಶಪುರಕ್ಕೆ ಬಂದಿದ್ದ ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿನಾಟಕಕಂಪೆನಿಯವರು ತಮ್ಮ ಪ್ರಖ್ಯಾತವಾದ 14-15 ನಾಟಕಗಳನ್ನು ಆಡಿ ಇಲ್ಲಿಯ ಜನರ ಮನಸ್ಸಿಗೆ ಆನಂದವನ್ನುಂಟುಮಾಡಿದುದಲ್ಲದೆ ದೈವಭಕ್ತಿಯೂ ಪಾಪಭೀತಿಯೂ ಉಂಟಾಗುವಂತೆ ಮಾಡಿದುದಕ್ಕಾಗಿ ಇಲ್ಲಿಯ ಪ್ರಮುಖರಾದ ಕಾಫಿಪ್ಲಾಂಟರ್ ಮ|| ಬೆಳ್ಳೂರು ನಂಜೇಗೌಡರು, ದೋಣಿಗಾಲ್ ಎಸ್ಟೇಟ್ ಮ|| ಡಿ. ಬಸವೇಗೌಡರು, ಬೇದ್ರವಳ್ಳಿ ಮ|| ಸಣ್ಣೇಗೌಡ ಅಂಡ್‌ಸನ್ಸ್‌ರವರು ಅಬ್ಬಿನದನಾಡು ಮ|| ಪಟೇಲ್ ವೀರೇಗೌಡರು ಮೊದಲಾದ ದೊಡ್ಡಮನುಷ್ಯರುಗಳು ಬಂಗಾರದಪದಕಗಳನ್ನು ಪಬ್ಲಿಕ್ ಆಫ್ ಮಂಜರಾಬಾದ್‌ರವರ ಪರವಾಗಿ ಸಬ್‌ಡಿವಿಜನ್ ಆಫೀಸರಾದ ಮ|| ಸುಂದರರಾಜಯ್ಯಂಗಾರ್ರವರ ಹಸ್ತದಿಂದ ಕೊಡಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ನಾಟಕಾಭಿಮಾನಿ.

ಕಾರ್ಕಾರ್ ಹಳ್ಳಿ ತಾ|| ಮರಳವಾಡಿ.

ಈ ಗ್ರಾಮದಲ್ಲಿ ಮುಂಗಾರುಮಳೆಯು ಒಂದೆರಡು ಹದವಾಗಿ ಕೆರೆಕಟ್ಟೆಗಳಿಗೆ ಸ್ವಲ್ಪ ನೀರು ಬಂದು ಜನಗಳಿಗೂ ದನಕರುಗಳಿಗೂ ಬಹಳ ಅನುಕೂಲವಾಗಿರುತ್ತದೆ. ಇದೇ ಗ್ರಾಮದ ದೇವರಹಳ್ಳಿ ಮಾರಮ್ಮನಜಾತ್ರೆಯು ಮಾಮೂಲಿನಂತೆ ತಾ|| 14-5-26 ನೇ ಶುಕ್ರವಾರ ನಡೆಯುತ್ತದೆ. ಈ ಜಾತ್ರೆಗೆ ಬರತಕ್ಕ ಜನಗಳಿಗೆ ಈ ಗ್ರಾಮದ ಜಮೀನ್‌ದಾರ್ ಮ|| ಸುಂದರಯ್ಯರ್‌ರವರು ಅನ್ನದಾನ ಮಾಡುವ ಏರ್ಪಾಡನ್ನು ಇಟ್ಟುಕೊಂಡಿರುವುದು ಸ್ತೋತ್ರಾರ್ಹವಾಗಿದೆ. ಅಲ್ಲದೆ ಇದೇ ಗ್ರಾಮದ ಈಡಿಗರ ಹನುಮಂತೆಗೌಡರ ಮಕ್ಕಳು ಮ|| ಸಿದ್ದೇಗೌಡರು ರಾಮಮಂದಿರಕ್ಕಾಗಿ ತಮ್ಮ ಮನೆಯಲ್ಲಿ 2 ಅಂಕಣ ಕಟ್ಟಿದ ಮನೆಯನ್ನು ಧರ್ಮಾರ್ಥವಾಗಿ ಕೊಟ್ಟು ಆಚಂದ್ರಾರ್ಕವಾಗಿ ಕೀರ್ತಿವಂತರಾಗಿರುತ್ತಾರೆ. ಇಂಥಾ ಧರ್ಮಿಷ್ಠರಿಗೆ ಭಗವಂತನು ಅನುಗ್ರಹಿಸಲೆಂದು ಕೋರುವ. ಓರ್ವ ಸ್ಥಳಾಭಿಮಾನಿ.

ಇದಲ್ಲವೇ ಪರೋಪಕಾರ !

ಮೈಸೂರು ಲೋವರ್‌ಸೆಕೆಂಡರಿಪರೀಕ್ಷೆಯು ನಡೆಯುವ ಸ್ಥಳಗಳಲ್ಲಿ ಚಳ್ಳಕೆರೆಯು ಒಂದು ಸೆಂಟರಾಗಿದ್ದರೂ ಪರಸ್ಥಳದಿಂದ ಪರೀಕ್ಷೆಗಾಗಿ ಬರತಕ್ಕ ಬ್ರಾಹ್ಮಣೇತರ ಬಾಲಕರಿಗೆ ಅನ್ನೋದಕಗಳಿಗೂ ವಸತಿಗೂ ಈ ತಾಲ್ಲೂಕಿನಲ್ಲಿರುವ ಉದಾರಿಗಳಾದ ವೀರಶೈವ ಧನಿಕರು ಯಾವ ವಿಧವಾದ ಏರ್ಪಾಡುಮಾಡದಿದ್ದುದನ್ನು ನೋಡಿ ಚಳ್ಳಕೆರೆ ವಾಸಿಗಳಾದ ಮ|| ಹಿರೇಹಳ್ಳಿ ತಿಪ್ಪೇಸ್ವಾಮಿಯವರು ತಮ್ಮ ಸ್ವಂತ ಖರ್ಚಿನಿಂದ ಈ ವರ್ಷದ ಪರೀಕ್ಷೆಗೆ ಬಂದಿದ್ದ ಬ್ರಾಹ್ಮಣೇತರ ಬಾಲಕರಿಗೂ ಜೊತೆಯಲ್ಲಿ ಬಂದಿದ್ದ ಉಪಾಧ್ಯಾಯರು ಮತ್ತು ಪೋಷಕರಿಗೂ ಅನ್ನೋದಕ ಫಲಾಹಾರಾದಿಗಳನ್ನು ಮಾಡಿಸಿದುದು ಸ್ತೋತ್ರಾರ್ಹವಾಗಿದೆ. ಈರೀತಿಯಲ್ಲಿ ಪರೋಪಕಾರನಿರತರಾದ ಮ|| ತಿಪ್ಪೇಸ್ವಾಮಿಯವರಿಗು ಮತ್ತು ಈ ಸೆಂಟರಿಗೆ ಬರತಕ್ಕ ಬ್ರಾಹ್ಮಣ ಬಾಲಕರಿಗೆ ಪ್ರತಿವರ್ಷವೂ ತಪ್ಪದೆ ಅನ್ನದಾನವನ್ನು ಮಾಡುತ್ತಿರುವ ಮ|| ಬಾಲೇನಹಳ್ಳಿ ಶ್ಯಾನುಭೋಗ ಪುಟ್ಟಪ್ಪನವರಿಗು ಜಗದೀಶ್ವರನು ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಸಿ. ಚಂಚಯ್ಯ, ಸ್ಕೂಲ್‌ಮಾಸ್ಟರ್ ಚಳ್ಳಕೆರೆ.

ಅಪೂರ್ವವಿಷಯ.

ಬೆಂಗಳೂರು ಪುರವಾಸಿಗಳಾದ ವೀರಶೈವಮಹನೀಯರು ಅರಳೇಪೇಟೆಯಲ್ಲಿ ಬಿಜಯಂಗೈದಿರುವ ಶ್ರೀ ವೀರಭದ್ರೇಶ್ವರಸ್ವಾಮಿಯು ಅಷ್ಟಪ, ಅನ್ಯ [illegible] ಕೊಂಡ ಮಹಾರಾಧನೆ ಈ ಸ್ವಾಮಿಕಾರ್ಯಗಳನ್ನು ನಡೆಯಿಸಿ ಸುಮಾರು 30-35 ವರ್ಷಗಳಾದಾಗ್ಯೂ ಈಚೆಗೆ ಮಾಡಿಸದೆ ನಿಲ್ಲಿಸಿರುವದು ತುಂಬಾ ಶೋಚನೀಯವೂ ಅನಿಷ್ಟಹೇತುವೂ ಆಗಿರುತ್ತದೆ. ಈಗ್ಗೆ 30 ವರುಷಗಳ ಪೂರ್ವ ಇದ್ದ ನಮ್ಮವರು ಈ ಕಾರ್ಯವನ್ನು ವಿಶೇಷ ಭಕ್ತಿಶ್ರದ್ಧೆಯಿಂದ ಆಗಾಗ್ಗೆ ನಡೆಯಿಸುತ್ತಾ ಇದ್ದರು. ಈಗಲೂ ಅಂಥಾವರು ಕೆಲವರು ಇದ್ದು ಕೂಡ ಕಾರ್ಯಭಾಗವನ್ನ ಕೈಗೊಳ್ಳದಿರುವದು ನಮ್ಮಗಳ ದುರದೃಷ್ಟವೆಂದೇ ಹೇಳಬೇಕು. ಲೌಕಿಕಸಂಬಂಧವಾದ ಕಾರ್ಯಗಳನ್ನ ಭಕ್ತಿಶ್ರದ್ಧೆಯಿಂದ ಮಾಡಿ ಧನವ್ಯಯಮಾಡಿದಂತೆ ಪಾರಮಾರ್ಥಿಕಸಂಬಂಧವಾದ ಕಾರ್ಯಗಳನ್ನು ಯಾಕೆಮಾಡಬಾರದು ? ಮೇಲ್ಕಂಡ ಶ್ರೀ ವೀರಭದ್ರೇಶ್ವರಸ್ವಾಮಿಯ ಕಾರ್ಯವನ್ನ ಮಾಡುವದರಿಂದ ಈ ಕನಿಷ್ಠ ಕ್ಷಯನಾಮಸಂವತ್ಸರದಲ್ಲಿ ಗ್ರಾಮಕ್ಕೆ ಶಾಂತಿಯಾಗುವದಲ್ಲದೆ ಪುಣ್ಯಬರುವದಿಲ್ಲವೆ ? ಹಿಂದೆ ಈ ಕಾರ್ಯಕ್ಕಾಗಿ ಕೆಲ ಜನರು 2-3 ವೇಳೆ ಪ್ರಯತ್ನಪಟ್ಟಾಗ್ಯೆ ಮುಖಂಡರುಗಳು ಈ ಕಾರ್ಯಕ್ಕಾಗಿ 2-3 ಸಾವಿರ ರೂಪಾಯಿಗಳು ಕೊಡುವವರ್ಯಾರು ? ವಸೂಲಿ ಎಲ್ಲಾಗುತ್ತೆ ? ನಿಂತು ಮಾಡುವವರ್ಯಾರು ? ಎಂದು ಉದಾಸೀನದಿಂದ ನಿಲ್ಲಿಸಿಬಿಟ್ಟರು. ಲೌಕಿಕಸಂಬಂಧವಾದ ಕಾರ್ಯಕ್ಕಾಗಿ 2-3 ಸಾವಿರ ರೂಪಾಯಿಗಳು ಹ್ಯಾಗೆ ವಸೂಲಿ ಆಗುತ್ತೆ, ಯಾವರೀತಿ ನಡಕಟ್ಟಿ ನಿಂತು ಶ್ರದ್ಧೆ ಭಕ್ತಿವಿಶ್ವಾಸಗಳಿಂದ ಮಾಡಿದಂತೆಯೇ ಈ ದೇವರಕಾರ್ಯವನ್ನ ಮಾಡಿದಲ್ಲಿ ಮತಕ್ಕೆ ಭೂಷಣವಾಗಿ ಇರುವದಿಲ್ಲವೆ ; ಪುಣ್ಯಬರುವದಲ್ಲದೆ ಶ್ರೀ ಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾಗುವದಿಲ್ಲವೆ ? ಹೆಚ್ಚಿಗೆ ಕೃತಪಡಿಸಿಕೊಳ್ಳುವದರಿಂದ ಗುಣವಿಲ್ಲ. ಮುಖ್ಯವಾಗಿ ಆಯುಷ್ಯ ದಿನೇದಿನೇ ಕ್ಷೀಣಿಸುತ್ತೆ. ಆದ್ದರಿಂದ ಇನ್ನಾದರೂ ವೀರಶೈವಮುಖಂಡರುಗಳು ಮನಸ್ಸಿಗೆ ತಂದುಕೊಂಡು ಶ್ರೀ ವೀರಭದ್ರೇಶ್ವರಸ್ವಾಮಿಯ ಕಾರ್ಯವನ್ನ ಅತಿ ತ್ವರೆಯಿಂದ ಮಾಡುತ್ತಾರೆಂದು ನಂಬಿರುವ,

ಓರ್ವ ಸ್ವಾಮಿಭಕ್ತ.

ಗೋವಧೆ.

ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿಯಲ್ಲಿ ಪ್ರತಿಗುರುವಾರವೂ ಭಾರಿಸಂತೆ ನಡೆಯುತ್ತದೆ. ಇಲ್ಲಿ ಪೊಲೀಸಿನವರು ಕಳ್ಳತನ ಮತ್ತು ಇತರ ಗಲಾಟೆಗಳಿಗೆ ಅವಕಾಶವಿಲ್ಲದಂತೆ ನೋಡಿಕೊಳ್ಳುತ್ತಿದ್ದಾರೆ. ತಾಲ್ಲೂಕು ಅಮಲ್ದಾರರು ಕೂಡ ಆಗಾಗ್ಗೆ ಸಂತೆಗೆ ಹೋಗುತ್ತ ಅಲ್ಲಿ ವ್ಯಾಪಾರಗಾರರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಿರುವರು. ಆದರೆ ಇಲ್ಲಿಂದ ವಾರಕ್ಕೆ ಸುಮಾರು ನೂರುರಾಸುಗಳಿಗೆ ಕಡಿಮೆ ಇಲ್ಲದಂತೆ ಬಡಗೋವುಗಳು ನೀಲಗಿರಿ ಮತ್ತು ಬತ್ತೇರಿಗಳ ಕಟುಕರಪಾಲಾಗುತ್ತಿರುತ್ತವೆ. ಗೋವುಗಳು ಮುದಿಯಾಗುವವರೆಗೂ ಅವುಗಳಿಂದ ಕೆಲಸಗಳನ್ನು ಮಾಡಿಸಿಕೊಳ್ಳುವುದಲ್ಲದೆ ತಮ್ಮ ಶರೀರವನ್ನು ಅವುಗಳ ಹಾಲು ಬೆಣ್ಣೆಗಳಿಂದ ಪುಷ್ಟಿಯಾಗಿ ಬೆಳೆಯಿಸಿಕೊಂಡು ಕಡೆಗಾಲದಲ್ಲಿ ಅವುಗಳನ್ನು ಧನಪಿಶಾಚಿಗ್ರಸ್ಥರಾದ ಅಧಮರು ಕಠಿಣಹೃದಯರಾದ ಕಟುಕರಿಗೆ ವಿಕ್ರಯಿಸಿ ಮೃತ್ಯುವಿಗೆ ತುತ್ತುಮಾಡುವದು ಯಾವ ಧರ್ಮ ? ಇವರೂ ಆ ಗೋಹತ್ಯೆಕ್ಕೆ ಭಾಗಿಗಳಾಗುವುದಿಲ್ಲವೇ ? ಚಿಕ್ಕಂದಿನಿಂದಲೂ ತನುಮನಧನಗಳನಿತ್ತು ಕಾಪಾಡಿದ ತಾಯಿತಂದೆಗಳನ್ನು ಕೊಂದ ಪಾಪವು ಉಂಟಾಗುವುದಿಲ್ಲವೇ ? ಇದಲ್ಲವೆ ಈ ಕಾಲದ ಜನಗಳಲ್ಲಿರುವ ಉಪಕಾರಸ್ಮರಣೆ ? ಆ ಮೂಕಪ್ರಾಣಿಗಳು ಯಾರಲ್ಲಿ ಹೇಳಿಕೊಳ್ಳಬೇಕು ? ಅಯ್ಯೋ ! ಪಾಪ ! ಸಾಮಾನ್ಯವಾಗಿ ಕೆಲವು ತಾಲ್ಲೂಕುಗಳಲ್ಲಿ ಗೋರಕ್ಷಣಸಂಘಗಳನ್ನು ಏರ್ಪಡಿಸಿರುತ್ತಾರೆ. ಕೆಲವು ತಾಲ್ಲೂಕುಗಳಲ್ಲಿ ಗೋಪ್ರದರ್ಶನವನ್ನುಮಾಡಿ ಗೋರಕ್ಷಕರಿಗೆ ಹೆಚ್ಚು ಪ್ರೋತ್ಸಾಹಗಳನ್ನು ಕೊಡುತ್ತಿರುವುದನ್ನು ನಾವುಗಳು ವರ್ತಮಾನಪತ್ರಿಕೆಗಳ ಮೂಲಕ ತಿಳಿಯುತ್ತಿರುತ್ತೇವೆಯಲ್ಲವೇ ? ಆದರೆ ಈ ತಾಲ್ಲೂಕಿನಲ್ಲಿ ಮಾತ್ರ ಗೋಹತ್ಯಕ್ಕೆ ಸಹಾಯಕರಾಗಿದ್ದಾರೆ. ಇಷ್ಟೆಲ್ಲಾ ಆ ಲೋಕೋಪಕಾರಿಗಳಾದ ಗೋವುಗಳ ದುರಾದೃಷ್ಟವಲ್ಲವೇ ? ಈ ವಿಷಯವನ್ನು ತಾಲ್ಲೂಕಿನ ಅಧಿಕಾರಿಗಳು ಕೂಡ ಗಮನಕ್ಕೆ ತಂದುಕೊಳ್ಳದಿರುವುದನ್ನು ನೋಡಿದರೆ ಮಹಾ ದುಃಖವಾಗುತ್ತದೆ. ಚಿಂತೆ ಇಲ್ಲ. ಇನ್ನಾದರೂ ಧರ್ಮಪ್ರವರ್ತಕರಾದ ಮಹನೀಯರುಗಳು ತಕ್ಕ ಏರ್ಪಾಡುಮಾಡಿ ಈ ವಿಧವಾದ ಗೋಹತ್ಯವನ್ನು ತಪ್ಪಿಸಿ ಗೋಮಾತೆಯ ಪ್ರೀತಿಗೆ ಪಾತ್ರರಾಗುತ್ತಾರೆಂದು ನಂಬಿದ್ದೇನೆ. ಓರ್ವ ಗೋರಕ್ಷಕ.

ಶ್ರೀ ಗೋರಕ್ಷಕಮಂಡಲಿ, ಬೆಂಗಳೂರು ಸಿಟಿ.

ಪ್ರಜಾಪ್ರತಿನಿಧಿಗಳಾದ ಮಹಾಶಯರಲ್ಲಿ ವಿಜ್ಞಪ್ತಿ.

ಒಬ್ಬ ಗೃಹಸ್ಥನು ಬೆಟ್ಟದಮೇಲೆ ಸಂತರ್ಪಣೆಮಾಡುತ್ತೇನೆಂದು ಸಹಸ್ರಾರು ಜನರಿಗೆ ಆಮಂತ್ರಣವನ್ನು ಕೊಟ್ಟು ಆ ಬೆಟ್ಟದ ಮೇಲೆ ಸೌದೆರಾಸಿಯನ್ನು ಹಾಕಿ ಬೆಂಕಿಯನ್ನಿಟ್ಟು ಹೊಗೆ ಎಬ್ಬಿಸಿದನು. ಧನಸಂಪನ್ನರು ಲಕ್ಷ್ಯಮಾಡದಿದ್ದರೂ ಬಡಬಗ್ಗರೆಲ್ಲರೂ ಸಂತೋಷದಿಂದ ಹಗಲು 10 ಘಂಟೆಗೇ ಹೋಗಿ ನೋಡಲಾಗಿ ಅಲ್ಲಿ ನರಸಂಚಾರವೇ ಇಲ್ಲದೆ ಬರೀ ಹೊಗೆಯಾಡುವದನ್ನು ಕಂಡು ನಿರಾಶರಾಗಿ ದುಃಖದಿಂದ ಹಿಂತಿರುಗಿದರು. ಇದರಂತೆಯೇ ನಮ್ಮ ಗೋವುಗಳ ಗತಿಯಾಗಿರುವುದು.. ಹೋದ ಪ್ರತಿನಿಧಿಸಭೆಯಲ್ಲಿ ಸರ್ವಸಮ್ಮತದಿಂದ ಗೋವಧೆನಿಲ್ಲಿಸುವ ಬಗ್ಗೆ ಠರಾವು ಪಾಸಾಯಿತಾದರೂ ನ್ಯಾಯವಿಧಾಯಕಸಭೆಯಲ್ಲಿ - ದೇವರು ವರಕೊಟ್ಟರೂ ಪೂಜಾರಿ ಕೊಡಲಿಲ್ಲ - ಎಂಬಂತೆ ನಮ್ಮ ಬಾನರ್ಜೀ ಸಾಹೇಬರವರು ದಯಾಳುಗಳಾಗಿ ತಮ್ಮ ದಿವಾನ್‌ಗಿರಿಯಲ್ಲಿ ಈ ಮಹತ್ಕಾರ್ಯವನ್ನು ಮಾಡಿ ಕೀರ್ತಿಯನ್ನು ಪಡೆಯಬೇಕೆಂದು ಸಮ್ಮತಿಸಿದರೂ ಮೆಂಬರುಗಳೇ ಸಮ್ಮತಿಪಡಲಿಲ್ಲ. ಮೇಲ್ಕಂಡಂತೆ ಈ ಮಹಾಪ್ರಯತ್ನದ ಫಲವು ಬರೀ ಹೊಗೆಯಾಗಿ ಪರಿಣಮಿಸಿರುವುದು. ನೀರಿಲ್ಲದ ಜನರ ಬೊಬ್ಬಾಟವೊಂದುಕಡೆ, ಹಾಲಿಲ್ಲದ ಮಕ್ಕಳ ಹಾಹಾಕಾರ ಮತ್ತೊಂದುಕಡೆ. ಇವುಗಳನ್ನು ಕಣ್ಣಾರ ನೋಡುತ್ತ ಪ್ರತಿನಿಧಿಗಳಾದ ತಾವು ಸುಮ್ಮನೆ ಕುಳಿತಲ್ಲಿ ಗತಿಯೇನು ? ಜೇಳುಕಡಿದ ಮನುಷ್ಯನು ಹೊಡಕೊಳ್ಳುತ್ತಾ ಬಂದು - ಪಂಡಿತರೇ ! ಔಷಧಿಯನ್ನು ಕೊಡಿಯೆಂದು ಕೇಳಿಕೊಂಡರೆ, ಅಯ್ಯಾ, ನಾಳೆದಿನ ಬಂದಲ್ಲಿ ಕೊಡುತ್ತೇನೆಂದನಂತೆ.- ಇದರಂತೆಯೇ ತಾವು ವಾಯಿದೆ ಹಾಕಿಸುತ್ತಾ ಇರುವಿರಿ. ತಾವೆಲ್ಲರೂ ಏಕಮನಸ್ಕರಾಗಿ ಈವಾಗಲಾದರೂ ಗೋವಧೆಯನ್ನು ನಿಲ್ಲಿಸುವ ಬಗ್ಗೆ ಬಂದೋಬಸ್ತಾದ ಕಾನೂನು ಮಾಡದೇಹೋದಲ್ಲಿ ಸಕಲಜಾತಿಯ ಬಡಬಗ್ಗರ ಮಕ್ಕಳುಗಳ ಮರಣಕ್ಕೂ ತಾವೇ ಜವಾಬ್ದಾರರಾಗಬೇಕಾಗುತ್ತೆ. ಬುನಾದಿಯಿಲ್ಲದ ಮಹಡಿಮನೆಯಂತೆ ತಮ್ಮ ಮಿಕ್ಕ ಪ್ರಯತ್ನಗಳೆಲ್ಲವೂ ವ್ಯರ್ಥವಾಗುವವು. ಬಾಳಿಬದುಕುವ ರಾಷ್ಟ್ರದ ಮುಂದಿನ ಜನಾಂಗದವರೇ ಮರಣಕ್ಕೆ ತುತ್ತಾಗುತ್ತಿರಲು ಮಿಕ್ಕ ಸುಖಸಂಪತ್ತುಗಳನ್ನು ಅನುಭವಿಸುವರಾರು ? ದಯಾವಂತರೇ ! ಗೋವುಗಳ ಪರವಾಗಿಯೂ ನಿಕೃಷ್ಟ ಜಾತಿಯವರ ಅನಾಥಮಕ್ಕಳ ಪರವಾಗಿಯೂ ಕೈ ಜೋಡಿಸಿ ಬೇಡಿಕೊಳ್ಳುತ್ತೇನೆ. ಈಸಲ ಪ್ರಜಾಪ್ರತಿನಿಧಿಸಭೆಯಲ್ಲಿ ಈ ವಿಚಾರಕ್ಕೆ ತಮ್ಮ ಸಂಪೂರ್ಣ ಗಮನವನ್ನು ಕೊಟ್ಟು ತಕ್ಕ ವ್ಯವಸ್ಥೆಯನ್ನು ಮಾಡಿ ಈ ಮಹಾಪುಣ್ಯಕ್ಕೆ ಭಾಗಿಗಳಾಗಿ ಗೋಸಂಜೀವಕರಾದ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಅಕ್ಕರೆಯೆಂಬ ಚಿಹ್ನೆಗೆ ಕುಂದಣವನ್ನು ಕೆತ್ತಿಸಿದಂತೆ ಮಾಡಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಬೇಡುತ್ತೇನೆ.

ಪಾ. ಚೆಮ್ಮನ್‌ಮಲ್‌ಮುಂಗಾಜಿ,
ಪ್ರೆಸಿಡೆಂಟ್.

ಮೇಲುಕೋಟೆಯ ಮಹಾತ್ಮರುಗಳ ವಿಷಯ.

ಮೇಲುಕೋಟೆಯ ಮಹಾತ್ಮರುಗಳು ಇವರು ಅಸ್ಪೃಶ್ಯರು, ಇವರು ಅಧಿಕರ್ಣಾಟಕರು, ಇವರು ಆದಿದ್ರಾವಿಡರು ಎಂದು ಭೇದಭಾವವನ್ನಿಡದೆ ಸರ್ವರೊಡನೆ ಸಹೋದರಭಾವದಿಂದ ವೈರಮುಡಿಮಹೋತ್ಸವಕಾಲದಲ್ಲಿ ಮೂರುದಿವಸಗಳಪರ್ಯಂತವೂ ಏಕೀಭವಿಸಿ ಇರುವ ವಿಷಯವು ಸರ್ವರಿಗೂ ತಿಳಿದದ್ದೇ ಆಗಿರುತ್ತೆ. ಆದರೆ ಶ್ರೀರಂಗಪಟ್ಟಣದ ಹತ್ತಿರವಿರುವ ದರಸಗುಪ್ಪೆಯಿಂದ ದೇವರದರ್ಶನನಿಮಿತ್ತವಾಗಿ ಒಬ್ಬ ವೈಷ್ಣವಪಂಡಿತರು ಬಂದು ಭಕ್ತಿಯಿಂದ ದೇವಸ್ಥಾನವನ್ನು ಸೇರಿ ದೇವರಸೇವೆಯನ್ನು ಮಾಡುತ್ತಿದ್ದಾಗ ಅಲ್ಲಿ ಸೇರಿದ್ದ ಶ್ರೀವೈಷ್ಣವಗೋಷ್ಠಿಯವರು - ಏ ಪತಿತಶೂದ್ರನೆ ! ಈ ನಿನ್ನ ಅವತಾರವೇನು? ನೀನು ಇಷ್ಟು ನಿರ್ಭಯನಾಗಿ ನಮ್ಮ ಗೋಷ್ಠಿಯಲ್ಲಿ ಹೇಗೆ ಬಂದುನಿಂತಿರುವಿ? ದೂರ ಹೋಗು - ಎಂದು ಹೇಳಿ ಅಷ್ಟಕ್ಕೇ ಸುಮ್ಮನಿರದೆ ಅವರನ್ನು ಬಹಳವಾಗಿ ಹೊಡೆದು ದೇವಸ್ಥಾನದ ಗೋಪುರದ್ವಾರದಲ್ಲಿಗೆ ತಳ್ಳಿಕೊಂಡುಬಂದು ಬಿಟ್ಟುಬಿಟ್ಟರು. ಇದನ್ನು ಅನುಭವಿಸಿದ ಆ ವೈಷ್ಣವಪಂಡಿತರು ಮನನೊಂದು ಬಹುದುಃಖಿಸಿ - ಎಲ್ಲೆ ಮಹಾತ್ಮರಿರಾ ! ಈರೀತಿ ನನ್ನನ್ನು ಶಿಕ್ಷಿಸಲು ನಾನು ಮಾಡಿದ ಅಪರಾಧವೇನು ? ನಾನು ನಿಮ್ಮ ಸಮೀಪಕ್ಕೂ ಬರಲಿಲ್ಲ ; ದೇವರಸಮೀಪಕ್ಕೂ ಹೋಗಲಿಲ್ಲ ; ದೂರದಲ್ಲಿ ನಿಂತು ದೇವರನ್ನು ನೋಡಿದುದೇ ತಪ್ಪೇ : ಅಥವ ನಾನು ದೇವಾಲಯವನ್ನು ಪ್ರವೇಶಿಸಿದುದೇ ತಪ್ಪೇ ? ಆರೀತಿ ನಾನು ಪ್ರವೇಶಿಸಿದುದು ತಪ್ಪಾದಲ್ಲಿ ಈ ದೇವಸ್ಥಾನವು ಯಾರಿಗಾಗಿ ಇರುತ್ತದೆ ? ಈ ದೇವಸ್ಥಾನವನ್ನು ಪ್ರವೇಶಿಸಲು ನಿಮಗೊಬ್ಬರಿಗೇ ಹಕ್ಕು ಇರುವುದೆ ? ಇತರರು ಯಾರಿಗೂ ಇಲ್ಲವೆ ? ನಿಮಗಾಗಿ ದೇವಸ್ಥಾನವನ್ನು ಕಟ್ಟಿಸಿರುವರೇ? ಅಥವ ಸರ್ವಜನರಿಗೂ ಅನುಕೂಲವಾಗಲು ಕಟ್ಟಿಸಿರುವರೇ ? ತಿಳಿಸಿರಿ. ನಿಮ್ಮ ಮತೋತ್ಪತ್ತಿಕ್ರಮವನ್ನು ನಾನು ಬಲ್ಲೆನು. ಯಾವ ಶಾಸ್ತ್ರೀಯವಾಗಲಿ ವೇದರೀತಿಯಾಗಲಿ ಯಾವ ಪ್ರಶ್ನೆಯನ್ನು ಕೇಳಿದರೂ ನಾನು ಉತ್ತರಕೊಡಬಲ್ಲೆನು. ನೀವು ಸಹ ಉತ್ತರವಾಗಿದ್ದಲ್ಲಿ ನಿಂತು ನನಗೆ ಪ್ರತ್ಯುತ್ತರವನ್ನು ಕೊಡಬಹುದು - ಎಂದು ಹೇಳಲು ಅಲ್ಲಿ ನಿಂತಿದ್ದ ದೊಡ್ಡ ದೊಡ್ಡ ಪಂಡಿತರೆಲ್ಲರೂ ತಮಗಿರುವ ಪಾಂಡಿತ್ಯವನ್ನು, ಅಂಲ್ಲಿದ ತಲೆತಪ್ಪಿಸಿಕೊಂಡುಹೋಗುವುದಕ್ಕೆ ಉಪಯೋಗಿಸಿದರೇ ವಿನಾ ಯಾರೂ ಸದುತ್ತರವನ್ನು ಕೊಡಲಿಲ್ಲ. ತದನಂತರ ಅಲ್ಲಿದ್ದ ಅಧಿಕಾರುಗಳು ಅವರು ಮಾಡಿರುವ ಕೆಲಸವು ಶುದ್ಧತಪ್ಪು; ನೀವು ದೇವರಸೇವೆಯನ್ನು ಚೆನ್ನಾಗಿಮಾಡಿ ಎಂದು ಹೇಳಿ ಪಂಡಿತರನ್ನು ಕಳುಹಿಸಿದರು. ಇದಲ್ಲದೆ ದೇವಸ್ಥಾನದ ಸುತ್ತಲೂ ದೇವರ ಉತ್ಸವ ವಿನಾ ಇನ್ನಾವ ಉತ್ಸವವೂ ನಡೆಯಕೂಡದೆಂದು ಹೇಳುವ ವಿಷಯವು ಎಲ್ಲರಿಗೂ ತಿಳಿದೇ ಇರಬಹುದು. ಆದರೆ ಇಲ್ಲಿಗೆ ಮದರಾಸಿನಿಂದ ಬಂದ ಒಬ್ಬಭಕ್ತರು ಒಂದು ಚಿನ್ನದ ಮಂದಾಸನವನ್ನು ದೇವರಿಗೆ ಕೊಡಬೇಕೆಂದು ಪ್ರಯತ್ನಿಸಲು, ಇಲ್ಲಿಯ ಮಹಾತ್ಮರು ಆ ಮಂದಾಸನವನ್ನು ದೇವಸ್ಥಾನದ ಸುತ್ತಲೂ ವಾದ್ಯಘೋಷದಿಂದ ಉತ್ಸವವನ್ನು ಮಾಡುದುದಲ್ಲದೆ ಆ ಮಂದಾಸನವನ್ನು ದೇವರಿಗೆ ಅರ್ಪಿಸಿದ ಸಾಹುಕಾರನನ್ನು ಸಹ ಅವನಲ್ಲಿದ್ದ ಹಣದಾಸೆಯಿಂದ ವಾದ್ಯಸಮೇತ ದೇವಾಲಯದ ಸುತ್ತಲೂ ಮೆರವಣಿಗೆಮಾಡಿದರು.

ಮಹಾಶಯರೇ, ಈ ಕಾಲದಲ್ಲಿ - ದುಡ್ಡಿದ್ದವನೇ ದೊಡ್ಡಪ್ಪ - ಎಂಬ ಗಾದೆ ಸುಳ್ಳಲ್ಲ. ದುಡ್ಡೊಂದಿದ್ದ ಪಕ್ಷದಲ್ಲಿ ಮಾಡಬಾರದ ಕೆಲಸವನ್ನು ಸಹ ಮಾಡಿಸುವುದು, ಆಗಬಾರದ ಕೆಲಸವನ್ನೂ ಆಗಮಾಡಿಸುವುದು; ಎಂತಹ ಹೀನಮನುಷ್ಯನನ್ನು ಸಹ ಪೂಜ್ಯಸ್ಥಾನದಲ್ಲಿ ಕೂರಿಸುವುದು. ಹಣವಲ್ಲವೇ ಇದೆಲ್ಲಕ್ಕೂ ಕಾರಣ? ಹಣವೇ! ಹಣವೇ!! ನೀನೇ ದೊಡ್ಡವನು. ನೀನೇ ಪ್ರಧಾನನು. ನೀನಿಲ್ಲದ ಸ್ಥಾನವೇ ತುಚ್ಛವಾದದ್ದು. ನೀನಿದ್ದರೆ ಸಕಲವೂ ಕೈಗೂಡುತ್ತದೆ. ಆದ್ದರಿಂದ ನೀನೇ ಪ್ರಧಾನನು.

ಪ್ರತ್ಯಕ್ಷದರ್ಶಿ.

ಮೈಸೂರುದೇಶದಲ್ಲಿ ವಿದ್ಯಾಭ್ಯಾಸದ ಸೆಸ್ಸು.

ಪ್ರಜಾನುರಾಗಿಗಳಾದ ಘನಸರ್ಕಾರದವರು ವಿದ್ಯಾಭ್ಯಾಸದ ಹೆಚ್ಚು ಏರ್ಪಾಟಿಗಾಗಿ ಇಷ್ಟಪಡುವ ಡಿಸ್ಟ್ರಿಕ್ಟ್‌ಗಳಿಂದ ವಿದ್ಯೆಯ ಕಂದಾಯವೆಂದು ಎತ್ತುತ್ತಿರುವುದು, ಮತ್ತು ಹಾಗೆ ಬಂದ ಕಂದಾಯವನ್ನು ಆಯಾಯ ಡಿಸ್ಟ್ರಿಕ್ಟ್‌ಗಳಿಗಾಗಿಯೇ ಉಪಯೋಗಿಸುತ್ತಿರುವುದು ಸರಿಯಷ್ಟೆ. ಹೀಗೆ ಹಾಲಿ ವಿದ್ಯಾಭ್ಯಾಸದ ಸೆಸ್ ಕೊಡುತ್ತಿರುವ ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟ್‌ಗಳ ವಿದ್ಯಾಭ್ಯಾಸ ಸುಧಾರಣೆಯು ಮಿಕ್ಕುಳಿದ ಅಂದರೆ, ಸೆಸ್ಸನ್ನು ಕೊಡಲು ಒಪ್ಪದೇ ಇರುವ ಡಿಸ್ಟ್ರಿಕ್ಟುಗಳಿಗಿಂತ ಎಷ್ಟೋಮಟ್ಟಿಗೆ ಮುಂದುವರಿದಿರುವುದು ಸಹಜವಾಗಿದೆ. ಹೀಗಾಗುವುದರಿಂದ ಸಂಸ್ಥಾನದಲ್ಲಿ ಎಲ್ಲಾ ಕಡೆಯಲ್ಲಿಯೂ ಸಮವಾದ ವಿದ್ಯಾಸುಧಾರಣೆಯು ದೊರೆಯದೆ ಕೆಲವು ಪ್ರಾಂತ್ಯಗಳು ಸುಧಾರಣೆಯ ಉನ್ನತಶಿಖರವನ್ನೇರಲು ಬರುತ್ತಿರುವಾಗ ಮತ್ತೆ ಕೆಲವೆಡೆಯಲ್ಲಿ ಆಗತಾನೇ ಕಣ್ದೆರೆದು ನೋಡುವ ಮತ್ತು ಹಿಂದೆ ಬಿದ್ದುದಕ್ಕಾಗಿ ಪಶ್ಚಾತ್ತಾಪಪಡುವ ಪ್ರಜೆಗಳನ್ನು ನೋಡಿ ಸರ್ಕಾರದವರು ಚಿಂತಿಸಬೇಕಾಗುವುದೆಂದೂ, ಪ್ರಜಾಹಿತೈಷಿಗಳೆಂದು ವಿಜೃಂಭಿಸುತ್ತಿರುವ ಕೆಲವು ಜನರ ಕುಹಕವಾದ ಆಕ್ಷೇಪಣೆಗಳಿಗೆ ಕಿವಿಗೊಟ್ಟು ಕಾಲಹರಣಮಾಡದೆ ವಿದ್ಯಾಭ್ಯಾಸದ ಸೆಸ್ಸನ್ನು ಬಲಾತ್ಕಾರವಾಗಿ ಎತ್ತುವುದು ಯೋಗ್ಯವೆಂದೂ, ಹಾಗೆ ಮಾಡಲು ಸರಕಾರದವರು ಶೀಘ್ರವಾಗಿಯೇ ಕೈಕೊಳ್ಳಬೇಕೆಂದೂ, ಚಿತ್ರದುರ್ಗಡಿಸ್ಟ್ರಿಕ್ಟಿನ ಪರವಾಗಿ ನ್ಯಾಯವಿಧಾಯಕಸಭೆಯ ಮೆಂಬರರಾದ ಮ|| ಡಿ. ಹೆಚ್. ಚೆಂದ್ರಶೇಖರಯ್ಯನವರು ಒಂದು ರೆಸಲೂಷನ್ ತಂದದ್ದು ಕೌನ್ಸಿಲ್ಲಿನಲ್ಲಿ ಸಮರ್ಥಿಸಿ ಉಪನ್ಯಾಸಮಾಡಿರುವುದನ್ನು ಕೌನ್ಸಿಲ್‌ಪ್ರೊಸೀಡಿಂಗ್ಸ್ ರಿಪೋರ್ಟಿನಲ್ಲಿ ಓದಬಹುದು. ಈ ಮೆಂಬರರ ಭಾಷಣದಲ್ಲಿ ಭರತಖಂಡದ ಇತರ ಭಾಗಗಳಲ್ಲಿಯ ವಿದ್ಯಾಭ್ಯಾಸದ ಏರ್ಪಾಟುಗಳನ್ನು ಉದಹರಿಸಿದ್ದು ಬಹು ಪರಿಣಾಮಕಾರಿಯಾಗುವಂತೆ ನಮ್ಮ ದೇಶದ ವಿದ್ಯಾಭಿವೃದ್ಧಿಯು ಎಷ್ಟರಮಟ್ಟಿಗೆ ಅವಶ್ಯಕವಾಗಿದೆಯೆಂಬುದನ್ನು ವ್ಯಕ್ತಪಡಿಸುತ್ತದೆ. ಸಭೆಯಲ್ಲಿ ಬಹುಚರ್ಚೆಯಾದಮೇಲೆ ಗೌರ್ನಮೆಂಟಿನವರು ತಮ್ಮ ಪೂರ್ಣಸಹಾನುಭೂತಿಯನ್ನು ತೋರಿಸಿದುದಲ್ಲದೆ ಈ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡುವುದಾಗಿಯೂ ಸಹ ಭರವಸೆಯನ್ನಿತ್ತರು. ಇದಕ್ಕನುಸರಿಸಿ ಈಗ ನೂತನವಾಗಿ ಜಾರಿಯಲ್ಲಿ ತರಲ್ಪಡುವುದಕ್ಕಾಗಿರುವ - ಡಿಸ್ಟ್ರಿಕ್ಟ್‌ಬೋರ್ಡ್‌ಬಿಲ್ - ಎಂಬುದರಲ್ಲಿ ವಿದ್ಯಾಭ್ಯಾಸದ ಸೆಸ್ಸನ್ನು ಪ್ರತಿ ಡಿಸ್ಟ್ರಿಕ್ಟಿನವರು ಬಲಾತ್ಕಾರವಾಗಿ ಎತ್ತಬೇಕೆಂದು ವಿಧಿಸಿರುವುದು ಪ್ರತಿಯೊಬ್ಬ ವಿದ್ಯಾಭಿಮಾನಿಯನ್ನೂ ಆಹ್ಲಾದಗೊಳಿಸದಿರಲಾರದು. ಈ ವಿಚಾರವು ಚರ್ಚೆಗೆ ಬಂದಾಗ್ಗೆ, ನಾನ್ ಅಫಿಷಿಯಲ್ ಮೆಂಬರರ ಪೈಕಿ ಬ್ರಾಹ್ಮಣೇತರರೆಲ್ಲರೂ (ಒಬ್ಬರಹೊರತಾಗಿ) ಅನುಮೋದಿಸುತ್ತ, ಬ್ರಾಹ್ಮಣರೆಲ್ಲರೂ ವಿರೋಧಿಸುತ್ತಿದ್ದುದು ದೊಡ್ಡ ಬಹು ಆಶ್ಚರ್ಯವಾಗಿದ್ದಿತು. ಒಬ್ಬ ಬ್ರಾಹ್ಮಣೇತರ ಮೆಂಬರರೆಂದರೆ—ಬ್ರಾಹ್ಮಣ ಪ್ರಭುತ್ವಪ್ರಿಯರಲ್ಲಿ ಬಹುಮುಂದುವರಿದಿರುವ ಮತ್ತು ಬೆಂಗಳೂರಿನಿಂದ ನಾಮಕರಣಹೊಂದಿ ಬಂದಿರುವ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು.

ಮ|| ಚಂದ್ರಶೇಖರಯ್ಯನವರ ಸೂಚನೆಯನ್ನೂ ಮತ್ತು ಡಿಸ್ಟ್ರಿಕ್ಟ್‌ಬೋರ್ಡ್‌ಬಿಲ್ಲನ್ನು ವಿರೋಧಿಸಿದ ಮೆಂಬರುಗಳ ಕೃತ್ಯವನ್ನು [illegible] ನೋಡಿ. ನಾಳೆಗೇ ಜೋರು, ವಿದ್ಯಾಭ್ಯಾಸಕ್ಕಾಗಿ ಎಷ್ಟು [illegible] ಪ್ರಜೆಗಳನ್ನು ಭಾರವಾಗಿದೆ ? ವಿದ್ಯೆಯಿಲ್ಲದೆ [illegible] ಮಹಾನೀಯರು ? [illegible]

ದಿದ್ದರೆ ಅದಕ್ಕೆ ಯಾವ ಹೆಸರಾದರೂ ಬರುತ್ತಿತ್ತೋ? ದೇಶದ ಆರ್ಥಿಕ ಸ್ಥಿತಿಗಳು ಎಷ್ಟೇ ನಿಕೃಷ್ಟವಾಗಿದ್ದರೂ ಸರಿಯೆ, ವಿದ್ಯಾಭ್ಯಾಸದ ಸುಧಾರಣೆಯು ಮಿಕ್ಕೆಲ್ಲವುಗಳಿಗಿಂತಲೂ ಅಗತ್ಯವಾಗಿ ಗಮನಿಸತಕ್ಕದ್ದಲ್ಲವೇ? ಇಲ್ಲಿಲ್ಲದ ಯೋಚನೆಗಳಿಂದ ನಮ್ಮ ಡಿಸ್ಟ್ರಿಕ್ಟಿನವರು ಸೆಸ್ಸನ್ನು ಕೊಡಲು ಸಮ್ಮತಿಸುವಷ್ಟು ಯೋಗ್ಯಸ್ಥಿತಿಯಲ್ಲಿಲ್ಲವೆಂದು ಹೇಳುವುದು ಉಚಿತವೇ? ನಾಲ್ಕುಮನೆ ಹಳ್ಳಿಯವರು ಕೂಡ ವಿದ್ಯೆಗಾಗಿ ಎಷ್ಟು ಎತ್ತಿದರೂ ಕೊಡಲು ಸಿದ್ಧರಿರುವಾಗ ಅವರ ಪ್ರತಿನಿಧಿಗಳು ತಲೆಕೊಡದಿರುತ್ತಿರುವುದು ಪರಮಾಶ್ಚರ್ಯವೆನಿಸುತ್ತದೆ. ಇದೇಕೆ ಆ ದೊಡ್ಡಮನುಷ್ಯರುಗಳಿಗೆ ಒಪ್ಪಿಗೆಯಾಗಲೊಲ್ಲದೋ? ಬ್ರಾಹ್ಮಣಪ್ರತಿನಿಧಿಗಳು ಮಾಡುತ್ತಿರುವ ಕಾರ್ಯಕ್ಕೆ ಒಂದು ರೀತಿಯಿಂದ ಉತ್ತರವನ್ನು ಊಹಿಸಬಹುದಾದರೂ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರಂಥ ಜ್ಞಾನವೃದ್ಧರೂ ವಯೋವೃದ್ಧರೂ ಮತ್ತು ಅನುಭವಶೀಲರೂ ಆದಂಥವರ ಅಂತರ್ಯವನ್ನು ಊಹಿಸಲಸಾಧ್ಯವಾಗಿದೆ. ನಮ್ಮ ದೇಶದ ವಿದ್ಯಾಧಿಕರು ಹಿಂದುಳಿದವರಿಗೆ ವಿದ್ಯಾದಾನವನ್ನು ಮಾಡುತ್ತ ಉಚ್ಛ್ರಾಯಸ್ಥಿತಿಗೆ ತರುವುದು ಅವರಿಗೆ ಸಹನವಾಗಲಾರದು. ಅವರ ದೊಡ್ಡಸ್ತಿಕೆಗೆಲ್ಲಿ ಕುಂದುಕಬರುವುದೋ ಎಂದು ಭಯಗ್ರಸ್ತರಾಗಿರಬಹುದಲ್ಲವೇ? ಏನೇ ಇರಲಿ, ಮುಖ್ಯವಾಗಿ ಓಟರುಮಹಾಶಯರಿಗೆ ಹೇಳುವುದೇನೆಂದರೆ, ನೀವು ಮತವನ್ನು ಕೊಟ್ಟು ಪ್ರತಿನಿಧಿಯಾಗಿ ಕಳುಹಿಸಿರುವ ಮೆಂಬರರು ನಿಮ್ಮ ಅಭಿವೃದ್ಧಿಗಾಗಿ ಹೊಡೆದಾಡುವುದು ಬಿಟ್ಟು ವಿರೋಧವನ್ನೇ ನೀಡುತ್ತಿರುವುದನ್ನು ನೋಡಿ ಅರಿತುಕೊಳ್ಳಬೇಕು. ಹಾಗೆಯೇ ಸರಕಾರದವರಿಂದ ನಾಮಿನೇಟಾದವರು ಸರಕಾರಕ್ಕೆ ಯೋಗ್ಯರೀತಿಯಿಂದ ಸಹಾಯಮಾಡಿ ತಮ್ಮನ್ನು ಆರಿಸಿದ್ದುದಕ್ಕಾಗಿ ಕೃತಜ್ಞತೆಯನ್ನು ತೋರಿಸುವಂತೆ ವರ್ತಿಸುವುದು ಯೋಗ್ಯವು. ಅಂತೂ ಎಲ್ಲ ಪ್ರತಿನಿಧಿಗಳೂ ವಿದ್ಯಾಭಿವೃದ್ಧಿಯ ಕಾರ್ಯಕ್ಕಾಗಿ ಮನವೊಚ್ಚಿ ಕೆಲಸಮಾಡಿ ಓಟರರ ಮತ್ತು ಸರಕಾರದವರ ಮೆಚ್ಚುಗೆಗೆ ಪಾತ್ರರಾಗಬೇಕಾಗಿ ನಂಬಿದೆ. ಓರ್ವ ವಿದ್ಯಾಭಿಮಾನಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

18 ನೆಯ ಪ್ರಕರಣ.

ಶಾಕಾಹಾರಸಂಘಸಭ್ಯರು ನನ್ನನ್ನು ಕೂಡ ಒಬ್ಬ ಕಾರ್ಯನಿರ್ವಾಹಕ ಸಂಘಸಭ್ಯನನ್ನಾಗಿ ತೆಗೆದುಕೊಂಡರು. ನಾನು ಪ್ರತಿ ಸಭೆಗೂ ತಪ್ಪದೇ ಹೋಗುತ್ತಿದ್ದೆನಲ್ಲದೆ ಬಾಯಿಬಿಟ್ಟು ಮಾತನಾಡಲು ಮಾತ್ರ ಧೈರ್ಯವಿರಲಿಲ್ಲವು. "ನೀನು ನನ್ನೊಡನೆ ಮಾತನಾಡುವಾಗ್ಗೆ ಇಷ್ಟು ಚೆನ್ನಾಗಿ ಮಾತನಾಡುತ್ತಿಯೆಲ್ಲಾ ಸಭೆಯಲ್ಲಿ ಮಾತ್ರ ಒಂದುದಿವಸವಾದರೂ ಬಾಯಿಬಿಡಲಿಲ್ಲವೇಕೆ? ನೀನು ಸಮಯದಲ್ಲಿ ಕೆಲಸಕ್ಕೆ ಬರತಕ್ಕವನಲ್ಲವು" ಎಂದು ಒಂದುಸಾರಿ ಡಾಕ್ಟರು ಓಲ್ಡ್‌ಫೀಲ್ಡರವರು ನನ್ನನ್ನು ಮೂದಲಿಸಿದರು. ಡ್ರೋನು ಅಂದರೆ ಸೋಮಾರಿ ನೊಣ. ಈ ನೊಣಗಳು ಸಾಧಾರಣವಾಗಿ ಹಗಲೆಲ್ಲ ವಿರಾಮವಿಲ್ಲದಂತೆ ಕೆಲಸಮಾಡುತ್ತಲೇ ಇರುವರು. ಅವರಂತೆಯೇ ಈ ಸಭೆಯಲ್ಲಿ ಇತರರೆಲ್ಲರೂ ಮಾತನಾಡುತ್ತಿರುವಾಗ್ಗೆ ನಾನು ಮಾತ್ರ ಮೂಗನಂತೆ ಕುಳಿತುಕೊಂಡಿರುವುದರಿಂದಲೇ ಅವರು ಹಾಗೆ ಚೀಪಾಟಿಮಾಡಿದರು. ನನಗೂ ಮಾತನಾಡಬೇಕೆಂದು ಬುದ್ಧಿಹುಟ್ಟದೆ ಇರಲಿಲ್ಲವಾದರೂ ನನ್ನ ಅಭಿಪ್ರಾಯವನ್ನು ಹೇಗೆ ತಿಳಿಸಬೇಕೆಂಬುದು ನನಗೆ ಗೊತ್ತಾಗದಿದ್ದಿತು. ಉಳಿದವರೆಲ್ಲರಿಗೂ ವಿಷಯವು ಚೆನ್ನಾಗಿ ತಿಳಿದಿದ್ದಿತೆಂದೂ, ನನಗೆ ಮಾತ್ರ ಯಾವ ವಿಷಯವೂ ತಿಳಿಯದೆಂದೂ ನನಗೆ ತೋರುತ್ತಿದ್ದಿತು. ಹೇಗೋ ಮಾತನಾಡಬೇಕೆಂದು ನಾನು ಧೈರ್ಯವನ್ನು ಮಾಡಿದ ಕೂಡಲೆ ವಿಷಯವು ಮರೆತುಹೋಗುತ್ತಿದ್ದುದರಿಂದ ತಟಸ್ಥನಾಗಿರಬೇಕಾಗಿದ್ದಿತು. ಒಂದುವೇಳೆ ಮುಖ್ಯವಿಷಯವನ್ನು ಚರ್ಚಿಸಬೇಕಾಗಿದ್ದುದರಿಂದ ಆ ಸಭೆಗೆ ಹೋಗದೆ ತಪ್ಪಿಸಿಕೊಳ್ಳಲಿಲ್ಲವಾಗಿದ್ದಿತು. ಹೋಗಿ ಮಾತನಾಡದಿರುವುದು ಹೇಡಿತನವು. ಥೇಮ್ಸುವರ್ಕ್ಸ್ ಕಂಪೆನಿಯ ಅಧ್ಯಕ್ಷರಾದ ಹಿಲ್ಲ್‌ರವರು ಸಂಘಕ್ಕೂ ಅಧ್ಯಕ್ಷರು. ಅವರು ಪ್ಯೂರಿಟನ್ನು ಅಂದರೆ ನೈತಿಕಾಭಿಮಾನಿ. ಅವರೇ ಮುಖ್ಯವಾಗಿ ನಮ್ಮ ಸಂಘಕ್ಕೆ ಧನಸಹಾಯವನ್ನು ಮಾಡುತ್ತಿದ್ದವರು. ಸಭ್ಯರಲ್ಲಿ ಅನೇಕರು ಆತನನ್ನು ಅನುಸರಿಸುತ್ತಿದ್ದರು. ಶಾಕಾಹಾರವಿಷಯದಲ್ಲಿ ಸುಪ್ರಸಿದ್ಧರಾದ ಡಾಕ್ಟರ್ ಅಲ್ಲಿನ್ಸನ್‌ರವರು ಕೂಡ ಕಾರ್ಯನಿರ್ವಾಹಕಸಂಘಕ್ಕೆ ಒಬ್ಬ ಮೆಂಬರರಾಗಿದ್ದರು. ಆಗ ಸಂತಾನನಿರೋಧ ಸಮಸ್ಯೆಯು ಹೊಸದಾಗಿ ಹುಟ್ಟಿದ್ದಿತು. ಆ ವಿಚಾರದಲ್ಲಿ ಅಲ್ಲಿನ್ಸನ್‌ರವರು ಅಭಿಮಾನವುಳ್ಳವರಾಗಿದ್ದರು. ಅದನ್ನು ಕುರಿತು ಅವರು ಪಾಮರಜನರಿಗೆ ಬೋಧಿಸುತ್ತಿದ್ದರು. ಈ ಸಂತಾನನಿರೋಧಪದ್ಧತಿಯು ನೀತಿಗೆ ಬಹಳ ಭಂಗಕರವೆಂದು ಹಿಲ್ಲ್‌ರವರ ಅಭಿಪ್ರಾಯವು. ಶಾಕಾಹಾರಸಂಘವು ಆಹಾರ ವಿಷಯದಲ್ಲಿ ಮಾತ್ರವಲ್ಲದೆ ನೀತಿವಿಷಯದಲ್ಲೂ ಕೂಡ ಕೆಲಸಮಾಡಬೇಕಾಗಿದ್ದುದರಿಂದ ಇಂತಹ ವಿಪರೀತಭಾವವುಳ್ಳ ಅಲ್ಲಿನ್ಸನ್‌ರವರಂತಹವರು ಸಂಘದಲ್ಲಿರಲು ಅರ್ಹರಲ್ಲವೆಂದು ಹಿಲ್ಲ್‌ರವರು ಹೇಳಿದರು. ಆದ್ದರಿಂದ ಅವರನ್ನು ತೊಲಗಿಸಲು ಒಂದು ತೀರ್ಮಾನವು ಉಪಪಾದಿಸಲ್ಪಟ್ಟಿತು. ನಾನೂ ಹಿಲ್ಲ್‌ರವರ ಕೂಡ ಸೇರಿಕೊಂಡೆನು. ಅಲ್ಲಿನ್ಸನ್‌ರವರ ಅಭಿಪ್ರಾಯವು ಬಹಳ ಹಾನಿಕರವೆಂದು ಭಾವಿಸಿದೆನಾದುದರಿಂದ ಹಿಲ್ಲ್‌ರವರು ಅಲ್ಲಿನ್ಸನ್‌ರವರಿಗೆ ಪ್ರತಿಕೂಲವಾಗಿರುವುದು ನ್ಯಾಯವೆಂದೇ ನಾನು ತಿಳಿದೆನು. ಹಿಲ್ಲ್‌ರವರ ಔದಾರ್ಯಕ್ಕಾಗಿ ಅವರಲ್ಲಿ ನನಗೆ ಬಹಳ ಗೌರವವುಂಟಾಗಿದ್ದಿತು. ಆದರೆ ನೀತಿವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದಮಾತ್ರಕ್ಕೆ ಒಬ್ಬ ಮೆಂಬರರನ್ನು ಶಾಕಾಹಾರಸಂಘದಿಂದ ಹೊರಡಿಸುವುದು ನ್ಯಾಯವಲ್ಲವೆಂದು ತೋರಿತು. ಹಿಲ್ಲ್‌ರವರು ನೈತಿಕಾಭಿಮಾನಿಯಾದುದರಿಂದ ಅವರಿಗೆ ವ್ಯಕ್ತಿಸಂಬಂಧವಾಗಿ ಆಕ್ಷೇಪವು ಇದ್ದರೂ ಇರಬಹುದೇಹೊರತು ಅದು ಸಂಘೋದ್ದೇಶಕ್ಕೆ ಸಂಬಂಧಪಟ್ಟುದಲ್ಲ. ಶಾಕಾಹಾರವನ್ನು ವಿಸ್ತರಿಸುವುದೇ ಸಂಘೋದ್ದೇಶವಲ್ಲದೆ ನೀತಿಬೋಧಕವಲ್ಲವು. ಆದುದರಿಂದ ಬೇರೆ ಅಭಿಪ್ರಾಯವು ಹೇಗಿದ್ದರೂ ಶಾಕಾಹಾರಿಗಳಾದವರೆಲ್ಲರೂ ಈ ಸಂಘದ ಮೆಂಬರರಾಗಿರಲು ಅರ್ಹರೇ ಎಂದು ನಾನು ಭಾವಿಸಿದೆನು.

ಈ ವಿಷಯದಲ್ಲಿ ಸಂಘದ ಕೆಲ ಮೆಂಬರುಗಳು ಕೂಡ ನನ್ನೊಡನೆ ಏಕೀಭವಿಸಿದರು. ಆದರೂ ನಾನೇ ಮಾತನಾಡಬೇಕೆಂದು ನಿಶ್ಚಯಿಸಿದೆನು. ಅದು ಹೇಗೆ ಸಾಧ್ಯವಾಗುವುದು? ನನಗೆ ಧೈರ್ಯಸಾಲದು. ಆದ್ದರಿಂದ ಬರೆದುಕೊಂಡು ಹೋದೆನು. ಬರೆದಿದ್ದುದನ್ನು ಕೂಡ ನಾನು ಓದಲಾರದವನಾಗಿದ್ದುದರಿಂದ ಅಧ್ಯಕ್ಷರ ವಶಕ್ಕೆ ಕೊಟ್ಟೆನು. ಅವರು ಇನ್ನೊಬ್ಬರಿಂದ ಓದಿಸಿದರಾದರೂ ಅಲ್ಲಿನ್ಸನ್‌ರವರನ್ನು ಹೊರಡಿಸಬೇಕೆಂಬ ತೀರ್ಮಾನವು ಅನುಮೋದಿಸಲ್ಪಟ್ಟಿತು. ಮೊದಲನೆಯ ಪ್ರಯತ್ನದಲ್ಲೇ ನನಗೆ ಪರಾಜಯವಾಯಿತಾದರೂ ನನ್ನ ಅಭಿಪ್ರಾಯವು ಸರಿಯಾದುದೆಂಬ ಸಮಾಧಾನವು ಮಾತ್ರ ನನಗುಂಟಾಗಿದ್ದಿತು. ಅನಂತರ ನಾನು ಕಾರ್ಯನಿರ್ವಾಹಕಸಂಘದ ಮೆಂಬರುತನಕ್ಕೆ ರಾಜೀನಾಮೆಕೊಟ್ಟ ಜ್ಞಾಪಕವಿದೆ. ನಾನು ಆಂಗ್ಲದೇಶದಲ್ಲಿದ್ದಷ್ಟು ಕಾಲ ನನಗೆ ಆ ಹೇಡಿತನವು ಹೋಗಲಿಲ್ಲವು. ಸ್ನೇಹಿತರ ಮನೆಗೆ ಹೋದರು ಕೂಡ ಹತ್ತುಜನರು ಸೇರಿದ್ದರೆ ನನಗೆ ಮಾತನಾಡಲಾಗುತ್ತಿರಲಿಲ್ಲ. ನಾನು ಒಂದುವೇಳೆ ಮಜುಂದಾರರೊಡನೆ ಹೋದೆನು. ಅಲ್ಲಿ ಒಂದು ಶಾಕಾಹಾರಕುಟುಂಬದಲ್ಲಿಳಿದುಕೊಂಡೆವು. ದಿ ಎಥಿಕ್ಸ್ ಆಫ್ ಡಯಟ್ ಎಂಬ ಗ್ರಂಥವನ್ನು ರಚಿಸಿದ ಹೋವರ್ಡ್ ರವರೂ ಅಲ್ಲೇ ವಾಸಿಸುತ್ತಿದ್ದರು. ಎಂಟನರು ಆರೋಗ್ಯಸ್ಥಳವು. ನಾನು ಹೋವರ್ಡರವರನ್ನು ನೋಡಿ ಮಾತನಾಡಿ ಶಾಕಾಹಾರಪ್ರಚಾರಕ್ಕಾಗಿ ಒಂದುಸಭೆಯನ್ನು ಏರ್ಪಡಿಸಿದೆನು. ಆ ಸಭೆಯಲ್ಲಿ ಮಾತನಾಡಲು ನೀವು ಬರಬೇಕೆಂದು ಅವರು ನಮಗೆ ಹೇಳಿದರು. ಅಂತಹ ಸಭೆಯಲ್ಲಿ ಬರೆದು ಓದುವುದು ತಪ್ಪಲ್ಲವೆಂದು ನಾನು ತಿಳಿದಿದ್ದೆನು. ಅನೇಕರು ಹಾಗೆಯೇ ಮಾಡುತ್ತಾರೆ. ನಾನು ಬರೆದುಕೊಳ್ಳದೆ ಮಾತನಾಡುವುದು ಅಸಂಭವವಾದುದರಿಂದ ಮಾತನಾಡಬೇಕೆಂದಿದ್ದ ವಿಷಯವನ್ನು ಬರೆದುಕೊಂಡು ಹೋದೆನು. ಅದು ಒಂದು ಫುಲ್‌ಸ್ಕೇಪ್ ಗಿಂತ ಹೆಚ್ಚಾಗಿರಲಿಲ್ಲವು. ಮತ್ತು ನಾನು ಸಭೆಯಲ್ಲೆದ್ದು ನಿಂತುಕೊಂಡ ಕೂಡಲೆ ನನ್ನ ಕಣ್ಣುಗಳು ಮಂಜಾದುವು. ಶರೀರವೆಲ್ಲವೂ ನಡುಗಲಾರಂಭಿಸಿತು. ಅಲ್ಲದೆ ಬಾಯನ್ನೇ ಬಿಡಲಿಲ್ಲವು. ಆದುಕಾರಣ ಅದನ್ನು ಮುಜುಂದಾರರೇ ಓದಿದರು. ಅವರು ಪ್ರತ್ಯೇಕವಾಗಿ ಉಪನ್ಯಾಸಮಾಡಿದಾಗ ಸಭಿಕರು ಹರ್ಷಧ್ವನಿಮಾಡಿದರು. ಆಗ ನನಗೆ ಬಹಳ ಲಜ್ಜೆಯುಂಟಾಯಿತು. ಈ ಪಾಪಿಷ್ಟ ನಾಚುಗೆಯು ನನಗೇಕೆ ಉಂಟಾಯಿತೆಂದು ಬಹಳವಾಗಿ ಚಿಂತಿಸಿದೆನು.

ಕಡೆಯಸಾರಿ ನಾನು ಆಂಗ್ಲದೇಶವನ್ನು ಬಿಟ್ಟು ಭರತಖಂಡಕ್ಕೆ ಹೊರಡುವಾಗಲೂ ಪುನಃ ಬಹಿರಂಗಸಭೆಯಲ್ಲಿ ಮಾತನಾಡಲು ಪ್ರಯತ್ನಿಸಿದೆನು; ಆ ಸಾರಿಯುಕೂಡ ಆಭಾಸವಾಯಿತು. ಶಾಕಾಹಾರಿಗಳಾದ ಮಿತ್ರರಿಗೆ ಹಲ್ಬರ್ನ್‌ರೆಸ್ಟೋರೆಂಟಿನಲ್ಲಿ ಶಾಕಾಹಾರಔತಣಮಾಡಿಸಲೇರ್ಪಡಿಸಿ ಅವರನ್ನು ಆಹ್ವಾನಿಸಿದೆನು. ಅದು ಶಾಕಾಹಾರಭೋಜನಶಾಲೆಯಲ್ಲದಿದ್ದರೂ ನಾನು ಮೇನೇಜರಿಗೆ ಹೇಳಿ ಬರೇಶಾಕಾಹಾರ ಮಾಡಿಸಲೇರ್ಪಡಿಸಿದೆನು. ನನ್ನ ಸ್ನೇಹಿತರು ಈ ಹೊಸಪದ್ಧತಿಗೆ ಬಹಳ ಸಂತೋಷಪಟ್ಟರು. ಔತಣವು ವಿನೋದಕ್ಕಾಗಿಯೇ ಆದರೂ ಪಾಶ್ಚಾತ್ಯರು ಔತಣದಲ್ಲಿ ಬಹಳ ತೇಗಡೆಯಾಗಿರುವ ಪ್ರಯುಕ್ತ ಅಲ್ಲಿ ಬಹಳವೈಭವದಿಂದ ಸಂಗೀತ, ಉಪನ್ಯಾಸ ಇತ್ಯಾದಿ ವಿನೋದಗಳಿಂದ ಸಂತೋಷಕೂಟವು ನಡೆಸಲ್ಪಡುವುದುಂಟು. ನಾನು ಕೊಂಚ ಜನರನ್ನೇ ಆಹ್ವಾನಿಸಿದ್ದೆನಾದರೂ ಉಪನ್ಯಾಸವು ಯಥಾಪ್ರಕಾರ ಜರುಗಿತು. ನನ್ನ ಸರದಿಯು ಬಂದಾಗ ನಾನು ಎದ್ದು ನಿಂತುಕೊಂಡೆನು. ಸ್ವಲ್ಪಮಾತನಾಡಬೇಕೆಂದು ಯೋಚಿಸಿದೆನಾದರೂ ಒಂದುವಾಕ್ಯವನ್ನು ಮಾತ್ರ ಹೇಳುವಷ್ಟರಲ್ಲಿ ನನಗೆ ವಾಗ್ಬಂಧವಾಯಿತು. ವಿನೋದಕರವಾಗಿ ಮಾತನಾಡುವುದಕ್ಕೆಸಿ ಹ್ಯಾಪಮುಖಮಾಡಿಕೊಂಡೆನು. ನೀವು ದಯೆಯಿಟ್ಟು ಬಂದುದಕ್ಕಾಗಿ ವಂದಿಸುತ್ತೇನೆಂದು ಹೇಳಿ ಕುಳಿತುಕೊಂಡೆನು. ಅನಂತರ ಅಡಿಸನ್‌ರವರು ಪಾರ್ಲಿಮೆಂಟ್‌ಸಭೆಯಲ್ಲಿ ಮೊದಲನೆಯಾವರ್ತಿ ಮಾತನಾಡುವಾಗ್ಗೆ ನಾನು ನಾನು ನಾನು ಎಂದು ಮೂರಾವರ್ತಿ ಹೇಳಿದರು. ಅದರ ಮೇಲೆ ಮಾತೇಹೊರಡಲಿಲ್ಲವು. ಅದನ್ನು ನೋಡಿ ಒಬ್ಬನು ಎದ್ದು ಇವರು ಮೂರುಮಾತಿನಿಂದೇನು ಹುಟ್ಟಿದುದೂ ಕಂಡುಬರಲಿಲ್ಲವೆಂದು ಪರಿಹಾಸಮಾಡಿದನು. ಆ ಕಥೆಯನ್ನು ಕುರಿತು ಹಾಸ್ಯರಸಪ್ರಧಾನವಾಗಿ ಮಾತನಾಡಬೇಕೆಂದು ಅಪೇಕ್ಷಿಸಿದೆನಾದರೂ ಹಾಗೆ ಮಾಡಲಾರದೆ ಹೋದೆನು.

ನನಗೆ ಈ ನಾಚುಗೆಯು ಯಾವಾಗಲೂ ಪೂರ್ತಿಯಾಗಿ ಹೋಗಲಿಲ್ಲವಾದರೂ ದಕ್ಷಿಣಾಫ್ರಿಕೆಯಲ್ಲಿ ಬಹಳಮಟ್ಟಿಗೆ ಕಡಿಮೆಯಾಯಿತು. ಸರಾಗವಾಗಿ ನಾನು ಮಾತನಾಡಲಾರೆನು. ಯಾರಾದರು ಹೊಸಬರನ್ನು ಕಂಡಲ್ಲಿ ನನಗೆ ಬಹಳ ಸಂಕೋಚವಾಗುವುದರಿಂದ ನಾನು ಅವರ ಕೂಡ ಮಾತನಾಡಲು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುವೆನು. ಈಗಲಾದರೂ ಹತ್ತುಜನ ಸ್ನೇಹಿತರಕೂಡ ಸೇರಿದಾಗ ನೆಪಮಾಡಿಕೊಂಡು ಯಾವ ವಿಚಾರವಾಗಿಯಾದರೂ ಮಾತನಾಡಬೇಕೆಂದರೆ ನನಗೆ ಸಾಧ್ಯವಲ್ಲವು.

ಈ ನಾಚುಗೆಯ ದೆಸೆಯಿಂದ ಆಗಾಗ್ಗೆ ಪರಿಹಾಸವಾಗಿ ಸಭಿಕರು ನಗುವುದರವಿನಾ ಮತ್ತಾವ ಹಾನಿಯಾಗುತ್ತಿರಲಿಲ್ಲವು. ಆಗ್ಗೆ ಅದು ನನಗೆ ಬಹಳ ಲಜ್ಜೆಯನ್ನುಂಟುಮಾಡುವುದಾಗಿದ್ದಿತಾದರೂ ಈಗ ಬಹಳ ಉಪಕಾರಿಯೇ ಆಗಿದೆ. ಅವಸರದಿಂದ ಮಾತನಾಡುವ ದುರಭ್ಯಾಸವಿಲ್ಲದಂತಾಯಿತು. ಮಿತವಾಗಿ ಮಾತನಾಡುವ ಅಭ್ಯಾಸವಾಗಿರುವುದು. ತಪ್ಪನ್ನು ನಿರೋಧಿಸುವ ಶಕ್ತಿಯು ಕೂಡ ಬಂದಿದೆ. ಆಲೋಚಿಸದೆ ಯಾವ ಮಾತನ್ನೂ ಆಡುವುದಾಗಲಿ ಬರೆಯುವುದಾಗಲಿ ಇಲ್ಲವೆಂದು ನಾನು ಈಗ ಧೈರ್ಯವಾಗಿ ಹೇಳುತ್ತೇನೆ. ತೊಂದರೆಪಟ್ಟುಕೊಂಡು ಮಾತನಾಡಲಿಕ್ಕಾಗದ ಮಾತನ್ನಾಡುವುದೂ ಬರೆಯಲಿಕ್ಕಾಗದ ಪದಗಳನ್ನು ಬರಯುವುದೂ ಅನಂತರ ಚಿಂತಿಸುವುದೂ ಈವರೆಗೆ ಎಂದೂ ಜರುಗಿಲ್ಲವು. ಈರೀತಿಯಾಗಿ ಅನೇಕ ತೊಡಕುಗಳೂ ವೃಥಾ ಕಾಲಯಾಪನೆಯೂ ತಪ್ಪಿರುತ್ತವೆ. ಸತ್ಯನಿರತೆಗೆ ಮಿತಭಾಷಣವು ಒಂದು ಮುಖ್ಯ ವಿಧಿಯೆಂದು ಸಹ ನಾನು ಅನುಭವದಿಂದ ತಿಳಿದಿರುವೆನು. ಅತಿಶಯೋಕ್ತಿಯಿಂದ ತಿಳಿಸುವುದೂ ಸತ್ಯವನ್ನು ಮರಮಾಜಿ ಹೇಳುವುದೂ ಮನುಷ್ಯನ ಸಹಜವಾದ ಮನೋದೌರ್ಬಲ್ಯವು. ಅದುಕಾರಣ ಮೌನವೂ ಮಿತಭಾಷೆಯೂ ಅಗತ್ಯವು. ಮಿತಭಾಷಿಯು ಅಪ್ರಸ್ತುತಪ್ರಸಂಗವನ್ನು ಎಂದಿಗೂ ಮಾಡುವುದಿಲ್ಲ; ಸಿಧಾನಿಸಿ ಮಾತನಾಡಲು ಬಹಳ ಜನರು ಪ್ರಯತ್ನಿಸುವರು. ಪ್ರತಿಸಭೆಯಲ್ಲೂ ಮಾತನಾಡಲು ಅಪ್ಪಣೆಯನ್ನು ಕೋರಿ ಅನೇಕರು ಅಧ್ಯಕ್ಷನಿಗೆ ಚೀಟಿಯನ್ನು ಬರೆದು ಕಳುಹಿಸುತ್ತಿರುವರು. ಅಪ್ಪಣೆ ದೊರಕಿದರೆ ಕ್ಲುಪ್ತಕಾಲ ಮೀರಿ ಮಾತನಾಡುವರು. ಇನ್ನು ಕೊಂಚಕಾಲ ಬೇಕೆಂದು ಹೇಳುವರು. ಅಪ್ಪಣೆ ಕೊಡುವುದಿಲ್ಲವೆಂದರೂ ಸುಮ್ಮನೆ ಮಾತನಾಡುತ್ತಲೇ ಇರುತ್ತಾರೆ. ಈ ಪೊಳ್ಳುಮಾತುಗಳಿಂದ ಲೋಕಕ್ಕೆ ತೃಣಮಾತ್ರ ಪ್ರಯೋಜನವಿಲ್ಲವು. ಆದರಿಂದ ವೃಥಾಕಾಲಕ್ಷೇಪವೇ ಹೊರತು ಮತ್ತೆ ಬೇರೆಯಿಲ್ಲ. ಆದುಕಾರಣ ನನ್ನ ನಾಚುಗೆಯೇ ನನಗೆ ಒಂದು ಗುರಾಣಿಯಾಗಿರುವುದು. ನನ್ನ ಅಭಿವೃದ್ಧಿಗು ಕೂಡ ಅದೇಕಾರಣವು. ಸತ್ಯಪರೀಕ್ಷೆಯಲ್ಲು ಕೂಡ ಅದೇ ನನಗೆ ಕಂಡುಬಂದಿತು.

ಅನಾಥವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ಹೊಳಲ್ಕೆರೆ ಟವನ್ನಿನಲ್ಲಿ ಕೈ. ಚನ್ನಪಟ್ಟಣದ ಕಾಲ್ವೆ ಹಳ್ಳಿಮಠದ ಗುರುಶಾಂತಪ್ಪಯ್ಯನವರ ಧರ್ಮದಿಂದ ನಡಿಯುತ್ತಿರುವ ಅನಾಥವೀರಶೈವಾಶ್ರಮದಲ್ಲಿ ಇಂಗ್ಲೀಷು ಲೋವರ್‌ಸೆಕೆಂಡರಿವರೆಗಿನ ತರಗತಿಗಳಲ್ಲಿ ಅಭ್ಯಾಸಮಾಡುವ 15 ವೀರಶೈವ ಅನಾಥವಿದ್ಯಾರ್ಥಿಗಳಿಗೆ ಭೋಜನದ ಏರ್ಪಾಟು ಉಚಿತವಾಗಿ ಮಾಡಲ್ಪಟ್ಟಿರುತ್ತದೆ. ಈ ಆಶ್ರಮದಲ್ಲಿ ಸೇರಿ ಅಭ್ಯಾಸಮಾಡಬೇಕೆಂದು ಅಪೇಕ್ಷಿಸುವ ಇಂಗ್ಲೀಷು 1 ನೇ ತರಗತಿಯಿಂದ ನಾಲ್ಕನೇ ತರಗತಿಯವರೆಗಿನ (ಲೋವರ್‌ಸೆಕೆಂಡರಿ) ವಿದ್ಯಾರ್ಥಿಗಳು ಮೇ ಮಾಹೆ ತಾರೀಖು 15 ರ ಒಳಗಾಗಿ ತಲುಪುವಂತೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. ಅನಂತರ ಬರತಕ್ಕ ಅಪ್ಲಿಕೇಷನ್‌ಗಳು ಗಮನಿಸಲ್ಪಡುವದಿಲ್ಲ. ಈ ಕೆಳಗಿನ ವಿಳಾಸಕ್ಕೆ ಒಂದಾಣೆಸ್ಟಾಂಪಿಟ್ಟು ಬರೆದುಕೊಂಡಲ್ಲಿ ಬೇಕಾಗುವ ಅಪ್ಲಿಕೇಷನ್ ಫಾರಂಗಳು ಕಳುಹಿಸಿಕೊಡಲ್ಪಡುತ್ತವೆ. ಸೆಕ್ರೆಟರಿ,

ಅನಾಥವೀರಶೈವಾಶ್ರಮ, ಹೊಳಲ್ಕೆರೆ.

ಔದ್ಯೋಗಿಕ ನಿಬಂಧಕ್ಕೆ 10 ರೂಪಾಯಿ ಇನಾಮು.

ನಿಮ್ಮ ಅಥವಾ ನಿಮ್ಮ ಕೇರಿಯ ಊರಲ್ಲಿ ನಡೆದಿರುವ ಒಂದು ಉಪಯುಕ್ತ ಉದ್ಯೋಗದ ವರ್ಣನೆಯನ್ನು ತಿಳಿಗನ್ನಡದಲ್ಲಿ ವ್ಯವಸ್ಥಿತವಾಗಿಯೂ ಸುವಾಚ್ಯವಾಗಿಯೂ ಮನೋರಂಜಕವಾಗಿಯೂ ಬರೆದು ಈ ಮೇ ತಿಂಗಳ ಕೊನೆಯ ಒಳಗಾಗಿ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಆ ಉದ್ಯೋಗವು ಸ್ವಲ್ಪ ಬಾಂಡವಲದಿಂದ ಬಡವರ ಚರಿತಾರ್ಥವನ್ನು ಸಾಗಿಸುವಂಥಾದ್ದಿರಬೇಕು. ಅದರಿಂದ ದೇಶದ ದುಡ್ಡು ದೇಶದಲ್ಲಿ ಉಳಿಯಬೇಕು. ಲೇಖಕರು ಕರ್ನಾಟಕವೃತ್ತದ ಚಂದಾದಾರರಿರಬೇಕು, ಅಥವಾ ಜೂನ್ ತಿಂಗಳು ಮುಗಿಯುವದರೊಳಗಾಗಿ ಚಂದಾದಾರರಾಗಬೇಕು.

ನಿಬಂಧವು ಫುಲ್‌ಸ್ಕೇಪ್ ಆಕಾರದ 10 ಪುಟಗಳು ತುಂಬುವಷ್ಟಿದ್ದು ಕಾಗದದ ಒಂದೇ ಮಗ್ಗುಲಿಗೆ ಬರೆಯಲ್ಪಟ್ಟಿರಬೇಕು.

ಇನಾಮು ಪಡೆದವರ ಹೆಸರೂ ನಿಬಂಧವೂ ಜುಲೈ ತಿಂಗಳ ಪ್ರಾರಂಭಕ್ಕೆ ಕರ್ನಾಟಕವೃತ್ತದಲ್ಲಿ ಪ್ರಸಿದ್ಧಿಸಲ್ಪಟ್ಟು ಇನಾಮು ಹಣವು ಅವರ ವಿಳಾಸಕ್ಕೆ ಕೂಡಲೇ ಮನಿಯಾರ್ಡರ್ ಮಾಡಲ್ಪಡುವದು.

ಸಂಪಾದಕ, ಕರ್ನಾಟಕವೃತ್ತ, ಧಾರವಾಡ.

ಪ್ರಾಂತೀಕ ವೀರಶೈವತರುಣಸಮ್ಮೇಳನ.

ಬಳ್ಳಾರಿಯ ವೀರಶೈವತರುಣಸಂಘದ ವಾಚನಾಲಯದಲ್ಲಿ ಈ ತಾ|| 3 ರಲ್ಲಿ ಮ|| ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿ, ಬಿ.ಎ., ಬಿ.ಎಲ್., ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಈಗ ಬಳ್ಳಾರಿಯಲ್ಲಿ ಜರುಗಲಿಕ್ಕಿರುವ ಕರ್ನಾಟಕಪರಿಷತ್ತುಗಳೊಡನೆ ಪ್ರಾಂತೀಕ ವೀರಶೈವತರುಣಸಮ್ಮೇಳನವನ್ನು ಈ ತಾ|| 20 ಮತ್ತು 21 ರಲ್ಲಿ ಬಿಜಾಪುರದ ರಾವ್‌ಸಾಹೇಬ್ ಪಿ. ಜಿ. ಹಳಕಟ್ಟಿ ಬಿ.ಎ., ಎಲ್‌ಎಲ್.ಬಿ, ಇವರ ಅಧ್ಯಕ್ಷತೆಯಲ್ಲಿ ಜರುಗಿಸಬೇಕೆಂದೂ ಈ ಸಮ್ಮೇಳನದ ಸ್ವಾಗತಮಂಡಲಿಗೆ ಮ|| ಹೀರದ ಕರಿಬಸಪ್ಪನವರು ಅಧ್ಯಕ್ಷರಾಗಿರಬೇಕೆಂದೂ ನಿರ್ಧರಿಸಲ್ಪಟ್ಟಿರುತ್ತದೆ. ಈ ಸಮ್ಮೇಳನಕ್ಕೆ ದಯಮಾಡಿಸತಕ್ಕ ಪ್ರತಿನಿಧಿಗಳು ಈ ಮೇ ತಾ|| 15 ರೊಳಗಾಗಿ ಕಾರ್ಯದರ್ಶಿಯವರಿಗೆ ಬರೆದು ತಿಳಿಸಬೇಕು.

ಸಭೆಯಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳು.

(1) ಕರ್ನಾಟಕಏಕೀಕರಣವಿಷಯದಲ್ಲಿ ವೀರಶೈವತರುಣರು ಮಾಡತಕ್ಕ ಕರ್ತವ್ಯ. (2) ಸಿರಸಂಗೀಕರ ಫಂಡಿನ ಸೌಲಭ್ಯಸಾಧನೆ. (3) ಬಳ್ಳಾರಿವೀರಶೈವಸ್ಕೂಲನ್ನು ಹೈಸ್ಕೂಲನ್ನಾಗಿ ಮಾಡುವ ಬಗ್ಗೆ ವಿಚಾರಗಳು. (4) ಬಳ್ಳಾರಿಜಿಲ್ಲೆಯನ್ನು ಮದ್ರಾಸ್ ಯೂನಿವರ್ಸಿಟಿಗೆ ಸೇರಿಸಬೇಕಾಗಿ ಮದ್ರಾಸ್ ಸರ್ಕಾರದವರನ್ನು ಪ್ರಾರ್ಥಿಸುವಿಕೆ. (5) ವಿವಾಹಕಾರ್ಯಗಳಲ್ಲಿ ವರದಕ್ಷಿಣೆ, ಕನ್ಯಾಶುಲ್ಕ ಮತ್ತು ದುಂದುವೆಚ್ಚಗಳ ನಿಷೇಧವಿಚಾರ. (6) ಸ್ತ್ರೀ ವಿದ್ಯಾಭ್ಯಾಸ. (7) ಕರ್ನಾಟಕಪ್ರಾಂತ್ಯಗಳಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ವೀರಶೈವತರುಣಸಂಘಗಳನ್ನೂ, ವಾಚನಾಲಯಗಳನ್ನೂ ಸ್ಥಾಪಿಸುವ ಆವಶ್ಯಕತೆ ಮತ್ತು ಸಬ್‌ಜಕ್ಟ್ ಕಮಿಟಿಯಲ್ಲಿ ಪಾಸಾದ ಇತರ ವಿಷಯಗಳು.

ಕಾರ್ಯದರ್ಶಿ, ಪಿ. ಎಂ. ನಂಜುಂಡಯ್ಯ,

ಸ್ವಾಗತಮಂಡಲಿ, ತರುಣಸಂಘ, ಬಳ್ಳಾರಿ.

ಪ್ರಕಟನೆ.

ಶ್ರೀಮನ್ಮಹಾರಾಜನಿರಂಜನಜಗದ್ಗುರು ಮೂರುಸಾವಿರಮಠ ಹುಬ್ಬಳ್ಳಿ ಇವರ ಸಂಸ್ಥಾನಕಚೇರಿಯಿಂದ.

ಈ ಮೂಲಕ ಯಾವತ್ತೂ ಕನ್ನಡವಾಙ್ಮಯ ವಿಶಾರದರಾದ ಜನರಿಗೆ ತಿಳಿಸುವದೇನೆಂದರೆ.—ನಮ್ಮ ವೀರಶೈವಸಮಾಜೋದ್ಧಾರಕ್ಕೆ ಯಾವ ಮಹಾತ್ಮರು ತಮ್ಮ ಅತುಲವಾದ ಸರ್ವಸಂಪತ್ತನ್ನೂ ಧಾರೆಯೆರೆದು ಮಠವನ್ನೇ ಋಣಿಯನ್ನಾಗಿ ಮಾಡಿರುವರೋ ಆ ಪುಣ್ಯಶ್ಲೋಕೀ ಕೈ. ವಾ. ಶಿರಸಂಗಿ ಲಿಂಗಭೂಪರ ವಿಷಯದಲ್ಲಿ ಯಾವತರಹದಿಂದ ಎಷ್ಟು ಪ್ರಕಾರಗಳಾದ ಸ್ಮಾರಕಗಳನ್ನು ಮಾಡಿದರೂ ತೀರದುದಾಗಿದೆ. ಆದರೆ ಅದೇ ಸುತ್ಯಪ್ರಯತ್ನಕ್ಕನುಸರಿಸಿ ಅವರ ಚರಿತ್ರೆಯೊಳಗಿನ ಸಂಸ್ಮರಣೀಯ ಚಿತ್ರಗಳು ಸಕಲ ಜನರ ಹೃತ್ಪಟಲದಲ್ಲಿ ಮೂಡಿ ಆ ಉದಾರ ಹೃದಯರಮಾರ್ಗದಂತೆ ತಮ್ಮ ತಮ್ಮ ರಾಷ್ಟ್ರಸಮಾಜಾದಿಗಳ ಪುರೋವೃದ್ಧಿಯಲ್ಲಿ ಸ್ವಲ್ಪವಾದರೂ ಪ್ರಯತ್ನವನ್ನು ಮಾಡಲು ಸಹಾಯವಾಗಬೇಕೆಂದು ನಾವೀಗ ಆ ಲಿಂಗರಾಜರ ಚರಿತ್ರೆಯನ್ನು ನಾಟಕರೂಪದಿಂದ ಬರಿಸಬೇಕೆಂದು ಯೋಚಿಸಿರುತ್ತೇವೆ. ಈ ನಾಟಕವು ನಾಲ್ಕು ಅಥವಾ ಐದು ಅಂಕಗಳ ಪ್ರಮಾಣದಷ್ಟಿದ್ದು ಪ್ರಸಂಗಾನುಸಾರ ಹೈಸ್ಕೂಲ ಕಾಲೇಜದ ವಿದ್ಯಾರ್ಥಿಗಳು ಅಭಿನಯಿಸಲಿಕ್ಕೆ ಎರಡು ಭಾಗಗಳನ್ನು ಮಾಡಲಿಕ್ಕೆ ಬರುವಂತಿರಬೇಕು. ನಾಟಕರಚನೆಯಲ್ಲಿ ಸಂದರ್ಭಾನುಸಾರ ಸ್ವಧರ್ಮ ಸ್ವಭಾಷಾ ಒಕ್ಕಲತನ ಕಲಾಕೌಶಲಾದಿ ವಿಷಯಗಳ ಅಭಿವೃದ್ಧಿಯು ಹುರುಪಿನಿಂದ ವಿವೇಚಿಸಲ್ಪಟ್ಟಿರಬೇಕು. ಭಾಷಾಶೈಲಿಯು ಸುಲಭವಾಗಿಯೂ ಉತ್ತೇಜಕವಾಗಿಯೂ ಇರತಕ್ಕದ್ದು. ಈ ತರಹದಿಂದ ಯಾರು ನಾಟಕವನ್ನು ಬರೆದು ಸನ್ 1926 ನೇ ಡಿಸೆಂಬರ ತಿಂಗಳೊಳಗಾಗಿ ನಮ್ಮ ಕಡೆಗೆ ಕಳಿಸುವರೋ ಅವರ ನಾಟಕಗಳನ್ನು ನೇಮಿಸಲ್ಪಟ್ಟ ಕಮಿಟಿಯವರು ವಿಚಾರಿಸಿ ಯಾವದು ಮೊದಲನೇ ನಂಬರದೆಂದು ಗೊತ್ತುಪಡಿಸುವರೋ ಅದರ ಕರ್ತೃಗಳಿಗೆ ಒಂದುನೂರು (100) ರೂಪಾಯಿಗಳು ಪಾರಿತೋಷಿಕವಾಗಿ ಕೊಡಲ್ಪಡುತ್ತವೆ. ಯಾವ ನಾಟಕಗ್ರಂಥಕ್ಕೆ ಇನಾಮು ದೊರೆಯುವದೋ ಅದರ ಸರ್ವಸ್ವಾಮಿತ್ವವು ಗ್ರಂಥಕಾರರದಿರದೆ ಎಲ್ಲರೀತಿಯಿಂದಲೂ ನಮ್ಮದೇ ಇರುತ್ತದೆ. ವಿಶೇಷಮಾಹಿತಿಗೆ ಪತ್ರವ್ಯವಹಾರ ಮಾಡತಕ್ಕವರು ಕೆಳಗಿನ ವಿಳಾಸಕ್ಕೆ ಮಾಡಬೇಕು.

ಕಾರಭಾರಿಗಳು, ಮೂರುಸಾವಿರಮಠ ಸಂ| ಹುಬ್ಬಳ್ಳಿ.

೧೯೨೬ ನೆಯ ಇಸವಿ ಮೇ ತಾ|| ೮ ರಿಂದ ೧೯೨೬ ನೆಯ ಇಸವಿ ಮೇ ತಾ|| ೧೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯ ನಾಮಸಂವತ್ಸರದ ನಿಜಚೈತ್ರ ಬಹುಳ ಏಕಾದಶಿಯಿಂದ ವೈಶಾಖ ಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಮಾಸ
8	ಶನಿ	ಏಕಾ	12-22	ಪೂಭಾ	0-56	26
9	[1] ಭಾನು	ದ್ವಾದ	6-55	ರೇವ	54-3	27
10	ಸೋಮ	ತ್ರ-ಚ	2-6 55-25	ಅಶ್ವಿ	51-37	28
11	ಮಂಗಳ	ಅಮಾ	54-19	ಭರ	50-17	29
12	ಬುಧ	ಅಷ್ಟ	52-30	ಕೃತ್ತಿ	50-3	30
13	[2] ಗುರು	ಪಾಡ್ಯ	51-43	ರೋಹಿ	51-0	31
14	[3] ಶುಕ್ರ	ತದಿ	52-12	ಮೃಗ	53-12	1

(1) ಮಳೆನಕ್ಷತ್ರ-ಕೃತ್ತಿಕೆ ೧ ನೆಯ ಪಾದ. (2) ಶ್ರೀ ಬಸವೇಶ್ವರ ಜಯಂತಿ. (3) ಮಳೆನಕ್ಷತ್ರ-ಕೃತ್ತಿಕೆ ೨ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಶ್ರೀಕಾ | ಧನಪತಿಕೃತಾವಕಾಶಾ ಪಕ್ಷದ್ವಿಪಕ್ಷತ್ತ ಸೋಮಶಾಲೀಯಾ |
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರೋಲಂಕೃತೀರ್ಪುಂಗವ | ಸ್ತೋಮಾಧೀಶ್ವರಶೀಲ ಪಾಲಿತಚ ಸಾಧ್ವಗ್ರ್ಯಾಲಿಕಾಲಂಬಲಂ |
ನೀಮಾತೀಶಯುತಃಪ್ರತಾಪವಿಪುಲಂ ಸದ್ವೃತ್ತಮಾತಾಕುಲಂ | ಶ್ರೀಮಂಚೆತ್ತಿತೆಯುಂಸಮಾಧುರೀಗೆ ಗೌರೀಶಾಸುಖಂಧೂಳ್ವಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೧೦-೦] [ಲೈಬ್ರರಿಗೆ ೨-೧೦-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಮೇ ತಾರೀಖು ೧೫ ನೆಯ ಶನಿವಾರ. [ಸಂಚಿಕೆ ೨೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

19

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-8-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ಸ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,

ಕ್ರಾಸ್‌ಆಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಅದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಕ್ಷೇಮಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ನೂರು ಚೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50—31] ಪೋ. ಬಾ. ೫೧, ಮದರಾಸು

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—

ಕೆ. ಹೆಚ್. ಎಂ. ಮಹದೇವಯ್ಯ,

[13-8] ಚಾಮರಾಜನಗರ (ಮೈ. ಸ್ಟೇಟ್).

ಆಯುರ್ವೇದ ಸುಲಭಚಿಕಿತ್ಸೆಗಳು.

ರಾಜಧಾನಿಯಲ್ಲಿರುವ ಸರ್ಕಾರೀ ಆಯುರ್ವೇದವೈದ್ಯಶಾಲೆಯಲ್ಲಿ ತಯಾರಿಸಿ ನಿತ್ಯವೂ ಉಪಯೋಗಿಸಲ್ಪಡುವ ಔಷಧಗಳಲ್ಲಿ ಕೆಲವು ಸ್ಟಾರ್ ಪತ್ರಿಕಾ ವಾಚಕರ ಉಪಯೋಗಾರ್ಥವಾಗಿ ಈ ಕೆಳಗೆ ಕೊಡಲ್ಪಟ್ಟಿವೆ.—

ದೃಷ್ಟಿಪ್ರದವರ್ತಿ.

ಅಳಲೆಕಾಯಿ
ನೆಲ್ಲಿಚೆಟ್ಟು
ತಾರೆಕಾಯಿ
ಅನ್ನಭೇದಿ

ಕನ್ನೈದಲೆ
ವಾಯುವಿಳಂಗ
ಸಮುದ್ರದನೊರೆ
ಕೋಳಿಮೊಟ್ಟೆಚಿಪ್ಪು

ಇವುಗಳನ್ನು ಸಮಭಾಗವಾಗಿ ಚೂರ್ಣಿಸಿ ಆಡಿನ ಹಾಲಿನಿಂದ ಚೆನ್ನಾಗಿ ನುಣ್ಣಗೆ ಅರೆದು ಏಳುರಾತ್ರಿ ತಾಮ್ರದ ಪಾತ್ರೆಯಲ್ಲಿ ಇಟ್ಟಿದ್ದು ಪುನಃ ಆಡಿನ ಹಾಲಿನಲ್ಲಿ ಅರೆದು ಬತ್ತಿಗಳನ್ನು ಮಾಡಿಡಬೇಕು. ಇದನ್ನು ನೀರಿನಿಂದ ಅರೆದು ಅಂಜನದಂತೆ ಕಣ್ಣಿಗೆ ಹಚ್ಚಿದರೆ ದೃಷ್ಟಿಮಾಂದ್ಯವು ಹೋಗಿ ನೇತ್ರಪಾಟವವುಂಟಾಗುವುದು.

ಮಹಾನಾರಿಕೇಳಾಂಜನ.

ಅತಿಮಧುರ ಅಳಲೆಕಾಯಿ ತಾರೆಕಾಯಿ ನೆಲ್ಲಿಚೆಟ್ಟು
ಮರದ ಅರಿಶಿನ ಇವುಗಳು ಬಗೆ ಒಂದಕ್ಕೆ ೩ ತೊಲ
ಎಳನೀರು ೪ ಸೇರು

ಇವುಗಳನ್ನು ಎಂಟನೇ ಒಂದು ಭಾಗಕ್ಕೆ ಕಾಯಿಸಿ ಕಷಾಯವಿಳಿಸಿ ಶೋಧಿಸಿ ಪುನಃ ಪಾಕಮಾಡುವುದಕ್ಕೆ ೪ ಸೇರು ಎಳನೀರನ್ನು ಸೇರಿಸಿ ಅದಕ್ಕೆ ಸೇರಿಸುವ ಕಲ್ಕದ್ರವ್ಯಗಳು—ಮೈಲುತುತ್ತ, ಪಚ್ಚಕರ್ಪೂರ, ಸಮುದ್ರದನೊರೆ, ಕಾವಿ, ಸೈಂಧವಲವಣ, ರಸಾಂಜನ, ಮೆಣಸು ಪ್ರತ್ಯೇಕ ೧ ಆಣೆ ತೂಕ ಸೇರಿಸಿ ಪಾಕಮಾಡಿ || ಸೇರಿಗೆ ಇಳಿಸಿ ಜೇನುತುಪ್ಪವನ್ನು ಸೇರಿಸಿ (೧|| ತೊಲ) ತಯಾರುಮಾಡಿ ಉಪಯೋಗಿಸಿದರೆ ನೇತ್ರರೋಗಗಳೆಲ್ಲಾ ಪರಿಹಾರವಾಗುವವು.

ಸುಖಾವತಿ.

ಚೆಲ್ಲದಬೀಜ
ಶಂಖಭಸ್ಮ
ಸೈಂಧವಲವಣ
ಹಿಪ್ಪಲಿ

ಮೆಣಸು
ಶುಂಠಿ
ಸಕ್ಕರೆ
ಸಮುದ್ರಫೇನ
ಕೋಳೀಮೊಟ್ಟೆಚಿಪ್ಪು

ರಸಾಂಜನ
ಜೇನುತುಪ್ಪ
ವಾಯುವಿಳಂಗ
ಮಣಿಶಿಲೆ

ಇವೆಲ್ಲವನ್ನೂ ಅರೆದು ಕಡ್ಡಿಗಳನ್ನು ಮಾಡಿ ಒಣಗಿಸಿ ನೀರಿನಿಂದ ತೆಯುದು ಕಣ್ಣಿಗೆ ಹಚ್ಚಿದರೆ ಛಾಳೀಸ, ಪಟಲ, ಕಾಚ, ಉರಿ ಮುಂತಾದ ನೇತ್ರರೋಗಗಳು ಗುಣವಾಗುವವು.

ವಿಜಯಚೂರ್ಣ.

ಶುಂಠಿ
ಮೆಣಸು
ಹಿಪ್ಪಲಿ
ಅಳಲೇಕಾಯಿ
ತಾರೇಕಾಯಿ
ನೆಲ್ಲಿಚೆಟ್ಟು
ಏಲಕ್ಕಿ
ಲವಂಗಚೆಕ್ಕೆ
ಲವಂಗಪತ್ರೆ
ಬಜೆ
ಕುರಿದಹಿಂಗು
ಅಗಿಲುಶುಂಠಿ

ಸಜ್ಜಿಕ್ಷಾರ
ಯವಕ್ಷಾರ
ಅರಶಿನ
ಮರದರಿಶಿನ
ಚವ್ಯ
ಚಿತ್ರಮೂಲ
ಕೊಲುಮುರುಕನಚೆಕ್ಕೆ
ಗಜಹಿಪ್ಪಲಿ
ಪಂಚಲವಣ
ಹಿಪ್ಪಲಿಮೂಲ
ಬೆಲವತ್ತದಬೇರು
ವಾದಕ್ಕಿ

ಇವೆಲ್ಲವನ್ನೂ ಸಮಾಂಶವಾಗಿ ಚೂರ್ಣಿಸಿ, ಶೋಧಿಸಿ ಆಡುಹಾಲು ದಲ್ಲಿ ಹರಳೆಣ್ಣೆ ಅಥವಾ ಉಷ್ಣೋದಕದಿಂದ ಸೇವಿಸುವುದು. ಪ್ರಮಾಣ ೪ ವರಹ ತೂಕ.

ಸೌಭಾಗ್ಯಶುಂಠಿ.

ದೇಶಾವಾರದ ಶುಂಠಿ ೧ ಸೇರು ಸೂಕ್ಷ್ಮವಾಗಿ ಚೂರ್ಣಿಸಿ ಹಾಲು ೪ ಸೇರು, ಸಕ್ಕರೆ ೬| ಸೇರು, ತುಪ್ಪ ೧೬ ತೊಲ ಇವೆಲ್ಲವನ್ನೂ ಪಾಕಮಾಡಿ ದರ್ವೀಪಾಕಕ್ಕೆ ಬಂದಾಗ ಇದಕ್ಕೆ ಹಾಕುವ ಕಲ್ಕದ್ರವ್ಯಗಳು—

ಕೊತ್ತಂಬರಿಬೀಜ	೨೪ ತೊಲ	ಮೆಣಸು	೮ ತೊಲ
ದೊಡ್ಡಜೀರಿಗೆ	೪೦ ,,	ಶುಂಠಿ	೮ ,,
ವಾಯುವಿಳಂಗ	೮ ,,	[illegible]	೮ ,,
ಜೀರಿಗೆ	೮ ,,	[illegible]	೮ ,,
ಕರೀಜೀರಿಗೆ	೮ ,,	[illegible]	೪ ,,
ಹಿಪ್ಪಲಿ	೮ ,,	[illegible]	೪ ,,

ಏಲಕ್ಕಿ ೮ ತೊಲ

ಎಲ್ಲವನ್ನೂ ಚೂರ್ಣಮಾಡಿಸಿ. || ಪ್ರಮಾಣ ೧ [illegible] [illegible] [illegible] [illegible] [illegible] [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಮೇ ತಾ|| ೧೫ ನೆಯ ಶನಿವಾರ.

THE NEW DEWAN OF MYSORE.

We have already said that the appointment of Mr. Mirza M. Ismail as Dewan of Mysore was one of the most popular announcements made in recent years. We are now in a position to affirm that no Dewan has started his *regime* under more favourable auspices than Mr. Mirza. There is an evident desire in all quarters, official and non-official, to co-operate with him and make his *regime* a sure success. There has not been a single adverse comment on the appointment. It may be that there have not been signs of public demonstration of the welcome in the shape of entertainments, but this is not because the public are not desirous of giving them, for we know they are most anxious in the matter. Mr. Mirza is, we are informed not in favour of accepting them, of which there have been many offers, a policy with the justification of which we have nothing to quarrel. We are even glad that he has made a wholesome departure from the degenerate tendency of courting entertainments. Mr. Mirza took charge on the 1st of May 1926, and already his presence is being felt. We do not know how exactly the official business works. Even there we expect a healthy absence of sticking to red-tapism and greater expedition in the disposal of questions. But what is more striking is his daily morning rounds and inspections of City. We know hcw very indebted Mysore City is to the vigilence and direction of Mr. Mirza. We congratulate Bangalore City on getting so careful and so helpful a guardian as the new Dewan. We are sure that the official metropolis of the State will change its colour and form considerably during Mr. Mirza's *regime*. The City and its gardens will improve markedly and there will be good bit of work for the Municipality and the D.P.W. Evidently Mr. Mirza is one who believes that cleanliness is next to godliness. We hope that he will turn his gentle and sympathetic looks to the villages also and use his power and personality in making them more pleasent and suitable for habitation. That is a truly glorious task which is awaiting for centuries and it looks as though only a Hercules could affect the reform. We trust from this point of view Mr. Mirza will be a modern Hercules. When he devotes so much of his morning time to work of the nature noticed above he must be evidently putting full time work at the Office. We learn with pleasure that his regularity in attending office is already having a very wholesome effect on the official class. There is no doubt that it will result in the improvement of the *morale* of the officialdom. Nor will his other virtues of patience and sympathetic listening to grievances, his supreme courtesy and pleasant manners go without a wholesome reaction on the rest of the official world, which in Mysore we are sorry to say has been sadly wanting. Elsewhere, for instance in Bombay and Madras we know how simple and unassuming the officials are, but in Mysore State there is a noticeable priggishness and snobbishness among them which is most provocative and intolerable so often. It would be no mean achievement for the new Dewan if he were to make the officials realise that they are there to listen to the grievances of the people patiently and make themselves useful instead of making a display of their official position and status and ride rough shod over the people under their charge. In fact, we are looking upon the improvement of the District administration as one of the urgent matters requiring the attention of the new Dewan. We are afraid we have strayed away from the immediate object of this article, which was to assure the new Dewan once again of the co-operation of the public and to notice the welcome start he has made in his administration which bodes nothing but good to the State. "A good beginning is half the work done" and let us hope it will be so in the case of Mr. Mirza.

MARIMALLAPPA HIGH SCHOOL.

We welcome the Government Order with regard to the taking over of the Marimallappa High School under Government management on certain conditions which we should say are on the whole favourable and just. The attitude of the trustees up till now had been anything but fair and reasonable. Incapable of improving the financial condition of the school, they were yet reluctant to let go their hold on the institution. Even now after the G.O. it is rumoured that the trustees are putting forward certain unacceptable terms which they want the Government to consider, such as treating the services of the teachers as entitled for pension, before handing over the institution to Government. Needles to say that this attitude of the trustees, if true, is most unreasonable and one which would go counter to the intentions of the generous donor. It would be all the more shameful since the more for transfer to Government came not from Government but from the trustees themselves. We only hope that this recalcitrant attitude is not due to the fear that in the new trust all the trustees would be Lingayets or that inefficient teachers at present entertained in the school have to take leave of their jobs. We trust that Government will adopt a strong attitude and take over the management of the institution without saddling the same with additional expenditure or impairing its efficiency.

ಮರಿಮಲ್ಲಪ್ಪನವರ ಹೈಸ್ಕೂಲು.

ರಾಜಧಾನಿಯಲ್ಲಿರುವ ಈ ಹೈಸ್ಕೂಲಿನ ಆಡಳಿತವನ್ನು ನೋಡಿಕೊಳ್ಳಲು ಡಿಸ್ಟ್ರಿಕ್ಟ್ ಜಡ್ಜಿಯವರಿಂದ ನಿಯಮಿಸಲ್ಪಟ್ಟಿರುವ ಟ್ರಸ್ಟಿಗಳು ಸ್ಕೂಲ್‌ಫೀ ಮತ್ತು ಸರ್ಕಾರೀ ಗ್ರಾಂಟುಗಳಿಂದ ಸ್ಕೂಲನ್ನು ನಡೆಯಿಸಲು ಸಾಧ್ಯವಿಲ್ಲವಾದುದರಿಂದಲೂ, ಸ್ಕೂಲಿನ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳದಿದ್ದಲ್ಲಿ ಗ್ರಾಂಟ್ ಇನ್ ಏಡ್‌ರೂಲ್ಸಿಗೆ ವಿರುದ್ಧವಾಗಿ ಕೊಡಲ್ಪಡುತ್ತಿರುವ ಹೆಚ್ಚು ಮೊಬಲಗು ಕಡಿಮೆಮಾಡಲ್ಪಡುವುದೆಂದು ಸರ್ಕಾರದವರು ಒತ್ತಿಹೇಳುತ್ತಿರುವುದರಿಂದಲೂ ಬೇರೊಂದುಪಾಯವನ್ನು ಕಾಣದೆ ಸ್ಕೂಲನ್ನು ಸರ್ಕಾರದವರೇ ವಹಿಸಿಕೊಂಡು ಧರ್ಮಕರ್ತರ ಹೆಸರಿನಿಂದಲೇ ನಡೆಯಿಸಿಕೊಂಡು ಹೋಗಬೇಕೆಂದೂ, ವೀರಶೈವವಿದ್ಯಾರ್ಥಿಗಳು ಈಗಿರುವಂತೆ ಉಚಿತವಾಗಿ ಅಂದರೆ ಫ್ರೀಯಾಗಿ ಸೇರಿಸಿಕೊಳ್ಳಲ್ಪಡಬೇಕೆಂದೂ, ಪ್ರೌಢವಿದ್ಯಾಭ್ಯಾಸಮಾಡುವ ವೀರಶೈವವಿದ್ಯಾರ್ಥಿಗಳಿಗೆ ಮಾಸಾಶನವನ್ನು ಕೊಡುವುದಕ್ಕಾಗಿ ಪುದುವಟ್ಟಾಗಿರುವ 30,000 ರೂಪಾಯಿಗಳು ತನ್ನ ವಶಮಾಡಲ್ಪಡಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದರು. ಸರ್ಕಾರದವರು ಮೇಲ್ಕಂಡ ನಿಬಂಧನೆಗಳಲ್ಲಿ ಪುದುವಟ್ಟಿನ ಹಣವನ್ನು ಟ್ರಸ್ಟಿಗಳ ವಶಪಡಿಸುವ ವಿಚಾರದಲ್ಲಿ ಒಪ್ಪಲಿಲ್ಲವಾಗಿ, ಸ್ಕೂಲನ್ನು ನಡಿಸಿಕೊಂಡು ಹೋಗಲು ಅಸಮರ್ಥರಾದ ಟ್ರಸ್ಟಿಗಳು ಬೇರೊಂದು ಮಾರ್ಗವನ್ನು ಕಾಣದೆ ಪುದುವಟ್ಟಿನ ಹಣವನ್ನು ಬಿಟ್ಟುಕೊಡುವುದಕ್ಕೆ ಸಿದ್ಧರಾಗಿದ್ದರೆಂಬುದನ್ನು ನಾವು ತಿಳಿದು, ಟ್ರಸ್ಟಿಗಳು ಹಾಗೆ ಮಾಡುವುದರಿಂದ ಧರ್ಮಕರ್ತರ ಸಂಕಲ್ಪಕ್ಕೆ ಭಂಗಬರುತ್ತದೆಂದೂ, ಹಾಗೆಮಾಡಲು ಅವರುಗಳಿಗೆ ಅಧಿಕಾರವಿಲ್ಲನೆಂದೂ ನಾವು 1925 ನೆಯ ಸೆಪ್ಟಂಬರ್ ತಾ|| 1 ರ ಸ್ಟಾರ್‌ಪತ್ರಿಕೆಯಲ್ಲಿ "ಕೈ|| ಮರಿಮಲ್ಲಪ್ಪನವರ ಸಂಕಲ್ಪಭಂಗ" ಎಂಬ ಶೀರ್ಷಿಕದಿಂದ ಅಗ್ರಲೇಖನವನ್ನು ಬರೆದು ಟ್ರಸ್ಟಿಗಳು ಧರ್ಮಕರ್ತರ ಸಂಕಲ್ಪಕ್ಕೆ ಭಂಗಬರದಂತೆ ಆಚರಿಸಬೇಕೆಂದೂ, ವೀರಶೈವ ಸಮಾಜದವರು ತಟಸ್ಥರಾಗಿರದೆ ಯೋಗ್ಯವಾದರೀತಿಯಲ್ಲಿ ಚಳವಳಿನಡೆಯಿಸುವವರಾಗಬೇಕೆಂದೂ ಸೂಚಿಸಿದ್ದೆವು. ನಮ್ಮ ಸೂಚನೆಯಂತೆ ವೀರಶೈವವಿದ್ಯಾಭಿಮಾನಿಗಳಾದ ದೊಡ್ಡಮನುಷ್ಯರು ಸರ್ಕಾರದವರಿಗೆ ಸಮ್ಮತವಾಗಿರುವಂತೆಯೂ, ಧರ್ಮಕರ್ತರ ಸಂಕಲ್ಪವು ಸಾರೋದ್ಧಾರವಾಗಿ ನಡೆದುಕೊಂಡು ಹೊಗಲು ಸಾಧಕವಾಗಿರುವಂತೆಯೂ ಸೂಚನೆಗಳನ್ನು ಕೊಟ್ಟುದರಮೇಲೆ ಸರ್ಕಾರದವರು ಸ್ಕೂಲನ್ನು ವಹಿಸಿಕೊಂಡು ನಡೆಯಿಸುವುದರ ವಿಚಾರವಾಗಿ ಹುಟ್ಟಿರುವ ಅಪ್ಪಣೆಯು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿರುತ್ತದೆ.

ಈ ಮೇಲ್ಕಂಡ ಸರ್ಕಾರಿಯಪ್ಪಣೆಯನ್ನು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರು ಮರಿಮಲ್ಲಪ್ಪನವರ ಸ್ಕೂಲಿನ ಟ್ರಸ್ಟಿಗಳಿಗೆ ತಿಳುಹಿಸಿ, ಇದಕ್ಕೆ ಅವರುಗಳೊಪ್ಪುವುದಾಗಿದ್ದಲ್ಲಿ ಬರುವ ಜೂನ್ ತಿಂಗಳಾರಭ್ಯ ಸರ್ಕಾರದವರಿಂದಲೇ ನಡೆಯಿಸಲನುಕೂಲಿಸುವಂತೆ ಬಿಟ್ಟುಕೊಡಬೇಕೆಂದೂ, ಒಂದುವೇಳೆ ಒಪ್ಪದಿದ್ದಲ್ಲಿ ಈ ಮೇ ತಾ|| 20 ರೊಳಗೆ ತಮಗೆ ಬರೆದು ತಿಳುಹಬೇಕೆಂದೂ ಬರೆದಿರುವುದಾಗಿಯೂ, ಸ್ಕೂಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡ $33\frac{1}{3}$ ರಂತೆ ವೀರಶೈವ ವಿದ್ಯಾರ್ಥಿಗಳಿಗೆ ಫ್ರೀಷಿಪ್ ಕೊಡುವುದಾದಲ್ಲಿ ಮತ್ತು ಈಗಿರತಕ್ಕ ಉಪಾಧ್ಯಾಯರು ಮೊದಲಾದವರ ಸರ್ವಿಸ್ಸನ್ನು ಸರ್ಕಾರಿಕೆಲಸಗಾರರ ಸರ್ವಿಸ್ಸಿನಂತೆ ಗಣಿಸುವುದಾದಲ್ಲಿ ಮಾತ್ರ ತಾವು ಬಿಟ್ಟುಕೊಡುತ್ತೇವೆಂದು ಟ್ರಸ್ಟಿಗಳು ಉತ್ತರ ಕೊಟ್ಟಿರುವುದಾಗಿಯೂ ವದಂತಿಯಿದೆ. ಇದು ನಿಜವಾಗಿದ್ದಲ್ಲಿ ಖಂಡಿತವಾಗಿಯೂ ಟ್ರಸ್ಟಿಗಳಿಗೆ ಇದಕ್ಕಿಂತಲೂ ಲಜ್ಜಾಸ್ಪದವಾದುದೂ, ಧರ್ಮಕರ್ತರ ಸಂಕಲ್ಪಕ್ಕೆ ಭಂಗವನ್ನುಂಟುಮಾಡತಕ್ಕುದೂ ಬೇರೊಂದಿಲ್ಲವೆಂದು ನಾವು ಹೇಳುತ್ತೇವೆ. ಯಾತಕ್ಕೆಂದರೆ, ಪುದುವಟ್ಟಿನ ಹಣದಿಂದ ಬರತಕ್ಕ ಬಡ್ಡಿಯನ್ನು ವಹಿಸಿಕೊಟ್ಟಹೊರತು ವೀರಶೈವವಿದ್ಯಾರ್ಥಿಗಳಿಗೆ ಫ್ರೀಷಿಪ್ ಕೊಡಲಿಕ್ಕಾಗುವುದಿಲ್ಲವೆಂದು ಹೇಳುತ್ತಿದ್ದ ಪ್ರಭುತ್ವದವರು ವೀರಶೈವಪ್ರಮುಖದೊಡ್ಡಮನುಷ್ಯರ ಮುಖ್ಯವಾಗಿ ವಿದ್ಯಾಭಿವೃದ್ಧಿಸಂಘದವರ ಅಭಿಪ್ರಾಯವನ್ನು ಪುರಸ್ಕರಿಸಿ ಪುದುವಟ್ಟಿನ ಹಣವನ್ನು ಟ್ರಸ್ಟಿಗಳಿಗೇ ಬಿಟ್ಟುಕೊಟ್ಟು ವೀರಶೈವವಿದ್ಯಾರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ 40 ರಂತೆ ಫ್ರೀಷಿಪ್ ಕೊಡಲೊಪ್ಪಿ ಸ್ಕೂಲನ್ನು ತಮ್ಮಾಡಳಿತಕ್ಕೆ ವಹಿಸಿಕೊಳ್ಳಲು ಸನ್ನದ್ಧರಾಗಿರುವಾಗ್ಗೆ 'ಎಣ್ಣೆಬರುವ ಸಮಯದಲ್ಲಿ ಕಣ್ಣುಮುಚ್ಚಿಕೊಂಡಂತೆ' ದುಡ್ಡಿನ ಅಭಾವದಿಂದ ಅಸಮರ್ಥರಾದ ಟ್ರಸ್ಟಿಗಳು ಪೂರ್ವಾಪರಯೋಚನೆಯಿಲ್ಲದೆ ತಿರಸ್ಕರಿಸಿದಲ್ಲಿ ಪ್ರಭುತ್ವದವರು ವಹಿಸಿಕೊಳ್ಳದೆ ಹೋಗಬಹುದು ಮತ್ತು ಅದರಿಂದ ಕೈ|| ಮರಿಮಲ್ಲಪ್ಪನವರ ಸ್ಕೂಲು ನಿರಾತಂಕವಾಗಿ ನಡೆದುಕೊಂಡು ಹೋಗಲು ಮಾರ್ಗವಿಲ್ಲದೆ ನಿರ್ನಾಮವಾಗಬಹುದು. ಈ ಧರ್ಮಸಂಸ್ಥೆಯನ್ನು ವಹಿಸಿಕೊಳ್ಳಲು ಪ್ರಭುತ್ವದವರು ತಾವಾಗಿಯೇ ಅಪೇಕ್ಷಿಸಿದ್ದಲ್ಲಿ ಟ್ರಸ್ಟಿಗಳು ಹೇಳುವ ನಿಬಂಧನೆಗಳಿಗೆ ಸರ್ಕಾರದವರು ಒಳಪಟ್ಟು ವಹಿಸಿಕೊಳ್ಳಬೇಕೆಂದು ಟ್ರಸ್ಟಿಗಳು ಮುಷ್ಕರ ಹಿಡಿಯುವುದೂ, ಸರ್ಕಾರದವರು ಅದರಂತೆ ನಡೆದುಕೊಳ್ಳುವುದೂ ಸಹಜವಾಗಿದ್ದಿತು. ಪ್ರಕೃತಸಂದರ್ಭವು ಹಾಗಿರದೆ ಟ್ರಸ್ಟಿಗಳ ಪ್ರಾರ್ಥನೆಯಂತೆ ಸ್ಕೂಲನ್ನು ವಹಿಸಿಕೊಂಡು ಧರ್ಮಕರ್ತರ ಸಂಕಲ್ಪಕ್ಕೆ ಭಂಗಬಾರದಂತೆ ಅವರ ಹೆಸರಿನಿಂದಲೇ ನಡೆಯಿಸಿಕೊಂಡು ಹೋಗುತ್ತೇವೆಂದು ಪ್ರಭುತ್ವದವರೊಪ್ಪಿರುವಾಗ್ಗೆ ಟ್ರಸ್ಟಿಗಳು ವಹಿಸಿಕೊಡಲು ಹಿಂಜರಿಯುವುದನ್ನು ನೋಡಿದರೆ ಅವರಿಗೇನೋ ನಿಗೂಢವಾದ ಅಭಿಪ್ರಾಯವಿರಬೇಕೆಂದು ತೋರುತ್ತದೆ. ಹಾಗಲ್ಲದೆ ವಾಸ್ತವವಾಗಿಯೂ ಟ್ರಸ್ಟಿಗಳು ಈ ಪ್ರಯತ್ನ ಮಾಡಿದಂದಿನಿಂದೀಚೆಗೇನಾದರೂ ಅವರಿಗೆ ಸ್ಕೂಲನ್ನು ಪರಾಶ್ರಯವಿಲ್ಲದೆ ನಡೆಯಿಸಿಕೊಂಡುಹೋಗಲು ನಿಕ್ಷೇಪವೇನಾದರೂ ದೊರಕಿರಬಹುದೆಂದೂಹಿಸೋಣವೆಂದರೆ ಸ್ಕೂಲಿನ ಉಪಾಧ್ಯಾಯರು ಮೊದಲಾದ ಕೆಲಸಗಾರರಿಗೆ ಸಂಬಳವು ಕಾಲಕಾಲಕ್ಕೆ ಕೊಡಲ್ಪಡದೆ ಕೆಲವೇಳೆ 2–3 ತಿಂಗಳೊಂದಾವರ್ತಿ ಕೊಡಲ್ಪಡುತ್ತಿರುವುದರಿಂದಲೂ, ಸೀಳುಬಿಟ್ಟಿರುವ ಕಟ್ಟಡವನ್ನು ರಿಪೇರಿಮಾಡಿಸಿ ಸುಣ್ಣ ಬಣ್ಣಗಳನ್ನೂ, ಮಹಾದ್ವಾರದ ಬಾಗಿಲುಗಳನ್ನೂ ಹಾಕಿಸದೆ ಬಿಟ್ಟಿರುವುದರಿಂದಲೂ ಆ ಊಹೆಗೂ ಆಸ್ಪದವಿಲ್ಲ. ಟ್ರಸ್ಟಿಗಳು ಯಾವರೀತಿಯಿಂದಲಾದರೂ ಕೈ|| ಮರಿಮಲ್ಲಪ್ಪನವರ ಧರ್ಮಕಾರ್ಯವನ್ನು ಸ್ವತಃ ನಡೆಯಿಸಿಕೊಂಡು ಹೋಗುವಷ್ಟು ಸಚೇತನರಾಗಿದ್ದಲ್ಲಿ ಅವರು ಅದನ್ನು ಸರ್ಕಾರದವರಿಗೆ ವಹಿಸಿಕೊಡಬೇಕಾದುದಿಲ್ಲ ಮತ್ತು ವೀರಶೈವ ಸಮಾಜದವರು ಅದಕ್ಕಾಗಿ ಟ್ರಸ್ಟಿಗಳನ್ನು ವಂದಿಸಿ ಅವರಿಗೆ ಕೃತಜ್ಞರಾಗಿರುವರು. ನಾವು ತಿಳಿದಮಟ್ಟಿಗೆ ಸ್ಕೂಲಿನ ಆರ್ಥಿಕಸ್ಥಿತಿಯು ಮೊದಲಿಗಿಂತಲೂ ಶೋಚನೀಯವಾಗಿರುವುದಲ್ಲದೆ, ಸರ್ಕಾರದವರ ಸಹಾಯದ್ರವ್ಯವು ಈಗ ಕೊಡಲ್ಪಡುವುದಕ್ಕಿಂತಲೂ ಕಡಿಮೆಮಾಡಲ್ಪಟ್ಟಲ್ಲಿ ಒಂದು ಕ್ಷಣಮಾತ್ರ ಸ್ಕೂಲನ್ನು ನಡೆಯಿಸಲಾಗದಂತಹ ಹೀನಸ್ಥಿತಿಯಲ್ಲಿದೆ. ಇದರಿಂದ ಟ್ರಸ್ಟಿಗಳು ಸಮಾಜದವರ ಕೃತಜ್ಞತೆಗೆ ಬದಲು ನಿಂದೆಗೆ ಗುರಿಯಾಗಬೇಕಾಗುತ್ತದೆ. ಇಂತಹುದರಲ್ಲಿ ಟ್ರಸ್ಟಿಗಳು, ಎಲ್ಲರೂ ಅಲ್ಲ ಕೆಲವರು ಮಾತ್ರ ಸರ್ಕಾರದವರು ವಹಿಸಿಕೊಳ್ಳುವುದರಲ್ಲಿ ನಿರ್ಬಂಧ ಕಲ್ಪಿಸುವುದನ್ನು ನೋಡಿದರೆ, ಸ್ಕೂಲಿನಾಡಳಿತಕ್ಕೇರ್ಪಟ್ಟಿರುವ ಟ್ರಸ್ಟಿಗಳಲ್ಲಿ ವೀರಶೈವೇತರರೂ ಇರುತ್ತಾರೆ; ಅವರು ಹೊಸದಾಗಿ ಪುದುವಟ್ಟಿನ ಹಣದ ವೃದ್ಧಂಶದ ವಿನಿಯೋಗಕ್ಕಾಗೇರ್ಪಡುವ ಟ್ರಸ್ಟಿಗಳಲ್ಲಿ ಬಿಟ್ಟುಹೋಗಿ ಎಲ್ಲರೂ ವೀರಶೈವರೇ ಆಗುತ್ತಾರೆಂಬ ಬುದ್ಧಿಯಿಂದಲೂ, ಈಗ ಮಾಸ್ಟರುಗಳಾಗಿರುವವರಲ್ಲಿ ಅನೇಕರು ತಕ್ಕ ವಿದ್ಯಾಪ್ರಶಸ್ತಿಯನ್ನು ಪಡೆದವರಾಗಿಲ್ಲದಿರುವುದರಿಂದ ಅವರೆಲ್ಲರೂ ಮನೆಗೆ ಹೋಗಬೇಕಾಗುತ್ತದೆಂಬ ಶಂಕೆಯಿಂದಲೂ ನಿಷ್ಪ್ರಯೋಜಕವಾದ ತೊಡಕುಗಳನ್ನು ತಂದೊಡ್ಡುತ್ತಿರುವುದಲ್ಲದೆ, ಊರು ಕೇರಿಗಳ ಮೇಲೆ ಯಾಚನೆಗೆ ಹೊರಟಲ್ಲಿ ಬೇಕಾದಷ್ಟು ದ್ರವ್ಯಸಹಾಯ ದೊರೆಯುತ್ತದೆಂದೂ, ಅದರಿಂದ ಸರ್ಕಾರದ ಸಾಹಾಯ್ಯಾಪೇಕ್ಷೆಯಿಲ್ಲದೇ ನಡೆಯಿಸಿಕೊಂಡು ಹೋಗಬಹುದೆಂದೂ ನೆಲದಮೇಲೆ ದೋಸೆಯನ್ನು ಬರೆದಂತೆ ಆಶೆಯನ್ನು ತೋರಿಸುತ್ತಿರುವರು. ಯಾಚನೆಗೆ ಹೊರಟರೆ ಎಷ್ಟರಮಟ್ಟಿಗೆ ದ್ರವ್ಯಸಹಾಯವಾಗುತ್ತದೆಂಬ ವಿಚಾರವನ್ನು ವೀರಶೈವವಿದ್ಯಾವರ್ಧಕಫಂಡಿನ ಸಂಘದವರನ್ನೂ ಇತರ ಅನುಭವಸ್ಥರನ್ನೂ ಕೇಳಿದಲ್ಲಿ ತಿಳಿಯಬರುತ್ತದೆ ಈಗಿರತಕ್ಕ ಉಪಾಧ್ಯಾಯರುಗಳು ತಕ್ಕ ವಿದ್ಯಾಯೋಗ್ಯತೆಯನ್ನು ಪಡೆದುಕೊಂಡು ತಮ್ಮ ಬೋಧನಾಶಕ್ತಿಯಿಂದ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದುವಂತೆ ಮಾಡುತ್ತಿದ್ದಲ್ಲಿ ಇತರ ಸ್ಕೂಲುಗಳಿಗಿಂತಲೂ ಈ ಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿ ತನ್ಮೂಲಕ ಉತ್ಪತ್ತಿಯೂ ಹೆಚ್ಚಿ ಸ್ಕೂಲು ಪರಾಶ್ರಯವಿಲ್ಲದೆ ಸ್ವಶಕ್ತಿಯಿಂದ ನಿರಾತಂಕವಾಗಿ ನಡೆದುಕೊಂಡು ಹೋಗುತ್ತಿದ್ದಿತೆಂದೂ, ಅಂತಹ ಯೋಗ್ಯತೆಯುಳ್ಳ ಉಪಾಧ್ಯಾಯರುಗಳನ್ನು ಸರ್ಕಾರದವರು ತಡಲಿಸಲಿಕ್ಕೆ ಕಾರಣವಿಲ್ಲವೆಂದೂ ಕಿಂಚಿತ್ತು ವಿವೇಕವಿರುವವರು ಸಹ ಹೇಳಬಲ್ಲರು. ಈಗಿನ ಸೆಕ್ರೆಟರಿಯವರು ವೀರಶೈವರಾದಾಗ್ಯೂ [illegible]ಳಿನ ಕೂಸಿನಂತಿದ್ದು ವಿಘ್ನಸಂತೋಷಿಗಳ ಮಾಯಾಜಾಲಕ್ಕೆ ಬಿದ್ದಿರುವರಾದುದರಿಂದ ಅವರನ್ನು ನಂಬಿಕೊಂಡು ಸಮಾಜದವರು ಮೌನರಾಗಿರುವುದಾದರೆ ಕೈ|| ಮರಿಮಲ್ಲಪ್ಪನವರ ಧರ್ಮವು ಉಳಿಯದೆ ಅದರಿಂದ ಸಮಾಜಕ್ಕೆ ನಷ್ಟವುಂಟಾಗುವ ಸಂಭವವಿರುವುದರಿಂದ ಮರಿಮಲ್ಲಪ್ಪನವರ ಸ್ಕೂಲನ್ನು ಸರ್ಕಾರದವರು ವಹಿಸಿಕೊಳ್ಳುವುದರಲ್ಲಿರುವ ಟ್ರಸ್ಟಿಗಳ ನಿರ್ಬಂಧವನ್ನು ಪ್ರಬಲವಾಗಿ ನಿರೋಧಿಸುವುದಲ್ಲದೆ ಅದನ್ನು ವಹಿಸಿಕೊಳ್ಳುವಂತೆ ವೀರಶೈವಸಮಾಜದವರು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ಸೂಚಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಕೆಲ ಅನಿವಾರ್ಯದೆಶೆಯಿಂದ ಈವೇಳೆ ಸ್ಟಾರ್‌ಪತ್ರಿಕೆಯ 6 ಪುಟಗಳನ್ನು ಮುದ್ರಿಸಲಿಕ್ಕಾಗಲಿಲ್ಲವಾಗಿ ಚಂದಾದಾರರ ಕ್ಷಮೆಯನ್ನು ಕೋರುತ್ತೇವೆ.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ಕುದುರೆಯ ಜೂಜು ಈಸಲ ಬರುವ ಜೂನ್ ತಾ|| 17, 19, 22 ಮತ್ತು 24 ರಲ್ಲಿ ನಡೆಯಲು ಗೊತ್ತಾಗಿರುವುದಲ್ಲದೆ ಪಂದ್ಯದ ಕುದುರೆಗಳೂ ಹೆಚ್ಚಾಗಿ ಬರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯಲ್ಲಿ ಬಡಬಗ್ಗರಿಗೆ ಅನ್ನವನ್ನು ಹಾಕಿಸುವುದಕ್ಕೋಸ್ಕರ ಕುಕ್ಕರಹಳ್ಳಿಕೆರೆಯ ಹಿಂಭಾಗದಲ್ಲಿ ಒಂದು ದೊಡ್ಡ ಕಟ್ಟಡವು ಕಟ್ಟಿಸಲ್ಪಡುವುದಾಗಿಯೂ, ಅಲ್ಲಿಯ ಅನ್ನದಾನವು ಅರಮನೆ, ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟ್‌ಬೋರ್ಡ್, ಸರಕಾರ ಇವುಗಳ ಸಹಾಯದಿಂದ ನಡೆಯಿಸಲ್ಪಡುವುದಾಗಿಯೂ ಕೇಳುತ್ತೇವೆ.

ಮೈಸೂರು ಸ್ಟಾಂಪು ರೆಗ್ಯುಲೇಷನ್ 2 ನೇ ಸೆಕ್ಷನ್ 10. ಬಿ. ಕ್ಲಾಸಿನಲ್ಲಿ ಕಂಡಂತೆ ಕೆಟ್ಟುಹೋದ ಅಥವ ದುರುಪಯೋಗಪಡಿಸಿದ ಛಾಪಾಕಾಗದ ಮತ್ತು ಸ್ಟಾಂಪುಗಳ ಬೆಲೆಯನ್ನು ರೀಫಂಡು (ವಾಪಸು) ಮಾಡುವ ಅಧಿಕಾರವನ್ನು ಎಲ್ಲಾ ಅಮಲ್ದಾರರುಗಳಿಗೆ ಕೊಟ್ಟಿರುತ್ತದೆ. ಈ ಅಧಿಕಾರವು ಇದುವರೆಗೆ ಡೆಪ್ಯುಟಿಕಮಿಷನರುಗಳಿಗೆ ಮಾತ್ರವೇ ಇದ್ದಿತು.

ಚಿತ್ರದುರ್ಗದ ಡಿ|| ಪೊಲೀಸ್ ಸೂ|| ರಾದ ಮ|| ಸಿ. ಗೋಪಾಲಾಚಾರರು ತುಮಕೂರು ಡಿ|| ಪೊ|| ಸೂ|| ರಾಗಿಯೂ, ಗುಬ್ಬಿ ಸಬ್‌ಡಿವಿಜನ್ ಆಫೀಸರಾದ ಮ|| ಎಸ್. ನಾರಾಯಣರಾಯರು ಚಿತ್ರದುರ್ಗದ ಡಿ|| ಪೊ|| ಸೂ|| ರಾಗಿಯೂ, ರಾಜಧಾನಿಯ ಮ್ಯುನಿಸಿಪಲ್ ಛೀಫ್‌ಆಫೀಸರಾದ ಮಿ|| ಅಬ್ದುಲ್‌ಅಜೀಜ್‌ಖಾನ್‌ಸಾಹೇಬರು ಗುಬ್ಬಿ ಸಬ್‌ಡಿವಿಜನ್ ಆಫೀಸರಾಗಿಯೂ ವರ್ಗಮಾಡಲ್ಪಟ್ಟಿರುತ್ತಾರೆ.

ಕಳೆದ ಏಪ್ರಿಲ್ ತಾ|| 24 ಕ್ಕೆ ಕಡೆಯಾದ ಒಂದುವಾರದಲ್ಲಿ ಮೈಸೂರು ಸರ್ಕಾರದವರಿಂದ ನಡೆಯಿಸಲ್ಪಡುತ್ತಿರುವ ರೈಲ್ವೆಗಳಿಂದ 71,200 ರೂ. ಉತ್ಪನ್ನವಾಗಿರುತ್ತದೆ. ಇದರ ಹಿಂದಣವಾರದಲ್ಲಿ 65,200 ರೂ. ಕಳೆದ ವರ್ಷ ಇದೇ ಏಪ್ರಿಲ್ ತಾ|| 24 ಕ್ಕೆ ಕಡೆಯಾದ ವಾರದಲ್ಲಿ 70,771 ರೂ. ಉತ್ಪನ್ನವಾಗಿದ್ದುವು. ಮದುವೆಕಾಲವಾದುದರಿಂದ ಪ್ರಯಾಣಿಕರ ಸಂಖ್ಯೆಯು ಹೆಚ್ಚಿ ಉತ್ಪನ್ನವೂ ಹೆಚ್ಚಿರುವುದಾಗಿರುತ್ತದೆ.

ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಡಾಕ್ಟರ್ ವ್ರಜೇಂದ್ರನಾಥಶೀಲ್‌ರವರು ಸಂಸ್ಥಾನದ ರಾಜಕಾರ್ಯನಿರ್ವಾಹಕಕೌನ್ಸಿಲಿನ ಹೆಚ್ಚುವರಿ ಮೆಂಬರಾಗಿ ನಿಯಮಿಸಲ್ಪಟ್ಟಿದ್ದರಷ್ಟೆ. ಈಗ ಇವರು ವಿಶ್ವವಿದ್ಯಾಲಯಾಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳಿಗೆ ವಿಶೇಷಗಮನವನ್ನು ಕೊಡಬೇಕಾಗಿರುವುದರಿಂದ ಕೌನ್ಸಿಲ್‌ಮೆಂಬರುದ್ಯೋಗವನ್ನು ಬಿಟ್ಟು ಎಂದಿನಂತೆ ವಿದ್ಯಾವಿಷಯದಲ್ಲಿ ಸರ್ಕಾರಕ್ಕೆ ತಕ್ಕ ಸೂಚನೆಗಳನ್ನು ಕೊಡುತ್ತಿರುವುದಾಗಿ ಪ್ರಕಟವಾಗಿದೆ.

ಬೆಂಗಳೂರಿಗೆ ನೀರನ್ನು ಸರಬರಾಯಿಮಾಡುತ್ತಿರುವ ಜಲಾಶಯ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಕೊರತೆಗಳಿದ್ದರೆ ಅವನ್ನು ಕಂಡುಹಿಡಿದು ಅವುಗಳ ನಿವಾರಣೋಪಾಯಗಳನ್ನು ಸೂಚಿಸುವುದಕ್ಕೂ ಮುಂದೆ ನೀರಿಗೆ ಅಭಾವವುಂಟಾಗದಂತೆ ಮಾಡಬೇಕಾದ ಕರ್ತವ್ಯಗಳನ್ನು ತಿಳಿಸುವುದಕ್ಕೂ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಎಂಜನಿಯರುಗಳ ಕಮಿಟಿಯನ್ನು ಸರ್ಕಾರದವರು ಏರ್ಪಡಿಸಿರುವರು. ಮ|| ಗಳಾದ ಪಿ. ರಂಗಸ್ವಾಮಿಅಯ್ಯಂಗಾರ್ಯರು, ಜೆ. ಭೋರ್‌ರವರು, ಕೆ. ಆರ್. ಶೇಷಾಚಾರ್ಯರು ಮತ್ತು ಎಚ್. ಆರ್. ವೆಂಕಟಸುಬ್ಬರಾಯರು ಈ ಕಮಿಟಿಯ ಮೆಂಬರುಗಳಾಗಿರುತ್ತಾರೆ.

ಹೈದರಾಬಾದುಸಂಸ್ಥಾನದಲ್ಲಿ ಗೋವುಗಳ ಚಿತ್ರಪಟಗಳನ್ನು [illegible] ಇಡಕೂಡದೆಂದೂ, ಹಾಗೆ ಇಟ್ಟುಕೊಂಡಿರುವವರು ಶಿಕ್ಷೆಗೆ ಗುರಿಯಾಗುವರೆಂದೂ, ನೈಜಾಂ ಸರ್ಕಾರದವರು ಪ್ರಕಟಿಸಿರುವುದು ನಿಜವೆ? ಎಂದು ಹೈದರಾಬಾದಿನ ಜೀವದಯಾಸಂಸ್ಥೆಯವರನ್ನು ಕೇಳಿದ್ದುದಕ್ಕೆ "ನೀವು ಕೇಳಿರುವ ವಿಷಯವು ನಿರಾಧಾರವಾದುದು. ನಮ್ಮ ನೈಜಾಂ ಗೌರ್ನ್‌ಮೆಂಟಿನವರು ಈ ವಿಧವಾದ ಅಪ್ಪಣೆಯನ್ನು ಎಂದಿಗೂ ಮಾಡಿಲ್ಲ. ಅಲ್ಲದೆ ಇಲ್ಲಿ ಪ್ರಸಿದ್ಧವಾಗಿರುವ ಮುಷೀರ್-ಇ-ದಕ್ಕನ್ ಎಂಬ ವೃತ್ತಪತ್ರಿಕೆಯ ಸಂಪಾದಕರನ್ನು ಕಂಡು ಈ ವಿಷಯವಾಗಿ ಮಾತನಾಡಲಾಗಿ ಈ ವಿಧವಾದ ಆರ್ಡರ್ [illegible] ಎಂದು ಉತ್ತರವನ್ನು ಕೊಟ್ಟಿರುತ್ತಾರೆಂಬುದಾಗಿ ದಾವಣಗೆರೆಯ ಪ್ರಾಣಿದಯಾಜ್ಞಾನಪ್ರಸಾರಕಸಂಘದವರು ನಮಗೆ ಬರೆದಿರುತ್ತಾರೆ.

ದಿವಾನ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರು ಕಳೆದ ಭಾನುವಾರ ರಾಜಧಾನಿಗೆ ದಯೆಮಾಡಿಸಿದರು. ಇವರು ರಾಜಧಾನಿಯಲ್ಲಿದ್ದ 1-2 ದಿವಸಗಳ ಅವಧಿಯಲ್ಲಿ ಮ್ಯುನಿಸಿಪಲ್‌ಪ್ರೆಸಿಡೆಂಟರು, ವೈಸ್‌ಪ್ರೆಸಿಡೆಂಟರು ಹೆಲ್ತಾಫೀಸರು ಮೊದಲಾದವರೊಡನೆ ಕುದುರೆಸ್ವಾರಿಯಿಂದ ಊರಿನ ಕೆಲಭಾಗಗಳಲ್ಲಿ ಸಂಚರಿಸಿ ಆರೋಗ್ಯಸ್ಥಿತಿಯನ್ನು ಪರಾಮರ್ಶಿಸಿ ಮ್ಯುನಿಸಿಪಲ್ ಅಧಿಕಾರಿಗಳಿಗೆ ಕೆಲಸೂಚನೆಗಳನ್ನು ಕೊಟ್ಟುದಾಗಿ ತಿಳಿಯಬರುತ್ತದೆ. ಜನರ ಆರೋಗ್ಯ ಮತ್ತು ನಗರಾಭಿವೃದ್ಧಿ ವಿಚಾರದಲ್ಲಿ ನಮ್ಮ ದಿವಾನರಿಗೆ ಎಷ್ಟು ಅಭಿಮಾನವಿದೆಯೆಂದು ಇದರಿಂದ ವ್ಯಕ್ತವಾಗುತ್ತದೆ. ಇದೇ ರೀತಿಯಲ್ಲಿ ಗ್ರಾಮಾಂತರಗಳನ್ನು ಪರಾಮರ್ಶಿಸಿ ಅಲ್ಲಿಯ ಆರೋಗ್ಯಾಭಿವೃದ್ಧಿಗೆ ತಕ್ಕೇರ್ಪಾಟನ್ನು ಮಾಡುವುದಾದರೆ ಸಂಸ್ಥಾನವೇ ಅಕಾಲಮೃತ್ಯುವಿನಿಂದ ಪಾರಾಗಿ ಚಿರಕೃತಜ್ಞವಾಗಿರುವುದು ಮತ್ತು ಅವರ ಹೆಸರು ಆಚಂದ್ರಾರ್ಕವಾಗಿರುವುದು.

ಸರ್ಕಾರಿಯಪ್ಪಣೆ.

ಮರಿಮಲ್ಲಪ್ಪನವರ ಹೈಸ್ಕೂಲು, ಮೈಸೂರು.

ಸರ್ಕಾರದಿಂದ ಸಲ್ಲುತ್ತಿರುವ ಸಹಾಯದ್ರವ್ಯವು ರೂಲ್ಸು ಪ್ರಕಾರ 1923-24 ನೆಯ ವರ್ಷದಿಂದ 5514 ರೂ. ಗೆ ಖಂಡಿತವಾಗಿ ಇಳಿಸಲ್ಪಡುವುದೆಂದು ಸ್ಕೂಲಿನ ಟ್ರಸ್ಟಿಗಳಿಗೆ ತಿಳುಹಲ್ಪಡತಕ್ಕುದೆಂದು 1922-23 ರಲ್ಲಿ 6480 ರೂ. ಗಳ ಸಹಾಯದ್ರವ್ಯವನ್ನು ಕೊಡಲೊಪ್ಪಿ 1923 ನೆಯ ಫೆಬ್ರವರಿ ತಾ|| 3 ರಲ್ಲಿ ಮಾಡಿದ E. 4795-6 Edn. 115-22-5 ನೇ ನಂಬರ್ ಅಪ್ಪಣೆಯಲ್ಲಿ ತಿಳುಹಲ್ಪಟ್ಟಿತು.

2. 1923-24 ನೆಯಿಸವಿಯಿಂದ ಮುಂದೆರಡು ವರ್ಷಕಾಲ 6480 ರೂ. ವರ್ಷಾಶನವನ್ನು ಕೊಡಲು ಸಮ್ಮತಿಸಿದವೇಳೆಯಲ್ಲಿ ರೂಲ್ಸಿನಲ್ಲಿ ನಿಷ್ಕೃಷ್ಟವಾಗಿರುವಷ್ಟು ಸಹಾಯದ್ರವ್ಯಕ್ಕಿಂತ ಹೆಚ್ಚಾಗಿ ಕೊಡಲ್ಪಡುವುದಿಲ್ಲವೆಂದು 1923 ನೆಯ ಆಗಸ್ಟ್ ತಾ|| 11 ರಲ್ಲಿ ಹುಟ್ಟಿದ E. 475-6 Edn. 66-23-2 ನೇ ನಂಬರ್ ಅಪ್ಪಣೆಯಲ್ಲಿ ಖಚಿತವಾಗಿ ತಿಳುಹಲ್ಪಟ್ಟಿತು.

3. ಈ ಸಂಸ್ಥೆಯು ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳಲ್ಪಡುವ ವಿಚಾರವು ಇತ್ಯರ್ಥವಾಗುವುದರಲ್ಲಿರುವುದರಿಂದ 6480 ರೂ. ವರ್ಷಾಶನವು ಕೊಡಲ್ಪಟ್ಟಿರುತ್ತದೆಂದು 1925 ನೆಯ ಜೂನ್ ತಾ|| 12 ರಲ್ಲಿ ಮಾಡಿದ E. 1186-7—Edn. 19-25-6 ನೇ ನಂ. ಸರ್ಕಾರಿಯ ಅಪ್ಪಣೆ ತಿಳುಹಲ್ಪಟ್ಟಿತು.

4. ಸಂಸ್ಥೆಯನ್ನು ಸರ್ಕಾರದಾಡಳಿತಕ್ಕೆ ವಹಿಸಿಕೊಳ್ಳುವ ವಿಚಾರವಾಗಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್‌ಜನರಲ್‌ರವರು 1925 ನೇ ನವಬಂರ್ ತಾ|| 24 ರಲ್ಲಿ ಮಾಡಿರುವ C. 6060 of 24-25 ನೇ ನಂ. ಪತ್ರವ್ಯವಹಾರ.

ಮೇಲ್ಕಂಡ ಕಾಗದಪತ್ರಗಳೋದಲ್ಪಟ್ಟು ಈ ಕೆಳಗೆಕಂಡ 1926 ನೇ ಏಪ್ರಿಲ್ ತಾ|| 14 ರ E. 5720-22 Edn. 10-25-5 ನೇ ನಂ. ಅಪ್ಪಣೆಮಾಡಲ್ಪಟ್ಟಿತು.

ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಿಂದ ನಿಯಮಿಸಲ್ಪಟ್ಟು ಅವರಿಗಧೀನವಾಗಿರುವ ಟ್ರಸ್ಟಿಗಳ ಆಡಳಿತದಲ್ಲಿರುತ್ತದೆ. ಈ ಸಂಸ್ಥೆಗೆ 30,000 ರೂಪಾಯಿನ ಪುದುವಟ್ಟಿದ್ದು ಅದರಿಂದ 1500 ರೂ. ವಾರ್ಷಿಕೋತ್ಪತ್ತಿ ಬರುವುದಲ್ಲದೆ ಹೈಸ್ಕೂಲು ಮತ್ತು ಮಿಡ್ಲ್‌ಸ್ಕೂಲು ಸೇರಿರುತ್ತವೆ. ಇದಕ್ಕೆ ಸರ್ಕಾರೀ ವರ್ಷಾಶನವಿಧಿಯಲ್ಲಿ ನಿಷ್ಕೃಷ್ಟವಾಗಿರುವುದಕ್ಕಿಂತ ಹೆಚ್ಚಾಗಿ ಅಂದರೆ 6480 ರೂ. ವರ್ಷಾಶನವು ಸರ್ಕಾರದಿಂದ ಸಲ್ಲುತ್ತಿದೆ. ಸ್ಕೂಲಿನ ಆರ್ಥಿಕಸ್ಥಿತಿಯು ಸಮರ್ಪಕವಾಗಿಲ್ಲವಾದುದರಿಂದ ಅದನ್ನುತ್ತಮಪಡಿಸಿಕೊಳ್ಳುವ ವಿಚಾರದಲ್ಲಿ ಸರ್ಕಾರದವರೂ, ವಿದ್ಯಾಶಾಖೆಯವರೂ ಪದೇಪದೇ ಸೂಚಿಸಿದಾಗ್ಯೂ ಕಾರ್ಯನಿರ್ವಾಹಕರು ಅದರ ಸ್ಥಿತಿಯನ್ನುತ್ತಮಗೊಳಿಸಲಾರದವರಾಗಿರುತ್ತಾರೆ. (1) ಲಿಂಗಾಯಿತ ವಿದ್ಯಾರ್ಥಿಗಳಿಗೆ ಸ್ಕೂಲ್ಫೀ ಇಲ್ಲದಿರುವುದು. (2) ಸ್ಕೂಲಿನಲ್ಲಿ ಉಪಾಧ್ಯಾಯರುಗಳಾಗಿದ್ದ ಇಬ್ಬರಿಗೆ ವರ್ಷವೊಂದಕ್ಕೆ 960 ರೂ. ಗಳ ಪಿಂಚನ್ ಕೊಡಬೇಕಾಗಿರುವುದು. ಈ ಎರಡು ಸಂದರ್ಭಗಳಿಂದ ಟ್ರಸ್ಟಿಗಳು ಸ್ಕೂಲನ್ನು ನಡೆಯಿಸಲು ಅಸಮರ್ಥರಾಗಿ ಪೇಚಾಡುತ್ತಿದ್ದಾರಾದುದರಿಂದ, ಈ ಕೆಳಗೆ ಕಂಡ ಒಡಂಬಡಿಕೆಯಮೇಲೆ ಸ್ಕೂಲಿನ ಆಡಳಿತವನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಟ್ರಸ್ಟಿಗಳು ಪ್ರಾರ್ಥಿಸಿಕೊಂಡಿರುತ್ತಾರೆ.

1. ಸ್ಕೂಲು ಧರ್ಮಕರ್ತರ ಹೆಸರಿನಲ್ಲೇ ನಡೆಯಬೇಕು.
2. ಸ್ಕೂಲಿನಲ್ಲಿರತಕ್ಕ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ $33\frac{1}{3}$ ರಂತೆ ಲಿಂಗಾಯತವಿದ್ಯಾರ್ಥಿಗಳಿಗೆ ಫ್ರೀಷಿಪ್ ಇರ (ಉಚಿತವಾಗಿ ಪಾಠಹೇಳ) ಬೇಕು.
3. ಪ್ರೌಢವಿದ್ಯಾಭ್ಯಾಸಮಾಡತಕ್ಕ ಲಿಂಗಾಯತವಿದ್ಯಾರ್ಥಿಗಳ ವೇತನಕ್ಕಾಗಿ ಪ್ರತಿವರ್ಷದಲ್ಲೂ 600 ರೂಪಾಯಿಗಳು ವಿನಿಯೋಗಿಸಲ್ಪಡಬೇಕು.

2. ವಿದ್ಯಾಭ್ಯಾಸದ ಇ|| ಜನರಲ್‌ರವರು ಟ್ರಸ್ಟಿಗಳ ಮೇಲ್ಕಂಡ ಸೂಚನೆಗಳಲ್ಲಿ ಕೆಲಬದಲಾವಣೆಗಳನ್ನುಮಾಡಿ ಸರ್ಕಾರದ ಪರ್ಯಾಲೋಚನೆಗಾಗಿ ನಿವೇದಿಸಿದುದರಮೇಲೆ ಧರ್ಮಕಾರ್ಯವು ಮುಂದೆ ಯಾವರೀತಿ ನಡೆಯತಕ್ಕುದು ಮತ್ತು ಯಾವ ನಿಬಂಧನೆಗಳಿಂದ ಸ್ಕೂಲಿನ ಆಡಳಿತವನ್ನು ಸರ್ಕಾರದವರು ವಹಿಸಿಕೊಳ್ಳತಕ್ಕುದು ಎಂಬ ವಿಚಾರದಲ್ಲಿ ಲಿಂಗಾಯತ ಸಮಾಜದ ಪ್ರಮುಖದೊಡ್ಡಮನುಷ್ಯರ ಮತ್ತು ಲಿಂಗಾಯತವಿದ್ಯಾವರ್ಧಕ ಫಂಡ್‌ಸಂಘದ ಸೆಕ್ರೆಟರಿಯವರ ಅಭಿಪ್ರಾಯವನ್ನು ತೆಗೆದುಕೊಂಡು ಸ್ಕೂಲಿನ ಅಭಿವೃದ್ಧಿಗೆ ಸಾಧಕವಾಗಿರುವಂತೆಯೂ, ಇದಕ್ಕೆ ಸಂಬಂಧಪಟ್ಟ ಪಕ್ಷದವರೊಪ್ಪುವಂತೆಯೂ ಒಂದು ವಿಧಾನವನ್ನು ತಿಳಿಸಬೇಕೆಂದು ಇ|| ಜನರಲ್‌ರವರನ್ನು ಸರ್ಕಾರದವರು ಕೇಳಿದ್ದರು. ಅವರು ಅದೇಪ್ರಕಾರ ಈ ವಿಚಾರದಲ್ಲಿ ಕೆಲ ಸೂಚನೆಗಳು ಪುನರ್ವಿಮರ್ಶಿಸಿ ಸರ್ಕಾರಕ್ಕೆ ನಿವೇದಿಸಿರುತ್ತಾರೆ.

3. ಈ ಸೂಚನೆಗಳನ್ನು ಬಹಳ ಎಚ್ಚರಿಕೆಯಿಂದ ಪ್ರಭುತ್ವದವರು ಪರ್ಯಾಲೋಚಿಸಿ ಮರಿಮಲ್ಲಪ್ಪನವರ ಹೈಸ್ಕೂಲನ್ನು ಈ ಕೆಳಗೆ ಕಂಡ ನಿಬಂಧನೆಗಳನುಸರಿಸಿ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವುದೆಂದು ಅಪ್ಪಣೆ ಮಾಡಿರುತ್ತಾರೆ.—

(i) ಸ್ಕೂಲಿಗೆ ಈಗಿರುವ ಹೆಸರೇ ಇರತಕ್ಕುದು.

(ii) ಶೇಕಡ 40 ರಂತೆ ಲಿಂಗಾಯತವಿದ್ಯಾರ್ಥಿಗಳಿಗೂ, ಶೇಕಡ 20 (ಎಲ್ಲಾ ಸರ್ಕಾರೀ ಹೈಸ್ಕೂಲುಗಳಲ್ಲಿರುವಂತೆ) ಇತರ ಎಲ್ಲಾ ಜಾತಿಯ ವಿದ್ಯಾರ್ಥಿಗಳಿಗೂ ಫೀ ವಿಧಿಸಕೂಡದು.

(iii) [illegible]ಕವು ಪ್ರೌಢವಿದ್ಯಾಭ್ಯಾಸಮಾಡುವ ಲಿಂಗಾಯತವಿದ್ಯಾರ್ಥಿಗಳ ಮಾಸಾಶನಕ್ಕೆ ಉಪಯೋಗಿಸಲ್ಪಡತಕ್ಕುದು.

(iv) ಉದ್ಯೋಗದಿಂದ ನಿವೃತ್ತರಾಗಿರುವ ಉಪಾಧ್ಯಾಯರಿಗೆ ಟ್ರಸ್ಟಿಗಳಿಂದ ಕೊಡಲ್ಪಡುತ್ತಿರುವ ಪೆನ್ಷನ್ನು ಪುದುವಟ್ಟಿನ ಹಣದ ವೃದ್ಧ್ಯಂಶದಿಂದ ಕೊಡಲ್ಪಡಬೇಕು, ಮತ್ತು ಅದು ನಿಂತುಹೋದಮೇಲೆ ಒಟ್ಟು ಹಣವು ಲಿಂಗಾಯತವಿದ್ಯಾರ್ಥಿಗಳ ವೇತನಕ್ಕೆ ಉಪಯೋಗವಾಗತಕ್ಕುದು.

(v) ಈಗ ಸ್ಕೂಲಿಡಲ್ಪಟ್ಟಿರುವ ಕಟ್ಟಡವೂ ಬಿಟ್ಟ ಉಪಕರಣಗಳೂ ಸರ್ಕಾರದವರಿಗೆ ವಹಿಸಲ್ಪಡಬೇಕು.

4. ಈಗಿನ ಆಡಳಿತದಲ್ಲಿ ಅವಶ್ಯಕವಾದ ಬದಲಾವಣೆಯನ್ನು ಮಾಡಲು ಮೈಸೂರು ಡಿಸ್ಟ್ರಿಕ್ಟ್‌ಕೋರ್ಟಿನವರನ್ನು ವಿದ್ಯಾಭ್ಯಾಸದ ಇ|| ಜನರಲ್‌ರವರು ಕೇಳಿಕೊಳ್ಳುವುದಲ್ಲದೆ, ಸ್ಕೂಲಿನ ಕೆಲಸವು ಸಮರ್ಪಕವಾಗಿ ನಡೆಯಲು ಕೆಲಸಗಾರರ ಕನಿಷ್ಠಸಂಖ್ಯೆಯೆಷ್ಟಿರಬೇಕು ಮತ್ತು ಇನ್ನಾವ ಸೌಕರ್ಯಗಳಾಗಬೇಕು ಎಂಬ ಬಗೆಗೆ ತಮ್ಮ ಸೂಚನೆಯನ್ನು ಸರ್ಕಾರಕ್ಕೆ ತಿಳುಹಬೇಕಾಗಿ ಕೋರಿದೆ.

5. ಈ ಸ್ಕೂಲು ವಿಶ್ವವಿದ್ಯಾಲಯದ ಬಿ. ಟಿ. ವಿದ್ಯಾರ್ಥಿಗಳ ಪ್ರಾಕ್ಟಿಸಿಂಗ್ ಸ್ಕೂಲಿಗೂ ಅನುಕೂಲವಾಗಿರುವುದರಿಂದ ಈಗ ಮೈಸೂರು ಟ್ರೈನಿಂಗ್ ಕಾಲೇಜಿನಲ್ಲಿ ನಡಿಯುತ್ತಿರುವ ಪ್ರಾಕ್ಟಿಸಿಂಗ್ ಸ್ಕೂಲು ಇತಃಪರ ಅಲ್ಲಿ ನಡಿಯಬೇಕಾದ ಅವಶ್ಯವಿಲ್ಲ. ವಿಶ್ವವಿದ್ಯಾಲಯದವರೊಡನೆ ಪರ್ಯಾಲೋಚಿಸಿದಮೇಲೆ ಈಗಿರುವ ಪ್ರಾಕ್ಟಿಸಿಂಗ್ ಸ್ಕೂಲನ್ನು ತೆಗೆದುಬಿಡುವ ವಿಚಾರದಲ್ಲಿ ಪ್ರತ್ಯೇಕವಾಗಿ ಅಪ್ಪಣೆ ಮಾಡಲಾಗುವುದು.

(ರುಜು) ಪಿ. ಜಿ. ಡಿ'ಸೌಜ,
ಸರ್ಕಾರದ ಚೀಫ್‌ಸೆಕ್ರೆಟರಿ.

ವರ್ತಮಾನಸಂಗ್ರಹ.

ಮಳೆಯಲ್ಲಿ ಸುರಿದ ಆಲಿಕಲ್ಲಿನ ಅನಾಹುತದಿಂದ ಹೈದರಾಬಾದ್ ನೈಜಾಮರ ಅರಮನೆಗೆ ಅಲ್ಲಲ್ಲಿ ಜಖಂಆಗಿ 35,000 ರೂಪಾಯಿಗಳವರೆಗೂ ನಷ್ಟವಾಗಿರುವುದೆಂದು ತಿಳಿದುಬರುತ್ತದೆ.

ಇಂಗ್ಲಂಡಿನ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ದೇಹಾರೋಗ್ಯದ ನಿಮಿತ್ತ ದಕ್ಷಿಣ ರಾಜ್ಯಗಳಿಗೆ ದಯಮಾಡಿದ್ದು ಕಳೆದ ವಾರ ಪಾರಿಸ್ ನಗರದಿಂದ ವಿಮಾನ ಯಂತ್ರದಲ್ಲಿ ವಾಪಸು ಲಂಡನ್ ಪಟ್ಟಣವನ್ನು ಸುರಕ್ಷಿತವಾಗಿ ತಲಪಿದರು.

ನ್ಯೂಫೌಂಡ್ಲೆಂಡಿಗೆ ಸೇರಿದ ಸೆಂಟ್ ಜಾನ್ ನಗರದಲ್ಲಿ 180 ಮಕ್ಕಳನ್ನು ಪೋಷಣೆ ಮಾಡುತ್ತಿದ್ದ ಅನಾಥಾಲಯವು ಏಪ್ರಿಲ್ ತಾ|| 14 ರಲ್ಲಿ ಬೆಂಕಿಬಿದ್ದು ಉರಿದುಹೋಗಿ ಆರು ಲಕ್ಷ ರೂಪಾಯಿ ನಷ್ಟವಾಯಿತು. ದೈವವಶಾತ್ ಪ್ರಾಣನಷ್ಟವೇನೂ ಆಗಲಿಲ್ಲ.

ಗಯಾ ಪಟ್ಟಣದಲ್ಲಿ ಸ್ಟಾಂಪ್ ವೆಂಡರಾಗಿದ್ದು ಕಾಲವಾದ ಮಾನೋಜಿಲಾಲ್ ಎಂಬುವನು ತನ್ನ ಆಸ್ತಿಯನ್ನೆಲ್ಲಾ ಹಿಂದೂ ಅನಾಥಾಲಯದ ಸ್ಥಾಪನೆಗಾಗಿ ವಿನಿಯೋಗಿಸಬೇಕೆಂದು ಬರೆದಿಟ್ಟಿದ್ದಾನೆ. ಆತನ ಆಸ್ತಿ ಎಷ್ಟೆಂಬುವುದನ್ನು ಸರ್ಕಾರದವರು ತನಿಖೆಮಾಡುತ್ತಿರುವರು.

ರಷ್ಯಾ ರಾಜ್ಯಕ್ಕೆ ಸೇರಿದ ಮೊಸ್ಕೊ ನಗರದಲ್ಲಿ ಸೈನ್ಯದ ಇಲಾಖೆಯ ಮೂವರು ಅಧಿಕಾರಿಗಳು ಕೆಲವು ಜನಗಳೊಡನೆ ಸೇರಿಕೊಂಡು ಚಲಾವಣೆ ನಾಣ್ಯದ ಬೆಲೆಯ ವಿಷಯದಲ್ಲಿ ಜೂಜಾಡುತ್ತಿದ್ದರೆಂದು ಹೇಳಿ ಅಲ್ಲಿನ ಸರ್ಕಾರದವರು ಆ ಮೂರುಮಂದಿ ಅಧಿಕಾರಿಗಳನ್ನೂ ಗುಂಡಿನಿಂದ ಹೊಡಿಸಿ ಕೊಲ್ಲಿಸಿಬಿಟ್ಟರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದ ಸಕಲಾತ್‌ವಾಲಾ ಎಂಬ ಇಂಡಿಯಾದೇಶಸ್ಥರೊಬ್ಬರಿರುವರು. ಈಗ ಇಂಗ್ಲಂಡಿನಲ್ಲಿ ಕೆಲಸಗಾರರ ಮುಷ್ಕರದಿಂದ ಉಂಟಾಗಿರುವ ತೊಂದರೆ ಕಾಲದಲ್ಲಿ ಇವರು ರಾಜದ್ರೋಹಕರವಾದ ಉಪನ್ಯಾಸವನ್ನು ಮಾಡಿದರೆಂದು ಅವರನ್ನು ವಿಚಾರಣೆಮಾಡಿ ಅವರಿಗೆ 2 ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಆಫ್ರಿಕಾದಲ್ಲಿ ಫ್ರೆಂಚರೂ ಸ್ಪೆಯಿನ್‌ನವರೂ ಸೇರಿ ರಿಫ್ ಜನರ ಮೇಲೆ ಯುದ್ಧಕಾರ್ಯಗಳನ್ನು ನಡಿಸಿ ಕರಾರು ಮಾಡಿಕೊಳ್ಳುವ ನಿಮಿತ್ತ ನಿಲ್ಲಿಸಿದ್ದರು. ರಿಫ್ ಜನರ ಮುಖಂಡನಾದ ಅಬ್ದುಲ್‌ಕರೀಂ ಎಂಬಾತನು ಕೇಳಿದಂತೆ ಕರಾರು ನಡೆಯದೆ ಹೋಯಿತಾದ್ದರಿಂದ ಮತ್ತೆ ಯುದ್ಧಗಳು ಪ್ರಾರಂಭವಾಗಿವೆ. ಫ್ರೆಂಚರೂ ಸ್ಪೆಯಿನ್‌ನವರೂ ವಿಮಾನ ಯಂತ್ರಗಳಿಂದ ಗುಂಡುಗಳನ್ನು ಹೊಡೆಯುತ್ತಿದ್ದಾರೆ.

ಬಂಗಾಳಾ ಆಧಿಪತ್ಯದ ನಿಮ್ನ ಪ್ರಾಂತ್ಯಗಳಲ್ಲಿ "ಕಾಲಾ ಅಜಾರ್" ಎಂಬ ಕೆಟ್ಟ ಜ್ವರವು ಹರಡಿಕೊಂಡು ಪ್ರಜೆಗಳನ್ನು ನರಳಿಸುತ್ತಲೂ ಕೊಲ್ಲುತ್ತಲೂ ಬಂದಿದೆ. ಈ ಜ್ವರಕ್ಕೆ ಕಾರಣವನ್ನೂ ಅದರ ಪರಿಹಾರವನ್ನೂ ಕಂಡುಹಿಡಿಯಬೇಕೆಂದು ಆಗಿಂದಾಗ್ಗೆ ಬಹುಮಂದಿ ಪಂಡಿತರು ಶೋಧನೆ, ಪರೀಕ್ಷೆಗಳನ್ನು ಮಾಡಿಯೂ ಮಾಡುತ್ತಲೂ ಬಂದಿದ್ದಾರೆ. ಕಳೆದ ವಾರ ಮೂವರು ವೈದ್ಯರು ಈ ಜ್ವರವು ಒಂದು ತರಹಾ [illegible]ಯ ಕಡಿತದಿಂದ ಒಬ್ಬರಿಂದೊಬ್ಬರಿಗೆ ವ್ಯಾಪಿಸುವುದೆಂದು ಕಂಡುಹಿಡಿದಿರುವುದಾಗಿ ಪ್ರಕಟಿಸಿದ್ದಾರೆ. ಅದನ್ನು ಬೇಗ ಬೇಗನೆ ನಿರ್ಮೂಲಮಾಡುವ ಕಾರ್ಯಗಳನ್ನು [illegible]ವಾಗಿ ನಡಿಸುತ್ತಿರುವುದರಿಂದ ಈ ಜ್ವರವು ಬೇಗನೆ [illegible] ಹೋಗುವುದೆಂದು ಭರವಸೆಯುಂಟಾಗಿದೆ.

ಈ ತಿಂಗಳು 7 ನೇ ತಾರೀಖು ಸುಮಾರು [illegible] ಗಂಟೆ ಸಮಯದಲ್ಲಿ ಪೂನಾದಿಂದ ಬೆಂಗಳೂರಿಗೆ [illegible]

(ಮರುಳುಕಲ್ಲು ಸಾಗಿಸುವ) ಟ್ರೇನಿಗೆ ಡಿಕ್ಕಿಹೊಡೆದುದರಿಂದ ಎರಡು ಪ್ರಯಾಣಿಕರ ಗಾಡಿಗಳು ಕಂಬಿಗಳನ್ನು ಬಿಟ್ಟು ಹೊರಬಿದ್ದುವು. ಇದರಿಂದ ಇಬ್ಬರು ಕೂಲಿಯವರು ಮೃತಪಟ್ಟು ಇಬ್ಬರು ಪ್ರಯಾಣಿಕರಿಗೂ ಇಬ್ಬರು ರೈಲ್ವೆನೌಕರರಿಗೂ ಗಾಯಗಳಾದುವು.

ಬರ್ಮಾದೇಶದ ಪಿನಾಯೋ ಎಂಬ ಊರಿನಲ್ಲಿ ಒಂದು ಮರದ ಪೊಟ್ಟರೆಯಲ್ಲಿ ಜೇನುಗೂಡು ಇರುವುದನ್ನು ಕಂಡು, ಒಬ್ಬ ಹುಡುಗನು ಹುಳಗಳನ್ನು ಓಡಿಸಲು ಒಂದು ಉರಿಯುವ ಕೊಳ್ಳಿಯನ್ನು ಹಿಡಿದು ಮರಹತ್ತಿದನು. ಆದರೆ ಹೊಗೆಯಿಂದಲೂ ಹುಳಗಳ ಕಡಿತದಿಂದಲೂ ಗಾಬರಿಪಟ್ಟು ಹುಡುಗನು ಕೊಳ್ಳಿಯನ್ನು ಕೆಳಕ್ಕೆ ಎಸೆದುಬಿಟ್ಟನು. ಕೂಡಲೆ ಕೆಳಗಿದ್ದ ಗುಡಿಸಲು ಹತ್ತಿಕೊಂಡು ಆ ಊರೆಲ್ಲವೂ ಅಗ್ನಿಗೆ ಆಹುತಿಯಾಯಿತು. ಮರದಮೇಲಿದ್ದ ಹುಡುಗನು ಬೆಂಕಿಯಲ್ಲಿ ಬಿದ್ದು ಮೃತಪಟ್ಟನು.

ಜಪಾನ್ ದೇಶದಲ್ಲಿ ನೂಲು ಮತ್ತು ಬಟ್ಟೆ ಕಾರ್ಖಾನೆಗಳಲ್ಲಿ ಕೆಲಸಮಾಡುವ ಹೆಂಗಸರು ಮಕ್ಕಳು ತಮ್ಮನ್ನು ಯಜಮಾನರು ಬಹಳ ದೀರ್ಘಕಾಲ ದುಡಿಸುತ್ತಾರೆಂದೂ, ಅದನ್ನು ಈಗಿನಕಾಲಕ್ಕೆ ಅನುಗುಣವಾಗಿ ಇತರ ದೇಶಗಳಲ್ಲಿರುವ ಕ್ರಮಗಳಂತೆ ಸರಿಪಡಿಸಿಕೊಡಬೇಕೆಂದೂ ಜಪಾನ್ ಪಾರ್ಲಿಮೆಂಟಿಗೆ ಅರ್ಜಿ ಬರೆದುಕೊಂಡಿದ್ದಾರೆ ಈ ಅರ್ಜಿಗೆ ವಿರೋಧವಾಗಿ ಮಿಲ್ಲುಗಳ ಯಜಮಾನರು ವಾದಿಸಿದ ಪಕ್ಷದಲ್ಲಿ ಕಾರ್ಖಾನೆಗಳಲ್ಲಿ ಕೆಲಸವೇ ನಿಂತುಹೋಗುವ ಸಮಯ ಒದಗುವುದೆಂದು ಹೇಳಲಾಗಿದೆ.

ಬೊಂಬಾಯಿನಲ್ಲಿ ವೇಶ್ಯಾಗೃಹವನ್ನಿಟ್ಟು ಹೆಂಗುಸರನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದ ಒಬ್ಬ ಸ್ತ್ರೀಯನ್ನು ವಿಚಾರಮಾಡಿ ಮ್ಯಾಜಿಸ್ಟ್ರೇಟರು ಆಕೆಯು ಸುಖಜೀವಿಯಾಗಿ ಬದುಕುತ್ತಿದ್ದವಳಾದುದರಿಂದ ಎರಡುತಿಂಗಳ ಸಾದಾಸಜವೂ 100 ರೂಪಾಯಿಗಳ ಜುಲ್ಮಾನೆಯೂ ಸಾಕೆಂದು ವಿಧಿಸಿದ್ದರು. ಈ ಮೊಕದ್ದಮೆಯ ಕಟ್ಟನ್ನು ಹೈಕೋರ್ಟು ಜಡ್ಜಿಗಳು ತರಿಸಿಕೊಂಡು ನೋಡಿ ಮ್ಯಾಜಿಸ್ಟ್ರೇಟರ ಅಭಿಪ್ರಾಯವನ್ನು ಅನುಮೋದಿಸದೆ 300 ರೂ. ಗಳ ಅರ್ಥದಂಡವನ್ನೂ 18 ತಿಂಗಳ ಕಠಿಣಸಜವನ್ನೂ ಆಕೆಗೆ ವಿಧಿಸಿದರು.

ಗೃಹಕೃತ್ಯದ ನೋಟೀಸು.

ಮೈಸೂರು ತಾಲ್ಲೋಕು ಕಡಕೊಳದ ಹೋಬಳಿ ತಳೂರು ಗ್ರಾಮದಲ್ಲಿರುವ ಆ. ವಿ. ಕ. ಮಲ್ಲಾರಾಧ್ಯರು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ:—ಈಗ್ಗೆ ಸುಮಾರು 3 ತಿಂಗಳಲ್ಲಿ ನನ್ನ ತಮ್ಮ ಮಲ್ಲಾರಾಧ್ಯನು ಮೃತನಾದನು. ಈತನಿಗೆ ಲಿಂಗಾಜಮ್ಮನೆಂಬ ಒಬ್ಬ ಹೆಂಡತಿಯೂ, ಪುಟ್ಟತಾಯಮ್ಮನೆಂಬ ಒಬ್ಬ ವಿಧವೆಯಾದ ತಂಗಿಯೂ ಸಹ ಇರುತ್ತಾರೆ. ಇವರಿಬ್ಬರಿಗೂ ಮಕ್ಕಳಿಲ್ಲ. ಇವರ ಪೈಕಿ ನನ್ನ ತಮ್ಮ ಲೇಟ್ ಮಲ್ಲಾರಾಧ್ಯನ ಹೆಂಡತಿ ಲಿಂಗಾಜಮ್ಮನು ಕೆಲವುಜನರ ದುರ್ಬೋಧೆಗೆ ಒಳಪಟ್ಟು ವಾರಸ್‌ದಾರರಾದ ನಮಗೆ ಮೋಸಮಾಡಬೇಕೆಂಬ ದುರುದ್ದೇಶದಿಂದ ಸ್ವತ್ತುಗಳನ್ನು ಪರಾಧೀನಮಾಡುವಂತೆ ತಿಳಿಯಬಂದಿರುತ್ತೆ. ಇವಳಿಗೆ ಚರಸ್ಥಿರ ಆಸ್ತಿಗಳನ್ನು ಆಧಾರ, ಭೋಗ್ಯ, ಕ್ರಯ ವಗೈರೆ ಮಾಡಲು ಯಾವ ಬಾಧ್ಯತೆಯೂ ಇಲ್ಲ. ಹಾಗೇನಾದರೂ ಪರಭಾರಮಾಡಿದಲ್ಲಿ ತೆಗೆದುಕೊಂಡವರಿಗೆ ಹಕ್ಕು ಊರ್ಜಿತವಾಗತಕ್ಕದ್ದಲ್ಲ ಮತ್ತು ಅವರೇ ವಿಶಿಷ್ಟ ನಷ್ಟ ಖರ್ಚುಗಳಿಗೆ ಬಾಧ್ಯರಾಗಬೇಕಾಗುತ್ತೆ. ಮೃತನಾದ ನನ್ನ ತಮ್ಮ ಮಲ್ಲಾರಾಧ್ಯನಿಗೆ ಬರಬೇಕಾದ ಲೇವಾದೇವಿ ದನಕರುಗಳೂ ಸಹ ನನ್ನ ಹಕ್ಕಿಗೆ ಒಳಪಟ್ಟಿರುತ್ತೆಯಾದ್ದರಿಂದ ಅವರುಗಳು ನನಗೆ ಪಾವತಿಮಾಡಿ ನನ್ನಿಂದ ರಶೀತಿ ಪಡಿಯತಕ್ಕದ್ದು. ಮೇಲ್ಕಂಡ ಲಿಂಗಾಜಮ್ಮನಿಗೆ ಯಾರೂ ಕೊಡಕೂಡದು. ಹಾಗೆ ಕೊಟ್ಟರೂ ಕೂಡ ಅದು ಊರ್ಜಿತವಾಗತಕ್ಕದ್ದಲ್ಲವೆಂದು ಈ ಮೂಲ್ಕ ತಿಳಿಸಿರುತ್ತೆ.

ತಾ|| 14-5-26. ಆ. ವಿ. ಕ. ಮಲ್ಲಾರಾಧ್ಯರ ರುಜು.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

19 ನೆಯ ಪ್ರಕರಣ.

ಅಸತ್ಯಪರತ್ವವು.

೪೦ ವರ್ಷಗಳಿಂದೆ ಆಂಗ್ಲದೇಶದಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯು ಬಹಳಮಟ್ಟಿಗೆ ಕಡಿಮೆಯಾಗಿದ್ದಿತು. ಅವರಿಗೆ ಮದುವೆಯಾಗಿದ್ದರೂ ಆಗದಿದ್ದವರಂತೆ ಅವರೆಲ್ಲರೂ ನಟಿಸುತ್ತಿರುವುದು ಸಂಪ್ರದಾಯವಾಗಿರುತ್ತದೆ. ಆ ದೇಶದಲ್ಲಿ ವಿದ್ಯಾಭ್ಯಾಸವನ್ನು ಪೂರೈಸುವವರೆಗೂ ಆಂಗ್ಲೆಯರು ಮದುವೆಯಾಗುವುದಿಲ್ಲವು. ಭಾರತದೇಶದಲ್ಲೂ ಕೂಡ ಪ್ರಾಚೀನಕಾಲದಲ್ಲಿ ಅದೇ ಪದ್ಧತಿಯಿದ್ದಿತು. ಅದುಕಾರಣವೇ ಆ ಕಾಲದಲ್ಲಿ ವಿದ್ಯಾರ್ಥಿಗಳೆಲ್ಲರಿಗೂ ಬ್ರಹ್ಮಚಾರಿ ಎಂಬ ಹೆಸರು ಸಾರ್ಥಕವಾಗಿದ್ದಿತು. ಈಗ ಬಾಲ್ಯವಿವಾಹವು ನಮ್ಮ ದೇಶದಲ್ಲಿ ಹೆಚ್ಚಿದುದರಿಂದ ಆ ಅತ್ಯುತ್ತಮ ಪದ್ಧತಿಯು ಮಾಯವಾಗಿರುವುದು. ಆದರೆ ಆಂಗ್ಲದೇಶಕ್ಕೆ ಹೋದ ಭಾರತೀಯ ವಿದ್ಯಾರ್ಥಿಗಳು ತಮಗೆ ವಿವಾಹವಾಗಿದೆಯೆಂದು ಹೇಳಿಕೊಳ್ಳಲು ನಾಚಿಕೊಂಡು ಅದನ್ನು ಮರೆಮಾಚುತ್ತಿದ್ದರು. ಮದುವೆಯಾಗಿದೆಯೆಂದು ಹೇಳಿದಲ್ಲಿ ತಾವು ವಾಸಮಾಡುವ ಮನೆಯಲ್ಲಿರುವ ಮದುವೆಯಿಲ್ಲದ ಯುವತಿಯರೊಡನೆ ಕೂಡಿಕೊಂಡಿರಲು ಅವಕಾಶವಿಲ್ಲವು. ಮದುವೆಯಿಲ್ಲದೆ ಯುವಕ ಯುವತಿಯರುಗಳು ಒಟ್ಟುಗೂಡಿ ಜೀವಿಸಿಕೊಂಡಿರುವುದು ಆ ದೇಶದಲ್ಲಿ ಸಾಂಪ್ರದಾಯಿಕವಾಗಿರುವುದು. ಅದು ಬಹಳಮಟ್ಟಿಗೆ ಪವಿತ್ರವಾದ ಸಾಹಚರ್ಯವಾಗಿರುವುದಲ್ಲದೆ ನಿಂದ್ಯವಾಗಿಯೂ ಇಲ್ಲವು. [illegible] ಸಾಹಚರ್ಯವನ್ನು ಅನುಮತಿಸಿ ತಮ್ಮ ಪುತ್ರಿಯರನ್ನು ಪ್ರೋತ್ಸಾಹಿಸುತ್ತಿರುವರು. ಆ ದೇಶದಲ್ಲಿ ಒಬ್ಬಳೇ ವಧುವನ್ನು ಗೊತ್ತುಮಾಡಿಕೊಂಡಿರಬೇಕಾದುದಿಲ್ಲವಾದುದರಿಂದ ಅಂತಹ ಯುವಕ ಯುವತಿಯರು ಒಟ್ಟುಗೂಡಿರಲು ಅವಶ್ಯವಾಗಿಯೂ ಇರುತ್ತದೆ. ಅದು ಆಂಗ್ಲೇಯ ಯುವಕರುಗಳಿಗೆ ಸಹಜವಾಗಿದ್ದರೂ ಭಾರತಯುವಕರು ಆ ದೇಶದಲ್ಲಿ ಸರಿಯಾಗಿ ನಡೆದುಕೊಳ್ಳದೆ ಈರೀತಿ ದುಶ್ಚೇಷ್ಟೆಯನ್ನು ಮಾಡಲಾರಂಭಿಸಿದಲ್ಲಿ ಬಹಳ ಕಷ್ಟಕ್ಕೆ ಗುರಿಯಾಗುವುದು ಖಂಡಿತ. ಅನೇಕರಿಗೆ ಅಂತಹ ಕಷ್ಟವೊದಗಿತು. ಭಾರತ ಯುವಕರು ಈ ವ್ಯಸನಕ್ಕೆ ದಾಸರಾಗಿ ಸಾಹಚರ್ಯವನ್ನು ಹೊಂದಲು ಅಸತ್ಯಜೀವನವನ್ನು ಜರುಗಿಸಲೊಡಂಬಟ್ಟರು. ಆಂಗ್ಲ ಯುವಕರ ವಿಷಯದಲ್ಲಿ ಅನಿಂದ್ಯವಾಗಿದ್ದರೂ ಭಾರತ ಯುವಕರಿಗೆಮಾತ್ರ ಅದು ನಿಂದ್ಯವೇ, ನಾನುಕೂಡ ಈ ಭ್ರಮೆಗೆ ಬಿದ್ದಿದ್ದೆನು. ನನಗೆ ಆಗ ಒಬ್ಬ ಮಗಳು ಹುಟ್ಟಿದ್ದರೂ ನಾನುಕೂಡ ಬ್ರಹ್ಮಚಾರಿಯ ಹಾಗೇ ನಟಿಸಿದೆನು. ಆ ನಟನೆಯಿಂದ ನನಗೆ ಆನಂದವೇನೂ ಆಗಲಿಲ್ಲವು. ನಾನು ಬಹಳಮಟ್ಟಿಗೆ ನಾಚುಗೆಯುಳ್ಳವನಾಗಿದ್ದೆನಾದುದರಿಂದ ನನಗಷ್ಟು ಅಪಮಾನವಾಗಲಿಲ್ಲವು. ನಾನು ಮುಂದುವರಿಯುತ್ತಿದ್ದರೂ ಯಾವ ಯುವತಿಯೂ ನನ್ನಕೂಡ ಮಾತನಾಡುತ್ತಿರಲಿಲ್ಲ. ನನ್ನ ಸಮೀಪಕ್ಕೆ ಬರಲಂಗೀಕರಿಸುತ್ತಿರಲಿಲ್ಲ.

ನನ್ನನ್ನು ನಾಚುಗೆಯೂ, ಹೇಡಿತನವೂ ಸಂರಕ್ಷಿಸಿದ್ದುವು. ಮನೆಯವರು ಮನೆಯಲ್ಲಿರುವ ಯುವಕರನ್ನು ಬೇಂಟೆಗೆ ಕರೆಯುವುದೊಂದು ಪದ್ಧತಿಯು. ನಾನು ವಾಸಮಾಡುತ್ತಿದ್ದ ಮನೆಯಜಮಾನನ ಹೆಂಡತಿಯು ಒಂದು ದಿವಸ ನನ್ನನ್ನು ಮನೋಹರವಾದ ಗುಡ್ಡಕ್ಕೆ ಬರಬೇಕೆಂದು ಕರೆದಳು. ನಾವಿಬ್ಬರು ಹೊರಟೆವು. ನಾನೂ ಬೇಗನಡೆಯುವವನಾದರೂ ಆಕೆಯು ನನಗಿಂತ ವೇಗವಾಗಿ ನಡೆಯಲಾರಂಭಿಸಿದಳು. ಆಕೆಯು ಏನೇನೋ ಮಾತನಾಡುತ್ತಿದ್ದಳು. ನಾನು "ಹೌದು, ಅಲ್ಲಿ ಬಹಳ ಚೆನ್ನಾಗಿದೆ" ಎಂದು ಮಾತ್ರ ಆಗಾಗ್ಗೆ ಪ್ರತ್ಯುತ್ತರವನ್ನು ಕೊಡುತ್ತಿದ್ದುದರವಿನಾ ಮತ್ತಾವ ಮಾತನ್ನೂ ಆಡದೆ ಆಕೆಯ ಕೂಡ ನಡೆದು ಹೋಗುತ್ತಿದ್ದೆನು. ಆಕೆಯು ಓಡುತ್ತಿದ್ದಳು. ನಾನು ಯಾವಾಗ ಮನೆಗೆ ಹೋದೇನೆಂದು ಆತುರಪಡುತ್ತಿದ್ದೆನು. ಈಪ್ರಕಾರವಾಗಿ ನಾನು ಬೆಟ್ಟದ ಮೇಲಕ್ಕೆ ಹತ್ತಿದೆನು. ಆಕೆಯ ವಯಸ್ಸು 25 ವರ್ಷ. ಆಕೆ ಎತ್ತರವಾದ ಜೋಡನ್ನುಹಾಕಿಕೊಂಡಿದ್ದರೂ ಗಾಳಿಯಂತೆ ವೇಗವಾಗಿ ಕೆಳಕ್ಕಿಳಿಯುತ್ತಿದ್ದಳು. ನಾನು ಇಳಿಯಲು ಬಹಳ ಕಷ್ಟಪಡುತ್ತಿದ್ದೆನಲ್ಲದೆ ಆಕೆಯನ್ನು ನೋಡಿ ಬಹಳ ನಾಚುಗೆಗೊಳ್ಳುತ್ತಿದ್ದೆನು. ಆಕೆಯು ಕೆಳಕ್ಕಿಳಿದು ನನ್ನನ್ನು ನೋಡಿ ನಕ್ಕು ನನಗೆ ಪ್ರೋತ್ಸಾಹಪಡಿಸುವುದಕ್ಕಾಗಿ ನಾನು ಬಂದು ಕೈಕೊಟ್ಟು ಇಳಿಸಿಕೊಳ್ಳಲೆ ಎಂದು ಕೇಳುತ್ತಿದ್ದಳು. ಆಕೆಯ ಸಹಾಯವನ್ನು ನಾನು ಹೇಗೆ ಅಪೇಕ್ಷಿಸುವುದು? ಹೇಗೋ ಕಷ್ಟಪಟ್ಟು ಕೆಳಕ್ಕಿಳಿದೆನು. ಆಕೆಯು ನನ್ನನ್ನು ನೋಡಿ ಕೇಕೆಹಾಕಿ ನಕ್ಕು ನನ್ನನ್ನು ಮತ್ತಷ್ಟು ಪರಿಹಾಸಗೊಳಿಸಿದಳು. ಪ್ರತಿಯೊಂದು ಸಂದರ್ಭದಲ್ಲೂ ನಾನು ಈ ರೀತಿಯಾಗಿ ತಪ್ಪಿಸಿಕೊಳ್ಳಲಿಕ್ಕಿಲ್ಲವಾಯಿತು. ಅಸತ್ಯಪಿಶಾಚಿಯಿಂದ ನನ್ನನ್ನು ವಿಮುಕ್ತನನ್ನಾಗಿ ಮಾಡಲು ದೇವರು ನಿಶ್ಚಯಿಸಿದನು. ವೆಂಟನರಿನಂತೆ ಬ್ರೈಟನ್ನು ಸಹ ಆರೋಗ್ಯಸ್ಥಳವು. ನಾನೊಂದಾವರ್ತಿ ಬ್ರೈಟನ್ನಿಗೆ ಹೋಗಿದ್ದೆನು. ಮೊದಲು ಬ್ರೈಟನ್ನಿಗೆ ಹೋಗಿ ಅನಂತರ ನಾನು ವೆಂಟನರಿಗೆ ಹೋದೆನು. ಅಲ್ಲಿ ಒಂದುಹೋಟಲಿನಲ್ಲಿ ಒಬ್ಬ ವೃದ್ಧ ವಿತಂತುವು ಗೋಚರಿಸಿದಳು. ಆಕೆಯು ಧನವಂತಳಾಗಿಲ್ಲದಿದ್ದರೂ ಅನ್ನವಸ್ತ್ರಗಳಿಗೆ ಅಭಾವವಿಲ್ಲದೆ ಕಾಲಕ್ಷೇಪಮಾಡುತ್ತಿದ್ದಳು. ನಾನು ಆಂಗ್ಲದೇಶಕ್ಕೆ ಹೋದವರ್ಷದಲ್ಲೇ ಈ ಸಂಗತಿಯು ಜರುಗಿದುದು. ಆಹಾರ ಪದಾರ್ಥಗಳೆಲ್ಲವೂ ಫ್ರೆಂಚ್‌ಭಾಷೆಯಲ್ಲೇ ತಿಳಿಸಲ್ಪಡುತ್ತಿದ್ದುವು. ಆ ವೃದ್ಧಸ್ತ್ರೀಯೂ ನಾನೂ ಒಂದೇಕಡೆ ಕುಳಿತುಕೊಳ್ಳುತ್ತಿದ್ದೆವು. ನಾನು ಹೊಸಬನೆಂದೂ ಸಂಕೋಚಪಡುತ್ತೇನೆಂದೂ ಆಕೆಯು ತಿಳಿದುಕೊಂಡಳು. ನೀನು ಹೊಸಬನಾಗಿ ತೋರುತ್ತೀಯೆ, ಈವರೆಗಿಲ್ಲಿಗೆಂದೂ ಬಂದಿರಲಿಲ್ಲವೆ? ಯಾತಕ್ಕಾಗಿ ಸಂಕೋಚಪಡುತ್ತಿಯೆ? ಒಂದುಪದಾರ್ಥವನ್ನಾದರೂ ಕೇಳಿ ತರಿಸಿಕೊಳ್ಳಬಾರದೆ? ಎಂದು ಆಕೆಯು ನನ್ನನ್ನು ಕೇಳಿದಳು. ನಾನು ಪರಿಚಾರಕನನ್ನು ಕೂಗಬೇಕೆಂದಿರುವಷ್ಟರಲ್ಲಿ ಆಕೆಯು ಹೀಗೆ ಪ್ರಶ್ನಿಸಿದಳು. ನಾನು ಆಕೆಯನ್ನು ವಂದಿಸಿ ನಾನು ಶಾಕಾಹಾರಿಯೆಂದೂ, ನನಗೆ ಫ್ರೆಂಚ್‌ಭಾಷೆ ಬರುವುದಿಲ್ಲವೆಂದೂ, ಮಾಡಿದ ಪದಾರ್ಥಗಳಲ್ಲಿ ಶಾಕಾಹಾರವಿದೆಯೋ ಇಲ್ಲವೊ ಎಂದು ತಿಳಿಯದೆ ಪೇಚಾಡುತ್ತಿದ್ದೇನೆಂದೂ ತಿಳಿಸಿದೆನು.

ಅನಂತರ ಆಕೆಯು ನನಗೆ ವಿವರಿಸಿ ಹೇಳಿದಳು. ಈ ರೀತಿಯಾಗಿ ಆಕೆಗೂ ನನಗೂ ಮೊದಲನೆಯಾವರ್ತಿ ಪರಿಚಯವಾದುದು ಸ್ನೇಹವಾಗಿ ಪರಿಣಮಿಸಿತು. ನಾನು ಆಂಗ್ಲದೇಶದಲ್ಲಿದ್ದವರೆಗೂ, ಅನಂತರವೂ ಆಕೆಯ ಪರಿಚಯವೂ ಸ್ನೇಹವೂ ಹೆಚ್ಚುತ್ತಿದ್ದಿತು. ಆಕೆಯು ಲಂಡನ್ ನಗರದಲ್ಲಿ ವಾಸಿಸುತ್ತಿದ್ದಳು. ಆಕೆಯು ತನ್ನ ವಿಳಾಸವನ್ನು ನನಗೆ ತಿಳಿಸಿ ಪ್ರತಿ ಭಾನುವಾರವೂ ತನ್ನ ಮನೆಗೆ ಬಂದು ಊಟಮಾಡಬೇಕೆಂದು ಕೋರಿಕೊಂಡಳು. ಆದಿತ್ಯವಾರ ಮಾತ್ರವಲ್ಲದೆ ಹೆಚ್ಚುಗಟ್ಟಲೆಯ ಕಾಲಗಳಲ್ಲೂ ನನ್ನನ್ನು ಆಹ್ವಾನಿಸುತ್ತಿದ್ದಳು. ನನ್ನ ನಾಚುಗೆಯನ್ನು ಹೋಗಲಾಡಿಸುವುದಕ್ಕಾಗಿ ಯುವತಿಯರ ಪರಿಚಯ ಮಾಡಿಸಿ ಅವರಕೂಡ ಸಂಭಾಷಿಸಲು ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದಳು. ಮುಖ್ಯವಾಗಿ ಒಬ್ಬ ಯುವತಿಯು ಆಕೆಯ ಮನೆಯಲ್ಲೇ ಇರುತ್ತಿದ್ದಳು. ಆಕೆಯು ಮಾತ್ರ ನಮ್ಮಿಬ್ಬರನ್ನೂ ಮನೆಯಲ್ಲಿ ಬಿಟ್ಟು ಹೊರಕ್ಕೆ ಹೋಗುತ್ತಿದ್ದಳು. ಅದೆಲ್ಲವೂ ನನಗೆ ಬಹಳ ಕಷ್ಟವಾಗಿದ್ದಿತು. ನಾನು ಮಾತನಾಡುವ ಸಂದರ್ಭವನ್ನುಂಟುಮಾಡಿಕೊಳ್ಳಲಾರದವನಾಗಿದ್ದೆನು. ಪರಿಹಾಸೋಕ್ತಿಯ ಗಂಧವೇ ಇಲ್ಲವು. ಆಕೆಯು ನನಗೆ ಇವೆಲ್ಲವನ್ನೂ ಕಲಿಸಿಕೊಡುವವಳಾದಳು. ನಾನು ಕಲಿತುಕೊಂಡೆನು. ಪ್ರತಿ ಆದಿತ್ಯವಾರವೂ ಆ ಯುವತಿಯಕೂಡ ಮಾತನಾಡಲು ನಾನು ಉತ್ಸಾಹವುಳ್ಳವನಾದೆನು. ಆ ವೃದ್ಧವಿತಂತುವು ಪ್ರತಿದಿನವೂ ಈ ಕ್ರಮವನ್ನು ಇನ್ನೂ ಹೆಚ್ಚಿಸುತ್ತಾ ಬಂದಳು. ಆಕೆಗೆ ಯಾವ ಉದ್ದೇಶವೋ ಇದುದರಿಂದ ನಮ್ಮಿಬ್ಬರನ್ನು ಒಂದುಕಡೆ ಸೇರಿಸುವುದಾಗಿದ್ದಿತು. ನನಗೆ ಮದುವೆಯಾಗಿದೆಯೆಂದು ಆಕೆಯೊಡನೆ ಹೇಳಿದರೊಳ್ಳೆಯದೆಂದು ನನಗೆ ತೋರಿದುದರಿಂದ ನಾನು ಆಕೆಗೆ ಒಂದು ಕಾಗದವನ್ನು ಬರೆದೆನು. "ಬ್ರೈಟನ್ನಿನಲ್ಲಿ ನಮಗೆ ಪರಿಚಯವಾದಾರಭ್ಯ ನೀವು ನನಗೆ ಬಹಳ ದಯಾವಂತೆಯರಾಗಿದ್ದಿರಿ. ಹೆತ್ತತಾಯಿಗಿಂತಲೂ ಹೆಚ್ಚಾಗಿ ನೀವು ನನ್ನನ್ನು ಆದರಿಸಿದಿರಿ. ನನಗೆ ಮದುವೆಯನ್ನು ಮಾಡಬೇಕೆಂಬ ಅಭಿಲಾಷೆಯಿಂದ ನೀವು ನನಗೆ ಯುವತಿಯೊಡನೆ ಪರಿಚಯವನ್ನು ಮಾಡಿಸಿದಿರಿ. ನನಗೆ ಇದಕ್ಕೆ ಮೊದಲೇ ವಿವಾಹವಾಗಿದೆಯೆಂದು ನಿಮಗೆ ತಿಳಿಸಬೇಕಾಗಿದ್ದಿತು. ಆದರೆ ಭಾರತವಿದ್ಯಾರ್ಥಿಗಳೆಲ್ಲರೂ ಆಂಗ್ಲದೇಶದಲ್ಲಿ ಅವಿವಾಹಿತರಂತೆಯೇ ನಟಿಸುತ್ತಾರೆ. ಅವರಂತೆಯೇ ನಾನೂ ಈವರೆಗೆ ಅವರಂತೆ ನಟಿಸಿದೆನು. ಅದು ತಪ್ಪೆಂದು ನನಗೆ ಈಗ ಗೊತ್ತಾಯಿತು. ನನಗೆ ಬಾಲ್ಯದಲ್ಲೇ ವಿವಾಹವಾಯಿತು. ನನಗೊಬ್ಬ ಮಗನು ಸಹ ಹುಟ್ಟಿದ್ದನು. ಈ ಸಂಗತಿಯನ್ನು ಇದುವರೆಗೆ ನಿಮಗೆ [illegible] ದೇವರು ನನಗೆ ಧೈರ್ಯವನ್ನು ಕೊಟ್ಟುದಕ್ಕಾಗಿ ನಾನು ಬಹಳ ಕೃತಜ್ಞನಾಗಿರುತ್ತೇನೆ. ನೀವು ನನ್ನನ್ನು ಕ್ಷಮಿಸುವಿರಾ? ನೀವು [illegible] ಯುವತಿಯ ವಿಚಾರವಾಗಿ ನಾನು ಯಾವ [illegible] ಇಲ್ಲ. ನಾನು ತನ್ನ [illegible] ಇನ್ನು [illegible] ನಿಮಗೆ ನಾನು ಈ [illegible] ಇನ್ನು ನಾನು ನಿಮ್ಮ [illegible] ನೆಂದು ನಿಮಗೆ ತೋರಿದಲ್ಲಿ ನಾನಿಷ್ಟು ಮಾತ್ರಕ್ಕೇ ಚಿಂತಿಸತಕ್ಕವನಲ್ಲ. ನಿಮ್ಮ ದಯೆಗಾಗಿ ನಾನು ಯಾವಾಗಲೂ ಕೃತಜ್ಞನಾಗಿರುವೆನು. ಇನ್ನು ಮೇಲೂ ನೀವು ನನ್ನನ್ನು ಆದರಿಸುವಿರೆಂದು ನಾನು ಬಹಳವಾಗಿ ನಂಬಿರುವೆನು." ಎಂದು ನಾನು ಆಕೆಗೆ ಕಾಗದವನ್ನು ಒಂದೇ ಆವರ್ತಿಗೆ ಬರೆಯಲಾರದೆ ಹೋದೆನಾದುದರಿಂದ ಅನೇಕವೇಳೆ ಬರೆದೂ ಹರಿದು ಹಾಕಿ ಕೆಲದಿನಗಳಲ್ಲಿ ಅದನ್ನು ಮುಗಿಸಿದೆನು. ನನ್ನ ಕಾಗದವು ತಲುಪಿದ ಕೂಡಲೇ ಆಕೆಯು ಉತ್ತರವನ್ನು ಬರೆದಳು.

"ನೀವು ಭಾರಾಳವಾಗಿ ಬರೆದ ಕಾಗದವು ತಲುಪಿತು. ನಾವಿಬ್ಬರೂ ಅದನ್ನು ಓದಿ ನಕ್ಕುಬಿಟ್ಟೆವು. ನೀವು ನಿಮ್ಮ ವಿವಾಹರಹಸ್ಯವನ್ನು ಹೇಳದಿದ್ದುದು ಮಹಾಪರಾಧವೆಂದು ನಾನು ಭಾವಿಸುತ್ತೇನೆ. ಈಗಲಾದರೂ ನೀವು ನಿಜವನ್ನು ತಿಳಿಸಿದುದಕ್ಕಾಗಿ ಸಂತೋಷಿಸುತ್ತೇನೆ. ಯಾವಾಗಲೂ ಮಾಮೂಲಾಗಿ ನೀವು ಬರುತ್ತಿರಬೇಕು. ನೀವು ಬಂದು ಬಾಲ್ಯವಿವಾಹವನ್ನು ವಿವರಿಸಿ ಹೇಳಿ ನಮಗೆ ಸಂತೋಷವನ್ನುಂಟುಮಾಡುವುದು. ನಮ್ಮ ಸ್ನೇಹಕ್ಕೆ ಇದರಿಂದ ಯಾವ ಭಂಗವೂ ಉಂಟಾಗುವುದಿಲ್ಲವೆಂದು ನಂಬುತ್ತೇನೆ." ಎಂದು ಆಕೆಯು ಬರೆದಳು. ಈಪ್ರಕಾರವಾಗಿ ಈ ಅಸತ್ಯಪಿಶಾಚಿಯನ್ನು ನಾನು ಉಚ್ಚಾಟನೆಮಾಡಿದೆನು. ಅನಂತರ ನನ್ನ ವಿವಾಹವನ್ನು ಕುರಿತು ಹೇಳಬೇಕಾದ ಸಂದರ್ಭವೊದಗಿದಾಗ ನಾನು ಯಾವ ಸಂಶಯವನ್ನೂ ಪಡಲಿಲ್ಲ.

ದಾವಣಗೆರೆ ವೀರಶೈವವಿದ್ಯಾವರ್ಧಕಫಂಡ್‌ಸಂಘ.

ಮೈಸೂರುಶೀಮೆಯ ಬಡವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ದಾವಣಗೆರೆ ಹೈಸ್ಕೂಲಿನಲ್ಲಿ ಅಭ್ಯಾಸಮಾಡತಕ್ಕ ಪರಸ್ಥಳವಿದ್ಯಾರ್ಥಿಗಳು ಈ ಸಂಘದ ರೂಲ್ಸಿಗೆ ಒಳಪಟ್ಟು ನಡೆದುಕೊಳ್ಳತಕ್ಕವರಿಗೆ ಮಾತ್ರ ಬೋರ್ಡಿಂಗ್ ಸೀಟ್ ಕೊಡಲ್ಪಡುವದು. ಅಪೇಕ್ಷೆಯುಳ್ಳವರು ಈ ಸಂಘದ ಪ್ರಿಂಟ್‌ಫಾರಂನಲ್ಲಿ ಬರುವ ಜೂನ್ ತಾರೀಖು 5 ರವಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು.

(1) ಕಾಲವಿಳಂಬವಾಗಿ ಬರುವ ಅಪ್ಲಿಕೇಷನ್‌ಗಳು ತಿರಸ್ಕರಿಸಲ್ಪಡುವವು. (2) ಒಂದುವೇಳೆ ಬೋರ್ಡಿಂಗಿನಲ್ಲಿ ಸೀಟುಗಳು ಇದ್ದರೆ ಅಂಥ ಅಪ್ಲಿಕೇಷನ್‌ಗಳಿಗೆ ನಿಗಕೊಡಲ್ಪಡುವದು. (3) ಅಪ್ಲಿಕೇಷನ್ನಿನಲ್ಲಿ ನಮೂದಿರುವ ಪ್ರತಿಯೊಂದು ಐಟಂಗಳು ಸರಿಯಾದ ಕಾರಣದಿಂದ ಭರ್ತಿಮಾಡಲ್ಪಟ್ಟಿರಬೇಕು. ಹಾಗಿಲ್ಲದ ಭಾಗದಲ್ಲಿ ತಿರಸ್ಕರಿಸಲ್ಪಡುವದು. (4) ಅನುಕೂಲಸ್ಥರಾದ ವಿದ್ಯಾರ್ಥಿಗಳು ಸಂಘದ ರೂಲ್ಸಿಗೆ ಒಳಪಟ್ಟು ಬೋರ್ಡಿಂಗಿಗೆ ಸೇರಲಪೇಕ್ಷೆಯುಳ್ಳವರು ಮಾಹೆಯಾನ ಆಗುವ ಖರ್ಚಿನಲ್ಲಿ ಹೀಲಿ ಪ್ರಕಾರ ಕೊಟ್ಟು ಸೇರಲು ಅವಕಾಶಕೊಡಲ್ಪಡುತ್ತೆ. ಇಷ್ಟವುಳ್ಳವರು ಜೂನ್ 5 ರವಳಗಾಗಿ 10 ರೂ. ಗಳನ್ನು ಅಡ್ವಾನ್ಸಾಗಿ ಕಳುಹಿಸಿ ಅಪ್ಲಿಕೇಷನ್ ಹಾಕಿಕೊಳ್ಳುವದು. (5) ಅಪ್ಲಿಕೇಷನ್‌ಫಾರಂ ಅಪೇಕ್ಷಿಸುವವರು ಪೋಸ್ಟ್ ಖರ್ಚಿಗಾಗಿ ಅರ್ಧಆಣೆ ಸ್ಟಾಂಪು ಕಳುಹಿಸುವುದು.

ತಿರಕಪ್ಪನವರಮಠದ ಷಡಾಕ್ಷರಪ್ಪ, ಪ್ರೆಸಿಡೆಂಟ್.

ಕರ್ನಾಟಕ ಏಕೀಕರಣ ಪರಿಷತ್ತ 2ನೇ ಅಧಿವೇಶನವು

ಕರ್ನಾಟಕ ಏಕೀಕರಣ ಪರಿಷತ್ತಿನ 2 ನೇ ಅಧಿವೇಶನವು ಈ ಸಾರಿ ಬಳ್ಳಾರಿ ಪಟ್ಟಣದಲ್ಲಿ ಇದೇ ಮೇ ತಿಂಗಳು 19-5-1926 ನೇ ತಾರೀಖಿಗೆ ಕೂಡುವುದು.

ಶ್ರೀ. ಪಂಡಿತ ರಾಯಪ್ಪಾ ಚಿಕ್ಕೋಡಿ, ಬಿ.ಎ. ಅಧ್ಯಕ್ಷ, ಜಿಲ್ಲಾ ಲೋಕಲ್‌ಬೋರ್ಡು ಬೆಳಗಾಂವ, ಇವರು ಅಧ್ಯಕ್ಷತೆಯನ್ನು ಸ್ವೀಕರಿಸಿರುವರು.

ಈ ಸಾರಿ ಪರಿಷತ್ತಿನಲ್ಲಿ ಬರತಕ್ಕ ಮುಖ್ಯ ವಿಷಯಗಳೇನೆಂದರೆ—

(1) ಈ ಕರ್ನಾಟಕ ಏಕೀಕರಣಸಭೆಯಧ್ಯೇಯ (Creed)ವನ್ನು ನಿಶ್ಚಯಿಸುವದು.

(2) ಕರ್ನಾಟಕ ಏ. ಸಭೆಯ ಸಂಘಟನೆಯ(Constitution) ನಿಯಮಾವಲಿಯನ್ನು ನಿಶ್ಚಯಿಸುವದು.

(3) ಈ ವರ್ಷದ ಕಾರ್ಯಕ್ರಮವನ್ನು ನಿಶ್ಚಯಿಸುವದು.

(4) ಈ ವರ್ಷದ ಅಧಿಕಾರಮಂಡಲವನ್ನು ಚುನಾಯಿಸುವದು.

(5) ಕ. ಏ. ಸಭೆಯ ಸಭಾಸದರಾಗಲಿಕ್ಕೆ ಅವಶ್ಯವಾದ ಯೋಗ್ಯತೆಯನ್ನು ನಿಶ್ಚಯಿಸುವದು.

ಇಮವರೆಗೆ ಕರ್ನಾಟಕ ಏಕೀಕರಣಸಭೆಗೆ ಒಂದುರೂಪಾಯಿ ಚಂದಾ ಹಣವನ್ನು ಕೊಟ್ಟ ಅಥವಾ ಈ 19 ನೇ ತಾರೀಖಿನೊಳಗಾಗಿ ಅಷ್ಟು ಹಣವನ್ನು ಬಳ್ಳಾರಿಯಲ್ಲಿ ಕಾರ್ಯದರ್ಶಿಗಳಿಗೆ ಕೊಡುವ ಪ್ರತಿಯೊಬ್ಬನು ಈ ಪರಿಷತ್ತಿನ ಸಾಮಾನ್ಯ ಸದಸ್ಯನಾಗಬಲ್ಲನು.

ಕರ್ನಾಟಕದ ರಾಜಕೀಯ ಏಕೀಕರಣವಾಗಬೇಕೆಂದು ಹವಣಿಸುವ ಪ್ರತಿಯೊಬ್ಬನು ಈ ಪರಿಷತ್ತಿಗೆ ಬಂದು ಸಹಾಯಮಾಡಬೇಕೆಂದು ಬಿನ್ನಹವಿರುವದು.

S. T. Kambli.
ಅಧ್ಯಕ್ಷ.
ಕ. ಏ. ಸಭೆ. ಮುಖ್ಯಕಚೇರಿ ಹುಬ್ಬಳ್ಳಿ.

೧೯೨೬ ನೆಯ ಇಸವಿ ಮೇ ತಾ|| ೧೫ ರಿಂದ ೧೯೨೬ ನೆಯ ಇಸವಿ ಮೇ ತಾ|| ೨೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ವೈಶಾಖ ಶುದ್ಧ ಚೌತಿಯಿಂದ ವೈಶಾಖ ಶುದ್ಧ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಮಾಸ
15	ಶನಿ	ಚೌತಿ	53-55	ಆರ್ದ್ರಾ	56-31	2
16	ಭಾನು	ಪಂಚ	56-50	ಪುನ.	60	3
17	¹ಸೋಮ	ಷಷ್ಠಿ	60	ಪುನ	1-36	4
18	ಮಂಗಳ	ಷಷ್ಠಿ	1-19	ಪುಷ್ಯ	7-7	5
19	ಬುಧ	ಸಪ್ತ	6-1	ಆಶ್ಲೇ	12-31	6
20	ಗುರು	ಅಷ್ಟ	11-5	ಮಘಾ	21-57	7
21	²ಶುಕ್ರ	ನವ	16-6	ಪುಬ್ಬ	23-23	8

(1) ಮಣಿನಕ್ಷತ್ರ-ಕೃತ್ತಿಕೆ ೩ ನೆಯ ಪಾದ. (2) ಮಣಿನಕ್ಷತ್ರ-ಕೃತ್ತಿಕೆ ೪ ನೆಯಪಾದ.

ಮೈಸೂರು: [illegible] ಪ್ರೆಸ್ [illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತ್ರಿಪಾ | ಘನಸಪಕ್ಷಕೃಶಾವಕಾರಾ ಪಕ್ಷಜನಹೃತ್ತ ತೋಷರಾಜೀಷಾ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾರೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಪಾಕಲಿತ ಸಾಧ್ವಸ್ತ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಜೆತ್ತಿಳೆಯಂಪಾಪುರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಮೇ ತಾರೀಖು ೨೨ ನೆಯ ಶನಿವಾರ. [ಸಂಚಿಕೆ ೨೧

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ತುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇವಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣವಾಗದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	20

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲ್ಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ಲಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲ್ಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೧— ೪—೦	೦— ೯—೦
ಚಾರುಶೀಲಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕಾ ಶತಕತ್ರಯ	೧— ೦—೦	೧— ೭—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧— ೦—೦	೧— ೬—೦

ಡಾಕ್ಟರ್ ಜೇ. ಬೀ. ಯವರ ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಕಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—32] ಪೋ. ಬಾ. ೫೧೦. ಮದರಾಸು.

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ್,
[12-6] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಇಮಿಟೇಷನ್ ರೇಶ್ಮೆಸೀರೆಗಳು.

ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡಕಂಪನಿಯವರಿಂದ ತಯಾರಿಸಿದ್ದು. 17 ಮೊಳ ಉದ್ದವೂ 2½ ಮೊಳ ಅಗಲವೂ ಇರುವದು. ಈ ಸೀರೆಗಳಿಗೆ ಅಂದವಾದ ಅಂಚೂ, ಸುಂದರವಾದ ಸಾಚಾರೇಷ್ಮೆಯ ಸೆರಗೂ ಇರುವದು. ಇವು ಯಾವಾಗಲೂ ರೇಷ್ಮೆಯಂತೆಯೇ ಇರುವುವು. ಇವುಗಳ ಬಣ್ಣವು ಬೇಗನೆ ಕೆಡದು. ಪ್ರತಿಯೊಬ್ಬರೂ ಉಡಲಿಕ್ಕೆ ಬಹು ಲಾಯಖಾದವು.

ಕ್ರಯ ನಂ. 1 10—8—0.
ನಂ. 2 8—8—0.
ನಂ. 3 7—8—0.

ವಿಳಾಸ—ಎಂ. ಬೆಸ್ಸನ್ ಅಂಡ್‌ಕೊ,
4—1 ನಂ. 504, ಪಾರ್ಕ್‌ಟೌನ್, ಮದರಾಸು.

ಆಯುರ್ವೇದ ಸುಲಭಚಿಕಿತ್ಸೆಗಳು.

ರಾಜಧಾನಿಯಲ್ಲಿರುವ ಸರ್ಕಾರೀ ಆಯುರ್ವೇದವೈದ್ಯಶಾಲೆಯಲ್ಲಿ ತಯಾರಿಸಿ ನಿತ್ಯವೂ ಉಪಯೋಗಿಸಲ್ಪಡುವ ಔಷಧಗಳಲ್ಲಿ ಕೆಲವು ಸ್ಟಾರ್ ಪತ್ರಿಕಾ ವಾಚಕರ ಉಪಯೋಗಾರ್ಥವಾಗಿ ಈ ಕೆಳಗೆ ಕೊಡಲ್ಪಟ್ಟಿವೆ.—

ಪಿಪ್ಪಲ್ಯಾದಿಚೂರ್ಣ.

ತಾಲೀಸಪತ್ರೆ	ಹಿಪ್ಪಲಿ	ಚಚೋರ
ಹುಣಸೆತೊಕ್ಕು	ಮೆಣಸು	ಕರ್ಕಾಟಕಶೃಂಗೀ
ಲವಂಗ	ತವಕ್ಷೀರ	ಅಳಲೇಕಾಯಿಸಿಪ್ಪೆ
ನಾಗಕೇಸರಿ	ದ್ರಾಕ್ಷಿಹಣ್ಣು	ಕರಿಜೀರಿಗೆ
ಏಲಕ್ಕಿ	ಖರ್ಜೂರ	ಜೀರಿಗೆ
ತಮಾಲಪತ್ರೆ	ದಾಳಿಂಬೆತೊಕ್ಕು	ಮುಡಿವಾಳ
ಶುಂಠಿ	ಜಾಕಾಯಿ	ಕಮಲದಹೂ

ಎಲ್ಲವನ್ನೂ ಸಮಭಾಗದಿಂದ ಚೂರ್ಣಿಸಿ ಸಮ ಸಕ್ಕರೆ ಸೇರಿಸಿ ¼ ತೊಲಾದಿಂದ ½ ತೊಲಾದವರಿಗೆ ಸೇವಿಸಿದರೆ ಕ್ಷಯ, ಕಾಸ, ಪ್ರದರ, ಬಹುಮೂತ್ರಗಳು ಗುಣವಾಗುವುವು.

ದ್ರಾಕ್ಷಾದಿಚೂರ್ಣ.

ದ್ರಾಕ್ಷಿಹಣ್ಣು	ಲಾವಂಚ	ಜಾಜಿಕಾಯಿ
ಭತ್ತದಅರಳು	ನೆಲ್ಲಿಚೆಟ್ಟು	ಏಲಕ್ಕಿ
ತಾವರೆಗೆಡ್ಡೆ	ಭದ್ರಮುಸ್ತೆ	ದಾಲಚಿನ್ನಿ
ಅತಿಮಧುರ	ಶ್ರೀಗಂಧ	ಲವಂಗಪತ್ರೆ
ಖರ್ಜೂರ	ಅಮೃತಬಳ್ಳಿ	ನಾಗಕೇಸರಿ
ನೆಗ್ಗಿಲು	ತಕ್ಕೋಲ	ಹಿಪ್ಪಲಿ
	ಕೊತ್ತುಂಬರಿ	

ಇವೆಲ್ಲವನ್ನೂ ಸಮಭಾಗದಿಂದ ಚೂರ್ಣಿಸಿ ಸಮ ಸಕ್ಕರೆ ಮಿಶ್ರಮಾಡಿ ೩೦ ರಿಂದ ೬೦ ಗ್ರೇನ್‌ವರಿಗೆ ಉಪಯೋಗಿಸಿದರೆ ಪಿತ್ತ, ದಾಹ, ಪಾಂಡು, ಕಾಮಾಲೆ, ರಕ್ತಪಿತ್ತ, ಉದರ, ದಾಹ, ಜ್ವರ, ಅರೋಚಕ, ಪ್ರಮೇಹ, ಯೋನಿದೋಷ ಮುಂತಾದವುಗಳು ಪರಿಹಾರವಾಗುವುವು.

ಮಹಾದ್ರಾಕ್ಷಾದಿಚೂರ್ಣ.

ದ್ರಾಕ್ಷಿಹಣ್ಣು	ದಾಳಿಂಬರಹಣ್ಣು	ಖರ್ಜೂರ
ದಾಲಚಿನ್ನಿ	ಏಲಕ್ಕಿ	ಲವಂಗಪತ್ರೆ
ನಾಗಕೇಸರಿ	ಹಿಪ್ಪಲಿ	ಮೆಣಸು
ಶುಂಠಿ	ತವಕ್ಷೀರ	ಕೊಬ್ಬರಿ
ಶ್ರೀಗಂಧ	ಯಷ್ಟಿಮಧು	ನೆಲ್ಲಿಚೆಟ್ಟು
ಚಾರುಪಪ್ಪು	ದೊಡ್ಡೀಪತ್ರೆ	ಲಾಮಂಚ
ಜಾಪತ್ರೆ	ನೆಲಗುಂಬಳ	ನೆಗ್ಗಿಲು
ಬಾಳೆಗೆಡ್ಡೆ	ನಸಗುನ್ನಿಬೀಜ	ಜಾಜೀಕಾಯಿ
ತಕ್ಕೋಲ	ಚಂಗಲಕೋಷ್ಟ	ಉದ್ದು
ಎಳ್ಳು	ಬದರಕ್ಕಿ	ಬಾರ್ಲಿಧಾನ್ಯ
ಲೋಧ್ರಚಕ್ಕೆ	ತುಂಗೆಮುಸ್ತೆ	ಶಣಬಿನಬೀಜ
ಕರೀಜೀರಿಗೆ	ಜೀರಿಗೆ	ಅಜಮೋದ
ಮೆಂತ್ಯ	ತಾಳೀಸಪತ್ರೆ	ಸೈಂಧವಲವಣ
ಕೊತ್ತುಂಬರಿಬೀಜ	ಗಂಟುಭಾರಂಗಿ	ಕರ್ಕಾಟಕಶೃಂಗೀ
ಗರುಗ	ಬಿಳಿಕೊಮ್ಮೆಬೇರು	ಗೋದುಬೀಜ
ಮಾವಿನಬೀಜ	ಅಭ್ರಕಸಿಂಧೂರ	

ಎಲ್ಲವನ್ನೂ ಸಮಭಾಗ ಚೂರ್ಣಿಸಿ ಎರಡರಷ್ಟು ಸಕ್ಕರೆ ಸೇರಿಸಿ ೩೦ ರಿಂದ ೬೦ ಗ್ರೇನ್‌ವರೆಗೆ ಉಪಯೋಗಿಸಿದರೆ ಸಮಸ್ತಪಿತ್ತರೋಗಗಳೂ ಗುಣವಾಗುವುವು. ಶುಕ್ಲ ಅಥವಾ [illegible] ಶರೀರಕ್ಕೆ ಪುಷ್ಟಿ, ಬಲ ಮತ್ತು [illegible]. [illegible] ಪರಿಹಾರವಾಗುವುದು.

[illegible]

MARIMALLAPPAH HIGH SCHOOL.

We are glad to hear that after the last article of ours the board of trustees have finally resolved to hand over the Marimallappa High School to the Education Department, a step which we have already said was inevitable and from the point of view of the students most desirable. They have also recommended that Government may be pleased to grant freeships to Lingayet students up to a strength of 33⅓ per cent of the total number of students in High School classes. Founded by a Lingayet with intent to give special encouragement to the Lingayet youth, the institution should no doubt be made specially useful to the Lingayet students. Hitherto all Lingayet students in the school were exempt from fees. This concession we need hardly say has to be continued by the Education Department too, as it is an obligation which every one taking charge of the institution is bound to fulfil. Just now it may be thought that wholesale freeships are not justified in this case. But we should think that as most of the Lingayet students are poor a liberal provision of freeships has to be made. We would endorse the recommendation of the board of trustees with regard to the freeships and urge upon the Government to approve of the same and we may assure the Government that the Lingayets will always be thankful to them for their keen interest in the education of the youth of the community.

EDUCATION IN MYSORE.

The Report on Public Instruction in Mysore for the year 1924-25 makes an interesting reading. Touring of inspecting officers as usual still leaves a lot of room for improvement. This is to be regretted in Mysore as the means of communication are so easy and convenient. If only their work was being vigilantly watched there may not have been any room for complaint. The decrease in the number of institutions both public and private from 9084 to 8002 is not a disturbing factor because it is only due to the closing of a large number of village aided schools and adult schools which had a lingering life for the last few years, while the number of pupils has increased from 303,092 to 306,195. We have had occasion to complain of these aided schools where many teachers showed their existence only on the day of drawing their pay. What a lot of money has been wasted on these aided schools which have had a nominal existence and which have helped nobody except the teachers concerned. There is an interesting article contributed to the Daily Post representing "A Villager's View," which while putting forward his view in a very vigorous way has unfortunately gone into wrong figures and into fearful conclusions. He says that out of every hundred children of school going age as many as 65% are found to be at school. It is just half of it in fact, which may not, therefore, compare very favourably with the more forward of the other States such as Cochin and Travancore and Provinces like Coorg and Bengal. The alarming portion of the "Villager's view refers to the purely literary education given to the industrial, labouring and trading classes who number according to him three-fourths of the total number of students, that is, 2¼ lakhs out of 3 lakhs and odd. He is not concerned a bit about the remaining one-fourth belonging to the learned or non-professional class whose education on the self same lines is not in the least harmful. He says that these 2¼ lakhs of youngsters of professional classes leave their education after 10 years of study to earn their living as coolies. Pathetic is the picture drawn. It would appear that these young men at their plastic age are weaned out from their ancestral world and are seen out to become quill-drivers and to thrust to compete for their advancement in the limited sphere of Government Service, and that at this rate in half a century the number would be increased to 5 times. Sadder still is the picture of the parent, who according to the writer will have reduced himself to bankruptcy in order to give this education to his children, whom he only sees promenading urban streets in collar and tie, earning a pittance unable to meet their own expenses in the shape of tailors' and Tobacco merchants' bills, and who would be converting the farms into tennis grounds or cricket fields. We could almost challenge that the "Villager" is no villager. For, we cannot deny some room for exaggeration in a newspaper article, but is there anything to justify these frightful forebodings? Are these facts true or even the figures? 3 lakhs of students only shows the total number in all the grades of schools. After ten years of study we find that only 2438 not 2¼ lakhs appear for S.S.L.C. and not even half of them are declared eligible for the College course. Will a thousand students getting out of the High Schools upset the village economy of our country? Will not so many of these get back to their own native places and look to their avocations? Large numbers of the students drop off in the lower classes and return to their parental occupations. Why, we see that quite a respectable number of Educated among the learned class taking to trade, agriculture and other industries and successfully too. What reasons are there that the children of the professional classes will not do the same. There may be during the transitional period some difficulty experienced by the students in selecting avocations. But that is bound to adjust itself. What is the use if 5 children in a family owning 10 acres of land split the land into plots of 2 acres and hang on them for all their lives, which would be result if the Villager's view is to be taken. Not that we are not in favour of education suited to the needs and aptitudes of our children. In fact, we have been fighting for it all along. But we cannot surely picture a calamity as the Villager does by the present course of education. With us any education is better than no education. Ignorance has been the stumbling block in the way of our progress and any education which could introduce some light into the dark homes, which could awaken the intellect in man and which could make him self-reliant to some extent at least is most welcome. We have had to say all this, because if this propaganda is carried to the rural population it would have dangerous results. Just now they are opening their eyes to the value of education and we wish that they should not be scared away by the fantastic theories of persons who are not truly conversant with the rural conditions. We know how the present education, wanting as it is in so many respects has converted a number of unknown villages into bright spots of which the State could be proud. Take for instance [illegible] in Gundlupet Taluk and [illegible] in Channarayapatna Taluk. Let us also bear in mind that industries and commerce have only progressed in countries where education has reached the masses.

The education among Mohammadans does not show much improvement. There has been very good progress among the depressed classes. Their students have shown excellent results in the Lower Secondary examinations. There is just one obstacle to satisfactory inspection of schools. That is, the divided responsibility so far as the various schools are concerned, the boys', the girls' and the Urdu schools. It would be infinitely better if one person is made responsible in each district for the satisfactory working of all the institutions in the district. There may be suitable assistants given both to the head office and to the District Inspectors to look after special interests.

We do not deny that most of the progress depends on the personnel of the Department. While the entire teaching and the Inspectoral staff should be earnest and sympathetic, the directing head must be the very idea of energy, enthusiasm and sympathy—one who would command respect and confidence of all sections of people and of the department. Mr. K. Matthan is one like that and the State is fortunate in having him at the head of the Education Department. Though he was not an educationist in the technical sense and though he was not a Mysorean which is so much made of of late he has put his heart into his work ever since he got into the Department and has succeeded in a remarkable way. With the rumours afloat one is anxious if Mr. Matthan would leave the Department. We would strongly urge on the Government his retention in the Department for some more time, unless it would come in his way of going higher up in which case we would expect one with the same broad sympathies, with the same earnestness and enthusiasm to fill the place. It is only then that the work of the Department would progress rapidly with the co-operation of the people.

[illegible]

[illegible]

ಪದ್ಧತಿಯಪ್ರಕಾರ ನಡೆಯುವುದರಿಂದ ಸದ್ಭಕ್ತರುಗಳು ಸಕಾಲಕ್ಕೆ ದಯೆಮಾಡಿಸಿ ಪೂರ್ಣವಾದ ಭಕ್ತಿಯಿಂದ ಸ್ವಾಮಿಯನ್ನು ಸೇವಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ. ಅಲ್ಲಿ ಎಲ್ಲ ಕೋಮಿನವರಿಗೂ ಆಹಾರಪಾನೀಯಗಳಿಗೆ ತಕ್ಕೇರ್ಪಾಟಿರುತ್ತದೆ. ಓರ್ವ ಸ್ವಾಮಿಭಕ್ತ.

ಹೊಸದಾಗಿ ದನಗಳ ಆಸ್ಪತ್ರೆಯೇರ್ಪಟ್ಟಿರುತ್ತದೆ.

ಹಾಸನದ ಜಿ॥ ಹೊಳೆನರಸೀಪುರದ ಕಸಬಾದಲ್ಲಿ ಈ ತಾಲ್ಲೂಕಿನ ದನಗಳ ಆಸ್ಪತ್ರೆಯನ್ನು ಸರಕಾರದವರು ಮಂಜೂರ್ಮಾಡಿದ್ದರಮೇಲೆ ತಾ॥ 28-4-26 ರ ಲಾಗಾಯಿತು ಮ್ಯುನಿಸಿಪಲ್ ಆಫೀಸಿನ ಎದುರುಭಾಗದಲ್ಲಿ ದನದಿನ ಆಸ್ಪತ್ರೆ ಇಡಲ್ಪಟ್ಟಿರುತ್ತದೆ. ಈ ಆಸ್ಪತ್ರೆಯ ಡಾಕ್ಟರಾಗಿ ನಿಯಮಿಸಲ್ಪಟ್ಟಿರುವ ಬೊಂಬಾಯಿನಲ್ಲಿ ಶಿಕ್ಷಣಹೊಂದಿದ ಮ॥ ಕೆ. ರಾಮಚಂದ್ರರಾವ್ ಎಂಬುವವರು ಕೇವಲ ಉತ್ಸಾಹದಿಂದಲೂ, ಶ್ರದ್ಧೆಯಿಂದಲೂ ಕೆಲಸಮಾಡತಕ್ಕವರಾಗಿರುವುದರಿಂದ ಈ ತಾಲ್ಲೂಕು ಪ್ರಜೆಗಳು ನಿರಾಂತಕವಾಗಿ ಈ ಆಸ್ಪತ್ರೆಯ ಪ್ರಯೋಜನವನ್ನು ಹೊಂದಬೇಕಾಗಿ ಕೋರಿದೆ. ಅಲ್ಲದೆ ಈ ಟೌನ್ ಪ್ರಜೆಗಳು ಈ ವಿಷಯದಲ್ಲಿ ಉತ್ಸಾಹದಿಂದ ಸಹಾಯಕರಾಗಿರುತ್ತಾರೆಂದು ನಂಬಿದೆ. ಪಶುರಕ್ಷಣಾಭಿಮಾನಿ.

ಬೀರೂರಿನ ವಾಚನಾಲಯ.

ಈ ಊರಿನ ಹಳೇಪೇಟೆಯಲ್ಲಿ ಸ್ಥಾಪಿತವಾಗಿರುವ ವೀರಶೈವವಾಚನಾಲಯವು ಸ್ಥಳಸಂಕೋಚದಿಂದ ಉಯ್ಯಾಲೆಕಂಭದ ಹತ್ತಿರ ಮ॥ ಪತ್ರಿ ಕೆ. ಚೆನ್ನವೀರಪ್ಪಯ್ಯನವರಿಂದ ಉಚಿತವಾಗಿ ಕೊಡಲ್ಪಟ್ಟಿರುವ ಮನೆಗೆ ಬದಲಾಯಿಸಲ್ಪಟ್ಟಿದೆ. ಇದಕ್ಕೆ ಸಂಬಂಧಪಟ್ಟ ಒಂದು ಸಾರ್ವಜನಿಕಸಭೆಯು ತಾ॥ 9-5-26 ನೇ ಭಾನುವಾರ ಮ॥ ಎಚ್. ಎಂ. ಶಿವಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಅನೇಕ ಮಹನೀಯರು ಬಂದಿದ್ದರು. ಆ ದಿವಸದ ಕಾರ್ಯಕ್ರಮಪ್ರಾರಂಭವಾಗಿ ದೇವರಪ್ರಾರ್ಥನೆಯಾದನಂತರ ಕಾರ್ಯದರ್ಶಿಯವರಿಂದ ವಾಚನಾಲಯದ ವಾರ್ಷಿಕವರದಿಯು ಓದಲ್ಪಟ್ಟ ನಂತರ ಮ॥ ಎಂ. ಕಲ್ಲಪ್ಪನವರು ವಾಚನಾಲಯದ ಉಪಯೋಗಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ತರುವಾಯ ಮ॥ ಗಳಾದ ಪತ್ರಿ ಕೆ. ಚೆನ್ನವೀರಪ್ಪಯ್ಯನವರು ಅದರ ಪ್ರೆಸಿಡೆಂಟರಾಗಿಯೂ ಎಚ್. ಎಂ. ಶಿವಲಿಂಗಪ್ಪಯ್ಯನವರು ವೈಸ್‌ಪ್ರೆಸಿಡೆಂಟರಾಗಿಯೂ, ಡಿ. ಹಾಲಪ್ಪನವರು ಸೆಕ್ರೆಟರಿಯಾಗಿಯೂ, ಎಂ. ಶಿವಲಿಂಗಯ್ಯನವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ, ಪಿ. ಎಂ. ಮಹೇಶ್ವರಯ್ಯನವರು ಟ್ರಜರರ್ ಆಗಿಯೂ, ಬಿ. ಸಿ. ಮರುಳಪ್ಪನವರು ಅಕೌಂಟ್‌ಕೀಪರರಾಗಿಯೂ, ಕೆ. ಮಲ್ಲಪ್ಪನವರು, ಎಂ. ಮುದ್ವೀರಯ್ಯನವರು, ಎಂ. ಕಲ್ಲಪ್ಪನವರು, ಎಚ್. ನಂಜಪ್ಪನವರು, ಕೆ. ರುದ್ರಪ್ಪನವರು, ಎಸ್. ಬಿ. ರುದ್ರಯ್ಯನವರು, ಡಿ. ರುದ್ರಪ್ಪನವರು, ಎಸ್. ಪಿ. ಶಾಂತಯ್ಯನವರು, ಟಿ. ರುದ್ರಪ್ಪನವರು ಮತ್ತು ಬಿ. ಸಿ. ಮರುಳಪ್ಪನವರು ಮೆಂಬರುಗಳಾಗಿಯೂ ಚುನಾಯಿಸಲ್ಪಟ್ಟರು. ಇನ್ನು ಇತರ ವಿಷಯಗಳು ಚರ್ಚಿಸಲ್ಪಟ್ಟು ಅಧ್ಯಕ್ಷರ ಭಾಷಣದಿಂದ ಮುಕ್ತಾಯವಾಯಿತು. ಈಗ ಹೊಸದಾಗಿ ಚುನಾಯಿಸಲ್ಪಟ್ಟಿರುವ ಮೆಂಬರುಗಳು ಶ್ರದ್ಧೆವಹಿಸಿ ವಾಚನಾಲಯದ ವ್ಯವಸ್ಥೆಯನ್ನು ಏರ್ಪಡಿಸಿ ಅದನ್ನು ಅಭಿವೃದ್ಧಿಗೆ ತರುತ್ತಾರಾಗಿ ನಂಬಿರುತ್ತೇನೆ. ವಾಚನಾಲಯಾಭಿಮಾನಿ.

ನಿಜವಾದ ಬ್ರಾಹ್ಮಣೇತರರ ಮುಖಂಡರಾರು ?

ತಾ॥ 1-5-1926 ರ ಸ್ಟಾರ್‌ಪತ್ರಿಕೆಯ ಅಗ್ರಲೇಖದಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಬ್ರಾಹ್ಮಣೇತರರ ನಾಯಕತ್ವವನ್ನು ಖಂಡಿಸಿ ಬ್ರಾಹ್ಮಣೇತರರಿಗೆ ಎಚ್ಚರಿಕೆಕೊಟ್ಟ ವಿಚಾರದಲ್ಲಿ ಈಗಾಗಲೇ ಸಂಪದಭ್ಯುದಯ ಮತ್ತು ವಿಶ್ವಕರ್ನಾಟಕಪತ್ರಿಕೆಗಳಲ್ಲಿ ವಿರೋಧಲೇಖಗಳು ಹೊರಟಿರುವುದನ್ನು ವಾಚಕರೆಲ್ಲರೂ ತಿಳಿಯದಿರಲಾರರು. ಬ್ರಾಹ್ಮಣೇತರರ ವರ್ಗಕ್ಕೆ ಕುಠಾರದಂತಿರುವ ಆ ಸಂಪದಭ್ಯುದಯದ ವಾತ್ಮೀದಾರರು ಶೇಕಡ 99 ಜನಗಳು ಸ್ಟಾರ್ ಪತ್ರಿಕೆಯು ಆ ಅಗ್ರಲೇಖನವನ್ನು ನಿಂದಿಸುತ್ತಿರುವುದಾಗಿ ಬರೆದಿರುವುದು ಪರಮಾಶ್ಚರ್ಯಕರವಾದ ವಿಷಯವೇಸರಿ. ಆ ಲೇಖವು ಹೊರಹೊರಟ ಒಂದೆರಡುದಿನಗಳಲ್ಲಿಯೇ ಈ ಮಹಾತ್ಮರು ಭರತಖಂಡವನ್ನೆಲ್ಲಾ ಸಂಚರಿಸಿ, ಎಲ್ಲ ಮತಕೋಮುಗಳ ಜನಗಳ ಅಭಿಪ್ರಾಯವನ್ನು ತಿಳಿದುಕೊಂಡುಬಂದು ಇಷ್ಟೊಂದು ನಿಷ್ಪಕ್ಷಪಾತವಾಗಿ ಶೇಕಡಾವಾರನ್ನು ಕಂಡುಹಿಡಿದಿರುವುದನ್ನು ನೋಡಿದರೆ ಜನಸಾಮಾನ್ಯಕ್ಕೆ ಆಶ್ಚರ್ಯವೆನಿಸದಿರಲಾರದು. ಈ ಅಸೂಯಾಪರರ ಮಾತು ಎಷ್ಟರಮಟ್ಟಿಗೆ ನಿಜವಾಗಿರುತ್ತದೆಂಬುದನ್ನು ಇದರಿಂದಲೇ ಊಹಿಸಬಹುದಲ್ಲವೇ ? ಇತ್ತಲಾಗಿ ಬೆಂಗಳೂರಿನ ತಾ॥ 9-5-26ರ ವಿಶ್ವಕರ್ನಾಟಕದಲ್ಲಿ “ದೇಶಹಿತಚಿಂತಕ” ನೆಂಬ ಅಭಿದಾನದಿಂದ ಒಬ್ಬ ಮಿತ್ರರು ಮಿ॥ ಅಬ್ಬಾಸ್‌ಖಾನ್‌ರವರೇ ಮೊದಲಾದ ಬ್ರಾಹ್ಮಣೇತರ ಪ್ರಮುಖರನ್ನು ಸ್ಟಾರ್ ಪತ್ರಿಕೆಯು ಹೇಳಿದಂತೆ ಆ ಜನಾಂಗದ ಮುಖಂಡರನ್ನಾಗಿ ಭಾವಿಸುವುದು ತಪ್ಪೆಂಬ ಅಭಿಪ್ರಾಯಬರುವಂತೆ ಬರೆದಿರುತ್ತಾರೆ. ಹಿಂದುಳಿದ ಜನಾಂಗದವರ ಹಿತವನ್ನುಂಟುಮಾಡುವುದಕ್ಕಾಗಿಯೇ ತಮ್ಮ ತನುಮನಧನಗಳನ್ನರ್ಪಿಸಿ ದೇಶಸೇವೆಮಾಡಿ ಕೀರ್ತಿಶೇಷರಾದ ಆ ಸರ್ ತ್ಯಾಗರಾಜರವರ, ಮತ್ತು ಆ ಶ್ರೀ॥ ಬಸವಯ್ಯನವರಂತಹ ದೇಶವತ್ಸಲರ ಮೇಲ್ಪಂಕ್ತಿಯನ್ನನುಸರಿಸಿ, ಹಿಂದುಳಿದ ಜನಾಂಗದ ಏಳಿಗೆಗಾಗಿ ಕುತ್ಸಿತರ ನಿಂದಾಸ್ತುತಿಗಳನ್ನೂ, ತಮ್ಮ ಸತ್ಕಾರ್ಯಕ್ಕೆ ಅಡ್ಡಬರುವ ಆ ಕೃತ್ರಿಮಿಗಳ ಅಡ್ಡಿ ಅಡಚಣೆಗಳನ್ನೂ ಲೆಕ್ಕಿಸದೆ, ಅವಿಶ್ರಾಂತರಾಗಿ ಕೆಲಸಮಾಡುತ್ತಿರುವ ಮಿ॥ ಗಳಾದ ಅಬ್ಬಾಸ್‌ಖಾನ್‌ರವರು ಜಿ. ಪರಮಶಿವಯ್ಯನವರು ಮತ್ತು ರಾವ್‌ಸಾಹೇಬ್ ಚೆನ್ನಯ್ಯನವರಂತಹ ಪುಢಾರಿಗಳನ್ನು ತಮ್ಮ ಮುಖಂಡರನ್ನಾಗಿ ಭಾವಿಸದೆ ಹಿಂದುಳಿದ ಜನಾಂಗಕ್ಕೆ ಯಾವುದೊಂದು ಉಪಕಾರವನ್ನೂ ಮಾಡದಿರುವ ಆ ಸರ್ ಕೆ. ಪಿ. ಪಿ. ಯವರನ್ನು ಅವರಿಗೆ ಬಂದಿರುವ “ರಾಜಸಭಾಭೂಷಣ” “ದಿವಾನ್ ಬಹದ್ದೂರ್” “ಸರ್” ಮೊದಲಾದ ಬಿರುದುಗಳನ್ನು ಹೊಂದಿದ ಮಾತ್ರದಿಂದಲೇ ಬ್ರಾಹ್ಮಣೇತರ ಮುಖಂಡರನ್ನಾಗಿ ಭಾವಿಸುವುದು ಶುದ್ಧವಿವೇಕಶೂನ್ಯತೆಯೇ ಸರಿ. ಹಾಗಾದರೆ ಮಿ॥ ಅಬ್ಬಾಸ್‌ಖಾನ್‌ರವರು ಅವರ ಮಿತ್ರರೂ ತದ್ವರ್ಗಕ್ಕೆ ಮಾಡಿರುವ ಉಪಕಾರವೇನೆಂಬುದನ್ನು ಇವರು ಪ್ರಜಾಪ್ರತಿನಿಧಿಗಳಾಗಿ ಮೈಸೂರು ನ್ಯಾಯವಿಧಾಯಕಸಭೆ, ಪ್ರಜಾಪ್ರತಿನಿಧಿಸಭೆ, ಮತ್ತು ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ ಮುಂತಾದ ಸಂಸ್ಥೆಗಳಲ್ಲಿ ಪರಹಿತಕಾರ್ಯಗಳಲ್ಲಿ, ಎಷ್ಟೊಂದು ಸಾಮರ್ಥ್ಯದಿಂದಲೂ, ಧರ್ಮದೃಷ್ಟಿಯಿಂದಲೂ ಕೆಲಸಮಾಡುತ್ತಿದ್ದಾರೆಂಬುದು ಸರ್ವಸಮದೃಷ್ಟಿಯಿಂದ ನೋಡುವ ಯಾರೊಬ್ಬರಿಗೂ ತಿಳಿಯದಿರಲಾರದು. ಉದಾಹರಣಾರ್ಥವಾಗಿ, ಹಿಂದಿನ ಪ್ರಜಾಪ್ರತಿನಿಧಿಸಭೆಯಲ್ಲಿ, ಬ್ರಾಹ್ಮಣಮಿತ್ರರೊಬ್ಬರು, ಮೈಸೂರುಸಿವಿಲಿಯನ್ನರ ರಿಟೈರಿಂಗ್ ವಯಸ್ಸನ್ನು 55 ರಿಂದ 60 ಕ್ಕೆ ಹೆಚ್ಚಿಸಬೇಕೆಂದು, ಹಾಲಿ ಸರ್ವಿಸ್ಸಿನಲ್ಲಿ ಅಲ್ಪಸಂಖ್ಯಾಕರಾಗಿ ಮುಂದೆಮುಂದೆ ಹೆಚ್ಚುಹೆಚ್ಚಾಗಿ ಬರಲಿರುವ ಬ್ರಾಹ್ಮಣೇತರರ ಏಳಿಗೆಗೆ ವಿಷಾಂಕುರದಂತಿದ್ದ ಒಂದು ಕೃತ್ರಿಮವಾದ ಸಲಹೆಯನ್ನು ತಂದಕಾಲದಲ್ಲಿ ಬ್ರಾಹ್ಮಣೇತರರ ಮುಖಂಡರೆಂದು ಸರ್ ಎಂ. ವಿಶ್ವೇಶ್ವರಯ್ಯನವರಿಂದ ನಾಮಕರಣಮಾಡಲ್ಪಟ್ಟಿರುವ ಸರ್ ಕೆ. ಪಿ. ಪಿ. ರವರು ಹಿಂದು ಅದಕ್ಕ ಪರವಾಗಿ ವಿಷಮಾಡಿದರು ? ನಮ್ಮ ಮಿ॥ ಅಬ್ಬಾಸ್‌ಖಾನ್ ಮಿತ್ರರೇನು ಮಾಡಿದರು ? ಮೊದಲನೆಯವರು ವಿರೋಧಭಾವವನ್ನು ಯಾವರೀತಿಯಿಂದಲೂ ವ್ಯಕ್ತಪಡಿಸಲಿಲ್ಲ. ಎರಡನೆಯವರುಗಳು ಇದನ್ನು ಪ್ರತಿಭಟಿಸಿದರು; ಇದು ಬ್ರಾಹ್ಮಣೇತರರ ವರ್ಗಕ್ಕೆ ಕುಠಾರವೆಂದು ತೋರ್ಪಡಿಸಿದರು. ಈ ವಿಷಾಂಕುರವನ್ನು ಧರ್ಮಬುದ್ಧಿಯಿಂದ ಕೂಡಿದ ಸಮರ್ಥತೆಯಿಂದ ನೆಲಕ್ಕೆ ಹಾಕಿ ತುಳಿದರು, ಮತ್ತು ಅದು ಪುನಃ ಚಿಗುರದಂತೆ ಮಾಡಿದರು. ಇಂಥ ಹಲವುಕಾರ್ಯಗಳನ್ನು ಅವರುಗಳು ಮಾಡಿದ್ದರೂ, ಲೇಖವಿಸ್ತಾರಭಯದಿಂದ ಇದೊಂದು ಉದಾಹರಣೆಯನ್ನು ಕೊಟ್ಟಿರುತ್ತೇನೆ. ಇನ್ನಾದರೂ, “ನಿಜವಾದ ಬ್ರಾಹ್ಮಣೇತರ ಮುಖಂಡರು” ಯಾರೆಂಬುದನ್ನು ನಮ್ಮ “ದೇಶಹಿತಚಿಂತಕರು” ಸರ್ವಸಮದೃಷ್ಟಿಯಿಂದ ಯೋಚಿಸಲಿ.

ಒಬ್ಬ ಬ್ರಾಹ್ಮಣೇತರ.

ಶ್ರೀಬಸವೇಶ್ವರಜಯಂತ್ಯುತ್ಸವಗಳು

[ಈ ಉತ್ಸವನೂರಂಭದ ವಿಷಯವಾಗಿ ನಾನಾಕಡೆಗಳಿಂದ ಬಂದಿರುವ ದೊಡ್ಡದೊಡ್ಡ ಲೇಖಗಳನ್ನು ಪ್ರಕಟಿಸಲು ಈ ಸ್ಟಾರ್‌ಪತ್ರಿಕೆಯ 24 ಪುಟಗಳಾದರೂ ಸಾಲುವುದಿಲ್ಲವಾದಪ್ರಯುಕ್ತ ಆ ಲೇಖಗಳನ್ನು ಸಂಕ್ಷೇಪವಾಡಿ ಪ್ರಕಟಿಸಿರುವುದಕ್ಕಾಗಿ ಲೇಖಕರು ಅಸಮಾಧಾನಗೊಳ್ಳಬಾರದೆಂದು ಕೋರುತ್ತೇವೆ. ಸಂ.]

ವಿಜಾಪುರ ಜಿಲ್ಲಾ ಹುನಗುಂದ ತಾ॥ ಕಮತಗಿ.

ಈ ಗ್ರಾಮದಲ್ಲಿ ಕಳೆದ ತಾ॥ 13ನೇ ಗುರುವಾರ ಶ್ರೀ ಬಸವೇಶ್ವರ ಜಯಂತ್ಯುತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಊರಲ್ಲಿಯ ಜನರು ಹಬ್ಬದ ದಿನದಂತೆ ಆಚರಿಸಿದರು. ಶ್ರೀ ಬಸವೇಶ್ವರನ ಫೋಟೋ ಪಲ್ಲಕ್ಕಿಯಲ್ಲಿಡಲ್ಪಟ್ಟು ಊರ ಎಲ್ಲ ಬೀದಿಗಳಲ್ಲಿ ವಾದ್ಯವೈಭವದೊಡನೆ ಮೆರಿಸಲ್ಪಟ್ಟು, ಸಾಯಂಕಾಲ ಶ್ರೀ ಹುಚ್ಚೇಶ್ವರಸ್ವಾಮಿಗಳ ಮಠದಲ್ಲಿ ಶ್ರೀ ಬಸವೇಶ್ವರನ ಚರಿತ್ರೆಯ ವ್ಯಾಖ್ಯಾನಗಳಾದವು.

ಚೆನ್ನಮಲ್ಲಪ್ಪ ಗದಿಗೆಪ್ಪ ಶೆಟ್ಟರ, ಕಮತಗಿ.

ಬಿಡದಿ.

ತಾ॥ 13-5-1926 ನೇ ಗುರುವಾರ ಇಲ್ಲಿಯ ಭಕ್ತಮಂಡಲಿಯವರು ಶ್ರೀ ಬಸವೇಶ್ವರದೇವಾಲಯವನ್ನು ತಳಿರುತೋರಣ ರಂಭಾಸ್ತಂಭಗಳಿಂದ ಮನೋಹರವಾಗಿ ಅಲಂಕರಿಸಿ ಪ್ರಾತಃಕಾಲದಿಂದ ಮಧ್ಯಾಹ್ನದವರೆವಿಗೂ ಶ್ರೀ ಬಸವೇಶ್ವರಸ್ವಾಮಿಗೆ ವೇದೋಕ್ತರೀತಿಯಿಂದ ವೇ॥ ಬಿ. ಸಿ. ರೇವಣ್ಣಶಾಸ್ತ್ರಿಗಳಮೂಲಕ ಶ್ರೀರುದ್ರಾಭಿಷೇಕವನ್ನು ಮಾಡಿಸಿ ಅನಂತರ ಶಾಂತಿರೂಪವಾಗಿ ಸಾಯಂಕಾಲಪರಿಯಂತರವೂ ಹೆಸರುಬೇಳೆ ಪಾನಕವನ್ನು ಆಬಾಲವೃದ್ಧರಾದಿಯಾಗಿ ಸರ್ವರಿಗೂ ವಿನಿಯೋಗಿಸಿದ್ದಲ್ಲದೆ, ಪುಣ್ಯಶ್ಲೋಕೀ ಶ್ರೀಶರಣಬಸವೇಶ್ವರಸ್ವಾಮಿಯ ಫೋಟೋಮಂಗಳಮೂರ್ತಿಯನ್ನೂ, ದ್ವಿತೀಯಶಂಭು ಶ್ರೀ ಬಸವೇಶ್ವರನ ಉತ್ಸವಮೂರ್ತಿಯನ್ನೂ ವೀರಶೈವರೂ ಸಕಲ ದೈವಸದ್ಭಕ್ತರೂ ವಾದ್ಯವೈಭವದೊಡನೆ ನೇತ್ರಾನಂದಕರವಾಗಿ ಉತ್ಸವಗೊಳಿಸಿದರು. ಈ ಗ್ರಾಮದ ಸಕಲ ದೈವಭಕ್ತರೂ ಆನಂದದೊಡನೆ ಈ ದಿನವನ್ನು ಕಳೆದರು.

ಓರ್ವ ಗ್ರಾಮವಾಸಿ.

ಹೊಳೆನರಸೀಪುರ ತಾ॥ ಹುವಿನಹಳ್ಳಿ.

ಕಳೆದ ತಾ॥ 13 ರಲ್ಲಿ ಈ ಗ್ರಾಮದ ಪ್ರಮುಖರಾದ ವೇ॥ ಗಳಾದ ರುದ್ರಾರಾಧ್ಯರು, ಮ॥ ಗಳಾದ ಚೆನ್ನಬಸಪ್ಪನವರು, ವೀರಣ್ಣನವರು, ಪುಟ್ಟಸ್ವಾಮಯ್ಯನವರು, ಹಿಂಡ್ಲಟ್ಟಿ ಬಸವೇಗೌಡರು, ಸಿದ್ಧಲಿಂಗಪ್ಪನವರು, ಹಲಗಪ್ಪನವರು ಮೊದಲಾದ ವೀರಶೈವ ದೊಡ್ಡಮನುಷ್ಯರುಗಳು ಊರನ್ನು ಅಲಂಕರಿಸಿ ಬಸವಣ್ಣಗಳನ್ನೂ, ಗೋವುಗಳನ್ನೂ ಹೊಳೆಗೆ ತೆಗೆದುಕೊಂಡು ಹೋಗಿ ಮೈತೊಳೆದು ಮುತ್ತೈದೆಯರಿಂದ ಪೂಜೆಮಾಡಿಸಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿಸಿದರು. ದೇವಸ್ಥಾನದಲ್ಲಿ ಶ್ರೀ ಬಸವೇಶ್ವರನ ಪೂಜೆಯೂ ಮಂಗಳಾರತಿಯೂ ನಡೆದಮೇಲೆ ನೆರೆದಿದ್ದ ಭಕ್ತರುಗಳಿಗೆ ಪಾನಕಪನ್ಯಾರ ವಿನಿಯೋಗವಾಯಿತು. ತರುವಾಯ ಶ್ರೀ ಬಸವೇಶ್ವರನ ಉತ್ಸವವು ಶಿವಭಜನೆ ಮತ್ತು ವಾದ್ಯಗಳಿಂದೊಡಗೂಡಿ ಊರಿನಲ್ಲೆಲ್ಲಾ ಮಾಡಲ್ಪಟ್ಟು ದೇವಸ್ಥಾನಕ್ಕೆ ಹಿಂದಿರುಗಿ ಸೇರಿದಮೇಲೆ ಮಹಾಮಂಗಳಾರತಿಯು ನಡೆದು ಸರ್ವರಿಗೂ ಸ್ವಾಮಿಯ ಪ್ರಸಾದವು ಕೊಡಲ್ಪಟ್ಟಿತು.

ಸ್ಥಳವಾಸಿ.

ಬಳ್ಳಾರಿ.

ಪದ್ಧತಿಮೇರಿಗೆ ಇದೇ ತಾ॥ 13ರ ಸಾಯಂಕಾಲ 5 ಗಂಟೆಯಲ್ಲಿ ಬಳ್ಳಾರಿಯ ವೀರಶೈವ ತರುಣಸಂಘದ ವತಿಯಿಂದಲೂ ಸದರಿ ಸಂಘದ ಅಧ್ಯಕ್ಷರಾದ ವೇ॥ ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿ, ಬಿ.ಎ.ಬಿ.ಎಲ್. ರವರ ಪ್ರೋತ್ಸಾಹದಿಂದಲೂ ಸಂಘದ ವಾಚನಾಲಯದಲ್ಲಿ ಶ್ರೀ ಬಸವೇಶ್ವರಜಯಂತ್ಯುತ್ಸವವು ಬಹಳ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಸಾಯಂಕಾಲ 5 ಗಂಟೆಗೆ ಸರಿಯಾಗಿ ಇಲ್ಲಿಯ ವೀರಶೈವತರುಣರೆಲ್ಲರೂ ವೀರಶೈವತರುಣಸಂಘದ ವಾಚನಾಲಯಭವನದಲ್ಲಿ ಸಮಾವೇಶರಾಗಿ ಶ್ರೀ ಬಸವೇಶ್ವರಫೋಟೋವನ್ನು ಪುಷ್ಪಾದಿಗಳಿಂದ ಅಲಂಕರಿಸಿ ಸುಮಾರು ಒಂದು ಗಂಟೆಯವರೆಗೂ ಭಜನೆಯಂಗೈದು, ವಾಚನಾಲಯದ ಮಗ್ಗುಲಲ್ಲಿರುವ ಶ್ರೀ ಪ್ಯಾಟಿಬಸವೇಶ್ವರದೇವಾಲಯದಲ್ಲಿ ಪೂಜೆಯಂಗೈದು ಅಲ್ಲಿಂದ ಅಲಂಕೃತವಾದ ಶ್ರೀ ಬಸವೇಶ್ವರನ ಫೋಟೋವನ್ನು ಅಚ್ಚಬಿಳೀರಂಗಿನ ಅಶ್ವದಿಂದೊಡಗೂಡಿದ ಕೋಚಿನಲ್ಲಿರಿಸಿ, ವಾದ್ಯವೈಭವದಿಂದ ಹೊರಟು ಬಳ್ಳಾರಿಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡಿ ಹಿಂತಿರುಗಿ ವಾಚನಾಲಯಕ್ಕೆ ಬಂದು ಮಂಗಳಾರತಿಯೂ ಬಾಲಬಾಲಿಕೆಯರಿಗೆ ಫಲಹಾರ ಹಂಚುವಿಕೆಯೂ ಆದನಂತರ ಜಯಘೋಷದೊಡನೆ ಜಯಂತ್ಯುತ್ಸವವನ್ನು ಪೂರೈಸಿದರು.

ಸಿಂದಿಗಿ ಲಿಂಗಪ್ಪ.

ರಾಯಚೂರು ಜಿಲ್ಲಾ ಗೆಜ್ಜಲಹಟ್ಟಿ.

ತಾ॥ 13ರ ಬೆಳಿಗ್ಗೆ ಸಮಸ್ತ ವೀರಶೈವರೂ ಒಟ್ಟುಗೂಡಿ ಇಲ್ಲಿಯ ನಿರಂಜನ ಶ್ರೀ ಜಡಸ್ವಾಮಿಗಳವರ ಮಠದಲ್ಲಿ ಶ್ರೀ ಬಸವೇಶ್ವರನ ಫೋಟೊ ಸ್ಥಾಪನೆಮಾಡಿ ಅಲಂಕರಿಸಿ ಶಾಸ್ತ್ರೋಕ್ತವಾಗಿ ಪೂಜಾ ಪ್ರಾರ್ಥನಾದಿಗಳನ್ನು ನೆರವೇರಿಸಿದರು. ಮೆರವಣಿಗೆಯು 6 ಘಂಟೆಗೆ ಪ್ರಾರಂಭವಾಗಿ ಅತಿಶಯದೀಪೋತ್ಸವ, ಭಜನೇ, ಮೇಳಾ, ವಾದ್ಯವೈಭವದೊಡನೆ ಹೊರಟು 8 ಘಂಟೆಗೆ ಸ್ವಸ್ಥಾನಕ್ಕೆ ಸೇರಿತು. ಉತ್ಸವದಲ್ಲಿ ಸಮಸ್ತ ಹಿಂದುಸಂಗಡದವರೂ, ಮಹಮ್ಮದೀಯರೂ ಭಾಗಿಗಳಾಗಿ ಎಲ್ಲಾ ಕಾರ್ಯವನ್ನೂ ನೆರವೇರಿಸಿದ್ದು ಸ್ತೋತ್ರಾರ್ಹವಾಗಿದೆ. ಉತ್ಸವದ ಸಂಗಡ ಸ್ವಯಂಸೇವಕಜನರಿದ್ದುಕೊಂಡು ಮಾಡುತ್ತಿದ್ದ ವ್ಯವಸ್ಥೆಯು ಅತಿ ಶ್ಲಾಘನೀಯವಾಗಿತ್ತು. ಉತ್ಸವ ಕಾಲಕ್ಕೆ ಇಲ್ಲಿಯ ಶ್ರೀಮನ್ಮಹಾರಾಜರವರು ರಾಜಕೀಯ ವೈಭವದೊಡನೆ ಬಂದಿದ್ದು ವಿಶೇಷ ಶೋಭೆಯನ್ನುಂಟುಮಾಡಿದ್ದರು. ಆ ದಿವಸ ಇಲ್ಲಿಯ ಶ್ರೀಮನ್ಮಹಾರಾಜರವರ ಸಮಕ್ಷಮದಲ್ಲಿ ನಡೆದ ಸಮಸ್ತ ಗಣಾಧೀಶರ ಮತ್ತು ಗ್ರಾಮಸ್ಥರ ಭೋಜನಸಮಾರಂಭವಾದರೂ ಆನಂದದಾಯಕವಾಗಿತ್ತು.

ಅಮರಪ್ಪಾ (ಲಿಂಗಪ್ಪಾ) ಹೊಂಬಳ.

ಚಿಕ್ಕಮಗಳೂರು ತಾ॥ ಮಲ್ಲೇದೇವರಹಳ್ಳಿ.

ಈ ಗ್ರಾಮದಲ್ಲಿ ಬಸವಜಯಂತಿಯುತ್ಸವವು ಯಾವಾಗಲೂ ನಡೆಸಲ್ಪಟ್ಟಿಲ್ಲವಾಗಿದ್ದರೂ ಮ॥ ಪಾಲುತುರಿಕೆ ಎಚ್. ಬಿ. ಮಲ್ಲಪ್ಪನವರ ಪ್ರೋತ್ಸಾಹದಿಂದ ಕಳೆದ ತಾ॥ 13 ರಲ್ಲಿ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿ ರುದ್ರಾಭಿಷೇಕಾದಿ ಪೂಜೆಯೂ, ನೆರೆದಿದ್ದ ಭಕ್ತಜನರಿಗೆ ಪ್ರಸಾದ ವಿನಿಯೋಗವೂ ನಡೆದು ಅಲಂಕರಿಸಲ್ಪಟ್ಟ ಬಸವಣ್ಣ ಮತ್ತು ಗೋವುಗಳ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯುತ್ಸವವು ವಾದ್ಯವಿಶೇಷದಿಂದ ಮಾಡಲ್ಪಟ್ಟು ಹಿಂದಿರುಗಿ ಸ್ವಾಮಿಯು ದೇವಸ್ಥಾನಕ್ಕೆ ಬಂದಮೇಲೆ ಮಹಾಮಂಗಳಾರತಿಯು ನಡೆದು ನೆರೆದಿದ್ದ ಭಕ್ತರುಗಳಿಗೆ ಮಹಾಪ್ರಸಾದವು ಕೊಡಲ್ಪಟ್ಟಿತು. ರಾತ್ರಿ 7 ರಿಂದ 10 ಗಂಟೆಯವರೆಗೆ ವೇ॥ ರುದ್ರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿ ಎಚ್. ಬಿ. ಮಲ್ಲಪ್ಪನವರು ಶ್ರೀ ಬಸವಜಯಂತಿವಿಷಯವಾಗಿಯೂ, ಗೋವುಗಳನ್ನು ಕಟುಗರರಿಗೆ ಮಾರಕೂಡದೆಂಬ ವಿಷಯವಾಗಿಯೂ ವೀರಶೈವಮತವಿಷಯವಾಗಿಯೂ ಉಪನ್ಯಾಸಮಾಡಿದರು. ಇದೇ ವಿಷಯವಾಗಿ ಇನ್ನೂ ಕೆಲ ದೊಡ್ಡಮನುಷ್ಯರು ಮಾತನಾಡಿದರು. ತರುವಾಯ ದೇವರಿಗೆ ಮಂಗಳಾರತಿನಡೆದು ಪ್ರಸಾದವಿನಿಯೋಗದಿಂದ ಎಲ್ಲರೂ ತಮ್ಮ ಮನೆಗಳಿಗೆ ತೆರಳಿದರು.

ಸ್ಥಳೀಕ.

ಸೋಸಲೆ.

ಕಳೆದ ತಾ॥ 13 ನೇ ಗುರುವಾರ ಇಲ್ಲಿಯ ಯೂನಿಯನ್ ಛೇರ್‌ಮನ್ ಸಿದ್ಧಶೆಟ್ಟರ ಮನೆಯಲ್ಲಿ ಅವರ ಭಾವಮೈದ ಪುಟ್ಟಶೆಟ್ಟರು ಮಕರತೋರಣ ಪೂಮಾಲೆ ಕದಳಿಸ್ತಂಭಗಳಿಂದ ಅಲಂಕರಿಸಲ್ಪಟ್ಟ ಮಂಟಪದಲ್ಲಿ ಶ್ರೀಬಸವೇಶ್ವರಸ್ವಾಮಿಫೋಟವನ್ನಿಟ್ಟು ಪೂಮಾಲೆಗಳಿಂದ ಅಲಂಕರಿಸಿ ವೀರಶೈವಮಂಡಲಿಯವರನ್ನೂ ಇತರ ಭಕ್ತರುಗಳನ್ನೂ ಬರಮಾಡಿಕೊಂಡು ಬಸವೇಶಜನನ ವಿಷಯವಾಗಿ ಭಾಷಣಗಳನ್ನು ನಡೆಸಿದ್ದಲ್ಲದೆ ಸಭೆಯವರನ್ನು ಗಂಧ ಪುಷ್ಪ ತಾಂಬೂಲವಿನಿಯೋಗದಿಂದ ಸಂತೋಷಗೊಳಿಸಿದರು. ವೇ॥ ಗುರುಸಿದ್ಧಪ್ಪನವರು ಇದೇ ಊರಲ್ಲಿರುವ ಉಪ್ಪರಿಗೆ ಶ್ರೀಬಸವೇಶ್ವರಸ್ವಾಮಿಗೆ ಪಂಚಾಭಿಷೇಕವನ್ನು ಮತ್ತು ವೇದೋಕ್ತ ಸಹಸ್ರನಾಮಗಳಿಂದ ಸಹಸ್ರಬಿಲ್ವಾರ್ಚನೆಯನ್ನು ಬೆಳಿಗ್ಗೆ ನಡೆಸಿದರು. ಸಾಯಂಕಾಲ ಶ್ರೀ ವೀರಭದ್ರಸ್ವಾಮಿದೇವಸ್ಥಾನದಿಂದ ಶ್ರೀಬಸವೇಶ್ವರಸ್ವಾಮಿಫೋಟೋವನ್ನು ಹೊರಡಿಸಿ ಪುರದ ನಾಲ್ಕು ಬೀದಿಗಳಲ್ಲೂ ಬಾಣ ಬಿರುಸು ವಾದ್ಯಗಳಿಂದ ಸರ್ವಜನರೂ ಗೂಡಿ ಉತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಸಿ ಉತ್ಸವವು ದೇವಸ್ಥಾನಕ್ಕೆ ಬಂದನಂತರ ಮಂಗಳಾರತಿ ಮತ್ತು ಪ್ರಸಾದವಿನಿಯೋಗದಿಂದ ಸರ್ವರನ್ನೂ ಸಂತೋಷಗೊಳಿಸಿದರು.

ಗುರುಸಿದ್ಧಪ್ಪ.

ಸೇಲಂ ಜಿಲ್ಲ ಆತ್ತೂರ್ ತಾ॥ ತಮ್ಮಂಪಟ್ಟಿ.

ತಮ್ಮಂಪಟ್ಟಿ ಟೌನ್ ಮತ್ತು ಸುತ್ತುಗ್ರಾಮಗಳ ವೀರಶೈವಮಹಾಜನರು 3ನೇ ವರ್ಷದ ಜಯಂತಿಮಹೋತ್ಸವವನ್ನು ಕಳೆದ 13ರಲ್ಲಿ ಮಹಾವೈಭವದಿಂದ ನೆರವೇರಿಸಿದರು. ಆ ದಿನಬೆಳಿಗ್ಗೆ ತಮ್ಮಂಪಟ್ಟಿಯ ನಿವಾಸಿಗಳಾದ ವೀರಶೈವಪ್ರಚಾರಕರ್ ಎಂ. ಆರುಮುಗ್ಗಯ್ಯನವರ ದಿವ್ಯಮಂಗಳ ಗೃಹದಲ್ಲಿ ಶ್ರೀಕಲ್ಯಾಣಬಸವೇಶ್ವರನ ಭಾವಚಿತ್ರಪಟಕ್ಕೆ ಸಹಸ್ರನಾಮಾರ್ಚನೆ, ಷಡ್ರಸೋಪೇತಪಂಚಭಕ್ಷ್ಯನೈವೇದ್ಯಗಳೊಡನೆ ಷೋಡಶೋಪಚಾರ ಪೂಜೆಗಳೂ ಧೂಪದೀಪಾರಾಧನಾದ್ಯುಪಚಾರಗಳೂ ಶ್ರದ್ಧಾಭಕ್ತಿಪುರಸ್ಸರವಾಗಿ ನಡೆಸಲ್ಪಟ್ಟು ವೀಣಾವೇಣುಮೃದಂಗ ಮುಂತಾದ ವಾದ್ಯಗಳಿಂದೊಡಗೂಡಿದ ಶ್ರೀ ದ್ವಿತೀಯಶಂಭುವಾದ ಕಲ್ಯಾಣಬಸವೇಶ್ವರಸಂಕೀರ್ತನಗಳಾದನಂತರ ಗಣಾರಾಧನೆ ನಡೆಸಲ್ಪಟ್ಟಿತು. ಮಧ್ಯಾಹ್ನ 3 ಗಂಟೆಗೆ ಶ್ರೀ ತಮ್ಮಂಪಟ್ಟಿಯ ಮ॥ ಗೋಪಾಲಕೃಷ್ಣಯ್ಯನವರಿಂದ ಶ್ರೀಬಸವಸ್ವಾಮಿಯ ಭಕ್ತಿಪ್ರಭಾವವಿಷಯಕವಾದ ಒಂದು ಉಪನ್ಯಾಸವು ಸ್ವಾನುಭವ ಲೌಕಿಕವೈದಿಕ ಪ್ರಾಚೀನ ನವೀನ ದೃಷ್ಟಾಂತಗಳೊಡನೆ ಬಹಳ ಸುವ್ಯಕ್ತವಾಗಿ ಉಪನ್ಯಾಸಮಾಡಲ್ಪಟ್ಟಿತಲ್ಲದೆ ಶ್ರೀ ಎಂ. ಆರುಮುಗಯ್ಯನವರಿಂದಲೂ ಶ್ರೀಕಲ್ಯಾಣಬಸವೇಶ್ವರನ ಜೀವಿತಚರಿತ್ರೆಯು ಹೇಳಲ್ಪಟ್ಟಿತು. ನಂತರ ಸಾಯಂಕಾಲ 6 ಗಂಟೆಗೆ ಪುಷ್ಪವಿಮಾನದಲ್ಲಿ ಶ್ರೀಕಲ್ಯಾಣಬಸವೇಶನ ಭಾವಚಿತ್ರವು ಇರಿಸಲ್ಪಟ್ಟು ದೀಪಾಲಂಕಾರದಿಂದಲೂ ವಾದ್ಯಘೋಷಗಳಿಂದಲೂ ಭಜನಾಗೋಷ್ಠಿಯಿಂದಲೂ ನೋಡುವವರ ಮನಸ್ಸೂ ಕಣ್ಣುಗಳೂ ನಿರತಿಶಯಾನಂದವನ್ನೈದುವಂತೆ ಎಲ್ಲಾ ವೀಧಿಗಳಲ್ಲೂ ಉತ್ಸವಮಾಡಲ್ಪಟ್ಟಿತು. ಆಗಮಿಸಿದ್ದ ಭಕ್ತಮಾಹೇಶ್ವರರೆಲ್ಲರೂ ಈಶಪ್ರಸಾದವನ್ನು ಭಕ್ತಿಪುರಸ್ಸರವಾಗಿ ಹೊಂದಿ ತೆರಳಿದರು.

ಓರ್ವ ವೀರಶೈವ.

ಮಳವಳ್ಳಿ.

ವೈಶಾಖ ಶುದ್ಧ ೩ನೇ ಗುರುವಾರ ಬೆಳಿಗ್ಗೆ 8 ಘಂಟೆಯಿಂದ 10 ಘಂಟೆವರೆಗೂ ಶ್ರೀ ಬಸವೇಶ್ವರಸ್ವಾಮಿಯವರಿಗೆ ರುದ್ರಾಭಿಷೇಕವೂ ಪಟ್ಟದ ಸ್ವಾಮಿಗಳ ಪಾದಪೂಜೆಯೂ ನಡೆಸಲ್ಪಟ್ಟು ಮಧ್ಯಾಹ್ನ 3 ಘಂಟೆಯಿಂದ 5 ಘಂಟೆವರೆಗೂ ಸ್ವಾಮಿಯವರ ಮತಸಂಬಂಧವಾದ ಭಾಷಣ ಜರುಗಿತು. 5 ಘಂಟೆಯ ತರುವಾಯ ಪಾನಕಪೂಜೆ ನಡೆದು ಸಾಯಂಕಾಲ 7 ಘಂಟೆಗೆ ಸರಿಯಾಗಿ ಮಠದಿಂದ ಶ್ರೀ ಬಸವೇಶ್ವರಸ್ವಾಮಿಯ ಹೂವಿನಪಲ್ಲಕ್ಕಿ ಉತ್ಸವವು ನಾಲ್ಕುಜನ ಸ್ವಾಮಿಗಳ ವೇದಪಠನೆಯಿಂದಲೂ ಶಿವಭಜನಾತೂಟದವರ ಸಂಕೀರ್ತನದಿಂದಲೂ ಮಂಗಳವಾದ್ಯಗಳಿಂದಲೂ ನಂದಿಧ್ವಜದ ಕುಣಿತದಿಂದಲೂ ಸಾವಿರಾರು ಜನಸಮೂಹದಿಂದಲೂ ವಿಜೃಂಭಣೆಯಾಗಿ ಹೊರಟು ಪೇಟೆ ಒಕ್ಕಲಗೇರಿಯಿಂದ ಹಿಂತಿರುಗಿ ಅಂಗಡಿಬೀದಿಗೆ ಬರುವಷ್ಟರಲ್ಲಿಯೇ ಸುಮಾರು 3 ತಿಂಗಳಿಂದಲೂ ಮಳೆಯಿಲ್ಲದ ತೊಂದರೆಯಿಂದ ಕಷ್ಟಪಡುತ್ತಿದ್ದ ನಮ್ಮಗಳ ಕಷ್ಟ ಪರಿಹಾರವಾಗುವಂತಹ ದೊಡ್ಡ ಮಳೆ ಬಂದದ್ದನ್ನು ನೋಡಿ ಜನರು ನಮ್ಮ ಶ್ರೀ ಬಸವೇಶ್ವರಸ್ವಾಮಿಯವರ ಕೃಪಾದೃಷ್ಟಿಯೇ ಇದೆಂದು ಹೇಳುತ್ತಾ ಬಹಳಾ ಸಂತೋಷಭರಿತರಾದರು. ನಂತರ ಶ್ರೀಯವರನ್ನು ಯಥಾಸ್ಥಾನಕ್ಕೆ ಬಿಜಯಂಗೈಸುವ ವೇಳೆಗೆ ಸುಮಾರು ರಾತ್ರಿ 3 ಘಂಟೆಯ ಮೇಲಾಯಿತು. ಮಾರನೇದಿವಸ ಇನ್ನೂ ವಿಪರೀತವಾಗಿ ದೊಡ್ಡಮಳೆ ಬಂದು ಕೆರೆಕಟ್ಟೆಗಳಿಗೆಲ್ಲಾ ನೀರು ಬಂದಿರುತ್ತದೆ. ಇದನ್ನೆಲ್ಲಾ ನೋಡಿದರೆ ನಮ್ಮ ಈ ಮಳವಳ್ಳಿಯ ವೀರಶೈವರ ಪುಣ್ಯಪ್ರಭಾವವೆಂದೇ ಹೇಳಬೇಕು.

ಮಠದ ಪಟ್ಟದ ಸಿದ್ದಲಿಂಗಸ್ವಾಮಿ

ಬೆಂಗಳೂರು.

ಈ ಊರಿನಲ್ಲಿ ವೀರಶೈವ ಮಹಾಜನಗಳ ಸಹಾಯದಿಂದ ಮಾಮೂಲ್ ಪೇಟೆ ಅಡಿಕೆಮಂಡಿ ಶೆಟ್ಟರು ಸಿದ್ಧಪ್ಪನವರು, ಇವರ ಮಕ್ಕಳು ಗುರುಸಿದ್ಧಪ್ಪನವರು, ಬಸಪ್ಪನವರು, ದೊಡ್ಡಪ್ಯಾಟೆ ಶೆಟ್ಟರು ಯಜಮಾನರು ಮೊದಲಾದ ವೀರಶೈವಭಕ್ತಮಹಾಶಯರುಗಳು ಶ್ರದ್ಧಾಭಕ್ತಿಯಿಂದ ತಾ॥ 13-5-26 ನೇ ಗುರುವಾರ ಬೆಳಿಗ್ಗೆ ದ್ವಿತೀಯಶಂಭುವಾದ ಶ್ರೀಬಸವೇಶ್ವರ ಜಯಂತ್ಯುತ್ಸವವನ್ನು ಮಹಂತಿನಮಠದಲ್ಲಿ ದೇವರಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯೂ, ಮಧ್ಯಾಹ್ನ ಮಹಾಗಣಾರಾಧನೆಯೂ ಹೆಸರುಬೇಳೆ ಪಾನಕಪನ್ಯಾರವಿನಿಯೋಗವೂ, ಸಾಯಂಕಾಲ 8 ಗಂಟೆಯಮೇಲೆ ಪುಷ್ಪಗಳಿಂದಲೂ ಬ್ಯಾಟರಿಯ ಎಲೆಕ್ಟ್ರಿಕ್ ಲೈಟುಗಳಿಂದಲೂ ಅತ್ಯಂತ ಸುಂದರವಾಗಿಯೂ ನೇತ್ರಾನಂದಕರವಾಗಿಯೂ ಅಲಂಕರಿಸಿದ ತೇರಿನಲ್ಲಿ ಶ್ರೀಬಸವೇಶ್ವರಮೂರ್ತಿಯನ್ನು ಮಂಡಿಸಿ ಬ್ಯಾಂಡು ಮೊದಲಾದ ನಾನಾವಿಧವಾದ ವಾದ್ಯಗಳಿಂದಲೂ ಗ್ಯಾಸ್‌ಲೈಟುಗಳಿಂದಲೂ ವೇ॥ ಶಿವಕಥಾಪಂಡಿತ ಶಿವಪ್ಪಶಾಸ್ತ್ರಿಗಳವರ ಭಜನೆಯಿಂದಲೂ ರಾತ್ರಿ 4 ಗಂಟೆವರಿವಿಗೂ ಮಾಮೂಲಿನಂತೆ ಎಲ್ಲಾ ಪ್ಯಾಟೆಗಳಲ್ಲಿಯೂ ಉತ್ಸವಮಾಡಲ್ಪಟ್ಟಿತು. ಎಲ್ಲಾ ಜನಾಂಗದ ಸಾವಿರಾರು ಜನರು ಉತ್ಸವದಲ್ಲಿ ಭಾಗಿಗಳಾಗಿದ್ದರಲ್ಲದೆ ಸ್ತ್ರೀಪುರುಷರು ಸ್ವಾಮಿದರ್ಶನ ಕುತೂಹಲದಿಂದ ದಾರಿಯುದ್ದಕ್ಕೂ ಕಿಕ್ಕಿರಿದು ನಿಂತುಕೊಂಡು ಜಯಧ್ವನಿಮಾಡುತ್ತಿದ್ದದ್ದು ಬಹಳ ಆನಂದದಾಯಕವಾಗಿದ್ದಿತು. ಬೆಂಗಳೂರುಪೇಟೆಯ ಶೆಟ್ಟಿಯಜಮಾನರುಗಳೂ ವೀರಶೈವ ವರ್ತಕಮಂಡಲಿಯವರೂ ಶ್ರೀಬಸವೇಶ್ವರನ ಜಯಂತ್ಯುತ್ಸವವನ್ನು ಪ್ರತಿವರ್ಷದಲ್ಲೂ ಅತ್ಯಂತ ಭಕ್ತಿವಿಶ್ವಾಸದಿಂದ ಮತ್ತು ಅತಿಶಯವೈಭವದಿಂದ ಮಾಡುತ್ತಿರುವುದು ಸ್ತೋತ್ರಾರ್ಹವಾಗಿರುತ್ತದಲ್ಲದೆ ಇತರರಿಗೆ ಮೇಲ್ಪಂಗ್ತಿಯಾಗಿರುತ್ತದೆ. ಇದಕ್ಕಾಗಿ ಈ ಭಗವದ್ಭಕ್ತಮಹಾಶಯರುಗಳಿಗೆ ಆ ವೃಷಭೇಶನು ಸನ್ಮಂಗಳವನ್ನುಂಟುಮಾಡಲೆಂದು ಬೇಡುತ್ತೇನೆ.

ಉತ್ಸವಾಭಿಮಾನಿ.

ಹೆಗ್ಗಡದೇವನಕೋಟೆ ತಾ॥ ಅಂತರಸಂತೆ.

ಈಸಾರಿ ಶ್ರೀಬಸವೇಶ್ವರಜಯಂತ್ಯುತ್ಸವ ನಿಮಿತ್ತವಾದ ಕಾರ್ಯಗಳು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ತಾ॥ 13-5-26 ನೇ ದಿವಸ ಗ್ರಾಮದ ಬೀದಿಗಳು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟದ್ದುವು. ಸಾಯಂಕಾಲ 5 ಘಂಟೆ ಮೇಲೆ ಇದೇ ಗ್ರಾಮದ “ಶ್ರೀ ಬಸವೇಶ್ವರಭಜನಾಸಂಘ” ದವರು ವಿಚಿತ್ರತರವಾಗಿ ರಚಿಸಿದ್ದ ಮಂಟಪದಲ್ಲಿ ಅದ್ವಿತೀಯ ಶಂಭುಬಸವೇಶ್ವರಸ್ವಾಮಿಯ ಭಾವಚಿತ್ರವನ್ನಿರಿಸಿ, ನಾನಾವಿಧ ವಾದ್ಯದಿಂದ ಭಜನಾಸಮೇತ ಬೀದಿಯಲ್ಲಿ ಉತ್ಸವವನ್ನು ಹೊರಡಿಸಿಕೊಂಡು ಕೆರೆಯಬಳಿಗೆ ಹೋಗಿ ವಾಪಸ್ ಹೊರಟು ಬೀದಿಗಳಲ್ಲಿ ಉತ್ಸವಮಾಡಿಕೊಂಡು ಬಂದು ಇದೇ ಗ್ರಾಮದ ಪೋ॥ ಮಾ॥ ಮ॥ ಎ. ಪಿ. ಶ್ರೀಕಂಠಯ್ಯನವರ ಮನೆಯಲ್ಲಿ ಏರ್ಪಡಿಸಿರುವ ಭಜನಾಮಂದಿರದಲ್ಲಿ ಮಂಟಪವು ಇರಿಸಲ್ಪಟ್ಟಿತು. ಉತ್ಸವವನ್ನು ನೋಡಲು ಹೊರಗಿನ ನೂರಾರು ಜನರು ಬಂದು ರಸ್ತೆಯ ಇಕ್ಕೆಲದಲ್ಲಿ ಕಿಕ್ಕಿರಿಯುವಂತೆ ನಿಂತಿದ್ದರು. ಶ್ರೀ ಬಸವೇಶ್ವರನ ಭಾವಚಿತ್ರವನ್ನಿರಿಸಿದ್ದ ಮಂಟಪವು ರಜತದಿಂದ ನಿರ್ಮಿಸಲ್ಪಟ್ಟ ಅರಮನೆಯೋಪಾದಿಯಲ್ಲಿ ಶೋಭಿಸುತ್ತಿತ್ತು. ನಂತರ ಒಂದೆರಡುಘಂಟೆಕಾಲ ಭಜನಾಸಂಘದವರು ಮಾಡಿದ ಶ್ರೀಮತ್ ಬಸವೇಶ್ವರಭಜನೆಯು ಸುಶ್ರಾವ್ಯವಾಗಿತ್ತು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೀಮುದ್ದುವರಾಜರವರ ಮತ್ತು ಶ್ರೀ ಜಯಚಾಮರಾಜಒಡೆಯರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು, ಮಹಾಮಂಗಳಾರತಿಯಾದನಂತರ ಸರ್ವರಿಗೂ ಕಡ್ಲೆಹಿಟ್ಟು, ಕೊಬರಿಸಕ್ಕರೆ, ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಇಲ್ಲಿನ ಮಹಾಜನಗಳೆಲ್ಲರೂ ಏಕಮತ್ಯದಿಂದ ಈ ಕಾರ್ಯದಲ್ಲಿ ಭಾಗಿಗಳಾಗಿದ್ದಂತೆ ಈ ಗ್ರಾಮದ ವೀರಶೈವಜನರಲ್ಲಿ ಐಕಮತ್ಯವು ಸದಾ ನೆಲಗೊಳ್ಳಲೆಂದು ಶ್ರೀ ನಂದೀಶ್ವರನ ಅಪರಾವತಾರನಾದ ಶ್ರೀಬಸವೇಶ್ವರನನ್ನು ಪ್ರಾರ್ಥಿಸುತ್ತೇನೆ.

ಓರ್ವ ಬಸವಭಕ್ತ.

ಮಂಡ್ಯ ತಾ॥ ಮಲ್ಲೇನಹಳ್ಳಿ.

ಈ ಗ್ರಾಮದ ಮ॥ ಯರಹಳ್ಳಿ ನಂಜಪ್ಪನವರ ಪ್ರೋತ್ಸಾಹದಿಂದ ಇಲ್ಲಿಯ ಮುಖ್ಯಸ್ತರುಗಳು, ಸ್ಕೂಲು ಕಮಿಟಿ ಮೆಂಬರುಗಳು, ಪಟೇಲ್, ಶ್ಯಾನುಭೋಗರು, ಸ್ಕೂಲ್ಮಾಸ್ಟರು ಇನ್ನೂ ಮುಂತಾದವರೆಲ್ಲರೂ ಸೇರಿ ಕಳೆದ ತಾ॥ 13 ನೇ ಗುರುವಾರ ಶ್ರೀ ಬಸವೇಶ್ವರಸ್ವಾಮಿದೇವಾಲಯವನ್ನೂ ಪ್ರತಿ ಗೃಹಸ್ತರೂ ತಮ್ಮ ತಮ್ಮ ಗೃಹಗಳನ್ನೂ ಅಲಂಕರಿಸಿ ಬಸವಣ್ಣಗಳನ್ನು ಯಾವ ಕೆಲಸಗಳಿಗೂ ಕಟ್ಟದೆ ಅವುಗಳನ್ನು ಮೈತೊಳೆದು ಶೃಂಗರಿಸಿ ಆ ದಿನ ದೊಡ್ಡ ಹಬ್ಬವನ್ನು ಮಾಡಿದರು. ಆ ದಿವಸ ಪ್ರಾತಃಕಾಲ ಸ್ವಾಮಿ ವೃಷಭೇಶ್ವರನಿಗೆ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ ಇತ್ಯಾದಿ ದೇವತಾಕಾರ್ಯಗಳನ್ನು ಮಾಡಿ ಎಲ್ಲರೂ ಸುಖಭೋಜನಾನಂತರ ದೇವಸ್ಥಾನಕ್ಕೆ ಬಂದು ಮಧ್ಯಾಹ್ನ 1 ರಿಂದ 3 ಘಂಟೆಯವರೆಗೆ ಬಸವೇಶ್ವರನ ಚರಿತ್ರೆಯನ್ನು ಕೇಳಿದ್ದಲ್ಲದೆ ಇಲ್ಲಿಯ ಸ್ಕೂ॥ ಮಾ॥ ಮ॥ ಎಚ್. ಪವಾಡಯ್ಯನವರು ದಾವಣಗೆರೆಯ ಪ್ರಾಣಿದಯಾಜ್ಞಾನಪ್ರಸಾರಕಸಂಘದಿಂದ ತರಿಸಿದ್ದ ಪುಸ್ತಕಗಳನ್ನೂ ಫಾರಂಗಳನ್ನೂ ಓದಿ ಬಸವಣ್ಣಗಳನ್ನೂ, ಗೋವುಗಳನ್ನೂ ಕಟುಕರಿಗೆ ವಿಕ್ರಯಿಸಕೂಡದೆಂಬುದೇ ಮೊದಲಾದ ಉಪನ್ಯಾಸವನ್ನು ಮಾಡಿದರು. ಮ॥ ಪುಟಗಿ ಮಾದಪ್ಪನವರು ಬಸವೇಶ್ವರಜಯಂತಿಮಹೋತ್ಸವವನ್ನು ಈ ದಿವಸ ಅತಿ ವಿಜೃಂಭಣೆಯಿಂದ ಇಲ್ಲಿಯ ಮುಖ್ಯಸ್ಥರುಗಳು ಮಾಡಿದ್ದಕ್ಕೋಸ್ಕರ ಸಂತೋಷಪಟ್ಟು ಇದೇ ರೀತಿ ಪ್ರತಿವರ್ಷದಲ್ಲಿಯೂ ಆಚರಣೆಗೆ ತರಬೇಕೆಂಬದಾಗಿ ಹೇಳಿದರು. ಆಮೇಲೆ ಮಹಾಮಂಗಳಾರತಿಯಾಗಿ ನೆರೆದಿದ್ದ ಸಭೆಯವರಿಗೆಲ್ಲಾ ಪ್ರಸಾದವಿನಿಯೋಗವು ನಡೆದು ಸಾಯಂಕಾಲ ನಂದಿಧ್ವಜ, ಬಾಲಬಸವೇಶ್ವರಪಟ ಮತ್ತು ಶೃಂಗರಿಸಿದ ಬಸವಣ್ಣಗಳ ಸಮೇತ ಪ್ರತಿಬೀದಿಗಳಲ್ಲಿಯೂ ಉತ್ಸವವು ಬಹಳ ಸಂತೋಷದಿಂದ ನಡೆಯಿತು. ರಾತ್ರಿ 9 ರಿಂದ 10 ಘಂಟೆಯವರೆಗೂ ಪುರಾಣಶ್ರವಣವಾಯಿತು. ಸಮಸ್ತರೂ ಕೇಳಿ ಆನಂದಪಟ್ಟರು.

ಮಾದಪ್ಪನವರ ಮಗ ನಂಜಯ್ಯ.

ಟಿ. ನರಸೀಪುರ.

ಪದ್ಧತಿಪ್ರಕಾರ ಇಲ್ಲಿಯ ವೀರಶೈವಮಂಡಲಿಯವರು ಕಳೆದ ತಾ॥ 13 ನೇ ಪ್ರಾತಃಕಾಲ ಉತ್ಸವಕ್ಕಾಗಿ ತಾಲ್ಲೂಕು ಟ್ರಜರಿಯಿಂದ ತರಲ್ಪಟ್ಟಿದ್ದ ಬೆಳ್ಳಿಯಬಸವೇಶ್ವರನನ್ನು ಬೆಳ್ಳಿಯಪ್ರಭಾವಳಿಯಿಂದಲೂ ಬಸವೇಶ್ವರಜನನದ ಫೋಟೋವಿನಿಂದಲೂ ಅಲಂಕರಿಸಿ ವಾದ್ಯಘೋಷದೊಡನೆಯೂ ಪೂಜಾಸಂಭಾರದೊಡನೆಯೂ ಶ್ರೀಕಾವೇರಿಕಪಿಲಾಸ್ಫಟಿಕಸರೋವರದಿಂದ ಕೂಡಿದ ತ್ರಿವೇಣಿಸಂಗಮದಲ್ಲಿ ರಾರಾಜಿಸುತ್ತಿರುವ ಶ್ರೀಮದ್ವಿತೀಯಶಂಭುವಾದ ಶ್ರೀ ನಡುಹೊಳೆಬಸವೇಶ್ವರಸ್ವಾಮಿಯ ಸಮೀಪಕ್ಕೆ ಉತ್ಸವಪೂರ್ವಕವಾಗಿ ಹೋಗಿ ಶ್ರೀಬಸವೇಶ್ವರಸ್ವಾಮಿಗೆ ವೇ॥ ಹುಚ್ಚಪ್ಪಶಾಸ್ತ್ರಿಗಳು ಮತ್ತು ಇವರ ಕುಮಾರರುಗಳಿಂದ ವಿಧ್ಯುಕ್ತವಾಗಿ ಶ್ರೀರುದ್ರಾಧ್ಯಾಯೇನಮಹಾಭಿಷೇಕವೂ ಶ್ರೀ ಬಸವಸಹಸ್ರನಾಮಾರ್ಚನಪೂರ್ವಕ ಷೋಡಶೋಪಚಾರಪೂಜೆಯೂ ರಾಜೋಪಚಾರಗಳೂ ವೇದಘೋಷದೊಡನೆ ಸಾಂಗವಾಗಿ ನೆರವೇರಿಸಲ್ಪಟ್ಟನಂತರ ದಧ್ಯೋದನಮಹಾನೈವೇದ್ಯವು ಮಾಡಲ್ಪಟ್ಟು ಅಲ್ಲಿ ನೆರೆದಿದ್ದ ಭಕ್ತಮಾಹೇಶ್ವರರಿಗೂ ಇತರರಿಗೂ ವಿನಿಯೋಗಿಸಲ್ಪಟ್ಟಿತು. ತರುವಾಯ ಪೂರ್ವೋಕ್ತರೀತಿಯಲ್ಲಿ ಅಲಂಕರಿಸಿದ್ದ ಶ್ರೀಬಸವೇಶ್ವರಸ್ವಾಮಿಯು ಪಾಲಕಿಯು ತ್ರಿವಾರ ಜಯಘೋಷದೊಡನೆ ಹೊರಟು ತಳಿರುತೋರಣಗಳಿಂದಲಂಕೃತವಾಗಿದ್ದ ಪುರದ ಎಲ್ಲ ಬೀದಿಗಳಲ್ಲಿಯೂ ಉತ್ಸವಗೊಂಡು ಸಾರಣೆಕಾರಣೆಗಳಿಂದಲೂ ತಳಿರುತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಮ॥ ಸಾಹುಕಾರ್ ಸಂ॥ ಪುಟ್ಟಣ್ಣನವರ ಧರ್ಮಶಾಲೆಗೆ ಬಿಜಯಂಗೈಸಿ ಷೋಡಶೋಪಚಾರಪೂಜೆಯೂ ರಾಜೋಪಚಾರಗಳೂ ನಡೆದನಂತರ ಅಲ್ಲಿ ನೆರೆದಿದ್ದ ಸಮಸ್ತರಿಗೂ ಮಂಗಳಾರತಿ ಮತ್ತು ತೀರ್ಥಪ್ರಸಾದಗಳು ಕೊಡಲ್ಪಟ್ಟು ಬಸವೇಶ್ವರನ ಜಯಘೋಷದೊಡನೆ ತಮ್ಮ ತಮ್ಮ ಮನೆಗಳನ್ನು ಕುರಿತು ಹೊರಟುಹೋದರು. ಪುನಃ ರಾತ್ರಿ 8½ ಗಂಟೆಗೆ ಮಹಾಮಂಗಳಾರತಿ [illegible] ಸಾಹುಕಾರ್ [illegible] ಮೊದಲಾದ ಸರ್ಕಾರಿಯುದ್ಯೋಗಸ್ಥರೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಇತರ ದೊಡ್ಡಮನುಷ್ಯರುಗಳೂ ಸೇರಿದನಂತರ ಉಡುಪಿ ಹರಿಕಥಾ ವೇ॥ ಶ್ರೀಪಾದದಾಸರವರಿಂದ “ಗಿರಿಜಾಕಲ್ಯಾಣ” ವೆಂಬ ಶಿವಕಥಾಶ್ರವಣವು ನಡೆಸಲ್ಪಟ್ಟು ದಯೆಮಾಡಿಸಿದ್ದ ಸಮಸ್ತರಿಗೂ ಮಹಾಮಂಗಳಾರತಿಯೂ ಗಂಧಪುಷ್ಪಾದಿಗಳೂ ವಿನಿಯೋಗಿಸಲ್ಪಟ್ಟು ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೆ ಶ್ರೀಬಸವೇಶ್ವರಸ್ವಾಮಿಯು ಸಕಲ ಸನ್ಮಂಗಳವನ್ನೀಯಲೆಂದು ಜಯಘೋಷವನ್ನುಮಾಡಿ ಸಕಲರೂ ತೆರಳಿದರು. ಈಸಾರಿ ಈ ಮಹೋತ್ಸವ ಕಾರ್ಯಕ್ಕೆ ಮ್ಯುನಿಸಿಪಲ್ ಕೌನ್ಸಿಲರೂ ಬೆಂಚ್‌ಮ್ಯಾಜಿಸ್ಟ್ರೇಟರೂ ಆದ ಮ॥ ಎಸ್. ಮಲ್ಲಣ್ಣನವರು ಮತ್ತು ಮುಡುಕುದೊರೆ ಶ್ರೀವೀರಶೈವಮತಸಂವರ್ಧಿನೀಸಭಾ ವರ್ಕಿಂಗ್‌ಕಮಿಟಿಯ ಸೆಕ್ರೆಟರಿಯವರಾದ ವೇ॥ ಹೆಚ್. ಪರಶಿವಮೂರ್ತಿಯವರು ಕಾರ್ಯದರ್ಶಿಗಳಾಗಿ ನಿಂತು ಬಹುವಿಜೃಂಭಣೆಯಿಂದ ನೆರವೇರಿಸಿದುದಕ್ಕಾಗಿ ಅವರುಗಳಿಗೆ ಶ್ರೀಬಸವೇಶ್ವರನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನೀಯಲೆಂದು ಕೋರಿ ನನ್ನ ವಂದನೆಯನ್ನರ್ಪಿಸುತ್ತೇನೆ.

ಓರ್ವ ವೀರಶೈವ.

ರಾಯಿಚೂರು.

ನೈಜಾಮರಾಜ್ಯದಲ್ಲಿ ಜಿಲ್ಲಾ ರಾಯಿಚೂರೊಳಗೆ ಸುಪ್ರಸಿದ್ಧವಾದ ಸೋಮವಾರಪೇಟೆಮಠಾಧ್ಯಕ್ಷರಾದ ರಾಚೋಟಿಸ್ವಾಮಿಗಳವರು ಪ್ರತಿವರ್ಷದಂತೆ ಆರನೇದಾದ ಬಸವೇಶ್ವರನ ಜಯಂತ್ಯುತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಇದೇ ಅಕ್ಷಯ ಸಂ॥ ರ ವೈಶಾಖ ಶು॥ ೨ ಬುಧವಾರ ಉದಯ ಎಳುಗಂಟೆಯಿಂದ 2 ಗಂಟೆಯ ಪರಿಯಂತರ ಕಲ್ಲೂರು ಸೂಗೂರುಶಾಸ್ತ್ರಿಗಳವರು ತಮ್ಮ ಅಸ್ಖಲಿತವಾಣಿಯಿಂದ ಶ್ರೋತೃಗಳ ಚಿತ್ತಾಕರ್ಷಕವಾಗುವಂತೆ ಶಿವಕೀರ್ತನೆಯನ್ನು ಮಾಡಿದರು. ಅನಂತರ ಹೊಸಪೇಟೆ ಮಠಾಧಿಕೃತರಾದ ಶ್ರೀ ಸಿದ್ಧಲಿಂಗಶಿವಯೋಗಿಗಳನ್ನೇ ಪ್ರೇಕ್ಷಕರ ಅಪೇಕ್ಷೆಯಂತೆ ಸಭಾಧ್ಯಕ್ಷರನ್ನಾಗಿ ಮಾಡಿ ಸ್ವಗ್ರಾಮದ ಬಾಗವಾನರ ಬಸವಣ್ಣನೆಂಬ ರಾಜಕೀಯ ವಿದ್ಯಾರ್ಥಿಯು ತನ್ನ ಹೃತ್ಪಟಲದಲ್ಲಿ ನೆಲಸಿರುವ ವಿದ್ಯಾ ಕಳಕಳಿಯನ್ನು ಸಪ್ರಮಾಣವಾಗಿ ಹತ್ತುಗಂಟೆಯ ಪರಿಯಂತರ ಸುವ್ಯಕ್ತಗೊಳಿಸಿದನು. ಅಲ್ಲಿಗೆ ಹೊತ್ತಾದಮೂಲಕ ಅಧ್ಯಕ್ಷರ ಅಪ್ಪಣೆಯ ಪ್ರಕಾರ ಸಭೆಯನ್ನು ವಿಸರ್ಜಿಸಿ ಬಂದ ಭಕ್ತಮಾಹೇಶ್ವರ ವರ್ಗಕ್ಕೆ ಸಂತೃಪ್ತಿಯು ಮಾಡಿಸಲ್ಪಟ್ಟಿತು. ಸಾಯಂಕಾಲ 5 ಗಂಟೆಯಿಂದ ಏಳುಗಂಟೆಯ ಪರಿಯಂತರ ಬಸವೇಶ್ವರನ ಪುರಾಣದಲ್ಲಿ ಬಸವೇಶ್ವರನ ಜನನವಿಷಯವನ್ನು ಮೇಲ್ಕಂಡ ಶಾಸ್ತ್ರಿಗಳೂ ಸಂಗೀತವಿದ್ವಾನ್ ರಾದ ಮಟಮರಿ ಹಂಪಯ್ಯನವರೂ ಸುಗಮವಾಗಿ ಸರ್ವರಿಗೆ ಬೋಧವಾಗುವಂತೆ ಹೇಳಿದ ಬಳಿಕ ನೀರಡಗುಂಭದ ಶಾಖಾ ಶಿವಯೋಗಮಂದಿರದ ವತಿಯಿಂದ ಬಂದ ಸಾಧಕರೀರ್ವರು ಪ್ರಶ್ನೋತ್ತರಮೂಲಕವಾಗಿ ಬಸವೇಶ್ವರನೆಂದರೆ ಯಾರು, ಜಯಂತಿಯಂದರೇನು ಎಂಬ ವಿಷಯವನ್ನು ಪ್ರತಿಪಾದಿಸಿದ ಮೇಲೆ ಅದೇ ಶಿವಯೋಗಮಂದಿರದ ಬಸವರಾಜಶಾಸ್ತ್ರೀ ವಿಜಾಪುರ ಇವರು ಬಸವೇಶ್ವರನು ಜಗತ್ಪೂಜ್ಯನಾಗಬೇಕಾದರೆ ಆತನಲ್ಲಿ ದೃಢವಾದ ಭಕ್ತಿಯೇ ನೆಲೆಗೊಂಡಿತ್ತು; ತಾದೃಶಭಕ್ತಿಯೇ ಸರ್ವರ ಏಳಿಗೆಗೆ ಮೂಲವಾದುದೆಂದು ಹೇಳಿದ ಬಳಿಕ ಬಿ. ಎ. ವಸೂರು ರೇವಪ್ಪ ಇವರು ಲಿಂಗರಹಸ್ಯದ ವಿಷಯದಲ್ಲಿ ಸರ್ವಮತದವರೂ ಲಿಂಗಾರ್ಚನೆ ಮಾಡಲೇಬೇಕೆಂಬ ಅಚಲವಾದ ಶ್ರದ್ಧೆಯು ಜನಿಸುವಂತೆ ಸದೃಷ್ಟಾಂತಪೂರ್ವಕ ಹೇಳಿದರು. ಭೋಜನಕಾಲವಾದ ಮೂಲಕ ಸಭೆಯು ನಿಲ್ಲಿಸಲ್ಪಟ್ಟಿತು. ಮಾರನೆದಿನ ಅಂದರೆ ವೈಶಾಖ ಶು॥ ೩ ಗುರುವಾರ ಉದಯ 7 ರಿಂದ 9 ಗಂಟೆಯ ಪರಿಯಂತರ ಮೇಲ್ಕಂಡ ಹಂಪಯ್ಯನವರು ಸಂಗೀತಪ್ರಾವೀಣ್ಯತೆಯಿಂದ ಪಾಮರರಿಗೂ ಸಹ ಬೋಧಾಗುವಂತೆ ಶಿವಕೀರ್ತನೆಯನ್ನು ಹೇಳಿದರು. ಗೊಬ್ಬೂರು ಚರಮೂರ್ತಿಗಳು ಲಿಂಗಧಾರಣದಿಂದಲೂ ಲಿಂಗಾರ್ಚನೆಯಿಂದಲೂ ಆಗುವ ಫಲವನ್ನ ಭಕ್ತರ ನಿದರ್ಶನಕ್ಕೆ ಬರುವಂತೆ ಯುಕ್ತಿಗಳಿಂದ ಹೇಳಿದ ಬಳಿಕ ಕಲ್ಲೂರು ಚೋಳೆಂದ್ರಶಾಸ್ತ್ರಿಗಳವರು ನಿತ್ಯಸುಖವು ಯಾವ ವಸ್ತುವಿನಲ್ಲಿ ಲಭಿಸುವದೆಂಬ ವಿಷಯದಲ್ಲಿ ಹೇಳಿದರು. ಅದೇ ವಿಷಯವನ್ನೇ ತಲ್ಲೂರು ಸೂಗೂರುಶಾಸ್ತ್ರಿಗಳು ಪುಷ್ಟೀಕರಿಸಿದರು. ಬಳಿಕ ಗದ್ವಾಲ ವಿರುಪಣ್ಣ ಸಾಹುಕಾರ ಇವರು ಏಕಮತ್ಯವಿಷಯವನ್ನು ಬೋಧಿಸಿದರು. ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಮೇಲ್ಕಂಡ ಪುರಾಣೀಕರಿಂದ ಬಸವೇಶ್ವರ ನಾಮಕರಣದ ವಿಷಯವು ಬೋಧಿಸಲ್ಪಟ್ಟಿತಲ್ಲದೆ ಪುರದ ಮಹಿಳೆಯರಿಂದ ನಾಮಕರಣವು ಮಾಡಿಸಲ್ಪಟ್ಟಿತು. ಅನಂತರ ಗುರುಶಾಂತಯ್ಯ ವಿದ್ಯಾರ್ಥಿ ಇವರು ಗುರುವಿನವಿಷಯದಲ್ಲಿ ಪ್ರಮಾಣಪೂರ್ವಕ ಹೇಳಿದಬಳಿಕ ಕಲ್ಲೂರುಶಾಸ್ತ್ರಿಗಳು ವೀರಶೈವಮಹಾಸಭೆಯನ್ನು ಈಸಾರಿ ನೈಜಾಮಿನೊಳಗೆ ಮಾಡಲೇಬೇಕೆಂದು ವಕ್ತಾಯದಿಂದ ಸೂಚಿಸಿದರು. ಅದೇ ವಿಷಯವನ್ನೇ ನೀರಡಗುಂಭದ ಶಾಸ್ತ್ರಿಗಳು ಪುಷ್ಟೀಕರಿಸಿದ ಕೂಡಲೆ ಸರ್ವಪ್ರೇಕ್ಷಕರೂ ಸಮ್ಮತಿಸಿದ್ದಲ್ಲದೆ ಸಾಹುಕಾರ ಮುಣೆಪ್ಪ ಇವರು ಒಪ್ಪಿಗೆಯನ್ನು ಕೊಟ್ಟು ಸಮಾಜೋದ್ಧಾರಕ್ಕೆ ಸಭೆಯೇ ಕಾರಣವಾದುದೆಂದು ಹೇಳಿದ್ದಲ್ಲದೆ ಕ್ರೈಸ್ತರ ಉದಾಹರಣೆಯನ್ನು ಕೂಡ ಕೊಟ್ಟರು. ಅಲ್ಲಿಗೆ ಅಧ್ಯಕ್ಷರ ಅಪ್ಪಣೆಯಪ್ರಕಾರ ನಿಲ್ಲಿಸಿ ಶು॥ ೪ ಶುಕ್ರವಾರ 7 ಗಂಟೆಯಿಂದ 9 ಗಂಟೆಯಪರಿಯಂತರ ಶಿವಕೀರ್ತನಭಾಷಣಗಳನ್ನು ನಡಿಸಿ ಸರ್ವಪ್ರೇಕ್ಷಕರಿಗೆ ಪುಷ್ಪಹಾರಗಳು ಹಂಚಲ್ಪಟ್ಟವಲ್ಲದೆ ಪಂಡಿತವರ್ಗಕ್ಕೆ ಯಥೋಚಿತಸಂಭಾವನೆಯು ಕೊಡಲ್ಪಟ್ಟು ವೈ. ವೀರಸಂಗಪ್ಪನವರ ಸ್ಮಾರಕಕ್ಕಾಗಿ ಸ್ವಾರಿಗೆ 2 ರೂ. ತೆಗಿಯಲ್ಪಟ್ಟಿತು. ಶ್ರೀ ಬಸವೇಶ್ವರನ ಜಯಂತ್ಯುತ್ಸವಕ್ಕೆ ಸೂತ್ರಧಾರಿಗಳಾದ ರಾಚೋಟಿಸ್ವಾಮಿಗಳಿಗೆ ಚಿರಾಯುರಾರೋಗ್ಯವನ್ನೀಯುವದಲ್ಲದೆ ಅತೋಪ್ಯತಿಶಯ ಊರ್ಜಿತಾವಸ್ಥೆಯನ್ನು ಬಸವೇಶ್ವರನೀಯಲೆಂದು ಈಶನನ್ನು ಸ್ತುತಿಸಿ ವಿರಮಿಸುವೆನು.

ಸಮಾಜಹಿತೈಷಿ.

ದಾವಣಗೆರೆ.

ಈ ಮೊದಲು ಗೊತ್ತಾದಪ್ರಕಾರ ಶ್ರೀ ಬಸವಜಯಂತಿಯ ದಿವಸ ಇಲ್ಲಿಯ ನಾಲ್ಕಾರು ಪೇಟೆಯ ತರುಣಭಜನಾಸಂಘದವರು ಬೆಳಗಿನ ನಾಲ್ಕು ಗಂಟೆಯಿಂದಲೇ ಸ್ನಾನಾದಿಗಳನ್ನು ತೀರಿಸಿಕೊಂಡು ಶ್ರೀಬಸವೇಶನ ಭಜನೆಯನ್ನು ಮಾಡುತ್ತಾ, ಪುರಪ್ರದಕ್ಷಿಣೆಯನ್ನು ಮಾಡಿದರು. ಮನೋಹರವಾದ ಬೆಳಗಿನಜಾವದಲ್ಲಿ ತಾಳ, ತಂಬೂರಿ, ತಬಲುಗಳೊಂದಿಗೆ ತತ್ವಾರ್ಥಗಳನ್ನೊಳಕೊಂಡ ನಾನಾರಾಗಗಳಲ್ಲಿನ ಭಜನೆಯು ಮಲಗಿದ್ದವರನ್ನೆಚ್ಚರಿಸಿ ಭಜಕರನ್ನು ಹಿಂಬಾಲಿಸುವಂತೆ ಮಾಡಿತು. ಇತ್ತ ಪುರಜನರು ಸಾರಣೆ ಕಾರಣೆ ತೋರಣಾದಿಗಳಿಂದಲಂಕೃತವಾದ ತಮ್ಮ ಮನೆಗಳಲ್ಲಿ ಬಸವಣ್ಣ ಮತ್ತು ಗೋವುಗಳನ್ನು ಮೈತೊಳೆದು ಪೂಜಿಸಿ, ನಾನಾ ಆಭರಣಗಳಿಂದಲೂ, ರೇಷ್ಮೆ ಜರತಾರಿಕಲಾಬತ್ತಿನ ಹೊದಿಕೆಗಳಿಂದಲೂ ಶೃಂಗರಿಸಿ, ಉತ್ಸವಗೊಳಿಸಲು ನಾನಾಬೀದಿಗಳಿಂದ ದೇವಸ್ಥಾನಕ್ಕೆ ಬರುತ್ತಿದ್ದರು. ದೊಡ್ಡಪೇಟೆ ಮತ್ತು ಕಾಯಿಪೇಟೆಯ ಭಜನಾಸಂಘದವರು ಶೃಂಗರಿಸಿದ ಸಹಸ್ರಾರು ಬಸವ ಮತ್ತು ಗೋವುಗಳನ್ನು ಸಾಲಾಗಿ ನಿಲ್ಲಿಸಿ ವಾದ್ಯದೊಡನೆ ಉತ್ಸವಗೊಳಿಸುತ್ತಿದ್ದುದೂ ಈ ಉತ್ಸವಕ್ಕಾಗಿಯೇ ಬರಮಾಡಲ್ಪಟ್ಟಿದ್ದ ಎರಡಾನೆಗಳು ವಿನೋದಾಟಗಳಾಡುತ್ತಿದ್ದುದೂ ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸಿದ್ದವು. ನಾನಾ ಅಲಂಕಾರದಿಂದೊಪ್ಪುವ ಸಹಸ್ರಾರು ಬಸವಣ್ಣಗಳು ಅರ್ಧಮೈಲಿ ಹಾಸರೆ ಬೀದಿಯುದ್ದಕ್ಕೂ ಸಾಲುಸಾಲಾಗಿ ವಾದ್ಯೋತ್ಸವದೊಂದಿಗೆ ಹೋಗುತ್ತಿರುವ ಸಂಭ್ರಮವು ನೋಟಕರ ಕಣ್ಮನಂಗಳಿಗೆ ಪರಮಾನಂದವನ್ನುಂಟುಮಾಡುತ್ತಿತ್ತು. ಭಜನಾಸಂಘದ ಒಬ್ಬ ಯುವಕನು ನೂರಾರು ತೊಲಿಯ ಬೆಳ್ಳಿಯಬಸವಮೂರ್ತಿಯನ್ನು ಕಾಯಿಪೇಟೆಯ ಶ್ರೀ ಬಸವೇಶ್ವರದೇವರಿಗೆ ಭಕ್ತಿಯಿಂದ ಅರ್ಪಿಸಿದನು. ಮಧ್ಯಾಹ್ನಾನಂತರ ಚುನಾಯಿಸಿದ ರಾಸುಗಳಿಗೆ ಮೆಡಲುಗಳು ಬಹುಮಾನವಾಗಿ ಕೊಡಲ್ಪಟ್ಟವು. ಅಂತು ಈ ಪವಿತ್ರದಿವಸ ಎಲ್ಲಿನೋಡಿದರಲ್ಲಿ ಬಸವಭಜನೆ ಬಸವೋತ್ಸವಾದಿಗಳೇ ನಡೆದು ಬಸವೇಶನ ಜಯಘೋಷವೇ ಕೇಳಿಬರುತ್ತಿತ್ತು. ಸಾಯಂಕಾಲಕ್ಕೆ ಕಾಯಿಪೇಟೆಯ ವೀರಶೈವಮಹಾಜನರು ವೀರಶೈವರಾದಿಯಾಗಿ ಅಂತ್ಯಜರ ವರೆಗಿನ ಯಾವತ್ತು ಸಾವಿರಾರುಜನರಿಗೆ ಗೋದಿಯ ಪಾಯಸದೊಂದಿಗೆ ಅನ್ನಸಂತರ್ಪಣೆಯನ್ನು ಸಹ ಮಾಡಿಸಿದರು. ಇತ್ತ ದೊಡ್ಡಪೇಟೆ ಮಹಾಜನರು ರಾತ್ರಿ ಶ್ರೀಬಸವೇಶ್ವರದೇವಾಲಯದಲ್ಲಿ ಶಿವಕೀರ್ತನೆಯನ್ನು ಜರುಗಿಸಿ ಮ॥ ಅಡ್ವೋಕೇಟ್ ಸಿದ್ಧರಾಮಯ್ಯ ಬಿ ಎ.,ಎಲ್‌ಎಲ್.ಬಿ., ಇವರ ಅಧ್ಯಕ್ಷತೆಯಲ್ಲಿ ವೀರಶೈವರ ಸಭೆಯನ್ನು ಜರುಗಿಸಿದರು. ಸಭೆಯಲ್ಲಿ ಶ್ರೀ ಬಸವೇಶ್ವರನ ವಿಷಯವಾಗಿ ಅನೇಕ ತರುಣರು ಮಾಡಿದ ಭಾಷಣಗಳು ಸಭಿಕರನ್ನು ಸಂತೋಷಗೊಳಿಸಿದವು.

ದೀನ್ದಾರಸಿದ್ದೀಕಸಾಬರ ನಿಷೇಧವೆಂಬ ವಿಷಯವನ್ನು ಕುರಿತು ಮ॥ ಮುಪ್ಪಣ್ಣ ಬೆಳ್ಳುಳ್ಳಿ ಇವರು ಭಾಷಣಮಾಡಿದ್ದೇನಂದರೆ :— ಬೆಳಗಾಂ ಹುಬ್ಬಳ್ಳಿ ಮೊದಲಾದ ಬ್ರಿಟಿಷ್ ಹದ್ದಿನಲ್ಲಿ ಬಾಯಿಗೆ ಬೀಗಮುದ್ರೆಯನ್ನು ಹಾಕಿಸಿಕೊಂಡು ಅಲ್ಲಿಂದ ಹೊರಬಿದ್ದಿರುವ ದೀನ್ದಾರು ಚೆನ್ನಬಸವೇಶ್ವರನೆಂಬ ಹೆಸರಿನ ಮುಸಲ್ಮಾನನೊಬ್ಬನು ತುಮುಕೂರಲ್ಲಿ ನೆಲಸಿ ಚೆನ್ನಬಸವೇಶ್ವರ ಎಂಬ ಹೆಸರಿನ ಒಂದು ವೃತ್ತಪತ್ರಿಕೆಯನ್ನು ಹೊರಡಿಸುತ್ತಿರುವನೆಂತಲೂ, ಈ ಸಿದ್ದೀಕಸಾಬರ ಲೇಖನ ಮತ್ತು ಭಾಷಣಗಳು ಹಿಂದುಗಳಿಗೆ ಅಸಮಾಧಾನವನ್ನುಂಟುಮಾಡತಕ್ಕವುಗಳಾಗಿರುತ್ತವೆಯೆಂತಲೂ, ಈಗಾಗಲೆ ಇವರ ಭಾಷಣಾದಿಗಳಿಗೆ ಮರುಳಾಗಿ ನಂಜುಂಡಪ್ಪನೆಂಬವನೊಬ್ಬನು ಮಹಮ್ಮದಿಯ ಮತವನ್ನು ಸ್ವೀಕರಿಸಿದನೆಂತಲೂ, ವೇಷಭಾಷಣಗಳಿಂದ ಮತಾಂತರಗೊಳಿಸುವುದೇ ಈ ಸಿದ್ದೀಕಸಾಬರ ಉದ್ದೇಶವಿರಬಹುದೆಂತಲೂ, ಈ ವಿಚಾರದಲ್ಲಿ ವೀರಶೈವರಾದಿಯಾಗಿ ಸರ್ವ ಹಿಂದುಗಳು ಜಾಗರೂಕರಾಗಿರಬೇಕಂತಲೂ ಹೇಳಿದುದಲ್ಲದೆ, ಮೈಸೂರು ದೇಶದ ಹೊರಗಿದ್ದ ಹಿಂದುಮುಸಲ್ಮಾನರ ದ್ವೇಷಾಸೂಯೆಗಳು ಇಲ್ಲಿಯೂ ಅಂಕುರಿಸಲು ಅವಕಾಶವಾಗಬಹುದಾದ್ದರಿಂದ ಸಹೋದರರಂತಿರುವ ಮೈಸೂರು ದೇಶದ ಹಿಂದುಮಹಮ್ಮದೀಯ ಮುಖಂಡರು ಮೊದಲು ಇದಕ್ಕೆ ಗಮನಕೊಡಬೇಕಾದ್ದು ಅವರ ಪವಿತ್ರ ಕರ್ತವ್ಯವೆಂತಲೂ, ದಯಾಳು ಶ್ರೀಮನ್ಮಹರಾಜರವರಿಗು ಮತ್ತು ರಾಜಪ್ರಜಾನುರಾಗಿಗಳಾದ ನಮ್ಮ ನೂತನ ದಿವಾನ್ ಸಾಹೇಬರವರಿಗು ಹಿಂದುಗಳ ಈ ಅನುತಾಪವನ್ನು ಒಡನೆ ನಿವಾರಣೆಗೊಳಿಸುವಂತೆ ತಂತಿಮೂಲಕ ಪ್ರಾರ್ಥಿಸಿಕೊಳ್ಳಬೇಕೆಂಬುದಾಗಿ ಸೂಚಿಸಿದರು. ಇವರ ಸೂಚನೆಯನ್ನು ಮ॥ ಬಸವಪ್ಪ ಕುರುವತ್ತಿ ಇವರು ಅನುಮೋದಿಸಿದರು. ನಂತರ ಅಧ್ಯಕ್ಷರು ಹೊರಗಿದ್ದ ಮತಕಲಹಗಳು ಇದರಿಂದ ನಮ್ಮ ದೇಶದಲ್ಲಿ ಹಬ್ಬಲು ಅವಕಾಶವಾಗಬಹುದಾದ್ದರಿಂದ ಹಿಂದುಮಹಮ್ಮದಿಯ ಮುಖಂಡರು ಈ ಸಿದ್ದೀಕಸಾಬರ ಕೃತಿಯನ್ನು ನಿಷೇಧಿಸಬೇಕೆಂತಲೂ, ಹೇಳಿ ಸಭಿಕರ ಸರ್ವಾನುಮತದೊಂದಿಗೆ ಶ್ರೀಮನ್ಮಹಾರಾಜರವರಿಗೆ ತಂತಿಕಳಿಸಬೇಕೆಂಬ ಠರಾವನ್ನು ಪಾಸುಮಾಡಿದರು. ನಂತರ ಪುಷ್ಪ ತಾಂಬೂಲವು ಹಂಚಲ್ಪಟ್ಟು ಶ್ರೀ ಬಸವೇಶ್ವರನ ಜಯಘೋಷದೊಡನೆ ಮಂಗಳವು ಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಮೈಸೂರು ಸಂಸ್ಥಾನದ ಕಬ್ಬಿಣದ ಕಾರ್ಖಾನೆ, ಭದ್ರಾವತಿ.

ಕಾರ್ಯನಿರ್ವಾಹಕ ಮಂಡಲಿಯವರ ವಿವರಣೆ.

ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯವರು ಈ ಕೆಳಗೆ ಕಂಡ ವಿಷಯಗಳನ್ನು (ಸ್ಟೇಟ್‌ಮೆಂಟನ್ನು) ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕಾಗಿ ಕಳುಹಿಸಿರುತ್ತಾರೆ :—

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ವಿಷಯವಾಗಿ ಆಗಾಗ್ಗೆ ವರ್ತಮಾನಪತ್ರಿಕೆಗಳಲ್ಲಿ ಬರುತ್ತಿರುವ ಲೇಖನಗಳಿಂದಲು ಮತ್ತು ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ನಡೆಯುತ್ತಿರುವ ಚರ್ಚೆಗಳಿಂದಲು ಈ ಕಾರ್ಖಾನೆಯ ನಿಜಸ್ಥಿತಿಯು ಜನಗಳಿಗೆ ಸರಿಯಾಗಿ ತಿಳಿದಿಲ್ಲವೆಂದು ಕಂಡುಬರುತ್ತೆ.

ಇಂಥಾ ಕಾರ್ಖಾನೆಗಳ ವಿಷಯವಾಗಿ ಲಾಭನಷ್ಟಗಳು, ಧಾರಣೆ ಮತ್ತು ಗಿರಾಕಿಸ್ಥಿತಿ, ಸಾಮಾನುಗಳನ್ನು ಸಾಗಿಸುವ ಖರ್ಚು ವಗ್ಯೆರೆ ತಪಶೀಲುಗಳನ್ನು ಪ್ರಕಟಪಡಿಸುವ ವಾಡಿಕೆ ಇಲ್ಲದಕಾರಣ ಕಾರ್ಯನಿರ್ವಾಹಕ ಮಂಡಲಿಯು ಇಲ್ಲಿಯವರಿವಿಗೆ ಈ ಕಾರ್ಖಾನೆಯ ವಿಷಯಗಳು ಯಾವವನ್ನೂ ಪ್ರಕಟಿಸಿರುವುದಿಲ್ಲ. ಆದರೆ ಮುಖ್ಯವಿಷಯಗಳನ್ನೆಲ್ಲಾ ಆಗಿಂದಾಗ್ಗೆ ಸರಕಾರದ ಅವಗಾಹನೆಗೆ ತರುತ್ತಲೇ ಇದೆ. ಈ ಕಾರ್ಖಾನೆಯ ನಿಜಸ್ಥಿತಿಗಳು ಜನಗಳಿಗೆ ತಿಳಿಯಬೇಕೆಂಬ ಉದ್ದೇಶದಿಂದ ಕಾರ್ಯನಿರ್ವಾಹಕ ಮಂಡಲಿಯವರು 1926ನೇ ಇಸವಿ ಏಪ್ರಿಲ್ 30ನೇ ತಾರೀಖಿನಲ್ಲಿ ನಡೆದ ಮೀಟಿಂಗಿನಲ್ಲಿ ಈ ಉದ್ಯಮದ ಪ್ರಾರಂಭ, ಈಗಿನ ಸ್ಥಿತಿ ಮತ್ತು ಮುಂದಿನ ನಿರೀಕ್ಷಣೆಗಳ ವಿಷಯವಾಗಿ ಒಂದು ಸಂಕ್ಷೇಪವಾದ ವಿವರಣೆಯನ್ನು ಪ್ರಕಟಿಸಬೇಕೆಂದು ತೀರ್ಮಾನಿಸಿದರು.

ಈ ಏರ್ಪಾಡಿನ ಪ್ರಾರಂಭ.

ಈ ಕಬ್ಬಿಣದ ಕಾರ್ಖಾನೆಯ ಸಂಬಂಧವಾಗಿ ಇಲ್ಲಿಯವರೆಗೆ ನಡೆದಿರುವ ಕೆಲಸಗಳನ್ನು ಮೂರುಭಾಗವಾಗಿ ವಿಂಗಡಿಸಲುಬಹುದು :—

(1) ಪ್ರಾರಂಭ,
(2) ಕಟ್ಟಡ ಮತ್ತು ಯಂತ್ರಸ್ಥಾಪನೆ,
(3) ಪದಾರ್ಥಗಳ ತಯಾರಿಯ ಕೆಲಸ,

ಮೈಸೂರು ಸಂಸ್ಥಾನದಲ್ಲಿ ಈ ವಿಧವಾದ ಕಾರ್ಖಾನೆಯ ಏರ್ಪಾಡಿಗೆ ಇರತಕ್ಕ ಅನುಕೂಲಗಳ ಪರಿಶೀಲನೆಯು 1915-16ನೇ ಸಾಲಿನಲ್ಲಿ ಪ್ರಾರಂಭವಾಯಿತು. ಸಂಬಂಧಪಟ್ಟ ಸರಕಾರಿ ನೌಕರರಿಂದಲು ಮತ್ತು ಇತರ ಪ್ರದೇಶಗಳಲ್ಲಿ ಈ ಕೈಗಾರಿಕೆಯಲ್ಲಿ ದಕ್ಷರಾದ ಜನಗಳಿಂದಲು ಚೆನ್ನಾಗಿ ಪರಿಶೀಲನೆ ಮಾಡಿಸಿ, ಅವರುಗಳ ಅಭಿಪ್ರಾಯಗಳನ್ನು ಪರ್ಯಾಲೋಚಿಸಿ, ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ಏರ್ಪಾಡನ್ನು 1917-18 ನೇ ಸಾಲಿನಲ್ಲಿ ಮಂಜೂರ್ಮಾಡಿದರು. ಗವರ್ನಮೆಂಟು ಮೆಂಬರುಗಳ್ಳುರ ಅನುಮೋದನೆಯಿಂದ ಯಂತ್ರಗಳು ವಗ್ಯೆರೆ ಸಾಮಾನುಗಳನ್ನು ಅಮೇರಿಕಾದೇಶದಲ್ಲಿ ಕೊಂಡುಕೊಳ್ಳಲು ಪ್ರಾರಂಭಿಸುವುದಕ್ಕೆ ಅದೇ ಸಾಲಿನಲ್ಲಿ ಸರಕಾರದವರು ಅಪ್ಪಣೆಯನ್ನು ಕೊಟ್ಟರು, ಮತ್ತು “[illegible] ಅಂಡ್ ಸ್ಟೀಲ್ ಕಂಪೆನಿ” ಯವರನ್ನು ಮ್ಯಾನೇಜಿಂಗ್ [illegible] ನೇಮಕಮಾಡಿದ ಒಪ್ಪಂದವು 1918ನೇ ಇಸವಿ ಮೇ ತಿಂಗಳಲ್ಲಿ [illegible] ಆಯಿತು. ಈ ಏರ್ಪಾಡು ಮಂಜೂರಾದ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನ್‌ರಾಗಿದ್ದರು. ಅವರು 1918ನೇ ಇಸವಿ [illegible] ಯಲ್ಲಿ ಆ ಪದವಿಯಿಂದ ನಿವೃತ್ತರಾದರು. ಈ [illegible] 1920ನೇ ಇಸವಿ ಜುಲೈ 30ನೇ ತಾರೀಖಿನವರೆಗೆ [illegible] ನಿವೃತ್ತರಾದ [illegible] ಒಟ್ಟು [illegible] ಮಾತ್ರ [illegible].

ಕಾರ್ಖಾನೆಯನ್ನು ಕಟ್ಟುವ ಕೆಲಸ.

ನ್ಯೂಯಾರ್ಕ್ ಪಟ್ಟಣದ ಮೆಸರ್ಸ್. ಪೆರಿನ್ ಅಂಡ್ ಮಾರ್ಷಲ್ ಎಂಬ ಕಂಪೆನಿಯವರನ್ನು ಕನ್ಸಲ್ಟಿಂಗ್ ಇಂಜನಿಯರುಗಳನ್ನಾಗಿ ನೇಮಕ ಮಾಡಿಕೊಂಡು ಕಟ್ಟಡದ ಕೆಲಸವನ್ನು 1918ನೆಯ ಇಸವಿಯಲ್ಲಿ ಪ್ರಾರಂಭ ಸಲಾಯಿತು. ಈ ಕಾರ್ಖಾನೆಯ ಸಂಬಂಧದ ಟ್ರಾಮ್ವೆಗಳೂ, ಜಂಗಲಿಯ ಮತ್ತು ಗಣಿಯ ಕೆಲಸಗಳೂ ಮೈಸೂರು ಸರ್ಕಾರದವರ ಮೇಲ್ವಿಚಾರಣೆಯಲ್ಲಿಯೇ ಇದ್ದುವು. 1919ನೆಯ ಇಸವಿಯ ಅಖೈರಿಗೆ ಕಾರ್ಖಾನೆಯು ಕೆಲಸವನ್ನು ಆರಂಭಿಸುವುದಕ್ಕೆ ಸಿದ್ಧವಾಗುವುದೆಂಬ ನಿರೀಕ್ಷಣೆ ಇತ್ತು; ಆದರೆ, ಮುಂದೆ ಸಂಕ್ಷೇಪವಾಗಿ ಸೂಚಿಸುವ ಕಾರಣಗಳ ದೆಸೆಯಿಂದ ಕಟ್ಟಡದ ಕೆಲಸವು ಪೂರೈಸುವುದಕ್ಕೆ ಸುಮಾರು ಐದು ವರುಷಗಳು ಹಿಡಿದುವು; ಎಂದರೆ 1923ನೆಯ ಇಸವಿ ಜನವರಿ ತಿಂಗಳಿನಲ್ಲಿ "ಬ್ಲಾಸ್ಟ್ ಫರ್ನೇಸ್" ಸಿದ್ಧವಾಗಿ, ಕಬ್ಬಿಣದ ತಯಾರಿಯ ಕೆಲಸವು ಉಪಕ್ರಮವಾಯಿತು.

ಹೊಸ ಕಾರ್ಯನಿರ್ವಾಹಕ ಮಂಡಲಿ (ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್).

ಕಟ್ಟಡದ ಕೆಲಸವು ಪೂರೈಸುತ್ತಿರುವಷ್ಟರಲ್ಲಿ, ಅನೇಕ ಆಫೀಸರುಗಳು ಈ ಕಾರ್ಖಾನೆಯನ್ನು ಮುಚ್ಚಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದರು. ಹೀಗೆ ಅಭಿಪ್ರಾಯಪಟ್ಟವರಲ್ಲಿ "ಮೆಸರ್ಸ್ ಪೆರಿನ್ ಅಂಡ್ ಮಾರ್ಷಲ್ ಕಂಪೆನಿ" ಯ ಒಬ್ಬ ಮೆಂಬರರು ಸಹ ಸೇರಿದ್ದರು. ಆದರೆ ಮಿ|| ಪೆರಿನ್‌ರವರು ಮಾತ್ರ ಇದನ್ನು ಅನುಮೋದಿಸಲಿಲ್ಲ. ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರ ಕೋರಿಕೆಯಂತೆ ಮಿ|| ಪೆರಿನ್‌ರವರು ನ್ಯೂಯಾರ್ಕ್ ಪಟ್ಟಣದಿಂದ ಮೈಸೂರು ಸಂಸ್ಥಾನಕ್ಕೆ ಬಂದು, ಕಾರ್ಖಾನೆಯ ಕೆಲಸವನ್ನು ಪ್ರಾರಂಭಮಾಡಿದರು. ಅವರು 1923ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ವಾಪಸು ಹೊರಟುಹೋದರು. ಆ ತರುವಾಯ ಕಾರ್ಖಾನೆಯ ಆಡಳಿತದ ಕೆಲಸವು ಒಂದು ಹೊಸ ಬೋರ್ಡಿನವರಿಗೆ ವಹಿಸಲ್ಪಟ್ಟಿತು. ಶ್ರೀಮನ್ಮಹಾರಾಜರವರ ಸರ್ಕಾರದವರ ಕೋರಿಕೆಯ ಪ್ರಕಾರ ಸರ್ ಎಂ. ವಿಶ್ವೇಶ್ವರಯ್ಯನವರು ಈ ಬೋರ್ಡಿಗೆ ಅಧ್ಯಕ್ಷ (ಚೇರ್‌ಮನ್)ರಾಗಿ ಸೇರಿದರು. ಇವರಿಗೆ ವಿಶೇಷಾಧಿಕಾರಗಳನ್ನೂ, ಜವಾಬ್ದಾರಿಗಳನ್ನೂ ವಹಿಸಲಾಯಿತು. ಆ ಲಾಗಾಯಿತು ತಹಲ್‌ವರೆಗೂ ಆಡಳಿತದ ನಿರ್ವಹಣೆಯು ಈ ಹೊಸ ಬೋರ್ಡಿನವರ ಕೈಯಲ್ಲಿರುತ್ತದೆ. ಈ ಬೋರ್ಡಿನಲ್ಲಿ, ಅಧ್ಯಕ್ಷರಲ್ಲದೆ, ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿಯವರೂ, ಹಾಜಿ ಸರ್ ಇಸ್ಮಾಯಿಲ್ ಸೇಟ್‌ರವರೂ, "ಮೆಸರ್ಸ್ ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ" ಯ ಮಿ|| ಜೆ. ಡಿ. ಘಾಂಡಿಯವರೂ ಮೆಂಬರುಗಳಾಗಿರುತಾರೆ. ಮೈಸೂರು ಸರ್ಕಾರಕ್ಕೂ, "ಮೆಸರ್ಸ್. ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ" ಗೂ ಆಗಿದ್ದ ಒಪ್ಪಂದವು 1924 ನೆಯ ಇಸವಿ ಮೇ ತಿಂಗಳಲ್ಲಿ ಉಭಯತ್ರ ಸಮ್ಮತಿಯಿಂದ ರದ್ದುಮಾಡಲ್ಪಟ್ಟಿತು. ಅಂದಿನಿಂದ ಸದರಿ ಕಂಪನಿಯವರು ಈ ಕಾರ್ಖಾನೆಯ ಮ್ಯಾನೇಜಿಂಗ್ ಏಜಂಟರಾಗಿರುವುದು ನಿಂತುಹೋಯಿತು.

ಈ ಕಾರ್ಖಾನೆಯ ಬಂಡವಾಳದ ವೆಚ್ಚವು ಮಿತಿಮೀರಿತು.

1918ನೆಯ ಇಸವಿಯಿಂದ 1923ನೆಯ ಇಸವಿಯವರೆಗೆ ಕಟ್ಟಡದ ಕೆಲಸವು ನಡೆಯುತ್ತಲಿತ್ತು. ಆ ಕಾಲದಲ್ಲಿ ಕಾರ್ಖಾನೆಯ ಬಂಡವಾಳಕ್ಕೆ ಅಂದಾಜಾದ ಮೊಬಲಗು 94 ಲಕ್ಷ ರೂಪಾಯಿಗಳಿಂದ 211 ಲಕ್ಷ ರೂಪಾಯಿಗಳಿಗೆ ಏರಿ ಹೋಯಿತೆಂಬ ಅಂಶವು ಪರಿಶಿಷ್ಟದಿಂದ ವ್ಯಕ್ತವಾಗುವುದು. ಏರಿಳಿವು ಬಹಳ ಹೆಚ್ಚಿದ್ದ ಕಾಲದಲ್ಲಿ ಸಾಮಾನುಗಳನ್ನು ವಿಶೇಷವಾಗಿ ಕೊಂಡುಕೊಂಡುದರಿಂದಲು, ಯಂತ್ರಸ್ಥಾಪನೆಯ ಕೆಲಸವು ಸಾವಕಾಶವಾದ್ದರಿಂದಲು ಮತ್ತು ಕಟ್ಟಡದ ಕೆಲಸ, ಇತರ ಆಡಳಿತಗಳ ಮೇಲ್ವಿಚಾರಣೆಗೆ ಸರಿಯಾದ ಏರ್ಪಾಡು ಇಲ್ಲದ್ದರಿಂದಲು ಸಹ, ಮೊದಲು ಅಂದಾಜುಮಾಡಿದ್ದಕ್ಕಿಂತಲೂ, ಬಹಳ ಹೆಚ್ಚಾಗಿ ಹಣವು ವೆಚ್ಚವಾಗುವುದಕ್ಕೆ ಕಾರಣವಾಯಿತು. ಸರಕಾರದ ಅನುಮತಿಯನ್ನು ಪಡೆಯದೆ ಯಂತ್ರರಚನೆಯ ಏರ್ಪಾಡನ್ನು ಬದಲಾಯಿಸಿದುದು ಸಹ ಸ್ವಲ್ಪಮಟ್ಟಿಗೆ ಹೆಚ್ಚು ವೆಚ್ಚಕ್ಕೆ ಕಾರಣವಾಯಿತು. ಪ್ರಾರಂಭದಲ್ಲಿ ಗೊತ್ತುಮಾಡಿದ್ದ ಕಟ್ಟಡದ ಕೆಲಸಗಳನ್ನು, ಆಗ ಅಂದಾಜು ಮಾಡಿದ್ದ ಮೊಬಲಗಿನೊಳಗಾಗಿಯೇ ಈಗ ಬೇಕಾದರೂ ನಡೆಸಬಹುದಾಗಿದೆ; ಆದಕಾರಣ ಮೊದಲು ಅಂದಾಜು ಮಾಡಿದ್ದ ಮೊಬಲಗು ಕಡಮೆಯಾದುದಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. 1923ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಹೊಸ ಬೋರ್ಡಿನವರು ಕೆಲಸದ ಚಾರ್ಜನ್ನು ವಹಿಸುವಷ್ಟರೊಳಗಾಗಿ, ಸುಮಾರು 167 ಲಕ್ಷ ರೂಪಾಯಿಗಳವರೆಗೆ ಹಣವು ವೆಚ್ಚವಾಗಿತ್ತು. ಬಂಡವಾಳವನ್ನು ಮಿತಿಮೀರಿ ವೆಚ್ಚಮಾಡಿದುದು ಕಾರ್ಖಾನೆಸ್ಥಾಪಿಸುವ ಕೆಲಸವು ಜರುಗುತ್ತಿದ್ದ ಕಾಲದಲ್ಲಿ ಮಾತ್ರವೇ. ಇದಕ್ಕೆ ಈಗಿನ ಕಾರ್ಯನಿರ್ವಾಹಕಮಂಡಲಿಯ (ಮ್ಯಾನೇಜ್ಮೆಂಟ್ ಬೋರ್ಡಿನ) ಮೆಂಬರುಗಳಾಗಲೀ, ಅಧ್ಯಕ್ಷರಾಗಲಿ ಜವಾಬ್ದಾರರಲ್ಲ.

ಮಿತಿಮೀರಿದ ಬಂಡವಾಳವು ವೆಚ್ಚವಾಗಿರುವದೇ ಈ ಕಾರ್ಖಾನೆಯ ಮುಖ್ಯ ನ್ಯೂನತೆಯಾಗಿದೆ. ಇಂಥಾ ಕಾರ್ಯಗಳಲ್ಲಿ, ವೆಚ್ಚವಾದ ಹಣಕ್ಕೆ ತಕ್ಕಷ್ಟು ಸಾಮಾನುಗಳು ಕಾಣಬರದೇ ಇರುವಂಥಾ ಹೆಚ್ಚು ವೆಚ್ಚವನ್ನು ಲೆಕ್ಕದಿಂದ ವಜಾಮಾಡುವುದು ವಾಡಿಕೆಯಾಗಿದೆ. ಬಂಗಾಳದಕಡೆ ಕಬ್ಬಿಣ ಮತ್ತು ಉಕ್ಕನ್ನು ತಯಾರುಮಾಡುವ ಮೂರು ಕಾರ್ಖಾನೆಗಳ ಪೈಕಿ ಎರಡರಲ್ಲಿ ಅದೇ ರೀತಿಯಾಗಿ ಹೆಚ್ಚುವೆಚ್ಚವು ವಜಾಮಾಡಲ್ಪಟ್ಟಿತು. ಈ ಕಾರ್ಖಾನೆಯ ಮಹದುದ್ದೇಶಗಳು ನೆರವೇರಬೇಕೆಂಬ ಸಂಕಲ್ಪದಿಂದ, ಅದೇ ರೀತಿಯಾಗಿ ಮಾಡಬಾರದೇ ಎಂಬುದು ಪರ್ಯಾಲೋಚನೆಗೆ ಅರ್ಹವಾದ ಅಂಶವಾಗಿದೆ.

ಕಾರ್ಖಾನೆಯ ಕೆಲಸಗಳು ಉತ್ತಮಸ್ಥಿತಿಗೆ ತರಲ್ಪಟ್ಟಿವೆ.

ಕಾರ್ಖಾನೆಯ ಕೆಲಸವನ್ನು ಕಳೆದ ಮೂರು ವರುಷಗಳಲ್ಲಿ ಕ್ರಮವಾಗಿ ಉತ್ತಮಸ್ಥಿತಿಗೆ ತಂದು, ಸ್ಥಿಮಿತಕ್ಕೆ ತರಲಾಗಿದೆ. 1925 ನೆಯ ಇಸವಿ ಅಕ್ಟೋಬರ್ ತಿಂಗಳ ಲಾಗಾಯಿತು ಖರ್ಚನ್ನು ಕಡಮೆ ಮಾಡುವುದಕ್ಕೂ, ಕಾರ್ಖಾನೆಯ ಕಾಮಗಾರಿಗಳನ್ನು ಉತ್ತಮಸ್ಥಿತಿಗೆ ತರುವದಕ್ಕೂ ವಿಶೇಷ ಪ್ರಯತ್ನಗಳನ್ನು ಮಾಡಿದೆ. ಕೆಲಸವು ಪ್ರಾರಂಭವಾದ ಮೊದಲನೆಯ ಆರು ತಿಂಗಳಲ್ಲಿ ದಿನ ಒಂದಕ್ಕೆ ಸುಮಾರು 30 ಟನ್ನುಗಳಷ್ಟು ಕಬ್ಬಿಣವು (ಪಿಗ್ ಐರನ್) ತಯಾರಾಗುತಾ ಇತ್ತು. ಈಗ ದಿನವೊಂದಕ್ಕೆ ಸುಮಾರು 57 ಟನ್ನುಗಳಷ್ಟು ಕಬ್ಬಿಣವು ತಯಾರಾಗುತ್ತಿದೆ. ಈ ಕಾರ್ಖಾನೆಯ ಕೆಲಸಕ್ಕೆ ಸ್ಥಳದ ಜನಗಳನ್ನೇ ತಯಾರುಮಾಡಿದೆ. ಕಾರ್ಖಾನೆಯ ಖರ್ಚು ಸಾಲಿಯಾನಾ ಸುಮಾರು 19 ಲಕ್ಷ ರೂಪಾಯಿ ಆಗುವುದೆಂಬುದಾಗಿ ಮಿ|| ಮಾರ್ಷಲ್‌ರವರು 1922ರಲ್ಲಿ ಅಂದಾಜು ಮಾಡಿದ್ದರು. ಈಗ ಸಾಲಿಯಾನಾ ಸದರಿ ವೆಚ್ಚವನ್ನು 13·5 ಲಕ್ಷ ರೂಪಾಯಿಗಳಿಗೆ ಇಳಿಸಲಾಗಿದೆ. ಕಳೆದ ಮೂರು ತಿಂಗಳುಗಳಲ್ಲಿ, ಧಾರಣೆಯು ಎಂದಿಗಿಂತಲೂ ಕಡಮೆಯಾಗಿದ್ದಾಗ್ಗ್ಯೂ ಇಲ್ಲಿನ ಉತ್ಪತ್ತಿಯು ಅಥವಾ ತಯಾರಾದ ವಸ್ತುಗಳ ಬೆಲೆಯೂ, ಅವುಗಳ ತಯಾರಿಗೆ ಮುಟ್ಟಿದ ವೆಚ್ಚವೂ ಒಂದಕ್ಕೊಂದು ಸರಿಹೋಗುತಲಿದೆ. ಎರಕದಿಂದ ನಲ್ಲಿಗಳನ್ನು ತಯಾರ್ಮಾಡುವ ಕಾರ್ಖಾನೆ, ಆಲ್ಕೋಹಾಲನ್ನು ಶುದ್ಧಿಮಾಡುವ ಯಂತ್ರ, ಇವೇ ಮೊದಲಾದ ಉಪಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ. ಇವುಗಳ ಕಟ್ಟಡಗಳು ಮುಂದಿನ ಜುಲೈ 1ನೆಯ ತಾರೀಖಿನೊಳಗಾಗಿ ಪೂರೈಸಬಹುದೆಂದೂ ಅನಂತರ ಇವುಗಳಿಂದಲೂ ಮತ್ತಷ್ಟು ಹುಟ್ಟುವಳಿಯು ಬರಬಹುದೆಂದೂ ನಿರೀಕ್ಷಿಸಲಾಗಿದೆ.

ಪೂರ್ವದಲ್ಲಿದ್ದ ಶಂಕೆಗಳ ಪರಿಹಾರ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಏರ್ಪಾಡು ಮಂಜೂರಾದ ಕಾಲದಲ್ಲಿ, ನಾನಾವಿಧವಾದ ಶಂಕೆಗಳು ಉಂಟಾಗಿದ್ದುವು; ಅವುಗಳೆಲ್ಲಾ ನಿರಾಧಾರವಾದುವೆಂಬುದಾಗಿ ಈಗ ಕಂಡುಬಂದಿರುತ್ತವೆ. ಸಾಕಾದಷ್ಟು ಸೌದೆಯು ದೊರೆಯದೇ ಹೋಗುವುದೆಂಬುದಾಗಿ ಯೋಚಿಸಲ್ಪಟ್ಟಿತ್ತು. ಸೌದೆಯು ಒದಗುತಾ ಇದೆ ಅಲ್ಲದೆ, ಕಾರ್ಖಾನೆಯ ಅವಶ್ಯಕತೆಗಳಿಗಾಗಿ ಸೌದೆಯನ್ನೊದಗಿಸಲು ಮೊದಲು ಯೋಚಿಸಿದ್ದಕ್ಕಿಂತಲೂ ಕಮ್ಮಿ ವಿಸ್ತೀರ್ಣದ ಜಂಗಲಿಯು ಸಾಕಾಗಿ ಕಂಡುಬಂದಿದೆ. ಜಂಗಲುಗಳ ಮರಗಳೆಲ್ಲಾ ಕಡಿದುಹಾಕಲ್ಪಡುವುವೆಂದು ಅನೇಕರಿಗೆ ಆತಂಕವುಂಟಾಗಿತು. ಆದರೆ, ವಸ್ತುತಃ ಕೆಲಸ ನಡೆಸುತ್ತಿರುವ ರೀತಿಯೇ ಬೇರೆ; ಯಾವ ಕೆಲಸಕ್ಕೂ ಬಾರದೆ ವ್ಯರ್ಥವಾಗುವಂತಿರುವ ಮರಗಳನ್ನು ಮಾತ್ರವೇ ಕಡಿದು ಸಾಗಿಸುತಾ ಇದೆ. ಜಂಗಲಿನ ಸಂರಕ್ಷಣೆಯ ವಿಚಾರದಲ್ಲಿ ನಡೆಸಬೇಕಾದ ಕೆಲಸಗಳನ್ನೆಲ್ಲಾ ಸಂಪೂರ್ಣವಾಗಿ ನಡೆಸುತಾ ಇದೆಯೆಂದು ಸ್ಥಳೀಯ ಫಾರೆಸ್ಟು ಇಲಾಖೆಯವರು ಭರವಸೆ ಕೊಡಬಲ್ಲವರಾಗಿದ್ದಾರೆ. ಅಲ್ಲದೆ; ಈಗ ಈ ರಿಯಾಯಿತಿಮರಗಳನ್ನು ಕಡಿದು ಸಾಗಿಸಿದುದರಿಂದ ಮುಂದೆ ದೊರೆಯತಕ್ಕ ಚೌಬೀನೆಮರದ ಪರಿಮಾಣವು ಇನ್ನೂ ಹೆಚ್ಚಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ಸೌದೆಯನ್ನು ಜಮಾಯಿಸುವದಕ್ಕೆ ಶುರುವಿನಲ್ಲಿ ಅಂದಾಜಾಮಾಡಿದ ದರಗಳು ಬಹಳ ಕಡಿಮೆಯೆಂಬ ಅಭಿಪ್ರಾಯ ವಿಶೇಷವಾಗಿತ್ತು; ಕಾರ್ಯತಃ ನೋಡುವಲ್ಲಿ ವೆಚ್ಚವು ಇನ್ನೂ ಕಡಮೆಯಾಗಿರುತ್ತದೆ. ಕಾರ್ಖಾನೆಯಲ್ಲಿ ತಯಾರಿಸಿದ ವಸ್ತುಗಳು ಧಾರಾಳವಾಗಿ ಮಾರಾಟವಾಗುವುದಿಲ್ಲವೆಂಬುದಾಗಿ ಕೆಲವರು ಆತಂಕಪಡುತ್ತಿದ್ದರು. ಆದರೆ ಇಲ್ಲಿನ ಪದಾರ್ಥಗಳು ಉಪಯೋಗಿಸಲ್ಪಡುವ ಕಡೆಗಳಲ್ಲೆಲ್ಲಾ—ಇಂಡಿಯಾ ದೇಶದಲ್ಲಿಯೇ ಆಗಲಿ ಅಥವಾ ವಿದೇಶಗಳಲ್ಲಿಯೇ ಆಗಲಿ—ಎಲ್ಲೆಲ್ಲಿಯೂ ಕೂಡ, ಅವು ಮೇಲಾದವು ಎಂತ ಉಪಯೋಗಿಸುವವರು ಅಭಿಪ್ರಾಯಪಡುತ್ತಿರುವುದು ಅನುಭವತಃ ಕಂಡುಬಂದಿರುತ್ತೆ. ಅದರಲ್ಲಿಯೂ ಮುಖ್ಯವಾಗಿ, ಇದ್ದಿಲಿನಿಂದ ತಯಾರಾದ ನಮ್ಮ ಕಬ್ಬಿಣವು, ಉತ್ಕೃಷ್ಟವಾದ ಕಬ್ಬಿಣವೆಂಬುದಾಗಿ ಪ್ರಸಿದ್ಧವಾಗಿದೆ.

ಬೆಲೆಗಳು ಇಳಿದುದರ ಪರಿಣಾಮ.

ಮೂರುವರುಷಗಳಕಾಲ ಕೆಲಸ ನಡೆಸಿದುದರಲ್ಲಿ 8,70,000 ರೂಪಾಯಿಗಳು ನಷ್ಟವಾಗಿವೆ, ಮತ್ತು ಇದರ ಜತೆಗೆ ಧಾರಣೆಗಳು ಇಳಿದುದರ ಸಲುವಾಗಿ ಕಬ್ಬಿಣದ ದಾಸ್ತಾನಿನ ಬೆಲೆ ಕಡಮೆಯುಯಾದುದರಿಂದ 5,16,000 ರೂಪಾಯಿಗಳು ನಷ್ಟವಾದುವು ; ಅಂತು, ಒಟ್ಟು 13,86,000 ರೂಪಾಯಿಗಳು ನಷ್ಟವಾದುವು. ಬ್ರಿಟಿಷ್ ಸಾಮ್ರಾಜ್ಯದ ಡೊಮಿನಿಯನ್‌ಗಳ ಮತ್ತು ವಿದೇಶಗಳ ಸರ್ಕಾರದವರು ಕೊಡುವ ಸಹಾಯ ದ್ರವ್ಯದಂತೆ, ಅಥವಾ (ಬೋನಸ್ಸು) ಇದನ್ನೂ ಸಹ, ನಮ್ಮ ಸರ್ಕಾರದವರಿಂದ ಕೊಡಲ್ಪಟ್ಟ ಸಹಾಯದ್ರವ್ಯವೆಂದೇ ಎಣಿಸಬಹುದಾಗಿದೆ. ಕಬ್ಬಿಣದ ಧಾರಣೆಯು ವಿಶೇಷವಾಗಿ ಇಳಿದುಹೋದುದೇ ಮೇಲ್ಕಂಡ ನಷ್ಟದಲ್ಲಿ ಹೆಚ್ಚು ಭಾಗಕ್ಕೆ ಮುಖ್ಯಕಾರಣ. ಮೈಸೂರು ಕಾರ್ಖಾನೆಗೆ ಇದೊಂದು ದೊಡ್ಡ ಕಷ್ಟವಾಗಿ ಪರಿಣಮಿಸಿತು. ಎಂದಿಗಿಂತಲೂ ಹೆಚ್ಚಾದ ತೊಂದರೆಗಳು ಕೈಗಾರಿಕೆಗೆ ಮತ್ತು ವ್ಯಾಪಾರಕ್ಕೆ ಸಂಭವಿಸಿ ಧಾರಣೆ ಇಳಿಮುಖವಾಗುವುದಕ್ಕೆ ಪ್ರಾರಂಭವಾದ ಸಮಯದಲ್ಲಿ ನಮ್ಮ ಕಾರ್ಖಾನೆಯ ಕೆಲಸವು ಆರಂಭವಾಯಿತು. 1923ನೇ ಇಸವಿಯಲ್ಲಿ ಕಬ್ಬಿಣದ (ಪಿಗ್ ಐರನ್) ಧಾರಣೆಯು ಟನ್ 1ಕ್ಕೆ 100 ರೂಪಾಯಿಗಳಾಗಿದ್ದಿತು. ಆಗಿನಿಂದಲೂ ಅದು ಒಂದೇ ಸಮವಾಗಿ ಇಳಿಯುತಾ ಇಂದಿನವರೆಗೂ ಬಂದಿದೆ; ಈಗ ಕಬ್ಬಿಣದ ನಿವ್ವಳ ಬೆಲೆಯು ಟನ್ 1ಕ್ಕೆ 45 ರೂಪಾಯಿಗಳಿಂದ 50 ರೂಪಾಯಿಗಳವರೆಗೂ ಇರುತ್ತದೆ. ಹಾಲಿ ಇರತಕ್ಕ ಬೋರ್ಡಿನವರು 1923ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಕಬ್ಬಿಣದ ಕಾರ್ಖಾನೆಯ ಮೇಲ್ವಿಚಾರಣೆಯ ಚಾರ್ಜನ್ನು ವಹಿಸಿಕೊಂಡರು. ಆಗಿನ ಧಾರಣೆಯೇ ಈಗ ಇದ್ದಪಕ್ಷದಲ್ಲಿ, ಡಿಪ್ರೀಸಿಯೇಷನ್ ಚಾರ್ಜುಗಳು ಕಳೆದು, ವರುಷವೊಂದಕ್ಕೆ ಸುಮಾರು 5 ಲಕ್ಷ ರೂಪಾಯಿಗಳು ಶೇಖರವಾಗುತ್ತಿದ್ದಿತು. ಕಬ್ಬಿಣದ ಧಾರಣೆಯು ಈರೀತಿ ಇಳಿದು ಹೋದ್ದರಿಂದ, ಬಂಗಾಳದ ಕಡೆಯಲ್ಲಿರುವ ಮೂರು ಕಬ್ಬಿಣದ ಕಾರ್ಖಾನೆಗಳು ಮತ್ತು ಪ್ರಪಂಚದ ಎಲ್ಲಾ ದೇಶಗಳಲ್ಲಿನ ಕಬ್ಬಿಣದ ಕೈಗಾರಿಕೆಗಳು ನಷ್ಟಕ್ಕೆ ಒಳಗಾಗಿರುತ್ತವೆ. 1925 ನೆಯ ಇಸವಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗೆ ಕಳೆದ ಅರ್ಧ ಶತಮಾನದಲ್ಲಿ ಎಂದೂ ಸಂಭವಿಸದೇ ಇದ್ದಂಥಾ ದುರ್ದೆಶೆಯುಂಟಾಯಿತು. ಇಂಡಿಯಾದೇಶದ ಈ ಬಗೆಯ ಇತರ ಕಾರ್ಖಾನೆಗಳು ಮತ್ತು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಇರುವ ಅನೇಕ ಕಾರ್ಖಾನೆಗಳು ಇಂಥ ದುರವಸ್ಥೆಗೇ ಈಡಾಗಿರುತ್ತವೆ. ಅನೇಕಾನೇಕ ಕಾರ್ಖಾನೆಗಳನ್ನು ಹಂಗಾಮಿಯಾಗಿ ಮುಚ್ಚಿಬಿಟ್ಟಿರುತಾರೆ. ಆಯಾ ದೇಶಗಳ ಸರ್ಕಾರದವರು ಸಹಾಯದ್ರವ್ಯಗಳನ್ನೂ, ರಕ್ಷಣಾ ತೆರಿಗೆಗಳು ಮೊದಲಾದುವುಗಳನ್ನು ದೊರಕಿಸಿರುತ್ತಿರುವದರಿಂದಲೇ ಬಾಕಿ ಕೆಲವು ಕಾರ್ಖಾನೆಗಳ ಕೆಲಸ ನಡೆಯುತಾ ಇದೆ. ಬೆಲೆಗಳು ಏರಿದಲ್ಲಿ ಅಥವಾ ಎಕ್ಸ್‌ಚೇಂಜ್ ದರಗಳು ಹಿಂದಣ ಮೂರು ವರುಷಗಳಲ್ಲಿ ಇದ್ದುದಕ್ಕಿಂತಲೂ ಹೆಚ್ಚು ಅನುಕೂಲವಾದಲ್ಲಿ, ಅಥವಾ ನಮ್ಮ ಉಪಕೈಗಾರಿಕೆಗಳಿಂದ ಲಾಭ ಬರುವುದಕ್ಕೆ ಪ್ರಾರಂಭವಾದಲ್ಲಿ ಈ ಕಾರ್ಖಾನೆಯ ಲಾಭಗಳು ವಿಶೇಷವಾಗಿ ಹೆಚ್ಚುವುವು. ನಮ್ಮ ವರಮಾನಗಳು ಹೆಚ್ಚಿದಲ್ಲಿ, ಡಿಪ್ರೀಸಿಯೇಷನ್ ಫಂಡಿಗಾಗಿ ಪ್ರತಿವರ್ಷವೂ ಸ್ವಲ್ಪ ಮೊಬಲಗನ್ನು ತೆಗೆದಿಡಬಹುದು. ಆಗ್ಗೆ ಈ ಕಾರ್ಖಾನೆಯು ಸಾರೋದ್ಧಾರವಾಗಿ ನಡೆಯುವುದೆಂದು ನಾವು ದೃಢವಾಗಿ ನಂಬಬಹುದು.

ಈಗಿನ ಸ್ಥಿತಿ.

ದೊಡ್ಡದೊಡ್ಡ ಇಂಜನಿಯರಿಂಗ್ ಕಾಮಗಾರಿಗಳು ಅಭಿವೃದ್ಧಿಸ್ಥಿತಿಗೆ ಬರುವುದಕ್ಕೆ ಸ್ವಲ್ಪ ಕಾಲವು ಹಿಡಿಯುವುದು. ಇದು ಸಹಜವೆಂಬುವದು ಚರ್ಚೆಗಳನ್ನು ನಡೆಸುವಾಗ ನೆನಪಿಗೆ ಬರುವುದಿಲ್ಲವೆಂತ ಕಾಣುತೆ. ಸಾಮಾನ್ಯವಾಗಿ ಅವು ಪ್ರಾರಂಭವಾದ 8 ಅಥವಾ 10 ವರ್ಷಗಳವರೆಗೂ ಅವುಗಳಿಂದ ಪೂರ್ತಿಯಾದ ಲಾಭವು ದೊರೆಯುವುದೆಂದು ನಿರೀಕ್ಷಿಸಲಾಗುವುದಿಲ್ಲ, ಮತ್ತು ಅನೇಕ ಉದ್ಯಮಗಳಿಂದ ಬಹುಕಾಲದವರೆಗೂ ಲಾಭವೇ ಬರುವುದಿಲ್ಲ. ಇಂಡಿಯಾದೇಶದಲ್ಲಿರುವ ಇತರ ಮೂರು ಉದ್ಯಮಗಳ ಅನುಭವವೂ ಸಹ ಇದೇ ರೀತಿಯಲ್ಲಿದೆ. ಅವಶ್ಯವಾದ ಸಿಬ್ಬಂದಿಯನ್ನು ಸರಬೇತುಮಾಡುವ ಕೆಲಸಕಾರ್ಯಗಳನ್ನು ಒಂದು ಸ್ಥಾಯಿಗೆ ತರುವುದು, ಗಿರಾಕಿಯನ್ನು ಏರ್ಪಡಿಸುವುದು ; ಇವಕ್ಕೆಲ್ಲಾ ಸಾಕಾದಷ್ಟು ಕಾಲವು ದೊರೆತು ಧಾರಣೆವಾಸಿಗಳು ಯಥಾಸ್ಥಿತಿಗೆ ಬಂದ ತರುವಾಯ ಈ ನಮ್ಮ ಉದ್ಯಮದಿಂದ ಪ್ರತಿಫಲವಿರುವುದೇ ಇಲ್ಲವೇ ಎಂಬುದನ್ನು ನಿರ್ಧರಿಸುವದು ನ್ಯಾಯ.

ಹಿಂದೇ ಸೂಚಿಸಿದಂತೆ, ಕಾರ್ಖಾನೆಯು ಇತರ ಭಾಗಗಳಲ್ಲಿ ಒಳ್ಳೇಸ್ಥಿತಿಗೆ ಬರುತಾ ಇದೆ. ಪ್ರಪಂಚದ ವ್ಯಾಪಾರವಾಣಿಜ್ಯಗಳು ಹೀನಸ್ಥಿತಿಯಲ್ಲಿರುವ ಕಾಲದಲ್ಲಿಯು ಸಹ ವರಮಾನವೂ ವೆಚ್ಚವೂ ಒಂದಕ್ಕೊಂದು ಸರಿಹೋಗುತ್ತಿರುವಂತೆ ಮಾಡಲು ನಮಗೆ ಸಾಧ್ಯವಾಗಿದೆ. ಹೀಗಿರುವಲ್ಲಿ ಈಗಿನ ಸ್ಥಿತಿಯು ಅತೃಪ್ತಿಕರವಾದುದೆಂದು ಹೇಳಲು ಅವಕಾಶವಿಲ್ಲ. ಕಾರ್ಖಾನೆಯು ಇನ್ನುಮುಂದಕ್ಕೆ ಉತ್ತಮಸ್ಥಿತಿಗೆ ಬರುವುದೆಂದು ತೋರುವುದು. ಏಕೆಂದರೆ, ಇದುವರೆಗೂ ತಗ್ಗುತ್ತಿರುವ ಬೆಲೆಗಳು ಇನ್ನೂ ಹೆಚ್ಚಾಗಿ ತಗ್ಗುವುದು ಅಸಂಭವ. ಧಾರಣೆಯು ಇಳಿಯುತ್ತಿದ್ದುದರಿಂದ, ಇದುವರೆಗೂ ಸಿಲುಕಿನ ಬೆಲೆಯನ್ನು ವರುಷ ವರುಷವೂ ಕಡಮೆಮಾಡಬೇಕಾಗಿದ್ದಿತು ; ಇನ್ನುಮುಂದೆ ಹಾಗೆ ಮಾಡಬೇಕಾದ ಅವಶ್ಯಕತೆಯಿರಲಾರದು. ನಮ್ಮ ಸಾಮಾನುಗಳಿಗೆ ಗಿರಾಕಿಯನ್ನು ದೊರಕಿಸಿಕೊಂಡಿದ್ದೇವೆ. ಈ ಸಾಲಿನ ಮೊದಲು ಆರು ತಿಂಗಳಲ್ಲಿ ತಯಾರಾದ ಕಬ್ಬಿಣವೆಲ್ಲವೂ ಪೂರ್ತಿಯಾಗಿ ವಿಕರಿಯಾಗಿದೆ. ಚಾಲ್ತಿ ಆರು ತಿಂಗಳಲ್ಲಿಯೂ ಹಾಗೆಯೇ ಮಾಡಲಾಗುವುದೆಂಬ ಭರವಸೆಯೂ ಇದೆ. ಸ್ಥಿತಿಗತಿಗಳು ಇನ್ನು ಕೆಡದೇ ಇರುವ ಪಕ್ಷದಲ್ಲಿ ಸರ್ಕಾರದವರಿಂದ ಮತ್ತೆ ಧನಸಹಾಯವನ್ನು ಪಡೆಯದೆಯೇ ಇನ್ನುಮುಂದೆ ಕಾರ್ಖಾನೆಯನ್ನು ನಡೆಸುವುದು ಸಾಧ್ಯವೆಂಬ ನಂಬಿಕೆಯು ಕಾರ್ಯನಿರ್ವಾಹಕಮಂಡಲಿಯವರಿಗೆ ಇರುತ್ತದೆ.

ಕಬ್ಬಿಣದ ತಯಾರಿಯೇ ದೇಶಕ್ಕೆ ಮುಖ್ಯಕೈಗಾರಿಕೆ; ಕೈಗಾರಿಕೆಯ ಅಭಿವೃದ್ಧಿಗೆ ಇದೇ ಅಸ್ತಿಭಾರವಾಗಿದೆ. ಆದಕಾರಣ ಸಂಸ್ಥಾನದ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳ ಜನಗಳೆಲ್ಲರೂ ಭದ್ರಾವತಿಗೆ ಬಂದು ನೋಡಿ, ಇಲ್ಲಿನ ವಾಸ್ತವ ವಿದ್ಯಮಾನಗಳನ್ನು ತಿಳಿದುಕೊಂಡು ಈಗ ಕೆಲಸ ನಡೆಯುತ್ತಿರುವುದು ತೃಪ್ತಿಕರವಾಗಿದೆಯೆಂದೂ, ಮುಂದೆ ಅಭಿವೃದ್ಧಿಗೆ ಬರುವುದೆಂದೂ ಅವರ ಮನಸ್ಸಿಗೆ ಕಂಡುಬಂದರೆ, ಈ ಉದ್ಯಮಕ್ಕೆ ಅವರ ಸಂಪೂರ್ಣ ಒತ್ತಾಸೆಯನ್ನು ಕೊಡುವರೆಂದೂ ನಂಬಿದೆ.

ಭದ್ರಾವತಿ, } (ರುಜು.) ಎಂ. ವಿಶ್ವೇಶ್ವರಯ್ಯ,
30-4-1926. } ,, ಕೆ. ಪಿ. ಪುಟ್ಟಣ್ಣಚೆಟ್ಟಿ,
,, ಜೆ. ಡಿ. ಘ್ಯಾಂಡಿ,
,, ಹಾಜಿ ಇಸ್ಮಾಯಿಲ್‌ಸೇಟ್.

ಪರಿಶಿಷ್ಟ.

ಕಾರ್ಖಾನೆಯ ಸಂಬಂಧವಾದ ವಿದ್ಯಮಾನಗಳು.

ಈ ಕಾರ್ಖಾನೆಯಲ್ಲಿ ದಿನಂಪ್ರತಿಯಲ್ಲಿಯೂ ಸುಮಾರು 57 ಟನ್ನುಗಳಷ್ಟು (ಇದ್ದಲಿನ) ಕಬ್ಬಿಣವನ್ನು ಉತ್ಪತ್ತಿಮಾಡತಕ್ಕ "ಬ್ಲಾಸ್ಟ್ ಫರ್ನೇಸ್" ಎಂಬ ಕುಲಿಮೆಯ ಯಂತ್ರವೂ ಮತ್ತು ಕ್ಯಾಲ್ಸಿಯಂ ಆಸಿಟೇಟ್, ಆಲ್ಕೋಹಾಲ್ ಮತ್ತು ವುಡ್‌ಟಾರ್ ಇವುಗಳನ್ನು ಉತ್ಪತ್ತಿಮಾಡತಕ್ಕ ಮರದ ಭಟ್ಟಿಯ ಯಂತ್ರಗಳೂ ಇರುತ್ತವೆ. ಅದುರನ್ನು ಬಾಬಾಬುಡನ್ ಬೆಟ್ಟದ ಮೇಲಿನಿಂದ ಮೂರು ಮೈಲಿಗಳ ದೂರ ತಂತಿಯ ಮಾರ್ಗದಲ್ಲು (ರೋಪ್ ವೇ) ಮತ್ತು ಆ ಬಳಿಕ 24 ಮೈಲಿಗಳ ದೂರ ಟ್ರಾಮ್‌ವೇ ಮುಖಾಂತರವು ಸಾಗಿಸಲಾಗುತ್ತದೆ. ಕಾರ್ಖಾನೆಯ ಕೆಲಸಕ್ಕಾಗಿ ಎರಡು ಅಡಿಗಳ ಅಂತರದಲ್ಲಿ ಕಂಬಿಗಳುಳ್ಳ 58 ಮೈಲಿಗಳ ಟ್ರಾಂವೇಯನ್ನು ಏರ್ಪಡಿಸಿದೆ.

ಕಾರ್ಖಾನೆಯನ್ನು ಮಂಜೂರ್ಮಾಡಿದುದು	1917-18ರಲ್ಲಿ.
"ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ, ಲಿಮಿಟೆಡ್" ಎಂಬ ಸಂಘದವರೊಡನೆ ಮಾಡಿಕೊಂಡ ಒಡಂಬಡಿಕೆಯು ಅಂಗೀಕೃತವಾದುದು	1918ನೇ ಇಸವಿ ಮೇ ತಿಂಗಳಿನಲ್ಲಿ
	ರೂಪಾಯಿಗಳು.
ಕಾರ್ಖಾನೆಯ ಏರ್ಪಾಡಿನ ವೆಚ್ಚದ ಬಗ್ಗೆ ಮೊದಲು ಹಾಕಿದ್ದ ಅಂದಾಜು	63,59,000
ಈ ಏರ್ಪಾಡಿನ ವೆಚ್ಚದ ಬಗ್ಗೆ ಆಖೈರು ಅಂದಾಜು (ಶುರುವಿನಲ್ಲಿ ಮಂಜೂರ್ಮಾಡಿದುದು)	94,00,000
ಕಟ್ಟಡದ ಕೆಲಸದಲ್ಲಿನ ಕಾಲವಿಳಂಬ ಮತ್ತು ಇತರ ಕಾರಣಗಳಿಂದ 1922ನೆ ಇಸವಿಯಲ್ಲಿ ಮಾಡಲ್ಪಟ್ಟ ಹೊಸ ಅಂದಾಜು	2,11,00,000
ಸರ್ಕಾರಿ ಇಲಾಖೆಗಳಿಂದ ತಿಳಿಸಲ್ಪಟ್ಟಿರುವಂತೆ, 1923 ನೇ ಇಸವಿ ಮಾರ್ಚಿ ತಿಂಗಳಿನವರೆಗೆ ವಸ್ತುತಃ ತಗಲಿದ ವೆಚ್ಚ	1,67,00,000
1926 ನೆ ಇಸವಿ ಮಾರ್ಚಿ ತಿಂಗಳಿನ ವರೆಗೆ ವಸ್ತುತಃ ತಗಲಿರುವ ವೆಚ್ಚ	1,81,10,000
ಹಾಲಿ ಇರುವ ಕಾರ್ಯನಿರ್ವಾಹಕಮಂಡಲಿಯನ್ನು (ಮ್ಯಾನೇಜ್ಮೆಂಟ್ ಬೋರ್ಡನ್ನು) ಏರ್ಪಡಿಸಿದುದು	1923ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ
	ರೂಪಾಯಿಗಳು.
1926ನೇ ಇಸವಿ ಮಾರ್ಚಿ 31 ನೇ ತಾರೀಖಿನವರೆಗೆ ಉಪಕೈಗಾರಿಕೆಗಳಿಗಾಗಿ ತಗಲಿದ ವೆಚ್ಚ	5,75,000
1925ನೇ ಇಸವಿ ಡಿಸೆಂಬರ್ 31ನೆ ತಾರೀಖಿನವರೆಗೆ ಕಾರ್ಖಾನೆಯನ್ನು ಶುರುಮಾಡಿ ಕೆಲಸಗಳನ್ನು ನಡೆಸಿದುದರ ಪ್ರಯುಕ್ತ ಉಂಟಾದ ಒಟ್ಟು ನಷ್ಟ	26,33,000
ಈ ಪೈಕಿ ಕಟ್ಟಡದ ಕೆಲಸವು ನಡೆಯುತ್ತಿದ್ದ ಕಾಲದಲ್ಲಿಯು ಮತ್ತು ತಯಾರಿ ಕೆಲಸವನ್ನು ಕೈಗೊಂಡ ಮೊದಲನೆ ಅರ್ಧ ವರುಷದಲ್ಲಿಯು ಆದ ನಷ್ಟ	12,47,000
ಧಾರಣೆಯು ಇಳಿದುಹೋದುದರಿಂದ ದಾಸ್ತಾನಿನ ಕಿಮ್ಮತ್ತನ್ನು ಲೆಕ್ಕದಲ್ಲಿ ಕಡಮೆಯಾಗಿ ನಮೂದಿಸಿದುದರ ಪ್ರಯುಕ್ತ ಉಂಟಾದ ನಷ್ಟ	5,16,000
1923ನೇ ಇಸವಿ ಜುಲೈ 1ನೇ ತಾರೀಖಿನ ಲಾಗಾಯಿತು 1925 ನೇ ಇಸವಿ ಡಿಸೆಂಬರ್ 31ನೇ ತಾರೀಖಿನವರೆಗೆ ಕಾರ್ಖಾನೆಯಲ್ಲಿ ಕೆಲಸಗಳನ್ನು ನಡೆಸಿದುದರಲ್ಲಿ ಉಂಟಾದ ನಷ್ಟ	8,70,000

೧೯೨೬ ನೆಯ ಇಸವಿ ಮೇ ತಾ|| ೨೨ ರಿಂದ ೧೯೨೬ ನೆಯ ಇಸವಿ ಮೇ ತಾ|| ೨೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯ ನಾಮಸಂವತ್ಸರದ ವೈಶಾಖ ಶುದ್ಧ ದಶಮಿ ವೈಶಾಖ ಬಹುಳ ಪಾಡ್ಯಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
22	ಶನಿ	ದಶ	20-39	ಉತ್ತ	32-28	9
23	ಭಾನು	ಏಕಾ	24-27	ಹಸ್ತ	37-32	10
24	¹ಸೋಮ	ದ್ವಾದ	27-8	ಚಿತ್ತ	41-44	11
25	ಮಂಗಳ	ತ್ರಯೋ	28-36	ಸ್ವಾತಿ	44-32	12
26	ಬುಧ	ಚತು	28-45	ವಿಶಾ	46-8	13
27	ಗುರು	ಪೌರ್ಣ	27-40	ಅನೂ	46-35	14
28	²ಶುಕ್ರ	ಪಾಡ್ಯ	25-1	ಜ್ಯೇಷ್ಠ	45-45	15

(1) ಮಳೆನಕ್ಷತ್ರ-ರೋಹಿಣಿ ೧ ನೆಯ ಪಾದ, ಸೋಮಪ್ರದೋಷ.
(2) ಮಳೆನಕ್ಷತ್ರ-ರೋಹಿಣಿ ೨ ನೆಯ ಪಾದ.

ಮೈಸೂರು: ಕೈ. ಜಿಯಾಣಾಶ್ವಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕಳ್ತಾವತಾರಾ ಪಕ್ಷಿಷ್ಟನಕ್ಷತ್ರ ಶೋಭರಾಜೀಜಾಟ್ |
ಶ್ರೀಮತ್ಕೃಷ್ಣನೃಪಾಲನುತ್ತಮಳಶಾಲೋಲಂಸುಧೀಪುಂಗವ | ಸ್ತೋತ್ರೀಮಾಧೀಶ್ವದಶೀಲ ಸಾಕಲಿತ ಸಾಮ್ರಾಜ್ಯಾಲವಾಲಂವಲಂ |
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾತಾಳುಲಂ | ಪ್ರೇಮಂಬೆತ್ತಿಕಿಯಂಶವಾಪುರಿಗೆ ಗೌರೀಶಾನುಕಂಪೋಜ್ವಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸಕ ೧೯೨೬ ನೆಯ ಇಸವಿ ಮೇ ತಾರೀಖು ೨೯ ನೆಯ ಶನಿವಾರ. [ಸಂಚಿಕೆ ೨೨

REGISTERED NO. M. 124.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣವಿಲ್ಲದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
21

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರ್ಯಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರ್ಯಾಂಚ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦ ; ಅನಂತರ ಪ್ರತಿ ೧೦೦ ಕ್ಕೂ ೦—೧೦—೦ ; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦-೧೨-೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

! ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಕ್ಷೇಮಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೬೧—33] ಪೋ. ಬಾ. ೫೧೦. ಮದರಾಸು

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗ್ಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[10-7] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಇಮಿಟೇಷನ್ ರೇಶ್ಮೆಸೀರೆಗಳು.

ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪನಿಯವರಿಂದ ತಯಾರಿಸಿದ್ದು. 17 ಮೊಳ ಉದ್ದವೂ 2½ ಮೊಳ ಅಗಲವೂ ಇರುವದು. ಈ ಸೀರೆಗಳಿಗೆ ಅಂದವಾದ ಅಂಚೂ, ಸುಂದರವಾದ ಸಾಚಾರೇಷ್ಮೆಯ ಸೆರಗೂ ಇರುವದು. ಇವು ಯಾವಾಗಲೂ ರೇಶ್ಮೆಯಂತೆಯೇ ಇರುವುವು. ಇವುಗಳ ಬಣ್ಣವು ಬೇಗನೆ ಕೆಡದು. ಪ್ರತಿಯೊಬ್ಬರೂ ಉಡಲಿಕ್ಕೆ ಬಹು ಲಾಯಖಾದವು.

ಕ್ರಯ ನಂ. 1 10—8—0.
ನಂ. 2 8—8—0.
ನಂ. 3 7—8—0.

ವಿಳಾಸ—ಎಂ. ಬೆಸ್ಟ್ ಅಂಡ್‌ಕೊ,
4—2 ನಂ. 504, ಪಾರ್ಕ್‌ಟೌನ್, ಮದರಾಸು.

ಆಯುರ್ವೇದ ಸುಲಭಚಿಕಿತ್ಸೆಗಳು.

ರಾಜಧಾನಿಯಲ್ಲಿರುವ ಸರ್ಕಾರೀ ಆಯುರ್ವೇದವೈದ್ಯಶಾಲೆಯಲ್ಲಿ ತಯಾರಿಸಿ ನಿತ್ಯವೂ ಉಪಯೋಗಿಸಲ್ಪಡುವ ಔಷಧಗಳಲ್ಲಿ ಕೆಲವು ಸ್ಟಾರ್ ಪತ್ರಿಕಾ ವಾಚಕರ ಉಪಯೋಗಾರ್ಥವಾಗಿ ಈ ಕೆಳಗೆ ಕೊಡಲ್ಪಟ್ಟಿವೆ.—

ರಾಸ್ನಾದಿಚೂರ್ಣ.

ರಾಸ್ನೆ
ಗಂಟುಭಾರಂಗಿ
ಚವ್ಯ
ಅತಿಬಜೆ
ಲವಂಗಚಕ್ಕೆ
ಲವಂಗಪತ್ರೆ
ನಾಗಕೇಸರಿ
ಯಾಲಕ್ಕಿ

ಮೋಡಿ
ಲವಂಗ
ಹಿಪ್ಪಲೀ
ಮೆಣಸು
ಕಟುಕರೋಹಿಣೀ
ರೇಣುಕಬೀಜ
ಜಟಾಮಾಂಸೀ
ಮಂಜಿಷ್ಠ

ಅತಿಮಧುರ
ತಾಳೀಸಪತ್ರೆ
ಜಾಜಿಕಾಯಿ
ಕಚೋರ
ದ್ರಾಕ್ಷಿ
ಲಾಮಂಚ
ಕೊತ್ತುಂಬರಿ
ಶುಂಠಿ

ಇವೆಲ್ಲವನ್ನೂ ಸಮಾಂಶವಾಗಿ ಚೂರ್ಣಿಸಿ ವಸ್ತ್ರಗಾಳಿತಮಾಡಿ ಇದರ ಅರ್ಧ ಶುದ್ಧಿಮಾಡಿದ ಹಿರೇಮದ್ದಿನಚೂರ್ಣವನ್ನು ಸೇರಿಸಿ ಎಲ್ಲರಸಮ ಸಕ್ಕರೆಸೇರಿಸಿ | ರಿಂದ || ತೊಲದಷ್ಟು ಉಪಯೋಗಿಸಿದರೆ ಕಾಸ, ಶ್ವಾಸ, ಅಗ್ನಿಮಾಂದ್ಯ, ಕ್ಷಯ, ದೌರ್ಬಲ್ಯ ಇವುಗಳು ಪರಿಹಾರವಾಗುವುವು.

ಜಾತೀಫಲಾದಿಚೂರ್ಣ.

ಜಾಜಿಕಾಯಿ ೨
ವಾಯುವಿಳಂಗ ೨
ಚಿತ್ರಮೂಲದಬೇರು ೨
ಗ್ರಂಥಿಕತಗರ ೨
ಎಳ್ಳು ೨
ತಾಳೀಸಪತ್ರೆ ೨
ರಕ್ತಚಂದನ ೨
ಶುಂಠಿ ೨
ಲವಂಗ ೨
ಜೀರಿಗೆ ೨

ಪಚ್ಚಕರ್ಪೂರ ೨
ಅಳಲೇಕಾಯಿ ೨
ತಾರೇಕಾಯಿ ೨
ಮೆಣಸು ೨
ಹಿಪ್ಪಲಿ ೨
ಬಿದರುಪ್ಪು ೨
ದಾಲಚಿನ್ನಿ ೨
ಏಲಕ್ಕಿ ೨
ತೇಜಪತ್ರೆ ೨
ನಾಗಕೇಸರಿ ೨

ಭೃಂಗರಾಜಚೂರ್ಣ ೫೬ ತೊಲ, ಸಕ್ಕರೆ ೯೬ ತೊಲ ಎಲ್ಲವನ್ನೂ ಚೂರ್ಣಿಸಿ ೧ನೇ ಒಂದು ತೊಲಾದಿಂದ || ತೊಲದ ವರಿವಿಗೆ ಸೇವಿಸಿದರೆ ಬಲಹೀನತೆ, ಚರ್ಮರೋಗಗಳು, ಕ್ಷಯ, ಶ್ವಾಸ, ಕಾಸ, ಪಾಂಡು, ಕಾಮಾಲೆ ಈ ರೋಗಗಳು ಪರಿಹಾರವಾಗುವುವು.

ಕುಸ್ತ್ಯಾನುಗಚೂರ್ಣ.

ಅಗಳುಶುಂಠಿ
ನೇರಳೇಬೀಜ
ಮಾವಿನಬೀಜದತಿರುಳು
ಬಿಳೀಹಿಂಡಿ
ರಸಾಂಜನ
ಬೂರಗದಗೋಂದು
ಮಂಜಿಷ್ಠೆ
ಕೊಡಸೀಗೆಬೀಜ
ಹಿಂಗು
ಅತಿಬಜೆ
ಬಿಲ್ವದಹಣ್ಣು
ಕೊಪ್ಪಾಕಿಗೆಟ್ಟು

ಲೋಧ್ರದಚೆಕ್ಕೆ
ಕಾವಿಕಲ್ಲು
ಶಿವನಿಚೆಕ್ಕೆ
ಮೆಣಸು
ಶುಂಠಿ
ದ್ರಾಕ್ಷಿ
ರಕ್ತಚಂದನ
ಹೆಮ್ಮರದಚೆಕ್ಕೆ
ಕೊಡಸೀಗೆಚೆಕ್ಕೆ
ಕುರುಬಸಾರೀರು
ಧಾತಕೀಕುಸುಮ
ಅತಿಮಧುರ

ಮುತ್ತುಗ

ಇವೆಲ್ಲವನ್ನೂ ಸಮವಾಗಿ ಚೂರ್ಣಿಸಿ [illegible] ಅಕ್ಕಿತೊಳೆದ ನೀರಿನಿಂದಾಗಲೀ [illegible] ದೋಷ, ರಕ್ತದೋಷ, ಅತ್ಯಗ್ಗಳ ಮುಂತಾದ [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಮೇ ತಾ|| ೨೯ ನೆಯ ಶನಿವಾರ.

THE MYSORE DISTRICT CONFERENCE.

The Mysore District Conference opened its session on Monday the 24th instant and has had a five days' programme togo through. It may seem a very long one in comparison with the duration of the conferences in other districts. Besides the usual conferences dealing with agriculture, co-operation, industries and education, they have had sericulture, irrigation, arboriculture, panchayet, municipality and health to deal with. The programme doubtless is a very ambitious one but the full effect of the efforts will be lost owing to the natural thinning of the audience as the days pass, with the result that though the deliberations are useful in character there will not be enough people to take advantage of them. We would urge a reduction in the number of days and grouping together of subjects. For instance we do not think that there should be separate conferences for panchayets and municipalities. Likewise agriculture and arboricalture could go together. Irrigation could go with the major and minor wants. Further, instead of having conferences only in the afternoons as per present arrangement they could have them both in the mornings and afternoons. This will have the additional advantage of saving the lunch which forms a big item in the budget for the conference. This may also be the reason why the Government cancelled the provision for lunch this time. What is more, those who have the benefit of the lunch are mostly local gentlemen to whom it is not so much intended. We should also say that the delegates have to be taken much greater into co-operation in the discussions, from which point of view the last year's conference was better. We do not deny that the need for getting through the heavy agenda does not permit of greater opportunities for the expression of the opinion of the delegates from the mofussil. We should say that on the whole the conferences were successful and a splendid programme of work in all the different diroctions of the district activities has been got up for the ensuing year. It was move in the right direction to have had a separate sericulture conference, for, we learn that two-thirds of Indian silk is produced in Mysore and Mysore District produces three-fourths of the silk in the whole of Mysore. We notice a growing enthusiasm evinced by the ryots in the industry and we hope that strenuous efforts will be made to bring home the results of the experiments in the department to the people engaged in the industry. It was interesting to see the troop of workers of the Chennapatna Silk Form rendering into a dancing tune the whole history of the silk worm and its achievements. The Panchayet Conference was a useful one, but though good in itself was unfortunately not so well attended as it ought to have been. It would doubtless help in focussing the questions affecting the welfare and progress of the villages. The conference is also indebted to the President and the Board for drawing its attention particularly to true cultivation which includes the planting of avenue trees, the development of village forests and planting of trees for manure in all wet-land areas. The idea has been there, but to concentrate efforts in that direction is no doubt a commendable object and we trust that the District Board will be able to achieve something tangible in this direction with the help of the Forest and Horticulture Departments. Not the least important activity of the District Conference has been the getting up of an exhibition which for variety and number is quite good. That it is becoming increasingly popular is evidenced by the large number of visitors who have attended it inspite of a fee of one anna. We would only hope that they will comprise more of the special industries of the District than of the general exhibits. There have been a large number of prizes awarded to various sections, sericulture, agriculture, education, industries and also to the persons who rendered help during the floods in the District. These prizes no doubt would have a very healthy effect in rousing the spirit of emulation, and we trust that the institution of the prizes will be made aware to the various bodies and persons concerned in time, so that they may all prepare themselves to enter the competitions. We should say that with the reduction of the number of days and avoiding the diffusion of activity and concentrating on a few important matters would be productive of much good. The District Conference is the one means of focussing the mind of the public on the various activities of the district and we would like as many of the rural people taking advantage of it as possible. The organisers of the Conference have bestowed a great deal of thought and labour on the Conference and they need to be congratulated. We hope that with some of these necessary reforms the Conference will be able to grow in its popularity and usefulness.

ಮೈಸೂರಿನಲ್ಲಿ ವಿದ್ಯಾಭ್ಯಾಸ.

1924-25ನೆಯ ವರ್ಷದಲ್ಲಿ ನಮ್ಮ ಸಂಸ್ಥಾನದ ವಿದ್ಯಾಶಾಖೆಯವರಿಂದ ನಡೆಯಿಸಲ್ಪಟ್ಟಿರುವ ಕಾರ್ಯಕಲಾಪಗಳ ವರದಿಯ ಒಂದು ಪ್ರತಿಯು ನಮ್ಮ ಹಸ್ತಗತವಾಗಿರುತ್ತದೆ. ಈ ವರದಿಯನ್ನು ಆದ್ಯಂತವಾಗಿ ನೋಡಿದಲ್ಲಿ ಅನೇಕ ಸ್ವಾರಸ್ಯವಾದ ವಿಷಯಗಳು ಗೋಚರಿಸುತ್ತವೆ. ಮೇಲ್ವಿಚಾರಣಾಧಿಕಾರಿಗಳ ಸಂಚಾರವು ತೃಪ್ತಿಕರವಾಗಿ ನಡೆದಿಲ್ಲವೆಂದು ಸರ್ಕಾರದವರು ಆಕ್ಷೇಪಿಸಿರುತ್ತಾರೆ. ಮೈಸೂರು ಸೀಮೆಯಲ್ಲಿ ಪ್ರಾಯಶಃ ಪ್ರತಿಯೊಂದು ಗ್ರಾಮಕ್ಕೂ ಬಸ್ಸುಗಳ ತಿರುಗಾಟದ ಸೌಲಭ್ಯವಿರುವ ಈ ಕಾಲದಲ್ಲಿ ಮೇಲ್ವಿಚಾರಣಾಧಿಕಾರಿಗಳು ಸಾಕಷ್ಟು ಸಂಚಾರಮಾಡದಿರುವುದು ಶೋಚನೀಯವೂ ಅಕ್ಷಮ್ಯವೂ ಆದುದೇ ಸರಿ. ಈ ವರದಿಯಾಗಿರುವ ವರ್ಷದಲ್ಲಿ ಸರ್ಕಾರಿಯ ಮತ್ತು ಖಾಸಗಿ ಪಾಠಶಾಲೆಗಳ ಸಂಖ್ಯೆಯು 9084 ರಿಂದ 8002 ಕ್ಕಿಳಿದಿತಾದರೂ ಓದುವವರ ಸಂಖ್ಯೆಯು ಮಾತ್ರ 3,03,092 ರಿಂದ 3,06,195 ಕ್ಕೇರಿತು. ಹೀಗೆ ಪಾಠಶಾಲೆಗಳ ಸಂಖ್ಯೆಯು ಕಡಮೆಯಾಗಲು, ಸರ್ಕಾರೀಗ್ರಾಂಟನ್ನು ಪಡೆಯುತ್ತಿದ್ದ ಅನೇಕ ಗ್ರಾಮಪಾಠಶಾಲೆಗಳು ಮತ್ತು ದೊಡ್ಡವರ ರಾತ್ರಿಪಾಠಶಾಲೆಗಳು ನಿರಂತರವಾಗಿ ಮುಚ್ಚಲ್ಪಟ್ಟುದುದೇ ಕಾರಣವೆಂದು ಹೇಳಲ್ಪಟ್ಟಿದೆ. ಈ ಸರ್ಕಾರಿಯ ಸಹಾಯವನ್ನು ಪಡೆಯುತ್ತಿರುವ ಪಾಠಶಾಲೆಗಳಲ್ಲಿ ಅನೇಕ ಶಾಲೆಗಳು ನಾಮಮಾತ್ರಕ್ಕಿದ್ದು ಅವುಗಳ ಉಪಾಧ್ಯಾಯರು ಸಂಬಳದ ದಿವಸಮಾತ್ರ ಮುಖತೋರಿಸುತ್ತಾರಾಗಿ ಅವುಗಳಿಂದ ಉಪಾಧ್ಯಾಯರುಗಳ ವಿನಾ ಇತರರಿಗೆ ಯಾವ ಪ್ರಯೋಜನವೂ ಇಲ್ಲದೆ ವೃಥಾ ಬಹುದುಡ್ಡು ಹಾಳಾಗುತ್ತದೆಂದು ನಾವು ಅನೇಕ ಸಂದರ್ಭದಲ್ಲಿ ಹೇಳಿಯೇ ಇರುತ್ತೇವೆ. ''ಗ್ರಾಮಸ್ಥನ ಅಭಿಪ್ರಾಯ'' ವೆಂದು ಒಂದು ಲೇಖವು ಡೇಲಿಪೋಸ್ಟ್ ಆಂಗ್ಲಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಗ್ರಾಮಸ್ಥರು ವಿದ್ಯಾಭಿವೃದ್ಧಿ ವಿಚಾರವಾಗಿ ತಮ್ಮಭಿಪ್ರಾಯವನ್ನು ಹೇಳುವಾಗ್ಗೆ ತಪ್ಪು ಸಂಖ್ಯೆಯನ್ನೂ ಭಯಂಕರ ಪರಿಣಾಮವನ್ನೂ ತಿಳಿಸಿರುವರು. ಪಾಠಶಾಲೆಗೆ ಹೋಗುವ ವಯಸ್ಸಿನ ಪ್ರತಿ 100 ಮಕ್ಕಳುಗಳಲ್ಲಿ 69 ರಷ್ಟು ಮಕ್ಕಳು ಪಾಠಶಾಲೆಗಳಿಗೆ ಹೋಗುತ್ತಿರುವುವೆಂದು ಹೇಳಿರುತ್ತಾರೆ. ವಾಸ್ತವವಾಗಿ ಇದರಲ್ಲಿ ಅರ್ಧದಷ್ಟು ಮಕ್ಕಳು ಸ್ಕೂಲಿಗೆ ಹೋಗುತ್ತಿರುವುದರಿಂದ ವಿದ್ಯಾಭ್ಯಾಸವಿಚಾರದಲ್ಲಿ ಮುಂಬರಿದಿರುವ ಕೊಚ್ಚಿನ್, ಟ್ರಾವನ್ಕೂರು, ಬರೋಡ ಮೊದಲಾದ ಸಂಸ್ಥಾನಗಳ ಕೂಡ ಹೋಲಿಸಲ್ಪಡಲಾಗುವುದಿಲ್ಲ. ಸ್ಕೂಲಿಗೆ ಹೋಗುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಮುಕ್ಕಾಲುಭಾಗ ಅಂದರೆ 3 ಲಕ್ಷ ಚಿಲ್ಲರೆ ವಿದ್ಯಾರ್ಥಿಗಳಲ್ಲಿ 2¼ ಲಕ್ಷದವರೆಗಿರುವ ಕೈಗಾರಿಕೆ, ಬೇಸಾಯ, ವ್ಯಾಪಾರಗಾರರ ಮಕ್ಕಳು ಬರೇ ಪಾಂಡಿತ್ಯದ ವಿದ್ಯಾಭ್ಯಾಸ ಮಾಡಿಸಲ್ಪಡುತ್ತಿರುವುದರಿಂದ ಮಹಾ ಅನರ್ಥವಾಗುತ್ತದೆಂದು ಹೇಳಿರುತ್ತಾರೆ. ವಿದ್ಯಾವಂತರ ಅಥವಾ ಕಸಬುದಾರರಲ್ಲದವರ ವರ್ಗಕ್ಕೆ ಸೇರಿದ ಕಾಲುಭಾಗದ ವಿದ್ಯಾರ್ಥಿಗಳಿಗೆ ಕಸಬುದಾರಿ ಮಕ್ಕಳಿಗೆ ಕಲಿಸಲ್ಪಡುತ್ತಿರುವ ರೀತಿಯಲ್ಲೇ ವಿದ್ಯಾಭ್ಯಾಸವು ನಡೆಯುತ್ತಿದ್ದರೂ ಆ ವಿಚಾರದಲ್ಲಿ ಈ ಗ್ರಾಮಸ್ಥರು ಯಾವ ಭಯವನ್ನೂ ತೋರಿಸಿಲ್ಲವು. ಕಸಬುದಾರಿವರ್ಗಗಳ 2¼ ಲಕ್ಷ ಯುವಕರು 10 ವರ್ಷ ಕಾಲಾನಂತರ ವಿದ್ಯಾಭ್ಯಾಸವನ್ನು ಬಿಟ್ಟು ಪಟ್ಟಣಗಳಲ್ಲಿ ನಿಂತು ಜೀವನವನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ತಮ್ಮ ತಾರುಣ್ಯದಲ್ಲಿ ಪೂರ್ವಿಕರ ಜನ್ಮಸ್ಥಲವನ್ನು ದೂರೀಕರಿಸಿ ಪರಿಮಿತವಾದ ಸರ್ಕಾರಿಯುದ್ಯೋಗಕ್ಕೆ ಸೇರಿ ಅಭಿವೃದ್ಧಿಯನ್ನು ಹೊಂದಲು ಪ್ರಯತ್ನಿಸುವರು. ಇದರಿಂದ ಇನ್ನು ಅರ್ಧ ಶತಮಾನದಲ್ಲಿ ಇವರ ಸಂಖ್ಯೆಯು 5 ರಷ್ಟು ಹೆಚ್ಚುವುದೆಂದೂ, ಕಸಬುದಾರನು ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಕೈಯಲ್ಲಿದ್ದುದನ್ನೆಲ್ಲಾ ಕಳೆದುಕೊಂಡು, ದರ್ಜಿಯವನಿಗೂ, ಸಿಗರೇಟಿನಂಗಡಿಗೂ, ಇತರ ಸ್ವಂತವೆಚ್ಚಕ್ಕೂ ಸಾಲದಷ್ಟು ವರಮಾನವುಳ್ಳ ತನ್ನ ಮಗನು ಪಟ್ಟಣದಲ್ಲಿ ಕೊರಳಿನಪಟ್ಟಿ ಮೊದಲಾದವುಗಳಿಂದಲಂಕೃತನಾಗಿ ಬೀದಿಗಳಲ್ಲಿ ವಿಜೃಂಭಿಸುತ್ತಿರುವುದನ್ನೂ, ತನ್ನ ಹೊಲಗದ್ದೆಯನ್ನು ಟೆನಿಸ್ ಕ್ರಿಕೆಟ್ ಮೊದಲಾದ ಆಟಗಳಿಗೆ ಸ್ಥಳವನ್ನಾಗಿ ಮಾಡುವುದನ್ನೂ ನೋಡಿ ಸಂಕಟಪಡಬೇಕಾಗಿರುತ್ತದೆಂದು ಈ ಗ್ರಾಮಸ್ಥರು ಬರೆದಿರುತ್ತಾರೆ. ವರ್ತಮಾನಪತ್ರಿಕೆಗಳಲ್ಲಿ ಬರೆಯುವಾಗ್ಗೆ ಕೊಂಚ ಅತಿಶಯೋಕ್ತಿಯಿರುವುದು ಸಾಮಾನ್ಯವಾದುದಾದರೂ ಈ ಗ್ರಾಮಸ್ಥನಾಮಾಂಕಿತರು ತೋರಿಸಿರುವ ಭಯೋತ್ಪಾದನಕ್ಕೆ ಆಸ್ಪದವಿಲ್ಲವಾದುದರಿಂದ ಇವರಿಗೆ ಗ್ರಾಮದ ಅನುಭವವೇ ಇಲ್ಲವೆಂದು ಹೇಳುತ್ತೇವೆ. ಇವರು ಹೇಳುವ 3 ಲಕ್ಷವು ಎಲ್ಲ ತರಗತಿಗಳಲ್ಲೂ ಓದುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಾಗಿರುತ್ತದೆ. ಹತ್ತುವರ್ಷಕಾಲದ ವಿದ್ಯಾಭ್ಯಾಸಾನಂತರ 2¼ ಲಕ್ಷದಲ್ಲಿ 2438 ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹೋಗಿ ಅವರಲ್ಲಿ ಅರ್ಧವು ಕೂಡ ಕಾಲೇಜ್ ತರಗತಿಗಳಿಗೆ ಉತ್ತೀರ್ಣರಾಗಿಹೋಗುವುದು ದುರ್ಲಭವಾಗಿರುತ್ತದೆ. ಹೀಗೆ ಹೈಸ್ಕೂಲಿನಿಂದ ಉತ್ತೀರ್ಣರಾಗಿ ಹೋಗುವಂತಹ 1000 ವಿದ್ಯಾರ್ಥಿಗಳು ನಮ್ಮ ದೇಶದ ಗ್ರಾಮಗಳ ಆರ್ಥಿಕ ಸ್ಥಿತಿಯನ್ನು ತಲೆಕೆಳಗೆ ಮಾಡಲಾಪರೆ? ಇವರೆಲ್ಲರೂ ಸ್ವಗ್ರಾಮಗಳಿಗೆ ಹಿಂದಿರುಗಿ ಬಂದು ತಮ್ಮ ಕಸಬುದಾರಿಜೀವನೋಪಾಯವನ್ನು ಕೈಕೊಳ್ಳದೆಬಿಟ್ಟುಬಿಡುವರೆ? ಅನೇಕ ಹುಡುಗರು ಸಣ್ಣ ತರಗತಿಗಳಲ್ಲಿರುವಾಗಲೇ ವ್ಯಾಸಂಗವನ್ನು ಬಿಟ್ಟು ಸ್ವಸ್ಥಳಗಳಿಗೆ ಬಂದು ತಮ್ಮ ನಿರುಪಾಧಿಕವಾದ ವೃತ್ತಿಯನ್ನು ಕೈಕೊಳ್ಳುವವರಾಗಿರುವರು. ಇಷ್ಟೇಕೆ, ವಿದ್ಯಾವಂತವರ್ಗಕ್ಕೆ ಸೇರಿದವರಲ್ಲಿ ಅನೇಕರು ವ್ಯಾಸಂಗಪೂರೈಸಿದಮೇಲೆ ವ್ಯಾಪಾರ, ಬೇಸಾಯ ಮತ್ತು ಕೈಗಾರಿಕೆಯುದ್ಯೋಗನಿರತರಾಗುತ್ತಿರುವುದನ್ನು ನೋಡುತ್ತಿದ್ದೇವೆ. ಅಂತಹುದರಲ್ಲಿ ಕಸಬುದಾರಿ ಜನರ ಮಕ್ಕಳು ತಮ್ಮ ಕುಲಕಸಬನ್ನು ಕೈಕೊಳ್ಳುವುದಿಲ್ಲವೆಂದು ಹೇಳಲು ಕಾರಣವೇ ಇಲ್ಲವು. ವಿದ್ಯಾರ್ಥಿಗಳು ತಾವು ಅನುಸರಿಸಬೇಕಾದ ವೃತ್ತಿಯನ್ನು ನಿರ್ಧರಿಸುವುದರಲ್ಲಿ ಮೊದಲು ಕೊಂಚ ತೊಂದರೆಯುಂಟಾಗಬಹುದಾದರೂ ಅದು ಅನಂತರ ತನ್ನಷ್ಟಕ್ಕೆ ತಾನೇ ಸರಿಹೋಗುವುದು. ವಿದ್ಯಾವಂತರಾದ ಗ್ರಾಮಸ್ಥರು ತಮ್ಮ ಕುಲಕಸಬನ್ನು ಬಿಡುವುದರಿಂದ ಯಾವ ಫಲಪ್ರಾಪ್ತವಾಗುತ್ತದೆಂದು ಗ್ರಾಮಸ್ಥನಾಮಾಂಕಿತರು ಹೇಳುತ್ತಾರೋ. ಒಂದು ಕುಟುಂಬದಲ್ಲಿ 5 ಮಕ್ಕಳೂ 10 ಎಕರೆ ಭೂಮಿಯನ್ನು ತಲೆಗೆ ಎರಡು ಎಕರೆಯಂತೆ ಹಂಚಿಕೊಂಡು ತಮ್ಮ ಜೀವನವನ್ನು ಹೊರೆಯುವುದಾದರೆ ಅದೇ ಫಲಪ್ರಾಪ್ತವಾಗುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಹೀಗೆ ಹೇಳುವುದರಿಂದ ಮಕ್ಕಳ ಅಭಿರುಚಿಗೂ, ಅವಶ್ಯಕತೆಗೂ ತಕ್ಕ ವಿದ್ಯಾಭ್ಯಾಸಮಾಡಿಸಕೂಡದೆಂಬುದು ನಮ್ಮ ತಾತ್ಪರ್ಯವೆಂಬುದಾಗಿ ಭಾವಿಸಬಾರದು. ನಿಜವಾಗಿ ಅಂತಹ ವಿದ್ಯಾಭ್ಯಾಸವನ್ನೇ ನಮ್ಮ ಮಕ್ಕಳಿಗೆ ಮಾಡಿಸಬೇಕೆಂದು ನಾವು ಮೊದಲಿಂದಲೂ ಹೋರಾಡುತ್ತಿದ್ದೇವೆ. ಆದರೆ ಈಗಿನ ವಿದ್ಯಾಭ್ಯಾಸಕ್ರಮದಿಂದ ಗ್ರಾಮಸ್ಥನಾಮಾಂಕಿತರು ಹೇಳುವರೀತಿಯಲ್ಲಿ ಖಂಡಿತವಾಗಿ ಕೆಡಕಾಗುತ್ತದೆಂದು ನಾವು ಹೇಳಲಾರೆವು. ವಿದ್ಯೆಯೇ ಇಲ್ಲದಿರುವುದಕ್ಕಿಂತ ಯಾವ ವಿದ್ಯೆಯನ್ನಾದರೂ ಕಲಿಯುವುದು ಆವಶ್ಯಕವೆಂಬುದು ನಮ್ಮಭಿಪ್ರಾಯವು. ಅಜ್ಞಾನವೇ ಮನುಷ್ಯನ ಅಭಿವೃದ್ಧಿಗೆ ದೊಡ್ಡ ಆತಂಕವಾಗಿರುವುದರಿಂದ ಮನುಷ್ಯನಿಗೆ ತಕ್ಕಮಟ್ಟಿಗೆ ಜ್ಞಾನೋದಯವಾಗಿ ಅದರಿಂದ ಸುಖಸಾಧನೆಯಾಗುವಂತಹ ವಿದ್ಯೆಯು ಅತ್ಯಾವಶ್ಯಕವಾಗಿರುವುದು. ಗ್ರಾಮಸ್ಥನಾಮಾಂಕಿತರು ಹೇಳುವರೀತಿ ವಿದ್ಯಾಭ್ಯಾಸವನ್ನು ಮಾಡಿಸುವುದಾದರೆ ಗ್ರಾಮನಿವಾಸಿಗಳಿಗೆ ಮಹಾನರ್ಥವುಂಟಾಗುತ್ತಾದುದರಿಂದ ನಾವು ಇಷ್ಟುದೂರ ಪ್ರಸ್ತಾವಿಸಬೇಕಾಗಿಬಂದಿತು. ಗ್ರಾಮಸ್ಥರು ಈಗತಾನೆ ವಿದ್ಯಾಪ್ರಯೋಜನದ ಕಡೆಗೆ ಕಣ್ಣನ್ನು ಬಿಡುತ್ತಿರುವುದರಿಂದ, ಗ್ರಾಮದ ನಿಜಸ್ಥಿತಿಯನ್ನು ತಿಳಿಯದಿರುವವರ ಊಹಾಪೋಹವಿಚಾರಗಳಿಗೆ ಗಮನಕೊಡುವುದು ಶ್ರೇಯಸ್ಕರವಲ್ಲವು. ಈಗಣ ವಿದ್ಯಾಭ್ಯಾಸಕ್ರಮದಲ್ಲಿ ಇನ್ನೂ ಕೊರತೆಯಿರುವುದಾದರೂ, ಅದರಿಂದ ಎಷ್ಟೋ ಅಗೋಚರವಾದ ಗ್ರಾಮಗಳು ಪ್ರಖ್ಯಾತಿಗೆ ಬಂದಿರುವುವೆಂಬುದಕ್ಕೆ ಗುಂಡ್ಲುಪೇಟೆ ತಾ|| ಕಬ್ಬಳ್ಳಿಯೂ, ಚೆನ್ನರಾಯಪಟ್ಟಣ ತಾ|| ಕಾಂತರಾಜಪುರವೂ ನಿದರ್ಶನಗಳಾಗಿವೆ. ಯಾವ ದೇಶದಲ್ಲಿ ಸಾಮಾನ್ಯಜನರೂ ವಿದ್ಯಾವಂತರಾಗಿರುವರೋ ಆ ದೇಶದಲ್ಲಿ ಕೈಗಾರಿಕೆಯೂ, ವ್ಯಾಪಾರವೂ ಅಭಿವೃದ್ಧಿಯಾಗಿರುತ್ತವೆಂಬುದನ್ನು ನಾವು ಮರೆಯಲಾಗದು.

ಮಹಮ್ಮದೀಯರಲ್ಲಿ ಅಷ್ಟೇನೂ ವಿದ್ಯಾಭಿವೃದ್ಧಿಯಾಗಿರುವುದಿಲ್ಲ. ನಿಮ್ನಜನರ ವಿದ್ಯಾಭಿವೃದ್ಧಿಯು ಚೆನ್ನಾಗಿರುತ್ತದೆ. ಈ ವಿದ್ಯಾರ್ಥಿಗಳ ಲೋವರ್‌ಸೆಕಂಡರೀಪರೀಕ್ಷೆಯ ಫಲಿತಾಂಶವು ಅತ್ಯಂತ ಸಮರ್ಪಕವಾಗಿರುತ್ತದೆ. ಬಾಲಕ, ಬಾಲಿಕಾ ಮತ್ತು ಉರುದು ಪಾಠಶಾಲೆಗಳ ಮೇಲ್ವಿಚಾರಣೆಗಾಗಿ ಬೇರೆಬೇರೆ ಜನರು ನಿಯಮಿಸಲ್ಪಟ್ಟಿರುವುದರಿಂದ ಒಟ್ಟಿನಲ್ಲಿ ಪಾಠಶಾಲೆಗಳ ಮೇಲ್ವಿಚಾರಣೆಯು ಸಮರ್ಪಕವಾಗಿ ನಡೆಯದಿರಲು ಕಾರಣವಾಗಿರುವುದಾದಕಾರಣ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಆಯಾ ಡಿಸ್ಟ್ರಿಕ್ಟಿನಲ್ಲಿರತಕ್ಕ ಎಲ್ಲ ಪಾಠಶಾಲೆಗಳ ಮೇಲ್ವಿಚಾರಣೆಗಾಗಿ ಒಬ್ಬೊಬ್ಬ ಅಧಿಕಾರಿಯನ್ನು ನಿಯಮಿಸುವುದುತ್ತಮವು. ಹೆಡ್ಡಾಫೀಸಿನವರಿಗೂ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರುಗಳಿಗೂ ತಕ್ಕ ಸಹಾಯಕ ಉದ್ಯೋಗಿಗಳಿರಬೇಕು. ಮುಖ್ಯಶಾಖಾಧಿಕಾರಿಗಳು ಶ್ರದ್ಧೆವಹಿಸಿ ಕೆಲಸಮಾಡಿದ ಹೊರತು ಯಾವ ಅಭಿವೃದ್ಧಿಯೂ ಆಗುವುದಿಲ್ಲವೆಂಬುದನ್ನು ಯಾರೂ ಅಲಗಳೆಯಲಾರರು. ಬೋಧಕರೂ, ಮೇಲ್ವಿಚಾರಕರೂ ಶ್ರದ್ಧೆಯಿಂದಲೂ, ಸಾನುಭೂತಿಯಿಂದಲೂ ಕೆಲಸಮಾಡಬೇಕಾಗಿರುವುದರಿಂದ, ಅವರ ಮೇಲ್ಪಟ್ಟ ಅಧಿಕಾರಿಯು ಶ್ರದ್ಧೆಯಿಂದಲೂ, ಉತ್ಸುಕತೆಯಿಂದಲೂ, ಸಾನುಭೂತಿಯಿಂದಲೂ ಕೆಲಸಮಾಡುವುದರಲ್ಲಿ ಮಾರ್ಗದರ್ಶಕನಾಗಿದ್ದುಕೊಂಡು ಸರ್ವಜನವರ್ಗದವರ ಮತ್ತು ಶಾಖೆಯವರ ಪ್ರೀತಿಗೌರವಗಳನ್ನು ಸಂಪಾದಿಸುವವನಾಗಿರಬೇಕು. ಇಂತಹ ಗುಣಸಂಪನ್ನರಾದ ಮಿ|| ಕೆ. ಮೆಥ್ಯೂರವರು ವಿದ್ಯಾಭ್ಯಾಸಶಾಖೆಯ ಮುಖ್ಯಾಧಿಕಾರಿಗಳಾಗಿರುವುದು ಮೈಸೂರುದೇಶೀಯರ ಪೂರ್ವಾರ್ಜಿತ ವೇಸರಿ. ಇವರು ಈ ಉದ್ಯೋಗನಿರ್ವಾಹಕ್ಕಾಗಿ ಬೇರೆ ಪ್ರಶಸ್ತಿಯನ್ನು ಪಡೆದವರಲ್ಲದಿದ್ದರೂ, ಮೈಸೂರು ದೇಶಸ್ಥರಲ್ಲದಿದ್ದರೂ ಈ ಶಾಖಾಧಿಕಾರವನ್ನು ವಹಿಸಿದಾರಭ್ಯ ವಿಶೇಷ ಆಸಕ್ತಿಯಿಂದಲೂ, ಶ್ರದ್ಧೆಯಿಂದಲೂ, ಉತ್ಸುಕತೆಯಿಂದಲೂ ಕೆಲಸಮಾಡುತ್ತಿರುವುದರಿಂದ ಈ ಶಾಖೆಯು ವಿಶೇಷ ಫಲಪ್ರದವಾಗಿರುವುದು. ನಿಜವಾಗಿಯೂ ಪ್ರಜೋಪಕಾರಿಗಳಾದ ಮಿ|| ಮೆಥ್ಯೂರವರು ಈ ಶಾಖೆಯನ್ನು ಬಿಟ್ಟುಹೋಗುವರೆಂಬ ಒಂದು ವದಂತಿಯಿದೆ. ಇದು ನಿಜವಾಗಿದ್ದಲ್ಲಿ ಮಿ|| ಮೆಥ್ಯೂರವರನ್ನು ಈ ಶಾಖಾಧಿಕಾರದಲ್ಲೇ ಉಳಿಸಿಕೊಡಬೇಕೆಂದೂ, ಒಂದುವೇಳೆ ಅವರು ಉನ್ನತಪದವಿಗೆ ಹೋಗುವುದಾಗಿದ್ದರೆ ಅವರಂತೆ ಶ್ರದ್ಧೆಯಿಂದ ಕೆಲಸಮಾಡುವ ವಿಶಾಲಹೃದಯರಾದವರನ್ನು ನಿಯಮಿಸಬೇಕೆಂದೂ ಪ್ರಭುತ್ವದವರಿಗೆ ನಾವು ಒತ್ತಿ ಹೇಳುತ್ತೇವೆ. ಹಾಗಾದರೇನೇ ಈ ಶಾಖೆಯ ಕೆಲಸವು ಪ್ರಜೆಗಳ ಸಹಕಾರದಿಂದ ಶೀಘ್ರದಲ್ಲಿ ಅಭಿವೃದ್ಧಿಯಾಗುವುದು.

ಮೈಸೂರು ಡಿಸ್ಟ್ರಿಕ್ಟ್‌ಕಾನ್ಫರೆನ್ಸ್.

ಈ ಡಿಸ್ಟ್ರಿಕ್ಟ್‌ಕಾನ್ಫರೆನ್ಸಿನ ಅಧಿವೇಶನವು ಕಳೆದ ತಾ|| 24 ರಲ್ಲಿ ಆರಂಭವಾಗಿ 5 ದಿನಗಳವರೆಗೆ ನಡೆದಿತು. ಇತರ ಡಿಸ್ಟ್ರಿಕ್ಟುಗಳಲ್ಲಿ ನಡೆದ ಕಾನ್ಫರೆನ್ಸುಗಳು ಯಾವವೂ ಇಷ್ಟು ದೀರ್ಘಕಾಲ ನಡೆಯಲಿಲ್ಲವೆಂದು ತೋರುತ್ತದೆ. ಈ ಡಿಸ್ಟ್ರಿಕ್ಟ್ ಕಾನ್ಫರೆನ್ಸಿನ ಜತೆಗೆ ವ್ಯವಸಾಯ, ಕೈಗಾರಿಕೆ, ವಿದ್ಯಾಭ್ಯಾಸ ರೇಷ್ಮೆ, ನೀರಾವರಿ, ಗ್ರಾಮಪಂಚಾಯಿತಿ, ಮ್ಯುನಿಸಿಪಾಲಿಟಿ ಮೊದಲಾದವುಗಳಿಗೆ ಸಂಬಂಧಪಟ್ಟ ಕಾನ್ಫರೆನ್ಸುಗಳೂ ಜರುಗಿದುವು. ಈ ಕಾನ್ಫರೆನ್ಸುಗಳಲ್ಲಿ ಅನೇಕ ಉಪಯುಕ್ತವಿಷಯಗಳು ಪರ್ಯಾಲೋಚಿಸಲ್ಪಡತಕ್ಕುವುಗಳಾಗಿದ್ದರೂ, ವಿಷಯಗಳ ಸಂಖ್ಯೆಯು ಹೆಚ್ಚಾಗಿದ್ದುದರಿಂದಲೂ, ಕಾಲಾವಧಿಯು ಬಹಳ ದೀರ್ಘವಾಗಿದ್ದುದರಿಂದಲೂ ಸಭೆಗೆ ಬಂದಿದ್ದ ಜನರು ಬೇಸರಪಟ್ಟುಕೊಂಡು ಕಡೆಯವರೆಗೂ ನಿಲ್ಲದಿರುವಂತಾದುದರಿಂದಲೂ ಕಾನ್ಫರೆನ್ಸಿನ ಪ್ರಯೋಜನವನ್ನು ಹೊಂದಲವಕಾಶವಿಲ್ಲವಾಯಿತು. ಆದುಕಾರಣ ಇನ್ನುಮುಂದೆ ಕಾನ್ಫರೆನ್ಸಿನ ಕಾಲಾವಧಿಯನ್ನೂ, ಅದರಲ್ಲಿ ಪರ್ಯಾಲೋಚಿಸಲ್ಪಡುವ ವಿಷಯಸಂಖ್ಯೆಗಳನ್ನೂ ಕಡಮೆ ಮಾಡಬೇಕು ಮತ್ತು ಪಂಚಾಯಿತಿ ಮ್ಯುನಿಸಿಪಾಲಿಟಿ ಇತ್ಯಾದಿ ವಿಷಯಗಳನ್ನು ಬೇರ್ಪಡಿಸದೆ ಡಿ|| ಕಾನ್ಫರೆನ್ಸಿನ ವಿಷಯಗಳ ಜತೆಗೇ ಸೇರಿಸಬೇಕು. ಇದೂ ಅಲ್ಲದೆ ಈಗಿನಂತೆ ಮಧ್ಯಾಹ್ನದ ಮೇಲೆ ಸಭೆಯನ್ನು ಮಾಡದೆ ಬೆಳಿಗ್ಗೆಯಲ್ಲೂ ಮಧ್ಯಾಹ್ನದಲ್ಲೂ ಮಾಡುವುದಾದರೆ, ಮೆಂಬರುಗಳಿಗಿಂತಲೂ ಇತರರಿಗೆ ವಿಶೇಷವಾಗಿ ವಿನಿಯೋಗವಾಗುತ್ತಿರುವ ಅಲ್ಪಾಹಾರದ ವೆಚ್ಚವು ಬಹಳಮಟ್ಟಿಗೆ ಕಡಮೆಯಾಗುವುದು. ಈ ಕಾರಣದಿಂದಲೇ ಈ ವೇಳೆ ಅಲ್ಪಾಹಾರಕ್ಕೆ ದುಡ್ಡನ್ನು ವ್ಯಯಮಾಡಲು ಸರ್ಕಾರದವರೊಪ್ಪಲಿಲ್ಲವಾಗಿ ಮೊದಲನೆಯ ದಿವಸ ನಡೆದ ಅಲ್ಪಾಹಾರವು ಎರಡನೆಯ ದಿನದಿಂದ ನಿಲ್ಲಿಸಲ್ಪಟ್ಟಿತು. ಮೈಸೂರು ಡಿಸ್ಟ್ರಿಕ್ಟ್‌ಬೋರ್ಡಿನ ಶ್ರದ್ಧಾವಿಶೇಷದಿಂದ ಕಾನ್ಫರೆನ್ಸಿನ ಕಾರ್ಯವು ಸುಲಲಿತವಾಗಿ ನಡೆದಿತು. ಕಾನ್ಫರೆನ್ಸಿನ ಅಧ್ಯಕ್ಷರು ಸಾಲುಮರಗಳನ್ನು ಬೆಳಸುವುದು, ಗ್ರಾಮದ ಕಾಡುಗಳನ್ನು ಅಭಿವೃದ್ಧಿಗೊಳಿಸುವುದು, ನೀರಾವರಿಜಮೀನಿನಲ್ಲಿ ಗೊಬ್ಬರಕ್ಕೆ ಬೇಕಾದ ಗಿಡಗಳನ್ನು ಬೆಳಸುವುದು ಇತ್ಯಾದಿ ರೈತರಿಗುಪಯುಕ್ತವಾದ ವಿಷಯಗಳನ್ನು ಚೆನ್ನಾಗಿ ತಿಳಿಯಹೇಳಿದರು. ಈ ಸೂಚನೆಯು ಬಹಳ ಯೋಗ್ಯವಾದುದರಿಂದ ಡಿ|| ಬೋರ್ಡಿನವರು ಫಾರೆಸ್ಟು ಮತ್ತು ಫಲಪುಷ್ಪಶಾಖೆಗಳವರ ಸಹಾಯದಿಂದ ಈ ಸೂಚನೆಯನ್ನು ಅನುಷ್ಠಾನಕ್ಕೆ ತಂದಲ್ಲಿ ಗ್ರಾಮಸ್ಥರಿಗೆ ನಿಜವಾಗಿಯೂ ಪ್ರಯೋಜನವಾಗುತ್ತದೆ. ಈ ಕಾನ್ಫರೆನ್ಸುಗಳ ಜತೆಯಲ್ಲಿ ಕೈಗಾರಿಕೆ ಬೇಸಾಯ ಮೊದಲಾದ ಕಸಬುಗಳ ಪದಾರ್ಥಗಳ ಪ್ರದರ್ಶನವು ನಡೆಯಿಸಲ್ಪಟ್ಟು ಉತ್ತಮಪದಾರ್ಥಗಳ ಪ್ರದರ್ಶಕರಿಗೆ ಬಹುಮಾನಗಳು ಕೊಡಲ್ಪಟ್ಟುವು. ಈ ಪ್ರದರ್ಶನಾಲಯಪ್ರವೇಶಕ್ಕೆ 1 ಆಣೆ ಇಡಲ್ಪಟ್ಟಿದ್ದರೂ ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದುದರಿಂದ ಜನರಿಗೆ ಅದರಲ್ಲಿರುವ ಅಭಿರುಚಿಯು ವ್ಯಕ್ತವಾಗುತ್ತದೆ. ಆದರೆ ಎಲ್ಲಾಕಡೆಯ ಪದಾರ್ಥಗಳನ್ನು ಸಂಗ್ರಹಿಸುವುದಕ್ಕಿಂತ ಆಯಾ ಡಿಸ್ಟ್ರಿಕ್ಟಿನಲ್ಲಾದ ಪದಾರ್ಥಗಳನ್ನು ಪ್ರದರ್ಶಿಸುವುದುತ್ತಮವಾಗಿದ್ದಿತು. ಈ ಡಿಸ್ಟ್ರಿಕ್ಟ್‌ಕಾನ್ಫರೆನ್ಸುಗಳಿಂದ ಜನರಿಗೆ ಅನೇಕ ಉಪಯುಕ್ತ ವಿಷಯಗಳು ಬೋಧವಾಗುವುದರಿಂದ ಗ್ರಾಮಸ್ಥರು ವಿಶೇಷವಾಗಿ ಭಾಗಿಗಳಾಗಿರುವಂತೆ ಮಾಡಿ, ಪರ್ಯಾಲೋಚಿಸಲ್ಪಡುವ ವಿಷಯಗಳ ಸಂಖ್ಯೆಯನ್ನೂ, ಸಭೆನಡೆಯುವ ಕಾಲಾವಧಿಯನ್ನೂ ಸಾಧ್ಯವಾದಮಟ್ಟಿಗೆ ಕಡಿಮೆಮಾಡಿ ಹೆಚ್ಚು ಜನರು ಇದರಲ್ಲಿ ಭಾಗಿಗಳಾಗುವಂತೆ ಮಾಡುವುದರ ಕಡೆಗೆ ಡಿ|| ಬೋರ್ಡಿನವರು ಗಮನಕೊಡಬೇಕಾಗಿ ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ತಿರುಮಕೂಡ್ಲು ನರಸೀಪುರ ತಾ|| ಬನ್ನೂರಿನಲ್ಲಿ ಬೆಸ್ತರಿಗೂ ಒಕ್ಕಲಿಗರಿಗೂ ದೊಂಬಿ ಕಲಹವಾಗಿ ಕೆಲವರು ಪೋಲೀಸರಿಂದ ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರಂತೆ.

ಬೆಂಗಳೂರು ಸಿಟಿ ನಗರ್ತರಪೇಟೆಯಲ್ಲಿರುವ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪೂಜೆಯನ್ನು ಮಾಡಿಸುವ ವಿಚಾರವಾಗಿ ಗಾಣಿಗರಲ್ಲಿ [illegible] ಸೇರಿದ [illegible] ಗುಂಪಿನವರಿಗೂ ಮತ್ತೊಂದು ಗುಂಪಿನವರಿಗೂ ಬಹಳ ದಿನದಿಂದ ಮನಸ್ತಾಪವುಳ್ಳ ಕಲಹಕ್ಕೆ ಕಾರಣವಾಗಿ [illegible] ಕಳೆದ ತಾ|| 24 ರಲ್ಲಿ ಉಭಯರಿಗೂ ಹೊಡೆದಾಟಬಡಿದಾಟವಾಗುತ್ತದೆಂಬ ಸಂಗತಿಯನ್ನು ಪೋಲೀಸಿನವರು ತಿಳಿದು ಜಾಗ್ರತರಾಗಿದ್ದು ಅದಕ್ಕೆ ಅವಕಾಶ ಕೊಡಲಿಲ್ಲವು.

ಕಳೆದ ಭಾನುವಾರ ಸಾಗರ ತಾ|| ಅನಂತಪುರದ ಶ್ರೀಮುರುಘಾಮಠದ ಉತ್ತರಾಧಿಕಾರಿಗಳ ಪಟ್ಟಾಭಿಷೇಕಮಹೋತ್ಸವವು ಜರುಗಿತು. ಆ ಕಾಲದಲ್ಲಿ ಮಲ್ನಾಡು ವೀರಶೈವರ ಕಾನ್ಫರೆನ್ಸು ಮೈಸೂರು ಮುನಸೀಫ್ ಮ|| ಎಚ್. ಕೆ. ವೀರಬಸವಯ್ಯ ಬಿ. ಎ., ಬಿ. ಎಲ್., ರವರ ಅಧ್ಯಕ್ಷತೆಯಲ್ಲಿ ಜರುಗಿ ಸಮಾಜೋನ್ನತಿಸಾಧಕವಾದ ಕೆಲ ಉಪಯುಕ್ತ ನಿರ್ಧಾರಗಳು ಮಾಡಲ್ಪಟ್ಟುವು.

ಯಳಂದೂರು ತಾಲ್ಲೂಕು ಹೊನ್ನೂರಿನಲ್ಲಿ ಒಂದು ಭೂಮಿಯ ವಿಚಾರವಾಗಿ ಶಿವಾಚಾರದವರಿಗೂ ಒಕ್ಕಲಿಗರಿಗೂ ಕಳೆದ ತಾ|| 18 ರಲ್ಲಿ ವ್ಯಾಜ್ಯ ನಡೆದು 11 ಜನರು ಪೆಟ್ಟನ್ನು ತಿಂದು ಆಸ್ಪತ್ರೆಯ ಚಿಕಿತ್ಸೆಯಲ್ಲಿರುತ್ತಾರೆ. ಪೊ|| ಸೂಪರಿಂಟೆಂಡೆಂಟ್‌ರವರೂ, ಡಿ|| ಮ್ಯಾಜಿಸ್ಟ್ರೇಟರೂ ರಿಜರ್ವ್‌ಪೋಲೀಸಿನವರನ್ನು ಕರೆದುಕೊಂಡು ಹೋಗಿ ಕಾವಲಿಟ್ಟು ಬಂದಿರುವರು. ದೊಂಬಿ ಮಾಡಿದವರಲ್ಲಿ 40 ಜನರು ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವುದಾಗಿ ತಿಳಿಯಬಂದಿದೆ.

ಉದಕಮಂಡಲದಲ್ಲಿರುವ ನಮ್ಮ ಶ್ರೀಮನ್ ಮಹಾರಾಜರವರು ಕಳೆದ ತಾ|| 26 ರ ರಾತ್ರಿ 9½ ಗಂಟೆಯಲ್ಲಿ ತಮ್ಮ ವಾಸಸ್ಥಳವಾದ ಫರ್ನ್‌ಹಿಲ್ ಅರಮನೆಗೆ ಮದ್ರಾಸ್ ಗೌರ್ನರಾದ ಲಾರ್ಡ್ ಗಾಸ್ಚೆನ್‌ರವರು, ಆನರಬ್ ಸೆಸಿಲ್ ಗಾಸ್ಚೆನ್‌ರವರು, ಗೌರ್ನರ ಕೈಕೆಳಗಣ ಉದ್ಯೋಗಸ್ಥರು, ಜೋಧಪುರದ ಮಹಾರಾಜರವರು, ಬರೋಡಾ, ಟ್ರಾವನ್ಕೂರು, ಮತ್ತು ಕುಚ್ ಬಿಹಾರ್ ಸಂಸ್ಥಾನಗಳ ಮಹಾರಾಣಿಯವರುಗಳು, ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳ ರೆಸಿಡೆಂಟರುಗಳು, ಕೆಲ ಅಧಿಕಾರಿಗಳು ಮೊದಲಾದವರನ್ನು ಬರಮಾಡಿಕೊಂಡು ನರ್ತನೋತ್ಸವದಿಂದ ಸತ್ಕರಿಸಿದರು. ಮಹಾಸ್ವಾಮಿಯವರ ಸ್ವಾರಿಯು ರಾಜಧಾನಿಗೆ ಕೂಡಲೆ ಚಿತ್ತೈಸುವುದಾಗಿದೆ.

ಬೆಂಗಳೂರು ಪಟ್ಟಣವಾಸಿಗಳಾದ ಇನಾಂದಾರ್ ಎಂ. ಕೃಷ್ಣಮೂರ್ತಿರಾಯರು ಕುಣಿಗಲ್ಲಿನಲ್ಲಿರುವ ತಮ್ಮ ಭೂಮಿಗಳನ್ನು ಗುತ್ತಿಗೆಗೆ ಕೊಡುವುದಕ್ಕಾಗಿ ಕೆಲದಿವಸಗಳ ಹಿಂದೆ ಕುಣಿಗಲ್ಲಿಗೆ ಹೋಗಿದ್ದು ಪಟೇಲನ ಕೂಡ ಹಿಂದಿರುಗಿ ಬರುವಾಗ್ಗೆ ಇವರ ದ್ವೇಷಿಗಳಾದ ಕೆಲ ಜನರು ದಾರಿಯಲ್ಲಿ ಅಡ್ಡಕಟ್ಟಿ ಇವರನ್ನೂ ಪಟೇಲನನ್ನೂ ಚೆನ್ನಾಗಿ ಪ್ರಹರಿಸಿ ಪಲಾಯನರಾದರು. ರಾಯರೂ ಪಟೇಲನೂ ಪೆಟ್ಟನ್ನು ತಿಂದು ಮೂರ್ಛಿತರಾಗಿದ್ದು ಸ್ವಲ್ಪಹೊತ್ತಿನಮೇಲೆ ಚೇತರಿಸಿಕೊಂಡು ದಾರಿಗರ ಸಹಾಯದಿಂದ ಕುಣಿಗಲ್ಲಿನ ಆಸ್ಪತ್ರೆಗೆ ಬಂದು ಅಲ್ಲಿ 1-2 ದಿನ ಚಿಕಿತ್ಸೆಯನ್ನು ಹೊಂದಿ ಬೆಂಗಳೂರಿಗೆ ಮೋಟಾರುಬಂಡಿಯಲ್ಲಿ ಕರೆತರಲ್ಪಟ್ಟು ವಿಕ್ಟೋರಿಯಾ ಆಸ್ಪತ್ರೆಯ ಚಿಕಿತ್ಸೆಯಲ್ಲಿರುವುದಾಗಿ ತಿಳಿಯಬಂದಿದೆ.

ಮ|| ಗಳಾದ ಎ. ಸಿದ್ಧಪ್ಪನವರು, ಬಿ. ರಾಚಪ್ಪನವರು, ಪಿ. ಮುರುಡಪ್ಪನವರು, ಬಿ. ಮರುಳಪ್ಪನವರು, ಎಂ. ಮಲ್ಲೇಶಯ್ಯನವರು, ಐ. ಧನಗೂರು ಸೆಟ್ಟರು, ಕೈ. ಧರ್ಮಪ್ಪನವರು, ಎಂ. ಎಸ್. ಸಿದ್ಧಲಿಂಗಯ್ಯನವರು ಈ ವೀರಶೈವವಿದ್ಯಾರ್ಥಿಗಳು ಕಳೆದ ಬಿ.ಎ. ಪರೀಕ್ಷೆಯಲ್ಲೂ; ಮೈಸೂರಿನ ಮ|| ಎಂ. ಎಸ್. ಬಸವಲಿಂಗಯ್ಯ, ಬಿ.ಎ., ಬಿ.ಎಲ್., ರವರು ಎಂ.ಎ. (ಸಂಸ್ಕೃತ) ಪರೀಕ್ಷೆಯಲ್ಲೂ, ಹಿರೋಡೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಜಿ. ಮಲ್ಲಿಕಾರ್ಜುನಯ್ಯ, ಬಿ.ಎ., ಯವರ ಕುಮಾರ ಜಿ. ಸಾಂಬಶಿವಯ್ಯ ಮತ್ತು ಬೆಂಗಳೂರು ಆರ್. ಪಾಪಣ್ಣನವರ ಕುಮಾರ ಪಿ. ಶಿವಶಂಕರ್ ಇವರಿಬ್ಬರು ಎಂಟ್ರೆನ್ಸ್ ಪರೀಕ್ಷೆಯಲ್ಲೂ ಉತ್ತೀರ್ಣರಾಗಿರುತ್ತಾರೆಂದು ತಿಳುಹಲು ಸಂತೋಷವಾಗುತ್ತದೆ.

ಚೆನ್ನಪಟ್ಟಣದ ದಾಸಬಣಜಿಗರಲ್ಲಿ ಜನಿವಾರವನ್ನು ಹಾಕಿಕೊಳ್ಳುವ ವಿಚಾರವಾಗಿ ಭಿನ್ನಾಭಿಪ್ರಾಯ ಹುಟ್ಟಿ ಕೆಲರು ಜನಿವಾರವನ್ನು ಹಾಕಿಕೊಂಡರು, ಮತ್ತೆ ಕೆಲರು ಅದನ್ನು ನಿರೋಧಿಸತೊಡಗಿದರು. ಅಂದಿನಿಂದಲೂ ಉಭಯಪಕ್ಷದವರೂ ಒಬ್ಬರಿಗೊಬ್ಬರು ಕಲಹಮಾಡುತ್ತಿದ್ದು ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ವಿವಾದವನ್ನು ನಡೆಸುತ್ತಿರುವರು. ಈ ಮಧ್ಯೆ ಕಳೆದ ತಾ|| 20 ರ ಸಾಯಂಕಾಲ 4 ಗಂಟೆಯ ವೇಳೆಯಲ್ಲಿ ಯಜಮಾನ್ ನರಸಿಂಹಯ್ಯನವರ ಮಗ ಸೀನಪ್ಪನೆಂಬಾತನು ಬೈಸಿಕಲ್ ಸ್ವಾರಿ ಮಾಡಿಕೊಂಡು ಪೇಟೆಯ ಪೋಲೀಸುಠಾಣದ ಬಳಿ ಬರುತ್ತಿರುವಾಗ್ಗೆ ಎಲ್ಲಿಂದಲೋ ಒಂದು ಜೋಡು ತನ್ನಕಡೆ ಬಂದು ಬೀಳಲು ಆತನು ಹಿಂದಿರುಗಿ ಮನೆಗೆ ಬಂದು ನಡೆದ ಸಂಗತಿಯನ್ನು ತನ್ನ ಗುಂಪಿನವರಿಗೆ ತಿಳಿಸಿದನು. ಅವರು ತಮ್ಮಿದಿರ ಕಕ್ಷಿಯವರು ಈ ಕೃತ್ಯವನ್ನು ಮಾಡಿರಬೇಕೆಂದೂಹಿಸಿ ದೊಣ್ಣೆ ಮೊದಲಾದವುಗಳನ್ನು ತೆಗೆದುಕೊಂಡು ಹೊಡದಾಟಕ್ಕೆ ಸಿದ್ಧರಾದರು. ಇದಿರಪಕ್ಷದವರೂ ಕಲ್ಲುಇಟ್ಟಿಗೆಚೂರುಗಳನ್ನೂ ದೊಣ್ಣೆಗಳನ್ನೂ ಚೂರಿಗಳನ್ನೂ ಸಿದ್ಧಪಡಿಸಿಕೊಂಡು ಬಂದರು. ಉಭಯರಿಗೂ ಹೊಡದಾಟ ಬಡಿದಾಟಗಳು ವೀರಾವೇಶದಿಂದ ನಡೆದು ಒಬ್ಬನು ಕೂಡಲೆ ಮೃತನಾದುದಾಗಿಯೂ, ಇಬ್ಬರು ಪ್ರಾಣಾಪಾಯವನ್ನೂ, ಇನ್ನು 10 ಜನರು ಪೆಟ್ಟನ್ನೂ ತಿಂದು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವುದಾಗಿಯೂ, ಡಿ|| ಪೋಲೀಸ್ ಸೂಪರಿಂಟೆಂಡೆಂಟರೂ ಡಿ|| ಮ್ಯಾಜಿಸ್ಟ್ರೇಟರೂ ಬಂದು ನಡೆದ ಸಂಗತಿಯನ್ನು ವಿಚಾರಿಸಿಕೊಂಡು ಹೋದುದಾಗಿಯೂ, ಹೊಡೆದಾಡಿದವರಲ್ಲಿ ಕೆಲರು ಸೆರೆಹಿಡಿಯಲ್ಪಟ್ಟಿರುವುದಾಗಿಯೂ ಕೇಳುತ್ತೇವೆ.

ವರ್ತಮಾನಸಂಗ್ರಹ.

82 ವರ್ಷವಯಸ್ಸಿನ ಒಬ್ಬ ಐರೋಪ್ಯನು ಈಗತಾನೆ ಎಂಟನೆಯ ಹೆಂಡಿತಿಯನ್ನು ವಿವಾಹಮಾಡಿಕೊಂಡನು.

ಕಲಕತ್ತಾನಗರದಲ್ಲಿ ಸುಪ್ರಸಿದ್ಧವಾದ ಜಕರಿಯಾಮಸೀದಿಯು ಈಚೆಗೆ ನಡೆದ ದಂಗೆಯಲ್ಲಿ ಕೊಂಚ ಅಪಾಯವಾಗಿದ್ದುದರಿಂದ ಒಡೆದುಹಾಕಲ್ಪಟ್ಟು 7 ಲಕ್ಷ ರೂ. ವೆಚ್ಚದಿಂದ ಹೊಸದಾಗಿ ಕಟ್ಟಲ್ಪಡುವುದು. ಈ ಹೊಸಕಟ್ಟಡವು ಭೂಮಟ್ಟದಿಂದ 80 ಅಡಿ ಎತ್ತರವಿರುವುದಲ್ಲದೆ ಅದರ ಉಭಯಪಾರ್ಶ್ವದ 2 ಶಿಖರಗಳು 180 ಅಡಿ ಎತ್ತರವಿದ್ದು ಸಮುದ್ರದಡದಲ್ಲಿರುವ ಹಡಗುಗಳಿಗೆ ಕಾಣಿಸಿಕೊಳ್ಳುವುವಂತೆ.

ಜರ್ಮನೀರಾಜ್ಯಕ್ಕೆ ಸೇರಿದ ಬವೇರಿಯಾಡಿಸ್ಟ್ರಿಕ್ಟಿನಲ್ಲಿ ಒಂದು ಮದ್ದಿನಕಾರ್ಖಾನೆಯು ಬೆಂಕಿಯಿಂದ ಹೊತ್ತಿಕೊಂಡು ಸಂಪೂರ್ಣವಾಗಿನಾಶವಾಯಿತು. ಯಂತ್ರಗಳೊಡೆದು ನುಚ್ಚುನೂರಾಗಿ ಮತ್ತು ಕೆಲಸಗಾರರ ಶರೀರವು ತುಂಡುತುಂಡಾಗಿ ಮೇಲಕ್ಕೆಹಾರಿ ಬಹುದೂರಹೋಗಿ ಬಿದ್ದಿದ್ದುವು. ಈ ಯಂತ್ರಾಲಯದ ಸಿಡಿತದ ರಭಸಕ್ಕೆ 8-10 ಮೈಲಿ ದೂರದಲ್ಲಿರುವ ಮನೆಮಠಗಳು ನಡುಗಿದುವು. ಈ ಅನಾಹುತದಲ್ಲಿ 9 ಜನರು ಮೃತರಾಗಿ 80 ಜನರು ಅಪಾಯಹೊಂದಿರುವುದಾಗಿ ವರದಿಯಾಗಿದೆ.

ಜೋಧ್‌ಪುರದ ಮಹಾರಾಜರು ನೀಲಗಿರಿಗೆ ಸೇರಿದ ಆನೆಕಟ್ಟೆ ಎಂಬಲ್ಲಿಗೆ ಬೇಂಟೆಗಾಗಿ ಹೋಗಿದ್ದಾಗ್ಗೆ, ಒಂದು ಕಾಡಾನೆಯು ಅವರ ಬೆನ್ನಹತ್ತಿ ಓಡಿಸಿಕೊಂಡು ಬಂದಿತು. ಆಗ ಮಹಾರಾಜರ ಸಹೋದರರೂ ಪರಿವಾರದವರೂ ಅದನ್ನು ಹಿಂಬಾಲಿಸಿ ಬಹಳ ಸಾಹಸಪಟ್ಟು ಅದು ಮಹಾರಾಜರನ್ನು ಹಿಡಿದುಕೊಳ್ಳುವಷ್ಟರಲ್ಲಿ ಅದನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು. ಮಹಾರಾಜರು ಆನೆಯು ಕೈಗೆಸಿಕ್ಕದೆ ಓಡಿಹೋಗುವಲ್ಲಿ ಕೈಕಾಲುಗಳು ತರಚಿಕೊಂಡು ಕೊಂಚ ಬಾಧೆಯಾಗಿದ್ದಿತು.

ಕೊಲಂಬೋಗೆ ಸೇರಿದ ಕ್ಯಾಂಡಿಯಲ್ಲಿ ಮಾಹುತರು ಆನೆಗಳನ್ನು ನದಿಯಲ್ಲಿ ತೊಳೆಯುತ್ತಿರುವಾಗ್ಗೆ ಒಂದಾನೆಯು ನೀರಿನಿಂದ ಮೇಲಕ್ಕೇಳಲು ಅದರ ಮಾಹುತನು ಪುನಃ ನೀರಿನಲ್ಲಿ ಮುಳಿಗಿಸುವುದಕ್ಕೆ ಪ್ರಯತ್ನಿಸಿದಾಗ ಆ ಆನೆಯು ರೇಗಿ ಅವನನ್ನು ಹಿಡಿದು ಮರಳಿನಲ್ಲಿ ಹಾಕಿ ತುಳಿದು ಕೊಂದುಬಿಟ್ಟು ಇತರ ಆನೆಗಳಮೇಲೆ ಬಿದ್ದಿತು. ಆಗ ಮಾಹುತರು ಅದನ್ನು ಪ್ರಯಾಸಪಟ್ಟು ನೀರಿನಿಂದ ಹೊರಕ್ಕೋಡಿಸಿದರು. ಅದು ಒಂದು ಹಳ್ಳಿಕಡೆಯೋಡಿಹೋಗಿ ಅಲ್ಲಿ ಕೊಂಚ ಹಾವಳಿಯನ್ನು ಮಾಡಿ ಅಲ್ಲಿಂದ ಗಜಶಾಲೆಗೆ ಬಂದು ಸ್ವಸ್ಥಳದಲ್ಲಿ ಮಲಗಿದ್ದಿತು.

ಬಂಗಾಳದ ಬಸಿರಹತ್ ಸಬ್‌ಡಿವಿಜನ್ನಿಗೆ ಸೇರಿದ ರಜವಾಪಿಗ್ರಾಮದಲ್ಲಿ ಕಳೆದ ಶನಿವಾರ ಆಯುಧಪಾಣಿಗಳಾದ 20-24 ಜನ ಕಳ್ಳರು ಹೇಮನಾಥನೆಂಬುವವನ ಮನೆಗೆ ನುಗ್ಗಿ ಪದಾರ್ಥಗಳನ್ನು ದೋಚಿಕೊಳ್ಳುತ್ತಿರುವಾಗ್ಗೆ ಹೇಮನಾಥನ ವಿಧವಾ ನಾದಿನಿಯು ಒಂದು ಹರಿತವಾದ ಚೂರಿಯನ್ನು ಹಿಡಿದು ಬಹಳ ಧೈರ್ಯಶೌರ್ಯದಿಂದ ಕಳ್ಳರನ್ನು ಪ್ರತಿಭಟಿಸಿದಳು. ಆದರೆ ಆ ಚಂಡಾಲರೆಲ್ಲರೂ ಆಕೆಯನ್ನು ಹಿಡಿದುಕೊಂಡು ನಿರ್ದಯೆಯಿಂದ ಮರ್ದಿಸಿದರು. ಆಕೆಯು ಪ್ರಾಣರಕ್ಷಣೆಗಾಗಿ ಆರ್ತಧ್ವನಿಮಾಡಿದಳಾದರೂ ಮನೆಯವರು ಪ್ರಾಣಭೀತಿಯಿಂದ ಬರಲಿಲ್ಲವಾಗಿ ಆಕೆಯು ಪ್ರಾಣಾಪಾಯವನ್ನು ಹೊಂದಿ ಆಸ್ಪತ್ರೆಯ ಚಿಕಿತ್ಸೆಯಲ್ಲಿರುವಳು.

ಜಪಾನ್ ರಾಜ್ಯಕ್ಕೆ ಸೇರಿದ ಹೂಕಿಯೋಡೋ ಎಂಬ ಅಗ್ನಿಪರ್ವತದ ಜ್ವಾಲಾಮುಖಿಯಿಂದ ಅಗ್ನಿಕಣಗಳೂ, ಕಾದಕಲ್ಲುಗಳೂ ಹಾರಿಬೀಳುತ್ತಿರುವುದರಿಂದಲೂ, ಕುದಿಯುವ ನೀರು ಹರಿಯುತ್ತಿರುವುದರಿಂಲೂ ನೆರೆಯಗ್ರಾಮಗಳು ನಾಶವಾದುವು. ಹೊಲದಲ್ಲಿ ಕೆಲಸಮಾಡುತ್ತಿದ್ದವರು ಮಾತ್ರ ಕಲ್ಲುಸಿಡಿಯುವ ಶಬ್ದವನ್ನು ಕೇಳಿ ದೂರಹೋಗಿ ತಲೆಯನ್ನುಳಿಸಿಕೊಂಡರು. ಒಂದು ಗುಡ್ಡದಮೇಲಿಂದ 30 ಮೈಲಿ ಕೆಳಗಡೆಗೆ ಕಾದನೀರುರುಳಿ ಹೊಲಗಳನ್ನೂ ಮನೆಗಳನ್ನೂ ನಾಶಪಡಿಸಿತು. ಇದು ಹಗಲಿನಲ್ಲಿ ನಡೆದುದರಿಂದ ರೈಲ್ವೆಪ್ರಯಾಣಿಕರಿಗೆ ಅಷ್ಟು ನಷ್ಟವಾಗಲಿಲ್ಲವು. ಒಂದು ಗ್ರಾಮದಲ್ಲಿ 200 ಜನರು ಪ್ರವಾಹದಲ್ಲಿ ಕೊಚ್ಚಿಕೊಂಡುಹೋದರು. ಇನ್ನೆರಡು ಗ್ರಾಮಗಳು ನಿರ್ನಾಮವಾದ ವರ್ತಮಾನವಿದೆ. ನದಿಗಳ ಪ್ರವಾಹದಲ್ಲಿ ಶವಗಳು ತೇಲಿಕೊಂಡುಹೋಗುತ್ತಿರುವುವು. ಸಾವಿರಾರು ಜನರು ನಿಲ್ಲಲಿಕ್ಕೆ ನೆರಳಿಲ್ಲದಿದ್ದಾರೆ. ಮಣ್ಣುಕಲ್ಲುಗಳ ರಾಶಿಯಲ್ಲಿ ಸಿಕ್ಕಿಬಿದ್ದಿರುವವರಲ್ಲಿ ಈವರೆಗೆ 144 ಶವಗಳು ತೆಗೆಯಲ್ಪಟ್ಟಿವೆ. ಇನ್ನುಮುಂದೆ ತೆಗೆಯಲು ಮಂಜು ವಿಪರೀತವಾಗಿ ಸುರಿಯುತ್ತ ಅಡ್ಡಿಪಡಿಸಿದೆ. ಜ್ವಾಲಾಮುಖಿಯಿಂದ ಅಗ್ನಿಕಣಗಳು ಇನ್ನೂ ಹೊರಡುತ್ತಲೇ ಇವೆ. ಈವರೆಗೆ 100 ಜನರು ಸತ್ತು 200 ಜನರಿಗೆ ಅಪಾಯವಿರುವುದಾಗಿ ಅಲ್ಲಿಯ ಗೌರ್ನರು ವರದಿಮಾಡಿರುತ್ತಾರೆ. ಕಿಟೋರಾ ಎಂಬೂರಿನಲ್ಲಿ ಪೋಸ್ಟಾಫೀಸು, ಬ್ಯಾಂಕು, ನಾಟಕಶಾಲೆ ಇತ್ಯಾದಿ ಕಟ್ಟಡಗಳು ನಾಶವಾಗಿ ಅರ್ಧ ಊರೇ ಹಾಳಾಗಿರುತ್ತದೆ.

ಘರವಾಲ ಡಿಸ್ಟ್ರಿಕ್ಟಿಗೆ ಸೇರಿದ ರುದ್ರಪ್ರಯಾಗವೆಂಬ ಊರಿನಲ್ಲೂ ನೆರೆಪ್ರದೇಶದಲ್ಲೂ ಒಂದು ಚಿರತೆಯು ಕಳೆದ 6-7 ವರ್ಷಗಳಿಂದಲೂ ಮನೆಗಳಿಗೆ ನುಗ್ಗಿ ಮಲಗಿರುವ ಮನುಷ್ಯರನ್ನೆತ್ತಿಕೊಂಡುಹೋಗಿ ತಿಂದುಬಿಡುತ್ತಿದ್ದಿತು. ಇದರ ಹಾವಳಿಯನ್ನು ಜನರು ತಡೆಯಲಾರದೆ ಬಹಳ ಭಯಗ್ರಸ್ಥರಾಗಿರುವಲ್ಲಿ ಅನೇಕ ಪ್ರಸಿದ್ಧ ಬೇಂಟೆಗಾರರು ಎಷ್ಟು ಸಾಹಸಪಟ್ಟರೂ ಅದನ್ನು ಕೊಲ್ಲಲು ಸಾಧ್ಯವಾಗಲಿಲ್ಲ, ಮತ್ತು ಅದನ್ನು ಕೊಲ್ಲುವುದಕ್ಕಾಗಿಡಲ್ಪಡುವ ವಿಷಮಿಶ್ರವಾದ ಪದಾರ್ಥಗಳನ್ನು ಅದು ತಿಂದಾಗ್ಯೂ ಅದಕ್ಕೇನೂ ಅಪಾಯವಾಗುತ್ತಿರಲಿಲ್ಲ. ಈ ಕ್ರೂರಮೃಗವನ್ನು ಹಿಡಿಯಲು ಅನೇಕ ಉಪಾಯಗಳು ಮಾಡಲ್ಪಟ್ಟಿದ್ದಾಗ್ಯೂ ಯಾರಿಗೂ ಸಿಕ್ಕದೆ ಒಂದೆರಡುವೇಳೆ ಬಹುಪ್ರಯಾಸದಿಂದ ಹಿಡಿಯಲ್ಪಟ್ಟಿದ್ದರೂ ತಪ್ಪಿಸಿಕೊಂಡು ಹೊರಟುಹೋಯಿತು. ಇದು ಯಾವುದಕ್ಕೂ ಜಗ್ಗದೆ ಹೋಗಿದ್ದುದರಮೇಲೆ ಮನುಷ್ಯರನ್ನು ನಾಶಪಡಿಸುವ ಮೃಗರೂಪರಾಕ್ಷಸವೆಂದು ಭಾವಿಸಲ್ಪಟ್ಟಿದ್ದಿತು. ಇದರಮೇಲೆ ಸರ್ಕಾರದವರು ಈ ನರಭಕ್ಷಕಮೃಗವನ್ನು ಹಿಡಿದವರಿಗೆ ಅಥವಾ ಅದನ್ನು ಸಂಹರಿಸಿ ಅದರ ಚರ್ಮವನ್ನು ತಂದೊಪ್ಪಿಸಿದವರಿಗೆ 500 ರೂ. ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದರು. ಕ್ಯಾಪ್ಟನ್ ಕೊಬೆಟ್ಟಿಯವರೂ ಆ ಡಿ|| ಡೆಪ್ಯುಟಿಕಮಿಷನರೂ ಆ ಪಿಶಾಚಮೃಗವನ್ನು ಕೊಲ್ಲಲು 8-10 ವಾರಗಳವರೆಗೆ ಅದು ಸಂಚರಿಸುವ ಸ್ಥಳದಲ್ಲಿ ಹುಡುಕುತ್ತ ಅದು ತಿಂದುಬಿಟ್ಟಿದ್ದ ಶವಗಳ ಸಮೀಪದಲ್ಲಿ ರಾತ್ರಿವೇಳೆ ಕಾದುಕೊಂಡಿರುತ್ತಿದ್ದು ಈ ಮೇ ತಾ|| 1 ರಲ್ಲಿ ಅದನ್ನು ತಮ್ಮ ಪೆಟ್ಟಿಗೆ ಸಿಕ್ಕಿಸಿಕೊಂಡು ಗುಂಡಿನಿಂದ ಸುಟ್ಟು ಕೊಂದುಬಿಟ್ಟರು. ಅದರ ಹಾವಳಿಯಿಂದ ಭಯಗ್ರಸ್ತರಾಗಿದ್ದ ಜನರು ಆ ಸಾಹೇಬರುಗಳ ಸಾಹಸವನ್ನು ಬಹಳವಾಗಿ ಕೊಂಡಾಡುತ್ತಿರುವರು.

ಸ್ವೀಕಾರ.

ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ತಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಟಿ. ನರಸೀಪುರದಲ್ಲಿರುವ ಮ॥ ಎಚ್. ಪುಟ್ಟಣ್ಣನವರ ಕುಮಾರ್ತಿ ಸೌ॥ ನೀಲಾಂಬೆಗೂ ಕುದೇರು ಮ॥ ಸಂಗಪ್ಪಶೆಟ್ಟರ ಕುಮಾರ ರಾ॥ ಶಿವಬಸಪ್ಪನಿಗೂ ನಡೆದ ಲಗ್ನದಲ್ಲಿ ಕೊಳ್ಳೇಗಾಲದ ಸಾಹುಕಾರ್ ಮ॥ ಜಿ. ಜಿ. ಮಲ್ಲಪ್ಪನವರ ಮೂಲಕ 1 ರೂ. (2) ಸೋಸಲೆ ಮ॥ ನಾಗಲಿಂಗಪ್ಪನವರ ಮಕ್ಕಳು ಚಿ॥ ಸುಬ್ಬಣ್ಣನವರ ನಿಷೇಕಪ್ರಸ್ತದಲ್ಲಿ ಮ॥ ಶಿವಸ್ವಾಮಿ, ಬಿ.ಎ., ಯವರ ಮೂಲಕ 1 ರೂ. (3) ಮೈಸೂರು ಮಾದೇಶ್ವರ ದೇವಸ್ಥಾನದ ಮ॥ ಚೆನ್ನಪ್ಪನವರ ಮಗಳಿಗೂ ಯಡತೊರೆ ತಾ॥ ತಂದ್ರೆಗ್ರಾಮದ ಮ॥ ಲಿಂಗದೇವಯ್ಯನವರ ಮಗನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 2 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ ?

ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳೆಂಬವರ
ಅಜ್ಞತಾಪ್ರಕಾಶನಂ
(ಮುಖ್ಯಭಾಗವು).

ದುರ್ದಾಂತವಾದಿಮಾತಂಗ ಕುಂಭಭೇದನಕೇಸರೀ ।
ಜೀಯಾಚ್ಛ್ರೀಪ್ರಭುನಾಮಾಂಕ ಶ್ರೀಮಯೋಗಿಶಿಖಾಮಣಿಃ ॥

ಸದಸದ್ವಿಚಾರಶೀಲರಾದ ಶ್ರೀ ವೀರಶೈವಬಾಂಧವರೇ ! ಕಾವ್ಯತೀರ್ಥರೆಂಬ ವಿಶೇಷಣವನ್ನಿಟ್ಟುಕೊಂಡಿರುವ ಪಂಡಿತ ಕಾಶೀನಾಥಶಾಸ್ತ್ರಿಗಳೆಂಬವರಿಂದ ರಚಿಸಲ್ಪಟ್ಟು ಬೆಂಗಳೂರು ಸಿಟಿ ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ ಮುದ್ರಿತವಾದ ವೀರಶೈವಬ್ರಾಹ್ಮಣ ಸನ್ಯಾಸಾಶ್ರಮವಿಮರ್ಶವೆಂಬ ವಿಲಕ್ಷಣವಿಷಮವಿಷಯ ವಿಷಮಯವಾದ ಲೇಖನದಿಂದೊಡಗೂಡಿದ ಒಂದು ಸಣ್ಣ ಸಂಚಿಕೆಯು ಸುಮಾರು ೮-೯ ತಿಂಗಳ ಕೆಳಗೆ ನನ್ನ ದೃಷ್ಟಿಗೆ ಗೋಚರವಾಯಿತು. ಅದಕ್ಕೆ ನಾನು ಸಿದ್ಧಮಂತ್ರದಂತಿರುವ ಒಂದು ಖಂಡನವನ್ನು ಸಂಸ್ಕೃತಭಾಷೆಯಲ್ಲಿಯೂ, ಕರ್ಣಾಟಕಭಾಷೆಯಲ್ಲಿಯೂ ರಚಿಸಿ, ಎರಡನ್ನೂ ಮುದ್ರಣಮಾಡಿಸಿ, ಪರಿಶೀಲನಾರ್ಥವಾಗಿ ವೀರಶೈವಮಹಾಜನಗಳಲ್ಲಿ ಪ್ರಕಟಿಸಿದೆನು. ಅದಕ್ಕೆ ಕಾಶೀನಾಥಶಾಸ್ತ್ರಿಗಳು ಯಾವುದೊಂದು ಉತ್ತರವನ್ನೂ ಕೊಡದೆ ಸ್ತಬ್ಧರಾಗಿರುವುದರಿಂದಲೇ ತಮ್ಮ ತಪ್ಪನ್ನು ತಾವು ತಿಳಿದುಕೊಂಡಂತಾಯಿತು. ಹೀಗಿರುವಲ್ಲಿ ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳೆಂಬವರೊಬ್ಬರು ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣವೆಂಬ ಹೆಸರಿನಿಂದ ೭೦ ಪುಟಗಳುಳ್ಳ ಒಂದು ಪುಸ್ತಕವನ್ನು ಅಚ್ಚುಮಾಡಿಸಿ ಪ್ರಕಟಿಸಿರುತ್ತಾರೆ. ಅದರಲ್ಲಿ ಕಾಶೀನಾಥಶಾಸ್ತ್ರಿಗಳನ್ನು ವೀರಶೈವ ಧರ್ಮಶಾಸ್ತ್ರದ ಯಥಾರ್ಥತತ್ವಜ್ಞರೆಂದೂ, ಜಗದ್ವಿಖ್ಯಾತರಾಗಿದ್ದಾರೆಂದೂ, ಕಲ್ಕತ್ತಾ ಗವರ್ನ್ಮೆಂಟಿನವರಿಂದ ಸನ್ಮಾನಿತರೆಂದೂ ಹೊಗಳಭಟ್ಟರಂತೆ ಹೊಗಳಿದ್ದಾರೆ. ಇಷ್ಟುಮಾತ್ರವಲ್ಲದೆ ಕಾಶೀನಾಥಶಾಸ್ತ್ರಿಗಳ ಒಂದು ಭಾವಚಿತ್ರಪಟವನ್ನು ತಮ್ಮ ಪುಸ್ತಕದ ಆದಿಭಾಗದಲ್ಲಿ ಜಂಟಿಸಿದ್ದಾರೆ. ಇದರಿಂದ ಸದರಿ ಗುರುಸಿದ್ಧಶಾಸ್ತ್ರಿಗಳು ಆ ಕಾಶೀನಾಥಶಾಸ್ತ್ರಿಗಳ ಪುಚ್ಛಾವಲಂಬಿಗಳೆಂದು ತೋರುತ್ತೆ. ಹೇಗಾದರೂ ಇರಲಿ. ಇವರು ಗ್ರಂಥಾರಂಭದಲ್ಲಿ—

"ಭಾಷ್ಯರೂಪೇಣ ಸಿದ್ಧಾಂತಂ ನಿಗಮಾಗಮಸನ್ಮತಂ । ವಿಲಿಖ್ಯ ಕೃಪಯಾಂ ಚ ಕ್ರುರ್ಕೇತಾನ್ ವಂದೇ ಜಗದ್ಗುರೂನ್" ಎಂದು ಜಗದ್ಗುರುಗಳನ್ನೂ ಇದರ ಕೆಳಗೆ. "ಗುರುದ್ರೋಹಿತಮಸ್ಸೂರ್ಯ ಸ್ಸಾಧುವರ್ಯಸ್ಸುಧೀಸ್ಸದಾ । ಲೋಕೇವಿಜಯತಾಂಶ್ರೀಮಾನ್ ಕಾಶೀನಾಥಬುಧೋಮುದಾ" ಎಂದು ಕಾಶೀನಾಥಶಾಸ್ತ್ರಿಗಳನ್ನೂ, ಉದ್ದೇಶಿಸಿ ಮಂಗಲವನ್ನು ಮಾಡಿದ್ದಾರೆ. ಮೊದಲನೆಯ ಮಂಗಳಶ್ಲೋಕದಲ್ಲಿ ಹೇಳಿರುವಂತೆ ಜಗದ್ಗುರುಗಳು ಯಾರೋ ? ಬಹುವಚನವಿರುವುದರಿಂದ ಎಷ್ಟುಮಂದಿಗಳೋ ? ಅವರಿಂದ ಮಾಡಲ್ಪಟ್ಟ ನಿಗಮಾಗಮಸಮ್ಮತವಾದ ಸಿದ್ಧಾಂತ ಯಾವುದೋ ? ಯಾರಿಗೂ ಗೊತ್ತಾಗುವುದಿಲ್ಲ. ಮತ್ತು ಎರಡನೆಯ ಮಂಗಲಶ್ಲೋಕದಲ್ಲಿ ತಮ್ಮ ಅಭಿಮಾನದೇವತೆಗಳಾದ ಕಾಶೀನಾಥಶಾಸ್ತ್ರಿಗಳಲ್ಲಿ ಗುರುದ್ರೋಹಿ ನಿವಾರಕತ್ವವನ್ನೂ, ಸಾಧುಶಿಖಾಮಣಿತ್ವವನ್ನೂ, ಸುಬುದ್ಧಿತ್ವವನ್ನೂ, ಶ್ರೀಮತ್ವವನ್ನೂ, ಬುಧತ್ವವನ್ನೂ ಆರೋಪಿಸಿದ್ದಾರೆ.

"ತಥಾಪ್ಯಸ್ಮದ್ಭಕ್ತಭಾಗ್ಯಮತನಾಮಪಂಡಿತಾಸ್ತತ್ತ್ವವಿದನಭಿಜ್ಞಾಯ ನಿರಾಭಾರ ವೀರಶೈವೇಷು ಗುರುತ್ವಂ ಶಿಷ್ಯತ್ವರಾಹಿತ್ಯಾದಿಕಂಚೋಪದಿಶ್ಯಜನಾನ್ ವಿಮೋಹಯಂತಿ" ಅಂದರೆ ನಮ್ಮ ನಿರ್ಭಾಗ್ಯ ವೀರಶೈವಮತಸ್ಥರಾದ ಪಂಡಿತರು ಈ ರಹಸ್ಯವಂ ತಿಳಿಯದೆ ನಿರಾಭಾರವೀರಶೈವರಾದ ಸನ್ಯಾಸಿಗಳೇ ಗುರುಗಳೆಂದೂ, ಮಠಾಚಾರ್ಯರಾದವರಿಗೆ ಶಿಷ್ಯರಲ್ಲವೆಂದೂ ಬೋಧಿಸಿ ಜನರನ್ನು ಮರುಳುಗೊಳಿಸುತ್ತಾರೆಂದು ಅರ್ಥವು. ಈ ಮಾತುಗಳನ್ನಾಡುವ ಉದ್ಧತಶಿರೋಮಣಿಗಳಾದ ಕಾಶೀನಾಥಶಾಸ್ತ್ರಿಗಳಿಗೆ ಸಾಧುಶಿಖಾಮಣಿತ್ವವು ಹೇಗೆ ಬಂದೀತು ? ಗುರುಲಕ್ಷಣವನ್ನು ತಿಳಿಸುವುದಕ್ಕಾಗಿ ಹೊರಟು "ತತೋವಿವೇಕಸಂಪನ್ನಂ........" ಇತ್ಯಾದಿ ಸಿದ್ಧಾಂತಶಿಖಾಮಣಿ ಗ್ರಂಥೋದಾಹರಣೆಗಳ ಸಂಗಡ "ಯಯಾದೀಕ್ಷಿತಿಸಾತಸ್ಯಾಂ ಗುರುರ್ದೀಕ್ಷಾಗುರುಸ್ಮೃತಃ" ಎಂಬುವುದೇ ಮೊದಲಾದ ಅತಿವರ್ಣಾಶ್ರಮಾರ್ಹಲಿಂಗಸ್ಥಲೋಕ್ತಗಳಾಗಿರುವ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು, ಪ್ರತಿಪಾದಕಶ್ಲೋಕಗಳನ್ನು ಸೇರಿಸಿ ಕೊನೆಯಲ್ಲಿ "ಇತಿ ಸಿದ್ಧಾಂತಶಿಖಾಮಣೌ" ಎಂದು ಬರೆದಿರುವ ಕಾಶೀನಾಥಶಾಸ್ತ್ರಿಗಳಿಗೆ ದುರ್ಬುದ್ಧಿತ್ವವಲ್ಲದೆ ಸುಬುದ್ಧಿತ್ವವು ಹ್ಯಾಗೆ ಒಪ್ಪುವುದು ? ಧನಾಶೆಯಿಂದಲೋ ಬುದ್ಧಿವಿಪರ್ಯಾಸದಿಂದಲೋ ಲೋಕಮರ್ಯಾದೆ, ಶಾಸ್ತ್ರಮರ್ಯಾದೆಗಳನ್ನೂ ಧಿಕ್ಕರಿಸಿರುವವರಿಗೆ ಶ್ರೀಮತ್ವವು ಸಿದ್ಧಿಸುವುದೇ ? ೯ ಪುಟಗಳುಳ್ಳ ಒಂದು ಚಿಕ್ಕ ಸಂಚಿಕೆಯಲ್ಲಿ "ವ್ಯಕ್ತಾವ್ಯಕ್ತಾದಿ ಸಿದ್ಧಾಂತಾನಿ, ಆಶ್ರಮಧರ್ಮಾಣಾಂ ಸ್ವರೂಪಃ" ಇವೇ ಮುಂತಾದ ಅಬದ್ಧಗಳನ್ನು ಪ್ರಯೋಗಿಸುವವರಿಗೆ ಬುಧತ್ವವು ಲೋಭಿಗೆ ಅನ್ನದಾನ ಭಟ್ಟನೆಂಬ ಹೆಸರಿನಂತೆ ಹಾಸ್ಯಾಸ್ಪದವಲ್ಲವೆ ?

ಯಜ್ಞಶಾಲೆಯಲ್ಲಿ ಋತ್ವಿಜರು ಒಬ್ಬರ ಕಚ್ಚೆಯನ್ನು ಒಬ್ಬರು ಹಿಡಿದುಕೊಂಡು ಯೂಪಸ್ತಂಭವನ್ನು ಸಮಂತ್ರಕರಾಗಿ ಸುತ್ತುವ ಕಾಲದಲ್ಲಿ ಮೊದಲನೆಯವನ ಕಚ್ಚೆಯು ಬಿಚ್ಚಿಹೋದರೆ ಆತನಿಗೆ ಮಾತ್ರವೂ, ಒಂದನೆಯವನಿಗೂ ಎರಡನೆಯವನಿಗೂ ಬಿಚ್ಚಿಹೋದರೆ ಎರಡನೆಯವನಿಗೆ ಮಾತ್ರವೂ, ಈ ಕ್ರಮವನ್ನನುಸರಿಸಿ ಎಲ್ಲರಿಗೂ ಬಿಚ್ಚಿಹೋದರೆ ಕೊನೆಯವನಿಗೆ ಮಾತ್ರವೂ ಪ್ರಾಯಶ್ಚಿತ್ತವಾಗಬೇಕೆಂದು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಉಕ್ತವಾಗಿರುವಂತೆ ಗುರು, ಲಿಂಗ, ಜಂಗಮರು ಒಂದೇಕಾಲದಲ್ಲಿ ಒಂದೆಡೆಯಲ್ಲೇ ಸೇರಿದರೆ ಜಂಗಮನಲ್ಲಿ ಮಾತ್ರ ಪಾದೋದಕಪ್ರಸಾದ ಸ್ವೀಕಾರವು ಅಂಗೀಕೃತವಾಗಿರುವುದು. ಈರೀತಿಯಾಗಿ ಅತ್ಯಾಶ್ರಮಿ, ಶಿವಯೋಗಿ ಮುಂತಾದ ಪರ್ಯಾಯನಾಮಗಳುಳ್ಳ ಅಸಾಧಾರಣ ಜಂಗಮನಿಗೆ ಅಸಾಧಾರಣವಾದ ಗುರುತ್ವವಿದ್ದರೂ ಅತ್ಯಾಶ್ರಮಿಗಳು ಅಷ್ಟಾವರಣದಲ್ಲಿ ಸೇರಿದ ಜಂಗಮರಲ್ಲವೆಂದು ಬರೆದವರ ಹಸ್ತಕ್ಕೂ, ಹಾಗೆ ಪ್ರೇರಿಸಿದ ಬುದ್ಧಿಗೂ, ಬೋಧಿಸಿದವರಿಗೂ ಸಹ ಕಿಲಬು ಹಿಡಿದ ಆಯುಧಗಳಿಗೆ ಸಂಸ್ಕಾರಮಾಡುವಂತೆ ಸಂಸ್ಕಾರಮಾಡುವುದು ಅತ್ಯಾವಶ್ಯಕವಲ್ಲವೆ ?

ಸಾಂಪ್ರದಾಯಕನಲ್ಲದ ಗುರುವಿನಲ್ಲಿ ಗುರುತ್ವವೂ, ಲಿಂಗಾಂಗಸಾಮರಸ್ಯವಿಲ್ಲದ ಜಂಗಮನಲ್ಲಿ ಜಂಗಮತ್ವವೂ, ವಿರಜಾನಲ ಹೋಮದಿಂದಾಗದ ಭಸ್ಮದಲ್ಲಿ ಭಸ್ಮತ್ವವೂ ಸಿದ್ಧಿಸದಿರುವಾಗ ಅವುಗಳು ಅಷ್ಟಾವರಣದಲ್ಲಿ ಸೇರುವ ಬಗೆ ಹೇಗೆ ? ನಿರಾಭಾರಿಗಳೂ, ಅತಿವರ್ಣಾಶ್ರಮಿಗಳೂ, ಷಟ್ಸ್ಥಲಬ್ರಹ್ಮಿಗಳೂ, ಸನ್ಯಾಸಿಗಳೂ, ವಿರಕ್ತರೂ ಎಂಬ ಪರ್ಯಾಯನಾಮವುಳ್ಳ ಸಕಲ ಭಕ್ತಮಾಹೇಶ್ವರಪೂಜ್ಯರಾದ ಜಂಗಮರಂ ಮಾಡುವ ಸಂದರ್ಭದಲ್ಲಿ ಸಕಲ ಭಕ್ತಮಾಹೇಶ್ವರರೂ ಸೇರಿ ಕುಲೀನನಾಗಿಯೂ, ಸರ್ವಾಂಗ ಸೌಷ್ಠವವುಳ್ಳವನಾಗಿಯೂ ಇರುವವನನ್ನು ಆರಿಸಿಕೊಂಡು ಆತನಿಗೆ ಆಶ್ರಮವನ್ನು ಕೊಟ್ಟನಂತರ ಪಟ್ಟಾಧಿಕಾರಿಗಳೂ, ಚರಪತಿಗಳೂ, ಗೃಹಸ್ಥಮಾಹೇಶ್ವರರೂ ಸಾಷ್ಟಾಂಗಪ್ರಣತರಾಗಿ ಆ ಜಂಗಮರಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸುತ್ತಿರುವುದು ಜಗತ್ಪ್ರಸಿದ್ಧವಾಗಿಯೂ, ಶಾಸ್ತ್ರಸಮ್ಮತವಾಗಿಯೂ ಇರುವಲ್ಲಿ ಈ ಶಾಸ್ತ್ರಿಗಳ ಜಂಗಮದ್ರೋಹಬುದ್ಧಿಯ ವೈಶದ್ಯವನ್ನು ವರ್ಣಿಸಲು ಆದಿಶೇಷನಿಗೂ ಅಶಕ್ಯವೆನಬಹುದು. ಮತ್ತು ಪಟ್ಟಾಧಿಕಾರಿಗಳ ಅಧೀನದಲ್ಲಿರುವ ಚರಪತಿಗಳನ್ನೇ ಜಂಗಮರೆಂದು ಹೇಳುವುದಾದರೆ ಈ ಚರಪತಿಗಳನ್ನು ಪೂಜಿಸಿ, ಅವರಲ್ಲಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿದ ಪಟ್ಟಾಧಿಕಾರಿಗಳನ್ನೂ, ವಿರಕ್ತರನ್ನೂ ಇದುವರೆಗೆ ಯಾರೂ ನೋಡಿಯೂ ಇಲ್ಲ, ಕೇಳಿಯೂ ಇಲ್ಲ. ಚರಪತಿಗಳೇ ಜಂಗಮರಾದರೆ ಈ ಶಾಸ್ತ್ರಕಾರರು "ಪಟ್ಟಾಭಿಷೇಕವಾನಾದ್ಯಃ ಪ್ರೋಕ್ತಸ್ಥಿರಪತಿಸ್ತಥಾ" ಎಂದು ಆ ಚರಪತಿಗಳಿಗೆ ಶಿಷ್ಯಭಾವವನ್ನು ವರ್ಣಿಸುತ್ತಿರಲಿಲ್ಲವು. ಆದುದರಿಂದ ಜಂಗಮರಲ್ಲಿರುವ ಪೂಜ್ಯತ್ವವು ನಿರತಿಶಯವಾದುದು. ಲಿಂಗದಲ್ಲಿಯೂ, ಗುರುವಿನಲ್ಲಿಯೂ ಇರುವ ಪೂಜ್ಯತ್ವವು ಸಾತಿಶಯವಾದುದು.

ಹೀಗಿರುವುದರಿಂದಲೇ ದೀಕ್ಷಾವಿಧಿಕರ್ಮಗಳಲ್ಲಿ ಸ್ಥಾಪಿಸುವ ಕಲಶಗಳ ನಾಲ್ಕು ದಿಕ್ಕುಗಳಲ್ಲಿ ಋತ್ವಿಜರೂ, ಪೂರ್ವಾಭಿಮುಖನಾಗಿ ಗುರುವೂ ಕುಳಿತುಕೊಂಡು ಆ ಗುರುವಿನ ಬಲಭಾಗದಲ್ಲಿ ಎತ್ತರವಾದ ಪೀಠವನ್ನು ಹಾಕಿ ಅದರಮೇಲೆ ಚರಮೂರ್ತಿಗಳಾದ ವಿರಕ್ತಸ್ವಾಮಿಗಳನ್ನು ಕುಳ್ಳಿರಿಸಿಕೊಳ್ಳತಕ್ಕದ್ದೆಂದು ಸ್ವಾಯಂಭುವಾಗಮದ ದಶಮಪಟಲದಲ್ಲಿ ಹೇಳಿರುತ್ತೆ.

(ಅಂಡಮಾಶ್ರಿತ್ಯಭುಂಜಂತಂ ಪದ್ಮಪತ್ರಮಯಾಚಿತ) ಎಂಬ ಗಾಥಾನುಸಾರವಾಗಿ ಕಾಶೀನಾಥಶಾಸ್ತ್ರಿಗಳು ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳನ್ನು ಗುರುಗಳಲ್ಲೇ ಜಂಗಮತ್ವ ಸಾಧನಕ್ಕಾಗಿ ಸಹಾಯ ಕೇಳಿಕೊಂಡಿರಬಹುದು.—ಇನ್ನಾದರೂ ನಿರಭಿಮಾನದಿಂದ ಗ್ರಂಥಾವಲೋಕನವಮಾಡಿ ರಾಗದ್ವೇಷಾದಿಗಳನ್ನು ಬಿಟ್ಟು ಅಷ್ಟಾವರಣ ಪರಸ್ಪರ ನ್ಯೂನಾತಿರೇಕಗಳನ್ನು ತಿಳಿದು ಸನ್ಮಾರ್ಗಾವಲಂಬಿಗಳಾಗುವುದು ಒಳ್ಳೆಯದು.

ಸಂಸ್ಕಾರಕರ್ತೃಗಳಾದ ಗುರುಗಳೇ ! ಚಿತ್ತವಿಡಿರಿ. ಈ ಮಹಾಪುರುಷರು ಷಟ್ಸ್ಥಲಬ್ರಹ್ಮಿಗಳನ್ನು ಕೀಳುಮಾಡಿ ನಿಮ್ಮನ್ನೇ ಮೇಲುಮಾಡುತ್ತೇವೆಂದು ಹೊಟ್ಟೆಯಮೇಲೆ ಕಯ್ಯಿಟ್ಟುಕೊಂಡು ಲಿಂಗವ್ಯಾಜದಿಂದ ಹೊಟ್ಟೆ ಹೊರೆದುಕೊಳ್ಳುತ್ತಿರುವರು. ಇವರ ಮಾಯಾಜಾಲಗಳಿಗೆ ನೀವುಗಳು ಖಂಡಿತವಾಗಿಯೂ ವಶರಾಗಬೇಡಿರಿ. ಗುರುವರ್ಗದವರು ಅನೂಚಾನವಾಗಿ ಬಂದಿರುವ ಶಾಸ್ತ್ರೀಯವಾದ ಜಂಗಮವಿಷಯಕವಾದ ಭಕ್ತಿಯನ್ನುಮೀರಿ "ಕ್ರಮತಪ್ಪಿ ನಡೆವುದರಿಂದತಿಕಷ್ಟಮುಂಟೆ" ಎಂಬ ನಿಜಗುಣರ ಉಕ್ತಿಯಂತೆ, ಐಹಿಕಾಮುಷ್ಮಿಕಸುಖಗಳಿಗೆ ದೂರರಾಗಬೇಡಿರಿ ಎಂದು ಸಹಸ್ರಧಾ ಪ್ರಣಾಮಗಳೊಡನೆ ಪ್ರಾರ್ಥಿಸುತ್ತೇನೆ. ಈ ಕಾವ್ಯತೀರ್ಥ, ಧರ್ಮಸುಧಾಕರರಿಬ್ಬರೂ ವಿಷವೃಕ್ಷವನ್ನು ಹುಟ್ಟಿಹಾಕಿ, ದುರಭಿಪ್ರಾಯವೆಂಬ ಜಲಸೇಚನೆಯಿಂದ ಬೆಳೆಸುತ್ತಿರುವರು. ಕಂದ॥ ಕಿಡುಕನನುರೆ ತಡಗೈಯದೆ । ಬಿಡವೇಳ್ಕುಂಮುಳ್ಳಿನಂತೆ ದೂರದೆ ಜಾಣಂ ॥ ಪೊಡವಿಯೊಳವನೆಲ್ಲರುಮಂ । ಕಡಿದ ಹುತನ್ನುಕಿತ್ತಿಶಲ್ಯದಿಂ ಭೇದಿಸುವಂ ॥ ಎಂಬಂತೆ ನೀವು ಇವರಿಗೆ ಆಶ್ರಯ ಕೊಟ್ಟದ್ದಲ್ಲಿ ಶೀಘ್ರದಲ್ಲಿಯೇ ಬಿಡುಗಡೆಮಾಡಿಕೊಳ್ಳುವುದು ಸುಖಕರವು. ಹಾಗೆಮಾಡದೆ ಇವರಿಗೆ ಪ್ರೋತ್ಸಾಹಕೊಡುತ್ತ ಬಂದರೆ ಉತ್ತರೋತ್ತರ ಇವರು ಕಾಕಮೋರೆ ಕಾಯಿಹುಟ್ಟಿ ತೋಟವನ್ನೇ ಹಾಳುಮಾಡಿತೆಂದು ಹೇಳುವ ಸಾಮಾನ್ಯಗಾದೆಯಂತೆ—ಈಗಿರುವ ಪಟ್ಟಾಧಿಕಾರಿ ಚರಪತಿಗಳೆಲ್ಲರೂ ಮಹಾದೀಕ್ಷೆಯನ್ನು ಪಡೆದ ಗುರುಸ್ಥಲ ಬ್ರಾಹ್ಮಣರಾದ ನಮ್ಮಿಂದಲೇ ಹುಟ್ಟಿ ನಮ್ಮಿಂದಲೇ ಮಹಾದೀಕ್ಷೆಯಂ ಪಡೆದವರಾದುದರಿಂದ ಅವರೂ ನಮ್ಮ ಶಿಷ್ಯರೇ ಆಗಿರುತ್ತಾರೆ. ಮತ್ತು ಅವರನ್ನು ನಾವುಗಳೆಲ್ಲರೂ ಸೇರಿ ಆಗಂತುಕ ಶಿಷ್ಯರಿಗೆ ಅಧಿಕಾರಿಗಳನ್ನಾಗಿ ನಿಯಮಿಸಿರುತ್ತೇವೆ. ಎಂಬದಾಗಿ ಹೊರಟರೂ ಹೊರಡಬಹುದು. ಇಂದು ವಿರಕ್ತಮಹಾಶಯರನ್ನು ಶಿಷ್ಯಕೋಟಿಯಲ್ಲಿ ಸೇರಿಸಿದವರು, ನಾಳೆ ಪಟ್ಟಾಧಿಕಾರಿ ಚರಪತಿಗಳನ್ನು ಬಿಡುವರೇ ?

(ಸಶೇಷ.)

INDUSTRIAL REGENERATION.

The Department of Industries and Commerce has been constituted with the intention of developing new Industries or encouraging existing once. In a country like India, we are more concerned with improving the existing methods of production in small or cottage industries. In certain cases where facilities occur for the starting of big concerns like Sugar factory, Paper mill, Oil mill, Glass factory, Match factory, or Tile factory, the department should concern itself in giving help and information that may be valuable in starting the particular industry.

Mistakes have been made in assuming that the department could practically give advice on any matter concerning any industry. This has been the cause of ruin of many an industry. There are certain industries that cannot be started unless it is done on a certain minimum paying scale. I do not believe in the slogan that any industry can be started on a small scale and be developed in time to a big concern. This is not at all practicable in industries enumerated above. It is also necessary that in all such cases, the magnitude of the concern should warrant the appointment of an expert who has really worked in a big factory of the kind and who has to be paid handsomely.

Reverting our attension to the departments of Industries in India, it is found by experience that they should concentrate their attention on small industries and improve their methods of work. There is any amount of scope for work in this direction.

It is invariably the fact that a lay mind however clever cannot grasp mechanical details and take bold action in any technical matter however able may be the technical assistance, it is difficult for the layman to initiate action on his own responsibility. The Government of some of the British provinces in India have found out this mistake and are appointing Mechanical Engineers for such posts wherever such men with the experience of departmental technique are available. For instance, the Government of Bihar and Orissa have appointed a Mechanical Engineer who has had experience in the department to the post of the Director of Industries. This question was raised in the Legislative council of Madras and Dewan Bahadur Krishnan Nair put up an able case for appointing their Industrial Engineer for the post when it recently fell vacant. The Industrial Commission on Industrial devolopment have clearly stated in their report that the Director must be in the ideal case, a business man with technical knowledge. Since it is difficult to secure such men with the pay and prospects usual in such cases, they have recommended technical men with some administrative ability.

It is a well-known fact that civilians without business experience tend to confine their attention to office routine and the disposal of papers become the all-absorbing function. The post may not be considered as a step-up for some civilian, however able he may be and in Mysore, able civilian has been filling the post from time to time. It is a development department requiring a lot of concentration on technical matters and it is for the improvement of the Industries of the people. There is a world of work to be done, for example, in improving agricultural implements, lift irrigation with bullocks and power, improvements in the weaving and dying industries of the cottage type with an eye to quick production. A lot of mechanical improvements are possible in these lines. Take for example, an industrial survey of the State on the lines that the Department of Industries of U.P. of Agra and Oudh have published utilisation of wind and water power for power purposes will come in this survey.

In case higher activities are contempiated, money may be usefully spent in instituting research work on forest produce which is the work of the Industrial Chemist, or on porcelain industry by an expert in this line and so on.

By constant concentration on these lines, any amount of useful and unostentatious work can be done. I do hope that the Government will revise their policy and think on the line that other Governments have been doing.

'Industry.'

ರಾ॥ ಬ॥ ಗುಬ್ಬಿ ತೋಟದಪ್ಪನವರ ಛತ್ರ.

ಈಗ್ಗೆ 2 ವರ್ಷಗಳ ಕೆಳಗೆ ನಾನು ಬೆಂಗಳೂರಿಗೆ ಹೋಗಿ ಈ ಛತ್ರದಲ್ಲಿ ಒಂದು ರೂಮನ್ನು ಬಾಡಿಗೆಗೆ ತೆಗೆದುಕೊಂಡಿರುವಾಗ್ಗೆ ನನ್ನ ಬಾಬತು ಸುಮಾರು 1700 ರೂಪಾಯಿ ಬೆಲೆಬಾಳುವ ಪದಾರ್ಥಗಳು ಕಳುವಾಗಿದ್ದವು. ಆಗ್ಗೆ ಛತ್ರದ ಮ್ಯಾನೇಜರಾಗಿದ್ದ ಟಿ. ಪುಟ್ಟಪ್ಪ ಎಂಬುವವರು ಬಹಳ ಪ್ರಯಾಸಪಟ್ಟು ಕಳುವಾಗಿದ್ದ ಪದಾರ್ಥಗಳನ್ನು ಪತ್ತೆಮಾಡಿಕೊಟ್ಟರು. ಅದಕ್ಕಾಗಿ ನಾನು ಸಂತೋಷಪಟ್ಟುಕೊಂಡು ಪುಟ್ಟಪ್ಪನವರಿಗೆ 25 ರೂ. ಯನ್ನು ಬಹುಮಾನವಾಗಿ ಕೊಡಲು ಅವರು ಅದನ್ನು ತೆಗೆದುಕೊಳ್ಳದೆ ಛತ್ರದಲ್ಲಿಡಲ್ಪಟ್ಟಿರುವ ಚಾಂಟಿ ಬಾಕ್ಸಿಗೆ ಆ 25 ರೂ. ಯನ್ನು ಹಾಕಿಸಿದರು. ಈಗ್ಗೆ 1 ತಿಂಗಳ ಕೆಳಗೆ ಬೆಂಗಳೂರಿಗೆ ಬಂದು ಇದೇ ಛತ್ರದಲ್ಲಿಳಿದುಕೊಂಡಿರುವಾಗ್ಗೆ ಬೇರೆಯೊಬ್ಬರು ಮ್ಯಾನೇಜರಿದ್ದರು. ಅಲ್ಲಿನ ವ್ಯವಸ್ಥೆಯು ಬಹಳ ಅಸಮರ್ಪಕವಾಗಿತ್ತು. ಆದ್ದರಿಂದ ನಿಸ್ಪೃಹರೂ, ಶ್ರದ್ಧೆಯಿಂದಲೂ, ವಿಶ್ವಾಸದಿಂದಲೂ ಕೆಲಸಮಾಡುವವರೂ ಆದವರು ಇಂಥಾ ದೊಡ್ಡ ಛತ್ರದ ಮ್ಯಾನೇಜರಾಗಿರುವದು ಆವಶ್ಯಕವಾಗಿರುವದರಿಂದ ಈ ಛತ್ರದ ಧರ್ಮದರ್ಶಿಗಳು ಇದನ್ನು ಅಗತ್ಯವಾಗಿ ಗಮನಿಸಬೇಕು.

ಸುಬ್ರಾವ್, ಅನಂತಪುರ.

ಎಲಕ್ಷನ್ನಿನ ಫಲಿತಾಂಶವು.

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು ಬೋರ್ಡಿನಿಂದ ಬಳ್ಳಾರಿ ಡಿ॥ ಬೋರ್ಡಿಗೆ ತಾ॥ 12-5-26 ರಲ್ಲಿ 7 ಸೀಟಿಗಾಗಿ ನಿಂತ 17 ಜನರಲ್ಲಿ ಎಲೆಕ್ಷನ್ನಿನಿಂದ ಚುನಾಯಿಸಿ ಬಂದ ಮೆಂಬರುಗಳ ಹೆಸರು ಈ ಕೆಳಗೆ ನಮೂದಿಸಿದಂತೆ ಇರುತ್ತದೆ.—

1. ಗುಗ್ಗರಿ ದೊಡ್ಡಪ್ಪ, ಬೆಂಚ್‌ಮೆಜಿಸ್ಟ್ರೇಟ್. 2. ಪತ್ತಿಕೊಂಡ ನಾಗಪ್ಪಶೆಟ್ಟಿ, ಮ್ಯುನಿಸಿಪಲ್ ಚೇರಮನ್. 3. ಎ. ಡಿ. ತಾಂಡುಮೊದಲಿಯಾರು. 4. ಕೆ. ಕೊಟ್ರಬಸಯ್ಯನವರು, ಕೂಡ್ಲಗಿ. 5. ವೀರಭದ್ರಗೌಡರು, ಕೂಡ್ಲಗಿ. 6. ಕೆನ್ನಳ್ಳಿ ಬಸವಲಿಂಗನಗೌಡರು, ಕೊಟ್ಟೂರು. 7. ಮುದ್ದಗಲ್ಲು ವೀರಭದ್ರಪ್ಪ, ನಾರಾಯಣದೇವರಕೆರೆ. ಮತ್ತು ಅದೇದಿವಸ ಹೊಸಪೇಟೆ ತಾಲ್ಲೂಕು ಬೋರ್ಡು ವೈಸ್‌ಪ್ರಸಿಡೆಂಟು ಸ್ಥಳಕ್ಕೆ ಉಮೇದವಾರರಾಗಿ ನಿಂತ ಎರಡುಜನಗಳ ಪೈಕಿ ಮ॥ ಗೌಡರ ವೆಂಕೋಬರಾಯರು ಕಂಪ್ಲಿ. ಈಪ್ರಕಾರ ಮಹಾಜನಗಳು ಸರ್ವಜನಸಮ್ಮತದಿಂದ ಮೆಂಬರುಗಳಾಗಿ ಆರಿಸಿ ಬಂದಿರುತ್ತಾರೆಂದು ತಿಳಿಸಲು ಅತ್ಯಾನಂದವಾಗುತ್ತದೆ. "ಪರೋಪಕಾರಾರ್ಥಮಿದಂ ಶರೀರಂ" ಎಂಬುಕ್ತಿಯಂತೆ ಸಾರ್ವಜನಿಕ ಹಿತವನ್ನು ಬಯಸತಕ್ಕ ಕಾರ್ಯದಲ್ಲಿ ವಿಶೇಷಭಾಗ ತೆಗೆದುಕೊಂಡು ಜನಸ್ತುತಿಗೆ ಪಾತ್ರರಾಗಬೇಕೆಂದು ಆಶಿಸುವ,

ತಮ್ಮ ಶ್ರೇಯೋಭಿಲಾಷಿ.

ಪೌರಸಾಮಾಜಿಕ ಮೀಟಿಂಗು

ಅಜ್ಜೀಹಳ್ಳಿ ಗ್ರಾಮದ ಶ್ರೀ ಅಂಜನೇಯದೇವರ ದೇವಸ್ಥಾನದಲ್ಲಿ ಗ್ರಾಮದ ಮುಖ್ಯಸ್ಥರ ಇಚ್ಛಾಪ್ರಕಾರ ಸಭೆಸೇರಲ್ಪಟ್ಟಿತು. ಎಲ್ಲಾ ಕೋಮಿನವರು ಮುಖ್ಯವಾಗಿ ಲಂಬಾಣಿಗರೂ ಅದಿಕರ್ನಾಟಕರೂ ಹೆಚ್ಚಾಗಿ ಬಂದಿದ್ದರು. ಪೌರಸಾಮಾಜಿಕ ವಿಷಯವಾಗಿ ಹಮ್ಮ ಹಾಲ್ಲೂಕು ಸ್ಕೂಲ್ ಮ॥ ವೆಂಕಟೇಶಮೂರ್ತಿಯವರು ಉಪನ್ಯಾಸವನ್ನು ಮಾಡಿದರು. ಸಾಧ್ಯವಾದಮಟ್ಟಿಗೂ ವಿವಾದದ ಖರ್ಚುಗಳನ್ನು ಕಡಮೆಮಾಡಬೇಕೆಂತಲೂ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸಮಾಡಿಸಬೇಕೆಂತಲೂ ಪ್ರಾಣಿಹಿಂಸೆ ಮಾಡತಕ್ಕದ್ದು ನಿಲ್ಲಿಸಬೇಕೆಂತಲೂ, ನಿಷಾಪದಾರ್ಥಗಳನ್ನು ವರ್ಜಿಸಬೇಕೆಂತಲೂ, ಎಲ್ಲರೂ ಅನ್ಯೋನ್ಯವಾಗಿರಬೇಕೆಂತಲೂ ಮನಸ್ಸಿಗೆ ನಾಟುವಂತೆ ಉಪನ್ಯಾಸಮಾಡಿದರು. ತಮ್ಮಲ್ಲಿರುವ ಕೆಟ್ಟ ಪದ್ಧತಿಗಳನ್ನು ಬಿಡುತ್ತೇವೆಂಬದಾಗಿ ಸಭೆಯಲ್ಲಿ ಲಂಬಾಣಿಗರು ಏಕವಾಕ್ಯತೆಯಿಂದ ಹೇಳಿದರು. ಈ ಸಭೆನಡೆಸುವುದರಲ್ಲಿ ಗ್ರಾಮದ ಮುಖ್ಯಸ್ಥರು ಉಪಾಧ್ಯಾಯರು ತುಂಬಾ ಮುತುವರ್ಜಿವಹಿಸಿದ್ದರು. ತಾ॥ 24-5-26ನೇ ಎಂಪೈರಡೆ ದಿವಸ ಈ ರೀತಿಯಾಗಿ ನಡೆಸಲ್ಪಟ್ಟು ಶ್ರೀಮನ್ ಮಹಾರಾಜರವರ ಶ್ರೇಯಪ್ರಾರ್ಥನೆಯಾದನಂತರ ಸಭೆ ಬರಖಾಸ್ತು ಮಾಡಲ್ಪಟ್ಟಿತು.

ಪಟೇಲ್ ಹನುಮಂತಪ್ಪ ಅಜ್ಜಹಳ್ಳಿ.

ಶಿದ್ದೀಕ ವ ಚೆನ್ನಬಸವೇಶ್ವರ.

ಶಿದ್ದೀಕನೆಂಬ ಓರ್ವ ತುರುಕನು ಚೆನ್ನಬಸವೇಶ್ವರ ಎಂಬ ಹೆಸರನ್ನು ಇಟ್ಟುಕೊಂಡು ತಾನು ಪರಮೇಶ್ವರನಿಂದ ಕಳುಹಿಸಲ್ಪಟ್ಟ ಪ್ರತಿನಿಧಿ ಎಂದೂ ತಾನೇ ಚೆನ್ನಬಸವೇಶ್ವರನೆಂದೂ ಹೇಳಿಕೊಳ್ಳುತ್ತಾ ಅನೇಕ ಸ್ಥಳಗಳಲ್ಲಿ ಅಗೌರವವನ್ನು ಹೊಂದಿ ಬೆಳಗಾಂವ, ಹುಬ್ಬಳ್ಳಿ ವಗೈರೆ ಸ್ಥಳಗಳಲ್ಲಿ ಬಾಯಿಗೆ ಬೀಗವನ್ನುಹಾಕಿಸಿಕೊಂಡು ಸದ್ದಿಲ್ಲದೆ ಇದುವರೆವಿಗೂ ಸುಮ್ಮನಿದ್ದು ಈಗ ಮೈಸೂರುಸೀಮೆಗೆ ಬಂದು ಪುನಹ ತನ್ನ ಅವತಾರವನ್ನು ಪ್ರಾರಂಭಿಸಿರುವುದು ಸರಿಯಷ್ಟೆ. ಈತನು ಈಗ ತುಮಕೂರಿನಲ್ಲಿ "ಚೆನ್ನಬಸವೇಶ್ವರ" ಎಂಬ ಪತ್ರಿಕೆಯನ್ನು ಹೊರಡಿಸುತ್ತಿರುವನು. ಈ ಪತ್ರಿಕೆಯಲ್ಲಿ ಹಿಂದುಧರ್ಮಕ್ಕೆ ಅದರಲ್ಲೂ ವೀರಶೈವಧರ್ಮಕ್ಕೆ ಕುಂದುಕಗಳಾದ ಲೇಖನಗಳೂ, ಸುಳ್ಳು ಮತ್ತು ಮೋಸದ ಲೇಖನಗಳೂ ತುಂಬಿವೆಯೇಹೊರತು ನಿಶ್ಚಯವಾದ ಲೇಖನಗಳಾವುವೂ ಇಲ್ಲ. ಈತನು ಇಂಥವರು ಅಂಥವರು ತನ್ನ ಸಮಾಜಕ್ಕೆ ಸೇರಿಕೊಂಡರೆಂಬುದಾಗಿ ಬರೆದು ತಿಳಿಯದ ಜನಗಳನ್ನು ತನ್ನ ಮೋಸದಬಲೆಯಲ್ಲಿ ಸಿಕ್ಕಿಸಿಕೊಳ್ಳಲು ಪ್ರಯತ್ನಿಸಿರುವನು. ತನ್ನ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ವೀರಭದ್ರಪ್ಪನೂ, ನಂಜುಂಡಪ್ಪನೂ ಹಿಂದುಮತವನ್ನು ತ್ಯಜಿಸಿ ಹೈದರ್‌ಸಾಬ್, ಹುಸೇನ್‌ಸಾಬ್ ಎಂಬುದಾಗಿ ಹೆಸರನ್ನು ಇಟ್ಟುಕೊಂಡಿದ್ದ ಭಾಗದಲ್ಲಿ ಅವರ ಸಂಪೂರ್ಣ ವಿಳಾಸವನ್ನು ತಿಳುಹಿಸಲಿಲ್ಲವೇಕೆ ? ಅಲ್ಲದೆ ಅವರ ತಾಯಿತಂದೆಗಳೂ, ಬಂಧುಬಳಗದವರೂ ಇವರು ಮತವನ್ನು ತ್ಯಜಿಸಿ ಹೋದಾಗ್ಗೂ ಏನೂ ಗಲಾಟೆಮಾಡದೆ ಸುಮ್ಮನಿರುವರೆ ? ಎಂಬ ವಿಷಯಗಳನ್ನೆಲ್ಲಾ ತಿಳುಹಿಸಿದ್ದರೆ ಶಿದ್ದೀಕನ ಮಾತಿನ ಬೆಲೆಯು ಸರ್ವರಿಗೂ ಗೊತ್ತಾಗುತ್ತಿದ್ದಿತು. ಅದರಂತೆಯೇ ಪ್ರಭಪ್ಪಸ್ವಾಮಿ, ಶರಣಮ್ಮಸಾಧು, ಕೃಷ್ಣಮೂರ್ತಿಸಾಧು ಮೊದಲಾದ 49 ಜನಗಳ ಹೆಸರನ್ನು ಬರೆದು ಅವರೆಲ್ಲರೂ ತನ್ನ ದೀನ್‌ದಾರ್‌ಸಮಾಜಕ್ಕೆ ತುಂಬಾ ಸಹಾಯಕರೆಂಬುದಾಗಿ ಬರೆದಿರುವನು. ಶಿದ್ದೀಕಸಾಹೇಬರೇ, ಈ ವಿಧವಾದ ಕೃತ್ರಿಮಹೆಸರನ್ನು ಬರೆಯುವ ಹವ್ಯಾಸವನ್ನು ಎಂದಿನಿಂದ ಕಲಿತಿರಿ ? ಹೀಗೆಲ್ಲಾ ಮಾಡಿದರೆ ಜನಗಳು ಮೋಹಿಸಿ ತಮ್ಮ ಬಲೆಗೆ ಬೀಳಬಹುದೆಂದು ಮಾಡಿರುವಿರೇನು ? ನಿಮ್ಮಂಥವರ ಮೋಸಗಾರಿಕೆಗೆ ಹಿಂದುಗಳು ಬಲಿಬೀಳುವಷ್ಟು ನಿಕೃಷ್ಟರೆಂದು ತಿಳಿದಿರುವಿರೇನು ? ಛೆ ! ಹಾಗೆ ತಿಳಿದಿದ್ದರೆ ನಿಮ್ಮ ಗ್ರಹಿಕೆಯು ತಪ್ಪಾದುದು. ಸ್ವಮತಕ್ಕಾಗಿ ತನುಮನಧನಗಳನ್ನರ್ಪಿಸುವ ಹಿಂದುಗಳಲ್ಲಿ ನಿಮ್ಮ ಆಟಸಾಗದೆಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿಡಿ.

ಶಿದ್ದೀಕ್‌ಸಾಹೇಬರೇ, ನಿಮ್ಮ ಪ್ರತಿಮಾತಿನಲ್ಲಿಯೂ ಕಾಲಜ್ಞಾನವನ್ನು ತೋರಿಸಹೋಗಿರುವಿರಿ. ನೀವು ಕಾಲಜ್ಞಾನವನ್ನು ಓದುವುದು ಬೇಡ, ಅದರ ಮುಖವನ್ನಾದರೂ ನೋಡಿರುವಿರಾ ? ಮೌನೇಶ್ವರಕಾಲಜ್ಞಾನದಲ್ಲಿ "ನೂರಾಒಂದು ಕುಲಗಳು ಒಂದಾಗನಡೆದಾವು ದೀನ್‌ದಾರ್ ಚೆನ್ನಬಸವಣ್ಣ ಬರುವಾಗ" ಎಂಬುದಾಗಿರುವುದಾಗಿ ಚೆನ್ನಬಸವೇಶ್ವರಪತ್ರಿಕೆಯಲ್ಲಿ ಬರೆದಿರುವಿರಿ. ಹೀಗೆ ಆ ಕಾಲಜ್ಞಾನದಲ್ಲಿರುವುದು ನಿಜವೇ ? ಯಾವ ಪುಟದಲ್ಲಿದೆ ? ನೀನೇ ದೀನ್‌ದಾರ್ ಚೆನ್ನಬಸವಣ್ಣನಾಗಿರುವಾಗ ನೂರಾಒಂದು ಕುಲಗಳು ಒಂದಾಗಲಿಲ್ಲವೇಕೆ ? ನಿಮ್ಮ ಪತ್ರಿಕೆಯಲ್ಲಿ ಬರೆದಿರುವಂತೆ ಕಳೆದ ತಿಂಗಳು ಡೆಲ್ಲಿಯಲ್ಲಿ ಹಿಂದುಮಹಮ್ಮದೀಯರಿಗೆ ಜಗಳವಾಗಿ ಹಿಂದುಗಳು ಮುಸಲ್ಮಾನರ ಮಸೀದಿಯಲ್ಲಿ ನುಗ್ಗಿ ಹದಿಮೂರು ಸ್ಥಳಗಳಲ್ಲಿ ಕಲ್ಲಿನಮೇಲಿದ್ದ "ಅಲ್ಲಾ" ಎಂಬ ಹೆಸರನ್ನು ಅಳಿಸಿ "ಓಂ" ಎಂಬುದಾಗಿ ಬರೆದಿರುವುದೂ ಹೀಗೆ ಮಾಡಿದ 5 ಹಿಂದೂಜನಗಳನ್ನು ಹಿಡಿದು ವಿಚಾರಣೆಮಾಡುತ್ತಿರುವುದೂ ನಿಜವೇ ? ಇದುವರೆವಿಗೂ ಯಾರಿಗೂ ತಿಳಿಯದಿದ್ದ ಈ ವಿಷಯವು ನಿಮಗೆ ಹೇಗೆ ಗೊತ್ತಾಯಿತು ? ಹೀಗೆಲ್ಲಾ ತಮ್ಮ ಪತ್ರಿಕೆಯಲ್ಲಿ ಬರೆದಾಕ್ಷಣವೇ ಜನಗಳು ಅದನ್ನು ನಂಬುವಷ್ಟು ಮೂಢರೆಂಬುದಾಗಿ ತಿಳಿದಿರುವಿರಾ ? ಶಿದ್ದೀಕರವರೇ, ಇನ್ನು ನಿಮ್ಮ ಮೋಸದ ಢೋಂಗಿತನವನ್ನು ಬಿಡಿ. ಹಿಂದುಗಳೆಲ್ಲಾ ಎಚ್ಚತ್ತು ನಿಮ್ಮ ಮೋಸಗಾರಿಕೆಯನ್ನು ಹೊರಪಡಿಸಲು ಸಿದ್ಧರಾಗಿರುವರು. ಅವರು ಎಚ್ಚರಿಸುವುದಕ್ಕಿಂತ ಮುಂಚಿತವಾಗಿಯೇ ನೀವೇ ನಿಮ್ಮ ಢೋಂಗಿತನವನ್ನು ಬಿಡುವುದು ಉತ್ತಮ.

ಹಿಂದುಮಹಾಶಯರೇ, ಪರಮತಿಯರ ದಾಳಿಯನ್ನು ಇನ್ನೂ ಎಲ್ಲಿಯವರೆಗೆ ಸಹಿಸುವಿರಿ ? ಇನ್ನಾದರೂ ಜಾಗ್ರತರಾಗಿ ಹುಬ್ಬಳ್ಳಿ, ದಾವಣಗೆರೆ, ಹಾವೇರಿ, ಬಾಗಲ್ಕೋಟೆ ಮೊದಲಾದ ಸ್ಥಳದವರಂತೆ ತಾವಾದರೂ ತಂತಮ್ಮಲ್ಲಿ ಸಭಾಮಾಡಿ ಶಿದ್ದೀಕನ ಕೃತಿಯನ್ನು ನಿಷೇಧಿಸಿ ಆತನು ಹೊರಡಿಸುವ ಪತ್ರಿಕೆಯನ್ನು ಕೂಡಲೆ ನಿಲ್ಲಿಸಬೇಕೆಂಬುದಾಗಿ ಮೈಸೂರು ಶ್ರೀಮನ್ ಮಹಾರಾಜರವರನ್ನೂ, ದಿವಾನರವರನ್ನೂ ಪ್ರಾರ್ಥಿಸಿರಿ. ಅಲ್ಲದೆ ಶಿದ್ದೀಕನ ಕೃತಿಯನ್ನು ನಿಲ್ಲಿಸುವಂತೆ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳಿರಿ. ಹಿಂದು ಪತ್ರಿಕಾಕರ್ತರುಗಳು ಈ ವಿಷಯದಲ್ಲಿ ಜನಜಾಗ್ರತೆಹುಟ್ಟಿಸುವ ಲೇಖಗಳನ್ನು ಪ್ರಕಟಿಸದಿರಲಾರರಾಗಿಯೂ, ಕೌನ್ಸಿಲ್‌ಮೆಂಬರುಗಳು ಈ ವಿಷಯದಕಡೆ ತಮ್ಮ ಲಕ್ಷ್ಯವನ್ನು ಕೊಡದಿರಲಾರರಾಗಿಯೂ ನಂಬಿರುವ,

ಓರ್ವ ಹಿಂದುಮತಾಭಿಮಾನಿ.

ಸನ್ಮಾನಸಮಾರಂಭ.

ಕಾನಡಾಜಿಲ್ಲಾ ಮುಂಡಗೋಡ ಪೇಟಾ ಚಿಗಳ್ಳಿಯಲ್ಲಿ ತಾ॥ 21-4-26 ನೇ ಬುಧವಾರ ಸಭೆಸೇರಿ ನಮ್ಮ ಸರ್ಕಾರವು ಸಿರ್ಸಿ ಸಬ್‌ಜಡ್ಜ ಕೋರ್ಟ ಗೌವರನ್‌ಮೆಂಟ ವಕೀಲರಾದ ಶ್ರೀಯುತ ನೆಜ್ಜೂರ ಸದಾಶಿವಪ್ಪಗೌಡರಿಗೆ ಇದೇ ವರ್ಷಾರಂಭದಲ್ಲಿ "ರಾವಸಾಹೇಬ" ಎಂಬ ಬಹುಮಾನದ ಕಿತಾಬು ಕೊಟ್ಟು ಸನ್ಮಾನಿಸಿದ್ದಕ್ಕಾಗಿ ಸರ್ಕಾರದ ಅಭಾರ ಎಣಿಸಿ ವಕೀಲರ ಅಭಿನಂದನೆಮಾಡಲಿಕ್ಕಾಗಿ ಈ ಜಿಲ್ಲೆಯಲ್ಲಿ ಹಿಂದಕ್ಕೆ ಮಾಮಲೇದಾರ, ಚಿಟನೀಸ ಮುಂತಾದ ಸರ್ಕಾರೀ ನೌಕರೀಮಾಡಿ ಪೆನ್‌ಷನ್‌ಪಡೆದಿರುವ ಶ್ರೀಯುತ ಇ॥ ಬಾ॥ ಗರ್ದೇಯವರ ಅಧ್ಯಕ್ಷತೆಯಲ್ಲಿ ಪ್ರಚಂಡಸಭೆಸೇರಿತ್ತು. ಲೋಕೇಶ್ವರ ಮಾಸ್ತರ ಮತ್ತು ನಾರಾಯಣರಾವ ಗೋಖಲೆ ಮುಂಡಗೋಡ ಇವರು ತಮ್ಮ ಸರಸವಾಣಿಯಿಂದ ಸಮಯೋಚಿತ ಭಾಷಣಮಾಡಿದರು. ಆಮೇಲೆ ರಾವಸಾಹೇಬ ವಕೀಲರು "ಸಿರ್ಸಿ ಮ್ಯುನಿಸಿಪಾಲಿಟಿ, ತಾಲ್ಲೂಕಾ ವ ಡಿಸ್ಟ್ರಿಕ್ಟ್ ಲೋಕಲ್‌ಬೋರ್ಡ ಕೃಷಾಭಿವೃದ್ಧಿ ಸಂಘ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಸೇರಿ ನಾನು ಅಲ್ಪಸ್ವಲ್ಪ ಜನಸೇವೆಮಾಡಿರುವದೇನೋ ನಿಜ. ಆದರೆ ನಾವು ಸಣ್ಣ ಅಲ್ಪಸೇವೆಯನ್ನು ಉಚಿತವಾಗಿ ವರ್ಣಿಸಿರುವಿರಿ. [illegible] ತಿಳಿಯವೆಂದು ನಾನು ಒಪ್ಪುವಲೆನು. ನನ್ನ ಅಲ್ಪಸೇವೆಯನ್ನೇ ದೊಡ್ಡದೆಂದು ಅಂತಃಕರಣಪೂರ್ವಕವಾಗಿ ಮಾಡಿದ ತಮ್ಮ ಈ ಸನ್ಮಾನಕ್ಕೆ ಬಹಳೇ ಅಭಾರಿಯಾಗಿದ್ದೇನೆ. ಇಂಥ ದೊಡ್ಡ ಸಮಾರಂಭದಿಂದ ನನ್ನನ್ನು ಸನ್ಮಾನಿಸಲಿಕ್ಕೆ ನಿಮ್ಮ ಸ್ವಾರ್ಥವಿರಬಹುದೆಂದು ನನ್ನ ತಿಳುವಳಿಕೆ. ಸ್ವಾರ್ಥವೆಂದರೆ ನನ್ನಿಂದೇನಾದರೂ ಲಾಭಹೊಂದುವದಲ್ಲ, ಆದರೆ ಸ್ವಾರ್ಥತ್ಯಾಗಮಾಡಿ ಸಾರ್ವಜನಿಕ ಕಾರ್ಯಗಳಲ್ಲಿ ಮನಮುಟ್ಟಿ ದುಡಿದು ನಿಮ್ಮ ಹಿತಬಗೆಯುವಂಥ ಧುರಂಧರರು ನಿಮ್ಮಲ್ಲಿ ಜನಿಸಬೇಕೆಂಬ (ಸ್ವಾರ್ಥ) ಇಚ್ಛೆಯಿಂದ ನನಗೆ ನೀವು ಸನ್ಮಾನಿಸುತ್ತಿರುವಿರೆಂದು ನನ್ನ ಗ್ರಹಿಕೆ. ಆದ್ದರಿಂದ ನಿಮ್ಮ ಸಮಾರಂಭದಲ್ಲಿ ನಾನು ಸಹಕಾರಿಯಾಗಿದ್ದೇನೆ. ನಾನಾದರೂ ಸ್ವಾರ್ಥಿಗಳಾಗಬೇಡಿರೆಂತಲೂ, ಕೈಲಾದಷ್ಟರಮಟ್ಟಿಗೆ ಪರೋಪಕಾರಮಾಡುವದು ಧರ್ಮವೆಂತಲೂ ಸ್ವಾರ್ಥತ್ಯಾಗವಿಲ್ಲದ ಸಮಾಜವೇ ಆಗಲೀ ದೇಶವೇ ಆಗಲೀ ಮುಂದರಿಯುವದು ಅಶಕ್ಯವೆಂತಲೂ ಸದಾ ಸರ್ವರಿಗೂ ಹೇಳುತ್ತಲೇ ಇದ್ದೇನೆ. ಅದೇ ವಿಷಯವಾಗಿ ಈಗಲಾದರೂ ಈ ಸಭೆಯ ತರುಣಮಂಡಳಿಗೆ ಪರಹಿತಬಯಸಿರೆಂತಲೂ, ಸ್ವಾರ್ಥಿಗಳಾಗಬೇಡಿರೆಂತಲೂ, ಸಮಾಜಸೇವೆ, ದೇಶಸೇವೆಗಿಂತ ಇನ್ನೊಂದು ಪರಮಪವಿತ್ರದ ಕಾರ್ಯವಿಲ್ಲೆಂತಲೂ ಇದರಿಂದಲೇ ಇಹಪರಸೌಖ್ಯವು ಲಭಿಸುವದೆಂತಲೂ ಒತ್ತಿ ಹೇಳುತ್ತೇನೆ. ತರುಣರಾದ ನೀವು ನಿಮ್ಮನಿಮ್ಮ ಊರುಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಶೇತಕೀ ಸಂಘ ಸಹಕಾರೀಸಂಘ ಮುಂತಾದ ಸಾರ್ವಜನಿಕಮಂಡಲಗಳಲ್ಲಿ ಸೇರಿ ಸ್ವಾರ್ಥಕ್ಕೆ ಲಕ್ಷ್ಯಕೊಡದೆ ಪ್ರಾಮಾಣಿಕತನದಿಂದಲೂ ನಿಸ್ಪೃಹತೆಯಿಂದಲೂ ಕೆಲಸಮಾಡಿ ಜನಹಿತಸಾಧಿಸಿ ಸತ್ಕೀರ್ತಿಪಡೆದು ಲೋಕಾದರಕ್ಕೂ ಸರ್ಕಾರದ ಬಹುಮಾನಕ್ಕೂ ಪಾತ್ರರಾಗುವಂಥ ಸದ್ಬುದ್ಧಿಯನ್ನು ನಿಮಗೆ ಶ್ರೀಪರಮಾತ್ಮನು ಕೊಡಲೆಂದು ಪ್ರಾರ್ಥಿಸುತ್ತೇನೆ. ಹಾಗೂ ಈ ಸಮಾರಂಭದ ಪುರಸ್ಕರ್ತರಾದ ಶ್ರೀ ಸಂಗೂರ ಅಡಿವೆಯ್ಯನವರಿಗೂ ಪಟೇಲ ಲಿಂಗನಗೌಡರಿಗೂ ಬದಲಿ ಪಟೇಲ ಜಂಬಣ್ಣನವರು ಮುಂತಾದ ಈ ಊರ ಪ್ರಮುಖರಿಗೂ, ಶ್ರೀಯುತ ಲೋಕೇಶ್ವರ ಹೆಡ್‌ಮಾಸ್ತರರಿಗೂ ಮತ್ತೊಮ್ಮೆ ನನ್ನ ಕೃತಜ್ಞತೆಯನ್ನರ್ಪಿಸಿ ಈ ಸಭೆಗೆ ದಯಮಾಡಿರುವ ಪರಮಪೂಜ್ಯಸ್ವಾಮಿಗಳನ್ನು ವಂದಿಸಿ ನನ್ನ ಚಿಕ್ಕಭಾಷಣವನ್ನು ಮುಗಿಸುವೆನು" ಎಂದು ಹೇಳಿದರು. ಅನಂತರ ಅಧ್ಯಕ್ಷರು ತಮ್ಮ ಸಮಾರೋಪಣಭಾಷಣದಲ್ಲಿ "ಇಷ್ಟು ಸಣ್ಣ ಹಳ್ಳಿಯಲ್ಲಿ ಇಂಥ ದೊಡ್ಡ ಸಭೆನೆರೆದಿದ್ದು ಕಂಡು ಮಹದಾನಂದವಾಗಿದೆ. ಈ ಊರು ಚಿಕ್ಕಹಳ್ಳಿ (ಚಿಗಳ್ಳಿ) ಯೆನಿಸಿಕೊಂಡಾಗ್ಗೂ ಚಿಕ್ಕಬಾಲಕರಮೇಲೆ ಸ್ವಾಭಾವಿಕವಾಗಿ ಹೆಚ್ಚಿನ ಪ್ರೇಮವಿರುವಂತೆ ಈ ಭಾಗದ ಜನರಲ್ಲಿರುವ ಈ ಹಳ್ಳಿಯಮೇಲಿನ ಪ್ರೇಮದಿಂದಲೋ ಈ ಸಭೆಗೆ ಕಾರಣರಾದ ರಾವಸಾಹೇಬ ವಕೀಲರಮೇಲಿನ ಪ್ರೇಮದಿಂದಲೋ ಇಲ್ಲಿ ಕೂಡಿರುವ ಇಷ್ಟೊಂದು ಜನಸ್ತೋಮವನ್ನೂ ಈ ಕಾರ್ಯದಲ್ಲಿ ಅವರಿಗಿರುವ ಉತ್ಸುಕತೆಯನ್ನೂ ನೋಡಿ ಈ ಸಭೆಗೆ ಬರುವದಕ್ಕೆ ಮುಂಚೆ ನನಗಿದ್ದ ಆನಂದವು ಇಮ್ಮಡಿಮುಮ್ಮಡಿಯಾಗಿದೆ. ಇದರಿಂದ ನನ್ನ ಆಯುಷ್ಯವು ನಿದಾನ ಎರಡುವರ್ಷಗಳಮಟ್ಟಿಗಾದರೂ ವೃದ್ಧಿಯಾಗದೆ ಇರಲಾರದು. ನನಗೆ ಸಿಗುತ್ತಿರುವ ಪೆನ್‌ಷನ್ ಸಂಬಳದ ಲೆಖ್ಖದಿಂದ ಎರಡುವರ್ಷದ ಪೆನ್‌ಷನ್ 5,000 ರೂ. ನನಗೆ ಈ ಸಭೆಯಿಂದಲೇ ಪ್ರಾಪ್ತಿಯಾಯಿತೆಂದು ನಿಶ್ಚಯವಾಗಿ ಹೇಳಬಹುದು. ಮೊದಲು ನಾನು ಈ ಜಿಲ್ಲೆಯಲ್ಲಿ ಮಾಮಲೇದಾರನಾಗಿ ಕೆಲಸಮಾಡುತ್ತಿರುವಾಗ ಈ ವಕೀಲರು ಆಗ ಹೊಸದಾಗಿ ವಕೀಲಿಮಾಡಲಿಕ್ಕೆ ಸುರುಮಾಡಿದವರಾಗಿದ್ದು ನನಗೆ ಪೋರಮಾಮಲೇದಾರನೆಂತಲೂ ಇವರಿಗೆ ಪೋರವಕೀಲರೆಂತಲೂ ಅನ್ನುವ ಸ್ಥಿತಿಯಿತ್ತು. ಈದಿನ ನಾವೀರ್ವರೂ ಜಗತ್ತಿನ ಅನುಭವವುಳ್ಳವರಾಗಿ ಈ ಸಭೆಯಲ್ಲಿ ಹಕ್ಕಿನಿಂದ ನಾಲ್ಕು ಉಪದೇಶದ ಮಾತುಗಳನ್ನಾಡಿರುತ್ತೇವೆ. ರಾವಸಾಹೇಬ ವಕೀಲರಂತೆ ನೀವು ಪರೋಪಕಾರಿಗಳಾಗಿ ಜನಹಿತಸಾಧಿಸಿ ಸತ್ಕೀರ್ತಿಪಡೆಯಬೇಕೆಂಬುದೇ ನನ್ನ ಇಚ್ಛೆ. ತಮ್ಮ ಧರ್ಮಸಂಯೋಗದಿಂದ ನಾನು ಅಕಸ್ಮಾತ್ ಈ ಸಭೆಗೆ ಬಂದು ನೀವು ನನ್ನನ್ನೇ ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಆರಿಸಿ ಈ ಜಿಲ್ಲೆಯಲ್ಲಿ ಬಹುಕಾಲ ಸರ್ಕಾರಿ ನೌಕರಿ ಮಾಡಿ ಈಗ ಕೊಂಕಣದಲ್ಲಿ ವಾಸಿಸುವವನಾದ ನನ್ನ ಮುಖಾಂತರ ಈ ರಾವಸಾಹೇಬರ ಸನ್ಮಾನಸಮಾರಂಭವೂ ಸರ್ಕಾರದ ಆಭಾರವೂ ಜರಗಿದ್ದು ಈಶಸಂಕಲ್ಪವೇ ಎಂದು ತಿಳಿಯುತ್ತೇನೆ. ಇವರಿಗೆ ತೀವ್ರವಾಗಿ "ರಾವಬಹಾದ್ದೂರ" ಕಿತಾಬು ದೊರೆದು ಅದರ ಸನ್ಮಾನಸಮಾರಂಭದಲ್ಲಿ ಈಗಿನಂತೆ ಸಭೆಯ ಅಧ್ಯಕ್ಷಪದವಿಗೆ ಆರಿಸಿ ಬಂದು ಸರ್ಕಾರದ ಆಭಾರ ಎಣಿಸುವಂಥ ಸುಯೋಗವನ್ನು ಇನ್ನೊಮ್ಮೆ ಶ್ರೀದೇವರು ತರಲೆಂದು ಹಾರೈಸುತ್ತೇನೆ" ಈಪ್ರಕಾರ ತಮ್ಮರಸಿಕಭಾಷಣದಲ್ಲಿ ಪ್ರಸಂಗಕ್ಕನುಸರಿಸಿ ಸಂಸ್ಕೃತಶ್ಲೋಕಗಳನ್ನು ಹೇಳುತ್ತ ಜನರನ್ನು ಬಹು ಆನಂದಪಡಿಸಿದರು.

ಸಭೆಯಲ್ಲಿದ್ದವ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

20 ನೆಯ ಪ್ರಕರಣ.

ವಿವಿಧಮತಗಳ ಸಂಪ್ರದಾಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದುದು.

ಆಂಗ್ಲದೇಶದಲ್ಲಿ ನಾನು ಓದುತ್ತಿರುವಾಗ ಇನ್ನೂ ಎರಡನೆಯವರ್ಷ ಮುಗಿಯುವುದರೊಳಗಾಗಿ ದಿವ್ಯಜ್ಞಾನಸಮಾಜದವರಿಬ್ಬರು ನನಗೆ ಪರಿಚಿತಸ್ಥರಾದರು. ಅವರಿಬ್ಬರೂ ಸಹೋದರರಾಗಿದ್ದರಲ್ಲದೆ ಇನ್ನೂ ಮದುವೆ ಮಾಡಿಕೊಂಡಿರಲಿಲ್ಲವು. ಅವರು ಭಗವದ್ಗೀತೆಯನ್ನು ಕುರಿತು ಪ್ರಸಂಗಿಸಲಾರಂಭಿಸಿದರು. ಗೀತೆಗೆ ಸರ್ ಎಡ್ವಿನ್ ಆರ್ನಾಲ್ಡ್ ರವರು ಆಂಗ್ಲಭಾಷೆಯಲ್ಲಿ ಬರೆದ ಟೀಕೆಯನ್ನು ಓದಿದ್ದರು. ನಾನು ಅವರೆಗೆಂದೂ ಗೀತೆಯನ್ನು ಓದಿರಲಿಲ್ಲ. ಆ ಸಂಗತಿಯನ್ನು ಅವರಿಗೆ ತಿಳಿಸಲು ನನಗೆ ಬಹಳ ಲಜ್ಜೆಯಾಗಿದ್ದರೂ ನಿಜವನ್ನು ತಿಳಿಸದಿದ್ದರೆ ಶಿಷ್ಟವಿರಲಿಲ್ಲವಾಗಿ ತಿಳಿಸಿದೆನು. ನನಗೆ ಸಂಸ್ಕೃತಭಾಷಾಜ್ಞಾನವು ಹೆಚ್ಚಾಗಿಲ್ಲದಿದ್ದರೂ ಸಂಸ್ಕೃತಶ್ಲೋಕಗಳಿಗೆ ಆಂಗ್ಲಭಾಷೆಯಲ್ಲಿ ಬರೆದ ಅರ್ಥವೆಲ್ಲಿಯಾದರೂ ಸರಿಯಾಗಿಲ್ಲದಿದ್ದಲ್ಲಿ ಅದನ್ನು ತಿಳಿದುಕೊಳ್ಳುವಷ್ಟು ಭಾಷಾಜ್ಞಾನವು ನನಗೆ ಇಲ್ಲದೆಯಿರಲಿಲ್ಲವು. ಆ ಸಂಗತಿಯನ್ನು ಕೂಡ ಅವರಿಗೆ ತಿಳಿಸಿದೆನು. ಅವರೊಡನೆ ಸೇರಿ ನಾನೂ ಓದಲಾರಂಭಿಸಿದೆನು. ಶ್ಲೋ॥ ಧ್ಯಾಯತೋ ವಿಷಯಾನ್ಪುಂಸಸ್ಸಂಗಸ್ತೇಷೂಪಜಾಯತೇ । ಸಂಗಾತ್ಸಂಜಾಯತೇಕಾಮಃ ಕಾಮಾತ್ಕ್ರೋಧೋಭಿಜಾಯತೇ ॥ ಕ್ರೋಧಾದ್ಭವತಿ ಸಂಮೋಹ ಸ್ಸಂಮೋಹಾತ್ಸ್ಮೃತಿವಿಭ್ರಮಃ । ಸ್ಮೃತಿಭ್ರಂಶಾದ್ಬುದ್ಧಿನಾಶೋಬುದ್ಧಿನಾಶಾತ್ಪ್ರಣಶ್ಯತಿ." ಎಂಬ ಶ್ಲೋಕವನ್ನು ಓದಿದಾಗ ನನ್ನ ಮನಸ್ಸಿನಲ್ಲಿ ಅದು ಚೆನ್ನಾಗಿನಾಟಿತು. ಇಂದಿಗೂ ಆ ಶ್ಲೋಕವು ನಿರಂತರದಲ್ಲಿ ಸ್ಮರಣೆಗೆ ಬರುತ್ತಲೇಯಿದೆ. ಭಗವದ್ಗೀತೆಯು ಅಮೂಲ್ಯಗ್ರಂಥರಾಜವೆಂದು ನಾನು ಆಗ ಗ್ರಹಿಸಿಕೊಂಡೆನು. ಗೀತೆಗೆ ಸಾಟಿಯಾದ ಗ್ರಂಥವು ಮತ್ತೊಂದು ಭಗವತ್ತತ್ವಪ್ರಬೋಧವಾದುದು ಇಲ್ಲವೇ ಇಲ್ಲವೆಂದು ಈಗ ನಾನು ನಿಶ್ಚಯವಾಗಿ ನಂಬಿರುತ್ತೇನೆ. ನಾನು ಆ ಶ್ಲೋಕವನ್ನು ಕಲಿತುಕೊಂಡಾಗ್ಗೆ ಗೀತೆಯು ನನಗೆ ಅತ್ಯಧಿಕಮನಶ್ಶಾಂತಿಯನ್ನುಂಟುಮಾಡಿತು. ಗೀತೆಗೆ ಆಂಗ್ಲಭಾಷೆಯಲ್ಲಿ ಬರೆಯಲ್ಪಟ್ಟಿರುವ ಟೀಕೆಗಳೆಲ್ಲವನ್ನೂ ನಾನು ಓದಿದೆನು. ಎಲ್ಲದರಲ್ಲೂ ಆರ್ನಾಲ್ಡ್ ರವರು ಬರೆದಿರುವುದೇ ಶ್ರೇಷ್ಠವಾದುದು. ಅವರು ಸರಿಯಾಗಿ ಅರ್ಥವನ್ನು ಬರೆದಿರುವರು. ಅದನ್ನು ಓದುವವರಿಗೆ ಅದು ಅನುವಾದವಾಗಿ ತೋರುವುದಿಲ್ಲ. ಆಗ ನಾನು ಅವರೊಡನೆ ಸೇರಿ ಮೊದಲನೆಯಾವರ್ತಿ ಗೀತೆಯನ್ನು ಓದಿದಾಗ ಅದು ಶ್ರದ್ಧಾಸ್ಪದವೆಂದು ಹೇಳಬಹುದಾಗಿದ್ದಿತು. ಅದಾದಮೇಲೆ ಇನ್ನು ಕೆಲ ವರ್ಷಗಳಲ್ಲಿ ಅದನ್ನು ನಾನು ಶ್ರದ್ಧೆಯಿಂದ ಓದುವುದಕ್ಕೂ, ನಿತ್ಯದಲ್ಲೂ ಪಾರಾಯಣಮಾಡಲಿಕ್ಕೂ ಏರ್ಪಡಿಸಿದೆನು.

ಆರ್ನಾಲ್ಡ್ ರವರು ಬರೆದ "ಲೈಟ್ ಆಫ್ ಏಷಿಯಾ" ಎಂಬ ಗ್ರಂಥವನ್ನು ಓದಬೇಕೆಂದು ಆ ಸಹೋದರರು ನನಗೆ ಸೂಚಿಸಿದರು. ಗೀತೆಗಿಂತಲೂ ಹೆಚ್ಚು ಶ್ರದ್ಧೆಯಿಂದ ಅದನ್ನು ಓದಲಾರಂಭಿಸಿ ಮಧ್ಯದಲ್ಲಿ ಬಿಡಲು ನನಗಿಷ್ಟವಾಗಲಿಲ್ಲವು. ಅವರೊಂದಾವರ್ತಿ ನನ್ನನ್ನು ಮೇಡಂ ಬ್ಲಾವಟ್ಸ್ಕಿಯವರ ಮನೆಗೆ ಸಂಗಡ ಕರೆದುಕೊಂಡು ಹೋಗಿ ಆಕೆಯವರ ಮತ್ತು ಬೆಸಂಟರವರ ಪರಿಚಯವನ್ನು ಮಾಡಿಸಿದರು. ಆಗಲೇ ಬೆಸಂಟರವರು ದಿವ್ಯಜ್ಞಾನಸಮಾಜವನ್ನು ಸೇರಿದರು. ಆ ವಿಚಾರವಾಗಿ ವೃತ್ತಪತ್ರಿಕೆಗಳಲ್ಲಿ ಕಾಣವಾಗಿ ಚರ್ಚೆಯು ಜರುಗುತ್ತಿದ್ದಿತು. ಆ ಲೇಖಗಳನ್ನು ನಾನು ಬಹಳ ಆಸಕ್ತಿಯಿಂದ ಓದುತ್ತಿದ್ದೆನು. ಸಮಾಜವನ್ನ ಸೇರಬೇಕೆಂದು ಆ ಸ್ನೇಹಿತರು ನನಗೆ ಸೂಚಿಸಿದರು, ಆದರೆ ನಾನು ಸವಿನಯದಿಂದ ನಿರಾಕರಿಸಿದೆನು. ಸ್ವಮತಪರಿಜ್ಞಾನವೇ ನನಗಿನ್ನೂ ಇಲ್ಲವು. ಹೀಗಿರುವಾಗ್ಗೆ ನಾನು ಇತರ ಮತಕ್ಕೆ ಹೇಗೆ ಸೇರಲಾಗುವುದು?" ಎಂದು ಹೇಳಿದೆನು. ಅವರ ಪ್ರೋತ್ಸಾಹದಿಂದ ನಾನು "ಕೀಟುಥಿಯಾಸಫಿ" ಎಂಬ ಗ್ರಂಥವನ್ನೋದಿದೆನು. ಅದನ್ನು ಬ್ಲಾವಟ್ಸ್ಕಿಯವರೇ ಬರೆದಿದ್ದರು. ಅಷ್ಟರಲ್ಲಿ ಹಿಂದುಮತಗ್ರಂಥವನ್ನೋದಬೇಕೆಂಬ ಆಸಕ್ತಿಯುಂಟಾಯಿತು. ಹಿಂದುಮತವು ಮೂಢವಿಶ್ವಾಸದಿಂದ ಕೂಡಿರುವುದೆಂದು ಕ್ರೈಸ್ತಮತಪ್ರಚಾರಕರಾದ ಮಿಷನರಿಗಳು "ಹಿಂದುಮತದಮೇಲೆ ದೋಷಾರೋಪಣೆಮಾಡುವುದು ನಿರಾಧಾರವಾದುದೆಂದು ಹಿಂದುಮತಗ್ರಂಥಗಳನ್ನೋದಿದುದರಿಂದ ನಾನು ಗ್ರಹಿಸುವವನಾದೆನು. ಒಂದುದಿವಸ ಒಂದು ಶಾಕಾಹಾರಭೋಜನಶಾಲೆಯಲ್ಲಿ ಮ್ಯಾಂಚೆಸ್ಟರ್ ಪಟ್ಟಣದಿಂದ ಬಂದಿದ್ದ ಒಬ್ಬ ಕ್ರೈಸ್ತಮತಪ್ರಚಾರಕನ ಕೂಡ ಸೇರಿದೆನು. ಆತನು ಬಹಳ ಒಳ್ಳೆಯವನುಸ್ಸನು ; ನನಗೆ ಕ್ರೈಸ್ತಮತವನ್ನು ಕುರಿತು ಬೋಧಿಸಿದನು. ರಾಜಕೋಟೆಯಲ್ಲಿ ಮಿಷನರಿಗಳ ಚರ್ಯವನ್ನು ಕುರಿತು ನಾನು ವಿವರಿಸಿ ಹೇಳಿದೆನು. ಆತನು ಕೇಳಿ ವಿಶೇಷವಾಗಿ ವಿಷಾದಿಸಿದನು. "ನಾನು ಮದ್ಯಮಾಂಸವನ್ನು ಸೇವಿಸುವುದಿಲ್ಲ. ಅವನ್ನು ಸೇವಿಸಲು ಬೈಬಲಿನಲ್ಲೆಲ್ಲೂ ಹೇಳಿಲ್ಲವು. ಬಹಳಜನ ಮತಪ್ರಚಾರಕರು ಅವನ್ನು ಸೇವಿಸುವರು. ನೀನು ಬೈಬಲನ್ನು ಓದಬೇಕು." ಎಂದು ಆತನು ನನಗೆ ಬೋಧಿಸಿದನು. ಅಲ್ಲದೆ ಒಂದು ಹೊಸ ಬೈಬಲನ್ನು ಸಹ ಕೊಟ್ಟನು. ಅದರಲ್ಲಿದ್ದ ತತ್ಸಂಬಂಧವಾದ ಪಟಗಳು ಮುಂತಾದವುಗಳನ್ನು ಸಹ ಕೊಂಡುಕೊಂಡೆನು. ನಾನು ಅದನ್ನು ಓದಲು ಅಪೇಕ್ಷೆಪಟ್ಟೆನಾದರೂ ಏನೂ ರುಚಿಸಲಿಲ್ಲವು. ಓದಿದೆನೆಂದು ಹೇಳಲು ಹೇಗೋ ಒಂದುಸಾರಿ ಶಾಂತಿಯಿಂದ ನೋಡಿದೆನು. ನನಗೇನೂ ಆಸಕ್ತಿ ಹುಟ್ಟಲಿಲ್ಲ; ಶ್ರದ್ಧೆಯುಂಟಾಗಲಿಲ್ಲ. ಇದು ಹಳೇ ಟೆಸ್ಟ್‌ಮೆಂಟಿನ ವಿಚಾರ. ನ್ಯೂಟೆಸ್ಟಮೆಂಟು ಹಾಗಲ್ಲವು. ಅದು ಬಹಳ ಆಕರ್ಷಕವಾಗಿರುವುದು. ಸೆರ್ಮನ್ ಆನ್ ದಿ ಮೌಂಟ್ ಎಂಬ ಭಾಗವು ಮನಸ್ಸಿನಲ್ಲಿ ಚೆನ್ನಾಗಿ ನಾಟಿತು. ನಾನು ಅದನ್ನು ಭಗವದ್ಗೀತೆಗೆ ಹೋಲಿಸಿದೆನು.

"ಅಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಬೇಕು. ಒಂದು ದವಡೆಯಮೇಲೆ ಒಬ್ಬನು ಹೊಡೆದರೆ ಎರಡನೆಯ ದವಡೆಯನ್ನು ಕೂಡ ತೋರಿಸಬೇಕು. ಒಬ್ಬನು ನಿನ್ನ ಅಂಗಿಯನ್ನು ಕಿತ್ತುಕೊಂಡರೆ ನಿನ್ನ ಬಟ್ಟೆಯಲ್ಲವನ್ನೂ ಅವನಿಗೊಪ್ಪಿಸಬೇಕು" ಎಂಬ ವಾಕ್ಯಗಳು ನನಗೆ ಬಹಳ ಸಂತೋಷವನ್ನುಂಟುಮಾಡುವುವು. "ಕುಡಿಯಲು ನೀರನ್ನು ಕೊಟ್ಟವನಿಗೆ ಹೊಟ್ಟೆತುಂಬ ಊಟಕ್ಕಿಡಬೇಕು" ಎಂಬ ಶಾಮಲಭಟ್ಟನ ವಾಕ್ಯವು ನನ್ನ ಮನಸ್ಸಿಗೆ ಜ್ಞಾಪಕಬಂದಿತು. ವೈರಾಗ್ಯವೇ ಉತ್ತಮವಾದ ಮತದ ನಂಬಿಗೆಯು ಎಂದು ನನಗಾಗ ಗಾಢವಾಗಿ ಹುಟ್ಟಿತು. ನಾನು ಓದಿದ ಗ್ರಂಥಗಳೆಲ್ಲವನ್ನೂ ಸಮನ್ವಯ ಮಾಡಬೇಕೆಂದು ಬಾಲ್ಯಸಹಜವಾದ ಬುದ್ಧಿಯಿಂದ ನಾನು ಪ್ರಯತ್ನಿಸಿದೆನು. ಆಗ ಇತರಮತಕರ್ತರ ಜೀವಿತಚರಿತ್ರೆಯನ್ನೋದಬೇಕೆಂದು ಕೂಡ ನನಗೆ ಆಸಕ್ತಿ ಹುಟ್ಟಿತು. "ಹೀರೋಸ್ ಅಂಡ್ ಹೀರೋ ವರ್ಷಿಪ್" ಎಂಬ ಕಾರ್ಲೈಲನ ಗ್ರಂಥವನ್ನು ಓದಬೇಕೆಂದು ಒಬ್ಬ ಸ್ನೇಹಿತನು ಹೇಳಿದನು. ಮಹಮ್ಮದನ ಜೀವಿತಚರಿತ್ರೆಯನ್ನೋದಿದೆನು. ಆತನ ಮಹಿಮೆಯನ್ನೂ, ಧೈರ್ಯವನ್ನೂ, ಕಠಿಣನಿಯಮಾಚರಣೆಯನ್ನೂ ಗ್ರಹಿಸಿಕೊಂಡೆನು. ಆಗ ಪರೀಕ್ಷೆಗೋದಬೇಕಾಗಿದ್ದುದರಿಂದ, ಇತರ ಗ್ರಂಥಗಳನ್ನೋದಲು ನನಗೆ ಅವಕಾಶವಿರಲಿಲ್ಲವು. ಬೇರೆಬೇರೆ ಮತಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕಾಗಿ ಬಹಳ ಮತಗ್ರಂಥಗಳನ್ನು ಓದಬೇಕೆಂದು ಮಾತ್ರ ನಾನು ಆಗ ನಿಶ್ಚಯಿಸಿಕೊಂಡೆನು. ನಾಸ್ತಿಕತ್ವವನ್ನು ಕುರಿತು ಕೊಂಚವಿಷಯವನ್ನು ತಿಳಿದುಕೊಂಡೆನು. ಬ್ರಾಡ್ಲಾಯವರ ಹೆಸರನ್ನು ಎಲ್ಲರೂ ಕೇಳಬಲ್ಲರು. ನಾಸ್ತಿಕತ್ವವನ್ನು ಕುರಿತು ಕೂಡ ನಾನೊಂದು ಗ್ರಂಥವನ್ನು ಓದಿದೆನು, ಆದರೆ ಅದು ನನ್ನ ಮನಸ್ಸಿಗೆ ಹಿಡಿಯಲಿಲ್ಲವು. ಅವರೆಗೂ ನಾಸ್ತಿಕರಾಗಿದ್ದ ಬೆಸಂಟರವರು ಆಗಲೇ ಆಸ್ತಿಕರಾದರು. ಆ ವಿಷಯದಲ್ಲಿ ಬೆಸಂಟರವರು ಬರೆದ ಗ್ರಂಥವನ್ನು ಕೂಡ ಓದಿದೆನು. ಆ ಕಾಲದಲ್ಲಿ ಬ್ರಾಡ್ಲಾಯವರು ತೀರಿಕೊಂಡರು. ಓಕಿಂಗ್‌ಸೆಮೆಟ್ರಿ ಅಂದರೆ ಸ್ಮಶಾನದಲ್ಲಿ ಅವರ ಸಮಾಧಿಗೊಳಿಸಲ್ಪಟ್ಟರು. ಆಗ ಲಂಡನ್ನಿನಲ್ಲಿದ್ದ ಭಾರತೀಯರೆಲ್ಲರೂ ಆ ದಿವಸ ಶವದ ಕೂಡ ಹೊರಟಿದ್ದರು. ನಾನೂ ಹೋಗಿದ್ದೆನು. ಕೆಲಮಂದಿ ಕ್ರೈಸ್ತಮತಪ್ರವರ್ತಕರು (ಕ್ಲರ್ಜಿ) ಕೂಡ ಬಂದಿದ್ದರು. ಅಂತ್ಯಕ್ರಿಯೆಯಾದಮೇಲೆ ರೈಲುಬಂಡಿಯನ್ನು ನಿರೀಕ್ಷಿಸಿಕೊಂಡು ನಾನು ಸ್ಟೇಷನ್ನಿನಲ್ಲಿ ಕೊಂಚಕಾಲ ಕಾದುಕೊಂಡಿರಬೇಕಾಗಿ ಬಂದಿತು. ಅಲ್ಲಿ ಒಬ್ಬ ನಾಸ್ತಿಕನು ಆಸ್ತಿಕನಾದವನನ್ನು ಖಂಡಿಸಲಾಗಿ ಮತಪ್ರಚಾರಕರಲ್ಲಿ ಒಬ್ಬರಿಗೊಬ್ಬರಿಗೆ ಪ್ರಶ್ನೋತ್ತರ ನಡೆದಿತು.

ಪ್ರ.—ದೇವರಿದ್ದಾನೆಯೇ ?
ಉ.—ಇದ್ದಾನೆ.
ಪ್ರ.—ಪ್ರಪಂಚದ ಸುತ್ತಳತೆಯು 28,000 ಮೈಲಿಗಳೇ ?
ಉ.—ಅಹುದು.
ಪ್ರ.—ದೇವರ ಅಳತೆಯೆಷ್ಟು, ಅವನೆಲ್ಲಿದ್ದಾನೆ ?
ಉ.—ಆತನು ನಿನ್ನ ಹೃದಯದಲ್ಲೂ, ನನ್ನ ಹೃದಯದಲ್ಲೂ, ಎಲ್ಲರ ಹೃದಯದಲ್ಲೂ ಇದ್ದಾನೆ.
ಪ್ರ.—ನಾನು ಎಳೆಮಗುವೆಂದು ತಿಳಿದು ಈ ಮಾತುಗಳನ್ನು ಹೇಳುತ್ತಿದ್ದೀರಾ ?

ಎಂದು ನಾಸ್ತಿಕನು ದರ್ಪದಿಂದ ಹೇಳಿದನು. ಮತಪ್ರಚಾರಕನು ಸವಿನಯದಿಂದ ಮೌನವಾಗಿದ್ದನು. ಈ ಸಂಭಾಷಣೆಯಿಂದ ನಾಸ್ತಿಕವಾದಿಯಮೇಲೆ ನನಗೆ ಮತ್ತಷ್ಟು ಅವಿಶ್ವಾಸವು ಹೆಚ್ಚಿತು.

ಶ್ರೀ ಬಸವೇಶ್ವರಜಯಂತ್ಯುತ್ಸವಗಳು.

ಹೊಳೆಕೆರೆ ಟವ್ನ್.

ಅಲ್ಲಿನ ವೀರಶೈವಮಹಾಜನರ ಸಹಾಯದಿಂದ ಕಳೆದ ವೈಶಾಖ ಶು॥ ೩ ಗುರುವಾರ ಪ್ರಾತಃಕಾಲ ಶ್ರೀ [illegible] ಮತ್ತು ಅಮೃತೇಶ್ವರ ದೇವರುಗಳಿಗೆ ಶ್ರೀರುದ್ರಾಭಿಷೇಕವು ಮಹಾಪೂಜೆಯೂ [illegible]

ವಿಜೃಂಭಣೆಯಿಂದ ನೆರವೇರಲ್ಪಟ್ಟು ರಾತ್ರಿ 9 ಗಂಟೆಯಿಂದ ವೇ॥ ಬ್ರ॥ ಶ್ರೀ॥ ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳಿಂದ ಬಸವೇಶ್ವರಮಹತ್ವವಿಚಾರಪೂರ್ವಕವಾಗಿ ಸಾನಂದಗಣೇಶ್ವರೋಪಾಖ್ಯಾನವೆಂಬ ಶಿವಕಥಾಸಂಕೀರ್ತನೆಯು ನೆರೆದಿದ್ದ ಮಹಾಜನರ ಹೃದಯಂಗಮವಾಗುವಂತೆ ಸುಶ್ರಾವ್ಯವಾಗಿ ನಡೆಸಲ್ಪಟ್ಟನಂತರ ಗಂಧಪುಷ್ಪ ತಾಂಬೂಲವು ಹಂಚಲ್ಪಟ್ಟು ಜಯಘೋಷದೊಡನೆ ಸಭೆಯು ಭರಖಾಸ್ತಾಯಿತು. ವೀರಶೈವ ಸಮಾಜಸೇವಕ.

ಕಡೂರು ತಾ॥ ಕುಂಕನಾಡು.

ತಾ॥ 13 ನೆ ಗುರುವಾರ ಶ್ರೀ ಯಲ್ಲಮ್ಮದೇವರ ಗುಡಿಯಲ್ಲಿ ಉಪಾಧ್ಯಾಯರೂ ಕೆ. ಶಿವಲಿಂಗಪ್ಪ ಮೊದಲಾದ ಸ್ಕೂಲ್ ವಿದ್ಯಾರ್ಥಿಗಳೂ ದ್ವಿತೀಯ ಶಂಭುವಾದ ಶ್ರೀ ಬಸವೇಶ್ವರನ ಭಾವಚಿತ್ರವನ್ನು ಪುಷ್ಪಹಾರಗಳಿಂದ ಅಲಂಕರಿಸಿ ಮಹಾಮಂಗಳಾರತಿ ನೈವೇದ್ಯಗಳನ್ನು ನಡೆಸಿದನಂತರ ವೀರಶೈವಮಾರ್ಗನಿರತರಾದ ಮಾಸ್ಟರ್ ಉ. ಚನ್ನಪ್ಪನವರು ವೀರಶೈವಮತೋದ್ಧಾರಕ್ಕಾಗಿ ಶ್ರೀ ಬಸವೇಶ್ವರನು ತೋರಿಸಿದ ಭಕ್ತಿ ಪವಾಡಗಳನ್ನು ಕುರಿತು ಉಪನ್ಯಾಸಮಾಡಿದಮೇಲೆ ಸ್ಕೂಲ್‌ವಿದ್ಯಾರ್ಥಿಗಳು ಶ್ರೀ ಬಸವೇಶ್ವರನ ಚಿತ್ರಪಟವನ್ನು ಊರಲ್ಲೆಲ್ಲಾ ಮೆರವಣಿಗೆಮಾಡಿ ತಮ್ಮ ದೈವಭಕ್ತಿಯನ್ನು ಪ್ರದರ್ಶಿಸಿದರು. ಪ್ರೇಕ್ಷಕ.

ಚಿಕ್ಕಮಗಳೂರು ತಾ॥ ಮಲ್ಲೇದೇವರಹಳ್ಳಿ.

ಮ॥ ಪಾಲುಕುರಿಕೆ ಮಲ್ಲಪ್ಪನವರ ಪ್ರೋತ್ಸಾಹದಿಂದ ಈ ಗ್ರಾಮದ ವೀರಶೈವರು ಕಳೆದ ತಾ॥ 13 ರ ಬೆಳಿಗ್ಗೆ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೆ ರುದ್ರಾಭಿಷೇಕಾದಿ ಪೂಜೆಯನ್ನು ಮಾಡಿಸಿ ಭಕ್ತಾದಿಗಳಿಗೆ ಸಕ್ಕರೆ ಫಲಹಾರಗಳನ್ನು ಹಂಚಿದರು. ಸಾಯಂಕಾಲ ವೇ॥ ರುದ್ರಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಶ್ರೀ ಬಸವೇಶ್ವರನ ಜನನಮಹಿಮೆ ಮೊದಲಾದ ವಿಷಯಗಳಮೇಲೆ ಉಪನ್ಯಾಸಗಳು ಮಾಡಲ್ಪಟ್ಟು ರಾತ್ರಿ ಶ್ರೀ ಮಲ್ಲಿಕಾರ್ಜುನಸ್ವಾಮಿಸಮೇತ ಶ್ರೀ ಬಸವೇಶ್ವರನಫೋಟೋ ಪಾಲಕಿಯಲ್ಲಿರಿಸಲ್ಪಟ್ಟು ಶೃಂಗರಿಸಲ್ಪಟ್ಟ ಬೀದಿಗಳಲ್ಲಿ ವಾದ್ಯವೈಭವದಿಂದ ಉತ್ಸವಮಾಡಲ್ಪಟ್ಟಿತು. ಸ್ತ್ರೀಪುರುಷರಾದಿಯಾಗಿ ಸರ್ವರೂ ದೇವರಿಗೆ ಫಲಪುಷ್ಪಗಳನ್ನೊಪ್ಪಿಸಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದರು. ಎಂ. ಪುಟ್ಟಣ್ಣಶೆಟ್ಟಿ, ಕಾಫಿಪ್ಲಾಂಟರ್.
ಎಂ. ಮಲ್ಲಪ್ಪಶೆಟ್ಟಿ.

ಕಾನ್‌ಕಾನ್‌ಹಳ್ಳಿ ತಾಲ್ಲೂಕ್ ಹಾರೋಹಳ್ಳಿ.

ಮಾಮೂಲಿನಂತೆ ಇಲ್ಲಿ ಇದೇ ವೈಶಾಖ ಶುದ್ಧ ಬಿದಿಗೆ ಗುರುವಾರ ಬೆಳಿಗ್ಗೆ ಪೇಟೆಯಲ್ಲಿರುವ ಶ್ರೀ ಬಸವೇಶ್ವರಸ್ವಾಮಿಗೆ ವಿಧ್ಯುಕ್ತವಾಗಿ ಮಹಾರುದ್ರಾಭಿಷೇಕವು ಸಾಂಗವಾಗಿ ನೆರವೇರಿಸಲ್ಪಟ್ಟಿತು. ಸಾಯಂಕಾಲ 6 ಘಂಟೆಗೆ ಹೂವಿನಿಂದ ತಯಾರಿಸಲ್ಪಟ್ಟಿದ್ದ ಚಂದ್ರಮಂಟಪದಲ್ಲಿ ಶ್ರೀ ಬಸವೇಶ್ವರಸ್ವಾಮಿಯ ಜನನದ ಫೋಟೋ ಮತ್ತು ಉತ್ಸವಮೂರ್ತಿಯು ಇರಿಸಲ್ಪಟ್ಟು ವಾದ್ಯದೊಡನೆ ಪುರಪ್ರದಕ್ಷಿಣೆಯಾಗಿ ರಾತ್ರಿ 10½ ಘಂಟೆಗೆ ದೇವಸ್ಥಾನಕ್ಕೆ ವಾಪಸ್ ಬಂದನಂತರ ಮಹಾಮಂಗಳಾರತಿ ನಡೆದು ಸಮಸ್ತರಿಗೂ ಶ್ರೀ ಸ್ವಾಮಿಯ ಪ್ರಸಾದವು ಕೊಡಲ್ಪಟ್ಟಿತು. ಈ ಗ್ರಾಮಸ್ಥರು ಮುಂದೆ ಪ್ರತಿವರ್ಷವೂ ತಪ್ಪದೆ ಇದೇರೀತಿಯಾಗಿ ನಡೆಯಿಸುವರೆಂದು ನಂಬಿರುತ್ತೇನೆ. ಇತಿ ಸುಜನವಿಧೇಯ, H. G. S.

ದೊಡ್ಡಬಳ್ಳಾಪುರದ ತಾ॥ ಹುಲ್ಲುಕುಂಟೆ.

ಇದೇ ತಾ॥ 13ನೇ ಗುರುವಾರ ಸಮಸ್ತ ಗೃಹಗಳೂ ತಳಿರುತೋರಣಗಳಿಂದಲಂಕರಿಸಲ್ಪಟ್ಟು ಪ್ರಾತಃಕಾಲ ಗೋವೃಷಭಾದಿಗಳಿಗೆ ಮಂಗಳಸ್ನಾನವಾದ ಬಳಿಕ ಊರುಮುಂದೆ ಇರತಕ್ಕಂಥ ಶ್ರೀಶಿವದೇವಾಲಯದಲ್ಲಿ ಶಾಸ್ತ್ರೋಕ್ತವಾದ ಮಹಾರುದ್ರಾಭಿಷೇಕವೂ ಮಧ್ಯಾಹ್ನದಲ್ಲಿ ಹೆಸರುಬೇಳೆ ಪಾನಕ ಮೊದಲಾದ ಅಲ್ಪಾಹಾರಗಳೂ ನೆರವೇರಿಸಲ್ಪಟ್ಟವು. ಸಾಯಂಕಾಲ ವೀರಶೈವಮತೋದ್ಧಾರಕನೂ, ದ್ವಿತೀಯಶಂಭುವೂ ಆದ ಶ್ರೀಬಸವೇಶ್ವರಭಾವಚಿತ್ರವನ್ನು ಪುಷ್ಪಾಲಂಕೃತಮಾದ ದಿವ್ಯವಾಹನದಲ್ಲಿ ಮೂರ್ತಿಗೊಳಿಸಿ ಊರಿನಲ್ಲೆಲ್ಲಾ ದಿವ್ಯವಾದ್ಯಘೋಷದಿಂದಲೂ, ಶಿವಭಜನೆಯಿಂದಲೂ ಮೆರವಣಿಗೆಯನ್ನು ಸಾಂಗಗೊಳಿಸಿದರು. ಈ ಊರಿನಲ್ಲಿ ಇದೇ ಪ್ರಥಮಜಯಂತ್ಯುತ್ಸವವು ನಡೆದುದು. ವೀರಶೈವಪ್ರಮುಖರಾದ ಶ್ರೀಪಟ್ಟದ ಸ್ವಾಮಿಗಳೂ ಪಟೇಲರೂ ಯಜಮಾನರೂ ಶೆಟ್ಟರೂ ಇನ್ನೂ ಅನೇಕರು ಕಾರ್ಯಾಗ್ರೇಸರರಾಗಿ ಕೆಲಸವನ್ನು ಸಾಂಗಗೊಳಿಸಿದ್ದು ಬಹಳ ಶ್ಲಾಘ್ಯವಾಗಿದೆ. ಈ ಬಸವೇಶ್ವರಜಯಂತ್ಯುತ್ಸವದಲ್ಲಿ ವೀರಶೈವೇತರರಾದ ಸಮಸ್ತ ವರ್ಣಾಶ್ರಮದವರೂ ಭಾಗಿಗಳಾಗಿದ್ದರೆಂದು ತಿಳಿಸಲು ಸಂತೋಷವಾಗುತ್ತದೆ.

ಓರ್ವಮಾಹೇಶ್ವರ.

ಹೊಸಪೇಟೆ ತಾ॥ ಕಂಪ್ಲಿ.

ಈ ಮೇ ತಾ॥ 13ನೇ ಗುರುವಾರ ಶ್ರೀಪ್ಯಾಟೆ ಬಸವೇಶ್ವರದೇವಾಲಯದಲ್ಲಿ ಗಣಾರಾಧನೆಯು ನಡೆಸಲ್ಪಟ್ಟಿದ್ದಲ್ಲದೆ ಸಮಸ್ತ ವೀರಶೈವರ ಗೃಹಗಳಲ್ಲಿಯೂ ಅವರವರ ಯೋಗ್ಯತಾನುಸಾರವಾಗಿ ಮಾಹೇಶ್ವರಸಂತರ್ಪಣೆಯು ನಡೆಸಲ್ಪಟ್ಟಿತು. ರಾತ್ರಿ ತಳಿರ್ತೋರಣಗಳಿಂದಲಂಕರಿಸಿದ ರಾಜವೀಧಿಯಲ್ಲಿ ಶ್ರೀ ಬಸವೇಶ್ವರನ ರಜತವಿಗ್ರಹದಿಂದಲಂಕೃತವಾದ ಪುಷ್ಪಪಾಲಕಿಯುತ್ಸವವನ್ನು ಪೇಟೆಯ ಮತ್ತು ಕೋಟೆಯ ವೀರಶೈವರು ಪ್ರತ್ಯೇಕ ಪ್ರತ್ಯೇಕವಾಗಿ ಬಹಳ ವಿಜೃಂಭಣೆಯಿಂದ ಜರುಗಿಸಿದರು. ಆ ದಿನ ಸಾಯಂಕಾಲದಲ್ಲಿ ಬೂದಗುಂಪಿ ಶ್ರೀರುದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಮಸ್ತ ವೀರಶೈವರು ಕೂಡಿ, ವೀರಶೈವ ತರುಣಸಂಘ ಮತ್ತು ವಾಚನಾಲಯಗಳನ್ನು ಸ್ಥಾಪನಮಾಡಿದರು. ತರುಣಸಂಘದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ವೇ॥ ವಳೇಮಠದ ಬಸವಯ್ಯನವರು ಮತ್ತು ವೇ॥ ಪಿ. ಯಂ. ಶಿದ್ಧಮಲ್ಲಾರ್ಯರು - ತರುಣರ ಕರ್ತವ್ಯ - ಎಂಬುವ ವಿಷಯದಲ್ಲಿ ಸರಸವಾಗಿ ಭಾಷಣಮಾಡಿ ಸಭಿಕರನ್ನಾನಂದಪಡಿಸಿದರು. ಅನಂತರ ಸಭಾಧ್ಯಕ್ಷರಿಗೆ ಸಂಘದ ಪರವಾಗಿ ವಂದನೆಗಳು ಸಮರ್ಪಿಸಲ್ಪಟ್ಟು ಸಭೆಯು ಮುಗಿಸಲ್ಪಟ್ಟಿತು.

ವೀರಶೈವತರುಣಸಂಘದ ಕಾರ್ಯದರ್ಶಿ,
ಎಂ. ಜಡೆಅಯ್ಯನವರು.

ತುರುವೇಕೆರೆ.

ಈ ತಾ॥ 13 ನೇ ಗುರುವಾರ ಬೆಳಿಗ್ಗೆ ಸುಣ್ಣ ಬಣ್ಣಗಳಿಂದಲೂ ಕದಳೀಸ್ಥಂಭಗಳಿಂದಲೂ ಅಲಂಕರಿಸಲ್ಪಟ್ಟ ಬಸವೇಶ್ವರದೇವಸ್ಥಾನದಲ್ಲಿ ಶ್ರೀ ಬಸವೇಶ್ವರಸ್ವಾಮಿಯವರಿಗೆ ಅಭಿಷೇಕ ನಡಿಸಲ್ಪಟ್ಟಿತು. ಹತ್ತುಗಂಟೆ ಲಾಗಾಯತು ಒಂದುಗಂಟೆವರೆವಿಗೆ ಶ್ರೀ ಬಸವೇಶ್ವರಸ್ವಾಮಿ ಮತ್ತು ಶ್ರೀ ರುದ್ರೇಶ್ವರಸ್ವಾಮಿ ಇವರ ಉತ್ಸವವು ನಂದೀಧ್ವಜಸಮೇತ ವಾದ್ಯವೈಭವದೊಡನೆ ನಡಿಸಲ್ಪಟ್ಟಿತು. ನಂತರ ಎರಡುಗಂಟೆಯಿಂದ ಸಾಯಂಕಾಲ ಆರುಗಂಟೆವರೆಗೆ ಗಣಸಂತರ್ಪಣೆ ನಡೆಯಿತು. ರಾತ್ರಿ ಮ॥ ತುಮಕೂರು ಷಾಪ್ ಅಂಗಡಿ ರೇವಣ್ಣನವರ ಮಕ್ಕಳು ಮ॥ ಬಸವಣ್ಣಪ್ಪನವರು ಮೇಲ್ಕಂಡ ಶ್ರೀಯವರ ಉತ್ಸವವನ್ನು ಭಕ್ತಿಪೂರ್ವಕವಾಗಿ ನಡಿಸಿದರು. ತರುವಾಯ ಬಸವಣ್ಣನವರ ವಿಚಾರದಲ್ಲಿ ಕಲ್ಲೂರುಮಠದ ಅಡವಿ ರುದ್ರಯ್ಯನವರು ಉಪನ್ಯಾಸಮಾಡಿದರು. ಅನಂತರ ಮಂಗಳಾರತಿಯೂ ಪ್ರಸಾದವೂ ವಿನಿಯೋಗಿಸಲ್ಪಟ್ಟಿತು.

ಕೆ. ಎಂ. ಅಡ್ವೀರುದ್ರಯ್ಯ,
ತುರ್ವೇಕೆರೆ ಪೇಟೆ ಯಜಮಾನ್ ಷಾಪ್ ನಂಜಪ್ಪಶೆಟ್ಟಿ.

ಹುಕ್ಕೇರಿ.

ತಾ॥ 13ನೇ ಗುರುವಾರ ವಿರಕ್ತಮಠದಲ್ಲಿ ಬಸವೇಶ್ವರಜಯಂತಿ ಉತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆದಿನ ಪ್ರಾತಃಕಾಲ ವೇ॥ ಸದಾಶಿವಶಾಸ್ತ್ರಿಗಳವರಿಂದ ವಿಧ್ಯುಕ್ತವಾಗಿ ಪೂಜೆಮಾಡಿಸಲ್ಪಟ್ಟಿತು. 9 ರಿಂದ 12 ಘಂಟೆಯವರೆಗೆ ಎಂ. ಎಸ್. ಪಾಟೀಲ ಎಲ್‌ಎಲ್. ಬಿ., ಮುನಸಿಫ್ ಇವರ ಅಧ್ಯಕ್ಷತೆಯಲ್ಲಿ ಸಭೆಜರುಗಿತು. ಸಭೆಗೆ 500ಕ್ಕೆ ಮೇಲ್ಪಟ್ಟು ಜನರು ಸೇರಿದ್ದರು. ಸದಾಶಿವಶಾಸ್ತ್ರಿಗಳು 1 ಘಂಟೆಯವರೆಗೆ ಬಸವೇಶ್ವರನ ಮಹತ್ವವನ್ನು ಹೇಳಿದರು. ಆಮೇಲೆ ಯಶವಂತಪ್ಪಾ ರಂಗೊಳ್ಳಿ ಜೈನರು ಬಸವೇಶ್ವರನ ಮಹತ್ವವನ್ನು ಹೇಳಿದ್ದಲ್ಲದೆ ಈ ಗ್ರಾಮದೇವಿಯ ಜಾತ್ರೆಯನ್ನು ಬಂದುಮಾಡುವ ವಿಷಯವನ್ನು ಚೆನ್ನಾಗಿ ವಿವರಿಸಿದರು. ಡಾಕ್ಟರ ಸಾಹೇಬರು ಗೌಡರು ವಗೈರೆ ಜನರು ಹೇಳಿದಮೇಲೆ ವಿರಕ್ತಮಠದ ಶ್ರೀ॥ ಶಿವಲಿಂಗಸ್ವಾಮಿಗಳವರು ಬಸವೇಶ್ವರರ ಚರಿತ್ರವನ್ನೂ ಅವರ ಮಹತ್ವವನ್ನೂ ಸಾದ್ಯಂತ ಸಂಕ್ಷೇಪವಾಗಿ ವಿವರಿಸಿ ಊರ ಜಾತ್ರೆಯ ಸಂಬಂಧವಾಗಿ ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಅಪ್ಪಣೆಕೊಡಿಸಿದರು. ನಂತರ ಅಧ್ಯಕ್ಷರ ಭಾಷಣವಾಯಿತು. ಗಂಧ ಅತ್ತರ ಹಾರ ತುರಾಯಿಗಳು ಹಂಚಲ್ಪಟ್ಟು ಸಭೆ ವಿಸರ್ಜಿಸಲ್ಪಟ್ಟಿತು. ಆಮೇಲೆ ಮಧ್ಯಾಹ್ನ ವೇ॥ ಸದಾಶಿವಶಾಸ್ತ್ರಿಗಳವರ ಶಿವಕೀರ್ತನವಾಯಿತು. ಸಂಜೆಯಲ್ಲಿ ಬಸವೇಶ್ವರಫೋಟೋದ ಪಲ್ಲಕ್ಕಿಯುತ್ಸವವು ಊರಲ್ಲಿ ಮಾಡಲ್ಪಟ್ಟಿತು. ಆಹೊತ್ತಿನ ದಿವಸವು ಊರಲ್ಲೆಲ್ಲ ಹಬ್ಬದ ದಿವಸದಂತೆ ಆಚರಿಸಲ್ಪಟ್ಟಿತು. ಈ ಉತ್ಸವವು ಸಿದ್ದನಾಯಕ ಪಾಟೀಲ ಮತ್ತು ರುದ್ರಪ್ಪಣ್ಣಾಶೆಟ್ಟಿ ಇವರುಗಳ ಸಹಾಯದಿಂದ ನಿರ್ವಿಘ್ನವಾಗಿ ನೆರವೇರಿಸಲ್ಪಟ್ಟಿತು. ಸ್ಥಳವಾಸಿ.

ಕಾನಕಾನಹಳ್ಳಿ ತಾ॥ ಸಾತನೂರು.

ಶ್ರೀ ಬಸವಣ್ಣನವರ ಜಯಂತ್ಯುತ್ಸವವು ಈ ಗ್ರಾಮದಲ್ಲಿ ತಾ॥ 11, 12, 13 ಈ ಮೂರುದಿವಸಗಳಲ್ಲೂ ಬಹು ವಿಜೃಂಭಣೆಯಿಂದ ಜರುಗಿತು. ಆಹ್ವಾನಿಸಲ್ಪಟ್ಟಿದ್ದ ಮಹನೀಯರೆಲ್ಲರೂ ಬಂದಿದ್ದರು. ಮೊದಲನೇ ದಿನ ಅಂಕುರಾರ್ಪಣವೂ, ಬಸವಪುರಾಣಶ್ರವಣವೂ ಜರುಗಿದಮೇಲೆ ರಾತ್ರಿ - ಚಂದ್ರಹಾಸನ ಬಾಲ್ಯಕೆ - ಎಂಬ ನಾಟಕವು ಅಭಿನಯಿಸಲ್ಪಟ್ಟಿತು. 2-3 ಸಾವಿರ ಜನಗಳು ನಾಟಕವನ್ನು ನೋಡುವುದಕ್ಕೆ ಬಂದಿದ್ದರು. ಎರಡನೇ ದಿನ ಮಹಾರುದ್ರಾಭಿಷೇಕವೂ, ಶಿವಪುರಾಣಶ್ರವಣವೂ ನಡೆದವು. ಕಡೆಯ ದಿನ ಮಹಾಕಥೆಯೂ, ಶಿವಪುರಾಣ ಮತ್ತು ಬಸವಪುರಾಣಶ್ರವಣಗಳೂ ನಡೆದವು. ಈದಿನ ಎಲ್ಲರೂ ಸ್ವಕಾರ್ಯವನ್ನು ಬಿಟ್ಟು ಸ್ವಾಮಿಯ ಕಾರ್ಯದಲ್ಲಿಯೇ ನಿರತರಾಗಿದ್ದರು. ಕಡೆಯದಿನ 5 ಗಂಟೆಗೆ ಪ್ರಸಾದವಿನಿಯೋಗವಾಯಿತು. ಬಡಬಗ್ಗರಿಗೂ ನೆರೆಗ್ರಾಮದಿಂದ ಬಂದಿದ್ದವರಿಗೂ ಯಥೇಚ್ಛವಾಗಿ ಅನ್ನವು ಹಾಕಲ್ಪಟ್ಟಿತು. ಇಷ್ಟಾದಮೇಲೆ ಸ್ವಾಮಿಯ ಪುಷ್ಪಪಲ್ಲಕ್ಕಿಯ ಉತ್ಸವವು ನಡೆದಿತು. ಸಾವಿರಾರುಜನಗಳು ನೆರೆಯೂರಿನಿಂದ ಉತ್ಸವವನ್ನು ನೋಡಲು ಬಂದಿದ್ದರು. ಈ ಕಾರ್ಯವು ಇಷ್ಟೊಂದು ಚೆನ್ನಾಗಿ ನಡೆಯಲು ಶ್ರದ್ಧಾಳುಗಳಾಗಿ ನಿಂತಿದ್ದ ಮ॥ ಗಳಾದಂತ ಗ್ರಂದಿಗೆ ಅಂಗಡಿ ಶಾಂತಪ್ಪನವರು, ಜವಳೀ ವಾದಪ್ಪನವರು, ಚಿಲ್ಲರೇ ಅಂಗಡಿ ಅಣ್ಣಯ್ಯಶೆಟ್ಟರು, ಶಾಂತವೀರಶೆಟ್ಟರು, ವೀರಣ್ಣಶೆಟ್ಟರು ಇನ್ನೂ ಮುಂತಾದವರೇ ಕಾರಣರೆಂದು ಧಾರಾಳವಾಗಿ ಹೇಳಬಹುದು. ಮ॥ ರಾ॥ ನಂಜುಂಡಯ್ಯನವರು ಮುಂದಿನ ಜಯಂತಿಯೊಳಗಾಗಿ ಬಸವೇಶ್ವರದೇವಸ್ಥಾನವನ್ನು ಕಟ್ಟಿಸಿಕೊಡುವುದಾಗಿ ಒಪ್ಪಿಕೊಂಡಿರುವುದು ಸಂತೋಷಕರವಾದ ಸಂಗತಿಯಾಗಿದೆ.

ಒಬ್ಬ ಗ್ರಾಮಸ್ಥ.

ಚನ್ನರಾಯಪಟ್ಟಣ ತಾ॥ ನಾಗರನವಿಲೆ.

ವೈಶಾಖ ಶು॥ 2 ಗುರುವಾರ ಗ್ರಾಮವು ತಳಿರುತೋರಣಗಳಿಂದಲೂ, ಸಾರಣೆಕಾರಣೆಗಳಿಂದಲೂ ಶೃಂಗರಿಸಲ್ಪಟ್ಟು ಈ ಗ್ರಾಮದ ವೀರಶೈವಮಂಡಲಿಯವರಿಂದ ಶ್ರೀಮನ್ನಾಗೇಶ್ವರಸ್ವಾಮಿ ದೇವಾಲಯದಲ್ಲಿ ಮಹಾರುದ್ರಾಭಿಷೇಕವೂ ಶ್ರೀಮದ್ಬಸವೇಶ್ವರಸಹಸ್ರನಾಮಾರ್ಚನೆಯೂ, ಮಹಾಮಂಗಳಾರತಿಯೂ, ಪಾನಕಪೂಜೆವಗೈರೆ ನಡೆಯಿಸಲ್ಪಟ್ಟು ಎಲ್ಲರೂ ಅವರವರ ಯೋಗ್ಯತಾನುಸಾರ ಹಬ್ಬವನ್ನು ಆಚರಿಸಿದರು. ರಾತ್ರಿ 8 ಗಂಟೆಗೆ ಸರಿಯಾಗಿ ಶ್ರೀಮನ್ನಾಗೇಶ್ವರಸ್ವಾಮಿಯವರನ್ನೂ ಶ್ರೀಬಸವೇಶ್ವರನ ದಿವ್ಯಫೋಟೋವನ್ನೂ ಅಲಂಕೃತವಾದ ಈ ಊರಿನ ಎಲ್ಲಾ ಬೀದಿಗಳಲ್ಲೂ ವಾದ್ಯವೈಭವದೊಡನೆ ಅತಿ ವಿಜೃಂಭಣೆಯಿಂದ ಉತ್ಸವಗೊಳಿಸಿದರು. ಛತ್ರಾಟನೆಗೋಸ್ಕರ ದಯಮಾಡಿಸಿದ್ದ ತಿಪಟೂರು ತಾಲ್ಲೂಕು ಕೆರೆಗೋಡಿ ರಂಗಾಪುರದ ಮಠದ ಪರದೇಶಪ್ಪನವರು ಈ ಮಹೋತ್ಸವಭಾಗಿಗಳಾಗಿದ್ದುದರಿಂದ ಮತ್ತಷ್ಟು ಶೋಭೆಯನ್ನುಂಟುಮಾಡಿತ್ತು. ಉತ್ಸವಾನಂತರ ಸದರಿ ಶ್ರೀಗಳವರು ಹಿಂದೆ ಒಂದಾನೊಂದು ಕಾಲದಲ್ಲಿ ಪರಮತಗಳ ಹಾವಳಿಯಿಂದ ಕ್ಷೀಣವಾಗಿದ್ದ ವೀರಶೈವಮತವನ್ನು ಪುನರುದ್ಧರಣಗೊಳಿಸಿದ ದ್ವಿತೀಯಶಂಭು ಬಸವೇಶ್ವರನ ದಿವ್ಯಚರಿತ್ರೆಯನ್ನು ತಮ್ಮ ಸರಳವಾದ ವಾಣಿಯಿಂದ ಭಾಷಣಮಾಡಿ ಇತೋಪ್ಯತಿಶಯವಾಗಿ ವರವರುಷವೂ ಆ ಮಹಾತ್ಮನ ಜಯಂತ್ಯುತ್ಸವವನ್ನು ನಡೆಯಿಸುವಂತೆ ಅಪ್ಪಣೆ ಕೊಡಿಸಿದರು. ನಂತರ ನಮ್ಮನ್ನಾಳುವ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರಿಗೂ, ಸಮಸ್ತ ರಾಜಕುಟುಂಬದವರಿಗೂ, ಬಹು ಶ್ರದ್ಧಾಭಕ್ತಿಪೂರ್ವಕ ಈ ಉತ್ಸವವನ್ನು ನೆರವೇರಿಸಿದ ಮ॥ ರಾ॥ ಲಿಂಗಶೆಟ್ಟಪ್ಪನವರು, ಗವಿಯಣ್ಣನವರು, ಚಿಕ್ಕನಾಗೇಗೌಡರು, ಪಟೇಲ್ ಚಿಕ್ಕೆಗೌಡರು ಮೊದಲಾದವರಿಗೂ ಶ್ರೀಬಸವೇಶ್ವರನು ಆಯುರಾರೋಗ್ಯೈಶ್ವರ್ಯಾದಿಗಳನ್ನಿತ್ತು ಕಾಪಾಡಲೆಂದು ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ಸಭೆವಿಸರ್ಜಿಸಲ್ಪಟ್ಟಿತು. ಚಂದಾದಾರ.

ಬ್ಯಾಡಗಿ.

ಕಳೆದ ತಾ॥ 13ನೇ ಗುರುವಾರ ಪದ್ಧತಿಯಂತೆ ಶ್ರೀಬಸವೇಶ್ವರನ ಜನ್ಮದಿನಮಹೋತ್ಸವವು ನಮ್ಮ ಗ್ರಾಮದಲ್ಲಿ ಪ್ರತಿವರ್ಷಕ್ಕಿಂತಲೂ ಬಹು ವಿಜೃಂಭಣೆಯಿಂದ ನೆರವೇರಿತು. ಶ್ರೀಬಸವೇಶ್ವರದೇವಾಲಯವು ಮಂಟಪದಿಂದಲೂ ತಳಿರುತೋರಣಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಜನರು ತಮ್ಮ ತಮ್ಮ ವ್ಯವಹಾರೋದ್ಯೋಗಗಳನ್ನು ಬಂದ್‌ಮಾಡಿ ಸ್ವಾಮಿಯ ಕಾರ್ಯದಲ್ಲಿ ನಿರತರಾಗಿದ್ದರು. ಅಂದು ಪ್ರಾತಃಕಾಲ 8 ಘಂಟೆಗೆ ಶ್ರೀ ಬಸವೇಶ್ವರನ ಅಭಿಷೇಕದ ಕಾರ್ಯವು ಪ್ರಾರಂಭವಾಯಿತು. ಆಗ ಮುತ್ತೈದೆಯರೆಷ್ಟೋ ಜನರು ಆರತಿ ಅಕ್ಷತೆ ಫಲಪುಷ್ಪಾದಿಗಳನ್ನು ತಕ್ಕೊಂಡುಬಂದು ಬಸವಣ್ಣನಿಗೆ ಅರ್ಪಿಸಿ ತಮ್ಮ ಭಕ್ತಿ ಪ್ರೀತಿ ಆನಂದಗಳನ್ನು ವ್ಯಕ್ತಪಡಿಸಿದರು. ಮಧ್ಯಾಹ್ನ 2 ಘಂಟೆಗೆ ಗಣಾರಾಧನೆ ಸಹಿತ ಯಾವತ್ತು ಕಾರ್ಯವು ಮುಗಿಯಿತು. ಸಾವಿರಾರುಜನರ ಅನ್ನಸಂತರ್ಪಣೆಯಾಯಿತು. ಇಷ್ಟರಲ್ಲಿಯೇ ಪ್ರತಿಯೊಂದು ಮನೆಯೊಳಗೆ ಗೋಮಾತೆ ಬಸವಣ್ಣಗಳನ್ನು ಆಯಾ ಜನರು ಮೈತೊಳೆದು ಪೂಜಿಸಿ ಅವುಗಳಿಗೆ ಆಹಾರವನ್ನು ಕೊಟ್ಟು ಮೆರವಣಿಗೆಗೆ ಸಿದ್ಧರಾಗಿದ್ದರು. 5 ಘಂಟೆಗೆ ಶ್ರೀ ಬಸವೇಶ್ವರನ ಪಲ್ಲಕ್ಕಿಯುತ್ಸವವು ಪುರಪ್ರದಕ್ಷಿಣೆ ಮಾಡಿಕೊಂಡು ರಾತ್ರಿ 9 ಘಂಟೆಗೆ ದೇವಾಲಯವನ್ನು ಸೇರಿತು. ತರುವಾಯ ಮುಂಭಾಗದ ಮಂಟಪದಲ್ಲಿ ಸಭೆಗೂಡಿ ಮಿ॥ ಕಲಬುರ್ಗಿ ಇವರ ಭಾಷಣವಾಯಿತು ಆಮೇಲೆ ಶಿವಮೂರ್ತಿ ಚೆನ್ನಯ್ಯಸ್ವಾಮಿ ಪಶುಪತಿ ಈ ಮಹನೀಯರು ಶ್ರೀಬಸವೇಶ್ವರನ ಮಹಿಮೆಯನ್ನೂ ಅವನ ವಚನಗಳನ್ನೂ ಸ್ಪಷ್ಟೀಕರಿಸಿ ತಮ್ಮ ಅಸ್ಖಲಿತವಾಣಿಯಿಂದ ಜನರನ್ನು ದಂಗುಬಡಿಸಿದರು. ೧೧ ಘಂಟೆಗೆ ಸಭಾವಿಸರ್ಜನೆಯಾಗಿ ೧ ಘಂಟೆಯವರೆಗೆ ಪುನಃ ಇತರ ಮತೀಯರಿಗೆ ಅನ್ನವು ಕೊಡಲ್ಪಟ್ಟಿತು. ಮರುದಿನ ಶುಕ್ರವಾರ ಸಾಯಂಕಾಲ 6 ಘಂಟೆಗೆ ಶ್ರೀಗಳವರ ಮಠದಲ್ಲಿ ಸಭೆಗೂಡಿ ಮಿ॥ ಹಾವೇರಿ ಹಾಗೂ ಕಲಬುರ್ಗಿ ಇವರ ಭಾಷಣವಾದನಂತರ ಶಿ. ಚನ್ನಯ್ಯಸ್ವಾಮಿ ಪಶುಪತಿ ಇವರ ಬೋಧನೆಯಾಯಿತು. ಅಷ್ಟಾವರಣಗಳ ವಿಷಯವನ್ನೂ ಸದ್ಯದ ವೀರಶೈವ ಸಮಾಜಸ್ಥಿತಿಯನ್ನೂ ಅದರ ಸುಧಾರಣ ಪ್ರಸರಣೋಪಾಯಗಳನ್ನೂ ಬಹು ಚೆನ್ನಾಗಿ ತಿಳಿಯಹೇಳಿದರು. ಹಾರ ತುರಾಯಿಗಳು ಹಂಚಲ್ಪಟ್ಟು ಸಭಾವಿಸರ್ಜನೆಯಾಯಿತು.

ಸೆಕ್ರೆಟರಿ ಶ್ರೀಲಿಂಗರಾಜ ಲೈಬ್ರರಿ.

ಜಗದ್ಗುರುಜಯದೇವಮುರುಘರಾಜೇಂದ್ರಮಹಾಸ್ವಾಮಿಗಳವರ ಸಂಸ್ಥಾನಕ್ಕೊಳಪಟ್ಟ ಶ್ರೀವೀರಶೈವಾನಂದಾಶ್ರಮ ತಿಪಟೂರು.

ತಿಪಟೂರಿನಲ್ಲಿ ಹೈಸ್ಕೂಲು ಸ್ಥಾಪನೆಯಾಗಿ ಎರಡು ವರುಷಗಳಾದವು. ಈಸಾರಿ 6 ನೇ ಫಾರಂ ಪ್ರಾರಂಭವಾಗುವುದು. ಶ್ರೀವೀರಶೈವಾನಂದಾಶ್ರಮದಲ್ಲಿ ಸಂಸ್ಕೃತ ಮತ್ತು ವೈದಿಕ ಪಾಠಕ್ರಮಗಳು ಕ್ರಮವಾಗಿ ನಡೆಯುತ್ತವೆ. ಇಲ್ಲಿನ ಹೈಸ್ಕೂಲಿಗೂ ಮತ್ತು ಸಂಸ್ಕೃತಪಾಠಶಾಲೆಗೂ ಸೇರಿ ಅಭ್ಯಾಸಮಾಡುವ ಬಡವೀರಶೈವವಿದ್ಯಾರ್ಥಿಗಳಿಗೆ ಆನಂದಾಶ್ರಮದ ಫ್ರೀ ಬೋರ್ಡಿಂಗಿನಲ್ಲಿ ಉಚಿತವಾಗಿ ಭೋಜನಕ್ಕೂ, ವಾಸಕ್ಕೂ ಅನುಕೂಲ ಮಾಡಿರುತ್ತೆ. ಫ್ರೀ ಬೋರ್ಡಿಂಗಿಗೆ ಸೇರಲಪೇಕ್ಷಿಸುವ ವೀರಶೈವವಿದ್ಯಾರ್ಥಿಗಳೆಲ್ಲರೂ ಬರುವ ಜೂನ್ ಮಾಹೆ 5 ನೇ ತಾರೀಖಿನೊಳಗಾಗಿ ತಮ್ಮ ತಮ್ಮ ಅಪ್ಲಿಕೇಷನ್‌ಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು. ಅನಂತರ ಬರುವ ಅಪ್ಲಿಕೇಷನ್‌ಗಳಿಗೆ ನಿಗಾಕೊಡಲಾಗುವುದಿಲ್ಲ.

N. B.—ಅನುಕೂಲಸ್ಥರಾದ ವೀರಶೈವ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಂತೆ ಛಾರ್ಜುಮಾಡಲ್ಪಡುವುದು.

ವಿಳಾಸ—ಜಿ. ತಮ್ಮಯ್ಯ, ಆನರರಿ ಸೆಕ್ರೆಟರಿ,
ಶ್ರೀವೀರಶೈವಾನಂದಾಶ್ರಮ ತಿಪಟೂರು.

ನೋಟೀಸು.

ಬೆಂಗಳೂರಿನಲ್ಲಿರುವ ಶ್ರೀಜಗದ್ಗುರುಜಯದೇವಮುರುಘರಾಜೇಂದ್ರ ವೀರಶೈವ ಹಾಸ್ಟಲಿಗೆ ಸೇರಲಿಚ್ಛಿಸುವ (ಎಂಟರನ್ಸ್ ತರಗತಿಯವರೆಗಿನ) ವಿದ್ಯಾರ್ಥಿಗಳು ಜೂನ್ ಮಾಹೆ 10ನೆ ತಾ॥ ಯೊಳಗಾಗಿ ವಿಧಾಯಕವಾಗಿರುವ ಅಪ್ಲಿಕೇಷನ್ ಫಾರಂನಲ್ಲಿ ಬರೆದುಕೊಳ್ಳತಕ್ಕದ್ದು. ಫಾರಂ ಬೇಕಾದವರು ಅರ್ಧಾಣೆ ಸ್ಟಾಂಪ್ ಸಹಿತ ಈ ಕೆಳಗಿನ ವಿಳಾಸಕ್ಕೆ ಬರೆದುಕೊಂಡಲ್ಲಿ ಕಳುಹಿಸಿಕೊಡಲ್ಪಡುತ್ತೆ. ಇದರ ಜೊತೆಯಲ್ಲಿ 1 ರೂ. ಅಡ್ಮಿಷನ್ ಫೀ ಕೊಡಬೇಕು. ಅಪ್ಲಿಕೇಷನ್ ಖಾಯಂ ಆದನಂತರ 25 ರೂ. ಡಿಪಾಜಿಟ್ಟಿಡತಕ್ಕದ್ದು. ಜೂನ್ 20ನೇ ತಾ॥ ಯೊಳಗಾಗಿ ಹಾಸ್ಟಲ್ ಪ್ರಾರಂಭಿಸಲ್ಪಡುತ್ತೆ. ಹೆಚ್ಚಿನ ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ಸದರಿ ಹಾಸ್ಟಲ್ ಆನರರಿ ಸೆಕ್ರಿಟೆರಿಯವರಿಗೆ ಬರೆದುಕೊಳ್ಳತಕ್ಕದ್ದು.

For Secretary,
R. Shanthayya,
Manager.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ.

ಲಗ್ನದಫಂಡಿಗೆ ಬಂದಿರತಕ್ಕ ಹಣದತಪಸೀಲು.—

1. ದೊಡ್ಡಬಳ್ಳಾಪುರದಲ್ಲಿರುವ ಮ॥ ದೊಡ್ಡವೀರಪ್ಪನವರ ಮನೆಯಲ್ಲಿ ನಡೆದ ರುತುಶಾಂತಿ ಪ್ರಸ್ತದಲ್ಲಿ ವಧೂವರರಿಂದ 2 ರೂ. ವರ್ತೂರಿನಲ್ಲಿರುವ ಹುಸ್ಕೂರು ಶೆಟ್ಟರು ರೇವಣ್ಣನವರ ಮನೆಯಲ್ಲಿ ನಡೆದ ರುತುಶಾಂತಿ ಪ್ರಸ್ತದಲ್ಲಿ ವಧೂವರರಿಂದ 3 ರೂ. ಜುಮ್ಲಾ 5 ರೂ. ಗಳು ಮ॥ ಬಿ. ಗುರುಬಸಪ್ಪನವರ ಮೂಲಕ. 2. ಅಂತರಸಂತೆ ಅಂಗಡಿಬೀದಿ ಮ॥ ಮಹಂತಶೆಟ್ಟರ ಮರಿಯಪ್ಪನವರ ಲಗ್ನದಲ್ಲಿ ವಧೂವರರಿಂದ 2 ರೂ. ದೊಡ್ಡಭೈರಕುಪ್ಪೆ ಸ್ಕೂಲುಮಾಸ್ಟರು ಮ॥ ಸಂಗಪ್ಪನವರ ಮೂಲಕ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಆನರರಿ ಸೆಕ್ರೆಟರಿ,
ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡು ಸಂಘ.

೧೯೨೬ ನೆಯ ಇಸವಿ ಮೇ ತಾ॥ ೨೯ ರಿಂದ ೧೯೨೬ ನೆಯ ಇಸವಿ ಜೂನ್ ತಾ॥ ೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ವೈಶಾಖ ಬಹುಳ ಬಿದಿಗೆ ಯಿಂದ ವೈಶಾಖ ಬಹುಳ ನವಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
29	ಶನಿ	ಬಿದಿ	22-0	ಮೂಲ	43-58	16
30	ಭಾನು	ತದಿ	17-42	ಪೂಷಾ	41-13	17
31	[1]ಸೋಮ	ಚೌತಿ	12-40	ಉಷಾ	37-51	18
1	ಮಂಗಳ	ಪಂಚ	6-54	ಶ್ರವ	33-57	19
2	ಬುಧ	ಷ-ಅ	1-5-53-52	ಧನಿ	29-49	20
3	ಗುರು	ಅಷ್ಟ	48-42	ಶತ	25-36	21
4	[2]ಶುಕ್ರ	ನವ	43-43	ಪೂಭಾ	21-33	22

(1) ಮಳೆನಕ್ಷತ್ರ-ರೋಹಿಣಿ ೩ ನೆಯಪಾದ, (2) ಮಳೆನಕ್ಷತ್ರ-ರೋಹಿಣಿ ೪ ನೆಯಪಾದ.

ಮೈಸೂರು: [illegible] ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕೃತಾ | ಘನಪಕ್ಷಕೃತಾವತಾರಾ ಪಕ್ಷ್ಮಜ್ಞ ಸತ್ಕೃತಾ ನೋಹರಾಜೀಜೋಹ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋನಾಭೀಷ್ಟದಶೀಲ ಪಾಳಲಿತ ಸಾಧ್ವಗ್ರ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

REGISTERED NO. M. 124.

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜೂನ್ ತಾರೀಖು ೫ ನೆಯ ಶನಿವಾರ. [ಸಂಚಿಕೆ ೨೩

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ತುಂಬಾ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು.
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

22

ಗೋಪಾಸ್ತ್ರೀಯರಿಗೂ ಕಾಂತಿಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ನ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರಾಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್‌ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ॥ ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಶಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—34] ಪೋ. ಬಾ. ೫೧೦. ಮದರಾಸು.

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾಚಾರ್,
[13-8] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಇಮಿಟೇಷನ್ ರೇಶ್ಮೆಸೀರೆಗಳು.

ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡಕಂಪನಿಯವರಿಂದ ತಯಾರಿಸಿದ್ದು. 17 ಮೊಳ ಉದ್ದವೂ 2½ ಮೊಳ ಅಗಲವೂ ಇರುವದು. ಈ ಸೀರೆಗಳಿಗೆ ಅಂದವಾದ ಅಂಚೂ, ಸುಂದರವಾದ ಸಾಚಾರೇಷ್ಮೆಯ ಸೆರಗೂ ಇರುವದು. ಇವು ಯಾವಾಗಲೂ ರೇಷ್ಮೆಯಂತೆಯೇ ಇರುವುವು. ಇವುಗಳ ಬಣ್ಣವು ಬೇಗನೆ ಕೆಡದು. ಪ್ರತಿಯೊಬ್ಬರೂ ಉಡಲಿಕ್ಕೆ ಬಹು ಲಾಯಖಾದವು.

ಕ್ರಯ ನಂ. 1 10—8—0.
ನಂ. 2 8—8—0.
ನಂ. 3 7—8—0.

ವಿಳಾಸ—ಎಂ. ಬೆಸ್ಟ್ ಅಂಡ್ ಕೊ,
4—3 ನಂ. 504, ಪಾರ್ಕ್‌ಟೌನ್, ಮದರಾಸು.

ಚಿಕ್ಕಮಗಳೂರು ವೀರಶೈವ ಹಾಸ್ಟಲು.

ಈ ಮೇಲ್ಕಂಡ ಹಾಸ್ಟಲಿನಲ್ಲಿ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲಿನಲ್ಲಿ ಓದುವ ಸಮಸ್ತ ವೀರಶೈವವಿದ್ಯಾರ್ಥಿಗಳ ವಸತಿ ಮತ್ತು ಭೋಜನ ವಗೈರೆ ಅನುಕೂಲಗಳು ಏರ್ಪಡಿಸಲ್ಪಟ್ಟಿವೆ. ಇದಕ್ಕಾಗಿ ಮಾಹೆಯಾನ ಪ್ರತಿಯೊಬ್ಬ ವಿದ್ಯಾರ್ಥಿಗೂ ಐದುರೂಪಾಯಿಗಳು ಮಾತ್ರ ಛಾರ್ಜು ಮಾಡಲ್ಪಡುವುದು. ಹೆಚ್ಚಿಗೆ ಆಗುವ ಸಕಲವಿಧವಾದ ಖರ್ಚು ವೆಚ್ಚಗಳು ಎಲ್ಲವನ್ನೂ ಸದರಿ ಹಾಸ್ಟಲಿನ ಕಮಿಟಿಯವರೇ ವಹಿಸುವರು. ಈ ಹಾಸ್ಟಲಿಗೆ ಬರಲು ಅಪೇಕ್ಷಿಸುವ ವಿದ್ಯಾರ್ಥಿಗಳು ಜೂನ್ ತಿಂಗಳು 15 ರ ಒಳಗಾಗಿ ಅರ್ಜಿಗಳನ್ನು ಈ ಕೆಳಗೆ ಕಂಡ ಅಡ್ರಸ್ಸಿಗೆ ಹಾಕಿಕೊಳ್ಳುವುದು. ಹೆಚ್ಚಿನ ವಿಚಾರಗಳನ್ನು ತಿಳಿಯಲಪೇಕ್ಷಿಸುವವರು ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

M. Nanjappa Setty,
Secretary,
Veerasiva Hostel, Chickmagalur.

ಯಾದಗಿರಿ ಶಂಕರಸಂಸ್ಕೃತ ಕಾಲೇಜು.

ಸೂಚನೆಯು.—

ಇದೇ ತಿಂಗಳು ಬ॥ ೨ ಯಿಂದ ಯಾದಗಿರಿ ಸಂಸ್ಕೃತಕಾಲೇಜು ಪ್ರಾರಂಭವಾಗಿರುತ್ತದೆ. ಹೊಸದಾಗಿ ಬರತಕ್ಕ ವಿದ್ಯಾರ್ಥಿಗಳು ಜೂನ್ ತಿಂಗಳ ಅಂತ್ಯದೊಳಗಾಗಿ ಬರಬೇಕು. ಅನಂತರ ಬರುವವರನ್ನು ಸೇರಿಸಿಕೊಳ್ಳಲಾಗುವುದಿಲ್ಲ. ಮೊದಲಿದ್ದ ವಿದ್ಯಾರ್ಥಿಗಳಲ್ಲದೆ ಈ ವರ್ಷ 10 ಜನ ವಿದ್ಯಾರ್ಥಿಗಳನ್ನು ಬೋರ್ಡಿಂಗಿನಲ್ಲಿ ಸೇರಿಸಲಾಗುತ್ತದೆ. ಇಲ್ಲಿಂದ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳು ಇತ್ತಕಡೆಗೆ ಲಕ್ಷ್ಯ ಕೊಡಬೇಕು. ಕೇವಲ ಬಡವಿದ್ಯಾರ್ಥಿಗಳಿಗೆ ಪುಸ್ತಕಗಳ ವ್ಯವಸ್ಥೆಯೂ ಪರೀಕ್ಷೆಗೆ ಹೋಗತಕ್ಕ ಖರ್ಚು ಸಂಸ್ಥೆಯ ವತಿಯಿಂದ ಕೊಡಲಾಗುತ್ತದೆ. ಸರ್ವರೂ ಇತ್ತಕಡೆಗೆ ಲಕ್ಷ್ಯಕೊಡತಕ್ಕದ್ದು. ಎನ್. ರುದ್ರಪ್ಪ, ಹೈಕೋರ್ಟು ವಕೀಲ,
ಜನರಲ್ ಸೆಕ್ರೆಟರಿ.

ಸಾಧುವೀರಶೈವಹಾಸ್ಟಲ್, ದಾವಣಗೆರೆ.

ಈ ಹಾಸ್ಟಲು ಜೂನ್ ತಾ॥ 9 ರಿಂದ ತೆರೆಯಲ್ಪಡುತ್ತದೆ. ಇಲ್ಲಿಗೆ ಸೇರಲು ಇಷ್ಟವುಳ್ಳ ವಿದ್ಯಾರ್ಥಿಗಳು ಇದೇ ಜೂನ್ ತಾ॥ 7 ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ತಂದೆ ಹೆಸರು, ವಾಸಸ್ಥಳ, ಕ್ಲಾಸ್ ವಗೈರೆ ನಮೂದಿಸಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ರೂಂ ರೆಂಟ್ ಇಲ್ಲ. ದೀಪಕ್ಕೆ ಎಣ್ಣೆಯು ಉಚಿತವಾಗಿ ಕೊಡಲ್ಪಡುತ್ತದೆ. ಇಲ್ಲಿ ಲೈಬ್ರರಿ ಮತ್ತು ರೀಡಿಂಗ್ ರೂಮು ಇವೆ. ಸರ್ಕಾರಕ್ಕೆ ಗ್ರಾಂಟಿಗಾಗಿ ಅಪ್ಲಿಕೇಷನ್ ಹಾಕಿಕೊಂಡಿರುತ್ತೇವೆ. ಗ್ರಾಂಟ್ ಮಂಜೂರಾದರೆ ಅದೆಲ್ಲವೂ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿಯೇ ಉಪಯೋಗಿಸಲ್ಪಡುತ್ತವೆ. ಊಟದ ಖರ್ಚು ವಿದ್ಯಾರ್ಥಿಗಳೆಲ್ಲರಿಗೂ ಸಮವಾಗಿ ಹಂಚಲ್ಪಡುತ್ತದೆ. ಇಲ್ಲಿಗೆ ಸೇರುವ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬನೂ 15 ರೂಪಾಯಿಗಳನ್ನು ಡಿಪಾಜಿಟ್ ಇಡಬೇಕು.

ಸೆಕ್ರೆಟರಿ,
ಸಾಧುವೀರಶೈವಹಾಸ್ಟಲ್, ದಾವಣಗೆರೆ.

ಮಹಾದೇವಿಯಕ್ಕನ ವಚನಗಳು.

ಶಿವಾನುಭವದ ಮುಂದಿನ ಸಂಚಿಕೆಯಲ್ಲಿ ಮಹಾದೇವಿಯಕ್ಕನ ವಚನಗಳು ಪ್ರಸಿದ್ಧಿಸಲ್ಪಡುವವು. ಬೇರೆ ಬೇರೆ ವಚನಗ್ರಂಥಸಂಗ್ರಹಗಳಲ್ಲಿಯ ಅಳಿಯ ವಚನಗಳನ್ನು ಒತ್ತಟ್ಟಿಗೆ ಸೇರಿಸಿ ಈ ಗ್ರಂಥವು [illegible] ಟ್ಟಿದೆ. ಆದರೆ ಅಳಿಯ ಸ್ವತಂತ್ರವಚನಗ್ರಂಥವು ನಮಗೆ ಸಿಕ್ಕಿಲ್ಲ. ಅದ್ದರಿಂದ ಇಂಥ ಗ್ರಂಥವು ಯಾರಲ್ಲಾದರೂ ಇದ್ದರೆ ಅದನ್ನು [illegible] ಅಂತ್ಯದೊಳಗಾಗಿ ನಮಗೆ ಕಳಿಸಿಕೊಟ್ಟರೆ [illegible] ವೆವು. ಇದರಿಂದ ಅವರು ಶ್ರೀಅಕ್ಕನ ಈ [illegible] ಪ್ರಕಟವಾಗುವ [illegible] ಉಪಕಾರಮಾಡಿದ [illegible].

ಫ. ಗು. [illegible].

ಗುಬ್ಬಿ ಶ್ರೀಚೆನ್ನಬಸವೇಶ್ವರಥಿಯೇಟ್ರಿಕಲ್ ಕಂಪೆನಿ.

ಮೇಲ್ಕಂಡ ಕಂಪೆನಿಯವರು ತಾ|| 12—6—26 ನೆ ಶನಿವಾರದಿಂದ ಬೆಂಗಳೂರು ಬಳೇಪೇಟೆಯಲ್ಲಿರುವ ತಮ್ಮ ಸ್ವಂತ ನಾಟಕಶಾಲೆಯಲ್ಲಿ ಆತ್ಮಬೋಧಕವಾಗಿಯೂ, ನೀತಿಬೋಧಕವಾಗಿಯೂ ಪತಿವ್ರತಾಧರ್ಮಬೋಧಕವಾಗಿಯೂ ಇರುವ ನಾಟಕಗಳನ್ನು ಆಡುವುದರಿಂದ ಮಹಾಜನಗಳ ಉದಾರಾಶ್ರಯವನ್ನು ಕೋರಿದೆ.

ಜಿ. ಹೆಚ್. ವೀರಣ್ಣ.
ವರ್ಸಟೈಲ್ ಕಮೆಡಿಯನ್,
ಪ್ರೊಪ್ರೈಟರ್.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜೂನ್ ತಾ|| ೫ ನೆಯ ಶನಿವಾರ.

THE COMING ELECTIONS.

We have had a good deal of talk about the Mysore Reforms before they came actually and some after also. The first elections which came off not long after the announcement of the Reforms were keenly fought and it did look as though fresh life had been introduced into the somewhat quiet politics of Mysore. There has been also very good work done at the Representative Assembly and the Legislative Council. The people's voice came to be heard a little louder and made itself a little more felt than before. It formed the soberer and sounder opinion on all questions of the two wings in the constitutional bodies and the smoother working of the Reforms is one not a little to the support Government got from the popular party. There is a party in the State known as the Progressive Party, the chief object of which is to oppose all progressive measures. They are drawn mostly from the intellectuals with a few sprinkling of non-Brahmins as figure-heads. It is a pity that a party which is supposed to possess some brains should range itself on the opposition side instead of endeavouring to represent truly the wishes and needs of the electorate. In-fact, their regard for their constituencies may fairly be said to be election-deep. The first term of the constitutional bodies is coming to an end with this year. There are hardly six months more. But we see a surprising calmness in the political atmosphere. Elsewhere, the election campaign would be active all through the period in a way, but at any rate vigorous for a long time before the elections. In British India, for instance, they have been working for so many months for elections which are to come in October. Take the case of the Madras Justicites and the Swarajists. If we can ascribe one and, we may say, only reason why there is so much of undesirable quiet in the State it is because of the absence of well-developed parties. It may also be said that there is a general suspicion here in Mysore against the growth of parties in the State. We do not know what exactly is wrong with the party-system. There is no country with a democratic constitution which can go on without party system. It is the only means of bringing the live principles affecting the interests of a country into play, principles which could guide the statesmen in their administration. We hope that the leaders of the two floors will bestir themselves and start an election campaign. We would at any rate call upon the popular party not to wake up too late, to see the field occupied already by candidates. It would only be criminal on their part if they from either a false sense of security or indifference sleep over. Let them know that the other forces though not working on the surface are yet capable of working within and very effectively too. Let them know also that the electorate is still far from being so enlightened as to discriminate between their well-wisher and well-wishernot without its being told everything. It would be mistake of the candidates and leaders if the electorates are not apprised of the objects and achievements of the two parties in the houses so as to enable them to chose between the two. There is not much time left after all and towards the end it comes flying.

We do not see any reason for delaying the preparation of the electoral rolls this time. They must be prepared sufficiently early so that opportunity may be given to those whose names are left out of them to get them inserted. There should also be proper advertisement of those rolls. We trust that the agencies who prepare the voters' lists will do it as thoroughly and as completely as they can. We have had instances where they have been mutilated or manipulated. It is not always possible for qualified illiterate voters to find out the omissions in the lists. Anyway, we hope to see a healthy and vigorous electton campaign this time.

ಮುಂದಲ ಚುನಾವಣೆ.

ಮೈಸೂರುರಾಜಕೀಯಸುಧಾರಣೆಯ ವಿಧಿವಿಧಾನಗಳ ಸಾಧಕಬಾಧಕಗಳನ್ನು ಕುರಿತು ಅವು ಅನುಷ್ಠಾನಕ್ಕೆ ಬರುವುದಕ್ಕೆ ಪೂರ್ವವೂ, ಬಂದನಂತರವೂ ನಾವು ಬೇಕಾದಷ್ಟು ಪ್ರಸ್ತಾವಿಸಿರುತ್ತೇವೆ. ರಾಜಕೀಯವಿಚಾರದಲ್ಲಿ ಪ್ರಜೆಗಳಿಗೆ ನವಚೈತನ್ಯವುಂಟಾದಂತೆ ಸುಧಾರಣೆಯು ಅನುಷ್ಠಾನಕ್ಕೆ ಬಂದ ಕೂಡಲೆ ನಡೆದ ಚುನಾವಣೆಯ ಕಾಲದಲ್ಲಿ ಜನರು ತೋರಿಸಿದ ಸ್ಪರ್ಧಾತಿಶಯದಿಂದ ವ್ಯಕ್ತವಾಯಿತು. ಇದಲ್ಲದೆ ಪ್ರಜಾಪ್ರತಿನಿಧಿಸಭೆಯಲ್ಲೂ ನ್ಯಾಯವಿಧಾಯಕಸಭೆಯಲ್ಲೂ ಒಳ್ಳೇಕಾರ್ಯಗಳು ನಡೆದಿರುತ್ತವೆ. ಪ್ರಜಾಭಿಪ್ರಾಯವು ಮೊದಲಗಿಂತಲೂ ವಿಶೇಷವಾಗಿ ಸರ್ಕಾರದವರಿಂದ ಗಮನಿಸಲ್ಪಟ್ಟು ಪುರಸ್ಕರಿಸಲ್ಪಡುವಂತಾಗಿದೆ. ಸಭೆಗಳಲ್ಲಿ ನಡೆಯುವ ಚರ್ಚೆಗಳಿಗೆ ಸೌಮ್ಯವೂ ದೃಢವೂ ಆದ ಅಭಿಪ್ರಾಯಗಳು ಕೊಡಲ್ಪಟ್ಟು ಕೆಲಸಗಳು ಸುಲಲಿತವಾಗಿ ನಡೆದು ಪ್ರಜಾಪಕ್ಷದವರಿಂದ ಪ್ರಭುತ್ವದವರಿಗೆ ವಿಶೇಷ ಸಹಾಯವು ದೊರೆಯುವಂತಾಗಿರುವುದು. ನಮ್ಮ ಸಂಸ್ಥಾನದಲ್ಲಿ ಪ್ರಾಗತಿಕಪಕ್ಷವೊಂದು ಏರ್ಪಟ್ಟಿರುತ್ತದೆ. ಪುರೋಭಿವೃದ್ಧಿಕಾರ್ಯಗಳನ್ನು ವಿರೋಧಿಸುವುದೇ ಇದರ ಮುಖ್ಯೋದ್ದೇಶವಾಗಿರುವುದು. ಈ ಪಕ್ಷದ ಮೆಂಬರುಗಳಲ್ಲಿ ಈಗ ತಾನೆ ತಲೆಯೆತ್ತುತ್ತಿರುವ ಕೆಲ ಹಿಂದುಳಿದವರ ವಿನಾ ಉಳಿದವರೆಲ್ಲರೂ ವಿದ್ಯಾಧಿಕವರ್ಗಕ್ಕೆ ಸೇರಿದವರಾಗಿರುತ್ತಾರೆ. ವಿದ್ಯಾಧಿಕರೂ ಮೇಧಾವಿಗಳೂ ಎನಿಸಿಕೊಂಡಿರುವವರು ಓಟರುಗಳ ಕುಂದುಕೊರತೆಗಳನ್ನು ಪ್ರಭುತ್ವದವರಲ್ಲಿ ನಿವೇದಿಸಿ ಪರಿಹರಿಸಿಕೊಡುವುದಕ್ಕೆ ಬದಲು ಅವನ್ನು ಪ್ರತಿಭಟಿಸುವುದಕ್ಕಾಗಿ ಒಂದು ಪಕ್ಷವನ್ನೇರ್ಪಡಿಸಿಕೊಂಡಿರುವುದು ವಿಷಾದಸ್ಥಾನವಾಗಿದೆ. ಮೊದಲನೆಯಸಲ ನಡೆದ ಚುನಾವಣೆಯ ಕಾಲಾವಧಿಯು ಈ ವರ್ಷಾಂತ್ಯದಲ್ಲಿ ಪೂರೈಸುವುದು, ಅಂದರೆ ಇನ್ನು ಆರುತಿಂಗಳು ಮಾತ್ರ ಉಳಿದಿರುವುದು. ಆದರೂ ಮುಂದಿನ ಚುನಾವಣೆಯ ವಿಚಾರದಲ್ಲಿ ಪ್ರಜಾಪಕ್ಷದವರು ಯಾವ ಪ್ರಯತ್ನವನ್ನೂ ಮಾಡದೆ ಮೌನರಾಗಿರುವುದು ಆಶ್ಚರ್ಯವಾಗಿದೆ. ಇತರಕಡೆಗಳಲ್ಲಿ ಚುನಾವಣೆಗೆ ಬಹುಕಾಲದ ಹಿಂದಿನಿಂದಲೂ ಪ್ರಯತ್ನವು ನಡೆಸಲ್ಪಡುವುದು ವಾಡಿಕೆಯಾಗಿದೆ. ಬ್ರಿಟಿಷ್ ಇಂಡ್ಯಾದಲ್ಲಿ ಅಕ್ಟೋಬರ್ ತಿಂಗಳಲ್ಲಿ ನಡೆಯಬೇಕಾಗಿರುವ ಚುನಾವಣೆಗೆ ಅನೇಕತಿಂಗಳ ಪೂರ್ವದಿಂದಲೂ ತಕ್ಕ ಸಾಹಸವು ನಡೆಸಲ್ಪಟ್ಟಿರುವುದು. ಮದ್ರಾಸಿನಲ್ಲಿ ಜಸ್ಟಿಸ್‌ಪಕ್ಷದವರೂ ಸ್ವರಾಜ್ಯಪಕ್ಷದವರೂ ಪರಸ್ಪರ ಸ್ಪರ್ಧೆಯಿಂದ ಬೇಕಾದ ಸಾಹಸವನ್ನು ಮಾಡುತ್ತಿದ್ದಾರೆ. ನಮ್ಮ ಸೀಮೆಯಲ್ಲಿ ಅಂತಹ ಪ್ರಯತ್ನವೇನೂ ನಡೆಯದಿರುವುದಕ್ಕೆ ಪ್ರಬಲವಾದ ಪಕ್ಷಗಳಿಲ್ಲದಿರುವುದೇ ಕಾರಣವೆಂದು ಹೇಳಬೇಕಾಗಿದೆ. ಇಂತಹ ಪಕ್ಷಗಳ ಏರ್ಪಾಟಿಗಾಗಿರುವ ತೊಂದರೆಯ ಭಾಗವೇನೆಂಬುದು ಗೊತ್ತಾಗಲಿಲ್ಲವು. ದೇಶಾಭ್ಯುದಯಕ್ಕೆ ಪ್ರತಿಬಂಧಕಗಳಾದ ವಿಷಯಗಳನ್ನು ಪರಿಹರಿಸಿ ರಾಜ್ಯಾಡಳಿತವು ಸುಲಲಿತವಾಗಿ ನಡೆಯುವಂತೆ ಮಾಡುವುದಕ್ಕೆ ರಾಜಕೀಯಪಕ್ಷಗಳ ವಿನಾ ಬೇರೊಂದುಪಾಯದಿಂದ ಸಾಧ್ಯವಿಲ್ಲವು. ಉಭಯ ಸಭೆಗಳ ಮುಖಂಡರುಗಳೂ ಮುಂದಿನ ಚುನಾವಣೆಗೆ ತಕ್ಕ ಪ್ರಯತ್ನವನ್ನು ಈಗಲಿಂದಲೇ ಪ್ರಾರಂಭಿಸುವರೆಂದು ನಿರೀಕ್ಷಿಸುತ್ತೇವೆ. ಹಾಗಲ್ಲದೆ ಇತರರು ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತು ಬೇಕಾದ ಪ್ರಯತ್ನವನ್ನೆಲ್ಲಾ ಮಾಡಿದಮೇಲೆ ಪ್ರಜಾಪಕ್ಷದವರು ಕಣ್ತೆರೆದು ಓಡಾಡುವುದಾಗಲಿ, ನಾವು ಪ್ರಯತ್ನಮಾಡದಿದ್ದರೂ ನಮಗೇ ಓಟು ಸಿಕ್ಕುತ್ತದೆಂಬ ಆಲಸ್ಯದಿಂದಾಗಲಿ, ನಮ್ಮವರು ನಮಗೇ ಕೊಡುತ್ತಾರೆಂಬ ಪೊಳ್ಳುಭರವಸೆಯಿಂದಾಗಲಿ ಯಾವ ಪ್ರಯತ್ನವನ್ನೂ ಮಾಡದೆ ಅಲಸರಾಗಿದ್ದಲ್ಲಿ ಚುನಾವಣೆಯ ಸ್ಪರ್ಧೆಯಲ್ಲಿ ವಿಫಲರಾಗುವುದಲ್ಲದೆ ಆತ್ಮದ್ರೋಹಮಾಡಿದಂತಾಗುತ್ತದೆ. ಇದೂ ಅಲ್ಲದೆ ಚುನಾವಣೆದಾರರಲ್ಲಿ ಬಹುಸಂಖ್ಯಾಕರು ಅವಿದ್ಯಾವಂತರೂ, ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬುವವರೂ ಆಗಿರುವುದರಿಂದ ಅಭ್ಯರ್ಥಿಗಳಲ್ಲಿ ತಮಗೆ ಹಿತರಾರು ಅಹಿತರಾರು ಎಂಬುದನ್ನು ವಿಮರ್ಶಿಸಿ ತಿಳಿದುಕೊಳ್ಳುವಷ್ಟು ಶಕ್ತರಾಗಿರದೆ ಹಿತಶತ್ರುಗಳ ಮಾಯಾಜಾಲಕ್ಕೆ ಬಿದ್ದು ಮೋಸಹೋಗುವುದೂ, ಮುಂಬರಿದ ವರ್ಗದವರು ಯಾವ ಪ್ರಯತ್ನವನ್ನೂ ಮಾಡದೆ ಮೌನರಾಗಿರುವಂತೆ ಹೊರಗಡೆ ನಟಿಸುತ್ತಿದ್ದು ಒಳಗೊಳಗೆ ಓಟರುಗಳನ್ನು ತಮ್ಮ ವಶಮಾಡಿಕೊಳ್ಳಲು ತಕ್ಕ ಸಾಹಸವನ್ನು ಮಾಡುತ್ತಿರುವುದೂ ನಮ್ಮ ಅನುಭವಕ್ಕೆ ಬಂದುವಾಗಿವೆ ಆದುಕಾರಣ ಹಿಂದುಳಿದ ಜನಾಂಗದ ಮುಖಂಡರುಗಳು ಈಗಲಿಂದಲೂ ಎಚ್ಚತ್ತು ತಾವೂ, ತಮ್ಮ ಪಕ್ಷದವರೂ ಮುಂದಲ ಚುನಾವಣೆಯಲ್ಲಿ ಕೃತಾರ್ಥರಾಗುವುದಕ್ಕೆ ಬೇಕಾದ ಸಾಹಸಪ್ರಯತ್ನಗಳನ್ನು ಮಾಡುವವರಾಗಬೇಕು. ಮುಂದಲ ಚುನಾವಣೆಯ ಕಾಲವು ಸಮೀಪಿಸುತ್ತ ಬಂದುದರಿಂದಲೂ, ಪ್ರಯತ್ನಮಾಡಲಿಕ್ಕೆ ಹೆಚ್ಚು ಕಾಲಾವಧಿಯಿಲ್ಲದಿರುವುದರಿಂದಲೂ ಮುಖಂಡರುಗಳೂ, ಅಭ್ಯರ್ಥಿಗಳೂ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲೇರ್ಪಟ್ಟಿರುವ ಪ್ರಜಾಪಕ್ಷ ಮತ್ತು ಪ್ರಾಗತಿಕಪಕ್ಷಗಳ ನಿಜವಾದ ಉದ್ದೇಶವನ್ನೂ, ಯಾವ ಪಕ್ಷದವರಿಂದ ಪ್ರಜಾಬಾಹುಳ್ಯಕ್ಕೆ ಪ್ರಯೋಜನವಾಗುತ್ತಿದೆಯೆಂಬುದನ್ನೂ ಓಟರುಗಳಿಗೆ ಈಗಲಿಂದಲೂ ಚೆನ್ನಾಗಿ ತಿಳಿಯಹೇಳಿ ಅವರುಗಳು ತಮ್ಮ ಹಿತಸಾಧಕರನ್ನು ಪ್ರತಿನಿಧಿಗಳನ್ನಾಗಿ ಆರಿಸಿಕೊಳ್ಳುವಂತೆ ಮಾಡದಿದ್ದಲ್ಲಿ ಕಾರ್ಯವಿಘಾತವಾಗುತ್ತದೆಂಬುದನ್ನು ಮುಖಂಡರುಗಳೂ ಅಭ್ಯರ್ಥಿಗಳೂ ಮರೆಯಬಾರದು. ನಮ್ಮ ಸರ್ಕಾರದವರು ಓಟುಕೊಡಲು ಮತ್ತು ಚುನಾವಣೆಗೊಳ್ಳಲು ಅರ್ಹರಾದವರ ಹೆಸರುಗಳ ಪಟ್ಟಿಗಳನ್ನು ಇನ್ನೂ ಸಿದ್ಧಗೊಳಿಸದೆ ಅಲಸ್ಯ ಮಾಡುತ್ತಿರುವುದರ ಕಾರಣವಾದರೂ ತಿಳಿಯಲಿಲ್ಲವು. ಓಟನ್ನು ಕೊಡಲು ಅರ್ಹರಾಗಿರುವವರ ಹೆಸರುಗಳು ಪಟ್ಟಿಯಲ್ಲಿ ಬಿಡಲ್ಪಟ್ಟಿರುವುದನ್ನು ತಿಳಿದು ಹೊಸದಾಗಿ ಸೇರಿಸುವಂತೆ ಮಾಡಲು ಅವಕಾಶವಾಗುವ ಹಾಗೆ ಹೆಸರುಗಳ ಪಟ್ಟಿಗಳು ಮುಂದಾಗಿ ಸಿದ್ಧಗೊಳಿಸಲ್ಪಡುವುದೂ, ಸಮಸ್ತ ಜನರಿಗೂ ಓಟಿನ ವಿಚಾರವು ತಿಳಿಯುವ ರೀತಿಯಲ್ಲಿ ಪ್ರಕಟಿಸಲ್ಪಡುವುದೂ ಅತ್ಯಾವಶ್ಯಕವು. ಹಿಂದಣ ಚುನಾವಣೆಯಲ್ಲಿ ಕೆಲವೆಡೆ ಪಟ್ಟಿಗಳಲ್ಲಿದ್ದ ಹೆಸರುಗಳು ಬಿಡಲ್ಪಟ್ಟಿದ್ದುದೂ, ಇಲ್ಲದ ಹೆಸರುಗಳು ಹೊಸದಾಗಿ ಸೇರಿಸಲ್ಪಟ್ಟಿದ್ದುದೂ ನಮ್ಮ ಜ್ಞಾಪಕದಲ್ಲಿರುತ್ತವೆ. ಅನೇಕರು ಓಟು ಕೊಡಲು ಅರ್ಹರಾಗಿದ್ದರೂ ಅನಕ್ಷರಸ್ಥರಾದುದರಿಂದ, ತಮ್ಮ ಹೆಸರುಗಳು ಬಿಟ್ಟುಹೋಗಿರುವುದನ್ನು ತಿಳಿಯಲು ಸಾಧ್ಯವಿಲ್ಲವು. ಆದುಕಾರಣ ಈಗಲಿಂದಲೇ ಓಟರುಗಳ ಲಿಸ್ಟುಗಳನ್ನು ಸಕ್ರಮವಾಗಿಯೂ, ಸಮಗ್ರವಾಗಿಯೂ ಸಿದ್ಧಗೊಳಿಸಲು ಸರ್ಕಾರದವರು ತಕ್ಕೇರ್ಪಾಟನ್ನು ಮಾಡುವುದಲ್ಲದೆ, ಪ್ರಜಾಪಕ್ಷದ ಮುಖಂಡರುಗಳೂ, ಅಭ್ಯರ್ಥಿಗಳೂ ಚುನಾವಣೆಯಲ್ಲಿ ತಾವು ಕೃತಾರ್ಥರಾಗಲು ತಕ್ಕ ಸಾಹಸವನ್ನು ಈಗಲಿಂದಲೇ ಮಾಡುವವರಾಗಲೆಂದು ನಾವು ಎಚ್ಚರಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಯಳಂದೂರು ತಾ|| ಹೊನ್ನೂರಿನಲ್ಲಿ ನಡೆದ ದೊಂಬಿಕಲಹದಲ್ಲಿ ಭಾಗಿಗಳಾಗಿದ್ದವರೆಂದು ಸೆರೆಹಿಡಿಯಲ್ಪಟ್ಟಿರುವವರ ವಿಚಾರಣೆಯನ್ನು ನಡೆಯಿಸಲು ನಂಜನಗೂಡು ಸ್ಪೆಷಲ್ ಸೆಕೆಂಡ್‌ಗ್ರೇಡ್ ಮ್ಯಾಜಿಸ್ಟ್ರೇಟರು ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಚಾಮುಂಡೇಶ್ವರಿಬೆಟ್ಟದಮೇಲೆ ಕುಡಿಯುವ ನೀರಿಗೆ ಬಹಳ ಕಷ್ಟವಾಗಿರುವುದರಿಂದ ಲಲಿತಾದ್ರಿ ಮಾರ್ಗವಾಗಿ ನಲ್ಲಿಗಳನ್ನು ಹಾಕಿ ಬೆಟ್ಟದಮೇಲಕ್ಕೆ ಕಾವೇರಿ ನದಿಯ ನೀರನ್ನೊದಗಿಸಲು 85,000 ರೂ. ಸ್ಯಾಂಕ್ಷನ್ ಆಗಿರುವುದಾಗಿ ಕೇಳುತ್ತೇವೆ.

ಗತಿಸಿದ ಚಿಕ್ಕಮಗಳೂರಿನ ಶ್ರೀನಿವಾಸರಾಯರ ಬದಲು ಪ್ರಜಾಪ್ರತಿನಿಧಿಸಭಾಮೆಂಬರಾಗಿ ಆರಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತಿದ್ದವರಲ್ಲಿ ಮ|| ಬಾಗಮನೆ ದೇವಗೌಡರು ಹೆಚ್ಚು ಮತಗಳನ್ನು ಪಡೆದು ಕೃತಾರ್ಥರಾದರೆಂದು ತಿಳಿಸಲು ಸಂತೋಷಿಸುತ್ತೇವಲ್ಲದೆ ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಉದಕಮಂಡಲಕ್ಕೆ ದಯೆಮಾಡಿಸಿದ್ದ ದಿವಾನರು ಕಳೆದ ಶುಕ್ರವಾರಮಧ್ಯಾಹ್ನ ರಾಜಧಾನಿಗೆ ಚಿತ್ತೈಸಿ ಅದೇರಾತ್ರಿ 11 ಗಂಟೆಯ ರೈಲುಬಂಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು, ಮತ್ತು ತಾ|| 14 ರಲ್ಲಿ ಆರಂಭವಾಗುವ ಪ್ರಜಾಪ್ರತಿನಿಧಿಸಭಾಧಿವೇಶನಕ್ಕಾಗಿ ಕೂಡಲೆ ಪರಿವಾರಸಮೇತ ರಾಜಧಾನಿಗೆ ಬರುವವರಾಗಿರುವರು.

ಬೆಂಗಳೂರಿಗೆ ಕುಡಿಯುವ ನೀರನ್ನೊದಗಿಸುವಕ್ರಮದಲ್ಲಿರುವ ತೊಂದರೆಯ ಭಾಗವನ್ನು ಕಂಡುಹಿಡಿದು ನಿರಾತಂಕವಾಗಿಯೂ, ನಿರಂತರವಾಗಿಯೂ ನೀರನ್ನೊದಗಿಸುವ ಮಾರ್ಗವನ್ನು ಸೂಚಿಸುವುದಕ್ಕಾಗಿ ಸರ್ಕಾರದವರಿಂದ ಇಂಜನಿಯರುಗಳಸಂಘವೊಂದೇರ್ಪಡಿಸಲ್ಪಟ್ಟು ಎಲೆಕ್ಟ್ರಿಕ್ ಚೀಫ್ ಇಂಜನಿಯರಾದ ಮಿ|| ಪೋರ್ಬ್ಸ್‌ರವರು ಒಬ್ಬ ಮೆಂಬರಾಗಿ ಗೊತ್ತುಮಾಡಲ್ಪಟ್ಟಿರುತ್ತಾರೆ.

ಮೈಸೂರು ಸರ್ಕಾರದವರಿಂದ ನಡೆಸಲ್ಪಡುತ್ತಿರುವ ರೈಲ್ವೆಯ ಉತ್ಪತ್ತಿಯು ಕಳೆದ ಮೇ ತಾ|| 15 ಕ್ಕೆ ಕಡೆಯಾದ ಒಂದು ವಾರದಲ್ಲಿ 72900 ರೂ. ಉತ್ಪನ್ನವಾಗಿರುವುದು. ಕಳೆದವರ್ಷ ಇದೇ ಕಾಲದಲ್ಲಿ 72400 ರೂ. ಉತ್ಪನ್ನವಾಗಿದ್ದಿತು. ಈ ರೈಲ್ವೆಗಳ 3 ನೇ ತರಗತಿಯ ಛಾರ್ಜು ಬರುವ ಜುಲೈ ತಾ|| 1 ರ ಆರಭ್ಯ ಮೈಲಿಯೊಂದಕ್ಕೆ 4½ ಕಾಸುಗಳಿಂದ 4 ಕಾಸುಗಳಿಗಿಳಿಸಲ್ಪಡುವುದಾಗಿ ವರ್ತಮಾನವಿದೆ

ದೊಡ್ಡಬಳ್ಳಾಪುರದ ಸಬ್‌ರಿಜಿಸ್ಟ್ರಾರರವರು ಸಕಾಲದಲ್ಲಿ ಆಫೀಸಿಗೆ ಬಂದು ಶ್ರದ್ಧೆಯಿಂದ ಕೆಲಸ ಮಾಡದಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿರುವ ಪ್ರಯುಕ್ತ ಮೇಲ್ಪಟ್ಟ ಅಧಿಕಾರಿಗಳು ಇದನ್ನು ಗಮನಕ್ಕೆ ತಂದುಕೊಂಡು ಕ್ರಮಪಡಿಸಿ ಜನರ ತೊಂದರೆಯನ್ನು ತಪ್ಪಿಸಬೇಕಾಗಿ ಒಬ್ಬರು ಈ ಮೂಲಕ ಪ್ರಾರ್ಥಿಸುತ್ತಾರೆ. ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ಈ ಅಕ್ರಮವನ್ನು ಸರಿಪಡಿಸಬೇಕಾಗಿ ಸೂಚಿಸುತ್ತೇವೆ.

ಕೊಡಗಿನ ರಿಟೈರ್ಡ್ ಸಬ್‌ಜಡ್ಜಿಯರೂ, ಮೈಸೂರು ನ್ಯಾಯವಿಧಾಯಕಸಭಾಸದರೂ ಆದ ರಾವ್‌ಸಾಹೇಬ್ ಮ|| ಚೆನ್ನಯ್ಯನವರ ಪುತ್ರಿಯರು, ಸೌ|| ಕಾಮಾಕ್ಷಮ್ಮ ಮತ್ತು ಸೌ|| ಕೃಷ್ಣಮ್ಮ ಈ ಉಭಯರೂ ಕಳೆದವರ್ಷದ ಎಸ್.ಎಸ್.ಎಲ್.ಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ರಾವ್‌ಸಾಹೇಬರನ್ನು ಅಭಿನಂದಿಸಿ ಈ ಸಹೋದರಿಯರಿಬ್ಬರೂ ಮುಂದಿನ ಪ್ರೌಢಪರೀಕ್ಷೆಗಳಲ್ಲಿ ಉತ್ತೀರ್ಣರಾಗಲೆಂದು ಕೋರುತ್ತೇವೆ.

ಮ|| ಗಳಾದ (1) ಎಂ. ಎಲ್. ಶ್ರೀಕಂಠಯ್ಯನವರು (2) ಟಿ. ಎಂ. ಪುಟ್ಟಸಿದ್ಧಪ್ಪನವರು (3) ಡಿ. ಎಸ್. ರುದ್ರಪ್ಪನವರು (4) ಆರ್. ಬಸಪ್ಪಾಜಿಯವರು (5) ತಿಪ್ಪೆರುದ್ರಪ್ಪನವರು ಬಿ.ಎ., ಪರೀಕ್ಷೆಯಲ್ಲೂ; (1) ವೀರಪ್ಪನವರು (2) ಗುರುಸಿದ್ಧಪ್ಪನವರು ಬಿ.ಎಸ್‌ಸಿ., ಪರೀಕ್ಷೆಯಲ್ಲೂ; (1) ಕೆ. ಎಸ್. ಚೆನ್ನಬಸವಯ್ಯನವರು (2) ಎಂ. ಆರ್. ಶಿವಪ್ಪನವರು ಎಂಟ್ರೆನ್ಸ್ ಪರೀಕ್ಷೆಯಲ್ಲೂ ತೇರ್ಗಡೆಯನ್ನು ಹೊಂದಿರುವುದಕ್ಕಾಗಿ ಅವರುಗಳನ್ನು ಅಭಿನಂದಿಸುತ್ತೇವೆ.

ಕಳೆದ ಮೇ ತಾ|| 25 ಮತ್ತು 26 ರಲ್ಲಿ ಬೆಂಗಳೂರು, ಕೋಲಾರ, ಮೈಸೂರು, ಕಡೂರು ಮತ್ತು ಹಾಸನ ಡಿ|| ಗಳಲ್ಲಿ ಅಂದರೆ ನೆಲಮಂಗಲದಲ್ಲಿ 1·64, ಆನೆಕಲ್ಲಿನಲ್ಲಿ 1·05, ಹೆಬ್ಬಗೋಡಿನಲ್ಲಿ 1·40, ಕೋಲಾರದಲ್ಲಿ 1·02, ಮುಳಬಾಗಿಲಿನಲ್ಲಿ 1·28 ಹೆಗ್ಗಡದೇವನಕೋಟೆಯಲ್ಲಿ 1·50, ನಂಜನಗೂಡಿನಲ್ಲಿ 1·37, ಮಳವಳ್ಳಿಯಲ್ಲಿ 2·90, ನಾಗಮಂಗಲದಲ್ಲಿ 1·32, ಬೇಲೂರಿನಲ್ಲಿ 1·15, ಗ್ರಾಮದಲ್ಲಿ 2·10, ಚಿಕ್ಕಮಗಳೂರಿನಲ್ಲಿ 1·25, ಮತ್ತು ಕಡೂರಿನಲ್ಲಿ 1·35 ಇಂಚು ಮಳೆಯಾಗಿರುವುದೆಂದು ವರದಿಯಾಗಿದೆ.

ಕಳೆದ 30–35 ವರ್ಷಗಳಿಂದಲೂ ಅರಮನೆಯ ಬಿಡದಿ ಬಕ್ಷಿಯವರಾಗಿದ್ದು ಬಹಳ ಶ್ರದ್ಧಾಭಕ್ತಿಯಿಂದ ಕೆಲಸಮಾಡುತ್ತಿದ್ದ ಮ|| ಮುದ್ದರಾಜಅರಸಿನವರು ಈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾದ ಪ್ರಯುಕ್ತ ಮ|| ಸಿ. ವಿ. ಸುಬ್ರಹ್ಮಣ್ಯರಾಜಅರಸಿನವರು ಬಿಡದಿ ಬಕ್ಷಿಯವರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಹೊಟ್ಟೆಗಿಲ್ಲದೆ ಬಂದು ಸೇರಿಕೊಂಡಿರುವ ಹಳ್ಳಿಯವರನ್ನು ಹಿಂದಿನ ಬಕ್ಷಿಯವರು ಕರುಣಾದೃಷ್ಟಿಯಿಂದ ನೋಡುತ್ತಿದ್ದಂತೆಯೇ ಮ|| ಸುಬ್ರಹ್ಮಣ್ಯರಾಜಅರಸಿನವರೂ ನೋಡುವರೆಂದು ನಿರೀಕ್ಷಿಸುತ್ತೇವೆ.

ಕಳೆದಮಂಗಳವಾರಸಾಯಂಕಾಲ ರಾಜಧಾನಿಯಲ್ಲಿ ಪ್ರಚಂಡವಾಯುಮಿಶ್ರಿತವಾದ ಮಳೆಯಾಯಿತು. ಈ ಮಳೆಯು ಪಶ್ಚಿಮೋತ್ತರಭಾಗದಲ್ಲಿ ವಿಶೇಷವಾಗಿಯೂ, ಇತರ ಭಾಗದಲ್ಲಿ ಅತ್ಯಲ್ಪವಾಗಿಯೂ ಇದ್ದಿತು. ಅಪೂರ್ವವಾದ ಗಾಳಿಯೇಟಿಗೆ ಅನೇಕ ಸಾಲುಮರಗಳೂ ಮನೆಗಳಲ್ಲಿರುವ ತೆಂಗಿನ ಮತ್ತು ಇತರ ಫಲವೃಕ್ಷಗಳೂ ಮುರಿದುಬಿದ್ದುವು. ಆದರೆ ದೈವಾಧೀನದಿಂದ ಯಾವ ಅಪಾಯವೂ ಆಗಲಿಲ್ಲ. ನೆನ್ನೆಯಿಂದಲೂ ಮೋಡಮುಸಿಕಿಕೊಂಡಿದೆ. ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿರುವ ಮಳೆಯಭವಿಷ್ಯದ್ವಿಚಾರದಂತೆ ಈ ದಿವಸ ಮಳೆಯಾರಂಭವಾಗಬೇಕಾಗಿದೆ.

ಕಳೆದ ಮೇ ತಾ|| 15 ರಲ್ಲಿ ಬೊಂಬಾಯಾಧಿಪತ್ಯದ ರಡ್ಡಿಜನರ ಮಹಾಸಭೆಯು ಬೆಳಗಾಂ ಡಿ|| ಎರಗಟ್ಟಿಯಲ್ಲಿ ಬೆಂಗಳೂರು ಒಕ್ಕಲಿಗರಸಂಘದ ಪ್ರೆಸಿಡೆಂಟರಾದ ರಾವ್‌ಸಾಹೆಬ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲೂ, ರಡ್ಡಿಸ್ತ್ರೀಯರ ಸಂಮೇಳನವು ತಾ|| 16 ರಲ್ಲಿ ರಾ|| ಸಾ|| ಚೆನ್ನಯ್ಯನವರ ಕುಮಾರಿ ಮಹಾರಾಣೀಕಾಲೇಜಿನ ಉಪಾಧ್ಯಾಯನಿಯರಾದ ಸೌ|| ಲಕ್ಷ್ಮಮ್ಮ, ಬಿ.ಎ., ಯವರ ಅಧ್ಯಕ್ಷತೆಯಲ್ಲೂ ಜರುಗಿದುವು. ವಿದ್ಯಾಭ್ಯಾಸ, ಸಮಾಜಸುಧಾರಣೆ ಮೊದಲಾದ ವಿಚಾರಗಳ ಮೇಲೆ ಅಧ್ಯಕ್ಷರು ಮತ್ತು ಅಧ್ಯಕ್ಷೆಯರು ಬಹುಶ್ಲಾಘ್ಯವೂ ಭಾವಗರ್ಭಿತವೂ, ಮನೋರಂಜಕವೂ ಆದ ಭಾಷಣಗಳನ್ನು ಮಾಡಿದರು.

ಸಾಗರಡಿವಿಜನ್ ಪಾರೆಸ್ಟಾಫೀಸರಾದ ಮ|| ಕೆ. ರೇವಣ್ಣನವರ ಅಳಿಯ ಮ|| ಬಸಪ್ಪ, ಬಿ.ಎ., ಯವರು ಕ್ಷಯರೋಗಗ್ರಸ್ತರಾಗಿ ರಾಜಧಾನಿಯ ಕ್ಷಯರೋಗದ ಆಸ್ಪತ್ರೆಯಲ್ಲಿ 20–25 ದಿನಗಳಿಂದ ಚಿಕಿತ್ಸೆಯನ್ನು ಹೊಂದುತ್ತಿದ್ದು ಗುಣವನ್ನು ಹೊಂದದೆ ಕಳೆದ ಬುಧವಾರ ಶಿವೈಕ್ಯರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಇನ್ನೂ 20–22 ವರ್ಷವಯಸ್ಸಿನವರಾಗಿದ್ದು ಮದ್ರಾಸಿನ ಎಫ್. ಎಲ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿ.ಎಲ್. ಪರೀಕ್ಷೆಗೆ ಹಣಕಟ್ಟಿದ್ದರು. ಅಪುತ್ರವಂತರಾದ ಮ|| ರೇವಣ್ಣನವರಿಗೆ 13–14 ವರ್ಷವಯಸ್ಸಿನ ಏಕಮಾತ್ರಪುತ್ರಿಯ ವೈಧವ್ಯದುಃಖಕ್ಕೆ ಪಾತ್ರರಾದುದಕ್ಕಾಗಿ ನಮ್ಮ ಅನುತಾಪವನ್ನು ತಿಳಿಸಿ ಅವರ ದುಃಖಸಮಾಧಾನವಾಗಲೆಂದು ಕೋರುತ್ತೇವೆ.

ಶ್ರೀಕೃಷ್ಣರಾಜಮಿಲ್ಲಿನ ಮ್ಯಾನೇಜಿಂಗ್ ಏಜಂಟರಲ್ಲೊಬ್ಬರಾದ ಮ|| ಬಿ. ಶೀತಾರಾಮಾಚಾರ್ಯರು ತಮ್ಮ ತೃತೀಯಕುವರಿ ಸೌ|| ಶಾರಾಬಾಯಿಯನ್ನು ಹಾಸನದ ಮ|| ಪಿ. ಜಯರಾಯರ ಮಗ ಮ|| ರಾಘವೇಂದ್ರರಾಯರಿಗೆ ಕೊಟ್ಟು ವಿವಾಹಮಹೋತ್ಸವವನ್ನು ಕಳೆದ ತಾ|| 31 ನೇ ಸೋಮವಾರ ರಾಜಧಾನಿಯಲ್ಲಿ ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಸರ್ಕಾರಿಯಧಿಕಾರಿಗಳು, ರಾಜಬಂಧುಗಳು, ಲಾಯರುಗಳು, ವರ್ತಕರು ಮೊದಲಾಗಿ ಅನೇಕ ದೊಡ್ಡಮನುಷ್ಯರುಗಳು ಆಹ್ವಾನಿಸಲ್ಪಟ್ಟಿದ್ದು ಸಂಗೀತಶ್ರವಣದಿಂದಲೂ, ಗಂಧಪುಷ್ಪ ಫಲತಾಂಬೂಲಗಳ ವಿನಿಯೋಗದಿಂದಲೂ ಸತ್ಕೃತರಾಗಿ ನೂತನದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿಬಂದರು.

ಕಳೆದವಾರ ಶ್ರೀರಂಗಪಟ್ಟಣದಲ್ಲಿ ಪ್ಲೀಡರ್ ಮ|| ಬಿ. ನರಸಿಂಗರಾಯರ ಮನೆಗೆ ಕಳ್ಳರು ನುಗ್ಗಿ ಕಬ್ಬಿಣದ ಪೆಟ್ಟಿಗೆಯ ಬಾಗಿಲನ್ನು ತೆಗೆಯಲು ಪ್ರಯತ್ನಿಸುತ್ತಿರುವಾಗ್ಗೆ ಶಬ್ದವನ್ನು ಕೇಳಿ ಮಲಗಿದ್ದವರೆಚ್ಚತ್ತು ಏನು ಗದ್ದಲವೆಂದು ಕೇಳಲಾಗಿ ಕಳ್ಳರು ದಿಗಿಲುಬಿದ್ದು ಪೆಟ್ಟಿಗೆಯನ್ನುಬಿಟ್ಟು ಕೈಗೆ ಸಿಕ್ಕಿದ ಕೆಲ ಸೀರೆ ಬಟ್ಟೆಬರೆಗಳನ್ನು ದೋಚಿಕೊಂಡು ಹೋದುದಾಗಿಯೂ, ಕಳ್ಳರ ವಶವಾಗದಿದ್ದ ಕಬ್ಬಿಣದ ಪೆಟ್ಟಿಗೆಯಲ್ಲಿ 5000 ರೂ. ಗಳಿಡಲ್ಪಟ್ಟಿದ್ದುದಾಗಿಯೂ ವರ್ತಮಾನವಿದೆ. ಮ|| ನರಸಿಂಗರಾಯರು ಹಣಕಾಸು ನಗನಾಣ್ಯಗಳನ್ನೆಲ್ಲಾ ರಾಜಧಾನಿಯಲ್ಲಿರುವ ತಮ್ಮ ಮನೆಯಲ್ಲಿಡುವರೇ ಹೊರತು, ಶ್ರೀರಂಗಪಟ್ಟಣದಲ್ಲಿ ಇತರರು ವಾಸಮಾಡುವ ತಮ್ಮ ಮನೆಯಲ್ಲಿ ಅಷ್ಟೊಂದು ಹಣವಿಡುವ ಸಂಭವವಿಲ್ಲವು. ನಿರಾಶರಾಗಿಹೋದ ಕಳ್ಳರಿಗೆ ವ್ಯಾಕುಲವನ್ನುಂಟುಮಾಡಲು ಯಾರೋ ಈರೀತಿ ಹುಟ್ಟಿಸಿರಬಹುದು.

ರಾಜಧಾನಿಯ ನರಸಿಂಹರಾಜಮೊಹಲ್ಲಾ. ವಾಸಿಯಾದ ಮ|| ಎಂ. ಎಸ್. ಸುಬ್ರಾಯಗೌಡರು ಅದೇ ಮೊಹಲ್ಲಾವಾಸಿಗಳಾದ ಕೆಲವರು ಕಳೆದ ಮೇ ತಾ|| 4 ರಲ್ಲಿ ತಮ್ಮ ಮೇಲೆ ಅತ್ಯಾಚಾರವನ್ನು ನಡೆಯಿಸಿ ಮಾನನಷ್ಟವನ್ನೂ ಮನೋವ್ಯಥೆಯನ್ನೂ ಉಂಟುಮಾಡಿದರೆಂದು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದರು. ಮೊಖದ್ದಮೆಯು ನಡಿಯುತ್ತಿರುವಾಗ್ಗೆ ಆ ಮೊಹಲ್ಲಾದಲ್ಲಿರುವ ರಾಮಮಂದಿರದ ಸೇವಾಜನಗಳ ಕೋರಿಕೆಯ ಮೇರಿಗೆ ಫಿರ್ಯಾದಿ ಅಪರಾಧಿಗಳಿಬ್ಬರೂ ತಾ|| 26 ರಲ್ಲಿ ಮಂದಿರದಲ್ಲಿಸೇರಿ, ಅಪರಾಧಿಗಳು ಫಿರ್ಯಾದಿಗೆ 50 ರೂಪಾಯಿ ದಂಡವನ್ನು ಕೊಡಬೇಕೆಂದು ತೀರ್ಮಾನಮಾಡಿ ಅಪರಾಧಿಗಳಿಂದ ಕೊಡಿಸಿದುದನ್ನು ಫಿರ್ಯಾದಿಯು ಅಂಗೀಕರಿಸಿ ಮಂದಿರದ ಸೇವಾಕಾರ್ಯಕ್ಕುಪಯೋಗಿಸುವುದಕ್ಕಾಗಿ ಮುಖಂಡರ ವಶಕ್ಕೆ ಕೊಟ್ಟು ತಮ್ಮ ಧರ್ಮಬುದ್ಧಿಯನ್ನು ವ್ಯಕ್ತಪಡಿಸಿದರೆಂದು ಒಬ್ಬರು ಬರೆದಿರುತ್ತಾರೆ. ಮ|| ಸುಬ್ರಾಯಗೌಡರಂತೆ ಇತರರೂ ಹಟವನ್ನು ಸಾಧಿಸದೆ ತಂತಮ್ಮ ವಿವಾದಗಳನ್ನು ಪಂಚಾಯಿತರ ಮುಖೇನ ಬಗೆಹರಿಸಿಕೊಂಡು ದೇಹಶ್ರಮ ಅರ್ಥಶ್ರಮಗಳಿಗೆ ಗುರಿಯಾಗಬಾರದೆಂದು ಸೂಚಿಸುತ್ತೇವೆ.

ವರ್ತಮಾನಸಂಗ್ರಹ.

ಮ್ಯೂನಿಚ್ಚಿನಲ್ಲಿ ಒಂದು ರೈಲ್ವೆಅನಾಹುತವು ನಡೆದು 33 ಜನರು ಸತ್ತರು 100 ಜನರು ಗಾಯವಡೆದರು.

ಪೊಲ್ಲಾಚಿ ಸಮೀಪಗ್ರಾಮವಾದ ಗೋಪಾಲಪುರದಲ್ಲಿ ಎರಡುಮಕ್ಕಳು ಸಿಡಿಲುಬಡಿತದಿಂದ ಮೃತವಾದುವು.

ಕೈಯಿಂದ ನೇಯಲ್ಪಟ್ಟ ಖಾದಿಬಟ್ಟೆಯ ಮೇಲಿನ ಸುಂಕವನ್ನು ಕಾಶಿನಗರದ ಮ್ಯುನಿಸಿಪಾಲಿಟಿಯವರು ತೆಗೆದುಹಾಕಿರುತ್ತಾರೆ.

ಸಿಂದಿನ ಲಾರ್ಕಾನಾಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ಕಳೆದವಾರ ಸಿಡಿಲುಬಡಿತದಿಂದ ಗ್ರಾಮವೇ ಸುಟ್ಟು ಭಸ್ಮವಾಯಿತಲ್ಲದೆ ಮತ್ತೊಂದು ಗ್ರಾಮವೂ ಸಿಡಿಲುಬಡಿತದಿಂದ ಅರ್ಧದವರೆಗೆ ಸುಟ್ಟುಹೋಗಿರುವುದು.

ಒಂದು ಬ್ರಿಟಿಷ್ ಮೋಟಾರುಬಂಡಿಯ ಪಂದ್ಯದಲ್ಲಿ ಗಂಟೆಯೊಂದಕ್ಕೆ 98·87 ಮೈಲಿಯಂತೆ ಓಡಿ ದೊಡ್ಡ ಬಹುಮಾನಪಡೆದಿತು. ಈವರೆಗೆ ಪ್ರಪಂಚದಲ್ಲಿ ಮತ್ತಾವ ಮೋಟಾರುಬಂಡಿಯೂ ಇಷ್ಟು ವೇಗವಾಗಿ ಓಡಿರಲಿಲ್ಲವಂತೆ.

ಚಕ್ರವರ್ತಿಯವರ ಜನ್ಮದಿನೋತ್ಸವವು ತಾ|| 3 ರಲ್ಲಿ ನಡೆಯಬೇಕಾಗಿದ್ದುದು ತಪ್ಪಿ ಈ ದಿವಸ ನಡೆಸಲ್ಪಡುವುದರಿಂದ ಎಲ್ಲ ಕೋರ್ಟುಕಚೇರಿಗಳಿಗೂ ಸ್ಕೂಲುಗಳಿಗೂ ರಜವು ಕೊಡಲ್ಪಟ್ಟಿದೆ. ಪದ್ಧತಿಪ್ರಕಾರ ಈದಿವಸ ಕೊಡಲ್ಪಡುವ ಪ್ರಶಸ್ತಿಗಳು ಜುಲೈ ತಾ|| 3 ರಲ್ಲಿ ಕೊಡಲ್ಪಡುವುದಾಗಿ ಪ್ರಕಟವಾಗಿದೆ.

ಜಾಂಜರ್ ಎಂಬುವವನು ತಾನು ವರಿಸಿದ್ದ ಸುಖತನಿಯಾ ಎಂಬ ಯುವತಿಯು ತನ್ನನ್ನು ಮದುವೆಯಾಗಲು ತಿರಸ್ಕರಿಸಿದುದರಿಂದ ಆಕೆಯ ಮನೆಗೆ ಮಧ್ಯರಾತ್ರಿಯಲ್ಲಿ ಹೋಗಿ ಅವಳ ಮೂಗನ್ನು ಕುಯಿದುಹಾಕಿದ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರಿಂದ 3 ವರ್ಷ ಕಠಿಣಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ಮಾಂಡಲೆಯಲ್ಲಿ ಒಬ್ಬ ಧಾನಾಢ್ಯನಾದ ರೇಶ್ಮೆ ವ್ಯಾಪಾರಿಯು ಕಳೆದ ತಾ|| 21 ರಲ್ಲಿ ಒಂದು ದೋಣಿಯಲ್ಲಿ ಕುಳಿತು ಗುಡ್ಡದ ಸಮೀಪಕ್ಕೆ ಹೋಗಿ ಎಲ್ಲಿಯೋಮಾಯವಾದನಂತೆ. "ನಾನು ಬಹಳ ಹೀನಅದೃಷ್ಟಶಾಲಿಯಾದುದರಿಂದ ಈ ಜೀವನದಲ್ಲಿ ಬೇಸತ್ತು ಹೊರಟುಹೋಗಿರುತ್ತೇನೆ. ಯಾರೂ ನನ್ನನ್ನು ಹುಡುಕಬೇಕಾದುದಿಲ್ಲ" ಎಂದು ಒಂದು ಕಾಗದವನ್ನು ಬರೆದಿಟ್ಟಿದ್ದನಂತೆ.

ಜಮದಗಿ ಎಂಬ ಗ್ರಾಮದಲ್ಲಿ ಹಿಂದೆ ಹಿಂದುಗಳಾಗಿದ್ದು ಈಗ ಮಹಮ್ಮದೀಯರಾಗಿರುವ ಕೆಲ ರೈತರುಗಳು ಸ್ವೇಚ್ಛೆಯಿಂದ ಶಾಸ್ತ್ರರೀತಿಯಾಗಿ ಶುದ್ಧಿಯನ್ನು ಹೊಂದಿ ಹಿಂದುಮತಕ್ಕೆ ಸೇರಿಕೊಂಡರು. ಇವರು ಶುದ್ಧಿಯನ್ನು ಹೊಂದಿದಮೇಲೆ ದೇವಾಲಯಕ್ಕೆ ಹೋಗಿ ದೇವರ ತೀರ್ಥಪ್ರಸಾದವನ್ನು ಹೊಂದಿಬಂದರಂತೆ ಮತ್ತು ಇವರಲ್ಲಿ ಕೆಲರು ವಿದ್ಯಾವಂತರೂ ಸರ್ಕಾರಿಯುದ್ಯೋಗಸ್ಥರೂ ಇರುವರಂತೆ.

ಆದಿವಾರ ಕುಂಭಕೋಣದಲ್ಲಿ 12 ವರ್ಷ ವಯಸ್ಸಿನ ಒಬ್ಬ ಬ್ರಾಹ್ಮಣ ಹುಡುಗಿಯು ತನ್ನ ತಂದೆಗೋಸ್ಕರ ಫಲಹಾರಮಂದಿರಕ್ಕೆ ಹೋಗಿ ಕಾಫಿ ಮತ್ತು ತಿಂಡಿಯನ್ನು ತೆಗೆದು ಬರುತ್ತಿರುವಾಗ್ಗೆ ಮಾರ್ಗದಲ್ಲಿದ್ದ ಒಂದು ತೆಂಗಿನಮರವು ಅಕಸ್ಮಾತ್ತಾಗಿ ಆ ಹುಡುಗಿಯಮೇಲೆ ಬೀಳಲಾಗಿ ಅವಳು ಕೂಡಲೆ ಮೃತಳಾದಳು. ಆ ಹುಡುಗಿಗೆ 5–6 ದಿನಗಳಲ್ಲಿ ವಿವಾಹವಾಗಲು ಲಗ್ನವು ನಿಶ್ಚಯಿಸಲ್ಪಟ್ಟಿದ್ದಿತಂತೆ.

ಪಂಜಾಬು ವಿಶ್ವವಿದ್ಯಾಲಯದ ರೆಜಿಸ್ಟ್ರಾರರಾದ ಮಿ|| ಪತ್ತರವರ ಕ್ಲಾರಿಕನು ಬಿ.ಎ. ಮೊದಲಾದ ಪರೀಕ್ಷೆಗಳಿಗೆ ಹೋಗಿದ್ದ 5–6 ಜನ ಕಾಲೇಜು ವಿದ್ಯಾರ್ಥಿಗಳನ್ನು ಕೃತಾರ್ಥರನ್ನಾಗಿ ಮಾಡುವಂತೆ ರೆಜಿಸ್ಟ್ರಾರರಿಗೆ ಹೇಳುತ್ತೇನೆಂದು ಅವರುಗಳಿಂದ 200–400 ರೂ. ಗಳವರೆಗೆ ತೆಗೆದುಕೊಂಡು ಮೋಸಪಡಿಸಿರುತ್ತಾನೆಂದು ಅವನಮೇಲೆ ಆ ವಿದ್ಯಾರ್ಥಿಗಳು ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿದ್ದರು. ಅಪರಾಧಿಯು ಹಣವನ್ನು ತೆಗೆದುಕೊಂಡುದಕ್ಕೆ ತಕ್ಕ ನಿದರ್ಶನ ಕೊಡಲ್ಪಡಲಿಲ್ಲವಾಗಿ ದೋಷಮುಕ್ತಗೊಳಿಸಲ್ಪಟ್ಟನು.

ಕಳೆದ ತಾ|| 23 ರಲ್ಲಿ ಒಂದು ಮೋಟಾರುಬಸ್ಸು ಕೆಲ ಪ್ರಯಾಣೀಕರನ್ನು ಕುಳ್ಳಿರಿಸಿಕೊಂಡು ಪಟ್ಟುಕೋಟದಿಂದ ತಂಜಾವೂರಿಗೆ ಹೋಗುತ್ತಿರುವಾಗ್ಗೆ, 75 ಜನ ಕಳ್ಳರು ಪಾಪನಾಡುಗ್ರಾಮದಿಂದ 3 ಮೈಲಿ ದೂರದಲ್ಲಿ ಮಾರ್ಗಕ್ಕೆ ಅಡ್ಡಲಾಗಿ ಹಗ್ಗದ ಬಲೆಯನ್ನು ಕಟ್ಟಿ ಕಾದುಕೊಂಡಿದ್ದರು. ಆ ಬಸ್ಸಿನ ಡ್ರೈವರು ಇದನ್ನು ಅರಿತು ಬಹಳ ವೇಗದಿಂದ ಬಲೆಯನ್ನು ಕಿತ್ತುಕೊಂಡು ಹೋಗಲು ಕಳ್ಳರು ನಿರಾಶರಾಗಿ ಮೋಟಾರುಬಸ್ಸಿನ ಲಾಂದ್ರವನ್ನೂ, ಮುಂಭಾಗದ ಗಾಜನ್ನೂ ಒಡೆದುಹಾಕಿ ಬಸ್ಸನ್ನು ಹಿಡಿದುನಿಲ್ಲಿಸಲು ಬಹಳ ಸಾಹಸಪಟ್ಟರಾದರೂ ಡ್ರೈವರು ಬಹಳ ಧೈರ್ಯದಿಂದಲೂ, ಚಮತ್ಕಾರದಿಂದಲೂ ತಪ್ಪಿಸಿಕೊಂಡು ಅತ್ಯಂತ ವೇಗವಾಗಿ ಬಂಡಿಯನ್ನೋಡಿಸಿಕೊಂಡು ಪ್ರಯಾಣೀಕರನ್ನು ಸುರಕ್ಷಿತವಾಗಿ ಓತಾರಡಕ್ಕೆ ತಲುಪಿಸಿ ನಡೆದ ಸಂಗತಿಯನ್ನು ಪೋಲೀಸರಿಗೆ ವರದಿಮಾಡಿ ಮಾರನೆಬೆಳಿಗ್ಗೆ ತಂಜಾವೂರನ್ನು ತಲುಪಿದನು. ಪೋಲೀಸರು ಆ ಕಳ್ಳರನ್ನು ತಡಕುತ್ತಿರುವರು.

ಪೂರ್ವಬಂಗಾಳಾದಲ್ಲಿ ನೇಹಿತಿ ರೈಲ್ವೆಸ್ಟೇಷನ್ ಸಮೀಪಗ್ರಾಮವಾದ ಹಾಜಿನಗರ ಎಂಬಲ್ಲಿ ಶಿವದೇವಾಲಯದ ಉಪಯೋಗಕ್ಕಾಗಿರುವ ಬಾವಿಯಿಂದ ಒಬ್ಬ ಮಹಮ್ಮದೀಯನು ನೀರನ್ನು ಸೇದುತ್ತಿದ್ದುದನ್ನು ದೇವಸ್ಥಾನದ ಅರ್ಚಕನು ಕಂಡು ಆಕ್ಷೇಪಿಸಿದುದರಮೇಲೆ ವಾಗ್ವಾದ ನಡೆದು ಕಲಹಕ್ಕಾರಂಭವಾಯಿತು. ಆಗ ಆ ಅರ್ಚಕನು ತನ್ನ ಸಹಾಯಕ್ಕಾಗಿ ಜನರನ್ನು ಕೂಗಲು ಕಾರ್ಯಾಲಯಗಳಲ್ಲಿ ಕೆಲಸಮಾಡುತ್ತಿದ್ದ ಹಿಂದುಮಹಮ್ಮದೀಯರಲ್ಲಿ 500 ಜನರವರೆಗೆ ಬಂದು ಹಿಂದುಗಳು ಅರ್ಚಕನ ಪಕ್ಷವನ್ನೂ ಮಹಮ್ಮದೀಯರು ನೀರುಸೇದುತ್ತಿದ್ದ ಮಹಮ್ಮದೀಯನ ಪಕ್ಷವನ್ನೂ ವಹಿಸಿ ದೊಣ್ಣೆ ಕಲ್ಲು ಮೊದಲಾದವುಗಳಿಂದ ಹೊಡೆದಾಡಿದರು. ಇದರಿಂದ 19 ಹಿಂದುಗಳಿಗೂ 10 ಮಹಮ್ಮದೀಯರಿಗೂ ಪೆಟ್ಟುಬಿದ್ದಿರುತ್ತದೆ. ಇವರಲ್ಲಿ ಇಬ್ಬರು ಮೂವರು ಪ್ರಾಣಾಪಾಯಸ್ಥಿತಿಯಲ್ಲಿರುವರು. ಬಾವಿಯಲ್ಲಿ ನೀರುಸೇದುತ್ತಿದ್ದವನು ಅಸ್ಪೃಶ್ಯನೆಂದೂ, ಕಾರ್ಯಾಲಯಗಳಲ್ಲಿ ಕೆಲಸಮಾಡುತ್ತಿದ್ದ ಮಹಮ್ಮದೀಯರು ಅವನು ಮಹಮ್ಮದೀಯನೆಂದು ಭಾವಿಸಿ ಅವನಪಕ್ಷ ಹಿಡಿದು ಹಿಂದುಗಳಕೂಡ ಕಾದಾಡಿದರೆಂದೂ ಮತ್ತೊಂದು ವರ್ತಮಾನವಿದೆ.

ಮಳೆಯ ಭವಿಷ್ಯ.

ಕೇಸರಿಪತ್ರದ ಉಪಸಂಪಾದಕರಾಗಿರುವ ವಿ. ಜನಾರ್ದನ ಸದಾಶಿವ ಕರಂದೀಕರ ಇವರು ಈ ವರ್ಷದ ಮಳೆಯ ಭವಿಷ್ಯವನ್ನು ಮುಂದೆ ಕೊಟ್ಟಂತೆ ಹೇಳಿದ್ದಾರೆ—

ಮೇ ತಿಂಗಳ ಕಡೆಯ ವಾರದಲ್ಲಿ ಮಳೆಯ ಸರವುಗಳು ಬರುವವು. ಜೂನ್ ೫ ನೆಯ ತಾರೀಖಿಗೆ ರವಿ, ಬುಧ ಯುತಿ ಇರುವದರಿಂದ, ಅಂದಿನಿಂದ ಜಡಿಮಳೆಗೆ ಪ್ರಾರಂಭವಾಗುವದು. ೭ ರಿಂದ ೧೧ ನೇ ತಾರೀಖಿನವರೆಗೆ ಸುರಿಮಳೆಯಾಗುವದು. ಮುಂದೆ ೨೧ ನೇ ತಾರೀಖಿನೊಳಗಾಗಿ ಎಲ್ಲ ಕಡೆಗೂ ಬೀಳುವದು. ಜುಲೈ ೧ ನೇ ತಾರೀಖಿನ ದಿವಸ ಮತ್ತು ಮುಂದೆ ೫ ರಿಂದ ೧೫ ರ ತನಕ ಸುವೃಷ್ಟಿಯಾಗುವದು. ಆನಂತರ ೨೦ ರಿಂದ ೨೭ ರ ವರೆಗೆ ಸಾಧಾರಣ ಮಳೆಯಾಗುವದು. ಆಗಸ್ಟದ ೭ ನೆಯ ತಾರೀಖಿನ ದಿವಸ ಪುನಃ ರವಿ ಬುಧಯುತಿ ೭ ನೆಯ ದಿವಸ ಚಂದ್ರ, ಶುಕ್ರಯುತಿ ಮತ್ತು ೯ ನೆಯ ದಿವಸ ಚಂದ್ರ ನೆಪಚ್ಯೂನ ಯುತಿ ಇರುವದರಿಂದ ೭ ಮತ್ತು ೧೧ ರ ತನಕ, ಆನಂತರ ೧೭ ರಿಂದ ೨೪ ರ ತನಕ ಚೆನ್ನಾಗಿ ಮಳೆಯಾಗುವದು. ಸಪ್ಟಂಬರ ತಿಂಗಳಲ್ಲಿ ೫ ರಿಂದ ೮, ಮತ್ತು ೧೩ ರಿಂದ ೧೬ ತಾರೀಖುಗಳ ನಡುವೆ ಮಳೆಯಾಗುವದು. ೨೯ ನೇ ತಾರೀಖಿನಿಂದ ಮೇಷ ರಾಸಿಯಲ್ಲಿರುವ ಮಂಗಳನು ವಕ್ರನಾಗುವದರಿಂದ ಅಕ್ಟೋಬರದ ಮೊದಲನೆಯ ವಾರದಲ್ಲಿ ಮಳೆಯ ಹಾಹಾಕಾರವಾಗುವದು. ೧೪ ನೇ ತಾರೀಖಿಗೆ ಗುರು ದೃಷ್ಟಿ ಬಿದ್ದ ಬಳಿಕ ಸಾಧಾರಣ ಮಳೆಯಾಗುವದು. ನವೆಂಬರ ತಿಂಗಳಲ್ಲಿಯೂ ಮಳೆಯ ಯೋಗವು ಚೆನ್ನಾಗಿರುವದು.

ಒಟ್ಟಿನಿಂದ ನೋಡಲಾಗಿ ಜೂನ್ ತಿಂಗಳಲ್ಲಿ ಹೋದವರ್ಷಕ್ಕಿಂತ ಹೆಚ್ಚು ಮಳೆ ಬೀಳುವದು. ಜುಲೈ ಅಗಸ್ಟದಲ್ಲಿ ಪ್ರತಿವರ್ಷದಷ್ಟು ಬೀಳುವದು. ಸಪ್ಟಂಬರದ ಉತ್ತರಾರ್ಧ ಮತ್ತು ಅಕ್ಟೋಬರದ ಪೂರ್ವಾರ್ಧದಲ್ಲಿ [illegible]. ([illegible])

ಪ್ಯಾರಿಸ್‌ನಗರದ ಒಂದು ಸಮೀಪಗ್ರಾಮದಲ್ಲಿ ಎರಡು ಸುವರ್ಣ ಹದ್ದುಗಳು ಪ್ರತಿದಿವಸ ಮಧ್ಯಾಹ್ನದವೇಳೆಗೆ ಹಾರಿ ಬಂದು ಕೋಳಿ, ಬಾತು, ಕುರಿಮರಿ ಮೊದಲಾದ ಪ್ರಾಣಿಗಳನ್ನು ಹೊತ್ತಿಕೊಂಡು ಹೋಗುತ್ತಿದ್ದು ಒಂದು ದಿವಸ ಒಬ್ಬ ರೈತನ ಮಗುವನ್ನೆತ್ತಿಕೊಂಡು ಹೋಗುವಷ್ಟರಲ್ಲಿ ಮನೆಯವರು ಗದ್ದಲಮಾಡಲಾಗಿ ಮಗುವನ್ನು ಬಿಟ್ಟು ಹೋದುವಂತೆ. ಖಗಮೃಗಗಳ ನಾಶವಿರೋಧಕ ವಿಧಿಯ ನಿರ್ಬಂಧದಿಂದ ಅವನ್ನು ಕೊಲ್ಲಲು ಅವಕಾಶವಿಲ್ಲದಿರುವುದರಿಂದ ಅಲ್ಲಿಯ ರೈತರು ಆ ಹದ್ದುಗಳು ಬಂದ ವೇಳೆಯಲ್ಲಿ ತಮ್ಮ ಪಕ್ಷಿಗಳ ಗೂಡುಗಳನ್ನು ಭದ್ರವಾಗಿ ಮುಚ್ಚಿಯೂ, ಮಕ್ಕಳನ್ನು ಮನೆಯಿಂದ ಹೊರಕ್ಕೆ ಬಿಡದೆಯೂ ಕಾಪಾಡಿಕೊಂಡಿರಬೇಕಾಗಿದೆ.

ಗೃಹಕೃತ್ಯದ ನೋಟೀಸು.

ನಾಗಮಂಗಲ ತಾಲ್ಲೂಕು ದೇವಲಾಪುರದ ಹೋಬಳಿ ಶಿಲ್ಪಾಪುರಗ್ರಾಮದ ಈಡಿಗಾಯಿಶೆಟ್ಟಿ ಮಗ ನಂಜಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ನಮ್ಮ ತಂದೆಗೆ ನಾಲ್ಕುಜನ ಮಕ್ಕಳಾದ ನಾವು ಜೀವನಾರ್ಥವಾಗಿ ಬೆಂಗಳೂರು ಮುಂತಾದ ಕಡೆ ಇದ್ದುಕೊಂಡಿದ್ದೆವು. ಹೀಗಿರುವಲ್ಲಿ 1 ನೇ ಬಸೆಟ್ಟಿಯು ನಮ್ಮಗಳಿಗೆ ಮೋಸಪಡಿಸುವದಕ್ಕಾಗಿ ಒಟ್ಟಿನ ಸ್ವತ್ತಾದ 3-4 ನಂಬರಿನ 10ಎಕರೆ 16 ಗುಂಟೆ ಜಮೀನನ್ನು 100 ರೂಪಾಯಿಗೆ ಆಧಾರಮಾಡಿದ್ದರಮೇಲೆ ಪತ್ರದಾರನು ದಾವಾಮಾಡಿ ಡಿಕ್ರಿಪಡದು ಸ್ವತ್ತುಸ್ವಾಧೀನಮಾಡಿಕೊಂಡು ಪರಬಾರೆಮಾಡಿಕೊಂಡಿರುತ್ತಾನೆ. ಉಳಿದ ಕೆಲವು ಜಮೀನುಗಳನ್ನು ತನ್ನ ಮಗಳ ಹೆಸರಿಗೆ ಉಯಿಲು ಬರದುಕೊಟ್ಟು ಮೋಸಪಡಿಸಿರುತ್ತಾನೆ. ಆದ್ದರಿಂದ ಮೇಲ್ಕಂಡ ಉಯಿಲು ನ್ಯಾಯವಾದ್ದಲ್ಲ. ಈ ಉಯಿಲು ಸ್ಥಿರಪಡತಕ್ಕದ್ದಲ್ಲ. ಆದ್ದರಿಂದ ಈ ಬಾಬತು ಜಮೀನುಗಳನ್ನು ಕ್ರಯ ಭೋಗ್ಯ ಆಧಾರ ಮುಂತಾದ್ದರಿಂದ ಯಾರಾದರು ಪಡದಲ್ಲಿ ಮುಂದೆ ಇದರಿಂದ ಆಗುವ ವಿಶಿಷ್ಟನಷ್ಟಕ್ಕೂ ಬದ್ಧರಾಗಬೇಕಲ್ಲದೆ ಅವರಿಗೆ ಜಮೀನುಹಕ್ಕು ಸೇರತಕ್ಕದ್ದಲ್ಲವಾಗಿ ಈ ಮೂಲಕ ತಿಳಿಸಿರುತ್ತೆ.

2 ನೇ ನಂಜಯ್ಯನ ರುಜು.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಚಾಮರಾಜನಗರದ ಶ್ರೀವರ್ತಕವರ್ಧಿನೀಬ್ಯಾಂಕ್ ಏಜಂಟರಾಗಿದ್ದ ಕೈ. ಗುರುನಂಜಪ್ಪನವರು ಕಟ್ಟಿಸಿದ ಧರ್ಮಸತ್ರದ ಪ್ರವೇಶೋತ್ಸವದಲ್ಲಿ ಡಿಟೋ ಬ್ಯಾಂಕ್ ಏಜಂಟರಾಗಿರುವ ಮ|| ಪುಟ್ಟವೀರಪ್ಪನವರ ಮೂಲಕ 1 ರೂ. (2) ವಿಘ್ನಸಂತೆ ಮ|| ತೀರ್ಥಯ್ಯನವರ ಮಗಳ ಲಗ್ನದಲ್ಲಿ ನೊಣವಿನಕೆರೆ ಚಿಕ್ಕಣ್ಣಶೆಟ್ಟರ ಮಕ್ಕಳು ಮ|| ಶಾಂತವೀರಪ್ಪಶೆಟ್ಟರವರ ಮೂಲಕ 1 ರೂ. (3) ಹೊಸದುರ್ಗದ ಮ|| ಎಚ್. ಗುರುಶಾಂತಪ್ಪನವರ ಮೊಮ್ಮಗ ಮ|| ಸಂಜಪ್ಪನವರ ಪುತ್ರ ಎಚ್. ಎನ್. ಸಿದ್ದಪ್ಪನವರಿಗೂ ಬುಕ್ಕಾಂಬುಧಿ ಮ|| ಹೊಳಲಕೆರೆ ಜಂಬಿಗೆ ಹಾಲಪ್ಪನವರ ಕುಮಾರ್ತಿಗೂ ನಡೆದ ಲಗ್ನದಲ್ಲಿ ಮ|| ಎಚ್. ಸಿ. ಜಂಬುಕೇಶ್ವರಯ್ಯ ಬಿ.ಎ., ಯವರ ಮೂಲಕ 1 ರೂ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ ಬೆಂಗಳೂರು.

ವಿಜ್ಞಾಪನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದ ಜನರಲ್ ಕಮಿಟಿಯ ವಾರ್ಷಿಕಮೀಟಂಗು 1926 ನೇ ಇಸವಿ ಜುಲೈ ತಾ|| 11 ನೇ ಭಾನುವಾರ ಸಾಯಂಕಾಲ 4 ಗಂಟೆಗೆ ಸರಿಯಾಗಿ ಬೆಂಗಳೂರುಸಿಟಿ ಶೇಷಾದ್ರಿ ರೋಡಿನಲ್ಲಿರುವ ಶ್ರೀಜಗದ್ಗುರುಜಯದೇವ ವೀರಶೈವವಿದ್ಯಾರ್ಥಿನಿಲಯದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವದರಿಂದ ತಾವು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ಮೀಟಂಗಿನಲ್ಲಿ ಜರುಗತಕ್ಕ ವಿಷಯಗಳು.

1. ತಾ|| 23-6-25 ರ ಲಾಗಾಯಿತು ತಾ|| 30-6-26 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಕಾರ್ಯನಿರ್ವಾಹಕಸಂಘದ ಅಧ್ಯಕ್ಷರು ಮೊದಲಾಗಿ ಮೆಂಬರುಗಳ ಚುನಾವಣೆ.
4. ನೂತನವಾಗಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೈಸೂರುದೇಶದ ವೀರಶೈವ ಗ್ರಾಜುಯೇಟುಗಳನ್ನು ಸಭೆಯಿಂದ ಅಭಿನಂದಿಸುವವಿಚಾರ.
5. ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರೂ ಸೆಕ್ರೆಟರಿಯವರಿಗೆ ತಿಳುಹಲ್ಪಟ್ಟದ್ದು ಮೀಟಂಗಿನಲ್ಲಿ ಇಡಲ್ಪಟ್ಟರೆ.)

ಎಂ. ನಾಗಪ್ಪ, ಅ|| ಸೆಕ್ರೆಟರಿ.
ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಆನರರಿ ಸೆಕ್ರೆಟರಿ.

ಶ್ರೀಜಗದ್ಗುರುಜಯದೇವವೀರಶೈವವಿದ್ಯಾರ್ಥಿನಿಲಯ ತುಂಕೂರು.

ಈ ವಿದ್ಯಾರ್ಥಿನಿಲಯವು ಇದೇ ವರ್ಷದ ಜುಲೈ ತಿಂಗಳಲ್ಲಿ ಪ್ರಾರಂಭಿಸಲ್ಪಡುವುದರಿಂದ ತುಂಕೂರುಹೈಸ್ಕೂಲು ಮುತ್ತು ಇತರ ಸ್ಕೂಲುಗಳಲ್ಲಿ ಓದಲಪೇಕ್ಷಿಸುವ ವೀರಶೈವವಿದ್ಯಾರ್ಥಿಗಳು ಈ ಜೂನ್ ತಿಂಗಳ 15 ನೆ ತಾರೀಖಿನೊಳಗಾಗಿ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್‌ಗಳನ್ನು ಹಾಕಿಕೊಳ್ಳತಕ್ಕದ್ದು. ಇದೇ ಜೂನ್ 8 ನೆ ತಾರೀಖಿನ ದಿನ ಹೈಸ್ಕೂಲು ಪ್ರಾರಂಭವಾಗುವುದರಿಂದ ಈ ಮಧ್ಯೆ ಬರತಕ್ಕ ವಿದ್ಯಾರ್ಥಿಗಳಿಗೆ ತಕ್ಕ ವ್ಯವಸ್ಥೆ ಮಾಡಲ್ಪಡುವುದು. ಈ ವಿದ್ಯಾರ್ಥಿನಿಲಯದಲ್ಲಿರತಕ್ಕ ಸುಮಾರು 7-8 ಬಡ ವೀರಶೈವವಿದ್ಯಾರ್ಥಿಗಳಿಗೆ ವೇತನಗಳು ಕೊಡಲ್ಪಡುವುವು.

ಜಿ. ರುದ್ರಪ್ಪ ಪ್ರೆಸಿಡೆಂಟ್.
ಶ್ರೀಜಗದ್ಗುರುಜಯದೇವ ವೀರಶೈವಸಂಘ ತುಂಕೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂಪಾದಕ.

ಹುಬ್ಬಳ್ಳಿ ಲಿಂಗಾಯತವಿದ್ಯಾವರ್ಧಕಸಂಘಕ್ಕೆ ದ್ರವ್ಯಸಹಾಯ.

ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀಮೃತ್ಯುಂಜಯ ಮಹಾಸ್ವಾಮಿಗಳವರು ಹುಬ್ಬಳ್ಳಿಗೆ ಆಗಮಿಸಿದ್ದಾಗ್ಗೆ ಈ ಊರಲ್ಲಿಯ ಪ್ರಮುಖರಿಂದ ಮಹಾಸ್ವಾಮಿಗಳವರ ಧಾರವಾಡದ ಬೋರ್ಡಿಂಗಿಗಾಗಿ ಸುಮಾರು ೧೧-೧೨ ನೂರು ರೂಪಾಯಿಗಳ ವರ್ಗಣಿಯು ಕೂಡಿತು. ಶ್ರೀಗಳವರು ಇಲ್ಲಿಂದ ಧಾರವಾಡಕ್ಕೆ ದಯಮಾಡಿಸುವಾಗ್ಗೆ ಇಲ್ಲಿರುವ ಮೇಲ್ಕಂಡ ವಿದ್ಯಾವರ್ಧಕಸಂಘದ ಕಾರ್ಯವನ್ನು ನೋಡಿ ಸಂತೋಷಪಟ್ಟು ೧೦೧ ರೂಪಾಯಿಗಳನ್ನು ಸದರಿ ಸಂಘಕ್ಕೆ ಆಶೀರ್ವದಿಸಿದರೆಂದು ತಿಳಿಸಲಿಕ್ಕೆ ಪರಮ ಸಂತೋಷವೆನಿಸುತ್ತದೆ. ಈ ಬಗ್ಗೆ ಮಹಾಸ್ವಾಮಿಗಳವರಿಗೆ ಸಂಘದ ವತಿಯಿಂದ ಹಾಗು ಹುಬ್ಬಳ್ಳಿ ವೀರಶೈವರ ವತಿಯಿಂದ ಪ್ರೇಮಪೂರ್ವಕವಾಗಿ ಭಕ್ತಿಯಿಂದ ಅನಂತ ಪ್ರಣಾಮಗಳನ್ನು ಸಮರ್ಪಿಸುತ್ತೇವೆ. ಹಾಗು ಸಕಲ ಭಕ್ತಾದಿಗಳಿಗೆ ಮಹಾಸ್ವಾಮಿಗಳವರ ಕಾರ್ಯದಲ್ಲಿ ತ್ರಿಕರಣಪೂರ್ವಕವಾಗಿ ಸೇವೆಯನ್ನು ಮಾಡುವ ಸದ್ಬುದ್ಧಿಯನ್ನು ಸಕಲರಿಗೂ ಕೊಡಲೆಂದು ದಯಾಘನನಾದ ಪರಮಾತ್ಮನನ್ನು ಕುರಿತು ಪ್ರಾರ್ಥಿಸುತ್ತೇವೆ.

ಚಿಕ್ಕವೀರಯ್ಯ, ಚಿಕ್ಕವೀರಯ್ಯನವರ ಚ. ಸಿ. ಕೆಂಪಣ್ಣನವರ,
ಕಾ. ಕಾರ್ಯದರ್ಶಿ.

ಮಳವಳ್ಳಿ.

ಕಳೆದ ಮಾಹೆಯಲ್ಲಿ ಈ ಪ್ರಾಂತ ಒಂದೆರಡು ಹದ ಮಳೆಯಾಗಿ ಕೆರೆಕಟ್ಟೆಗಳಿಗೆ ನೀರು ಬಂದುದರಿಂದ ಜನರೂ ದನಕರುಗಳೂ ಕುಡಿಯುವ ನೀರಿಗೆ ಅನುಕೂಲವಾಗಿರುತ್ತೆಯಾದರೂ ಆರಂಭಕ್ಕೆ ಇನ್ನೂ ಮಳೆಬೇಕಾಗಿದೆ. ಈ ಪ್ರಾಂತ್ಯ ಸಾಂಕ್ರಾಮಿಕರೋಗಗಳ ಉಪದ್ರವೇನೂ ಇಲ್ಲ. ಈ ತಾಲ್ಲೂಕಿನ ಅಮಲ್ದಾರರಾಗಿ ಈಗ ಸುಮಾರು 6-7 ತಿಂಗಳಲ್ಲಿ ದಯಮಾಡಿಸಿದ ಮ|| ಬಿ. ಎನ್. ಸೀತಾರಾಮಯ್ಯನವರು ಸಕಲ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಿ ಕೆಲಸಮಾಡುತ್ತಿರುವದು ತುಂಬಾ ಸಂತೋಷಕರವಾಗಿರುತ್ತೆ. ಇಲ್ಲಿಗೆ 4 ಮೈಲಿ ದೂರದಲ್ಲಿರುವ ಹಣ್ಣಹಳ್ಳಿಗ್ರಾಮದ ವಿಶ್ವಕರ್ಮ ಜಾತಿಯ ಸುಮಾರು 35-36 ವರ್ಷ ವಯಸ್ಸಿನ ಪುಟ್ಟಮ್ಮನೆಂಬುವವಳು ತಾ|| 1-6-26ನೇ ಹಗಲು 10 ಗಂಟೆಹೊತ್ತಿನಲ್ಲಿ ತನ್ನ ಹೊಲದಲ್ಲಿದ್ದ ಸೌದೆ ತರಲು ಹೋಗಿದ್ದವೇಳೆ ಪಕ್ಕದ ಕೆಕ್ಕಲಿನಲ್ಲಿದ್ದ ಒಂದು ಚಿರತೆಯು ಆಕೆಯ ಮೇಲೆ ಬಿದ್ದು ಎಡದಮುಂಗೈಕಚ್ಚಿದಾಗ ಅವಳು ತನ್ನ ಕೈಯಲ್ಲಿದ್ದ ಕೊಡಲಿಯಿಂದ ಹೊಡೆದಳು. ಆಗ ಅದು ಆಕೆಯ ಎಡದಕಿವಿಯನ್ನು ಪರಚಿ ಹಿಂಸೆಪಡಿಸಿ ಹೊರಟಿತು. ಸಮೀಪದಲ್ಲಿದ್ದ ಲಿಂಗಿ ಎಂಬುವವಳು ಪುಟ್ಟಮ್ಮನ ಕೂಗನ್ನು ಕೇಳಿ ಬಂದು ಆಕೆಯನ್ನು ಉಪಚರಿಸಿ ಗ್ರಾಮಕ್ಕೆ ಹೋಗಿ ತಿಳಿಸಿದಳು. ಆಗ ಗ್ರಾಮಸ್ಥರು ಬಂದು ಒಂದುನಾಯಿಯ ಸಹಾಯದಿಂದ ಪೊದರಿನಲ್ಲಿದ್ದ ಚಿರತೆಯನ್ನು ಪತ್ತೆಮಾಡಿ ಚನ್ನವೀರ-ಮುದ್ದ ಎಂಬುವವರು ದೊಣ್ಣೆಯಿಂದ ಹೊಡೆದು ಕೊಂದುಹಾಕಿ ಮಳವಳ್ಳಿಯ ಕಚೇರಿಗೆ ತಂದೊಪ್ಪಿಸಿದರು, ಅಲ್ಲದೆ ಸದರಿಪುಟ್ಟಮ್ಮನನ್ನು ಆಸ್ಪತ್ರೆಯಲಾಜಿಗೆ ತಂದಿರುತ್ತಾರೆ. ಈ ವಿಚಾರದಲ್ಲಿ ನಮ್ಮ ಸ|| ಅ|| ಸರ್ಜನ್ ಮಿ|| ಟಿ. ಸದಾಶಿವಂರವರು ತುಂಬಾ ಮುತುವರ್ಜಿಯಿಂದ ಇಲಾಜುಮಾಡುತ್ತಿರುವದು ತುಂಬಾ ಸಂತೋಷವಾಗಿದೆ. ಆಕೆಗೆ ಪ್ರಾಣಾಪಾಯವೇನೂ ಇಲ್ಲ. ಈ ಭಾಗದಲ್ಲಿ ಆಕೆಯ ಮುತ್ತು ಚಿರತೆಯನ್ನು ಕೊಂದ ಚನ್ನವೀರ-ಮುದ್ದ ಇವರ ಧೈರ್ಯವನ್ನು ಎಷ್ಟುಕೊಂಡಾಡಿದರೂ ಸಾಲದು. ಸರ್ಕಾರದವರು ಅವರುಗಳು ಮಾಡಿರುವ ಸಾಹಸಕ್ಕೆ ತಕ್ಕ ಪ್ರತಿಫಲವನ್ನು ಅವರಿಗೆ ದಯಪಾಲಿಸಿದರೆ ಮುಂದಿನವರಿಗೆ ಮೇಲ್ಪಂಕ್ತಿಯಾಗುತ್ತೆಂದು ನಂಬಿದೆ. ಪ್ರಜಾಹಿತಚಿಂತಕ.

ಕ್ಯಾತನಹಳ್ಳಿಯಲ್ಲಿ ಒಕ್ಕಲಿಗರ ಹಾಸ್ಟಲ್‌ಸ್ಥಾಪನೆ.

ಶ್ರೀರಂಗಪಟ್ಟಣ ತಾ|| ಕ್ಯಾತನಹಳ್ಳಿಯಲ್ಲಿ ಕಳೆದ ಮೇ ತಾ|| 30 ನೇ ಭಾನುವಾರ ಒಕ್ಕಲಿಗರ ಹಾಸ್ಟಲ್ ಆರಂಭೋತ್ಸವವು ಮೈಸೂರು ಅಡ್ವೋಕೇಟ್ ಮ|| ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಮ|| ಗಳಾದ ಮೈಸೂರು ಡಿ|| ಸ್ಕೂಲ್ ಇನ್‌ಸ್ಪೆಕ್ಟರ್ ಎಂ. ವೆಂಕಟಸುಬ್ಬಯ್ಯ, ಬಿ.ಎ., ಯವರು, ಸೋಮನಹಳ್ಳಿ ಎಸ್. ಸಿ. ಮಲ್ಲಯ್ಯನವರು, ಮದ್ದೂರ್ ಹಾಸ್ಟಲಿನ ಮ್ಯಾನೇಜರ್ ಜವರಯ್ಯನವರು, ಬೆಳ್ಳೂರಿನ ಮುಸಲ್ಮಾನ್ ದೊಡ್ಡಮನುಷ್ಯರು, ಸ್ಥಳದ ಬ್ರಾಹ್ಮಣರು, ವೀರಶೈವರು ಮೊದಲಾದ ಒಕ್ಕಲಿಗರ ಶ್ರೇಯೋಭಿಲಾಷಿಗಳು ಈ ಉತ್ಸವಸಮಾರಂಭಕ್ಕೆ ದಯಮಾಡಿಸಿದ್ದರು. ಗ್ರಾಮರಕ್ಷಣಸಭೆಯ ಸೆಕ್ರೆಟರಿಯವರು ರಿಪೋರ್ಟನ್ನು ಓದಿದನಂತರ ಡಿ|| ಇನ್‌ಸ್ಪೆಕ್ಟರು ಸಭಾರಂಭಭಾಷಣವನ್ನು ಮಾಡಿದಮೇಲೆ ಸಭಾಧ್ಯಕ್ಷರಾದ ಮ|| ದಾಸಪ್ಪನವರು ವಿದ್ಯಾಭಿವೃದ್ಧಿ, ಹಾಸ್ಟಲ್‌ಸ್ಥಾಪನಾವಶ್ಯಕತೆ ಮೊದಲಾದ ಒಕ್ಕಲಿಗರ ಪುರೋಭಿವೃದ್ಧಿವಿಷಯಗಳಮೇಲೆ ಅತ್ಯಂತ ಶ್ಲಾಘ್ಯವಾಗಿ ಭಾಷಣಮಾಡಿ ಹಾಸ್ಟಲನ್ನು ಆರಂಭಿಸಿರುವುದಾಗಿ ಅಪ್ಪಣೆಕೊಡಿಸಿದರು. ತರುವಾಯ ಸಂಸ್ಕೃತಪಂಡಿತರು ವೇ|| ಜ. ಶ್ಯಾಮಣ್ಣನವರ ಬೆಳ್ಳೂರಿನ ಮುಸಲ್ಮಾನ್ ಸ್ನೇಹಿತರು, ರೇಂಜ್ ಇನ್‌ಸ್ಪೆಕ್ಟರ ಮುತ್ತು ಮ|| ಎಸ್. ಸಿ. ಮಲ್ಲಯ್ಯನವರ ಸ್ವಾರಸ್ಯವಾದ ಉಪನ್ಯಾಸಗಳು ನಡೆದುವು. ಆನಂತರ ಅಧ್ಯಕ್ಷರಿಗೂ ಸಭಿಕರಿಗೂ ಗಂಧಪುಷ್ಪತಾಂಬೂಲಗಳು ಹಂಚಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಒಕ್ಕಲಿಗಜನಾಂಗದ ಪುರೋಭಿವೃದ್ಧಿದಾಯಕವಾದ ಉಪನ್ಯಾಸಗಳನ್ನು ಕೇಳಿದ ಒಕ್ಕಲಿಗಬಾಂಧವರು ಅದರಂತೆ ಆಚರಣೆಯಲ್ಲಿ ತಂದು ಭಾವಿಪ್ರಜೆಗಳಾದ ತಮ್ಮ ಮಕ್ಕಳುಗಳಿಗೆ ಮೊದಲು ವಿದ್ಯಾಭ್ಯಾಸಮಾಡಿಸಲು ಪರಸ್ಥಳದ ಮಕ್ಕಳುಗಳಿಗಾಗಿ ಈ ಗ್ರಾಮದಲ್ಲಿ ಕಲ್ಪಿಸಿಕೊಟ್ಟಿರುವ ವಿದ್ಯಾರ್ಥಿನಿಲಯದ ಅನುಕೂಲವನ್ನು ಉಪಯೋಗಿಸಿಕೊಳ್ಳುವರೆಂದೂ, ಸ್ಕೂಲ್ ಇರುವ ಸ್ಥಳಗಳಲ್ಲೆಲ್ಲಾ ವಿದ್ಯಾಪ್ರಸರಣೆಯಾಗುವ ಏರ್ಪಾಡನ್ನು ಮಾಡುವರೆಂದೂ ನಂಬಲಾಗಿದೆ. ಜಿ. ಬೋರೆಗೌಡ.

ಧಾರವಾಡ ಜಿಲ್ಲಾ ಕುರುಬರ 1 ನೇ ಪರಿಷತ್ತು, ದೇವೀಹೊಸೂರ.

ಈ ಪರಿಷತ್ತು ಸದರಿ ಗ್ರಾಮದಲ್ಲಿ ಸನ್ 1926 ನೇ ಇಸವಿ ಜೂನ್ ತಿಂಗಳ ತಾರೀಖು 12, 13 ಶನಿವಾರ, ರವಿವಾರ ಈ ಎರಡು ದಿವಸಗಳಲ್ಲಿ ನಡೆಯುವದು. ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಮ|| ಕೆ. ವಿ. ಭದ್ರಾಪುರ, ಎಂ. ಎ. ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ ಸಾಹೇಬ ಬಹದ್ದೂರ್ 2 ನೇ ಭಾಗ ಧಾರವಾಡ ಈ ಮಹನೀಯರು ವಹಿಸಲಿಕ್ಕೆ ಒಪ್ಪಿಕೊಂಡಿದ್ದಾರೆ. ಈ ಪರಿಷತ್ತಿಗೆ ಕರ್ನಾಟಕ ಮಹಾರಾಷ್ಟ್ರಗಳ ಹಾಲುಮತ ಸಮಾಜದ ಮುಖಂಡರು ಆಗಮಿಸುವರು. ಹಾಗು ಶ್ರೀ ತಿಮ್ಮಣ್ಣ ಮುದಿರಡ್ಡಿ ಮುತ್ತು ಡಿ. ಲೋ. ಬೋ. ವೈಸ್‌ಪ್ರಸಿಡೆಂಟರೂ ಕರ್ನಾಟಕ ಕುರುಬರ ಸಂಘದ ಆನರರಿ ಮೆಂಬರೂ ಆದ ಶ್ರೀ. ದೇವನಗೌಡ ಲಿಂ. ಪಾಟೀಲ, ಬಿ. ಎ., ಎಲ್‌ಎಲ್.ಬಿ., ಹೈಕೋರ್ಟು ವಕೀಲ, ಧಾರವಾಡ ಮೊದಲಾದವರು ಬರುವರಲ್ಲದೆ ಅವರ ಮಹತ್ವದ ಭಾಷಣಗಳಾಗುವವು. ಈ ಪರಿಷತ್ತಿನಲ್ಲಿ ಹಾಲುಮತಸಮಾಜಕ್ಕೆ ಸಂಬಂಧಿಸಿದ ಸಾಮಾಜಿಕ, ವಿದ್ಯಾವರ್ಧಕ, ನೈತಿಕ, ಔದ್ಯೋಗಿಕ, ಸಹಕಾರವಿಷಯಕ, ಸ್ತ್ರೀಶಿಕ್ಷಣ, ಸ್ತ್ರೀಧರ್ಮನೀತಿ ಮೊದಲಾದ ಮಹತ್ವದ ವಿಷಯಗಳು ಚರ್ಚಿಸಲ್ಪಡುವವು. ಇಂದೂರಸಂಸ್ಥಾನದ ಪುಣ್ಯಶ್ಲೋಕಿ ಶ್ರೀದೇವೀ ಅಹಲ್ಯಾಬಾಯಿಯ ಕೀರ್ತನವಾಗುವದು, ಮುತ್ತು ಇದೇ ಸಮಯದಲ್ಲಿ ಕರ್ನಾಟಕ ಕುರುಬರ ಕೌನ್ಸಿಲ್ 3 ನೇ ಅಧಿವೇಶನವು ಕೂಡುವದು. ಹಾಗು ಉತ್ತಮವಾದ ಕುರಿ, ಉಣ್ಣೆ, ಕಂಬಳಿ, ಕೈಗಾರಿಕೆಯ ಸಾಮಾನುಗಳನ್ನು ತಂದ ನಮ್ಮ ಸಮಾಜದ ಜನರಿಗೆ ಇನಾಮು ಕೊಡಲ್ಪಡುವದು. ಈ ವಿಷಯಗಳ ಬಗ್ಗೆ ಭಾಷಣಮಾಡುವವರು ಅಥವಾ ಸೂಚನೆ ಹಾಗು ಠರಾವುಗಳನ್ನು ತರುವವರು 8 ದಿನ ಮುಂಚಿತವಾಗಿ ಪರಿಷತ್ತಿನ ಜನರಲ್ ಸೆಕ್ರೆಟರಿಯವರಿಗೆ ತಿಳಿಸಬೇಕು. ಆದ್ದರಿಂದ ಯಾವತ್ತು ಹಾಲುಮತಬಂಧುಭಗಿನಿಯರು ಈ ಸಭೆಗೆ ಅವಶ್ಯವಾಗಿ ಬರಬೇಕೆಂದು ಆಗ್ರಹದ ವಿನಂತಿ. ಬಸಪ್ಪ ಫಕೀರಪ್ಪ ಕಲ್ಲಣ್ಣವರ, ಜನರಲ್ ಸೆಕ್ರೆಟರಿ.

ವಿಶೇಷ ಸೂಚನೆ:—ದೇವೀಹೊಸೂರಗ್ರಾಮವು ಹಾವೇರಿ ಸ್ಟೇಷನ್ನದಿಂದ ಪಶ್ಚಿಮಕ್ಕೆ 5 ಮೈಲು ದೂರ ಇರುತ್ತದೆ. ಸಭೆಗೆ ಬರತಕ್ಕ ಜನರಿಗೆ ಹಾವೇರಿ ಸ್ಟೇಷನ್ನದಲ್ಲಿ ಗಾಡಿಗಳ ವ್ಯವಸ್ಥೆ ಮಾಡಿದೆ. ಸಭೆಗೆ ಬರುವ ಜನರು ಹಾಸಿಗೆ, ಹೊದಿಕೆ, ತಂಬಿಗೆಗಳನ್ನು ದಯಮಾಡಿ ಸಂಗಡ ತರಬೇಕು. ಊಟದ ವ್ಯವಸ್ಥೆಯು ಉಚಿತವಾಗಿ ಮಾಡಲ್ಪಡುವದು.

✓ ಮಲ್ನಾಡು ವೀರಶೈವಸಭೆ.

ಕಳೆದ ತಾ|| 23 ರಲ್ಲಿ ಶಿವಮೊಗ್ಗ ಡಿ|| ಸಾಗರದ ತಾ|| ಅನಂತಪುರದಲ್ಲಿ ಜರುಗಿದ ಶ್ರೀಮುರುಘಾಮಠದ ಪಟ್ಟಾಭಿಷೇಕಮಹೋತ್ಸವ ಕಾಲದಲ್ಲಿ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳ ಉದಾರಾಶ್ರಯದಿಂದ ಮೇಲ್ಕಂಡ ಮಲನಾಡು ವೀರಶೈವಸಭೆಯು ಮೈಸೂರು ಅಡಿಷನಲ್ ಮುನಸೀಫರಾದ ಮ|| ಎಚ್. ಕೆ. ವೀರಬಸವಯ್ಯ, ಬಿ. ಎ., ಬಿ. ಎಲ್., ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮ|| ಗಳಾದ (1) ಕೆರೆಕೋಡಿಮಠದ ಗುರುಲಿಂಗಯ್ಯನವರು (2) ಆಚಾಪುರದ ಶಾಂತವೀರಪ್ಪಗೌಡರು, (3) ಮಲಿಗೊಪ್ಪದ ರುದ್ರಪ್ಪಗೌಡರು, (4) ಮಲಂದೂರು ಲಿಂಗಪ್ಪಗೌಡರು, (5) ಬಾಳೂರು ವೀರಪ್ಪಗೌಡರು, (6) ಲಕ್ಕುವಳ್ಳಿ ವೀರಭದ್ರಪ್ಪಗೌಡರು, (7) ಕುಕ್ಕಳಲೆ ರುದ್ರಪ್ಪಗೌಡರು, (8) ಗಾಜನೂರು ಚೆನ್ನಪ್ಪನವರು, (9) ಹೊಳೇನಕೊಪ್ಪದ ವೀರಭದ್ರಪ್ಪಗೌಡರು, (10) ದಡಿಗನಕೊಪ್ಪದ ಶಾಂತವೀರಪ್ಪಗೌಡರು, (11) ಮಳಲಿ ಬಸಪ್ಪಗೌಡರು, (12) ಹೆಡತರೆ ಹಾಲಪ್ಪಗೌಡರು, (13) ಬರದವಳ್ಳಿ ಗುರಪ್ಪಗೌಡರು, (14) ಬೇತವಳ್ಳಿ ರುದ್ರಪ್ಪಗೌಡರು, (15) ಮಸೂರು ಶಾಂತವೀರಪ್ಪಗೌಡರು, (16) ಬಂಬಳ್ಳಿ ಹೊಳೆಬಸಪ್ಪಗೌಡರು, (17) ಗವಟೂರು ಗುರುಬಸಪ್ಪಗೌಡರು, (18) ಗಾಮದ ಬಸವಲಿಂಗಪ್ಪಗೌಡರು, (19) ಕಾಗೋಡು ಶಿವಲಿಂಗಪ್ಪಗೌಡರು, (20) ಜ. ಎಂ. ಕಾಡಪ್ಪನವರು, (21) ಹೊಸಕೋಟೆ ಚೆನ್ನಬಸಪ್ಪಗೌಡರು, (22) ಮರೂರು ರುದ್ರಪ್ಪನವರು, (23) ಕುಣೆಹೊಸೂರು ನಾಗಲಿಂಗಪ್ಪಗೌಡರು, ಮೊದಲಾದ ವೀರಶೈವದೊಡ್ಡಮನುಷ್ಯರುಗಳು ಈ ಸಭೆಗೆ ದಯಮಾಡಿಸಿದ್ದರು. ಸ್ವಾಗತ ಸಂಘಾಧ್ಯಕ್ಷರಾದ ಮ|| ಎಚ್. ಜ. ಬಸಪ್ಪನವರು ಸ್ವಾಗತ ಪರಭಾಷಣವನ್ನು ಮಾಡಿದಮೇಲೆ ಸಭಾಧ್ಯಕ್ಷರಭಾಷಣವಾಯಿತು. (ಇದು ಮುಂದೆ ಪ್ರಕಟಿಸಲ್ಪಡುವುದು). ಅನಂತರ ನೂತನ ದಿವಾನರನ್ನೂ ಕೌನ್ಸಿಲರುಗಳನ್ನೂ ಅಭಿನಂದಿಸುವ ನಿರ್ಧಾರವು ಮ|| ಎಚ್. ಜ. ಬಸಪ್ಪನವರಿಂದ ಸೂಚಿಸಲ್ಪಟ್ಟು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು. ಅಡ್ವೋಕೇಟ್ ಮ|| ಎಚ್. ಲಿಂಗಪ್ಪನವರು ಸಾಗರದಲ್ಲಿ ವೀರಶೈವವಿದ್ಯಾರ್ಥಿನಿಲಯವನ್ನು ಪುನಃ ಆರಂಭಿಸುವ ವಿಚಾರದಲ್ಲೂ, ಶಿವಮೊಗ್ಗೆಯಲ್ಲಿ ಅರ್ಧಾಂಕಿತವಾಗಿರುವ ವೀರಶೈವವಿದ್ಯಾರ್ಥಿನಿಲಯವನ್ನು ಪೂರ್ತಿಗೊಳಿಸುವ ವಿಚಾರದಲ್ಲೂ ಆ ಪ್ರಾಂತದ ವೀರಶೈವರು ಸಾಹಾಯಮಾಡಬೇಕಾದ ಆವಶ್ಯಕತೆಯನ್ನು ಕುರಿತು ಸಭಿಕರ ಮನಸ್ಸಿಗೆ ನಾಟುವಂತೆ ಉಪನ್ಯಾಸಮಾಡಿದರು. ತರುವಾಯ ಬಾಗಲಕೋಟೆಯ ಶ್ರೀಮಹಂತಸ್ವಾಮಿಯವರೂ, ಸಂಪಗಾವಿಯ ಶ್ರೀಚರಮೂರ್ತಿಯವರೂ ನಿರಾಭಾರಿಗಳಪೂಜ್ಯತೆ, ಕರ್ತವ್ಯ ಇತ್ಯಾದಿವಿಷಯಗಳಮೇಲೆ ಬಹು ಸ್ವಾರಸ್ಯವಾಗಿಯೂ ಶಾಸ್ತ್ರಸಮ್ಮತವಾಗಿಯೂ ಭಾಷಣಮಾಡಿ ಶ್ರೋತೃ ಜನರ ಮನಸ್ಸಿಗೆ ಮಹಾನಂದವನ್ನುಂಟುಮಾಡಿದರು. ಆ ದಿವಸ ಬಹಳ ಹೊತ್ತಾದುದರಿಂದ ಸಭೆಯು ವಿಸರ್ಜಿಸಲ್ಪಟ್ಟು ಮಾರನೆಯ ದಿನ ಪುನಃ ನೆರೆದಿತು. ಆಗ್ಗೆ ಸಾಗರದ ಸಬ್‌ಡಿವಿಜನ್ ಆಫೀಸರು, ಮುನಸೀಫರು, ಸ್ಪೆಷಲ್‌ಮ್ಯಾಜಿಸ್ಟ್ರೇಟರು, ಡಿ|| ಫಾರೆಸ್ಟ್ ಆಫೀಸರು, ಅ|| ಇಂಜನಿಯರು, ಅಮಲ್ದಾರರು, ವಿದ್ಯಾಭ್ಯಾಸದ ಡಿ|| ಇನ್‌ಸ್ಪೆಕ್ಟರು ಮೊದಲಾಗಿ ಸಾಗರದ ಸರ್ಕಾರಿಯಧಿಕಾರಿಗಳು ಆಹ್ವಾನಿಸಲ್ಪಟ್ಟಿದ್ದರು. ಧರ್ಮ ಮುತ್ತು ಬ್ರಹ್ಮಚರ್ಯವಿಷಯಗಳ ಮೇಲೆ ಶಿವಯೋಗಮಂದಿರದ ಪ್ರೌಢವಿದ್ಯಾರ್ಥಿಗಳು ಅತ್ಯಂತ ಶ್ಲಾಘ್ಯವಾಗಿ ಭಾಷಣಮಾಡಿದಮೇಲೆ ಶಿರಾಳಕೊಪ್ಪದ ಮ|| ಚೆನ್ನಮಲ್ಲಪ್ಪನವರೂ, ಶಿವಮೊಗ್ಗೆಯ ಮ|| ಕೆ. ಎಚ್. ಹಾಲಪ್ಪ, ಬಿ. ಎ., ಯವರೂ ವೀರಶೈವ ಸಮಾಜಾಭಿವೃದ್ಧಿಗೆ ಮಠಗ್ರಂಥಗಳ ಭಾಂಡಾಗಾರವೂ, ದಿನಪತ್ರಿಕೆಯೂ ಅತ್ಯಾವಶ್ಯಕವಾಗಿರುವುದರಿಂದ ಆದಷ್ಟು ಕೂಡಲೆ ಅವುಗಳನ್ನು ಸ್ಥಾಪಿಸಬೇಕೆಂದು ಭಾಷಣಮಾಡಲಾಗಿ ಮ|| ಗಳಾದ ಎಚ್. ಜ. ಬಸಪ್ಪನವರೂ, ಅಡ್ವೋಕೇಟ್ ಕೆ. ಲಿಂಗಪ್ಪನವರೂ ಪುಷ್ಟೀಕರಿಸಿ ಮಾತನಾಡಿದರು. ಅದರ ಮೇಲೆ ಒಂದು ನಿರ್ಧಾರವು ಮಾಡಲ್ಪಟ್ಟು ನಾಲ್ಕುಬಾರಿ ದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಕಾರ್ಯನಿರ್ವಾಹಕಸಂಘವೇರ್ಪಡಿಸಲ್ಪಟ್ಟಿತು. ಮಲ್ನಾಡುಪ್ರಜಾಸಂಖ್ಯೆಯು ಕಡಮೆಯಾಗುತ್ತಿರುವುದರ ವಿಚಾರವಾಗಿ ಅಧ್ಯಕ್ಷರು ಉಪನ್ಯಾಸಮಾಡಿದಮೇಲೆ ಮಲ್ನಾಡುವೀರಶೈವರಲ್ಲಿ ಕನ್ಯಾಶುಲ್ಕವರದಕ್ಷಿಣೆ ಮೊದಲಾದ ದುಷ್ಟ ಪದ್ಧತಿಯನ್ನು ಕುರಿತು ಅಡ್ವೋಕೇಟ್ ಮ|| ಎಚ್. ಸಿದ್ಧಯ್ಯನವರು ಮುತ್ತು ವೀರಶೈವವಿದ್ಯಾರ್ಥಿನಿಲಯಗಳ ಸ್ಥಾಪನವಿಚಾರವಾಗಿ ಎರಡನೇ ವರ್ಷದ ಬಿ.ಎ. ತರಗತಿಯ ವಿದ್ಯಾರ್ಥಿ ಮ|| ಎಂ. ವೀರಭದ್ರಪ್ಪ ಮ|| ವೈ. ಎಚ್. ಶಿವಶಂಕರಯ್ಯನವರು ಭಾಷಣಮಾಡಿದ ತರುವಾಯ ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳು ಎಲ್ಲರ ಭಾಷಣಗಳನ್ನೂ ಸಮಾಲೋಚಿಸಿ ಅನಂತಪುರಮಠದ ಹಿಂದಣ ಸ್ವಾಮಿಗಳ ಗುಣಕಥನವನ್ನು ಮಾಡಿ ಮಠಗ್ರಂಥಾಲಯವನ್ನೂ ದಿನಪತ್ರಿಕೆಯನ್ನೂ ಸ್ಥಾಪಿಸಲೇರ್ಪಟ್ಟಿರುವ ಕಾರ್ಯನಿರ್ವಾಹಕ ಮಂಡಳಿಯವರು ಆದಷ್ಟು ತ್ವರೆಯಿಂದ ಕಾರ್ಯಾರಂಭಮಾಡಬೇಕೆಂದು ಅಪ್ಪಣೆಕೊಡಿಸಿದಮೇಲೆ ಅಧ್ಯಕ್ಷರ ಸಮಾರೋಪಭಾಷಣವಾಗಿ ಗಂಧ ಪುಷ್ಪ ತಾಂಬೂಲಗಳ ವಿನಿಯೋಗದಿಂದ ಶ್ರೀ ಹಾನಗಲ್ ಕುಮಾರಸ್ವಾಮಿಗಳಿಗೂ, ಅಧ್ಯಕ್ಷರಿಗೂ ವಂದನೆಸಮರ್ಪಿಸಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಸಭೆಯಲ್ಲಿದ್ದವ.

ನಿಜವಾಗಿ ಹಿಂದುಳಿದವರು ಯಾರು?

ನವನಾಗರೀಕಕಾಲವಾದ ಈ 20 ನೆಯ ಶತಮಾನದಲ್ಲಿ ಎಲ್ಲಿ ನೋಡಿದರೂ ಸುಧಾರಣೆಗಳು (Reforms) ದಿನದಿನಕ್ಕೆ ಅಭಿವೃದ್ಧಿಯನ್ನೈದುತ್ತ, ಹಿಂದುಳಿದ ಜನಾಂಗದವರಲ್ಲಿ ಮೂಢಬುದ್ಧಿಯು ತೊಲಗಿ ಪ್ರೌಢಬುದ್ಧಿಯು ಅಂಕುರಿಸುತ್ತಿದೆ. ಕೇವಲ ಹಿಂದುಳಿದಿದ್ದವರು ಕೂಡ ತಮ್ಮ ನೆರೆಯವರನ್ನು ನೋಡುತ್ತಲೂ, ಇತರರಿಂದ ಉಪದೇಶಿಸಲ್ಪಡುತ್ತಲೂ, ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದವರ ಉದಾರಾಶ್ರಯ ಪ್ರೋತ್ಸಾಹಗಳಿಂದಲೂ ಎಲ್ಲರಂತೆ ನಾಗರೀಕರಾಗಿಯೂ, ಆಗುತ್ತಲೂ ಇರುವರು. ಆದರೆ ನಿಜವಾಗಿ ವಿದ್ಯೆಯಲ್ಲಿಯೂ, ನಾಗರೀಕತೆಯಲ್ಲಿಯೂ ಕೇವಲ ಹೀನಸ್ಥಿತಿಯಲ್ಲಿರುವ ಯಾವ ಜನಾಂಗವು ನರಳುತ್ತಿದೆಯೆಂಬುದನ್ನು ಎಷ್ಟು ಜನರು ತಿಳಿದಿರುವರು? ಹಾಗೆ ತಿಳಿದಿದ್ದರೂ ಅವರ ಪರವಾಗಿ ಸಾರ್ವಜನಿಕಸಂಸ್ಥೆಗಳಲ್ಲಿ ಮಾತನಾಡುವವರು ತಾನೇ ಯಾರು? ವಿದ್ಯಾವಂತರಾದ ದೂರದೃಷ್ಟಿಯುಳ್ಳ ಮುತ್ತು ಸರ್ವಸಮದೃಷ್ಟಿಯುಳ್ಳ ಯಾವ ದೊಡ್ಡಮನುಷ್ಯರೇ ಆಗಲಿ ಯೋಚಿಸಿದರೆ, ದೇಶದಲ್ಲೆಲ್ಲ "ಹಳೆಕರ್ನಾಟಕಬ್ರಾಹ್ಮಣರು" ಇರುವಷ್ಟು ಶೋಚನೀಯಸ್ಥಿತಿಯಲ್ಲಿ ಉಳಿದ ಯಾವ ಜನಾಂಗವೂ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಅಯ್ಯೋ! ಪಾಪ! ಇವರ ಪುರಾಕೃತಕರ್ಮಫಲವಿನ್ನೆಷ್ಟು ಕಠಿಣವೋ ಯಾರು ಬಲ್ಲರು? ಈ ಮೂಕಪ್ರಾಣಿಗಳ ತೊಂದರೆಯನ್ನು ಪರಿಹರಿಸಲು, ಆ ಪರಮೇಶ್ವರನು ಯಾರನ್ನೂ ಸೃಷ್ಟಿಸಿಯೇ ಇಲ್ಲವೆಂದು ಊಹಿಸಬೇಕೇ? ಸ್ವಾಭಾವಿಕವಾಗಿ ತಮ್ಮತಮ್ಮ ವಿಷಯಗಳಲ್ಲಿ ಆಸಕ್ತರಾಗಿ, ಕಾರ್ಯಸಾಧನೆಯನ್ನು ಮಾಡುತ್ತಿರುವವರು ಇತರರ ಪುರೋಭಿವೃದ್ಧಿಗಾಗಿ ಏತಕ್ಕೆ ಪ್ರಯತ್ನಮಾಡಬೇಕು?

ಅಯ್ಯಾ! ಪ್ರಜಾಪ್ರತಿನಿಧಿಗಳೆ, ತಮಗಾದರೂ ಈ ವಿಷಯವು ಪರಿತಾಪವನ್ನುಂಟುಮಾಡುವುದಿಲ್ಲವೆ? ಈ ಜನಾಂಗದವರು ಸರ್ಕಾರಕ್ಕೆ ಯಾವ ವಿಧವಾದ ಸಂಬಂಧವನ್ನೂ ಹೊಂದಿಲ್ಲವೆ? ನಮ್ಮನ್ನಾಳುವ ಶ್ರೀಮನ್ಮಹಾರಾಜರವರು, ಕರುಣಾಳುಗಳೂ, ಪ್ರಜಾಹಿತಚಿಂತಕರೂ ಆಗಿರುವುದು ಸರ್ವವಿದಿತವಾಗಿದೆ. ಅಂಥಾದ್ದರಲ್ಲಿ ಈ ಜನಾಂಗವು ಇನ್ನೂ ತಲೆಯೆತ್ತದಿರುವುದು ಅದರ ದುರದೃಷ್ಟವೇಸರಿ. ಹೋದವರ್ಷದ ಪ್ರಜಾಪ್ರತಿನಿಧಿಸಭೆಯಲ್ಲಿ ಒಬ್ಬ ಮೆಂಬರು, ಈ ವಿಷಯವನ್ನು ಚರ್ಚೆಗೆತಂದಾಗ ದಿವಾನರವರು "ನೋಡೋಣ" ವೆಂದು ಬಿಟ್ಟರು. ಪಾಪ! "ನರಿಯಕೂಗು ಗಿರಿಮುಟ್ಟೀತೆ" ಎಂಬಂತೆ, ಆ ಒಬ್ಬರಮಾತು ಎಷ್ಟು ಬೆಲೆ ಪಡೆದೀತು? ಇತರರ್ಯಾರಾದರು ಆ ವಿಷಯವನ್ನು ಚರ್ಚಿಸಿದ್ದರೆ ಚೆನ್ನಾಗಿತ್ತು. ಈಗಿನ ದಿವಾನರಾದ ಮಿ|| ಮಿರ್ಜಾಯವರು, ಸಕಲಜನಗಳನ್ನೂ ಏಕರೀತಿಯಿಂದ ಕಾಣುತ್ತಿರುವುದೂ, ಬಡವರ ಅಹವಾಲುಗಳನ್ನು ತಮ್ಮ ಘನಚಿತ್ತಕ್ಕೆ ತಂದುಕೊಂಡು, ತಕ್ಕ ಪರಿಹಾರಗಳನ್ನು ದಯಪಾಲಿಸುತ್ತಿರುವುದೂ ಈಗಾಗಲೇ ಸಮಸ್ತರಿಗೂ ತಿಳಿದಿದೆ. ಈ ಕಾರ್ಯವು ಇಂತಹ ನಿಷ್ಪಕ್ಷಪಾತರಾದ ಮಹನೀಯರ ದಯಾರ್ದ್ರಹೃದಯಕ್ಕೆ ಬಂದಹೊರತು ಬೇರೆ ಮಾರ್ಗವಿಲ್ಲ. ಸ್ವಭಾವಜನ್ಯವಾದ ದ್ವೇಷಾಸೂಯೆಗಳಿಂದ ತುಂಬಿ, ಈ ಹೆಸರನ್ನೇ ದ್ವೇಷಿಸುತ್ತಿರುವ ಬ್ರಾಹ್ಮಣವೆಂಬರುಗಳು ಯಾರುತಾನೇ ಇದಕ್ಕೆ ತಕ್ಕ ಗಮನವನ್ನು ಕೊಡುವರು? ಸಾಧಾರಣವಾಗಿ ಎಲ್ಲಾ ಹಿಂದುಳಿದವರಿಗೂ ಸರ್ಕಾರದವರು ಪ್ರೋತ್ಸಾಹಕೊಟ್ಟು ಅಭಿವೃದ್ಧಿಮಾಡುತ್ತಿರುವ ಕಾಲದಲ್ಲಿ, ಈ ಜನರಿಗೆ ಯಾವ ವಿಧವಾದ ಸಹಾಯಸಂಪತ್ತುಗಳೂ ಒದಗದಿರುವುದು ಬಹಳ ವಿಷಾದಕರ. ಅಯ್ಯಾ, ಪ್ರಜಾಹಿತಚಿಂತಕರೆ, ಮುಂದೆ ಬರುವ ಅಧಿವೇಶನದಲ್ಲಿಯಾದರೂ, ತಾವು ಈ ವಿಷಯದಲ್ಲಿ ಸರ್ಕಾರಕ್ಕೆ ಮನವಿಮಾಡಿ, ಇವರನ್ನು ಉದ್ಧಾರಮಾಡಿ ಶಾಶ್ವತವಾದ ಕೀರ್ತಿಸಂಪಾದಿಸಿ, ಕಾರ್ಮುಗಿಲಿನಲ್ಲಿರುವವರನ್ನು ಬೆಳಕಿಗೆ ತಂದು ಕೃತಾರ್ಥರನ್ನಾಗಿ ಮಾಡಬೇಕೆಂಬುದೇ ನನ್ನ ಮನಃಪೂರ್ವಕಪ್ರಾರ್ಥನೆಯು.

ಸರ್ವೇಜನಾಸ್ಸುಖಿನೋಭವನ್ತು.

S. L. S. ಹಿತಚಿಂತಕ.

ಮೈಸೂರುಸೀಮೆಯ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿಸಭೆಯ ಮೆಂಬರುದಾರರುಗಳಾದ ಮಹನೀಯರಲ್ಲಿ, ರೆವಿನ್ಯೂ ಸರ್ವೇಯಿಲಾಖೆಯ ರಿಡಕ್ಷನ್ ರೂಲಿಗೆ ತುತ್ತಾಗಿರುವ ಬಡನೌಕರರುಗಳ ವಿಜ್ಞಾಪನೆ.

ಮಹಾಶಯರೆ,

ಮೈಸೂರು ರೆವಿನ್ಯೂ ಸರ್ವೇಯಿಲಾಖೆಯಲ್ಲಿರುವ ಸುಮಾರು 400 ಜನ ನೌಕರರ ಪೈಕಿ ಸರ್ಕಾರದ ಖರ್ಚಿನಿಂದ ಮೋಜಣಿ ಮುತ್ತು ಕ್ಲಾಸಿಫಿಕೇಷನ್ ಟ್ರೈನಿಂಗ್ ಹೊಂದಿ ಇಲಾಖಾ ಮಜ್ಕೂರಿನಲ್ಲಿ ಮೋಜಣಿ ವಗೈರೆ ಇತರ ಕೆಲಸಗಳನ್ನೂ ಮಾಡಬಲ್ಲವರು 150 ಜನಗಳು ಮಾತ್ರಯಿಧೇವೆ.

ಈ ಇಲಾಖೆಗೆ ಮುಂದಣಸಾಲಿನಿಂದ 50 ಸಾವಿರರೂಪಾಯಿಗಳಿಗೆ ಮೇಲ್ಪಟ್ಟು ಸರ್ಕಾರದಲ್ಲಿ ಬಡ್ಜೆಟ್ ಕಡಮೆ ಮಾಡಲ್ಪಟ್ಟ ಸಬಬು ಮೇಲ್ಕಂಡ 150 ಜನಗಳ ಪೈಕಿ 8-10 ವರುಷಗಳ ಸರ್ವಿಸ್ಸಾಗಿರತಕ್ಕ ಸುಮಾರು (40) ಜನಗಳನ್ನು ಈ ಜೂನ್ ಆಖೈರಿಗೆ ನೌಕರಿಯಿಂದ ನಿವೃತ್ತರನ್ನಾಗಿ ಮಾಡಲು ಯೇರ್ಪಾಡಾಗಿಧೆಯಷ್ಟೆ?

ಈಚೆಗೆ ರೆವಿನ್ಯೂ ಹುಟ್ಟುವಳಿಯನ್ನು ಜಾಗ್ರತೆ ಜಾಸ್ತಿ ಮಾಡಬೇಕೆಂಬ ಕಾರಣದಮೇಲೆ, ಬಹುದಿನಗಳು ನಡಿಯಬಹುದಾದ ರೀ ಸರ್ವೆ ಕೆಲಸವನ್ನು ನಿಲ್ಲಿಸಿ, ರೀ ಕ್ಲಾಸಿಫಿಕೇಷನ್ ಕೆಲಸ ಮಾತ್ರ ಮಾಡಿಸಲು ಯೇರ್ಪಾಡಾಯಿತಲ್ಲವೆ? ಈ ಉದ್ದೇಶಕ್ಕೆ ಮುಖ್ಯವಾಗಿ ನಡಿಯಬೇಕಾದ ಕ್ಲಾಸಿಫಿಕೇಷನ್ ಅಳತೆ ವಗೈರೆ ಕೆಲಸವನ್ನೂ, ಹಿಂದೆ ರೀ ಸರ್ವೆ ಕೆಲಸ ನಡಿಯುತ್ತಿದ್ದಾಗಲೂ ಸಹ ಇಲಾಖಾ ಮಜ್ಕೂರಿನಲ್ಲಿ ನಮ್ಮಗಳಿಂದ ಧೈರಿಯನ್ನ ಒಂದಕ್ಕೆ ಮೂರಾಗಿ ಅತಿಕಷ್ಟತರವಾದ ಈ ಕೆಲಸವನ್ನು ವರುಷಕ್ಕೆ 8-9 ತಿಂಗಳ ಕಾಲ ಕಾಡುಪ್ರದೇಶಗಳಲ್ಲೆಲ್ಲಾ ಅಲಿಸಿ, ದಿನಂಪ್ರತಿಯೂ 8-9 ಗಂಟೆಗಳ ಕಾಲದಂತೆ ಕಾಲಕಾಲಕ್ಕೆ ಅನ್ನೋದಕವಿಲ್ಲದರೀತಿಯಲ್ಲಿ ದುಡಿಸಿಕೊಂಡದ್ದರಿಂದ ಪರಸ್ಥಳದಲ್ಲಿ ಅನೇಕರು ಮೃತರಾದರು; ಉಳಿದ ನಾವುಗಳಾದರೊ ಪರಸ್ಥಳದಲ್ಲಿ ಸಂಸಾರದೊಳಗೆ ಸಂಭವಿಸಿದ ಅನೇಕ ಕಷ್ಟಗಳನ್ನು ಅನುಭವಿಸಿಕೊಂಡು ಸರ್ಕಾರದ ಹುಕ್ಕುಂ ಪ್ರಕಾರ ಶೀಘ್ರದಲ್ಲೇ ಕೆಲಸಪೂರೈಸಿದೆವು. ಇದರಿಂದ ಸರ್ಕಾರಕ್ಕೆ ರೆವಿನ್ಯೂ ಹುಟ್ಟುವಳಿಯು 8-10 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಜಾಸ್ತಿಯಾಗಿರುತ್ತೆಂಬ ವಿಚಾರವೂ, ಅಲ್ಲದೆ ಹಾಲಿ ನೌಕರಿಯಿಂದ ತೆಗೆಯಲ್ಪಡುವ ಜುಜ್ವಿತಲಬಿನ ಅನಾಥರಾದ ನಮ್ಮಗಳ ಸಂಬಳದ ಒಟ್ಟು ಮೊಬಲಗು ಮೇಲ್ಕಂಡಂತೆ ಜಾಸ್ತಿಯಾಗಿರುವ ಹುಟ್ಟುವಳಿಯಲ್ಲಿ ನೂರರಲ್ಲೊಂದುಭಾಗ ಸಹ ಆಗಲಾರದೆಂಬುವ ವಿಚಾರವೂ ತಮ್ಮಗಳಿಗೆಲ್ಲಾ ತಿಳಿಯದ ವಿಷಯವಲ್ಲ.

ಇದಲ್ಲದೆ ಮೋಜಣಿ ಕೆಲಸ ಬಲ್ಲವರು ಸ್ವಲ್ಪ ಜನರಿದ್ದು ಸಂಸ್ಥಾನಾಮಿ ಗೋಮಾಳ, ಕಾವಲು, ಸೇಂದೀವನ ವಗೈರೆಗಳಲ್ಲಿ ಪೋಡಿಯೇ ಮುಂತಾದ ಅನೇಕ ಕೆಲಸಗಳಿರುತ್ತೆಂದೂ, ಇದರಿಂದ ಈ ನೌಕರರುಗಳ ಸರ್ವಿಸ್ಸು ಇಲಾಖಾ ಮಜಕೂರಿಗೆ ಅತ್ಯವಶ್ಯಕ ಬೇಕಾಗಿರುವುದರಿಂದ ಇವರುಗಳನ್ನು ನೌಕರಿಯಿಂದ ತೆಗೆಯಲಿಕ್ಕೂಡದೆಂದೂ ವಗೈರೆ ಮೆಸರ್ಸ್ ಸರ್ವೆ ಸೂಪರಿಂಟೆಂಡೆಂಟ್ ಸಾಹೇಬರವರು ಆಗಾಗ್ಗೆ ಗೌರ್ನಮೆಂಟಿಗೆ ತಿಳಿಸಿರುವ ಪ್ರಪೋಜಲ್‌ಗಳಿಂದಲೇ ದೃಢವಾಗಿ ವ್ಯಕ್ತಪಟ್ಟಿರುತ್ತೆ.

ಹೀಗಿರುತ್ತ ಮೇಲ್ಕಂಡ 150 ಜನಗಳ ಪೈಕಿ ಹಿಂದೆ ಗತಿಸಿ ಹೋದವರು, ಹಾಲೀ ತೆಗೆಯಲ್ಪಡುವವರು, ಬಾಕೀ ಉಳಿಯುವ ಸುಮಾರು 100 ಜನರಲ್ಲಿ ಹಾಲಿಯೂ ಮುತ್ತು ತರುಣದಲ್ಲೇ ರಿಟೈರು ಆಗುವಂಥಾವರಿದ್ದು, ಈ ಮುಂತಾದ ಕಾರಣಗಳಿಂದ ಈ ನೌಕರರ ಸಂಖ್ಯೆಯು ಶೀಘ್ರದಲ್ಲೇ ಕಡಿಮೆಯಾಗುತ್ತೆಂಬ ವಿಚಾರವೂ, ಇದರಿಂದ ಸರಕಾರದ ಕೆಲಸಕ್ಕೆ ಕುಂದಕವಾಗಬಹುದೆಂಬ ವಿಷಯವೂ ಮುಖ್ಯವಾಗಿ ಪರ್ಯಾಲೋಚಿಸತಕ್ಕದೆಂಬುವದು ತಮ್ಮಗಳಿಗೆ ತಿಳಿಯದವಿಷಯವಲ್ಲ.

ಈ ಮುಂತಾದ ಕಾರಣಗಳಿಂದ ಘನಸರ್ಕಾರಕ್ಕೆ ಜುಜ್ವಿಸಂಬಳದ ಈ ಬಡ ನೌಕರರ ಸರ್ವಿಸ್ಸು ಅತ್ಯಾವಶ್ಯಕ ಬೇಕಾಗಿರುವುದರಿಂದ ನಮ್ಮನ್ನು ಈ ರಿಡಕ್ಷನ್ ರೂಲಿಗೆ ತುತ್ತಾಗಗೊಳಿಸದೆ ಮಹನೀಯರಾದ ತಾವುಗಳೆಲ್ಲರೂ 8-10 ವರ್ಷ ಸರ್ವಿಸ್ಸಾಗಿರುವ ನಮ್ಮಗಳಮೇಲೆ ದಯವಿಟ್ಟು, ನ್ಯಾಯವಿಧಾಯಕ ಮುತ್ತು ಪ್ರಜಾಪ್ರತಿನಿಧಿಸಭೆಯಲ್ಲಿ ನಮ್ಮಗಳ ಈ ಅಹವಾಲನ್ನು ಒಂದು ಮುಖ ಸಬ್ಜೆಕ್ಟಾಗಿ ಚರ್ಚಿಸುವುದರಮೂಲಕ, ನಾವುಗಳು ಇದೇ ಇಲಾಖೆಯೊಳಗೆ ನೌಕರಿಯಲ್ಲಿ ಉಳಿಯುವಂತೆ ಮಾಡಿಸಿಯಾಗಲಿ ಅಥವ ಈಗ್ಗೆ 3-4 ವರ್ಷಗಳ ಹಿಂದೆ ಜನರಲ್ ರಿಟ್ರೆಂಚ್‌ಮೆಂಟಿನಲ್ಲಿ ಅನೇಕ ಇಲಾಖೆಗಳಲ್ಲಿ ತೆಗೆಯಲ್ಪಟ್ಟ ಜುಜ್ವೀಸರ್ವಿಸ್ಸಿನ ನೌಕರರಿಗೆಲ್ಲಾ ಇತರೇ ಇಲಾಖೆಯಲ್ಲೂ, ಸರ್ವೆ ಇಲಾಖೆಯೊಳಗೆ ಪರಮನೆಂಟ್ ಆರ್ಡರನ್ನು ಎದುರುನೋಡುತ್ತಲಿದ್ದ ನಮ್ಮಗಳಿಗೆ ತಪ್ಪಿಸಿ ಆಗ್ಗೆ ಅವರುಗಳಲ್ಲಿ ಅನೇಕರಿಗೆ ಈ ಇಲಾಖೆಯಲ್ಲೂ ಖಾಯಂ ನೌಕರಿಯನ್ನು ಕೊಟ್ಟು ಘನಸರ್ಕಾರದವರು ಕಾಪಾಡಿದಂತೆಯೇ, ಈ ಮಧ್ಯಕಾಲದಲ್ಲಿ ನಮ್ಮಗಳನ್ನು ಕೆಲಸದಿಂದ ನಿವೃತ್ತಿಮಾಡಗೊಳಿಸದೆ ರೆವಿನ್ಯೂ ವಗೈರೆ ಇತರ ಇಲಾಖೆಗಳಲ್ಲಿಯಾದರೂ ನೌಕರಿಯನ್ನು ಕೊಡಿಸಿ ಜೀವನೋಪಾಯಕ್ಕೆ ಲೋಪಬಾರದಂತೆ ಮಹನೀಯರಾದ ತಾವುಗಳೆಲ್ಲರೂ ಮೇಲ್ಕಂಡ ನಮ್ಮ ವಿಜ್ಞಾಪನೆಗಳನ್ನೆಲ್ಲಾ ಸಾವಧಾನ ಚಿತ್ತದಿಂದ ಪರ್ಯಾಲೋಚಿಸಿ ಸರ್ಕಾರದಲ್ಲಿ ಏರ್ಪಾಡುಮಾಡಿಸಿಕೊಟ್ಟು ಆಚಂದ್ರಾರ್ಕಪರಿಯಂತರ ಶಾಶ್ವತವಾದ ಕೀರ್ತಿಯನ್ನು ಹೊಂದಬೇಕಾಗಿ ಅತಿವಿನಯದಿಂದ ಬೇಡುತ್ತೇವೆ.

ತಮ್ಮ ವಿಧೇಯರಾದ ಬಡನೌಕರರು.

ಹುಬ್ಬಳ್ಳಿ ಶ್ರೀ ಮೂರುಸಾವಿರಮಠದ ವತಿಯಿಂದ ಜರುಗಿದ ಶ್ರೀಮದ್ಬಸವಜಯಂತ್ಯುತ್ಸವವು.

ಯಾವ ಮಹಾತ್ಮನಿಂದ ವೀರಶೈವಧರ್ಮವೂ ವೀರಶೈವರೂ ಉದ್ಧರಿಸಲ್ಪಟ್ಟರೋ, ಯಾವ ಭಕ್ತಾಗ್ರಣಿಯಿಂದ ಕರ್ಮಮಾರ್ಗವು ತಡೆಯಲ್ಪಟ್ಟು ಭಕ್ತಿಮಾರ್ಗವು ಪ್ರಚಾರದಲ್ಲಿ ತರಲ್ಪಟ್ಟಿತೋ, ಯಾವ ಸತ್ಪುರುಷನಿಂದ ವೀರಶೈವಸಮಾಜದಲ್ಲಿ ಜ್ಞಾನಪ್ರಸಾರವೂ ಧರ್ಮಜಾಗ್ರತೆಯೂ ಸಮಾಜರಚನೆಯೂ ಉದ್ಯೋಗಾಭಿವೃದ್ಧಿಗಳೂ ನೆಲೆಗೊಂಡವೋ, ಯಾವ ಮಹದ್ವಿಭೂತಿಯಿಂದ ಧಾರ್ಮಿಕ ಹಕ್ಕುಗಳು ಸ್ತ್ರೀಪುರುಷರೆಲ್ಲರಿಗೂ ಸಮನಾಗಿರುವದೆಂಬದೂ ಉಚ್ಚ ನೀಚ ಭೇದಗಳ ಹುಚ್ಚನ್ನು ಅವಲಂಬಿಸದೆ ನಡೆನುಡಿ ಆಚಾರಾದಿಗಳನ್ನು ಅವಲಂಬಿಸಿರುವದೆಂಬುದೂ ತೋರಿಸಲ್ಪಟ್ಟವೋ ಯಾವ ಮಹಾನುಭಾವನಿಂದ ವಿದ್ಯಾಪ್ರಸಾರವೂ, ಜ್ಞಾನಪ್ರಸಾರವೂ ಹೆಚ್ಚಿ ಕರ್ನಾಟಕದಲ್ಲಿ ಜೀವಕಳೆಯೂ, ನವಚೈತನ್ಯವೂ ಉಂಟಾದವೋ, ಯಾವ ಪುಣ್ಯಾತ್ಮನು ತನ್ನ ನಡೆನುಡಿ ಆಚಾರಾದಿಗಳಿಂದ ಲೌಕಿಕದಲ್ಲಿ ಪರಮಾರ್ಥವನ್ನು ಸಂಪಾದಿಸುವ ಬಗೆಯನ್ನೂ, ಮುಕ್ತಿಮಾರ್ಗವನ್ನೂ ತೋರ್ಪಡಿಸಿದನೋ ಆ ಮಹಾನುಭಾವನಾದ ಶ್ರೀಮದ್ಬಸವೇಶ್ವರನು ಲೋಕಕಲ್ಯಾಣಾರ್ಥವಾಗಿ ಕರ್ನಾಟಕದಲ್ಲಿ ವೈಶಾಖ ಶುದ್ಧ ರೋಹಿಣೀ ನಕ್ಷತ್ರದಲ್ಲಿ ಅವತರಿಸಿದನು. ಆ ಪುಣ್ಯಕರವಾದ ಶುಭತಿಥಿಯು ಈಸಾರೆ ತಾ|| 13-5-26ನೇ ಗುರುವಾರ ಬಂದುದರಿಂದ ಶ್ರೀಮನ್ಮಹಾರಾಜನಿರಂಜನಜಗದ್ಗುರು ಶ್ರೀಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳವರ ಆಜ್ಞೆಯಂತೆ ಹುಬ್ಬಳ್ಳಿ ಲಿಂಗಾಯತವಿದ್ಯಾವರ್ಧಕಸಂಘದ ಗೌರವಕಾರ್ಯದರ್ಶಿಗಳು ಮಹಾಸ್ವಾಮಿಗಳವರ ಮಠದಲ್ಲಿ ಬಾಸಮಠದ ವತಿಯಿಂದ ತಾ|| 9-5-1926ರಿಂದ ತಾ|| 13-5-1926ರ ವರೆಗೆ ಐದು ದಿವಸ ಶ್ರೀಮದ್ಬಸವಜಯಂತ್ಯುತ್ಸವವನ್ನು ಕಡುವೈಭವದಿಂದಲೂ ಅಟ್ಟಹಾಸದಿಂದಲೂ ಜರುಗಿಸಿದರೆಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ. ಈ ಮಹೋತ್ಸವ ಸಂಬಂಧದಲ್ಲಿ ಪ್ರತಿ ದಿವಸ ಸಂಜೆಯ 7 ಗಂಟೆಗೆ ಶ್ರೀ ಮಹಾಸ್ವಾಮಿಗಳವರು ಸಿಂಹಾಸನದಲ್ಲಿ ಅಧಿಷ್ಠಿತರಾದಾಗ ಎಡಬಲದಲ್ಲಿ ಚಿಕ್ಕ ಬಾಲಕರಾದ ಸ್ವಯಂಸೇವಕರು ಸನ್ನಿಧಿಯ ಬಿರುದಾವಳಿಗಳನ್ನು ಪಠಿಸುತ್ತ ಛತ್ರಚಾಮರಾದಿಗಳನ್ನು ಹಿಡಿದು ಸಜ್ಜಾಗಿ ನಿಂತವೇಳೆಯಲ್ಲಿ ಮಹಾಸ್ವಾಮಿಗಳವರ ಮೂರ್ತಿಯನ್ನು ನೋಡಿದರೆ ಪರಶಿವನೇ ನಿರಂಜನಮೂರ್ತಿಯಾಗಿ ಅವತರಿಸಿದಂತೆ ಕಂಡುಬರುತ್ತಿತ್ತು. ಇದನ್ನು ಪ್ರತ್ಯಕ್ಷ ಕಂಡ ಮನುಜನೇ ಧನ್ಯನು.

ತಾ|| 9-5-26 ನೇ ದಿವಸ ಸುಪ್ರಸಿದ್ಧ ಕೀರ್ತನಕಾರರಾದ ವೇ|| ಬಸವಲಿಂಗಶಾಸ್ತ್ರಿಗಳವರು ಲಿಂಗಪೂಜೆಯ ಮಹತ್ವ ಹಾಗು ಅದರ ಇಂಗಿತ ಇವುಗಳನ್ನು ಶಾಸ್ತ್ರಾಧಾರಗಳಿಂದಲೂ ಶ್ರೀಬಸವಣ್ಣನವರ ಶಿವಯೋಗನಿದ್ರಾಮುದ್ರಾಕಥನದಿಂದಲೂ, ತಾ|| 10-5-1926 ನೇ ದಿವಸ ದಾನದ ಮಹತ್ವದಲ್ಲಿ ಯಾವ ದಾನವು ಶ್ರೇಷ್ಠವಾದುದು ಎಂಬ ವಿಷಯವನ್ನು ಶ್ರೀಸಿಂಧುಬಲ್ಲಾಳನ ಚರಿತ್ರೆಯಿಂದಲೂ ತಮ್ಮ ಸುಬೋಧಪ್ರದವೂ ಮಂಜುಳವೂ ಆದ ವಾಣಿಯಿಂದ ನೆರೆದ ಪ್ರಚಂಡ ಶ್ರೋತೃಸಮುದಾಯವು ತಲೆದೂಗುವಂತೆ ಕೀರ್ತಿಸಿದರು. ತಾ|| 11 ರಲ್ಲಿ ಮುಖ್ಯವ್ಯಾಖ್ಯಾತರಾದ ವೇ|| ಎಸ್. ಬಿ. ಹಿರೇಮಠ ವಕೀಲರು ಹಾವೇರಿ ಮುತ್ತು ಶ್ರೀ ಮಂಜಪ್ಪನವರು ಹರ್ಡೇಕರ ವೇ|| ಹು. ಫ. ಕಟ್ಟೀಮನಿ, ಸಭಾಧ್ಯಕ್ಷರಾದ ರಾವಬಹದ್ದೂರ ಕಂಬಳಿ ಈ ಮಹನೀಯರು ಕರ್ನಾಟಕದಲ್ಲಿ ವೀರಶೈವಸ್ಥಾನ ಈ ವಿಷಯದ ಮೇಲೆ ಎಲ್ಲರಿಗೂ ಬಿಂಬಿಸುವಂತೆ ಮಾತಾಡಿದರು. ಇದರ ಮುಖ್ಯಾಂಶವೇನಂದರೆ-ಕರ್ನಾಟಕದ ಉನ್ನತಿಯೇ ವೀರಶೈವರ ಉನ್ನತಿಯು, ವೀರಶೈವರ ಉನ್ನತಿಯೇ ಕರ್ನಾಟಕದ ಉನ್ನತಿಯು, ಕರ್ನಾಟಕದ ಅವನತಿಯೇ ವೀರಶೈವರ ಅವನತಿಯು, ವೀರಶೈವರ ಅವನತಿಯೇ ಕರ್ನಾಟಕದ ಅವನತಿಯು ಆದ್ದರಿಂದ ವೀರಶೈವಸಮಾಜವು ಕರ್ನಾಟಕದ ಉನ್ನತಿಗಾಗಿ ಅರ್ಥಾತ್ ತನ್ನ ಉನ್ನತಿಗಾಗಿ ಕೈಕೊಳ್ಳಬಹುದಾದ ಮಹತ್ಕಾರ್ಯಗಳು ಯಾವವೆಂಬದನ್ನು ವಿವರಿಸಿದರು. ಬುಧವಾರ ಮುಖ್ಯವ್ಯಾಖ್ಯಾತರಾದ ಶ್ರೀಬಸವನಾಳ, ಎಂ. ಎ., ಹಾಗು ಶ್ರೀನಾವಲಗಿ ವಕೀಲರು ಚಿಕ್ಕೋಡಿ, ವೇ|| ಟಿ. ಎಚ್. ಎಂ. ಸಿದ್ಧಯ್ಯನವರು ವಕೀಲರು ಹರಪನಹಳ್ಳಿ, ಮುತ್ತು ಅಧ್ಯಕ್ಷರಾದ ಶ್ರೀಹರ್ಡೇಕರ ಮಂಜಪ್ಪನವರು ಈ ಮಹಾಶಯರು ಕರ್ನಾಟಕದ ವಿಶ್ವವಿದ್ಯಾಲಯವೂ ವೀರಶೈವರೂ ಈ ವಿಷಯದಮೇಲೆ ಅತ್ಯುತ್ತಮವಾಗಿ ಮಾತಾಡಿದರು. ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯದ ಆವಶ್ಯಕತೆಯು ಅತ್ಯಧಿಕವಾಗಿದ್ದು, ಸರಕಾರದ ಹಾಗು ಯೂನಿವರ್ಸಿಟಿಯ ಈಗಿನ ಧೋರಣದಿಂದ ತುಂಡುತುಂಡಾದ ಕರ್ನಾಟಕಕ್ಕೆ ಒದಗಬಹುದಾದ ಅತ್ಯನರ್ಥಗಳನ್ನು ವಿವೇಚಿಸಿ ಈ ಬಗ್ಗೆ ನಾವು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿದರು. ತಾ|| 13 ರ ಸಂಜೆಯ 7 ಗಂಟೆಗೆ ನಿತ್ಯದಂತೆ ಶ್ರೀಗಳವರ ಪಾದಸನ್ನಿಧಿಯಲ್ಲಿ ಸಭೆನೆರೆಯಿತು. ಮ|| ಗಳಾದ ಸಿದ್ಧರಾಮಪ್ಪನವರು ಹಾವೇರಿ ವಕೀಲರು, ಮಂಜಪ್ಪನವರು ಹರ್ಡೇಕರ ಇವರು ಮುತ್ತು ಸಭಾಧ್ಯಕ್ಷರಾದ ಹರಪನಹಳ್ಳಿಯಿಂದ ಆಗಮಿಸಿದ ವೇ|| ಸದಾಶಿವಯ್ಯನವರು, ಎಂ. ಎ. ಇವರು ಶ್ರೀಬಸವೇಶ್ವರರೂ ಸದ್ಯದ ವೀರಶೈವಸಮಾಜವೂ ಈ ವಿಷಯವನ್ನು ಕುರಿತು ಜನರ ಮನಸ್ಸಿನಮೇಲೆ ಒಳ್ಳೇಪರಿಣಾಮಕಾರಕವೂ ಸ್ಫೂರ್ತಿದಾಯಕವೂ ಆದ ಭಾಷಣಗಳನ್ನು ಮಾಡಿದರು. ಇದರಲ್ಲಿ ಬಸವಣ್ಣನವರ ಆಚಾರ ಹಾಗು ಅವರು ಮಾಡಿದ ಮಹತ್ಕಾರ್ಯಗಳು ಆಗಿನಕಾಲದ ಮುತ್ತು ಸದ್ಯದ ವೀರಶೈವಸಮಾಜದ ಸ್ಥಿತಿ ಹಾಗು ನಾವು ಮಾಡಬೇಕಾದ ಕರ್ತವ್ಯಗಳು, ಮುಂತಾದವುಗಳು ವಿವೇಚಿಸಲ್ಪಟ್ಟವು. ಕೊನೆಗೆ ಶ್ರೀಮನ್ನಿರಂಜನಜಗದ್ಗುರು ಮಹಾಸನ್ನಿಧಿಯಿಂದ ನೆರೆದ ಯಾವತ್ತು ಭಕ್ತವೃಂದಕ್ಕೆ "ಲೋಕೋದ್ಧಾರಕಾರ್ಯಕ್ಕಾಗಿ ಶಿವನೇ ಒಂದೊಂದು ರೂಪದಿಂದ ಒಂದೊಂದುಕಾಲಕ್ಕೆ ಭೂಲೋಕದಲ್ಲಿ ಅವತರಿಸುವನು. ಅದರಂತೆ ಶ್ರೀಮದ್ಬಸವೇಶ್ವರ ಶ್ರೀಮನ್ನಿರಂಜನಪ್ರಭು ಶ್ರೀಮತ್ಪಂಚಾಚಾರ್ಯರು ಇವರೇ ಮೊದಲಾದವರು ಈಶ್ವರಾಂಶವಿಭೂತಿಗಳು. ಇಂಥವರ ಜಯಂತ್ಯುತ್ಸವಗಳಿಂದ ಅನೇಕ ಪಾಠಗಳನ್ನು ಕಲಿತು ಐಹಿಕಾಮುಷ್ಮಿಕಸುಖಗಳನ್ನು ಎಲ್ಲರೂ ಹೊಂದತಕ್ಕದ್ದು" ಎಂಬ ಅಭಿಪ್ರಾಯದ ಆಶೀರ್ವಚನಗಳನ್ನು ಅಪ್ಪಣೆಕೊಡಿಸಿದ ಬಳಿಕ ಮಹಾಸನ್ನಿಧಿಯ ಆಜ್ಞೆಯಪ್ರಕಾರ ಮಂಗಳವಾಗಿ ಉತ್ಸವದ ಕಾರ್ಯವು ಪೂರ್ತಿಗೊಳಿಸಲ್ಪಟ್ಟಿತು. ಓರ್ವ ಪ್ರೇಕ್ಷಕ.

ವೇಷಧಾರಿಚೆನ್ನಬಸವೇಶ್ವರ.

ಈಗಿನಕಾಲದ ಪ್ರತಿಯೊಂದು ಜನಾಂಗದವರೂ ದ್ವೇಷಾಸೂಯೆಗಳನ್ನು ಬಿಟ್ಟು ಭ್ರಾತೃಭಾವನನ್ನು ಅನುಸರಿಸಿ ಯಾವ ಜನಾಂಗದವರು ಹಿಂದುಳಿದಿರುತ್ತಾರೆಯೋ ಅವರನ್ನು ಮುಂದುಬಂದಿರುವವರ ಸ್ಥಾನಕ್ಕೆ ಸೇರಿಸಿಕೊಂಡು ಒಂದು ಸ್ಥಿರವಾದ ಐಕಮತ್ಯವನ್ನುಂಟುಮಾಡಬೇಕೆಂದು ಪ್ರಯತ್ನಿಸುತ್ತಿರುವುದು ಸಾಮಾನ್ಯವಾಗಿ ಸರ್ವರಿಗೂ ತಿಳಿದ ವಿಷಯವಾಗಿದೆ. ಈ ಸತ್ಪ್ರಯತ್ನದಿಂದಲೇ 'ಜನಾಂಗಸಂಯೋಗ' (League of Nations) ಮುಂತಾದ ದೊಡ್ಡದೊಡ್ಡ ಸಂಯೋಗಗಳು ಉಂಟಾಗಿರುವುದು. ಈ ಮೇಲ್ಕಂಡ "ಜನಾಂಗಸಂಯೋಗ" ದ ಜತೆಗೆ ನಮ್ಮ ಮಾತೃಭೂಮಿಯಾದ ಇಂಡಿಯಾದೇಶವನ್ನು ಸಹ ಸೇರಿಸಬೇಕೆಂದು ಮಹಾತ್ಮ ಗಾಂಧಿಯವರೇ ಮೊದಲಾದ ಮುಖಸ್ಥರು ಬದ್ಧಕಂಕಣರಾಗಿ ನಿಂತಿರುವರು. ಆದರೆ ಈ ಕೂಟಕ್ಕೆ ನಮ್ಮ ಇಂಡಿಯಾದೇಶವು ಸೇರುವುದಕ್ಕೆ ತತ್ಪೂರ್ವ ಇಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಿಕೊಂಡು ಪರಕೀಯರ ಅಪಹಾಸ್ಯಕ್ಕೂ ನಿಂದೆಗೂ ಗುರಿಯಾಗದಂತೆ ತಿದ್ದುಪಾಡುಮಾಡಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆ. ಇಂಥಾ ನ್ಯೂನತೆಗಳಲ್ಲಿ ಎಲ್ಲಾ ಜನರ ದೃಷ್ಟಿಗೂ ಪ್ರತಿದಿವಸವೂ ವ್ಯಕ್ತವಾಗುತ್ತಿರುವುದು ಯಾವುವೆಂದರೆ—ಹಿಂದೂ ಮುಸಲ್ಮಾನರಿಗಿರುವ ದ್ವೇಷಾಸೂಯೆಗಳು, ಹಿಂದೂಗಳಲ್ಲಿಯೇ ಪರಸ್ಪರ ಸಮದೃಷ್ಟಿ ಇಲ್ಲದಿರುವಿಕೆ, ಪಂಚಮರೇ ಮೊದಲಾದವರನ್ನು ಮೂಲೆಗೆ ತಳ್ಳಿರುವುದು. ಹಿಂದುಮುಸಲ್ಮಾನರ ಐಕಮತ್ಯ ಮುತ್ತು ಹಿಂದುಗಳಲ್ಲಿ ಪರಸ್ಪರ ಸಮಾನಭಾವ ಇವುಗಳುಂಟಾದ ಹೊರತು ನಮ್ಮ ಭಾರತಮಾತೆಯು ಅನ್ಯದೇಶದವರ ಕೈಪಿಡಿಯಿಂದ ಬಿಡುಗಡೆಯಾಗಲಾರಳು, ಮುತ್ತು ನಮ್ಮ ಸ್ವರಾಜ್ಯಾಪೇಕ್ಷೆಯು ಸ್ವಪ್ನಪ್ರಾಯವಾಗುವುದು. ಆದರೆ ಹಿಂದು ಮುಸಲ್ಮಾನರ ಐಕಮತ್ಯಕ್ಕೆ ವಿರುದ್ಧವಾಗಿರುವ ಅನೇಕ ಕಾರ್ಯಗಳು ಈಗ ಮುಸಲ್ಮಾನರಿಂದ ಮಾಡಲ್ಪಡುತ್ತಿವೆ. ಮುಸಲ್ಮಾನರ ಅನೇಕ ಮುಖಂಡರು ಎಲ್ಲರನ್ನೂ ಮುಸಲ್ಮಾನರನ್ನಾಗಿ ಮಾಡಬೇಕೆಂದು ಮನೋವಾಕ್ಕಾಯಗಳಿಂದ ಪ್ರಯತ್ನಿಸುತ್ತಲಿದ್ದಾರೆ. ಇದಕ್ಕಾಗಿ ಅನೇಕ ಸಮಿತಿಗಳನ್ನು ಏರ್ಪಡಿಸಿಕೊಂಡು "ಇಸ್ಲಾಮ್" ಪ್ರಚಾರಕರನ್ನು ಕಳುಹಿಸಿಕೊಟ್ಟಿರುತ್ತಾರೆ. ಇಂಥಾ ಪ್ರಚಾರಕರಲ್ಲಿ ಅನೇಕರು ವೇಷಧಾರಿಗಳಾಗಿ ಪರಮಾತ್ಮನ ಅಂಥಾ ಅವತಾರ ಇಂಥಾ ಅವತಾರವೆಂದು ಮನಸ್ಸೀ ಹರಟುತ್ತಾ ತಿಳಿಯದ ಹಿಂದುಗಳಿಗೆ ಮಂಕುಬೂದಿಯನ್ನು ಹಾಕಿ ಕೈಲಾದಮಟ್ಟಿಗೂ ಉಪಾಯದಿಂದ ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡಲು ಹೊರಟಿರುವರು. ಇಂಥಾವರ ಪೈಕಿ "ದೀನ್‌ದಾರ್ ಚೆನ್ನಬಸವೇಶ್ವರ" ನೆಂಬ ನಾಮಧೇಯದಿಂದ ಹೊರಟು ಧಾರ್ವಾಡದ ಕಡೆಯಿಂದ ಅರ್ಧಚಂದ್ರಪ್ರಯೋಗವನ್ನು ಹೊಂದಿ ತುಮಕೂರಿಗೆ ಬಂದು ಒಂದು ಸಂಘವನ್ನು ಏರ್ಪಡಿಸಿಕೊಂಡು ಅಲ್ಲಲ್ಲಿ ಸಂಚಾರಮಾಡುತ್ತಿರುವ ಮುಸಲ್ಮಾನ್‌ಪ್ರಚಾರಕರೊಬ್ಬರಾಗಿರುತ್ತಾರೆ.

ಮಹನೀಯರೆಂದೂ ಸರ್ವಮತಗಳನ್ನು ಒಂದಾಗಿಮಾಡುವುದಕ್ಕಾಗಿ ಪರಮೇಶ್ವರನು ತನ್ನನ್ನು ಈ ಭೂಲೋಕಕ್ಕೆ ಕಳುಹಿಸಿಕೊಟ್ಟಿರುವನೆಂದು ಮುಂತಾಗಿ ತನ್ನನ್ನು ತಾನೇ ಹೊಗಳಿಕೊಳ್ಳುತ್ತಿರುವ ಈ ವೇಷಧಾರಿಯಾದ ಇಸ್ಲಾಮ್ ಪ್ರಚಾರಕನು ಅನೇಕಕಡೆ ಸಂಚಾರಮಾಡುತ್ತ ಇಲ್ಲದ ಸುಳ್ಳುಗಳನ್ನು ತಾನು ಹೊರಡಿಸುತ್ತಿರುವ "ಚೆನ್ನಬಸವೇಶ್ವರ" ಎಂಬ ಪತ್ರಿಕೆಯಲ್ಲಿಯಲ್ಲೂ ಇತರಪತ್ರಿಕೆಗಳಲ್ಲಿಯೂ ಹರಡುತ್ತಾ ತಿಳಿಯದವರ ಬುದ್ಧಿಗೆ ಇನ್ನೂ ಹೆಚ್ಚಾದ ಮಾಂದ್ಯವನ್ನುಂಟುಮಾಡುತ್ತ ಗಲಭೆಮಾಡುತ್ತಲಿರುವನು. ಇದಕ್ಕೆ ಉದಾಹರಣೆ ಏನಂದರೆ—ತಾರೀಖು 25-4-26ರಲ್ಲಿ ತಿಪಟೂರಿಗೆ ಬಂದು ಅಲ್ಲಿ ಎರಡು ಮೂರು ದಿವಸಗಳಿದ್ದು ಅನೇಕರಿಗೆ ತನ್ನ ಉಪದೇಶವನ್ನು ಮಾಡಿದೆನೆಂತಲೂ, ತನ್ನ ಉಪದೇಶದಿಂದ ಸಂತುಷ್ಟನಾದ ಒಬ್ಬಾನೊಬ್ಬ ನಂಜುಂಡಪ್ಪನೆಂಬುವವನು ಕೂಡಲೆ ದೀಕ್ಷೆಯನ್ನು ಹೊಂದಿ "ಹಸನ್ ಸಾಹೇಬ್" ಎಂಬ ನಾಮವನ್ನು ಸ್ವೀಕರಿಸಿದನೆಂತಲೂ, ಬಸಪ್ಪಗೌಡ ಎಂಬುವವರು "ನೂರೊಂದು ಮತಗಳನ್ನು ಒಟ್ಟುಮಾಡುವ" ವಿಷಯವಾಗಿ ಉಪನ್ಯಾಸಮಾಡಿದರೆಂದೂ ಈ ವೇಷಧಾರಿಯು ಹೇಳುತ್ತಾನೆ. ಆದರೆ ನಂಜುಂಡಪ್ಪನೆಂಬುವವನು ಹಸನ್‌ಸಾಹೇಬನಾದದ್ದೂ ಸುಳ್ಳು, ಬಸಪ್ಪಗೌಡರು ಉಪನ್ಯಾಸಮಾಡಿದ್ದೂ ಸುಳ್ಳು. ಮಹನೀಯರೆಂದು ಹೊಗಳಿಕೊಳ್ಳುತ್ತಿರುವ ಈ ಚೆನ್ನಬಸವೇಶ್ವರನು ಇಂಥಾ ಸುಳ್ಳು ವರ್ತಮಾನಗಳನ್ನು ಲೋಕದಲ್ಲಿ ಹರಡಿ ತನ್ನ ಕೀರ್ತಿಯನ್ನು ಪ್ರಶಂಸೆಮಾಡಲು ಪ್ರಯತ್ನಿಸುತ್ತಿರುವುದು ಈತನ ಮಹತ್ವದ ಲಕ್ಷಣವೆಂದು ತೋರಿಬರುತ್ತದೆ. ಸುಳ್ಳು ಎಂಬ ಶಬ್ದವು ಸಾಮಾನ್ಯ ಮನುಷ್ಯನ ಬಾಯಿಂದಲು ಕೂಡ ಹೊರಡಬಾರದೆಂತಲೂ ಅದಕ್ಕೆ ಪ್ರಾಯಶ್ಚಿತ್ತವೇ ಇಲ್ಲವೆಂತಲೂ ನಮ್ಮ ಹಿಂದೂಶಾಸ್ತ್ರವು ಸಾರಿಸಾರಿ ಹೇಳುತ್ತದೆ. ಹೀಗಿರುವಾಗ ಈ ವೇಷಧಾರಿಯಾದ ಮಹಾತ್ಮನು ಸುಳ್ಳಿಗೇ ಪ್ರಧಾನತ್ವವನ್ನು ಕೊಟ್ಟು ನಿಜವೆಂಬ ಶಬ್ದವನ್ನು ನಿಘಂಟಿನಿಂದ ತೆಗೆದುಹಾಕಲು ಹೊರಟಿರುವುದಾಗಿ ಕಾಣುತ್ತದೆ. ತಾನೇ ಚೆನ್ನಬಸವೇಶ್ವರನೆಂದು ತೋರಿಸುವುದಕ್ಕಾಗಿ ಐವತ್ತಾರು ಹೊರ ಒಳಗಿನ ಗುರುತುಗಳಿವೆಯೆಂದು ಹೇಳುತ್ತಾ ಚೆನ್ನಬಸವೇಶ್ವರನ ಕಾಲಜ್ಞಾನ ಮುಂತಾದ ಗ್ರಂಥಗಳ ಆಧಾರವನ್ನು ಈತನು ತೋರಿಸುತ್ತಲಿದ್ದಾನೆ. ಅಂದಮೇಲೆ ನಮ್ಮ ಹಿಂದು ಕಾಲಜ್ಞಾನದಲ್ಲಿ ಹೇಳಿರುವುದೆಲ್ಲಾ ನಿಜವೆಂದು ಈತನು ನಂಬಿದ ಹಾಗಾಯಿತು. ಹಾಗೆಯೇ ಚೆನ್ನಬಸವೇಶ್ವರಪುರಾಣದಲ್ಲಿಯೂ ಬಸವೇಶ್ವರಗ್ರಂಥದಲ್ಲಿಯೂ ಹೇಳಿರುವಂತೆ ಈ ಮಹನೀಯರು ಅನೇಕ ಪವಾಡಗಳನ್ನು ಗೆದ್ದು ಲೋಕದಲ್ಲಿ ಪ್ರಸಿದ್ಧಪುರುಷರೆಂದು ಕೀರ್ತಿಯನ್ನು ಹೊಂದಿದರು. ಅದೇ ಗ್ರಂಥಗಳನ್ನೇ ಆಧಾರವನ್ನಾಗಿ ಮಾಡಿಕೊಂಡಿರುವ ಈ ಚೆನ್ನಬಸವೇಶ್ವರನು ಅಂಥಾ ಪವಾಡಗಳಲ್ಲಿ ಒಂದನ್ನಾದರೂ ಗೆದ್ದು ಜನರಿಗೆ ತನ್ನ ಮಹತ್ವವನ್ನು ತೋರಿಸಿದರೆ ಈತನೇ ನಿಜವಾದ ಚೆನ್ನಬಸವೇಶ್ವರನೆಂದು ನಂಬಬಹುದು. ಹಾಗಿಲ್ಲದೆ ಶಬ್ದಮಾತ್ರದಿಂದ ಈತನು ಚೆನ್ನಬಸವೇಶ್ವರನೆಂದು ಹೇಳಿಕೊಳ್ಳುತ್ತಾ ಅಲ್ಲಲ್ಲಿ ಅಲೆಯುತ್ತಿರುವುದು ಕೇವಲ ಲಜ್ಜಾಸ್ಪದವಾದ ಸಂಗತಿಯಾಗಿರುವುದು.

ಮಹನೀಯರಾದ ಬಸವೇಶ್ವರ ಚೆನ್ನಬಸವೇಶ್ವರರ ಕಾಲದಲ್ಲಿ ಪರಮತೀಯರನ್ನು ವೀರಶೈವಮತಕ್ಕೆ ಸೇರಿಸಿಕೊಳ್ಳಲಿಲ್ಲವೇನು? ಈ ಮಹನೀಯರು ಮಾಡಿದ್ದನ್ನೇ ಅನುಸರಿಸಿದ ಈ ಚೆನ್ನಬಸವೇಶ್ವರನು [illegible] ಮೊದಲಾದವರನ್ನು ಮುಸಲ್ಮಾನ್‌ಮತಕ್ಕೆ ಸೇರಿಸಿಕೊಳ್ಳುತ್ತಿರುವುದು [illegible] ವಲ್ಲವೇನು? ಮಹನೀಯರಾದ ಚೆನ್ನಬಸವೇಶ್ವರನ [illegible]

ಆತನು ಮಾಡಿರುವ ಕಾರ್ಯಕ್ಕೆ ಈತನು ವಿರೋಧವಾಗಿ ನಡೆಯಬಹುದೆ ? ಈತನು ಜಗದ್ಗುರುವಾಗಿದ್ದರೆ ಎಲ್ಲಾ ಮತೀಯರೂ ಈತನ ಶಿಷ್ಯರಾಗಿರದೆ ಮುಸಲ್ಮಾನ್ ಜನಗಳು ಮಾತ್ರವೇ ಈತನ ಹಿಂದುಮುಂದಿರುವುದೇತಕ್ಕೆ ? ಈತನು ತಿಪಟೂರಿಗೆ ಬಂದಿದ್ದಾಗ್ಗೆ 238-0-0 ರೂಪಾಯಿಗಳು ಚಂದಾವಸೂಲಾಯಿತೆಂದು ಹೇಳುತ್ತಾನಲ್ಲವೇ ? ಅಂಥಾ ಚಂದಾದಾರರ ಹೆಸರುಗಳನ್ನು ಇತನು ತಿಳಿಸಿದರೆ ತುಂಬಾ ಉಪಕಾರಮಾಡಿದಂತಾಗುವುದು. ಪ್ರಿಯಬಾಂಧವರೇ ! ಈತನ ಕಾರ್ಯಗಳಿಂದಲೇ ಇವನು ನಿಜವಾದ ಚೆನ್ನಬಸವೇಶ್ವರನಲ್ಲವೆಂಬುದು ಕಂಡುಬರುವುದಿಲ್ಲವೇ ?

ನಿರ್ಭಾಗ್ಯರಾದ ಹಿಂದುಗಳೇ ! ನೀವು ಎಚ್ಚರದಿಂದಿರಬೇಕಾದ ಕಾಲವು ಬಂದೊದಗಿರುವುದು. ಆಲಸ್ಯರಹಿತರಾಗಿ ತೆರೆದ ಕಣ್ಣುಳ್ಳವರಾಗಿ ಹೊರಗಿನವರು ನಿಮ್ಮ ಮೇಲೆ ನಡಿಸುತ್ತಿರುವ ಅತ್ಯಾಚಾರಗಳ ಬಲೆಗೆ ಸಿಕ್ಕದಂತೆ ಜಾಗರೂಕರಾಗಿರಿ. ಚೆನ್ನಬಸವೇಶ್ವರನ ಕಾಲಜ್ಞಾನದಲ್ಲಿಯೇ ಅಂಗೈಯಲ್ಲಿ ಲಿಂಗವನ್ನು ತೋರುವವರೂ, ನಾಲ್ಕು ಭುಜಗಳುಳ್ಳವರೂ, ಎರಡು ಮೂರು ತಲೆಗಳುಳ್ಳವರೂ, ತಲೆಯಮೇಲೆ ಕೋಡುಳ್ಳವರೂ ಈ ಕಲಿಯುಗದಲ್ಲಿ ಬರುತ್ತಾರೆ; ಅವರ ಮಾತಿಗೆ ಮೋಸಹೋಗಬೇಡಿ ಎಂದು ಮುಂಚಾಗಿ ಹೇಳಿದೆ. ಆದುದರಿಂದ ನೀವೆಲ್ಲರೂ ಸಹೋದರಭಾವದಿಂದಿರುತ್ತ ಅನ್ಯರನ್ನು ದ್ವೇಷಿಸದೆ ನಿಮ್ಮ ಹಕ್ಕುಬಾಧ್ಯತೆಗಳನ್ನುಳಿಸಿಕೊಂಡು ದೃಢಕಾಯರಾಗಿ ಏಕಮತ್ಯದಿಂದ ಇದ್ದರೆ ಬೇರೆಯವರು ನಿಮಗೆ ಯಾವ ಉಪಹತಿಯನ್ನೂ ಮಾಡಲಾರರು. ಎಚ್ಚರಿಕೆ ! ಎಚ್ಚರಿಕೆ ! ಕೆ. ಪಿ.

ಶ್ರೀಮನ್ಮಹಾದಕ್ಷಿಣಕಾಶೀ ನಿಜಸಿಂಹಾಸನಾಧೀಶ ಚವಡಯ್ಯ ದಾನಪುರಸಂಸ್ಥಾನದ ಜಗದಾಚಾರ್ಯ ಶ್ರೀಸ್ವಾಮಿ ವಿರೂಪಾಕ್ಷ ಒಡೆಯರವರಿಂದ ಬರೆಯಲ್ಪಟ್ಟ ಲಿಂಗಾಂಗಿ ಮತದ ನಿಜತತ್ವದ ಸಾರಾಂಶವು.

(ಹಿಂದಿನಿಂದ ಮುಂದೆಸಾಗಿದ್ದು.)

“……ಪ್ರತೀಕ್ಷೇತ್ ಶಿಶೋರ್ಜನ್ಮ | ಸಂಸ್ಕಾರ್ಯಸ್ತನಯಂ ಜಾತಕರ್ಮಣಾಜನನಾತ್ಪರಂ | ಜಾತಂಕುಮಾರಂಸಂಪ್ರಾಪ್ಯಗುರುಣಾಕಾರಯೇತ್ ಬುಧಃ || ಪೂರ್ವನೇವವಿನಿರ್ದಿಷ್ಟಂಲಿಂಗಂಪಂಚಾಪ್ಯಕ್ಕೇ ಪೃಥಕ್” (ವೀರಶೈವಸದಾಚಾರಸಂಗ್ರಹ) ಲಿಂಗಾಂಗಿಗಳಲ್ಲಿ ವರ್ಣಭೇದಾದಿಗಳಿಲ್ಲದೆ ಹುಟ್ಟಿದಾಕ್ಷಣಕ್ಕೆ ಹೆಣ್ಣು ಅಥವ ಗಂಡುಶಿಶುವಿಗೆ ಲಿಂಗಧಾರಣಮಾಡಿ ಮುಂದೆ ದೀಕ್ಷಾಪೂಜಾದಿಗಳಲ್ಲಿಯೂ, ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಮಂತ್ರಗಳನ್ನು ಕಲಿಸಿ, ಮುಂದೆ ವಿದ್ಯಾಧ್ಯಯನಾಧ್ಯಾಪನ ಆಶ್ರಮಾದಿ ಸ್ವೀಕಾರಗಳಲ್ಲಿಯೂ ಸಮಾನಾಧಿಕಾರವನ್ನೇ ಹೇಳಿರುವರು. ಯಾಕೆಂದರೆ ಸೃಷ್ಟಿಯಲ್ಲಿ ಸ್ತ್ರೀ-ಪುರುಷರೀರ್ವರಿಗೂ ಈಶ್ವರನ ಪುತ್ರತ್ವಾಧಿಕಾರದ ಹಕ್ಕಿರುವದರಿಂದ, ಅವನ ಸಂಬಂಧ ಜ್ಞಾನಸಂಪಾದನೆಗೆ ಸ್ತ್ರೀ-ಪುರುಷರೀರ್ವರಿಗೂ ಸಮಾನ ಹಕ್ಕುದಾರರೆಂಬುವದನ್ನು ವೀರಶೈವಧರ್ಮದ ಪೂರ್ವಾಚಾರ್ಯರು ಅರಿತವರಾಗಿ ಇವತ್ತಿನವರೆಗೂ ತದನುಸಾರ ನಡೆಯುವಂತೆ ಶಾಸನವನ್ನು ಮಾಡಿರುವರು. “ಉದಾರಹೃದಯಾನಾಂತುವಸುಧೈವಕುಟುಂಬಕಂ” ಎಂಬ ಚರಿತ್ರವೇ ಆ ಪೂರ್ವಾಚಾರ್ಯರದಾಗಿರುವದು.

ಸೂತಕಗಳನಿಷೇಧ.

ವೀರಶೈವರು ಸದಾಪವಿತ್ರಲಿಂಗಧಾರಿಗಳಾಗಿರುವದರಿಂದ ಜನನ ಮರಣಸೂತಕಗಳ ಝುಂಝಾಟವು ಸರ್ವಥಾ ಅವರಿಗಿರುವದಿಲ್ಲ. ಯಾಕೆಂದರೆ, ಹುಟ್ಟಿದಾಕ್ಷಣಕ್ಕೆ ಶಿಶುವಿಗೆ ಲಿಂಗಧಾರಣವಿರುವದರಿಂದ ಅದು ಲಿಂಗೋತ್ಪತ್ತಿಯೆಂತಲೂ ಮೃತವಾದಾಕ್ಷಣಕ್ಕೆ ಪುನರ್ಜನ್ಮರಹಿತವಾದ ಶಿವಸಾಯುಜ್ಯಪ್ರಾಪ್ತಿಯೆಂತಲೂ ಭಾವಿಸಲ್ಪಟ್ಟಿದೆ. ಆದ್ದರಿಂದಲೇ ವೀರಶೈವರಲ್ಲಿ ಸೂತಕಶ್ರಾದ್ಧಾದಿಕರ್ಮಗಳಿಲ್ಲ. ಲಿಂಗಧಾರಿಯಾಗಿ ಮೃತನಾದವನಿಗೆ ಒಂದೇಜನ್ಮದಲ್ಲಿಯೇ ಶಿವಸಾನ್ನಿಧ್ಯವೆಂದು ಪುನರ್ಜನ್ಮರಹಿತತ್ವವನ್ನು ಹೇಳುವಲ್ಲಿ ಶ್ರಾದ್ಧಾದಿವಿಥ್ಯಾಡಂಬರಗಳನ್ನು ಮಾಡುವದ್ಯಾಕೆ ? ವೀರಶೈವರಿಗೆ ನಿಶ್ಚಿತವಾದ ವಾರ, ತಿಥಿ, ವ್ರತೋಪವಾಸಾದಿಗಳಿಲ್ಲ. ಯಾಕೆಂದರೆ, ನಿತ್ಯಶಿವಾನುಷ್ಠಾನಪರರಾದಿವರಿಗೆ ನಿತ್ಯಶಿವಯೋಗವೇ ಕಂಡುಬರುವದು. ಹಾಗೂ ಇತರ ಕರ್ಮಕಾಂಡಗಳ ಸ್ತ್ರೀಯರಂತೆ ವೀರಶೈವಸ್ತ್ರೀಯರಿಗೆ ರಜಸ್ವಲಾದಿ ಕಾಲಗಳಲ್ಲಿ ದೇವತಾರ್ಚನೆಯಿಲ್ಲದಿರಲು ಅವಕಾಶವಿಲ್ಲವಾದುದರಿಂದ ಸ್ವಚ್ಛಸ್ನಾನವಂಮಾಡಿ ಶುದ್ಧಬಟ್ಟೆಗಳನ್ನುಟ್ಟು ಲಿಂಗಾರ್ಚನೆಯನ್ನು ಮಾಡಬೇಕು. ಇದರಂತೆ ಪಾರಮೇಶ್ವರಾಗಮದಲ್ಲಿಯೂ ಹೇಳಲ್ಪಟ್ಟಿರುವದು. “ಶೈವಂದೇವಾರ್ಚನಂಯಸ್ಯಯಸ್ಯಚಾಗ್ನಿಪರಿಗ್ರಹಃ | ಬ್ರಹ್ಮಚಾರಿಯತೀನಾಂಚಶರೀರೇನಾಸ್ತಿಸೂತಕಂ || ಲಿಂಗಾರ್ಚನರತಾನಾರೀಸೂತಕೀವಾರಜಸ್ವಲಾ | ರವಿರಗ್ನಿರ್ಯಥಾವಾಯುಃ ಕೋಟಿಕೋಟಿಗುಣಃಶುಚಿಃ || ಜಾತಕೇಸೂತಕೇವಾಪಿನತ್ಯಾಜ್ಯಂ ಶಿವಪೂಜನಂ” (ಪಾರಮೇಶ್ವರಾಗಮ) “ಪವಿತ್ರತ್ವಾನ್ಮಹೇಶಸ್ಯ ಶಿವಸ್ಯಪ್ರತಿಪಾದನಾತ್ | ಪವಿತ್ರೀಕರಣಾತ್ ಪುಂಸಾಂಪವಿತ್ರಮಿತಿಕಥ್ಯತೇ” (ಸಿದ್ಧಾಂತಶಿಖಾಮಣಿಯಲ್ಲಿ) “ಸರ್ವೇಪಿವಂದನೀಯಹಿವಿಧವಾಃ ಶುಚಿಪ್ಮೇನುಖಾಃ || ಯಸ್ಯಾಸ್ತಿಭಕ್ತಿರೀಶಾನಿ” “ವೀರಶೈವಮತಾಶ್ರಯೇ ಭಕ್ತಿಮಾತ್ರಪವಿತ್ರಾಹಿಸರ್ವಏವಾಧಿಕಾರಿಣಃ” ಪವಿತ್ರವಾದ ಲಿಂಗವನ್ನು ಅಹರ್ನಿಶದಲ್ಲಿ ಧರಿಸಿ ತದ್ಧ್ಯಾನಪರರಾಗಿರುವುದರಿಂದ ಅವರ ಮಾನಸಿಕಸ್ಥಿತಿಗೆ ಯಾವ ಕಲಂಕವೂ ಬರಲು ಆಸ್ಪದವಿಲ್ಲ. ಇನ್ನು ಶಾರೀರಿಕಶುದ್ಧಿಯಸಲುವಾಗಿ ಸ್ವಚ್ಛಸ್ನಾನವನ್ನು ಆಯಾಕಾಲಕ್ಕೆಮಾಡಿ ಶುದ್ಧವಸ್ತ್ರಗಳನ್ನು ಧರಿಸುವದು ಸರ್ವರಿಗೂ ವಿಹಿತವೇ ಸರಿ.

ಲಿಂಗಧಾರಣಕ್ಕರ್ಹರು ಯಾರು ?

“ಜೀವನ್ಮುಕ್ತಪ್ರಾಣಲಿಂಗಾನ್ವೇತಿಚೇನ್ನೋಪಾಸಾತ್ರೈವಿದ್ಯಾದ್ಯಾಶ್ರಿತತ್ವಾದಿಹತನ್ಯೋಗಾತ್” ಎಂಬೀಬ್ರಹ್ಮಸೂತ್ರಕ್ಕೆ ಭಾಷ್ಯಬರೆಯುವಾಗ್ಗೆ ಶ್ರೀಕರಾಚಾರ್ಯರು “ಯೋವಾಮಹಸಾರ್ಪಿತಲಿಂಗಮೇಕಂಪರಾತ್ಪರಂ ಧಾರಯತೆಸತತಂವಿಪ್ರಃಕ್ಷತ್ರಿಯೋವಾತಸ್ಯೈವನಲ್ಲಭ್ಯಃ ಪರಮೇಶ್ವರೋಸೌ ನಿರಂಜನಪರಮಂಸಾಮ್ಯಮುಪೈತಿದಿವ್ಯಂ” ಎಂಬದಾಗಿ ಸಾಮುಜ್ಯನೀಸ್ಯಯ ಶಾಖೆಯಾದ ಸದಾನಂದೋಪನಿಷತ್ತಿನ ಈ ವಾಕ್ಯವನ್ನು ಪ್ರಮಾಣಹಿಡಿದು ತಮ್ಮ ಭಾಷ್ಯದಲ್ಲಿ ವಿಪ್ರ ಕ್ಷತ್ರಿಯಾದಿಗಳೆಲ್ಲರೂ ಲಿಂಗಧಾರಣಕ್ಕಧಿಕಾರಿಗಳೆಂದು ತೋರಿಸಿರುವರು. ಇದಲ್ಲದೆ “ಸ್ತ್ರೀಯೋಬಾಲಾಸ್ತಥಾವೃದ್ಧಾಃ ಖಂಜಾಃ | ಕುಬ್ಜಾಂಧಪುಂಗವಃ || ತಲ್ಲಿಂಗಧಾರಣಾದೇವಯದ್ರೂಪಾಪವತೆ ಶಿವೆ | ನಸ್ಪೃಷ್ಟಿರ್ನರಜೋದೋಷೋನಸ್ತ್ರೀಬಾಲಾದಿಕಲ್ಪನಾ || ನಜನ್ಮಮರಣಾಶೌಚಂಸ್ನಾನಾದಿವಿಧಿರ್ಯಥಾ | ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಯೇಚಾನ್ಯಜಾತಯಃ ಲಿಂಗಧಾರಣಮಾತ್ರೇಣಶಿವಪಾವನಸಂಶಯಃ ಯಸ್ಯಾಸ್ತಿಭಕ್ತಿರೀಶಾನಿ ವೀರಶೈವಮತಾಶ್ರಯೇ || ಭಕ್ತಿಮಾತ್ರಪವಿತ್ರಾಹಿ ಸರ್ವಏವಾಧಿಕಾರಿಣಃ” (ಪಾರಮೇಶ್ವರಾಗಮದಲ್ಲಿ) ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಇತರ ಎಲ್ಲ ಜಾತಿಯವರು ಲಿಂಗಧಾರಣಕ್ಕೆ ಅರ್ಹರಿದ್ದು ಅದರಲ್ಲಿ ಸ್ತ್ರೀ-ಬಾಲಕ-ವೃದ್ಧ ಕುರುಡ ಕುಂಟ ಮೂಕ ಬೇಕಾದವರೇ ಇರಲಿ ಶಿವಲಿಂಗಧಾರಣಮಾಡಿಕೊಳ್ಳಬೇಕೆಂಬ ಅಭಿಲಾಷೆಯಾರಿಗೆ ಇರುವುದೋ ಅವರೆಲ್ಲರೂ ಲಿಂಗಧಾರಣಕ್ಕಧಿಕಾರಿಗಳೆಂದು ಆಗಮಗಳಲ್ಲಿ ಹೇಳಿರುವದರಿಂದ, ಲಿಂಗಾಂಗಿಧರ್ಮದ ಆಚಾರವಿಚಾರಕ್ಕೆ ಅನುಕೂಲವಾಗಿ ಮದ್ಯಮಾಂಸಾದಿ ದುಷ್ಟಾಹಾರಗಳನ್ನು ಸೇವಿಸದೆ ಯಾರು ಇರುವರೋ ಅವರಿಗೆ ಲಿಂಗಧಾರಣಮಾಡಲು ಯಾವ ಶಾಸ್ತ್ರಪ್ರತಿಬಂಧವೂ ಇಲ್ಲ. ಅರ್ಥಾತ್ ನಿಸ್ಸಂದೇಹವಾಗಿ ಅವರನ್ನು ವೀರಶೈವರನ್ನಾಗಿಮಾಡಿಕೊಳ್ಳತಕ್ಕದ್ದು. ಧರ್ಮಸಂಬಂಧವನ್ನು ಬೆಳೆಸುವದೇ ಮನುಷ್ಯನ ಮುಖ್ಯಕರ್ತವ್ಯವಾಗಿರುವದರಿಂದ ಯಾರೂ ಈ ವಿಷಯದಲ್ಲಿ ಹಿಂಜರಿಯದೆ ಅಲಕ್ಷ್ಯಮಾಡದೇ ಮುಂದಾಳುಗಳಾಗುವದೇ ವಿಹಿತವು.

ಇನ್ನು ಪ್ರಮಾದವಶಾತ್ ಈ ಲಿಂಗವು ಎಲ್ಲಿಯಾದರೂ ತಪ್ಪಿಹೋದಲ್ಲಿ ಏನುಮಾಡತಕ್ಕದ್ದೆಂದು ಪ್ರಶ್ನೆಬಂದಾಗ್ಗೆ, ಶಾಸ್ತ್ರವು ಯಾವಾಗಲೂ ನಿಯಮಗಳನ್ನು ಮಾಡುವದಾದ್ದರಿಂದ ಲಿಂಗತ್ಯಾಗವಾದಲ್ಲಿ ಪ್ರಾಣತ್ಯಾಗವೇ ತಜಸೆಂದು ಹೇಳಿರುವದು. ಯಾತಕಂದರೆ, ಧರ್ಮವೂ, ಲಿಂಗವೂ ನಿನ್ನ ಪ್ರಾಣಕ್ಕಿಂತಲೂ ಹೆಚ್ಚಿನದಾದ್ದರಿಂದ ಪ್ರಾಣತ್ಯಾಗವೇ ವಿಹಿತವೆಂದು ಮೊದಲು ವಿಧಾನಮಾಡುವದು. ಹ್ಯಾಗಂದರೆ,— “ಶಕ್ತೇತಸ್ಮಿನ್ನಭುಂಜೀತ ಪ್ರಾಣಾನೇವಪರಿತ್ಯಜೇತ್” (ಸದಾನಂದೋಪನಿಷತ್ತಿನಲ್ಲಿ) “ನಷ್ಟೇಇಷ್ಟಪ್ರಾಣಲಿಂಗಂತ್ವಂಯಯಾವಜ್ಜೀವಂಪ್ರತಿಜ್ಞಯಾ | ಪುನರ್ಧರ್ವೋನಶೇನತಸ್ಯವಿದ್ಯತೇನಮಾತ್ಮಯೋನಿಷು” (ಶಂಕರಸಂಹಿತೆಯಲ್ಲಿ) “ಕದಾಚಿತ್ಕ್ಮತ್ರಚಿದ್ವಾಪಿನ ವಿಯೋಜಯದೇಹತಃ | ಮುನ್ನಿಪ್ರಮಾದಾತ್ಪತಿತೇಲಿಂಗಂ ದೇಹಾನ್ಮಹೀತಲೇ | ಪ್ರಾಣಾನ್ವಿಮುಂಚಸಹಸಾಪ್ರಾಪ್ತಯೇ ಮೋಕ್ಷಸಂಪದಾಂ |” (ಸಿದ್ಧಾಂತಶಿಖಾಮಣಿಯಲ್ಲಿ) ಎಲ್ಲಿಯಾದರೂ ಪ್ರಮಾದದಿಂದಲಾದರೂ ದೇಹದಿಂದ ಲಿಂಗತ್ಯಾಗವಾದಲ್ಲಿ ಪ್ರಾಣವನ್ನೇ ಬಿಟ್ಟುಬಿಡೆಂದು ವಿಧಾಯಕಮಾಡುವಶ್ಲೋಕಗಳನ್ನು ಶ್ರೀಕರಾಚಾರ್ಯರು ಧರ್ಮದ ಅತಿ ಬಂಧನಮಾಡಲುದ್ದಿಶ್ಯ ಪ್ರಮಾಣವನ್ನಾಗಿ ಅಂಗೀಕರಿಸಿ ಬಹಳ ಉತ್ತಮರೀತಿ ಪ್ರತಿಪಾದನಮಾಡಿರುವರು. ಇನ್ನು ಇದು ಧರ್ಮಬಂಧನದ ಮುಖ್ಯ ನಿಯಮವಾಗಿರುವದು. ಆದರೆ ದೇಶಕಾಲಸ್ಥಿತಿಗಳ ವಿಚಾರಮಾಡಿ ವಿಧಾನಮಾಡುವದೊಂದು ಶಾಸ್ತ್ರಪದ್ಧತಿಯು ಬೇರಿರುವದು.

ಅದು ಹ್ಯಾಗಂದರೆ,—ಮುಖ್ಯವಾಗಿ ಸ್ತ್ರೀಯರಿಗೆ ಒಬ್ಬನೇ ಪತಿ ಎಂದು ಎಲ್ಲಾ ಶಾಸ್ತ್ರವು ವಿಧಾಯಕಮಾಡಿದ್ದರೂ ಕೆಲವು ಕಾರಣಗಳವಶಾತ್ ಪತಿ ನಷ್ಟವಾದಲ್ಲಿ ಪುನರ್ವಿವಾಹಮಾಡಿಕೊಳ್ಳಲು ಯಾವ ಸಂದೇಹವೂ ಇಲ್ಲೆಂದು ಅದೇ ಶಾಸ್ತ್ರವೇ ಹ್ಯಾಗೆ ಪ್ರತಿಪಾದಿಸುವದೋ ಹಾಗೆ ದೈವವಶಾತ್ ಅಥವಾ ಅಜ್ಞಾನ ವಿಪತ್ತು ಪ್ರಮಾದವಶಾತ್ ಲಿಂಗವನ್ನು ಕಳಕೊಂಡಲ್ಲಿ ಸಾಮಾನ್ಯ ವಿಶೇಷಾಶ್ರಮಿಗಳು ಯಥೋಕ್ತ ವಿಧಿಯಂತೆ ಗುರುಹಸ್ತದಿಂದ ಪುನರ್ಲಿಂಗಧಾರಣೆಯನ್ನು ಮಾಡಿಕೊಳ್ಳಲು ಯಾವ ಅಡ್ಡಿಯೂ ಇಲ್ಲವೆಂತಲು ಹಾಗೂ ಸರ್ವಸಂಗ ಪರಿತ್ಯಾಗಿಯಾಗಿ ಆ ಲಿಂಗವೇ ನಾನೆಂಬ ಸ್ವರೂಪವನ್ನು ತಾಳಿದ ಧರ್ಮಾಚಾರ್ಯರೆನಿಸಿದ ಪಟ್ಟೆಚರಾಧಿಪತಿಗಳೆಂಬ ನಿರಾಭಾರಿಗಳು ಪುನರ್ಲಿಂಗವನ್ನು ಧರಿಸದೇ ಅಥವಾ ಧರಿಸಿಯಾದರೂ ಆ ಲಿಂಗಸ್ವರೂಪನೇ ನಾನೆಂಬ ಸೋಹಂಭಾವದಿಂದ ಏಕಧ್ಯೇಯನಾಗಿ ಜೀವಿಸಲು ಯಾವ ಪ್ರತಿಬಂಧವಿಲ್ಲೆಂತಲೂ ಶಾಸ್ತ್ರವು ಉಪದೇಶಮಾಡುವದು. “ಪ್ರಮಾದಾತ್ಪತಿತೇ ಲಿಂಗೇನಷ್ಟೇದಗ್ಧೇಹೃತೇಪಿವಾ | ವಿಸರ್ಗತೇತಃ ಪಿಠಾದ್ಯೇನಕೇನಚಿದೂಷಿತೇ || ಗುರುಪಾದಾಂಬುಜಂ ಸ್ಮೃತ್ವಾಜಪ್ತ್ವಾಘೋರಂ ತದಾಜ್ಞಯಾ | ತಲ್ಲಿಂಗಮೇವವಾನ್ಯದ್ವಾಧಾರಯೇತ್ ಪೂಜಯೇತ್ಸುನಃ | ಪ್ರಮಾದಾನ್ನಿಯಮೇಲುಪ್ತೇಮೂಲ ಪಂಚಾಕ್ಷರೀಂಜಪೇತ್” (ಸುಪ್ರಭೇಧಾಗಮದಲ್ಲಿ)

“ಏತಾದೃಶನಿರಾಭಾರವೀರಶೈವಸ್ಯಕುತ್ರಚಿತ್ | ಕಾಂತಾರೇತ್ವಿಷ್ಟಲಿಂಗಸ್ಯವಿಯೋಗೇ ಸತಿದೈವತಃ || ನಪುನರ್ಧಾರಯೇಲ್ಲಿಂಗಂ ವೀರಶೈವ ಇವಸ್ಯಕಂ | ಪೂರ್ವಾಚಾರ್ಯೈರ್ದತ್ತಲಿಂಗಂ ಮನಾಂಗಸ್ಪರ್ಶಮಾತ್ರತಃ | ಸೋಹಂಭಾವೇಸ್ಯೈಕ್ಯಭೂತಂಮಯಾಸಾರ್ಧಂನಸಂಶಯಃ || ಇತಿನಿಶ್ಚಿತ್ಯಮನಸಾ ಸಭೇದತ್ವಾಂಗಲಿಂಗಯೋಃ | ತಸ್ಮಾಲ್ಲಿಂಗಂಗತಂ ವಾಪಿಜಾಹಮೇವೇಷ್ಟಲಿಂಗತಃ” (ವೀರಶೈವ ಪ್ರಕಾಶಿಕದಲ್ಲಿ) ಈರೀತಿ ಮೇಲೆ ತೋರಿಸಿದ ಪ್ರಮಾಣಗಳಿಂದ ಸಾಮಾನ್ಯ ವಿಶೇಷನಿರಾಭಾರಗಳೆಂಬ ಆಶ್ರಮತ್ರಯಗಳಲ್ಲಿ ಯಾವ ಆಶ್ರಮಿಯಾದರೂ ಪ್ರಮಾದವಶಾತ್ ಲಿಂಗವನ್ನು ಕಳಕೊಂಡನೆಂದರೆ ಅವನು ಪುನಃ ಲಿಂಗಧಾರಣೆಯನ್ನು ಮಾಡಿಕೊಂಡು ಲಿಂಗದಲ್ಲಿ ಅನನ್ಯವಾದ ಪವಿತ್ರಭಕ್ತಿಯಿಂದಿದ್ದು ಜೀವನವನ್ನು ಮಾಡಿ ಅಂತ್ಯಮ ಶಿವಜೀವೈಕ್ಯವನ್ನು ಸಂಪಾದಿಸತಕ್ಕದ್ದು. ಶಾಸ್ತ್ರವೇನೋ ಒಂದುವೇಳೆ ಲಿಂಗತ್ಯಾಗವಾದಲ್ಲಿ ಪ್ರಾಣವನ್ನೇ ತಜಸೆಂದು ಹೇಳಿರುವದು. ಆದರೆ ವಿಚಾರಾಂತ್ಯದಲ್ಲಿ ಹೀಗೆ ಕಂಡುಬರುತ್ತದೆ—ಲಿಂಗವನ್ನು ಕಳಕೊಂಡದ್ದಕ್ಕಿಂತಲೂ ದೇಹದಿಂದ ಆತ್ಮವನ್ನು ಕಳಕೊಳ್ಳುವದು ಮಹಾಪಾಪ. ಯಾಕಂದರೆ ಆತ್ಮಸುಖಕ್ಕಾಗಿಯೇ ಬಾಹ್ಯ ಇಷ್ಟಲಿಂಗಾದಿಗಳಿದ್ದು ಆತ್ಮಸುಖವಂತೂ ದೂರೇ ಉಳಿದು ಪ್ರತಿಯಾಗಿ ದೇಹನಾಶಕ್ಕೆ ಈ ಲಿಂಗವೇ ಕಾರಣವಾದಂತಾಯಿತು. ಅಂದಮೇಲೆ ಲಿಂಗಕಳಕೊಂಡ ಪಾಪ ಒಂದು ಆತ್ಮಹತ್ಯಮಾಡಿಕೊಂಡ ಪಾಪ ಇನ್ನೊಂದು ಹೀಗೆ ಉಭಯ ಪಾಪಗಳಿಗೆ ಭಾಗಿಯಾಗಬೇಕಾದ್ದರಿಂದ ಪ್ರಾಣಹತ್ಯಮಾಡಿಕೊಳ್ಳದೇ ತದೇಕಧ್ಯಾನಪೂರ್ವನಾಗಿ ಎರಡನೇ ಲಿಂಗವನ್ನು ಧರಿಸಿಕೊಳ್ಳುವಲ್ಲಿ ಯಾವ ಪ್ರತಿಬಂಧವೂ ಇಲ್ಲ. ಹಾಗೂ ಅವನ ಪೂಜತೆಯು ಯಾವ ರೀತಿಯಿಂದಲೂ ಕಡಿಮೆಯಾಗಲಾರದು. ಆದರೆ ಆದಷ್ಟು ಕಾಳಜಿಯಿಂದ ಪ್ರಾಣವತ್ ಲಿಂಗವನ್ನು ಸಂರಕ್ಷಿಸಿಕೊಂಡು ಲಿಂಗೈಕನಿಷ್ಠನಾಗಿರುವದು ಪ್ರತಿ ಒಬ್ಬ ಲಿಂಗಾಂಗಿಯ ಆದ್ಯ ಕರ್ತವ್ಯವಾಗಿದೆ.

ಅಜ್ಜಯ್ಯಶಾಸ್ತ್ರಿ, ಚವುಡಯ್ಯದಾನಪುರಸಂಸ್ಥಾನದ ಕಾರಭಾರಿ,
ಜಿಲ್ಲಾ ಧಾರವಾಡ ತಾಲ್ಲೂಕು ರಾಣಿಬೆನ್ನೂರು.

ಮೊದಲನೆಯ ಪ್ರಾಂತೀಕವೀರಶೈವತರುಣಸಮ್ಮೇಳನ, ಬಳ್ಳಾರಿ.

ಇದೇ ಮೇ ತಿಂಗಳು ತಾ|| 20-21 ರಲ್ಲಿ ಬಳ್ಳಾರಿಯಲ್ಲಿ ವೀರಶೈವತರುಣಸಂಘದ ವತಿಯಿಂದ “ಮೊದಲನೆಯ ಪ್ರಾಂತೀಕವೀರಶೈವತರುಣಸಮ್ಮೇಲಣವು” ಮ|| ರಾ|| ರಾವ್‌ಸಾಹೇಬ್ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್.ಎಲ್.ಬಿ., (ವಿಜಾಪುರ) ಇವರ ಅಧ್ಯಕ್ಷತೆ ಕೆಳಗೆ ಸಭೆ ನಡೆದು ಈ ಕೆಳಗೆ ಕಂಡ ಪ್ರಕಾರ ಸರ್ವಾನುಮತದಿಂದ ಠರಾವುಗಳು ನಿಯಮಿಸಲ್ಪಟ್ಟವು. ಈ ಸಮ್ಮೇಳನಕ್ಕೆ ಅನೇಕ ಮಹನೀಯರುಗಳು ದೂರ ದೂರ ಪ್ರಾಂತ್ಯಗಳಿಂದ ಬಂದು ಸಮ್ಮೇಳನವನ್ನು ಅಲಂಕರಿಸಿದ್ದರು. ಮತ್ತು ಮಿ|| ರಾವ್ ಬಹದ್ದೂರು, ಎಸ್. ಟಿ. ತಂಬಳಿ, ಬಿ.ಎ., ಎಲ್‌ಎಲ್.ಬಿ., ಯವರೂ, ಮಿ|| ಬೆಳಗಾಂವ್ ಚಿಕ್ಕೋಡಿ, ಬಿ.ಎ., ಎಲ್‌ಎಲ್.ಬಿ., ಯವರೂ, ಹರಿಹರದ ಸತ್ಯಾಗ್ರಹಸ್ಥಾಪಕ, ಮಂಜಪ್ಪ ಹರ್ಡೇಕರ್‌ರವರೂ, ಹಾವೇರಿ ಶಿವಮೂರ್ತಿಸ್ವಾಮಿ, ಹಿರೇಮಠ ಬಿ.ಎ., ಎಲ್‌ಎಲ್.ಬಿ., ಯವರು ಮೊದಲಾದ ಇನ್ನೂ ಅನೇಕ ಮಹನೀಯರು ಸಮ್ಮೇಳನವನ್ನು ಅಲಂಕರಿಸಿದ್ದರು. ಈ ಸಮ್ಮೇಳನದಲ್ಲಿ ಸ್ವಾಗತಮಂಡಲಿಯ ಅಧ್ಯಕ್ಷರ ಭಾಷಣಗಳು ನಡೆದವು. ಈ ಸಂಘದ ಸೆಕ್ರೆಟರಿಯು ಹಿಂದಿನವರ್ಷದ ರಿಪೋರ್ಟನ್ನು ಓದಿದರು.

ಠರಾವುಗಳು.

(1) ನಮ್ಮ ಸಮಾಜದ ಪ್ರಸಿದ್ಧಪಂಡಿತರಾದ ತೆಲಗಿಮಠದ ವೇ|| ಚಂದ್ರಶೇಖರಶಾಸ್ತ್ರಿಗಳ ಹಾಗೂ, ನಮ್ಮ ಸಮಾಜಕ್ಕೆ ಸಾವಿರಾರು ರೂಪಾಯಿ ಸಹಾಯಮಾಡಿದ ದಾನವೀರ ಕಬ್ಬಳ್ಳಿ ಚೆನ್ನಬಸಪ್ಪನವರ ಅಕಾಲಮರಣಕ್ಕಾಗಿ ಈ ಸಮ್ಮೇಳನವು ತನಗಾದ ದುಃಖವನ್ನು ಪ್ರದರ್ಶಿಸುತ್ತದೆ. (೨) ನಮ್ಮ ವೀರಶೈವತರುಣಬಂಧುಗಳಾದ ಡಾ|| ಮಂಜುನಾಥರು, ಮೈಸೂರು ಇವರು ವಿದೇಶದಲ್ಲಿ ದೊಡ್ಡ ಪದವಿಯನ್ನು ಪಡೆದುದಕ್ಕಾಗಿಯೂ, ಶ್ರೀಯುತ ಮುಪ್ಪಣ್ಣ, ಇವರು ಎಂ. ಎಸ್. ಸಿ. ಪದವಿಯನ್ನು ಪಡೆದುದಕ್ಕಾಗಿಯೂ, ಈ ಸಂಮೇಳನವು ತನಗಾದ ಸಂತೋಷವನ್ನು ಪ್ರದರ್ಶಿಸುತ್ತದೆ. (೩) ದೀನದಾರ ಸಿದ್ಧಿಕನೆಂಬುವ ಮುಸಲ್ಮಾನ್ನೈಹಸ್ಥನು ತನ್ನ ಧರ್ಮವನ್ನು ಹಬ್ಬಿಸುವ ಪ್ರಯತ್ನದಲ್ಲಿ ವೀರಶೈವಸಮಾಜದ ಪೂಜ್ಯವಿಭೂತಿಗಳಾದ ಶ್ರೀ ಚೆನ್ನಬಸವೇಶ್ವರರ ಅವತಾರವೇ ತಾನೆಂದು ಹೇಳುತ್ತಾ ನಮ್ಮ ಧರ್ಮವನ್ನು ಅಪಹಾಸ್ಯಮಾಡುವ ದುಷ್ಕೃತಿಯನ್ನು ಈ ಸಮ್ಮೇಳನವು ಕಡುತರವಾಗಿ ನಿಷೇಧಿಸುತ್ತದಲ್ಲದೆ ಸದರಿ ಸಿದ್ದೀಕನು ಮತ್ತು ಅವನ ಕೆಲವು ಸಂಗಡಿಗರು ಕೂಡಿ ತಮ್ಮ ದುಷ್ಪ್ರಯತ್ನದ ಸಫಲಕ್ಕಾಗಿ ಶ್ರೀ ಚೆನ್ನಬಸವೇಶ್ವರರ ಪವಿತ್ರನಾಮದಿಂದ ಒಂದು ವರ್ತಮಾನಪತ್ರವನ್ನು ತುಮಕೂರಿನಲ್ಲಿ ತೆಗೆಯುತ್ತಿದ್ದು, ಅದರಮೂಲಕ ಅಸತ್ಯಸಂಗತಿಗಳ ಪ್ರಸಾರ ಮತ್ತು ನಮ್ಮ ಧರ್ಮತತ್ವಗಳ ವಿಪರ್ಯಾಸಮಾಡಿ ಧರ್ಮದವರ ನಡುವೆ ಅಸಂತೋಷ ಹುಟ್ಟಿಸುತ್ತಿರುವುದರಿಂದ ಆ ಪ್ರಯತ್ನವನ್ನು ಕೂಡಲೇ ನಿಲ್ಲಿಸಲಿಕ್ಕೆ ತಕ್ಕ ಏರ್ಪಾಟು ಆಗಬೇಕೆಂದು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರನ್ನು ಈ ಸಮ್ಮೇಳನವು ಪ್ರಾರ್ಥಿಸುತ್ತದೆ. (4) ಶುದ್ಧ ಕನ್ನಡಜಿಲ್ಲೆಯಾದ ಬಳ್ಳಾರಿಯು ಆಂಧ್ರವಿಶ್ವವಿದ್ಯಾಲಯಕ್ಕೆ ಸೇರುವುದು ಅನ್ಯಾಯವಾಗಿರುತ್ತದಾದ ಕಾರಣ ಕರ್ನಾಟಕ ವಿಶ್ವವಿದ್ಯಾಲಯವು ಸ್ಥಾಪನೆಯಾಗುವವರೆಗೂ ಬಳ್ಳಾರಿಯನ್ನು ಪುನಃ ಮದ್ರಾಸ್ ಯೂನಿವರ್ಸಿಟಿಗೇನೇ ಸೇರಿಸಬೇಕಾಗಿ ಈ ಸಮ್ಮೇಳನವು ಮದ್ರಾಸ್ ಸರ್ಕಾರದವರನ್ನು ಬೇಡಿಕೊಳ್ಳುತ್ತದೆ. (5) ಕರ್ನಾಟಕದ ಏಕೀಕರಣಪ್ರಯತ್ನಕ್ಕಾಗಿ ಸರ್ವ ವೀರಶೈವರು ಬದ್ಧಕಂಕಣರಾಗುವುದು ಪರಮಾವಶ್ಯಕವೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ. (6) ವೀರಶೈವಸಮಾಜದೇಳ್ಗೆಗೆ ವೀರಶೈವಧರ್ಮಗ್ರಂಥಪ್ರಸಾರವಾಗುವುದು ಪರಮಾವಶ್ಯಕವಾಗಿರುವುದರಿಂದ ಈ ಬಗ್ಗೆ ಸರ್ವವೀರಶೈವಪಂಡಿತರೂ, ಪದವೀಧರರೂ ಪ್ರಯತ್ನಮಾಡಬೇಕು. ಮತ್ತು ವೀರಶೈವರಲ್ಲಿ ಪರಮಪೂಜ್ಯವಿಭೂತಿಗಳಾದ ಪುರಾತನ ಶಿವಶರಣರ ವಚನಗಳನ್ನು ಸರ್ವಾಂಗಸುಂದರವಾದ ಪುಸ್ತಕರೂಪವಾಗಿ ಪ್ರಕಟಿಸಿ ವೀರಶೈವವಾಙ್ಮಯಕ್ಕೂ, ತನ್ಮೂಲಕ ಕನ್ನಡಭಾಷೆಗೂ ಮಹದುಪಕಾರವನ್ನು ಮಾಡಿದ ರಾ|| ಸಾ|| ಪಿ. ಜಿ. ಹಳಕಟ್ಟಿಯವರನ್ನು ಈ ಸಮ್ಮೇಳನವು ಅಭಿನಂದಿಸುತ್ತದಲ್ಲದೆ, ಸದರಿ ವಚನಶಾಸ್ತ್ರವನ್ನು ಮತ್ತು ಶಿವಾನುಭವತ್ರೈಮಾಸಿಕವನ್ನು ಪ್ರತಿಯೊಂದು ವೀರಶೈವಸಂಸ್ಥೆಗೆ ತರಿಸಬೇಕಾಗಿ ಈ ಸಮ್ಮೇಳನವು ಸೂಚಿಸುತ್ತದೆ. (7) ಶ್ರೀ ಶಿರಸಂಗೀಕರಫಂಡಿನ ಪ್ರಯೋಜನವು ಬರೀ ಮುಂಬೈ ಪ್ರಾಂತ್ಯಕ್ಕಲ್ಲದೆ ಪ್ರತಿಯೊಂದು ಪ್ರಾಂತ್ಯಕ್ಕಾಗಬೇಕಾದುದು ನ್ಯಾಯವಾಗಿದ್ದು ಆ ಬಗ್ಗೆ ಮಾಡಬೇಕಾದ ಪ್ರಯತ್ನಗಳನ್ನು ತೀವ್ರವಾಗಿ ಕೈಕೊಳ್ಳಬೇಕಾಗಿ ಈ ಸಮ್ಮೇಳನವು ಸರ್ವವೀರಶೈವರನ್ನು ಪ್ರಾರ್ಥಿಸುತ್ತದೆ. (8) ಬಳ್ಳಾರಿಯಲ್ಲಿ ಮದ್ರಾಸ್‌ವೀರಶೈವವಿದ್ಯಾವರ್ಧಕಸಂಘದವರಿಂದ ಸ್ಥಾಪಿತವಾದ ವೀರಶೈವಪ್ರಾಥಮಿಕಸ್ಕೂಲನ್ನು ಶೀಘ್ರವಾಗಿ ಪ್ರೌಢಸ್ಕೂಲನ್ನಾಗಿ ಮಾಡುವುದು ಪರಮಾವಶ್ಯಕವೆಂದು ಈ ಸಮ್ಮೇಳನವು ಮೇಲ್ಕಂಡ ಸಂಘದವರಿಗೆ ಸೂಚಿಸುತ್ತದೆ. (9) ಅಖಿಲಭಾರತೀಯ ವೀರಶೈವತರುಣಸಮ್ಮೇಳನದಲ್ಲಿ ತೀರ್ಮಾನವಾದಪ್ರಕಾರ ಈ ಸಮ್ಮೇಳನವು ಕೂಡ ವೀರಶೈವಸಮಾಜದ ಸಾಂಪತ್ತಿಕ ಅಭಿವೃದ್ಧಿಗಾಗಿ ಕೈನೂಲು ಕೈಮಗ್ಗಗಳಿಂದಾದ ಬಟ್ಟೆಗಳನ್ನೇ ಧರಿಸಬೇಕೆಂದು ವೀರಶೈವಸಮಾಜದವರಿಗೆ ಸೂಚಿಸುತ್ತದೆ. (10) ಗೋಸಂರಕ್ಷಣೆಯು ಆರ್ಯಸನಾತನಧರ್ಮದ ಮುಖ್ಯಲಕ್ಷಣವಾಗಿರುವುದರಿಂದ ಆ ಬಗ್ಗೆ ಮಾಡಬೇಕಾದ ಏರ್ಪಾಟುಗಳನ್ನು ಮಾಡುವುದಕ್ಕಾಗಿ ಈ ಸಮ್ಮೇಳನವು ಸರ್ವ ಪ್ರಭುತ್ವದವರನ್ನೂ ಪ್ರಾರ್ಥಿಸುತ್ತದೆ. (11) ಶ್ರೀಶೈಲ ಕ್ಷೇತ್ರದ ಧರ್ಮಾಧಿಪತ್ಯವನ್ನು ಪುನಃ ಸಂಪಾದಿಸಿಕೊಳ್ಳಲು ಸಮಾಜಹಿತಕ್ಕಾಗಿ ಪ್ರಯತ್ನಪಡುತ್ತಿರುವ ಶ್ರೀ ಗಿರಿರಾಜಸೂರ್ಯಸಿಂಹಾಸನದ ಜಗದ್ಗುರು ಚರಪಟ್ಟಾಧ್ಯಕ್ಷ ವೀರಭಿಕ್ಷಾವೃತ್ತಿ ಮಹಾಸ್ವಾಮಿಗಳವರಿಗೆ ಈ ಸಂಮೇಳನವು ವಂದನೆಗಳನ್ನರ್ಪಿಸುತ್ತದಲ್ಲದೆ ಶ್ರೀಗಳವರ ಪ್ರಯತ್ನವು ಶೀಘ್ರವಾಗಿ ಕೊನೆಸಾಗುವಂತೆ ಸರ್ವರೂ ಪ್ರಯತ್ನಿಸಬೇಕಾಗಿ ಈ ಸಭೆಯು ಸೂಚಿಸುತ್ತದೆ. (12) ಸ್ತ್ರೀವಿದ್ಯಾಭ್ಯಾಸವು ನಮ್ಮ ಸಮಾಜದಲ್ಲಿ ಹಿಂದುಳಿದಿರುವುದರಿಂದ ಇದನ್ನು ಸಾಧ್ಯವಾದಮಟ್ಟಿಗೂ ಪ್ರಚಾರಕ್ಕೆ ತರಬೇಕೆಂದು ಸರ್ವ ವೀರಶೈವರಿಗೂ ಈ ಸಂಮೇಳನವು ಸೂಚಿಸುತ್ತದೆ. (13) ವರದಕ್ಷಿಣೆ, ಕನ್ಯಾಶುಲ್ಕ, ಬಾಲ್ಯವಿವಾಹ, ದುಂದುವೆಚ್ಚ ಮುಂತಾದ ಅನಿಷ್ಟ ಮತ್ತು ಸಮಾಜಘಾತಕ ಪದ್ಧತಿಗಳು ವೀರಶೈವಸಮಾಜದಲ್ಲಿ ತಲೆದೋರಿ ಸಮಾಜದ ನೈತಿಕ ವಾತಾವರಣವನ್ನು ಕೆಡಿಸುತ್ತಿರುವುದರಿಂದ, ಅವುಗಳನ್ನು ಈ ಸಂಮೇಳನವು ಕಡುತರವಾಗಿ ನಿಷೇಧಿಸುತ್ತದಲ್ಲದೆ, ತನ್ನಿವಾರಣೆಯ ಬಗ್ಗೆ ಎಲ್ಲಾ ವೀರಶೈವರೂ ಪ್ರಯತ್ನಪಡಬೇಕಾಗಿ ಸೂಚಿಸುತ್ತದೆ. (14) ಶ್ರೀಮತ್ಪಂಚಾಚಾರ್ಯ ಜಗದ್ಗುರುಗಳ ಮತ್ತು ಶ್ರೀ ಬಸವೇಶ್ವರಾದಿ ಶಿವಶರಣರ ಹಾಗೂ ತದಿತರ ವೀರಶೈವವಿಭೂತಿಗಳ ಭಾವಚಿತ್ರಪಟಗಳನ್ನು ಪ್ರಸಿದ್ಧಿಗೊಳಿಸುತ್ತಾ ತನ್ಮೂಲಕ ಒಂದು ವಿಧವಾದ ಸಮಾಜಸೇವೆಯನ್ನು ಮಾಡುತ್ತಿರುವ ಸೊಲ್ಲಾಪುರದ ಮ|| ಜೇರಿಗೆಯವರನ್ನು ಈ ಸಂಮೇಳನವು ಅಭಿನಂದಿಸುತ್ತದೆ. ಇವುಗಳಲ್ಲದೆ ಇನ್ನೂ ಅನೇಕ ಸಮಾಜಸಂಬಂಧವಾಗಿ ಹಲಕೆಲವು ಗೊತ್ತುವಳಿಗಳು ಅಂಗೀಕರಿಸಲ್ಪಟ್ಟನಂತರ, ಸಭಾಧ್ಯಕ್ಷರ ಉಪಸಂಹಾರಭಾಷಣವಾಗಿ ಅವರಿಗೆ ವಂದನೆಗಳರ್ಪಿಸಲ್ಪಟ್ಟವು. ತದನಂತರ ಅಧ್ಯಕ್ಷರಿಗೂ, ನೆರದ ದೊಡ್ಡ ಮನುಷ್ಯರಿಗೂ ಹಾರತುರಾಯಿಗಳು ಅರ್ಪಿಸಲ್ಪಟ್ಟು ಜಯಘೋಷದೊಡನೆ ಸಭೆಯು ಮುಕ್ತಾಯಗೊಂಡಿತು.

ಪಿ. ಯಂ. ನಂಜುಂಡಯ್ಯ,
ಕಾರ್ಯದರ್ಶಿ ಸ್ವಾಗತಮಂಡಲಿ.

೧೯೨೬ ನೆಯ ಇಸವಿ ಜೂನ್ ತಾ|| ೫ ರಿಂದ ೧೯೨೬ ನೆಯ ಇಸವಿ ಜೂನ್ ತಾ|| ೧೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ವೈಶಾಖ ಬಹುಳ ದಶಮಿಯಿಂದ ಜ್ಯೇಷ್ಠ ಶುದ್ಧ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಾಸ
5	ಶನಿ	ದಶ	37-10	ಉಭಾ	17-50	23
6	1 ಭಾನು	ಏಕಾ	32-14	ರೇವ	14-43	24
7	2 ಸೋಮ	ದ್ವಾದ	28-10	ಅಶ್ವಿ	12-19	25
8	3 ಮಂಗಳ	ತ್ರಯೋ	24-28	ಭರ	10-43	26
9	ಬುಧ	ಚತು	22-50	ಕೃತ್ತಿ	10-15	27
10	4 ಗುರು	ಅಮಾ	21-58	ರೋಹಿ	10-53	28
11	5 ಶುಕ್ರ	ಪಾಡ್ಯ	22-15	ಮೃಗ	12-48	29

(1) ಸರ್ವತ್ರೈಕಾದಶಿ, ಶ್ರೀಮದ್ಯುವರಾಜರವರ ವರ್ಧಂತಿ. (೨) ಮಳೆನಕ್ಷತ್ರ-ಮೃಗಶಿರ ೧ ನೆಯ ಪಾದ, ಕಂಚಿಯಲ್ಲಿ ವಸಂತೋತ್ಸವ. (3) ಮಾಸಶಿವರಾತ್ರಿ. (4) ಸರ್ವತ್ರಾಮಾವಾಸ್ಯ. (5) ಮಳೆನಕ್ಷತ್ರ-ಮೃಗಶಿರ ೨ ನೆಯ ಪಾದ, ಪುನ್ನಾಗಗೌರೀವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪತ್ರಿಕೈಷಾ ನಕ್ಷತ್ರ ನಾಮಿಕಾ ಜೀಯಾತ್ !
ಶ್ರೀಮತ್ಕೃಷ್ಣನೃಪಾಲಸತ್ತಮಳಕಾಲೋಲುಂಸುಧೀಪುಂಗವ | ಸ್ತೋಮಾಪೇಕ್ಷ್ಯದಲೀಲ ಪಾಠಕೇಶ ಸಾಧ್ವೀಕ್ಷ್ಯಾಲವಾಲಂವಲಂ |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾತಾಳುಲಂ | ಶ್ರೀಮಂತೆಕ್ತಿಕಿಯಂಸವಾಪುರಿಗೆ ಗೌರೀಶಾಸುಖಂಪುಷ್ಯಲಂ !

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜೂನ್ ತಾರೀಖು ೧೨ ನೆಯ ಶನಿವಾರ. [ಸಂಚಿಕೆ ೨೪

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA
VAIDYASALA

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	23

ಗೋಶಾಸ್ತ್ರೀಯರಿಗೂ ಕಲಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಅಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಅಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.	ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾದ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೦—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪ್ರತಿಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೦—೧೨—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರಹ ಬಣ್ಣದಿಂದ ಬಿಳೀಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ಕ್ಕೂ ೦—೧೦—೦ ಬಿಳಿಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ೧೦೦ ಪತ್ರಿಕೆಗಳನ್ನು ಅಚ್ಚುಮಾಡಲು ೧—೧೦—೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦—೬—೦ ಆಣೆಯಂತೆಯೂ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವೆವು. ಪರಸ್ಥಳದವರು ಅಂಚೆಯ ವೆಚ್ಚವನ್ನು ಬೇರೆ ಕೊಡಬೇಕಾಗುತ್ತದೆ. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೦—೧೨—೦ ರೂ. ಸ್ನು ಹೆಚ್ಚಾಗಿಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್,
ಸ್ಟಾರ್ ಆಫೀಸ್, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೭—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಶಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—35] ಪ್ರೋ. ಬಾ. ೫೧೦. ಮದರಾಸು.

ಬೇಸಿಗೆಕಾಲ ಬಂತು.
ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[13-0] ಹಂಪಸಾಗರ, (ಜಿಲ್ಲಾ ಬಳ್ಳಾರಿ).

ಶ್ರೀ ಬಸವೇಶ್ವರಜಯಂತ್ಯುತ್ಸವಗಳು.

ಗುಡಿಯಾತ್ತಂ.

ಪ್ರತಿವರ್ಷದಂತೆ ವೀರಶೈವವಿದ್ಯಾವರ್ಧಕಸಂಘದವರ ಪ್ರೋತ್ಸಾಹದಿಂದ “ಶ್ರೀಬಸವಜಯಂತಿ” ಯುತ್ಸವವು ತಾ|| 13-5-26 ರಲ್ಲಿ ಬಹು ಸಂಭ್ರಮವಾಗಿ ಜರುಗಿಸಲ್ಪಟ್ಟಿತು. ಆ ದಿವಸ ರಾತ್ರಿ ಶ್ರೀಶಂಭುಲಿಂಗಸ್ವಾಮಿಗಳ ಮಠಾಲಯದಲ್ಲಿ ಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸಭೆಯು ಸೇರಿ ಸಂಘದ ಸೆಕ್ರೆಟರಿ “ಶ್ರೀಬಸವೇಶ್ವರನ ಜನನ ಮತ್ತು ಪ್ರಭಾವ” ಎಂಬ ವಿಷಯದಮೇಲೆ ಉಪನ್ಯಾಸಮಾಡಿದರು. ತರುವಾಯ ಸ್ಕೂಲುವಿದ್ಯಾರ್ಥಿಗಳು ವಿದ್ಯ, ಸತ್ಯ, ಪತಿವ್ರತಾಧರ್ಮ, ಬುದ್ಧಿಬಲನೇಶ್ರೇಷ್ಠ, ಎಂಬ ವಿಷಯಗಳಮೇಲೆ ಸ್ವಾರಸ್ಯವಾಗಿ ಮಾತನಾಡಿ ಸಭಿಕರನ್ನು ಆನಂದಪಡಿಸಿದರು.

ಬಿ. ಕೆ. ಸಾವಳಪ್ಪ.

ದೊಡ್ಡಬಳ್ಳಾಪುರ ತಾ|| ಗೊಲ್ಲಹಳ್ಳಿ.

ಈ ಗ್ರಾಮಸ್ಥರು ಶ್ರೀ ಬಸವಜಯಂತ್ಯುತ್ಸವದ ದಿವಸ ಬಸವಣ್ಣಗಳನ್ನು ನೇಗಲಿಗೂ ಬಂಡಿಗೂ ಹೂಡದೆ ಮೈತೊಳೆದು ಅಲಂಕರಿಸಿ ಪಂಚಭಕ್ಷ್ಯಪರಮಾನ್ನವನ್ನು ಉಣಿಸಿ ತಾವೂ ಮೃಷ್ಟಾನ್ನಭೋಜನಮಾಡಿ ಮಧ್ಯಾಹ್ನದಲ್ಲಿ ಶ್ರೀ ಬಸವೇಶ್ವರಫೋಟೋವನ್ನು ಅಲಂಕರಿಸಿ ಪಾಲಕಿಯಲ್ಲಿಟ್ಟು ಬಸವಣ್ಣಗೋವುಗಳ ಸಮೇತ ವಾದ್ಯವೈಭವದಿಂದ ಊರಲ್ಲೆಲ್ಲಾ ಮೆರವಣಿಗೆ ಮಾಡಿ ಮಹಾಮಂಗಳಾರತಿಯಿಂದ ಮುಕ್ತಾಯಗೊಳಿಸಿದರು. ಈ ಉತ್ಸವವನ್ನು ಬಹಳ ಭಕ್ತಿಶ್ರದ್ಧೆಯಿಂದ ನಡೆಸುವಲ್ಲಿ ಮುಂದಾಳುಗಳಾಗಿದ್ದ ಮ|| ಗಳಾದ ಪಿಳ್ಳ ನಂಜಪ್ಪನವರು, ಪಟೇಲ್ ನಂಜುಂಡಪ್ಪನವರು ಮೊದಲಾದವರಿಗೆ ಪರಮೇಶ್ವರನು ಶ್ರೇಯಸ್ಸನ್ನುಂಟುಮಾಡಲೆಂದು ಬೇಡುವ,

ಸ್ವಾಮಿಭಕ್ತ.

ಶ್ರೀರಂಗಪಟ್ಟಣ ತಾ|| ಮಾರಸಿಂಗನಹಳ್ಳಿ.

ಪಟೇಲ್ ಮ|| ಶಿವಮಲ್ಲಪ್ಪನವರ ಪ್ರಯತ್ನವಿಶೇಷದಿಂದ ಶ್ರೀಬಸವಜಯಂತ್ಯುತ್ಸವವು ಈವೇಳೆ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಗ್ರಾಮದ ನೈರುತಭಾಗದಲ್ಲಿರುವ ಶ್ರೀಕೋಡಿಬಸವೇಶ್ವರಸ್ವಾಮಿಗೆ ವಿಧ್ಯುಕ್ತವಾಗಿ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಮಹಾಮಂಗಳಾರತಿ ನಡೆದು ನೆರದಿದ್ದ ಭಕ್ತಮಂಡಲಿಗೆ ಸ್ವಾಮಿಪ್ರಸಾದವಿನಿಯೋಗವಾಯಿತು. ಅನೇಕ ಮೆಡಲುಗಳನ್ನೂ ಗೌನುಗಳನ್ನೂ ಬಹುಮಾನವಾಗಿ ಪಡೆದಿರುವ ಮ|| ಶಿವಮಲ್ಲಪ್ಪನವರ ಹೋರಿಸಮೇತ ಗ್ರಾಮದ ಬಸವಣ್ಣಗಳೂ ಗೋವುಗಳೂ ಸ್ನಾನ ಪೂಜೆ ನೈವೇದನೆಗಳಿಂದ ತೃಪ್ತಿಗೊಳಿಸಲ್ಪಟ್ಟು ತಾಳಮೇಳ ವಾದ್ಯಗಳ ಸಮೇತ ಗ್ರಾಮದಸುತ್ತಲೂ ಮೆರವಣಿಗೆ ಮಾಡಲ್ಪಟ್ಟವು. ಮುಂದಾಳುಗಳಾಗಿದ್ದ ಶಿವಮಲ್ಲಪ್ಪನವರು ಮೊದಲಾದವರಿಗೆ ಭಗವಂತನು ಆಯುರಾರೋಗ್ಯೈಶ್ವರ್ಯವನ್ನು ಕೊಡಲಿ.

ಗ್ರಾಮಸ್ಥ.

ಬೆಳಕವಾಡಿ

ಮಳವಳ್ಳಿ ತಾ|| ಬೆಳಕವಾಡಿಯಲ್ಲಿ ಶ್ರೀ ಬಸವಜಯಂತ್ಯುತ್ಸವವು ಮ|| ಏಜಂಟ್ ಹಲಗಪ್ಪನವರ ಪ್ರೋತ್ಸಾಹದಿಂದ ಬಸವೇಶ್ವರನ ಪೂಜೆ, ಪ್ರಸಾದ ವಿನಿಯೋಗ, ಬಸವಪುರಾಣ, ಸಂಗೀತಶ್ರವಣ, ಪಂಡಿತ ಶಿವಯ್ಯಶಾಸ್ತ್ರಿಗಳು ಮೊದಲಾದವರಿಂದ ಶಿವಕಥಾಕಾಲಕ್ಷೇಪ, ಹುವಿನಪಾಲಕಿ ಮೆರವಣಿಗೆ ಇತ್ಯಾದಿಗಳಿಂದ ಬಹಳ ವಿಜೃಂಭಣೆಯಾಗಿ ಜರುಗಿಸಲ್ಪಟ್ಟಿತು. ಈ ಉತ್ಸವಭಾಗಿಗಳಾದ ಜನರ ಭಕ್ತಿಗೆ ಆ ದಯಾಮಯನಾದ ನಂದೀಶನು ಮೆಚ್ಚಿ ಪ್ರಸನ್ನನಾದನೋ ಎಂಬಂತೆ ಆ ದಿವಸ ರಾತ್ರಿ ದೊಡ್ಡಮಳೆಯು ಬಂದು ಕೆರೆಕಟ್ಟೆಗಳಿಗೆ ವಿಶೇಷ ನೀರುಬಂದು ಜನರನ್ನು ಆನಂದಸಾಗರದಲ್ಲಿ ಮುಳುಗಿಸಿತು. ಮ|| ಹಲಗಪ್ಪನವರಿಂದ ಆರಂಭಿಸಲ್ಪಟ್ಟ ಈ ಬಸವಜಯಂತ್ಯುತ್ಸವವನ್ನು 300 ರೂ. ಗಳ ಮೇಲ್ಪಟ್ಟ ವೆಚ್ಚದಿಂದ ಅತ್ಯಂತ ವಿಜೃಂಭಣೆಯಿಂದ ನಡೆಸುವಲ್ಲಿ ಮುಂದಾಳುಗಳಾಗಿ ನಿಂತಿರುವ ಪಟ್ಟದ ಶ್ರೀ ಕರಿಬಸವ ಒಡೆಯರಿಗೂ, ಮ|| ಪಟೇಲ್ ನಂಜುಂಡಪ್ಪನವರಿಗೂ, ಮ|| ಬಸವಲಿಂಗಪ್ಪನವರಿಗೂ ಆ ನಂದೀಶನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಬಸವಭಕ್ತ.

ಅರಕಲಗೂಡು ತಾ|| ಬಸವಾಪಟ್ಟಣ.

ಈ ಊರಿನ ವೀರಶೈವಮಹಾಜನಗಳು ವೈಶಾಖ ಶು|| ಬಿದಿಗೆ ಗುರುವಾರ ಬೆಳಗ್ಗೆ ಆಗಮೋಕ್ತವಾಗಿ ಶ್ರೀ ಬಸವೇಶ್ವರಸ್ವಾಮಿಗೆ ರುದ್ರಾಧ್ಯಯನ ಚಮಕ ಪುರುಷಸೂಕ್ತ ಪೂರ್ವಕ ಶತಕುಂಭಾಭಿಷೇಕ ಸಹಸ್ರಬಿಲ್ವಾರ್ಚನೆಯನ್ನು ನಡೆಯಿಸಿದಮೇಲೆ ಮಧ್ಯಾಹ್ನದಲ್ಲಿ ಚೌಕಳ್ಳಿ ಮ|| ಗುರುಸಿದ್ಧಶೆಟ್ಟರ ಸ್ವಂತಖರ್ಚಿನಿಂದ ದೇವರಿಗೆ ಮಂಗಳಾರತಿಯೂ ನೆರೆದಿದ್ದ ಭಕ್ತಮಾಹೇಶ್ವರರಿಗೂ ಇತರರಿಗೂ ಫಲಾಹಾರವು ನಡಿಸಲ್ಪಟ್ಟಿತು. ರಾತ್ರಿ ಶ್ರೀ ಚಿಕ್ಕವೀರದೇಶಿಕೇಂದ್ರ ಮಹಾಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮಹಾಸಭೆ ಸೇರಿದ್ದು ತುಮಕೂರಿನ ವೇ|| ಶಿವರುದ್ರಶಾಸ್ತ್ರಿಗಳಿಂದ ಬಸವೇಶ್ವರಜನನ ಮಹಿಮೆ ಮೊದಲಾದ ವಿಚಾರವಾಗಿ ಕಥಾಪ್ರಸಂಗವೂ ಸಂಗೀತವಿದ್ವಾನ್ ದೊಡ್ಡಬಸಪ್ಪನವರ ಸಂಗೀತಪ್ರಸಂಗವೂ ನಡಿಸಲ್ಪಟ್ಟವು. ಇದೂ ಅಲ್ಲದೆ ವೇ|| [illegible] ಶಾಸ್ತ್ರಿಗಳಿಂದ ಕಥಾಕಾಲಕ್ಷೇಪವಾಯಿತು. ಈ ಮಹೋತ್ಸವವನ್ನು ಬಹಳ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ನಡಿಸಿದ ಮ|| [illegible] [illegible] [illegible] ಪಟೇಲ್ ಬಿ. ಎನ್. [illegible] [illegible] [illegible] ಪ್ರಾರ್ಥಿಸುತ್ತೇವೆ. [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜೂನ್ ತಾ|| ೧೨ ನೆಯ ಶನಿವಾರ.

MYSORE FINANCES.

BUDGET ESTIMATES FOR 1926-27.

The budget estimates for the last few years go to show clearly that the finances of Mysore are stationary, inelastic and not prosperous. It cannot be otherwise in a country preeminently agricultural and with no particular potentiality for the growth of industries or the expansion of trade. But when the resources do not expand it cannot be said that expenditure does not show a tendency to increase. There is doutless a growing demand on all sides for more money, and in Mysore it has become a common saying that development departments are starved. The situation is such that something must be done if Mysore has to take some rapid strides towards self-advancement and the only solution seems to be to claim our just dues from the Imperial Government in the matter of Customs, Post and Telegraphs and if possible, a reduction in the Subsidy. We are not aware of the exact efforts made so far in these directions. But we may well say that no time is more auspicious than now when the new Dewan of whose wonderful capacity to negotiate everyone is confident of has assumed the reigns of the administration. While the income thereby would be appreciable from our point of view it would be after all a small amount to the Imperial Government. The fact that the principle involved is one affecting generally all the Native States need not deter the efforts to secure a speedy solution. To us it seems as though there is no other way for improving our finances. The incidence of taxation may not be so high, but considering the capacity of the average ratepayer we should say he is taxed high enough. The question of raising taxation within the State can only arise when the people become more prosperous and wealthy.

The inelasticity of our finance does not, however, mean that our administration cannot improve. The man-power is there and it should be the primary concern of the Government to see that the man-power under its control is being fully, properly and efficiently employed. To this we can emphatically say it has not been employed to the fullest advantage. For example, there is still vast and, we may say, unlimited scope for bettering the District Administration, which is the one directly affecting the welfare of the people. It is in the contentment and happiness of the ryots that the success of an administration has to be measured. Are the Sub-Division Officers, the Amildars, the other revenue officers and officials, the Police officers, are these persons really discharging their duties conscientuously and efficiently? Are they bringing to play in their work that amount of honesty and sympathy which is expected of them? A sincere answer to this, we dare say, cannot be too flattering to our administration. This is certainly not the first time we have emphasised this aspect of the administrative problems. Though the past has not been very encouraging to us, it is because that the present is so we have ventured to touch upon it once again. We are not inclined in this article to go over the main features of the Budget Estimates, as they have appeared already in other journals. They could be characterised as thoroughly fair and reasonable. We are more inclined to note the distinguishing features which as we have already stated are the ones which give a clue, a very encouraging clue to the policy of the new Dewan. It is a salutory provision to sanction Rs. 1,00,000 for economic development, town and minor municipalities secure a special increase of Rs. 1,00,000 and so does village reconstruction in addition to their usual grants. We are happy to note this tendency and we congratulate the Dewan on turning his sympathetic and effective looks on the rural areas. We are aware of the keen interest that Mr. Mirza M. Ismail has always evinced in the improvement of sanitation in cities and villages and we hope that his *regime* would wisher in a new era of happiness and enlightenment to the rural folk in the State. It is not that we are against the improvement of cities, but these latter are always looked after, and when people feel that the rural areas are also given a sympathetic attention which is a very rare privilege they feel so much more grateful than before. The new Dewan has an arduous work before him during the coming fortnight with the sessions of the Representative Assembly and the Legislative Council running one after the other. He has begun exceedingly well and we hope that the deliberations in both the Councils will under the able and sympathetic guidance of the New Dewan be productive of very fruitful results.

PROMOTIONS IN HIGH SCHOOLS.

The results in the public examinations in Mysore are often wayward. More often they are strict, sometimes moderate and very rarely good. This year the Entrance results are far from satisfactory. It does not seem to be more than 33 percent. There is a certain idea that the passes are made to conform to the number of seats available in the Colleges of the University. We are glad to note that the S.S.L.C. results are better. But the complaint is getting louder in the matter of promotions from the V Form and IV Form. Unusual numbers of students are being detained in these classes. We cannot understand why or how this sudden rigour came to operate in class promotions. We are not sure whether the students were apprised of the fact that they would be very strict in making promotions. If not, there would be no justification for these large dententions. After all, in these class examinations too much strictness in promotions would only mean a huge and needless waste in the time and energy of the students. It will have a baneful effect on the teaching, as they would only select the very best for the higher classes in order to show good results in public examinations. Further, a student does not stand to gain so much by detention in these lower classes. We do hope that the Inspector General of Education will inquire into this matter and lessen the keenly felt rigour by making promotions more liberal.

ಚೆನ್ನಬಸವೇಶ್ವರಪತ್ರಿಕಾವತಾರಸಮಾಪ್ತಿ.

ಪೊಲೀಸರು ಚೋರಶಿಖಾಮಣಿಗಳನ್ನು ಹಿಡಿಯಲು ವೇಷಧಾರಿಗಳಾಗುವಂತೆ ಪ್ರಾಯಶಃ ನೈಜಾಂದೇಶಸ್ಥನಾದ ದೀನ್‌ದಾರ್ ಸಿದ್ದಿಕ್ ಎಂಬ ಮಹಮ್ಮದೀಯನು ಮೂಢಭಕ್ತಿಯ ವೀರಶೈವರನ್ನು ತನ್ನ ಮತಾವಲಂಬಿಗಳನ್ನಾಗಿಮಾಡಿಕೊಳ್ಳುವ ಉದ್ದೇಶದಿಂದ ತಾನು ಚೆನ್ನಬಸವೇಶ್ವರನ ಅವತಾರವೆಂದು ಹೇಳಿಕೊಂಡು ಊರೂರನ್ನು ತಿರುಗುತ್ತಿರುವನು. ಈತನು ಧಾರ್ವಾಡ, ಹುಬ್ಬಳ್ಳಿ, ಗದಗು ಮೊದಲಾದ ಸ್ಥಳಗಳಲ್ಲಿ ವೀರಶೈವರ ಷಟ್ಸ್ಥಲ, ಅಷ್ಟಾವರಣ ಇತ್ಯಾದಿ ತಾನು ಕೇಳಿರುವ ಕೆಲ ಹೆಸರುಗಳನ್ನೂ, ಯಾರೋ ಮಾಡಿದ ಕಾಲಜ್ಞಾನವಚನಗಳನ್ನೂ ಹೇಳುತ್ತ ಜನರನ್ನು ಮೋಸಪಡಿಸಲೆತ್ನಿಸಿದಾಗ ತನ್ನ ಗುಟ್ಟು ರಟ್ಟಾಗಿ ಸರ್ಕಾರದ ಮೂಲಕ ವಾಗ್ಬಂಧವನ್ನೂ, ಊರಿನವರಿಂದ ತಿರಸ್ಕಾರೋಚ್ಚಾಟನೆಗಳನ್ನೂ ಹೊಂದಿ ಮೈಸೂರು ಸೀಮೆಗೆ ಬಂದು ಅಲ್ಲಲ್ಲಿ ಸಂಚರಿಸುತ್ತ ಕಡೆಯಲ್ಲಿ ತುಮಕೂರಿನಲ್ಲಿ ನಿಂತು 'ಚೆನ್ನಬಸವೇಶ್ವರ' ಎಂಬ ಹೆಸರಿನಿಂದ ಆಂಗ್ಲ ಮತ್ತು ಕನ್ನಡಭಾಷೆಗಳಲ್ಲಿ ಒಂದು ವಾರಪತ್ರಿಕೆಯನ್ನು ಮಿ|| ಆರ್. ಸಯ್ಯದ್ ಸರ್‌ಮುಸ್ತಹುಸೇನ್‌ರವರ ಸಂಪಾದಕತ್ವದಿಂದ ಹೊರಡಿಸಲು ಮೈಸೂರು ಸರ್ಕಾರದವರಿಂದ ಅನುಜ್ಞೆಯನ್ನು ಪಡೆದು ಮೊದಲನೆಯ ಸಂಚಿಕೆಯನ್ನು ಪ್ರಕಟಿಸಿದುದರ ವಿಚಾರವನ್ನು ನಾವು ಮೊದಲೇ ತಿಳಿಸಿರುತ್ತೇವೆ. ಈ ಪತ್ರಿಕೆಯ ಎರಡನೆಯ ಸಂಚಿಕೆಯು ಜೂನ್ ತಾ|| 7ರಲ್ಲಿ ಹೊರಡುವುದಾಗಿ ಪ್ರಕಟವಾಗಿದ್ದಿತು. ಇಷ್ಟರಲ್ಲಿ ಮೈಸೂರುದೇಶದ ಮತ್ತು ಹೊರಗಿನ ವೀರಶೈವರು ಈ ವೇಷಧಾರಿ ದೀನ್‌ದಾರ್ ಸಿದ್ದಿಕ್‌ಚೆನ್ನಬಸವೇಶ್ವರನಿಂದಲೂ, ತನ್ನಾಮಕ ವೃತ್ತಪತ್ರಿಕೆಯಿಂದಲೂ ಹಿಂದುಗಳಿಗೆ ಮುಖ್ಯವಾಗಿ ವೀರಶೈವರಿಗೆ ಉಂಟಾಗುವ ಮಹಾನರ್ಥವಿಚಾರವನ್ನು ಮೈಸೂರು ಪ್ರಭುತ್ವದವರಿಗೆ ಬಿನ್ನೈಸಿಕೊಂಡು ಆ ಪತ್ರಿಕೆಯು ಹೊರಡದಂತೆ ಅಡ್ಡಿಪಡಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದುದರಮೇಲೆ ಪ್ರಭುತ್ವದವರು ದೂರದೃಷ್ಟಿಯಿಂದ ಚೆನ್ನಾಗಿ ಪರ್ಯಾಲೋಚಿಸಿ ಚೆನ್ನಬಸವೇಶ್ವರಪತ್ರಿಕಾಪ್ರಕಟನೆಗೆ ಕೊಟ್ಟಿದ್ದ ಅಪ್ಪಣೆಯನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರೆಂದು ಸಂತೋಷದಿಂದ ತಿಳುಹುತ್ತೇವಲ್ಲದೆ ಅದಕ್ಕಾಗಿ ಪ್ರಭುತ್ವದವರನ್ನು ವಂದಿಸುತ್ತೇವೆ.

ಲೌಕಿಕಪಾರಮಾರ್ಥಿಕ ವಿಚಾರಗಳಲ್ಲಿ ಜನರ ಮನಸ್ಸನ್ನು ವಿಕಸನಗೊಳಿಸುವುದೇ ವೃತ್ತಪತ್ರಿಕೆಗಳ ಮುಖ್ಯ ಕರ್ತವ್ಯವಾಗಿರುತ್ತದೆ. ನೈತಿಕ, ಧಾರ್ಮಿಕ, ಸಾಮಾಜಿಕ ಇತ್ಯಾದಿ ವಿಷಯಗಳಲ್ಲೊಂದೊಂದನ್ನು ಒಂದೊಂದು ಪತ್ರಿಕೆಯೂ, ಕೆಲಕೆಲ ವಿಷಯಗಳನ್ನು ಕೆಲಕೆಲ ಪತ್ರಿಕೆಗಳೂ ಪ್ರತಿಪಾದಿಸಿ ತೃಪ್ತೀಕರಿಸುವುದು ವಾಡಿಕೆಯಾಗಿದೆ. ಮತವಿಷಯಕವಾದ ಪತ್ರಿಕೆಗಳು ತಾವು ಪ್ರತಿಪಾದಿಸುವ ಮತವೇ ಸರ್ವೋತ್ತಮವೆಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ, ಆದರೆ ಹಾಗೆ ಮಾಡುವಲ್ಲಿ ಇತರ ಮತಗಳನ್ನು ಹೀಯಾಳಿಸಿ ತುಚ್ಛೀಕರಿಸುವುದಾದರೆ ಮತ್ತು ಜನರ ಮನಸ್ಸನ್ನು ಕೆಡಿಸುವುದಾದರೆ ಮಾತ್ರ ಅಂತಹ ಪತ್ರಿಕೆಯಿಂದ ಭಿನ್ನಭಿನ್ನ ಮತದವರ ಪರಸ್ಪರ ಪ್ರೀತಿ ವಿಶ್ವಾಸಕ್ಕೂ, ನೆಮ್ಮದಿಗೂ ಭಂಗವುಂಟಾಗಿ ಅನರ್ಥಸಂಭವಿಸುವುದರಲ್ಲಿ ಸಂದೇಹವಿಲ್ಲ. ಅಂತಹುದರಲ್ಲಿ ವಿಗ್ರಹಾರಾಧಕರೂ, ಗೋಪೂಜಕರೂ, ಮಾಂಸಾಹಾರನಿರೋಧಕರೂ ಆದ ವೀರಶೈವರು ಮಹಾಶರಣನೂ, ಪೂಜ್ಯನೂ ಎಂದು ಭಾವಿಸಿಕೊಂಡಿರುವ ಚೆನ್ನಬಸವೇಶ್ವರನ ಅವತಾರವೆಂದು ವಿಗ್ರಹಾರಾಧನನಿಂದಕನೂ, ಮಾಂಸಭಕ್ಷಕನೂ, ಗೋಭೇದಕನೂ ಆದ ಮಹಮ್ಮದೀಯನು ಹೇಳುವುದಾದರೆ ವೀರಶೈವರು ಅದನ್ನೆಂತು ಸಹಿಸುವರು ಮತ್ತು ಅದರಿಂದ ವೀರಶೈವಮತಕ್ಕೆಷ್ಟು ಅನರ್ಥವಾಗುವುದಿಲ್ಲ? ಇದನ್ನರಿತೇ ಸ್ವಧರ್ಮಾಭಿಮಾನಿಗಳಾದ ವೀರಶೈವರು ಜಾಗ್ರತರಾಗಿ ಅಲ್ಲಲ್ಲಿ ಸಭೆಗಳನ್ನು ಕೂಡಿಸಿ ಈ ವೇಷಧಾರಿ ದೀನ್‌ದಾರ್‌ಸಿದ್ದಿಕ್ ಚೆನ್ನಬಸವೇಶ್ವರನಿಂದಲೂ ಅವನು ಹೊರಡಿಸಲುಪಕ್ರಮಿಸಿದ ಚೆನ್ನಬಸವೇಶ್ವರಪತ್ರಿಕೆಯಿಂದಲೂ ಸಮಾಜಕ್ಕೆ ತಟ್ಟುವ ಮಹಾಹಾನಿಯನ್ನು ಪ್ರಭುತ್ವದವರಿಗೆ ಸಕಾಲದಲ್ಲಿ ತಿಳಿಸಿ ಆ ಪತ್ರಿಕೆಯನ್ನು ಹೊರಡಿಸದಂತೆ ಮಾಡಬೇಕೆಂದು ಬಿನ್ನೈಸಿಕೊಂಡುದುದಾಗಿದೆ. ಇದರಂತೆಯೇ ಪ್ರತಿಯೊಂದು ಮತದವರೂ ಪರಮತದವರ ಉಪಟಳಕ್ಕೆ ಅವಕಾಶವನ್ನು ಕೊಡದೆ ಸ್ವಧರ್ಮವನ್ನು ಕಾಪಾಡಿಕೊಳ್ಳುವುದರಲ್ಲಿ ಆಲಸರಾಗಿರದೆ ವ್ಯಗ್ರರಾಗಿರಲೆಂದು ಕೋರುತ್ತೇವೆ.

ನಿಜವಾಗಿದ್ದರೆ ಮಹೋಪಕಾರವಾಗುವುದು.

ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಇಸ್ಮಾಯಿಲ್, ಸಿ. ಐ. ಇ., ರವರು ಸಂಸ್ಥಾನದ ಅಮಾತ್ಯಪದವಿಯನ್ನು ಅಲಂಕರಿಸಿದ ಅತ್ಯಲ್ಪಕಾಲದಲ್ಲಿಯೇ ಮಹಾಘನವಾದ ತಮ್ಮುದ್ಯೋಗನಿರ್ವಾಹಶಕ್ತಿಯನ್ನೂ, ಪ್ರಜಾಪ್ರೇಮವನ್ನೂ ನಾನಾಮುಖವಾಗಿ ವ್ಯಕ್ತಪಡಿಸುತ್ತಿರುವುದು ಪ್ರಭುಪ್ರಜಾನಿರೀಕ್ಷಣೆಯನ್ನು ಸಾರ್ಥಕಗೊಳಿಸುವ ಶುಭಚಿಹ್ನೆಯಾಗಿದೆ. ಮಿ|| ಮಿರ್ಜಾಯವರು ವಿರಾಮವಿದ್ದ ವೇಳೆಯಲ್ಲಿ ಊರಿನಲ್ಲೆಲ್ಲ ಸಂಚರಿಸುತ್ತ ಕೆಲಕೆಲ ಸಾರ್ವಜನಿಕಸಂಸ್ಥೆಗಳನ್ನು ಪರಾಮರ್ಶಿಸುತ್ತಿರುವುದರಮೇಲೆ ಊಹಿಸಿಯೋ ಮತ್ತಾವಕಾರಣದಿಂದಲೋ ಒಂದು ಅಪೂರ್ವಸಮಾಚಾರವು ಹುಟ್ಟಿ ಜನಜನಿತವಾಗಿ ಹಬ್ಬುತ್ತಿದೆ. ಅದೇನೆಂದರೆ—" ಈಗ್ಗೆ ಕೆಲ ದಿವಸಗಳ ಹಿಂದೆ ಅಂದರೆ, ಅವರು ಉದಕಮಂಡಲಕ್ಕೆ ದಯೆಮಾಡಿಸುವುದಕ್ಕೆ ಮುಂದೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಆಡಳಿತವು ಪ್ರಜಾಹಿಂಸಕವಾಗಿದೆಯೆಂದು ಕೆಲ ಅರ್ಜಿಗಳು ಬಂದುದರಮೇಲೆ ಮಿ|| ಮಿರ್ಜಾಯವರು ತಮ್ಮ ಗುರುತು ಇತರರಿಗೆ ಗೋಚರವಾಗದಂತೆ ವೇಷವನ್ನು ಬದಲಾಯಿಸಿಕೊಂಡು ಒಂದು ಬಾಡಿಗೆಯ ಬಂಡಿಯಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಅಲ್ಲಿರುವ ರೋಗಿಗಳಲ್ಲಿ ಯಾವನೋ ಒಬ್ಬನನ್ನು ನೋಡಲು ಒಳಕ್ಕೆ ಬಿಡಬೇಕೆಂದು ದ್ವಾರಪಾಲಕನನ್ನು ಕೇಳಿದರು. ಅವನು ಈಗ ಸಮಯವಿಲ್ಲವಾದುದರಿಂದ ಬಿಡುವುದಿಲ್ಲವೆಂದು ಹೇಳಿ ಅವರನ್ನು ತಡೆದು ನಿಲ್ಲಿಸಿಬಿಟ್ಟನು. ಆಗ ಮಿ|| ಮಿರ್ಜಾಯವರು ನಾನು ಪರಸ್ಥಳದವನು ; ರೋಗಿಯನ್ನು ನೋಡಿಕೊಂಡು ಹೋಗಲು ಬಂದಿರುತ್ತೇನೆ. ಕೂಡಲೆ ಊರಿಗೆ ಪ್ರಯಾಣಮಾಡಬೇಕಾಗಿರುವುದರಿಂದ ದಯೆಯಿಟ್ಟು ಬಿಟ್ಟಲ್ಲಿ ರೋಗಿಯನ್ನು ನೋಡಿಕೊಂಡು ಹೋಗುತ್ತೇನೆಂದು ಹೇಳಿದಾಗ್ಯೂ ದ್ವಾರಪಾಲಕನಿಗೆ ದಯೆಬರಲಿಲ್ಲವಾಗಿ ಕೂಡಲೆ ಜೇಬಿನಿಂದ ಒಂದುರೂಪಾಯಿಯನ್ನು ತೆಗೆದು ಕೊಡಲು ದ್ವಾರಪಾಲಕನು ಸಂತೋಷಪಟ್ಟುಕೊಂಡು ಸಲಾಂಮಾಡಿ ಒಳಕ್ಕೆ ಬಿಟ್ಟನು. ಈ ವೇಷಧಾರಿಪರಸ್ಥಳಿಕರು ವಾರ್ಡಿಗೆ ಹೋಗಿ ಯಾರನ್ನೋ ತಡಕುವಂತೆ ನಟಿಸಿ ಅಲ್ಲಿದ್ದ ಅಸಿಸ್ಟೆಂಟ್ ಸರ್ಜನರನ್ನು ಕುರಿತು, ದೊಡ್ಡಡಾಕ್ಟರು ಯಾವಾಗಬರುತ್ತಾರೆ? ಅವರನ್ನು ನಾನು ನೋಡಬೇಕಾಗಿದೆ ಎಂದು ಹೇಳಲು, ಆ ಅ|| ಸರ್ಜನರು ಅವರು ಯಾವಾಗಬರುತ್ತಾರೋ; ಅವರು ಬರುವವರೆಗೆ ನೀವು ಹೊರಗೆ ಕಾದುಕೊಂಡಿರಿ ಎಂದು ಹೇಳಿದರು. ಅದರಂತೆ ಈ ವೇಷಧಾರಿಗಳು ಬಹಳ ಹೊತ್ತು ಕಾದುಕೊಂಡಿದ್ದರೂ ಅವರು ಬರಲಿಲ್ಲವಾಗಿ, ಅಯ್ಯಾ ಡಾಕ್ಟರೇ ನಮ್ಮ ರೋಗಿಯ ವಿಚಾರವಾಗಿ ದೊಡ್ಡಡಾಕ್ಟರನ್ನು ಕಂಡು ಮಾತನಾಡಿ ನಾನು ಜಾಗ್ರತೆ ಹೊರಟು ಹೋಗಬೇಕಾಗಿರುವುದರಿಂದ ದೊಡ್ಡಡಾಕ್ಟರು ಇಷ್ಟರಲ್ಲಿ ಬರುವುದಾಗಿಲ್ಲದಿದ್ದರೆ ಯಾರೋ ನೋಡುವುದಕ್ಕಾಗಿ ಕಾದುಕೊಂಡಿದ್ದಾರೆಂದು ಹೇಳಿಕಳುಹಿಸಿ ಎಂದು ಹೇಳಿದರು. ಅದಕ್ಕೆ ಆ ಸರ್ಜನರು ಕೋಪಿಸಿಕೊಂಡು, ನಿಮ್ಮನ್ನು ಒಳಕ್ಕೆ ಬಿಟ್ಟವರಾರು? ಬೇಕಾಗಿದ್ದರೆ ಅವರು ಬರುವವರೆಗೂ ಕಾದುಕೊಂಡಿರಿ, ಇಲ್ಲವಾದಲ್ಲಿ ಹೊರಟು ಹೋಗಿ ಎಂದು ಮುಖಸಿಂಡ್ರಿಸಿಕೊಂಡು ಗದ್ದರಿಸಿ ಹೇಳಿದರು. ಆಗ ವೇಷಧಾರಿ ಪರಸ್ಥಳಿಕರು ಇನ್ನೂ ಕೊಂಚಕಾಲ ಕಾದುಕೊಂಡಿದ್ದರಾದರೂ ದೊಡ್ಡಡಾಕ್ಟರು ಬರಲಿಲ್ಲವಾಗಿ ಬೇಸತ್ತು ದಿವಾನರು ಬಂದಿದ್ದಾರೆಂದು ದೊಡ್ಡಡಾಕ್ಟರಿಗೆ ತಿಳಿಸಿ ಎಂದು ಹೇಳಿದಾಗ ಆ ಸರ್ಜನರೂ ಇತರರೂ ದಿಗಿಲುಬಿದ್ದು ಓಡಿಹೋಗಿ ಹೇಳಿದರು. ಆ ಕೂಡಲೆ ದೊಡ್ಡಡಾಕ್ಟರು ಓಡಿಬಂದು ಕಾಣಿಸಿಕೊಳ್ಳಲಾಗಿ ದಿವಾನರು ತಮ್ಮ ಜೇಬಿನಲ್ಲಿದ್ದ ಅರ್ಜಿಯನ್ನು ಅವರ ಕೈಗೆ ಕೊಟ್ಟು, ಅದರ ನಿಜಾಂಶವೇನೆಂದು ಕೇಳಲು ದೊಡ್ಡಡಾಕ್ಟರು ಅದನ್ನು ವಿಚಾರಿಸಿ ಅರಿಕೆಮಾಡುತ್ತೇನೆಂದು ಉತ್ತರವನ್ನು ಕೊಟ್ಟರು. ಆಗ ದಿವಾನರು ಅದೆಲ್ಲವೂ ತಮ್ಮ ನಿದರ್ಶನಕ್ಕೆ ಬಂದಿರುತ್ತದೆಂದು ಹೇಳಿದುದಲ್ಲದೆ ತಾವು ಬಂದಾರಭ್ಯ ಅದುವರೆಗೆ ನಡೆದ ವಿದ್ಯಮಾನವನ್ನೆಲ್ಲಾ ಸವಿಸ್ತಾರವಾಗಿತಿಳಿಸಿ ತಕ್ಕ ಎಚ್ಚರಿಕೆಯನ್ನು ಕೊಟ್ಟು ಬಂದರು" ಎಂದು ಒಂದು ವದಂತಿಯು ಪುಂಖಾನುಪುಂಖವಾಗಿ ಹರಡುತ್ತಿದೆ. ಇದು ಜನಾರ್ದನಕಚೇರಿಯ ವರ್ತಮಾನವಲ್ಲದೆ ಮತ್ತೆಬೇರೆಯಲ್ಲವು. ಒಂದುವೇಳೆ ನಿಜವಾಗಿದ್ದಲ್ಲಿ ಅಥವಾ ಮುಂದೆ ನಡೆದಲ್ಲಿ ಜನೋಪಯೋಗಕ್ಕಾಗಿರುವ ಆಸ್ಪತ್ರೆ, ರಿಜಿಸ್ಟರಾಫೀಸು, ಕಚೇರಿ ಮೊದಲಾದ ಸ್ಥಳಗಳಲ್ಲಿ ನಡೆಯುತ್ತಿರುವ ಅನ್ಯಾಯ ಅಕ್ರಮಾಚರಣೆಗಳು ದಿವಾನರ ಚಿತ್ತಕ್ಕೆ ಬಂದು ಅವು ಪರಿಹಾರವಾಗಿ ಪ್ರಜೆಗಳಿಗೆ ಮಹೋಪಕಾರವಾಗುವುದರಲ್ಲಿ ಅಭ್ಯಂತರವಿಲ್ಲ.

ಸ್ವದೇಶದ ವೃತ್ತಾಂತಗಳು.

ದಿವಾನರು ತಮ್ಮ ಸೆಕ್ರೆಟರಿಗಳ ಸಮೇತ ನೆನ್ನೆಯದಿವಸ ರಾಜಧಾನಿಗೆ ದಯೆಮಾಡಿಸಿದರು.

ಈ ಪತ್ರಿಕೆಯಲ್ಲಿ ಗರ್ಭಿತವಾಗಿರುವ ಮದ್ರಾಸಿನ ಕ್ಯಾಪ್ಟನ್ ವಾಚ್‌ಕಂಪೆನಿಯವರ ಪ್ರಕಟನಪತ್ರಿಕೆಯನ್ನು ಗ್ರಾಹಕರು ಗಮನಿಸಬೇಕಾಗಿ ಕೋರಿದೆ.

ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ಉದಕಮಂಡಲದಿಂದ ರಾಜಧಾನಿಗೆ ಚಿತ್ತೈಸಿದ್ದು ಪುನಃ ಒಂದು ದಿನದಮಟ್ಟಿಗೆ ಹೋಗಿದ್ದು ದಯೆಮಾಡಿಸಿದರು.

ಭದ್ರಾ ಅಣೆಕಟ್ಟೆಯ ನಾಲೆಗಳ ಉಪಯೋಗಾರಂಭೋತ್ಸವವು ಈ ದಿವಸ ಶ್ರೀಮನ್ಮಹಾರಾಜರವರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟಿತು. ಮಹಾಸ್ವಾಮಿಯವರ ಅಮೋಘವಾದ ಆರಂಭೋತ್ಸವಭಾಷಣವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿಸಲ್ಪಟ್ಟಿದೆ.

ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವಕ್ಕೆ ಅತಿಥಿಗಳಾಗಿ ಬರತಕ್ಕ ಮದ್ರಾಸ್ ಗೌರ್ನರ್ ದಂಪತಿಗಳು ಗೌರ್ನಮೆಂಟ್ ಹೌಸಿನಲ್ಲಿ ಅಥವಾ ಖಾಸಬಂಗಲೆಯಲ್ಲಿ ಮತ್ತು ಕೂಚ್‌ಬಿಹಾರ್ ಮಹಾರಾಣಿಯವರು ವಸಂತಮಹಲಿನಲ್ಲಿ ಇಳಿದುಕೊಳ್ಳಲೇರ್ಪಾಟಾಗಿರುತ್ತದೆ.

ರಾಜಧಾನಿಯಲ್ಲಿ ಕುದುರೆಯ ಪಂದ್ಯವು ನಡೆಯುವುದಲ್ಲದೆ ಪೋಲೋ ಚಂಡಾಟದ ಪಂದ್ಯವೂ ಮೇಜರ್ ಬಿ.ಪಿ. ಕೃಷ್ಣ ಅರಸಿನವರ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ. ಬೆಂಗಳೂರು, ಮದ್ರಾಸು, ಜೋಧಪುರ, ಬೊಬ್ಬಲಿ ಈ ಸ್ಥಳಗಳಿಂದ ಪಂದ್ಯಗಾರರು ಬರುವವರಾಗಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮಿ|| ಟಿ. ಎಸ್. ಅಲ್ಲಿಖಾನ್‌ರವರು ಮಾನನಷ್ಟಕ್ಕಾಗಿ ಸಂಪದಭ್ಯುದಯಪತ್ರಿಕೆಯಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿರುವ ವಿವಾದದಲ್ಲಿ ಅಪರಾಧಿಪರ ಆರ್ಗ್ಯುಮೆಂಟು ಕಳೆದ ಸೋಮವಾರ ನಡೆದಿತು, ಮತ್ತು ಫಿರ್ಯಾದಿಪರ ಆರ್ಗ್ಯುಮೆಂಟು ಈ ದಿವಸ ನಡೆಯುವುದಾಗಿದೆ.

ಶ್ರೀಮನ್ಮಹಾರಾಜರವರ 43 ನೆಯ ವರ್ಷದ ವರ್ಧಂತ್ಯುತ್ಸವವು ಈ ತಾ|| 21 ರಲ್ಲಿ ನಡೆಯುವುದರಿಂದ ಮಹಾಸ್ವಾಮಿಯವರು ಆ ದಿವಸ ಪ್ರಾತಃಕಾಲ ಅಭ್ಯಂಜನಸ್ನಾನ ಕುಲಗುರುದೇವತಾರ್ಚನಾದಿಗಳನ್ನು ತೀರಿಸಿಕೊಂಡು 10 ಘಂಟೆಗೆ ದರ್ಬಾರನ್ನು ನಡೆಯಿಸಿ ಸಾಯಂಕಾಲ 5½ ಘಂಟೆಗೆ ಅಶ್ವಾರೂಢರಾಗಿ ಉತ್ಸವಹೊರಡುವರು. ತಾ|| 22 ಮತ್ತು 23 ರ ರಾತ್ರಿ 7 ಗಂಟೆಗೆ ದರ್ಬಾರು ನಡೆಯುವುದು.

ಕೈ|| ಸರ್ ಎಂ. ಕಾಂತರಾಜಅರಸಿನವರ ಕುಮಾರಿಯವರು ಆಕ್ಟಿಂಗ್ ಮುನ್ಸೀಫರಾದ ಮ|| ಕೆ. ಬಸವರಾಜಅರಸ್, ಎಂ.ಎ., ಎಲ್ ಎಲ್. ಬಿ., ರವರಿಗೆ ಕೊಡಲ್ಪಟ್ಟು ಈ ತಾ|| 20 ನೆಯ ಭಾನುವಾರ ಅರಮನೆಯಲ್ಲಿ ವಿವಾಹಮಹೋತ್ಸವವು ಜರುಗುವುದು. ವಧುವಿಗೆ ಅವರ ಮಾತೃಶ್ರೀಯವರಾದ ಮಹಾರಾಜಕುಮಾರಿ ಕೈ|| ಜಯಲಕ್ಷ್ಮಮ್ಮಣ್ಣಿಯವರ 45 ಲಕ್ಷ ರೂಪಾಯಿವರೆಗಿನ ಆಸ್ತಿಯು ಲಭ್ಯವಾಗುವುದು.

ಕಾರಾಪುರದ ಕಾಡಿಗೆ ಮೃಗಯಾವಿಹಾರಕ್ಕಾಗಿ ಹೋಗಿರುವ ಜೋಧಪುರಸಂಸ್ಥಾನದ ಮಹಾರಾಜಸಹೋದರರು ಒಂದು ದೊಡ್ಡಹುಲಿಯನ್ನು ಕೊಂದು ಅದರ ಶರೀರಕ್ಕೆ ಹುಲ್ಲನ್ನು ತುಂಬಿ ಹೊಲಿಯಲಿಕ್ಕೆ ರಾಜಧಾನಿಗೆ ಕಳುಹಿಸಿಕೊಟ್ಟಿರುವರು, ಮತ್ತು ಈ ದಿವಸ ರಾಜಧಾನಿಗೆ ಹಿಂದಿರುಗಿ ಬಂದು ವರ್ಧಂತಿಮಹೋತ್ಸವವು ಮುಗಿಯುವವರೆಗೂ ನಮ್ಮ ಶ್ರೀಮನ್ಮಹಾರಾಜರವರ ಅತಿಥಿಗಳಾಗಿರುವರು. ಇವರ ಬಿಡಾರಕ್ಕಾಗಿ ಚಾಮುಂಡಿವಿಹಾರವು ಸಜ್ಜುಗೊಳಿಸಲ್ಪಟ್ಟಿರುವುದು.

ನಮ್ಮ ಸಂಸ್ಥಾನಕ್ಕೆ 1926-27 ರಲ್ಲಿ 3,41,12,000 ರೂಪಾಯಿಗಳ ಆಯವೂ, 3,40,69,900 ರೂಪಾಯಿಗಳ ವ್ಯಯವೂ ಆಗಿ 43,000 ರೂಪಾಯಿಗಳ ಮಿಗತಾಯವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ಹತ್ತಿಯಮೇಲಿನ ಸುಂಕವು ತಪ್ಪಿಸಲ್ಪಡುವುದರಿಂದ ಆಯದಲ್ಲಿ 1,70,000 ರೂ. ಕಡಿಮೆಬೀಳುವುದು. ವಿದ್ಯಾಭಿವೃದ್ಧಿಗಾಗಿ ಮೊದಲಿಗಿಂತಲೂ 2 ಲಕ್ಷ ರೂ. ಹೆಚ್ಚಾಗಿಯೂ, ಪಟ್ಟಣಾಭಿವೃದ್ಧಿಗೂ, ಗ್ರಾಮಪುನರ್ನಿರ್ಮಾಣಕ್ಕೂ 1 ಲಕ್ಷ ರೂ. ಹೆಚ್ಚಾಗಿಯೂ ಕೊಡಲ್ಪಡುವುದು. ಸೇನೆಯು ಪುನಃ ಉದ್ಧರಿಸಲ್ಪಡುವುದರಿಂದ ಅದರ ವೆಚ್ಚದಲ್ಲಿ 1 ಲಕ್ಷ ರೂ. ಹೆಚ್ಚಿಸಲ್ಪಟ್ಟಿದೆ.

ದೊಡ್ಡಬಳ್ಳಾಪುರವಾಸ್ತವ್ಯಳಾದ ಪದ್ಮಸಾಲೆ ಮುನಿಯಮ್ಮನೆಂಬುವವಳು ಹೊಟ್ಟೆಗಿಲ್ಲದೆ ತನ್ನ 9 ತಿಂಗಳ ಮಗುವನ್ನು ಕಂಕುಳಲ್ಲಿಟ್ಟುಕೊಂಡು ಬಾವಿಗೆ ಹೋಗಿ ಬಿದ್ದುಬಿಟ್ಟಳು. ಈಕೆಯ ಹಿಂದೆಬರುತ್ತಿದ್ದ 7 ವರ್ಷದ ಮಗನು ಬಾಯಿಬಡಿದುಕೊಂಡೋಡಿಬಂದು ತಾನೂ ಬಾವಿಗೆ ದುಮ್ಮಿಕ್ಕಿಬಿಟ್ಟನು. ರೈಲ್ವೆಸ್ಟೇಷನ್ನಿನ ರಿಫ್ರೆಷ್‌ಮೆಂಟ್‌ರೂಮಿನಲ್ಲಿ ಕೆಲಸಗಾರನಾಗಿರುವ ಜೋಸಫ್ ಎಂಬುವವನು ಸಮೀಪದಲ್ಲಿ ಹೋಗುತ್ತಿದ್ದು ಹುಡುಗನ ರೋದನವನ್ನು ಕೇಳಿ ಓಡಿಬಂದು ಬಾವಿಯೊಳಕ್ಕಿಳಿದು ದೊಡ್ಡಹುಡುಗನನ್ನು ಮೊದಲು ಹಿಡಿದುಕೊಂಡು ಮೇಲಕ್ಕೆ ತಂದುಬಿಟ್ಟು ಅನಂತರ ತಾಯಿಯನ್ನು ಹಿಡಿದು ಮೇಲಕ್ಕೆ ತಂದನು. ಆ ಎಳೆಮಗುವು ಮಾತ್ರ ನೀರಿನಲ್ಲಿ ಮುಳುಗಿದ್ದಿತಾದರೂ ಬದುಕಿರುವುದು. ಆ ಪುಣ್ಯಾತ್ಮನ ಸಾಹಸದಿಂದ ಮೂವರ ಪ್ರಾಣವುಳಿದಿತು.

ಬೆಂಗಳೂರುಸಿಟಿ ಮ್ಯುನಿಸಿಪಲ್ ಕೌನ್ಸಿಲಿನವರು ಮಿ|| ಎಸ್. ಎನ್. ರಜಾಮಿಯವರ ಸೂಚನೆಯಂತೆ ಆ ಊರಿನ ನಾಲ್ಕುದಿಕ್ಕುಗಳಲ್ಲೂ ಮ್ಯುನಿಸಿಪಲ್‌ಗಡಿಯಾಚೆ 10 ಎಕರೆ ಭೂಮಿಯನ್ನು ಗೋಮಾಳವಾಗಿ ಬಿಟ್ಟುಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಏಕಾಭಿಪ್ರಾಯದಿಂದ ನಿರ್ಧರಿಸಿರುವುದು ಸ್ತೋತ್ರಾರ್ಹವಾಗಿದೆ. ರಾಜಧಾನಿಯ ಬೆಟ್ಟದಕಿಬ್ಬಿ, ಗೊಬ್ಬಳಿಕಟ್ಟೆ ಮೊದಲಾದ ಪ್ರದೇಶಗಳು ಬಹುಕಾಲದಿಂದ ಗೋಮಾಳಗಳಾಗಿ ಬಿಡಲ್ಪಟ್ಟಿದ್ದು ಈಚೆಗೆ ತಪ್ಪಿಸಲ್ಪಟ್ಟಿರುವುದರಿಂದ ದನಗಳ ಮೇವಿಗೆ ಬಹಳ ತೊಂದರೆಯಾಗಿರುವ ವಿಚಾರವು ಇಲ್ಲಿಯ ಕೌನ್ಸಿಲರ ಗಮನಕ್ಕೆ ಬಾರದಿರುವುದು ವಿಷಾದಕರವು. ಇನ್ನಾದರೂ ಬೆಂಗಳೂರು ಮ್ಯು|| ಕೌನ್ಸಿಲಿನವರ ಅನುಕರಣವನ್ನು ಮಾಡಿ ಗೋರಕ್ಷಣಾಭಿಮಾನವನ್ನು ಕಾರ್ಯತಃ ವ್ಯಕ್ತಗೊಳಿಸುವವರಾಗಲೆಂದು ಸೂಚಿಸುತ್ತೇವೆ.

ಮ|| ಗಳಾದ ಗುರುನಂಜಒಡೆಯರವರು, ಮುಡಕತೊರೆ ಶ್ರೀ ವೀರಶೈವಮತಸಂವರ್ಧನೀಸಭಾಸ್ಥಾಪಕರಾದ ಸೋಸಲೆಯ ಕೈ|| ಸಿದ್ಧಲಿಂಗಮರಿದೇವರ ಕುಮಾರರು ಮ|| ಶಿವಸ್ವಾಮಿಯವರು, ಸೇಲಂ ಡಿ|| ಡೆಂಕಣಿಕೋಟೆಯಲ್ಲಿರುವ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರಾದ ಮ|| ಡಿ. ಎನ್. ನೀಲಕಂಠಪ್ಪನವರ ಕುಮಾರರೂ, ಕೊಳ್ಳೇಗಾಲದಲ್ಲಿರುವ ಡಿ|| ಬೋರ್ಡು ಮೆಂಬರಾದ ಶ್ರೀಮಂತ ಜಿ. ಪಿ. ಮಲ್ಲಪ್ಪನವರ ಅಳಿಯಂದರೂ ಆದ ಡಿ. ಎನ್. ಪ್ರಸನ್ನಯ್ಯನವರು, ಮ|| ನೀಲಕಂಠಪ್ಪನವರ ಸೋದರಅಳಿಯಂದರಾದ ಮ|| ನಂಜುಂಡಶೆಟ್ಟರು ಮತ್ತು ಹರಪನಹಳ್ಳಿ ಟಿ. ಎಂ. ಷಡಕ್ಷರಯ್ಯನವರು ಮದ್ರಾಸು ವಿಶ್ವವಿದ್ಯಾಲಯದ ಬಿ. ಎಲ್., ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರುವುದಕ್ಕಾಗಿ ನಾವು ಅವರುಗಳನ್ನು ಅಭಿನಂದಿಸಿ, ಅವರುಗಳು ತಮ್ಮ ಮುಂದಣ ಉದ್ಯೋಗಗಳಲ್ಲಿ ಯಶಸ್ವಿಗಳಾಗಲೆಂದು ಕೋರುತ್ತೇವೆ.

ಯಳಂದೂರು ತಾ|| ಹೊನ್ನೂರು ದೊಂಬಿಕಲಹದ ವಿಚಾರಣೆಯನ್ನು ಯಳಂದೂರಿನಲ್ಲೇ ನಡೆಯಿಸಲು ನಿಯಮಿಸಲ್ಪಟ್ಟಿರುವ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ಎಸ್. ಕೃಷ್ಣಮೂರ್ತಿಯವರ ಕೋರ್ಟಿನಲ್ಲಿ ಕಳೆದ ಶನಿವಾರ 68 ಜನ ಅಪರಾಧಿಗಳಮೇಲೆ ಛಾರ್ಜುಷೀಟು ದಾಖಲ್ಮಾಡಲ್ಪಟ್ಟು 37 ಅಪರಾಧಿಗಳಿಗೆ ರಿಮ್ಯಾಂಡು ತೆಗೆದುಕೊಳ್ಳಲ್ಪಟ್ಟಿತು. ಅಡ್ವೋಕೇಟ್ ಮ|| ಕೆ. ರಾಮಸ್ವಾಮಯ್ಯನವರು ಅಪರಾಧಿಗಳಪರ ವಕೀಲಿಯನ್ನು ವಹಿಸಿ ಅವರನ್ನು ಹೊಣೆಯಮೇಲೆ ಬಿಡಿಸಿಕೊಳ್ಳಲು ಅರ್ಜಿಹಾಕಿ ಮ್ಯಾಜಿಸ್ಟ್ರೇಟರು ಅವರನ್ನು ಬಿಡದೆ ಹೋದುದರಮೇಲೆ ಸೆಷನ್ಸುಕೋರ್ಟಿಗೆ ಅರ್ಜಿಹಾಕಿರುತ್ತಾರೆ. ಅದರ ವಿಚಾರಣೆಯು ನೆನ್ನೆಯದಿನ ನಡೆಯತಕ್ಕದಾಗಿದ್ದಿತು. ತಪ್ಪಿಸಿಕೊಂಡಿರುವ ಅಪರಾಧಿಗಳಮೇಲೆ ವಾರಂಟು ಹುಟ್ಟಿರುತ್ತದೆ, ಮತ್ತು ಇದರ ವಿಚಾರಣೆಯು ಯಳಂದೂರು ಕೋರ್ಟಿನಲ್ಲಿ ತಾ|| 19 ರಲ್ಲಿ ನಡೆಯತಕ್ಕದಾಗಿದೆ.

ಭದ್ರಾ ಅಣೆಕಟ್ಟು ನಾಲೆಗಳ ಉಪಯೋಗಾರಂಭ ಮಹೋತ್ಸವದಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣ.

(12 ನೆಯ ಜೂನ್ 1926.)

ಸಭಿಕರೆ,

ಭದ್ರಾ ಅಣೆಕಟ್ಟು ನಾಲೆಗಳ ವಿನಿಯೋಗ ಕಾರ್ಯದ ಸಮಾರಂಭೋತ್ಸವವನ್ನು ಆಗಮಾಡಿಸಿ, ಆ ಮೂಲಕ ಮಲೆನಾಡಿನ ಪುರೋಭಿವೃದ್ಧಿಗಾಗಿ ಆಗಿರುವ ಈ ಹೊಸ ಪ್ರಯತ್ನದ ವಿಷಯದಲ್ಲಿ ನಮ್ಮ ಅಭಿಮತವನ್ನು ಸೂಚಿಸುವುದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಈ ಸಂದರ್ಭದಲ್ಲಿ ಮಲೆನಾಡಿಗೆ ಸೇರಿದ ಕಡೂರು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಪ್ರತಿನಿಧಿಗಳನ್ನು ಅವರ ರಮಣೀಯವಾದ ಕಾನನ ಪ್ರಾಂತದಲ್ಲಿಯೇ ನೋಡುವ ಅವಕಾಶವು ದೊರೆತಿರುವುದು ನಮಗೆ ಮತ್ತಷ್ಟು ಸಂತೋಷಕರವಾಗಿದೆ.

ತುಂಗಾ ಭದ್ರಾ ನದಿಗಳೆರಡೂ ಸೇರಿ 2,500 ಚದರ ಮೈಲಿಗಳಷ್ಟು ಪ್ರದೇಶದ ನೀರನ್ನು ಆಕರ್ಷಿಸಿಕೊಳ್ಳುತ್ತಿದ್ದರೂ, ಇದುವರೆಗೂ ಅವುಗಳಲ್ಲೊಂದರ ಕಣಿವೆಯಲ್ಲಾದರೂ ಕೂಡ ಯಾವ ಭಾರೀ ನೀರಾವರಿಯ ಕೆಲಸವನ್ನೂ ಕೈಗೊಂಡಿಲ್ಲ. ಈಗ ನಾವು ಪ್ರಾರಂಭಿಸಿರುವ ಅಣೆಕಟ್ಟೇ ಈ ಕಣಿವೆಯ ನೀರನ್ನು ನಮ್ಮ ಸಂಸ್ಥಾನದಲ್ಲಿ ಉಪಯೋಗಿಸಿಕೊಳ್ಳಲು ಮಾಡಿರುವ ಮೊದಲನೆಯ ಪ್ರಯತ್ನ.

ಈ ಪ್ರದೇಶಕ್ಕೆ ದುರ್ಭಿಕ್ಷನಿವಾರಣೆಗೋಸ್ಕರ ಜಲವಸತಿಯನ್ನುಂಟುಮಾಡಿಕೊಡಬೇಕೆಂಬ ಉದ್ದೇಶದಿಂದ, ಭದ್ರಾ ಅಣೆಕಟ್ಟು ನಾಲೆಗಳ ಕೆಲಸದ ಅಂದಾಜು 1897 ನೆಯ ಇಸವಿಯಷ್ಟು ಹಿಂದೆಯೇ ತಯಾರಾಯಿತು. ನಾನಾ ಕಾರಣಗಳಿಂದ ಆ ಕೆಲಸವು 1917 ರ ವರೆಗೂ ತಡವಾಯಿತು, ಆಗ ನಮ್ಮ ಸರ್ಕಾರದವರು ಆ ವಿಷಯವನ್ನು ಪುನಃ ವಿಚಾರಮಾಡಿ, ಹಿಂದಿನ ಸಂಕಲ್ಪವನ್ನು ಊರ್ಜಿತಮಾಡಿ, 1918 ನೆಯ ಏಪ್ರಿಲ್ ತಿಂಗಳಲ್ಲಿ ಕೆಲಸದ ಪ್ರಾರಂಭಕ್ಕೆ ಅನುಮತಿಕೊಟ್ಟರು. ಈ ಏರ್ಪಾಟು ಸಂಪೂರ್ಣವಾಗಿ ನೆರವೇರುವುದಕ್ಕೆ, 16 ಲಕ್ಷ ರೂಪಾಯಿಗಳ ವೆಚ್ಚವು ಮುಟ್ಟಬಹುದೆಂದು ಅಂದಾಜಾಗಿದೆ ; ಹಾಗೆ ಅದು ನೆರವೇರಿದ ಬಳಿಕ, ಅದರಿಂದ 116 ಗ್ರಾಮಗಳಿಗೆ ಜಲಸೌಕರ್ಯವುಂಟಾಗುವುದಕ್ಕೆ, ಆ ಮೂಲಕ, ಸಂಸ್ಥಾನಕ್ಕೆ ಇದು ಒಂದು ಲಾಭಕರವಾದ ಏರ್ಪಾಟು ಎನ್ನಿಸುವಷ್ಟರಮಟ್ಟಿನ ಒಳ್ಳೆಯ ಪ್ರತಿಫಲವೂ ದೊರೆತೀತೆಂಬ ನಿರೀಕ್ಷಣೆ ಇದೆ.

ಮಲೆನಾಡು ಭಾರೀ ಮಳೆಯ ಪ್ರದೇಶವೆಂದು ಪ್ರಸಿದ್ಧವಾಗಿರುವುದರಿಂದ, ಇಲ್ಲಿ ನೀರಾವರಿಯ ಕೆಲಸಗಳನ್ನು ನಡಿಸುವುದು ಅನವಶ್ಯಕವೆಂದು ಬಹುಕಾಲ ಅಭಿಪ್ರಾಯವಿತ್ತು. ಆದರೆ ಈ ಭೂಮಿಯು ಬಂಡೆ ಕೊರಚುಕಲ್ಲುಗಳಿಂದ ತುಂಬಿದ್ದಾಗಿಯೂ ಇದರ ಇಳಿಮೇಡುಗಳು ಕಡಿದಾಗಿಯೂ ಇರುವುದರಿಂದ, ಇಲ್ಲಿ ಬಿದ್ದ ಮಳೆಯನೀರು ನೆಲದೊಳಕ್ಕೆ ಸ್ವಲ್ಪಮಾತ್ರವೂ ಇಳಿದು ನಿಲ್ಲದೆ ಬೇಗನೆ ಹರಿದು ತಪ್ಪಿಸಿಕೊಂಡು ಹೋಗುತ್ತದೆ. ಕೆಲವೆಡೆಗಳಲ್ಲಿ ಜನರಿಗೂ ದನಕರುಗಳಿಗೂ ಬೇಸಗೆಯಲ್ಲಿ ಕುಡಿಯುವುದಕ್ಕಾದರೂ ನೀರು ಸಿಕ್ಕುವುದು ಕಷ್ಟವಾಗಿದೆ. ಇಲ್ಲಿ ಭಾರೀ ಮಳೆ ಬೀಳುತ್ತಿದ್ದಾಗ್ಯೂ, ಬೇಸಗೆಯ ಸಾಗುವಳಿಗೆ ಮೈದಾನದಲ್ಲಿರುವುದಕ್ಕಿಂತ ಇಲ್ಲಿ ಜಲಾನುಕೂಲ್ಯವು ಕಡಮೆಯಾಗಿದೆ. ಆದುದರಿಂದ ಈ ಪ್ರಾಂತದಲ್ಲಿ ಮೇಲ್ಪರದ ಸಾಗುವಳಿಗೂ, ಅಲ್ಲಲ್ಲಿ ಗೃಹೋಪಯೋಗಕ್ಕೂ ಸಹ, ಕೆರೆ ಕಾಲುವೆಗಳು ಅವಶ್ಯಕವೆಂದು ತೋರುತ್ತದೆ.

ಇದೂ ಅಲ್ಲದೆ, ಮಲೆನಾಡಿಗೆ ಅನಾರೋಗ್ಯದ ಪ್ರದೇಶವೆಂಬ ಅಪಖ್ಯಾತಿಯುಂಟಾಗಿದೆ. ಈ ಕೊರತೆಯನ್ನು ಹೋಗಲಾಡಿಸಲು ವಿದ್ಯಾಪ್ರಚಾರವನ್ನು ಹೆಚ್ಚಿಸಿ, ಜನರಿಗೆ ಅವರ ವಾಯುಗುಣಕ್ಕೆ ತಕ್ಕ ಊಟ ಉಡುಪುಗಳ ಉಪಯೋಗವನ್ನು ಕಲಿಸಬೇಕು—ಎಂದರೆ ಅವರ ಜೀವನ ರೀತಿಯನ್ನು ಉತ್ತಮಗೊಳಿಸಬೇಕು. ಇದು ಅರ್ಥವಿಚಾರಕ್ಕೆ ಸೇರಿದ ವಿಷಯ. ಇದನ್ನು ಸಾಧಿಸುವುದಕ್ಕೆ ವ್ಯವಸಾಯಕ್ರಮವನ್ನು ಉತ್ತಮಪಡಿಸಿ, ಭೂಮಿಯಿಂದ ಹೆಚ್ಚು ಬೆಳೆಯನ್ನು ತೆಗೆಯುವುದೇ ಮೊದಲನೆಯ ಪ್ರಯತ್ನವಾಗಿರುತ್ತದೆ. ಜನರು ಶಾಸ್ತ್ರೀಯವಾದ ಕೃಷಿಪದ್ಧತಿಗಳನ್ನು ಅವಲಂಬಿಸಿ, ಒಳ್ಳೆಯ ಜಲವೃದ್ಧಿಯಿಂದ ಸಾಧ್ಯವೂ ಹೆಚ್ಚು ಬೆಲೆಬಾಳತಕ್ಕವೂ ಆದ ಕಬ್ಬಿನಂಥಾ ಬೆಳೆಗಳನ್ನು ಬೆಳೆಸಲು ಕಲಿತುಕೊಂಡರೆ ಆಗ ಈ ಪ್ರದೇಶವು ಈಗಿಗಿಂತ ಬಹಳ ಹೆಚ್ಚಾದ ಪ್ರಜಾವರ್ಗಕ್ಕೆ ಆರೋಗ್ಯವನ್ನೂ ಸೌಖ್ಯವನ್ನೂ ದೊರಕಿಸಿಕೊಡಲಾಗುವುದು.

ಈ ಡಿಸ್ಟ್ರಿಕ್ಟುಗಳ ಜನರ ಸಂಪದ್ವೃದ್ಧಿಗಾಗಿಯೂ ಸಾಮಾಜಿಕ ಹಿತಕ್ಕಾಗಿಯೂ ನಡೆಯುವ ಕಾರ್ಯಗಳು ನಮಗೆ ಅತ್ಯಂತ ಪ್ರಿಯವಾದುವೆಂದೂ, ಅವು ನಮ್ಮ ಸರ್ಕಾರದ ತೀವ್ರ ಗಮನಕ್ಕೆ ಎಂದಿನಂತೆ ಪಾತ್ರವಾಗಿರುವುವೆಂದೂ ಅವರಿಗೆ ನಾವು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇವೆ. ಈ ಭದ್ರಾ ಏರ್ಪಾಟಿನಿಂದ ಆಗುವ ಜಲಸೌಕರ್ಯದ ದೆಸೆಯಿಂದ ಈ ಪ್ರದೇಶದ ಉತ್ಪತ್ತಿಯು ತಕ್ಕಮಟ್ಟಿಗೆ ಹೆಚ್ಚಾಗುವುದು. ಜನರು ಸಹಾಯಕ್ಕೆ ಬಂದು ಇದನ್ನು ಜಯಪ್ರದವನ್ನಾಗಿ ಮಾಡಿದರೆ, ಕಾಲಕ್ರಮದಲ್ಲಿ ಈ ನದಿಯಿಂದ ಒಂದು ಭಾರೀ ಜಲಾಶಯವೂ ನಿರ್ಮಿತವಾಗಿ, ಅದು ಹೆಚ್ಚು ಸಾಗುವಳಿಗೂ, ವಿದ್ಯುಚ್ಛಕ್ತಿಯ ಉತ್ಪತ್ತಿಗೂ ಸಾಧಕವಾಗುವುದು. ಶಿಕಾರಿಪುರದ ತಾಲ್ಲೂಕಿನ ಅಂಜನಾಪುರದ ಬಳಿ ಕುಮುದ್ವತೀನದಿಗೆ ಅಣೆಹಾಕಿ ಒಂದು ಜಲಾಶಯವನ್ನು ನಿರ್ಮಾಣಗೊಳಿಸಬೇಕೆಂಬ ಸಂಕಲ್ಪವು ಕಾರ್ಯೋನ್ಮುಖವಾದ ಆಲೋಚನೆಯಲ್ಲಿದೆ. ಸೂಳೆಕೆರೆಗೆ ಸಂಬಂಧಪಟ್ಟ ಏರ್ಪಾಟನ್ನು ತಿದ್ದಿ ಇನ್ನೂ ಒಳ್ಳೆಯ ಪ್ರತಿಫಲವನ್ನು ಪಡೆಯಬಹುದೆಂಬ ನಿರೀಕ್ಷಣೆಯೂ ಇದೆ.

ಸಂಸ್ಥಾನದ ಯಂತ್ರಕರ್ಮಾಭಿವೃದ್ಧಿಯ ಒಂದು ಭಾಗವಾಗಿ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯನ್ನು ಇಲ್ಲಿಗೆ ಸಮೀಪದಲ್ಲಿಯೇ ಉಪಕ್ರಮಿಸಿದ್ದೇವೆ. ಈ ಕಾರ್ಖಾನೆಯ ಉಪಯೋಗಕ್ಕೋಸ್ಕರ ಈಗಾಗಲೇ ಸುಮಾರು ೫೬ ಮೈಲಿಗಳ ದೂರ ಟ್ರಾಂವೇ ಬಂಡಿ ನಡೆಯುತ್ತಿದೆ. ಇಷ್ಟರಲ್ಲಿಯೇ ರೈಲ್ವೇ ಕೆಲಸವನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪುನಃ ಪ್ರಾರಂಭಿಸುವವರಾಗಿದ್ದೇವೆ. ಗ್ರಾಮಾಂತರ ಪ್ರದೇಶಗಳ ಪರಿಶುದ್ಧಿಯನ್ನು ಹೆಚ್ಚಿಸುವುದಕ್ಕಾಗಿ ಕೆಲವು ಕೆಲಸಗಳನ್ನು ಮಾಡಿಸುತ್ತಿದ್ದೇವೆ; ಹಳ್ಳಿಗಳ ದಾರಿಗಳನ್ನು ಹೆಚ್ಚು ಮಾಡುವುದಕ್ಕಾಗಿ ಬೇರೆ ಒಂದು ಸಿಬ್ಬಂದಿಯನ್ನು ನಿಯಮಿಸಿದೆ; ಈಚೆಗೆ ಕೊಪ್ಪ, ಮೂಡಿಗೆರೆ, ಕಳಸ, ಕಡೂರು—ಈ ಊರುಗಳಿಗೆ ನಲ್ಲಿಗಳಿಂದ ನೀರನ್ನೊದಗಿಸುವ ಏರ್ಪಾಡುಗಳನ್ನು ಮಂಜೂರ್ ಮಾಡಲಾಗಿದೆ. ಶಿವಮೊಗ್ಗೆಯ ಜಲವಸತಿಯನ್ನು ದೊಡ್ಡದು ಮಾಡುವುದಕ್ಕಾಗಿ ಹಣವನ್ನು ಬೇರೆ ಒದಗಿಸಿದೆ. ವೈದ್ಯಸಹಾಯದ ಏರ್ಪಾಡುಗಳನ್ನು ವಿಸ್ತಾರಪಡಿಸುತ್ತಿದೆ. ವಿದ್ಯಾಪ್ರಸಾರವನ್ನು ಹೆಚ್ಚಿಸಿ, ಜಮೀನ್ದಾರರಿಗೂ ರೈತರಿಗೂ, ಕೈಕೆಲಸದವರಿಗೂ, ವರ್ತಕರಿಗೂ, ಅವರವರ ಕಸಬುಗಳಲ್ಲಿ ಕುಶಲತೆಯನ್ನೂ, ಸಂಪಾದನೆಯನ್ನೂ ಅವರವರು ಹೆಚ್ಚಿಸಿಕೊಳ್ಳುವಂತೆ ಮಾಡಲು ಸರ್ಕಾರವು ಕೊಡಬಹುದಾದ ಎಲ್ಲ ಬಗೆಯ ಸಹಾಯವನ್ನೂ ಒದಗಿಸಬೇಕೆಂಬುದು ನಮ್ಮ ಅಭಿಲಾಷೆ. ಮಲೆನಾಡಿನ ಅಭ್ಯುದಯವನ್ನು ಪುನರುಜ್ಜೀವನಗೊಳಿಸುವ ಮಾರ್ಗಗಳಲ್ಲಿ ಯಾವ ಒಂದನ್ನೂ ಪರೀಕ್ಷಿಸದೆ ಬಿಡಬಾರದೆಂದೂ ಸಂಕಲ್ಪಿಸಿರುವ ಅನೇಕ ಏರ್ಪಾಟುಗಳನ್ನು ಸಾಧಿಸುವುದರಲ್ಲಿ ಈ ಪ್ರಾಂತದ ಪ್ರಜಾಪ್ರಮುಖರು ಉತ್ಸಾಹದಿಂದ ಸರ್ಕಾರದೊಡನೆ ಸೇರಿ ಕೆಲಸ ಮಾಡಬೇಕೆಂದೂ ನಮಗೆ ತೀವ್ರವಾದ ಆಶೆ ಇದೆ.

ಈ ಕೆಲಸವು ಮುಂದೆ ಮಲೆನಾಡಿನಲ್ಲೆಲ್ಲವೂ,-ತತ್ರಾಪಿ ತುಂಗಾ, ಪ್ರಕೃತ ಭದ್ರಾ, ಕಣಿವೆಗಳಲ್ಲಿ ವಿಶೇಷವಾಗಿ--ನಡೆಯಬೇಕಾಗಿರುವ ಜಲವಸತಿಯ ಏರ್ಪಾಟುಗಳಿಗೆ ಶುಭಸೂಚಕವಾದ ಅಂಕುರಾರ್ಪಣೆಯಾಗಲೆಂದು ನಾವು ಹಾರೈಸೋಣ.

ಇನ್ನು ಈ ಭದ್ರಾ ಅಣೆಕಟ್ಟೆ ನಾಲೆಗಳು ಉಪಯೋಗಾರ್ಹವಾಗಲೆಂದು ನಾವು ಸಂತೋಷದಿಂದ ಹರಸುತ್ತೇವೆ.

ನೋಟೀಸು.

ಹುಣಸೂರು ತಾಲ್ಲೋಕು ಬೆಟ್ಟದಪುರದ ಹೋಬಳಿ ನಂದೀಪುರಗ್ರಾಮದಲ್ಲಿರುವ ಮಾಯಾಚಾರಿ ಮಗ ಚನ್ನಯಾಚಾರಿಯಾದ ನಾನು ಈ ಮೂಲಕ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ—ನನಗೆ ಮನ್ವಾಚಾರಿ ಉರುಫ್ ತಮ್ಮಯ್ಯಾಚಾರಿ, ದಕ್ಷಿಣಾಚಾರಿ ಮತ್ತು ಮಾಯಾಚಾರಿ ಎಂಬದಾಗಿ ಮೂರುಜನ ಮಕ್ಕಳಿರುತ್ತಾರೆ. ಈ ಪೈಕಿ ಹಿರೀಮಗನಾದ ತಮ್ಮಯ್ಯಾಚಾರಿಯು ಮಾತ್ರ, ಮೇಜರಾಗಿರುತ್ತಾನೆ. ಇವನಿಗೆ ನಾನೇ ಮುಂಚೆ ಮದುವೆ ಮಾಡಿರುತ್ತೇನೆ. ಬಾಕಿ ಇಬ್ಬರುಮಕ್ಕಳು ಮೈನರುಗಳು. ಈ ಹಿರೀಮಗನಾದ ತಮ್ಮಯ್ಯಾಚಾರಿಯು ಕೆಟ್ಟಜನರ ಸಹವಾಸದಿಂದ ಈಗ ಎರಡುವರ್ಷದಿಂದಲೂ ನನ್ನ ಮನೆಯನ್ನು ಬಿಟ್ಟು ಪೋಲಿಯಾಗಿ ಸಿಕ್ಕಿದಕಡೆ ತಿರುಗಿಕೊಂಡು ಇರುತ್ತಾನೆ. ಆದ್ದರಿಂದ ಇವನಿಗೆ ಯಾರಾದರೂ ಸಾಲಾ ವಗೈರೆ ಕೊಟ್ಟಿದ್ದಲ್ಲಿ ಅಥವಾ ಮುಂದೆ ಕೊಟ್ಟಲ್ಲಿ ನನ್ನ ಸ್ವಯಾರ್ಜಿತವಾದ ಮನೆ ಮತ್ತು ಜಮೀನುಗಳು ನನ್ನ ಹುಕೋಟೆಯಲ್ಲಿಲ್ಲದೆ ಪೋಲಿಯಾಗಿ ತಿರುಗಿಕೊಂಡಿರುವ ಮನ್ವಾಚಾರಿ ಉರುಫ್ ತಮ್ಮಯ್ಯಾಚಾರಿ ಮಾಡಿದ ಸಾಲಕ್ಕೆ ಗುರಿಯಾಗುವುದಿಲ್ಲವೆಂದು ಇದರ ಮೂಲಕ ತಿಳಿಸಿದೆ.

ನಂದೀಪುರದ ಚನ್ನಯಾಚಾರಿ ರುಜು.

ಲಂಡನ್ನದಲ್ಲಿ ಒಬ್ಬ ಫಕೀರನ ದಿವ್ಯಸಾಮರ್ಥ್ಯದ ಪ್ರಯೋಗಗಳು.

ಡಾಕ್ಟರ ತಾಹರಾಬೇ ಎಂಬ ಹೆಸರಿನ ಒಬ್ಬ ಫಕೀರನು ಲಂಡನ್ನದ ಒಂದು ನಾಟಕಶಾಲೆಯಲ್ಲಿ ತನ್ನ ದಿವ್ಯಸಾಮರ್ಥ್ಯದ ಅದ್ಭುತ ಪ್ರಯೋಗಗಳನ್ನು ಅಲ್ಲಿಯ ಅನೇಕಮಂದಿ ಡಾಕ್ಟರರ ಮುಂದೆ ಮಾಡಿ ತೋರಿಸಿದನು. ಇವುಗಳನ್ನು ನೋಡಿ ಎಲ್ಲರೂ ಅತ್ಯಾಶ್ಚರ್ಯಪಟ್ಟರು. ಅವುಗಳು ಯಾವವೆಂದರೆ.— 1. ಫಕೀರನು ತನ್ನ ಕುತ್ತಿಗೆಯ ಹಿಂಬದಿಯಲ್ಲಿಯೂ ಕಾಲುಗಳ ಹಿಂಬದಿಯಲ್ಲಿಯೂ ಕುಡುಗೋಲುಗಳನ್ನು ಕಟ್ಟಿಕೊಂಡು ಮಲಗಿದಾಗ್ಗೆ ಅವನಿಗೆ ಒಬ್ಬ ಪೈಲವಾನನು ಸುತ್ತಿಗೆಯಿಂದ ಎಷ್ಟು ಪೆಟ್ಟುಗಳನ್ನು ಹೊಡೆದಾಗ್ಯೂ ಅವನಿಗೆ ಯಾವತರದ ನೋವೂ ಆಗಲಿಲ್ಲ. 2. ಅವನು ತನ್ನ ಗಲ್ಲಗಳಿಗೆ ಸೂಜಿಗಳನ್ನು ಚುಚ್ಚಿಕೊಂಡು ತನ್ನ ಗಂಟಲನ್ನು ಬರ್ಚಿಯಿಂದ ಇರಿದುಕೊಂಡು ನಾಟಕಮನೆಯಲ್ಲಿ ಅಡ್ಡಾಡಿದನು. ಅವನು ಚುಚ್ಚಿಕೊಂಡ ಸ್ಥಳದಲ್ಲಿ ಏನೂ ರಕ್ತವು ಹರಿಯಲಿಲ್ಲ. ಆದರೆ ಅವನು ತನ್ನ ಗಂಟಲದೊಳಗಿನ ಬರ್ಚಿಯನ್ನು ಹಿರಿದನಂತರ ಸ್ವಲ್ಪ ರಕ್ತವು ಸೋರಿತು. 3. ಒಬ್ಬ ಡಾಕ್ಟರನನ್ನು ಕರೆದು ಕೇಳಲಾಗಿ ಅವನಿಗೆ ತನ್ನ ಹೆಂಡತಿಯು ಆಹೊತ್ತಿನದಿವಸ ನಾಟಕಶಾಲೆಗೆ ಬಂದದ್ದು ಗೊತ್ತಿತ್ತು. ಆದರೆ ಆಕೆಯು ಎಲ್ಲಿ ಕೂತಿರುತ್ತಾಳೆಂಬುವದು ಗೊತ್ತಿದ್ದಿಲ್ಲ. ಆಗ ಈ ಫಕೀರನು ಆ ಡಾಕ್ಟರನನ್ನು ಅವನ ಹೆಂಡತಿಯು ಕೂತ ಸ್ಥಳಕ್ಕೆ ನೆಟ್ಟಗೆ ಕರೆದುಕೊಂಡು ಹೋದನು. 4. ಜನರು ತಮ್ಮ ಮನಸ್ಸಿಗೆ ಬೇಕಾದ್ದನ್ನು ಬರೆದು ತಮ್ಮ ಹತ್ತಿರ ಇಟ್ಟುಕೊಂಡಾಗ್ಯೂ ಈ ಫಕೀರನು ದೂರದಿಂದಲೇ ಅದರಲ್ಲಿ ಬರೆದಂತೆಯೇ ಓದಿ ಹೇಳಿದನು. 5. ಒಬ್ಬ ತರುಣಮನುಷ್ಯನನ್ನು ಈ ಫಕೀರನು ತನ್ನ ವಿದ್ಯೆಯಿಂದ ಸುಷುಪ್ತಾವಸ್ಥೆಗೆ ತಂದು (ಹಿಪ್ನಾಟಿಜಮ್ಮ ಮಾಡಿ) ಅವನಿಗೆ ಬೇಕಾದ ಪ್ರಶ್ನೆಗಳನ್ನು ಕೇಳಿಕೊಳ್ಳಿರೆಂದು ಜನರಿಗೆ ಹೇಳಿ ಅವರು ಕೇಳಿದ್ದನ್ನೆಲ್ಲ ತಾನು ದೂರದಿಂದಲೇ ನಿಂತುಕೊಂಡು ಸರಿಯಾದ ಉತ್ತರ ಕೊಟ್ಟನು. 6. ಡರ್ಬಿ ಕುದುರೆಯ ಶರ್ಯತಿನಲ್ಲಿ ಯಾರು ಗೆದ್ದರೆಂದು ಕೇಳಬೇಕೆಂದು ಒಬ್ಬ ಮನುಷ್ಯನು ಧ್ಯಾನಿಸಿಕೊಂಡು ಈ ಸುಷುಪ್ತಾವಸ್ಥೆಯ ಮನುಷ್ಯನನ್ನು ಮುಟ್ಟಿಕೊಂಡು ನಿಂತಿರಲಾಗಿ ಫಕೀರನು ಶರ್ಯತಿನಲ್ಲಿ ಗೆದ್ದವರ ಹೆಸರನ್ನು ಸರಿಯಾಗಿ ಹೇಳಿದನು. 7. ಒಬ್ಬ ಚಿಕ್ಕಹುಡಿಗಿಯು ತನ್ನ ಮನೆತನದ ಸಮಾಚಾರವನ್ನು ಕೇಳಲು ಫಕೀರನು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟನು. 8. ಫಕೀರನು ತನ್ನ ಮೂಗಿನ ಹೊಳ್ಳೆಗಳಲ್ಲಿಯೂ ಬಾಯಿಯಲ್ಲಿಯೂ ಅರಳೆಯನ್ನು ತುಂಬಿಕೊಂಡು ತನ್ನ ಮೋರೆಯಮೇಲೆ ಮುಸುಕು ಹಾಕಿಸಿಕೊಂಡು ಶವದ ಪೆಟ್ಟಿಗೆಯಲ್ಲಿ ತಾನು ಮಲಗಿಕೊಂಡು ಬಿಟ್ಟನು. ಆ ಪೆಟ್ಟಿಗೆಯಮೇಲೆ 10 ನಿಮಿಷಗಳತನಕ ಮುಸುಕು ಮುಚ್ಚಿಟ್ಟರು. ಆಮೇಲೆ ಆ ಪೆಟ್ಟಿಗೆಯನ್ನು ಹೊರಗೆ ತೆಗೆಸಿ ನೋಡಲಾಗಿ ಅವನಿಗೆ ಎಚ್ಚರಿಕೆಯು ಇದ್ದಿಲ್ಲ. ಅವನ ತುಟಿಗಳೆಲ್ಲ ಉಬ್ಬಿಹೋಗಿದ್ದವು. ಮುಂದೆ 2 ನಿಮಿಷಗಳಮೇಲೆ ಅವನು ಪೂರ್ಣವಾಗಿ ಎಚ್ಚರಗೊಂಡನು. (ಚಂದ್ರೋದಯ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

(1) ಬಿ. ಎಸ್. ಕರಿಸಿದ್ಧಪ್ಪ—ನಿಮ್ಮ ಭದ್ರಾವತಿಯ ಸ್ಕೂಲ್ ಮೇಸ್ತರ ವಿಚಾರವು ಪ್ರಕಟಿಸಲರ್ಹವಾದುದಲ್ಲ.

WANT OF A GOODS SHED AT SHIMOGA RAILWAY STATION.

Shimoga is a centre for beatal-nut market. Nearly 4 lacks of maunds *i.e.* 80 thousand bags are exported from this market every year. The business done amounts to from 60 to 75 lacks of rupees. But there is no Goods shed at Shimoga Railway Station to stock the bags before loading them in the wagons. These bags are placed on the open platform from morning till sunset exposed to heat and rain. Thus of the weight per bag 1/16th to 1/8th maund is lost and the beatal-nut merchants are put into great loss. To prove this a recent instance is cited here. On the 24th May 26, nearly 600 bags were sent by the merchants to the station for export. As usual they were lying on the open platform and in the evening they were drenched by rain. By this the merchants are put to a loss to the extent of 10 thousand rupees.

These beatal-nut merchants have repeatedly brought their grievences to the notice of railway authorities and the Government. Even sir A. R. Banarjee and Mr. Hamza Husain Sahib, when they were Dewan and acting Dewan respectively promised to redress the difficulties of these merchants but their promises have proved to be mere lip sympthies. Mr. H. G. Basavappa, the Legislative Council Member will put interpelations on this subject in the ensuing session of the Council and what answers the Government give will be anxiously watched by the merchants here. Now at least let the Government and the Railway authorities realise that the grievences of the merchants are not mere fantoms but actual realities and do the need-ful in the matter without any further delay.

K. H. Halappa, B.A.,
Shimoga.

ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ ?

ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳೆಂಬವರ

ಅಜ್ಞತಾಪ್ರಕಾಶನಂ

(ಮುಖ್ಯಭಾಗವು).

- ಸುವರ್ಣರತ್ನಪ್ರಮುಖವಸ್ತುವೃದ್ಧ್ಯೈಜೀವನಾಶ್ | ಅತಿವರ್ಣೋಯದಿಚರೇತ್ಸೋಯಂ ಪಾತಕಿನಾಂವರಃ " ಎಂಬ ಸೂಕ್ಷ್ಮಾಗಮವಚನ ರೀತ್ಯಾ, ವಿರಕ್ತರಿಗೆ ಅತಿವರ್ಣಾಶ್ರಮಿತ್ವವನ್ನು ಇವರೇ ಒಪ್ಪಿಕೊಂಡಮೇಲೆ ವೀರಶೈವರಲ್ಲಿ ಅತಿವರ್ಣಾಶ್ರಮಿಗಳು ಗುರುಗಳಿಗೂ ಗುರುಗಳೆಂಬ ವಚನವನ್ನು ಒಪ್ಪಿಕೊಳ್ಳಬೇಕಲ್ಲವೆ ?

ಮಹಾಶಯರೇ ! ಚರಪತಿಗಳೆಂದರೆ - ಚರಸ್ಯಾಸ್ + ಪತಿಃ = ಚರಪತಿಃ " ಎಂಬ ಸಮಾಸಾರ್ಥಾನುಗುಣವಾಗಿ ಚರಪತಿಗಳು ಪಟ್ಟಾಧಿಕಾರಿಗಳ ಅಧೀನದಲ್ಲಿದ್ದು, ತದಾಜ್ಞಾನುಸಾರವಾಗಿ ಅಲ್ಲಲ್ಲಿ ಸಂಚರಿಸಿ ಧನಧಾನ್ಯಗಳನ್ನಾರ್ಜಿಸಿ, ಪಟ್ಟಾಧಿಕಾರಿಗಳ ವಶಕ್ಕೆ ತಂದುಕೊಡುವವರಾದುದರಿಂದ ಅವರಿಗೆ ಸಂಚರಿಸುವ ಒಡೆಯರೆಂದು ಹೆಸರು. ಪಟ್ಟಾಧಿಕಾರಿಗಳಿಗೆ ಮಠದಲ್ಲಿ ಕೂತುಕೊಂಡು ಅಧಿಕಾರಮಾಡುವ ಒಡೆಯರೆಂದು ಹೆಸರು. ಇವರಿಬ್ಬರಿಗೆ ಅಷ್ಟಾವರಣಘಟಿತ ಜಂಗಮತ್ವವು ಸಂಭವಿಸುವುದಿಲ್ಲ. ಆದುದರಿಂದ ಸಿದ್ಧಾಂತಶಿಖಾಮಣಿಯಲ್ಲಿ ಇವರನ್ನು ಉಭಯ ಪೂಜಾಸ್ಥಲದಲ್ಲಿ ಸೇರಿಸಿರುವರು.

ಲಿಂಗವು ಜಂಗಮಲಿಂಗ, ಅಜಂಗಮಲಿಂಗ ಎಂದು ಎರಡು ವಿಧವು. ಸಂಚರಿಸುತ್ತಿರುವವನಾಗಿಯೂ, ಸರ್ವಸಂಗ ಪರಿತ್ಯಾಗಮಾಡಿದವನಾಗಿಯೂ ಇರುವ ವಿರಕ್ತನೇ ಜಂಗಮಲಿಂಗವು. ಶಿಲಾದಿಗಳಿಂದ ನಿರ್ಮಿತವಾದ ಲಿಂಗವೇ ಅಜಂಗಮಲಿಂಗವು. ವಿರಕ್ತನಾದ ಶಿವಯೋಗಿಯ ಪೂಜೆಯು ನಾಶರಹಿತವಾದ ಫಲವನ್ನುಂಟುಮಾಡುವುದು. ಗೃಹಕ್ಕೆ ಬಿಜಯಂಗೈಸಿದ ಶಿವಯೋಗಿಗೆ ಅವಮಾನಪಡಿಸಿದವನು ನರಕಕ್ಕೆ ಹೋಗುವನು. ಶಿವಯೋಗಿಯನ್ನು ಸಾಕ್ಷಾದೀಶ್ವರನೆಂದು ತಿಳಿದು ಭಕ್ತಿಯಿಂದ ಲಿಂಗವನ್ನೂ, ಗುರುಗಳನ್ನೂ ಪೂಜಿಸುವಂತೆ ಜಂಗಮನನ್ನೂ ಪೂಜಿಸತಕ್ಕದ್ದು. ಲಿಂಗಪಾದೋದಕ ಪ್ರಸಾದಗಳನ್ನು ಸ್ವೀಕರಿಸುವಂತೆ ಗುರುಜಂಗಮರ ಪಾದೋದಕಪ್ರಸಾದಗಳನ್ನು ಪೂರ್ಣಭಕ್ತಿಯಿಂದ ಸ್ವೀಕರಿಸತಕ್ಕದ್ದು. ಶಿವಯೋಗಿಗೆ ಕೊಟ್ಟ ದಾನವು ನಿತ್ಯಫಲವನ್ನು ಕೊಡುವುದು. ಎಂದು ಹೇಳಿದ ಪ್ರಮಾಣವಚನಗಳಿಗೆಲ್ಲಾ ಗತಿಯೇ ಇಲ್ಲದಂತಾಗುತ್ತದಲ್ಲವೇ ?

ಮಹನೀಯರೇ ! ಈ ಸುಧಾಕರರು, - ಸನ್ಯಾಸಿಯನ್ನು ಪೂಜಿಸಿದವನಿಗೂ, ಪೂಜಿಸಿಕೊಂಡವನಿಗೂ ನರಕಪ್ರಾಪ್ತಿಯಾಗುವುದು. ಸನ್ಯಾಸಿಗಳಿಗೆ ಆಂದೋಳಿಕಾದ್ಯಾರೋಹಣವು ಇಲ್ಲವು. ಭಕ್ಷ್ಯಭೋಜ್ಯಾದಿಗಳನ್ನು ತಿನ್ನಕೂಡದೆಂದು ಪ್ರಾಕೃತಶಾಸ್ತ್ರಸ್ಥ ಶ್ಲೋಕಗಳೊಡನೆ ಮಾರುದ್ದ ನಾಲಿಗೆಯನ್ನು ನೀಡಿದ್ದಾರೆ. ಈ ಶಾಸ್ತ್ರಿಗಳು ಪ್ರಾಕೃತ ಧರ್ಮಶಾಸ್ತ್ರದಲ್ಲಿರುವ ಎಲ್ಲಾ ಧರ್ಮಗಳನ್ನೂ ಅಂಗೀಕರಿಸುವರೇ ? ಹಾಗಾದರೆ, ಪಶುಹಿಂಸಾಪೂರ್ವಕವಾದ ಯಾಗಗಳನ್ನು ಮಾಡಿ ವಪೆಯನ್ನು ಸೇವಿಸುತ್ತಾರೆಯೇ ? ಸನ್ಯಾಸಸ್ವೀಕಾರದಲ್ಲಿ ಲಿಂಗರೂಪವಾದ ಯಜ್ಞೋಪವೀತವನ್ನು ಕಿತ್ತುಹಾಕುವರೇ ? ಇಲ್ಲ. ಆ ಸಂದರ್ಭದಲ್ಲಿ ವೀರಶೈವಶಾಸ್ತ್ರವನ್ನು ಒಡ್ಡುವರಲ್ಲವೇ ? ಹಾಗೆ ಒಡ್ಡುವುದಾದರೆ ವೀರಶೈವ ಸನ್ಯಾಸಸ್ಥಾಪನೆಗಾಗಿ ಪ್ರಾಕೃತಧರ್ಮಶಾಸ್ತ್ರವನ್ನು ತೆಗೆದುಕೊಳ್ಳುವುದಕ್ಕೆ ಬುದ್ಧಿಯು ಹೇಗೆ ಪ್ರವರ್ತಿಸಿತು ? ಸಾಮಾನ್ಯಶಾಸ್ತ್ರವು ವಿಶೇಷ ಶಾಸ್ತ್ರದಿಂದ ಬಾಧಿಸಲ್ಪಡುವುದೆಂಬ ಅಂಶವು ಈ ಧರ್ಮಸುಧಾಕರರಿಗೆ ಗೊತ್ತಿಲ್ಲವೇನೋ ? ನಿಜ. ಈ ಭಾಗಗಳೆಲ್ಲವೂ ಶಾಸ್ತ್ರದಲ್ಲಿ ಬರುವುದೇ ಹೊರತು ಕಾವ್ಯದಲ್ಲಿ ಬರುವುದಿಲ್ಲ. ಶಾಸ್ತ್ರಗಂಧ ದೂರರಿಗೆ ಈ ನಿಯಮಜ್ಞಾನವೆತ್ತಣದು ? ನೀವು ಸಾರುತ್ತಿರುವ ಅಲಿಂಗಿ ವಿಷಯಕವಾದ ಸಾಮಾನ್ಯವಾಕ್ಯಗಳ ಮೇಲೆ ವಿಶೇಷ ವಾಕ್ಯಗಳನ್ನು ಚೆನ್ನಾಗಿ ಪರಿಶೀಲಿಸಿರಿ.

ನಿಖಿಲಭಕ್ತ ಶಿರೋಮಣಿಗಳೇ ! ಗುರುಸ್ಥಲದ ಮಾಹೇಶ್ವರನು ಪುಣ್ಯಪ್ರಭಾವದಿಂದ ಬ್ರಹ್ಮಚರ್ಯದಲ್ಲಿ ಸನ್ಯಾಸವನ್ನು ತೆಗೆದುಕೊಂಡರೆ ಪೂರ್ವಾಶ್ರಮದ ಗುರುಗಳಿಗೂ ಗುರುವಾಗುತ್ತಾನೆ. ಮಗನು ತಂದೆಯಿಂದ ಉಪನಯನಪೂರ್ವಕ ಬ್ರಹ್ಮೋಪದೇಶವನ್ನು ಪಡೆದು ಮುಂದೆ ಸನ್ಯಾಸವನ್ನು ಸ್ವೀಕರಿಸಿದರೆ ಪೂರ್ವಾಶ್ರಮದ ಗುರುಗಳಿಗಿಂತಲೂ ಪೂಜ್ಯನಾಗುತ್ತಾನಲ್ಲವೆ? ಎಂಬ ನಮ್ಮ ಖಂಡನ ಗ್ರಂಥದಲ್ಲಿರುವ ವಚನಗಳ ಮೇಲೆ ಈ ಧರ್ಮಸುಧಾಕರರು ಬರೆದಿರುವ ಸಮಾಧಾನದ ಚಮತ್ಕಾರವನ್ನು ನೋಡಿರಿ. ಮಗನು ಸನ್ಯಾಸವನ್ನು ತೆಗೆದುಕೊಂಡಮೇಲೆ ಯಜ್ಞೋಪವೀತವನ್ನು ಕಿತ್ತುಹಾಕುತ್ತಾನೆ. ಗಾಯತ್ರಿಯನ್ನು ಬಿಡುತ್ತಾನೆ. ಶಿಖೆಯನ್ನು ತೆಗೆದುಹಾಕುವನು. ಹಾಗೆ ನಮ್ಮ ಮಾಹೇಶ್ವರರು ಸನ್ಯಾಸವಂ ಸ್ವೀಕರಿಸಿದಮೇಲೆ ಲಿಂಗರೂಪವಾದ ಯಜ್ಞೋಪವೀತವನ್ನು ಕೀಳುತ್ತಾರೋ, ಭಸ್ಮವನ್ನು ದೂರೀಕರಿಸುತ್ತಾರೋ, ಪಂಚಾಕ್ಷರಿಯನ್ನು ಪಲಾಯನಮಾಡಿಸುತ್ತಾರೋ ಎಂಬಿವು ಮೊದಲಾದ ಆಕ್ಷೇಪವಂ ಬರೆದಿರುತ್ತಾರೆ. ಆಹಾ ! ಈ ಧರ್ಮಸುಧಾಕರರು ಎಷ್ಟುಮಟ್ಟಿನ ಶಾಸ್ತ್ರಕೋವಿದರು ? ಎಷ್ಟುಮಟ್ಟಿನ ಆಲಂಕಾರಿಕರು ? ಇವರಿಗೆ ಉಪಮಾನೋಪಮೇಯಗಳ ಸ್ವರೂಪಜ್ಞಾನವೇ ಇಲ್ಲದ ಹಾಗೆ ತೋರುತ್ತದೆ, ಅಥವಾ ಮರೆತಿರಬಹುದು. ಸಾದೃಶ್ಯವೆಂದರೆ - ತದ್ಭಿನ್ನತ್ವೇ ಸತಿ ತದ್ಗತಭೂಯೋಧರ್ಮವತ್ತ್ವಂ " ಎಂದು ಆಲಂಕಾರಿಕರು ಹೇಳುವರು. ಉಪಮಾನವು ಅಧಿಕಗುಣವುಳ್ಳದ್ದು. ಉಪಮೇಯವು ನ್ಯೂನಗುಣವುಳ್ಳದ್ದು. ಉಪಮಾನದಲ್ಲಿರುವ ಗುಣಗಳೆಲ್ಲವೂ ಉಪಮೇಯದಲ್ಲಿರುವುದಿಲ್ಲ. ಪ್ರಕರಣದಲ್ಲಿ ಎಷ್ಟು ಪ್ರಸಕ್ತವಾಗಿರುವುದೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುವುದು ವಿದ್ವಜ್ಜನರ ಸಂಪ್ರದಾಯವಲ್ಲವೇ ? ಛಾಂದೋಗ್ಯದಲ್ಲಿ.—" ಅಶ್ವ ಇವ ರೋಮಾಣಿ ವಿಧೂಯ ಪಾಪಂ ಚಂದ್ರ ಇವರಾಹೋರ್ಮುಖಾತ್ಪ್ರಮುಚ್ಯ ಧೂತ್ವಾ ಶರೀರಮಕೃತಂ ಕೃತಾತ್ಮಾ ಬ್ರಹ್ಮಲೋಕಮಭಿಸಂಭವಾಮಿ " ಅಂದರೆ ಕುದುರೆಯು ತನ್ನ ರೋಮಗಳನ್ನು ಹ್ಯಾಗೆ ಕೊಡಹುತ್ತದೆಯೋ, ಚಂದ್ರನು ರಾಹುವಿನಿಂದ ಹೇಗೆ ಬಿಡುಗಡೆ ಹೊಂದುವನೋ ಹಾಗೆ ಮುಮುಕ್ಷುವು ಅಸ್ಥಿರವಾದ ಈ ಶರೀರವನ್ನು ಕೊಡಹಿ ಬ್ರಹ್ಮಲೋಕವನ್ನು ಹೊಂದಿ ಕೃತಕೃತ್ಯನಾಗುವನು. ಎಂಬ ವಾಕ್ಯದಲ್ಲಿ ವಿವಕ್ಷಿತವಾದ ಧರ್ಮದ ಸಾಮ್ಯವನ್ನು ಬಿಟ್ಟು ಕುದುರೆಗೆ ಪುಚ್ಛವಿದೆ ! ಈತನಿಗೂ ಇದೆಯೋ ? ಕುದುರೆಯು ಸವಾರಿಗೆ ಯೋಗ್ಯವಾಗಿದೆ, ಇವನ ಮೇಲೆಯೂ ಸವಾರಿ ಮಾಡಬಹುದೋ ? ಚಂದ್ರನು ಆಕಾಶಗಾಮಿ, ಇವನೂ ಆಕಾಶಗಾಮಿಯೋ ಎಂದು ಕುತರ್ಕವಂ ಮಾಡುವವರು ಅನಾಘ್ರಾತಶಾಸ್ತ್ರಗಂಧವುಳ್ಳವರಲ್ಲವೇ ? ನಮ್ಮ ಖಂಡನ ಪುಸ್ತಕದಲ್ಲಿ ಕೊಟ್ಟಿರುವ ಸಾದೃಶ್ಯದಲ್ಲಿ ಎಷ್ಟನ್ನು ಮಾತ್ರ ತೆಗೆದುಕೊಳ್ಳಬೇಕೋ ಅಷ್ಟನ್ನು ತೆಗೆದುಕೊಳ್ಳಬೇಕು. ಪ್ರಾಕೃತಸನ್ಯಾಸಕ್ಕೂ ಅಪ್ರಾಕೃತಸನ್ಯಾಸಕ್ಕೂ ಬಹಳ ವ್ಯತ್ಯಾಸವಿರುವುದು. ಈ ವೀರಶೈವಮತದಲ್ಲಿ ಲಿಂಗವು ಸಕಲಾಶ್ರಮದವರಿಗೂ, ಸಕಲ ವರ್ಣದವರಿಗೂ, ಅತ್ಯಾಶ್ರಮಿಗಳಿಗೂ ಯಾವಜ್ಜೀವವು ಧಾರಣೀಯವೆಂದು ಪ್ರಬಲವಾದ ನಿಯಮವಿರುವುದು.

(ಸಶೇಷ.)

ಶ್ರೀರೇವಣಸಿದ್ಧೇಶ್ವರಸ್ವಾಮಿಯ ರಥೋತ್ಸವ.

ಕ್ಲೋಸ್‌ಪೇಟೆ ತಾ|| ಅವ್ವೇರಳ್ಳಿ ಹತ್ತಿರ ಇರುವ ಶ್ರೀರೇಣುಕಗಿರಿಯಲ್ಲಿ ಕಳೆದ ವೈಶಾಖ ಶು|| ೧೫ ರಿಂದ 3 ದಿವಸಗಳವರೆಗೆ ರಥೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಸಹಸ್ರಾರುಜನ ಯಾತ್ರಾರ್ಥಿಗಳು ಬಂದಿದ್ದರು. ಕೆರೆಯಲ್ಲಿ ನೀರಿದ್ದುದರಿಂದ ನೀರಿಗೂ, ಊಟಕ್ಕೂ ಬಹಳ ಅನುಕೂಲವಾಗಿತ್ತು. ಜಾತ್ರೆಯಲ್ಲಿ ಬೆಟ್ಟದಕೆಳಗಡೆಯೂ ಮೇಲ್ಗಡೆಯೂ ಮೊದಲನೇ ಎರಡುದಿವಸಗಳು ಪೋಲೀಸು ಸಿಬ್ಬಂದಿ ಚೆನ್ನಾಗಿತ್ತು. ಮೂರನೆಯ ದಿವಸ ಬೆಟ್ಟದಮೇಲೆ ಶ್ರೀಸ್ವಾಮಿಯ ಅಭಿಷೇಕಕ್ಕಾಗಿ ಇರುವ ನೀರಿನ ದೋಣಿಯಲ್ಲಿ ಸ್ನಾನವಗೈರೆ ಮಾಡಕೂಡದೆಂದು ನಿರ್ಬಂಧವಿದ್ದರೂ ಪೋಲೀಸ್‌ನವರು ಇಲ್ಲದೆ ಇದ್ದುದರಿಂದ ಸ್ವಲ್ಪ ಗಲಭೆಯಾಯಿತು. ಆದ್ದರಿಂದ ಘನ ಸರ್ಕಾರದವರು ಚಿತ್ತವಿಟ್ಟು ಮೂರುದಿವಸಗಳೂ ಸರಿಯಾದ ಪೋಲೀಸು ಸಿಬ್ಬಂದಿ ಇಟ್ಟರೆ ಅನುಕೂಲ. ಇಲ್ಲಿ ಅನೇಕ ಅನ್ನಸತ್ರಗಳು ಇರುವುದರಿಂದಲೂ, ನೀರಿನ ಮತ್ತು ನೆರಳಿನ ಅನುಕೂಲತೆ ಚೆನ್ನಾಗಿರುವುದರಿಂದಲೂ ದನಗಳ ಪರಿಷೆಯನ್ನು ಏರ್ಪಡಿಸಿದರೆ ಚೆನ್ನಾಗಿ ನಡೆಯುತ್ತದಲ್ಲದೆ ಉತ್ಪನ್ನವೂ ಆಗುತ್ತದೆ.

ಪ್ರತ್ಯಕ್ಷದರ್ಶಿ.

ಶ್ರೀಲಕ್ಷ್ಮೀಕಾಂತವಿಲಾಸಕರ್ಣಾಟಕನಾಟಕಸಭಾ
ಮೈಸೂರು.

ಅನಂತಪುರದಿಂದ ಗುಂತಕಲ್ಲಿಗೆ ಬಹು ಅಪರೂಪವಾಗಿ ಬಂದ ಈ ನಾಟಕಕಂಪೆನಿಯವರು 3 ವಾರಗಳವರೆಗೆ ಇಲ್ಲಿನ ಶ್ರೀರಾಮಮಂದಿರಂ ಥಿಯೇಟರಿನಲ್ಲಿ ಮಹಾತ್ಮಕಬೀರ್‌ದಾಸ್ ಮೊದಲಾದ ನಾಟಕಗಳನ್ನಾಡಿ ಈ ಸುತ್ತುಮುತ್ತಲಿನ ಜನಗಳಿಗೆ ಎಂದೆಂದಿಗೂ ಮರೆಯದಂತಹ ಆನಂದವನ್ನುಂಟುಮಾಡಿದರು. ಪ್ರತಿ ನಾಟಕಕ್ಕೂ ಜನರು ಸ್ಥಳಸಂಕೋಚದಿಂದ ಹಿಂದಿರುಗುವ ಮಟ್ಟಿಗೂ ಧನಾರ್ಜನೆಯನ್ನೂ, ಕೀರ್ತಿಯನ್ನೂ ಇವರು ಪಡೆದುದು ಸಂತೋಷಪ್ರದವಾಗಿದೆ. ಈ ಊರಿನ ಪ್ರಮುಖರು ಇಲ್ಲಿನ ರಾವ್‌ಬಹದ್ದೂರ್ ಹಂಪಯ್ಯಗಾರು ಇವರ ಅಧ್ಯಕ್ಷತೆಯಲ್ಲಿ ಈ ಸಂಘದ ಪ್ರೊಪ್ರೈಟರವರುಗಳಾದ ಶ್ರೀಯುತ ಟಿ. ಎಸ್. ಗುರುಕಾರ್ ಮತ್ತು ಅಭಿನಯ ಕಂಠೀರವ ಎಂ. ಎನ್. ಗಂಗಾಧರರಾವ್ ಇವರುಗಳನ್ನು ಸತ್ಕರಿಸಿದುದಲ್ಲದೆ ಮ|| ಗಂಗಾಧರರಾಯರಿಗೂ ಕೃಷ್ಣನ ಪಾತ್ರವನ್ನು ಬಹು ಚೆನ್ನಾಗಿ ಅಭಿನಯಿಸಿದ ಗೋವಿಂದ ಎಂಬ ಬಾಲಕನಿಗೂ ಎಲ್ಲಾ ನಾಟಕಗಳಲ್ಲಿಯೂ ತಮ್ಮ ತಮ್ಮ ಪಾತ್ರಗಳನ್ನು ಬಹುಶ್ಲಾಘನೀಯವಾಗಿ ಅಭಿನಯಿಸಿದುದಕ್ಕಾಗಿ ಮ|| ಎಂ. ಸುಬ್ಬರಾವ್ ಮತ್ತು ಎಚ್. ಆರ್. ಶಿವಯ್ಯ ಎಂಬುವವರಿಗೂ ಘನವಾದ ಸುವರ್ಣಪದಕಗಳನ್ನು ಪಾರಿತೋಷಿಕವಾಗಿ ಸನ್ಮಾನಿಸಿದರು. ಇವರ ನಾಟಕಗಳನ್ನು ಪುನಃಪುನಃ ನೋಡಬೇಕೆಂದೂ, ಇವರು ಅಭ್ಯಾಸಮಾಡಿರುವ ಇನ್ನೂ ಎಷ್ಟೋ ನಾಟಕಗಳನ್ನು ಆಡಿ ಹೋಗಬೇಕೆಂದೂ ಬಹುವಾಗಿ ಕೋರಲ್ಪಟ್ಟರೂ ಬಳ್ಳಾರಿಯಲ್ಲಿ ಕರ್ಣಾಟಕಸಮ್ಮೇಳನಗಳ ಸಮಯಕ್ಕೆ ಈ ಸಭೆಯವರು ವಿಧಿಯಿಲ್ಲದೆ ಹೋಗಬೇಕಾಯಿತು. ಈ ವಿಚಾರಗಳಲ್ಲೆಲ್ಲಾ ಈ ಸಂಘದ ಮ್ಯಾನೇಜರವರಾದ ಮ|| ಎಸ್. ಪಿ. ನರಸಿಹ್ಮಮೂರ್ತಿ, ಬಿ. ಎ., ಇವರ ಶ್ರದ್ಧೆಯೂ ಕಾರ್ಯದಕ್ಷತೆಯೂ ಶ್ಲಾಘನೀಯವಾದವಾಗಿವೆ. ಇವರಿಗೆ ಭಗವಂತನು ಎಲ್ಲೆಲ್ಲಿಯೂ ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇನೆ.

ಪ್ರೇಕ್ಷಕ.

ಹೀಗೆಯೋ ಸರ್ವಜನರ ಸುಖವನ್ನು ಕೋರುವುದು ?

ಶ್ರೀರಂಗಪಟ್ಟಣ ತಾ|| ಮೇಲುಕೋಟೆಯ ನಿವಾಸಿಗಳೂ ಹಿರೇಕುರುವಿನಶೆಟ್ಟಿಯ ವಂಶೀಕರೂ ಆದ ಬಳೀಮಗ್ಗದವರು ತಮ್ಮ ಕುಲಕಸಬಾದ ಬಟ್ಟೆಯ ನೇಯಿಗೆಯಿಂದ ಜೀವಿಸುತ್ತಿರುವರಲ್ಲದೆ ಸಾಧುಸಜ್ಜನರಿಗೆ ಶಕ್ತ್ಯಾನುಸಾರ ಭಕ್ಷ್ಯ ಕಾಣಿಕೆಗಳನ್ನು ಕೊಟ್ಟುಕೊಂಡು ಶ್ರೀರಾಮಭಜನೆ ಮೊದಲಾದ ದೇವರಸೇವೆಯಿಂದ ಕಾಲಹರಣಮಾಡುತ್ತಿರುವರು. ಇವರು ಶ್ರಾವಣಮಾಸದಲ್ಲಿ ಶ್ರೀರಾಮನವಮಿಯನ್ನು ಅರ್ಚನ ಕೀರ್ತನಾದಿಗಳಿಂದ ನಡೆಯಿಸಿ ಕಡೆಯದಿನ ಶ್ರೀರಾಮಪಟವನ್ನು ಉತ್ಸವಪೂರ್ವಕವಾಗಿ ಭಜಕರೊಡನೆ ಎಲ್ಲಾ ಬೀದಿಗಳಲ್ಲೂ ಮೆರೆಸುತ್ತಿರುವಂತೆ ಈಸಲದ ಶ್ರಾವಣಮಾಸದಲ್ಲೂ ಮೊದಲನೇದಿವಸ ಅಂದರೆ ತಾ|| 6-5-1926 ನೇ ಗುರುವಾರ ಎಲ್ಲಾ ಬೀದಿಗಳಲ್ಲೂ ಉತ್ಸವಮಾಡಿಕೊಂಡು ಬಂದರಾದರೂ ಯಾರೂ ಅಡ್ಡಿ ಪಡಿಸಲಿಲ್ಲ. ಆದರೆ ಕಡೆಯದಿವಸ ಶ್ರೀರಾಮರ ಪಟವನ್ನು ಭಜಕರ ಸಮೋಹದೊಡನೆ ಉತ್ಸವಮಾಡಿಕೊಂಡು ಬರುವಾಗ್ಗೆ ಸರ್ವೇಜನಾಸ್ಸುಖಿನೋಭವಂತು ಎಂದು ಹರಸಿ ಲೋಕಕಲ್ಯಾಣಮಾಡುವವರೆಂದು ಹೇಳಿಕೊಳ್ಳುತ್ತಿರುವ ಭೂಸುರೋತ್ತಮರು ಉತ್ಸವವನ್ನು ನೋಡಿ ಸಹಿಸಲಾರದೆ, ಬ್ರಾಹ್ಮಣರು ಮಾಡತಕ್ಕ ಕಾರ್ಯವನ್ನು ನೀಚಶೂದ್ರರು ಮಾಡಿ ಎಲ್ಲಾ ಕೇರಿಯಲ್ಲಿ ನಿರ್ಭಯವಾಗಿ ದೇವರ ನೆಪದಿಂದ ಸುತ್ತುವಂತಾಯಿತೆ ? ಎಂದು ಹೊಲೆಯರ ಬಾಯಿನಲ್ಲಿ ಸಹ ಬಾರದ ಕೆಟ್ಟ ಶಬ್ದಗಳಿಂದ ಬೈದು ಹೊಡೆದೋಡಿಸಿದರು. ಈ ಹೊಡೆದಾಟದಲ್ಲಿ ಬಳೀಮಗ್ಗದವನೊಬ್ಬನ ಒಂದು ಕಣ್ಣು ಹೋಯಿತು; ಇನ್ನು ಕೆಲವರಿಗೆ ಪೂರಾ ಏಟು ಬಿದ್ದಿತು. ಇವರೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವುದನ್ನು ಅನೇಕರು ನೋಡಿರುತ್ತಾರೆ, ಮತ್ತು ಜಗಳದಲ್ಲಿ ಏಟನ್ನು ತಿಂದವರು ಫ್ರೆಂಚ್‌ರಾಕ್ಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಫಿರ್ಯಾದುಮಾಡಿರುತ್ತಾರೆ. ಭೂಸುರೋತ್ತಮರೆಂದು ಹೇಳಿಕೊಳ್ಳುತ್ತಿರುವ ಮಹನೀಯರು ಸರ್ವಜನರ ಸುಖವನ್ನು ಕೋರುವುದು ಹೀಗೆಯೇ ಅಲ್ಲವೆ ? ಇಂಥಾವರನ್ನು ಭೂಸುರರೆಂದು ಕರೆಯುವುದು ಹೇಗೆ ? ನಿಷ್ಪಕ್ಷಪಾತಿಗಳೇ ಹೇಳಲಿ.

ಪೆಟ್ಟನ್ನುತಿಂದವರಲ್ಲೊಬ್ಬ.

ವೀರಶೈವತರುಣರಸಮ್ಮೇಳನ.

ರಾಯಚೂರಿನಲ್ಲಿ ಕೆಲದಿನಗಳ ಕೆಳಗೆ ವೀರಶೈವತರುಣರಸಮ್ಮೇಳನವು ವೇ|| ಮಕ್ತಲಿ ಬಸವಲಿಂಗಪ್ಪ ಮಾಸ್ತರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಜಕೀಯಭಾಷಾವಿದ್ಯಾರ್ಥಿನಿಚಯಕ್ಕೆ ಸಂತೋಷವಾಗುವಂತೆ ಅವರ ಹಿತವನ್ನು ಬಯಸಿ ಧೂಮಪಾನ ನಿಷೇಧದ ಬಗ್ಗೆ ದೇ|| ಭ|| ಹರ್ಡೇಕರ್ ಮಂಜಪ್ಪನವರು ಅತ್ಯಂತ ಶ್ಲಾಘ್ಯವಾಗಿ ಭಾಷಣಮಾಡಿದರು. ಪಾಠಶಾಲಾಪಂಡಿತರಾದ ವೇ|| ಬಸವಲಿಂಗಶಾಸ್ತ್ರಿಗಳು ಕಲ್ಲೂರವರು, ವೇ|| ಸೂಗೂರು ಶಾಸ್ತ್ರಿಗಳು, ವೇ|| ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿಗಳು, ಶ್ರೀಯುತ ವಿರೂಪಾಕ್ಷಪ್ಪಒಡೆಯರು ಮುಂತಾದ ಪ್ರಮುಖರು ಸಭೆಗೆ ದಯಮಾಡಿಸಿದ್ದರು. ಅದೇ ದಿವಸ ಸಾಯಂಕಾಲ ಸೋಮವಾರಪೇಟೆ ಮಠದ ಪಾಕ್ಷಿಕಪರಿಷತ್ತಿನ ವ್ಯವಸ್ಥಾಪಕರ ಪ್ರಯತ್ನವಿಶೇಷದಿಂದ ಒಂದು ದೊಡ್ಡ ಸಭೆಯು ಸೇರಿತು. ಶ್ರೀಯುತ ಕಿರ್ಶ್ನರಾಯರೇ ಮುಂತಾದ ವಿದ್ಯಾಭಿಮಾನಿಗಳು 400 ಕ್ಕೆ ಮೇಲ್ಪಟ್ಟು ಆಗಮಿಸಿದ್ದರು. ಮ|| ಹರ್ಡೇಕರ್ ಮಂಜಪ್ಪನವರು ಅಹಿಂಸೆ ಎಂಬ ವಿಷಯದಮೇಲೆ 2 ಗಂಟೆಯಕಾಲ ಬಹುಗಂಭೀರವಾಗಿ ಭಾಷಣಮಾಡಿದರು. ಮಾರನೆಯದಿನ ಸಾಯಂಕಾಲ ನೀಲಕಂಠೇಶ್ವರಪಾಠಶಾಲೆಯಲ್ಲಿ ಮಠದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದಿತು. ಆ ದಿವಸವೂ ದೇಶಭಕ್ತ ಮಂಜಪ್ಪನವರು ಸಮಾಜಸೇವೆಯ ವಿಚಾರವಾಗಿ ಪ್ರೇಕ್ಷಕಜನರ ಮನಸ್ಸಿಗೆ ಹಿಡಿಯುವಂತೆ ಉಪನ್ಯಾಸಮಾಡಿ ಪಾಕ್ಷಿಕಪರಿಷತ್ತಿನ ಮತ್ತು ಪಾಠಶಾಲೆಯ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಯಿಸಿಕೊಂಡು ಹೋಗಬೇಕೆಂದು ಹೇಳಿದರು. ನೈಜಾಂಪ್ರಭುತ್ವದಲ್ಲಿ ಹಿಂದುಳಿದ ನಮ್ಮ ಜನ [illegible] ವೃದ್ಧಿಗೆ ಸಾಧಕವಾದ ಕಲ್ಪವೃಕ್ಷದಂತಿರುವ ಮಹಾಸಭೆಯು ಈವರೆಗೆ

ಎಲ್ಲಿಯು ಜರುಗದಿರುವುದು ತುಂಬಾ ಶೋಚನೀಯವು. ಈ 2-3 ವರ್ಷಗಳಿಂದಲೂ ವೃತ್ತಪತ್ರಿಕೆಗಳಲ್ಲಿ ಸಭೆಯು ಜರುಗುವುದೆಂದು ಪ್ರಕಟನೆಯಾದರೂ ಜರುಗದಂತಾದುದು ನಮ್ಮ ಮಂದಭಾಗ್ಯದ ಮಹಿಮೆಯಲ್ಲವೆ? ಭರತಖಂಡದ ಸಮಸ್ತ ಜನಾಂಗದವರು ಸಭೆಗಳ ಮೂಲಕ ತಮ್ಮ ಏಳ್ಗೆಗಾಗಿ ಯತ್ನಿಸುತ್ತಿರುವ ಈ ಕಾಲದಲ್ಲಿ ನೈಜಾಂದೇಶದಲ್ಲಿ ಎಂದೂ ಜರುಗದಿರುವ ಮಹಾಸಭೆಯನ್ನು ರಾಯಚೂರು ವೀರಶೈವಮಹಾಶಯರಾದರು ಈ ವರ್ಷ ಜರುಗಿಸಿ ಭರತಖಂಡದ ವೀರಶೈವರ ಕೀರ್ತಿಪ್ರತಿಷ್ಠೆಗಳನ್ನು ಕಾಪಾಡಿ ಯಶಸ್ವಿಗಳಾಗಬೇಕೆಂದು ಪ್ರಾರ್ಥಿಸುವ,

ಓರ್ವ ಸಮಾಜಾಭಿಮಾನಿ.

ಹೊಸದುರ್ಗ ತಾ|| ಬೆಲಗೋಡು.

ಈ ಗ್ರಾಮದಲ್ಲಿ 500 ಮನೆಗಳೂ 2,000 ಪ್ರಜೆಗಳೂ ಇರುತ್ತಾರೆ. ಅಲ್ಲದೆ ಒಂದು ಬ್ರಾಂಚ್ ಪೋಸ್ಟಾಫೀಸೂ, ಮ್ಯುನಿಸಿಪಾಲಿಟಿಯೂ ಇರುತ್ತವೆ. ಇಷ್ಟಿದ್ದಾಗ್ಯೂ ಜನರಿಗೆ ಸೌಕರ್ಯ ಕಡಿಮೆ. ಇದು ವ್ಯಾಪಾರಸ್ಥಳವಾದ್ದರಿಂದ ಬ್ರಾಂಚ್ ಪೋಸ್ಟಾಫೀಸನ್ನು ಪಕ್ಕಾಪೋಸ್ಟಾಫೀಸನ್ನಾಗಿ ಮಾಡಿಕೊಡಬೇಕೆಂದು ಎಷ್ಟು ಪ್ರಾರ್ಥಿಸಿಕೊಂಡಾಗ್ಯೂ ನಿಷ್ಪ್ರಯೋಜನವಾಗಿದೆ. ಇಲ್ಲಿನ ಮ್ಯುನಿಸಿಪಾಲಿಟಿಯ ವಿಚಾರವಂತು ಬಹಳ ಶೋಚನೀಯವಾಗಿದೆ. ಮ್ಯುನಿಸಿಪಾಲಿಟಿಯ ಉದ್ಯೋಗಸ್ಥರಾಗಲಿ ಮೆಂಬರುಗಳಾಗಲಿ ಗ್ರಾಮನೈರ್ಮಲ್ಯ ರೋಡುರಿಪೇರಿ ಮೊದಲಾದ ವಿಚಾರಗಳಲ್ಲಿ ಸ್ವಲ್ಪವೂ ಶ್ರದ್ಧೆವಹಿಸುತ್ತಿಲ್ಲ. ಈ ಗ್ರಾಮದ ಸ್ಕೂಲು ಇದ್ದರೂ ಇಲ್ಲದಂತೆಯಾಗಿದೆ. ಬಾಲಕರ ಸಂಖ್ಯೆಯು 150-200 ವರೆಗಿದ್ದು 4 ಜನ ಉಪಾಧ್ಯಾಯರಿರುತ್ತಾರೆ. ಪಾಠದ ವಿಚಾರದಲ್ಲಿ ಉಪಾಧ್ಯಾಯರು ಶ್ರದ್ಧೆವಹಿಸದೆಯಿರುವುದರಿಂದ ಬಾಲಕರ ವಿದ್ಯಾಭಿವೃದ್ಧಿಯು ಬಹಳ ಹಿಂದುಳಿದಿದೆ. ಈ ವಿಚಾರವನ್ನು ಕಮಿಟಿ ಮೆಂಬರುಗಳೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಹೆಣ್ಣುಮಕ್ಕಳ ಪಾಠಶಾಲೆಯ ಸ್ಥಳಸಂಕೋಚದ ವಿಚಾರವು ಮೇಲ್ಪಟ್ಟ ಅಧಿಕಾರಿಗಳಿಗೆ ಬಿನ್ನೈಸಿಕೊಂಡಾಗ್ಯೂ ಪ್ರಯೋಜನವಿಲ್ಲವಾಗಿದೆ. ಇನ್ನಾದರೂ ಐ. ಜಿ. ಯವರು ಸ್ಕೂಲಿನ ಸಂಗತಿಯನ್ನು ಮನಸ್ಸಿಗೆತಂದುಕೊಂಡು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಇಲ್ಲಿಯ ಕೋ-ಆಪರೇಟಿವ್ ಸೊಸೈಟಿಯ ವಿಚಾರವಂತು - ರಾಯಹೇಳಿಂದ ಭೂಪಕೇಳಿಂದ - ಎಂಬಗಾದೆಗೆ ಸರಿಯಾಗಿದೆ. ಇದಕ್ಕೆ ಮೇಲ್ಪಟ್ಟ ಅಧಿಕಾರಿಗಳ ನಿಗಾವಣೆಯಿಲ್ಲದಿರುವದೇ ಕಾರಣ. ಈ ಗ್ರಾಮಕ್ಕೆ 7-8 ಮೈಲಿದೂರದಲ್ಲಿ ಸರ್ಕಾರೀ ರಸ್ತೆಗಳಿದ್ದು ಲಕ್ಷಾಂತರರೂಪಾಯಿ ವ್ಯಾಪಾರನಡೆಯುವ ಈ ಗ್ರಾಮಕ್ಕೆ ಮಾತ್ರ ಸರ್ಕಾರೀ ರಸ್ತೆಯಿಲ್ಲದಿರುವುದು ಇಲ್ಲಿಯ ಜನರ ದುರದೃಷ್ಟವೆಂದು ಹೇಳಬೇಕಾಗಿದೆ. ಸರ್ಕಾರದವರು ಎಷ್ಟೋ ಸಣ್ಣಗ್ರಾಮಗಳಿಗೆಲ್ಲ ಆಸ್ಪತ್ರೆಗಳ ಸೌಕರ್ಯವನ್ನುಂಟುಮಾಡಿಕೊಟ್ಟು ಈ ದೊಡ್ಡಗ್ರಾಮಕ್ಕೆ ಮಾತ್ರ ಆಸ್ಪತ್ರೆಕೊಡದಿರುವುದು ಶುದ್ಧ ಅನ್ಯಾಯವೇಸರಿ. ಇನ್ನಾದರೂ ಸರ್ಕಾರದವರು ದಿವ್ಯಚಿತ್ತಕ್ಕೆ ತಂದುಕೊಂಡು ಆಸ್ಪತ್ರೆಯನ್ನು ದಯಪಾಲಿಸುವವರಾಗಬೇಕೆಂದು ಪ್ರಾರ್ಥನೆ.

ಸ್ವಗ್ರಾಮಾಭಿಮಾನಿ.

ಸರ್ಕಾರೀ ನೌಕರರೂ, ಬಡರೈತರುಗಳೂ.

ಈಗ್ಗೆ ಸುಮಾರು 15 ದಿವಸಗಳ ಹಿಂದೆ ಬೆಂಗಳೂರು ಡಿ|| ನೆಲಮಂಗಲದಲ್ಲಿ ಜನರಲ್‌ಮರ್ಚೆಂಟ್ ಬಿ. ಸಿದ್ಧರಾಮಶೆಟ್ಟರವರ ಅಂಗಡಿಗೆ ನಂಜಪ್ಪನೆಂಬ ಒಬ್ಬ ರೈತನು ವ್ಯಾಪಾರಕ್ಕಾಗಿ ಬಂದಿರಲಾಗಿ, ಆತನು 6 ಆಣೆ ಬಾಳುವ ಒಂದು ಬರ್ನರನ್ನು ಕದ್ದನೆಂದು ಇದೇ ಊರಿನ ಸ್ಯಾನಿಟರಿ ಇಲಾಖೆಯ ನೌಕರರು ಪೋಲೀಸ್ ಸಬ್‌ಇನ್ಸ್‌ಪೆಕ್ಟರಾಗಿ ನಟಿಸಿ ಆತನನ್ನು ಹೆದರಿಸಿ ಆತನಿಂದ 8 ರೂಪಾಯಿಗಳನ್ನು ತೆಗೆದುಕೊಂಡು ಅಂಗಡಿಯ ಯಜಮಾನರಿಗೆ 2 ರೂ. ಗಳನ್ನು ಕೊಟ್ಟು ಬಾಕಿ ರೂ. ಗಳನ್ನು ಒಬ್ಬ ಪೋಲೀಸ್ ಕಾನಸ್ಟೇಬಲ್, ಕಸಬಾ ಶ್ಯಾನುಭೋಗರು ಮತ್ತು ನಟನೆಯ ಪೋಲೀಸ್ ಸಬ್‌ಇನ್ಸ್‌ಪೆಕ್ಟರು ತಂತಮ್ಮಲ್ಲಿ ಹಂಚಿಕೊಂಡರೆಂಬ ಸುದ್ದಿ ಊರಿನ ಎಲ್ಲಾ ಭಾಗದಲ್ಲಿಯೂ ಹಬ್ಬಿ ಈ ವಿಚಾರವನ್ನು ಜನಗಳು ತಂತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದಾರೆ. ಇದು ನಿಜವಾದ ಸಂಗತಿಯಾಗಿ ಕಂಡುಬರುತ್ತದೆ. ಬಡಪಾಯಿಗಳಾದ ಮತ್ತು ಏನೂ ತಿಳಿಯದ ರೈತರನ್ನು ಮೇಲೆ ಹೇಳಿದ ರೀತಿಯಲ್ಲಿ ಹೆದರಿಸಿ ಅವರನ್ನು ಕಷ್ಟಕ್ಕೆ ಗುರಿಮಾಡುವುದು ಯಾವಧರ್ಮವೋ ಗೊತ್ತಿಲ್ಲ. ಅಲ್ಲದೆ ಬಡರೈತರು ತಮಗಾಗುವ ತೊಂದರೆಗಳನ್ನು ಇತರರಲ್ಲಿ ಹೇಳಿಕೊಳ್ಳಲು ಶಕ್ತಿಸಾಲದು. ಈ ಕಾರಣದಿಂದ ಸರ್ಕಾರವೇ ತಮ್ಮದೆಂದು ಭಾವಿಸಿ ಹೆಮ್ಮೆಯಿಂದ ಮೆರೆಯುತ್ತಾ ತಮ್ಮ ಸಮಾನ ಯಾರೂ ಇಲ್ಲವೆಂದು ತಿಳಿದು ವಿದ್ಯಾಬುದ್ಧಿಯಲ್ಲಿ ಕೇವಲ ಹಿಂದುಳಿದ ಬಡರೈತರನ್ನು ನಾನಾಕಷ್ಟಗಳಿಗೆ ಗುರಿಮಾಡುವುದು ಪ್ರತಿದಿನವೂ ಅನೇಕರ ಗೋಚರಕ್ಕೆ ಬೀಳುತ್ತಲೇ ಇದೆ. ಆದರೂ ದುಷ್ಟಶಿಕ್ಷಣ ಶಿಷ್ಟರಕ್ಷಣವೆಂಬ ಮಹಾವಾಕ್ಯವನ್ನು ಪರಿಪಾಲನೆಮಾಡುವ ಸರ್ಕಾರವು ಇಂಥ ಅನರ್ಥಗಳನ್ನು ತಪ್ಪಿಸದಿರುವದು ಆಶ್ಚರ್ಯವೇ ಸರಿ. ಸರ್ಕಾರದ ನೌಕರರೇ ಇಂಥಾ ಅಗೌರವವಾದ ಕೃತ್ಯಗಳನ್ನು ನಡೆಸಿದರೆ ದೇಶದಲ್ಲಿ ಶಾಂತಿಯು ಎಲ್ಲಿಂದ ಬರುವುದು ? ಅಲ್ಲದೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರೆಂದು ನಟಿಸಿದ ಸ್ಯಾನಿಟರಿ ಇಲಾಖೆಯ ಕೆಲಸಗಾರನೂ ಇತರರೂ ಸರ್ಕಾರಿ ಕೆಲಸಗಳನ್ನು ಯಾವರೀತಿ ನಡೆಸುತ್ತಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮೇಲೆ ವಿವರಿಸಿದ ವಿಚಾರವನ್ನು ಮೇಲಿನ ಅಧಿಕಾರಿಗಳು ಇದುವರೆವಿಗೂ ತನಿಖೆ ಮಾಡದೆ ಮೌನರಾಗಿರುವುದರಿಂದ ತುಂಬಾ ವಿಷಾದವಾಗುತ್ತದೆ. ಆದ್ದರಿಂದ ಈಗಲಾದರೂ ದಯಾಳುಗಳಾದ ಸರ್ಕಾರದವರೂ ತಾಲ್ಲೂಕ್ ಹೆಡ್ ಆಫೀಸರುಗಳೂ ಮೇಲ್ಕಂಡ ವಿಚಾರವನ್ನು ತನಿಖೆಮಾಡಿ, ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಬಡರೈತರನ್ನು ಕಾಪಾಡಬೇಕೆಂದು ಪ್ರಾರ್ಥಿಸುವ,

ಓರ್ವ [illegible] ವರ್ತಕ.

ಬೆಲವಂತ್ರದಲ್ಲಿ ನಡೆದ ತಿರ್ಯಗಾಂದೋಳಿಕೋತ್ಸವ.

ಕಲಘಟಗಿ ತಾ|| ಬೆಲವಂತ್ರದಲ್ಲಿ ವೈಶಾಖ ಶು|| ೧೧ ರಿಂದ ೧೫ ರ ವರೆಗೆ ಅಲ್ಲಿಯ ಹಿರೇಮಠದ ದಾಸೋಹಮೂರ್ತಿ ಚೆನ್ನಬಸವಯ್ಯನವರು ನಡೆಸಿದ ಸಹಸ್ರಗಣಾರಾಧನೆಗೆ ಹುಬ್ಬಳ್ಳಿಯ ಮೂರುಸಾವಿರ ಮಠಾಧ್ಯಕ್ಷ ಶ್ರೀಮನ್ಮಹಾರಾಜನಿರಂಜನಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಯ ಸ್ವಾರಿಯು ಬಿಜಯಂಗೈಸಬೇಕೆಂದು ಪ್ರಾರ್ಥಿಸಿಕೊಂಡಿದ್ದುದರ ಮೇಲೆ ಜಗದ್ಗುರುಗಳ ಮಹಾಸವಾರಿಯು ಬೆಲವಂತ್ರಕ್ಕೆ ಮೋಟಾರುಬಂಡಿಯಲ್ಲಿ ಚಿತ್ತೈಸಿ ಊರಹೊರಗಡೆ ಕಾದುಕೊಂಡಿದ್ದ ವೀರಶೈವಪ್ರಮುಖರು ಸಾಷ್ಟಾಂಗನಮಸ್ಕಾರಪೂರ್ವಕವಾಗಿ ಒಪ್ಪಿಸಿದ ಫಲಪುಷ್ಪಗಳನ್ನು ಸ್ವೀಕರಿಸಿ ಎಲ್ಲರಿಗೂ ಆಶೀರ್ವಾದಮಾಡಿ ಮನೋಹರವಾಗಿ ಅಲಂಕೃತವಾಗಿದ್ದ ಪಂಚಕಳಸದ ಅಡ್ಡಪಾಲಕಿಯಲ್ಲಿ ಮಂಡಿಸಿ ಶ್ವೇತಛತ್ರ, ಮಕರತೋರಣ, ಹಗಲುದೀವಟಿಗೆ ಮೊದಲಾದ ಬಿರುದಾವಳಿಗಳಿಂದಲೂ, ವಾದ್ಯವಿಶೇಷಗಳಿಂದಲೂ, ಪಂಡಿತರ ವೇದಘೋಷದಿಂದಲೂ [illegible] ಮನೋಹರವಾಗಿ [illegible] ಮತ್ತು ಮಾರ್ಗದ ಇಕ್ಕೆಲಗಳಲ್ಲೂ [illegible] ಯಿಂದ ಆಶೀರ್ವದಿಸಿ ತೆರಳುತ್ತಿದ್ದುದು ಆ ಪರಶಿವಮೂರ್ತಿಯೇ ಜಗದುದ್ಧಾರಕ್ಕಾಗಿ ಪ್ರತ್ಯಕ್ಷನಾಗಿರುವನಂತೆ ತೋರುತ್ತಿದ್ದುದರಿಂದ ಇಂತಹ ತೇಜೋರಾಶಿಯಿಂದ ಕೂಡಿದ ದಿವ್ಯಮೂರ್ತಿಯ ಉತ್ಸವವನ್ನು ನೋಡದಿದ್ದ ಕಣ್ಣುಗಳು ವ್ಯರ್ಥವೆಂದು ಪ್ರೇಕ್ಷಕಜನರು ಅಂದುಕೊಳ್ಳುತ್ತಿದ್ದರು. ಮಹಾಸ್ವಾಮಿಯವರ ಸ್ವಾರಿಯು ಈರೀತಿಯಾಗಿ ಉತ್ಸವಗೊಂಡು ಭವ್ಯವಾಗಿ ಹಾಕಲ್ಪಟ್ಟಿದ್ದ ಚಪ್ಪರಕ್ಕೆ ದಯಮಾಡಿಸಿ ಅಲಂಕೃತವಾದ ಸಿಂಹಾಸನದ ಮೇಲೆ ಮಂಡಿಸಿತು. ಈ ಉತ್ಸವದ ಸುವ್ಯವಸ್ಥೆಗಾಗಿ ಕಲಘಟಗಿಯಿಂದ ಪೋಲೀಸುಸಿಬ್ಬಂದಿ ಸಮೇತ ಬಂದಿದ್ದ ಮಾಮಲೇದಾರರೂ ಪೋಲೀಸು ಇನ್ಸ್‌ಪೆಕ್ಟರೂ ಮಹಾಸ್ವಾಮಿಯವರ ದರುಶನಕ್ಕೆ ಪಾತ್ರರಾಗಿ ಅಪ್ಪಣೆಯನ್ನು ಪಡೆದು ತೆರಳಿದರು. ಅಲ್ಲಿಗೆ ವೇಳೆಯಾದುದರಿಂದ ಮಹಾಸ್ವಾಮಿಯವರು ಪೂಜಾನುಷ್ಠಾನಕ್ಕೆ ಚಿತ್ತೈಸಿದಮೇಲೆ ನೆರೆದಿದ್ದ ಸಮೂಹಕ್ಕೆ ಮಹಾಗಣಾರಾಧನೆಯು ನಡೆಯಿತು. ಶಿಗ್ಗಾವಿ ಮುಂತಾದ ಚರಪಟ್ಟಾಧ್ಯಕ್ಷರುಗಳೂ, ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ಬ್ಯಾಡಗಿ, ಹಾವೇರಿ ಮುಂತಾದ ಸ್ಥಳಗಳಿಂದ ಸಾವಿರಾರು ಭಕ್ತರುಗಳೂ ಬಂದು ಉತ್ಸವದಲ್ಲಿ ಭಾಗಿಗಳಾಗಿದ್ದರು. ಮಾರನೆಯದಿನ ಮಧ್ಯಾಹ್ನ ಶ್ರೀ ಜಗದ್ಗುರುಗಳ ಸ್ವಾರಿಯು ಚೆನ್ನಬಸವಯ್ಯನವರ ಮಠಕ್ಕೆ ಚಿತ್ತೈಸಿ ಅವರೊಪ್ಪಿಸಿದ ಕಾಣಿಕೆಯನ್ನು ಸ್ವೀಕರಿಸಿ, ಚೆನ್ನಬಸವಯ್ಯನವರು ನಿರಂತರ ದಾಸೋಹವನ್ನು ನಡೆಸುತ್ತಿರುವುದಕ್ಕಾಗಿ ಸಂತೋಷಪಟ್ಟು ಅವರನ್ನು ಆಶೀರ್ವದಿಸಿ ಮತ್ತು ಸಮಸ್ತ ಭಕ್ತಮಂಡಲಿಗೂ ದರ್ಶನಾಶೀರ್ವಾದವನ್ನು ಇತ್ತು ಯಥಾ ಮರ್ಯಾದೆಯಿಂದ ಕಲಘಟಗಿ ಮಾರ್ಗವಾಗಿ ಹುಬ್ಬಳ್ಳಿಗೆ ಬಿಜಯಂಗೈಸಿತು.

ಪ್ರತ್ಯಕ್ಷದರ್ಶಿ.

ಶಿದ್ದೀಕನ ಮೋಸಕ್ಕೆ ಒಳಗಾಗಬೇಡಿರಿ.

ಈಚೆಗೆ ಕೆಲವು ವರ್ಷಗಳಿಂದ ಶಿದ್ದೀಕನೆಂಬ ಓರ್ವ ತುರುಕನು ಚೆನ್ನಬಸವೇಶ್ವರ ಎಂಬುದಾಗಿ ಹೆಸರನ್ನು ಇಟ್ಟುಕೊಂಡು ತಿಳಿಯದ ಜನಗಳನ್ನು ತನ್ನ ಮೋಸದ ಬಲೆಯಲ್ಲಿ ಸಿಕ್ಕಿಸಿಕೊಳ್ಳಬೇಕೆಂದಿರುವನು. ಇದಕ್ಕಾಗಿಯೇ ಇವನು ತುಮಕೂರಿನಲ್ಲಿ - ಚೆನ್ನಬಸವೇಶ್ವರ " ಎಂಬ ಪತ್ರಿಕೆಯನ್ನು ಸಹ ಹೊರಡಿಸುತ್ತಿರುವನು. ಇವನೂ ಇವನ ಕೆಲವು ಅನುಯಾಯಿಗಳೂ ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡುವ ಉದ್ದೇಶದಿಂದ ಈ ವಿಧವಾದ ಸೋಗನ್ನು ತೆಗೆದಿರುವುದಾಗಿ ಗೊತ್ತಾಗುತ್ತದೆ. ಈತನು ನಿಜವಾಗಿಯೂ ಚೆನ್ನಬಸವೇಶ್ವರಾವತಾರವಾಗಿದ್ದಲ್ಲಿ ರುದ್ರಾಕ್ಷಿ, ವಿಭೂತಿ, ಲಿಂಗ ಮೊದಲಾದುವುಗಳನ್ನು ಧರಿಸಿ ಚೆನ್ನಬಸವೇಶ್ವರಮಹಾತ್ಮರಂತೆ ಪವಾಡಗಳನ್ನು ತೋರಿಸುತ್ತಾ ಸಮಾಜದಲ್ಲಿರುವ ಕುಂದುಕೊರತೆಗಳನ್ನು ತಿದ್ದಿ ವೀರಶೈವಜನಾಂಗವನ್ನು ಅಭಿವೃದ್ಧಿಗೆ ತರುವುದು ಕರ್ತವ್ಯವಾಗಿದ್ದಿತಾದರೂ ಆರೀತಿಯಾಗಿ ಮಾಡದೆ ಅನೇಕರಿಂದ ಅಗೌರವವನ್ನು ಹೊಂದುತ್ತಲೂ ಬಾಯಿಗೆ ಬೀಗವನ್ನು ಹಾಕಿಸಿಕೊಳ್ಳುತ್ತಲೂ ಇದ್ದನೆ? ಶಿದ್ದೀಕನೇ, ಹೀಗೆ ಜನಗಳನ್ನು ಮೋಸಮಾಡಲು ಹೋದರೆ ಏನಾಗುತ್ತದೆ ಎಂಬುದು - ಹುಲಿಯಚರ್ಮವನ್ನು ಹೊದ್ದಿಸಿದ್ದ ಕತ್ತೆ " ಯ ಕಥೆಯಿಂದ ತಿಳಿಯಬಹುದಲ್ಲವೆ ? 'ಹುಲಿಯಬಣ್ಣಕ್ಕೆ ನರಿ ಮೈಸುಟ್ಟುಕೊಂಡಂತೆ' ನಿನ್ನ ಕೃತಿಯಾಗಿದೆ. ಲಿಂಗವಿಲ್ಲದ ಭವಿಯನ್ನು ಕಣ್ಣಿನಿಂದ ಸಹ ನೋಡಕೂಡದೆಂಬುದಾಗಿ ನಮ್ಮ ಮತದ ಕಟ್ಟಳೆ ಇರುವಾಗ ಲಿಂಗವಿಲ್ಲದ ಭವಿಯಾದ ನೀನು ಮಹಾತ್ಮರಾದ ಶ್ರೀಚೆನ್ನಬಸವೇಶ್ವರರ ಅವತಾರವಾಗಬಲ್ಲೆಯ ? ಪಾಪ ! ನೀನೇನುಮಾಡುವಿ, ಇದು ಕಲಿಕಾಲವಲ್ಲವೆ ? ವೀರಶೈವರು 'ಅಹಿಂಸಾ' ತತ್ವಕ್ಕೆ ಹೆಚ್ಚು ಪ್ರಾಧಾನ್ಯಕೊಡುವರು. ಶಿದ್ದೀಕ (ಚೆನ್ನಬಸವೇಶ್ವರ)ನಾದರೋ ತನ್ನ ಪತ್ರಿಕೆಯಲ್ಲಿ - ಜಗದ್ಗುರು " ಎಂಬ ಶಿರೋನಾಮದಿಂದ ಒಂದು ಲೇಖನವನ್ನು ಬರೆದಿದ್ದು ಅದರಲ್ಲಿ ಮನುಷ್ಯನು ಮಾಂಸವನ್ನು ತಿನ್ನುವಂತೆ ಭಗವಂತನಿಂದ ನಿರ್ಮಿಸಲ್ಪಟ್ಟಿದ್ದಾನೆ ಎಂಬುದಾಗಿ ಬರೆದಿರುವನು. ನೋಡಿದಿರಾ ಇವನ ಕುಟಿಲಬರವಣಿಗೆಯನ್ನು ! ಕಲ್ಕತ್ತಾ ದಂಗೆಯಲ್ಲಿ ತಪ್ಪು ಯಾರದು ಎಂಬುದು ಇಡೀ ಜಗತ್ತಿಗೇ ಗೊತ್ತಿರುವಾಗ ಈ ಶಿದ್ದೀಕನಿಗೆ ಮಾತ್ರ ಗೊತ್ತಾಗದೆ - ಕಲ್ಕತ್ತೆಯಲ್ಲಿ ಆರ್ಯಸಮಾಜದವರಲ್ಲಿಯೂ ಮುಸಲ್ಮಾನರಲ್ಲಿಯೂ ಬಹಳ ದಂಗೆಯಾಯಿತೆಂದು ತಾ|| 3-4-26 ನೇ ವರ್ತಮಾನಗಳಿಂದ ತಿಳಿಯಬಂದಿರುತ್ತದೆ. ಮುಸಲ್ಮಾನರು ಪ್ರಾರ್ಥನೆ ಮಾಡುವ ಸಮಯದಲ್ಲಿ ಆರ್ಯಸಮಾಜದವರು ಕಾಲ್ಕೆದರಿ ಜಗಳವನ್ನು ತೆಗೆಯಲು ಪ್ರಾರ್ಥನಾಮಂದಿರದಮುಂದೆ ತಾ|| 1-4-26 ರಲ್ಲಿ ವಿವಿಧವಾದ ವಾದ್ಯಘೋಷದೊಂದಿಗೆ ಪ್ರಾರ್ಥನಾಕ್ರಿಯೆಯಲ್ಲಿ ಅಡ್ಡಿ ಮಾಡಲು ಕಾರಣರಾದರು. ಆಗ ಮುಸಲ್ಮಾನರು ಬಂದು ದೈನ್ಯದೊಡನೆ ಅವರನ್ನು ಗಲಾಟೆ ಮಾಡದಹಾಗೆ ಪ್ರಾರ್ಥಿಸಿಕೊಳ್ಳಲು ಆರ್ಯಸಮಾಜದವರು ಹೋಗಿ ಜಗಳವನ್ನು ಪ್ರಾರಂಭಿಸಿ ಇಬ್ಬರನ್ನು ಹೊಡೆಯಲು ಪ್ರಯತ್ನಿಸಿದರು " ಎಂಬುದಾಗಿ ಬರೆದಿರುವುದನ್ನು ನೋಡಿದರೆ ಬಹು ಆಶ್ಚರ್ಯವಾಗುತ್ತೆ. ಇವನ ಬರವಣಿಗೆಯಿಂದಲೇ ಇವನು ಮೋಸಗಾರ ಚೆನ್ನಬಸವಣ್ಣನೆಂಬುದು ಗೊತ್ತಾಗುತ್ತದೆ. ಇಷ್ಟೇ ಅಲ್ಲದೆ ಇವನು ತನ್ನ ಚೆನ್ನಬಸವೇಶ್ವರಪತ್ರಿಕೆಯಲ್ಲಿ ಕೃತ್ರಿಮಲೇಖಗಳನ್ನು ಹೇಗೆ ಬರೆದಿರುವನೆಂಬುದು - ವೀರವಸಂತರ ನ್ಯಾಯವಿಧಾಯಕಸಭೆ " ಎಂಬ ಲೇಖನದಿಂದ ವ್ಯಕ್ತವಾಗುತ್ತದೆ. ಈ ಶಿದ್ದೀಕನು ತಾನೇ ವೀರವಸಂತರಾಯನ ಅವತಾರವೋ ಅಥವಾ ತನ್ನ ಅನುಯಾಯಿಗಳ ಪೈಕಿ ಯಾರಾದರೂ ವೀರವಸಂತರಾಯನೋ ಎಂಬ ಸಂಗತಿ ಯಾವುದನ್ನೂ ಹೇಳದೆ ಹೆಸರಿಲ್ಲದೆ - ಈ ವರ್ಷದ ಏಪ್ರಿಲ್ ತಿಂಗಳಿನಲ್ಲಿ ವೀರವಸಂತರಾಯರ ವಾರ್ಷಿಕಮಹೋತ್ಸವವು ಖಾದಿಯಾಬಾದ್ ಪಟ್ಟಣದಲ್ಲಿ ವಿಜೃಂಭಣೆಯಿಂದ ಜರುಗಿತು. ಸಮ್ಮೇಲನಕ್ಕೋಸ್ಕರ ಅನೇಕ ದೊಡ್ಡಮನುಷ್ಯರು ಹಿಂದೂಸ್ಥಾನದ ಅನೇಕ ಭಾಗಗಳಿಂದ ದಯಮಾಡಿಸಿದ್ದರು. ಸದರಿ ಸಮ್ಮೇಳನದಲ್ಲಿ ಅನೇಕ ಠರಾವುಗಳು ಪಾಸಾದವು. ಅದರಲ್ಲಿ ವೀರವಸಂತರಾಯರು ಹಿಂದೂಸ್ಥಾನದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಂಚಾರಮಾಡಿ ಧರ್ಮಪ್ರಚಾರಸಂಬಂಧವಾದ ಕೆಲಸಗಳನ್ನು ಜರುಗಿಸಬೇಕೆಂಬುದೂ, ಸದರಿ ಧರ್ಮಪ್ರಚಾರಕ ಕೆಲಸಗಳಿಗೆ ಬೇಕಾದ ಸಲಕರಣೆಗಳನ್ನು ಯಥಾವಿಧಿಯಾಗಿ ಒದಗಿಸುವುದಕ್ಕೆ ಅನುಕೂಲಮಾಡಬೇಕೆಂಬುದೂ ಸಮ್ಮೇಳನದ ಮುಖ್ಯ ಠರಾವು " ಎಂಬುದಾಗಿ ಬರೆದಿರುವನು. ಮೇಲ್ಕಂಡ ಸಭೆಯು ನಡೆದ ವಿಷಯವು ಶಿದ್ದೀಕನಿಗೆ ಮಾತ್ರ ಗೊತ್ತಾಗಿ ಇತರ ಯಾರಿಗೂ ಗೊತ್ತಿಲ್ಲದಿರಲು ಕಾರಣವೇನು ? ಬಹುಶಃ ಶಿದ್ದೀಕನಿಗೆ ಆಕಾಶದಿಂದ ವರ್ತಮಾನಗಳು ಬರಬಹುದಾಗಿ ಕಾಣುತ್ತದೆ.

ಶಿದ್ದೀಕನೇ, - ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ " ಎಂಬ ಗಾದೆಯಂತೆ ಇಹೊತ್ತಿಲ್ಲ ನಾಳೆಯಾದರೂ ನಿನ್ನ ಮೋಸಗಾರಿಕೆಯು ಹೊರಬೀಳುವುದು. ಅಲ್ಲಿಯವರೆಗೂ ಸ್ವಲ್ಪ ತಾಳು. ನಿನ್ನ ಚೆನ್ನಬಸವೇಶ್ವರಾವತಾರದ ಮಹಿಮೆಯನ್ನು ನೋಡುವ ಕಾಲವು ಸಮೀಪಿಸಿದೆ. ವಾಚಕರೇ, ಈ ಶಿದ್ದೀಕನ ಕೃತಿಯನ್ನು ಖಂಡಿಸುತ್ತಾ ಹೋದರೆ ಒಂದು ಪುಸ್ತಕವನ್ನೇ ಬರೆಯಬಹುದು. ಆದರೆ ಈ ವಿಷಯವಾಗಿ ಅಮೂಲ್ಯವಾದ ಸ್ಟಾರ್‌ಪತ್ರಿಕೆಯ ಸ್ಥಳವನ್ನು ವ್ಯರ್ಥಮಾಡಲು ಇಷ್ಟವಿಲ್ಲದೆ ಸದ್ಯಕ್ಕೆ ಇಲ್ಲಿಗೆ ಮುಗಿಸಿ [illegible] ಇವನ ಮೋಸದ ಬಲೆಗೆ ಬೀಳದೆ [illegible] ಹಿಂದುಗಳೆಲ್ಲರೂ ಶಿದ್ದೀಕನಿಗೆ ಅಥವ ಕೃತ್ರಿಮ ಚೆನ್ನಬಸವೇಶ್ವರನಿಗೆ [illegible] ಭಕ್ತಿಯನ್ನು ತೋರಿಸದಿರಬೇಕಾಗಿ [illegible].

ಓರ್ವ ಹಿಂದುಧರ್ಮಾಭಿಮಾನಿ.

[illegible]

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

21 ನೆಯ ಪ್ರಕರಣ.

ನಿರ್ಬಲಕೇಬಲರಾಂ.

ಪರಮೇಶ್ವರನಾದ ಶ್ರೀರಾಮಚಂದ್ರನೇ ಅನಾಥರಿಗೆ ನಾಥನಾಗಿಯೂ, ದುರ್ಬಲರಿಗೆ ಬಲನಾಗಿಯೂ ಇದ್ದಾನೆಂಬ ಭಾವವನ್ನು ನಿರ್ಬಲರಿಗೆ ಬಲರಾಂ ಎಂಬ ವಾಕ್ಯದಿಂದ ಸೂರದಾಸರು ಹೇಳಿರುತ್ತಾರೆ. ನನಗೆ ಹಿಂದುಮತ ಮೊದಲಾಗಿ ವಿವಿಧಮತಗಳ ಸ್ವರೂಪಪರಿಜ್ಞಾನವು ಅತ್ಯಲ್ಪವಾಗಿದ್ದರೂ ಆಪತ್ತು ಬಂದವೇಳೆಯಲ್ಲಿ ನನ್ನನ್ನು ಕಾಪಾಡಲು ಅದು ಸಾಲದೆಂದು ನಾನು ಗ್ರಹಿಸಿಕೊಂಡಿರಬೇಕಾಗಿದ್ದಿತು. ಆಪತ್ತಿನಲ್ಲಿ ಧೈರ್ಯಹುಟ್ಟುವಂತಹ ಮಹಾಶಕ್ತಿಯ ವಿಚಾರದಲ್ಲಿ ಮನುಷ್ಯನಿಗೆ ಕೊಂಚವೂ ತಿಳಿಯದು. ಆ ತರುಣದಲ್ಲಿ ತದ್ವಿಷಯಕಜ್ಞಾನವಿರುವುದಿಲ್ಲ. ನಾಸ್ತಿಕನಾದಲ್ಲಿ ಅಕಸ್ಮಾತ್ತಾಗಿ ಆ ಧೈರ್ಯವು ತನಗುಂಟಾಯಿತೆಂದು ಭಾವಿಸುವನು. ಆಸ್ತಿಕನಾದಲ್ಲಿ ಭಗವಂತನೇ ತನ್ನನ್ನು ಕಾಪಾಡಿದನೆಂದು ಸಂತೋಷಪಡುವನು. ತಾನು ಮತಧರ್ಮವನ್ನು ಸರಿಯಾಗಿ ನೆರವೇರಿಸಿಕೊಂಡಿರುವಂತೆ ತನ್ನಮೇಲೆ ಭಗವದನುಗ್ರಹವುಂಟಾಗಿರುವುದೆಂದು ಕೊಂಚ ನಿರ್ಣಯಿಸುವನು. ಆದರೆ ಆಪತ್ಕಾಲದಲ್ಲಿ ಆ ವಿಷಯವನ್ನು ಆತನು ಗ್ರಹಿಸುವುದಿಲ್ಲ. ತಾನು ನಿಷ್ಠಪರನೆಂದು ಗರ್ವಪಟ್ಟುಕೊಂಡಿರುವವನಿಗೆ ವಿನಮ್ರತೆಯಿದ್ದಹೊರತು ಅವನಿಗೆ ದೈವಸಾಕ್ಷಾತ್ಕಾರವಾಗುವುದಿಲ್ಲ. ಅನುಭವವಿಲ್ಲದ ಮತಜ್ಞಾನವು ಆಪತ್ಕಾಲದಲ್ಲಿ ನಿಷ್ಫಲವು. ಈ ವಿಷಯವನ್ನು ನಾನು ಮೊದಲು ಆಂಗ್ಲದೇಶದಲ್ಲೇ ಗ್ರಹಿಸಿಕೊಂಡೆನು. ಆಗ್ಗೆ ನನಗೆ 20 ವರ್ಷವಯಸ್ಸಾಗಿದ್ದಿತು. ನನಗೆ ಮಗನು ಸಹ ಹುಟ್ಟಿದ್ದನು. ತತ್ಪೂರ್ವದಲ್ಲಿ ನಾನು ಹೇಗೆ ಕಾಪಾಡಲ್ಪಟ್ಟೆನೋ ಅದು ನನಗೆ ತಿಳಿಯದು. 1890 ರಲ್ಲಿ ನಾನು ಆಂಗ್ಲದೇಶದಲ್ಲಿದ್ದಾಗ್ಗೆ ಪೋರ್ಟ್ಸ್‌ಮತ್ತಿನಲ್ಲಿ ಶಾಕಾಹಾರಸಭೆಯು ಜರುಗಿತು. ಆ ಸಭೆಗೆ ನನ್ನನ್ನೂ ನನ್ನ ಸ್ನೇಹಿತನಾದ ಮತ್ತೊಬ್ಬ ಭಾರತೀಯನನ್ನೂ ಆಹ್ವಾನಿಸಿದ್ದರು. ಅದು ಒಂದು ರೇವುಪಟ್ಟಣವು. ಸಮುದ್ರತೀರದಲ್ಲಿದೆ. ಅಲ್ಲಿಯ ಪ್ರಜೆಗಳಲ್ಲಿ ಬಹಳ ಜನರು ನಾವಿಕರಾಗಿರುವರು. ಅಲ್ಲಿ ವ್ಯಭಿಚಾರಿಣಿಯರು ಬಹಳ ಮಂದಿಯುಂಟು. ಅವರು ಗುಡಸಟ್ಟಗಳು. ಸಂಸಾರಿಗಳಲ್ಲೂ ಪಾತಿವ್ರತ್ಯನಿಯಮವಿಲ್ಲವು. ಅಂತಹವರ ಮನೆಯಲ್ಲಿ ಒಂದು ಕೊಠಡಿಯು ನಮ್ಮ ವಾಸಕ್ಕೇರ್ಪಡಿಸಲ್ಪಟ್ಟಿತು. ಪ್ರತ್ಯೇಕವಾಗಿ ನಮಗೆ ಸನ್ಮಾನಸಂಘದವರು ಆ ಮನೆಯನ್ನು ಏರ್ಪಡಿಸುವ ಉದ್ದೇಶವುಳ್ಳವರಾಗಿರಲಿಲ್ಲವು. ನಾವು ಹೊಸಬರು. ಅದು ದೊಡ್ಡಪಟ್ಟಣವು. ಆದುದರಿಂದ ಯಾವ ಮನೆಯು ವಾಸಕ್ಕೆ ಯೋಗ್ಯವು ಯಾವುದು ಅಯೋಗ್ಯವು ಎಂದು ನಿರ್ಣಯಿಸುವುದು ಕಷ್ಟವಾಗಿದ್ದಿತು.

ನಾವು ಸಭೆಗೆ ಹೋಗಿ ಸಾಯಂಕಾಲದಲ್ಲಿ ಮನೆಗೆ ಬಂದು ಭೋಜನಮಾಡಿದೆವು. ತರುವಾಯ ಬ್ರಿಡ್ಜ್ ಎಂಬ ಇಸ್ಪೀಟು ಆಟವನ್ನಾಡಲಾರಂಭಿಸಿದೆವು. ಅಲ್ಲಿ ಉತ್ತಮರಾದ ಸಂಸಾರಿಗಳ ಮನೆಯಜಮಾನಿಯರು ಕೂಡ ಪುರುಷರ ಜತೆಗೆ ಆಡುವರು. ಅದು ತಪ್ಪಲ್ಲವು. ಪೋರ್ಟ್ಸ್‌ಮತ್ತಿನಲ್ಲಿ ನಮ್ಮ ಮನೆಯ ಯಜಮಾನಿಯು ನಮ್ಮ ಜತೆಯಲ್ಲಿ ಆಟವಾಡಲುಪಕ್ರಮಿಸಿದಳು. ಸಾಧಾರಣವಾಗಿ ಎಲ್ಲರೂ ಪಾಪಭೀತಿಯಿಲ್ಲದೆ ಚಲ್ಲುಮಾತುಗಳನ್ನಾಡುವುದು ಸಹಜವಾಗಿದ್ದುದರಿಂದ ಆಗ ನನ್ನ ಕೂಡಯಿದ್ದ ಭಾರತೀಯನೂ, ಮನೆ ಯಜಮಾನಿಯೂ, ನೀತಿಬಾಹ್ಯವಾದ ಸರಸಸಲ್ಲಾಪಗಳನ್ನಾಡುವವರಾದರು. ಈ ಚೇಷ್ಟೆಯಲ್ಲಿ ನನ್ನ ಸಂಗಡಿಗನು ನಿಪುಣನೆಂದು ನನಗೆ ತಿಳಿಯದು. ಅವರ ಸರಸೋಕ್ತಿಯು ನನ್ನ ಮನಸ್ಸನ್ನಾಕರ್ಷಿಸಿತು. ನಾನೂ ಅವರ ಕೂಡ ಅಂತಹ ಮರ್ಮೋಕ್ತಿಗಳನ್ನಾಡಲುಪಕ್ರಮಿಸಿದೆ. ನನ್ನ ವಿವೇಕವು ಮಾಯವಾಯಿತು. ನನ್ನ ಮನಸ್ಸು ಕಾಮಾಂಧಕಾರದಲ್ಲಿ ಮುಳುಗಿತು. ಇಸ್ಪೀಟು ಆಟವನ್ನು ಕಟ್ಟಿಟ್ಟು ಮೋಹವಿಕಾರವನ್ನು ತೋರಿಸುವವನಾದೆನು. ಅಷ್ಟರಲ್ಲಿ ನನ್ನ ಸ್ನೇಹಿತನ ಹೃತ್ಕಮಲನಿವಾಸಿಯಾಗಿದ್ದ ಪರಮೇಶ್ವರನು ನನ್ನನ್ನು ಎಚ್ಚರಿಸಿ, ನೀನು ಕೂಡ ಕಾಮಾಂಧನಾದೆಯಾ ? ಕೂಡಲೆ ಈ ಸ್ಥಳವನ್ನು ಬಿಟ್ಟು ಹೋಗು ಎಂದು ಅವನ ಮುಖದ್ವಾರ ಭಗವಂತನು ನನ್ನನ್ನು ಎಚ್ಚರಗೊಳಿಸಿದನು. ಅಷ್ಟರಲ್ಲಿ ಕಾಮಪಿಶಾಚಿಯು ನನ್ನನ್ನು ಬಿಟ್ಟಿತು. ನನ್ನ ತಾಯಿಗೆ ನಾನು ಮಾಡಿದ ಪ್ರಮಾಣವು ನನ್ನ ಸ್ಮರಣೆಗೆ ಬಂದು ನನಗೆ ನಾಚುಗೆಯುಂಟಾಯಿತು. ಮನಸ್ಸಿನಲ್ಲೇ ಆ ಸ್ನೇಹಿತನಿಗೆ ಕೃತಜ್ಞತೆಯಿಂದ ವಂದಿಸಿ ಅಲ್ಲಿಂದೆದ್ದು ಹೊರಟುಹೋದೆನು. ಹುಲಿಬಾಯಿಯಿಂದ ತಪ್ಪಿಸಿಕೊಂಡ ಕುರಿಮರಿಯಂತೆ ಧಡಧಡನೆ ಎದೆಯು ಬಡಿದುಕೊಳ್ಳುತ್ತಿದ್ದ ನಾನು ನನ್ನ ಸ್ಥಳವನ್ನು ಸೇರಿದೆನು.

ಪರಸ್ತ್ರೀಯನ್ನು ನೋಡಿ ಮೋಹಿತನಾದುದು ಅದೇ ಮೊದಲು. ಆ ರಾತ್ರಿ ನನಗೇನೇನೋ ಆಲೋಚನೆಯು ಹುಟ್ಟಿತು. ಸರಿಯಾಗಿ ನಿದ್ರೆ ಬರಲಿಲ್ಲವು. ನಾನು ಆ ಮನೆಯನ್ನು ಬಿಟ್ಟು ಹೋಗಲೇ ? ಆ ಪಟ್ಟಣದಿಂದಲೇ ಮಾಯವಾಗಲೋ ? ನಾನೆಲ್ಲಿದ್ದೆನು ? ನಾನು ವಿವೇಕಹೀನನಾಗಿದ್ದಲ್ಲಿ ನನಗೆ ಎಂತಹಗತಿಯು ಪ್ರಾಪ್ತವಾಗುತ್ತಿದ್ದಿತು ? ಎಂದು ನಾನು ಆಲೋಚಿಸುತ್ತಿದ್ದೆನು. ಸಭೆಯು ಮುಗಿಯುವುದಕ್ಕೆ ಪೂರ್ವವೇ ನಾನು ಆ ಪಟ್ಟಣವನ್ನು ಬಿಟ್ಟು ಹೊರಟೆನು. ನನ್ನ ಸ್ನೇಹಿತನು ನನ್ನ ಕೂಡ ಬರಲಿಲ್ಲವು : ಇನ್ನೂ ಕೆಲಕಾಲ ಅಲ್ಲೇ ಇದ್ದನು. ಆಗ ನನಗೆ ಮತವನ್ನು ಕುರಿತೂ ದೇವರನ್ನು ಕುರಿತೂ ದೇವಸಹಾಯವನ್ನು ಕುರಿತೂ ಏನೂ ತಿಳಿಯದು. ಭಗವಂತನು ನನ್ನನ್ನು ಕಾಪಾಡಿದನೆಂದು ಮಾತ್ರ ನಾನು ತಿಳಿದುಕೊಂಡಿದ್ದೆನು. ದೇವರು ಈ ಪ್ರಕಾರವಾಗಿ ನನ್ನನ್ನು ಅನೇಕಸಾರಿ ವಿಪತ್ತಿನಿಂದ ಕಾಪಾಡಿದನೆಂದು ನನಗೆ ಈಗ ದೃಢವಾದ ನಂಬಿಕೆಯು ಹುಟ್ಟಿರುತ್ತದಲ್ಲದೆ ಅದನ್ನು ಈವರೆಗೂ ನಾನು ಸಾಕಲ್ಯವಾಗಿ ಗ್ರಹಿಸಿಕೊಂಡಿರಲಿಲ್ಲವು. ಇನ್ನೂ ಹೆಚ್ಚಾದ ಅನುಭವವುಂಟಾದ ಹೊರತು ನನಗದು ಸರಿಯಾಗಿ ಬೋಧವಾಗುವುದಿಲ್ಲವು. ಆಧ್ಯಾತ್ಮಿಕವಿಷಯದಲ್ಲಿರುವಾಗಲೂ, ನ್ಯಾಯವಾದಿಯಾಗಿದ್ದಾಗಲೂ, ರಾಜಕೀಯವಿಚಾರದಲ್ಲಿರುವಾಗಲೂ, ಸಂಸ್ಥೆಗಳನ್ನು ನಿರ್ವಹಿಸುತ್ತಿದ್ದಾಗಲೂ ಅನೇಕಸಾರಿ ಭಗವಂತನೇ ನನ್ನನ್ನು ಕಾಪಾಡಿದನು. ಆಶೆಯಲ್ಲವೂ ಭಗ್ನವಾಗಿದ್ದಾಗಲೂ, ಸಹಾಯವು ಕಡಮೆಯಾದಾಗಲೂ, ಸೌಖ್ಯವು ತಗ್ಗಿದಾಗಲೂ ನಾನು ಗ್ರಹಿಸದೆಯಿದ್ದಾಗ್ಗೂ ದೈವಸಹಾಯವು ನನಗೆ ಲಭಿಸುತ್ತಲೇ ಇದ್ದಿತು. ಭಗವದಾರಾಧನೆ, ಪ್ರಾರ್ಥನೆ, ಸಾಷ್ಟಾಂಗನಮಸ್ಕಾರ ಮೊದಲಾದವುಗಳು ಮೂಢವಿಶ್ವಾಸವೆಂದು ತಿಳಿಯುವುದು ಅವಿವೇಕವು. ತಿನ್ನುವುದು, ಕುಡಿಯುವುದು, ನಡೆಯುವುದು, ಮಲಗುವುದು ಮೊದಲಾದ ಕೃತ್ಯಗಳಿಗಿಂತ ಭಗವದ್ವಂದನಾರ್ಚನ ಪ್ರಾರ್ಥನಾದಿಗಳು ಬಹಳ ಫಲಪ್ರದವಾದುವು. ನಿತ್ಯಕೃತ್ಯಗಳು ಫಲಪ್ರದಗಳಲ್ಲವೇ ಅಲ್ಲ. ಭಗವತ್ಸೇವಾರೂಪವಾದ ಕಾರ್ಯಗಳೇ ಫಲಪ್ರದವೆಂದು ಹೇಳುವುದರಲ್ಲಿ ಅತಿಶಯೋಕ್ತಿಯು ಸ್ವಲ್ಪಮಾತ್ರಕ್ಕೂ ಇಲ್ಲವು. ಅಂತಹ ಪ್ರಾರ್ಥನಾದಿಗಳನ್ನು ಪ್ರಜೆಗಳೆಲ್ಲರೂ ಪಡೆಯಲಾರರು. ಆ ಸ್ಮರಣೆಯು [illegible] ಬಂದುದಲ್ಲವು. ಅದು ಮನಃಪೂರ್ವಕವಾದುದರಿಂದ [illegible] ಪ್ರೇಮಮಾತ್ರ [illegible] ಫಲವು. ಪ್ರಾರ್ಥನೆಗೆ ಬಾಯಿಮಾತು [illegible]

ಮಲ್ನಾಡು ವೀರಶೈವಸಭೆಯ ಅಧ್ಯಕ್ಷರಾಗಿದ್ದ ಮ|| ಎಚ್. ಕೆ. ವೀರಬಸವಯ್ಯ ಬಿ.ಎ.,ಬಿ.ಎಲ್., ರವರ ಭಾಷಣ.

ಮುಖ್ಯವಾಗಿ ಈ ನಮ್ಮ ಸಮಾಜಕ್ಕೆ ಬಂದೊದಗಿರುವ ವಿಪತ್ಪರಂಪರೆಗಳ ಈ ವಿಷಮಸಮಯದಲ್ಲಿ ಅವರವರ ಶಕ್ತ್ಯನುಸಾರ ಮತಸೇವೆಯನ್ನು ಮಾಡಬೇಕಾದದ್ದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿರುತ್ತದೆ. ಈ ಸಮಾಜದಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಬೇರೂರಿ ಕೇವಲ ಅಧೋಗತಿಯನ್ನು ಈ ಸಮಾಜವು ಹೊಂದುತ್ತಾ ಇದೆ. ಪೂರ್ವಕಾಲಗಳಲ್ಲಿ ಯಾವ ದೇಶದಲ್ಲಿ ಅಧರ್ಮವು ಪ್ರಬಲಿಸುತ್ತೊ ಅಲ್ಲಿ ಶ್ರೀಜಗನ್ನಿಯಾಮಕನ ಕೃಪಾದೃಷ್ಟಿಯಿಂದ ಯಾರಾದರೂ ಅದ್ಭುತಸಾಮರ್ಥ್ಯವುಳ್ಳ ವ್ಯಕ್ತಿಗಳು ಅವತರಿಸಿ ಅವರ ಮೂಲಕ ಪುನಃ ಧರ್ಮಸ್ಥಾಪನೆಯಾಗಿ ಪ್ರಪಂಚವ್ಯಾಪಾರವು ಶಾಂತರೀತಿಯಿಂದ ನಡೆದು ಬಂದಂತೆ ಗೊತ್ತಾಗುತ್ತದೆ. ಈ ಕಾರಣದಿಂದಲೇ ಬೌದ್ಧ, ಕ್ರೈಸ್ತ, ಮಹಮದ್ ಮೊದಲಾದ ದೈವಾಂಶಸಂಭೂತರ ಅವತಾರಗಳು ನಡೆದು ಜನಸಾಮಾನ್ಯಕ್ಕೆ ಎಷ್ಟೋ ಮಹದುಪಕಾರವಾಗಿರುತ್ತದೆ. ಇದೇ ತತ್ವದಿಂದ ವೇದಸಂಮತವಾದ ಹಲವು ಮತಗಳು ಬಲವಾಗುತ್ತ ಬಂದವೇಳೆಗಳಲ್ಲಿ ಮಹಾಪುರುಷರು ಆಗಿಂದಾಗ್ಗೆ ಜನ್ಮವೆತ್ತಿ ದೇಶಮಧ್ಯದಲ್ಲಿ ಧರ್ಮಜಾಗ್ರತೆಯನ್ನುಂಟುಮಾಡಿರುತ್ತಾರೆ. ಈ ನಮ್ಮ ವೀರಶೈವಮತವು ಬಹಳವಾಗಿ ನಶಿಸಿಹೋಗಿದ್ದ ವೇಳೆಯಲ್ಲಿ ಶ್ರೀಬಸವಾದಿಪ್ರಮಥರಿಂದ ಎಷ್ಟರಮಟ್ಟಿಗೆ ಪುನರುಜ್ಜೀವಿತವಾಯಿತೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಪ್ರಕೃತದಲ್ಲಿ ಈ ಮತಕ್ಕೆ ಮೇಲಿಂದಮೇಲೆ ಬರುತ್ತಿರುವ ಕಷ್ಟಪರಂಪರೆಗಳು ಅಸಂಖ್ಯಾತವಾಗಿರುತ್ತವೆ. ಅವುಗಳೆಲ್ಲವನ್ನೂ ವಿಶದಪಡಿಸಲು ಕಾಲಸಂಕೋಚದಿಂದ ಸಾಧ್ಯವಿಲ್ಲ. ಮುಖ್ಯವಾಗಿ ಗುರುವರ್ಗದಲ್ಲಿ ಪಂಚಾಚಾರ್ಯಪೀಠಗಳಿಗೂ ವಿರಕ್ತಾಧಿಕಾರಿವರ್ಗಕ್ಕೂ ಹುಟ್ಟಿರುವ ಭಿನ್ನಭಾವಗಳ ಕೋಲಾಹಲವು ಈ ಸಮಾಜವನ್ನೇ ನಿರ್ಮೂಲಮಾಡುವಷ್ಟು ಪ್ರಚಂಡವಾಗಿ ಎದ್ದಿರುತ್ತದೆ. ಇದಕ್ಕೆ ಅಂಗವಾಗಿ ಶಿಲಾಸ್ಥಾಪನೆ, ಶಿಖಿ, ಪಾದತೀರ್ಥ ಮುಂತಾದ ನಮ್ಮ ಪಾರಮಾರ್ಥಿಕಸಂಸ್ಕಾರಗಳಲ್ಲಿಯೂ, ಅಂತರ್ಬಾಹಿರ ಚಿಹ್ನೆಗಳಲ್ಲಿಯೂ ಭಿನ್ನಾಭಿಪ್ರಾಯಗಳು ಪ್ರಬಲವಾಗಿ ಸಮಾಜವು ಛಿದ್ರವಾಗುತ್ತಿದೆ. ಮುಕ್ತಿಸಾಧನಗಳಾದ ಈ ಮುಖ್ಯ ಕ್ರಿಯೆಗಳಲ್ಲಿಯೇ ಏಕಮತ್ಯವಿಲ್ಲದಮೇಲೆ ಈ ಸಮಾಜದಲ್ಲಿ ನೈತಿಕ, ಆರ್ಥಿಕ, ಮುಂತಾದ ಪ್ರಶ್ನೆಗಳ ಗತಿಯೇನಾಗಿರುತ್ತದೆಂದು ಹೇಳಬೇಕಾಗಿಲ್ಲ. ಈ ಬಡಕುಗಳಿಂದ ಗುರುವರ್ಗದಲ್ಲಿ ಗೌರವ ಮತ್ತು ಬಿಗಿಯೂ, ಶಿಷ್ಯರಲ್ಲಿ ಭಯಭಕ್ತಿಗಳೂ ತಪ್ಪಿಹೋಗಿ ಗುರುಶಿಷ್ಯರೆಲ್ಲಾ ಸ್ವೇಚ್ಛಾವಿಹಾರಿಗಳಾಗಿ ಒಬ್ಬರ ಭಯವು ಮತ್ತೊಬ್ಬರಿಗಿಲ್ಲದೆ ಸ್ವಧರ್ಮವನ್ನು ಮೂಲೆಗೊತ್ತುತ್ತ ಬಂದಿರುತ್ತಾರೆ. ಇವುಗಳ ಜೊತೆಗೆ ಈ ಸಮಾಜದಲ್ಲಿರುವ ಅನೇಕ ಪ್ರಭೇದಗಳಲ್ಲಿ ಅನೂಚಾನವಾಗಿ ಬಂದ ಪದ್ಧತಿಗಳನ್ನು ಉಲ್ಲಂಘಿಸಿ ತಮ್ಮಲ್ಲಿಯೇ ಗುರುಗಳನ್ನು ನಿರ್ಮಿಸಿಕೊಂಡು ಪಂಗಡಗಳೂ, ಒಳಬೇಧಗಳೂ ಹೆಚ್ಚುತ್ತಲಿವೆ. ಇವುಗಳನ್ನೆಲ್ಲಾ ಸರಿಪಡಿಸಲು ಮನುಷ್ಯಮಾತ್ರಕ್ಕೆ ಸಾಧ್ಯವಲ್ಲವೆಂದು ಎಲ್ಲರಿಗೂ ತೋರುತ್ತಾ ಬಂದು ಶ್ರೀಜಗದೀಶ್ವರನೊಬ್ಬನೇ ಈ ವ್ಯತ್ಯಾಸಗಳನ್ನು ಸರಿಪಡಿಸಲು ದಾರಿಯನ್ನು ತೋರಿಸಬೇಕೆಂದು ಸರ್ವರೂ ಮೊರೆಯಿಡುವ ಕಾಲವು ಬರುತ್ತಾ ಇರುತ್ತೆಂದು ಮಾತ್ರ ಒಂದು ಶುಭಸೂಚನೆಯು ನನಗೆ ಕಂಡುಬರುತ್ತಾ ಇದೆ. ಈ ಸಮಯದಲ್ಲಿ ನಾವು ಎತ್ತ ಬಂದಾಗ ಕಣ್ಣುಮುಚ್ಚಿಕೊಂಡಂತೆ ಇರದೆ ನಮ್ಮ ಮನದಟ್ಟಿ ಅವರವರ ಶಕ್ತ್ಯನುಸಾರ ಕೆಲಸಮಾಡದ ಹೊರತು ಈ ಮತವು ಉದ್ಧಾರವಾಗುವಂತಿಲ್ಲ. ಈ ಜಾಗ್ರತೆಯು ನಮ್ಮಲ್ಲಿ ಹುಟ್ಟಬೇಕಾದರೆ ಈ ನವನಾಗರೀಕತೆಯ ಕಾಲದಲ್ಲಿ ಇತರ ಜನಾಂಗಗಳು ಯಾವ ರೀತಿಯಿಂದ ಏಳಿಗೆಗೆ ಬಂದಿರುತ್ತವೆ ಎಂಬುದನ್ನು ಮುಖ್ಯವಾಗಿ ನಾವು ಗಮನಿಸಬೇಕಾಗಿದೆ. ಈ ಭೂಮಂಡಲದಲ್ಲಿ ಅದ್ಭುತವಾದ ವ್ಯತ್ಯಾಸಗಳು ಮನುಷ್ಯಪ್ರಯತ್ನದಲ್ಲಿ ನಡೆಯುತ್ತ ಬಂದಿವೆ. ದೇಶಪರ್ಯಟನದ ಸೌಲಭ್ಯಗಳು, ತಂತಿಯ ಸಹಾಯಕೂಡ ಇಲ್ಲದೆ ಒಂದು ಗೋಳಭಾಗದಿಂದ ಮತ್ತೊಂದು ಗೋಳಭಾಗಕ್ಕೆ ವರ್ತಮಾನಗಳು, ಆಕಾಶವಿಮಾನಗಳು, ವಿದ್ಯುಚ್ಛಕ್ತಿಯ ಸಾಧನಗಳು ಮುಂತಾದ ನವನಾಗರೀಕತೆಯ ವೈಭವಗಳನ್ನು ಚೆನ್ನಾಗಿ ಯೋಚನೆಮಾಡಿ ನೋಡುವಲ್ಲಿ ಸ್ವಲ್ಪ ವರ್ಷಗಳಲ್ಲಿಯೇ ಈ ಪ್ರಪಂಚದಲ್ಲಿನ ಜನಸಾಮಾನ್ಯವೆಲ್ಲವೂ ಒಂದೇಜನಾಂಗದಂತೆಯೂ ಮನುಷ್ಯಪ್ರಾಣಿಗಳಲ್ಲಿ ದೇಶ, ವರ್ಣ, ಕಸಬು ಮುಂತಾದ ಭಿನ್ನಭಾವಗಳು ಬಹಳಮಟ್ಟಿಗೆ ಅಡಗಿ ಏಕಮತ್ಯವು ದಿನೇದಿನೇ ಹೆಚ್ಚಬಹುದೆಂದು ತೋರುತ್ತಿದೆ. ಇಡಿ ಪ್ರಪಂಚವೇ ಈ ಸ್ಥಿತಿಗೆ ಬರುತ್ತಿರುವಾಗ ಈ ನಮ್ಮ ಸಮಾಜವು ತಕ್ಕ ಸುಧಾರಣೆಯನ್ನು ಮಾಡಿಕೊಂಡು ಮನುಷ್ಯವರ್ಗದಲ್ಲಿ ಪ್ರತಿಯೊಂದು ಪ್ರಾಣಿಗೂ ತಾನು ಅಭಿವೃದ್ಧಿಗೆ ಬರಬೇಕೆಂದು ಹುಟ್ಟುತ್ತಿರುವ ಕಾಂಕ್ಷೆಗೆ ನಮ್ಮ ಸಹಾನುಭೂತಿಯನ್ನು ಕೊಟ್ಟು, ತನ್ಮೂಲಕ ಸಮಾಜದ ಐಕ್ಯತೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಈ ತತ್ವವನ್ನು ತಮ್ಮ ಮುಂದೆ ಇಟ್ಟು ಇದರ ಅವಶ್ಯಕತೆಯನ್ನು ಹೆಚ್ಚಿಸಬೇಕೆಂಬ ಲವಲವಿಕೆಯಿಂದ ಒಂದೆರಡು ಮಾತುಗಳನ್ನಾಡಲು ಅಪೇಕ್ಷಿಸಿದ್ದೇನೆ.

ಪ್ರಾಂತಿಕಸಭೆಗಳಿಂದಾಗಲಿ ಮತ್ತು ಅಲ್ಲಲ್ಲಿ ಸದುಪದೇಶಗಳನ್ನು ಮಾಡುವುದರಿಂದಾಗಲಿ ಈ ತತ್ವವು ಜಾಗ್ರತೆಯಾಗಿ ಜನಸಾಮಾನ್ಯಕ್ಕೆ ಮನದಟ್ಟಲಾರದು. ಇವುಗಳ ಜೊತೆಗೆ ಸಮಾಜಪರವಾದ ಒಂದು ಮುದ್ರಣಾಲಯವೂ, ಒಂದು ವರ್ತಮಾನಪತ್ರಿಕೆಯೂ ಅತ್ಯವಶ್ಯಕವಾಗಿರುತ್ತವೆ. ಇವುಗಳ ಮಹತ್ವವನ್ನು 1920 ನೇ ಇಸವಿಯಲ್ಲಿ ಕೆಳದಿಯಲ್ಲಿ ನಡೆದ ಇದೇ ಪ್ರಾಂತಿಕಸಭೆಯಲ್ಲಿ ವಿಶದವಾಗಿ ಅರಿಕೆಮಾಡಿಕೊಂಡಿರುತ್ತೇನೆ. ಈವರೆಗೂ ಅದು ಫಲಿಸದಿದ್ದುದಕ್ಕಾಗಿ ತುಂಬಾ ವಿಷಾದಿಸುತ್ತೇನೆ. ಮೈಸೂರು ವೀರಶೈವವಿದ್ಯಾಭಿವೃದ್ಧಿಸಂಘದವರೂ ಸಹ ಇದರ ಅವಶ್ಯಕತೆಯನ್ನು ಚೆನ್ನಾಗಿ ಗ್ರಹಿಸಿ ಮಾಡಿದ ಪ್ರಯತ್ನವು ಜನಸಮುದಾಯದಲ್ಲಿ ತಕ್ಕ ಪ್ರೋತ್ಸಾಹವಿಲ್ಲದೆ ನಿಂತುಹೋಯಿತು. ಈಗಲಾದರೂ ಇತ್ತಕಡೆ ನಮ್ಮ ಸಮಾಜವು ಗಮನವಿಡದ ಹೊರತು ಯಾವ ಕಾರ್ಯವೂ ಕ್ಷಿಪ್ರದಲ್ಲಿ ಸಾಧ್ಯವಾಗಲಾರದು. ವೀರಶೈವರಲ್ಲಿ ಇವರ ನಡೆನುಡಿಗಳು ನಿತ್ಯ ಮತ್ತು ನೈಮಿತ್ತಿಕ ವಿಧಿಗಳು ಹಲವು ತೆರನಾಗಿ ಆಚರಣೆಯಲ್ಲಿರುವುವು. ಮತ್ತು ದಿನೇದಿನೇ ಇವರ ಆರ್ಥಿಕಸ್ಥಿತಿಯು ಬಹಳ ಶೋಚನೀಯವಾಗುತ್ತ ಬಂದಿದೆ. ಇವುಗಳಿಗೆಲ್ಲಾ ಅವಿದ್ಯೆಯೇ ಮುಖ್ಯ ಕಾರಣವಾಗಿದೆ ಎಂದು ಹೇಳಿದರೆ ಪ್ರಕೃತಕ್ಕೆ ಸಾಕಾಗಿದೆ. ನಮ್ಮನ್ನಾಳುವ ದಯಾಳು ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳಲ್ಲಿ ವಿದ್ಯಾಪ್ರಸರಣೆಗಾಗಿ ಪ್ರತಿವರ್ಷವೂ ಬಡ್ಜೆಟ್ಟಿನಲ್ಲಿ ತೆಗೆದಿಡುವ ಮೊಬಲಗನ್ನು ಒಟ್ಟು ಉತ್ಪತ್ತಿಯಲ್ಲಿ ಹೋಲಿಸಿನೋಡಿದರೆ ನಮ್ಮ ಸರ್ಕಾರವು ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿರುವ ಖರ್ಚನ್ನು ಮತ್ಯಾವದೇಶೀಯ ರಾಜ್ಯದಲ್ಲಾಗಲಿ ಬ್ರಿಟಿಷ್ ಇಂಡಿಯಾದಲ್ಲಾಗಲೀ ನಡೆಯುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಷ್ಟೊಂದು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಪ್ರತಿವರ್ಷವೂ ಈ ಬಾಬಿನಲ್ಲಿ ಹೆಚ್ಚು ಉದಾರಖರ್ಚುಗಳನ್ನು ಮಾಡಿ ಅನೇಕ ಸೌಕರ್ಯಗಳನ್ನು ಕಲ್ಪಿಸುತ್ತಿರುವ ನಮ್ಮ ಶ್ರೀಮನ್ಮಹಾರಾಜರವರಲ್ಲಿ ನಮ್ಮ ಕೃತಜ್ಞತೆಯು ಎಷ್ಟರಮಟ್ಟಿಗಿರಬೇಕೆಂದು ನಾನು ಹೇಳಬೇಕಾಗಿಲ್ಲ. ಈ ಮಲೆನಾಡು ಪ್ರಾಂತ್ಯದಲ್ಲಿ ವರ್ಷೇವರ್ಷೇ ಪ್ರಜಾಸಂಖ್ಯೆಯು ಕಮ್ಮಿಯಾಗುತ್ತಾ ಬಂದಿರುವಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಎಷ್ಟು ದೀರ್ಘಾಲೋಚನೆಯನ್ನು ದಿವಾರಾತ್ರಿಗಳೂ ನಡೆಸುತ್ತಾ ಈ ಪ್ರಾಂತ್ಯದಲ್ಲಿ ಆರೋಗ್ಯಾದಿಸಂಪತ್ ಸಹಾಯಗಳನ್ನು ಹೆಚ್ಚಿಸಿ ಜನಾಭಿವೃದ್ಧಿಯನ್ನು ಮಾಡಬೇಕೆಂಬ ದೃಢಸಂಕಲ್ಪದಿಂದ ಸರ್ಕಾರಕ್ಕಿರುವ ಊನ ಪ್ರಾಭಾವದ ಕೊರತೆಯನ್ನೂ ಲಕ್ಷಿಸದೆ ದ್ರವ್ಯಸಹಾಯಮಾಡುತ್ತ ಇರುತ್ತಾರೆ. ಈ ಸೌಕರ್ಯಗಳ ಪ್ರಯೋಜನವನ್ನು ಹೊಂದಿ ನಿಮ್ಮಲ್ಲಿ ಆರೋಗ್ಯ, ವಿದ್ಯೆ, ಮುಂತಾದವುಗಳನ್ನು ಹೆಚ್ಚಿಸಿಕೊಳ್ಳದೆ ಹೋಗುವ ಪಕ್ಷದಲ್ಲಿ ನಿಮ್ಮ ದುರ್ದೈವವೆಂದೇ ಹೇಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಈ ಪ್ರಾಂತ್ಯದಲ್ಲಿ ಸ್ತ್ರೀ ಶಿಕ್ಷಣವು ಸಹಾ ಬಹಳಮಟ್ಟಿಗೆ ಹಿಂದುಳಿದಿದೆ ಎಂದು ನಾನು ನೋಡಿ ತುಂಬಾ ವಿಷಾದಿಸುತ್ತೇನೆ. ವೇದಸಮ್ಮತವಾದ ದ್ವೈತಾದ್ವೈತ ಮುಂತಾದ ಮತಗಳಲ್ಲಿ ಸ್ತ್ರೀಯರಿಗೆ ವಿವಾಹವಿನಹ ಮತ್ಯಾವ ಸಂಸ್ಕಾರದ ಅವಶ್ಯಕತೆಯು ಇರುವುದಿಲ್ಲ. ಶಕ್ತಿವಿಶಿಷ್ಟಾದ್ವೈತಾವಲಂಬಿಗಳಾದ ನಮ್ಮಲ್ಲಿ ಸ್ತ್ರೀ ಪುರುಷರೀರ್ವರಿಗೂ ಲಿಂಗಧಾರಣಸಂಸ್ಕಾರವು ವಿಹಿತವಿರುವುದರಿಂದ ವಿಧಿವತ್ತಾಗಿ ಶಿವಪೂಜಾ ವಗೈರೆ ನಿತ್ಯಕರ್ಮಗಳನ್ನು ಮಾಡಲು ಮತ್ತು ಮಂತ್ರಗಳ ಗೂಢಾರ್ಥವನ್ನು ತಿಳಿಯಲು ಸ್ತ್ರೀಯರಿಗು ಕೂಡ ವಿದ್ಯೆಯ ಅವಶ್ಯಕತೆಯು ಎಷ್ಟಿರುತ್ತೆಂಬುದನ್ನು ಹೇಳಬೇಕಾಗಿಲ್ಲ. ಈ ಕಾರಣದಿಂದಲೇ ನಮ್ಮ ಸ್ತ್ರೀಯರು ಮುಮುಕ್ಷುಗಳಾಗಲು ವಿದ್ಯೆಯನ್ನು ಸಂಪಾದಿಸಲೇಬೇಕು. ನಮ್ಮಲ್ಲಿ ಇತ್ತೀಚೆಗೆ ಕನ್ನಡವಿದ್ಯೆಯು ಸಹಾ ಕಮ್ಮಿಯಾಗುತ್ತಾ ಇದೆ. ಇದರ ಅಭಿವೃದ್ಧಿಯಲ್ಲಿ ನಮ್ಮ ಪೂರ್ವಜರು ಎಷ್ಟು ಶ್ರಮಪಟ್ಟು ವೇದೋಪನಿಷತ್ತುಗಳ ಸಾರವನ್ನು ಜನಸಾಮಾನ್ಯಕ್ಕೆ ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ನೂರಾರು ಗ್ರಂಥಗಳನ್ನು ಬರದಿರುವದು ಎಲ್ಲರಿಗೂ ಗೊತ್ತೇ ಇದೆ. ಅದರಲ್ಲಿಯೂ ವಚನಗ್ರಂಥಗಳು ಎಂಥಾ ಅಮೂಲ್ಯವಾದ ವೇದಾಂತರಹಸ್ಯಗಳನ್ನು ಗರ್ಭೀಕರಿಸಿ ಬಹುರಸಭರಿತವಾಗಿಯೂ ಲಲಿತವಾಗಿಯೂ ಇರುವ ಶಬ್ದಗಳಿಂದ ಬರೆಯಲ್ಪಟ್ಟಿರುತ್ತವೆಂಬುದನ್ನು ಇತರ ಮತಾನುಯಾಯಿಗಳು ಈಗತಾನೇ ಕಣ್ದೆರೆದು ನೋಡಿ ವಿಸ್ಮಯವನ್ನು ಹೊಂದುತ್ತಿರುತ್ತಾರೆ. ಇದರ ಹಬ್ಬುವಿಕೆಯು ಜನಸಾಮಾನ್ಯಕ್ಕೆ ಎಷ್ಟು ಅವಶ್ಯಕವೆಂಬುದನ್ನು ಈ ಸಮಾಜಕ್ಕೆ ಮಾತ್ರವೇ ಅಲ್ಲದೆ ಇತರ ಮತಾನುಯಾಯಿಗಳಿಗು ಸಹಾ ಅನ್ವಯಿಸುವಷ್ಟು ಉದಾರಧರ್ಮದಿಂದ ಬರೆಯಲ್ಪಟ್ಟಿರುತ್ತವೆಂದು ವಿದ್ವಾಂಸರೆಲ್ಲರೂ ಕೊಂಡಾಡುತ್ತಾ ಇರುತ್ತಾರೆ. ಆದ್ದರಿಂದ ಮಾತೃಭಾಷೆಯನ್ನು ನಮ್ಮಲ್ಲಿ ಹೆಚ್ಚಿಸಿಕೊಂಡು ಇದಕ್ಕೆ ಮೂಲಾಧಾರವಾದ ಸಂಸ್ಕೃತವಿದ್ಯೆಯನ್ನು ನಾವು ಖಂಡಿತವಾಗಿ ಮರೆಯಬಾರದು. ಈ ಸಂಸ್ಕೃತ ವಿದ್ಯಾಪ್ರಸಾರಣೆಯಲ್ಲಿ ನಮಗೆ ಅನೇಕ ತೊಡಕುಗಳು ಇದ್ದಾಗ್ಯೂ, ಅವುಗಳನ್ನು ಲಕ್ಷಿಸದೆ ನಮ್ಮ ಸ್ವಪ್ರಯಾಸದಿಂದ ಕೆಲವು ಮುಖ್ಯಸ್ಥಳಗಳಲ್ಲಿ ಸಂಸ್ಕೃತಕಾಲೇಜುಗಳನ್ನು ಸ್ಥಾಪಿಸಲು ಅನೇಕ ಕಡೆಗಳಲ್ಲಿ ಪ್ರಚಂಡಪ್ರಯತ್ನಗಳು ನಡೆಯುತ್ತಾ ಇವೆ. ಇವುಗಳಿಗೆ ನಮ್ಮ ಉದಾರವಾದ ಸಹಾನುಭೂತಿಯನ್ನು ಕೊಟ್ಟು ಕ್ಷಿಪ್ರದಲ್ಲಿಯೇ ಇವು ಸ್ಥಾಪನೆಯಾದರೆ ನಮ್ಮ ದಯಾಳು ಸರ್ಕಾರದವರು ತಕ್ಕ ಉತ್ತೇಜನವನ್ನು ಕೊಡಲು ಸಿದ್ಧರಾಗಿರುತ್ತಾರೆ. ಈ ಸುಸಮಯವನ್ನು ನೀವು ಕಳೆದುಕೊಳ್ಳಲಾರಿರೆಂದು ನಾನು ನಂಬುತ್ತೇನೆ. ನಮ್ಮಲ್ಲಿ ವ್ಯಾಪಾರ ಮತ್ತು ವ್ಯವಸಾಯಾಭಿವೃದ್ಧಿಯು ಒಂದಾನೊಂದುಕಾಲದಲ್ಲಿ ಕೇಂದ್ರಸ್ಥಾನವನ್ನು ಹೊಂದಿದ್ದವು. ಈಗ ಅವುಗಳು ಅದರಲ್ಲಿಯೂ ಮುಖ್ಯವಾಗಿ ವ್ಯಾಪಾರವು ನಮ್ಮ ಸಮಾಜದ ಕೈಬಿಟ್ಟು ಹೋಗುತ್ತಾ ಇದೆ. ಇತ್ತಕಡೆಗೆ ನಮ್ಮ ವಿದ್ಯಾವಂತರಾದ ತರುಣರು ಲಕ್ಷ್ಯ ಕೊಡಬೇಕೆಂದು ಬಹಳ ಒತ್ತಾಯಮಾಡಿ ನಾನು ಹೇಳುತ್ತೇನೆ. ಸರ್ಕಾರಿಯ ನೌಕರಿಗಳನ್ನೇ ಮುಖ್ಯಗುರಿಯನ್ನಾಗಿಟ್ಟುಕೊಂಡು ನಮ್ಮವರು ವಿದ್ಯಾಭ್ಯಾಸಮಾಡುವುದಾದರೆ ಇವರ ಕೋರಿಕೆಗಳು ಸಫಲವಾಗುವಷ್ಟು ಸರ್ಕಾರಿಯ ಹುದ್ದೆಗಳು ಇಲ್ಲದೆ ಇದರಿಂದ ಭಗ್ನಮನೋರಥರಾಗಿ ಉತ್ತೇಜನ ಭಂಗವಾಗುವುದು. ಈ ದುಸ್ಥಿತಿಯು ನಮ್ಮ ತರುಣರಿಗೆ ಒದಗಿದರೆ ಇದರಿಂದ ನಮ್ಮ ಅಭಿವೃದ್ಧಿಗೆ ಎಷ್ಟು ಅನರ್ಥವೆಂದು ನಾನು ಹೇಳಬೇಕಾಗಿಲ್ಲ. ನಮ್ಮಲ್ಲಿ ವಿದ್ಯಾವಂತರಾದವರು ವ್ಯಾಪಾರ, ಕೃಷಿ, ಕೈಗಾರಿಕೆ ಮುಂತಾದ ಕಸಬುಗಳನ್ನು ಕೈಕೊಳ್ಳದಿದ್ದರೆ ಬಹಳ ಜಾಗ್ರತೆಯಾಗಿ ಬಡಬಗ್ಗರಾಗಿ ಯಾವ ಕೌಶಲವನ್ನೂ ಪಡೆಯಲು ಅಸಮರ್ಥರಾಗುವುದಲ್ಲದೆ ಜನವರ್ಗದಲ್ಲಿ ತುಂಬಾ ಹಿಂದುಳಿದು ಅಗಣ್ಯರಾಗುತ್ತಾರೆ.

ಈ ಮೇಲ್ಕಂಡ ಕೊರತೆಗಳನ್ನೆಲ್ಲಾ ಹೋಗಲಾಡಿಸಿಕೊಳ್ಳಬೇಕಾದರೆ ನಮ್ಮಲ್ಲಿ ವಿದ್ಯೆಯು ಪ್ರಸರಿಸಬೇಕೆಂದು ಈ ಮೊದಲೇ ಅರಿಕೆಮಾಡಿಕೊಂಡಿದ್ದೇನೆ. ನಮ್ಮ ಮತದಲ್ಲಿ ಏಕಮತ್ಯವು ತಪ್ಪುವುದಕ್ಕೆ ತಕ್ಕ ಶಾಸ್ತ್ರಶೋಧನೆಯುಳ್ಳ ವಿದ್ವಾಂಸರು ವಿರಳವಾಗಿರುವುದು ಒಂದು ಮುಖ್ಯಕಾರಣವಾಗಿದೆ. ನಮ್ಮಲ್ಲಿ ಬೇಕಾದ ಪುಸ್ತಕಭಂಡಾರಗಳಿಲ್ಲ. ಅಲ್ಲಲ್ಲಿ ದೊರೆತ ಹರಕುಮುರುಕು ಪುಸ್ತಕಗಳನ್ನು ಕೊಂಚಕೊಂಚ ನೋಡಿಕೊಂಡು ನಮ್ಮಲ್ಲಿರುವ ಕೆಲ ವಿದ್ವಾಂಸರು ಜನಸಾಮಾನ್ಯದಲ್ಲಿ ಸಂಶಯಾಸ್ಪದವಾಗುವಂತ ಅನೇಕ ಭಿನ್ನಾಭಿಪ್ರಾಯಗಳನ್ನು ಹಬ್ಬಿಸಿರುತ್ತಾರೆ. ಈ ನ್ಯೂನತೆಯನ್ನು ಹೋಗಲಾಡಿಸಬೇಕಾದರೆ ಶಾಸ್ತ್ರಶೋಧನೆಯೂ ಅದಕ್ಕೆ ಸಹಕಾರಿಯಾದ ಒಂದು ಪುಸ್ತಕಭಂಡಾರವೂ ಮತ್ತು ಮಾಸಿಕ ಅಥವ ದೈನಿಕ ಪತ್ರಿಕೆಯು ಅತ್ಯವಶ್ಯಕವಾಗಿವೆ. ಇದು ವಿನಹ ಸಮಾಜದಲ್ಲಿ ಅಂಕುರಿಸಿರುವ ಛಿದ್ರಗಳು ನಿರ್ಮೂಲವಾಗಲಾರವು. ದಿನೇ ದಿನೇ ನಮ್ಮಲ್ಲಿ ಪಂಗಡಗಳೂ ಒಳಭೇದಗಳೂ ಹೆಚ್ಚುತ್ತಾ ಬಂದು ಒಬ್ಬರು ಮತ್ತೊಬ್ಬರನ್ನು ದೋಷದೃಷ್ಟಿಯಿಂದ ಕಾಣುತ್ತ ಇರುತ್ತಾರೆ. ಹೇಗಾದರೂಮಾಡಿ ಈ ನ್ಯೂನತೆಯನ್ನು ತಪ್ಪಿಸಲು ಒಂದು ಪ್ರಬಲವಾದ ಪ್ರಯತ್ನವು ಕ್ಷಿಪ್ರದಲ್ಲಿಯೇ ನಡೆಯಬೇಕಾಗಿದೆ. ವಿಧವಿಧವಾದ ಅಭಿಪ್ರಾಯಗಳನ್ನು ಪ್ರತಿಪಾದಿಸುವ ಮುಖಂಡರುಗಳು ಒಂದುಕಡೆ ಸೇರಿ ಚರ್ಚೆ ನಡೆಸಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲದೆ ಅವರವರು ಹಿಡಿದಿರುವ ಅಭಿಮತಗಳ ಆವೇಶದಿಂದ ಬಡಿದಾಟಗಳು ಹೆಚ್ಚುತ್ತವೆ. ಆದ್ದರಿಂದ ಈ ಮುಖಂಡರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಪುಷ್ಟೀಕರಿಸತಕ್ಕ ಆಧಾರಗಳನ್ನು ನಿಷ್ಪಕ್ಷಪಾತಿಗಳಾದ ಮಧ್ಯವರ್ತಿಗಳಿಗೆ ಕೊಟ್ಟು ಅವರ ತೀರ್ಮಾನಕ್ಕೆ ಬದ್ಧರಾಗಬೇಕು. ಎಲ್ಲಾ ಪ್ರಾಂತ್ಯದವರೂ ಸುಲಭವಾಗಿ ಸೇರತಕ್ಕ ಒಂದು ಸ್ಥಳವನ್ನು ಗೊತ್ತುಮಾಡಿ ಅಲ್ಲಿ ನಮ್ಮ ಸಮಾಜದಿಂದಲೂ ಇತರ ಸಮಾಜಗಳಿಂದಲೂ ಶಾಸ್ತ್ರಜ್ಞರೂ ನ್ಯಾಯವಾದಿಗಳೂ ಮತ್ತು ನಿಸ್ಪೃಹರೂ ಆದ ದೊಡ್ಡಮನುಷ್ಯರನ್ನು ಮಧ್ಯವರ್ತಿಗಳನ್ನಾಗಿಟ್ಟುಕೊಂಡು ಸಮಾಜ ಮತ್ತು ದೇಶಸೇವೆಗಳ ದೃಷ್ಟಿಯಿಂದ ಯಾವ ಅಭಿಪ್ರಾಯಕ್ಕೂ ಒಳಗಾಗದೆ ಮತ್ತು ಮಾನಾವಮಾನವೆಂಬ ಅಂಧಕಾರವನ್ನು ತ್ಯಜಿಸಿ ಮಧ್ಯವರ್ತಿಗಳ ತೀರ್ಮಾನಕ್ಕೆ ಸರ್ವರೂ ಬದ್ಧರಾಗದ ಹೊರತು ಏಕಮತವು ಉಂಟಾಗಲಾರದು. ಇದನ್ನು ಸಾಧಿಸದೆ ಎಲ್ಲರೂ ಉಪೇಕ್ಷೆಮಾಡುವ ಪಕ್ಷದಲ್ಲಿ ಈ ಅನೈಕಮತ್ಯದ ಉಪಟಳವನ್ನು ನಮ್ಮವರು ತಡೆಯಲಾರದೆ ಉತ್ತರೋತ್ತರ ಈ ಮತದಲ್ಲಿ ಜಗುಪ್ಸೆಯು ಹುಟ್ಟಿ ಈ ಮತವೇ ನಾಶವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಮತೋದ್ಧಾರಬದ್ಧಕಂಕಣರಾದ ಪೀಠಾಧಿಕಾರಿಗಳು, ಶ್ರೀ ಹಾನಗಲ್ ಕುಮಾರಮಹಾಸ್ವಾಮಿಗಳು ಮುಂತಾದ ಅವತಾರಪುರುಷರು ಈ ವಿಚಾರವನ್ನು ದೀರ್ಘಾಲೋಚನೆಯಿಂದ ಗಮನಿಸಿ ಒಂದು ಪುಸ್ತಕಭಂಡಾರ, ಮುದ್ರಣಾಲಯ, ಮತಗ್ರಂಥಗಳ ಪ್ರಚಾರಕ್ಕವಕಾಶವಿರುವ ಮಾಸ ಮತ್ತು ದಿನ ಪತ್ರಿಕೆಗಳನ್ನು ನಿರ್ವಿಘ್ನವಾಗಿ ನಡೆಸಿಕೊಂಡುಬರುವಂತೆ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಸಮಾಜದ ಎಲ್ಲಾ ಭಿನ್ನಾಭಿಪ್ರಾಯಗಳ ಮತ್ತು ಪಂಗಡಗಳ ಮುಖಂಡರ ಸಭೆಯನ್ನು ಸೇರಿಸಿ ಮಧ್ಯವರ್ತಿಗಳ ತೀರ್ಮಾನಕ್ಕೆ ಅವರೆಲ್ಲರೂ ಒಳಪಡುವಂತೆ ಮಾಡಿ ಈ ಸಮಾಜದಲ್ಲಿ ಐಕಮತ್ಯವನ್ನು ಪುನಃ ಸ್ಥಾಪಿಸಬೇಕಾಗಿ ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ ಬೆಂಗಳೂರು.

ವಿಜ್ಞಾಪನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದ ಜನರಲ್ ಕಮಿಟಿಯ ವಾರ್ಷಿಕಮೀಟಿಂಗು 1926 ನೇ ಇಸವಿ ಜುಲೈ ತಾ|| 11 ನೇ ಭಾನುವಾರ ಸಾಯಂಕಾಲ 4 ಗಂಟೆಗೆ ಸರಿಯಾಗಿ ಬೆಂಗಳೂರುಸಿಟಿ ಶೇಷಾದ್ರಿ ರೋಡಿನಲ್ಲಿರುವ ಶ್ರೀಜಗದ್ಗುರುಜಯದೇವ ವೀರಶೈವವಿದ್ಯಾರ್ಥಿನಿಲಯದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವದರಿಂದ ತಾವು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ಮೀಟಿಂಗಿನಲ್ಲಿ ಜರುಗತಕ್ಕ ವಿಷಯಗಳು.

1. ತಾ|| 23-6-25 ರ ಲಾಗಾಯತು ತಾ|| 30-6-26 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಕಾರ್ಯನಿರ್ವಾಹಕಸಂಘದ ಅಧ್ಯಕ್ಷರು ಮೊದಲಾಗಿ ಮೆಂಬರುಗಳ ಚುನಾವಣೆ.
4. ನೂತನವಾಗಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೈಸೂರುದೇಶದ ವೀರಶೈವ ಗ್ರಾಜ್ಯುಯೇಟುಗಳನ್ನು ಸಭೆಯಿಂದ ಅಭಿನಂದಿಸುವವಿಚಾರ.
5. ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರೂ ಸೆಕ್ರೆಟರಿಯವರಿಗೆ ತಿಳುಹಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ.)

ಎಂ. ನಾಗಪ್ಪ,   ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಅ|| ಸೆಕ್ರೆಟರಿ.   ಆನರರಿ ಸೆಕ್ರೆಟರಿ.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—1]   ಶಿವಾನುಭವ ಆಫೀಸು ವಿಜಾಪುರ.

ಇಮಿಟೇಷನ್ ರೇಶ್ಮೆಸೀರೆಗಳು.

ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪನಿಯವರಿಂದ ತಯಾರಿಸಿದ್ದು. 17 ಮೊಳ ಉದ್ದವೂ 2½ ಮೊಳ ಅಗಲವೂ ಇರುವದು. ಈ ಸೀರೆಗಳಿಗೆ ಅಂದವಾದ ಅಂಚೂ, ಸುಂದರವಾದ ಸಾಚಾರೇಷ್ಮೆಯ ಸೆರಗೂ ಇರುವದು. ಇವು ಯಾವಾಗಲೂ ರೇಶ್ಮೆಯಂತೆಯೇ ಇರುವುವು. ಇವುಗಳ ಬಣ್ಣವು ಬೇಗನೆ ಕೆಡದು. ಪ್ರತಿಯೊಬ್ಬರೂ ಉಡಲಿಕ್ಕೆ ಬಹು ಲಾಯಖಾದವು.

ಕ್ರಯ ನಂ. 1 10—8—0.
ನಂ. 2 8—8—0.
ನಂ. 3 7—8—0.

ವಿಳಾಸ—ಎಂ. ಬೆಸ್ಟ್ ಅಂಡ್ ಕೋ,
4—4   ನಂ. 504, ಪಾರ್ಕ್‌ಟೌನ್, ಮದರಾಸು.

೧೯೨೬ ನೆಯ ಇಸವಿ ಜೂನ್ ತಾ|| ೧೨ರಿಂದ ೧೯೨೬ ನೆಯ ಇಸವಿ ಜೂನ್ ತಾ|| ೧೮ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಜ್ಯೇಷ್ಠ ಶುದ್ಧ ಬಿದಿಗೆಯಿಂದ ಜ್ಯೇಷ್ಠ ಶುದ್ಧ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಮಿಥು
12	ಶನಿ	ಬಿದಿ	23-54	ಆರ್ದ್ರಾ	15-54	30
13	ಭಾನು	ತದಿ	26-42	ಪುನ	20-12	31
14	[1]ಸೋಮ	ಚೌತಿ	30-30	ಪುಷ್ಯ	25-32	1
15	ಮಂಗಳ	ಪಂಚ	35-8	ಆಶ್ಲೇ	31-30	2
16	ಬುಧ	ಷಷ್ಠಿ	40-11	ಮಖಾ	38-10	3
17	ಗುರು	ಸಪ್ತ	45-15	ಹುಬ್ಬ	44-51	4
18	[2]ಶುಕ್ರ	ಅಷ್ಟ	49-54	ಉತ್ತ	50-58	5

(1) ಮಳೆನಕ್ಷತ್ರ-ಮೃಗಶಿರ ೩ ನೆಯಪಾದ. (2) ಮಳೆನಕ್ಷತ್ರ-ಮೃಗಶಿರ ೪ ನೆಯಪಾದ

ಮೈಸೂರು: ಶ್ರೀ. [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಾಕಶಾಸನಾಭಾ ಪಕ್ಷ್ಮಜಪತ್ಕೃತ ತೋಷರಾಜೇಯಾಃ |
ಶ್ರೀಮತ್ಕೃಷ್ಣನೃಪಾಲಸುತ ಮಹಾಲೋಲಂಬುಧೀಪುಂಗವ | ಸ್ತ್ರೀಮಾತೀಕ್ಷ್ಯದೇಲು ಪಾಲಿತ ಸಾಧ್ವಾಲವಾಲಂವಲಂ |
ಶೀಮಾತೀಶಯುಕಶ್ರಪಾಪವಿಪುಲಂ ಸದ್ಭಕ್ತಮಾತಾಳುಂ | ಶ್ರೀಮಂಚಿತ್ರೀಕೆಯುಂಕವಾರಿರಗೆ ಗೌರೀಶಾನುಕಂಪೋಜ್ಜ್ವಲಂ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦]   [ಪರಸ್ಥಳದವರಿಗೆ ೨-೮-೦]   [ಲೈಬ್ರರಿಗೆ ೩-೮-೦]

ಸಂಪುಟ ೩೯]   ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜೂನ್ ತಾರೀಖು ೧೯ ನೆಯ ಶನಿವಾರ.   [ಸಂಚಿಕೆ ೨೫

ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ

ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

(ಬಡ್ಜೆಟ್ ಅಧಿವೇಶನ)

೧೪ನೆಯ ಜೂನ್ ೧೯೨೬.

ಪ್ರಜಾಪ್ರತಿನಿಧಿಸಭೆಯ ಸದಸ್ಯರೆ,

ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ತಮ್ಮನ್ನು ಮತ್ತೊಂದು ಸಮ್ಮೇಳನದ ಕಾರ್ಯಕಲಾಪಕ್ಕಾಗಿ ಬರಮಾಡಿಕೊಳ್ಳುವ ಸುಯೋಗವು ನನಗೆ ಲಭಿಸಿದೆ.

ನಮ್ಮ ಕಾರ್ಯಾರಂಭಕ್ಕೆ ಮುಂಚೆ, ಹತ್ತುವರ್ಷಗಳ ಕಾಲ ಈ ಸಂಸ್ಥಾನದಲ್ಲಿ ಪ್ರಶಸ್ತವಾದ ರೀತಿಯಲ್ಲಿ ಉದ್ಯೋಗಮಾಡಿ ಈಚೆಗೆ ಅಧಿಕಾರದಿಂದ ವಿಶ್ರಾಂತರಾಗಿರುವ ಮತ್ತು ನನ್ನ ಈಗಿನಸ್ಥಾನದಲ್ಲಿ ನನಗೆ ಹಿಂದೆ ಇದ್ದವರಾದ ರಾಜಮಂತ್ರಧುರೀಣ ಸರ್ ಆಲ್ಬಿಯನ್ ಬಾನರ್ಜಿಯವರ ವಿಷಯದಲ್ಲಿ ನಮ್ಮಗಳ ಕೃತಜ್ಞತೆಯನ್ನು ವ್ಯಕ್ತಪಡಿಸದೆ ಇದ್ದರೆ ಅದು ನಿಮ್ಮ ಮನಸ್ಸಿಗಾಗಲಿ ನನ್ನ ಮನಸ್ಸಿಗಾಗಲಿ ಒಪ್ಪಲಾರದು.

ಮಹಾಶಯರೆ, ಅವರು ರಾಜ್ಯದ ಮಂತ್ರಿಮಂಡಲದ ಸದಸ್ಯರಾಗಿಯೂ ಬಳಿಕ ದಿವಾನರಾಗಿಯೂ ಇದ್ದ ಕಾಲಗಳಲ್ಲಿ ತಮ್ಮಲ್ಲನೇಕರು ಅವರ ಸಮೀಪಪರಿಚಯವನ್ನು ಮಾಡಿಕೊಂಡಿರುವಿರಿ. ಅವರ ಅತಿಶಯವಾದ ಶಕ್ತಿ, ನಯ, ತೀವ್ರನಿಷ್ಠೆಯುಗಳನ್ನು ನೋಡಿ ಮೆಚ್ಚುವ ಅವಕಾಶಗಳು ನಿಮಗೆ ಅನೇಕವಾಗಿ ದೊರೆತಿದ್ದುವು. ಆದಕಾರಣ, ಅವರ ಸ್ವಂತದ ಅಥವಾ ಅಧಿಕಾರಕ್ರಮದ ಗುಣವಿಶೇಷಗಳನ್ನು ಕುರಿತಾಗಲಿ, ಅವರು ಈ ಸಭೆಯ ಅಧ್ಯಕ್ಷರಾಗಿದ್ದುಕೊಂಡು ಇಲ್ಲಿಯ ಕಾರ್ಯಗಳನ್ನು ನಡಿಸಿದ ರೀತಿಯ ದಕ್ಷತೆಯನ್ನು ಕುರಿತಾಗಲಿ ನಾನು ಹೆಚ್ಚಾಗಿ ಹೇಳುವುದು ಅನಾವಶ್ಯಕ. ಅವರು ಇನ್ನು ಮುಂದೆ ತಮಗಾಗಿ ನಿರ್ಧರಿಸಿಕೊಂಡಿರುವ ಜೀವನಪಥದಲ್ಲಿ ಅವರಿಗೆ ಜಯವೂ ಸಕಲ ಶ್ರೇಯಸ್ಸೂ ದೊರೆಯಲೆಂದು ಬಯಸುವುದರಲ್ಲಿ ನೀವುಗಳೆಲ್ಲರೂ ನನ್ನೊಡನೆ ಸೇರುವಿರೆಂದು ನನಗೆ ದೃಢವಾಗಿದೆ.

ಸರ್ಕಾರದಲ್ಲಿ ನಡೆದಿರುವ ಇನ್ನೆರಡು ಬದಲಾವಣೆಗಳನ್ನು ಕುರಿತು ನಾನು ಇಲ್ಲಿ ಪ್ರಸ್ತಾಪಿಸುವೆನೆಂದು ತಾವು ನಿರೀಕ್ಷಿಸುವಿರಲ್ಲವೆ! ಮ|| ರಾ|| ಕೆ. ಆರ್. ಶ್ರೀನಿವಾಸಯ್ಯಂಗಾರ್ಯರವರು ೩೪ ವರ್ಷಗಳ ಕಾಲ ಶ್ರದ್ಧೆಯಿಂದ ರಾಜ್ಯಸೇವೆ ಮಾಡಿ ಕಳೆದ ತಿಂಗಳಿನಲ್ಲಿ ಮಂತ್ರಿಮಂಡಲದ ಪ್ರಥಮಸ್ಥಾನದಿಂದ ವಿಶ್ರಾಂತಿಪಡೆದರು. ಅವರು ಇಲ್ಲಿ ನಡೆಯುತ್ತಿದ್ದ ಸರ್ಕಾರೀ ವಿಚಾರಗಳ ಚರ್ಚೆಗೆ ತಮ್ಮ ಅನುಭವದಿಂದಲೂ ತಿಳಿವಳಿಕೆಯಿಂದಲೂ ತಂದೊದಗಿಸಿದ ಸಹಾಯವನ್ನು ಈ ಸಭೆಯ ಸದಸ್ಯರೆಲ್ಲರೂ ಜ್ಞಾಪಕದಲ್ಲಿಟ್ಟುಕೊಂಡಿರುವರು. ಅವರ ಸರ್ಕಾರೀ ಪದವಿಯ ಪರಿಸಮಾಪ್ತಿಯು ಅವರ ಪ್ರಜಾಪಕ್ಷೀಯವಾದ ದೇಶಸೇವೆಗೆ ಪ್ರಾರಂಭವಾಗಿ ಪರಿಣಮಿಸಿ, ಸಂಪತ್ಸಾಧಕ ಕಾರ್ಯಗಳಲ್ಲಿಯೂ, ಪುರಾಭಿವೃದ್ಧಿಯ ಕಾರ್ಯಗಳಲ್ಲಿಯೂ ಇತರ ವಿಧಗಳಲ್ಲಿಯೂ ಅವರು ಬಹುಕಾಲ ಪ್ರಮುಖರಾಗಿರಬೇಕೆಂದೂ, ಚೆನ್ನಾಗಿ ಸಂಪಾದಿಸಿರುವ ವಿರಾಮಕಾಲವನ್ನು ಅವರು ಸುಖಶಾಂತತೆಗಳಿಂದ ಅನುಭವಿಸುವಂತಾಗಬೇಕೆಂದೂ ನಾವೆಲ್ಲರೂ ಹಾರೈಸುವವರಾಗಿದ್ದೇವೆ.

ಈಚಿನ ಕೆಲವು ಸಮ್ಮೇಳನಗಳಲ್ಲಿ ಇಲ್ಲಿದ್ದುಕೊಂಡು ಈಗ ಆಸ್ಥಾನದಲ್ಲಿ ಕಾಣಿಸದಿರುವ ಮತ್ತೊಬ್ಬ ರಾಜ್ಯಾಧಿಕಾರಿಗಳು ನಮ್ಮ ವಿಶ್ವವಿದ್ಯಾಲಯದ ಉಪಾಧ್ಯಕ್ಷರಾದ ರಾಜತಂತ್ರಪ್ರವೀಣ ಡಾಕ್ಟರ್ ಬ್ರಜೇಂದ್ರನಾಥ್‌ಶೀಲ್ ರವರು. ಅವರು ಸುಮಾರು ಒಂದುವರ್ಷದಮೇಲೆ ನಾಲ್ಕುತಿಂಗಳಕಾಲ ಅಲಂಕರಿಸಿದ್ದ ಮಂತ್ರಿಮಂಡಲದ ವಿಶೇಷಸ್ಥಾನವನ್ನು ಅನಾರೋಗ್ಯನಿಮಿತ್ತದಿಂದ ಕೆಲವು ವಾರಗಳೊಳಗೆ ಬಿಡಬೇಕಾಯಿತು. ಅವರು ಆ ಪದವಿಯಲ್ಲಿದ್ದ ಸ್ವಲ್ಪ ಕಾಲದಲ್ಲಿ ಅವರಿಗೆ ದೇಶದ ವಿದ್ಯಾಭ್ಯಾಸವಿಷಯದಲ್ಲಿರುವ ಸೂಕ್ಷ್ಮಜ್ಞಾನವೂ, ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿರುವ ಅಗಾಧ ಪಾಂಡಿತ್ಯವೂ ಸರ್ಕಾರಕ್ಕೆ ಅತ್ಯಂತ ಸಹಾಯಕಾರಿಗಳಾಗಿದ್ದುವು. ಅವರಿಗೆ ವಿದ್ಯಾವಿಷಯದಲ್ಲಿರುವ ಉತ್ಸಾಹವು ಸರ್ವರಿಗೂ ವಿದಿತವಾಗಿದೆ. ಇನ್ನುಮೇಲೆ ಅವರು ವಿಶ್ವವಿದ್ಯಾಲಯದ ಉಪಾಧ್ಯಕ್ಷತೆಯ ಮೂಲಕವೂ ಸರ್ಕಾರಕ್ಕೆ ವಿದ್ಯಾವಿಷಯದಲ್ಲಿ ಹಿತಸೂಚಕರಾಗಿರುವುದರ ಮೂಲಕವೂ ತಮ್ಮ ಕಾಲಶಕ್ತಿಗಳನ್ನೆಲ್ಲಾ ವಿದ್ಯಾಪ್ರಸಾರಕಾರ್ಯವೊಂದಕ್ಕೇ ವಿನಿಯೋಗಿಸಲಾಗುವುದು. ನಮ್ಮ ಸಂಸ್ಥಾನವೂ, ವಿಶ್ವವಿದ್ಯಾಲಯವೂ ಇನ್ನೂ ಬಹುಕಾಲ ಅವರ ವಿಶಾಲವಾದ ಅನುಭವದಿಂದಲೂ, ನೈಪುಣ್ಯಜನಿತವಾದ ಹಿತೋಕ್ತಿಯಿಂದಲೂ ಪ್ರಯೋಜನಪಡೆಯುತ್ತಿದ್ದಾವೆಂದು ನಾನು ನಂಬಿದ್ದೇನೆ.

ಇನ್ನೂ ಇತರ ವಿಷಯಗಳಿಗೆ ಕೈಹಾಕುವುದಕ್ಕೆ ಮೊದಲು, ಕಳೆದ ಏಪ್ರಿಲ್ ತಿಂಗಳಲ್ಲಿ ಸಂಭವಿಸಿದ ಚಿಕ್ಕಮಗಳೂರಿನ ಮ|| ಸಿ. ಶ್ರೀನಿವಾಸರಾಯರ ಮರಣವನ್ನು ಕುರಿತು ಕೆಲವು ಮಾತುಗಳನ್ನಾಡುವುದು ನನಗೆ ವಿಷಾದಕರವಾದ ಕರ್ತವ್ಯವಾಗಿದೆ. ಅವರು 44 ವರ್ಷಗಳ ಕೆಳಗೆ ಈ ಸಭೆಯು ಪ್ರತಿಷ್ಠಿತವಾದಂದಿನಿಂದ ಇದರ ಸದಸ್ಯರಾಗಿದ್ದುಕೊಂಡು, ಇದರಲ್ಲಿ ಅತ್ಯಂತ ಗಣ್ಯರಾದ ಸದಸ್ಯರಲ್ಲೊಬ್ಬರಾಗಿದ್ದರು. ಅವರ ಮೃತಿಯಿಂದ ರಾಜ್ಯದ ಪ್ರಜಾಸಮಾರಂಭಕ್ಕೆ ಒಂದು ದೊಡ್ಡ ನಷ್ಟವುಂಟಾಗಿದೆ. ಅವರ ಸುಪರಿಚಿತಮೂರ್ತಿಯನ್ನು ಇಲ್ಲಿ ನಾವು ಬಹುಕಾಲ ನೆನೆಸಿಕೊಳ್ಳುವೆವು.

ನಾವು ಹಿಂದೆ ಇಲ್ಲಿ ಸೇರಿದ್ದಂದಿನಿಂದೀಚೆಗೆ, ಗುಂಡ್ಲುಪೇಟೆಯ ಮ|| ವಿ. ಎಸ್. ಚೆನ್ನಬಸಪ್ಪನವರು ಲೋಕಾಂತರರಾದಕಾರಣ ನಮಗೆ ಉಂಟಾಗಿರುವ ನಷ್ಟವನ್ನು ನಾನು ಅತ್ಯಂತ ಖೇದದಿಂದ ಸ್ಮರಿಸುತ್ತೇನೆ.

ಸಂಕಲ್ಪಸೂಚನೆ.

ಈಗ ಶ್ರೀಮನ್ಮಹಾರಾಜರವರು ನನಗೆ ವಹಿಸಿಕೊಟ್ಟಿರುವ ಜವಾಬ್ದಾರಿಗಳನ್ನು ನಿರ್ವಹಿಸುವ ಪ್ರಯತ್ನದಲ್ಲಿ [illegible] ಸಂಕಲ್ಪಸೂಚನೆಯನ್ನು ನನ್ನ ಅಭಿಪ್ರಾಯವನ್ನು ಕೆಲವು ವಿಷಯಗಳಲ್ಲಿ ಸೂಚಿಸಲು ಯತ್ನಿಸುವೆನು. ಶ್ರೀಮನ್ಮಹಾರಾಜರವರ ಸರ್ಕಾರವು ತನ್ನ ಶಕ್ತಿಸಂಪತ್ತುಗಳೆಲ್ಲವನ್ನೂ ಯಾವಾಗಲೂ ರಾಜ್ಯದ ಸರ್ವತೋಮುಖವಾದ—ಎಂದರೆ ಅರ್ಥಮಾರ್ಗ, ನೀತಿಮಾರ್ಗ, ಮತ್ತು ವಿಶಾಲದೃಷ್ಟಿಯಿಂದ ನೋಡಿದರೆ ತೋರುವ ಧರ್ಮಮಾರ್ಗ. ಈ ಎಲ್ಲಾ ಮಾರ್ಗಗಳಲ್ಲಿಯೂ ಆಗಬೇಕಾದ ಅಭ್ಯುದಯಸಾಧನೆಗಾಗಿ ವಿನಿಯೋಗಿಸುತ್ತಾ ಬಂದಿದೆಯೆಂದು ಸರ್ವತ್ರ ಅಂಗೀಕೃತವಾದ ವಿಷಯವಾಗಿದೆ. ಆ ವಿಧವಾದ ಉದ್ದೇಶಪ್ರಯತ್ನಗಳು ನಮ್ಮ ಕಾಲದಲ್ಲಿ ಕಡಿಮೆಯಾಗಲಾರವೆಂದು ನಾನು ತಮಗೆ ಆದರದಿಂದ ಭರವಸೆಕೊಡುತ್ತೇನೆ. ನಮ್ಮ ದೇಶಾಭ್ಯುದಯ ಕಾರ್ಯದ ವಿವರಗಳನ್ನೆಲ್ಲವನ್ನೂ ಈಗಲೇ ನಾನು ಸಾಂಗೋಪಾಂಗವಾಗಿ ವರ್ಣಿಸಿ ಪ್ರತಿಯೊಂದಂಶವನ್ನೂ ಪ್ರತ್ಯೇಕವಾಗಿ ಹೇಳಿ, ಪ್ರತಿಯೊಂದು ಕಾರ್ಯವಿಧಾನವನ್ನೂ ಪುನರಂಗೀಕಾರಮಾಡಬೇಕಾದುದು ಅನಾವಶ್ಯಕವೆಂಬುದು ಸ್ಪಷ್ಟವಾಗಿದೆ. ಹಿಂದಿನವರಿಂದ ಬಂದಿರತಕ್ಕ ಆಶಯ ಉದ್ದೇಶಗಳೆಲ್ಲವನ್ನೂ ಸ್ವೀಕಾರಮಾಡಿಕೊಂಡು, ಪ್ರಕೃತದ ಸ್ಥಿತಿಗತಿಗಳಿಗನುಸಾರವಾಗಿ ಅವುಗಳನ್ನು ನಡಿಸಿ ಸಾರ್ಥಕಗೊಳಿಸಬೇಕೆಂದು ನಾವು ನಿಶ್ಚಯಿಸಿಕೊಂಡಿರುವೆವು. ಸದ್ಯಃ ಅವುಗಳಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ಕುರಿತು ಇಲ್ಲಿ ಸ್ವಲ್ಪ ವಿಶೇಷವಾಗಿ ಪ್ರಸ್ತಾಪಿಸುವೆನು.

ಅರ್ಥವಿಚಾರವು ನಮ್ಮ ವಿಚಾರಗಳಲ್ಲೆಲ್ಲಾ ಮೊದಲನೆಯದಾಗಿದೆ. ಅದಕ್ಕೆ ನಮ್ಮ ಸಂತತವೂ, ಜಾಗರೂಕವೂ ಆದ ಗಮನವು ಸಲ್ಲುವದು. ಅದರಲ್ಲಿ ಅತಿ ಸಾಮಾನ್ಯವೂ ಅತಿ ಸ್ಪಷ್ಟವೂ, ಆದರೂ ಅತಿ ನಿರ್ಲಕ್ಷಿತವೂ ಆದ ಒಂದು ವಿಷಯವನ್ನು ನೋಡೋಣ ; ಜೀವನದ ಆವಶ್ಯಕ ಸಾಮಗ್ರಿಗಳನ್ನು ನಾವೇ ಬೆಳೆದುಕೊಂಡು ಉಪಯೋಗಿಸಿಕೊಳ್ಳುವುದೇ ಆ ವಿಷಯ. ಜೀವನಕ್ಕೆ ಬೇಕಾದ ಮುಖ್ಯ ವಸ್ತುಗಳನ್ನು ಸ್ವಂತವಾಗಿ ಬೆಳೆಯುವುದು, ಸ್ವಂತವಾಗಿ ತಯಾರುಮಾಡುವುದು, ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು- ಈ ಮೂರು ಕ್ರಮಗಳೂ ದೇಶದ ಸಂಪದಭಿವೃದ್ಧಿಗೆ ಮೂಲವಾಗಿ, ಇತರ ಎಲ್ಲಾ ಅಭಿವೃದ್ಧಿಗಳಿಗೂ ಆಧಾರವಾಗಿರುತ್ತವೆ. ಭೂವ್ಯವಸಾಯದ ಸಾಧನಗಳನ್ನೂ, ವಿಧಾನಗಳನ್ನೂ ಉತ್ತಮಪಡಿಸಿಕೊಳ್ಳುವುದೇ ಆ ಬಗೆಯ ಅಭಿವೃದ್ಧಿಸಾಧನೆಗೆ ಪ್ರಥಮ ಸೋಪಾನ. ಇದಕ್ಕೆ ಸರ್ಕಾರದವರು ಸಾಧ್ಯವಾದ ಎಲ್ಲಾ ಸಹಾಯವನ್ನೂ ಕೊಡುವರು. ಕೃಷಿಕರಲ್ಲಿ ಪರಸ್ಪರಸಹಾಯಪದ್ಧತಿಯನ್ನೂ, ವಿಜ್ಞಾನಶಾಸ್ತ್ರಪರಿಚಯವನ್ನೂ ಹೆಚ್ಚುಮಾಡುವುದು ಎಷ್ಟು ಒಳ್ಳೆಯದೆಂಬುದು ಎಲ್ಲರಿಗೂ ವೇದ್ಯವಾಗಿರುವುದರಿಂದ ನಾನು ಅದನ್ನು ಒತ್ತಿ ತಿಳಿಸಬೇಕಾಗಿಲ್ಲ. ಆದರೆ ಈ ಬಗೆಯ ಪ್ರಯತ್ನಗಳ ಸಫಲತೆಯು ಸರ್ಕಾರದ ಸಹಾಯಕ್ಕಿಂತ ಹೆಚ್ಚಾಗಿ ಜನರ ಉದ್ಯಮಶೀಲತೆಯನ್ನೇ ಅನುಸರಿಸಿರುವುದು. ಜನರ ಉದ್ಯಮವು ಅವರ ಸ್ವಂತ ಹಿತಕ್ಕೆ ಮಾತ್ರವೇ ಅಲ್ಲದೆ ದೇಶಹಿತಕ್ಕೂ ಸಾಧಕವಾಗುವುದು.

ಕಸಬು ಕಾರ್ಖಾನೆಗಳು ಬೆಳೆಯುವುದಕ್ಕೂ, ಸಂಸ್ಥಾನದ ವ್ಯಾಪಾರವು ಒಳಗೂ ಹೊರಗೂ ಸಹ ವಿಸ್ತರಿಸುವುದಕ್ಕೂ, ಸೌಲಭ್ಯಗಳನ್ನು ಕಲ್ಪಿಸುವುದು ಅತ್ಯಾವಶ್ಯಕವೆಂಬುದನ್ನೂ ಸರ್ಕಾರದವರು ಚೆನ್ನಾಗಿ ಬಲ್ಲರು. ಈ ಬಾಬಿನಲ್ಲಿ ವಿಷಯಸಂಗ್ರಹಕ್ಕೋಸ್ಕರವೂ, ಪರಿಶೀಲನೆಗೋಸ್ಕರವೂ ನಮ್ಮ ಸಂಸ್ಥಾನದಲ್ಲಿ ಹಿಂದೆ ಬಹುಕೆಲಸನಡೆದಿದೆಯೆಂಬುದು ನಮಗೆಲ್ಲಾ ತಿಳಿದೇ ಇದೆ. ಆ ವಿಚಾರಗಳಲ್ಲಿ, ಸಾಧ್ಯವಾದರೆ ಹಿಂದಿಗಿಂತ ಹೆಚ್ಚು ಫಲಪ್ರದವಾಗುವ ರೀತಿಯಲ್ಲಿ ಪುನಃ ಪ್ರಯತ್ನಗಳನ್ನು ನಡಿಸಬೇಕೆಂದು ನನಗೆ ಆಸೆ ಬಹಳವಾಗಿದೆ. ದೊಡ್ಡದೊಡ್ಡ ಯಂತ್ರಕರ್ಮಗಳ ಬಾಬಿನಲ್ಲಾಗಲಿ, ಭಾರೀ ವ್ಯಾಪಾರದ ಬಾಬಿನಲ್ಲಾಗಲಿ, ದೇಶೀಯಗಳಾದ ಕೈಗಾರಿಕೆ, ಕುಶಲಕಲೆಗಳ ಬಾಬಿನಲ್ಲಾಗಲಿ, ನಮ್ಮ ಜನರ ನೂತನಪ್ರಯತ್ನಗಳಿಗೆ ಪ್ರೋತ್ಸಾಹವನ್ನೊದಗಿಸಲು ಚೆನ್ನಾಗಿ ವಿಚಾರಮಾಡಿ ಕಾರ್ಯಕಾರಿಗಳಾದ ಸಲಹೆಗಳನ್ನು ಕೊಟ್ಟರೆ ಸರ್ಕಾರದವರು ಅವುಗಳನ್ನಂಗೀಕರಿಸಲು ಸಿದ್ಧರಾಗಿರುವರು.

ಜೀವನೋಪಾಯ ಮಾರ್ಗಗಳನ್ನು ಹೆಚ್ಚಿಸಬೇಕಾದುದರ ಅವಶ್ಯಕತೆಯು ನಮ್ಮಗಳೆಲ್ಲರ ಗೋಚರಕ್ಕೂ ಬಂದಿದೆ. ತಥಾಪಿ ಮಧ್ಯಮ ತರಗತಿಯ ಜನರಿಗೂ, ಬಡವರಿಗೂ ಈ ಅವಶ್ಯಕತೆಯು ವಿಶೇಷವಾಗಿದೆ. ಪ್ರಕೃತದ ವಿಚಾರಗಳಲ್ಲಿ ಇದೇ ಅತ್ಯಂತ ವಿಸ್ತಾರವಾಗಿ ಹರಡಿ ಅತ್ಯಂತ ಮುಖ್ಯವಾಗಿರತಕ್ಕುದೆಂಬುದಕ್ಕೆ ಸಂದೇಹವಿಲ್ಲ. ಆದರೆ ಅದನ್ನು ಬಗೆಹರಿಸಲು ರಾಜಮಾರ್ಗವಾವುದೂ ಇಲ್ಲ. ಎಲ್ಲರೂ ಶ್ರಮಪಟ್ಟು ಕೆಲಸಮಾಡಿದರೆ ಉಂಟಾಗುವ ಅರ್ಥಾಭಿವೃದ್ಧಿಯೇ ಸ್ವತಃ ಜೀವನವೃತ್ತಿಗಳನ್ನು ಹೆಚ್ಚುಮಾಡುವುದು. ಈ ವಿಚಾರದಲ್ಲಿ ಸರ್ಕಾರವು ತಾನು ಕೈಗೊಂಡಿರುವ ಅಥವಾ ಆಲೋಚಿಸುತ್ತಿರುವ ಬಗೆಬಗೆಯ ಕೆಲಸಗಳ ಮೂಲಕ ಕೂಡಿದಮಟ್ಟಿಗೂ ಸಹಾಯಕೊಡುವುದು. ಆ ಕೆಲಸಗಳು ಪ್ರತ್ಯಕ್ಷವಾದ ಸೌಕರ್ಯವನ್ನುಂಟುಮಾಡತಕ್ಕವುಗಳು ಮಾತ್ರವೇ ಅಲ್ಲದೆ ಸೌಂದರ್ಯವನ್ನು ಹೆಚ್ಚಿಸತಕ್ಕವುಗಳಾಗಿಯೂ ಇರಬಹುದು; ಏಕೆಂದರೆ ಜನದ ಏಳಿಗೆಗೆ ಸೌಕರ್ಯಗಳು ಎಷ್ಟು ಅವಶ್ಯಕವೋ ಸೌಂದರ್ಯ, ಅಚ್ಚುಕಟ್ಟುಗಳೂ ಅಷ್ಟು ಆವಶ್ಯಕ.

ಇದಲ್ಲದೆ, ನಮ್ಮ ಊರು ಹಳ್ಳಿಗಳಲ್ಲಿಯ ಮನೆಗಳ ಸ್ಥಿತಿಯನ್ನೂ, ಅವುಗಳ ಅಶುಚಿ ಸ್ಥಿತಿಯನ್ನೂ ನೋಡಿರಿ ; ಅಲ್ಲಿಯ ಜನರಿಗೆ ಅನುಕೂಲವೂ ಇಲ್ಲ, ಆರೋಗ್ಯವೂ ಇಲ್ಲ. ಈ ವಿಚಾರದಲ್ಲಿ ಉತ್ತಮಸ್ಥಿತಿಯುಂಟಾಗಬೇಕಾದರೆ ಜನರ ಸಂಪಾದಕ ಶಕ್ತಿಯು ಹೆಚ್ಚಬೇಕು: ಏಕೆಂದರೆ, ಉತ್ತಮಸ್ಥಿತಿಯು ದ್ರವ್ಯಸಾಧ್ಯವಾದುದು. ಸರ್ಕಾರದವರೂ, ಜನರೂ ಕೂಡ ಹೆಚ್ಚು ಹಣವನ್ನು ವೆಚ್ಚಮಾಡಲು ಸಿದ್ಧರಾಗಿರಬೇಕು. ಸಂಸ್ಥಾನಾಮಳೆಯ ಭೂವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸಲು ನಾವು ವಿಶೇಷ ಸಾಹಸಗಳನ್ನು ಮಾಡಬೇಕೆಂಬುದಕ್ಕೆ ಇದೂ ಒಂದು ಕಾರಣ. ಎಲ್ಲಿ ಸಂಪತ್ತಾದುವು ಜನಜೀವನ ಕ್ಷೇತ್ರದಲ್ಲಿ ಸಮೃದ್ಧವಾಗಿ ಹರಿಯುವುದೋ, ಅಲ್ಲಿ ಅದು ಉತ್ತಮಸ್ಥಿತಿಗಳನ್ನು ವಿಸ್ತಾರವಾಗಿ ಹರಡುವುದು. ಆದುದರಿಂದ ಕೈಕಸುಬುಗಳನ್ನೂ, ಹಳ್ಳಿಗಳ ಕಸಬುಗಳನ್ನೂ ಅಭಿವೃದ್ಧಿಗೊಳಿಸಲು ಬಲವತ್ತರವಾದ ಪ್ರಯತ್ನಗಳನ್ನು ನಡಿಸಬೇಕೆಂದು ನಾನು ಒತ್ತಿ ಹೇಳಬಯಸುತ್ತೇನೆ. ಪ್ರಜಾಪ್ರಮುಖರು ಈ ಉದ್ದೇಶಕ್ಕೆ ನಮ್ಮ [illegible]ವನ್ನೂ, ಸಹಾಯವನ್ನೂ ಕೊಡಬೇಕೆಂದು ನನ್ನ ಕೋರಿಕೆ. ಜನರ ಕೃಷಿ, ಯಂತ್ರ, ಕರ್ಮಗಳು ಬೆಳೆದರೆ ಅವರವರ ಮತ್ತು ದೇಶದ ಸ್ವತ್ತುಗಳು ವೃದ್ಧಿಯಾಗುವುದು ಮಾತ್ರವಲ್ಲದೆ, ಅವರ ಬುದ್ಧಿಶಕ್ತಿಯು ಪ್ರಬಲಿಸಿ ವಿಕಾಸಗೊಂಡು, ಅವರ ಪೌರಸಾಮಾಜಿಕ ಕರ್ತವ್ಯಜ್ಞಾನವು ಸೂಕ್ಷ್ಮತರವಾಗಿ ಅವರ ಆಶಯಜೀವನಕ್ರಮಗಳು ಮೇಲ್ಮೆಯನ್ನು ಪಡೆದು ಮಾನವ ಜೀವಿತದ ಪರಮಾರ್ಥಗಳನ್ನು ಸಾಧಿಸಲು ಅವರು ಮತ್ತಷ್ಟು ಚೆನ್ನಾಗಿ ಅರ್ಹರಾಗುವರು.

ಭಾಗ್ಯಾಭಿವೃದ್ಧಿ, ವಿದ್ಯಾಭಿವೃದ್ಧಿಗಳೊಡನೆ ಪ್ರಜೆಗಳ ರಾಜಕೀಯಾಭಿವೃದ್ಧಿಯೂ ನಡೆಯಬೇಕು. ರಾಜಕೀಯ ಪುರೋವೃದ್ಧಿಯೆಂಬುದು ವಾಸ್ತವವಾಗಿ ಪ್ರಜಾಬೋಧೆಯೇ ಸರಿ. ಹ್ಯಾಗೆಂದರೆ, ಸರ್ಕಾರದವರೂ ಪ್ರಜೆಗಳೂ ಸಹ ಸಾವಧಾನವಾಗಿ ಸಾರ್ವಜನಿಕ ವಿಷಯಗಳನ್ನು ವಿಮರ್ಶೆಮಾಡಿ ರಾಜಕಾರ್ಯ ನಿರ್ವಾಹಕ್ಕೆ ಸಿದ್ಧರಾಗುವಿಕೆ ; ಈ ವಿಚಾರದಲ್ಲಿ, ಇಂಡಿಯಾದೇಶದ ಇತರ ಭಾಗಗಳವರು ಕೂಡ ಪರಾಮರ್ಶಿಸುವುದಕ್ಕೂ, ಪ್ರಾಯಶಃ ಅನುಸರಿಸುವುದಕ್ಕೂ ಸಹ ಅರ್ಹವಾಗಬಹುದಾದ ರಾಜ್ಯಶಾಸನಕ್ರಮವನ್ನು ನಿರ್ಮಿಸಲು ಮೈಸೂರಿಗೆ ಅನನ್ಯವಾದ ಅವಕಾಶವು ದೊರೆತಿದೆ. ಇಂತಹ ಕ್ರಮಕ್ಕೆ ಚರಿತ್ರೆಯಲ್ಲಾಗಲಿ, ಸಾಂಪ್ರತ ಪ್ರಪಂಚದಲ್ಲಾಗಲಿ ಎಲ್ಲಿಯೂ ಮಾದರಿ ತೋರುವುದಿಲ್ಲ. ಸಹನೆಯಿಂದ ಕೆಲಸಮಾಡಿ, ಕ್ರಮಕ್ರಮವಾಗಿ ಆಲೋಚಿಸಿ ತಿದ್ದುಪಾಟುಮಾಡಿ, ಭಾರತೀಯ ಸಂಪ್ರದಾಯಕ್ಕೆ ತಕ್ಕಂತೆಯೂ, ಇಂಡಿಯಾದೇಶದಲ್ಲಿಯೂ, ಇತರಕಡೆಯೂ ಆಗುತ್ತಿರುವ ಆಧುನಿಕ ಸುಧಾರಣೆಗಳಿಗೆ ತಕ್ಕಂತೆಯೂ, ಮೈಸೂರಿನ ವಿಶೇಷ ಸಂದರ್ಭಗಳಿಗೆ ತಕ್ಕಂತೆಯೂ ನಾವು ನಮ್ಮ ರಾಜಯಂತ್ರವನ್ನು ಪರಿಷ್ಕಾರಗೊಳಿಸಬೇಕು. ಇದಕ್ಕಿಂತ ತೊಡಕಾದ ವಿಚಾರವಾಗಲಿ, ಇದಕ್ಕಿಂತ ಚಿತ್ತಸಮುನ್ನತಿಯನ್ನುಂಟುಮಾಡತಕ್ಕವಾಗಲಿ ಯಾವುದೂ ಇರದು. ಇದಕ್ಕೆ ಹಠ, ಪಕ್ಷಪಾತಗಳಿಲ್ಲದ ಮನಸ್ಸಿನಿಂದ ಮಾಡಿ, ನಮ್ಮ ಸಂದರ್ಭಗಳ ನಿಜಸ್ಥಿತಿಯನ್ನು ಜಾಗರೂಕರಾಗಿ ಗಮನಕ್ಕೆ ತಂದುಕೊಂಡು, ನಮಗಿರುವ ಜವಾಬ್ದಾರಿಗಳನ್ನೆಲ್ಲಾ ನಿರ್ವಂಚನೆಯಿಂದ ನೆನಪಿನಲ್ಲಿರಿಸಿ ವಿಶದವಾಗಿಯೂ, ಆವೇಶಕ್ಕೆಡೆಕೊಡದೆಯೂ ಆಲೋಚನೆ ಮಾಡತಕ್ಕುದು ಆವಶ್ಯಕ. ಇಷ್ಟರಮೇಲೆ ಕಾರ್ಯಾನುಭವವೇ ತತ್ತ್ವಗಳನ್ನು ಬೋಧಿಸತಕ್ಕುದಾದ ಕಾರಣ, ಪ್ರಜೆಗಳ ಮೇಲ್ಮೆಗಾಗಿ ನಾವು ಪಡುವ ಪರಿಶ್ರಮದ ಮೂಲಕ ಸಂಪತ್ಸಂಬಂಧವಾದ ಪ್ರಜ್ಞೆಯನ್ನು ಮಾತ್ರವಲ್ಲದೆ ರಾಜಕೀಯ ಪ್ರಜ್ಞೆಯನ್ನೂ ಪಡೆಯಲಾಗುವುದು.

ಈ ಕಾರಣದಿಂದ ತಾವುಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಜಾಸಂಸ್ಥೆಗಳನ್ನು ಕಟ್ಟಿ, ಸಾರ್ವಜನಿಕ ಕಾರ್ಯಗಳನ್ನು ನಡಿಸುವ ಬಗೆಗೆ ತಮ್ಮ ವ್ಯವಧಾನ, ಬುದ್ಧಿಶಕ್ತಿಗಳೆಲ್ಲವನ್ನೂ ವಿನಿಯೋಗಿಸಬೇಕೆಂದು ನಾನು ಕೋರುತ್ತೇನೆ. ಗ್ರಾಮಾಂತರಗಳ ಕಸಬುಗಳನ್ನು ಜೀರ್ಣೋದ್ಧಾರ ಮಾಡುವುದರಲ್ಲಿಯೂ, ಯಂತ್ರ, ಕರ್ಮ, ವ್ಯಾಪಾರಗಳಿಗಾಗಿ ಸಾಂಘಿಕ ಪ್ರಯತ್ನಗಳನ್ನು ಪ್ರೋತ್ಸಾಹಗೊಳಿಸುವುದರಲ್ಲಿಯೂ, ಪರಸ್ಪರಸಹಾಯ ಸಂಘಗಳನ್ನೂ ಸರ್ಕಾರಿ ಸಹಾಯವನ್ನು ಪಡೆಯುವ ಸ್ವತಂತ್ರ ಪಾಠಶಾಲೆಗಳನ್ನೂ ಕಟ್ಟಿಸಿ ನಿಲ್ಲಿಸುವುದರಲ್ಲಿಯೂ, ಸ್ಥಳೀಯ ಪ್ರಜಾಪ್ರಭುತ್ವದ ಸಂಸ್ಥೆಗಳು ಹೆಚ್ಚು ಕಾರ್ಯಕಾರಿಗಳಾಗುವಂತೆ ಮಾಡುವುದರಲ್ಲಿಯೂ ಪ್ರಜಾಪ್ರಮುಖರು ಸ್ವತಃ ಮುಂದೆ ಬಂದು, ಶ್ರಮಪಡುವ ಸಂದರ್ಭಗಳನ್ನು ಕಾಣಲು ನಾವು ಕುತೂಹಲದಿಂದ ನೋಡುತ್ತಿರುತ್ತೇವೆ. ನಮ್ಮ ಸ್ಥಳೀಯ ಸ್ವರಾಜ್ಯಕ್ರಮವನ್ನು ಪರಿಷ್ಕಾರಗೊಳಿಸಲು ಕೆಲವು ಏರ್ಪಾಟುಗಳು ಸರ್ಕಾರದವರ ಕಾರ್ಯಪರವಾದ ಆಲೋಚನೆಯಲ್ಲಿದೆಯೆಂಬುದು ತಮಗೆ ವಿದಿತವಾಗಿಯೇ ಇದೆ. ನಮ್ಮ ಜನರ ಪೌರಧರ್ಮಜ್ಞಾನವನ್ನು ಊರ್ಜಿತಪಡಿಸಿ ಸ್ಥಳೀಯ ಸಂಸ್ಥೆಗಳ ಕಾರ್ಯಶೀಲತೆಯನ್ನು ಪ್ರೋತ್ಸಾಹಗೊಳಿಸತಕ್ಕ ಎಲ್ಲಾ ಪ್ರಯತ್ನಗಳಿಗೂ ಸರ್ಕಾರದ ಮನಃಪೂರ್ವಕವಾದ ಒತ್ತಾಸೆಯು ದೊರೆಯುವುದೆಂದು ನಾನು ಭರವಸೆ ಕೊಡಬಲ್ಲೆ. ಅನೇಕ ಮಂದಿ ಪ್ರಜಾವರ್ಗದ ಜನರು ಈ ಕಾರ್ಯಕ್ಷೇತ್ರದಲ್ಲಿ ಶ್ಲಾಘ್ಯವಾದ ಸಾರ್ವಜನಿಕ ಸೇವೆಯನ್ನು ಆಗಲೇ ಮಾಡಿರುವರು ; ಅದು ಇನ್ನೂ ಹೆಚ್ಚಬೇಕೆಂದು ನಾನು ನಂಬಿಕೆಯಿಂದ ಆಶಿಸುತ್ತೇನೆ.

ಆಯವ್ಯಯಗಳ ವಿಚಾರ.

ಈ ಸಮಯದಲ್ಲಿ ಮೂರುಸಾಲುಗಳಿಗೆ ಸಂಬಂಧಪಟ್ಟ ಆಯವ್ಯಯಗಳ ವಿಚಾರವನ್ನು ಕುರಿತು ವಿಮರ್ಶೆಮಾಡುವುದು ವಾಡಿಕೆಯಾಗಿದೆ ; ಈ ಮೂರು ಸಾಲುಗಳು ಯಾವುವೆಂದರೆ :—ಪರಿಶೋಧನೆ (Audit) ಮಾಡಲ್ಪಟ್ಟು ಕರಾರ್ಖಾತಾ ಸಿದ್ಧಗೊಳಿಸಲ್ಪಟ್ಟಿರುವ ಲೆಕ್ಕಗಳು ದೊರೆಯುವ ಹಿಂದಣ ಆಖೈರುಸಾಲು ; ಸ್ವಲ್ಪಕಾಲದಲ್ಲಿಯೇ ಆಖೈರಾಗುತ್ತಿರುವ ಚಾಲ್ತಿಸಾಲು ; ಮುಂದಣತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗುವ ಸಾಲು. ನಾವೂ ಸಹ ಹಿಂದಿನ ವಾಡಿಕೆಯನ್ನೇ ಅನುಸರಿಸಿ, ಮುಂದಣಸಾಲಿನ ಬಡ್ಜೆಟ್ ಕಾರ್ಯಕ್ರಮವನ್ನು ಪ್ರಸ್ತಾಪಮಾಡುವುದಕ್ಕೆ ಮೊದಲು, 1924-25 ನೇ ಸಾಲಿನಲ್ಲಿ ನಡೆದ ಆಯವ್ಯಯಗಳ ವಾಸ್ತವಿಕ ಲೆಕ್ಕವನ್ನೂ, 1925-26 ನೇ ಸಾಲಿನ ಆಯವ್ಯಯಗಳ ಅಂದಾಜು ಲೆಕ್ಕಗಳನ್ನೂ ಸಂಕ್ಷೇಪವಾಗಿ ವಿಚಾರಮಾಡುತ್ತೇವೆ.

1924-25ನೇ ಸಾಲಿನ ಆಯವ್ಯಯಗಳ ಲೆಕ್ಕಗಳು.

1924-25 ನೇ ಸಾಲಿನಲ್ಲಿ ಒಟ್ಟು ಹುಟ್ಟುವಳಿಯು 3[illegible] ಲಕ್ಷರೂಪಾಯಿಗಳು ; ಮತ್ತು ಹುಟ್ಟುವಳಿಯ ಬಾಕಿಗೆ ಖರ್ಚುಮಾಡಬೇಕಾಗಿದ್ದ ವೆಚ್ಚವೂ ಸಹ, ಸುಮಾರು ಅಷ್ಟೇ ಮೊಬಲಗಾಗಿದ್ದಿತು. ರೈಲ್ವೆಗಳು, ಫಾರೆಸ್ಟು, ವರಮಾನದ ತೆರಿಗೆ, ಮತ್ತು ವಿವಿಧ ತೆರಿಗೆಗಳು ಮತ್ತು ಸ್ಟ್ಯಾಂಪು. ಈ ಬಾಬುಗಳಲ್ಲಿ ಮೊದಲು ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಹುಟ್ಟುವಳಿಯು ಬಂದಿತು. ಇವುಗಳ ಪೈಕಿ ರೈಲ್ವೆಗಳು ಮತ್ತು ಫಾರೆಸ್ಟು ಈ ಎರಡು ಬಾಬುಗಳ ಹುಟ್ಟುವಳಿಯಲ್ಲಿ ವಿಶೇಷ ಆಧಿಕ್ಯವು ಕಂಡುಬಂದಿತು ; ಈ ಎರಡು ಬಾಬುಗಳಲ್ಲಿ 16 ಲಕ್ಷರೂಪಾಯಿಗಳಷ್ಟು ಹೆಚ್ಚು ಹುಟ್ಟುವಳಿಯು ಬಂದಿತು. [illegible]

[illegible]

ಮೈಸೂರು ಸ್ಟಾರ್.

೧೯೨೭ನೆಯ ಇಸವಿ ಜೂನ್ ತಾ|| ೧೮ ನೆಯ ಶನಿವಾರ.

THE DEWAN'S ADDRESS.

Sympathy, sincerety and patriotic fervour are the striking characteristics of the notable address delivered by the New Dewan at the first session he presided over after assuming charge of his high office. He struck a genuine note in a manner which was singularly lacking in cant or platitude. It was essentially an expression of action and not words. He assured the House that the policy of the Government of His Highness has always been to devote all its resources and powers to the advancement of the State in all directions material, moral and in a broad sense, spiritual, and that those aims and efforts would not suffer dimunition at his hands. He was right in putting the economic question among the foremost of all questions. It was only a simple and yet as he said the most neglected of matters—the production and use of the necessities of life, and he assured them that improvement of means and methods of agricultural production and of industrial enterprise and trade would receive all help by the Government. As regards the question of unemployment he suggested the only remedy that greater prosperity will cause a natural increase of employment—and as a measure for the time that the State would consider the execution of the various works on hand—works which need not necessarily be merely utilitarian—but may also be beautiful. Another very significant aspect of the State needs—a much neglected need indeed—which he emphasised was in regard to the housing and sanitary conditions of our towns and villages, which commanded neither comfort nor good health. This again could only be possible on more earning capacity and the Dewan urged on the development of handicrafts and village industries. Speaking of political development he said by patient work and gradual thought and adjustment, the political system must be developed in the light of Indian tradition, of modern developments in India and elsewhere and of the peculiar circumstances of Mysore. Of the features of the budget estimates it is needless to notice here. The most noteworthy portion of the address refered to the need for administrative efficiency and the Dewan's remarks in this connection are such as to be noted by all administrators, and we make no excuse for quoting some of them here. "Scriptory work must be cut down, and real constructive work must be increased in all public offices. I have every assurance that the officers of the Government will co-operate whole heartedly in reducing unnecessary correspondence and in getting things done by prompt personal attention. It is generally complained that we Indians have yet to earn a name for business like habits and expeditious disposal of papers." We welcome this policy and the subjects of His Highness would be ever grateful if the New Dewan would introduce this necessary Reform. We have been fed up with red-tapism and correspondence. He appealed to the House to exert themselves to the utmost in every direction in order to maintain the good name of the State, to raise its prestige abroad and to add to its renown as a friend of all progressive movements. The Dewan saheb was fully conscious of his relationship with His Highness the Maharaja and it was a correct standpoint when he said that His Highness' approval of such service as he may render the State was paramount worth to him and it could only be secured by patient labour for the prosperity and the happiness of the people of Mysore. Need there be any doubt that the *regime* of such a statesman would be anything but a success? Rightly did he touch on the fortunate position of the State—fortunate in the nobility and wisdom of its Ruler, in the character and homogeniety of its people, in its vast mineral and other resources. He did not take it as an individual effort of his but as one which could only be possible through the sympathy and the support of the House, a matter which will be given to him in full. He wanted the maintenance of an absolute purity and nobility of policy and word in creating sound traditions for the House and working for the State, and told them that any one amongst them, including himself, who sought to use the Assembly for purposes narrower than the universal service of the State would dishonour his office. These are sentiments which must strike a sympathetic echo in the heart of every true citizen of the State. We congratulate heartily the Dewan Saheb for the high and splendid ideals placed before the House. We wish him all success in his endeavours.

GOVERNMENT GUESTS.

SOME CONSTANT FACTORS.

The system of inviting members of the Representative Assembly and the Legislative Council as guests by rotation was a happy idea introduced along with the reconstitution of the two Houses. Between the two bodies there are on the whole about 300 members. The usual number invited each time during the Birthday and the Dasara seasons is twelve. The idea is to give as many members as possible a chance of enjoying the special amenities of the seasons in as full a measure as possible. But it is somewhat surprising that three Brahmin celebrities of Mysore two of whom are on both the Houses and one only in the Legislative Council form constant factors in the list of invited guests. The matter has become notoriously public that these three are the special favourites of the Government, at any rate of those entrusted with the duty of selecting guests. Doubtless no people who are to be guests have a right to question the discretion of the host in an affair like this. But we would not question if the expenses of these guests are met by any private funds, but if public funds are to be expended surely the payer has a right to call the tune. Besides, we have no objection to these constant factors remaining so, provided they do not deprive the chances of other members, yet uninvited, from getting into the list of guests. But necessarily they do, which is extremely unfair and inequitable. We would like to see in future a more equitable principle prevailing in the selection of Government guests.

ದಿವಾನರ ಭಾಷಣ.

ಮೈಸೂರು ಪ್ರಜಾಪ್ರತಿನಿಧಿಸಭಾಧ್ಯಕ್ಷರಾದ ಅಮೀರ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್, ಬಿ.ಎ., ಸಿ.ಐ.ಇ.,ಒ.ಬಿ.ಇ. ಯವರು ಮಾಡಿದ ಅಧ್ಯಕ್ಷೋಪನ್ಯಾಸವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಸಮಗ್ರವಾಗಿ ಮುದ್ರಿಸಲ್ಪಟ್ಟಿರುತ್ತದೆ. 252 ಜನ ಪ್ರತಿನಿಧಿಗಳಲ್ಲಿ 167 ಜನರು ಮಾತ್ರ ಬಂದಿದ್ದರು. ಮಿ|| ಮಿರ್ಜಾಯವರು ಸಂಸ್ಥಾನದ ಅಮಾತ್ಯಪದವಿಯನ್ನು ಹೊಂದಿದುದಕ್ಕಾಗಿ ಅವರನ್ನು ಮ|| ಜಿ. ಪರಮಶಿವಯ್ಯನವರು ಪ್ರತಿನಿಧಿಸಭಾಪರವಾಗಿಯೂ, ಮ|| ವೆಂಕಟಸ್ವಾಮಯ್ಯನವರು ಪ್ರಾಗತಿಕಪಕ್ಷದ ಪರವಾಗಿಯೂ ಅಭಿನಂದಿಸಿದರು. ತರುವಾಯ ಪ್ರಜಾಪ್ರತಿನಿಧಿಸಭಾಸದಸ್ಯರಾಗಿದ್ದ ಚಿಕ್ಕಮಗಳೂರಿನ ಶ್ರೀನಿವಾಸರಾಯರ ಮತ್ತು ಕಬ್ಬಳ್ಳಿ ಚೆನ್ನಬಸಪ್ಪನವರ ವಿಯೋಗಕ್ಕಾಗಿ ಸಭೆಯವರ ಅನುತಾಪವನ್ನು ಪ್ರದರ್ಶಿಸಿ ಅವರ ಕುಟುಂಬದವರಿಗೆ ಸಾನುಭೂತಿಯನ್ನು ತಿಳಿಸಬೇಕಾಗಿ ಕೋರಲ್ಪಟ್ಟಿತು. ಮಿ|| ಮಿರ್ಜಾಯವರು ಈ ಮಹೋನ್ನತ ಅಮಾತ್ಯಪದವಿಯನ್ನಲಂಕರಿಸಿದ ಮೇಲೆ ಪ್ರಜಾಪ್ರತಿನಿಧಿಸಭಾಧ್ಯಕ್ಷತೆಯನ್ನು ಪ್ರಥಮತಃ ವಹಿಸಿ ಮಾಡಿದ ಸ್ಮರಣೀಯವಾದ ಭಾಷಣವು ಸಹಾನುಭೂತಿ, ನಿಷ್ಕಾಪಟ್ಯ, ದೇಶಾಭಿಮಾನೋತ್ಸುಕತೆಗಳಿಂದ ತುಂಬಿತುಳುಕುತ್ತಿರುವುದು ಮಾತ್ರವಲ್ಲದೆ ಇದುವರೆಗಿನಂತೆ ಸಪ್ಪೆಯಾಗಿಯೂ ಬರೇ ವಾಗಾಡಂಬರವಾಗಿಯೂ ಇರದೆ ಕಾರ್ಯಸಾಧಕವಾಗಿರುವುದು. ಸಂಸ್ಥಾನದ ಪ್ರಜೆಗಳ ಆರ್ಥಿಕ, ನೈತಿಕ ಮತ್ತು ಧಾರ್ಮಿಕಾಭಿವೃದ್ಧಿಸಾಧನೆಗಾಗಿ ಬೇಕಾದ ಧನವ್ಯಯವನ್ನೂ ಸಾಹಸವನ್ನೂ ಸರ್ವದಾ ಮಾಡುತ್ತಿರುವುದೇ ಪ್ರಭುತ್ವದವರ ಮುಖ್ಯಸಂಕಲ್ಪವಾಗಿರುತ್ತದೆಂದೂ, ಈ ಸಂಕಲ್ಪಕ್ಕೆ ತಮ್ಮಿಂದ ಲೇಶಮಾತ್ರ ಚ್ಯುತಿಯಾಗುವುದಿಲ್ಲವೆಂದೂ ಮಿ|| ಮಿರ್ಜಾಯವರು ಬಹಳ ಭರವಸೆಯಿಂದ ಅಪ್ಪಣೆಕೊಡಿಸಿರುತ್ತಾರೆ. ಇವರು ತಮ್ಮ ಭಾಷಣದಲ್ಲಿ ಅರ್ಥಸಾಧಕವಿಚಾರಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಯುಕ್ತವಾಗಿದೆ. ಜನೋಪಯುಕ್ತವಸ್ತುಗಳನ್ನು ಬೆಳೆದು ಅವುಗಳನ್ನು ಉಪಯೋಗಿಸುವ ವಿಚಾರವು ಬಹು ಸುಲಭಸಾಧ್ಯವಾಗಿದ್ದರೂ ಅದು ನಿರ್ಲಕ್ಷಿಸಲ್ಪಟ್ಟಿರುತ್ತಾದುದರಿಂದ ಬೇಸಾಯ, ಕೈಗಾರಿಕೆ ಮತ್ತು ವ್ಯಾಪಾರಾಭಿವೃದ್ಧಿಸಾಧನೋಪಾಯಗಳಿಗೆ ಪ್ರಭುತ್ವದವರಿಂದ ಬೇಕಾದ ಸಹಾಯವೆಲ್ಲವೂ ಮಾಡಲ್ಪಡುವುದೆಂದು ಅಭಿವಚನವನ್ನಿತ್ತಿರುವರು. ಜನರಿಗೆ ಸಾಕಷ್ಟು ಉದ್ಯೋಗವು ದೊರೆಯುತ್ತಿಲ್ಲವೆಂಬುದರಮೇಲೆ ಆಂದೋಳನವೆದ್ದಿರುವುದಷ್ಟೆ. ಇದಕ್ಕೆ ವಿಶೇಷ ಸಂಪದಭಿವೃದ್ಧಿಯಾಗಿ ತನ್ಮೂಲಕ ಉದ್ಯೋಗವು ಸ್ವಭಾವವಾಗಿ ಹೆಚ್ಚುವುದೇ ಶಕ್ಯ ನಿವಾರಣೋಪಾಯವೆಂದೂ, ಈಗ ಕೈಕೊಂಡಿರುವ ಉಪಯುಕ್ತವೂ, ಸಲಕ್ಷಣವೂ ಆದ ಕಾರ್ಯಗಳನ್ನು ಪೂರೈಸುವ ವಿಚಾರವು ಪ್ರಭುತ್ವದವರ ಪರ್ಯಾಲೋಚನೆಯಲ್ಲಿರುತ್ತದೆಂದೂ ಅಪ್ಪಣೆಕೊಡಿಸಿರುವರು. ಅನುಕೂಲ್ಯವೂ, ಆರೋಗ್ಯವೂ ಇಲ್ಲದಿರುವ ನಮ್ಮ ದೇಶದ ಸಣ್ಣ ಪಟ್ಟಣಗಳ ಮತ್ತು ಗ್ರಾಮಗಳ ಆರೋಗ್ಯಸ್ಥಿತಿಯು ಬಹಳವಾಗಿ ಉಪೇಕ್ಷಿಸಲ್ಪಟ್ಟಿರುವುದರಿಂದ ಇದರ ಪರಿಹಾರವು ಅತ್ಯಾವಶ್ಯಕವಾಗಿರುವುದಾದರೂ ಸಂಪಾದನಾಶಕ್ತಿಯು ಹೆಚ್ಚದ ವಿನಾ ಇದು ಸಾಧ್ಯವಿಲ್ಲವೆಂದೂ, ಇದಕ್ಕಾಗಿ ಗ್ರಾಮಕೈಗಾರಿಕೆಗಳು ಅಭಿವೃದ್ಧಿಯಾಗಬೇಕೆಂದೂ ದಿವಾನರು ಒತ್ತಿಹೇಳಿರುತ್ತಾರೆ. ರಾಜಕೀಯವಿಚಾರದಲ್ಲಿ ಪ್ರಜೆಗಳು ಹೆಚ್ಚು ಸ್ವಾತಂತ್ರ್ಯವನ್ನು ಹೊಂದುವ ವಿಷಯವಾಗಿ ಪ್ರಸ್ತಾವಿಸುವಾಗ್ಗೆ, ತಾಳ್ಮೆಯಿಂದ ಕೆಲಸಮಾಡುವುದರಿಂದಲೂ, ದೀರ್ಘಾಲೋಚನೆಯಿಂದ ಕಾಲಾನುಗುಣವಾಗಿ ಯೋಚಿಸಿಕೊಳ್ಳುವುದರಿಂದಲೂ, ರಾಜನೀತಿವಿಧಾನವು ಸಂಪ್ರದಾಯಕ್ಕೂ, ಭರತಖಂಡದಲ್ಲೂ ಪರದೇಶಗಳಲ್ಲೂ ನಡೆಯುತ್ತಿರುವ ನವೀನ ಸುಧಾರಣೆಗೂ ನಮ್ಮ ಮೈಸೂರು ಸಂಸ್ಥಾನದ ಅಸಾಧಾರಣ ಪರಿಸ್ಥಿತಿಗೂ ಅನುಗುಣವಾಗಿ ಅಭಿವೃದ್ಧಿಯಾಗಬೇಕಾಗಿದೆ ಎಂದು ಹೇಳಿರುವರು. ಅಧಿಕಾರಿಗಳ ಉದ್ಯೋಗನಿರ್ವಾಹ ವಿಚಾರದಲ್ಲಿ "ನಮ್ಮ ಕಛೇರಿಗಳಲ್ಲಿ ಬರೆವಣಿಗೆಯು ಕಡಿಮೆಯಾಗಿ ಕಾರ್ಯಸಾಧನೆಯು ಹೆಚ್ಚಾಗಬೇಕು. ಅನಾವಶ್ಯಕವಾದ ಪತ್ರಿಕಾಪ್ರಸಂಗವನ್ನು ತಪ್ಪಿಸಿ, ಕರ್ತವ್ಯಗಳನ್ನು ನೆರವೇರಿಸುವ ವಿಷಯದಲ್ಲಿ ಸರ್ಕಾರದ ಅಧಿಕಾರಿಗಳು ಮನಃಪೂರ್ತಿಯಾಗಿ ಸಹಾಯಮಾಡಿಯಾರೆಂಬ ಭರವಸೆಯು ನನಗೆ ಸಂಪೂರ್ಣವಾಗಿದೆ. ಕಾರ್ಯಸಾಧಕಗಳಾದ ಪದ್ಧತಿಗಳನ್ನು ಅನುಸರಿಸುವ ವಿಷಯದಲ್ಲಿಯೂ, ಕಾಗದ ಪತ್ರಗಳನ್ನು ಬೇಗ ಬೇಗನೆ ಇತ್ಯರ್ಥಪಡಿಸುವ ವಿಷಯದಲ್ಲಿಯೂ ಭಾರತೀಯರು ಇನ್ನೂ ಹೆಸರನ್ನು ಸಂಪಾದಿಸಬೇಕಾಗಿದೆಯೆಂಬ ಆಕ್ಷೇಪಣೆಯು ಸಾಮಾನ್ಯವಾಗಿದೆ." ಎಂದು ಅಪ್ಪಣೆಕೊಡಿಸಿರುತ್ತಾರೆ. ಈ ನೀತಿಯನ್ನು ನಾವು ಸ್ವಾಗತಿಸುತ್ತೇವಲ್ಲದೆ ಈ ವಿಚಾರದಲ್ಲಿ ಅವಶ್ಯಕವಾದ ಸುಧಾರಣೆಯನ್ನು ನಮ್ಮ ನೂತನ ಮಂತ್ರಿವರ್ಯರು ಮಾಡುವುದಾದರೆ ಶ್ರೀಮನ್ ಮಹಾರಾಜರವರ ಪ್ರಜೆಗಳೆಲ್ಲರೂ ಯಾವಾಗಲೂ ಅವರಿಗೆ ಕೃತಜ್ಞರಾಗಿರುವರು. ಕಾಗದಪತ್ರಗಳನ್ನು ದಫ್ತರದಲ್ಲಿ ಕಟ್ಟಿಡುವುದೂ, ಪತ್ರವ್ಯವಹಾರವನ್ನು ಬೆಳೆಸುವುದೂ ನಮ್ಮವರಿಗೆ ಅಭ್ಯಸ್ತವಾಗಿ ಬಂದಿದೆ. ಸಂಸ್ಥಾನದ ಖ್ಯಾತಿಯುಳಿದುಕೊಂಡು ಅದರ ಮರ್ಯಾದೆಯು ಅನ್ಯದೇಶಗಳಲ್ಲಿ ಹೆಚ್ಚಿ ಎಲ್ಲ ಪ್ರಾಗತಿಕಕಾರ್ಯಗಳಿಗೆ ಅದು ಆಶ್ರಯದಾಯಿ ಎಂಬ ಮೇಲ್ಮೆಯು ಅಭಿವೃದ್ಧಿಯಾಗುವ ವಿಚಾರದಲ್ಲಿ ಪ್ರತಿನಿಧಿಗಳ ಸಾಹಾಯ್ಯವನ್ನು ಕೋರಿರುವರು. ದಿವಾನರು ತಮಗೂ, ಶ್ರೀಮನ್ ಮಹಾರಾಜರವರಿಗೂ ಇರುವ ಸಂಬಂಧವನ್ನು ಸಂಪೂರ್ಣ ಮನಗಂಡವರಾಗಿ ಮೈಸೂರು ಪ್ರಜೆಗಳ ಸುಖಸಂಪತ್ಸಾಧನೆಗಾಗಿ ತಾಳ್ಮೆಯಿಂದ ದುಡಿಯುವ ಮಾತ್ರದಿಂದಲೇ ಸಂಪಾದಿಸಲು ಸಾಧ್ಯವಾದ ಶ್ರೀಮನ್ ಮಹಾರಾಜರವರ ಮೆಚ್ಚುಗೆಯು ತಮಗೆ ಅತ್ಯಂತ ಅಮೂಲ್ಯವಾಗಿರುವುದೆಂದು ಅವರು ಹೇಳಿರುವುದು ಯಥಾರ್ಥ ಮಾತಾಗಿದೆ. ಇಂತಹ ಪುಣ್ಯಜ್ಞಾನವೂ, ಮನಸ್ಸಂಕಲ್ಪವೂ ಉಳ್ಳ ರಾಜ್ಯಾಧಿಕಾರಿಗಳ ಆಡಳಿತವು ಕೃತಾರ್ಥವಾಗುವುದೆನ್ನುವುದರಲ್ಲಿ ಅಭ್ಯಂತರವೇನಿರುವುದು ? ಮಹಾಘನವಂತರೂ, ಪ್ರಜ್ಞಾಶಾಲಿಗಳೂ ಆದ ಪ್ರಭುಗಳನ್ನೂ, ಸುಶೀಲಸ್ವಭಾವದ ಪ್ರಜೆಗಳನ್ನೂ, ಅಪಾರವಾದ ಖನಿಜ ಮೊದಲಾದ ಸಂಪತ್ಸಾಧನಗಳನ್ನೂ ಹೊಂದಿರುವ ಮೈಸೂರುಸಂಸ್ಥಾನವು ಮಹಾಭಾಗ್ಯಶಾಲಿಯೆಂದು ಅವರು ಹೇಳಿರುವುದು ಬಹಳ ಸಮಂಜಸವಾಗಿದೆ. ಪ್ರಜಾಪ್ರತಿನಿಧಿಗಳ ಸಹಾಯ ಸಹಾನುಭೂತಿಗಳಿಂದ ತಮ್ಮ ಸಂಕಲ್ಪಸಿದ್ಧಿಯಾಗಬೇಕಲ್ಲದೆ ತಮ್ಮೊಬ್ಬರ ಪ್ರಯತ್ನದಿಂದಲೇ ಆಗತಕ್ಕುದಲ್ಲವೆಂದು ತಿಳಿಸಿರುವರು. ಆರೀತಿ ಸಭೆಯ ಪೂರ್ಣಸಹಾಯವು ಅವರಿಗೆ ದೊರಕುವುದರಲ್ಲಿ ಅಭ್ಯಂತರವಿಲ್ಲ. ಪ್ರಜಾಪ್ರತಿನಿಧಿಸಭೆಯ ಸಂಪ್ರದಾಯವನ್ನು ಸುಸ್ಥಿರಗೊಳಿಸುವುದರಲ್ಲೂ, ಸಂಸ್ಥಾನದ ಅಭಿವೃದ್ಧಿಗಾಗಿ ಪಾಟುಪಡುವುದರಲ್ಲೂ, ಸಂಪೂರ್ಣ ಪರಿಶುದ್ಧತೆಯನ್ನೂ, ಭಾವೋನ್ನತಿಯನ್ನೂ ಕಾಪಾಡಿಕೊಂಡು ಬರಬೇಕೆಂದು ಕೋರಿರುವರಲ್ಲದೆ, ತಾವು ಮೊದಲಾಗಿ ಸಭಾಸದಸ್ಯರಲ್ಲಿ ಆರಾದರೂ ಪ್ರತಿನಿಧಿಸಭೆಯನ್ನು ಸಂಸ್ಥಾನದ ಸಾರ್ವಜನಿಕ ಕಾರ್ಯಗಳಿಗಲ್ಲದೆ ಸಂಕುಚಿತ ಕಾರ್ಯಗಳಿಗೆ ಉಪಯೋಗಿಸುವುದಾದರೆ ಅವರು ತಮ್ಮ ಸ್ಥಾನಕ್ಕೆ ಅಗೌರವವನ್ನುಂಟುಮಾಡಿದಂತಾಗುವುದೆಂದು ಹೇಳಿರುವರು. ಇವರ ಮನೋಭಾವವು ನಿಜವಾದ ಮೈಸೂರುದೇಶೀಯನ ಹೃದಯದಲ್ಲಿ ತಾದೃಶಭಾವಜನ್ಯವಾಗಿರುವುದು. ಮಹೋನ್ನತವೂ ಶ್ಲಾಘ್ಯವೂ ಆದ ತಮ್ಮ ಮನೋಭಾವ ಮತ್ತು ಸಂಕಲ್ಪಗಳನ್ನು ಭಾಷಣದಲ್ಲಿ ವ್ಯಕ್ತಗೊಳಿಸಿರುವುದಕ್ಕಾಗಿ ನಾವು ಮಂತ್ರಿವರ್ಯರನ್ನು ಮನಃಪೂರ್ವಕವಾಗಿ ವಂದಿಸಿ ಅವರ ಉದ್ದಿಷ್ಟಫಲಪ್ರಾಪ್ತಿಯಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ಕೂಚ್‌ಬಿಹಾರ ಮಹಾರಾಣಿಯವರು ತಾ|| 16 ರಲ್ಲೂ, ಬ್ರಿಟಿಷ್ ರೆಸಿಡೆಂಟರು ತಾ|| 17 ರಲ್ಲೂ ಮದ್ರಾಸ್ ಗೌರ್ನರ್ ದಂಪತಿಗಳು ತಾ|| 18 ರಲ್ಲೂ ಬಂದರು. ಇವರುಗಳ ಮರ್ಯಾದಾರ್ಥವಾಗಿ 13-13-19 ಗುಂಡುಗಳು ಹಾರಿಸಲ್ಪಟ್ಟುವು.

ನಾಳೆಯ ಬೆಳಗಿನ 10-14 ಘಂಟೆಯಮೇಲೆ 10-40 ಘಂಟೆಯೊಳಗೆ ಸಲ್ಲುವ ಸಿಂಹಲಗ್ನ ವೃಷಭಮಿಥುನಾಂಶಗಳಲ್ಲಿ ಮಹಾರಾಜಕುಮಾರೀ ಶ್ರೀ|| ಜಯಲಕ್ಷ್ಮಮ್ಮಣ್ಣಿಯವರ ಕುಮಾರಿ ಸೌ|| ಲೀಲಾವತಿಯವರಿಗೂ ಮ|| ಕೆ. ಬಸವರಾಜಅರಸಿನವರಿಗೂ ಪಾಣಿಗ್ರಹಣಮಹೋತ್ಸವವು ಕನ್ನೆಯ ಸೋದರ

ಖಿಗಳ ವ್ಯಯದಿಂದ ಹಾಸ್ಟಲನ್ನು ಸ್ಥಾಪಿಸಿ ಸಮಾಜಕ್ಕೆ ಮಹೋಪಕಾರವನ್ನು ಮಾಡಿಯೂ, ಮುಂದೆ ಮಾಡುವವರಾಗಿಯೂ ಇದ್ದ ಮ|| ಕೆ. ಚೆನ್ನಬಸಪ್ಪನವರು ಅತ್ಯಂತ ಚಿಕ್ಕವಯಸ್ಸಿನಲ್ಲೇ ಅಕಾಲಮೃತ್ಯುವಿನ ಪಾಲಾದುದರಿಂದ ವೀರಶೈವ ಸಮಾಜಕ್ಕುಂಟಾದ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದೂ, ಈ ಮಹೋಪಕಾರಿಗಳ ಸ್ಮರಣಾರ್ಥವಾಗಿ ಅವರ ಒಂದು ಎಣ್ಣೆಬಣ್ಣದ ಛಾಯಾಚಿತ್ರಪಟವನ್ನು ಬರೆಯಿಸಿ ಹಾಸ್ಟಲಿನಲ್ಲಿ ಕಟ್ಟಬೇಕೆಂದೂ ನಿರ್ಧರಿಸಿದರು. ಈ ಚಿತ್ರಪಟವನ್ನು ಬರೆಯಿಸುವುದರ ವೆಚ್ಚಕ್ಕಾಗಿ ಚಂದಾಹಣವು ಸಂಗ್ರಹಮಾಡಲ್ಪಟ್ಟು ಅಧ್ಯಕ್ಷರು 15 ರೂ., ಮ|| ಗಳಾದ ಜಿ. ಪರಮಶಿವಯ್ಯನವರು 10 ರೂ., ಬೀರೂರಿನ ಮ್ಯುನಿಸಿಪ

ಲು ಕೊಡುಬಂದ ಮೊಬಲುಗಾಗಿದೆ.

ಇಷ್ಟು ವೆಚ್ಚದ ವಿಷಯ: ಬಡ್ಡಿ, ಸಿವಿಲ್ ಕಾಮಗಾರಿಗಳು, ಮತ್ತು ವ್ಯವಸಾಯ, ಈ ಮೂರು ಬಾಬುಗಳಲ್ಲಿಯೂ ವಿಶೇಷ ಆಧಿಕ್ಯವು ಕಂಡುಬರುತ್ತದೆ.

ಬಡ್ಡಿಯ ಬಾಬಿನಲ್ಲಿ ವೆಚ್ಚವು ಹೆಚ್ಚಾಗಿದೆ. ಇದಕ್ಕೆ [illegible]

ಯಲ್ಲಿದ್ದಿತು ; ಇದರ ಪೈಕಿ ಬಜೆಟ್ಟಿನಲ್ಲಿ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಮೊಬಲಗನ್ನು ಶಾವತಿಮಾಡಬೇಕಾಗಿ ಬಂದಿತು ; ಇದು ಮೊದಲನೆಯ ಕಾರಣ. ಎರಡನೆಯದು, ಬಜೆಟ್ ಅಂದಾಜಿನಲ್ಲಿ ನಿರೀಕ್ಷಿಸಲ್ಪಟ್ಟದ್ದಕ್ಕಿಂತಲೂ ಹೆಚ್ಚಾಗಿ ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳ ಮತ್ತು ವಿಮೆಯ ಫಂಡುಗಳ ಶಿಲ್ಕು ಮೊಬಲಗು ಉಳಿಯಿತು. ಇದು ಎರಡನೆಯ ಕಾರಣ.

ಸಿವಿಲ್ ಕಾಮಗಾರಿಗಳ ಬಾಬಿನಲ್ಲಿ ಸುಮಾರು 2.5 ಲಕ್ಷ ರೂಪಾಯಿ ವೆಚ್ಚವಾಯಿತು. ಮಾಧವ ಮಂತ್ರಿ ಅಣೆಕಟ್ಟೆಯ ಕೊರೆಯುಹೋದ ನೀರು ಸರಬರಾಯಿನ ವಿಚಾರಣೆಗೆ ಗಳ ಬಾಬತು ವೆಚ್ಚ ; ಇವು ಮೇಲೆ ತಿಳಿಸಿದ ಕಾರಣ.

ವಿಚಾರದಲ್ಲಿ ಪರಿಹಾರಕ್ರಿಯೆಗಳೇ ಮುಂತಾದು ಕ್ಕಾಗಿ ಸುಮಾರು 2 ಲಕ್ಷ ರೂಪಾಯಿಗಳ ಹೆಚ್ಚು ಅವಶ್ಯವಾಯಿತು. ವ್ಯವಸಾಯದ ಬಾಬಿನಲ್ಲಿ ಕ್ಕೆ ಇದೇ ಕಾರಣ.

ಗಿ ಕಡಿಮೆಯಾಗಿರುವುದು ವಿದ್ಯಾಭ್ಯಾಸದ ಬಾಬಿ ಈ ಬಾಬಿನಲ್ಲಿ ಸುಮಾರು 2.5 ಲಕ್ಷ ರೂಪಾಯಿ ಕಡಿಮೆ ಯಾಗಿರುತ್ತದೆ. ವಿದ್ಯಾಭ್ಯಾಸದ ನಾನಾ ಯ ವಿಗುತಾಯವು ಕಂಡುಬಂದುದೇ ಇದಕ್ಕೆ ಈ ಬಾಬಿನಲ್ಲಿ ಭಾಗೀಪ್ರಮಾಣದಲ್ಲಿ ವ್ಯವಾಟು ನ್ನೂ, ಮತ್ತು ವಿದ್ಯಾಭ್ಯಾಸದ ಬಾಬಿನಲ್ಲಿ ನಡೆಯು ಸ್ವಭಾವವನ್ನೂ ಪರಿಗಣಿಸಿದರೆ, ಬಜೆಟ್ ಪ್ರಕಾರ ಲಗು ಪೂರ್ತಿಯಾಗಿ ವಿನಿಯೋಗವಾಗದೆ ಉಳಿದು ಯುವಲ್ಲ.

ಕಟ್ಟೆಯ ಬಾಬತು ವೆಚ್ಚಕ್ಕೆ ಪೂರ್ವಪದ್ಧತಿಯನ್ನ ಬಂಡವಾಳದ ರಿಜರ್ವಿನಿಂದ ಮೊಬಲಗನ್ನು ಒದಗಿ ಬಾಬುಗಳ ವೆಚ್ಚಕ್ಕಾಗಿ ಒಟ್ಟು 4.33 ಲಕ್ಷ ರೂಪಾ ಯಿತು. ಅವುಗಳನ್ನು ಮುಂದೆ ನಮೂದಿಸಿದೆ. ಅವು ಭಾವದ (Non-recurring) ವೆಚ್ಚಗಳಾ ಗಳಿಗೆ ವಿಶೇಷಸ್ವಭಾವದ ರಿಜರ್ವಿನಿಂದಲೇ ಹಣವ ಇವುಗಳೆಲ್ಲದರ ವಿವರ :—

ವ ಮಂತ್ರಿಯ ಅಣೆಕಟ್ಟೆಯ	ರೂ.
ವೆಚ್ಚ	60,000
ಕೆಗಾಗಿ ಕೊಂಡುಕೊಂಡ ತ್ತು ಸಿಬ್ಬಂದಿಗೂ ತಗಲಿದ ವೆಚ್ಚ	2,05,000
ಂಟಾದ ನಷ್ಟಗಳ ಬಾಬತು ಗಾರಿ	1,68,000
ಜುಮ್ಲಾ	4,33,000

ನೇ ಸಾಲಿನ ಬಜೆಟ್ ಅಂದಾಜು.

ನಡೆಯಬೇಕಾದ ಬಜೆಟ್ ಕಾರ್ಯಕ್ರಮದ ತಿಳಿಸಲಿಚ್ಛಿಸುವೆವು. ಮುಂದಣಸಾಲಿನಲ್ಲಿ ಒಟ್ಟು ಹುಟ್ಟುವಳಿಯು ಬರಬಹುದೆಂಬುದಾಗಿ ಅಂದಾ ಂದಣಸಾಲಿನ ಒಟ್ಟು ವೆಚ್ಚವು 340.5 ಲಕ್ಷ ರೂಪಾ ದಾಜುಮಾಡಲಾಗಿದೆ. ಆದಕಾರಣ, ಮುಂದಣ ಸುಮಾರು ಅರ್ಧಲಕ್ಷ ರೂಪಾಯಿಗಳಷ್ಟು ಹಣ ನಿರೀಕ್ಷಿಸಲ್ಪಟ್ಟಿದೆ.

ದ ಹುಟ್ಟುವಳಿಯ ಬಾಬುಗಳ ಕೆಲವು ವಿಶೇಷ ಲ್ಲರೂ ಗಮನಿಸಬೇಕೆಂದು ಕೋರುತ್ತೇವೆ. ಕೆಲ ವರುಷವೂ ಹುಟ್ಟುವಳಿಯು ಕಡಿಮೆಯಾಗುತ್ತಾ ವು ಬಾಬುಗಳಲ್ಲಿ ಹುಟ್ಟುವಳಿಯು ಸ್ಥಿರವಾಗಿಲ್ಲ; ಲ್ಲಿ ವಿಶೇಷ ಹೆಚ್ಚುತ್ತದೆ : ಮತ್ತೆ ಕೆಲವು ಸಾಲು ಹೋಗುತ್ತದೆ. ಎಕ್ಸೈಜ್ ಬಾಬಿನಲ್ಲಿ ವರುಷವರುಷ ಹುಟ್ಟುವಳಿಯು ತಗ್ಗುತ್ತಾ ಬರುತ್ತಿದೆ. ಮಾದಕದ್ರ ಮೆಯಾಗುತ್ತಿರುವುದೆಂಬುವುದೂ ಸಹ, ಇದರಿಂದ ನೋ ಸರ್ಕಾರದವರಿಗೆ ಸಂತೋಷಕರವಾದ ಸಂಗ ಸರ್ಕಾರದ ಹುಟ್ಟುವಳಿಯನ್ನು ಗಮನಿಸಿದಲ್ಲಿ, ರಮಾನವು ತಗ್ಗುತ್ತಿರುವುದು ಆಯವ್ಯಯಗಳ ಸಮ ವೆಂಬುವೇನೋ ನಿಶ್ಚಯ. ಇಂಡಿಯಾ ಸರ್ಕಾರದ ರ್ಯಕ್ರಮವನ್ನೇ ಅನುಸರಿಸಿ ಹತ್ತಿಯ ಸನದುಗಳ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಇಂಡಿಯಾ ಸರ್ಕಾ ಗಳಮೇಲಣ ಸುಂಕವನ್ನು ಅಪ್ಪೆರಾಗಿ ತೆಗೆದುಹಾಕಿ ಸಹ, ಅದನ್ನು ಅಪ್ಪೆರಾಗಿ ವಜಾಮಾಡಬೇಕಾಗುತ್ತ ಬಾಬಿನಿಂದ ಬರುವ ಹುಟ್ಟುವಳಿಯನ್ನು ಮುಂದಣ . ಈ ಸುಂಕವನ್ನು ತೆಗೆದುಹಾಕಿದುದರವೆಸೆಯಿಂದ, ಮಾರು ಎರಡುಲಕ್ಷ ರೂಪಾಯಿಗಳಷ್ಟು ಹುಟ್ಟುವಳಿ ದೆ. ಬೆಂಗಳೂರು ದಂಡಿನ ಹುಟ್ಟುವಳಿಯಲ್ಲಿ ವೆಚ್ಚ ಶಿಲ್ಕು ಮೊಬಲಗು ಮೈಸೂರು ಸರ್ಕಾರಕ್ಕೆ ಸಲ್ಲು ಮೊಬಲಗೂ ಸಹ ಕಡಿಮೆಯಾಗುತ್ತಾ ಬರುವ ರುತ್ತಾ ಇವೆ. ಗಂಧದ ಎಣ್ಣೆಯ ಮಾರಾಟವು ಟ್ಟಿಗೆ ದೊರೆತರೆ ಅಷ್ಟುಮಟ್ಟಿಗೆ ಹೆಚ್ಚಾಗಿ ಸಹಿಯ ಕಾರಣ, ಇದರಿಂದ ಬರುವ ಹುಟ್ಟುವಳಿಯು ಸ್ಥಿರವಾ ; ಅದು ಆಗಾಗ ಹೆಚ್ಚು ಕಡಿಮೆಯಾಗುತ್ತಲೇ ಇರು ಕೆಲಸಗಳು ಪೂರೈಸಿವೆ ; ಆದಕಾರಣ, ಇನ್ನು ಕೆಲವು ನಕಂದಾಯದಿಂದ ಬರುವ ಹುಟ್ಟುವಳಿಯು ಅದರ ಕ್ಕೆ ಏರಿಹೋಗಿವೆ. ಇದೂ ಅಲ್ಲದೆ, ಈ ಬಾಬಿನ ತವಾಗಿ ನಿಲ್ಲದ ಕಾಲಸ್ಥಿತಿಗಳ ಸ್ವಭಾವವನ್ನನುಸರಿಸಿ ಡಿಮೆಯಾಗುತ್ತದೆ.

ಸಂಬಂಧಪಟ್ಟ ಹುಟ್ಟುವಳಿಯ ಬಾಬುಗಳ ಪೈಕಿ, ತಕೊಡಬೇಕೆಂದು ಕೋರಲು ಅರ್ಹವಾದ ಬಾಬು ಮಾತ್ರವೇ ಇವೆ. ಮುಂದಣಸಾಲಿನಿಂದ ರಿಲೀಫ್ ಜಾರಿಯಲ್ಲಿ ಬರುತ್ತದೆ. ಅದರ ಫಲವಾಗಿ ಹುಟ್ಟುವಳಿಯು ಬರುವುದೆಂದು ನಿರೀಕ್ಷಿಸಲಾಗಿದೆ. ರಿನ ಏದು ಸಾಲಿನ ಅಂದಾಜಿನಲ್ಲಿ ನಮೂದಿಸಿರುವುದಕ್ಕಿಂತಲೂ ೩ ಲಕ್ಷ ರೂಪಾಯಿಗಳಷ್ಟು ಹೆಚ್ಚು ಹುಟ್ಟುವಳಿಯು ಮುಂದಣಸಾಲಿನಲ್ಲಿ ಬರಬಹುದೆಂಬುದಾಗಿ ನಿರೀಕ್ಷಿಸಲಾಗಿದೆ. [illegible]

ಶ್ರೀ:

ಶ್ರೀ ಗಣೇಶಾಯ ನಮಃ:

[illegible]

श्रीशारदा

प्रतिपक्षं चतुर्थ्यामियं पत्रिका प्रकाश्यते

सनातनधर्म संस्कृतभाषाविषयप्रतिपादका विशेषेणायुर्वेदविमर्शका लेखाः प्रकटीक्रियन्ते।

संस्कृतभाषायामियमेकैव निखिलभारतेषु वरीवृत्यत इदृग्विषयप्रतिपादिका पत्रिका ॥

संपादकः— आयुर्वेदकलाविभूषणं विद्वान्. शेषशास्त्री, श्री बालवाणी इत्यादिः, — शृङ्गेरि. (मैसूर संस्थानम्.)

द्वितीयवर्षस्य] १८४९ श्री प्रभव संवत्सर ज्येष्ठ शुक्ल चतुर्थ्यां भृगुवासरे शृङ्गगिरितः ता. ३-६-'२७. [संचिका १७

ॐ

॥ श्री गरुडध्वजाय नमः ॥

धन्वन्तरिरुवाच-

(पूर्वतोनुवृत्तम्)

आर्द्रान्नयेस्तः पीनस्यात्कठिनोदुर्जरो गुरुः ।
स्वात्यर्तेऽङ्कुरितः श्वेतो राजाहमधुरोलघुः ॥ ५ ॥
युक्त्या भ्रष्टायावनालालाजा इति हि विश्रुताः ।
मल्लीप्रसूनसदृशाः चर्वणे बलपुष्टिदाः ॥ ६ ॥
लाजापिष्टं च चालन्या शोधितं शर्करानिभम् ।
गरुडानां हितं शुद्धं गायत्री सदृशं भुवि ॥ ७ ॥
विश्वामित्रस्य सम्बन्धाच्चूर्णं सकलसम्मतम् ।
नानानुपानयोगेन तेजोवर्धनमुत्तमम् ॥ ८ ॥
पलं गरुडचूर्णस्य तावच्छर्करया युतम् ।
शुध्याचूर्णं माषमात्रं घृतमर्धपलं स्मृतम् ॥ ९ ॥
पर्याप्तसक्षीरेण मर्दितं मोदकाकृतिम् ।
प्रातःकाले भक्षितंचेत् शान्तिं पुष्टिंच गच्छति ॥१०॥
अनेन दध्ना मथितेन वापि तक्रेण वा पिष्टमिदं वि-
लोडितम् । किंचिच्चसिन्धूत्थरजोविमिश्रं मह हृ-
काले मधुरं च हृद्यम् ॥ ११ ॥
नालिकेरस्य सारेण हिंगुना लवणेन च ।
आम्रमारीचचूर्णेन कुस्तुंबरुदलैस्समम् ॥ १२ ॥
जंबीररसघृष्टंच व्यञ्जनं 'चट्णि' संज्ञितम् ।
इदं गरुडचूर्णस्य सौभाग्यायैव कुंकुमम् ॥ १३ ॥
रात्रौ श्रीगरुडोपेतमाज्ययुक्तं सुखोत्तरम् ।
पित्तघ्नंशान्तिदं निद्रासाहाय्यकमुदाहृतम् ॥ १४ ॥
लाजापिष्टं त्रिदोषघ्नं पीतं कांचिकसन्निभम् ।
खण्डशर्करयायुक्तं सोष्णं च स्वेदने ज्वरे ॥ १५ ॥

आश्विनेयौ-

येषां हितमिदं चूर्णं के ते गरुडनामकाः ।
गरुडः पन्नगाधीशो विष्णुं वाह इति प्रथा ॥ १६ ॥

सस्मितं धन्वन्तरिः -

मा शंकां कुरुतादत्र गरुडो विधवा स्मृता ।

साश्चर्यमाश्विनेयौ-

विधवावाचकः शब्दो गरुडो न श्रुतः पुरा ॥ १७ ॥

धन्वन्तरिः -

दाक्षिणात्यैर्द्विजश्रेष्ठैः शब्दोऽयं रचितो हृदा ।
वीनां धवस्तुगरुड विधवा वीतभर्तृका ॥ १८ ॥
अतोऽस्या गरुडत्वं च शब्दसाम्येन निर्मितम् ।
गोविंदे च परां भक्तिं स्वातन्त्र्यं सर्वतोमुखम् ॥ १९ ॥
वीक्ष्य विप्रैर्विनोदार्थं शिखण्डीशब्दवत्कृतः ।
इदं गरुडचूर्णं च कलौ कल्पतरुः स्मृतः ॥ २० ॥

इति श्री शशविषाणसंहितायां दस्त्रधन्वन्तरि
संवादे गरुडचूर्णप्रयोगः ।

वैद्यविनोद श्रीपुंडकोपाह्व
नरसिंहाचार्य शर्मा, कव्यानन्दः.

ಮೈಸೂರು ಸ್ಟಾರ್.

೧೯೨೭ ನೆಯ ಇಸವಿ ಜೂನ್ ತಾ|| ೧೯ ನೆಯ ಶನಿವಾರ.

THE DEWAN'S ADDRESS.

Sympathy, sincerety and are the striking characteristic address delivered by the New D session he presided over after as his high office. He struck a a manner which was singularly l platitude. It was essentially action and not words. He assur the policy of the Government has always been to devote all i powers to the advancement of directions material, moral and i spiritual, and that those aims a not suffer dimunition at his hands in putting the economic question most of all questions. It was o yet as he said the most neglected production and use of the neces he assured them that improvem methods of agricultural produc dustrial enterprise and trade woul by the Government. As regards unemployment he suggested the greater prosperity will cause a na employment—and as a measure f the State would consider the various works on hand—works necessarily be merely utilitarian be beautiful. Another very sign the State needs—a much neglecte which he emphasised was in regar and sanitary conditions of our tow which commanded neither com health. This again could only more earning capacity and the the development of handicraf industries. Speaking of political said by patient work and grad adjustment, the political system m in the light of Indian tradition, of ments in India and elsewhere and circumstances of Mysore. Of the budget estimates it is needless The most noteworthy portion of th to the need for administrative effi Dewan's remarks in this connecti to be noted by all administrators, excuse for quoting some of them h work must be cut down, and r work must be increased in all p have every assurance that the Government will co-operate who reducing unnecessary corresponden things done by prompt personal a generally complained that we India earn a name for business like hab tious disposal of papers." W policy and the subjects of His be ever grateful if the New Dewan this necessary Reform. We ha with red-tapism and correspondence to the House to exert themselves in every direction in order to mai name of the State, to raise its and to add to its renown as a progressive movements. The Dew fully conscious of his relationship w ness the Maharaja and it was a co when he said that His Highness' a service as he may render the S mount worth to him and it could o by patient labour for the prosperity ness of the people of Mysore. Nee doubt that the *regime* of such a s be anything but a success? Right on the fortunate position of the S in the nobility and wisdom of it character and homogeniety of its vast mineral and other resources. He did not take it as an individual effort of his but as one which could only be possible through the sympathy and the support of the House, a matter which will be given to him in full. He wanted the maintenance of an absolute purity and nobility of policy and word in creating sound traditions for the

House and working for the State, and told them that any one amongst them, including himself, who sought to use the Assembly for purposes narrower than the universal service of the State would dishonour his office. These are sentiments which must strike a sympathetic echo in the heart of

---

"श्री शारदा"

१८४९ प्रभव सं. ज्येष्ठ शुक्ल ४ भृगुवासरे.

॥ श्री गणेशाय नमः ॥

गजवदनमचिन्त्यं तीक्ष्णदंष्ट्रं त्रिणेत्रम् ।
बृहदुदरमशेषं भूतिराजं पुराणम् ॥
अमरवरसुपूज्यं रक्तवर्णं सुरेशं ।
पशुपतिसुतमीशं विघ्नराजं नमामि ॥ १ ॥
चतुर्मुखमुखाम्भोजवनहंसवधूर्मम ।
मानसे रमतां नित्यं सर्वशुक्ला सरस्वती ॥ २ ॥

॥ देशीयवैद्यचिकित्सा ॥

मधुरानगरे सिद्धवैद्यमहासभा श्रीमतां मद्रास राजकीयमन्त्रिणां, आरोग्यस्वामिमोदलियास्महाशयानामध्यक्षतायां प्रावर्तत । अध्यक्षकानामुपन्यासस्सर्वादरणीयोवरीवृत्तते । देशीयचिकित्सादरणं प्रधानराजकीयाधिकारिभिरपि समाकल्पत इत्यभिमानास्पदोऽयं विषयः । वैद्यसाहाय्यदानाय ग्रामेष्वांग्लवैद्यनियमनं नातीव फलकरं । ग्रामेषु वैद्यसाहायप्रयत्नः साधु न कृतइति मन्त्रिणो वदन्ति । 'अलोपति' वैद्यपद्धतिर्विपुलधनैकसाध्या । जनतायामद्याप्यायुर्वेदाभिमानो नगलितः । संप्रति पाश्चात्यवैद्यप्रयोजनमल्पसंख्याकैरेव लभ्यते । यावज्जनस्वयमलोपतिचिकित्सा दुर्लभैव । तद्वैद्याभ्युदयप्रमाणमपि स्वावधिमधिगतमेव । देशीयवैद्यविधानावलम्बनं न केवलमभिमानास्पदम् । सर्वथाहीदं चिराय सर्वत्र दृष्टफलकम् ।

पाश्चात्यवैद्यचिकित्साविधानमेकैकस्य रोगिणः कृते द्वादशाणकाः व्ययीभवन्ति । आयुर्वेदचिकित्साव्ययास्त्वैकाणकाररिमित एव भवन्ति । ग्रामेषु यदि वैद्यसहायं सफलं राजकीयादिदिच्छन्ति तर्ह्यायुर्वेदवैद्यविधानावलम्बनमेव वरम् । मद्रास् नगरस्थापित देशीय वैद्यपाठशाला विशपतञ्छात्रान्समाकर्षति । एतत्पाठशालानुबन्धि चिकित्सालयोपि जनता स्वपारहितमाधत्ते इत्थमन्यत्राऽपि देशीयवैद्यचिकित्साशालाः महोपकारका विराजन्ते । देशीयवैद्यविद्याठ्या ग्रंथा प्रवर्धन्तां तथा तथालोपति वैद्यपाठशालानां ह्रासो करणीय एवेति मन्त्रिणोभिप्रयन्ति । देशीयवैद्याभ्युदयकल्याणवासराः प्रादुर्भवन्ति । अद्य हि वै विद्यार्थिभिः प्राक्तनवैद्यशास्त्रविज्ञानार्जनं परिश्रमेण संपादनीयम् । देशीयवैद्यशास्त्रस्यालोपतिवैद्यनयेन सहैकदेशाध्ययनं न किमपि फलं संसाधयेत् । संप्रत्यपि केचनांग्लविद्याधिकाः देशीयौषधानि परं श्लाघ्यानि प्राक्तनरोगान्वेषणपद्धतिस्तु न श्रेयस्करीति शुकवत् गिरन्ति । इमे तु त्रिदोषपद्धतिं यथाशास्त्रं नाधीयन्ते । अतश्च तत्वावबोध एतेषां नैव जायते । रोगलक्षणानि भिन्नभिन्नान्यपि रोगकारणमेकमेवेति । रोगलक्षणापनयनापेक्षया तन्निदानानिवारणमेव श्रेयस्करमिति च देशीयवैद्यशास्त्राणि प्रख्यापयन्ति । नाडीपरीक्षया यन्त्राविदित (Tharmameter) विषयाः विज्ञायन्ते । देशीयवैद्यावलिलम्बयिषवो विद्यार्थिनः स्वस्वशास्त्रीय संप्रदायहानं न स्वीकुर्युः । देशीयवैद्यपद्धतयस्तु केवलैहिक शारीरज्ञानाभिवृद्धौ न पर्यवस्यन्ति । किन्तु, शाश्वतसत्यमार्ग मवबोधयन्ति । अतश्च देशीयवैद्यशास्त्राण्याधुनिकशास्त्रज्ञाना नुकूलानि न सन्तीति ये तु कुतर्कयन्ति तेषां नेत्रनिमील भारतवैद्यपुङ्गवाः कारयेयुरिति सूचयामः ।

॥ विधवाविवाहः ॥

सनातनधर्मावलम्बिभिर्विधवाविवाहो महापातकत्व गृह्यत इति सुप्रसिद्धमेतत् । सर्वास्वपि स्मृतिषु निन्द्यो विधवाविवाहः । पूर्वं भारते मृतभर्तृकयाः पुनर्विवाहस्य ना माऽपि नाभूत् । आपदि देवरेण सुतोत्पादनमात्रं अनुष्ठितम दितीतिहासेनावगम्यते । तदपि धर्मशास्त्रकारैः कलौ निषिद्धम कतिपयवर्षेभ्यः पूर्वं दक्षिणभारते विधवा पुनर्विवाहश्शास्त्री इति केनापि महाशयेन तदभिमानिना कोऽपि वादस्समुत्था पितस्तदात्वेधर्माभिमानिभिः महद्भिः समूलखातं विनाशि श्चाभूत् । उत्तरभारतत्वेत्वार्यसमाजिभिः तत्र तत्र प्रचारे क्रि माणेपि सनातनधर्मावलम्बिभिः खण्ड्यमानएवाभूदयम अद्य पुनः उत्तरभारते विधवाविवाहः केश्चित्कृत इति महान् लाहलस्समुत्पन्नो दृश्यते । वृत्तान्तपत्रिकासु विधवाविवाह मण्डन खण्डनञ्च कुर्वन्तो लेखा इदानीं प्रकाश्यमाना दृश्यन्ते कालः कलिः । सर्वेपि यथेच्छाचरणे प्रायः प्रवर्तमाना दृश्यन्ते ऐहलौकिकं सुखमेव केवलमभीष्टं जनानामिदानीम् । अ मवस्थायामेतादृशेषु कर्मसु प्रवृत्तिर्जनानां स्वाभाविक्येव । न्यानयस्वेच्छाचारत्वद्वयमपि कश्चिदिति भावयन्तस्तु त तिष्ठन्ति ।

❖

॥ श्री कामकोटिजगद्गुरुमठीयशासनानि ॥

(पूर्वतोनुवृत्तम्)

विज[य]नगरमध्ये रत्नसिंहासनस्थः जयति भुवि[स] वीरशीनसिंहक्षितीन्द्रः । नृगनहुषययाति–नन्दय[न]भूसु णाणां सुरतरुविभोगः पुण्यकीर्तिप्रतापः । **शकाब्देशालिवाहनस्य सहस्रेभ्यश्च तुदृश–तैः । एकोनत्रिंशतानागण्ये शङ्कुनामानि वत्सरे विख्याते मासि माघा ख्ये पुण्यकाले महोदये तुंगभद्रानदीतीरे** श्री विरूपाक्षसन्निधौ । परहंसपरिव्राजका[या] [स्या]य मुमुक्षवे । भस्मोद्धूलितगात्राय रुद्राक्षावलिधारिणे शीतोष्णादि द्वंद्व[दुं] दुःखव्यतीताय महात्मने । समस्तम्नान्तपाथोधिपारगाय तपस्विने । ष्टांगयोगयुक्ताय दयाशीलाय धमते सदा शिवसरस्वत्यैशिष्ययामिततेजसे महे[दे]व सरस्वतीगुरवे शिवरूपिणे ।

मण्डले जयचोळस्य पडवीडुसुराज्यककाञ्चिनाडुसमा–युक्तं वलका[ट्] रुसीमनि । वभावं०पत्तुनागुक्तं कालियुरुकोट्टुसन्वनितं । कलकाट्टूरुसुग्राम [दक्षिण]स्यां दिशि स्थितं । शुरिट्टिलूरुमहाग्रामाप्रतीच्यान्दिशिमाश्रितं । शित्तेलेपाक्कसुग्रामदुत्तरस्यादि–शिस्तितं कृ[तं] तांगलुग्रमापुत्रस्यां दिशिमु आश्रितं । नाळिकेरा–म्रपनशताळहिन्ताळशोभितं । सर्व[स]स्य [स]मृद्ध्या च राजम नं शुभान्वितं । कुडियां तण्डलाख्यातं ग्राम नं प्रदत्तवायिदम[हि]तनपाणामौलिराजकि[री]टस्फुरितमणिगणानां का[न्ति]नीराजतांघ्रिः । लसतमनवयश्च शासनं म्प्रपात्रं जयतु भुवनसोमिश्रिन्नसिंहक्षितिंद्रः । मल्लणाशारिपुत्रेण रणाशारिसंहिता । लिखितं लब्ध[वि][धे]न तदिदं ताम्रशासनं । दानपालनयोर्मध्ये दानाश्रेयोनुपालनं । दानास्वर्ग वाप्नोति पालनादच्युतं पदं । श्रीविरूपाक्ष

(केचन शब्दा असाधवश्शासन एव वर्तन्त इति नास्माभिःसुला विताः । विद्वद्भिः परिशोध्य शासनं पठनीयम् । संपादकः)

॥ सानन्दस्वीकारः ॥

अष्टाङ्गसंग्रहःसटीकः– इन्दुव्याख्यासहितोष्टाङ्गसंग्र ऽस्मच्छारदाकार्यस्थानमलंकुरुते । पुस्तकमिदमशेषविदुषा युर्वेदबुभुत्सूनामतीवोपयुक्तमित्यत्र न विषयावसरः । पुस्तक दं भागत्रयात्मकम् । मौल्यञ्च १५ रूप्यकाणि । गोश्री यमुद्रणालये सुन्दरदेवनागराक्षरैर्मुद्रितमास्तेव्याख्या च नोज्ञा, सुबोधा वरीवृत्तते । ईदृक्पुस्तकप्रकाशकानां सर्वेऽपि ज्ञः कृतज्ञा भवेयुः । पुस्तकमिदमखिलभारतवर्षीयायुर्वेद्यापीठस्य विशारदाचार्यपरीक्षयोः पाठ्यत्वेन निक्षेपणीयविति सुस्पष्टं ब्रूमः । सर्वेपि वैद्यविद्वांसोऽस्य पुस्तकस्य ग्राहका युरिति विश्वसिमः जिघृक्षवो मुखविलासस्य "The langa-to-dayam Press, *Trichur*, Cochin tate" पत्रं प्रेषयेयुः ।

भविष्यसिद्धान्तः– पुस्तकमिदं "ज्योतिर्भूषण"पत्रिकासंपादकैः ज्योतिषरत्नादि बिरुदाङ्कित पण्डित, रघुनाथशास्त्री, पटवर्धनमहाशयैः लिखितं प्रकाशितञ्च विलसति । एतत्पण्डितमहाशयानां गणितविज्ञानसामर्थ्यमद्भुतमास्ते । विषयाश्च सर्वे बहुपरिश्रमेण समाकलिताः । विदुषामेषां परिश्रमं प्रकाममभिनन्दामः । अत्र च हर्शेल्, नेप्चून् नामकं नवग्रहातिरिक्तग्रहद्वयं स्वीकृत्य बहुधा प्रपञ्चितम् । बहवो ज्योतिर्विदो नानुमन्यन्ते पृथग्ग्रहद्वयस्वीकरणम् । अपि तु भविष्यफलसिद्धान्तप्रत्यक्षीकरणेन विषयोऽयं निर्धारणीयः । सांप्रतिकपरिस्थितौ ज्योतिर्विषयपरिशीलनाय पुस्तकमिदमतीवोपयुक्तमिति सुस्पष्टं सुदृढं प्रतिजानीमः । ज्योतिर्विदो ज्योतिषाभिमानिनश्च सर्वे पुस्तकमिदं समाकलयेयुरिति विश्वसिमः । विजिज्ञासवो 'Sampa-daka Jyotirbhushana Office Budhawarpet, Poono City' इति मुखविलासस्य विलिख्य त्वस्वीकुर्युरिति सानन्दमावेदयामः ।

॥ लिप्युत्कर्षप्रसंगः ॥

भारतीयभाषाणां सर्वासामपि उर्दुलिपिरेव आत्यन्तिकमौचित्यमात्रहतीति श्रीमतो गान्धिमहाशयस्य सिद्धान्तमादरानर्हमभिसन्दधाना'सोषलरिफार्मर' पत्रिका प्रकाशयतीत्थम् ।

सर्वाण्यपि लिपिजातान्यनादृत्य उर्दुलिपीनामेव सर्वोत्कर्षं स्थापयतो गान्धिमहाशयस्याऽशयमनुरोद्धुं न तावदिच्छामो वयम् । निर्मूलकएवायमस्य सिद्धान्त इति वयं व्यक्तं व्याहर्तुमीश्महे । उर्दुलिपीनां वैखरीतु कदाचिदस्माभिः परीक्षिताऽभूत् । न तत्र गुणभूयस्त्वं वयमुदपश्याम । देवनागराक्षमेव सर्वथा सर्वोत्कृष्टपदभागितामर्हतीति निश्चयमभिदध्महे । भूयसीनां देशीयभाषाणामक्षराण्यपि देवनागराक्षरप्रकृतिकान्येवेति निरूपकानि ध्यायन्ति । सर्वा अपि भाषा देवनागरलिपिभिरनायासमेव लेखनीया भवन्ति । उर्दुलिपीनामीदृशीशक्तिरस्ति नवेति तदक्षरप्रणालीपरीक्षकावेलुमलंभविष्णव इति न तत्रास्माकं आयासदृष्टः मितंपचमतीनां जनानां तदलिप्युत्कर्षप्रसंगं व्याचक्षाणस्य गान्धिमहाशयस्य हृदयगूढमभिसन्धिं न वयमवबुध्यामहे । विवेचकवरेण्यास्तु देवनागरलिपीनामेव सर्वात्मना प्राधान्यमाद्रियेरन्निलाषामहे नितरां ॥

'इति'

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜೂನ್ ತಾ|| ೧೯ ನೆಯ ಶನಿವಾರ.

THE DEWAN'S ADDRESS.

Sympathy, sincerety and
are the striking characteristic
address delivered by the New D
session he presided over after as
his high office. He struck a
a manner which was singularly li
platitude. It was essentially
action and not words. He assur
the policy of the Government c
has always been to devote all i
powers to the advancement of
directions material, moral and i
spiritual, and that those aims a
not suffer dimunition at his hands
in putting the economic question
most of all questions. It was o
yet as he said the most neglected
production and use of the neces
he assured them that improvem
methods of agricultural produ
dustrial enterprise and trade woul
by the Government. As regards
unemployment he suggested the
greater prosperity will cause a na
employment—and as a measure f
the State would consider the
various works on hand—works
necessarily be merely utilitarian
be beautiful. Another very sig
the State needs—a much neglect
which he emphasised was in rega
and sanitary conditions of our tov
which commanded neither co
health. This again could only
more earning capacity and the
the development of handicraf
industries. Speaking of political
said by patient work and grad
adjustment, the political system m
in the light of Indian tradition, of
ments in India and elsewhere and
circumstances of Mysore. Of the
budget estimates it is needless
The most noteworthy portion of th
to the need for administrative effi
Dewan's remarks in this connectio
to be noted by all administrators, e
excuse for quoting some of them h
work must be cut down, and re
work must be increased in all p
have every assurance that the
Government will co-operate who
reducing unnecessary corresponden
things done by prompt personal a
generally complained that we India
earn a name for business like hab
tious disposal of papers." W
policy and the subjects of His H
be ever grateful if the New Dewan
this necessary Reform. We hav
with red-tapism and correspondence
to the House to exert themselves
in every direction in order to mai
name of the State, to raise its
and to add to its renown as a
progressive movements. The Dev
fully conscious of his relationship w
ness the Maharaja and it was a cor
when he said that His Highness' a
service as he may render the S
mount worth to him and it could o
by patient labour for the prosperity
ness of the people of Mysore. Nee
doubt that the *regime* of such a s
be anything but a success? Righ
on the fortunate position of the S
in the nobility and wisdom of
character and homogeniety of its
vast mineral and other resources. He did not take it as an individual effort of his but as one which could only be possible through the sympathy and the support of the House, a matter which will be given to him in full. He wanted the maintenance of an absolute purity and nobility of policy and word in creating sound traditions for the House and working for the State, and told them that any one amongst them, including himself, who sought to use the Assembly for purposes narrower than the universal service of the State would dishonour his office. These are sentiments which must strike a sympathetic echo in the heart of

ದುದರಿಂದ ದೇಶಾಯ, ಶೃಂಗಾರಿಕೆ ಮತ್ತು ವ್ಯಾಪಾರಾಭಿವೃದ್ಧಿ ಸಾಧನೋಪಾಯಗಳಿಗೆ ಪ್ರಭುತ್ವದವರಿಂದ ದೊರಕಾದ ಸಹಾಯವೆಲ್ಲವೂ ದೊರೆಯುವುದೆಂದು ಅಧಿವಚನವನ್ನಿತ್ತಿರುವರು. ಜನರಿಗೆ ಸಾಕಷ್ಟು ಉದ್ಯೋಗವು ದೊರೆಯುತ್ತಿಲ್ಲವೆಂಬುದರಮೇಲೆ ಆಂದೋಳನವೆದ್ದಿರುವುದಷ್ಟೆ. ಇದಕ್ಕೆ ವಿಶೇಷ ಸಂಪದಭಿವೃದ್ಧಿಯಾಗಿ ಜನಗಳ ಉದ್ಯೋಗವು ಸ್ವಭಾವವಾಗಿ ಹೆಚ್ಚುವುದೇ

ತಕ್ಕ ನಿವಾರಣೋಪಾಯವೆಂದೂ, ಈಗ ಕೈಕೊಂಡಿರುವ ಉಪಯುಕ್ತವೂ, ಸಲಕ್ಷಣವೂ ಆದ ಕಾರ್ಯಗಳನ್ನು ಪೂರೈಸುವ ವಿಚಾರವು ಪ್ರಭುತ್ವದವರ ಪರ್ಯಾಲೋಚನೆಯಲ್ಲಿರುತ್ತದೆಂದೂ ಅಪ್ಪಣೆಕೊಡಿಸಿರುವರು. ಅನುಕೂಲ್ಯವೂ, ಆರೋಗ್ಯವೂ ಇಲದಿರುವ ನಮ್ಮ ದೇಶದ ಸಣ್ಣ [illegible]ಗಳ ಮತ್ತು

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ಈಚೆ ಬಿಹಾರ ಮಹಾರಾಣಿಯವರು ತಾ|| 16 ರಲ್ಲೂ, ಬ್ರಿಟಿಷ್ ರೆಸಿಡೆಂಟರು ತಾ|| 17 ರಲ್ಲೂ ಮದ್ರಾಸ್ ಗೌರ್ನರ್ ದಂಪತಿಗಳು ತಾ|| 18 ರಲ್ಲೂ ಬಂದರು. ಇವರುಗಳ ಮುಖ್ಯ[illegible]ವಾಗಿ 13-13-19 ಗುಂಡುಗಳು ಹಾರಿಸಲ್ಪಟ್ಟುವು.

॥ आयुर्वेदीयानि मूलतत्त्वानि ॥

(कफपित्तानिलास्त्रिदोषाः पञ्च कर्मानुबन्धश्च)

अमरावतीवास्तव्यैः पंडित पुरुषोत्तमशास्त्री हिर्लेकर महाशयैः —

(पूर्वतोनुवृत्तम्)

प्रसरणावस्थायां ग्रहणं पोषकाणां सकोचावस्थायां च मलोत्सर्जनं बहिस्तथा शुद्धो धातोरन्यस्मिन्धातौ प्रक्षेपणं तत्पोषणाय च नित्यशरीरस्वभावात् । अनेनैव स्वभावेन पुष्यते सदा शरीरम् । विकृतादाहाररसा दोषानुबन्धेन विकृतिमापद्यमानाः शरीरविभागाः । नैतत्स्वाभाविकं कर्म यथावत्संपादयन्ति । विकारिणश्च ततो भवन्ति । धातुस्रोतस्सु विलीना दोषाः प्रथमं स्वभावसामर्थ्यादपि अविपक्वाः सन्तो पुनर्नायान्ति स्वाशयांप्रति । कदाचिदल्पत्वाच्च शमनोपायैः संशम्यन्ते । अतिवृद्धास्तु शोधनीया एव शोधनैर्वमनादिभिः । कालवशाद्विपाकोपायैश्च विपक्वाः स्नेहनात्संछिन्नाः स्वेदनाच्च शिथिला द्रवीभूता वा सूक्ष्मसूक्ष्मेभ्यो धातुस्रोतोभ्यो विमुक्ताः स्वाशयागमनादनन्तरं शोधनैर्यथामार्गं बहिरुत्सृष्टा विनाशमापद्यन्ते । स्नेहनस्वेदनोपयोगश्चावश्यं करणीयः । अपक्वाः स्रोतोविलीनाश्च कदाचिदपि न विशोधनीयाः । यतो लीनत्वात्प्रयुक्तेन शोधनेन नैषां ह्रासनं किन्तु भैषज्यप्रभावात्प्रक्षुब्धा धातवः पुनर्विपद्यन्त एव । दोषाणां प्रतिनिवृत्त्यर्थं वृद्धिः, अभिष्यन्दः शैथिल्यं द्रवत्वं वा विपाकः । वायोश्च प्रतिमार्गानयनं तथा स्नेहनस्वेदने चैतानि साधनानि सन्ति । यदुक्तं—'वृध्याभिष्यन्दनात्पाकात्कोष्ठं वायोश्च निग्रहात् । (अ. हृ) एवं विपाकात्तथा स्नेहनक्लेदनात्स्वेदनद्रवत्वाच्च वियुक्ता धातुभ्यस्तेऽवश्यं शोधनीया भवन्त्यारोग्याकांक्षिभिः ।

यथा पक्वमानाशयात् प्रकुपितं पित्तं रसमनुप्राप्य ज्वरं निर्वर्तयति । तरुणज्वरे पित्तस्य विलीनत्वात् धातुषु पित्तशमनं विरेचनं नोपयुज्यते ज्वरचिकित्सायाम् । लंघनपाचनादिना षडहोपलक्षितेन कालेन वा विपाचितं पुनः पक्वमानाशयप्राप्तं विरेचने नोपक्रमणीयम् । अत उक्तं ज्वरान्ते रेचनमिति प्रयुक्तं तरुणज्वरे विरेचनं धातुलीनं पित्तमनिर्हरन् पक्वामाशयादधिकं प्रस्राव्य रसस्रोतोनिरोधादुन्मार्गप्रवृत्तस्य ज्वरोत्पादकस्य पित्तस्य सहायतां प्राप्य ज्वरं ज्वरोपद्रवांश्च वर्धयति । अतः प्रागेव शोधनादामपक्वान्वेषणं करणीयम् । प्रतिरोगं पक्वानां दोषाणां ह्रासने शोधनं स्थानभेदादनेकधा प्रविभक्तमानत्वं याति । नेत्राभ्यामश्रुमार्गेण, रसात्स्वेदद्वारेण, नस्तः श्लेष्मद्वारेण रक्तात् सिरावेधजलौकाद्युपयोगात् रुधिरस्रावेण, व्रणादिभ्यश्च पूयास्रावणेनेत्यादि । स्थूलतया प्राधान्याच्च वमनविरेचनबस्तीनां प्राधान्यं रोगानेकमूलभूतस्य त्रिदोषप्रकोपस्योच्छेदात् ।

एषां वमनादीनां मध्ये वमनं विरेचनं च साक्षात् स्थूल
स्वरूपस्य श्लेष्मणः पित्तस्य च कुपितस्य ह्रासनं वर्धनाभावश्
स्तुभयथा संशमनाय । धातुप्रभ्रष्टौ कफपित्तदोषौ यदा रोगा
नुत्पादयतस्तदा तद्विकारशान्तै वमनविरेचनोपयोगो निर्दि
ष्टएव । विद्रध्यर्बुदग्रो विसर्पकुष्ठादयश्च कफपित्तकृता विकाराः
केवल संशोधनेन न नश्येयुः । तत्तद्विकारप्रत्यनीकचिकित्सा
नामोपयोजनीया । शोधनात् कोष्ठशुद्धौ कफपित्तयोरपुनर्भा
वात् प्रागुत्पन्नाः प्रशमं यान्ति विकाराः । आशयस्थाश्च वि
नाशमुपयान्ति । वातव्याधयस्तु सूक्ष्मपरमाणुसमुदायस्वरूपेणा
रब्धाः । धातुक्षयाच्च वातवृद्धिः । अतश्च वातचिकित्साय
बृंहणोपायाएवोपयोजनीया भवन्ति नैवात्र किञ्चिदपि ह्रा
सनं उपयुज्यते । प्रकाशय प्रकुपितेन वायुना वृद्धगतित्वा
द्विषयगतित्वाद्वा जनिताऽनेके व्याधयः पक्वाशयशोधनादूर्ध्वगानु
लोम्याद्विनिवार्याः । वायोश्चिकित्सा नाम बृंहणं धातूनां स्वे
च वायोः क्षपणम् । गतेरानुलोम्यश्च बस्तिना निरूहान्वास
नोभयरूपेणैतत् कार्यद्वितयं संपाद्यते । अतो विमार्गप्राप्त
वायुना समारब्धाः सर्वे विकारासाकल्येन बस्तिसाध्या भ
न्ति । विशेषश्चात्र धातुक्षय प्रकुपितेन मरुता समुत्पन्ना
व्याधीनां शान्त्यर्थं बस्तिविधिं विहायापि बृंहणं धातूनां श्रेयः
इतरेषां कोष्ठाश्रयाणां च बस्तिः ।

- सशेषः

सूचना.

श्री शारदायाः द्वित्रिसंचिकाः किल तत्र भव
प्रेषिताः । येषां न प्रोत्साहनाभिलाषस्ते सकृपमावेदयेयुः
यैर्लेखनमुखेन न निवेद्यते न वयमभिलषाम इति "अप्रति
षिद्धमनुमतं भवती"ति न्यायेन श्रीमद्भ्यः पत्रिका वी. पी
मार्गेण प्रेष्येत । एनां स्वीकृत्य प्रोत्साहयेयुरित्याकलयामः ।

मूल्यम्—

भारते ब्रह्मदेशे सिंहलद्वीपे च वर्तमानैर्देयम्
वार्षिकं मूल्यं मार्गव्ययेन साकं २—८—०.
,, विद्यार्थिभिर्देयं ... १—८—०.
,, द्वीपांतरस्थैर्देयं ... ३—८—०
,, पोषकैर्देयं ... ५—०—०.

संपादकः—

"श्री शारदा" पत्रिका, शृङ्गेरि, (मैसूरराज्य
इति मुखविलासेन कार्या

प्रधान पोषकाः—

श्री, श्री, कामकोटिपीठाधीशाः श्री कुम्
कोणक्षेत्रस्थाः श्री, चन्द्रशेखरेन्द्रसरस्वत्या
श्री, श्री, जगद्गुरुशंकरभगवत्पादाचार्याः म
स्वामिनः

rinted by P. N. Prabhu, at the Prabhakara Press, Udipi, and published by Vidwan K. Shesha Shastri, Sringeri

---

ನಾಳೆಯ ಬೆಳಗಿನ 10-14 ಘಂಟೆಯಮೇಲೆ 10-40 ಘಂಟೆಯೊಳಗೆ ಸಲ್ಲುವ ಸಿಂಹಲಗ್ನ ವೃಷಭವಿಂಶಾಂಶಗಳಲ್ಲಿ ಮಹಾರಾಜಕುಮಾರೀ ಶ್ರೀ|| ಜಯಲಕ್ಷ್ಮಮ್ಮಣ್ಣಿಯವರ ಕುಮಾರಿ ಸೌ|| ಲೀಲಾವತಿಯವರಿಗೂ ಮ|| ಕೆ. ಬಸವರಾಜಅರಸಿನವರಿಗೂ ಪಾಣಿಗ್ರಹಣಮಹೋತ್ಸವವು ಕನ್ಯೆಯ ಸೋದರಮಾವಂದಿರಾದ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಜರುಗುವುದು. ವರನ ಉಪನಯನೋತ್ಸವವು ಕಳೆದ ಬುಧವಾರ ಜರುಗಿತು. ಈ ಮಹೋತ್ಸವವು ರಾಜಲೀಲೆಗೆ ತಕ್ಕಂತೆ ನಡೆಯಲು ತಕ್ಕೇರ್ಪಾಟಾಗಿರುತ್ತದೆ.

ಈ ಜೂನ್ ತಾ|| 12 ಕ್ಕೆ ಕಡೆಯಾದ ವಾರದಲ್ಲಿ ಸಂಸ್ಥಾನದ ಕೆಲ ಭಾಗಗಳಲ್ಲಿ ಮಳೆಯಾಗಿರುವುದರ ವಿವರ—ಕಾನಕಾನಹಳ್ಳಿ 6·33 ಅಂಗುಲ; ಚೆನ್ನಪಟ್ಟಣ 3·85 ಅಂಗುಲ; ಕಾಡ್ಗುಡಿ 2·48; ಸಿಡ್ಲಘಟ್ಟ 2; ಚಿಕ್ಕಬಳ್ಳಾಪುರ 1·99; ಇರಗಂಪಳ್ಳಿ 2·50; ಚಿಕ್ಕನಾಯಕನಹಳ್ಳಿ 3·20; ಕಡಬ 2 62; ಕಳ್ಳಂಬೆಳ್ಳ 3 54; ಮದ್ದೂರು 2·10; ಚೆನ್ನರಾಯಪಟ್ಟಣ 3 35; ಅರಸೀಕೆರೆ 2·86; ಹಳೇಬೀಡು 3·75; ಶಿವಮೊಗ್ಗ 3·70; ಹೊನ್ನಾಳಿ 3·05; ಸೊರಬ 2 59; ಕಲ್ಲೂರುಕಟ್ಟೆ 6·21; ತರೀಕೆರೆ 2·23; ಹಿರಿಯೂರು 1·80 ಮತ್ತು ಹೊಸದುರ್ಗ 3·84 ಅಂಗುಲ ಮಳೆಯಾಗಿರುತ್ತದೆ

ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ಈಸಲ ಮಾಮೂಲುಮಾರ್ಗದಲ್ಲಿ ಹೊರಡದೆ ಕೋಟೆಯ ಉತ್ತರಬಾಗಿಲಿನಿಂದ ಹೊರಟು ದೊಡ್ಡಪೇಟೆಮಾರ್ಗವಾಗಿ ಸೆಂಟ್ರಲ್ ಪೋಲೀಸು ಸ್ಟೇಷನ್‌ವರೆಗೂ ಬಂದು ಅಲ್ಲಿಂದ ಬಲಕ್ಕೆ ತಿರುಗಿಕೊಂಡು ರೈಲ್ವೆಸ್ಟೇಷನ್ ರೋಡಿನಲ್ಲಿ ಪೂರ್ವಾಭಿಮುಖವಾಗಿ ಹೊರಟು ಪಶ್ಚಿಮದಿಕ್ಕಿನ ದ್ವಾರದಿಂದ ದೊಡ್ಡಬಂಗಲೆಗೆ ದಯೆಮಾಡಿಸಿ ಅಲ್ಲಿ ಸ್ಪೀಕರ ಮರ್ಯಾದೆಯನ್ನೂ ಅಂಗವಿನ್ಯಾಸವನ್ನೂ ಪರಾಮರ್ಶಿಸಿಕೊಂಡು ದಕ್ಷಿಣದ್ವಾರದಿಂದ ರಾಜಾಸಾಹೇಬರ ಬಂಗಲೆಯ ಪಕ್ಕದರೋಡಿನಲ್ಲಿ ಹೊರಟು ಹಾರ್ಡಿಂಜ್'ಸರ್ಕಲ್ಲಿನಲ್ಲಿ ಪಶ್ಚಿಮಕ್ಕೆ ತಿರುಗಿಕೊಂಡು ವಿದ್ಯುದ್ದೀಪದ ಮನೆಯ ಮುಂಗಡೆಯ ರಸ್ತೆಯಲ್ಲಿ ಸ್ಟ್ಯಾಚುಸ್ಕ್ವೇರ್‌ವರೆಗೂ ಬಂದು ಅಲ್ಲಿಂದ ಕೋಟೆಯ ಉತ್ತರದ್ವಾರದಿಂದ ಅರಮನೆಯನ್ನು ಸೇರುವುದಾಗಿ ತಿಳಿಯಬಂದಿದೆ.

ಹುಣಸೂರು ತಾ|| ರಾಮೇನಹಳ್ಳಿ ವಾಸಸ್ಥರಾದ ಆರೇನಹಳ್ಳಿಪಿರ್ಕಾ ಶಾನುಭೋಗ ಮ|| ಕೆ. ಗುರುದೇವರಾಧ್ಯರು ತಮ್ಮ ಮಗ 12 ವರ್ಷವಯಸ್ಸಿನ ಕೆ. ಗುರುದೇವಾರಾಧ್ಯನೆಂಬ ಹುಡುಗನು ಧರ್ಮಪ್ರಕಾಶ ಬನುಮಯ್ಯನವರ ಹೈಸ್ಕೂಲಿನಲ್ಲಿ ಓದುತ್ತಿದ್ದವನು ಈಗ್ಗೆ 15-16 ದಿವಸಗಳಲ್ಲಿ ಮನೆಯನ್ನು ಬಿಟ್ಟು ಹೋಗಿರುವನು. ಇವನು ಮಟ್ಟತರವಾಗಿಯೂ, ಕೆಂಪುಬಣ್ಣ ಮತ್ತು ಗುಂಡುಮುಖವುಳ್ಳವನಾಗಿಯೂ ಇರುವನಲ್ಲದೆ ಕಪ್ಪುಚಕ್ಕಿನಕೋಟನ್ನೂ, ಫೆಲ್ಟ್‌ಕ್ಯಾಪನ್ನೂ ಇಟ್ಟುಕೊಂಡು ನಿಕ್ಕರಿನಮೇಲೆ ಪಂಚೆಯಲುಂಗಿಯನ್ನು ಸುತ್ತಿಕೊಂಡಿರುತ್ತಾನೆ, ಮತ್ತು ಕಿವಿಗಳಿಗೆ ಚಿನ್ನದಟಟ್ಟುಗಳನ್ನಿಟ್ಟುಕೊಂಡಿರುತ್ತಾನೆ. ಇವನನ್ನು ಕಂಡವರಾರಾದರೂ ದಯೆಯಿಟ್ಟು ಮೇಲ್ಕಂಡ ತಮ್ಮ ವಿಳಾಸಕ್ಕೆ ಬರೆದಲ್ಲಿ ಅವರನ್ನು ತಾವು ಬಹಳವಾಗಿ ವಂದಿಸುವುದಲ್ಲದೆ ಅವರಿಗೆ ಬಹುಮಾನವನ್ನು ಸಹ ಕೊಡುವುದಾಗಿ ತಿಳಿಸಿರುತ್ತಾರೆ.

ಕಳೆದ ಸೋಮವಾರ ಆರಂಭವಾದ ಪ್ರಜಾಪ್ರತಿನಿಧಿ ಸಭಾಧಿವೇಶನವು ಪ್ರತಿದಿನ ಸಾಯಂಕಾಲ 5-5½ ಗಂಟೆಯವರೆಗೂ ನಡೆಯುತ್ತಿದ್ದು ಈ ದಿವಸ ಮುಕ್ತಾಯವಾಗುವುದು. ಬರುವ ಮಂಗಳವಾರ ನ್ಯಾಯವಿಧಾಯಕ ಸಭಾಧಿವೇಶನವು ಜಗನ್ಮೋಹನಬಂಗಲೆಯ ಸಭಾಂಗಣದಲ್ಲಿ ಪ್ರಾರಂಭವಾಗಿ 3-4 ದಿನಗಳವರೆಗೆ ನಡೆಯುವುದಾಗಿದೆ. ಮಿ|| ಮಿರ್ಜಾಯವರಿಗೆ ಬಹಿರಂಗಸಭೆಯಲ್ಲಿ ಮಾತನಾಡುವ ಅಭ್ಯಾಸವೂ, ಸಭಾಚಾಲನಶಕ್ತಿಯೂ, ರಾಜಕೀಯವಿಚಾರಾನುಭವವೂ ಇಲ್ಲದಿರುವುದರಿಂದ ಪ್ರತಿನಿಧಿಸಭಾಧ್ಯಕ್ಷತೆಯಲ್ಲಿ ಏನು ಅಭಾಸವಾಗುತ್ತದೋ ಎಂದು ಸಂಶಯಪಡುತ್ತಿದ್ದವರೆಲ್ಲರೂ ಮಿ|| ಮಿರ್ಜಾಯವರು ತಮ್ಮ ಅಧ್ಯಕ್ಷೋಪನ್ಯಾಸವನ್ನು ಬಹುಗಂಭೀರವಾಗಿಯೂ ಲಲಿತವಾಗಿಯೂ ಮಾಡಿದುದನ್ನೂ, ಸಭಿಕರ ಪ್ರಶ್ನೆಗಳಿಗೆ " ಆಗಲಿ ನೋಡುತ್ತೇವೆ, ವಿಚಾರಿಸುತ್ತೇವೆ, ನೋಟುಮಾಡಿಕೊಂಡಿರುತ್ತೇವೆ " ಎಂದು ಮೊದಲಾಗಿ ಉಡಾಫೆ ಜವಾಬಗಳನ್ನು ಕೊಡದೆ ಖಂಡಿತವಾದ ಉತ್ತರಗಳನ್ನು ಹೇಳುತ್ತ ಬಹುಕಾಲಾನುಭವವಿರುವವರಿಗಿಂತಲೂ ಅತಿಶಯವಾಗಿ ಮತ್ತು ಲೀಲಾಜಾಲವಾಗಿ ನಡೆಯಿಸಿಕೊಂಡು ಹೋಗುತ್ತಿರುವುದನ್ನು ನೋಡಿ ಮೂಗಿನಮೇಲೆ ಬೆರಳಿಟ್ಟುಕೊಳ್ಳುವಂತಾಗಿದೆಯೆಂದು ತಿಳಿಸಲು ಸಂತೋಷವಾಗುತ್ತದೆ.

ಪ್ರಜಾಪ್ರತಿನಿಧಿಸಭೆಗೆ ಬಂದಿರತಕ್ಕ ವೀರಶೈವ ಮೆಂಬರುಗಳು ಕಳೆದ ಗುರುವಾರ ಸಾಯಂಕಾಲ ರಾಜಧಾನಿಯ ಕಬ್ಬಳ್ಳಿ ಚೆನ್ನಬಸಪ್ಪನವರ ಹಾಸ್ಟಲಿನಲ್ಲಿ ಕೋಲಾರದ ಸಾಹುಕಾರ್ ಮ|| ಚಿಕ್ಕಚೆನ್ನಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ರಾಜಧಾನಿಯಲ್ಲಿ ವ್ಯಾಸಂಗಮಾಡುವ ವೀರಶೈವ ವಿದ್ಯಾರ್ಥಿಗಳಿಗಾಗಿ ಸ್ವಸಂತೋಷದಿಂದ ಸಾಹಸ್ರಾರುರೂಪಾಯಿಗಳ ವ್ಯಯದಿಂದ ಹಾಸ್ಟಲನ್ನು ಸ್ಥಾಪಿಸಿ ಸಮಾಜಕ್ಕೆ ಮಹೋಪಕಾರವನ್ನು ಮಾಡಿಯೂ, ಮುಂದೆ ಮಾಡುವವರಾಗಿಯೂ ಇದ್ದ ಮ|| ಕೆ. ಚೆನ್ನಬಸಪ್ಪನವರು ಅತ್ಯಂತ ಚಿಕ್ಕವಯಸ್ಸಿನಲ್ಲೇ ಅಕಾಲಮೃತ್ಯುವಿನ ಪಾಲಾದುದರಿಂದ ವೀರಶೈವ ಸಮಾಜಕ್ಕುಂಟಾದ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದೂ, ಆ ಮಹೋಪಕಾರಿಗಳ ಸ್ಮರಣಾರ್ಥವಾಗಿ ಅವರ ಒಂದು ಎಣ್ಣೆಬಣ್ಣದ ಭಾವಚಿತ್ರಪಟವನ್ನು ಬರೆಯಿಸಿ ಹಾಸ್ಟಲಿನಲ್ಲಿ ಕಟ್ಟಬೇಕೆಂದೂ ನಿರ್ಧರಿಸಿದರು. ಈ ಚಿತ್ರಪಟವನ್ನು ಬರೆಯಿಸುವುದರ ವೆಚ್ಚಕ್ಕಾಗಿ ಚಂದಾಹಣವು ಸಂಗ್ರಹಮಾಡಲ್ಪಟ್ಟು ಅಧ್ಯಕ್ಷರು 15 ರೂ., ಮ|| ಗಳಾದ ಜಿ. ಪರಮಶಿವಯ್ಯನವರು 10 ರೂ., ಬೀರೂರಿನ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಎನ್. ಎಂ. ಶಿವಲಿಂಗಪ್ಪಯ್ಯನವರು 10 ರೂ., ದಾವಣಗೆರೆ ತಾ|| ಶಾಬನೂರು ಭಿಷ್ಟಪ್ಪನವರು 10 ರೂ., ಕಾನಕಾನಹಳ್ಳಿಯ ಕೆ. ಪಿ. ಪರಶಿವಯ್ಯನವರು 10 ರೂ. ಗಳನ್ನು ಆ ಕೂಡಲೇ ಸಲ್ಲಿಸಿಬಿಟ್ಟರು. ಇವರ ಮೇಲ್ಪಂಕ್ತಿಯನ್ನು ಇತರ ವೀರಶೈವಬಂಧುಗಳು ಅನುಸರಿಸಿ ಯಥೋಚಿತ ದ್ರವ್ಯಸಹಾಯಮಾಡಿ ತಮ್ಮ ಕೃತಜ್ಞತಾಭಾವವನ್ನು ಪ್ರದರ್ಶಿಸುವರೆಂದು ನಿರೀಕ್ಷಿಸುತ್ತೇವೆ.

[1 ನೇ ಪುಟದಿಂದ ಮುಂದರಿಸಿದುದು]

ವರಮಾನ, ಗಣಿಗಳ ಹುಟ್ಟುವಳಿ, ಮತ್ತು ಬಡ್ಡಿ. ಈ ಬಾಬುಗಳಲ್ಲಿ ವಾಸ್ತವವಾಗಿ ಬಂದ ಹುಟ್ಟುವಳಿಯು ಸದರಿ ಸಾಲಿನ ಬಡ್ಜೆಟ್ಟಿನಲ್ಲಿ ಅಂದಾಜುಮಾಡಿದ್ದ ಹುಟ್ಟುವಳಿಗಿಂತಲೂ ಕಡಮೆಯಾಗಿದ್ದಿತು. ಈ ಪೈಕಿ ಎಕ್ಸೈಜು ಬಾಬಿನ ಹುಟ್ಟುವಳಿಯಲ್ಲಿ 3 ಲಕ್ಷರೂಪಾಯಿಗಳು ಕಡಮೆಯಾದುವು: ಉಳಿದ ಪ್ರತಿಯೊಂದು ಬಾಬಿನ ಹುಟ್ಟುವಳಿಯಲ್ಲಿಯೂ ಒಂದೊಂದು ಲಕ್ಷ ರೂಪಾಯಿಗಳ ಅಥವಾ ಅದಕ್ಕಿಂತ ಕಡಮೆ ಮೊಬಲಗಿನಷ್ಟು ಹುಟ್ಟುವಳಿಯು ತಗ್ಗಿತು. ಒಟ್ಟು ವೆಚ್ಚವು ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ ಸುಮಾರು 4 ಲಕ್ಷರೂಪಾಯಿಗಳಷ್ಟು ಹೆಚ್ಚಿತು. ಆದರೆ, ರೈಲ್ವೆಯೇ ಮುಂತಾದ ನಾಲ್ಕು ಬಾಬುಗಳಿಂದ ಹೆಚ್ಚುವರಮಾನವು ಬಂದಿತೆಂದು ನಾವು ಮೇಲೆ ತಿಳಿಸಿದೆವಷ್ಟೆ: ಹಾಗೆ ಹೆಚ್ಚು ಹುಟ್ಟುವಳಿಯು ಬಂದುದರಿಂದಲೇ, ಇತರ ಬಾಬುಗಳಲ್ಲಿ ಹುಟ್ಟುವಳಿಯು ಕಡಮೆಯಾದುದಕ್ಕಾಗಿಯೂ, ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತ ವೆಚ್ಚವು ಹೆಚ್ಚಾದುದಕ್ಕಾಗಿಯೂ, ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ನಡೆಸಿದುದರ ಬಾಬತು ಹಿಂದಿನಿಂದಲೂ ಬಾಕಿಯುಳಿದ್ದ ನಷ್ಟದ ಮತ್ತು ಚಾಲ್ತಿನಷ್ಟದ ಮೊಬಲಗಾದ 773 ಲಕ್ಷರೂಪಾಯಿಗಳನ್ನು ಲೆಕ್ಕದಿಂದ ವಜಾಕೊಟ್ಟುದಕ್ಕಾಗಿಯೂ ಹಣವನ್ನೊದಗಿಸಲು ಸಹಾಯವಾಯಿತು.

1925-26 ನೆಯ ಸಾಲಿನ ಆಯವ್ಯಯಗಳ ವಿಮರ್ಶೆ.

ಚಾಲ್ತಿ ಸಾಲಿನ ಬಡ್ಜೆಟ್ ಅಂದಾಜಿನ ಪ್ರಕಾರ, ಒಟ್ಟು 340.79 ಲಕ್ಷರೂಪಾಯಿಗಳ ಹುಟ್ಟುವಳಿಯು ಬರಬಹುದೆಂಬುದಾಗಿ ನಿರೀಕ್ಷಿಸಲಾಗಿದ್ದಿತು. ಮತ್ತು ಈ ಹುಟ್ಟುವಳಿಯಿಂದ 340 ಲಕ್ಷರೂಪಾಯಿಗಳನ್ನು ವೆಚ್ಚಗಳಿಗೆ ವಿನಿಯೋಗಿಸತಕ್ಕುದೆಂದು ಬಡ್ಜೆಟ್ಟಿನಲ್ಲಿ ನಿಷ್ಕರ್ಷೆ ಮಾಡಲಾಗಿದ್ದಿತು. ಹೀಗೆ ವೆಚ್ಚವು ಕಳೆದು 0.75 ಲಕ್ಷರೂಪಾಯಿಗಳು ಉಳಿಯುವುವೆಂದು ನಿರೀಕ್ಷಿಸಲಾಗಿದ್ದಿತು. ತಿದ್ದುಪಾಟಾದ ಅಂದಾಜಿನ ಪ್ರಕಾರ ನೋಡಿದಲ್ಲಿ, ಒಟ್ಟು 340 ಲಕ್ಷರೂಪಾಯಿಗಳ ಹುಟ್ಟುವಳಿಯು ಬರಬಹುದೆಂದು ನಿರೀಕ್ಷಿಸಲಾಗಿದೆ. ಹುಟ್ಟುವಳಿಯಿಂದ ಹಣವನ್ನೊದಗಿಸಿ ಹುಟ್ಟುವಳಿಗೆ ಖರ್ಚುಹಾಕಬೇಕಾದ ವೆಚ್ಚಗಳಿಗೂ ಕೂಡ, ಸುಮಾರು ಅಷ್ಟೇ ಮೊಬಲಗು ಬೇಕಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ: ಆದಕಾರಣ, ಮೊದಲೇ ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದಂತೆ ಆಯವ್ಯಯಗಳನ್ನು ಸಮತೂಕಕ್ಕೆ ನಿಲ್ಲಿಸುವುದು ಸಾಧ್ಯವಾಗುತ್ತದೆ. ಫೈನಾನ್ಷಿಯಲ್ ಸೆಕ್ರೆಟರಿಯವರು ಬಡ್ಜೆಟ್ ವಿಚಾರವಾಗಿ ಒಂದು ಮೆಮೊರ್ಯಾಂಡಮನ್ನು ಸಾದರುಮಾಡಿರುತ್ತಾರೆ. ಅದನ್ನು ತಮ್ಮೆಲ್ಲರಿಗೂ ಈ ಮೊದಲೇ ಕಳುಹಿಸಲಾಗಿದೆ. ಚಾಲ್ತಿ ಸಾಲಿನ ಬಡ್ಜೆಟ್ ಅಂದಾಜಿಗನುಗುಣವಾಗಿಲ್ಲದ ಕೆಲವು ಮುಖ್ಯ ವ್ಯತ್ಯಾಸಗಳು ಇರುವುದು ಅದರಲ್ಲಿ ತಪಶೀಲಾಗಿ ವಿವರಿಸಲ್ಪಟ್ಟಿದೆ.

ಫಾರೆಸ್ಟ್ ಬಾಬಿನಲ್ಲಿ 4 ಲಕ್ಷರೂಪಾಯಿಗಳ ಹೆಚ್ಚು ವರಮಾನವು ಬಂದಿತು. ಈ ಪೈಕಿ 3 ಲಕ್ಷ ರೂಪಾಯಿಗಳು ಗಂಧದ ಎಣ್ಣೆಯಿಂದ ಬಂದುವು. ಚಾಲ್ತಿ ಸಾಲಿನಲ್ಲಿ ಗಂಧದ ಎಣ್ಣೆಗೆ ವಿಶೇಷ ಶೀಘ್ರಶೀಘ್ರವಾಗಿ ಗಿರಾಕಿಯು ಬಂದಿತು; ಈಸಾರಿ ಮಾರಾಟವಾದಷ್ಟು ಗಂಧದ ಎಣ್ಣೆಯು ಮತ್ತಾವಾಗಲೂ ಮಾರಾಟವಾಗಿರಲಿಲ್ಲ.

ವರಮಾನದ ತೆರಿಗೆ ಮತ್ತು ವಿವಿಧ ತೆರಿಗೆಗಳ ಬಾಬಿನಲ್ಲಿ 3 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹೆಚ್ಚು ವರಮಾನವು ಬಂದಿತು. ಗಣಿಗಳ ಕಂಪನಿಗಳವರಿಂದ ಬರಬೇಕಾಗಿದ್ದ ಹಿಂದಣಬಾಕಿಯು ವಸೂಲಾದುದೇ ಇದಕ್ಕೆ ಮುಖ್ಯ ಕಾರಣ.

ರೈಲ್ವೆಯ ಬಾಬಿನಲ್ಲಿ ಸುಮಾರು 4 ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ನಮೂದಾಗಿರುತ್ತದೆ. ಮದರಾಸು ಮತ್ತು ಸದರ್ನ್ ಮರಾಠಾ ರೈಲ್ವೆ ಕಂಪೆನಿಯವರು ಆಡಳಿತವನ್ನು ನಡೆಸುತ್ತಿರುವ ಸಂಸ್ಥಾನದ ಲೈನುಗಳಲ್ಲಿ ಜನಸಂಚಾರದಿಂದಲೂ ಮತ್ತು ಸಾಮಾನುಗಳನ್ನು ಸಾಗಿಸಿದುದರಿಂದಲೂ ಹೆಚ್ಚು ವರಮಾನವು ಬಂದುದೂ, ಮತ್ತು ಸದರಿ ಲೈನುಗಳಿಗೆ ಉಪಯೋಗಿಸಿರತಕ್ಕ ಸಾಮಾನುಗಳ ಮೇಲೆ ವಸೂಲಾದ ಕಸ್ಟಮ್ಸ್ ಸುಂಕದ ಮೊಬಲಗು ಸುಮಾರು ಮುಕ್ಕಾಲು ಲಕ್ಷ ರೂಪಾಯಿಗಳು ವಾಪಸು (ರೀಫಂಡ್) ಮಾಡಲ್ಪಟ್ಟುದೂ ಮುಖ್ಯ ಕಾರಣ.

ಕೃಷ್ಣರಾಜಸಾಗರ ವಿದ್ಯುಚ್ಛಕ್ತಿಯ ಮತ್ತು ನೀರಾವರಿಯ ಏರ್ಪಾಡಿನ ಬಾಬಿನಲ್ಲಿ [illegible] ಲಕ್ಷ ರೂಪಾಯಿಗಳ ಹುಟ್ಟುವಳಿಯು ಕಡಮೆಯಾಯಿತು. ಕೋಲಾರದ ಚಿನ್ನದಗಣಿಯ ಕಂಪನಿಗಳವರು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿದ್ದುದನ್ನು ಹಂಗಾಮಿಯಾಗಿ ಕಡಮೆಮಾಡಿದುದೇ ಅದಕ್ಕೆ ಕಾರಣವಾಗಿರುತ್ತದೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ನಡೆಸಿದುದರ ಬಾಬತು ನಷ್ಟವು ಸಂಭವಿಸುವುದೆಂಬುದಾಗಿ ಬಡ್ಜೆಟ್ ಕಾರ್ಯಕ್ರಮದ ಪ್ರಕಾರ ನಿರೀಕ್ಷಣೆಯಿರಲಿಲ್ಲ. ಆದರೆ, ಧಾರಣೆಗಳು ಒಂದೇಸಮನಾಗಿ ಇಳಿಯುತ್ತಾ ಬಂದುದರಿಂದ ನಷ್ಟವು ಸಂಭವಿಸಿತು. ಇದರ ಬಾಬತು ಸುಮಾರು 8 ಲಕ್ಷ ರೂಪಾಯಿಗಳ ಮೊಬಲಗಿನ ಬಗ್ಗೆ ಲೆಕ್ಕಸಮಜಾಯಿಷಿಮಾಡುವ ಅಂಶವನ್ನು ಸಹ ತಿದ್ದುಪಾಟಾದ ಅಂದಾಜಿನಲ್ಲಿ ಸೇರಿಸಲಾಗಿದೆ. ಈ 8 ಲಕ್ಷ ರೂಪಾಯಿಗಳ ಪೈಕಿ 3 ಲಕ್ಷ ರೂಪಾಯಿಗಳು ಚಾಲ್ತಿ ನಷ್ಟದ ಮೊಬಲಗಾಗಿರುತ್ತದೆ. ಇದು 1925 ನೇ ಇಸವಿ ಡಿಸೆಂಬರ್ ತಿಂಗಳಿಗೆ ಅಖೈರಾದ ಅರ್ಧವರುಷದಲ್ಲಿ ಸಂಭವಿಸಿದ ನಷ್ಟ. ಉಳಿದ 5 ಲಕ್ಷರೂಪಾಯಿಗಳು ಹಿಂದೆ ಕೈಕೊಂಡ ಆರಂಭವೆಚ್ಚಗಳ ಮತ್ತು ಹಿಂದೆ ಸಂಭವಿಸಿದ ನಷ್ಟದ ಮೊಬಲಗಿನ ಬಗ್ಗೆ ಹಣಹಾಕಿಸಮುಗ್ಗಟ್ಟಿನ ದೆಸೆಯಿಂದ, ಹಿಂದಣ ಸಾಲುಗಳಲ್ಲೇ ಲೆಕ್ಕ ಸಮಜಾಯಿಷಿಮಾಡಲು ಸಾಧ್ಯವಾಗದೆ ಹೋಗಿ, ಅಗಿಂದಲೂ ಉಳಿದುಬಂದ ಮೊಬಲಗಾಗಿದೆ.

ಇನ್ನು ವೆಚ್ಚದ ವಿಷಯ: ಬಡ್ಡಿ, ಸಿವಿಲ್ ಕಾಮಗಾರಿಗಳು, ಮತ್ತು ವ್ಯವಸಾಯ, ಈ ಮೂರು ಬಾಬುಗಳಲ್ಲಿಯೂ ವಿಶೇಷ ಆಧಿಕ್ಯವು ಕಂಡುಬರುತ್ತದೆ.

ಬಡ್ಡಿಯಬಾಬಿನಲ್ಲಿ ವೆಚ್ಚವು ಹೆಚ್ಚಾಗಿದೆ. ಇದಕ್ಕೆ ಎರಡು [illegible] ಯಲ್ಲಿದ್ದಿತು; ಇದರ ಪೈಕಿ ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಮೊಬಲಗನ್ನು ಪಾವತಿಮಾಡಬೇಕಾಗಿ ಬಂದಿತು; ಇದು ಮೊದಲನೆಯ ಕಾರಣ. ಎರಡನೆಯದು, ಬಡ್ಜೆಟ್ ಅಂದಾಜಿನಲ್ಲಿ ನಿರೀಕ್ಷಿಸಲ್ಪಟ್ಟಿದ್ದುದಕ್ಕಿಂತಲೂ ಹೆಚ್ಚಾಗಿ ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳ ಮತ್ತು ವಿಮೆಯ ಫಂಡುಗಳ ಶಿಲ್ಕು ಮೊಬಲಗು ಉಳಿಯಿತು. ಇದು ಎರಡನೆಯ ಕಾರಣ.

ಸಿವಿಲ್ ಕಾಮಗಾರಿಗಳ ಬಾಬಿನಲ್ಲಿ ಸುಮಾರು 2.5 ಲಕ್ಷರೂಪಾಯಿಗಳ ಹೆಚ್ಚು ಮೊಬಲಗು ವೆಚ್ಚವಾಯಿತು. ಮಾಧವ ಮಂತ್ರಿ ಅಣೆಕಟ್ಟೆಯ ದುರಸ್ತಿಯ ವೆಚ್ಚ; ಮೈಸೂರುಸಿಟಿಯ ನೀರುಸರಬರಾಯಿನ ಏರ್ಪಾಡಿಗೆ ಸಂಬಂಧಪಟ್ಟ ಮೇಲ್ಪಾಟುಗಳ ಬಾಬತು ವೆಚ್ಚ; ಇವು ಮೇಲೆ ತಿಳಿಸಿದ ಹೆಚ್ಚು ವೆಚ್ಚಕ್ಕೆ ಮುಖ್ಯ ಕಾರಣ.

ದನಗಳ ರೋಗಗಳ ವಿಚಾರದಲ್ಲಿ ಪರಿಹಾರಕ್ರಿಯೆಗಳೇ ಮುಂತಾದುವುಗಳನ್ನು ನಡೆಸುವುದಕ್ಕಾಗಿ ಸುಮಾರು 2 ಲಕ್ಷರೂಪಾಯಿಗಳ ಹೆಚ್ಚು ವೆಚ್ಚವನ್ನು ಮಾಡುವುದು ಅವಶ್ಯವಾಯಿತು. ವ್ಯವಸಾಯದ ಬಾಬಿನಲ್ಲಿ ವೆಚ್ಚವು ಹೆಚ್ಚಾಗಿರುವುದಕ್ಕೆ ಇದೇ ಕಾರಣ.

ವೆಚ್ಚವು ವಿಶೇಷವಾಗಿ ಕಡಮೆಯಾಗಿರುವುದು ವಿದ್ಯಾಭ್ಯಾಸದ ಬಾಬಿನಲ್ಲಿ ಮಾತ್ರವೇ ಆಗಿದೆ. ಈ ಬಾಬಿನಲ್ಲಿ ಸುಮಾರು 2.5 ಲಕ್ಷರೂಪಾಯಿಗಳಷ್ಟುಮಟ್ಟಿಗೆ ವೆಚ್ಚವು ಕಡಮೆ ಯಾಗಿರುತ್ತದೆ. ವಿದ್ಯಾಭ್ಯಾಸದ ನಾನಾ ಮೈನರ್ ಬಾಬುಗಳಲ್ಲಿಯೂ ಮಿಗುತಾಯವು ಕಂಡುಬಂದುದೇ ಇದಕ್ಕೆ ಮುಖ್ಯಕಾರಣವಾಗಿದೆ. ಈ ಬಾಬಿನಲ್ಲಿ ಭಾರೀಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿರುವ ಅಂಶವನ್ನೂ, ಮತ್ತು ವಿದ್ಯಾಭ್ಯಾಸದ ಬಾಬಿನಲ್ಲಿ ನಡೆಯುವ ಕಾರ್ಯಕಲಾಪಗಳ ಸ್ವಭಾವವನ್ನೂ ಪರಿಗಣಿಸಿದರೆ, ಬಡ್ಜೆಟ್ ಪ್ರಕಾರ ಒದಗಿಸಲ್ಪಡುವ ಮೊಬಲಗು ಪೂರ್ತಿಯಾಗಿ ವಿನಿಯೋಗವಾಗದೆ ಉಳಿದು ಹೋಗುವುದೇನೂ ಅತಿಶಯವಲ್ಲ.

ಭದ್ರಾನದಿಯ ಅಣೆಕಟ್ಟೆಯ ಬಾಬತು ವೆಚ್ಚಕ್ಕೆ ಪೂರ್ವಪದ್ಧತಿಯನ್ನನುಸರಿಸಿ ನೀರಾವರಿಯ ಬಂಡವಾಳದ ರಿಜರ್ವಿನಿಂದ ಮೊಬಲಗನ್ನು ಒದಗಿಸಲಾಯಿತು. ಕೆಲವು ಬಾಬುಗಳ ವೆಚ್ಚಕ್ಕಾಗಿ ಒಟ್ಟು 4.33 ಲಕ್ಷರೂಪಾಯಿಗಳನ್ನು ಒದಗಿಸಲಾಯಿತು. ಅವುಗಳನ್ನು ಮುಂದೆ ನಮೂದಿಸಿದೆ. ಅವುಗಳೂ ಸಹ ಅನಾವೃತ್ತಸ್ವಭಾವದ (Non-recurring) ವೆಚ್ಚಗಳಾಗಿವೆ. ಆದಕಾರಣ, ಅವುಗಳಿಗೆ ವಿಶೇಷಸ್ವಭಾವದ ರಿಜರ್ವಿನಿಂದಲೇ ಹಣವನ್ನೊದಗಿಸಲಾಯಿತು; ಇವುಗಳೆಲ್ಲದರ ವಿವರ :—

	ರೂ.
ಮೇಲೆ ಸೂಚಿಸಿದ ಮಾಧವ ಮಂತ್ರಿಯ ಅಣೆಕಟ್ಟೆಯ ದುರಸ್ತಿಯಬಾಬತು ವೆಚ್ಚ	60,000
ದೊಡ್ಡರೋಗದ ನಿವಾರಣೆಗಾಗಿ ಕೊಂಡುಕೊಂಡ ಸೀರಂರಸತ್ವ ಮತ್ತು ಸಿಬ್ಬಂದಿಗೂ ತಗಲಿದ ವೆಚ್ಚ	2,05,000
ಪ್ರವಾಹಗಳದೆಸೆಯಿಂದುಂಟಾದ ನಷ್ಟಗಳಬಾಬತು ದುರಸ್ತಿಯ ಕಾಮಗಾರಿ	1,68,000
ಜುಮ್ಲಾ	4,33,000

1926-27 ನೇ ಸಾಲಿನ ಬಡ್ಜೆಟ್ ಅಂದಾಜು.

ಮುಂದಿನಸಾಲಿನಲ್ಲಿ ನಡೆಯಬೇಕಾದ ಬಡ್ಜೆಟ್ ಕಾರ್ಯಕ್ರಮದ ವಿವರವನ್ನು ನಾವು ಈಗ ತಿಳಿಸಲಿಚ್ಛಿಸುವೆವು. ಮುಂದಣಸಾಲಿನಲ್ಲಿ ಒಟ್ಟು 341 ಲಕ್ಷರೂಪಾಯಿಗಳ ಹುಟ್ಟುವಳಿಯು ಬರಬಹುದೆಂಬುದಾಗಿ ಅಂದಾಜುಮಾಡಲ್ಪಟ್ಟಿದೆ. ಮುಂದಣಸಾಲಿನ ಒಟ್ಟು ವೆಚ್ಚವು 340.5 ಲಕ್ಷರೂಪಾಯಿಗಳಾಗಬಹುದೆಂದು ಅಂದಾಜುಮಾಡಲಾಗಿದೆ. ಆದಕಾರಣ, ಮುಂದಣ ಸಾಲಿನಲ್ಲಿ ವೆಚ್ಚವು ಕಳೆದು ಸುಮಾರು ಅರ್ಧಲಕ್ಷರೂಪಾಯಿಗಳಷ್ಟು ಹಣವು ಉಳಿಯಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ನಮ್ಮ ಸಂಸ್ಥಾನದ ಹುಟ್ಟುವಳಿಯ ಬಾಬುಗಳ ಕೆಲವು ವಿಶೇಷ ಲಕ್ಷಣಗಳನ್ನು ತಾವುಗಳೆಲ್ಲರೂ ಗಮನಿಸಬೇಕೆಂದು ಕೋರುತ್ತೇವೆ. ಕೆಲವು ಬಾಬುಗಳಲ್ಲಿ ವರುಷವರುಷವೂ ಹುಟ್ಟುವಳಿಯು ಕಡಮೆಯಾಗುತ್ತಾ ಬರುತ್ತದೆ. ಇತರ ಕೆಲವು ಬಾಬುಗಳಲ್ಲಿ ಹುಟ್ಟುವಳಿಯು ಸ್ಥಿರವಾಗಿಲ್ಲ; ಅದು ಕೆಲವು ಸಾಲುಗಳಲ್ಲಿ ವಿಶೇಷ ಹೆಚ್ಚುತ್ತದೆ: ಮತ್ತೆ ಕೆಲವು ಸಾಲುಗಳಲ್ಲಿ ವಿಶೇಷವಾಗಿ ತಗ್ಗಿಹೋಗುತ್ತದೆ. ಎಕ್ಸೈಜ್‌ಬಾಬಿನಲ್ಲಿ ವರುಷವರುಷವೂ ಕ್ರಮಕ್ರಮವಾಗಿ ಹುಟ್ಟುವಳಿಯು ತಗ್ಗುತ್ತಾ ಬರುತ್ತದೆ. ಮಾದಕದ್ರವ್ಯಗಳ ಸೇವನೆಯು ಕಡಮೆಯಾಗುತ್ತಿರುವುದೆಂಬುವುದೂ ಸಹ, ಇದರಿಂದ ತೋರಿಬರುತ್ತದೆ. ಇದೇನೋ ಸರ್ಕಾರದವರಿಗೆ ಸಂತೋಷಕರವಾದ ಸಂಗತಿಯೇ ಸರಿ. ಆದರೂ ಸರ್ಕಾರದ ಹುಟ್ಟುವಳಿಯನ್ನು ಗಮನಿಸಿದಲ್ಲಿ, ಎಕ್ಸೈಜ್ ಬಾಬಿನಲ್ಲಿ ವರಮಾನವು ತಗ್ಗುತ್ತಿರುವುದು ಆಯವ್ಯಯಗಳ ಸಮತೆಯನ್ನು ಹದಗೆಡಿಸುವುದೆಂಬುದೇನೋ ನಿಶ್ಚಯ. ಇಂಡಿಯಾ ಸರ್ಕಾರದವರು ಕೈಗೊಂಡ ಕಾರ್ಯಕ್ರಮವನ್ನೇ ಅನುಸರಿಸಿ ಹತ್ತಿಯ ಸರಕುಗಳ ಮೇಲಣ ಸುಂಕವನ್ನು ತತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಇಂಡಿಯಾ ಸರ್ಕಾರದವರು ಹತ್ತಿಯಸರಕುಗಳಮೇಲಣ ಸುಂಕವನ್ನು ಅಖೈರಾಗಿ ತೆಗೆದುಹಾಕಿರುತ್ತಾರೆ. ಇಲ್ಲಿಯೂ ಸಹ, ಅದನ್ನು ಅಖೈರಾಗಿ ವಜಾಮಾಡಬೇಕಾಗುತ್ತದೆ. ಆದಕಾರಣ, ಈ ಬಾಬಿನಿಂದ ಬರುವ ಹುಟ್ಟುವಳಿಯನ್ನು ಮುಂದಣ ಸಾಲಿನಲ್ಲಿ ನಮೂದಿಸಿಲ್ಲ. ಈ ಸುಂಕವನ್ನು ತೆಗೆದುಹಾಕಿದುದರದೆಸೆಯಿಂದ, ವರುಷವೊಂದಕ್ಕೆ ಸುಮಾರು ಎರಡುಲಕ್ಷರೂಪಾಯಿಗಳಷ್ಟು ಹುಟ್ಟುವಳಿಯು ಕಡಮೆಯಾಗುತ್ತದೆ. ಬೆಂಗಳೂರು ದಂಡಿನ ಹುಟ್ಟುವಳಿಯಲ್ಲಿ ವೆಚ್ಚವು ಕಳೆದು ಉಳಿಯುವ ಶಿಲ್ಕು ಮೊಬಲಗು ಮೈಸೂರು ಸರ್ಕಾರಕ್ಕೆ ಸಲ್ಲುತ್ತಾ ಇದೆಯಷ್ಟೆ. ಈ ಮೊಬಲಗೂ ಸಹ ಕಡಮೆಯಾಗುತ್ತಾ ಬರುವ ಸೂಚನೆಗಳು ತಲೆದೋರುತ್ತಾ ಇವೆ. ಗಂಧದ ಎಣ್ಣೆಯ ಮಾರಾಟವು ಗಿರಾಕಿಯು ಎಷ್ಟುಮಟ್ಟಿಗೆ ದೊರೆತರೆ ಅಷ್ಟುಮಟ್ಟಿಗೆ ಹೆಚ್ಚಾಗಿ ನಡೆಯತಕ್ಕುದಾಗಿದೆ; ಆದಕಾರಣ, ಇದರಿಂದ ಬರುವ ಹುಟ್ಟುವಳಿಯು ಸ್ಥಿರವಾಗಿ ನಿಲ್ಲತಕ್ಕುದಲ್ಲ; ಅದು ಆಗಾಗ ಹೆಚ್ಚು ಕಡಮೆಯಾಗುತ್ತಲೇ ಇರುತ್ತದೆ. ಸೆಟ್ಲ್‌ಮೆಂಟ್ ಕೆಲಸಗಳು ಪೂರೈಸಿವೆ; ಆದಕಾರಣ, ಇನ್ನು ಕೆಲವು ವರುಷಗಳವರೆಗೆ ಜಮಾನುಕಂದಾಯದಿಂದ ಬರುವ ಹುಟ್ಟುವಳಿಯು ಅದರ ಪರಮಾವಧಿಯ ಹಂತಕ್ಕೆ ಬಂದಿಹೋಗಿದೆ. ಇದೂ ಅಲ್ಲದೆ, ಈ ಬಾಬಿನ ಹುಟ್ಟುವಳಿಯು ಸ್ಥಿರವಾಗಿ ನಿಲ್ಲದ ಕಾಲಸ್ಥಿತಿಗಳ ಸ್ವಭಾವವನ್ನನುಸರಿಸಿ ಅದೂ ಸಹ, ಹೆಚ್ಚು ಕಡಮೆಯಾಗುತ್ತದೆ.

ಮುಂದಣಸಾಲಿಗೆ ಸಂಬಂಧಪಟ್ಟ ಹುಟ್ಟುವಳಿಯ ಬಾಬುಗಳ ಪೈಕಿ, ತಾವುಗಳೆಲ್ಲರೂ ಗಮನಕೊಡಬೇಕೆಂದು ಕೋರಲು ಅರ್ಹವಾದ ಬಾಬುಗಳು ಎಲ್ಲೋ ಕೆಲವು ಮಾತ್ರವೇ ಇವೆ. ಮುಂದಣಸಾಲಿನಿಂದ ರಿವಿಜನ್ ಸೆಟ್ಲ್‌ಮೆಂಟ್ ಏರ್ಪಾಡು ಜಾರಿಯಲ್ಲಿ ಬರುತ್ತದೆ. ಅದರ ಫಲಿತಾಂಶವಾಗಿ ಸ್ವಲ್ಪಮಟ್ಟಿಗೆ ಹೆಚ್ಚು ಹುಟ್ಟುವಳಿಯು ಬರುವುದೆಂದು ನಿರೀಕ್ಷಿಸಲಾಗಿದೆ. ಆದಕಾರಣ, ಚಾಲ್ತಿ ಸಾಲಿನ ತಿದ್ದುಪಾಟಾದ ಅಂದಾಜಿನಲ್ಲಿ ನಮೂದಿಸಿರುವುದಕ್ಕಿಂತಲೂ 3 ಲಕ್ಷರೂಪಾಯಿಗಳಷ್ಟು ಹೆಚ್ಚು ಹುಟ್ಟುವಳಿಯು ಮುಂದಣಸಾಲಿನಲ್ಲಿ ಬರಬಹುದೆಂಬುದಾಗಿ ನಿರೀಕ್ಷಿಸಲಾಗಿದೆ. ಚಾಲ್ತಿ ಸಾಲಿನಲ್ಲಿ ಮಾರಾಟವಾದಷ್ಟು ಗಂಧದ ಎಣ್ಣೆಯು ಹಿಂದೆ ಯಾವಾಗಲೂ ಮಾರಾಟ [illegible]

ಹುಟ್ಟುವಳಿಯು ಕಳೆದ ಕೆಲವು ವರುಷಗಳಿಂದಲೂ ಇಳಿಮುಖವಾಗಿರುತ್ತದೆ. ಇದನ್ನು ನೋಡಿಯೇ, ಮುಂದಣ ಸಾಲಿನ ಬಜೆಟ್ಟಿನಲ್ಲಿ ಚಾಲ್ತಿ ಸಾಲಿಗಿಂತಲೂ ಈ ಬಾಬಿನ ಹುಟ್ಟುವಳಿಯು ೧.೫೦ ಲಕ್ಷ ರೂಪಾಯಿಗಳು ಕಡಮೆಯಾಗುವುದಾಗಿ ನಮೂದಿಸಲಾಗಿದೆ. ವರಮಾನದ ತೆರಿಗೆಯ ಮತ್ತು ವಿವಿಧ ತೆರಿಗೆಗಳ ಬಾಬಿನಲ್ಲಿಯೂ ಸಹ, ಕಡಮೆ ವರಮಾನವನ್ನು ಬಜೆಟ್ಟಿನಲ್ಲಿ ನಮೂದಿಸಲಾಗಿದೆ; ಹತ್ತಿಯ ಸರಕುಗಳ ಮೇಲಣ ಸುಂಕವನ್ನು ವಜಾ ಮಾಡಿದುದೇ ಇದಕ್ಕೆ ಕಾರಣವಾಗಿದೆ. ಕೋಲಾರದ ಚಿನ್ನದಗಣಿಯವರು ಮುಂದಣ ಸಾಲಿನಲ್ಲಿ ಚಾಲ್ತಿಸಾಲಿಗಿಂತಲೂ ಹೆಚ್ಚು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುವರೆಂಬ ನಿರೀಕ್ಷಣೆಯಿದೆ. ಆದುದರಿಂದ ಕೃಷ್ಣರಾಜಸಾಗರ ವಿದ್ಯುಚ್ಛಕ್ತಿಯ ಮತ್ತು ನೀರಾವರಿಯ ಏರ್ಪಾಡಿನ ಬಾಬಿನಲ್ಲಿ ಚಾಲ್ತಿ ಸಾಲಿನ ತಿದ್ದುಪಾಟಾದ ಅಂದಾಜಿನಪ್ರಕಾರ ನಿರೀಕ್ಷಿಸಿರುವುದಕ್ಕಿಂತಲೂ ಮುಂದಣ ಸಾಲಿನಲ್ಲಿ ಹೆಚ್ಚು ಹುಟ್ಟುವಳಿಯು ಬರುವುದೆಂಬುದಾಗಿ ಯೋಚಿಸಿ ಬಜೆಟ್ ಅಂದಾಜಿನಲ್ಲಿ ಆ ರೀತಿ ನಮೂದಿಸಲಾಗಿದೆ.

ಭದ್ರಾವತಿಯ ಕಬ್ಬಿಣದಕಾರ್ಖಾನೆಯ ಕೆಲಸಗಳನ್ನು ನಡೆಸುವ ವಿಚಾರದಲ್ಲಿ ಚಾಲ್ತಿಸಾಲಿನ ಉತ್ತರಾರ್ಧದಲ್ಲಿ ಅನೇಕ ಮೇಲ್ಪಾಟುಗಳು ಸ್ಪಷ್ಟವಾಗಿ ಕಂಡುಬಂದಿರುತ್ತವೆ. ಆದಕಾರಣ, ಕಾರ್ಖಾನೆಯ ಕಾರ್ಯನಿರ್ವಾಹಕಸಮಂಡಲಿಯವರು ಮುಂದಣ ಸಾಲಿನಲ್ಲಿ ಕಾರ್ಖಾನೆಯ ಕೆಲಸ ನಡೆಸುವುದರಲ್ಲಿ ನಷ್ಟವಾವುದೂ ಸಂಭವಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಆದಕಾರಣ, ಮುಂದಣಸಾಲಿನ ಬಜೆಟ್ ಅಂದಾಜುಗಳಲ್ಲಿ, ಕಾರ್ಖಾನೆಯ ಚಾಲ್ತಿ ನಷ್ಟದ ಸಲುವಾಗಿ ಯಾವ ಮೊಬಲಗನ್ನೂ ನಮೂದಿಸಿರುವುದಿಲ್ಲ.

ಮುಂದಣಸಾಲಿನ ಬಜೆಟ್ ಅಂದಾಜಿನಲ್ಲಿ ಒಟ್ಟು ೩೪೯ ಲಕ್ಷ ರೂಪಾಯಿಗಳ ವೆಚ್ಚಕ್ಕಾಗಿ ಮೊಬಲಗನ್ನು ಒದಗಿಸಿದೆ. ಈ ಪೈಕಿ ೩೪೧ ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಚಾಲ್ತಿ ಹುಟ್ಟುವಳಿಯಿಂದಲೇ ಒದಗಿಸಬೇಕೆಂದು ಉದ್ದೇಶಿಸಲಾಗಿದೆ. ಇನ್ನುಳಿದುದು ಸುಮಾರು ೮ ಲಕ್ಷ ರೂಪಾಯಿಗಳ ವೆಚ್ಚ. ಇದಕ್ಕಾಗಿ ರಿಜರ್ವ್‌ಫಂಡುಗಳಿಂದ ಹಣವನ್ನೊದಗಿಸಬೇಕೆಂದು ಯೋಚಿಸಲಾಗಿದೆ.

ರಾಜ್ಯಾಡಳಿತವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಪಕ್ಷದಲ್ಲಿ ಹೆಚ್ಚು ಹೆಚ್ಚಾಗಿ ವೆಚ್ಚವು ನಡೆಯಬೇಕಾಗುತ್ತದೆ. ಹೀಗೆ ಹೆಚ್ಚು ವೆಚ್ಚಕ್ಕೆ ಹಣವನ್ನು ಒದಗಿಸಲು ಹುಟ್ಟುವಳಿಗಳೂ ಹೆಚ್ಚುತ್ತಿರುವುದು ಅವಶ್ಯಕವಾಗಿದೆ. ಆದರೆ ನಾವು ಹೇಳಿರುವ ಅಂಕಗಳ ಪ್ರಕಾರ, ನಮ್ಮ ಹುಟ್ಟುವಳಿಯ ಸ್ಥಿತಿಯ ವಿಷಯದಲ್ಲಿ ಜಾಗರೂಕತೆಯಿಂದ ಅವಿಚ್ಛಿನ್ನವಾಗಿ ಗಮನವನ್ನು ಕೊಡಬೇಕಾಗಿದೆ. ಬಗೆಬಗೆಯ ಅಭಿವೃದ್ಧಿಯ ಏರ್ಪಾಡುಗಳಿಗೆ ಬೇಕಾಗುವ ಹಣವನ್ನು ಒದಗಿಸುವುದಕ್ಕಾಗಿ ನಮ್ಮ ಹುಟ್ಟುವಳಿಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನಗಳನ್ನು ಮಾಡಬೇಕಾಗಿದೆ. ಪ್ರಕೃತದಲ್ಲಿ ರೂಪಾಯಿಗಳ ರೂಪದಲ್ಲಿ ಸಂದಾಯವಾಗುವ ನಮ್ಮ ಸಾಲವು ೩೫೪·೬೨ ಲಕ್ಷ ರೂಪಾಯಿಗಳಾಗಿರುತ್ತದೆ. ಇದನ್ನು ತೀರಿಸುವುದಕ್ಕಾಗಿ, ಸಿಂಕಿಂಗ್‌ಫಂಡ್ ಬಾಬಿಗೆ ೧೧೬ ಲಕ್ಷ ರೂಪಾಯಿಗಳ ಒಂದು ಮೊಬಲಗನ್ನು ೧೯೨೬ನೆಯ ಇಸವಿ ಜೂನ್ ೩೦ ನೆಯ ತಾರೀಖಿನೊಳಗಾಗಿ ನಾವು ತೆಗೆದಿಟ್ಟಿರುವೆವು. ಆದಕಾರಣ, ಇನ್ನುಳಿದಿರುವ ಈ ಸಾಲವು ೨೩೮ ಲಕ್ಷ ರೂಪಾಯಿಗಳು ಮಾತ್ರವಾಗುವುದು. ನಾವು ನಮ್ಮ ಅಲ್ಪಕಾಲದ ಸಾಲಗಳನ್ನು ದೀರ್ಘಕಾಲದ ಸಾಲಗಳನ್ನಾಗಿ ಮಾರ್ಪಡಿಸಬೇಕಾಗಿದೆ. ಬಜಾರಿನ ಬಡ್ಡಿಯ ದರವು ಕಡಮೆಯಾಗುತ್ತಿರುವ ಸಂಭವವು ಕಂಡುಬರುತ್ತಿರುವುದರಿಂದಲೂ ಮತ್ತು ಜನಗಳು ದೀರ್ಘಕಾಲದ ಅವಧಿಯ ಸಾಲಗಳ ವಿಚಾರದಲ್ಲಿ ಇಷ್ಟಪಡುತ್ತಿರುವುದರಿಂದಲೂ, ಶೀಘ್ರವಾಗಿ ನಾವು ಮೇಲ್ಕಂಡ ರೀತಿಯಲ್ಲಿ ಮಾರ್ಪಡಿಸಬಹುದಾಗಿದೆ. ಇನ್ನೂ ಕಡಮೆಯ ದರದಲ್ಲಿ ಬಡ್ಡಿಯುಳ್ಳ ಹೊಸ ಸಾಲವೊಂದನ್ನು ಏರ್ಪಡಿಸುವುದರ ಮೂಲಕ ಈಗಿನ ಸಾಲವನ್ನು ವಾಪಸು ಕೊಡತಕ್ಕ ಅವಧಿಯನ್ನು ದೀರ್ಘಕಾಲಕ್ಕೆ ಹೆಚ್ಚಿಸಿಕೊಳ್ಳಬಹುದಾಗಿದೆ. ಶೇಕಡಾ ೬ ರಂತೆ ಬಡ್ಡಿಯನ್ನು ಕೊಟ್ಟಾಗ್ಗ್ಯೂ ಕೂಡ (ವಾಸ್ತವಿಕವಾಗಿ ಬಡ್ಡಿಯ ದರವು ಬಹುಶಃ ಇನ್ನೂ ಕಡಮೆಯಾಗಿಯೇ ಇರಬಹುದು.) ಮತ್ತು ಸಿಂಕಿಂಗ್ ಫಂಡಿಗೆ ಶೇಕಡಾ ೪ ರಂತೆ ಕೊಟ್ಟಾಗ್ಗ್ಯೂ ಕೂಡ, ೩೦ ವರುಷಗಳಲ್ಲಿ ಈ ಸಾಲವನ್ನು ತೀರಿಸಲು ವರ್ಷಂಪ್ರತಿ ೧೮·೫ ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಸಾಮಾನ್ಯ ಹುಟ್ಟುವಳಿಗಳಿಂದ ಕಂಟ್ರಿಬ್ಯೂಷನನ್ನು ಕೊಡಬೇಕಾಗಿರುವುದಿಲ್ಲ. ಹೀಗೆ ಮಾಡುವುದಕ್ಕೆ ಬದಲಾಗಿ, ಈಗ ನಾವು ಪ್ರತಿವರ್ಷವೂ ಬಡ್ಡಿಯ ಮತ್ತು ಸಿಂಕಿಂಗ್‌ಫಂಡಿನ ಚಾರ್ಜುಗಳಿಗಾಗಿ ೪೨·೩೯ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈ ಮೊಬಲಗಿನ ಪೈಕಿ ೨೦ ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾದ ಹಣವನ್ನು ಕೃಷ್ಣರಾಜಸಾಗರದ ಮೇಲುಮಟ್ಟದ ಕಾಲುವೆಯ ಕಾಮಗಾರಿಗಳಿಗೂ ಮತ್ತು ಪ್ರಕೃತದಲ್ಲಿ ಸಾಕಾದಷ್ಟು ಹಣವನ್ನೊದಗಿಸದೆ ಇರತಕ್ಕ ಜನಾಂಗದ ಏಳಿಗೆಗೆ ಸಂಬಂಧಪಟ್ಟ ಇತರ ಕಾರ್ಯಕಲಾಪಗಳಿಗೂ ಒದಗಿಸಬಹುದಾಗಿದೆ; ಮೇಲುಮಟ್ಟದ ನಾಲೆಯನ್ನೇರ್ಪಡಿಸತಕ್ಕ ವಿಷಯವು ಸರ್ವಸಮ್ಮತವಾಗಿಯೇ ಇದೆ. ಇಂಥಾ ಕಾರ್ಯಕಲಾಪಗಳಿಗೆ ಪ್ರೋತ್ಸಾಹವನ್ನು ಕೊಡುವುದರಿಂದ ನಾವು ಜನಗಳಿಗೆ ಉತ್ಸಾಹವನ್ನುಂಟುಮಾಡಿದಂತಾಗುತ್ತದೆಯಲ್ಲದೆ, ಪರೋಕ್ಷವಾಗಿ ಸಂಸ್ಥಾನದ ಹುಟ್ಟುವಳಿಯ ಅಭಿವೃದ್ಧಿಗೆ ಸಹಾಯಮಾಡಿದಂತಾಗುತ್ತದೆ.

೧೯೨೧-೨೨ನೇ ಸಾಲಿನ ಶೇಕಡಾ ೭ರಂತೆ ಬಡ್ಡಿಯುಳ್ಳ ೧೯೫·೫೬ ಲಕ್ಷ ರೂಪಾಯಿಗಳಷ್ಟು ಸಾಲವು ೧೯೩೧-೩೨ನೇ ಇಸವಿಯಲ್ಲಿ ತೀರಿಸಲ್ಪಡತಕ್ಕದ್ದಾಗಿದೆ. ಆಗ್ಗೆ, ಈ ಸಾಲಕ್ಕಾಗಿ ೨೯ ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಒದಗಿಸುತ್ತಿರುವುದು ತಪ್ಪುವುದೆಂಬುದಾಗಿ ನಿರೀಕ್ಷಿಸಲಾಗಿದೆ. ಮೇಲ್ಕಂಡ ಸಾಲವನ್ನು ಸಕಾಲದಲ್ಲಿ ಬೇರೆ ಸಾಲವನ್ನಾಗಿ ಬದಲಾಯಿಸುವುದಕ್ಕಾಗಲಿ, ಅಥವಾ ಹಿಂದಿನಸಾಲದ ಬಾಕಿಯನ್ನು ತೀರಿಸುವುದಕ್ಕಾಗಿ ಹೊಸದಾಗಿ ಒಂದು ದೀರ್ಘಾವಧಿಯ ಸಾಲವನ್ನು ಏರ್ಪಡಿಸುವುದಕ್ಕಾಗಲಿ ತಕ್ಕ ಏರ್ಪಾಡುಗಳನ್ನು ಮಾಡುವುದರ ಮೂಲಕ ಮೇಲ್ಕಂಡಂತೆ ಸಾಲಕ್ಕಾಗಿ ಕೊಡಬೇಕಾದ ಈ ಮೊಬಲಗಿನ ಬಹುಭಾಗವನ್ನು ಉಳಿಸಿಕೊಳ್ಳತಕ್ಕುದು ಅವಶ್ಯಕವೆಂಬುದಾಗಿ ನಾವು ಭಾವಿಸುತ್ತೇವೆ.

ಒಟ್ಟಿನಮೇಲೆ ಪರ್ಯಾಲೋಚಿಸಿದಲ್ಲಿ, ಇದುವರೆಗೆ ಏರ್ಪಟ್ಟಿರುವ ಸಂಸ್ಥಾನದ ಸ್ವತ್ತುಗಳಿಂದ ಯುಕ್ತವಾದ ವರಮಾನವು ಬರುತ್ತಿದೆ. ಪ್ರಕೃತ ಚರ್ಚೆಯಲ್ಲಿರುವ ಸಾಲವನ್ನು ಒಂದು ಹೊಸ ಸ್ವತ್ತನ್ನು ಏರ್ಪಡಿಸುವುದಕ್ಕಾಗಿ ತೆಗೆದದ್ದಾಗಿದೆ. ಆದರೆ, ಸದರಿ ಸ್ವತ್ತಿನಿಂದ ಅಷ್ಟು ಶೀಘ್ರದಲ್ಲಿಯೇ ವರಮಾನವು ಬರುತ್ತಾ ಇಲ್ಲ. ಆದರೂ, ಎಂಟು ಅಥವಾ ಹತ್ತು ವರುಷಗಳ ಮೇಲೆ ಸದರಿ ಸ್ವತ್ತಿನಿಂದ ವರಮಾನವು ಬರುವಂತಾಗುವುದು. ಅಲ್ಲಿಂದ ಮುಂದೆ ಸಂಸ್ಥಾನದ ಸಾಮಾನ್ಯ ಹುಟ್ಟುವಳಿಯಿಂದ ಅದರ ಸಾಲದ ಬಾಬಿಗಾಗಿ ಒದಗಿಸುತ್ತಿರುವ ವೆಚ್ಚವು ಇರಲಾರದು.

ಈ ಕೆಲಸಗಳಿಂದ ಉಂಟಾಗತಕ್ಕ ಕಷ್ಟಗಳಿಗೆಲ್ಲಾ ಈಗಣ ಜನಗಳನ್ನು ಗುರಿಮಾಡಿ, ಮುಂದೆ ಅವರ ಸಂತತಿಯವರು ಅವುಗಳಿಂದ ಉಂಟಾಗತಕ್ಕ ಫಲಗಳನ್ನು ಮಾತ್ರವೇ ಅನುಭವಿಸುವಂತೆ ಮಾಡುವುದು ನ್ಯಾಯವಲ್ಲವೆಂಬುದನ್ನು ನೀವು ಒಪ್ಪುವಿರಿ. ನಾವು ಆ ಕೆಲಸಗಳನ್ನೆಲ್ಲಾ ಒಟ್ಟಾಗಿ ಗಣನೆಗೆ ತೆಗೆದುಕೊಳ್ಳಬೇಕು. ಈ ವಿಚಾರವನ್ನು ಶ್ರೀಮನ್ಮಹಾರಾಜರವರ ಸರ್ಕಾರದವರು ಆಸಕ್ತಿಯಿಂದ ಆಲೋಚಿಸುತ್ತಿದ್ದಾರೆ; ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯಗಳನ್ನೂ ಸಲಹೆಗಳನ್ನೂ ಪಡೆಯಬೇಕೆಂದು ಆದರದಿಂದ ನಿರೀಕ್ಷಿಸುತ್ತಾ ಇದೆ.

ಸಂಪದಭಿವೃದ್ಧಿಯ ವಿಚಾರಗಳಲ್ಲಿಯೂ ಮತ್ತು ಸಮಾಜಾಭಿವೃದ್ಧಿಯಲ್ಲಿಯೂ ಜನಗಳಿಗೆ ಸಹಾಯಮಾಡುವುದಕ್ಕೋಸ್ಕರ ಯಾವ ಬಾಬಿನಿಂದಲಾದರೂ ಹಣವನ್ನು ಒದಗಿಸಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಅತ್ಯಂತ ಕುತೂಹಲವುಳ್ಳವರಾಗಿದ್ದಾರೆಂದು ನಾವು ನಿಮಗೆ ಭರವಸೆ ಹೇಳಬಹುದಾಗಿದೆ. ಪ್ರಕೃತದಲ್ಲಿ ಸಾಲದ ತೀರ್ಮಾನಕ್ಕಾಗಿ ವಿನಿಯೋಗಿಸಲ್ಪಡುತ್ತಿರುವ ಫಂಡುಗಳಲ್ಲಿ ಕೆಲವನ್ನು ಉಳಿಸಿಕೊಳ್ಳಲು ಮಾಡಲ್ಪಡುವ ಏರ್ಪಾಡುಗಳ ನಿರೀಕ್ಷಣೆಯಮೇಲೆ, ಮೊದಲೇ ಹೇಳಿರುವಂತೆ, ಈ ಬಾಬಿಗಾಗಿ ಕೂಡಲೇ ೮ ಲಕ್ಷ ರೂಪಾಯಿಗಳ ಮೊಬಲಗನ್ನು ಒದಗಿಸಬೇಕೆಂಬುದಾಗಿ ನಾವು ತೀರ್ಮಾನಿಸಿದ್ದೇವೆ. ಸದ್ಯದಲ್ಲಿ ಈ ಹಣವು ರಿಜರ್ವ್ ಫಂಡುಗಳಿಂದ ಒದಗಿಸಲ್ಪಡುವುದು. ಮುಂದಿನ ಸಾಲಿನ ಬಜೆಟ್ಟಿನಲ್ಲಿ, ಹೆಚ್ಚಿಗೆಯ ಗ್ರಾಂಟುಗಳು ಒದಗಿಸಲ್ಪಟ್ಟಿರುವ ಮುಖ್ಯವಾದ ಬಾಬುಗಳು ಈ ಕೆಳಗೆ ನಮೂದಿಸಲ್ಪಟ್ಟಿವೆ.—

(೧) ಬೆಂಗಳೂರಿನ ಸಿಟಿ ಮ್ಯುನಿಸಿಪಾಲಿಟಿಗೆ ನೀರಿನ ಸರಬರಾಯಿಯ ಏರ್ಪಾಡನ್ನು ಮೇಲ್ಪಡಿಸುವುದಕ್ಕಾಗಿ ಸಹಾಯದ್ರವ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದುದನ್ನು ನೆರವೇರಿಸುವುದಕ್ಕೋಸ್ಕರ ೧,೨೦,೦೦೦ ರೂಪಾಯಿಗಳ ಗ್ರಾಂಟನ್ನು ಒದಗಿಸಿದೆ.

(೨) ಮೈಸೂರು ಸಿಟಿಯ ನೀರು ಸರಬರಾಯಿಯ ಏರ್ಪಾಡನ್ನು ಮೇಲ್ಪಡಿಸುವುದರಲ್ಲಿ ಮತ್ತೆ ನಡೆಸಬೇಕಾಗಿರುವ ಕಾಮಗಾರಿಗಳಿಗಾಗಿ ಸಹಾಯದ್ರವ್ಯವನ್ನು ಕೊಡಬೇಕಾಗಿದೆ. ಇದಕ್ಕಾಗಿ ೩ ಲಕ್ಷ ರೂಪಾಯಿಗಳನ್ನು ಒದಗಿಸಿದೆ.

(೩) ವಿದ್ಯಾಭ್ಯಾಸದ ಇಲಾಖೆಯವರು ಹೆಚ್ಚು ವೆಚ್ಚವನ್ನು ಕೈಗೊಳ್ಳಬೇಕಾದ ಆವಶ್ಯಕತೆಯುಂಟಾಗಿದೆ. ಆದಕಾರಣ ಈ ಹೆಚ್ಚಿಗೆಯ ಆವಶ್ಯಕತೆಗಳಿಗೋಸ್ಕರ ೫೦,೦೦೦ ರೂಪಾಯಿಗಳ ಒಟ್ಟು ಮೊತ್ತವನ್ನು (Lumpsum grant) ಒದಗಿಸಲಾಗಿದೆ.

(೪) ಸಬ್ ಅಸಿಸ್ಟೆಂಟ್ ಸರ್ಜನರುಗಳಿಗೆ ಈಗ ದೊರೆಯುತ್ತಾ ಇರುವ ಸಂಬಳಗಳ ಸ್ಕೇಲು ಬಹಳ ಕಡಮೆಯಾದುದೆಂದು ಬಹುಕಾಲದಿಂದಲೂ ಅರಿಕೆಮಾಡಲ್ಪಡುತ್ತಾ ಇದೆ. ಈ ಆಫೀಸರುಗಳ ಸಂಬಳವನ್ನು ಹೆಚ್ಚಿಸಬೇಕೆಂಬುದಾಗಿ ಸಲಹೆಮಾಡಿ, ನ್ಯಾಯವಿಧಾಯಕ ಸಭೆಯವರು ಈಗ್ಗೆ ಕೆಲವು ಕಾಲಕ್ಕೆ ಹಿಂದೆ ಒಂದು ನಿರ್ಣಯವನ್ನೂ ಮಾಡಿಸಿದ್ದರು. ಅವರ ನಿರ್ಣಯಕ್ಕನುಗುಣವಾಗಿ ಕೆಲಸ ನಡೆಸುವುದಕ್ಕೋಸ್ಕರವಾಗಿ ಬಜೆಟ್ಟಿನಲ್ಲಿ ೧೬,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ.

(೫) ಸೈನ್ಯದ ನಾನಾ ಯೂನಿಟ್ಟುಗಳಿಗೂ ಸೇರಿದ ನೌಕರರಿಗೆ ಈಗ ದೊರೆಯುತ್ತಾ ಇರುವ ಸಂಬಳಗಳ ಸ್ಕೇಲು ಬಹಳ ಕಡಿಮೆಯಾದುದಾಗಿದೆ. ಆದಕಾರಣ, ತಕ್ಕ ಜನರು ಕೆಲಸಗಳಿಗೆ ಸೇರುವಂತೆ ಆಕರ್ಷಿಸುವುದು ಅಸಾಧ್ಯವಾಗಿದೆ. ಆದುದರಿಂದ, ಅವರ ಸಂಬಳದ ಸ್ಕೇಲನ್ನು ಮೇಲ್ಪಡಿಸುವುದು ಅತ್ಯಾವಶ್ಯಕವಾಗಿದೆ. ಆದಕಾರಣ, ಸೈನ್ಯಕ್ಕಾಗಿ ೫೦,೦೦೦ ರೂಪಾಯಿಗಳನ್ನೂ, ಅರಮನೆಯ ಬಾಬತು ಸೈನ್ಯಕ್ಕಾಗಿ ೫೦,೦೦೦ ರೂಪಾಯಿಗಳನ್ನೂ, ಮುಂದಣ ಸಾಲಿನ ಬಜೆಟ್ಟಿನಲ್ಲಿ ಒದಗಿಸಲಾಗಿದೆ.

(೬) ಫಾರೆಸ್ಟು ಇಲಾಖೆಯವರ ಮೇಲ್ವಿಚಾರಣೆಯಲ್ಲಿ ಕೀಲೆಣ್ಣೆಯಿಂದ ಕ್ರಿಯೋಸೋಟ್ ತೈಲವನ್ನು ತೆಗೆದು, ಅದನ್ನು ಸ್ಲೀಪರುಗಳಾಗಿ ಉಪಯೋಗಿಸಲ್ಪಡುವ ಮರದ ತುಂಡುಗಳಿಗೆ ಸವರಿ ಸಿದ್ಧಪಡಿಸಲು ಒಂದು ಯಂತ್ರಶಾಲೆಯನ್ನು ಏರ್ಪಡಿಸಬೇಕೆಂದು ಉದ್ದೇಶಿಸಲಾಗಿದೆ. ಈ ಕೆಲಸಕ್ಕಾಗಿ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯವರು ಕೀಲೆಣ್ಣೆಯನ್ನು ಒದಗಿಸುತ್ತಾರೆ. ಈ ಕೆಲಸವು ನೆರವೇರುವುದಕ್ಕಾಗಿ ಬಜೆಟ್ಟಿನಲ್ಲಿ ೮೫,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ.

(೭) ಟವನುಗಳಲ್ಲಿ (ಬೆಂಗಳೂರು, ಮೈಸೂರು ಸಿಟಿಗಳನ್ನು ಬಿಟ್ಟು ಇತರ ಟವನುಗಳಲ್ಲಿ) ಅಲ್ಲಿನ ಸ್ಥಳಾರೋಗ್ಯಸಾಧನಗಳನ್ನು ಹೆಚ್ಚಿಸುವುದು ಕೇವಲ ಆವಶ್ಯವಾಗಿ ಪರಿಣಮಿಸಿರುತ್ತದೆ; ಇದಕ್ಕಾಗಿ ೧,೩೦,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ.

(೮) ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳಾರೋಗ್ಯಸಾಧನಗಳನ್ನು ಮೇಲ್ಪಡಿಸುವುದು ಅತ್ಯಾವಶ್ಯಕವಾಗಿದೆ. ಆದಕಾರಣ, ಗ್ರಾಮಗಳ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ೧,೩೦,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ.

(೯) ಸಂಪದಭಿವೃದ್ಧಿಯ ಏರ್ಪಾಡುಗಳ ವಿಷಯ; ಈಗ್ಗೆ ಕೆಲಕಾಲಕ್ಕೆ ಹಿಂದಿನಿಂದಲೂ ಇವುಗಳನ್ನು ತೀವ್ರವಾಗಿ ನಡೆಸಿರುವುದಿಲ್ಲ. ಅವುಗಳನ್ನು ಮತ್ತೆ ಔತ್ಸುಕ್ಯದಿಂದ ಕೈಗೊಂಡು ಕೆಲಸವನ್ನು ಆರಂಭಿಸುವುದಕ್ಕಾಗಿ ೧,೦೦,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ.

(೧೦) ಮಲೆನಾಡುಪ್ರಾಂತ್ಯಗಳಲ್ಲಿ ನಡೆಸಬೇಕಾಗಿರುವ ಮೇಲ್ಪಾಡುಗಳಿಗಾಗಿ ೧,೨೦,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ. ವೈದ್ಯದ (ಮೆಡಿಕಲ್) ಇಲಾಖೆಯಲ್ಲಿಯೂ, ಪಶುವೈದ್ಯದ (ವೆಟರಿನರಿ) ಇಲಾಖೆಯಲ್ಲಿಯೂ, ಹೊಸದಾಗಿ ಡಿಸ್ಪೆನ್ಸರಿಗಳನ್ನು ಸ್ಥಾಪಿಸುವುದಕ್ಕಾಗಿ ಎಂದಿನಂತೆಯೇ ಒದಗಿಸತಕ್ಕ ಮೊಬಲಗುಗಳೂ ಸಹ ಇದರಲ್ಲಿ ಸೇರಿವೆ.

ರಿಜರ್ವುಗಳಿಂದ ಹಣವನ್ನೊದಗಿಸುವ ವೆಚ್ಚಗಳು.

ಭದ್ರಾನದಿಯ ಅಣೆಕಟ್ಟೆಯ ಕಾಮಗಾರಿಗಾಗಿ ನೀರಾವರಿ ಬಂಡವಾಳದ ರಿಜರ್ವಿನಿಂದ ಮೂಲಧನವನ್ನೊದಗಿಸಲಾಗುತ್ತದೆ. ಬೆಂಗಳೂರು ಮತ್ತು ಮೈಸೂರು ನಗರಗಳ ಸಿಟಿ ಮುನಿಸಿಪಾಲಿಟಿಗಳಿಗೆ ನೀರು ಸರಬರಾಯಿ ಏರ್ಪಾಡಿಗಾಗಿ ಒಟ್ಟು ೪·೨೫ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಕಾರಣವೊಂದು; ಈ ವೆಚ್ಚವು ಅನಾವೃತ್ತ (Non-recurring) ಸ್ವಭಾವದ ವೆಚ್ಚವಾಗಿರುವ ಕಾರಣವೊಂದು; ಇವೆರಡನ್ನೂ ಪರಿಶೀಲಿಸಿ, ಈ ವೆಚ್ಚಕ್ಕಾಗಿ ವಿಶೇಷಸ್ವಭಾವದ ರಿಜರ್ವಿನಿಂದ ಪಡೆಯಲು ಅನುಕೂಲಿಸುವ ಹಾಗಿರುವ ಶಿಲ್ಕು ಮೊಬಲಗಿನಿಂದ ಹಣವನ್ನು ಒದಗಿಸಬೇಕೆಂದು ಉದ್ದೇಶಿಸಲಾಗಿದೆ. ಮುಂದಣಸಾಲಿನ ಆರಂಭದಲ್ಲಿ ಕ್ಷಾಮವಿಮೆಯ (Famine Insurance) ಫಂಡಿನ ಜಮೆಯಲ್ಲಿರತಕ್ಕ ಮೊಬಲಗು ೬೩ ಲಕ್ಷ ರೂಪಾಯಿಗಳು. ಈ ಫಂಡಿನ ಸಲುವಾಗಿ ಬಡ್ಡಿಗೆ ಹಾಕಿರತಕ್ಕ ಮೊಬಲಗುಗಳ ಮೇಲೆ ಶೇಖರವಾಗುವ ಬಡ್ಡಿಯ ಮೊಬಲಗಿನಲ್ಲಿ ಸ್ವಲ್ಪ ಭಾಗವನ್ನು ನೀರಾವರಿಯ ಬಾಬತು ಮೂಲಕಾಮಗಾರಿಗಳಿಗಾಗಿಯೂ, ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕಾಗಿಯೂ ವೆಚ್ಚಮಾಡಲಾಗುತ್ತದೆ: ಏಕೆಂದರೆ, ಈ ಕಾಮಗಾರಿಗಳ ಸಲುವಾಗಿ ನಡೆಸತಕ್ಕ ವೆಚ್ಚವು ಪರಿಣಾಮದಲ್ಲಿ ಕ್ಷಾಮವಿಮೆಯ ಒಂದು ರೂಪವೆನಿಸುತ್ತದೆ. ಮೇಲೆ ಹೇಳಿದ ಮೂರು ವಿಧದ ರಿಜರ್ವುಗಳಿಂದಲೂ ಹಣವನ್ನೊದಗಿಸಿ ಕೈಕೊಳ್ಳಬೇಕಾಗಿರುವ ಒಟ್ಟು ವೆಚ್ಚವು ಸುಮಾರು ೮ ಲಕ್ಷ ರೂಪಾಯಿಗಳು.

ಮೂಲಧನದ ಕಾಮಗಾರಿಗಳು.

ಮುಂದಣ ಸಾಲಿನಲ್ಲಿ ನಡೆಸಬೇಕಾದ ಮೂಲಧನದ ಕಾಮಗಾರಿಗಳ ಕಾರ್ಯಕ್ರಮಕ್ಕೋಸ್ಕರ ಸುಮಾರು ೫೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಈ ಮೊಬಲಗಿನಲ್ಲಿ ಬಹುಭಾಗದ ಹಣವು ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಇಲಾಖೆಯವರು ನಡೆಸುತ್ತಿರುವ ಹೊಸ ಯಂತ್ರಸ್ಥಾಪನೆಯ ಕೆಲಸಕ್ಕೋಸ್ಕರವಾಗಿ ವೆಚ್ಚವಾಗಬೇಕಾಗುತ್ತದೆ. ಯಂತ್ರಸ್ಥಾಪನೆಯ ಕೆಲಸವು ಶೀಘ್ರವಾಗಿ ನಡೆಯುತ್ತಾ ಇದೆ. ಕೃಷ್ಣರಾಜಸಾಗ
ರದ ಅಣೆಕಟ್ಟೆಯ ಕಾಮಗಾರಿಗಳಿಗಾಗಿ ೧೦·೫ ಲಕ್ಷ ರೂಪಾಯಿಗಳನ್ನೊದಗಿಸಲಾಗಿದೆ. ಮೈಸೂರು ಸರ್ಕಾರದವರು ಆಡಳಿತ ನಡೆಸುತ್ತಿರುವ ರೈಲ್ವೆಗಳಲ್ಲಿಯೂ, ಮದರಾಸು ಮತ್ತು ಸದರನ್‌ಮರಾಟಾ ರೈಲ್ವೆ ಕಂಪೆನಿಯವರು ಆಡಳಿತ ನಡೆಸುತ್ತಿರುವ ರೈಲ್ವೆಗಳಲ್ಲಿಯೂ ಸಹ, ರೈಲುಗಳು ಓಡಾಡುತ್ತಿರುವ ಲೈನುಗಳ ಅವಶ್ಯಕತೆಗಳಿಗೋಸ್ಕರ ಒದಗಿಸಿರುವ ಮೊಬಲಗು ೧೦·೫ ಲಕ್ಷ ರೂಪಾಯಿಗಳು.

ಆಡಳಿತಸಂಬಂಧವಾದ ಮುಖ್ಯಾಂಶಗಳು.

ಈ ಸಭೆಯ ಕಳೆದ ಅಧಿವೇಶನವು ಮುಗಿದಾಗಿನಿಂದ ರಾಜ್ಯಾಡಳಿತದಲ್ಲಿ ನಡೆದಿರುವ ಕಾರ್ಯಗಳ ಮುಖ್ಯಾಂಶಗಳಲ್ಲಿ ಕೆಲವನ್ನು ನಾವು ಈಗ ಪ್ರಸ್ತಾಪಿಸುತ್ತೇವೆ.

ರೆವೆನ್ಯೂ ಇಲಾಖೆ.

ಚಾಲ್ತಿ ಸಾಲಿನಲ್ಲಿ ತುಮಕೂರು ಮತ್ತು ಕೋಲಾರ, ಇವೆರಡು ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ಕಾಲಸ್ಥಿತಿಗಳು ನೆಟ್ಟಗಿರಲಿಲ್ಲ; ಸಂಸ್ಥಾನದ ಇತರ ಭಾಗಗಳಲ್ಲೆಲ್ಲಾ ಅವು ಚೆನ್ನಾಗಿದ್ದುವು. ತುಮಕೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಕಾಲಸ್ಥಿತಿಗಳು ನೆಟ್ಟಗಿಲ್ಲದಿದ್ದ ಪ್ರದೇಶಗಳಲ್ಲಿ ಕಷ್ಟನಿವಾರಣೆಯ ಏರ್ಪಾಡುಗಳನ್ನು ನಡೆಸಿಕೊಂಡು ಬರಲಾಯಿತು. ತಕಾವಿ ಸಾಲಗಳನ್ನು ಕೊಡುವುದು; ನಿರ್ಗತಿಕರಾದವರಿಗೆ ಧರ್ಮಾರ್ಥವಾದ ಸಹಾಯಮಾಡುವುದು; ಕೆರೆಗಳು ಸುರಕ್ಷಿತವಾಗಿರುವಂತೆ ತಕ್ಕ ಕಾಮಕಾರಿಗಳನ್ನು ನಡೆಸುವುದು; ಇತರ ಅಭಿವೃದ್ಧಿಸಾಧಕವಾದ ಕಾಮಗಾರಿಗಳನ್ನು ನಡೆಸುವುದು; ಈ ಕಾರ್ಯಗಳಿಗಾಗಿ ೭೪,೨೦೦ ರೂಪಾಯಿಗಳು ಮಂಜೂರ್ಮಾಡಲ್ಪಟ್ಟುವು.

ಸರ್ಕಾರದವರು ಕೆರೆಗಳ ಬಯಲಿನ ಜಮೀನುಗಳ ಬಾಬತು ತರೀ ಕಂದಾಯವನ್ನು ವಸೂಲ್ಮಾಡದೆ ತಾತ್ಕಾಲಿಕವಾಗಿ ನಿಲ್ಲಿಸುವ ವಿಚಾರವನ್ನೂ ಮತ್ತು ಅವುಗಳ ಬಾಬತು ತರೀ ಕಂದಾಯವನ್ನು ಮಾಫೀ ಬಿಡುವ ವಿಚಾರವನ್ನೂ ಜಾಗರೂಕತೆಯಿಂದ ಪರಿಶೀಲನೆಮಾಡಿ ನೋಡಿದರು. ಕಂದಾಯವನ್ನು ಮಾಫೀ ಮಾಡುವ ವಿಚಾರದಲ್ಲಿನ ನಿಬಂಧನೆಗಳನ್ನು ತಿದ್ದುಪಾಟು ಮಾಡಿ ತದನುಗುಣವಾಗಿ ಹೊಸ ನಿಬಂಧನೆಗಳನ್ನು ೧೯೨೫ನೆಯ ಇಸವಿ ಅಕ್ಟೋಬರ್ ತಿಂಗಳಲ್ಲಿ ಸಾದರುಮಾಡಿದರು. ಚಾಲ್ತಿ ಸಾಲಿನಲ್ಲಿ ಈ ನಿಬಂಧನೆಗಳ ಮೇರೆಗೆ 99,462 ರೂಪಾಯಿಗಳ ಕಂದಾಯದ ಮೊಬಲಗನ್ನು ಮಾಫೀ ಬಿಡಲಾಯಿತು.

1924-25 ನೇ ಸಾಲಿನಲ್ಲಿ ಭಾರಿ ಪ್ರವಾಹಗಳು ಬಂದಿದ್ದುದು ಸರಿಯಷ್ಟೆ. ಅವುಗಳ ದೆಸೆಯಿಂದ ನಷ್ಟಗಳು ಸಂಭವಿಸಿದ ಡಿಸ್ಟ್ರಿಕ್ಟುಗಳಲ್ಲಿ ದುರಸ್ತಿಯ ಕಾಮಗಾರಿಗಳಿಗಾಗಿ 90,000 ರೂಪಾಯಿಗಳಿಗಿಂತಲೂ ಸ್ವಲ್ಪ ಹೆಚ್ಚು ಮೊಬಲಗು ಮಂಜೂರು ಮಾಡಲ್ಪಟ್ಟಿತು. ಈ ಸಂಬಂಧದಲ್ಲಿ ಸೆಂಟ್ರಲ್ ಫ್ಲಡ್‌ರಿಲೀಫ್ ಕಮಿಟಿಯವರು ಪ್ರವಾಹಗಳ ದೆಸೆಯಿಂದ ನಷ್ಟಕ್ಕೊಳಗಾದವರ ಕಷ್ಟಗಳನ್ನು ನಿವಾರಣೆಮಾಡುವುದಕ್ಕಾಗಿ ತ್ವಾಘ್ಯರೀತಿಯಲ್ಲಿ ಕೆಲಸಮಾಡಿರುವುದನ್ನು ತಿಳಿಸದೆ ಇರುವುದು ಸರಿಯಲ್ಲ. ಕಷ್ಟಕ್ಕೆ ಗುರಿಯಾಗಿದ್ದವರಿಗೆ ಸಕಾಲದಲ್ಲಿ ಸಹಾಯವನ್ನೊದಗಿಸುವುದಕ್ಕೋಸ್ಕರ ಈ ಕಮಿಟಿಯ ಖಾಸಗೀ ಮೆಂಬರುಗಳು ಸರ್ಕಾರದವರೊಡನೆ ಸಹಕಾರಭಾವದಿಂದ ವರ್ತಿಸಿರುತ್ತಾರೆ. ಅವರು ಮನಃಪೂರ್ವಕವಾಗಿ ಹೀಗೆ ಕೆಲಸಮಾಡಿರುವುದಕ್ಕಾಗಿ ಸರ್ಕಾರದವರು ಅವರನ್ನು ವಿಶೇಷವಾಗಿ ವಂದಿಸಬೇಕಾಗಿದೆ. ಕಮಿಟಿಯವರ ಕೆಲಸಗಳು ಪರಿಸಮಾಪ್ತಿಯನ್ನು ಹೊಂದಿರುತ್ತವೆ. ಕಮಿಟಿಯವರ ವಶದಲ್ಲಿ 55,000 ರೂಪಾಯಿಗಳ ಶಿಲ್ಕು ಮೊಬಲಗು ವೆಚ್ಚವಾಗದೆ ಉಳಿದಿರುತ್ತವೆ. ಈ ಮೊಬಲಗನ್ನು ಉತ್ತಮರೀತಿಯಲ್ಲಿ ವೆಚ್ಚಮಾಡುವ ಬಗೆ ಹೇಗೆಂಬುದು ಈಗ ಪರ್ಯಾಲೋಚನೆಯಲ್ಲಿದೆ.

ವ್ಯವಸಾಯದ ಇಲಾಖೆ.

ಕಾಫೀ ಸೆಸ್ ವಸೂಲಾದ ಕಾನೂನನ್ನು ಕಾನೂನನ್ನಾಗಿ ಏರ್ಪಡಿಸಲಾಯಿತು. ಸದರಿ ಸೆಸ್ಸನ್ನು ವಿಧಿಸುವುದು, ಅದನ್ನು ವಸೂಲುಮಾಡುವುದು, ಮತ್ತು ಅದರಿಂದ ಬಂದ ಹುಟ್ಟುವಳಿಯನ್ನು ವಿನಿಯೋಗಿಸಿ ಆಡಳಿತ ನಡೆಸುವುದು; ಇವುಗಳ ಬಗ್ಗೆ ನಿಬಂಧನೆಗಳನ್ನು ರಚಿಸಿ ಸಾದರು ಮಾಡಲಾಯಿತು. ಬಾಳೇಹೊನ್ನೂರಿನಲ್ಲಿರುವ ಕಾಫಿಯ ಪ್ರಯೋಗಕ್ಷೇತ್ರದಲ್ಲಿನ ಪ್ರಯೋಗ ಕಾರ್ಯಗಳು ತೃಪ್ತಿಕರವಾಗಿ ಮುಂದುವರಿಯುತ್ತಾ ಇವೆ.

ಚಾಲ್ತಿ ಸಾಲಿನಲ್ಲಿ ಸಂಸ್ಥಾನದ ಕೆಲವು ಭಾಗಗಳಲ್ಲಿ ದೊಡ್ಡರೋಗದ ಹಾವಳಿಗುಪಕ್ರಮವಾಯಿತು. ದನಗಳಿಗೆ ದೊಡ್ಡರೋಗವು ತಗಲದಂತೆ ಇನಾಕ್ಯುಲೇಷನ್ ಮಾಡುವುದಕ್ಕಾಗಿ "ಸೀರಂ" ರಸವನ್ನು ಕೊಂಡುಕೊಳ್ಳಲು ವಿಶೇಷರೀತಿಯ ಗ್ರಾಂಟನ್ನು ಮಂಜೂರುಮಾಡಿದ ವಿಷಯವನ್ನು ಹಿಂದೆಯೇ ತಿಳಿಸಿದ್ದೇವೆ. ಈ "ಸೀರಂ" ರಸವನ್ನು ಸಂಸ್ಥಾನದಲ್ಲಿಯೇ ತಯಾರಿಸುವ ವಿಚಾರವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ.

ಸಿಟಿಗಳಲ್ಲಿಯೂ, ಟವನುಗಳಲ್ಲಿಯೂ ನೀರಿನ ಸರಬರಾಯಿ.

ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗ, ಈ ಸ್ಥಳಗಳಲ್ಲಿ ನೀರುಸರಬರಾಯಿ ಏರ್ಪಾಡನ್ನು ಮೇಲ್ಪಡಿಸಲು ಚಾಲ್ತಿ ಸಾಲಿನಲ್ಲಿ ಸ್ಕೀಮುಗಳು ಮಂಜೂರ್ಮಾಡಲ್ಪಟ್ಟುವು. ಬೆಂಗಳೂರಿನ ನೀರುಸರಬರಾಯಿ ಏರ್ಪಾಡಿನ ವಿಚಾರವನ್ನು ಸಮಗ್ರವಾಗಿ ಪರಿಶೋಧನೆಮಾಡಿ, ಮುಂದೆ ಯಾವಾಗಲೂ ನೀರಿಗೆ ಕೊರತೆಯಾಗದಂತೆ ಮಾಡಲು ತಕ್ಕ ಸಲಹೆಗಳನ್ನು ಕೊಡುವುದಕ್ಕಾಗಿ ಒಂದು ಕಮಿಟಿಯನ್ನು ನೇಮಕಮಾಡಿದೆ. ಅದಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗಿದ್ದಾರೆ. ಸಂಸ್ಥಾನದ ಇತರ ಮುಖ್ಯಪಟ್ಟಣಗಳಲ್ಲಿಯೂ ಸಹ, ನೀರಿನಸರಬರಾಯಿ ಏರ್ಪಾಡನ್ನು ಮೇಲ್ಪಡಿಸುವ ವಿಚಾರವನ್ನೂ ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಕೋಲಾರ, ಮೂಡಗೆರೆ ಮತ್ತು ಚಿತ್ರದುರ್ಗ, ಈ ಸ್ಥಳಗಳಲ್ಲಿನ ನೀರುಸರಬರಾಯಿಗೆ ಏರ್ಪಾಡುಮಾಡಲು ಚಾಲ್ತಿ ಸಾಲಿನಲ್ಲಿ ಸ್ಕೀಮುಗಳು ಮಂಜೂರುಮಾಡಲ್ಪಟ್ಟುವು. ದೊಡ್ಡಬಳ್ಳಾಪುರ, ತರೀಕೆರೆ, ಯಡತೊರೆ, ವೈಟ್‌ಫೀಲ್ಡ್ ಮತ್ತು ಮಳವಳ್ಳಿ, ಈ ಸ್ಥಳಗಳಲ್ಲಿಯೂ ನೀರುಸರಬರಾಯಿ ಏರ್ಪಾಡನ್ನು ಮಾಡಲು ಇದೇ ವಿಧವಾದ ಸ್ಕೀಮುಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ವಿದ್ಯಾಭ್ಯಾಸ.

ವಿದ್ಯಾಭ್ಯಾಸದ ಇಲಾಖೆಗೆ 48.30 ಲಕ್ಷ ರೂಪಾಯಿಗಳ ಗ್ರಾಂಟನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದ್ದಿತು. ಈ ಪೈಕಿ 8.66 ಲಕ್ಷ ರೂಪಾಯಿಗಳು ಲೋಕಲ್‌ಸೆಸ್ ಮೊಬಲಗಿನಿಂದಲೂ ಮತ್ತು ಸ್ಥಳೀಯ ಸಂಸ್ಥೆಗಳಿಂದ ಬಂದ ಕಂಟ್ರಿಬ್ಯೂಷನ್ ಮೊಬಲಗುಗಳಿಂದಲೂ ಒದಗಿಸಲ್ಪಟ್ಟುವು. ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಏರ್ಪಾಡುಮಾಡುವ ಆವಶ್ಯಕತೆಯು ಹೆಚ್ಚುತ್ತಾ ಇದೆ. ಆದಕಾರಣ, ನಂಜನಗೂಡಿನಲ್ಲಿ ಒಂದು ಹೈಸ್ಕೂಲನ್ನೂ, ಮತ್ತು ತೀರ್ಥಹಳ್ಳಿಯಲ್ಲಿ ಒಂದು ಹೈಸ್ಕೂಲನ್ನೂ ಸ್ಥಾಪಿಸಲಾಯಿತು. ಇದಲ್ಲದೆ ಆ ಮೊದಲೇ ಇದ್ದ ಇತರ ಹೈಸ್ಕೂಲುಗಳಲ್ಲಿ ಹೆಚ್ಚಿಗೆ ಸೆಕ್ಷನ್‌ಗಳನ್ನು ಏರ್ಪಡಿಸಲಾಯಿತು. ಇನ್ನೂ ಕೆಲವು ಹೈಸ್ಕೂಲುಗಳನ್ನು ಸ್ಥಾಪಿಸತಕ್ಕುದು ಅವಶ್ಯಕವಾಗಿದೆ. ಆದರೆ ಈ ಕೆಲಸವನ್ನು ಹಣವು ದೊರೆತಹಾಗೆಲ್ಲಾ ನಡೆಸಿಕೊಂಡು ಬರಬೇಕಾಗುತ್ತದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪಾಠಕ್ರಮವನ್ನು ಪೂರ್ತಿಯಾಗಿ ತಿದ್ದುಪಾಟುಮಾಡಿ ಎಲ್ಲಾ ಹೈಸ್ಕೂಲುಗಳಲ್ಲಿಯೂ ಜಾರಿಯಲ್ಲಿ ತಂದುದಾಯಿತು. ಅನೇಕ ಹೈಸ್ಕೂಲುಗಳಲ್ಲಿ ಕಸುಬುದಾರಿ ವಿದ್ಯೆಯನ್ನೂ ವಾಣಿಜ್ಯಸಂಬಂಧವಾದ ವಿಷಯಗಳನ್ನೂ ಬೋಧಿಸಲು ಏರ್ಪಾಡುಮಾಡಲಾಯಿತು. ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ವಿದ್ಯಾಭ್ಯಾಸದ ಸೆಸ್ಸನ್ನು ಚಾಲ್ತಿಸಾಲಿನಲ್ಲಿ ವಸೂಲ್ಮಾಡಲು ಸಮ್ಮತಿಸಿರುತ್ತಾರೆ. ಸಂಸ್ಥಾನದಲ್ಲಿನ 8 ಡಿಸ್ಟ್ರಿಕ್ಟುಗಳ ಪೈಕಿ ಈ ಡಿಸ್ಟ್ರಿಕ್ಟೂ ಸೇರಿ, 6 ಡಿಸ್ಟ್ರಿಕ್ಟುಗಳಲ್ಲಿ ವಿದ್ಯಾಭ್ಯಾಸದ ಸೆಸ್ಸು ವಸೂಲಾಗುತ್ತಾ ಇದೆ. ಆರಂಭದಿಂದಲೂ ಇಲ್ಲಿನವರೆಗೆ ಸೆಸ್ ಮೊಬಲಗುಗಳಿಂದ ಮಂಜೂರಾಗಿರುವ ಒಟ್ಟು ಹಣದಿಂದ ಈಗ ವರ್ಷಂಪ್ರತಿಯಲ್ಲಿಯೂ 2.60 ಲಕ್ಷ ರೂಪಾಯಿಗಳ ವೆಚ್ಚವು ನಡೆಯುವಂತಾಗಿದೆ. ಈ ಮೊಬಲಗಿನ ಸಹಾಯದಿಂದ 52 ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನು ಹೊಸಮಾದರಿಯ ಮಿಡ್ಲ್ ಸ್ಕೂಲುಗಳನ್ನಾಗಿ ಮಾರ್ಪಡಿಸಲಾಯಿತು; ಮತ್ತು 72 ಪ್ರೈಮರಿ ಸ್ಕೂಲುಗಳನ್ನು ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನಾಗಿ ಮಾರ್ಪಡಿಸಲು ಸಾಧ್ಯವಾಯಿತು; ಮತ್ತು 156 ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಸ್ಥಾಪಿಸಲಾಯಿತು. ಇದೇ ಮೊಬಲಗಿನ ಸಹಾಯದಿಂದ 763 ಏಡೆಡ್ ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳನ್ನಾಗಿ ಬದಲಾಯಿಸುವುದೂ ಕೂಡ ಸಾಧ್ಯವಾಯಿತು. ಬೆಂಗಳೂರಿನಲ್ಲಿರುವ ಆದಿಕರ್ನಾಟಕ ಬೋರ್ಡಿಂಗ್ ಹೋಮಿನಲ್ಲಿ 80 ಮಂದಿ ವಿದ್ಯಾರ್ಥಿಗಳು ವಾಸಮಾಡಲನುಕೂಲಿಸುವಂತೆ ಅದನ್ನು ಬಡಾವಣೆಗೊಳಿಸಲಾಯಿತು. ಇದಕ್ಕಾಗಿ 9,000 ರೂಪಾಯಿಗಳ ಹೆಚ್ಚುವೆಚ್ಚವನ್ನು ನಡೆಸಲಾಯಿತು.

ಮೈಸೂರು ಯೂನಿವರ್ಸಿಟಿ.

ಇಂಡಿಯಾ ದೇಶದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳು ಹೊಸ ರೀತಿಯನ್ನವಲಂಬಿಸಿರುತ್ತವೆ: ಮತ್ತು ಮೈಸೂರು ದೇಶವೂ ಸಾರ್ವತ್ರಿಕವಾದ ಈ ಏರ್ಪಾಡಿನಲ್ಲಿ ಭಾಗಿಯಾಗಿದೆ. ಮೇಲ್ಕಂಡ ಈ ವಿಷಯಗಳನ್ನು ರಚನಾಕ್ರಮಕ್ಕೆ ಸಂಬಂಧಪಟ್ಟವುಗಳೆಂದೂ (Constitutional), ವಿದ್ಯಾಶಾಖೆಗಳ (ಫ್ಯಾಕಲ್ಟಿಗಳು) ಮತ್ತು ಪಾಠಕ್ರಮಗಳ ವ್ಯವಸ್ಥೆಗೆ ಸಂಬಂಧಪಟ್ಟವುಗಳೆಂದೂ, ಮುಖ್ಯವಾದ ಎರಡು ಬಾಬುಗಳ ಕೆಳಗೆ ಒಟ್ಟುಗೂಡಿಸಿ ಹೇಳಬಹುದಾಗಿದೆ. ಮೊದಲನೆಯ ಬಾಬಿನ ವಿಚಾರವನ್ನು ಪರಿಗಣಿಸಿನೋಡಿದರೆ, ಒಂದೇ ಕಡೆಯಲ್ಲಿ ಯೂನಿವರ್ಸಿಟಿಗೆ ಸೇರಿದಂತೆ ಹಲವು ಕಾಲೇಜುಗಳೂ ಇರುವಂತೆಯೋ ಅಥವಾ ಹಲವು ಮಧ್ಯರಂಗಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸೇರಿದ ಹಲವು ಕಾಲೇಜುಗಳು ಇರುವಂತೆಯೋ, ಮಾಡಿಕೊಂಡು ಬೋಧನಾಕ್ರಮವನ್ನು ಸಮಂಜಸವಾಗಿ ಜರುಗಿಸುವ ಫೆಡರಲ್ ಮಾದರಿಯ ವಿಶ್ವವಿದ್ಯಾನಿಲಯವು ಏರ್ಪಡುವಂತೆ ಕೆಲಸಗಳು ಜರುಗುತ್ತಾ ಬರುತ್ತಿವೆಯೆಂಬುದು ವ್ಯಕ್ತವಾಗುತ್ತದೆ. ಎರಡನೆಯಬಾಬಿನ ವಿಚಾರವನ್ನು ಪರಿಗಣಿಸಿದರೆ ವಿಶ್ವವಿದ್ಯಾನಿಲಯದ ಫ್ಯಾಕಲ್ಟಿ (Faculty) ಗಳೂ ಮತ್ತು ವ್ಯಾಸಂಗಕ್ರಮಗಳೂ ಸಹ. ದೇಶದ ಸಾಧನಸಂಪತ್ತುಗಳಿಗೂ, ಜನರ ಸ್ವಭಾವ ಸಾಮರ್ಥ್ಯಗಳಿಗೂ ಅನುಸಾರವಾಗಿ ಹೊಂದಿಕೆಯಾಗಿರುವಂತೆ ಮಾಡಲು ತಕ್ಕ ಮೇಲ್ಪಾಟುಗಳನ್ನು ಕಲ್ಪಿಸುವುದು, ಸಾಮಾನ್ಯವಾಗಿ ಈ ಏರ್ಪಾಡಿನ ಆಶಯವಾಗಿರುವಂತೆ ತೋರುತ್ತದೆ.

ಮೈಸೂರು ವಿಶ್ವವಿದ್ಯಾನಿಲಯವು ಅದು ಪ್ರಾರಂಭಿಸಲ್ಪಟ್ಟಂದಿನಿಂದಲೂ ಈ ಎರಡು ಬಗೆಯ ಮಾರ್ಗಗಳನ್ನೂ ಏಕರೀತಿಯಲ್ಲಿ ಅನುಸರಿಸುತ್ತಾ ಬಂದಿದೆ. ಈಚೆಗೆ ಒಂದು ವೈದ್ಯವಿದ್ಯದ ಫ್ಯಾಕಲ್ಟಿಯನ್ನೂ, ಡಿಗ್ರಿ ಮತ್ತು ಡಿಪ್ಲೊಮಾ ಪರೀಕ್ಷೆಗಳನ್ನೊಳಗೊಂಡ ಒಂದು ಮೆಡಿಕಲ್ ಕಾಲೇಜನ್ನೂ, ಮೈಸೂರಲ್ಲಿರುವ ಯೂನಿವರ್ಸಿಟಿ ಆರ್ಟ್ಸ್ ಕಾಲೇಜಿನಲ್ಲಿ ಒಂದು ಶಿಕ್ಷಣಶಾಖೆಯನ್ನೂ, ಬೆಂಗಳೂರಿನಲ್ಲಿರುವ ಯೂನಿವರ್ಸಿಟಿ ಇಂಜನಿಯರಿಂಗ್ ಕಾಲೇಜಿನಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಇಂಜನಿಯರಿಂಗ್ ಶಾಖೆಯೊಂದನ್ನೂ, ಮತ್ತು ಬೆಂಗಳೂರಲ್ಲಿರುವ ಯೂನಿವರ್ಸಿಟಿ ಸೈನ್ಸ್ ಕಾಲೇಜಿನಲ್ಲಿ ವಿಜ್ಞಾನಶಾಸ್ತ್ರಕ್ಕೆ ಸಂಬಂಧಪಟ್ಟ ಕೆಲವು ಮುಖ್ಯವಾದ ಮತ್ತು ಅತ್ಯಗತ್ಯವಾದ ಯಂತ್ರಸ್ಥಾಪನೆಯ ಬಡಾವಣೆಗಳನ್ನೂ, ವಿಶ್ವವಿದ್ಯಾನಿಲಯಕ್ಕೆ ಹೆಚ್ಚಾಗಿ ಸೇರಿದೆ. "ಹ್ಯೂಮನಿಸ್ಟಿಕ್" ಎಂದರೆ ಚರಿತ್ರೆ, ತತ್ವಶಾಸ್ತ್ರ ಮುಂತಾದ ವ್ಯಾಸಂಗಗಳ ಬಾಬಿನಲ್ಲಿ, ಚರಿತ್ರೆಯ ಪಾಠಕ್ರಮದೊಡನೆ ಪ್ರಾಕ್ತನ ವಿಚಾರಗಳಿಗೂ, ಶಿಲಾಶಾಸನಗಳಿಗೂ, ಸಂಬಂಧಪಟ್ಟ ವ್ಯಾಸಂಗವನ್ನು ಸೇರಿಸುವುದಕ್ಕೂ, ಚರಿತ್ರೆಯ ವ್ಯಾಸಂಗದಲ್ಲಿ ವಸ್ತುತಃ ಪ್ರಾಂತಿಕಸಂಬಂಧವಿರುವಂತೆ ಮಾಡುವುದಕ್ಕೂ, ಯೂನಿವರ್ಸಿಟಿಗೆ ಪ್ರಾಕ್ತನವಿಮರ್ಶೆಯ ಇಲಾಖೆಯನ್ನು ವರ್ಗಾಯಿಸಿರುವುದರಿಂದ ಎಷ್ಟೋ ಸಹಾಯವಾಗಿದೆ. ಇದಲ್ಲದೆ, "ಅಪ್ಲೈಡ್ ಸೈನ್ಸ್" ಮತ್ತು "ಟೆಕ್ನಾಲಜಿ" ಇವುಗಳ ವ್ಯಾಸಂಗವನ್ನೂ "ಇಂಡಾಲಜಿ" ಎಂದರೆ ಇಂಡಿಯಾ ದೇಶದ ಸಾಹಿತ್ಯ, ತತ್ವಶಾಸ್ತ್ರ, ಮುಂತಾದುವು ಮತ್ತು ಮಾನವಸಂಸ್ಕೃತಿಬೋಧಕವಾದ ಚರಿತ್ರೆ ಇವುಗಳ ವ್ಯಾಸಂಗಕ್ರಮವನ್ನೂ, ನವೀನರೀತಿಯಲ್ಲಿ ಏರ್ಪಡಿಸುವುದು ಅತ್ಯಾವಶ್ಯಕವಾಗಿರುವುದರಿಂದ ಇವುಗಳನ್ನು ತಿಳಿದುಕೊಂಡುಬರುವುದಕ್ಕಾಗಿ ವಿದ್ವಾಂಸರುಗಳನ್ನು ಪರದೇಶಗಳಿಗೆ ಕಳುಹಿಸಲಾಗಿದೆ. ಗಣಿತಶಾಸ್ತ್ರ ಮತ್ತು "ಎಕ್ಸ್‌ಪೆರಿಮೆಂಟಲ್ ಸೈಕಾಲಜಿ" ಪ್ರಯೋಗಸಹಿತವಾಗಿ ಮನಶ್ಶಾಸ್ತ್ರವ್ಯಾಸಂಗ ಇವುಗಳ ಶಾಖೆಗಳ ಸಂಬಂಧದಲ್ಲಿ ಗಣಿತಶಾಸ್ತ್ರಕ್ಕೂ, ದೇಶದಲ್ಲಿ ಜನರ ಸ್ಥಿತಿಗತಿಗಳ ಲೆಕ್ಕಗಳಿಗೂ ಸಂಬಂಧಪಟ್ಟ ಹೊಸ ಪಾಠಕ್ರಮಗಳನ್ನು ಏರ್ಪಡಿಸಲಾಗಿದೆ; ಇವುಗಳ ವ್ಯಾಸಂಗದಿಂದ ಆಯಾ ವ್ಯಾಸಂಗ ವಿಷಯಗಳಲ್ಲಿ ಪ್ರತ್ಯಕ್ಷಾನುಭವದಿಂದ ಪರಿಶ್ರಮವುಂಟಾಗಿ ಅದು ಖಚಿತವಾಗಿ ನಿಲ್ಲುವುದಕ್ಕೆ ಅವಕಾಶವಾಗುವುದು.

ವಿದ್ಯಾವಿಷಯಕವಾದ ಈ ಪಾರಿಭಾಷಿಕ ವಿಚಾರಗಳನ್ನು ನಾವು ಇನ್ನು ಹೆಚ್ಚಾಗಿ ಪ್ರಸ್ತಾಪಿಸುವವರಾಗಿಲ್ಲ: ಆದರೆ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ವಿಚಾರದಲ್ಲಿ ಈಚೆಗೆ ಮೈಸೂರು ಸಂಸ್ಥಾನದಲ್ಲಿ ನಡೆದಿರುವಂತಹ ಆರಂಭಕಾರ್ಯವನ್ನು ಪ್ರಜೆಗಳ ಗಮನಕ್ಕೆ ತರುವುದಕ್ಕೆ ಇಷ್ಟುಮಟ್ಟಿನ ವಿವರಣೆಯು ಆವಶ್ಯಕವಾಗಿದೆ. ಪುನರ್ವ್ಯವಸ್ಥೆಯ ಕಾರ್ಯವನ್ನು ಈಗಾಗಲೇ ಬಹುಮಟ್ಟಿಗೆ ನಡೆಸಲಾಗಿದೆ. ಆಡಳಿತವನ್ನು ಮಿತವ್ಯಯದಿಂದ ನಿರ್ವಹಿಸುತ್ತಾ, ಸುಮಾರು ಐದುವರುಷಗಳ ಹಿಂದೆ ವಿಶ್ವವಿದ್ಯಾನಿಲಯಕ್ಕೆ ಕೊಡುತ್ತಿದ್ದ ಸುಮಾರು ಏಳುಲಕ್ಷ ರೂಪಾಯಿನ ಸಂಸ್ಥಾನದ ಗ್ರಾಂಟಿನಿಂದಲೇ, ಬಹು ವಿಷಯಗಳನ್ನೊಳಗೊಂಡು ಗಹನವಾಗಿರುವ ಈ ನವೀನ ಮೇಲ್ಪಾಟುಗಳಿಗೆಲ್ಲಾ ಹಣವನ್ನೊದಗಿಸುವುದು ಸಾಧ್ಯವಾಗಿದೆಯೆಂಬುದನ್ನು ತಿಳಿಯುವುದು ತಮ್ಮೆಲ್ಲರಿಗೂ ಸಂತೋಷಕರವಾಗಿರಬಹುದು.

ವಿಶ್ವವಿದ್ಯಾನಿಲಯದ ಪುನರ್ವ್ಯವಸ್ಥೆಯ ಏರ್ಪಾಡಿನ ಮಸೂದೆಯನ್ನು ಸೆನೇಟ್ ಸಭೆಯವರು ದೀರ್ಘಕಾಲ ಸಂಪೂರ್ಣವಾಗಿ ವಿಚಾರಮಾಡಿದ ತರುವಾಯ, ಅದನ್ನು ಅಂಗೀಕರಿಸಿ ಸರ್ಕಾರದವರಿಗೆ ಒಪ್ಪಿಸಿದ್ದಾರೆ. ಈ ಮೇಲ್ಪಾಟುಗಳ ವಿಷಯವನ್ನೆಲ್ಲಾ ಈಗ ಅದರಲ್ಲಿ ಸಂಪೂರ್ಣಸ್ಥಿತಿಗೆ ತರಲಾಗಿದೆ. ಹಾಲಿ ಇರುವ ಎಂಟ್ರೆನ್ಸ್ ಸೆಕ್ಷನಿಗೆ ಬದಲಾಗಿ ಇಂಟರ್‌ಮೀಡಿಯೆಟ್ ಕಾಲೇಜುಗಳನ್ನೂ ಇಂಟರ್‌ಮೀಡಿಯೆಟ್ ವ್ಯಾಸಂಗಕ್ರಮಗಳನ್ನೂ ಏರ್ಪಡಿಸುವುದೊಂದು, ಮತ್ತು ಈ ಸಂಸ್ಥಾನದಲ್ಲಿ ಯಾವ ಉದ್ಯಮಗಳಿಗೆ ಸೌಕರ್ಯಗಳೂ ಸಾಧನಸಂಪತ್ತುಗಳೂ ಇರುವುವೋ ಅಂತಹ ವಿವಿಧ ಕೈಗಾರಿಕೆಗಳ ಮತ್ತು ವ್ಯವಸಾಯದ ಉದ್ಯಮಗಳಲ್ಲಿ ವ್ಯವಹಾರೋಚಿತವಾದ ಶಾಸ್ತ್ರೀಯ ಶಿಕ್ಷಣೆಯನ್ನು ಕೊಡುವ ಬಗೆಬಗೆಯ ಕೈಗಾರಿಕೆಗಳಲ್ಲಿ ಡಿಪ್ಲೊಮಾಗಳನ್ನು ಪಡೆಯತಕ್ಕ ವ್ಯಾಸಂಗಕ್ರಮಗಳನ್ನೇರ್ಪಡಿಸುವುದು ಮತ್ತೊಂದು— ಈ ರೀತಿಯಾದ ಎರಡು ಮುಖ್ಯಾಂಶಗಳು ಸದರಿ ಏರ್ಪಾಡಿನಲ್ಲಿ ಸೇರಿರುತ್ತವೆ.

ಎಂಟ್ರೆನ್ಸ್ ತರಗತಿಯ ವ್ಯಾಸಂಗವು ವಿದ್ಯಾಭ್ಯಾಸದ ಶಿಕ್ಷಾಕ್ರಮದಲ್ಲಿ ಯಾವುದೊಂದು ನಿರ್ದಿಷ್ಟವಾದ ಅಂತಸ್ತನ್ನೂ ಸೂಚಿಸುವುದಿಲ್ಲ. ಒಂದುಸ್ಥಿತಿಯಿಂದ [illegible] ವ್ಯಾಸಂಗಮಾಡಿ, ಅಲ್ಲಿಗೆ ಬಿಟ್ಟುಬಿಡುವ ವಿದ್ಯಾರ್ಥಿಗಳು ಸೆಳೆಂಡರಿ ಶಿಕ್ಷಾಕ್ರಮಕ್ಕೆ ಮೇಲ್ಪಟ್ಟು ವಿಶೇಷ ವಿದ್ಯಾವಂತರಾಗಿರುವುದಿಲ್ಲ ಮತ್ತು ಉತ್ತೀರ್ಣರಾಗುವವರೂ ಸಹ ಸಂಸ್ಥಾನವನ್ನು ಬಿಟ್ಟು ಹೊರಗಡೆಗೆ ಹೋದಲ್ಲಿ ಕಸಬುದಾರಿ ತರಗತಿಗಳಿಗಾಗಲಿ ಅಥವಾ ಸಾಮಾನ್ಯ ಗ್ರಾಜ್ಯುಯೇಟುಗಳಾಗಲು ಆಯಾ ತರಗತಿಗಳಿಗಾಗಲಿ, ಸೇರಿಸಿಕೊಳ್ಳಲ್ಪಡುವುದಕ್ಕೆ ಅರ್ಹರಾಗಿರುವರೆಂದು ಅಂಗೀಕರಿಸಲ್ಪಡುವುದಿಲ್ಲ.

ವಿಶ್ವವಿದ್ಯಾನಿಲಯದವರು ಕಲ್ಪಿಸಿರುವ ರೀತಿಯಲ್ಲಿ ಇಂಟರ್‌ಮೀಡಿಯೇಟ್ ಶಿಕ್ಷಾಕ್ರಮಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹೋಗಲು ಇನ್ನೂ ಒಂದು ವರುಷಕಾಲ ಹೆಚ್ಚಾಗಿ ವ್ಯಾಸಂಗಮಾಡಬೇಕಾಗುವುದು; ಅಲ್ಲದೆ ಸುಮಾರು ೨,೦೦೦ ದಿಂದ ೨,೫೦೦ ವಿದ್ಯಾರ್ಥಿಗಳಿಗೆ ಅವರವರ ಅಭಿರುಚಿಗೂ ಪ್ರಯೋಜನಾಂಶಗಳಿಗೂ ಸರಿಹೋಗುವಂತೆ ನಾನಾ ಗ್ರೂಪು (ವರ್ಗ) ಗಳ ಪೈಕಿ ಒಂದನ್ನು ಚುನಾಯಿಸಿಕೊಳ್ಳುವುದಕ್ಕೆ ಅವಕಾಶವೂ ಸಹ ಒದಗುವುದು. ಇದರಿಂದ ನಮ್ಮ ಯುವಕರಿಗೆ ಟೆಕ್ನೊಲಾಜಿಕಲ್ ಮತ್ತು ಪ್ರೊಫೆಷನಲ್ ಕಾಲೇಜುಗಳಲ್ಲಿಯೂ ಮತ್ತು ಇಂಟರ್‌ಮೀಡಿಯೇಟ್ ಪರೀಕ್ಷೆಯಾದನಂತರ ವ್ಯಾಸಂಗಮಾಡಬೇಕಾದ ಡಿಪ್ಲೊಮಾ ಶಿಕ್ಷಾಕ್ರಮಗಳ ರೂಪದಲ್ಲಿಯೂ ಮತ್ತಷ್ಟು ಅಧಿಕವಾದ ತರಬೇತು ದೊರೆಯುವುದೆಂದೂ, ಈ ಮೂಲಕ ಸಂಸ್ಥಾನದಲ್ಲಿ ಪರಿಣಾಮದಲ್ಲಿ ಬಗೆಬಗೆಯ ವ್ಯವಸಾಯ ಮತ್ತು ಕೈಗಾರಿಕೆಯ ವೃತ್ತಿಗಳು ಸ್ಥಾಪಿತವಾಗುವುದಕ್ಕೆ ಸಹಾಯವಾಗುವುದೆಂದೂ, ನಿರೀಕ್ಷಿಸಲಾಗಿದೆ. ಸೆನೇಟಿನವರ ಅನುಮೋದನೆಯನ್ನು ಪಡೆದು ಸರ್ಕಾರದವರ ಮಂಜೂರಾತಿಗೆ ಒಪ್ಪಿಸಲ್ಪಟ್ಟಿರುವ ಇಂಟರ್‌ಮೀಡಿಯೇಟ್ ಶಿಕ್ಷಾಕ್ರಮದ ಉದ್ದೇಶಗಳು ಇಂಥವುಗಳಾಗಿರುತ್ತವೆ. ಬಡಾವಣೆಗೊಂಡು ನಾನಾ ಭಾಗಗಳನ್ನುಳ್ಳ ಈ ಇಂಟರ್‌ಮೀಡಿಯೇಟ್ ಶಿಕ್ಷಾಕ್ರಮದಿಂದ ಯೂನಿವರ್ಸಿಟಿ ವಿದ್ಯಾಭ್ಯಾಸವು ಅದರ ಈಗಣ ವಿಶೇಷ ಅನನುಕೂಲಸ್ಥಿತಿಯಿಂದ ಚೇತರಿಸಿಕೊಳ್ಳುವುದೆಂದೂ, ಮತ್ತು ಸಾಮಾಜಿಕ ವಿಷಯಗಳಲ್ಲಿಯೂ, ಅರ್ಥಸಾಧಕ ಭಾಗಗಳಲ್ಲಿಯೂ, ಅವ್ಯವಸ್ಥೆಯುಂಟಾಗುವಂತೆ ಉದ್ಯೋಗಗಳಿಲ್ಲದವರ ಸಂಖ್ಯೆಗಳನ್ನು ಹೆಚ್ಚಿಸಿರುವ ಶುದ್ಧಸಾಹಿತ್ಯ ಮತ್ತು ಕೇವಲ ವಿಜ್ಞಾನಶಾಸ್ತ್ರಭಾಗದ ಶಿಕ್ಷಾಕ್ರಮಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಮಿತಿಮೀರಿರುವುದು ತಪ್ಪಲು ಬಹುಮಟ್ಟಿಗೆ ಸಹಾಯವಾಗುವುದೆಂದೂ ಎಣಿಸಲಾಗಿದೆ.

ಕೆಮಿಕಲ್ ಮತ್ತು ಇಂಜನಿಯರಿಂಗ್ ಟೆಕ್ನಾಲಜಿ, ಅಪ್ಲೈಡ್ ಕೆಮಿಸ್ಟ್ರಿ ಮತ್ತು ವ್ಯವಸಾಯಶಾಸ್ತ್ರ, ಇವುಗಳೂ ಸೇರಿ ಅಪ್ಲೈಡ್‌ಸೈನ್ಸ್ ಮತ್ತು ಟೆಕ್ನಾಲಜಿಯ ನಾನಾ ಶಾಖೆಗಳಲ್ಲಿಯೂ ಈ ಡಿಪ್ಲೊಮಾ ಶಿಕ್ಷಾಕ್ರಮಗಳನ್ನು ಜಾರಿಗೆ ತರಬೇಕೆಂದು ಉದ್ದೇಶಿಸಲಾಗಿದೆ. ಪ್ರಿಪರೇಟರಿ ಇಂಟರ್‌ಮೀಡಿಯೆಟ್ ಶಿಕ್ಷಾಕ್ರಮವು ಪೂರೈಸಿದ ತರುವಾಯ, ಈ ವ್ಯಾಸಂಗಗಳಿಗೆ ಒಂದುವರುಷ ಅಥವಾ ೧೮ ತಿಂಗಳುಗಳು ಹಿಡಿಯುವುದು. ಯೂನಿವರ್ಸಿಟಿಯ ಸೈನ್ಸ್ ಕಾಲೇಜುಗಳಲ್ಲಿಯೂ ಇಂಜನಿಯರಿಂಗ್ ಕಾಲೇಜಿನಲ್ಲಿಯೂ ಉಪನ್ಯಾಸಗಳಿಗೂ ಪ್ರಯೋಗಗಳ ಕೆಲಸಕ್ಕೂ ಏರ್ಪಾಟುಗಳನ್ನು ಮಾಡಲಾಗುವುದು; ಮತ್ತು ವರ್ಕ್‌ಶಾಪುಗಳಲ್ಲಿಯೂ, ಕಾರ್ಖಾನೆಗಳಲ್ಲಿಯೂ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿಯೂ ರೂಢಿಭಾಗದಲ್ಲಿ ಶಿಕ್ಷಣವನ್ನು ಕೊಡಲಾಗುವುದು.

ಸೆನೇಟಿನವರು ಮಂಜೂರ್ಮಾಡಿರುವ ಪುನರ್ವ್ಯವಸ್ಥೆಯ ಏರ್ಪಾಡಿಗೆ ತಗಲುವ ವಿಶಿಷ್ಟವೆಚ್ಚವೂ ಅನೇಕವರುಷಗಳ ಅವಧಿಯಲ್ಲಿ ಹಂಚಿಕೆಯಾಗಿ ಕೊಡಲ್ಪಡಬಹುದೆಂದು ಸೆನೇಟ್ ಸಭೆಯವರು ಅಭಿಪ್ರಾಯಪಟ್ಟಿರುತ್ತಾರೆ. ಈಗ ಸಲಹೆಯಾಗಿರುವ ಏರ್ಪಾಡು ಪೂರ್ತಿಯಾಗಿ ಜಾರಿಗೆ ಬರುವುದಕ್ಕೆ ಇಂಟರ್‌ಮೀಡಿಯೇಟ್ ಕಾಲೇಜುಗಳನ್ನು ಉಪಕ್ರಮಮಾಡಿದ ತರುವಾಯ ಐದುವರುಷಗಳು ಬೇಕಾಗುವುವು. ಜೂನಿಯರ್ ಇಂಟರ್‌ಮೀಡಿಯೇಟ್ ತರಗತಿಯನ್ನು ೧೯೨೭ನೆಯ ಇಸ್ವಿ ಜುಲೈ ತಿಂಗಳಿನಲ್ಲಿ ಪ್ರಾರಂಭಿಸಬೇಕೆಂಬುದೇ ಸೆನೇಟಿನವರ ಸಲಹೆಯು. ಸರ್ಕಾರದವರು ಸೆನೇಟಿನವರ ಈ ಶಿಫಾರಸನ್ನು ಅಂಗೀಕರಿಸಬೇಕೆಂದು ನಿರ್ಧರಿಸಿರುತ್ತಾರೆ. ಆದರೆ, ಈ ಏರ್ಪಾಡನ್ನು ಒಂದೊಂದು ಭಾಗವಾಗಿಯೂ, ಅಥವಾ ಅವಶ್ಯತೋರಿದಲ್ಲಿ ಚುನಾಯಿಸಲ್ಪಟ್ಟ ಕೆಲವು ವ್ಯಾಸಂಗಶಾಖೆಗಳಲ್ಲಿಯೂ ಜಾರಿಗೆ ತರುವುದು ಸಾಧ್ಯವಾಗುತ್ತದೆ; ಮತ್ತು ಅದರ ಆಡಳಿತವನ್ನು ಸಂಸ್ಥಾನಕ್ಕೆ ಒದಗತಕ್ಕ ದ್ರವ್ಯಾನುಕೂಲತೆಗನುಸಾರವಾಗಿ ಕ್ರಮಕ್ರಮವಾಗಿ ನಡೆಸುವುದೂ ಸಹ ಸಾಧ್ಯವಾಗುತ್ತದೆ.

ಕೃಷ್ಣರಾಜಸಾಗರ.

ಇನ್ನು ಮೂಲಧನದ ಕಾಮಗಾರಿಗಳ ವಿಷಯ: ಕೃಷ್ಣರಾಜಸಾಗರದ ಅಣೆಯ ಏರಿಯನ್ನು ಅದರ ಪೂರ್ತಾ ಎತ್ತರಕ್ಕೆ, ಎಂದರೆ ೧೩೦ ಅಡಿಗಳಿಗೆ ಎತ್ತರಿಸಬೇಕಾಗಿದೆ. ಇದರ ಕೆಲಸವು ಸಮರ್ಪಕವಾಗಿ ಮುಂದುವರಿಯುತ್ತಾ ಇದೆ. ೧೦೬ ಅಡಿಗಳ ಮಟ್ಟಕ್ಕೆ ಈಗ ನೀರು ಶೇಖರವಾಗಿರುವುದು ಸರಿಯಷ್ಟೆ. ಈ ಮಟ್ಟದ ನೀರಿನಿಂದ ಸುಮಾರು ೬೦,೦೦೦ ಎಕರೆಗಳಿಗಿಂತಲೂ ಸ್ವಲ್ಪ ಹೆಚ್ಚಾದ ಜಮೀನಿಗೆ ನೀರು ಹಾಯಿಸಿ ಸಾಗುವಳಿಮಾಡಲನುಕೂಲಿಸುತ್ತದೆ. ಏರಿಯನ್ನು ಎತ್ತರಿಸಿ ನೀರಿನ ಮಟ್ಟವನ್ನು ೧೨೪ ಅಡಿಗಳಿಗೆ ಹೆಚ್ಚಿಸಿದಲ್ಲಿ ೧,೨೦,೦೦೦ ಎಕರೆಗಳಿಗೆ ನೀರನ್ನು ಹಾಯಿಸಿ ಸಾಗುವಳಿಮಾಡಲನುಕೂಲಿಸುತ್ತದೆ. ಕಾವೇರೀನದಿಯ ಬಯಲಿನಲ್ಲಿ ನೀರಾವರಿ ಸಾಗುವಳಿಯನ್ನು ಅಭಿವೃದ್ಧಿಗೊಳಿಸುವ ವಿಚಾರವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಮೇಲುಮಟ್ಟದ ನಾಲೆಯನ್ನು ತೋಡಿಸಿ ಸಿದ್ಧಪಡಿಸಲು ತಪಶೀಲು ನಕ್ಷೆ (ಪ್ಲಾನು) ಗಳೂ, ಮತ್ತು ಅಂದಾಜುಗಳೂ ತಯಾರಿಸಲ್ಪಟ್ಟಿವೆ; ಈ ನಾಲೆಯ ಕೆಲಸಕ್ಕಾಗಿ ೨೫೦ ಲಕ್ಷ ರೂಪಾಯಿಗಳು ವೆಚ್ಚವಾಗುವಂತೆ ಅಂದಾಜುಮಾಡಲ್ಪಟ್ಟಿದೆ; ಇದರ ವಿಚಾರಗಳೆಲ್ಲಾ ಪರಿಶೀಲನೆಯಲ್ಲಿವೆ.

ರೈಲ್ವೆಗಳು.

ರೈಲ್ವೆಯ ಬಾಬಿನಿಂದ ಹೆಚ್ಚು ಹುಟ್ಟುವಳಿಯು ಬಂದಿರುವ ಸಂಗತಿಯನ್ನು ನಾವು ಈ ಮೊದಲೇ ತಿಳಿಸಿದ್ದೇವೆ. ರೈಲ್ವೆಯ ಇಲಾಖೆಯವರು ರೈಲ್ವೆಗಳ ಬಾಬತು ಕೆಲಸನಡೆಸುವ ವೆಚ್ಚವನ್ನು ತಗ್ಗಿಸುವುದಕ್ಕಾಗಿ ಮಾಡಿದ ಪ್ರಯತ್ನಗಳು ಸಫಲವಾಗಿವೆ. ಆದಕಾರಣ, ಚಾಲ್ತಿಸಾಲಿನಲ್ಲಿ, ಹುಟ್ಟುವಳಿಯಲ್ಲಿ ಕೆಲಸನಡೆಸುವ ವೆಚ್ಚವು ಶೇಕಡಾ ಸುಮಾರು ೬೭.೫ ಆಗುವುದು. ಅದರ ಹಿಂದೆ ಮೂರು ಸಾಲುಗಳಲ್ಲಿಯೂ ಇದ್ದ ದಾಮಾಷಾಯಿಗಳಿಗೆ ಹೋಲಿಸಿ ನೋಡಿದಲ್ಲಿ, ಈ ದಾಮಾಷಾಯಿಯು ಕೇವಲ ಅನುಕೂಲರೀತಿಯಲ್ಲೇ ಇರುವುದೆಂಬುದು ಗೊತ್ತಾಗುತ್ತದೆ. ಚಾಲ್ತಿಸಾಲಿನಲ್ಲಿ ನಂಜನಗೂಡಿನಿಂದ ಚಾಮರಾಜನಗರಕ್ಕೆ ರೈಲುಹಾಕುವ ಕೆಲಸವನ್ನು ಪ್ರಾರಂಭಿಸಲಾಯಿತು. ಈ ಕೆಲಸವು ಪೂರೈಸುತ್ತಾ ಬಂದಿದೆ. ಸ್ಥಿತಿಗತಿಗಳು ಅನುಕೂಲವಾಗಿದ್ದಲ್ಲಿ, ಮುಂದಣ ಜುಲೈತಿಂಗಳು ಪೂರೈಸುವವೇಳೆಗೆ ಈ ಲೈನಿನಲ್ಲಿ ಜನಗಳ ಸಂಚಾರಕ್ಕೂ, ಸಾಮಾನುಗಳನ್ನು ಸಾಗಿಸುವುದಕ್ಕೂ, ರೈಲುಗಳನ್ನು ಬಿಡಲು ಅವಕಾಶವುಂಟಾಗುವುದೆಂದು ನಿರೀಕ್ಷಿಸಲಾಗಿದೆ. ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆಗಳಿಗೆ ಹಣವನ್ನೊದಗಿಸುವ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಆಕ್ವರ್ತ್‌ಕಮಿಟಿಯವರ ಸಲಹೆಗಳಮೇಲೆ ಒಂದು ಕಾರ್ಯಕ್ರಮವನ್ನು ನಿರ್ಧರಿಸಿ ಜಾರಿಯಲ್ಲಿ ತಂದಿರುತ್ತಾರೆ. ಇಲ್ಲಿಯೂ ಸಹ, ಅದೇ ಕಾರ್ಯಕ್ರಮವನ್ನೇ ಅನುಸರಿಸಬೇಕೆಂದು ಸರ್ಕಾರದವರು ನಿರ್ಧರಮಾಡಿದ್ದಾರೆ. ಅದಕ್ಕನುಗುಣವಾಗಿ ಕಡೂರಿನಿಂದ ಚಿಕ್ಕಮಗಳೂರಿಗೆ ರೈಲುಹಾಕುವ ಏರ್ಪಾಡನ್ನು ಮಂಜೂರುಮಾಡಿದ್ದಾರೆ. ಹೀಗೆ ಮಾಡುವುದರಲ್ಲಿ ವಿಧಾಯಕವಾಗಿರುವ ಷರತ್ತುಗಳು ಎರಡು: ಮೊದಲನೆಯದು, ರೈಲ್ವೇ ಲೈನನ್ನು ಏರ್ಪಡಿಸಲು ಸರ್ಕಾರದವರು ಹಣವನ್ನೊದಗಿಸುವುದು; ಎರಡನೆಯದು, ಕೆಲಸ ನಡೆಸುವಲ್ಲಿ ಈ ಲೈನಿನಿಂದ ನಷ್ಟವೇನಾದರೂ ಸಂಭವಿಸಿದರೆ, ಸರ್ಕಾರದವರಿಗೆ ಆ ನಷ್ಟವನ್ನು ಕಟ್ಟಿಕೊಡುವಂತೆ ಡಿಸ್ಟ್ರಿಕ್ಟ್ ಬೋರ್ಡಿನವರು ಖಾತರಿಯನ್ನು (ಗ್ಯಾರಂಟಿಯನ್ನು) ಕೊಡುವುದು. ಈ ಲೈನಿನ ಕೆಲಸವನ್ನು ಸಾಧ್ಯವಾದಷ್ಟು ಶೀಘ್ರವಾಗಿ ಪ್ರಾರಂಭಿಸಲಾಗುತ್ತದೆ. ಶಿವಮೊಗ್ಗೆಯಿಂದ ಅರಸಾಳಿಗೆ ರೈಲುಹಾಕುವ ಕೆಲಸವನ್ನು ಮತ್ತೆ ನಡೆಸುವ ವಿಷಯವೂ ಪರ್ಯಾಲೋಚನೆಯಲ್ಲಿದೆ. ಈ ಪ್ರಯತ್ನವು ಸಾಗಬೇಕಾದರೆ ತುಂಗಾನದಿಗೆ ಹೊಸ ಸೇತುವೆಯೊಂದನ್ನು ಕಟ್ಟಬೇಕಾಗುತ್ತದೆ. ಇತರ ಸ್ಥಳಗಳಲ್ಲಿಯೂ ರೈಲುಗಳ ಸಂಚಾರಕ್ಕೆ ಏರ್ಪಾಡುಮಾಡುವುದು ಇದರಂತೆಯೇ ಅತ್ಯಾವಶ್ಯಕವಾಗಿದೆ. ಆದರೆ, ನಮಗೆ ದ್ರವ್ಯಾನುಕೂಲತೆಯು ದೊರೆತಾಗ ಮಾತ್ರವೇ ಈ ವಿಷಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾಗುತ್ತದೆ. ರೈಲುಗಳ ವಿಷಯದಲ್ಲಿ ಕೆಲಸ ನಡೆಸಲು ತಗಲುವ ವೆಚ್ಚವನ್ನು ಕಡಮೆಮಾಡಿರುವುದರ ಫಲಿತಾಂಶವಾಗಿ, ಮೂರನೆಯ ತರಗತಿಯ ಪ್ರಯಾಣಿಕರಿಗೆ ಸ್ವಲ್ಪಮಟ್ಟಿಗೆ ಅನುಕೂಲಮಾಡಿಕೊಡಲು ಸಾಧ್ಯವಾಗಬಹುದು. ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸುತ್ತಿದ್ದಾರೆ; ಮೂರನೆಯ ತರಗತಿಯ ಚಾರ್ಜುಗಳ ದರವನ್ನು ಕಡಮೆಮಾಡಿ ಇಷ್ಟರಲ್ಲೇ ಹುಕುಂ ಸಾದರುಮಾಡುತ್ತಾರೆ.

ನೀರಾವರಿ.

ಈಗ ನಡೆಯುತ್ತಾ ಇರುವ ಭಾರಿ ನೀರಾವರಿಯ ಕಾಮಗಾರಿಗಳ ವಿಷಯ; ಭದ್ರಾನದಿಯ ಅಣೆಕಟ್ಟಿನ ಬಲದಡದ ನಾಲೆಯ ಕೆಲಸವು ನಡೆಯುತ್ತಾ ಇದೆ. ಅಣೆಕಟ್ಟೆಯ ಕೆಲಸವೂ ಮತ್ತು ೧೬½ ಮೈಲಿಗಳ ದೂರದವರೆಗೆ ಬಲದಡದ ನಾಲೆಯ ಕೆಲಸವೂ, ಪೂರೈಸಿರುತ್ತವೆ. ಶ್ರೀಮನ್ಮಹಾರಾಜರವರು ಕೇವಲ ಅನುಗ್ರಹಮಾಡಿ ೧೨ ನೇ ತಾರೀಖಿನ ದಿನ ಅಣೆಕಟ್ಟೆಯ ಸಮಾರಂಭ ಮಹೋತ್ಸವವನ್ನು ನೆರವೇರಿಸಿದರು. ಸುಮಾರು ೪,೦೦೦ ಎಕರೆಗಳಷ್ಟು ಜಮೀನು ಕೂಡಲೇ ತರೀ ಸಾಗುವಳಿಗೆ ಬರುತ್ತದೆ. ಸೌಲಂಗ ಜಲಾಶಯದ ಕಾಮಗಾರಿಯು ಪೂರೈಸಿದೆ. ಮೇಲುಮಟ್ಟದ ನಾಲೆಯನ್ನು ತೋಡಿಸುವ ಕೆಲಸವು ನಡೆಯುತ್ತಾ ಇದೆ. ೩ ಮೈಲಿಗಳಷ್ಟು ದೂರದವರೆಗೆ ಕಾಲುವೆಯ ಕೆಲಸವು ಪೂರೈಸಿದೆ. ಸದರಿ ನಾಲೆಯಿಂದ ಅಷ್ಟು ದೂರದವರೆಗೂ ಸಾಗುವಳಿಗೆ ನೀರನ್ನು ಕೊಡುತ್ತಾ ಇದೆ. ೧೯೨೪-೨೫ ನೇ ಇಸವಿಯಲ್ಲಿ ಸಂಭವಿಸಿದ ಪ್ರವಾಹಗಳ ದೆಸೆಯಿಂದ ಹರಿಹರದಲ್ಲಿ ಇರತಕ್ಕ ತುಂಗಭದ್ರಾನದಿಯ ಸೇತುವೆಯು ನಷ್ಟಕ್ಕೆ ಗುರಿಯಾಯಿತು. ಅದರ ದುರಸ್ತಿ ಕಾಮಗಾರಿಯು ಪೂರೈಸುತ್ತಾ ಬಂದಿದೆ. ಇಷ್ಟರಲ್ಲಿಯೇ ಅದರ ಮೇಲೆ ಜನಗಳೂ, ಗಾಡಿಗಳೂ ಸಂಚಾರಮಾಡಲು ಅನುಕೂಲಿಸುತ್ತದೆ. ಕೆರೆಗಳನ್ನು ಜೀರ್ಣೋದ್ಧಾರಮಾಡುವ ಕೆಲಸವು ಹೆಚ್ಚು ದಕ್ಷತೆಯಿಂದಲೂ ಮತ್ತು ಹೆಚ್ಚು ಜಾಗ್ರತೆಯಾಗಿಯೂ, ನಡೆಯುವಂತೆ ಮಾಡಬೇಕೆಂಬ ಉದ್ದೇಶವಿದೆ. ಆದಕಾರಣ, ಕೆರೆಗಳ ಸರ್ವೆಯನ್ನು ನಡಿಸತಕ್ಕ ಬಗ್ಗೆ ಒಂದು ಡಿವಿಜನ್ ಆಫೀಸನ್ನು ಈಚೆಗೆ ಸ್ಥಾಪಿಸಲಾಯಿತು. ಕೆರೆಗಳ ಜೀರ್ಣೋದ್ಧಾರ ಮತ್ತು ಕೆರೆಗಳ ದುರಸ್ತೀ ಕಾಮಗಾರಿ, ಇವೆರಡನ್ನೂ ನಡೆಸುವುದಕ್ಕಾಗಿ ಅವಶ್ಯವಾದ ವಿಷಯಗಳನ್ನೆಲ್ಲಾ ಸಂಗ್ರಹಿಸಿ, ತಕ್ಕಂತೆ ಕಾರ್ಯಕ್ರಮವೊಂದನ್ನು ಬರೆದು ಸಿದ್ಧಗೊಳಿಸುವ ಕೆಲಸವನ್ನು ಅದರ ಅಧಿಕಾರಿಗಳಿಗೆ ವಹಿಸಲಾಗಿದೆ. ಮುಖ್ಯವಾದ ಇತರ ಮೂಲ ಕಾಮಗಾರಿಗಳ ಪೈಕಿ, ಎರಡನ್ನು ಇಲ್ಲಿ ತಿಳಿಸಬಹುದಾಗಿದೆ. ಮೊದಲನೆಯದು, ತಿರುಮಕೂಡ್ಲುನರಸೀಪುರದ ಹತ್ತಿರ ಕಾವೇರಿ ಮತ್ತು ಕಪಿನೀ ನದಿಗಳಿಗೆ ಒಂದು ಸೇತುವೆಯನ್ನು ಕಟ್ಟುವುದು: ಎರಡನೆಯದು, ಅಂಜನಾಪುರದ ಬಳಿಯಲ್ಲಿ ಕುಮುದ್ವತೀ ನದಿಗೆ ಅಣೆಯನ್ನು ಕಟ್ಟುವುದು. ಈ ಎರಡು ಕಾಮಗಾರಿಗಳ ವಿಷಯದಲ್ಲಿಯೂ, ಪರಿಶೋಧನೆಗಳು ನಡೆಸಲ್ಪಟ್ಟಿವೆ. ಸರ್ಕಾರದವರು ಸಾಧ್ಯವಾದಷ್ಟು ಜಾಗ್ರತೆಯಾಗಿ ಈ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.

ವಿದ್ಯುಚ್ಛಕ್ತಿಯ ಇಲಾಖೆ.

ವಿದ್ಯುಚ್ಛಕ್ತಿಯ ಇಲಾಖೆಯವರು ನಡೆಸಿದ ಕೆಲಸಗಳ ಪೈಕಿ, ಕೆಲವನ್ನು ಇಲ್ಲಿ ತಿಳಿಸಬಹುದಾಗಿದೆ. ಚಾಲ್ತಿಸಾಲಿನ ಮೊದಲಣ ೧೦ ತಿಂಗಳುಗಳಲ್ಲಿ ದೀಪಗಳಿಗೋಸ್ಕರ ೬೦೦ ಸ್ಥಳಗಳಲ್ಲಿ ಯಂತ್ರಸಾಧನಗಳನ್ನು ಏರ್ಪಡಿಸಲಾಯಿತು. ಇವುಗಳೂ ಸೇರಿ, ಇದುವರೆಗೆ ಇರತಕ್ಕ ಇಂಥವುಗಳ ಒಟ್ಟು ಸಂಖ್ಯೆಯು ೮,೯೦೪ ಆಗಿರುತ್ತದೆ. ಮೇಲೆ ಹೇಳಿದ ೧೦ ತಿಂಗಳುಗಳ ಅವಧಿಯಲ್ಲಿ ೧೧ ಸ್ಥಳಗಳಲ್ಲಿ ಇತರ ಕೆಲಸಗಳಿಗೋಸ್ಕರ ವಿದ್ಯುಚ್ಛಕ್ತಿಯ ಸರಬರಾಯಿನ ಯಂತ್ರಸಾಧನಗಳನ್ನು ಹೊಸದಾಗಿ ಸ್ಥಾಪನೆ ಮಾಡಲಾಯಿತು. ಈಗ ಇಂಥವುಗಳ ಒಟ್ಟು ಸಂಖ್ಯೆಯು ಈ ೧೧ ಸೇರಿ ೨೯೯ ಆಗುತ್ತದೆ. ಶಿವಸಮುದ್ರದಲ್ಲಿ ೬ ನೆಯ ಯಂತ್ರಸ್ಥಾಪನೆಯ ಕೆಲಸವು ಹೆಕ್ಕಳವಾಗಿ ನಡೆಯುತ್ತಾ ಇದೆ. ಈ ಯಂತ್ರಸ್ಥಾಪನೆಯ ಸಹಾಯದಿಂದ ಈ ಮೊದಲೇ ತಯಾರಾಗುತ್ತಿದ್ದ ವಿದ್ಯುಚ್ಛಕ್ತಿಯ ಜತೆಗೆ ಇನ್ನೂ ೧೪,೦೦೦ ಅಶ್ವಶಕ್ತಿಗಳ ಪರಿಮಾಣದ ವಿದ್ಯುಚ್ಛಕ್ತಿಯು ತಯಾರಾಗುವಂತಾಗುತ್ತದೆ. ಈ ಕೆಲಸಕ್ಕಾಗಿ ಬೇಕಾಗುವ ಯಂತ್ರಗಳೆಲ್ಲವನ್ನೂ ತರಿಸಿಕೊಳ್ಳಲು ಸ್ಟೋರ್ಸ್ ಪರ್ಛೇಸ್ ಕಮಿಟಿಯವರು ಅವುಗಳನ್ನು ಮಾರುವ ಕಂಪನಿಗಳಿಗೆ ಬರೆದಿರುತ್ತಾರೆ. ಕಟ್ಟಡಗಳ ಕೆಲಸವು ಚೆನ್ನಾಗಿ ನಡೆಯುತ್ತಾ ಇದೆ. ಶಿವಸಮುದ್ರದಿಂದ ಬೆಂಗಳೂರಿಗೆ ವಿದ್ಯುಚ್ಛಕ್ತಿಯು ಬರುವ ತಂತಿಗಳನ್ನು ಹೊಸಮಾದರಿಯಲ್ಲಿ ಮತ್ತೆ ಹಾಕಿಸಲಾಯಿತು. ಇದರಿಂದ ವಿದ್ಯುಚ್ಛಕ್ತಿಯು ಅಡಚಣೆಯಿಲ್ಲದೆ ಉತ್ತಮರೀತಿಯಲ್ಲಿ ಪ್ರವಹಿಸಲು ಅನುಕೂಲಿಸಿತು. ಈ ತಂತಿಯನ್ನು ಹಾಕಿರುವ ದಾರಿಯುದ್ದಕ್ಕೂ ಸಮೀಪದಲ್ಲಿರುವ ಬೌರಿಂಗ್‌ಪೇಟೆ, ಯಲಹಂಕ, ಕಾನಕಾನಹಳ್ಳಿ ಮುಂತಾದ ಮುಖ್ಯಪಟ್ಟಣಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ವಿಷಯವು ಪರ್ಯಾಲೋಚನೆಯಲ್ಲಿದೆ. ಅರ್ಕಾವತಿ ನದಿಯ ತೀರಪ್ರದೇಶದಲ್ಲಿರುವ ಜಮೀನುಗಳಿಗೆ ಯಂತ್ರದಿಂದ ನೀರನ್ನೆತ್ತಿ ಹಾಯಿಸಿ ತರೀ ಸಾಗುವಳಿ ಮಾಡಬಹುದಾಗಿದೆ. ರೈತರುಗಳು ಪಂಪುಗಳನ್ನಿಟ್ಟು ನೀರನ್ನು ಹಾಯಿಸಲು ಇಷ್ಟಪಡುವ ಪಕ್ಷದಲ್ಲಿ, ಅವರಿಗೆ ಆ ಕೆಲಸಕ್ಕಾಗಿ ವಿದ್ಯುಚ್ಛಕ್ತಿಯನ್ನು ಸುಲಭ ದರಗಳಲ್ಲಿ ಸರಬರಾಯಿ ಮಾಡುವ ವಿಷಯವು ಪರ್ಯಾಲೋಚನೆಯಲ್ಲಿದೆ. ಸಣ್ಣಪುಟ್ಟ ಕೈಗಾರಿಕೆಗಳ ಯಂತ್ರಶಾಲೆಗಳಲ್ಲಿ ೨೦ ಅಶ್ವಶಕ್ತಿಗಳ ಮತ್ತು ಅದಕ್ಕಿಂತ ಕಡಮೆಯಾದ ವಿದ್ಯುಚ್ಛಕ್ತಿಯನ್ನುಪಯೋಗಿಸುವುದಕ್ಕೆ ಚಾರ್ಜಿನ ದರವನ್ನು ೨ ಆಣೆಗಳಿಂದ ೧½ ಆಣೆಗಳಿಗೆ ತಗ್ಗಿಸಲಾಗಿದೆ. ತಿಂಗಳೊಂದಕ್ಕೆ ಆರು ಯೂನಿಟುಗಳ ಅಥವಾ ಇನ್ನೂ ಕಡಮೆ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳತಕ್ಕವರು "ಮೀಟರ್" (ವಿದ್ಯುಚ್ಛಕ್ತಿಯ ಪರಿಮಾಣವನ್ನು ಅಳೆಯುವ ಯಂತ್ರದ) ಬಾಡಿಗೆಯನ್ನು ಕೊಡಬೇಕಾದುದಿಲ್ಲವೆಂಬುದಾಗಿ ಸರ್ಕಾರದವರು ಈಚೆಗೆ ಹುಕುಂ ಸಾದರುಮಾಡಿರುತ್ತಾರೆ. ಅಲ್ಪಸ್ವಲ್ಪ ಪರಿಮಾಣದಲ್ಲಿ ವಿದ್ಯುಚ್ಛಕ್ತಿಯನ್ನುಪಯೋಗಿಸುವವರೆಲ್ಲರೂ, ಈ ವಿಚಾರಗಳಲ್ಲಿ ತಮಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂಬುದಾಗಿ ಪದೇ ಪದೇ ಅರಿಕೆಮಾಡುತ್ತಿದ್ದರು. ಆದಕಾರಣ, ಅವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದು ಆವಶ್ಯಕವೆಂದೆಣಿಸಿ ಮೇಲೆ ಹೇಳಿದಂತೆ ರಿಯಾಯಿತಿಗಳನ್ನು ತೋರಿಸಲಾಗಿದೆ. ಇದರಿಂದ ಅವರಿಗೆ ಸಹಾಯವಾಗುವುದೆಂದು ಭಾವಿಸಿದ್ದೇವೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

೧೯೨೪-೨೫ ನೇ ಸಾಲಿನ ಆದಿಭಾಗದಲ್ಲಿ ಅಭಿವೃದ್ಧಿಯ ಚಿಹ್ನೆಗಳು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ಸ್ವಲ್ಪ [illegible] [illegible] ಕಾಣಬರಲಾರಂಭಿಸಿದುವು; ಇದರಿಂದ [illegible] [illegible] [illegible]

ಣದ ಮತ್ತು ಇತರ ಉಪವಸ್ತುಗಳ ಪರಿಮಾಣದ ದಾಮಾಷಾಯಿ ದರವು ಕಡಮೆಯಾಯಿತು ; ಮತ್ತು ಧಾರಣೆಗಳು ಬಹು ಶೀಘ್ರವಾಗಿ ಇಳಿದುಹೋದುವು. ಅಕ್ಟೋಬರು ತಿಂಗಳಿನ ಹೊತ್ತಿಗೆ ನಷ್ಟಗಳು ಕೇವಲ ಭಾರಿಯಾಗಿ ಪರಿಣಮಿಸಿದುವು. ಆದಕಾರಣ, ಆಗಿನ ದುಸ್ಥಿತಿಯನ್ನು ನಿವಾರಣೆ ಮಾಡಲು ಪ್ರಬಲವಾದ ಏರ್ಪಾಡುಗಳನ್ನು ನೆರವೇರಿಸಬೇಕಾಯಿತು. ೧೯೨೫ ನೇ ಇಸವಿ ಡಿಸೆಂಬರು ತಿಂಗಳು ೩೧ ನೇ ತಾರೀಖಿಗೆ ಮುಕ್ತಾಯವಾದ ಅರ್ಧವರ್ಷದ ಅವಧಿಯಲ್ಲಿ, ಕೆಲಸ ನಡೆಸಿದುದರ ಬಾಬತು ನಷ್ಟವು ೧,೮೮,೮೨೬ ರೂಪಾಯಿಗಳಾಗಿದ್ದಿತು. ಧಾರಣೆಗಳು ಶೀಘ್ರವಾಗಿ ಇಳಿದುದರ ಪರಿಣಾಮವಾಗಿ ದಾಸ್ತಾನಿನ ಬೆಲೆಯು ಕಡಮೆಯಾದ ಕಾರಣದಿಂದ ೧,೦೪,೩೮೬ ರೂಪಾಯಿಗಳ ನಷ್ಟವು ಕೈಗಟ್ಟಿತು. ಅಂತು, ಇವೆರಡು ನಷ್ಟಗಳೂ ಸೇರಿ ಆ ಅರ್ಧವರ್ಷದ ಅವಧಿಯಲ್ಲಿ ಒಟ್ಟು ೨,೯೩,೨೧೨ ರೂಪಾಯಿಗಳು ನಷ್ಟವಾದಂತಾಯಿತು. ಚಾಲ್ತಿ ಅರ್ಧವರ್ಷದಲ್ಲಿ ಕೆಲಸ ನಡೆಸುವ ಬಗೆಯು ಮೇಲ್ಪಡಿಸಲ್ಪಟ್ಟಿದೆ. ಆದಕಾರಣ, ಹೆಚ್ಚು ನಷ್ಟವು ಸಂಭವಿಸುವುದಿಲ್ಲವೆಂದು ನಿರೀಕ್ಷಿಸಲಾಗಿದೆ. ಕಳೆದ ಅಕ್ಟೋಬರು ತಿಂಗಳಿನಿಂದ ಈಚೆಗೆ, ಕಾರ್ಖಾನೆಯ ಎಲ್ಲಾ ಶಾಖೆಗಳಲ್ಲಿಯೂ ವಿಶೇಷ ಚೈತನ್ಯವು ಕೈಗೊಳ್ಳಲ್ಪಟ್ಟಿದೆ. ಅಲ್ಲಿ ತಯಾರಾಗುವ ವಸ್ತುಗಳ ಪರಿಮಾಣದ ದಾಮಾಷಾಯಿ ದರವನ್ನು ಹೆಚ್ಚು ಮಾಡುವುದಕ್ಕೂ ಕೂಡ, ವಿಶೇಷ ರೀತಿಯಲ್ಲಿ ಕ್ರಮ ಜರುಗಿಸಲಾಗಿದೆ. ಕಚ್ಚಾ ಸಾಮಾನುಗಳನ್ನು ಶೇಖರಿಸಲು ತಗಲುವ ವೆಚ್ಚವನ್ನು ವಿಶೇಷವಾಗಿ ತಗ್ಗಿಸಲಾಗಿದೆ. ಬ್ಲಾಸ್ಟ್ ಫರ್ನೇಸಿನಲ್ಲಿ ತಯಾರಾಗುವ ಕಬ್ಬಿಣದ ಪರಿಮಾಣದ ದಾಮಾಷಾಯಿ ದರವು, ಅವರ ವಿಚಾರದಲ್ಲಿ ಅಂದಾಜಾಗಿದ್ದ ಪರಮಾವಧಿಗೆ ಹೆಚ್ಚಿರುತ್ತದೆ. ನಾನಾ ಮೇಲ್ಪಾಡುಗಳನ್ನು ನಡೆಸುವುದಕ್ಕೂ, ಮತ್ತು ಕಬ್ಬಿಣದ ತಯಾರಿಗೆ ತಗಲುವ ವೆಚ್ಚದ ದರವನ್ನು ತಗ್ಗಿಸುವುದಕ್ಕೂ, ತಕ್ಕ ಕ್ರಮವನ್ನು ಜರುಗಿಸಿದ ಮೇಲೆ, ಅದರಿಂದ ಪೂರ್ತಿಯಾಗಿ ಫಲವು ದೊರೆಯಲು ಸ್ವಲ್ಪ ಕಾಲವು ಹಿಡಿಯಿತು. ೧೯೨೫ ನೇ ಇಸವಿಯ ನವಂಬರು ತಿಂಗಳಿನ ಲಾಗಾಯಿತು ೧೯೨೬ ನೆಯ ಇಸವಿಯ ಏಪ್ರಿಲ್ ತಿಂಗಳ ವರೆಗಿನ ಆರು ತಿಂಗಳ ಅವಧಿಯಲ್ಲಿ ಕಾರ್ಖಾನೆಯ ಸಿಬ್ಬಂದಿಗೆ ಸೇರಿದ ಸಮಸ್ತರೂ ತಮ್ಮ ಸಂಬಳದಲ್ಲಿ ಶೇಕಡಾ ೬| ರಿಂದ ೧೦ ರ ವರೆಗೂ ಅವರವರ ಸ್ಥಿತಿಗೆ ತಕ್ಕಂತೆ ಒಂದೊಂದು ಭಾಗವನ್ನು ಬಿಟ್ಟುಬಿಡಲು ಒಪ್ಪಿಕೊಂಡರು. ಅವರುಗಳು ತೋರಿಸಿರುವ ಸ್ವಾರ್ಥತ್ಯಾಗವು ವಿಶೇಷ ಅಭಿನಂದನೆಗೆ ಅರ್ಹವಾಗಿದೆ.

ಮುಂದಣ ಸಾಲಿನಲ್ಲಿ, (ಎಂದರೆ, ೧೯೨೬-೨೭ ನೇ ಸಾಲಿನಲ್ಲಿ) ಕೋಕಾಯಿಗಳ ಎರಕದಯಂತ್ರ, ಆಲ್ಕೊಹಾಲನ್ನು ಶುದ್ಧಿಗೊಳಿಸುವ ಯಂತ್ರ, ಕೀಲೆಣ್ಣೆಯನ್ನು ಪತಂಗಿಸುವಯಂತ್ರ ಇವು ಮೂರರಲ್ಲಿಯೂ ಚೆನ್ನಾಗಿ ಕೆಲಸವು ನಡೆದು ಇವುಗಳ ಸಂಬಂಧದಲ್ಲಿ ಉಪಕೈಗಾರಿಕೆಗಳು ನಡೆಯಲಾರಂಭವಾಗುತ್ತವೆಂದೂ, ಇವುಗಳಿಂದ ಹೆಚ್ಚಿಗೆ ಹುಟ್ಟುವಳಿಯು ಬರುವುದಕ್ಕಾರಂಭವಾಗುತ್ತದೆಂದೂ ನಿರೀಕ್ಷಿಸಲಾಗಿದೆ. ಮೂಲಕೈಗಾರಿಕೆಯಾದ ಕಬ್ಬಿಣದ ಭಟ್ಟಿಯ ವಿಚಾರದಲ್ಲಿ, ಈಗ ಕೆಲಸ ನಡೆಯುವ ರೀತಿಯಲ್ಲಿಯೇ ಇನ್ನು ಮುಂದೆಯೂ ಸಹ, ಕೆಲಸವು ಬಹುಶಃ ನಡೆಸಲ್ಪಡುವುದೆಂದು ನಿರೀಕ್ಷಿಸಲ್ಪಟ್ಟಿದೆ. ಧಾರಣೆಗಳು ಈಗಿರುವಂತೆ ಇನ್ನುಮುಂದೆಯೂ ಕಡಮೆಯಾಗಿಯೇ ಇದ್ದರೂ ಕೂಡ, ನಷ್ಟವಾಗುವ ಸಂಭವವು ಬಹುಶಃ ಉಂಟಾಗಲಾರದು. ಚಾಲ್ತಿ ಸಾಲಿನ ಮೊದಲನೆಯ ಆರುತಿಂಗಳ ಅವಧಿಯಲ್ಲಿ ತಯಾರಾದ ಉತ್ಪನ್ನಗಳೆಲ್ಲಾ ವಿಕ್ರಯವಾದುವು ; ಸಾಲಿನ ಉತ್ತರಾರ್ಧದ ಅವಧಿಯಲ್ಲಿಯೂ ಕೂಡ, ಇದೇ ವಿಧದ ಫಲಿತಾಂಶವೇ ಉಂಟಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯವರು ಈಚೆಗೆ ಒಂದು ವಿವರವನ್ನು ಪ್ರಕಟಿಸಿದ್ದಾರೆ. ಅದರಿಂದ ಈಗಿನ ಸ್ಥಿತಿಯು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾವೂ ಸಹ ಈಚೆಗೆ ಭದ್ರಾವತಿಗೆ ಹೋಗಿದ್ದೆವು. ಅಲ್ಲಿ ಪ್ರತಿಯೊಂದು ವಿಚಾರದಲ್ಲಿಯೂ ಒಂದೇ ಸಮನಾದ ಅಭಿವೃದ್ಧಿಯು ಕಂಡುಬರುತ್ತಾ ಇದೆ. ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಕಬ್ಬಿಣದ ಕೈಗಾರಿಕೆಯು ಈಚೆಗೆ ಕೇವಲ ಅತೃಪ್ತಿಕರವಾಗಿದೆ. ಇತರ ದೇಶಗಳಲ್ಲಿರುವ ಕಬ್ಬಿಣದ ಕಾರ್ಖಾನೆಗಳ ಸ್ಥಿತಿಗಿಂತಲೂ ನಮ್ಮ ದೇಶದ ಕಬ್ಬಿಣದ ಕಾರ್ಖಾನೆಯ ಸ್ಥಿತಿಯು ಯಾವ ಭಾಗದಲ್ಲಿಯೂ ಹೀನವೆನಿಸಿಲ್ಲ. ಲಂಡನ್ ನಗರದ ಮೆಸರ್ಸ್ ವಿಲಿಯಂ ಜಾಕ್ಸ್ ಅಂಡ್ ಕಂಪೆನಿಯವರು, ಗ್ರೇಟ್ ಬ್ರಿಟನ್ನಿನವರು ೧೯೨೫ ನೆಯ ಇಸವಿಯಲ್ಲಿ ನಡೆಸಿದ ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರವನ್ನು ಕುರಿತು ಒಂದು ವಿಶೇಷವಾದ ವಿಮರ್ಶಾಲೇಖನವನ್ನು ಪ್ರಕಟಿಸಿರುತ್ತಾರೆ. ಅದರಿಂದ ಉದ್ಧೃತವಾದ ಈ ಕೆಳಗೆ ನಮೂದಿಸಿರುವ ಅಂಶಗಳು ಈ ಸಂಬಂಧದಲ್ಲಿ ಪ್ರಾಯಶಃ ಬಹು ಅಮೂಲ್ಯವಾಗಿ ಕಂಡುಬರಬಹುದು —

“ಆಧುನಿಕ ಕೈಗಾರಿಕೆಗಳ ಇತಿಹಾಸದಲ್ಲಿ ಅಭೂತಪೂರ್ವವೆನಿಸಿ ವರ್ಷಾಂತರಗಳವರೆಗೆ ಧಾರಣೆವಾಸಿಗಳು ತಗ್ಗಿದುದರಿಂದ ಬ್ರಿಟಿಷ್ ದೇಶದ ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರವು ಬಹು ಹೀನಸ್ಥಿತಿಗೆ ಬಂದಿದೆ. ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರದ ಭಾರೀ ಕಂಪನಿಗಳ ಪೈಕಿ ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿದ್ದ ಕಂಪನಿಗಳವರೂ ಸಹ, ತಮ್ಮ ನಗದು ರಿಜರ್ವುಗಳನ್ನೂ ಸುಲಭವಾಗಿ ನಗದು ಮೊಬಲಗಿಗೆ ರೂಪಾಂತರಗೊಳಿಸಬಹುದಾಗಿದ್ದ ಆಸ್ತಿಗಳನ್ನೂ ಸಂಪೂರ್ಣವಾಗಿ ಬಳಸಿಕೊಂಡಿರುತ್ತಾರೆ. ಅಲ್ಲದೆ ಹಿಸ್ಸೇದಾರರಿಗೆ ಡಿವಿಡೆಂಡುಗಳನ್ನು ಸಂಪಾದಿಸಿಕೊಡಲಿಲ್ಲ, ಇದು ಮಾತ್ರವೇ ಅಲ್ಲದೆ, ವಿಪರೀತವಾದ ನಷ್ಟಗಳಿಗೂ ಒಳಗಾಗಿರುತ್ತಾರೆ. ಈ ರೀತಿ ಎಲ್ಲಾ ಬಗೆಯ ಉಪಾಯಗಳಿಗೂ ಹಿಂದೆಗೆಯದೆ ಸಾಹಸಮಾಡಿದಾಗ್ಯೂ ಸಹ, ಕಳೆದ ವರುಷದಲ್ಲಿ ಉತ್ಪತ್ತಿಯು ಮತ್ತಷ್ಟು ತಗ್ಗಿರುತ್ತದೆ. ಕೆಲವು ಕಾರ್ಖಾನೆಗಳಲ್ಲಿ ಕೆಲಸ ನಡೆಸುತ್ತಿರುವುದೇನೋ ನಿಜ. ಆದರೆ ಇಂಥಾ ಕಾರ್ಖಾನೆಗಳವರು ನಷ್ಟಕ್ಕೊಳಪಡದೆ ಬೇರೆ ಕೆಲಸಗಳನ್ನು ನಡೆಸುತ್ತಾ ಇಲ್ಲ. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಸ್ಥಿತಿಯು ಬ್ರಿಟಿಷ್ ಜನಾಂಗಕ್ಕೆ ವಿಶೇಷ ವ್ಯಾಕುಲವನ್ನುಂಟುಮಾಡತಕ್ಕದಾಗಿರುವುದೆಂದು ಪ್ರಕೃತದಲ್ಲಿ ಎಲ್ಲರೂ ಅಭಿಪ್ರಾಯಪಡಬೇಕಾಗಿದೆ.”

ಕೈಗಾರಿಕೆಗಳ ವಿಷಯದಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿರುವ ದೇಶದಲ್ಲಿಯೇ ಜನಗಳ ಅನುಭವವು ಈರೀತಿಯಾಗಿದೆ. ಆದಕಾರಣ, ಪ್ರಕೃತದಲ್ಲಿ ಒದಗಿರುವ ಕಷ್ಟಕಾಲಗಳಲ್ಲಿ ಈ ಹೊಸ ಉದ್ಯಮವನ್ನು ನಡೆಸುವುದರಲ್ಲಿ ನಾವು ಸಾಧಿಸಿರುವ ಅಭಿವೃದ್ಧಿಯಿಂದ ತೃಪ್ತಿ ಹೊಂದಲು ಖಂಡಿತವಾಗಿಯೂ ಕಾರಣವಿರುತ್ತದೆ. ಕಬ್ಬಿಣದ ಕೈಗಾರಿಕೆಯ ವಿಷಯದಲ್ಲಿ ಪ್ರಪಂಚದ ಸ್ಥಿತಿಗತಿಗಳು ಮೇಲ್ಪಟ್ಟು, ಈಗ ಹೀನದೆಸೆಗಿಳಿದಿರುವ ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರವು ಗಣನೀಯವಾಗಿ ಪುನಃ ಉತ್ತಮಸ್ಥಿತಿಗೆ ಬಂದಲ್ಲಿ, ನಾವು ಈಗ ಸಾಧಿಸಿರುವ ಅಭಿವೃದ್ಧಿಯ ಪೂರ್ಣಪ್ರಯೋಜನವು ಆಗ್ಗೆ ಗೋಚರಕ್ಕೆ ಬರುತ್ತದೆ.

ಅಧಿಕಾರ ವಿಚಕ್ಷಣೆ.

ಮಹಾಶಯರೆ, ಇದೀಗ ನಮ್ಮ ಸರ್ಕಾರದ ಮುಖ್ಯ ಇಲಾಖೆಗಳ ಸ್ಥಿತಿಯ ಸಂಕ್ಷೇಪವಾದ ವಿವರಣೆ. ಅಧಿಕಾರಯಂತ್ರಕ್ಕೆ ಇಲ್ಲಲ್ಲಿ ಸಂಸ್ಕಾರಗಳೂ, ಮಾರ್ಪಾಟುಗಳೂ, ನಡೆಯಬೇಕಾಗಿವೆ ಎಂಬುದನ್ನು ಇತರರಂತೆಯೇ ನಾನೂ ಬಲ್ಲೆ. ನಮ್ಮ ಕಛೇರಿಗಳಲ್ಲಿ ಬರೆವಣಿಗೆಯು ಕಡಿಮೆಯಾಗಿ ಕಾರ್ಯಸಾಧನೆಯು ಹೆಚ್ಚಾಗಬೇಕು. ಅನಾವಶ್ಯಕವಾದ ಪತ್ರಿಕಾಪ್ರಸಂಗವನ್ನು ತಪ್ಪಿಸಿ, ಕರ್ತವ್ಯಗಳನ್ನು ನೆರವೇರಿಸುವ ವಿಷಯದಲ್ಲಿ ಸರ್ಕಾರದ ಅಧಿಕಾರಿಗಳು ಮನಃಪೂರ್ತಿಯಾಗಿ ಸಹಾಯಮಾಡಿಯಾರೆಂಬ ಭರವಸೆಯು ನನಗೆ ಸಂಪೂರ್ಣವಾಗಿದೆ. ಕಾರ್ಯಸಾಧಕಗಳಾದ ಪದ್ಧತಿಗಳನ್ನು ಅನುಸರಿಸುವ ವಿಷಯದಲ್ಲಿಯೂ, ಕಾಗದಪತ್ರಗಳನ್ನು ಬೇಗ ಬೇಗನೆ ಇತ್ಯರ್ಥಪಡಿಸುವ ವಿಷಯದಲ್ಲಿಯೂ ಭಾರತೀಯರು ಇನ್ನೂ ಹೆಸರನ್ನು ಸಂಪಾದಿಸಬೇಕಾಗಿದೆಯೆಂಬ ಆಕ್ಷೇಪಣೆಯು ಸಾಮಾನ್ಯವಾಗಿದೆ. ನಮ್ಮ ಬೇರೆಬೇರೆ ಇಲಾಖೆಗಳಲ್ಲಿಯ ಬೇರೆಬೇರೆ ದರ್ಜೆಗಳ ಅಧಿಕಾರಿಗಳು ಇದನ್ನು ಜ್ಞಾಪಕದಲ್ಲಿಟ್ಟುಕೊಂಡು, ತಮ್ಮ ದಿನಚರಿಯ ಕರ್ತವ್ಯಗಳನ್ನು ನೆರವೇರಿಸುವುದರಲ್ಲಿ ಹೆಚ್ಚು ಕ್ಷಿಪ್ರತೆಯನ್ನೂ ಶ್ರದ್ಧೆಯನ್ನೂ ತೋರಿಸುತ್ತಾ ಬಂದರೆ, ಅದರಿಂದ ನಮ್ಮ ಸಂಸ್ಥಾನಕ್ಕೆ ಒಳ್ಳೆಯ ಹೆಸರೂ ನಮ್ಮ ಜನರಿಗೆ ಹೆಚ್ಚಿದ ಪ್ರಯೋಜನವೂ ಲಭಿಸುವುದು ಮಾತ್ರವಲ್ಲದೆ, ಸರ್ಕಾರದವರು ತಮ್ಮ ಮುಂದಿರುವ ಭಾರೀ ವಿಚಾರಗಳಿಗೆ ಧಾರಾಳವಾಗಿ ಗಮನಕೊಡಲು ತಕ್ಕಷ್ಟು ವಿರಾಮವೂ ದೊರಕುವುದು.

ಕೆಲವು ಭಾರೀ ವಿಚಾರಗಳು.

ಆ ವಿಧವಾದ ವಿಚಾರಗಳು ಸಂಖ್ಯೆಯಲ್ಲಿಯೂ ಸಂದರ್ಭ ವೈಲಕ್ಷಣ್ಯದಲ್ಲಿಯೂ ಸಹ ಹೇಗೆ ಬೆಳೆಯುತ್ತಿವೆ ಎಂಬುದು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿಯೇ ಇರಬೇಕು. ವರ್ಷಂಪ್ರತಿಯೂ ನಮ್ಮ ಜವಾಬ್ದಾರಿಗಳು ವಿಸ್ತಾರಪಡುತ್ತಲಿವೆ. ಅವುಗಳ ಪೈಕಿ, ನಾವು ಹೊಸಹೊಸದಾಗಿ ಅಭ್ಯುದಯಮಾರ್ಗಗಳಲ್ಲಿ ಮುಂದುವರಿಯುವಂಥಾ ದೇಶೀಯ ರಾಜ್ಯದವರೆಂಬ ಯಶಸ್ಸಿನ ಮೇಲೆ ಹೊರಿಸಿರತಕ್ಕ ರಾಜನೀತಿ ಸಂಬಂಧವಾದ ಜವಾಬ್ದಾರಿಗಳು ಅಮುಖ್ಯವಾದವುಗಳೇನೂ ಅಲ್ಲ. ನಾವುಗಳು ಇಲ್ಲಿ ಮಾಡುತ್ತಿರುವ ಕೆಲಸಗಳನ್ನು ಪರಿಶೀಲಿಸಿ, ನಮ್ಮ ಕಾರ್ಯರೀತಿಗಳ ಯುಕ್ತತೆ ಅಥವಾ ಅಯುಕ್ತತೆಗಳಿಗೆ ಅನುಗುಣವಾದ ಪ್ರೋತ್ಸಾಹವನ್ನು ಅಥವಾ ಎಚ್ಚರಿಕೆಯನ್ನು ಪಡೆದುಕೊಳ್ಳಲು ವಿಸ್ತಾರವಾದ ಪ್ರಪಂಚವೊಂದು ಕುತೂಹಲದಿಂದ ಕಣ್ಣಿಟ್ಟು ನೋಡುತ್ತಿದೆ. ನಾವು ಇಲ್ಲಿ ಸಂಪಾದಿಸುವಂಥಾ ಖ್ಯಾತಿಯಲ್ಲಿ ಮೈಸೂರಿಗಿಂತ ವಿಶಾಲವಾಗಿರುವ ದೇಶದ ಜಯಾಪಜಯಗಳು ಒಳಗೂಡಿವೆ. ನಮ್ಮ ಸಂಸ್ಥಾನದ ಕೀರ್ತಿಯನ್ನು ಕಾಪಾಡಿ, ಹೊರಗಡೆ ಅದರ ಮಾನ್ಯತೆಯನ್ನು ಹೆಚ್ಚಿಸಿ, ಎಲ್ಲಾ ಅಭ್ಯುದಯ ಪ್ರಯತ್ನಗಳಿಗೂ ಅದು ಆಶ್ರಯದಾಯಿ ಎಂಬ ಮೇಲ್ಮೆಯನ್ನು ಅಭಿವೃದ್ಧಿಗೊಳಿಸಲು ನಾವು ಎಲ್ಲಾ ಮಾರ್ಗಗಳಲ್ಲಿಯೂ ನಮ್ಮ ಶಕ್ತಿಯೆಲ್ಲವನ್ನೂ ಪ್ರಯೋಗಿಸಿ ಶ್ರಮಪಡಬೇಕಾಗಿದೆ. ಇನ್ನು ಸ್ವಲ್ಪ ಕಾಲದೊಳಗಾಗಿಯೇ, ಇಂಡಿಯಾದೇಶದ ಅಖಂಡರಾಜ ಭಾರಕ್ರಮದಲ್ಲಿ ದೇಶೀಯ ಸಂಸ್ಥಾನಗಳ ನಡುವೆ ಮೈಸೂರನ್ನು ಹೇಗೆ ಜೋಡಣೆಗೊಳಿಸಬೇಕು—ಎಂಬ ವಿಚಾರವೂ, ಅದೇ ಸಂಬಂಧದಲ್ಲಿ ನಮ್ಮ ರಾಜ್ಯದ ಬಾಹ್ಯವ್ಯವಹಾರಗಳಲ್ಲಿ ನಾವು ನ್ಯಾಯವನ್ನು ದೊರಕಿಸಿಕೊಳ್ಳಲು ಯಾವ ಏರ್ಪಾಟುಗಳನ್ನು ನಡಿಸಬೇಕು—ಎಂಬ ವಿಚಾರವೂ, ಆಲೋಚನೆಗೆ ಬರಬೇಕಾಗುವುದು. ಈ ವಿಚಾರಗಳ ಸೂಕ್ಷ್ಮವಿವರಣೆಗೆ ಇದು ಸಮಯವಲ್ಲ. ನಮ್ಮ ಮುಂದಿರುವ ಕರ್ತವ್ಯಗಳು ಎಷ್ಟು ದೊಡ್ಡವೆಂಬುದನ್ನು ತೋರಿಸುವುದಕ್ಕೋಸ್ಕರ ಮಾತ್ರ ಅವುಗಳನ್ನಿಲ್ಲಿ ಸೂಚಿಸಿದ್ದೇನೆ.

ಉಪಸಂಹಾರ.

ಈ ಉಪನ್ಯಾಸದ ಉಪಸಂಹಾರ ಭಾಗದಲ್ಲಿ ಸ್ವವಿಷಯಕವೂ, ಅಂತರಂಗಸೂಚಕವೂ ಆದ ಕೆಲವು ಮಾತುಗಳನ್ನು ವಿಜ್ಞಾಪಿಸದೆ ಇರಲಾರೆ.

ಶ್ರೀಮನ್ಮಹಾರಾಜರವರು ತಮಗೂ, ತಮ್ಮ ಪ್ರಜೆಗಳಿಗೂ ವಿಶಾಲತರವಾದ ಸೇವೆಯನ್ನು ಮಾಡಲು ಈ ಅವಕಾಶವನ್ನು ನನಗೆ ದಯಪಾಲಿಸಿರುವುದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ದಿವಾನ್ ಪದವಿಯು ಅಧಿಕಾರವೆಂಬುದಕ್ಕಿಂತ ಹೆಚ್ಚಾಗಿ ದೇಶಸೇವಾದೀಕ್ಷೆಯೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಮಹಾಪ್ರಭುಗಳವರ ವಿಷಯದಲ್ಲಿ ನಾನು ಕೃತಜ್ಞತೆಯಿಂದಲೂ ಯಾವಜ್ಜೀವವಾದ ಪ್ರೀತಿಯಿಂದಲೂ ಬದ್ಧನಾಗಿದ್ದೇನೆ. ಈ ಸಂಸ್ಥಾನಕ್ಕೆ ನಾನು ಮಾಡಬಹುದಾದ ಸೇವೆಯ ವಿಷಯದಲ್ಲಿ ಅವರು ತೋರುವ ಮೆಚ್ಚುಗೆಯು ನನಗೆ ಅತ್ಯಂತ ಬೆಲೆಯುಳ್ಳದಾಗಿರುವುದು ; ಆ ಮೆಚ್ಚಿಕೆಯನ್ನು ಮೈಸೂರಿನ ಪ್ರಜೆಗಳ ಸುಖಸಂಪತ್ತುಗಳಿಗಾಗಿ ತಾಳ್ಮೆಯೊಡನೆ ಶ್ರಮಪಡುವುದರಿಂದ ಮಾತ್ರವೇ ಸಂಪಾದಿಸಲಾಗುವುದು. ಮಹಾಶಯರೆ, ಆ ಬಗೆಯ ಶ್ರಮದಲ್ಲಿ ನಾನು ಲೋಪಮಾಡತಕ್ಕವನಲ್ಲವೆಂದೂ ಅದನ್ನು ಸಾರ್ಥಕಪಡಿಸಲು ಅತ್ಯವಶ್ಯಕವಾದ ಸಹಾನುಭೂತಿಯಲ್ಲಿಯೂ ನಾನು ಲೋಪಮಾಡತಕ್ಕವನಲ್ಲವೆಂದೂ ಭರವಸೆ ಕೊಡುತ್ತೇನೆ. ಯಾವ ನಿರ್ಮಲವೂ, ಅಚಂಚಲವೂ ಆದ ಸ್ಫೂರ್ತಿಯ ಮಹಿಮೆಯಿಂದ, ಮಾನವರ ದೌರ್ಬಲ್ಯವೂ ಮಾನವ ವ್ಯಾಪಾರಗಳ ದುಷ್ಕರತೆಯೂ ಎಷ್ಟಿದ್ದಾಗ್ಯೂ, ಸ್ವೀಕೃತಸಂಕಲ್ಪವು ಮನುಷ್ಯರ ಸಣ್ಣಸಣ್ಣ ಕೆಲಸಗಳಲ್ಲಿಯೂ ಸಹ ತಲೆದೋರಲಾಗುವುದೋ, ಆ ಸ್ಫೂರ್ತಿವಿಶೇಷಕ್ಕಾಗಿ ನಾನು ಸದಾ ಪ್ರಾರ್ಥಿಸುತ್ತಿರುತ್ತೇನೆ. ಈ ಪದವಿಯ ಉತ್ತರ ಭಾರಗಳನ್ನೂ, ತನ್ನಲ್ಲಿರತಕ್ಕ ನ್ಯೂನತೆಗಳನ್ನೂ, ಸಹ ನೆನೆದುಕೊಂಡರೆ ಎಂಥವನೂ ಎದೆಗುಂದಿದವನಾಗಬಹುದು. ಆದರೆ ಇದೇನೂ ಒಬ್ಬ ವ್ಯಕ್ತಿಯ ಸಾಹಸವಲ್ಲ. ಮಹಾಶಯರೆ, ನಿಮ್ಮಗಳ ವಿಶ್ವಾಸ ಸಹಾಯಗಳಿಲ್ಲವಾದರೆ, ಒಬ್ಬಂಟಿಗನು ಮಾಡುವ ಪ್ರಯತ್ನವು ವ್ಯರ್ಥವಾಗಿ ಹೋಗಬಹುದು. ಆದರೆ ನಾವೆಲ್ಲರೂ ಸೇರಿ ನಡಿಸುವ ಪ್ರಯತ್ನವು ವಿಫಲವಾಗದು. ಹಾಗೆ ನಾವು ಒಟ್ಟುಗೂಡಿ ಕೆಲಸ ಮಾಡಬಲ್ಲೆವೆಂದು ನನಗೆ ಪೂರ್ಣವಾದ ನಂಬಿಕೆಯುಂಟು. ಈ ನಂಬಿಕೆಗೆ, ನಿಮ್ಮಲ್ಲಿ ಎಲ್ಲಾ ತರಗತಿಗಳ ಪ್ರತಿನಿಧಿಗಳಿಂದಲೂ ನನಗೆ ಲಭಿಸಿರುವ ಅಕೃತ್ರಿಮವೆಂದೂ, ಮನಃಪುರಸ್ಸರವೆಂದೂ ಸ್ಪಷ್ಟವಾಗಿ ತೋರುವ ಶುಭವಾದಗಳು ಸ್ವಲ್ಪಮಟ್ಟಿಗೆ ಆಧಾರವಾಗಿವೆ ; ಆದರೆ ಅದರ ಮುಖ್ಯಾಧಾರವು ನಿಮ್ಮ ಮತ್ತು ನನ್ನ ದೇಶವಾತ್ಸಲ್ಯದ ವಿಷಯದಲ್ಲಿ ನನಗಿರತಕ್ಕ ತಿಳಿವಳಿಕೆಯೇ.

ನಾವು ಅನೇಕ ಕಷ್ಟಗಳ ನಡುವೆ ಕಾರ್ಯಾಲೋಚನೆ ನಡಿಸಬೇಕಾಗಿದೆ; ಆದರೆ ಆ ಕಷ್ಟಗಳೇ ನಮಗಿರುವ ಅವಕಾಶಕ್ಕೆ ಮತ್ತಷ್ಟು ಮೇಲ್ಮೆಯನ್ನುಂಟುಮಾಡುತ್ತವೆ. ನಮ್ಮ ರಾಜ್ಯವು ಯೋಗಶಾಲಿಯಾದುದು. ಅದರ ಸ್ವಾಮಿಯ ಪ್ರಜ್ಞೆ ಉದಾತ್ತತೆಗಳಿಂದಲೂ, ಅದರ ಜನರ ಸುಗುಣ ಸಮಾನ ಧರ್ಮಾಯಕತೆಗಳಿಂದಲೂ, ಅದಾಗ್ಯೂ ಅಸ್ಪಷ್ಟವಾಗಿ ನಾವು ರೂಢಿಸಬೇಕಾಗಿರುವ ಅದರ ಖನಿಜಾದಿ ನಾನಾ ಸಂಪತ್ತುಗಳಿಂದಲೂ ಅದು ಯೋಗಶಾಲಿಯಾಗಿದೆ. ಮಾಡಬೇಕಾಗಿರುವ ಪ್ರಯತ್ನವನ್ನು ಜಾಣತನದಿಂದಲೂ, ಶಕ್ತಿಯಿಂದಲೂ, ಸ್ಥಿರಚಿತ್ತದಿಂದಲೂ, ಐಕಮತ್ಯದಿಂದಲೂ ಮಾಡಿದರೆ, ಅದಕ್ಕೆ ಈ ದೇಶದಷ್ಟು ಬೇಗನೆ ಅನುವಾಗತಕ್ಕ ದೇಶಗಳು ಅನೇಕವಿಲ್ಲ.

ಮಹಾಶಯರೆ, ನನ್ನ ಮನಸ್ಸು ಈಗ ಕಳವಳವನ್ನು ಬಿಟ್ಟಿದ್ದಲ್ಲವಾದರೂ, ಮುಂದೆ ನಾನು ಈ ಅಧಿಕಾರದಿಂದ ವಿಶ್ರಾಂತನಾಗಿ ಲೆಕ್ಕವನ್ನೊಪ್ಪಿಸುವ ದಿನದ ಕಡೆಗೆ ಅದು ಆಶಾಭರವಸೆಗಳೊಡನೆ ತಿರುಗುತ್ತದೆ. ನೀವೂ ನಾನೂ ಒಟ್ಟಿಗೆ ಏಳಬೇಕು ಅಥವಾ ಒಟ್ಟಿಗೆ ಬೀಳಬೇಕು. ನಿಮ್ಮ ಮತ್ತು ನನ್ನ ಕರ್ತವ್ಯ ಉದ್ದೇಶಗಳು ಒಂದಾಗಿವೆ. ನಮ್ಮಗಳ ತೀರ್ಮಾನಗಳೂ ಒಂದೇ ಆಗಿದ್ದಾವೆಂದು ನಾನು ನಂಬಿದ್ದೇನೆ. ನೀವೂ ನಾವೂ ಬೇರೆ ಬೇರೆಯೆಂದೆಣಿಸಲು ನನಗೆ ಮನಸ್ಸಿನಲ್ಲಿ ಕೂಡ ಸಾಧ್ಯವಿಲ್ಲವಾಗಿದೆ. ಆದರೆ ಒಂದು ದೊಡ್ಡ ವ್ಯತ್ಯಾಸವುಂಟು. ದಿವಾನನಾದಾತನು ಕೆಲವು ವರ್ಷ ಮಾತ್ರ ನಾನಾ ಉದ್ದೇಶಗಳನ್ನಿಟ್ಟುಕೊಂಡು ಕಷ್ಟಪಟ್ಟು ವಿರಮಿಸುವನು, ಆಮೇಲೆ ಆತನ ಸ್ಥಾನದಲ್ಲಿ ಆತನಿರುವುದಿಲ್ಲ ; ಆತನ ಕಾರ್ಯಗಳ ವಿಷಯದಲ್ಲಿ ಇತರರು ಮೌಲ್ಯನಿರ್ಣಯ ಮಾಡುವರು. ಪ್ರಜಾಪ್ರತಿನಿಧಿಗಳಾದ ತಮ್ಮಗಳ ಅಧಿಕಾರವಾದರೋ ಎಂದೆಂದಿಗೂ ಇರುವುದು. ವ್ಯಕ್ತಿಗಳಾದವರು ಬಂದು ಹೋಗುತ್ತಿರಬಹುದು, ಈ ಸಭೆಯಾದರೋ ಈಗ ಗೋಚರಕ್ಕೆ ಬಾರದೆ ಇರುವ ಕಾಲದಲ್ಲಿಯೂ ಶಾಶ್ವತವಾಗಿ ನಡೆಯುತ್ತಲೇ ಇರುವುದು. ಅದರ ಬಾಲ್ಯವತ್ಸರಗಳಲ್ಲಿ ತಾವುಗಳು ಬೇರೆಬೇರೆಯಾಗಿಯೂ ಒಟ್ಟಿಗೂ ಅದರ ಸಂಪ್ರದಾಯಗಳಿಗೆ ಪೀಠಿಕೆ ಹಾಕುತ್ತಿರುವಿರಿ. ಹೀಗಿದ್ದ ಮೇಲೆ, ಇಲ್ಲಿ ಮಾತಿನಲ್ಲಿಯೂ ಆಲೋಚನೆಯಲ್ಲಿಯೂ ಪರಿಶುದ್ಧತೆಯನ್ನೂ ಭಾವೋನ್ನತಿಯನ್ನೂ ತೋರುವುದು ಎಷ್ಟು ಮುಖ್ಯವಾದುದು ? ರಾಜ್ಯವಿಚಾರಗಳಲ್ಲಿ ಪರಿಶುದ್ಧತೆ ಭಾವೋನ್ನತಿಗಳೆಂದರೆ ವ್ಯಕ್ತಿಪರವಾದ ಮತ್ತು ಪಕ್ಷಪರವಾದ ಸ್ವಾರ್ಥತೆಗಳನ್ನು ದೂರಮಾಡಿ, ಐಕ್ಯವನ್ನೂ ಶಕ್ತಿಯನ್ನೂ ಅಭಿವೃದ್ಧಿಪಡಿಸುವಿಕೆ. ನಾವುಗಳು ಪರಸ್ಪರ ಸ್ನೇಹದಿಂದಲೂ, ಸೌಹಾರ್ದದಿಂದಲೂ ಕೂಡಿದವರಾಗಿ, ನಮ್ಮ ಜನಪದದ ಅವಿಭಕ್ತ ಜೀವನದ ಪುರಾತನ ಸ್ಮರಣೆಯು ಪುನಃ ಸಂಪೂರ್ಣವಾಗಿ ಮೂರ್ತೀಭವಿಸುವಂತೆ ಮಾಡೋಣ. ನಮ್ಮ ಪೈಕಿ ಯಾರಾದರೂ—ಅದರಲ್ಲಿ ನಾನೂ ಸೇರಿ—ಈ ಸಭೆಯನ್ನು ನಮ್ಮ ಸಂಸ್ಥಾನವೆಲ್ಲಕ್ಕೋಸ್ಕರವೂ ಅಲ್ಲದೆ, ಅದಕ್ಕಿಂತ ಸಣ್ಣದಾದ ಯಾವ ಉದ್ದೇಶಕ್ಕಾಗಿಯಾದರೂ ಉಪಯೋಗಿಸಿಕೊಳ್ಳಲು ಯತ್ನಿಸುವುದಾದರೆ, ಅಂಥವರು ತಮ್ಮ ಪದವಿಗೇ ಅಗೌರವ ತಂದವರೆಂದು ನಾನು ಭಾವಿಸುತ್ತೇನೆ. ನಾವು ಒಂದು ರಾಜ್ಯವೆನ್ನಿಸಿಕೊಂಡು ನಿಜವಾಗಿ ಮುಂದುವರಿದು, ಹೊರಗಣವರ ಮನ್ನಣೆ ಮೆಚ್ಚಿಕೆಗಳನ್ನು ಪಡೆಯಬೇಕಾದರೆ, ನಾವು ಯಾವಾಗಲೂ ಎಲ್ಲಾ ವಿಷಯಗಳನ್ನೂ ಸಾರ್ವಜನಿಕ ದೃಷ್ಟಿಯಿಂದಲೇ ನೋಡಿ, ನಮ್ಮೆದುರಿಗಿರುವ—ಮತ್ತು ನಮ್ಮಗಳ ಮನಸ್ಸಿಗೆ ಚಿಂತೆಯನ್ನುಂಟುಮಾಡುತ್ತಿರುವ—ವಿಚಾರಗಳನ್ನು ಸಹೋದ್ಯೋಗ ರೀತಿಯಿಂದಲೂ, ಪರಸ್ಪರ ಕಷ್ಟಸುಖಗಳಲ್ಲಿ ಭಾಗಿಗಳಾಗತಕ್ಕವರೆಂಬ ಬುದ್ಧಿಯಿಂದಲೂ, ಅನ್ಯೋನ್ಯ ವಿಶ್ವಾಸದಿಂದಲೂ ಪರಾಮರ್ಶಿಸಬೇಕಾದುದು ಆವಶ್ಯಕ.

ಮಿರ್ಜಾ ಯಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನರವರು.

ಗೃಹಕೃತ್ಯದ ನೋಟೀಸು.

ಈ ಮೂಲಕ ಸಮಸ್ತಜನಗಳಿಗೂ ತಿಳಿಯಪಡಿಸುವುದೇನಂದರೆ— ನಮ್ಮ ಖಾಸಾ ಅಣ್ಣಂದಿರಾದ ಹಾಲುಮತದ ದಾಸಯ್ಯನಕೆಂಚಯ್ಯ ಪತಿ ಹೆಂಡತಿ ಹನುಮಕ್ಕನೆಂಬ ನಮ್ಮ ಅತ್ತಿಗೆ ಸಾಲಾ ವಗೈರೆ ಮಾಡಿಕೊಂಡು ನಮ್ಮ ಸ್ವತ್ತುಗಳನ್ನು ಪರಭಾರೆ ಮಾಡಬೇಕೆಂಬ ದುರುದ್ದೇಶ ಮಾಡುತ್ತಿದ್ದಾರಾಗಿ ವರ್ತಮಾನ ಕೇಳುತ್ತೇವೆ. ಒಂದುವೇಳೆ ಅವರು ಸಾಲ ವಗೈರೆ ಮಾಡುವ ಪಕ್ಷದಲ್ಲಿ ಅವರ ಸ್ವಂತ ಜವಾಬ್ದಾರಿಯಿಂದ ತೀರ್ಮಾನಮಾಡಿಕೊಳ್ಳತಕ್ಕದ್ದೇ ವಿನಹಾ ನಮ್ಮಗಳ ಅವಿಭಕ್ತ ಕುಟುಂಬದ ಆಸ್ತಿಯಿಂದ ಸಲ್ಲತಕ್ಕದ್ದಲ್ಲ. ಸದರಿ ನಮ್ಮ ಅತ್ತಿಗೆ ಒಟ್ಟು ಕುಟುಂಬದ ಆಸ್ತಿಯಿಂದ ಜೀವನಾಂಶ ಸಲ್ಲತಕ್ಕದ್ದಾಗಿದೆಯೇ ವಿನಹಾ ಇನ್ನಾವ ಭಾಗಕ್ಕೂ ಅವಳು ಹಕ್ಕುದಾರಳಲ್ಲ.

ದಾಸಯ್ಯನ ಶಂಕ್ರಪ್ಪನವರ ರುಜು.
ಬೇರೂರು. ಯಂಗಟಯ್ಯನ ರುಜು.

ನೋಟೀಸು.

ಹುಣಸೂರು ತಾಲ್ಲೋಕು ಬೆಟ್ಟದಪುರದ ಹೋಬಳಿ ನಂದೀಪುರಗ್ರಾಮದಲ್ಲಿರುವ ಮಾಯಾಚಾರಿ ಮಗ ಚನ್ನಯ್ಯಾಚಾರಿಯಾದ ನಾನು ಈ ಮೂಲಕ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ—ನನಗೆ ಮನ್ಯಾಚಾರಿ ಉರುಫ್ ತಮ್ಮಯ್ಯಾಚಾರಿ, ದಕ್ಷಿಣಾಚಾರಿ ಮತ್ತು ಮಾಯಾಚಾರಿ ಎಂಬದಾಗಿ ಮೂರುಜನ ಮಕ್ಕಳಿರುತ್ತಾರೆ. ಈ ಪೈಕಿ ಹಿರೀಮಗನಾದ ತಮ್ಮಯ್ಯಾಚಾರಿಯು ಮಾತ್ರ ಮೇಜರಾಗಿರುತ್ತಾನೆ. ಇವನಿಗೆ ನಾನೇ ಮುಂಜಿ ಮದುವೆ ಮಾಡಿರುತ್ತೇನೆ. ಬಾಕಿ ಇಬ್ಬರುಮಕ್ಕಳು ಮೈನರುಗಳು. ಈ ಹಿರೀಮಗನಾದ ತಮ್ಮಯ್ಯಾಚಾರಿಯು ಕೆಟ್ಟಜನರ ಸಹವಾಸದಿಂದ ಈಗ ಎರಡುವರ್ಷದಿಂದಲೂ ನನ್ನ ಮನೆಯನ್ನು ಬಿಟ್ಟು ಪೋಲಿಯಾಗಿ ಸಿಕ್ಕಿದಕಡೆ ತಿರುಗಿಕೊಂಡು ಇರುತ್ತಾನೆ. ಆದ್ದರಿಂದ ಇವನಿಗೆ ಯಾರಾದರೂ ಸಾಲಾ ವಗೈರೆ ಕೊಟ್ಟಿದ್ದಲ್ಲಿ ಅಥವಾ ಮುಂದೆ ಕೊಟ್ಟಲ್ಲಿ ನನ್ನ ಸ್ವಯಾರ್ಜಿತವಾದ ಮನೆ ಮತ್ತು ಜಮೀನುಗಳು ನನ್ನ ಹುಕೋಟೆಯಲ್ಲಿಲ್ಲದೆ ಪೋಲಿಯಾಗಿ ತಿರುಗಿಕೊಂಡಿರುವ ಮನ್ಯಾಚಾರಿ ಉರುಫ್ ತಮ್ಮಯ್ಯಾಚಾರಿ ಮಾಡಿದ ಸಾಲಕ್ಕೆ ಗುರಿಯಾಗುವುದಿಲ್ಲವೆಂದು ಇದರ ಮೂಲಕ ತಿಳಿಸಿದೆ.

2 ನಂದೀಪುರದ ಚನ್ನಯಾಚಾರಿ ರುಜು.

೧೯೨೬ ನೆಯ ಇಸವಿ ಜೂನ್ ತಾ|| ೧೯ರಿಂದ ೧೯೨೬ ನೆಯ ಇಸವಿ ಜೂನ್ ತಾ|| ೨೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಜ್ಯೇಷ್ಠ ಶುದ್ಧ ನವಮಿಯಿಂದ ಜ್ಯೇಷ್ಠ ಶುದ್ಧ ಪೌರ್ಣಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
19	ಶನಿ	ನವ	53-49	ಹಸ್ತ	56-31	6
20	ಭಾನು	ದಶ	56-40	ಚಿತ್ತ	60	7
21	[1]ಸೋಮ	ಏಕಾ	58-15	ಚಿತ್ತ	0-24	8
22	ಮಂಗಳ	ದ್ವಾದ	58-32	ಸ್ವಾತಿ	3-31	9
23	[2]ಬುಧ	ತ್ರಯೋ	57-50	ವಿಶಾ	5-21	10
24	ಗುರು	ಚತು	55-7	ಅನೂ	5-58	11
25	[3]ಶುಕ್ರ	ಪೌರ್ಣ	51-47	ಜ್ಯೇಷ್ಠ	5-27	12

(1) ನಿರ್ಜಲೈಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ, ಮಳೆನಕ್ಷತ್ರ-ಆರ್ದ್ರಾ ೧ ಸೇರುವಾಡೆ. (2) ಪ್ರದೋಷ, ಪ್ರಿನ್ಸ್ ಆಫ್ ವೇಲ್ಸ್ ರವರ ವರ್ಧಂತಿ. (3) ವಟಸಾವಿತ್ರೀವ್ರತ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಜ್ಯೋತ್ಸ್ನಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾ ಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮುತ್ತಮಕಲಾಲೋಲಂ ಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾತಲಿತ ಸಾದ್ಗುಣ್ಯಾಲವಾಲಂ ವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸತ್ಸ್ಯತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

REGISTERED NO. M. 124.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜೂನ್ ತಾರೀಖು ೨೬ ನೆಯ ಶನಿವಾರ. [ಸಂಚಿಕೆ ೨೬

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಬಳಲಿಕೆಯಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆಂಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	24

S.P.E.S. SITHARAGHAVA
ARYASALA

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಶಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು. ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—2] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕಾ [illegible] ಶಬ್ದಮಂಜರಿ	೦—೮—೦	೦—೧೩—೦
ಸಟೀಕಾ [illegible]	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಿನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಕ್ಷೇಮಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:— ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ನೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧೨ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—36] ಪೋ. ಬಾ. ೫೧೦, ಮದರಾಸು.

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[12-10] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಮಹಾತ್ಮಗಾಂಧಿಯವರ ಸ್ವಚರಿತ್ರ.

(ಸತ್ಯಾನ್ವೇಷಣ.)

೨೨ ನೆಯ ಪ್ರಕರಣ.

ಆಂಗ್ಲದೇಶದಲ್ಲಿ ಮಾಡಿದ ಕೆಲಸ.

ನಾನು ಆಂಗ್ಲದೇಶಕ್ಕೆ ಯಾವ ಕೆಲಸವನ್ನು ಕುರಿತು ಹೋದೆನೋ ಅದನ್ನು ಕುರಿತು ಈವರೆಗೇನನ್ನೂ ಬರೆದಿಲ್ಲವು. ಅದನ್ನು ಕುರಿತು ಈವಾಗ ಸಂಗ್ರಹವಾಗಿ ಬರೆಯುವೆನು. ನಾನು ಬ್ಯಾರಿಸ್ಟರ್ ಪರೀಕ್ಷೆಗೆ ಓದಲು ಹೋದೆನು. ಎರಡು ಶರತ್ತುಗಳು ಮುಂದಾಗಿ ನೆರವೇರಿನ ಹೊರತು ಬಾರಿಸ್ಟರ್ ಪ್ರಶಸ್ತಿಯು ಕೊಡಲ್ಪಡುವುದಿಲ್ಲವು. ಒಟ್ಟು ಮೂರುವರ್ಷಗಳಲ್ಲಿ 12 ಟರಂಗಳು ಮುಗಿಯಬೇಕು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಟರ್ಮು ಮುಗಿಯುತಲೆ ಔತಣಕ್ಕೆ ಹೋಗಬೇಕು. ಒಂದು ಟರ್ಮಿಗೆ 24 ಔತಣಗಳಾಗುವುವು. ಅವುಗಳಲ್ಲಿ ಕನಿಷ್ಠಪಕ್ಷ 6 ಔತಣಗಳಿಗಾದರೂ ಹೋಗಬೇಕು. ಔತಣದಲ್ಲಿ ಊಟದ ಸಮಯಕ್ಕೆ ಹೋದರೆ ಸಾಲದು. ಸಕಾಲದಲ್ಲಿ ಹೋಗಿ ಹಾಜರಾಗಿಕೊಂಡು ಬಂದಿದ್ದೇನೆಂದು ಬರೆಯಿಸಿಕೊಳ್ಳಬೇಕು. ಔತಣವು ಮುಗಿಯುವವರೆಗೂ ಅಲ್ಲೇ ಇರಬೇಕಲ್ಲದೆ ಹೋಗಕೂಡದು. ಆಗ ಎಲ್ಲರೂ ಪಕ್ವಾನ್ನವನ್ನು ಭುಂಜಿಸುವರು. ಒಳ್ಳೇ ಮದ್ಯವನ್ನು ಕುಡಿಯುವರು. ಒಂದೌತಣದಲ್ಲಿ ಒಬ್ಬನಿಗೆ 2-3 ರೂಪಾಯಿ ವೆಚ್ಚವಾಗುವುದು. ಅದು ಕಡಮೆಯೆಂದೇ ಹೇಳಬೇಕು. ಯಾಕೆಂದರೆ ಹೋಟಲಿನಲ್ಲಿ ಊಟಕ್ಕೆ ಹೋದರೆ ಒಬ್ಬನಿಗೆ ಸಾರಾಯಿಯಿಲ್ಲದೆ 2-3 ರೂಪಾಯಿ ವೆಚ್ಚವಾಗುವುದು. ಊಟದ ಖರ್ಚಿಗಿಂತ ಸಾರಾಯಿಯ ಖರ್ಚು ಹೆಚ್ಚೆಂದು ಹೇಳಿದರೆ ಭಾರತೀಯರಲ್ಲಿ ನವನಾಗರಿಕರಿಗೆ ಬಹಳ ಆಶ್ಚರ್ಯವಾಗುವುದು ನಿಶ್ಚಯ. ಮೊದಲನೆಯವೇಳೆ ನನಗೆ ಬಹಳ ವ್ಯಾಕುಲವಾಯಿತು. ಇಷ್ಟು ಹಣವನ್ನು ಸಾರಾಯಿಗಾಗಿ ಹಾಳ್ಮಾಡಲು ಇವರ ಮನಸ್ಸು ಹೇಗೆ ಒಪ್ಪುವುದೋ ಎಂದು ನಾನು ಬಹಳವಾಗಿ ಚಿಂತಿಸುತ್ತಿದ್ದೆನು. ಆಮೇಲೆ ನನಗೆ ತಿಳಿಯಿತು. ಆ ಔತಣದಲ್ಲಿ ನಾನು ಏನನ್ನೂ ತಿನ್ನಲಿಲ್ಲವು. ರೊಟ್ಟಿಯನ್ನು, ಕೋಸುಗೆಡ್ಡೆಯ ತಾಳದವನ್ನೂ ಬೇಯಿಸಿದ ಹಾಲುಗೆಡ್ಡೆಯನ್ನೂ ತಿಂದೆನು. ಮೊದಲು ಅವನ್ನು ಕೂಡ ನಾನು ತಿಂದಿರಲಿಲ್ಲವು. ಆಮೇಲೆ ಅವು ರುಚಿಯಾಗಿ ಕಂಡುಬಂದುದರ ಮೇಲೆ ಅವನ್ನು ತಿಂದೆನು. ಆಮೇಲೆ ಇತರ ಪದಾರ್ಥಗಳನ್ನು ತೆಗೆದುಕೊಂಡು ಬರುವಂತೆ ಹೇಳಲು ಸಹ ಧೈರ್ಯವುಂಟಾಯಿತು.

ಉಪಾಧ್ಯಾಯರು (ಬೇಂಬರ್ಸ್) ಗಳಿಗೆ ಮಾಡಿಸಲ್ಪಡುವ ಔತಣದ ಪದಾರ್ಥಗಳು ವಿದ್ಯಾರ್ಥಿಗಳಿಗೆ ಮಾಡಿಸಲ್ಪಡುವ ಪದಾರ್ಥಗಳಿಗಿನ್ನ ಶ್ರೇಷ್ಠವಾಗಿರುತ್ತವೆ. ಒಬ್ಬ ಪಾರ್ಸಿವಿದ್ಯಾರ್ಥಿಯೂ, ನಾನೂ ಶಾಕಾಹಾರಿಗಳಾದ ಉಪಾಧ್ಯಾಯರುಗಳಿಗೆ ಮಾಡಿಸಿ ಶಾಕಾಹಾರಪದಾರ್ಥಗಳನ್ನೇ ನಮಗೂ ಕೊಡಬೇಕೆಂದು ಅಪೇಕ್ಷಿಸಿದುದರಮೇಲೆ ಹಣ್ಣುಹಂಪಲು ಮೊದಲಾದ ಪದಾರ್ಥಗಳನ್ನು ಪ್ರತ್ಯೇಕವಾಗಿ ತಂದುಕೊಟ್ಟರು. ನಾಲ್ವರು ವಿದ್ಯಾರ್ಥಿಗಳಿಗೆ ಎರಡು ಸಾರಾಯಿಶೀಸೆಯನ್ನು ಕೊಟ್ಟರು. ನಾನು ಕುಡಿಯುವುದಿಲ್ಲವಾದುದರಿಂದ ಎಲ್ಲರೂ ತಮ್ಮ ಸಮೂಹಕ್ಕೆ ನನ್ನನ್ನು ಸೇರಿಸಿಕೊಳ್ಳುವುದಕ್ಕಾಗಿ ಕರೆಯುತ್ತಿದ್ದರು. ಆದರಿಂದ ಎರಡು ಸೀಸೆಗಳನ್ನು ಮೂವರೇ ಕುಡಿದುಬಿಟ್ಟರು. ಪ್ರತಿ ಟರಮಿನಲ್ಲೂ ಒಂದು ದೊಡ್ಡ ಔತಣವು ಕೂಡ ಜರುಗಿತು. ಆ ದಿವಸ ಶಾಂಪೇನು, ಪೋರ್ಟು, ಷರಿ ಮೊದಲಾದ ಮದ್ಯವು ಕೊಡಲ್ಪಟ್ಟಿತು. ಆದುಕಾರಣ ಆ ದಿವಸ ಮುಖ್ಯವಾಗಿ ಬರಬೇಕೆಂದು ಸಹಪಾಠಿಗಳು ನನ್ನನ್ನು ಬಲವಂತಪಡಿಸುತ್ತಿದ್ದರು. ಈ ಔತಣದಿಂದ ವಿದ್ಯಾರ್ಥಿಗಳಿಗುಂಟಾಗುವ ಅಧಿಕ ಯೋಗ್ಯತೆ ಯಾವುದೋ ನನಗೆ ಈಗಲೂ ತಿಳಿಯದು. ಮೊದಲು ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಹೆಚ್ಚಾಗಿದ್ದುದರಿಂದ ಆಗ ಸಂಭಾಷಣೆಯೂ, ಉಪನ್ಯಾಸವೂ ಜರುಗುತ್ತಿದ್ದುವು. ಅದರಿಂದ ಪ್ರಪಂಚಜ್ಞಾನ ನಾಗರಿಕಪದ್ಧತಿ ವಾಗ್ಧಾಟಿ ಮೊದಲಾದವುಗಳುಂಟಾಗುತ್ತಿದ್ದುವು. ನಾನು ಹೋಗುವಹೊತ್ತಿಗೆ ಆ ಲಾಭವೆಲ್ಲವೂ ಮುಗಿದುಹೋಗಿದ್ದುವು. ಉಪಾಧ್ಯಾಯರುಗಳಿಗೆ ದೂರವಾಗಿ ಆಸನಗಳು ಹಾಕಲ್ಪಡುತ್ತಿದ್ದುವು. ಆದರ ಉದ್ದೇಶವು ಗೋಪ್ಯವಾಗಿದ್ದರೂ ಆಚಾರವನ್ನು ಮಾತ್ರ ಆಂಗ್ಲೇಯರು ಬಿಡರು. ಅವರು ಪೂರ್ವಾಚಾರಪರಾಯಣರು.

ಓದಬೇಕಾದ ವಿಷಯಗಳಲ್ಲಿ ಕಾಠಿನ್ಯವೇನೂ ಇಲ್ಲ. ಆದರೂ ಬ್ಯಾರಿಸ್ಟರುಗಳಿಗೆ ಭೋಜನಪ್ರಿಯರೆಂದು ಹಾಸ್ಯದ ಹೆಸರುಂಟಾಗಿದೆ. ಪರೀಕ್ಷೆಯು ಹೆಸರಿಗೆ ಮಾತ್ರವೆಂದು ಎಲ್ಲರೂ ತಿಳಿದುಕೊಂಡಿರುವರು. ನಾನು ಹೋಗಿದ್ದಾಗ ರೋಮನ್‌ಲಾದಲ್ಲಿ ಒಂದು ಪರೀಕ್ಷೆಯೂ ಕಾಮನ್‌ಲಾದಲ್ಲಿ ಒಂದು ಪರೀಕ್ಷೆಯೂ ನಡೆಯುತ್ತಿದ್ದುವು. ಅವುಗಳಿಗೆ ಓದಬೇಕಾದ ಪುಸ್ತಕಗಳಿವೆ. ಅವನ್ನು ಪ್ರತ್ಯೇಕಪ್ರತ್ಯೇಕವಾಗಿ ಓದಿ ಪ್ರತ್ಯೇಕವಾಗಿ ಪರೀಕ್ಷೆಕೊಡಬಹುದು. ಆದರೆ ವಿದ್ಯಾರ್ಥಿಗಳಾರೂ ಗ್ರಂಥಗಳನ್ನೋದುವುದಿಲ್ಲ. ರೋಮನ್‌ಲಾ ನೋಟ್ಸ್ (ಟಿಪ್ಪಣಿಯು) ನ್ನು ಎರಡು ಮೂರುವಾರದವರೆಗೂ, ಕಾಮನ್‌ಲಾ ನೋಟ್ಸನ್ನು ಎರಡು ಮೂರು ತಿಂಗಳವರೆಗೂ ಓದುವಷ್ಟರಲ್ಲಿ ಅನೇಕಮಂದಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವರು. ಪರೀಕ್ಷಾಪ್ರಶ್ನೆಗಳು ಬಹಳ ಸುಲಭ. ಪರೀಕ್ಷಕರು ಸರಳಹೃದಯರಲ್ಲದೆ ಕಠಿಣರಲ್ಲ. ರೋಮನ್‌ಲಾದಲ್ಲಿ 100 ಕ್ಕೆ 99 ಗುಣ (ಮಾರ್ಕ್ಸ್) ಗಳೂ ಕಡೆಯ ಪರೀಕ್ಷೆಯಲ್ಲಿ 100 ಕ್ಕೆ 75 ಗುಣಗಳೂ ಬರುತ್ತಿದ್ದುವು. ಆದರಿಂದ ಪ್ಯಾಸಾಗುವುದಿಲ್ಲವೆಂಬ ಭಯವೇ ಇರಲಿಲ್ಲ. ಒಂದು ವರ್ಷದಲ್ಲಿ ನಾಲ್ಕುವೇಳೆ ಪರೀಕ್ಷೆಯು ಜರುಗುವುದು. ಆದರಿಂದ ಯಾವ ಕಷ್ಟವೂ ಇಲ್ಲ. ನಾನು ಮಾತ್ರ ಎಲ್ಲಾ ಪುಸ್ತಕಗಳನ್ನೂ ಪೂರ್ತಿಯಾಗಿ ಓದಲು ನಿಶ್ಚಯಿಸಿದೆನು. ಓದದೆ ಪರೀಕ್ಷೆಗೆ ಕುಳಿತುಕೊಳ್ಳುವುದು ಮೋಸವೆಂದು ನನಗೆ ತೋರಿತು. ನಾನು ಅನೇಕ ಪುಸ್ತಕಗಳನ್ನು ದುಡ್ಡು ಖರ್ಚುಮಾಡಿ ತೆಗೆದುಕೊಂಡೆನು. ರೋಮನ್‌ಲಾವನ್ನು ಲ್ಯಾಟಿನ್ ಭಾಷೆಯಲ್ಲಿ ಓದಬೇಕಾಯಿತು. ನಾನು ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗಾಗಿ ಓದಿದ್ದೆನಾದುದರಿಂದ ನನಗದುಪಯೋಗಕ್ಕೆ ಬಂದಿತು. ದಕ್ಷಿಣಾಫ್ರಿಕೆಯಲ್ಲಿ ರೋಮನ್‌ಡಚ್ಚ್ ಭಾಷೆಯಲ್ಲೇ ಕಾಮನ್‌ಲಾಯಿರುವುದರಿಂದ ನಾನು ಲಾಟಿನ್ನು ಓದಿದ್ದುದರಿಂದ ದಕ್ಷಿಣಾಫ್ರಿಕೆಯ ನ್ಯಾಯಶಾಸ್ತ್ರವನ್ನು ಗ್ರಹಿಸಿಕೊಳ್ಳಲು ಅದು ಬಹಳ ಸಹಾಯಕಾರಿಯಾಯಿತು.

ಇಂಗ್ಲೆಂಡು ಕಾಮನ್‌ಲಾಯನ್ನು ಪೂರ್ತಿಗೊಳಿಸಲು 9 ತಿಂಗಳು ಕಷ್ಟಪಟ್ಟು ಓದಿದೆನು. ಬ್ರೂಮ್ಸ್ ಕಾಮನ್‌ಲಾ ಎಂಬುದು ಬಹಳ ದೊಡ್ಡ ಪುಸ್ತಕವಾಗಿದ್ದರೂ ಬಹಳ ಆಕರ್ಷಕವಾಗಿದ್ದಿತು. ಸ್ನೆಲ್ಸ್ ಈಕ್ವಿಟಿ ಎಂಬುದು ಕೊಂಚ ಕಷ್ಟವಾದುದು. ವೈಟ್ ಅಂಡ್ ಟ್ಯೂಡರ್ಸ್ ಲೀಡಿಂಗ್ ಕೇಸಸ್ ಎಂಬುದು ಕೂಡ ಒಳ್ಳೇಗ್ರಂಥವೇ. ವಿಲಿಯಂಸ್ ಅಂಡ್ ಎಡ್ವರ್ಡ್ಸ್ ರಿಯಲ್‌ಪ್ರಾಪರ್ಟಿ ಗುಡೀವ್ಸ್ ಪರ್ಸನಲ್ ಪ್ರಾಪರ್ಟೀ ಎಂಬ ಗ್ರಂಥವನ್ನೂ ಕೂಡ ನಾನು ಓದಿದೆನು. ವಿಲಿಯಂರವರ ಪುಸ್ತಕವು [illegible] ಯೇ ಇದ್ದಿತು. ಮೇಯನ್ಸ್ ಹಿಂದೂಲಾ ಎಂಬ ಗ್ರಂಥವನ್ನು ನಾನು ಭಾರತದೇಶಕ್ಕೆ ಹಿಂದಿರುಗಿ ಬರುವಾಗ್ಗೆ ಹಡಗಿನಲ್ಲಿ ಬಹಳ ಶ್ರದ್ಧೆಯಿಂದ ಓದಿದೆನು. ಭಾರತನ್ಯಾಯಶಾಸ್ತ್ರಗ್ರಂಥಗಳ ವಿಷಯವು ಇಲ್ಲಿ ಅಪ್ರಸ್ತುತವು. ನಾನು ಪರೀಕ್ಷೆಯಲ್ಲಿ ತೇರ್ಗಡೆಯಾದೆನು. 10-6-1891 ರಲ್ಲಿ ಪ್ರಶಸ್ತಿ ದೊರಕಿತು. 11-6-91 ರಲ್ಲಿ ಹೈಕೋರ್ಟಿನಲ್ಲಿ [illegible]

ಅನುಮೋದಿಸಲ್ಪಟ್ಟಿತು. 12-6-91 ರಲ್ಲಿ ನಾನು ಹಡಗಿನಲ್ಲಿ ಭಾರತದೇಶಕ್ಕೆ ಪ್ರಯಾಣಮಾಡಿದೆನು. ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೂ ನನಗೆ [illegible]ವಿರಲಿಲ್ಲ. ನಾನು ಕೋರ್ಟಿನಲ್ಲಿ ವಾದಿಸಲಾರದವನಾಗಿದ್ದೆನು. ಅದನ್ನು ಕುರಿತು ಮತ್ತೊಂದು ಪ್ರಕರಣದಲ್ಲಿ ತಿಳಿಸುತ್ತೇನೆ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜೂನ್ ತಾ|| ೨೬ ನೆಯ ಶನಿವಾರ.

THE REPRESENTATIVE ASSEMBLY.

It was a lively session of the Rep esentative Assembly that they had this Birthday week. The most notable characteristic of it was that it was the smoothest session they had for many years past. Evidently, the lead given to the House by the Dewan has had a very salutory effect on the House. Extreme views were few and far between dignity and sobriety characterised the deliberations. The Dewan-President is to be congratulated on the easy manner in which he conducted them. He showed he could be firm if occasion demanded. When once a member got out of the way to misrepresent things in connection with a building grant made by the Government he was promptly required to resume his seat. Some of the speeches on the budget were very informing and good, but there were others which took the shape of local representations. Among the resolutions before the House the one regarding the prevention of cow-slaughter evoked a lively discussiom. The opposition to legislation for the purpose was mainly on the ground that the object should be left to be achieved by way of propaganda and not by way of legislation especially when the sentiments of certain sections of the people were not against cow-slaughter. Economic grounds were also urged to the effect that the condition of the people did not permit them to maintain old or disabled cattle. The Muhammadan members on the whole opposed the motion. We cannot deny that the question is not free from difficulties. We would however await eagerly the day when the practice of cow killing becomes extinct in our State. When the idea is so much opposed to the sentiments of a large section the other section in minority may well give it up, while at the same time the former should be ready to observe the scruples of the latter with tolerance.Mr. M. C. Linge Gowda wanted an officer to be appointed to scrutinise how far the appointments made so far were in accordance with the orders on the Miller Committee Report. But on the assurance of the Government to look into the matter sympathetically the motion was withdrawn. We would say that we are still far from achieving the goal in view and there appears no perceptable change in the personnel manning the different officers. Various are the ways adopted to evade the obligations under the Order. Let us hope that the assurance of the Government will mean a more effective adherance to their own order. Of the reprsentations before the House, the one most important was the maintenance of a register for the several hissedars of a single holding so that when the question of sale for arrearss of revenue came only the particular shares of defaulters may be made liable. The Dewan was pleased to appiont a committee to see the feasability of it with the Revenue Commissioner as its chairman. We are glad to find that the rural section of the House is becoming increasingly vocal and the members take a real interest in the affairs of the State. It would be shortsightedness if the work of the Assembly is to be measured merely by its proceedings. It has the supreme virtue of rousing the patriotism and civic consciousness of the members which is bound to result in substantial good to the State. "Progress" should be the watchward of all movements and if we can judge our political institutions from that standard they have a record which the State need not be ashamed of.

SAPMADABHUDAYA DEFAMATION CASE.

EDITOR CONVICTED.

The long and protracted trial in the defamation case instituted by Mr. T. S. Alikhan, Vice-President of the Mysore City Municipal Council against the first accused Mr. M. Venkatakrishnayya, managing proprietor of the journal and the press in which it is priuted and the 2nd accused Mr. M. S. Lakshmana Rao, editor, printer and publisher of the journal came to an end on the 22nd instant when judgment was delivered in the case by Mr. Rama Iyer, the learned City Magistrate passing the order of discharge of the first accused and convicting the second accused under S. 500 of the Indian Penal Code and sentancing him to a fine of Rs. 250 in default of which he had to undergo simple imprisonment for one month out of which fine if realised Rs. 150 was to be paid to the complainant. The case arose on a highly defamatory article publised in *the Sampadabhyudaya* in its issue of the 31st August 1925 under the attractive heading "ಟಿಪ್ಪು ಸುಲ್ತಾನರ ಹಾವಳಿ" or Tippu Sultan's Havoc. The judgment itself is a very long one covering nearly 64 pages of manuscript. Mr. M. Venkatakrishnayya is a reputed journalist of many years standing, in fact, he is the oldest journalist in the State. But it was not known to the world till now that he was only a propietor there to watch his financial interests and was unconcerned with the editing of the journal. It was a good defence probably, because so far as the documents were concerned there was nothing to connect the editorship with the 1st accused. What is more, the 2nd accused came forward to take the full responsibility for the defamatory article, which it would appear was sufficient to absolve Mr. Venkatakrishnayya of all responsibility in the conduct of the journal. Mr. M. S. Lakshmana Rao has come into the notice of the public prominently after the defamation case. Few knew there was such a person till new and that as editor of 3 journals. The article in question had made serious allegations against the conduct of the cumplainant as a public servant, the main one ascribing to the Vice-President selfishness in the discharge of his duties and stating that he was using his offical position for priveate ends. The learned City Magistrate was of opinion that the defence failed to prove that the imputations were true. We do not deny that the atmost latitude shuld be given to the public to criticize the work of public servants, but it would be dangerous to allow them to make irresponsible and serious statements ascribing base and tordid motives to responsible officers. We have had occasions in the years past to condemn the vocabulary and tone of our contemporary and we should expect a better standard of journalism in future. We should also congratulate Mr. T. S. Alikhan, who was on his trial parctically and in a more real sense than the accused for having successfully vindicated his character and reputation.

ಸ್ಟಾರ್‌ಪತ್ರಿಕಾವಾಚಕಮಹಾಶಯರಲ್ಲಿ ವಿಜ್ಞಾಪನೆ.

ನಮ್ಮ ಮುದ್ರಾಲಯದ ಕೆಲಸಗಾರರ ಅಜಾಗರೂಕತೆಯಿಂದ ಮುದ್ರಣಯಂತ್ರದ ಒಂದು ಮುಖ್ಯಾಂಗವು ಅಪಾಯವಾಗಿರುವ ಪ್ರಯುಕ್ತ, ಅದು ಸರಿಪಡಿಸಲ್ಪಡುವವರೆಗೆ ಅಂದರೆ ೧-೨ ವಾರಗಳವರೆಗೆ "ಮೈಸೂರುಸ್ಟಾರ್ ಪತ್ರಿಕೆಯು" ಕ್ಲುಪ್ತಕಾಲದಲ್ಲಿ ಹೊರಡುವ ಭರವಸೆಯಿಲ್ಲದಿರುವುದಲ್ಲದೆ ಮುದ್ರಣಮಾಡಲು ಸಾಧ್ಯವಿಲ್ಲವಾಗಬಹುದೆಂಬ ಶಂಕೆಯೂ ಇರುತ್ತದೆ. ಅದುಕಾರಣ ಈ ಅನಿರೀಕ್ಷಿತ ಅನಿವಾರ್ಯಕ್ಕಾಗಿ ನಮ್ಮ ಪ್ರಿಯವಾಚಕಮಹಾಶಯರು ಬೇಸರಗೊಳ್ಳದೆ ಕ್ಷಮಿಸಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇವೆ. ಸಂ.

ಸ್ವದೇಶದ ವೃತ್ತಾಂತಗಳು.

ಕಳೆದ ಮಂಗಳವಾರ ದಿವಾನರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವ ನ್ಯಾಯವಿಧಾಯಕಸಭೆಯ ಬಡ್ಜೆಟ್ ಅಧಿವೇಶನವು ಬರುವ ಬುಧವಾರ ಮುಕ್ತಾಯವಾಗಬಹುದಾಗಿದೆ.

ವರ್ಧಂತಿಮಹೋತ್ಸವಕ್ಕೆ ಬಂದಿದ್ದ ಗೌರ್ನರ್ ದಂಪತಿಗಳು, ಬ್ರಿಟಿಷ್ ರೆಸಿಡೆಂಟರು ಮೊದಲಾದ ಐರೋಪ್ಯಾಧಿಪಗಳೂ, ಜೋಧಪುರದ ಮಹಾರಾಜರು, ಕೂಚಬಿಹಾರ್ ಮಹಾರಾಣಿಯವರೂ ಹಿಂದಿರುಗಿ ಪ್ರಯಾಣಮಾಡಿದರು.

ಕಳೆದ ತಾ|| 20 ರಲ್ಲಿ ವಿವಾಹಿತರಾದ ರಾಜಕುಮಾರಿ ಸೌ|| ಲೀಲಾವತಿ ದಂಪತಿಗಳ ಆನೆಮೇಲಿನ ಅಂಬಾರಿಯುತ್ಸವವು ಸಕಲ ರಾಜಬಿರುದಾವಳಿಗಳಿಂದ ಈ ತಾ|| 28 ನೆಯ ಸೋಮವಾರರಾತ್ರಿ ನಡೆಯುವುದಾಗಿ ತಿಳಿದು ಬಂದಿದೆ.

ಮೈಸೂರುಡಿವಿಜನ್ ಪೊಲೀಸ್‌ಸೂಪರಿಂಟೆಂಡೆಂಟ್ ಮ|| ಕೆ. ಸಿದ್ಧರಾಮಪ್ಪನವರು ರಾಜಧಾನಿಯ ಅಡ್ವೊಕೇಟ್ ಮ|| ಮಿರ್ಲೆ ಸುಬ್ಬರಾಯರಮೇಲೂ, ಶಾನುಭೋಗವೆಂಕಟಸುಬ್ಬಯ್ಯನವರಮೇಲೂ ಸಿಟಿಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ಮಾಡಿದ್ದ ವಿವಾದದಲ್ಲಿ ಶಾನುಭೋಗರಮೇಲೆ ಅಪರಾಧವು ಆಪಾದಿಸಲ್ಪಡಲಿಲ್ಲವೆಂದು ಅವರು ಕಳೆದವಾರ ಬಿಡುಗಡೆಮಾಡಲ್ಪಟ್ಟಿದ್ದು ನೆನ್ನೆಯದಿವಸ ಮ|| ಸುಬ್ಬರಾಯರೂ ಅವರಮೇಲಿನ ತಪ್ಪು ಆಪಾದನೆಯಾಗಲಿಲ್ಲವಾಗಿ ಬಿಡಲ್ಪಟ್ಟರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರಾದ ಮಿ|| ಟಿ. ಎಸ್. ಅಲ್ಲಿಖಾನ್‌ರವರು ಮೈಸೂರು ಸಂಪದಭ್ಯುದಯಪತ್ರಿಕಾಸಂಪಾದಕರಮೇಲೆ ಮಾನನಷ್ಟಕ್ಕಾಗಿ ಮೈಸೂರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ವಿವಾದದಲ್ಲಿ ಅಪರಾಧಿಗೆ 250 ರೂ. ನ ಅರ್ಥದಂಡವನ್ನು ವಿಧಿಸಿ ಆ ನೊಬಲಗಿನಲ್ಲಿ 150 ರೂಪಾಯಿಗಳು ಫಿರ್ಯಾದಿಗೆ ಕೊಡಲ್ಪಡತಕ್ಕದೆಂದು ಬರೆದಿದ್ದ 64 ಪುಟಗಳುಳ್ಳ ತೀರ್ಪನ್ನು ಓದಿ ಹೇಳಲು ಮ್ಯಾಜಿಸ್ಟ್ರೇಟರಿಗೆ 1½ ಘಂಟೆಯಕಾಲ ಹಿಡಿದಿತಂತೆ. ಈ ತೀರ್ಪಿನಮೇಲೆ ಅಪರಾಧಿಯು ಅಪೀಲನ್ನು ಮಾಡುವ ಪ್ರಯತ್ನವು ನಡೆಯುತ್ತಿದೆಂದು ಕೇಳುತ್ತೇವೆ.

ಕಳೆದ ಭಾನುವಾರ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು, ಅರಸುಮಕ್ಕಳು, ಅಧಿಕಾರಿಗಳು, ಲಾಯರುಗಳು, ವರ್ತಕರುಗಳು ಮೊದಲಾದ ಸ್ಥಳ ಪರಸ್ಥಳಗಳ ದೊಡ್ಡಮನುಷ್ಯರುಗಳನ್ನು ದಿವಾನರು ತಮ್ಮ ಬಿಡಾರವಾದ ಲೇಕ್‌ವ್ಯೂ ಬಂಗಲೆಗೆ ಆಹ್ವಾನಿಸಿ, ಅಲ್ಪಾಹಾರದಿಂದಲೂ ಬ್ಯಾಂಡ್‌ಶ್ರವಣದಿಂದಲೂ ಸತ್ಕರಿಸಿದರು. ಅತಿಥಿಗಳು ದಿವಾನರ ಆದರಾತಿಶಯದಿಂದ ಸಂತುಷ್ಟರಾಗಿ ಅವರನ್ನು ವಂದಿಸಿ ತೆರಳಿದರು. ಆದರೆ ಆ ದಿವಸ ವೀರಶೈವರ ಅಲ್ಪಾಹಾರಕ್ಕೆ ಪ್ರತ್ಯೇಕವಾದೇರ್ಪಾಟು ಮಾಡಲ್ಪಡದಿದ್ದುದು ಒಂದು ಕೊರತೆಯಾಗಿದ್ದಿತು. ಇತಃಪರ ಆರೀತಿ ನಡೆಯಲವಕಾಶವಾಗುವುದಿಲ್ಲವೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ಕಳೆದ ಒಂದು ವಾರದಿಂದಲೂ ಮೋಡಕಟ್ಟಿಕೊಂಡಿರುವುದಲ್ಲದೆ ನೆನ್ನೆಯದಿನ ಸಾಯಂಕಾಲದಲ್ಲಿ ಗುಡುಗು ಮಿಂಚು ಆರ್ಭಟಿಸುತ್ತ ಪ್ರಳಯಕಾಲದ ಮಳೆಯು ಬರುತ್ತದೋ ಎಂಬುವಷ್ಟು ಭೀತಿಯನ್ನುಂಟುಮಾಡಿ ಕಡೆಗೆ ನಾಲ್ಕು ಹನಿಗಳುದುರಿ ಮಾಯವಾಯಿತು. ಅನೇಕಕಡೆ ಮಳೆಯಿಲ್ಲದೆ ಜೋಳದ ಪೈರು ನಾಶವಾಯಿತು. ಕೆರೆಕುಂಟೆಗಳಲ್ಲಿ ಪಕ್ಷಿಗಳು ಹಸ ಕುಡಿಯಲು ಒಂದುಬೊಟ್ಟು ನೀರಿಲ್ಲ. ಕಾವೇರೀನದಿಯ ನಾಲಾಕೆಳಗಿನ ಗದ್ದೆಗಳಿಗೆ ಈ ಕಾಲದಲ್ಲಿ ನಾಲೆಗಳಿಂದ ನೀರು ಬಿಡಲ್ಪಟ್ಟು ಬೇಸಾಯಕ್ಕೆ ಆರಂಭವಾಗಬೇಕಾಗಿದ್ದುದು ಈವೇಳೆ ನದಿಯಲ್ಲಿ ನೀರು ಕಡಮೆಯಾಗಿರುವುದರಿಂದ ಇನ್ನೂ ನಾಲೆಗಳಲ್ಲಿ ನೀರು ಬಿಡಲ್ಪಟ್ಟಿಲ್ಲವಾಗಿ ರೈತರು ತಪಿಸುತ್ತಿರುವರು. ಜ್ಯೇಷ್ಠಮಾಸದಲ್ಲಿ ಇಷ್ಟುಹೊತ್ತಿಗೆ ಕಾವೇರೀನದಿಯಲ್ಲಿ ಪೂರ್ಣಪ್ರವಾಹ ಬರಬೇಕಾಗಿದ್ದುದು ಇನ್ನೂ ಬಾರದೆ ನೀರು ಸುತರಾಂ ಕಡಮೆಯಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಚೀಫ್‌ಆಫೀಸರಾದ ಮಿ|| ಅಬ್ದುಲ್ ಅಜೀಜ್‌ಖಾನ್, ಬಿ. ಎ., ಯವರು ಗುಬ್ಬಿಸಬ್‌ಡಿವಿಜನ್ ಆಫೀಸರಾಗಿ ತುಮಕೂರಿಗೆ ವರ್ಗಪಟ್ಟು ಹೋಗುವುದರಿಂದ ಮ್ಯುನಿಸಿಪಲ್ ಕೌನ್ಸಿಲರುಗಳು ಈ ದಿವಸ ಸಾಯಂಕಾಲ ಮ್ಯುನಿಸಿಪಲ್ ಆಫೀಸಿನಲ್ಲಿ ಮಿ|| ಖಾನ್‌ರವರನ್ನು ಅಲ್ಪಾಹಾರದಿಂದ ಸತ್ಕರಿಸಿ ತಮ್ಮಗಳಿಗೆ ಅವರ ಮೇಲಿರುವ ಪ್ರೀತಿಗೌರವವನ್ನು ಪ್ರದರ್ಶಿಸುವವರಾಗಿರುವರು. ಮಿ|| ಖಾನ್‌ರವರು ಚೀಫ್‌ಆಫೀಸರಾಗಿ ಬಂದಾರಭ್ಯ, ಬಹಳ ಶ್ರದ್ಧೆಯಿಂದಲೂ, ದರ್ಪದಿಂದಲೂ, ನಿಷ್ಪಕ್ಷಪಾತತೆಯಿಂದಲೂ ಕೆಲಸಮಾಡಿ ಸಮಸ್ತರ ಮೆಚ್ಚುಗೆಗೆ ಪಾತ್ರರಾಗಿರುವರು. ಸೋಮಾರಿಗಳೂ ದುರ್ನೀತರೂ ಆದ ಮ್ಯುನಿಸಿಪಲ್ ಕೆಲಸಗಾರರಿಗೆವಿನಾ ಇತರರಿಗೆಲ್ಲರಿಗೂ ಮಿ|| ಖಾನ್‌ರವರ ಅಗಲಿಕೆಯಿಂದ ಖೇದವುಂಟಾಗಿದೆ. ಇವರು ತಮ್ಮ ಕಾರ್ಯದಕ್ಷತೆಗೆ ತಕ್ಕಂತೆ ಅಧಿಕಾರೋನ್ನತಿಯನ್ನು ಹೊಂದುವವರಾಗಲೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ನಡೆದ ಪೋಲೋಪಂದ್ಯಕ್ಕೆ ಬೆಂಗಳೂರಿನಿಂದ ಬಂದಿದ್ದ ಲೆಫ್ಟನೆಂಟ್ ಬೋಸ್ಟಾಕ್ ಎಂಬ ಐರೋಪ್ಯರು ಕುದುರೆಯಮೇಲೆ ಕುಳಿತು ಚೆಂಡನ್ನು ಒಡೆಯುತ್ತಿರುವಾಗ್ಗೆ ಆಯತಪ್ಪಿ ಕುದುರೆಯಮೇಲಿಂದ ಕೆಳಗೆ ಬಿದ್ದುಬಿಟ್ಟರು. ಅವರ ಕುದುರೆಯು ಅವರಮೇಲೆ ಬಿದ್ದು ಉರುಳಿ ಚೇತರಿಸಿಕೊಂಡೆದ್ದಿತು. ಆದರೆ ಬೋಸ್ಟಾಕ್‌ರವರು ಬಿದ್ದ ರಭಸಕ್ಕೂ ಕುದುರೆಯತುಳಿತಕ್ಕೂ ಅವರ ತಲೆಯೊಡೆದು ಪ್ರಾಣಕೋಶಕ್ಕೆ ಪೆಟ್ಟುಬಿದ್ದುದರಿಂದ ಮೂರ್ಛಿತರಾದುದರಮೇಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಪರೀಕ್ಷಿಸಿದುದರಲ್ಲಿ ಪ್ರಾಣವು ಹೋಗಿದ್ದಿತು. ಅವರಕೂಡ ಬಂದಿದ್ದ ಪತ್ನಿಯು ಶವವನ್ನು ಅರಮನೆಯ ಮೋಟಾರುಬಂಡಿಯಲ್ಲಿ ಆ ಕೂಡಲೆ ಬೆಂಗಳೂರಿಗೆ ಸಾಗಿಸಿಕೊಂಡು ಹೋಗಿ ಮಾರನೆಯದಿನ ಸಂಸ್ಕಾರನಾಡಿಸಿದರು. ಮೃತರಿಗೆ 27 ವರ್ಷವಯಸ್ಸಾಗಿದ್ದಿತು. ಈ ಅನಾಹುತವನ್ನು ಕೇಳಿ ಮೈಸೂರಿಗೆ ಮೈಸೂರೇ ವ್ಯಸನಪಟ್ಟುದಲ್ಲದೆ ಶ್ರೀಮನ್ಮಹಾರಾಜರವರೂ ಗೌರ್ನರೂ ಕೇಳಿ ಬಹಳ ವ್ಯಸನಪಟ್ಟು ಮೃತರ ಪತ್ನಿಗೆ ತಮ್ಮ ಅನುತಾಪವನ್ನು ತಿಳಿಸಿದರು. ರಾಜಧಾನಿಯಲ್ಲಿ ಇಂತಹ ಅನಾಹುತವು ಇದುವರೆಗೂ ನಡೆದಿರಲಿಲ್ಲವು.

ಕಳೆದ ಸೋಮವಾರ ಶ್ರೀಮನ್ಮಹಾರಾಜರವರ 43 ನೆಯ ವರ್ಷವರ್ಧಂತ್ಯುತ್ಸವವು ಯಥಾವಿಧಿಯಾಗಿ ನಡೆಯಿತು. ಆದರೆ ಸಾಯಂಕಾಲ ಅಶ್ವಾರೋಹಣೋತ್ಸವದಲ್ಲಿ ಶ್ರೀಜಯಚಾಮರಾಜಒಡೆಯರವರು ದಿವ್ಯಾಲಂಕಾರವಿಭೂಷಿತರಾಗಿ ಅಶ್ವಾರೋಹಣಮಾಡಿ ಶ್ರೀಮನ್ಮಹಾರಾಜರವರ ವಾಮಭಾಗದಲ್ಲಿ ದಯೆಮಾಡಿಸಿದ್ದುದು ಆ ದಿವ್ಯತೇಜೋರಾಶಿಯೇ ಭೂಮಂಡಲಕ್ಕಿಳಿದು ಪ್ರೇಕ್ಷಕರನ್ನು ವಿಸ್ಮಯಗೊಳಿಸಿ ಆನಂದಾಬ್ಧಿಯಲ್ಲಿ ಮುಳುಗಿಸಿದ್ದಿತು. ಪ್ರೇಕ್ಷಕರು ಈ ಅಪೂರ್ವ ನೋಟದಿಂದ ಮನದಣಿಯದೆ ಸ್ಥಳದಿಂದ ಸ್ಥಳಕ್ಕೆ ಓಡಿಹೋಗಿ ನೋಡುತ್ತಿದ್ದರು. ಈವೇಳೆ ಉತ್ಸವವು ಅರಮನೆಯಿಂದ ಹೊರಟು ಯಥಾಮಾರ್ಗವಾಗಿ ರೆಸಿಡೆನ್ಸಿ ಬಂಗಲೆಯನ್ನು ತಲುಪಿ ಹಿಂತಿರುಗುವಾಗ ಮಾತ್ರ ದಕ್ಷಿಣದ್ವಾರದಿಂದ ಮದ್ರಾಸ್ ಬ್ಯಾಂಕ್ ರೋಡಿನಲ್ಲಿ ಹಾರ್ಡಿಂಜ್‌ಸರ್ಕಲ್‌ಮಾರ್ಗವಾಗಿ ದಯೆಮಾಡಿಸಿದುದರಿಂದ ನೋಟಕರಿಗೆ ತತ್ರಾಪಿ ಹೆಂಗುಸರು ಮಕ್ಕಳಿಗೆ ಪ್ರಭುಗಳ ದರ್ಶನಕ್ಕೆ ತೊಂದರೆಯಾಗಿ ಅವರುಗಳು ನಿರಾಶೆಯಿಂದ ಪೇಚಾಡುವಂತಾದುದು ಒಂದು ದೊಡ್ಡ ಕೊರತೆಯಾಗಿದ್ದಿತು. ಅದುಕಾರಣ ಪ್ರೇಕ್ಷಕರು ಮನೆಯ ಮಾಳಿಗೆಮೇಲೂ, ಜಗುಲಿಗಳಮೇಲೂ ನಿಂತು ನೋಡಲು ಅನುಕೂಲವಾಗಿಯೂ, ಮಾಮೂಲಾಗಿಯೂ ಬಂದಿರುವ ದೊಡ್ಡಪೇಟೆಯಲ್ಲೇ ಇನ್ನುಮುಂದೆ ಮಹಾಸ್ವಾಮಿಯವರ ಉತ್ಸವವು ಚಿತ್ತೈಸುವಂತಾಗಬೇಕೆಂದು [illegible] ಪ್ರಾರ್ಥಿಸುತ್ತಾರೆ.

ಕ್ಷಯಸಂವತ್ಸರಫಲ.

ಭವಿಷ್ಯತ್ಫಲವನ್ನು ಹೇಳುವುದರಲ್ಲಿ ನಿಪುಣರೆಂದು ಪ್ರಖ್ಯಾತರಾಗಿರುವ ಧಾರವಾಡ ಜಿಲ್ಲಾ ಹೊಸರಿತ್ತಿಗ್ರಾಮವಾಸಸ್ಥರಾದ ಜ್ಯೋತಿರ್ಮಾರ್ತಾಂಡ ಶಂಕರಶಾಸ್ತ್ರಿಗಳು 1926 ನೇ ಮಾರ್ಚಿ ತಾ|| 15 ರಿಂದ 1927ನೇ ಏಪ್ರಿಲ್ ತಾ|| 26 ರ ವರೆಗೆ ಮಳೆಯಾಗುವ ಕಾಲವನ್ನೂ, ಬೆಳೆಯು ಹ್ಯಾಗುತ್ತದೆಂಬುದನ್ನೂ, ದೇಶಕಾಲಪರಿಸ್ಥಿತಿ ಹೇಗಿರುತ್ತದೆಂಬುದನ್ನೂ ಚೆನ್ನಾಗಿ ಗುಣಿಸಿ ಪ್ರಕಟಿಸಿರುವರು.—1926 ನೇ ಜೂನ್ ತಾ|| 17 ರಲ್ಲಿ ಮಳೆಯಾರಂಭವಾಗುವುದು. ಸಂಯುಕ್ತರಾಷ್ಟ್ರ, ಸೂರತ್ ಡಿಸ್ಟ್ರಿಕ್ಟು, ಬೀರಾರು, ಕಟಕ, ಮದ್ರಾಸು ಪ್ರಾಂತದ ಮಧ್ಯಪ್ರದೇಶ, ಒರಿಸ್ಸಾ, ಗುಜರಾತು, ಬಂಗಾಳಾ, ಬೊಂಬಾಯಾಧಿಪತ್ಯದ ಪಶ್ಚಿಮಭಾಗ, ಉಜ್ಜಯಿನಿ, ಕಾಶ್ಮೀರ, ಪಂಜಾಬು ಈ ಸ್ಥಳಗಳಲ್ಲಿ ಮಳೆಯು ಚೆನ್ನಾಗಿ ಬೀಳುವುದು. ಕೊಂಕಣ, ತಿರ್ಹೂತ, ಸಿಂಧು, ದಿಲ್ಲಿ, ಕೊಲ್ಹಾಪುರ, ಬರೋಡ, ಪೂನಾ ಈ ದೇಶಗಳಲ್ಲಿ ಒಂದು ವಿಧವಾಗಿ ಬೀಳುವುದು. ದಕ್ಷಿಣ ಬಿಹಾರು, ಕರ್ನಾಟಕಪ್ರಾಂತ ನೈಜಾಂರಾಷ್ಟ್ರ, ತಮಿಳುದೇಶ, ಆಂಧ್ರದೇಶ ಈ ಸ್ಥಳಗಳಲ್ಲಿ ಕೂಡ ಮಳೆಯು ಚೆನ್ನಾಗಿ ಆಗುವುದು. ಆದರೆ ಮೈಸೂರು ಮತ್ತು ಪಾಟ್ನಾ ಪ್ರಾಂತಗಳಲ್ಲಿ ಮಾತ್ರ ತಕ್ಕಮಟ್ಟಿಗಾಗುವುದು. ಒಂದುರೂಪಾಯಿನಲ್ಲಿ 9 ಆಣೆಯಿಂದ 12 ಆಣೆಯವರೆಗೆ ಬೆಳೆಯಾಗುವುದು. 34 ವರ್ಷಗಳ ಹಿಂದೆ ಆಗಿದ್ದಂತೆ ಈ ವರ್ಷದಲ್ಲೂ ಮಳೆಯಾಗುವುದು.

ರಾಜಕೀಯಪರಿಸ್ಥಿತಿ.

ಮದ್ಯಪಾನವನ್ನೂ, ಮಾದಕಪದಾರ್ಥಗಳ ವಿಕ್ರಯವನ್ನೂ ನಿಷೇಧಿಸುವ ಬಗೆಗೆ ಕಠಿಣಶಾಸನವು ಆಚರಣೆಗೆ ತರಲ್ಪಡುವುದರಿಂದ ಅವುಗಳ ವ್ಯಾಪ್ತಿಯು ಕಡಿಮೆಯಾಗುವುದು. ಬಂಗಾರದ ಮತ್ತು ಕೆಯಲೆಯ ಬೆಲೆಯು ನಿಲುಗಡೆಯಿಲ್ಲದೆ ವ್ಯತ್ಯಸ್ತವಾಗುತ್ತಿರುವುದು. ಸರ್ಕಾರಿಯುದ್ಯೋಗಸ್ಥರುಗಳಿಗೆ ಈ ಸಂವತ್ಸರವು ಸುಖಪ್ರದವಾಗಿರುತ್ತದೆ. ವ್ಯಾಪಾರ ಮತ್ತು ಪರಿಶ್ರಾಮಿಕಗಳ ಪರಿಸ್ಥಿತಿಯು ಚೆನ್ನಾಗಿರುವುದು. ನೀತಿಬಾಹ್ಯಕಾರ್ಯಗಳು ಹೆಚ್ಚಾಗಿ ನಡೆಯುವುವು. ಯುದ್ಧಸನ್ನಾಹಗಳು ವಿಶೇಷವಾಗಿ ಜರುಗುತ್ತವೆ. ವೈದ್ಯಶಾಲೆಗಳೂ ಮಠಪ್ರತಿಷ್ಠಾಪನಗಳೂ ವೃದ್ಧಿಯಾಗುವುವು.

ಇತರ ವಿಷಯಗಳು.

ಒಂದು ಗಂಟೆಗೆ 100 ರಿಂದ 150 ಮೈಲಿ ವೇಗದಿಂದ ಹಡಗುಗಳನ್ನು ನಡೆಯಿಸುವ ಸಾಧನಗಳು ಕಂಡು ಹಿಡಿಯಲ್ಪಡುವುವು. ಅಫೀಮಿನಂತಹ ಒಂದು ಮಾದಕಪದಾರ್ಥವು ನೂತನವಾಗಿ ಕಂಡು ಹಿಡಿಯಲ್ಪಡುವುದು. ಮನುಷ್ಯರ ಬಲವನ್ನು ವೃದ್ಧಿಗೊಳಿಸುವುದಕ್ಕಾಗಿ ವೈದ್ಯರು ಈ ಹೊಸ ಮಾದಕಪದಾರ್ಥವನ್ನುಪಯೋಗಿಸುವರು. ಸೀಮೆಯೆಣ್ಣೆಯ ಬಾವಿಗಳೂ, ಪೆಟ್ರೋಲಿಯಂ ಪರಿಶ್ರಮವೂ ಭರತಖಂಡದಲ್ಲಿ ವೃದ್ಧಿಯಾಗುತ್ತವೆ. ವಿಚಾರವಿಲ್ಲದೆ ಮಾಡುವ ವ್ಯಾಪಾರವೂ ಜೂಜೂ ಹೆಚ್ಚುವುವು. ಕುದುರೆಯ ಪಂದ್ಯಾಭಿಲಾಷೆಯು ಹೆಚ್ಚಾಗುತ್ತದೆ. ಯಥೋಚಿತ ಸಹಕಾರವಿಧಾನದಿಂದ ದೀರ್ಘವಾದ ವಿವಾದವು ನಡೆಯುವುದು. ಎಲ್ಲ ರಾಜಕೀಯಪಕ್ಷಗಳಲ್ಲೂ ಪರಸ್ಪರ ಅನ್ಯೋನ್ಯ ಒಡಂಬಡಿಕೆಯು ನಡೆಯುವುದಾಗಿರುವುದು. ರಾಜಕೀಯನಾಯಕರುಗಳ ನಿರೋಧವು ಕೊನೆಗಾಣುವುದಿಲ್ಲ. ಆದಕ್ಕಾಗಿ ಕಠಿಣಶಾಸನವನ್ನು ಸರ್ಕಾರದವರು ಅನುಷ್ಠಾನಕ್ಕೆ ತರುವರು.

ಪ್ರಜಾಮಿತ್ರಮಂಡಲಿ.

ಕಳೆದ 19ನೇ ಶನಿವಾರ ಬೆಳಿಗ್ಗೆ ಪ್ರಜಾಮಿತ್ರಮಂಡಲಿಯವರು ರಾಜಧಾನಿಯ ವರ್ತಕಸಂಘದ ಕಟ್ಟಡದಲ್ಲಿ ಮಂಡಲಿಯ ಪ್ರೆಸಿಡೆಂಟರಾದ ರಾವ್ ಸಾಹೇಬ್ ಮ|| ಎಚ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದು ಮಂಡಲಿಯ ಸದುದ್ದೇಶ ಪುರೋಭಿವೃದ್ಧಿಯುಪಾಯ ಮೊದಲಾದ ವಿಷಯಗಳ ಮೇಲೆ ಅಧ್ಯಕ್ಷರಾದಿಯಾಗಿ ಕೆಲಮೆಂಬರುಗಳಿಂದ ಉಪನ್ಯಾಸಗಳು ಮಾಡಲ್ಪಟ್ಟಮೇಲೆ ಈ ಕೆಳಗೆ ಕಂಡ ನಿರ್ಧಾರಗಳು ಮಾಡಲ್ಪಟ್ಟುವು. ಮ|| ಗಳಾದ ರಾವ್‌ಸಾಹೇಬ್ ಎಚ್. ಚನ್ನಯ್ಯನವರು (ಮಂಡಲಿಯ ಅಧ್ಯಕ್ಷರು), ಮಹಮ್ಮದ್ ಅಬ್ಬಾಸ್‌ಖಾನ್‌ರವರು (ಉಪಾಧ್ಯಕ್ಷರು), ಎನ್. ಜಿ. ಸಂಜೀವಯ್ಯನವರು (ಜಾಯಿಂಟ್‌ಸೆಕ್ರೆಟರಿ), ಜಿ. ಪರಮಶಿವಯ್ಯನವರು (ಜಾಯಿಂಟ್‌ಸೆಕ್ರೆಟರಿ), ಡಿ. ಎಸ್. ಮಲ್ಲಪ್ಪನವರು, ಮುರುಘೇಶಂಪಿಳ್ಳೆಯವರು, ಪಿ. ಪುಟ್ಟಸ್ವಾಮಿಯವರು, ಕಾನಕಾನಹಳ್ಳಿ ತಾ|| ವೆಂಕಟೇಗೌಡರು, ಜಿ. ಮುನಿಯಪ್ಪನವರು, ಎಂ. ಮುನಿಸ್ವಾಮಪ್ಪನವರು, ಹನುಮಂತರಾಜುಯವರು, ಕಾನಕಾನಹಳ್ಳಿ ಜಿ. ವೆಂಕಟರಮಣಗೌಡರು, ಜಿ. ಮಲ್ಲಣ್ಣನವರು, ದೊಡ್ಡಯ್ಯನವರು, ಮಳವಳ್ಳಿ ಚಿಕ್ಕಣ್ಣಗೌಡರು, ಎ. ಎಸ್. ನಂಜುಂಡಪ್ಪನವರು, ಓ. ವಿ. ರಾಜಗೋಪಾಲ್, ಕೆ. ಜಿ. ಎಫ್. ರವರು, ಕೆ. ಮಹಾದೇವಪ್ಪನವರು, ಗುರುಸ್ವಾಮಿಗೌಡರು, ಕಪಿನಿಗೌಡರು, ಜಿ. ರುದ್ರಪ್ಪನವರು, ಬೆಂಗಳೂರು ತಾ|| ಬಂಡಪ್ಪನವರು, ಬೆಂಗಳೂರು ರಾಮಯ್ಯನವರು, ನೆಲಮನೆ ಅಣ್ಣೇಗೌಡರು ಮೊದಲಾದ ದೊಡ್ಡಮನುಷ್ಯರುಗಳು ದಯೆಮಾಡಿಸಿದ್ದರು.

ನಿರ್ಧಾರಗಳು.

1. ಮ್ಯಾನೇಜಿಂಗ್ ಕಮಿಟಿಯವರು ತಾ|| 19-2-22ರಲ್ಲಿ ಸಭೆಸೇರಿದ್ದು ಗೊತ್ತುಮಾಡಿದ ರೂಲ್ಸು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಅಚ್ಚುಹಾಕಿಸಲ್ಪಟ್ಟು ಮಂಡಲಿಯ ಮೆಂಬರುಗಳಲ್ಲಿ ಹಂಚಲ್ಪಡತಕ್ಕದ್ದು. 2. ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳು ಮ್ಯಾನೇಜಿಂಗ್‌ಕಮಿಟಿಯ ಮೆಂಬರುಗಳಾಗಿ ಚುನಾಯಿಸಲ್ಪಡತಕ್ಕದ್ದು.

ಅಧ್ಯಕ್ಷರು.

ರಾವ್‌ಸಾಹೇಬ್ ಎಚ್. ಚನ್ನಯ್ಯನವರು.

ಉಪಾಧ್ಯಕ್ಷರುಗಳು.

1. ಮಿ|| ಮಹಮ್ಮದ್ ಅಬ್ಬಾಸ್‌ಖಾನ್‌ರವರು.
2. ನವಾಬ್ ಗುಲಾಂಅಹಮ್ಮದ್‌ಕಲಾಮಿಯವರು.
3. ಬಿ. ವಿ. ರಾಮಸ್ವಾಮಿಶೆಟ್ಟಿ, ಬಿ.ಎ., ಯವರು.

ಸೆಕ್ರೆಟರಿ.

ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಯವರು.

ಟ್ರೆಜರರು.

ಎನ್. ಜಿ. ಸಂಜೀವಯ್ಯನವರು.

ಮೆಂಬರುಗಳು.

ಮ|| ಗಳಾದ

(1) ಎಚ್. ಸಿ. ದಾಸಪ್ಪ, ಬಿ.ಎ., ಎಲ್‌ಎಲ್.ಬಿ., ರವರು (2) ಜಿ. ರುದ್ರಪ್ಪ, ಎಂ. ಎ., ಎಲ್‌ಎಲ್.ಬಿ., ರವರು (3) ಒ. ವಿ. ರಾಜಗೋಪಾಲ್, ಕೆ.ಜಿ. ಎಫ್. ರವರು (4) ಬಿ. ದೇವೇಗೌಡರು, ಚಿಕ್ಕಮಗಳೂರು (5) [illegible]ಯವರು, ಚಿತ್ರದುರ್ಗ (6) ಎಂ. ಸಂಜೀವಪ್ಪನವರು, ಕಾಂತರಾಜಪುರ (7) ಎಚ್. ಜಿ. ಬಸಪ್ಪನವರು (8) ಗುರುಸ್ವಾಮಿಗೌಡರು (9) ಮುರುಘೇಶಂಪಿಳ್ಳೆಯವರು (10) ಡಾಕ್ಟರ್ ಅಬ್ಬಯ್ಯನಾಯುಡುರವರು (11) ಎಫ್. ಎಂ. ಜೇವಿಯರ್, ಬಿ.ಎ., ಎಲ್‌ಎಲ್.ಬಿ., ರವರು (12) ಜಿ. ಮುನಿಯಪ್ಪನವರು (13) ಟಿ. ರಾಜಪ್ಪನವರು (14) ಪಿ. ಎಂ. ಬಸಪ್ಪನವರು (15) ಇ. ಪಿ. ನಾಯುಡುರವರು (16) ಆದಿನಾರಾಯಣಯ್ಯನವರು (17) ಕೆ. ಸುಬ್ಬರಾಯಶೆಟ್ಟಿ, ಬಿ.ಎ., ಎಲ್‌ಎಲ್.ಬಿ., ರವರು (18) ಪಿ. ಎ. ಕೃಷ್ಣಮೂರ್ತಿಮೊದಲಿಯಾರರು (19) ಬಿ. ಎಸ್. ವಿಜಯದೇವ, ಎಂ. ಎ., ಬ್ಯಾರಿಸ್ಟರ್‌ರವರು (20) ಎಂ. ಮುನಿಸ್ವಾಮಪ್ಪನವರು, ದ್ಯಾಪಸಹಳ್ಳಿ, ಬೆಂಗಳೂರು ತಾ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ನಿಜಾಂಪ್ರಾಂತದಲ್ಲಿ ವೀರಶೈವಮಹಾಸಭೆಯು.

(ಲೇಖಕ—ಚಂದ್ರಶೇಖರಶಾಸ್ತ್ರಿ ವ್ಯಾಕರಣತೀರ್ಥ, ಹೊಳಲು, ಸಂಸ್ಕೃತಕಾಲೇಜ್, ಯಾದಗಿರಿ.)

ಒಂದು ಸಮಾಜದಲ್ಲಿಯೇ ಆಗಲಿ, ದೇಶದೊಳಗೇ ಆಗಲಿ ಹೇಗೆಹೇಗೆ ಶಿಕ್ಷಣವು ಹೆಚ್ಚಾಗುವದೊ ಹಾಗೆಹಾಗೆ ಕಾರ್ಯಕುಶಲತೆ, ಐಕ್ಯತೆ ಮೊದಲಾದ ಗುಣಗಳು ನೆಲೆಗೊಳ್ಳುವದು ಸ್ವಾಭಾವಿಕವಷ್ಟೆ? ಆದರೆ ವೀರಶೈವಸಮಾಜದ ಸ್ಥಿತಿಯು ಮಾತ್ರ ಇದಕ್ಕೆ ಬಹಳ ವಿರುದ್ಧವಾಗಿರುತ್ತದೆ. ಈ ಸಮಾಜದಲ್ಲಿ ಮೊದಲು ವಿದ್ಯಾವಂತರ ಸಂಖ್ಯೆಯು ಕಡಮೆ ಇದ್ದಾಗ್ಯೂ ಸಮಾಜದ ಕೆಲಸಗಳೆಲ್ಲ ಬಹು ಸಿಸ್ತಿನಿಂದಲೂ, ಅಭಿಮಾನದಿಂದಲೂ ನಡೆಯುತ್ತಿದ್ದವು. ಈಗಲಾದರೋ ಡಿಗ್ರಿಗಳನ್ನು ಪಡೆದವರ ಸಂಖ್ಯೆಯು ಮಾತ್ರ ಅಧಿಕವಾಗಿರುವದೇನೋ ನಿಜ, ಆದರೆ ಸಮಾಜದ ಕಾರ್ಯಗಳೆಲ್ಲ ಶಿಥಿಲವಾಗುತ್ತ ಅನೈಕ್ಯವು ತಲೆದೋರಿರುತ್ತದೆ. ಇದಕ್ಕೆ ಕಳೆದ ಹತ್ತುವರ್ಷಗಳಿಂದ ಹಾಸಿಗೆಯನ್ನು ಹಿಡಿದ ಮಹಾಸಭೆಯೇ ಪ್ರಬಲವಾದ ಉದಾಹರಣವೆಂದು ಹೇಳಬಹುದು. ಮಹಾಸಭೆಯು ಪ್ರತಿವರ್ಷವೂ ಬಾಧಕವಿಲ್ಲದೆ ನಡೆಯಲಿಕ್ಕೆ ಒಂದು ಧನನಿಧಿಯು ಕೂಡ ಇರುತ್ತದೆ. ಇಂಥ ಅನುಕೂಲತೆಯು ಉಳಿದ ಯಾವ ಸಮಾಜದ (ಪ್ರತ್ಯಕ್ಷ ರಾಷ್ಟ್ರೀಯ) ಸಭೆಗೂ ಇರುವದಿಲ್ಲ. ಹೀಗಿದ್ದು ಮಹಾಸಭೆಯಂಥ ಜವಾಬದಾರಿ ಸಂಸ್ಥೆಯನ್ನು ಮೂಲೆಗುಂಪಾಗಿ ಮಾಡಿರುವದನ್ನು ನೋಡಿದರೆ ಸಮಾಜಕ್ಕೆ ಒಂದು ಕಲಂಕವೆಂದು ಹೇಳಬಹುದು. ಈಗಿನಕಾಲದಲ್ಲಿ ಪ್ರತಿಯೊಂದು ಸಣ್ಣ ಪುಟ್ಟ ಸಮಾಜವು ಕೂಡ ಆಧ್ಯತೆಯಿಂದ ಸಭೆಗಳನ್ನು ಮಾಡಿಕೊಂಡು ತನ್ನ ಪ್ರಗತಿಯಮಾರ್ಗವನ್ನು ಹುಡುಕಿಕೊಳ್ಳುವುದು. ವೀರಶೈವಸಮಾಜದ ಈ ಸ್ಥಿತಿಯನ್ನು ನೋಡಿದರೆ ಸಮಾಜದಲ್ಲಿ ನಿಜವಾಗಿಯೂ ಮುಖಂಡರಿಲ್ಲವೆಂದು ಹೇಳಬಹುದು. ಅಲ್ಲಲ್ಲಿ ದೊಡ್ಡದೊಡ್ಡ ಪದವಿಗಳನ್ನೂ, ಡಿಗ್ರಿಗಳನ್ನೂ ಪಡೆದ ಮುಖಂಡರು ಅನೇಕರಿರುವರು, ಆದರೆ ಸಮಾಜದ ಭಾರವನ್ನು ಹೊತ್ತುಕೊಂಡು ಯೋಗ್ಯಮಾರ್ಗಕ್ಕೆ ಹಚ್ಚುವ ಮುಖಂಡರಿರುವದಿಲ್ಲ. ನಿಪ್ಪಾಣಿಯ ಸಭೆಯಲ್ಲಿ ಮುಖಂಡರ ಮೂರ್ಖತನದಿಂದ ಮೂಲೆಗುಂಪಾಗಿದ್ದ ಮಹಾಸಭೆಗೆ ಕಾರ್ಯದಕ್ಷರಾದ ದಾವಣಗೇರಿಯ ಮಹಾಜನಗಳು ಮೂರ್ತಸ್ವರೂಪವನ್ನು ಕೊಟ್ಟರಲ್ಲದೆ ಮಹಾಸಭೆಯ ಚಿರಸ್ಥಾಯಿಯಾ ಫಂಡನ್ನು ಸಹ ಕೂಡಿಸಿದರು. ಆದರೆ ಅದೇ ಪ್ರಾಂತದ ಬೆಂಗಳೂರು, ಮತ್ತು ಮೈಸೂರಿನ ಮಹಾಜನಗಳು ಒಂದು ವರ್ಷ ಬೆಂಗಳೂರಿನಲ್ಲಿ ಮಹಾಸಭೆಯನ್ನು ಮಾಡುತ್ತೇವೆಂತಲೂ ಮತ್ತೊಂದು ವರ್ಷ ಮೈಸೂರಿನಲ್ಲಿ ಮಾಡುತ್ತೇವೆಂತಲೂ ಠರಾವುಗಳನ್ನು ಪಾಸುಮಾಡುತ್ತ ಮೇ ತಿಂಗಳಿನಿಂದ ಡಿಸಂಬರಕ್ಕೂ ಡಿಸಂಬರ ತಿಂಗಳಿನಿಂದ ಮೇ ತಿಂಗಳಿಗೂ ಹಾಕುವದನ್ನು ನೋಡಿದರೆ, ಸುವಿಚಾರಿಯಾದ ಮನುಷ್ಯನಿಗೆ ವೇಸನವಾಗದೆ ಇರಲಾರದು. ಅಂತೂ ಇಂತೂ ಮೈಸೂರದೇಶದವರು ಮಹಾಸಭೆಯನ್ನು ತಾವೂ ಮಾಡರು, ಮಾಡುವವರರಿಗೂ ಬಿಟ್ಟುಕೊಡಲೊಲ್ಲರು. ಹೀಗೆಯೇ ಮೈಸೂರಿನವರು ದಿನಗಳನ್ನು ಕಳೆಯುತ್ತ ಹೋದರೆ, ನಿಜಾಂಪ್ರಾಂತದ ವೀರಶೈವರು ತಮ್ಮಲ್ಲಿ ಮಹಾಸಭೆಯನ್ನು ಮಾಡಲಿಕ್ಕೆ ಯತ್ನಿಸುವದು ಯೋಗ್ಯವಿರುತ್ತದೆ. ಮಹಾಸಭೆಯನ್ನು ಮಾಡಲಿಕ್ಕೆ ರಾಯಚೂರು, ಕಲಬುರ್ಗಿ, ಯಾದಗಿರಿ ಈ ಮೂರುಗ್ರಾಮಗಳು ಯೋಗ್ಯವಿರುತ್ತವೆ, ಮತ್ತು ರಾಯಚೂರಿನ ಒಬ್ಬ ಪ್ರಸಿದ್ಧ ಶ್ರೀಮಂತರು ತಮ್ಮ ಸ್ವಂತ ಔದಾರದಿಂದ ಮಹಾಸಭೆಯನ್ನು ಮಾಡಬೇಕೆಂಬುವ ಅಪೇಕ್ಷೆಯುಳ್ಳವರಾಗಿದ್ದಾರೆ. ಅವರು ಅಪೇಕ್ಷೆಯನ್ನು ಪೂರೈಸಿದರೆ ಧನರೆಂದು ಹೇಳಬಹುದಲದೆ, ವೀರಶೈವಸಮಾಜದಲ್ಲಿ ಹುಟ್ಟಿದುದಕ್ಕೆ ಸಾರ್ಥಕವಾಗುತ್ತದೆ. ಸಮಾಜದ ಅನೇಕ ಮುಖ್ಯ ಕಾರ್ಯಗಳಲ್ಲಿ ಹಿಂದಾಗಿರುವ ನಿಜಾಂಪ್ರಾಂತದ ವೀರಶೈವರು ಹಿಂಜರಿಯದೆ ಹೊಸದಾಗಿ ಒಂದು ಮಹಾಸಭೆಯ ಸ್ಟ್ಯಾಂಡಿಂಗ್‌ಕಮಿಟಿಯನ್ನು ಏರ್ಪಡಿಸಿ ಕಾರ್ಯವನ್ನು ಈಗಿನಿಂದಲೇ ಪ್ರಾರಂಭಿಸಿದರೆ ಯೋಗ್ಯರೀತಿಯಿಂದ ಆಗುವದು. ಆದ್ದರಿಂದ ರಾಯಚೂರು ಮತ್ತು ಕಲುಬುರ್ಗಿ ಗ್ರಾಮಗಳ ಮುಖಂಡರು ಅಗತ್ಯವಾಗಿ ಆಲೋಚನೆಮಾಡತಕ್ಕದ್ದು.

ವೀರಶೈವರು ಇತ್ತಗಮನಿಸುವರೇನು ?

ದೇಶಾಭ್ಯುದಯಕ್ಕೂ, ಜನಗಳಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೂ ವೃತ್ತಪತ್ರಿಕೆಗಳೇ ಮುಖ್ಯಕಾರಣ. ಈ ವೃತ್ತಪತ್ರಿಕೆಗಳ ಮಹತ್ವವನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಇವುಗಳ ಪ್ರಚಾರವು ಪಾಶ್ಚಾತ್ಯದೇಶಗಳಲ್ಲಿ ಬಹಳವಾಗಿದೆ. ಪ್ರತಿ ಊರಿನಿಂದಲೂ ಅನೇಕ ಪತ್ರಿಕೆಗಳು ಹೊರಡುವುವು. ಅಲ್ಲಿ ಕಸಗುಡಿಸುವ ಕೂಲಿಯವನು ಮೊದಲುಗೊಂಡು ಎಲ್ಲರೂ ಪತ್ರಿಕೆಗಳನ್ನು ಓದುವರು. ಪತ್ರಿಕೆಗಳಾದರೋ ದಿನಕ್ಕೆ ಒಂದಾವರ್ತಿ ಪ್ರಕಟವಾಗುವವಲ್ಲದೆ ಗಂಟೆಗೊಂದಾವರ್ತಿ ಪ್ರಕಟವಾಗುವುವೂ ಕೆಲವಿರುವುವು. ಒಂದೊಂದು ಪತ್ರಿಕೆಗೆ ಅನೇಕ ಸಹಸ್ರಚಂದಾದಾರರಿರುವರು. ಅಲ್ಲಿಯ ಜನಗಳು ಪ್ರತಿದಿವಸವೂ ತಪ್ಪದೆ ಪತ್ರಿಕೆಯನ್ನು ಓದಿಯೇ ತೀರುತ್ತಾರೆ. ಆದರೆ ನಮ್ಮ ಹಿಂದೂದೇಶದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ವೃತ್ತಪತ್ರಿಕೆಗಳನ್ನು ಓದುವವರೇ ಕಡಮೆ. ಪತ್ರಿಕೆಗಳು ಕೂಡ ಕಡಮೆ. ಕೆಲವು ಇಂಗ್ಲಿಷುಪತ್ರಿಕೆಗಳು ಮಾತ್ರ ತಕ್ಕಮಟ್ಟಿಗೆ ನಡೆಯುತ್ತವೆ. ಕನ್ನಡಪತ್ರಿಕೆಗಳ ಗೋಳನ್ನು ಹೇಳತೀರದಾಗಿದೆ. ಈ ಕನ್ನಡಪತ್ರಿಕೆಗಳಿಗೆ ಜನಸಹಾಯವೇ ಇಲ್ಲ. ನಮ್ಮ ಕರ್ನಾಟಕದಲ್ಲಿ ಅನೇಕರು [illegible] ಪತ್ರಿಕೆಯನ್ನು ತರಿಸುವಹಾಗಿಲ್ಲ. ವ್ಯಾಪಾರಿಗಳಿಗೆ ಈ ಕನ್ನಡಪತ್ರಿಕೆಗಳಿಂದ ಪ್ರಯೋಜನವಿಲ್ಲ. ಇಂಗ್ಲಿಷ್‌ಭಾಷೆಯನ್ನು ಕಲಿತು ಇಂಗ್ಲಿಷ್ ಭಾಷೆಯ ಪತ್ರಿಕೆಯನ್ನು ಓದುವವರಿಗೆ ಈ ಕನ್ನಡಪತ್ರಿಕೆಯ ವಿಷಯಗಳು ಹಳೆಯವಿಷಯಗಳು ಎಂದಮೇಲೆ ಪಾಪ! ಈ ಪತ್ರಿಕೆಗಳನ್ನು ಪೋಷಿಸುವವರು ಇಲ್ಲದೆ ಪತ್ರಿಕಾಸಂಪಾದಕರು ಹಾಗೂ ಹೀಗೂ ಅಭಿಮಾನದಿಂದ ಪತ್ರಿಕೆಯನ್ನು ಹೊರಡಿಸಿ ನಷ್ಟವನ್ನು ಅನುಭವಿಸಿ ಕಡೆಗೆ ಪತ್ರಿಕೆಯನ್ನೇ [illegible]

[illegible] ಕರ್ನಾಟಕದಲ್ಲಿ [illegible] ಪತ್ರಿಕೆಗಳು [illegible] ಕರ್ನಾಟಕದಲ್ಲಿ ಹೆಚ್ಚಾಗಿರುವ ವೀರಶೈವರ ಪತ್ರಿಕೆಗಳಾದರೋ [illegible]ವೇ. ಆದರಲ್ಲೂ ಆ ಪತ್ರಿಕೆಗಳು ಸಹ ಚಂದಾದಾರರ ಕೊರತೆ ಎಂಬ ಮೇಲೆ ವೀರಶೈವರು ತಮ್ಮ ಮತದ ಪತ್ರಿಕೆಗಳಮೇಲೆ ತೋರಿಸುವ ಅಭಿಮಾನವು ವ್ಯಕ್ತವಾಗುತ್ತದೆ. ವೀರಶೈವಮಹಾಶಯರೇ, ನಮ್ಮ ಮತದ ವಿಷಯವಾಗಿ ಏನಾದರೂ ತಿಳಿಯಬೇಕಾದರೆ "ಮೈಸೂರುಸ್ಟಾರ್" ವಿನಾ ಬೇರೆ ಯಾವ ಪತ್ರಿಕೆಗಳೂ ಇಲ್ಲವೆಂದಮೇಲೆ ನಮ್ಮ ಸಮಾಜವು ಅಭಿವೃದ್ಧಿಯಾಗುವ ಬಗೆಹೇಗೆ? ಕೈಲಾಸವಾಸಿ ವೀರಸಂಗಪ್ಪನವರು ಅನೇಕ ವರ್ಷಗಳ ಪೂರ್ವದಲ್ಲಿಯೇ "ಮೈಸೂರುಸ್ಟಾರ್" ಎಂಬ ಪತ್ರಿಕೆಯನ್ನು ಹೊರಡಿಸಿ ಸಮಾಜಾಭಿವೃದ್ಧಿಯ ಕೆಲಸವನ್ನು ಮಾಡಿ ವೀರಶೈವರ ಚಿರಸ್ಮರಣೆಗೆ ಪಾತ್ರರಾದರು. ಅವರು ಕೈಲಾಸವಾಸಿಗಳಾದನಂತರವೂ ಪತ್ರಿಕೆಯು ನಿಲ್ಲದೆ ಮ|| ವಿರೂಪಾಕ್ಷಯ್ಯನವರ ನೇತೃತ್ವದಲ್ಲಿ ನಡೆಯುತ್ತಾ ಸಮಾಜಸೇವೆಯನ್ನು ಮಾಡುತ್ತಿರುವುದು ಸಂತೋಷದ ಸಂಗತಿಯೇ ಸರಿ. ಈ ಪತ್ರಿಕೆಯಿಂದ ನಮ್ಮ ಸಮಾಜಕ್ಕಾಗುತ್ತಿರುವ ಪ್ರಯೋಜನವನ್ನು ಹೇಳತೀರದಾಗಿದೆ. ಆದುದರಿಂದ ವೀರಶೈವಬಾಂಧವರು ಈ ಪತ್ರಿಕೆಯು ದಿನಪತ್ರಿಕೆಯಾಗುವಂತೆ ಪ್ರಯತ್ನಿಸುವುದು ಅಗತ್ಯವಾಗಿದೆ. ಸದ್ಯಃ ವಾರಕ್ಕೆ ಎರಡಾವರ್ತಿಯಾದರೂ ಹೊರಡುವಂತೆ ಪ್ರಯತ್ನಿಸಿ ತನ್ಮೂಲಕ ಹೆಚ್ಚಾದ ಸಮಾಜಸೇವೆಯನ್ನು ತೆಗೆದುಕೊಳ್ಳಬೇಕಾದುದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ. ಈ ವಿಷಯದಲ್ಲಿ ವೀರಶೈವಬಾಂಧವರೆಲ್ಲರೂ ತಮ್ಮ ಶಕ್ತ್ಯನುಸಾರ ಸ್ವಹಸ್ತ ಪರಹಸ್ತಗಳಿಂದ ಸಹಾಯಮಾಡಿ ಈ ಪತ್ರಿಕೆಯು ದಿನಪತ್ರಿಕೆಯಾಗಿ ಅಥವ ಸದ್ಯಕ್ಕೆ ವಾರಕ್ಕೆ ಎರಡಾವರ್ತಿಯಾದರೂ ಹೊರಡುವಂತೆ ಪ್ರಯತ್ನಿಸುವುದು ಅವಶ್ಯಕವೆಂಬುದಾಗಿ ನನ್ನ ಅಲ್ಪಬುದ್ಧಿಗೆ ತೋರುತ್ತದೆ. ಈ ವಿಷಯದಲ್ಲಿ ಸರ್ವ ವೀರಶೈವಮಹನೀಯರೂ ತಂತಮ್ಮ ಅಭಿಪ್ರಾಯವನ್ನು ಸೂಚಿಸಿ ಪತ್ರಿಕೆಯು ವಾರಕ್ಕೆ ಎರಡಾವರ್ತಿಯಾದರೂ ಹೊರಡುವಂತೆ ಪ್ರಯತ್ನಿಸದಿರಲಾರರಾಗಿ ನಂಬಿರುವ,

ತಮ್ಮ ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

ದೀನ್‌ದಾರ್ ಸಿದ್ದೀಕನ ಪ್ರಸಿದ್ಧಪತ್ರಿಕಾಸಾರಾಂಶ.

ವೀರಶೈವಸಜ್ಜನರೇ! ದೀನ್‌ದಾರ್‌ಸಿದ್ದೀಕ್ ಎಂಬ ಮಹಮ್ಮದೀಯನು ತಾನೇ ಚನ್ನಬಸವೇಶ್ವರನೆಂದು ಹೇಳಿಕೊಂಡು ತಿರುಗುತ್ತಾ ಅನೇಕ ಉಪಾಯಗಳಿಂದ ಜನರನ್ನು ಮರುಳುಗೊಳಿಸುತ್ತಿರುವುದನ್ನು ಪ್ರತಿವಾರದ ಸ್ಟಾರ್‌ಪತ್ರಿಕೆಯಲ್ಲೂ ಓದುತ್ತಿರುವುದು ಸರಿಯಷ್ಟೆ. ಈತನು ತಾ|| 1-5-26 ರಲ್ಲಿ "ಛಾಲೆಂಜ್" ಎಂಬ ಹೆಸರಿನಿಂದ ಒಂದು ಪ್ರಸಿದ್ಧಪತ್ರಿಕೆಯನ್ನು ಹಂಚಿರುತ್ತಾನೆ. ಅದರಲ್ಲಿ ಪ್ರಪಂಚವನ್ನುದ್ಧರಿಸಲೋಸುಗ ಪರಮೇಶ್ವರನು ಈತನನ್ನು ಕಳುಹಿಸಿದ ಹಾಗು ಮತ್ತು ಈತನು ಸುಷುಪ್ತಿಯಲ್ಲಿದ್ದಾಗ್ಗೆ ಈಶ್ವರನು ಪ್ರತ್ಯಕ್ಷನಾಗಿ "ನಾನು ನಿನ್ನನ್ನು ಸರ್ವಧರ್ಮಾಧಿಕಾರಿಯನ್ನಾಗಿ ಪ್ರಪಂಚದಲ್ಲಿ ಕಳುಹಿಸಿರುತ್ತೇನೆ. ನೀನು ಶ್ರೀಕೃಷ್ಣ, ಮೂಸ, ಶ್ರೀಚನ್ನಬಸವೇಶ್ವರ ಇವರಂತೆ ಧರ್ಮೋದ್ಧಾರವನ್ನು ಮಾಡು; ಲಿಂಗಾಯತಮತದವರನ್ನು ಸ್ವಾಧೀನಪಡಿಸಿಕೊಂಡು ಈ ಕಾರ್ಯವನ್ನು ನೆರವೇರಿಸು. ನೀನೇ ಸಾಕ್ಷಾತ್‌ಚನ್ನಬಸವೇಶ್ವರ ಇರುತ್ತೀ ಎಂದು "ಓಂಕಾರದಿಂದತಿಳಿಸಿ ಧರ್ಮಸ್ಥಾಪನದ ಅಜ್ಞೆಯನ್ನು ಮಾಡಿದನು" ಎಂದು ಬರೆದಿರುತ್ತಾನೆ. ಮತ್ತು ಮೊದಮೊದಲು ಲಿಂಗಾಯತ (ವೀರಶೈವ) ಮತತತ್ವಗಳನ್ನೆಲ್ಲಾ ಹೊಗಳಿ ಕಡೆಗೆ ಇಸ್ಲಾಂಮತಕ್ಕೂ ಇದಕ್ಕೂ ಸಂಬಂಧಿಸಿ ಅಭೇದವನ್ನು ಕಲ್ಪಿಸಿಕೊಂಡು ಮುಸಲಂ ಎಂದರೆ ಲಿಂಗಾಯತರೆಂದು ಅರ್ಥಮಾಡಿರುತ್ತಾನೆ. "ಪೂರ್ವದಲ್ಲಿ ಹುಟ್ಟಿದ ಅಂಶದಿಂದವತರಿಸಿದ ಶ್ರೀಚನ್ನಬಸವೇಶ್ವರನನ್ನು ಯಾರೂ ವಿರೋಧಿಸಿಲ್ಲ. ಈಗ ಅದೇ ಅಂಶವು ದೀನ್‌ದಾರ್ ಚನ್ನಬಸವೇಶ್ವರರಲ್ಲಿ ಕಾಣಿಸಿಕೊಂಡಿರುವುದನ್ನು ಲೋಕದ ಅಂಧಕರು ಅರಿಯರು. ನಾನು ಕೃತಯುಗದಲ್ಲಿ ದೇವಾಂಗಭಕ್ತನೆಂಬ ನಾಮದಿಂದಲೂ, ತ್ರೇತಾಯುಗದಲ್ಲಿ ಘಂಟಾಕರ್ಣನೆಂಬದಾಗಿಯೂ, ದ್ವಾಪರದಲ್ಲಿ ಅಮಿಭುಜನೆಂಬದಾಗಿಯೂ, ಕಲಿಯುಗದ ಮೊದಲನೆಪಾದದಲ್ಲಿ ಚಿಕ್ಕಚನ್ನಬಸವಣ್ಣನಾಗಿಯೂ ಅವತರಿಸಿ ಮೆರೆದೆನು. ಇಷ್ಟಾದರೂ ಅಜ್ಞಾನಿಗಳು ನನ್ನನ್ನು ಅರಿಯರು. ಈಗ ಶೈವ, ವೈಷ್ಣವಮತಗಳ ವೈಶಮ್ಯಗಳನ್ನು ನಾಶಪಡಿಸುವ ಸಲುವಾಗಿ ರುದ್ರಗೋಪಾಲನ ಭಕ್ತನಾಗಿ, ಶಂಖ, ಚಕ್ರ, ಗದಾ, ತ್ರಿಶೂಲ, ಬಿಲ್ಲುಬಾಣ, ವೃಷಭನಮುದ್ರೆ, ಪರಶು-ಕೊಡಲಿ ಮುಂತಾದುವನ್ನು ಧರಿಸಿ ಧರ್ಮೋದ್ಧಾರಕ್ಕಾಗಿ ಬಂದಿರುತ್ತೇನೆಂದು" ಬರೆದು ಕಡೆಯಲ್ಲಿ ಕಲಿಯುಗದ ಐದುಸಹಸ್ರವರ್ಷಗಳ ಅಂತ್ಯದಲ್ಲಿ ಬರತಕ್ಕ ಅವತಾರವನ್ನು ನಂಬದ ಹೊರ್ತು ಮುಕ್ತಿಯಿಲ್ಲವೆಂತಲೂ ಬರೆದಿರುತ್ತಾನೆ. ವಾಚಕರೇ! ಇವನ ಧೈರ್ಯ, ಸಾಮರ್ಥ್ಯ ಮತ್ತು ಕುಯುಕ್ತಿಗಳನ್ನು ನೋಡಿದಿರಾ? ಎಲೈ ಸಿದ್ದೀಕ್‌ಸಾಬರೇ! ನಿಮ್ಮ ಗಾರುಡಿವಿದ್ಯವನ್ನು ಸರ್ವರೂ ಎಚ್ಚರಿಕೆಯಿಂದಿರುವ ಈಗಿನ ಕಾಲದಲ್ಲಿ ತೋರಿಸಲು ಬಂದರೆ, ಹಗಲಿನಲ್ಲಿ ಕಳ್ಳತನಕ್ಕೆ ಬಂದವನ ಗತಿಯಂತೆ ಆಗುತ್ತದಲ್ಲವೇ? "ಕೆಡುವಕಾಲಕ್ಕೆ ದುರ್ಬುದ್ಧಿ" ಎಂಬ ಗಾದೆಗೆ ಸರಿಯಾಗಿ ನೀನು ವೀರಶೈವರನ್ನು ನಿನ್ನ ಮೋಸದ ಬಲೆಗೆ ಸಿಕ್ಕಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಸಿಕ್ಕಿದಹಾಗೆ ಪುಸ್ತಕಗಳಲ್ಲಿಯೂ ವೃತ್ತಪತ್ರಿಕೆಗಳಲ್ಲಿಯೂ ಬಡಬಡಿಸುವುದಕ್ಕೆ ಪ್ರಯತ್ನಪಟ್ಟರೆ, ಕಾಮಾಂಧನಾದ ರಾವಣ[illegible] ಶ್ರೀರಾಮನನ್ನು [illegible]ದಿಲ್ಲವೆ? [illegible]

[illegible]

H. G. Siddalingayya,
Harohalli.

[illegible]

ನೀರು ಬಂದಿಲ್ಲವಾದ್ದರಿಂದ ಜನಗಳಿಗೂ ದನಕರಗಳಿಗೂ ಕುಡಿಯುವ ನೀರಿಗೆ ತುಂಬಾತೊಂದರೆಯಾಗಿದೆ. ಎಲ್ಲರೂ ಅತ್ಯಂತ ಆತುರದಿಂದ ಮುಂಗಾರುಮಳೆಗಾಗಿ ಹಾ ಎಂದು ಬಾಯಿತೆರೆದುಕೊಂಡು ಕಾದಿರುವ ಚಾತಕಪಕ್ಷಿಗಳಂತೆ ಆಕಾಶವನ್ನೇ ನೋಡುತ್ತಿರುವರು. ಸುಮಾರು 1½ ತಿಂಗಳ ಕೆಳಗೆ ಹೊಸದಾಗಿ ಚುನಾಯಿಸಲ್ಪಟ್ಟಿದ್ದ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಕೆ. ಮಲ್ಲಪ್ಪನವರು ಕಾಲಗತಿಯನ್ನೈದಿದಕಾರಣ ಅವರ ಸ್ಥಳಕ್ಕೆ ಮತ್ತೊಬ್ಬರನ್ನು ಆರಿಸಬೇಕಾಗಿರುವುದರಿಂದ ಈಗಿರುವ ಮ್ಯುನಿಸಿಪಲ್ ಕೌನ್ಸಿಲರುಗಳನ್ನು ಕೇಳಿಕೊಳ್ಳುವುದೇನೆಂದರೆ—ಹಿಂದಿನಂತೆ ಮತವೈಷಮ್ಯವನ್ನು ಬಿಟ್ಟು “ದೇಶಸೇವೆಯೇ ಈಶಸೇವೆ” ಎಂಬ ತತ್ವವನ್ನು ತಿಳಿದುಕೊಂಡು ಉತ್ಸಾಹದಿಂದ ಜನಸೇವೆಯನ್ನು ಮಾಡಲು ಯಾರಿಗೆ ಅಪೇಕ್ಷೆ ಇದೆಯೋ, ತಮಗೆ ಯಾರು ಶಕ್ತರೆಂದು ತಿಳಿದುಬರುವುದೋ ಅಂಥವರಿಗೆ ತಮ್ಮ ಉದಾರವಾದ ಓಟುಗಳನ್ನು ಕೊಡುವುದರ ಮೂಲಕ ತಮಗೆ ಸರ್ಕಾರದವರು ಕೊಟ್ಟಿರುವ ಹಕ್ಕನ್ನು ಸದುಪಯೋಗಮಾಡಿಕೊಳ್ಳಬೇಕೆಂಬುದೇ ಕೋರಿಕೆ. ಈ ಊರಲ್ಲಿ ಈಚೆಗೆ ಒದಗಿರುವ ಒಂದು ವಿಶೇಷಸಂಗತಿಯೇನೆಂದರೆ—ಈ ಗ್ರಾಮವು ವೀರಶೈವರಲ್ಲಿದ್ದ ಐಕಮತ್ಯಕ್ಕೆ ಪ್ರಸಿದ್ಧವಾಗಿತ್ತು. ಆದರೆ ಈಗ ಕಾರಣಾಂತರಗಳಿಂದ ಒಗ್ಗಟ್ಟೆಂಬ ಗಂಟು ಸಡಿಲವಾಗಿ ಅನೈಕ್ಯವೆಂಬ ಮಾರಿಯು ತಲೆಹಾಕುವುದಕ್ಕೆ ಉಪಕ್ರಮಿಸಿರುವಳು. ಇಲ್ಲಿಯ ದೇವಸ್ಥಾನದ ಕಾರ್ಯಗಳು ಇದುವರೆಗೂ, ಅಡಿಕೆವ್ಯಾಪಾರದ ರುಸುಮಿನ ಹಣದಿಂದ ನಡೆಯುತ್ತಿದ್ದುದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿದೆ. ಆದರೆ ಈಚೆಗೆ ವ್ಯಾಪಾರವು ಕ್ಷೀಣದಶೆಯನ್ನು ಹೊಂದಿದ್ದರಿಂದ ರುಸುಮಿನ ಹಣವು ದೇವಾಲಯದ ಕಾರ್ಯಗಳ ವೆಚ್ಚಕ್ಕೆ ಸಾಲದೆ ಹೋದದ್ದರಮೇಲೆ ಎಲ್ಲರಿಂದಲೂ 10,000 ರೂ. ವರೆಗೆ ಚಂದಾವಸೂಲ್ಮಾಡಿ ಬ್ಯಾಂಕಿನಲ್ಲಿಟ್ಟು ಅದರ ಬಡ್ಡಿಯಿಂದ ದೇವತಾಕಾರ್ಯಗಳನ್ನು ನಡೆಯುವಂತೆ ಏರ್ಪಡಿಸಬೇಕೆಂದು ಕೆಲವರು ಸಲಹೆಕೊಡಲಾಗಿ ಒಂದು ಸಾರ್ವಜನಿಕಸಭೆಯು 3 ತಿಂಗಳ ಕೆಳಗೆ ಸೇರಿತು. ಆಗ ಸದರಿ ಫಂಡಿನ ಸಂಬಂಧವಾದ ಅನೇಕ ವಿಷಯಗಳು ಚರ್ಚಿಸಲ್ಪಟ್ಟನಂತರ ಶೇಕಡ 90 ಜನರು ಒಂದು ಸರಿಯಾದ ವ್ಯವಸ್ಥಾಸಂಘವನ್ನು ಏರ್ಪಡಿಸಿ ಅದರ ಮೂಲಕ ಹಣವನ್ನು ವಸೂಲ್ಮಾಡಿ, ಪ್ರೆಸಿಡೆಂಟರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಮೊಬಲಗನ್ನು ಡಿಪಾಜಿಟ್ ಮಾಡುವುದಾದರೆ ಚಂದಾಕೊಡುವುದಾಗಿ ಹೇಳಿದರು. ಇದು ಸರ್ವಸಮ್ಮತವಾದ ಮತ್ತು ನ್ಯಾಯವಾದ ವಿಷಯವಾಗಿದೆ. ಆದರೆ ಯಾವ ಕಾರಣದಿಂದಲೋ ಕೆಲವು ಪ್ರಮುಖರು ಮಾತ್ರ ಇದಕ್ಕೊಪ್ಪದೆ ಹಿಂದಿದ್ದ ಬುದ್ಧಿವಂತರು, ಯುವಕರು ಗೌಡರೇ ಈ ಕೆಲಸಮಾಡಬೇಕೆಂದು ಮುಷ್ಕರಹಿಡಿದದ್ದರಮೇಲೆ, ಏನೂ ತೀರ್ಮಾನವಾಗದೆ ಆ ಹೊತ್ತಿನ ಸಭೆಯು ಮುಕ್ತಾಯವಾಯಿತು. ಈಚೆಗೆ ಈ ವಿಷಯದಲ್ಲಿ ಯಾವ ಪ್ರಯತ್ನವನ್ನೂ ಮಾಡದಿರುವುದು ಶೋಚನೀಯವಾಗಿದೆ. ದೇವತಾಕಾರ್ಯಗಳು ಇನ್ನೂ ಉದಾಸೀನಮಾಡಲ್ಪಟ್ಟರೆ ಸ್ವಲ್ಪದಿವಸಗಳಲ್ಲೇ ನಿಂತುಹೋಗುವುದರಲ್ಲಿ ಅಭ್ಯಂತರವಿಲ್ಲ. ಈಗಿನಂತಹ ಪ್ರಜಾಪ್ರಭುತ್ವದ ಕಾಲದಲ್ಲಿ ಸಾರ್ವಜನಿಕಕಾರ್ಯಗಳಿಗಾಗಿ ಸಾವಿರಾರುರೂಪಾಯಿ ಕೊಟ್ಟವರಿಗೆ ಎಷ್ಟು ಹಕ್ಕಿದೆಯೋ ಒಂದು ರೂ. ಕೊಟ್ಟವರಿಗೂ ಅಷ್ಟೇ ಹಕ್ಕಿರುವುದರಿಂದ ಈ ವಿಷಯಗಳಲ್ಲಿ ಸರ್ವರಸಮ್ಮತಿಯಂತೆ ನಡೆಯುವುದು ಪ್ರಮುಖರ ಧರ್ಮವಲ್ಲವೇ? ಅಲ್ಲದೆ ಈವರೆಗೆ ವಸೂಲಾಗಿರುವ ರುಸುಮಿನ ಮತ್ತು ಲಗ್ನದಫಂಡಿನ ಹಣವು ಯಾರಲ್ಲಿ ಎಷ್ಟೆಷ್ಟು ಇದೆಯೋ ಯಾರಿಗೂ ಗೊತ್ತಿಲ್ಲ. ಯಾರಾದರೂ ಈ ವಿಷಯದಲ್ಲಿ ಮುಖಂಡರೆಂಬುವವರನ್ನು ಪ್ರಶ್ನೆಮಾಡಿದರೆ ತಮ್ಮ ಗೃಹಕೃತ್ಯದ ಆದಾಯವೆಚ್ಚದ ಲೆಕ್ಕವನ್ನು ಕೇಳಿದರೆ ಹೇಗೆ ಕೋಪಗೊಳ್ಳುವರೋ ಹಾಗೆ ಸಿಟ್ಟಿಗೇಳುವರು. ಯಾರು ಕೇಳಿದರೂ ಸಮಾಧಾನಕರವಾದ ಪ್ರತ್ಯುತ್ತರವನ್ನು ಕೊಡುವುದು ಜವಾಬ್ದಾರಿಹೊತ್ತವರ ಕರ್ತವ್ಯವಲ್ಲವೇ? ಇದಕ್ಕಾಗಿ ಏತಕ್ಕೆ ಕೋಪ? ವೀರಶೈವಪ್ರಮುಖಬಾಂಧವರೇ! ತಮ್ಮ ತಪ್ಪುಗಳ ಕಡೆಗೆ ಎಣಿಕೆಹಾಕಿ ಅನ್ಯೋನ್ಯಕಲಹಕ್ಕೂ, ಅಸಮಾಧಾನಗಳಿಗೂ ಅವಕಾಶಕೊಡದಂತೆಯೂ, ಸರ್ವರ ಅನುಮತಿಯಂತೆ ನಡೆದು ಐಕ್ಯವೆಂಬ ಲೋಕೋತ್ತರಗುಣವು ನಮ್ಮೂರುಬಿಟ್ಟು ಹೋಗದಂತೆಯೂ ನೋಡಿಕೊಳ್ಳಿ. ಒಬ್ಬರಿಗೊಬ್ಬರು ಭೇದಬುದ್ಧಿಯಿಂದ ನಡೆಯುವುದು ಮೂರನೆಯವರಿಗೆ ಹಾಸ್ಯಾಸ್ಪದವೆಂದು ತಿಳಿಯಿರಿ. ಎಲ್ಲರ ಅನರ್ಥವೇ ನಮ್ಮನರ್ಥ ಎಲ್ಲರ ಸೌಖ್ಯವೇ ನಮ್ಮ ಸೌಖ್ಯ, ಎಲ್ಲರ ಮಾನವೇ ನಮ್ಮ ಮಾನವೆಂದು ನಂಬಿ ನಡೆಯಿರಿ. ಇನ್ನು ಮೇಲಾದರೂ ದೇವಸ್ಥಾನದ ಕಾರ್ಯಗಳಿಗೆ ಭಂಗಬಾರದಂತೆ ಕೂಡಿದಷ್ಟು ಜಾಗ್ರತೆಯಾಗಿ ಒಂದು ವ್ಯವಸ್ಥಾಸಂಘವನ್ನು ಏರ್ಪಡಿಸಿ ಚಂದಾವಸೂಲ್ಮಾಡಲು ಪ್ರಮುಖರು ಪ್ರಯತ್ನಿಸಿ ಕೀರ್ತಿಭಾಗಿಗಳಾಗಬೇಕಾಗಿ ಎಚ್ಚರಿಸಬೇಕೆಂಬುದೇ ಈ ಲೇಖಕನ ಉದ್ದೇಶವಲ್ಲದೆ, ಯಾರನ್ನೂ ಅಸೂಯೆಯಿಂದ ದೂಷಿಸಬೇಕೆಂದಲ್ಲ. ಇಲ್ಲಿಯ ಎ. ವಿ. ಸ್ಕೂಲು ವರ್ಷೇ ವರ್ಷೇ ಕ್ಷೀಣಸ್ಥಿತಿಯನ್ನು ಹೊಂದುತ್ತಿರುವದನ್ನು ನೋಡಿದರೆ ಉಪಾಧ್ಯಾಯರುಗಳು ಶ್ರದ್ಧೆವಹಿಸಿ ಪಾಠಹೇಳುವಂತೆ ಕಾಣುವುದಿಲ್ಲ. ಇದಕ್ಕೆ ಈ ವರ್ಷ ಲೋವರ್‌ಸೆಕೆಂಡರೀಪರೀಕ್ಷೆಗೆ ಹೋಗಿದ್ದ 14 ವಿದ್ಯಾರ್ಥಿಗಳ ಪೈಕಿ ಇಬ್ಬರು ಮಾತ್ರ ತೇರ್ಗಡೆಹೊಂದಿರುವುದೇ ನಿದರ್ಶನ. ಕಮಿಟಿಮೆಂಬರುಗಳು ಸರಿಯಾಗಿ ವಿಚಾರಿಸಿಕೊಳ್ಳುವಹಾಗೆ ಕಾಣುವುದಿಲ್ಲ. ಮೇಲಿನವರು ದಯವಿಟ್ಟು ಈ ವಿಷಯದಲ್ಲಿ ನಿಗಾಕೊಟ್ಟು ಸ್ಕೂಲಿನ ಅಭಿವೃದ್ಧಿಗೆ ಸಹಾಯ ಮಾಡಬೇಕಾಗಿ ಕೋರಿಕೆ.

ಗ್ರಾಮಾಭಿಮಾನಿ.

ವೇದಾರ್ಥವಿಚಾರ.

(ಲೇಖಾಂಕ ೧)

(ಲೇಖಕ—ಸ್ವಾಮಿ ವಿರೂಪಾಕ್ಷ ಒಡೆಯರು.)

ಪಾಶ್ಚಾತ್ಯ ಪೌರ್ವಾತ್ಯ ಉಭಯದೇಶೀಯರ ಪುರಾತನ ಪ್ರಾಜ್ಞಸ್ಥಿತಿಗೆ ಮೂಲಕಾರಣೀಭೂತವಾದವುಗಳೆಂದರೆ ವೇದಗಳೇ ಎಂಬದಾಗಿ ಉಭಯದೇಶೀಯ ವಿದ್ವಾಂಸರು ಬರೆದಿರುವರು. ಆದರೆ ಇಂಥಾ ಮೂಲಗ್ರಂಥಗಳಲ್ಲಿ ಯಾವ್ಯಾವ ವಿಷಯಗಳು ಬರೆಯಲ್ಪಟ್ಟಿರುವವೆಂಬುದನ್ನು ವಿಚಾರಮಾಡುವದು ಪ್ರತಿಯೊಬ್ಬಮನುಷ್ಯನ ಕರ್ತವ್ಯವಾಗಿರುವದರಿಂದ ಅದರಲ್ಲಿಯೇ ಕೆಲವು ವಿಚಾರಗಳನ್ನು ವಾಚಕರ ಮುಂದಿಡುವೆವು. ಪೂರ್ವಕಾಲದಿಂದಲು ಕೆಲವು ಋಷಿಗಳು ವೇದವು ಈಶ್ವರನಿರ್ಮಿತವೆಂತಲೂ, ಕೆಲವರು ಮನುಷ್ಯಕೃತವೆಂತಲೂ ಹೋರಾಡುತ ಬಂದಿರುವರು. ಆದರೆ ಅವರಲ್ಲಿ ಕೆಲವರು ಅಗ್ನಿ, ವಾಯು, ಆದಿತ್ಯ, ಅಂಗಿರಸ ಎಂಬ ನಾಲ್ಕುಮಂದಿ ಋಷಿಗಳ ಹೃದಯದಲ್ಲಿ ಈಶ್ವರೀ ಪ್ರೇರಣೆಯಿಂದ ಈ ವೇದಗಳು ಆವಿರ್ಭವಿಸಿರುವವೆಂತ ಹೇಳುವರು. ಇನ್ನು ಪೌರಾಣಿಕರು ಓರ್ವ ಚತುರ್ಮುಖಬ್ರಹ್ಮನಿರುವನೆಂತಲೂ, ಅವನ ನಾಲ್ಕು ಮುಖಗಳಿಂದ ಈ ನಾಲ್ಕು ವೇದಗಳು ಹುಟ್ಟಿರುವವೆಂತಲೂ, ಇನ್ನು ಕೆಲವರು ಅಂದರೆ ಈಚೀಕಡೆಯ ಪಾಶ್ಚಾತ್ಯ ವಿದ್ವಾಂಸರು ಹಿಂದುಸ್ಥಾನದ ಪೂರ್ವಕಾಲೀನ ಜನರಿಂದ ಬರೆಯಲ್ಪಟ್ಟ ಕಾಲ್ಪನಿಕ ಅಸಂಬದ್ಧ ನುಡಿಗಳೆಂತಲೂ ಮತ್ತೆ ಕೆಲವು ಭಾರತೀಯ ಈಚೀಕಡೆಯ ಪಂಡಿತರು ಹತ್ತು ಎಂಟುಸಾವಿರ ವರ್ಷಗಳ ಪೂರ್ವದಲ್ಲಿ ಮಹಾತ್ಮರಿಂದ ರಚಿಸಲ್ಪಟ್ಟಿರುವವೆಂತಲೂ ಅನೇಕರು ಅನೇಕರೀತಿಯಾಗಿ ವಾದಿಸುತ್ತಿರುವರು. ಅದರಲ್ಲಿ ಈಚೀಕಡೆಯ ಪೌರ್ವಾತ್ಯಪಂಡಿತರ ಪೈಕಿ ಬಾಲಗಂಗಾಧರತಿಲಕರೆಂಬುವವರು “ಆರ್ಕ್ಟಿಕ್ ಹೋಮ್ ಇನ್ ವೇದಾಸ್” ಎಂಬ ತಮ್ಮ ಪುಸ್ತಕದಲ್ಲಿ ವೇದವಿಷಯ [illegible] ಒಂದು ಪಕ್ಷಸ್ಥಾಪಿತ ಸಾಧಕ ವಿಶೇಷದಿಂದಲೂ, ಗತಿಕಾರತಮ್ಯದಿಂದಲೂ, ವೇದಕಾಲದಲ್ಲಿಯ ನಕ್ಷತ್ರದ ಅವಸ್ಥಿತಿಯ ಮೇಲಿಂದಲೂ, ಈಗಿನ ಸ್ಥಿತಿಯ ಮೇಲಿಂದಲೂ ಅವರ ಪರಿಣತಿಯನ್ನು ಮಾಡಿ ಇಂತಿಷ್ಟುಸಾವಿರ ವರ್ಷಗಳೆಂಬ ಅವಧಿಯನ್ನು ತೋರಿಸಿರುವರು. ಆದರೆ ಅವರ ಈರೀತಿಯಾದ ನಿಶ್ಚಿತವಿಚಾರವು ತಪ್ಪಾಗುವದೆಂದು ಹೇಳುವೆವು. ಯಾಕೆಂದರೆ ನಕ್ಷತ್ರವು ಗಮನಶೀಲವಾದ್ದರಿಂದಲೂ ಕಾಲವು ನಿರವಧಿಯುಳ್ಳದ್ದರಿಂದಲೂ ಆ ನಕ್ಷತ್ರವು ಇದೊಂದೇಸಾರಿಗೇನೆ ಇಷ್ಟೊಂದುದೂರ ಬಂದಿರಬಹುದೆಂಬ ನಿಶ್ಚಿತತ್ವವು ಹ್ಯಾಗೆ ದೊರೆಯುವದು? ಯಾಕಂದರೆ ಆ ನಕ್ಷತ್ರವು ಅನಿಶ್ಚಿತವೇದಕಾಲದಿಂದ ಅನೇಕಸಾರೆ ಪೃಥ್ವಿಯ ಪರಿಭ್ರಮಣವನ್ನು ಮಾಡಿ ಈಗ ತೋರಿಸುವ ಸ್ಥಳಕ್ಕೆ ಬಂದಿರಲಿಕ್ಕಿಲ್ಲವೆಂಬುವದನ್ನು ಹೇಳಲು ಯಾಕೆ ಸಾಧ್ಯವಿಲ್ಲಾ? ಅಂದಮೇಲೆ ಇಂಥಾ ಊಹೆಗಳಿಂದ ಅನಿಶ್ಚಿತವಾದ ವೇದಕಾಲವನ್ನು ನಿಶ್ಚೈಸುವದು ಆಕಾಶವು ಕಪ್ಪು, ಹಸುರು, ಕೆಂಪುಬಣ್ಣಗಳುಳ್ಳದ್ದೆಂದು ಹೇಳುವ ಭ್ರಾಂತರಂತೆಯೇ ಈ ಟಿಳಕಾದಿಗಳು ಹೇಳುವ ವಿಚಾರವಾಗಿರುವದು.

ಇನ್ನು ನಮ್ಮ ಪೂರ್ವದ ಋಷಿಗಳು ವೇದಕ್ಕೆ ಕಾಲದ ಅವಧಿಯಿಲ್ಲವೆಂತಲೂ ಅದು ಸೃಷ್ಟಿ-ಪರಮಾತ್ಮರಜ್ಞಾನಬೋಧಕವಾಗಿರುವದರಿಂದ ಹ್ಯಾಗೆ ಜ್ಞಾನಸ್ವರೂಪನಾದ ಆತ್ಮನಿಗೆ ಕಾಲಾವಧಿಯಿಲ್ಲವೋ ಅದರಂತೆ ಜ್ಞಾನರೂಪವಾದ ವೇದಕ್ಕೂ ಕಾಲಾವಧಿಯಿಲ್ಲವೆಂದು ಹೇಳಿರುವರು. ಇನ್ನು ಆ ಅಪೌರುಷೇಯವಾದ ವೇದವು ಜೀವರಾಶಿಗಳ ಬೋಧಕ್ಕಾಗಿ ಅಗ್ನಿ, ವಾಯು, ಆದಿತ್ಯ, ಅಂಗಿರಸ ಎಂಬ ಪವಿತ್ರಾತ್ಮರ ದ್ವಾರಾ ಈಶ್ವರೀ ಪ್ರೇರಣೆಯಿಂದ ಬಂದದ್ದೆಂದು ನಂಬುವವರಲ್ಲಿ ನಾವೊಬ್ಬನಾಗಿರುವೆವು. ಆದರೆ ನಾಲ್ಕುಮುಖವುಳ್ಳ ಬ್ರಹ್ಮನಿದ್ದು ಅವನ ಮುಖಗಳಲ್ಲಿ ವೇದಗಳು ಹುಟ್ಟಿದವೆಂಬ ಪೌರಾಣಿಕವಾದವು ಕೇವಲ ಮಿಥ್ಯಾಕಲ್ಪನಾಡಂಬರದಿಂದ ಕೂಡಿದ ಸುಳ್ಳುಮಾತಾಗಿರುವದರಿಂದ ಸರ್ವಥಾ ಅದನ್ನು ನಾವು ನಂಬಲಾರೆವು. ಇನ್ನು ಪಾಶ್ಚಾತ್ಯಪಂಡಿತರು ಯಾವ ವೇದಾರ್ಥವನ್ನು ಭೌತಿಕಾರ್ಥದೃಷ್ಟಿಯಿಂದ ನೋಡಿ ಪೂರ್ವಾಪರ ವಿರೋಧವನ್ನು ವೇದಕ್ಕೆ ಆರೋಪಿಸುವರೋ ಅದು ಸಮಂಜಸವೆನಿಸಲಾರದು. ಯಾಕಂದರೆ, ವೇದವು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಾರ್ಥವೆಂಬ ಮೂರರ್ಥಗಳುಳ್ಳದ್ದಿದ್ದು ಸಮಾಧಿಭಾಷಾ, ಪರಕೀಯಭಾಷಾ, ಲೌಕಿಕಭಾಷಾ ಎಂಬ ಮೂರು ಭಾಷಾಶೈಲಿಗಳಿಂದ ಅದರ ಫಲಿತಾರ್ಥವನ್ನು ವಿಚಾರಿಸಬೇಕಾಗಿರುವದು. ಹ್ಯಾಗೆಂದರೆ, “ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯಜಾತಃ ಪತಿರೇಕ ಆಸೀತ್ | ಸದಾಧಾರ ಪೃಥಿವೀಂದ್ಯಾಮುತೇಮಾಂಕಸ್ಮೈದೇವಾಯ ಹವಿಷಾವಿಧೇಮ” (ಯಜುರ್ವೇದ ಮಂತ್ರ ಅ. 13 ಮ. 4) ಎಂಬೀ ವೇದಮಂತ್ರಕ್ಕೆ ಪಾಶ್ಚಾತ್ಯಪಂಡಿತರಾದ ಮೋಕ್ಷಮೂಲರಾದಿಗಳು ಭೌತಿಕಾರ್ಥಪರವಾಗಿ ಲೌಕಿಕಭಾಷೆಯಿಂದ ಈ ಮಂತ್ರದಲ್ಲಿಯ ಹಿರಣ್ಯಶಬ್ದಕ್ಕೆ ಭಂಗಾರವೆಂತಲೂ ಆ ಭಂಗಾರವೇ ಗರ್ಭದಲ್ಲುಳ್ಳದ್ದು ಗುಡ್ಡವೆಂತಲೂ ಹಿರಣ್ಯಗರ್ಭಶಬ್ದಕ್ಕೆ ಗುಡ್ಡೆಂಬರ್ಥವನ್ನುಮಾಡಿ ಸೃಷ್ಟಿಯುತ್ಪತ್ತಿಯಾಗಬೇಕಾದರೆ ಮೊದಲು ಗುಡ್ಡಗಾಡು ಪ್ರದೇಶವಾಯಿತೆಂತಲೂ, ಆ ಹಿರಣ್ಯಶಬ್ದಾರ್ಥವಾಚಕವಾದ ಸುವರ್ಣಜ್ಞಾನವು ಭಾರತೀಯರಿಗೆ ಮೂರುಸಾವಿರ ವರ್ಷಗಳ ಪೂರ್ವದಲ್ಲಿದ್ದವೆಂತಲೂ, ಅದರಿಂದೀಚೆಗೆ ಸುವರ್ಣವೆಂಬ ಧಾತುವಿನ ಮಹತ್ವವು ಹೊಳೆದು ಅದನ್ನು ಬೆಲೆಗೀಡುಮಾಡಿದರೆಂತಲೂ ಹೇಳಿ ಈ ವೇದಮಂತ್ರದ ಕಾಲವು ಮೂರುಸಾವಿರದ್ದೆಂಬದಾಗಿ ಕಾಲನಿಶ್ಚಯವನ್ನು ಮಾಡಿರುವರು. ಆದರೆ ಇವರ ಈ ಕೇವಲ ಭೌತಿಕಾರ್ಥಪರ ವಿಚಾರವು ವೇದಕ್ಕೆ ಅನರ್ಥವನ್ನುಂಟುಮಾಡಿರುವದು. ಹ್ಯಾಗೆಂದರೆ, ಈ ಹಿರಣ್ಯಗರ್ಭವೆಂಬ ಮಂತ್ರವು ದೈವಿಕಾರ್ಥರೀತಿಯಿಂದ ವಿಚಾರಮಾಡಿದಲ್ಲಿ ಹಿರಣ್ಯವೆಂದರೆ ಅಗ್ನಿತೇಜವೆಂಬರ್ಥವನ್ನು ತೋರಿಸಿದ್ದು ತೇಜವೇ ಗರ್ಭದಲ್ಲುಳ್ಳಂಥಾ ವಸ್ತುವೆಂದರೆ ಸೂರ್ಯನೆಂಬರ್ಥವಾಗುತ್ತಿದ್ದು ಹಿರಣ್ಯಗರ್ಭಮಂತ್ರಕ್ಕೆ ಸೂರ್ಯಾರ್ಥಪರ ವಿಚಾರಮಾಡಿದಲ್ಲಿ ಪಂಚಭೂತಗಳ ಪೈಕಿ ತೇಜವೇ ಪ್ರಥಮದಲ್ಲುತ್ಪನ್ನವಾಯಿತೆಂತಲೂ, ಅದೇ ಎಲ್ಲಾ ತತ್ವಗಳ ರಕ್ಷಕವಾಗಿದ್ದು ಆ ತೇಜರೂಪವಾದ ಸೂರ್ಯನೇ ಆ ಪೃಥಿವ್ಯಾದಿಗಳನ್ನು ತನ್ನ ಆಕರ್ಷಣಶಕ್ತಿಯಿಂದ ಆಕಾಶದಲ್ಲಿ ತಡದಿರುವ (ಧರಿಸಿರುವ) ನೆಂತಲೂ ಅರ್ಥವಾಗುತ್ತಿದ್ದು ಯಾವ ಯುರೋಪ್ಯರು ಭಾರತೀಯರಿಗೆ ಪೂರ್ವದಲ್ಲಿ ಸೂರ್ಯನ ಆಕರ್ಷಣಶಕ್ತಿಯಿಂದ ಪೃಥಿವ್ಯಾದಿಗಳು ತಟಸ್ಥವಾಗಿರುವವೆಂಬ ವಿಚಾರವು ಗೊತ್ತಿದ್ದಿಲ್ಲವೆಂಬ ಆರೋಪವನ್ನು ಹೊರಿಸುವರೋ, ಆ ಆರೋಪವನ್ನು ನಿವೃತ್ತಿಗೊಳಿಸುವಂಥಾ ಪ್ರೌಢಮಂತ್ರಗಳು ಪಾಶ್ಚಾತ್ಯರ ಕೈಯೊಳಗೆ ಶಿಕ್ಕು ಹಾಗೂ ನಮ್ಮ ಈಚೀಕಡೆಯ ವೇದಾರ್ಥವನ್ನು ತಿಳಿಯದ ಪೌರಾಣಿಕ ಭಟಜಿಗಳು ಹಿರಣ್ಯಶಬ್ದದಮೇಲೆ ಅನುಮಾನಮಾಡಿ ಯಾವದಾದರೊಂದು ದೇವತೆಯ ಪೂಜಾರ್ಚನಕಾಲಗಳಲ್ಲಿ ಪರರಿಂದ ದಕ್ಷಿಣೆ (ದುಡ್ಡು) ಯನ್ನು ತೆಗೆದುಕೊಳ್ಳುವದಕ್ಕೆ ಈ ಮಂತ್ರವನ್ನು ಬಡಬಡಿಸಿ ದ್ರವ್ಯವನ್ನಪಹರಿಸಲುಪಯೋಗಿಸಿ ಈ ವೇದಮಂತ್ರಾರ್ಥದ ಗಾಂಭೀರ್ಯವನ್ನೇ ಕಳೆದುಬಿಟ್ಟು ವೇದವನ್ನು ದುರ್ಲೌಕಿಕಕ್ಕೀಡುಮಾಡಿರುವರು. ಆದರೆ ಈ ಅನರ್ಥಪರಂಪರೆಯು ತಪ್ಪಬೇಕಾದಲ್ಲಿ ಪ್ರತಿ ಒಬ್ಬ ಮನುಷ್ಯನೂ ವೇದಮಂತ್ರಗಳನ್ನು ಯಾವಾಗಲೂ ಮೂರು ಅರ್ಥಗಳಿಂದಲೇ ಪರಿಶೀಲನೆಮಾಡತಕ್ಕದ್ದು. ಇನ್ನು ಈ ಹಿರಣ್ಯಗರ್ಭಮಂತ್ರಕ್ಕೆ ಆಧ್ಯಾತ್ಮಿಕಾರ್ಥಪರವಿಚಾರಮಾಡಲು ಹಿರಣ್ಯವೆಂದರೆ ಪ್ರಕಾಶ, ಜ್ಞಾನವೆಂಬರ್ಥವನ್ನು ನಿಘಂಟುಕಾರರು ಹೇಳುತ್ತಿದ್ದು ಅದರಂತೆ ಜ್ಞಾನ, ಅಥವಾ ಪ್ರಕಾಶವೇ ಗರ್ಭದಲ್ಲುಳ್ಳಂಥಾ ವಸ್ತುವೆಂದರೆ ಪರಮಾತ್ಮನೆಂದು ವಾಚ್ಯವಾಗುತ್ತಿದ್ದು ಇಂಥಾ ಪರಮಾತ್ಮವಸ್ತುವೇ ಎಲ್ಲಾ ಭೂತಗಳಿಗೆ ಆದಿಯಾಗಿದ್ದು ಅದೇ ಎಲ್ಲವುಗಳ ಪಾಲಕವಾಗಿರುವದು, ಹಾಗೂ ಪೃಥ್ವೀ ಅಂತರಿಕ್ಷಗಳನ್ನೆಲ್ಲ ಅದೇ ಧರಿಸಿದ್ದು ಸರ್ವಕ್ಕೂ ನಿಯಾಮಕ ವಸ್ತುವಾದರೂ ಅದೇ ಆಗಿರುವದು, ಅಂದಮೇಲೆ ಅಂಥಾ ಪರಮಾತ್ಮವಸ್ತುವಿಗೆ ಹವಿರಾದಿಗಳಿಂದ ವಿಧಾನ ಮಾಡುವ (ಪೂಜಿಸೋಣ) ವೆಂಬ ಆತ್ಮವಾಚಕ ದಿವ್ಯಾರ್ಥವಾಗುತ್ತಿದ್ದು ಈ ಆತ್ಮವಾಚಕದಿಂದ ಅನಾದ್ಯನಂತ ಪರಮಾತ್ಮನನ್ನು ಬೋಧಿಸುವ ಮಂತ್ರಕ್ಕೆ ಮೋಕ್ಷಮೂಲರಂಥವರು ಹ್ಯಾಗೆ ಕಾಲನಿರ್ಣಯವನ್ನು ಮಾಡುವರೋ ಮಾಡಲಿ. ಯಾಕಂದರೆ, ಆತ್ಮವು ಅನಾದ್ಯನಂತವಾದ್ದರಿಂದ ತತ್ಪ್ರತಿಪಾದಕವಾದ ಜ್ಞಾನರೂಪ ಮಂತ್ರಗಳೂ ಪರಂಪರೆಯಿಂದ ಅನಾದ್ಯನಂತವೆಂಬುವಲ್ಲಿ ಯಾವ ಸಂಶಯವೂ ಬರಲಾರದು.

ಇನ್ನು ಈರೀತಿಯಾಗಿ ಜ್ಞಾನರೂಪವಾದ ವೇದವು ತ್ರಿಕಾಲ ಅಬಾಧಿತವಾದ್ದರಿಂದ “ತದ್ವಚನಾದಾಮ್ನಾಯಸ್ಯ ಪ್ರಾಮಾಣ್ಯಂ” ಎಂಬದಾಗಿ ಷಟ್‌ಪದಾರ್ಥಜ್ಞಾನವನ್ನು ಬಲ್ಲಂಥಾ ವೈಶೇಷಿಕಶಾಸ್ತ್ರಕಾರರು ವೇದಕ್ಕೆ ಮಹತ್ವವನ್ನು ಕೊಟ್ಟಿರುವರು. ಈರೀತಿಯಾಗಿ ಪೂರ್ವಕಾಲದಲ್ಲಿ ವೇದಗಳ ಅಧ್ಯಯನ ಅಧ್ಯಾಪನ ಕ್ರಿಯೆಗಳು ಸಾಂಗೋಪಾಂಗವಾಗಿ ಅವಾಹತನಡೆದು ಸರ್ವಥಾ ಜ್ಞಾನೋಲ್ಲಾಸದಿಂದ ಪ್ರಜೆಗಳು ಲೋಲಾಡುತ್ತಿದ್ದರು. ಆದರೆ ಸ್ಮೃತಿಪುರಾಣಗಳನ್ನು ರಚಿಸುವ ಮಧ್ಯಕಾಲದಲ್ಲಿ ಸ್ವಾರ್ಥಿಗಳಾದ ಬ್ರಾಹ್ಮಣರ ಉಪಟಳವು ಹೆಚ್ಚಾಗಿ ಈ ವೇದಾರ್ಥಗಳ ಆರ್ಷಪದ್ಧತಿಯ ಪರಂಪರೆಯು ತಗ್ಗಿಹೋಗಿ ಮೇಲೆ ತೋರಿಸಿದ ಹಾಗೂ ಮುಂದೆ ತೋರಿಸುವ ಅನರ್ಥಪರಂಪರೆಗೆ ಈಡಾಯಿತು. ಹ್ಯಾಗೆಂದರೆ, ಯಜುರ್ವೇದಕ್ಕೆ ಈಚೀಕಡೆಗೆ ಉವ್ವಟ, ಮಹೀಧರರೆಂಬೀರ್ವ ಬ್ರಾಹ್ಮಣಪಂಡಿತರುಗಳು ಮಂತ್ರಾರ್ಥಮಾಡುವ ಭಾಷ್ಯಕಾರರಾಗಿದ್ದು ಇವರ ಕಾಲಕ್ಕೆ ಪೌರಾಣಿಕಕಾಲದ ಢೋಂಗಲೀಲೆಯು ಹೆಚ್ಚಾಗಿದ್ದದ್ದರಿಂದ ಇವರು ಯಜುರ್ವೇದಕ್ಕೆ ಭಾಷ್ಯಬರೆದಿರುವದನ್ನು ನೋಡಿದರೆ ಎಂಥಾ ಮೂಢನೂ ಸಹ ನಿಂದ್ಯವೂ, ಹೇಯವೂ ಎನಿಸದಿರಲಾರದು. ಯಾಕೆಂದರೆ, ಯಜುರ್ವೇದದ 23 ನೇ ಅಧ್ಯಾಯದ 6 ನೇ ಮಂತ್ರದಿಂದ 44 ನೇ ಮಂತ್ರದವರೆಗೂ ಇರುವ ಈ ವೇದಮಂತ್ರಗಳು ಅಶ್ವಯಾಗಪರವಾಗಿರುವವೆಂಬ ಅರ್ಥವನ್ನು ಮಾಡಿಕೊಂಡು ಈ 23 ನೇ ಅಧ್ಯಾಯದ 18 ನೇ ಮಂತ್ರದಿಂದ 36 ನೇ ಮಂತ್ರದವರೆಗೂ ಸ್ತ್ರೀಯರವಿಷಯವಾಗಿ ಬರೆದಿರುವ ಅರ್ಥವು ಜಗತ್ತಿನಲ್ಲಿಯ ಯಾವ ನೀಚಾನುನೀಚರಿಂದಲೂ ಬರೆಯಲ್ಪಡಲು ಸಾಧ್ಯವಿಲ್ಲ. ಯಾಕೆಂದರೆ, ಈ ಯಾಗವನ್ನು ಮಾಡಿಸುವ ಯಜಮಾನನ ಎಲ್ಲಾ ಹೆಂಡಿರು ಒಬ್ಬರ ಮೇಲೊಬ್ಬರು ಮುಂದೆ ಬಿದ್ದು ಆ ಅಶ್ವಪ್ರದಕ್ಷಿಣೆಯನ್ನು ಮಾಡುತ್ತಾ ಈ ಅಶ್ವವು ನನ್ನನ್ನು ಭೋಗಕ್ಕೆ ಕರೆದುಕೊಳ್ಳುವದು, ನನ್ನನ್ನು ಭೋಗಕ್ಕೆ ಕರೆದುಕೊಳ್ಳುವದು ಎಂಬುವ ಆತುರವುಳ್ಳವರಾಗಿ ನಾಮುಂದೆ ತಾಮುಂದೆ ಎಂದು ಅಶ್ವದಸಂಗಡ ಭೋಗವನ್ನು ಮಾಡುವಕಾಲದ ಅನೇಕ ದುರ್ವಿಷಯಗಳನ್ನು ಮನಸ್ಸಿಗೆ ಹೇಯವೆನಿಸದೆ ವೇದದಂಥಾ ಪರಮಪವಿತ್ರಗ್ರಂಥದಲ್ಲಿ ಆ ಮಹೀಧರಾದಿ ಬ್ರಾಹ್ಮಣರಿಂದ ಬರೆಯಲು ಹ್ಯಾಗೆ ಕೈಬಂದಿತೋ ದೇವರೇಬಲ್ಲ! ಇನ್ನು ಅವರು ಬರೆದಿರುವ ಆ ಹೇಯವಾದ ವಿಷಯವನ್ನೆಲ್ಲ ಮುಂದಿನ ಲೇಖದಲ್ಲಿ ತೋರಿಸುವೆವು.

(ಸಶೇಷ.)

ಮೈಸೂರ. ವೀರಶೈವವಿದ್ಯಾಭಿವೃದ್ಧಿಫಂಡುಸಂಘ ಬೆಂಗಳೂರು.

ವಿಜ್ಞಾಪನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದ ಜನರಲ್ ಕಮಿಟಿಯ ವಾರ್ಷಿಕಮೀಟಿಂಗು 1926 ನೇ ಇಸವಿ ಜುಲೈ ತಾ॥ 11 ನೇ ಭಾನುವಾರ ಸಾಯಂಕಾಲ 4 ಗಂಟೆಗೆ ಸರಿಯಾಗಿ ಬೆಂಗಳೂರುಸಿಟಿ ಶೇಷಾದ್ರಿರೋಡಿನಲ್ಲಿರುವ ಶ್ರೀಜಗದ್ಗುರುಜಯದೇವ ವಿರಶೈವವಿದ್ಯಾರ್ಥಿನಿಲಯದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವದರಿಂದ ತಾವು ಆ ಕಾಲಕ್ಕೆ ದಯೆಮಾಡಿಸಬೇಕಾಗಿ ಪ್ರಾರ್ಥನೆ.

ಮೀಟಿಂಗಿನಲ್ಲಿ ಜರುಗತಕ್ಕ ವಿಷಯಗಳು.

1. ತಾ॥ 23-6-25 ರ ಲಾಗಾಯಿತು ತಾ॥ 30-6-26 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಕಾರ್ಯನಿರ್ವಾಹಕಸಂಘದ ಅಧ್ಯಕ್ಷರು ಮೊದಲಾಗಿ ಮೆಂಬರುಗಳ ಚುನಾವಣೆ.
4. ನೂತನವಾಗಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೈಸೂರುದೇಶದ ವೀರಶೈವ ಗ್ರಾಜ್ಯುಯೇಟುಗಳನ್ನು ಸಭೆಯಿಂದ ಅಭಿನಂದಿಸುವವಿಚಾರ.
5. ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರೂ ಸೆಕ್ರೆಟರಿಯವರಿಗೆ ತಿಳುಹಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ.)

ಎಂ. ನಾಗಪ್ಪ, ಅ॥ ಸೆಕ್ರೆಟರಿ.
ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ., ಆನರರಿ ಸೆಕ್ರೆಟರಿ

ನೋಟೀಸು.

ಹುಣಸೂರು ತಾಲ್ಲೋಕು ಬೆಟ್ಟದಪುರದ ಹೋಬಳಿ ನಂದೀಪುರಗ್ರಾಮದಲ್ಲಿರುವ ಮಾಯಾಚಾರಿ ಮಗ ಚನ್ನಯಾಚಾರಿಯಾದ ನಾನು ಈ ಮೂಲಕ ಸಮಸ್ತಜನಗಳಿಗೂ ತಿಳಿಯಪಡಿಸುವದೇನೆಂದರೆ—ನನಗೆ ಮನ್ವಾಚಾರಿ ಉರುಫ್ ತಮ್ಮಯ್ಯಾಚಾರಿ, ದಕ್ಷಿಣಾಚಾರಿ ಮತ್ತು ಮಾಯಾಚಾರಿ ಎಂಬದಾಗಿ ಮೂರುಜನ ಮಕ್ಕಳಿರುತ್ತಾರೆ. ಈ ಪೈಕಿ ಹಿರೀಮಗನಾದ ತಮ್ಮಯ್ಯಾಚಾರಿಯು ಮಾತ್ರ ಮೇಜರಾಗಿರುತ್ತಾನೆ. ಇವನಿಗೆ ನಾನೇ ಮುಂಚೆ ಮದುವೆ ಮಾಡಿರುತ್ತೇನೆ. ಬಾಕಿ ಇಬ್ಬರುಮಕ್ಕಳು ಮೈನರುಗಳು. ಈ ಹಿರೀಮಗನಾದ ತಮ್ಮಯ್ಯಾಚಾರಿಯು ಕೆಟ್ಟಜನರ ಸಹವಾಸದಿಂದ ಈಗ ಎರಡುವರ್ಷದಿಂದಲೂ ನನ್ನ ಮನೆಯನ್ನು ಬಿಟ್ಟು ಪೋಲಿಯಾಗಿ ಸಿಕ್ಕಿದಕಡೆ ತಿರುಗಿಕೊಂಡು ಇರುತ್ತಾನೆ. ಆದ್ದರಿಂದ ಇವನಿಗೆ ಯಾರಾದರೂ ಸಾಲಾ ವಗೈರೆ ಕೊಟ್ಟಿದ್ದಲ್ಲಿ ಅಥವಾ ಮುಂದೆ ಕೊಟ್ಟಲ್ಲಿ ನನ್ನ ಸ್ವಯಾರ್ಜಿತವಾದ ಮನೆ ಮತ್ತು ಜಮೀನುಗಳು ನನ್ನ ಹಕೋಟೆಯಲ್ಲಿಲ್ಲದೆ ಪೋಲಿಯಾಗಿ ತಿರುಗಿಕೊಂಡಿರುವ ಮನ್ವಾಚಾರಿ ಉರುಫ್ ತಮ್ಮಯ್ಯಾಚಾರಿ ಮಾಡಿದ ಸಾಲಕ್ಕೆ ಗುರಿಯಾಗುವುದಿಲ್ಲವೆಂದು ಇದರ ಮೂಲಕ ತಿಳಿಸಿದೆ.

3 ನಂದೀಪುರದ ಚನ್ನಯಾಚಾರಿ ರುಜು.

೧೯೨೬ ನೆಯ ಇಸವಿ ಜೂನ್ ತಾ॥ ೨೬ರಿಂದ ೧೯೨೬ ನೆಯ ಇಸವಿ ಜುಲೈ ತಾ॥ ೨ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಜ್ಯೇಷ್ಠ ಬಹುಳ ಪಾಡ್ಯಮಿಯಿಂದ ಜ್ಯೇಷ್ಠ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
26	ಶನಿ	ಪಾಡ್ಯ	47-23	ಮೂಲ	3-52	13
27	ಭಾನು	ಬಿದಿ	42-17	ಪೂಷಾ	1-24	14
28	¹ಸೋಮ	ತದಿ	36-36	ಶ್ರವ	54-42	15
29	ಮಂಗಳ	ಚೌತಿ	30-32	ಧನಿ	50-33	16
30	ಬುಧ	ಪಂಚ	24-17	ಶತ	46-13	17
1	ಗುರು	ಷಷ್ಠಿ	18-7	ಪೂಭಾ	42-5	18
2	²ಶುಕ್ರ	ಸಪ್ತ	12-7	ಉಭಾ	38-13	19

(1) ಮಳೆನಕ್ಷತ್ರ-ಆರ್ದ್ರಾ ೩ ನೆಯಪಾದ, ಸಂಕಷ್ಟಚತುರ್ಥಿ. (2) ಮಳೆನಕ್ಷತ್ರ-ಆರ್ದ್ರಾ ೪ ನೆಯಪಾದ.

ಮೈಸೂರು: ಕೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

REGISTERED NO. M. 124.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಪಿಕೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮುಕಲಾಲೋಲಂಸುಧೀಪುಂಗವ | ಸ್ತೋತ್ರಾಮಾಭೀಷ್ಟದಶೀಲ ನಾಕಲಿತ ಸಾಧ್ಗ್ರಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತಿಳೆಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೇಯ ಇಸವಿ ಜುಲೈ ತಾರೀಖು ೩ ನೇಯ ಶನಿವಾರ. [ಸಂಚಿಕೆ ೨೭

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇವಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆಂಜಾ ಕ್ಷೀಣಜ್ವರ

SREE SITHARAGHAVA VAIDYASALA

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

25

ಗರ್ಭಿಣೀಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-9-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡಪತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದು, ಇದರ ಸಂಪಾದಕರು ರಾ॥ ಸಾ॥ ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—3] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಪಂಚಾಚಾರ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕಾಷ್ಟಾವರಣ ಮಂಜರಿ	೦—೮—೦	೦—೧೩—೦
[illegible]	೧—೦—೦	೧—೬—೦
[illegible] ಶಾಸ್ತ್ರಿಗಳಿಂದ ರಚಿತವಾದ ಕನ್ನಡ [illegible]	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—37] ಪ್ರೋ. ಬಾ. ೫೦. ಮದರಾಸು

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[12-11] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

23 ನೆಯ ಪ್ರಕರಣ.

ನನ್ನ ಅಸಹಾಯಸ್ಥಿತಿ.

ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಪಟ್ಟವ (ಡಿಗ್ರಿಯ) ನ್ನು ಹೊಂದುವುದು ಸುಲಭವಾದರೂ ನ್ಯಾಯವಾಗಿ ಕೆಲಸಮಾಡುವುದು ಬಹಳ ಕಷ್ಟವು. ನಾನು ನ್ಯಾಯಶಾಸ್ತ್ರವನ್ನು ಓದಿದೆನೇ ಹೊರತು ಹೇಗೆ ವಾದಿಸಬೇಕೆಂಬುದನ್ನು ಕಲಿಯಲಿಲ್ಲ. ನ್ಯಾಯಸೂತ್ರಗಳನ್ನು ಶ್ರದ್ಧೆಯಿಂದ ತಿಳಿದುಕೊಂಡೆನಾದರೂ ಅವುಗಳನ್ನು ಪ್ರಯೋಗಿಸುವ ಪದ್ಧತಿಯನ್ನು ತಿಳಿದುಕೊಳ್ಳಲಿಲ್ಲವು. “ಇತರರ ಸೊತ್ತಿಗೆ ನಷ್ಟವುಂಟಾಗದ ಬಗೆಯಿಂದ ನಿನ್ನ ಸೊತ್ತನ್ನುಪಯೋಗಿಸಬೇಕು” ಎಂಬುದು ಆ ನ್ಯಾಯಸೂತ್ರಗಳಲ್ಲೊಂದಾಗಿದೆ. ಆದರೆ ಈ ಸೂತ್ರವನ್ನು ಕಕ್ಷಿಗಾರನ ಪ್ರಯೋಜನಕ್ಕಾಗಿ ಹೇಗೆ ಉಪಯೋಗಿಸಬೇಕೆಂಬುದು ನನಗೆ ತಿಳಿದಿರಲಿಲ್ಲವು. ಈ ವಿಷಯವನ್ನು ಅನೇಕ ದಾವಾಗಳ ಸಂಬಂಧದಲ್ಲಿ ಓದಿದೆನಾದರೂ [illegible] ಅವಕಾಶವು ಸಿಕ್ಕಲಿಲ್ಲವು. ಭಾರತದೇಶದ ನ್ಯಾಯಶಾಸ್ತ್ರವನ್ನು ಕುರಿತು ನಾನು ಏನನ್ನೂ ಓದಿರಲಿಲ್ಲವು. ಹಿಂದುಮಹಮ್ಮದೀಯ ನ್ಯಾಯಶಾಸ್ತ್ರಗಳ ಸಂಗತಿಯೇನೂ ನನಗೆ ತಿಳಿದಿರಲಿಲ್ಲ. ದಾವಾ ಅರ್ಜಿಯನ್ನು ಬರೆಯುವ ಪದ್ಧತಿಯು ಸಹ ನನಗೆ ಗೊತ್ತಿರಲಿಲ್ಲವು. ಸರ್ ಫಿರೋಜ್‌ಷಾ ಮೆಹತಾಯವರು ನ್ಯಾಯಸ್ಥಾನದ (ಕೋರ್ಟಿನ) ಲ್ಲಿ ಸಿಂಹದಂತೆ ಗರ್ಜಿಸುತ್ತಿದ್ದರೆಂದು ನಾನು ಕೇಳಿದ್ದೆನು. ಆ ನೈಪುಣ್ಯವನ್ನು ಅವರು ಆಂಗ್ಲದೇಶದಲ್ಲಿ ಹೇಗೆ ಹೊಂದಿದರೋ ನನಗೆ ತಿಳಿಯದು. ಅದರಂತೆ ನಾನು ಎಂದಿಗೂ ಸುಪ್ರಸಿದ್ಧ ನ್ಯಾಯವಾದಿ ಆಗಲಾರನೆಂಬುದು ನಿಶ್ಚಯವಾಗಿದ್ದರೂ ಹೊಟ್ಟೆಸಾಕಿಕೊಳ್ಳಲು ತಕ್ಕಷ್ಟು ಮಾತ್ರವಾದರೂ ಸಂಪಾದಿಸುವೆನೆ? ಎಂಬ ಸಂಶಯವು ಕೂಡ ನನ್ನನ್ನು ಬಾಧಿಸುತ್ತಿದ್ದಿತು. ನಾನು ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡುತ್ತಿದ್ದಾಗಲೇ ನನಗೆ ಸಂಶಯವುಂಟಾಯಿತು. ಕೆಲ ಮಂದಿ ಸ್ನೇಹಿತರಿಗೆ ತಿಳಿಸಿದೆನು. ದಾದಾಭಾಯಿ ನೌರೋಜಿಯವರ ಸಲಹೆಯನ್ನು ತೆಗೆದುಕೊಳ್ಳಬೇಕೆಂದು ಒಬ್ಬ ಸ್ನೇಹಿತನು ಸೂಚಿಸಿದನು. ನಾನು ಆಂಗ್ಲದೇಶಕ್ಕೆ ಹೋದಾಗ್ಗ ದಾದಾಭಾಯಿಯವರಿಗೂ ಕೂಡ ಒಂದು ಶಿಫಾರ್ಸು ಕಾಗದವನ್ನು ತೆಗೆದುಕೊಂಡು ಹೋಗಿದ್ದೆನು. ಅಂತಹ ದೊಡ್ಡವರನ್ನು ನೋಡಲು ನನಗೆ ಅರ್ಹತೆಯಿಲ್ಲವೆಂದು ತಿಳಿದುಕೊಂಡಿದ್ದೆನು. ಅವರು ಉಪನ್ಯಾಸಮಾಡುತ್ತಾರೆಂದು ಪ್ರಕಟವಾದಾಗಲೆಲ್ಲಾ ನಾನು ಹೋಗಿ ಒಂದು ಮೂಲೆಯಲ್ಲಿ ಕುಳಿತುಕೊಂಡು ಕೇಳಿ ಬರುತ್ತಿದ್ದೆನು. ವಿದ್ಯಾರ್ಥಿಗಳ ಪರಿಚಯವನ್ನು ಬಹಳವಾಗಿಮಾಡಿಕೊಳ್ಳಲು ದಾದಾಭಾಯಿಯವರು ಒಂದು ಸಂಘವನ್ನೇರ್ಪಡಿಸಿದ್ದರು. ನಾನು ಆ ಸಂಘದ ಸಭೆಗೆ ಹೋಗಿದ್ದೆನು. ದಾದಾಭಾಯಿಯವರಿಗೆ ವಿದ್ಯಾರ್ಥಿಗಳಮೇಲಿದ್ದ ವಾತ್ಸಲ್ಯವನ್ನೂ, ವಿದ್ಯಾರ್ಥಿಗಳಿಗೆ ಅವರಮೇಲಿದ್ದ ಭಕ್ತಿಯನ್ನೂ ನೋಡಿ ನನಗೆ ಬಹಳ ಸಂತೋಷವಾಯಿತು. ಕಾಲಕ್ರಮೇಣ ನನಗೆ ಧೈರ್ಯವು ಬಂದಮೇಲೆ ಒಂದುದಿವಸ ದಾದಾಭಾಯಿಯವರ ದರ್ಶನಕ್ಕೆ ಹೋಗಿದ್ದು ನಾನು ತಂದಿದ್ದ ಶಿಫಾರ್ಸು ಕಾಗದವನ್ನು ಕೊಟ್ಟೆನು. “ನಿನಗಿಷ್ಟ ಬಂದಾಗಲೆಲ್ಲಾ ಬಂದು ನೋಡಬಹುದು” ಎಂದು ಅವರು ಉತ್ತರವನ್ನು ಕೊಟ್ಟರು. ಆದರೆ ನಾನು ಹೋಗಲಿಲ್ಲವು. ಸ್ವಲ್ಪ ವಿಷಯಕ್ಕಾಗಿ ಅವರಿಗೆ ತೊಂದರೆ ಕೊಡಕೂಡದೆಂದು ಯೋಚಿಸಿದೆನು. ಆದುದರಿಂದ ಅವರಲ್ಲಿಗೆ ನಾನು ಹೋಗಲಿಲ್ಲವು. ಫ್ರೆಡ್ರಿಕ್‌ಪಿನ್ಕಟ್‌ರವರಲ್ಲಿಗಾದರೂ ಹೋಗಬೇಕೆಂದು ಮತ್ತೊಬ್ಬ ಸ್ನೇಹಿತನು ಹೇಳಿದನು. ಅವರು ಪೂರ್ವಾಚಾರಪರಾಯಣ (ಕನ್ಸರ್ವೇಟಿವ್) ಪಕ್ಷದವರಾದರೂ ಭಾರತೀಯ ವಿದ್ಯಾರ್ಥಿಗಳಮೇಲೆ ಅಕುಟಿಲವಾದ ವಿಶ್ವಾಸವನ್ನಿಟ್ಟಿದ್ದರು. ಅವರ ಪ್ರೀತಿಯು ಸ್ವಾರ್ಥವಿರಹಿತವಾಗಿದ್ದುದರಿಂದ ಅನೇಕ ವಿದ್ಯಾರ್ಥಿಗಳು ಅವರ ಸಲಹೆಯನ್ನು ತೆಗೆದುಕೊಳ್ಳುತ್ತಿದ್ದರು. ನಾನು ದರ್ಶನಾರ್ಥವಾಗಿ ಬರೆದಿರಲು ಅವರಂಗೀಕರಿಸಿದರು. ಅವರ ಸಂದರ್ಶನವನ್ನು ಮರೆಯುವಂತಿಲ್ಲ. ಅವರು ಬಹಳ ವಿಶ್ವಾಸದಿಂದ ಮಾತನಾಡಿದರು; ನನ್ನ ಭೀತಿಯೆಲ್ಲವನ್ನೂ ಹೋಗಲಾಡಿಸಿದರು. “ಎಲ್ಲರೂ ಫಿರೋಜ್‌ಷಾಮೆಹತಾರವರಂತೆಯೇ ಆಗುವರೆ? ಮೆಹತಾಬದರುದ್ದೀನ್‌ರವರಂತಹವರು ಬಹಳ ವಿರಳರಾಗಿರುವರು. ನ್ಯಾಯವಾದಿಯಾಗಿ ಕೆಲಸಮಾಡುವುದಕ್ಕಿಂತ ವಿಪರೀತ ಕಷ್ಟವು ಬೇರೊಂದಿಲ್ಲವು. ನ್ಯಾಯದಿಂದಲೂ ಶ್ರದ್ಧೆಯಿಂದಲೂ ಕೆಲಸಮಾಡಿದಲ್ಲಿ ಮಾತ್ರ ದ್ರವ್ಯಾರ್ಜನೆಮಾಡಲವಕಾಶವಾಗುವುದು. ಎಲ್ಲಾ ದಾವಾಗಳೂ ಕ್ರಮವಾಗಿರುವುದಿಲ್ಲ. ನಿನಗಿರುವ ಸಾಧಾರಣ ಗ್ರಂಥಪರಿಚಯವನ್ನು ತಿಳಿಯಲಪೇಕ್ಷಿಸುತ್ತೇನೆ” ಎಂದು ಪಿನ್ಕಟ್‌ರವರು ಹೇಳಿದರು. ನನಗಿರತಕ್ಕ ಗ್ರಂಥಪರಿಚಯವನ್ನು ಹೇಳಿದೆನು. ಅವರಿಗೆ ಮೊದಲು ಸಂಶಯವುಂಟಾಗಿ “ನಿನಗಿರುವ ಅನುಮಾನವು ನನಗೆ ತಿಳಿಯಿತು. ನಿನಗಿರುವ ಗ್ರಂಥಪರಿಚಯವು ಅತ್ಯಂತ ಕಡಮೆ. ಪ್ರಪಂಚಜ್ಞಾನವು ಸಾಲದು. ಭಾರತದೇಶಚರಿತ್ರೆಯು ಸಹ ನಿನಗೆ ಗೊತ್ತಿಲ್ಲ. ನ್ಯಾಯವಾದಿ ಮಾನವಸ್ವಭಾವವನ್ನು ಚೆನ್ನಾಗಿ ಗ್ರಹಿಸಿಕೊಂಡಿರಬೇಕು. ಮನುಷ್ಯನ ಮುಖವನ್ನು ನೋಡುತ್ತಲೆ ಅವನ ಸ್ವಭಾವವನ್ನು ತಿಳಿದುಕೊಳ್ಳಬೇಕು. ಭಾರತೀಯರೆಲ್ಲರೂ ಭಾರತದೇಶಚರಿತ್ರೆಯನ್ನು ತಿಳಿದುಕೊಂಡಿರಬೇಕು. ಅದಕ್ಕೂ ನ್ಯಾಯವಾದಿವೃತ್ತಿಗೂ ಸಂಬಂಧವಿಲ್ಲದಿದ್ದರೂ ನಿನಗೆ ಭಾರತದೇಶಚರಿತ್ರೆಯು ತಿಳಿದಿರುವುದು ಅಗತ್ಯವು. 1857 ರಲ್ಲಿ ನಡೆದ ವಿಪ್ಲವವನ್ನು ಕುರಿತು ಕೇಯ್‌ರವರೂ ಮಲ್ಲಿಸನ್‌ರವರೂ ಒಟ್ಟುಗೂಡಿ ಬರೆದಿರುವ ಚರಿತ್ರೆಯೂ ನಿನಗೆ ತಿಳಿಯದು. ಆ ಚರಿತ್ರೆಯನ್ನೂ, ಫಿಜಿಯಾಗ್ನಮಿಯಮೇಲೆ ಲಾವಟರು-ಷಿಮ್ಮೆಲ್ಪೆನ್ನಿಕ್‌ರವರು ಬರೆದಿರುವ ಎರಡು ಪುಸ್ತಕಗಳನ್ನೂ ನೀನು ಓದಬೇಕು” ಎಂದು ಪಿನ್ಕಟ್‌ರವರು ತಿಳಿಸಿದರು. ನಾನು ಆ ಪೂಜ್ಯರಿಗೆ ಬಹಳವಾಗಿ ಕೃತಜ್ಞನಾಗಿರುವೆನು. ಅವರಿದಿರಿಗಿರುವವರೆಗೂ ಧೈರ್ಯವಿಂದಿದ್ದೆನು. ಆದರೆ ಅಲ್ಲಿಂದ ಹೊರಟಕೂಡಲೆ ಪುನಃ ಮನಸ್ಸಿಗೆ ಯೋಚನೆ ಹುಟ್ಟಿತು. ಮಾರನೆಯದಿನ ಲಾವಟರವರು ಬರೆದಿದ್ದ ಪುಸ್ತಕವನ್ನು ಕೊಂಡುಕೊಂಡೆನು. ಷಿಮ್ಮೆಯವರು ಬರೆದ ಪುಸ್ತಕವು ಆ ಅಂಗಡಿಯಲ್ಲಿ ದೊರಕಲಿಲ್ಲವು. ಲಾವಟರವರ ಪುಸ್ತಕವು ಸ್ನೆಲರ್ರವರ ಟೆಕ್ಸ್ಟ್‌ಪುಸ್ತಕಕ್ಕಿಂತ ಕಠಿಣವಾಗಿದ್ದಿತಲ್ಲದೆ ಆಕರ್ಷಕವಾಗಿರಲಿಲ್ಲವು. ಷೇಕ್ಸ್‌ಪಿಯರು ಬರೆದ ಫಿಜಿಯಾಗ್ನಮಿಯನ್ನೋದಿದೆನು. ಷೇಕ್ಸ್‌ಪೀಯರು ಲಂಡನ್ನಿನ ಬೀದಿಯಲ್ಲಿ ತಿರುಗುತ್ತಿದ್ದುದನ್ನು ಕುರಿತು ವಿಚಾರಿಸದೆ ಹೋದೆನು. ಲಾವಟರ ಪುಸ್ತಕದಿಂದ ಹೆಚ್ಚು ಜ್ಞಾನವೇನೂ ಉಂಟಾಗಲಿಲ್ಲವು. ಪಿನ್ಕಟ್‌ರವರ ಸೂಚನೆಯಿಂದ ವ್ಯಾವಹಾರಿಕದಲ್ಲಿ ಹೆಚ್ಚು ಪ್ರಯೋಜನವಾಗಲಿಲ್ಲವು. ಆದರೂ ಅವರ ಪ್ರೇಮವು ನನಗೆ ಬಹಳವಾಗಿ ವ್ಯಕ್ತವಾಯಿತು. ಅಕಳಂಕರಾದ ಅವರ ನಗೆಮೊಗವು ನನ್ನ ಕಣ್ಣಿಗೆ ಕಟ್ಟಿದಂತಿದೆ. “ಅಕ್ರಮವಿಲ್ಲದೆ ಶ್ರದ್ಧೆಯಿಂದ ಕೆಲಸಮಾಡಿದರೆ ಸಾಕು. ಮೆಹತಾರವರಿಗಿದ್ದಂತಹ ಪಾಂಡಿತ್ಯವು ಅವಶ್ಯವಿಲ್ಲವು.” ಎಂದು ಅವರು ಹೇಳಿದ ಬುದ್ಧಿವಾದದಂತೆ ನನಗೆ ಬಹಳಮಟ್ಟಿಗೆ ಧೈರ್ಯಬಂದಿರುತ್ತೆ. ನಾನು ದಕ್ಷಿಣಾಫ್ರಿಕೆಗೆ ಹೋದಮೇಲೆ ಕೇಯ್‌ರವರೂ ಮಲ್ಲಿಸನ್‌ರವರೂ ಒಟ್ಟುಗೂಡಿ ಬರೆದ ಪುಸ್ತಕವನ್ನು ಓದಿದೆನು. [illegible] ಮನಸ್ಸಿನಿಂದ ಅಸಾಂ ಎಂಬ ಹಡಗಿನಲ್ಲಿ ಬೊಂಬಾಯಿ [illegible] ಸೇರಿದೆನು. ಸಮುದ್ರವು [illegible] ಪ್ರಯಾಣಮಾಡಿದೆನು.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜುಲೈ ತಾ॥ ೩ ನೆಯ ಶನಿವಾರ.

THE LEGISLATIVE COUNCIL.

The budget session of the Legislative Council, which was held for the first time at Mysore came to a termination on the 1st July 1926, after an arduous sitting for 8 days. It was in many ways a very interesting session. The utmost latitude was given to the members to criticise administration and departments, in fact, criticism was welcomed by the Government. It was a departure for which the public have to be thankful to the President and we have no doubt that that accounts largely to the freedom with which the cut motions were discussed. The members were not slow in taking advantage of this privilege which was used with care and dignity. The departmental heads had no doubt to be very vigilent and their explanations, though in some respects were not quite so satisfactory were on the whole iuforming and convincing. For instance, the token motion to reduce the grant under Land Revenue was brought forward by Mr. D. S. Mallappa with a view to bring to the notice of Government the necessity for the representation of the backward communities in Public Service and the working of the Miller Committee Report. It surely cannot be said that in this department so fully affecting the interests of ryots, the Government had done all that it could in making appointments from members of the backward communities. We may urge very strongly the need for some time to come of increasing the number of revenue probationers in preference to appointments by promotion which was only another way of perpetuating the existing state of affairs. The Vokkaligars and the Lingayets formed the bulk of the agricultural and industrial population. But how many of the Amildars and Sub-Division Officers belonged to these two communities? It was ridiculously low. The Revenue Commissioner no doubt said that the Miller Committee Report was kept in view, but as we have already said the perceptability of it is the thing which we were not sure of. The Excise policy came for a good deal of what we think a legitimate criticism. It is time that the Government should take a more progressive policy and seek introduction of local option at least, with a view to establish total prohibition in the near future. The difficulty in the way effecting the reform arises from the fact that those who have the shaping of the destiny in their hands are themselves diffident about the success of even making a beginning in the direction and seem to think that it is impossible to make up the likely losses that might arise in consequence. We should, however, remember that the not inappreciable revenue from Excise is mostly derived from the poor by playing on their weakness, and that it would be more equitable to transfer this burden on to the shoulders of the more well-to-do. In many ways, Mysore is setting examples to the rest of India, and would it not be one of the proudest achievements for Mysore if it were to initiate measures for doing away with this revenue. It was also well on the part of Mr. Chandrashekariah to have brought forward to the notice of Government the need for proper arrangements for the next elections. We have had occasion to show that our first experience during the last elections was not very pleasing. The preparation of the lists of voters and the arrangements for polling demand the special attention of Government. The statement of the Government that the Botanical gardens at Lalbagh would be kept open till 9 p. m. and provision for lights made came somewhat as a surprise, especialy in view of the fact that Goverment had orginaly thought that even 8 p.m. to be too late an hour for keeping open Lalbagh. It would not be surprising if the quiet and peace of the gardens were to be considerably disturbed by the new arrangement. **Criticism of the Forest Department raised a spirited defence by the Conservator of Forests whose speech disclosed that though sympathy was not wanted there was room for popularising the facilities provided by the Department to the public who were not utilising them at present to the full.** The grievance over the working of the Incometax Department was to some extent real, and the appeal courts have a tendency to stick too much to technicalities and refusing to interfere with the somewhat arbitrary lives made by the taxing officers. The Police Department came for a good bit of criticism, especialy from the point of view of appointments and transfers in which there has been shown no particular anxiety to follow the spirit or the letter of the Miller Committee Report. We should say the deliberations were very lively and instructive and we should congratulate the Dewan on the successful terminaton of the first session over which he presided.

ಇದು ವೃದ್ಧಪಿತಾಮಹತ್ವದ ಲಕ್ಷಣವೋ?

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರಾದ ಮಿ॥ ಟಿ. ಎಸ್. ಅಲ್ಲಿಖಾನರವರು ತಮ್ಮ ಅಧಿಕಾರಬಲದಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆಂದು ಮೊದಲಾಗಿ ಸಂಪದಭ್ಯುದಯಪತ್ರಿಕೆಯಲ್ಲಿ "ಟಿಪ್ಪುಸುಲ್ತಾನರ ಹಾವಳಿ" ಎಂಬ ಶೀರ್ಷಿಕದಿಂದ ಬರೆಯಲ್ಪಟ್ಟಿದ್ದ ಲೇಖವು ತಮಗೆ ಬಹಳ ಅವಮಾನಕರವೂ ಖೇದಜನಕವೂ ಆಗಿರುವುದಾದುದರಿಂದ ಆ ಪತ್ರಿಕೆಯ ಪ್ರೊಪ್ರೈಟರಾದ ಮ॥ ಎಂ. ವೆಂಕಟಕೃಷ್ಣಯ್ಯನವರನ್ನೂ; ಸಂಪಾದಕರು, ಪ್ರಕಾಶಕರು ಮತ್ತು ಮುದ್ರಾಪಕರು ಆದ ಮ॥ ಎಂ. ಎಸ್. ಲಕ್ಷ್ಮಣರಾಯರನ್ನೂ ಇಂಡಿಯನ್ ಪಿನಲ್ ಕೋಡು 500 ನೇ ಶೆಕ್ಷನ್ ಪ್ರಕಾರ ವಿಚಾರಣೆ ಮಾಡಿ ಶಿಕ್ಷಿಸಬೇಕೆಂದು ಮಿ॥ ಅಲ್ಲಿಖಾನರವರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದರು. ಸಂಪದಭ್ಯುದಯಪತ್ರಿಕೆಯ ಪ್ರೊಪ್ರೈಟರಾಗಿದ್ದು ಅದರ ಆಯವ್ಯಯವನ್ನು ಮಾತ್ರ ನೋಡಿಕೊಳ್ಳುವುದರವಿನಾ ಅದರಲ್ಲಿ ಪ್ರಕಟವಾಗುವ ಲೇಖಗಳಿಗೆ ಸಂಪಾದಕರಾದ ಎರಡನೆಯ ಅಪರಾಧಿಯು ಉತ್ತರವಾದಿಯಲ್ಲದೆ ತಾವಲ್ಲವೆಂದು ಮ॥ ವೆಂಕಟಕೃಷ್ಣಯ್ಯನವರು ವಾದಿಸಿ ದೋಷಾರೋಪಣೆಗೆ ಗುರಿಯಾಗದೆ ತಪ್ಪಿಸಿಕೊಂಡುಬಿಟ್ಟರು, ಆದರೆ 'ಎರಡನೆಯಪರಾಧಿ ಮ॥ ಲಕ್ಷ್ಮಣರಾಯರು ಮಾತ್ರ ಟಿಪ್ಪುಸುಲ್ತಾನರ ಹಾವಳಿ ಎಂಬ ಲೇಖದಲ್ಲಿ ಬರೆದಿದ್ದಂಶವು ನಿರ್ದೋಷವಾದುದೆಂದು ಸಾಧಿಸಲಸಮರ್ಥರಾಗಿ 250 ರೂಪಾಯಿಗಳ ಅರ್ಥದಂಡಕ್ಕೆ ಗುರಿಯಾದರು.

ಒಂದನೆಯಪರಾಧಿ ಮ॥ ವೆಂಕಟಕೃಷ್ಣಯ್ಯನವರಮೇಲಿನ ದೋಷಾರೋಪಣೆಯು ಸ್ಥಿರಪಡದಿದ್ದುದರಿಂದ ಅವರು ಬಿಡಲ್ಪಟ್ಟುದೂ, ಎರಡನೆಯಪರಾಧಿ ಮ॥ ಲಕ್ಷ್ಮಣರಾಯರಮೇಲಿನ ದೋಷಾರೋಪಣೆ ಸ್ಥಿರಪಟ್ಟು ಅವರು ಶಿಕ್ಷಿಸಲ್ಪಟ್ಟುದೂ ಆಶ್ಚರ್ಯಕರವೇನೂ ಅಲ್ಲವು. ಆದರೆ ಪುರಾತನಪತ್ರಿಕಾಲೇಖಕರೆಂದು ಲೋಕಕ್ಕೇ ತಿಳಿದಿರುವುದಾದರೂ, ತಮ್ಮ ಮಾಯಾಜಾಲಕ್ಕೆ ವಶರಾಗಿ ತಮ್ಮನ್ನು ಪುರಸ್ಕರಿಸದಿರುವ ಸರ್ಕಾರಿಯ ಅಧಿಕಾರಿಗಳನ್ನೂ, ಸಾಧುಸಜ್ಜನರನ್ನೂ ವಾಚಾಮಗೋಚರವಾಗಿ ನಿಂದಿಸಿ ಖಂಡಿಸಿ ಹಗೆಯನ್ನು ತೀರಿಸಿಕೊಳ್ಳುವುದನ್ನು ತಮ್ಮ ಮುಖ್ಯಧ್ಯೇಯವನ್ನಾಗುಳ್ಳವರಾದುದರಿಂದ, "ಕಳ್ಳನ ಹೆಂಡಿತಿ ಎಂದಿದ್ದರೂ ಮುಂಡೆ" ಎಂಬ ಗಾಥೆಯನ್ನು ಮ॥ ವೆಂಕಟಕೃಷ್ಣಯ್ಯನವರು ಚೆನ್ನಾಗರಿತು ಅನ್ಯರನ್ನು ನೆಪಮಾತ್ರಕ್ಕೆ ಸಂಪಾದಕರನ್ನಾಗಿ ನಿಲ್ಲಿಸಿ ತಾವು ತಮ್ಮ ಹಗೆಗಳ ಮೇಲೆ ಅಭಿಯೋಗಮಾಡುತ್ತಿರುವುದು ಅವರ ಸತ್ಯಸಂಧತೆಯ ಪ್ರಥಮಪಾದವಾಗಿದೆ.

ಸಂಪದಭ್ಯುದಯಪತ್ರಿಕೆಯೊಂದು ಮಾತ್ರವಲ್ಲದೆ ಸಾಧ್ವಿ ಮತ್ತು ವೆಲ್ತ್ ಆಫ್ ಮೈಸೂರು ಪತ್ರಿಕೆಗಳಿಗೂ ಸಂಪಾದಕರಾಗಿರುವ ಮ॥ ಎಂ. ಎಸ್. ಲಕ್ಷ್ಮಣರಾಯರು ಮ॥ ವೆಂಕಟಕೃಷ್ಣಯ್ಯನವರ ಈಗಿನ ಶ್ರೀಕೃಷ್ಣರಾಜವಾಣೀವಿಲಾಸನಾಮಾಂಕಿತಮುದ್ರಾಲಯದಲ್ಲಿ ಪ್ರಥಮತಃ ಅಕ್ಷರಸಂಯೋಜಕರಾಗಿ ಸೇರಿ ಆ ಕೆಲಸದೊಡನೆ ಮುದ್ರಾಶಾಲೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿರುವರು. ಇವರ ಆಂಗ್ಲ ಕನ್ನಡ ಭಾಷಾಪಾಂಡಿತ್ಯವೂ, ಪತ್ರಿಕಾಸಂಪಾದಕೀಯಪರಿಚಯವೂ ಎಷ್ಟರಮಟ್ಟಿಗಿರುವುದೆಂಬುದು ಇವರನ್ನು ಕಂಡುಕೇಳಿದವರಿಗೆಲ್ಲ ಗೊತ್ತಿರುವುದಲ್ಲದೆ, ಮೈಸೂರುಡಿವಿಜನ್ ಪೊಲೀಸ್ ಸೂಪರಿಂಟೆಂಡೆಂಟ್ ಮ॥ ಕೆ. ಸಿದ್ಧರಾಮಪ್ಪನವರು ರಾಜಧಾನಿಯ ಅಡ್ವೊಕೇಟ್ ಮ॥ ಪಿರ್ಲೆ ಸುಬ್ಬರಾಯರಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ಮಾನನಷ್ಟದ ವಿವಾದದಲ್ಲಿ ಎಂ. ಎಸ್. ಲಕ್ಷ್ಮಣರಾಯರು ಫಿರ್ಯಾದಿಪರ ನುಡಿದಿರುವ ಸಾಕ್ಷಿಯಿಂದ ವ್ಯಕ್ತವಾಗುತ್ತದೆ. ಈ ಪಾಪದ ಗಂಧವನ್ನೇ ಅರಿಯದ ಮ॥ ಲಕ್ಷ್ಮಣರಾಯರು ಅಪರಾಧವನ್ನು ತಮ್ಮ ತಲೆಯಮೇಲೆ ಹೊತ್ತುಕೊಂಡಿರುವುದು ಅವರ ಸ್ವಾಮಿಭಕ್ತಿಯನ್ನು ಪ್ರದರ್ಶಿಸುವುದರಲ್ಲಿ ಸಂದೇಹವಿಲ್ಲ, ಆದರೆ ಲೋಕೋಪಕಾರಕ್ಕಾಗಿಯೇ ಜನ್ಮಧಾರಣೆ ಮಾಡಿರುತ್ತೇವೆಂದು ಹೇಳಿಕೊಂಡು "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದಾಂಕನದಿಂದ "ವೃದ್ಧಪಿತಾಮಹ"ರೆಂದು ತಮ್ಮ ಕೂಟದವರಿಂದ ಹೊಗಳಿಸಿಕೊಳ್ಳುತ್ತ ಲೋಕವನ್ನು ವಂಚಿಸುತ್ತಿರುವ ಮ॥ ಎಂ. ವೆಂಕಟಕೃಷ್ಣಯ್ಯನವರು ಗೇಣುದ್ದ ಹೊಟ್ಟೆಯಪಾಡಿಗಾಗಿ ಬಾಲ್ಯಾರಭ್ಯ ತಮ್ಮ ಆಶ್ರಯವನ್ನು ಹೊಕ್ಕಿರುವ ಆ ನಿರಪರಾಧಿ ಲಕ್ಷ್ಮಣರಾಯರನ್ನು ಶಿಕ್ಷೆಗೆ ಗುರಿಮಾಡಿದುದು "ಅನ್ಯರಮಕ್ಕಳನ್ನು ಬಾವಿಗೆತಳ್ಳಿ ಆಳವನ್ನು ನೋಡಿದಂತೆ" ಎಂಬ ಗಾಥೆಗೆ ಅನುಸಾರವಾಗಿರುತ್ತದೆ. ಇದು ವೃದ್ಧಪಿತಾಮಹತ್ವದ ಲಕ್ಷಣವೋ? ನುಡಿದಂತೆ ನಡೆದು ತನ್ನ ದೇಶಹಿತಾರ್ಥಕ್ಕಾಗಿ ಜನ್ಮವನ್ನೇ ಧಾರೆಯೆರೆದು ಗತಿಸಿದ ದಾದಾಭಾಯಿ ನೌರೋಜಿಯವರಂತಹ ಮಹನೀಯರುಗಳಲ್ಲದೆ ಪುರಾತನರಂತೆ ನುಡಿದು ಕಿರಾತರಂತೆ ನಡೆಯುವವರಿಗೆ ಈ ವೃದ್ಧಪಿತಾಮಹತ್ವವು ಎಂದಿಗೂ ಸಲ್ಲದು ಮತ್ತು ಇಂತಹ ಗೋಮುಖವ್ಯಾಘ್ರಗಳಿಂದ ಮುಂದಣ ಪ್ರಜಾಪೀಳಿಗೆಯು ಮೋಸಹೋಗುವುದು. ವೃತ್ತಪತ್ರಿಕೆಗಳ ಆಯವ್ಯಯವನ್ನು ನೋಡಿಕೊಳ್ಳುವುದರ ವಿನಾ ಪತ್ರಿಕಾಲೇಖಗಳ ಹಸ್ತ್ಯಾಸವೇ ಮ॥ ವೆಂಕಟಕೃಷ್ಣಯ್ಯನವರಿಗಿಲ್ಲವೆಂದು ಭಾವಿಸಿದಾಗ್ಯೂ, ಇವರ ಆಶ್ರಯದಲ್ಲಿರುವ ಮ॥ ಲಕ್ಷ್ಮಣರಾಯರೇ ಪತ್ರಿಕಾಲೇಖಕರಾಗಿ ಅದರ ಉತ್ತರವಾದಿತ್ವವನ್ನು ವಹಿಸಿಕೊಂಡಿದ್ದಾಗ್ಯೂ, ಪರರ ಕಷ್ಟನಿವಾರಣೆಗಾಗಿಯೇ ಇನ್ನೂ ಜೀವಿಸಿರುವೆವೆಂದು ವಿಜೃಂಭಿಸುತ್ತಿರುವ ಮ॥ ವೆಂಕಟಕೃಷ್ಣಯ್ಯನವರು ಮ॥ ಲಕ್ಷ್ಮಣರಾಯರನ್ನು ಅಪರಾಧಕ್ಕೆ ಗುರಿಮಾಡದೆ ತಾವೇ ಅದನ್ನು ವಹಿಸಿಕೊಂಡಿದ್ದರೆ ಸ್ವಕಲ್ಪಿತ ವೃದ್ಧಪಿತಾಮಹತ್ವವು ಸಾರ್ಥಕವಾಗಿ ಲೋಕವಂದ್ಯರಾಗುತ್ತಿದ್ದರು. ಆದರೆ ಇದಕ್ಕೆ ವಿರುದ್ಧವಾಗಿ ಮ॥ ವೆಂಕಟಕೃಷ್ಣಯ್ಯನವರು ತಮ್ಮ ಯಾಜಮಾನ್ಯದಿಂದ ನಡೆಸುತ್ತಿರುವ ವೃತ್ತಪತ್ರಿಕೆಗಳ ಲೇಖಕರು ತಾವೇ ಆಗಿದ್ದು ತಮ್ಮ ಆತ್ಮರಕ್ಷಣೆಗೋಸ್ಕರ ನೆಪಮಾತ್ರಕ್ಕೆ ಸಂಪಾದಕರನ್ನಾಗಿ ನಿಲ್ಲಿಸಿರುವ ನಿರಪರಾಧಿಯನ್ನು ಮುಂದೆಚಾಚಿ ಶಿಕ್ಷೆಗೆ ಗುರಿಮಾಡಿಸಿ ತಾವು ಮಾತ್ರ ಪಾರಾದುದಕ್ಕೆ ತಮ್ಮ ಮನೋದೇವತೆಯೊಪ್ಪುವುದೇ ಮತ್ತು ಈಶ್ವರನು ಕ್ಷಮಿಸುವನೇ? ಎಂದಿಗೂ ಇಲ್ಲ. ಆದುಕಾರಣ ಮ॥ ವೆಂಕಟಕೃಷ್ಣಯ್ಯನವರು ತಮ್ಮ ಕೃತಕರ್ಮಕ್ಕೆ ಜನ್ಮಾಂತ್ಯದಲ್ಲಾದರೂ ಪಶ್ಚಾತ್ತಾಪಪಟ್ಟು ಕಪಟನಾಟಕವನ್ನು ಬಿಟ್ಟು ನುಡಿದಂತೆ ನಡೆದು 'ವೃದ್ಧಪಿತಾಮಹ'ನೆಂಬ ಹೆಸರನ್ನು ಸಾರ್ಥಕಪಡಿಸಿಕೊಳ್ಳುವುದಲ್ಲದೆ ಈಶ್ವರನ ಅನುಗ್ರಹಕ್ಕೆ ಪಾತ್ರರಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ಚಿಕ್ಕನಾಯಕನಹಳ್ಳಿಯ ದೇವಾಂಗಮಂಡಲಿಯವರು ತುಮಕೂರು ಡಿಸ್ಟ್ರಿಕ್ಟಿನ ದೇವಾಂಗಜನರ ಸಮ್ಮೇಳನವನ್ನು ಈ ಜುಲೈ 23-24 ನೇಯ ತಾರೀಖಿನ ಸುಮಾರಿನಲ್ಲಿ ನಡೆಯಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿದುಬಂದಿದೆ.

ಮಿ॥ ಕೆ. ಚಾಂಡಿಯವರು ಒಂದನೇ ಕೌನ್ಸಿಲರಾಗಿಯೂ, ದಿವಾನ್ ಬಹದ್ದೂರ್ ಎಂ. ಎನ್. ಕೃಷ್ಣರಾಯರು ಎರಡನೇ ಕೌನ್ಸಿಲರಾಗಿಯೂ, ಮ॥ ಬಿ. ಶ್ರೀನಿವಾಸಯ್ಯಂಗಾರರು ಫೈನಾನ್ಷಿಯಲ್ ಸೆಕ್ರೆಟರಿಯಾಗಿಯೂ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಕಂಟ್ರೋಲರಾದ ಮ॥ ಎಂ. ವೀರರಾಜ ಅರಸಿನವರು 1 ತಿಂಗಳವರೆಗೆ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಅಸಿಸ್ಟೆಂಟ್ ಕಮಿಷನರ್ ಮ॥ ಎಂ. ಶ್ಯಾಮಣ್ಣನವರು ಅ॥ ಕಂಟ್ರೋಲರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ವಿಶ್ವವಿದ್ಯಾಲಯದ ರೆಜಿಸ್ಟ್ರಾರರಾದ ಮ॥ ವಿ. ಸುಬ್ರಹ್ಮಣ್ಯಅಯ್ಯರ್‌ರವರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟು ಅವರ ಬದಲು ಮಹಾರಾಜಾ ಕಾಲೇಜಿನ ಪ್ರೊಫೆಸರ್ ಮ॥ ಬಿ.ಎಂ. ಶ್ರೀಕಂಠಯ್ಯನವರು ರೆಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

ಬ್ರಾಹ್ಮಣವಿದ್ಯಾಸಹಾಯಸಂಘ, ವೀರಶೈವವಿದ್ಯಾವರ್ಧಕಪಂಡುಸಂಘ, ಒಕ್ಕಲಿಗರಸಂಘ ಇತ್ಯಾದಿ ಸಂಘಗಳಲ್ಲಿ ಸರ್ಕಾರಿಯಧಿಕಾರಿಗಳು ಸಭಾಸ್ತಾರರಾಗಿರಕೂಡದೆಂದು ಪ್ರಜಾಪ್ರತಿನಿಧಿಸಭಾಮೆಂಬರರ ಪ್ರಾರ್ಥನೆಯಂತೆ ಸರ್ಕಾರದಪ್ಪಣೆಯಾಗಿರುವುದಾಗಿ ಕೇಳುತ್ತೇವೆ.

ಹೊಳೇನರಸೀಪುರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ॥ ಎಸ್. ಗೋವಿಂದರಾಜಲುಯವರು 2 ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೂ ಬೆಂಗಳೂರಲ್ಲಿ ಅಡ್ವೊಕೇಟರಾಗಿರುವ ಮ॥ ಸಿ. ಬಿ. ಶ್ರೀನಿವಾಸರಾಯರು ಆಕ್ಟಿಂಗ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿತರಾಗಿರುತ್ತಾರೆ.

ಸರ್ವೆಶಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿರುವ ಮ॥ ಆರ್. ಎ. ನರಸಿಂಹಯ್ಯಂಗಾರರು ತೀರ್ಥಹಳ್ಳಿ ಸಬ್‌ಡಿವಿಜನ್ ಆಫೀಸರಾಗಿಯೂ, ಅಲ್ಲಿಯ ಸಬ್‌ಡಿವಿಜನ್ ಆಫೀಸರಾಗಿರುವ ಮ॥ ಎಸ್. ಸೀತಾರಾಮಯ್ಯನವರು ಹಾಸನದ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾಗಿಯೂ, ಟ್ರೆಜರಿ ಆಫೀಸರಾಗಿದ್ದ ಮಿ॥ ಸಯದ್ ಅಬ್ದುಲ್‌ಖಾಲಕ್‌ರವರು ಅಮಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಮ॥ ಬಿ. ಕೆ. ಗರುಡಾಚಾರರು ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ॥ ಅಬ್ಬಾಸ್‌ಖಾನ್‌ರವರಮೇಲೂ, ಮ॥ ಜಿ. ಪರಮಶಿವಯ್ಯನವರು ಮೊದಲಾಗಿ ಐವರು ಕೌನ್ಸಿಲರುಗಳಮೇಲೂ ಮಾನನಷ್ಟಕ್ಕಾಗಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ವಿವಾದವನ್ನು ಮಾಡಿರುವರಷ್ಟೆ? ಆದರೆ ದಿವಾನರು ಈ ವಿಚಾರದಲ್ಲಿ ಪ್ರವೇಶಿಸಿ ಉಭಯರಿಗೂ ರಾಜೀಮಾಡಿಸಿರುವುದಾಗಿ ಕೇಳಿ ಸಂತೋಷಿಸುತ್ತೇವೆ.

ಕಳೆದ ಜೂನ್ ತಾ॥ 22 ರಲ್ಲಿ ಆರಂಭಗೊಂಡು ನಡೆಯುತ್ತಿದ್ದ ನ್ಯಾಯವಿಧಾಯಕಸಭಾಧಿವೇಶನವು ಮೊನ್ನೆಯದಿನಸಾಯಂಕಾಲ ಮುಕ್ತಾಯಗೊಂಡಿತು. ಈ ಸಭಾಪತಿತ್ವವನ್ನು ಮಿ॥ ಮಿರ್ಜಾಯವರು ವಹಿಸಿದುದು ಇದೇ ಪ್ರಥಮವಾದರೂ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಈ ಸಭೆಗಾಗಿ ಬಂದಿದ್ದ ಮೆಂಬರುಗಳೂ, ಅಧಿಕಾರಿಗಳೂ ನೆನ್ನೆಯದಿನದಿಂದಲೂ ಸ್ವಸ್ಥಳಗಳಿಗೆ ಹಿಂದಿರುಗುತ್ತಿರುವರು.

ರಾಜಧಾನಿಯ ಸಂತೆಪೇಟೆವರ್ತಕಮಂಡಲಿಯವರು ತಮಗೆ ಸೇರಿರುವ ಸಂತೆಪೇಟೆಯ ಶ್ರೀರಾಮಮಂದಿರದಲ್ಲಿ ತಾ॥ 21-4-26 ರಿಂದ ನಡೆಸಿದ ಶ್ರೀರಾಮಪಟ್ಟಾಭಿಷೇಕ ಸಂತರ್ಪಣೆ ಮೊದಲಾದ ಕಾರ್ಯಗಳಿಗಾಗಿ ವರ್ತಕ ಮಹಾಜನಗಳಿಂದ ನಗದಾಗಿಯೂ ಧಾನ್ಯರೂಪವಾಗಿಯೂ 1801 ರೂಪಾಯಿಗಳು ಬಂದುದರಲ್ಲಿ 1223-1-4 ರೂ. ವೆಚ್ಚವಾಗಿ ಉಳಿದ 577-15-1 ರೂ. ಗಳು ಹಿಂದೆ ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ಟಾಗಿರುವ 573-5-0 ರೂ. ಜತೆಗೆ ಇಡಲ್ಪಟ್ಟಿರುವುದೆಂದು ಈ ಮಂದಿರದ ಪರವಾಗಿ ಮ॥ ಎಂ. ಸಿ. ತಮ್ಮಯ್ಯ ಸುಬ್ಬಣ್ಣ ಇವರು ಪ್ರಕಟಿಸಿರುವ ಆಯವ್ಯಯದ ಪಟ್ಟಿಯಿಂದ ತಿಳಿಯಬರುತ್ತದೆ.

ಮೈಸೂರುಸೀಮೆಯಲ್ಲಿ ಗೋವಧಾನಿರೋಧಕಶಾಸನವನ್ನು ಮಾಡಬೇಕೆಂಬ ವಿಚಾರವು ನ್ಯಾಯವಿಧಾಯಕಸಭೆಯಲ್ಲಿ ಚರ್ಚೆಗೆ ಬಂದಾಗ್ಗೆ, "ನಾನು ಮಹಮ್ಮದೀಯನಾದಾಗ್ಯೂ ಗೋಸಂರಕ್ಷಣೆಯಲ್ಲಿ ಪೂರ್ಣಸಹಾನುಭೂತಿಯನ್ನುಳ್ಳವನಾಗಿದ್ದೇನೆ, ಆದರೆ ದಿವಾನನಾಗಿದ್ದು ಮಾತ್ರ ಯಾವುದನ್ನು ಮಾಡಲೂ ಬಹಳ ಕಷ್ಟವಿರುವುದರಿಂದ ಈ ನಿರೋಧಕಶಾಸನದ ಅವಶ್ಯಕತೆಯನ್ನೂ ಅನಾವಶ್ಯಕತೆಯನ್ನೂ ಕುರಿತು ಪರ್ಯಾಲೋಚಿಸುವುದಕ್ಕಾಗಿ ಒಂದು ಕಮಿಟಿಯೇರ್ಪಡಿಸಲ್ಪಡುತ್ತದೆ" ಎಂದು ಸಭಾಧ್ಯಕ್ಷರಾದ ಮಿ॥ ಮಿರ್ಜಾಯವರು ಅಪ್ಪಣೆಕೊಡಿಸಿದರು. ಇದಕ್ಕಾಗಿ ಹಿಂದುಗಳು ಅವರನ್ನು ವಂದಿಸಿ ಕೂಡಲೆ ಶಾಸನವು ಮಾಡಲ್ಪಡುವುದೆಂದು ನಿರೀಕ್ಷಿಸುತ್ತಾರೆ.

ರಾಜಧಾನಿಯಲ್ಲಿ ಒಬ್ಬ ದೊಡ್ಡಮನುಷ್ಯರ ಉಪಪತ್ನಿಯಾಗಿದ್ದು ಕಾರಣಾಂತರದಿಂದ ದೂರೀಕರಿಸಲ್ಪಟ್ಟು ತಿರುಮಕೂಡ್ಲು ನರಸೀಪುರದ ಒಬ್ಬ ಯುವತಿಯು ಇಟಿಗೆಗೂಡಿನ ಕಡೆ ಒಬ್ಬಳೇ ಹೋಗುತ್ತಿದ್ದುದನ್ನು ಒಬ್ಬ ಪೊಲೀಸಿನವನು ಕಂಡು, ಯಾರು ಎಲ್ಲಿಗೆ ಹೋಗುತ್ತೀಯೆ? ಎಂದು ಕೇಳಿ ಅವಳು ಸರಿಯಾಗಿ ಉತ್ತರವನ್ನು ಕೊಡದೆ ಹೋದುದರಮೇಲೆ ಅನುಮಾನಿಸಿ ಅವಳನ್ನು ಒಂದು ಜಟ್ಕಾಬಂಡಿಯಲ್ಲಿ ಕುಳ್ಳಿರಿಸಿಕೊಂಡು ಚಾಮುಂಡಿಬೆಟ್ಟದ ತಪ್ಪಲಿಗೆ ಕರೆದುಕೊಂಡು ಹೋಗಿ ಅಲ್ಲಿ ಅವಳ ಮಾನಭಂಗಮಾಡಿ ಮೈಮೇಲಿದ್ದ ನಗಗಳನ್ನು ಕಸುಕೊಂಡು ಕಳುಹಿಸಿಬಿಟ್ಟನು. ಜಟ್ಕಾಬಂಡಿಯವನು ಅವಳನ್ನು ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಊರೊಳಕ್ಕೆ ಬಂದು ಪೊಲೀಸುಠಾಣಾದವರಿಗೆ ನಡೆದ ಸಂಗತಿಯನ್ನು ತಿಳಿಸಿದನು. ಅದರಮೇಲೆ ಇನ್‌ಸ್ಪೆಕ್ಟರು ಅವಳ ವಾಂಗ್ಮೂಲವನ್ನು ತೆಗೆದುಕೊಂಡು ಆ ಕಾನಿಸ್ಟಬಲನ್ನು ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುತ್ತಾರೆ.

ಅಮಲ್ದಾರರುಗಳಾದ ಮ॥ ಬಿ.ಕೆ. ಸುಬ್ಬರಾಯ ಇವರು ಅರಸೀಕೆರೆ ತಾ॥ ಇಂದ ತೀರ್ಥಹಳ್ಳಿ ತಾ॥ ಗೂ, ಮ॥ ಬಿ. ಲಿಂಗಯ್ಯನವರು ತೀರ್ಥಹಳ್ಳಿ ತಾ॥ ಇಂದ ಮಾಗಡಿ ತಾ॥ ಗೂ, ಮ॥ ಟಿ. ವೆಂಕಟರಂಗನ್‌ರವರು ಗೌರಿಬಿದನೂರು ತಾ॥ ಗೂ, ಕೆ. ಸುಬ್ಬರಾಯರು ಗೌರಿಬಿದನೂರು ತಾ॥ ಇಂದ ಗುಬ್ಬಿ ತಾ॥ ಗೂ, ಮ॥ ಆರ್. ತಮ್ಮಾಜಿರಾಯರು ಕೋಲಾರ ತಾ॥ ಗೂ, ಮ॥ ಜಿ. ಪದ್ಮನಾಭರಾಯರು ಕೋಲಾರ ತಾ॥ ಇಂದ ಶ್ರೀನಿವಾಸಪುರ ತಾ॥ ಗೂ, ಮ॥ ಕೆ. ಅನಂತಪದ್ಮನಾಭಯ್ಯನವರು ಮಾಗಡಿ ತಾ॥ ಇಂದ ಶ್ರೀರಂಗಪಟ್ಟಣ ತಾ॥ ಗೂ, ಮ॥ ಟಿ. ಕೃಷ್ಣರಾಯರು ಶ್ರೀರಂಗಪಟ್ಟಣ ತಾ॥ ಇಂದ ಬೇಲೂರು ತಾ॥ ಗೂ, ಮ॥ ಟಿ. ವಿ. ರಾಮಶಾಸ್ತ್ರಿಗಳು ಸಾಗರ ತಾ॥ ಇಂದ ಅರಸೀಕೆರೆ ತಾ॥ ಗೂ, ಮ॥ ಕೆ. ವೇದಾಂತಯ್ಯಂಗಾರರು ಬೇಲೂರು ತಾ॥ ಇಂದ ಚಳ್ಳಕೆರೆ ತಾ॥ ಗೂ, ಮ॥ ಬಿ. ವಿ. ಸರಾಫ್‌ರವರು ಚಳ್ಳಕೆರೆ ತಾ॥ ಇಂದ ಸಾಗರ ತಾ॥ ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರು ತಮ್ಮ ದ್ವಿತೀಯಕುಮಾರಿ ಸೌ॥ ಇಂದಿರಾದೇವಿಯನ್ನು ಶ್ರವಣಬೆಳಗೊಳದ ಮ॥ ದಾಸಣ್ಣನವರ ಕುಮಾರ ರಾ॥ ಜಯಕೀರ್ತಿಯವರಿಗೆ ಕೊಟ್ಟು ಕಳೆದ ಬುಧವಾರ ತಮ್ಮ ಬಂಗಲೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿಸಿದ ವಿವಾಹಮಹೋತ್ಸವಕ್ಕೆ ದಿವಾನರು, ಕೌನ್ಸಿಲರುಗಳು, ಶಾಖಾಧಿಕಾರಿಗಳು, ಅರಸುಮಕ್ಕಳು, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳು, ಮ್ಯುನಿಸಿಪಲ್ ಕೌನ್ಸಿಲರುಗಳು, ಲಾಯರುಗಳು, ವರ್ತಕರು ಮೊದಲಾದವರನ್ನು ಆಹ್ವಾನಿಸಿ ತಿರುವಂಡರಂ ಬ್ರದರ್ಸ್‌ರವರ ಕೊಳಲು ಮತ್ತು ಪಿಟೀಲು ವಾದನಗಳಿಂದಲೂ ಗಂಧಪುಷ್ಪ ಫಲಗಳ ವಿನಿಯೋಗದಿಂದಲೂ ಸತ್ಕರಿಸಿದರು. ಅತಿಥಿಗಳು ಶ್ರೀಮಂತರ ಆದರಾತಿಶಯದಿಂದ ಸಂತುಷ್ಟರಾಗಿ ಅವರನ್ನು ವಂದಿಸಿ ನೂತನದಂಪತಿಗಳ ಶ್ರೇಯಸ್ಸನ್ನು ಕೋರಿ ತೆರಳಿದರು. ಮನೆಯವರೆಲ್ಲರೂ ಈ ಉತ್ಸವಸಂಭ್ರಮದಲ್ಲಿರುವಾಗ್ಗೆ ಫಲಹಾರದ ಬೀರುವಿನಲ್ಲಿಟ್ಟಿದ್ದ 9-10 ಸಾವಿರ ರೂಪಾಯಿಗಳ ಬೆಲೆಬಾಳುವ ಸೀಮೆಂತನದ ಎರಡು ಕಂಠಾಭರಣಗಳು ಅಪಹರಿಸಲ್ಪಟ್ಟವೆಂದು ಕೇಳಿ ವಿಷಾದಿಸುತ್ತೇವೆ.

ಮದ್ರಾಸ್ ಗೌರ್ನರ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಸೀನಿಯರ್ ಮೆಂಬರಾಗಿದ್ದು ಈಗತಾನೆ ಉದ್ಯೋಗದಿಂದ ನಿವೃತ್ತರಾಗಿರುವ ಸರ್ ಚಾರ್ಲ್ಸ್ ಟಾಡ್‌ಹಂಟರ್‌ರವರು ನಮ್ಮ ಶ್ರೀಮನ್ಮಹಾರಾಜರವರ ಪ್ರೈವೆಟ್‌ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ಕೊಂಚಕಾಲ ಗೌರ್ನರು ರಜದಮೇಲಿದ್ದಾಗ್ಗೆ ಗೌರ್ನರಾಗಿ ಬದಲುನೋಡಿದ್ದರಲ್ಲದೆ ವಿಶೇಷ ಲೋಕಾನುಭವಿಗಳೂ, ಕಾರ್ಯದಕ್ಷರೂ ಎಂದು ಹೆಸರುಗೊಂಡಿರುವರು. ಇಂತಹ ಸಮರ್ಥರಾದ ಐರೋಪ್ಯಾಧಿಕಾರಿಗಳ ಸಹಾಯವು ನಮ್ಮ ಪ್ರಭುತ್ವದವರಿಗೆ ದೊರಕಿದುದಕ್ಕಾಗಿ ಪ್ರಜೆಗಳು ಸಂತೋಷಪಟ್ಟು ಇವರಿಂದ ನಮ್ಮ ಸಂಸ್ಥಾನಕ್ಕೆ ಪ್ರಯೋಜನವಾಗಲೆಂದು ಕೋರುತ್ತಾರೆ. ಇವರು ಸಪತ್ನೀಕರಾಗಿ ರಾಜಧಾನಿಗೆ ಬಂದು ಪಾರ್ಕ್‌ಹೌಸಿನಲ್ಲಿ 3-4 ದಿನಗಳವರೆಗಿದ್ದು ಶ್ರೀಮನ್ಮಹಾರಾಜರವರ ದರ್ಶನಭಾಷಣಗಳನ್ನು ಮಾಡಿಕೊಂಡು ಪ್ರೈವೆಟ್ ಸೆಕ್ರೆಟರಿಯಾಫೀಸು ಮೊದಲಾದವುಗಳನ್ನು ಪರಾಮರ್ಶಿಸಿ ಸೀಮೆಗೆ ಪ್ರಯಾಣಮಾಡಿದರು, ಮತ್ತು ನ್ಯೂಜಿಲೆಂಡು ಮೊದಲಾದ ದೇಶಗಳಲ್ಲಿ ಸಂಚಾರಮಾಡಿಕೊಂಡು ಆಕ್ಟೋಬರ್ ತಿಂಗಳ ಅಂತ್ಯದಲ್ಲಿ ಅಥವಾ ನವಂಬರ್ ತಿಂಗಳ ಆದಿಭಾಗದಲ್ಲಿ ಮೈಸೂರಿಗೆ ಬಂದು ಪ್ರೈವೆಟ್‌ಸೆಕ್ರೆಟರಿಯುದ್ಯೋಗವನ್ನು ವಹಿಸಿಕೊಳ್ಳುವವರಾಗಿರುವರೆಂದು ತಿಳಿಯಬರುತ್ತದೆ.

ರಾಜಕುಮಾರಿ ಸೌ॥ ಲೀಲಾವತಿಯವರು ಮತ್ತು ಅವರ ಪತಿಯಾದ ಮ॥ ಕೆ. ಬಸವರಾಜಅರಸಿನವರು ಸರ್ವಾಲಂಕಾರವಿಭೂಷಿತರಾಗಿ ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಸಕಲ ರಾಜಮರ್ಯಾದೆಯಿಂದಲೂ, ರಾಜಬಂಧುಗಳಿಂದಲೂ ಕೂಡಿ ಕಳೆದ ಸೋಮವಾರ ರಾತ್ರಿ 7½ ಘಂಟೆಗೆ ಅರಮನೆಯ ಉತ್ತರದ್ವಾರದಿಂದ ಹೊರಟು ಎಲಿಜಬೆತ್ ಫೌಂಟೆನ್ ಮಾರ್ಗವಾಗಿ ಸಯ್ಯಾಜಿರಾವ್ ರೋಡಿನಲ್ಲಿ ಲೈಬ್ರರಿ ಬಳಿ ರೈಲ್ವೆಸ್ಟೇಷನ್ ಮಾರ್ಗವಾಗಿ ಸೆಂಟ್ರಲ್‌ಪೊಲೀಸುಠಾಣಾದವರೆಗೂ ಬಂದು ಅಲ್ಲಿಂದ ದೊಡ್ಡಪೇಟೆಗೆ ತಿರುಗಿಕೊಂಡು 9½ ಘಂಟೆಯವೇಳೆಗೆ ಅರಮನೆಯನ್ನು ತಲುಪಿದರು. ವಿದ್ಯುದ್ದೀಪಗಳ ಕಾಂತಿಯೊಂದಿಗೆ ವಧೂವರರು ಧರಿಸಿದ್ದ ಅಮೋಘವಾದ ನವರತ್ನಾಭರಣಗಳ ಕಾಂತಿಯು ಕೂಡಿಕೊಂಡು ಮಾರ್ಗಗಳ ಇಕ್ಕೆಲದಲ್ಲೂ ಕಿಕ್ಕಿರಿದು ನಿಂತುಕೊಂಡು ನೋಡುತ್ತಿದ್ದ ಪ್ರೇಕ್ಷಕಜನರನ್ನು ಬಿಗ್ಗ್ರಮೆಗೊಳಿಸಿತ್ತು. ಮ॥ ಬಸವರಾಜಅರಸಿನವರು ವಂದಿಸಿದವರನ್ನು ಪ್ರತಿಯಾಗಿ ವಂದಿಸುತ್ತಿದ್ದುದನ್ನು ನೋಡಿ ಜನರು ವರನ ವಿದ್ಯಾಪಾಂಡಿತ್ಯಕ್ಕೆ ತಕ್ಕಷ್ಟು ವಿನಯಾದಿಗಳಿದ್ದುವಿರುವುದನ್ನು ನೋಡಿ ಕೊಂಡಾಡುತ್ತಿದ್ದರು. ರಾಣಿವಾಸದವರು ಶ್ರೀ॥ ಚಾಮರಾಜಒಡೆಯರವರ ಪ್ರತಿಮೆಯ ಪೀಠದ ಬಳಿ ಮೋಟಾರುಬಂಡಿಗಳಲ್ಲಿ ಕುಳಿತು ಉತ್ಸವವನ್ನು ನೋಡುತ್ತಿದ್ದು ಅಲ್ಲಿಂದ ಅರಮನೆಗೆ ಹಿಂತಿರುಗಿ ನೂತನವಾಗಿ ಕಟ್ಟಲ್ಪಡುತ್ತಿರುವ ಸಜ್ಜೆಯ ಹಂತಗಳಮೇಲೆ ನಿಂತು ವಧೂವರರನ್ನು ಮನಸ್ಸಾರ ಪರಾಮರ್ಶಿಸಿದರು. ಮ॥ ಬಸವರಾಜ ಅರಸಿನವರು ಅರಮನೆಯ ಪ್ರಾಕಾರಕ್ಕೆ ಬಂದಕೂಡಲೆ ಎದ್ದು ನಿಂತು ಸಜ್ಜೆಯಮೇಲಿದ್ದ ಶ್ರೀಮನ್ಮಹಾರಾಜರವರಿಗೂ ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯವರಿಗೂ ಮಹಾರಾಣಿಯವರಿಗೂ ವಿನಮ್ರರಾಗಿ ನಮಸ್ಕರಿಸಿ ಅವರುಗಳ ಆಶೀರ್ವಾದವನ್ನು ಪಡೆದರು.

ಭರತಖಂಡದ ವೃತ್ತಾಂತಗಳು.

ಬ್ರಹ್ಮಸಮಾಜದವರು ಹಿಂದುಗಳು ಅಹುದೋ ಅಲ್ಲವೋ ಎಂಬ ವಿಚಾರವಾಗಿ ಕಲಕತ್ತಾ ಕೋರ್ಟಿನಲ್ಲಿ ವಿವಾದವು ನಡೆದು ಅವರು ಹಿಂದುಗಳೆಂದು ನಿರ್ಧರವಾಯಿತು.

ಬರುವ ಸೆಪ್ಟಂಬರಿನಲ್ಲಿ ಜಿನೀವಾದಲ್ಲಿ ನಡೆಯುವ ನಾನಾಜನಾಂಗಕೂಟದ ಮಹಾಸಭೆಗೆ ಭಾರತದೇಶೀಯರಾಜರ ಪ್ರತಿನಿಧಿಯಾಗಿ ಕಪೂರ್ಥಲಾ ಮಹಾರಾಜರು ಹೋಗುವವರಾಗಿರುವರು.

1925 ನೆಯ ವರ್ಷದಲ್ಲಿ ಬೊಂಬಾಯಾಧಿಪತ್ಯದಲ್ಲೆಲ್ಲ ಒಟ್ಟು 1331 ಜನರು ದುಷ್ಟಪ್ರಾಣಿಗಳಿಂದ ಮೃತರಾದರೆಂದೂ, ಇವರಲ್ಲಿ 1325 ಜನರು ಸರ್ಪದಷ್ಟರಿಂದಲೇ ಸತ್ತರೆಂದೂ ವರದಿಯಾಗಿದೆ.

ಕಾಶಿಪಟ್ಟಣದ ಸೆರೆಮನೆಯಲ್ಲಿ ಬಂದಿಯಾಗಿರುವ ಲಾಲಖಾನನೆಂಬುವನು ಜೈಲರ ನಾಲಿಗೆಯನ್ನು ಚೂರಿಯಿಂದ ಕುಯಿದುಹಾಕಿಬಿಟ್ಟನು. ಇದರಿಂದ ಆ ಜೈಲರು ಮಾತನಾಡಲಿಕ್ಕಿಲ್ಲವಾಗಿದೆಯಂತೆ.

ಶ್ರೀ॥ ದೇಶಬಂಧುಚಿತ್ತರಂಜನದಾಸರವರ ಪುತ್ರರಾದ ಚಿರರಂಜನದಾಸರವರು ತಮ್ಮ ಅಲ್ಪವಯಸ್ಸಿನಲ್ಲಿ ವಿಧಿವಶರಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ಇವರ ತಾಯಿ ವಾಸಂತೀದೇವಿಯವರು ದೇಶೋದ್ಧಾರಕಪತಿವಿಯೋಗದುಃಖದೊಂದಿಗೆ ಏಕಮಾತ್ರಪುತ್ರವಿಯೋಗದುಃಖವನ್ನೆಂತು ಸಹಿಸುವರು.

ಬೆಂಗಳೂರಿನಿಂದ ಮದ್ರಾಸಿಗೆ ರೈಲುಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ 30 ವರ್ಷವಯಸ್ಸಿನ ಒಬ್ಬ ಕ್ರೈಸ್ತನು ಇತರ ಪ್ರಯಾಣಿಕರೊಡನೆ ಮಾತನಾಡುತ್ತಿದ್ದು ಆಕಸ್ಮಿಕವಾಗಿ ಜ್ಞಾನತಪ್ಪಿ ಕೂಡಲೆ ಮೃತನಾದನು. ಅವನ ಜೇಬಿನಲ್ಲಿದ್ದ ಕಾಗದಪತ್ರಗಳನ್ನು ನೋಡುವಲ್ಲಿ ಅವನು ಮೋಟಾರುಬಂಡಿಯನ್ನು ನಡೆಸುವವನೆಂದು ಗೊತ್ತಾಯಿತು.

ಕೊಲ್ಲಾಪುರದ ಪ್ರಭುತ್ವದವರು ತಮ್ಮ ಸಂಸ್ಥಾನದಲ್ಲಿ 14 ವರ್ಷವಯಸ್ಸಿನೊಳಗಿರುವ ಬಾಲಕರಿಗೂ, 10 ವರ್ಷವಯಸ್ಸಿನೊಳಗಿರುವ ಬಾಲಿಕೆಯರಿಗೂ ಯಾರೂ ವಿವಾಹಮಾಡಕೂಡದೆಂದೂ, ಹಾಗೆ ಮಾಡಿದವರು 2,000 ರೂಪಾಯಿನ ಅರ್ಥದಂಡಕ್ಕೆ ಗುರಿಯಾಗುವರೆಂದೂ ಹೊಸದಾಗಿ ಬಾಲವಿವಾಹನಿರೋಧಕಶಾಸನವನ್ನು ಮಾಡಿರುತ್ತಾರೆ.

ರಾವಲ್ಪಿಂಡಿಯ ಮಹಮ್ಮದೀಯರು ರಾಜಕೀಯ ಮತ್ತು ಧಾರ್ಮಿಕ ವಿಚಾರಗಳಲ್ಲಿ ಹಿಂದುಗಳಿಗಿನ್ನ ಹೆಚ್ಚು ಸೌಲಭ್ಯಗಳನ್ನು ಹೊಂದುವುದಕ್ಕಾಗಿ ದಂಗೆಯೆದ್ದು ಧಾನ್ಯದ ಮಾರ್ಕೆಟ್ಟಿಗೆ ಬೆಂಕಿಯನ್ನು ಹೊತ್ತಿಸಿದರು, ಸೀಮೆಯೆಣ್ಣೆಯನ್ನು ಚೆಲ್ಲಾಡಿದರು, ಬೆಂಕಿಯನ್ನು ಆರಿಸಲು ಬಂದ ಜನರನ್ನು ದೊಣ್ಣೆಗಳಿಂದ ಪ್ರಹರಿಸಿದರು. ಈ ಹಾವಳಿಯಿಂದ 8-10 ಮರಣಗಳಾಗಿ ಎರಡುಕೋಟಿರೂಪಾಯಿಗಳವರೆಗೆ ನಷ್ಟವುಂಟಾಗಿರುತ್ತದಂತೆ.

ಲಾಹೋರುಡಿಸ್ಟ್ರಿಕ್ಟಿಗೆ ಸೇರಿದ ಒಂದುಗ್ರಾಮದಲ್ಲಿ ಒಬ್ಬ ಬಡಗಿಯ ಹೆಂಗುಸು ಒಂದುವಿಕಾರಸ್ವರೂಪಿನ ಮಗುವನ್ನು ಹೆತ್ತಿದ್ದಳು. ಅದರ ಮುಖವು ಕರಡಿಯಮುಖಂತಿದ್ದಲ್ಲದೆ ನಾಲಿಗೆಯು ಕುತ್ತಿಗೆಯಲ್ಲೂ, ಕಿವಿಗಳು ಕತ್ತೆಯಕಿವಿಗಳಂತೆ ಜೋಲಾಡುತ್ತಲ್ಲೂ ಇದ್ದುವು. ಇದು ಜನಿಸಿದ ಕೆಲಗಂಟೆಗಳ ತರುವಾಯ ಸತ್ತುಹೋಯಿತು. ಈ ವಿಚಿತ್ರಮಗುವನ್ನು ನೋಡಲು ನೆರೆಗ್ರಾಮಗಳಿಂದ ಸಾವಿರಾರುಜನರು ಬಂದು ಹೋಗುತ್ತಿದ್ದರು.

ಬೊಂಬಾಯಿನಗರದ ಸಿ. ಐ. ಡಿ. ಪೊಲೀಸಿನಲ್ಲಿ ಕಳೆದ 18 ವರ್ಷಗಳಿಂದಲೂ ಕೆಲಸಮಾಡುತ್ತಿದ್ದ ಇನ್‌ಸ್ಪೆಕ್ಟರ್ ಕವೇಶ್ವರ್ ಎಂಬಾತನು ಲಂಚವನ್ನು ತೆಗೆದುಕೊಂಡನೆಂಬುದರಮೇಲೆ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟನು. ಆ ನಗರದಲ್ಲಿ ಕಳೆದ ಒಂದೂವರೆ ವರ್ಷದಿಂದೀಚೆಗೆ 7 ಜನ ಪೊಲೀಸರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟಿರುವರಂತೆ. ಈ ಮೈಸೂರುಸೀಮೆಯಲ್ಲಿ ಇಂತಹ ಲಂಚಕೋರ ಪೊಲೀಸು ಅಧಿಕಾರಿಗಳ ಸಂಖ್ಯೆಯು ಹೆಚ್ಚಾಗಿದ್ದರೂ ಅವರಿಗೆ ಶಿಕ್ಷೆಯಾಗುವುದಕ್ಕೆ ಬದಲು ರಕ್ಷಣೆಯಾಗುತ್ತಿದೆ.

ರಾವಲ್ಪಿಂಡಿಗೆ 10 ಮೈಲಿ ದೂರದಲ್ಲಿರುವ ಸೈದಪುರ ಗ್ರಾಮಕ್ಕೆ 250 ಜನ ಕಾಡುಗುಡ್ಡವಾಸಿಗಳು ನುಗ್ಗಿ ಹಿಂದುಜನರನ್ನು ಚೆನ್ನಾಗಿ ಪ್ರಹರಿಸಿ ಪ್ರಮುಖರಾದ ಲಕ್ಷ್ಮಣದಾಸರನ್ನೂ ಅವರ ಮಗ ನೇಕಿರಾಮನನ್ನೂ ಕೊಂದು ಎಲ್ಲರ ಮನೆಯನ್ನು ಸೂರೆಮಾಡಿ ಗ್ರಾಮಕ್ಕೆ ಬೆಂಕಿಯನ್ನು ಹೊತ್ತಿಸಿ ಪಲಾಯನರಾದರು. ಈ ಸುದ್ದಿಯನ್ನು ಕೇಳಿ ಪೊಲೀಸರು ಬಂದು ಗ್ರಾಮವೇ ಹೊತ್ತಿಕೊಂಡುರಿಯುತ್ತಿರುವುದನ್ನು ನೋಡಿ ಬೆಂಕಿಯನ್ನಾರಿಸಲು ಪ್ರಯತ್ನಪಟ್ಟರಾದರೂ ದೇವಾಲಯಗಳೂ, ಮನೆಮಠಗಳೂ ಸುಟ್ಟು ಭಸ್ಮವಾದುವು. ಜನರಿಗೆ ವಾಸಿಸಲು ಮನೆಯಿಲ್ಲದೆಯೂ ತಿನ್ನಲು ಪದಾರ್ಥಗಳಿಲ್ಲದೆಯೂ ರಾವಲ್ಪಿಂಡಿಗೆ ವಲಸೆ ಹೋಗುತ್ತಿದ್ದರು. ಆ ದುಷ್ಟ ಕಾಡುಜನರನ್ನು ಹಿಡಿಯಲು ಪೊಲೀಸರು ಪ್ರಯತ್ನಿಸಿರುತ್ತಾರೆ.

ಈಗ ರೈತರು 3-4 ತಿಂಗಳವರೆಗೆ ಬೇಸಾಯಕೆಲಸಗಳಲ್ಲಿ ನಿರತರಾಗಿದ್ದು ಆನಂತರ ಮುಂದಣ ಬೇಸಾಯಕಾಲದವರೆಗೂ ನಿರುದ್ಯೋಗಿಗಳಾಗಿರುವರಲ್ಲದೆ ಬೆಳೆದ ಧಾನ್ಯವನ್ನು ಅಲ್ಪಸ್ವಲ್ಪ ಬೆಲೆಗೆ ದಲ್ಲಾಳಿಗಳ ಮೂಲಕ ವಿಕ್ರಯಿಸಿ ಜೀವನಕ್ಕೆ ಸಾಲದೆ ಪೇಚಾಡುತ್ತಿರುವರಷ್ಟೆ? ಆದರೆ ಇದು ತಪ್ಪಿ ಅವರು ವರ್ಷಾಕಾಲ ಉದ್ಯೋಗನಿರತರಾಗಿ ಹೆಚ್ಚು ಆದಾಯವನ್ನು ಹೊಂದುವಂತೆ ಮಾಡುವುದಕ್ಕಾಗಿ ಬೆಳೆದ ಬತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡಲು, ಕಬ್ಬಿನಿಂದ ಬೆಲ್ಲವನ್ನೂ ಸಕ್ಕರೆಯನ್ನೂ ತಯಾರಿಸಲು, ಕಡಲೆಕಾಯಿಬೀಜದಿಂದ ಎಣ್ಣೆಯನ್ನು ತೆಗೆಯಲು, ಹತ್ತಿಯನ್ನು ಬಿಡಿಸಿ ಅರಳೆಮಾಡಲು ಅಥವಾ ನೂಲನ್ನು ತೆಗೆಯಲು ತಕ್ಕ ಯಂತ್ರಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಸಾಕಷ್ಟು ದ್ರವ್ಯಸಹಾಯಮಾಡಬೇಕೆಂದು ಮದ್ರಾಸುಪ್ರಭುತ್ವದವರು ಪರ್ಯಾಲೋಚಿಸುತ್ತಿರುವರು.

"ನಾನು ಭರತಖಂಡದ ಚಕ್ರವರ್ತಿಯಾಗಿದ್ದಲ್ಲಿ ಸಮಸ್ತ ಜಾತಿಯವರನ್ನು ಯಾವತಾರತಮ್ಯವೂ ಇಲ್ಲದೆ ಒಬ್ಬ ತಂದೆತಾಯಿ ಮಕ್ಕಳಂತೆ ಪರಿಗಣಿಸಿ ಪರಿಪಾಲಿಸುತ್ತ ಸೇನೆಯನ್ನು ತೆಗೆದುಬಿಟ್ಟು ಜನರನ್ನು ಕಳ್ಳಕಾಕರ ಭಯದಿಂದ ಸಂರಕ್ಷಿಸಲು ಪೊಲೀಸರನ್ನು ಮಾತ್ರ ಇಟ್ಟುಕೊಳ್ಳುತ್ತಿದ್ದೆನು. ಭರತಖಂಡದ ಎಲ್ಲೆಕಟ್ಟಿನ ಜನರಿಗೆ ಬ್ರಿಟಿಷರು ಈಗ ಕೊಡುತ್ತಿರುವ ಲಂಚವನ್ನು ನಿಲ್ಲಿಸಿ ಅವರೊಡನೆ ಮಿತ್ರತ್ವವನ್ನು ಬೆಳಸಿ ಅವರ ಜೀವನೋಪಾಯಮಾರ್ಗವನ್ನು ಕಲ್ಪಿಸಿಕೊಡುತ್ತಿದ್ದೆನು. ಭರತಖಂಡವಾಸಿಗಳಾದ ಐರೋಪ್ಯರ ಸುರಕ್ಷತೆಯ ವಿಚಾರದಲ್ಲಿ ಪೂರ್ಣ ಭರವಸೆಯನ್ನು ಕೊಡುತ್ತಿದ್ದೆನು. ಪರದೇಶಗಳಿಂದ ಬರುವ ಪದಾರ್ಥಗಳಮೇಲೆ ವಿಶೇಷ ಸುಂಕವನ್ನು ಹಾಕಿ ತನ್ಮೂಲಕ ದೇಶೀಯ ಕೈಗಾರಿಕೆಗಳಿಗೆ ಉತ್ತೇಜನಕೊಟ್ಟು ಪ್ರತಿಯೊಂದು ಗ್ರಾಮದಲ್ಲೂ ಬಟ್ಟೆಯು ನೇಯಲ್ಪಡುವಂತೆ ಮಾಡುತ್ತಿದ್ದೆನು. ಪರದೇಶದಿಂದ ಮಾದಕಪದಾರ್ಥಗಳನ್ನು ಬರಗೊಡದೆ ಔಷಧಿಯುಪಯೋಗಕ್ಕಾಗಿ ಅಫೀಮನ್ನೂ ಸಾರಾಯನ್ನೂ ತಯಾರ್ಮಾಡುವುದರ ವಿನಾ ಕುಡಿಯಲುಪಯೋಗಿಸದಂತೆ ಸಾರಾಯಿ ಬಟ್ಟಿಗಳನ್ನೆಲ್ಲಾ ಮುಚ್ಚಿಸಿಬಿಡುತ್ತಿದ್ದೆನು. ಹಿಂದುಗಳಲ್ಲಿ ಉತ್ತಮವರ್ಣದವರಂತೆ ಅಸ್ಪೃಶ್ಯರೂ ದೇವಸ್ಥಾನಗಳು, ಪಾಠಶಾಲೆಗಳು ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ ನಿರಾತಂಕವಾಗಿ ಹೋಗಿಬರುವಂತೆ ಮಾಡುತ್ತಿದ್ದೆನು. ಹಿಂದುಮಹಮ್ಮದೀಯರ ಪ್ರಮುಖರನ್ನು ಬರಮಾಡಿಕೊಂಡು ಅವರ ಜೋಬುಗಳನ್ನು ಶೋಧಿಸಿ ಅವುಗಳಲ್ಲಿರಬಹುದಾದ ತಿಂಡಿಯ ಪದಾರ್ಥಗಳನ್ನೂ ಅವರ ವಶದಲ್ಲಿರುವ ಆಯುಧಗಳನ್ನೂ ಕಿತ್ತುಕೊಂಡು ಅವರೆಲ್ಲರನ್ನೂ ಒಂದು ಕೊಠಡಿಯಲ್ಲಿ ಕೂಡಿ ಬಾಗಿಲನ್ನು ಮುಚ್ಚಿ ಬೀಗಮುದ್ರೆಯಿಂದ ಭದ್ರಪಡಿಸಿದ್ದು ಅವರೆಲ್ಲರೂ ತಂತಮ್ಮ ಕಲಹವನ್ನು ಬಗೆಹರಿಸಿಕೊಂಡು ಒಗ್ಗಟ್ಟಾಗಿರುತ್ತೇವೆಂದು ಹೇಳಿದಮೇಲೆ ಹೊರಗೆ ಬಿಡುತ್ತಿದ್ದೆನು. ನಾನು ಸಾರ್ವಭೌಮನಾದಲ್ಲಿ ಮಾಡಬೇಕಾದ ವಿಷಯಗಳು ಇನ್ನೂ ಬಹಳವಾಗಿರುತ್ತವೆ" ಎಂದು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಈ ಸಾರ್ವಭೌಮಪದವಿಯು ಲಭ್ಯವಾಗತಕ್ಕದಲ್ಲವಾದರೂ ಬಡಪ್ರಜೆಗಳ ಕುಂದುಕೊರತೆಗಳನ್ನು ಬಲ್ಲವರು ಪಾಲಕರಾದಲ್ಲಿ ಹೇಗೆ ಮಾಡಬೇಕೆಂಬುದು ಗಾಂಧಿಯವರ ಲೇಖದಿಂದ ವ್ಯಕ್ತವಾಗುತ್ತದೆ.

ವಿದೇಶದ ವೃತ್ತಾಂತಗಳು

ಸುಮಾತ್ರಾದಲ್ಲಿ ಭೂಕಂಪವಾಗಿ ಸಾವಿರಾರು ಮನೆಗಳು ನಾಶವಾದುವು ಮತ್ತು ಅನೇಕ ಜನರು ಅಪಾಯವನ್ನು ಹೊಂದಿ 35 ಜನರು ಸತ್ತರು. ಇತರ ಕಡೆಯಲ್ಲೂ ಬಹಳ ನಷ್ಟ ಸಂಭವಿಸಿರುತ್ತದೆ.

ರಷ್ಯಾರಾಜಧಾನಿಯಾದ ಲೆನಿನ್‌ಗ್ರೇಡಿನಿಂದ ಏಷ್ಯಾಖಂಡದ ಪೂರ್ವತೀರದಲ್ಲಿರುವ ವ್ಲಾಡಿವೋಸ್ಟಾಕ್‌ಪಟ್ಟಣದವರೆಗೆ ಹಾಕಲ್ಪಟ್ಟಿರುವ ರೈಲುಮಾರ್ಗವು 6,000 ಮೈಲಿ ದೂರವಿರುತ್ತದೆ. ಇಷ್ಟು ಉದ್ದವಾದ ರೈಲುಮಾರ್ಗವು ಪ್ರಪಂಚದ ಮತ್ತಾವಕಡೆಯಲ್ಲೂ ಇಲ್ಲವು.

ಮಂತಾಜ್‌ಬೇಗಂವೇಶ್ಯಾಂಗನೆಯ ಮಾಯಾಬಲೆಗೆ ಸಿಲುಕಿ ಅರ್ಥಮಾನಹಾನಿಯನ್ನೂ, ರಾಜ್ಯಭ್ರಷ್ಟತೆಯನ್ನೂ ಹೊಂದಿದ ಇಂದೂರ ಮಹಾರಾಜರು 5 ಲಕ್ಷ ರೂ. ವರ್ಷಾಶನವನ್ನು ಪಡೆದುಕೊಂಡು ಆಂಗ್ಲದೇಶಕ್ಕೆ ಹೋಗಿರುವರಷ್ಟೆ. ಇವರು ಅಲ್ಲಿ ನಿಶ್ಚಿಂತರಾಗಿ ದೇಹಾದಾರ್ಢ್ಯವನ್ನು ಹೊಂದುತ್ತಿರುವರೆಂದೂ, ಇದರಿಂದ ಅವರ ದೇಹಬಲವು 360 ತೊಲಾಗಳಷ್ಟು ಹೆಚ್ಚಿರುವುದೆಂದೂ ತಿಳಿಯಬರುತ್ತದೆ.

ಭಾರತವೈಸ್‌ರಾಯ್ ಲಾರ್ಡ್ ಇರ್ವಿನ್‌ರವರ ತಂದೆಯವರಾದ ಲಾರ್ಡ್ ಹ್ಯಾಲಿಫಾಕ್ಸ್‌ರವರು ತಮ್ಮ ಕುಮಾರರನ್ನು ನೋಡುವುದಕ್ಕಾಗಿ ಬರುವ ನವಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಭರತಖಂಡಕ್ಕೆ ಬರುವವರಾಗಿರುವರು. ಇವರು ಈವರೆಗೆಂದೂ ಭರತಖಂಡವನ್ನು ನೋಡಿಲ್ಲವಾದುದರಿಂದಲೂ, ವಯಸ್ಸುಗಳೆಯುತ್ತಿರುವುದರಿಂದಲೂ ಭರತಖಂಡಕ್ಕೆ ಹೋಗಿಬರಲು ನಿಶ್ಚಯಿಸಿರುವುದಾಗಿ ಒಬ್ಬ ಪತ್ರಿಕಾವಿಲೇಖಕನಿಗೆ ತಿಳಿಸಿದರಂತೆ.

ಫೋರ್ಡ್ ಮೋಟಾರುಬಂಡಿಗಳನ್ನು ತಯಾರಿಸುವ ಕಂಪೆನಿಯ ಲೆಖ್ಖವನ್ನು ನೋಡಿದುದರಲ್ಲಿ 1917 ರಿಂದ 1924 ರ ವರೆಗೆ 2,64,00,00,000 ರೂ. ಗಳುತ್ಪನ್ನವಾಗಿ ಆದಾಯದ ತೆರಿಗೆ ಮೊದಲಾದವುಗಳನ್ನು ಕಳೆದು 1,59,00,00,000 ರೂ. ಗಳು ಉಳಿದಿರುವುದಾಗಿಯೂ ಕಂಡುಬಂದಿರುತ್ತದೆ. ಈ ಕಂಪೆನಿಯ ಸಾಮಗ್ರಿಯಗಳೆಲ್ಲವೂ ಹೆನ್ರಿಫೋರ್ಡ್‌ರವರಿಗೂ, ಅವರ ಪತ್ನಿಗೂ, ಮಗನಿಗೂ ಸೇರಿರುವುದರಿಂದ ಪ್ರಪಂಚದಲ್ಲೆಲ್ಲಾ ಇವರುಗಳ ಸ್ವತ್ತನ್ನವೇ ಅಧಿಕವಾಗಿರುತ್ತದೆ.

ಅಮೇರಿಕೆಯ ಜಾರ್ಜ್‌ಹಾಸ್ಲರ್ ಜಾನ್‌ಸ್ಟನ್ ಎಂಬಾತನು 30 ದಿನಗಳವರೆಗೆ ನಿರಾಹಾರಿಯಾಗಿದ್ದು 1,000 ಮೈಲಿ ದೂರ ನಡೆಯಬೇಕೆಂದು ಸಂಕಲ್ಪಿಸಿ, ಈ ತಾ॥ 1 ರಲ್ಲಿ ಷಿಕಾಗೋಪಟ್ಟಣದಿಂದ ಪ್ರಯಾಣಮಾಡಿ ದಿನ ಒಂದಕ್ಕೆ 35 ಮೈಲಿಗಳಂತೆ ನಡೆದು ನ್ಯೂಯಾರ್ಕ್‌ಪಟ್ಟಣವನ್ನು ತಲುಪುವವನಾಗಿರುವನು. ಈತನು ನಿತ್ಯದಲ್ಲೂ 20 ಶೀಸೆಗಳಷ್ಟು ನೀರನ್ನು ಕುಡಿಯುವುದರವಿನಾ ಇನ್ನಾವ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲ. ಪ್ರತಿದಿನವೂ 3 ವೇಳೆ ಷರಟುಗಳನ್ನು ಬದಲಾಯಿಸುವುದಕ್ಕಾಗಿ ಜತೆಯಲ್ಲಿ 100 ಷರ್ಟುಗಳನ್ನು ತೆಗೆದುಕೊಂಡು ಹೋಗಿರುತ್ತಾನೆ. ಮಾರ್ಗದಲ್ಲಿ ಇವನ ದೇಹಸ್ಥಿತಿಯನ್ನು ಪರೀಕ್ಷಿಸುವುದಕ್ಕಾಗಿ ಅಲ್ಲಲ್ಲಿಗೆ ಡಾಕ್ಟರುಗಳು ಸಿದ್ಧರಾಗಿರುವರು. ಲಂಘನದಿಂದ ಆರೋಗ್ಯವೂ ಶಕ್ತಿವರ್ಧನವೂ ಆಗುತ್ತದೆಂಬ ಸೂತ್ರವನ್ನು ನಿದರ್ಶನಪಡಿಸುವುದಕ್ಕಾಗಿ ಈತನು ಉಪವಾಸಪರ್ಯಟನವ್ರತವನ್ನು ಹಿಡಿದಿರುವುದಾಗಿದೆ.

ವಿವಾಹವಾಗತಕ್ಕ ವಧೂವರರು ಪರಸ್ಪರ ಅನುರೂಪರಾಗಿರುವುದಲ್ಲದೆ ಮಕ್ಕಳನ್ನು ಪಡೆದು ದೇಶದ ಪ್ರಜಾಸಂಖ್ಯೆಯನ್ನು ಅಭಿವೃದ್ಧಿಗೊಳಿಸತಕ್ಕವರಾಗಿರಬೇಕೆಂಬುದು ಜರ್ಮನಿಯವರ ಆಶಯವಾಗಿರುತ್ತದೆ. ಇದಕ್ಕಾಗಿ ಕಳೆದ ಜೂನ್‌ತಿಂಗಳಾರಭ್ಯ ಬರ್ಲಿನ್ ಪಟ್ಟಣದಲ್ಲಿ ಒಂದು ವೈದ್ಯರ ಆಫೀಸು ಏರ್ಪಡಿಸಲ್ಪಟ್ಟಿದೆ. ವಿವಾಹವಾಗಲಿಷ್ಟಪಡುವ ಸ್ತ್ರೀಪುರುಷರು ಅಲ್ಲಿಯ ವೈದ್ಯರಿಂದ ಸಾಂಗವಾಗಿ ಪರೀಕ್ಷಿಸಲ್ಪಟ್ಟು ಸಂತಾನಾಭಿವೃದ್ಧಿ ಮಾಡತಕ್ಕವರೆಂದು ಕಂಡುಬಂದಲ್ಲಿ ಮದುವೆಯಾಗಲು ಸರ್ಟಿಫಿಕೇಟು ಕೊಡಲ್ಪಡುವುದು. ಕಾರಣಾಂತರಗಳಿಂದ ವಧೂವರರಲ್ಲಿ ಸಂತಾನಾಭಿವೃದ್ಧಿಶಕ್ತಿಯಿಲ್ಲದಿದ್ದ ಪಕ್ಷದಲ್ಲಿ ಅಂತಹವರುಗಳು ವಿವಾಹಮಾಡಿಕೊಳ್ಳಬಾರದೆಂದು ವೈದ್ಯರು ಅವರಿಗೆ ವಿವೇಕವನ್ನು ಹೇಳುವರು. ಈ ವಿಧಾನವು ಪ್ರಯೋಜನಕರವಾಗಿ ಕಂಡುಬಂದಲ್ಲಿ ಆ ರಾಜ್ಯದ ನಾನಾಭಾಗಗಳಲ್ಲಿ ವಧೂವರಪರೀಕ್ಷಾವೈದ್ಯಶಾಲೆಗಳು ಏರ್ಪಡಿಸಲ್ಪಡುವುವು.

ಪತ್ರವ್ಯವಹಾರಕರಿಗೆ ಸೂಚನೆ.

ನಮ್ಮ ಮುದ್ರಣಯಂತ್ರಕ್ಕೆ ಅಪಾಯಸಂಭವಿಸಿರುವುದರಿಂದ ಅದು ಸರಿಹೋಗುವವರೆಗೂ ಸ್ಟಾರ್‌ಪತ್ರಿಕೆಯ 4 ಪುಟಗಳನ್ನೇ ಹೊರಡಿಸುವುದು ಪ್ರಯಾಸವಾಗಿರುವಪ್ರಯುಕ್ತ ಬಹಳ ಸಂಕ್ಷಿಪ್ತವೂ ಅಗತ್ಯವೂ ಆದ ಪತ್ರವ್ಯವಹಾರಗಳ ವಿನಾ ಇತರವುಗಳನ್ನು ಮುದ್ರಿಸಲು ಸಾಧ್ಯವಿಲ್ಲವು. ಅದಕ್ಕಾಗಿ ನಮ್ಮ ಪತ್ರವ್ಯವಹಾರಕರು ಆಗ್ರಹಗೊಳ್ಳಬಾರದು. ಸಂ.

ಸೂರ್ಯಗ್ರಹಣ.

ಅಕ್ಷಾಂಶ ೧೫-೨೬ ಧಾರವಾಡಮಾನಗಣಿತ.

ಶ್ರೀಶಾಲಿವಾಹನಶಕೆ ೧೮೪೮ ನೇ ಕ್ಷಯ ಸಂ॥ ರದ ಜ್ಯೇಷ್ಠ ಬಹುಳ 30 ಜುಲೈ ತಾ॥ 9 ನೇ ಶುಕ್ರವಾರ ಸೂರ್ಯೋದಯಾದಿ ೫೦-೧೯ ಘಳಿ ಸುಮಾರಕ್ಕೆ ಸೂರ್ಯನಿಗೆ ಚಂದ್ರನ ಉತ್ತರಶರ (ಕೇತಕಿ-ಗಾಂಧಿ) ಗಣಿತ ಪ್ರಕಾರ ೧-೨೫ ಬಂದಿವೆ, ಮತ್ತು ಆ ಕಾಲದ ಸೂರ್ಯನಿಗೆ ತುಂಬಾ ಗ್ರಹಣ ಹಿಡಿದು ೫೪ ಗಳಿಗೆ ಸುಮಾರಕ್ಕೆ ಮೋಕ್ಷಕಾಲವಾಗುತ್ತದೆ. ಈ ಗ್ರಹಣ ಆಸ್ಟ್ರೇಲಿಯಾ, ನ್ಯೂಝಿಲಾಂಡ, ಜಾವಾ, ನ್ಯೂಗಿನಿಯಾ ಫಿಲಿಪೈನದ್ವೀಪ, ಚೀನಾದೇಶದವರಿಗೆ ತುಂಬಾ ದರ್ಶನವಾಗುತ್ತದೆ. ಜಪಾನ, ಹಾಂಕಾಂಗ ದ್ವೀಪಗಳಿಗೂ, ಪ್ಯಾಸಿಫಿಕ್ ಮಹಾಸಾಗರದಲ್ಲಿ ಹಡಗಿನಿಂದ ಸಂಚಾರಮಾಡುವವರಿಗೂ ಮುಖ್ಯಾಲಭಾಗ ಗ್ರಹಣ ಕಾಣುತ್ತದೆ. ಈ ಗ್ರಹಣ ಉತ್ತರಅಮೇರಿಕದವರಿಗೂ ಬೆಹರಿಂಗ ಸಮುದ್ರದ ಪ್ರಾಂತ್ಯದ ಜನರಿಗೂ ೫೮-೨೦ ಘಳಿಗೆ ಸುಮಾರಕ್ಕೆ ಸ್ವಲ್ಪವಾಗಿ ಅರ್ಧಭಾಗ ಗ್ರಹಣ ಕಾಣುತ್ತದೆ. ಈ ಗ್ರಹಣವು ದಕ್ಷಿಣಅಮೇರಿಕದವರಿಗೂ, ಆಫ್ರಿಕ, ಯುರೋಪ್, ಅಥವಾ ಏಷಿಯಾದವರಿಗೂ ಅಗೋಚರವಾದ್ದರಿಂದ ಕಾಣುವದಿಲ್ಲ. ಅದ್ದರಿಂದ ಈ ಗ್ರಹಣದೋಷವು ಹಿಂದುಸ್ಥಾನಕ್ಕೆ ಬರುವದಿಲ್ಲ.

ಮಳೆ ಭವಿಷ್ಯ.—ಮುಂದೆ ಆಷಾಢ ಶುದ್ಧ ೧೫ ಮುಗಿದು ಹಿಂದೆ 7 ದಿವಸ ಮುಂದೆ 7 ದಿವಸಗಳವರೆಗೆ ಚಂದ್ರನು ಮಧ್ಯನಾಡಿಯಲ್ಲಿ

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜುಲೈ ತಾ|| ೩ ನೆಯ ಶನಿವಾರ.

THE LEGISLATIVE COUNCIL.

The budget session of the Legislative Council, which was held for the first time at Mysore came to a termination on the 1st July 1926, after an arduous sitting for 8 days. It was in many ways a very interesting session. The utmost latitude was given to the members to criticise administration and departments, in fact, criticism was welcomed by the Government. It was a departure for which the public have to be thankful to the President and we have no doubt that that accounts largely to the freedom with which the cut motions were discussed. The members were not slow in taking advantage of this privilege which was used with care and dignity. The departmental heads had no doubt to be very vigilent and their explanations, though in some respects were not quite so satisfactory were on the whole informing and convincing. For instance, the token motion to reduce the grant under Land Revenue was brought forward by Mr. D. S. Mallappa with a view to bring to the notice of Government the necessity for the representation of the backward communities in Public Service and the working of the Miller Committee Report. It surely cannot be said that in this department so fully affecting the interests of ryots, the Government had done all that it could in making appointments from members of the backward communities. We may urge very strongly the need for some time to come of increasing the number of revenue probationers in preference to appointments by promotion which was only another way of perpetuating the existing state of affairs. The Vokkaligars and the Lingayets formed the bulk of the agricultural and industrial population. But how many of the Amildars and Sub-Division Officers belonged to these two communities? It was ridiculously low. The Revenue Commissioner no doubt said that the Miller Committee Report was kept in view, but as we have already said the perceptability of it is the thing which we were not sure of. The Excise policy came for a good deal of what we think a legitimate criticism. It is time that the Government should take a more progressive policy and seek introduction of local option at least, with a view to establish total prohibition in the near future. The difficulty in the way effecting the reform arises from the fact that those who have the shaping of the destiny in their hands are themselves diffident about the success of even making a beginning in the direction and seem to think that it is impossible to make up the likely losses that might arise in consequence. We should, however, remember that the not inappreciable revenue from Excise is mostly derived from the poor by playing on their weakness, and that it would be more equitable to transfer this burden on to the shoulders of the more well-to-do. In many ways, Mysore is setting examples to the rest of India, and would it not be one of the proudest achievements for Mysore if it were to initiate measures for doing away with this revenue. It was also well on the part of Mr. Chandrashekariah to have brought forward to the notice of Government the need for proper arrangements for the next elections. We have had occasion to show that our first experience during the last elections was not very pleasing. The preparation of the lists of voters and the arrangements for polling demand the special attention of Government. The statement of the Government that the Botanical gardens at Lalbagh would be kept open till 9 p. m. and provision for lights made came somewhat as a surprise, especialy in view of the fact that Goveroment had orginaly thought that even 8 p.m. to be too late an hour for keeping open Lalbagh. It would not be surprising if the quiet and peace of the gardens were to be considerably disturbed by the new arrangement. Criticism of the Forest Department raised a spirited defence by the Conservator of Forests whose speech disclosed that though sympathy was not wanted there was room for popularising the facilities provided by the Department to the public who were not utilising them at present to the full. The grievance over the working of the Incometax Department was to some extent real, and the appeal courts have a tendency to stick too much to technicalities and refusing to interfere with the somewhat arbitrary lives made by the taxing officers. The Police Department came for a good bit of criticism, especialy from the point of view of appointments and transfers in which there has been shown no particular anxiety to follow the spirit or the letter of the Miller Committee Report. We should say the deliberations were very lively and instructive and we should congratulate the Dewan on the successful terminaton of the first session over which he presided.

ಇದು ವೃದ್ಧಪಿತಾಮಹತ್ವದ ಲಕ್ಷಣವೋ?

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರಾದ ಮಿ|| ಟಿ. ಎಸ್. ಅಲ್ಲಿಖಾನ್‌ರವರು ತಮ್ಮ ಅಧಿಕಾರಬಲದಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆಂದು ಮೊದಲಾಗಿ ಸಂಪದಭ್ಯುದಯಪತ್ರಿಕೆಯಲ್ಲಿ "ಟಿಪ್ಪುಸುಲ್ತಾನರ ಹಾವಳಿ" ಎಂಬ ಶೀರ್ಷಿಕದಿಂದ ಬರೆಯಲ್ಪಟ್ಟಿದ್ದ ಲೇಖವು ತಮಗೆ ಬಹಳ ಅವಮಾನಕರವೂ ಖೇದಜನಕವೂ ಆಗಿರುವುದಾದುದರಿಂದ ಆ ಪತ್ರಿಕೆಯ ಪ್ರೊಪ್ರೈಟರಾದ ಮ|| ಎಂ. ವೆಂಕಟಕೃಷ್ಣಯ್ಯನವರನ್ನೂ; ಸಂಪಾದಕರು, ಪ್ರಕಾಶಕರು ಮತ್ತು ಮುದ್ರಾಪಕರು ಆದ ಮ|| ಎಂ. ಎಸ್. ಲಕ್ಷ್ಮಣರಾಯರನ್ನೂ ಇಂಡಿಯನ್ ಪಿನಲ್ ಕೋಡು 500 ನೇ ಸೆಕ್ಷನ್ ಪ್ರಕಾರ ವಿಚಾರಣೆ ಮಾಡಿ ಶಿಕ್ಷಿಸಬೇಕೆಂದು ಮಿ|| ಅಲ್ಲಿಖಾನ್‌ರವರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದರು. ಸಂಪದಭ್ಯುದಯಪತ್ರಿಕೆಯ ಪ್ರೊಪ್ರೈಟರಾಗಿದ್ದು ಅದರ ಆಯವ್ಯಯವನ್ನು ಮಾತ್ರ ನೋಡಿಕೊಳ್ಳುವುದರವಿನಾ ಅದರಲ್ಲಿ ಪ್ರಕಟವಾಗುವ ಲೇಖಗಳಿಗೆ ಸಂಪಾದಕರಾದ ಎರಡನೆಯ ಅಪರಾಧಿಯು ಉತ್ತರವಾದಿಯಲ್ಲದೆ ತಾವಲ್ಲವೆಂದು ಮ|| ವೆಂಕಟಕೃಷ್ಣಯ್ಯನವರು ವಾದಿಸಿ ದೋಷಾರೋಪಣೆಗೆ ಗುರಿಯಾಗದೆ ತಪ್ಪಿಸಿಕೊಂಡುಬಿಟ್ಟರು, ಆದರೆ ಎರಡನೆಯಪರಾಧಿ ಮ|| ಲಕ್ಷ್ಮಣರಾಯರು ಮಾತ್ರ ಟಿಪ್ಪುಸುಲ್ತಾನರ ಹಾವಳಿ ಎಂಬ ಲೇಖದಲ್ಲಿ ಬರೆದಿದ್ದಂಶವು ನಿರ್ದೋಷವಾದುದೆಂದು ಸಾಧಿಸಲಸಮರ್ಥರಾಗಿ 250 ರೂಪಾಯಿಗಳ ಅರ್ಥದಂಡಕ್ಕೆ ಗುರಿಯಾದರು.

ಒಂದನೆಯಪರಾಧಿ ಮ|| ವೆಂಕಟಕೃಷ್ಣಯ್ಯನವರಮೇಲಿನ ದೋಷಾರೋಪಣೆಯು ಸ್ಥಿರಪಡದಿದ್ದುದರಿಂದ ಅವರು ಬಿಡಲ್ಪಟ್ಟುದೂ, ಎರಡನೆಯಪರಾಧಿ ಮ|| ಲಕ್ಷ್ಮಣರಾಯರಮೇಲಿನ ದೋಷಾರೋಪಣೆ ಸ್ಥಿರಪಟ್ಟು ಅವರು ಶಿಕ್ಷಿಸಲ್ಪಟ್ಟುದೂ ಆಶ್ಚರ್ಯಕರವೇನೂ ಅಲ್ಲವು. ಆದರೆ ಪುರಾತನಪತ್ರಿಕಾಲೇಖಕರೆಂದು ಲೋಕಕ್ಕೇ ತಿಳಿದಿರುವುದಾದರೂ, ತಮ್ಮ ಮಾಯಾಜಾಲಕ್ಕೆ ವಶರಾಗಿ ತಮ್ಮನ್ನು ಪುರಸ್ಕರಿಸದಿರುವ ಸರ್ಕಾರಿಯ ಅಧಿಕಾರಿಗಳನ್ನೂ, ಸಾಧುಸಜ್ಜನರನ್ನೂ ವಾಚಾಮಗೋಚರವಾಗಿ ನಿಂದಿಸಿ ಖಂಡಿಸಿ ಹಗೆಯನ್ನು ತೀರಿಸಿಕೊಳ್ಳುವುದನ್ನು ತಮ್ಮ ಮುಖ್ಯೋದ್ದೇಶವನ್ನಾಗುಳ್ಳವರಾದುದರಿಂದ, "ಕಳ್ಳನ ಹೆಂಡಿತಿ ಎಂದಿದ್ದರೂ ಮುಂಡೆ" ಎಂಬ ಗಾಧೆಯನ್ನು ಮ|| ವೆಂಕಟಕೃಷ್ಣಯ್ಯನವರು ಚೆನ್ನಾಗರಿತು ಅನ್ಯರನ್ನು ನೆಪಮಾತ್ರಕ್ಕೆ ಸಂಪಾದಕರನ್ನಾಗಿ ನಿಲ್ಲಿಸಿ ತಾವು ತಮ್ಮ ಹಗೆಗಳಮೇಲೆ ಅಭಿಯೋಗಮಾಡುತ್ತಿರುವುದು ಅವರ ಸತ್ಯಸಂಧತೆಯ ಪ್ರಥಮಪಾದವಾಗಿದೆ.

ಸಂಪದಭ್ಯುದಯಪತ್ರಿಕೆಯೊಂದು ಮಾತ್ರವಲ್ಲದೆ ಸಾಧ್ವಿ ಮತ್ತು ವೆಲ್ತ್‌ಆಫ್ ಮೈಸೂರು ಪತ್ರಿಕೆಗಳಿಗೂ ಸಂಪಾದಕರಾಗಿರುವ ಮ|| ಎಂ. ಎಸ್. ಲಕ್ಷ್ಮಣರಾಯರು ಮ|| ವೆಂಕಟಕೃಷ್ಣಯ್ಯನವರ ಈಗಿನ ಶ್ರೀಕೃಷ್ಣರಾಜವಾಣೀವಿಲಾಸನಾಮಾಂಕಿತಮುದ್ರಾಲಯದಲ್ಲಿ ಪ್ರಥಮತಃ ಅಕ್ಷರಸಂಯೋಜಕರಾಗಿ ಸೇರಿ ಆ ಕೆಲಸದೊಡನೆ ಮುದ್ರಾಶಾಲೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿರುವರು. ಇವರ ಆಂಗ್ಲಕನ್ನಡ ಭಾಷಾಪಾಂಡಿತ್ಯವೂ, ಪತ್ರಿಕಾಸಂಪಾದಕೀಯಪರಿಚಯವೂ ಎಷ್ಟರಮಟ್ಟಿಗಿರುವುದೆಂಬುದು ಇವರನ್ನು ಕಂಡುಕೇಳಿದವರುಗೆಲ್ಲ ಗೊತ್ತಿರುವುದಲ್ಲದೆ, ಮೈಸೂರುಡಿವಿಜನ್ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಕೆ. ಸಿದ್ಧರಾಮಪ್ಪನವರು ರಾಜಧಾನಿಯ ಅಡ್ವೊಕೇಟ್ ಮ|| ಪಿಯರ್ಲ್ ಸುಬ್ಬರಾಯರಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ಮಾನನಷ್ಟದ ವಿವಾದದಲ್ಲಿ ಎಂ. ಎಸ್. ಲಕ್ಷ್ಮಣರಾಯರು ಫಿರ್ಯಾದಿಪರ ನುಡಿದಿರುವ ಸಾಕ್ಷಿಯಿಂದ ವ್ಯಕ್ತವಾಗುತ್ತದೆ. ಈ ಪಾಪದ ಗಂಧವನ್ನೇ ಅರಿಯದ ಮ|| ಲಕ್ಷ್ಮಣರಾಯರು ಅಪರಾಧವನ್ನು ತಮ್ಮ ತಲೆಯಮೇಲೆ ಹೊತ್ತುಕೊಂಡಿರುವುದು ಅವರ ಸ್ವಾಮಿಭಕ್ತಿಯನ್ನು ಪ್ರದರ್ಶಿಸುವುದರಲ್ಲಿ ಸಂದೇಹವಿಲ್ಲ, ಆದರೆ ಲೋಕೋಪಕಾರಕ್ಕಾಗಿಯೇ ಜನ್ಮಧಾರಣೆ ಮಾಡಿರುತ್ತೇವೆಂದು ಹೇಳಿಕೊಂಡು "ಸತ್ಯಮೇವೋದ್ಧರಾಮ್ಯಹಂ" ಎಂಬ ಬಿರುದಾಂಕಿತನದಿಂದ "ವೃದ್ಧಪಿತಾಮಹ"ರೆಂದು ತಮ್ಮ ಕೂಟದವರಿಂದ ಹೊಗಳಿಸಿಕೊಳ್ಳುತ್ತ ಲೋಕವನ್ನು ವಂಚಿಸುತ್ತಿರುವ ಮ|| ಎಂ. ವೆಂಕಟಕೃಷ್ಣಯ್ಯನವರು ಗೇಣುದ್ದ ಹೊಟ್ಟೆಯಪಾಡಿಗಾಗಿ ಬಾಲ್ಯಾರಭ್ಯ ತಮ್ಮ ಆಶ್ರಯವನ್ನು ಹೊಕ್ಕಿರುವ ಆ ನಿರಪರಾಧಿ ಲಕ್ಷ್ಮಣರಾಯರನ್ನು ಶಿಕ್ಷೆಗೆ ಗುರಿಮಾಡಿದುದು "ಅನ್ಯರಮಕ್ಕಳನ್ನು ಬಾವಿಗೆತಳ್ಳಿ ಆಳವನ್ನು ನೋಡಿದಂತೆ" ಎಂಬ ಗಾಧೆಗೆ ಅನುಸಾರವಾಗಿರುತ್ತದೆ. ಇದು ವೃದ್ಧಪಿತಾಮಹತ್ವದ ಲಕ್ಷಣವೋ? ನುಡಿದಂತೆ ನಡೆದು ತನ್ನ ದೇಶಹಿತಾರ್ಥಕ್ಕಾಗಿ ಜನ್ಮವನ್ನೇ ಧಾರೆಯೆರೆದು ಗತಿಸಿದ ದಾದಾಭಾಯಿ ನೌರೋಜಿಯವರಂತಹ ಮಹನೀಯರುಗಳ್ಲದೆ ಪುರಾತನರಂತೆ ನುಡಿದು ಕಿರಾತರಂತೆ ನಡೆಯುವವರಿಗೆ ಈ ವೃದ್ಧಪಿತಾಮಹತ್ವವು ಎಂದಿಗೂ ಸಲ್ಲದು ಮತ್ತು ಇಂತಹ ಗೋಮುಖವ್ಯಾಘ್ರಗಳಿಂದ ಮುಂದಣ ಪ್ರಜಾಪೀಳಿಗೆಯು ಮೋಸಹೋಗುವುದು. ವೃತ್ತಪತ್ರಿಕೆಗಳ ಆಯವ್ಯಯವನ್ನು ನೋಡಿಕೊಳ್ಳುವುದರ ವಿನಾ ಪತ್ರಿಕಾಲೇಖಗಳ ಹವ್ಯಾಸವೇ ಮ|| ವೆಂಕಟಕೃಷ್ಣಯ್ಯನವರಿಗಿಲ್ಲವೆಂದು ಭಾವಿಸಿದಾಗ್ಯೂ, ಇವರ ಆಶ್ರಯದಲ್ಲಿರುವ ಮ|| ಲಕ್ಷ್ಮಣರಾಯರೇ ಪತ್ರಿಕಾಲೇಖಕರಾಗಿ ಅದರ ಉತ್ತರವಾದಿತ್ವವನ್ನು ವಹಿಸಿಕೊಂಡಿದ್ದಾಗ್ಯೂ, ಪರರ ಕಷ್ಟನಿವಾರಣೆಗಾಗಿಯೇ ಇನ್ನೂ ಜೀವಿಸಿರುವೆವೆಂದು ವಿಜೃಂಭಿಸುತ್ತಿರುವ ಮ|| ವೆಂಕಟಕೃಷ್ಣಯ್ಯನವರು ಮ|| ಲಕ್ಷ್ಮಣರಾಯರನ್ನು ಅಪರಾಧಕ್ಕೆ ಗುರಿಮಾಡದೆ ತಾವೇ ಅದನ್ನು ವಹಿಸಿಕೊಂಡಿದ್ದರೆ ಸ್ವಕಲ್ಪಿತ ವೃದ್ಧಪಿತಾಮಹತ್ವವು ಸಾರ್ಥಕವಾಗಿ ಲೋಕವಂದ್ಯರಾಗುತ್ತಿದ್ದರು. ಆದರೆ ಇದಕ್ಕೆ ವಿರುದ್ಧವಾಗಿ ಮ|| ವೆಂಕಟಕೃಷ್ಣಯ್ಯನವರು ತಮ್ಮ ಯಾಜಮಾನ್ಯದಿಂದ ನಡೆಸುತ್ತಿರುವ ವೃತ್ತಪತ್ರಿಕೆಗಳ ಲೇಖಕರು ತಾವೇ ಆಗಿದ್ದು ತಮ್ಮ ಆತ್ಮರಕ್ಷಣೆಗೋಸ್ಕರ ನೆಪಮಾತ್ರಕ್ಕೆ ಸಂಪಾದಕರನ್ನಾಗಿ ನಿಲ್ಲಿಸಿರುವ ನಿರಪರಾಧಿಯನ್ನು ಮುಂದೆಚಾಚಿ ಶಿಕ್ಷೆಗೆ ಗುರಿಮಾಡಿಸಿ ತಾವು ಮಾತ್ರ ಪಾರಾದುದಕ್ಕೆ ತಮ್ಮ ಮನೋದೇವತೆಯೊಪ್ಪುವುದೇ ಮತ್ತು ಈಶ್ವರನು ಕ್ಷಮಿಸುವನೇ? ಎಂದಿಗೂ ಇಲ್ಲ. ಅದುಕಾರಣ ಮ|| ವೆಂಕಟಕೃಷ್ಣಯ್ಯನವರು ತಮ್ಮ ಕೃತಕರ್ಮಕ್ಕೆ ಜನ್ಮಾಂತ್ಯದಲ್ಲಾದರೂ ಪಶ್ಚಾತ್ತಾಪಪಟ್ಟು ಕಪಟನಾಟಕವನ್ನು ಬಿಟ್ಟು ನುಡಿದಂತೆ ನಡೆದು 'ವೃದ್ಧಪಿತಾಮಹ'ನೆಂಬ ಹೆಸರನ್ನು ಸಾರ್ಥಕಪಡಿಸಿಕೊಳ್ಳುವುದಲ್ಲದೆ ಈಶ್ವರನ ಅನುಗ್ರಹಕ್ಕೆ ಪಾತ್ರರಾಗಲೆಂದು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ಚಿಕ್ಕನಾಯಕನಹಳ್ಳಿಯ ದೇವಾಂಗಮಂಡಲಿಯವರು ತುಮಕೂರು ಡಿಸ್ಟ್ರಿಕ್ಟಿನ ದೇವಾಂಗಜನರ ಸಮ್ಮೇಳನವನ್ನು ಈ ಜುಲೈ 23-24 ನೇಯ ತಾರೀಖಿನ ಸುಮಾರಿನಲ್ಲಿ ನಡೆಯಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿದು ಬಂದಿದೆ.

ಮಿ|| ಕೆ. ಚಾಂಡಿಯವರು ಒಂದನೇ ಕೌನ್ಸಿಲರಾಗಿಯೂ, ದಿವಾನ್ ಬಹದ್ದೂರ್ ಎಂ. ಎನ್. ಕೃಷ್ಣರಾಯರು ಎರಡನೇ ಕೌನ್ಸಿಲರಾಗಿಯೂ, ಮ|| ಬಿ. ಶ್ರೀನಿವಾಸಯ್ಯಂಗಾರರು ಫೈನಾನ್ಸಿಯಲ್ ಸೆಕ್ರೆಟರಿಯಾಗಿಯೂ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಕಂಟ್ರೋಲರಾದ ಮ|| ಎಂ. ವೀರರಾಜ ಅರಸಿನವರು 1 ತಿಂಗಳವರೆಗೆ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಅಸಿಸ್ಟೆಂಟ್ ಕಮಿಷನರ್ ಮ|| ಎಂ. ಶ್ಯಾಮಣ್ಣನವರು ಅ|| ಕಂಟ್ರೋಲರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ವಿಶ್ವವಿದ್ಯಾಲಯದ ರೆಜಿಸ್ಟ್ರಾರರಾದ ಮ|| ಎ. ಸುಬ್ರಹ್ಮಣ್ಯಅಯ್ಯರ್‌ರವರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟು ಅವರ ಬದಲು ಮಹಾರಾಜಾ ಕಾಲೇಜಿನ ಪ್ರೊಫೆಸರ್ ಮ|| ಬಿ.ಎಂ. ಶ್ರೀಕಂಠಯ್ಯನವರು ರೆಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

ಬ್ರಾಹ್ಮಣವಿದ್ಯಾಸಹಾಯಸಂಘ, ವೀರಶೈವವಿದ್ಯಾವರ್ಧಕಪಂಡುಸಂಘ, ಒಕ್ಕಲಿಗರಸಂಘ ಇತ್ಯಾದಿ ಸಂಘಗಳಲ್ಲಿ ಸರ್ಕಾರಿಯಧಿಕಾರಿಗಳು ಸಭಾಸ್ತರಾಗಿರಕೂಡದೆಂದು ಪ್ರಜಾಪ್ರತಿನಿಧಿಸಭಾಮೆಂಬರರ ಪ್ರಾರ್ಥನೆಯಂತೆ ಸರ್ಕಾರದಪ್ಪಣೆಯಾಗಿರುವುದಾಗಿ ಕೇಳುತ್ತೇವೆ.

ಹೊಳೇನರಸೀಪುರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಎಸ್. ಗೋವಿಂದರಾಜುಲುಯವರು 2 ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೂ ಬೆಂಗಳೂರಲ್ಲಿ ಅಡ್ವೊಕೇಟರಾಗಿರುವ ಮ|| ಸಿ. ಬಿ. ಶ್ರೀನಿವಾಸರಾಯರು ಆಕ್ಟಿಂಗ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿತರಾಗಿರುತ್ತಾರೆ.

ಸರ್ವೆಶಾಖೆಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿರುವ ಮ|| ಆರ್. ಎ. ನರಸಿಂಹಯ್ಯಂಗಾರರು ತೀರ್ಥಹಳ್ಳಿ ಸಬ್‌ಡಿವಿಜನ್ ಆಫೀಸರಾಗಿಯೂ, ಅಲ್ಲಿಯ ಸಬ್‌ಡಿವಿಜನ್ ಆಫೀಸರಾಗಿರುವ ಮ|| ಎಸ್. ಸೀತಾರಾಮಯ್ಯನವರು ಹಾಸನದ ಡಿಸ್ಟ್ರಿಕ್ಟ್ ಟ್ರಜರಿ ಆಫೀಸರಾಗಿಯೂ, ಟ್ರಜರಿ ಆಫೀಸರಾಗಿದ್ದ ಮಿ|| ಸಯದ್ ಅಬ್ದುಲ್ ಖಾಲಕ್‌ರವರು ಅಮಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಮ|| ಬಿ. ಕೆ. ಗರುಡಾಚಾರರು ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ|| ಅಬ್ಬಾಸ್‌ಖಾನ್‌ರವರಮೇಲೂ, ಮ|| ಜ. ಪರಮಶಿವಯ್ಯನವರು ಮೊದಲಾಗಿ ಐವರು ಕೌನ್ಸಿಲರುಗಳಮೇಲೂ ಮಾನನಷ್ಟಕ್ಕಾಗಿ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ವಿವಾದವನ್ನು ಮಾಡಿರುವರಷ್ಟೆ? ಆದರೆ ದಿವಾನರು ಈ ವಿಚಾರದಲ್ಲಿ ಪ್ರವೇಶಿಸಿ ಉಭಯರಿಗೂ ರಾಜೀಮಾಡಿಸಿರುವುದಾಗಿ ಕೇಳಿ ಸಂತೋಷಿಸುತ್ತೇವೆ.

ಕಳೆದ ಜೂನ್ ತಾ|| 22 ರಲ್ಲಿ ಆರಂಭಗೊಂಡು ನಡೆಯುತ್ತಿದ್ದ ನ್ಯಾಯವಿಧಾಯಕಸಭಾಧಿವೇಶನವು ಮೊನ್ನೆಯದಿನಸಾಯಂಕಾಲ ಮುಕ್ತಾಯಗೊಂಡಿತು. ಈ ಸಭಾಪತಿತ್ವವನ್ನು ಮಿ|| ಮಿರ್ಜಾಯವರು ವಹಿಸಿದುದು ಇದೇ ಪ್ರಥಮವಾದರೂ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಈ ಸಭೆಗಾಗಿ ಬಂದಿದ್ದ ಮೆಂಬರುಗಳೂ, ಅಧಿಕಾರಿಗಳೂ ನೆನ್ನೆಯದಿನದಿಂದಲೂ ಸ್ವಸ್ಥಳಗಳಿಗೆ ಹಿಂದಿರುಗುತ್ತಿರುವರು.

ರಾಜಧಾನಿಯ ಸಂತೆಪೇಟೆವರ್ತಕಮಂಡಲಿಯವರು ತಮಗೆ ಸೇರಿರುವ ಸಂತೆಪೇಟೆಯ ಶ್ರೀರಾಮಮಂದಿರದಲ್ಲಿ ತಾ|| 21-4-26 ರಿಂದ ಜರುಗಿದ ಶ್ರೀರಾಮಪಟ್ಟಾಭಿಷೇಕ ಸಂತರ್ಪಣೆ ಮೊದಲಾದ ಕಾರ್ಯಗಳಿಗಾಗಿ ವರ್ತಕಮಹಾಜನಗಳಿಂದ ನಗದಾಗಿಯೂ ಧಾನ್ಯರೂಪವಾಗಿಯೂ 1801 ರೂಪಾಯಿಗಳು ಬಂದುದರಲ್ಲಿ 1223-1-4 ರೂ. ವೆಚ್ಚವಾಗಿ ಉಳಿದ 577-15-1 ರೂ. ಗಳು ಹಿಂದೆ ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ಟಾಗಿರುವ 873-5-0 ರೂ. ಜತೆಗೆ ಇಡಲ್ಪಟ್ಟಿರುವುದೆಂದು ಈ ಮಂದಿರದ ಪರವಾಗಿ ಮ|| ಎಂ. ಸಿ. ತಮ್ಮಯ್ಯ ಸುಬ್ಬಣ್ಣ ಇವರು ಪ್ರಕಟಿಸಿರುವ ಆಯವ್ಯಯದ ಪಟ್ಟಿಯಿಂದ ತಿಳಿಯಬರುತ್ತದೆ.

ಮೈಸೂರುಸೀಮೆಯಲ್ಲಿ ಗೋವಧಾನಿರೋಧಕಶಾಸನವನ್ನು ಮಾಡಬೇಕೆಂಬ ವಿಚಾರವು ನ್ಯಾಯವಿಧಾಯಕಸಭೆಯಲ್ಲಿ ಚರ್ಚೆಗೆ ಬಂದಾಗ್ಯೆ, "ನಾನು ಮಹಮ್ಮದೀಯನಾದಾಗ್ಯೂ ಗೋಸಂರಕ್ಷಣೆಯಲ್ಲಿ ಪೂರ್ಣಸಹಾನುಭೂತಿಯನ್ನುಳ್ಳವನಾಗಿದ್ದೇನೆ, ಆದರೆ ದಿವಾನನಾಗಿದ್ದು ಮಾತ್ರ ಯಾವುದನ್ನು ಮಾಡಲೂ ಬಹಳ ಕಷ್ಟವಿರುವುದರಿಂದ ಈ ನಿರೋಧಕಶಾಸನದ ಅವಶ್ಯಕತೆಯನ್ನೂ ಅನಾವಶ್ಯಕತೆಯನ್ನೂ ಕುರಿತು ಪರ್ಯಾಲೋಚಿಸುವುದಕ್ಕಾಗಿ ಒಂದು ಕಮಿಟಿಯೇರ್ಪಡಿಸಲ್ಪಡುತ್ತದೆ" ಎಂದು ಸಭಾಧ್ಯಕ್ಷರಾದ ಮಿ|| ಮಿರ್ಜಾಯವರು ಅಪ್ಪಣೆಕೊಡಿಸಿದರು. ಇದಕ್ಕಾಗಿ ಹಿಂದುಗಳು ಅವರನ್ನು ವಂದಿಸಿ ಕೂಡಲೆ ಶಾಸನವು ಮಾಡಲ್ಪಡುವುದೆಂದು ನಿರೀಕ್ಷಿಸುತ್ತಾರೆ.

ರಾಜಧಾನಿಯಲ್ಲಿ ಒಬ್ಬ ದೊಡ್ಡಮನುಷ್ಯರ ಉಪಪತ್ನಿಯಾಗಿದ್ದು ಕಾರಣಾಂತರದಿಂದ ದೂರೀಕರಿಸಲ್ಪಟ್ಟ ತಿರುಮಕೂಡ್ಲು ನರಸೀಪುರದ ಒಬ್ಬ ಯುವತಿಯು ಇಟಿಗೆಗೂಡಿನ ಕಡೆ ಒಬ್ಬಳೇ ಹೋಗುತ್ತಿದ್ದುದನ್ನು ಒಬ್ಬ ಪೋಲೀಸಿನವನು ಕಂಡು, ಯಾರು ಎಲ್ಲಿಗೆ ಹೋಗುತ್ತೀಯೆ? ಎಂದು ಕೇಳಿ ಅವಳು ಸರಿಯಾಗಿ ಉತ್ತರವನ್ನು ಕೊಡದೆ ಹೋದುದರಮೇಲೆ ಅನುಮಾನಿಸಿ ಅವಳನ್ನು ಒಂದು ಜಟ್ಕಾಬಂಡಿಯಲ್ಲಿ ಕುಳ್ಳಿರಿಸಿಕೊಂಡು ಚಾಮುಂಡಿಬೆಟ್ಟದ ತಿಬ್ಬಿಗೆ ಕರೆದುಕೊಂಡು ಹೋಗಿ ಅಲ್ಲಿ ಅವಳ ಮಾನಭಂಗಮಾಡಿ ಮೈಮೇಲಿದ್ದ ನಗಗಳನ್ನು ಕಸುಕೊಂಡು ಕಳುಹಿಸಿಬಿಟ್ಟನು. ಜಟ್ಕಾಬಂಡಿಯವನು ಅವಳನ್ನು ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಊರೊಳಕ್ಕೆ ಬಂದು ಪೋಲೀಸುಠಾಣಾದವರಿಗೆ ನಡೆದ ಸಂಗತಿಯನ್ನು ತಿಳಿಸಿದನು. ಅಗರಮೊಹಲ್ಲಾ ಇನ್ಸ್‌ಪೆಕ್ಟರು ಅವಳ ವಾಂಗ್ಮೂಲವನ್ನು ತೆಗೆದುಕೊಂಡು ಆ ಕಾನೆಸ್ಟಬಲನ್ನು ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುತ್ತಾರೆ.

ಅಮಲ್ದಾರರುಗಳಾದ ಮ|| ಬಿ.ಕೆ. ಸುಬ್ಬರಾಯ ಇವರು ಅರಸೀಕೆರೆ ತಾ|| ಇಂದ ತೀರ್ಥಹಳ್ಳಿ ತಾ|| ಗೂ, ಮ|| ಬಿ. ಲಿಂಗಯ್ಯನವರು ತೀರ್ಥಹಳ್ಳಿ ತಾ|| ಇಂದ ಮಾಗಡಿ ತಾ|| ಗೂ, ಮ|| ಟಿ. ವೆಂಕಟರಂಗಚಾರವರು ಗೋರಿಬಿದನೂರು ತಾ|| ಗೂ. ಕೆ. ಸುಬ್ಬರಾಯರು ಗೋರಿಬಿದನೂರು ತಾ|| ಇಂದ ಗುಬ್ಬಿ ತಾ|| ಗೂ, ಮ|| ಆರ್. ತಮ್ಮಾಜಿರಾಯರು ಕೋಲಾರ ತಾ|| ಗೂ, ಮ|| ಜಿ. ಪದ್ಮನಾಭರಾಯರು ಕೋಲಾರ ತಾ|| ಇಂದ ಶ್ರೀನಿವಾಸಪುರ ತಾ|| ಗೂ, ಮ|| ಕೆ. ಅನಂತಪದ್ಮನಾಭಯ್ಯನವರು ಮಾಗಡಿ ತಾ|| ಇಂದ ಶ್ರೀರಂಗಪಟ್ಟಣ ತಾ|| ಗೂ, ಮ|| ಟಿ ಕೃಷ್ಣರಾಯರು ಶ್ರೀರಂಗಪಟ್ಟಣ ತಾ|| ಇಂದ ಬೇಲೂರು ತಾ|| ಗೂ, ಮ|| ಟಿ. ವಿ. ರಾಮಶಾಸ್ತ್ರಿಗಳು ಸಾಗರ ತಾ|| ಇಂದ ಅರಸೀಕೆರೆ ತಾ|| ಗೂ, ಮ|| ಕೆ. ವೇದಾಂತಯ್ಯಂಗಾರರು ಬೇಲೂರು ತಾ|| ಇಂದ ಚಳ್ಳಕೆರೆ ತಾ|| ಗೂ, ಮ|| ಬಿ. ಎ. ಸರಾಫ್‌ರವರು ಚಳ್ಳಕೆರೆ ತಾ|| ಇಂದ ಸಾಗರ ತಾ|| ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರು ತಮ್ಮ ದ್ವಿತೀಯಕುಮಾರಿ ಸೌ|| ಇಂದಿರಾದೇವಿಯನ್ನು ಶ್ರಾವಂಡಹಳ್ಳಿಯ ಮ|| ಪಾಪಣ್ಣನವರ ಕುಮಾರ ರಾ|| ಜಯಕೀರ್ತಿಯವರಿಗೆ ಕೊಟ್ಟು ಕಳೆದ ಬುಧವಾರ ತಮ್ಮ ಬಂಗಲೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿಸಿದ ವಿವಾಹಮಹೋತ್ಸವಕ್ಕೆ ದಿವಾನರು, ಕೌನ್ಸಿಲರುಗಳು, ರಾಜಾಧಿಕಾರಿಗಳು, ಅರಸುಮಕ್ಕಳು, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳು, ಮ್ಯುನ್ಸಿಪಲ್ ಕೌನ್ಸಿಲರುಗಳು, ಲಾಯರುಗಳು, ವರ್ತಕರು ಮೊದಲಾದವರನ್ನು ಆಹ್ವಾನಿಸಿ ತಿರುವಂಡರಂ ಬ್ರದರ್ಸ್‌ರವರ ಕೊಳಲು ಮತ್ತು ಪಿಟೀಲು ವಾದನಗಳಿಂದಲೂ ಗಂಧಪುಷ್ಪ ಫಲಗಳ ವಿನಿಯೋಗದಿಂದಲೂ ಸತ್ಕರಿಸಿದರು. ಅತಿಥಿಗಳು ಶ್ರೀಮಂತರ ಆದರಾತಿಶಯದಿಂದ ಸಂತುಷ್ಟರಾಗಿ ಅವರನ್ನು ವಂದಿಸಿ ನೂತನದಂಪತಿಗಳ ಶ್ರೇಯಸ್ಸನ್ನು ಕೋರಿ ತೆರಳಿದರು. ಮನೆಯವರೆಲ್ಲರೂ ಈ ಉತ್ಸವಸಂಭ್ರಮದಲ್ಲಿರುವಾಗ್ಗೆ ಫಲಹಾರದ ಬೀರುವಿನಲ್ಲಿಟ್ಟಿದ್ದ 9-10 ಸಾವಿರ ರೂಪಾಯಿಗಳ ಬೆಲೆಬಾಳುವ ಸೀಮೇಕಮಲದ ಎರಡು ಕಂಠಾಭರಣಗಳು ಅಪಹರಿಸಲ್ಪಟ್ಟವೆಂದು ಕೇಳಿ ವಿಷಾದಿಸುತ್ತೇವೆ.

ಮದ್ರಾಸ್ ಗೌರ್ನರ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಸೀನಿಯರ್ ಮೆಂಬರಾಗಿದ್ದು ಈಗತಾನೆ ಉದ್ಯೋಗದಿಂದ ನಿವೃತ್ತರಾಗಿರುವ ಸರ್ ಚಾರ್ಲ್ಸ್ ಟಾಡ್‌ಹಂಟರ್‌ರವರು ನಮ್ಮ ಶ್ರೀಮನ್ ಮಹಾರಾಜರವರ ಪ್ರೈವೆಟ್‌ಸೆಕ್ರೆಟರಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ಕೊಂಚಕಾಲ ಗೌರ್ನರು ರಜದಮೇಲಿದ್ದಾಗ್ಗೆ ಗೌರ್ನರಾಗಿ ಬದಲುನೋಡಿದ್ದರಲ್ಲದೆ ವಿಶೇಷ ಲೋಕಾನುಭವಿಗಳೂ, ಕಾರ್ಯದಕ್ಷರೂ ಎಂದು ಹೆಸರ್ಗೊಂಡಿರುವರು. ಇಂತಹ ಸಮರ್ಥರಾದ ಐರೋಪ್ಯಾಧಿಕಾರಿಗಳ ಸಹಾಯವು ನಮ್ಮ ಪ್ರಭುತ್ವದವರಿಗೆ ದೊರುಕಿದುದಕ್ಕಾಗಿ ಪ್ರಜೆಗಳು ಸಂತೋಷಪಟ್ಟು ಇವರಿಂದ ನಮ್ಮ ಸಂಸ್ಥಾನಕ್ಕೆ ಪ್ರಯೋಜನವಾಗಲೆಂದು ಕೋರುತ್ತಾರೆ. ಇವರು ಸಪತ್ನೀಕರಾಗಿ ರಾಜಧಾನಿಗೆ ಬಂದು ಪಾರ್ಕ್‌ಹೌಸಿನಲ್ಲಿ 3-4 ದಿನಗಳವರೆಗಿದ್ದು ಶ್ರೀಮನ್ ಮಹಾರಾಜರವರ ದರ್ಶನಭಾಷಣಗಳನ್ನು ಮಾಡಿಕೊಂಡು ಪ್ರೈವೆಟ್ ಸೆಕ್ರೆಟರಿಯಾಫೀಸು ಮೊದಲಾದವುಗಳನ್ನು ಪರಾಮರ್ಶಿಸಿ ಸೀಮೆಗೆ ಪ್ರಯಾಣಮಾಡಿದರು, ಮತ್ತು ನ್ಯೂಜಿಲೆಂಡು ಮೊದಲಾದ ದೇಶಗಳಲ್ಲಿ ಸಂಚಾರಮಾಡಿಕೊಂಡು ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ಅಥವಾ ನವಂಬರ್ ತಿಂಗಳ ಆದಿಭಾಗದಲ್ಲಿ ಮೈಸೂರಿಗೆ ಬಂದು ಪ್ರೈವೆಟ್‌ಸೆಕ್ರೆಟರಿಯುದ್ಯೋಗವನ್ನು ವಹಿಸಿಕೊಳ್ಳುವವರಾಗಿರುವರೆಂದು ತಿಳಿಯಬರುತ್ತದೆ.

ರಾಜಕುಮಾರಿ ಸೌ|| ಲೀಲಾವತಿಯವರು ಮತ್ತು ಅವರ ಪತಿಯಾದ ಮ|| ಕೆ. ಬಸವರಾಜಅರಸಿನವರು ಸರ್ವಾಲಂಕಾರವಿಭೂಷಿತರಾಗಿ ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಸಕಲ ರಾಜಮರ್ಯಾದೆಯಿಂದಲೂ, ರಾಜಬಂಧುಗಳಿಂದಲೂ ಕೂಡಿ ಕಳೆದ ಸೋಮವಾರ ರಾತ್ರಿ 7½ ಘಂಟೆಗೆ ಅರಮನೆಯ ಉತ್ತರದ್ವಾರದಿಂದ ಹೊರಟು ಎಲಿಫೆಂಟ್‌ಗೇಟ್ ಮಾರ್ಗವಾಗಿ ಸಯ್ಯಾಜಿರಾವ್ ರೋಡಿನಲ್ಲಿ ಲೈಬ್ರರಿ ಬಳಿ ರೈಲ್ವೆಸ್ಟೇಷನ್ ಮಾರ್ಗವಾಗಿ ಸೆಂಟ್ರಲ್‌ಪೊಲೀಸುಠಾಣಾದವರೆಗೂ ಬಂದು ಅಲ್ಲಿಂದ ದೊಡ್ಡಪೇಟೆಗೆ ತಿರುಗಿಕೊಂಡು 9½ ಘಂಟೆಯವೇಳೆಗೆ ಅರಮನೆಯನ್ನು ತಲುಪಿದರು. ವಿದ್ಯುದ್ದೀಪಗಳ ಕಾಂತಿಯೊಂದಿಗೆ ವಧೂವರರು ಧರಿಸಿದ್ದ ಅಮೋಘವಾದ ನವರತ್ನಾಭರಣಗಳ ಕಾಂತಿಯು ಕೂಡಿಕೊಂಡು ಮಾರ್ಗಗಳ ಇಕ್ಕೆಲದಲ್ಲೂ ಕಿಕ್ಕಿರಿದು ನಿಂತುಕೊಂಡು ನೋಡುತ್ತಿದ್ದ ಪ್ರೇಕ್ಷಕಜನರನ್ನು ವಿಸ್ಮಯಗೊಳಿಸಿತ್ತು. ಮ|| ಬಸವರಾಜಅರಸಿನವರು ವಂದಿಸಿದವರನ್ನು ಪ್ರತಿಯಾಗಿ ವಂದಿಸುತ್ತಿದ್ದುದನ್ನು ನೋಡಿ ಜನರು ವರನ ವಿದ್ಯಾಪಾಂಡಿತ್ಯಕ್ಕೆ ತಕ್ಕಷ್ಟು ವಿನಯಾದಿಸದ್ಗುಣವಿರುವುದನ್ನು ನೋಡಿ ಕೊಂಡಾಡುತ್ತಿದ್ದರು. ರಾಣಿವಾಸದವರು ಶ್ರೀ|| ಚಾಮರಾಜಒಡೆಯರವರ ಪ್ರತಿಮೆಯ ಪೀಠದ ಬಳಿ ಮೋಟಾರುಬಂಡಿಗಳಲ್ಲಿ ಕುಳಿತು ಉತ್ಸವವನ್ನು ನೋಡುತ್ತಿದ್ದು ಅಲ್ಲಿಂದ ಅರಮನೆಗೆ ಚಿತ್ರಿಸಿ ನೂತನವಾಗಿ ಕಟ್ಟಲ್ಪಡುತ್ತಿರುವ ಸಜ್ಜೆಯ ಹಂತಗಳಮೇಲೆ ನಿಂತು ವಧೂವರರನ್ನು ಮನಸ್ಕಾರ ಪರಾಮರ್ಶಿಸಿದರು. ಮ|| ಬಸವರಾಜ ಅರಸಿನವರು ಅರಮನೆಯ ಪ್ರಾಕಾರಕ್ಕೆ ಬಂದಕೂಡಲೆ ಎದ್ದುನಿಂತು ಸಜ್ಜೆಯಮೇಲಿದ್ದ ಶ್ರೀಮನ್ಮಹಾರಾಜರವರಿಗೂ ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯವರಿಗೂ ಮಹಾರಾಣಿಯವರಿಗೂ ವಿನಮ್ರರಾಗಿ ನಮಸ್ಕರಿಸಿ ಅವರುಗಳ ಆಶೀರ್ವಾದವನ್ನು ಪಡೆದರು.

ಭರತಖಂಡದ ವೃತ್ತಾಂತಗಳು.

ಬ್ರಹ್ಮಸಮಾಜದವರು ಹಿಂದುಗಳು ಅಹುದೋ ಅಲ್ಲವೋ ಎಂಬ ವಿಚಾರವಾಗಿ ಕಲಕತ್ತಾಕೋರ್ಟಿನಲ್ಲಿ ವಿವಾದವು ನಡೆದು ಅವರು ಹಿಂದುಗಳೆಂದು ನಿರ್ಧರವಾಯಿತು.

ಬರುವ ಸೆಪ್ಟಂಬರಿನಲ್ಲಿ ಜಿನೀವಾದಲ್ಲಿ ನಡೆಯುವ ನಾನಾಜನಾಂಗಕೂಟದ ಮಹಾಸಭೆಗೆ ಭಾರತದೇಶೀಯರಾಜರ ಪ್ರತಿನಿಧಿಯಾಗಿ ಕಪೂರ್ಥಲಾ ಮಹಾರಾಜರು ಹೋಗುವವರಾಗಿರುವರು.

1925 ನೆಯ ವರ್ಷದಲ್ಲಿ ಬೊಂಬಾಯಾಧಿಪತ್ಯದಲ್ಲೆಲ್ಲ ಒಟ್ಟು 1331 ಜನರು ದುಷ್ಟಪ್ರಾಣಿಗಳಿಂದ ಮೃತರಾದರೆಂದೂ, ಇವರಲ್ಲಿ 1325 ಜನರು ಸರ್ಪದಷ್ಟವೊಂದರಿಂದಲೇ ಸತ್ತರೆಂದೂ ವರದಿಯಾಗಿದೆ.

ಕಾಶೀಪಟ್ಟಣದ ಸೆರೆಮನೆಯಲ್ಲಿ ಬಂದಿಯಾಗಿರುವ ಲಾಲಖಾನನೆಂಬುವವನು ಜೈಲರ ನಾಲಿಗೆಯನ್ನು ಚೂರಿಯಿಂದ ಕುಯಿದುಹಾಕಿಬಿಟ್ಟನು. ಇದರಿಂದ ಆ ಜೈಲರು ಮಾತನಾಡಲಿಕ್ಕಿಲ್ಲವಾಗಿದೆಯಂತೆ.

ಶ್ರೀ|| ದೇಶಬಂಧುಚಿತ್ತರಂಜನದಾಸರವರ ಪುತ್ರರಾದ ಚಿರರಂಜನದಾಸರವರು ತಮ್ಮ ಅಲ್ಪವಯಸ್ಸಿನಲ್ಲಿ ವಿಧಿವಶರಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ಇವರ ತಾಯಿ ವಾಸಂತೀದೇವಿಯವರು ದೇಶೋದ್ಧಾರಕ ಪತಿವಿಯೋಗದುಃಖದೊಂದಿಗೆ ಏಕಮಾತ್ರಪುತ್ರವಿಯೋಗದುಃಖವನ್ನೆಂತು ಸಹಿಸುವರು.

ಬೆಂಗಳೂರಿನಿಂದ ಮದ್ರಾಸಿಗೆ ರೈಲುಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ 30 ವರ್ಷವಯಸ್ಸಿನ ಒಬ್ಬ ಕ್ರೈಸ್ತನು ಇತರ ಪ್ರಯಾಣಿಕರೊಡನೆ ಮಾತನಾಡುತ್ತಿದ್ದು ಆಕಸ್ಮಿಕವಾಗಿ ಜ್ಞಾನತಪ್ಪಿ ಕೂಡಲೆ ಮೃತನಾದನು. ಅವನ ಜೇಬಿನಲ್ಲಿದ್ದ ಕಾಗದಪತ್ರಗಳನ್ನು ನೋಡುವಲ್ಲಿ ಅವನು ಮೋಟಾರುಬಂಡಿಯನ್ನು ನಡೆಸುವವನೆಂದು ಗೊತ್ತಾಯಿತು.

ಕೊಲ್ಲಾಪುರದ ಪ್ರಭುತ್ವದವರು ತಮ್ಮ ಸಂಸ್ಥಾನದಲ್ಲಿ 14 ವರ್ಷವಯಸ್ಸಿನೊಳಗಿರುವ ಬಾಲಕರಿಗೂ, 10 ವರ್ಷವಯಸ್ಸಿನೊಳಗಿರುವ ಬಾಲಿಕೆಯರಿಗೂ ಯಾರೂ ವಿವಾಹಮಾಡಕೂಡದೆಂದೂ, ಹಾಗೆ ಮಾಡಿದವರು 2,000 ರೂಪಾಯಿನ ಅರ್ಥದಂಡಕ್ಕೆ ಗುರಿಯಾಗುವರೆಂದೂ ಹೊಸದಾಗಿ ಬಾಲವಿವಾಹನಿರೋಧಕಶಾಸನವನ್ನು ಮಾಡಿರುತ್ತಾರೆ

ರಾವಲ್ಪಿಂಡಿಯ ಮಹಮ್ಮದೀಯರು ರಾಜಕೀಯ ಮತ್ತು ಧಾರ್ಮಿಕ ವಿಚಾರಗಳಲ್ಲಿ ಹಿಂದುಗಳಿಗಿನ್ನ ಹೆಚ್ಚು ಸೌಲಭ್ಯಗಳನ್ನು ಹೊಂದುವುದಕ್ಕಾಗಿ ದಂಗೆಯೆದ್ದು ಧಾನ್ಯದ ಮಾರ್ಕೆಟ್ಟಿಗೆ ಬೆಂಕಿಯನ್ನು ಹೊತ್ತಿಸಿದರು, ಸೀಮೆಯೆಣ್ಣೆಯನ್ನು ಚೆಲ್ಲಾಡಿದರು, ಬೆಂಕಿಯನ್ನು ಆರಿಸಲು ಬಂದ ಜನರನ್ನು ದೊಣ್ಣೆಗಳಿಂದ ಪ್ರಹರಿಸಿದರು. ಈ ಹಾವಳಿಯಿಂದ 8-10 ಮರಣಗಳಾಗಿ ಎರಡುಕೋಟಿರೂಪಾಯಿಗಳವರೆಗೆ ನಷ್ಟವುಂಟಾಗಿರುತ್ತದಂತೆ.

ಲಾಹೋರುಡಿಸ್ಟ್ರಿಕ್ಟಿಗೆ ಸೇರಿದ ಒಂದುಗ್ರಾಮದಲ್ಲಿ ಒಬ್ಬ ಬಡಗಿಯ ಹೆಂಗುಸು ಒಂದುವಿಕಾರಸ್ವರೂಪಿನ ಮಗುವನ್ನು ಹೆತ್ತಿದ್ದಳು. ಅದರ ಮುಖವು ಕರಡಿಯಮುಖದಂತಿದ್ದಲ್ಲದೆ ನಾಲಿಗೆಯು ಕುತ್ತಿಗೆಯಲ್ಲೂ, ಕಿವಿಗಳು ಕತ್ತೆಯಕಿವಿಗಳಂತೆ ಜೋಲಾಡುತ್ತಲೂ ಇದ್ದುವು. ಇದು ಜನಿಸಿದ ಕೆಲಗಂಟೆಗಳ ತರುವಾಯ ಸತ್ತುಹೋಯಿತು. ಈ ವಿಚಿತ್ರಮಗುವನ್ನು ನೋಡಲು ನೆರೆಗ್ರಾಮಗಳಿಂದ ಸಾವಿರಾರುಜನರು ಬಂದು ಹೋಗುತ್ತಿದ್ದರು.

ಬೊಂಬಾಯಿನಗರದ ಸಿ. ಐ. ಡಿ. ಪೋಲೀಸಿನಲ್ಲಿ ಕಳೆದ 18 ವರ್ಷಗಳಿಂದಲೂ ಕೆಲಸಮಾಡುತ್ತಿದ್ದ ಇನ್ಸ್‌ಪೆಕ್ಟರ್ ಕವೀಶ್ವರ್ ಎಂಬಾತನು ಲಂಚವನ್ನು ತೆಗೆದುಕೊಂಡನೆಂಬುದರಮೇಲೆ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟನು. ಆ ನಗರದಲ್ಲಿ ಕಳೆದ ಒಂದೂವರೆ ವರ್ಷದಿಂದೀಚೆಗೆ 7 ಜನ ಪೋಲೀಸರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟಿರುವರಂತೆ. ಈ ಮೈಸೂರುಸೀಮೆಯಲ್ಲಿ ಇಂತಹ ಲಂಚಕೋರ ಪೋಲೀಸು ಅಧಿಕಾರಿಗಳ ಸಂಖ್ಯೆಯು ಹೆಚ್ಚಾಗಿದ್ದರೂ ಅವರಿಗೆ ಶಿಕ್ಷೆಯಾಗುವುದಕ್ಕೆ ಬದಲು ರಕ್ಷಣೆಯಾಗುತ್ತಿದೆ.

ರಾವಲ್ಪಿಂಡಿಗೆ 10 ಮೈಲಿ ದೂರದಲ್ಲಿರುವ ಸೈದಪುರ ಗ್ರಾಮಕ್ಕೆ 250 ಜನ ಕಾಡುಗುಡ್ಡವಾಸಿಗಳು ನುಗ್ಗಿ ಹಿಂದುಜನರನ್ನು ಚೆನ್ನಾಗಿ ಪ್ರಹರಿಸಿ ಪ್ರಮುಖರಾದ ಲಕ್ಷ್ಮಣದಾಸರನ್ನೂ ಅವರ ಮಗ ನೇಕಿರಾಮನನ್ನೂ ಕೊಂದು ಎಲ್ಲರ ಮನೆಯನ್ನು ಸೂರೆಮಾಡಿ ಗ್ರಾಮಕ್ಕೆ ಬೆಂಕಿಯನ್ನು ಹೊತ್ತಿಸಿ ಪಲಾಯನರಾದರು. ಈ ಸುದ್ದಿಯನ್ನು ಕೇಳಿ ಪೋಲೀಸರು ಬಂದು ಗ್ರಾಮವೇ ಹೊತ್ತಿಕೊಂಡುರಿಯುತ್ತಿರುವುದನ್ನು ನೋಡಿ ಬೆಂಕಿಯನ್ನಾರಿಸಲು ಪ್ರಯತ್ನಪಟ್ಟರಾದರೂ ದೇವಾಲಯಗಳೂ, ಮನೆಮಠಗಳೂ ಸುಟ್ಟು ಭಸ್ಮವಾದುವು. ಜನರಿಗೆ ವಾಸಿಸಲು ಮನೆಯಿಲ್ಲದೆಯೂ ತಿನ್ನಲು ಪದಾರ್ಥಗಳಿಲ್ಲದೆಯೂ ರಾವಲ್ಪಿಂಡಿಗೆ ವಲಸೆ ಹೋಗುತ್ತಿದ್ದರು. ಆ ದುಷ್ಟ ಕಾಡುಜನರನ್ನು ಹಿಡಿಯಲು ಪೋಲೀಸರು ಪ್ರಯತ್ನಿಸಿರುತ್ತಾರೆ.

ಈಗ ರೈತರು 3-4 ತಿಂಗಳವರೆಗೆ ಬೇಸಾಯಕೆಲಸಗಳಲ್ಲಿ ನಿರತರಾಗಿದ್ದು ಅನಂತರ ಮುಂದಣ ಬೇಸಾಯಕಾಲದವರೆಗೂ ನಿರುದ್ಯೋಗಿಗಳಾಗಿರುವರಲ್ಲದೆ ಬೆಳೆದ ಧಾನ್ಯವನ್ನು ಅಲ್ಪಸ್ವಲ್ಪ ಬೆಲೆಗೆ ದಳ್ಳಾಳಿಗಳ ಮೂಲಕ ವಿಕ್ರಯಿಸಿ ಜೀವನಕ್ಕೆ ಸಾಲದೆ ಪೇಚಾಡುತ್ತಿರುವರಷ್ಟೆ? ಆದರೆ ಇದು ತಪ್ಪಿ ಅವರು ವರ್ಷಕಾಲ ಉದ್ಯೋಗನಿರತರಾಗಿ ಹೆಚ್ಚು ಆದಾಯವನ್ನು ಹೊಂದುವಂತೆ ಮಾಡುವುದಕ್ಕಾಗಿ ಬೆಳೆದ ಬತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡಲು, ಕಬ್ಬಿನಿಂದ ಬೆಲ್ಲವನ್ನೂ ಸಕ್ಕರೆಯನ್ನೂ ತಯಾರಿಸಲು, ಕಡಲೆಕಾಯಿಬೀಜದಿಂದ ಎಣ್ಣೆಯನ್ನು ತೆಗೆಯಲು, ಹತ್ತಿಯನ್ನು ಬಿಡಿಸಿ ಅರಳೆಮಾಡಲು ಅಥವಾ ನೂಲನ್ನು ತೆಗೆಯಲು ತಕ್ಕ ಯಂತ್ರಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಸಾಕಷ್ಟು ದ್ರವ್ಯಸಹಾಯಮಾಡಬೇಕೆಂದು ಮದ್ರಾಸುಪ್ರಭುತ್ವದವರು ಪರ್ಯಾಲೋಚಿಸುತ್ತಿರುವರು.

"ನಾನು ಭರತಖಂಡದ ಚಕ್ರವರ್ತಿಯಾಗಿದ್ದಲ್ಲಿ ಸಮಸ್ತ ಜಾತಿಯವರನ್ನು ಯಾವತಾರತಮ್ಯವೂ ಇಲ್ಲದೆ ಒಬ್ಬ ತಂದೆತಾಯಿ ಮಕ್ಕಳಂತೆ ಪರಿಗಣಿಸಿ ಪರಿಪಾಲಿಸುತ್ತ ಸೇನೆಯನ್ನು ತೆಗೆದುಬಿಟ್ಟು ಜನರನ್ನು ಕಳ್ಳಕಾಕರ ಭಯದಿಂದ ಸಂರಕ್ಷಿಸಲು ಪೋಲೀಸರನ್ನು ಮಾತ್ರ ಇಟ್ಟುಕೊಳ್ಳುತ್ತಿದ್ದೆನು. ಭರತಖಂಡದ ಎಲ್ಲೆಕಟ್ಟಿನ ಜನರಿಗೆ ಬ್ರಿಟಿಷರು ಈಗ ಕೊಡುತ್ತಿರುವ ಲಂಚವನ್ನು ನಿಲ್ಲಿಸಿ ಅವರೊಡನೆ ಮಿತ್ರತ್ವವನ್ನು ಬೆಳಸಿ ಅವರ ಜೀವನೋಪಾಯಮಾರ್ಗವನ್ನು ಕಲ್ಪಿಸಿಕೊಡುತ್ತಿದ್ದೆನು. ಭರತಖಂಡವಾಸಿಗಳಾದ ಐರೋಪ್ಯರ ಸುರಕ್ಷತೆಯ ವಿಚಾರದಲ್ಲಿ ಪೂರ್ಣ ಭರವಸೆಯನ್ನು ಕೊಡುತ್ತಿದ್ದೆನು. ಪರದೇಶಗಳಿಂದ ಬರುವ ಪದಾರ್ಥಗಳಮೇಲೆ ವಿಶೇಷ ಸುಂಕವನ್ನು ಹಾಕಿ ತನ್ಮೂಲಕ ದೇಶೀಯ ಕೈಗಾರಿಕೆಗಳಿಗೆ ಉತ್ತೇಜನಕೊಟ್ಟು ಪ್ರತಿಯೊಂದು ಗ್ರಾಮದಲ್ಲೂ ಬಟ್ಟೆಯು ನೇಯಲ್ಪಡುವಂತೆ ಮಾಡುತ್ತಿದ್ದೆನು. ಪರದೇಶದಿಂದ ಮಾದಕಪದಾರ್ಥಗಳನ್ನು ಬರಗೊಡದೆ ಔಷಧಿಯುಪಯೋಗಕ್ಕಾಗಿ ಅಫೀಮನ್ನೂ ಸಾರಾಯನ್ನೂ ತಯಾರ್ಮಾಡುವುದರ ವಿನಾ ಕುಡಿಯಲುಪಯೋಗಿಸದಂತೆ ಸಾರಾಯಿ ಬಟ್ಟಿಗಳನ್ನೆಲ್ಲಾ ಮುಚ್ಚಿಸಿಬಿಡುತ್ತಿದ್ದೆನು. ಹಿಂದುಗಳಲ್ಲಿ ಉತ್ತಮವರ್ಣದವರಂತೆ ಅಸ್ಪೃಶ್ಯರೂ ದೇವಸ್ಥಾನಗಳು, ಪಾಠಶಾಲೆಗಳು ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ ನಿರಾತಂಕವಾಗಿ ಹೋಗಿಬರುವಂತೆ ಮಾಡುತ್ತಿದ್ದೆನು. ಹಿಂದುಮಹಮ್ಮದೀಯರ ಪ್ರಮುಖರನ್ನು ಬರಮಾಡಿಕೊಂಡು ಅವರ ಜೋಬುಗಳನ್ನು ಶೋಧಿಸಿ ಅವುಗಳಲ್ಲಿರಬಹುದಾದ ತಿಂಡಿಯ ಪದಾರ್ಥಗಳನ್ನೂ ಅವರ ವಶದಲ್ಲಿರುವ ಆಯುಧಗಳನ್ನೂ ಕಿತ್ತುಕೊಂಡು ಅವರೆಲ್ಲರನ್ನೂ ಒಂದು ಕೊಠಡಿಯಲ್ಲಿ ಕೂಡಿ ಬಾಗಿಲನ್ನು ಮುಚ್ಚಿ ಬೀಗಮುದ್ರೆಯಿಂದ ಭದ್ರಪಡಿಸಿದ್ದು ಅವರೆಲ್ಲರೂ ತಂತಮ್ಮ ಕಲಹವನ್ನು ಬಗೆಹರಿಸಿಕೊಂಡು ಒಗ್ಗಟ್ಟಾಗಿರುತ್ತೇವೆಂದು ಹೇಳಿದಮೇಲೆ ಹೊರಗೆ ಬಿಡುತ್ತಿದ್ದೆನು. ನಾನು ಸಾರ್ವಭೌಮನಾದಲ್ಲಿ ಮಾಡಬೇಕಾದ ವಿಷಯಗಳು ಇನ್ನೂ ಬಹಳವಾಗಿರುತ್ತವೆ" ಎಂದು ಎಂಗ್ ಇಂಡ್ಯಾ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಈ ಸಾರ್ವಭೌಮಪದವಿಯು ಲಭ್ಯವಾಗತಕ್ಕುದಲ್ಲವಾದರೂ ಬಡಪ್ರಜೆಗಳ ಕುಂದುಕೊರತೆಗಳನ್ನು ಬಲ್ಲವರು ಪಾಲಕರಾದಲ್ಲಿ ಹೇಗೆ ಮಾಡಬೇಕೆಂಬುದು ಗಾಂಧಿಯವರ ಲೇಖದಿಂದ ವ್ಯಕ್ತವಾಗುತ್ತದೆ.

ವಿದೇಶದ ವೃತ್ತಾಂತಗಳು

ಸುಮಾತ್ರಾದಲ್ಲಿ ಭೂಕಂಪವಾಗಿ ಸಾವಿರಾರು ಮನೆಗಳು ನಾಶವಾದುವು ಮತ್ತು ಅನೇಕ ಜನರು ಅಪಾಯವನ್ನು ಹೊಂದಿ 35 ಜನರು ಸತ್ತರು. ಇತರ ಕಡೆಯಲ್ಲೂ ಬಹಳ ನಷ್ಟಸಂಭವಿಸಿರುತ್ತದೆ.

ರಷ್ಯಾರಾಜಧಾನಿಯಾದ ಲೆನಿನ್‌ಗ್ರೇಡಿನಿಂದ ಏಸಾಖಂಡದ ಪೂರ್ವತೀರದಲ್ಲಿರುವ ವ್ಲಾಡಿವೋಸ್ಟಾಕ್‌ಪಟ್ಟಣದವರೆಗೆ ಹಾಕಲ್ಪಟ್ಟಿರುವ ರೈಲುಮಾರ್ಗವು 6,000 ಮೈಲಿ ದೂರವಿರುತ್ತದೆ. ಇಷ್ಟು ಉದ್ದವಾದ ರೈಲುಮಾರ್ಗವು ಪ್ರಪಂಚದ ಮತ್ತಾವಕಡೆಯಲ್ಲೂ ಇಲ್ಲವು.

ಮುಂತಜ್‌ಬೇಗಂನರ್ತಾಂಗನೆಯ ಮಾಯಾಬಲೆಗೆ ಸಿಲುಕಿ ಅರ್ಥಮಾನಹಾನಿಯನ್ನೂ, ರಾಜ್ಯಭ್ರಷ್ಟತೆಯನ್ನೂ ಹೊಂದಿದ ಇಂದೂರ ಮಹಾರಾಜರು 5 ಲಕ್ಷ ರೂ. ವರ್ಷಾಶನವನ್ನು ಪಡೆದುಕೊಂಡು ಆಂಗ್ಲದೇಶಕ್ಕೆ ಹೋಗಿರುವರಷ್ಟೆ. ಇವರು ಅಲ್ಲಿ ನಿಶ್ಚಿಂತರಾಗಿ ದೇಹದಾರ್ಢ್ಯವನ್ನು ಹೊಂದುತ್ತಿರುವರೆಂದೂ, ಇದರಿಂದ ಅವರ ದೇಹಬಲವು 360 ತೊಲಾಗಳಷ್ಟು ಹೆಚ್ಚಿರುವುದೆಂದೂ ತಿಳಿಯಬರುತ್ತದೆ.

ಭಾರತವೈಸ್‌ರಾಯ್ ಲಾರ್ಡ್ ಇರ್ವಿನ್‌ರವರ ತಂದೆಯವರಾದ ಲಾರ್ಡ್ ಹ್ಯಾಲಿಫಾಕ್ಸ್‌ರವರು ತಮ್ಮ ಕುಮಾರರನ್ನು ನೋಡುವುದಕ್ಕಾಗಿ ಬರುವ ನವಂಬರ್ ಅಥವಾ ಡಿಸಂಬರ್ ತಿಂಗಳಲ್ಲಿ ಭರತಖಂಡಕ್ಕೆ ಬರುವವರಾಗಿರುವರು. ಇವರು ಈವರೆಗೆಂದೂ ಭರತಖಂಡವನ್ನು ನೋಡಿಲ್ಲವಾದುದರಿಂದಲೂ, ವಯಸ್ಸುಗಳಿಸುತ್ತಿರುವುದರಿಂದಲೂ ಭರತಖಂಡಕ್ಕೆ ಹೋಗಿಬರಲು ನಿಶ್ಚಯಿಸಿರುವುದಾಗಿ ಒಬ್ಬ ಪತ್ರಿಕಾವಿಲೇಖಕನಿಗೆ ತಿಳಿಸಿದರಂತೆ.

ಫೋರ್ಡ್ ಮೋಟಾರುಬಂಡಿಗಳನ್ನು ತಯಾರಿಸುವ ಕಂಪೆನಿಯ ಲೆಕ್ಕವನ್ನು ನೋಡಿದುದರಲ್ಲಿ 1917 ರಿಂದ 1924 ರ ವರೆಗೆ 2,64,00,00,000 ರೂ. ಗಳುತ್ಪನ್ನವಾಗಿ ಆದಾಯದ ತೆರಿಗೆ ಮೊದಲಾದವುಗಳನ್ನು ಕಳೆದು 1,59,00,00,000 ರೂ. ಗಳು ಉಳಿದಿರುವುದಾಗಿಯೂ ಕಂಡುಬಂದಿರುತ್ತದೆ. ಈ ಕಂಪೆನಿಯ ಸಾಮಗ್ರಿಯಗಳೆಲ್ಲವೂ ಹೆನ್ರಿಫೋರ್ಡ್‌ರವರಿಗೂ, ಅವರ ಪತ್ನಿಗೂ, ಮಗನಿಗೂ ಸೇರಿರುವುದರಿಂದ ಪ್ರಪಂಚದಲ್ಲೆಲ್ಲಾ ಇವರುಗಳುತ್ಪನ್ನವೇ ಅಧಿಕವಾಗಿರುತ್ತದೆ.

ಅಮೇರಿಕೆಯ ಜಾರ್ಜ್‌ಹಾಸ್ಲರ್ ಜಾನ್ಸ್‌ನ್ ಎಂಬಾತನು 30 ದಿನಗಳವರೆಗೆ ನಿರಾಹಾರಿಯಾಗಿದ್ದು 1,000 ಮೈಲಿ ದೂರ ನಡೆಯಬೇಕೆಂದು ಸಂಕಲ್ಪಿಸಿ, ಈ ತಾ|| 1 ರಲ್ಲಿ ಷಿಕಾಗೋಪಟ್ಟಣದಿಂದ ಪ್ರಯಾಣಮಾಡಿ ದಿನ ಒಂದಕ್ಕೆ 35 ಮೈಲಿಗಳಂತೆ ನಡೆದು ನ್ಯೂಯಾರ್ಕ್‌ಪಟ್ಟಣವನ್ನು ತಲುಪುವವನಾಗಿರುವನು. ಈತನು ನಿತ್ಯದಲ್ಲೂ 20 ಶೀಸೆಗಳಷ್ಟು ನೀರನ್ನು ಕುಡಿಯುವುದರವಿನಾ ಇನ್ನಾವ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲ. ಪ್ರತಿದಿನವೂ 3 ವೇಳೆ ಷರಟುಗಳನ್ನು ಬದಲಾಯಿಸುವುದಕ್ಕಾಗಿ ಜತೆಯಲ್ಲಿ 100 ಷರ್ಟುಗಳನ್ನು ತೆಗೆದುಕೊಂಡು ಹೋಗಿರುತ್ತಾನೆ. ಮಾರ್ಗದಲ್ಲಿ ಇವನ ದೇಹಸ್ಥಿತಿಯನ್ನು ಪರೀಕ್ಷಿಸುವುದಕ್ಕಾಗಿ ಅಲ್ಲಲ್ಲಿಗೆ ಡಾಕ್ಟರುಗಳು ಸಿದ್ಧರಾಗಿರುವರು. ಲಂಘನದಿಂದ ಆರೋಗ್ಯವೂ ಶಕ್ತಿವರ್ಧನವೂ ಆಗುತ್ತದೆಂಬ ಸೂತ್ರವನ್ನು ನಿದರ್ಶನಪಡಿಸುವುದಕ್ಕಾಗಿ ಈತನು ಉಪವಾಸಪರ್ಯಟನವ್ರತವನ್ನು ಹಿಡಿದಿರುವುದಾಗಿದೆ.

ವಿವಾಹವಾಗತಕ್ಕ ವಧೂವರರು ಪರಸ್ಪರ ಅನುರೂಪರಾಗಿರುವುದಲ್ಲದೆ ಮಕ್ಕಳನ್ನು ಪಡೆದು ದೇಶದ ಪ್ರಜಾಸಂಖ್ಯೆಯನ್ನು ಅಭಿವೃದ್ಧಿಗೊಳಿಸತಕ್ಕವರಾಗಿರಬೇಕೆಂಬುದು ಜರ್ಮನಿಯವರ ಆಶಯವಾಗಿರುತ್ತದೆ. ಇದಕ್ಕಾಗಿ ಕಳೆದ ಜೂನ್ ತಿಂಗಳಾರಭ್ಯ ಬರ್ಲಿನ್ ಪಟ್ಟಣದಲ್ಲಿ ಒಂದು ವೈದ್ಯರ ಆಫೀಸು ಏರ್ಪಡಿಸಲ್ಪಟ್ಟಿದೆ. ವಿವಾಹವಾಗಲಿಷ್ಟಪಡುವ ಸ್ತ್ರೀಪುರುಷರು ಅಲ್ಲಿಯ ವೈದ್ಯರಿಂದ ಸಾಂಗವಾಗಿ ಪರೀಕ್ಷಿಸಲ್ಪಟ್ಟು ಸಂತಾನಾಭಿವೃದ್ಧಿ ಮಾಡತಕ್ಕವರೆಂದು ಕಂಡುಬಂದಲ್ಲಿ ಮದುವೆಯಾಗಲು ಸರ್ಟಿಫಿಕೇಟು ಕೊಡಲ್ಪಡುವುದು. ಕಾರಣಾಂತರಗಳಿಂದ ವಧೂವರರಲ್ಲಿ ಸಂತಾನಾಭಿವೃದ್ಧಿಶಕ್ತಿಯಿಲ್ಲದಿದ್ದ ಪಕ್ಷದಲ್ಲಿ ಅಂತಹವರುಗಳು ವಿವಾಹಮಾಡಿಕೊಳ್ಳಬಾರದೆಂದು ವೈದ್ಯರು ಅವರಿಗೆ ವಿವೇಕವನ್ನು ಹೇಳುವರು. ಈ ವಿಧಾನವು ಪ್ರಯೋಜನಕರವಾಗಿ ಕಂಡುಬಂದಲ್ಲಿ ಆ ರಾಜ್ಯದ ನಾನಾಭಾಗಗಳಲ್ಲಿ ವಧೂವರಪರೀಕ್ಷಾವೈದ್ಯಶಾಲೆಗಳು ಏರ್ಪಡಿಸಲ್ಪಡುವುವು.

ಪತ್ರವ್ಯವಹಾರಕರಿಗೆ ಸೂಚನೆ.

ನಮ್ಮ ಮುದ್ರಣಯಂತ್ರಕ್ಕೆ ಅಪಾಯಸಂಭವಿಸಿರುವುದರಿಂದ ಅದು ಸರಿಹೋಗುವವರೆಗೂ ಸ್ಟಾರ್‌ಪತ್ರಿಕೆಯ 4 ಪುಟಗಳನ್ನೇ ಹೊರಡಿಸುವುದು ಪ್ರಯಾಸವಾಗಿರುವಪ್ರಯುಕ್ತ ಬಹಳ ಸಂಕ್ಷಿಪ್ತವೂ ಅಗತ್ಯವೂ ಆದ ಪತ್ರವ್ಯವಹಾರಗಳ ವಿನಾ ಇತರವುಗಳನ್ನು ಮುದ್ರಿಸಲು ಸಾಧ್ಯವಿಲ್ಲವು. ಅದಕ್ಕಾಗಿ ನಮ್ಮ ಪತ್ರವ್ಯವಹಾರಕರು ಆಗ್ರಹಗೊಳ್ಳಬಾರದು. ಸಂ.

ಸೂರ್ಯಗ್ರಹಣ.

ಅಕ್ಷಾಂಶ ೧೫-೨೬ ಧಾರವಾಡಮಾನಗಣಿತ.

ಶ್ರೀಶಾಲಿವಾಹನಶಕೆ ೧೮೪೮ ನೇ ಕ್ಷಯ ಸಂ|| ರದ ಜ್ಯೇಷ್ಠ ಬಹುಳ ೩೦ ಜುಲೈ ತಾ|| 9 ನೇ ಶುಕ್ರವಾರ ಸೂರ್ಯೋದಯಾದಿ ೫೧-೧೯ ಘಳಿಗೆ ಸುಮಾರಕ್ಕೆ ಸೂರ್ಯನಿಗೆ ಚಂದ್ರನ ಉತ್ತರಶರ (ಕೇತಕಿ-ಗಾಂಧಿ) ಗಣಿತ ಪ್ರಕಾರ ೧-೨೫ ಬಂದಿದೆ, ಮತ್ತು ಆಕಾಲದ ಸೂರ್ಯನಿಗೆ ತುಂಬಾ ಗ್ರಹಣ ಹಿಡಿದು ೫೯ ಗಳಿಗೆ ಸುಮಾರಕ್ಕೆ ಮೋಕ್ಷಕಾಲವಾಗುತ್ತದೆ. ಈ ಗ್ರಹಣ ಆಸ್ಟ್ರೇಲಿಯಾ, ನ್ಯೂಝಿಲಾಂಡ, ಜಾವಾ, ನ್ಯೂಗಿನಿಯಾ ಫಿಲಿಪೈನದ್ವೀಪ, ಚೀನಾದೇಶದವರಿಗೆ ತುಂಬಾ ದರ್ಶನವಾಗುತ್ತದೆ. ಜಪಾನ, ಹಾಕ್ಕಾಂಗ ದ್ವೀಪಗಳಿಗೂ, ಪಾಸಿಫಿಕ್ ಮಹಾಸಾಗರದಲ್ಲಿ ಹಡಗಿನಿಂದ ಸಂಚಾರಮಾಡುವವರಿಗೂ ಮುಖ್ಯಾಲುಭಾಗ ಗ್ರಹಣ ಕಾಣುತ್ತದೆ. ಈ ಗ್ರಹಣ ಉತ್ತರಅಮೇರಿಕದವರಿಗೂ ಬೆಹರಿಂಗ ಸಮುದ್ರದ [illegible] ಜನಗಳಿಗೂ ೫೮-೨೦ ಘಳಿಗೆ ಸುಮಾರಕ್ಕೆ ಸ್ಪರ್ಶವಾಗಿ ಅರ್ಧಭಾಗ ಗ್ರಹಣ ಕಾಣುತ್ತದೆ. ಈ ಗ್ರಹಣವು ದಕ್ಷಿಣಅಮೇರಿಕದವರಿಗೂ, ಆಫ್ರಿಕ, ಯುರೋಪ್, ಅಫಘಾನ ಮುಂತಾದವರಿಗೂ [illegible] ಕಾಣುವದಿಲ್ಲ. ಆದ್ದರಿಂದ ಈ ಗ್ರಹಣದೋಷವು ಹಿಂದುಸ್ಥಾನಕ್ಕೆ ಬರುವದಿಲ್ಲ.

ಮಳೆ ಭವಿಷ್ಯ.—ಮುಂದೆ ಆಷಾಢ ಶುದ್ಧ ೧೫ [illegible] ಹಿಂದೆ 7 ದಿವಸ ಮುಂದೆ 7 ದಿವಸದೊಳಗಾಗಿ ಚಂದ್ರನು [illegible]

(ಭೂಮಿತಿಬೀಜಗಣಿತಪ್ರಕಾರ) 1900 ನೈಋತ್ಯಭೂಮಿಗೆ ಸಮೀಪವಾಗುವದರಿಂದಲೂ, ರವಿ-ಬುಧ-ಚಂದ್ರ ಸಂಯೋಗವು ನೇಟಿಗಣಿತಪ್ರಕಾರ ಕೂಡುವದರಿಂದಲೂ, ಪಶ್ಚಿಮಸಮುದ್ರಕ್ಕೆ ಅತ್ಯುಷ್ಣತೆ ತಗಲಿ ಚಿಕ್ಕ ಪುಷ್ಯಮಳೆ ಮತ್ತು ಪಶ್ಚಿಮಘಾಳಿಯಿಂದ ಸ್ವಾತಿಮಳೆಯು ಎಲ್ಲಾದೇಶಕ್ಕೂ ವಿಪರೀತ ಮಳೆಯಾಗಿ ಹೊಳೆ ಹಳ್ಳಗಳು ತುಂಬಿ ಹರಿಯುವವು. ಮತ್ತು ಬಿತ್ತಿದ ಪೈರುಗಳು ಅಭಿವೃದ್ಧಿ ಹೊಂದುವವು.

ಕೇತಕಿ-ಗಾಂಧಿ-ಗ್ರಹಲಾಘವಿ ಗಣಿತಜ್ಞ ಪಂಡಿತ ದೇವಪ್ಪ,
ತುಮ್ಮಿನಕಟ್ಟಿ ತಾ|| ರಾಣಿಬೆನ್ನೂರು.

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇನೆ.—ಸಂ.

(1) ಗುಬ್ಬಿ ತಾ|| ದೊಡ್ಡಗುಣಿ ಮ|| ಶೆಟ್ಟರು ಸಿದ್ದಲಿಂಗಪ್ಪನವರ ತಮ್ಮಂದಿರು ಮ|| ಸಿದ್ದಪ್ಪನವರ ಲಗ್ನದಲ್ಲಿ 1 ರೂ. (2) ಕೊಳ್ಳೇಗಾಲ ತಾ|| ಮಧುವನಹಳ್ಳಿ ಮ|| ಸಾಹುಕಾರ್ ದೊಡ್ಡಮಲ್ಲಪ್ಪನವರ ಕುಮಾರರ ಲಗ್ನದಲ್ಲಿ 1 ರೂ. (3) ಮಾಗಡಿ ಮ|| ಗುರುಸಿದ್ಧಾರಾಧ್ಯರ ಮಕ್ಕಳು ಮುರುಘಾರಾಧ್ಯರಿಗೂ ಮ|| ಸೋ|| ಶೆಟ್ಟರು ಶಾಂತಮಲ್ಲಪ್ಪನವರ ಪುತ್ರಿ ಸೌ|| ಸರ್ವಮಂಗಳಮ್ಮನಿಗೂ ನಡೆದ ಲಗ್ನದಲ್ಲಿ ಮಾಗಡಿ ಶೆಟ್ಟರು ಮ|| ಗುರುನಂಜಶೆಟ್ಟರು ಮ|| ಯ|| ನಂಜಪ್ಪನವರು ಇವರುಗಳ ಮೂಲಕ 1 ರೂ. (4) ಹಾಸನದಲ್ಲಿರುವ ಹುಣಸೇಮರದ ಮಠದ ಶ್ರೀ ಶ್ರೀಕಂಠಯ್ಯನವರ ಕುಮಾರ್ತಿ ಸೌ|| ಗುರುಬಸಮ್ಮನಿಗೂ ಸಕಲೇಶಪುರದ ಮಗಳೂರುಮಠದ ಶ್ರೀ ಚನ್ನಬಸವಯ್ಯನವರ ಕುಮಾರರು ಬಸಪ್ಪನವರಿಗೂ ನಡೆದ ಲಗ್ನದಲ್ಲಿ 1 ರೂ. ಮತ್ತು ಹಾಸನದಲ್ಲಿರುವ ಮ|| ಹಿರಾಳು ರುದ್ರಪ್ಪನವರ ಕುಮಾರ್ತಿ ಸೌ|| ಶಾಂತಮ್ಮನಿಗೂ ಚನ್ನರಾಯಪಟ್ಟಣದ ಮ|| ಗೋಸುಮಾಳದ ಲಿಂಗಪ್ಪನವರ ಕುಮಾರರು ಬಸಪ್ಪನವರಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 3 ರೂ. ಈ 4 ರೂ. ಹಾಸನದ ಮ|| ಕೇಣಿ ಮಹಾದೇವಪ್ಪನವರ ಮೂಲಕ ಬಂದಿದೆ.

ಪತ್ರವ್ಯವಹಾರ.

☛ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಸುಪುತ್ರವಂತರಾದ ಹೋಳೇಬಸವಶಾಸ್ತ್ರಿಗಳು.

ವೀರಶೈವರಲ್ಲಿ ಪಂಚಾಂಗವನ್ನು ಗುಣಿಸಿ ಪ್ರಕಟಿಸುವಲ್ಲಿ ಮೊದಲನೆಯವರಾದ ಹರ್ಪನಹಳ್ಳಿ ಮಠದ ಬ್ರ|| ಶ್ರೀ|| ಸಿದ್ಧಾಂತಿ ಹೋಳಬಸವಶಾಸ್ತ್ರಿಗಳು ಬಹಳ ಕಷ್ಟಪಟ್ಟು ತಮ್ಮ ಮಕ್ಕಳಿಗೆ ಇಂಗ್ಲಿಷ್ ವಿದ್ಯಾಭ್ಯಾಸಮಾಡಿಸಿದುದರಲ್ಲಿ ಮ|| ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿಗಳು, ಬಿ.ಎ., ಬಿ.ಎಲ್., ಪರೀಕ್ಷೆಗಳನ್ನು ಕೊಟ್ಟು ಈಗ ಬಳ್ಳಾರಿಯಲ್ಲಿ ವಕೀಲರಾಗಿರುತ್ತಾರೆ. ಉಳಿದ ಮಕ್ಕಳುಗಳಲ್ಲಿ ಟಿ. ಎಚ್. ಎಂ. ಷಡಕ್ಷರಯ್ಯ, ಎಂ.ಎ., ಯವರು ಈಸಲ ಬಿ.ಎಲ್. ಪರೀಕ್ಷೆಯಲ್ಲೂ, ಎಂ. ಎಚ್. ಎಂ. ನಂಜುಂಡಯ್ಯ, ಬಿ.ಎ., ಯವರು ಬಿ.ಎಲ್. ಪರೀಕ್ಷೆಯಲ್ಲಿ ಮೊದಲನೇಭಾಗವಾದ ಎಫ್. ಎಲ್. ಪರೀಕ್ಷೆಯಲ್ಲೂ, ಟಿ. ಎಚ್. ಎಂ. ಸದಾಶಿವಯ್ಯ, ಎಂ.ಎ., ರವರು ಎಫ್. ಎಲ್. ಪರೀಕ್ಷೆಯಲ್ಲಿ ಒಂದನೆತರಗತಿಯಲ್ಲೂ ಮತ್ತು ಬಳ್ಳಾರಿ ಕಂಬಾಳಿಮಠದ ದಕ್ಷಿಣಾಮೂರ್ತಿಯವರು, ಬಿ.ಎ., ಆನರ್ಸ್ ಪ್ರಿಲಿಮಿನರಿ ಪರೀಕ್ಷೆಯಲ್ಲೂ ತೇರ್ಗಡೆಹೊಂದಿರುತ್ತಾರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಲೋಕದಲ್ಲಿ ಎಷ್ಟೋ ಜನರಿಗೆ ಮಕ್ಕಳಿರುತ್ತಾರೆ. ಅವರಲ್ಲಿ ಒಬ್ಬಿಬ್ಬರು ವಿದ್ಯಾವಂತರಾಗಬಹುದು. ಆದರೆ ಹೀಗೆ ಎಲ್ಲಾ ಪುತ್ರರೂ ಬಿ.ಎ., ಎಂ.ಎ., ಬಿ.ಎಲ್. ಪರೀಕ್ಷೆಗಳಲ್ಲಿ ಪಾಸಾಗಿ ಮಹಾವಿದ್ವಾಂಸರುಗಳಾಗುವದು ಅತ್ಯಂತ ವಿರಳ. ಅದ್ದರಿಂದ ಇಂಥಾ ಸುಪುತ್ರರನ್ನು ಪಡೆದಿರುವ ಬ್ರ|| ಶ್ರೀ ಹೋಳಬಸವಶಾಸ್ತ್ರಿಗಳೇ ಧನ್ಯರು ಮತ್ತು ಇವರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಾಹಸವೆಲ್ಲಾ ಸಾರ್ಥಕವಾಯಿತು.

ವಿದ್ಯಾಭಿಮಾನಿ.

ವೀರಶೈವರೂ ಶುದ್ಧಿಚಳವಳಿಯೂ.

ಲೇಖಾಂಕ ೧

(ಲೇಖಕ—ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಸಂಸ್ಕೃತಕಾಲೇಜು ಯಾದಗಿರಿ.)

ಈಗಿನಕಾಲದಲ್ಲಿ ಪ್ರತಿಯೊಂದು ದೇಶದಲ್ಲಿಯು ಕೂಡ ಬಹುಮತದಂತೆಯೇ ಎಲ್ಲ ರಾಜಕೀಯ, ಧಾರ್ಮಿಕ ಮೊದಲಾದ ಕಾರ್ಯಗಳು ನಡೆಯುತ್ತವೆಂಬುದು ಪಾರ್ಲಿಮೆಂಟಿನಲ್ಲಿಯೂ, ಹಿಂದೂಸ್ಥಾನದ ಕೌನ್ಸಿಲ್ ಲೋಕಲ್‌ಬೋರ್ಡು ಮ್ಯುನಿಸಿಪಾಲಿಟಿ ಮೊದಲಾದ ಸಮಸ್ತ ಸಾರ್ವಜನಿಕಸಂಸ್ಥೆಗಳಲ್ಲೂ ಬಹುಮತದಸಲುವಾಗಿ ಪ್ರತಿಯೊಂದು ಸಂಘದವರು ಶಕ್ತಿಮೀರಿ ಪ್ರತಿನಿತ್ಯದಲ್ಲಿ ಪ್ರಯತ್ನಮಾಡುತ್ತಿರುವದರಿಂದ ಗೋಚರವಾಗುತ್ತದೆ. ಅಂತೆಯೇ ಪ್ರತಿಯೊಂದು ಸಮಾಜದವರು ತಮ್ಮತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿದ್ದಾದರೆ ತಮ್ಮ ಸಮಾಜದ ಪ್ರಾಬಲ್ಯವೇ ಪ್ರತಿಯೊಂದು ಸಂಸ್ಥೆಗಳಲ್ಲಿ ಹೆಚ್ಚಾಗಿ ಸಮಸ್ತ ಅಧಿಕಾರವೂ ತಮ್ಮ ಕೈವಶವಾಗುವದೆಂದು ತಿಳಿದೇ ಪ್ರಯತ್ನಮಾಡುತ್ತಲಿರುವರು. ಇದಕ್ಕೆ ಪ್ರಬಲವಾದ ಉದಾಹರಣೆಯೆಂದರೆ ಮುಸಲ್ಮಾನಸಮಾಜವೆಂದು ಹೇಳಬಹುದು. ಯಾಕೆಂದರೆ, ಮೊದಲು ಹಿಂದುಸ್ಥಾನಕ್ಕೆ ಬಂದ ಮುಸಲ್ಮಾನರ ಸಂಖ್ಯೆಗೂ ಈಗಿರುವ ಅವರ ಸಂಖ್ಯೆಗೂ ತುಲನೆಯನ್ನುಮಾಡಿ ನೋಡಿದರೆ ಅತ್ಯದ್ಭುತ ಆಶ್ಚರ್ಯವಾಗುವಂತಿರುತ್ತದೆ. ಅದ್ದರಿಂದಲೇ ಹಿಂದುಗಳ ಸಂಖ್ಯೆಯು ಮೊದಲು ನೂರಕ್ಕೆ ತೊಂಭತ್ತು ಇದ್ದದ್ದು ಈಗ 70 ಕ್ಕೆ ಬಂದಿರುತ್ತದೆ. ಹೀಗೆಯೇ ನೂರಾರು ವರ್ಷಗಳು ಹೋದರೆ ಈಗಿರುವ ಹಿಂದುಗಳ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗಿ ಮುಸಲ್ಮಾನರ ಸಂಖ್ಯೆಯೇ ಹೆಚ್ಚಾಗುವದರಲ್ಲಿ ಸಂಶಯವಿಲ್ಲ. ಅದನ್ನು ತಿಳಿದು ಹಿಂದುಮಹಾಸಭೆಯವರೂ, ಆರ್ಯಸಮಾಜದವರೂ ಅದಕ್ಕೆ ತಕ್ಕ ಪ್ರತೀಕಾರವನ್ನು ನಡೆಯಿಸುತ್ತಿರುವರಲ್ಲದೆ ಹಿಂದೆ ಆದ ಹಾನಿಯನ್ನು ಕೂಡ ಈಗ ಭರ್ತಿಮಾಡಿಕೊಳ್ಳಬೇಕೆಂಬ ಕುತೂಹಲವುಳ್ಳವರಾಗಿರುತ್ತಾರೆ. ಇನ್ನು ಮುಸಲ್ಮಾನರಂತೆ ಅನೇಕ ಪ್ರಯತ್ನಗಳನ್ನು ಮಾಡಿ ಹಿಂದುಸಮಾಜವನ್ನು ಹಾಳುಮಾಡುವವರೆಂದರೆ ಕ್ರಿಶ್ಚನ್ ಮಿಶನರಿಯವರು. ಇವರು ಅಜ್ಞಜನರಿಗೆ ಅನೇಕ ತರಹದ ಆಶೆಗಳನ್ನು ಹುಟ್ಟಿಸಿ ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳುತ್ತಾರೆ. ಹೀಗೆ ಇವರ ಸಮಾಜದಲ್ಲಿ ಸೇರಿಕೊಳ್ಳುವ ಹಿಂದುಗಳ ಸಂಖ್ಯೆಯು ಪ್ರತಿವಾರಕ್ಕೆ ಹತ್ತುಸಾವಿರವೆಂದು ತಿಳಿಯಬರುತ್ತದೆ. ಹಾಹಾಕಾರ, [illegible], ಹೀಗೆಯೇ ಮುಸಲ್ಮಾನರ ಮತ್ತು ಕ್ರಿಶ್ಚನ್ನರ ಸಹವಾಸ ಸಿಕ್ಕಿ ಬಳಲುತ್ತಿರುವ ಹಿಂದುಸಮಾಜದವರ ಸ್ಥಿತಿಯು! ಇದಕ್ಕೆ ಈ ಸಮಾಜದಲ್ಲಿ ಒಗ್ಗಟ್ಟು ಇಲ್ಲದೆ ಜಾತಿಜಾತಿಗಳಲ್ಲಿ ಅನೇಕ ತರಹದ ಕಲಹಸೇರಿರುವದೇ ಕಾರಣವಾಗಿರುತ್ತದೆ. ಹೀಗೆ ಹಿಂದುಗಳಲ್ಲಿ ಅನೈಕ್ಯತೆಯುಂಟಾಗಲಿಕ್ಕೆ ಕೆಲವರು ಕುಚೇಷ್ಟೆಯ ಬ್ರಾಹ್ಮಣರೇಕಾರಣವೆಂದು ಹೇಳಬಹುದು. ಯಾಕೆಂದರೆ, ಇವರು ಈ ಸಮಾಜದವರಿಗೆ ಈ ಅಧಿಕಾರವಿಲ್ಲ, ಆ ಸಮಾಜದವರಿಗೆ ಆ ಅಧಿಕಾರವಿಲ್ಲವೆಂದು ನಿಂದೆಯನ್ನು ಮಾಡುವದರಿಂದ ಅವರು ಹಿಂದುಸಮಾಜದ ಹಂಗೇ ನಮಗೆ ಬೇಡವೆಂದೂ, ನಾವೂ ಸ್ವತಂತ್ರರಾಗೋಣವೆಂದೂ ತಿಳಿದು ಯಾವದಾದರೊಂದು ಸಮಾಜದಲ್ಲಿ ಕೂಡಿಕೊಂಡುಬಿಡುತ್ತಾರೆ. ಕಳೆದ ಒಂದೆರಡುವರ್ಷಗಳಿಂದ ಸಿದ್ದೀಕನಂಥ ಒಬ್ಬ ಬುದ್ಧಿಗೇಡಿಯು ಕೂಡ ಎಷ್ಟು ಗದ್ದಲಹಾಕಿರುವನೆಂಬುವದು ಧೂಮಕೇತುವಿನಂತೆ ಹೊರಡುವ ಅವನ ಸುದ್ದಿಗಳಿಂದಲೇ ತಿಳಿಯಬರುತ್ತದೆ. ಈ ಮೇಲಿನ ವಿವೇಚನೆಯ ದೃಷ್ಟಿಯಿಂದ ನೋಡಿದ್ದಾದರೆ ನಮ್ಮ ವೀರಶೈವರ ಸಂಖ್ಯೆಯು ಕೋಟಿ ಎರಡುಕೋಟಿಯಾದರೂ ಇರುವದು ಆವಶ್ಯವೆಂದು ಹೇಳಬಹುದು. ಆದರೆ ಈಗ ವೀರಶೈವಸಮಾಜದಸ್ಥಿತಿಯನ್ನು ನೋಡಿದರೆ ಬಹುಶೋಚನೀಯವಾಗಿರುತ್ತದೆ. ಯಾಕೆಂದರೆ, ಸಮಾಜದಲ್ಲಿ ಐಕ್ಯಕ್ಕೆ ಆಸೆಯೇ ಇಲ್ಲ. ವಿವೇಕತನದಿಂದ ಸಮಾಜದ ಭಾರವನ್ನು ಹೊರುವ ಮುಂದಾಳುಗಳಿಲ್ಲ. ಸಮಾಜದಲ್ಲಿ ಯಾರು ಮುಖಂಡರೂ ಹೇಳಲಿಕ್ಕೆ ಬರುವಂತಿಲ್ಲ. ಒಂದು ಕಾರ್ಯವನ್ನು ಒಬ್ಬರು ಮಾಡಲಿಕ್ಕೆ ಹತ್ತಿದರೆ ಉಳಿದವರು ಕೆಡಿಸಲಿಕ್ಕೆ ನಿಲ್ಲುವರು. ಇದಕ್ಕೆ ಎಂಟುವರ್ಷಗಳಿಂದ ಹಾಸಿಗೆಯನ್ನು ಹಿಡಿದ ಮಹಾಸಭೆಯ ಉದಾಹರಣೆಯೇ ಸಾಕಾಗಿರುತ್ತದೆ. ಹೀಗೆ ಎಷ್ಟೋ ಸಮಾಜದ ಮುಖ್ಯಮುಖ್ಯ ಕಾರ್ಯಗಳಿಗು ಕೂಡ ವಿಘ್ನವುಂಟಾಗಿ ಸಮಾಜದ ಪ್ರಗತಿಗೆ ಕುಂದಕವಾಗಿರುತ್ತದೆಂಬುವದು, ಸುವಿಚಾರಿಯಾದ ಮನುಷ್ಯನಿಗೆ ತಿಳಿಯದೆ ಇರಲಾರದು. ಪ್ರಕೃತದಲ್ಲಿ ಶುದ್ಧಿಚಳವಳಿಯಗೊಂದಲವು ಸಮಾಜದಲ್ಲಿ ಬಹು ವಿಕೋಪಕ್ಕೆ ಹೋಗಿರುತ್ತದೆ. ಕೆಲವರು ಮಾಡಬೇಕೆಂತಲೂ ಮತ್ತೆ ಕೆಲವರು ಸಾಂಕರ್ಯವಾಗುವದೆಂತಲೂ ತಮ್ಮತಮ್ಮ ಬುದ್ಧಿಗೆ ತೋರಿದಂತೆ ವಾದಿಸುತ್ತಾರೆ. ಈ ವಿಷಯವನ್ನು ಯೋಗ್ಯರೀತಿಯಿಂದ ವ್ಯವಸ್ಥೆಮಾಡುವದು ಸಮಾಜಕ್ಕೆ ಬಹುಗಹನವಾದ ವಿಷಯವಾಗಿರುತ್ತದೆ. ಯಾವ ಕಾರ್ಯವನ್ನೇ ಆಗಲಿ ಶಿಸ್ತಿನಿಂದಲೂ ಐಕ್ಯತೆಯಿಂದಲೂ ಮಾಡಿ ಕೊನೆಗಾಣಿಸಿದರೆ ಅದರಿಂದ ಫಲವು ಸಿಕ್ಕುವದು, ಇಲ್ಲದಿದ್ದರೆ ಸಮಾಜಕ್ಕೆ ದೊಡ್ಡಹಾನಿಯಾಗುವದು. ಈ ಶುದ್ಧೀಚಳವಳಿಯಲ್ಲಿ ದೊಡ್ಡ ಭಿನ್ನಾಭಿಪ್ರಾಯವಿರುತ್ತದೆಂದು ಮೇಲೆಬರೆಯಲ್ಪಟ್ಟಿರುತ್ತದಷ್ಟೆ. ಈಗಂತೂ ಕೆಲವರು ಮಾಂಸಹಾರಿಗಳೇ ಇರಲಿ ಮದ್ಯಪಾಯಿಗಳೇ ಇರಲಿ ಅವರಿಗೆ ಲಿಂಗಧಾರಣವನ್ನು ಮಾಡಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳಲಿಕ್ಕೆ ಹತ್ತಿರುವರು. ಮನುಷ್ಯನು ಯಾವದಾದರೊಂದು ಲಾಭದಕಾರ್ಯವನ್ನು ಮಾಡಿದರೆ ಲಾಭದಕೂಡ ಹಾನಿಯನ್ನು ಆಲೋಚನೆ ಮಾಡಬೇಕಾಗುತ್ತದೆ. ಒಂದೊಂದು ಕಾರ್ಯದಲ್ಲಿ ಒಬ್ಬೊಬ್ಬನಿಗೆ ಒಂದೊಂದು ಅಧಿಕಾರವಿರುವದಷ್ಟೆ? ಆದರೆ ಧಾರ್ಮಿಕಸಂಬಂಧವಾದ ಕಾರ್ಯಗಳು ಸಮಾಜದಲ್ಲಿ ನಡೆಯಬೇಕಾದರೆ ಅವಕ್ಕೆ ಸ್ಥಾಪನಾಕರ್ತೃಗಳಾದ ಜಗದ್ಗುರು ಪಂಚಾಚಾರ್ಯರ ಅಪ್ಪಣೆಯಂತೆ ನಡೆಯುವದು ಯೋಗ್ಯವೂ ಶಾಸ್ತ್ರಸಿದ್ಧವೂ ಇರುತ್ತದೆ. ಪ್ರತಿಯೊಬ್ಬನಿಗೂ ಆ ಅಧಿಕಾರವಿದ್ದರೆ ಅನವಸ್ಥಾಪ್ರಸಂಗವು ಬರುವದರಲ್ಲಿ ಸಂಶಯವಿಲ್ಲ. ವಾಚಕರೆ, ಪ್ರತಿಯೊಬ್ಬನಿಗೂ ಆ ಅಧಿಕಾರವಿದ್ದರೆ ನಾಳೆ ಮಾಂಸಭಕ್ಷಕನಾದ ಒಬ್ಬಾನೊಬ್ಬ ಮನುಷ್ಯನು ಬಾಜಾರದಲ್ಲಿ ಸಿಕ್ಕಸಿಕ್ಕ ಲಿಂಗವನ್ನು ಖರೀದಿಗೆ ತಂದು ಕಟ್ಟಿಕೊಂಡು ಕಾವಿಯಬಟ್ಟೆಯನ್ನು ಧರಿಸಿ ತಾನೂ ವೀರಶೈವಸಮಾಜದ ಪೂರ್ವಕಾಶೀಸಿಂಹಾಸನಾಧೀಶನೆಂತಲೂ, ಮತ್ತೊಬ್ಬ ಮುಸಲ್ಮಾನನು ಹೀಗೆಯೇ ಲಿಂಗವನ್ನು ಕಟ್ಟಿಕೊಂಡು ತಾನೂ ವೀರಶೈವಮತಸ್ಥಾಪಕನಾದ ಪಶ್ಚಿಮಕಾಶೀಸಿಂಹಾಸನಾಧೀಶ್ವರನೆಂತಲೂ ನಿಮ್ಮಗಳಿಗೆಲ್ಲ ಗುರುವೆಂತಲೂ ಹೇಳಿಕೊಳ್ಳುತ್ತ ಬಂದರೆ ನೀವು ಏನುಮಾಡಬಲ್ಲಿರಿ? ಅವರನ್ನು ವೀರಶೈವರಲ್ಲವೆಂದು ಹೇಳುವಿರೋ? ಹೇಳಿದ್ದಾದರೆ ಲಿಂಗವನ್ನು ಕಟ್ಟಿಕೊಂಡಿರುವರಲ್ಲ! ನಿಮಗೆ ಇನ್ನೂ ಯೋಗ್ಯಾವಸ್ಥೆಯು ಬಂದಿಲ್ಲವೆಂದು ಹೇಳುವಿರೋ? ಬೇಕಾದ ಹಾಗೆ ಕಾವಿಯಬಟ್ಟೆಗಳನ್ನು ಧರಿಸಿರುವರಲ್ಲ! ಪ್ರಮಾಣಗಳಿಲ್ಲವೆಂದು ಹೇಳಿದ್ದಾದರೆ ಕಲ್ಲಿನಲ್ಲಿಯೊ ಕಟ್ಟಿಗೆಯಲ್ಲಿಯೊ ಬರೆದ ಅನೇಕ ಪ್ರಮಾಣಗಳನ್ನು ತೋರಿಸುವರು. ಹೀಗೆ ಅನಾಯಕತ್ವವಾದರೆ ಸದ್ಯಕ್ಕಿರುವ ವೀರಶೈವಮತ ಸ್ಥಾಪನಾಚಾರ್ಯರ ಐದುಸಿಂಹಾಸನಗಳಲ್ಲದೆ ಒಂದೊಂದು ದಿಕ್ಕಿಗೆ ಒಂದೊಂದು ಸಿಂಹಾಸನದಂತೆ ಲೆಖ್ಖವನ್ನು ಹಾಕಿದರೆ 50 ಸಿಂಹಾಸನಗಳಾಗಬೇಕಾದೀತು. ಆಮೇಲೆ ಸಮಾಜದ ಪ್ರತಿಯೊಬ್ಬನೂ ಸಿಂಹಾಸನಾಧಿಪತಿಯೇ ಆಗಬೇಕಾದೀತು. ನಾವು ಯಾವ ಧರ್ಮದ ಪಂಥಕ್ಕೆ ಒಳಗಾಗಿರುತ್ತೇವೆಯೋ ಆ ಧರ್ಮಸ್ಥಾಪನಾಚಾರ್ಯರಿಗೆ ಅಧೀನರಾಗಿರಬೇಕು. ಇಲ್ಲದಿದ್ದರೆ ಆ ಪಂಥವನ್ನೇ ಬಿಟ್ಟು ಹೋಗಬೇಕು. ಈ ಎರಡು ಮಾರ್ಗಗಳಲ್ಲದೆ ಬೇರೆ ಮಾರ್ಗವೇ ಇರುವದಿಲ್ಲ. ಯಾವ ತಂದೆತಾಯಿಗಳಿಗೆ ನಾವು ಹುಟ್ಟಿದೆವೋ ಅಂಥವರು ನಮ್ಮ ತಂದೆತಾಯಿಗಳೇ ಅಲ್ಲವೆಂದು ಹೇಳಬಹುದೋ? ಈಗಂತೂ ಕೆಲವರು ಸ್ವಾರ್ಥಸಾಧನೆಗಾಗಿ ಬಿದ್ದು ಪಂಚಾಚಾರ್ಯರೇ ಸುಳ್ಳು; ಅವರಿಂದ ಈ ಮತವು ಸ್ಥಾಪನವಾಗಿರುವದಿಲ್ಲವೆಂದು ಬುಡಬುಡಿಕೆಯನ್ನು ಬಾರಿಸಲಿಕ್ಕೆ ಹತ್ತಿರುತ್ತಾರೆ. ವಾಚಕರೆ, ಮನುಷ್ಯನು ಸ್ವಾರ್ಥಸಾಧನೆಗೆ ಬಿದ್ದನೆಂದರೆ ಪುಣ್ಯಪಾಪದ ಭಯವೂ ಧರ್ಮಕರ್ಮದ ಎಚ್ಚರಿಕೆಯೂ ಇಲ್ಲದೆ ಹೋಗುತ್ತಾನೆ. ಇಂಥವರನ್ನು ಯಾವ ಮಾಲಿಕೆಯಲ್ಲಿ ಸೇರಿಸಬೇಕೆಂಬುದನ್ನು ವಾಚಕರೇ ವಿಚಾರಿಸಲಿ. ಎರಡನೇ ಲೇಖಾಂಕದಲ್ಲಿ ಶುದ್ಧೀಚಳವಳಿಯನ್ನು ಮಾಡಬೇಕೇ ಮಾಡಬಾರದೇ ಎಂಬುವ ವಿಷಯವು ವಿವೇಚಿಸಲ್ಪಡುವದು.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ ಬೆಂಗಳೂರು.

ವಿಜ್ಞಾಪನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದ ಜನರಲ್ ಕಮಿಟಿಯ ವಾರ್ಷಿಕಮೀಟಿಂಗು 1926 ನೇ ಇಸವಿ ಜುಲೈ ತಾ|| 11 ನೇ ಭಾನುವಾರ ಸಾಯಂಕಾಲ 4 ಗಂಟೆಗೆ ಸರಿಯಾಗಿ ಬೆಂಗಳೂರುಸಿಟಿ ಶೇಷಾದ್ರಿರೋಡಿನಲ್ಲಿರುವ ಶ್ರೀಜಗದ್ಗುರುಜಯದೇವ ವೀರಶೈವವಿದ್ಯಾರ್ಥಿನಿಲಯದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವದರಿಂದ ತಾವು ಆ ಕಾಲಕ್ಕೆ ದಯೆಮಾಡಿಸಬೇಕಾಗಿ ಪ್ರಾರ್ಥನೆ.

ಮೀಟಿಂಗಿನಲ್ಲಿ ಜರುಗತಕ್ಕ ವಿಷಯಗಳು.

1. ತಾ|| 23-6-25 ರ ಲಾಗಾಯಿತು ತಾ|| 30-6-26 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಕಾರ್ಯನಿರ್ವಾಹಕಸಂಘದ ಅಧ್ಯಕ್ಷರು ಮೊದಲಾಗಿ ಮೆಂಬರುಗಳ ಚುನಾವಣೆ.
4. ನೂತನವಾಗಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೈಸೂರುದೇಶದ ವೀರಶೈವ ಗ್ರಾಜ್ಯುಯೇಟುಗಳನ್ನು ಸಭೆಯಿಂದ ಅಭಿನಂದಿಸುವವಿಚಾರ.
5. ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರೂ ಸೆಕ್ರೆಟರಿಯವರಿಗೆ ತಿಳುಹಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ.)

ಎಂ. ಹಾಲಪ್ಪ, ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಅ|| ಸೆಕ್ರೆಟರಿ. ಆನರರಿ ಸೆಕ್ರೆಟರಿ.

ನೋಟೀಸು.

ಗುಂಡ್ಲುಪೇಟೆ ತಾಲ್ಲೂಕು ಹಿರೀಕಾಟಿಗ್ರಾಮದಲ್ಲಿರುವ ಅದಿಕರ್ನಾಟಕ ಚಿಕ್ಕ ಕಾಳಯ್ಯನ ಮಗ ದ್ಯಾವಯ್ಯನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ನಾನು ನನ್ನ ಚಿಕ್ಕಪ್ಪ ಮತ್ತು ನನ್ನ ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳುಗಳು ಸುಮಾರಾಗುಳ್ಳ ದೊಡ್ಡ ಕುಟುಂಬಸ್ಥನಾಗಿದ್ದೇನೆ. ಹೀಗಿರುವಾಗ್ಯೆ ನನ್ನ ತಮ್ಮ ಕಾಳಿಂಗ ಎಂಬುವವನು ನನ್ನ ಮತ್ತು ನನ್ನ ಚಿಕ್ಕಪ್ಪನವರ ಸಮ್ಮತಿಯಿಲ್ಲದೆ ಹೊರಗೆ ಅಲ್ಪಸ್ವಲ್ಪ ಸಾಲಮಾಡಿರುವದಾಗಿ ತಿಳಿದುಬಂದಿದೆ. ಹೀಗೆ ನಮ್ಮ ಕುಟುಂಬದಲ್ಲಿರುವ ಯಾರೇ ಆಗಲಿ ನಮ್ಮ ಸಮ್ಮತಿಯಿಲ್ಲದೆ ಹೊರಗೆ ಸಾಲ ವಗೈರೆ ಮಾಡಿದ ಪಕ್ಷದಲ್ಲಿ ಅಂಥವರಿಗೆ ಯಾರಾದರೂ ಸಾಲ ವಗೈರೆ ಕೊಡುವ ಪಕ್ಷದಲ್ಲಿ ಸದರಿ ಮೊಬಾಬು ನಮ್ಮ ಸಮಷ್ಟಿ ಆಸ್ತಿಯಿಂದ ವಿಲೆ ಆಗತಕ್ಕದ್ದಲ್ಲವೆಂಬದಾಗಿ ಈ ಮೂಲಕ ತಿಳಿಸಿರುತ್ತೇನೆ.

ದ್ಯಾವಯ್ಯನ ರುಜು.

ಎಲ್ಲರೂ ಗಮನಿಸಿ ನೋಡಿ.

ಉತ್ತಮವಾದ ಮಾಲು! ಒಂದು ಸಾರಿ ತರಿಸಿ ಪರೀಕ್ಷಿಸಿರಿ!!

ಜ್ಞಾನವೃದ್ಧಿ. ಸ್ವಾಧೀನಬುದ್ಧಿ. ನಾಸಿಕಶುದ್ಧಿ.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಬೆಳ್ಳೂರು ಉಂಡೆನಶ್ಯ.

ಮ್ಯಾನೇಜರ ವಿಜ್ಞಾಪನೆ.

ನಮ್ಮ ಕಂಪನಿಯು ಈಗ್ಗೆ 50 ವರುಷದಿಂದ ಮೈಸೂರು ಸೀಮೆಯಲ್ಲಿ ಅಲ್ಲದೆ ಇತರ ದೇಶಗಳಲ್ಲಿಯೂ ಸಹಾ ಪ್ರಖ್ಯಾತಿ ಹೊಂದಿರುತ್ತೆ. ನಮ್ಮ ಕಂಪೆನಿ ನಶ್ಯವು ಹಿಂದೆ ಸೇರು 1 ಕ್ಕೆ 1-8-0, 1-4-0, ಮೂರಾಟಾ ಇತ್ತು. ಅದಕಾರಣ ಈಗ ಜುಲೈ 1 ನೇ ತಾ|| ಲಾಗಾಯ್ತು ಜುಲೈ 31 ರ ವರೆಗೆ ಆರ್ಡರು ಕೊಡುವ ಮಹಸೀಯರಿಗೆ ಈ ಕೆಳಗೆ ಕಂಡ ರೇಟಿನಂತೆ ಕೊಡಲು ಒಂದು ವರುಷ ನಮ್ಮ ಕಂಪೆನಿಯವರು ಒಪ್ಪಿರುತ್ತಾರೆ. ನಮ್ಮ ಕಂಪೆನಿಯ ನಶ್ಯ ತೆಗೆದುಕೊಳ್ಳುವವರು ಬೇರೆ ನಶ್ಯಕ್ಕೆ ಸಮ್ಮತಿಸುವುದಿಲ್ಲ.

ದಯೆಯಿಟ್ಟು ನಮ್ಮ ಕಂಪೆನಿಗೆ ಪ್ರೋತ್ಸಾಹ ಕೊಡುವಿರಾಗಿ ನಂಬಿರುತ್ತೇವೆ.

ನಮ್ಮ ನಶ್ಯವು ಒಂದು ತಿಂಗಳಿಟ್ಟರೂ ಕೆಡುವುದಿಲ್ಲ.
ಖೋಟಾ ಬಂದಲ್ಲಿ ವಾಪಸು ಪಡೆಯುತ್ತೇವೆ.

ಹರ್ಷ ಪುಡಿ ನಶ್ಯ ಸೇರಿಗೆ 0-10-0. 5 ಸೇರಿಗೆ ರೂ. 3-0-0.

ಪೋಸ್ಟೇಜ್ ಮತ್ತು ಪ್ಯಾಕಿಂಗ್ ಅಲಾಯಿದಾ.

3 ಸೇರು ಲಾಗಾಯಿತು 6 ಸೇರು ವರಿಗೆ ರೂ. 1-0-0. 6 ಸೇರು ಲಾಗಾಯಿತು 12 ಸೇರು ವರಿಗೆ ರೂ. 2-0-0.

ಅಡ್ವಾನ್ಸು ಕಳುಹಿಸಬೇಕು.

ಈ ವಾಯಿದೆ ಕಳೆದ ನಂತರ ಬರತಕ್ಕ ಆರ್ಡರಿಗೆ ಸೇರು 1 ಕ್ಕೆ 6 ಆಣೆ ಹೆಚ್ಚಾಗುತ್ತೆ. ತಮ್ಮ ವಿಳಾಸ ಸಂಪೂರ್ಣವಾಗಿ ಬರೆಯಿರಿ.

H. P. ABDUL SHUKOOR

ಉಂಡೆನಶ್ಯ, ಸೇರು 1 ಕ್ಕೆ	24 ತೊಲ	ರೂ.	0-10-0.
ಒಂದುವರೆ ಸೇರಿಗೆ	,, ,,	,,	0-15-0.
ಮೂರು ಸೇರಿಗೆ	,, ,,	,,	1- 8-0.
ಆರು ಸೇರಿಗೆ	,, ,,	,,	3- 0-0.
ಒಂಭತ್ತು ಸೇರಿಗೆ	,, ,,	,,	4- 8-0.
ಹನ್ನೆರಡು ಸೇರಿಗೆ	,, ,,	,,	6- 0-0.

ಆರು ಸೇರಿಗೆ ಮೇಲ್ಪಟ್ಟು ತೆಗೆದುಕೊಳ್ಳುವವರು 2 ರೂಪಾಯಿ ಮುಂಗಡ ಕಳುಹಿಸಬೇಕು.

ಡಿ. ಅಬ್ದುಲ್ ಅಜೀಜ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು, ದೊಡ್ಡಪೇಟೆ,
391 ನಂಬರು ಬಿಲ್ಡಿಂಗ್, ಬೆಳ್ಳೂರು ಪೋಸ್ಟು,
ಮೈಸೂರು ಡಿಸ್ಟ್ರಿಕ್ಟು.

D. ABDUL AZIZ & SONS, Snuff Merchant,
Building No. 391, Doddapett,
Bellur Post, Mysore Dt.

೧೯೨೬ ನೆಯ ಇಸವಿ ಜುಲೈ ತಾ|| ೩ ರಿಂದ ೧೯೨೬ ನೆಯ ಇಸವಿ ಜುಲೈ ತಾ|| ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಜ್ಯೇಷ್ಠ ಬಹುಳ ಅಷ್ಟಮಿಯಿಂದ ಜ್ಯೇಷ್ಠ ಬಹುಳ ಅಮಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
3	ಶನಿ	ಅಷ್ಟ	6-35	ರೇವ	34-55	20
4	ಭಾನು	ನ-ಉ	1-38-55-18	ಅಶ್ವಿ	32-16	21
5	[1]ಸೋಮ	ಏಕಾ	53-36	ಭರ	30-23	22
6	ಮಂಗಳ	ದ್ವಾದ	51-20	ಕೃತ್ತಿ	29-44	23
7	ಬುಧ	ತ್ರಯೋ	50-19	ರೋಹಿ	30-5	24
8	ಗುರು	ಚತು	50-33	ಮೃಗ	31-38	25
9	[2]ಶುಕ್ರ	ಅಮಾ	52-5	ಆರ್ದ್ರ	34-38	26

(1) ಮಳೆನಕ್ಷತ್ರ-ಭರಣಿ ವರ್ಷಕು ೧ ನೆಯಪಾದ. (2) ಮಳೆನಕ್ಷತ್ರ-ಆರ್ದ್ರಾ ವರ್ಷಕು ೨ ನೆಯಪಾದ, ಸರ್ವತ್ರಾಮಾವಾಸ್ಯೆ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಾಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾ ಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜುಲೈ ತಾರೀಖು ೧೦ ನೆಯ ಶನಿವಾರ. [ಸಂಚಿಕೆ ೨೮

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗ
ಗಳನ್ನು ಗುಣಪಡಿಸುತ್ತವೆ.

26

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಬೊಳ್ಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—4] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್‌ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರೇಶ್ವರಚರಿತೆ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
[illegible] ಮಂಜರಿ	೦—೮—೦	೦—೧೩—೦
[illegible]	೧—೦—೦	೧—೬—೦
[illegible] ಶ್ರೀ ಬಸವಣ್ಣಶಾಸ್ತ್ರಿಗಳಿಂದ ರಚಿತವಾದ ಶಿಕ್ಷಣ [illegible]	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—38] ಪೋ. ಬಾ. [illegible]. ಮದರಾಸು

ಬೇಸಿಗೆಕಾಲ ಬಂತು.

ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[12-12] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

ಎರಡನೆಯಭಾಗ

1 ನೆಯ ಪ್ರಕರಣ.

ರಾಯಚಂದುಭಾಯಿ.

ಆಂಗ್ಲದೇಶದಿಂದ ಹೊರಟ ಹಡಗು ಬೊಂಬಾಯಿಗೆ ಬಂದು ಸೇರುವುದಕ್ಕೆ ಸರಿಯಾಗಿ ಸಮುದ್ರವು ಬಹಳ ಉಲ್ಲೋಲವಾಗಿದ್ದಿತೆಂದು ಹಿಂದಣ ಪ್ರಕರಣದಲ್ಲಿ ಹೇಳಿದ್ದೆನು. ಜೂನ್ ಜುಲೈ ತಿಂಗಳುಗಳಲ್ಲಿ ಅರೇಬಿಯಾ ಸಮುದ್ರವು ಸಾಮಾನ್ಯವಾಗಿ ಕಲ್ಲೋಲವಾಗಿರುವುದು. ಏಡೆನ್ನಿಂದ ಸಮುದ್ರವು ಶಾಂತವಾಗಿರಲಿಲ್ಲವು. ಪ್ರಯಾಣಿಕರೆಲ್ಲರೂ ಅಸ್ವಸ್ಥರಾದರು. ನಾನು ಮಾತ್ರ ಆರೋಗ್ಯವಾಗಿದ್ದುಕೊಂಡು ಹಡಗಿನ ಹೊರಗೆ ನಿಂತುಕೊಂಡು ತುಫಾನುಗಳು ತರಂಗತರಂಗವಾಗಿ ಬರುತ್ತಿರುವುದರ ಸೌಂದರ್ಯವನ್ನು ನೋಡುತ್ತಿದ್ದೆನು. ಅಲೆಗಳು ಮೇಲುಕ್ಕೇಳುವಾಗ್ಗೆ [illegible] ಮೇಜಿನ್ನಾಗಳಿಗೆ ಬಂದು ಬೀಳುತ್ತಿದ್ದುವು. ಬೆಳಗಿನ [illegible] ಸಣ್ಣಸಣ್ಣ ಮಕ್ಕಳಿಬ್ಬರು ಮಾತ್ರ ಹೊರಗೆ [illegible] ಕೊಂಡು ಓಟುಗಂಜಿಯನ್ನು ಕುಡಿಯುತ್ತಿದ್ದರು. ಕೊಂಚ ಅಜಾಗ್ರತೆಯಾಗಿರುತ್ತಿದ್ದಲ್ಲಿ ಗಂಜಿಯಲ್ಲವೂ ಚೆಲ್ಲಿಹೋಗುತ್ತಿದ್ದಿತು. ಯಾಕೆಂದರೆ ಅಲೆಯು ಅಷ್ಟು ಹೆಚ್ಚಾಗಿ ಉಬ್ಬಿಳಿಯುತ್ತಿದ್ದಿತು. ಹೊರಗಿನ ತುಫಾನು ಒಳಗಿನ ತುಫಾನಿಗೆ ಚಿಹ್ನೆಯೆಂಬುದು ನನ್ನ ಅಭಿಪ್ರಾಯವು. ಹೊರಗಣ ತುಫಾನಿಗೇ ನಾನು ಹೆದರಲಿಲ್ಲವೆಂದಮೇಲೆ ಇನ್ನು ಒಳಗಿನ ತುಫಾನಿಗೆ ಹೆದರಲಿಲ್ಲವೆಂದು ಹೇಳಬೇಕಾದುದಿಲ್ಲ. ಬೊಂಬಾಯಲ್ಲಿಳಿದು ಮನೆಗೆ ಹೋಗುತ್ತಲೆ ಕುಲದವರು ಬಹಿಷ್ಕರಿಸುವ ವಿಚಾರವೊಂದು ಹುಟ್ಟಿತು. ನ್ಯಾಯವಾದಿ (ಲಾಯರು) ವೃತ್ತಿಯನ್ನು ಪ್ರಾರಂಭಿಸಲು ನಾನು ಬಹಳ ಅಸಮರ್ಥನೆಂದು ಮೊದಲೇ ಹೇಳಿರುತ್ತೇನೆ. ನಾನು ಸಂಘಸಂಸ್ಕರಣೆಯ ಜತೆಗೆ ಮತ್ತೆ ಕೆಲ ಸಂಸ್ಕರಣಗಳನ್ನು ಪ್ರಾರಂಭಿಸುವುದನ್ನು ಕುರಿತು ಶ್ರದ್ಧೆಯಿಂದ ಆಲೋಚಿಸುತ್ತಿರುವಲ್ಲಿ ನಾನು ಊಹಿಸದೆಯಿದ್ದ ಕೆಲ ವಿಷಯಗಳು ಸ್ಫುರಿಸಿದುವು. ನನ್ನನ್ನು ಇದಿರ್ಗೊಂಡು ಕರೆದುಕೊಂಡುಹೋಗಲು ನನ್ನ ದೊಡ್ಡಣ್ಣನು ಬೊಂಬಾಯಿನಲ್ಲಿ ಸ್ಟೀಮರಿನ ಬಳಿಗೆ ಬಂದಿದ್ದನು. ಡಾಕ್ಟರ್ ಮೆಹತಾರವರ ಮತ್ತು ಅವರ ಅಣ್ಣಂದಿರ ಪರಿಚಯ ಮಾಡಿಕೊಂಡಿದ್ದನು. ಡಾಕ್ಟರ್ ಮೆಹತಾಯವರ ವಿಶ್ವಾಸದಮೇಲೆ ನಾವೆಲ್ಲರೂ ಅವರ ಮನೆಗೆ ಹೋದೆವು. ಆದರಿಂದ ಆಂಗ್ಲದೇಶದಲ್ಲಿ ಆರಂಭವಾದ ಪರಿಚಯವು ಕ್ರಮವಾಗಿ ವೃದ್ಧಿಯಾಯಿತು ಭಾರತದೇಶಕ್ಕೆ ಬಂದಮೇಲೆ ಸಹಿತ ಅವರ ಕುಟುಂಬದವರಿಗೂ ನಮ್ಮ ಕುಟುಂಬದವರಿಗೂ ವಿಶ್ವಾಸವು ಹೆಚ್ಚಿತು.

ನನ್ನ ತಾಯಿಯನ್ನು ಯಾವಾಗ ನೋಡುತ್ತೇನೆ? ಎಂದು ನಾನು ಬಹಳ ಆತುರದಿಂದಿದ್ದೆನು. ಆಕೆಯು ಪರಲೋಕವಾಸಿಯಾದಳೆಂಬ ಸಂಗತಿಯನ್ನು ನನ್ನ ಅಣ್ಣನು ನನಗೆ ಬರೆದು ತಿಳಿಸಿರಲಿಲ್ಲವು. ಬೊಂಬಾಯಿನಲ್ಲಿ ಸ್ಟೀಮರಿನಿಂದಿಳಿಯುತಲೆ ಹೇಳಿದುದರಮೇಲೆ ನಾನು ಸೂತಕಸ್ನಾನಮಾಡಿದೆನು. ನಾನು ಆಂಗ್ಲದೇಶದಲ್ಲಿರುವಾಗಲೇ ಆಕೆಯು ಮೃತಳಾದ ಸಂಗತಿಯನ್ನು ನನಗೆ ತಿಳಿಸಿದ್ದಲ್ಲಿ ವಿದೇಶದಲ್ಲಿ ನಾನು ಬಹಳ ವ್ಯಸನಪಡುತ್ತಿದ್ದೆನೆಂಬುದರಮೇಲೆ ನನ್ನ ಅಣ್ಣನು ನನಗೆ ಬರೆಯಲಿಲ್ಲವು. ಆ ಮರಣವಾರ್ತೆಯನ್ನು ಕೇಳಿದಕೂಡಲೆ ನನಗೆ ಅತ್ಯಧಿಕವಾದ ಸಂತಾಪವುಂಟಾಯಿತಲ್ಲದೆ ಆ ಸಂತಾಪಾತಿಶಯವು ಈಗಲು ಕೂಡ ಅಧಿಕವಾಗಿದೆ. ನನ್ನ ತಂದೆಯು ಸತ್ತಾಗುಂಟಾದ ದುಃಖಕ್ಕಿಂತ ಅತ್ಯಧಿಕವಾಗಿ ನನಗಾಗುಂಟಾಯಿತು. ನನ್ನ ಆಶಯವೆಲ್ಲವೂ ವಿಫಲವಾದುವು. ಆದರೆ ನಾನು ದುಃಖವೆಲ್ಲವನ್ನೂ ಮನಸ್ಸಿನಲ್ಲಿ ಅಡಗಿಸಿಕೊಂಡು ಮೇಲೆ ಗಂಭೀರವಾಗಿದ್ದೆನು. ಆಗ ಡಾಕ್ಟರ್ ಮೆಹತಾರವರು ನನಗೆ ಬಹಳ ಜನರ ಪರಿಚಯವನ್ನು ಮಾಡಿಸಿದರು. ಅದರಲ್ಲಿ ಮೆಹತಾರವರ ಸಹೋದರರಾದ ಶ್ರೀಯುತ ರೇವಾಶಂಕರ ಜಗಜೀವನರವರೊಬ್ಬರಾಗಿದ್ದರು. ಇವರೊಡನೆ ಆಗುಂಟಾದ ಮೈತ್ರಿಯು ಯಾವಜ್ಜೀವವೂ ಗಾಢವಾಗಿರುವುದು. ಡಾಕ್ಟರ್ ಮೆಹತಾರವರ ದೊಡ್ಡಣ್ಣನವರ ಅಳಿಯಂದರೂ, ಆಭರಣಗಳ ವರ್ತಕರಾದ ರೇವಾಶಂಕರ ಜಗಜೀವನ ಕಂಪೆನಿಯ ಭಾಗಸ್ಥರೂ ಆದ ರಾಯಚಂದ್ರ ಉರುಫ್ ರಾಜಚಂದ್ರ ಕವೀಂದ್ರರ ಪರಿಚಯವನ್ನೂ ಮೆಹತಾಯವರು ಆಗಲೇ ಮಾಡಿಸಿದರು. ಇದು ಬಹಳ ದೊಡ್ಡ ವಿಷಯವು. ಕವಿಯವರಿಗೆ ಆಗ 25 ವರ್ಷ ವಯಸ್ಸು. ಪ್ರಥಮ ಸಂದರ್ಶನದಿಂದಲೇ ಅವರು ನಿಸ್ಪೃಹವರ್ತಕರೆಂದೂ, ವಿದ್ವಾಂಸರೆಂದೂ ನಾನು ಗ್ರಹಿಸಿಕೊಂಡೆನು. ಅವರು ಶತಾವಧಾನವನ್ನೂ ಕಲಿತುಕೊಂಡಿದ್ದರು. ನಾನು ಕಲಿತಿರುವ ವಿದೇಶಭಾಷೆಗಳಿಂದೆಲ್ಲ ವಾಕ್ಯಗಳನ್ನೋದಿದೆನು. ನಾನು ಯಾವರೀತಿಯಲ್ಲಿ ಹೇಳಿದೆನೋ ಅವರೂ ಅದೇರೀತಿಯಲ್ಲಿ ಅವೆಲ್ಲವನ್ನೂ ಹಿಂದಿರುಗಿ ಹೇಳಿದರು. ಅವರಿಗೆ ಅನೇಕ ಭಾಷೆಗಳು ಈಗಲು ಕೂಡ ಬರುತ್ತವೆ. ಅವರು ಮುಮುಕ್ಷುಗಳು, ವೇದವೇದಾಂಗವೇತ್ತರು, ಪರಿಶುದ್ಧಚರಿತ್ರರು. ಅವರು ತಮ್ಮ ಜೀವಿತವೆಲ್ಲವನ್ನೂ ಮೋಕ್ಷಸಾಧನೆಗೇ ಧಾರೆಯೆರದಿರುವರು. “ನನ್ನ ನಿತ್ಯಕೃತ್ಯಗಳಲ್ಲೆಲ್ಲ ನಾನು ಯಾವಾಗ ಅವುಗಳಿಂದ ಭಗವಂತನನ್ನು ನೋಡಲಾಗುವುದೋ ಆಗಲೇ ನನ್ನ ಜನ್ಮವು ಧನ್ಯವಾಗುವುದು. ಮುಕ್ತಾನಂದನಜೀವಿತಕ್ಕೆ ಆಧಾರವಾದ ಸೂತ್ರವು ಆ ಜಗದೈಕರಕ್ಷಕನೇ” ಎಂಬ ಅರ್ಥವನ್ನು ಕೊಡುವ ಮುಕ್ತಾನಂದನ ವಾಕ್ಯವನ್ನು ರಾಜಚಂದ್ರಕವಿಯು ಯಾವಾಗಲೂ ಸ್ಮರಿಸುತ್ತಿದ್ದನು. ಆತನು ಲಕ್ಷಾಂತರ ರೂಪಾಯಿ ವ್ಯಾಪಾರಮಾಡುತ್ತಿದ್ದನು, ಮುತ್ತು ಪಚ್ಚೆ ವಜ್ರ ಮೊದಲಾಗಿ ನವರತ್ನವ್ಯಾಪಾರವನ್ನೇ ಆತನು ಮಾಡುತ್ತಿದ್ದುದು. ವ್ಯಾಪಾರದಲ್ಲಿದ್ದ ಆತನ ಪ್ರಜ್ಞೆಯು ಅಸಾಮಾನ್ಯವಾಗಿದ್ದರೂ ಆತನ ದೀಕ್ಷೆಯು ಅದರಮೇಲಿರಲಿಲ್ಲವು. ಭಗವಂತನ ಅಪರೋಕ್ಷಸಂದರ್ಶನಾಪೇಕ್ಷೆಯಿಂದ ಆತನು ಏಕಾಗ್ರಚಿತ್ತನಾಗಿದ್ದನು. ಆತನ ವ್ಯಾಪಾರದ ಗದ್ದುಗೆಯಮೇಲೆ ವ್ಯಾಪಾರಸಂಬಂಧವಾದ ಪುಸ್ತಕಗಳೊಡನೆ ಕೆಲ ಮತಗ್ರಂಥಗಳೂ ದಿನಚರ್ಯಪುಸ್ತಕಗಳೂ ಯಾವಾಗಲೂ ಇರುತ್ತಿದ್ದುವು. ವ್ಯಾಪಾರವಿಷಯವು ಮುಗಿಯುತ್ತಲೆ ಮತಗ್ರಂಥಗಳನ್ನೂ ದಿನಚರ್ಯ ಪುಸ್ತಕಗಳನ್ನೂ ನೋಡುತ್ತಿದ್ದನು. ದಿನಚರ್ಯ ಪುಸ್ತಕಗಳಿಂದಲೇ ಅನೇಕ ವಿಷಯಗಳನ್ನು ಆತನು ಗ್ರಂಥರೂಪವಾಗಿ ಪ್ರಕಟಿಸಿದನು. ಅಧಿಕವಾದ ವ್ಯಾಪಾರವು ಮುಗಿಯುತ್ತಲೆ ಆಧ್ಯಾತ್ಮಿಕರಹಸ್ಯವನ್ನು ಕುರಿತು ಬರೆಯಲು ಸತ್ಯಾನ್ವೇಷಿಗಲ್ಲದೆ ಸಾಮಾನ್ಯವರ್ತಕನಿಗೆ ಸಾಧ್ಯವಲ್ಲವು. ಆತನು ಈರೀತಿಯಾಗಿ ವ್ಯಾಪಾರಗೋಷ್ಠಿಯಲ್ಲಿ ಆಧ್ಯಾತ್ಮಿಕವಿಷಯನಿಮಗ್ನನಾಗಿರುವುದನ್ನು ನಾನು ಅನೇಕವೇಳೆ ನೋಡಿದ್ದೆನು. ಆತನು ಯಾವಾಗಲೂ ಪ್ರಶಾಂತಚಿತ್ತನಾಗಿದ್ದನು. ಆತನಿಗೂ ನನಗೂ ಹಿತವಾದ ಸ್ವಾರ್ಥಪರಸಂಬಂಧವೇನೂ ಇಲ್ಲದಿದ್ದರೂ ನನಗೆ ಆತನಕೂಡ ವಿಶೇಷ ಪರಿಚಯವಿದ್ದಿತು. ಆಗ್ಗೆ ನನಗೆ ಇನ್ನೂ ಮೊಕದ್ದಮೆಗಳು ಬರುತ್ತಿರಲಿಲ್ಲವು. ನಾನು ಆತನಲ್ಲಿಗೆ ಹೋದಾಗಲೆಲ್ಲ ಅಮುಖ್ಯವಾದ ಮತವಿಷಯವನ್ನು ಆತನು ನನಗೆ ಬೋಧಿಸುತ್ತಿದ್ದನು. ನನಗೆ ಆಗ ಮತವಿಷಯದಲ್ಲಿ ಆಸಕ್ತಿಯು [illegible]

(ಭೂಮಿಚ್ಛೇದಗಣಿತಪ್ರಕಾರ) 1900 ನೈಋತ್ಯಭೂಮಿಗೆ ಸಮೀಪಸ್ಥನಾಗುವದರಿಂದಲೂ, ರವಿ-ಬುಧ-ಚಂದ್ರ ಸಂಯೋಗವು ನೇಟಿಗಣಿತಪ್ರಕಾರ ಕೂಡುವದರಿಂದಲೂ, ಪಶ್ಚಿಮಸಮುದ್ರಕ್ಕೆ ಅತ್ಯುಷ್ಣತೆ ತಗಲಿ ಚಿಕ್ಕ ಪುಷ್ಯಮಳೆ ಮತ್ತು ಪಶ್ಚಿಮಘಾಳಿಯಿಂದ ಸ್ವಾತಿಮಳೆಯು ಎಲ್ಲಾದೇಶಕ್ಕೂ ವಿಪರೀತ ಮಳೆಯಾಗಿ ಹೊಳೆ ಹಳ್ಳಗಳು ತುಂಬಿ ಹರಿಯುವವು. ಮತ್ತು ಬಿತ್ತಿದ ಪೈರುಗಳು ಅಭಿವೃದ್ಧಿ ಹೊಂದುವವು.

ಕೇತಕಿ-ಗಾಂಧಿ-ಗ್ರಹಲಾಘವಿ ಗಣಿತಜ್ಞ ಪಂಡಿತ ದೇವಪ್ಪ,
ತುಮ್ಮಿನಕಟ್ಟಿ ತಾ|| ರಾಣೆಬೆನ್ನೂರು.

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಗುಬ್ಬಿ ತಾ|| ದೊಡ್ಡಗುಣಿ ಮ|| ಶೆಟ್ಟರು ಸಿದ್ಧಲಿಂಗಪ್ಪನವರ ತಮ್ಮಂದಿರು ಮ|| ಸಿದ್ಧಪ್ಪನವರ ಲಗ್ನದಲ್ಲಿ 1 ರೂ. (2) ಕೊಳ್ಳೇಗಾಲ ತಾ|| ಮಧುವನಹಳ್ಳಿ ಮ|| ಸಾಹುಕಾರ್ ದೊಡ್ಡಮಲ್ಲಪ್ಪನವರ ಕುಮಾರರ ಲಗ್ನದಲ್ಲಿ 1 ರೂ. (3) ಮಾಗಡಿ ಮ|| ಗುರುಸಿದ್ಧಾರಾಧ್ಯರ ಮಕ್ಕಳು ಮುರುಘಾರಾಧ್ಯರಿಗೂ ಮ|| ಸೋ|| ಶೆಟ್ಟರು ಶಾಂತಮಲ್ಲಪ್ಪನವರ ಪುತ್ರಿ ಸೌ|| ಸರ್ವಮಂಗಳಮ್ಮನಿಗೂ ನಡೆದ ಲಗ್ನದಲ್ಲಿ ಮಾಗಡಿ ಶೆಟ್ಟರು ಮ|| ಗುರುಸಂಜಶೆಟ್ಟರು ಮ|| ಯ|| ನಂಜಪ್ಪನವರು ಇವರುಗಳ ಮೂಲಕ 1 ರೂ. (4) ಹಾಸನದಲ್ಲಿರುವ ಹುಣಸೇಮಠದ ಮಠದ ಶ್ರೀ ಶ್ರೀಕಂಠಯ್ಯನವರ ಕುಮಾರ್ತಿ ಸೌ|| ಗುರುಬಸಮ್ಮನಿಗೂ ಸಕಲೇಶಪುರದ ಮಗಳೂರುಮಠದ ಶ್ರೀ ಚನ್ನಬಸವಯ್ಯನವರ ಕುಮಾರರು ಬಸಪ್ಪನವರಿಗೂ ನಡೆದ ಲಗ್ನದಲ್ಲಿ 1 ರೂ. ಮತ್ತು ಹಾಸನದಲ್ಲಿರುವ ಮ|| ಹಿರಾಳು ರುದ್ರಪ್ಪನವರ ಕುಮಾರ್ತಿ ಸೌ|| ಶಾಂತಮ್ಮನಿಗೂ ಚನ್ನರಾಯಪಟ್ಟಣದ ಮ|| ಗೋಸುವಾಳದ ಲಿಂಗಪ್ಪನವರ ಕುಮಾರರು ಬಸಿಟ್ಟಪ್ಪನವರಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 3 ರೂ. ಈ 4 ರೂ. ಹಾಸನದ ಮ|| ಕೇಣಿ ಮಹಾದೇವಪ್ಪನವರ ಮೂಲಕ ಬಂದಿವೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಸುಪುತ್ರವಂತರಾದ ಹೋಳೆಬಸವಶಾಸ್ತ್ರಿಗಳು.

ವೀರಶೈವರಲ್ಲಿ ಪಂಚಾಂಗವನ್ನು ಗುಣಿಸಿ ಪ್ರಕಟಿಸುವಲ್ಲಿ ಮೊದಲನೆಯವರಾದ ಹರ್ಪನಹಳ್ಳಿ ಮಠದ ಬ್ರ|| ಶ್ರೀ|| ಸಿದ್ಧಾಂತಿ ಹೋಳೆಬಸವಶಾಸ್ತ್ರಿಗಳು ಬಹಳ ಕಷ್ಟಪಟ್ಟು ತಮ್ಮ ಮಕ್ಕಳಿಗೆ ಇಂಗ್ಲಿಷ್ ವಿದ್ಯಾಭ್ಯಾಸಮಾಡಿಸಿದುದರಲ್ಲಿ ಮ|| ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿಗಳು, ಬಿ.ಎ., ಬಿ.ಎಲ್., ಪರೀಕ್ಷೆಗಳನ್ನು ಕೊಟ್ಟು ಈಗ ಬಳ್ಳಾರಿಯಲ್ಲಿ ವಕೀಲರಾಗಿರುತ್ತಾರೆ. ಉಳಿದ ಮಕ್ಕಳುಗಳಲ್ಲಿ ಟಿ. ಎಚ್. ಎಂ. ಷಡಕ್ಷರಯ್ಯ, ಎಂ.ಎ., ಯವರು ಈಸಲ ಬಿ.ಎಲ್. ಪರೀಕ್ಷೆಯಲ್ಲೂ, ಎಂ. ಎಚ್. ಎಂ. ನಂಜುಂಡಯ್ಯ, ಬಿ.ಎ., ಯವರು ಬಿ.ಎಲ್. ಪರೀಕ್ಷೆಯಲ್ಲಿ ಮೊದಲನೇಭಾಗವಾದ ಎಫ್. ಎಲ್. ಪರೀಕ್ಷೆಯಲ್ಲೂ, ಟಿ. ಎಚ್. ಎಂ. ಸದಾಶಿವಯ್ಯ, ಎಂ.ಎ., ರವರು ಎಫ್. ಎಲ್. ಪರೀಕ್ಷೆಯಲ್ಲಿ ಒಂದನೆತರಗತಿಯಲ್ಲೂ ಮತ್ತು ಬಳ್ಳಕಿ ಕಂಬಾಳಿಮಠದ ದಕ್ಷಿಣಾಮೂರ್ತಿಯವರು, ಬಿ.ಎ., ಆನರ್ಸ್ ಪ್ರಿಲಿಮಿನರಿ ಪರೀಕ್ಷೆಯಲ್ಲೂ ತೇರ್ಗಡೆಹೊಂದಿರುತ್ತಾರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಲೋಕದಲ್ಲಿ ಎಷ್ಟೋ ಜನರಿಗೆ ಮಕ್ಕಳಿರುತ್ತಾರೆ. ಅವರಲ್ಲಿ ಒಬ್ಬಿಬ್ಬರು ವಿದ್ಯಾವಂತರಾಗಬಹುದು. ಆದರೆ ಹೀಗೆ ಎಲ್ಲಾ ಪುತ್ರರೂ ಬಿ.ಎ., ಎಂ.ಎ., ಬಿ.ಎಲ್. ಪರೀಕ್ಷೆಗಳಲ್ಲಿ ಪ್ಯಾಸಾಗಿ ಮಹಾವಿದ್ವಾಂಸರುಗಳಾಗುವದು ಅತ್ಯಂತ ವಿರಳ. ಆದ್ದರಿಂದ ಇಂಥಾ ಸುಪುತ್ರರನ್ನು ಪಡೆದಿರುವ ಬ್ರ|| ಶ್ರೀ ಹೋಳೆಬಸವಶಾಸ್ತ್ರಿಗಳೇ ಧನ್ಯರು ಮತ್ತು ಇವರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಾಹಸವೆಲ್ಲಾ ಸಾರ್ಥಕವಾಯಿತು.

ವಿದ್ಯಾಭಿಮಾನಿ.

ವೀರಶೈವರೂ ಶುದ್ಧಿ ಚಳವಳಿಯೂ.

ಲೇಖಾಂಕ ೧

(ಲೇಖಕ—ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಸಂಸ್ಕೃತಕಾಲೇಜು ಯಾದಗಿರಿ.)

ಈಗಿನಕಾಲದಲ್ಲಿ ಪ್ರತಿಯೊಂದು ದೇಶದಲ್ಲಿಯು ಕೂಡ ಬಹುಮತದಂತೆಯೇ ಎಲ್ಲ ರಾಜಕೀಯ, ಧಾರ್ಮಿಕ ಮೊದಲಾದ ಕಾರ್ಯಗಳು ನಡೆಯುತ್ತವೆಂಬುದು ಪಾರ್ಲಿಮೆಂಟಿನಲ್ಲಿಯೂ, ಹಿಂದೂಸ್ಥಾನದ ಕೌನ್ಸಿಲ್ ಲೋಕಲ್‌ಬೋರ್ಡು ಮ್ಯುನಿಸಿಪಾಲಿಟಿ ಮೊದಲಾದ ಸಮಸ್ತ ಸಾರ್ವಜನಿಕಸಂಸ್ಥೆಗಳಲ್ಲೂ ಬಹುಮತದಸಲುವಾಗಿ ಪ್ರತಿಯೊಂದು ಸಂಘದವರು ಶಕ್ತಿಮೀರಿ ಪ್ರತಿನಿತ್ಯದಲ್ಲಿ ಪ್ರಯತ್ನಮಾಡುತ್ತಿರುವದರಿಂದ ಗೋಚರವಾಗುತ್ತದೆ. ಅಂತೆಯೇ ಪ್ರತಿಯೊಂದು ಸಮಾಜದವರು ತಮ್ಮತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿದ್ದಾದರೆ ತಮ್ಮ ಸಮಾಜದ ಪ್ರಾಬಲ್ಯವೇ ಪ್ರತಿಯೊಂದು ಸಂಸ್ಥೆಗಳಲ್ಲಿ ಹೆಚ್ಚಾಗಿ ಸಮಸ್ತ ಅಧಿಕಾರವೂ ತಮ್ಮ ಕೈವಶವಾಗುವದೆಂದು ತಿಳಿದೇ ಪ್ರಯತ್ನಮಾಡುತ್ತಲಿರುವರು. ಇದಕ್ಕೆ ಪ್ರಬಲವಾದ ಉದಾಹರಣೆಯೆಂದರೆ ಮುಸಲ್ಮಾನಸಮಾಜವೆಂದು ಹೇಳಬಹುದು. ಯಾಕೆಂದರೆ, ಮೊದಲು ಹಿಂದುಸ್ಥಾನಕ್ಕೆ ಬಂದ ಮುಸಲ್ಮಾನರ ಸಂಖ್ಯೆಗೂ ಈಗಿರುವ ಅವರ ಸಂಖ್ಯೆಗೂ ತುಲನೆಯನ್ನುಮಾಡಿ ನೋಡಿದರೆ ಅತ್ಯದ್ಭುತ ಆಶ್ಚರ್ಯವಾಗುವಂತಿರುತ್ತದೆ. ಆದ್ದರಿಂದಲೇ ಹಿಂದುಗಳ ಸಂಖ್ಯೆಯು ಮೊದಲು ನೂರಕ್ಕೆ ತೊಂಭತ್ತು ಇದ್ದದ್ದು ಈಗ 70 ಕ್ಕೆ ಬಂದಿರುತ್ತದೆ. ಹೀಗೆಯೇ ನೂರಾರು ವರ್ಷಗಳು ಹೋದರೆ ಈಗಿರುವ ಹಿಂದುಗಳ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗಿ ಮುಸಲ್ಮಾನರ ಸಂಖ್ಯೆಯೇ ಹೆಚ್ಚಾಗುವದರಲ್ಲಿ ಸಂಶಯವಿಲ್ಲ. ಅದನ್ನು ತಿಳಿದು ಹಿಂದುಮಹಾಸಭೆಯವರೂ, ಆರ್ಯಸಮಾಜದವರೂ ಅದಕ್ಕೆ ತಕ್ಕ ಪ್ರತೀಕಾರವನ್ನು ನಡೆಯಿಸುತಿರುವರಲ್ಲದೆ ಹಿಂದೆ ಆದ ಹಾನಿಯನ್ನು ಕೂಡ ಈಗ ಭರ್ತಿಮಾಡಿಕೊಳ್ಳಬೇಕೆಂಬ ಕುತೂಹಲವುಳ್ಳವರಾಗಿರುತ್ತಾರೆ. ಇನ್ನು ಮುಸಲ್ಮಾನರಂತೆ ಅನೇಕ ಪ್ರಯತ್ನಗಳನ್ನು ಮಾಡಿ ಹಿಂದುಸಮಾಜವನ್ನು ಹಾಳುಮಾಡುವವರೆಂದರೆ ಕ್ರಿಶ್ಚನ್ ಮಿಶನರಿಯವರು. ಇವರು ಅಜ್ಞ ಜನರಿಗೆ ಅನೇಕ ತರಹದ ಆಶೆಗಳನ್ನು ಹುಟ್ಟಿಸಿ ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳುತ್ತಾರೆ. ಹೀಗೆ ಇವರ ಸಮಾಜದಲ್ಲಿ ಸೇರಿಕೊಳ್ಳುವ ಹಿಂದುಗಳ ಸಂಖ್ಯೆಯು ಪ್ರತಿವಾರಕ್ಕೆ ಹತ್ತುಸಾವಿರವೆಂದು ತಿಳಿಯಬರುತ್ತದೆ. ಹಾಹಾಕಾರೇ, ಶಿವಶಿವಾ, ಹೀಗೆಯೇ ಮುಸಲ್ಮಾನರ ಮತ್ತು ಕ್ರಿಶ್ಚನ್ನರ ನಡುವೆ ಸಿಕ್ಕಿ ಬಳಲುತ್ತಿರುವ ಹಿಂದುಸಮಾಜದವರ ಸ್ಥಿತಿಯು! ಇದಕ್ಕೆ ಈ ಸಮಾಜದಲ್ಲಿ ಒಕ್ಕಟ್ಟು ಇಲ್ಲದೆ ಜಾತಿಜಾತಿಗಳಲ್ಲಿ ಅನೇಕ ತರಹದ ಕಲಹಗಳಿರುವದೇ ಕಾರಣವಾಗಿರುತ್ತದೆ. ಹೀಗೆ ಹಿಂದುಗಳಲ್ಲಿ ಅನೈಕ್ಯತೆಯುಂಟಾಗಲಿಕ್ಕೆ ಕೆಲವರು ಕುಚೇಷ್ಟೆಯ ಬ್ರಾಹ್ಮಣರೇ ಕಾರಣವೆಂದು ಹೇಳಬಹುದು. ಯಾಕೆಂದರೆ, ಇವರು ಈ ಸಮಾಜದವರಿಗೆ ಈ ಅಧಿಕಾರವಿಲ್ಲ, ಆ ಸಮಾಜದವರಿಗೆ ಆ ಅಧಿಕಾರವಿಲ್ಲವೆಂದು ನಿಂದೆಯನ್ನು ಮಾಡುವದರಿಂದ ಅವರು ಹಿಂದುಸಮಾಜದ ಸಂಗೇ ನಮಗೆ ಬೇಡವೆಂದೂ, ನಾವು ಸ್ವತಂತ್ರರಾಗೋಣವೆಂದೂ ತಿಳಿದು ಯಾವದಾದರೊಂದು ಸಮಾಜದಲ್ಲಿ ಕೂಡಿಕೊಂಡುಬಿಡುತ್ತಾರೆ. ಕಳೆದ ಒಂದೆರಡುವರ್ಷಗಳಿಂದ ಸಿದ್ದೀಕನಂಥ ಒಬ್ಬ ಬುದ್ಧಿಗೇಡಿಯು ಕೂಡ ಎಷ್ಟು ಗದ್ದಲಹಾಕಿರುವನೆಂಬುವದು ಧೂಮಕೇತುವಿನಂತೆ ಹೊರಡುವ ಅವನ ಸುದ್ದಿಗಳಿಂದಲೇ ತಿಳಿಯಬರುತ್ತದೆ. ಈ ಮೇಲಿನ ವಿವೇಚನೆಯ ದೃಷ್ಟಿಯಿಂದ ನೋಡಿದ್ದಾದರೆ ನಮ್ಮ ವೀರಶೈವರ ಸಂಖ್ಯೆಯು ಕೋಟಿ ಎರಡುಕೋಟಿಯಾದರೂ ಇರುವದು ಅಗತ್ಯವೆಂದು ಹೇಳಬಹುದು. ಆದರೆ ಈಗ ವೀರಶೈವಸಮಾಜದಸ್ಥಿತಿಯನ್ನು ನೋಡಿದರೆ ಬಹುಶೋಚನೀಯವಾಗಿರುತ್ತದೆ. ಯಾಕೆಂದರೆ, ಸಮಾಜದಲ್ಲಿ ಐಕ್ಯತೆಗೆ ಆಶೆಯೇ ಇಲ್ಲ. ವಿವೇಕತನದಿಂದ ಸಮಾಜದ ಭಾರವನ್ನು ಹೊರುವ ಮುಂದಾಳುಗಳಿಲ್ಲ. ಸಮಾಜದಲ್ಲಿ ಯಾರು ಮುಖಂಡರೋ ಹೇಳಲಿಕ್ಕೆ ಬರುವಂತಿಲ್ಲ. ಒಂದು ಕಾರ್ಯವನ್ನು ಒಬ್ಬರು ಮಾಡಲಿಕ್ಕೆ ಹತ್ತಿದರೆ ಉಳಿದವರು ಕೆಡಿಸಲಿಕ್ಕೆ ನಿಲ್ಲುವರು. ಇದಕ್ಕೆ ಎಂಟುವರ್ಷಗಳಿಂದ ಹಾಸಿಗೆಯನ್ನು ಹಿಡಿದ ಮಹಾಸಭೆಯ ಉದಾಹರಣೆಯೇ ಸಾಕಾಗಿರುತ್ತದೆ. ಹೀಗೆ ಎಷ್ಟೋ ಸಮಾಜದ ಮುಖ್ಯಮುಖ್ಯ ಕಾರ್ಯಗಳು ಕೂಡ ವಿಘ್ನವುಂಟಾಗಿ ಸಮಾಜದ ಪ್ರಗತಿಗೆ ಕುಂದಕವಾಗಿರುತ್ತವೆಂಬುವದು, ಸುವಿಚಾರಿಯಾದ ಮನುಷ್ಯನಿಗೆ ತಿಳಿಯದೆ ಇರಲಾರದು. ಪ್ರಕೃತದಲ್ಲಿ ಶುದ್ಧಿಚಳವಳಿಯಗೊಂದಲವು ಸಮಾಜದಲ್ಲಿ ಬಹು ವಿಕೋಪಕ್ಕೆ ಹೋಗಿರುತ್ತದೆ. ಕೆಲವರು ಮಾಡಬೇಕೆಂತಲೂ ಮತ್ತೆ ಕೆಲವರು ಸಾಂಕರ್ಯವಾಗುವದೆಂತಲೂ ತಮ್ಮತಮ್ಮ ಬುದ್ಧಿಗೆ ತೋರಿದಂತೆ ವಾದಿಸುತ್ತಾರೆ. ಈ ವಿಷಯವನ್ನು ಯೋಗ್ಯರೀತಿಯಿಂದ ವ್ಯವಸ್ಥೆಮಾಡುವದು ಸಮಾಜಕ್ಕೆ ಬಹುಗಹನವಾದ ವಿಷಯವಾಗಿರುತ್ತದೆ. ಯಾವ ಕಾರ್ಯವನ್ನೇ ಆಗಲಿ ಶಿಸ್ತಿನಿಂದಲೂ ಐಕ್ಯತೆಯಿಂದಲೂ ಮಾಡಿ ಕೊನೆಗಾಣಿಸಿದರೆ ಅದರಿಂದ ಫಲವು ಸಿಕ್ಕುವದು, ಇಲ್ಲದಿದ್ದರೆ ಸಮಾಜಕ್ಕೆ ದೊಡ್ಡಹಾನಿಯಾಗುವದು. ಈ ಶುದ್ಧಿಚಳವಳಿಯಲ್ಲಿ ದೊಡ್ಡ ಭಿನ್ನಾಭಿಪ್ರಾಯವಿರುತ್ತದೆಂದು ಮೇಲೆಬರೆಯಲ್ಪಟ್ಟಿರುತ್ತದಷ್ಟೆ. ಈಗಂತೂ ಕೆಲವರು ಮಾಂಸಹಾರಿಗಳೇ ಇರಲಿ ಮದ್ಯಪಾಯಿಗಳೇ ಇರಲಿ ಅವರಿಗೆ ಲಿಂಗಧಾರಣವನ್ನು ಮಾಡಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳಲಿಕ್ಕೆ ಹತ್ತಿರುವರು. ಮನುಷ್ಯನು ಯಾವದಾದರೊಂದು ಲಾಭದಕಾರ್ಯವನ್ನು ಮಾಡಿದರೆ ಲಾಭದಕೂಡ ಹಾನಿಯನ್ನು ಆಲೋಚನೆ ಮಾಡಬೇಕಾಗುತ್ತದೆ. ಒಂದೊಂದು ಕಾರ್ಯದಲ್ಲಿ ಒಬ್ಬೊಬ್ಬನಿಗೆ ಒಂದೊಂದು ಅಧಿಕಾರವಿರುವದಷ್ಟೆ? ಆದರೆ ಧಾರ್ಮಿಕಸಂಬಂಧವಾದ ಕಾರ್ಯಗಳು ಸಮಾಜದಲ್ಲಿ ನಡೆಯಬೇಕಾದರೆ ಅವಕ್ಕೆ ಸ್ಥಾಪನಾಕರ್ತೃಗಳಾದ ಜಗದ್ಗುರು ಪಂಚಾಚಾರ್ಯರ ಅಪ್ಪಣೆಯಂತೆ ನಡೆಯುವದು ಯೋಗ್ಯವೂ ಶಾಸ್ತ್ರಸಿದ್ಧವೂ ಇರುತ್ತದೆ. ಪ್ರತಿಯೊಬ್ಬನಿಗೂ ಆ ಅಧಿಕಾರವಿದ್ದರೆ ಅನವಸ್ಥಾಪ್ರಸಂಗವು ಬರುವದರಲ್ಲಿ ಸಂಶಯವಿಲ್ಲ. ವಾಚಕರೆ, ಪ್ರತಿಯೊಬ್ಬನಿಗೂ ಆ ಅಧಿಕಾರವಿದ್ದರೆ ನಾಳೆ ಮಾಂಸಭಕ್ಷಕನಾದ ಒಬ್ಬಾನೊಬ್ಬ ಮನುಷ್ಯನು ಬಾಜಾರದಲ್ಲಿ ಸಿಕ್ಕತಕ್ಕ ಲಿಂಗವನ್ನು ಖರೀದಿಗೆ ತಂದು ಕಟ್ಟಿಕೊಂಡು ಕಾವಿಯಬಟ್ಟೆಯನ್ನು ಧರಿಸಿ ತಾನೂ ವೀರಶೈವಸಮಾಜದ ಪೂರ್ವಕಾಶೀಸಿಂಹಾಸನಾಧೀಶನೆಂತಲೂ, ಮತ್ತೊಬ್ಬ ಮುಸಲ್ಮಾನನು ಹೀಗೆಯೇ ಲಿಂಗವನ್ನು ಕಟ್ಟಿಕೊಂಡು ತಾನೂ ವೀರಶೈವಮತಸ್ಥಾಪಕನಾದ ಪಶ್ಚಿಮಕಾಶೀಸಿಂಹಾಸನಾಧೀಶ್ವರನೆಂತಲೂ ನಿಮ್ಮಗಳಿಗೆಲ್ಲ ಗುರುವೆಂತಲೂ ಹೇಳಿಕೊಳ್ಳುತ್ತ ಬಂದರೆ ನೀವು ಏನುಮಾಡಬಲ್ಲಿರಿ? ಅವರನ್ನು ವೀರಶೈವರಲ್ಲವೆಂದು ಹೇಳುವಿರೋ? ಹೇಳಿದ್ದಾದರೆ ಲಿಂಗವನ್ನು ಕಟ್ಟಿಕೊಂಡಿರುವರಲ್ಲ! ನಿಮಗೆ ಇನ್ನೂ ಯೋಗ್ಯಾವಸ್ಥೆಯು ಬಂದಿಲ್ಲವೆಂದು ಹೇಳುವಿರೋ? ಬೇಕಾದ ಹಾಗೆ ಕಾವಿಯಬಟ್ಟೆಗಳನ್ನು ಧರಿಸಿರುವರಲ್ಲ! ಪ್ರಮಾಣಗಳಿಲ್ಲವೆಂದು ಹೇಳಿದ್ದಾದರೆ ಕಲ್ಲಿನಲ್ಲಿಯೊ ಕಟ್ಟಿಗೆಯಲ್ಲಿಯೊ ಬರೆದ ಅನೇಕ ಪ್ರಮಾಣಗಳನ್ನು ತೋರಿಸುವರು. ಹೀಗೆ ಅನಾಯಕತ್ವವಾದರೆ ಸದ್ಯಕ್ಕಿರುವ ವೀರಶೈವಮತಸ್ಥಾಪನಾಚಾರ್ಯರ ಐದುಸಿಂಹಾಸನಗಳಲ್ಲದೆ ಒಂದೊಂದು ದಿಕ್ಕಿಗೆ ಒಂದೊಂದು ಸಿಂಹಾಸನದಂತೆ ಲೆಖ್ಖವನ್ನು ಹಾಕಿದರೆ 50 ಸಿಂಹಾಸನಗಳಾಗಬೇಕಾದೀತು. ಆಮೇಲೆ ಸಮಾಜದ ಪ್ರತಿಯೊಬ್ಬನೂ ಸಿಂಹಾಸನಾಧಿಪತಿಯೇ ಆಗಬೇಕಾದೀತು. ನಾವು ಯಾವ ಧರ್ಮದ ಪಂಥಕ್ಕೆ ಒಳಗಾಗಿರುತ್ತೇವೆಯೋ ಆ ಧರ್ಮಸ್ಥಾಪನಾಚಾರ್ಯರಿಗೆ ಅಧೀನರಾಗಿರಬೇಕು. ಇಲ್ಲದಿದ್ದರೆ ಆ ಪಂಥವನ್ನೇ ಬಿಟ್ಟು ಹೋಗಬೇಕು. ಈ ಎರಡು ಮಾರ್ಗಗಳಲ್ಲದೆ ಬೇರೆ ಮಾರ್ಗವೇ ಇರುವದಿಲ್ಲ. ಯಾವ ತಂದೆತಾಯಿಗಳಿಗೆ ನಾವು ಹುಟ್ಟಿದೆವೋ ಅಂಥವರು ನಮ್ಮ ತಂದೆತಾಯಿಗಳೇ ಅಲ್ಲವೆಂದು ಹೇಳಬಹುದೋ? ಈಗಂತೂ ಕೆಲವರು ಸ್ವಾರ್ಥಸಾಧನೆಗಾಗಿ ಬಿದ್ದು ಪಂಚಾಚಾರ್ಯರೇ ಸುಳ್ಳು; ಅವರಿಂದ ಈ ಮತವು ಸ್ಥಾಪನವಾಗಿರುವದಿಲ್ಲವೆಂದು ಬುಡಬುಡಿಕೆಯನ್ನು ಬಾರಿಸಲಿಕ್ಕೆ ಹತ್ತಿರುತ್ತಾರೆ. ವಾಚಕರೆ, ಮನುಷ್ಯನು ಸ್ವಾರ್ಥಸಾಧನೆಗೆ ಬಿದ್ದನೆಂದರೆ ಪುಣ್ಯಪಾಪದ ಭಯವೂ ಧರ್ಮಕರ್ಮದ ಎಚ್ಚರಿಕೆಯೂ ಇಲ್ಲದೆ ಹೋಗುತ್ತಾನೆ. ಇಂಥವರನ್ನು ಯಾವ ಮಾಲಿಕೆಯಲ್ಲಿ ಸೇರಿಸಬೇಕೆಂಬುದನ್ನು ವಾಚಕರೇ ವಿಚಾರಿಸಲಿ. ಎರಡನೇ ಲೇಖಾಂಕದಲ್ಲಿ ಶುದ್ಧಿಚಳವಳಿಯನ್ನು ಮಾಡಬೇಕೋ ಮಾಡಬಾರದೋ ಎಂಬುವ ವಿಷಯವು ವಿವೇಚಿಸಲ್ಪಡುವದು.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ ಬೆಂಗಳೂರು.

ವಿಜ್ಞಾಪನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದ ಜನರಲ್ ಕಮಿಟಿಯ ವಾರ್ಷಿಕಮೀಟಿಂಗು 1926 ನೇ ಇಸವಿ ಜುಲೈ ತಾ|| 11 ನೇ ಭಾನುವಾರ ಸಾಯಂಕಾಲ 4 ಗಂಟೆಗೆ ಸರಿಯಾಗಿ ಬೆಂಗಳೂರುಸಿಟಿ ಶೇಷಾದ್ರಿರೋಡಿನಲ್ಲಿರುವ ಶ್ರೀಜಗದ್ಗುರುಜಯದೇವ ವೀರಶೈವವಿದ್ಯಾರ್ಥಿನಿಲಯದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವದರಿಂದ ತಾವು ಆ ಕಾಲಕ್ಕೆ ದಯಿಮಾಡಿಸಬೇಕಾಗಿ ಪ್ರಾರ್ಥನೆ.

ಮೀಟಿಂಗಿನಲ್ಲಿ ಜರುಗತಕ್ಕ ವಿಷಯಗಳು.

1. ತಾ|| 23-6-25 ರ ಲಾಗಾಯತು ತಾ|| 30-6-26 ರ ವರೆಗಿನ ಜಮಾಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಕಾರ್ಯನಿರ್ವಾಹಕಸಂಘದ ಅಧ್ಯಕ್ಷರು ಮೊದಲಾಗಿ ಮೆಂಬರುಗಳ ಚುನಾವಣೆ.
4. ನೂತನವಾಗಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೈಸೂರುದೇಶದ ವೀರಶೈವ ಗ್ರ್ಯಾಜ್ಯುಯೇಟುಗಳನ್ನು ಸಭೆಯಿಂದ ಅಭಿನಂದಿಸುವವಿಚಾರ.
5. ಇತರ ವಿಷಯಗಳು (ಮೆಂಬರುಗಳಿಂದ ಒಂದುವಾರ ಮುಂಚಿತವಾಗಿ ಯಾವುದಾದರೂ ಸೆಕ್ರೆಟರಿಯವರಿಗೆ ತಿಳುಹಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ.)

ಎಂ. ಶಾಣಪ್ಪ, ಜಿ. ಪರಮಶಿವಯ್ಯ, ಬಿ.ಎ., ಎಲ್‌ಎಲ್.ಬಿ.,
ಅ|| ಸೆಕ್ರೆಟರಿ. ಆನರರಿ ಸೆಕ್ರೆಟರಿ.

ನೋಟೀಸು.

ಗುಂಡ್ಲುಪೇಟೆ ತಾಲ್ಲೂಕು ಹಿರೀಕಾಟಿಗ್ರಾಮದಲ್ಲಿರುವ ಆದಿಕರ್ನಾಟಕ ಚಿಕ್ಕಕಾಳಯ್ಯನ ಮಗ ದ್ಯಾವಯ್ಯನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ನಾನು ನನ್ನ ಚಿಕ್ಕಪ್ಪ ಮತ್ತು ನನ್ನ ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳುಗಳು ಸಹಿತವಾಗುಳ್ಳ ದೊಡ್ಡ ಕುಟುಂಬಸ್ಥನಾಗಿದ್ದೇನೆ. ಹೀಗಿರುವಾಗ್ಗೆ ನನ್ನ ತಮ್ಮ ಕಾಳಿಂಗ ಎಂಬುವವನು ನನ್ನ ಮತ್ತು ನನ್ನ ಚಿಕ್ಕಪ್ಪನವರ ಸಮ್ಮತಿಯಿಲ್ಲದೆ ಹೊರಗೆ ಅಲ್ಪಸ್ವಲ್ಪ ಸಾಲಮಾಡಿರುವದಾಗಿ ತಿಳಿದುಬಂದಿದೆ. ಹೀಗೆ ನಮ್ಮ ಕುಟುಂಬದಲ್ಲಿರುವ ಯಾರೇ ಆಗಲಿ ನಮ್ಮ ಸಮ್ಮತಿಯಿಲ್ಲದೆ ಹೊರಗೆ ಸಾಲ ವಗೈರೆ ಮಾಡಿದ ಪಕ್ಷದಲ್ಲಿ ಅಂಥವರಿಗೆ ಯಾರಾದರೂ ಸಾಲ ವಗೈರೆ ಕೊಡುವ ಪಕ್ಷದಲ್ಲಿ ಸದರಿ ನಷ್ಟಬಾಬ್ತು ನಮ್ಮ ಸಮಷ್ಟಿ ಆಸ್ತಿಯಿಂದ ವಿಲೆ ಆಗತಕ್ಕದ್ದಲ್ಲವೆಂಬದಾಗಿ ಈ ಮೂಲಕ ತಿಳಿಸಿರುತ್ತೇನೆ.

ದ್ಯಾವಯ್ಯನ ರುಜು.

ಎಲ್ಲರೂ ಗಮನಿಸಿ ನೋಡಿ.

ಉತ್ತಮವಾದ ಮಾಲು! ಒಂದು ಸಾರಿ ತರಿಸಿ ಪರೀಕ್ಷಿಸಿರಿ!!

ಜ್ಞಾನವೃದ್ಧಿ. ಸ್ವಾಧೀನಬುದ್ಧಿ. ನಾಸಿಕಶುದ್ಧಿ.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಬೆಳ್ಳೂರು ಉಂಡೆನಶ್ಯ.

ಮ್ಯಾನೇಜರ ವಿಜ್ಞಾಪನೆ.

ನಮ್ಮ ಕಂಪನಿಯು ಈಗ್ಗೆ 50 ವರುಷದಿಂದ ಮೈಸೂರು ಸೀಮೆಯಲ್ಲಿ ಅಲ್ಲದೆ ಇತರ ದೇಶಗಳಲ್ಲಿಯೂ ಸಹಾ ಪ್ರಖ್ಯಾತಿ ಹೊಂದಿರುತ್ತೆ. ನಮ್ಮ ಕಂಪೆನಿ ನಶ್ಯವು ಹಿಂದೆ ಸೇರು 1 ಕ್ಕೆ 1-8-0, 1-4-0, ಮಾರಾಟಾ ಇತ್ತು. ಆದಕಾರಣ ಈಗ ಜುಲೈ 1 ನೇ ತಾ|| ಲಾಗಾಯ್ತು ಜುಲೈ 31 ರ ವರೆಗೆ ಆರ್ಡರು ಕೊಡುವ ಮಹನೀಯರಿಗೆ ಈ ಕೆಳಗೆ ಕಂಡ ರೇಟಿನಂತೆ ಕೊಡಲು ಒಂದು ವರುಷ ನಮ್ಮ ಕಂಪೆನಿಯವರು ಒಪ್ಪಿರುತ್ತಾರೆ. ನಮ್ಮ ಕಂಪೆನಿಯ ನಶ್ಯ ತೆಗೆದುಕೊಳ್ಳುವವರು ಬೇರೆ ನಶ್ಯಕ್ಕೆ ಸಮ್ಮತಿಸುವುದಿಲ್ಲ.

ದಯೆಯಿಟ್ಟು ನಮ್ಮ ಕಂಪೆನಿಗೆ ಪ್ರೋತ್ಸಾಹ ಕೊಡುವಿರಾಗಿ ನಂಬಿರುತ್ತೇವೆ.

ನಮ್ಮ ನಶ್ಯವು ಒಂದು ತಿಂಗಳಿಟ್ಟರೂ ಕೆಡುವುದಿಲ್ಲ.
ಖೋಟಾ ಬಂದಲ್ಲಿ ವಾಪಸು ಪಡೆಯುತ್ತೇವೆ.

ಹಸರ ಪುಡಿ ನಶ್ಯ ಸೇರಿಗೆ 0-10-0. 5 ಸೇರಿಗೆ ರೂ. 3-0-0.

ಪೋಸ್ಟೇಜ್ ಮತ್ತು ಪ್ಯಾಕಿಂಗ್ ಅಲಾಯಿದಾ.

3 ಸೇರು ಲಾಗಾಯಿತು 6 ಸೇರು ವರಿಗೆ ರೂ. 1-0-0. 6 ಸೇರು ಲಾಗಾಯಿತು 12 ಸೇರು ವರಿಗೆ ರೂ. 2-0-0.

ಅಡ್ವಾನ್ಸು ಕಳುಹಿಸಬೇಕು.

ಈ ವಾಯಿದೆ ಕಳೆದ ನಂತರ ಬರತಕ್ಕ ಆರ್ಡರಿಗೆ ಸೇರು 1 ಕ್ಕೆ 6 ಆಣೆ ಹೆಚ್ಚಾಗುತ್ತೆ. ತಮ್ಮ ವಿಳಾಸ ಸಂಪೂರ್ಣವಾಗಿ ಬರೆಯಿರಿ.

H. P. ABDUL SHUKOOR

ಉಂಡೆನಶ್ಯ, ಸೇರು 1 ಕ್ಕೆ	24 ತೋಲ		ರೂ.	0-10-0.
ಒಂದುವರೆ ಸೇರಿಗೆ	,,	,,	,,	0-15-0.
ಮೂರು ಸೇರಿಗೆ	,,	,,	,,	1-8-0.
ಆರು ಸೇರಿಗೆ	,,	,,	,,	3-0-0.
ಒಂಭತ್ತು ಸೇರಿಗೆ	,,	,,	,,	4-8-0.
ಹನ್ನೆರಡು ಸೇರಿಗೆ	,,	,,	,,	6-0-0.

ಆರು ಸೇರಿಗೆ ಮೇಲ್ಪಟ್ಟು ತೆಗೆದುಕೊಳ್ಳುವವರು 2 ರೂಪಾಯಿ ಮುಂಗಡ ಕಳುಹಿಸಬೇಕು.

ಡಿ. ಅಬ್ದುಲ್ ಅಜೀಜ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು, ದೊಡ್ಡಪೇಟೆ,
391 ನಂಬರು ಬಿಲ್ಡಿಂಗ್, ಬೆಳ್ಳೂರು ಪೋಸ್ಟು,
ಮೈಸೂರು ಡಿಸ್ಟ್ರಿಕ್ಟು.

D. ABDUL AZIZ & SONS, Snuff Merchant,
Building No. 391, Doddapett,
Bellur Post, Mysore Dt.

೧೯೨೬ ನೆಯ ಇಸವಿ ಜುಲೈ ತಾ|| ೩ ರಿಂದ ೧೯೨೬ ನೆಯ ಇಸವಿ ಜುಲೈ ತಾ|| ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಜ್ಯೇಷ್ಠ ಬಹುಳ ಅಷ್ಟಮಿಯಿಂದ ಜ್ಯೇಷ್ಠ ಬಹುಳ ಅಮಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
3	ಶನಿ	ಅಷ್ಟ	6-35	ರೇವ	34-55	20
4	ಭಾನು	ನ-ಉ	1-38-55-18	ಅಶ್ವಿ	32-16	21
5	[1]ಸೋಮ	ಏಕಾ	53-36	ಭರ	30-23	22
6	ಮಂಗಳ	ದ್ವಾದ	51-20	ಕೃತ್ತಿ	29-44	23
7	ಬುಧ	ತ್ರಯೋ	50-19	ರೋಹಿ	30-5	24
8	ಗುರು	ಚತು	50-33	ಮೃಗ	31-38	25
9	[2]ಶುಕ್ರ	ಅಮಾ	52-5	ಆರ್ದ್ರಾ	34-38	26

(1) ಮಳೆನಕ್ಷತ್ರ-ಪುನರ್ವಸು ೧ ನೆಯಪಾದ. (2) ಮಳೆನಕ್ಷತ್ರ-ಪುನರ್ವಸು ೨ ನೆಯಪಾದ, ಸರ್ವತ್ರಾಮಾವಾಸ್ಯ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾ ಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ಜುಲೈ ತಾರೀಖು ೧೦ ನೆಯ ಶನಿವಾರ. [ಸಂಚಿಕೆ ೨೮

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

26

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—4] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರಲೀಶ್ವರಶತಕ	೦—೧—೦	೦—೬—೦
ಬಸವೇಶ್ವರಚರಿತ	೦—೮—೦	೦—೧೩—೦
ಸಟೀಕ [illegible] ಮಂಜರಿ	೦—೮—೦	೦—೧೩—೦
ಸಟೀಕ [illegible]	೧—೦—೦	೧—೬—೦
ಅಧುನಾ [illegible] ಶ್ರೀ|| ಬಸವಪ್ಪಶಾಸ್ತ್ರಿಗಳಿಂದ ರಚಿತವಾದ ಲಕ್ಷ್ಮಣ		
[illegible]	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೀ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—38] ಪೋ. ಬಾ. ೫೦. ಮದರಾಸು

ಬೇಸಿಗೆಕಾಲ ಬಂತು.
ಈ ದಿನವೇ ತರಿಸಿರಿ.

ಅದ್ಭುತ ವೃಶ್ಚಿಕಕಲ್ಪ.

ಚೇಳು ಕಚ್ಚಿದ್ದು ತಕ್ಷಣವೇ ಗುಣ. ಕ್ರಯ ಬಾಟ್ಲಿ 1ಕ್ಕೆ ರೂ. 0-4-0. ಡಜನ್ ಬಾಟ್ಲಿಗೆ ರೂ. 2-8-0. ಉಪಯೋಗಿಸುವ ವಿಧಾನ ಬಾಟ್ಲಿ ಸಂಗಡ ಕಳುಹಿಸುತ್ತೆ.

ವಿಳಾಸ—
ಹೆಚ್. ಹೆಚ್. ಎಂ. ಮಹದೇವಾರ್ಯ,
[12-12] ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

ಎರಡನೆಯಭಾಗ

1 ನೆಯ ಪ್ರಕರಣ.

ರಾಯಚಂದುಭಾಯಿ.

ಆಂಗ್ಲದೇಶದಿಂದ ಹೊರಟ ಹಡಗು ಬೊಂಬಾಯಿಗೆ ಬಂದು ಸೇರುವುದಕ್ಕೆ ಸರಿಯಾಗಿ ಸಮುದ್ರವು ಬಹಳ ಉಲ್ಲೋಲವಾಗಿದ್ದಿತೆಂದು ಹಿಂದಣ ಪ್ರಕರಣದಲ್ಲಿ ಹೇಳಿದ್ದೆನು. ಜೂನ್ ಜುಲೈ ತಿಂಗಳುಗಳಲ್ಲಿ ಅರೇಬಿಯಾ ಸಮುದ್ರವು ಸಾಮಾನ್ಯವಾಗಿ ಕಲ್ಲೋಲವಾಗಿರುವುದು. ಏಡೆನ್ನಿನಿಂದ ಸಮುದ್ರವು ಶಾಂತವಾಗಿರಲಿಲ್ಲವು. ಪ್ರಯಾಣಿಕರೆಲ್ಲರೂ ಅಸ್ವಸ್ಥರಾದರು. ನಾನು ಮಾತ್ರ ಆರೋಗ್ಯವಾಗಿದ್ದುಕೊಂಡು ಹಡಗಿನ ಹೊರಚೆ ಕುಳಿತುಕೊಂಡು ತುಫಾನುಗಳು ತರಂಗತರಂಗವಾಗಿ ಬರುತ್ತಿರುವುದರ ಸೌಂದರ್ಯವನ್ನು ನೋಡುತ್ತಿದ್ದೆನು. ಅಲೆಗಳು ಮೇಲುಕ್ಕೇರುವಾಗ್ಗೆ ತುಂತುರುಗಳು [illegible] ಮೇಲ್ಭಾಗಕ್ಕೆ ಬಂದು ಬೀಳುತ್ತಿದ್ದುವು. [illegible] ಕೊಂಡು ಓಟುಗಂಜಿಯನ್ನು ಕುಡಿಯುತ್ತಿದ್ದರು. ಕೊಂಚ ಅಜಾಗ್ರತೆಯಾಗಿರುತ್ತಿದ್ದಲ್ಲಿ ಗಂಜಿಯಲ್ಲವೂ ಚೆಲ್ಲಿಹೋಗುತ್ತಿದ್ದಿತು. ಯಾಕೆಂದರೆ ಅಲೆಯು ಅಷ್ಟು ಹೆಚ್ಚಾಗಿ ಉಬ್ಬಿಳಿಯುತ್ತಿದ್ದಿತು. ಹೊರಗಿನ ತುಫಾನು ಒಳಗಿನ ತುಫಾನಿಗೆ ಚಿಹ್ನೆಯೆಂಬುದು ನನ್ನ ಅಭಿಪ್ರಾಯವು. ಹೊರಗಣ ತುಫಾನಿಗೇ ನಾನು ಹೆದರಲಿಲ್ಲವೆಂದಮೇಲೆ ಇನ್ನು ಒಳಗಿನ ತುಫಾನಿಗೆ ಹೆದರಲಿಲ್ಲವೆಂದು ಹೇಳಬೇಕಾದುದಿಲ್ಲ. ಬೊಂಬಾಯಿಯಲ್ಲಿಳಿದು ಮನೆಗೆ ಹೋಗುತ್ತಲೆ ಕುಲದವರು ಬಹಿಷ್ಕರಿಸುವ ವಿಚಾರವೊಂದು ಹುಟ್ಟಿತು. ನ್ಯಾಯವಾದಿ (ಲಾಯರು) ವೃತ್ತಿಯನ್ನು ಪ್ರಾರಂಭಿಸಲು ನಾನು ಬಹಳ ಅಸಮರ್ಥನೆಂದು ಮೊದಲೇ ಹೇಳಿರುತ್ತೇನೆ. ನಾನು ಸಂಘಸಂಸ್ಕರಣೆಯ ಜತೆಗೆ ಮತ್ತೆ ಕೆಲ ಸಂಸ್ಕರಣಗಳನ್ನು ಪ್ರಾರಂಭಿಸುವುದನ್ನು ಕುರಿತು ಶ್ರದ್ಧೆಯಿಂದ ಆಲೋಚಿಸುತ್ತಿರುವಲ್ಲಿ ನಾನು ಊಹಿಸದೆಯಿದ್ದ ಕೆಲ ವಿಷಯಗಳು ಸ್ಫುರಿಸಿದುವು. ನನ್ನನ್ನು ಇದಿರ್ಗೊಂಡು ಕರೆದುಕೊಂಡುಹೋಗಲು ನನ್ನ ದೊಡ್ಡಣ್ಣನು ಬೊಂಬಾಯಿನಲ್ಲಿ ಸ್ಟೀಮರಿನ ಬಳಿಗೆ ಬಂದಿದ್ದನು. ಡಾಕ್ಟರ್ ಮೆಹತಾರವರ ಮತ್ತು ಅವರ ಅಣ್ಣಂದಿರ ಪರಿಚಯ ಮಾಡಿಕೊಂಡಿದ್ದನು. ಡಾಕ್ಟರ್ ಮೆಹತಾಯವರ ವಿಶ್ವಾಸದಮೇಲೆ ನಾವೆಲ್ಲರೂ ಅವರ ಮನೆಗೆ ಹೋದೆವು. ಆದರಿಂದ ಆಂಗ್ಲದೇಶದಲ್ಲಿ ಆರಂಭವಾದ ಪರಿಚಯವು ಕ್ರಮವಾಗಿ ವೃದ್ಧಿಯಾಯಿತು ಭಾರತದೇಶಕ್ಕೆ ಬಂದಮೇಲೆ ಸಹಿತ ಅವರ ಕುಟುಂಬದವರಿಗೂ ನಮ್ಮ ಕುಟುಂಬದವರಿಗೂ ವಿಶ್ವಾಸವು ಹೆಚ್ಚಿತು.

ನನ್ನ ತಾಯಿಯನ್ನು ಯಾವಾಗ ನೋಡುತ್ತೇನೆ? ಎಂದು ನಾನು ಬಹಳ ಆತುರದಿಂದಿದ್ದೆನು. ಆಕೆಯು ಪರಲೋಕವಾಸಿಯಾದಳೆಂಬ ಸಂಗತಿಯನ್ನು ನನ್ನ ಅಣ್ಣನು ನನಗೆ ಬರೆದು ತಿಳಿಸಿರಲಿಲ್ಲವು. ಬೊಂಬಾಯಿನಲ್ಲಿ ಸ್ಟೀಮರಿನಿಂದಿಳಿಯುತಲೆ ಹೇಳಿದುದರಮೇಲೆ ನಾನು ಸೂತಕಸ್ನಾನಮಾಡಿದೆನು. ನಾನು ಆಂಗ್ಲದೇಶದಲ್ಲಿರುವಾಗಲೇ ಆಕೆಯು ಮೃತಳಾದ ಸಂಗತಿಯನ್ನು ನನಗೆ ತಿಳಿಸಿದ್ದಲ್ಲಿ ವಿದೇಶದಲ್ಲಿ ನಾನು ಬಹಳ ವ್ಯಸನಪಡುತ್ತಿದ್ದೆನೆಂಬುದರಮೇಲೆ ನನ್ನ ಅಣ್ಣನು ನನಗೆ ಬರೆಯಲಿಲ್ಲವು. ಆ ಮರಣವಾರ್ತೆಯನ್ನು ಕೇಳಿದಕೂಡಲೆ ನನಗೆ ಅತ್ಯಧಿಕವಾದ ಸಂತಾಪವುಂಟಾಯಿತಲ್ಲದೆ ಆ ಸಂತಾಪಾತಿಶಯವು ಈಗಲು ಕೂಡ ಅಧಿಕವಾಗಿದೆ. ನನ್ನ ತಂದೆಯು ಸತ್ತಾಗುಂಟಾದ ದುಃಖಕ್ಕಿಂತ ಅತ್ಯಧಿಕವಾಗಿ ನನಗಾಗುಂಟಾಯಿತು. ನನ್ನ ಆಶೆಯುವೆಲ್ಲವೂ ವಿಫಲವಾದುವು. ಆದರೆ ನಾನು ದುಃಖವೆಲ್ಲವನ್ನೂ ಮನಸ್ಸಿನಲ್ಲಿ ಅಡಗಿಸಿಕೊಂಡು ಮೇಲೆ ಗಂಭೀರವಾಗಿದ್ದೆನು. ಆಗ ಡಾಕ್ಟರ್ ಮೆಹತಾರವರು ನನಗೆ ಬಹಳ ಜನರ ಪರಿಚಯವನ್ನು ಮಾಡಿಸಿದರು. ಅದರಲ್ಲಿ ಮೆಹತಾರವರ ಸಹೋದರರಾದ ಶ್ರೀಯುತ ದೇವಾಶಂಕರ ಜಗಜೀವನರವರೊಬ್ಬರಾಗಿದ್ದರು. ಇವರೊಡನೆ ಆಗುಂಟಾದ ಮೈತ್ರಿಯು ಯಾವಜ್ಜೀವವೂ ಗಾಢವಾಗಿರುವುದು. ಡಾಕ್ಟರ್ ಮೆಹತಾರವರ ದೊಡ್ಡಣ್ಣನವರ ಅಳಿಯಂದರೂ, ಆಭರಣಗಳ ವರ್ತಕರಾದ ರೇವಾಶಂಕರ ಜಗಜೀವನ ಕಂಪೆನಿಯ ಭಾಗಸ್ಥರೂ ಆದ ರಾಯಚಂದ್ರ ಉರುಫ್ ರಾಜಚಂದ್ರ ಕವೀಂದ್ರರ ಪರಿಚಯವನ್ನೂ ಮೆಹತಾಯವರು ಆಗಲೇ ಮಾಡಿಸಿದರು. ಇದು ಬಹಳ ದೊಡ್ಡವಿಷಯವು. ಕವಿಯವರಿಗೆ ಆಗ 25 ವರ್ಷ ವಯಸ್ಸು. ಪ್ರಥಮ ಸಂದರ್ಶನದಿಂದಲೇ ಅವರು ನಿಸ್ಪೃಹವರ್ತಕರೆಂದೂ, ವಿದ್ವಾಂಸರೆಂದೂ ನಾನು ಗ್ರಹಿಸಿಕೊಂಡೆನು. ಅವರು ಶತಾವಧಾನವನ್ನೂ ಕಲಿತುಕೊಂಡಿದ್ದರು. ನಾನು ಕಲಿತಿರುವ ವಿದೇಶಭಾಷೆಗಳಿಂದೆಲ್ಲ ವಾಕ್ಯಗಳನ್ನೋದಿದೆನು. ನಾನು ಯಾವರೀತಿಯಲ್ಲಿ ಹೇಳಿದೆನೋ ಅವರೂ ಅದೇರೀತಿಯಲ್ಲಿ ಅವೆಲ್ಲವನ್ನೂ ಹಿಂದಿರುಗಿ ಹೇಳಿದರು. ಅವರಿಗೆ ಅನೇಕ ಭಾಷೆಗಳು ಈಗಲು ಕೂಡ ಬರುತ್ತವೆ. ಅವರು ಮುಮುಕ್ಷುಗಳು, ವೇದವೇದಾಂಗವೇತ್ತರು, ಪರಿಶುದ್ಧಚರಿತ್ರರು. ಅವರು ತಮ್ಮ ಜೀವಿತವೆಲ್ಲವನ್ನೂ ಮೋಕ್ಷಸಾಧನೆಗೇ ಧಾರೆಯೆರದಿರುವರು. "ನನ್ನ ನಿತ್ಯಕೃತ್ಯಗಳಲ್ಲೆಲ್ಲ ನಾನು ಯಾವಾಗ ಅವುಗಳಿಂದ ಭಗವಂತನನ್ನು ನೋಡಲಾಗುವುದೋ ಆಗಲೇ ನನ್ನ ಜನ್ಮವು ಧನ್ಯವಾಗುವುದು. ಮುಕ್ತಾನಂದನಜೀವಿತಕ್ಕೆ ಆಧಾರವಾದ ಸೂತ್ರವು ಆ ಜಗದೈಕರಕ್ಷಕನೇ" ಎಂದು ಅರ್ಥವನ್ನು ಕೊಡುವ ಮುಕ್ತಾನಂದನ ವಾಕ್ಯವನ್ನು ರಾಜಚಂದ್ರಕವಿಯು ಯಾವಾಗಲೂ ಸ್ಮರಿಸುತ್ತಿದ್ದನು. ಆತನು ಲಕ್ಷಾಂತರ ರೂಪಾಯಿ ವ್ಯಾಪಾರಮಾಡುತ್ತಿದ್ದನು, ಮತ್ತು ಪಚ್ಚೆ ವಜ್ರ ಮೊದಲಾಗಿ ನವರತ್ನವ್ಯಾಪಾರವನ್ನೇ ಆತನು ಮಾಡುತ್ತಿದ್ದುದು. ವ್ಯಾಪಾರದಲ್ಲಿದ್ದ ಆತನ ಪ್ರಜ್ಞೆಯು ಅಸಾಮಾನ್ಯವಾಗಿದ್ದರೂ ಆತನ ದೀಕ್ಷೆಯು ಅದರಮೇಲಿರಲಿಲ್ಲವು. ಭಗವಂತನ ಅಪರೋಕ್ಷಸಂದರ್ಶನಾಪೇಕ್ಷೆಯಿಂದ ಆತನು ಏಕಾಗ್ರಚಿತ್ತನಾಗಿದ್ದನು. ಆತನ ವ್ಯಾಪಾರದ ಗದ್ದುಗೆಯಮೇಲೆ ವ್ಯಾಪಾರಸಂಬಂಧವಾದ ಪುಸ್ತಕಗಳೊಡನೆ ಕೆಲ ಮತಗ್ರಂಥಗಳೂ ದಿನಚರ್ಯಪುಸ್ತಕಗಳೂ ಯಾವಾಗಲೂ ಇರುತ್ತಿದ್ದುವು. ವ್ಯಾಪಾರವಿಷಯವು ಮುಗಿಯುತ್ತಲೆ ಮತಗ್ರಂಥಗಳನ್ನೂ ದಿನಚರ್ಯ ಪುಸ್ತಕಗಳನ್ನೂ ನೋಡುತ್ತಿದ್ದನು. ದಿನಚರ್ಯ ಪುಸ್ತಕಗಳಿಂದಲೇ ಅನೇಕ ವಿಷಯಗಳನ್ನು ಆತನು ಗ್ರಂಥರೂಪವಾಗಿ ಪ್ರಕಟಿಸಿದನು. ಅಧಿಕವಾದ ವ್ಯಾಪಾರವು ಮುಗಿಯುತ್ತಲೆ ಆಧ್ಯಾತ್ಮಿಕರಹಸ್ಯವನ್ನು ಕುರಿತು ಬರೆಯಲು ಸತ್ಯಾನ್ವೇಷಿಗಲ್ಲದೆ ಸಾಮಾನ್ಯವರ್ತಕನಿಗೆ ಸಾಧ್ಯವಲ್ಲವು. ಆತನು ಈರೀತಿಯಾಗಿ ವ್ಯಾಪಾರಗೋಷ್ಠಿಯಲ್ಲಿ ಆಧ್ಯಾತ್ಮಿಕವಿಷಯನಿಮಗ್ನನಾಗಿರುವುದನ್ನು ನಾನು ಅನೇಕವೇಳೆ ನೋಡಿದ್ದೆನು. ಆತನು ಯಾವಾಗಲೂ ಪ್ರಶಾಂತಚಿತ್ತನಾಗಿದ್ದನು. ಆತನಿಗೂ ನನಗೂ ಐಹಿಕವಾದ ಸ್ವಾರ್ಥಪರಸಂಬಂಧವೇನೂ ಇಲ್ಲದಿದ್ದರೂ ನನಗೆ ಆತನಕೂಡ ವಿಶೇಷ ಪರಿಚಯವಿದ್ದಿತು. ಆಗ್ಗೆ ನನಗೆ ಇನ್ನೂ ಮೊಕದ್ದಮೆಗಳು ಬರುತ್ತಿರಲಿಲ್ಲವು. ನಾನು ಆತನಲ್ಲಿಗೆ ಹೋದಾಗಲೆಲ್ಲ ಆಮುಖ್ಯವಾದ ವಿಷಯವನ್ನು ಆತನು ನನಗೆ ಬೋಧಿಸುತ್ತಿದ್ದನು. ನನಗೆ ಆಗ ಮತವಿಷಯದಲ್ಲಿ ಆಸಕ್ತಿಯು [illegible]

ಪಾಗಿರಲಿಲ್ಲವು. ಆತನ ಉಪದೇಶವು ಚೆನ್ನಾಗಿ ನನ್ನ ಮನಸ್ಸಿನಲ್ಲಿ ನಾಟಿಕೊಂಡಿತು. ಆತನ ಪಾಂಡಿತ್ಯಕ್ಕೆ ತಕ್ಕಂತೆ ವಿಮಲವರ್ತನವಿದ್ದುದರಿಂದಲೇ ಆತನಲ್ಲಿ ನನಗೆ ಅಧಿಕವಿಶ್ವಾಸವುಂಟಾಯಿತು. ಆತನು ಬಹಳ ರಹಸ್ಯವಾದ ವಿಷಯವನ್ನು ಕೂಡ ನನಗೆ ತಿಳಿಸುತ್ತಿದ್ದನು. ಅಧ್ಯಾತ್ಮಿಕವಿಚಾರದಲ್ಲಿ ನನ್ನ ಮನಸ್ಸಿಗೆ ಆಂದೋಳನವುಂಟಾದಾಗಲೆಲ್ಲಾ ಆತನೇ ನನಗೆ ಶರಣ್ಯನಾಗಿದ್ದನು. ಆದುಕಾರಣ ನನಗೆ ಆತನೇ ಗುರುವೆಂದು ನನ್ನ ಮನಸ್ಸಿನಲ್ಲಿ ದೃಢಪಡಿಸಿಕೊಂಡಿದ್ದೆನಲ್ಲದೆ ಈಗಲೂ ನಾನು ಆತನನ್ನು ಗುರುವೆಂದು ಸ್ಮರಿಸುತ್ತಿರುವೆನು. ದೈವಸಾಕ್ಷಾತ್ಕಾರಕ್ಕೆ ಸದ್ಗುರೂಪದೇಶವು ಅವಶ್ಯವೆಂಬ ನಂಬುಗೆಯು ನನಗೆ ಅತ್ಯಧಿಕವಾಗಿಯೇ ಇರುವುದು. ಗುರುವಿಲ್ಲದಿದ್ದರೆ ಸನ್ಮಾರ್ಗವೂ, ಜ್ಞಾನವೂ ಗೋಚರಿಸುವುದಿಲ್ಲವೆಂಬುದು ಸತ್ಯ. ಐಹಿಕವಿಚಾರದಲ್ಲಿ ಅಸಮಗ್ರನಾದ ಗುರುವು ಕೆಲಸಕ್ಕೆ ಬರುತ್ತಾನಲ್ಲದೆ ಆಧ್ಯಾತ್ಮವಿಚಾರದಲ್ಲಿ ಹಾಗೆ ಕೆಲಸಕ್ಕೆ ಬರುವುದಿಲ್ಲ. ಅಪರೋಕ್ಷಜ್ಞಾನಿಯೇ ಗುರುಪದಕ್ಕೆ ಅರ್ಹನು. ಆಯಾ ವ್ಯಕ್ತಿಗಳ ಅರ್ಹತೆಯನ್ನನುಸರಿಯೇ ಗುರುಗಳು ಲಭಿಸುವರು. ಸಂಪೂರ್ಣ ಜ್ಞಾನವನ್ನು ಹೊಂದಲು ಮನುಷ್ಯನು ನಿರಂತರವೂ ಕೃಷಿಮಾಡುತ್ತಲೇ ಇರಬೇಕು. ಅದಕ್ಕೆ ಮನುಷ್ಯರಿಗೆ ಹಕ್ಕಿರುವುದು. ಉಳಿದುದೆಲ್ಲವೂ ಭಗವದಧೀನವಾಗಿಯೇ ಇರುವುದು. ನಾನು ರಾಜಚಂದ್ರ ಕವಿಯನ್ನು ಗುರುವನ್ನಾಗಿ ಮಾಡಿಕೊಳ್ಳದಿದ್ದರೂ ಅನೇಕಸಾರಿ ಆತನು ನನಗೆ ಮಾರ್ಗದರ್ಶಕನಾಗಿದ್ದನು. ಪ್ರತ್ಯಕ್ಷಸಂದರ್ಶನ ಕೊಟ್ಟೀಸ್ವರ ರಾಜಚಂದ್ರಕವಿಯು ಗ್ರಂಥಪಠನದಿಂದಲೂ, ಭಗವಂತನ ರಾಜ್ಯವು ನಿನ್ನೊಳಗೇ ಇದೆ ಎಂದು ಟಾಲಸ್ಟಾಯಿ ಬರೆದಿರುವ ಗ್ರಂಥದಿಂದಲೂ, ರಸ್ಕಿನ್ ಬರೆದಿರುವ ಅಂಟುದಿಲಾಸ್ಟ್ ಎಂಬ ಪುಸ್ತಕಪಠನದಿಂದಲೂ ನನಗೆ ವಿಶೇಷಭಕ್ತಿಯುಂಟಾಯಿತು.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜುಲೈ ತಾ|| ೧೦ ನೆಯ ಶನಿವಾರ.

SIR CHARLES TOD-HUNTER.

We do not understand why there should have been so much criticism over the appointment of Sir Charles Tod-hunter as Private Secretary to His Highness the Maharaja of Mysore. Nobody can deny that the place is one of supreme importance where the best of administration experience and of political wisdom would be always in demand and especially so when important questions regarding the claims of Mysore in the matter of custom duties, stamps etc., on the Imperial Government are likely to be taken up earnestly on hand for consideration. There are few who can deny that Sir Charles Tod-hunter is possessed of both these virtues. It may be asked why the privilege once accorded to an Indian, which happened in the case of Amin-ul-Mulk Mirza M. Ismail, for the first time should not be continued. But in this affair, we must say that His Highness the Maharaja is the best judge. One thing can be fairly assumed. It is not that His Highness only appointed an Indian in the person of Mr. Mirza as an exception, but we are sure it would be treated as a rule, subject to such modifications as the exigencies of circumstances might dictate. The other criticism for which there may have been some grounds is that Sir Charles would not be quite so sympathetic a person concerning national aspirations. We need not examine the antecedents of the New Private Secretary to say either way. Whatever line of action he might have taken in British India and however hard a beurocrat he might have been there, it is not a matter which should cause any grave concern to us the people of Mysore. For one thing, the new place is such that the beaurocratic instincts, even if there be any, would have little play. For another, there should be no reason why freed from gubernatorial harness Sir Charles should prove the most sympathetic of men. It is one thing to be a Government official and to act and it is quite a different thing to be a free man whose action could be unfettered. For our part, we would not wonder if Sir Charles whom we expect to make India his home in future turns out to be a most sympathetic of British friends of India. There have also been taunts that he should not have accepted the place having once held positions of very high distinction. There is nothing so unbecoming Sir Charles in his accepting the new office. To have the privilege of giving counsel to a premier Indian Ruler whose State is forging a head and ranks as the foremost of Indian States and to have the opportunity of having a hand however little in the shaping of its destinies is by no means a thing to be underrated by anybody. For our part, we hope Sir Charles will more than justify the confidence reposed in him by His Highness and leave behind him a name which would be endearing to His Highness' subjects.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿರುವ ಉತ್ತರಾದಿಮಠದಲ್ಲಿ ಇಂದಿನಿಂದ ವಿಶ್ವಜಿದ್ಯಾಗಕ್ಕಾರಂಭವಾಗುವುದೆಂದು ತಿಳಿಯಬರುತ್ತದೆ

ಮೈಸೂರು ದಿವಾನ್‌ಪದವಿಯಿಂದ ನಿವೃತ್ತರಾಗಿ ಈವರೆಗೂ ಸ್ವಸ್ಥಳದಲ್ಲಿ ವಾಸಿಸುತ್ತಿದ್ದ ಮ|| ವಿ. ಪಿ. ಮಾಧವರಾಯರು ಈಗ ಬೆಂಗಳೂರಿಗೆ ಬಂದು ತಮ್ಮ ಪರ್ಲ್‌ಭವನದಲ್ಲಿಳಿದುಕೊಂಡಿರುವರು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟ್ಟಿನಲ್ಲಿ ಸೀನಿಯರ್ ಕ್ಲಾರ್ಕಾಗಿರುವ ಮ|| ಸಿ. ಎನ್. ಸುಬ್ಬರಾಯರು ಶ್ರೀನಿವಾಸಪುರ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬರುವ ತಾ|| 30 ನೆಯ ಶುಕ್ರವಾರ ಮಧ್ಯಾಹ್ನ 12 ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸ್‌ಕಟ್ಟಡದ ಕೌನ್ಸಿಲ್‌ಹಾಲಿನಲ್ಲಿ ಮೈಸೂರು ಸಂಪದಭ್ಯುದಯಸಮಾಜದ ಅಧಿವೇಶನವು ನಡೆಯುವುದಾಗಿ ಪ್ರಕಟವಾಗಿದೆ.

ಡೆಪ್ಯುಟಿಕಂಟ್ರೋಲರಾದ ಮ|| ಎಲ್. ಬಿಸ್ಟೋಪಂತ್ ಬಾದಾಮಿಯವರು ಉದ್ಯೋಗದಿಂದ ನಿವೃತ್ತರಾಗುವುದಕ್ಕೆ ಪೂರ್ವಭಾವಿಯಾಗಿ ಈ ತಾ|| 1 ರಿಂದ 2 ತಿಂಗಳು ಮತ್ತು 16 ದಿವಸಗಳ ರಜವನ್ನು ಕೊಡಲ್ಪಟ್ಟಿರುತ್ತಾರೆ.

ಕಳೆದ ಜೂನ್ ತಾ|| 19 ಕ್ಕೆ ಕಡೆಯಾದ ಒಂದು ವಾರದಲ್ಲಿ ಮೈಸೂರು ಸರ್ಕಾರದವರಿಂದ ನಡೆಯಿಸಲ್ಪಡುತ್ತಿರುವ ರೈಲ್ವೆಗಳಿಂದ 80,800 ರೂ. ಉತ್ಪನ್ನವಾಗಿರುವುದಾಗಿಯೂ ಕಳೆದವರ್ಷ ಇದೇ ಕಾಲದಲ್ಲಿ 73,493 ರೂ. ಉತ್ಪನ್ನವಾಗಿದ್ದುದಾಗಿಯೂ ವರದಿಯಾಗಿದೆ.

ರಾಜಧಾನಿಯ ಪೋಲೀಸಿನವರು ಟಿ. ನರಸೀಪುರದ ಹೆಂಗುಸನ್ನು ಮಾನಭಂಗಮಾಡಿ ಅವಳ ಮೈಮೇಲಿದ್ದ ನಗಗಳನ್ನು ಕಸುಕೊಂಡಿದ್ದುದಕ್ಕಾಗಿ ಸಿಟಿಮ್ಯಾಜಿಸ್ಟ್ರೇಟರವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಸಿಟಿಪೋಲೀಸು ಕಾನಿಸ್ಟೇಬಲು ಡಿಫೆನ್ಸ್ ಸಾಕ್ಷಿಕೋರಿಕೊಂಡುದರಮೇಲೆ ಈ ದಿವಸ ವಿಚಾರಣೆಗಿಡಲ್ಪಟ್ಟಿರುತ್ತದೆ.

ರಾಜಧಾನಿಯಲ್ಲಿ ದಂತದ ಕೆತ್ತನೆಯಕೆಲಸಮಾಡುವ ಮಿರ್ ಮುಸ್ತಕಾಲಿ ಅಂಡ್‌ಸನ್ಸ್‌ರವರು 1924 ರಲ್ಲಿ ನಡೆದ ವೆಂಬ್ಲೆ ಪ್ರದರ್ಶನಾಲಯಕ್ಕೆ ಕಳುಹಿಸಿಕೊಟ್ಟಿದ್ದ ಕರೀಮರದ ಮೇಲೆ ದಂತದ ಕೆತ್ತನೆಕೆಲಸ ಮಾಡಿರುವ ತಟ್ಟೆ, ಪೆಟ್ಟಿಗೆ, ಟೀಪಾಯಿ ಮೊದಲಾದ ಪದಾರ್ಥಗಳಿಗಾಗಿ ಕಂಚಿನ ಬಹುಮಾನದ ಬಿಲ್ಲೆಯು ದೊರಕಿರುತ್ತದೆ.

ಬೆಂಗಳೂರುದಂಡಿನಲ್ಲಿರುವ ಸೆಂಟ್ ಪಾಟ್ರಿಕ್ ಕೆಥೇಡ್ರಲಿನ ರೆವರೆಂಡ್‌ಫಾದರ್ ರಾಜಸಭಾಭೂಷಣ ಎ. ಎಂ. ಟೈಬಾರ್ಡ್, ಎಂ. ಎ., ಎಂ. ಆರ್. ಎ. ಎಸ್., ಎಂ. ಬಿ. ಇ., ರವರು ಕಳೆದ 18 ತಿಂಗಳಿಂದಲೂ ಅಸ್ವಸ್ಥರಾಗಿದ್ದು ತಾ|| 2 ರಲ್ಲಿ ಕ್ರಿಸ್ತಲೋಕವಾಸಿಗಳಾದರು. ಇವರಿಗೆ ಅವಸಾನಕಾಲದಲ್ಲಿ 63 ವರ್ಷ ವಯಸ್ಸಾಗಿದ್ದಿತು.

ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟರಾದ ಮ|| ಡಿ. ಶ್ರೀನಿವಾಸಯ್ಯಂಗಾರ್‌ರವರು ಈ ತಾ|| 30 ರಿಂದ 2 ನೇ ತರಗತಿಯ ಡೆಪ್ಯುಟಿಕಮಿಷನರಾಗಿ ನಿಯಮಿಸಲ್ಪಟ್ಟಿರುವುದರಿಂದ ಅವರ ಬದಲು ಡೆಪ್ಯುಟಿಸೂಪರಿಂಟೆಂಡೆಂಟರಾದ ಮ|| ಡಿ. ಶ್ರೀನಿವಾಸರಾವ್, ಬಿ.ಎ., ಯವರು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದ ಭಾನುವಾರದಿಂದ 3-4 ದಿವಸಗಳವರೆಗೆ ರಾಜಧಾನಿಯಲ್ಲಿ ಜಡಿಮಳೆಯಾಗುತ್ತಿದ್ದಿತಲ್ಲದೆ ಆಗಾಗ್ಗೆ ದೊಡ್ಡಮಳೆಯು ಸಹ ಸುರಿದು ಕೆರೆಕಟ್ಟೆಗಳಿಗೆ ಕೊಂಚ ನೀರು ಬಂದಿರುತ್ತದೆ. ನಂಜನಗೂಡಿನಲ್ಲಿ ಕಪಿಲಾನದಿಯ ಪ್ರವಾಹವು ಕರೆಕಟ್ಟೆ ಹರಿಯುತ್ತಿರುವುದಾಗಿಯೂ, ಕಾವೇರೀನದಿಯಲ್ಲಿ ತಕ್ಕಮಟ್ಟಿಗೆ ಪ್ರವಾಹವು ಬಂದಿರುವುದಾಗಿಯೂ ತಿಳಿಯಬಂದಿದೆ.

ಟಿ. ನರಸೀಪುರ ತಾ|| ದಣಾಯಕನಪುರದಲ್ಲಿ ಪಟೇಲವಿಚಾರವಾಗಿ ನಡೆದ ಕೊಲೆಯಸಂಬಂಧದಲ್ಲಿ ಅಪರಾಧಿಗಳೆಂದು ಸೆರೆಹಿಡಿಯಲ್ಪಟ್ಟು ಮೈಸೂರು ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಇಬ್ಬರು ಅರಸುಗಳಲ್ಲಿ ತಂದೆಗೆ 2 ವರ್ಷಕಾಲ ಸಾಮಾನ್ಯಕಾರಾಗೃಹವಾಸಶಿಕ್ಷೆಯೂ, ಮಗನಿಗೆ 3 ವರ್ಷಕಾಲ ಕಠಿಣಕಾರಾಗೃಹವಾಸಶಿಕ್ಷೆಯೂ ಕಳೆದ ತಾ|| 8 ರಲ್ಲಿ ಸೆಷನ್ಸ್ ಜಡ್ಜರಿಂದ ವಿಧಿಸಲ್ಪಟ್ಟಿತು.

ರೆವಿನ್ಯೂ ಕಮಿಷನರಾದ ಮ|| ಸಿ. ಎಸ್. ಬಾಲಸುಂದರಂಅಯ್ಯರ್‌ರವರು 2,000 ರೂ. ಸಂಬಳದಮೇಲೆ ಕೌನ್ಸಿಲರ ಅಂತಸ್ತಿಗೇರಿಸಲ್ಪಟ್ಟು ದಿಲ್ಲಿಯಲ್ಲಿ ನೆರೆಯುವ ಭಾರತನರೇಂದ್ರಮಂಡಳದ ಅಧಿವೇಶನಕ್ಕೆ ಮೈಸೂರುಸಂಸ್ಥಾನದ ಪ್ರತಿನಿಧಿಗಳಾಗಿ ಹೋಗಿ ನಮ್ಮ ಸಂಸ್ಥಾನಕ್ಕಿರುವ ಸ್ಥಾನವಿಶೇಷವನ್ನೂ ಇತರ ವಿಷಯಗಳನ್ನೂ ಕುರಿತು ಪ್ರಸ್ತಾಪಿಸುವರೆಂದು ಕೆಲಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಕೊಡಗಿನ ಪಾಲಿಬೆಟ್ಟದ ಕಾಫಿತೋಟದಲ್ಲಿ ಕೆಲಸಮಾಡುವುದಕ್ಕಾಗಿ 16 ಹುಡುಗರನ್ನು ಬಂಡಿಗಳಲ್ಲಿ ಕುಳ್ಳಿರಿಸಿಕೊಂಡು ಪುಟ್ಟಮೇಸ್ತ್ರಿ ಎಂಬುವವನು ಕಳೆದವಾರ ಹುಣಸೂರುಮಾರ್ಗವಾಗಿ ಹೋಗುತ್ತಿರುವಾಗ್ಗೆ ಬೀಟ್ ಪೋಲೀಸಿನವನು ನೋಡಿ ಸಂಶಯದಿಂದ ಅವರೆಲ್ಲರನ್ನೂ ಹಿಡಿದು ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದನು. ಇದು ಈ ತಾ|| 13 ರಲ್ಲಿ ವಿಚಾರಣೆಗಿಡಲ್ಪಟ್ಟಿದೆ.

ಯಳಂದೂರು ತಾ|| ಹೊನ್ನೂರಿನಲ್ಲಿ ನಡೆದ ದಂಗೆಯ ವಿವಾದದ ವಿಚಾರಣೆಗಾಗಿ ಯಳಂದೂರಿನಲ್ಲೇರ್ಪಟ್ಟಿರುವ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯಕೂಡದೆಂದು ಅಪರಾಧಿಗಳು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಬಿನ್ನೈಸಿಕೊಂಡಿದ್ದು ಅದು ಸಫಲವಾಗಲಿಲ್ಲವಾಗಿ ಚೀಫ್‌ಕೋರ್ಟಿಗೆ ಅಪೀಲ್‌ಮಾಡಿಕೊಂಡಿದ್ದರು. ಆದರೆ ಸರ್ಕಾರದ ಅಪ್ಪಣೆಗೆ ವಿರೋಧವಾಗಿ ತಾವು ಪ್ರವೇಶಿಸಲಾಗುವುದಿಲ್ಲವೆಂದು ಚೀಫ್‌ಕೋರ್ಟಿನವರು ತೀರ್ಮಾನಿಸಿ ಅಪೀಲನ್ನು ತಿರಸ್ಕರಿಸಿಬಿಟ್ಟರು.

ತಿರುಮಕೂಡ್ಲುನರಸೀಪುರ ತಾ|| ಕುರುಬೂರಿನ ಪಟೇಲ್ ಪುಟ್ಟಸುಬ್ಬಪ್ಪನವರು ಈ ತಾ|| 7 ನೆಯ ಬುಧವಾರ ಚಿಕ್ಕಸಿದ್ಧನಮನೆ ಹತ್ತಿರ ಹೋಗಿ ಜನನಮರಣದ ರಿಜಿಸ್ಟರುಬುಕ್ಕನ್ನು ತೆಗೆದುಕೊಂಡು ಬರುವಂತೆ ಹೇಳಿದುದರಮೇಲೆ ಸಿದ್ದನು ಕೋಪಗೊಂಡು ಒಂದು ಮಚ್ಚಿನಿಂದ ಪಟೇಲರ ತಲೆಅಂಗೈಗಳಮೇಲೆ ಹೊಡೆದು ಗಾಯಪಡಿಸಿದನು. ಈ ಸುದ್ದಿಯನ್ನು ಡಿವಿಜನ್ ಪೋಲೀಸು ಸೂಪರಿಂಟೆಂಡೆಂಟರು ತಿಳಿದು ಸ್ಥಳದ ವಿದ್ಯಮಾನವನ್ನು ವಿಚಾರಿಸಿಕೊಂಡುಬರಲು ಹೋಗಿದ್ದುದಾಗಿ ತಿಳಿಯಬರುತ್ತದೆ.

ಯಾವ ವಿಶ್ವವಿದ್ಯಾಲಯದಿಂದಾದರೂ ಈಗ್ಗೆ 5 ವರ್ಷಗಳ ಹಿಂದೆ ಬಿ. ಎ., ಪ್ರಶಸ್ತಿಯನ್ನು ಪಡೆದಿರುವವರಲ್ಲಾರಾದರು ವೀರಶೈವಮತಚರಿತ್ರೆಯನ್ನು ಆಂಗ್ಲಭಾಷೆಯಲ್ಲಿ ಬರೆದು 1927 ನೆಯ ಜೂನ್ ತಾ|| 30 ರೊಳಗೆ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರವರಲ್ಲಿಗೆ ಕಳುಹಿಸಿಕೊಟ್ಟಲ್ಲಿ ಉತ್ತಮವಾದುದಕ್ಕೆ ರಾಜಸಭಾಭೂಷಣ ರೆವರೆಂಡ್ ಫಾದರ್ ಟಬಾರ್ಡರವರ ಸ್ಮಾರಕವಾಗಿ ಅವರ ಮಿತ್ರರಿಂದೇರ್ಪಡಿಸಲ್ಪಟ್ಟಿರುವ 100 ರೂ. ಬೆಲೆಯ ಪದಕವು ಯೂನಿವರ್ಸಿಟಿಕೌನ್ಸಿಲಿನವರಿಂದ ಬಹುಮಾನಿಸಲ್ಪಡುವುದಾಗಿ ಈ ವಾರದ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಮೈಸೂರು ಡಿವಿಜನ್ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಕೆ. ಸಿದ್ದರಾಮಪ್ಪನವರು ರಾಜಧಾನಿಯ ಅಡ್ವೋಕೇಟ್ ಮ|| ಮಿರ್ಲೆ ಸುಬ್ಬರಾಯರ ಮೇಲೂ ಮತ್ತೊಬ್ಬ ಶಾನುಭಾಗರ ಮೇಲೂ ಮಾನನಷ್ಟಕ್ಕಾಗಿ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ವಿವಾದದಲ್ಲಿ ಅಪರಾಧಿಗಳ ಮೇಲೆ ತಪ್ಪು ಆಪಾದನೆಯಾಗದೆ ಮ|| ಸುಬ್ಬರಾಯರೂ ಶಾನುಭಾಗರೂ ಬಿಡಲ್ಪಟ್ಟರೆಂದು ತಿಳುಹಿಸಲ್ಪಟ್ಟಿರುವುದಷ್ಟೆ. ಹೀಗೆ ಅಪರಾಧಿಗಳು ಬಿಡಲ್ಪಟ್ಟುದು ತಪ್ಪೆಂದು ಫಿರ್ಯಾದಿಯು ಕಳೆದ ಗುರುವಾರ ಮೈಸೂರು ಸೆಷನ್ಸ್‌ಜಡ್ಜರಲ್ಲಿ ಅಪೀಲನ್ನು ಮಾಡಿರುವುದಾಗಿ ಕೇಳುತ್ತೇವೆ.

ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ರಾಜತಂತ್ರಧುರೀಣ ಡಾಕ್ಟರ್ ಬ್ರಜೇಂದ್ರನಾಥಶೀಲ್‌ರವರಿಗೆ ಸರ್ ಪ್ರಶಸ್ತಿಯೂ, ನಮ್ಮ ಸಂಸ್ಥಾನದ ವಿದ್ಯಾಭ್ಯಾಸಶಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಾಗಿದ್ದು ನಿವೃತ್ತರಾಗಿರುವ ಮುನೀರ್-ಉಲ್-ತಾಲಿಂ ಎಚ್. ಜೆ. ಭಾಭಾ, ಎಂ.ಎ., ಯವರಿಗೆ ಸಿ.ಐ.ಇ., ಪ್ರಶಸ್ತಿಯೂ, ಬೆಂಗಳೂರುದಂಡಿನ ಮ್ಯುನಿಸಿಪಲ್ ಕೌನ್ಸಿಲ್ ವೈಸ್‌ಪ್ರೆಸಿಡೆಂಟರಾದ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರರವೊಮ್ಮಗ ಮ|| ಎ. ಎಂ. ತಂಗವೇಲು ಮೊದಲಿಯಾರರಿಗೆ ರಾವ್ ಸಾಹೆಬ್ ಪ್ರಶಸ್ತಿಯೂ ಚಕ್ರವರ್ತಿಯವರ ವರ್ಧಂತ್ಯುತ್ಸವದ ಸಂಬಂಧದಲ್ಲಿ ದಯಪಾಲಿಸಲ್ಪಟ್ಟಿರುತ್ತವೆ.

ರಾಜಧಾನಿಯಲ್ಲಿ ದಿವಾನ್‌ಬಹದ್ದೂರ್ ಸಿ. ಶ್ರೀಕಂಠೇಶ್ವರ ಅಯ್ಯರ್‌ರವರ ಮನೆಯಲ್ಲಿದ್ದ 18 ವರ್ಷ ವಯಸ್ಸಿನ ಎಸ್. ನಾರಾಯಣರಾವ್ ಎಂಬ ಬ್ರಾಹ್ಮಣವಿದ್ಯಾರ್ಥಿಯು ರಾಜಧಾನಿಯ ಎರಡು ಬಟ್ಟೆ ಅಂಗಡಿಗಳಿಂದ ಮ|| ಅಯ್ಯರ್‌ರವರ ಮನೆಗೆ ರೇಷ್ಮೆ ಮತ್ತು ನೂಲಿನಸೀರೆಗಳನ್ನು ತರುವಂತೆ ಚೀಟಿಯನ್ನು ಕಳುಹಿಸಿರುತ್ತಾರೆಂದು ಸೃಷ್ಟಿಸಿ ಕಾಗದವನ್ನು ತೋರಿಸಿ ತೆಗೆದುಕೊಂಡುಹೋಗಿ ಹಿಂದಿರುಗಿಬರಲಿಲ್ಲವಾಗಿ ಅಂಗಡಿಯವರು ಪೋಲೀಸಿಗೆ ತಿಳಿಸಿದುದರಮೇಲೆ ಆ ವಿದ್ಯಾರ್ಥಿಯು ಸೆರೆಹಿಡಿಯಲ್ಪಟ್ಟು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು 3 ವರ್ಷ ಕಠಿಣಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ಕೃಷ್ಣರಾಜಸಾಗರದಿಂದ ಎತ್ತರಪ್ರದೇಶದಲ್ಲಿ ನಾಲೆಗಳನ್ನು ಹಾಕುವ ವಿಚಾರವನ್ನು ಪರ್ಯಾಲೋಚಿಸುವ ಬಗೆಗೆ ಒಂದು ಕಮಿಟಿಯು ಏರ್ಪಡಿಸಲ್ಪಡುವುದೆಂದು ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನರು ಅಪ್ಪಣೆಕೊಡಿಸಿದರು. ಈ ಕಮಿಟಿಯು ಇಷ್ಟರಲ್ಲೇ ಏರ್ಪಡಿಸಲ್ಪಟ್ಟು ಸರ್ ಎಂ. ವಿಶ್ವೇಶ್ವರಯ್ಯನವರು ಅದರ ಅಧ್ಯಕ್ಷರಾಗಿ ನಿಯಮಿಸಲ್ಪಡುವ ವರ್ತಮಾನವಿದೆ. ಇವರು ಮದ್ರಾಸು ಮ್ಯುನಿಸಿಪಾಲಿಟಿಯ ಆರ್ಥಿಕಸ್ಥಿತಿಯನ್ನು ಪರಿಶೀಲಿಸಿ ಮಿತವ್ಯಯಮಾರ್ಗವನ್ನು ಸೂಚಿಸಬೇಕೆಂದು ಆ ಮ್ಯುನಿಸಿಪಾಲಿಟಿಯವರಿಂದ ಪ್ರಾರ್ಥಿಸಲ್ಪಟ್ಟಿರುವುದರಮೇಲೆ ಈ ತಿಂಗಳ ಅಂತ್ಯಭಾಗದಲ್ಲಿ ಮದರಾಸಿಗೆ ಹೋಗುವವರಾಗಿರುವರು.

ಕಳೆದ ಬುಧವಾರ ರಾಜಕುಮಾರಿ ಸೌ|| ಲೀಲಾವತಿ ದಂಪತಿಗಳು ಶ್ರೀಮನ್ಮಹಾರಾಜರವರನ್ನೂ, ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಿಯವರನ್ನೂ, ಮಹಾರಾಣಿಯವರನ್ನೂ ಜಯಲಕ್ಷ್ಮೀವಿಲಾಸ ಪ್ರಾಸಾದಕ್ಕೆ ಬಿಜಮಾಡಿಸಿಕೊಂಡು ಮಹಾಸ್ವಾಮಿಯವರ ಪಾದಪೂಜೆಯನ್ನು ಯಥಾಮರ್ಯಾದೆಯಿಂದ ಮಾಡಿ ದಿವ್ಯವಾದ ಔತಣದಿಂದಲೂ ಬಹುಬೆಲೆಯ ದುಕೂಲಾದಿ ಉಡುಗೆರೆಗಳಿಂದಲೂ ಸತ್ಕರಿಸಿ ತಮ್ಮ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸಿದರು. ಆದಿವಸ ರಾಜಬಂಧುಗಳೆಲ್ಲರೂ ಆಹ್ವಾನಿಸಲ್ಪಟ್ಟಿದ್ದರು. ಈ ದಿವಸ ಪ್ರಾಸಾದದಲ್ಲಿ ಕೆಲಸಮಾಡುವ ನೆರೆಯಹಳ್ಳಿಯ ನೂರಾರುಜನರಿಗೆ ಭೋಜನ ಮಾಡಿಸಲ್ಪಡುವುದಾಗಿ ಕೇಳುತ್ತೇವೆ.

ಕಾನಕಾನಹಳ್ಳಿ ತಾ|| ಕೋಡಿಹಳ್ಳಿ ಹೋಬಳಿ ಕೆಬ್ಬೆದೊಡ್ಡಿವಾಸಸ್ಥನಾದ ಸಿದ್ದೇಗೌಡನೆಂಬುವವನು ಹೊಲದಿಂದ ಮನೆಗೆ ಬಂದಾಗ ತನ್ನ ಹೆಂಡತಿ ಕೆಂಪಿ ಎಂಬುವವಳು ಗ್ರಾಮದ ಗೌಡನ ಆಳು ಮುತ್ತನೆಂಬುವವನನ್ನು ಕಟ್ಟಿಕೊಂಡು ಬಿದ್ದಿದ್ದನ್ನು ಕಂಡು ಕೋಪೋದ್ರೇಕನಾಗಿ ಕುಡುಗೋಲಿನಿಂದ ಹೆಂಡತಿಯ ಮತ್ತು ಮುತ್ತನ ಕೊರಳುಗಳನ್ನು ಕತ್ತರಿಸಿಹಾಕಿ ಅವರ ತಲೆಯಬುರುಡೆಗಳನ್ನು ಕೈಗಳಲ್ಲಿ ಹಿಡಿದುಕೊಂಡು ಕೋಡಿಹಳ್ಳಿಯ ಪೋಲೀಸುಠಾಣ್ಯಕ್ಕೆ ತೆಗೆದುಕೊಂಡುಹೋಗಿ ನಡೆದ ಸಂಗತಿಯೆಲ್ಲವನ್ನೂ ವಿಸ್ತಾರವಾಗಿ ತಿಳಿಸಿದುದರಮೇಲೆ ಸಬ್‌ಇನ್ಸ್‌ಪೆಕ್ಟರ್ ಮ|| ಭೋಗಪ್ಪನವರು ಕೃತ್ಯದ ವಿದ್ಯಮಾನವನ್ನು ವಿಚಾರಿಸಲೆತ್ನಿಸಿರುವರು.

ಶ್ರೀಕೃಷ್ಣರಾಜೇಂದ್ರವಂಶಚರಿತ್ರೆಯನ್ನು ಚಂಪೂರೂಪವಾಗಿ ರಚಿಸಿರುವ ಆರ್ಸುಬೋರ್ಡಿಂಗ್ ಸ್ಕೂಲಿನ ಕನ್ನಡಪಂಡಿತರಾದ ಆಸ್ಥಾನವಿದ್ವಾನ್ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಗೆ ಎರಡನೆತರಗತಿಯ ಬಹುಮಾನವಾದ 200 ರೂ. ಗಳೂ, ಮಹಾಲಿಂಗರಂಗಕವಿ ವಿರಚಿತ ಅನುಭವಾಮೃತವನ್ನು ಪರಿಶೋಧಿಸಿದ ಭಕ್ತಬಂಧು ಆಫೀಸಿನ ಮ|| ಚಿದಂಬರಯ್ಯನವರಿಗೆ 200 ರೂ. ಗಳ ಬಹುಮಾನವೂ ನಂಜರಾಜಬಹದ್ದೂರು ಗ್ರಂಥಪ್ರೋತ್ಸಾಹಕಫಂಡಿನಿಂದ ಕೊಡಲ್ಪಟ್ಟಿರುತ್ತವೆ. ವೇ|| ಶ್ರೀಕಂಠಶಾಸ್ತ್ರಿಗಳು ಅನೇಕ ನಾಟಕಗಳನ್ನೂ ಇತರ ಗ್ರಂಥಗಳನ್ನೂ ರಚಿಸಿ ಕರ್ಣಾಟಭಾಷಾಸೇವೆಯನ್ನು ಮಾಡಿಯೂ ಮಾಡುತ್ತಲೂ ಇರುವುದರಿಂದ ಅವರ ಪಾಂಡಿತ್ಯಕ್ಕೆ ತಕ್ಕ ಸನ್ಮಾನವನ್ನು ಮಾಡಿ ರಾಜಧಾನಿಯ ನಿವಾಸಿಗಳಿಗಿರತಕ್ಕ ಸ್ವಭಾಷಾಭಿಮಾನವನ್ನು ಪ್ರದರ್ಶಿಸಲು ಪ್ರಯತ್ನಿಸಿರುವುದಾಗಿ ಕೇಳಿ ಸಂತೋಷಿಸುತ್ತೇವಲ್ಲದೆ ವಿದ್ಯಾಪಕ್ಷಪಾತಿಗಳು ಈ ಸತ್ಕಾರ್ಯಕ್ಕೆ ಯಥಾಶಕ್ತಿ ದ್ರವ್ಯಸಹಾಯಮಾಡುವರೆಂದು ನಿರೀಕ್ಷಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಇಂದೂರಿನಲ್ಲಿ ಕುಂಜಲಾಲನೆಂಬೊಬ್ಬ ಸಾಧುವು ಸೆರೆಹಿಡಿಯಲ್ಪಟ್ಟಿರುತ್ತಾನೆ. ಇವನು ಓರ್ವ ಕನ್ನೆಯನ್ನು ಅಪಹರಿಸಿಕೊಂಡುಬಂದು ಪುರುಷವೇಷದಲ್ಲಿಟ್ಟಿದ್ದನಂತೆ.

ಬಿಜಾಪುರ ಡಿಸ್ಟ್ರಿಕ್ಟಿಗೆ ಸೇರಿದ ಅಮೀನಗಡದಲ್ಲಿ ಒಂದು ಕ್ಷುದ್ರರೋಗವು ಪ್ರಾಪ್ತವಾಗಿ ಸ್ತ್ರೀಯರ ಕಾಲುಗಳೇ ಬಿದ್ದುಹೋಗುವುವಂತೆ. ಮೊದಲೇ ಅಬಲೆಯರಾದ ಸ್ತ್ರೀಯರ ಕಾಲುಗಳು ಹೋದಮೇಲೆ ಅವರು ಜೀವಿಸುವುದೆಂತು ?

ಅಮರಾವತಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಮಹಮ್ಮದೀಯ ಹುಡುಗನು ಅಲ್ಲಿಯ ಹನುಮಂತದೇವರ ಕೊರಳಿನಲ್ಲಿ ಮೂಳೆಯಸರವನ್ನು ಹಾಕಿದ್ದುದಕ್ಕಾಗಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಅಪ್ರಾಪ್ತವಯಸ್ಕನೆಂಬುದರಮೇಲೆ ವಾಗ್ದಂಡನೆಯಿಂದ ಬಿಡಲ್ಪಟ್ಟನು.

ಕೋಚಿನ್‌ಸಂಸ್ಥಾನಕ್ಕೆ ಸೇರಿದ ಇದಪಲ್ಲಿ ಎಂಬ ಗ್ರಾಮದಲ್ಲಿ ಒಂದು ವಿಚಿತ್ರತರವಾದ ಮಗುವು ಹುಟ್ಟಿದ್ದಿತು. ಅದರತಲೆಯಮೇಲೆ ಸಣ್ಣುಗರಿ ಬಿಟ್ಟದಂತೆ ಒಂದು ಶಿಖರವೂ ಬಾಯತುಂಬ ಹಲ್ಲುಗಳೂ 6 ಬೆರಳುಗಳೂ ಇದ್ದು ಜನನವಾದ ಕೂಡಲೆ ಗಟ್ಟಿಯಾಗಿ ಅರಚಿ ಸ್ವಲ್ಪಹೊತ್ತು ಬದುಕಿದ್ದು ಸತ್ತುಹೋಯಿತಂತೆ.

ಕೊಚ್ಚಿನ್ನಿಗೆ ಸೇರಿದ ಕ್ರಾಂಗನೋರ್ ಎಂಬಲ್ಲಿ 6-7 ಜನರುಳ್ಳ ಒಂದು ಎಜವಾಕುಟುಂಬವು ಕೆಲದಿನಗಳ ಕೆಳಗೆ ಕ್ರಿಸ್ತಮತವನ್ನವಲಂಬಿಸಿತು. ಈ ಮತದೀಕ್ಷೆಯ ಕಾಲದಲ್ಲಿ 3,000 ಕ್ರೈಸ್ತರು ಸೇರಿದ್ದರು. ಎಜವಾ ಜನರು ತಮ್ಮ ಅಸ್ಪೃಶ್ಯತೆಯನ್ನು ಹೋಗಲಾಡಿಸಿಕೊಳ್ಳಲು ಕ್ರೈಸ್ತಮತಕ್ಕೆ ಸೇರಿಕೊಳ್ಳುವ ಪ್ರಯತ್ನದಲ್ಲಿರುವರಂತೆ.

ಟ್ರಾವಂಕೂರು ಸಂಸ್ಥಾನದ ವರಕಲಿಮಠದ ಶ್ರೀಗಳವರು ತಮಗೆ 70 ವರ್ಷ ವಯಸ್ಸಾದುದರ ಸಂತೋಷಾರ್ಥವಾಗಿ ವರಕಲಿಗ್ರಾಮದಲ್ಲಿ 1 ಲಕ್ಷ ರೂ. ವೆಚ್ಚದಿಂದ ಒಂದು ಇಂಗ್ಲಿಷ್ ಹೈಸ್ಕೂಲನ್ನು ಸ್ಥಾಪಿಸಲು ಮತ್ತು ಭಾರತಸೇವಾಸಂಘದಂತೆ ಒಂದು ಸೇವಾಸಂಘವನ್ನು ಏರ್ಪಡಿಸಲು ಸಂಕಲ್ಪಿಸಿ ಅವುಗಳ ಕಾರ್ಯಕ್ರಮದ ಬಗೆಗೆ ಒಂದು ನಿಬಂಧವನ್ನು ಬರೆಯಲು ಇಬ್ಬರು ಪಂಡಿತರುಗಳನ್ನು ಗೊತ್ತುಮಾಡಿರುವರಂತೆ.

ಕರ್ನೂಲಿನಲ್ಲಿ ಮ್ಯುನಿಸಿಪಾಲಿಟಿಯವರು ಡೈನಾಮೇಟನ್ನು ಹಾಕಿ ನೀರಿನಬಾವಿಯನ್ನು ತೋಡಿಸುತ್ತಿರುವಾಗ್ಗೆ ಒಂದು ಕಲ್ಲಿನಚಪ್ಪಡಿಯು ಮೇಲಕ್ಕೆಹಾರಿ ಸಮೀಪದ ಮನೆಯ ಹಿತ್ತಲಿನಲ್ಲಿ ಮಲವಿಸರ್ಜನೆಗಾಗಿ ಕುಳಿತಿದ್ದ ಮಹಮ್ಮದೀಯ ಹೆಂಗುಸಿನ ತಲೆಯಮೇಲೆ ಬೀಳಲು ಆಕೆಯು ಕೂಡಲೆ ಸತ್ತುಹೋದಳು. ಆಕೆಯ ಅನಾಥರಾದ ಮೂರುಸಣ್ಣಮಕ್ಕಳಿಗೆ ಪರಿಹಾರದ್ರವ್ಯವು ಮ್ಯುನಿಸಿಪಾಲಿಟಿಯಿಂದ ಕೊಡಲ್ಪಡುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಸಿಲೋನಿಗೆ ಸೇರಿದ ಜಾಫ್ನಾ ವಾಸಸ್ಥನಾದ 65 ವರ್ಷ ವಯಸ್ಸಿನ ಸದಯಾರ್ ಎಂಬ ಒಬ್ಬ ವೃದ್ಧನು ಕೊಲೊಂಬೋದಲ್ಲಿಯ ಒಂದು ದೇವಾಲಯದಲ್ಲಿ ಕಳೆದ 46 ದಿವಸಗಳಿಂದಲೂ ನಿರಾಹಾರವ್ರತವನ್ನು ಆಚರಿಸುತ್ತ 51 ನೆಯ ದಿವಸದಲ್ಲಿ ಪಾರಣೆಯನ್ನು ಮಾಡಲು ಸಂಕಲ್ಪಿಸಿರುವನು. ಈತನು ದೇವರಿಗೆ ಅಭಿಷೇಕವಾದ ನೀರನ್ನು ಕೊಂಚವಾಗಿ ಪಾನಮಾಡುವುದರ ವಿನಾ ಇನ್ನೇನನ್ನೂ ಸೇವಿಸುವುದಿಲ್ಲವಂತೆ. ಈ ವೃದ್ಧನ ವ್ರತಾಚರಣೆಯ ಕಾರಣವು ಪ್ರಕಟವಾಗಿಲ್ಲವು.

ಕಳೆದ ಬಕ್ರೀದ್‌ಹಬ್ಬದದಿವಸ ಉತ್ತರದೇಶಕ್ಕೆ ಸೇರಿದ ಸಿಂಗಾಸೋ ಎಂಬ ಊರಿನಲ್ಲಿ ಕೆಲಮಹಮ್ಮದೀಯರು ಹಾಲನ್ನು ಮಾರುವ ಒಬ್ಬ ಹಿಂದುವಿನ ಮನೆಗೆ ಬೆಂಕಿಯನ್ನು ಹೊತ್ತಿಸಿ ಅವನ ಒಂದು ಹಸುವನ್ನು ಕೊಂದುಹಾಕಿ ಮನೆಯ ಹೆಂಗುಸರ ಮಾನಭಂಗಮಾಡಲೆತ್ನಿಸಿದರು. ಆಗ ಆ ಹಾಲುಮಾರುವವನು ಕೋಪೋದ್ರೇಕನಾಗಿ ಆಯುಧವನ್ನು ಧರಿಸಿ ಮಹಮ್ಮದೀಯರಮೇಲೆ ಬಿದ್ದು ನಾಲ್ವರನ್ನು ಕತ್ತರಿಸಿಹಾಕಿ ಅವರೇಟುಗಳಿಂದ ತನ್ನ ಕೈಯನ್ನು ಕಳೆದುಕೊಂಡು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವನು.

ಪಂಜಾಬಿನ ನ್ಯಾಯವಿಧಾಯಕಸಭಾಮೆಂಬರಾದ ಚೌಧೂರಿಟೇಕರಾಂರವರು ಒಂದುಕೊಲೆಯ ವಿವಾದದಲ್ಲಿ ಸಾಕ್ಷಿಯನ್ನು ನುಡಿಯಲು ಕರೆಯಲ್ಪಟ್ಟಿದ್ದಾಗ್ಯೂ ಬರಲಿಲ್ಲವಾಗಿ ರೋಹತಕ್ಕಿನ ಮ್ಯಾಜಿಸ್ಟ್ರೇಟರು ಅವರನ್ನು ಹಿಡಿಯಲು ವಾರಂಟನ್ನು ಕೊಟ್ಟಿದ್ದರು. ಈ ವಾರಂಟು ಹುಟ್ಟಿರುವ ವಿಚಾರವನ್ನು ಟೇಕ್‌ರಾಮರವರು ಅರಿತು ಸಭೆಯು ನಡೆಯುವವರೆಗೆ ಅದು ತಮ್ಮಮೇಲೆ ಜಾರಿಯಾಗದಂತೆ ಮಾಡಬೇಕೆಂದು ಸಭಾಪತಿಗಳನ್ನು ಕೇಳಿಕೊಂಡರಾದರೂ ಅದು ಸಫಲವಾಗಲಿಲ್ಲವಾಗಿ ವಾರಂಟು ಸಿಮ್ಲಾಕ್ಕೆ ಬರುವುದರೊಳಗಾಗಿ ಅವರು ಆ ಸ್ಥಳವನ್ನು ಬಿಟ್ಟುಹೋಗಿದ್ದರು.

ಗುಜರಾತದೇಶದಲ್ಲಿ ಕಳೆದ ಎರಡುವರ್ಷಗಳಿಂದಲೂ ಮಳೆಯಿಲ್ಲದೆ ಬೆಳೆಯಾಗಲಿಲ್ಲ ಮತ್ತು ಕೆರೆಕುಂಟೆಗಳು ಒಣಗಿಹೋಗಿವೆ. ಇದರಿಂದ ದನಗಳ ಮೇವಿಗೂ ಕುಡಿಯುವ ನೀರಿಗೂ ಅತ್ಯಂತಕಷ್ಟವಾಗಿ ರೈತರುಗಳು ತಂತಮ್ಮ ದನಕರುಗಳನ್ನು ಹೊಡೆದುಕೊಂಡು ಮೇವು ದೊರಕುವ ಅಹಮದಾಬಾದ್ ಮೊದಲಾದ ಕಡೆಗಳಿಗೆ ಹೊಲಸೆ ಹೋಗುತ್ತಿದ್ದಾರೆ. ಅಹಮದಾಬಾದಿನ ವರ್ತಕರುಗಳು ಅವುಗಳಿಗೆ ಮೇವನ್ನೊದಗಿಸಿ ಸಹಾಯಮಾಡುತ್ತಿರುವರಲ್ಲದೆ ಮುಲ್ತಾನಿ ಸೇಟರುಗಳು ಈ ಗೋಸಂರಕ್ಷಣಕಾರ್ಯಗಳಿಗಾಗಿ ಈವರೆಗೆ 10 ಸಾವಿರ ರೂಪಾಯಿಗಳ ಮೇಲೆಯೇ ಸಹಾಯಮಾಡಿರುತ್ತಾರೆ.

ಕಳೆದ 4-5 ದಿವಸಗಳಿಂದಲೂ ಬೊಂಬಾಯಿನಗರದಲ್ಲಿ ಮಳೆಯು ಅವಿಚ್ಛಿನ್ನವಾಗಿ ಸುರಿಯುತ್ತಿರುವುದಲ್ಲದೆ ಒಂದುದಿವಸ 12 ಗಂಟೆಯಕಾಲದಲ್ಲಿ 7 ಅಂಗುಲ ಮಳೆಯಾಯಿತು. ಈ ವಿಪರೀತಮಳೆಯಿಂದ ತಗ್ಗುಪ್ರದೇಶದಲ್ಲಿ ನೀರುನಿಂತುಕೊಂಡು ಕೆಲವೆಡೆಯಲ್ಲಿ ರೈಲುಮಾರ್ಗವು ಕೊಚ್ಚಿಹೋಗಿ ತಿರುಗಾಡುವ ಜನರಿಗೂ ಬಂಡಿಗಳಿಗೂ ಬಹಳ ತೊಂದರೆಯಾಗಿದೆ. ಇದರಂತೆ ಬರೋಡಾಸಂಸ್ಥಾನಕ್ಕೆ ಸೇರಿದ ಕೋಡಿನಾರದಲ್ಲೂ 48 ಗಂಟೆಗಳಕಾಲದಲ್ಲಿ 39 ಅಂಗುಲ ಮಳೆಯಾಗಿ ಜನರಿಗೂ, ದನಕರುಗಳಿಗೂ ಬಹಳ ತೊಂದರೆಯಾಗಿರುತ್ತದೆ. ಆದರೆ ಇದರಿಂದ ನಷ್ಟವೇನಾಗಿರುವುದೆಂಬುದು ಇನ್ನೂ ಪ್ರಕಟವಾಗಿಲ್ಲ. ಇಷ್ಟು ದೊಡ್ಡಮಳೆಯು ಕಾಥೆವಾಡ ಮತ್ತು ಗುಜರಾತು ಪ್ರಾಂತಗಳಲ್ಲಿ ಹಿಂದೆ ಯಾವಾಗಲೂ ಆಗಿಲ್ಲವಂತೆ.

ಬಂಗಾಳದಲ್ಲಿ ಭೂತನಾಥ ಹಲಧರನೆಂಬೊಬ್ಬ ವೃದ್ಧನು ತನ್ನ ಹೆಂಡತಿಯು ಸತ್ತುಹೋಗಲಾಗಿ ವಯಸ್ಕರಾದ ಮಕ್ಕಳಿದ್ದರೂ, ತನ್ನ ಮಿತ್ರರನೇಕರು ಅಡ್ಡಿಪಡಿಸಿದರೂ ಲಕ್ಷಿಸದೆ 14 ವರ್ಷವಯಸ್ಸಿನ ಒಬ್ಬ ಹುಡುಗಿಯನ್ನು ವಿವಾಹಮಾಡಿಕೊಂಡನು. ತದಾರಭ್ಯ ಹಿರೀಹೆಂಡತಿಯ ಮಕ್ಕಳು ಮಲತಾಯಿಯನ್ನು ದ್ವೇಷಿಸುತ್ತ ಹಿಂಸಿಸುತ್ತಿದ್ದು ತಂದೆಯು ಕೆಲದಿನಗಳ ಹಿಂದೆ ಎಲ್ಲಿಗೋ ಹೋಗಿರುವಾಗ್ಗೆ ಹರಿತವಾದ ಚೂರಿಯಿಂದ ಆಕೆಯನ್ನು ಕತ್ತರಿಸಿಹಾಕಿ ಯಾವುದೋ ರೋಗದಿಂದ ಮೃತಳಾದಳೆಂದು ಹುಟ್ಟಿಸಿ ಕೂಡಲೆ ಶ್ಮಶಾನಕ್ಕೆ ತೆಗೆದುಕೊಂಡು ಹೋಗಿ ಚಿತೆಯಮೇಲಿಟ್ಟು ದಹನಮಾಡಲುಪಕ್ರಮಿಸಿದ್ದರು. ಅಷ್ಟರಲ್ಲಿ ಮೃತಳ ತಾಯಿಯು ಮಗಳ ಆಕಸ್ಮಿಕಮರಣವಾರ್ತೆಯನ್ನು ಕೇಳಿ ಸಂಶಯಪಟ್ಟು ದಿಗಿಲಿನಿಂದ ಪೋಲೀಸುಠಾಣ್ಯಕ್ಕೆ ಹೋಗಿ ಸಂಗತಿಯನ್ನು ತಿಳಿಸಿ ಪೋಲೀಸರನ್ನು ರುದ್ರಭೂಮಿಗೆ ಕರೆದುಕೊಂಡು ಬಂದು ಚಿತೆಯಮೇಲಿದ್ದ ಶವವನ್ನು ಹೊರಕ್ಕೆ ತೆಗಿಸಿದಳು. ಪೋಲೀಸರು ಆ ಶವವನ್ನು ಡಾಕ್ಟರಪರೀಕ್ಷೆಗೆ ಕಳುಹಿಸಿಕೊಟ್ಟು ಮಲಮಗನನ್ನೂ ಅವನ ಸಂಗಡಿಗರನ್ನೂ ಸೆರೆಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು.

ತನ್ನ ಗಂಡನು ಸೇವಕಳಲ್ಲಿ ಅನುರಕ್ತನಾಗಿ ತನ್ನನ್ನು ಹೊಡೆದು ಹಿಂಸಿಸುತ್ತಿದ್ದುದಲ್ಲದೆ ಕಳೆದ ಮೇ ತಾ|| 19 ರಲ್ಲಿ ಆ ಸೇವಕಳು ತನ್ನನ್ನು ಬೈದು ಅವಮಾನಪಡಿಸಿದ ಸಂಗತಿಯನ್ನು ಗಂಡನಿಗೆ ತಿಳಿಸಲು ಅವನು ಅವಳನ್ನು ವಿಚಾರಿಸಿ ತಾನೇ ಅವಳನ್ನು ಬೈದುದಾಗಿ ಹೇಳಿ ಅದೇ ಸಾಯಂಕಾಲ ಸೇವಕಳೊಡನೆ ಮನೆಯನ್ನು ಬಿಟ್ಟು ಹೊರಟುಹೋದನು, ಮತ್ತು ಆ ಮಾರನೆಯದಿನದಿಂದ ಜೂನ್ ತಾ|| 1 ರ ವರೆಗೆ ತನಗೆ ಹಣವನ್ನು ಕಳುಹಿಸುತ್ತಿದ್ದು ಅನಂತರ ನಿಲ್ಲಿಸಿಬಿಟ್ಟನು. ಅದುಕಾರಣ ಗಂಡನಿಂದ ತನ್ನ ಜೀವನಾಂಶಕ್ಕೆ ಕೊಡಿಸಬೇಕೆಂದು ಒಬ್ಬಳು ಆಂಗ್ಲೋ ಇಂಡಿಯನ್ ಸ್ತ್ರೀಯು ಮದ್ರಾಸಿನ ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದಳು. ಅದರಮೇಲೆ ಅವಳ ಗಂಡನು ತನ್ನ ವಿಚಾರಣೆಯಲ್ಲಿ “ನನ್ನ ಹೆಂಡತಿಯು ಹಿಂದೆ ಒಂದುಸಂದರ್ಭದಲ್ಲಿ ನನ್ನನ್ನು ಕಚ್ಚಿದಳು ಮತ್ತು ತಾ|| 19 ರಲ್ಲಿ ಮುಖದಮೇಲೆ ಹೊಡೆದಳು. ಅದಕ್ಕಾಗಿ ಮನೆಯನ್ನು ಬಿಟ್ಟುಹೋಗಿ ಅವಳಮೇಲೆ ಫಿರ್ಯಾದುಮಾಡಿದ್ದೆನು, ಆದರೆ ರಾಜಿಮಾಡಲ್ಪಟ್ಟಿತು. ಈ ವಿವಾದದಲ್ಲಿ ಸೇವಕಳು ನನ್ನ ಪರವಾಗಿ ಸಾಕ್ಷಿ ಹೇಳಿದ್ದಕ್ಕಾಗಿ ಅವಳಮೇಲೆ ನನ್ನ ಹೆಂಡತಿಯು ಕೋಪಗೊಂಡು ಅವಳಿಗೂ ನನಗೂ ಸಂಬಂಧಕಲ್ಪಿಸಿದಳು. ಸೇವಕಳು ಬಹಳ ಕುರೂಪಿಯೂ ರೋಗಿಷ್ಠಳೂ ಆಗಿರುವಳು. ಇಂತಹವಳ ಸಹವಾಸವನ್ನು ನನ್ನಂಥವನು ಎಂದಿಗೂ ಮಾಡುವುದಿಲ್ಲ. ನನ್ನ ತಿಂಗಳ ವರಮಾನವು ಬ್ಯಾಂಕಿನಲ್ಲಿಟ್ಟಿರುವ ಹಣದ ಬಡ್ಡಿಯೂ ಸೇರಿ 65 ರೂ. ಪಡೆಯುತ್ತಿರುವುದು. 40 ದಿವಸಗಳಲ್ಲಿ 30 ರೂ. ವನ್ನೆ ನನ್ನ ಹೆಂಡತಿಗೆ ಕಳುಹಿಸಿಕೊಟ್ಟಿರುತ್ತೇನೆ. ಏಕೆಂದರೆ, 35 ರೂ. [illegible] ಆಕೆಯಿಂದ ಒಂದು ನೋಟೀಸು ಹಠಾತ್ತಾಗಿ ಬಂದಿತು” ಎಂದು ಹೇಳಿದುದರಮೇಲೆ, ಆಕೆಗೆಷ್ಟು ಹಣವನ್ನು ಕೊಡಲಿಷ್ಟಪಡುವೆ ಎಂದು ಫಿರ್ಯಾದಿ ಕಡೆಯ ವಕೀಲನು ಕೇಳಿದುದಕ್ಕೆ “ನನ್ನ ಸ್ಥಿತಿಗತಿಯನ್ನೂ ನಡೆದಿರುವ ವಿದ್ಯಮಾನವನ್ನೂ ಮ್ಯಾಜಿಸ್ಟ್ರೇಟರಲ್ಲಿ ಬಿನ್ನೈಸಿಕೊಂಡಿರುತ್ತೇನಾದುದರಿಂದ ಅವರು ನಿರ್ಧರಿಸತಕ್ಕದಾಗಿದೆ” ಎಂದುತ್ತರಕೊಟ್ಟನು. ಹಾಗಾದರೆ ನಿನ್ನ ಹೆಂಡತಿಯಕೂಡ ವಾಸಮಾಡಿಕೊಂಡಿರಲಿಷ್ಟಪಡುವಿಯಾ ? ಎಂದು ಫಿರ್ಯಾದಿಕಡೆಯ ವಕೀಲನು ಪುನಃ ಪ್ರಶ್ನಿಸಲು, ಅನೇಕ ಸಂದರ್ಭದಲ್ಲಿ ಹೊಡೆದು ಅವಮಾನಪಡಿಸಿರುವಂತಹ ಸ್ತ್ರೀಯೊಡನೆ ಯಾವ ಅವಿವೇಕಿಯೂ ವಾಸಮಾಡಿಕೊಂಡಿರುವುದು ಅಸಂಭವವು” ಎಂದುತ್ತರಕೊಟ್ಟನು. ಮ್ಯಾಜಿಸ್ಟ್ರೇಟರು ವಿವಾದದ ವಿದ್ಯಮಾನವನ್ನೆಲ್ಲಾ ಚೆನ್ನಾಗಿ ಅರಿತುಕೊಂಡು ಜೀವನಾಂಶಕ್ಕೆ ಕೊಡಿಸದೆ ವಿವಾದವನ್ನು ತಳ್ಳಿಪಡಿಮಾಡಿಬಿಟ್ಟರು.

ವಿದೇಶದ ವೃತ್ತಾಂತಗಳು

ಬ್ರಿಟಿಷ್ ಗಣೆಗಳ ಕೆಲಸಗಾರರ ಗೊಂದಲದಿಂದ ಪ್ರಭುತ್ವದವರಿಗೆ 9,00,00,000 ರೂ. ನಷ್ಟವಾಗಿರುವುದಾಗಿ ಕಾರ್ಮಿಕ ಮಂತ್ರಿಯು ತಿಳಿಸಿದರು.

ನಿರುದ್ಯೋಗಿಗಳಾಗಿ ಹೊಟ್ಟೆಗಿಲ್ಲದೆ ಪೇಚಾಡುತ್ತಿರುವ ಬ್ರಿಟಿಷ್ ಗಣೆಗಳ ಕೆಲಸಗಾರರಿಗೆ ದ್ರವ್ಯಸಹಾಯಮಾಡುವುದಕ್ಕಾಗಿ ಮಾಸ್ಕೋಪಟ್ಟಣದಲ್ಲಿ ಪೋಲೀಸಿನವರು ಪ್ರತಿಕುಟುಂಬದವರನ್ನೂ ನಿರ್ಬಂಧಪಡಿಸಿ 90,00,000 ರೂಪಾಯಿಗಳನ್ನು ಈವರೆಗೆ ಶೇಖರಿಸಿರುವರು.

ಆಸ್ಟ್ರಿಯಾದೇಶದಲ್ಲಿ ಡ್ಯಾನ್ಯೂಬುನದಿಯು ಮಳೆಯಾಧಿಕ್ಯದಿಂದ ಮಿತಿಮೀರಿ ಪ್ರವಹಿಸಿ ಸಾವಿರಾರು ಮನೆಗಳೂ, ನಿಂತಿದ್ದ ಬೆಳೆಗಳೂ ನಾಶವಾದುವು. ಕುಯಿಲಿಗೆ ಬಂದಿದ್ದ ಬೆಳೆಯು ಪ್ರವಾಹದಲ್ಲಿ ಕೊಚ್ಚಿಹೋಗದಂತೆ 1,500 ಸ್ತ್ರೀಪುರುಷರುಗಳು ಬಹಳ ಸಾಹಸಪಟ್ಟು ಫಸಲನ್ನು ರಕ್ಷಿಸಲುದ್ಯುಕ್ತರಾಗಿರುವರು.

ಡಾಕ್ಟರ್ ಬರ್ನಾರ್ಡ್‌ರವರ ಶರಣಾಲಯದಲ್ಲಿ ವಾಸವಾಗಿರುವಷ್ಟು ಜನರು ಪ್ರಪಂಚದ ಮತ್ತಾವ ಕುಟುಂಬದಲ್ಲಾಗಲಿ ಪೋಷಣಾಲಯದಲ್ಲಾಗಲಿ ಇಲ್ಲ. ಇದು ಸ್ಥಾಪಿತವಾಗಿ 60 ವರ್ಷಗಳಾದುವು. ಅಂದಿನಿಂದ ಈವರೆಗೆ 100, 700 ಅನಾಥಬಾಲಕ ಬಾಲಿಕೆಯರುಗಳು ಈ ಆಲಯದ ಪೋಷಣೆಯಲ್ಲಿದ್ದರು. ಈಗಲೂ 7,636 ಮಕ್ಕಳಿರುವರು.

ಕಳೆದ ತಾ|| 26 ರ ಶನಿವಾರ ಕೈರೋಪಟ್ಟಣದಲ್ಲಾದ ಮಹಾಭಯಂಕರಭೂಕಂಪದಿಂದ 4 ಸಾವಿರಕ್ಕೆ ಮೇಲ್ಪಟ್ಟು ಮನೆಗಳು ನಾಶವಾದವು, 74 ಮಸೀದಿಗಳು ಬಿದ್ದುಹೋದವು ; 110 ಜನರು ಸತ್ತು 60 ಜನರಿಗೆ ಗಾಯವಾಗಿರುತ್ತದೆ. ಫೂಯನುಡಿಸ್ಟ್ರಿಕ್ಟಿನಲ್ಲಿ ಭೂಕಂಪವು ಬಹಳ ತೀಕ್ಷ್ಣವಾಗಿದ್ದು 85 ಜನರು ಸತ್ತರು, ಮತ್ತು 62 ಜನರು ಗಾಯವಡೆದಿರುವರು.

ರಷ್ಯಾರಾಜ್ಯವನ್ನು ಆಳುತ್ತಿರುವ ಸೋವಿಯಟ್ ಪ್ರಭುತ್ವದವರು ಪದಭ್ರಷ್ಟನಾದ ಚಕ್ರವರ್ತಿಯ ಕುಟುಂಬಕ್ಕೆ ಸೇರಿದ ಅನೋಘವಾದ ಆಭರಣಗಳನ್ನು ವಿಕ್ರಯಿಸಲು ಯೂರೋಪಿನ ಮುಖ್ಯಪಟ್ಟಣಗಳಿಗೆಲ್ಲ ಕಳುಹಿಸಿ ಕಡಿಮೆ ಬೆಲೆಯ ಪದಾರ್ಥಗಳು ಮಾರಾಟವಾಗಿ ಬಹುಬೆಲೆಯ ಪದಾರ್ಥಗಳು ಹಾಗೆಯೇ ನಿಂತುಹೋದುದರಿಂದ ಅವನ್ನು ಹಿಂದಿರುಗಿ ತರಿಸಿಕೊಂಕೊಂಡು ಭದ್ರಪಡಿಸಿರುವರು.

ಸರ್ ಜಾನ್ ರುಥರ್‌ಫರ್ಡ್ ಎಂಬುವವರಲ್ಲಿರುವ ಸೋಲೇರಿಯಾ ಎಂಬ ಪಂದ್ಯದ ಕುದುರೆಯು ಅತ್ಯಂತ ಬೆಲೆಬಾಳುವುದಾಗಿಯೂ, ಇದನ್ನು ಹಿಜ್ ಹೈನೆಸ್ ಆಗಾಖಾನ್‌ರವರು 15 ಲಕ್ಷರೂಪಾಯಿಗಳ ಬೆಲೆಗೆ ಕೇಳಿದರೂ ರೂಥರ್‌ಫರ್ಡ್‌ರವರು ಅದರಿಂದ ಒಳ್ಳೇತಳಿಯನ್ನು ಇಳಿಸಿ ವೃದ್ಧಿಪಡಿಸಿ ತನ್ಮೂಲಕ 30 ಲಕ್ಷ ರೂ. ಗಳನ್ನು ಸಂಪಾದಿಸಬಹುದೆಂಬ ಆಲೋಚನೆಯಿಂದ ಕೊಡಲೊಪ್ಪಲಿಲ್ಲವಂತೆ.

ಸುಮಾತ್ರಾಕ್ಕೂ ಜಾವಾಕ್ಕೂ ಮಧ್ಯೆಯಿರುವ ಬಟೇವಿಯಾಕ್ಕೆ ಸೇರಿದ ಪಡಂಗ್ ಎಂಬ ಊರಿನಲ್ಲಿ ಭೂಕಂಪವಾಗಿ ಮನೆಗಳೆಲ್ಲವೂ ಬಿದ್ದುಹೋಗಿ ನಾಶವಾದುವು ಮತ್ತು ಅನೇಕ ಜನರು ಸತ್ತರು. ಈವರೆಗೆ 200 ಶವಗಳು ದೊರಕಿರುವುವು. ನಿಲ್ದಾಣವನ್ನು ಬಿಟ್ಟು ಮುಂದಕ್ಕೆ ಹೊರಟ ರೈಲುಬಂಡಿಗಳಮೇಲೆ ನಿಲ್ದಾಣವು ಸಿಡುಗಿ ಬಿದ್ದಿತು. ಇದರಿಂದ ಎಷ್ಟುಜನರು ಹತರಾದರೆಂಬುದು ಇನ್ನೂ ಗೊತ್ತಾಗಿಲ್ಲವು.

ಪರ್ಷ್ಯದೇಶಕ್ಕೆ ಸೇರಿದ ಸಾಲ್ಮಾಸ್‌ಪಟ್ಟಣದಲ್ಲಿರುವ ಸೈನಿಕರು ಅಧಿಕಾರಿಗಳ ವರ್ತನದಿಂದ ಅಸಂತುಷ್ಟರಾಗಿ ದಂಗೆಯೆದ್ದು ಸೇನಾಪತಿಯನ್ನು ಕೊಂದುಹಾಕಿ ಊರುಗಳಮೇಲೆ ನುಗ್ಗಿ ಸೂರೆಮಾಡುತ್ತಿರುವರು. ಇದನ್ನು ನೋಡಿ ಇತರ ಸೈನಿಕರೂ ದಂಗೆಯೆದ್ದು ಹಾವಳಿಯನ್ನು ಮಾಡುತ್ತಿದ್ದಾರೆ. ಇವರ ಹಾವಳಿಯನ್ನು ಅಡಗಿಸಲು ಟೆಹ್ರಾನಿನಿಂದ ಪ್ರಭುತ್ವದವರು ನಂಬಿಗಸ್ಥರಾದ ಸೈನಿಕರನ್ನು ಕಳುಹಿಸಿಕೊಟ್ಟಿರುವರು.

ಗೂಳಿಯೊಡನೆ ಕಾಳಗಮಾಡುವುದರಲ್ಲಿ ಮಹಾಪ್ರಖ್ಯಾತನಾದ ಡಾನ್ ಲೂಯಿಸ್‌ಮಜಾಂಟಿನಿ ಎಂಬ ಸ್ಪೇನ್‌ದೇಶಸ್ಥನು ಕಾಲವಾದನು. ಈತನು 1,184 ಗೂಳಿಗಳೊಡನೆ ಕಾಳಗಮಾಡಿ 3,084 ಗೂಳಿಗಳನ್ನು ಕೊಂದಿರುವನಂತೆ, ಮತ್ತು ಏಳಾವರ್ತಿಮಾತ್ರ ಭೀಕರವಾಗಿ ಕಾಳಗವು ನಡೆದು ಪ್ರತಿಘಟಿಸಲ್ಪಟ್ಟನಂತೆ. ಪ್ರತಿಯೊಂದು ಕಾಳಗಕ್ಕೂ 3,000 ರೂ. ವರಮಾನವಿದ್ದು ಇವನು ಒಳ್ಳೇ ಐಶ್ವರ್ಯವನ್ನು ಸಂಪಾದಿಸಿದ್ದನು.

ಫ್ರಾನ್ಸ್‌ರಾಜಧಾನಿಯಾದ ಪ್ಯಾರಿಸ್‌ಪಟ್ಟಣಕ್ಕೆ ಹಾವರಿನಿಂದ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್ವೆಬಂಡಿಯು ಮಳೆಯಾಧಿಕ್ಯದಿಂದ ಪೊಲತುಸಿದಿದ್ದ ಕಂಬಿಗಳಮೇಲೆ ಹಾಯುವಾಗ್ಗೆ ಉರುಳಿಬಿಟ್ಟುದರಿಂದ ಪ್ರಯಾಣಿಕರಲ್ಲಿ 17 ಜನರು ಸತ್ತರು, ಮತ್ತು 97 ಜನರು ಗಾಯವಡೆದರು. ಡಿಜಾನ್ ಎಂಬ ರೈಲ್ವೆಸ್ಟೇಷನ್ನಿನಲ್ಲಿ ಸಾಮಾನುಗಳನ್ನು ತುಂಬಿದ್ದ ಗುಡಿಸಲಿಗೆ ಯಾರೋ ದುಷ್ಟರು ಬೆಂಕಿಯನ್ನು ಹೊತ್ತಿಸಿದುದರಿಂದ ನೂರಾರು ವಾಗಿನ್ನುಗಳು ಸುಟ್ಟು ಭಸ್ಮವಾಗಿ ಲಕ್ಷಾಂತರರೂಪಾಯಿಗಳ ನಷ್ಟವಾಯಿತು.

ಜರ್ಮನಿಯ ಚಕ್ರವರ್ತಿಯಾಗಿದ್ದು ಪದಚ್ಯುತನೂ ದೇಶಭ್ರಷ್ಟನೂ ಆಗಿರುವ ಕೈಸರ್ ದೊರೆಗೆ ಪ್ರಭುತ್ವದವರ ವಶವಾಗಿರುವ ಆತನ ಸ್ವಂತ ಆಸ್ತಿಯನ್ನು ಆತನಿಗೆ ಬಿಟ್ಟುಕೊಡಬೇಕೆಂಬ ವಿಚಾರವಾಗಿ ಪ್ರಜೆಗಳಲ್ಲಿ ಭಿನ್ನಾಭಿಪ್ರಾಯವಿರುವುದರಮೇಲೆ ಅವರುಗಳ ಓಟು ತೆಗೆದುಕೊಳ್ಳಲ್ಪಟ್ಟಿತು. ಅದರಲ್ಲಿ ಕೊಡಕೂಡದೆಂಬ ಬಗೆಗೆ ಹೆಚ್ಚು ಓಟುಗಳು ಬರಲಿಲ್ಲವಾಗಿ ಕೊಂಚ ಆಸ್ತಿಯಾದರೂ ಕೊಡಲ್ಪಡಬೇಕೆಂಬ ವಿಚಾರವು ರೈಷ್‌ಸ್ಟಾಗ್‌ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುತ್ತಿದೆ. ಇದಕ್ಕೂ ಸಭಿಕರ ಬಹುಮತವು ದೊರೆಯುವ ಸಂಭವವಿಲ್ಲವಂತೆ.

ಜರ್ಮನಿರಾಜ್ಯದಲ್ಲಿ ನಿರುದ್ಯೋಗಿಗಳಾದ ಸೋಮಾರಿಜನರಿಗೆ ಅನ್ನ ಹಾಕುವುದರಿಂದ ಅವರ ಕಾರ್ಯಾಸಕ್ತಿಯು ತಪ್ಪಿಹೋಗಿ ಆ ಜನರ ಸಂಖ್ಯೆಯು ಹೆಚ್ಚಿ ದೇಶಕ್ಕೆ ಅನರ್ಥವಾಗುತ್ತದೆಂದು ಪ್ರಭುತ್ವದವರು ಪರ್ಯಾಲೋಚಿಸಿ ಅಂತಹ ಜನರಿಂದ ಹೊಸಮಾರ್ಗಗಳನ್ನೂ ಜಲಾಶಯನಗಳನ್ನೂ ಕಲ್ಪಿಸುವುದು, ಪಾಳುಬಿದ್ದಿರುವ 570 ಲಕ್ಷ ಭೂಪ್ರದೇಶದಲ್ಲಿ ಬೆಳೆಯನ್ನಿಡಿಸುವುದು ಇತ್ಯಾದಿ ಕೆಲಸಗಳನ್ನು ಮಾಡಿಸಿ ಅವರಲ್ಲಿ ಕಾರ್ಯಾಸಕ್ತಿಯನ್ನೂ ಜೀವನೋಪಾಯಮಾರ್ಗವನ್ನೂ ಕಲ್ಪಿಸಬೇಕೆಂದೂ ಈ ಕಾರ್ಯಕ್ಕಾಗಿ ವೆಚ್ಚಮಾಡಲು ಹಣವನ್ನು ಸಾಲಮಾಡಬೇಕೆಂದೂ ರೈಷ್‌ಸ್ಟಾಗ್‌ಪಾರ್ಲಿಮೆಂಟಿನಲ್ಲಿ ಚರ್ಚೆಯು ನಡೆಯುತ್ತಿದೆ.

ಕಾರ್ಟ್‌ಮಾರ್ಕೆಟ್ ಕಮಿಟಿ ಪ್ರಕಟನೆ.

ಈಗ್ಗೆ ಅನೇಕ ವರ್ಷಗಳಿಂದಲೂ ಚಿತ್ರದುರ್ಗದ ಟವನ್ ಮ್ಯುನಿಸಿಪಾಲಿಟಿಯವರು ಎಣ್ಣೆಬೀಜ ಮತ್ತು ಕೆಲವು ಆಹಾರಪದಾರ್ಥಗಳು ಇವೇ ಮುಂತಾದ ಹೊರಗಿನಿಂದ ಈ ಊರಿಗೆ ಬರತಕ್ಕ ಸರಕುಗಳಮೇಲೆ ಸುಂಕವನ್ನು ವಸೂಲುಮಾಡುತ್ತಿದ್ದ ವಿಷಯವೂ ಮತ್ತು ಅದರಿಂದ ಇಲ್ಲಿ ಈ ಸರಕುಗಳ ವ್ಯಾಪಾರಕ್ಕೆ ಉಂಟಾಗಿದ್ದ ಅನಾನುಕೂಲಗಳೂ ಜನಗಳಿಗೆ ಇದ್ದಕಿರುಕುಳವೂ ಸರ್ವರಿಗೂ ಚೆನ್ನಾಗಿ ತಿಳಿದ ವಿಷಯವಾಗಿರುತ್ತದೆ. ಈ ಅನಾನುಕೂಲವನ್ನು ನಿವಾರಣೆಮಾಡಿಕೊಳ್ಳುವುದಕ್ಕೋಸ್ಕರ ಸ್ಥಳದ ಮಹನೀಯರ ಸಹಾಯದಿಂದ ಚಿತ್ರದುರ್ಗದ ಕಾರ್ಟ್‌ಮಾರ್ಕೆಟ್‌ಕಮಿಟಿಯವರು ನಮ್ಮ ಸರ್ಕಾರಕ್ಕೆ ಸುಂಕವನ್ನು ವಜಾಮಾಡಿಸಿಕೊಡಬೇಕೆಂಬ ತಮ್ಮ ಅಹವಾಲನ್ನು ಕಳಿಸಿಕೊಟ್ಟಿದ್ದಲ್ಲದೆ ಇನ್ನು ಅನೇಕವಿಧದಿಂದ ಈ ಕೆಲಸವು ಕೈಗೂಡುವ ಪ್ರಯತ್ನಗಳನ್ನು ಹೋದವರುಷದಿಂದಲೂ ನಡಿಸಿಕೊಂಡು ಬಂದಿರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ.

2. ಕಮಿಟಿಯವರ ಅಹವಾಲಿನಂತೆ ಸರ್ಕಾರದವರು ಅನುಮೋದಿಸಿ ತಾ|| 1—7—1926 ರಿಂದ ಸೀಮೆಎಣ್ಣೆ ವೀಳ್ಯದೆಲೆ ಮತ್ತು ಪೆಟ್ರೋಲ್ ಈ ಸಾಮಾನುಗಳ ವಿನಹ ಉಳಿದ ಎಲ್ಲಾ ಸಾಮಾನುಗಳಮೇಲೆ ಸುಂಕ ವಸೂಲ್ಮಾಡುವುದನ್ನು ನಿಲ್ಲಿಸಿರುತ್ತಾರೆ.

3. ಸುಂಕವದೆಸೆಯಿಂದ ಮಾರಿಕಣಿವೆ ಭೀಮಸಮುದ್ರ ತುರುವನೂರು ಶೀರ್ಯ ಮತ್ತು ಪಾವುಗಡ ಮುಂತಾದ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುವ ಹೊಗೆಸೊಪ್ಪು ಎಣ್ಣೆಬೀಜಗಳೂ ಮತ್ತು ಬೆಲ್ಲ ಮುಂತಾದ ಸರಕುಗಳು ಇಲ್ಲಿಗೆ ಬರಲು ಇದುವರಿಗೂ ಬಹಳ ಅನಾನುಕೂಲವಾಗಿತ್ತು. ಇನ್ನು ಮುಂದೆ ಸುಂಕ ವಜಾಮಾಡಲ್ಪಟ್ಟಿರುವುದರಿಂದ ಈ ದಿನಸಿಗಳನ್ನು ಹೆಚ್ಚಾಗಿ ಬೆಳೆಯುವ ರೈತರುಗಳು ಇಲ್ಲಿಗೆ ತಂದು ಯಾವ ಆತಂಕವೂ ಇಲ್ಲದೆ ಮಾರಾಟಮಾಡಲು ಬಹಳ ಅನುಕೂಲ ಉಂಟಾಗಿರುತ್ತದೆ.

4. ಮೇಲ್ಕಂಡ ದಿನಿಸಿಗಳನ್ನು ಇಲ್ಲಿಗೆ ತರತಕ್ಕ ರೈತರಿಗೆ ಸರಿಯಾದ ಅಳತೆ ಮತ್ತು ಧಾರಣೆಯನ್ನು ಮಾಡಿಸಿ ವ್ಯಾಪಾರಮಾಡಿಸತಕ್ಕ ಅರ್ಹತೆಯುಳ್ಳ ದಲಾಳರೂ ಮತ್ತು ಖರೀದಿದಾರರು ಇಲ್ಲಿ ಅನೇಕರು ಇರುವದರಿಂದ ಈ ವಿಷಯದಲ್ಲಿ ನಾಲು ತರತಕ್ಕವರಿಗೆ ಯಾವ ವಿಧದಲ್ಲಿಯೂ ಅನಾನುಕೂಲ ಉಂಟಾಗುವದಿಲ್ಲವೆಂಬ ಭರವಸೆ ಇದೆ. ಆದುದರಿಂದ ಮೇಲೆ ನಮೂದಿಸಿರುವ ಸರಕುಗಳನ್ನು ಇನ್ನು ಮುಂದೆ ಹಾವುಗಳು ವಿಕರಿಮಾಡುವುದಕ್ಕೆ ಬೇರೆ ಸ್ಥಳಗಳಿಗೆ ಕಳಿಸದೆ ಅವುಗಳನ್ನು ಇಲ್ಲಿಗೆ ಕಳುಹಿಸಿಕೊಡುವುದರ ಮೂಲಕವೂ ಮತ್ತು ಇಲ್ಲಿ ಸುಂಕ ವಜಾ ಆಗಿರುವ ವಿಷಯವನ್ನು ತಿಳಿಯದೇ ಇರುವ ರೈತರುಗಳಿಗೆ ತಿಳಿಸಿ ಅವರು ಈ ಸರಕುಗಳನ್ನು ಇಲ್ಲಿಗೆ ಮಾರಾಟಕ್ಕೆ ತರುವಂತೆ ಮಾಡುವುದರ ಮೂಲಕವೂ ಈ ಊರಿನ ವ್ಯಾಪಾರಾಭಿವೃದ್ಧಿಗೆ ಸಹಾಯಕರಾಗುವಿರೆಂದು ನಂಬಿದ್ದೇನೆ.

ಚಿತ್ರದುರ್ಗ,
ತಾ|| 1-7-26.

[illegible]
ಪ್ರೆಸಿಡೆಂಟ್, ಕಾರ್ಟ್‌ಮಾರ್ಕೆಟ್ ಕಮಿಟಿ.

ಪ್ರಕಟನೆ.

ಶ್ರೀಮನ್ಮಹಾರಾಜನಿರಂಜನಜಗದ್ಗುರು ಮುರುಘರಾಜೇಂದ್ರಮಹಾಸ್ವಾಮಿಗಳವರ ಧಾರವಾಡ ಹಾವೇರಿಪೇಟೆ ಮುರುಘಮಠದ ಶ್ರೀ ಬೋರ್ಡಿಂಗಸಂಸ್ಥೆಯಿಂದ ಯಾವತ್ತು ಮಹನೀಯರಿಗೆ ಅರಿಕೆಮಾಡಿಕೊಳ್ಳುವದೇನೆಂದರೆ.—

ಈ ಸಂಸ್ಥೆಯು ಕೇವಲ ಬಡಮಕ್ಕಳಿಗಾಗಿ ಏರ್ಪಟ್ಟಿರುವದು ಸರ್ವಶ್ರುತವಿದೆಯಷ್ಟೆ ? ಆದರೆ ತಾರೀಖು 20-6-26 ನೇ ದಿವಸ ವಿದ್ಯಾರ್ಥಿಗಳೆಲ್ಲಾ ಬೋರ್ಡಿಂಗಿಗೆ ಹೊಸದಾಗಿ ತೆಗೆದುಕೊಳ್ಳುವದಕ್ಕಾಗಿ ಜನರಲ್ ಕಮಿಟಿಯು ಸೇರಿದಾಗ್ಗೆ ಶ್ರೀಯುತ ಬಸವಪ್ರಭಪ್ಪನವರು ಹಂಪಣ್ಣನವರ ಸಾ|| ಸವದತ್ತಿ ಮತ್ತು ಶ್ರೀಯುತ ಕೊಟ್ರಪ್ಪನವರು ಜೋಳದ ಸಾ|| ನರೇಗಲ್ಲು ಈ ಉಭಯತರು ಆಗಮಿಸಿದ್ದರು. ಈ ಗೃಹಸ್ಥರು, ಈ ಬೋರ್ಡಿಂಗಿನಲ್ಲಿ ಅನುಕೂಲಸ್ಥರ ಮಕ್ಕಳನ್ನು ಸೇರಿಸಿಕೊಂಡರೆ ಒಳ್ಳೆಯದಾಗುತದೆ, ಯಾಕೆಂದರೆ ಈ ಸಂಸ್ಥೆಯಲ್ಲಿ ಹುಡುಗರಿಗೆ ಸದಾಚಾರ, ಧರ್ಮಾಚರಣೆಗಳು ಚೆನ್ನಾಗಿ ತಿಳಿಯಬರುತ್ತವೆಂಬುದು ನಮಗೆ ಖಾತ್ರಿಯಿರುತ್ತದೆ. ಆದ್ದರಿಂದ ಖರ್ಚು ಕೊಟ್ಟು ಇಲ್ಲಿಗೆ ಕಳುಹಿಸತಕ್ಕ ಅನುಕೂಲಸ್ಥರ ಮಕ್ಕಳನ್ನು ಬೋರ್ಡಿಂಗಿಗೆ ಸೇರಿಸಿಕೊಂಡಲ್ಲಿ ಅನುಕೂಲವೆಂದೂ, ಅನುಕೂಲಸ್ಥರ ಮಕ್ಕಳು ಪರಭಾರೆಯಿದ್ದರೆ ಸ್ವೇಚ್ಛೆಗೆ ಅವಕಾಶವಾಗುತ್ತದೆಂದೂ ಆಗ್ರಹಪೂರ್ವಕ ಸೂಚಿಸಲಾಗಿ ಈ ಬಗೆ ಯಾವತ್ತು ಸಮಾಜದವರ ಅಭಿಪ್ರಾಯವು ಅವಶ್ಯಕವಾಗಿರುವ ಪ್ರಯುಕ್ತ ಈ ವಿಚಾರದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಕಮಿಟಿಗೆ ಸೂಚಿಸಬೇಕಾಗಿ ವಿನಂತಿ.

ಸೆಕ್ರೆಟರಿ, ಬಸಪ್ಪಾ ಮಲ್ಲಪ್ಪಾ ಹಾವೇರಿ.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ದೊಡ್ಡಬಳ್ಳಾಪುರ ತಾ|| ಸಕ್ಕರಗೊಲ್ಲಹಳ್ಳಿ ಮ|| ಯಜಮಾನ್ ದೊಡ್ಡಕಣ್ಣಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ 1 ರೂ. ಡಿಟೊ ಸಕ್ಕರಗೊಲ್ಲಹಳ್ಳಿ ಮ|| ಗುಂಡುಶಂಕರಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ 1 ರೂ. ಒಟ್ಟು 2 ರೂ.ಗಳು ತುಮಕೂರು ಅಡ್ವೊಕೇಟ್ ಮ|| ಜಿ. ರುದ್ರಪ್ಪ, ಎಂ.ಎ., ಎಲ್‌ಎಲ್.ಬಿ., ಯವರ ಮೂಲಕ ಬಂದಿದೆ.

ಪತ್ರವ್ಯವಹಾರ.

[illegible] ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಕುಂಬಾರಮಠದ ಪ್ರಾಥಮಿಕಸಭೆ.

ಕೊಳ್ಳೆಗಾಲಂ ತಾಲ್ಲೋಕು ದೊಡ್ಡಿಂದುವಾಡಿ ಗ್ರಾಮದ ಬೋರ್ಡ್ ಹೈಯರ್ ಎಲಿಮೆಂಟರಿ ಸ್ಕೂಲ್‌ಮಾಸ್ಟರು ಬಿ. ಪುಟ್ಟಮಲ್ಲಯ್ಯನವರು ಶಿವನಸಮುದ್ರಕ್ಕೆ ಸೇರಿದ [illegible] ದಲ್ಲಿ ತಾ|| 5-6-26 ರಲ್ಲಿ ಈ ತಾಲ್ಲೋಕಿಗೆ ಸೇರಿದ ಎಲ್ಲಾ ಗ್ರಾಮದ ಕುಂಬಾರರುಗಳನ್ನು ಸೇರಿಸಿ “ಅಹಿಂಸಾಪರಮೋಧರ್ಮ” ಎಂಬ ವಿಚಾರವನ್ನು ಸ್ಪಷ್ಟವಾಗಿ [illegible] ವ್ಯಾಖ್ಯಾನಮಾಡಿದ್ದಲ್ಲದೆ, ಕುಂಬಾರಮಠದ ಅಭಿವೃದ್ಧಿ [illegible] ಮಾರ್ಗ ಇವುಗಳನ್ನು ತೋರಿಸಿದರು. [illegible]

ಆದರೆ ಕೊಂಚಕಾಲದಲ್ಲಿ ಬಿಟ್ಟುಬಿಡುತ್ತೇವೆಂದು ವಾಗ್ದಾನಮಾಡಿದರು. ಇದರಲ್ಲಿ ದೊಡ್ಡಿಂದುವಾಡಿ ಕುಂಬಾರ ಪುಟ್ಟಶೆಟ್ಟಿ, ಬೆಳತೂರು ಮಾದಶೆಟ್ಟಿ ಮುಂತಾದವರುಗಳು ಇನ್ನೊಂದುಸಾರಿ ಸಭೆಸೇರುವದರೊಳಗೆ ಯಾರು ಮಾಂಸಾಹಾರವರ್ಜ್ಯಮಾಡುವದಿಲ್ಲವೋ ಅವರನ್ನು ತಮ್ಮ ಜಾತಿಯಿಂದ ತೆಗೆದುಬಿಡುವೆವೆಂಬದಾಗಿ ಹೇಳಿ ಸಭೆಮುಕ್ತಾಯಮಾಡಿದರು.

ಓರ್ವ ಪ್ರೇಕ್ಷಕ.

ನಂಜನಗೂಡಿನಲ್ಲಿ ವೀರಶೈವರ ಧರ್ಮಸತ್ರ.

ಮಹನೀಯರಲ್ಲಿ ವಿಜ್ಞಾಪನೆ.

ಸ್ವಾಮಿ, ದಕ್ಷಿಣಕಾಶಿಯಾದ ನಂಜನಗೂಡು ಕ್ಷೇತ್ರದಲ್ಲಿ ಕೆಲವು ವೀರಶೈವಮಹನೀಯರು ಭಾರೀ ಲಾಗೋಡಿನಿಂದ ಒಂದು ಮಠವನ್ನು ಕಟ್ಟಿಸಿ ಅದಕ್ಕೆ ಶ್ರೀ ಮುರಘರಾಜೇಂದ್ರಮಠವೆಂದು ನಾಮಕರಣಮಾಡಿದ್ದರು. ಆದರಮೇಲೆ (1000) ಒಂದುಸಾವಿರರೂಪಾಯಿ ಋಣವಿರುತ್ತೆ. ಈ ಮಠವು ಕಳೆದ ಪ್ರವಾಹದಲ್ಲಿ ಸಂಪೂರ್ಣವಾಗಿ ನಾಶವಾಯಿತು. ಈ ಊರಿನಲ್ಲಿ ವೀರಶೈವರ ಸಂಖ್ಯೆಯು ಬಹಳ ಕಡಮೆ ಮತ್ತು ಶ್ರೀಮಂತರು ಇಲ್ಲವೇ ಇಲ್ಲ. ಈ ಮಠವನ್ನು ಮುಂದಾಳಾಗಿ ನಿಂತು ಮಾಡಿಸಿದ ಮಹನೀಯರಲ್ಲಿ ಕೆಲವರು ಮೇಲ್ಕಂಡ ಪ್ರವಾಹದಲ್ಲಿ ತಮ್ಮಗಳ ಮನೆಯು ಸಂಪೂರ್ಣ ನಾಶವಾದ್ದರಿಂದ ತಮ್ಮಗಳ ವಸತೀ ಏರ್ಪಾಡುಮಾಡುವದೇ ಕಷ್ಟವಾಗಿ ಮಠದ ಯೋಚನೆಯೇ ಬಿಟ್ಟಿದ್ದಾರೆ. ಈ ಮಠವಿದ್ದಾಗ್ಯೆ ಕ್ಷೇತ್ರಕ್ಕೆ ಬಂದ ವೀರಶೈವಭಕ್ತಮಹೇಶ್ವರರೂ ಇತರರೂ ಇಳಿದುಕೊಳ್ಳುತ್ತಾಯಿದ್ದದ್ದು ಅನೇಕರಿಗೆ ವೇದ್ಯವಿರಬಹುದು. ಆದಪ್ರಯುಕ್ತ ವೀರಶೈವಮಹನೀಯರು ಯಾರಾದರು ಈ ಧರ್ಮಕೆಲಸವನ್ನು ಕೈಗೊಂಡು ವೀರಶೈವಯಾತ್ರಿಕರಿಗೆ ಅತ್ಯುಪಯುಕ್ತವಾಗಿದ್ದ ಈ ಮಠವನ್ನು ಪುನಹ ನಿರ್ಮಾಣಮಾಡಿಸಿ ಪ್ರಾರಂಭಿಸಿದವರ ಇಷ್ಟಾರ್ಥಸಿದ್ಧಿಗೂ ಪುಣ್ಯಕ್ಕೂ ಭಾಗಿಗಳಾಗಬೇಕೆಂತ ಕೋರುವ,

ದೈವಭಕ್ತ.

ಶ್ರೀ ಜಗದಾಚಾರ್ಯರ ಸನ್ಮಾನ.

ಶ್ರೀಮದ್ದಕ್ಷಿಣಕಾಶೀ ನಿಜಸಿಂಹಾಸನಾಧೀಶ ಜಗದಾಚಾರ್ಯಸ್ವಾಮಿ ವಿರೂಪಾಕ್ಷಒಡೆಯರವರ ಸವಾರಿಯನ್ನು ಬಳ್ಳಾರಿಜಿಲ್ಲಾ ಹರಪನಹಳ್ಳಿ ತಾಲ್ಲೂಕು ಹರವಿ, ಹಲವಾಗಲಗ್ರಾಮದ ಮಠಸ್ಥರು, ಗೌಡರು, ಬಣಕಾರು ಮೊದಲಾದ ವೀರಶೈವಜನಾಂಗದವರು ಹಾಗೂ ಅಂಬಿಗ ಮೊದಲಾದ ಇತರ ಸಮಸ್ತಜಾತಿಯ ಜನರು ಕೂಡಿ ತಮ್ಮ ತಮ್ಮ ಗ್ರಾಮಗಳಿಗೆ ಹೋದಠಿಂಗಳಲ್ಲಿ ಸಕಲ ಬಿರುದಾವಳಿಗಳ ಸಮೇತ ಅತಿವೈಭವದಿಂದ ಅಡ್ಡಪಲ್ಲಕ್ಕಿ ಉತ್ಸವದೊಡನೆ ಬಿಜಯಂಗೈಸಿಕೊಂಡು ಸತ್ಕರಿಸಿದರು. ಈ ಉತ್ಸವಗಳಲ್ಲಿ ಪೋಲೀಸ ಬಂದೋಬಸ್ತು ಇಡಲ್ಪಟ್ಟಿದ್ದಿತು. ಇದೇ ಸಮಯಕ್ಕೆ ಹಲವಾಗಲದಲ್ಲಿ ಬಸವಜಯಂತಿಯು ನಡೆದದ್ದರಿಂದ ಶ್ರೀಜಗದಾಚಾರ್ಯಸ್ವಾಮಿ ಒಡೆಯರವರು, ಉತ್ಸವಸಮಾರಂಭಕ್ಕಾಗಿ ಬಂದು ಸನ್ನಿಧಿಯಲ್ಲಿ ನೆರೆದಿದ್ದ ಸಮಸ್ತ ಜನಾಂಗಕ್ಕೂ ಶ್ರೀ ಬಸವೇಶ್ವರನ ವಿಷಯವಾಗಿ ಹೇಳಿದ್ದೇನಂದರೆ- ಮಹಾಪುಣ್ಯಪುರುಷನಾದ ಶ್ರೀ ಬಸವೇಶ್ವರನ ಜನ್ಮದಿನವು ಈ ಹೊತ್ತು ಒದಗಿರುವದು ನಮ್ಮೆಲ್ಲರಿಗೆ ಪರಮಸಂತೋಷಪ್ರದವಾಗಿರುವದು. ಯಾಕೆಂದರೆ, ಆ ಮಹಿಮನು ಧಾರ್ಮಿಕದೃಷ್ಟಿಯಿಂದ ವೀರಶೈವರಿಗೂ, ವೀರಶೈವಮತಾನುಯಾಯಿಗಳಾದ ಇತರ ಮತಗಳಿಗೂ ಪರಮಉಪಕಾರಿಯಾಗಿರುವನಲ್ಲದೆ ದೇಶದ ಹಿತದೃಷ್ಟಿಯಿಂದ ಬ್ರಾಹ್ಮಣಾದಿ ಸಮಸ್ತ ಭಾರತೀಯಜನಾಂಗಕ್ಕೆ ಆತ್ಮಾದರನೂ, ಪರಮಪೂಜ್ಯನೂ ಆಗಿದ್ದು ದೇಶಾಭಿಮಾನದ ದೇವಮೂರ್ತಿಯಾಗಿರುವನು. ಇನ್ನು ರಾಜನೀತಿದೃಷ್ಟಿಯಿಂದ ಎಲ್ಲಾ ರಾಜ್ಯಾಧಿಕಾರಿಗಳಿಗೂ ರಾಜರಿಗೂ ರಾಜನೀತಿಬೋಧಕನೂ, ಗ್ರಾಹ್ಯನೂ, ಉದಾಹರಣಪ್ರಾಯನೂ ಆಗಿರುವನು. ಭಾರತೀಯರಲ್ಲಿ ಇಂಥಾ ಪುಣ್ಯಾತ್ಮನಾದ ಬಸವೇಶ್ವರನನ್ನು ಅಭಿಮಾನಿಸದೆ ಇರುವನಂಥಾ ಪಾಪಿಯೇ ಜಗತ್ತಿನಲ್ಲಿಲ್ಲವೆಂದು ಹೇಳಬಹುದು. ಎಂಬಿವೇ ಮೊದಲಾದ ಬಹುಸ್ವಾರಸ್ಯವಾದ ಬಸವಚರಿತ್ರೆಯನ್ನು ಬೋಧಿಸಿದುದನ್ನು ಕೇಳಿ ಎಲ್ಲಾ ಜನಾಂಗದವರೂ ಶ್ರೀಜಗದಾಚಾರ್ಯಒಡೆಯರನ್ನು ಕೊಂಡಾಡಿದರು. ಓರ್ವ ಪ್ರೇಕ್ಷಕ.

ಮೇಲುಕೋಟೆ.

ನಮ್ಮ ದಯಾಳು ಪ್ರಭುಗಳಾದ ಶ್ರೀಮನ್ಮಹಾರಾಜರವರ 43 ನೇ ವರ್ಷ ವರ್ಧಂತಿಯುತ್ಸವವು ಪದ್ಧತಿಯಂತೆ ಈ ಊರು ಮಿಡ್ಲ್ ಸ್ಕೂಲಿನಲ್ಲಿ ಬಹಳ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಈ ವರ್ಧಂತಿಮಹೋತ್ಸವದ ಕಾರ್ಯಕ್ರಮವನ್ನು ಕುರಿತು ಯೋಚಿಸಲು ಮಿಡ್ಲ್ ಸ್ಕೂಲಿನಲ್ಲಿ ಮಿಡ್ಲ್ ಮತ್ತು ಪ್ರೈಮರಿಸ್ಕೂಲುಗಳ ಉಪಾಧ್ಯಾಯರುಗಳ ಸಭೆಯು ಈ ಮೊದಲೇ ಸೇರಿತ್ತಂತೆ. ಪದ್ಧತಿಯಪ್ರಕಾರ ಈಸಾರಿಯೂ ಶ್ರೀಮನ್ಮಹಾರಾಜರವರ ಚಿತ್ರಪಟದ ಉತ್ಸವವನ್ನು ನಡೆಸುವ ವಿಷಯದಲ್ಲಿ ಬಹಳ ಚರ್ಚೆನಡೆಯಿತಂತೆ. ಈ ಊರಲ್ಲಿ ಶ್ರೀಯವರ ದೇವಸ್ಥಾನದ ಮೆರೆಯುವವಿಗ್ರಹದ ಉತ್ಸವ ವಿನಹ ಇತರ ಉತ್ಸವಗಳನ್ನು ಮಾಡಕೊಡದೆಂದು ಬಹಳ ಹಾವಳಿಮಾಡುವ ಪಂಗಡಕ್ಕೆ ಸೇರಿದ ಉಪಾಧ್ಯಾಯರುಗಳಲ್ಲಿ ಅಧಿಕಸಂಖ್ಯೆಯವರು ಈ ಯುತ್ಸವವನ್ನು ಮಾಡಕೂಡದೆಂದು ಪ್ರತಿಭಟಿಸಿದರಂತೆ. ಅಲ್ಪಸಂಖ್ಯೆಯವರು ಉತ್ಸವಕ್ಕೆ ಸಮ್ಮತಿಯನ್ನಿತ್ತರಂತೆ. ಆದರೆ ಸಭಾಧ್ಯಕ್ಷರಾಗಿದ್ದ ಮಿಡ್ಲ್ ಸ್ಕೂಲ್ ಹೆಡ್ಮಾಸ್ಟರವರು ಈ ಅಧಿಕಸಂಖ್ಯೆಯವರ ಗೊಡ್ಡುಬೆದರಿಕೆಗೆ ಹೆದರದೆ ಸರಿಯಾದ ಪೋಲೀಸ್ ಕುಮ್ಮಕ್ಕನ್ನು ತರಿಸಿಕೊಂಡು ಉತ್ಸವವನ್ನು ಬಾಜಾಬಜಂತ್ರಿಯೇ ಮೊದಲಾದ ರಾಜಮರ್ಯಾದೆಗಳಿಂದ ಮುಖ್ಯವಾದ ಬೀದಿಗಳಲ್ಲೆಲ್ಲಾ ಮಾಡಿಯೇಬಿಟ್ಟರು. ಮಹಾರಾಜರವರ ಉಪ್ಪು ತಿಂದು ಅವರಿಗೆರಡುಬಗೆಯುವ ಈ ಅಸಮ್ಮತಿ ಪಕ್ಷಕ್ಕೆ ಸೇರಿದ ಶಾಲಾಬೋಧಕರ ರಾಜಭಕ್ತಿ ವಿಶ್ವಾಸಗಳನ್ನು ಏನು ಹೇಳೋಣ ! ಇವರಿಂದ ಶಿಕ್ಷೆಯನ್ನು ಹೊಂದುವ ವಿದ್ಯಾರ್ಥಿಗಳು ಇನ್ನೆಂಥಾ ರಾಜಭಕ್ತಿಯುತರಾವಾರು ? ಈ ಉತ್ಸವದ ಪಕೆಯಲ್ಲಿ ಈ ಊರಿನ ರೆವಿನ್ಯೂ, ಮುಜರಾಯಿ, ಫಾರೆಸ್ಟ್, ಮೆಡಿಕಲ್ ಮೊದಲಾದ ಇಲಾಖೆಗಳ ಆಫೀಸರರು ವಿನಹ ಆ ಇಲಾಖೆಗಳ ಇತರ ನೌಕರರು ಸೇರಿರಲಿಲ್ಲ. ಅಸಮ್ಮತಿ ಪಕ್ಷದವರಂತು ಒಬ್ಬರೂ ಬಂದಿರಲಿಲ್ಲ. ಮನೆಬಾಗಿಲುಗಳಲ್ಲಿ ಕುಳಿತಿದ್ದ ಈ ಪಕ್ಷದ ಒಬ್ಬೊಬ್ಬರು ಈ ಉತ್ಸವ ಬಂದಾಗ ಎಳಲೂ ಇಲ್ಲ. ಉತ್ಸವವು ಶ್ರೀಯವರ ದೇವಸ್ಥಾನದ ಬಾಗಲಿಗೆ ಬಿಜಯಮಾಡಿದಾಗ ದೇವಸ್ಥಾನದಲ್ಲಿ ದೀಪಗಳನ್ನು ಹಚ್ಚಿರಲಿಲ್ಲ. ದೇವರತೆರೆಯನ್ನು ತೆಗೆದು ದೇವರಿಗೆ ಮಂಗಳಾರತಿವಗೈರೇ ಪೂಜಾದಿಗಳನ್ನು ನಡೆಸದೆ ಮೊದಲಿನಂತೆ ಶ್ರೀಮನ್ಮಹಾರಾಜರವರ ಚಿತ್ರಪಟಕ್ಕೆ ಸರಿಯಾದ ರಾಜಮರ್ಯಾದೆಯನ್ನು ಮಾಡಲಿಲ್ಲ. ಸಮ್ಮತಿಪಂಗಡಗಳ ಆಬಾಲವೃದ್ಧರೆಲ್ಲರೂ ಭಜನೆ ಮೊದಲಾದ ಮಂಗಳವಾದ್ಯಗಳೊಡನೆ ಆ ದಿವಸದ ಕಾರ್ಯಕ್ರಮದಲ್ಲೆಲ್ಲಾ ಭಾಗಿಗಳಾಗಿದ್ದು ಸ್ಕೂಲಿನಿಂದ ಉತ್ಸವ [illegible] ಹೊರಟು ಕೊನೆಯವರೆಗೂ ಹಾಜರಿದ್ದು ಉತ್ಸವವನ್ನು ಸ್ಕೂಲಿಗೆ ಬಿಜಯಮಾಡಿಸಿ ಜಯಘೋಷದಿಂದ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ತಮ್ಮತಮ್ಮ ಸ್ಥಳಗಳಿಗೆ ತೆರಳಿದರು. ಅಸಮ್ಮತಿ ಪಕ್ಷದವರ ಈ ವರ್ತನವು ನಮ್ಮ ಪ್ರಭುಗಳವರ ದೃಷ್ಟಿಗೆ ಬಿದ್ದು ಸಮ್ಮತಿಪಕ್ಷದವರ ರಾಜಭಕ್ತಿ [illegible]

[illegible]

ಬೆಂಗಳೂರು ಸಂಸ್ಕೃತಕಾಲೇಜು, ಮತ್ತು ವೀರಶೈವರು.

ದ್ವೈತಾದ್ವೈತ ವಿಶಿಷ್ಟಾದ್ವೈತಮತಗಳಂತೆ ವೀರಶೈವಮತವೂ ವೈದಿಕಮತಗಳಲ್ಲಿ ಒಂದಾಗಿರುತ್ತದೆ. ಈ ಮತಕ್ಕೆ ಸಂಸ್ಕೃತವೇ ಮೂಲಭಾಷೆಯಾಗಿರುವುದು. ಪೂರ್ವದ ಮಹನೀಯರುಗಳು ನಮ್ಮ ಮತದ ಭಾಷ್ಯ ಮತ್ತು ಇತರ ಧರ್ಮಗ್ರಂಥಗಳನ್ನು ಅನೇಕಾನೇಕವಾಗಿ ರಚಿಸಿ, ಕೀರ್ತಿವಂತರಾಗಿರುತ್ತಾರೆ. ಈ ಗ್ರಂಥಗಳನ್ನು ನೋಡಿದರೆ ಪೂರ್ವದಲ್ಲಿ ವೀರಶೈವಮತವು ವಿದ್ಯೆಯಲ್ಲಿ ಎಷ್ಟು ಅಭಿವೃದ್ಧಿಸ್ಥಿತಿಯಲ್ಲಿ ಇತ್ತೆಂಬುದು ಗೊತ್ತಾಗುತ್ತದೆ. ಇಂಥಾ ಗ್ರಂಥಗಳನ್ನು ರಚಿಸಬೇಕಾಗಿದ್ದರೆ ನಮ್ಮಲ್ಲಿ ವೇದವೇದಾಂಗಪಾರಂಗತರಾದ ವಿದ್ವಾಂಸರು ಎಷ್ಟು ಮಂದಿ ಇದ್ದರೆಂದು ವಾಚಕರೇ ಊಹಿಸಬಹುದು. ಪೂರ್ವದಲ್ಲಿದ್ದಂತೆ ನಮ್ಮ ಸಮಾಜದಲ್ಲಿ ಪಂಡಿತರು ಈಗ ಒಬ್ಬಿಬ್ಬರು ಸಹ ಸಿಕ್ಕುವುದು ಅತಿಪ್ರಯಾಸವಾಗಿದೆ. ನಮ್ಮ ಮೈಸೂರು ದೇಶದಲ್ಲಿಯಂತೂ ಅತಿವಿರಳ. ಈ ವಿಧವಾದ ನ್ಯೂನತೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಕಳೆದ ಇಪ್ಪತ್ತೈದುವರ್ಷಗಳಿಂದಲೂ ನಮ್ಮ ಮತದ ಮುಂದಾಳುಗಳು ಪ್ರಜಾಪ್ರತಿನಿಧಿಸಭೆಯಲ್ಲಿ ಇತರರು ತುಚ್ಛವಾದ ಮಾತುಗಳನ್ನಾಡಿದರೂ ಮತಾಭಿಮಾನದಿಂದ ಸಹಿಸಿಕೊಂಡು ಸಂಸ್ಕೃತಕಾಲೇಜಿನ ಪ್ರವೇಶಕ್ಕಾಗಿ ಹೋರಾಡಿದರು. ಇದನ್ನು ಪ್ರಭುತ್ವದವರು ತಮ್ಮ ವಿಶಾಲವಾದ ದೃಷ್ಟಿಯಿಂದ ಪರಾಂಬರಿಸಿ, ಸರ್ವರಿಗೂ ಬೆಂಗಳೂರು ಕಾಲೇಜಿನಲ್ಲಿ ಸಂಸ್ಕೃತವಿದ್ಯಾಭ್ಯಾಸಕ್ಕೆ ಅವಕಾಶವನ್ನೊದಗಿಸಿಕೊಟ್ಟು ಎರಡುವರ್ಷಗಳಾದುವು. ಈಗ ನಮ್ಮ ವೀರಶೈವರು ತಮ್ಮವರಿಗೆ ಯಾವವಿಧವಾದ ಪ್ರೋತ್ಸಾಹವನ್ನೂ ಕೊಡದೆ ನಿದ್ರಿಸುತ್ತಿದ್ದಾರೆ. ಈ ಪಾಠಶಾಲೆಯು ಅಭಿವೃದ್ಧಿಸ್ಥಿತಿಗೆ ಬರಲೆಂದು 600-700 ರೂ. ಗಳನ್ನು ಈ ಪಾಠಶಾಲೆಗಾಗಿ ಪ್ರತಿ ತಿಂಗಳಲ್ಲಿಯೂ ನಮ್ಮ ದಯಾಳು ಸರ್ಕಾರದವರು ಖರ್ಚುಮಾಡುತ್ತ ಪ್ರೋತ್ಸಾಹಿಸುತ್ತಿದ್ದಾರೆ. ಈ ಸಂಸ್ಕೃತಕಾಲೇಜಿನಲ್ಲಿ ವಿದ್ಯಾರ್ಥಿಗಳು, ತರ್ಕ, ವ್ಯಾಕರಣ ಮುಂತಾದ ಯಾವ ಶಾಸ್ತ್ರಗಳನ್ನಾದರೂ ಅಭ್ಯಾಸಮಾಡಬಹುದು. ಇಂಥಾ ಸಮಯದಲ್ಲಿ ವೀರಶೈವರು ಸುಮ್ಮನೆ ಕುಳಿತಿರುವುದು ಬಹಳ ವ್ಯಸನಕರವಾಗಿದೆ. ಈಗ ಈ ಪಾಠಶಾಲೆಯಲ್ಲಿ ವೀರಶೈವವಿದ್ಯಾರ್ಥಿಗಳು 14-15 ಜನರು ಮಾತ್ರ ಇರುತ್ತಾರೆ. ಇವರುಗಳಲ್ಲಿ ಪರಸ್ಥಳದವರು ಕೆಲವರಿದ್ದಾರೆ. ಇವರಲ್ಲಿ 7-8 ಜನರಿಗೆ ಮಾತ್ರ ತೋಂಟದಪ್ಪನವರ ಸತ್ರದಲ್ಲಿ ಊಟಕ್ಕೆ ಅವಕಾಶಕೊಡಲ್ಪಟ್ಟಿದೆ. ಇಂಗ್ಲಿಷ್ ವಿದ್ಯಾರ್ಥಿಗಳಿಗಾದರೋ 50-60 ಜನಗಳಿಗೆ ಕೊಡಲ್ಪಟ್ಟಿದೆ. ಇದನ್ನು ನೋಡಿದರೆ ಸಂಸ್ಕೃತವನ್ನು ಬಹಳವಾಗಿ ತಿರಸ್ಕರಿಸುತ್ತಾರೆಂದು ವ್ಯಕ್ತವಾಗುತ್ತದೆ. ಆದ್ದರಿಂದ ವೀರಶೈವಮಹಾಜನಗಳು ಈ ವಿಷಯದಲ್ಲಿ ಬಹಳ ಶ್ರದ್ಧೆಯನ್ನು ವಹಿಸಿ, ಈಗ ನಡೆಯುವ ವೀರಶೈವವಿದ್ಯಾಭಿವೃದ್ಧಿಫಂಡಿನ ಮೀಟಿಂಗಿನಲ್ಲಿ ಈ ವಿಷಯವನ್ನೇ ಮುಖ್ಯವಿಷಯವನ್ನಾಗಿ ಇಟ್ಟುಕೊಂಡು ಮೇಲ್ಕಂಡ ಚಾಮರಾಜೇಂದ್ರ ಸಂಸ್ಕೃತಕಾಲೇಜಿಗೆ ಹೆಚ್ಚಾಗಿ ವಿದ್ಯಾರ್ಥಿಗಳನ್ನು ಒದಗಿಸುವ ಉಪಾಯವನ್ನು ಪರ್ಯಾಲೋಚಿಸಿ ಮತಕ್ಕೆ ಒದಗಿರುವ ದೊಡ್ಡನ್ಯೂನತೆಯನ್ನು ಪರಿಹರಿಸಿ, ಸಮಾಜಾಭಿಮಾನವನ್ನು ವ್ಯಕ್ತಗೊಳಿಸುವರೆಂದು ನಂಬಿದ್ದೇನೆ.

ಓರ್ವ ಸಂಸ್ಕೃತವಿದ್ಯಾಭಿಮಾನಿ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ.

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಜಿ. ಬಿ. ಇ. ಯವರ ವರ್ಧಂತ್ಯುತ್ಸವವು ದಾವಣಗೇರಿಯ ಅನೇಕ ಸ್ಥಳಗಳಲ್ಲಿ ವಿಜೃಂಭಣೆಯಿಂದ ನೆರವೇರಿತು. ಆ ದಿವಸ ಪ್ರಾತಃಕಾಲ 10 ಘಂಟೆಗೆ ಪ್ರಾಣಿದಯಾಜ್ಞಾನಪ್ರಸಾರಕಸಂಘದವರ ವತಿಯಿಂದ ಒಂದು ಸಭೆಯು ಸಾವಳಿಗಿ ನಾಗಪ್ಪನವರ ಥಿಯೇಟರಿನಲ್ಲಿ ಸಂಘಾಧ್ಯಕ್ಷರಾದ ಮ|| ದೇವೇಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸಭೆಗೆ ಸಬ್ ಡಿವಿಜನ್ ಸಾಹೇಬರೂ, ಅಮಲ್ದಾರರೂ, ಪೋಲೀಸ್ ಇನ್ಸ್ಪೆಕ್ಟರವರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ವಕೀಲ್ ಮಂಡಲಿಯವರೂ ಊರಿನ ಪ್ರಮುಖರೂ ದಯೆಮಾಡಿಸಿದ್ದರು. ಶ್ರೀಮನ್ಮಹಾರಾಜರವರ ವರ್ಧಂತಿಯ ಸುದಿವಸದಲ್ಲಿ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವ ಮತ್ತು ಬಡಜನಗಳಿಗೆ ಒಂದು ಸ್ವತಂತ್ರ ಉದ್ಯೋಗವನ್ನು ಕಲ್ಪಿಸುವಂತ ರಾಟೆ ಮತ್ತು ಕೈನೂಲಿನ ಬಟ್ಟೆಯ ಪ್ರಚಾರಮಾಡುವ ವಿಷಯವನ್ನು ಆಲೋಚಿಸಲಿಕ್ಕಾಗಿಯೇ ಸಭೆಯು ಸೇರಲ್ಪಟ್ಟಿತ್ತು. ಮ|| ಶಿರೂರು ಲಕ್ಷ್ಮಣರಾಯರು ಮಹಾತ್ಮಗಾಂಧಿಯವರು ಹೊರಡಿಸುವ "ಎಂಗ್ ಇಂಡಿಯಾ" ಪತ್ರಿಕೆಯಲ್ಲಿ ಖಾದಿ ಬಗ್ಗೆ ಬರೆದಿದ್ದ ಲೇಖನವನ್ನು ಓದಿದರು. ಅದನ್ನು ಮ|| ವಕೀಲ್ ಶೀತಾರಾಮಯ್ಯಂಗಾರ್‌ರವರು ಕನ್ನಡದಲ್ಲಿ ಹೇಳಿದ ತರುವಾಯ ಮ|| ಅನೆಕೊಂಡದ ಮುಪ್ಪಣ್ಣನವರು ಖಾದಿಯು ಪೂರ್ವದಲ್ಲಿ ನಮ್ಮ ಭಾರತೀಯರ ಕಸಬುಗಳಲ್ಲಿ ಒಂದಾಗಿದ್ದು ಪರದೇಶದವರು ಸಹ ಈ ದೇಶದ ಖಾದಿಯನ್ನು ಧರಿಸುತ್ತಿದ್ದರು. ಆದರೆ ಕ್ರಮೇಣ ಮಿಲ್ಲಿನ ಬಟ್ಟೆಯ ಉಪಯೋಗದಿಂದ ಈ ಕಸಬು ಮುಳುಗಿಹೋಗಿ ಈಗ ಖಾದಿಯನ್ನು ಹಾಕಿರಿ, ಖಾದಿಯು ಪವಿತ್ರವಾದುದು ಎಂಬುದಾಗಿ ಹೇಳುವಕಾಲ ಬಂದುದಕ್ಕಾಗಿ ವಿಷಾದಿಸುವುದಾಗಿಯೂ ಆರ್ಥಿಕದೃಷ್ಟಿಯಿಂದಲ್ಲದೆ ಧಾರ್ಮಿಕದೃಷ್ಟಿಯಿಂದಲೂ ಖಾದಿಯು ಪವಿತ್ರವಾದುದು, ಆದುದರಿಂದ ಖಾದಿಯನ್ನೇ ಧರಿಸಬೇಕೆಂಬುದಾಗಿಯೂ ಮ|| ಬೆಲ್ಲದ ಶಿದ್ಧಲಿಂಗಪ್ಪನವರು ಖಾದಿಯನ್ನು ಧರಿಸುವುದರಿಂದಾಗುವ ಪ್ರಯೋಜನಗಳನ್ನೂ, ಖಾದಿಯು ಮೋಕ್ಷಕ್ಕೆ ದಾರಿಯಾಗಿರುವ ರೀತಿಯನ್ನೂ ವಿವರಿಸಿದರು. ತರುವಾಯ ಮ|| ಕಾಸಲು ಶ್ರೀನಿವಾಸಶೆಟ್ಟರು ಖಾದಿಯಿಂದ ಬಡಜನಗಳಿಗಾಗುವ ಪ್ರಯೋಜನಗಳನ್ನೂ, ಬಂಗಾರದ ಹೊಗೆಯು ಹಾಯುತ್ತಿದ್ದ ಈ ದೇಶದಲ್ಲಿ ಖಾದಿಯನ್ನು ಬಿಟ್ಟುದುದರಿಂದ ಈಗ ತಿನ್ನಲಿಕ್ಕೆ ಕೂಳಿಲ್ಲದೆ ಇರುವ ಸ್ಥಿತಿಯನ್ನೂ ವಿವರಿಸಿದನಂತರ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದುವು.

1. ದಾವಣಗೆರೆ ಪುರಜನಗಳು ಪ್ರಾಣಿದಯಾಜ್ಞಾನಪ್ರಸಾರಕಸಂಘದವರ ವತಿಯಿಂದ ಸಭೆಸೇರಿ ಶ್ರೀಮನ್ಮಹಾರಾಜರವರಿಗೆ ತಮ್ಮ ರಾಜಭಕ್ತಿಯನ್ನು ತೋರಿಸುವರಲ್ಲದೆ ಮಹಾರಾಜರವರನ್ನು ದೇವರು ದೀರ್ಘಕಾಲ ಸುರಕ್ಷಿತವಾಗಿ ಸಲಹಲೆಂದು ಪ್ರಾರ್ಥಿಸುತ್ತಾರೆ. 2. ಮೈಸೂರು ದೇಶದ ಪ್ರತಿಯೊಬ್ಬರೂ ಎಲ್ಲಾ ಸಂದರ್ಭಗಳಲ್ಲಿಯೂ ಖಾದಿಯನ್ನೇ ಧರಿಸಬೇಕೆಂದೂ, ಪ್ರತಿದಿವಸವೂ ಕನಿಷ್ಟಪಕ್ಷ ಅರ್ಧಘಂಟೆಯಹೊತ್ತಾದರೂ ನೂಲಬೇಕೆಂಬುದಾಗಿಯೂ ಈ ಸಭೆಯು ಸೂಚಿಸುತ್ತದೆ. 3. ಮೈಸೂರು ಸರ್ಕಾರದವರು ತಮಗೆ ಒಳಪಟ್ಟ ಎಲ್ಲಾ ಸ್ಕೂಲುಗಳಲ್ಲಿಯೂ ಚರಕಗಳಿಂದ ನೂಲನ್ನು ನೂಲುವಂತೆಯೂ, ಖಾದಿಯನ್ನು ಧರಿಸುವಂತೆಯೂ ಪ್ರೋತ್ಸಾಹಿಸಬೇಕಾಗಿ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 4. ಮೈಸೂರುದೇಶದ ಮುನಸಿಪಲ್ ಮತ್ತು ಲೋಕಲ್‌ಬೋರ್ಡುಗಳು ಕೈಯಿಂದ ತಯಾರಾದ ಖಾದಿಬಟ್ಟೆಗೆ ಸುಂಕವನ್ನು ಹಾಕಕೂಡದಾಗಿ ಈ ಸಭೆಯು ಸೂಚಿಸುತ್ತದೆ. 5. ಈ ಸಂಘದವರು ಒಂದು ಡಿಪೋವನ್ನು ತೆಗೆದು ಎಲ್ಲಾ ಜನಗಳಲ್ಲಿಯೂ ಚರಕದ ಪ್ರಸಾರವನ್ನು ಮಾಡಬೇಕಾಗಿ ಈ ಸಭೆಯು ಸೂಚಿಸುತ್ತದೆ. ನಂತರ ಸಭಾಧ್ಯಕ್ಷರು ತಮ್ಮನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿದುದಕ್ಕಾಗಿ ತಮ್ಮ ವಂದನೆಗಳನ್ನು ಅರ್ಪಿಸಿದನಂತರ ಮಹಾರಾಜರವರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಅಲ್ಲಿ ಸೇರಿದ್ದ ಸರ್ಕಾರಿ ಅಧಿಕಾರಿಗಳೂ, ದೊಡ್ಡಮನುಷ್ಯರೂ ಪ್ರಾಣಿದಯಾಜ್ಞಾನಪ್ರಸಾರಕಸಂಘದ [illegible] ಹೋದರು. ಮೇಲ್ಕಂಡ ಠರಾವುಗಳನ್ನು ಎಲ್ಲರೂ ಆಚರಣೆಯಲ್ಲಿ ತಂದು ಕೈಗಾರಿಕೆಗೆ ಪ್ರೋತ್ಸಾಹಕೊಟ್ಟು ಬಡತನದಿಂದ ಬಳಲುವ ನಮ್ಮ ದೇಶವನ್ನು ಪುನಹ ಪೂರ್ವದಸ್ಥಿತಿಗೆ ತರಬೇಕಾಗಿ ಅಪೇಕ್ಷಿಸುವ,

ಓರ್ವ ದೇಶಾಭಿಮಾನಿ.

ನಂಜನಗೂಡು–ಚಾಮರಾಜನಗರ ರೈಲ್ವೆ.

ಈ ರೈಲ್ವೆಗಾಗಿ ಜಮೀನುಗಳನ್ನು ಸರ್ಕಾರದವರು ತೆಗೆದುಕೊಂಡು ವರುಷವಾದಾಗ್ಯೂ, ಕಂಪರ್ನೇಸನ್ ಕೊಡದೇಲೂ, ಬದಲಿ ಜಮೀನುಗಳನ್ನಾದರೂ ಕೊಡದೇಲೂ, ರೈತರು ಅನೇಕಾವರ್ತಿ ಕಛೇರಿಗಳಿಗೆ ತಿರುಗಿದರೂ ಕಣ್ಣೆತ್ತಿ ಸಹ ನೋಡದೇಲೂ ಇರುವ ವಿಚಾರವನ್ನು ಬಹಳ ವ್ಯಸನದಿಂದ ಬರೆಯಬೇಕಾಗಿದೆ. ನಿಸ್ಪೃಹರಾದ ಅಧಿಕಾರಿಗಳನ್ನು ಸರ್ಕಾರದವರು ದಯೆಪಾಲಿಸಿರುವರಾದರೂ ನಮ್ಮ ರೈತರ ಕಷ್ಟವಿನ್ನೂ ತಪ್ಪಲಿಲ್ಲ. ಬದಲಿ ಜಮೀನನ್ನು ಕೊಡುವುದಾಗಿ ಹ|| ಡೆ|| ಕ|| ಸಾಹೇಬರವರು ಭರವಸೆ ಕೊಟ್ಟರೂ "ಗ್ರಾಮಸ್ಥರು ಒಪ್ಪುವುದಿಲ್ಲ" "ಪಂಚಮರಿಗೆ ಬೇಕು" "ಗೋಮಾಳಕೊಡುವುದಿಲ್ಲ" "ಈಚಲುಗಿಡಗಳಿಗೆ ಅನುಕೂಲ" ವೆಂಬೀ ಖಾಲಿ ತಕರಾರಿನಿಂದ ನಮ್ಮ ಬಾಯಿಗೆ ಮಣ್ಣುಹಾಕುತ್ತಿದ್ದಾರೆ. ನಾವು ಬರೆದುಕೊಂಡ ಎಷ್ಟೋ ಅರ್ಜಿಗಳು ಹೊರಕ್ಕೆ ಬಂದಿಲ್ಲ. ಇಲ್ಲ ಉಂಟೆಂಬ ಜವಾಬೂ ಇಲ್ಲ. ಆಫೀಸಿಗೆ ಹೋದರೆ ಗದರಿಕೊಳ್ಳುತ್ತಾರೆ. ಸಾಲುದುದಕ್ಕೆ ನಮಗೆ ಜಮೀನು ಕೊಡುವುದರ ಬದಲು ದರಖಾಸ್ತುದಾರರಿಗೆ ಅಂತರಂಗವಾಗಿ ರಿಕಾರ್ಡುಮಾಡಿ ಕೊಡುತ್ತಿದ್ದಾರೆ. ಡೆ|| ಕ|| ರವರಮಾತಿಗೂ ನಡೆಯುತ್ತಿರುವ ನಡವಳಿಕೆಗಳಿಗೂ ಸಂಬಂಧವೇ ಇಲ್ಲ. ಒಂದೆರಡುವರುಷಗಳಿಂದ ಜಮೀನುಕಳೆದುಕೊಂಡು, ಮಳೆಗಳಿಲ್ಲದೆ ಫಸಲು ಲುಕ್ಸಾನಾಗಿ ಕಂದಾಯಕ್ಕೂ ಗತಿಯಿಲ್ಲದೆ ರೈತರಿಂದ ರೈಲಿಗಾಗಿ ಹೋದ ಜಮೀನುಗಳಿಗೂ ಕಂದಾಯವನ್ನು ಜುಲುಂನಿಂದ ವಸೂಲುಮಾಡಿದರು. ಇದು ನ್ಯಾಯವೆ ? ಸಾಲದ್ದಕ್ಕೆ ಏನೂ ಅರಿಯದ ರೈತರ ಜಮೀನುಗಳಲ್ಲಿ ಡಿಕ್ಲೇರ್ ಆಗಿರುವ ಜಮೀನುಗಳಿಗಿಂತ ಹೆಚ್ಚಾಗಿ ಹಂಗಾಮಿ ಕೆಲಸಕ್ಕೆಂಬ ನೆಪದ ಮೇಲೆ ಜಮೀನುಗಳನ್ನು ತೆಗೆದುಕೊಂಡು ಗುಂಡಿಹಾಕಿದರು. ಅವುಗಳ ಕಂಪರ್ನೇಸನ್ ಪ್ರಸ್ತಾಪಮಾಡಿದರೆ ಕೇಳಿದಷ್ಟು ಹೇಳಿಕೊಡಿ, ಇಲ್ಲವಾದರೆ ನಿಮ್ಮ ದುಡ್ಡಿಗೆ ನಾವುಬೀಳುತ್ತೆವೆಂದು ಗುಮಾಸ್ತರು ಬೆದರಿಸುತ್ತಾರೆ. ಫಸಲು ಲುಕ್ಸಾನು ಕೊಡುವುದರಲ್ಲಿಯೂ ಬಹಳ ಲುಕ್ಸಾನು ಮಾಡಿರುತ್ತಾರೆ. ಅವಾರ್ಡು ಆಗಿದೆಯೋ ಇಲವೋ ಹಣಬರುತ್ತದೆಯೋ ಇಲ್ಲವೋ? ಎಂಬುದನ್ನು ನಮಗೆ ತಿಳಿಸುವವರೇ ಇಲ್ಲ. ನಾವು ಯಾರಲ್ಲಿ ಮೊರೆಯಿಡಬೇಕು ? ಸ್ಪೆಷಲ್ ಶೇಕದಾರರೊಬ್ಬರನ್ನು ಈ ಕೆಲಸಕ್ಕೆ ನೇಮಿಸಿರುತ್ತಾರೆ. ಇವರು ನಿಸ್ಪೃಹರೂ ನ್ಯಾಯಸ್ಥರೂ ಆಗಿರುವುದುದು ನಮಗೆಲ್ಲಾ ಸಂತೋಷವಾದರೂ ನಮ್ಮ ಜಮೀನುಗಳನ್ನು ನೋಡಿ ಅಳತೆಮಾಡಿಕೊಂಡು ಹೋಗಿ ತಿಂಗಳಾದರೂ ನಮಗೆ ಯಾವ ಪ್ರಯೋಜನವೂ ಆಗಿಲ್ಲ. ಅವರಾದರೂ ಹೊಸಜಮೀನುಗಳನ್ನು ಚುನಾವಣೆಮಾಡುವುದು, ರಿಕಾರ್ಡುಮಾಡುವುದುವಗೈರೆ ಎಲ್ಲಾ ಕೆಲಸಗಳನ್ನು ಮಾಡುವರೆಂದು ನಮಗೆ ಅಮಲ್ದಾರರು ತಿಳಿಯಪಡಿಸಿದರೂ ಅವರನ್ನು ವಿಚಾರಮಾಡಿದರೆ ನಿಮ್ಮ ಅರ್ಜಿಗಳು ನಮ್ಮಲ್ಲಿ ಬಂದಿಲ್ಲವೆಂದು ಹೇಳುತ್ತಾರೆ. ಹಾಗಾದರೆ ನಮ್ಮ ಅರ್ಜಿಗಳನ್ನು ಬಹುಶಃ ಸಬ್‌ಡಿವಿಜನ್ ಆಫೀಸ್‌ಪೆಟ್ಟಿಯು ತಿಂದಿರುವುದರಿಂದ ಅವುಗಳನ್ನು ಯಾರು ಹೊರಗೆ ತೆಗೆಯಬೇಕೆಂಬುದನ್ನು ಡೆ|| ಕ|| ರವರು ವಿಚಾರಮಾಡಲಿ. ಈಚೆಗೆ ಹುಟ್ಟಿರುವ ವರ್ತಮಾನದಿಂದ ಕೆಲವು ಅವಾರ್ಡುಗಳನ್ನು ಹಿಂದಿದ್ದ ಸಬ್‌ಡಿವಿಜನ್ ಆಫೀಸರು ಮಾಡಿರುವರೆಂದೂ ಅವರು ಹೊರಡುವ ಭರದಲ್ಲಿ ರೈತರ ಅಹವಾಲುಗಳನ್ನು ಸರಿಯಾಗಿ ಪರ್ಯಾಲೋಚಿಸಲಿಲ್ಲವೆಂದೂ, ಆಯಾ ಗ್ರಾಮದ ಸರಾಸರಿ ಕ್ರಯದಮೇಲೆ ಜಮೀನುಗಳಿಗೆ ಅವಾರ್ಡು ಮಾಡಿರುವರೆಂದೂ ತಿಳಿಯಬರುತ್ತದೆ. ಅವರೇ ರಿಜಿಸ್ಟ್ರೇಷನ್ ದಾಖಲೆ ನೋಡಿ ಸರಾಸರಿ ದರದಂತೆ ಕೊಡುವುದಾಗಿ ಅಪ್ಪಣೆ ಕೊಡಿಸಿದರು. ಇದು ಅನ್ಯಾಯವಲ್ಲವೆ ? ಎಕರೆಗೆ 25 ರೂಪಾಯಿಗಳು ಬಾಳುವ ಜಮೀನಿಗೂ 100 ರೂಪಾಯಿ ! ಎಕರೆಗೆ 250 ರೂಪಾಯಿ ಬಾಳುವ ಜಮೀನಿಗೂ 100 ರೂಪಾಯಿ !! ಈ ನ್ಯಾಯವನ್ನು ವಿಮರ್ಶೆಮಾಡುವವರು ಯಾರು ? ಅಲ್ಲದೆ ಬಾಗಾಯ್ತು ಜಮೀನಿಗೆ ಮರಗಳನ್ನೂ ಸೇರಿಸಿ ಒಂದೇಬೆಲೆ ಕೊಡುತ್ತಾರಂತೆ. ಇದು ನಿಜವಾದರೆ ರೈತರಪಾಡು ನಾಯಿಪಾಡೇ ಸರಿ. ಮರಗಳನ್ನು ಕಷ್ಟಪಟ್ಟು ಎಳಸಿ ಒಂದೇಪೆಟ್ಟಿಗೆ ಉರುಳಗೊಳಿಸಿ ಅವುಗಳನ್ನು ಬೆಳೆಸಿದ ಕಷ್ಟಕ್ಕೆ ಪ್ರತಿಫಲವೂ ಇಲ್ಲವೆಂದರೆ ರೈತನಿಗೆ ಇದಕ್ಕಿಂತ ಅನ್ಯಾಯವಾದ್ದು ಯಾವದೂ ಇಲ್ಲ. ಜಮೀನಿಗೆ ತಕ್ಕ ಪ್ರತಿಫಲವನ್ನು ಕೊಡದೆ ಗ್ರಾಮದ ಜಮೀನಿನ ದರದಂತೆ ಕೊಡುವುದು ಬಹಳ ಅನ್ಯಾಯವೆಂತಲೇ ಹೇಳುತ್ತೇನೆ. ಸರ್ಕಾರಕ್ಕೆ ಫಾಯಿದೆ ಮಾಡುವ ಉದ್ದೇಶವಿದ್ದರೆ ಹಾಗೆ ಮಾಡಬಹುದೇ ವಿನಃ ನ್ಯಾಯದಂತೆ ಹೀಗೆ ಮಾಡುವುದು ಸಾಧ್ಯವಿಲ್ಲ. ಹ|| ಡೆ|| ಕ|| ರವರು ರೈತರ ಕ್ಷೇಮಚಿಂತನೆಯನ್ನು ಬಯಸಿ ಅವರ ಗೋಳು ಸರ್ಕಾರದವರಿಗೂ ಮುಟ್ಟದಂತೆ ಏರ್ಪಾಡು ಮಾಡುವರಾಗಿ ನಂಬುತ್ತೇನೆ.

ಪ್ರಜಾಹಿತೈಷಿ.

೧೯೨೬ ನೆಯ ಇಸವಿ ಜುಲೈ ತಾ|| ೧೦ ರಿಂದ ೧೯೨೬ ನೆಯ ಇಸವಿ ಜುಲೈ ತಾ|| ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಆಷಾಢ ಶುದ್ಧ ಪಾಡ್ಯಮಿಯಿಂದ ಆಷಾಢ ಶುದ್ಧ ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ಮಾಸ
10	ಶನಿ	ಪಾಡ್ಯ	54-47	ಪುನ	38-77	27
11	[1] ಭಾನು	ಬಿದಿ	58-48	ಪುಷ್ಯ	43-41	28
12	[2] ಸೋಮ	ತದಿ	60	ಆಶ್ಲೇ	49-38	29
13	ಮಂಗಳ	ತದಿ	3-34	ಮಖಾ	56-7	30
14	ಬುಧ	ಚೌತಿ	8-33	ಪುಬ್ಬ	60	31
15	[3] ಗುರು	ಪಂಚ	13-35	ಪುಬ್ಬ	2-40	32
16	[4] ಶುಕ್ರ	ಷಷ್ಠಿ	18-9	ಉತ್ತ	9-1	1

(1) ಮೊಹರಂಪ್ರಾರಂಭ. (2) ಮಳೆನಕ್ಷತ್ರ-ಪುನರ್ವಸು ೩ ನೆಯಪಾದ. (3) ಅಮೃತಲಕ್ಷ್ಮೀವ್ರತಂ. (4) ಮಳೆನಕ್ಷತ್ರ-ಪುನರ್ವಸು ೪ ನೆಯಪಾದ.

ಮೈಸೂರು : ಶ್ರೀ. [illegible] ಮುದ್ರಿತವಾಗಿ ಪ್ರಕಾಶಿತವಾಯಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಾಭಿಗತೆರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾತಲಿತ ಸಾಧುಗ್ರಾಮ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜುಲೈ ತಾರೀಖು ೧೭ ನೆಯ ಶನಿವಾರ. [ಸಂಚಿಕೆ ೨೯

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯುಳ್ಳದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.



ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗ
ಇಂಫ್ಲುಯೆನ್ಜಾ	ಗಳನ್ನು ಗುಣಪಡಿಸುತ್ತವೆ.
ಪ್ಲೇಗುಜ್ವರ	27

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ವೈದ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—6] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೬—೦	೦—೧೩—೦
ಷಟ್ಸ್ಥಲ ಬ್ರಾಹ್ಮ	೧—೪—೦	೧—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೨—೦
[illegible]	೦—೬—೦	೦—[illegible]—೦
[illegible]	೦—೬—೦	೦—[illegible]—೦
[illegible]	೦—೩—೦	೦—೩—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂ... ಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿ... ಗಳಾಗಿ, ಯೋಗ್ಯವ ಕೊಟ್ಟಿರುವರು.—ಪಿನಸ ನಶ್ಯದ ಪುಡಿಯಿಂ... ಯಲ್ಲಿನ ವ್ಯಾಧಿಗಳು... ಲ್ಲಿ ಉಂಟಾತಿ, ಒಂಟಿ... ಗಳು, ಜಲರೋಗಗಳ... ವ್ಯಾಧಿಗಳು ಗತಕ್ಕ... ದೆ ಕಂಠಕ್ಕೆ ದೋಷ... ವ್ಯಾಧಿಗಳನ್ನೂ ಪರಿಹಾರ... ಶಕ್ತಿಯನ್ನೂ ಮೇಲ್ಪಟ್ಟ... ಮೂರು ಬಿ ಸ್ವಸ್ಥ ಪಡಿ... ಯಲ್ಲಿ ಒಂದು ಹೆಚ್ಚು ಮ... ದು. ಇದನ್ನು... ಗಿ ಉಪಯೋ...

(Registered Trade Mark)

...ಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನ... ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳ... ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ... ಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾ... ೦—♥—೦. ಖುದ್ದಿ ಒಂದಕ್ಕೆ ಕ್ರಯ ರೂ. ೦—♥—೦. ...ಜರ್ ೮ ಆಣೆ. ಡಜನ್ ೧೨ಕ್ಕೆ ಕ್ರಯ ರೂ. ೨—೮—೦. ವಿ. ...ಗಿ ತಿಳಿಯು...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ... ವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂತೆ ಕಂ... ಲಿಮಿಟೆಡ್,
ಪ್ರೋ. ಬಾ. ಹ... ಮದರಾಸು.

[50—39] ...& CO..

SIROMANY NARAYANACHA... BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟೆ, ಜರಿ... ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ...ಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥ ಜಾ... ನಾರ್ಮದಗಳು, ಹಿತ್ತಾಳೆಪಾತ್ರೆ ಮತ್ತು ಕೂರ್ಚಗಳು, ಸಾಲಿಗ್ರಾಮ... ದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ...ವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗ... ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾ...

ವಿಳಾಸ.—

ಶಿರೋಮಣಿ ನಾರಾಯಣಾಚಾರ್ಯ... 1
..., ಕಾಶೀಕ್ಷೇತ್ರ

ನೋಟೀಸ್.

ದೊಡ್ಡಬಳ್ಳಾಪುರದ ಫಮತಿ ತಿಪ್ಪೆಗುಂಡಿ ಗುರು... ಫಮತಿ ರುದ್ರಪ್ಪನವರ ಕುಟುಂಬ ಬಸಮ್ಮನು ಜಾ... ಸುವ ಸ್ಥಿತಿಯಲ್ಲಿರುವುದನ್ನು ತಿಳಿದು 1. ಶೀತಕಲ್ಲು... ಪುಟ್ಟಪ್ಪ, 2. ಹಡಚಿಯಲ್ಲಿರುವ ಚಿಕ್ಕಳ್ಳಿ ಶಿದ್ಧಲಿಂ... ಅವನ ತಮ್ಮ ಶಿದ್ಧಪ್ಪ, 4. ಬಸಮ್ಮನ ತಾಯಿ ಶಿದ್ಧ... ದವರು ಮತ್ತು ಇನ್ನೂ ಕೆಲವು ಪುಂಡುಗಾರರು... ಉತ್ತರವಾದಿಸುದಾರಳಾದ ಈ ಕೆಳಗೆ ರುಜುಮಾಡಿರುವ... ಹಡೆಕೆಂಬ ದುರುದ್ದೇಶದಿಂದ ಫಮತಿ ರುದ್ರಪ್ಪನ [illegible] ಖುಲ್ ಮಾಡುವುದರಲ್ಲಿ ಉದ್ಯುಕ್ತರಾಗಿದ್ದಾರೆ. ಹಾಗೆ... ಸದರಿ ಬಸಮ್ಮನಿಗೆ ಯಾವ ಅಧಿಕಾರವು ಮತ್ತು ಅವ... ದಿಲ್ಲ. ಹಾಗೆ [illegible] ದಾವ, ಕ್ರಯ, [illegible] ಇತ್ಯಾದಿಗಳನ್ನು ವಾರಸ್‌ದಾರಳಾದ ನನ್ನ ಅನುಮತಿಯಿಲ್ಲದೆ ... ಮ್ಮಿಂದ [illegible] ಹಾಗಿ ಈ ಮೂಲಕ ಎಚ್ಚರಿಸುತ್ತೇನೆ.

...ಶಿದ್ಧಪ್ಪನವರ ಮಗ ...ಪಟ್ಟೆಣದಿಂದ ವರ್ತ ...ದೇವಣ್ಣನ ಮಗ ...ಪ್ಪ, 3. ಮತ್ತು ...ಂಗನ್ನ, ಮೊದಲಾ ...ಕಾಗಿ [illegible] ...ನತಿಗೆ ಮೋಸಮಾ ...ರ ಆಸ್ತಿಗಳನ್ನು ...ಭಾರ ಮಾಡಲು ...ಇರುವ ...ವ, ಭೋಗ್ಯ ...[illegible]

[illegible]

[illegible]

Prize Essay on "HISTORY OF THE LINGAYE..."

(From the Mysore Gazette, July 8
UNIVERSITY OF MYS...
Notification No. 17444, dated ...unded ...ushana
THE TABARD MEMORI... ...A., M.B.E.,

A gold medal of th... University Coun- by the friends and a... following subject:— Rev. Father ... M.R.A. *of the Lingayets.*"

...he medal is open to graduates of not more ...ve years' standing of any Indian University.

3. The essay should be forwarded to the ...gistrar, Mysore University, Mysore, so as to reach him on or before the 30th June 1927.

4. Each candidate for the essay should state generally in an introductory note and specifically in footnotes, the extent to which he has relied upon different sources of information and the portion which he claims as his original work.

5. The essay should have a motto instead of the writer's name and shall be accompanied by a sealed cover containing the name of the candidate, the year in which he passed the Highest University Examinations, name of the University, his Post Office address and a declaration that the essay sent in by him is his own *bona fide* composition.

6. The essay must be the result of the personal investigations of the author and must contain clear evidence of independent and original research. Essays consisting only of criticisms, compilations or matter discoverable in or deducible from the writings of others will be ineligible for the prize, unless accompanied by the results of the author's independent research.

7. Each candidate must forward two copies of his essay together with a statement as to when and where the work was carried out. If any portion of the work was done in collaboration or under guidance, the nature and extent of such collaboration or guidance must be clearly stated.

V. SUBRAHMANYA IYER,
Registrar.

ಬಡವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವವಿದ್ಯಾರ್ಥಿಗಳು ಜುಲೈ ತಾ|| 31 ರ ಒಳಗಾಗಿ ಸೆಕ್ರೆಟರಿಯವರಿಗೆ ತಲುಪುವಂತೆ ಗೊತ್ತಾದ ಪ್ರಿಂಟ್‌ಫಾರಮ್ಮಿನಲ್ಲಿ ಅರ್ಜಿ ಬರೆದುಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಅರ್ಧಾಣೆ ಸ್ಟಾಂಪು ಕಳುಹಿಸಿ ಅಡ್ರೆಸ್ಸನ್ನು ತಿಳಿಸಿದಲ್ಲಿ ಕಳುಹಿಸಲ್ಪಡುವವು. ಸರ್ಟಿಫಿಕೇಟುಗಳು ಇಲ್ಲದೆಯು ಮತ್ತು ವಾಯಿದೆ ಮೀರಿಯು ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

G. Paramasiviah,
Secretary.

M. Nagappa,
Asst. Secretary.

ವೀರಶೈವಗ್ರಂಥಕರ್ತರಿಗೆ ಬಹುಮಾನ.

ಈ ಕೆಳಗೆ ವಿವರಿಸಿದ ವಿಷಯಗಳಲ್ಲೊಂದರಮೇಲೆ ಒಂದು ಪ್ರಬಂಧವನ್ನು ಅರ್ಧಫುಲ್ಸ್ಕೇಪ್ 20 ರಿಂದ 25 ಪುಟಗಳವರೆಗೆ ಬರೆದು ಇದೇ ಬರುವ [illegible] ಉತ್ತಮವಾದ [illegible] 50 ರೂಪಾಯಿಗಳು ಬಹುಮಾನವಾಗಿ [illegible] —(1) [illegible] (2) [illegible] (3) [illegible] (4) [illegible]

[illegible]

ಆದರೆ ಕೊಂಚಕಾಲದಲ್ಲಿ ಬಿಟ್ಟುಬಿಡುತ್ತೇವೆಂದು ವಾಗ್ದಾನಮಾಡಿದರು. ಇದರಲ್ಲಿ ದೊಡ್ಡಿಂದುವಾಡಿ ಕುಂಬಾರ ಪುಟ್ಟಸೆಟ್ಟಿ, ಬೆಳತೂರು ಮಾದಸೆಟ್ಟಿ ಮುಂತಾದವರುಗಳು ಇನ್ನೊಂದುಸಾರಿ ಸಭೆಸೇರುವದರೊಳಗೆ ಯಾರು ಮಾಂಸಾಹಾರವರ್ಜ್ಯಮಾಡುವದಿಲ್ಲವೊ ಅವರನ್ನು ತಮ್ಮ ಜಾತಿಯಿಂದ ತೆಗೆದುಬಿಡುವೆವೆಂಬದಾಗಿ ಹೇಳಿ ಸಭೆಮುಕ್ತಾಯಮಾಡಿದರು.

ಓರ್ವ ಪ್ರೇಕ್ಷಕ.

ನಂಜನಗೂಡಿನಲ್ಲಿ ವೀರಶೈವರ ಧರ್ಮಸತ್ರ.

ಮಹನೀಯರಲ್ಲಿ ವಿಜ್ಞಾಪನೆ.

ಸ್ವಾಮಿ, ದಕ್ಷಿಣಕಾಶಿಯಾದ ನಂಜನಗೂಡು ಕ್ಷೇತ್ರದಲ್ಲಿ ಕೆಲವು ವೀರಶೈವಮಹನೀಯರು ಭಾರೀ ಲಾಗೋಡಿನಿಂದ ಒಂದು ಮಠವನ್ನು ಕಟ್ಟಿಸಿ ಅದಕ್ಕೆ ಶ್ರೀ ಮುರಘರಾಜೇಂದ್ರಮಠವೆಂದು ನಾಮಕರಣಮಾಡಿದ್ದರು. ಅದರಮೇಲೆ (1000) ಒಂದುಸಾವಿರರೂಪಾಯಿ ಋಣವಿರುತ್ತೆ. ಈ ಮಠವು ಕಳೆದ ಪ್ರವಾಹದಲ್ಲಿ ಸಂಪೂರ್ಣವಾಗಿ ನಾಶವಾಯಿತು. ಈ ಊರಿನಲ್ಲಿ ವೀರಶೈವರ ಸಂಖ್ಯೆಯು ಬಹಳ ಕಡಮೆ ಮತ್ತು ಶ್ರೀಮಂತರು ಇಲ್ಲವೇ ಇಲ್ಲ. ಈ ಮಠವನ್ನು ಮುಂದಾಳಾಗಿ ನಿಂತು ಮಾಡಿಸಿದ ಮಹನೀಯರಲ್ಲಿ ಕೆಲವರು ಮೇಲ್ಕಂಡ ಪ್ರವಾಹದಲ್ಲಿ ತಮ್ಮಗಳ ಮನೆಯು ಸಂಪೂರ್ಣ ನಾಶವಾದ್ದರಿಂದ ತಮ್ಮಗಳ ವಸತೀ ಏರ್ಪಾಡುಮಾಡುವದೇ ಕಷ್ಟವಾಗಿ ಮಠದ ಯೋಚನೆಯೇ ಬಿಟ್ಟಿದ್ದಾರೆ. ಈ ಮಠವಿದ್ದಾಗ್ಯೆ ಕ್ಷೇತ್ರಕ್ಕೆ ಬಂದ ವೀರಶೈವ ಭಕ್ತಮಹೇಶ್ವರರೂ ಇತರರೂ ಇಳಿದುಕೊಳ್ಳುತ್ತಾಯಿದ್ದದ್ದು ಅನೇಕರಿಗೆ ವೇದ್ಯವಿರಬಹುದು. ಆದಪ್ರಯುಕ್ತ ವೀರಶೈವಮಹನೀಯರು ಯಾರಾದರು ಈ ಧರ್ಮಕೆಲಸವನ್ನು ಕೈಗೊಂಡು ವೀರಶೈವಯಾತ್ರಿಕರಿಗೆ ಅತ್ಯುಪಯುಕ್ತವಾಗಿದ್ದ ಈ ಮಠವನ್ನು ಪುನಹ ನಿರ್ಮಾಣಮಾಡಿಸಿ ಪ್ರಾರಂಭಿಸಿದವರ ಇಷ್ಟಾರ್ಥಸಿದ್ಧಿಗೂ ಪುಣ್ಯಕ್ಕೂ ಭಾಗಿಗಳಾಗಬೇಕೆಂತ ಕೋರುವ,

ದೈವಭಕ್ತ.

ಶ್ರೀ ಜಗದಾಚಾರ್ಯರ ಸನ್ಮಾನ.

ಶ್ರೀಮದ್ದಕ್ಷಿಣಕಾಶೀ ನಿಜಸಿಂಹಾಸನಾಧೀಶ ಜಗದಾಚಾರ್ಯಸ್ವಾಮಿ ವಿರೂಪಾಕ್ಷಒಡೆಯರವರ ಸವಾರಿಯನ್ನು ಬಳ್ಳಾರಿಜಿಲ್ಲಾ ಹರಪನಹಳ್ಳಿ ತಾಲ್ಲೂಕು ಹರವಿ, ಹಲವಾಗಲಗ್ರಾಮದ ಮಠಸ್ಥರು, ಗೌಡರು, ಬಣಕಾರು ಮೊದಲಾದ ವೀರಶೈವಜನಾಂಗದವರು ಹಾಗೂ ಅಂಬಿಗ ಮೊದಲಾದ ಇತರ ಸಮಸ್ತಜಾತಿಯ ಜನರು ಕೂಡಿ ತಮ್ಮ ತಮ್ಮ ಗ್ರಾಮಗಳಿಗೆ ಹೋದಕಿಂಗಳಲ್ಲಿ ಸಕಲ ಬಿರುದಾವಳಿಗಳ ಸಮೇತ ಅತಿವೈಭವದಿಂದ ಅಡ್ಡಪಲ್ಲಕ್ಕಿ ಉತ್ಸವದೊಡನೆ ಬಿಜಯಂಗೈಸಿಕೊಂಡು ಸತ್ಕರಿಸಿದರು. ಈ ಉತ್ಸವಗಳಲ್ಲಿ ಪೊಲೀಸ ಬಂದೋಬಸ್ತು ಇಡಲ್ಪಟ್ಟಿದ್ದಿತು. ಇದೇ ಸಮಯಕ್ಕೆ ಹಲವಾಗಲದಲ್ಲಿ ಬಸವಜಯಂತಿಯು ನಡೆದದ್ದರಿಂದ ಶ್ರೀಜಗದಾಚಾರ್ಯಸ್ವಾಮಿ ಒಡೆಯರವರು, ಉತ್ಸವಸಮಾರಂಭಕ್ಕಾಗಿ ಬಂದು ಸನ್ನಿಧಿಯಲ್ಲಿ ನೆರೆದಿದ್ದ ಸಮಸ್ತ ಜನಾಂಗಕ್ಕೂ ಶ್ರೀ ಬಸವೇಶ್ವರನ ವಿಷಯವಾಗಿ ಹೇಳಿದ್ದೇನಂದರೆ- ಮಹಾಪುಣ್ಯಪುರುಷನಾದ ಶ್ರೀ ಬಸವೇಶ್ವರನ ಜನ್ಮದಿನವು ಈ ಹೊತ್ತು ಒದಗಿರುವದು ನಮ್ಮೆಲ್ಲರಿಗೆ ಪರಮಸಂತೋಷಪ್ರದವಾಗಿರುವದು. ಯಾಕೆಂದರೆ, ಆ ಮಹಿಮನು ಧಾರ್ಮಿಕದೃಷ್ಟಿಯಿಂದ ವೀರಶೈವರಿಗೂ, ವೀರಶೈವಮತಾನುಯಾಯಿಗಳಾದ ಇತರ ಮತಗಳಿಗೂ ಪರಮಉಪಕಾರಿಯಾಗಿರುವನಲ್ಲದೆ ದೇಶದ ಹಿತದೃಷ್ಟಿಯಿಂದ ಬ್ರಾಹ್ಮಣಾದಿ ಸಮಸ್ತ ಭಾರತೀಯಜನಾಂಗಕ್ಕೆ ಆಹ್ಲಾದರನೂ, ಪರಮಪೂಜ್ಯನೂ ಆಗಿದ್ದು ದೇಶಾಭಿಮಾನದ ದೇವಮೂರ್ತಿಯಾಗಿರುವನು. ಇನ್ನು ರಾಜನೀತಿದೃಷ್ಟಿಯಿಂದ ಎಲ್ಲಾ ರಾಜ್ಯಾಧಿಕಾರಿಗಳಿಗೂ ರಾಜರಿಗೂ ರಾಜನೀತಿಬೋಧಕನೂ, ಗ್ರಾಹ್ಯನೂ, ಉದಾಹರಣಪ್ರಾಯನೂ ಆಗಿರುವನು. ಭಾರತೀಯರಲ್ಲಿ ಇಂಥಾ ಪುಣ್ಯಾತ್ಮನಾದ ಬಸವೇಶ್ವರನನ್ನು ಅಭಿಮಾನಿಸದೆ ಇರುವನಂಥಾ ಪಾಪಿಯೇ ಜಗತ್ತಿನಲ್ಲಿಲ್ಲವೆಂದು ಹೇಳಬಹುದು. ಎಂಬಿವೇ ಮೊದಲಾದ ಬಹುಸ್ವಾರಸವಾದ ಬಸವಚರಿತ್ರೆಯನ್ನು ಬೋಧಿಸಿದುದನ್ನು ಕೇಳಿ ಎಲ್ಲಾ ಜನಾಂಗದವರೂ ಶ್ರೀಜಗದಾಚಾರ್ಯಒಡೆಯರನ್ನು ಕೊಂಡಾಡಿದರು. ಓರ್ವ ಪ್ರೇಕ್ಷಕ.

ಮೇಲುಕೋಟೆ.

ನಮ್ಮ ದಯಾಳು ಪ್ರಭುಗಳಾದ ಶ್ರೀಮನ್ಮಹಾರಾಜರವರ 43 ನೇ ವರ್ಷ ವರ್ಧಂತಿಯುತ್ಸವವು ಪದ್ಧತಿಯಂತೆ ಈ ಊರು ಮಿಡ್ಲ್‌ಸ್ಕೂಲಿನಲ್ಲಿ ಬಹಳ ವಿಜ್ರಂಭಣೆಯಿಂದ ಜರುಗಿಸಲ್ಪಟ್ಟಿತು. ಈ ವರ್ಧಂತಿಮಹೋತ್ಸವದ ಕಾರ್ಯಕ್ರಮವನ್ನು ಕುರಿತು ಯೋಚಿಸಲು ಮಿಡ್ಲ್‌ಸ್ಕೂಲಿನಲ್ಲಿ ಮಿಡ್ಲ್ ಮತ್ತು ಪ್ರೈಮರಿಸ್ಕೂಲುಗಳ ಉಪಾಧ್ಯಾಯರುಗಳ ಸಭೆಯು ಈ ಮೊದಲೇ ಸೇರಿತ್ತಂತೆ. ಪದ್ಧತಿಯುಪ್ರಕಾರ ಈಸಾರಿಯೂ ಶ್ರೀಮನ್ಮಹಾರಾಜರವರ ಚಿತ್ರಪಟದ ಉತ್ಸವವನ್ನು ನಡೆಸುವ ವಿಷಯದಲ್ಲಿ ಬಹಳ ಚರ್ಚೆನಡೆಯಿತಂತೆ. ಈ ಊರಲ್ಲಿ ಶ್ರೀಯವರ ದೇವಸ್ಥಾನದ ಮೆರೆಯುವವಿಗ್ರಹದ ಉತ್ಸವವಿನಹ ಇತರ ಉತ್ಸವಗಳನ್ನು ಮಾಡಕೂಡದೆಂದು ಬಹಳ ಹಾವಳಿಮಾಡುವ ಪಂಗಡಕ್ಕೆ ಸೇರಿದ ಉಪಾಧ್ಯಾಯರುಗಳಲ್ಲಿ ಅಧಿಕಸಂಖ್ಯೆಯವರು ಈ ಯುತ್ಸವವನ್ನು ಮಾಡಲೇಕೂಡದೆಂದು ಪ್ರತಿಭಟಿಸಿದರಂತೆ. ಅಲ್ಪಸಂಖ್ಯೆಯವರು ಉತ್ಸವಕ್ಕೆ ಸಮ್ಮತಿಯನ್ನಿತ್ತರಂತೆ. ಆದರೆ ಸಭಾಧ್ಯಕ್ಷರಾಗಿದ್ದ ಮಿಡ್ಲ್‌ಸ್ಕೂಲ್ ಹೆಡ್ಮಾಸ್ಟರವರು ಈ ಅಧಿಕಸಂಖ್ಯೆಯವರ ಗೊಡ್ಡುಬೆದರಿಕೆಗೆ ಹೆದರದೆ ಸರಿಯಾದ ಪೊಲೀಸ್ ಕುಮ್ಮಕ್ಕನ್ನು ತರಿಸಿಕೊಂಡು ಉತ್ಸವವನ್ನು ಬಾಜಾಬಜಂತ್ರಿಯೇ ಮೊದಲಾದ ರಾಜಮರ್ಯಾದೆಗಳಿಂದ ಮುಖ್ಯವಾದ ಬೀದಿಗಳಲ್ಲೆಲ್ಲಾ ಮಾಡಿಯೇಬಿಟ್ಟರು. ಮಹಾರಾಜರವರ ಉಪ್ಪುತಿಂದು ಅವರಿಗೆರಡುಬಗೆಯುವ ಈ ಅಸಮ್ಮತಿ ಪಕ್ಷಕ್ಕೆ ಸೇರಿದ ಶಾಲಾಬೋಧಕರ ರಾಜಭಕ್ತಿ ವಿಶ್ವಾಸಗಳನ್ನು ಏನು ಹೇಳೋಣ! ಇವರಿಂದ ಶಿಕ್ಷೆಯನ್ನು ಹೊಂದುವ ವಿದ್ಯಾರ್ಥಿಗಳು ಇನ್ನೆಂಥಾ ರಾಜಭಕ್ತಿಯುತರಾದಾರು? ಈ ಉತ್ಸವದ ಜತೆಯಲ್ಲಿ ಈ ಊರಿನ ರೆವಿನ್ಯೂ, ಮುಜರಾಯಿ, ಫಾರೆಸ್ಟ್, ಮೆಡಿಕಲ್ ಮೊದಲಾದ ಇಲಾಖೆಗಳ ಮೊಖ್ತೇಸರರು ವಿನಹ ಆ ಇಲಾಖೆಗಳ ಇತರ ನೌಕರರು ಸೇರಿರಲಿಲ್ಲ. ಅಸಮ್ಮತಿ ಪಕ್ಷದವರಂತು ಒಬ್ಬರೂ ಬಂದಿರಲಿಲ್ಲ. ಮನೆಬಾಗಿಲುಗಳಲ್ಲಿ ಕುಳಿತಿದ್ದ ಈ ಪಕ್ಷದ ಒಬ್ಬೊಬ್ಬರು ಈ ಉತ್ಸವ ಬಂದಾಗ ಏಳಲೂ ಇಲ್ಲ. ಉತ್ಸವವು ಶ್ರೀಯವರ ದೇವಸ್ಥಾನದ ಬಾಗಲಿಗೆ ಬಿಜಮಾಡಿದಾಗ ದೇವಸ್ಥಾನದಲ್ಲಿ ದೀಪಗಳನ್ನು ಹಚ್ಚಿರಲಿಲ್ಲ. ದೇವರತೆರೆಯನ್ನು ತೆಗೆದು ದೇವರಿಗೆ ಮಂಗಳಾರತಿವಗೈರೇ ಪೂಜಾದಿಗಳನ್ನು ನಡೆಸದೆ ಮೊದಲಿನಂತೆ ಶ್ರೀಮನ್ಮಹಾರಾಜರವರ ಚಿತ್ರಪಟಕ್ಕೆ ಸರಿಯಾದ ರಾಜಮರ್ಯಾದೆಯನ್ನು ಮಾಡಲಿಲ್ಲ. ಸಮ್ಮತಿಪಂಗಡಗಳ ಆಬಾಲವೃದ್ಧರೆಲ್ಲರೂ ಭಜನೆ ಮೊದಲಾದ ಮಂಗಳವಾದ್ಯಗಳೊಡನೆ ಆ ದಿವಸದ ಕಾರ್ಯಕ್ರಮದಲ್ಲೆಲ್ಲಾ ಭಾಗಿಗಳಾಗಿದ್ದು ಸ್ಕೂಲಿನಿಂದ ಉತ್ಸವದಜೊತೆಯಲ್ಲಿ ಹೊರಟು ಕೊನೆಯವರೆಗೂ ಹಾಜರಿದ್ದು ಉತ್ಸವವನ್ನು ಸ್ಕೂಲಿಗೆ ಬಿಜಯಮಾಡಿಸಿ ಜಯಘೋಷದಿಂದ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ತಮ್ಮತಮ್ಮ ಗೃಹಗಳಿಗೆ ತೆರಳಿದರು. ಅಸಮ್ಮತಿ ಪಕ್ಷದವರ ಈ ವರ್ತನವು ನಮ್ಮ ಘನಸರ್ಕಾರದವರ ದೃಷ್ಟಿಗೆ ಬಿದ್ದು ಸಮ್ಮತಿಪಕ್ಷದವರ ರಾಜಭಕ್ತಿ ವಿಶ್ವಾಸಗಳಿಗೆ [illegible] ಎಂದು ಪ್ರಾರ್ಥಿಸುವ, [illegible].

ಬೆಂಗಳೂರು ಸಂಸ್ಕೃತಕಾಲೇಜು, ಮತ್ತು ವೀರಶೈವರು.

ದ್ವೈತಾದ್ವೈತ ವಿಶಿಷ್ಟಾದ್ವೈತಮತಗಳಂತೆ ವೀರಶೈವಮತವೂ ವೈದಿಕ ಮತಗಳಲ್ಲಿ ಒಂದಾಗಿರುತ್ತದೆ. ಈ ಮತಕ್ಕೆ ಸಂಸ್ಕೃತವೇ ಮೂಲಭಾಷೆಯಾಗಿರುವುದು. ಪೂರ್ವದ ಮಹನೀಯರುಗಳು ನಮ್ಮ ಮತದ ಭಾಷ್ಯ ಮತ್ತು ಇತರ ಧರ್ಮಗ್ರಂಥಗಳನ್ನು ಅನೇಕಾನೇಕವಾಗಿ ರಚಿಸಿ, ಕೀರ್ತಿವಂತರಾಗಿರುತ್ತಾರೆ. ಈ ಗ್ರಂಥಗಳನ್ನು ನೋಡಿದರೆ ಪೂರ್ವದಲ್ಲಿ ವೀರಶೈವಮತವು ವಿದ್ಯೆಯಲ್ಲಿ ಎಷ್ಟು ಅಭಿವೃದ್ಧಿಸ್ಥಿತಿಯಲ್ಲಿ ಇತ್ತೆಂಬುದು ಗೊತ್ತಾಗುತ್ತದೆ. ಇಂಥಾ ಗ್ರಂಥಗಳನ್ನು ರಚಿಸಬೇಕಾಗಿದ್ದರೆ ನಮ್ಮಲ್ಲಿ ವೇದವೇದಾಂಗಪಾರಂಗತರಾದ ವಿದ್ವಾಂಸರು ಎಷ್ಟು ಮಂದಿ ಇದ್ದರೆಂದು ವಾಚಕರೇ ಊಹಿಸಬಹುದು. ಪೂರ್ವದಲ್ಲಿದ್ದಂತೆ ನಮ್ಮ ಸಮಾಜದಲ್ಲಿ ಪಂಡಿತರು ಈಗ ಒಬ್ಬಿಬ್ಬರು ಸಹ ಸಿಕ್ಕುವುದು ಅತಿಪ್ರಯಾಸವಾಗಿದೆ. ನಮ್ಮ ಮೈಸೂರು ದೇಶದಲ್ಲಿಯಂತೂ ಅವಿರಳ. ಈ ವಿಧವಾದ ನ್ಯೂನತೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಕಳೆದ ಇಪ್ಪತ್ತೈದುವರ್ಷಗಳಿಂದಲೂ ನಮ್ಮ ಮತದ ಮುಂದಾಳುಗಳು ಪ್ರಜಾಪ್ರತಿನಿಧಿಸಭೆಯಲ್ಲಿ ಇತರರು ತುಚ್ಛವಾದ ಮಾತುಗಳನ್ನಾಡಿದರೂ ಮತಾಭಿಮಾನದಿಂದ ಸಹಿಸಿಕೊಂಡು ಸಂಸ್ಕೃತಕಾಲೇಜಿನ ಪ್ರವೇಶಕ್ಕಾಗಿ ಹೋರಾಡಿದರು. ಇದನ್ನು ಪ್ರಭುತ್ವದವರು ತಮ್ಮ ವಿಶಾಲವಾದ ದೃಷ್ಟಿಯಿಂದ ಪರಾಂಬರಿಸಿ, ಸರ್ವರಿಗೂ ಬೆಂಗಳೂರು ಕಾಲೇಜಿನಲ್ಲಿ ಸಂಸ್ಕೃತವಿದ್ಯಾಭ್ಯಾಸಕ್ಕೆ ಅವಕಾಶವನ್ನೊದಗಿಸಿಕೊಟ್ಟು ಎರಡುವರ್ಷಗಳಾದುವು. ಈಗ ನಮ್ಮ ವೀರಶೈವರು ತಮ್ಮವರಿಗೆ ಯಾವವಿಧವಾದ ಪ್ರೋತ್ಸಾಹವನ್ನೂ ಕೊಡದೆ ನಿದ್ರಿಸುತ್ತಿದ್ದಾರೆ. ಈ ಪಾಠಶಾಲೆಯು ಅಭಿವೃದ್ಧಿಸ್ಥಿತಿಗೆ ಬರಲೆಂದು 600-700 ರೂ. ಗಳನ್ನು ಈ ಪಾಠಶಾಲೆಗಾಗಿ ಪ್ರತಿಂಗಳಲ್ಲಿಯೂ ನಮ್ಮ ದಯಾಳು ಸರ್ಕಾರದವರು ಖರ್ಚುಮಾಡುತ್ತ ಪ್ರೋತ್ಸಾಹಿಸುತ್ತಿದ್ದಾರೆ. ಈ ಸಂಸ್ಕೃತಕಾಲೇಜಿನಲ್ಲಿ ವಿದ್ಯಾರ್ಥಿಗಳು, ತರ್ಕ, ವ್ಯಾಕರಣ ಮುಂತಾದ ಯಾವ ಶಾಸ್ತ್ರಗಳನ್ನಾದರೂ ಅಭ್ಯಾಸಮಾಡಬಹುದು. ಇಂಥಾ ಸಮಯದಲ್ಲಿ ವೀರಶೈವರು ಸುಮ್ಮನೆ ಕುಳಿತಿರುವುದು ಬಹಳ ವ್ಯಸನತರವಾಗಿದೆ. ಈಗ ಈ ಪಾಠಶಾಲೆಯಲ್ಲಿ ವೀರಶೈವವಿದ್ಯಾರ್ಥಿಗಳು 14-15 ಜನರು ಮಾತ್ರ ಇರುತ್ತಾರೆ. ಇವರುಗಳಲ್ಲಿ ಪರಸ್ಥಳದವರು ಕೆಲವರಿದ್ದಾರೆ. ಇವರಲ್ಲಿ 7-8 ಜನರಿಗೆ ಮಾತ್ರ ತೋಟದಪ್ಪನವರ ಸತ್ರದಲ್ಲಿ ಊಟಕ್ಕೆ ಅವಕಾಶಕೊಡಲ್ಪಟ್ಟಿದೆ. ಇಂಗ್ಲಿಷ್ ವಿದ್ಯಾರ್ಥಿಗಳಿಗಾದರೊ 50-60 ಜನಗಳಿಗೆ ಕೊಡಲ್ಪಟ್ಟಿದೆ. ಇದನ್ನು ನೋಡಿದರೆ ಸಂಸ್ಕೃತವನ್ನು ಬಹಳವಾಗಿ ತಿರಸ್ಕರಿಸುತ್ತಾರೆಂದು ವ್ಯಕ್ತವಾಗುತ್ತದೆ. ಆದ್ದರಿಂದ ವೀರಶೈವ ಮಹಾಜನಗಳು ಈ ವಿಷಯದಲ್ಲಿ ಬಹಳ ಶ್ರದ್ಧೆಯನ್ನು ವಹಿಸಿ, ಈಗ ನಡೆಯುವ ವೀರಶೈವವಿದ್ಯಾಭಿವೃದ್ಧಿಫಂಡಿನ ಮೀಟಿಂಗಿನಲ್ಲಿ ಈ ವಿಷಯವನ್ನೇ ಮುಖ್ಯ ವಿಷಯವನ್ನಾಗಿ ಇಟ್ಟುಕೊಂಡು ಮೇಲ್ಕಂಡ ಚಾಮರಾಜೇಂದ್ರ ಸಂಸ್ಕೃತಕಾಲೇಜಿಗೆ ಹೆಚ್ಚಾಗಿ ವಿದ್ಯಾರ್ಥಿಗಳನ್ನು ಒದಗಿಸುವ ಉಪಾಯವನ್ನು ಪರ್ಯಾಲೋಚಿಸಿ ಮತಕ್ಕೆ ಒದಗಿರುವ ದೊಡ್ಡ ನ್ಯೂನತೆಯನ್ನು ಪರಿಹರಿಸಿ, ಸಮಾಜಾಭಿಮಾನವನ್ನು ವ್ಯಕ್ತಗೊಳಿಸುವರೆಂದು ನಂಬಿದ್ದೇನೆ.

ಓರ್ವ ಸಂಸ್ಕೃತವಿದ್ಯಾಭಿಮಾನಿ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ.

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಜಿ. ಬಿ. ಇ. ಯವರ ವರ್ಧಂತ್ಯುತ್ಸವವು ದಾವಣಗೇರಿಯ ಅನೇಕ ಸ್ಥಳಗಳಲ್ಲಿ ವಿಜೃಂಭಣೆಯಿಂದ ನೆರವೇರಿತು. ಆ ದಿವಸ ಪ್ರಾತಃಕಾಲ 10 ಘಂಟೆಗೆ ಪ್ರಾಣಿದಯಾಜ್ಞಾನಪ್ರಸಾರಕಸಂಘದವರ ವತಿಯಿಂದ ಒಂದು ಸಭೆಯು ಸಾವಳಗಿ ನಾಗಪ್ಪನವರ ಥಿಯೇಟರಿನಲ್ಲಿ ಸಂಭಾಧ್ಯಕ್ಷರಾದ ಮ|| ದೇವೇಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸಭೆಗೆ ಸಬ್ ಡಿವಿಜನ್ ಸಾಹೇಬರೂ, ಅಮಲ್ದಾರರೂ, ಪೊಲೀಸ್ ಇನ್ಸ್ಪೆಕ್ಟರರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ವಕೀಲ್ ಮಂಡಲಿಯವರೂ ಊರಿನ ಪ್ರಮುಖರೂ ದಯೆಮಾಡಿಸಿದ್ದರು. ಶ್ರೀಮನ್ಮಹಾರಾಜರವರ ವರ್ಧಂತಿಯ ಸುದಿವಸದಲ್ಲಿ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವ ಮತ್ತು ಬಡಜನಗಳಿಗೆ ಒಂದು ಸ್ವತಂತ್ರ ಉದ್ಯೋಗವನ್ನು ಕಲ್ಪಿಸುವಂತ ರಾಟೆ ಮತ್ತು ಕೈನೂಲಿನ ಬಟ್ಟೆಯ ಪ್ರಚಾರಮಾಡುವ ವಿಷಯವನ್ನು ಆಲೋಚಿಸಲಿಕ್ಕಾಗಿಯೇ ಸಭೆಯು ಸೇರಲ್ಪಟ್ಟಿತ್ತು. ಮ|| ಶಿರೂರು ಲಕ್ಷ್ಮಣರಾಯರು ಮಹಾತ್ಮಗಾಂಧಿಯವರು ಹೊರಡಿಸುವ "ಎಂಗ್ ಇಂಡಿಯಾ" ಪತ್ರಿಕೆಯಲ್ಲಿ ಖಾದಿ ಬಗ್ಗೆ ಬರೆದಿದ್ದ ಲೇಖನವನ್ನು ಓದಿದರು. ಅದನ್ನು ಮ|| ವಕೀಲ್ ಸೀತಾರಾಮಯ್ಯಂಗಾರ್‌ರವರು ಕನ್ನಡದಲ್ಲಿ ಹೇಳಿದ ತರುವಾಯ ಮ|| ಆನೆಕೊಂಡದ ಮುಪ್ಪಣ್ಣನವರು ಖಾದಿಯು ಪೂರ್ವದಲ್ಲಿ ನಮ್ಮ ಭಾರತೀಯರ ಕಸಬುಗಳಲ್ಲಿ ಒಂದಾಗಿದ್ದು ಪರದೇಶದವರು ಸಹ ಈ ದೇಶದ ಖಾದಿಯನ್ನು ಧರಿಸುತ್ತಿದ್ದರು. ಆದರೆ ಕ್ರಮೇಣ ಮಿಲ್ಲಿನ ಬಟ್ಟೆಯ ಉಪಯೋಗದಿಂದ ಈ ಕಸಬು ಮುಳುಗಿಹೋಗಿ ಈಗ ಖಾದಿಯನ್ನು ಹಾಕಿರಿ, ಖಾದಿಯು ಪವಿತ್ರವಾದುದು ಎಂಬುದಾಗಿ ಹೇಳುವಕಾಲ ಬಂದುದಕ್ಕಾಗಿ ವಿಷಾದಿಸುವುದಾಗಿಯೂ ಆರ್ಥಿಕದೃಷ್ಟಿಯಿಂದಲ್ಲದೆ ಧಾರ್ಮಿಕದೃಷ್ಟಿಯಿಂದಲೂ ಖಾದಿಯು ಪವಿತ್ರವಾದುದು, ಆದುದರಿಂದ ಖಾದಿಯನ್ನೇ ಧರಿಸಬೇಕೆಂಬುದಾಗಿಯೂ ಮ|| ಬೆಲ್ಲದ ಶಿದ್ಧಲಿಂಗಪ್ಪನವರು ಖಾದಿಯನ್ನು ಧರಿಸುವುದರಿಂದಾಗುವ ಪ್ರಯೋಜನಗಳನ್ನೂ ಖಾದಿಯು ಮೋಕ್ಷಕ್ಕೆ ದಾರಿಯಾಗಿರುವ ರೀತಿಯನ್ನೂ ವಿವರಿಸಿದರು. ತರುವಾಯ ಮ|| ಕಾಸಲು ಶ್ರೀನಿವಾಸಶೆಟ್ಟರು ಖಾದಿಯಿಂದ ಬಡಜನಗಳಿಗಾಗುವ ಪ್ರಯೋಜನಗಳನ್ನೂ, ಬಂಗಾರದ ಹೊಗೆಯು ಹಾಯುತ್ತಿದ್ದ ಈ ದೇಶದಲ್ಲಿ ಖಾದಿಯನ್ನು ಬಿಟ್ಟುದುದರಿಂದ ಈಗ ತಿನ್ನಲಿಕ್ಕೆ ಕೂಳಿಲ್ಲದೆ ಇರುವ ಸ್ಥಿತಿಯನ್ನೂ ವಿವರಿಸಿದನಂತರ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದುವು.

1. ದಾವಣಗೆರೆ ಪುರಜನಗಳು ಪ್ರಾಣಿದಯಾಜ್ಞಾನಪ್ರಸಾರಕಸಂಘದವರ ವತಿಯಿಂದ ಸಭೆಸೇರಿ ಶ್ರೀಮನ್ಮಹಾರಾಜರವರಿಗೆ ತಮ್ಮ ರಾಜಭಕ್ತಿಯನ್ನು ತೋರಿಸುವರಲ್ಲದೆ ಮಹಾರಾಜರವರನ್ನು ದೇವರು ದೀರ್ಘಕಾಲ ಸುರಕ್ಷಿತವಾಗಿ ಸಲಹಲೆಂದು ಪ್ರಾರ್ಥಿಸುತ್ತಾರೆ. 2. ಮೈಸೂರು ದೇಶದ ಪ್ರತಿಯೊಬ್ಬರೂ ಎಲ್ಲಾ ಸಂದರ್ಭಗಳಲ್ಲಿಯೂ ಖಾದಿಯನ್ನೇ ಧರಿಸಬೇಕೆಂದೂ, ಪ್ರತಿದಿವಸವೂ ಕನಿಷ್ಟಪಕ್ಷ ಅರ್ಧಘಂಟೆಯಹೊತ್ತಾದರೂ ನೂಲಬೇಕೆಂಬುದಾಗಿಯೂ ಈ ಸಭೆಯು ಸೂಚಿಸುತ್ತದೆ. 3. ಮೈಸೂರು ಸರ್ಕಾರದವರು ತಮಗೆ ಒಳಪಟ್ಟ ಎಲ್ಲಾ ಸ್ಕೂಲುಗಳಲ್ಲಿಯೂ ಚರಕಗಳಿಂದ ನೂಲನ್ನು ನೂಲುವಂತೆಯೂ, ಖಾದಿಯನ್ನು ಧರಿಸುವಂತೆಯೂ ಪ್ರೋತ್ಸಾಹಿಸಬೇಕಾಗಿ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ. 4. ಮೈಸೂರುದೇಶದ ಮುನಸಿಪಲ್ ಮತ್ತು ಲೋಕಲ್‌ಬೋರ್ಡುಗಳು ಕೈಯಿಂದ ತಯಾರಾದ ಖಾದಿಬಟ್ಟೆಗೆ ಸುಂಕವನ್ನು ಹಾಕಕೂಡದಾಗಿ ಈ ಸಭೆಯು ಸೂಚಿಸುತ್ತದೆ. 5. ಈ ಸಂಘದವರು ಒಂದು ಡಿಪೋವನ್ನು ತೆಗೆದು ಎಲ್ಲಾ ಜನಗಳಲ್ಲಿಯೂ ಚರಕದ ಪ್ರಸಾರವನ್ನು ಮಾಡಬೇಕಾಗಿ ಈ ಸಭೆಯು ಸೂಚಿಸುತ್ತದೆ. ನಂತರ ಸಭಾಧ್ಯಕ್ಷರು ತಮ್ಮನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿದುದಕ್ಕಾಗಿ ತಮ್ಮ ಅಭಿವಂದನೆಗಳನ್ನು ತಿಳುಹಿಸಿದನಂತರ ಮಹಾರಾಜರವರ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು. ಅಲ್ಲಿ ಸೇರಿದ್ದ ಸರ್ಕಾರಿ ಅಧಿಕಾರಿಗಳೂ, ದೊಡ್ಡಮನುಷ್ಯರೂ ಪ್ರಾಣಿದಯಾಜ್ಞಾನಪ್ರಸಾರಕಸಂಘದ ಆಫೀಸಿಗೆ ಹೋಗಿ ಖಾದಿಯನ್ನು ಮಾರಲಿಕ್ಕೆ ತೆಗೆದುಕೊಂಡು ಹೋದರು. ಮೇಲ್ಕಂಡ ಠರಾವುಗಳನ್ನು ಎಲ್ಲರೂ ಆಚರಣೆಯಲ್ಲಿ ತಂದು ಕೈಗಾರಿಕೆಗೆ ಪ್ರೋತ್ಸಾಹಕೊಟ್ಟು ಬಡತನದಿಂದ ಬಳಲುವ ನಮ್ಮ ದೇಶವನ್ನು ಪುನಹ ಪೂರ್ವಸ್ಥಿತಿಗೆ ತರಬೇಕಾಗಿ ಅಪೇಕ್ಷಿಸುವ,

ಓರ್ವ ದೇಶಾಭಿಮಾನಿ.

ನಂಜನಗೂಡು-ಚಾಮರಾಜನಗರ ರೈಲ್ವೆ.

ಈ ರೈಲ್ವೆಗಾಗಿ ಜಮೀನುಗಳನ್ನು ಸರ್ಕಾರದವರು ತೆಗೆದುಕೊಂಡು ವರುಷವಾದಾಗ್ಯೂ, ಕಾಂಪೆನ್ಸೇಷನ್ ಕೊಡದೇಲೂ, ಬದಲಿ ಜಮೀನುಗಳನ್ನಾದರೂ ಕೊಡದೇಲೂ, ರೈತರು ಅನೇಕಾವರ್ತಿ ಕಛೇರಿಗಳಿಗೆ ತಿರುಗಿದರೂ ಕಣ್ಣೆತ್ತಿ ಸಹ ನೋಡದೇಲೂ ಇರುವ ವಿಚಾರವನ್ನು ಬಹಳ ವ್ಯಸನದಿಂದ ಬರೆಯಬೇಕಾಗಿದೆ. ನಿಸ್ಪೃಹರಾದ ಅಧಿಕಾರಿಗಳನ್ನು ಸರ್ಕಾರದವರು ದಯೆಪಾಲಿಸಿರುವರಾದರೂ ನಮ್ಮ ರೈತರ ಕಷ್ಟವಿನ್ನೂ ತಪ್ಪಲಿಲ್ಲ. ಬದಲಿ ಜಮೀನನ್ನು ಕೊಡುವುದಾಗಿ ಹ|| ಡೆ|| ಕ|| ಸಾಹೇಬರವರು ಭರವಸೆ ಕೊಟ್ಟರೂ "ಗ್ರಾಮಸ್ಥರು ಒಪ್ಪುವುದಿಲ್ಲ" "ಪಂಚಮರಿಗೆ ಬೇಕು" "ಗೋಮಾಳಕೊಡುವುದಿಲ್ಲ" "ಈಚಲುಗಿಡಗಳಿಗೆ ಅನುಕೂಲ" ವೆಂಬೀ ಖಾಲಿ ತಕರಾರಿನಿಂದ ನಮ್ಮ ಬಾಯಿಗೆ ಮಣ್ಣುಹಾಕುತ್ತಿದ್ದಾರೆ. ನಾವು ಬರೆದುಕೊಂಡ ಎಷ್ಟೋ ಅರ್ಜಿಗಳು ಹೊರಕ್ಕೆ ಬಂದಿಲ್ಲ. ಇಲ್ಲ ಉಂಟೆಂಬ ಜವಾಬೂ ಇಲ್ಲ. ಆಫೀಸಿಗೆ ಹೋದರೆ ಗದರಿಕೊಳ್ಳುತ್ತಾರೆ. ಸಾಲದುದಕ್ಕೆ ನಮಗೆ ಜಮೀನು ಕೊಡುವುದರ ಬದಲು ದರಖಾಸ್ತುದಾರರಿಗೆ ಅಂತರಂಗವಾಗಿ ರಿಕಾರ್ಡುಮಾಡಿ ಕೊಡುತ್ತಿದ್ದಾರೆ. ಡೆ|| ಕ|| ರವರಮಾತಿಗೂ ನಡೆಯುತ್ತಿರುವ ನಡವಳಿಕೆಗಳಿಗೂ ಸಂಬಂಧವೇ ಇಲ್ಲ. ಒಂದೆರಡುವರುಷಗಳಿಂದ ಜಮೀನುಕಳೆದುಕೊಂಡು, ಮಳೆಗಳಿಲ್ಲದೆ ಫಸಲು ಲುಕ್ಸಾನಾಗಿ ಕಂದಾಯಕ್ಕೂ ಗತಿಯಿಲ್ಲದೆ ರೈತರಿಂದ ರೈಲಿಗಾಗಿ ಹೋದ ಜಮೀನುಗಳಿಗೂ ಕಂದಾಯವನ್ನು ಜುಲುಮಿನಿಂದ ವಸೂಲುಮಾಡಿದರು. ಇದು ನ್ಯಾಯವೆ? ಸಾಲದ್ದಕ್ಕೆ ಏನೂ ಅರಿಯದ ರೈತರ ಜಮೀನುಗಳಲ್ಲಿ ಡಿಕ್ಲೇರ್ ಆಗಿರುವ ಜಮೀನುಗಳಿಗಿಂತ ಹೆಚ್ಚಾಗಿ ಹಂಗಾಮಿ ಕೆಲಸಕ್ಕೆಂಬ ನೆಪದ ಮೇಲೆ ಜಮೀನುಗಳನ್ನು ತೆಗೆದುಕೊಂಡು ಗುಂಡಿಹಾಕಿದರು. ಅವುಗಳ ಕಾಂಪೆನ್ಸೇಷನ್ ಪ್ರಸ್ತಾಪಮಾಡಿದರೆ ಕೇಳಿದಷ್ಟು ಹೇಳಿಕೆಕೊಡಿ, ಇಲ್ಲವಾದರೆ ನಿಮ್ಮ ದುಡ್ಡಿಗೆ ನಾಮಬೀಳುತ್ತದೆಂದು ಗುಮಾಸ್ತರು ಬೆದರಿಸುತ್ತಾರೆ. ಫಸಲು ಲುಕ್ಸಾನು ಕೊಡುವುದರಲ್ಲಿಯೂ ಬಹಳ ಲುಕ್ಸಾನು ಮಾಡಿರುತ್ತಾರೆ. ಅವಾರ್ಡು ಆಗಿದೆಯೋ ಇಲ್ಲವೋ ಹಣಬರುತ್ತದೆಯೋ ಇಲ್ಲವೋ? ಎಂಬುದನ್ನು ನಮಗೆ ತಿಳುಹಿಸುವವರೇ ಇಲ್ಲ. ನಾವು ಯಾರಲ್ಲಿ ಮೊರೆಯಿಡಬೇಕು? ಸ್ಪೆಷಲ್ ಶೇಕದಾರರೊಬ್ಬರನ್ನು ಈ ಕೆಲಸಕ್ಕೆ ನೇಮಿಸಿರುತ್ತಾರೆ. ಇವರು ನಿಸ್ಪೃಹರೂ ನ್ಯಾಯಸ್ಥರೂ ಆಗಿರುವುದುದು ನಮಗೆಲ್ಲಾ ಸಂತೋಷವಾದರೂ ನಮ್ಮ ಜಮೀನುಗಳನ್ನು ನೋಡಿ ಅಳತೆಮಾಡಿಕೊಂಡು ಹೋಗಿ ತಿಂಗಳಾದರೂ ನಮಗೆ ಯಾವ ಪ್ರಯೋಜನವೂ ಆಗಿಲ್ಲ. ಅವರಾದರೂ ಹೊಸಜಮೀನುಗಳನ್ನು ಚುನಾವಣೆಮಾಡುವುದು, ರಿಕಾರ್ಡುಮಾಡುವುದುವಗೈರೆ ಎಲ್ಲಾ ಕೆಲಸಗಳನ್ನು ಮಾಡುವರೆಂದು ನಮಗೆ ಅಮಲ್ದಾರರು ತಿಳಿಯಪಡಿಸಿದರೂ ಅವರನ್ನು ವಿಚಾರಮಾಡಿದರೆ ನಿಮ್ಮ ಅರ್ಜಿಗಳು ನಮ್ಮಲ್ಲಿ ಬಂದಿಲ್ಲವೆಂದು ಹೇಳುತ್ತಾರೆ. ಹಾಗಾದರೆ ನಮ್ಮ ಅರ್ಜಿಗಳನ್ನು ಬಹುಶಃ ಸಬ್‌ಡಿವಿಜನ್ ಆಫೀಸ್‌ಪೆಟ್ಟಿಯು ತಿಂದಿರುವುದರಿಂದ ಅವುಗಳನ್ನು ಯಾರು ಹೊರಗೆ ತೆಗೆಯಬೇಕೆಂಬುದನ್ನು ಡೆ|| ಕ|| ರವರು ವಿಚಾರಮಾಡಲಿ. ಈಚೆಗೆ ಹುಟ್ಟಿರುವ ವರ್ತಮಾನದಿಂದ ಕೆಲವು ಅವಾರ್ಡುಗಳನ್ನು ಹಿಂದಿದ್ದ ಸಬ್‌ಡಿವಿಜನ್ ಆಫೀಸರು ಮಾಡಿರುವರೆಂದೂ ಅವರು ಹೊರಡುವ ಭರದಲ್ಲಿ ರೈತರ ಅಹವಾಲುಗಳನ್ನು ಸರಿಯಾಗಿ ಪರ್ಯಾಲೋಚಿಸಲಿಲ್ಲವೆಂದೂ, ಆಯಾ ಗ್ರಾಮದ ಸರಾಸರಿ ಕ್ರಯದಮೇಲೆ ಜಮೀನುಗಳಿಗೆ ಅವಾರ್ಡುಮಾಡಿರುವರೆಂದೂ ತಿಳಿಯಬರುತ್ತದೆ. ಅವರೇ ರಿಜಿಸ್ಟ್ರೇಷನ್ ದಾಖಲೆ ನೋಡಿ ಸರಾಸರಿ ದರದಂತೆ ಕೊಡುವುದಾಗಿ ಅಪ್ಪಣೆ ಕೊಡಿಸಿದರು. ಇದು ಅನ್ಯಾಯವಲ್ಲವೆ? ಎಕರೆಗೆ 25 ರೂಪಾಯಿಗಳು ಬಾಳುವ ಜಮೀನಿಗೂ 100 ರೂಪಾಯಿ! ಎಕರೆಗೆ 250 ರೂಪಾಯಿ ಬಾಳುವ ಜಮೀನಿಗೂ 100 ರೂಪಾಯಿ!! ಈ ನ್ಯಾಯವನ್ನು ವಿಮರ್ಶೆಮಾಡುವವರು ಯಾರು? ಅಲ್ಲದೆ ಬಾಗಾಯ್ತು ಜಮೀನಿಗೆ ಮರಗಳನ್ನೂ ಸೇರಿಸಿ ಒಂದೇಬೆಲೆ ಕೊಡುತ್ತಾರಂತೆ. ಇದು ನಿಜವಾದರೆ ರೈತರಪಾಡು ನಾಯಿಪಾಡೇ ಸರಿ. ಮರಗಳನ್ನು ಕಷ್ಟಪಟ್ಟು ಏಳಿಸಿ ಒಂದೇಪೆಟ್ಟಿಗೆ ಉರುಳಗೊಳಿಸಿ ಅವುಗಳನ್ನು ಬೆಳೆಸಿದ ಕಷ್ಟಕ್ಕೆ ಪ್ರತಿಫಲವೂ ಇಲ್ಲವೆಂದರೆ ರೈತನಿಗೆ ಇದಕ್ಕಿಂತ ಅನ್ಯಾಯವಾದ್ದು ಯಾವದೂ ಇಲ್ಲ. ಜಮೀನಿಗೆ ತಕ್ಕ ಪ್ರತಿಫಲವನ್ನು ಕೊಡದೆ ಗ್ರಾಮದ ಜಮೀನಿನ ದರದಂತೆ ಕೊಡುವುದು ಬಹಳ ಅನ್ಯಾಯವೆಂತಲೇ ಹೇಳುತ್ತೇನೆ. ಸರ್ಕಾರಕ್ಕೆ ಫಾಯಿದೆ ಮಾಡುವ ಉದ್ದೇಶವಿದ್ದರೆ ಹಾಗೆ ಮಾಡಬಹುದೇ ವಿನಃ ನ್ಯಾಯದಂತೆ ಹಾಗೆ ಮಾಡುವುದು ಸಾಧ್ಯವಿಲ್ಲ. ಹ|| ಡೆ|| ಕ|| ರವರು ರೈತರ ಕ್ಷೇಮಚಿಂತನೆಯನ್ನು ಬಯಸಿ ಅವರ ಗೋಳು ಸರ್ಕಾರದವರಿಗೂ ಮುಟ್ಟದಂತೆ ಏರ್ಪಾಡು ಮಾಡುವರಾಗಿ ನಂಬುತ್ತೇನೆ. ಪ್ರಜಾಹಿತೈಷಿ.

೧೯೨೬ ನೆಯ ಇಸವಿ ಜುಲೈ ತಾ|| ೧೦ ರಿಂದ ೧೯೨೬ ನೆಯ ಇಸವಿ ಜುಲೈ ತಾ|| ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಆಷಾಢ ಶುದ್ಧ ಪಾಡ್ಯಮಿಯಿಂದ ಆಷಾಢ ಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಮಾಸ
10	ಶನಿ	ಪಾಡ್ಯ	54-47	ಪುನ	38-77	27
11	[1]ಭಾನು	ಬಿದಿ	58-48	ಪುಷ್ಯ	43-41	28
12	[2]ಸೋಮ	ತದಿ	60	ಆಶ್ಲೇ	49-38	29
13	ಮಂಗಳ	ತದಿ	3-34	ಮಖಾ	56-7	30
14	ಬುಧ	ಚೌತಿ	8-33	ಪುಬ್ಬ	60	31
15	[3]ಗುರು	ಪಂಚ	13-35	ಪುಬ್ಬ	2-40	32
16	[4]ಶುಕ್ರ	ಷಷ್ಠಿ	18-9	ಉತ್ತ	9-1	1

(1) ಮೊಹರಂಪ್ರಾರಂಭ. (2) ಮಳೆನಕ್ಷತ್ರ-ಪುನರ್ವಸು ೩ ನೆಯ ಪಾದ. (3) ಅಮೃತಲಕ್ಷ್ಮೀವ್ರತಂ. (4) ಮಳೆನಕ್ಷತ್ರ-ಪುನರ್ವಸು ೪ ನೆಯಪಾದ.

ಮೈಸೂರು : [illegible] ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತನಾಲಾಕುಲಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

REGISTERED NO. M. 124.

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಜುಲೈ ತಾರೀಖು ೧೭ ನೆಯ ಶನಿವಾರ. [ಸಂಚಿಕೆ ೨೯

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಹಿತಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆನ್ಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
27

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟ್ಯಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ವಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡ ತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—5] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೬—೦	೦—೧೩—೦
ಷಟ್ಸ್ಥಲವಿದ್ಯಾ	೧—೪—೦	೧—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಿಕ	೦—೪—೦	೦—೯—೦
ಗುರುಶಂಕರಶಿವ್ಯರಚರಿತೆ	೦—೧—೦	೦—೬—೦
ಬಸವೇಶ್ವರಚರಿತ	೦—೬—೦	೦—೧೩—೦
[illegible]	೦—೬—೦	೦—೧೩—೦
[illegible]	[illegible]	[illegible]

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವವು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—39] ಪೋ. ಬಾ. [illegible] ಮದರಾಸು

SIROMANY NARAYANACHARYA & CO., BENARES CITY.

ನಮ್ಮಲ್ಲಿ ತರವಾರಿ ರೇಷ್ಮೆ ಮೊಗಟ, ಜರಿ ಸಾದಾಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥ ಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— 1

ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ನೋಟೀಸ್.

ದೊಡ್ಡಬಳ್ಳಾಪುರದ ಘನತಿ ಚಿಪ್ಪೆಗುಂಡಿ ಗುರುಶಿದ್ಧಪ್ಪನವರ ಮಗ ಘನತಿ ರುದ್ರಪ್ಪನವರ ಕುಟುಂಬ ಬಸಮ್ಮನು [illegible] ವರ್ತಿಸುವ ಸ್ಥಿತಿಯಲ್ಲಿರುವುದನ್ನು ತಿಳಿದು 1. ಶೀತಕಲ್ಲು [illegible] ದೇವಣ್ಣನ ಮಗ ಪುಟ್ಟಪ್ಪ, 2. ಹಣಚಿಯಲ್ಲಿರುವ ಚಿಕ್ಕಳ್ಳಿ ಶಿದ್ಧಲಿಂಗಪ್ಪ, 3. ಮತ್ತು ಅವನ ತಮ್ಮ ಶಿದ್ಧಪ್ಪ, 4. ಬಸಮ್ಮನ ತಾಯಿ ಶಿದ್ಧಲಿಂಗಮ್ಮ, ಮೊದಲಾದವರು ಮತ್ತು ಇನ್ನೂ ಕೆಲವು ಪುಂಡುಗಾರರೂ [illegible] ನಿಜವಾದ ಉತ್ತರವಾರಸುದಾರನಾದ ಈ ಕೆಳಗೆ ರುಜುಮಾಡಿರುವ ನನಗೆ ಮೋಸಮಾಡಬೇಕೆಂಬ ದುರುದ್ದೇಶದಿಂದ ಘನತಿ ರುದ್ರಪ್ಪನ [illegible] ಆಸ್ತಿಗಳನ್ನು ಖುಲಾಸ್ ಮಾಡುವುದರಲ್ಲಿ ಉದ್ಯುಕ್ತರಾಗಿದ್ದಾರೆ. ಹಾಗೆ [illegible] ಮಾಡಲು ಸದರಿ ಬಸಮ್ಮನಿಗೆ ಯಾವ ಅಧಿಕಾರವು ಮತ್ತು [illegible] ಇರುವುದಿಲ್ಲ. ಹಾಗೆ ಉಂಟಾಗಬಹುದಾದ ದಾನ, ಕ್ರಯ, [illegible], ಭೋಗ್ಯ ಇತ್ಯಾದಿಗಳನ್ನು ವಾರಸ್‌ದಾರನಾದ ನನ್ನ ಅನುಮತಿಯಿಲ್ಲದೆ [illegible] ಮ್ಮನಿಂದ ಮಾಡಿಕೊಂಡಲ್ಲಿ ಅವು ಖಂಡಿತ ಊರ್ಜಿತವಾಗ[illegible] ಎಂಬುದಾಗಿ ಈ ಮೂಲಕ ಎಚ್ಚರಿಸುತ್ತೆ.

ಚಿಪ್ಪೆಗುಂಡಿ ವೀರಭದ್ರಪ್ಪ, [illegible],
[illegible]

Prize Essay on "HISTORY OF THE LINGAYETS."

(From the Mysore Gazette, July 8, 1926.)

UNIVERSITY OF MYSORE.

Notification No. 17444, dated 30th June 1926.

THE TABARD MEMORIAL MEDAL.

A gold medal of the value of Rs. 100 founded by the friends and admirers of Rajasabhabhushana Rev. Father Anthony Mary Tabard, M.A., M.B.E., M.R.A.S., will be awarded by the University Council for the best essay on the following subject:—

"*History of the Lingayets.*"

2. The medal is open to graduates of not more than five years' standing of any Indian University.

3. The essay should be forwarded to the Registrar, Mysore University, Mysore, so as to reach him on or before the 30th June 1927.

4. Each candidate for the essay should state generally in an introductory note and specifically in footnotes, the extent to which he has relied upon different sources of information and the portion which he claims as his original work.

5. The essay should have a motto instead of the writer's name and shall be accompanied by a sealed cover containing the name of the candidate, the year in which he passed the Highest University Examinations, name of the University, his Post Office address and a declaration that the essay sent in by him is his own *bona fide* composition.

6. The essay must be the result of the personal investigations of the author and must contain clear evidence of independent and original research. Essays consisting only of criticisms, compilations or matter discoverable in or deducible from the writings of others will be ineligible for the prize, unless accompanied by the results of the author's independent research.

7. Each candidate must forward two copies of his essay together with a statement as to when and where the work was carried out. If any portion of the work was done in collaboration or under guidance, the nature and extent of such collaboration or guidance must be clearly stated.

V. SUBRAHMANYA IYER,
Registrar.

ಬಡವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡುಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲ್ ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವವಿದ್ಯಾರ್ಥಿಗಳು ಜುಲೈ ತಾ|| 31 ರ ಒಳಗಾಗಿ ಸೆಕ್ರೆಟರಿಯವರಿಗೆ ತಲುಪುವಂತೆ ಗೊತ್ತಾದ ಪ್ರಿಂಟ್‌ಫಾರಮ್ಮಿನಲ್ಲಿ ಅರ್ಜಿಬರೆದುಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾದಲ್ಲಿ ಅರ್ಧಾಣೆ ಸ್ಟ್ಯಾಂಪು ಕಳುಹಿಸಿ ಅಡ್ರೆಸ್ಸನ್ನು ತಿಳಿಸಿದಲ್ಲಿ ಕಳುಹಿಸಲ್ಪಡುವವು. ಸರ್ಟಿಫಿಕೇಟುಗಳು ಇಲ್ಲದೆಯು ಮತ್ತು ವಾಯಿದೆ ಮೀರಿಯು ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

M. Nagappa,
Asst. Secretary.

G. Paramasiviah,
Secretary.

ವೀರಶೈವಗ್ರಂಥಕರ್ತರಿಗೆ ಬಹುಮಾನ.

ಈ ಕೆಳಗೆ ವಿವರಿಸಿದ ವಿಷಯಗಳಲ್ಲೊಂದರ ಒಂದು ನಿಬಂಧವನ್ನು ಅರ್ಧಫುಲಸ್ಕ್ಯಾಪ್ 20 ರಿಂದ 25 ಪುಟಗಳವರೆಗೆ ಬರೆದು ಇದೇ ಬರುವ ಆಗಸ್ಟ್ ತಿಂಗಳ ಕೊನೆಯೊಳಗಾಗಿ ಕಳುಹಿಸಬೇಕು. ಉತ್ತಮವಾದ ನಿಬಂಧವನ್ನು ಬರೆದವರಿಗೆ 50 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವವು.—(1) ವೀರಶೈವಸಮಾಜದ ಉತ್ಪತ್ತಿ. (2) [illegible] (3) ವೀರಶೈವ[illegible] (4) [illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜುಲೈ ತಾ|| ೧೭ ನೆಯ ಶನಿವಾರ.

THE MYSORE LINGAYET EDUCATION FUND ASSOCIATION.

The annual meeting of the members of the Mysore Lingayet Education Fund Association was held on Sunday the 11th July 1926 at the Sri Jagadguru Jayadeva Hostel Buildings—when about 160 members were present. Sir K. P. Puttanna Chetty, the President of the Association took the chair. The report of the working of the Association for the year 1925-26 was presented by the Secretary Mr. G. Paramashiviah and it shows, if not any rapid progress in the work of the Association, at least the stability of its finances and the useful administration of the funds. The total deposits which stood at Rs. 99,679-7-3 at the end of the year 1924-25 rose to Rs. 1,01,539-4-11 which amount is invested in Government Savings and in the Bank of Mysore. Of the donations may be mentioned the generous sum of Rs. 1001 by Revamma the wife of late Veerappa and an equal sum by the late Mr. N. Nanjappa of Denkinakote of which Rs. 500 has been paid. The properties left to the Association under will of late Shamanna which were estimated at the time of making the will at about Rs. 22,000 were sold and it is pleasing to note that they fetched nearly thrice that amount. The tatal receipts in the shape of interest and contributions to the marriage fund, which were at the disposal of the Association for disbursements amounted to Rs. 6182-7-8. The expenditure which was mainly incurred in awarding scholarships to the Lingayet boys amounted to Rs. 6123-10-0. A sum of Rs. 500 was paid as an advance for the publication of the work Sreekara Bhashya. During the year 1924-25, 69 students were granted scholarships to the extent of Rs. 2959-4-0 while in the 1925-26, 89 students received a sum of Rs. 4353-2-0, which is indeed a great progress. One of the stipendiaries Mr. M. Basavalingayya B.A., B.L., of Mysore stood first in the M.A. Examination in Sanskrit in the Mysore University. There has been a satisfactory progress in the education of the Lingayet youths, though it admits of much development. 14 Lingayet students graduated in the year. There were six Law graduates. Twenty of them passed the Entrance examination. The saddest event during the year was the early and premature death of Sahukar Kabbaballi Chennabasappa under tragic circumstances. He was the munificent donor of the fine hostel which now stands in his name at Mysore and was the enthusiastic guardian of the same. The Lingayet community has lost in him one of its best and most stable patrons, and it is hoped that the bore created by his demise will be filled in by equally philanthropic gentlemen. We may also notice that a handsome endowment of Rs. 5000 has been made by captain Y. V. Iyya of Bangalore Jayadeva dispensary the interest on which is to be paid to a Lingayet student undergoing the medical course. It is unfortunate that there was none to make use of the same last year and the accumulated interest has been added on to the principal fund. We need hardly commend the excellent object of the donor who is desirous of encouraging the young men of his community to take to the noble profession and it is hoped that they will not be slow in seeking this avenue of study and service in the years to come. The office bearers for the year 1926-27 were elected at the meeting. Sir K. P. Puttanna Chetty was re-elected President while so were also Messrs. G. Paramashiviah and M. Nagappa as Secretary and Assistant Secretary respectively. 12 members were appointed for the Excecutive Committee. Messrs. G. S. Thamayya, B.A., the account Probationer and G. Chennabasappa, B.A., B.L., were appointed as auditors. It is worthy to note that this record of progress which is not unsatisfactory has been made by no special or extra efforts of the Executive. It has been achieved without much of labour. The vast resources of the community are yet remaining untapped, and we may say are only waiting to be tapped. The large number of philanthropic gentlemen who promised donations at the Second Veerashaiva Conference in the year 1905 are yet to be approached and reminded of their promises. No doubt each year at the annual meeting resolutions to work and to carry a comprehensive campaign are made. We are concious of the limitations and the difficulties of men busy with their own duties, but surely the community can boast of some gentlemen who possess sympathy and time for such disinterested and useful service. Let us hope fervently that the year 1926-27 will be fruitful of greater effort and achievement. We have only to say that the demands of the youth of the community are increasing by leaps and bounds. Curiously it is the poor in the community that are taking more and more to education. It is up to the Association to make strenuous efforts to meet their growing demands.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡು ಸಂಘದ ವಾರ್ಷಿಕಸಮ್ಮೇಳನ.

ಕಳೆದ ಭಾನುವಾರ ಈ ಸಮ್ಮೇಳನವು ಬೆಂಗಳೂರು ಜಗದ್ಗುರುಜಯದೇವ ವೀರಶೈವವಿದ್ಯಾರ್ಥಿನಿಲಯದಲ್ಲಿ ರಾಜಸಭಾಭೂಷಣ ದಿವಾನ್‌ಬಹದ್ದೂರ್ ಸರ್ ಕೆ. ಪಿ ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಇಷ್ಟು ಸಲಕ್ಕಿನ್ನ ಈ ವರ್ಷದ ಸಮ್ಮೇಳನದಲ್ಲಿ ನೆರೆದಿದ್ದ ಜನರಲ್ ಕಮಿಟಿಮೆಂಬರುಗಳ ಸಂಖ್ಯೆಯು ಹೆಚ್ಚಾ (160 ರ ವರೆ) ಗಿದ್ದಿತು. ಕಳೆದ ವರ್ಷದ ಲೆಕ್ಕದ ಆಡಿಟರುಗಳ ವರದಿಯೂ, ಸೆಕ್ರೆಟರಿಯವರ ವರದಿಯೂ ಓದಲ್ಪಟ್ಟುವು. ಅದರ ಪ್ರಕಾರ ಹಿಂದಣ ವರ್ಷದಲ್ಲಿ ಅಂದರೆ 1925-26 ರಲ್ಲಿ ಮೂಲಧನದ ವೃದ್ಧ್ಯಂಶದಿಂದಲೂ, ಇತರ ವಿಧದಿಂದಲೂ ಒಟ್ಟು 6182-7-8 ರೂ. ಆದಾಯವೂ, ವಿದ್ಯಾರ್ಥಿವೇತನ ಮೊದಲಾದವುಗಳಿಗಾಗಿ 6123-10-0 ರೂ. ವ್ಯಯವೂ ಆಗಿವೆ. ವೆಚ್ಚವು ಇಷ್ಟು ಹೆಚ್ಚಲು 89 ವಿದ್ಯಾರ್ಥಿಗಳ ವೇತನಕ್ಕಾಗಿ ರೂ. 4353-2-0 ಕೊಡಲ್ಪಟ್ಟುದು ಕಾರಣವಾಗಿದೆ. ವೇತನಾಪೇಕ್ಷಿಗಳಾದ ಬಡವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿರುವುದಾದರೂ ಧನಾಭಾವದಿಂದ ಅವರೆಲ್ಲರಿಗೂ ಸಾಹಾಯ್ಯ ಮಾಡಲು ಅವಕಾಶವಿಲ್ಲದಿರುವುದಕ್ಕಾಗಿ ಸಂಘದವರು ತಮ್ಮ ಅಸಮಾಧಾನವನ್ನು ಪ್ರದರ್ಶಿಸಿರುತ್ತಾರೆ.

ಈಗ್ಗೆ 21 ವರ್ಷಗಳ ಕೆಳಗೆ ಬೆಂಗಳೂರಿನಲ್ಲಿ ನೆರೆದಿದ್ದ ಎರಡನೆಯ ವೀರಶೈವಮಹಾಸಭಾಕಾಲದಲ್ಲಿ ಈ ಫಂಡು ಏರ್ಪಡಿಸಲ್ಪಟ್ಟು ಸಭೆಯಲ್ಲೇ 70,000 ರೂ. ವರೆಗೆ ವಿದ್ಯಾಭಿಮಾನಿಗಳಾದ ವೀರಶೈವರಿಂದ ವಾಗ್ದಾನಮಾಡಲ್ಪಟ್ಟು ಕೊಂಚ ಹಣವೂ ಕೊಡಲ್ಪಟ್ಟಿತು. ಅಲ್ಲಿಂದೀಚೆಗೆ ಮೊದಲು ವಾಗ್ದಾನ ಮಾಡಿದವರೂ ಮಾಡದಿದ್ದವರೂ ತಾವು ತಾವಾಗಿಯೇ ಕೊಟ್ಟುದೂ, ಲಗ್ನ ಮೊದಲಾದ ಕಾರ್ಯಗಳಲ್ಲಿ ಕಾಣಿಕೆರೂಪವಾಗಿ ಸಲ್ಲಿಸಲ್ಪಟ್ಟುದೂ ಸೇರಿ ರೂ. 1,01,539-4-11 ಫೈ ಫಂಡಿಗೆ ಶೇಖರವಾಗಿರುತ್ತದೆ. ಇದರಲ್ಲಿ ಕೈ|| ಸೂಲಬೆಲೆ ಶ್ಯಾಮಣ್ಣನವರು ಅಪ್ರಾರ್ಥಿತವಾಗಿ ಕೊಟ್ಟ ಅವರ ಚರಸ್ಥಿರಾಸ್ತಿಗಳಿಂದ ಪ್ರಥಮತಃ 20-22 ಸಾವಿರರೂಪಾಯಿಗಳು ಬರಬಹುದೆಂದು ನಿರೀಕ್ಷಿಸಲ್ಪಟ್ಟಿದ್ದು ಈಚೆಗೆ 60 ಸಾವಿರ ರೂ. ಗಳವರೆಗೂ ಬಂದಿರುತ್ತದೆ. ಅಲ್ಲದೆ ಕೈ|| ಪತ್ರೆವೀರಪ್ಪನವರು ವೀರಶೈವಸಂಸ್ಕೃತ ಪ್ರೌಢವಿದ್ಯಾಶಾಲೆಯ ಸ್ಥಾಪನೆಗಾಗಿ 30 ಸಾವಿರ ರೂ. ಗಳನ್ನು ಕೊಡಲು ವಾಗ್ದಾನಮಾಡಿದ್ದುದಕ್ಕಾಗಿ ಅವರ ಪತ್ನಿಯವರು ಮತ್ತು ಅಣ್ಣನವರ ಪುತ್ರರಾದ ಮ|| ಚೆನ್ನವೀರಪ್ಪಯ್ಯನವರು ಕೊಟ್ಟ 25 ಸಾವಿರ ರೂ. ಗಳಲ್ಲಿ ಜಗದ್ಗುರುಜಯದೇವಹಾಸ್ಟಲ್ ಕಟ್ಟಡಕ್ಕೆ 14,171 ರೂ. ಉಪಯೋಗಿಸಲ್ಪಟ್ಟು ಉಳಿದ 10,829 ರೂ., ಕೈ|| ಬಿ. ಎಂ. ವೀರಪ್ಪನವರ ಪತ್ನಿ ಶ್ರೀಮತಿ ರೇವಮ್ಮನವರು ತಮ್ಮ ಪತಿಯಾಜ್ಞೆಯಂತೆ ದತ್ತಸ್ವೀಕಾರಮಾಡಿದಕಾಲದಲ್ಲಿ ಕೊಟ್ಟ 1001 ರೂ, ಶೇಲಂ ಡಿ|| ಡೆಂಕಣಿಕೋಟೆಯ ಕೈ|| ಎನ್. ನಂಜಪ್ಪನವರ ವಿಲ್ಲಿನ ಪ್ರಕಾರ ಬರಬೇಕಾದ 1,000 ರೂ. ಗಾಗಿ ಸಂದಿರುವ 500 ರೂ. ಫಂಡಿಗೆ ಶೇಖರಿಸಲ್ಪಟ್ಟಿವೆ. ಹೀಗೆ ಯಾವ ಪ್ರಯತ್ನವೂ ಇಲ್ಲದೆ 1,01,539 ರೂ. ವರೆಗೆ ಕೂಡಿರುವಾಗ್ಗೆ ಫಂಡಿನ ಸಂಘದವರು ಮತ್ತು ಸಮಾಜದ ಮುಖಂಡರು ಪ್ರಯತ್ನಪಟ್ಟಿದ್ದಲ್ಲಿ ಧನರಾಶಿಯು ದ್ವಿಗುಣತ್ರಿಗುಣವಾಗಿ ಕೂಡಿ ಈಗ ವೇತನವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ 2-3 ರಷ್ಟು ಹೆಚ್ಚಾಗುತ್ತಿದ್ದಿತೆಂದು ನಿಸ್ಸಂದೇಹವಾಗಿ ಹೇಳಬಹುದು.

ಫಂಡಿಗೆ ಸಹಾಯಮಾಡಲು ಏರ್ಪಟ್ಟಿರುವ ಉಪಾಯಗಳಲ್ಲಿ ಲಗ್ನ ಮೊದಲಾದ ಶುಭಕಾಲದೊಳಗೆ ಯಥೋಚಿತವಾದ ಕಾಣಿಕೆಯನ್ನು ತೆಗೆದುಕೊಡುವುದು ಒಂದುಪದ್ಧತಿಯಾಗಿದೆ. ಈ ಮೂಲಕವಾಗಿ ಕಳೆದ ವರ್ಷ 626-14-0 ರೂ. ಮಾತ್ರ ಬಂದಿರುತ್ತದೆ. ಸಮಾಜದಲ್ಲಿ ಎಷ್ಟೋ ಸಾವಿರಾರು ಲಗ್ನ ಮೊದಲಾದ ಶುಭಕಾರ್ಯಗಳು ನಡೆದಿರುವುವಾದರೂ ಇಷ್ಟು ಅಲ್ಪವಾದ ಹಣವು ಫಂಡಿಗೆ ಬಂದಿರುವುದು ತೃಪ್ತಿಕರವಲ್ಲ. ಫಂಡಿನ ಪ್ರಯೋಜನವನ್ನು ಗಮನಿಸಿ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ, ಸಂಸ್ಥಾನದ ಹೊರಗಿನ ಸ್ಥಳಗಳಲ್ಲೂ ಅಭಿಮಾನಶಾಲಿಗಳಾಗಿರುವ ಪ್ರಮುಖವೀರಶೈವರು ಲಗ್ನಗಳಿಗೆ ಸೇರಿದ ಕಾಲದಲ್ಲಿ [illegible] ಪ್ರತಿ ಲಗ್ನದಲ್ಲೂ ಕನಿಷ್ಠಪಕ್ಷ 5 ರೂ. ಸಂತೆಯಾದರೂ ಎತ್ತಿಸಿ ಕೂಡಲೆ ಫಂಡಿನ ಸೆಕ್ರೆಟರಿಯವರಲ್ಲಿಗೆ [illegible] ಸಂಘದ [illegible] ವಂತೆ ಮಾಡಬೇಕು. ಕೆಲವೆಡೆ ಎತ್ತಲ್ಪಟ್ಟ ಹಣವು ಫಂಡಿಗೆ ಸಂದಾಯವಾಗದೆ ಅಲ್ಲಲ್ಲೇ ಕೆಲವರಲ್ಲಿ ನಿಂತು ಹೋಗಿರುವುದೆಂಬ ದೂರು ಪ್ರಬಲವಾಗಿದೆ. ಹೀಗೆ ಮಾಡದೆ ಹಣವನ್ನು ಕೂಡಲೇ ಫಂಡಿಗೆ ಕಳುಹಿಸಿಕೊಡುತ್ತ ಬಂದರೆ ಎತ್ತಿ ಕೊಟ್ಟವರ ಉದ್ದೇಶವು ಸಾರ್ಥಕವಾಗುತ್ತದೆ, ಮತ್ತು ಫಂಡಿಗೂ ಅನುಕೂಲವಾಗುತ್ತದೆ. ಅದುಕಾರಣ ಪ್ರತಿಯೊಬ್ಬ ಜನರಲ್ ಕಮಿಟಿಯ ಮೆಂಬರೂ, ಆಯಾಕಡೆಯ ಪುರೋಹಿತರುಗಳೂ, ಶೆಟ್ಟಿ ಯಜಮಾನರುಗಳೂ ಇತ್ತಕಡೆಗೆ ಹೆಚ್ಚುಗಮನ ಕೊಡುವವರಾಗಬೇಕು. ಕಳೆದ ವರ್ಷ 8 ಡಿಸ್ಟ್ರಿಕ್ಟುಗಳಿಂದಲೂ ಬಂದಿರುವ ಕಾಣಿಕೆಯ ಹಣವು ಬಹಳ ಕಡಿಮೆಯಾಗಿರುತ್ತದೆ. ಪ್ರಯತ್ನಪಟ್ಟರೆ ಡಿಸ್ಟ್ರಿಕ್ಟಿಗೆ ಒಂದೊಂದು ಸಾವಿರದಂತೆ ಲಗ್ನದ ಕಾಣಿಕೆಯನ್ನು ಕೂಡಿಸುವುದು ಅರಿದಲ್ಲವಾದಪ್ರಯುಕ್ತ ಸ್ಪರ್ಧೆಯಿಂದ ಮುಂದಣವರ್ಷದಲ್ಲಿ ಇವಕ್ಕೆ ಎಲ್ಲ ಕಡೆಯವರೂ ಶ್ರದ್ಧಾಭಿಮಾನವಹಿಸಿ ಪ್ರಯತ್ನಪಡುವವರಾಗಲೆಂದು ಆಶಿಸುತ್ತೇವೆ.

ತಮ್ಮ ಜನರಲ್ಲಿ ವಿದ್ಯಾಪ್ರಸರಣೆಯು ಚೆನ್ನಾಗಿ ಆಗಿ ಅವರುಗಳು ಮುಂದಕ್ಕೆ ಬರಬೇಕೆಂಬ ಸದುದ್ದೇಶದಿಂದ ಈ ವಿದ್ಯಾಭಿವೃದ್ಧಿಫಂಡೇ ಅಲ್ಲದೆ ಮೈಸೂರು, ಚಿಕ್ಕಮಗಳೂರು, ತುಮಕೂರು, ತಿಪಟೂರು, ಶಿವಮೊಗ್ಗ, ಚಿತ್ರದುರ್ಗ, ಚಳ್ಳಕೆರೆ ಮೊದಲಾದ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಸ್ಥಾಪನೆ ಮೊದಲಾದ ಪ್ರಯತ್ನಗಳು ವೀರಶೈವರಿಂದ ನಡೆದೂ ನಡೆಯುತ್ತಲೂ ಇವೆ, ಮತ್ತು ಅವುಗಳ ಫಲಿತಾಂಶವು ತಕ್ಕಮಟ್ಟಿಗೆ ತೃಪ್ತಿಕರವಾಗಿದೆ. ಕಳೆದವರ್ಷ ಬಿ.ಎ., ಪರೀಕ್ಷೆಯಲ್ಲಿ 14 ಜನರೂ, ಬಿ.ಎಲ್. ಮತ್ತು ಎಲ್‌ಎಲ್.ಬಿ., ಯಲ್ಲಿ 6 ಜನರೂ, ಉತ್ತೀರ್ಣರಾಗಿರುವುದು ತೃಪ್ತಿಕರವಾಗಿಯೂ, ಎಂಟ್ರೆನ್ಸಿನಲ್ಲಿ 20 ಜನರು ಮಾತ್ರ ಉತ್ತೀರ್ಣರಾಗಿರುವುದು ಅತೃಪ್ತಿಕರವಾಗಿಯೂ ಇರುತ್ತವೆ. ಮ|| ತಿಪ್ಪೆರುದ್ರಪ್ಪನೆಂಬುವವರು ಬಿ.ಎ., ಪರೀಕ್ಷೆಯಲ್ಲಿ ಒಂದನೇ ತರಗತಿಯಲ್ಲಿ ಮೊದಲನೆಯವರಾಗಿ ಉತ್ತೀರ್ಣರಾಗಿರುವುದೂ, ರಾಜಧಾನಿಯ ಮ|| ಎಂ. ಬಸವಲಿಂಗಯ್ಯ, ಬಿ.ಎ., ಬಿ.ಎಲ್., ರವರು ಎಂ. ಎ. ಪರೀಕ್ಷೆಯಲ್ಲಿ ಸಂಸ್ಕೃತವನ್ನು ತೆಗೆದುಕೊಂಡು ಮೊದಲನೆಯವರಾಗಿ ಕೃತಾರ್ಥರಾಗಿರುವುದೂ ಪ್ರಶಂಸನೀಯವಾಗಿರುವುದಲ್ಲದೆ ಸಮಾಜಕ್ಕೆ ಭೂಷಣವಾಗಿದೆ. ಶ್ರೀಕರಭಾಷ್ಯವನ್ನು ಮುದ್ರಣ ಮಾಡಿಸುವುದಕ್ಕಾಗಿ ಕಾಗದವನ್ನು ಕೊಂಡುಕೊಳ್ಳಲು ಸಂಘದಿಂದ 500 ರೂ. ಗಳು ಕೊಡಲ್ಪಟ್ಟಿರುವುದಾಗಿ ತಿಳುಹಲ್ಪಟ್ಟಿದೆ. ಈ ಭಾಷ್ಯವು ಮಹಾ ಉದ್ಗ್ರಂಥವಾಗಿರುವುದರಿಂದ ಇದನ್ನು ತಿದ್ದಿ ಮುದ್ರಣಮಾಡಿಸುವುದು ಸಾಮಾನ್ಯಕಾರ್ಯವಲ್ಲವಾದಪ್ರಯುಕ್ತ ವೀರಶೈವಪಂಡಿತರುಗಳ ಕಮಿಟಿಯೊಂದನ್ನು ನಿಯಮಿಸಿ ಅವರಿಂದ ಅದು ಅನುಮೋದಿಸಲ್ಪಟ್ಟಮೇಲೆ ಮುದ್ರಣಮಾಡಿಸಲ್ಪಡಬೇಕೆಂದು ಹಿಂದೆ ಒಂದಾನೊಂದು ಸಮ್ಮೇಳನದಲ್ಲಿ ಕೈ|| ಎಚ್. ಆರ್. ಕರಿಬಸವಶಾಸ್ತ್ರಿಗಳು ಬಹಳವಾಗಿ ಚರ್ಚಿಸಿ ಸಂಘದ ಮೆಂಬರುಗಳನ್ನೊಪ್ಪಿಸಿದ್ದುದಾಗಿ ನಮ್ಮ ಸ್ಮೃತಿಯಲ್ಲುಂಟು. ಆದರೆ ಅಂತಹ ವೀರಶೈವವಿದ್ವನ್ಮಂಡಲಿಯು ಏರ್ಪಡಿಸಲ್ಪಡದೆ ಈ ಮಹಾಗ್ರಂಥದ ಪರಿಶೋಧನೆಯ ಕೆಲಸವು ಒಬ್ಬ ಶ್ರೀವೈಷ್ಣವಬ್ರಾಹ್ಮಣರಿಗೆ ವಹಿಸಲ್ಪಟ್ಟಿರುವುದಾಗಿ ಕೇಳುತ್ತೇವೆ. ಇದು ನಿಜವಾಗಿದ್ದಲ್ಲಿ "ಹಗೆಯವನನ್ನು ಚಂದ್ರತಾರಾಬಲವನ್ನು ಕೇಳಿದ'' ನೆಂಬ ಸಾಮತಿಗೆ ಸರಿಯಾಗಿದೆ. ಇದೀ ವೀರಶೈವಸಮಾಜಕ್ಕೆ ಸಂಬಂಧಪಟ್ಟು ಬಹು ಉತ್ತರವಾದಿತ್ವವುಳ್ಳ ಕಾರ್ಯವನ್ನು ಈ ಫಂಡ್‌ಸಂಘದವರು ಸ್ವೇಚ್ಛೆಯಿಂದ ಮಾಡಿ ಸಮಾಜದವರು ಮುಂದೆ ಕಣ್ಣು ಬಾಯಿಬಿಡುವಂತೆ ಮಾಡುವುದು ಉಚಿತವಲ್ಲವಾದಪ್ರಯುಕ್ತ, ವೇದ ಮತ್ತು ಭಾಷ್ಯಗಳಲ್ಲಿ ಅದ್ವಿತೀಯಪಂಡಿತರಾದ ಸ್ವಾಮಿವಿರೂಪಾಕ್ಷ ಒಡೆಯರ ಸಾಹಾಯ್ಯವನ್ನು ಪಡೆದುಕೊಂಡು ಶ್ರೀಕರಭಾಷ್ಯವನ್ನು ಮುದ್ರಣಮಾಡಿಸುವುದು ಈ ವಿದ್ಯಾಭಿವೃದ್ಧಿಫಂಡ್‌ಸಂಘದವರಿಗೆ ಯೋಗ್ಯವಾಗಿರುತ್ತದೆ. ಸೆಕ್ರೆಟರಿಯವರ ವರದಿಯಮೇಲೆ ಕೆಲ ಚರ್ಚೆಗಳೂ ಸಮಾಧಾನಗಳೂ ನಡೆದನಂತರ ಮ್ಯಾನೇಜಿಂಗ್ ಕಮಿಟಿಯ ಸಭಿಕರ ಆರಿಸುವಿಕೆಯಾಗಿ ಸರ್ ಕೆ.ಪಿ. ಪುಟ್ಟಣ್ಣಸೆಟ್ಟರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟು, ಮ|| ಗಳಾದ ಜಿ. ಪರಮಶಿವಯ್ಯ, ಬಿ. ಎ., ಎಲ್ ಎಲ್. ಬಿ. ಯವರು ಸೆಕ್ರೆಟರಿಯಾಗಿಯೂ, ಎಂ. ನಾಗಪ್ಪನವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ, (1) ಪಿ. ಎಂ. ಬಸಪ್ಪನವರು (2) ಜಿ. ಸಿದ್ಧವೀರಪ್ಪನವರು (3) ಗೊಲ್ಲಹಳ್ಳಿ ರುದ್ರಪ್ಪನವರು (4) ಯಜಮಾನ್ ಬಸಪ್ಪನವರು (5) ಸಿದ್ಧಬಸವಶೆಟ್ಟರು (6) ಕ್ಯಾಪ್ಟನ್ ವೈ ವಿ. ಅಯ್ಯನವರು (7) ಟಿ. ಎಚ್. ಚೆನ್ನಪ್ಪನವರು (8) ಟಿ. ರಾಚಪ್ಪನವರು (9) ತಿಪಟೂರಿನ ಡಿ. ಎಸ್. ಮಲ್ಲಪ್ಪನವರು (10) ಹೊಸಕೋಟೆ ಭದ್ರಪ್ಪನವರು (11) ತುಮಕೂರಿನ ಟಿ. ಗುರುನಂಜಯ್ಯ, ಬಿ. ಎ, ಬಿ. ಎಲ್., ರವರು (12) ಯು. ಎಸ್. ಕಾಳಪ್ಪನವರು ಮೆಂಬರುಗಳಾಗಿಯೂ ಬಹುಮತದಿಂದ ಆರಿಸಲ್ಪಟ್ಟರು, ಮತ್ತು ಅಕೌಂಟ್ ಪ್ರಬೇಷನರ್ ಮ|| ಜಿ. ಎಸ್. ತಮ್ಮಯ್ಯ, ಬಿ. ಎ, ಯವರೂ, ಮ|| ಜಿ. ಚೆನ್ನಬಸಪ್ಪ, ಬಿ. ಎ, ಬಿ. ಎಲ್., ರವರೂ ಆಡಿಟರುಗಳಾಗಿ ನಿಯಮಿಸಲ್ಪಟ್ಟರು. ಹೊಸದಾಗಿ ನಿಯಮಿಸಲ್ಪಟ್ಟಿರುವ ಮ್ಯಾನೇಜಿಂಗ್ ಕಮಿಟಿಯವರು ತಮ್ಮ ಕಾಲಾವಧಿಯಾದ 3 ವರ್ಷಗಳಲ್ಲಿ ಸತ್ಪ್ರಯತ್ನಪಟ್ಟು ಸಂಘದ ಫಂಡನ್ನು ನಾನಾಮುಖವಾಗಿ ಅಭಿವೃದ್ಧಿಗೊಳಿಸಿ ಅದರ ವೃದ್ಧ್ಯಂಶದಿಂದ ಹೆಚ್ಚು ಸಂಖ್ಯೆಯ ಬಡವೀರಶೈವ ವಿದ್ಯಾರ್ಥಿಗಳು ವೇತನವನ್ನು ಪಡೆದು ಉನ್ನತಪರೀಕ್ಷೆಗಳಲ್ಲಿ ಕೃತಾರ್ಥರಾಗಿ ಸಮಾಜಕ್ಕೆ ಕೀರ್ತಿಪ್ರತಿಷ್ಠೆಗಳನ್ನು ತರುವಂತೆಮಾಡಿ ಕೃತಕೃತ್ಯರಾಗುವರೆಂದು ನಿರೀಕ್ಷಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ನೆನ್ನೆಯ ದಿವಸ ಸಾಯಂಕಾಲ ರಾಜಧಾನಿಯಲ್ಲಿ ಕೊಂಚ ಮಳೆಯಾಯಿತು.

ಈ ರಾತ್ರಿ ರಾಜಧಾನಿಯ ಶ್ರೀಚಾಮುಂಡೇಶ್ವರೀ ಕರ್ನಾಟಕನಾಟಕ ಸಭೆಯವರು ಚಿತ್ತಾಕರ್ಷಕವಾದ ಆ ಪ್ರಖ್ಯಾತ ರಾಜಸೂಯಯಾಗಕಥೆಯನ್ನು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಪ್ರದರ್ಶಿಸುವವರಾಗಿರುವರು.

ಬೆಂಗಳೂರಲ್ಲಿರುವ ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿದ್ದ ಫಾದರ್ ಟಬಾರ್ಟ್‌ರವರು ಗತಿಸಿದುದರಿಂದ ರಾಜಕಾರ್ಯಪ್ರಸಕ್ತ ರಾವ್‌ಬಹದ್ದೂರ್ ಮ|| ಶ್ಯಾಮರಾವ್ ಎಂ.ಎ., ಯವರು ಆ ಸೊಸೈಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಾಗಿ ನಿಯಮಿಸಲ್ಪಟ್ಟಿರುವ ಸರ್ ಟಾಡ್‌ಹಂಟರ್‌ರವರು ಸೀಮೆಗೆ ಪ್ರಯಾಣಮಾಡದೆ ಈ ದಿವಸ ರಾಜಧಾನಿಗೆ ಬಂದು ಸೋಮವಾರ ತಮ್ಮ ಉದ್ಯೋಗವನ್ನು ವಹಿಸಿಕೊಳ್ಳುವವರಾಗಿರುವರೆಂದು ಕೇಳುತ್ತೇವೆ.

ಬರೋಡಾಸಂಸ್ಥಾನದ ಮಹಾರಾಣಿಯವರ ಪ್ರೈವೆಟ್‌ಸೆಕ್ರೆಟರಿಯಾದ ಮ|| ಭಾಟೆಯವರೂ ಡಾಕ್ಟರ್ ಅಂಬಿಕರ್‌ರವರೂ ರಾಜಧಾನಿಗೆ ಬಂದು ಸಂಸ್ಥಾನದ ಅತಿಥಿಗಳಾಗಿದ್ದು ಕನ್ನಂಬಾಡಿಕಟ್ಟೆ ಮೊದಲಾಗಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ತೆರಳಿದರು.

ಕಾಫಿತೋಟದಲ್ಲಿ ಕೆಲಸಮಾಡಲು ಸಣ್ಣಹುಡುಗರನ್ನು ರಹಸ್ಯದಿಂದ ಕರೆದುಕೊಂಡು ಹೋಗುತ್ತಿದ್ದ ಪುಟ್ಟಾಮೇಸ್ತ್ರಿಯು ಪೋಲೀಸಿನವರಿಂದ ಹಿಡಿಯಲ್ಪಟ್ಟು ಮೈಸೂರುಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು 6 ವಾರಗಳವರೆಗೆ ಸಾಮಾನ್ಯಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ಮೈಸೂರು ನ್ಯಾಯವಿಧಾಯಕಸಭೆಯಲ್ಲಿ ಒಬ್ಬ ಸಭಾಸ್ತರರು ಒಂದು ರೆಝುಲೇಷನ್ನಿಗಿಂತಲೂ, ಒಂದು ಪ್ರಶ್ನೆಗಿಂತಲೂ ಹೆಚ್ಚಾಗಿ ತರಕೂಡದೆಂಬ ನಿರ್ಬಂಧವು ತಪ್ಪಿಸಲ್ಪಟ್ಟು ಬೇಕಾದಷ್ಟು ರೆಝುಲೇಷನ್ನನ್ನು ತರಬಹುದೆಂಬ ಮತ್ತು ಪ್ರಶ್ನೆಯನ್ನು ಕೇಳಬಹುದೆಂಬ ಸೌಕರ್ಯವು ಕಲ್ಪಿಸಲ್ಪಟ್ಟಿರುತ್ತದೆ.

ಇದೇ ಜುಲೈ ತಾ. 21 ನೇ ಬುಧವಾರ ರಾತ್ರಿ 9 ಘಂಟೆಗೆ ಪ್ರಥಮ ಏಕಾದಶಿ ಪ್ರಯುಕ್ತ ಮೈಸೂರು ಮಂಡಿಪೇಟೆ ಎಲೆಮಂಡಿಯಲ್ಲಿರುವ ಗಂಜಾಂ ಮ|| ಬಾಲಯ್ಯನವರ ಮನೆಯಲ್ಲಿ ಬ್ರ|| ಶ್ರೀ|| ವೇ|| ಶಿವಕಥಾಪಂಡಿತ ಸಿಂಹ ಇತ್ಯಾದಿ ಬಿರುದಾಂಕಿತರಾದ ಶಿವಯ್ಯಶಾಸ್ತ್ರಿಗಳಿಂದ ಕಿರುತಾಜುಣಸೀಯ ಎಂಬ ಕಥಾಶ್ರವಣವು ಜರುಗಿಸಲ್ಪಡುವುದು.

ಗುಂಡ್ಲುಪೇಟೆ ತಾಲ್ಲೂಕಿನಿಂದ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿ ಆರಿಸಲ್ಪಟ್ಟಿದ್ದ ಕಬ್ಬಳ್ಳಿ ಸಾಹುಕಾರ್ ಚೆನ್ನಬಸಪ್ಪನವರ ಅಕಾಲಮರಣದಿಂದ ಬಿಡುವಾದ ಸ್ಥಳಕ್ಕೆ ಉಮೇದುವಾರರಾಗಿ ನಿಂತಿದ್ದ ವೀರಶೈವರಲ್ಲಿ ಸ್ಪರ್ಧೆಯು ಹೆಚ್ಚಾದುದರಿಂದ 'ಇಬ್ಬರ ಜಗಳದಿಂದ ಮೂರನೆಯವನಿಗೆ ಲಾಭ' ಎಂಬ ಗಾದೆಯಂತೆ ಮ|| ಜಿ. ವೆಂಕಟೇಶಯ್ಯನವರು ನಿರಾಯಾಸವಾಗಿ ಆರಿಸಲ್ಪಟ್ಟರು.

ರಾಜಧಾನಿಯ ವರ್ತಕಸಂಘದ ವಾರ್ಷಿಕಸಮ್ಮೇಳನವು ಈ ತಾ|| 25 ನೆಯ ಭಾನುವಾರಸಾಯಂಕಾಲ 6 ಘಂಟೆಗೆ ಸಂಘದ ಕಟ್ಟಡದಲ್ಲಿ ನಡೆಯುವುದು. ಆ ಕಾಲದಲ್ಲಿ ಪರ್ಯಾಲೋಚಿಸಲ್ಪಡುವ ವಿಚಾರಗಳಲ್ಲಿ ಸಕ್ಕರೆಯ ಮೇಲಿನ ಸುಂಕವನ್ನು ಕಡಿಮೆಮಾಡಬೇಕೆಂದೂ, ಅಂಚೆಯ ಮೂಲಕ ತರಿಸಲ್ಪಡುವ ಪದಾರ್ಥಗಳಮೇಲೆ ಸುಂಕವನ್ನು ವಿಧಿಸಬಾರದೆಂದೂ ಮ್ಯುನಿಸಿಪಾಲಿಟಿಗೆ ಅಂಕೆಮಾಡಿಕೊಳ್ಳತಕ್ಕ ವಿಚಾರವು ಪ್ರಾಮುಖ್ಯವಾಗಿರುತ್ತದೆ.

ಕಳ್ಳತನದಿಂದ ಸಾರಾಯಿಭಟ್ಟಿಯನ್ನಿಳಿಸುತ್ತಿದ್ದ ಅಪರಾಧಕ್ಕಾಗಿ ಕೋಲಾರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಎಂ.ಎಚ್. ಬಾಳರಾಜ ಅರಸ್, ಬಿ.ಎ., ಯವರ ಕೋರ್ಟಿನಲ್ಲಿ ವಿಚಾರಣೆಗೊಳ್ಳುತ್ತಿದ್ದ ರಾಮಯ್ಯ ಎಂಬುವವನಿಗೆ 2 ತಿಂಗಳ ಕಠಿಣಕಾರಾಗೃಹವಾಸ ಮತ್ತು 2 ತಿಂಗಳ ಸಾಧಾರಣ ಕಾರಾಗೃಹವಾಸಶಿಕ್ಷೆಯೂ 200 ರೂ. ಅರ್ಥದಂಡವೂ, ಅವನ ಸಹಾಯಕರಾದ ಚೆಂಗನಿಗೂ ಮಾದನಿಗೂ ತಲಾ 1 ತಿಂಗಳ ಕಠಿಣಕಾರಾಗೃಹವಾಸ ಶಿಕ್ಷೆಯೂ ವಿಧಿಸಲಾಯಿತು.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿರುವ ಮ|| ಬಿ. ಕೃಷ್ಣಪ್ಪ, ಎಂ. ಎ., ರವರು ಕಣ್ಣುಬೇನೆಯಿಂದ ರಜವನ್ನು ತೆಗೆದುಕೊಂಡಿರುವ ಪ್ರಯುಕ್ತ ರಾಜಧಾನಿಯ ಓರಿಯಂಟಲ್ ಲೈಬ್ರರಿಯಲ್ಲಿ ಗ್ರಂಥಶೋಧಕರಾಗಿದ್ದ ಮ|| ಎ. ಆರ್. ಕೃಷ್ಣಶಾಸ್ತ್ರಿ, ಎಂ. ಎ , ಯವರು ಮಹಾರಾಜಾ ಕಾಲೇಜಿನಲ್ಲಿ ಕನ್ನಡಪಂಡಿತರಾಗಿ ನಿಯಮಿಸಲ್ಪಟ್ಟಿರುವರು. ಇವರು ಸಂಸ್ಕೃತದಲ್ಲೂ ಕನ್ನಡದಲ್ಲೂ ಒಳ್ಳೇ ಪಂಡಿತರಾಗಿರುವುದರಿಂದ ಈ ಉದ್ಯೋಗಕ್ಕೆ ತಕ್ಕವರಾಗಿರುತ್ತಾರೆ.

ಬೆಂಗಳೂರು ಗೌರ್ನಮೆಂಟ್ ಇಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರ ಮಗನಾದ ಶ್ರೀನಿವಾಸಯ್ಯರ್ ಎಂಬ ವಿದ್ಯಾರ್ಥಿಯು ತಾನು ವ್ಯಾಸಂಗ ಮಾಡುತ್ತಿದ್ದ ಅದೇ ಇಂಜನಿಯರಿಂಗ್ ಕಾಲೇಜಿನಲ್ಲಿ ಮೇಲ್ತರಗತಿಗೆ ತನ್ನ ತಂದೆಯಿಂದ ಕಳುಹಿಸಲ್ಪಡದಿದ್ದುದರಮೇಲೆ ಹತಾಶನಾಗಿ ಒಂದು ಚೂರಿಯಿಂದ ಆತ್ಮಹತ್ಯಮಾಡಿಕೊಳ್ಳುತ್ತಿರುವಷ್ಟರಲ್ಲಿ ತಂದೆಯು ಕಂಡು ಆ ಕೃತ್ಯವನ್ನು ತಡೆದು ನಿಲ್ಲಿಸಿದರು. ಈಗ ಆ ವಿದ್ಯಾರ್ಥಿಯು ಆತ್ಮಹತ್ಯಪ್ರಯತ್ನಕ್ಕಾಗಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು.

ಬೆಂಗಳೂರಿಗೆ ಮದ್ರಾಸಿನಿಂದ ಬಂದು ವೆಸ್ಟ್ ಎಂಡ್ ಹೋಟೆಲಿನಲ್ಲಿಳಿದುಕೊಂಡಿದ್ದ ವೆಂಕಟರಾಯರೆಂಬುವವರು ಕಳೆದ ತಾ|| 9 ರ ರಾತ್ರಿ ಮಲಗಿಕೊಂಡಿರುವಾಗ್ಗೆ ಪೆಟ್ಟಿಗೆಯನ್ನೆಳೆದ ಶಬ್ದವನ್ನು ಕೇಳಿದರೂ ಎದ್ದು ನೋಡದೆ ಬೆಳಕುಹರಿದಮೇಲೆದ್ದು ನೋಡುವಲ್ಲಿ ತಮ್ಮ ಪೆಟ್ಟಿಗೆಯು ಮಾಯವಾಗಿದ್ದು ಕೊಂಚಹೊತ್ತಿನಮೇಲೆ ಸಿಕ್ಕಿತಾದರೂ ಅದರೊಳಗಿಟ್ಟಿದ್ದ 15,000 ರೂಪಾಯಿಗಳ ನೋಟುಗಳು ಮಾತ್ರ ಇರಲಿಲ್ಲ. ಈ ವೆಂಕಟರಾಯರಿಗೆ ಉದಕಮಂಡಲದಲ್ಲೂ ಬೆಂಗಳೂರಿನಲ್ಲೂ ನಡೆದ ಕುದುರೆಯ ಜೂಜಿನಲ್ಲಿ ವಿಶೇಷ ಹಣಬಂದಿದ್ದಿತಂತೆ.

ಲೋಕಸೇವಾನಿರತ ಮ|| ಅಂಬಲೆ ಅಣ್ಣಯ್ಯಪಂಡಿತರ ಧರ್ಮಪತ್ನಿಯವರು ವೃದ್ಧಾಪ್ಯದಿಂದ ರುಗ್ಣಶಾಯಿಗಳಾಗಿದ್ದು ನೆನ್ನೆಯದಿನ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈಕೆಯು ತಮ್ಮ 79-80 ನೆಯ ವಯಸ್ಸಿನಲ್ಲಿ ಸುಮಂಗಲಿಯಾಗಿ ಪರಂಧಾಮವನ್ನು ಹೊಂದಿದ್ದು ಅವರ ಸುಕೃತವಿಶೇಷ. ಮ|| ಪಂಡಿತರಿಗೆ ವೃದ್ಧಾಪ್ಯದಲ್ಲಿ ಪತ್ನಿವಿಯೋಗವೂ, ಮ|| ಸುಬ್ರಹ್ಮಣ್ಯಅಯ್ಯರ್‌ರವರಿಗೆ ಮಾತೃವಿಯೋಗವೂ ಪ್ರಾಪ್ತವಾದುದಕ್ಕಾಗಿ ನಮ್ಮ ಅನುತಾಪವನ್ನು ತಿಳುಹಿಸಿ ಮೃತರ ಆತ್ಮಕ್ಕೆ ನಿರಂತರಶಾಂತಿಯುಂಟಾಗಲೆಂದು ಕೋರುತ್ತೇವೆ.

ರಾಜಕುಮಾರಿ ಸೌ|| ಲೀಲಾವತಿಯವರ ಪತಿಯವರಾದ ಮ|| ಕೆ. [illegible] ಅರಸಿನವರು ತಮಗೆ ಲಗ್ನವಾದ ಸಂತೋಷಸೂಚಕಾರ್ಥವಾಗಿ [illegible] ಮೊದಲಾದ ಅಧಿಕಾರಿಗಳು, ಬಂಧುಬಳಗಳು, ಮ್ಯುನಿಸಿಪಲ್ ಕೌನ್ಸಿಲರುಗಳು, [illegible]ರುಗಳು, ವರ್ತಕರುಗಳು ಮೊದಲಾದ [illegible] ಮಾಡಿಕೊಂಡು ಅಲ್ಪಹಾರದಿಂದಲೂ ಟೆನಿಸ್ ಮೊದಲಾದ ಆಟಗಳಿಂದಲೂ ತಿರುವೆಂಕಟರಂ ಬ್ರದರ್ಸ್‌ರವರ ಕೊಳಲು ಮತ್ತು ಪಿಟೀಲುವಾದನಗಳಿಂದಲೂ, ಕರ್ನಾಟಕಬ್ಯಾಂಡ್‌ಶ್ರವಣದಿಂದಲೂ ಸತ್ಕರಿಸಿದರು. ಮ|| ಅರಸಿನವರು ಬುಧವಾರ ಮೋಟಾರುಬಂಡಿಯಲ್ಲಿ ಬೆಂಗಳೂರಿಗೆ ಹೋಗಿ ಅದೇ ರಾತ್ರಿ ಅಲ್ಲಿಂದ ನರಸಿಂಹರಾಜಪುರಕ್ಕೆ ರೈಲುಬಂಡಿಯಲ್ಲಿ ಪ್ರಯಾಣಮಾಡಿ ಮಾರನೆಯ ದಿನ ಮುನಸೀಫ್ ಉದ್ಯೋಗವನ್ನು ವಹಿಸಿಕೊಂಡರು.

ಮಡಕೇರಿಯಲ್ಲಿ ಕಳೆದ ತಾ|| 6 ರಲ್ಲಿ 4 ಅಂಗುಲ 70 ಸೆಂಟು, ತಾ|| 7ರಲ್ಲಿ 4 ಅಂಗುಲ 78 ಸೆಂಟು ಮತ್ತು ತಾ|| 8 ರಲ್ಲಿ 8 ಅಂಗುಲ ಈ ಪ್ರಕಾರವಾಗಿ ಒಂದು ವಾರದಲ್ಲಿ 25 ಅಂಗುಲ 42 ಸೆಂಟು ಮಳೆಯಾಗಿರುವುದಲ್ಲದೆ, ಇದೇ ಕಾಲಾವಧಿಯಲ್ಲಿ ನಮ್ಮ ಮೈಸೂರು ಸೀಮೆಯಲ್ಲಿ ಅಂದರೆ ತಿಪಟೂರಿನಲ್ಲಿ 2.80, ಮೈಸೂರಿನಲ್ಲಿ 6.68, ಶ್ರೀರಂಗಪಟ್ಟಣದಲ್ಲಿ 2.60 ಹುಣಸೂರಿನಲ್ಲಿ 8.57, ಯಡತೊರೆಯಲ್ಲಿ 3.05, ಪಿರಿಯಾಪಟ್ಟಣದಲ್ಲಿ 8.23, ಹಾಸನದಲ್ಲಿ 5.25, ಸಕಲೇಶಪುರದಲ್ಲಿ 23.03, ಬೇಲೂರಿನಲ್ಲಿ 10.20, ಶಿವಮೊಗ್ಗೆಯಲ್ಲಿ 8.96, ನಗರದಲ್ಲಿ 48.31, ತೀರ್ಥಹಳ್ಳಿಯಲ್ಲಿ 28.97, ಚಿಕ್ಕಮಗಳೂರಿನಲ್ಲಿ 10.51, ಮೂಡಗೆರೆಯಲ್ಲಿ 31.45, ಶ್ರಿಂಗೇರಿಯಲ್ಲಿ 38.74, ಕೊಟಿಗೆಹಾರಿನಲ್ಲಿ 59.20 ಮತ್ತು ಹೊಸದುರ್ಗದಲ್ಲಿ 2.59 ಅಂಗುಲ ಮಳೆಯಾಗಿರುತ್ತದೆಂದು ಸರ್ಕಾರದ ವರದಿಯಿಂದ ವ್ಯಕ್ತವಾಗುತ್ತದೆ.

ಒಬ್ಬ ಐರೋಪ್ಯ ತೋಟಗಾರನ ಹೆಂಡತಿಯು ಅಸ್ವಸ್ಥಳಾಗಿ ಮಲಗಿಕೊಳ್ಳಲು ಅವಳು ಮುದ್ದಾಗಿ ಸಾಕುತ್ತಿದ್ದ ನಾಯಿಯು ಪದೇ ಪದೇ ಹಾಸಿಗೆಯ ಬಳಿ ಹೋಗಿ ತನ್ನ ಯಜಮಾನಿಯನ್ನು ನೋಡಿಕೊಂಡುಬರುತ್ತಿದ್ದು ಆಕೆಯು ಸತ್ತುಹೋಗಿ ಅವಳ ಶವವು ಹೊರಗೆ ಅಡುಗೆಯಮನೆಯ ಹತ್ತಿರ ತಂದು ಮಲಗಿಸಲ್ಪಡುತ್ತಲೆ ತನ್ನ ಹಿಂಗಾಲುಗಳಮೇಲೆ ನಿಂತುಕೊಂಡು ಆಕೆಯನ್ನು ನೋಡುತ್ತ ಬಹುಗಟ್ಟಿಯಾಗಿ ರೋದಿಸಿ ನೆಲದಮೇಲೆ ಬಿದ್ದು ಕೂಡಲೆ ಪ್ರಾಣಬಿಟ್ಟಿತಂತೆ.

ಮಧುರೆಯ ಡಿಸ್ಟ್ರಿಕ್ಟಿಗೆ ಸೇರಿದ ತೇವರಂ ಎಂಬ ಗ್ರಾಮದಲ್ಲಿ ನಾಗಯ್ಯಚೆಟ್ಟಿ ಎಂಬುವವನು ರಾಮಸ್ವಾಮಿಚೆಟ್ಟಿ ಎಂಬುವವನಿಗೆ ಕೊಡಬೇಕಾಗಿದ್ದ 9 ರೂಪಾಯಿ ಸಾಲಕ್ಕಾಗಿ ಉಭಯರಿಗೂ ವಾಗ್ವಾದನಡೆದು ಪಂಚಾಯತರಲ್ಲಿ ಸಾಲಗಾರನು 4 ರೂಪಾಯಿ ಕೊಡುವಂತೆ ತೀರ್ಮಾನವಾಗಿದ್ದಿತು. ಅದರೆ ರಾಮಸ್ವಾಮಿಚೆಟ್ಟಿಯು ಒಂದು ದಿವಸ ಮನೆಯಜಗಲಿಯಮೇಲೆ ಕುಳಿತಿರುವಾಗ್ಗೆ ಸಾಲಗಾರನಾದ ನಾಗಯ್ಯಚೆಟ್ಟಿಯು ಹಿಂದಿನಿಂದ ಬಂದು ಚೂರಿಯಿಂದ ಅವನನ್ನು ತಿವಿದು ಕೊಂದುಹಾಕಿ ಓಡಿಹೋಗುತ್ತಿದ್ದಾಗ್ಗೆ ಜನರು ಅವನನ್ನು ಹಿಡಿದು ಪೋಲೀಸರ ವಶಮಾಡಿದುದರಮೇಲೆ ಸೆಶನ್ಸ್ ವಿಚಾರಣೆಗೆ ಗುರಿಯಾಗಿ ಮರಣದಂಡನೆಯನ್ನು ಹೊಂದಿದನು.

ಬೊಂಬಾಯಿಪಟ್ಟಣದ ಕಾಮಾಟಿಪುರ ಬೀದಿನಲ್ಲಿ ಚಾ ಮಾರುವ ಒಬ್ಬ ಹಿಂದುವಿನ ಹೆಂಡತಿ ಪ್ರಹ್ಲಾದಬಾಯಿಯು ತಾ|| 9 ರಲ್ಲಿ ತನ್ನ ಗಂಡನೂ, ಅಂಗಡಿಯ ಸೇವಕನೂ ಚಾ ಮಾರಲು ಹೊರಕ್ಕೆ ಹೋಗಿರುವಾಗ್ಗೆ ಅಂಗಡಿಯ ಹಿಂದೆ ಒಂದು ಕೊಠಡಿಯೊಳಗೆ ಮಲಗಿರುವ ವೇಳೆಯಲ್ಲಿ ಅದಿರ ಕೊಠಡಿಯ ವಾಸಸ್ಥನಾದ ಹನುಮಂತರಾವ್ ಎಂಬುವವನು ಬಂದು ಅವಳ ಎದೆಯಮೇಲೆ ಕುಳಿತು ಅವಳ ಕೆನ್ನೆಯನ್ನು ಕಡಿದು ಮಾನಭಂಗಮಾಡಲು ಸಾಹಸಪಟ್ಟಾಗ್ಗೆ ಅವಳು ಅವಕಾಶಕೊಡದೆಹೋದುದರಮೇಲೆ ಚಾಕುವಿನಿಂದ ಏವಿಯಲ್ಲಿ [illegible]. ಅಷ್ಟರಲ್ಲಿ ಹೊರಕ್ಕೆ ಹೋಗಿದ್ದ ಅವಳ ಗಂಡನು ಬಂದುನೋಡಿ ಬಾಯನ್ನು ಬಡಿದುಕೊಂಡನು. ಆಗ ಆ ಸ್ತ್ರೀಯು ಅವಳ ಗಂಡನನ್ನು [illegible] ತಿವಿಯಲೆತ್ತಿಸುವಷ್ಟರಲ್ಲಿ ನೆರೆಯವರು ಬಂದು ಅವನನ್ನು ಹಿಡಿದು ಚೂರಿಯನ್ನು ಕಿತ್ತುಹಾಕಿ ಪೋಲೀಸರ ವಶಮಾಡಿದರು. ಅವನ ವಿಚಾರಣೆಯು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿದೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡು ಸಂಘದ 1925-26 ನೇ ಸಾಲಿನ ವರದಿ.

ಸಂಘದ ಕಾರ್ಯನಿರ್ವಾಹಕ ಕಮಿಟಿಯವರ ಪರವಾಗಿ ಸಭಿಕರ ಸುಜನಗಮನವನ್ನು ಬಯಸಿ 1925-26 ನೇ ಸಾಲಿನಲ್ಲಿ ಎಂದರೆ ತಾ|| 23-6-25 ರಿಂದ 30-6-26 ರ ವರಿವಿಗೆ ಕಮಿಟಿಯವರು ನಡೆಸಿರುವ ಕಾರ್ಯಕ್ರಮವನ್ನು ಸಂಕ್ಷೇಪವಾಗಿ ತಿಳುಹಲು ಅಪೇಕ್ಷಿಸುತ್ತೇವೆ. ಕಳೆದ ವರ್ಷದ ತಮ್ಮ ರಿಪೋರ್ಟಿನಲ್ಲಿ ಆಡಿಟರುಗಳು ಸೂಚಿಸಿದಂತೆ ವೇತನವನ್ನು ಪಡೆಯಲು ಅರ್ಹರೆಂದು ಕಮಿಟಿಯವರು ನಿರ್ಧರಿಸಿದ ವಿದ್ಯಾರ್ಥಿಗಳ ಹೆಸರನ್ನು ತೋರಿಸುವ ಒಂದು ರಿಜಿಸ್ಟರನ್ನು ಇಟ್ಟಿದೆ. ಹೋದ ಜನರಲ್‌ಕಮಿಟಿಯಲ್ಲಿ ನಿರ್ಧರವಾದಂತೆ ಬೆಂಗಳೂರಿನ ವೀರಶೈವವರ್ತಕರು ಮೊದಲಾದವರಿಂದ ಗೋಲಕಗಳ ಮೂಲಕ ಹಣವನ್ನು ವಸೂಲ್ ಮಾಡುತ್ತಲಿದೆ. ಅದರ ಬಾಬತು ಇದುವರಿವಿಗೆ 369-6-7 ಶೇಖರವಾಗಿದೆ.

ಇದುವರಿವಿಗೆ ಸಂಘದಿಂದ ವೇತನವನ್ನು ಪಡೆದು ಸಂಪಾದನೆಯನ್ನು ಮಾಡುತ್ತಲಿರುವವರಿಂದ ಮೊಬಲಗನ್ನು ಬರಮಾಡಿಕೊಳ್ಳಲು ಅಸಿಸ್ಟೆಂಟ್ ಸೆಕ್ರೆಟರಿಯವರು ಬಹಳ ಶ್ರಮವನ್ನು ವಹಿಸಿ ಒಂದು ತಖ್ತೆಯನ್ನು ತಯಾರುಮಾಡಿರುತ್ತಾರಾದಾಗ್ಯು ಯಾರ್‍ಯಾರಿಂದ ಎಷ್ಟೆಷ್ಟು ಮೊಬಲಗು ಬರಬೇಕೆಂಬುದನ್ನು ನಿರ್ಧರಿಸಿ ಹೇಳಲು 1907 ರಿಂದ 1919 ನೇ ಇಸವಿವರಿವಿಗೆ ಸರಿಯಾದ ದಾಖಲೆಯು ದೊರೆಯದಿದ್ದರಿಂದ ಅದರ ವಿಚಾರದಲ್ಲಿ ಮುಂದಲ ಕ್ರಮವನ್ನು ಜರಿಗಿಸಲು ಸಾಧ್ಯವಾಗಲಿಲ್ಲ. ಈಗ ತಯಾರುಮಾಡಲ್ಪಟ್ಟಿರುವ ತಖ್ತೆಯಂತೆ ಮೊಬಲಗನ್ನು ಬರಮಾಡಿಕೊಳ್ಳಬಹುದೆಂದು ತಾವು ನಿರ್ಧರಿಸಿದಲ್ಲಿ ಅದರಂತೆ ಮಾಡಲಾಗುತ್ತೆ. ಯೋಗ್ಯರಾದ ಒಬ್ಬ ಉಪನ್ಯಾಸಕರನ್ನು ಮಾಹೆಯಾನ 30 ರೂಪಾಯಿಗೆ ಮೀರದ ತಲುಬಿನಮೇಲೆ ಸಂಘದ ಉದ್ದೇಶವನ್ನು ಪ್ರಚುರಪಡಿಸುವುದಕ್ಕೂ ಹಣವನ್ನು ಶೇಖರಿಸುವುದಕ್ಕೂ 6 ತಿಂಗಳುಗಳ ಮಟ್ಟಿಗಾದರು ನೇಮಿಸಬೇಕೆಂದು ಕಳೆದವರ್ಷ ನಿರ್ಧರವಾದಂತೆ ಪ್ರಯತ್ನಮಾಡಿದಾಗ್ಯು ಆ ಕೆಲಸಕ್ಕೆ ಯೋಗ್ಯರಾದವರು ಯಾರೂ ದೊರೆಯಲಿಲ್ಲ.

ಆಯವ್ಯಯ.

1925-26ನೆ ಸಾಲಿನ ಆಯವ್ಯಯದ ಮುಖ್ಯಾಂಶಗಳ್ಯಾವುವೆಂದರೆ:— ಮೂಲಧನದ ವೃದ್ಧ್ಯಂಶದಿಂದಲೂ ಇತರ ಬಾಬುಗಳಿಂದಲೂ ಬಂದಿರತಕ್ಕ ಮೊಬಲಗು ಸೇರಿ ನಿವ್ವಳ ಉತ್ಪತ್ತಿಯು ರೂ. 6182-7-8, ಮತ್ತು ವೇತನವೇ ಮೊದಲಾದ್ದಕ್ಕೆ ಒಟ್ಟು ಖರ್ಚು ರೂ. 6123-10-0 ಆಗಿರುವುದು. ಆಡಿಟರುಗಳ ರಿಪೋರ್ಟಿನಲ್ಲಿ ಬಾಬುಗಳೆಲ್ಲವೂ ವಿಶದವಾಗಿ ತೋರ್ಪಡಿಸಲ್ಪಟ್ಟಿವೆ. ಫಂಡಿನ ಬಾಬತು ಮೈಸೂರು ಬ್ಯಾಂಕಿನಲ್ಲಿಟ್ಟಿರುವ ರೂ. 22,000 ಮತ್ತು ರೂ. 1,500 ಫಿಕ್ಸಡ್ ಡಿಪಾಜಿಟ್‌ಗಳ ಬಾಬತು ಈ ಸಾಲಿನ ಜೂನ್ ಆಖೈರುವರೆಗಿನ ಬಡ್ಡಿ ಮೊಬಲಗು ಆಗತಕ್ಕದ್ದು ಸುಮಾರು ರೂ. 1,202-8-0 ಯನ್ನು ಮೂಲಧನಕ್ಕೆ ಸೇರಿಸಿ ಫಿಕ್ಸೆಡ್ ಡಿಪಾಜಿಟ್ಟನ್ನು ರೂ. 25,000 ಕ್ಕೆ ಹೆಚ್ಚಿಸಬೇಕೆಂಬ ಉದ್ದೇಶದಿಂದ ಬ್ಯಾಂಕಿನವರಲ್ಲೇ ಬಿಟ್ಟಿರುತ್ತೆ. 1924-25 ನೇ ಸಾಲಿನಲ್ಲಿ ಫಂಡಿನ ಮೊಬಲಗಿನಿಂದ ವೇತನಕ್ಕಾಗಿ ರೂ. 2,959-4-0 ಮಾತ್ರ ವಿಲೆಯಾಗಿತ್ತು. 1925-26 ನೇ ಸಾಲಿನಲ್ಲಿ 89 ವಿದ್ಯಾರ್ಥಿಗಳಿಗೆ ರೂ. 4,353-2-0 ಕೊಡಲ್ಪಟ್ಟಿದೆ. ಫಂಡಿನ ಸಹಾಯವನ್ನು ಕೋರತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವದ್ದರಿಂದ ಅನೇಕ ಬಡ ವಿದ್ಯಾರ್ಥಿಗಳು ಸಹಾಯವನ್ನು ಹೊಂದಲು ಅರ್ಹರಾದಾಗ್ಯು ವೇತನವನ್ನು ಕೊಡಲು ಅವಕಾಶವಿಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಲಗ್ನ ಮೊದಲಾದುವುಗಳಿಂದ ರೂ. 626-14-0 ಜಮಾಬಂದಿರುತ್ತೆ. ಇದರ ವಿವರ :—

ಬೆಂಗಳೂರು ಡಿಸ್ಟ್ರಿಕ್ಟು		261— 6—0
ತುಮಕೂರು	,,	147— 0—0
ಮೈಸೂರು	,,	61— 0—0
ಹಾಸನ	,,	58—13—0
ಶಿವಮೊಗ್ಗ	,,	43—11—0
ಚಿತ್ರದುರ್ಗ	,,	18— 0—0
ಕೋಲಾರ	,,	17— 0—0
ಕಡೂರು	,,	10— 0—0
ದೆಂಕಣಿಕೋಟೆ, ಸೇಲಂ ಡಿಸ್ಟ್ರಿಕ್ಟು		10— 0—0

ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ ವೀರಶೈವ ವಿದ್ಯಾರ್ಥಿಗಳು —

ಬಿ.ಎ. ಯಲ್ಲಿ 14 ಜನರು, ಬಿ.ಯಲ್. ಮತ್ತು ಎಲ್‌ಎಲ್.ಬಿ. ಯಲ್ಲಿ 6 ಜನರು, ಎಂಟ್ರೆನ್ಸ್‌ನಲ್ಲಿ ಸುಮಾರು 20 ಮಂದಿ ಮಾತ್ರ ಉತ್ತೀರ್ಣರಾಗಿರುವಂತೆ ತಿಳಿದುಬಂದಿದೆ. ಸಂಘದಿಂದ ಮೊದಲಿನಿಂದಲೂ ಸಹಾಯವನ್ನು ಹೊಂದುತ್ತಲಿರುವ ಮೈಸೂರಿನ ಮ||ರಾ|| ಯಂ. ಬಸವಲಿಂಗಯ್ಯ ಎಂಬುವವರು ಬಿ.ಯಲ್. ಮತ್ತು ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರುತ್ತಾರೆ.

ಸಂಘದ ಮೂಲಧನ.

ಬೆಂಗಳೂರಿನಲ್ಲಿ ಮಂಡಿವರ್ತಕರಾಗಿದ್ದ ಗತಿಸಿದ ಬಿ. ಎಂ. ವೀರಪ್ಪನವರ ಧರ್ಮಪತ್ನಿಯವರಾದ ರೇವಮ್ಮನವರು ತಮ್ಮ ಯಜಮಾನರ ಆಜ್ಞೆಯಂತೆ ದತ್ತುಸ್ವೀಕಾರ ಮಾಡಿದ ಕಾಲದಲ್ಲಿ ಫಂಡಿನ ಮೂಲಧನಕ್ಕಾಗಿ ಕೊಟ್ಟರತಕ್ಕ 1001 ರೂ. ಗಳನ್ನೂ, ಸೇಲಂ ಡಿಸ್ಟ್ರಿಕ್ಟು ದೆಂಕಣಿಕೋಟೆಯ ನೋಟುಕಾರ ನಂಜಪ್ಪನವರು ತಮ್ಮ ಅವಸಾನಕಾಲದಲ್ಲಿ ಬರೆದಿಟ್ಟ ವಿಲ್ಲಿನಂತೆ 1000 ರೂ. ಬಾಬ್ತು ಸದರಿ ಸ್ಥಳದ ಮ|| ಡಿ.ಎಚ್. ನೀಲಕಂಠಪ್ಪನವರಿಂದ ಬಂದ 500 ರೂ. ಗಳನ್ನೂ ಮೂಲಧನಕ್ಕೆ ಸೇರಿಸಿ 1,500 ರೂಪಾಯಿಗಳನ್ನು ಮೈಸೂರು ಬ್ಯಾಂಕಿನಲ್ಲಿ ಫಿಕ್ಸಡ್ ಡಿಪಾಜಿಟ್ಟನಲ್ಲಿಟ್ಟಿರುತ್ತೆ. ಮೇಲ್ಕಂಡ ಮತಬಾಂಧವರಿಗು ಮತ್ತು ಅವರ ಕುಟುಂಬದವರಿಗು ಸಹ ಕಾರ್ಯನಿರ್ವಾಹಕ ಸಂಘದವರು ಸಮಾಜದಪರವಾಗಿ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನು ತಿಳುಹಿಸಿರುತ್ತಾರೆ. ಯುವಸಾರ್ವಭೌಮರವರು (ಪ್ರಿನ್ಸ್ ಆಫ್ ವೇಲ್ಸ್‌ರವರು) ಮೈಸೂರು ದೇಶಕ್ಕೆ ದಯೆಮಾಡಿಸಿದ ಜ್ಞಾಪಕಾರ್ಥವಾಗಿ ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು ಸಂಘಕ್ಕೆ ಕೊಟ್ಟಿರುವ 5,000 ರೂಪಾಯಿಗಳ ವೃದ್ಧ್ಯಂಶದಲ್ಲಿ ವೇತನವನ್ನು ಪಡೆಯಲು ವೈದ್ಯವಿದ್ಯಾರ್ಥಿಗಳು ಯಾರೂ ಮುಂದೆ ಬರಲಿಲ್ಲವಾಗಿ ಮೈಸೂರು ಸ್ಟೇಟ್‌ಲೋನ್ ಬಾಬತು ಶೇಕಡ $6\frac{1}{4}$ ರ ಬಡ್ಡಿಯ 300 ರೂಪಾಯಿನ ಬಾಂಡುಗಳನ್ನು ತೆಗೆದುಕೊಂಡು ಮೂಲಧನಕ್ಕೆ ಸೇರಿಸಿದೆ. ಅಂತು ಖರ್ಚೆಲ್ಲ ಕಳೆದು ಫಂಡಿನ ಮೊಬಲಗು ಬ್ಯಾಲೆನ್ಸು ಷೀಟಿನಲ್ಲಿ ತೋರಿಸಿರುವಂತೆ 1,01,539-4-11 ಇರುತ್ತೆ.

ಕೈ|| ಶಾಮಣ್ಣನವರ ಧರ್ಮ.

ಇದಕ್ಕೆ ಸಂಬಂಧಪಟ್ಟ 2 ಕೇಸುಗಳಲ್ಲಿ ಸ್ಥಿರಸ್ವತ್ತುಗಳು ಹರಾಜಿಗೆ ತರಲ್ಪಟ್ಟು ಒಂದರಲ್ಲಿ ಹರಾಜು ನಡೆದು ಇತರರು ಯಾರೂ ಹರಾಜಿನಲ್ಲಿ ಬಿಡ್‌ಮಾಡಲಿಲ್ಲವಾಗಿ ಯಕ್ಸಿಕ್ಯೂಟರ ಹೆಸರಿನಲ್ಲಿ ನಿಲ್ಲಿಸಿಕೊಂಡಿರುತ್ತೆ. ಇನ್ನೊಂದರಲ್ಲಿ ಕಾರಣಾಂತರದಿಂದ ಹರಾಜು ನಡೆಯದೆ ಕೇಸು ಅಡ್ಜರ್ನ್ ಆಗುತ್ತಲಿದೆ.

ಶ್ರೀಕರಭಾಷ್ಯ.

ಇದು ಪ್ರಿಂಟುಮಾಡಲು ಸಿದ್ಧವಾಗಿರುವುದು. ಕಾಗದವನ್ನು ಕೊಂಡುಕೊಳ್ಳಲು ಬೆಂಗಳೂರುಪ್ರೆಸ್ಸಿನವರಿಗೆ 500 ರೂಪಾಯಿ ಅಡ್ವಾನ್ಸು ಕೊಟ್ಟಿದೆ. ಸದರಿ ಕಾಗದವು ಈ ತಿಂಗಳ ಆಖೈರು ಒಳಗಾಗಿ ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಮತಾಭಿಮಾನಿಗಳ ವಿಯೋಗ.

ಈ ಸಮಯದಲ್ಲಿ ಸ್ವಮತದ ವಿದ್ಯಾರ್ಥಿಗಳ ಪುರೋಭಿವೃದ್ಧಿಗಾಗಿ ಸುಮಾರು 50,000 ಸಹಸ್ರಕ್ಕೆ ಮೇಲ್ಪಟ್ಟು ವ್ಯಯಮಾಡಿ ಮೈಸೂರಿನಲ್ಲಿ ವಿದ್ಯಾರ್ಥಿನಿಲಯವನ್ನು ಕಟ್ಟಿಸಿಯು ಇತರ ಧರ್ಮಕಾರ್ಯಗಳನ್ನು ಮಾಡಿಯು ಮತ್ತು ಮಾಡುವವರಾಗಿಯು ಇದ್ದ ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಸಾಹುಕಾರ್ ಚೆನ್ನಬಸಪ್ಪನವರು ಆಕಸ್ಮಿಕವಾಗಿ ಮೃತಿಯನ್ನು ಹೊಂದಿದರೆಂಬ ಸಮಾಚಾರವು ವೀರಶೈವ ಮತಸ್ಥರಿಗಲ್ಲದೆ ಇತರ ಜನಾಂಗದವರಿಗು ಸಹ ಅಪರಮಿತವಾದ ಸಂಕಟವನ್ನುಂಟುಮಾಡಿತು. ಮೈಸೂರು ವಿಶ್ವವಿದ್ಯಾಲಯ (ಯುನಿವರ್ಸಿಟಿ) ಸ್ಥಾಪಿತವಾದಾಗ್ಗೆ ಮೊದಲು ಅದಕ್ಕೆ ಎಂಡೋಮೆಂಟನ್ನು ಕೊಟ್ಟರು. ಅವರು ತಮ್ಮ ಗ್ರಾಮವಾದ ಕಬ್ಬಳ್ಳಿಯಲ್ಲಿ ವಿಶೇಷ ದ್ರವ್ಯವನ್ನು ವೆಚ್ಚಮಾಡಿ ಶ್ರದ್ಧೆವಹಿಸಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡಿ ದೇಶಕ್ಕೆಲ್ಲ ಮಾದರಿ ಗ್ರಾಮವೆಂದು ಹೆಸರು ತಂದರು. ಅದೇ ಗ್ರಾಮದಲ್ಲಿ ಬಾಲಕ ಬಾಲಕಿಯರ ಉಪಯೋಗಕ್ಕಾಗಿ ಉತ್ತಮತರಹೆಯ ಕಟ್ಟಡಗಳನ್ನು ಕಟ್ಟಿಸಿದುದಲ್ಲದೆ ಉಪಾಧ್ಯಾಯರುಗಳ ವಾಸಕ್ಕೆ ಅನುಕೂಲವಾದ ವಸತಿಯನ್ನು ಕಲ್ಪಿಸಿಕೊಟ್ಟರು. ನಂಜನಗೂಡಿನಲ್ಲಿ ಕಟ್ಟಿಸಲ್ಪಡುವುದಕ್ಕಿರುವ ಹೈಸ್ಕೂಲು ಕಟ್ಟಡಕ್ಕೆ ಉದಾರವಾಗಿ ಸಹಾಯಮಾಡಿದರು. ಅಂತು ಇಹಲೋಕದಲ್ಲಿ ತಮಗೆ ದೊರಕಿದ್ದ ಅಲ್ಪಾವಧಿಯಲ್ಲಿ ತಮ್ಮ ಶಕ್ತಿಮೀರಿದ ದಾನಧರ್ಮಗಳನ್ನು ಮಾಡಿ ಕೀರ್ತಿಯುತರಾಗಿಯೂ ಇತರಮತಬಾಂಧವರಿಗೆ ಮಾರ್ಗದರ್ಶಕರಾಗಿಯೂ ಇದ್ದು ದಿವಂಗತರಾದರು. ಇನ್ನೂ ವಿಶೇಷವಾಗಿ ಸಮಾಜಸೇವೆಯನ್ನು ಮಾಡಬೇಕೆಂಬ ಕುತೂಹಲವುಳ್ಳವರಾಗಿದ್ದ ಅವರನ್ನು ಕಳೆದುಕೊಂಡದ್ದು ನಮ್ಮ ಮತದವರ ದುರ್ದೈವವಲ್ಲದೆ ಮತ್ತೇನೂ ಇಲ್ಲ.

ಶ್ರೀಮನ್ ಮಹಾರಾಜರವರ ಆಸ್ಥಾನ ವಿದ್ವಾನ್ ದಾವಣಗೆರೆ ತೆಲಗಿ ಮಠದ ವೇ|| ಚಂದ್ರಶೇಖರಶಾಸ್ತ್ರಿಗಳು ಮತ್ತು ಮಾಗಡಿ ವೇ|| ವೀರಪ್ಪಶಾಸ್ತ್ರಿಗಳು ಶಿವಸಾಯುಜ್ಯವನ್ನು ಹೊಂದಿದುದರಿಂದ ಅತ್ಯಲ್ಪ ಸಂಖ್ಯೆಯ ವಿದ್ವಾಂಸರುಗಳನ್ನೊಳಗೊಂಡಿರುವ ನಮ್ಮ ಸಮಾಜಕ್ಕೆ ಅಪರಮಿತವಾದ ನಷ್ಟವುಂಟಾಯಿತು. ದಿವಂಗತರಾದ ಮೇಲ್ಕಂಡ ಇವರುಗಳ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ದುಃಖಶಮನವನ್ನೂ ಉಂಟುಮಾಡಲೆಂದು ಸರ್ವಶಕ್ತನಾದ ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಪರಿಸಮಾಪ್ತಿ.

ಮತಬಾಂಧವರೆ, ಈದಿನ ಬಹಳ ಮುಖ್ಯವಾದ ಸಂಗತಿಗಳು ಚರ್ಚೆಗೆ ತರಲ್ಪಟ್ಟಿವೆ, ಮತ್ತು ಕಾರ್ಯನಿರ್ವಾಹಕ ಸಂಘದ ಮೆಂಬರುಗಳ ಅವಧಿಯು ಮುಗಿದು ಹೊಸದಾಗಿ ಚುನಾವಣೆಯಾಗಬೇಕಾಗಿರುವುದು. ಮತದ ಮತ್ತು ಸಂಘದ ಏಳ್ಗೆಯನ್ನೇ ಮುಂದಾಗಿಟ್ಟುಕೊಂಡು ಅಮೂಲ್ಯವಾದ ತಮ್ಮ ಸಲಹೆಗಳಿಂದ ಈದಿನ ಇತರ ಕಾರ್ಯಕ್ರಮವನ್ನು ನೆರವೇರಿಸಬೇಕಾಗಿ ಪ್ರಾರ್ಥಿಸಿ ಈ ವರದಿಯನ್ನು ಮುಗಿಸುತ್ತೇವೆ.

M. Nagappa,
Asst. Secretary.

G. Paramashiviah,
Secretary.

Bangalore,
ತಾ|| 11-7-1926.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಗವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಔದಾರ್ಯ.

-ಬ್ಯಾಡಗಿಯಲ್ಲಿ ವಾಸಿಸುವಂಥಾ ರಾ|| ಮಲ್ಲಪ್ಪಾ ಕಬ್ಬೂರ ಇವರು ತಮ್ಮ ತಂದೆಯವರಾದ ಬಸಪ್ಪನವರ ಸ್ಮಾರಕಾರ್ಥವಾಗಿ ಧಾರವಾಡ ಹಾವೇರಿಪೇಟೆಯಲ್ಲಿ ಇರುವಂಥಾ ಶ್ರೀಜಗದ್ಗುರುಮುರುಘರಾಜೇಂದ್ರ ಫ್ರೀ ಬೋರ್ಡಿಂಗಿನ ಭೋಜನಗೃಹದ ಕಟ್ಟಡದ ಸಲುವಾಗಿ 501 ರೂಪಾಯಿಗಳನ್ನು ತಮ್ಮ ಆತ್ಮಸಂತೋಷದಿಂದ ದಾನ್ನವನ್ನು ಮಾಡಿ ಈಗ್ಗೆ 51 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ವಿ. ಎಸ್. ಮಠ (ಜೆ. ಬಿ. ಎ.)
ಜ. ಸೆಕ್ರೆಟರಿ.

ಬೌರಿಂಗಪೇಟೆಯ ಬಡರೈತರ ದುಸ್ಥಿತಿ.

ಈ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕಳೆದ 3-4 ವರ್ಷಗಳಿಂದಲೂ ಸರಿಯಾಗಿ ಮಳೆಯಾಗದೆ ಕೆರೆಕಟ್ಟೆಗಳಿಗೆ ನೀರು ಬಾರದ್ದರಿಂದ ಸುತರಾಂ ಬೆಳೆಯಾಗದಿರುವುದೂ ಇದರಿಂದ ದನಕರುಗಳ ಮತ್ತು ಜನರ ಕುಡಿಯುವ ನೀರಿಗೂ ತಿಂದಿಗೂ ಅಭಾವವಾಗಿರುವುದೂ ಸರ್ವಪ್ರಜೆಗಳಿಗೂ ಸರ್ಕಾರದವರಿಗೂ ತಿಳಿದೇ ಇದೆ. ಈ ವರ್ಷವೂ ಮಳೆಯಿಲ್ಲದೆ ಸಾಗುವಳಿಗೆ ಅವಕಾಶವಿಲ್ಲವಾಗಿದೆ. ಕೆಲವುಕಡೆ ನಾಲ್ಕಾರು ಹನಿಗಳು ಹಂತಿದುದರಮೇಲೆ ಬಿತ್ತಿದ ಪೈರುಗಳು ಮಳೆಯಿಲ್ಲದೆ ಒಣಗುತ್ತಿವೆ. ಇದರಿಂದ ಈ ತಾಲ್ಲೂಕಿನ ಬಡರೈತರು ಬೆಳೆಯಿಲ್ಲದೆಯೂ, ಕೂಲಿನಾಲಿಮಾಡಿ ಜೀವಿಸಲು ತಕ್ಕ ಕೆಲಸಗಳು ದೊರಕದೆಯೂ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುತ್ತದೆಂದು ಚಿಂತಿಸುತ್ತಿರುವಾಗ್ಗೆ, ಕಂದಾಯದ ಬಾಕಿಗಾಗಿ ತಮ್ಮ ಜಮೀನುಗಳು ಹರಾಜು ಆಗುತ್ತಿರುವುದನ್ನು ನೋಡಿ ಸಂಕಟಪಡುತ್ತಿದ್ದಾರೆ. ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿಲ್ಲದೆ ಬಹುದೂರಪ್ರದೇಶದಿಂದ ನೀರನ್ನು ತಂದು ಕಾಲಕಳೆಯುತ್ತಿರುವುದನ್ನು ನೋಡಿದರೆ ಎಂಥಾ ಕಲ್ಲೆದೆಯವನಿಗಾದರೂ ಮರುಕಹುಟ್ಟದೆ ಇರುವುದಿಲ್ಲ. ಕೆಲವು ಸ್ಥಳಗಳಲ್ಲಿ ಬಾವಿಗಳನ್ನು ತೋಡಲುಪಕ್ರಮಿಸಿ 8-10 ವರ್ಷಗಳಾದರೂ ಇನ್ನೂ ಪೂರೈಸದೆ ನಿಂತುಹೋಗಿರುವದರಿಂದ ಅವನ್ನು ಪೂರೈಸಿಕೊಡಬೇಕೆಂದೂ ತಮ್ಮ ನಿರ್ಗತಿಕಸ್ಥಿತಿಯಿಂದ ಕಂದಾಯ ರಿಮಿಷನ್ ಮಾಡಿಕೊಡಬೇಕೆಂದೂ ಎಷ್ಟು ಪ್ರಾರ್ಥಿಸಿಕೊಂಡರೂ ಸರ್ಕಾರದವರ ಚಿತ್ತಕ್ಕೆ ಬಂದಿಲ್ಲವಾದ್ದರಿಂದ ಇನ್ನಾದರೂ ಈ ಬಡರೈತರ ಪ್ರಾರ್ಥನೆಯನ್ನು ಸರ್ಕಾರದವರು ನೆರವೇರಿಸಿಕೊಡಬೇಕೆಂದು ಈ ಮೂಲಕ ಬಹುದೈನ್ಯದಿಂದ ಪ್ರಾರ್ಥಿಸುತ್ತೇನೆ. ಬಡರೈತ.

ನಂಜನಗೂಡಿನಸ್ಥಿತಿ.

ಇಲ್ಲಿ ಪ್ಲೇಗುರೋಗದಿಂದ ಕೆಲವು ಮರಣಗಳಾಗಿವೆ. ವಿಷಮಶೀತಜ್ವರವು ಅಲ್ಲಲ್ಲಿ ಹರಡುತ್ತಿದೆ. ಸ್ವಾಭಾವಿಕವಾಗಿ ಈ ಊರು ಹೊರಗಿನ ಜನರಿಂದ ಪ್ರತಿದಿನವೂ ಕೂಡಿರುವುದಾಗಿದೆ. ಹೀಗಿದ್ದೂ ನಮ್ಮ ಕಷ್ಟಾರ್ಜಿತದ್ರವ್ಯದ ಲಕ್ಷಾಂತರರೂಪಾಯಿಗಳ ವೆಚ್ಚದ ಪ್ರತಿಫಲವಾದ ಕುಡಿಯುವ ಶುದ್ಧವಾದ ನೀರು ಹಲವುದಿನಗಳಿಂದ ದೊರೆಯುತ್ತಿಲ್ಲ. ಬಾರಿಬಾರಿಗೂ ಉಂಟಾಗುತ್ತಿರುವ ಈ ವಿಧವಾದ ಅನಾನುಕೂಲಗಳ ಪರಿಹಾರೋತ್ತರವನ್ನು ಕುರಿತು ಒಂದು ಪ್ರಸ್‌ಕಾಮ್ಯುನಿಕ್ಕನ್ನು ನಮ್ಮ ತಿಳಿವಳಿಕೆಬಗ್ಗೆ ಮುದ್ರಿಸಬೇಕೆಂತಲೂ, ಅರ್ಜಿಗೆ ಇಂಡಾರ್ಸುಕೊಡಬೇಕೆಂತಲೂ ಮ್ಯುನಿಸಿಪಾಲಿಟಿಗೆ ಮಾಡಿಕೊಂಡ ಪ್ರಾರ್ಥನೆಗೆ ಪ್ರೆಸಿಡೆಂಟರ ಪ್ರತ್ಯುತ್ತರವು ಈ ಕಾಲದಲ್ಲಿ ಶ್ರೀಮನ್ಮಹಾರಾಜರವರ ರಾಜಭಕ್ತಿಯುತರಾದ ಪ್ರಜೆಗಳ ಅಹವಾಲಿಗೆ ಅಧಿಕಾರಿಗಳು ತೋರಿಸಬೇಕಾದ ಸಹಾನುಭೂತಿಯಿಂದ ಕೂಡಿರಲಿಲ್ಲವೆಂದೂ, ನಮ್ಮ ತೊಂದರೆಯಪರಿಹಾರಕ್ಕೆ ನಿಷ್ಕೃಷ್ಟವಾದ ಮತ್ತು ಸ್ಪಷ್ಟವಾದ ಸಲಹೆಗಳಿಂದ ಕೂಡಿರಲಿಲ್ಲವೆಂದೂ ತಿಳಿಸಲು ವಿಷಾದಿಸುತ್ತೇನೆ. ಇಂಥಹ ದುಸ್ಥಿತಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲ್ಲಿನ ತೀರ್ಮಾನವನ್ನು ಗಮನಕ್ಕೆ ತಾರದೆ ಪ್ರೆಸಿಡೆಂಟರವರು ನಮಗೆ ನಷ್ಟವಾಗದಂತೆ ನೋಡಿಕೊಳ್ಳುತ್ತೇವೆಂಬ ನೆಪದಿಂದ ನಮ್ಮಗಳ ಆರೋಗ್ಯವನ್ನು ಅಲಕ್ಷ್ಯ ಮಾಡುತ್ತಿರುವರೆಂದು ಜನರು ಆಡಿಕೊಳ್ಳುತ್ತಿರುವರು. ಈ ಅಧಿಕಾರಿಗಳು ತಮ್ಮ ಅಮೋಘವಾದ ಬುದ್ಧಿಬಲದಿಂದಲೂ ನಮ್ಮಮೇಲಿನ ಮಿತಿಮೀರಿದ ಮಮತೆಯಿಂದಲೂ ಮಿಗಿಸಬಹುದಾದ ಹಲಕೆಲವು ರೂಪಾಯಿಗಳಿಗಿಂತ ಶ್ರೀಮನ್ಮಹಾರಾಜರವರ ರಾಜಭಕ್ತಿಯುತರಾದ ಪ್ರತಿಯೊಬ್ಬ ಪ್ರಜೆಯ ಪ್ರಾಣವೂ ಬಹುಬೆಲೆಯುಳ್ಳದೆಂಬುದನ್ನು ತಿಳಿದು ಕೂಡಲೆ ವೆಚ್ಚದ ಭಾಗವನ್ನು ವಿಶೇಷವಾಗಿ ಗಮನಿಸದೆ ಆದಷ್ಟು ಬೇಗನೆ ನೀರನ್ನು ಅನುಗ್ರಹಿಸುವರೆಂದು ನಂಬಿರುತ್ತೇನೆ. ಹಿತೈಷಿ.

ದುಷ್ಟಜಂತುಗಳ ನಾಶ.

ಸೊರಬ ತಾ|| ಆನವಟ್ಟಿ ಹೋ|| ಕುಬಟೂರು ಮತ್ತು ತಲ್ಲೂರು ಹುರಳಿ ಈ ಗಿಡಗಳಲ್ಲಿ ಹುಲಿಗಳು ಸೇರಿಕೊಂಡು ದನಗಳಿಗೂ ಮನುಷ್ಯರಿಗೂ ಬಹುತೊಂದರೆಕೊಡುತ್ತಾ ಇದ್ದವು. ಇವುಗಳನ್ನು ನಾಶಪಡಿಸಬೇಕಾಗಿ ಜನಗಳು ಸರ್ಕಾರದವರಿಗೆ ಅನೇಕಸಾರಿ ಅರಿಕೆಮಾಡಿಕೊಂಡಿದ್ದರು. ರೈತರುಗಳ ಪ್ರಾರ್ಥನೆಯಮೇರೆಗೆ ಸರ್ಕಾರದವರಿಂದ ಕಳುಹಿಸಲ್ಪಟ್ಟ ಒಬ್ಬ ದಂಡಿನ ಅಧಿಕಾರಿಯು ಇಲ್ಲಿಗೆ ಬಂದು ಒಂದು ಚಿಕ್ಕಹುಲಿಯನ್ನು ಹೊಡೆದು ಇನ್ನೂ ಇದ್ದ ಹುಲಿಗಳನ್ನು ಹೊಡಿಯಬೇಕೆಂದು ಎರಡುತಿಂಗಳು ಕಾದುಕೊಂಡಿದ್ದರೂ ಅವರಿಗೆ ಹುಲಿಗಳು ಸಿಕ್ಕದೆ ನಿರಾಶೆಯಿಂದ ಹೊರಟುಹೋದರು. ಅಕಸ್ಮಾತ್ತಾಗಿ ಆನವಟ್ಟಿ ವಾಸಿ ವಿಲೇಜ್ ಪೋಸ್ಟ್‌ಮನ್ ಮಲ್ಲಪ್ಪ, ತಲ್ಲೂರುವಾಸಿ ತಳವಾರ ಬಸಣ್ಣ ಮತ್ತು ಚವುಡಪ್ಪ ಈ ಜನಗಳು ಹುರಳಿಗಿಡಕ್ಕೆ ಷಿಕಾರಿಗೆ ಹೋದಕಾಲದಲ್ಲಿ ತಾ|| 3-7-26 ನೇ ದಿವಸ ಹಗಲು ನಾಲ್ಕುಗಂಟೆ ಸಮಯದಲ್ಲಿ ಒಂದು ದೊಡ್ಡಹುಲಿಯು (ಇದು 8 ಅಡಿ ಉದ್ದವೂ 2½ ಅಡಿ ಎತ್ತರವೂ ಇದ್ದಿತು) ಒಂದು ಎಮ್ಮೆಯನ್ನು ಹಿಡಿದು ತಿನ್ನುತ್ತಾ ಒಂದು ಮೆಳೆಯಲ್ಲಿ ಇದ್ದುದನ್ನು ಕಂಡು ತಳವಾರ ಬಸಣ್ಣನು ಧೈರ್ಯದಿಂದ ಮೊದಲು ಹೊಡೆದನು. ನಂತರ ಮಲ್ಲಪ್ಪ ಮತ್ತು ಚವುಡ ಇವರು ತಮ್ಮ ಬಂದೂಕಗಳನ್ನು ಹಾರಿಸಿದರು. ಈ ಮೂರುಜನರ ಹೊಡತಕ್ಕೆ ಅದು ಸತ್ತುಹೋಯಿತು. ಏನೂ ತಿಳಿಯದ ಹಳ್ಳಿಗಾಡಿನ ಜನರಾದ ಇವರುಗಳಿಂದ ಇಂಥಾ ದುಷ್ಟಪ್ರಾಣಿಯು ನಾಶಪಡಿಸಲ್ಪಟ್ಟದ್ದು ಆಶ್ಚರ್ಯವೇ ಸರಿ. ಇವರನ್ನು ಅನೇಕಜನರು ದ್ರವ್ಯರೂಪದಿಂದ ಬಹುಮಾನಿಸಿ ಮೆ|| ಅಮಲ್ದಾರ್ರವರಲ್ಲಿಗೆ ಕಳುಹಿಸಿಕೊಟ್ಟರು.

ಆಶ್ಚರ್ಯಕರವಾದ ಪ್ರಾಣಿ.

ಸೊರಬ ತಾಲ್ಲೂಕು ಆನವಟ್ಟಿ ಹೋಬಳಿಗೆ ಸೇರಿದ ಮಲ್ಲಾಪುರದ ಜನಗಳು ಒಂದು ಪ್ರಾಣಿಯನ್ನು ಹಿಡಿದಿರುವರು. ಇದರ ದೇಹವು ಕೋತಿಯ ಆಕೃತಿ ಇದೆ, ಆದರೆ ಬಾಲಮಾತ್ರ ಇಲ್ಲ. ಮುಖವು ಗೂಬೆಯಾಕೃತಿಯಾಗಿದೆ; ಕಣ್ಣುಗಳೂ ದೊಡ್ಡವಾಗಿಯೇ ಇವೆ; ಬಣ್ಣವು ಕೋತಿಯಬಣ್ಣದಂತೆಯೇ ಇದೆ. ಇಂಥಾ ಪ್ರಾಣಿಯನ್ನು ನಾನು ಇದುವರೆಗೂ ಎಲ್ಲಿಯೂ ನೋಡಿಲ್ಲ. ಬೆಂಗಳೂರು ಮೈಸೂರುಗಳಲ್ಲಿರುವ ಲಾಲಬಾಗಿನಲ್ಲಿಯು ಸಹ ಇಲ್ಲ. ಇದು ಒಂದು ಹೊಸಪ್ರಾಣಿಯೇ ಆಗಿರುವುದರಿಂದ ಇದನ್ನು ಲಾಲಬಾಗಿನಲ್ಲಿಡುವುದು ಅತ್ಯಾವಶ್ಯಕವಾಗಿದೆ. ಪ್ರಪಂಚದಲ್ಲಿ ಎಂತೆಂಥಾ ಜಾತಿಯ ಪ್ರಾಣಿಗಳಿವೆಯೋ ! ಬಸವಂತಯ್ಯ ಪಾಟೀಲ, ಕುಬಟೂರು.

ತುಮಕೂರು ಶ್ರೀ ಜಗದ್ಗುರುಜಯದೇವವೀರಶೈವಾಶ್ರಮದ ಪ್ರವೇಶಮಹೋತ್ಸವವು.

ವಿದ್ಯಾಭಿಮಾನಿಗಳೇ, ಸದರಿ ಆಶ್ರಮದ ಕಟ್ಟಡದ ಕೆಲಸವು ಪೂರೈಸಿದ್ದಾಯಿತು. ಅಲ್ಲದೆ ಅದರ ಪ್ರವೇಶಮಹೋತ್ಸವವನ್ನು ಇದೇ ಜೂಲೈ 2 ನೇ ತಾರೀಖಿನಲ್ಲಿ ನಡೆಯಿಸಬೇಕೆಂಬದಾಗಿಯೂ ನಿಶ್ಚಯವಾಗಿತ್ತು. ಆದರೆ ಈಗ ವಿಚಾರಿಸುವಲ್ಲಿ ಆ ಮಹೋತ್ಸವವನ್ನು ಶ್ರಾವಣಮಾಸದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಬೇಕೆಂಬದಾಗಿ ತೀರ್ಮಾನಮಾಡಿಕೊಂಡಿರುವಂತೆ ತಿಳಿಯಬಂದಿದೆ. ಸ್ಕೂಲುಬಾಗಿಲುಗಳನ್ನು ತೆಗೆದು ಆಗಲೇ ಒಂದುತಿಂಗಳಾಗುತ್ತಾ ಬಂದಿತು. ಇದುವರೆವಿಗೂ ಈ ಊರಿನಲ್ಲಿ ಇಂಥಾ ಅನುಕೂಲವು ಇಲ್ಲದಿದ್ದಪ್ರಯುಕ್ತ ಆದರಿಂದ ವೀರಶೈವವಿದ್ಯಾರ್ಥಿಗಳಿಗೆ ಉಂಟಾಗಿದ್ದ ತೊಂದರೆಯನ್ನು ನಿವಾರಣೆಮಾಡಲೋಸುಗವೇ ಈ ಆಶ್ರಮವು ಸ್ಥಾಪನೆಯಾಯಿತು. ಕಟ್ಟಡವು ಕಟ್ಟಲ್ಪಟ್ಟು ಪ್ರವೇಶಕ್ಕೆ ಸಿದ್ಧವಾಗಿದ್ದರು ಕೂಡ ಅದರ ಪ್ರವೇಶಮಹೋತ್ಸವವನ್ನು ನಡೆಯಿಸದೆ ಇರುವುದರಿಂದ ಇದನ್ನೇ ನಂಬಿಕೊಂಡಿದ್ದ ವಿದ್ಯಾರ್ಥಿಗಳ ಗೋಳನ್ನು ನೋಡತೀರದು. ಇಳಿದುಕೊಳ್ಳಲಿಕ್ಕೆ ಸ್ಥಳವಿಲ್ಲದೆ ಊರಿನಲ್ಲಿ ಅಲೆಯುತ್ತಿದ್ದಾರೆ. ಮೇಲಾಗಿ ಈ ಊರಿನಲ್ಲಿ ಸರಿಯಾದ ಭೋಜನಮಂದಿರಗಳು ಇಲ್ಲದಿರುವುದರಿಂದ ಅವರ ಊಟೋಪಚಾರಕ್ಕಂತೂ ಹೇಳತೀರದಷ್ಟು ಕಷ್ಟವಾಗಿದೆ. ಇಂದೋ ನಾಳೆಯೋ ಆಶ್ರಮದ ಪ್ರಾರಂಭೋತ್ಸವವಾಗಿ ನಮಗೆ ಅನುಕೂಲದೊರಕುತ್ತದೆಂದು ನಿರೀಕ್ಷಿಸಿಕೊಂಡಿದ್ದ ವಿದ್ಯಾರ್ಥಿಗಳೆಲ್ಲರೂ ನಿರಾಶರಾಗಿದ್ದಾರೆ. ಸದರಿ ಮಹೋತ್ಸವವನ್ನು ಮುಂದುವರಿಸಿದ್ದು ಯಾವ ಕಾರಣಕ್ಕೋಸ್ಕರ ? ಮತ್ತು ವೃಥಾ ಬಹಳ ಹಣವನ್ನು ವ್ಯಯಮಾಡಿ ಆ ಮಹೋತ್ಸವವನ್ನು ಅಷ್ಟು ವಿಜೃಂಭಣೆಯಿಂದ ನಡೆಯಿಸುವುದರಿಂದ ಯಾವ ಪುರುಷಾರ್ಥಸಾಧನೆಯಾದಂತಾಗುವುದು ? ಹಾಗಲ್ಲದೆ ಅದೇ ದುಡ್ಡನ್ನು ಮೂಲಧನವಾಗಿಟ್ಟುಕೊಂಡು ಅದರಿಂದ ಉತ್ಪತ್ತಿಯಾಗುವ ಬಡ್ಡಿಯಿಂದ 5-6 ಜನ ಬಡವಿದ್ಯಾರ್ಥಿಗಳಿಗೆ ಅನ್ನದಾನಮಾಡಬಹುದು. ಇಂಥಾ ಉಪಕಾರದ ಕೆಲಸವನ್ನು ಬಿಟ್ಟು ಒಂದೇ ದಿವಸದಲ್ಲಿ ಅನ್ಯಾಯವಾಗಿ ನಾಲ್ಕೈದುಸಹಸ್ರ ರುಪಾಯಿಗಳನ್ನು ವೆಚ್ಚಮಾಡಿ ಸಾರ್ಥಕವಿಲ್ಲದ ಕೆಲಸವನ್ನು ಮಾಡಬೇಕೆಂದಿರುವುದನ್ನು ನೋಡಿದರೆ ಈ ಊರಿನ ವೀರಶೈವಮಹನೀಯರು ಎಂತಹ ಉದಾರಿಗಳೂ, ಮುಂದಾಲೋಚನೆಯುಳ್ಳವರೂ ಎಂಬುದು ಚೆನ್ನಾಗಿ ವ್ಯಕ್ತವಾಗುತ್ತೆ. ಈ ವಿಚಾರವನ್ನು ತುಮಕೂರು ವೀರಶೈವ ಮಹನೀಯರು ಚೆನ್ನಾಗಿ ಪರ್ಯಾಲೋಚಿಸಬೇಕು. ಅಲ್ಲದೆ ಈ ಊರಿನಲ್ಲಿ ಎರಡು ಪಂಗಡಗಳಿವೆ. ಆದಕಾರಣ ಇವರಲ್ಲಿ ಏಕಮತ್ಯವಿಲ್ಲ. ಒಬ್ಬರು "ಉತ್ತರ" ವೆಂದರೆ ಇನ್ನೊಬ್ಬರು "ದಕ್ಷಿಣ" ವೆಂದು ಹೇಳುತ್ತಾರೆ. ಇವರ ಈ ಬಡಿದಾಟದಲ್ಲಿ "ಗಂಡ ಹೆಂಡಿರ ವ್ಯಾಜ್ಯದಲ್ಲಿ ಮಗು ಬಡವಾಯಿತು" ಎಂಬ ಗಾದೆಯಂತೆ ವಿದ್ಯಾರ್ಥಿಗಳು ಕಷ್ಟಕ್ಕೊಳಗಾಗಿದ್ದಾರೆ. ಹೀಗೆ ವಿದ್ಯಾರ್ಥಿಗಳು ತೊಂದರೆಗೆ ಒಳಗಾಗಿರುವ ಅಂಶವು ಪ್ರತಿಯೊಬ್ಬ ವೀರಶೈವನಿಗೂ ಗೊತ್ತು. ಹಾಗಾದರು ಕೂಡ ಇವರು ಆರಂಭಮಹೋತ್ಸವವನ್ನು ಮುಂದೆ ಸಾಗಿಸಿರುವುದನ್ನು ನೋಡಿದರೆ ಇವರು ಎಂತಹ ಕರುಣಾಳುಗಳಾಗಿಯೂ ವಿದ್ಯಾಭಿಮಾನಿಗಳಾಗಿಯೂ, ಇರುವರೆಂಬುದನ್ನು ಊಹಿಸಲು ಕೂಡ ಅಸಾಧ್ಯವಾಗಿದೆ. ಈಗಲಾದರೂ ತಮ್ಮಲ್ಲಿರುವ ದ್ವೇಷಾಸೂಯೆಗಳನ್ನು ಬಿಟ್ಟು ಸದರಿ ಆಶ್ರಮವು ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೇ ಏರ್ಪಟ್ಟಿರುವುದರಿಂದ ಅದರ ಅನುಕೂಲವನ್ನು ಅವರಿಗೆ ಕೂಡಲೆ ಕಲ್ಪಿಸಿಕೊಟ್ಟು ಅವರಿಗುಂಟಾಗಿರುವ ತೊಂದರೆಯನ್ನು ಹೋಗಲಾಡಿಸುವರೆಂದು ನಂಬಿದ್ದೇನೆ. ಓರ್ವ ವಿದ್ಯಾಭಿಮಾನಿ.

"ಸಂಪದಭ್ಯುದಯಪತ್ರಿಕಾಲೇಖನಖಂಡನ"

ತಾ|| 1-7-26 ರ ಸಂಪದಭ್ಯುದಯ ಪತ್ರಿಕೆಯು "ಒಬ್ಬ ಪ್ರತಿನಿಧಿಸಭೆಯ ಮೆಂಬರು" "ಒಬ್ಬ ಪ್ರತಿನಿಧಿ" "ಸತ್ಯವಾದಿ" ಮೊದಲಾದ ಹೆಸರುಗಳಿಂದ ಲೇಖನಗಳನ್ನು ಪ್ರಕಟಿಸಿರುತ್ತದೆ. ಇವುಗಳನ್ನು ನೋಡಿದರೆ ಈ ಪತ್ರಿಕೆಯು ವಾರ್ಧಕ್ಯವನ್ನು ಹೊಂದುತ್ತಾ ಬಂದಹಾಗೆಲ್ಲಾ ಸಜ್ಜನನಿಂದೆಯೂ, ದ್ವೇಷಾಸೂಯೆಗಳೂ, ಕಪಟನಟನೆಗಳೂ ವೃದ್ಧಿಹೊಂದುತ್ತಿರುವುವೆಂದು ಸರ್ವಸಮದೃಷ್ಟಿಯಿಂದ ನೋಡುವ ಯಾರಿಗಾದರೂ ತಿಳಿಯದಿರಲಾರದು. ಅದರಲ್ಲಿಯೂ ಕೇವಲ ಪರೋಪಕಾರ, ದೇಶಸೇವೆ, ಹಿಂದುಳಿದವರ ಅಭ್ಯುದಯ ಮೊದಲಾದ ಸತ್ಕಾರ್ಯಗಳಲ್ಲಿ ಪ್ರವರ್ತಿಸಿಯೂ, ಪ್ರವರ್ತಿಸುತ್ತಲೂ ಇರುವ ಆ ಮಹನೀಯರುಗಳಾದ ಮಿ|| ಅಬ್ಬಾಸ್‌ಖಾನ್‌ರವರಂತಹ, ಮ|| ಪರಮಶಿವಯ್ಯನವರಂತಹ ದೇಶವತ್ಸಲರಮೇಲೆ ಈ ಅರುಳುಮರುಳು ಮುದಿಮಾರಿಯು ಕಣ್ಣುಬಿದ್ದಿರುವುದು ಕೇವಲ ಶೋಚನೀಯವೂ ನಿಂದ್ಯವೂ ಆದ ವಿಚಾರವಾಗಿದೆ. ಇವರುಗಳಮೇಲೆ ಇದರ ಆರೋಪಣೆಗಳೇನೆಂದರೆ.—1. ಶ್ರೀಮತಿ ರಂಗಮ್ಮ ಮತ್ತು ಕನಕಲಕ್ಷ್ಮಮ್ಮ ಇವರುಗಳಮೇಲೆ ಮಾಡುತ್ತಿರುವ............ಎಂದು ಉದ್ಗಾರ ತೆಗೆದಿರುತ್ತದೆ. ನ್ಯಾಯವಿಧಾಯಕಸಭೆಯಲ್ಲಾಗಲಿ, ಇತರ ಯಾವಕಡೆಯಲ್ಲಾಗಲಿ ಇವರುಗಳಮೇಲೆ ಮಾಡಲ್ಪಟ್ಟಿರುವ ಕೃತಕದೋಷಾರೋಪಣೆಗಳಾಗಲಿ, ನಡೆಸಿರತಕ್ಕ ಕಾರ್ಯಭಾಗಗಳಾಗಲಿ ಏನೆಂಬುದನ್ನು ಏಕೆ ತಿಳಿಸಬಾರದಾಗಿದ್ದಿತು? ಸ್ವೈರಿಣಿಯ ನ್ಯಾಯದಂತೆ ಸಾಧುಸಜ್ಜನರನ್ನು ಸಹ ತನ್ನಂತೆ ಭಾವಿಸಿ ವ್ಯಕ್ತಿಗತವಾದ ದ್ವೇಷವನ್ನು ವಸ್ತುಸ್ಥಿತಿಯಲ್ಲಿ ಹೊರಪಡಿಸಲು ಶಕ್ತಿಸಾಲದೆ ಇಂತಃ ಕೃತ್ರಿಮವಾದ ಲೇಖನಗಳಿಂದ ಏನುತಾನೆ ಪ್ರಯೋಜನವನ್ನು ಹೊಂದುವ ಆಸೆಯಿದೆ ? 2. ಆದರೆ ಇವರು ಬ್ರಾಹ್ಮಣರಮೇಲೆ........ ಎಂಬುದೊಂದು ರಾಗ. ಇವರು ಬ್ರಾಹ್ಮಣರ ತಲೆಯಮೇಲೆ ಮಣಸರೆದಿರುವುದಾದರೂ ಏನು ? ಹಿಂದುಳಿದವರಿಗೆ ಹೆಚ್ಚು ಸಹಾನುಭೂತಿಯನ್ನು ತೋರಿಸಬೇಕೆಂದು ಹೇಳಿದಮಾತ್ರದಿಂದಲೇ ಬ್ರಾಹ್ಮಣರನ್ನು ನಿರ್ಮೂಲಮಾಡಿದಹಾಗಾಯಿತೆ ? 3. ಮ|| ಪರಮಶಿವಯ್ಯನವರ ಮೇಲೆ ಒಂದು ಸವರಣೆ____ತನ್ನ ಶಕ್ತಿಗೆ ಸೇರದೆ ಇರತಕ್ಕ........ರಂತೆ. ಈ ಅಂತೆ ಕಂತೆಗಳಿಗಿಂತಲೂ ದೃಢವಾದ ಆಧಾರಗಳೇನಾದರೂ ಇದ್ದಲ್ಲಿ ಧೈರ್ಯವಾಗಿ ಸಂಪೂರ್ಣಾರ್ಥವುಳ್ಳ ಬರೆವಣಿಗೆಯನ್ನೇಕೆ ಬರೆಯಕೂಡದು ? ವೃಥಾ ಇಂತಃ ವಿಕಟನಟನೆಯಿಂದ ಉಂಟಾಗುವ ಘನತೆಯಾದರೂ ಏನು ? 4. ಇವರುಗಳಮೇಲೆ ಮತ್ತೊಂದು ಕವಿತೆ. ಏನೆಂದರೆ, ಕೆಲವುಜನ ಲಿಂಗಾಯಿತರು........ಎಂಬುದು ತನಗೆ ವಿರೋಧಿಗಳಾಗಿರುವವರ ಅಭಿಪ್ರಾಯಗಳು ಕೆಲವು ಸಂದರ್ಭಗಳಲ್ಲಿ ಒಂದೇ ಆಗಿದ್ದ ಮಾತ್ರದಿಂದಲೆ ಇವರುಗಳನ್ನು ಸೇರಿಸಿ ಒಂದು ಪಾರ್ಟಿ ಎಂಬುದಾಗಿ ಹೆಸರುಕಟ್ಟಿರುವ ಅನ್ಯೋನ್ಯಬುದ್ಧಿಗೆ ಹಲವು ವಿಷಯಗಳಲ್ಲಿ ಏಕಾಭಿಪ್ರಾಯಪಡುವ ಮ|| ಗಳಾದ ಎಚ್. ಕೃಷ್ಣರಾವ್, ಎಂ. ವೆಂಕಟಕೃಷ್ಣಯ್ಯ ಮೊದಲಾದವರು ಮತ್ತೊಂದು ಪಾರ್ಟಿ ಎಂದು ಏಕೆ ಹೊಳೆಯಬಾರದಾಗಿದ್ದಿತು ? ಇವುಗಳನ್ನೆಲ್ಲಾ ವಿಚಾರಮಾಡಿ ನೋಡಿದಲ್ಲಿ "ತನ್ನ ಪಾದಕ್ಕೆ ತಾನೇ ಶರಣು" ಎಂದುಕೊಳ್ಳುವ ಈ ಪತ್ರಿಕೆಯ ಬಂಡವಾಳವು ಇಷ್ಟೇ ಎಂಬುದನ್ನು ನಿರ್ಣಯಿಸಲು ಏನೊಂದು ಶ್ರಮವೂ ಆಗಲಾರದು. ಲೋಕವಂದ್ಯನೂ, ಲೋಕರಕ್ಷಕನೂ ಆದ ಸೂರ್ಯನನ್ನು ಉಪಕಾರವನ್ನು ಹೊಂದಲುತಕ್ಕದಾದ ಮುದಿಗೂಬೆಯೊಂದು ನಿಂದಿಸಿದಮಾತ್ರಕ್ಕೆ ಸೂರ್ಯನ ಗುಣಾವಗುಣಗಳು ಕಣ್ಣಿರುವವರಿಗೆ ಗೊತ್ತಾಗಲಾರದೆ ? ಎಂಬುದನ್ನು ಸಂಪದಭ್ಯುದಯ ಪತ್ರಿಕೆಯು ಏಕೆ ಪರಿಭಾವಿಸಬಾರದು ! ರಾಮರಾಜ್ಯಕ್ಕೆ ಅತಿಶಯವಾಗಿ ಧರ್ಮಪ್ರಭುಗಳ ಧರ್ಮದಿಂದ ಪರಿಪಾಲಿಸಲ್ಪಡುತ್ತಿರುವ "ಶ್ರೀಕೃಷ್ಣ" ರಾಜ್ಯದಲ್ಲಿ ಅದರಲ್ಲಿಯೂ ಇದರ ಅಧಿನಗರದಲ್ಲಿ ಇಂತಹ ವಿಷವೃಕ್ಷಗಳು ಬೆಳೆಯಲು ಅವಕಾಶ ದೊರೆತಿರುವುದು ದುರ್ದೈವವೇ ಸರಿ. ಎಲೈ ಸಂಪದಭ್ಯುದಯವೇ ! ನೀನು ಜನ್ಮಾರಭ್ಯ, ಮರಣದವರೆಗೂ ಪರನಿಂದೆಯಲ್ಲಿಯೂ ದ್ವೇಷಾಸೂಯೆಗಳಲ್ಲಿಯೂ ನಿರತನಾಗಿ ನಿನ್ನ ಕರ್ತವ್ಯವನ್ನೇ ಮರೆತಿರುವೆ. ಬ್ರಹ್ಮಚಾರಿಯಂತೆ ನಟಿಸಿ ವ್ಯಭಿಚಾರಿಯಂತೆ ವರ್ತಿಸುವ ಅಧಮರಲ್ಲಿ ಪರಿಗಣಿಸಲ್ಪಡದಂತೆ ಇನ್ನುಮುಂದಾದರೂ ಎಚ್ಚರವಾಗಿರು. ಆ ನಿರ್ದೋಷಿಗಳಾದ ಮಿ|| ಟಿ. ಯಸ್. ಅಲ್ಲಿಖಾನ್ ರವರನ್ನು ಕೆಣಕಿ ನಿನ್ನ ಅಧರ್ಮಕ್ಕೆ ಸರಿಯಾದ ಪ್ರಾಯಶ್ಚಿತ್ತವನ್ನು ಹೊಂದಿ ಆ ಗಾಯವು ಇನ್ನೂ ಮಾಯುವುದರೊಳಗಾಗಿಯೇ ಪುನಃ ನಿನ್ನ ಬಾಲವನ್ನು ಬಿಚ್ಚಲು ಹೊರಟಿರುವೆ. ಒಂದಿಲ್ಲೊಂದುದಿನವಾದರೂ ನಿನ್ನ ಬಾಲವು ಸಂಪೂರ್ಣವಾಗಿ ಕತ್ತರಿಸಿಹೋಗುವುದು ಎಂಬುದನ್ನಾದರೂ ನೆನಸಿಕೊಳ್ಳಬಾರದೆ ? ಇನ್ನುಮುಂದಾದರೂ ನಿನ್ನ ಕರ್ತವ್ಯವನ್ನು ನೀನು ಜ್ಞಾಪಿಸಿಕೊಂಡು ಪರಹಿತಕಾರ್ಯಗಳಲ್ಲಿ ನಿನ್ನ ಬುದ್ಧಿಕುಶಲತೆಗಳನ್ನುಪಯೋಗಿಸಿದರೆ ಶುಭವಾಗುವುದಲ್ಲದೆ ಇಂತಃ ದುರ್ವರ್ತನೆಯಿಂದ ನಿನಗೆಂದೂ ಶುಭವಾಗಲಾರದು. ಎಚ್ಚರಿಕೆ.

Shravanabelgola, }
11—7—1926. }
S. N. R.
ಸಜ್ಜನವಿಧೇಯ.

ಪ್ರಕಟನೆ.

ಶ್ರೀಮನ್ಮಹಾದಕ್ಷಿಣಕಾಶೀ ನಿಜಸಿಂಹಾಸನಾಧೀಶ ಹವುಡೆಯ್ಯದಾನವಪುರಸಂಸ್ಥಾನದ ರಾಜಗುರು ಶ್ರೀಜಗದಾಚಾರ್ಯಸ್ವಾಮಿ ವಿರೂಪಾಕ್ಷ ಒಡೆಯರವರ ಮಹಾಸನ್ನಿಧಿಯಿಂದ.—

ಇದರಿಂದ ಸದ್ಭಕ್ತರುಗಳಾದ ಸಮಸ್ತ ವೀರಶೈವಮಂಡಲಿಯವರಿಗೆ ಶ್ರುತಗೊಳಿಸುವದೇನೆಂದರೆ :—

ಮೈಸೂರು ಸ್ಟೇಟು ಕಡೂರು ತಾ|| ಯಗಟಿಪುರದ ಶ್ರೀಪ್ರಸನ್ನಮಲ್ಲಿಕಾರ್ಜುನಸ್ವಾಮಿಯವರದೇವಸ್ಥಾನದ ಎಲ್ಲಾ ಸೇವಾರ್ಚನೆಗಳು ಪುರಾತನಕಾಲದಿಂದಲೂ ಲಿಂಗಾಯತಅರ್ಚಕರ ಹಕ್ಕುದಾರಿಗೊಳಪಟ್ಟಿರುವುದು ಆದರೆ ಆ ಸ್ಥಳದ ಬಾಜುಗ್ರಾಮದ ಕೆಲವು ಜನ ಅಲಿಂಗಿಬ್ರಾಹ್ಮಣರು ಇತ್ತೀಚೆಗೆ ಈ ಮಲ್ಲಿಕಾರ್ಜುನಸ್ವಾಮಿಯ ರಥೋತ್ಸವಕಾಲದಲ್ಲಿ ಆಗತಕ್ಕ ಗಿರಿಜಾಕಲ್ಯಾಣದ ಸಂಬಂಧವಾಗಿ ನಡೆಯತಕ್ಕ ಆಗಮಕಾರ್ಯದ ಹಕ್ಕುದಾರರು ತಾವೇ ಎಂದೂ, ವಿದ್ಯೆಯಲ್ಲಿ ಹಿಂದುಳಿದ ಲಿಂಗಿಬ್ರಾಹ್ಮಣ ಅರ್ಚಕರನ್ನು ತಮ್ಮ ತಂತ್ರಗಳಿಗೆ ಒಳಪಡಿಸಿಕೊಂಡು ತಮ್ಮ ಬ್ರಾಹ್ಮಣ್ಯದ ಹಕ್ಕನ್ನೇ ಸಹಸ್ರಾರು ಲಿಂಗಿಬ್ರಾಹ್ಮಣರು ವಗೈರೆ ಭಕ್ತಾದಿಗಳಮೇಲೆ ಸ್ಥಾಪಿಸಲೋಸುಗ ಪ್ರತ್ಯಕ್ಷ ಜಾರಿಯಲ್ಲಿ ಇಲ್ಲದೆ ಸರಸ್ವತಿಪ್ರಸನ್ನತೆಯಲ್ಲಿ ಬಹುಕಾಲದಿಂದಲೂ ಮತವೈಷಮ್ಯದ ಕರಸ್ಪಾಂಡೆನ್ಸಿನಲ್ಲೂ, ಸರ್ಕಾದವರ ವಿಚಾರಣೆಯ ಪೆಂಡಿಂಗ್‌ನಲ್ಲೂ ಇದ್ದು ಪಕ್ಷಪಾತಿಗಳಾದ ಆಫೀಸರವರ ಮತವೈಷಮ್ಯದಿಂದ ದೇವರ ಮಹೋತ್ಸವಾದಿಸೇವಾಕಾರ್ಯಗಳು ಸುಲಲಿತವಾಗಿ ನಡಿಯಲು ಅವಕಾಶತಪ್ಪಿರುವುದರಿಂದ ಈ ಬಾಲ್ತಿಸಾಲ್ ರಥಾರೋಹಣವು ನಡಿಯದೆ ನಿಂತಿರುವದು ಅರ್ಚಕಸಂಘದ ಪ್ರೆಸಿಡೆಂಟರು ಹೊರಡಿಸಿರುವ ಜನರಲ್ ರಿಪೋರ್ಟಿನಿಂದಲೂ, ಮೈಸೂರುಸ್ಟಾರ್‌ಪತ್ರದ್ವಾರದಿಂದಲೂ, ಅಲಾಹಿದ ನಮ್ಮ ಸನ್ನಿಧಿಗೆ ಸಂಘದ ಅರ್ಚಕರು ಬಿನ್ನೈಸಿಕೊಂಡಿರುವದರಿಂದಲೂ ವ್ಯಕ್ತವಾಗುತ್ತದೆ. ಆ ವಿಚಾರವೆಲ್ಲಾ ಆಮೂಲಾಗ್ರವಾಗಿ ವಿಸ್ತರಿಸಿದರೆ ಪರವಾದಿಗಳ ಕುಯುಕ್ತಿಗಳೆಲ್ಲಾ ಹೊರಪಟ್ಟು ಎಂಥಾ ನಪುಂಸಕನಿಗಾದರೂ ಆಗ್ರಹವುಂಟಾಗದೆ ಇರಲಾರದು. ದೇವಸ್ಥಾನದ ಆಡಳಿತವು ಮುಜರಾಯಿ ಸರ್ಕಾರದ ಆಡಳಿತಕ್ಕೆ ಸೇರಿರುವದಾದರೂ ಮೆಜಾರ್ಟಿಭಕ್ತಾದಿಗಳ ಅಹವಾಲಿಗೂ, ಮತಧರ್ಮಸುಧಾರಣೆಗೂ ಅವಕಾಶವಿಲ್ಲದೆ ಮೈಸೂರಿನಂಥಾ ಧರ್ಮರಾಜ್ಯದಲ್ಲೇ ಅನಾಯಕತ್ವಪ್ರವರ್ತನೆಗೆ ಅವಕಾಶವಾಗಿರುವುದು ಆಶ್ಚರ್ಯದಾಯಕವಾಗಿರುತ್ತದೆ. ಈ ವಿಚಾರವನ್ನು ಶ್ರೀಮನ್ಮಹಾರಾಜರವರ ಪರಾಂಬರಿಕೆಗೆ ತಂದು ತಪ್ಪುತಿಳುವಳಿಕೆದಾರರ ಹಕ್ಕನ್ನು ತಟಸ್ಥಮಾಡಿಸಲು ಧರ್ಮಶಾಸ್ತ್ರಾರ್ಥದಿಂದ ಮೂಲಕ ಇತ್ಯರ್ಥಪಡಿಸತಕ್ಕಬಗ್ಗೆ ಕಮಿಷನರವರನ್ನು ನೇಮಿಸಿಕೊಡಬೇಕೆಂತ ಮೆಮೋರಿಯಲ್‌ಮೂಲಕ ಪ್ರಾರ್ಥಿಸಿಕೊಳ್ಳಲು ವಾಂಛಲ್ಯಶೀಲರಾದ ಸರ್ವರೂ ಬದ್ಧಾದರರಾಗಬೇಕೆಂತಲೂ, ಈ ವಿಚಾರದಲ್ಲಿ ಈ ಸಂಘದವರಿಗೆ ಮುಂದಿನ ವ್ಯವಸ್ಥಾಬಗ್ಗೆ ಸರ್ವರೂ ಸ್ವಹಸ್ತ ಪರಹಸ್ತಗಳಿಂದ ಧನವನ್ನು ಸಹಾಯಮಾಡುವುದರಮೂಲಕ ಶ್ರೀಸ್ವಾಮಿಕೃಪೆಗೆ ಪಾತ್ರರಾಗಬೇಕೆಂತಲೂ ಕೋರುವುದಲ್ಲದೆ ಈಬಗ್ಗೆ ಸಂಘದವರ ಪ್ರಾರ್ಥನೆ ಮೇರೆ ಶ್ರೀಮಲ್ಲಿಕಾರ್ಜುನಸ್ವಾಮಿಯ ಕ್ಷೇತ್ರಸ್ಥಾನಕ್ಕೆ ದಯಮಾಡಿಸುವ ಪ್ರೋಗ್ರಾಂ ಮುಂದೆ ಶ್ರುತಗೊಳಿಸುವದರಲ್ಲಿ ಬಂದೀತು. ಈಬಗ್ಗೆ ಸರ್ವರ ಆಗ್ರಹವಿರಲಿ.

೧೯೨೬ ನೆಯ ಇಸವಿ ಜುಲೈ ತಾ|| ೧೭ ರಿಂದ ೧೯೨೬ ನೆಯ ಇಸವಿ ಜುಲೈ ತಾ|| ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಆಷಾಢ ಶುದ್ಧ ಸಪ್ತಮಿಯಿಂದ ಆಷಾಢ ಶುದ್ಧ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಮಾಸ
17	ಶನಿ	ಸಪ್ತ	22-0	ಹಸ್ತ	14-33	2
18	ಭಾನು	ಅಷ್ಟ	24-47	ಚಿತ್ತ	19-3	3
19	¹ಸೋಮ	ನವ	26-26	ಸ್ವಾತಿ	22-31	4
20	ಮಂಗಳ	ದಶ	26-47	ವಿಶಾ	24-40	5
21	²ಬುಧ	ಏಕಾ	25-47	ಅನೂ	25-30	6
22	³ಗುರು	ದ್ವಾದ	23-40	ಜ್ಯೇಷ್ಠ	25-14	7
23	⁴ಶುಕ್ರ	ತ್ರಯೋ	20-25	ಮೂಲ	23-51	8

(1) ಮಳೆನಕ್ಷತ್ರ-ಪುಷ್ಯ ೧ ನೆಯ ಪಾದ. (2) ಸರ್ವತ್ರ ಪ್ರಥಮೈಕಾದಶಿ, ಗೋಪದ್ಮವ್ರತಂ. ಚಾತುರ್ಮಾಸವ್ರತಾರಂಭಃ, ಮೊಹರಂ ಕೊನೇ ದಿನ. (3) ಪ್ರದೋಷಃ, ಶಯನದ್ವಾದಶಿ. (4) ಅತಿಶುಕ್ರವಾರಂ, ಮಳೆನಕ್ಷತ್ರ-ಪುಷ್ಯ ೨ನೆಯ ಪಾದ.

ಮೈಸೂರು : ಪೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಕರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟಪದಲೀಲ ಪಾಳರಿತ ಸಾಧ್ವಗ್ರ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸೆಕ್ ೧೯೨೬ ನೆಯ ಇಸವಿ ಜುಲೈ ತಾರೀಖು ೨೪ ನೆಯ ಶನಿವಾರ. [ಸಂಚಿಕೆ ೩೦

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ತುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲವಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SITHARAGHAVA
VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

28

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ. } ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—6] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦
[illegible]	೦—೮—೦	೦—೧೩—೦
[illegible]	[illegible]	[illegible]

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೆಯೇನು ನೋಡೋಣ

ಸತ್ಯವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಕೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೀಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಪತ್ರಿ, ಜಾಯಪತ್ರಿ, ಪಿಸಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಶಾಲೀಮಖಾನಾ, ಬೀಜಹರಣಖೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ಮಗಜ, ಅಲದಹಾಲು, ವಾಳೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಖಾರಾ, ಕೇಶರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತೀಕಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—1] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಸಲಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥ ಹಾಗುವ ವ್ಯಾಧಿಗಳು ಯಾವವೆಂದರೆ:— [illegible]

(Registered Trade Mark)

[illegible]

ವಿಳಾಸ:—ಗುರುಬಸವ ಅಂಡ್ [illegible]

[illegible]

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO.,
BENARES CITY.

[illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜುಲೈ ತಾ|| ೨೪ ನೆಯ ಶನಿವಾರ.

THE DEWAN'S ADDRESS TO MYSORE ENGINEERS.

It was a very wholesome address that the Dewan Saheb gave to the Executive Engineers of Districts who were summoned by him with the object of hearing from them their wants and difficulties and of considering how best to surmount them. Evidently, it was the outcome of the recent criticisms levelled at the working of the Department by the members of the Representative Assembly and the Legislative Council. The Dewan was conscious that paucity of funds had considerably restricted the activities of the Department, but he was anxious that the grants were put to the best use and made to go as far as possible. The Dewan emphasised the importance of the Department in relation to other departments. It could help materially the Revenue Department in extending cart tracks gradually to every village or hamlet. It could help the Agricultural Department by restoring and increasing the tanks and canals. The cry with regard to the restoration of minor tanks has been a very loud and long cry and the Dewan has very rightly emphasised the need for systematic work in the direction. Suggested remedies are to bringing up of all information and data of tanks up-to-date, energetic action in the matter of repairs of feeders, sluices and channels and submission of an annual report from the Sub-Division officers to the Executive Engineers with special reference to this work, of which we are glad to note Government propose to take special note. The other equally important work of the Department lies in looking to the condition of roads in the State, which with the rapid increase of bus traffic is becoming perceptibly worse. While the Dewan is not in a position to assure increased grants he hopes for better output of work by timely action and improved methods of executing repairs. There is a suggestion for the increase of toll-gates and the levy of higher fees from the bus proprietors. Comparatively there are much fewer toll-gates in the State than outside, but we should think any scheme to increase their number should be very judiciously planned. The Dewan is earnest in seeing that the reproach that our roads are deteriorating is removed and he appeals to the Engineers for greater attention to details. The same appeal is made with regard to buildings and bridges. It is an advice which is timely and which is necessary, and nothing can be truer than his statement that he has found not infrequently that want of personal supervision more than insufficient funds was responsible for many of the defects one notices in the design and execution of buildings. What else could the washing away of some of the spans of Gorur bridge during construction be due to? The Engineering Department is one where the personal supervision of the Engineers in charge and their integrity have everything to do in the satisfactory execution of the works. The public are thankful to the Dewan for directing increased attention to the work of this Department and we hope it will result in greater efficiency and usefulness of the Department. We are sure that the vigilence from above would be a sufficient corrective to the indifference of the departmental officers. Let us hope that where indifference manifests itself desciplinary action will not be found wanting.

ಮೈಸೂರು ಇಂಜನಿಯರುಗಳ ಸಭೆಯಲ್ಲಿ ದಿವಾನರು ಮಾಡಿದ ಭಾಷಣ.

ಇಂಜನಿಯರ್ ಶಾಖಾಕೆಲಸಗಳ ಅಸಮರ್ಪಕತೆಯನ್ನು ಕುರಿತು ಕಳೆದ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಮೆಂಬರುಗಳು ಬಹಳ ಕಠಿಣವಾಗಿ ಆಕ್ಷೇಪಿಸಿದುದರ ಮೇಲೆ, ಇಂಜನಿಯರುಗಳು ಸಮರ್ಪಕವಾಗಿ ಕೆಲಸಮಾಡುವುದರಲ್ಲಿರುವ ಕೊರತೆಯನ್ನೂ ತೊಂದರೆಯನ್ನೂ ತಿಳಿದು ಅವುಗಳ ನಿವಾರಣೋಪಾಯವನ್ನು ಆಲೋಚಿಸುವಬಗೆಗೆ ಡಿಸ್ಟ್ರಿಕ್ಟ್ ಎಕ್ಸಿಕ್ಯುಟಿವ್ ಇಂಜನಿಯರುಗಳನ್ನು ಬೆಂಗಳೂರಿಗೆ ಬರಮಾಡಿಕೊಂಡು ನಡಿಸಿದ ಸಭೆಯಲ್ಲಿ ದಿವಾನರು ಮಾಡಿದ ಭಾಷಣವು ಬಹುಸಮಂಜಸವಾಗಿರುತ್ತದೆ. ದ್ರವ್ಯಾಭಾವದಿಂದ ಈ ಶಾಖೆಯ ಕೆಲಸಗಳು ಸಮರ್ಪಕವಾಗಿ ನಡೆಯಲವಕಾಶವಿಲ್ಲವೆಂದು ದಿವಾನರು ಬಲ್ಲವರಾಗಿದ್ದರೂ ದೊರೆತಷ್ಟು ಹಣವು ಉಪಯುಕ್ತಕಾರ್ಯಗಳಿಗೆ ಸದ್ವಿನಿಯೋಗವಾಗಬೇಕೆಂಬ ಆವಶ್ಯಕತೆಯನ್ನು ಸ್ಪಷ್ಟೀಕರಿಸಿದರು. ಮತ್ತು ಇತರ ಎಲ್ಲಾ ಶಾಖೆಗಳಗಿಂತಲೂ ಈ ಇಂಜನಿಯರ್ ಶಾಖೆಯು ಬಹಳ ಉಪಯುಕ್ತವಾಗಿರುವುದಲ್ಲದೆ, ಪ್ರತಿಯೊಂದು ಹಳ್ಳಿಗೂ ಬಂಡಿಯಮಾರ್ಗಾನುಕೂಲವನ್ನು ಕಲ್ಪಿಸಿಕೊಟ್ಟು ರೆವಿನ್ಯೂಶಾಖೆಯುತ್ಪತ್ತಿಯನ್ನು ಹೆಚ್ಚಿಸಬಲ್ಲುದೆಂದೂ, ಕೆರೆಗಳ ಮತ್ತು ನಾಲೆಗಳ ಜೀರ್ಣೋದ್ಧಾರಮಾಡಿ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದರಮೂಲಕ ವ್ಯವಸಾಯಶಾಖೆಗೆ ಸಾಹಾಯ್ಯಕರಿಸಬಲ್ಲುದೆಂದೂ ದಿವಾನರು ಅಪ್ಪಣೆಕೊಡಿಸಿದರು. ಸಣ್ಣಕೆರೆಗಳ ಜೀರ್ಣೋದ್ಧಾರವಾಗಬೇಕೆಂದು ಬಹಳಕಾಲದಿಂದಲೂ ಪ್ರಬಲವಾಗಿ ಪ್ರಾರ್ಥಿಸಲ್ಪಡುತ್ತಿದೆಯಾದುದರಿಂದ, ಈ ಜೀರ್ಣೋದ್ಧಾರಕಾರ್ಯವನ್ನು ಬಿಡದೆ ಒಂದೇಸಮನಾಗಿ ಮಾಡಬೇಕಾಗುದರ ಆವಶ್ಯಕತೆಯನ್ನು ಒತ್ತಿಹೇಳಿ, ಕೆರೆಗಳ ಸಂಬಂಧವಾದ ಎಲ್ಲ ವಿಷಯಗಳನ್ನೂ ಸಮಗ್ರವಾಗಿ ತಿಳಿದುಕೊಂಡು, ಅವುಗಳ ಜಲಾಶಯಗಳನ್ನೂ, ತೂಬುಗಳನ್ನೂ, ನಾಲೆಗಳನ್ನೂ ಸಕಾಲದಲ್ಲಿ ಸರಿಪಡಿಸಿ ಆ ಬಗೆಗೆ ಸಬ್‌ಡಿವಿಜನ್ ಆಫೀಸರುಗಳು ಎಕ್ಸಿಕ್ಯುಟಿವ್ ಇಂಜನಿಯರುಗಳಿಗೂ ಅವರುಗಳು ಪ್ರಭುತ್ವದವರಿಗೂ ಪ್ರತಿವರ್ಷದಲ್ಲೂ ವರದಿಮಾಡಬೇಕೆಂದು ಸೂಚಿಸಿರುತ್ತಾರೆ. ಮೋಟಾರುಬಸ್ಸುಗಳ ಓಡಾಟವು ಬಹಳವಾಗಿ ಹೆಚ್ಚಿ ಮಾರ್ಗಗಳು ಹಾಳಾಗುತ್ತಿರುವುದರಿಂದ ಅವುಗಳ ರಕ್ಷಣೆಗೆ ಇಂಜನಿಯರ್ ಶಾಖೆಯವರು ವಿಶೇಷಗಮನಕೊಡುವುದೂ ಅತ್ಯಾವಶ್ಯವಾಗಿದೆ ಎಂದು ಹೇಳಿ, ಈ ಕಾರ್ಯಗಳಿಗಾಗಿ ಹೆಚ್ಚು ಹಣವನ್ನು ಕೊಡಲು ಸಾಧ್ಯವಿಲ್ಲವಾದರೂ, ಸಕಾಲದಲ್ಲಿ ಮತ್ತು ಸುಧಾರಿಸಿದ ರೀತಿಯಲ್ಲಿ ರಿಪೇರಿ ಕೆಲಸಮಾಡಿ ಉತ್ತಮಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ. ಈ ಕಾರ್ಯಗಳಿಗಾಗಿ ಹೆಚ್ಚು ವೆಚ್ಚವಾಗುವುದರಿಂದ ಟೋಲುಗೇಟುಗಳನ್ನು ಹೆಚ್ಚಿಸಿ, ಬಸ್ಸುಗಳ ಯಜಮಾನರುಗಳಿಂದ ಹೆಚ್ಚು ಫೀಜನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿರುವರು. ನಮ್ಮ ಸಂಸ್ಥಾನದೊಳಗಿರತಕ್ಕ ಟೋಲುಗೇಟುಗಳು ಹೊರಗಡೆಯಿರುವುದಕ್ಕಿಂತ ಬಹಳ ಕಡಿಮೆಯಾಗಿರುವುದರಿಂದ ಅವುಗಳ ಸಂಖ್ಯೆಯನ್ನು ಬಹಳ ದೂರದೃಷ್ಟಿಯಿಂದ ಹೆಚ್ಚಿಸತಕ್ಕುದಾಗಿದೆ. ನಮ್ಮ ಮಾರ್ಗಗಳು ಕೆಟ್ಟುಹೋಗಿವೆಯೆಂಬ ದೂರು ಪ್ರಬಲವಾಗಿರುವುದರಿಂದ ಇಂಜನಿಯರುಗಳು ಅವುಗಳ ರಿಪೇರಿಯನ್ನು ಚೆನ್ನಾಗಿಮಾಡಿಸಿ ಈ ಆಕ್ಷೇಪವನ್ನು ಹೋಗಲಾಡಿಸಬೇಕೆಂದು ದಿವಾನರು ಅಪೇಕ್ಷಿಸಿರುತ್ತಾರಲ್ಲದೆ, ಕಟ್ಟಡಗಳ ಮತ್ತು ಸೇತುಗಳ ವಿಚಾರದಲ್ಲೂ ಅದೇ ರೀತಿ ಕೋರಿರುತ್ತಾರೆ. ಕಟ್ಟಡಗಳ ಪ್ಲಾನಿನಲ್ಲೂ ನಿರ್ಮಾಣದಲ್ಲೂ ಕಂಡುಬರುವ ನ್ಯೂನತೆಗಳಿಗೆ ದ್ರವ್ಯದ ಕೊರತೆಯು ಕಾರಣವಾಗಿರುವುದಕ್ಕಿಂತ ಇಂಜನಿಯರುಗಳ ಸ್ವವಿಚಾರಣಾಭಾವವೇ ಮುಖ್ಯಕಾರಣವೆಂದು ದಿವಾನರು ಅಪ್ಪಣೆಕೊಡಿಸಿರುವುದು ಅಕ್ಷರಶಃ ನಿಶ್ಚಯವಾಗಿರುವುದಲ್ಲದೆ, ತಾತ್ಕಾಲಿಕವೂ ಅತ್ಯಾವಶ್ಯಕವೂ ಆದ ಬುದ್ಧಿವಾದವಾಗಿದೆ. ಗೊರೂರು ಸೇತುವೆಯ ಕೆಲ ಕಮಾನುಗಳು ಕಟ್ಟಲ್ಪಡುತ್ತಿರುವಾಗಲೇ ಕೊಚ್ಚಿಕೊಂಡುಹೋದುದಕ್ಕೆ ಅಧಿಕಾರಿಗಳ ಸ್ವವಿಚಾರಣಾಭಾವವಲ್ಲದೆ ಮತ್ತಾವುದು ಕಾರಣವು? ಈ ಶಾಖೆಯಿಂದ ನಡೆಸಲ್ಪಡುವ ಕಾರ್ಯಗಳು ಸಮರ್ಪಕವಾಗಿ ನಡೆಯಲು ಇಂಜನಿಯರುಗಳ ಸ್ವಂತವಿಚಾರಣೆಯೂ ಬುದ್ಧಿವಂತಿಕೆಯೂ ಅತ್ಯಾವಶ್ಯಕವು. ಅತ್ಯುಪಯುಕ್ತವಾದ ಈ ಶಾಖೆಯ ಕಾರ್ಯಾಡಳಿತದ ಕಡೆಗೆ ದಿವಾನರು ಹೆಚ್ಚು ಗಮನಕೊಟ್ಟಿರುವುದಕ್ಕಾಗಿ ಪ್ರಜೆಗಳು ಅವರನ್ನು ವಂದಿಸುವರಲ್ಲದೆ ಇತಃಪರ ಈ ಶಾಖಾಕಾರ್ಯಗಳು ಸಮರ್ಪಕವಾಗಿಯೂ ಫಲಪ್ರದವಾಗಿಯೂ ನಡೆವುವೆಂದು ನಿರೀಕ್ಷಿಸುತ್ತಾರೆ. ಶಾಖಾಧಿಕಾರಿಗಳ ಅಶ್ರದ್ಧೆಯ ರೋಗಕ್ಕೆ ಮೇಲ್ಪಟ್ಟ ಅಧಿಕಾರಿಗಳ ಎಚ್ಚರಿಕೆಯು ಪರಮೌಷಧವಾಗಿರುವುದೆಂದು ನಾವು ನಂಬುತ್ತೇವಲ್ಲದೆ, ಅಶ್ರದ್ಧೆಯು ತೋರಿದಕಡೆಯಲ್ಲಿ ಅದಕ್ಕೆ ಪರಮಸಂಜೀವನವಾದ ಎಚ್ಚರಿಕೆಗೆ ಅಭಾವವಿರುವುದಿಲ್ಲವೆಂದು ಎಣಿಸುತ್ತೇವೆ.

ಬೆಂಗಳೂರು ಬಿನ್ನಿಮಿಲ್ಲಿನಲ್ಲಾದ ಗೊಂದಲ.

ಬೆಂಗಳೂರು ಬಿನ್ನಿಮಿಲ್ಲಿನ ಕೆಲಸಗಾರರಿಗೆ ಕಳೆದ ಜೂನ್ ತಾ|| 30 ರೊಳಗೆ ಕೊಡಬೇಕಾಗಿದ್ದ 6 ತಿಂಗಳ ಬೋನಸ್ ಮೊಬಲಗನ್ನು ಜುಲೈ ತಿಂಗಳಲ್ಲಿ ಅವರ ಸಂಬಳದ ಜತೆಗೆ ಸಹ ಕೊಡದಿದ್ದುದರಮೇಲೆ ಸುಮಾರು 5000 ಜನರು ಕ್ಷುಬ್ಧರಾಗಿ ಕಳೆದ 20ರ ಮಧ್ಯಾಹ್ನ ಬೋನಸ್ಸನ್ನು ಕೊಟ್ಟಹೊರತು ಕೆಲಸಕ್ಕೆ ಹೋಗುವುದಿಲ್ಲವೆಂದು ಮುಷ್ಕರಮಾಡಿದರು. ಆದರೂ ಹೊಸದಾಗಿ ಬಂದಿರುವ ಮ್ಯಾನೇಜರು ಲಕ್ಷಿಸದೆಹೋಗಲಾಗಿ ಅದೇ ಮಿಲ್ಲಿನಲ್ಲಿ ಕೆಲಸಮಾಡುವ ಮತ್ತು ಕೂಲಿಕಾರರ ಪರವಾಗಿ ಪ್ರಜಾಪ್ರತಿನಿಧಿಸಭಾ ಮೆಂಬರಾಗಿರುವ ಮ|| ಮುರುಘೇಶಂಪಿಳ್ಳೆಯವರು ಸಮಾಧಾನಮಾಡಲು ಪ್ರಯತ್ನಿಸಿ ಬೋನಸ್‌ಹಣವನ್ನು ಕೊಡುವುದುತ್ತಮವೆಂದು ಬಹಳ ವಿಧವಾಗಿ ಹೇಳಿದರೂ ಮ್ಯಾನೇಜರು ಕೊಡದೆಹೋದುದರಮೇಲೆ ಕೆಲಸಗಾರರು ಗೊಂದಲವನ್ನೆಬ್ಬಿಸಿದರು. ಆಗ ಮ್ಯಾನೇಜರು ತನ್ನ ಕೊಠಡಿಯೊಳಕ್ಕೋಡಿಹೋಗಿ ಬಾಗಿಲನ್ನು ಭದ್ರಪಡಿಸಿಕೊಂಡು ಟೆಲಿಫೋನ್ ಮೂಲಕ ಪೋಲೀಸಿನವರಿಗೆ ವರ್ತಮಾನವನ್ನು ಕೊಡಲು ಕೆಲಜನ ಸಿಟಿಪೋಲೀಸರು ಬಂದರಾದರೂ ಗೊಂದಲ ನಿಲ್ಲಲಿಲ್ಲವಾಗಿ ರಿಜರ್ವ್‌ಪೋಲೀಸಿನವರು ಸಾಯುಧರಾಗಿ ಸೂಪರಿಂಟೆಂಡೆಂಟ್ ಮಿ|| ಸಿರಲ್‌ರವರೊಡನೆ ಬಂದು ಮಿಲ್ಲಿನ ಮುಖದ್ವಾರದಲ್ಲಿ ನುಗ್ಗಿಹೋಗಲು ಸಾಧ್ಯವಾಗಲಿಲ್ಲವಾಗಿ ಹಿಂದಣದ್ವಾರದಿಂದ ಒಳಕ್ಕೆ ಪ್ರವೇಶಿಸಿ ಗೊಂದಲವನ್ನು ಸಮಾಧಾನಪಡಿಸಲೆತ್ನಿಸಿದಾಗ್ಗೂ ಕೂಲಿಕಾರರು ಆ ದಿವಸ ಬೋನಸ್ ಕೊಟ್ಟಹೊರತು ಕೆಲಸಕ್ಕೆ ಹೋಗುವುದಿಲ್ಲವೆಂದು ಹೇಳಿ ಇಟ್ಟಿಗೆಚೂರುಗಳನ್ನೆಸೆಯಲು ತೊಡಗಿದುದರಮೇಲೆ ರಿಜರ್ವ್‌ಪೋಲೀಸಿನವರು 3-4 ವೇಳೆ ಗುಂಡನ್ನು ಹೊಡೆದರು. ಅದು ಗುಂಪಿನಲ್ಲಿ ಕೆಲವರಿಗೆ ತಗುಲಿ ಇಬ್ಬರು ಕೂಡಲೆ ಸತ್ತರು, ಮತ್ತೆ ನಾಲ್ಕಾರುಜನರಿಗೆ ಪ್ರಾಣಾಪಾಯವಾಯಿತು. ಅವರು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಟ್ಟಾಗ್ಗೂ ಇಬ್ಬರು ಸತ್ತುಹೋದರು. ಈ ವರ್ತಮಾನವು ದಿವಾನರಿಗೆ ತಿಳಿದು ಅವರೂ, 1ನೇ ಕೌನ್ಸಿಲರೂ, ಪೊ|| ಇ|| ಜನರಲ್‌ರವರೂ, ಡಿ|| ಮ್ಯಾಜಿಸ್ಟ್ರೇಟರೂ ಮಿಲ್ಲಿಗೆ ಬಂದು [illegible] ಕೆಲಸಗಾರರಿಗೆ ಸಮಾಧಾನಹೇಳಿ [illegible]. ಈ ಗೊಂದಲದಲ್ಲಿ ಒಬ್ಬಿಬ್ಬ ಪೋಲೀಸಿನವರಿಗೂ ಪೆಟ್ಟುಬಿದ್ದಿರುತ್ತದೆಂದೂ, ಕೆಲಸಗಾರರು ತಾವು ಹೀಗೆ ಮುಷ್ಕರಮಾಡುತ್ತೇವೆಂದು ಮಿಲ್ಲಿನ ಅಧಿಕಾರಿಗಳಿಗೆ ಮುಂದಾಗಿ ತಿಳಿಸಿರಲಿಲ್ಲವೆಂದೂ, ಕೆಲಸಗಾರರು ಗೊಂದಲವನ್ನು ನಿಲ್ಲಿಸದೆ ಅತ್ಯಾಚಾರ ಮಾಡಿದಲ್ಲಿ ಗುಂಡುಹಾರಿಸಲ್ಪಡುತ್ತದೆಂದು ಕೆಲಸಗಾರರಿಗೆ ಪೋಲೀಸರು ಮುಂದಾಗಿ ಎಚ್ಚರಿಕೆಯನ್ನು ಕೊಡದೆ ಏಕಾಏಕಿ ಹೊಡೆದರೆಂದೂ ವರ್ತಮಾನವಿದೆ. ನಿಜವಾಗಿ ನಡೆದ ಸಂಗತಿಯನ್ನು ಕುರಿತು ಸರ್ಕಾರದವರ ಹೇಳಿಕೆಯು ಇನ್ನೂ ಪ್ರಕಟವಾಗಿಲ್ಲವು. ಕೆಲಸಗಾರರು ಈಗ ಶಾಂತರಾಗಿ ತಮ್ಮ ಕೆಲಸದಮೇಲೆ ಹೋಗುತ್ತಿರುವುದಾಗಿ ತಿಳಿಯಬಂದಿದೆ.

ಸ್ವದೇಶದ ವೃತ್ತಾಂತಗಳು.

ಮೈಸೂರು-ಬೆಂಗಳೂರು ಮಧ್ಯ ಓಡಾಡುವ ಮೇಲು ಮತ್ತು ಎಕ್ಸ್‌ಪ್ರೆಸ್ ಬಂಡಿಗಳ 3 ನೇ ತರಗತಿಯ ಛಾರ್ಜು 4⅓ ಕಾಸಿನಿಂದ 4 ಕಾಸಿಗೆ ಬರುವ ಆಗಸ್ಟ್ ತಾ|| 1 ರ ಆರಭ್ಯ ಇಳಿಸಲ್ಪಟ್ಟಿರುತ್ತದೆ.

ಹೊಳೇನರಸೀಪುರದ ಸಬ್‌ಡಿವಿಜನ್ ಆಫೀಸರಾದ ಅ|| ಕ|| ಮ|| ಎನ್. ಸುಬ್ಬರಾಯರು ಹಾಸನ ಡಿ|| ಟ್ರಜರಿಗೂ ರಜದಮೇಲಿರುವ ಅ|| ಕ|| ಮ|| ಎಂ. ಸದಾಶಿವರಾಯರು ಹೊಳೇನರಸೀಪುರದ ಸಬ್‌ಡಿವಿಜನ್ನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಪೋಲೀಸು ಕಾನಿಸ್ಟಬಲು ಒಬ್ಬ ಹೆಂಗಸಿನ ಆಭರಣಗಳನ್ನು ಕಸುಕೊಂಡು ಮಾನಭಂಗವನ್ನು ಮಾಡಿದುದಕ್ಕಾಗಿ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿರುವ ವಿಚಾರಣೆಯ ಫಲಿತಾಂಶವು ಈ ಸೋಮವಾರ ತಿಳುಹಲ್ಪಡುವುದು.

ಶ್ರೀಮನ್ ಮಹಾರಾಜರವರ ಸ್ವಾರಿಯು ನೆನ್ನೆಯ ಮಧ್ಯಾಹ್ನ 2 ಘಂಟೆಯಲ್ಲಿ ಮೋಟಾರುಬಂಡಿಯಲ್ಲಿ ಬೆಂಗಳೂರಿಗೆ ಚಿತ್ತೈಸಿತು, ಮತ್ತು ಈ ತಾ|| 30 ರಲ್ಲಿ ನಡೆಯುವ ಶ್ರೀಜಯಚಾಮರಾಜಒಡೆಯರವರ ವರ್ಧಂತ್ಯುತ್ಸವಕ್ಕಾಗಿ ರಾಜಧಾನಿಗೆ ದಯೆಮಾಡಿಸಬಹುದಾಗಿದೆ.

ರಾಜಧಾನಿಯ ಶ್ರೀಚಾಮುಂಡೇಶ್ವರೀಕರ್ಣಾಟಕನಾಟಕಸಭೆಯವರು ಕಳೆದ ತಾ|| 17ರಲ್ಲಿ ರಾಜಸೂಯಯಾಗಕಥೆಯನ್ನೂ, ತಾ|| 22ರಲ್ಲಿ ವಿರಾಟಪರ್ವಕಥೆಯನ್ನೂ ಶ್ರೀಮನ್ ಮಹಾರಾಜರವರ ಸಂಮುಖದಲ್ಲಿ ಪ್ರದರ್ಶಿಸಿ ಮಹಾಸ್ವಾಮಿಯವರ ಮೆಚ್ಚುಗೆಗೂ ಬಹುಮಾನಕ್ಕೂ ಪಾತ್ರರಾದರೆಂದು ತಿಳಿಯಬರುತ್ತದೆ.

ನಂಜನಗೂಡಿನಿಂದ ಚಾಮರಾಜನಗರಕ್ಕೆ ಹಾಕಲ್ಪಟ್ಟಿರುವ ರೈಲುಮಾರ್ಗವು ಈ ತಾ|| 27ರಲ್ಲಿ ಭರತಖಂಡದ ರೈಲ್ವೆಗಳ ಇನ್ಸ್‌ಪೆಕ್ಟರಿಂದ ಪರೀಕ್ಷಿಸಲ್ಪಡುವುದೆಂದೂ, ಬರುವ ಆಗಸ್ಟ್ ತಾ|| 15-20 ರೊಳಗೆ ಶ್ರೀಮನ್ಮಹಾರಾಜರವರಿಂದ ಆರಂಭೋತ್ಸವವು ನಡೆಯಿಸಲ್ಪಟ್ಟು ಪ್ರಯಾಣಿಕರ ಬಂಡಿಗಳು ಬಿಡಲ್ಪಡುವುವೆಂದೂ ಕೇಳುತ್ತೇವೆ.

ಮೈಸೂರು ಡಿವಿಜನ್ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಕೆ. ಸಿದ್ಧರಾಮಪ್ಪ, ಬಿ.ಎ., ಯವರು ಮಾನನಷ್ಟಕ್ಕಾಗಿ ರಾಜಧಾನಿಯ ಅಡ್ವೋಕೇಟ್ ಮ|| ಎಂ. ಸುಬ್ಬರಾವ್, ಬಿ.ಎ., ಎಲ್‌ಎಲ್.ಬಿ., ರವರ ಮೇಲೂ ಒಬ್ಬ ಶಾನುಭೋಗರಮೇಲೂ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ವಿವಾದದಲ್ಲಿ ಅಪರಾಧಿಗಳು ಬಿಡಲ್ಪಟ್ಟುದರಮೇಲೆ ಪುನರ್ವಿಚಾರಣೆಗಾಗಿ ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿಗೆ ಅರ್ಜಿಹಾಕಿರುವರು.

ನರಸಿಂಹರಾಜಪುರದ ಮುನಸೀಫರಾದ ಮ|| ಕೆ. ಬಸವರಾಜಅರಸಿನವರು ತಮ್ಮ ವಿವಾಹಸಂಬಂಧವಾಗಿ ರಜವನ್ನು ತೆಗೆದುಕೊಂಡಿದ್ದ ವೇಳೆಯಲ್ಲಿ ಮ|| ಡಿ. ಶ್ರೀನಿವಾಸಾಚಾರರು ಬದಲುನೋಡುತ್ತಿರಬೇಕೆಂಬ ಸರ್ಕಾರಿಯಪ್ಪಣೆಯು ಮ|| ಕೆ. ಬಸವರಾಜಅರಸಿನವರು ರಜವನ್ನು ಪೂರೈಸಿಕೊಂಡು ಕೆಲಸದಮೇಲೆ ಹೋಗಿ ಒಂದುವಾರದನಂತರ ಗಜೆಟ್ಟಿನಲ್ಲಿ ಪ್ರಕಟವಾಗಿರುವವುದು ಅಧಿಕಾರಿಗಳ ಚಟುವಟಿಕೆಯನ್ನು ವ್ಯಕ್ತಗೊಳಿಸುತ್ತದೆ.

ಅರಮನೆಯ ಕಂಟ್ರೋಲರುದ್ಯೋಗದಿಂದ ನಿವೃತ್ತರಾಗಿದ್ದ ಮ|| ಬಿ. ರಾಮಕೃಷ್ಣರಾಯರು ಕೆಲದಿನಗಳಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 17 ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ 71 ವರ್ಷ ವಯಸ್ಸಾಗಿದ್ದಿತು. ಶ್ರೀಮನ್ ಮಹಾರಾಜರವರು ದಿವಾನರ ಸಮೇತ 15-20 ದಿವಸಗಳ ಕೆಳಗೆ ರಾಮಕೃಷ್ಣರಾಯರ ಮನೆಗೆ ದಯೆಮಾಡಿಸಿ ಅವರ ದೇಹಸ್ಥಿತಿಯನ್ನು ಪರಾಮರ್ಶಿಸಿಕೊಂಡು ಬಂದುದಾಗಿ ವರ್ತಮಾನವಿದೆ.

ಸಂಪದಭ್ಯುದಯಪತ್ರಿಕಾಸಂಪಾದಕರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತಮಗೆ 250 ರೂ. ಅರ್ಥದಂಡವು ವಿಧಿಸಲ್ಪಟ್ಟಿರುವುದರಮೇಲೆ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ಅಪೀಲನ್ನು ಮಾಡಿರುವುದಾಗಿಯೂ, ಒಂದನೇ ಅಪರಾಧಿ ಮ|| ವೆಂಕಟಕೃಷ್ಣಯ್ಯನವರನ್ನು ಬಿಟ್ಟುದು ತಪ್ಪೆಂದೂ ಎರಡನೇ ಅಪರಾಧಿಗೆ ವಿಧಿಸಿರುವ ಅರ್ಥದಂಡವು ಕಡಿಮೆಯೆಂದೂ ಫಿರ್ಯಾದಿ ಮಿ|| ಟಿ. ಎಸ್. ಅಲ್ಲಿಖಾನ್‌ರವರು ಡಿ|| ಕೋರ್ಟಿಗೆ ಅರ್ಜಿಹಾಕಿರುವುದಾಗಿಯೂ ಕೇಳುತ್ತೇವೆ.

ರಾಜಧಾನಿಯಲ್ಲಿ ಮೊಹರಂಹಬ್ಬವು ಯಾವ ಗಲಾಟೆಯೂ ಇಲ್ಲದೆ ಶಾಂತವಾಗಿ ನಡೆಯಿತು. ಇದಕ್ಕೆ ಮಹಮ್ಮದೀಯರು ಪೂರ್ವದಂತೆ ವಿಶೇಷಶ್ರದ್ಧೆಯನ್ನು ವಹಿಸಿ ವಿನೋದಗಳಲ್ಲಿ ಭಾಗಿಗಳಾಗದೆ ಇದ್ದುದೇ ಕಾರಣವೆಂದು ಹೇಳಬಹುದು. ಕಾಸಿನ ಆಸೆಗಾಗಿ ಬೀದಿಗುಡಿಸುವ ಒಡ್ಡರು ಮತ್ತು ಕೆಲ ಕೀಳುಜನರು ತುಚ್ಛವಾದ ವೇಷಗಳನ್ನು ಹಾಕಿಕೊಂಡು ಕುಣಿಯುವುದು, ಗರುಡಿಯ ಹುಡುಗರು ಹುಲಿಯವೇಷವನ್ನು ಧರಿಸಿಕೊಂಡು ಅಲೆಯುವುದು ಮೊದಲಾದ ಪುಡಿವೇಷಗಳವಿನಾ ಘನಗಂಭೀರವಾದ ವೇಷವೊಂದಾದರೂ ಇರಲಿಲ್ಲ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿ ನಗರಾಭಿವೃದ್ಧಿಸಂಘದವರು ತಮಗೆ ಸೇರಿರುವ ಮತ್ತು ಮುಂದೆ ತಾವು ಕಟ್ಟುವ ಕಟ್ಟಡಗಳನ್ನು ಮದ್ಯದ ವ್ಯಾಪಾರಕ್ಕೆ ಕೊಡಕೂಡದೆಂದು ನಿರ್ಧರಿಸಿಕೊಂಡಿರುವರು.

ಕೋಲಾರದಲ್ಲಿ ಚಿನ್ನದ ಗಣಿಪ್ರದೇಶವಾದ ಉರಿಗಮ್ಮಿನಿಂದ ಮದ್ರಾಸಿಗೆ ರೈಲುಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಹಿಂದು ಗರ್ಭಿಣಿಯು ಬಂಡಿಯಲ್ಲೇ ಅವಳಿಜವಳಿ ಮಕ್ಕಳನ್ನು ಪ್ರಸವಿಸಿ ಕೊಂಚಕಾಲಾನಂತರ ಮಕ್ಕಳೊಡನೆ ಮೃತಳಾದಳಂತೆ!

ಕರಾಚಿಪಟ್ಟಣದ ಮ್ಯುನಿಸಿಪಾಲಿಟಿಯವರು ಈಗಿರುವ ತಮ್ಮ ಆಫೀಸ್‌ಕಟ್ಟಡವನ್ನು ವಿಕ್ರಯಿಸಿ ಅದರಿಂದ ಬರುವ 4 ಲಕ್ಷ ರೂ. ಗಳ ಜತೆಗೆ ಇನ್ನು 9 ಲಕ್ಷ ರೂ. ಗಳನ್ನು ಸಾಲವಾಗಿ ತೆಗೆದುಕೊಂಡು ಒಟ್ಟು 13ಲಕ್ಷ ರೂ. ವೆಚ್ಚದಿಂದ ಮ್ಯುನಿಸಿಪಲ್ ಆಫೀಸ್ ಕಟ್ಟಡವನ್ನು ಹೊಸದಾಗಿ ಕಟ್ಟಬೇಕೆಂದು ನಿರ್ಧರಿಸಿ 6,500 ರೂ. ಗಳನ್ನು ಕೊಟ್ಟು ಒಂದು ಪ್ಲಾನನ್ನು ಬರೆಯಿಸಿರುವರು.

ಕಾಡುಗಳಲ್ಲಿ ಬೆಳೆಯುವ ಗೆಡ್ಡೆಗೆಣಸುಗಳಲ್ಲಿ ಕೆಲವು [illegible] ಎಲ್ಲವೂ ನಿಷ್ಪ್ರಯೋಜಕವಾಗಿ ಭಾವಿಸಲ್ಪಟ್ಟಿರುವುದಷ್ಟೆ. [illegible] ಯನಿಕಶಾಸ್ತ್ರರೀತ್ಯಾ ಅವುಗಳಿಂದ ನಾರು ತೆಗೆಯಲ್ಪಟ್ಟು ಬಟ್ಟೆಬರೆಗಳಿಗುಪಯೋಗಿಸಲ್ಪಡಬಹುದೆಂದು ಒಬ್ಬ ಭಾರತೀಯ ಡಾಕ್ಟರು ಕಂಡುಹಿಡಿದಿರುವನಂತೆ. ಇದು ಸಾಧ್ಯವಾದಲ್ಲಿ ಹತ್ತಿಯ ಬಟ್ಟೆಯು ಬಿದ್ದುಹೋಗಿ ಈ ಬಟ್ಟೆಯು ಅಗ್ಗವಾಗಿ ದೊರೆಯಬಹುದು.

ಮಂಗಳೂರಿನ ಒಂದು ಗೌಡಸಾರಸ್ವತಕುಟುಂಬದಲ್ಲಿ ಲಕ್ಷ್ಮೀಬಾಯಿ ಎಂಬಾಕೆಯು ಬಹಳ ಅಸ್ವಸ್ಥನಾಗಿದ್ದ ತನ್ನ ಗಂಡನು ಬದುಕುವುದಿಲ್ಲವಾದ್ದರಿಂದ ತಾನು ಮುಂದೆ ವಿಧವೆಯಾಗಿ ಬಾಳಬೇಕಾಗುತ್ತದೆಂದು ಬಹಳವಾಗಿ ಸಂಕಟಪಟ್ಟು ವೈಧವ್ಯವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಒಂದು ಬಾವಿಯಲ್ಲಿ ಬಿದ್ದು ಆತ್ಮಹತ್ಯಮಾಡಿಕೊಂಡಳು. ಅತ್ತಲಾಗಿ ಪ್ರಾಣಾಪಾಯಸ್ಥಿತಿಯಲ್ಲಿದ್ದ ಆಕೆಯ ಗಂಡನು ಈಗ ಗುಣಮುಖನಾಗಿರುತ್ತಾನೆ.

ಕಥವಾಡಕ್ಕೆ ಸೇರಿದ ಕೆಲ ಭಾಗದಲ್ಲಿ 10-15 ದಿವಸಗಳ ಕೆಳಗೆ ವಿಪರೀತ ಮಳೆಯಾಗಿ ನದಿಗಳಲ್ಲಿ ಪ್ರವಾಹವು ಮಿತಿಮೀರಿಬಂದು ರೈಲ್ವೆ ಮಾರ್ಗವು ಕೊಚ್ಚಿಹೋಯಿತು ಮತ್ತು ತಂತಿಯ ಕಂಬಗಳೂ ಮರಗಳೂ ಬುಡಮೇಲಾಗಿ ಉರುಳಿದುವು. ಜೋರ್‍ವಾಡ ಮತ್ತು ವೆರಾವೋಲ್ ಎಂಬೂರುಗಳ ಮಧ್ಯೆ 2 ದಿವಸಗಳಲ್ಲಿ 21 ಅಂಗುಲ ಮಳೆಸುರಿಯಿತು. ಒಂದು ಗ್ರಾಮದಲ್ಲಿ 25 ಜನರ ವಿನಾ ಉಳಿದವರೆಲ್ಲರೂ ಪ್ರವಾಹದಲ್ಲಿ ಕೊಚ್ಚಿಹೋದರಂತೆ.

ಸರ್ವೆಂಟ್ಸ್ ಆಫ್ ಇಂಡ್ಯಾ ಸೊಸೈಟಿಯ ಮುದ್ರಾಲಯ ಮತ್ತು ಪುಸ್ತಕಭಂಡಾರಗಳು ಬೆಂಕಿಯ ಅನಾಹುತದಿಂದ ನಷ್ಟವಾದಪ್ರಯುಕ್ತ ಅವುಗಳ ಜೀರ್ಣೋದ್ಧಾರಕ್ಕಾಗೇರ್ಪಟ್ಟಿರುವ ಧನರಾಶಿಗೆ ಈವರೆಗೆ 92,000 ರೂ. ಗಳು ಸಹಾಯವಾಗಲ್ಪಟ್ಟಿರುವುದಲ್ಲದೆ ಹಿಸ್ ಹೈನೆಸ್ ಆಗಾಖಾನ್‌ರವರು 5,000 ರೂ. ಗಳನ್ನೂ ಗ್ವಾಲಿಯರ್ ಸಂಸ್ಥಾನದ ರೀಜೆಂಟರಾದ ಮಹಾರಾಣಿಯವರು 8,000 ರೂ. ಗಳನ್ನೂ ಕೊಡಲು ವಾಗ್ದಾನಮಾಡಿರುತ್ತಾರೆ.

ನಯನಕ್ಷತ್ರಿಯರು ವಿದ್ಯೆ, ಕಸಬು ಮೊದಲಾದ ವಿಚಾರಗಳಲ್ಲಿ ಅಭಿವೃದ್ಧಿಯನ್ನು ಹೊಂದುವ ಮಾರ್ಗವನ್ನು ಕಂಡುಹಿಡಿಯಲು ಯಾವದ್ಭಾರತನಯನಕ್ಷತ್ರಿಯರ ಮಹಾಸಭೆಯನ್ನು ಅಮೃತಸರದಲ್ಲಿ ಬರುವ ದಸರಾಕಾಲದಲ್ಲಿ ನಡೆಯಿಸಲು ಅಮೃತಸರದ ಬದ್ರೀದಿನ್ ಎಂಬಾತನು ಪ್ರಯತ್ನಪಟ್ಟು ಒಂದು ಸ್ವಾಗತಸಂಘವನ್ನೇರ್ಪಡಿಸಿ ಅದಕ್ಕೆ ತಾನೇ ಅಧ್ಯಕ್ಷನಾಗಿರುವನು. ಕ್ಷೌರವೃತ್ತಿಯ ಹಿಂದು ಮಹಮ್ಮದೀಯ ಮತ್ತು ಸಿಖ್ ಮತಸ್ಥರೆಲ್ಲರೂ ಈ ಮಹಾಸಭೆಗೆ ಬರಬೇಕಾಗಿ ಕೋರಲ್ಪಟ್ಟಿರುತ್ತಾರೆ.

ಬರ್ಕೆಲಿಯಲ್ಲಿ ಕೇಕೆಯದಾಸನೆಂಬ ವಕೀಲನಿಗೆ ನಾಲ್ಕುವರ್ಷ ವಯಸ್ಸಿನ ಒಬ್ಬ ಮಗನಿದ್ದಾನೆ. ಇವನು ತನ್ನ ಪೂರ್ವಜನ್ಮವೃತ್ತಾಂತವನ್ನು ಅಂದರೆ ತಾನು ಹಿಂದೆ ಕಾಶೀಪಟ್ಟಣದ ವಾಸಸ್ಥನಾದ ಬಾಬಾಜಿಪಾಂಡೆ ಎಂಬಾತನಿಗೆ ಮಗನಾಗಿದ್ದನೆಂದೂ, ಆ ಪಾಂಡೆಯು ಬಹಳ ಶ್ರೀಮಂತನಾಗಿದ್ದು ಮೋಟಾರು ಮತ್ತು ಕುದುರೆಬಂಡಿಗಳನ್ನಿಟ್ಟುಕೊಂಡು ಬಹಳ ಆಟ್ಟಹಾಸದಿಂದ ಜೀವಿಸುತ್ತಿದ್ದನೆಂದೂ ಹೇಳುತ್ತಿರುವುದರಮೇಲೆ ಅದರ ನಿಜಾಂಶವನ್ನು ತಿಳಿಯುವುದಕ್ಕಾಗಿ ತಂದೆಯಾದ ವಕೀಲನು ಕಾಶೀಪಟ್ಟಣಕ್ಕೆ ಹೋಗಿ ವಿಚಾರಿಸುವವನಾಗಿರುವನಂತೆ.

ಸಿಲೋನಿಗೆ ಸೇರಿದ ಒಂದು ಗ್ರಾಮದ ಹೊರಗಡೆ ಗುಡಿಸಿಲಿನಲ್ಲಿ ವಾಸಿಸುತ್ತಿರುವ ರಿಕ್ತದಂಪತಿಗಳು ಎಳೆಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿ ಜೀವನಾರ್ಥವಾಗಿ ಹೊರಕ್ಕೆ ಹೋಗಿರುವ ಸಮಯದಲ್ಲಿ ಒಂದು ಚಿರತೆಯು ಬಂದು ತೊಟ್ಟಿಲಿನಲ್ಲಿದ್ದ ಮಗುವನ್ನೆತ್ತಿಕೊಂಡು ತನ್ನ ವಾಸಸ್ಥಳಕ್ಕೆ ತೆಗೆದುಕೊಂಡುಹೋಗಿ ಸತ್ತುಹೋಗಿದ್ದ ತನ್ನ ಮರಿಯಪಕ್ಕದಲ್ಲಿ ಮಲಗಿಸಿಕೊಂಡಿದ್ದಿತಂತೆ. ಆ ಮಗುವಿನ ತಂದೆತಾಯಿಗಳೂ ಗ್ರಾಮಸ್ಥರೂ ಮಾಯವಾದ ಮಗುವನ್ನು ತಡಕುತ್ತಿರುವಾಗ ಸತ್ತ ಚಿರತೆಮರಿಯ ಪಕ್ಕದಲ್ಲಿ ಮಗುವು ಸುರಕ್ಷಿತವಾಗಿ ಮಲಗಿದ್ದುದನ್ನು ಕಂಡು ಅದನ್ನೆತ್ತಿಕೊಂಡುಬಂದರಂತೆ!

ಈ ತಾ|| 21 ರ ರಾತ್ರಿ 10 ಘಂಟೆಯಿಂದ ಬೆಳಗಿನ 10 ಘಂಟೆಯವರೆಗೆ ಕಲಕತ್ತಾ ಪಟ್ಟಣದಲ್ಲಿ 6.3 ಅಂಗುಲ ಮಳೆಯು ಸುರಿದು ಅನೇಕ ಮಾರ್ಗಗಳಲ್ಲಿ ಮಂಡಿಯುದ್ದವೂ ನಡುವಿನುದ್ದವೂ ನೀರುನಿಂತು ಜನಗಳ ಮತ್ತು ಬಂಡಿಗಳ ತಿರುಗಾಟಕ್ಕೆ ಅಡಚಣೆಯಾಗಿದ್ದಿತು; ಅನೇಕ ಕೆರೆಗಳಲ್ಲಿ ನೀರುತುಂಬಿ ತುಳುಕುತ್ತಿದ್ದಿತಲ್ಲದೆ ಅಂಗಡಿಗಳಿಗೆ ನೀರುನುಗ್ಗಿ ವಿಪರೀತ ನಷ್ಟವುಂಟಾಯಿತು; ಮನೆಗಳು ಬಿದ್ದುಹೋಗಿ ಕೆಲ ಪ್ರಾಣನಷ್ಟವೂ ಆಗಿರುವುದು. ನದಿಯಿಂದ ನೀರನ್ನೆತ್ತಿ ಊರಿಗೊದಗಿಸುವ ಯಂತ್ರಾಲಯಕ್ಕೆ ನೀರುನುಗ್ಗಿ ಯಂತ್ರಗಳೆಲ್ಲವೂ ಕೆಲಸಮಾಡದೆ ತಟಸ್ಥವಾಗಿದ್ದುದರಿಂದ ಕುಡಿಯುವ ನೀರನ್ನೊದಗಿಸಲು ಅವಕಾಶವಿಲ್ಲದಿದ್ದಿತು.

ಢಾಕಾಡಿಸ್ಟ್ರಿಕ್ಟಿಗೆ ಸೇರಿದ ನರಾದ ಎಂಬ ಗ್ರಾಮವಾಸಿಯಾದ ಒಬ್ಬ ಹಿಂದುವು ಹೆಂಡತಿಯಮೇಲೆ ಕೋಪಿಸಿಕೊಂಡು ಒಂದು ಆಯುಧದಿಂದ ಅವಳ ತಲೆಯಮೇಲೆ ಹೊಡೆದು ಗಾಯಪಡಿಸಲಾಗಿ ಆಕೆಯು ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದು ಗುಣಹೊಂದಿದಳು. ಈ ವಿಚಾರವನ್ನು ಪೋಲೀಸರು ತಿಳಿದು ಅವನಮೇಲೆ ಕ್ರಿಮಿನಲ್ ಕೋರ್ಟಿನಲ್ಲಿ ವಿವಾದವನ್ನು ಹೂಡಿರಲಾಗಿ ಆವನ ಹೆಂಡತಿಯು ತನ್ನ ವಿಚಾರಣೆಯಕಾಲದಲ್ಲಿ "ಗಂಡನಾದವನು ಕೋಪದಿಂದ ಹೊಡೆದುದಕ್ಕಾಗಿ ಆತನನ್ನು ಶಿಕ್ಷೆಗೆ ಗುರಿಪಡಿಸಿ ತಾನೂ ತನ್ನ ಮಕ್ಕಳೂ ಆತನ ಪೋಷಣೆಯನ್ನು ಕಳೆದುಕೊಳ್ಳಲಾಗುವುದಿಲ್ಲವಾದುದರಿಂದ ಗಂಡನನ್ನು ಶಿಕ್ಷಿಸಲಾಗದು" ಎಂದು ಹೇಳಿಕೊಂಡುದರಮೇಲೂ, ಅಪರಾಧಿಯಾದ ಗಂಡನು ತಾನು ಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟುದರ ಮೇಲೂ ಅವನನ್ನು ಮ್ಯಾಜಿಸ್ಟ್ರೇಟು ಶಿಕ್ಷಿಸದೆ ಇತಃಪರ ಒಳ್ಳೇನಡತೆಯಿಂದಿರಬೇಕೆಂದು ಅವನಿಗೆ ವಿವೇಕವನ್ನು ಹೇಳಿ ಬಿಟ್ಟುಬಿಟ್ಟನು. "ಗಂಡಸಿನ ಪ್ರಾಣದಂತೆ ಹೆಂಗುಸಿನ ಪ್ರಾಣವಲ್ಲವೆ? ಗಂಡನಾದ ಮಾತ್ರಕ್ಕೆ ಹೆಂಡತಿಯನ್ನು ದಂಡಿಸಲು ಅಧಿಕಾರವೆಲ್ಲಿದೆ" ಎಂದು ಹೇಳುವ ನಯ್ಯಾಳಿಗಳು ಆ ಪತಿವ್ರತೆಯ ಮಾರ್ಗವನ್ನು ಅನುಸರಿಸಬಾರದೆ?

ಬಂಗಾಳಕ್ಕೆಸೇರಿದ ಏಕಬಾಲಪುರದ ಒಂದು ಮಹಮ್ಮದೀಯ ಬಡಕುಟುಂಬದಲ್ಲಿ ಕುಂಕುಲ್‌ಬೀಬಿ ಎಂಬ ಓರ್ವ ಸುಂದರತರುಣಿಯು ತನ್ನ ನಿರುದ್ಯೋಗಿಯಾದ ಗಂಡನೊಡನೆ ವಾಸಮಾಡಿಕೊಂಡಿರುವಾಗ್ಗೆ, "ತಿನ್ನಕ್ಕೆ ಹಿಟ್ಟಿಲ್ಲದ ಗಂಡನನ್ನು ಕಟ್ಟಿಕೊಂಡು ಏಕೆ ಕಷ್ಟಪಡುತ್ತೀಯೆ? ಅವನನ್ನು ಬಿಟ್ಟು ನನ್ನ ಮನೆಗೆ ಬಂದು ಉಪಪನ್ನರಾದ ಜನರ ಸಂಗಮಾಡಿ ಹಣವನ್ನು ಸಂಪಾದಿಸಿ ಸುಖದಿಂದ ಜೀವಿಸಬಹುದು" ಎಂದು ಅವಳ ತಾಯಿಯು ಬಹಳ ದಿನಗಳಿಂದಲೂ ಬಲವಂತಪಡಿಸುತ್ತಿದ್ದಾಗ್ಗೂ ಆ ತರುಣಿಯು ಅದಕ್ಕೊಡಂಬಡದೆ ವೇಶ್ಯಾವೃತ್ತಿಯದಿಂದ ಸುಖವಾಗಿ ಜೀವಿಸುವುದಕ್ಕಿಂತ ತನ್ನ ಗಂಡನ ಕಷ್ಟದಲ್ಲಿ ಭಾಗಿಯಾಗಿರುವುದೇ ತನಗೆ ಸುಖವೆಂದು ಹೇಳಿ ತಿರಸ್ಕರಿಸಲಾಗಿ ಅವಳು ವ್ಯಭಿಚಾರಿಣಿ ಎಂದು ಮೊದಲಾಗಿ ತಾಯಿಯು ಸುಳ್ಳುಸುದ್ದಿಯನ್ನು ಹುಟ್ಟಿಸಿದಳು. ಅದರಮೇಲೆ ಮಗಳೂ ಅವಳ ಗಂಡನೂ ಆ ಸ್ಥಳವನ್ನು ಬಿಟ್ಟು ಬೇರೆಸ್ಥಳದಲ್ಲಿ ವಾಸಮಾಡಲು ಮನೆಯನ್ನು ಗೊತ್ತುಮಾಡಿ ಅದೇದಿವಸ ಹೊಸಮನೆಗೆ ಹೋದರು. ಅವಳ ತಾಯಿಯು ಮಗಳ ಹೊಸಮನೆಗೆ ಇಬ್ಬರು ಮೂವರು ಗೂಂಡಾಗಳೊಡನೆ ಹೋಗಿ ಮಗಳನ್ನು [illegible] ಅವಳ ಎದೆಯಮೇಲೆ [illegible] ಅವಳ [illegible]. ಅದರಮೇಲೆ [illegible] ಮ್ಯಾಜಿಸ್ಟ್ರೇಟ್ [illegible].

ಕಳೆದ ತಾ|| 10ರ ರಾತ್ರಿ 9½ ಗಂಟೆಯಲ್ಲಿ ಮೋತಿಬಾಯಿ ಎಂಬ ಒಬ್ಬ ಭಿಕ್ಷುಕಳು ತನ್ನ ಎರಡುಮಕ್ಕಳೊಡನೆ ಬೊಂಬಾಯಿಪಟ್ಟಣದ ಚರ್ಚ್‌ಗೇಟಿನಿಂದ ಗ್ರ್ಯಾಂಟ್‌ರೋಡಿಗೆ ಹೋಗುತ್ತಿದ್ದ ರೈಲ್ವೆಬಂಡಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ಮಗುವೊಂದು ಅಳುತ್ತಿರಲು ಅದರ ಗಲ್ಲವನ್ನು ಮುದ್ದಿಸಿ ಸಮಾಧಾನಪಡಿಸುತ್ತಿರುವಲ್ಲಿ ಹಿಂದಿನಿಂದ ಯಾರೋ ತನ್ನ ಎದೆಯಮೇಲೆ ಕೈಗಳನ್ನು ಹಾಕಿ ಬಾಚಿತಬ್ಬಿಕೊಳ್ಳುತ್ತಿರುವುದನ್ನು ತಿಳಿದು ಬೆಚ್ಚಿಬಿದ್ದು ಸುತ್ತಲೂ ನೋಡಿ ಒಬ್ಬ ಪಾರ್ಸಿಯುವಕನನ್ನು ಕಂಡು ಮನಸ್ವೀ ನಿಂದಿಸಿದಳು. ಅದರಮೇಲೆ ಅವನು ಅವಳನ್ನು ಹೊಡೆಯುತ್ತೇನೆಂದೂ ಪೋಲೀಸರ ವಶಮಾಡುತ್ತೇನೆಂದೂ ಭಯಪಡಿಸಿದನು. ಅಷ್ಟರಲ್ಲಿ ಬಂಡಿಯು ಸ್ಟೇಷನ್ನಿಗೆ ಬಂದು ನಿಲ್ಲಲು ಆ ಭಿಕ್ಷುಕಳು ಮಕ್ಕಳಸಮೇತ ಕೆಳಗಿಳಿದು ಆ ಅತ್ಯಾಚಾರಿ ಪಾರ್ಸಿಯನ್ನು ಗಟ್ಟಿಯಾಗಿ ಬಯ್ಯಲು ತೊಡಗಿದಾಗ ಇತರ ಪ್ರಯಾಣಿಕರು ಗುಂಪುಕೂಡಿ ಅವನನ್ನು ಹಿಡಿದು ಪೋಲೀಸರ ವಶಮಾಡಿದರು. ಅದರಮೇಲೆ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ನಡೆದು ಅವನು ರೈಲುಬಂಡಿಯು ಹೊರಡುವ ಸಮಯದಲ್ಲಿ ಆತುರದಿಂದ ಹೆಂಗುಸರ ಬಂಡಿಯನ್ನು ಹತ್ತಿದನೆಂದೂ, ಫಿರ್ಯಾದಿಗೆ ಭಿಕ್ಷೆಯನ್ನು ಕೊಡದಿದ್ದುದಕ್ಕಾಗಿ ಈ ರೀತಿ ಗೊಂದಲಹಚ್ಚಿ ಸುಳ್ಳುಫಿರ್ಯಾದನ್ನು ಮಾಡಿರುತ್ತಾಳೆಂದೂ ವಾದಿಸಿದನಾದರೂ ಮ್ಯಾಜಿಸ್ಟ್ರೇಟರು ಅದನ್ನು ನಂಬದೆ 100 ರೂ. ಅರ್ಥದಂಡವನ್ನು ಕೊಡಬೇಕೆಂದೂ ಅದು ತಪ್ಪಿದಲ್ಲಿ 2 ತಿಂಗಳ ಕಠಿಣಕಾರಾಗೃಹವಾಸ ಮಾಡಬೇಕೆಂದೂ ವಿಧಿಸಿದರು, ಮತ್ತು ಟಿಕೀಟಿಲ್ಲದೆ ಪ್ರಯಾಣಮಾಡಿದುದಕ್ಕಾಗಿ ರೈಲ್ವೆಕಂಪೆನಿಯವರು ಅವನಿಗೆ 5 ರೂ. ದಂಡವನ್ನು ವಿಧಿಸಿದರು.

ವಿದೇಶದ ವೃತ್ತಾಂತಗಳು

ಇರುವೆಯ ನಡಿಗೆಗೆ ಅನುಗುಣವಾಗಿ ಮನುಷ್ಯನು ಕಾಲುಗಳನ್ನು ಹಾಕುವುದಾದರೆ ಘಂಟೆಯೊಂದಕ್ಕೆ 800 ಮೈಲಿಯಂತೆ ನಡೆಯಬಹುದು.

ಕಳೆದ ತಾ|| 22ರಲ್ಲಿ ಚಕ್ರವರ್ತಿಯವರು ಬಕಿಂಗ್ಯಾಂ ಅರಮನೆಗೆ 13000 ಅತಿಥಿಗಳನ್ನು ಬರಮಾಡಿಕೊಂಡು ವಿನೋದೋತ್ಸವದಿಂದ ಸತ್ಕರಿಸಿದರು.

ಈಜಿಪ್ಟಿನ ಪೂರ್ವಕಾಲದ ವೈದ್ಯರು ರೋಗಿಯ ತಲೆಯಮೇಲೆ ಹೊಡೆದು ಅವನು ಜ್ಞಾನತಪ್ಪಿದಮೇಲೆ ಅವನಿಗೆ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದರಂತೆ.

ಕಳೆದ ಸೋಮವಾರ ಹಾಂಕಾಂಗಿನಲ್ಲಿ 21 ಅಂಗುಲ ಮಳೆಯಾಗಿ ಮಾಗಣಗಳು ಕುಸಿದುಹೋಗಿ ಹಾಳಾದುವು. ಪ್ರಾಣನಷ್ಟವು ಬಹು ಅಲ್ಪವಾಗಿ ಆದುದಲ್ಲದೆ ಮತ್ತಾವ ನಷ್ಟವೂ ಆಗಲಿಲ್ಲ.

ಟೆಹರಾನಿನಲ್ಲಿ ಬಹಳ ಪ್ರಖ್ಯಾತನೂ ಹಿಂದಣ ಮಂತ್ರಿಯೂ ಆಗಿದ್ದ ಮತ್ತು ದೊಡ್ಡ ಶ್ರೀಮಂತ ಭೂಸ್ವಾಮಿಯೆಂದು ಭಾವಿಸಲ್ಪಟ್ಟಿದ್ದ ಶೇಖ್ ಸಲ್ತಾಂ ಎಂಬಾತನು ಕಂದಾಯದ ಬಾಕಿಯನ್ನು ಕೊಡಲು ಚೈತನ್ಯವಿಲ್ಲದೆ ಆತ್ಮಹತ್ಯಮಾಡಿಕೊಂಡನು.

ಸೈಬೀರಿಯಾದಲ್ಲಿ ನದಿಗಳು ಮಂಜಿನನೆಲದಮೇಲೆ ಪ್ರವಹಿಸುತ್ತವೆಯಂತೆ. ಈ ಮಂಜಿನನೆಲವು ಬಹುಕಾಲದಿಂದಲೂ ಬಂಡೆಗಳಷ್ಟು ಬಲವಾಗಿ ಹೆಪ್ಪುಕಟ್ಟಿಕೊಂಡಿರುತ್ತದಂತೆ. ಲೀನಾ ಎಂಬ ನದಿಯು 9 ಅಡಿ ಮಂದವಿರುವ ಮಂಜಿನನೆಲದಮೇಲೆ ಹರಿಯುತ್ತದೆ.

ಅಮೇರಿಕಾದೇಶಸ್ಥರಾದ ಲಂಟ್‌ವೆಲ್ಸ್ ಮತ್ತು ಇವಾನ್ಸ್ ಎಂಬುವವರು ಬೈಸಿಕಲ್ಲು, ಮೋಟಾರು ಆಕಾಶಯಾನ ಮೊದಲಾದ ವಾಹನಗಳ ಸಹಾಯದಿಂದಲೂ ಕಾಲ್ನಡಗೆಯಿಂದಲೂ 28 ದಿನ ಮತ್ತು 14½ ಗಂಟೆಯ ಕಾಲದಲ್ಲಿ ಭೂಪ್ರದಕ್ಷಿಣೆಯನ್ನು ಮಾಡಿಕೊಂಡು ಸ್ವಸ್ಥಲವನ್ನು ಸುರಕ್ಷಿತವಾಗಿ ಸೇರಿರುತ್ತಾರೆ. ವಿಮಾನಗಳುಪಯೋಗವಿಲ್ಲದಿದ್ದಾಗ್ಗೆ ಜ್ಯಾಕ್‌ಮಿಯಲ್ಸ್ ಎಂಬಾತನು 35 ದಿನಗಳಲ್ಲಿ ಭೂಪ್ರದಕ್ಷಿಣೆಮಾಡಿದ್ದನು.

ಲಂಡನ್ ಪಟ್ಟಣದಲ್ಲಿ ಒಂದು ಪೋಸ್ಟಾಫೀಸಿನಿಂದ ಮತ್ತೊಂದು ಪೋಸ್ಟಾಫೀಸಿಗೆ ಕಾಗದ ಭಾಂಗಿ ಮೊದಲಾದವುಗಳನ್ನು ಕಳುಹಿಸುವಲ್ಲಿ ಬಹಳ ತಡವಾಗುತ್ತಿರುವುದರಿಂದ ಜಾಗ್ರತೆ ಕಳುಹಿಸಬೇಕೆಂಬುದರಮೇಲೆ ಭೂಮಿಯೊಳಗೆ ಸುರಂಗವನ್ನು ಕೊರೆದು ಕಂಬಿಗಳನ್ನು ಹಾಕಿ 3 ಅಡಿ ಉದ್ದ 5 ಅಡಿ ಎತ್ತರವಿರುವ ಬಂಡಿಗಳನ್ನು ಬಿಡುವುದಕ್ಕಾಗಿ 1913 ರ ಲಾಗಾಯಿತು ಕೆಲಸಕ್ಕುಪಕ್ರಮಿಸಿರುವರು. ಸೆಂಟ್ರಲ್ ಪೋಸ್ಟಾಫೀಸಿನಲ್ಲಿ ಕುಳಿತುಕೊಂಡು ಬಂಡಿಗಳನ್ನು ನಡೆಯಿಸುವವನು ಒಂದು ಗಂಟೆಗೆ 8 ರಿಂದ 35 ಮೈಲಿಗಳವರೆಗಿನ ವೇಗದಿಂದ ಓಡಿಸಲಾಗುವುದಂತೆ.

ಮಲೇರಿಯಾಜ್ವರವು ಒಂದುವಿಧವಾದ ಸೊಳ್ಳೆಯಕಡಿತದಿಂದ ಬರುತ್ತದೆಂಬುದರಮೇಲೆ, ಅವುಗಳು ವಾಸಮಾಡುವ ಕೊಚ್ಚೆಯನೀರಿನಗುಂಡಿ, ಬಚ್ಚಲು, ತಿಪ್ಪೆಗುಂಡಿ ಮೊದಲಾದ ಸ್ಥಳಗಳಿಗೆ ದ್ರಾವಕವನ್ನು ಹಾಕಿ ಅವನ್ನು ಸಾಯಿಸುತ್ತಿರುವುದು ಸರಿಯಷ್ಟೆ? ಆದರೆ ಇಂತಹ ರೋಗಜನ್ಯವಾದ ಸೊಳ್ಳೆಗಳಿಂದ ಪಾರ್ಶ್ವವಾಯುರೋಗಗ್ರಸ್ತರ ಮೈಯನ್ನು ಕಡಿಸಿದರೆ ಆ ವಾಯು ಗುಣವಾಗುತ್ತದೆಂದು ಇಂಗ್ಲೆಂಡಿಗೆ ಸೇರಿದ ಹಲ್‌ಪಟ್ಟಣದ ಆಸ್ಪತ್ರೆಯವರು ಈ ಮಲೇರಿಯಾ ಸೊಳ್ಳೆಗಳನ್ನು ಆಸ್ಪತ್ರೆಗೆ ತಂದು ಪಾರ್ಶ್ವವಾಯುರೋಗಗ್ರಸ್ತರಿಗೆ ಪ್ರಯೋಗಿಸುತ್ತಿರುವರಂತೆ.

ಹಾಲೆಂಡ್‌ದೇಶಕ್ಕೆ ಸೇರಿದ ರೋಜನ್‌ಡಾಲ್ ಎಂಬೂರಿನಲ್ಲಿ 20 ವರ್ಷ ವಯಸ್ಸಿನ ಒಬ್ಬ ಕನ್ಯೆಯಿರುತ್ತಾಳೆ. ಈಕೆಯು 7 ಅಡಿ 11 ಅಂಗುಲ ಎತ್ತರವೂ 350 ಪೌಂಡ್ ತೂಕವೂ ಇರುವಳು. ಪ್ರಪಂಚದಲ್ಲಿ ಇಷ್ಟು ಎತ್ತರವಾದ ಸ್ತ್ರೀಯು ಬೇರೊಬ್ಬಳಿಲ್ಲವಂತೆ, ಮತ್ತು ಈಕೆಯ ಕೋಟಿಗೆ 9 ಗಜ ಬಟ್ಟೆ ಹಿಡಿಯುವುದಂತೆ! ಈ ಕನ್ಯೆಯು ಮದುವೆಯಾಗಲು ವರಿಸಿರುವ ವರನು ಈಕೆಗಿನ್ನ ಉನ್ನತವಾಗಿದ್ದು ಬೀದಿ ದೀಪಸ್ತಂಭಗಳಲ್ಲಿ ಸಿಗರೇಟನ್ನು ಹಚ್ಚಿಕೊಳ್ಳುವನಂತೆ! ದೇವರು ಈ ಅಪೂರ್ವ ಉನ್ನತಾಕೃತಿಯ ಸ್ತ್ರೀಪುರುಷರಿಗೆ ತಕ್ಕ ವರಸಾಮ್ಯದೊರಕಿರುವುದೂ ಅಪೂರ್ವವೇ ಸರಿ.

ಕೆಲ ನಾರು ಮೊದಲಾದವುಗಳಿಂದ ಕೃತಕ ರೇಶ್ಮೆ ತಯಾರಿಸಲ್ಪಡುತ್ತಿದೆಯಷ್ಟೆ. ಹೀಗೆ ತಯಾರಿಸುವುದರಲ್ಲಿ ನೈಟ್ರಿಕ್ ಆಸಿಡ್ ಎಂಬ ದ್ರಾವಕವು ಉಪಯೋಗಿಸಲ್ಪಡುವುದು. ಈ ರೇಶ್ಮೆಯಿಂದ ನೇಯಲ್ಪಟ್ಟ ಬಟ್ಟೆಗಳಿಗೆ ಬೇರೆ ಹದವನ್ನು ಕೊಟ್ಟು ಆ ದ್ರಾವಕದ ಶಕ್ತಿಯನ್ನು ಕಡಮೆಮಾಡದಿದ್ದಲ್ಲಿ ಆ ಬಟ್ಟೆಯು ಆ ದ್ರಾವಕದ ಶಾಖಕ್ಕೆ ಹೊತ್ತಿಕೊಳ್ಳುವುದಂತೆ. ಈಗ್ಗೆ ಕೆಲ ದಿನಗಳಲ್ಲಿ ಅಂತಹ ಬಟ್ಟೆಯನ್ನು ಧರಿಸಿದ್ದ ಒಬ್ಬ ವಿದ್ಯಾರ್ಥಿಯು ಅದರಿಂದ ಹೊರಟ ಜ್ವಾಲೆಯಿಂದ ಸುಟ್ಟುಹೋದುದರಮೇಲೆ ಅವನ ತಂದೆಯು 13,000 ರೂ. ಗಳ ಪರಿಹಾರದ್ರವ್ಯವನ್ನು ಕೊಡಬೇಕೆಂದು ಆ ಬಟ್ಟೆಯ ಕಾರ್ಖಾನೆಯವರಮೇಲೆ ವಿವಾದಮಾಡಿರುತ್ತಾನೆ.

ಕ್ಷಯರೋಗನಿವಾರಣಸಂಘಾಧ್ಯಕ್ಷರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಸಂಘದ [illegible] ಸಮಯದಲ್ಲಿ ಪ್ರಸ್ತಾಪಿಸುವಾಗ್ಗೆ "ಕ್ಷಯರೋಗವು ನಿವಾರಣೀಯವಾಗಿರುವ ಪಕ್ಷದಲ್ಲಿ ಏಕೆ ನಿವಾರಣೆ ಮಾಡಲ್ಪಡಕೂಡದೆಂದು ಈ ಸಂಘಸ್ಥಾಪಕರೂ ಅಧ್ಯಕ್ಷರೂ ಆಗಿದ್ದ ಸಪ್ತಮ ಎಡ್ವರ್ಡ್ ಚಕ್ರವರ್ತಿಯವರು ಒಂದಾವರ್ತಿ ಪ್ರಶ್ನಿಸಿದ್ದರು" ಎಂಬುದನ್ನು ಜ್ಞಾಪಕಕ್ಕೆ ತಂದರಲ್ಲದೆ, ಈ [illegible] ಇಂಗ್ಲೆಂಡು ಮತ್ತು [illegible] ರಕ್ಕೆ ಪ್ರತಿಯೊಬ್ಬನೂ ಉದಾರವಾಗಿ ದ್ರವ್ಯಸಹಾಯಮಾಡಬೇಕೆಂದು ಅಪ್ಪಣೆ ಕೊಡಿಸಿದಕೂಡಲೆ 71,206 ರೂಪಾಯಿಗಳಿಗೆ ಮೇಲ್ಪಟ್ಟು ಚಂದಾ ವಾಗ್ದಾನಮಾಡಲ್ಪಟ್ಟಿತು.

ಅಮೇರಿಕೆಯ ನ್ಯೂಯಾರ್ಕ್‌ಪಟ್ಟಣದಲ್ಲಿ ಜನಸಂಚಾರವು ಬಹಳವಾಗಿ ಹೆಚ್ಚುತ್ತಿರುವುದರಿಂದ ಭೂಮಿಯಮೇಲೆ ಹಾಕಿರುವ ರೈಲುಮಾರ್ಗಗಳಲ್ಲದೆ, ಭೂಮಿಯಮೇಲೆ ಕಂಭಗಳನ್ನು ನಿಲ್ಲಿಸಿ ಅವುಗಳಮೇಲೂ ಭೂಮಿಯೊಳಗಡೆಯೂ ರೈಲುಗಳನ್ನು ಹಾಕಿರುವರು. ಕಂಭಗಳಮೇಲಿನ ಮತ್ತು ಸುರಂಗದೊಳಗಿನ ರೈಲುಮಾರ್ಗಗಳಲ್ಲಿ ಕೆಲಸಮಾಡುವವರು ಒಂದುಘಂಟೆಗೆ 3 ರೂಪಾಯಿನಂತೆ ಸಂಬಳಕೊಟ್ಟವಿನಾ ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರಮಾಡಿ ನಿಂತುಬಿಟ್ಟಿರುವರು. ರೈಲ್ವೆಯ ಯಜಮಾನರು ಅವರಿಷ್ಟದಂತೆ ಸಂಬಳ ಕೊಡದೆ ಅದೇ ಸಂಬಳದಮೇಲೆ ವಾಲಂಟಿಯರುಗಳನ್ನು ನಿಯಮಿಸಿಕೊಂಡು ಪ್ರಯಾಣಿಕರಿಗೆ ತೊಂದರೆಯಾಗದಂತೆ ಬಂಡಿಗಳನ್ನು ನಡಿಸುತ್ತಿರುವರು. ಈ ರೈಲ್ವೆಬಂಡಿಗಳಲ್ಲಿ ನಿತ್ಯದಲ್ಲೂ 25 ಲಕ್ಷ ಜನರು ಸಂಚರಿಸುತ್ತಾರಂತೆ! ಆ ಪಟ್ಟಣದ ಜನಸಂಖ್ಯೆಯು 80 ಲಕ್ಷಕ್ಕೆ ಮೀರಿರುವುದು.

ಅಮೇರಿಕೆಯ ಚಿಕಾಗೋಪಟ್ಟಣದಲ್ಲಿ ಮದುವೆಯಾಗಿದ್ದು ಪರಸ್ಪರ ಅಗಲಿದ ಜನರಲ್ಲಿ 25 ರಿಂದ 34 ವರ್ಷವಯಸ್ಸಿನೊಳಗಿರುವರು 1,000 ಕ್ಕೆ 15 ರಂತೆಯೂ, ಮದುವೆಯಾಗದೆ ಇರುವವರಲ್ಲಿ 5 ರಂತೆಯೂ, ಮದುವೆಯಾಗಿ ಸಂಸಾರಮಾಡಿಕೊಂಡಿರುವವರಲ್ಲಿ 4 ರಂತೆಯೂ; 35 ರಿಂದ 44 ವರ್ಷವಯಸ್ಸಿನೊಳಗಿರುವವರಲ್ಲಿ ಪರಸ್ಪರ ಅಗಲಿದವರು 1,000 ಕ್ಕೆ 18 ರಂತೆಯೂ, ಅವಿವಾಹಿತರು 14 ರಂತೆಯೂ, ವಿವಾಹಿತರಲ್ಲಿ 7 ರಂತೆಯೂ, 55 ರಿಂದ 64 ವರ್ಷವಯಸ್ಸಿನೊಳಗಿರುವವರಲ್ಲಿ ದಾಂಪತ್ಯವನ್ನು ಬಿಟ್ಟಿರುವವರು 56 ರಂತೆಯೂ, ಅವಿವಾಹಿತರು 49 ರಂತೆಯೂ, ವಿವಾಹಿತರು 29 ರಂತೆಯೂ ಮೃತಪಟ್ಟಿರುವುದಾಗಿ ಅಂದರೆ ಮದುವೆಯಾಗಿ ಸಂಸಾರಮಾಡಿಕೊಂಡಿರುವ ಸ್ತ್ರೀಪುರುಷರು ಸಾಯುವುದು ಬಹಳ ಕಡಿಮೆಯೆಂಬುದಾಗಿ ಚಿಕಾಗೋಪಟ್ಟಣದ ಹೆಲ್ತಾಫೀಸರ ವರದಿಯಿಂದ ಗೊತ್ತಾಗುತ್ತದೆ.

ಅಮೇರಿಕೆಯ ಅತ್ಯುನ್ನತಪರ್ವತಪ್ರದೇಶದಲ್ಲಿ ಬಾನಫ್ ಎಂಬ ಒಂದೂರು ನಿರ್ಮಲವಾಯುಸ್ಥಳವಾಗಿ ಬಹಳ ಪ್ರಖ್ಯಾತವಾಗಿರುವುದರಿಂದ ಯುನೈಟೆಡ್‌ಸ್ಟೇಟ್ಸ್ ಮೊದಲಾದ ಸ್ಥಳಗಳಿಂದ ಅನೇಕಜನರು ಬೇಸಿಗೆಯಕಾಲದಲ್ಲಿ ಬಂದು ವಾಸಮಾಡುವರು. ಅಲ್ಲಿಗೆ ವಾಸಕ್ಕಾಗಿ ಬರತಕ್ಕ ಜನರಿಗೆ ಸಾಕಷ್ಟು ಮನೆಗಳಿಲ್ಲದಿರುವುದರಿಂದ ಸಸಿಗಳನ್ನು ಒಂದು ಸ್ಥಳದಿಂದ ತೆಗೆದು ಬೇರೊಂದು ಸ್ಥಳದಲ್ಲಿ ನೆಡುವಂತೆ ಕಟ್ಟಡಗಳನ್ನು ಯಾವ ಅಪಾಯವೂ ಇಲ್ಲದೆ ಸ್ಥಳಾಂತರ ಮಾಡುವುದರಲ್ಲಿ ನಿಪುಣನಾದ ರೆಡ್ಡಾಕ್ ಎಂಬ ಶಿಲ್ಪಿಯು ಆ ಆರೋಗ್ಯಪಟ್ಟಣಕ್ಕೆ 6½ ಮೈಲಿ ದೂರದಲ್ಲಿರುವ ಬ್ಯಾಂಕ್‌ಹೆಡ್ ಎಂಬೂರಿನಲ್ಲಿ ಜನರ ವಾಸವಿಲ್ಲದೆ ಮನೆಗಳು ಪಾಳುಬಿದ್ದಿರುವುದರಿಂದ ಅವನ್ನು ತಕ್ಕ ಯಂತ್ರಸಾಮಗ್ರಿಗಳ ಸಹಾಯದಿಂದ ಸಾಗಿಸಲು ಪ್ರಯತ್ನಿಸಿ 60 ಮನೆಗಳನ್ನು ಸುರಕ್ಷಿತವಾಗಿ ಸಾಗಿಸಿರುವನು. 28 ಅಡಿ ಅಗಲ ಮತ್ತು 50 ಅಡಿ ಉದ್ದವಿರುವ ಮನೆಯನ್ನು ಸಾಗಿಸಲು 5 ದಿವಸಗಳು ಹಿಡಿದುವಂತೆ.

ಕ್ಷಮಾಪ್ರಾರ್ಥನಾಪತ್ರಿಕೆ.

ಮಹಾರಾಜಶ್ರೀ ಗರುಡಾಚಾರ್ಯರವರಿಗೆ,

ಮಹಮುದ್ ಅಬ್ಬಾಸ್‌ಖಾನ್, ಜಿ. ಪರಮಶಿವಯ್ಯ, ಬಿ.ಎ.,ಎಲ್‌ಎಲ್., ಬಿ. ಬೈಯಣ್ಣ, ಜಿ. ಸಿದ್ಧವೀರಪ್ಪ, ಎಂ. ಸಿ. ಚಿಕ್ಕನಂಜುಂಡಪ್ಪ, ಪಿ. ಎಂ. ಬಸಪ್ಪ ಈ ನಾವುಗಳು ೧೯೨೪ನೇ ನವಂಬರ್ ೫ನೇ ತಾರೀಖಿನಲ್ಲಿ ನಡೆದ ಬೆಂಗಳೂರುಸಿಟಿ ಮುನಿಸಿಪಾಲಿಟಿಯ ಅಧ್ಯಕ್ಷರ ಚುನಾವಣೆಯ ಸಂಬಂಧವಾಗಿ ಶ್ರೀಮನ್ಮಹಾರಾಜಾ ಸರ್ಕಾರಕ್ಕೆ ೧೯೨೪ನೇ ನವಂಬರ್ ೭ನೇ ತಾರೀಖಿನ ದಿನ ಒಂದು ತಕರಾರು ಅರ್ಜಿಯನ್ನು ಹಾಕಿದೆವು. ಆ ಅರ್ಜಿಯಲ್ಲಿ ನಿಮ್ಮ Public & Private ನಡತೆಯ ವಿಚಾರವಾಗಿ ದೋಷಾರೋಪಣೆಗಳನ್ನು ಸೇರಿಸಿದ್ದೆವು. ಆದಕಾರಣ ತಾವು ನಮ್ಮಮೇಲೆ ಮಾನಹಾನಿಗೆ ಕ್ರಿಮಿನಲ್ ಮೊಕದ್ದಮೆಯನ್ನೂ ಮಾನನಷ್ಟಕ್ಕೆ ಸಿವಿಲ್ ವ್ಯವಹಾರವನ್ನೂ ವಿಧಿಯಿಲ್ಲದೆ ನಡೆಸಬೇಕಾಗಿ ಬಂತು. ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನ ೧೯೨೪-೨೫ನೇ ವರ್ಷದ ನಂ. ೧೨ನೇ ಅಸಲ್ ಮೊಕದ್ದಮಾ ದಾವಾ ಅರ್ಜಿ ೬ನೇ ಪ್ಯಾರಾದಲ್ಲಿ ಕಂಡುಬರುವ ದೋಷಾರೋಪಣೆಗಳನ್ನು ನಾವು ಸೇರಿಸಿದ್ದು ಸರಿಯಾದದ್ದಲ್ಲವೆಂದು ನಾವು ಮನಃಪೂರ್ವಕವಾಗಿ ಒಪ್ಪುತ್ತೇವೆ. ಆ ದೋಷಾರೋಪಣೆಗಳಿಗೆ ಎಷ್ಟುಮಾತ್ರವೂ ಆಧಾರವಿಲ್ಲವೆಂಬುದೂ ನಮಗೆ ತಿಳಿದುಬರುತ್ತದೆ. ನಾವು ಹೀಗೆ ತಮ್ಮ ಮೇಲೆ ದೋಷಾರೋಪಣೆ ಮಾಡಿ ತಮ್ಮ ಮನಸ್ಸಿಗೆ ಯಾತನೆಯನ್ನೂ, ಕಷ್ಟವನ್ನೂ ಖರ್ಚನ್ನೂ ಸಹಾ ಉಂಟುಮಾಡಿದ್ದಕ್ಕಾಗಿ ಅತ್ಯಂತ ವಿಷಾದಪಡುತ್ತೇವೆ. ಆದಕಾರಣ ನಿರಪೇಕ್ಷವಾದ ಕ್ಷಮಾಪಣೆಯನ್ನು ಮಾಡಲು ನಾವು ಒಪ್ಪಿ ಕೊಟ್ಟಿರುವ ಈ ಕ್ಷಮಾಪಣಾಪತ್ರಿಕೆಯನ್ನು ತಾವು ದಯವಿಟ್ಟು ಅಂಗೀಕರಿಸಬೇಕಾಗಿ ಕೋರುತ್ತೇವೆ. ಇನ್ನುಮೇಲೆ ನಮ್ಮ ಉಭಯತ್ರರ ಸಂಬಂಧವು ನಿರಂತರವೂ ಪ್ರೇಮ ಮತ್ತು ಸ್ನೇಹಪ್ರದವಾಗಿರುವುದೆಂದು ಎಣಿಸಿ ನಂಬುತ್ತೇವೆ. ತಮಗೆ ಸೂಕ್ತತೋರಿದಂತೆ ವರ್ತಮಾನಪತ್ರಿಕೆಗಳಲ್ಲಿ ಈ ಕ್ಷಮಾಪ್ರಾರ್ಥನಾಪತ್ರಿಕೆಯನ್ನು ತಾವು ಪ್ರಕಟಿಸಲು ನಾವು ಒಪ್ಪಿರುತ್ತೇವೆ.

1. ಜಿ. ಸಿದ್ಧವೀರಪ್ಪ
2. ಜಿ. ಪರಮಶಿವಯ್ಯ
3. ಮಹಮ್ಮದ್ ಅಬ್ಬಾಸ್‌ಖಾನ್
4. ಪಿ. ಯಂ. ಬಸಪ್ಪ
5. ಯಂ. ಸಿ. ಚಿಕ್ಕನಂಜುಂಡಪ್ಪ
6. ಬಿ. ಎಲ್. ಬೈಯಣ್ಣ

ಬೆಂಗಳೂರು,
೨೨ನೇ ಜುಲೈ 1926.

ನೋಟೀಸ್.

ದೊಡ್ಡಬಳ್ಳಾಪುರದ ಛವತಿ ತಿಪ್ಪೆಗುಂಡಿ ಗುರುಸಿದ್ದಪ್ಪನವರ ಮಗ ಛವತಿ ರುದ್ರಪ್ಪನವರ ಕುಟುಂಬ ಬಸಮ್ಮನು ಜ್ಞಾನತಪ್ಪಿದುದರಿಂದ ಮರ್ಯಸುವ ಸ್ಥಿತಿಯಲ್ಲಿರುವುದನ್ನು ತಿಳಿದು 1. ಶೀಕಲ್ಲು ರೇವಣ್ಣನ ಮಗ ಪುಟ್ಟಪ್ಪ, 2. ಹಟ್ಟಿಯಲ್ಲಿರುವ ಚಿಕ್ಕಪ್ಪ ಸಿದ್ಧಲಿಂಗಪ್ಪ, 3. ಮತ್ತು ಅವನ ತಮ್ಮ ಸಿದ್ಧಪ್ಪ, 4. ಬಸಮ್ಮನ ತಾಯಿ ಸಿದ್ಧಲಿಂಗಮ್ಮ ಮೊದಲಾದವರು ಮತ್ತು ಇನ್ನೂ ಕೆಲವು ಪುಂಡುಗಾರರೂ ಷರೀಕಾಗಿ [illegible]

ನೋಟೀಸಿಗೆ ಜವಾಬು.

ಹುಣಸೂರು ತಾಲ್ಲೂಕು ಬೆಟ್ಟದಪುರದ ಹೋಬಳಿ ನಂದೀಪುರದ ಗ್ರಾಮದಲ್ಲಿರುವ ಚೆನ್ನಾಚಾರಿ ಮಗ ಮನ್ನಾಚಾರಿ ಉರಫ್ ತಮ್ಮಯ್ಯಾಚಾರಿಯು ತಿಳಿಸುವದೇನೆಂದರೆ:—ನಮ್ಮ ತಂದೆಗೆ ನಾನು, ದಕ್ಷಿಣಾಚಾರಿ ಮತ್ತು ಮಾಯಾಚಾರಿ ಎಂದು ಮೂರುಜನ ಮಕ್ಕಳು. ನಮ್ಮ ತಂದೆಗೆ ಸುಮಾರು 65-70 ವರುಷವಯಸ್ಸಾಗಿ ಬುದಿ ವಿಕಲ್ಪವಾಗಿರುತ್ತೆ. ನಾವೆಲ್ಲ ಏಕೀಗೃಹಕೃತ್ಯದಲ್ಲಿಯೇ ಇದ್ದುಕೊಂಡು ನಾನೇ ಮನೆ ಆಡಳಿತವನ್ನೆಲ್ಲಾ ನೋಡುತ್ತಿರುತ್ತೇನೆ. ಹೀಗಿರುವಲ್ಲಿ ನಮ್ಮ ತಂದೆಗೆ ಬುದ್ಧಿ ಕೆಟ್ಟುಹೋಗಿ ಅರಳುಮರುಳಾದ್ದನ್ನು ತಿಳಿದು ಕೆಲವು ಪುಂಡುಜನಗಳು ನನಗೂ ನಮ್ಮ ತಂದೆಗೂ ದ್ವೇಷವನ್ನು ತಂದುಹಾಕಿ ಒಟ್ಟು ಕುಟುಂಬದ ಆಸ್ತಿಯನ್ನು ಅವನಿಂದ ಬರಿಸಿಕೊಂಡು ಮೋಸಮಾಡಬೇಕೆಂಬ ಇರಾದೆಯಿಂದ ನಮ್ಮ ತಿಳುವಳಿಕೆಯಿಲ್ಲದೆ ಮೈಸೂರುಸ್ಟಾರ್ 12-6-1926 ನೇ ತಾರೀಖಿನ ಪೇಪರಿನಲ್ಲಿ ನನ್ನ ಮೇಲೆ ಇಲ್ಲದ ದೋಷಾರೋಪಣೆಯನ್ನು ಛಾಯಿಷ್‌ಮಾಡಿ ಸುಳ್ಳುಬರವಣಿಗೆಯನ್ನು ನಮ್ಮ ತಂದೆಯಿಂದ ದುಷ್ಟಜನರು ಬರೆಸಿರುತ್ತಾರೆ. ಅದರಲ್ಲಿ ಕಂಡ ಸಂಗತಿಯೆಲ್ಲ ಶುದ್ಧಸುಳ್ಳು. ನಿಷ್ಕಾರಣವಾಗಿ ಯಾರಾದರೂ ನನ್ನ ಇರಾದೆ ಅನುಮತಿ ಇಲ್ಲದೆ ಒಟ್ಟು ಕುಟುಂಬದಲ್ಲಿ ನನ್ನ ಸ್ವಾಧೀನಾನುಭವದಲ್ಲಿ ಇರತಕ್ಕ ನಮ್ಮ ಬಾಬತು ಸ್ಥಿರ ಆಸ್ತಿಯನ್ನು ಕ್ರಯ ಆಧಾರ ಭೋಗ್ಯ ವಗೈರೆ ಮಾಡಿಸಿಕೊಂಡದ್ದೇ ಆದರೆ ಅವುಗಳು ಊರ್ಜಿತವಾಗತಕ್ಕದ್ದಲ್ಲವೆಂದು ಎಲ್ಲರ ತಿಳುವಳಿಕೆ ಬಗ್ಗೆ ಈ ಮೂಲಕ ತಿಳಿಸಿರುತ್ತೇನೆ.

ನಂದೀಪುರ, } ಮನ್ನಾಚಾರಿ ಉರಫ್ ತಮ್ಮಯ್ಯಾಚಾರಿ ರುಜು.
ತಾ|| 14-7-26.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ ?

ಎಂಬ ಹೆಡ್ಡಿಂಗಿನಿಂದ ಆಸ್ಥಾನವಿದ್ವಾನ್ ವೇ|| ಸಿರ್ಸಿ ಗುರುಶಾಂತಶಾಸ್ತ್ರಿಗಳಿಗೂ ಕಾಶೀನಾಥಶಾಸ್ತ್ರಿಗಳಿಗೂ ಪಟ್ಟದವರ ಮತ್ತು ವಿರಕ್ತರ ವಿಚಾರವಾಗಿನಡೆದಿರುವ ಖಂಡನಪ್ರತಿಖಂಡನಗಳನ್ನು ಕುರಿತು ನಾನು ಬರೆಯುತ್ತಿದ್ದ ಆರ್ಟಿಕಲ್ಲನ್ನು ಕೆಲವುಕಾಲ ನಿಮ್ಮ ಘನವಾದ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸುತ್ತ ಬಂದು ಕಳೆದ ಜೂನ್ ತಾ|| 19ರ ಸಂಚಿಕೆಯಿಂದ ನಿಲ್ಲಿಸಿಬಿಟ್ಟಿದ್ದೀರಿ. ತಾವು ದಯವಿಟ್ಟು ನನ್ನಪ್ರಾರ್ಥನೆಯನ್ನು ಅಂಗೀಕರಿಸಿ ಸ್ಥಳವನ್ನು ಕೊಟ್ಟದ್ದಕ್ಕಾಗಿ ನಾನು ನಿಮಗೆ ಬಹಳ ಆಭಾರಿಯಾಗಿರುತ್ತೇನೆ. ಆದರೆ ಈ ಆರ್ಟಿಕಲ್ಲು ಇನ್ನೂ ಪೂರ್ತಿಯಾಗದಿರುವದರಿಂದ ಬೇರೆಪತ್ರಿಕೆಯಲ್ಲಿ ಪ್ರಕಟಿಸಲು ಅವಕಾಶವಿಲ್ಲವಾಗಿ ತಾವು ಪೂರ್ಣಕೃಪೆಯಿಟ್ಟು ನನ್ನ ಆರ್ಟಿಕಲ್ಲನ್ನು ಸಂಪೂರ್ಣಗೊಳಿಸಲು ಅವಕಾಶಕೊಡಬೇಕೆಂದು ಬೇಡುತ್ತೇನೆ.

[ನಮ್ಮ ಮುದ್ರಣಯಂತ್ರಕ್ಕೆ ಅಪಾಯಸಂಭವಿಸಿ ಕೆಲಸಗಳಿಗೆ ಅಡಚಣೆಯಾಗಿರುವುದರಿಂದ ಸ್ಟಾರ್‌ಪತ್ರಿಕೆಯ ಪುಟಸಂಖ್ಯೆಯು ಕಡಿಮೆಮಾಡಲ್ಪಟ್ಟಿರುವಪ್ರಯುಕ್ತ ನಿಮ್ಮ ಲೇಖವು ನಿಲ್ಲಿಸಲ್ಪಟ್ಟದಾಗಿದೆ, ಮತ್ತು ಸ್ಥಳಾನುಕೂಲವರಿತು ಪ್ರಕಟಿಸಲ್ಪಡುವುದಾಗುತ್ತದೆ.—ಸಂ.]

TO THE INSPECTOR-GENERAL OF POLICE.

Will the Inspector-General of Police be pleased to answer the following questions.—

1. Is it a fact that one Mr. S. Panchanathier is the Head Clerk of the office of the Assistant Superintendent of Police Railway and C. I. D.?

2. Is it a fact that he has got a grown up son by name P. Ramanathan?

3. Is it a fact that this P. Ramanathan was appointed on 1st January 1925 as a 4th class constable on Rs. 12 in the Railway Police?

4. Is it a fact that this person was promoted on 25th January 1926 to the post of 1st grade Daffedar of the Railway Department?

5. Is it not a fact that the claims of a number of constables of the 3rd, 2nd and 1st grade drawing a salary of Rs. 13, 14 and 15 respectively and those of lower grade Daffedars were overlooked in order to give a promotion to the above said P. Ramanathan who is the son of the Head clerk of the Railway Police Office?

6. Is it a fact that as a further step of advance this person was again promoted on the 1st July 1926 to the post of 1st grade Jamadar on Rs. 31 plus Rs 15 in the Railway Police?

7. Is the Inspector-General justified in shewing such undue partiality in giving two promotions within so short a period of six months to the son of a Head clerk of his Department who was only a constable of 4th class on Rs. 12?

8. Is it a fact that there were a number of better paid and better qualified persons in the Police Department who were entitled to this promotion and to whom promises had been held out?

9. Is the Inspector-General of Police aware that this act of his has created deep discontenment in the lower rank of the Police force?

10. To be consistent with the public interests and to be fair and equitable to all concerned will the Inspecter-General of Police be pleased to cancel the two promotions and revert the incumbent to his original appointment on Rs. 12?

Bangalore, AN ENQUIRER.
21st July 1926.

ಕಾಫೀಜಮಿನುಕಂದಾಯಹೆಚ್ಚುವಿಕೆ.

ಸರ್ಕಾರದವರು ಕಾಫೀಜಮೀನುಗಳಿಗೆ ಹಾಲಿ ಇರುವ 1-0-0 ರೂಪಾಯಿ ಕಂದಾಯವನ್ನು 1-4-0 ರೂಪಾಯಿಗೆ ಹೆಚ್ಚಿಸುವುದಾಗಿ ತಾ|| 4-7 ನೆಯ ಜುಲೈ 1926 ನೇ [illegible] ನಂಬರು 340 ನೇ ನೋಟೀಫಿಕೇಷನನ್ನು ಛಾಯಿಷ್ ಮಾಡಿರುವುದಲ್ಲದೆ ಕ್ಲುಪ್ತಕಾಲದಲ್ಲಿ ಜನಗಳು ಆಕ್ಷೇಪಣೆಯನ್ನು ಮಾಡದೆ ಇದ್ದರೆ ವಾಯಿದೆ ಗತಿಸಿದನಂತರ ಬರತಕ್ಕ ಆಕ್ಷೇಪಣೆಗಳನ್ನು ಅಂಗೀಕರಿಸುವದಿಲ್ಲವಾಗಿ ಪ್ರಚುರಪಡಿಸಿರುವದು ಸರ್ವರಿಗೂ ತಿಳಿದಿರಬಹುದು. ಈಗಿನ ಸ್ಥಿತಿಯಲ್ಲಿ ಕಾಫೀಜಮೀನುಗಳಿಗೆ ಕಂದಾಯ ಜಾಸ್ತಿ ಆದರೆ ಜನಗಳಿಗೆ ವೃಥಾ ಹೆಚ್ಚು ತೊಂದರೆ ಮತ್ತು ನಷ್ಟಕ್ಕೆ ಅವಕಾಶವಾಗುವಕಾರಣ ಈ ವಿಚಾರದಲ್ಲಿ ತಕ್ಕ ರೀತಿಯಲ್ಲಿ ಸರ್ಕಾರಕ್ಕೆ ಮನವೆಮಾಡಿಕೊಳ್ಳತಕ್ಕ ಬಗ್ಗೆ ತಾ|| 31-7-26 ನೇ ಶನಿವಾರ ಮಧ್ಯಾಹ್ನ 3 ಘಂಟೆಗೆ ಚಿಕ್ಕಮಗಳೂರು ಟೌನ್ ಶ್ರೀನರಸಿಂಹರಾಜಒಡೆಯರ್‌ಟೌನ್‌ಹಾಲಿನಲ್ಲಿ ನಡೆಯುವ ಮೀಟಿಂಗಿಗೆ ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

ಬಿ. ಕೇಶವಯ್ಯ, ಮತ್ತು ಬಿ. ಎನ್. ಹನುಮಂತಪ್ಪ,
ಕಾಫೀಪ್ಲಾಂಟರುಗಳು.

ಹಾವೇರಿ ಶ್ರೀಸಿದ್ಧಲಿಂಗೇಶ್ವರಲೈಬ್ರರಿಯ ವಾರ್ಷಿಕೋತ್ಸವವು.

ಮೇಲ್ಕಂಡ ಲೈಬ್ರರಿಯು 1919 ರಲ್ಲಿ ಸ್ಥಾಪಿತವಾಗಿ ಇಲ್ಲಿಯವರೆಗೆ ಅವಿಚ್ಛಿನ್ನವಾಗಿ ನಡೆದುಕೊಂಡುಬಂದಿರುತ್ತದೆ. ಸದ್ಯಕ್ಕೆ ಈ ಲೈಬ್ರರಿಯ ಕಾಯಂಫಂಡು 1,300 ರೂ. ಇದ್ದು 8-10 ವಾರಪತ್ರಿಕೆಗಳೂ 7-8 ಮಾಸಪತ್ರಿಕೆಗಳೂ ಬರುತ್ತವೆ. ಈ ವರ್ಷದ ಈ ಲೈಬ್ರರಿಯ ಜನರಲ್ ಕಮಿಟಿಯು ತಾ|| 11 ರ ಸಾಯಂಕಾಲ ಧಾರವಾಡದ ವಕೀಲರಾದ ಶ್ರೀಯುತ ಚೆನ್ನಪ್ಪಾ ಹುಂಡೇಕಾರ, ಬಿ.ಎ., ಎಲ್‌ಎಲ್.ಬಿ. ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಮೊದಲು ಶ್ರೀಯುತ ಮುಷ್ಟಿ ಇವರು ವಾರ್ಷಿಕ ರಿಪೋರ್ಟನ್ನು ಓದಿದನಂತರ ಕಾವ್ಯತೀರ್ಥ ಗುರುಮೂರ್ತಿಶಾಸ್ತ್ರಿ ಹಿರೇಮಠ ಕಜ್ಜರಿ ಇವರು ಲೈಬ್ರರಿಯಲ್ಲಿ ಸಂಗ್ರಹಿಸಬೇಕಾದ ಧರ್ಮಗ್ರಂಥಗಳ ಅವಶ್ಯಕತೆಯನ್ನು ಸ್ವಲ್ಪದರಲ್ಲಿಯೇ ಒಳ್ಳೇ ಸ್ವಾರಸ್ಯವಾಗಿ ಹೇಳಲು ಕೈ|| ರಾ|| ಬ|| ನಾರದ ಅಪ್ಪಾಸಾಹೇಬರಿಂದ ಪ್ರಸಿದ್ಧಪಡಿಸಲ್ಪಟ್ಟ ಧರ್ಮಗ್ರಂಥಗಳನ್ನೆಲ್ಲಾ ಲೈಬ್ರರಿಯ ವತಿಯಿಂದ ತರಿಸಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು. ಕೂಡಲೆ ರಾ|| ಬ|| ದೇವಿಹೊಸೂರ ಶೆಟ್ಟರ ಅಂಗಡಿಯವರು ಶಿವತತ್ವರತ್ನಾಕರವೆಂಬ ಅಮೂಲ್ಯಗ್ರಂಥವನ್ನೂ ಶ್ರೀಯುತ ಬಸಪ್ಪಾ ಮಾಗನೂರ ಇವರು ಸಂಪೂರ್ಣ ಋಗ್ವೇದವನ್ನೂ ತರಿಸಿ ಲೈಬ್ರರಿಗೆ ಕೊಡುವದಾಗಿ ವಾಗ್ದಾನಮಾಡಿದರು. ಇಷ್ಟಾದಮೇಲೆ ಕಳೆದ ತಿಂಗಳಲ್ಲಿ ಹಲಗೇರಿನಾಟಕಕಂಪನಿಯ ಅಧ್ಯಕ್ಷರಾದ ಮ|| ಜಟ್ಟೆಪ್ಪನವರು ಒಂದು ನಾಟಕದ ಉತ್ಪನ್ನವಾದ 200 ರೂ. ಗಳನ್ನು ಲೈಬ್ರರಿಯ ಕಾಯಂಫಂಡಿಗೆ ಕೊಟ್ಟದ್ದಕ್ಕೋಸ್ಕರ ಅವರ ಆಭಾರಮನ್ನಣೆಯಾಗಿ ಅವರಿಗೆ "ಅಭಿನಯಕುಶಲ" ವೆಂಬ ಬಹುಮಾನವನ್ನು ಕೊಟ್ಟದ್ದು ಸಭೆಯಲ್ಲಿ ಮಂಜೂರಾಯಿತು. ಆ ಮೇಲೆ ಅಧ್ಯಕ್ಷರು ತಮ್ಮ ರಸಭರಿತವಾದ ವಾಣಿಯಿಂದ ಲೈಬ್ರರಿಯ ಅವಶ್ಯಕತೆಯನ್ನೂ ಗ್ರಂಥಗಳನ್ನು ಓದುವ ಪದ್ಧತಿಯನ್ನೂ ಇದರಿಂದ ಮನುಷ್ಯನ ಮೇಲೆ ಆಗುವ ಪರಿಣಾಮವನ್ನೂ ಹೇಳಿದಮೇಲೆ ಅಧ್ಯಕ್ಷರ ಆಭಾರಮನ್ನಣೆಯಾಗಿ ಗಂಧತಾಂಬೂಲಹಾರಸಮರ್ಪಣೆಗಳಿಂದ ಸಭೆಯು ಮುಗಿಸಲ್ಪಟ್ಟಿತು.

ಸೆಕ್ರೆಟರಿ ಶ್ರೀ. ಸಿ. ಲೈಬ್ರರಿ. ಹಾವೇರಿ.

ಶ್ರೀಜಗದ್ಗುರುಜಯದೇವವೀರಶೈವಹಾಸ್ಟಲ್, ತುಮಕೂರು.

ಶ್ರೀ ಜಗದ್ಗುರುಜಯದೇವಮಹಾಸ್ವಾಮಿಗಳವರ ಕೃಪಾಂತಃಕರಣದಿಂದಲೂ ತುಮಕೂರಿನ ವೀರಶೈವ ಮಹಾಜನಗಳ ಸ್ಥಿರಪ್ರಯತ್ನದಿಂದಲೂ ಸರ್ಕಾರದ ಸಹಾಯದಿಂದಲೂ ತುಮಕೂರಿನಲ್ಲಿ ಕಟ್ಟಲ್ಪಟ್ಟ ವೀರಶೈವ ವಿದ್ಯಾರ್ಥಿನಿಲಯದ ಹೊಸಕಟ್ಟಡವು ಪೂರ್ತಿಯಾಗಿ ಸುಣ್ಣಬಣ್ಣಗಳಿಂದ ರಂಜಿತವಾಗಿ ಕಂಗೊಳಿಸುತ್ತಾ ವಿದ್ಯಾರ್ಥಿಗಳ ವಾಸಕ್ಕೆ ಸಿದ್ಧವಾಗಿರುವುದರಿಂದ ಸಮಾಜದ ವಿದ್ಯಾರ್ಥಿಗಳು ಪ್ರೆಸಿಡೆಂಟರಾದ ಮ|| ಅಡ್ವೋಕೇಟ್ ಜಿ. ರುದ್ರಪ್ಪನವರಲ್ಲಿಗೆ ಅಪ್ಲಿಕೇಷನ್ ಹಾಕಿಕೊಂಡು ವಾಸಕ್ಕೆ ಅವಕಾಶವನ್ನು ಪಡೆಯುವದು ಸೂಕ್ತವಾಗಿರುತ್ತೆ. ಪರಂತು ಕಟ್ಟಡವೇನೋ ಸಿದ್ಧವಾಯಿತು. ವಿದ್ಯಾರ್ಥಿಗಳು ನೆಲಸುವುದರಲ್ಲಿ ಅಡ್ಡಿಯಿಲ್ಲ. ಆದರೆ ಸಮಾಜದ ಕೆಲ ಕೇವಲ ಬಡವಿದ್ಯಾರ್ಥಿಗಳಿಗೆ ಆಶ್ರಮದಲ್ಲಿ ಉಚಿತವಾಗಿ ಭೋಜನಕ್ಕೆ ಅನುಕೂಲವನ್ನು ಮಾಡದಿದ್ದರೆ ಬರಿಯ ಕಟ್ಟಡದ ಮಾತ್ರದಿಂದ ಶ್ರೀಮಂತವಿದ್ಯಾರ್ಥಿಗಳಿಗೆ ವಿನಾ ಬಡವಿದ್ಯಾರ್ಥಿಗಳಿಗೆ ಯಾವ ವಿಧವಾಗಿಯೂ ಧರ್ಮಸಹಾಯವಾದಂತಾಗುವದಿಲ್ಲ. ಈ ವಿಚಾರವನ್ನು ಧರ್ಮೈಕಪರಾಯಣರಾದ ಶ್ರೀಜಗದ್ಗುರು ಮಹಾಸ್ವಾಮಿಗಳವರು ಮತ್ತು ಸಮಾಜದ ಧರ್ಮಾತ್ಮರಾದ ಶ್ರೀಮಂತರು ಸಹಾಕೃಪೆಮಾಡಿ ಪರ್ಯಾಲೋಚಿಸಿ ಈ ಬಗ್ಗೆ ಒಂದು ಫಂಡನ್ನು ಏರ್ಪಡಿಸಿ ಅದರಿಂದ ಈ ನಿಲಯದಲ್ಲಿ ತಿಪಟೂರಿನಂತೆ ಬಡಹುಡುಗರಿಗೆ ಅನುಕೂಲ್ಯಗಳನ್ನುಂಟುಮಾಡುವುದು ಅತ್ಯವಶ್ಯವೆಂದು ಅರಿಕೆಮಾಡುತ್ತೇನೆ. ನಮ್ಮಲ್ಲಿ ದಾನಶೂರರೂ ವಿದ್ಯಾಭಿಮಾನಿಗಳೂ ಆದ ಶ್ರೀಮಂತರುಗಳೇನೂ ಕಮ್ಮಿಯಿಲ್ಲ. ಪುಣ್ಯಾತ್ಮರಾದ ಮಹನೀಯರು ಈ ವಿಚಾರವನ್ನು ಪರಿಭಾವಿಸಿ ಶಕ್ತಿಮೀರಿ ಸ್ವಹಸ್ತಪರಹಸ್ತಗಳಿಂದ ಸಹಾಯಮಾಡಿ ಶ್ರೀಪರಶಿವನ ಕೃಪೆಗೆ ಪಾತ್ರರಾಗಿ ಇಹಪರದಲ್ಲಿ ವಿದ್ಯಾದಾನಮಾಡಿದ ಪುಣ್ಯಕ್ಕೆ ಭಾಗಿಗಳಾಗಲು ಸವಿನಯದಿಂದ ಬೇಡುತ್ತೇನೆ. ತಥಾಪಿ ಈ ಸಂಘದ ಮತ್ತು ವಿದ್ಯಾರ್ಥಿನಿಲಯದ ಕಟ್ಟಡದ ಕೆಲಸಗಳನ್ನು ಸಾಂಗಗೊಳಿಸಲು ಸಮರ್ಥರಾದವರು ಈ ಮಹಾಕಾರ್ಯಕ್ಕೆ ಪ್ರಯತ್ನಮಾಡಿದ ತುಮಕೂರಿನಲ್ಲಿ ಅಭಿಮಾನಶಾಲಿಗಳಲ್ಲಿ ಇಲ್ಲದೆ ಇಲ್ಲ. ಆದರೆ ಶ್ರೀಮಂತರು ಮತ್ತು ಸ್ವತಃ ವಿದ್ಯಾವಂತರು ಆದ ಜನಗಳು ಸಮಾಜಕ್ಕೂ ಫಂಡಿಗೂ ಶಕ್ತಿಮೀರಿ ಸಹಾಯಮಾಡಿ ಕೀರ್ತಿ ಪಡೆಯಲೆಂಬ ಸದುದ್ದೇಶದಿಂದಲೇ ಶ್ರೀ ಜಗದ್ಗುರು ಮಹಾಸ್ವಾಮಿಗಳು ಮತ್ತು ತುಮಕೂರಿನ ವೀರಶೈವಬಂಧುಗಳು ಇಲ್ಲಿಗೆ ಹೊಸದಾಗಿ ಬಂದ ಶ್ರೀಮಂತರಾದ ಜಿ. ರುದ್ರಪ್ಪನವರಿಗೆ ಸಂಘದ ಪ್ರೆಸಿಡೆಂಟ್ ಕೆಲಸವನ್ನು ಕೊಟ್ಟು ಬಹಳ ಸ್ವಾತಂತ್ರ್ಯವನ್ನು ವಹಿಸಿದರು. ಈ ಭರವಸೆಯನ್ನು ಸಾರ್ಥಕಗೊಳಿಸಿ ಸಮಾಜದ ಪ್ರೀತಿಯನ್ನೂ ಕೀರ್ತಿಯನ್ನೂ ಪಡೆಯುವದು ಇವರ ಕರ್ತವ್ಯವಾಗಿದೆ. ಇವರು ಇದುವರೆಗೂ ಈ ಸಂಘಕ್ಕೆ ಏನೂ ದ್ರವ್ಯಸಹಾಯಮಾಡಿಲ್ಲ. ಇತರ ಸಂಘಗಳಿಗೆ ಪ್ರೆಸಿಡೆಂಟರುಗಳಾಗಿರುವ ಮಹನೀಯರು ಸಾವಿರಾರು ರೂಪಾಯಿಗಳಿಗೆ ಕಡಮೆಯಿಲ್ಲದಂತೆ ಆಯಾ ಸಂಘಗಳಿಗೆ ಸಹಾಯಮಾಡಿ ಕೀರ್ತಿಶಾಲಿಗಳಾಗಿರುತ್ತಾರೆ. ಇದನ್ನೆಲ್ಲಾ ತಿಳಿದಿರುವ ವಿವೇಚನಾಪರರಾದ ಮ|| ರುದ್ರಪ್ಪನವರು ಇನ್ನುಮೇಲಾದರೂ ಶ್ರೀಜಗದ್ಗುರುಮಹಾಸ್ವಾಮಿಗಳವರನ್ನು ಶೀಘ್ರವಾಗಿ ಬರಮಾಡಿಕೊಂಡು ಸಿದ್ಧವಾಗಿರುವ ಕಟ್ಟಡದ ಪ್ರವೇಶೋತ್ಸವವನ್ನು ಜಾಗ್ರತೆ ಸಾಂಗಗೊಳಿಸಿ ಆ ಕಾಲದಲ್ಲಿ ತಮ್ಮ ಘನತೆಗೆ ಯೋಗ್ಯವಾಗಿ ಶಕ್ತಿಮೀರಿ ಫಂಡಿಗೆ ಸಹಾಯಮಾಡಿ ವಿದ್ಯಾರ್ಥಿಗಳ ವಾಸಕ್ಕೆ ಅವಕಾಶಮಾಡಿಕೊಟ್ಟು ಶ್ರೀ ಸಾಂಬಮೂರ್ತಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಡಿ. ವೀರಣ್ಣ ಜವಳಿ ಅಂಗಡಿ ತುಮಕೂರು.

ವೇದಾರ್ಥವಿಚಾರ.

(ಲೇಖಾಂಕ ೨.)

(ಲೇಖಕ—ಸ್ವಾಮಿ ವಿರೂಪಾಕ್ಷ ಒಡೆಯರು.)

ವಾಚಕರೇ ? ಪರಮಪವಿತ್ರವಾದ ವೇದಮಂತ್ರಗಳಿಗೆ ಹೇಯವಾಗುವಂತೆ ಅರ್ಥವನ್ನು ಬರೆಯುವ ಹೇಸದಂಥಾ ಬ್ರಾಹ್ಮಣರ ಮೂರ್ಖತನವನ್ನು ನೋಡಿದಿರಾ ? ಆ ಮಹೀಧರನು ಶುಕ್ಲಯಜುರ್ವೇದದ ಭಾಷ್ಯಪ್ರಾರಂಭದಲ್ಲಿ ವೇದವಿಷಯವಾಗಿ ಬರೆಯುವದೇನೆಂದರೆ—ಮೊದಲು ವೇದವು ಒಂದಿದ್ದು ಕಲಿಯುಗವು ಬಂದಾಕ್ಷಣಕ್ಕೆ ಮನುಷ್ಯಬುದ್ಧಿಯು ಕಡಿಮೆಯಾಗಿ ಒಂದಾದ ಸಂಪೂರ್ಣವೇದವನ್ನು ಗ್ರಹಿಸಲು ಶಕ್ತಿಸಾಲದಂಥಾ ಮಂದಬುದ್ಧಿಯ ಮಾನವರನ್ನು ಕಂಡು ವ್ಯಾಸಮಹರ್ಷಿಗಳು ಆ ಒಂದಾದ ವೇದವನ್ನು ನಾಲ್ಕುಭಾಗಮಾಡಿ—"ಚತುರ್ಧಾವ್ಯಸ್ಯ" ಅದನ್ನು ಕಣ್ವ, ಜಾಬಾಲ, ವೈಶಂಪಾಯನ ಮೊದಲಾದ ನಾಲ್ಕುಮಂದಿ ಶಿಷ್ಯರಿಗೆ ಬೋಧಿಸಿದರೆಂತಲೂ, ಪುನಃ ವೈಶಂಪಾಯನನು ಯಾಜ್ಞವಲ್ಕ್ಯ ಮೊದಲಾದ ತನ್ನ ಶಿಷ್ಯರಿಗೆ ಬೋಧಿಸಲು ಆಗ್ಗೆ ಒಂದುದಿವಸ ದೈವವಶಾತ್ ವೈಶಂಪಾಯನನು ಕೃದ್ಧನಾಗಿ ಯಾಜ್ಞವಲ್ಕ್ಯನಿಗೆ, ಎಲೈ ನನ್ನಿಂದ ಅಧ್ಯಯನಮಾಡಿದ್ದನ್ನು ಬಿಟ್ಟುಬಿಡು, (ಮದಧೀತಂತ್ಯಜ) ಎಂಬದಾಗಿ ಆಕ್ರೋಶಿಸಲು ಆದಕ್ಕೆ ಯಾಜ್ಞವಲ್ಕ್ಯನು ಯೋಗಸಾಮರ್ಥ್ಯದಿಂದ ಗುರುಗಳಲ್ಲಿ ಕಲಿತ ವಿದ್ಯೆಯನ್ನೆಲ್ಲಾ ಮೂರ್ತಿಮಂತಮಾಡಿ ಬಾಯಿಂದ ವಮನಮಾಡಿ (ಕಾರಿ) ಕೊಂಡನೆಂತಲೂ ಆ ಯಾಜ್ಞವಲ್ಕ್ಯನು ತಿರುಗಿಸಿಕೊಂಡದ್ದನ್ನೆಲ್ಲಾ ತನ್ನ ಇತರ ಶಿಷ್ಯರಿಗೆ ತಿನ್ನಿರೆಂದು ಗುರುಗಳು ಹೇಳಲು ಆ ಗುರುವಿನಾಜ್ಞೆಯಂತೆ ಇತರ ಶಿಷ್ಯರು ತಿತ್ತಿರಿಪಕ್ಷಿಗಳಾಗಿ ಆ ಕಾರಿದ್ದುದನ್ನೆಲ್ಲಾ ತಿಂದರೆಂತಲೂ, ಆ ವೇದವಿದ್ಯೆಯು ಎಂಜಲಾದ್ದರಿಂದ ಅದು ಮಲಿನವಾದ ಕಪ್ಪು, ಹೊಲಸು ಮೊದಲಾದರ್ಥವುಳ್ಳ ಕೃಷ್ಣಯಜುರ್ವೇದವಾಯಿತೆಂತಲೂ, ವೇದಗಳಲ್ಲಿಯ ಅಷ್ಟೊಂದು ಪಾವಿತ್ರ್ಯಕ್ಕೆ ಅದು ಅರ್ಹವಾದ ಭಾಗವಲ್ಲವೆಂತಲೂ ಮಲಿನವಾದ ವೇದವೆಂದು ಅದಕ್ಕೆ ಆರೋಪಿಸಿರುವರು. ವಾಚಕರೇ ನೋಡಿದಿರಾ, ವೇದವೆಂದಾದರೂ ಕಾರಲಿಕ್ಕೆ ಬರುವ ಪದಾರ್ಥವೇ ? ಮತ್ತು ಮನುಷ್ಯರು ಎಂದಾದರೂ ಪಕ್ಷಿಗಳಾಗುವದುಂಟೇ ? ಇನ್ನು ಬಹುಜನಾಂಗವು ಕೃಷ್ಣಯಜುಃಶಾಖೆಯುಳ್ಳದ್ದಿದ್ದು ಅದನ್ನು ಈ ಹೊತ್ತಿನವರೆಗೂ ಅಧ್ಯಯನ ಮಾಡುವವರೇ ಬಹಳ ಜನರು. ಹೀಗಿರುವಲ್ಲಿ ಆ ಎಂಜಲೆನಿಸಿ ಮಲಿನವಾದದ್ದನ್ನು ಓದುವದರಿಂದ ಪವಿತ್ರತೆಯು ಹ್ಯಾಗೆ ಬರುವದು ? ಈ ರೀತಿಯಾದ ಕಥೆಯನ್ನೇ ಮೂಲವನ್ನಾಗಿ ನಂಬಿ ಓದುವವರ ಬುದ್ಧಿ ಪವಿತ್ರತೆಯು ಹ್ಯಾಗಾಗುವದು ? ಈ ಕೃಷ್ಣಯಜುರ್ವೇದವನ್ನು ಓದಿ ಇದರ ಘೋಷದಿಂದಲೇ ಹೊಟ್ಟೆ ಹೊರಕೊಳ್ಳುತ್ತಾ ಮಹಾವೈದಿಕರೂ ಕರ್ಮನಿಷ್ಠರೂ ಎಂದು ಡಾಂಭಿಕವೃತ್ತಿಯಿಂದ ಮೆರಿಯುತ್ತಿರುವ ಈಗಿನ ವೈದಿಕನಾಮಧಾರಿಗಳು, ಪೂರ್ವಋಷಿಶಿಷ್ಯರಿಂದಲೇ ಗ್ರಹಿಸಲಸಹ್ಯವಾಗಿ ಪಕ್ಷಿರೂಪದಿಂದ ಗ್ರಹಿಸಿದ ಎಂಜಲನ್ನು ಹಾಗೂ ಮಲಿನವನ್ನು ಯಾವ ಹೇಯಭಾವವನ್ನೂ ತಾಳದೇ ಗ್ರಹಿಸುವವರಾದಿವರಗತಿ ಏನು ? ಎಂಜಲ ತಿನ್ನುವವರಿಗೆ ಶ್ರೇಷ್ಠರೆಂತಾ ಹ್ಯಾಗನ್ನಬೇಕು ? ಹಾಗಿಲ್ಲದಿದ್ದಲ್ಲಿ ಯಾರು ವೈದಿಕತ್ವದ ಅಭಿಮಾನವನ್ನು ತೋರಿಸುವರೋ ಅವರು ಈರೀತಿ ಅಸಂಬದ್ಧಪ್ರಲಾಪಗಳಿಂದ ಕೂಡಿದ ಮಹೀಧರ, ಸಾಯನ ಮೊದಲಾದ ವಿಲೀಕಡೆಯ ಭಾಷ್ಯಕಾರರ ಭಾಷ್ಯವನ್ನು ನಂಬಬಾರದು; ಒಂದುವೇಳೆ ನಂಬಿದಲ್ಲಿ ಇಂಥಾ ಪೇಚಾಟಗಳಿಗೀಡಾಗುವರು. ಇದರಂತೆ ಸಾವಿರಾರು ಪೇಚಾಟಗಳನ್ನು ಮುಂದಿನ ಈ ಲೇಖಮಾಲೆಯಲ್ಲಿ ತೋರಿಸುತ್ತಾ ಹೋಗುವೆವು. ತಮ್ಮ ಭಾಷ್ಯಗಳನ್ನು ನಂಬಿ ಯಾರು ವೈದಿಕರೆನಿಸಿಕೊಳ್ಳುವರೋ ಅಂಥವರಿಗೆ ಇಂಥಾ ಕಥೆಗಳಿಂದ ಮುಂದೆ ಅನೇಕ ಪೇಚಾಟಗಳು ಬರುವವೆಂಬ ಧೂರ್ತ ವಿಚಾರವನ್ನು ಮಾಡದೇ ಮನಬಂದಂತೆ ಕಪೋಲಕಲ್ಪಿತ ಕಥೆಗಳನ್ನು ವೇದಮಂತ್ರಾರ್ಥಗಳಲ್ಲಿ ತುಂಬಿಸಿಬಿಟ್ಟಿರುವವರಾದೀ ಭಾಷ್ಯಕಾರರಿಗೇನನ್ನಬೇಕೋ ತಿಳಿಯದಾಗಿದೆ. ಇನ್ನು ಎಲ್ಲಾ ವೇದವಿದ್ಯೆಯನ್ನು ಕಾರಿಕೊಂಡು ವಿದ್ಯಾಹೀನರಾದ್ದರಿಂದ ಯಾಜ್ಞವಲ್ಕ್ಯರು ಬಹಳ ಪರಿತಾಪಗೊಂಡು ಪುನಃ ವೇದವಿದ್ಯೆಯ ಪ್ರಾಪ್ತಿಗಾಗಿ ಸೂರ್ಯನನ್ನು ಕುರಿತು ತಪಶ್ಚರ್ಯಮಾಡಿ ಪ್ರಾರ್ಥಿಸಲು ಅದಕ್ಕೆ ಸೂರ್ಯನು ಒಲಿದು ಶುದ್ಧವಾದ ಯಜುಃಸಂಹಿತೆಯನ್ನು ಯಾಜ್ಞವಲ್ಕ್ಯರಿಗೆ ಬೋಧಿಸಿದನೆಂತಲೂ, ಆ ಯಾಜ್ಞವಲ್ಕ್ಯರಲ್ಲಿ ಈ ಶುಕ್ಲಯಜುರ್ವೇದವನ್ನು ಕಲಿಯುವ ಬಹುಜನ ಶಿಷ್ಯರಿದ್ದು ಅವರಲ್ಲಿ ಮಾಧ್ಯಂದಿನನೆಂಬೋರ್ವಶಿಷ್ಯನು ಒಳ್ಳೇ ಪ್ರೌಢವಿದ್ಯಾರ್ಥಿಯಾದ್ದರಿಂದ ಅವನಿಂದ ಈ ಶುಕ್ಲ ಯಜುರ್ವೇದವು ಅಧ್ಯಯನಮಾಡಲ್ಪಟ್ಟು ಅವನ ದೈವಯೋಗಬಲದಿಂದ ಈ ಶುಕ್ಲ ಯಜುರ್ವೇದಕ್ಕೆ ಮಾಧ್ಯಂದಿನೀಯ ಶಾಖೆಯೆಂದು ಹೆಸರು ಬಂದಿರುವುದಾಗಿ ಮಹೀಧರನು ಬರೆದಿರುವನು. ಈರೀತಿಯಾದ ಇವರ ಕಥೆಗಳಮೇಲಿಂದ ಯಾಜ್ಞವಲ್ಕ್ಯರೇ ಶುಕ್ಲಯಜುರ್ವೇದವನ್ನು ನಿರ್ಮಿಸಿದವರೆಂದು ವಿಶ್ವಾಸಮಾಡಿದಲ್ಲಿ ವೇದಕ್ಕೆ ಅನಾದ್ಯನಂತತ್ವ, ಹಾಗೂ ಬಹು ಪುರಾತನತ್ವಾದಿಗಳನ್ನು ಹೇಳುವ ಋಷ್ಯಾದಿಗಳ ಗತಿಯೇನು ? ಯಾಕಂದರೆ, ಯಾಜ್ಞವಲ್ಕ್ಯರು ಜನಕಮಹಾರಾಜನ ದರ್ಬಾರಿನಲ್ಲಿದ್ದದ್ದು ಸರ್ವಜನ ಪ್ರಸಿದ್ಧಿಯು. ಇನ್ನು ಯಾಜ್ಞವಲ್ಕ್ಯರೆಂಬ ಹೆಸರಿನ ಬಹುಜನ ಋಷಿಗಳಾಗಿ ಹೋಗಿರುವರೆಂದು ಹೇಳಿದಲ್ಲಿ ಅನವಸ್ಥಾದೋಷ ಬರುವದು. ಯಾಕಂದರೆ, ಇಂಥವರೇ ಇಂಥಾ ಕಾಲದಲ್ಲಿಯೇ ವೇದಸ್ಮೃತಿ, ಹಾಗೂ ಶ್ರೌತಗ್ರಂಥಗಳನ್ನು ನಿರ್ಮಿಸಿದ ಆಯಾಯ ಯಾಜ್ಞವಲ್ಕ್ಯರು ಭಿನ್ನರೆಂದು ಹೇಳುವದು ಸ್ಥಿರಪಡಲು ಸಾಧ್ಯವಿಲ್ಲದ್ದರಿಂದಲೂ, ಸೂರ್ಯಾದಿ ಜಡಪದಾರ್ಥಗಳಿಂದ ಇಂಥಾ ಅಮೌಲ್ಯವಾದ ವೇದವಾಣಿಯ ಉಪದೇಶವಾಗಲು ಸಂಭವವಿಲ್ಲದ್ದರಿಂದಲೂ, ಜಡವಾದ ಅಗ್ನಿತತ್ವವು ಜ್ವಲನಸ್ಥಿತಿಯನ್ನು ಬಿಟ್ಟು ಚೇತನವಾದ ಆತ್ಮಸ್ವರೂಪದಲ್ಲಿ ಬಂದು ಉಪದೇಶಮಾಡಲು ಶಕ್ಯವಿಲ್ಲದ್ದರಿಂದಲೂ, ಇನ್ನು ನಮ್ಮ ಹಿಂದೂ ಧರ್ಮದವರಿಗೆ ಸರ್ವತ್ರಸದಾಭಾವನಾಸಿದ್ಧಿಯೆಂದು ಹೇಳುವವೆಂದಲ್ಲಿ, ಸರಳವಾದ ಆತ್ಮಮಾರ್ಗವನ್ನು ಬಿಟ್ಟು ಕೊಂಕಣಸುತ್ತಿ ಮೈಲಾರಕ್ಕೆ ಬಂದರೆಂಬ ಗಾದೆಯಂತೆಯೂ, ಹಾಗೂ ದ್ರಾವಿಡೀಪ್ರಾಣಾಯಾಮದಂತೆಯೂ, ಎಂಬ ನಿಂದಕತ್ವವು ಬರುವದರಿಂದಲೂ, ಹಾಗೂ ಜಡಪದಾರ್ಥವು ಚೇತನನಿಗೆ ಉಪದೇಶಿಸಿದ್ದು ಎಲ್ಲಿಯೂ ಕಂಡುಬಾರದ್ದರಿಂದಲೂ ಅಸಂಭವನೀಯಕಲ್ಪನೆಯಿಂದ ಮಿಥ್ಯಾತ್ವವು ಸ್ವತಃ ಸಿದ್ಧವಾಗುವದು.

ಇನ್ನು ಈ ಶುಕ್ಲಯಜುರ್ವೇದದಲ್ಲಿ ಒಟ್ಟು ೪೦ ಅಧ್ಯಾಯಗಳಿದ್ದು ಕಡೆಯ ನಾಲ್ವತ್ತನೆಯ ಅಧ್ಯಾಯವೇ ಕೇವಲ ಬ್ರಹ್ಮಬೋಧಕವಾಗಿರುವದಲ್ಲದೆ, ಇದರ "ಈಶಾವಾಸ್ಯಮಿದಂಸರ್ವಂ" ಎಂಬ ಮೊದಲನೇ ಮಂತ್ರದಿಂದ ಇದನ್ನು ಈಶಾವಾಸ್ಯೋಪನಿಷತ್ ಎಂದು ಕರೆಯುವರು. ವೇದದ ಕಡೆಯ ಅಧ್ಯಾಯವಾದ ಇದರಲ್ಲಿ "ಕುರ್ವನ್ನೇವೇಹಕರ್ಮಾಣಿಜಿಜೀವಿಷೇಚ್ಛತಂಸಮಾಃ" ಎಂಬದಾಗಿ ಕರ್ಮಾನುಷ್ಠಾನಬೋಧಕಮಂತ್ರವಿದ್ದಾಗ್ಯೂ ವಿಶೇಷವಾಗಿ ಬ್ರಹ್ಮಜ್ಞಾನಬೋಧಕವಿದ್ದು ಅಂತಿಮಾವಸ್ಥೆಯ ಪ್ರಾಪ್ತಿಪ್ರದವಾದ್ದರಿಂದ ಇದಕ್ಕೆ ವೇದಾಂತವೆಂತಲೂ ಹಾಗೂ ಕಡೆಯ ಅಧ್ಯಾಯವಾದ್ದರಿಂದಲೂ ವೇದಾಂತವೆಂಬ ಹೆಸರು ಜ್ಞಾಪಕವಾಗಿರುವದು. ಇನ್ನು ಈ ಅಧ್ಯಾಯದಲ್ಲಿ ೧೭ ಮಂತ್ರಗಳೆಂಬದಾಗಿಯೂ ಕೆಲವರು ೧೮ ಮಂತ್ರಗಳೆಂಬದಾಗಿಯೂ ಮಂತ್ರಸಂಖ್ಯೆಯ ವಿಷಯವಾಗಿ ವಾದಿಸುವರು. ಈ ಈಶಾವಾಸ್ಯೋಪನಿಷತ್ತಿನ ವಿಷಯಸಾಹಚರ್ಯದಿಂದ ಕೇನ, ಕಠ, ಮುಂಡ, ಮಾಂಡುಕ್ಯಾದಿ ಹತ್ತು ಉಪನಿಷತ್ತುಗಳು ಶ್ರುತಿಗಳೆಂದು ಹೇಳಿಸಿಕೊಳ್ಳಲ್ಪಡುವವು. ಈಗ್ಗೆ ಒಟ್ಟು ೧೦೮ ಉಪನಿಷತ್ತುಗಳಾಗಿದ್ದು ಅವುಗಳಲ್ಲಿ ದಶೋಪನಿಷತ್ತುಗಳೇ ವಿಶೇಷ ಪ್ರಮಾಣವಾಗಿಯೂ ಹಾಗು ಪ್ರಾಧಾನ್ಯವಾಗಿಯೂ ಅಂಗೀಕರಿಸಲ್ಪಟ್ಟು ಆಚಾರ್ಯರೆಂಬುವರೆಲ್ಲರೂ ಪ್ರಸ್ಥಾನತ್ರಯದ ಭಾಷ್ಯಬರೆಯುವಾಗ್ಗೆ ದಶೋಪನಿಷತ್ತುಗಳಿಗಷ್ಟೇ ಭಾಷ್ಯವಿರಚಿಸುವರು. ಈ ಇತರ ಒಂಭತ್ತು ಉಪನಿಷತ್ತುಗಳು [illegible] ಲೋಕವ್ಯವಹಾರದಲ್ಲಿ ಹ್ಯಾಗೆ ಅಸಂಖ್ಯಾಕವಾದ ಸರ್ವಸೇನಾಸಮೇತನಾಗಿ ರಾಜನು ಹೋಗುತ್ತಿದ್ದರೂ ರಾಜನು ಹೋಗುತ್ತಿರುವನೆಂದು ಚತುರಂಗಬಲಸಮೇತನಾದ ರಾಜನಿಗೆ ಜನರು ಯಾವಪ್ರಕಾರ ಸರ್ವಸೈನ್ಯಕ್ಕು ರಾಜತ್ವಭಾವದಿಂದಲೇ ರಾಜನೆಂದು ಏಕತ್ವದಿಂದ ಭಾವಿಸಿ ಸಂಬೋಧಿಸುವರೋ ಆ ಪ್ರಕಾರ ಕೇನಾದ್ಯುಪನಿಷತ್ತುಗಳು ವೇದಾಂತಗಳೆಂತಲೂ, ಶ್ರುತಿಗಳೆಂತಲೂ ಭಾವಿಸುವರು. ಇದರಂತೆಯೇ ನಿಜಗುಣಶಿವಯೋಗಿಗಳಾದರೂ ಅನುಭವಸಾರದಲ್ಲಿ "ಶ್ರುತಿಯೇ ಅಖಿಲಗೇಪ್ರಮಾಣವಕ್ಕುಂ" ಎಂಬದಾಗಿ ಅಲ್ಲಲ್ಲಿ ಸರ್ವೋಪನಿಷತ್ತುಗಳ ಪ್ರಮಾಣವನ್ನು ಶ್ರುತಿಭಾವನೆಯಿಂದಲೇ ತೋರಿಸಿರುವರು. ಆದರೆ ವಸ್ತುತಃ "ಈಶಾವಾಸ್ಯ" ಒಂದನ್ನು ಬಿಟ್ಟು ಇತರ ಯಾವ ಉಪನಿಷತ್ತುಗಳೂ ಮೂಲವೇದದೊಳಗಿನವಲ್ಲ. ಇರಲಿ, ಈ ವಿಷಯವನ್ನು ಉಪನಿಷತ್‌ಗ್ರಂಥಗಳ ವಿಷಯವಾಗಿ ಬರೆಯುವ ಕಾಲಕ್ಕೆ ವಿಚಾರಮಾಡುವೆವು. ಇನ್ನು ವ್ಯಾಸರು ಕಲಿಯುಗದಲ್ಲಿ ಮಂದಬುದ್ಧಿಯ ಜನರು ಹುಟ್ಟುವರೆಂದು ಆಲೋಚಿಸಿ ಒಂದಾದ ವೇದವನ್ನು ನಾಲ್ಕು ಭಾಗಮಾಡಿದರೆಂದು ಹೇಳುವ ಮಹೀಧರನ ವಿಚಾರಕ್ಕೇನನ್ನಬೇಕು ? ಯಾಕಂದರೆ, ಸ್ವತಃ ವೇದದಲ್ಲಿಯೇ ಋಗ್ಯಜುಃಸಾಮಗಳೆಂಬ ವೇದಭೇದವರ್ಣನೆಯಿದ್ದು ಐತರೇಯಾದಿ ಬ್ರಾಹ್ಮಣ ಗ್ರಂಥಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ, ಮನ್ವಾದಿಸ್ಮೃತಿಗಳಲ್ಲಿಯೂ "ಅಗ್ನಿವಾಯುರವಿಭ್ಯಸ್ತು ತ್ರಯಂಬ್ರಹ್ಮಸನಾತನಂ | ದುದೋಹಯಜ್ಞಸಿದ್ಧ್ಯರ್ಥಂ ಋಗ್ಯಜುಃಸಾಮಲಕ್ಷಣಂ" ಎಂಬದಾಗಿಯೂ "ಅಥರ್ವಾಂಗಿರಸಃಸ್ಮೃತಃ" ಎಂದು ಅಲ್ಲಲ್ಲಿ ಋಗಾದಿವೇದಭೇದವು ಸರ್ವತ್ರ ವ್ಯಾಸರಿಗಿಂತಲೂ ಸಹಸ್ರಾವಧಿವರ್ಷಪೂರ್ವದಲ್ಲಿದ್ದ ಋಷಿಗಳ ನೂರಾರು ವಾಕ್ಯಗಳಿದ್ದು ಅವ್ಯಾವೂ ಈ ಮಹೀಧರನಿಗೆ ಕಂಡಿರಲಿಕ್ಕಿಲ್ಲವೋ ? ಮತ್ತು "ಭಾಷ್ಯಂವಿಲೋಕ್ಯೌವ್ವಟಮಾಧವೀಯಂ ಯಜುರ್ಮನೂನಾಂವಿಲಿಖಾಮಿಚಾರ್ಥಂ" ಎಂಬದಾಗಿ ಮಾಧವಾ (ಸಾಯನಾ) ಚಾರ್ಯರ ಭಾಷ್ಯವನ್ನು ನೋಡಿ ಬರೆಯುವೆನೆಂದು ಹೇಳುವವನಾದವನಿಗೆ ಸಾಯನಾಚಾರ್ಯರು ಋಗ್ವೇದಭಾಷ್ಯೋಪೋದ್ಘಾತಪ್ರಕರಣದಲ್ಲಿ "ಅಗ್ನೇಃ ಋಗ್ವೇದೋವಾಯೋರ್ಯಜುರ್ವೇದಃ ಆದಿತ್ಯಾತ್‌ಸಾಮವೇದಃ" ಎಂಬಿವೇ ಮೊದಲಾದ ಆರಣ್ಯಕಗ್ರಂಥಗಳ ವಾಕ್ಯಗಳನ್ನುಲ್ಲೇಖಿಸಿರುವದಲ್ಲದೆ "ಋಗ್ವೇದಂಭಗವೋ ಅಧ್ಯೇಮಿ" ಇವೇ ಮೊದಲಾದ ಅನೇಕ ಪ್ರಮಾಣಗಳನ್ನು ತೋರಿಸುವಾಗ್ಗೆ ಋಗಾದಿಗಳ ಸ್ಪಷ್ಟ ಉಲ್ಲೇಖಮಾಡಿದ್ದುದು ಕಾಣದೇ ಹೋಗಿರುವದರಿಂದ ಈ ಮಹೀಧರನಿಗೆ ದೃಷ್ಟಿಮಾಂದ್ಯವೋ ? ವಿಚಾರಶೂನ್ಯವೋ ? ತಿಳಿಯದಾಗಿದೆ. ಇನ್ನು "ತ್ರಯೀವಿದ್ಯಾ" ಎಂಬದಾಗಿ ಕೆಲವು ಕಡೆ ಋಗಯಜುಃಸಾಮಗಳದಷ್ಟೇ ಉಲ್ಲೇಖವಿದ್ದು ಅಥರ್ವಣವೇದದುಲ್ಲೇಖ ಕಾಣದ್ದರಿಂದ ಕೆಲವರು ಅಂಗಿರಸ "ಋಷಿಯಿಂದ ಮೂರುವೇದಗಳಲ್ಲಿಯ ಮಂತ್ರಗಳನ್ನು ಆರಿಸಿಕೊಂಡು ಮತ್ತು ಸ್ವಲ್ಪ ಹೆಚ್ಚು ಕಡಮೆ ಹೊಸದಾಗಿ ಮಂತ್ರಗಳನ್ನು ರಚಿಸಿ ಅಲ್ಲಲ್ಲಿ ಹಾಕಿ ಅಥರ್ವಣವನ್ನು ನಿರ್ಮಿಸಿರುವರೆಂತಲೂ, ಅದು ಋಗಾದಿಗಳ ಕಾಲದ್ದಲ್ಲವೆಂತಲೂ ವಾದಿಸುವರು. ಇಷ್ಟೇ ಅಲ್ಲದೆ ಕಲಕತ್ತಾ ಸಾರಸ್ವತಆಸೋಸಿಯೇಶನದ ಪ್ರೆಸಿಡೆಂಟರಾದ "ಉಮೇಶಚಂದ್ರವಿದ್ಯಾರತ್ನ" ರೆಂಬೋರ್ವ ವೃದ್ಧವಿದ್ಯಾವಂತರು ಸಾಮವೇದವೇ ಎಲ್ಲ ವೇದಗಳಲ್ಲಿ ಆದಿವೇದವೆಂತಲೂ, ಅದನ್ನನುಕರಿಸಿಯೇ ಇತರ ಋಗಾದಿಗಳು ರಚಿಸಲ್ಪಟ್ಟಿರುವವೆಂತಲೂ "ವೇದಾನಾಂಸಾಮವೇದೋಸ್ಮಿ" "ಗಾಯತ್ರೀಯಂಸಾಮಗಾಃ" ಎಂಬಿವೇ ಮೊದಲಾದ ವಾಕ್ಯಗಳನ್ನು ವಿಶೇಷಪ್ರಮಾಣವನ್ನಾಗಿ ಅಂಗೀಕರಿಸಿ ನಾನು ಕಲಕತ್ತೆಯಲ್ಲಿದ್ದ ಕಾಲಕ್ಕೆ ನಿತ್ಯ ನನ್ನೊಡನೆ ಪರಿಪರಿಯಾಗಿ ಪ್ರತಿಪಾದಿಸುತ್ತಿದ್ದರು, ಮತ್ತು ಅವರು ವೇದಗಳು ಅಪೌರುಷೇಯವಲ್ಲ; ಆದರೆ ಅನೇಕ ಋಷಿಗಳಿಂದ ಆಯಾಯಕಾಲದಲ್ಲಿ ಕಾಲಮಾನವು ಬೆಳೆಯುತ್ತ ಹೋದಂತೆ ರಚಿಸಲ್ಪಟ್ಟಿರುವವಲ್ಲದೆ ಈಶ್ವರಪ್ರೇರಣೆಯಿಂದ ರಚಿತವಾದವುಗಳಲ್ಲವೆಂತಲೂ, ಅಪೌರುಷೇಯ ಮೊದಲಾದದ್ದು ಸುಳ್ಳೆಂತಲೂ ಇದಕ್ಕೆಲ್ಲಾ ಅನೇಕ ಕಾರಣಗಳನ್ನು ತೋರಿಸಿ "ವೇದಭಾಷ್ಯಭೂಮಿಕಾ" ಎಂಬ ಒಂದು ಪುಸ್ತಕವನ್ನು ಬರೆದಿದ್ದು ಮುಂದೆ ಸಂಪೂರ್ಣ ನಾಲ್ಕುವೇದಗಳಿಗೂ ಸರಿಯಾದ ನೂತನ ಅರ್ಥವನ್ನು ಬರೆಯುವವು. ಅದಕ್ಕೆಲ್ಲಾ ಹಿಂದುರಾಜರುಗಳು ಸಹಾಯಮಾಡಬೇಕೆಂದು ಆ ಪುಸ್ತಕದಲ್ಲಿ ನಮೂದಿಸಿ ಇಂದೂರ ದರ್ಬಾರಕ್ಕೂ, ಹಾಗೂ ನನಗೂ ಒಂದನ್ನು ಕಳಿಸಿದ್ದರು, ಆದರೆ ಇತ್ತಲಾಗಿ ಏನು ಮಾಡಿದರೋ ತಿಳಿಯಲಿಲ್ಲ.

ಇನ್ನು ಸಾಯನ, ಉವ್ವಟ, ಮಹೀಧರ ಮೊದಲಾದ ವಿಲೀಕಡೆಯ ಯಾವ ಭಾಷ್ಯಕಾರರೇ ಆಗಲಿ, ಅವರೆಲ್ಲರು ವೇದಮಂತ್ರಗಳನ್ನು ಪುರಾಣದಲ್ಲಿ ಬರೆದಿರುವ ಕಥೆಗಳಿಗೆ ಹೋಲಿಸಿ ಆ ಕಥೆಯು ಆದರಲ್ಲಿ ಹೊರಡುವಂತೆ ಅರ್ಥಮಾಡುತ್ತ ಹೋಗುವರು. ಇಷ್ಟೇ ಅಲ್ಲದೇ ಆ ಸಂಪೂರ್ಣ ಕಥೆಯನ್ನೇ ಆಯಾಯ ಮಂತ್ರದ ಭಾಷ್ಯಾರಂಭದಲ್ಲಿ ಬರೆದು ಇಂಥಾ ಕಥೆಯನ್ನೇ ಈ ಮಂತ್ರವು ಹೇಳುವದೆಂದು ಸ್ಪಷ್ಟ ಉಲ್ಲೇಖಮಾಡುವರು, ಮತ್ತು ಇಲ್ಲದಸಲ್ಲದ ವಿಚಾರಗಳಿಂದ ಮಂತ್ರಗಳ ಶಬ್ದಾರ್ಥಮಾಡಿ ವೇದವಾಕ್ಯದಂತೆ ಪುರಾಣಗಳೂ ನಂಬಲರ್ಹವಾದವುಗಳೆಂಬೋವೃತ್ತಿಯನ್ನು ಮುಗ್ಧಜನರಿಗೆ ಮಬ್ಬುಹಾಕಿ ತೋರಿಸಿರುವರು. ಮಹೀಧರನು ಬರೆದಿರುವ ಭಾಷ್ಯವು ಉವ್ವಟಾಚಾರ್ಯನು ಬರೆದ ಭಾಷ್ಯದ ಕಾಪಿಯಾಗಿದ್ದು ಅಲ್ಲಲ್ಲಿ ಹೇಯವಾದ ವಿಷಯವನ್ನು ಹಾಗೂ ಪೌರಾಣಿಕ ಕಥೆಗಳನ್ನು ಬರೆಯುವದರಲ್ಲಿ ಮಾತ್ರ ತನ್ನ ಬುದ್ಧಿ ಕೌಶಲ್ಯವನ್ನು ಹೆಚ್ಚಾಗಿ ತೋರಿಸಿರುವನು. ಆದರೆ ಇಂಥಾ ಪ್ರೌಢಭಾಷ್ಯಕಾರನಾದ ತಾನು ಈ ಭಾಷ್ಯವನ್ನು ಓದುವಾಗ್ಗೆ ವಾಚಕರು ನನ್ನ ಮೇಲೆ ಕೃಪೆಯನ್ನಿಟ್ಟು ಓದಬೇಕೆಂದು ವಾಚಕರ ಕೃಪೆಯ ಯಾಚನೆಯನ್ನು ಮಾಡಿದ್ದು ನೋಡಿದರೆ ಇವನ ಅಸಂಬದ್ಧಪ್ರಲಾಪಗಳನ್ನು ಹೊರಗೆ ಹಾಕಬೇಡಿರೆಂದು ಹೇಳಿಕೊಳ್ಳುವದೇ ಮುಖ್ಯೋದ್ದೇಶವಾಗಿ ಕಾಣುತ್ತದೆ. ಆದರೆ ಈ ಮಹೀಧರನು ತನ್ನ ಉಪೋದ್ಘಾತದಲ್ಲಿ ಕೇವಲ ಮಂತ್ರಘೋಷದಿಂದ ಏನೊಂದು ಪ್ರಯೋಜನವಾಗದೆ ಅರ್ಥವನ್ನು ತಿಳಿಯದೆ ಮಂತ್ರೋಚ್ಚಾರಣಮಾಡುವದರಿಂದ ಮಹಾಪಾಪಿಗಳು ಹಾಗೂ ನರಕವೆಂಬ ತಗ್ಗಿನಲ್ಲಿ ಬೀಳುವವರಾಗುವರೆಂಬದಾಗಿಯೂ ಅನರ್ಥಜ್ಞರಿಗೆ ಹೇಯವನ್ನೂ ವೇದಮಂತ್ರಾರ್ಥಜ್ಞರಿಗೆ ಸಕಲೇಷ್ಟಸಿದ್ಧಿಯನ್ನೂ ತೋರಿಸಿರುವನಲ್ಲದೆ ಈ ಬಗ್ಗೆ ಕಾತ್ಯಾಯನಋಷಿಯ ಹಾಗೂ ಇತರ ಬ್ರಾಹ್ಮಣಗ್ರಂಥಗಳ ಪ್ರಮಾಣವನ್ನೂ ತೋರಿಸಿರುವನು. ಮತ್ತು ಮಂತ್ರಗಳ ವಿನಿಯೋಗಕ್ಕಾಗಿ ಕಾತ್ಯಾಯನರ ಪ್ರಮಾಣವೇ ವಿಶೇಷವಾಗಿ ಅಲ್ಲಲ್ಲಿ ತೋರಿಸಲ್ಪಟ್ಟಿರುವದು. ಇನ್ನು ಇವನು ಅಲ್ಲಲ್ಲಿ ತೋರಿಸಿರುವ ಪೌರಾಣಿಕ ಕಥೆಗಳನ್ನು ಹಾಗೂ ಹೇಯವಾದ ಅಶ್ವದೊಡನೆ ಸ್ತ್ರೀಭೋಗಾದಿವಿಷಯವನ್ನು ಮುಂದಿನ ಲೇಖದಲ್ಲಿ ತೋರಿಸುವೆವು.

ದಾವಣಗೆರೆ ವೀರಶೈವರು ಮತ್ತು ಮಹಾಸಭೆಯೂ.

(ಲೋಕಮತಪತ್ರಿಕೆಯಿಂದ.)

ಭರತಖಂಡದ ವೀರಶೈವರಪ್ರತಿನಿಧಿಸಭೆಯಾಗಿದ್ದ ಮಹಾಸಭೆಯು ಧಾರವಾಡದಲ್ಲಿ ಜನಿಸಿ, ತನ್ನ ಎಂಟನೆಯ ವರ್ಷವನ್ನು ಅತಿವೈಭವದಿಂದ ದಾವಣಗೆರೆಯಲ್ಲಿ ಆಳೆಯುವುದರೊಂದಿಗೆ ತನ್ನ ಸ್ಥಿರಸ್ಥಾಯಿಗಾಗಿ ಸಹಸ್ರಾವಧಿ ರೂಪಾಯಿಗಳನ್ನು ಕೇಳರಿಸಿದ್ದೂ, ಮಾರನೇವರ್ಷ ಮಹನೀಯರಾರ ಕಾಲ್ಗುಣದಿಂದಲೋ ಬೀದರೂರಿನಲ್ಲಿ ಬಿಂದೊಡದದ್ದೂ ಸರ್ವಶ್ರುತವಷ್ಟೆ. ಅಂದೊಡೆದ ಸಭೆಯು ಇಂದಿನವರೆಗೆ ಒಂದೂರಲ್ಲಿಯಾದರೂ ಸಂಧಿಸದೆ, ಮುಂದಾಳುಗಳಿಲ್ಲದೆ ಮಣ್ಣಗೂಡಿ ಬಿದ್ದಿದೆ.

ಕರ್ನಾಟಕದಲ್ಲಿ ದೊಡ್ಡಜನಾಂಗವಾದ ವೀರಶೈವರ ಅನೈಕ್ಯಮತವೆ ಕರ್ನಾಟಕದ ಅನೈಕ್ಯಮತವಾಗಿರುವಾಗ ಕಾಶೀನಾಥಾದಿ ಕೆಲವು ಅದೂರದರ್ಶಿಗಳಿಗೆ ನಮ್ಮಲ್ಲಿಯ ಕೆಲವು ಗಣ್ಯರು ಸಹಕಾರಿಯಾದಂತೆ ಅನ್ಯಸಮಾಜದ ಕೆಲವರು ಸಹ ಉತ್ತೇಜನಕೊಟ್ಟದ್ದರಿಂದಲೆ ಈ ದುಸ್ಥಿತಿಗೆ ಕಾರಣವಾಗಿದೆ. ಈಗ ವೀರಶೈವಸಮಾಜದಲ್ಲಿ ಐಕ್ಯಮತವೇ ಅಡಗಿ ಒಂದುಕಡೆ ಬಸವಾದಿಪ್ರಮಥರ ನಿಂದೆ, ಇನ್ನೊಂದುಕಡೆ ವಿರಕ್ತರ ವಿರುದ್ಧಲೇಖನ ಭಾಷಣಗಳ ಸುರಿಮಳೆ, ಮತ್ತೊಂದುಕಡೆ ಶಿದ್ಧೀಕನಂಥ ಅನ್ಯಮತೀಯನ ಅವಾಂತರ, ಇವುಗಳಮೇಲೆ ನಮ್ಮವರಲ್ಲೇ ಕೌನ್ಸಿಲ್ ಚುನಾವಣೆಯ ಹೋರಾಟ, ಇವುಗಳಿಂದ ವ್ಯಕ್ತಿಗಳಲ್ಲಿ ಪರಸ್ಪರ ವೈಮನಸ್ಸು ಹೆಚ್ಚಿ, ಸಮಾಜದಲ್ಲಿನ ಒಕ್ಕಟ್ಟೇ ಶಿಥಿಲವಾಗಿ ಹೋಗಿದೆ. ಅನ್ಯಸಮಾಜದವರೊತ್ತಟ್ಟಿಗಿರಲಿ; ನಮ್ಮ ಸಮಾಜದಲ್ಲಿ ಕೆಲವರು ಈ ದುಸ್ಥಿತಿಯ ದುರುಪಯೋಗಮಾಡಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುತ್ತಾ ಹಿಗ್ಗುತ್ತಿರುವರಲ್ಲದೆ, ಕುಗ್ಗರು. ಇಂಥ ಮಂದಮತಿಗಳಾರೆಂಬುದೂ ಇವರಿಂದ ಸಮಾಜಕ್ಕೆ ಎಂಥ ಘಾತವಾಗುತ್ತಲಿದೆಯೆಂಬುದೂ ಸಮಾಜಾಭಿಮಾನಿಗಳಿಗೆ ಶ್ರುತವಾಗಿದೆಯಲ್ಲದೆ, ಈ ಕುಹಕಿಗಳ ಕೂಗಾಟವನ್ನು ಅಡಗಿಸಬೇಕೆಂಬ ಬಹುಜನರ ಬಯಕೆಗೆ ಕೆಲವು ಪ್ರತಿಷ್ಠಿತರೇ ಅಡ್ಡಬರುತ್ತಿರುವರು. ಇದರಿಂದ ಕುಹಕಿಗಳ ಕೂಗಾಟವು ತಗ್ಗದಂತಿಲ್ಲ. ಮುಂದಾಳುಗಳಿಲ್ಲದ ಈ ಸಮಯದಲ್ಲಿ ಈ ಆಸ್ಥಾನ ಕಮಿಟಿಯ ಕಪಟಾಟಗಳು ನಿಲ್ಲಬೇಕಾದರೆ, ಮಹಾಸಭೆಯೊಂದೇ ಸಾಧನವಲ್ಲದೆ, ಬೇರೆ ಉಪಾಯವೇ ಇಲ್ಲ.

ಮಹಾಸಭೆಯು ನೆರೆಯದಿರಲು ಅನೈಕ್ಯಮತ್ಯವೇ ಕಾರಣವಾಗಿರುವಾಗ, ಮಹಾಸಭೆಯನ್ನು ಸೇರಿಸುವುದಾದರೂ ಹೇಗೆ, ಸೇರಿಸುವವರಾದರು ಯಾರು, ಎಂದು ಕೆಲವರು ಶಂಕಿಸಬಹುದು. ಹಾಗೆ ಶಂಕಿಸಲು ಕಾರಣವಿಲ್ಲ. ಏಕೆಂದರೆ, ಕಾರಣಾಂತರಗಳಿಂದ ಸಮಾಜದವರಲ್ಲಿ ಐಕ್ಯಮತ್ಯವು ತಪ್ಪಿದಾಗು, ಮಹಾಸಭೆಯ ಕಾರ್ಯಕ್ಕೆ ಚ್ಯುತಿಬರಬಾರದೆಂಬ ಉದ್ದೇಶದಿಂದಲೇ ಸ್ಥಿರಸ್ಥಾಯಿಫಂಡನ್ನು ಕೂಡಿಸಿದ್ದಾಗಿದೆ. ಮಹಾಸಭೆಯ ಏಳಿತದ ಜವಾಬ್ದಾರಿಯನ್ನು ಈ ಸ್ಥಿರಸ್ಥಾಯಿಫಂಡಿನವರಿಗೆ ವಹಿಸಿ, ಸಮಾಜದವರು ತಕ್ಕಷ್ಟು ಹಣವನ್ನು ಸಹ ಅವರ ಸ್ವಾಧೀನಪಡಿಸಿರುವದರಿಂದ ಇಂಥ ಸಮಯದಲ್ಲಿ ಮಹಾಸಭೆಯನ್ನು ಕೂಡಿಸುವ ಭಾರವು ಅವರದಾಗಿದೆ. ಮಹಾಸಭೆಯು ನಿಂತುಹೋಗಿದೆ. ಫಂಡಿನವರೇ, ನೀವಾದರು ಮಹಾಸಭೆಯನ್ನು ನೆರೆಸಿರಿ ; ಕೂಡಿಸಿರಿ ಎಂದು ಪರಿಪರಿಯಿಂದ ವರ್ತಮಾನಪತ್ರಗಳಲ್ಲಿ ಬರದದ್ದು ಅರಣ್ಯರೋದನವಾಗಿ ಪರಿಣಮಿಸಿ, ಮಹಾಸಭೆಯು ಈ ವರ್ಷ ಬೆಂಗಳೂರಲ್ಲಿ ಕೂಡುವುದು; ಮೈಸೂರಲ್ಲಿ ನೆರೆಯುವುದು ; ಅಲ್ಲಿ ಡಿಸೆಂಬರ್ ತಿಂಗಳಲ್ಲಿ ಕೂಡುವುದು, ಇಲ್ಲ ಮೇ ತಿಂಗಳಲ್ಲಿ ಆಗುವುದು ; ಅಲ್ಲಲ್ಲಿ ಫಂಡಿನ ಹಣವು ಮುಂಗಡ ದೊರೆಯದ್ದರಿಂದ ಮಹಾಸಭೆಯು ಮುಂದೆ ಎಂದೋ ಹಾಕಲ್ಪಟ್ಟಿದೆಯೆಂದು ಮೊದಲಾಗಿ ಸುದ್ದಿಯಮೇಲೆ ಸುದ್ದಿಯುಂಟಾಗಿ, ಮಹಾಸಭೆಯ ಸದ್ದೇ ಅಡಗಿತು. ಇದರಿಂದ ಸಮಾಜಾಭಿಮಾನಿಗಳ ಅಸಂತೋಷವು ಹೆಚ್ಚಿ, ಸಮಾಜಕಾರ್ಯಕ್ಕೆ ಮುಂದರಿಯದಂತಾಗಿದೆ.

ಮಹಾಸಭೆಯ ಸಾರೋದ್ಧಾರಕ್ಕೆಂದು ಶೇಖರಿಸಿದ ಹಣವು ಮಹಾಸಭೆಯ ಸದ್ದನ್ನಡಗಿಸುವುದಕ್ಕನುವಾಯಿತೇ ಚೆನ್ನಾಯಿತು! ಚೆನ್ನಾಯಿತು!! ಬೇಲಿಯೆದ್ದು ಹೊಲ ಹಾಳುಬಿದ್ದಂತಾಯಿತು!!! ಮೈಸೂರು ಮಹಾರಾಜ ಸರಕಾರದಲ್ಲಿ ಸಣ್ಣಹುದ್ದೆಯಿಂದ ದಿವಾನಪದವಿಯವರೆಗೆ ಏರಿ, ರಾಜಸಭಾಭೂಷಣ, ದಿವಾನ್ ಬಹದ್ದೂರ, ಸರ್ ಮೊದಲಾದ ಕಿತಾಬುಗಳನ್ನು ಹೊಂದಿದ ಪುಟ್ಟಣ್ಣಶೆಟ್ಟರಂಥ ರಾಜಕಾರ್ಯಧುರಂಧರರು ಈ ಸ್ಥಿರಸ್ಥಾಯಿಫಂಡಿನ ಅಧ್ಯಕ್ಷರಿರುವಾಗ, ಮಹಾಸಭೆಗೆ ಈ ದುರವಸ್ಥೆಯೇ ? ಗೌರವಕಾರ್ಯನಿರ್ವಾಹಕತ್ವಗಳನೇಕರ ಗಲಾಟೆಗಳಲ್ಲಿ ದಿ|| ಬ|| ಶೆಟ್ಟರಿಗೆ ಮಹಾಸಭೆಯಮೇಲಣ ಅಲಕ್ಷ್ಯೆಯೋ, ಅಥವಾ ಅನಭಿಮಾನವೋ ತಿಳಿಯದು. ಯಾಕೆಂದರೆ, ಶೆಟ್ಟರ ಮೇಲ್ವಿಚಾರಣೆಗೊಳಪಟ್ಟ ಹಲವು ದೇಶಾಭ್ಯುದಯಕಾರ್ಯಗಳು ಸಮರ್ಪಕವಾಗಿ ನಡೆದಿರುವಾಗ ಮಹಾಸಭೆಯ ಕಾರ್ಯವು ಮೂಲೆಗೆ ಬೀಳುವುದೆಂದರೆ, ಅವರ ಅಲಕ್ಷ್ಯೆಯಿಂದು ತಿಳಿಯಲವಕಾಶವಾಗಿಲ್ಲವೆ ? ಇರಲಿ ; 35 ಲಕ್ಷ ವೀರಶೈವರಮಹಾಸಭೆಯಂಥ ಮಹತ್ವದ ಕಾರ್ಯವನ್ನು ಮೂಲೆಗೊತ್ತುವದಕ್ಕಿಂತ ಆದರ ಚಾಲಕತ್ವದಿಂದ ಬಿಡುಗಡೆಹೊಂದುವುದು ಶೆಟ್ಟರ ಘನತೆಗೆ ಶೋಭಿಸತಕ್ಕದ್ದಾಗಿದೆಯೆಂದು ಹೇಳದಿರಲಾಗದು. ದಿ|| ಬ|| ಶೆಟ್ಟರಂತೂ ಸುಮ್ಮನಿರುವರು. ಸ್ಥಿರಸ್ಥಾಯಿಗೆಂದು ಹಣಕೊಟ್ಟ ಮತ್ತು ಕೂಡಿಸಿದ ಮಹನೀಯರೆ, ನೀವೂ ಸುಮ್ಮನೆ ಕೂತಿರುವಿರಲ್ಲವೆ ? ನೀವು ಹಣಕೊಟ್ಟದ್ದು ಮಹಾಸಭೆಯ ಸಾರೋದ್ಧಾರಕ್ಕೋ, ಸದ್ದಡಗುವದಕ್ಕೋ ? ಹಣ ಕೊಡುವ ಮುಂಚೆ ಹಾಗೂ ಹೀಗೂ ನಡೆದಿದ್ದ ಮಹಾಸಭೆಯು ನೀವು ಹಣ ಕೊಟ್ಟಂದಿನಿಂದ ನಡೆಯದಿರುವದನ್ನು ನೋಡಿದರೆ, ಎಂದೂ ಮಹಾಸಭೆಯು ಸೇರಬಾರದೆಂಬುದಕ್ಕಾಗಿಯೇ ನೀವು ಹಣಕೊಟ್ಟಂತೆ ತಿಳಿಯಲವಕಾಶವಾಗಿಲ್ಲವೇ? ಹಣಕೊಟ್ಟು ಪುಣ್ಯಾರ್ಜನೆಮಾಡುವವರಿರುವಂತೆ, ಮಹಾಸಭೆಯಂಥ ಪುಣ್ಯಕಾರ್ಯವನ್ನು ಹಣಕೊಟ್ಟು ನಿಲ್ಲಿಸತಕ್ಕ ನಿಮ್ಮಂಥವರು ನಮ್ಮ ಸಮಾಜದಲ್ಲಿರುವರೆಂದಮೇಲೆ, ನಮ್ಮ ಸಮಾಜದ ಪುಣ್ಯಕ್ಕೆ ಎಣೆಯುಂಟೆ! ಮಹಾಸಭೆಯ ಅಳಿಗಾಲಕ್ಕಾದರೂ ತಡೆಯುಂಟೆ ?

ದಾವಣಗೆರೆ ಮಹಾಜನಗಳೇ, ನೀವು ಸಮಾಜದವರಿಗೆ ಒಂದುತರದಿಂದ ವಂಚಿಸಿದರೆಂದು ಹೇಳಬಹುದಲ್ಲವೆ ? ಏಕೆಂದರೆ, ನಿಂತುಹೋದ ಮಹಾಸಭೆಯನ್ನು ಅಲ್ಪಾವಧಿಯಲ್ಲೇ ಅಟ್ಟಹಾಸದಿಂದ ನೆರಿಸಿ, ಅದರ ಸಾರೋದ್ಧಾರಕ್ಕೆಂದು ನೀವು ಹಣವನ್ನು ಕೊಟ್ಟು ಉಳಿದವರಿಗೆ ಪ್ರೋತ್ಸಾಹಿಸಿ, ಹೆಚ್ಚು ಹಣಕೂಡಿಸಿ ಕೊಡದ್ದರಿಂದಲ್ಲವೆ ಈ ಸ್ಥಿತಿಗೆ ಕಾರಣವು ? ಫಂಡಿಗೆ ಹಣಕೊಟ್ಟವರೆಂದರೆ ನೀವು. ನಿಮ್ಮ ಪ್ರಾಂತದವರೇ ಹೆಚ್ಚು ಜನಗಳು. ಸ್ವಾಗತಸಂಘಾಧ್ಯಕ್ಷರಂತು ನಿಮ್ಮ ಊರಿನವರೆ. ಇವರ ಮೇಲಿಂದ ಇತರರಿಗಿಂತ ನಿಮ್ಮ ಮೇಲೆ ಹೆಚ್ಚು ಜವಾಬ್ದಾರಿ ಇರುತ್ತದೆ. ಹಣಶೇಖರಿಸುವಾಗಿನ ಹುರುಪು ಶೇಖರವಾದ ಹಣದ ವಿನಿಯೋಗವಾಗುವಾಗ ಇಲ್ಲದಿರುವುದೆಂದರೆ, ಆರಂಭಶೂರತ್ವವೆನಿಸುವದಿಲ್ಲವೇ ? ಸಮಾಜಸೇವಾಧುರೀಣರೆಂಬ ನಿಮ್ಮ ಈ ವರೆಗಿನ ಖ್ಯಾತಿಗೆ ಇದು ಕಳಂಕವಲ್ಲವೆ ? ತಂಟಬಂದರೂ ತಡೆಯಾಗಬಾರದೆಂದು ಗಂಟುಕೂಡಿಸಿ ಕೊಟ್ಟವರು ನೀವಲ್ಲವೆ ? ಆ ಗಂಟು ಎಲ್ಲಿ ? ಮಹಾಸಭೆಯಲ್ಲಿ ? ಎಂದು ಸಮಾಜದವರು ಕೇಳುವ ಪ್ರಶ್ನೆಗೆ ನಿಮ್ಮ ಉತ್ತರವೇನು ? ಸುಮ್ಮನಿರುವುದೋ ? ಬೆಂಗಳೂರು ಕಡೆ ಕೈತೋರಿಸುವುದೋ ?

ಮಹಾಸಭೆಯ ಉತ್ಪಾದಕರು ಶ್ರೀಕುಮಾರಸ್ವಾಮಿಗಳು, ಮಹಾಸಭೆಯ ಉದ್ಧಾರಕರು ಶ್ರೀಜಗದ್ಗುರುಮುರುಘೇಂದ್ರಮಹಾಸ್ವಾಮಿಗಳು ಇರುವಂತೆ, ಸಾರೋದ್ಧಾರಕರೆನಿಸುವ ಕೀರ್ತಿಗೆ ನೀವು ಭಾಜನರಾಗುವವರಲ್ಲವೆ? ಸಾಕಾದಷ್ಟು ಗಂಟುಕೂಡಿಸುವ ಮಹತ್ವದ ಕಾರ್ಯವನ್ನೇ ನೀವು ಮಾಡಿರುವಾಗ, ಆ ಗಂಟಿನ ಸದುಪಯೋಗಮಾಡುವ ಕಾರ್ಯವು ನಿಮಗೆ ದೊಡ್ಡದೆ ? ಮನಸ್ಸುಮಾಡಿ ಮರೆಯಿಂದ ಹೊರಬಿದ್ದು ಇನ್ನೊಂದೇಸಲ ಮಹಾಸಭೆಯನ್ನು ಕೂಡಿಸಿರಿ ; ಇಲ್ಲವೆ, ಹಣಕೊಟ್ಟ ಎಲ್ಲ ಮಹನೀಯರನ್ನಾದರು ನಿಮ್ಮಲ್ಲಿಗೆ ಬರಮಾಡಿಕೊಳ್ಳಿರಿ. ಎಂದರೆ, ಸ್ಥಿರಸ್ಥಾಯಿಫಂಡಿನ ವ್ಯವಸ್ಥೆಯಾಗುವುದು. ಬಹುಜನ ಶ್ರೇಯಸ್ಸಾಧಕವಾದ ಈ ಕೆಲಸವನ್ನು ಮಾಡಲು ಇದು ಸುಸಮಯವಾಗಿ, ಬೇಕಷ್ಟು ಕಾಲಾವಧಿಯುಳ್ಳದ್ದಾಗಿದೆ. ಎಂಟನೆಯ ಮಹಾಸಭೆಯನ್ನು ನೆರಿಯಿಸಿ, ಗಂಟನ್ನು ಕೂಡಿಸಿದ, ಅಂದಿನ ನಿಮ್ಮ ಕೀರ್ತಿಗಿಂತಲೂ, ಮುಂದರಿದು ಈಗ ಮಾಡುವುದು ಹೆಚ್ಚು ಕೀರ್ತಿಗೆ ಕಾರಣವಾಗಿದೆಯಾದ್ದರಿಂದ ಸಮಾಜದ ಈ ಕಾರ್ಯಕ್ಕೆ ಯಾರೂ ಅಂಜಬಾರದು. ಇದು ರಾಜಕೀಯ ಚಳವಳಿಯಲ್ಲ ; ಇದಕ್ಕೆ ಮತ್ಯಾವ ಭಯವೂ ಇಲ್ಲ. ನಿಮ್ಮ ಸಮಾಜದ ಹಿತಕ್ಕಾಗಿ ನೀವು ಕೊಟ್ಟಿರುವ ಹಣದ ಉಪಯೋಗ ಮಾಡಲು ಅಧಿಕಾರದಿಂದ ಬದ್ಧರಾಗಿ, ಸಮಾಜದವರಿಗೆ ನೀವೇ ಜವಾಬ್ದಾರರಾಗಿರುತ್ತೀರಿ. ನೀವು ಮರೆಯಿಂದ ಹೊರಬಿದ್ದು ಸಮಾಜಕಾರ್ಯಕ್ಕೆ ನಡಕಟ್ಟಿ ನಿಲ್ಲದವಿನಾ ಈ ಕಾರ್ಯವಾಗುವಂತಿಲ್ಲ. ಆದ್ದರಿಂದ ಧನಸಂಗ್ರಹಿಸಿದ ದಾವಣಗೆರೆಯವರೇ ಮತ್ತು ಧನನಿಧಿಯ ಸಭಾಸದರೇ, ಈ ಸುಸಂಧಿಯನ್ನು ಕಳೆಯದೆ ಏಳಿರಿ, ಸಮಾಜಹಿತಕ್ಕೆ ಏಳಿರಿ, ಕಾಮಧೇನುಸಮವಾದ ಕಬಿನಾಟಿಯನ್ನು ತೆರೆಯಿರಿ. ಇದರಿಂದ ಶಾಶ್ವತ ಕೀರ್ತಿಯನ್ನು ಹೊಂದುವಿರೆಂದು ಕೋರುವ,

ಓರ್ವ ಸಮಾಜಹಿತೈಷಿ.

MR. G. PARAMASIVIAH'S SPEECH ON BUDGET.

Before proceeding with the usual discussions on the Budget, I beg to offer my hearty congratulations to you and to your honourable colleagues on the high offices that have been respectively conferred on you by His Highness the Maharaja.

Coming to the Budget proper, it will facilitate our discussions if we were to try and find out the policy underlying the framing of the budget in the past years. The period of six years from 1912-13 to 1918-19 were years of prosperous budgets resulting in huge surpluses to the extent of 321 lakhs. During the same period, the revenues rose from 255 to 315 lakhs, and expenditure from 202 lakhs to 298 lakhs. The total outlay on capital works was 328 lakhs, that is 7 lakhs more than the surplus realised during those 6 years. Even during those years of prosperity, the outlay on capital works was met by the realisation of our investments in securities, thereby incurring a heavy loss of nearly a crore of rupees. The cumulative effect of all these was seen in 1918-19 when for the first time there was a deficit of 3 lakhs in our budget. It came up to 11 lakhs in 1920 and went up to 31 lakhs in the year 1921-22. In that year, the deficit of 31 lakhs was met from departmental balances and also by resorting to the amounts realised from public loans.

The decennial review and quinquennial forecast published by Government in 1919, disclosed a recurring deficit of 15¾ lakhs per annum and also indicated the necessity of borrowing largely for productive capital works. I think it is in the year 1918 that Government decided to incur a normal capital outlay of about Rs. 70 lakhs a year of which 40 lakhs were to be spent from the balances at the credit of reserves and Rs. 30 lakhs from loans. Now sir, let us think of the present position. We have provided in the budget under discussion for a capital outlay of 50 lakhs and another 10 lakhs for the Depreciation Fund Works. Practically we are going to spend 60 lakhs of rupees on capital works and depreciation fund works during the year 1926-27 without resorting to any loan, and proposing to draw only 8¼ lakhs from the Reserves.

Some honourable members of this House have taken objection for utilising funds from the reserves fearing that the policy would be repeated in coming years also. I beg to point out that it has been clearly stated that this sum had been earmarked for items of non-recurring expenditure. There is therefore no room whatever to entertain any doubt that in coming years our reserves would be exploited to a greater or an equal extent. Let us see what is being done in other countries. In Bengal, a sum of Rs. 25 lakhs, has been proposed to be met from balances at the credit of the departments and reserves, and in Western Countries deficits are proposed to be met by the levy of new taxes and by raising the rates of existing taxes.

Fortunately we have not been confronted with such a situation and there is no scope whatever to levy new taxes, because our system of taxation is very rigid and inelastic.

In the year 1918 it was proposed by the Government that new methods of taxation should be adopted and that the existing rates of taxation should be raised. That scheme we have completed. Next it was proposed that income-tax should be levied and this we have done. It was also proposed that Court Fees, Stamp and Registration Fees should be raised and this also has been done. Lastly a suggestion was made that education cess should be levied. This we have rendered obligatory on all the District Boards. Therefore, there is at present no scope whatever for the levy of new taxes or for the raising of the existing taxes.

Some of the honourable members complained that there is no inclination on the part of the Government to reduce the existing taxes. But at the same time, they recommend for the revision of scales of pay of lower subordinates as well as officers getting Rs. 100 and below, which will probably involve an amount of Rs. 30 to 35 lakhs. The mere grant of grain allowances to some of the lower subordinates alone camp up to nearly 20 lakhs of rupees. Therefore I think it is rather curious that we should plead on the one hand that we should not levy new taxes and on the other make proposals for the enhancement of the pay of Government servants.

The present situation though not very hopeful is not so alarming as depicted by some Hon'ble members of this House. When compared with the budgets prevailing in other countries, I think, we have been very fortunate in being presented with a budget for the year 1926-27 which seems to be quite satisfactory in all respects.

In this connection I must bring to your kind notice, sir, one question relating to the building up of the Mining Revenue Capitalisation Fund. We all know that the income from that source is not a permanent one. Therefore, it is incumbent on us to see that that reserve at least is being safeguarded to ensure the income which we have been getting from that source. Originally it was proposed that 60 per cent of the income from the gold mining revenue should be set apart to build up such a reserve. I do not think that that policy has been kept in view of late. However, it is very necessary that we should pay particular attention towards the building up of that capitalisation fund. It is quite apparent that some of the permanent sources of revenue have been failing of late. For instance from Land Revenue, there had been a steady increase of one or two lakhs every year, but now we have reached the maximum as the resurvey and resettlement operations are complete. At the same time, from excise, we have been on an average losing nearly 2½ lakhs every year. It is therefore necessary that we should improve the other sources of revenue to compensate for the loss that we have been incurring from these sources. In this connection, may I suggest that there is great scope to improve our revenue from forests, hydro-electric works State railways, and other capital works. I think it is very necessary that we have to take stock of the results that have been achieved as regards our capital works.

As far back as 1920 the Brussels Committee of financial experts who met under the auspices of the League of Nations recommended among other things that we should stop all extraordinary items of expenditure on capital works which are unproductive.

The only thing that has been causing anxiety at present is the Bhadravati Iron Works. You have given us the assurance that your personal inspection as well as the reports from the Board of Management just now discloses that they hope to make the concern a self-supporting one. But such assurances were given in the past also. In the year 1923 your distinguished predecessor anticipated a net revenue of 3 lakhs in the current year. But what is the position today? It is very discouraging and I think every one who has got the best interests of the State at heart, has got a right to know how far these hopes are going to be realised.

In the Financial Review and forecast adverted to above, under Interest and Sinking Fund, the standard was fixed at 22 lakhs, but at present it has gone up to 53½ lakhs. Your proposal to convert the existing loan into a long-termed and low-rated one with a view to save about 20 lakhs a year in this respect is, therefore, most welcome.

As regards the Education Department, I must say that the amount allotted is very disappointing, because at the budget Session of this Council in 1919, your predecessor in office stated as follows:—

"I have pointed out on a previous occasion that our educational expenditure which was 26 lakhs in 1916-17 will rise to nearly 42 lakhs during the next year and according to the forecast of our requirements which have been carefully calculated with reference to the policy of expansion and consolidation the Government have in view, the expenditure will, in all probability, still further rise by another 20 lakhs during the next six years." According to that calculation, it ought to have been Rs. 62 lakhs in the current year. Therefore, for purposes of expansion of primary education, we have to allot more funds. The policy of converting the aided institutions requires careful revision as there is no improvement whatever in spite of the increased grants. We have been spending more than 7 lakhs by giving grants to these aided institutions which are languishing and I think it will be sheer waste of money, if we are to defer the improvement of these institutions any longer. As indicated in the Education Memorandum, the best policy would be to convert all these aided institutions into Government institutions by which we can hope to get the maximum result for the amount that we spend. At the same time, the establishment of one type of school with only one type of teachers is not at all conducive to the spread of primary education. Even in Europe, it is being reported that the number of pupils in the primary schools is going down on account of one type of schools and teachers. They state that the schools in the rural areas should be staffed by teachers from the countries and not from the cities and unless an industrial turn is given to the present scheme of education, I do not think we will derive any benefit out of the funds that we have been spending on education.

I need not now refer to the various observations made by the previous speakers except on one or two points. As regards the Bench Magistrates' Courts, I beg to submit that with a view to realise the benefits of the Separation Scheme fully, the Bench Courts should be developed. We would have derived the fullest benefit of the Separation Scheme by extending the establishment of Bench Courts. I think no body will differ from me if I say that these honorary magistrates are going to fulfill our expectations to the fullest extent as far as Separation Scheme is concerned. There is already the verdict in their favour by the members of the Assembly who are more in touch with them and their verdict has to be valued more.

Some Honourable members were pleased to suggest that the age of retirement should be extended in order to curtail pension charges. You will pardon me, if I were to quote what I have stated in the last Budget Session of this House. It runs as follows:—

"I have to strongly protest against the suggestion of lengthening the span of official life with a view to cut down pension charges as it will not at all help to attain the object in view. Henry Higgs in his book on National Economy says, "Length of service is accompanied by regular increases of pay even in the classes where the value of experience quickly reaches its limit, and in many cases begins to be counter-balanced by a falling off in mental and physical vigour. To put it shortly, salaries increase long after service ceases to improve. Unnecessary expense is thus incurred on the effective list and ultimately on the pension list." Moreover keeping men in service after the completion of the 55th year will not only block the way of promotion to our younger officers, who will naturally become discontented but it will also come in the way of new candidates being recruited into service, thus rendering the whole service stagnant and inefficient. I am sure that our young civilians have already become much agitated at this suggestion." The best thing that can be done in this respect is to revise the rules as regards pensions. That would be a proper remedy.

As there are already a large number of cut motions tabled, I do not wish to occupy any more time of this Hon'ble House. With these few remarks I beg to close my observations on the budget.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ಸತ್ಯಾನ್ವೇಷಣ.)

ಎರಡನೆಯಭಾಗ

೪ ನೆಯ ಪ್ರಕರಣ.

ಕಷ್ಟಿಯುಪ್ಪಿಗೆಯ ಪ್ರಯತ್ನ.

ನನ್ನ ದೊಡ್ಡಣ್ಣನು ನನ್ನಮೇಲೆ ಬಹಳ ಆಶೆಯನ್ನಿಟ್ಟುಕೊಂಡಿದ್ದನು. [illegible]

[illegible]

೧೯೨೬ ನೆಯ ಇಸವಿ ಜುಲೈ ತಾ|| ೨೪ ರಿಂದ ೧೯೨೬ ನೆಯ ಇಸವಿ ಜುಲೈ ತಾ|| ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಆಷಾಢ ಶುದ್ಧ ಚತುರ್ದಶಿಯಿಂದ ಆಷಾಢ ಬಹುಳ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಲ್ಯಾ ಮಾನ
24	ಶನಿ	ಚತು	16-12	ಪೂಷಾ	21-33	9
25	ಭಾನು	ಪೌರ್ಣ	11-34	ಉಷಾ	18-30	10
26	¹ಸೋಮ	ಪಾ-ಬಿ	5-41 54-18	ಶ್ರವ	14-51	11
27	ಮಂಗಳ	ತದಿ	53-37	ಧನಿ	10-49	12
28	ಬುಧ	ಚೌತಿ	47-20	ಶತ	6-38	13
29	²ಗುರು	ಪಂಚ	41-16	ಪೂಭಾ	2-28	14
30	³ಶುಕ್ರ	ಷಷ್ಠಿ	35-40	ರೇವ	54-55	15

(1) ಮಳೇನಕ್ಷತ್ರ-ಪುಷ್ಯ ೩ ನೆಯ ಪಾದ. (2) [illegible] ದಿನ. (3) ಮಳೇನಕ್ಷತ್ರ-ಪುಷ್ಯ ೪ ನೆಯ ಪಾದ. [illegible]

ಮೈಸೂರು: ಶ್ರೀ. [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಾಶಪಡಿಸಿದೆ.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

[illegible] ‖ [illegible] ‖
[illegible] ‖ [illegible] ‖
[illegible] ‖ [illegible] ‖

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

REGISTERED NO. M. 124.

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ಜುಲೈ ತಾರೀಖು ೩೧ ನೆಯ ಶನಿವಾರ. [ಸಂಚಿಕೆ ೩೧

ಸಾರಸ್ವತಾಸವ.

[illegible]

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

[illegible]

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಕಾಮಧುಕದ ಕಸ್ತೂರಿಮಾತ್ರೆಗಳು.

[illegible]

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಆ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೩೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದಾರರು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—7] ಶಿವಾನುಭವ ಆಫೀಸು ವಿಜಾಪುರ

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಬಾದುಶೀರಾಚರಿತ್ರೆ	೦—೫—೦	೦—೧೦—೦
ಹರಿದಾಸ	೦—೪—೦	೦—೯—೦
ವೃಷಸಂಹಿತ	೦—೪—೦	೦—೯—೦
ಗುರುಬಂಕಲೇಶ್ವರಚರಿತೆ	೦—೧—೦	೦—೬—೦
[illegible]	೦—೮—೦	೦—೧೩—೦
[illegible]	೦—೮—೦	೦—೧೩—೦
[illegible]	೧—೦—೦	೧—೬—೦

ಸತ್ಯದಮಗತ್ತು ಮೊದಲು ಓದಿನ್ನು ಓದಿ ನಂಬಿಗೆ ಇಡಿರಿ. ಆದಿಯೋನು ನೋಡೋಣ

ಸತ್ಯವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದದ್ದು

ಅಲ್ಪವಯಸ್ಸಿನಲ್ಲಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧಾಕಸಿದರೆ ಕ್ಷೀಣತೆ ಕಾಯ್ದುಕೊಳ್ಳಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುವಿನ ವಿಕಾರಗಳು, [illegible]

[illegible]

[50—2] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.



(Registered Trade Mark)

[illegible]

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನು ಸ್ಪಷ್ಟವಾಗಿ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50—41] ಪೋ. ಬಾ. ನಂ. [illegible]

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO., BENARES CITY.

S. N. N. & CO. BENARES CITY

[illegible]

3

[illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಜುಲೈ ತಾ|| ೩೧ ನೆಯ ಶನಿವಾರ.

THE MYSORE ECONOMIC CONFERENCE.

THE DEWAN'S ADDRESS.

The sixteenth session of the Mysore Economic Conference commenced its sittings yesterday under the presidency of the Dewan. The public at large are not quite alive to the work turned out by this Conference in recent years. Time there was when it did create a lot of stir the practical results of which is some what difficult to discover. Money was spent on a large and liberal scale and the only justification for it would be that we were cutting new ground and just doing the spade work which as the Dewan observes took eight solid years. We are inclined to know what the total amount of expenditure was on this spade work for those eight years. The people no doubt are to be grateful to Government for recognising that active co-operation with the people in promoting their economic uplift was their responsibility. We should think that that is a responsibility which is theirs when they administer every department in the State. We are not sure if the industrially and economically advanced contries owe their position to any separate organisation such as the above. The transference of the work relating to rural economic development to the care of the District Boards was one of the best and most welcome changes in the organisation of the Conference. It would have been a marvellous feat for any central agency to promote local enterprises and meet local needs in the districts. What is more it is not possible for such an agency to bring to the consideration of such needs the same amount of sympathy and patriotism as the District Board could possess. We should confess that the work turned out by the three Boards of the Conference is such that could well be attended to by the departments concerned. Though we have no knowledge of the inner working of the administration, we would not wonder if there are occasions for friction between these Boards and the Departments which deal with the work. We are not sure of any real reform effected by the Board of Education in the system obtaining in Mysore. Practical education has been a cry all the while and we are still far from providing a satisfactory solution to the problem. If the Conference could take credit for the founding of the University of Mysore it cannot be said that it has considered well about the utilisation of the products of the University which is much more important than starting institutions. As regards agriculture we are not aware of any achievement of the Conference. As for industries and trade we only know that large sums were advanced to various persons for starting industries and business concerns, most of which probably could not be recovered and has or had to be written off. We should think that with a separate department for Industries and Commerce the need for a separate Board of the Conference becomes less important. We would not have wished to offer a bit of frank criticism but for the fact that the Dewan proposes to appoint a secretary for the Conference and also revive the appointments of the District Economic Superintendents. Past experience we regret to say has been nothing very encouraging and we hope that before more expenditure is incurred these matters will be considered carefully.

ಕೃಷ್ಣರಾಜಸಾಗರದನೀರಾವರಿಯಭಿವೃದ್ಧಿಯು.

ಕೋಟ್ಯಂತರ ರೂಪಾಯಿಗಳ ವ್ಯಯದಿಂದ ಕಟ್ಟಲ್ಪಟ್ಟಿರುವ ಕೃಷ್ಣರಾಜಸಾಗರಜಲಾಶಯವು 136 ಅಡಿ ಪರಮಾವಧಿಯೆತ್ತರಕ್ಕೆ ಬರುವುದಾಗಿರುವುದರಿಂದಲೂ ಕೀಳುಮಟ್ಟದ ನಾಲೆಗಳ ಕೆಲಸವು ಪೂರೈಸಿ ಸಾಕಷ್ಟು ಜಮೀನುಗಳ ವ್ಯವಸಾಯಕ್ಕೆ ನೀರೊದಗಿಸಲ್ಪಡುತ್ತಿರುವುದರಿಂದಲೂ, ಜಲಾಶಯವು ಪರಮಾವಧಿ ಎತ್ತರಕ್ಕೆ ತಲ್ಪುವುದಕ್ಕೆ ಮೊದಲೇ ಮೇಲುಮಟ್ಟದ ನಾಲೆಗಳನ್ನು ಮಾಡಿಸಿ ನೀರಾವರಿಗೆ ಅವಕಾಶಕಲ್ಪಿಸಬೇಕಾಗಿರುವ ಉನ್ನತಪ್ರದೇಶಗಳಿಗೆ ನೀರೊದಗಿಸಲ್ಪಡುತ್ತದೆಂದು ವಾಗ್ದಾನವಾಗಿದ್ದ ಪ್ರಕಾರ ಕಾರ್ಯಾರಂಭಮಾಡಬೇಕೆಂದು ಪ್ರಜೆಗಳು ಪ್ರಜಾಪ್ರತಿನಿಧಿಸಭಾ ಮೂಲಕವೂ ಸ್ವಯಮಾಗಿಯೂ ಪ್ರಾರ್ಥಿಸಿಕೊಂಡಿದ್ದುದಕ್ಕೆ ಮೇಲುಮಟ್ಟದ ನಾಲೆಗಳನ್ನು ತೆಗೆಯುವ ವಿಧಾನವನ್ನು ಪರ್ಯಾಲೋಚಿಸಿ ತಕ್ಕ ಸೂಚನೆಗಳನ್ನು ಪ್ರಭುತ್ವದವರಿಗೆ ಕೊಡುವ ಬಗೆಗೆ ನಿಪುಣರೂ ಕಾರ್ಯಾನುಭವಸ್ಥರೂ ಆದ ದೊಡ್ಡಮನುಷ್ಯರುಗಳಿಂದ ಕೂಡಿದ ಒಂದು ಆಲೋಚನಾಸಂಘವು ಏರ್ಪಡಿಸಲ್ಪಡುವುದೆಂದು ಕಳೆದ ಪ್ರಜಾಪ್ರತಿನಿಧಿಸಭಾಧಿವೇಶನದಲ್ಲಿ ದಿವಾನರು ಅಪ್ಪಣೆಕೊಡಿಸಿದ್ದರು. ಅಲ್ಲದೆ "ಕೃಷ್ಣರಾಜಸಾಗರಜಲಾಶಯದ ಈಗಿನ ಎತ್ತರವು 106 ಅಡಿ ವರೆಗಿದ್ದು 28,000 ಘನಅಡಿ ನೀರನ್ನು ಶೇಖರಿಸುವಷ್ಟು ಸಶಕ್ತವಾಗಿರುತ್ತದೆ. ಈ ಜಲಾಶಯದಿಂದ 7 ನೇ ಪರ್ಯಾಯದ ವಿದ್ಯುದುತ್ಪಾದನೆಗೂ, ಕೀಳುಮಟ್ಟದ ನಾಲೆಗಳ ಮೂಲಕ ವ್ಯವಸಾಯಕ್ಕೂ, ಬೇಸಗೆಯ ಬೆಳೆಗೂ ನೀರೊದಗಿಸಲ್ಪಡುತ್ತಿರುವುದಲ್ಲದೆ ಇನ್ನೂ 60,000 ಎಕರೆ ಭೂಮಿಗೆ ನೀರೊದಗಿಸಲ್ಪಡಲು ಅನುಕೂಲವಿರುತ್ತದೆ" ಎಂದು ಜಲಾಶಯಕೆಲಸಗಳ ಸೆಕ್ರೆಟರಿಯವರು ಸರ್ಕಾರಕ್ಕೆ ವರದಿಮಾಡಿರುತ್ತಾರೆ. ಇದರ ಮೇಲೆ ಪ್ರಭುತ್ವದವರು ಈ ನೀರಾವರಿಯಭಿವೃದ್ಧಿ ಕಾರ್ಯವು ಬಹಳ ಸಾವಕಾಶಮಾಡಲ್ಪಟ್ಟಿರುವುದರಿಂದ ಕೂಡಲೆ ಆರಂಭಿಸಲ್ಪಡಲು ತಕ್ಕ ಉಪಾಯಗಳನ್ನು ಪರ್ಯಾಲೋಚಿಸಿ ಪ್ರಭುತ್ವದವರಿಗೆ ವರದಿಮಾಡಲು, ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನೇರ್ಪಡಿಸಿ (1) ಒಂದನೇ ಕೌನ್ಸಿಲರಾಗಿದ್ದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು (2) ಎಕ್ಸಿಕ್ಯುಟಿವ್ ಇಂಜನಿಯರಾಗಿದ್ದ ರಾಜಶಿಲ್ಪಿವಿಶಾರದ ರಾವ್‌ಬಹದ್ದೂರ್ ಬಿ. ಸುಬ್ಬರಾಯರು (3) ಅಮೃತಮಹಲ್ ಸೂಪರಿಂಟೆಂಡೆಂಟರಾಗಿದ್ದ ಲೋಕಹಿತೈಷಿ ಮ|| ಎಚ್. ನಂಜುಂಡರಾಜಅರಸಿನವರು (4) ಶ್ರೀರಂಗಪಟ್ಟಣದ ಪ್ಲೀಡರ್ ಮ|| ಬಿ. ನರಸಿಂಗರಾಯರು ಮೆಂಬರುಗಳಾಗಿಯೂ, ಪಿ. ಡಬ್ಲ್ಯು. ಡಿ. ಸೆಕ್ರೆಟರಿ ಮ|| ಆರ್. ಶೇಷಾಚಾರ್ರು ಮತ್ತು ಸರ್ವೆಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮ|| ಕೆ. ನಾರಣಯ್ಯಂಗಾರ್‌ರವರು ಸೆಕ್ರೆಟರಿಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮೇಲ್ಕಂಡ ಕಮಿಟಿಯ ಅಧ್ಯಕ್ಷರೂ, ಕಮಿಟಿಯ ಮೆಂಬರುಗಳಲ್ಲಿ ಮೂವರು ವಿನಾ ಉಳಿದವರೆಲ್ಲರೂ ಇಂಜನಿಯರುಗಳಾದುದರಿಂದ ಪ್ರಭುತ್ವದವರ ಉದ್ದಿಷ್ಟಕಾರ್ಯಸಾಧನೋಪಾಯವನ್ನು ಕಂಡು ಸೂಚಿಸಲು ಸಮರ್ಥರಾಗಿರುತ್ತಾರೆ. ಆದರೆ ಆ ಮೂವರಲ್ಲಿ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು 1ನೇ ಕೌನ್ಸಿಲರಾಗಿದ್ದು ಇಂಜನಿಯರಿಂಗ್ ಶಾಖೆಯ ಅಥವಾ ಜಲಾಶಯನಿರ್ಮಾಣಸಂಬಂಧವಾದ ಕಾಗದಪತ್ರಗಳನ್ನು ವಿಮರ್ಶಿಸುತ್ತಿದ್ದುದರಮೇಲೆ ತಕ್ಕಮಟ್ಟಿಗೆ ಅನುಭವಸ್ಥರಾಗಿರಬಹುದೆಂದು ಕಮಿಟಿಯ ಮೆಂಬರಾಗಿ ತೆಗೆದುಕೊಳ್ಳಲ್ಪಟ್ಟಿರಬಹುದು. ಆದರೆ ಶಿಲ್ಪವಿದ್ಯೆಯ ಅಥವಾ ಕೆಲಸದ ಗಂಧವನ್ನೇ ಅರಿಯದ ಉಳಿದಿಬ್ಬರು ದೊಡ್ಡಮನುಷ್ಯರುಗಳು ದೊಡ್ಡಜಮೀನ್ದಾರರೆಂಬುದರಮೇಲೆ ಮೆಂಬರುಗಳಾಗಿ ತೆಗೆದುಕೊಳ್ಳಲ್ಪಟ್ಟಿರಬೇಕೆಂದು ಊಹಿಸುವುದಾದರೆ, ಇವರುಗಳ ಸಲಹೆಯಿಂದ ಸರ್ಕಾರಕ್ಕೂ ರೈತಪ್ರಜೆಗಳಿಗೂ ಎಷ್ಟು ಪ್ರಯೋಜನವಾಗುವುದೆಂಬುದನ್ನು ಮುಂದೆ ತಿಳಿಯಬೇಕಾಗಿದೆ. ಕೀಳುಮಟ್ಟದ ನಾಲೆಗಳ ಕೆಳಗೆ ಷ್ಟೋ ಭೂಮಿಗಳು ರೈತರ ಅಭಾವದಿಂದಲೂ, ಅನಾರೋಗ್ಯದಶೆಯಿಂದಲೂ ಪಾಳುಬಿದ್ದು ಅವುಗಳ ಬೆಲೆಯು ಅತ್ಯಂತವಾಗಿಳಿದುಹೋಗಿರುವುದರಿಂದ, ಮೇಲುಮಟ್ಟದ ನಾಲೆಗಳ ನಿರ್ಮಾಣಕಾರ್ಯಾಲೋಚನಾಕಮಿಟಿಯವರು ಯಾವ ಪ್ರದೇಶದಲ್ಲಿ ನಾಲೆಗಳನ್ನು ಹಾಕಿದರೆ ರೈತರಿಗೆ ವಿಶೇಷ ಪ್ರಯೋಜನವಾಗುತ್ತದೆ, ಮತ್ತು ನಿರಂತರವಾಗಿ ಬೇಸಾಯಗಾರರ ಸಹಾಯ ದೊರೆಯುತ್ತದೆಂಬುದನ್ನು ದೀರ್ಘವಾಗಿ ಪರ್ಯಾಲೋಚಿಸಿ, ಕೂಂಕಣಸುತ್ತಿ ಮೈಲಾರಕ್ಕೆ ಬಂದಂತೆ ಕಾಡುಮೇಡುಗಳನ್ನು ಬಳಸಿ ವೃಥಾ ದ್ರವ್ಯವ್ಯಯಕ್ಕೆ ಆಕರವಾಗದಂತೆ ಸಾಧ್ಯವಾದ ಮಟ್ಟಿಗೆ ಸಮೀಪವಾಗಿಯೂ, ಬಂಡೆಗಳಿಲ್ಲದೆ ಸುಲಭವಾಗಿಯೂ ಇರುವ ಪ್ರದೇಶಗಳನ್ನು ಗೊತ್ತುಮಾಡಿ ಮಿತವಾದ ಸಿಬ್ಬಂದಿಯಿಂದ ನಾಲೆಗಳನ್ನು ಹಾಕಲು ಸೂಚನೆಯನ್ನು ಕೊಡುವವರಾಗಲೆಂದು ಸೂಚಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಅಸಿಸ್ಟೆಂಟ್ ಕಂಟ್ರೋಲರಾದ ಮ|| ಎಂ. ವೀರರಾಜಅರಸ್, ಬಿ.ಎ.,ಬಿ.ಎಲ್., ರವರು ತೆಗೆದುಕೊಂಡಿರುವ ರಜವು ಬರುವ ಆಗಸ್ಟ್ ಕಡೆಯವರೆಗೆ ಹೆಚ್ಚಿಸಲ್ಪಟ್ಟಿದೆ.

ಅಮಲ್ದಾರರುಗಳಾದ ಮ|| ಕೆ ವಿ. ಜಗನ್ನಾಥಾಚಾರರು ಸಿದ್ಲಘಟ್ಟದಿಂದ ತರೀಕೆರೆಗೂ, ರಜದಮೇಲಿರುವ ಮ|| ಎಸ್. ಎಲ್. ಶ್ರೀನಿವಾಸರಾಯರು ಸಿದ್ಲಘಟ್ಟಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ 3-4 ದಿನಗಳಿಂದಲೂ ಆಗಾಗ್ಗೆ ತುಂತುರು ಮಳೆಯಾಗುತ್ತಿದ್ದು ನಿನ್ನೆಯದಿನ ಮಧ್ಯಾಹ್ನ ಗುಡುಗುಸಮೇತವಾಗಿ ಚೆನ್ನಾಗಿ ಮಳೆಯಾಯಿತು ಮತ್ತು ರಾತ್ರಿಯೆಲ್ಲಾ ಹನಿಯುತ್ತಿದ್ದಿತು.

ಮೈಸೂರು ಸಂಪದಭ್ಯುದಯಸಮಾಜದ 16 ನೆಯ ಅಧಿವೇಶನವು ನೆನ್ನೆಯದಿವಸ ದಿವಾನರ ಅಧ್ಯಕ್ಷತೆಯಲ್ಲಿ ಬೆಂಗಳೂರು ಪಬ್ಲಿಕ್‌ಆಫೀಸ್‌ಸಭಾಂಗಣದಲ್ಲಿ ಜರುಗಿ ಕೆಲ ಉಪಯುಕ್ತ ನಿರ್ಧಾರಗಳು ಮಾಡಲ್ಪಟ್ಟವು.

ಕಡೂರು ಡಿ|| ಡೆ|| ಕಮಿಷನರ್ ಮ|| ಜಿ. ಬಿ. ಹೆಬ್ಬಿಕರ್‌ರವರು ಬೇರೆ ಕೆಲಸದಮೇಲಿರುವವರೆಗೆ ಮ|| ಡಿ. ಶ್ರೀನಿವಾಸಯ್ಯಂಗಾರ್‌ರವರು ಅನಿತ್ಯವಾಗಿ ಕಡೂರು ಡಿ|| ಡೆ|| ಕಮಿಷನರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರ ಪ್ರೈವೆಟ್‌ಸೆಕ್ರೆಟರಿಯ ಉದ್ಯೋಗವನ್ನು ಕಳೆದ ತಾ|| 23 ರಲ್ಲಿ ಸರ್ ಚಾರ್ಲ್ಸ್‌ಟಾಡ್ ಹಂಟರ್‌ರವರು ವಹಿಸಿಕೊಂಡರು. ಇವರು ತಿಂಗಳಿಗೆ 2,000 ರೂ. ಸಂಬಳದಮೇಲೆ 1 ವರ್ಷಕಾಲದವರೆಗೆ ನಿಯಮಿಸಲ್ಪಟ್ಟಿರುವುದಾಗಿ ವದಂತಿಯಿದೆ.

ಬೆಂಗಳೂರಿನ ವೈಶ್ಯಮಂಡಲಿಯವರು ತಮ್ಮ ಜನರ ಉಪಯೋಗಾರ್ಥವಾಗಿ 1 ಲಕ್ಷ ರೂ. ಬಂಡವಾಳದಿಂದ ಒಂದು ಬ್ಯಾಂಕನ್ನು ಸ್ಥಾಪಿಸುವವರಾಗಿರುವರಂತೆ. ನಮ್ಮ ರಾಜಧಾನಿಯ ವೈಶ್ಯರೂ ತಮ್ಮ ಬೆಂಗಳೂರ ಬಂಧುಗಳ ಅನುಕರಣ ಮಾಡುವುದು ಕ್ಷೇಮಕರವು.

ಇದೇ ಜುಲೈ ತಾ|| 10 ಕ್ಕೆ ಕಡೆಯಾದ ಒಂದು ವಾರದಲ್ಲಿ ಮೈಸೂರು ರೈಲ್ವೆಗಳಿಂದ ಇದರ ಹಿಂದಣವಾರದಲ್ಲಿ ಉತ್ಪನ್ನವಾಗಿದ್ದುದಕ್ಕಿಂತ 5100 ರೂ. ಕಡಮೆಯಾಗಿ ಅಂದರೆ 68200 ರೂ. ಉತ್ಪನ್ನವಾಗಿರುವುದು; ಕಳೆದ ವರ್ಷ ಇದೇ ಕಾಲದಲ್ಲಿ 60928 ರೂ. ಉತ್ಪನ್ನವಾಗಿದ್ದಿತು.

ಶ್ರೀಮನ್ಮಹಾರಾಜರವರು ತಮ್ಮ ಪ್ರೈವೇಟ್‌ಸೆಕ್ರೆಟರಿಯವರಸಮೇತ ಬೆಂಗಳೂರು ಬಿನ್ನಿಮಿಲ್ಲಿಗೆ ದಯೆಮಾಡಿಸಿ ಅಲ್ಲಿ ನಡೆದ ಗಲಾಟೆಯ ವಿಷಯವನ್ನು ವಿಚಾರಿಸಿಕೊಂಡು ಬಂದರೆಂದು ಮದ್ರಾಸಿನ ನ್ಯೂಇಂಡ್ಯಾಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸುಳ್ಳೆಂದು ಮೈಸೂರು ಪಬ್ಲಿಸಿಟಿ ಆಫೀಸರು ತಿಳಿಸುತ್ತಾರೆ.

ಕೋಲಾರದ ಟ್ರೆಜರೀಆಫೀಸರಾದ ಅಸಿಸ್ಟೆಂಟ್‌ಕಮಿಷನರ್ ಮ|| ಎಂ. ಪಿ. ವಿಶ್ವನಾಥರಾಯರಿಗೆ ಅವರುಪಯೋಗಿಸಿಕೊಳ್ಳುವಾರಭ್ಯ 6 ತಿಂಗಳ ಫರ್ಲೋರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಅಸಿಸ್ಟೆಂಟ್‌ಕಮಿಷನರ್ ಮಿ|| ಸಯದ್ ಅಬ್ದುಲ್ ಖಾಲಕ್‌ರವರು ಕೋಲಾರದ ಟ್ರೆಜರೀಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಶ್ರೀಮದ್ಯುವರಾಣಿಯವರು, ರಾಜಕುಮಾರಿಯವರು ಇನ್ನೂ ಕೆಲ ಸಮೀಪಬಂಧುಗಳೊಡನೆ ಮಹಾಮಾತೃಶ್ರೀಯವರು ಕಳೆದ ಸೋಮವಾರ ಮಧ್ಯಾಹ್ನ 12 ಗಂಟೆಯಲ್ಲಿ ಹೆಜ್ಜುಗಟ್ಟಲೆಯ ರೈಲುಬಂಡಿಯಲ್ಲಿ ಮಂದಗೆರೆಗೆ ಚಿತ್ತೈಸಿದ್ದು ಹೇಮಾವತಿನದಿಯಪ್ರವಾಹವನ್ನು ಪರಾಮರ್ಶಿಸಿ ಪೂಜಾದಿಗಳನ್ನೂ ಭೋಜನವನ್ನೂ ನೆರವೇರಿಸಿಕೊಂಡು ರಾತ್ರಿ 8 ಘಂಟೆಗೆ ರಾಜಧಾನಿಗೆ ದಯೆಮಾಡಿಸಿದರು.

ಚಾಮರಾಜೇಂದ್ರಕೈಗಾರಿಕೆಪಾಠಶಾಲೆಯ ಸೂಪರಿಂಟೆಂಡೆಂಟರಾದ ಮಿ|| ಎಚ್. ಜಿ. ಅಲ್ಡರ್ಸನ್‌ರವರು ಈ ಜುಲೈ ತಾ|| 12 ರಿಂದ 1 ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಅಥವಾ ಬೇರೊಂದು ಅಪ್ಪಣೆಯಾಗುವವರೆಗೆ ಅ|| ಸೂಪರಿಂಟೆಂಡೆಂಟರಾದ ಮ|| ಎಸ್. ರಾಮಸ್ವಾಮಿಯವರು ತಮ್ಮ ಕೆಲಸದೊಡನೆ ಸೂಪರಿಂಟೆಂಡೆಂಟ್ ಕೆಲಸವನ್ನು ನೋಡಿಕೊಳ್ಳುವಂತೆ ಅಪ್ಪಣೆಯಾಗಿದೆ.

ಪ್ರಾಚೀನ ಲಿಪ್ಯನ್ವೇಷಣವಿಚಾರದಲ್ಲಿ ವ್ಯಾಸಂಗಮಾಡಿಬರಲು ಸೀಮೆಗೆ ಸರ್ಕಾರದವರಿಂದ ಕಳುಹಲ್ಪಟ್ಟಿದ್ದ ರಾಜಧಾನಿಯ ಮ|| ಹಟ್ಟಿರಂಗಯ್ಯಂಗಾರರ ಕುಮಾರರಾದ ಮ|| ಎಂ. ಎಚ್. ಕೃಷ್ಣಯ್ಯಂಗಾರ್, ಎಂ.ಎ., ಯವರು ಲಂಡನ್ ವಿಶ್ವವಿದ್ಯಾಲಯದಲ್ಲಿ ಉನ್ನತಪ್ರಶಸ್ತಿಯನ್ನು ಪಡೆದುಕೊಂಡರೆಂದು ತಿಳುಹಲು ಸಂತೋಷವಾಗುತ್ತದೆ. ಇವರು ಬರುವ ತಿಂಗಳಲ್ಲಿ ಸ್ವದೇಶೋನ್ಮುಖರಾಗಿ ತೆರಳುವವರಾಗಿರುವರು.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಕ್ಯಾಪ್ಟನ್ ಸಿ. ಎ. ಶಾಂತ, ಎಂ.ಬಿ., ಎಂ.ಆರ್.ಸಿ.ಪಿ. ಯವರು ಈ ತಾ|| 29 ರಿಂದ 2 ತಿಂಗಳ ಪ್ರಿವಿಲೆಜ್‌ರಜವನ್ನು ತೆಗೆದುಕೊಂಡಿರುವ ಪ್ರಯುಕ್ತ ರಾಜಧಾನಿಯ ಕೃಷ್ಣರಾಜಆಸ್ಪತ್ರೆಯಲ್ಲಿದ್ದ ಅ|| ಸರ್ಜನ್ ಡಾಕ್ಟರ್ ಸಿ. ಕೃಷ್ಣಸ್ವಾಮಿರಾವ್, ಬಿ.ಎ., ಎಂ. ಬಿ.ಸಿ.ಎಂ., ಎಂ. ಆರ್. ಸಿ. ಎಸ್. ಎಂ. ಆರ್. ಸಿ. ಪಿ., ಯವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಒಬ್ಬ ದೊಡ್ಡಮನುಷ್ಯರ ಆಶ್ರಯವನ್ನು ಬಿಟ್ಟು ಬಂದಿದ್ದ ಟಿ. ನರಸೀಪುರಪ್ರಾಂತದ ಒಬ್ಬ ಯುವತಿಯನ್ನು ಬೆಟ್ಟದಕಿಬ್ಬರಿಗೆ ಕರೆದುಕೊಂಡು ಹೋಗಿ ಅವಳ ಮೈಮೇಲಿದ್ದ ನಗಗಳನ್ನು ಕಸುಕೊಂಡು ಮಾನಭಂಗವನ್ನು ಮಾಡಿದ ಅಪರಾಧಕ್ಕಾಗಿ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಪೊಲೀಸ್ ಕಾನೆಸ್ಟಬಲ್ ರಾಮಸಿಂಗ್ ಎಂಬುವವನಿಗೆ 2 ವರ್ಷ ಕಠಿಣಕಾರಾಗೃಹವಾಗಶಿಕ್ಷೆಯು ವಿಧಿಸಲ್ಪಟ್ಟಿತು.

ನಂಜನಗೂಡಿನಿಂದ ಚಾಮರಾಜನಗರಕ್ಕೆ ಹಾಕಲ್ಪಟ್ಟಿರುವ ರೈಲುಮಾರ್ಗವನ್ನು ಕಳೆದ 27 ರಲ್ಲಿ ಭರತಖಂಡದ ರೈಲ್ವೆಗಳ ಇನ್ಸ್‌ಪೆಕ್ಟರ್‌ರವರು ಪರೀಕ್ಷಿಸಿ ಮಾರ್ಗವು ಸಮರ್ಪಕವಾಗಿರುವುದೆಂದೂ, ಘಂಟೆಯೊಂದಕ್ಕೆ 25 ಮೈಲಿಯ ವೇಗದಿಂದ ರೈಲುಬಂಡಿಯನ್ನು ಬಿಡಬಹುದೆಂದೂ ಅಭಿಪ್ರಾಯಪಟ್ಟಿರುವುದಾಗಿಯೂ, ಈ ರೈಲುಬಂಡಿಯ ಆರಂಭೋತ್ಸವವು ಬರುವ ಆಗಸ್ಟ್ ತಾ|| 27 ರಲ್ಲಿ ಶ್ರೀಮನ್ಮಹಾರಾಜರವರಿಂದ ನಡಿಸಲ್ಪಡುವುದಾಗಿಯೂ ತಿಳಿಯಬರುತ್ತದೆ.

3-4 ದಿನಗಳ ಹಿಂದೆ ಮಹಾರಾಣಿಯವರ ಸ್ವಾರಿಯು ಮ|| ಎಂ. ಎಲ್. ವರ್ಧಮಾನಯ್ಯ ಕಂಪೆನಿಯವರಿಂದ ನಡಿಸಲ್ಪಡುತ್ತಿರುವ ಎಸ್‌ವೂಲ್ ಕಾರ್ಯಾಲಯಕ್ಕೆ ಚಿತ್ತೈಸಿದ್ದು ಅಲ್ಲಿಯ ಕಾರ್ಯಕಲಾಪಗಳನ್ನು ಪರಾಮರ್ಶಿಸಿಕೊಂಡು ಬಂದುದಾಗಿಯೂ, ಇಷ್ಟರಲ್ಲೇ ಕೃಷ್ಣರಾಜಮಿಲ್ಲಿಗೂ ದಯೆಮಾಡಿಸಿ ಪರಾಮರ್ಶಿಸಿಕೊಂಡು ಬರುವುದಾಗಿಯೂ ಕೇಳುತ್ತೇವೆ. ಹೀಗೆ ದೊಡ್ಡವರು ಆಗಾಗ್ಗೆ ದಯೆಮಾಡಿಸುತ್ತಿದ್ದಲ್ಲಿ ಕಂಪೆನಿಯವರಿಗೆ ಉತ್ತೇಜನವುಂಟಾಗುತ್ತದೆ.

ರೆವಿನ್ಯೂಕಮಿಷನರ್ ಮ|| ಸಿ. ಎಸ್. ಬಾಲಸುಂದರಂ ಅಯ್ಯರ್‌ರವರು ಈ ಜುಲೈ ತಾ|| 27 ರಿಂದ 1 ತಿಂಗಳವರೆಗೆ ಬೇರೆ ಕೆಲಸದಮೇಲೆ ನಿಯಮಿಸಲ್ಪಟ್ಟಿರುವ ಪ್ರಯುಕ್ತ ಅಫಿಷಿಯೇಟಿಂಗ್ ಎಕ್ಸೈಸ್‌ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರು ಅಫಿಷಿಯೇಟಿಂಗ್ ರೆವಿನ್ಯೂಕಮಿಷನರಾಗಿಯೂ, ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಅಫಿಷಿಯೇಟಿಂಗ್ ಡೈರೆಕ್ಟರಾದ ಮಿ|| ಜಹಿರುದ್ದೀನ್‌ಮೆಕ್ಕೆಯವರು ತಮ್ಮ ಕೆಲಸದೊಡನೆ ಅಫಿಷಿಯೇಟಿಂಗ್ ಎಕ್ಸೈಸ್‌ಕಮಿಷನರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರಲ್ಲಿ ಬಿನ್ನಿ ಕಂಪೆನಿಯವರಿಂದ ನಡಿಸಲ್ಪಡುತ್ತಿರುವ ಮಿಸರ್ಮಿಲ್ಲಿನ 800-900 ಕೂಲಿಯವರು ಬೋನಸ್ಸನ್ನು ಕೊಡಬೇಕೆಂದೂ, ಕೂಲಿಯನ್ನು ಹೆಚ್ಚಿಸಿಕೊಡಬೇಕೆಂದೂ ಕೇಳಿ, ಕಂಪೆನಿಗೆ ಕಳೆದವರ್ಷ ನಷ್ಟವಾದುದರಿಂದ ಸದ್ಯದಲ್ಲಿ ಕೊಡಲಾಗುವುದಿಲ್ಲವೆಂದು ಅಧಿಕಾರಿಗಳು ಹೇಳಲಾಗಿ ಕೆಲಸಗಾರರೆಲ್ಲರೂ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದು ನಿಂತುಬಿಟ್ಟಿದ್ದರಲ್ಲದೆ ಗಲಭೆಮಾಡುವ ಸಂಭವವಿದ್ದಿತು. ಅಷ್ಟರಲ್ಲಿ ದಿವಾನರು ಮೊದಲಾಗಿ ಅಧಿಕಾರಿಗಳು ಹೋಗಿ ಸಮಾಧಾನಪಡಿಸಿದುದರಮೇಲೆ ಕೂಲಿಕಾರರು ಈಗ ಕೆಲಸಕ್ಕೆ ಹೋಗುತ್ತಿರುವುದಾಗಿ ತಿಳಿಯಬಂದಿದೆ.

ನಮ್ಮ ಮೈಸೂರುಸೀಮೆಯ ಕಾರಾಗೃಹಬಂಧನದಿಂದ ಬಿಡಲ್ಪಟ್ಟವರು ಸ್ವಸ್ಥಳಕ್ಕೆ ಹೋಗುವಾಗ್ಗೆ ದಾರಿಯ ವೆಚ್ಚಕ್ಕಾಗಿ ಅವರ ಪ್ರಯಾಣವು ಒಂದುದಿವಸದೊಳಗಿದ್ದರೆ ದಿನ 1 ಕ್ಕೆ 4 ಆಣೆಯಂತೆಯೂ, ದೂರವಾಗಿದ್ದರೆ ದಿನ 1 ಕ್ಕೆ 6 ಆಣೆಯೆಂತೆಯೂ ಕೊಡಲ್ಪಡತಕ್ಕದೆಂದು ಸರ್ಕಾರದಪ್ಪಣೆಯಾಗಿದೆ. ಆದರೆ ದಾರೀಪ್ರಯಾಣವು 5 ಮೈಲಿಗೂ, ಬಂಡಿಯಪ್ರಯಾಣವು 3 ಘಂಟೆಗೂ ಕಡಮೆಯಾಗಿರಕೂಡದು. ಹೀಗೆ ದಾರಿಯ ವೆಚ್ಚವು ಕೊಡಲ್ಪಡುವುದಕ್ಕಾಗಿ ಕೋರ್ಟಿನವರು ಅಪರಾಧಿಗೆ ಶಿಕ್ಷೆಯನ್ನು ವಿಧಿಸುವಾಗ್ಗೆ ಅವನ ವಾಸಸ್ಥಳದ ಹೆಸರನ್ನು ಮತ್ತು ಅದು ರೈಲ್ವೆಸ್ಟೇಷನ್ನಿಗೆಷ್ಟು ದೂರವಿರುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಸೂಚಿಸಲ್ಪಟ್ಟಿರುತ್ತದೆ.

ಕಳೆದವಾರ ನಂಜನಗೂಡು ಮಾರ್ಗವಾಗಿ ಬರುತ್ತಿದ್ದ ಒಬ್ಬ ಐರೋಪ್ಯನ ಮೋಟಾರುಬಂಡಿಯ ಹಿಂಗಡೆ ಸಾಮಾನಿಡುವುದಕ್ಕಾಗಿ ಸರಪಳಿ ಕಟ್ಟಿರುವ ಸ್ಥಳದಲ್ಲಿ 8-9 ವರ್ಷವಯಸ್ಸಿನ ಒಬ್ಬ ಹಿಂದುಹುಡುಗನು ಹೇಗೋ ಕುಳಿತುಕೊಂಡು ಎರಡು ಕೈಗಳಲ್ಲೂ ಎರಡು ಸರಪಳಿಗಳನ್ನು ಭದ್ರವಾಗಿ ಹಿಡಿದುಕೊಂಡು ಮೋಟಾರುಬರುವ ವೇಗಕ್ಕೆ ದಿಗ್ಭ್ರಾಂತನಾಗಿದ್ದುದನ್ನು ಮೋಟಾರುಬಂಡಿಯು ರಾಜಧಾನಿಯ ದೊಡ್ಡಗಡಿಯಾರದ ಚೌಕದಲ್ಲಿ ಹೋಗುತ್ತಿರುವಾಗ್ಗೆ ಪೊಲೀಸಿನವನು ಕಂಡು ಕೂಗಿ ಬಂಡಿಯನ್ನು ನಿಲ್ಲಿಸಿ ಹುಡುಗನನ್ನು ಕೆಳಕ್ಕಿಳಿಸಿಕೊಂಡು ಪೊಲೀಸುಠಾಣಕ್ಕೆ ಕರೆದುಕೊಂಡುಹೋದನೆಂದೂ, ಅಲ್ಲಿ ಆ ಹುಡುಗನು ನಂಜನಗೂಡಿನವನೆಂಬುದನ್ನು ಅವನಿಂದ ತಿಳಿದುಕೊಂಡು ರೈಲುಬಂಡಿಯಲ್ಲಿ ನಂಜನಗೂಡಿಗೆ ಅವನನ್ನು ಕಳುಹಿಸಿಕೊಟ್ಟರೆಂದೂ ತಿಳಿಯಬಂದಿದೆ.

1926 ನೇ ಅಕ್ಟೋಬರ್ ತಾ|| 18 ರಲ್ಲಿ ಪ್ರಾರಂಭವಾಗುವ ಪ್ರಜಾಪ್ರತಿನಿಧಿಸಭಾಧಿವೇಶನದಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳ, ಕೇಳಬೇಕಾದ ಪ್ರಶ್ನೆಗಳ ಮತ್ತು ರೆಜ್ಯುಲೇಷನ್ನುಗಳ ಪಟ್ಟಿಗಳು ಬರುವ ಆಗಸ್ಟ್ ತಾ|| 24 ರೊಳಗೆ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರುಗಳಲ್ಲಿಗೆ ಆಯಾ ಡಿ|| ನ ಮೆಂಬರುಗಳಿಂದ ಕಳುಹಲ್ಪಡಬೇಕೆಂದೂ, ಬರುವ ಸೆಪ್ಟಂಬರ್ ತಾ|| 6 ರಲ್ಲಿ ಅಥವಾ ಅದಕ್ಕೆ ಮೊದಲು ಆಯಾ ಡಿ|| ನ ಡೆ|| ಕಮಿಷನರುಗಳು ತಂತಮ್ಮ ಡಿ|| ಮೆಂಬರುಗಳನ್ನು ಬರಮಾಡಿಕೊಂಡು ಮೀಟಿಂಗನ್ನು ಮಾಡಿ ಚರ್ಚಿಸಲ್ಪಡಲು, ಪ್ರಶ್ನೆ ಕೇಳಲ್ಪಡಲು ಮತ್ತು ರೆಜ್ಯುಲೇಷನ್ ಮಾಡಲ್ಪಡಲು ಯೋಗ್ಯವಾದ ವಿಷಯಗಳನ್ನು ಗೊತ್ತುಮಾಡಿ ಅವುಗಳ ಪ್ರತಿಯೊಂದನ್ನು ಸೆಪ್ಟಂಬರ್ ತಾ|| 13 ರ ರೊಳಗೆ ರೆಪ್ರೆಜೆಂಟೇಟಿವ್ ಅಸೆಂಬ್ಲಿಯ ಸೆಕ್ರೆಟರಿಯವರಲ್ಲಿಗೆ ಕಳುಹಿಸಬೇಕೆಂದೂ ಪ್ರಕಟವಾಗಿದೆ.

ಅರಮನೆಯ ಸಂಗೀತವಿದ್ವಾಂಸರುಗಳಲ್ಲಿ ಅಗ್ರಗಣ್ಯರಾಗಿದ್ದ ವೈಣಿಕಶಿಖಾಮಣಿ ಶೇಷಣ್ಣನವರು ವೃದ್ಧಾಪ್ಯದಶೆಯಿಂದ ಒಂದುವರ್ಷಾರಭ್ಯ ಅಸ್ವಸ್ಥರಾಗಿದ್ದು ಕಳೆದ ಭಾನುವಾರ ವೈಕುಂಠವಾಸಿಗಳಾದರೆಂದು ತಿಳುಹಲು ಅತ್ಯಂತಖೇದವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ 74 ವರ್ಷವಯಸ್ಸಾಗಿದ್ದಿತು, ಮತ್ತು ವೃದ್ಧಭಾರ್ಯೆಯೂ, ದತ್ತಪುತ್ರನೂ ಇರುವರು. ಇವರು ವೀಣಾವಾದನದಲ್ಲಿ ಅದ್ವಿತೀಯರಾಗಿದ್ದು ನಮ್ಮ ಶ್ರೀಮನ್ಮಹಾರಾಜರವರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ವೈಣಿಕಶಿಖಾಮಣಿ ಎಂಬ ಅನ್ವರ್ಥಪ್ರಶಸ್ತಿಯನ್ನು ಪಡೆದಿದ್ದುದಲ್ಲದೆ, ಬರೋಡಾ ಮೊದಲಾದ ಸಂಸ್ಥಾನಾಧೀಶ್ವರರುಗಳಿಂದಲೂ, ವಿದ್ವಾಂಸರುಗಳಿಂದಲೂ ಬಹುಮಾನವನ್ನು ಹೊಂದಿದ್ದರು. ಈ ವೀಣಾವಾದನವಿದ್ಯೆಯು ಇತರ ವಿದ್ಯೆಗಳಂತೆ ಸುಲಭವಾಗಿರದೆ ಅದರ ಅಧಿದೇವತೆಯಾದ ಶ್ರೀಶಾರದೆಯ ಪೂರ್ಣಾನುಗ್ರಹದಿಂದ ಲಭ್ಯವಾಗತಕ್ಕುದಾಗಿದೆ. ಇಂತಹ ಅದ್ವಿತೀಯ ವೈಣಿಕಶಿಖಾಮಣಿಯನ್ನು ಕಳೆದುಕೊಂಡುದು ನಮ್ಮ ಸೀಮೆಯ ದೌರ್ಭಾಗ್ಯವೇ ಸರಿ.

ಶ್ರೀಜಯಚಾಮರಾಜಒಡೆಯರ್‌ಬಹದ್ದೂರ್‌ರವರ 7 ನೆಯ ವರ್ಷದ ವರ್ಧಂತ್ಯುತ್ಸವಸಂಬಂಧವಾಗಿ ನೆನ್ನೆಯ ಪ್ರಾತಃಕಾಲ ಅಭ್ಯಂಜನಸ್ನಾನಾನಂತರ ರಾಜಬಂಧುವರ್ಗದವರಿಂದಲೂ, ಅರಮನೆಯ ಅಧಿಕಾರಿಗಳಿಂದಲೂ ಕೂಡಿದ ದರ್ಬಾರೂ ಮಧ್ಯಾಹ್ನ ಸ್ವಬಂಧುವರ್ಗಕ್ಕೆ ಸುಖಭೋಜನವೂ ನಡೆದು ಸಾಯಂಕಾಲ ಸಕಲ ರಾಜಮರ್ಯಾದೆಯೊಡನೆ ಅಶ್ವಾರೋಹಣೋತ್ಸವವು ಕೋಟೆಯೊಳಗೆ ಅತಿವೈಭವದಿಂದ ನಡೆದಿತು. ಮಳೆಯುಸುರಿಯುತ್ತಿದ್ದಿತಾದರೂ ಪ್ರೇಕ್ಷಕರಸಮೂಹವು ಹೆಚ್ಚಾಗಿ ಸೇರಿದ್ದಿತು. ಬೆಂಗಳೂರಿಗೆ ದಯೆಮಾಡಿಸಿದ್ದ ಶ್ರೀಮನ್ಮಹಾರಾಜರವರಸ್ವಾರಿಯು ಈ ವರ್ಧಂತ್ಯುತ್ಸವಕ್ಕಾಗಿ ಗುರುವಾರರಾತ್ರಿ 9½ ಗಂಟೆಯಸಮಯದಲ್ಲಿ ಚಿತ್ತೈಸಿತು. ಶ್ರೀ ವಿಜಯಲಕ್ಷ್ಮಮ್ಮಣ್ಣಿಯವರು ಕೋಟು ಪೇಟ ಮೊದಲಾಗಿ ಪುರುಷ ಉಡುಪುಧಾರಣೆಯಿಂದ ಅಶ್ವಾರೂಢರಾಗಿ ಅಣ್ಣಂದಿರಾದ ಶ್ರೀಜಯಚಾಮರಾಜರೊಡನೆ ದಯೆಮಾಡಿಸಿದ್ದುದು ಈಸಲದ ಉತ್ಸವದಲ್ಲಿ ವಿಶೇಷವಾಗಿದ್ದಿತಲ್ಲದೆ ಪ್ರೇಕ್ಷಕರಿಗೆ ಪರಮಾನಂದವನ್ನುಂಟುಮಾಡಿದ್ದಿತು. ನಮ್ಮ ಸಂಸ್ಥಾನದ ರಾಜಕುಲದೀಪಕರಾದ ಶ್ರೀಜಯಚಾಮರಾಜಒಡೆಯರ ವರ್ಧಂತ್ಯುತ್ಸವಗಳು ಅನಂತಾನಂತವಾಗಿ ನಡೆಯುತ್ತಿರಲೆಂದು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ಮೆಕ್ಸಿಕೋಪಟ್ಟಣದ ಮೇಯರ್ ಅಂದರೆ ಮುಖಂಡನು ಒಬ್ಬ ಸನ್ಯಾಸಿಯನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದನೆಂದು ಜನರು ರೇಗಿ ಅವನನ್ನು ಕಲ್ಲಿನಿಂದ ಹೊಡೆದು ಸಾಯಿಸಿ ಅವನ ಮನೆಯವರನ್ನೆಲ್ಲಾ ಕೊಂದುಹಾಕಿದರು.

ಈಜಿಪ್ಟಿನಲ್ಲಿ ಮಂತ್ರಿಮಂಡಲದವರು ಸಭೆಗೂಡಿ ಚರ್ಚಿಸುತ್ತಿರುವಾಗ್ಗೆ, ಎಲ್ಲಿಂದಲೋ ಒಂದು ಗೂಬೆಯು ಸಭಾಮಂದಿರದೊಳಕ್ಕೆ ಹಾರಿಬಂದು ಕುಳಿತುಕೊಂಡಿತು. ಅದು ಅಶುಭಸೂಚಕವಾದುದರಿಂದ ಸಭೆಯು ನಿಲ್ಲಿಸಲ್ಪಟ್ಟು ಗೂಬೆಯು ಹೊರಗೋಡಿಸಲ್ಪಡಲು ಪ್ರಯತ್ನಿಸಲ್ಪಟ್ಟಿತು.

ಕಾಮರೂಪಡಿಸ್ಟ್ರಿಕ್ಟಿಗೆ ಸೇರಿದ ಸಾರಸರ್ಕಜ ಎಂಬ ಗ್ರಾಮದಲ್ಲಿ ಒಬ್ಬ ಸ್ತ್ರೀಯು ದೀರ್ಘರೋಗಿಗಳಾಗಿ ನರಳುತ್ತಿದ್ದ ತನ್ನ ಎರಡು ಮಕ್ಕಳನ್ನು ನೋಡಿ ಸಹಿಸಲಾರದೆ ಅವನ್ನು ಕೊಂದುಹಾಕಿ ತಾನು ಆತ್ಮಹತ್ಯೆಯನ್ನು ಮಾಡಿಕೊಳ್ಳಲೆತ್ನಿಸುತ್ತಿರುವಾಗ್ಗೆ ನೆರೆಯವರು ತಿಳಿದು ಆಕೆಯ ಕೃತ್ಯವನ್ನು ನಿಲ್ಲಿಸಿ ಅವಳನ್ನು ಪೊಲೀಸರ ವಶಮಾಡಿದರು.

ನಭೋಮಂಡಲದಲ್ಲಿ ಎಷ್ಟು ಮೇಲಕ್ಕೆ ಹೋದರೆ ಅಷ್ಟು ವಾಯು ಕಡಿಮೆಯಾಗುವುದರಿಂದ ಆಕಾಶಯಾನಗಳು ವಾಯುಪ್ರತಿಬಂಧಕವಿಲ್ಲದೆ ಘಂಟೆಯೊಂದಕ್ಕೆ 1000 ಮೈಲಿ ವೇಗದಿಂದ ಸಂಚರಿಸಬಹುದೆಂದೂ, ಇನ್ನು 25 ವರ್ಷಗಳ ಕಾಲದಲ್ಲಿ ಈ ಸಂಚಾರಕ್ಕನುಗುಣವಾಗಿ ಯಾನಗಳನ್ನು ನಿರ್ಮಿಸಲಾಗುವುದೆಂದೂ, ಆಗ ಲಂಡನ್ ನಗರದಿಂದ 4000 ಮೈಲಿ ದೂರದಲ್ಲಿರುವ ನ್ಯೂಯಾರ್ಕ್ ಪಟ್ಟಣಕ್ಕೆ 4 ಘಂಟೆಯಲ್ಲಿ ಪ್ರಯಾಣಮಾಡಬಹುದೆಂದೂ ಒಬ್ಬ ವೈಮಾನಿಕ ಶಿಲ್ಪಿಯು ಬರೆಯುತ್ತಾನೆ.

ನ್ಯೂಯಾರ್ಕ್‌ಪಟ್ಟಣದಲ್ಲಿ ಚಾರ್ಲ್ಸ್‌ಸೀನಿಯರ್ ಎಂಬಾತನು ಮನುಷ್ಯರ ತಲೆಗೂದಲುಗಳನ್ನು ಎಣಿಸುವ ಮತ್ತು ಅವುಗಳ ಬೆಳವಣಿಗೆಯನ್ನು ಗೊತ್ತುಮಾಡುವ ಒಂದು ಅತ್ಯಂತ ಸೂಕ್ಷ್ಮವಾದ ಯಂತ್ರವನ್ನು ನಿರ್ಮಿಸಿರುತ್ತಾನೆ. ಈ ಯಂತ್ರಪರೀಕ್ಷೆಯಿಂದ ಒರಟಾದ ತಲೆಯಬುರುಡೆಯಲ್ಲಿ ಅತ್ಯಂತ ಒರಟಾದ ಕೂದಲುಗಳು 1,00,000 ವರೆಗೆ ಇರುವುವೆಂದೂ ಬಹಳ ಮೃದುವಾಗಿ ಬೆಳೆಯುವ ಕೂದಲುಗಳು 2½ ಲಕ್ಷದವರೆಗಿರುವುವೆಂದೂ, ಒಂದು ತಿಂಗಳಿನಲ್ಲಿ ½ ಅಂಗುಲದವರೆಗೆ ಕೂದಲು ಬೆಳೆಯುವುದೆಂದೂ ಗೊತ್ತುಮಾಡಲ್ಪಟ್ಟಿದೆ.

ರಷ್ಯಾ ಚಕ್ರವರ್ತಿಯು ಯೂರೋಪಿನಲ್ಲಿ ಮಹಾಯುದ್ಧವು ಪ್ರಾರಂಭವಾದಾಗ ತನ್ನ ಅಪಾರವಾದ ಐಶ್ವರ್ಯವನ್ನು ಲಂಡನ್ ಬ್ಯಾಂಕಿನಲ್ಲಿಟ್ಟಿದ್ದನೆಂದೂ, ರಷ್ಯಾದಲ್ಲುಂಟಾದ ಕ್ಷಾಮದ ದೆಸೆಯಿಂದ ಆಗಾಗ್ಗೆ ತೆಗೆದುಕೊಳ್ಳಲ್ಪಟ್ಟ ಹಣವು ಹೋಗಲಾಗಿ ಈಗ 15,60,00,000 ರೂಪಾಯಿಯೂ ಅದರ ಮೇಲಿನ ಬಡ್ಡಿಯೂ ಶೇಖರವಾಗಿರುತ್ತದೆಂದು ಜಾರಿನಸಮಿಪವರ್ತಿಯಾಗಿದ್ದವನೊಬ್ಬನು ಕೆಲ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾನೆ. ಈ ಐಶ್ವರ್ಯದ ವಿಲೆಯನ್ನು ಮಾಡಲು ಜಾರ್ಜ್‌ಚಕ್ರವರ್ತಿಯವರೂ, ಪದಭ್ರಷ್ಟನಾದ ಮ್ಯಾನುಯಲ್‌ದೊರೆಯೂ ಬಾಧ್ಯರಾಗಿರುತ್ತಾರಾದರೂ ಜಾರು ಸತ್ತುಹೋಗಿರುವನೆಂಬುದು ನಿರ್ಧರವಾಗಿಲ್ಲವಾದುದರಿಂದ ವಿಲೆಮಾಡಲು ಯತ್ನವಿಲ್ಲವಾಗಿದೆಯಂತೆ.

ಕಪಿಗಳ ಶರೀರದಲ್ಲಿರುವ ಗ್ರಂಥಿಗಳಿಂದ ರಸವನ್ನು ತೆಗೆದು ವೃದ್ಧರ ರಕ್ತನಾಳದಲ್ಲಿ ಸೇರಿಸಿದರೆ ವೃದ್ಧರು ಹರೆಯದವರಾಗುತ್ತಾರೆಂದು ಕೆಲ ಡಾಕ್ಟರುಗಳು ವಿಷಯಾಭಿಲಾಷಿಗಳಾದ ವೃದ್ಧರಿಗೆ ಹುಚ್ಚುಹಿಡಿಸಿ ಅವರಿಂದ ದ್ರವ್ಯಾರ್ಜನೆಯನ್ನು ಮಾಡುತ್ತಿರುವುದೂ, ನಿರುಪಾಧಿಕ ಪ್ರಾಣಿಗಳಾದ ಕಪಿಗಳನ್ನು ಮಾನವರ ಕ್ಷಣಿಕಪ್ರಯೋಜನಕ್ಕಾಗಿ ಕೊಲ್ಲುವುದೂ ಕೊಲ್ಲಿಸುವುದೂ ಮಹಾಪಾತಕವೆಂದೂ ಹೇಳಲ್ಪಡುತ್ತಿದೆಯಷ್ಟೆ. ಈಗ ಕಪಿಗಳ ಗ್ರಂಥಿಗಳಲ್ಲಿ ದೊರೆಯುವ ಕಾಮೋದ್ರೇಕರಸವು ರಸಾಯನಶಾಸ್ತ್ರರೀತ್ಯಾ ಪದಾರ್ಥಗಳ ಸಂಯೋಜನದಿಂದ ಉತ್ಪನ್ನಮಾಡಬಹುದೆಂದು ಕೆಲ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದು ಸಾಧ್ಯವಾದಲ್ಲಿ ಕಪಿಯಪಡೆಯು ಮನುಷ್ಯರಿಗೆ ಕೃತಜ್ಞವಾಗಿರುವುದು.

ಇಂಗ್ಲೆಂಡಿನಲ್ಲಿ ವಾರವೊಂದಕ್ಕೆ 20 ರೂ. ಗಳನ್ನು ಸಂಪಾದಿಸುವ 19 ವರ್ಷವಯಸ್ಸಿನ ಒಬ್ಬ ಯುವಕನು ಸಮವಯಸ್ಕಳಾದ ಯುವತಿಯನ್ನು ವರಿಸಿ ವಿವಾಹಮಾಡಿಕೊಳ್ಳಲು ಆಕೆಯ ತಂದೆತಾಯಿಗಳನ್ನು ಒಡಂಬಡಿಸಿದ್ದನು. ಆದರೆ ಸಂಸಾರನಿರ್ವಾಹಮಾಡುವಷ್ಟು ವಯಸ್ಸು ಅವನಿಗಿನ್ನೂ ಆಗಿಲ್ಲವಾದುದರಿಂದಲೂ, ಅತ್ತೆಮಾವಂದಿರ ಮನೆಯಲ್ಲಿ ಅವನು ವಾಸಮಾಡುವುದು ಯೋಗ್ಯವಲ್ಲವೆಂದೂ ಅವನ ತಂದೆತಾಯಿಗಳು ಅನುಜ್ಞೆಯನ್ನು ಕೊಡಲಿಲ್ಲವಾಗಿ ಮಗನು ಕೋಪಿಸಿಕೊಂಡು ತಂದೆಯಮೇಲೆ ಕ್ರಿಮಿನಲ್ ಕೋರ್ಟಿನಲ್ಲಿ ವಿವಾದಮಾಡಿದನು. ಆದರೆ ಮ್ಯಾಜಿಸ್ಟ್ರೇಟು ತಂದೆತಾಯಿಗಳ ಅಧೀನದಲ್ಲಿ ಅಪರಾಧಿಯು ಇನ್ನೂ ಕೆಲಕಾಲ ಇರಬೇಕೆಂದು ಆಜ್ಞೆಮಾಡಿದನು.

ಬೊಂಬಾಯಿನಗರದಲ್ಲಿ ರೋಗದಿಂದ ನರಳುವ ಜಂತುಗಳನ್ನು ಕೊಲ್ಲಲು ಪೊಲೀಸಿನವರಿಗೆ ಅಧಿಕಾರವಿರುತ್ತದೆ. ಹೀಗೆ ರೋಗಿಷ್ಠ ಜಂತುಗಳನ್ನು ಕೊಲ್ಲುವುದು ಭೂತದಯೆಯೆಂದು ಪಾಶ್ಚಾತ್ಯರು ಅಭಿಪ್ರಾಯಪಡುವರು. ಆದರೆ ಅದು ಹಿಂದುಗಳಿಗೆ ಅಹಿಂಸಾಧರ್ಮವಿರೋಧವಾಗಿದೆ. ಅದುಕಾರಣ ಬೊಂಬಾಯಿನ ನ್ಯಾಯವಿಧಾಯಕಸಭೆಯ ಅನಧಿಕಾರಿ ಹಿಂದುಸಭಾಸ್ತರರು ರೋಗಿಷ್ಠ ಜಂತುಗಳನ್ನು ಕೊಲ್ಲುವುದು ಭೂತದಯೆಯಲ್ಲವೆಂದೂ, ರೋಗಿಷ್ಠರಾದ ಮನುಷ್ಯರನ್ನು ಕೊಲ್ಲದೆ ಆಸ್ಪತ್ರೆಯಲ್ಲಿಟ್ಟು ಪೋಷಿಸುವಂತೆ ಪ್ರಭುತ್ವದವರು ಜಂತುಶಾಲೆಗಳನ್ನೇರ್ಪಡಿಸಿ ಅವುಗಳಲ್ಲಿ ಅಂತಹ ಜಂತುಗಳನ್ನು ಕಾಪಾಡುವಂತೇರ್ಪಡಿಸಬೇಕೆಂದೂ ವಾದಿಸಿದರು. ಅದರಮೇಲೆ ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ತಕ್ಕ ಸೂಚನೆಯನ್ನು ಕೊಡಲು ಒಂದು ಸೆಲೆಕ್ಟ್‌ಕಮಿಟಿಯನ್ನೇರ್ಪಡಿಸಲಾಗುತ್ತದೆಂದು ಪ್ರಭುತ್ವಪಕ್ಷದ ಮೆಂಬರುತ್ತರವನ್ನು ಕೊಟ್ಟರು.

ಪ್ರಸಿದ್ಧಪತ್ರಿಕೆ.

ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರ್ ಸಾಹೇಬರವರು ನಾಗಮಂಗಲದ ತಾಲ್ಲೂಕಿನಲ್ಲಿರುವ ಶ್ರೀ ಆದಿಚುಂಚನಗಿರಿ ಮಠಕ್ಕೆ ಸೇರಿದ ಸಮಸ್ತ ಶಿಷ್ಯಮಂಡಲಿಗೆ ಈ ಮೂಲಕ ಪ್ರಸಿದ್ಧಪಡಿಸುವದೇನಂದರೆ—

ಶ್ರೀ ಆದಿಚುಂಚನಗಿರಿಮಠಕ್ಕೆ ಇನ್ನೂ ಯಾರನ್ನೂ ಗುರುಗಳನ್ನಾಗಿ ಮೈಸೂರು ಸರ್ಕಾರದವರು ಮೊಕರೂರು ಮಾಡಿಲ್ಲವಾದರೂ ಯಾರೋ ಕೆಲವು ಕಪಟಿಗಳು ಮೋಸದಿಂದ ಶ್ರೀಮಠಕ್ಕೆ ಸಲ್ಲತಕ್ಕ ಕಪ್ಪಕಾಣಿಕೆಗಳನ್ನು ಗ್ರಾಮಾಂತರಗಳಲ್ಲಿರುವ ಶಿಷ್ಯರುಗಳಿಂದ ವಸೂಲ್ಮಾಡುತ್ತಾ ಇರುವ ಸಂಗತಿ ನನ್ನ ಗೋಚರಕ್ಕೆ ಬಂದಿರುತ್ತೆಯಾಗಿ, ಅಂಥಾವರಿಗೆ ಈ ಕಪ್ಪಕಾಣಿಕೆಗಳನ್ನು ಕೊಟ್ಟು ಮೋಸಹೋಗದಂತೆ ಈ ಮೂಲಕ ತಿಳಿಯಪಡಿಸಿಧೆ. ಆದರೆ ಇನ್ನೊಬ್ಬ ಗುರುಗಳು ಮೊಕರೂರಾಗುವವರಿಗೆ ಕಪ್ಪಕಾಣಿಕೆಗಳನ್ನೇನಾದರೂ ಸಲ್ಲಿಸಬೇಕಾದವರು ಅಂಥಾ ಕಪ್ಪಕಾಣಿಕೆಗಳನ್ನು ನಾಗಮಂಗಲದ ತಾಲ್ಲೂಕು ಅಮಲ್ದಾರರಿಂದ ಲಿಖಿತಮೂಲಕವಾಗಿ ಅಧಿಕಾರವನ್ನು ಹೊಂದಿರುವ ಶ್ರೀಮಠದ ಕಮಿಟಿಮೆಂಬರರ ವಶಕ್ಕೆ ಪಾವತೀ ಮಾಡಿ ರಶೀತಿ ಪಡೆಯಬಹುದು.

A. V. RAMANATHAN,
Deputy Commissioner,
Mysore District.

ತಾ|| 29-7-26.

ಪ್ರಸಿದ್ಧಪತ್ರಿಕೆ.

1926 ನೇ ಇಸವಿ ಜುಲೈ ತಿಂಗಳು 20 ನೇ ತಾರೀಖು ಮಂಗಳವಾರ ದಿವಸ ಬೆಂಗಳೂರಿನಲ್ಲಿರುವ "ದಿ ಬ್ಯಾಂಗಲೂರು ಸಿಲ್ಕ್ ಉಲನ್ ಅಂಡ್ ಕಾಟನ್ ಮಿಲ್ಸ್" ಎಂಬ ಹೆಸರಿನ ಬಟ್ಟೆಯ ಕಾರ್ಖಾನೆಯಲ್ಲಿ ದೊಂಬಿಯು ನಡಿಯಿತಷ್ಟೆ. ಈ ವಿಚಾರವಾಗಿ ವರ್ತಮಾನಪತ್ರಿಕೆಗಳಲ್ಲಿ ಲೇಖನಗಳು ಪ್ರಕಟಿಸಲ್ಪಟ್ಟವೆ. ಇವುಗಳು ಪರಸ್ಪರ ಭಿನ್ನಾಭಿಪ್ರಾಯದಿಂದ ಕೂಡಿರುತ್ತವೆ. ಕೆಲವು ಲೇಖನಗಳಲ್ಲಿ ಪ್ರಕಟಿಸಲ್ಪಟ್ಟಿರುವ ಸಂಗತಿಗಳಂತು ಖಂಡಿತವಾಗಿಯೂ ವಾಸ್ತವವಾದುವಲ್ಲ. ದೊಂಬಿಯು ನಡೆದ ಕೂಡಲೆ ಪೂರ್ಟಾಗಿ ತನಿಖೆಗಳನ್ನು ನಡೆಸಲಾಯಿತು; ಆಗ್ಗೆ ಬರೆದುಕೊಳ್ಳಲ್ಪಟ್ಟ ಸಾಕ್ಷ್ಯದ ಬಾಬತು ಸಂಕ್ಷೇಪವಾದ ಸಾರಾಂಶವನ್ನು ಪಬ್ಲಿಸಿಟಿ ಆಫೀಸರವರು ಪ್ರಕಟಿಸಬೇಕೆಂಬುದಾಗಿ ಹುಕುಂಸಾದರುಮಾಡಲ್ಪಟ್ಟಿತು. ಅದರಂತೆ ಈ ಕೆಳಗೆ ನಮೂದಿಸಿರುವ ಸಾರಾಂಶವನ್ನು ಪ್ರಕಟಿಸಲಾಗಿದೆ. ಆದರೆ ಈ ಸಂಬಂಧದಲ್ಲಿ ಒಂದು ಅಂಶವನ್ನು ಗಮನಿಸುವುದು ಅವಶ್ಯವಾಗಿದೆ. ಈ ತನಿಖೆಗಳು ಪೂರ್ತಿಯಾಗಿಲ್ಲ. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರು ಇನ್ನೂ ತನಿಖೆಯ ಕ್ರಮವನ್ನು ಜರುಗಿಸುತ್ತಾ ಇದ್ದಾರೆ; ಆದುದರಿಂದ ಈ ಮೊದಲೇ ನಡೆದಿರುವಷ್ಟುಮಟ್ಟಿನ ತನಿಖೆಗಳ ಆಧಾರದಮೇಲೆ ಸದ್ಯಕ್ಕೆ ನಿಷ್ಕರ್ಷೆ ಮಾಡಿದ ಅಂಶಗಳನ್ನು ಬದಲಾಯಿಸಬೇಕಾಗುವ ಸಂಭವವು ಮುಂದೆ ಬಂದರೂ ಬರಬಹುದು.

1926 ನೇ ಇಸವಿ ಜೂನ್ ತಿಂಗಳು 30 ನೇ ತಾರೀಖಿಗೆ ಆಖೈರಾದ ಅರ್ಧವರುಷದ ಅವಧಿಗೆ ತಮಗೆ ಬೋನಸ್ಸು ವೊಬಲಗು ದೊರೆಯುವುದೋ ಇಲ್ಲವೋ ಎಂಬುದಾಗಿ ಕಾರ್ಖಾನೆಯ ಕೆಲಸಗಾರರಿಗೆ ಆತಂಕವುಂಟಾಗಿದ್ದಿತು. ದೊಂಬಿಗೆ ಇದೇ ಕಾರಣವೆಂಬ ಅಂಶದಲ್ಲಿ ಲೇಶವೂ ಸಂಶಯವಿಲ್ಲ. ಈಚೆಗೆ ಕೆಲವು ವರುಷಗಳಿಂದಲೂ, ಅವರಿಗೆ ಈರೀತಿ ಬೋನಸ್ಸುಗಳನ್ನು ಕೊಡುವುದು ಪದ್ಧತಿಯಾಗಿದ್ದಿತು. ಮೇಲೆ ನಮೂದಿಸಿದ ಅರ್ಧವರುಷದ ಅವಧಿಯ ಬಾಬತು ಬೋನಸ್ಸು ವೊಬಲಗು ಯಾವ ತಾರೀಖಿನಲ್ಲಿ ಪಾವತಿ ಮಾಡಲ್ಪಡುವುದೆಂಬ ನಿರೀಕ್ಷಣೆಯಿದ್ದಿತೋ, ಆ ತಾರೀಖಿನಲ್ಲಿ ಅದು ಪಾವತಿ ಮಾಡಲ್ಪಡಲಿಲ್ಲ. ಕೆಲಸಗಾರರು ಈ ವಿಷಯವಾಗಿ ಮ್ಯಾನೇಜರವರಲ್ಲಿ ಪ್ರಸ್ತಾಪಮಾಡಿದರು. ಆಗ್ಗೆ ಮ್ಯಾನೇಜರವರು ಪ್ರಧಾನಕಾರ್ಯಾಲಯದಿಂದ (Head office) ತಮಗೆ ಇನ್ನೂ ಹುಕುಮು ಬಂದಿರಲಿಲ್ಲವೆಂಬುದಾಗಿ ಅವರಿಗೆ ತಿಳಿಸಿದರು; ಮತ್ತು ಇನ್ನು ಮೂರುದಿವಸಗಳಕಾಲ ಕೆಲಸಗಾರರು ಸುಮ್ಮನಿರಬೇಕೆಂದೂ, ಮತ್ತು ಆ ವೇಳೆಗೆ ತಾವು ಹುಕುಮನ್ನು ತರಿಸುವುದಾಗಿಯೂ ಸಹ, ಅವರಿಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ, ಕೆಲಸಗಾರರು, ತಮಗೆ ಮೂರುದಿವಸಗಳೊಳಗಾಗಿ ಬೋನಸ್ಸು ವೊಬಲಗನ್ನ ಕೊಡುವುದಾಗಿ ಮ್ಯಾನೇಜರವರು ಒಂದು ಕರಾರನ್ನು ಬರೆದು ಕೊಡಬೇಕೆಂದು ಕೇಳಿದರು. ಮ್ಯಾನೇಜರವರಿಗೆ ಆರೀತಿಮಾಡುವುದು ಸಾಧ್ಯವಾಗಲಿಲ್ಲ. ಕೆಲಸಗಾರರೆಲ್ಲರೂ ಕಾರ್ಖಾನೆಯಲ್ಲಿ ಕೆಲಸಮಾಡದೆ ಮುಷ್ಕರ ಹಿಡಿದರು; ಕಾರ್ಖಾನೆಯ ಅಧಿಕಾರವರ್ಗದವರನ್ನು ಕೊಂದುಹಾಕುವುದಾಗಿ ಹೆದರಿಸಿದರು; ಮತ್ತು ಕಲ್ಲುಗಳನ್ನು ಎಸೆಯಲಾರಂಭಿಸಿದರು; ಆಫೀಸುಕೋಣೆಯ ಕಿಟಕಿಗಳೊಳಕ್ಕೆ ಕೋಲುಗಳನ್ನು ಚಾಚುವುದಕ್ಕೆ ಉಪಕ್ರಮಿಸಿದರು. ಪ್ರಾತಃಕಾಲ ಸುಮಾರು ಹತ್ತುಘಂಟೆಯವೇಳೆಯಲ್ಲಿ ಹೀಗೆ ತೊಂದರೆಗೆ ಆರಂಭವಾಯಿತು. ಕೆಲಸಗಾರರು ಫಲಹಾರದ ವಿರಾಮಕಾಲದಲ್ಲಿ ಕಾರ್ಖಾನೆಯ ಹೊರಗೆ ಹೋಗಿ ಮತ್ತೆ ಹಿಂದಿರುಗಿದ ಬಳಿಕ, ಈ ದೊಂಬಿಯು ಒಂದುರೂಪವನ್ನು ತಾಳಿ ಮತ್ತಷ್ಟು ಹೆಚ್ಚಿತು; ಅದು ವಿಪರೀತವಾಗಿ ಹೆಚ್ಚುತ್ತಾಬಂದುದರಿಂದ, ಪೊಲೀಸಿನವರು ಸಹಾಯಕ್ಕೆ ಬರಬೇಕೆಂದು ಪ್ರಾರ್ಥಿಸಿ ಮೇಲಿಂದಮೇಲೆ ವರ್ತಮಾನಗಳು ಕಳುಹಿಸಲ್ಪಟ್ಟವು.

ಸಿಟಿ ಪೊಲೀಸಿನವರಲ್ಲಿ ಲಟ್ಟಿಗಳು ಮಾತ್ರವೇ ಇದ್ದುದರಿಂದ, ಜನಗಳು ಅವರನ್ನು ಸ್ವಲ್ಪವೂ ಲಕ್ಷಿಸಲಿಲ್ಲ; ಆದುದರಿಂದ ಪೊಲೀಸಿನವರಿಗೆ ಜನರ ಗುಂಪಿನೊಳಗೆ ನುಗ್ಗಿ ಕಾರ್ಖಾನೆಯ ಕಟ್ಟಡದೊಳಕ್ಕೆ ಹೋಗುವುದೇ ಅಸಾಧ್ಯವಾಯಿತು. ಇಷ್ಟರಲ್ಲಿ ತುರುಮಂದಿ ರಿಜರ್ವ್‌ಪೊಲೀಸಿನವರ ಮೊದಲನೆಯ ದಳವೊಂದು ಮುಂದೆ ಬಂದಿತು. ನಾಲ್ಕುಸಾವಿರ ಮಂದಿಗಳು ಅವರು ಮುಂದೆ ಹೋಗಲು ಅವಕಾಶಕೊಡದೆ ಅಡ್ಡಿಮಾಡಿದರು. ಆದರೂ, ರಿಜರ್ವ್ ಪೊಲೀಸಿನವರು ಸಾಹಸದಿಂದ ಗುಂಪಿನಮಧ್ಯದಲ್ಲಿ ನುಗ್ಗಿ, ಮ್ಯಾನೇಜರವರ ಆಫೀಸಿನೊಳಕ್ಕೆ ಹೋದರು. ಪೊಲೀಸಿನವರು ಈ ರೀತಿ ಪ್ರವೇಶಮಾಡಿದುದು ಜನಗಳಿಗೆ ಅಸಮಾಧಾನವನ್ನುಂಟುಮಾಡಿತು. ಪೊಲೀಸಿನವರು ಹಾಗೆ ನುಗ್ಗುತ್ತಿರುವಾಗ ಅವರಲ್ಲಿ ಆರುಮಂದಿಗಳಿಗೆ ಪೆಟ್ಟುಗಳು ಬಿದ್ದುವು. ಜನಗಳನ್ನು ಹತೋಟಿಗೆ ತರುವುದು ಅಸಾಧ್ಯವಾಗಿ ಕಂಡುಬಂದುದರಿಂದ ಪೊಲೀಸಿನವರೆಲ್ಲರೂ ಮ್ಯಾನೇಜರವರ ಆಫೀಸಿನಲ್ಲಿ ಸೇರಿಕೊಂಡರು; ಸುತ್ತಲು ಜನರು ಮುತ್ತಿದ್ದು ಹೊಂಚು [illegible] ಅಲ್ಲಿಂದ ಹೊರಗೆ ಬರಲು ಅವರಿಗೆ

ಸಾಧ್ಯವಿಲ್ಲದೆಹೋಯಿತು. ಒಂಬತ್ತುಮಂದಿ ಪೋಲೀಸಿನವರ ಮತ್ತೊಂದು ಗುಂಪಿನವರು ಸನೀನುಗಳನ್ನು ಚಾಚಿಕೊಂಡು ಮುಂದಕ್ಕೆ ಹೊರಟರು, ಆದರೆ ಹೆಬ್ಬಾಗಿಲನ್ನು ದಾಟಿ ಒಳಕ್ಕೆ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ. ಅವರೆಲ್ಲರಿಗೂ ಜಖಮುಗಳಾದುವು; ಕೆಲವರಿಗೆ ಭಾರಿ ಜಖಮುಗಳಾದುವೆಂದೇ ಹೇಳಬೇಕಾಗಿದೆ. ಆದಕಾರಣ ಅವರೆಲ್ಲರೂ ಕಾವಲುಗಾರರ ಕೊಠಡಿಗೆ (ಗಾರ್ಡ್‌ರೂಂ) ಹೋಗಿ ಸೇರಿಕೊಳ್ಳಬೇಕಾಯಿತು. ಜನರು ಅದರ ಸುತ್ತಲೂ ಮುತ್ತಿಕೊಂಡು ಕಟ್ಟಡಕ್ಕೆ ವಿಶೇಷ ನಷ್ಟವುಂಟಾಗುವಂತೆ ಮಾಡಿದರು. ಈ ಸಮಯದಲ್ಲಿ ಹೆಚ್ಚುಮಂದಿ ಪೋಲೀಸಿನವರನ್ನು ಕಳುಹಿಸುವಂತೆಯೂ, ಗುಂಡುಹಾರಿಸುವಂತೆ ಹುಕುಂ ಮಾಡಲು ಅಧಿಕಾರವುಳ್ಳ ಒಬ್ಬ ಆಫೀಸರನ್ನು ಕಳುಹಿಸುವಂತೆಯೂ, ಟೆಲಿಫೋನಿನ ಮೂಲಕ ಸಮಾಚಾರವು ಕಳುಹಿಸಲ್ಪಟ್ಟಿತು. ಏತನ್ಮಧ್ಯೆ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರೂ, ಮತ್ತು ಅವರ ಕೈಕೆಳಗಿನ ಒಂಬತ್ತುಮಂದಿ ಪೋಲೀಸಿನವರೂ ಅಲ್ಲಿಗೆ ಬಂದು ಸೇರಿದರು. ಮುಂಭಾಗದ ಹೆಬ್ಬಾಗಿಲಿನಿಂದ ಪ್ರವೇಶಿಸುವುದು ಅಸಾಧ್ಯವೆಂದು ಅವರಿಗೆ ತೋರಿತು. ಆದಕಾರಣ ಅವರು ಹಿಂಭಾಗದ ಒಂದು ಬಾಗಿಲಿನಿಂದ ಕಾರ್ಖಾನೆಯೊಳಕ್ಕೆ ಪ್ರವೇಶಿಸಿದರು. ಹೀಗೆ ಹೋಗುತ್ತಿರುವಲ್ಲಿ ಕಾರ್ಖಾನೆಯೊಳಗೆ ಕೇವಲ ಅಪಾಯಕರವಾದ ಸನ್ನಿವೇಶವುಂಟಾಗಿದ್ದಿತೆಂಬುದಾಗಿ ಇತರ ಪೋಲೀಸು ಆಫೀಸರುಗಳಿಂದ ಇವರಿಗೆ ತಿಳಿಯಬಂದಿತು. ಇವರು ಸನೀನುಗಳನ್ನು ಚಾಚಿಕೊಂಡು ಮುಂದಕ್ಕೆ ನುಗ್ಗಿದರು. ಆಗ ಜನಗಳು ತಟ್ಟೆಗಳನ್ನೂ, ಕಲ್ಲುಗಳನ್ನೂ ಎಸೆಯತೊಡಗಿದರು. ಇವರುಗಳು ಎಷ್ಟು ಸಮಾಧಾನ ಹೇಳಿದರೂ ಜನರು ಲಕ್ಷಿಸದೆಹೋದರು. ಪೋಲೀಸಿನವರು ಆಬಳಿಕ ಬಂದೂಕಿನ ಬಾಯನ್ನು ಜನರ ಕಡೆಗೆ ತೋರಿಸಿದರು; ಅಲ್ಲದೆ ಆಕಾಶದ ಕಡೆಗೆ ಒಂದುಸಾರಿ ಗುಂಡನ್ನು ಹಾರಿಸಿದರು. ಹೀಗೆ ಮಾಡಿದುದರಿಂದಲೂ ಏನೂ ಫಲವಾಗಲಿಲ್ಲ. ಕೊನೆಗೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಜನರಮೇಲೆ ಗುಂಡನ್ನು ಹಾರಿಸುವಂತೆ ಅಪ್ಪಣೆಮಾಡಿದರು. ಎಷ್ಟು ಜನರು ಬಂದೂಕುಗಳನ್ನು ಹಾರಿಸಬೇಕೆಂದು ಅವರು ಅಪ್ಪಣೆಮಾಡಿದರು ಮತ್ತು ಯಾವರೀತಿ ಬಂದೂಕುಗಳನ್ನು ಹಾರಿಸಬೇಕೆಂದು ಅವರು ಅಪ್ಪಣೆಮಾಡಿದರು ಎಂಬ ವಿಚಾರದಲ್ಲಿ ಇದುವರೆಗೆ ದೊರೆತಿರುವ ಸಾಕ್ಷ್ಯಗಳು ಪರಸ್ಪರ ಭಿನ್ನಾಭಿಪ್ರಾಯವುಳ್ಳವುಗಳಾಗಿವೆ. ಸಾಕ್ಷ್ಯಗಳನ್ನೆಲ್ಲಾ ಒಟ್ಟಿನಲ್ಲಿ ಚೆನ್ನಾಗಿ ಪರಿಶೀಲಿಸಿ ನಿಜವನ್ನು ನಿರ್ಧರಿಸುವವರೆಗೂ ಈ ವಿಷಯದಲ್ಲಿ ಊಹೆಗಳನ್ನು ಕಟ್ಟಿ ಸಾರಾಂಶವನ್ನು ಪ್ರಕಟಿಸುವುದು ಯುಕ್ತವಾಗಿಲ್ಲ. ಅಂತು, ಬಂದೂಕುಗಳನ್ನು ಹಾರಿಸಿದುದರ ಫಲಿತಾಂಶವಾಗಿ ಇಬ್ಬರು ಅಲ್ಲೇ ಮೃತರಾದರು; ಇಬ್ಬರು ಆಸ್ಪತ್ರೆಯಲ್ಲಿ ಮೃತರಾದರು. ಇಬ್ಬರಿಗೆ ಗಾಯವಾಗಿದ್ದಿತು. ಈಗ ಅವರು ಅಪಾಯದಿಂದ ಪಾರಾಗಿರುತ್ತಾರೆ. ಪೋಲೀಸಿನವರು ಗುಂಡನ್ನು ಹಾರಿಸಿದ ತರುವಾಯ ಅವರು ಮುಂದೆ ನಡೆದರು. ಆದರೆ ಅವರು ಮ್ಯಾನೇಜರವರ ಆಫೀಸಿನೊಳಕ್ಕೆ ಹೋಗಲು ಸಾಧ್ಯವಾಗಲಿಲ್ಲವಾಗಿ ಅವರು ಜನರ ಗುಂಪಿನಕಡೆಗೆ ಬಂದೂಕುಗಳ ಬಾಯಿಗಳನ್ನು ತೋರಿಸುತ್ತಾ ಅವರು ಹಿಮ್ಮೆಟ್ಟಬೇಕಾಯಿತು.

ಮಧ್ಯಾಹ್ನದಮೇಲೆ ಮೂರು ಗಂಟೆಯ ವೇಳೆಗೆ ಸಿಟಿಮ್ಯಾಜಿಸ್ಟ್ರೇಟರು ಅಲ್ಲಿಗೆ ಬಂದರು. ಜನಗಳು ರೇಗಿದ್ದುದನ್ನೂ, ಕಲ್ಲುಗಳು, ಮರದತುಂಡುಗಳು, ಕಟ್ಟಿಗೆಗಳು ಮತ್ತು ಕಬ್ಬಿಣದ ಸಲಾಕಿಗಳು ಅಲ್ಲೆಲ್ಲಾ ಎರಚಾಡಿದ್ದುದನ್ನೂ ನೋಡಿದರು. ಬಳಿಕ, ಹತ್ತು ನಿಮಿಷಗಳಮೇಲೆ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಅಲ್ಲಿಗೆ ಬಂದರು. ಈರೀತಿ ದೊಂಬಿಯು ನಡೆದುದಕ್ಕೆ ಕಾರಣಗಳೇನೆಂಬುದೇ ಮುಂತಾದ ಅಂಶಗಳನ್ನು ಚರ್ಚಿಸಲು ಕೆಲವರನ್ನು ಅಲ್ಲಿ ಬಿಟ್ಟು, ಗುಂಪಿನಲ್ಲಿ ಉಳಿದವರೆಲ್ಲರೂ ಹೊರಟುಹೋಗಬೇಕೆಂಬುದಾಗಿ ಅವರಿಬ್ಬರೂ ಜನರಿಗೆ ತಿಳಿಸಿದರು. ಆದರೆ, ತಮ್ಮ ತಮ್ಮ 'ಗೇಟ್‌ಪಾಸು'ಗಳನ್ನು ತೆಗೆದುಕೊಳ್ಳದೆ ಆ ರೀತಿ ಹೊರಟುಹೋಗಲು ಕೆಲಸಗಾರರು ಸಮ್ಮತಿಸಲಿಲ್ಲ; ತಾವು ಹಾಗೆ ಮಾಡಿದಲ್ಲಿ ತಮಗೆ ಕೆಲಸದಿಂದ ನಿವೃತ್ತಿಯಾದಂತೆ ಭಾವಿಸಲ್ಪಡುವುದೆಂದೂ, ಆದಕಾರಣ, ತಾವು ಹೋಗುವುದಿಲ್ಲವೆಂದೂ ತಿಳಿಸಿದರು. ಆರೀತಿ ಭಾವಿಸಲ್ಪಡದಂತೆ ತಾವು ಹೊಣೆಯಾಗಿರುವುದಾಗಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ವಾಗ್ದಾನಮಾಡಿದರು. ಜನರು ಅದನ್ನೂ ಒಪ್ಪಲಿಲ್ಲ; ಸ್ಥಳವನ್ನು ಬಿಟ್ಟು ಕದಲಲಿಲ್ಲ.

ಮಧ್ಯಾಹ್ನದ ಮೇಲೆ ಸುಮಾರು ನಾಲ್ಕೂಮುಕ್ಕಾಲು ಗಂಟೆಯ ವೇಳೆಗೆ ದಿವಾನ್‌ಸಾಹೇಬರವರು ಅಲ್ಲಿಗೆ ದಯಮಾಡಿಸಿದರು, ಅವರೊಡನೆ ಕೌನ್ಸಿಲಿನ ಮೊದಲನೆಯ ಮೆಂಬರವರೂ ದಯಮಾಡಿಸಿದ್ದರು. ದಿವಾನ್‌ಸಾಹೇಬರವರ ಆಗಮನವು ಪ್ರಯೋಜನಕಾರಿಯಾಗಿ ಪರಿಣಮಿಸಿತು. ಕೆಲಸಗಾರರು ತಮ್ಮ ಅಹವಾಲನ್ನು ಅವರಿಗೆ ಅರಿಕೆಮಾಡಿಕೊಂಡರು. ಅವರ ಕುಂದುಕೊರತೆಗಳನ್ನು ಪರಿಹರಿಸಿಕೊಡುವುದಾಗಿ ದಿವಾನ್‌ಸಾಹೇಬರವರು ವಾಗ್ದಾನಮಾಡಿದರು. ಆಬಳಿಕ ಕೆಲಸಗಾರರೆಲ್ಲರೂ ಯಾವುದೊಂದು ಗಲಭೆಯನ್ನೂ ಮಾಡದೆ ಸುಮ್ಮನೆ ಹೊರಟುಹೋದರು.

ಬೋನಸ್ಸು ಮೊಬಲಗಿನ ವಿಷಯವು ಈಗ ಹಿತರೀತಿಯಲ್ಲಿ ವ್ಯವಸ್ಥೆ ಮಾಡಲ್ಪಟ್ಟಿರುವುದಾಗಿಯೂ, ಕೆಲಸಗಾರರು ಕಾರ್ಖಾನೆಗೆ ಬಂದು ಕೆಲಸ ಮಾಡುತ್ತಿದ್ದಾರೆಂದೂ, ತಿಳಿಯಬಂದಿದೆ. ಈ ದೊಂಬಿಯ ದೆಸೆಯಿಂದ ಮೃತಪಟ್ಟವರ ಬಂಧುಗಳಿಗೂ, ಗಾಯಹೊಂದಿದವರಿಗೂ ಯುಕ್ತವಾಗಿ ಪರಿಹಾರದ್ರವ್ಯವು ಕೊಡಲ್ಪಟ್ಟಿದೆ. ದೊಂಬಿಗೆ ಸಂಬಂಧಪಟ್ಟ ಸಮಗ್ರ ವಿಷಯಗಳನ್ನೂ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರು ಈಗ ಕೂಲಂಕಷವಾಗಿ ವಿಚಾರಣೆ ಮಾಡುತ್ತಿದ್ದಾರೆ. ದೊಂಬಿಯು ನಡೆದ ಕಾಲದಲ್ಲಿ ಗುಂಡನ್ನು ಹಾರಿಸುವಂತೆ ಅಪ್ಪಣೆಮಾಡಿದ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನು, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರ ತೀರ್ಮಾನವು ಸರ್ಕಾರದವರಿಗೆ ಒಪ್ಪಿಸಲ್ಪಡುವವರೆಗೂ ಕೆಲಸದಿಂದ 'ಸಸ್ಪೆಂಡ್' ಮಾಡಲಾಗಿದೆ.

ಆರ್. ರಂಗರಾವ್,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ನೋಟೀಸ್.

ದೊಡ್ಡಬಳ್ಳಾಪುರದ ಛವಣಿ ತಿಪ್ಪೆಗುಂಡಿ ಗುರುಶಿದ್ದಪ್ಪನವರ ಮಗ ಛವಣಿ ರುದ್ರಪ್ಪನವರ ಕುಟುಂಬ ಬಸಮ್ಮನು ಜ್ಞಾನಪಲ್ಲಟದಿಂದ ವರ್ತಿಸುವ ಸ್ಥಿತಿಯಲ್ಲಿರುವುದನ್ನು ತಿಳಿದು 1. ಶೀತಕಲ್ಲು ರೇವಣ್ಣನ ಮಗ ಪುಟ್ಟಪ್ಪ, 2. ಹಣಬೆಯಲ್ಲಿರುವ ಚಿಕ್ಕಳ್ಳಿ ಶಿದ್ದಲಿಂಗಪ್ಪ, 3. ಮತ್ತು ಅವನ ತಮ್ಮ ಶಿದ್ದಪ್ಪ, 4. ಬಸಮ್ಮನ ತಾಯಿ ಶಿದ್ದಲಿಂಗಮ್ಮ ಮೊದಲಾದವರು ಮತ್ತು ಇನ್ನೂ ಕೆಲವು ತುಂಟಗಾರರೂ ಸೇರಿಕಾಗಿ ನಿಜವಾದ ಉತ್ತರವಾರಸುದಾರನಾದ ಈ ಕೆಳಗೆ ರುಜುಮಾಡಿರುವ ನನಗೆ ಮೋಸಮಾಡಬೇಕೆಂಬ ದುರುದ್ದೇಶದಿಂದ ಛವಣಿ ರುದ್ರಪ್ಪನ ಚರಸ್ಥಿರ ಆಸ್ತಿಗಳನ್ನು ಖಿಲಾಫ್ ಮಾಡುವುದರಲ್ಲಿ ಉದ್ಯುಕ್ತರಾಗಿದ್ದಾರೆ. ಹಾಗೆ ಪರಭಾರೆ ಮಾಡಲು ಸದರಿ ಬಸಮ್ಮನಿಗೆ ಯಾವ ಅಧಿಕಾರವು ಮತ್ತು ಅವಶ್ಯವು ಇರುವುದಿಲ್ಲ. ಹಾಗೆ ಉಂಟಾಗಬಹುದಾದ ದಾನ, ಕ್ರಯ, ಆಧಾರ, ಭೋಗ್ಯ ಇತ್ಯಾದಿಗಳನ್ನು ವಾರಸ್‌ದಾರನಾದ ನನ್ನ ಅನುಮತಿಯಿಲ್ಲದೆ ಡಿಟೊ ಬಸಮ್ಮನಿಂದ ಮಾಡಿಕೊಂಡಲ್ಲಿ ಅವು ಖಂಡಿತ ಊರ್ಜಿತವಾಗಲಾರವು ಎಂಬುದಾಗಿ ಈ ಮೂಲಕ ಎಚ್ಚರಿಸಿರುತ್ತೆ.

ತಿಪ್ಪೆಗುಂಡಿ ವೀರಭದ್ರಪ್ಪ, ಪ್ರೋಸೆಸ್ ಸರ್ವರ್,
[೩—೩] ಮುನ್ಸೀಫ್ ಕೋರ್ಟು, ದೊಡ್ಡಬಳ್ಳಾಪುರ.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ತಿಪಟೂರು ತಾ|| ನೊಣವಿನಕೆರೆಯಲ್ಲಿರುವ ಮ|| ತುಮಕೂರು ಸಿದ್ದಪ್ಪನವರ ಮಕ್ಕಳು ಚೆನ್ನಪ್ಪನವರ ಲಗ್ನದಲ್ಲಿ ಮ|| ಶಾಂತವೀರಪ್ಪಶೆಟ್ಟರ ಮೂಲಕ 1 ರೂ., ಗುಂಡ್ಲುಪೇಟೆ ತಾ|| ಕುಪ್ಪೂರಿನಲ್ಲಿ ನಡೆದ ಪಟ್ಟಾಭಿಷೇಕ ಮಹೋತ್ಸವದಲ್ಲಿ ತೆಗೆದ ೧ ರೂ. ನಂಜನಗೂಡು ಮ|| ಎಚ್. ಜಿ. ಮಹದೇವಪ್ಪನವರ ಮೂಲಕ ಬಂದಿದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ನಂಜನಗೂಡು-ಚಾಮರಾಜನಗರ ರೈಲ್ವೆ.

ರೈಲ್ವೆಗೆ ತೆಗೆದುಕೊಂಡ ಜಮೀನುಗಳ ಪರಿಹಾರದ್ರವ್ಯದ ವಿಚಾರವಾಗಿ ಯಾವ ಆಫೀಸರನ್ನಾದರೂ ನಿಂದಿಸಬೇಕೆಂಬ ಅಭಿಪ್ರಾಯದಿಂದ ಹಿಂದೆ ಈ ಸ್ಟಾರ್‌ಪೇಪರಿನಲ್ಲಿ ಬರೆದಿಲ್ಲ. ಈಗ ಹೊಸದಾಗಿ ದಯಮಾಡಿಸಿರುವ ಸಬ್‌ಡಿವಿಜನ್ ಆಫೀಸರು ಬಂದು ಒಂದುತಿಂಗಳು ಮಾತ್ರವಾಗಿದಾಗ್ಯೂ ಈಗಾಗಲೇ ಈ ಬಾಬಿನಲ್ಲಿ ರೈತರ ಅಹವಾಲುಗಳನ್ನು ಕೇಳುತ್ತಲೂ, ಸ್ವತಃ ಜಮೀನುಗಳನ್ನು ನೋಡುತ್ತಲೂ ಕೆಲಸಗಳನ್ನು ಪ್ರಾರಂಭಿಸಿರುವುದರಿಂದ ಒಂದೆರಡು ತಿಂಗಳುಗಳಲ್ಲೇ ರೈತರ ಕಷ್ಟಗಳು ಪರಿಹಾರವಾಗುವಂತಿವೆ. ಈಗಾಗಲೇ ನಾಲ್ಕಾರುಸಾವಿರ ರೂಪಾಯಿಗಳನ್ನು ಪಾವತಿಮಾಡಿದ್ದಾರೆ. ಇವರು ಮಾಡುತ್ತಿರುವ ಕೆಲಸದ ವಿಧಾನದಲ್ಲಿ ರೈತರೆಲ್ಲಾ ಇವರ ಸಹನಗುಣವನ್ನೂ, ಕನಿಕರವನ್ನೂ ಕೊಂಡಾಡುತ್ತಿದ್ದಾರೆ. ಮುಂದೆ ರೈಲ್ವೆ ಪರಿಹಾರಗಳ ವಿಚಾರದಲ್ಲಿ ಯಾವ ವಿಧವಾದ ಗಲಭೆಗೂ ತೊಂದರೆಗೂ ಅವಕಾಶವಿಲ್ಲದಂತೆ ಆದುದಕ್ಕಾಗಿ ತುಂಬಾ ಸಂತೋಷಪಡುತ್ತೇನೆ. ಪ್ರಜಾಹಿತೈಷಿ.

ವೈಶ್ಯಬಂಧುಗಳಲ್ಲಿ ವಿಜ್ಞಾಪನೆ.

ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಹೊಸಪೇಟೆಯ ವೈಶ್ಯಬಂಧುಗಳು ತಮ್ಮ ಮನೆಗಳಲ್ಲಿ ನಡಿಯುವ ಉಪನಯನ ಮತ್ತು ವಿವಾಹಕಾರ್ಯಗಳನ್ನು ವೇದೋಕ್ತವಾಗಿ ಮಾಡಿಸಬೇಕೆಂದು ಅಲ್ಲಿನ ಬ್ರಾಹ್ಮಣರನ್ನು ಕೇಳಲಾಗಿ ಅವರು ಪುರಾಣೋಕ್ತವಾಗಲ್ಲದೆ ವೇದೋಕ್ತವಾಗಿ ಮಾಡಿಸುವುದಿಲ್ಲವೆಂದು ಹೇಳಿದ್ದರಮೇಲೆ ವೈಶ್ಯರೆಲ್ಲರೂ ಸಭೆಗೂಡಿ ಇನ್ನುಮುಂದೆ ತಮ್ಮ ಮನೆಗಳಲ್ಲಿ ನಡೆಯುವ ಯಾವಕಾರ್ಯಗಳಿಗೂ ಬ್ರಾಹ್ಮಣರನ್ನು ಕರೆಯಕೂಡದೆಂದು ಕಟ್ಟುಮಾಡಿಕೊಂಡರು. ಇದನ್ನು ನೋಡಿ ಆ ಊರಿನ ತ್ರಿಮತಸ್ಥ ಬ್ರಾಹ್ಮಣರೂ ಒಟ್ಟುಗೂಡಿ ವೈಶ್ಯರ ಮನೆಗಳಿಗೆ ಹೋಗಿ ಅವರ ಯಾವ ಕಾರ್ಯಗಳನ್ನೂ ಮಾಡಿಸಕೂಡದೆಂದೂ ನಿರ್ಧರಿಸಿಕೊಂಡರು. ಎಂಬದಾಗಿ ಉತ್ತರದೇಶದ ಪತ್ರಿಕೆಗಳಿಂದ ತಿಳಿಯಬರುತ್ತದೆ. ವೇದೋಕ್ತವಾಗಿ ವಿವಾಹಾದಿ ಕರ್ಮಗಳನ್ನು ಮಾಡಿಸಿಕೊಳ್ಳಬೇಕೆಂದು ಬಹುಕಾಲದಿಂದ ನ್ಯಾಯಮಾರ್ಗದಲ್ಲಿ ಹೋರಾಡುತ್ತಿರುವ ನಮ್ಮ ಸೀಮೆಯ ವೈಶ್ಯಬಂಧುಗಳು ಹೊಸಪೇಟೆಯ ವೈಶ್ಯಬಂಧುಗಳ ಮಾರ್ಗವನ್ನು ಅನುಸರಿಸಿ ತಮ್ಮ ಕುಲಾಭಿಮಾನವನ್ನು ಕಾಪಾಡಿಕೊಳ್ಳುವವರಾಗಲೆಂದು ಕೋರುವ ಒಬ್ಬ ವೈಶ್ಯ.

ಶ್ರೀಮನ್ಮಹಾದಕ್ಷಿಣಕಾಶೀ ನಿಜಸಿಂಹಾಸನಾಧೀಶ ಚವುಡಯ್ಯದಾನಪುರದ ರಾಜಗುರು ಶ್ರೀಜಗದಾಚಾರ್ಯ ಸ್ವಾಮಿ ವಿರೂಪಾಕ್ಷ ಒಡೆಯರವರ ಮಹಾಸನ್ನಿಧಾನಂಗಳಿಗೆ.

ಮಹಾಸ್ವಾಮಿ, ಇದೇ ಜುಲೈ ತಾರೀಖು 17 ನೇ ಸ್ಟಾರ್‌ಪತ್ರಿಕೆಯಲ್ಲಿ ಮೈಸೂರು ದೇಶದ ಕಡೂರು ತಾ|| ಯಗಟಿಪುರದ ಶ್ರೀಮಲ್ಲಿಕಾರ್ಜುನಸ್ವಾಮಿಯವರ ದೇವಸ್ಥಾನದ ಸಂಬಂಧವಾಗಿ ಪ್ರಕಟಿಸಿರುವ ವಿಚಾರದ ಕಡೆಯಲ್ಲಿ ತಮ್ಮ ಹೆಸರಾಗಲಿ, ಅಪ್ಪಣೆಪಡೆದ ಸಂಸ್ಥಾನದ ಏಜಂಟರ ಹೆಸರಾಗಲಿ ಇಲ್ಲದೆ ಇರುವದರಿಂದ ಈ ಪ್ರಕಟನೆಯು ಸನ್ನಿಧಿಯಿಂದ ಹೊರಟಿದ್ದಾಗಿಲ್ಲವೆಂಬದಾಗಿ ಕೆಲವರಿಗೆ ಸಂಶಯಾಸ್ಪದವಾಗಿದೆ. ಇದು ಸನ್ನಿಧಿಯಿಂದ ಹೊರಟಿರುವದು ನಿಜವಾಗಿದಲ್ಲಿ, ಮಹಾಸವಾರಿಯು ಯಗಟಿಪುರಕ್ಷೇತ್ರಕ್ಕೆ ದಯಮಾಡಿಸತಕ್ಕ ಪ್ರೋಗ್ರಾಂ ತಾರೀಖು ವಗೈರೆ ವಿಚಾರಗಳನ್ನು ಮತ್ತು ಸದರಿ ಕ್ಷೇತ್ರವು ರೈಲ್ವೆ ಫಾಸಲೆಗೆ ದೂರವಾಗಿರುವದಾಗಿ ಕಂಡುಬರುವದರಿಂದ ಮತಾಭಿಮಾನಿಗಳೆಲ್ಲರೂ ಸೇರಲಿಕ್ಕೆ ಅವಕಾಶವಾಗುವಂತೆ ರೈಲ್ವೆಗೆ ಸಮೀಪವಾಗಿರುವ ಯಾವದಾದರೊಂದು ಊರನ್ನು ನಿಶ್ಚಯಮಾಡಿ ಮತಬಾಂಧವರ ಮತ್ತು ಸ್ವಾಮಿಭಕ್ತಿ ತತ್ಪರರ ತಿಳುವಳಿಕೆ ಬಗ್ಗೆ ಇದೇ ಪತ್ರಿಕೆಯ ಮುಖೇನ ಅಪ್ಪಣೆಕೊಡಿಸಬೇಕಾಗಿ ಮಹಾಪಾದದಲ್ಲಿ ಸವಿನಯದಿಂದ ಬೇಡುವ,

ದೈವಭಕ್ತ ಮತ್ತು ವೀರಶೈವಮತಾಭಿಮಾನಿ.

ಪಾಳಯಗಾರರ ಕಾನ್ಫರೆನ್ಸು.

ಮೈಸೂರುಸೀಮೆಯಲ್ಲಿ ಇರತಕ್ಕ ಪಾಳಯಗಾರ್ ಪೆಷ್‌ಕಷ್‌ದಾರರುಗಳ ಒಂದು ಸಭೆಯು ಇದೇ ಆಗಸ್ಟ್ 4ನೇ ತಾರೀಖಿನಿಂದ 6ನೇ ತಾರೀಖು ಶುಕ್ರವಾರದವರೆಗೆ ಬೆಂಗಳೂರಿನಲ್ಲಿ ನಡೆಯುವುದು. ಸದರೀ 4-5 ನೇ ತಾ|| ಬುಧವಾರ ಗುರುವಾರ ಸಹಾ ಬೆಂಗಳೂರು ಬಸವನಗುಡಿಯಲ್ಲಿ ಇರುವ ಮೆ|| ಚೆನ್ನಿಗೋವಿಂದಪ್ಪನವರ ಸತ್ರದಲ್ಲಿ ಸಾಧಾರಣ ಮೀಟಿಂಗು ಜರಗುವುದು. 6 ನೇ ತಾ|| ಶುಕ್ರವಾರ 4 ಗಂಟೆಗೆ ಬೆಂಗಳೂರು ಮಿಥಿಕ್‌ಸೊಸೈಟಿ (Mythic Society) ಮಂದಿರದಲ್ಲಿ ದೊಡ್ಡ ಸಭೆ ನೆರೆಯುವುದು. ಈ ದೊಡ್ಡಸಭೆಗೆ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ. ಯವರು ಅಗ್ರಾಸನವನ್ನು ವಹಿಸಲು ಒಪ್ಪಿದ್ದಾರೆ. ಸ್ವಾಗತಮಂಡಲಿಗೆ ಮ|| ರಾಜಕಾರ್ಯಪ್ರಸಕ್ತ ರಾವ್‌ಬಹದ್ದೂರ್ ಎಂ. ಶಾಮರಾವ್ ಎಂ. ಎ. ಯವರು ಅಗ್ರಾಸನವನ್ನು ವಹಿಸುವುದಕ್ಕೂ, ಮ|| ಗಳಾದ ಪೆನ್‌ಷನ್ ಸಬ್‌ಜಡ್ಜ್ ಕೆ. ಲಕ್ಷ್ಮೀನಾರಣಪ್ಪ, ಬಿ.ಎ., ಬಿ.ಎಲ್. ರವರು, ರಿಟೈರ್ಡ್ ಅಮಲ್ದಾರ್ ಎಂ. ಎಸ್. ಪುಟ್ಟಣ್ಣ, ಬಿ.ಎ., ಯವರು, ಬಾಗೂರು ಪಾಳಯಗಾರರು ಬಿ. ಜೆ. ಕೃಷ್ಣಸ್ವಾಮಿನಾಯಕರವರು, ಮರ್ಚೆಂಟ್ ಪಿ. ಶ್ಯಾಮರಾಯರು, ಪಾಳಯಗಾರರ ಏಜಂಟರು ಹೆಚ್. ಮನ್ನಾರಯ್ಯನವರು, ಎಸ್. ನರಸೋಜರಾಯರು ವಗೈರೆ ದೊಡ್ಡಮನುಷ್ಯರುಗಳು ಮೆಂಬರಾಗಿರಲು ಅಂಗೀಕಾರ ಮಾಡಿರುತ್ತಾರೆ. ತಾ|| 6ರಲ್ಲಿ ನಡೆಯುವ ದೊಡ್ಡಸಭೆಗೆ ಸರ್ಕಾರದ ದೊಡ್ಡಉದ್ಯೋಗಸ್ಥರುಗಳು ದಯಮಾಡುವುದಕ್ಕೆ ಆಹ್ವಾನಪತ್ರಿಕೆಗಳು ಕಳುಹಿಸಲ್ಪಡುತ್ತವೆ. ಈ ಪಾಳಯಗಾರ್ ಪೆಷ್‌ಕಷ್‌ದಾರರುಗಳ ವರ್ತಮಾನಸ್ಥಿತಿಯನ್ನೂ ಉತ್ತರೋತ್ತರ ಅವರುಗಳು ಪ್ರಯೋವೃದ್ಧಿಗೆ ಬರುವ ರೀತಿಯನ್ನೂ ಚರ್ಚೆಮಾಡಿ ಸರ್ಕಾರಕ್ಕೆ ಅರಿಕೆಮಾಡಿಕೊಳ್ಳಬೇಕೆಂಬುದೇ ಈ ಸಭೆಯ ಮುಖ್ಯೋದ್ದೇಶ್ಯವಾಗಿದೆ.

P. Shama Rao, Merchant, Bazar Street,
Basavangudi Post, Bangalore City.

ವೀರಶೈವಮಹಾಸಭೆ.

ಮಹಾಸಭೆಯು ನಿರಾತಂಕವಾಗಿ ಪ್ರತಿವರ್ಷದಲ್ಲೂ ನಡೆದುಕೊಂಡು ಹೋಗಬೇಕೆಂದು ದಾವಣಗೆರೆಯಲ್ಲಿ ಸಭೆಸೇರಿದ್ದಾಗ್ಗೆ ಒಂದು ಮಹಾಸಭಾ ಚಿರಸ್ಥಾಯಿಫಂಡು ಕೂಡಿಸಲ್ಪಟ್ಟಲಾಗಾಯಿತು ಯಾವಾಗಲೂ ನಡಿಯದೆಯಿರುವದರಮೇಲೆ ಈ ಚಿರಸ್ಥಾಯಿಫಂಡುಸ್ಥಾಪನೆಯೇ ಮಹಾಸಭೆಯು ನಿಲ್ಲಲು ಕಾರಣವಾಯಿತೆಂದು ವಗೈರೆ ಲೋಕಮತದಿಂದ ತೆಗೆದು ಪ್ರಕಟಿಸಿದ್ದ ಆರ್ಟಿಕಲ್ಲನ್ನು ನೋಡಿದೆನು. ಫಂಡಿನ ಉದ್ದೇಶವು ಒಳ್ಳೆಯದಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವಾದರೂ ಬೆಂಗಳೂರಿನವರು 2-3 ವೇಳೆ ಪ್ರಯತ್ನಮಾಡಿ ನಡಿಸದೇಹೋದ್ದರಿಂದಲೂ ಮೈಸೂರಿನವರು ಡಿಸೆಂಬರು ಬಂದಾಗ ಮೇ ತಿಂಗಳಿನಲ್ಲಿ ಮಾಡುತ್ತೇವೆಂದೂ ಮೇ ತಿಂಗಳು ಕಳೆದಿರುವುದಾದರೂ ಉಸಿರೆತ್ತದೆ ಸುಮ್ಮನಿರುವುದೂ ಜನರು ಚಿರಸ್ಥಾಯಿಫಂಡನ್ನು ದೂಷಿಸಲು ಕಾರಣವಾಗಿದೆ. ರಾಯಚೂರು ಮೊದಲಾದಕಡೆಯ ಮತಬಾಂಧವರು ತಾವು ಮಹಾಸಭೆಯನ್ನು ನೆರೆಯಿಸಲು ಸಂಕಲ್ಪಿಸಿರುವದರಿಂದ ಮೈಸೂರಿನಲ್ಲಿ ಸಭೆನೆರೆಯುವುದಿಲ್ಲವೆಂದು ಗೊತ್ತಾದಲ್ಲಿ ತಾವು ಏರ್ಪಡಿಸುತ್ತೇವೆಂದು ಈ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆದರೂ ಮೈಸೂರಿನವರು ಈವರೆಗೂ ಇಲ್ಲ ಉಂಟೆಂದು ಹೇಳಲಿಲ್ಲ. ವರ್ಧಂತಿ ಮಹೋತ್ಸವಕ್ಕೆ ಮ|| ಡಿ. ಚಂದ್ರಶೇಖರಯ್ಯನವರು, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟರವರು ಮೈಸೂರಿಗೆ ಹೋಗಿದ್ದಾಗ್ಗೆ ರಿಸೆಪ್ಷನ್ ಕಮಿಟಿ ಸೆಕ್ರೆಟರಿಗಳಲ್ಲೊಬ್ಬರಾದ ಮ|| ಎಂ. ಪಿ. ಭೋಗಯ್ಯನವರನ್ನು ಕಂಡು ಕೇಳುವಲ್ಲಿ ಮಹಾಸಭೆಯು ಮೈಸೂರಿನಲ್ಲಿ ನಡಿಯುವುದಿಲ್ಲವೆಂದು ಹೇಳಿದ್ದಾಗಿ ಕೇಳುತ್ತೇನೆ. ಇದರಿಂದ ಮೈಸೂರಿನವರು ಮಹಾಸಭೆ ಕೂಡಿಸುವುದಿಲ್ಲವೆಂಬುದು ಖಂಡಿತವಾಯಿತು, ಮತ್ತು ಡಿಸೆಂಬರು ತಿಂಗಳು ಸಮೀಪಿಸುತ್ತಬಂದಿತು. ಆದ್ದರಿಂದ ಈಗಲಿಂದಲೇ ಸಭೆಯನ್ನು ಕೂಡಿಸಲು ತಕ್ಕ ಪ್ರಯತ್ನಮಾಡದಿದ್ದಲ್ಲಿ ಈವರ್ಷವೂ ಸಾಧ್ಯವಿಲ್ಲದೆ ನಿಂತುಹೋಗುವುದು. ಆದ್ದರಿಂದ ಚಿರಸ್ಥಾಯಿಫಂಡನ್ನು ಕೂಡಿಸಿದವರಾದ ದಾವಣಗೆರೆ ವೀರಶೈವಬಂಧುಗಳು ಹುಬ್ಬಳ್ಳಿಯಲ್ಲಾಗಲಿ, ರಾಯಚೂರಿನಲ್ಲಾಗಲಿ, ಇವೆರೆಡರಲ್ಲೂ ಸಾಧ್ಯವಿಲ್ಲದಿದ್ದಲ್ಲಿ ದಾವಣಗೆರೆಯಲ್ಲಾಗಲಿ ಸಭೆಯನ್ನು ಕೂಡಿಸುವಂತೆ ಮಾಡಿ ಫಂಡನ್ನು ಕೂಡಿಸಿ ಸಭೆಗೆ ಇಂಥಾ ದುರವಸ್ಥೆ ಬಂದಿತೆಂಬ ಕೆಟ್ಟ ಹೆಸರನ್ನು ಹೋಗಲಾಡಿಸಿಕೊಳ್ಳುವವರಾಗಲಿ. ವೀರಶೈವರ ವಿದ್ಯಾಭಿವೃದ್ಧಿ ಸಮಾಜಾಭಿವೃದ್ಧಿ ಕಾರ್ಯಗಳಿಗಾಗಿ ದಿವಾರಾತ್ರಿ ತಮ್ಮ ದೇಹವನ್ನು ದಣಿಸುತ್ತಿರುವ ಶ್ರೀ ಮೃತ್ಯುಂಜಯಸ್ವಾಮಿಗಳು ಕಲ್ಪವೃಕ್ಷದಂತಿರುವ ಮಹಾಸಭೆಗೆ ಪ್ರಾಪ್ತವಾಗಿರುವ ಜಡತ್ವವನ್ನು ತಮ್ಮ ಕೃಪಾಬಲದಿಂದ ಯಾವಲ್ಲಾದರೂ ಸಭೆಯನ್ನು ಜರುಗಿಸಿ ಹೋಗಲಾಡಿಸಬೇಕೆಂದು ಅಡ್ಡಬಿದ್ದು ಬೇಡಿಕೊಳ್ಳುತ್ತೇನೆ. ಈ ವೇಳೆ ಸಭೆಯು ನಡಿಯದಿದ್ದಲ್ಲಿ ಅದು ಎಲ್ಲೂ ಮುಂದೆ ನಡೆಯುವುದಿಲ್ಲವೆಂಬುದು ಖಂಡಿತ. ಸಭಾಭಿಮಾನಿ.

ಈಜುವ ಪಂದ್ಯವು.

ಇದೇ ಸನ್ ಸಾವಿರದ ಒಂಭೈನೂರ ಇಪ್ಪತ್ತಾರನೇ ಜುಲೈ 24 ಮತ್ತು 25ನೇ ತಾರೀಖುಗಳಲ್ಲಿ ಬೆಂಗಳೂರುಸಿಟಿ ಚಾಮರಾಜಪೇಟೆ ಸಮೀಪದಲ್ಲಿರುವ ಕೆಂಪಾಂಬುಧಿ ಕೆರೆಯಲ್ಲಿ ಇದೇ ಊರಿನ 'ಡಾಲ್ಫಿನ್‌ಕ್ಲಬ್ಬಿ'ನವರಿಂದ ಏರ್ಪಡಿಸಲ್ಪಟ್ಟ ಈಜುವ ಪಂದ್ಯವು ಮೈಸೂರಿನ ಮಾಜಿ ಕೌನ್ಸಿಲರಾದ ಮ|| ಕೆ. ಆರ್. ಶ್ರೀನಿವಾಸಅಯ್ಯಂಗಾರ್. ಎಂ.ಎ., ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಇದಕ್ಕೆ ಸ್ತ್ರೀಪುರುಷರಾದಿಯಾಗಿ ಅನೇಕ ಬಾಲಕಬಾಲಿಕೆಯರು ಉಮೇದುವಾರರಾಗಿದ್ದರು. ಶನಿವಾರ (ತಾ|| 24-7-26) ಹೆಂಗುಸರಿಗಾಗಿಯೂ, ಭಾನುವಾರ (25-7-26) ಗಂಡುಸರಿಗಾಗಿಯೂ ಏರ್ಪಡಿಸಲ್ಪಟ್ಟಿತ್ತು. ಈ ಪಂದ್ಯವನ್ನು ನೋಡಲಿಕ್ಕೆ 1 ನೇ ಕೌನ್ಸಿಲರ್ ಮಿ|| ಕೆ. ಚಾಂಡಿ, ಬಿ. ಎ. ಯವರೂ, ರೆವೆನ್ಯೂಕಮಿಷನರ್ ಮ|| ಸಿ. ಎಸ್. ಬಾಲಸುಂದರಂಅಯ್ಯರ್, ಬಿ. ಎ. ಯವರೂ, ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ಮ|| ಜಹಿರುದ್ದೀನ್ ಮೆಕ್ಕೆ, ಬಿ. ಎ. ಯವರೂ, ರಾವ್‌ಬಹದ್ದೂರ್ ಡಾ|| ಸಿ. ಬಿ. ರಾಮರಾಯರವರು ಮೊದಲಾಗಿ ಅನೇಕ ಪುರಪ್ರಮುಖರೂ, ಸ್ತ್ರೀಯರೂ, ಬಾಲಕರೂ ಬಂದಿದ್ದರು. ಈ ಪಂಥವು ಯಾವ ವಿಘ್ನವೂ ಇಲ್ಲದೆ ಸಾಂಗವಾಗಿ ನೆರವೇರಿದ್ದನ್ನೂ ಬಾಲಕ ಬಾಲಕಿಯರು ಇದರಲ್ಲಿ ತಮಗಿದ್ದ ಅಕ್ಕರೆ ಕುಶಲತೆಗಳನ್ನು ಪ್ರಕಾಶಪಡಿಸಿದ್ದನ್ನೂ ನೋಡಿ ಬಂದಿದ್ದವರೆಲ್ಲರೂ ಸಂತೋಷಪಟ್ಟರು. ಗೆದ್ದವರಿಗೆಲ್ಲಾ ಬೆಳ್ಳಿಯ ಬಟ್ಟಲುಗಳೂ ಪದಕಗಳೂ ಬಹುಮಾನವಾಗಿ ಕೊಡಲ್ಪಟ್ಟವು. ಮ|| ಡಿ. ಲಕ್ಷ್ಮೀನಾರಾಯಣರಾಯರ ಸುಮಾರು ನಾಲ್ಕು ವರ್ಷದ ಹೆಣ್ಣುಮಗುವು ವಿವಿಧರೀತಿಗಳಿಂದ ಈಜುವದನ್ನು ಪ್ರದರ್ಶಿಸಿ ನೆರೆದಿದ್ದ ಸಕಲರಿಗೂ ಆಶ್ಚರ್ಯವನ್ನು ಉಂಟುಮಾಡಿತು. ಹೀಗಿದ್ದರೂ ಅಧಿಕಾರಿಗಳು ಆ ಮಗುವಿಗೆ ಯಾವ ಬಹುಮಾನವನ್ನೂ ಕೊಡದೆಹೋಗಿರುವದು ಆಶ್ಚರ್ಯವೇ ಸರಿ. ಈ ಪಂದ್ಯವನ್ನೇರ್ಪಡಿಸಿ ಇದಕ್ಕೆ ತಕ್ಕ ಸಹಾನುಭೂತಿಯನ್ನು ತೋರಿಸಿ, ಸಕಲರ ವಿಶ್ವಾಸಗೌರವಕ್ಕೂ ಪಾತ್ರರಾದ ಈ ಸಂಸ್ಥೆಯ ಕಾರ್ಯದರ್ಶಿಯವರಾದ ಡಾ|| ಎಂ. ಕೆ. ವೆಂಕಟರಾಯರನ್ನು ಇಲ್ಲಿ ವಂದಿಸದಿರಲಾರೆನು. ಆದರೆ ಪ್ರಾತಃಕಾಲದಿಂದ ಸಾಯಂಕಾಲದವರಿವಿಗೂ ಆಯಾ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಕಾಲಗಳನ್ನನುಸರಿಸಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಕಾರ್ಯಕಲಾಪವನ್ನು ನಡಿಸಿ, ಈ ಕಲೆಯನ್ನು ಬಾಲಕ ಬಾಲಕಿಯರಲ್ಲಿ ಹರಡಿರುವ ಮತ್ತು ಹರಡುತ್ತಿರುವ ಮ|| ಡಿ. ಲಕ್ಷ್ಮೀನಾರಾಯಣರಾಯರ ಮತ್ತು ಅವರ ಸಹೋದ್ಯೋಗಿಯಾದ ಮ|| ಬಿ. ಆರ್. ಶ್ರೀನಿವಾಸರಾಯರ ವಿಷಯದಲ್ಲಿ ನೆರೆದಿದ್ದ ಸಭಿಕರಲ್ಲಿ ಒಂದು ಮಾತನ್ನಾದರೂ ತಿಳಿಸದೆ ಹೋದದ್ದು ತುಂಬಾ ವಿಷಾದಕರವಾದ ಸಂಗತಿಯಾಗಿದೆ. ಇವರಿಬ್ಬರೂ ಬಹುಶ್ರದ್ಧೆವಹಿಸಿ ಕಳೆದ ಆರುವರ್ಷಗಳಿಂದಲೂ ಅಂಗಸಾಧನೆಗೆ ಸೋಪಾನವಾಗಿಯೂ ಪ್ರಾಣರಕ್ಷಣೆಗೆ ಅತ್ಯಾವಶ್ಯಕವಾಗಿಯೂ ಇರುವ ಈ ವಿದ್ಯೆಯನ್ನು ಸಾವಿರಾರು ಮಂದಿಗೆ ಕಲಿಸಿರುತ್ತಾರೆ. ಈಗಲೂ ಹಾಲಿ 100-150 ಜನ ಗಂಡುಸರೂ, 30-50 ಜನ ಹೆಂಗುಸರೂ ಇವರ ಶಿಕ್ಷಣಕ್ಕೊಳಗಾಗಿ ಇರುತ್ತಾರೆ. 'ಕೆಂಪಾಂಬುಧಿ' ಎಂಬ ಹೆಸರನ್ನು ಕೇಳಿದಮಾತ್ರಕ್ಕೆ ಹೆದರುತ್ತಿದ್ದಂಥ ಅನೇಕ ಬಾಲಕ ಬಾಲಿಕೆಯರು ಈಗ ಕೆರೆಗೆ ಧಾರಾಳವಾಗಿ ಬರುತ್ತಿರುವುದನ್ನೂ ದೊಡ್ಡವರು ತಮ್ಮ ಮಕ್ಕಳನ್ನು ಯಾವ ಭಯವೂ ಇಲ್ಲದೆ ಉತ್ಸಾಹದಿಂದ ಇವರ ವಶಕ್ಕೆ ಒಪ್ಪಿಸುತ್ತಿರುವುದನ್ನೂ ನೋಡಿದರೆ ಈ ಗುರುಗಳಲ್ಲಿರುವ ಪ್ರೀತಿವಿಶ್ವಾಸವೂ ವಿದ್ಯಾಪ್ರವೀಣತೆಯೂ ಕರ್ತವ್ಯದಕ್ಷತೆಯೂ ಕಾರಣವೆಂದು ತೋರುತ್ತದೆ. ಈ ಮೇಲ್ಕಂಡ ಆದರ್ಶನೀಯವಾದ ಗುಣಗಳನ್ನು ಗ್ರಹಿಸಿ ವಿದ್ಯಾಖಾತೆಯವರೂ ಪೌರಸಮಾಜದವರೂ ಪುರಕ್ಕಾಗುವ ಪ್ರಯೋಜನಗಳನ್ನು ಪರ್ಯಾಲೋಚಿಸಿ ಈ ಇಬ್ಬರು ಉಪಾಧ್ಯಾಯರಿಗೂ ಪ್ರೋತ್ಸಾಹವನ್ನು ಕಲ್ಪಿಸಿ ಗುಣಗ್ರಾಹಿಗಳೆಂದೆನಿಸಿಕೊಳ್ಳುವರಾಗಿ ನಿರೀಕ್ಷಿಸಿದೆ. ಅಲ್ಲದೆ ಅಧ್ಯಕ್ಷಮಹಾಶಯರಾದ ಮ|| ಶ್ರೀನಿವಾಸಯ್ಯಂಗಾರ್ಯರು ತಮ್ಮ ಅಮೂಲ್ಯಭಾಷಣದಲ್ಲಿ 'ಅಲ್ಲಿಗೆ ಬರತಕ್ಕ ಹೆಂಗುಸರಿಗಾಗಿ ಒಂದು ಪ್ರತ್ಯೇಕಸ್ಥಳವು ಅವರ ಬಟ್ಟೆಗಳನ್ನು ಬದಲಾಯಿಸುವುದಕ್ಕಾಗಿ ಒಂದು ಗುಡಿಸಲೂ ಆವಶ್ಯಕ' ವೆಂದು ಹೇಳಿರುವರು. ಅದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಈ ವಿಷಯದಲ್ಲಿ ಕಳೆದ ಮೂರು ವರ್ಷಗಳಿಂದಲೂ ಅನೇಕಾವರ್ತಿ ಪೌರಸಮಾಜದವರ ಲಕ್ಷ್ಯಕ್ಕೆ ತಂದಿದ್ದರೂ ಅವರು ಉದಾಸೀನತೆಯನ್ನುತಾಳಿ ಮೌನದಿಂದಿರುವರೆಂಬುದನ್ನು ಅಧ್ಯಕ್ಷರ ಭಾಷಣದಿಂದ ಕೇಳಿ, ಆವ ಪುರಾಭಿಮಾನಿಗೆ ತಾನೆ ವಿಷಾದವಾಗಲಿಕ್ಕಿಲ್ಲ? ಈಗಲಾದರೂ ಘನಸರ್ಕಾರದವರೂ ಪೌರಸಮಾಜದವರೂ ಪುರಪ್ರಮುಖರೂ ಇದರ ಕಡೆಗೆ ತಮ್ಮ ಲಕ್ಷ್ಯ ಕೊಡುವರೇನು?

ಪ್ರೇಕ್ಷಕ.

ಪ್ರಾಣಿದಯಾಜ್ಞಾನಪ್ರಚಾರಕಸಂಘ ದಾವಣಗೇರಿ.

(ಲೇಖಕ—ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ, ಹೊಳಲು.)

ಈ ಸಂಘವು ಸ್ಥಾಪಿತವಾಗಿ 2-3 ವರ್ಷಗಳಾದುವು. ಇಷ್ಟರಲ್ಲಿಯೇ ಇದರಿಂದ ಅತ್ಯುತ್ತಮವಾಗಿ ಕಾರ್ಯವು ನಡೆಯಲಿಕ್ಕೆ ಹತ್ತಿರುತ್ತದೆ. ಈ ಸಂಘದಿಂದ ಈಗತಾನೆ ಪ್ರಕಟಿಸಿರುವ ಇಸ್ಲಾಮಿ ಗೋರಕ್ಷಣವೆಂಬುವ ಪುಸ್ತಕವನ್ನು ಸಂಘದ ಸೆಕ್ರೆಟರಿಗಳು ವಿಮರ್ಶೆಗಾಗಿ ನಮ್ಮ ಕಡಿಗೆ ಕಳಿಸಿರುತ್ತಾರೆ. ಈ ಪುಸ್ತಕವನ್ನು ಉರ್ದುಭಾಷೆಯಲ್ಲಿ ಬರೆದ ಇಸ್ಲಾಂಪುರದ ವಕೀಲರು ಮುಸಲ್ಮಾನರಿದ್ದಾಗ್ಯೂ, ಗೋರಕ್ಷಣೆಯ ವಿಷಯವಾಗಿ ಅನೇಕ ಪ್ರಮಾಣಗಳನ್ನು ಸಂಗ್ರಹಿಸಿ ಪ್ರಕಟನೆಮಾಡಿರುವದು ಮಂದಮತಿಗಳಾದ ಹಿಂದುಗಳಿಗೆ ನಾಚಿಕೆಯನ್ನು ಹುಟ್ಟಿಸುವಂತಿರುತ್ತದೆ. ದಾವಣಗೇರಿಯ ಈ ಸಂಘದವರ ಪ್ರಯತ್ನದಿಂದ ಕೆಲವುಕಡೆ ಪ್ರಾಣಿಗಳ ಹಿಂಸೆಯು ಕಡಿಮೆಯಾಗುತ್ತ ನಡೆದಿರುವದು ಸಂತೋಷದ ಸಂಗತಿಯಾಗಿರುತ್ತದೆ. ಈ ವಿಷಯದಲ್ಲಿ ಮುಖ್ಯವಾಗಿ ಮುಸಲ್ಮಾನರಿಗೆ ಮಾತ್ರ ದೋಷವನ್ನು ಕೊಡದೆ ಎಷ್ಟೋ ಹಿಂದುಗಳು ಕೂಡ ದೋಷಿಗಳೆನ್ನಬಹುದು. ಒಕ್ಕಲತನದಲ್ಲಿ ಮುಂದಾಳುಗಳಾದ ಹಿಂದುಗಳು ಗೋವುಗಳನ್ನು ಕಟುಕರಿಗೆ ಮಾರದೇ ಇದ್ದರೆ, ಮಹಮ್ಮದೀಯರೇನುಮಾಡುವರು? ಈ ಬುದ್ಧಿಯು ಹುಟ್ಟುವವರೆಗೆ ಗೋರಕ್ಷಣೆಯು ಚೆನ್ನಾಗಿ ನಡೆಯಲಾರದು. ವಾಚಕರೇ, ಗೋರಕ್ಷಣೆಯು ಹಿಂದುಗಳಿಗೆ ಅತ್ಯಂತ ಪವಿತ್ರಕಾರ್ಯವಾಗಿರುತ್ತದೆ. ಪ್ರತ್ಯಕ್ಷ ಶ್ರೀಕೃಷ್ಣನು ಕೂಡ ಗೋವುಗಳನ್ನು ರಕ್ಷಣೆಮಾಡಿದನೆಂದಮೇಲೆ ಉಳಿದವರ ವಿಷಯದಲ್ಲಿ ಹೇಳುವದೇನು? ಆದ್ದರಿಂದಲೇ ಸೂರ್ಯವಂಶಕ್ಕೆ ಧ್ವಜಸ್ವರೂಪನಾದ ದಿಲೀಪ ಮಹಾರಾಜನು ತನ್ನ ಗುರುಗಳಾದ ವಸಿಷ್ಠ ಮಹರ್ಷಿಗಳ ಗೋಸೇವೆಯನ್ನು ಮಾಡಿ ಸೂರ್ಯವಂಶಕ್ಕೆ ಕರ್ತನಾದ ಪುತ್ರನನ್ನು ಪಡೆದನು. ಆದ್ದರಿಂದಲೇ ರಘುವಂಶವೆಂಬ ಹೆಸರುಂಟಾಯಿತು. ಅದೇ ರಘುರಾಜನು ತನ್ನ ತಂದೆಯಾದ ದಿಲೀಪಮಹಾರಾಜನು ಅಶ್ವಮೇಧಯಜ್ಞವನ್ನು ಮಾಡುವ ಕಾಲಕ್ಕೆ ಸೇನಾಪತಿಯಾಗಿ ಅಶ್ವರಕ್ಷಣೆಗಾಗಿ ಹೋಗಿದ್ದನು. ಅದು ನೂರನೇಯಜ್ಞವಾಗಿದ್ದ ಕಾರಣ ಈ ಯಜ್ಞವು ಪೂರೈಸಿದರೆ ನನ್ನ ಐಶ್ವರ್ಯವೆಲ್ಲಾ ಹಾಳಾಗಿಹೋಗುವದೆಂಬುವ ಭಯದಿಂದ ಇಂದ್ರನು ಗೂಢವೇಷವನ್ನು ಧರಿಸಿಕೊಂಡು ರಘುರಾಜನಿಗೆ ಕಾಣದಂತೆ ಆ ಅಶ್ವವನ್ನು ಅಪಹರಣಮಾಡಿದನು. ಆಗ ರಘುರಾಜನು ಕುರುಡನಂತೆ ದಿಕ್ಕುತೋರದವನಾಗಿ ತನ್ನ ಅಶ್ವವು ಮಾಯವಾದದ್ದಕ್ಕೆ ಚಿಂತೆಯಲ್ಲಿ ಮಗ್ನನಾದನು. ಆಗ ಯಾವ ಗೋವಿನವರದಿಂದ ಹುಟ್ಟಿದ್ದನೊ ಅದೇ ಗೋವು ಕರುಣಾಶಾಲಿಯಾಗಿ ತನ್ನ ವರದಿಂದ ಹುಟ್ಟಿದವನೆಂಬ ಅಭಿಮಾನದಿಂದ ರಘುರಾಜನ ಮುಂದೆ ಬಂದುನಿಂತಿತು. ಆಗ ರಘುರಾಜನು ಅದಕ್ಕೆ ನಮಸ್ಕಾರವನ್ನು ಮಾಡಿ ಆ ಗೋವಿನ ಮೂತ್ರವನ್ನು ತನ್ನ ಕಣ್ಣಿಗೆ ಹಚ್ಚಿಕೊಂಡನು. ಕೂಡಲೇ ಕುದುರೆಯ ಕಳ್ಳನಾದ ಇಂದ್ರನು ಓಡಿಹೋಗುವದನ್ನು ನೋಡಿ ಇಂದ್ರನನ್ನು ನಿಲ್ಲಿಸಿ ಅವನ ಕೂಡ ಯುದ್ಧವನ್ನು ಮಾಡಲಿಕ್ಕೆ ಸನ್ನದ್ಧನಾದನು. ವಾಚಕರೇ, ನೋಡಿದಿರಾ ಗೋವಿನ ಮಹತ್ವವನ್ನು? ಮಲ, ಮೂತ್ರಗಳು ಸಾಧಾರಣವಾಗಿ ಜಗತ್ತಿನಲ್ಲಿ ತುಚ್ಛವಾದ ಪದಾರ್ಥಗಳಷ್ಟೇ. ಆದರೆ ಅಂಥ ಗೋಮೂತ್ರದ ಮಹತ್ವದಿಂದಲೇ ರಘುರಾಜನು ಗೂಢವೇಷದಿಂದ ಓಡಿಹೋಗುವ ಇಂದ್ರನನ್ನು ಕಂಡು ತನ್ನ ಕಾರ್ಯವನ್ನು ಪೂರೈಸಿದನು. ನಾವು ವಾಸಮಾಡುವ ಸ್ಥಲವು ಅಪವಿತ್ರವಾಗಿದ್ದರೆ ನಮಗೆ ಗೋಮಯವು ಬೇಕು. ನಾವು ಯಾವದಾದರೊಂದು ಪಾಪವನ್ನು ಮಾಡಿದರೆ ಗೋದಾನದಿಂದ ಆ ಪಾಪವು ಪರಿಹಾರವಾಗುವದೆಂದು ಹಿಂದು ಧರ್ಮಗ್ರಂಥಗಳಲ್ಲಿ ಘಂಟಾಘೋಷವಾಗಿ ಹೇಳಿರುತ್ತದೆ. ಇದನ್ನೆಲ್ಲ ತಿಳಿದೂ ಪಶುಗಳಿಗಿಂತಲೂ ಕಡೆಯಾಗಿ ವರ್ತಿಸುವ ಮಂದಮತಿಗಳಿಗೆ ಏನೆಂದು ಹೆಸರನ್ನಿಡಬೇಕು? ಯಾವ ಮನುಷ್ಯನೇ ಆಗಲಿ ಇಂಥ ಅಮೌಲ್ಯವಾದ ಗೋಮಾತೆಯನ್ನು ಕನಿಕರವಿಲ್ಲದೆ ಕಟುಕರ ಪಾಲುಮಾಡುವದು ಅನ್ಯಾಯದ ಪರಮಾವಧಿಯಾಗಿರುತ್ತದೆ. ಮುಖ್ಯವಾಗಿ ಹಿಂದು ಬಾಂಧವರಲ್ಲಿ ಧಾರ್ಮಿಕ ಭಾವನೆಯು ಸ್ಥಿರವಾಗಿ ದಾವಣಗೆರೆಯಲ್ಲಿ ಸ್ಥಾಪಿತವಾದಂಥ ಸಂಘಗಳು ಪ್ರತಿಯೊಂದೂರಿನಲ್ಲೂ ಸ್ಥಾಪನವಾದರೆ ಕನ್ನಡನಾಡಿನಲ್ಲಿ ಸ್ವಲ್ಪಮಟ್ಟಿಗಾದರೂ ಗೋರಕ್ಷಣೆಯಾಗಬಹುದು. ಕರ್ನಾಟಕದೇಶದ ಪ್ರತಿಯೊಂದು ದೊಡ್ಡಗ್ರಾಮದ ಮಹಾಜನಗಳು ಇಂಥ ಸಂಸ್ಥೆಗಳನ್ನು ಸ್ಥಾಪಿಸಿ ಗೋರಕ್ಷಣೆಯಂಥ ಧಾರ್ಮಿಕಕಾರ್ಯವನ್ನು ಮಾಡಲಿಕ್ಕೆ ತತ್ಪರರಾಗಬೇಕೆಂದು ಕೋರುತ್ತೇವೆ.

ಕೈ|| ಕಬ್ಬಳ್ಳಿ ಚೆನ್ನಬಸಪ್ಪನವರ ಸ್ಮಾರಕ.

ತಾ|| 17-6-26 ರಲ್ಲಿ ಮೈಸೂರು ಪ್ರಜಾಪ್ರತಿನಿಧಿಸಭೆಗೆ ಬಂದಿದ್ದ ವೀರಶೈವ ಮೆಂಬರುಗಳೂ ಕೆಲ ಸ್ಥಳೀಯ ವೀರಶೈವರೂ ಕೋಲಾರದ ಮ|| ಚಿಕ್ಕಚೆನ್ನಂಜಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಕೈಲಾಸವಾಸಿಗಳಾದ ಕಬ್ಬಳ್ಳಿ ಚೆನ್ನಬಸಪ್ಪನವರ ಭಾವಚಿತ್ರವನ್ನು ತಯಾರುಮಾಡಿಸಿ, ಅದನ್ನು ಮೈಸೂರು ವೈಸ್‌ರಾಯಿರೋಡಿನಲ್ಲಿರುವ ಕಬ್ಬಳ್ಳಿ ಸಾಹುಕಾರ್ ಚೆನ್ನಬಸಪ್ಪನವರ ವೀರಶೈವ ವಿದ್ಯಾರ್ಥಿನಿಲಯದಲ್ಲಿ ಇಡಬೇಕೆಂದು ನಿರ್ಣಯಿಸಿದಂತೆ ಈ ಕೆಳಗೆ ಕಂಡ ದೊಡ್ಡಮನುಷ್ಯರಲ್ಲಿ ಕೆಲವರು ಚಂದಾಮೊಬಲಗನ್ನು ಪಾವತಿಮಾಡಿರುತ್ತಾರೆ. ಮತ್ತೆ ಕೆಲವರು ವಾಗ್ದಾನಮಾಡಿರುತ್ತಾರೆ. ಮತಾಭಿಮಾನಿಗಳಾದ ಇತರ ವೀರಶೈವಬಂಧುಗಳು ಸಹ ಉದಾರವಾಗಿ ಸಹಾಯಮಾಡಿ ಕೈಕೊಂಡಿರುವ ಈ ಸ್ಮಾರಕಕಾರ್ಯವು ಸುಲಲಿತವಾಗಿ ನಡೆಯುವಂತೆ ಸಾಹಾಯ್ಯಕರಿಸಬೇಕಾಗಿ ಪ್ರಾರ್ಥನೆ.

ಮ|| ಗಳಾದ ಸಾಹುಕಾರ್ ಚಿಕ್ಕಚೆನ್ನಂಜಪ್ಪಶೆಟ್ಟರು ಕೋಲಾರ 15 ರೂ., ಜಿ. ರುದ್ರಪ್ಪನವರು, ಎಂ.ಎ.,ಎಲ್‌ಎಲ್.ಬಿ., ಅಡ್ವೋಕೇಟ್ ತುಮಕೂರು 10 ರೂ., ಜಿ. ಪರಮಶಿವಯ್ಯನವರು, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟ್ ಬೆಂಗಳೂರು 10 ರೂ., ದಾವಣಗೆರೆ ತಾ|| ಶಾಬನೂರು ಪಟೇಲ್ ಬಿಷ್ಟಪ್ಪನವರು 10 ರೂ., ಗುರುಕಾರ್ ಪುಟ್ಟಣ್ಣನವರು ಹೊನ್ನು 10 ರೂ., ನ್ಯಾಮತಿ ಗುರುಲಿಂಗಪ್ಪನವರು 10 ರೂ., ಕಾನಕಾನಹಳ್ಳಿ ಕೆ. ಪಿ. ಪರಶಿವಯ್ಯನವರು 10 ರೂ., ಉಜ್ಜಾಣಿಮಠದ ಎನ್. ಯಂ. ಶಿವಲಿಂಗಯ್ಯನವರು 10 ರೂ., ತಿಪಟೂರು ಡಿ. ಯಸ್. ಮಲ್ಲಪ್ಪನವರು 10 ರೂ., ಜಗಲೂರು ಜಿ. ಯಸ್. ಮಹಲಿಂಗಪ್ಪನವರು 10 ರೂ.

ವಾಗ್ದಾನಮಾಡಿರತಕ್ಕವರು.

ಮ|| ಗಳಾದ ಜಿ. ಮಲ್ಲಣ್ಣನವರು ಮೈಸೂರು 10 ರೂ., ಟಿ. ಸಂಜಪ್ಪನವರು ಬೆಂಗಳೂರು 16 ರೂ., ಯಜಮಾನ್ ಚಂದ್ರಶೇಖರಪ್ಪನವರು ಕೊಟ್ಟೂರು 10 ರೂ., ಯಸ್.ಎಂ. ಶಿವಲಿಂಗಪ್ಪನವರು ತ್ಯಾಕೆರೆ 10 ರೂ., ಬಿ. ಶಿವಯ್ಯನವರು ಶೆಟ್ಟಿಹಳ್ಳಿ 10 ರೂ., ಪಟೇಲ್ ಮಲ್ಲಪ್ಪನವರು ಭರ್ಮನಾಯ್ಕನದುರ್ಗ 10 ರೂ., ಅಲದೂರು ಪಟೇಲ್ ರಾಮಪ್ಪಗೌಡರು 10 ರೂ., ಚಂದ್ರಶೇಖರಯ್ಯನವರು ಸೊರಬ 10 ರೂ., ಪುಟ್ಟವೀರಭದ್ರಪ್ಪನವರು ಮದ್ದಗಿರಿ ತಾ|| 10 ರೂ., ಜಿ. ಎಸ್. ಮುರಿಗಪ್ಪನವರು ಗುಬ್ಬಿ 10 ರೂ., ತ್ಯಾವಣಿಗೆ ಬಸೆಟ್ಟಪ್ಪನವರು ಚೆನ್ನಗಿರಿ ತಾ|| 10 ರೂ., ನಲ್ಕುದುರೆ ಪಟೇಲ್ ಹಾಲಪ್ಪನವರು ಚೆನ್ನಗಿರಿ ತಾ|| 10 ರೂ., ಸಂಗನಬಸಪ್ಪನವರು ಚಾಮರಾಜನಗರ 10 ರೂ., ಚೆನ್ನಪ್ಪನವರು ಯಡತೊರೆ ತಾ|| 10 ರೂ., ಬಿ. ಯಂ. ದ್ಯಾವೇಗೌಡರು ಬೇಲೂರು ತಾ|| 10 ರೂ., ಗುರುಕಾರ್ ನಂಜಪ್ಪನವರು ಗುಂಡ್ಲುಪೇಟೆ 10 ರೂ., ದ್ಯಾವಪ್ಪಗೌಡರು ಮೂಡುಗೆರೆ ತಾ|| 10 ರೂ., ಸೊರಟೂರು ಶಿವಬಸಪ್ಪನವರು ಶಿರಾಳಕೊಪ್ಪ 10 ರೂ., ಸಾಟಿ ಹಾಲಪ್ಪನವರು ಚಿತ್ರದುರ್ಗ 10 ರೂ., ಸಾಹುಕಾರ್ ವೀರಭದ್ರಪ್ಪನವರು ಚಿತ್ರದುರ್ಗ 10 ರೂ., ಮಲ್ಲಪ್ಪನವರು ಜಗಲೂರು 10 ರೂ., ಕೇಣಿ ಮಹದೇವಪ್ಪನವರು ಹಾಸನ 10 ರೂ., ಎ. ಎಸ್. ನಂಜುಂಡಪ್ಪನವರು ಆಲೂರು 10 ರೂ., ಬಿ. ಸಿದ್ದಲಿಂಗಶೆಟ್ಟರು ಯಡತೊರೆ 10 ರೂ., ಡಿ. ಬಸವೇಗೌಡರು ಮಂಜರಾಬಾದ್ 10 ರೂ., ಪುಟ್ಟಮಲ್ಲಪ್ಪನವರು ಶಿಕಾರಿಪುರ ತಾ|| 10 ರೂ., ಕಂದಗಲ್ ಚೆನ್ನಬಸಪ್ಪನವರು ದಾವಣಗೆರೆ 10 ರೂ., ಯಂ. ಎನ್. ನಾಗಪ್ಪನವರು 10 ರೂ.

ಬೆಂಗಳೂರು,
20-7-27. } G. Paramasiviah.

M. L. E. FUND ASSOCIATION.

Proceedings of the Annual General Meeting of the Mysore Lingayet Education Fund Association, Bangalore, held on 11th July 1926 at 4 p.m. in Sree Jagadguru Jayadeva Veerasaive Hostel, Bangalore with Rajasabhabhushana Dewan Bahadur Sir K. P. Puttanna Chetty, Kt., C.I.E., in the chair.

There were 160 members in the meeting.

I. Resolved that the hearty felicitations of the Association in meeting assembled which represents the Lingayet population of the State be conveyed to Amin-Ul-Mulk Mirza M. Ismail, B.A., O.B.E., C.I.E., on his appointment as Dewan of Mysore.

II. Resolved that congratulations of the Association be conveyed to Rajathanthrapravina Dr. Brajendranath Seal, M.A., PH.D., D.SC., Vice-Chancellor of the Mysore University on the high distinction of Knight-hood confirred upon him by His Majesty the King Emperor.

III. Resolved that the Auditor's report and the Secretary's report of the Association for the year 1925–26 be adopted.

IV. Resolved that the Auditor's report and the Secretary's report of Sree Jagadguru Jayadeva Veerasaiva Hostel for the year 1925–26 be accepted.

V. Election of office bearers and members of the Managing Committee.

1. Dewan Bahadur Rajasabhabhushana Sir K. P. Puttana Chetty, Kt., C.I.E., was unanimously elected as President.

The following gentlemen were returned as office bearers and members of the Managing Committee.—

Messrs.—

1.	G. Paramasivayya, B.A., LL.B.,	Secretary.
2.	M. Nagappa, Asst. Secretary.	
3.	P. M. Basappa	Member.
4.	Captain Y. V. Iyya	"
5.	U. S. Kalappa	"
6.	D. S. Mallappa, Tiptur	"
7.	Desada Yajaman Basappa	"
8.	G. Siddaveerappa	"
9.	Desada Siddabasappa Setty	"
10.	T. N. Channappa	"
11.	H. Bhadrappa	"
12.	Gollabally Rudrappa	"
13.	T. Rachappa	"
14.	T. Gurunanjaiah, B.A., B.L., of Tumkur	"

Messrs. G. S. Thammayya, B.A., Account probationer and G. Channabasappa, B.A., B.L., were appointed as auditors for the current year.

VI. Resolved unanimously that the thanks of the Association be conveyed to the retiring members Messrs. P. Mahadevayya, B.A., B.L., G. K. Rudrarya, T. Nanjappa, S. Sivappa, P. V. Bhadrappa and Desada Basavalinga Setty for the valuable services rendered by them as members of the Managing Committee and also to Messrs. T. R. Sivappa and B. Puttaiah for having audited the accounts of the Association for the last three years.

VII. Resolved that the Government of His Highness the Maharaja be requested to take necessary steps against one Mr. Siddick, who has been giving public lectures in Bangalore, which are likely to disturb public tranquillity.

VIII. Resolved that suitable action be taken as regards the proposed sale of land belonging to Godurayana Mutt, Bangalore after the same is enquired into by the Managing Committee of the Association.

IX. Resolved that the proposal that the trustees of Dharmapravarthaka Gubbi Thotadappa's Charities be requested to reserve a number of seats in the Free Boarding for Veerasaiva students studying Sanskrit be referred to that body.

X. Resolved that further action be taken in the matter of getting some benefit out of the Sirsangi Desai's Trust Fund and that the Trustees be moved to grant scholarships to Veerasaiva students of the Mysore State as per intention of the Donor as expressed in the will.

XI. Resolved that the Government of His Highness the Maharaja of Mysore be requested to give adequate representation in public service to members of the Veerasaiva Community who form one seventh of the total population of the State.

The meeting which lasted from 4 p.m. to 10 p.m. terminated with cheers for His Highness the Maharaja and a vote of thanks to the Chair.

Bangalore,
11th July 1926. } K. P. PUTTANNA CHETTY,
President.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗ.

3 ನೆಯ ಪ್ರಕರಣ.

ನಾನು ಹಿಡಿದ ಮೊದಲನೆಯ ದಾವಾ.

ಬೊಂಬಾಯಿನಲ್ಲಿ ನಾನು ಇಂಡಿಯನ್ ಲಾನ ಓದುತ್ತಿದ್ದೆನು. ಆಹಾರಸಂಸ್ಕರಣವಿಧಾನವನ್ನು ಕುರಿತು ನಾನೂ ನನ್ನ ಸ್ನೇಹಿತರಾದ ವೀರಚಂದುಗಾಂಧಿಯವರೂ ಕಲೆತು ಪರೀಕ್ಷೆಯನ್ನು ಮಾಡುತ್ತಿದ್ದೆವು. ನನಗೆ ದಾವಾಗಳನ್ನು ತಂದೊದಗಿಸಲು ನನ್ನ ಅಣ್ಣನು ಶಕ್ತಿವಂಚನೆಯಿಲ್ಲದೆ ಪ್ರಯತ್ನಿಸುತ್ತಿಸುತ್ತಿದ್ದನು. ಇಂಡಿಯನ್ ಕೋಡನ್ನೋದುವುದು ಬಹಳ ನಿರುತ್ಸಾಹಕರವಾಗಿದ್ದಿತು. ಸಿವಿಲ್‌ಪ್ರೊಸೀಜರುಕೋಡನ್ನು ನಾನು ಪೂರ್ತಿಗೊಳಿಸದವನಾಗಿದ್ದೆನು. ಎವಿಡೆನ್ಸು ಆಕ್ಟು ಮಾತ್ರ ಹಾಗಿರಲಿಲ್ಲವು. ವೀರಚಂದುಗಾಂಧಿಯವರು ಸಾಲಿಸಿಟರ್‌ಪರೀಕ್ಷೆಗೋದುತ್ತಿದ್ದರು. ಬ್ಯಾರಿಸ್ಟರು, ಮತ್ತು ವಕೀಲರುಗಳ ವಿಚಾರವಾಗಿ ಅವರು ಅನೇಕ ಕಥೆಗಳನ್ನು ಹೇಳುತ್ತಿದ್ದರು. 'ಸರ್ ಫೆರೋಜ್‌ಷಾಯವರಿಗೆ ಕೋಡುಗಳೆಲ್ಲವೂ ಬಾಯಿಪಾಠವಾಗಿದ್ದವು. ಆದುದರಿಂದಲೇ ಅವರು ಅಷ್ಟು ಶ್ಲಾಘನೀಯವಾಗಿ ಕೆಲಸಮಾಡಲು ಸಮರ್ಥರಾದುದು. ಅವರಿಗೆ ಎವಿಡೆನ್ಸು ಆಕ್ಟೆಲ್ಲವೂ ಕಂಠಪಾಠವಾಗಿದ್ದಿತು. 32ನೆಯ ಸೆಕ್ಷನ್ನಿನ ಕೇಸುಗಳೆಲ್ಲವನ್ನೂ ಅವರು ಬಲ್ಲವರಾಗಿದ್ದರು. ಬದರುದ್ದೀನ್ ತಿಯಾಬ್ಜಿಯವರು ವಾದಿಸುವುದನ್ನು ನೋಡಿ ನ್ಯಾಯಾಧಿಪತಿಗಳೆಲ್ಲರೂ ಆಶ್ಚರ್ಯಪಡುತ್ತಿದ್ದರು' ಎಂದು ವೀರಚಂದುಗಾಂಧಿಯವರು ಹೇಳುತ್ತಿದ್ದುದರಮೇಲೆ ನನಗೆ ಧೈರ್ಯಹುಟ್ಟಿದುದು. 'ಬ್ಯಾರಿಸ್ಟರುಗಳು ಮೊದಲು 5 ಅಥವಾ 7 ವರ್ಷಗಳವರೆಗೆ ದಾವಾಗಳೂ ಆದಾಯವೂ ಇಲ್ಲದೆ ಕಷ್ಟಪಡುತ್ತಿದ್ದರು. ಆದುದರಿಂದಲೇ ನಾನೂ ಸಾಲಿಸಿಟರ್ ಪರೀಕ್ಷೆಗೆ ಓದಿದೆನು. ಮೂರುವರ್ಷಗಳಿಗೆ ಮುಂಚಿತವಾಗಿಯೇ ನನಗೆ ಕೇಸುಗಳು ಬಂದಲ್ಲಿ ನೀನು ಅದೃಷ್ಟವಂತನಾಗುವಿ ಎಂದು ವೀರಚಂದರವರು ಹೇಳಿದರು. ತಿಂಗಳು ತಿಂಗಳಿಗೆ ಮನೆಯವೆಚ್ಚವು ಹೆಚ್ಚುತ್ತಿದ್ದಿತು. ಇನ್ನೂ ನ್ಯಾಯಶಾಸ್ತ್ರಗ್ರಂಥಗಳನ್ನು ಓದುತ್ತಿದ್ದೆನು. ಕೋರ್ಟಿನಲ್ಲಿ ಬ್ಯಾರಿಸ್ಟರ್ ಬಿಲ್ಲೆಯನ್ನು ಕಟ್ಟಲು ನನಗಿಷ್ಟವಾಗಿರಲಿಲ್ಲವು. ನಾನು ಎವಿಡೆನ್ಸು ಆಕ್ಟನ್ನೂ, ಮೇಯಿನ್ಸು ಹಿಂದೂಲಾವನ್ನೂ ಬಹಳ ಶ್ರದ್ಧೆಯಿಂದ ಓದಿದೆನು. ಆದರೂ ಒಂದು ದಾವಾ ಹಿಡಿದು ವಾದಿಸಲು ತಕ್ಕ ಧೈರ್ಯವು ಮಾತ್ರ ನನಗಿನ್ನೂ ಉಂಟಾಗಿರಲಿಲ್ಲವು. ಹೊಸದಾಗಿ ಅತ್ತೆಯಮನೆಗೆ ಸೊಸೆಯು ಬಂದಾಗೆಷ್ಟು ಮಿತಭಾಷಿಣಿಯಾಗಿರುವಳೋ ಹಾಗೆಯೇ ನಾನೂ ಇದ್ದೆನು.

ಆ ಸಮಯದಲ್ಲಿ ಮಾಮಿಬಾಯಿ ಎಂಬುವವರ ದಾವಾ ಹಿಡಿದೆನು. ಮಧ್ಯಸ್ತಗಾರರು ಕಮಿಷನನ್ನು ಕೊಡಬೇಕೆಂದು ಕೇಳಿದರು. ನಾನು ಕೊಡುವುದಿಲ್ಲವೆಂದೆನು. ತಿಂಗಳಿಗೆ 3-4 ಸಾವಿರ ರೂಪಾಯಿಗಳನ್ನು ಸಂಪಾದಿಸುತ್ತಿದ್ದ ನ್ಯಾಯವಾದಿಗಳು ಕೂಡ ಕಮಿಷನ್ ಕೊಡುತ್ತಿದ್ದರು. ಅವರು ಕೊಡುತ್ತಿದ್ದರಾದರೂ ನಾನು ಕೊಡುತ್ತಿರಲಿಲ್ಲ. ನನಗೆ ತಿಂಗಳಿಗೆ 300 ರೂಪಾಯಿ ಬಂದರೆ ಸಾಕು; ನನ್ನ ಅಣ್ಣನಕೂಡ ಅದಕ್ಕಿನ್ನ ಹೆಚ್ಚಾಗಿ ಸಂಪಾದಿಸಲಿಲ್ಲವೆಂದು ನಾನು ಹೇಳಿದ್ದೆನು. ನನ್ನ ಅಣ್ಣನಕಾಲದಲ್ಲಿ ಎಲ್ಲಪದಾರ್ಥಗಳೂ ಬಹಳ ಸುಲಭವಾಗಿದ್ದುವು. ಈಗ ಧಾರಣೆಯು ಬಹಳ ಹೆಚ್ಚಿದೆ. ನಾನು ಮಾತ್ರ ನನ್ನ ಪಂಥವನ್ನು ಬಿಡಲಿಲ್ಲವು. ಕಮಿಷನ್ ಕೊಡಲಿಲ್ಲ. ಮಾಮಿಬಾಯಿ ಕೇಸು ಬಹಳ ಸುಲಭವಾದುದು. 30 ರೂಪಾಯಿ ಫೀಜು ಗೊತ್ತುಮಾಡಲ್ಪಟ್ಟಿತು. ಒಂದು ದಿವಸದಲ್ಲೇ ಪರಿಷ್ಕಾರವಾಗಬಹುದೆಂದು ತೋರಿತು. ಸ್ಮಾಲ್ ಕಾಜ್ ಕೋರ್ಟಿನಲ್ಲಿ ಪ್ರತಿವಾದಿ ಪಕ್ಷವನ್ನು ವಹಿಸಿ ನಾನು ನ್ಯಾಯವಾದಿಯಾಗಿದ್ದೆನು. ವಾದಿಯ ಸಾಕ್ಷಿಗಳ ಪಾಟಿಸವಾಲ್ ಮಾಡಲು ಎದ್ದು ನಿಂತಕೂಡಲೆ ನನ್ನ ಆಪಾದಮಸ್ತಕದಿಂದ ಶರೀರವು ನಡುಗಲಾರಂಭಿಸಿತು. ಒಂದು ಪ್ರಶ್ನೆಯನ್ನು ಸಹ ಕೇಳಲಾರದೆ ಕುಳಿತುಬಿಟ್ಟೆನು. ನನ್ನನ್ನು ನೋಡಿ ನ್ಯಾಯಾಧಿಪತಿಯೂ ಇತರ ನ್ಯಾಯವಾದಿಗಳೂ ನಗುತ್ತಿದ್ದರು. ಆದರೆ ನಾನು ಮಾತ್ರ ತಲೆಯೆತ್ತಿ ಯಾರನ್ನೂ ನೋಡಲಿಲ್ಲವು. ನಾನು ಈ ದಾವಾದಲ್ಲಿ ವಾದಿಸಲಾರೆ. ಪಟೇಲರವರಿಗೆ ವಕಾಲತ್ತನ್ನು ಕೊಡಿ; ನಾನು 30 ರೂಪಾಯಿಗಳನ್ನು ಹಿಂದಕ್ಕೆ ಕೊಡುತ್ತೇನೆಂದು ಏಜಂಟಿಗೆ ಹೇಳಿದೆನು. ಆತನು ಕೂಡಲೆ 51 ರೂಪಾಯಿ ಗೊತ್ತುಮಾಡಿ ಪಟೇಲರಿಗೆ ವಕಾಲತ್ತನ್ನು ಕೊಟ್ಟನು. ಇಂತಹ ದಾವಾಗಳು ಪಟೇಲರಿಗೆ ಸಾಮಾನ್ಯವಾದುವು. ಪರ್ಯವಸಾನವನ್ನು ತಿಳಿದುಕೊಳ್ಳಲು ನಾನು ಅಲ್ಲಿ ನಿಲ್ಲಲೇ ಇಲ್ಲವು. ಹೇಡಿತನವು ನನಗೆ ಬಹಳ ಅವಮಾನಕರವಾಗಿದ್ದುದರಿಂದ ಕೂಡಲೇ ಮನೆಗೆ ಹೊರಟುಹೋದೆನು. ನನಗೆ ತಕ್ಕ ಧೈರ್ಯವು ಹುಟ್ಟುವವರೆಗೂ ವಕಾಲತ್ತುಗಳನ್ನು ತೆಗೆದುಕೊಳ್ಳಕೂಡದೆಂದು ನಿಶ್ಚಯಿಸಿದೆನು. ನಾನು ದಕ್ಷಿಣಆಫ್ರಿಕೆಗೆ ಹೊರಡುವವರೆಗೂ ಪುನಃ ಕೋರ್ಟಿಗೆ ಹೋಗಲಿಲ್ಲವು. ಇದೊಂದು ಸುಗುಣವೆಂದು ನಾನು ಹೇಳುವುದಿಲ್ಲ. ನನ್ನಂತಹ ಅಂಜುಪುರಕನಿಗೆ ತನ್ನ ದಾವಾಗೆಲ್ಲಬೇಕೆನ್ನುವವನಾರಾದರೂ ಹೇಗೆ ವಕಾಲತ್ತನ್ನು ಕೊಡುವನು? ಅದುಕಾರಣ ನನ್ನನಿಯಮವು 'ಅಭಾವೇ ವಿರಕ್ತಿಃ' ಎಂಬ ಲೋಕೋಕ್ತಿಯಂತಿದೆ.

ಬೊಂಬಾಯಿನಲ್ಲಿ ಮತ್ತೊಂದು ಕೇಸು ಬಂದಿತು. ಪೋರಬಂದರಿನಲ್ಲಿ ಒಬ್ಬ ಮಹಮ್ಮದೀಯನ ಭೂಮಿಯು ವಶಪಡಿಸಿಕೊಳ್ಳಲ್ಪಟ್ಟಿದ್ದಿತು. ಅವನು ನನ್ನ ತಂದೆಯ ಪರಿಚಿತನಾಗಿದ್ದುದರಿಂದ ನನ್ನಲ್ಲಿಗೆ ಬಂದನು. ದಾವಾ ಮಾಡಲು ನನಗೇನೂ ಆಧಾರವು ಕಂಡುಬರಲಿಲ್ಲವಾಗಿ ಒಂದು ವಿಜ್ಞಪ್ತಿಯ (ಮೆಮೋರಿಯಲ್ಲ)ನ್ನು ಬರೆದು ಕೊಡಲೊಪ್ಪಿಕೊಂಡು ಅದನ್ನು ಬರೆದು ನನ್ನ ಸ್ನೇಹಿತರಿಗೆ ಓದಿಹೇಳಿದೆನು. ಅವರು ಅದನ್ನು ಅನುಮೋದಿಸಿದುದರಮೇಲೆ ನನಗೆ ಕೊಂಚ ಧೈರ್ಯಹುಟ್ಟಿತು. ವಿಜ್ಞಪ್ತಿಯನ್ನು ಬರೆಯುವ ಶಕ್ತಿಯು ನನಗೆ ನಿಜವಾಗಿ ಹುಟ್ಟಿದ್ದಿತು. ಈ ರೀತಿಯಾಗಿ ಮೆಮೋರಿಯಲ್ಲುಗಳನ್ನು ಬರೆಯುವುದರಲ್ಲಿರುವಷ್ಟು ವಾದಿಸುವುದರಲ್ಲಿ ಆಸಕ್ತಿಯು ಇಲ್ಲದಿರುದರಿಂದ ನನಗೆ ಒಳ್ಳೇ ಆದಾಯ ಬರುವಹಾಗಿದ್ದಿತು. ಆದರೆ ಹಾಗೆ ಕೊಡುವವರು ಹೆಚ್ಚಾಗಿರಲಿಲ್ಲವು. ಆದುದರಿಂದ ನಾನು ಉಪಾಧ್ಯಾಯನಾಗಿ ಕೆಲಸ ಮಾಡಬೇಕೆಂದಿದ್ದೆನು. ನನಗೆ ಇಂಗ್ಲಿಷ್‌ಭಾಷೆಯಲ್ಲಿ ಒಳ್ಳೇ ಪಾಂಡಿತ್ಯವಿದ್ದಿತು. ಮೆಟ್ರಿಕ್ಯುಲೇಷನ್ ವರೆಗಿನವರಿಗೆ ಇಂಗ್ಲಿಷ್‌ಭಾಷೆಯಲ್ಲಿ ಪಾಠ ಹೇಳಿಕೊಡುವುದು ನನಗೆ ಬಹಳ ಸಂತೋಷಕರವಾಗಿದ್ದಿತು. [illegible] ಒಂದು ಪ್ರಸಿದ್ಧವಾದ ಹೈಸ್ಕೂಲಿನಲ್ಲಿ [illegible] ಒಂದು [illegible] ಇಂಗ್ಲಿಷ್‌ಭಾಷೆಯನ್ನು [illegible] ಒಬ್ಬ ಉಪಾಧ್ಯಾಯನು [illegible] 75 ರೂ. [illegible]

ವನ್ನು ಕೊಡುವುದಾಗಿ ಪ್ರಕಟಿಸಿದ್ದರು. ನಾನು ಅದನ್ನವೇಕ್ಷಿಸಿ ಅರ್ಜಿಯನ್ನು ಬರೆದು ಬಹಳ ಉತ್ಸಾಹದಿಂದ ತೆಗೆದುಕೊಂಡು ಹೋದೆನು. ನಿನಗೆ ಬಿ.ಎ. ಪರೀಕ್ಷೆಯಾಗಿರುವುದೇ? ಎಂದು ಮುಖ್ಯೋಪಾಧ್ಯಾಯನು ಕೇಳಿದುದಕ್ಕೆ ಇಲ್ಲವೆಂದುತ್ತರಕೊಟ್ಟೆನು. ಹಾಗಾದರೆ ಈ ಉದ್ಯೋಗವನ್ನು ನಿನಗೆ ಕೊಡಲಾಗುವುದಿಲ್ಲವೆಂದು ಹೇಳಲು, ನಾನು ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಲ್ಯಾಟಿನ್ ಭಾಷೆಯನ್ನು ತೆಗೆದುಕೊಂಡು ಕೃತಾರ್ಥನಾದೆನೆಂದು ಹೇಳಿದೆನು. ನಮಗೆ ಬಿ.ಎ. ಪ್ಯಾಸಾಗಿರುವವನೇ ಬೇಕೆಂದು ಆತನು ಹೇಳಿದನು. ಅದರಮೇಲೆ ನನ್ನ ಮನಸ್ಸಿಗೆ ಬಹಳ ಚಿಂತೆಯುಂಟಾಯಿತು. ನನ್ನ ಅಣ್ಣನಿಗೂ ಬಹಳ ಯೋಚನೆಯು ಹುಟ್ಟಿತು. ಇನ್ನು ರಾಜಕೋಟೆಗೆ ಹೊರಡಬೇಕು; ಬೊಂಬಾಯಿನಲ್ಲಿರುವುದರಿಂದ ಪ್ರಯೋಜನವಿಲ್ಲವೆಂದು ನಾನು ನಿಶ್ಚಯಿಸಿದೆನು. ರಾಜಕೋಟೆಯಲ್ಲಿ ನನ್ನ ಅಣ್ಣನು ಒಬ್ಬ ಚಿಕ್ಕ ಪ್ಲೀಡರಾಗಿದ್ದನು. ಆತನು ಅರ್ಜಿಯನ್ನು ಬರೆಯುವ ಕೆಲಸವನ್ನು ನನಗೆ ಕೊಡಿಸುತ್ತೇನೆಂದು ಹೇಳಿದನು. ಬೊಂಬಾಯಿನ ವಾಸವನ್ನು ಬಿಟ್ಟುದಾದರೆ ಬಹಳ ಖರ್ಚು ಕಡಿಮೆಯಾಗುವುದು. ರಾಜಕೋಟೆಯಲ್ಲೇ ಎಲ್ಲರೂ ಒಟ್ಟಿಗೆ ಕೂಡಿರಬಹುದು ಎಂದು ನನ್ನಅಣ್ಣನು ಹೇಳಿದನು. ಅದು ನನಗೂ ಸಮ್ಮತವಾಗಿದ್ದಿತು. ಈ ಪ್ರಕಾರವಾಗಿ 6 ತಿಂಗಳು ಬೊಂಬಾಯಿನಲ್ಲಿದ್ದು ಅನಂತರ ರಾಜಕೋಟೆಗೆ ಹೋದೆನು. ಬೊಂಬಾಯಿನಲ್ಲಿದ್ದಾಗ್ಗೆ ನಾನು ಪ್ರತಿದಿನವೂ ಹೈಕೋರ್ಟಿಗೆ ಹೋಗುತ್ತಿದ್ದೆನಾದರೂ ಏನನ್ನೂ ತಿಳಿದುಕೊಳ್ಳಲಿಲ್ಲವು. ಅಲ್ಲಿ ನಡೆಯುವ ದಾವಾಗಳು ಬಹಳ ಆಕರ್ಷಕವಾಗಿದ್ದುವು. ಆದುದರಿಂದ ಅಲ್ಲಿ ಕುಳಿತು ತಿಳಿದುಕೊಳ್ಳುತ್ತಿದ್ದೆನು. ಹೈಕೋರ್ಟಿನಲ್ಲಿ ಅನೇಕ ಜನ ವಕೀಲರು ನನ್ನಂತೆಯೇ ಕುಳಿತುಕೊಂಡು ತೂಗಡಿಸುತ್ತಿದ್ದರು. ಅವರನ್ನು ನೋಡಿ ನನಗೂ ಮೊದಲು ಹುಟ್ಟಿದ್ದ ಶಂಕೆಯು ಬಿಟ್ಟುಹೋಯಿತು. ಹೈಕೋರ್ಟಿನಲ್ಲಿ ವಕೀಲರು ಹಾಗೆ ತೂಗಡಿಸುವುದು ಒಂದು ಫ್ಯಾಷನ್ನೆಂದು ತಿಳಿದುಕೊಂಡಿದ್ದೆನು.

ಈಗ ಬೊಂಬಾಯಿನಲ್ಲಿರುವ ಹೊಸ ಬ್ಯಾರಿಸ್ಟರುಗಳಲ್ಲಿ ದಾವಾಗಳು ಸಿಕ್ಕದೆ ಶ್ರಮಪಡುತ್ತಿದ್ದವರಿಗೆ ನಾನು ಕೆಲ ಸೂಚನೆಯನ್ನು ಕೊಟ್ಟೆನು. ನಾನು ಗಿರ್ಗಾಮಿನಲ್ಲಿ ವಾಸಮಾಡುತ್ತಿದ್ದೆನಾದರೂ ನಾನು ಯಾವಾಗಲೂ ಯಾವ ಬಂಡಿಯನ್ನೂ ಹತ್ತಿದವನಲ್ಲ. ಟ್ರಾಂಬಂಡಿಯಲ್ಲಿ ಸಹ ಕೂತುಕೊಳ್ಳಲಿಲ್ಲ. ಹೈಕೋರ್ಟಿಗೆ ಪ್ರತಿನಿತ್ಯದಲ್ಲೂ ನಡೆದುಕೊಂಡುಹೋಗಿ ಬರುತ್ತಿದ್ದೆನು. ಹೋಗಲು 45 ನಿಮಿಷ, ಬರಲು 45 ನಿಮಿಷ ಹಿಡಿಯುತ್ತಿದ್ದಿತು. ನನಗೆ ಬಿಸಲಿನಲ್ಲಿ ತಿರುಗಾಡುವುದು ಸಾಮಾನ್ಯವಾಗಿದ್ದಿತು. ನನಗದರಿಂದ ಕೊಂಚ ಖರ್ಚು ಕಡಿಮೆಯಾಯಿತು. ಬೊಂಬಾಯಿನಲ್ಲಿ ಬಹಳ ಜನರಿಗೆ ಆಗಾಗ್ಗೆ ಜಾಯಿಲೆ ಬರುತ್ತಿದ್ದಿತಾದರೂ ನನಗೆ ಮಾತ್ರ ಒಂದು ದಿವಸವೂ ಬರಲಿಲ್ಲ. ನನಗೆ ಸಂಪಾದನೆಯಾದ ದಿವಸದಲ್ಲಿ ಕೂಡ ಈ ಪದ್ಧತಿಯನ್ನು ಅವಲಂಬಿಸಿದ್ದೆನು. ಅದರ ಲಾಭವನ್ನು ಈ ದಿವಸವೂ ನಾನು ಅನುಭವಿಸುತ್ತಲೇ ಇದ್ದೇನೆ.

ಶ್ರೀಮನ್ಮಹಾದಕ್ಷಿಣಕಾಶೀ ಶ್ರೀಮದುದಮರಗಹಂಗಳ ನಿಜಸಿಂಹಾಸನಾಧೀಶ
ಚಿವಡಯ್ಯದಾನಪುರಸಂಸ್ಥಾನದ ಜಗದಾಚಾರ್ಯ ಸ್ವಾಮಿ
ವಿರೂಪಾಕ್ಷ ಒಡೆಯರವರಿಂದ ಬರೆಯಲ್ಪಟ್ಟ

ಮಹಾತ್ಮಾ ಬುದ್ಧದೇವ ಮತ್ತು ಶ್ರೀಯುತ ಟಿಳಕರ ಗೀತಾರಹಸ್ಯ.

(ಹಿಂದಿನಿಂದ ಮುಂದೆಸಾಗಿದ್ದು.)

ಋಷಿಗಳ ವಿಷಯಕವಾದ ಅವನ ಪೂಜ್ಯಬುದ್ಧಿಯು.

“ಇಸಯೋಪುಬ್ಬಕಾಆಸುಂ ಸಞ್ಞತತ್ತಾತಪಸ್ಸಿನೋ | ಪಂಚಕಾಮಗುಣೇಹಿತ್ವಾ ಅತ್ತದತ್ಥಮಕಾರಿಸುಂ|| ನಪಸೂಬ್ರಾಹ್ಮಣಾನಾಸುಂ ನಹಿರಞ್ಞಂ ನಧಾನಿಯಂ | ಸಜ್ಝಾಯಿ ಧನಧಞ್ಞಾಸುಂ ಬ್ರಹ್ಮಂ ನಿಧಿಮಪಾಲಯುಂ || ಬ್ರಹ್ಮಚರಿಯಂಚಸೀಲಂಚ ಅಜ್ಜವಂ ಮದ್ದವಂ ತಪಂ| ಸೋರಚ್ಚಂ ಅವಿಹಿಂಸಂಚಖಂತಿಂಚಾಪಿ ಅವಣ್ಣಯುಂ | ಯೋತಿಸಂಪರಮೋ ಆಸಿಬ್ರಹ್ಮಾದಳ್ಹಪರಕ್ಕಮೋ||” ಪ್ರಾಚೀನಕಾಲದ ಋಷಿಗಳು, ಸಂಯತಾತ್ಮ ಮತ್ತು ತಪಸ್ವಿಗಳಾಗುತಿದ್ದರು. ಅವರು ಯಾವಾಗಲೂ ಪಂಚೇಂದ್ರಿಯಗಳ ವಿಷಯತ್ಯಾಗ ಮಾಡಿ ಆತ್ಮತತ್ವದ ಚಿಂತನೆಮಾಡುತ್ತಿದ್ದರು. ಅವರ ಹತ್ತಿರ ಪಶುಗಳಿರಲಿಲ್ಲ, ಮತ್ತು ಸುವರ್ಣಧನಧಾನ್ಯಸಮೃದ್ಧಿಯೂ ಇರಲಿಲ್ಲ. ಆದರೆ ಅವರಿಗೆ ಸ್ವಾಧ್ಯಾಯ ಅಂದರೆ ಕೇವಲ ವೇದಾಧ್ಯಯನ ಒಂದೇ ಧನಧಾನ್ಯವಾಗಿತ್ತು. ಕೇವಲ ಆ ಬ್ರಹ್ಮನಿಧಿಯ ರಕ್ಷಣವೇ ಅವರಿಗೆ ಮುಖ್ಯ ಕರ್ತವ್ಯವಾಗಿತ್ತು. ಈರೀತಿಯಾದ ಋಷಿವರ್ಯರು ತಮ್ಮ ಶಿಷ್ಯಜನರಿಗೆ ಬ್ರಹ್ಮಚರ್ಯ, ಶೀಲ, ಆರ್ಜವ, ನಮ್ರತಾ, ತಪಶ್ಚರ್ಯ, ಆತ್ಮರತಿ, ಅಹಿಂಸಾ, ಸಹನಶೀಲತೆ ಮೊದಲಾದ ಗುಣಗಳ ಶಿಕ್ಷಣಕೊಟ್ಟು, ಇಂಥಾ ಸದ್ಗುಣಮಂಡಿತಶಿಷ್ಯರನ್ನೇ ತಯಾರಮಾಡುತ್ತಿದ್ದರು. ಅವರಲ್ಲಿ ಯಾವ ಶಿಷ್ಯನು ಸರ್ವಮಾನ್ಯಗುಣಮಂಡಿತನಾಗಿ ಶ್ರೇಷ್ಠನಾಗುವನೋ ಅವನಿಗೆ ಪರಾತ್ಪರವಾದ ಬ್ರಹ್ಮನೆಂಬ ಪದವಿಯಿಂದ ಅಲಂಕರಿಸುತ್ತಿದ್ದರು.

ಹವಿಶುದ್ಧಿಗಾಗಿ ಮಾಡುವ ವೇದೋಕ್ತಯಜ್ಞಯಾಗಾದಿ ಕರ್ಮಗಳಲ್ಲಿ ಬುದ್ಧದೇವನ ವಿಶ್ವಾಸವು “ಗಾವೋನೋ ಪರಮಾಮಿತ್ತಾ ಯಸು ಜಾಯಂತಿ ಓಸಧಾ ಅನ್ನದಾ ಬಲದಾ ಚೇತಾವಣ್ಣದಾಸುಖದಾತಥಾ” “ಏತಮತ್ಥವಸಂಞತ್ವಾನಸ್ಸು ಗಾವೋಹನಿಂಸುತೇ ಸುಖುಮಾಲಾ ಮಹಾಕಾಯ ವಣ್ಣವಂತೋಯಸಸ್ಸಿನೋ” “ತಂಡುಲಂ ಸಯನಂವತ್ಥಂ ಸಪ್ಪಿತೇಲಞ್ಚ ಯಾಚಿಯ ಧಮ್ಮೇನ ಸಮುದಾನೆತ್ವ ತತೋಯಞ್ಞಮಕಪ್ಪಯುಂ || ಉಪಟ್ಠಿತಸ್ಮಿಂ ಯಞ್ಞಸ್ಮಿನಾ ಸುಗಾವೋಹನಿಂಸುತೇ” ಆಕಳು ನಮಗೆ ಅತ್ಯಂತ ಹಿತಕರವಾದ ಮತ್ತು ಸರ್ವರೋಗನಿವಾರಕವಾದ ಔಷಧರೂಪೀ ಹಾಲನ್ನು ಕೊಡುತ್ತಿರುವದು. ಈ ಆಕಳೇ ನಮಗೆ ಅನ್ನವನ್ನೂ ಬಲವನ್ನೂ ಚೇತನವನ್ನೂ ದೇಹಕಾಂತಿಯನ್ನೂ ಸುಖವನ್ನೂ ಕೊಡುವ ಪ್ರಾಣಿಯಾಗಿರುವದು. ಈ ಅರ್ಥವನ್ನು ಮನಸ್ಸಿನಲ್ಲಿ ವಿಚಾರಮಾಡುವವರಾಗಿ ಪ್ರಾಚೀನ ಋಷಿಜನರು ಆಕಳ ಹಿಂಸೆಯನ್ನು ಯಜ್ಞ ಯಾಗ ಮೊದಲಾದ ಯಾವ ಕ್ರಿಯೆಗಳಲ್ಲಿಯೂ ಮಾಡುತ್ತಿರಲಿಲ್ಲ. ಆದರೆ ಕೇವಲ ಅಕ್ಕಿ, ಹಾಸಿಗೆ, ವಸ್ತ್ರ, ತುಪ್ಪ, ಎಣ್ಣೆ ಮೊದಲಾದ ಪದಾರ್ಥಗಳನ್ನು ಗೃಹಸ್ಥಜನರ ಕಡೆಯಿಂದ ಯಾಚನಾಮಾಡಿ ತಂದ ಆ ಪದಾರ್ಥಗಳಿಂದ ತಮ್ಮ ಶಿಷ್ಯರಿಗೂ ಊಟ ಉಪಚಾರಮಾಡಿಸಿ ವಿದ್ಯಾಧ್ಯಯನ ಕಲಿಸುತ್ತ ಅದೇ ವನಸ್ಪತಿಗಳಿಂದ ಯಜ್ಞಯಾಗಾದಿ ಕ್ರಿಯೆಗಳನ್ನು ಆಚರಿಸುತ್ತಿದ್ದರು. ಯಜ್ಞಗಳಲ್ಲಿ ಆಕಳು ಮೊದಲಾದ ಪಶುಹಿಂಸೆ ಎಂದೂ ಮಾಡುತ್ತಿರಲಿಲ್ಲ. ಈರೀತಿಯಾಗಿ ಬುದ್ಧದೇವನಿಗೆ ಹಿಂಸಾರಹಿತವಾಗಿದ್ದು, ಭೂತಮಾತ್ರಕ್ಕೆ ಉಪಕಾರಗಳಾದ ಸಮಸ್ತ ವೇದೋಕ್ತಕರ್ಮಗಳು ಸಮ್ಮತಿ ಇದ್ದವೆಂದು ಕಂಡುಬರುವುದು. ಇದರಂತೆ ಆತ್ಮದಮನ ಮಾಡುವದು ಅತಿ ಶ್ರೇಷ್ಠಧರ್ಮವೆಂದು ಅವನು ಹೇಳುವನು.

“ಯೋಸಹಸ್ಸಂ ಸಹಸ್ಸೇನ ಸಂಗಾಮೇ ಮಾನುಸೇಜಿನೇ | ಏಕಂಚಜೇಯ್ಯಮತ್ತಾನಂ ಸವೇಸಂಗಾಮಜುತ್ತಮೋ” ಸಹಸ್ರಾವಧಿ ಯೋಧರನ್ನು ಸಂಗ್ರಾಮದಲ್ಲಿ ಯಾವನಾದರೂ ಸಂಹಾರಮಾಡಿದರೆ ನಾನು ಅವನಿಗೆ ಸರ್ವಥಾ ಮಹಾಯೋಧನೆನ್ನಲಾರೆನು. ಆದರೆ ಯಾವನು ಒಂದಾದ ತನ್ನ ಆತ್ಮವನ್ನು ಗೆಲ್ಲುವನೋ ಅವನೇ ನಿಜವಾದ ಮಹಾಯೋಧ ಅಥವಾ ಅಧಿರಥಮಹಾರಥನೆಂದು ಹೇಳುವೆನು. ಎಂಬ ಬುದ್ಧವಾಕ್ಯದಂತೆ ಸಂಸ್ಕೃತದಲ್ಲಿಯೂ ಭರ್ತೃಹರಿಯು ಆತ್ಮದಮನವನ್ನೇ ಸ್ತುತಿಸಿರುವನು.

“ಭಕ್ತಿಃ ಶೂಲಿನಿಶಕ್ತಿರಾತ್ಮದಮನೇ ಸಂಸರ್ಗಮುಕ್ತಿಃ ಖಲೈರೇತೇಯೇಷುವಸಂತಿ ನಿರ್ಮಲಗುಣಾಸ್ತೇಭ್ಯೋ ನರೇಭ್ಯೋನಮಃ” ಆತ್ಮದಮನ ಮಾಡಿದ ಪುರುಷನೇ ಸರ್ವಥಾ ನಮಸ್ಕಾರಾರ್ಹನಿರುವನೆಂದು ಹೇಳುವ ಭರ್ತೃಹರಿ ವಾಕ್ಯದಂತೆ ಅನ್ಯಗ್ರಂಥಗಳಲ್ಲಿಯೂ ಆತ್ಮದಮನವು ಅನೇಕ ರೀತಿ ಸ್ತುತಿಸಲ್ಪಟ್ಟಿರುವದು.

“ಮನಸಶ್ಚೇಂದ್ರಿಯಾಣಾಂ ಚೈಕಾಗ್ರ್ಯಂ ಪರಮಂತಪಃ | ತಜ್ಜಾಯಃ ಸರ್ವಧರ್ಮೇಭ್ಯಃ ಸಧರ್ಮಃ ಪರ ಉಚ್ಯತೇ || ಯಾವತ್ತದವಶಂದುಃಖಂ ಯಾವದಾತ್ಮವಶಂಸುಖಂ” ಸಂಸ್ಕೃತವಾಕ್ಯವೂ ಬುದ್ಧದೇವನ ವಾಕ್ಯವೂ ಸದಾ ಒಂದೇರೀತಿಯಾಗಿ ತೋರುತ್ತಿದ್ದು ಬುದ್ಧದೇವನಿಂದ ಉಪದೇಶಿಸಲ್ಪಟ್ಟ ತ್ರಿಪಿಟಕವೆಂಬ ಮೂರು ಮುಖ್ಯ ಗ್ರಂಥಗಳಲ್ಲಿ ಮತ್ತು ಅನ್ಯ ಬೌದ್ಧಗ್ರಂಥಗಳಲ್ಲಿ ಬೋಧಿಸಲ್ಪಟ್ಟ ವಿಷಯಗಳನ್ನು ವಿಚಾರಮಾಡಿ ನೋಡಿದರೆ ಬುದ್ಧದೇವನಿಗಿಂತ ಪೂರ್ವ ನಮ್ಮ ಭರತಖಂಡದಲ್ಲಿ ವೇದಕ್ಕೆ ಪ್ರತಿಕೂಲವಾದ ಹಿಂಸಾಪ್ರಚಾರಕ ಯಜ್ಞಯಾಗಾದಿ ಕರ್ಮಗಳ ಪ್ರಚಾರಣೆಯ ಪಕ್ಷವಹಿಸಿದವರೂ, ವೇದಾಂತದ ದಿವ್ಯತತ್ವಗಳಲ್ಲಿ ಅನುರಾಗವನ್ನು ವಹಿಸಿದ ಎರಡನೇ ಪಕ್ಷದವರೂ, ದೇವರೂ ಇಲ್ಲ, ಯಜ್ಞಯಾಗಾದಿ ಕರ್ಮಗಳಿಗೂ ಸಂಬಂಧವಿಲ್ಲ; ವೇದೋಪನಿಷತ್ತುಗಳೆಲ್ಲಾ ಭ್ರಮಮೂಲಕವೆಂತಲೂ ವಾದಿಸುವ ಮೂರನೇ ಪಕ್ಷವೂ ಹೀಗೆ ಮೂರು ಪಕ್ಷದವರು ತಮ್ಮತಮ್ಮ ಪ್ರಾಬಲ್ಯವನ್ನೇ ಇಚ್ಛಿಸುತ್ತ ಭಯಂಕರವಾದ ತಮ್ಮ ಕೋಲಾಹಲದಿಂದ ಜಗತ್ತನ್ನು ಅಶಾಂತಿಮಯವನ್ನಾಗಿ ಮಾಡಿದ್ದರೆಂದು ಗೊತ್ತಾಗುತ್ತದೆ. ಈ ತ್ರಿವರ್ಗದವರ ಭಯಂಕರ ಕೋಲಾಹಲವನ್ನು ತಪ್ಪಿಸಿ ಜಗತ್ತಿಗೆ ಶಾಂತಿಯನ್ನುಂಟುಮಾಡಲುದ್ದಿಶ್ಯ ಭರತಖಂಡದ ಉತ್ತರಭಾಗದ ರಾಜಶಾಸನಕ್ಕೆ ಅಧ್ಯಕ್ಷಸ್ಥಾನವಾದ ಕಪಿಲವಸ್ತುವೆಂಬ ರಾಜಧಾನಿಯ ರಾಜಮಂದಿರದಲ್ಲಿ ಸ್ವಯಂರಾಜಮೂರ್ತಿಯಾಗುದ್ಭವಿಸಿ ಸಿದ್ಧಾರ್ಥನೆಂಬ ಬಾಲನಾಮದಿಂ ದೇದೀಪ್ಯಮಾನನಾಗಿ ರಾಜೈಶ್ವರ್ಯವನ್ನು ಭೋಗಿಸುತ್ತ ಇದ್ದು ಕೆಲವು ದಿವಸದನಂತರ ಕೇವಲ ಈ ರಾಜ್ಯಶಾಸನದಿಂದಲೇ ಸಿದ್ಧಾರ್ಥನಾಮವು ಪೂರ್ಣಸಾರ್ಥಕವಾಗಲಾರದೆಂದು ಭಾವಿಸಿ ಜಗತ್ತಿನಲ್ಲಿ ಉಂಟಾಗಿರುವ ಅಶಾಂತಿಯನ್ನು ಶಮನಮಾಡಿ ಅದರಿಂದ ಸಿದ್ಧಾರ್ಥನೆಂಬ ನಾಮವನ್ನು ಸಾರ್ಥಕಮಾಡಬೇಕೆಂಬ ಪರಮೋದ್ದೇಶವನ್ನು ತಾಳಿ ಪ್ರಥಮತಃ ತನ್ನ ಆತ್ಮಶಾಂತಿಯುಂಮಾಡಿಕೊಳ್ಳಲು ಅರಣ್ಯವಾಸಿಯಾಗುವ ವಿಚಾರದಲ್ಲಿ ಮಗ್ನನಾದನು. ಬಾಂಧವರೇ, ಬುದ್ಧದೇವನ ಈ ವಿಚಾರವು ಸರ್ವಥಾ ವಿಹಿತವೇ ಸರಿ. ಯಾಕೆಂದರೆ, ಲೋಕದಲ್ಲಿ ಇಂಥಾ ಧರ್ಮಕೋಲಾಹಲವು ಶಾಂತವಾಗಬೇಕಾದರೆ ಕೇವಲ ರಾಜಕೀಯ ಶಾಸನದಿಂದೆಂದೂ ಆಗದೇ ಆತ್ಮದಮನದಿಂದ ಮಾತ್ರ ಆಗುವದು. ಹ್ಯಾಗೆಂದರೆ, ಆತ್ಮನು ಸರ್ವಶಕ್ತಿಮಾನನಿದ್ದು ಆತ್ಮಸ್ವರೂಪನಾದ ತನ್ನನ್ನು ತಾನು ತನ್ನಲ್ಲಿ ಅರಿತುಕೊಂಡದ್ದಾದರೆ ಅರ್ಥಾತ್ ತನ್ನ ಆತ್ಮವು ಸರ್ವಶಕ್ತಿಯುತವಾದದ್ದೆಂದು ತಿಳಕೊಂಡಲ್ಲಿ ತಾನು ಶಕ್ತಿಮಾನನಾಗಲು ಯಾವ ಅಭ್ಯಂತರವೂ ಇಲ್ಲ. ಇದರಂತೆ ಅಥರ್ವಣವೇದದಲ್ಲಿ—ಏಕೋವಶೀ ಸರ್ವಭೂತಾಂತರಾತ್ಮ ಏಕಂರೂಪಂ ಬಹುಧಾಯಃ ಕರೋತಿ ತಮಾತ್ಮಸ್ಥಂ ಯೇನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ | ನಿತ್ಯೋನಿತ್ಯಾನಾಂ ಚೇತನಶ್ಚೇತನಾನಾಮೇಕೋಬಹೂನಾಂ ಯೋವಿದಧಾತಿ ಕಾಮಾನ್ ತಮಾತ್ಮಸ್ಥಂ ಯೇನುಪಶ್ಯಂತಿ ಧೀರಾಸ್ತೇಷಾಂ ಶಾಂತಿಃ ಶಾಶ್ವತೀನೇತರೇಷಾಂ” ಇದರಂತೆ ಈಶಾವಾಸ್ಯೋಪನಿಷತ್ತಿನಲ್ಲಿಯೂ “ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ಸರ್ವಭೂತೇಷುಚಾತ್ಮಾನಂತತೋನವಿಜುಗುಪ್ಸತೇ” ತನ್ನ ಆತ್ಮವೇ ಸರ್ವವ್ಯಾಪಿಯಾಗಿದ್ದು ತನ್ನ ಆತ್ಮನಲ್ಲಿಯೇ ಸರ್ವಪ್ರಾಣಿಯ ವಾಸವುಂಟೆಂದು ಅರ್ಥಾತ್ ತಾನೇ ಜಗತ್ಸ್ವರೂಪನೆಂದು ಅರಿತುಕೊಳ್ಳಬೇಕೆಂದು ಆತ್ಮತತ್ವವನ್ನು ಉಪದೇಶಮಾಡಿರುವ ವೇದವೇದಾಂತ ವಿಚಾರಗಳ ಯಥಾರ್ಥಸ್ಥಿತಿಯನ್ನು ಅನುಭವಮಾಡಿಕೊಳ್ಳುವ ಹೇತುವಿನಿಂದ ಪತ್ನೀಪುತ್ರ ಸುಹೃದ್ಬಾಂಧವಾದಿ ಸಮಸ್ತ ರಾಜವೈಭವವನ್ನು ಧಿಕ್ಕಾರಮಾಡಿ ರಾಜನೆಂಬ ಅಭಿಮಾನವನ್ನು ಸ್ವಪ್ನದಲ್ಲಿಯೂ ತಾಳದೆ ಏಳುವರ್ಷದವರೆಗೆ ಅರಣ್ಯವಾಸಿಯಾಗಿ ಅಲ್ಲಿ ತನ್ನ ತಪೋಬಲದಿಂದ ಸ್ವಯಂ ಬುದ್ಧಸ್ವರೂಪವಾದ ಆತ್ಮತತ್ವವನ್ನು ತಿಳಿದು ಅನಂತರ ವೈರಾಗ್ಯ ಭಿಕ್ಷಾವೃತ್ತಿಯಿಂ ದೇಹಯಾತ್ರೆಯಂ ನಡೆಸುತ್ತಾ ದೇಶದೇಶಾಂತರದಲ್ಲಿ ಸಂಚರಿಸಿ ಮೇಲೆ ತೋರಿಸಿದ ತ್ರಿವರ್ಗದಲ್ಲಿರುವ ಪರಸ್ಪರ ವಿರೋಧವನ್ನು ದೂರೀಕರಿಸಿ ಅವರಲ್ಲಿ ಅನುರಾಗವನ್ನು ಉತ್ಪನ್ನಮಾಡಿ ಅವರು ಯಾವಯಾವ ವರ್ಗದಲ್ಲಿ ತಪ್ಪಿರುವರೆಂಬುವದನ್ನು ಸಮ್ಯಗ್ ನಿರೀಕ್ಷಣಮಾಡಿ ಆ ತಪ್ಪನ್ನು ತಿದ್ದಲೋಸುಗ ಅವರಿಗೆ ವೇದವೇದಾಂತದ ನಿಜತತ್ವಾರ್ಥವನ್ನೇ ಬೋಧಿಸಿದನು. ಇವನ ಸದ್ಬೋಧದ ಆತ್ಮಸ್ಫೂರ್ತಿಯ ಬಲದಿಂದ ಸ್ವಲ್ಪಕಾಲದಲ್ಲಿಯೇ ಅನಂತಜನರು ಇವನಿಗೆ ಅನುಯಾಯಿಗಳಾದರು. ಕಿಂಬಹುನಾ ತಾತ್ಕಾಲದ ಎಷ್ಟೋ ರಾಜಮಹಾರಾಜರುಗಳೂ ಬುದ್ಧದೇವನ ಅನುಯಾಯಿಗಳಾದರೆಂದು ತಿಳಿಯಬರುತ್ತದೆ. ಬುದ್ಧದೇವನು ತನ್ನ ಸದ್ಬೋಧವು ಸರ್ವಸಾಮಾನ್ಯ ಜನಸಮೂಹಕ್ಕೆಲ್ಲಾ ತಿಳಿದು ಸರ್ವರೂ ಕೃತಾರ್ಥರಾಗಬೇಕೆಂಬ ಸದುದ್ದೇಶದಿಂದ ತಾತ್ಕಾಲಪ್ರಚಲಿತವಾದ ಪಾಲಿಭಾಷೆಯಲ್ಲಿ ಉಪದೇಶಮಾಡಿದನಲ್ಲದೆ ಇತರ ಪಂಡಿತಜನರಂತೆ ಅಭಿಮಾನದಿಂದ ಅವನು ಸಂಸ್ಕೃತದಲ್ಲಿಯೇ ಪುನಹ ಟೀಕಿಸಲಿಲ್ಲ. ಸಮಸ್ತ ಪಾಲೀಭಾಷೆಯಲ್ಲಿ ಬರೆದಿರುವ ಅವನ ಗ್ರಂಥಗಳನ್ನೋದೋಣದರಿಂದ ಅವನು ಮಹಾ ವೇದಜ್ಞನೂ ವೇದಾಂತಪರಿಪೂರ್ಣತತ್ವಜ್ಞನೂ ವೇದದಲ್ಲಿ ಪರಮವಿಶ್ವಾಸವುಳ್ಳವನೂ ಇದ್ದನೆಂದು ಸರ್ವರಿಗೂ ಕಂಡುಬರುವುದು. ನನಗಂತೂ ಅವನಲ್ಲಿ ಸಂಪೂರ್ಣವಾದ ವಿಶ್ವಾಸವೂ ಅಭಿಮಾನವೂ ನೆಲೆಗೊಂಡಿರುವುದು. ಬುದ್ಧದೇವನು ನಿಜವಾದ ವೇದವೇದಾಂತಮಾರ್ಗವನ್ನು ಉಪದೇಶಮಾಡಿದ್ದರಿಂದಲೇ ಸಂಕುಚಿತಬುದ್ಧಿಯುಳ್ಳ ಆಗಿನಕಾಲದ ಕೆಲವು ಕುಹಕಬ್ರಾಹ್ಮಣರು ಬುದ್ಧನ ಮೇಲೆ ಮಾಡುತ್ತಿರುವ ವ್ಯರ್ಥದೋಷಾರೋಪಣೆಯನ್ನು ಮತ್ತು ದುಷ್ಟಹಾವಳಿಯನ್ನೂ ಶಾಂತಮಾಡಲು ಬುದ್ಧದೇವನಿಂದ ಪ್ರತಿಪಾದಿತ ವಿಷಯವನ್ನೇ ಆದಿಶಂಕರಸ್ವಾಮಿಗಳು ಸಂಸ್ಕೃತದಲ್ಲಿಯೇ ಬೋಧಿಸಿ ಕುಹಕರನ್ನು ಸಮಾಧಾನಪಡಿಸಿದರೆಂದು ತಿಳಿದುಬರುತ್ತದೆ. ಅತಯೇವ ಇಂಥಾ ವೈದಿಕಮಾರ್ಗಪ್ರವರ್ತಕರೆನಿಸಿದ ಆದಿಶಂಕರಾಚಾರ್ಯರಿಗು “ಪ್ರಚ್ಛನ್ನ ಬೌದ್ಧೋಸಿ” ನೀನು ಕಪಟಬುದ್ಧಶಿಷ್ಯನಿರುವಿ ಎಂಬ ಈರ್ಷಾವಾಕ್ಯವನ್ನು ಹೊರುವ ಪ್ರಸಂಗವು ಬಂದೊದಗಿತು. ಇಷ್ಟೇ ಅಲ್ಲದೆ ಮಧ್ವಾನುಯಾಯಿಗಳು ಆದಿಶಂಕರಾಚಾರ್ಯರಿಗೆ ಸಂಕರ ಎಂತ ತಮ್ಮ ಪುಸ್ತಕದಲ್ಲಿ ಬರೆದಿರುವರು. ಆದರೆ ಬುದ್ಧದೇವನಮೇಲೆಯು ಮತ್ತು ಆದಿಶಂಕರಾಚಾರ್ಯರಮೇಲೆಯು ಮಾಡುವ ದೋಷಾರೋಪಣೆಗಳು ಸೂರ್ಯನಿಗೆ ಮಣ್ಣುತೂರುವ ಕೃತಿಯ ಸಮಾನವಾಗಿರುವವು. ಬುದ್ಧದೇವನಿಂದ ಮತ್ತು ಆದಿಶಂಕರಾಚಾರ್ಯರಿಂದ ಪ್ರತಿಪಾದಿತವಾದ ವಿಷಯಗಳು ಆದಿಯಿಂದ ಹಿಡಿದು ಅಂತ್ಯದವರೆಗೆ ಏಕವಾಕ್ಯ ಉಳ್ಳವಾಗಿದ್ದು ಅದರಲ್ಲಿ ಅಂತಿಮವಿಷಯವಾದ ನಿರ್ವಾಣ (ನಿಬ್ಬಾಣ) ಅಥವಾ ಮುಕ್ತಿವ್ಯಾಖ್ಯಾನವೂ ಒಂದೇರೂಪವಾಗಿರುವದು. ಶಂಕರಾಚಾರ್ಯರು “ಬ್ರಹ್ಮಭಾವಶ್ಚಮೋಕ್ಷಃ” ಸರ್ವತ್ರ ಸರ್ವವನ್ನು ಬ್ರಹ್ಮಸ್ವರೂಪಿನಿಂದ ಕಾಣುವದೇ ಅಥವಾ ಸರ್ವವನ್ನೂ ಆತ್ಮರೂಪವಾಗಿ ಕಾಣುವದೇ ಮುಕ್ತಿ ಎಂದು ಶಾರೀರಿಕ ಭಾಷ್ಯದಲ್ಲಿ ಹೇಳುವರು. ಬುದ್ಧದೇವನು ಆತ್ಮವತ್ ಸರ್ವಪ್ರಾಣಿಯನ್ನೂ ಕಾಣುವನು. ಅರ್ಥಾತ್ ತನ್ನಂತೆ ಅಥವಾ ತನ್ನ ಸುಖದುಃಖಾದಿಗಳಂತೆ ಸರ್ವದರಲ್ಲಿಯೂ ಭಾವನವನ್ನು ವಹಿಸಿ ವಿಶ್ವಸ್ವರೂಪಿಯಾಗಿ ಹೋಗುವುದೇ ನಿರ್ವಾಣ (ನಿಬ್ಬಾಣ) ವೆಂತ ಬೋಧಿಸುವನು.

ಬುದ್ಧದೇವನ ಅಖಂಡ ಧೈರ್ಯವು ಅವನು ತಪಶ್ಚರ್ಯೆಗೆ ಮೊದಲು ಕೂಡ್ರುವ ಸಮಯದಲ್ಲಿ ಮಾಡಿದ ನಿಶ್ಚಯದ ಮೇಲಿಂದ ಕಂಡುಬರುವುದು. “ಇಹಾಸನೇ ಶುಷ್ಯತುಮಾಶರೀರಂ ತ್ವಗಸ್ಥಿ ಮಾಂಸಂವಿಲಯಂ ಪ್ರಯಾತು | ಅಪ್ರಾಪ್ಯಪ್ರಜ್ಞಾಂ ಬಹುಜನ್ಮದುರ್ಲಭಾಂ ನೈವಾಸನಾದ್ ದೇಹಮಿದಂ ಚಲಿಷ್ಯತಿ” ಬುದ್ಧದೇವನು ನಾನು ಕೂತಿರುವ ಆಸನದಲ್ಲಿಯೇ ನನ್ನ ಶರೀರವು ಒಣಗಿಹೋಗಲಿ ಅಥವಾ ಶರೀರದ ಚರ್ಮ, ಎಲುಬು, ಮಾಂಸ ಮೊದಲಾದವುಗಳೆಲ್ಲಾ ನಾಶವನ್ನು ಹೊಂದಲಿ. ಆದರೆ ಅನೇಕ ಜನ್ಮಗಳಲ್ಲಿಯೂ ದುರ್ಲಭವಾದ ಪ್ರಜ್ಞಾಸ್ವರೂಪವನ್ನು ಪ್ರಾಪ್ತಮಾಡಿಕೊಳ್ಳದೇ ಈ ಆಸನದಿಂದ ಇತಸ್ತತಃ ಈ ದೇಹವನ್ನು ಚಲಿಸಲಿಕ್ಕಿಲ್ಲವೆಂಬ ದೃಢಸಂಕಲ್ಪದಿಂದ ಅಶ್ವತ್ಥವೃಕ್ಷದ ಕೆಳಗೆ (ಕೆಲವರ ವಿಚಾರದಂತೆ ಆಲದವೃಕ್ಷದ ಕೆಳಗೆ) ಆಸನಹಾಕಿ ಘೋರತಪಶ್ಚರ್ಯಾಪೂರ್ವಕ ಯೋಗಾಭ್ಯಾಸಮಾಡಿದನೆಂದು ಹೇಳುವ ಬುದ್ಧಚರಿತ್ರದಿಂದ ಯಾರಿಗೆ ತಾನೆ ಆಗಾಧವೆನಿಸಲಿಕ್ಕಿಲ್ಲಾ? ಇಂಥಾ ಘೋರತಪಸ್ವಿಯೂ ವೇದೋಕ್ತಧರ್ಮಪ್ರಚಾರಕನೂ ಆದ್ದರಿಂದಲೇ ಅವನಿಗೆ ಪ್ರಾಚೀನರು ವಿಷ್ಣುವಿನ ಒಂಭತ್ತನೇ ಅವತಾರವೆಂದು ಕಲ್ಪಿಸಿ ಈ ಬುದ್ಧಾವತಾರವನ್ನು ಪುರಾಣಗಳಲ್ಲಿಯೂ ಪ್ರಾತಃಕಾಲದ ಸ್ತುತಿಗಳಲ್ಲಿಯೂ ಸ್ತುತಿಸುವರು. “ಯಂಶೈವಾಃ ಸಮುಪಾಸತೆ ಶಿವ ಇತಿ ಬ್ರಹ್ಮೇತಿವೇದಾಂತಿನೋ | ಬೌದ್ಧ ಬುದ್ಧಾ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ || ಅರ್ಹನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ || ಸೋಯಂ ವೋವಿದಧಾತುವಾಂಛಿತಫಲಂ ತ್ರೈಲೋಕ್ಯನಾಥೋಹರಿಃ” ಈರೀತಿಯಾಗಿ ಪುರಾಣಗಳಲ್ಲಿಯೂ ಬುದ್ಧದೇವನು ಸಾಕ್ಷಾತ್ ವಿಷ್ಣುದೇವರೆಂದು ಸ್ತುತಿಸಲ್ಪಟ್ಟಿದ್ದು ಸ್ವಯಂ ಬುದ್ಧದೇವನು ಪಾಲೀಭಾಷೆಯಲ್ಲಿ, “ನಾಹಂ ನಹಾತೇನ ಚ ಘಾತಯೇಯ್ಯನಚಾವಿ ಜಞ್ಞಾಹನನಂ ಪತೀಸಂ || ಸಬ್ಬೇಸುಭೂತೇಸುನಿಧಾಯದಂಡಂ ಯೇಥಾವರಾಯೇಚತಸಂತಿ ಲೋಕೇ” ಯಾವ ಪ್ರಾಣಿಯನ್ನು ಎಂದೂ ಹೊಡೆಯಬೇಡ ಮತ್ತು ಹೊಡೆಯಲಿಕ್ಕೆ ಯಾರಿಗೂ ಆಜ್ಞೆ ಮಾಡಬೇಡ. ಯಾವಪರ ಪ್ರಾಣಿಯನ್ನೂ ನಿನ್ನ ಶತ್ರುವನ್ನಾಗಿ ತಿಳಿಯಬೇಡ. ಸ್ಥಾವರವೇ ಆಗಲಿ ಚೇತನವೇ ಆಗಲಿ ಆ ಎಲ್ಲಾ ಪ್ರಾಣಿಮಾತ್ರಕ್ಕೂ ಅಭಯದಾನವನ್ನು ಕೊಡುತ್ತಿರು ಎಂದು ಹೆಜ್ಜೆಹೆಜ್ಜೆಗೂ ಅಹಿಂಸಾಪ್ರತಿಪಾದನಮಾಡುತ್ತ ಕೇವಲ ಭೂತದಯಾಮೂರ್ತಿಯಾಗಿದ್ದ ಬುದ್ಧದೇವನಿಗೆ ಶ್ರೀಯುತ ಬಾಲಗಂಗಾಧರಟಿಳಕಮಹಾಶಯರು ನೂತನವಾಗಿ ರಚಿಸಿದ ತಮ್ಮ ಮೊದಲನೇ ಎಡಿಶನದ ಮರಾಠಿಭಾಷೆಯ ಗೀತಾರಹಸ್ಯದ ಕರ್ಮಯೋಗಪರಿಶಿಷ್ಟ ಪ್ರಕರಣದ 572ನೇ ಪಾನಿನಲ್ಲಿ—(ಇತ್ಯಾದಿವಾಕ್ಯಗಳಿಂದ ಮುಂದೆ ಬರೆಯುತ್ತಾರೆ ಆದರೆ ಅದರ ಭಾಷಾಂತರಮಾಡೇ ಇಲ್ಲಿ ತೋರಿಸುವೆನು) “ಬುದ್ಧನ ಸಮಕಾಲ ಆದರೆ ಅವನಿಗಿಂತಲೂ ಪೂರ್ವದಲ್ಲಿಯೇ ಸಮಾಧಿಸ್ಥನಾದ ಮಹಾವೀರನಾಮಕಕಡೆಯ ಜೈನತೀರ್ಥಂಕರನ ಉಪದೇಶವಾದರೂ ಇದರಂತೆಯೇ ಇರುತ್ತದೆ. ಆದರೆ ಅವನು ಬುದ್ಧನಂತೆ ಅನಾತ್ಮವಾದಿ (ನಿರೀಶ್ವರವಾದಿ) ಇರದೇ ವಸ್ತ್ರಹೊದಿಯುವದೂ ಐಹಿಕಸುಖಗಳ ತ್ಯಾಗಮಾಡುವದೂ ಮತ್ತು ಅಹಿಂಸಾವ್ರತ ರಕ್ಷಿಸುವ ಧರ್ಮವು ಜೈನಯತಿಗಳಲ್ಲಿ ಬುದ್ಧಭಿಕ್ಷುಗಳಿಂದ ಅಧಿಕತೀಕ್ಷ್ಣರೀತಿಯಿಂದ ಪಾಲಿಸುತ್ತಾ ಬಂದಿದ್ದು ಈವತ್ತಿನವರೆಗೂ ಅದರಂತೆ ಪಾಲಿಸುತ್ತಾ ಬಂದಿರುವರು. ಇದೇ ಈ ಎರಡು ಧರ್ಮದೊಳಗಿನ ಒಂದು ಮಹತ್ವದ ಭೇದವಾಗಿರುವದು. ತನಗೆ ತಿನ್ನುವ ಉದ್ದೇಶವಾಗಿ ತಾನೇ ಹೊಡಿಯದೇ ಇದ್ದಂಥಾ ಪ್ರಾಣಿಗಳ “ಪವತ್ತ (ಪ್ರವರ್ತ) ಅಂದರೆ ತಯಾರಮಾಡಿದ ಮಾಂಸ ಆನೆ, ಸಿಂಹ ಮೊದಲಾದ ಕೆಲವು ಪ್ರಾಣಿಗಳನ್ನು ಬಿಟ್ಟು ಬುದ್ಧನು ಸ್ವತಃ ತಿನ್ನುತ್ತಿದ್ದು ಪವತ್ತ ಮಾಂಸ ಮತ್ತು ಮತ್ಸ್ಯ ತಿನ್ನುವುದಕ್ಕೆ ಬೌದ್ಧಭಿಕ್ಷುಗಳಿಗಾದರೂ ಅವನು ಅಪ್ಪಣೆ ಕೊಟ್ಟಿದ್ದಾನೆ, ಮತ್ತು ವಸ್ತ್ರದ ಹೊರತು ನಗ್ನ ತಿರುಗುವುದು ಅಪರಾಧವಿರುವದೆಂದು ಬೌದ್ಧಭಿಕ್ಷುಧರ್ಮದಲ್ಲಿ ನಿಯಮವಿರುವದು. (ಮಹಾವಗ್ಗ 6-31-14 ಮತ್ತು 8-28-1) ಸಾರಾಂಶ ಎಲೈ ಭಿಕ್ಷುಗಳೇ ನೀವು ಅನಾತ್ಮವಾದಿ (ನಿರೀಶ್ವರವಾದಿ) ಭಿಕ್ಷುಗಳಾಗಿರಿ ಎಂದು ಬುದ್ಧನ ನಿಶ್ಚಿತ ಉಪದೇಶವಿದ್ದಾಗ್ಯೂ ಶರೀರಕ್ಲೇಶಮಯವಾದ ಉಗ್ರತಪಶ್ಚರ್ಯೆ ಬುದ್ಧನಿಗೆ ಸಮ್ಮತವಿದ್ದಿಲ್ಲ ಇತ್ಯಾದಿ ಅನೇಕ ರೀತಿ ಬುದ್ಧನ ವಿಷಯಕವೂ ಬೌದ್ಧಧರ್ಮವಿಷಯಕವೂ ಬರೆದಿರುವರು.

ಆದರೆ ಪ್ರಾಣಿಯನ್ನು ಕೊಲ್ಲದ ಹೊರತು ಮಾಂಸ ಸಿಗುವಂತಿಲ್ಲ. ಅಥವಾ ತಾನಾಗಿ ಸತ್ತ ಪ್ರಾಣಿಯ ಮಾಂಸವನ್ನು ಬುದ್ಧನು ತಿನ್ನುತ್ತಿದ್ದನೆಂತ ಹೇಳಿದರೆ ಪ್ರಾಣಿಯಂ ಸ್ವಯಂ ಕೊಲ್ಲಬೇಡ ಕೊಲ್ಲಲಿಕ್ಕೆ ಆಜ್ಞೆ ಕೊಡಬೇಡ ಎಂದು ಸದ್ಬೋಧವನ್ನು ಮಾಡುವ ಬುದ್ಧದೇವನಿಗೆ ವೈರಾಗ್ಯ ಭಿಕ್ಷಾನ್ನವು (ವನಸ್ಪತಿಮಯವಾದದ್ದು) ಸಿಗುತ್ತಿದ್ದಿಲ್ಲವೋ ಹ್ಯಾಗೆ? ಮಾಂಸತಿನ್ನುವ ನಿಮಿತ್ತದಿಂದಲೇ ಯಜ್ಞಯಾಗಾದಿ ಕ್ರಿಯೆಗಳ ಆಡಂಬರವನ್ನು ಹಬ್ಬಿಸುತ್ತಿದ್ದ ಬ್ರಾಹ್ಮಣರ ಹಾವಳಿಯನ್ನು ತಪ್ಪಿಸುವ ಉದ್ದೇಶದಿಂದ ರಾಜ್ಯೈಶ್ವರ್ಯವನ್ನು ತೃಣಸಮಾನ ತ್ಯಾಗಮಾಡಿ ಮಹಾಯೋಗಿಯಾದ ಬುದ್ಧದೇವನು ಹ್ಯಾಗೆ ಮಾಂಸವನ್ನು ತಿಂದನೋ ಮತ್ತು ತಿನ್ನಲಿಕ್ಕೆ ಆಜ್ಞೆಯನ್ನು ಕೊಟ್ಟನೋ? ಇದು ಶ್ರೀಯುತ ಟಿಳಕರಂಥ ವೈಚಿತ್ರ್ಯ ವೈದುಷ್ಯಯುತವಾದ ಬ್ರಾಹ್ಮಣಬುದ್ಧಿಗೇನೇ ಗೋಚರವಲ್ಲದೆ ಅನ್ಯರಿಗೆ ಸರ್ವಥಾ ಗೋಚರವಾಗಲಾರದು. (ಸಶೇಷ.)

೧೯೨೬ ನೆಯ ಇಸವಿ ಜುಲೈ ತಾ|| ೩೧ ರಿಂದ ೧೯೨೬ ನೆಯ ಇಸವಿ ಆಗಸ್ಟ ತಾ|| ೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಆಷಾಢ ಬಹುಳ ಸಪ್ತಮಿಯಿಂದ ಆಷಾಢ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾಮಾಸ
31	ಶನಿ	ಸಪ್ತ	30-40	ಅಶ್ವಿ	52-3	16
1	ಭಾನು	ಅಷ್ಟ	26-26	ಭರ	50-4	17
2	¹ಸೋಮ	ನವ	23-6	ಕೃತ್ತಿ	48-58	18
3	ಮಂಗಳ	ದಶ	20-50	ರೋಹಿ	49-1	19
4	ಬುಧ	ಏಕಾ	19-46	ಮೃಗ	50-16	20
5	ಗುರು	ದ್ವಾದ	19-56	ಆರ್ದ್ರಾ	52-46	21
6	²ಶುಕ್ರ	ತ್ರಯೋ	21-23	ಪುನ	56-35	22

(1) ಮಳೇನಕ್ಷತ್ರ-ಆಶ್ಲೇಷ ೧ ನೆಯ ಪಾದ, ಪದಿನಟ್ಟಾಂಪರಕಾ.
(2) ಮಳೇನಕ್ಷತ್ರ-ಆಶ್ಲೇಷ ೨ ನೆಯ ಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ, ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧ್ವನ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಆಗಸ್ಟ್ ತಾರೀಖು ೭ ನೆಯ ಶನಿವಾರ. [ಸಂಚಿಕೆ ೩೨

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ತಲೆತಿರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ	ಮಕ್ಕಳ
ಶೀತ, ನೆಗಡಿ,	ಮಂದ, ಎಳವು,
ಶೀತವಾತ, ಜ್ವರ,	ಜ್ವರಗಳು, ವಾಯು,
ಚಳಿಜ್ವರ, ಕೆಮ್ಮಲು,	ಕೆಮ್ಮಲು, ಮಲಬದ್ಧ,
ಮಲಬದ್ಧ, ಅಜೀರ್ಣ,	ಹೊಟ್ಟೆನೋವು
ಹೊಟ್ಟೆನೋವು,	ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
ಇಂಫ್ಲುಯೆಂಜಾ	
ಪ್ಲೇಗುಜ್ವರ	30

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಬೊಳ್ಳದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—8] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರೇಶ್ವರಚರಿತ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಶಾಲಿವಾಹನ ಟಿಕಪಟ್ಟ ಮಂಜರಿ	೦—೮—೦	೦—೧೩—೦
ಸಟೀಕ [illegible]	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ [illegible]	೧—೦—೦	೧—೬—೦

ಸತ್ಯವೇಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧಿಃಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಆದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಸಾಲಮಕಂದ, ಮಧುಕಂದ, ಜಠಾಕಂದ, ಶಾಲೀಮುಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಬೋರಿ, ಮುಂಗಲೇಬೇದಾಣೆ, ಮರ್ದಸೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಆವಳಕಾಟ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಶರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತೀಕಮಾಸದತನಕ ಕಡಿಮೆ ದರದಿಂದ ೫|| ರೂ. ಗೆ ಸಿಗುವದು. ೩ ಡಬ್ಬಿಗೆ ೧೫| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—3] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಅಂತಹ್ಯ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ವಿಷಯವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಟಪಟ್ಟಿ ಕಳುಹಿಸಲಾಗುವುದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್.

[50—ಟ] ಪೋ. ಬಾ. ಸೆಂ, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮನೆಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಟ್ಟದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನೆಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO.,
BENARES CITY.

ನಮ್ಮಲ್ಲಿ ಜರತಾರಿ ರೇಶ್ಮೆ ಸೀರೆ ಮೊಗಟೆ, ಜರಿ ಸಾದಾ ಶೀಲೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ಕಾಶೀ ಕಸ್ತೂರಿ, ಜರ್ಮನ್ ಪ್ರಿಂಟ್ ಪಟಗಳು, ಸಾಲಿಗ್ರಾಮ, ಹಿತ್ತಾಳೆ ಮತ್ತು ಕಂಚಿನ ಸಾಮಾನುಗಳು, ಸಾಲಿಗ್ರಾಮ, ಸುವರ್ಣಮುಖಿಗಳು ಇವೇ ಮುಂತಾದ ಮಾಲುಗಳನ್ನು ಕೊಡುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಈ ಮಾಲುಗಳ ವರ್ಣನೆ ಕ್ಯಾಟಲಾಗನ್ನು ಕೇಳುವವರಿಗೆ ಉಚಿತವಾಗಿ ಕಳುಹಿಸಲಾಗುವುದು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

NOTICE.

Wanted a B.E., or L.C.E., or a B.A., B.E., or B.A., L.C.E., of a recognized University having previous experience of Municipal Administration, office management and of Civil Engineering to act as Chief Officer of the Dharwar Municipality on a monthly salary of Rs. 250 to 300 with conveyance allowance. Applications stating age and previous experience with testimonials should be addressed to the Chairman Standing Committee so as to reach him before 15th August 1926.

Dharwar Municipal Office,
19th July, 1926.

A. F. PATHAN,
President,
Dharwar Municipality.

ಅಖಿಲಭಾರತವೀರಶೈವಮಹಾಸಭಾ
ಚಿರಸ್ಥಾಯಿಫಂಡು.

ನೋಟೀಸ್

1916 ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಯಾವನಾದರೂ ಒಂದು ಮುಖ್ಯವಾದ ಸ್ಥಳದಲ್ಲಿ ಶ್ರೀಮದ್ವೀರಶೈವಮಹಾಸಭೆಯನ್ನು ಕೂಡಿಸಲು ಅಪೇಕ್ಷಿಸುವ ವೀರಶೈವಪ್ರಮುಖರು ಸ್ಥಳದ ಜನರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮಹಾಸಭೆಯನ್ನು ನಡೆಯಿಸಲು ಉದ್ಯುಕ್ತವಡುವದಾದರೆ ಅಖಿಲಭಾರತವೀರಶೈವಚಿರಸ್ಥಾಯಿಫಂಡಿನಿಂದ ಅದರ ನಿಬಂಧನೆಗಳಿಗೆ ಒಳಪಟ್ಟು ಸೂಕ್ತವಾದ ದ್ರವ್ಯಸಹಾಯವನ್ನು ಮಾಡುವದಾಗುತ್ತದೆ. ಮಹಾಸಭಾನಡೆಯಿಸಬೇಕೆಂದಿರುವ ಮಹನೀಯರು ಕಾಲವಿಳಂಬಮಾಡದೆ ಮೇಲ್ಕಂಡ ಕ್ರಮವರಿತು ಅರ್ಜಿಯನ್ನು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ದಯೆಯಿಟ್ಟು ಕಳುಹಿಸಿಕೊಡಬೇಕೆಂದು ಇದರಿಂದ ಸಮಸ್ತ ವೀರಶೈವರಿಗೂ ತಿಳಿಸಿರುತ್ತದೆ.

ರಾಜಸಭಾಭೂಷಣ ದಿವಾನ್ ಬಹದ್ದೂರ್
ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ.,
ಛೇರ್ ಮನ್,
ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡ್,
ತಾ|| 24-7-26. ಬೆಂಗಳೂರುಸಿಟಿ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಗಸ್ಟ್ ತಾ|| ೭ ನೆಯ ಶನಿವಾರ.

NANJANGUD—C. NAGAR RAILWAY.
PRESIDENT'S ARRANGEMENTS.

We are credibly informed that His Highness the Maharaja will be performing the opening ceremony of the New Railway line between Nanjangud and Chamarajnagar which has been constructed by the Mysore District Board, on the 27th of August 1926. We have no doubt that arrangements for the reception of His Highness and the other distinguished visitors must be going on briskly especially with a President such as Mr. A. V. Ramanathan who is fairly liberal on all such occasions. It is the District Board that is to incur the necessary expenditure and responsible for the arrangements. But we are afraid that its President so identifies himself with the Board that it is more than doubtful if he has either placed an approximate estimate of the expenditure on this account before the District Board or taken any members of the Board into his confidence for making the arrangements. The proper thing in such a case would have been to form a sub-committee of the District Board with sufficient non-official strength on it, for, this is a matter with which the non-officials should have more to do than the Government servants. It would appear that an address with a casket will be presented to His Highness on the occasion. This, we need hardly say, is but appropriate. The members of the Board are to be thankful to the President for letting them know of the proposal to present a casket and of its probable cost, which we expect to have met with their heartiest approval. But further than that they seem to be thoroughly ignorant. It seems that the draft address has been prepared and sent to Government or His Highness for approval. But could it be said that it has been shown to any members or that any of them know anything of the contents of the same. We may suggest the desirability of presenting addresses not only in English, but also in Kannada and Hindustani. We have had to make these suggestions because it is only proper that the representatives of the District on the Board should be taken fully into confidence in matters such as these and that officials no matter what important part they play should keep in the background.

ಸಂಪದಭಿವೃದ್ಧಿಸಮಾಜೋದ್ಧಾರ.

ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ ಪ್ರಜೆಗಳ ಆಡಳಿತಕ್ಕೆ ವಹಿಸಲ್ಪಡುವುದಕ್ಕೆ ಪೂರ್ವ ಸರ್ಕಾರಿಯಾಡಳಿತದಲ್ಲಿದ್ದ ಪ್ರಯುಕ್ತ ಅವುಗಳಿಂದ ಪ್ರಜೆಗಳ ಸಂಪದಭಿವೃದ್ಧಿಕಾರ್ಯಗಳು ಧಾರಾಳವಾಗಿಯೂ, ಸಮರ್ಪಕವಾಗಿಯೂ ನಡೆಯಲವಕಾಶವಿರಲಿಲ್ಲವೆಂಬುದರಮೇಲೆ ಸರ್ ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಪ್ರಜೆಗಳ ಆರ್ಥಿಕಾಭಿವೃದ್ಧಿಗೋಸ್ಕರವಾಗಿ ಈ ಸಂಪದಭಿವೃದ್ಧಿಸಮಾಜವೇರ್ಪಟ್ಟಿತು. ಈ ಸಮಾಜವು ತನ್ನ ಉತ್ಪಾದಕರಕಾಲದಲ್ಲೂ, ಅನಂತರ ಕೆಲಕಾಲದವರೆಗೂ ಬಹಳವಾಗಿ ಆರ್ಭಟಿಸುತ್ತಿದ್ದು ಈಚೆಗೆ ತಣ್ಣಗಾಗಿದ್ದಿತು. ಆದರೆ ನಮ್ಮ ನೂತನ ಮಂತ್ರಿವರ್ಯರಾದ ಮಿ|| ಮಿರ್ಜಾಯವರು ಕಳೆದ ತಾ|| 23 ರಲ್ಲಿ ಈ ಸಂಪದಭ್ಯುದಯಸಮಾಜದ 16 ನೆಯ ಅಧಿವೇಶನವನ್ನು ತಮ್ಮ ಅಧ್ಯಕ್ಷತೆಯಲ್ಲಿ ನಡಿಸಿ ಈ ಸಮಾಜೋದ್ಧಾರದ ಅವಶ್ಯಕತೆಯನ್ನು ಕುರಿತು ಪ್ರಸ್ತಾಪಿಸುವಾಗ್ಗೆ, ಈ ಸಮಾಜಕಾರ್ಯಾನುಭವಮಾಡಿಕೊಳ್ಳುವುದರಲ್ಲೇ 8 ವರ್ಷಗಳು ಕಳೆದುದರಿಂದ ವಿಶೇಷ ದ್ರವ್ಯವ್ಯಯವಾಗಲು ಕಾರಣವಾಯಿತೆಂದೂ, ಇತಃಪರ ಅಷ್ಟು ದ್ರವ್ಯವ್ಯಯವಿಲ್ಲದೆ ಪ್ರಜೆಗಳ ಆರ್ಥಿಕಾಭಿವೃದ್ಧಿಗೊಳಿಸಬಹುದೆಂದೂ, ಈ ಪ್ರಯತ್ನಗಳಲ್ಲಿ ಸಹಕರಿಸುವುದು ಸರ್ಕಾರದವರ ಮುಖ್ಯಕರ್ತವ್ಯವಾದುದರಿಂದ ಈ ಸಮಾಜದ ಕಾರ್ಯವು ಚುರುಕಾಗಿಯೂ ಸಮರ್ಪಕವಾಗಿಯೂ ನಡೆಯಲು ಒಬ್ಬ ಸೆಕ್ರೆಟರಿಯ ಮತ್ತು ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರುಗಳ ನಿಯಾಮಕವು ಅತ್ಯಾವಶ್ಯಕವೆಂದೂ ಅಪ್ಪಣೆಕೊಡಿಸಿ ಈ ಕಾರ್ಯನಿರ್ವಾಹಕ್ಕಾಗಿ ಸದ್ಯದಲ್ಲಿ 1 ಲಕ್ಷ ರೂಪಾಯಿಗಳನ್ನು ಕೊಡಲು ವಾಗ್ದಾನಮಾಡಿದರು. ಈ ಸಮಾಜದಿಂದ ಯಾವ ಯಾವ ಅರ್ಥಸಾಧಕ ಕಾರ್ಯಗಳು ನಡೆದು ಪ್ರಜೆಗಳು ವ್ಯವಸಾಯ ಕೈಗಾರಿಕೆ ವ್ಯಾಪಾರಾದಿಕಸಬುಗಳಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿಯನ್ನು ಹೊಂದಿ ಶ್ರೀಮಂತರಾದರೆಂಬುದನ್ನೂ, ಇದು ತಟಸ್ಥವಾದಿಂದೀಚೆಗೆ ಅರ್ಥಾಭಿವೃದ್ಧಿಕಾರ್ಯಗಳು ನಿಂತುಹೋಗಿ ಪ್ರಜೆಗಳು ಎಷ್ಟು ನಷ್ಟಪಟ್ಟರೆಂಬುದನ್ನೂ ನಿದರ್ಶನಪೂರ್ವಕವಾಗಿ ತಿಳಿಸಿ ಮತ್ತು ಪ್ರಜಾಭಿಪ್ರಾಯವನ್ನು ಕೇಳಿ ಈ ಸಮಾಜದ ಪುನರುದ್ಧಾರಕ್ಕೆ ಪ್ರಯತ್ನಪಟ್ಟಿದ್ದಲ್ಲಿ ಉತ್ತಮವಾಗಿರುತ್ತಿದ್ದಿತು. ನಾವು ತಿಳಿದಮಟ್ಟಿಗೆ ಈ ಸಂಪದಭಿವೃದ್ಧಿಸಮಾಜದಿಂದ ಕೈಗಾರಿಕೆ ಮತ್ತು ವ್ಯಾಪಾರಾಭಿವೃದ್ಧಿಗಾಗಿ ಹಣವು ಸಾಲವಾಗಿ ಕೊಡಲ್ಪಟ್ಟುದರ, ಕೊಟ್ಟ ಹಣದಲ್ಲಿ ಬಹುಭಾಗವು ಹಿಂದಿರುಗಿ ಬರುವುದು ಕಷ್ಟವಾದುದರಿಂದ ಮನ್ನಿಸಲ್ಪಟ್ಟುದರ, ಮತ್ತು ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಸ್ಥಳಗಳಲ್ಲಿ ವರ್ಷಕ್ಕೊಂದಾವರ್ತಿಯೋ ಎರಡಾವರ್ತಿಯೋ ಸಭೆಗಳು ನಡಿಸಲ್ಪಟ್ಟು ಊಟ ಉಪಚಾರಾದಿಗಳಿಗೆ ದ್ರವ್ಯವು ಹೇರಳವಾಗಿ ವ್ಯಯಮಾಡಲ್ಪಟ್ಟುದರ ವಿನಾ ಮತ್ತಾವ ಶಾಶ್ವತಪ್ರಯೋಜನಕಾರ್ಯಗಳೂ ನಡಿಸಲ್ಪಟ್ಟದಿಲ್ಲವು. ಕೈಗಾರಿಕೆ ವ್ಯಾಪಾರಾದಿಗಳಲ್ಲಿ ಆರ್ಥಿಕಾಭಿವೃದ್ಧಿಯನ್ನು ಹೊಂದಿರುವ ಯಾವ ದೇಶವೂ ಸಂಪದಭಿವೃದ್ಧಿಸಮಾಜದ ಮೂಲಕವೇ ಅಭಿವೃದ್ಧಿಯಾಗಿರುತ್ತದೆಂದು ಹೇಳಲಾಗುವುದಿಲ್ಲವಾದುದರಿಂದ ನಮ್ಮ ದೇಶದ ಸಂಪತ್ತು ಈ ಸಮಾಜದ ಸಹಾಯದಿಂದಲೇ ಅಭಿವೃದ್ಧಿಯಾಗಬೇಕೆಂದು ಹೇಳುವುದು ಹೇಗೆ? ಕುಡಿಯುವನೀರು, ತಿರುಗಾಡುವ ಮಾರ್ಗ, ಓದುವ ಶಾಲೆ ಮೊದಲಾದ ಪ್ರಜೋಪಯುಕ್ತ ಕಾರ್ಯಗಳನ್ನು ನೆರವೇರಿಸಿಕೊಡುತ್ತಿರುವ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಪ್ರಜೆಗಳ ಕುಂದುಕೊರತೆಗಳನ್ನು ಅರಿತು ಅವುಗಳನ್ನು ನಿವಾರಣೆಮಾಡಿ ಅವರ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಅವಕಾಶವೂ ಸಾಮರ್ಥ್ಯವೂ ಹೆಚ್ಚಾಗಿರುವುದರಿಂದ ಅವುಗಳಿಗೆ ಬೇಕಾದಷ್ಟು ಉತ್ತೇಜನಕೊಡಲ್ಪಟ್ಟಲ್ಲಿ ವೃಥಾ ಹೆಚ್ಚು ದ್ರವ್ಯನಷ್ಟಕ್ಕೆ ಅವಕಾಶವಿಲ್ಲದೆ ತಮ್ಮ ಪ್ರಜೆಗಳ ಸಂಪದಭಿವೃದ್ಧಿಯಾಗಬೇಕೆಂಬ ಪ್ರಭುತ್ವದವರ ಸತ್ಸಂಕಲ್ಪವು ನೆರವೇರಲು ಅಭ್ಯಂತರವಿರುವುದಿಲ್ಲ. ನಮ್ಮ ದಿವಾನರು ಯಾವ ಭರವಸೆಯಿಂದಲೋ ಸಂಪದಭಿವೃದ್ಧಿಸಮಾಜವನ್ನು ಪುನರುದ್ಧಾರಗೊಳಿಸಿ ಅದರ ಕಾರ್ಯಕಲಾಪಗಳಿಗಾಗಿ ವಿನಿಯೋಗಿಸಲು ಗೊತ್ತುಮಾಡಿರುವ ದ್ರವ್ಯವು ಮೊದಲಿನಂತೆ ಆಡಂಬರಗಳಿಗೂ, ಗಗನಕುಸುಮದಂತೆಯೂ ಕನ್ನಡಿಯೊಳಗಣ ಗಂಟಿನಂತೆಯೂ ಇರುವ ಕಾರ್ಯಗಳಿಗೂ ವ್ಯಯವಾಗದೆ ಜನರ ನಿಜವಾದ ಸಂಪದಭಿವೃದ್ಧಿಕಾರ್ಯಗಳಿಗೆ ವಿನಿಯೋಗವಾಗಿ ತಮ್ಮ ಸಂಕಲ್ಪಸಿದ್ಧಿಸುವಂತೆ ಮಾಡುವಲ್ಲಿ ವ್ಯಗ್ರರಾಗಿರಬೇಕೆಂದು ಸೂಚಿಸುತ್ತೇವೆ.

ಹೈದರಾಬಾದಿನ ನೈಜಾಂರವರಮೇಲೆ ಆಕ್ಷೇಪ.

ನೈಜಾಂರವರು ಸ್ವಮತಾಭಿಮಾನಾವೇಶದಿಂದ ಪರಮತೀಯರಿಗೆ ಕೊಡುತ್ತಿರುವ ಉಪಟಳವು ಸಹಿಸಲಶಕ್ಯವಾಗಿದೆಯೆಂಬ ದೂರು ಇತ್ತೀಚೆಗೆ ಬಹಳ ಪ್ರಬಲವಾಗುತ್ತಿದೆಯಷ್ಟೆ? ಆದರೆ ಈಗ ಬ್ರಿಟಿಷ್ ಪ್ರಭುತ್ವದವರು ನೈಜಾಂರವರ ರಾಜ್ಯಾಡಳಿತವಿಚಾರದಲ್ಲಿ ಬೇಸರಗೊಂಡು (1) ಉದ್ಯೋಗಗಳವಿಕ್ರಯ, ಲಂಚ, ನ್ಯಾಯವಿಮರ್ಶೆಯಲ್ಲಿ ಪಕ್ಷಪಾತ, ಸಹೋದರ ಸಹೋದರೀಯರನ್ನೂ, ಸಾಮಂತರಾಜರುಗಳನ್ನೂ, ಭೂಸ್ವಾಮಿಗಳನ್ನೂ ಹಿಂಸಿಸುವುದು ಇತ್ಯಾದಿ ದುರ್ವರ್ತನೆಗಳು ಉತ್ಕಟಾವಸ್ಥೆಗೆ ಬಂದಿರುತ್ತವೆ. ಭರತಖಂಡದಲ್ಲೂ ಹೊರಗಡೆಯಲ್ಲೂ ನಡೆಯುವ ಮಹಮ್ಮದೀಯ ಸಮಾಜಕಾರ್ಯಗಳಿಗಾಗಿ ಲಕ್ಷಾಂತರರೂಪಾಯಿ ವೆಚ್ಚಮಾಡಲ್ಪಡುತ್ತಿದೆ. ಐರೋಪ್ಯಾಧಿಕಾರಿಗಳು ಬಿಟ್ಟು ಹೋಗಲೆಂದು ಉದ್ಯೋಗದ ಗೌರವವೇ ಹಾಳುಮಾಡಲ್ಪಡುತ್ತಿದೆ ಎಂಬ ದೂರು ಪ್ರಬಲವಾಗಿ ನಮ್ಮಲ್ಲಿಗೆ ಬರುತ್ತಿದೆಯಾದುದರಿಂದ ನೈಜಾಂರವರು (1) ನಜರಾನಾ ಮೊದಲಾದ ಕಾಣಿಕೆಗಳನ್ನು ಸುತರಾಂತೆಗೆದುಕೊಳ್ಳಕೂಡದು (2) ನೈಜಾಂರವರ ಅಪ್ಪಣೆಯಾಗಿದೆಯೆಂದು ಜನರನ್ನು ಹಿಂಸಿಸುವ ತಾಲ್ಲೂಕುದಾರರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕು. (3) ಕೌನ್ಸಿಲ್ ಪ್ರೆಸಿಡೆಂಟರು, ಅರ್ಥಿಕ ಮತ್ತು ರೆವಿನ್ಯೂ ಮೆಂಬರುಗಳ ಸ್ಥಳಗಳಿಗೂ ಪೋಲೀಸು ಡೈರೆಕ್ಟರ್ ಜನರಲ್‌ರವರ ಉದ್ಯೋಗಕ್ಕೂ ಐರೋಪ್ಯನರನ್ನು ನಿಯಮಿಸತಕ್ಕದು. (4) ಮೈನರ್ ಜಹಗೀರುದಾರರಿಗೂ ಅವರ ಆಸ್ತಿಗಳಿಗೂ ಇರುವ ತೊಂದರೆಯನ್ನು ತಪ್ಪಿಸಿ ಅವರಿಗೆ ಒಳ್ಳೆಯದನ್ನು ಮಾಡುವುದು. (5) ಸಂಸ್ಥಾನದ ಆಡಳಿತವನ್ನು ತಕ್ಕಕ್ರಮದಿಂದ ನಡಿಸುವುದು. ಇತ್ಯಾದಿ ವಿಷಯಗಳನ್ನು ವೈಸ್‌ರಾಯರು ನೈಜಾಂರವರಿಗೆ ಬರೆದು ಈ ಆಗಸ್ಟ್ ತಾ|| 20 ರೊಳಗೆ ತತ್ಕಾಲೋಚನೆಯಿಂದ ಸರಿಯಾದುತ್ತರವನ್ನು ಕೊಡಬೇಕೆಂದೂ, ಹಾಗೆ ಕೊಡದಿದ್ದಲ್ಲಿ ಒಂದು ಕಮಿಷನನ್ನು ಏರ್ಪಡಿಸಲ್ಪಟ್ಟು ಅದರ ಮೂಲಕ ವಿಚಾರಣೆ ನಡಿಸಲ್ಪಡುವುದೆಂದೂ ತಿಳಿಸಿರುವುದಾಗಿ ಕೆಲ ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದರ ನಿಜಾಂಶವು ಮುಂದೆ ತಿಳಿಯತಕ್ಕದಾಗಿದೆ.

ಸ್ವದೇಶದ ವೃತ್ತಾಂತಗಳು.

ಮೈಸೂರು ಡಿ|| ಕಮಿಷನರು ಈ ತಾ|| 9 ರಿಂದ 12 ರ ವರೆಗೆ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಸಂಚರಿಸಿಕೊಂಡುಬರುವವರಾಗಿರುವರು.

ಶ್ರೀಮನ್ಮಹಾರಾಜರವರ ಸ್ವಾರಿಯು ವಿಡಿಕಾಂಗ್ ಮಿ|| ಪಾರವರೊಡನೆ ಕಳೆದ ಭಾನುವಾರ ಮಧ್ಯಾಹ್ನ ಬೆಂಗಳೂರಿಗೆ ಚಿತ್ತೈಸಿತು, ಮತ್ತು ಉಪಾಕರ್ಮಕ್ಕಾಗಿ ತಾ|| 20 ರಲ್ಲಿ ರಾಜಧಾನಿಗೆ ಚಿತ್ತೈಸುವುದಾಗಿರುವುದು.

ಹಂಸಪಕ್ಷಿಗಳು ಸಾಮಾನ್ಯವಾಗಿ ಬೆಳ್ಳಗಿರುವವಷ್ಟೆ. ಆದರೆ ಈಗ ನಮ್ಮ ಶ್ರೀಮನ್ಮಹಾರಾಜರವರು 1,000 ರೂ. ಗಳನ್ನು ಕೊಟ್ಟು ಅಚ್ಚಕಪ್ಪುಬಣ್ಣದ ನಾಲ್ಕುಹಂಸಪಕ್ಷಿಗಳನ್ನು ಸೀಮೆಯಿಂದ ತರಿಸಿ ರಾಜಧಾನಿಯ ಪ್ರಾಣಿಪ್ರದರ್ಶನಾಲಯದಲ್ಲಿಡಿಸಿರುವರು.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿರುವ ಒಂದು ಕ್ರಿಮಿನಲ್ ಕೇಸಿನಲ್ಲಿ ಸಿವಿಲ್ ಕೋರ್ಟು ಸರ್ವೆಂಟ್ ನರಸಿಂಹಗೌಡನೆಂಬುವವನು ಸಾಕ್ಷಿನುಡಿಯುವಾಗ್ಗೆ ಅವಿಧೇಯತೆಯಿಂದ ನಡೆದುಕೊಂಡುದಕ್ಕಾಗಿ ಮ್ಯಾಜಿಸ್ಟ್ರೇಟರು ಅವನಿಗೆ 25 ರೂ. ಅರ್ಥ ದಂಡವನ್ನು ವಿಧಿಸಿದರು.

ನಮ್ಮ ದಿವಾನರು ಬಿಕನೀರ್‌ಸಂಸ್ಥಾನದ ಮಹಾರಾಜರವರಿಂದ ಆಮಂತ್ರಿತರಾಗಿ ಈ ತಾ|| 11 ರಲ್ಲಿ ಬಿಕನೀರಿಗೆ ಮ|| ಸಿ. ಎಸ್. ಬಾಲಸುಂದರಂಅಯ್ಯರ್‌ರವರು ಮತ್ತು ಪ್ರೈವೆಟ್ ಸೆಕ್ರೆಟರಿ ಮ|| ಎಂ. ಎಸ್. ರಾಮಚಂದ್ರರಾಯರು ಇವರುಗಳೊಡನೆ ಪ್ರಯಾಣಮಾಡಿ ಒಂದುಪಕ್ಷದವರೆಗೆ ಅಲ್ಲಿದ್ದು ಬರುವವರಾಗಿರುವರು.

ಹಾಸನದ ಮುನ್ಸೀಫರಾದ ಮ|| ಎಚ್. ನಂಜುಂಡಯ್ಯ ಬಿ.ಎ.,ಬಿ.ಎಲ್., ರವರು 1 ತಿಂಗಳು 10 ದಿವಸಗಳ ಫರ್ಲೋ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಲೆ|| ಕೌನ್ಸಿಲ್ ಮೆಂಬರರಾದ ತುಮಕೂರಿನ ಅಡ್ವೊಕೇಟ್ ಮ|| ಜೆ. ರುದ್ರಪ್ಪ, ಎಂ.ಎ.,ಎಲ್‌ಎಲ್.ಬಿ., ಯವರು ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಟಿ. ನರಸೀಪುರ ತಾ|| ದಣಾಯಕನಪುರದ ಕೊಲೆಮೊಖದ್ದಮೆಯಲ್ಲಿ ಅಪರಾಧಿಗಳಾದ ಇಬ್ಬರು ಅರಸುಗಳಲ್ಲಿ ತಂದೆಗೆ 2 ತಿಂಗಳ ಸಾಮಾನ್ಯಕಾರಾಗೃಹವಾಸಶಿಕ್ಷೆಯೂ ಮಗನಿಗೆ 3 ವರ್ಷಗಳ ಕಠಿಣಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿದ್ದುದರಮೇಲೆ, ಈ ಶಿಕ್ಷೆಯು ಅಪರಾಧಕ್ಕೆ ತಕ್ಕಂತಿಲ್ಲದೆ ಕಡಿಮೆಯಾಗಿರುವುದೆಂದು ಪೋಲೀಸಿನವರು ಚೀಫ್ ಕೋರ್ಟಿಗೆ ಅಪೀಲನ್ನು ಮಾಡಿರುತ್ತಾರೆ.

ರಾಜಧಾನಿಯ ಶ್ರೀಕೃಷ್ಣರಾಜೇಂದ್ರಮಿಲ್ಸಿನ ಷೇರುದಾರರ 5 ನೇ ವಾರ್ಷಿಕ ಮೀಟಿಂಗು ಆಗಸ್ಟ್ ತಾ|| 21 ನೇ ಶನಿವಾರ ಮಧ್ಯಾಹ್ನ 4½ ಘಂಟೆಗೆ ಧರ್ಮಪ್ರಕಾಶ ಡಿ|| ಬನುಮಯ್ಯನವರ ಹೈಸ್ಕೂಲುಕಟ್ಟಡದಲ್ಲಿ ನಡೆಯುವುದು. 1926ನೇ ಜನವರಿಯಿಂದ ಜೂನ್ ಕಡೆಯವರೆಗೆ ಒಟ್ಟು 1,18,000 ರೂ. ಹುಟ್ಟುವಳಿಯಾಗಿ 38,000 ರೂ. ನಿವ್ವಳ ಆದಾಯವು ಬಂದಿರುವುದೆಂದು ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಕಳೆದ ಮಂಗಳವಾರ ಮಧ್ಯಾಹ್ನ 1-3 ಘಂಟೆಯಕಾಲ ಮಳೆಯಾಗಿ ಕಳೆದ ಗುರುವಾರದವರೆಗೂ ಜಡಿಹಿಡಿದಿದ್ದು ನೆನ್ನೆಯಿಂದ ವಿರಾಮಕೊಟ್ಟಿದೆ, ಆದರೂ ಮಧ್ಯ ಮಧ್ಯ ಸಾಧಾರಣ ಹನಿಗಳುದುರುತ್ತಿರುತ್ತವೆ. ಕೊಡಗಿನಲ್ಲಿ ಮಳೆಯಾಗುತ್ತಿರುವುದರಿಂದ ಕಾವೇರೀನದಿಯಲ್ಲಿ ಪ್ರವಾಹವು ಕೊಂಚ ಹೆಚ್ಚಾಗಿ ಬಂದಿರುತ್ತದೆ. ಬೆಂಗಳೂರು ಮೊದಲಾದ ಕಡೆಗಳಲ್ಲಿ ತುಂತುರುಮಳೆಯೇ ಹೊರತು ದೊಡ್ಡ ಮಳೆಯಾಗಿಲ್ಲವಂತೆ.

ರಾಜಧಾನಿಯ ಚಾಮುಂಡೇಶ್ವರೀಕರ್ನಾಟಕನಾಟಕಸಭೆಯ ಮ|| ಎಂ. ಕೃಷ್ಣಮೂರ್ತಿರಾಯರು ಶ್ರೀಮನ್ಮಹಾರಾಜರವರ ಸಮುಖದಲ್ಲಿ ನಾಟಕಗಳನ್ನು ಅಭಿನಯಿಸಿದ ವೇಳೆಯಲ್ಲೂ, ಕಳೆದ ತಾ|| 31 ನೇ ಶನಿವಾರ ಚಾಮುಂಡೀಜಂಬಾನಾ ಬೈಲಿನಲ್ಲಿ ಮೋಹಕಮ್ಮಿನ ಬೈರಾಗಿಯ ವೇಷವನ್ನು ಧರಿಸಿದ್ದಾಗಲೂ ಪ್ರದರ್ಶಿಸಿದ ಹಾಸ್ಯರಸನೈಪುಣ್ಯಕ್ಕೆ ಮಹಾಪ್ರಭುಗಳು ಮೆಚ್ಚಿ ಅವರಿಗೆ ಕೋರ್ಟ್‌ಬಫೂನ್ ಅಂದರೆ ಆಸ್ಥಾನವಿದೂಷಕನೆಂಬ ಪ್ರಶಸ್ತಿಯನ್ನು ದಯೆಪಾಲಿಸಿ ಸಂಬಳ ಮಾಡಿಕೊಟ್ಟಿರುವುದಾಗಿ ಕೇಳಿ ಸಂತೋಷಿಸುತ್ತೇವಲ್ಲದೆ, ಅವರು ಮಹಾಸ್ವಾಮಿಯವರ ಚಿತ್ತಾಕರ್ಷವನ್ನು ಮಾಡಿ ಇತೋಪ್ಯತಿಶಯವಾದ ಬಹುಮಾನವನ್ನು ಪಡೆಯಲೆಂದು ಕೋರುತ್ತೇವೆ.

ಭರತಖಂಡದ ಯಾವ ಮುಖ್ಯಸ್ಥಳದಲ್ಲಾದರೂ ವೀರಶೈವಮಹಾಸಭೆಯನ್ನು ನಡಿಸಲಿಷ್ಟವುಳ್ಳವರು ವೀರಶೈವಮಹಾಸಭಾಚಿರಸ್ಥಾಯಿಫಂಡಿನಿಂದ ಸಹಾಯವನ್ನು ಕೋರಿ ಅದರ ಪ್ರೆಸಿಡೆಂಟರಿಗೆ ಬರೆದುಕೊಂಡಲ್ಲಿ ನಿಬಂಧನೆಗನುಸಾರವಾಗಿ ದ್ರವ್ಯಸಹಾಯಮಾಡಲ್ಪಡುತ್ತದೆಂದು ಚಿರಸ್ಥಾಯಿಫಂಡಿನವರು ಪ್ರಕಟಿಸಿರುವ (ಈ ಆಗಸ್ಟ್ ತಾ|| 3 ರಲ್ಲಿ ನಮ್ಮ ಕೈಸೇರಿರುವ) ನೋಟೀಸು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿಸಲ್ಪಟ್ಟಿರುತ್ತದೆ. ಮೈಸೂರಿನವರು ಮಹಾಸಭೆಯನ್ನು ಮಾಡುವುದಿಲ್ಲವೆಂದು ಪ್ರಕಟಿಸಿದರೆ ಇತರ ಕಡೆಯವರು ಮಹಾಸಭೆಯನ್ನು ನೆರೆಯಿಸಲು ಪ್ರಯತ್ನಿಸುತ್ತಾರೆಂದು ಹೇಳುತ್ತಿದ್ದ ಮಹಾಸಭಾಭಿಮಾನಿಗಳು ಈಗಲಾದರೂ ಮೈಸೂರಿನಲ್ಲಿ ಸಭೆಯು ನಡೆಯುವುದಿಲ್ಲವೆಂಬುದನ್ನು ತಿಳಿದುಕೊಂಡು ಅನುಕೂಲವಾದ ಮತ್ತಾವ ಸ್ಥಳದಲ್ಲಾದರೂ ಡಿಸೆಂಬರ್ ತಿಂಗಳಲ್ಲಿ ಜರುಗಿಸಲು ಪ್ರಯತ್ನಿಸಿ ಬೀರೂರಿನಲ್ಲಿ ಬೇರುಬಿಟ್ಟಿರುವ ಮಹಾಸಭೆಯನ್ನು ಮುಂದಕ್ಕೆ ಸಾಗಿಸಿದ ಕೀರ್ತಿಗೂ ಪುಣ್ಯಕ್ಕೂ ಭಾಗಿಗಳಾಗಲೆಂದು ಕೋರುತ್ತೇವೆ.

ಕಳೆದ ತಾ|| 30 ನೆಯ ಶುಕ್ರವಾರ ನಡೆದ ಶ್ರೀಜಯಚಾಮರಾಜಒಡೆಯರವರ ವರ್ಧಂತ್ಯುತ್ಸವದ ಸಂತೋಷಾರ್ಥವಾಗಿ ಮಾರನೆಯದಿನ ಸಾಯಂಕಾಲ ಚಾಮುಂಡೀಜಂಬಾನಾ ಮೈದಾನದಲ್ಲಿ ಅರಸುಬಾಲಕರುಗಳಿಂದ ಆಟಪಾಟಗಳು ಆಡಿಸಲ್ಪಟ್ಟು ಬಹುಮಾನಗಳ ವಿನಿಯೋಗದಿಂದಲೂ, ಫಲಾಹಾರದಿಂದಲೂ ಮಕ್ಕಳುಗಳೆಲ್ಲರೂ ತೃಪ್ತಿಗೊಳಿಸಲ್ಪಟ್ಟರು. ಶ್ರೀಮನ್ಮಹಾರಾಜರವರೂ, ಮಹಾಮಾತೃಶ್ರೀಯವರೂ, ಮಹಾರಾಣಿಯವರೂ, ಯುವರಾಣಿಯವರೂ, ರಾಜಕುಮಾರಿಯವರೂ, ಇತರ ಅರಸುಸ್ತ್ರೀಯರೂ ಬಂದಿದ್ದರು. ಶ್ರೀಚಾಮುಂಡೇಶ್ವರೀನಾಟಕಸಭೆಯ ಮ|| ಗಳಾದ ಲಕ್ಷ್ಮೀಪತಿಶಾಸ್ತ್ರಿಗಳು, ಪುಟ್ಟಸ್ವಾಮಿಶಾಸ್ತ್ರಿಗಳು, ಎಂ. ಕೃಷ್ಣಮೂರ್ತಿರಾಯರು, ವೆಂಕಟರಾಮಯ್ಯನವರು ಮತ್ತೆ ಕೆಲರು ಬೈರಾಗಿಗಳ ಮತ್ತು ರಾಮಕೃಷ್ಣಯ್ಯನವರು ಬೈರಾಗಿಣಿಯ ವೇಷಗಳನ್ನು ಧರಿಸಿಕೊಂಡು ಶ್ರೀಮನ್ಮಹಾರಾಜರವರ ಸುತ್ತವರಿದು ಮನೋಹರವಾಗಿ ಗಾನಮಾಡಿ ಭಿಕ್ಷೆಯನ್ನು ಬೇಡುತ್ತಿದ್ದುದು ಬಹುಪ್ರೇಕ್ಷಣೀಯವೂ ಆಹ್ಲಾದಕರವೂ ಆಗಿದ್ದಿತು. ಈ ವೇಷಧಾರಿಗಳ ಭಾವಚಿತ್ರವು ತೆಗೆಸಲ್ಪಟ್ಟುದಾಗಿ ಕೇಳುತ್ತೇವೆ.

ರಾಮನಾರಾಯಣಶಾಸ್ತ್ರಿ ಎಂಬುವವರು ಗೋಪಾಲಾಚಾರ್ ಎಂಬುವವರಿಂದ ಆಧಾರಪತ್ರದ ಬಾಬತು ಹಣಬರಬೇಕೆಂದು ರಾಜಧಾನಿಯ ಎರಡನೇ ಮುನ್‌ಸೀಫ್ ಕೋರ್ಟಿನಲ್ಲಿ ದಾವಾಮಾಡಿ ಎಕ್ಸ್‌ಪಾರ್ಟಿ ಡಿಕ್ರಿಪಡೆದುಕೊಂಡಿದ್ದರು. ಪ್ರತಿವಾದಿಯು ಆಧಾರಪತ್ರದ ಹಣಕ್ಕಾಗಿ 1,000 ರೂ. ಕೊಟ್ಟು ಪತ್ರದಲ್ಲಿ ಷರಾಬರೆದಿರುತ್ತೇನಾದುದರಿಂದ ಪೂರ್ತಿಮೊಬಲಗಿಗೆ ಕೊಡಲ್ಪಟ್ಟಿರುವ ಡಿಕ್ರಿಯನ್ನು ವಜಾಮಾಡಬೇಕೆಂದು ಡಿಸ್ಟ್ರಿಕ್ಟ್ ಕೋರ್ಟಿಗೆ ಅಪೀಲುಮಾಡಿಕೊಂಡಿದ್ದು ಅಲ್ಲೂ ಕೆಳಕೋರ್ಟಿನ ಡಿಕ್ರಿ ಸ್ಥಿರಪಟ್ಟುದರಮೇಲೆ ಚೀಫ್ ಕೋರ್ಟಿಗೆ ಅಪೀಲನ್ನು ಮಾಡಿದರು. ಅಲ್ಲಿಯ ಇಬ್ಬರು ಜಡ್ಜಿಯರುಗಳು ವಿದ್ಯಮಾನವನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ, "ಪ್ರತಿವಾದಿಯು ಮುನ್ಸೀಫ್ ಕೋರ್ಟಿನ ಡಿಕ್ರಿಯಮೇಲೆ ಡಿ|| ಕೋರ್ಟಿಗೆ ಅಪೀಲುಮಾಡಿಕೊಂಡಿದ್ದವೇಳೆಯಲ್ಲಿ ಕೋರ್ಟಿನ ಯಾವನೋ ಒಬ್ಬ ಕ್ಲಾರ್ಕಿನ ಸಹಾಯದಿಂದ ತಾನು ಬರೆದುಕೊಟ್ಟಿದ್ದ ಆಧಾರಪತ್ರಹಲ್ಲಿ 1,000 ರೂ. ಸಲ್ಲಿಸಿರುವುದಾಗಿ ಬರೆದು ಯಥಾಪ್ರಕಾರ ಕಟ್ಟಿನಲ್ಲಿ ಸೇರಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ" ಎಂದು ಅಭಿಪ್ರಾಯಪಟ್ಟಿರುವರೆಂದೂ, ಇದರಮೇಲೆ ವಾದಿಯು ಪ್ರತಿವಾದಿಯಮೇಲೆ ಪ್ರಾಸಿಕ್ಯೂಷನ್ ಮಾಡಲು ಕೋರ್ಟಿನವರ ಅಪ್ಪಣೆಕೇಳಿರುತ್ತಾರೆಂದೂ ತಿಳಿಯಬರುತ್ತದೆ.

ಪೋಲೀಸು ಇನ್‌ಸ್ಪೆಕ್ಟರುಗಳಾದ ಮೆಸರ್ಸ್. (1) ಎಚ್. ಸಿದ್ಧರಾಜಅರಸಿನವರು ಚಾಮರಾಜನಗರ ತಾ|| ಇಂದ ಯಡತೊರೆ ತಾ|| ಗೆ (2) ಕೆ. ಕೃಷ್ಣರಾಯರು ಯಡತೊರೆಯಿಂದ ಚಾಮರಾಜನಗರಕ್ಕೆ (3) ಎಂ. ಲಕ್ಷ್ಮೀನರಸಿಂಹಯ್ಯನವರು ಟಿ. ನರಸೀಪುರದಿಂದ ಕಾನಕಾನಹಳ್ಳಿಗೆ (4) ಎಚ್. ಡಿ. ಹೂವರ್‌ರವರು ಹುಣಸೂರಿನಿಂದ ಮಾಲೂರಿಗೆ (5) ಎಚ್. ಎಂ. ನೂರುಲ್ಲಾರವರು ಮಾಲೂರಿಂದ ಮೈಸೂರು ತಾ|| ಗೆ (6) ಸಿಂಗ್ರಯ್ಯನವರು ಹೆಗ್ಗಡದೇವನಕೋಟೆಯಿಂದ ಹಾಸನಕ್ಕೆ (7) ಡಿ. ಬಸವರಾಜಅರಸಿನವರು ಹಾಸನದಿಂದ ಹೆಗ್ಗಡದೇವನಕೋಟೆಗೆ (8) ಬಿ. ಕೃಷ್ಣಯ್ಯಂಗಾರರು ರಾಜಧಾನಿಯಿಂದ ಚನ್ನರಾಯಪಟ್ಟಣಕ್ಕೆ (9) ಅಬ್ದುಲ್‌ಲತೀಫ್‌ರವರು ಚನ್ನರಾಯಪಟ್ಟಣದಿಂದ ರಾಜಧಾನಿಗೆ (10) ಪ್ರಬೇಷನರಾದ ಎಸ್. ಸಿ. ಮಲ್ಲಪ್ಪನವರು ಹುಣಸೂರಿಗೆ (11) ಸಯದ್ ಅಮೀರ್ ಅಹಮ್ಮದ್‌ರವರು ಮೈಸೂರಿಂದ ಟಿ. ನರಸೀಪುರಕ್ಕೆ (12) ಕೆ. ಕೊಪ್ಪರೇಶರಾಯರು ದೊಡ್ಡಬಳ್ಳಾಪುರದಿಂದ ಚಳ್ಳಕೆರೆಗೆ (13) ಎಂ. ಎಸ್. ಬಾಲಾಜಿಯವರು ಚಳ್ಳಕೆರೆಯಿಂದ ಮಾಗಡಿಗೆ (14) ಎನ್. ಸಿ. ಕೃಷ್ಣಯ್ಯಂಗಾರರು ಕಾನಕಾನಹಳ್ಳಿಯಿಂದ ದೊಡ್ಡಬಳ್ಳಾಪುರಕ್ಕೆ (15) ವಿಜಾರ್ ಅಹಮದ್ ಹುಸೇನ್‌ರವರು ತುಮಕೂರಿಂದ ಬೆಂಗಳೂರುಸಿಟಿಗೆ (16) ಅನ್ವರಲಿ ಮೇಕ್ರಿಯವರು ಬೆಂಗಳೂರು ಸಿಟಿಯಿಂದ ತುಮಕೂರಿಗೆ (17) ಎ. ಸ್ಯಾಮ್ಯುಯಲ್ ಮಾಗಡಿಯಿಂದ ಚಿಕ್ಕಮಗಳೂರು ಹೆಡ್‌ಕ್ವಾರ್ಟರಿಗೆ (18) ಎ. ಆರ್. ಸುಬ್ಬರಾಯರು ಚಿಕ್ಕಮಗಳೂರಿಂದ ಕೋಲಾರ ಹೆ|| ಕ್ವಾರ್ಟರಿಗೆ (19) ಎಂ. ಶ್ಯಾಮಯ್ಯಂಗಾರರು ದೇವನಹಳ್ಳಿಯಿಂದ ಶ್ರೀರಂಗಪಟ್ಟಣಕ್ಕೆ (20) ಎಂ. ಮಲ್ಲರಾಜಅರಸಿನವರು ನೆಲಮಂಗಲದಿಂದ ದೇವನಹಳ್ಳಿಗೆ (21) ವಿ. ಎಸ್. ಗೋವಿಂದರಾಜಪಿಳ್ಳೆಯವರು ಚಿಕ್ಕಬಳ್ಳಾಪುರದಿಂದ ಚಿಕ್ಕಮಗಳೂರಿಗೆ (22) ಬಿ. ಕೆ. ಗುಡಿಯಪ್ಪನವರು ಚಿಕ್ಕಮಗಳೂರಿಂದ ಚಿಕ್ಕಬಳ್ಳಾಪುರಕ್ಕೆ (23) ಆರ್. ಲಕ್ಷ್ಮೀನರಸಿಂಹಯ್ಯನವರು ಶ್ರೀರಂಗಪಟ್ಟಣದಿಂದ ಜಗಳೂರಿಗೆ (24) ಎ. ಅನಂತಸ್ವಾಮಿರಾಯರು ಪ್ರಾ|| ಇನ್‌ಸ್ಪೆಕ್ಟರಾಗಿ ಮಂಡ್ಯದಿಂದ ಹಾಸನಕ್ಕೆ (25) ಸಿ. ಎನ್. ರಂಗನಾಥಂರವರು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಾಗಿ ಹಾಸನದಿಂದ ಮಂಡ್ಯಕ್ಕೆ (26) ಎಂ. ವೈನ್ ಬೆಂಗಳೂರಿಂದ ಸಕಲೇಶಪುರಕ್ಕೆ (27) ಸಿ. ಬಿ. ಅಪ್ಪಯ್ಯನವರು ಸಕಲೇಶಪುರದಿಂದ ಬೆಂಗಳೂರು ಸಿಟಿಗೆ (28) ಡಿ. ವಿಶ್ವೇಶ್ವರಯ್ಯನವರು ಪ್ರಾ|| ಇನ್‌ಸ್ಪೆಕ್ಟರಾಗಿ ಕೋಲಾರ ಗೋಲ್ಡ್‌ಫೀಲ್ಡ್ಸಿನಿಂದ ಶಿವಮೊಗ್ಗಕ್ಕೆ (29) ಪಿ. ರಾಮಾಚಾರರು ಪ್ರಾ|| ಇನ್‌ಸ್ಪೆಕ್ಟರಾಗಿ ಶಿವಮೊಗ್ಗೆಯಿಂದ ಕೋಲಾರ ಗೋಲ್ಡ್‌ಫೀಲ್ಡ್ಸಿಗೆ (30) ಮುನಿಸ್ವಾಮಿಮೊದಲಿಯಾರ್ರು ಶಿವಮೊಗ್ಗೆಯಿಂದ ನೆಲಮಂಗಲಕ್ಕೆ (31) ಎಂ. ಚೌಡಯ್ಯನವರು ಜಗಳೂರಿಂದ ಶಿವಮೊಗ್ಗಕ್ಕೆ (32) ಎಂ. ಎ. ಕೃಷ್ಣಯ್ಯಂಗಾರರು ನಗರದಿಂದ ಅರಕಲಗೂಡಿಗೆ (33) ಎಚ್. ನರಸಿಂಹಾಚಾರರು ಅರಕಲಗೂಡಿನಿಂದ ನಗರಕ್ಕೆ (34) ಎನ್. ರಂಗಾಚಾರರು ಪ್ರ|| ಇನ್‌ಸ್ಪೆಕ್ಟರಾಗಿ ಸೊರಬಕ್ಕೆ ವರ್ಗಾಯಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ.

ಇಂದೂರಿನಲ್ಲಿ ನೇಗೆಯ ಕಾರ್ಖಾನೆಗಳ ಯಜಮಾನರುಗಳಿಗೂ ಅವುಗಳಲ್ಲಿ ಕೆಲಸಮಾಡುವವರಿಗೂ ಕೂಲಿಯದರ ಮತ್ತು ಕೆಲಸಮಾಡುವ ಕಾಲಾವಧಿಗಳ ವಿಚಾರವಾಗಿ ಮನಸ್ತಾಪಗಳು ಹುಟ್ಟಿ 12,000 ಕೂಲಿಜನರು ಕೆಲಸಕ್ಕೆ ಹೋಗದೆ ಮುಷ್ಕರಹಿಡಿದು ನಿಂತುಬಿಟ್ಟಿದ್ದಾರೆ.

ಜರ್ಮನಿಯ ಶಾಸ್ತ್ರಜ್ಞನೊಬ್ಬನು ಕಾರಾಗೃಹದಲ್ಲಿರುವ ಬಂದಿಗಳ ಮಾನಸಿಕವರ್ತನೆಯ ಭಾವಚಿತ್ರವನ್ನು ಎಕ್ಸರೆ ಎಂಬ ದೇಹಾಂತರ್ಗತಪದಾರ್ಥಛಾಯಾಗ್ರಾಹಿಯಂತ್ರದ ಮೂಲಕ ತೆಗೆದು ಅವರ ವರ್ತನವು ಎಂತಹುದೆಂಬುದನ್ನು ಗೊತ್ತುಮಾಡಲು ಸಾಧ್ಯವೆಂದು ಹೇಳುತ್ತಿರುವನು.

ನದಿಯಾ ಡಿಸ್ಟ್ರಿಕ್ಟಿಗೆ ಸೇರಿದ ಆನಂದ ಎಂಬ ಊರಿನಲ್ಲಿ ಕೆಲ ಕ್ರೈಸ್ತಪಾದ್ರಿಗಳು ಒಂದು ದೊಡ್ಡಮರದಕೆಳಗೆ ಮತಬೋಧೆಯನ್ನು ಮಾಡುತ್ತಿರುವಾಗ್ಗೆ ಮರವು ಬುಡಸಹಿತ ಉರುಳಿಬಿದ್ದುದರಿಂದ ಅದರ ಕೆಳಗೆ ಸೇರಿದ್ದ ನೂರಾರುಜನರಲ್ಲಿ 6 ಜನರು ಸತ್ತರು ಮತ್ತು 18 ಜನರು ಗಾಯವಡೆದರು.

ಕಡಲೂರು ಹತ್ತಿರ ರೈಲ್ವೆ ಸೇತುವೆಯಮೇಲೆ ರಾತ್ರಿವೇಳೆಯಲ್ಲಿ ಹೋಗುತ್ತಿದ್ದ ಮೂವರು ಹೆಂಗುಸರು ಮಧ್ಯಸೇತುವೆಗೆ ಬರುವಷ್ಟರಲ್ಲಿ ರೈಲುಬಂಡಿಯು ಬರಲು ಇಬ್ಬರು ಹೆಂಗಸರು ದಿಗಿಲುಬಿದ್ದು ಸೇತುವೆಯ ಕೆಳಕ್ಕೆ ಬಿದ್ದುಬಿಟ್ಟು ಅಪಾಯವನ್ನು ಹೊಂದಿದರು, ಮತ್ತೊಬ್ಬಳು ಬಂಡಿಗೆ ಸಿಕ್ಕಿ ಸತ್ತಳು.

ಕರಾಚಿ ಡಿ|| ಘೋರಬಾರಿ ತಾಲ್ಲೂಕುಬೋರ್ಡಿನ ಪ್ರೆಸಿಡೆಂಟರಾಗಿದ್ದ ನಂದಿರಾಮಾವತಾರಿಚಂದಿರಮನಿ ಎಂಬುವವರನ್ನು ಕರಾಚಿಯಿಂದ 70 ಮೈಲಿದೂರದಲ್ಲಿರುವ ಗಾರೋ ಎಂಬ ಅವರ ಗ್ರಾಮದಲ್ಲಿ ಕಳೆದ ತಾ|| 2 ರ ಮಧ್ಯರಾತ್ರಿಯಲ್ಲಿ ಯಾರೋ ದುಷ್ಟರು ಗುಂಡಿನಿಂದ ಹೊಡೆದು ಕೊಂದುಹಾಕಿದರು.

ಮಹಮ್ಮದೀಯರ ಗುರುವಾದ ಮಹಮ್ಮದನ ಗೋರಿಯಮೇಲಿರುವ ಭುವನೇಶ್ವರಿಯನ್ನು ನಾಶಪಡಿಸಲಿಷ್ಟವುಳ್ಳವರಾಗಿರುವೆವೆಂದು ಯಾರೋ ದುಷ್ಟರು ಹುಟ್ಟಿಸಿರುವ ಸುದ್ದಿಯು ಶುದ್ಧಸುಳ್ಳು, ಮತ್ತು ನಾವು ಆ ಗುರುವಿನ ಗೋರಿಯನ್ನು ಬಹುಭಕ್ತಿಯಿಂದ ಕಾಣುವವರಾಗಿರುತ್ತೇವೆ ಎಂದು ಹೆಡ್ಜಾಜಿನ ದೊರೆಯು ಬೊಂಬಾಯಿನಲ್ಲಿರುವ ತನ್ನ ಕಡೆಯ ಏಜಂಟರಿಗೆ ತಿಳಿಸಿರುತ್ತಾನೆ.

ಕಲಕತ್ತಾಪಟ್ಟಣದ ಹಿಂದು-ಮಹಮ್ಮದೀಯರುಗಳಲ್ಲಿ ಕಲಹವಾಗಿ ಮನಸ್ತಾಪವುಂಟಾಗಿರುವ ಈ ಸಮಯದಲ್ಲಿ ನಿವಿಸ್ವಾಮ್ಯರಾಗಮನವೂ ಭಾಷಣವೂ ಜನರ ಮನಸ್ಸನ್ನು ರೇಗಿಸಿ ಅನರ್ಥವನ್ನುಂಟುಮಾಡುತ್ತವಾದುದರಿಂದ ನೀವುಭಯರೂ ಕಲಕತ್ತಾಪಟ್ಟಣವನ್ನು ಎರಡುತಿಂಗಳವರೆಗೆ ಪ್ರವೇಶಿಸಕೂಡದೆಂದು ಪಂಡಿತಮದನಮೋಹನಮಾಲವಿಯರವರಿಗೂ ಡಾಕ್ಟರ್ ಬಿ. ಎಸ್. ಮೂಂಜೆಯವರಿಗೂ ಕಲಕತ್ತಾ ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ನೋಟೀಸನ್ನು ಕೊಟ್ಟಿರುತ್ತಾರೆ.

ಎಡ್ಮಂಟನ್ ಎಂಬಲ್ಲಿ ಒಂದು ಸರ್ಕಸ್ ಕಂಪೆನಿಯ ಮೃಗಗಳನ್ನು ಬಂಡಿಗಳಲ್ಲಿ ತುಂಬಿ ಅವುಗಳಿಗೆ 14 ಆನೆಗಳನ್ನು ಕೂಡಿ ಸರ್ಕಸ್ಸು ನಡಿಯುವ ಸ್ಥಳಕ್ಕೆ ಳೆಸಿಕೊಂಡು ಹೋಗುತ್ತಿರುವಾಗ್ಗೆ ಒಂದು ನಾಯಿಯು ಬೊಗಳಿಕೊಂಡು ಹೊರಗೆ ಬರಲು ಆನೆಗಳು ಬೆದರಿ ಕಡಿವಾಣಗಳನ್ನು ಕಿತ್ತುಹಾಕಿ ಕರಡಿಗಳನ್ನೂ ಹುಲಿಗಳನ್ನೂ ಕೂಡಿದ್ದ ಎರಡು ಬಂಡಿಗಳನ್ನು ತಲೆಕೆಳಗಾಗಿ ಬೀಳಿಸಿಬಿಟ್ಟು ಊರಿನೊಳಗೆ ದಿಕ್ಕಾಪಾಲಾಗಿ ನುಗ್ಗಿ ಹಾವಳಿಯನ್ನು ಮಾಡಲುಪಕ್ರಮಿಸಿದುವು. ಜನರು ಭಯಪಟ್ಟು ಪ್ರಾಣರಕ್ಷಣೆಗಾಗಿ ಓಡಾಡುತ್ತಿದ್ದರು. ಅಷ್ಟರಲ್ಲಿ ಪೋಲೀಸಿನವರೂ, ಮಾವುತರೂ ಮೋಟಾರುಬಂಡಿಗಳಲ್ಲಿ ಬಂದು ಆ ರೇಗಿದ್ದ ಆನೆಗಳನ್ನು ತಡೆದುನಿಲ್ಲಿಸಲು ಪ್ರಯತ್ನಿಸುತ್ತಿರುವಾಗ್ಗೆ ಒಂದು ಆನೆಯುಮರಿಯು ಮಾವುತನನ್ನು ಪ್ರತಿಭಟಿಸಿ ಓಡಿಸಿಕೊಂಡು ಹೋಗುತ್ತಿರುವಾಗ್ಗೆ ಅವನು ಸಮಾಧಿಯ ನೆಟ್ಟುಗಲ್ಲಿನ ಹಿಂಗಡೆ ಸೇರಿಕೊಂಡು ತನ್ನ ಪ್ರಾಣವನ್ನುಳಿಸಿಕೊಂಡನು.

ಕಳೆದ ತಾ|| 26 ರ ರಾತ್ರಿ ಲಕ್ನೋಪಟ್ಟಣದಿಂದ ಲಾಹೋರುಪಟ್ಟಣಕ್ಕೆ ಹೋಗುತ್ತಿದ್ದ ರೈಲುಬಂಡಿಯು ಮಧ್ಯದಾರಿಯಲ್ಲಿ ಕಂಬಿಗಳನ್ನು ಬಿಟ್ಟು ಹರಿದುದರಿಂದ ಹಿಂದಿದ್ದ 5

ಪಬ್ಲಿಸಿಟಿ ಆಫೀಸಿನ
ಪ್ರಸಿದ್ಧಪತ್ರಿಕೆ.

1926 ನೇ ಇಸ್ವಿ ಜುಲೈ 27 ನೇ ತಾರೀಖಿನ "ವೆಲ್ತ್ ಆಫ್ ಮೈಸೂರ್" ಎಂಬ ವರ್ತಮಾನಪತ್ರಿಕೆಯಲ್ಲಿ "ವಿದ್ಯಾಭ್ಯಾಸದ ಇಲಾಖೆಯಲ್ಲಿ ಏಕಾಧಿಪತ್ಯ" ಎಂಬ ಶಿರ್ನಾಮೆಯಲ್ಲಿ "ಫೇರ್‌ಪ್ಲೆ" ಎಂಬುವರಿಂದ ಒಂದು ಲೇಖನವನ್ನು ಪ್ರಕಟಿಸಲಾಗಿದೆ. ಸದರಿ ಲೇಖನದಲ್ಲಿ ಇತರ ವಿಷಯಗಳ ಜತೆಗೆ ಸದ್ವಿದ್ಯಾಪಾಠಶಾಲೆಗೆ ಸಂಬಂಧಪಟ್ಟ ನಿಜವಾದ ಸಂಗತಿಗಳ ವಿಚಾರದಲ್ಲಿ ತಪ್ಪು ಅಭಿಪ್ರಾಯವನ್ನು ಕೊಡುವಂತೆ ಪರಿಗಣಿಸಲ್ಪಟ್ಟ ಹಲವು ಸುಳ್ಳು ವರ್ತಮಾನಗಳು ಇರುವುದರಿಂದ ಇದರಡಿ ಕಂಡ ಪ್ರಸಿದ್ಧಪತ್ರಿಕೆಯನ್ನು ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ.—

ಸದ್ವಿದ್ಯಾಪಾಠಶಾಲೆಯಲ್ಲಿ ಮಿಡ್ಲ್ ಮತ್ತು ಪ್ರೈಮರಿ ಸೆಕ್ಷನುಗಳು ಇರುತವೆ. ಈ ಪಾಠಶಾಲೆಯು 1924-25 ನೇ ಸಾಲು ಅಪ್ರೈಲ್‌ವರೆಗೆ ಮಾಹೆವಾರು (ಮಿಡ್ಲ್‌ಸ್ಕೂಲ್ ಸೆಕ್ಷನ್ನಿಗಾಗಿ 53 ರೂಪಾಯಿಗಳು ಮತ್ತು ಪ್ರೈಮರಿ ಸೆಕ್ಷನ್ನಿಗಾಗಿ 32 ರೂಪಾಯಿಗಳು) 85 ರೂಪಾಯಿಗಳ ಗ್ರಾಂಟನ್ನು ಪಡೆಯುತ್ತಲಿತ್ತು. ತಿದ್ದುಪಾಟಾದ ಗ್ರಾಂಟ್-ಇನ್-ಯೇಡ್ ನಿಬಂಧನೆಗಳ ಪ್ರಕಾರ ಬಾಲಕರ ಸಂಖ್ಯೆ, ಸಿಬ್ಬಂದಿ, ವೆಚ್ಚ ಇವೇ ಮುಂತಾದ ಲೆಕ್ಕಗಳ ಆಧಾರದಮೇಲೆ ಈ ಪಾಠಶಾಲೆಯು ಇನ್ನೂ ಸ್ವಲ್ಪ ಹೆಚ್ಚಿನ ಗ್ರಾಂಟನ್ನು ಎಂದರೆ 93¼ ರೂಪಾಯಿಗಳನ್ನು ಪಡೆಯುವುದಕ್ಕೆ ಅರ್ಹವಾಗಿರುವಂತೆ ಕಂಡುಬಂದಿತು. 1925 ನೇ ಇಸ್ವಿ ಅಕ್ಟೋಬರ್ 15 ನೇ ಮರ್ಕುಂ ಇ. 1833-35 ಎಜುಕೇಷನ್ 37-24-21 ನೇ ನಂಬರ್ ಹುಕ್ಕುಮಿನಲ್ಲಿ ತಿದ್ದುಪಾಟಾದ ನಿಬಂಧನೆಗಳ ಪ್ರಕಾರವಾಗಿ ತಾವು ಪಡೆಯುತ್ತಿದ್ದ ಗ್ರಾಂಟಿಗಿಂತಲೂ ಹೆಚ್ಚಾಗಿ ಗ್ರಾಂಟುಗಳನ್ನು ಪಡೆಯುವುದಕ್ಕೆ ಅರ್ಹವಾಗಿರತಕ್ಕ ಎಲ್ಲಾ ಮಿಡ್ಲ್ ಮತ್ತು ಪ್ರೈಮರಿ ಸ್ಕೂಲುಗಳ ವಿಷಯದಲ್ಲಿಯೂ ತತ್ಕಾಲದಲ್ಲಿಯೂ ಮತ್ತು ಅದಕ್ಕಾಗಿ ಬೇಕಾಗುವ ಪೂರ್ತಿ ಮೊಬಲಗನ್ನು ಒದಗಿಸುವ ನಿರೀಕ್ಷಣೆಯಮೇಲೂ ಈ ಮೊದಲೇ ಮಂಜೂರ್ಮಾಡಲ್ಪಟ್ಟ ಗ್ರಾಂಟಿಗೂ ಮತ್ತು ಈಗ ಪಡೆಯುವುದಕ್ಕೆ ಅವಕಾಶವಿರುವ ವ್ಯತ್ಯಾಸದಲ್ಲಿ ಅರ್ಧ ಮೊಬಲಗನ್ನು ಮಾತ್ರ ಕೊಟ್ಟು ಅಂಥಾ ಗ್ರಾಂಟುಗಳನ್ನು ಹೆಚ್ಚಿಸಬಹುದೆಂಬದಾಗಿ ಸರ್ಕಾರದವರು ಅಪ್ಪಣೆಮಾಡಿದರು. ಅದರ ಪ್ರಕಾರ ಈ ಪಾಠಶಾಲೆಗೂ 1925-26 ನೇ ಸಾಲಿನಲ್ಲಿ 89 ರೂಪಾಯಿಗಳ ಗ್ರಾಂಟನ್ನು ಕೊಡಲಾಯಿತು. ಆದಾಗ್ಯೂ ನಂತರ ಇಲಾಖೆಯವರು ಅರಿಕೆಮಾಡಿಕೊಂಡದ್ದರಮೇಲೆ ತಿದ್ದುಪಾಟಾದ ಗ್ರಾಂಟ್-ಇನ್-ಯೇಡ್ ನಿಬಂಧನೆಗಳನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವುದಕ್ಕಾಗಿ ಸಲಹೆಗಳನ್ನು ಒಪ್ಪಿಸುವಂತೆ ಸರ್ಕಾರದವರು 1926 ನೇ ಇಸ್ವಿ ಜುಲೈ 10 ನೇ ತಾರೀಖಿನ ದಿವಸ ಇನ್‌ಸ್ಪೆಕ್ಟರ್ ಜನರಲ್‌ರವರನ್ನು ಕೋರಿದರು. ಇಲಾಖೆಯವರು ಸಂಬಂಧಪಟ್ಟ ಪಾಠಶಾಲೆಗಳ ಈಗಿನ ಆದಾಯ ವೆಚ್ಚ ಇವೇ ಮುಂತಾದ ಅವಶ್ಯಕವಾದ ಲೆಕ್ಕಗಳನ್ನು ಶೇಖರಿಸುತ್ತಲಿದ್ದಾರೆ. ಈ ಲೆಕ್ಕಗಳು ತಲುಪಿದೊಡನೆಯೇ ಅವಕಾಶವಿರುವಷ್ಟುಮಟ್ಟಿಗೆ ಸಂಪೂರ್ಣವಾಗಿ ಗ್ರಾಂಟುಗಳನ್ನು ಹೆಚ್ಚಿಸಲಾಗುವುದು. ನ್ಯಾಯವಿಧಾಯಕಸಭೆಯ ಕಳೆದ ಅಧಿವೇಶನದಲ್ಲಿ ದಿವಾನ್‌ರವರೂ ಮತ್ತು ಕೌನ್ಸಿಲಿನ 2 ನೇ ಮೆಂಬರವರೂ ಸಹ ಈ ಪಾಠಶಾಲೆಗೆ ಹೆಚ್ಚಿಗೆ ಗ್ರಾಂಟಿನ ವಿಚಾರವಾಗಿ ಸರ್ಕಾರದವರು ಹುಕ್ಕುಮನ್ನು ಸಾದರ್ಮಾಡಿದ್ದರೆಂದು ತಿಳಿಸಿದರೆಂಬದಾಗಿ ಹೇಳುವುದೂ ಕರಾರ್ವಾಕಾದ ಸಂಗತಿಯಲ್ಲ. ಅಲ್ಲಿ ಹೇಳಿದ್ದೇನೆಂದರೆ ತಿದ್ದುಪಾಟಾದ ಗ್ರಾಂಟ್-ಇನ್-ಯೇಡ್ ನಿಬಂಧನೆಗಳನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರಲಾಗುವುದೆಂಬದಾಗಿಯೂ ಮತ್ತು ಈ ಸಂಸ್ಥೆಯು ಈ ನಿಬಂಧನೆಗಳಿಗನುಸಾರವಾಗಿ ಪಡೆಯುವುದಕ್ಕೆ ಅರ್ಹವಾಗಿರುವ ಮೊಬಲಗನ್ನು ಸಹ ಪಡೆಯುವುದೆಂಬದಾಗಿಯೂ ಆಗಿದ್ದಿತು.

ಈ ಪಾಠಶಾಲೆಗೆ ಮಿ|| ಸಿ. ಆರ್. ರೆಡ್ಡಿಯವರು ಇಂಗ್ಲಿಷ್ ತರಗತಿಗಳನ್ನು ಸ್ಥಾಪಿಸುವುದಕ್ಕಾಗಿ ವಾಗ್ದಾನಮಾಡಿದ್ದಂತೆ ಹೇಳುವ 45 ರೂಪಾಯಿಗಳ ಹೆಚ್ಚಿಗೆ ಗ್ರಾಂಟಿನ ವಿಚಾರದಲ್ಲಿ ಗ್ರಾಂಟ್-ಇನ್-ಏಡ್ ನಿಬಂಧನೆಗಳ ಪ್ರಕಾರವಾಗಿ ಹಾಗೆ ಹೆಚ್ಚಿಗೆ ಗ್ರಾಂಟನ್ನು ಕೊಡುವುದಕ್ಕೆ ಅವಕಾಶವಿಲ್ಲವೆಂಬದಾಗಿ ತಿಳಿಸಬೇಕಾಗಿರುತ್ತದೆ.

ಗ್ರಾಂಟ್-ಇನ್-ಏಡ್ ನಿಬಂಧನೆಗಳಲ್ಲಿ ಕೆಲವು ನಿರ್ದಿಷ್ಟವಾದ ನಿಬಂಧನೆಗಳ ಪ್ರಕಾರ ತಲುಪಿನ ಗ್ರಾಂಟುಗಳನ್ನೂ ಮತ್ತು ಪಾಠಶಾಲೆಗಳು ಮಾಡುವುದಕ್ಕೆ ಅವಕಾಶವಿರುವ ವೆಚ್ಚಕ್ಕೆ ಹೋಲಿಸಿ ಕಡಮೆಯಾದ ಆದಾಯವನ್ನು ಸರಿಪಡಿಸುವುದಕ್ಕಾಗಿ ತಲುಪಿನ ಗ್ರಾಂಟಿಗೆ ಮೇಲ್ಪಟ್ಟು ಸಾಮಾನ್ಯಗ್ರಾಂಟನ್ನೂ ಸಹ ಒದಗಿಸಿರೋಣದರಿಂದ ಸದರೀ ನಿಬಂಧನೆಗಳ ಪ್ರಕಾರ ಫೀಜಿನಿಂದ ಬರತಕ್ಕ ಆದಾಯವು ನಷ್ಟವಾಗುವುದಕ್ಕಾಗಿ ಪರಿಹಾರದ್ರವ್ಯವನ್ನು ಕೊಡುವ ವಿಚಾರವೇ ಇರುವುದಿಲ್ಲ. ಫೀಜಿನಿಂದ ಆದಾಯವು ಬರದೇ ಇದ್ದಪಕ್ಷದಲ್ಲಿ ಸಾಮಾನ್ಯಗ್ರಾಂಟನ್ನು ಅದಕ್ಕೆ ತಕ್ಕಂತೆ ಹೆಚ್ಚಿಸಲಾಗಿದೆ.

ಮೇಲೆ ತಿಳಿಸಿರುವ ನಿಜವಾದ ಸಂಗತಿಗಳಿಂದ ಇನ್‌ಸ್ಪೆಕ್ಟರ್‌ಜನರಲ್‌ರವರು ಕೈಗೊಂಡಿರುವ ಕಾರ್ಯಕ್ರಮವು ಸಂಪೂರ್ಣವಾಗಿ ನಿಬಂಧನೆಗಳಿಗೂ ಮತ್ತು ಸರ್ಕಾರದವರ ಹುಕ್ಕುಮಾತುಗಳಿಗೂ ಅನುಸಾರವಾಗಿದೆಯೆಂದೂ ಮತ್ತು ವಿದ್ಯಾಭ್ಯಾಸದ ಇಲಾಖಾ ಮೇಲ್ತನಿಖೆದಾರರೂ ಮೈಸೂರು ಸದ್ವಿದ್ಯಾಪಾಠಶಾಲೆಯ ಆನರರಿ ಸೆಕ್ರೆಟರಿಯವರಿಗೆ 1926 ನೇ ಇಸವಿ ಜುಲೈ 22ನೇ ತಾರೀಖಿನದಿನ ಕೊಟ್ಟ ಜವಾಬಿನ ಸಂಬಂಧದಲ್ಲಿ ಅವರಮೇಲೆ "ಫೇರ್‌ಪ್ಲೆ" ಎಂಬುವವರು ಮಾಡಿರುವ ಆಪಾದನೆಗೆ ಆಧಾರವಿಲ್ಲವೆಂದೂ ವ್ಯಕ್ತವಾಗುತ್ತದೆ.

ಬೆಂಗಳೂರು,
ತಾ|| 5-8-1926.

ಆರ್. [illegible],
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಬಂಡಿಗಳು ಮುಗುಚಿಕೊಂಡವು, ಆದರೆ ಪ್ರಯಾಣಿಕರಿಗೆ ಪ್ರಾಣನಷ್ಟವಾದಂತಿಲ್ಲ. ಯಾರೋ ಬೇಕೆಂದು ಕಂಬಿಗಳನ್ನು ಕಿತ್ತಿರಬಹುದಾಗಿ ಊಹಿಸಲ್ಪಟ್ಟಿದೆ.

ಕರಾಚಿಪಟ್ಟಣದಲ್ಲಿ ಮನೆಗಳಿಗೆ ವಿದ್ಯುದ್ದೀಪಗಳನ್ನು ಒದಗಿಸುತ್ತಿರುವ ಕಂಪೆನಿಯವರು ದೀಪದ ದರವನ್ನು ಒಂದು ಯೂನಿಟ್ಟಿಗೆ 6 ಆಣೆಯಿಂದ 8 ಆಣೆಗೆ ಹೆಚ್ಚಿಸಿದುದರಮೇಲೆ ದೀಪವನ್ನುಪಯೋಗಿಸುವವರೆಲ್ಲರೂ ಒಗ್ಗಟ್ಟಾಗಿ ದರವನ್ನು ಕಡಿಮೆಮಾಡಿದ ಹೊರತು ವಿದ್ಯುದ್ದೀಪವನ್ನುಪಯೋಗಿಸಬಾರದೆಂದು ಕಟ್ಟುಮಾಡಿಕೊಂಡಿರುತ್ತಾರೆ.

ಕಲ್ಲಿಕೋಟೆಯ ಸಮೀಪದ ಕಾಡಿನಲ್ಲಿ ಒಬ್ಬ ಸನ್ಯಾಸಿಯು ಬಹಳಕಾಲದಿಂದ ತಪಸ್ಸನ್ನು ಮಾಡುತ್ತ ಕಂದಮೂಲಾದಿಗಳನ್ನು ತಿಂದು ಹಸುವಿನಹಾಲನ್ನು ಕುಡಿದು ಜೀವಿಸುತ್ತಿರುವನು. ಈತನು ಬಹುಪ್ರೀತಿಯಿಂದ ಸಾಕುತ್ತಿದ್ದ ಆಕಳನ್ನು ಒಬ್ಬ ಮಾಪಿಳ್ಳೆಯು ಅಪಹರಿಸಿ ಮಾರುತ್ತಿದ್ದುದಕ್ಕಾಗಿ ಸೆಷನ್ಸುಜಡ್ಜಿಂದ 7 ವರ್ಷ ಕಠಿಣಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ಬಂಗಾಳಪ್ರಾಂತದ ರಾಮುಗಂಜಿಗೆ ಸೇರಿದ ತಕಿಲ್ ಎಂಬ ಗ್ರಾಮದಲ್ಲಿ ಒಬ್ಬಹೆಂಗುಸು 1½ ಅಡಿಯುದ್ದದ ಒಂದು ಹುಲಿಯಮರಿಯನ್ನು ಹೆರಲಾಗಿ ಸೂಲಗಿತ್ತಿಯು ಭಯದಿಂದ ಅದನ್ನು ಬಿಸಾಡಿದುದರಿಂದ ಅದು ಸತ್ತುಹೋದುದರಮೇಲೆ ಅದರ ಕಳೇಬರವು ದ್ರಾವಕದಲ್ಲಿಡಲ್ಪಟ್ಟಿರುವುದಾಗಿಯೂ, ಅದನ್ನು ನೋಡಲು ಜನರು ತಂಡತಂಡವಾಗಿ ಹೋಗುತ್ತಿರುವುದಾಗಿಯೂ ಬಂಗಾಳಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದು ಸಾಧ್ಯವೆ ?

ಬರೋಡಾದಲ್ಲಿ ಅಭಯಸಿಂಹಪರ್ವತನೆಂಬ ಪ್ರಸಿದ್ಧ ತಲೆಬಡುಕನು ಪೊಲೀಸರ ಸೆರೆಯಲ್ಲಿರುವಾಗ್ಯೆ ಅಕಸ್ಮಾತ್ತಾಗಿ ತನ್ನ ಬೆಂಗಾವಲಿನ ಪೊಲೀಸರಮೇಲೆ ಬಿದ್ದು ಒಬ್ಬನಿಗೆ ಗಾಯಪಡಿಸಿ ಇನ್ನೊಬ್ಬನನ್ನು ಕೊಂದುಹಾಕಿ ಮಗದೊಬ್ಬನನ್ನು ಓಡಿಸಿಬಿಟ್ಟು ಠಾಣಾದಲ್ಲಿದ್ದ ಬಂದೂಕಗಳನ್ನೂ ಮದ್ದುಗುಂಡುಗಳನ್ನೂ ತನ್ನ ಸ್ವಾಧೀನಮಾಡಿಕೊಂಡು ಅಲ್ಲೇ ಒಂದು ಸ್ಥಳದಲ್ಲಿ ಸೇರಿಕೊಂಡಿದ್ದನು. ಪೋಲೀಸಿನವರು ಅವನನ್ನು ಹಿಡಿಯಲು ಸರ್ವಪ್ರಯತ್ನಪಟ್ಟು ಸಾಧ್ಯವಾಗಲಿಲ್ಲವಾಗಿ ಗುಂಡಿನಿಂದ ಅವನನ್ನು ಹೊಡೆದು ಕೊಂದುಬಿಟ್ಟರು.

ಜರ್ಮನಿದೇಶಸ್ಥನಾದ ಜಾರ್ಜ ಹೇಗರ್ಬಾಕ್ ಎಂಬೊಬ್ಬ ಶ್ರೀಮಂತನು 200 ಭಾರತೀಯ ಬಡಜನರನ್ನು ತನ್ನ ಸೀಮೆಗೆ ಕರೆದುಕೊಂಡುಹೋಗಿ ಮೃಗಾಲಯದಲ್ಲಿಟ್ಟು ಅವರ ದೇಹರಚನೆ, ಬಣ್ಣ, ಊಟ ಮೊದಲಾದುವುಗಳನ್ನೆಲ್ಲಾ ಅಲ್ಲಿಯ ಜನರಿಗೆ ಪ್ರದರ್ಶಿಸುತ್ತಿರುವನು. ಅಲ್ಲಿರುವ ಭಾರತೀಯರು ತಮ್ಮ ದೇಶದ ಬಡಜನರನ್ನು ಮೃಗಗಳೋಪಾದಿಯಲ್ಲಿ ಕಾಣುತ್ತಿರುವುದನ್ನು ನೋಡಿ ಸಂತಾಪಪಟ್ಟುಕೊಂಡು ಆ ಕ್ರೂರಕೃತ್ಯವನ್ನು ನಿಲ್ಲಿಸುವಂತೆ ಅಲ್ಲಿಯ ಪ್ರಭುತ್ವದವರಿಗೆ ಬಿನ್ನೈಸಿಕೊಂಡಿರುವರು. ಈ ದುರವಸ್ಥೆಗೆ ಭಾರತೀಯರ ಬಡತನವೇ ಕಾರಣವು.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಲ್ಲಿ ತಪ್ಪಿತಸ್ಥರಿಗೆ ಮರಣದಂಡನೆಯನ್ನು ವಿಧಿಸುವುದು ಬಹುಮಟ್ಟಿಗೆ ಕಡಿಮೆಯಾಗುತ್ತಿದೆ. ಚಿಕಾಗೋ ಪಟ್ಟಣವೊಂದರಲ್ಲಿಯೇ ಈ ವರ್ಷಾರಂಭದಿಂದ 6 ತಿಂಗಳುಗಳಲ್ಲಿ 150 ಕೊಲೆಗಳು ನಡೆದಿರುವುವಾದರೂ ಕೊಲೆಪಾತಕರಲ್ಲಿ ಒಬ್ಬನಿಗೆ ಮಾತ್ರ ಮರಣದಂಡನೆ ವಿಧಿಸಲ್ಪಟ್ಟಿತು. ಮದದ್ರವ್ಯಗಳನ್ನು ಆ ದೇಶಕ್ಕೆ ತರಿಸಲ್ಪಡದಂತೆ ನೋಡಿಕೊಳ್ಳುವುದಕ್ಕಾಗಿ ನಿಯಮಿಸಲ್ಪಟ್ಟಿದ್ದ ಅಧಿಕಾರಿಯನ್ನು ಒಬ್ಬನು ಕೊಂದುಬಿಟ್ಟುದಕ್ಕಾಗಿ ಅವನಮೇಲೆ ವಿವಾದವು ನಡೆದು ಅವನ ಅಪರಾಧವು ಸಿದ್ಧಪಟ್ಟಿತಾದರೂ ಅವನಿಗೆ ಮರಣದಂಡನೆಯು ವಿಧಿಸಲ್ಪಡದೆ 35 ವರ್ಷ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತಂತೆ

ಹುಟ್ಟಿದ ಮಕ್ಕಳೆಲ್ಲವೂ ಸತ್ತುಹೋಗುತ್ತಿದ್ದುದರಮೇಲೆ ಅವುಗಳ ತಂದೆತಾಯಿಗಳು ಸತ್ತುಹೋದಮಕ್ಕಳ ಸಮಾಧಿಯಮೇಲೆ ಮಧ್ಯರಾತ್ರಿಯಲ್ಲಿ ನಿಂತುಕೊಂಡು ಸ್ನಾನಮಾಡಿದರೆ ಮುಂದೆ ಹುಟ್ಟುವ ಮಕ್ಕಳು ಸಾಯುವುದಿಲ್ಲವೆಂದು ಯಾರೋ ಹೇಳಿದರು. ಆ ತಂದೆತಾಯಿಗಳು ಅದೇರೀತಿ ಮಧ್ಯರಾತ್ರಿಯಲ್ಲಿ ಸಮಾಧಿಯಮೇಲೆ ನಿಂತು ಸ್ನಾನಮಾಡುತ್ತಿರುವಾಗ್ಯೆ ಒಬ್ಬ ಮನುಷ್ಯನು ಯಾತಕ್ಕಾಗಿಯೋ ಅವರ ಮುಂಗಡೆಬರಲು ಅವರುಗಳು ಅವನನ್ನು ಪಿಶಾಚವೆಂದು ಭ್ರಮಿಸಿ ಹೊಡೆದುದರಿಂದ ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿದಾಗ್ಯೂ ಬದುಕದೆ ಸತ್ತುಹೋಗಲಾಗಿ ಸಾಯಿಸಿದವನು ಸೆಷನ್ಸು ವಿಚಾರಣೆಗೆ ಗುರಿಮಾಡಲ್ಪಟ್ಟು ಯಾವಜ್ಜೀವದ್ವೀಪಾಂತರವಾಸಶಿಕ್ಷೆ ವಿಧಿಸಲ್ಪಟ್ಟಿದರ ಮೇಲೆ ಬೊಂಬಾಯಿ ಹೈಕೋರ್ಟಿಗೆ ಅಪೀಲನ್ನು ಮಾಡಿರಲಾಗಿ ಕೃತ್ಯನಡೆದ ವಿದ್ಯಾಮಾನವನ್ನು ಜಡ್ಜಿಯವರು ಪರ್ಯಾಲೋಚಿಸಿ ಅಪರಾಧಿಯನ್ನು ದೋಷಮುಕ್ತನನ್ನಾಗಿ ಮಾಡಿದರು.

ಕೈ|| ಕಬ್ಬಹಳ್ಳಿ ಚೆನ್ನಬಸಪ್ಪನವರ ಸ್ಮಾರಕ.

50-60 ಸಾವಿರ ರೂಪಾಯಿಗಳ ವೆಚ್ಚದಿಂದ ರಾಜಧಾನಿಯಲ್ಲಿ ವೀರಶೈವವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ಆಶ್ರಮವನ್ನು ಏರ್ಪಡಿಸಿ ಸಮಾಜಕ್ಕೆ ಮಹೋಪಕಾರವನ್ನು ಮಾಡಿರುವ ಕೈ|| ಕೆ. ಚೆನ್ನಬಸಪ್ಪನವರ ಸ್ಮರಣಾರ್ಥವಾಗಿ ಅವರ ಭಾವಚಿತ್ರವನ್ನು ಎಣ್ಣೆಬಣ್ಣದಲ್ಲಿ ಬರೆಯಿಸಿ ಅವರಾಶ್ರಮದಲ್ಲಿ ಕಟ್ಟಬೇಕೆಂದು ನಿರ್ಧರಿಸಿ ಅದಕ್ಕಾಗಿ ಚಂದಾದ್ರವ್ಯವನ್ನು ಕೊಟ್ಟಿರುವ ಮತ್ತು ಕೊಡಲೊಪ್ಪಿರುವ ಸಮಾಜಬಾಂಧವರ ಹೆಸರುಗಳನ್ನು ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಈ ಭಾವಚಿತ್ರವನ್ನು ಬರೆಯಲು ಬೆಂಗಳೂರಿನಲ್ಲಿ ಪ್ರಸಿದ್ಧರಾದ ಬಾರ್ಟರ್ ಕಂಪೆನಿಯವರಿಗೆ ವಹಿಸಿದೆ. ಅದು ಇನ್ನು 4-5 ವಾರಗಳಲ್ಲಿ ಸಿದ್ಧವಾಗುವುದು. ಅದರ ಆರಂಭೋತ್ಸವವು ಬರುವ ದಸರಾಮಹೋತ್ಸವಕಾಲದಲ್ಲಿ ನಡಿಸಲ್ಪಡಬೇಕಾಗಿರುವುದರಿಂದ ಚಂದಾವಾಗ್ದಾನಮಾಡಿರುವ ದೊಡ್ಡಮನುಷ್ಯರುಗಳು ಕೂಡಲೆ ಹಣವನ್ನು ದಯೆಯಿಟ್ಟು ಕಳುಹಿಸಿಕೊಡಬೇಕೆಂದೂ, ಈವರೆಗೆ ಕೊಡದೆ ಮತ್ತು ವಾಗ್ದಾನಮಾಡದೆ ಇರುವ ಸಮಾಜಬಾಂಧವರು ಯಥೋಚಿತವಾಗಿ ದ್ರವ್ಯಸಹಾಯಮಾಡಿ ಕೈಕೊಂಡಿರುವ ಸ್ಮಾರಕಕಾರ್ಯವು ನಿರ್ವಿಘ್ನವಾಗಿಯೂ ಪ್ರಶಸ್ತವಾಗಿಯೂ ನಡಿಯುವಂತೆ ಮಾಡಬೇಕಾಗಿ ಪ್ರಾರ್ಥಿಸುವ,

ತಮ್ಮ ವಿಧೇಯ,
ಜಿ. ಪರಮಶಿವಯ್ಯ, ಅಡ್ವೋಕೇಟ್,
ಬೆಂಗಳೂರು ಸಿಟಿ.

ಶ್ರೀಮದ್ದಕ್ಷಿಣಕಾಶೀ ಶ್ರೀಮದಮರಗಣಂಗಳ ನಿಜಸಿಂಹಾಸನ
ಜಗದಾಚಾರ್ಯ ರಾಜಗುರು ಚವುಡಯ್ಯದಾನಪುರದ
ಸಂಸ್ಥಾನ್ ಶ್ರೀಸ್ವಾಮಿ ವಿರೂಪಾಕ್ಷ ಒಡೆಯ
ರವರ ಸನ್ನಿಧಾನದಿಂದ.

ಶ್ರೀಮದ್ವೀರಶೈವಮಹಾಜನರ ತಿಳುವಳಿಕೆ ಬಗ್ಗೆ ಶ್ರುತಗೊಳಿಸುವದೇನಂದರೆ.—ತಾ|| 31-7-26 ನೇ ಸ್ಟಾರ್ ಪತ್ರಿಕೆಯಲ್ಲಿ ಸನ್ನಿಧಾನಕ್ಕೆ ವಾಂಛಲ್ಯಶೀಲರು ವಿಜ್ಞಾಪಿಸಿಕೊಂಡಿರುವದರಲ್ಲಿ ತಾ|| 17-7-26 ನೇ ಸ್ಟಾರ್‌ಪತ್ರಿಕೆಯಲ್ಲಿ ಸನ್ನಿಧಾನದಿಂದ ಮೈಸೂರ್ ಸ್ಟೇಟ್ ಕಡೂರ್ ತಾ|| ಯಗಟಿಪುರದ ಶ್ರೀಪ್ರಸನ್ನ ಮಲ್ಲಿಕಾರ್ಜುನಸ್ವಾಮಿಯವರ ದೇವಸ್ಥಾನದ ರಥೋತ್ಸವಸಂಬಂಧ ಆಗಮಕಾರ್ಯದ ವಿವಾದದಲ್ಲಿ ಈ ಚಾಲ್ತಿಸಾಲ್ ರಥಾರೋಹಣಕಾರ್ಯವು ನಿಂತುಹೋಗಿರುವುದರಿಂದ ಪರವಾದಿಗಳ ಪ್ರತಿಷ್ಠಾ ವಾಂಛಲ್ಯವನ್ನು ವೀರಶೈವಧರ್ಮಪ್ರಕಾರ ಸುಧಾರಿಸಲು ಚಿತ್ತವಿಟ್ಟಿರುವದಾಗಿರುತ್ತೆ. ಎಲ್ಲಾ ಮಹಾಜನರ ವಾಂಛಲ್ಯದಕ್ಷತೆಯ ಅಭಿಮಾನದೊಡನೆ ಮಹಾಸ್ವಾಮಿ ಸ್ವಾರಿಯು ಖುದ್ದು ಯಗಟಿಪುರಸ್ಥಳಕ್ಕೆ ಸಂಘದವರ ಪ್ರಾರ್ಥನೆಯ ಮೇರೆಗೆ ದಯೆಮಾಡಿಸಲು ಸ್ಥಳವಿದ್ಯಮಾನ ಸುವ್ಯವಸ್ಥಾ ಬಗ್ಗೆ ಸಂಸ್ಥಾನದಿಂದ ಮ್ಯಾನೇಜರ್ ಗಂಗಾಧರಯ್ಯನವರನ್ನೂ ಧರ್ಮೋಪದೇಶಕ ಎಸ್. ಹಾಲಪ್ಪನವರನ್ನೂ 4 ಜನ ಸಿಪಾಯಿಗಳನ್ನೂ ಕಳುಹಿಸಿಕೊಟ್ಟಿದೆ. ಈಗ ಮಹಾಸ್ವಾಮಿ ಸ್ವಾರಿಯು ಇಂದೂರ್ ಸ್ಟೇಟ್ ಶಿವದೇವಪುರ ಮೊಕ್ಕಾಂನಲ್ಲಿದ್ದು ದೇವಾಸ, ಸೈಲಾನಾ ವಗೈರೆ ಮಹಾರಾಜರವರ ಆಮಂತ್ರಣಪ್ರಕಾರ ಅವರ ಆಸ್ಥಾನಕ್ಕೆ ದಯೆಮಾಡಿಸಿ ನೈಜಾಂ ಇಲಾಖೆ ಉಸ್ಮಾನಬಾದ ಮತ್ತು ಸೋಲಾಪೂರ ಜಿಲ್ಲೆಗಳಲ್ಲಿ 7 ಸಾವಿರ ಜನರಿಗೆ ವಿಧ್ಯುಕ್ತಪ್ರಕಾರ ಶಿವಲಿಂಗದೀಕ್ಷಾಸಂಸ್ಕಾರವನ್ನು ಪೂರೈಸಿಕೊಟ್ಟು ದರ್ಜಾಗಾಸಂಸ್ಥಾನಕ್ಕೆ ದಯೆಮಾಡಿಸಿ, ಅನಂತರ ಯಗಟಿಪುರದ ಸಂಬಂಧವಾಗಿ ಆ ಪ್ರಾಂತದ ಕೆಲವು ಪ್ರಮುಖರನ್ನು ಬರಮಾಡಿಕೊಂಡು ಆಲೋಚಿಸಿ ಯೋಗ್ಯಕಾಲದಲ್ಲಿ ಶ್ರೀಯಗಟಿಪುರದ ದೇವಸ್ಥಾನಕ್ಕೆ ಮೊಕ್ಕಾಂ ಮಾಡುವ ಪ್ರೋಗ್ರಾಂ ಇದೇ ಸ್ಟಾರ್‌ಪತ್ರಿಕಾದ್ವಾರ ಸರ್ವರಿಗೂ ಶ್ರುತಗೊಳಿಸಲಾಗುವ ವಿವರವನ್ನು ತಿಳಿಸಲು ಮಹಾಸ್ವಾಮಿಯವರ ಅಪ್ಪಣೆಯಾಗಿರುತ್ತದೆ.

ತಾ|| 6-8-1926,
ಯಗಟಿಪುರ ತಾ|| ಕಡೂರು. }
ಎಸ್. ಹಾಲಪ್ಪ,
ಸಂಸ್ಥಾನಧರ್ಮೋಪದೇಶಕ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಆನಂದದ ಸುದ್ದಿ.

ನವಲಗುಂದ ತಾ|| ಶಲವಡಿ ಸುಸಂಗಿವಿರಕ್ತಮಠದ ಶ್ರೀಗುರುಶಾಂತಶಿವಯೋಗಿಗಳು ನಡಿಸಿದ ಶ್ರೀನಿರಂಜನಜಂಗಮಪೂಜಾಸಮಾರಂಭಕಾಲದಲ್ಲಿ ಸದರೀ ಶಿವಯೋಗಿಗಳ ಪೂಜಾವಿನಿಯೋಗಕ್ಕಾಗಿ ವಾಗ್ದಾನಮಾಡಿದ ಪ್ರಕಾರ ರೋಣ ತಾ|| ಸೂಡಿ ರಾ|| ಶ್ರೀಮಂತ ಸಿದ್ಧಪ್ಪನವರು ಬಿದರೂರ ಇವರು 2 ಸಾವಿರ ರೂ. ಕಿಮ್ಮತ್ತಿನ 13 ಎಕರೆ ಜಮೀನನ್ನು ಇದೇ ಆಷಾಢ ಬ|| ೬ ಶುಕ್ರವಾರ ದಾನಪತ್ರದಮೂಲಕ ಒಪ್ಪಿಸಿದರು. ಪರಮಾತ್ಮನು ಸದರಿಯವರಿಗೆ ಆಯುರಾರೋಗ್ಯಾಭಿವೃದ್ಧಿಯನ್ನು ದಯಪಾಲಿಸಲೆಂಬದಾಗಿ ಬೇಡುತ್ತೇನೆ.

ಚಂದ್ರಶೇಖರಶಾಸ್ತ್ರಿ,
ಸಂಸ್ಕೃತಪಾಠಶಾಲಾಧ್ಯಾಪಕ.

ಬುಕ್ಕಾಂಬುಧಿಯ ಪ್ರಜೆಗಳ ಸಂತೋಷವಾರ್ತೆ.

ಈಗ ಸುಮಾರು ಒಂದುತಿಂಗಳ ಹಿಂದೆ ಬುಕ್ಕಾಂಬುಧಿಯಿಂದ ಜಗಲೂರಿಗೆ ವರ್ಗಪಟ್ಟ ಡಾಕ್ಟರ್ ಎಸ್. ನಾರಾಯಣರಾಯರವರ ಹಾವಳಿಯನ್ನು ಬಡವರು ಸಹಿಸಲಸಾಧ್ಯವಾಗಿದ್ದಿತು. ಮೇಲ್ಪಟ್ಟ ಆಫೀಸರುಗಳು ಈ ಊರಿನ ಬಡವರ ದೀನಪ್ರಾರ್ಥನೆಯನ್ನು ಘನಚಿತ್ತಕ್ಕೆ ತಂದುಕೊಂಡು ಡಾಕ್ಟರ್ ಎಸ್. ನಾರಾಯಣರಾಯರವರನ್ನು ಜಾಗ್ರತೆಯಾಗಿ ವರ್ಗಮಾಡಿ, ಡಾಕ್ಟರ್ ಕೆ. ವಾಸುದೇವರಾಯರನ್ನು ಜಗಲೂರಿಂದ ಈ ಊರಿಗೆ ಕಳುಹಿಸಿದ್ದರಿಂದಲೂ, ಇವರು ಬಡವರೂ ಬಲ್ಲಿದವರೂ ಎಂದು ತಾರತಮ್ಯವನ್ನು ಇಡದೆ ಮುಕವರ್ಜಿಯಿಂದ ಕೆಲಸಮಾಡುತ್ತಿರುವದರಿಂದಲೂ ನಮ್ಮ ವೈದ್ಯಇಲಾಖಾ ಸೀನಿಯರ್ ಸರ್ಜನ್ ಸಾಹೇಬರವರಿಗೂ, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರಿಗೂ ಬುಕ್ಕಾಂಬುಧಿಪ್ರಜೆಗಳು ತಮ್ಮ ಸಂತೋಷವನ್ನು ಈ ಮೂಲಕ ತಿಳಿಸಿ ಅವರುಗಳನ್ನು ವಂದಿಸುತ್ತಾರೆ.

ಸತ್ಯವಾದಿ.

ವತನದಾರಓಲೆಕಾರರ ಮತ್ತು ವಾಲ್ಮೀಕಜನರ ಕಾನ್ಫರೆನ್ಸುಗಳು.

ಅಖಿಲಕರ್ನಾಟಕ ವತನದಾರ ಓಲೆಕಾರರ ಕಾನ್ಫರೆನ್ಸು ಚಿತ್ರದುರ್ಗ ಡಿ|| ಡೆಪ್ಯುಟಿಕಮಿಷನರ ಅಧ್ಯಕ್ಷತೆಯಲ್ಲೂ, ವಾಲ್ಮೀಕಜನರ 5ನೇ ಮಹಾಸಭೆಯು ಮಳವಳ್ಳಿ ತಾ|| ಅಮಲ್ದಾರ್ ಮ|| ಬಿ. ಸೀತಾರಾಮಯ್ಯ, ಎಂ.ಎ. ಯವರ ಅಧ್ಯಕ್ಷತೆಯಲ್ಲೂ ಹರಿಹರಮಹಾಕ್ಷೇತ್ರದಲ್ಲಿ ಈ ಆಗಸ್ಟ ತಾ|| 15 ರಿಂದ 17ರ ವರೆಗೆ ನಡಿಯುವವು. ಸ್ವಮತಪರಮತಗಳ ಸರ್ಕಾರಿಯಧಿಕಾರಿಗಳೂ, ವಕೀಲರುಗಳೂ, ವಿದ್ಯಾವಂತರೂ ದಯೆಮಾಡಿ ಸಮಾಜದ ನೈತಿಕ ಆರ್ಥಿಕ ವಿದ್ಯಾಭಿವೃದ್ಧಿಯ ವಿಚಾರವಾಗಿ ವ್ಯಾಖ್ಯಾನಮಾಡುವರು. ಆದ್ದರಿಂದ ಕುಲಾಭಿಮಾನಿಗಳು ದಯೆಯಿಟ್ಟು ದಯಮಾಡಿ ಸಮಾಜಾಭಿವೃದ್ಧಿಗೆ ತಮ್ಮ ಘನವಾದ ಸಲಹೆಗಳನ್ನು ಕೊಡಬೇಕಾಗಿ ಪ್ರಾರ್ಥಿಸುತ್ತೇವೆ. ಬರತಕ್ಕ ಜನರ ವಾಸಕ್ಕೂ ಊಟಕ್ಕೂ ತಕ್ಕೇರ್ಪಾಟುಮಾಡಲ್ಪಟ್ಟಿದೆ. ಹರಿಹರಕ್ಕೆ ದಯಮಾಡಿಸುವುದರಿಂದ ಶ್ರೀ ಹರಿಹರೇಶ್ವರಸ್ವಾಮಿಯ ಮತ್ತು ಸಮಾಜದ ಸೇವೆಯು ಏಕಕಾಲದಲ್ಲಿ ಲಭ್ಯವಾಗುವುದು ಒಂದು ಪುಣ್ಯವಿಶೇಷವಾಗಿರುವುದರಿಂದ ಸಮಾಜಬಾಂಧವರು ತಪ್ಪದೆ ಬರಬೇಕಾಗಿ ಕೋರುವ,

ಸ್ವಾಗತಸಂಘಾಧ್ಯಕ್ಷರು ಮತ್ತು ಸೆಕ್ರೆಟರಿ.

ಯಕ್ಷಗಾನನಾಟಕಾಭಿನಯ.

ನಮ್ಮ ಭಾರತಮಾತೆಯ ಉದರದಲ್ಲಿ ಜನಿಸಿದ ಅನೇಕಾನೇಕ ಶೂರರು ತಮ್ಮ ಭುಜಬಲಪರಾಕ್ರಮಗಳಿಂದ ಸಕಲರನ್ನೂ ಗೆದ್ದು ಚಿರಸ್ಮರಣೀಯವಾದ ಕೀರ್ತಿಯನ್ನು ಪಡೆದಿರುತ್ತಾರೆಂಬುದನ್ನು ವಾಚಕರಿಗೆ ತಿಳಿಸಬೇಕಾದ ಪ್ರಕೃತವಿಲ್ಲ. ಆದರೂ ಮೇಲ್ಕಂಡ ಯಕ್ಷಗಾನರೂಪವಾದ ಸುಧನ್ವನ ಕಾಳಗವು ವಿಧೇಯತೆ, ಆಜ್ಞೆ, ನಯ, ವಿನಯ, ಭಯಭಕ್ತಿಗಳನ್ನು ಪ್ರಜೆಗಳಿಗೆ ಕಲಿಸತಕ್ಕ ರೂಪದಲ್ಲಿ ತುಮಕೂರು ತಾ|| ಬ್ರಹ್ಮಸಂದ್ರದಲ್ಲಿ ಯಕ್ಷಗಾನನಾಟಕಸಂಘದವರಿಂದ ಶ್ಲಾಘ್ಯವಾಗಿ ಅಭಿನಯಿಸಲ್ಪಟ್ಟಿದ್ದು ಸ್ತೋತ್ರಾರ್ಹವಾಗಿದೆ. ಸಂಘದ ಪ್ರೊಪ್ರೈಟರಾದ ಮಿ|| ಚಿಕ್ಕವೀರಯ್ಯನವರು ಈಗ್ಗೆ ಸ್ವಲ್ಪದಿವಸಗಳಲ್ಲಿ ಈ ಕಥೆಯನ್ನು ಆಡಿತೋರಿಸಲುಜ್ಜುಗಿಸಿ ಮೊದಲನೇಸಾರಿಯೇ ಪ್ರೇಕ್ಷಕರ ಚಕ್ಷುರಿಂದ್ರಿಯಕ್ಕೆ ಹಬ್ಬವನ್ನು ಮಾಡಿಸಿದರು. ಅವರ ಮೆಹನತ್ತು ಶ್ಲಾಘನೀಯವಾಗಿದೆ. ಸುಧನ್ವನ ಪಾರ್ಟನ್ನು ವಹಿಸಿದ್ದ ಅಡವಪ್ಪನವರೂ, ಅವನ ಪತ್ನಿ ಪ್ರಭಾವತಿಪಾರ್ಟನ್ನು ವಹಿಸಿದ್ದ ಚಿಕ್ಕತಿಮ್ಮಯ್ಯನೂ, ಹಂಸಧ್ವಜನ ಪಾರ್ಟನ್ನು ವಹಿಸಿದ್ದ ಪುಟ್ಟಯ್ಯನೂ ಆತನ ಪತ್ನೀಪಾರ್ಟನ್ನು ವಹಿಸಿದ್ದ ನಂಜಪ್ಪನೂ, ಅರ್ಜುನನ ಪಾರ್ಟನ್ನು ವಹಿಸಿದ್ದ ಗಂಗಪ್ಪನವರೂ, ಸಾಲ್ವನ ಪಾರ್ಟನ್ನು ವಹಿಸಿದ್ದ ದೊಡ್ಡೀರಯ್ಯನೂ ಕೇವಲ ಹಳ್ಳಿಯವರಾದಾಗ್ಯೂ ಕಥೆಯನ್ನು ವ್ಯಾಕರಣಬದ್ಧವಾಗಿಯೂ, ಶ್ರಾವ್ಯವಾಗಿಯೂ, ನೇತ್ರಾನಂದಕರವಾಗಿಯೂ ಅಭಿನಯಿಸಿದರು. ಒಟ್ಟಿನಲ್ಲಿ ಕಥೆಯು ಕೇವಲ ತಿಳವಳಿಕೆಯಲ್ಲಿ ಹಿಂದುಳಿದ ಹಳ್ಳಿಯಜನರಿಗೆ ತಂದೆತಾಯಿಗಳಲ್ಲಿ ವಿಧೇಯತೆ, ಸ್ತ್ರೀಯರಿಗೆ ಸ್ವತಂತ್ರವನ್ನು ಕೊಡಕೂಡದು ; ಕೊಟ್ಟಲ್ಲಿ ಅದರಿಂದಾಗತಕ್ಕ ಅನಾಹುತ, ಪತಿಭಕ್ತಿ, ಏಕಪತ್ನೀವ್ರತ ಇತ್ಯಾದಿ ನೀತಿಗಳನ್ನು ಬೋಧಿಸತಕ್ಕುದಾಗಿದೆ. ಸಂಘದವರು ವಿಶೇಷ ಪ್ರಾಜ್ಞರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಸಂಘವನ್ನು ಅಭಿವೃದ್ಧಿಗೆ ತರುತ್ತಿರುವುದು ಅಭಿನಂದನೀಯವಾಗಿದೆ.

ಪ್ರೇಕ್ಷಕ, ಬಿ. ಎಲ್. ಗುಂಡಪ್ಪ, ಶಾನುಭೋಗ್.

ಸ್ವದೇಶೀವೈದ್ಯಕ್ಕೆ ಪ್ರೋತ್ಸಾಹ.

ಚಿಕ್ಕಬಳ್ಳಾಪುರದ ಶ್ರೀ ಆನಂದಕೃಷ್ಣ ಆಯುರ್ವೇದೀಯ ಧರ್ಮವೈದ್ಯಶಾಲೆಯ ಪೋಷಕಮಹಾಶಯರ ತೃತೀಯ ಸಮ್ಮೇಳನವು ಇದೇ ಟೌನ್ನಲ್ಲಿರುವ ಗೌರ್ನ್ಮೆಂಟ್ ಗರ್ಲ್ಸ್ ಸ್ಕೂಲ್‌ಹಾಲಿನಲ್ಲಿ 1-8-1926ನೇ ಭಾನುವಾರ ಮಧ್ಯಾಹ್ನಾತ್ಪರ ಮ|| ಸುಂದರರಾವ್, ಬಿ.ಎ. ಅಸಿಸ್ಟೆಂಟ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೋಲಾರ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಾದ ಮ|| ಸಿ. ಬಿ. ಗೋಪಾಲರಾಯರವರು, ಡಾಕ್ಟರು, ಟೌನ್ ವೈಸ್‌ಪ್ರೆಸಿಡೆಂಟರೇ ಮೊದಲಾದ ಅಧಿಕಾರಿಗಳು, ಪ್ಲೀಡರುಗಳು, ವರ್ತಕಮಂಡಲಿಯವರು ಇನ್ನೂ ಅನೇಕ ಪುರನಿವಾಸಿಗಳು ನೆರೆದಿದ್ದರು. ದೇವತಾಸ್ತೋತ್ರಪೂರ್ವಕವಾಗಿ ಪ್ರೆಸಿಡೆಂಟರವರ ಆರಂಭಭಾಷಣದೊಂದಿಗೆ ಸಮ್ಮೇಳನದ ಕಾರ್ಯಗಳು ಉಪಕ್ರಮವಾದನಂತರ ಟೌನ್ ವೈಸ್‌ಪ್ರೆಸಿಡೆಂಟರು ಮ|| ವೈ. ವೆಂಕಟರಾಯಪ್ಪನವರು ವೈದ್ಯಶಾಲೆಯ ವಾರ್ಷಿಕಾಭಿವೃದ್ಧಿ ರಿಪೋರ್ಟನ್ನು ಓದಿದರು. ಮ|| ಆನಂದಕೃಷ್ಣವೈದ್ಯಶಾಲಾ ಪಂಡಿತ ಕೆ. ಲಕ್ಷ್ಮೀನರಸಪ್ಪನವರು ಆಯುರ್ವೇದೀಯಾಷ್ಟತಂತ್ರ ಸ್ವರೂಪವಿವರಣಾ ಎಂಬ ಲೇಖನವನ್ನು ಓದಿದರು. ಮ|| ಹೈಸ್ಕೂಲ್ ಸಾಹಿತ್ಯವಿದ್ವಾನ್ ಹೆಚ್. ಸೀತಾರಾಮಶಾಸ್ತ್ರಿಗಳವರು ಪೂರ್ವದಾರಭ್ಯ ಈಗಿನವರೆಗೆ ಆಯುರ್ವೇದದ ಬೆಳವಣಿಗೆಯನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಮ|| ಕೆ. ಚನ್ನಪ್ಪನವರು “ ಆಯುರ್ವೇದವನ್ನು ಏತಕ್ಕೆ ಪ್ರೋತ್ಸಾಹಿಸಬೇಕು ? ” ಎಂಬ ವಿಷಯವನ್ನು ಕುರಿತು ಯುಕ್ತಿಯುಕ್ತವಾಗಿ ಉಪನ್ಯಾಸಮಾಡಿದರು. ಇವರಂತೆಯೇ ಮ|| ಪ್ಲೀಡರ್ ದೊರಸಾಮಯ್ಯನವರು ಮತ್ತು ಬೆಂಗಳೂರಿನಿಂದ ದಯಮಾಡಿಸಿದ್ದ ವೈದ್ಯವರ ಕೆ. ಶೇಷಯ್ಯರ್‌ರವರು ಆಯುರ್ವೇದಪ್ರಾಶಸ್ತ್ಯದ ವಿಷಯವಾಗಿ ಬಹುಚೆನ್ನಾಗಿ ಪ್ರಸ್ತಾಪಿಸಿದರು. ಈ ವೈದ್ಯಶಾಲೆಯ ಪುರೋಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಮ|| ಪ್ಲೀಡರ್ ಯಂ. ಹನುಮಂತರಾಯರವರು ಸೂಚಿಸಿದರು. ಮ|| ಪ್ಲೀಡರ್ ಹೆಚ್. ಸುಬ್ಬಾಯರವರು ಅದನ್ನು ಪುಷ್ಟೀಕರಿಸಿದರು; ಅಲ್ಲಿ ನೆರೆದಿದ್ದ ಮಹಾಜನಗಳು ಅನುಮೋದಿಸಿದರು. ನಂತರ ಮ|| ಪಂಡಿತಕವಿ ಎ. ಕೇಶವಯ್ಯನವರು ಮ|| ಪಂಡಿತ ಕೆ. ಲಕ್ಷ್ಮೀನರಸಪ್ಪನವರಿಗೂ ಮ|| ಕೆ. ಚೆನ್ನಪ್ಪನವರಿಗೂ ಬೆಂಗಳೂರಿನಲ್ಲಿ ನಡೆದ ಅಖಿಲಕರ್ನಾಟಕ ಆಯುರ್ವೇದೀಯ ದ್ವಿತೀಯ ಸಮ್ಮೇಳನದ ಕಾಲದಲ್ಲಿ ದಯಪಾಲಿಸಿದ ಮೆಡಲುಗಳ ವಿಷಯಕವಾದ ಅಭಿನಂದನಪತ್ರಿಕೆಯನ್ನು ಓದಿದರು. ತರುವಾಯ ಪ್ರೆಸಿಡೆಂಟರವರು ಶ್ರೀ ಆನಂದಕೃಷ್ಣಧರ್ಮವೈದ್ಯಶಾಲಾ ಪಂಡಿತರ ಲೋಕಸೇವಾರೂಪವಾದ ಸತ್ಕಾರ್ಯವನ್ನೂ, ಪುರನಿವಾಸಿಗಳಿಗೆ ಈ ವೈದ್ಯಶಾಲೆಯ ಮೇಲೆ ಇರುವ ಅತ್ಯಂತ ಅಭಿಮಾನವನ್ನೂ ಶ್ಲಾಘಿಸಿ ಇದರ ಪುರೋಭಿವೃದ್ಧಿಗೆ ಅನೇಕ ಸಲಹೆಗಳನ್ನು ಸೂಚಿಸುತ್ತಾ ತಮ್ಮ ಕೊನೆಯ ಭಾಷಣವನ್ನು ಉಪಸಂಹರಿಸಿದರು. ನಂತರ ಪಂಡಿತಕವಿ ಎ. ಕೇಶವಯ್ಯನವರು ತಮ್ಮಿಂದ ರಚಿಸಲ್ಪಟ್ಟಿದ್ದ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನಾಪದ್ಯಮಾಲಿಕೆಯನ್ನು ಗಾನಮಾಡಿದರು. ಗಂಧಪುಷ್ಪತಾಂಬೂಲಗಳ ವಿನಿಯೋಗಾನಂತರ ಸಮ್ಮೇಳನದ ಕಾರ್ಯಗಳು ಪರಿಸಮಾಪ್ತಿಗೊಂಡವು.

ಪ್ರತ್ಯಕ್ಷದರ್ಶೀ.

ತಾಳಿಕೋಟೆಯ ಶಿವಯೋಗಿವರ್ಯರ ಜಾತ್ರೆ.

ತಾಳಿಕೋಟೆಯು ಶ್ರೀಮನ್ನಿರಂಜನಪೂಜ್ಯಪಾದ ಖಾಸಗತ ಶಿವಯೋಗಿವರ್ಯರ ಕೃಪಾಕಟಾಕ್ಷದಿಂದಲೂ ಮಹಾಪಾದಸ್ಪರ್ಶದಿಂದಲೂ ಪುಣ್ಯಕ್ಷೇತ್ರಸದೃಶವಾಗಿದ್ದು ಸಕಲಸಂಪತ್ತಿನಿಂದೊಡಗೂಡಿರುವದು ಸರ್ವಶ್ರುತವಾಗಿರುತ್ತದೆ. ಈ ಪುಣ್ಯಮಯಪಟ್ಟಣದಲ್ಲಿ ವಿರಾಜಮಾನವಾಗಿರುವ ಶ್ರೀ ಸಂಸ್ಥಾನಮಠದಲ್ಲಿ ಪದ್ಧತಿಪ್ರಕಾರ ಈ ವರ್ಷವಾದರೂ ಇದೇ ಆಷಾಢ ಶು|| ೫ ಯಿಂದ ಸಪ್ತಾಹ ಭಜನಾ ಶ್ರೀರುದ್ರಾಭಿಷೇಕ ಪುರಾಣಶ್ರವಣಾದಿ ಕಾರ್ಯಗಳು ಕ್ರಮದಿಂದ ನಿರ್ವಿಘ್ನವಾಗಿ ಜರಗಿದವು ಮತ್ತು ಶು|| ೧೨ ಪ್ರಾತಃಕಾಲದಿಂದ ಸಾಯಂಕಾಲದವರೆಗೂ ಸ್ವಪರಸ್ಥಳಗಳಿಂದ ಬಂದಿದ್ದ ಸಮಸ್ತಜನರಿಗೆ ವಿಶೇಷ ಅನ್ನಸಂತರ್ಪಣೆಯಾಯಿತು. ಸದರಿ ದಿವಸವೇ ಶ್ರೀಶಿವಯೋಗಿವರ್ಯರ ಕೃಪಾವಿಶೇಷದಿಂದಲೋ ನಮ್ಮಗಳ ಸುದೈವದಿಂದಲೋ ಮ|| ಮಂಜಪ್ಪ ಹರ್ಡೇಕರ ಈ ಮಹನೀಯರ ಆಗಮನವಾಯಿತು. ಮತ್ತು ಶು|| ೧೩ ಶುಕ್ರವಾರ ಸಾಯಂಕಾಲಕ್ಕೆ ನಾಲ್ಕು ಘಂಟೆಗೆ ಮೊದಲೇ ಅನೇಕ ವೈಭವಗಳಿಂದಲಂಕರಿಸಲ್ಪಟ್ಟ ಮಹಾರಥದಲ್ಲಿ ಶ್ರೀಶಿವಯೋಗಿಗಳ ಭಾವಪಟವನ್ನು ಸ್ಥಾಪಿಸಿ ಸಂಸ್ಥಾನದ ಪಾಠಶಾಲಾವಿದ್ಯಾರ್ಥಿಗಳ ವೇದಘೋಷ ಅನೇಕ ಜನರ ಶಿವಭಜನೆ ಮತ್ತು [illegible] ರಥವು ಸಂಕೇತಸ್ಥಾನಪರ್ಯಂತರ ಸಾಗಿ ಪುನಃ ಸ್ವಸ್ಥಾನಕ್ಕೆ ಸಾಯಂಕಾಲ ೬ ಘಂಟೆಗೆ ನಿರ್ವಿಘ್ನವಾಗಿ ಬಂದುಸೇರಿತು. ಮತ್ತು ರಾತ್ರಿ ೯|| ಘಂಟೆಯಿಂದ ಶ್ರೀಮತ್ಪೂಜ್ಯಪಾದ ಷಟಸ್ಥಲಬ್ರಹ್ಮಿ ಗುರುಪಟ್ಟಾಧ್ಯಕ್ಷ ಶ್ರೀಮದ್ಗುರುಮಹಾಂತ ಶಿವಾಚಾರ್ಯಮಹಾಸ್ವಾಮಿ ಬೃಹನ್ಮಠ ಸೂಡಿ ಇವರ ಅಧ್ಯಕ್ಷತೆಯ ಕೆಳಗೆ ಸಾಧಾರಣ ೮-೧೦ ಸಾವಿರ ಜನರು ಸಭೆಗೂಡಿ ಅಧ್ಯಕ್ಷರ ಆಭಾರಾದಿ ಕಾರ್ಯಗಳು ಜರಿಗಿದನಂತರ ಸದರಿ ಮಂಜಪ್ಪನವರು ಪಂಡಿತರಿಗೂ ಪಾಮರರಿಗೂ ಚೆನ್ನಾಗಿ ಬೋಧವಾಗುವಂತೆ ಸರಸವಾಗಿ ಮಾನುಷತ್ವ ಈ ವಿಷಯಬಗ್ಗೆ ಭಾಷಣಮಾಡಿದರು, ಮತ್ತು ಚಹಾ ತಂಬಾಖು, ಪರದೇಶೀಸಕ್ಕರಿ ಇವುಗಳಲ್ಲಿರತಕ್ಕ ಗುಣದೋಷಗಳ ಬಗ್ಗೆ ಸರ್ವರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಬೋಧಿಸಿದನಂತರ ಸದ್ಗೃಹಸ್ಥರು ಇವುಗಳಲ್ಲಿರತಕ್ಕ ಹಾನಿಯನ್ನು ವಿಚಾರಿಸಿ ತತ್ಕಾಲದಲ್ಲಿಯೇ ಅನೇಕಜನರು ಪೂರ್ವೋಕ್ತ ವಸ್ತುಗಳನ್ನು ಅವಶ್ಯ ಬಿಡುತ್ತೇವೆಂಬು ಸತ್ಯಪ್ರತಿಜ್ಞೆಯನ್ನು ಮಾಡಿದರು. ಇಲ್ಲಿಯ ಪ್ರಮುಖರ ಇಚ್ಛಾನುಸಾರವಾಗಿ ನಾಲ್ಕೆಂಟು ದಿನಗಳವರೆಗೆ ಸದರಿಯವರ ವ್ಯಾಖ್ಯಾನಗಳಾಗತಕ್ಕವಿರುವವು.

ತಮ್ಮ ವಿಧೇಯ,
ಶ್ರೀಖಾಸ್ಗತಸ್ವಾಮಿವಾಚನಾಲಯ ಸೆಕ್ರೆಟರಿ, ತಾಳೀಕೋಟೆ.

ಔದಾರ್ಯ.

ತುಮಕೂರು ತಾಲ್ಲೂಕು ಶ್ರೀಸಿದ್ಧಗಂಗಾಕ್ಷೇತ್ರವು ಅನಾದಿಸಂಸಿದ್ಧವಾದ ಪುಣ್ಯಕ್ಷೇತ್ರವಾಗಿಯೂ ಪ್ರತಿದಿವಸದಲ್ಲಿಯೂ ಅನೇಕಮಂದಿ ಯಾತ್ರಾರ್ಥಿಗಳು ಬರತಕ್ಕ ಸ್ಥಳವಾಗಿಯೂ ಇರುವ ವಿಷಯವು ಸಮಸ್ತರಿಗೂ ಗೊತ್ತೇ ಇದೆ. ಶ್ರೀಕ್ಷೇತ್ರದಲ್ಲಿ ದಾಸೋಹ, ಸಂಸ್ಕೃತಪಾಠಶಾಲೆ ಮುಂತಾದ ಕಾರ್ಯಗಳೆಲ್ಲವೂ ಮೂಲಧನ ಮುಂತಾದ್ದೇನೂಯಿಲ್ಲದ ಭಕ್ತರಿಂದಲೇ ನಡೆಯಬೇಕಾಗಿದೆ. ಹಾಲಿ ನಡೆಯುತ್ತಿರುವ ಧರ್ಮಕಾರ್ಯಗಳೆಲ್ಲಾ ಶಾಶ್ವತವಾಗಿ ನಡೆಯುವಂತೆ ಮಾಡಬೇಕೆಂಬುದೇ ಸಿದ್ಧಗಂಗಾಮಠಾಧಿಪತಿಗಳಾದ ಶ್ರೀಸ್ವಾಮಿಗಳವರ ಅಭಿಪ್ರಾಯವಾಗಿದೆ. ಮಹಾಜನಗಳ ಸಹಾಯವಿಲ್ಲದೆ ಯಾವ ಮಹತ್ಕಾರ್ಯವೂ ನೆರವೇರುವುದಿಲ್ಲವೆಂಬಂಶ ಸಮಸ್ತರಿಗೂ ಗೊತ್ತೇ ಇದೆ. ಇದನ್ನೆಲ್ಲಾ ನೋಡಿ ಚೆನ್ನಾಗಿ ಪರ್ಯಾಲೋಚಿಸಿ ಮ|| ಅತ್ತಿಬೆಲೆ ಸಾಹುಕಾರ್ ಸಿದ್ಧಬಸಪ್ಪನವರ ಶರಭಣ್ಣನವರು ತಮ್ಮ ಸಹಾಯವು ಸರಿಯಾದರೀತಿಯಲ್ಲಿ ಸದ್ವಿನಿಯೋಗವಾಗಬೇಕೆಂದು ಒಂದುಸಾವಿರ ರೂಪಾಯಿಗಳನ್ನು ಭಕ್ತಿಪುರಸ್ಸರವಾಗಿ ಶ್ರೀಕ್ಷೇತ್ರದ ಧರ್ಮಕಾರ್ಯಗಳಿಗೆ ಸಹಾಯಮಾಡಿರುತ್ತಾರೆ. ಹಿಂದೆ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರೇ ಮೊದಲಾದ ಮಹನೀಯರು ತಮ್ಮ ಉದಾರಬುದ್ಧಿಯಿಂದ ಸಹಾಯಮಾಡಿ ಇಹಲೋಕದಲ್ಲಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡೆದು ಸಮಾಜವನ್ನುದ್ಧರಿಸಿದರು. ಇಂತಹ ಮಹನೀಯರ ಮೇಲ್ಪಙ್ತಿಯನ್ನನುಸರಿಸುವುದು ಪ್ರತಿಯೊಬ್ಬನ ಕರ್ತವ್ಯವೇ ಆಗಿರುತ್ತದೆ. ಶ್ರೀಮನ್ನಿರಂಜನಸ್ವಾಮಿಗಳು ಈಗಿನ ಕಾಲದಲ್ಲಿ ತುಂಬಾ ದುರ್ದೆಸೆಯಲ್ಲಿರುವ ಸಂಸ್ಕೃತಭಾಷಾಭಿವೃದ್ಧಿಗೋಸ್ಕರ ಬಹಳ ಪ್ರಯತ್ನಪಡುತ್ತಿದ್ದಾರೆ. ಹಾಲಿ ಇರುವ ಸಂಸ್ಕೃತಪಾಠಶಾಲೆಯಲ್ಲಿ ಸಂಸ್ಕೃತವನ್ನೇ ಪ್ರಧಾನವಾಗಿಟ್ಟುಕೊಂಡು ವ್ಯಾಸಂಗಮಾಡುವವರು ಸುಮಾರು 25 ಮಂದಿಗಳಿರುತ್ತಾರೆ. ಇಂಗ್ಲಿಷ್ ಮತ್ತು ಸಂಸ್ಕೃತಗಳೆರಡನ್ನೂ ವ್ಯಾಸಂಗಮಾಡುವವರು 10 ಮಂದಿಗಳಿರುತ್ತಾರೆ. ಕಳೆದ ಸಾಲಿನಲ್ಲಿ ಶ್ರೀಕ್ಷೇತ್ರದ ವಿದ್ಯಾರ್ಥಿನಿಲಯದಿಂದ ಸಂಸ್ಕೃತಕಾವ್ಯಪರೀಕ್ಷೆಗೆ ಹೋಗಿದ್ದ ಒಬ್ಬನೂ, S.S.L.C. ಪರೀಕ್ಷೆಗೆ ಹೋಗಿದ್ದ ಇಬ್ಬರೂ, ಇಂಗ್ಲಿಷ್ ಲೋವರ್‌ಸೆಕೆಂಡರೀಪರೀಕ್ಷೆಗೆ ಹೋಗಿದ್ದ ಇಬ್ಬರಲ್ಲಿ ಒಬ್ಬನೂ ತೇರ್ಗಡೆಯಾಗಿರುತ್ತಾರೆ. ಮುಂದಿನ ಸಾಲಿನಲ್ಲಿ ಶ್ರೀಚಾಮರಾಜೇಂದ್ರಸಂಸ್ಕೃತಕಾಲೇಜಿನಲ್ಲಿ ನಡೆಯುವ “ ಚಂಪೂನಾಟಕ ಪರೀಕ್ಷೆ ”ಗೆ ಒಬ್ಬನೂ “ ಕಾವ್ಯ ಪರೀಕ್ಷೆಗೆ ” ನಾಲ್ಕುಮಂದಿಗಳೂ ಹೋಗುವವರಾಗಿರುತ್ತಾರೆ. ಸಂಸ್ಕೃತಪಾಠಶಾಲೆಯು ಇಷ್ಟು ಅಭಿವೃದ್ಧಿಸ್ಥಿತಿಯಲ್ಲಿರುವುದಕ್ಕೆ ಶ್ರೀಮನ್ನಿರಂಜನಸ್ವಾಮಿಗಳವರ ಉತ್ಸಾಹವೇ ಕಾರಣವಾಗಿರುತ್ತೆ. ಪಾಠಶಾಲಾಪುರೋಭಿವೃದ್ಧಿಗೆ ಪೂರ್ತಿಯಾದ ಸಹಾಯವನ್ನು ಯಾರಾದರೂ ಮಾಡಿದಲ್ಲಿ ಅಂತಹ ಮಹನೀಯರ ಹೆಸರಿನಿಂದಲೇ ಸಂಸ್ಕೃತಪಾಠಶಾಲೆಯನ್ನು ನಡೆಯಿಸಲು ಶ್ರೀಮನ್ನಿರಂಜನಸ್ವಾಮಿಗಳವರು ಸಿದ್ಧರಿರುತ್ತಾರೆ. ಆದುದರಿಂದ ಮಹಾಜನಗಳು ಮೇಲ್ಕಂಡ ಮ|| ಶರಭಣ್ಣನವರಂತೆ ಶಕ್ತಿಮೀರಿ ಸಹಾಯಮಾಡಿ ಕ್ಷೇತ್ರದ ಧರ್ಮಕಾರ್ಯಗಳು ಆಚಂದ್ರಾರ್ಕವಾಗಿ ನಡೆಯುವಂತೆಯೂ, ಸಮಾಜೋದ್ಧಾರವಾಗುವಂತೆಯೂ ಮಾಡಿ ಶ್ರೀಗುರುಸಿದ್ಧಲಿಂಗನ ಕೃಪೆಗೆ ಪಾತ್ರರಾಗುವರೆಂದು ನಂಬಿರುತ್ತೇನೆ.

ಶ್ರೀಕ್ಷೇತ್ರಾಭಿಮಾನಿ.

ಬೀರೂರುನಲ್ಲಿ ಶಾಂತಪ್ಪಶೆಟ್ಟರ ಸತ್ರ.

ಇಲ್ಲಿಯ “ ಶಿವಾನಂದ ಫ್ರೀ ವಾಚನಾಲಯ ”ಕ್ಕೆ ಹೊಸದಾಗಿ ಸರ್ವಜನರ ಜ್ಞಾನಾರ್ಜನೆಗಾಗಿ ಒಂದು ಪುಸ್ತಕಭಂಡಾರವನ್ನೇರ್ಪಡಿಸಿರುವುದು ಸ್ತುತ್ಯವಾಗಿದೆ. ಇದಕ್ಕೆ ಮ|| ಪತ್ರೆ ಕೆ. ಚನ್ನವೀರಪ್ಪಯ್ಯನವರು 100 ರೂ. ಬೆಲೆ ಬಾಳುವ ಪುಸ್ತಕಗಳನ್ನೂ ಮ|| ದೊಡ್ಡಮನೆ ಹಾಲಪ್ಪನವರು ಒಂದು ದೊಡ್ಡಗಡಿಯಾರವನ್ನೂ ತರಿಸಿ ಕೊಟ್ಟಿದ್ದಕ್ಕಾಗಿ ಅವರನ್ನು ಎಲ್ಲರೂ ವಂದಿಸುತ್ತಾರೆ. ಈಗ್ಗೆ ಸುಮಾರು 6-7 ವರ್ಷಗಳ ಹಿಂದೆ ಈ ಊರಿನ ಹೊರಗೆ ಮ|| ಇಂಗಳಗುಂದಿ ಶಾಂತಪ್ಪಶೆಟ್ಟರು 6-8 ಸಾವಿರ ರೂ. ವೆಚ್ಚದಿಂದ ಮನೋಹರವಾದ ಒಂದು ಸತ್ರವನ್ನು ಧರ್ಮಾರ್ಥವಾಗಿ ಕಟ್ಟಿಸಿ, ಹಿಂದೆ ದಿವಾನರಾಗಿದ್ದ ಕೈ|| ಸರ್ ಕಾಂತರಾಜಅರಸಿನವರಿಂದ ವೈಭವದಿಂದ ಓಪನ್‌ಮಾಡಿಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯವೇಆಗಿದೆ. ಈಗ್ಗೆ 8-10 ದಿವಸಗಳ ಹಿಂದೆ ನನ್ನ ಕೆಲವು ಸ್ನೇಹಿತರೊಂದಿಗೆ ನಾನು ವಾಕಿಂಗ್ ಹೋಗಿದ್ದಾಗ ಆ ಸತ್ರಕ್ಕೆ ಹೋದೆನು “ಅಲ್ಲಿ ಮ|| ಶಾ. ಶೆಟ್ಟರು ತಕ್ಕ ವ್ಯವಸ್ಥೆಯನ್ನು ಕಲ್ಪಿಸಿಕೊಡದೆ ಇರುವುದನ್ನು ನೋಡಿ ನನ್ನ ಮನಸ್ಸಿಗೆ ತುಂಬಾ ವ್ಯಾಕುಲವಾಯಿತು. ಅದು ದನಗಳೂ ಕತ್ತೆಗಳೂ ನಿಂತುಕೊಳ್ಳುವುದಕ್ಕೂ, ಹಾವಾಡಿಗರೂ ತಿರುಕರೂ ಇಳಿದುಕೊಳ್ಳುವುದಕ್ಕೂ ಹಳ್ಳಿಯ ಆಶ್ರಯವಾಗಿದೆಯೇ ಹೊರ್ತು, ಅದರಿಂದ ಇತರರಿಗೆ ಯಾವ ಪ್ರಯೋಜನವೂ ಇಲ್ಲವೆಂದು ಹೇಳಲು ವಿಷಾದವಾಗುತ್ತದೆ. ನಮ್ಮ ಶೆಟ್ಟರು ಅಖಂಡೈಶ್ವರ್ಯವಂತರೂ, ಯೋಚನಾಪರರೂ, ಉದಾರಿಗಳೂ ಆಗಿರುವುದಲ್ಲದೆ ಈ ಪ್ರಾಂತ್ಯದ ವೀರಶೈವಬಾಂಧವರಲ್ಲಿ ರತ್ನಪ್ರಾಯರೂ ಅದ್ವಿತೀಯಜ್ಞಾನವುಳ್ಳವರೂ ಆಗಿರುತ್ತಾರೆ.” ಇವರು ಅನೇಕ ಪರೋಪಕಾರಕಾರ್ಯಗಳನ್ನು ಮಾಡಿ “ಧನಧಾನ್ಯಾದಿಗಳೂ, ಭೂಕನಕಾದಿಗಳೂ ಪರೋಪಕಾರಕ್ಕಾಗಿ ಉಪಯೋಗವಾಗಲೆಂದೇ ಸರ್ವೇಶ್ವರನು ತಮಗೆ ಕೊಟ್ಟಿದ್ದಾನೆ ಆತನಿಂದ ಕೊಡಲ್ಪಟ್ಟ ಈ ಭಂಡಾರವನ್ನು ಆತನ ಕಾರ್ಯಕ್ಕಾಗಿಯೇ ವಿನಿಯೋಗಿಸುವುದು ತನ್ನ ಕರ್ತವ್ಯವು” ಎಂದು ಮಠಾಭಿವೃದ್ಧಿ ಭಾಷಾಭಿವೃದ್ಧಿ ಕಾರ್ಯಗಳಿಗೆ ಸ್ವಾರ್ಥವನ್ನು ನೀಗಿ, ಮುಕ್ತಹಸ್ತರಾಗಿ ದಾನವನ್ನು ಮಾಡಿರುವ ಕೆಲವರನ್ನು ತಾವೇ ಕಣ್ಣಿನಿಂದನೋಡಿ, ಇತರರಿಗೆ ತಾವೇ ಮಾರ್ಗದರ್ಶಿಗಳಾಗಿರುತ್ತಾರೆ. ಇಂತಹವರಿಗೆ ಈ ಸತ್ರದ ಸುವ್ಯವಸ್ಥೆಯನ್ನು ಮಾಡುವುದು ದೊಡ್ಡ ಕಾರ್ಯವಲ್ಲ. ಇದರ ಅವ್ಯವಸ್ಥೆಯು ಇವರ ಗಮನಕ್ಕೆ ಬಂದಿಲ್ಲವಾಗಿ ಕಾಣುತ್ತೆ, ಅಥವಾ ಇದರ ಪ್ರಸ್ತಾಪವನ್ನೇ ಇವರು ಮರತಿರಬಹುದು. ಇವರಿಗೆ ಈ ವಿಷಯ ಗೊತ್ತಿದ್ದರೆ ಅದಕ್ಕೆ ತಕ್ಕ ಏರ್ಪಾಟು ಮಾಡುತ್ತಿದ್ದರೆಂದು ದೃಢವಾಗಿ ಹೇಳಬಲ್ಲೆ. ಈಗಲಾದರೂ ಮ|| ಶೆಟ್ಟರು ತಮ್ಮ ಉದಾರವಾದ ಗಮನಕ್ಕೆ ತಂದುಕೊಂಡು ತಮ್ಮ ಐಶ್ವರ್ಯದಲ್ಲಿ ಸ್ವಲ್ಪಭಾಗವನ್ನಾದರೂ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟು ಅದರ ಬಡ್ಡಿಯಿಂದ ಕೆಲವು ಬಡವಿದ್ಯಾರ್ಥಿಗಳ ವಾಸಕ್ಕೂ ಊಟಕ್ಕೂ ತಮ್ಮ ಧರ್ಮಸತ್ರದಲ್ಲಿ ತಕ್ಕೇರ್ಪಾಟನ್ನು ಮಾಡಿಸಿಕೊಟ್ಟರೆ ಇಷ್ಟು ವೆಚ್ಚಮಾಡಿ ಮನೋಹರವಾಗಿ ಸತ್ರವನ್ನು ಕಟ್ಟಿಸಿದ್ದಕ್ಕೆ ಸಾರ್ಥಕವಾಗುತ್ತೆ. ಮ|| ಶಾ. ಶೆಟ್ಟರು ವಯೋವೃದ್ಧರಾಗುತಾ ಬಂದದ್ದರಿಂದ “ ಶುಭಸ್ಯಶೀಘ್ರಂ ” ಎಂಬಂತೆ ಈ ಸತ್ಕಾರ್ಯವನ್ನು ಕೂಡಿದಷ್ಟು ಜಾಗ್ರತೆಯಾಗಿ ನೆರವೇರಿಸಬೇಕಾಗಿ ಈ ಊರಿನ ವೀರಶೈವಮಂಡಳಿಯಪರವಾಗಿ ಬೇಡಿಕೊಳ್ಳುತ್ತೇನೆ. ಇದರಿಂದ ಸಮಾಜಸೇವೆಮಾಡಿದಂತಾಗಿ ಆಚಂದ್ರಾರ್ಕಕೀರ್ತಿಗೆ ಭಾಗಿಗಳಾಗುವರು. ದಾನದಲ್ಲೆಲ್ಲಾ ವಿದ್ಯಾದಾನವೇ ಶ್ರೇಷ್ಠವಾದ್ದೆಂದು ಶಾಸ್ತ್ರಗಳು ಹೇಳುತ್ತಿರುವುದರಿಂದ ಮೇಲೆ ಹೇಳಿದ ರೀತಿಯಲ್ಲಿ ವಿದ್ಯಾರ್ಥಿಗಳ ವಾಸಕ್ಕೂ ಊಟಕ್ಕೂ ತಮ್ಮ ಸತ್ರದಲ್ಲಿ ವ್ಯವಸ್ಥೆಯನ್ನು ಮಾಡಲು ಅವರಿಗೆ ದೇವರು ಮನಸ್ಸು ಕೊಡಲೆಂದು ಪ್ರಾರ್ಥಿಸುತ್ತೇನೆ. ಬಡವಿದ್ಯಾರ್ಥಿಗಳ ಹಿತೈಷಿ.

ವೀರಶೈವವಿದ್ಯಾವರ್ಧಕಸಂಘ, ಬಳ್ಳಾರಿ.

ಕಳೆದ ಆದಿತ್ಯವಾರ ಸಾಯಂಕಾಲ ಮದ್ರಾಸು ವೀರಶೈವವಿದ್ಯಾವರ್ಧಕ ಸಂಘದ ಪತಿಯಿಂದ ಇಲ್ಲಿಯ ಸೂಗಮ್ಮನವರ ಚೌಕಿಯಲ್ಲಿ, ಹಿಂದುಳಿದ ನಮ್ಮ ಜನಾಂಗದ ಹಕ್ಕುಬಾಧ್ಯತೆಗಳನ್ನು ಗೌರ್ನ್ಮೆಂಟಿನವರಿಗೆ ತಿಳಿಸಲೋಸುಗ ಒಂದು ಮಹತ್ತರವಾದ ಸಭೆಯು ಮ|| ತಂಗೀಮಲ್ಲೇಶಪ್ಪ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಸಭೆಯು ನಮ್ಮ ಜನಾಂಗದ ದೊಡ್ಡದೊಡ್ಡ ವರ್ತಕರಿಂದಲೂ, ವೈಭವಶಾಲಿಗಳಾದ ಐಶ್ವರ್ಯವಂತರಿಂದಲೂ, ಜಮೀನ್ದಾರರಿಂದಲೂ, ಸದಸದ್ವಿವೇಕಶಾಲಿಗಳಾದ ವಿದ್ವಜ್ಜನಮಂಡಲಿಯಿಂದಲೂ, ಉತ್ತಮ ಆಂಗ್ಲಪದವೀಧರರಿಂದಲೂ ಸುಸಜ್ಜಿತವಾಗಿ ಒಪ್ಪುತ್ತಲಿದ್ದಿತು. ಮ|| ಟಿ. ಹೆಚ್. ಎಂ. ಚಂದ್ರಶೇಖರಶಾಸ್ತ್ರಿಗಳು, ಬಿ.ಎ., ಬಿ.ಎಲ್. ವಕೀಲರು ತಮ್ಮ ಪೀಠಿಕೋಪನ್ಯಾಸಪ್ರಸಂಗದಲ್ಲಿ, ನಮ್ಮ ಜನಾಂಗದ ರಾಜಕೀಯವಿದ್ಯಾವಿಷಯಗಳಲ್ಲಿ ಆರೂಢವಾಗಿರುವ ಹೀನದೆಸೆಯನ್ನು ಹೃದಯಂಗಮವಾಗಿ ವರ್ಣಿಸುತ್ತ, ಮಗುವು ಅತ್ತರೆ ತಾಯಿಯು ಹಾಲನ್ನು ಕೊಡುವಳೆಂಬುವ ನಾಣ್ಣುಡಿಯಂತೆ, ನಾವಾದರೂ, ಇನ್ನು ಮುಂದೆ ಗಾಢನಿದ್ರೆಯಲ್ಲಿರದೆ, ನಮ್ಮ ಹಕ್ಕುಬಾಧ್ಯತೆಗಳನ್ನು ಗೌರ್ನ್ಮೆಂಟಿನವರಿಗೆ ಒತ್ತಿಹೇಳುತ್ತ, ಹೆಚ್ಚು ಸೌಲಭ್ಯಗಳನ್ನೊದಗಿಸಿಕೊಂಡು ನಮ್ಮ ಜನಾಂಗದ ಏಳಿಗೆಯ ಬಗ್ಗೆ ಪಾಟುಪಡುವದೇ ನಮ್ಮ ಪ್ರಥಮ ಕರ್ತವ್ಯವಿರುತ್ತದೆಂದು ತಿಳಿಸಿದರು. ಆಮೇಲೆ ಕೆಲವು ವಿವಾದಾಸ್ಪದವಾದ ವಿಷಯಗಳು ಚರ್ಚಿಸಲ್ಪಟ್ಟು ಸಭೆಯಲ್ಲಿ ನೆರೆದಿದ್ದ ಸರ್ವರ ಅನುಮತಿಯಿಂದ ಕೆಳಗೆ ಕಂಡ ಠರಾವುಗಳು ಮಂಜೂರುಮಾಡಲ್ಪಟ್ಟವು.—

(1) ಈ ವರುಷ ಪ್ರಥಮಸರಿ ರೆವಿನ್ಯೂಇನ್ಸ್ಪೆಕ್ಟರ ಚುನಾವಣೆಯು ಅನಂತಪುರದಲ್ಲಿ ನಡೆಯುವಪ್ರಯುಕ್ತ ಆ ಜಿಲ್ಲೆಯಲ್ಲಿ ಹಿಂದುಳಿದ ನಮ್ಮ ಜನಾಂಗದಲ್ಲಿ ಯಾರೂ ಗೌರ್ನ್ಮೆಂಟು ಉದ್ಯೋಗಗಳಲ್ಲಿ ಇಲ್ಲದೆ ಇರುವದರಿಂದ ಇದೇ ವರುಷ ಎ.ಕೆ. ನಾಗಪ್ಪ ಬಿ.ಎ., ಎಂಬುವವರು, ಈ ವೀರಶೈವ ವಿದ್ಯಾವರ್ಧಕಸಂಘದಿಂದ ಸಹಾಯವನ್ನು ಹೊಂದಿ, ಪದವೀಧರರಾಗಿರುವದರಿಂದ ಅವರ ಹೆಸರನ್ನು ಅನಂತಪುರ ಡಿ|| ಕಲೆಕ್ಟರ ಸಾಹೇಬರಿಗೆ ಕಳುಹಿಸಿ, ಅವರನ್ನು ಸದರಿ ಕಲೆಕ್ಟರು ಚುನಾಯಿಸುವದಾಗಿ ಪ್ರಾರ್ಥಿಸುತ್ತದೆ. ಈ ಠರಾವು ಟಿ. ಹೆಚ್. ಎಂ. ಚಂದ್ರಶೇಖರಶಾಸ್ತ್ರಿ ಬಿ.ಎ., ಬಿ.ಎಲ್. ಇವರಿಂದ ತರಲ್ಪಟ್ಟು ಮ|| ಶಿವಚನ್ನಬಸಪ್ಪ ಮ್ಯುನಿಸಿಪಲ್ ಕೌನ್ಸಿಲರ್ ಇವರಿಂದ ಅನುಮೋದಿಸಲ್ಪಟ್ಟಿತು. (2) ಬಳ್ಳಾರಿಜಿಲ್ಲೆಯಲ್ಲಿ ಸರ್ಕಾರೀ ಉದ್ಯೋಗಗಳಲ್ಲಿ ಸೇರಿರತಕ್ಕ, ಹಿಂದುಳಿದ ಜನಾಂಗವಾದ ಲಿಂಗಾಯತ ಉದ್ಯೋಗಸ್ಥರ ಪೈಕಿ ಹಂಗಾಮಿ ಕೆಲಸದಲ್ಲಿರತಕ್ಕವರನ್ನು ಖಾಯಂಮಾಡುವದಾಗಿಯೂ, ಖಾಯಂ ಆಗಿರತಕ್ಕವರಿಗೆ, ಮುಂದೆಹೋಗಲು ಉತ್ತೇಜನಕೊಡುವದಾಗಿಯೂ, ಇನ್ನು ಮುಂದೆ ಪಾಸಾಗಿಬರತಕ್ಕವರಿಗೆ ಹೆಚ್ಚು ಸೌಲಭ್ಯಗಳನ್ನು ಕೊಡುವದಾಗಿಯೂ, ಈ ಸಭೆಯು ಬಳ್ಳಾರಿಜಿಲ್ಲಾ ಕಲೆಕ್ಟರವರನ್ನು ಪ್ರಾರ್ಥಿಸುತ್ತದೆ. ಈ ಠರಾವು ಕುರುಗೋಡು ಎ. ಮರಿಬಸವನಗೌಡರು ಡಿಸ್ಟ್ರಿಕ್ಟ್ ಮೆಂಬರು ಇವರಿಂದ ಸೂಚಿಸಲ್ಪಟ್ಟು ಶ್ರೀಮಂತ ಹೊಳಗುಂದಿ ಜಿ. ಬಸವನಗೌಡರು ಯೂನಿಯನ್ ಚೇರ್ಮನ್ ಇವರಿಂದ ಪುಷ್ಟೀಕರಿಸಲ್ಪಟ್ಟಿತು. (3) ಈ ಸಂಘವು ಹೊಸರೆಗುಲೇಷನ್ ಪ್ರಕಾರ ಐ. ಸಿ. ಎಸ್. ಟ್ರೇನಿಂಗಿಗಾಗಿ ಗೌರ್ನ್ಮೆಂಟಿನವರು ಹಿಂದುಳಿದ ಜನಾಂಗದಿಂದ, ಕೆಲ ಉಮೇದುವಾರರನ್ನು ನಾಮಿನೇಟು ಮಾಡುವದಕ್ಕೆ ಒಪ್ಪಿಕೊಂಡಿರುವದರಿಂದ ಹಿಂದುಳಿದ ವರ್ಗವಾದ ಲಿಂಗಾಯಿತಮತದ ಟಿ. ಹೆಚ್. ಎಂ. ಸದಾಶಿವಯ್ಯ, ಎಂ. ಎ. (ಬಿ. ಎಲ್. ಕ್ಲಾಸು) ಇವರನ್ನು ಚುನಾಯಿಸಬೇಕಾಗಿ ಪ್ರಾರ್ಥಿಸುವ ಠರಾವು ತೊಗರಿ ವೀರಮಲ್ಲಪ್ಪ ವೈಸ್ ಪ್ರೆಸಿಡೆಂಟ್ ತಾಲ್ಲೂಕು ಬೋರ್ಡು ಬಳ್ಳಾರಿ ಇವರಿಂದ ತರಲ್ಪಟ್ಟು, ಎಚ್. ದೊಡ್ಡನಗೌಡರು ತಾಲ್ಲೂಕು ಬೋರ್ಡುಮೆಂಬರು ಬಳ್ಳಾರಿ ಇವರಿಂದ ಅನುಮೋದಿಸಲ್ಪಟ್ಟಿತು. (4) 20 ವರ್ಷಮೀರಿದ ವಿದ್ಯಾರ್ಥಿಗಳನ್ನು ಹೈಸ್ಕೂಲುಗಳಲ್ಲಿ ಸೇರಿಸಿಕೊಳ್ಳಬಾರದೆಂದು ಮದ್ರಾಸು ಇಲಾಖೆಯ ವಿದ್ಯಾಧಿಕಾರಿಗಳಾದ (Director of Public Instructions) ಇವರು ಮಾಡಿದ ಉತ್ತರವು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಕುಂದಕವನ್ನುಂಟುಮಾಡುವದರಿಂದ, ಸರ್ಕಾರದವರು ಸದರಿ ಉತ್ತರವನ್ನು ರದ್ದುಮಾಡುವದಾಗಿ ಈ ಸಭೆಯು ಪ್ರಾರ್ಥಿಸುತ್ತದೆ. ಈ ಠರಾವು ಟಿ. ಹೆಚ್. ಎಂ. ಷಡಾಕ್ಷರಯ್ಯ, ಎಂ.ಎ. ಬಿ.ಎಲ್. ಇವರಿಂದ ಮುಂದಿಡಲ್ಪಟ್ಟು, ಹೆಚ್. ಕರಿಬಸಪ್ಪ, ಸೆಕ್ರೆಟರಿ ವೀರಶೈವವಿದ್ಯಾವರ್ಧಕ ಸಂಘ ಇವರಿಂದ ಪುಷ್ಟೀಕರಿಸಲ್ಪಟ್ಟಿತು. (5) ಈ ಸಭೆಯು ಮದ್ರಾಸು ಖಾಯದೆ ಕೌನ್ಸಿಲ್ ನಾಮಿನೇಷನ್ ಮೆಂಬರುಗಳ ವಿಷಯದಲ್ಲಿ ಮೈನಾರಿಟಿ ಜನಾಂಗಗಳ ಪೈಕಿ ಈ ಕೋರಿನ ಅನೇಕ ಜಿಲ್ಲಾಗಳಲ್ಲಿ ಭಿನ್ನಭಿನ್ನವಾಗಿರುವ ವಿಶೇಷ ಜನಸಂಖ್ಯೆವುಳ್ಳ ಈ ಲಿಂಗಾಯತಜನಾಂಗಕ್ಕೆ ಒಂದೇಸೀಟು ಕೊಟ್ಟಿರುವದು ಸಗಣತವಾಗಿ ಇಲ್ಲದೆ ಇರುವದರಿಂದ ಮುಂದೆ ಏರ್ಪಾಟಾಗತಕ್ಕ ಹೊಸಕೌನ್ಸಿಲ್ಲಿನಲ್ಲಿ 2 ಸೀಟುಗಳನ್ನು ರಿಜರ್ವುಮಾಡಬೇಕಾಗಿ ಗೌರ್ನ್ಮೆಂಟ್ನವರನ್ನು ಪ್ರಾರ್ಥಿಸುತ್ತದೆ. ಈ ಠರಾವು ಮ|| ತೊಗರಿ ವೀರಪ್ಪನವರು ಪ್ರೆಸಿಡೆಂಟರು ವೀರಶೈವವಿದ್ಯಾವರ್ಧಕಸಂಘ ಇವರಿಂದ ಮುಂದಿಡಲ್ಪಟ್ಟು ಚಂದ್ರಶೇಖರಶಾಸ್ತ್ರಿ ಬಿ.ಎ.,ಬಿ.ಎಲ್. ಇವರಿಂದ ಅನುಮೋದಿಸಲ್ಪಟ್ಟಿತು. ಈ ಠರಾವುಗಳು ಪಾಸುಮಾಡಲ್ಪಟ್ಟಮೇಲೆ, ಪ್ರೆಸಿಡೆಂಟರವರು ವಂದಿಸಲ್ಪಟ್ಟು ಸಭೆಯು ಜಯಘೋಷದೊಡನೆ ಮುಕ್ತಾಯಗೊಂಡಿತು.

ಓರ್ವ ವೀರಶೈವಮತಾಭಿಮಾನಿ.

ಮಹಾತ್ಮಗಾಂಧಿಯವರ ಸ್ವಚರಿತ್ರ

(ಸತ್ಯಾನ್ವೇಷಣ).

ಎರಡನೆಯಭಾಗ.

4 ನೆಯ ಪ್ರಕರಣ.

ಮೊದಲನೆಯ ಅವಮಾನವು.

ಬೊಂಬಾಯಿನಲ್ಲಿ ನನ್ನ ಪ್ರಯತ್ನವು ಸಾಗದಿದ್ದುದರಮೇಲೆ ಜೀವನಕ್ಕಾಗಿ ರಾಜಕೋಟೆಗೆ ಹೋಗಿ ಅಲ್ಲಿ ವಕೀಲನಾಗಿದ್ದುಕೊಂಡು [illegible] ಒಂದು ಆಫೀಸನ್ನೇರ್ಪಡಿಸಿದೆನು. ಅರ್ಜಿಗಳನ್ನೂ ವಿಜ್ಞಾಪನಪತ್ರಿಕೆಗಳನ್ನೂ ಬರೆದುಕೊಡುವುದರಿಂದಲೇ ತಿಂಗಳಿಗೆ 300 ರೂ. ವರಮಾನ ಬರುತ್ತಿದ್ದಿತು. ಇದು ನನ್ನ ಪ್ರಯತ್ನವಿಶೇಷದಿಂದ ಬಂದುದಾಗಿರದೆ ನನ್ನ ಅಣ್ಣನ ಹೆಸರುವಾಸಿಯಿಂದ ಬರುತ್ತಿದ್ದಿತು. ನನ್ನ ಅಣ್ಣನ ಪಾಲುಗಾರ ವಕೀಲನಿಗೆ ಬಹಳಜನರು ವಕಾಲತ್ತನ್ನು ಕೊಡುತ್ತಿದ್ದರು. ಅವುಗಳಲ್ಲಿ ಮುಖ್ಯವಾದುವುಗಳೆಂದು ಆತನಿಗೆ ತೋರಿದವುಗಳನ್ನು ದೊಡ್ಡ ದೊಡ್ಡ ಬ್ಯಾರಿಸ್ಟರುಗಳಿಗೆ ಕಳುಹಿಸಿ ಅವರಿಂದ ದಾವಾ ಅರ್ಜಿಯನ್ನು ಬರೆಸುತ್ತಿದ್ದನು. ಸಾಮಾನ್ಯ ಅರ್ಜಿಗಳನ್ನು ನನಗೆ ಕೊಡುತ್ತಿದ್ದನು. ಬೊಂಬಾಯಿನಲ್ಲಿ ಟೌಟುಗಳಿಗೆ ನಾನು ಕಮಿಷನ್ ಕೊಡುವುದಿಲ್ಲವೆಂದು ಹೇಳಿದ್ದೆನು, ಆದರೆ ರಾಜಕೋಟೆಯಲ್ಲಿ ತಪ್ಪಿದುದಲ್ಲವು. ರಾಜಕೋಟೆಯಲ್ಲಿ ಬ್ಯಾರಿಸ್ಟರುಗಳೆಲ್ಲರೂ ವಕೀಲರಿಗೆ ಕಮಿಷನನ್ನು ಕೊಡುವುದಲ್ಲದೆ ಟೌಟುಗಳಿಗೆ ಕೊಡಬೇಕಾದುದಿಲ್ಲವು. “ ನಾನೂ ಇನ್ನೊಬ್ಬ ವಕೀಲನೂ ಒಟ್ಟಾಗಿ ಕೆಲಸಮಾಡತೊಡಗಿದುವು.” ನೀನು ಕೆಲಸಮಾಡುವುದಕ್ಕಾಗಿ ದಾವಾಗಳನ್ನು ನಿನಗೆ ಕೊಡುತ್ತಿರುವೆನಾದುದರಿಂದ ನನ್ನ ಜತೆಗಾರನಿಗೆ ನೀನು ಕಮಿಷನ್ ಕೊಡದೆ ಹೋದಲ್ಲಿ ನನಗೆ ಬಹಳ ಅವಮಾನವಾಗುವುದು. ನಾವು ಸಮಷ್ಟಿ ಕುಟುಂಬದವರಾದುದರಿಂದ ನಿನ್ನ ಆದಾಯದಲ್ಲಿ ಕೂಡ ನನಗೆ ಭಾಗವು ಬರಬೇಕಾಗಿರುವುದಲ್ಲದೆ ನನ್ನ ಪಾಲುದಾರನಿಗೆ ಹೇಗೆ ಸಲ್ಲುವುದು? ನನ್ನ ಪಾಲುದಾರನು ಬೇರೊಬ್ಬ ಬ್ಯಾರಿಸ್ಟರಿಗೆ ಒಂದು ದಾವಾ ಕೊಟ್ಟಲ್ಲಿ ನನಗೆ ತಪ್ಪದೆ ಕಮಿಷನನ್ನು ಕೊಡಿಸುವನು” ಎಂದು ನನ್ನ ಅಣ್ಣನು ಹೇಳಿದನು. ಅದಕ್ಕೆ ನಾನು ಒಪ್ಪಿಕೊಳ್ಳಬೇಕಾಗಿಬಂದಿತು. ಬ್ಯಾರಿಸ್ಟರಾಗಿ ಕೆಲಸಮಾಡಬೇಕಾದಲ್ಲಿ ಕಮಿಷನ್ ಕೊಡದಿದ್ದರೆ ತೀರದೆಂದು ನಾನು ನಿಶ್ಚಯಿಸಿದೆನು. ಆ ಪ್ರಕಾರವಾಗಿ ನನ್ನ ಆತ್ಮವಂಚನೆಯನ್ನು ಮಾಡಿದೆನು. ಆದರೆ ಯಾವ ದಾವಾದಲ್ಲೂ ನಾನು ಕಮಿಷನ್ ಕೊಟ್ಟುದು ನನಗೆ ಜ್ಞಾಪಕವಿಲ್ಲವು. ಈ ಪ್ರಕಾರವಾಗಿ ಕುಟುಂಬದ ಖರ್ಚಿಗೆ ತಕ್ಕಷ್ಟು ಆದಾಯವು ಬರುತ್ತಿದ್ದಿತಾದರೂ ಆಗಲೇ ನನಗೆ ಮೊದಲನೆಯ ಅವಮಾನವು ಸಂಪ್ರಾಪ್ತವಾಯಿತು. ಬ್ರಿಟಿಷ್ ಉದ್ಯೋಗಿಗಳನ್ನು ಕುರಿತು ನಾನು ಕೇಳಿದ್ದೆನಲ್ಲದೆ ನಾನು ಬೇರೆ ಸ್ವಯಮಾಗಿ ಯಾರನ್ನೂ ನೋಡಿದುದಿಲ್ಲವು.

ಕೀರ್ತಿಶೇಷರಾದ ಪೂರುಬಂದರು ರಾಜರವರು ರಾಜ್ಯಾಧಿಕಾರವನ್ನು ವಹಿಸುವುದಕ್ಕೆ ಮೊದಲು ನನ್ನ ಅಣ್ಣನು ಅವರಿಗೆ ಕಾರ್ಯದರ್ಶಿಯಾಗಿದ್ದು ಸಲಹೆಯನ್ನು ಕೊಡುತ್ತಿದ್ದನು. ಆಗ ನನ್ನ ಅಣ್ಣನು ಅವರಿಗೆ ದುರ್ಬೋಧೆಯನ್ನು ಮಾಡಿದನೆಂದು ಹುಟ್ಟಿಸಲ್ಪಟ್ಟಿತು. ಆ ಸುದ್ದಿಯು ಪೊಲಿಟಿಕಲ್ ಏಜಂಟರಿಗೂ ಕೂಡ ತಿಳಿದು ಅವರಿಗೆ ನನ್ನ ಅಣ್ಣನಮೇಲೆ ದುರಭಿಪ್ರಾಯ ಹುಟ್ಟಿತು. ಆ ಅಧಿಕಾರಿಯು ಆಂಗ್ಲದೇಶದಲ್ಲಿದ್ದಾಗ್ಗೆ ನನಗೆ ಆತನ ಪರಿಚಯವಾಗಿದ್ದಿತು. ಆತನು ಅಲ್ಲಿ ನನ್ನಕೂಡ ಬಹಳ ವಿಶ್ವಾಸದಿಂದಿದ್ದನು. ಆದರಮೇಲೆ ಆತನಿಗೆ ನನ್ನ ಅಣ್ಣನ ವಿಚಾರದಲ್ಲಿ ಹುಟ್ಟಿದ್ದ ದುರಭಿಪ್ರಾಯವನ್ನು ಹೋಗಲಾಡಿಸಲು ನಿಜಸ್ಥಿತಿಯನ್ನು ಆತನಿಗೆ ತಿಳಿಸಿದರೆ ಬಹಳ ಒಳ್ಳೆಯದೆಂದು ನನ್ನ ಅಣ್ಣನು ಹೇಳಿದನು. ನನಗೆ ಅದು ಚೆನ್ನಾಗಿತೋರಲಿಲ್ಲವು. ಆಂಗ್ಲದೇಶದಲ್ಲಿ ಎಲ್ಲೋ ಕೊಂಚ ಪರಿಚಯವಾಗಿರುವುದೆಂಬುದರ ಮೇಲೆ ನಾನು ನನ್ನ ಅಣ್ಣನ ವಿಷಯವನ್ನು ಕುರಿತು ಆ ಅಧಿಕಾರಿಯೊಡನೆ ಮಾತನಾಡುವುದು ಒಳ್ಳೆಯ ಕೆಲಸವಲ್ಲವೆಂದು ನನಗೆ ತೋರಿತು. ನನ್ನ ಅಣ್ಣನು ಮಾಡಿದುದು ತಪ್ಪೆಂದು ನಾನು ಹೇಳುವುದರಿಂದ ಲಾಭವಿಲ್ಲವು. ಆತನು ನಿರ್ದೋಷಿಯೆಂದು ಅರ್ಜಿ ಬರೆಯುವುದೇ ಯುಕ್ತವೆಂದು ನಿಶ್ಚಯಿಸಿ ಅದನ್ನು ನನ್ನ ಅಣ್ಣನಿಗೆ ಹೇಳಿದೆನು. ಆತನಿಗೆ ಅದು ಸರಿಬೀಳಲಿಲ್ಲವು. “ ನಿನಗೆ ಕಥಿಯವಾಡದ ಸಂಗತಿ ತಿಳಿಯದು. ನಿನಗೆ ಪ್ರಪಂಚಾನುಭವವು ಕಡಿಮೆ. ಇಲ್ಲಿ ಉಪಾಯದಿಂದ ಕೆಲಸಮಾಡಬೇಕು. ನಿನಗೆ ಪರಿಚಯಸ್ಥನಾದ ಅಧಿಕಾರಿಯೊಡನೆ ನಿನ್ನ ಸೋದರನನ್ನು ಕುರಿತು ಒಳ್ಳೆಯ ಮಾತನ್ನು ಹೇಳಲು ನಿನಗೆ ಅವಕಾಶವಿರುವಾಗ್ಗೆ ನೀನು ಸುಮ್ಮನಿರಕೂಡದು” ಎಂದು ನನ್ನ ಅಣ್ಣನು ಹೇಳಿದನು.

ನಾನು ಮರುಮಾತನಾಡಲಾರದೆ ಹೋದೆನಾದರೂ ನಾನು ಮಾಡುವ ಕೆಲಸವು ಅಕ್ರಮವೆಂದೇ ನನಗೆ ತೋರಿತು. ನಾನು ಮುಂದಾಗಿ ಬರೆದೆನು. ಆದರಮೇಲೆ ಆ ಅಧಿಕಾರಿಯು ಬರಹೇಳಿದನು. ಪೂರ್ವಪರಿಚಯವನ್ನು ಕುರಿತು ಮೊದಲು ಜ್ಞಾಪಿಸಿದೆನಲ್ಲದೆ ಆಂಗ್ಲದೇಶಕ್ಕೂ ಕಥಿಯವಾಡಕ್ಕೂ ಬಹಳದೂರವೆಂದು ನಾನು ಕೂಡಲೆ ಗ್ರಹಿಸಿಕೊಂಡೆನು. ಕೆಲಸದಮೇಲಿರುವ ಉದ್ಯೋಗಿಯ ಲಕ್ಷಣಕ್ಕೂ ವಿಶ್ರಾಂತಿಯಮೇಲಿರುವ ಉದ್ಯೋಗಿಯ ಲಕ್ಷಣಕ್ಕೂ ಬಹಳ ವ್ಯತ್ಯಾಸವಿರುವುದು. ಪರಿಚಯವುಂಟೆಂದು ಆತನು ಒಪ್ಪಿಕೊಂಡಿದುದರಮೇಲೆ ನಾನು ನನ್ನ ವಿಷಯವನ್ನು ಜ್ಞಾಪಕಕ್ಕೆ ತಂದ ಕೂಡಲೆ ಆತನು ಬಿಗುಮಾನ ತೋರಿಸಹತ್ತಿದನು. ಆ ಪರಿಚಯವನ್ನು ದುರ್ವಿನಿಯೋಗಮಾಡುವುದಕ್ಕಾಗಿಯೇ ನೀನು ಇಲ್ಲಿಗೆ ಬಂದೆಯಾ ? ಎಂದು ಕೇಳುವಹಾಗೆ ಅವನ ಮುಖಭಾವದಿಂದ ವ್ಯಕ್ತವಾಯಿತು. ನಾನು ನನ್ನ ಅಣ್ಣನ ಸಂಗತಿಯನ್ನು ತಿಳುಹಲಾರಂಭಿಸಿದೆನು. ಆತನು ಸಿಟ್ಟುಮಾಡಿಕೊಂಡು “ ನಿನ್ನ ಅಣ್ಣನು ಸಂಚುಗಾರನು. ಅವನ ವಿಚಾರವಾಗಿ ನಾನೇನನ್ನೂ ಕೇಳುವುದಿಲ್ಲ. ನನಗೀಗ ಅವಕಾಶವಿಲ್ಲವು. ನಿನ್ನ ಅಣ್ಣನು ಏನನ್ನಾದರೂ ಹೇಳಿಕೊಳ್ಳಬೇಕಾಗಿದ್ದಲ್ಲಿ ಕ್ರಮವಾದ ರೀತಿಯಲ್ಲಿ ಬರೆದುಕೊಳ್ಳಲಿ” ಎಂದು ಆ ಅಧಿಕಾರಿಯು ಹೇಳಿದನು. ಆ ಉತ್ತರವೇ ಸಾಕು. ಅದು ಸರಿಯಾಗಿಯೇ ಇದ್ದಿತಾದರೂ ಸ್ವಾರ್ಥಪರತ್ವದಿಂದ ನಾನು ಬಿಡದೆ ಹೇಳತೊಡಗಿದೆನು. ಆತನು ಎದ್ದುನಿಂತು ನೀನು ಇನ್ನು ಹೊರಡಬಹುದೆಂದನು. ದಯೆಯಿಟ್ಟು ಕೇಳಿ ಎಂದು ನಾನು ಹೇಳಿದೆನು. ಅಷ್ಟಕ್ಕೆ ಆತನಿಗೆ ಕೋಪಬಂದು ಒಬ್ಬ ಆಳನ್ನು ಕೂಗಿದನು. ನಾನು ಇನ್ನೂ ಹೇಳುತ್ತಿರುವಾಗ್ಗೆ ಆಳು ಬಂದನು. ಈತನನ್ನು ಹೊರಗೆ ಕಳುಹಿಸಿಬಿಡೆಂದು ಆಳಿಗೆ ಹೇಳಿದನು. ಆ ಆಳು ನನ್ನ ಭುಜದಮೇಲೆ ಕೈಹಾಕಿ ನನ್ನನ್ನು ಹೊರಬಾಗಿಲಿಗೆ ತರತಂದುಬಿಟ್ಟನು. ನಾನು ಕೋಪಗೊಂಡು ಬಂದುಬಿಟ್ಟನು. “ ನೀವು ನನಗೆ ಅವಮಾನಪಡಿಸಿದಿರಿ. ನಿಮ್ಮಾಳಿನಿಂದ ಹೊರಕ್ಕೆ ನೂಕಿಸಿದಿರಿ. ನೀವು ಕ್ಷಮಾಪಣೆಯನ್ನು ಕೇಳದಿದ್ದಲ್ಲಿ ನಾನು ದಾವಾ ಮಾಡುತ್ತೇನೆ ” ಎಂದು ಕಾಗದ ಬರೆದೆನು. “ ನೀವು ವಕ್ರವಾಗಿ ಪ್ರವರ್ತಿಸಿದಿರಿ. ನಾನು ಹೊರಡಬೇಕೆಂದು ಹೇಳಿದರೂ ನೀವು ಹೊರಡಲಿಲ್ಲ. ಅದುದರಿಂದ ನಾನು ನನ್ನ ಸೇವಕನನ್ನು ಕರೆದು ನಿಮ್ಮನ್ನು ಕಳುಹಿಸಬೇಕಾಗಿ ಬಂದಿತು. ಆತನು ಬಂದು ಹೇಳಿದರೂ ನೀವು ಹೊರಡಲಿಲ್ಲವು. ಅದರ ಮೇಲೆ ಅವನು ಕಾಲಕ್ಕೆತಕ್ಕಂತೆ ದೌರ್ಜನ್ಯವನ್ನು ನಡಿಸಬೇಕಾಯಿತು. ನೀವು ದಾವಾಮಾಡುವುದಾದರೆ ಮಾಡಬಹುದು ” ಎಂದು ಆತನು ಉತ್ತರವನ್ನು ಬರೆದು ಕಳುಹಿಸಿದನು. ಅದನ್ನು ಜೇಬಿನಲ್ಲಿಟ್ಟುಕೊಂಡು ವ್ಯಾಕುಲದಿಂದ ಮನೆಗೆ ಹೋಗಿ ನಡೆದ ಸಂಗತಿಯನ್ನೆಲ್ಲ ನನ್ನ ಅಣ್ಣನಿಗೆ ಹೇಳಿದೆನು. ಆತನು ಕೂಡ ಬಹಳವಾಗಿ ಚಿಂತಿಸಿದನು. ಆದರೆ ನನ್ನ [illegible] ಉಪಾಯವೇನೂ ತೋರಲಿಲ್ಲವು. ನನ್ನ ಸ್ನೇಹಿತರಾದ ವಕೀಲರಿಗೆ ತಿಳಿಸಿದೆನು. ಹೇಗೆ ಕೇಸುಮಾಡಬೇಕೆಂಬುದು ನನಗೆ ಗೊತ್ತಾಗಲಿಲ್ಲವು. ಆ ಸಮಯದಲ್ಲಿ ಒಂದು ದಾವಾ ಸಂಬಂಧವಾಗಿ ಫಿರೋಜ್‌ಷಾ ಮೆಹತಾರವರು ರಾಜಕೋಟೆಗೆ ಬಂದಿದ್ದರು. [illegible]

ದಲ್ಲಿ ಬ್ಯಾರಿಸ್ಟರುಗಳಿಗೂ ವಕೀಲರುಗಳಿಗೂ ಇಂತಹ ಅವಮಾನವಾಗುವುದು ರೂಢಿಯಾಗಿದೆ. ಗಾಂಧಿಯು ಹೊಸದಾಗಿ ಆಂಗ್ಲದೇಶದಿಂದ ಬಂದ ಯುವಕನಾಗಿರುವುದರಿಂದ ಆತನಿಗೆ ಅನುಭವವಿಲ್ಲ. ಬ್ರಿಟಿಷ್ ಅಧಿಕಾರಿಗಳ ಸಂಗತಿ ಆತನಿಗೆ ಗೊತ್ತಿಲ್ಲ. ಹೇಗಾದರೂ ಕೊಂಚ ಅರಿತು ಚೆನ್ನಾಗಿ ಕಾಲವನ್ನು ಕಳೆಯುವಂತೆ ಪ್ರಯತ್ನಿಸುವುದೇ ಕರ್ತವ್ಯವು. ದಾವಾ ಮಾಡಿದಲ್ಲಿ ಪ್ರಯೋಜನವಿಲ್ಲ, ಮತ್ತು ಅದರಿಂದ ಹಾನಿಯೇ ಆಗುವುದು. ಆತನಿಗಿನ್ನೂ ಅನುಭವವು ಸಾಲದೆಂದು ನಾನು ಹೇಳಿದನೆಂದು ತಿಳಿಸುವುದು" ಎಂದು ಮಹಾಶಯರು ಹೇಳಿದರು. ಆ ಸಲಹೆಯು ನನಗೆ ಬೋಧಪರವಾಗಿದ್ದರೂ ಮನೋವ್ಯಾಕುಲವು ತಪ್ಪಲಿಲ್ಲ. ಆದರೆ ಅದರಿಂದ ನನಗೆ ಬಹಳ ಅನುಭವ ಬಂದಿತು. ಅಂತಹ ಪರಿಚಯದ ಮೇಲೆ ಪುನಃ ನಾನು ಎಂದೂ ಯಾರಲ್ಲಿಗೂ ಹೋಗಿರಲಿಲ್ಲವು.

ವೇದಾರ್ಥವಿಚಾರ.

(ಲೇಖಾಂಕ ೩)

(ಲೇಖಕ—ಸ್ವಾಮಿ ವಿರೂಪಾಕ್ಷಒಡೆಯರು.)

ಹಿಂದಿನ ಲೇಖದಲ್ಲಿ ಮಹೀಧರಪಂಡಿತನ ವಿಚಾರವನ್ನು ವೇದವಿಷಯದಲ್ಲಿ ತೋರಿಸಿದಂತೆ ವೇದವಿಭಾಗ, ವೇದೋತ್ಪತ್ತಿ ಮೊದಲಾದ್ದನ್ನು ಸಾಯಣಾಚಾರ್ಯರು ಹ್ಯಾಗೆ ಪ್ರತಿಪಾದನೆಮಾಡಿರುವರೆಂಬುವದನ್ನು ವಿಚಾರಿಸುವ. ಮಹೀಧರನಿಗಿಂತಲೂ ಸಾಯಣರ ವಿಚಾರಗಳು ಸ್ವಲ್ಪ ಸೌಮ್ಯವಾಗಿಯೂ, ವರುಣ (ಉಲ್ಕ) ಮೊದಲಾದ ಅಷ್ಟೊಂದು ಹೊಲಸುವಿಚಾರಗಳಿಂದ ರಹಿತವಾಗಿಯೂ ಪೌರಾಣಿಕರ ಜೊಳ್ಳುಪೊಳ್ಳು ಕಥೆಗಳಿಂದ ಭರಿತವಾಗಿಯೂ ಇರುವವು. ಕೇವಲ ಲೌಕಿಕ ವ್ಯಾಕರಣಪ್ರವೃತ್ತಿಯಿಂದ ಸಾಯಣರು ವೇದಗಳಲ್ಲಿಯ ಶಬ್ದಸಿದ್ಧಿಮಾಡುವ ಆಲೋಚನಾಪರರಾಗಿರುವರಲ್ಲದೆ ಭೌತಿಕಾರ್ಥಪರವೃತ್ತಿಯುಳ್ಳವರಾಗಿ ವೇದಮಂತ್ರಾರ್ಥವನ್ನು ಹಸಗೆಡಿಸಿಬಿಟ್ಟಿರುವರು. ಯಾಕೆಂದರೆ, ಇವರು ಯಾವ ವೇದಮಂತ್ರಕ್ಕೆ ಅರ್ಥವನ್ನು ಬರೆದರೂ ಅದರಲ್ಲಿ ಮೊದಲು ಪುರಾಣಕಥೆಗಳನ್ನುಲ್ಲೇಖಿಸಿ ಈ ಮಂತ್ರವು ಈ ಕಥೆಯನ್ನೇ ಬೋಧಿಸುವದೆಂದು ಬರೆದು ಮುಂದೆ ಅದರಂತೆ ವೇದಮಂತ್ರಾರ್ಥಮಾಡಲು ತೊಡಗುವರು. ಇದರಿಂದ ಇವರ ಕೈಯಲ್ಲಿ ವೇದವು ಸಿಕ್ಕಿ ದಾಸಪ್ಪನ (ದಾಸರ) ಕಥೆಯಾಗಿರುವದು. ಇಷ್ಟೇ ಅಲ್ಲದೆ ಅಮೌಲ್ಯವಾದ ವೇದರತ್ನದಲ್ಲಿ ಗಾಂಭೀರ್ಯವಾದ ತೇಜೋರೂಪತತ್ವಾರ್ಥವನ್ನು ಹುಡುಕಿ ತೆಗೆಯಲು ಪ್ರಯತ್ನಪಡದೆ ವೇದವು ಯಾವಾಗಲೂ ದುಡ್ಡನ್ನೇ ಸಂಗ್ರಹಿಸಲು ಬೋಧಿಸುತ್ತದೋ ಮತ್ತು ವೇದಕಾಲದ ಜನರು ಯಾವಾಗಲೂ ದೇವರನ್ನು "ದೇವಾ ದುಡ್ಡನ್ನು ಕೊಡೆಂದು ಬೇಡುತ್ತಿದ್ದರೋ" ಎಂಬ ಸಂಶಯಕ್ಕೀಡುಮಾಡಿ "ಉದರನಿಮಿತ್ತಂ ಬಹುಕೃತವೇಷಂ" ಎಂಬಂತೆ ಬ್ರಾಹ್ಮಣರು ಯಾವಾಗಲೂ ದ್ರವ್ಯಯಾಚನಾವೃತ್ತಿಯ ರೋಗವನ್ನು ಹಾಕುವ ಅವರ ಸ್ವಾಭಾವಿಕಗುಣದಂತೆ ಬ್ರಾಹ್ಮಣರಾದೀ ಸಾಯಣರು ತಮ್ಮ ಸ್ವಭಾವಸಿದ್ಧವಾದ ದ್ರವ್ಯಯಾಚನಾವೃತ್ತಿಯನ್ನು ಹೋಗಲಾಡಿಸಲು ಸಮರ್ಥರಾಗದೆ ವೇದವನ್ನು ತಮ್ಮಂತೆ ಪರಿಭಾವಿಸಿಕೊಂಡಿರುವರೆಂದು ಕಾಣುತ್ತದೆ. ಹಾಗೂ ಇವರು "ಪರಾಶರಸ್ಮೃತಿ"ಯ ವ್ಯಾಖ್ಯಾನಮಾಡುವ ಕಾಲಕ್ಕೆ "ಪರಾಶರಮಾಧವ" ಗ್ರಂಥದ ಪ್ರಾರಂಭದಲ್ಲಿ "ಕುಲಗುರುರ್ಮಂತ್ರೀತಥಾಮಾಧವಃ" ಎಂಬದಾಗಿಯು ಮತ್ತು "ಕಾಲಮಾಧವ" ವೆಂಬ ಸಂಸ್ಕೃತಗ್ರಂಥಪ್ರಾರಂಭದಲ್ಲಿ "ಶ್ರೀಬುಕ್ಕಣಕ್ಷ್ಮಾಪತಿಃ" ಎಂಬದಾಗಿ ಬುಕ್ಕರಾಜನನ್ನು ಪರಿಪರಿಯಾಗಿ ಹೊಗಳಿ ತಾವು ಅವನ ಮಂತ್ರಿಯಾಗಿಯೂ, ಕುಲಗುರುಗಳಾಗಿಯೂ ಇದ್ದರೆಂದು ಅತಿಪ್ರೌಢಿಮೆಯಿಂದ ಬರೆದುಕೊಂಡಿರುವರು. ಇಷ್ಟೇ ಅಲ್ಲದೆ ಬುಕ್ಕರಾಜನು ವೇದಭಾಷ್ಯಬರೆಯಲಿಕ್ಕೆ ತಮಗಾಜ್ಞೆ ಮಾಡಿದನೆಂತಲೂ "ಆದಿಶನ್ಮಾಧವಾಚಾರ್ಯಂ ವೇದಾರ್ಥಸ್ಯಪ್ರಕಾಶನೇ" ಎಂಬೀ ವಾಕ್ಯಗಳಿಂದ ಗೊತ್ತಾಗುತ್ತದೆ. ಆದರೆ ತಾವು ತಮ್ಮ ತಮ್ಮನಾದ ಮಾಧವನಿಗೆ ವೇದಾರ್ಥಮಾಡಲು ಹಚ್ಚಿದರೆಂದು "ಸಾಯಣಾನುಜಃ ಮಮಾನುಜಂ" ಇತ್ಯಾದಿ ವಾಕ್ಯಗಳಿಂದ ಕಂಡುಬರುತ್ತದೆ. ಈ ವಿಷಯವನ್ನು ಸ್ವಲ್ಪ ಋಗ್ವೇದಭಾಷ್ಯಭೂಮಿಕೆಯಲ್ಲಿ ತೋರಿಸಿರುವರು. ಆದರೆ "ವೈಯಾಸಿಕನ್ಯಾಯಮಾಲಾ" ಎಂಬ ಗ್ರಂಥದ ಏಳೀಕದೆಯ ಪ್ರಕಾಶಕರು ಆ ಗ್ರಂಥವನ್ನು ಮುದ್ರಿಸುವ ಸಮಯಕ್ಕೆ ಪರಿಶೋಧಕಟಿಪ್ಪಣಿಯಲ್ಲಿ ಗ್ರಂಥಕರ್ತರಾದ ವಿದ್ಯಾರಣ್ಯರ ಚರಿತ್ರೆ ಬರೆದು ಅದರಲ್ಲಿ ಈ ವಿದ್ಯಾರಣ್ಯರಿಗೆ ಸಾಯಣ, ಮಾಧವ, ವಿದ್ಯಾರಣ್ಯ ಎಂಬ ಮೂರು ಹೆಸರುಗಳಿದ್ದವೆಂತಲೂ ಮೊದಲು ಬುಕ್ಕರಾಜನಲ್ಲಿದ್ದ ಕಾಲಕ್ಕೆ ಇವರಿಗೆ ಮಾಧವರೆಂತಲೂ, ವೇದಭಾಷ್ಯ ಬರೆದನಂತರ ಸಾಯಣರೆಂಬ ಹೆಸರು ಬಂತೆಂತಲೂ, ಮುಂದೆ ಇವರೇ ಶೃಂಗೇರಿಮಠಕ್ಕೆ ಅಧಿಪತಿಗಳಾಗಿ ಸನ್ಯಸ್ತವೃತ್ತಿಯಲ್ಲಿ ತೊಡಗಿದನಂತರ ಇವರಿಗೆ ವಿದ್ಯಾರಣ್ಯರೆಂಬ ನಾಮವು ಬಂದಿತೆಂತಲೂ, ಇವರು ಶಂಕರಾಚಾರ್ಯರ ಶೃಂಗೇರಿಮಠದ 23 ನೇ ಅಧಿಪತಿಗಳಾಗಿದ್ದರೆಂತಲೂ ಬರೆದಿರುವರು, ಆದರೆ ಮತ್ತೆ ಕೆಲವರು ಈ ಅರಣ್ಯಪಂಡಿತರಾದ ವಿದ್ಯಾರಣ್ಯರಿಗೆ ಸಾಯಣ, ಮಾಧವರೆಂಬುವವರು ಅಣ್ಣ ತಮ್ಮಂದಿರಿದ್ದರೆಂದು ಹೇಳುವರಲ್ಲದೆ ಕೆಲವು ಸ್ವಾರ್ಥಪರರಾದ ಬ್ರಾಹ್ಮಣರು ವಿಜಯನಗರ ರಾಜ್ಯಸ್ಥಾಪನೆಗೆ ವಿದ್ಯಾರಣ್ಯರೇ ಮೂಲಕಾರಣರೆಂದು ಹೇಳುವರು. ಇದು ಅವರ ಸರ್ವಥಾ ತಪ್ಪಾಗಿರುತ್ತದೆ. ಈ ವಿಜಯನಗರ ರಾಜ್ಯಸ್ಥಾಪನೆಗೆ ವೀರಶೈವರು ಹಾಗೂ ವೀರಶೈವಮಠಾಧಿಪತಿಗಳು ಮೂಲಕಾರಣರು, ಮತ್ತು ಆ ವಿಜಯನಗರದ ರಾಜರಿಗೆ ವೀರಶೈವರೇ ಕುಲಗುರುಗಳು. ಯಾಕೆಂದರೆ, ವಿಜಯನಗರದ ರಾಜರು ವೀರಶೈವಮತಾನುಯಾಯಿಗಳಾಗಿದ್ದು ಕೇವಲ ಶಿವಧರ್ಮನಿಷ್ಠಾಪರರಾಗಿ ತಮ್ಮ ರಾಜ್ಯಸಂರಕ್ಷಣೆಗೆ ವೀರಶೈವಧರ್ಮದವರನ್ನೇ ಮುಖ್ಯ ಸೇನಾಪತಿಗಳನ್ನಾಗಿ ಮಾಡಿಕೊಂಡಿದ್ದರು. ಈಗೂ ಇದಕ್ಕೆಲ್ಲಾ ಸಾಕ್ಷಿಭೂತವಾಗಿ ಶಿವಧರ್ಮಪ್ರತಿಷ್ಠಾಪನೆಯು ಜ್ಯೋತಿಯಂತಿರುವ ಧನ್ಯವಾದ ಪಂಪಾಕ್ಷೇತ್ರವೂ ಅದರಲ್ಲಿ ವಿಜಯನಗರದ ರಾಜರುಗಳು ಕಟ್ಟಿಸಿದ ಶೈವದೇವಾಲಯಗಳೂ ವೀರಶೈವರ ಧನ್ಯವಾದ ಮಠವೂ ನೆಲಸಿರುವವು. ಈ ವಿಷಯವನ್ನು ಬೇರೊಂದು ಸ್ವತಂತ್ರವಾದ ಲೇಖದಲ್ಲಿ ಅನೇಕ ಶಾಸನ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸುವೆವು.

ಇನ್ನು ಸಾಯಣರ ವಿಷಯವಾಗಿ ಕೆಲವರು ಹೀಗೆ ಹೇಳುವರು. ಸಾಯಣರು ಬುಕ್ಕರಾಜನ ಮಂತ್ರಿಗಳಾಗಿದ್ದು ಹೊಟ್ಟೆಹೊರಕೊಳ್ಳುವ ಅನೇಕಜನ ಬ್ರಾಹ್ಮಣರನ್ನು ಒಟ್ಟುಗೂಡಿಸಿ ಅವರೆಲ್ಲರಿಗೂ ವೇದಗಳ ಬೇರೆ ಬೇರೆ ಭಾಗಗಳನ್ನು ಹಂಚಿ ಆ ನೆರೆದಿದ್ದ ಬ್ರಾಹ್ಮಣರಿಂದ ವೇದಭಾಷ್ಯವನ್ನು ಬರೆಯಿಸಿ ಇತರ ಜನರು ಇದನ್ನೇ ಪ್ರಮಾಣವನ್ನಾಗಿ ಅಂಗೀಕರಿಸಲೋಸುಗ ಈ ವೇದಭಾಷ್ಯಕ್ಕೆ "ಸಾಯಣಭಾಷ್ಯ" ವೆಂದು ತಮ್ಮ ಹೆಸರನ್ನಿಟ್ಟರೆಂತಲೂ, ತಮ್ಮಿಂದ ಬರೆಸಲ್ಪಟ್ಟೀಭಾಷ್ಯವನ್ನೇ ಸರ್ವರೂ ಪ್ರಮಾಣವನ್ನಾಗಂಗೀಕರಿಸಬೇಕೆಂಬ ವಿಚಾರದಿಂದ ವೇದಕ್ಕೆ ತತ್ಪೂರ್ವದಲ್ಲಿದ್ದ ಋಷಿಭಾಷ್ಯಗಳನ್ನೆಲ್ಲಾ ಸುಡಿಸಿಬಿಟ್ಟರೆಂತಲೂ, ಈರೀತಿಯಾಗಿ ನೆರೆದಿದ್ದ ಬ್ರಾಹ್ಮಣಸಂಘದಿಂದ ಬರೆಸಲ್ಪಟ್ಟದ್ದರಿಂದಲೇ ವೇದಾರ್ಥವು ಹಸಗೆಟ್ಟು ಹೋಗಿರುವದೆಂತಲೂ ಅವರೆಲ್ಲರೂ ಹೊಟ್ಟೆಹೊರಕರಾದ ಯಾಚನಾಪರನಾಮಧಾರಿಬ್ರಾಹ್ಮಣರಾದ್ದರಿಂದ ದುಡ್ಡು ಬೇಡುವ ತಮ್ಮ ಸ್ವಾಭಾವಿಕವೃತ್ತಿಯನ್ನನುಸರಿಸಿ ವೇದಮಂತ್ರಾರ್ಥದಲ್ಲಿಯೂ ದುಡ್ಡನ್ನೇ ಕಾಣಿಸಿರುವರು, ಆದರೆ ಇನ್ನು ಕೆಲವರು ಹೀಗೆ ಹೇಳುತ್ತಿರುವರು—ಸಾಯಣರಕಾಲಕ್ಕೆ "ಬ್ರಹ್ಮಸತ್ಯಂಜಗನ್ಮಿಥ್ಯಾ" ಎಂಬುವ ಬಾಯಿಬಡುಕತನದ ವೇದಾಂತವು ಹೆಚ್ಚಾಗಿ ಮಿತಿಮೀರಿ ಎಲ್ಲರೂ ಸಾಂಸಾರಿಕವೃತ್ತಿಯಲ್ಲಿ ಆಲಸ್ಯವಂತರಾಗಿ ನಿರುದ್ಯೋಗದಿಂದ ದಾರಿದ್ರ್ಯರಾಗಿ ಆಗಿನಕಾಲದ ಮಹಮ್ಮದೀಯರ ಪ್ರಬಲಪ್ರತಾಪಕ್ಕೀಡಾಗಿ ಪತಂಗವು ಬಿದ್ದಂತೆ ಹಿಂದುಗಳು ಮಹಮ್ಮದೀಯಮತಪ್ರವಿಷ್ಟರಾಗಲು ಪ್ರಾರಂಭಿಸಿದ್ದರಿಂದ ಸರ್ವಕ್ಕೂ ಪ್ರಬಲವನ್ನುಂಟುಮಾಡುವ ದ್ರವ್ಯವೇ ಹಿಂದುಗಳಲ್ಲಿ ಅಭಾವವಾಗಿರುವದರಿಂದ "ಟಕಾಧರ್ಮಷ್ಟಕಾಕರ್ಮ ಟಕಾಟಕಟಕಾಯತೇ" ಎಂಬಂತೆ ಕನ್ನಡದಲ್ಲಿಯೂ "ದುಡ್ಡೇ ದೊಡ್ಡಪ್ಪ" ಎಂದು ಸರ್ವಕ್ಕೂ ಮೂಲ ಹಾಗೂ ಮುಖ್ಯವಾದದ್ದು ದುಡ್ಡೇ (ದ್ರವ್ಯವೇ) ಎಂದಾಲೋಚಿಸಿ ಅದರಂತೆ ದ್ರವ್ಯಸಂಗ್ರಹಕ್ಕಾಗಿ ಜನರನ್ನು ಪ್ರೋತ್ಸಾಹಿಸಲೋಸುಗ ವೇದಾದಿಶಾಸ್ತ್ರಗಳ ಪ್ರಮಾಣವಿಲ್ಲದೆ ಬರೇ ಮುಖೋಪದೇಶದಿಂದ ಹೇಳಿದರೆ ಯಾರೂ ಕೇಳುವದಿಲ್ಲವೆಂದು ತಿಳಿದು ಈರೀತಿಯಾಗಿ ಸರ್ವಕ್ಕೂ ಮೂಲಪ್ರಮಾಣವೆನಿಸಿದ ವೇದದಲ್ಲಿಯೇ ಬರದಿಟ್ಟಿದ್ದಾದರೆ, ಸರ್ವರೂ ದ್ರವ್ಯಸಂಗ್ರಹೋನ್ಮುಖರಾಗಿ ಅದರಿಂದ ಬಲಾಢ್ಯರೆನಿಸಿ ಸ್ವಧರ್ಮಪಾಲನಪರರಾಗುವರೆಂಬ ವಿಚಾರದಿಂದ ದ್ರವ್ಯಸಂಗ್ರಹಪರ ವೇದಭಾಷ್ಯಬರೆಸಿರುವರೆಂದು ಹೇಳುವರು, ಆದರೆ ಇದು ಆಗಿನಕಾಲಮಾನಕ್ಕನುಸರಿಸಿ ದೇಶಧರ್ಮಹಿತವಾಗಿದ್ದರೂ ವೇದದಲ್ಲಿಯ ಅಮೌಲ್ಯವಾದ ತತ್ವಜ್ಞಾನವೆಂಬ ತೇಜೋರಾಶಿಯನ್ನೇ ಬಿಟ್ಟು ಹೋಗಿರುವದು ಹಾಗೂ ಪುರಾಣಕಥೆಗಳನ್ನು ಜೋಡಿಸುತ್ತಾ ಅದರಂತೆ ಮಂತ್ರಾರ್ಥಕೂಡಿಸುತ್ತಾ ಹೋಗಿರುವದೂ ಬುಡವನ್ನು ಬಿಟ್ಟು ಟೊಂಗೆಯನ್ನಾಶ್ರಯಿಸುವವನ ಸ್ಥಿತಿಯಂತೆ ಸಾಯಣರ ಗತಿಯಾಗಿರುವದು. ಇದರಿಂದಲೇ ವೇದದ ಕೀರ್ತಿಯು ಇಲ್ಲದಂತಾಗಿ ಪಾಶ್ಚಾತ್ಯರಿಗೆ ಇದು ಜಂಗಲೀಜನರ ಗಾನವಿರುವದೆಂದು ನಿಂದೆಗೆ ನಿಲುವಾಯಿತು. ಇಷ್ಟೇ ಅಲ್ಲದೆ ವೇದದಲ್ಲಿಯ ತತ್ವಾರ್ಥವನ್ನು ಮಥನಮಾಡಿ ಆ ಅಮೌಲ್ಯವಾದ ದಿವ್ಯಜ್ಞಾನಬೋಧದಿಂದ ಜನರನ್ನು ಕೃತಕೃತ್ಯರನ್ನಾಗಿಮಾಡುವ ಮಹಾಫಲದಿಂದಲೂ ಸಾಯಣರು ವಂಚಿತರಾದರು. ಅವರ ಬುದ್ಧಿಗೇಡಿತನಕ್ಕೆ ಈಡಿಲ್ಲ. ಇದರಿಂದ ಸಾಯಣರೇ ವಿದ್ಯಾರಣ್ಯರೆಂಬುವ ಪಕ್ಷದಲ್ಲಿ ವಿದ್ಯೆಯೆಂಬ ಅಡವಿಯಲ್ಲಿ ಮಾರ್ಗತಪ್ಪಿ ನಡೆದಿರುವ ಹುಚ್ಚನಂತೆ ಅರಣ್ಯಪಂಡಿತರಾದೀವಿದ್ಯಾರಣ್ಯರಾಗಿರುವರು. ಆದರೆ ಇವರ ಸ್ತುತಿಪಾಠಕರಾದ ಕೆಲವು ಬ್ರಾಹ್ಮಣರು ಇವರು ವಿದ್ಯೆಯ ಅರಣ್ಯದಂತಿದ್ದರು ಅರ್ಥಾತ್ ಅರಣ್ಯವು ಹ್ಯಾಗೆ ಅನೇಕ ಪದಾರ್ಥಸಂಗ್ರಹಗಳಿಂದ ಯುಕ್ತವಾಗಿರುವದೋ ಹಾಗೆ ಇವರು ಅನೇಕ ವಿದ್ಯೆಗಳಲ್ಲಿ ಪ್ರಬಲರಾಗಿದ್ದದ್ದರಿಂದಲೇ ಇವರಿಗೆ ವಿದ್ಯಾರಣ್ಯರೆಂಬ ಹೆಸರು ಇಡಲ್ಪಟ್ಟಿತೆಂದು ವರ್ಣಿಸಿರುವರು. ಯಾಕೆಂದರೆ, ಮಗನು ಕುರುಡನಾದಾಗ್ಯೂ ತಂದೆಯು ತನ್ನ ಮಗನು ಬಹುಸುರೂಪನೆಂದು ಹ್ಯಾಗೆ ಹೊಗಳಿಕೊಳ್ಳುವನೋ ಹಾಗೆ ಬ್ರಾಹ್ಮಣರು ವಿದ್ಯಾರಣ್ಯರನ್ನು ಹೊಗಳಿಕೊಂಡಿರುವರಲ್ಲದೆ ವಿಜಯನಗರದಲ್ಲಿ ಅವರು ಹೊನ್ನಿನಮಳೆಯನ್ನು ಸುರಿಸಿದರೆಂಬ ಕಥೆಯನ್ನು ಹೇಳುವರು. ಇವರು ವೇದಾದಿಶಾಸ್ತ್ರಗಳಿಗೆಲ್ಲಾ ದುಡ್ಡಿನಪರ ಅರ್ಥಮಾಡಿ ಜನರನ್ನು ದ್ರವ್ಯಸಂಗ್ರಹಮಾಡುವ ಕುತೂಹಲವುಳ್ಳವರನ್ನಾಗಿಮಾಡಿದರೆಂತಲು, ಹಾಗೂ "ದುಡಿಯೈ ಸುಖಮಂ ಪಡೆಯೈ; ದುಡಿಯದಮನುಜಂಗೆ ದುಃಖವೆಂದಿಗುಬಿಡದೈ" ಎಂಬ ಸಂಸಾರನೀತಿಯನ್ನು ಚೆನ್ನಾಗಿ ಬೋಧಿಸಿರೆಂದು ಹೇಳುವಪರಿಯಾದ ಮಾತುಗಳನ್ನು ಕಥಾರೂಪವಾಗಿ ಜನರಿಗೆ ಬೋಧಿಸಿ ತಾವೂ ಅದನ್ನು ನಂಬಿದವರಂತೆ ತೋರಿಸಿ ಜನರನ್ನು ಮೋಸಮಾಡಲೆತ್ನಿಸಿದ್ದನ್ನು ನೋಡಿದರೆ ಸೃಷ್ಟಿಯ ನೈಸರ್ಗಿಕವಾದ ಮೋಡದಿಂದ ನೀರಿನಮಳೆಯು ಸುರಿಯದೆ ಈ ಬ್ರಾಹ್ಮಣರದೆಸೆಯಿಂದ ಕೇವಲ ಭಂಗಾರದಮಳೆಯು ಎಂದಾದರೂ ಸುರಿಯುವದುಂಟೆ? ವಾಚಕರೇ ನೋಡಿದಿರಾ, ಇವರ ಈರೀತಿಯಾದ ಕಥಾಪರಿಯನ್ನು ನೀವೇ ವಿಚಾರಮಾಡಿರಿ. ಇನ್ನು ಸಂಸ್ಕೃತದಲ್ಲಿ ಬಹುಗ್ರಂಥಗಳು ಹಾಗೂ ಟೀಕಾಭಾಷ್ಯಗಳೂ ಈ ವಿದ್ಯಾರಣ್ಯರ ಹೆಸರಿನವಿದ್ದು ಅವೆಲ್ಲವುಗಳೂ ಪರಧರ್ಮನಿಂದೆಯಿಂದ ಪರಿಣಮಿಸಿಕೊಂಡಿರುವವು. ಇದರಿಂದ ವಿದ್ಯಾರಣ್ಯರು ಪರಧರ್ಮನಿಂದೆಯನ್ನೇ ತಮ್ಮ ಗ್ರಂಥರಚನೆಯಲ್ಲಿ ಮುಖ್ಯವನ್ನಾಗಿಟ್ಟುಕೊಂಡಂತೆ ಕಂಡುಬರುತ್ತದೆ. ಇರಲಿ, ಇನ್ನು ಈರೀತಿಯಾದ ಸಾಯಣರ ವೇದಮಂತ್ರಾರ್ಥಗಳಿಂದ ಬ್ರಾಹ್ಮಣರಲ್ಲಿಯ ಎಷ್ಟೋಜನ ಪಂಡಿತರು ವೇದವಿಷಯವಾಗಿ ತುಚ್ಛಬುದ್ಧಿಯ ವಿಚಾರವನ್ನಿರುಹುವದನ್ನು ನಾವು ಕಿವಿಯಾರ ಕೇಳಿರುವೆವು. ಹ್ಯಾಗೆಂದರೆ, ಅವರಲ್ಲಿಯ ಓರ್ವ ಕಾಶಿಯ ಪ್ರಸಿದ್ಧ ಶಿವಕುಮಾರಪಂಡಿತರ ಉದಾಹರಣೆಯಿಂದ ತಿಳಿದು ಬರುವಂತಿರುವದು. ನಾನು 1913 ನೇ ಇಸವಿಯಲ್ಲಿ ಕಲಕತ್ತೆಯನ್ನು ಬಿಟ್ಟು ಬರುವ ಕಾಲಕ್ಕೆ ಕಲಕತ್ತೆಯ ಹೈಕೋರ್ಟು ಜಡ್ಜರಾದ ಶಾರದಾಚರಣಮಿತ್ರ ಎಂ.ಎ., ಎಲ್‌ಎಲ್.ಬಿ., ಯವರು ಕಾಶಿಯ ಸನಾತನಧರ್ಮಮಹಾಮಂಡಲದಲ್ಲಿ ಕೆಲವು ಧಾರ್ಮಿಕವಿಷಯಗಳ ಬಗ್ಗೆ ಚರ್ಚೆಮಾಡಲೋಸುಗ ಕಲಕತ್ತೆಯಿಂದ ಕಾಶಿಗೆ ನನ್ನನ್ನು ಮುದ್ದಾಂ ತಮ್ಮೊಡನೆ ಕರೆದುಕೊಂಡು ಹೋಗಿ ಬನಾರಸ ಮಹಾರಾಜರ ಪ್ರೈವೆಟ್ ಸೆಕ್ರೆಟರಿಗಳ ಬಂಗ್ಲೇದಲ್ಲಿಳಿದುಕೊಂಡರು. ಈ ಶಾರದಾಚರಣಮಿತ್ರರೆಂಬ ಜಡ್ಜರು ವೃದ್ಧರಾದಾಗ್ಯೂ ಬಹು ಉತ್ಸಾಹಿಗಳೂ, ಕುಶಲಮತಿಗಳೂ, ಧೀರರೂ, ವಿದ್ಯಾಪ್ರೇಮಿಗಳೂ, ಧರ್ಮನಿಷ್ಠರೂ ಆಗಿದ್ದು ನನ್ನನ್ನು ಯಾವಾಗಲೂ ಬಹುಪ್ರೇಮದಿಂದ ಕಾಣುತ್ತಿದ್ದರಲ್ಲದೆ ನಿತ್ಯ ನಾವೂ ಅವರೂ ಅನೇಕ ಧಾರ್ಮಿಕಚರ್ಚೆಗಳಿಂದ ಕಲಕತ್ತೆಯಲ್ಲಿ ಕಾಲವನ್ನು ಕಳೆಯುತ್ತಿದ್ದೆವು. ಇವರು ನನ್ನ ವಿಷಯದಲ್ಲಿ ಒಳ್ಳೇ ಅಭಿಮಾನವುಳ್ಳವರಾಗಿ ಅನೇಕಮಂದಿ ಜಡ್ಜರ ಹಾಗೂ ಢೋಂಗರಪುರ, ನದಿಯಾ, ಕಾಶೀ ಮೊದಲಾದ ಮಹಾರಾಜರುಗಳ ಪರಿಚಯವನ್ನು ಮಾಡಿಸಿಕೊಟ್ಟರಲ್ಲದೆ ವೇದವಿಷಯಕವಾದ ಕೆಲವು ವ್ಯಾಖ್ಯಾನಗಳನ್ನು ಮಾಡಲೋಸುಗ ಅಲಹಾಬಾದ ಯೂನಿವರ್ಸಿಟಿ ವೈಸ್‌ಚಾನ್ಸಲರ್ ಸುಂದರಲಾಲ, ಸಿ. ಐ. ಇ., ಮತ್ತು ಲಾಹೋರ ಯೂನಿವರ್ಸಿಟಿ ವೈಸ್‌ಚಾನ್ಸಲರ್ ಸರ ಪ್ರತುಲಚಂದ್ರ ಚಟರ್ಜಿ ಎಂಬುವರಲ್ಲಿಯೂ ಮುದ್ದಾಂ ತಮ್ಮ ಆಪ್ತರ ಪೈಕಿ ಓರ್ವರನ್ನು ಹಾಗೂ ಖಾಸಗೀಪತ್ರಗಳನ್ನೂ ಕೊಟ್ಟು ಕಳಿಸಿದ್ದರು. ಅಲ್ಲದೆ ಮುಂದಾಗಿ ತಾರನ್ನು ಅವರಿಗೆ ಕೊಟ್ಟಿದ್ದರು. ಇದರಿಂದ ನಮಗೆ ಪತ್ರಗಳನ್ನು ತೋರಿಸುವ ಪ್ರಯೋಜನವು ಬೀಳದೆ ಆ ಪತ್ರಗಳು ಇದುವರೆಗೂ ನಮ್ಮಲ್ಲಿಯೇ ಉಳಿದಿರುವವು. ಇವರೀರ್ವರೂ ನಮ್ಮನ್ನು ಸತ್ಕರಿಸಿ ಕೆಲವು ವ್ಯಾಖ್ಯಾನಗಳನ್ನು ಮಾಡಿಸಿದರಲ್ಲದೆ ನಾವು ಹೋದಕಾಲಕ್ಕೆ ಸುಂದರಲಾಲ, ಸಿ. ಐ. ಇ., ಯವರು ವೀರಶೈವರ ಸಂಬಂಧವಾಗಿ ಮಾಹಿತಿಯು ತಮಗೆ ಅತ್ಯಾವಶ್ಯಕವಾಗಿ ಬೇಕಾಗಿರುವದನ್ನು ತೋರಿಸಿದ್ದರಿಂದ ನಾನು ಹೇಳಿದ್ದನ್ನೆಲ್ಲ ಟಿಪ್ಪಣಿಮಾಡಿಕೊಂಡರು. ಅಲ್ಲಿಂದ ಲಾಹೋರಿಗೆ ಹೋಗಲು ಅಲ್ಲಿಯ ಗತ ಹೈಕೋರ್ಟು ಜಡ್ಜರಾದ ಸರಪ್ರತುಲಚಂದ್ರಚಟರ್ಜಿಯವರು ಒಳ್ಳೇ ಗೌರವಸ್ಥರೂ, ವೃದ್ಧರೂ, ವಿವೇಕಿಗಳೂ ಆಗಿದ್ದರು. ಅವರು ನಮ್ಮನ್ನು ಬಹುಪ್ರೇಮದಿಂದ ಕಂಡರು. ಆಗ್ಗೆ ನಾಭಾಸಂಸ್ಥಾನದ ಮಹಾರಾಜರೂ ಅವರಲ್ಲಿಗೆ ಬಂದಿದ್ದರು. ಅವರನ್ನು ನನಗೆ ಪರಿಚಯಮಾಡಿಕೊಟ್ಟರು. ಒಂದುದಿವಸ ಲಾಹೋರ ಓರಿಯಂಟಲ ಕಾಲೇಜಿಗು, ಹಾಗೂ ದಯಾನಂದ ಆಂಗ್ಲೋವೈದಿಕಕಾಲೇಜಿಗು ಕರೆದುಕೊಂಡು ಹೋಗಿದ್ದರು. ದಯಾನಂದ ಕಾಲೇಜಕ್ಕೆ ಲಾಲಾಹಂಸರಾಜರು ಪ್ರಿನ್ಸಿಪಾಲರಿದ್ದು ಸರ್ ಚಟರ್ಜಿ ಮೊದಲಾದ ನಮ್ಮೆಲ್ಲರನ್ನೂ ಚೆನ್ನಾಗಿ ಗೌರವಿಸಿ ಹೇಳತಕ್ಕ ತೋರಿಸತಕ್ಕ ವಿಷಯಗಳನ್ನೆಲ್ಲಾ ಹೇಳಿ ತೋರಿಸಿ ತಮ್ಮ ವೇಟಿಂಗರೂಮಿಗೆ ಕರೆದುಕೊಂಡು ಹೋಗಿ ಕೂತು ಮಾತನಾಡುತ್ತಿರಲು ಆಗ್ಗೆ ಗುರುಕುಲ ಗೌರ್ನರವರಾದ ಮುನ್ಷೀರಾಮರ (ಸದ್ಯದ ಸ್ವಾಮಿ ಶ್ರದ್ಧಾನಂದರ) ಮಕ್ಕಳಾದ ಇಂದ್ರ, ಹರಿಶ್ಚಂದ್ರರೆಂಬೀರ್ವರು ಲಾಲಾಹಂಸರಾಜರಲ್ಲಿ ಬಂದಿಳಿದಿದ್ದು ಅಕಸ್ಮಾತ್ ಅವರೂ ಕಾಲೇಜಕ್ಕೆ ಬರಲು ಅವರನ್ನೂ ತಮ್ಮ ವೇಟಿಂಗರೂಮಿಗೆ ಬರಮಾಡಿಕೊಂಡು ಕೂಡ್ರಿಸಿದರು. ಇದಕ್ಕಿಂತ ಒಂದುವರ್ಷ ಪೂರ್ವದಲ್ಲಿಯೇ ಅಂದರೆ 1912 ರಲ್ಲಿ ಗುರುಕುಲವನ್ನು ಹಾಗೂ ಅದರ ಸಮೀಪದಲ್ಲಿರುವ ಸನಾತನಧರ್ಮದವರ ಋಷಿಕುಲವನ್ನು ನಾನು ನೋಡಲಿಕ್ಕೆ ಹೋದಾಗ್ಗೆ ಗುರುಕುಲದಲ್ಲಿ ನನ್ನ ಆದರಾತಿಥ್ಯಕ್ಕಾಗಿ ಮುನ್ಷೀರಾಮರವರು ಈ ಈರ್ವ ಮಕ್ಕಳನ್ನೇ ನಿಯಮಿಸಿದ್ದು ಅಲ್ಲಿ ವೇದವಿಷಯವಾಗಿಯೂ, ನಾನು ನಿತ್ಯ ಪೂಜಿಸುವ ಶಿವಲಿಂಗದ ವಿಷಯವಾಗಿಯೂ ಅಂದರೆ ಮೂರ್ತಿಪೂಜಾವಿಷಯವಾಗಿಯೂ ನನ್ನೊಡನೆ ಬಹು ವಾದಮಾಡುತ್ತಿದ್ದರು. ಅದೆಲ್ಲಾ ಲಾಹೋರದಲ್ಲಿ ನನ್ನನ್ನು ಕಂಡೊಡನೆ, ಓ, ಇವರು ಸ್ವಾಮಿ ವಿರೂಪಾಕ್ಷಒಡೆಯರು. ಇವರು ವೇದಜ್ಞರಾದಾಗ್ಯೂ ಇನ್ನೂ ಇವರಲ್ಲಿಯ ಮೂರ್ತಿಪೂಜೆಯ ಭಾವನೆಯು ಹೋಗಿಲ್ಲ. ಇವರು ಕಟ್ಟಾ ಮಹಾಶೈವರು, ಇವೇ ಮೊದಲಾದ ವಾಕ್ಯಗಳನ್ನಾಡುತ್ತಾ ನಗಲಾರಂಭಿಸಿದರು. ಅಷ್ಟರಲ್ಲಿಯೇ ಸರ್ ಪ್ರತುಲಚಂದ್ರಚಟರ್ಜಿಯವರು ಲಾಲಾಹಂಸರಾಜರನ್ನು ಕುರಿತು, ಲಾಲಾರವರೇ ಮೂರ್ತಿಪೂಜೆಯು ಅನಿಷ್ಟವೆಂದು ಹ್ಯಾಗನ್ನುವಿರಿ? ಪೂರ್ವದಲ್ಲಿ ಋಷಿಗಳು ಮೂರ್ತಿಪೂಜಕರಿರಲಿಲ್ಲವೆ? ನಾನು ಶಾಕ್ತನಿದ್ದು ನಿತ್ಯದಲ್ಲಿ ಶಿವಶಕ್ತಿಗಳೆಂಬೆರಡು ಮೂರ್ತಿಗಳನ್ನು ಪೂಜಿಸುತ್ತ ನವರಾತ್ರಿಯಲ್ಲಿ ವಿಶೇಷವಾಗಿ ಘನವಾದ ಪೂಜೆಯನ್ನು ಮಾಡುವದರಿಂದ ನನ್ನ ಮನಸ್ಸು ಶಾಂತವಾಗುವದೆಂದೆನ್ನಲು, ಅದಕ್ಕೆ ಲಾಲಾರವರು ಇದು ಪೂರ್ವದಲ್ಲಿಯ ಅನಾರ್ಯರ (ಮ್ಲೇಚ್ಛರ) ಧರ್ಮವಾಗಿದ್ದಿತು; ಇದರಿಂದ ಅಷ್ಟೊಂದು ಪ್ರಯೋಜನವು ನನಗೆ ಕಂಡುಬರುವದಿಲ್ಲವೆಂತಲು, ಹಾಗೂ ಇದರಿಂದ ಜನರಲ್ಲಿ ಒಂದುತರದ ನಿರುದ್ಯೋಗವು ಹೆಚ್ಚಾಗಿ ಆಲಸ್ಯದಿಂದ ದೇಶಕ್ಕೆ ಮಹಾ ಅನರ್ಥ ಉಂಟಾಗಿದೆಯೆಂತಲು ವಿನೋದದಿಂದ ಅನೇಕರೀತಿ ಅವರು ಹೇಳಿದರು. ಆಗ್ಯೆ ನಾನು ಅದಕ್ಕೆ ನನ್ನ ಲಿಂಗಾಂಗಿಧರ್ಮದ ವೃತ್ತಾಂತವನ್ನೂ, ಈ ಲಿಂಗಭಾವನೆಯಿಂದ ಆಗುವ ಮಾನಸಿಕಶಾಂತಿಯನ್ನೂ ಲಿಂಗಾಂಗಿಧರ್ಮದಿಂದಾಗುವ ದೇಶದಲ್ಲಿಯ ಐಕ್ಯತೆಯನ್ನೂ, ವೇದಕಾಲೀನವಾದ ಮೂರ್ತಿಪೂಜಾವಿಷಯವನ್ನೂ ಹೇಳಲು ಅದಕ್ಕೆ ಚಟರ್ಜೀಯವರು ಏನು ಲಾಲಾರವರೇ, ಈ ರೀತಿಯಾದ ಮೂರ್ತಿಪೂಜೆಯವಾದವು ಸ್ವಾಮಿ ದಯಾನಂದರವರಲ್ಲಿ ಬಿದ್ದರೆ ಅವರು ಇಂಥಾದ್ದನ್ನು ಖಂಡಿಸಲು ಕಾರಣವೇನು? ಇವೇ ಮೊದಲಾದ ವಾಕ್ಯಗಳಿಂದ ಲಾಲಾರವರಿಗೆ ಹೇಳುತ್ತಾ ವಿನೋದದಿಂದ ಹೊರಟು ಬಂದೆವು. ಸರ್ ಚಟರ್ಜಿಯವರು ಒಳ್ಳೇವಿಲಾಸಿಗಳಾದ್ದರಿಂದ ನನ್ನನ್ನು ಒಂದುತಿಂಗಳವರೆಗೂ ಲಾಹೋರದಲ್ಲಿ ಬಿಡದೆ ಇಟ್ಟುಕೊಂಡಿದ್ದರು, ಆದರೆ ನನ್ನ ಅಡಿಗೆಯ ಮನುಷ್ಯನಾದ ಗುರುಬಸಪ್ಪನೆಂಬುವವನಿಗೆ ಲಾಹೋರದ ಥಂಡಿಯ ಹವೆಯು ತಡೆಯದೆ ಜಾಡ್ಯವಾದ್ದರಿಂದ ನಾವು ಹೊರಟುಬರಬೇಕಾಯಿತು. ಲಾಹೋರದಲ್ಲಿಯ ಓರಿಯಂಟಲಕಾಲೇಜ ಮೊದಲಾದ ಸಂಸ್ಥೆಯ ವಿದ್ವಾಂಸರೊಡನೆ ಅನೇಕವಿಷಯ ಚರ್ಚೆಯಿಂದಲೂ ಅಲ್ಲಿಯ ಸುತ್ತುಮುತ್ತಲಿನ ಸ್ಥಳಗಳನ್ನು ನೋಡುವದರಿಂದಲೂ, ದೇಶಪರಿಸ್ಥಿತಿಯ ಅವಲೋಕನದಿಂದಲೂ ನನ್ನ ಮನಸ್ಸಿಗೆ ಎಷ್ಟೋ ವಿಕಾಸಬಂದಂತಾಯಿತು. ಇರಲಿ, ಇನ್ನು ಕಾಶಿಯಲ್ಲಿ ಶಾರದಾಚರಣಮಿತ್ರರೊಡನೆ ನಾನಿದ್ದಾಗ್ಗೆ ಭಾರತಧರ್ಮಮಹಾಮಂಡಲದಲ್ಲಾದ ಧಾರ್ಮಿಕಚರ್ಚೆಗಾಗಿ ಕೈ. ವಾ. ಶಿವಕುಮಾರಪಂಡಿತರೂ ಬಂದಿದ್ದರು. ಆಗ್ಗೆ ಶಾರದಾಚರಣಮಿತ್ರರೆಂಬ ಜಡ್ಜರು ನನಗೆ ಕೆಲವು ವೇದದಲ್ಲಿಯ ವಿಷಯಗಳನ್ನು ನೆರೆದಿದ್ದ ಪಂಡಿತರ ಮುಂದಿಡಲು ಸೂಚಿಸಿದರು. ಇಷ್ಟರಲ್ಲಿಯೇ ಅಲ್ಲಿ ಕೂತಿದ್ದ ಶಿವಕುಮಾರಪಂಡಿತರ ಕಿವಿಗೆ ಈ ವೇದಶಬ್ದವು ಬೀಳಲು ತತ್‌ಕ್ಷಣಕ್ಕೆ ಶಿವಕುಮಾರರಂದದ್ದು—"ವೇದಮೇ ಕ್ಯಾ ಫತ್ತರ ಹೈ, ಜೋ ಕುಛ್ ಹೈ ಸೋ ಸಬ್ ಹಮಾರಾ ಭಾಗವತಾದಿ ಮಹಾಪುರಾಣೋಮೇ ಭರಾಹುವಾ ಹೈ" ಎಂಬದಾಗಿ ವೇದದಲ್ಲೇನು ಕಲ್ಲುಂಟು? ಏನಿದ್ದದ್ದೆಲ್ಲಾ ಭಾಗವತಾದಿಮಹಾಪುರಾಣಗಳಲ್ಲಿ ಹೇಳಿದೆಯೆಂಬದಾಗಿ ಬಹು ಪ್ರೌಢಿಮೆಯಿಂದ ವೇದವಿಷಯಕವಾಗಿ ತಿರಸ್ಕಾರಬುದ್ಧಿಯಿಂದ ನುಡಿಯಲು ಕೆಲವರಿಗೆ ಖಿನ್ನತ್ವವುಂಟಾಯಿತು. ಅದಕ್ಕೆ ನಾನು ಶಿವಕುಮಾರಪಂಡಿತರಿಗೆ "ವೇದವು ನಿರರ್ಥಕವಾಗಿದ್ದ ಪಕ್ಷದಲ್ಲಿ ಪೂರ್ವದ ಋಷಿ ಮೊದಲಾದವರೆಲ್ಲ ಆ ವೇದಕ್ಕೆ ಅಷ್ಟೊಂದು ಮಹತ್ವವನ್ನು ಕೊಟ್ಟು ಬರಿಯಲು ಕಾರಣವೇನೆಂದು ಕೇಳಲು, ಅದಕ್ಕೆ ಶಿವಕುಮಾರರು "ವೇದವು ಬಹುದೊಡ್ಡ ಪುಸ್ತಕವಾದ್ದರಿಂದ ಅಷ್ಟು ಮಹತ್ವಕೊಟ್ಟಿರುವರೆಂದು" ಉತ್ತರವನ್ನು ಕೊಡಲು ಅದಕ್ಕೆ ಬರೇಪುಸ್ತಕವು ದೊಡ್ಡದಿದ್ದ ಮಾತ್ರಕ್ಕೆ ಮಹತ್ವವು ಬರುವದುಂಟೇ? ಎಂಬ ವಿಚಾರವು ಸಹ ಈ ಶಿವಕುಮಾರರಲ್ಲಿ ಬರಲಿಲ್ಲವೆಂದು ಅಲ್ಲಿ ಕೂತಿದ್ದ ಜನರೆಲ್ಲರೂ ನಗಲಾರಂಭಿಸಿದರು. ಅರ್ಥಾತ್ ಇದರಿಂದ ಹೇಳುವದೇನೆಂದರೆ, ವೇದಕ್ಕೆ ಸಾಯಣಾಚಾರ್ಯರು ಬರೆದಿರುವ ಭಾಷ್ಯವು ನಿಸ್ಸಾರವಾದ್ದರಿಂದ ಆ ಸಾಯಣಭಾಷ್ಯವನ್ನೇ ಪ್ರಮಾಣವನ್ನಾಗಿ ತಿಳಿದುಕೊಂಡಿದ್ದ ಶಿವಕುಮಾರರಂಥಾ ಪಂಡಿತರು ಸಹ ಲೋಕಾಪಹಾಸ್ಯಕ್ಕೀಡಾದರು. ಅಂತೂ ಒಟ್ಟು ವಿಚಾರಮಾಡಿದುಬರಲ್ಲಿ ಸಾಯಣರ ವೇದಭಾಷ್ಯವು ಅಷ್ಟೊಂದು ಮಾನ್ಯವಾದ್ದಲ್ಲವಾದರೂ ಕೆಲ ಅಂಶಗಳಲ್ಲಿ ಗ್ರಾಹ್ಯವಾಗಿರುವದು, ಮತ್ತು ಈ ಸಾಯಣರೇ ವಿದ್ಯಾರಣ್ಯ, ಮಾಧವರೆಂಬ ಹೆಸರುಳ್ಳವರಾಗಿದ್ದ ಪಕ್ಷದಲ್ಲಿ ಇವರು ಸಂಸ್ಕೃತವಿದ್ಯಾ, ಹಾಗೂ ಗ್ರಂಥರಚನೆಗಳಿಗೆ ಮಾಡಿರುವ ಅವರ ಆಗಿನ ಕಾಲದ ಪ್ರಯತ್ನವು ಸ್ತುತ್ಯವಾಗಿರುವದು.

೧೯೨೬ ನೆಯ ಇಸವಿ ಆಗಸ್ಟ್ ತಾ|| ೭ ರಿಂದ ೧೯೨೬ ನೆಯ ಇಸವಿ ಆಗಸ್ಟ್ ತಾ|| ೧೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಆಷಾಢ ಬಹುಳ ಚತುರ್ದಶಿಯಿಂದ ಶ್ರಾವಣ ಶುದ್ಧ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕ ಮಾಸ
7	ಶನಿ	ಚತು	23-59	ಪುಷ್ಯ	60	23
8	[1]ಭಾನು	ಅಮಾ	27-47	ಪುಷ್ಯ	1-57	24
9	[2]ಸೋಮ	ಪಾಡ್ಯ	32-17	ಆಶ್ಲೇ	7-43	25
10	[3]ಮಂಗಳ	ಬಿದಿ	37-20	ಮಘಾ	14-5	26
11	[4]ಬುಧ	ತದಿ	42-26	ಪುಬ್ಬ	20-39	27
12	[5]ಗುರು	ಚೌತಿ	47-17	ಉತ್ತ	26-59	28
13	[6]ಶುಕ್ರ	ಪಂಚ	50-20	ಹಸ್ತ	32-46	29

(1) ಸರ್ವತ್ರಭೀಮಾಮಾವಾಸ್ಯೆ, ಜ್ಯೋತಿಸ್ತಂಭವ್ರತಂ. (2) ಮಳೆ ನಕ್ಷತ್ರ-ಆಶ್ಲೇಷ ೩ ನೆಯಪಾದ. (3) ಮಂಗಳಗೌರೀವ್ರತಂ. (4) ಸಂಪದ್ಗೌರೀವ್ರತಂ. (5) ನಾಗರಚೌತಿ. (6) ಗರುಡಪಂಚಮಿ, [illegible]ವ್ರತಂ; ಆದಿಶುಕ್ರವಾರ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಚಾರಾ ವರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತ್ರಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ಆಗಸ್ಟ್ ತಾರೀಖು ೧೪ ನೆಯ ಶನಿವಾರ. [ಸಂಚಿಕೆ ೩೩

ಸಾರಸ್ವತಾಸವ."

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
31

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ದೌಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—9] ಶಿವಾನುಭವ ಆಫೀಸು ವಿಜಾಪುರ.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ನೃಪಪಂಚಕ	೦—೪—೦	೦—೯—೦
ಗುರುಶಂಕರೇಶ್ವರಚರಿತ	೦—೧—೦	೦—೬—೦
ಬಸವೇಶ್ವರಚರಿತ	೦—೮—೦	೦—೧೩—೦
ಸಟೀಕ [illegible] ಶಬ್ದಮಂಜರಿ	೦—೮—೦	೦—೧೩—೦
ಸಟೀಕಾ [illegible]	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸತ್ಯದಜಗತ್ತು   ಮೊದಲು ಇದನ್ನು ಓದಿ ನಂಬಿಗೆ ಇಡಿರಿ.   ಅದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಆದರ ಸಂಬಂಧದ ರೋಗನಾಶಕ ಖ್ಯಾತಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ತಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ರತಬೀಜ, ಸಾಗಬೀಜ, ಬಾಳ್ಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಆಡವೀ ಎಳ್ಳಿನಪಂಚಾಂಗ, ಜವಿಪತ್ರಿ, ಜಾಯಪತ್ರಿ, ಪಿರಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ಪಾಕೇರಿಭಾತಾ, ಗೋಖರು, ಆಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ. ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—4] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—43] ಪ್ರೋ. ಬಾ. ನಂ. ೨೧೦, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO.,
BENARES CITY.



ನಮ್ಮಲ್ಲಿ ಜರತಾರಿ ರೇಶ್ಮೆ ಮೊಗಟೆ, ಜರಿ ಸಾದಾ ಸೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಘಂಟೆ, ಪಾದ್ಯಗಳು, ಹಿತ್ತಾಳೆಪಾತ್ರೆ, ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೇಳುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೇಳುವವರಿಗೆ ಉಚಿತವಾಗಿ ಕಳುಹಿಸಲಾದೀತು.

ವಿಳಾಸ— 5
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಶ್ರೀಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್,

ಲಕ್ಷ್ಮೀಬ್ಯುಲ್ಡಿಂಗ್ಸ್, ಗಡಿಯಾರದ ಚೌಕ, ಪೋಸ್ಟ್‌ಬಾಕ್ಸ್ 101,
ಮೈಸೂರು.

ನೋಟೀಸು.

ಮೇಲ್ಕಂಡ ಕಂಪೆನಿಯ 5 ನೇ ವಾರ್ಷಿಕ ಜನರಲ್ ಮೀಟಿಂಗು ರಾಜಧಾನಿಯ ಸಯ್ಯಾಜೀರಾವ್ ರೋಡಿನಲ್ಲಿರುವ ಧರ್ಮಪ್ರವರ್ತಕ ಡಿ. ಬನುಮಯ್ಯನವರ ಕಲಿಜಿಯೆಟ್ ಹೈಸ್ಕೂಲು ಕಟ್ಟಡದಲ್ಲಿ 1926 ನೇ ಆಗಸ್ಟ್ ತಾ|| 21 ನೆಯ ಶನಿವಾರ ಮಧ್ಯಾಹ್ನ 4-30 ಘಂಟೆಯಲ್ಲಿ ನಡೆಯುವುದು. ಆ ಕಾಲದಲ್ಲಿ ಡೈರೆಕ್ಟರುಗಳು ಒಪ್ಪಿಸುವ 1925 ನೇ ಡಿಸೆಂಬರ್ ತಾ|| 31 ಕ್ಕೆ ಅಂತ್ಯವಾದ ಒಂದು ವರ್ಷದಲ್ಲಿ ನಡೆದಿರುವ ಕೆಲಸದ ರಿಪೋರ್ಟೂ ಲೆಖ್ಖವೂ ಸ್ವೀಕರಿಸಲ್ಪಟ್ಟು ಅಂಗೀಕರಿಸಲ್ಪಡತಕ್ಕುವಾಗಿವೆಯಲ್ಲದೆ ಚಾಲ್ತಿಸಾಲಿಗಾಗಿ ಆಡಿಟರುಗಳನ್ನು ಗೊತ್ತುಮಾಡಿ ಇತರ ವಿಷಯಗಳೇನಾದರೂ ತರಲ್ಪಟ್ಟರೆ ಪರ್ಯಾಲೋಚಿಸಲ್ಪಡತಕ್ಕುವಾಗಿವೆ.

ಷೇರು ರಿಜಿಸ್ಟರುಗಳು 1926 ನೇ ಆಗಸ್ಟ್ ತಾ|| 13 ರಿಂದ 21 ರ ವರೆಗೆ (ಉಭಯದಿನಗಳೂ ಸೇರಿ) ಮುಚ್ಚಲ್ಪಟ್ಟಿರುವುವು.

ಡೈರೆಕ್ಟರುಗಳ ಬೋರ್ಡಿನ ಆಜ್ಞಾಪ್ರಕಾರ
ಎಂ. ಎಲ್. ವರ್ಧಮಾನಯ್ಯ, ಅಂಡ್ ಕೊ.,
ತಾ|| 11 ಆಗಸ್ಟ್ 1926. ಮ್ಯಾನೇಜಿಂಗ್ ಏಜಂಟ್ಸ್.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಗಸ್ಟ್ ತಾ|| ೧೪ ನೆಯ ಶನಿವಾರ.

ನಿರ್ಬಂಧವೈಧವ್ಯ.

ಸಂಘಸಂಸ್ಕರಣದಲ್ಲಿ ಪಾಟುಪಡುತ್ತಿರುವ ಲಾಹೋರಿನ ಸರ್ ಗಂಗಾರಾಂರವರು ಭರತಖಂಡದಲ್ಲಿ ಒಟ್ಟು ವಿಧವೆಯರ ಸಂಖ್ಯೆಯೆಷ್ಟಿರುತ್ತದೆ ಮತ್ತು ಯಾವ್ಯಾವ ವಯಸ್ಸಿನವರು ಯಾವ್ಯಾವ ದೇಶದಲ್ಲೆಷ್ಟೆಷ್ಟು ಇರುತ್ತಾರೆ ಎಂಬುದನ್ನು ಪ್ರಕಟಿಸಿ, ಮೊದಲು ಸಂಘಸಂಸ್ಕರಣವು ಅನಂತರ ಆರ್ಥಿಕಸಂಸ್ಕರಣವು ತರುವಾಯ ರಾಜಕೀಯಸಂಸ್ಕರಣವು ಅಥವಾ ಸ್ವರಾಜ್ಯಸಾಧನವು ನಡೆಯಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಮಹಾತ್ಮಗಾಂಧಿಯವರು ಸರ್ ಗಂಗಾರಾಂರವರ ಅಭಿಪ್ರಾಯದಿಂದ ಭಿನ್ನರಾಗಿ ಯಂಗ್‌ಇಂಡ್ಯಾಪತ್ರಿಕೆಯಲ್ಲಿ ಈ ಪ್ರಕಾರವಾಗಿ ಬರೆದಿರುತ್ತಾರೆ.--ಗಂಗಾರಾಂರವರಿಗಿಂತ ಪ್ರಬಲಸಂಘಸಂಸ್ಕರ್ತರಾಗಿದ್ದ ರಾನಡೆ, ಗೋಖಲೆ ಮತ್ತು ಚಂದಾವರ್ಕರುಗಳು ಕೂಡ ಸಂಘಸಂಸ್ಕರಣಕ್ಕೂ ಸ್ವರಾಜ್ಯಕ್ಕೂ ಸಮಾನಪ್ರಾಮುಖ್ಯತೆಯನ್ನು ಕೊಟ್ಟಿದ್ದರು, ಮತ್ತು ಸಂಘಸಂಸ್ಕರಣವು ಎಷ್ಟು ಮುಖ್ಯವೋ ಸ್ವರಾಜ್ಯವು ಕೂಡ ಅಷ್ಟೇ ಮುಖ್ಯವೆಂದು ಅವರು ನಿರ್ಧರಿಸಿದ್ದರು. ತಿಲಕರವರೂ ಗೋಖಲೆಯವರೂ ಸ್ವರಾಜ್ಯಕ್ಕೇ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. ಅದು ಲಭಿಸುವವರೆಗೂ ಇತರ ಸಂಸ್ಕರಣಗಳು ನಡೆಯುವುದಿಲ್ಲವೆಂದು ಅವರುಗಳು ತಿಳಿದಿದ್ದರು. ಎಲ್ಲ ಸಂಸ್ಕರಣಗಳೂ ಒಂದೇಕಾಲದಲ್ಲಿ ನಡೆಯಬೇಕೆಂದು ಇತರರ ಅಭಿಪ್ರಾಯವಾಗಿರುತ್ತದೆ. ಸ್ವರಾಜ್ಯವೆಂದರೆ ದೇಶೀಯರೆಲ್ಲರು ಕೂಡ ರಾಜಕೀಯಜ್ಞಾನವುಳ್ಳವರಾಗಿರುವುದು. ಸಂಸ್ಕರಣವೆಂದರೆ ಲೋಕಜ್ಞಾನವು. ಅಂತಹ ಜ್ಞಾನವು ದೇಶೀಯರಲ್ಲಿ ಉಂಟಾದರೆ ಎಲ್ಲ ಶಾಖೆಗಳಲ್ಲಿರುವ ಲೋಪಗಳು ನಿವಾರಣೆಯಾಗುವವರಿಗೂ ಅವರು ಸುಮ್ಮನಿರರು. ಎಲ್ಲ ಶಾಖೆಗಳಲ್ಲೂ ತಕ್ಕ ಅಭಿವೃದ್ಧಿಯುಂಟಾದ ಹೊರತು ಜ್ಞಾನಕ್ಕೆ ಸಂಪೂರ್ಣ ವಿಕಾಸವಾಗುವುದಿಲ್ಲ. ರಾಜಕೀಯ ವಿಚಾರದಲ್ಲೂ, ಆರ್ಥಿಕ ವಿಚಾರದಲ್ಲೂ ಎಲ್ಲರೂ ಗಂಗಾರಾಂರವರ ಅಭಿಪ್ರಾಯವನ್ನು ಅಂಗೀಕರಿಸುವುದಿಲ್ಲವಾದರೂ ಸಂಘಸಂಸ್ಕರಣ ವಿಷಯದಲ್ಲಿ ಗಂಗಾರಾಂರವರು ದೀಕ್ಷಾಬದ್ಧರಾಗಿ ಪಾಟುಪಡುತ್ತಿದ್ದಾರೆಂದು ಒಪ್ಪಿಕೊಳ್ಳದೆ ಇರಲಾಗದು. "ಬಾಲ್ಯವಿವಾಹದಿಂದಲೂ, ನಿರ್ಬಂಧವೈಧವ್ಯದಿಂದಲೂ ಉಂಟಾಗುತ್ತಿರುವ ದೌರ್ಭಾಗ್ಯವನ್ನು ಈ ಲೆಖ್ಖದಿಂದ ತಿಳಿದು ಯಾರುತಾನೇ ದುಃಖಿತರಾಗದೆ ಇರುವರು ? "ಎಂದು ಗಂಗಾರಾಂರವರು ಬರೆದಿರುತ್ತಾರೆ.

ವಿತಂತುಗಳು.

5 ವರ್ಷವಯಸ್ಸಿನವರು	11892
5 ರಿಂದ 10 ರೊಳಗಿರುವವರು	85037
10 ರಿಂದ 15 ,,	232147
ಒಟ್ಟು	3,29,076

ಮತಧರ್ಮವೆಂದು ಗೋರಕ್ಷಣವನ್ನು ಕುರಿತು ನಾವು ಆಂದೋಳನವನ್ನು ಮಾಡುತ್ತಿದ್ದೇವೆಯೇ ಹೊರತು ಬಾಲವಿತಂತುಗಳಾದ ಮಾನವ ಗೋವುಗಳನ್ನು ಕಾಪಾಡಲು ಅಂಗೀಕರಿಸುವುದಿಲ್ಲ. ಮತವಿಷಯದಲ್ಲಿ ನಾವು ದೌರ್ಜನ್ಯವನ್ನು ಮಾಡುತ್ತೇವೆ. ವಿವಾಹವೆಂದರೇನೆಂಬುದನ್ನು ಸಹ ತಿಳಿಯದ ಚಿಕ್ಕವಯಸ್ಸಿನ ವಿತಂತುಗಳು ಭಾರತಭೂಮಿಯಲ್ಲಿ 3 ಲಕ್ಷದವರೆಗಿರುತ್ತಾರೆ. ಇಂತಹ ಪಸುಳೆಗಳನ್ನು ಪುರುಷರ ಕೊರಳಿಗೆ ಕಟ್ಟಿ ಅವರು ಸತ್ತುಹೋದಲ್ಲಿ ಆ ಪಸುಳೆಗಳು ವಿಧವೆಗಳೆಂದು ಹೆಸರಿಟ್ಟು ನಿರ್ಬಂಧ ವೈಧವ್ಯವನ್ನು ವಿಧಿಸುವುದಕ್ಕಿಂತ ರಾಕ್ಷಸಕೃತ್ಯವು ಬೇರೊಂದಿಲ್ಲವು. ಹಿಂದುಗಳು ಇಂತಹ ಘೋರಕೃತ್ಯವನ್ನು ಆಚರಿಸುತ್ತಿರುವುದರಿಂದಲೇ ಹಿಂದುಮತಕ್ಕೆ ಈಗಿನ ದುರವಸ್ಥೆಯು ಪ್ರಾಪ್ತವಾಗಿರುವುದು. 15 ವರ್ಷದೊಳಗಿರುವ ಯಾವ ಕನ್ಯೆಗೂ ವಿವಾಹಮಾಡಕೂಡದು. ಬಾಲ್ಯವಯಸ್ಸಿನಲ್ಲಿ ಆದ ವಿವಾಹವು ಪ್ರಹಸನವ (ನಕಲಿಯೆ) ಲ್ಲದೆ ಸರಿಯಾದುದಲ್ಲವಾದುದರಿಂದ ಆ ಮೂರುಲಕ್ಷ ಬಾಲಿಕೆಯರೂ ವಿತಂತುಗಳಲ್ಲವೆಂದು ನಾವು ಪ್ರಕಟಿಸಬೇಕು. ಇಂತಹ ವೈಧವ್ಯಕ್ಕೆ ಪ್ರಮಾಣವಾಕ್ಯವು ಯಾವ ಶಾಸ್ತ್ರದಲ್ಲೂ ಇಲ್ಲ. ಗಂಡನು ಸತ್ತಮೇಲೆ ಹೆಂಡಿತಿಯು ಮನಃಪೂರ್ವಕವಾಗಿಯೂ ಐಚ್ಛಿಕವಾಗಿಯೂ ವೈಧವ್ಯವನ್ನು ಅವಲಂಬಿಸಿದಲ್ಲಿ ಆಕೆಯ ಮನೆಯು ಪಾವನವಾಗುತ್ತದೆ; ಆ ಮತವು ಅಭಿವೃದ್ಧಿಯಾಗುತ್ತದೆ; ಆಕೆಯ ಜೀವಿತವು ಆದರ್ಶಪ್ರಾಯವಾಗುತ್ತದೆ. ಮತಧರ್ಮವೆಂದಾಗಲಿ, ಸಂಪ್ರದಾಯವೆಂದಾಗಲಿ ನಿರ್ಬಂಧದಿಂದ ಏರ್ಪಡಿಸಿದ ವೈಧವ್ಯವು ದುರ್ಭರವು. ಅದರಿಂದ ಆ ಗೃಹವು ಕಲುಷಿತವಾಗುವುದು; ವ್ಯಭಿಚಾರಾದಿಗಳಿಗೆ ಅವಕಾಶವೇರ್ಪಡುವುದು; ಮತವು ಕ್ಷೀಣಿಸುವುದು. ಪುರುಷರಲ್ಲಿ ವೃದ್ಧರೂ, ರೋಗಪೀಡಿತರೂ ಆದ 60 ವರ್ಷವಯಸ್ಸಿನವರು ಲಗ್ನವಾಗಲೆಳಸಿ ಧನಗಳನ್ನು ಕೊಂಡುಕೊಳ್ಳುವ ರೀತಿಯಲ್ಲಿ ರೂಪಾಯಿಗಳನ್ನು ಕೊಟ್ಟು ಕನ್ಯೆಗಳನ್ನು ಕೊಂಡುಕೊಂಡು ಅವುಗಳ ಕೊರಳಿಗೆ ಹಗ್ಗವೆಂಬ ತಾಲಿಯನ್ನು ಬಿಗಿಯುತ್ತಿರುವುದು ಸಮ್ಮತವಾಗಿರುವಾಗ್ಯೆ ಸ್ತ್ರೀಯರಿಗೆ ಮಾತ್ರ ನಿರ್ಬಂಧ ವೈಧವ್ಯವನ್ನು ವಿಧಿಸುವುದು ಮಹಾಘೋರಕೃತ್ಯವಲ್ಲದೆ ಮತ್ತೇನು ? ದೇಶದಲ್ಲಿ ಲಕ್ಷಾವಧಿ ವಿತಂತುಗಳಿರುವುದು ಫಿರಂಗಿಮದ್ದಿನ ನೆಲಮನೆಯ ಮೇಲೆ ಕುಳಿತಂತೆಯೇ ಸರಿ. ಅದು ಯಾವ ನಿಮಿಷದಲ್ಲಾದರೂ ಹಾರದೆ ಬಿಡದು. ಆದುಕಾರಣ ಬಾಲ್ಯವಿತಂತುಗಳಿರುವ ಕುಟುಂಬದವರು ಧೈರ್ಯಮಾಡಿ ಅವರುಗಳಿಗೆ ವಿವಾಹಮಾಡತಕ್ಕುದು. ಆದಕ್ಕೆಮೊದಲಾದ ವಿವಾಹವು ಶಾಸ್ತ್ರೀಯವೂ ನಿಜವಾದುದೂ ಅಲ್ಲವು. ಈಗಾದ ವಿವಾಹವೇ ಸರಿಯಾದ ವಿವಾಹವಾಗುತ್ತದಲ್ಲದೆ ಎಂದಿಗೂ ವಿತಂತುವಿವಾಹವಾಗುವುದಿಲ್ಲ.

ಬಾಲ್ಯವಿವಾಹದಿಂದಲೂ, ನಿರ್ಬಂಧವೈಧವ್ಯದಿಂದಲೂ ದೇಶಕ್ಕೂ ಸಮಾಜಕ್ಕೂ ಮತಕ್ಕೂ ಕುಟುಂಬಕ್ಕೂ ಆಗತಕ್ಕ ಮಹಾನರ್ಥಗಳನ್ನೂ, ಈ ಘೋರಕೃತ್ಯಗಳ ನಿವಾರಣಾವಶ್ಯಕತೆಯನ್ನೂ ಕುರಿತು ಮಹಾತ್ಮಗಾಂಧಿಯವರು ಹೇಳಿರುವುದಕ್ಕಿಂತ ಹೆಚ್ಚಾಗಿ ಹೇಳತಕ್ಕುದೇನೂ ಇಲ್ಲವಾದರೂ, ರಾಜ್ಯಸಂಸ್ಕರಣ ಅಥವಾ ಸ್ವರಾಜ್ಯಸಾಧನಕ್ಕಿಂತ ಸಂಘಸಂಸ್ಕರಣವು ಮೊದಲು ನಡೆಯಬೇಕೆಂದು ಸರ್ ಗಂಗಾರಾಂರವರು ಅಭಿಪ್ರಾಯಪಟ್ಟಿರುವುದು ಯುಕ್ತವೆಂದು ಹೇಳಬೇಕಾಗಿದೆ. ಯಾಕೆಂದರೆ, ಸ್ವರಾಜ್ಯಸಾಧನವೆಂಬುದು ಭಾರತಮಾತೆಯನ್ನು ಪರದೇಶೀಯರ ಪ್ರಭುತ್ವಶೃಂಖಲದಿಂದ ಬಿಡಿಸಿ ಸ್ವತಂತ್ರಳನ್ನಾಗಿ ಮಾಡುವುದಾಗಿದೆ. ಈ ನಿರ್ಬಂಧವಿಮೋಚನಾಕಾರ್ಯವು ಆಕೆಯ ಪುತ್ರರಾದ ಭಾರತೀಯರಿಗೆ ಅತ್ಯವಸರವೂ ಆವಶ್ಯಕವೂ ಆಗಿರುವುದು. ಆದರೆ ಲೋಕದಲ್ಲಿ ಸ್ತ್ರೀಯರು ಅಷ್ಟೈಶ್ವರ್ಯಸಂಪನ್ನೆಯರಾಗಿದ್ದರೂ ತಮ್ಮ ಹೆಣ್ಣುಮಕ್ಕಳಿಗೇನಾದರೂ ಕಷ್ಟಸಂಭವಿಸಿದಲ್ಲಿ ತಮ್ಮ ಭೋಗಭಾಗ್ಯಗಳನ್ನೆಲ್ಲಾ ತೃಣೀಕರಿಸಿ ಚಿಂತಾನಿಮಗ್ನರಾಗುವರು. ಅದರಂತೆಯೇ ಭಾರತಮಾತೆಯು ತನ್ನ ನಿರ್ಬಂಧವಿಮೋಚನೆಯಾದರೂ ತನ್ನ ಪುತ್ರಿಯರು ಬಾಲ್ಯವಿವಾಹದಿಂದಲೂ ನಿರ್ಬಂಧವೈಧವ್ಯದಿಂದಲೂ ನರಳುತ್ತಿರುವುದನ್ನು ನೋಡಿ ಸಹಿಸಲಾರಳಾದುದರಿಂದ ಮತ್ತು ನಿರ್ಬಂಧವೈಧವ್ಯದಿಂದುಂಟಾಗುವ ಭ್ರೂಣಹತ್ಯ, ಶಿಶುಹತ್ಯ, ಆತ್ಮಹತ್ಯಗಳೇ ಭಾರತೀಯರ ಅವನತಿಗೂ, ಸಂಕಷ್ಟಗಳಿಗೂ ಕಾರಣವಾಗಿರುವುದರಿಂದ ಆಕೆಯ ವಿಧವಾಪುತ್ರಿಯರ ನಿರ್ಬಂಧವಿಮೋಚನೆಗೆ ಮಹಾತ್ಮಗಾಂಧಿಯವರಾದಿಯಾಗಿ ಆಕೆಯ ಪುತ್ರರು ಪ್ರಥಮತಃ ಪ್ರಯತ್ನಿಸುವುದು ಬಹುಮುಖ್ಯವಾಗಿದೆ.

ಮಾಳವ್ಯರವರ ಆಜ್ಞೋಲ್ಲಂಘನ.

ಪಂಡಿತ ಮದನಮೋಹನ ಮಾಳವ್ಯರವರು ಕಲಕತ್ತಾನಗರವನ್ನು 2 ತಿಂಗಳ ಕಾಲದವರೆಗೆ ಪ್ರವೇಶಿಸಕೂಡದೆಂದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಮಾಡಿದ್ದ ಆಜ್ಞೆಯನ್ನು ಮಾಳವ್ಯರವರುಉಲ್ಲಂಘಿಸಿ ಕಳೆದ ತಾ|| 7ರ ಬೆಳಿಗ್ಗೆ ರೈಲುಬಂಡಿಯಲ್ಲಿ ಪ್ರಯಾಣಮಾಡಿಬಂದು ಪುರಪ್ರವೇಶವನ್ನು ಮಾಡಿದರು. ನಿಲ್ದಾಣದಲ್ಲಿ ನೂರಾರುಜನ ದೇಶಭಕ್ತರುಗಳು ಇದಿರ್‍ಗೊಂಡು ಮರ್‍ಯಾದಿಸಿ ಮೋಟಾರುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಚೌಧೂರಿಯವರ ಬಿಡಾರಕ್ಕೆ ಕರೆದುಕೊಂಡುಹೋದರು. ತಮ್ಮಾಗಮನ ಕಾಲದಲ್ಲಿ ಯಾವ ಉತ್ಸವದೇರ್ಪಾಟೂ ಮಾಡಲ್ಪಡಕೂಡದೆಂದು ಮೊದಲೇ ಪಂಡಿತರು ತಿಳಿಸಿದ್ದರಾದುದರಿಂದ ಎಲ್ಲವೂ ಶಾಂತವಾಗಿಯೇ ಇದ್ದಿತು. ಮಾಳವ್ಯರವರು ತಮಲ್ಲಿಗೆ ಬಂದು ತಮ್ಮನ್ನು ಕಂಡುಹೋಗಬೇಕೆಂದು ಪ್ರಸಿಡೆನ್ಸೀ ಮ್ಯಾಜಿಸ್ಟ್ರೇಟರು ಬರೆದಿದ್ದುದಕ್ಕೆ ತಾವು ಬರಲಾಗುವುದಿಲ್ಲವೆಂದೂ, ತಾವಿದ್ದಲ್ಲಿಗೇ ಪ್ರ|| ಮ್ಯಾಜಿಸ್ಟ್ರೇಟರೇ ಬಂದು ನೋಡಿಕೊಂಡು ಹೋಗಬಹುದೆಂದೂ ಮಾಳವ್ಯರವರು ಉತ್ತರವನ್ನು ಕೊಟ್ಟರು. ಮಾಳವ್ಯರವರು ಬಹಿರಂಗಸಭೆಯಲ್ಲಿ ಕಾಲೋಚಿತವಾದ ಭಾಷಣವನ್ನು ಮಾಡಿ ಮಾರನೆಯ ದಿನ ಕಲಕತ್ತಾಪಟ್ಟಣವನ್ನು ಬಿಟ್ಟು ಮುಂದಕ್ಕೆ ಪ್ರಯಾಣಮಾಡಿದರು. ಹೀಗೆ ಆಜ್ಞೋಲ್ಲಂಘನಮಾಡಿದುದಕ್ಕಾಗಿ ನಿಮ್ಮನ್ನು ಏತಕ್ಕೆ ಪ್ರಾಸಿಕ್ಯೂಷನ್ ಮಾಡಬಾರದೆಂದು ಪ್ರೆಸಿಡೆನ್ಸೀ ಮ್ಯಾಜಿಸ್ಟ್ರೇಟರು ಮಾಳವ್ಯರವರನ್ನು ನೋಟೀಸಿನ ಮೂಲಕ ಕೇಳಿರುತ್ತಾರೆ. ಆದರೆ ಆ ನೋಟೀಸು ಮಾಳವ್ಯರವರಿಗೆ ಇನ್ನೂ ತಲುಪಿಲ್ಲವು. ಅದು ತಲುಪಿದ ಮೇಲೆ ಅವರು ಯಾವ ಉತ್ತರವನ್ನು ಕೊಡುವರೋ ನೋಡಬೇಕಾಗಿದೆ. ಮಾಳವ್ಯರವರು ಸೌಮ್ಯಪಕ್ಷಕ್ಕೆ ಸೇರಿದವರಾದುದರಿಂದ ಯಾವಾಗಲೂ ಯಾವಕಲಹಕ್ಕೂಹೋಗದೆ ಪಕ್ಷಾಭಿಮಾನದಿಂದ ಜನರಲ್ಲಿ ಹುಟ್ಟುವ ಮನಸ್ತಾಪಗಳನ್ನು ಹೋಗಲಾಡಿಸಿ ಪರಸ್ಪರ ಮೈತ್ರಿಯನ್ನುಂಟುಮಾಡುವ ಸ್ವಭಾವದವರೆಂದು ಪ್ರಖ್ಯಾತವಾಗಿದೆ. ಇಂತಹುದರಲ್ಲಿ ಮಾಳವ್ಯರವರ ಕಲಕತ್ತಾ ನಗರಾಗಮನದಿಂದ ಹಿಂದುಮಹಮ್ಮದೀಯರ ಮನಸ್ತಾಪವು ಪ್ರಬಲವಾಗಿ ಜನರ ನೆಮ್ಮದಿಗೆ ಭಂಗಬರುತ್ತದೆಂದು ಪ್ರಭುತ್ವದವರು ಭ್ರಮಿಸಿ ಈ ರೀತಿ ಆಜ್ಞೆಮಾಡಿದುದು ಅನುಚಿತವೆಂದು ಲಂಡನ್‌ಟೈಂಸ್ ಮೊದಲಾಗಿ ವೃತ್ತಪತ್ರಿಕೆಗಳು ಅಭಿಪ್ರಾಯಪಟ್ಟು ಪ್ರಭುತ್ವದವರ ಚರ್ಯವನ್ನು ತೀವ್ರವಾಗಿ ಖಂಡಿಸುತ್ತಿವೆ.

ನೈಜಾಂರವರ ಸಮಾಧಾನ.

"ನೈಜಾಂರವರ ಹೈದರಾಬಾದುದೇಶದ ಆಡಳಿತವು ಬಹಳ ಅಕ್ರಮವೂ ಅಸಮಾಧಾನಕರವೂ ಆಗಿರುವುದೆಂದೂ, ಆದಕ್ಕಾಗಿ ಬ್ರಿಟಿಷ್ ಪ್ರಭುತ್ವದವರು ಕೊಟ್ಟಿರುವ ಸೂಚನೆಗಳಂತೆ ಕ್ರಮಪಡಿಸದಿದ್ದಲ್ಲಿ ಅದರ ವಿಚಾರಣೆಯ ಬಗೆಗೆ ಒಂದು ಕಮಿಷನ್ನೇರ್ಪಡಿಸಲ್ಪಡುವುದೆಂದೂ ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಚಾರವು ನಿರಾಧಾರವಾದುದು. ಕೆಲ ತಾಲ್ಲೂಕುದಾರರುಗಳ ಆಡಳಿತದಲ್ಲಿರುವ ಅಕ್ರಮಗಳನ್ನು ಸರಿಪಡಿಸಬೇಕೆಂದು ಇಂಡ್ಯಾಗೌರ್ನಮೆಂಟಿನವರು ಕೆಲ ಸೂಚನೆಗಳನ್ನು ಮಾತ್ರ ಕೊಟ್ಟಿರುವರು. ಅದರಂತೆ ಶಕ್ತ್ಯೇರ್ಪಾಟುಮಾಡಲಾಗುವುದು. ನಜರಾನಾ ತೆಗೆದುಕೊಳ್ಳುವ ಪದ್ಧತಿಯು ಈಗಿರುವುದಿಲ್ಲ'' ಎಂದು ನೈಜಾಂರವರು ಒಂದು ಪ್ರಕಟನೆಯನ್ನು ಹೊರಡಿಸಿರುವರು. ಆದರೂ ಅಲ್ಲಿಯ ಪ್ರಜೆಗಳಿಗೆ ಕುಡಿಯುವ ನೀರು ಮೊದಲಾದ ಸಾಧಾರಣವಿಚಾರಗಳಲ್ಲು ಕೂಡ ಅನುಕೂಲವು ಕಲ್ಪಿಸಲ್ಪಟ್ಟಿಲ್ಲವೆಂದೂ, ಅಧಿಕಾರಿಗಳು ದೊಡ್ಡವರ ಮಕ್ಕಳೆಂಬ ಯೋಗ್ಯತೆವಿನಾ ಅವರುಗಳಿಗೆ ಕೆಲಸವೇ ತಿಳಿಯದು. ಕೌನ್ಸಿಲಿನ ಪ್ರೆಸಿಡೆಂಟರಿಗೂ ರಾಜ್ಯಾಡಳಿತದ ಅನುಭವವೇ ಇಲ್ಲವಾದುದರಿಂದ ಆ ರಾಜ್ಯದ ಪ್ರಜೆಗಳಲ್ಲಿ ಬಹಳ ಅಸಮಾಧಾನಹುಟ್ಟಿದೆ. ಆದುಕಾರಣ ಸರ್ ಹರ್ಕೋರ್ಟ್‌ಬಟ್ಲರು, ಸರ್ ಚಾರ್ಲೆಸ್‌ಟಾಡ್‌ಹಂಟರ್, ಸರ್ ಬೇಸಿಲ್‌ಬ್ಲಾಕೆಟ್ ಮತ್ತು ಮಿಗ್ಗಾಲ್ಸಿ ಇವರುಗಳಲ್ಲಿ ಯಾರಾದರೊಬ್ಬರನ್ನು ಮುಖ್ಯಮಂತ್ರಿಯನ್ನಾಗಿ ನಿಯಮಿಸಿಕೊಳ್ಳಬೇಕೆಂದು ಇಂಡ್ಯಾಸರ್ಕಾರದವರು ಸೂಚಿಸಿರುವರೆಂದು ಕೆಲ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ರಾಕ್ಷಸಮಗುವು ಜನಿಸಿದ್ದುದು.

ರಾಮನಾಥಪುರದಲ್ಲಿ ಒಬ್ಬ ಪೂರ್ಣಗರ್ಭಿಣಿಗೆ ಹೆರಿಗೆಯಲ್ಲಿ ಬಹಳ ಪ್ರಯಾಸವಾದುದರಿಂದ ಆಕೆಗೆ ಮತ್ತುಬರುವ ಔಷಧವು ಕೊಡಲ್ಪಟ್ಟು ಶಿಶುವು ಹೊರಗೆ ತೆಗೆಯಲ್ಪಡಬೇಕಾಗಿಬಂದಿತು. ಆ ಮಗುವು ರಾಕ್ಷಸಾಕೃತಿಯಲ್ಲಿದ್ದು ತಲೆಯ ಮೇಲೆ ಎರಡು ಕೊಂಬುಗಳೂ, ಕೋತಿಯಮುಖವೂ ಇದ್ದುವು. ಅದು ಮೂರುತಿಂಗಳ ಮಗುವಿನಷ್ಟು ಪುಷ್ಟಿಯಾಗಿದ್ದು ಜನಿಸಿದ ಕೊಂಚಕಾಲದಮೇಲೆ ಸತ್ತುಹೋಯಿತು. ಇನ್ನೊಬ್ಬ ಹೆಂಗುಸು ಹುಲಿಮರಿಯನ್ನು ಪ್ರಸವಿಸಿದ್ದುದಾಗಿ ಪ್ರಕಟವಾಗಿದ್ದಿತು. ಅಭೂತಪೂರ್ವವೂ ಅಸಂಭವವೂ ಆದ ಈ ವರ್ತಮಾನಗಳು ನಿಜವಾಗಿದ್ದಲ್ಲಿ ಕಲಿಮಹಿಮೆಯೆಂದೇ ನಿರ್ಧರಿಸಬೇಕಾಗುತ್ತದೆ.

ಸ್ವದೇಶದ ವೃತ್ತಾಂತಗಳು.

ಹಾಸನದ ಮುನಸೀಫರಾದ ಮ|| ಎಚ್. ನಂಜುಂಡಯ್ಯನವರು ರಜದಮೇಲೆ ಹೋಗುವುದಿಲ್ಲವೆಂದು ಕೇಳುತ್ತೇವೆ.

ಈಗ ಮೂರನೆತರಗತಿಗಿಳಿಸಲ್ಪಟ್ಟಿರುವ ಬೆಂಗಳೂರುದಂಡು ಪೂರ್ವದಂತೆ ಒಂದನೇ ತರಗತಿಗೆ ಹೆಚ್ಚಿಸಲ್ಪಡುವ ಸಂಭವವಿದೆ.

ಇಷ್ಟರಲ್ಲೇ ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯು ಮೋಟಾರುಬಂಡಿಯಲ್ಲಿ ನಂಜನಗೂಡು ಮಾರ್ಗವಾಗಿ ತಿರುಮಕೂಡ್ಲು ನರಸೀಪುರಕ್ಕೆ ಹೋಗಿ ಬರುವುದಾಗಿ ತಿಳಿಯಬರುತ್ತದೆ.

ಬೆಂಗಳೂರು ದಂಡಿನಲ್ಲಿ ಕೆಲ ಮಹಮ್ಮದೀಯರು ಕಳ್ಳತನದಿಂದ ಸಾರಾಯಿಭಟ್ಟಿಯನ್ನಿಳಿಸುತ್ತಿದ್ದುದು ಗೊತ್ತಾಗಿ ಪೊಲೀಸರಿಂದ ಸೆರೆಹಿಡಿಯಲ್ಪಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳ ತ್ರೈವಾರ್ಷಿಕ ಚುನಾವಣೆಯು ಬರುವ ನವಂಬರ್ ತಾ|| 27 ರಲ್ಲಿ ನಡೆಯುವುದಾಗಿಯೂ, ಓಟರುಗಳ ಹೆಸರಿನ ಪಟ್ಟಿಯು ಸೆಪ್ಟಂಬರ್ ಅಂತ್ಯದೊಳಗಾಗಿ ಪ್ರಕಟಿಸಲ್ಪಡುವುದಾಗಿಯೂ ತಿಳಿಯಬರುತ್ತದೆ.

ಶ್ರೀಮನ್‌ಮಹಾರಾಜರವರು ಸರದಾರ್ ಚಾಮರಾಜೆ ಅರಸಿನವರೊಡನೆ ಕಳೆದ ಶನಿವಾರ ರಾತ್ರಿ 9 ಘಂಟೆಗೆ ಮೋಟಾರುಬಂಡಿಯಲ್ಲಿ ರಾಜಧಾನಿಗೆ ದಯೆಮಾಡಿಸಿದ್ದು ಮಂಗಳವಾರ ಮಧ್ಯಾಹ್ನ 3½ ಘಂಟೆಯಲ್ಲಿ ಮೋಟಾರುಬಂಡಿಯಲ್ಲೇ ಬೆಂಗಳೂರಿಗೆ ಪುನಃ ಚಿತ್ತೈಸಿದರು.

ಚೆನ್ನಪಟ್ಟಣದಲ್ಲಿ ನಡೆದ ದಾಸಬಣಜಿಗರ ಕೊಲೆಯ ಸಂಬಂಧದಲ್ಲಿ ಅಪರಾಧಿಗಳೆಂದು ಸೆರೆಹಿಡಿಯಲ್ಪಟ್ಟು ಕ್ಲೋಸ್‌ಪೇಟೆಯ ಸ್ಪೆಷಲ್‌ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಜನಿವಾರದ ಗುಂಪಿಗೆ ಸೇರಿದ 13 ಜನರು ಬೆಂಗಳೂರು ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

1926 ನೇ ಅಕ್ಟೋಬರಿನಲ್ಲಿ ಎರಡನೆಯವೇಳೆ ನಡೆದ ಬಿ.ಎ., ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಬರುವ ಸೆಪ್ಟಂಬರ್ ತಾ|| 4 ನೇ ಶನಿವಾರ ಬೆಳಗಿನ 8½ ಘಂಟೆಗೆ ವಿಶ್ವವಿದ್ಯಾಲಯದ ಯೂನಿಯನ್ ಸಭಾಮಂದಿರದಲ್ಲಿ ಪಟ್ಟಪ್ರದಾನವಾಗುವುದು ಅಂದರೆ ಬಿ.ಎ. ಡಿಗ್ರಿ ಕೊಡಲ್ಪಡುವುದು.

ದಿವಾನರವರು ಈ ತಾ|| 11 ರಲ್ಲಿ ಮ|| ಬಾಲಸುಂದರಂ ಅಯ್ಯರವರೊಡನೆ ಬಿಕನೀರಿಗೆ ದಯೆಮಾಡಿಸಿದರು, ಮತ್ತು ಈ ತಿಂಗಳ ಕಡೆಯಲ್ಲಿ ಹಿಂದಿರುಗಿ ಬರುವವರಾಗಿರುವರು. ಅದುವರೆಗೆ ಒಂದನೆಯ ಕೌನ್ಸಿಲರಾದ ಮಿ|| ಕೆ. ಚಾಂಡಿಯವರು ತಮ್ಮ ಸ್ವಂತಕೆಲಸದೊಡನೆ ದಿವಾನರ ಕೆಲಸವನ್ನು ನೋಡಿಕೊಳ್ಳಬೇಕಾಗಿ ಅಪ್ಪಣೆಯಾಗಿದೆ.

ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡಿನ ವಿಚಾರವಾಗಿ ಹಾವೇರಿಯ ಬಸವರಾಜಪತ್ರಿಕೆಯೂ, ಹುಬ್ಬಳ್ಳಿಯ ಲೋಕಮತವೂ ಬರೆದಿರುವ ಲೇಖಗಳು ಈ ಸ್ಟಾರ್‌ಪತ್ರಿಕೆಯ ಬೇರೊಂದೆಡೆಯಲ್ಲಿ ಉದ್ಧರಿಸಲ್ಪಟ್ಟಿರುತ್ತವೆ. ಮಹಾಸಭಾ ಚಿರಸ್ಥಾಯಿಫಂಡಿನ ಕಮಿಟಿಯವರು ಮಾಡಿಕೊಂಡಿರುವ ನಿಬಂಧನೆಗಳನ್ನು ತಿಳಿಯಬೇಕೆಂಬ ಕುತೂಹಲವು ಮತಬಾಂಧವರಲ್ಲಿ ವಿಶೇಷವಾಗಿರುವುದರಿಂದ ಅವನ್ನು ಈ ಕಮಿಟಿಯವರು ಸಮಗ್ರವಾಗಿ ಪ್ರಕಟಿಸುವುದು ಅತ್ಯಾವಶ್ಯಕವೆಂದು ಸೂಚಿಸುತ್ತೇವೆ.

ಮ|| ಕರ್ಣೀಕ ಕೃಷ್ಣಮೂರ್ತಿರಾಯರು ತಮ್ಮ ಭೂಮಿಗಳನ್ನು ವ್ಯವಸಾಯಕ್ಕೆ ಕೊಡಲು ಪಟೇಲ್ ಬೋರೇಗೌಡನ ಸಮೇತ ಮಾಗಡಿಗೆಹೋಗಿ ಬರುವಾಗ್ಯೆ ಮಾರ್ಗದಲ್ಲಿ ಅವರೊಬ್ಬರನ್ನೂ ಚೆನ್ನಾಗಿ ಹೊಡೆದು ಹಿಂಸೆಪಡಿಸಿದ ಅಪರಾಧಿಗಳು ಸೆರೆಹಿಡಿಯಲ್ಪಟ್ಟು ಕ್ಲೋಸ್‌ಪೇಟೆಯ ಸ್ಪೆಷಲ್‌ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವ ವಿವಾದದಲ್ಲಿ ಪ|| ಬೋರೇಗೌಡನ ವಿಚಾರಣೆಯು ಮುಗಿದು ಇತರ ಸಾಕ್ಷಿಗಳ ವಿಚಾರಣೆಯು ಸೆಪ್ಟಂಬರ್ ತಾ|| 6 ರಲ್ಲಿ ನಡೆಯಲು ಗೊತ್ತುಮಾಡಲ್ಪಟ್ಟಿದೆ.

ನಾಳೆಯದಿನ ಸಾಯಂಕಾಲ ರಾಜಧಾನಿಯ ಟವುನ್‌ಹಾಲಿನಲ್ಲಿ ಆಸ್ಥಾನವಿದ್ವಾನ್ ವೇ|| ಎನ್. ಶ್ರೀಕಂಠಶಾಸ್ತ್ರಿಗಳವರಿಗೆ ಅರಮನೆಯ ಮುಜರಾಯಿಬಕ್ಷಿಯವರಾದ ರಾಜಕವಿ ಮ|| ಎಚ್. ಲಿಂಗರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಒಂದು ಭಂಗಾರದ ಕಡಗವು ಮೈಸೂರು ನಿವಾಸಿಗಳ ಪರವಾಗಿ ಕೊಡಲ್ಪಡುವುದು. ಪ್ರಭುಪ್ರಜಾಸನ್ಮಾನಾರ್ಹರಾದ ವೇ|| ಶ್ರೀಕಂಠಶಾಸ್ತ್ರಿಗಳಿಗೆ ರಾಜಧಾನಿಯ ನಿವಾಸಿಗಳು ಉಚಿತರೀತಿಯಲ್ಲಿ ಬಹುಮಾನಿಸುವುದು ಅವರ ವಿದ್ಯಾಭಿಮಾನವನ್ನೂ, ಗುಣೈಕಪಕ್ಷಪಾತತೆಯನ್ನೂ ವ್ಯಕ್ತಗೊಳಿಸುತ್ತದೆ. ಈ ಶಾಸ್ತ್ರಿಗಳು ದೀರ್ಘಾಯುಷ್ಮಂತರಾಗಿದ್ದು ಭಾಷಾಸೇವೆಯನ್ನು ವಿಶೇಷವಾಗಿ ಮಾಡಿ ಇತೋಪ್ಯತಿಶಯವಾದ ಬಹುಮಾನಗಳನ್ನು ಪಡೆಯುವವರಾಗಲೆಂದು ಕೋರುತ್ತೇವೆ.

ಬೆಂಗಳೂರಿನಿಂದ ಮೈಸೂರಿಗೆ ಬರುವ ರೈಲ್ವೆಮೇಲ್ ಬಂಡಿಯು ಬೆಳಗಿನ 12½ ಘಂಟೆಗಿಂತಲೂ ಮುಂಚಿತವಾಗಿ ಬರಲು ಸಾಧ್ಯವಿಲ್ಲವೆಂದು ಏಜಂಟರು ತಿಳಿಸಿರುವಪ್ರಯುಕ್ತ ಮದ್ದೂರಿನಿಂದ ಬೆಳಗಿನ 8 ಘಂಟೆಗೆ ಹೊರಟು ರಾಜಧಾನಿಯನ್ನು 10½ ಘಂಟೆಗೆ ತಲುಪುವಂತೆಯೂ, ಮಧ್ಯಾಹ್ನ 5½ ಘಂಟೆಗೆ ರಾಜಧಾನಿಯಿಂದ ಹೊರಟು ರಾತ್ರಿ 8 ಘಂಟೆಗೆ ಮದ್ದೂರನ್ನು ತಲುಪುವಂತೆಯೂ ಒಂದು ಟ್ರೇನನ್ನು ಪ್ರತ್ಯೇಕವಾಗಿ ಬಿಡುವಂತೆ ಏಜಂಟರನ್ನು ಕೇಳಬೇಕೆಂದೂ, ಮೈಸೂರು-ಚಾಮರಾಜನಗರ ಮಧ್ಯೆ ಓಡಾಡುವ ರೈಲುಬಂಡಿಗಳು ರಾಜಧಾನಿಯಿಂದ ಬೆಳಗಿನ 7 ಘಂಟೆಗೆ ಹೊರಟು ನಂಜನಗೂಡನ್ನು 8-20 ಕ್ಕೂ, ಚಾಮರಾಜನಗರವನ್ನು 10-30 ಕ್ಕೂ ತಲುಪುವಂತೆಯೂ, ಸಾಯಂಕಾಲ 5-25 ಕ್ಕೆ ಹೊರಟು ನಂಜನಗೂಡನ್ನು 6-46 ಕ್ಕೂ, ಚಾಮರಾಜನಗರವನ್ನು ರಾತ್ರಿ 9 ಕ್ಕೂ ತಲುಪುವಂತೆಯೂ, ಇದರಂತೆಯೇ ಚಾಮರಾಜನಗರದಿಂದ ಹೊರಟು ರಾಜಧಾನಿಯನ್ನು ತಲುಪುವಂತೆಯೂ ರೈಲುಬಂಡಿಗಳನ್ನು ಬಿಡುವ ಹಾಗೆ ಏಜಂಟರಿಗೆ ಸೂಚಿಸಬೇಕೆಂದೂ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ನಿರ್ಧರಿಸಲ್ಪಟ್ಟಿರುತ್ತದೆ.

ಗೋವಧಾನಿರೋಧಕಶಾಸನವನ್ನು ಮಾಡುವ ವಿಚಾರವಾಗಿ ಒಂದು ಕಮಿಟಿಯನ್ನೇರ್ಪಡಿಸುತ್ತೇವೆಂದು ದಿವಾನರು ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಅಪ್ಪಣೆಕೊಡಿಸಿದಪ್ರಕಾರ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ಗೊತ್ತುಮಾಡಲ್ಪಟ್ಟು ಮ|| ಗಳಾದ (1) ಮಿರಾರ್ ಹಂಸಾಹುಸೇನ್ ಸಾಹೇಬರು (2) ಡಿ. ವಿ ಗುಂಡಪ್ಪನವರು (3) ಬಿ. ಅಬ್ದುಲ್‌ರಹಿಮಾನ್‌ರವರು (4) ಎಂ. ರಾಮಚಂದ್ರಸಿಂಧ್ಯಾಯವರು (5) ಸಿಲ್ವೆಸ್ಟರ್ ಪಾಯಸ್‌ರವರು (6) ಅಡ್ವೊಕೇಟ್ ಎಸ್. ವೆಂಕಟೇಶಯ್ಯನವರು (7) ರೆವರೆಂಡ್ ಇ. ಎಸ್. ಎಡ್ವರ್ಡ್ಸ್‌ರವರು (8) ಡಾಕ್ಟರ್ ಸಿ. ಬಿ. ರಾಮರಾಯರು ಮೆಂಬರುಗಳಾಗಿಯೂ, ಸಿ. ರಂಗನಾಥರಾವ್ ಸಾಹೇಬ್‌ರವರು ಕಮಿಟಿಯ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುವರು. ಬ್ರಿಟಿಷ್ ಇಂಡ್ಯಾದಲ್ಲೂ, ಇತರ ದೇಶೀಯ ಸಂಸ್ಥಾನಗಳಲ್ಲೂ ಗೋವಧಾನಿರೋಧಕ ವಿಚಾರವಾಗಿರುವ ಶಾಸನಗಳನ್ನು ತರಿಸಿಕೊಂಡು ಚೆನ್ನಾಗಿ ಪರ್ಯಾಲೋಚಿಸಿಯೂ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಈ ಗೋವಧೆಯಿಂದಾಗತಕ್ಕ ನಷ್ಟಕಷ್ಟಗಳನ್ನು ಜನರಿಂದ ಕೇಳಿ ತಿಳಿದುಕೊಂಡೂ ಈ ಗೋವಧಾನಿರೋಧಕಶಾಸನವನ್ನು ಮಾಡುವುದರಿಂದಾಗತಕ್ಕ ಸಾಧಕಬಾಧಕಗಳನ್ನೂ, ಗೋವಧೆಯನ್ನು ನಿಲ್ಲಿಸಲು ಇತರ ಉಪಾಯಗಳನ್ನೂ ಪ್ರಭುತ್ವದವರಿಗೆ ನಿವೇದಿಸಬೇಕೆಂದು ಅಪ್ಪಣೆಯಾಗಿರುತ್ತದೆ.

ಬೆಂಗಳೂರುಸಿಟಿಮಾರ್ಕೆಟ್ಟಿನಿದಿರಿಗೆ ಹೊಸದಾಗಿ ಕಟ್ಟಿಸಲ್ಪಟ್ಟಿರುವ ವಾದ್ಯದ ಜಗತಿಯಮೇಲೆ ಪ್ರತಿಬುಧವಾರಸಾಯಂಕಾಲದಲ್ಲಿ ಇನ್ಫೆಂಟ್ರೀಬ್ಯಾಂಡೂ, ಶುಕ್ರವಾರಸಾಯಂಕಾಲದಲ್ಲಿ ನಾಗಸ್ವರವೂ ಆಗುವಂತೆ ಅಲ್ಲಿಯ ಸಿಟಿಮ್ಯುನಿಸಿಪಾಲಟಿಯವರೇರ್ಪಡಿಸಿರುತ್ತಾರೆ. ನಮ್ಮ ರಾಜಧಾನಿಯ ನಿಷದ್‌ಬಾಗಿನಲ್ಲಿ ಪ್ರತಿಬುಧವಾರಸಾಯಂಕಾಲದಲ್ಲೂ ಪೂರ್ಣಿಮೆಯರಾತ್ರಿಯಲ್ಲೂ ಅರಮನೆಯ ಆರ್ಕೆಸ್ಟ್ರಾ ಎಂಬ ಇಂಗ್ಲಿಷ್‌ಬ್ಯಾಂಡೂ, ಕಾನ್ಸರ್ಟ್ ಎಂಬ ಮಿಶ್ರವಾದ್ಯವೂ, ಕರ್ನಾಟಕಬ್ಯಾಂಡೂ ಸರದಿಯಪ್ರಕಾರ ನಡೆಯುವಂತೆ ಶ್ರೀಮನ್‌ಮಹಾರಾಜರವರು ತಮ್ಮ ರಾಜಧಾನಿಯ ಪ್ರಜೆಗಳಮೇಲೆ ಪೂರ್ಣಕಟಾಕ್ಷವಿಟ್ಟು ಏರ್ಪಡಿಸಿರುತ್ತಾರೆ, ಆದರೆ ಸಂಗೀತವಿದ್ವಾಂಸರುಗಳಿಂದ ಹೊಸರಾಗಗಳನ್ನೂ, ಕೀರ್ತನೆಗಳನ್ನೂ, ವರ್ಣಗಳನ್ನೂ ಕಲಿಸಲ್ಪಡುತ್ತಿರುವ ಈ ವಾದ್ಯಗಾರರು ಒಂದುದಿವಸದಲ್ಲಿ 1 ಘಂಟೆಯ ಕಾಲ ಬಾಜಿಸುವುದಾಗಿದ್ದರೂ ಬಹಳ ಆಯಾಸಪಟ್ಟವರಂತೆ ಬೇಸರಿಸಿಕೊಂಡು "ಹಾಡಿದ್ದನ್ನೇ ಹಾಡುವ ಕಿಸುಬಾಯಿದಾಸ'' ನಂತೆ ಬಾಜಿಸಿದ್ದನ್ನೇ ಬಾಜಿಸಿ ಕೇಳುವವರಿಗೆ ಜುಗುಪ್ಸೆಯನ್ನುಂಟುಮಾಡಿ "ದೇವರು ವರವನ್ನು ಕೊಟ್ಟರೂ ಪೂಜಾರಿಕೊಡ'' ಎಂಬ ಗಾಧೆಯನ್ನು ಸ್ಮರಿಸಿಕೊಳ್ಳುವಂತೆ ಮಾಡುತ್ತಿರುವರು. ಈರೀತಿ ಬೆಂಗಳೂರಿನ ವಾದ್ಯಗಾರರು ಮಾಡದೆ ವಿಧವಿಧವಾದ ರಾಗಗಳನ್ನು ನುಡಿಸಿ ಜನರ ಬೇಸರಿಕೆಯನ್ನು ಹೋಗಲಾಡಿಸಿ ಅಲ್ಲಿಯ ಮ್ಯುನಿಸಿಪಾಲಿಟಿಯವರ ಉದ್ದೇಶವನ್ನು ಸಾರ್ಥಕಪಡಿಸುವವರಾಗಲೆಂದು ಸೂಚಿಸುತ್ತೇವೆ.

ಭರತಖಂಡದ ವೃತ್ತಾಂತಗಳು.

ಸಿಲೋನ್‌ನಲ್ಲಿ ಎಂದೂ ನಗದಿರುವ ಮತ್ತು ಸುಳ್ಳು ಹೇಳದಿರುವ 'ವೇದಾಸ' ಎಂಬ ಒಂದು ಜಾತಿಯಿರುವುದು.

ಈರಾನ್ ಬಾದಶಾಹರಲ್ಲಿ ರತ್ನಖಚಿತವಾದ ಒಂದು ಕತ್ತಿಯು ಇದೆ. ಇದರ ಬೆಲೆಯು 45 ಲಕ್ಷ ರೂಪಾಯಿಗಳಂತೆ.

ಮದ್ರಾಸು ಮ್ಯುನಿಸಿಪಲ್ ಎಲ್ಲೆಯೊಳಗಿರುವ ಆಸ್ತಿಪರಭಾರೆಪತ್ರಗಳ ರಿಜಿಸ್ಟರ ಛಾರ್ಜು ಶೇಕಡ 1½ ಯಷ್ಟು ಹೆಚ್ಚಿಸಲ್ಪಡುವ ಸಂಭವವಿದೆ. ಇದರಿಂದ ಮ್ಯುನಿಸಿಪಾಲಿಟಿಗೆ 40-45 ಸಾವಿರರೂಪಾಯಿ ಹೆಚ್ಚಾಗಿ ಉತ್ಪನ್ನವಾಗುವುದು.

ಮದ್ರಾಸಿನ ಪೆರಂಬೂರಿಗೂ ವಿಲ್ಲಿವಾಕ್ಕಮ್ಮಿಗೂ ಮಧ್ಯೆ ಒಬ್ಬ ಹೆಂಗುಸು ರೈಲುರಸ್ತೆಯಮೇಲೆ ರೈಲುಬಂಡಿಯು ಬರುವುದರಸ್ಮರಣೆಯಿಲ್ಲದೆ ಹೋಗುತ್ತಿರುವಾಗ್ಯೆ ಇಂಜನ್ನಿನ ಚಕ್ರಗಳಿಗೆ ಸಿಕ್ಕಿ ಎರಡುತುಂಡುಗಳಾಗಿ ಕತ್ತರಿಸಲ್ಪಟ್ಟಳು.

15 ದಿವಸಗಳ ಹಿಂದೆ ಶಿರಪುರ ತಾಲ್ಲೂಕಿನಲ್ಲಿ ತಪತಿನದೀಪ್ರದೇಶದಲ್ಲಿ 30 ಮೈಲಿ ದೂರದವರೆಗೂ ಬಹುಬೆಚ್ಚಗಿರುವ ಗಾಳಿಯು ಬೀಸಿ 1 ಲಕ್ಷ ರೂಪಾಯಿನವರೆಗೆ ಪೈರು ನಷ್ಟವಾದುದಲ್ಲದೆ ಹೊಲಗಳಲ್ಲಿದ್ದ ರೈತರು ಆ ಬಿಸಿಯತಾಪವನ್ನು ಸಹಿಸದೆ ತಪಿಸುತ್ತಿದ್ದರಂತೆ.

ಮದ್ರಾಸಿನಲ್ಲಿ ಒಬ್ಬ ಜಟ್ಕಾಬಂಡಿಯವನು ಒಬ್ಬ ಹೆಂಗುಸಿನ ಮೇಲೆ ಬಂಡಿಯನ್ನು ಬಿಟ್ಟು ಅವಳನ್ನು ಕೊಂದುದಕ್ಕಾಗಿ 150 ರೂ. ಅರ್ಥದಂಡವು ತಪ್ಪಿದಲ್ಲಿ 6 ತಿಂಗಳ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು. ಈ ಸೀಮೆಯಲ್ಲಿ ಮೋಟಾರು ಬಂಡಿಗಳನ್ನು ಅತ್ಯಂತ ವೇಗದಿಂದಲೋ ಆಲಸ್ಯದಿಂದಲೋ ಓಡಿಸುತ್ತ ಜನರನ್ನು ಪದೇಪದೇ ಕೊಂದುಹಾಕುತ್ತಿದ್ದರೂ ಈವರೆಗೂ ಹಿಡಿಯಲ್ಪಟ್ಟು ನ್ಯಾಯವಾಗಿ ಶಿಕ್ಷಿಸಲ್ಪಟ್ಟಿಲ್ಲ.

ಅಮೃತಸರದ ದಂಡಿನ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ|| ಸಯ್ಯದ್‌ಅಬ್ದುಲ್‌ಹಸೇನ್‌ಕ್ವಾಜಿಲ್‌ಬಾಷ್‌ರವರ ಮನೆಗೆ ಕಳೆದ ತಾ|| 4ರ ಮಧ್ಯರಾತ್ರಿಯಲ್ಲಿ ಯಾರೋ ಕಳ್ಳರು ಕಿಟಕಿಬಾಗಿಲುಗಳ ಗಾಜನ್ನು ಒಡೆದುಹಾಕಿ ಒಳಕ್ಕೆ ನುಗ್ಗಿ ಮನೆಯವರೆಲ್ಲರೂ ನಿದ್ರೆಮಾಡುತ್ತಿದ್ದಾಗ್ಯೆ ಪೆಟ್ಟಿಗೆಗಳನ್ನು ಹೊತ್ತುಕೊಂಡುಬಂದು ಅವುಗಳೊಳಗಿದ್ದ 6000 ರೂ. ಪರಿಗಿನ ಆಭರಣಗಳನ್ನೂ ಹಣವನ್ನೂ ಅಪಹರಿಸಿಕೊಂಡು ಮಾಯವಾದರು. ಪೊಲೀಸರು ಕಳ್ಳರನ್ನು ತಡಕುತ್ತಿರುವರು.

ಈರೋಡಿನಲ್ಲಿ ಕಾವೇರೀನದಿಯಪ್ರವಾಹವು ಕಳೆದವಾರ ಸೇತುವೆಯಮೇಲೆ ಹರಿಯುತ್ತಿದ್ದುದು ಈಗ ಇಳಿದುಹೋಗಿದೆ. ಇದರಂತೆಯೇ ಕೋಲರೂನ್ ಮೊದಲಾದ ನದಿಗಳಲ್ಲೂ ಪ್ರವಾಹವು ಇಳಿದುಹೋಗಿರುವುದು. ಪ್ರವಾಹವು ಮಿತಿಮೀರಿಬಂದು ಅನಾಹುತವನ್ನು ಮಾಡಬಹುದೆಂಬ ಶಂಕೆಯಿಂದ ಅಧಿಕಾರಗಳು ತಕ್ಕೇರ್ಪಾಟನ್ನು ಮಾಡಲು ಸಿದ್ಧರಾಗಿ ಬಂದಿದ್ದು ಕೊಡಗಿನಲ್ಲಿ ಮಳೆಯು ಕಡಿಮೆಯಾಗಿ ಪ್ರವಾಹವು ಬರುವ ಚಿಹ್ನೆಯಿಲ್ಲದುದರಿಂದ ಸ್ವಸ್ಥಾನಗಳಿಗೆ ಇಷ್ಟರಲ್ಲೇ ತೆರಳುವವರಾಗಿರುವರು.

ಬಂಗಾಳದಲ್ಲಿ ಒಬ್ಬ ಪ್ಲೀಡರು ಒಂದು ವಿವಾದದಲ್ಲಿ ಒಬ್ಬ ಸಾಕ್ಷಿಯ ವಿಚಾರಣೆಮಾಡುವಾಗ್ಯೆ ಅವಮಾನಕರವಾದ ಪ್ರಶ್ನೆ ಕೇಳಿದುದಕ್ಕಾಗಿ ಶಿಕ್ಷೆವಿಧಿಸಲ್ಪಟ್ಟಿದ್ದು ಕಲ್ಕತ್ತಾ ಹೈಕೋರ್ಟಿಗೆ ಅದರಮೇಲೆ ಅಪೀಲನ್ನು ಮಾಡಿಕೊಂಡುದಕ್ಕೆ ಕೆಳಕೋರ್ಟಿನ ಶಿಕ್ಷೆಯೇ ಸ್ಥಿರಗೊಳಿಸಲ್ಪಟ್ಟಿತಂತೆ. ಹೀಗೆ ಲಾಯರುಗಳು ಸಾಕ್ಷಿಗಾರರನ್ನು ಬಹಳ ತುಚ್ಛವಾಗಿ ಪರಿಗಣಿಸಿ ಮನಸ್ವೀ ನಿಂದಿಸುವುದು ಈ ಮೈಸೂರುಸೀಮೆಯಲ್ಲಿ ಬಹುಸಾಮಾನ್ಯವಾಗಿರುವುದಾದರೂ ಅದರ ಪರಿಹಾರದ ವಿಚಾರದಲ್ಲಿ ಸಾಕ್ಷಿಗಳು ಪ್ರಯತ್ನಿಸುವುದಾಗಲೀ, ಮೇಲ್ಪಟ್ಟ ಕೋರ್ಟಿನವರು ಗಮನಿಸುವುದಾಗಲೀ ಸ್ವಪ್ನಪ್ರಾಯವಾಗಿರುವುದು.

ತಿರುವಾಂಕೂರು, ಕೊಚಿನ್ ಮತ್ತು ಕಲ್ಲಿಕೋಟೆ ಈ ದೇಶಗಳಲ್ಲಿರುವ ನಂಬೂದ್ರಿಜನರ ಕುಟುಂಬಗಳಲ್ಲಿ ಎಷ್ಟುಜನ ಅಣ್ಣತಮ್ಮಂದರಿದ್ದರೂ ಜ್ಯೇಷ್ಠನು ಮಾತ್ರ ಮದುವೆಯಾಗಿ ಉಳಿದವರು ನಾಯರುಸ್ತ್ರೀಯರ ಸಂಸರ್ಗದಲ್ಲಿರುವ ವಾಡಿಕೆಯಾಗಿದೆ. ಇದರಿಂದ ಅನೇಕ ನಂಬೂದ್ರಿಯುವತಿಯರು ವಿವಾಹವಿಲ್ಲದಿರುವರಲ್ಲದೆ ವರದಕ್ಷಿಣೆಯು ಮತ್ತು ಬಹುಪತ್ನೀತ್ವವು ಹೆಚ್ಚುತ್ತಿವೆ. ಆದುಕಾರಣ ನಂಬೂದ್ರಿಯುವಕರೆಲ್ಲರೂ ಸಜಾತಿಸ್ತ್ರೀಯರನ್ನೇ ಲಗ್ನವಾಗುವಂತೆಯೂ, ವರದಕ್ಷಿಣೆಯನ್ನು ನಿಲ್ಲಿಸುವಂತೆಯೂ, ಬಹುಪತ್ನೀತ್ವವನ್ನು ಶಿಕ್ಷಾರ್ಹವಾಗಿ ಮಾಡುವಂತೆಯೂ ಅಲ್ಲಿನ ನಂಬೂದ್ರಿಯುವತಿಯರು ತಿರುವಾಂಕೂರಿನ ಮಹಾರಾಣಿ ರೀಜಂಟರವರಿಗೂ, ಕೊಚಿನ್ ರಾಜರಿಗೂ ಕಲ್ಲಿಕೋಟೆಯ ಜಾಮರಿನ್‌ರವರಿಗೂ ಬಿನ್ನೈಸಿಕೊಂಡಿರುತ್ತಾರೆ.

ಬಳ್ಳಾರಿ ಡಿ|| ಹೊಸ್ಪೇಟೆ ತಾ|| ಉತ್ತಂಗಿಯಲ್ಲಿ ಕೆಲತಿಂಗಳ ಕೆಳಗೆ ಸಾಧುವೀರಶೈವಸಂಗಡದ ಸ್ವಾಮಿಗಳು ಉತ್ಸವಪೂರ್ವಕವಾಗಿ ಗ್ರಾಮಪ್ರವೇಶಮಾಡುವ ವಿಚಾರದಲ್ಲಿ ಆ ಸಂಗಡದವರಿಗೂ ಇತರ ವೀರಶೈವಸಂಗಡದವರಿಗೂ ಕಲಹವಾಗಿ ಪೊಲೀಸಿನವರಲ್ಲಿ 24 ಜನರಿಗೆ ಪೆಟ್ಟುಬಿದ್ದಿತು, ಮತ್ತು ಕಲಹಗಾರರಲ್ಲಿ 3 ಜನರು ಸತ್ತು 20 ಜನರು ಗಾಯವಡೆದರು. ಅದರಮೇಲೆ 115 ಜನರು ಸೆರೆಹಿಡಿಯಲ್ಪಟ್ಟು ಅಡಿಷನಲ್ ಸೆಷನ್ಸುಜಡ್ಜಿಯರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ. ಈ ವಿವಾದದಲ್ಲಿ ಪ್ರಾಸಿಕ್ಯೂಷನ್ ಪರ 115 ಜನರೂ, ಅಪರಾಧಿಗಳ ಪರ 82 ಜನರೂ ಸಾಕ್ಷಿಯಾಗಿ ತೆಗೆದುಕೊಳ್ಳಲ್ಪಟ್ಟಿರುವರು. ಪ್ರಾಸಿಕ್ಯೂಷನ್ ಪರ ಮದ್ರಾಸ್ ಹೈಕೋರ್ಟು ವಕೀಲರಾದ ಮ|| ಎಂ. ಎಲ್. ಗೋವಿಂದರಾಘವಯ್ಯರ್‌ರವರು ವಾದಿಸುತ್ತಿರುವರು.

ಮದ್ರಾಸಿನ ಮ್ಯುನಿಸಿಪಲ್ ಕೌನ್ಸಿಲಿನ ಚುನಾವಣೆಗೆ ಆರಂಭವಾದಂದಿನಿಂದ ಆಯಾ ಓಟರುಗಳು ತಂತಮ್ಮ ಪಕ್ಷಾಭಿಮಾನವನ್ನು ತೋರಿಸಿ ಹೋರಾಡುತ್ತಿದ್ದಂತೆ ವೆಂಗಟೇಶ್ವರ ಹಾಸ್ಟಲ್ ಎಂಬಲ್ಲಿದ್ದ ವಿದ್ಯಾರ್ಥಿಗಳಲ್ಲೂ ಪಕ್ಷಾಭಿಮಾನವಿದ್ದಿತು. ಅದರೊಳಗೆ ಜಸ್ಟಿಸ್‌ಪಕ್ಷದವರಿಗೆ ವಿಜಯವಾದುದಕ್ಕಾಗಿ ಆ ಪಕ್ಷಾಭಿಮಾನಿಗಳಾದ ವಿದ್ಯಾರ್ಥಿಗಳು ಕೃತಾರ್ಥರಾದ ಅಭ್ಯರ್ಥಿಗಳನ್ನು ತಮ್ಮ ಹಾಸ್ಟಲ್ಲಿಗೆ ಬರಮಾಡಿಕೊಂಡು ಔತಣಾದಿಗಳಿಂದ ಸತ್ಕರಿಸಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು. ಈ ಸಂತೋಷಕೂಟವನ್ನು ಹಾಸ್ಟಲಿನಲ್ಲಿ ನಡೆಯಿಸಲು ಅವಕಾಶಕೊಡಕೂಡದೆಂದು ಬ್ರಾಹ್ಮಣವಿದ್ಯಾರ್ಥಿಗಳು ನಿರೋಧಿಸಿದರಾದರೂ ಅವಕಾಶಕೊಟ್ಟುದಕ್ಕಾಗಿ 60 ಬ್ರಾಹ್ಮಣವಿದ್ಯಾರ್ಥಿಗಳು ಕೋಪಿಸಿಕೊಂಡು ತಮ್ಮ ಹಾಸಿಗೆ ಪೆಟ್ಟಿಗೆ ಮೊದಲಾದ ಪದಾರ್ಥಗಳನ್ನು ತೆಗೆದುಕೊಂಡು ಹಾಸ್ಟಲನ್ನು ಬಿಟ್ಟು ಹೊರಟುಹೋದರಂತೆ. ಭಾರತೀಯರಲ್ಲಿ ಯಾವ ತಾರತಮ್ಯವೂ ಇಲ್ಲದೆ ಭ್ರಾತೃಭಾವವಿರಬೇಕೆಂದು ವಿಜೃಂಭಿಸುತ್ತಿರುವ ವರ್ಗದ ವಿದ್ಯಾರ್ಥಿಗಳ ನಡತೆಯನ್ನು ನೋಡಿದಿರಾ ಮತ್ತು ಇದರಿಂದ ಪರಸ್ಪರ ಸೌಹಾರ್ದವು ಎಷ್ಟರಮಟ್ಟಿಗೆ ಉಂಟಾಗಿ ಭಾರತಮಾತೆಯು ಸಂತೋಷಪಡುವಳು ?

ವಿದೇಶದ ವೃತ್ತಾಂತಗಳು

ಜನನವಾಗುವ ಪ್ರತಿ 69 ಮಕ್ಕಳುಗಳಲ್ಲಿ ಒಂದು ಅವಳಿಜವಳಿ ಮಕ್ಕಳು ಹುಟ್ಟುವುದಾಗಿ ಲೆಖ್ಖಿಸಲ್ಪಟ್ಟಿದೆ.

ಲಂಡನ್ ನಗರದಲ್ಲಿ ಗತಿಸಿದ ಕೋಟ್ಯಧೀಶ್ವರನ ಮಗಳೊಬ್ಬಳು ಈಗ ಪಾರ್ಲಿಮೆಂಟ್‌ಸಭಾಮಂದಿರದಬಳಿ ಚಾಕೋಲೆಟ್ ಎಂಬ ತಿಂಡಿಯನ್ನು ಮಾರಿ ಜೀವಿಸುತ್ತಿರುವಳಂತೆ.

ನೇಟಾಲಿನಲ್ಲಿ ಇಲ್ಲೋವಾ ನದಿಯ ಕೆಳಗೆ 500 ಎಕರೆ ಭೂಮಿಯಲ್ಲಿಡಲ್ಪಟ್ಟಿದ್ದ ಕಬ್ಬಿನ ಬೆಳೆಗೆ ಬೆಂಕಿಯುಬಿದ್ದು 5 ಮೈಲಿ ದೂರದವರೆಗೆ ವ್ಯಾಪಿಸಿದ್ದುದರಿಂದ ಪೈರೆಲ್ಲವೂ ನಷ್ಟವಾದುದಲ್ಲದೆ 12 ಜನರು ಮೃತರಾದರು.

ಪ್ರಪಂಚದಲ್ಲಿ ಹಾಕಲ್ಪಟ್ಟಿರುವ ಲೋಹಮಾರ್ಗಗಳನ್ನೆಲ್ಲಾ ಒಟ್ಟುಗೂಡಿಸಿದರೆ 4,77,636 ಮೈಲಿ ವಿಸ್ತೀರ್ಣವಾಗುವುದಂತೆ ಮತ್ತು ಈ ವಿಸ್ತೀರ್ಣದಲ್ಲಿ ಭೂಮಂಡಲದಿಂದ ಚಂದ್ರಮಂಡಲಕ್ಕೆ ಒಂದು ಮಾರ್ಗವನ್ನು ಹಾಕಬಹುದಂತೆ.

ಜರ್ಮನಿಯಲ್ಲಿ ವರ್ಟಂಬರ್ಗ್ ಡಿಸ್ಟ್ರಿಕ್ಟಿಗೆ ಸೇರಿದ ಹಾರ್ಟ್ಜ್ ಎಂಬೂರಿನಲ್ಲಿ ಜನರು ಗುಂಪಾಗಿ ನಿಂತುಕೊಂಡು ಆಕಾಶಯಾನವನ್ನು ನೋಡುತ್ತಿರವಾಗ್ಗೆ ಅದು ಆಯತಪ್ಪಿ ಕೆಳಗಡೆ ನಿಂತಿದ್ದ ಜನರಮೇಲೆ ಬಹಳ ರಭಸದಿಂದ ಬೀಳಲಾಗಿ 5 ಜನರು ಮೃತರಾದರು ಮತ್ತು 7 ಜನರು ಪೆಟ್ಟನ್ನು ತಿಂದರು.

ಎಸ್ಕಿಮೋ ಎಂಬ ಕಾಡುಜನರು ತಮ್ಮಲ್ಲಿ ಆರಾದರೂ ರೋಗಗ್ರಸ್ತರಾದರೆ ಡಾಕ್ಟರಿಗೆ ಮುಂಗಡವಾಗಿ ಛಾರ್ಜನ್ನು ಕೊಟ್ಟು ಕರೆದುಕೊಂಡು ಬಂದು ಚಿಕಿತ್ಸೆಮಾಡಿಸುವರು. ಒಂದುವೇಳೆ ರೋಗವು ಗುಣವಾಗದಿದ್ದಲ್ಲಿ ಡಾಕ್ಟರು ಮುಂಗಡವಾಗಿ ತೆಗೆದುಕೊಂಡಿದ್ದ ಹಣವನ್ನು ಹಿಂದಕ್ಕೆ ಕೊಟ್ಟುಬಿಡುವ ಪದ್ಧತಿಯುಂಟು.

ವಿದ್ಯುಚ್ಛಕ್ತಿಯಿಂದ ನಡೆಯುವ ಅತ್ಯಂತ ದೊಡ್ಡದಾದ ರೈಲ್ವೆಯಿಂಜಿನ್ನು ವೆಸೀವಾಪಟ್ಟಣದಲ್ಲಿ ನಿರ್ಮಿಸಲ್ಪಡುತ್ತಿದೆ. ಇದು 126 ಟನ್ ತೂಕವೂ, 60 ಅಡಿಯುದ್ದವೂ ಇರುವುದಲ್ಲದೆ, 4500 ಕುದುರೆಗಳ ಬಲವುಳ್ಳ 6 ಮೊಟಾರುಗಳಿಂದ ನಡಿಸಲ್ಪಡುವುದಾಗಿದೆ. ಇಷ್ಟು ದೊಡ್ಡದಾದ ಇಂಜಿನ್ನು ಪ್ರಪಂಚದಲ್ಲಿ ಬೇರೊಂದಿಲ್ಲವು.

ಜಾನ್ಸನ್ ಎಂಬಾತನು ಚಿಕಾಗೋಪಟ್ಟಣದಿಂದ 1214 ಮೈಲಿ ದೂರದಲ್ಲಿರುವ ನ್ಯೂಯಾರ್ಕ್‌ಪಟ್ಟಣಕ್ಕೆ ಪಾದಚಾರಿಯಾಗಿಯೂ ನಿರಾಹಾರಿಯಾಗಿಯೂ ಹೊರಟು 20 ದಿವಸಗಳಲ್ಲಿ ಅರ್ಧದಾರಿಯವರೆಗೂ ಪ್ರಯಾಣಮಾಡಿ ಮುಂದೆ ಹೋಗಲಾರದೆ ನಿಂತುಬಿಟ್ಟನು. ಈ ಪ್ರಯತ್ನದಲ್ಲಿ ಅವನ ಶರೀರತೂಕವು 37 ಪೌಂಡಿನಷ್ಟು ಕಡಮೆಯಾಗಿರುವುದು.

ಬರ್ಮಿಂಘಾಂ ಎಂಬಲ್ಲಿ ಇಬ್ಬರು ದಂಪತಿಗಳಿಗೆ ಮೂವರು ಮಕ್ಕಳು ಏಕಕಾಲದಲ್ಲಿ ಜನಿಸಿ ಆಕಾರ ಬಣ್ಣ ಮೊದಲಾದ ಲಕ್ಷಣಗಳಲ್ಲಿ ತಿಲಾಂಶವೂ ವ್ಯತ್ಯಾಸವಿಲ್ಲದಿರುವಪ್ರಯುಕ್ತ ಅವುಗಳ ಗುರ್ತನ್ನು ಕಂಡುಹಿಡಿಯುವಲ್ಲಿ ಭ್ರಾಂತಿಯುಂಟಾಗುತ್ತಾದುದರಿಂದ ತನ್ನಿವಾರಣಾರ್ಥವಾಗಿ 1, 2 ಮತ್ತು 3 ಎಂದು ಸಂಖ್ಯೆಯನ್ನು ಬರೆದಿರುವ ಪಟ್ಟಿಯು ಅವುಗಳ ಕೊರಳಿಗೆ ಕಟ್ಟಲ್ಪಟ್ಟಿದೆಯಂತೆ.

ಇಂಗ್ಲೆಂಡು ಮುಸಲೋನಿಯನ್ನು ತನ್ನ ವಶಮಾಡಿಕೊಳ್ಳಲು ಸರ್ವಪ್ರಯತ್ನಮಾಡುತ್ತಿದ್ದಾಗ್ಯೂ, ಮುಸಲೋನಿಗೂ ಸ್ಪೇನಿಗೂ ಈಚೆಗೆ ಒಡಂಬಡಿಕೆಯು ನಡೆದಿರುವುದರಿಂದ ಪೂರ್ವದೇಶಕ್ಕೂ, ಈಜಿಪ್ಟಿಗೂ, ಇಂಡ್ಯಾಕ್ಕೂ ಬರಲು ತನಗೆ ಅನುಕೂಲವಿರುವ ಮಧ್ಯಧರಾಸಮುದ್ರಮಾರ್ಗವನ್ನು ಮುಸಲೋನಿಯು ಎಲ್ಲಿ ಮುಚ್ಚಿಬಿಡುತ್ತಾನೋ? ಎಂದು ಇಂಗ್ಲೆಂಡಿಗೆ ಭಯಹುಟ್ಟಿರುತ್ತದೆ.

ಅಮೇರಿಕೆಗೆ ಸೇರಿದ ಫಿಲಿಡಲ್‌ಫಿಯಾ ಮತ್ತು ಕ್ಯಾಂಡೆನ್ ಎಂಬೂರುಗಳ ಮಧ್ಯೆ ಹರಿಯುವ ಡಿಲಾವೇರ್ ಎಂಬ ನದಿಯ ಮೇಲೆ ಒಂದು ಸೇತುವೆಯು ಅಂತರಾಳದಲ್ಲಿ ಕಟ್ಟಲ್ಪಟ್ಟಿರುತ್ತದೆ. ಅದು 1½ ಮೈಲಿ ಉದ್ದವಿರುವುದಲ್ಲದೆ ಅದರ ಮಧ್ಯಭಾಗದ ಕಮಾನು 1750 ಅಡಿ ಅಗಲವಿದೆ. ಇದನ್ನು ನಿರ್ಮಿಸಲು 4½ ವರ್ಷ ಕಾಲ ಹಿಡಿದಿತಲ್ಲದೆ 900 ಲಕ್ಷ ರೂ. ವ್ಯಯವಾಗಿರುತ್ತದೆ. ರೈಲು ಮತ್ತು ಟ್ರಾಂ ಬಂಡಿಗಳು ತಿರುಗಾಡಲು ಒಂದು ಸಾಲೂ, ಇತರ ಬಂಡಿಗಳ ತಿರುಗಾಟಕ್ಕೆ ಮತ್ತೊಂದು ಸಾಲೂ ಪ್ರತ್ಯೇಕವಾಗಿ ವಿಂಗಡಿಸಲ್ಪಟ್ಟಿರುವವಲ್ಲದೆ ಜನರ ಸಂಚಾರಕ್ಕೆ ಮೇಲಂತಸ್ತಿನಲ್ಲಿ ಏರ್ಪಡಿಸಲ್ಪಟ್ಟಿದೆ. ಒಂದು ಘಂಟೆಯಲ್ಲಿ 6000 ಮೊಟಾರುಬಂಡಿಗಳು ಈ ಸೇತುವೆಯ ಮೇಲೆ ಓಡಾಡಲು ಅವಕಾಶವಿರುತ್ತದಂತೆ!

ಅಮೇರಿಕೆಯಲ್ಲಿ ಯುವತಿಯರು ವಿವಾಹಿತರು ಅಥವಾ ಅವಿವಾಹಿತರು ಎಂಬುದನ್ನು ಅವರ ಕುಂಡಲಧಾರಣೆಯಿಂದ ಗೊತ್ತುಮಾಡಿಕೊಳ್ಳುವ ಒಂದು ವಿಚಿತ್ರಪದ್ಧತಿಯನ್ನು ಆಂಗ್ಲಯುವತಿಯರು ಈಗ ಅನುಕರಿಸುತ್ತಿದ್ದಾರೆ. ಯುವತಿಯು ಬಲಗಿವಿಗೆ ಮಾತ್ರ ಮುತ್ತಿನ ಅಥವಾ ಭಂಗಾರದ ಓಲೆಯನ್ನು ಧರಿಸಿದ್ದರೆ ನಿಶ್ಚಿತಾರ್ಥ ಅಂದರೆ ವಿವಾಹಪ್ರಸ್ತವಾಗಿದೆಯೆಂದೂ, ಎರಡು ಕಿವಿಗಳಿಗೂ ಧರಿಸಿದ್ದರೆ, ಅವುಗಳಲ್ಲಿ ಒಂದು ತನಗಾಗಿಯೂ ಮತ್ತೊಂದು ತನ್ನ ಪತಿಗಾಗಿಯೂ ಧರಿಸಿದ್ದಾಳೆ ಅಂದರೆ ಲಗ್ನವಾಗಿದೆಯೆಂದೂ, ಬರಿಗಿವಿಗಳಲ್ಲಿದ್ದರೆ ನಿಶ್ಚಿತಾರ್ಥವಿಲ್ಲವೆಂದೂ ಮುಂದೆ ವರಿಸಿ ಲಗ್ನಮಾಡಿಕೊಳ್ಳಲು ಸಿದ್ಧಳಾಗಿರುವಳೆಂದೂ ಆ ಯುವತಿಯನ್ನು ನೋಡಿದವರು ತಿಳಿದುಕೊಳ್ಳಬೇಕಂತೆ. ಪಾಶ್ಚಾತ್ಯರ ವಿಚಿತ್ರವಿವೇಚನೆಯು ಇನ್ನೂ ಯಾವಕಡೆಗಾಗಿ ಪರಿಣಮಿಸುವುದೋ?

ಪಬ್ಲಿಸಿಟಿ ಆಫೀಸಿನ
ಪ್ರಸಿದ್ಧಪತ್ರಿಕೆ.

1926 ನೇ ಇಸ್ವಿ ಜುಲೈ 16 ನೇ ತಾರಿಖಿನ 'ವೆಲ್ತ್ ಆಫ್ ಮೈಸೂರು' ಎಂಬ ವರ್ತಮಾನಪತ್ರಿಕೆಯಲ್ಲಿ 'ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್' ಎಂಬ ಶಿರೋನಾಮೆಯಲ್ಲಿ ಈ ಸಂಸ್ಥಾನವು ದೇಶಾಭಿಮಾನಿಗಳಲ್ಲದ ಜನಗಳಿಂದ ರೂಢಿಸಲ್ಪಡುತ್ತಲಿದೆ ಎಂಬುದಾಗಿಯೂ ಮತ್ತು ಸದರಿ ಇಲಾಖೆಯಲ್ಲಿ ಸ್ವತಂತ್ರವಾಗಿ ಕಾಲಕಾಲಕ್ಕೆ ನಡೆಯಬೇಕಾದ ಲೆಕ್ಕಗಳ ಪರಿಶೋಧನಾಕಾರ್ಯವು ನಡೆಯುತ್ತಿರುವುದಿಲ್ಲವೆಂಬುದಾಗಿಯೂ ಸಹ ಕೆಲವು ಸಮಾಚಾರಗಳನ್ನು ಪ್ರಕಟಿಸಲಾಗಿದೆ. ಈ ಸಮಾಚಾರಗಳು ವಿದ್ಯುಚ್ಛಕ್ತಿಯ ಇಲಾಖೆಯ ಸಿಬ್ಬಂದಿ ಮತ್ತು ಕೆಲಸದ ವಿಷಯದಲ್ಲಿ ತಪ್ಪು ಅಭಿಪ್ರಾಯಗಳನ್ನು ಕೊಡುವ ಸಂಭವವಿರುವ ಪ್ರಯುಕ್ತ ಇದರಡಿ ಕಂಡ ನಿಜವಾದ ಸಂಗತಿಗಳನ್ನು ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ.

(1) ಚೀಫ್ ಎಲೆಕ್ಟ್ರಿಕಲ್ ಇಂಜನೀಯರವರೂ ಮತ್ತು ಶಿವನಸಮುದ್ರದ ಜನರಲ್ ಸೂಪರಿಂಟೆಂಡೆಂಟರವರೂ ಇವರ ವಿನಾ ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಕೆಲಸಮಾಡುತ್ತಿರುವ ಬಾಕಿ ಎಲ್ಲಾ ಎಗ್ಜಿಕ್ಯುಟಿವ್ ಮತ್ತು ಲಿಖಾವಟ್ ಸಿಬ್ಬಂದಿಯವರು, ಇಲ್ಲಿಯೇ ಜನಿಸಿದವರಾಗಿಯೋ ಅಥವಾ ವಾಸಿಸುವವರಾಗಿಯೋ ಮೈಸೂರು ದೇಶಸ್ಥರಾಗಿರುತ್ತಾರೆ. ಇದಲ್ಲದೆ, ಇಲ್ಲಿನ ಮೆಕ್ಯಾನಿಕಲ್ ಇಂಜನೀಯರಿಂಗ್ ಸ್ಕೂಲಿನಲ್ಲಿಯೂ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿಯು ತೇರ್ಗಡೆಹೊಂದಿರತಕ್ಕ ಅನೇಕ ಜನ ವಿದ್ಯಾರ್ಥಿಗಳಿಗೆ, ಈ ಇಲಾಖೆಯಲ್ಲಿ ಪ್ರತಿವರುಷವೂ ಪ್ರಯೋಗಶಿಕ್ಷಣವನ್ನು ಕೊಡುತ್ತಲಿದೆ. ಈ ವಿದ್ಯಾರ್ಥಿಗಳಲ್ಲಿ ಕೆಲವರನ್ನು ಇಲಾಖೆಯಲ್ಲಿಯೇ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದು. ಉಳಿದವರು ಸರ್ಕಾರದ ಇತರ ಇಲಾಖೆಗಳಲ್ಲಿಯೋ ಅಥವಾ ಸಂಸ್ಥಾನದಲ್ಲಿಯಾಗಲಿ ಅಥವಾ ಹೊರಗಡೆಯಾಗಲಿ ಇರುವ ಖಾಸಗಿ ಸಂಸ್ಥೆಗಳಲ್ಲಿಯೋ ಕೆಲಸಕ್ಕೆ ಸೇರುವರು.

(2) ಲೆಕ್ಕಗಳನ್ನಿಟ್ಟಿರುವ ಕ್ರಮದ ವಿಚಾರವಾಗಿಯಾದರೋ, ವಿದ್ಯುಚ್ಛಕ್ತಿಯ ಇಲಾಖೆಯು ಸಾಮಾನುಗಳ ಎಲ್ಲಾ ಲೆಕ್ಕಗಳನ್ನು, ಚೀಫ್ ಎಲೆಕ್ಟ್ರಿಕಲ್ ಇಂಜನೀಯರವರ ಆಫೀಸಿನಲ್ಲಿ ಕೆಲಸಮಾಡುತ್ತಿರುವ ಕಂಟ್ರೋಲರವರ ಆಡಿಟ್ ಸಿಬ್ಬಂದಿಯವರು ಪ್ರೀ ಆಡಿಟ್ ಮಾಡುವರು- ಎಂದರೆ ಮೊದಲೇ ಲೆಕ್ಕಗಳನ್ನು ಪರಿಶೋಧನೆಮಾಡುವರು. ಇವರ ಜತೆಗೆ ಲೆಕ್ಕಗಳನ್ನು ಸರಿಯಾಗಿ ತಯಾರುಮಾಡಿದೆಯೇ ಎಂಬ ವಿಷಯವನ್ನೂ ಮತ್ತು ನ್ಯಾಯವಿಧಾಯಕ ಸಭೆಯವರು ಮಂಜೂರ್ಮಾಡಿದ ಅಪ್ರೋಪ್ರಿಯೇಷನುಗಳ ಏರ್ಪಾಡನ್ನು ಅವಲಂಬಿಸಲಾಗಿದೆಯೇ ಎಂಬ ವಿಷಯವನ್ನೂ ಸಹ ನೋಡಿಕೊಳ್ಳುವುದಕ್ಕೋಸ್ಕರ, ವಿದ್ಯುಚ್ಛಕ್ತಿಯ ಇಲಾಖೆಯ ಫೈನಾನ್ಶಿಯಲ್ ಬ್ರಾಂಚಿನ ಲೆಕ್ಕಗಳನ್ನೂ ಮತ್ತು ಆಡಿಟ್ ಕೆಲಸವನ್ನೂ ಸಹ ಕೊನೆಯುಪಕ್ಷ ವರುಷಕ್ಕೊಮ್ಮೆ ಪರಿಶೋಧಿಸುವುದಕ್ಕಾಗಿ, ಕಂಟ್ರೋಲರವರು ಏರ್ಪಡಿಸುವರು. ಅಲ್ಲದೆ ಸರ್ಕಾರದವರಿಗೆ ಕಳುಹಿಸಿಕೊಡತಕ್ಕ ಆಡಿಟ್ ಮತ್ತು ಅಪ್ರೋಪ್ರಿಯೇಷನ್ ರಿಪೋರ್ಟುಗಳಲ್ಲಿ ಗಮನಿಸಬೇಕಾದ ಸಂಗತಿಗಳನ್ನು ಚೀಫ್ ಎಲೆಕ್ಟ್ರಿಕಲ್ ಇಂಜನೀಯರವರ ಆಫೀಸಿಗೆ ಲಗತ್ತಾದ ಫೈನಾನ್ಶಿಯಲ್ ಅಸಿಸ್ಟೆಂಟರವರು ಗಮನಕ್ಕೆ ತರುವರು.

ಬೆಂಗಳೂರು, ಆರ್. ರಂಗರಾವ್,
ತಾ|| 5-8-1926. ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಅಖಿಲಭಾರತವೀರಶೈವಮಹಾಸಭಾ ಚಿರಸ್ಥಾಯಿಫಂಡು.

ನೋಟೀಸ್

1916 ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಯಾವದಾದರೂ ಒಂದು ಮುಖ್ಯವಾದ ಸ್ಥಳದಲ್ಲಿ ಶ್ರೀಮದ್ವೀರಶೈವಮಹಾಸಭೆಯನ್ನು ಕೂಡಿಸಲು ಅಪೇಕ್ಷಿಸುವ ವೀರಶೈವಪ್ರಮುಖರು ಸ್ಥಳದ ಜನರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮಹಾಸಭೆಯನ್ನು ನಡೆಯಿಸಲು ಉದ್ಯುಕ್ತಪಡುವದಾದರೆ ಅಖಿಲಭಾರತವೀರಶೈವಚಿರಸ್ಥಾಯಿಫಂಡಿನಿಂದ ಅದರ ನಿಬಂಧನೆಗಳಿಗೆ ಒಳಪಟ್ಟು ಸೂಕ್ತವಾದ ದ್ರವ್ಯಸಹಾಯವನ್ನು ಮಾಡುವದಾಗುತ್ತದೆ. ಮಹಾಸಭಾನಡೆಯಿಸಬೇಕೆಂದಿರುವ ಮಹನೀಯರು ಕಾಲವಿಳಂಬಮಾಡದೆ ಮೇಲ್ಕಂಡ ಕ್ರಮವರಿತು ಅರ್ಜಿಯನ್ನು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ದಯೆಯಿಟ್ಟು ಕಳುಹಿಸಿಕೊಡಬೇಕೆಂದು ಇದರಿಂದ ಸಮಸ್ತ ವೀರಶೈವರಿಗೂ ತಿಳಿಸಿರುತ್ತದೆ.

ರಾಜಸಭಾಭೂಷಣ ದಿವಾನ್ ಬಹದ್ದೂರ್
ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ.,
ಛೇರ್‌ಮನ್,
ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡ್,
ತಾ|| 24-7-26. ಬೆಂಗಳೂರುಸಿಟಿ.

ಕೈ|| ಕಬ್ಬಹಳ್ಳಿ ಚೆನ್ನಬಸಪ್ಪನವರ ಸ್ಮಾರಕ.

50-60 ಸಾವಿರ ರೂಪಾಯಿಗಳ ವೆಚ್ಚದಿಂದ ರಾಜಧಾನಿಯಲ್ಲಿ ವೀರಶೈವವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ಆಶ್ರಮವನ್ನು ನಿರ್ಮಿಸಿ ಸಮಾಜಕ್ಕೆ ಮಹೋಪಕಾರವನ್ನು ಮಾಡಿರುವ ಕೈ|| ಕೆ. ಚೆನ್ನಬಸಪ್ಪನವರ ಸ್ಮರಣಾರ್ಥವಾಗಿ ಅವರ ಭಾವಚಿತ್ರವನ್ನು ಎಣ್ಣೆಬಣ್ಣದಲ್ಲಿ ಬರೆಯಿಸಿ ಅವರಾಶ್ರಮದಲ್ಲಿ ಕಟ್ಟಬೇಕೆಂದು ನಿರ್ಧರಿಸಿ ಅದಕ್ಕಾಗಿ ಚಂದಾದ್ರವ್ಯವನ್ನು ಕೊಟ್ಟಿರುವ ಮತ್ತು ಕೊಡಲೊಪ್ಪಿರುವ ಸಮಾಜಬಾಂಧವರ ಹೆಸರುಗಳನ್ನು ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಈ ಭಾವಚಿತ್ರವನ್ನು ಬರೆಯಲು ಬೆಂಗಳೂರಿನಲ್ಲಿ ಪ್ರಸಿದ್ಧರಾದ ಬಾರ್ಟನ್ ಕಂಪೆನಿಯವರಿಗೆ ವಹಿಸಿದೆ. ಅದು ಇನ್ನು 4-5 ವಾರಗಳಲ್ಲಿ ಸಿದ್ಧವಾಗುವುದು. ಅದರ ಆರಂಭೋತ್ಸವವು ಬರುವ ದಸರಾಮಹೋತ್ಸವಕಾಲದಲ್ಲಿ ನಡೆಸಲ್ಪಡಬೇಕಾಗಿರುವುದರಿಂದ ಚಂದಾವಾಗ್ದಾನಮಾಡಿರುವ ದೊಡ್ಡಮನುಷ್ಯರುಗಳು ಕೂಡಲೆ ಹಣವನ್ನು ದಯೆಯಿಟ್ಟು ಕಳುಹಿಸಿಕೊಡಬೇಕೆಂದೂ, ಈವರೆಗೆ ಕೊಡದೆ ಮತ್ತು ವಾಗ್ದಾನಮಾಡದೆ ಇರುವ ಸಮಾಜಬಾಂಧವರು ಯಥೋಚಿತವಾಗಿ ದ್ರವ್ಯಸಹಾಯಮಾಡಿ ಕೈಕೊಂಡಿರುವ ಸ್ಮಾರಕಕಾರ್ಯವು ನಿರ್ವಿಘ್ನವಾಗಿಯೂ ಪ್ರಶಸ್ತವಾಗಿಯೂ ನಡೆಯುವಂತೆ ಮಾಡಬೇಕಾಗಿ ಪ್ರಾರ್ಥಿಸುವ, ತಮ್ಮ ವಿಧೇಯ,

ಜಿ. ಪರಮಶಿವಯ್ಯ, ಅಡ್ವೋಕೇಟ್,
ಬೆಂಗಳೂರು ಸಿಟಿ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದ ಪ್ರಕಟನೆ.

ಸಂಘದ ಉದ್ದೇಶಗಳನ್ನು ಸಮಾಜಬಾಂಧವರಲ್ಲಿ ಪ್ರಚುರಪಡಿಸುವುದಕ್ಕೂ, ಸಂಘದ ಮೂಲಧನಕ್ಕೆ ಸಹಾಯಮಾಡುವಂತೆ ಅವರುಗಳನ್ನು ಪ್ರೋತ್ಸಾಹಿಸುವುದಕ್ಕೂ, ಸಂಘದವರು ನಿರ್ಧರಿಸುವ ಇತರ ಕಾರ್ಯಗಳನ್ನು ಕೈಗೊಳ್ಳುವುದಕ್ಕೂ ಶಕ್ತರಾದ ಒಬ್ಬ ವೀರಶೈವ ಉಪನ್ಯಾಸಕರು ಬೇಕಾಗಿದೆ ಅವರಿಗೆ ಮಾಹೆಯಾನ 30 ರೂ. ಸಂಬಳವೂ ಪರಸ್ಥಳಗಳಿಗೆ ಹೋದರೆ ರೈಲ್ವೆ ಮೊದಲಾದ ಪ್ರಯಾಣದ ವೆಚ್ಚವೂ ಕೊಡಲ್ಪಡುತ್ತವೆ. ಇಷ್ಟವುಳ್ಳವರು ಸೆಪ್ಟಂಬರ್ 15 ನೇ ತಾರೀಖಿನೊಳಗಾಗಿ ಸಂಘದ ಸೆಕ್ರೆಟರಿಯವರಿಗೆ ಅರ್ಜಿಯನ್ನು ಹಾಕಿಕೊಂಡಲ್ಲಿ, ಕಾರ್ಯನಿರ್ವಾಹಕಮಂಡಲಿಯವರಿಂದ ತೀರ್ಮಾನಿಸಲ್ಪಡುವುದು.

ಜಿ. ಪರಮಶಿವಯ್ಯ ಸೆಕ್ರೆಟರಿ,
ಬೆಂಗಳೂರು, ಮೈಸೂರು ವೀರಶೈವವಿದ್ಯಾಭಿವೃದ್ಧಿ
ತಾ|| 11-8-26. ಫಂಡುಸಂಘ, ಬೆಂಗಳೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಅಂಬುಗದಲ್ಲಿ ನಡೆದ ಕಳ್ಳತನ.

ತಾ|| 5-8-26 ರ ರಾತ್ರಿ ಹಾಸನ ತಾಲ್ಲೂಕ್ ಅಂಬುಗದ ಶ್ರೀ ಕೇಶವಾಚಾರ್ಯರ ಮನೆಯಲ್ಲಿ ಒಂದು ಕಳ್ಳತನವು ನಡೆದಿರುತ್ತೆ. ಆ ರಾತ್ರಿ ಎಲ್ಲರೂ ನಿದ್ರಿಸುತ್ತಿರುವಾಗ ಕಳ್ಳರು ಬಂದು ಮನೆಯಲ್ಲಿಟ್ಟಿದ್ದ ಕೆಲವು ನಾಣ್ಯಗಳನ್ನು ಅಂದರೆ ಸುಮಾರು 600 ರೂ. ಗಳನ್ನೂ, 200 ರೂ. ಬೆಲೆಬಾಳುವ ಬೆಳ್ಳಿ ನಗಗಳನ್ನೂ ದೋಚಿಕೊಂಡು ಹೋದರು. ಇತರ ಬಟ್ಟೆಬರೆ ಮೊದಲಾದ ಪದಾರ್ಥಗಳನ್ನು ಬಿಟ್ಟು, ನಾಣ್ಯವನ್ನು ಅಪಹರಿಸಿರುವುದನ್ನು ನೋಡಿದರೆ, ಯಾರೋ ಒಳಗಳ್ಳರೇ ನಡೆಸಿರಬೇಕೆಂದು ತೋರುತ್ತದೆ. ಆದ್ದರಿಂದ ಘನಸರ್ಕಾರದವರು ಬಡವರ ಕಷ್ಟವನ್ನು ಚಿತ್ತಕ್ಕೆ ತಂದು ಪತ್ತೆತರದೂದು ನಡಿಸುವರೆಂದು ನಂಬಿದೆ.

ಹಿತೈಷಿ,
S. L. S.

ಬಹುಮಾನವಿನಿಯೋಗ.

ಹೋದ ಡಿಸಂಬರ ತಿಂಗಳಿನ ಸ್ಟಾರ್‌ಪತ್ರದಲ್ಲಿ ಪ್ರಸಿದ್ಧಮಾಡಿದಂತೆ 'ಸ್ತ್ರೀಶಿಕ್ಷಣದ ಯೋಗ್ಯಪದ್ಧತಿ' ಅಥವಾ 'ಸ್ತ್ರೀಯರ ಅಧಿಕಾರ' ವೆಂಬೀ ವಿಷಯದಮೇಲೆ ಬರೆದ ನಿಬಂಧಗಳು, ವೀರಶೈವಸ್ತ್ರೀಯರಕಡೆಯಿಂದ ಬಂದಿದ್ದವು. ಅವುಗಳಲ್ಲಿ ನಾಲ್ಕು ನಿಬಂಧಗಳು ಉತ್ತಮವಾದವುಗಳೆಂದು ನಿರ್ಣಯಿಸಲ್ಪಟ್ಟು ಅವನ್ನು ಬರೆದ ಈ ಕೆಳಗೆ ಕಂಡ ಸ್ತ್ರೀಯರಿಗೆ ರಾ|ಬ| ವಾರದ ಇವರ ಮನೆಯಲ್ಲಿ ತಾ|| 1-8-26ರ ದಿವಸ ಸೌ|| ನವಲಬಾಯಿ ಗುಲಾಬಚಂದ ದೋಶಿ ಎಂಬುವವರ ಅಧ್ಯಕ್ಷತೆಯಲ್ಲಿ ಪದಕ (ಮೆಡಲ್) ಗಳು ಬಹುಮಾನವಾಗಿ ಕೊಡಲ್ಪಟ್ಟವು. ಇದೇ ಕಾಲಕ್ಕೆ ಮಂದಿರದ 8 ನೆಯ ವಾರ್ಷಿಕಸಭೆಯು ನೆರವೇರಿಸಲ್ಪಟ್ಟಿತು.

ಬಹುಮಾನಪಡೆದವರ ಹೆಸರುಗಳು.

(1) ಶ್ರೀಮತಿ ಗಿರಿಜಾಬಾಯಿ ಇಚ್ಚಂಗಿಮಠ, ಧಾರವಾಡ (2) ಸೌ|| ಶಿವಗಂಗಾಬಾಯಿ ಪಾಟೀಲ, ಸೋಲಾಪುರ (3) ಸೌ|| ಭಾಗೀರಥಿಬಾಯಿ ಕುಟಾಶ, ಸೋಲಾಪುರ (4) ಡಿ. ಸರ್ವಮಂಗಳಾದೇವಮ್ಮ, ಶ್ರೀರಾಮಪುರ.

ಸೆಕ್ರೆಟರಿ,
ವೀರಶೈವಮಹಿಳಾಜ್ಞಾನಮಂದಿರ, ಸೋಲಾಪುರ.

ಉತ್ತರಾಧಿಕಾರಕ್ಕೆ ವಟುಬೇಕಾಗಿದೆ.

ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೋಕು ಮುರಗಮಲ್ಲಾ ಹೋಬಳಿ ಚಲಮಕೋಟೆ ಮುಕ್ತಗಿರಿಮಠದ ವೇ|| ಶ್ರೀ|| ಶಿವಯೋಗಿಬಸವರಾಜಮರಿದೇಶಿಕೇಂದ್ರಸ್ವಾಮಿಗಳು ಈ ಪತ್ರಿಕಾಮೂಲಕ ತಿಳಿಯಪಡಿಸುವದೇನಂದರೆ.— ಮೇಲ್ಕಂಡ ಮಠದ ಉತ್ತರಾಧಿಕಾರಕ್ಕೆ 10-15 ವರುಷ ವಯಸ್ಸಿನವರಾಗಿಯೂ ವಿದ್ಯಾವಂತರಾಗಿಯೂ ಸಲಕ್ಷಣರಾಗಿಯೂ ಇರುವ ಒಬ್ಬ ವೀರಶೈವ ಜಂಗಮಮೂರ್ತಿ ಬೇಕಾಗಿರುವದರಿಂದ ಸ್ವದೇಶೀಯರಲ್ಲಾಗಲಿ ಮಹಾರಾಷ್ಟ್ರೀಯರಲ್ಲಾಗಲಿ ಯಾರಾದರು ಬರಲು ಪೂರ್ಣೇಚ್ಛೆಯುಳ್ಳ ಬಾಲಕರು ಇದೇ ಸಂವತ್ಸರದ ಶ್ರಾವಣಮಾಸದೊಳಗಾಗಿ ಅಂದರೆ ತಾ|| 6-9-1926 ರ ಒಳಗಾಗಿ ಅಪ್ಲಿಕೇಷನ್ ಬರೆದು ಅದರ ಜೊತೆಯಲ್ಲಿ ಸ್ವಂತ ಗ್ರಾಮದ ಪಟೇಲ ಶಾನುಭೋಗರು ಇನ್ನು ಕೆಲವು ದೊಡ್ಡಮನುಷ್ಯರಿಂದ ಶಿಫಾರ್ಸುಪತ್ರವನ್ನು ಬರೆಯಿಸಿ ಜಂಟಿಸಿ ಈ ಕೆಳಗಿನ ವಿಳಾಸಕ್ಕೆ ಟಪ್ಪಾಲು ಮೂಲಕ ಕಳುಹಿಸಿಕೊಟ್ಟು ನಮ್ಮಿಂದ ಜವಾಬು ತಿಳಿದುಕೊಂಡು ಬರಬೇಕು. ಅಪ್ಲಿಕೇಷನ್ ಬರೆದುಕೊಳ್ಳತಕ್ಕವರು ಹೆಸರು, ಗ್ರಾಮ, ತಾಲ್ಲೋಕು ಜಿಲ್ಲಾ ಪೋ|| ವಗೈರೆ ಸಂಗತಿಯನ್ನು ಸವಿಸ್ತಾರವಾಗಿ ಬರೆಯತಕ್ಕದ್ದು. ಈ ಅರ್ಜಿದಾರರುಗಳಲ್ಲಿ ಯೋಗ್ಯವಾಗಿ ಕಂಡುಬಂದ ವಟುವನ್ನು ಆರಿಸಲಾಗುವುದು.

ನಮ್ಮ ವಿಳಾಸ—ಶ್ರೀಶಿವಯೋಗಿ ಬಸವರಾಜಸ್ವಾಮಿಗಳು
ಮುಕ್ತಗಿರಿಮಠ, ಮ್ಯಾಗಮಳೆ ಪೋಸ್ಟು, ಚಿಂತಾಮಣಿ ತಾಲ್ಲೂಕು.

ಶ್ರೀಜಗದಾಚಾರ್ಯರ ಮರ್ಯಾದೆಯ ರಹದಾರಿ.

ನಮ್ಮ ಶ್ರೀಮನ್ ಮೈಸೂರ ಮಹಾರಾಜರವರು ಶ್ರೀಮದ್ದಕ್ಷಿಣಕಾಶೀ ನಿಜಸಿಂಹಾಸನಾಧೀಶ ಚವುಡಯ್ಯದಾನಪುರಸಂಸ್ಥಾನದ ಮಹಾಸ್ವಾಮಿ ವಿರುಪಾಕ್ಷ ಒಡೆಯರವರ ವಿದ್ಯಾಗೌರವಕ್ಕೂ ಅವರ ಸಂಸ್ಥಾನಮಠದ ಪೂರ್ವಮರ್ಯಾದೆಗಳಿಗೂ ಮೆಚ್ಚಿ ತಮ್ಮ ಮೈಸೂರ ಪ್ರಾಂತ್ಯದ ಎಂಟು ಜಿಲ್ಲೆಗಳ 64 ತಾಲ್ಲೂಕುಗಳಲ್ಲಿಯೂ ಶ್ರೀಜಗದಾಚಾರ್ಯ ಒಡೆಯರ ಸಂಚಾರವಾಗಲೋಸುಗ ಕೆಲವು ರಾಯಲ್, ಮತ್ತು ಸ್ಪೆಷಲ್ ಆನರ್ಸ್ (ಮರ್ಯಾದೆ) ಗಳೊಡನೆ ರಹದಾರಿ ಹುಕುಮನ್ನು ಹೋದತಿಂಗಳಲ್ಲಿ ದಯೆಪಾಲಿಸಿರುವದನ್ನು ಕೇಳಿ ನಮ್ಮ ಮೈಸೂರ ಮಹಾರಾಜರವರಿಗೆ ವೀರಶೈವಸಮಾಜದವರು ಹಾಗೂ ಅಂಬಿಗ ಮೊದಲಾದ ಜನಾಂಗದವರು ತುಂಬಾಕೃತಜ್ಞತೆಯನ್ನು ತೋರಿಸುವರಲ್ಲದೆ, ನಮ್ಮ ಮಹಾಪ್ರಭುಗಳು ಇನ್ನೂ ಉತ್ತರೋತ್ತರ ಹೆಚ್ಚಿನ ಮರ್ಯಾದೆಗಳನ್ನು ನಮ್ಮ ಜಗದಾಚಾರ್ಯ ಒಡೆಯರವರಿಗೆ ದಯೆಪಾಲಿಸುತ್ತಾ ಹೋಗಲೆಂತಲೂ ಶ್ರೀಒಡೆಯರವರ ಸಂಚಾರವು ನಮ್ಮ ದೇಶದಲ್ಲಿ ಹೆಚ್ಚಾಗಿ ಬೆಳೆಯಲೆಂತಲೂ ನಾವೆಲ್ಲರೂ ಮನಃಪೂರ್ವಕವಾಗಿ ಹಾರೈಸುವೆವು. ಮತ್ತು ಸ್ವಲ್ಪಕಾಲದಲ್ಲಿಯೇ ಶ್ರೀಜಗದಾಚಾರ್ಯ ಒಡೆಯರವರ ಸ್ವಾರಿಯು ನಮ್ಮ ಹೊದಿಗ್ಗೇರಿ ಪ್ರಾಂತ್ಯದಲ್ಲಿ ಆಗುವ ಸಭೆಗೆ ದಯೆಮಾಡಿಸುವರೆಂದು ಕೇಳಿ ನಾವೆಲ್ಲರೂ ತುಂಬಾ ಸಂತೋಷವುಳ್ಳವರಾಗಿರುವೆವು. ಓರ್ವ ಸಮಾಜಹಿತಚಿಂತಕ.

ಮದ್ರಾಸಿನಲ್ಲಿ "ಕರ್ನಾಟಕಸಭಾ" ಏರ್ಪಟ್ಟಿರುವುದು.

ಮದ್ರಾಸು ಪ್ರೆಸಿಡೆನ್ಸಿಯಲ್ಲಿ ತಮಿಳು ಮತ್ತು ತೆಲುಗುಭಾಷೆಗಳೇ ಪ್ರಾಧಾನ್ಯವಾಗಿದ್ದುಕೊಂಡು ಅವುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ವಿಶ್ವವಿದ್ಯಾನಿಲಯಗಳು ಸ್ಥಾಪನೆ ಆಗಿಯೂ ಆಗುತ್ತಲೂ ಇರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಈ ಪ್ರೆಸಿಡೆನ್ಸಿಯ ಬಹುಭಾಗವು ಕನ್ನಡಿಗರಿಗೆ ವಾಸಸ್ಥಾನವಾಗಿದ್ದು ಕನ್ನಡಭಾಷೆಯು ವ್ಯವಹಾರದಲ್ಲಿದ್ದಾಗ್ಯೂ ಅದರ ಪ್ರಚಾರ ಮತ್ತು ಅಭಿವೃದ್ಧಿಗಾಗಿ ಯಾವ ವಿಧವಾದ ಪ್ರಯತ್ನಗಳೂ ಇಲ್ಲದೆ ಇರುವ ನ್ಯೂನತೆಯನ್ನು ಕಂಡು, ದಕ್ಷಿಣದೇಶದ ಸಾಹಿತ್ಯಾಭಿವೃದ್ಧಿಗೆ ತಮಿಳು ಮತ್ತು ತೆಲುಗುಭಾಷೆಗಳು ಎಷ್ಟು ಪ್ರಾಮುಖ್ಯವೋ ಕನ್ನಡಭಾಷೆಯು ಸಹ ಅಷ್ಟೇ ಮುಖ್ಯವಾದದ್ದೆಂಬ ವಿಷಯವನ್ನು ಇಲ್ಲಿನ ವಿದ್ಯಾಧಿಕಾರಿಗಳ ಮತ್ತು ಜನಗಳ ಮನವರಿಕೆಗೆ ತರಬೇಕಾದ್ದು ಅವಶ್ಯಕವೆಂದು ತಿಳಿದು ಮದರಾಸಿನಲ್ಲಿ 'ಕರ್ನಾಟಕಸಭಾ' ಎಂಬ ಹೆಸರಿನಿಂದ ಒಂದು ಸಂಸ್ಥೆಯು ಏರ್ಪಟ್ಟಿರುತ್ತದೆ. ಇಲ್ಲಿನ ಲಾ ಕಾಲೇಜಿನ ಪ್ರಿನ್ಸಿಪಾಲರಾದ ಮಿ|| ಅರ್ಕೇಲ್‌ಡೇವಿಸ್, ಎಂ.ಎ. ಬಾರ್-ಅಟ್-ಲಾ ಇವರು ಈ ಸಭೆಯ ಅಧ್ಯಕ್ಷರಾಗಿಯೂ, ಮಿ|| ಬಿ. ಎಲ್. ಎನ್. ರಾಯಿ ಎಂ. ಎ. ಎಂ. ಎಲ್. ರವರು ಉಪಾಧ್ಯಕ್ಷರಾಗಿಯೂ; ಮಿ|| ಎಂ. ಎಲ್. ಶ್ರೀಕಂಠಯ್ಯ, ಬಿ.ಎ., ಯವರು ಸೆಕ್ರೆಟರಿಗಳಾಗಿಯೂ ಈಸಾರಿಯ ಜನರಲ್ ಮೀಟಿಂಗಿನಲ್ಲಿ ಬಹುಮತದಿಂದ ಚುನಾಯಿಸಲ್ಪಟ್ಟಿರುತ್ತಾರೆ. ಸಭಾಸದ.

ವಿದ್ವದಭಿನಂದನ.

ಬಳ್ಳಾರಿ ಡಿ|| ಗೆ ಸೇರಿದ ಕಂಪ್ಲಿ ಗ್ರಾಮದ ವೀರಶೈವತರುಣಸಂಘದವರ ವತಿಯಿಂದ ತಾ|| 5-7-26 ನೇ ಸಾಯಂಕಾಲ 6 ಘಂಟೆಗೆ ಪಂಡಿತ ಬಸವರಾಜಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಆ ಸಭೆಗೆ ಬೂದಗುಪ್ಪಿ ಶ್ರೀ ಚರಮೂರ್ತಿಗಳೂ, ವೀರಶೈವತತ್ವಚಿಂತಾಮಣಿ ಪಗಡದಿನ್ನಿ ಇವರೂ, ಪಂಡಿತ ಬಸವರಾಜಶಾಸ್ತ್ರಿಗಳು ಪಗಡದಿನ್ನಿ ಇವರೂ, ಜಗನ್ನಾಥಶಾಸ್ತ್ರಿಗಳೂ, ಗ್ರಾಮದ ಮುಖ್ಯ ಮುಖ್ಯ ಪುಢಾರಿಗಳೂ, ಇತರರೂ ಆಗಮಿಸಿದ್ದರು. ಸಂಘದ ಪ್ರೆಸಿಡೆಂಟ್ ಬಸವಯ್ಯನವರು 'ಬಸವರಾಜಶಾಸ್ತ್ರಿಗಳು ಬಾಲ್ಯದಲ್ಲಿ ಇದೇ ಕಂಪ್ಲಿ ಗ್ರಾಮದಲ್ಲಿ ಅಭ್ಯಾಸಮಾಡಿ, ಈ ಗ್ರಾಮದವರ ಮತ್ತು ಇತರರ ಸಹಾಯದಿಂದ ಕಾಶಿಗೆ ಹೋಗಿ ಕಲಕತ್ತಾ ಗೌರ್ನಮೆಂಟು ಸಂಸ್ಕೃತಕಾಲೇಜಿನ ವ್ಯಾಕರಣತೀರ್ಥ ಪರೀಕ್ಷೆಯಲ್ಲಿಯೂ, ಕಾಶೀ ಗೌರ್ನಮೆಂಟು ಸಂಸ್ಕೃತಕಾಲೇಜಿನ ವ್ಯಾಕರಣಶಾಸ್ತ್ರಿ (ಉಪಾಧ್ಯಾಯ) ಪರೀಕ್ಷೆಯಲ್ಲಿಯೂ ತೇರ್ಗಡೆಯನ್ನು ಹೊಂದಿ ಕಾಶಿಯ ಪಂಡಿತಜನಗಳಿಂದ 'ವ್ಯಾಕರಣರತ್ನ' ಎಂಬ ಪ್ರಶಸ್ತಿಯನ್ನು ಪಡೆಕೊಂಡಿರುವರು. ಇದಲ್ಲದೆ ನ್ಯಾಯ, ವೇದಾಂತಶಾಸ್ತ್ರಗಳ ಪ್ರಥಮ ಮಧ್ಯಮ ಪರೀಕ್ಷಾ ಗ್ರಂಥಗಳನ್ನೂ, ಯಜುರ್ವೇದ ವಾಜಸನೇಯಮಾಧ್ಯಂದಿನ ಸಂಹಿತೆಯ ಭಾಷ್ಯಸಹಿತ ಕೆಲವು ಭಾಗಗಳನ್ನೂ ಅಭ್ಯಾಸಮಾಡಿರುವರು. ಅವಿಚ್ಛಿನ್ನಪರಿಶ್ರಮದಿಂದಲೂ ಅಧಿಕವಾದ ಕಳಕಳಿಯಿಂದಲೂ ಅಧ್ಯಯನಮಾಡಿ ಅಸಾಧಾರಣ ಪಾಂಡಿತ್ಯವನ್ನು ಸಂಪಾದಿಸಿಕೊಂಡು ನಮ್ಮ ಪ್ರಾಂತಕ್ಕೂ ನಮ್ಮ ಮತಕ್ಕೂ ಭೂಷಣವನ್ನುಂಟುಮಾಡಿರುವ ಕಾರಣ ತರುಣಸಂಘದವತಿಯಿಂದ ಶಾಸ್ತ್ರಿಗಳ ಅಭಿನಂದನಮಾಡಿ ಅವರ ಅಮೋಘವಾದ ವಾಣಿಯಿಂದ ಧರ್ಮೋಪದೇಶ ಮಾಡುವವರಾಗಬೇಕೆಂದು ನಿವೇದಿಸುತ್ತೇನೆ' ಎಂದು ಹೇಳಿ ತಮ್ಮ ಭಾಷಣಮಾಡಲುಪಕ್ರಮಿಸಿ ತರುಣಸಂಘದ ಉದ್ದೇಶ ಮತ್ತು ಪ್ರಯೋಜನಗಳಾವವೆಂಬುದನ್ನು ಚೆನ್ನಾಗಿ ವಿವರಿಸಿ ಹೇಳಿದಮೇಲೆ ಅಧ್ಯಕ್ಷರು ಧಾರ್ಮಿಕವಿಷಯವಾಗಿ ಅವಿಚ್ಛಿನ್ನಧಾರಾಪ್ರವಾಹದಂತೆ ಅಸ್ಖಲಿತವಾಣಿಯಿಂದ ಎರಡುಘಂಟೆಯವರೆಗೂ ಮಾತನಾಡಿದರು. ಪಂಡಿತರ ವಾಗ್ವೈಖರಿಗೆ ಚಕಿತರಾದ ಸಭಿಕರು ಆನಂದಾಬ್ಧಿಯಲ್ಲಿ ಮಗ್ನರಾಗಿದ್ದರು. ಅಲ್ಲಿಗೆ 9 ಘಂಟೆಯಾದ್ದರಿಂದ ಸಭಾಕಾರ್ಯವು ನಿಲ್ಲಿಸಲ್ಪಟ್ಟು ಮಾರನೆಯದಿನ ಬೂದಗುಪ್ಪಿ ಶ್ರೀ ಚರಮೂರ್ತಿಗಳು 'ಧರ್ಮ' ಎಂಬ ವಿಷಯದಲ್ಲೂ ಜಗನ್ನಾಥಶಾಸ್ತ್ರಿಗಳು 'ತರುಣಸಂಘದ ಕರ್ತವ್ಯ' ಎಂಬ ವಿಷಯದಲ್ಲೂ ಭಾಷಣಮಾಡಿದರು. ಅಧ್ಯಕ್ಷರ ಭಾಷಣವು ಪೂರ್ಣವಾಗದಿರುವದರಿಂದ ಪೂರ್ಣ ಕೇಳುವ ಕುತೂಹಲವುಳ್ಳ ಸಭಿಕರೆಲ್ಲರೂ ಪೂರ್ಣವಾಗಿ ಭಾಷಣವಾಗಬೇಕೆಂದು ಬೇಡಿಕೊಳ್ಳಲು 2 ನೇ ವಾರ ಸಾಯಂಕಾಲ 6 ಘಂಟೆಗೆ ಸಭೆಸೇರಿತು. ಪಂಡಿತ ಚಂದ್ರಶೇಖರಶಾಸ್ತ್ರಿಗಳವರು ಸ್ವತಂತ್ರವಾದ ಇಂಗ್ಲಿಷು ಪ್ರಾಥಮಿಕಸ್ಕೂಲಿನ ಆವಶ್ಯಕತೆ ಬಹಳವಾಗಿದೆ. ಸರಕಾರಿ ಸ್ಕೂಲಿನ ಉಪಾಧ್ಯಾಯರು ಬಾಲಕರಿಗೆ ಚೆನ್ನಾಗಿ ಅಭ್ಯಾಸಮಾಡಿಸುವದಿಲ್ಲ. ಈ ವಿಷಯದ ಬಗ್ಗೆ ವಿದ್ಯಾಖಾತೆಯವರಿಗೆ ಒಂದೆರಡುಸಾರೆ ಸೂಚನೆಮಾಡಿದೆ, ಆದರೂ ಅವರು ಪೂರ್ಣವಾಗಿ ಇತ್ತಕಡೆ ಗಮನಿಸಿರುವದಿಲ್ಲ. ಇದರಿಂದ ಅಭ್ಯಾಸಕರ ವಯೋತೀತವಾಗಿ ಮುಂದಿನ ಅಭ್ಯಾಸಕ್ಕೆ ತೊಂದರೆಯಾಗುವದು. ಆದಕಾರಣ ವೀರಶೈವ ಉಪಾಧ್ಯಾಯರಿಂದ ನಡೆಸಲ್ಪಡುವ ಪ್ರಾಯಿವೇಟು ಸ್ಕೂಲಾದರೆ ಯಾವ ತೊಂದರೆಯೂ ಇರುವದಿಲ್ಲವೆಂದು ತರುಣಸಂಘದವರಿಗೂ ಮುಖ್ಯ ಪುಢಾರಿಗಳಿಗೂ ಸೂಚಿಸಲು ಅದು ಸರ್ವಾನುಮತದಿಂದ ಒಪ್ಪಿತವಾಯಿತು. ನಂತರ ಪಂಡಿತ ಬಸವರಾಜಶಾಸ್ತ್ರಿಗಳವರು ಅಮೃತವಾಣಿಯಿಂದ ತಮ್ಮ ಅಪೂರ್ವವಾದ ಭಾಷಣವನ್ನು 9 ಘಂಟೆಯವರೆಗೆ ಸರಸವಾಗಿ ಮಾಡಿ ಮುಗಿಸಿದರು.

ಸೆಕ್ರೆಟರಿ ವೀರಶೈವತರುಣಸಂಘ, ಕಂಪ್ಲಿ.

ಕವಿಯ ಜನ್ಮಸ್ಥಳವು ಮತ್ತು ಮಹತ್ವದ ಒಂದು ಬಿಲ್ವವೃಕ್ಷವು.

ಶಿಕಾರಿಪುರದ ತಾಲ್ಲೂಕಿನಲ್ಲಿ ಪ್ರಕೃತಕ್ಕೆ ಹಾಳುಬಿದ್ದು ನಿರ್ಜನವಾಗಿರತಕ್ಕ ಶೀಲವಂತರಕೊಪ್ಪವೆಂಬ ಒಂದು ಗ್ರಾಮವಿದೆ. ಈ ಗ್ರಾಮವು ಸಂಸ್ಕೃತಪ್ರಾಕೃತೋಭಯಭಾಷಾವಿಶಾರದರೂ, ತಾತ್ಪರ್ಯಸಂಗ್ರಹ ಮೊದಲಾದ ಗ್ರಂಥಗಳನ್ನು ಬರೆದ ಕವಿಪುಂಗವರೂ ಆದ ಅನ್ನದಾನಿ ಮಲ್ಲಿಕಾರ್ಜುನಾಚಾರ್ಯರೆಂಬ ಓರ್ವ ವೀರಶೈವ ಕವಿಶ್ರೇಷ್ಠರಿಗೆ ಜನ್ಮಸ್ಥಳವಾಗಿದ್ದಿತು. ಶೀಲವಂತರಕೊಪ್ಪವೆಂಬ ಹೆಸರಿಗೆ ಅನ್ವರ್ಥವಾಗಿ, ಯಾವಾಗಲೂ ಈ ಊರಿನಲ್ಲಿ ಬರೇ ಶೀಲವಂತರವಸತಿಯು ಮಾತ್ರವೇ ಇರುತ್ತಿದ್ದಿತು. ಇದರ ವಿರುದ್ಧವಾಗಿ ಯಾರಾದರೂ ವೀರಶೈವೇತರರು ಈ ಊರಿಗೆ ಬಂದು ನೆಲಸಿದಲ್ಲಿ ಅಂತವರಿಗೆ ಯಾವುದಾದರೊಂದುವಿಧವಾದ ದೈವಿಕ ಆಪತ್ತು ಅಲ್ಪಾವಕಾಶದಲ್ಲಿ ಸಂಭವಿಸುತ್ತಿದ್ದಿತು. ಇವರು ತಿರುಗಿ ಇಲ್ಲಿಂದ ಬಿಟ್ಟು ಹೊರಡುವವರಿವಿಗೂ ಈ ಆಪತ್ತು ನಿವಾರಣೆಯಾಗುತ್ತಿರಲಿಲ್ಲವು. ಈರೀತಿಯಾಗಿ ಇಲ್ಲಿ ಯಾವಾಗಲೂ ವೀರಶೈವೇತರರು ಇರಲೇ ಇಲ್ಲವು. ಯಾವಾಗಲೂ ಇಲ್ಲಿಯ ಶೀಲವಂತರು ಒಳ್ಳೇ ಆಚಾರನಿಷ್ಠರೂ, ಗುರುದೈವಭಕ್ತಿತತ್ಪರರೂ, ಸರ್ವಪ್ರಾಣಿದಯಾಪರರೂ, ಸೌಮ್ಯರೂ ಆಗಿದ್ದರು. ಇವರ ಆಚರಣೆಯಲ್ಲಿದ್ದ ಆಚಾರಾದಿಗಳೆಲ್ಲವನ್ನೂ ಬರೆದು ತಿಳಿಸುವುದು ಇಲ್ಲಿ ಸಾಧ್ಯವಿಲ್ಲವಾದರೂ ಅವುಗಳಲ್ಲಿ ಒಂದೆರಡರನ್ನು ಮಾತ್ರವೇ ಇಲ್ಲಿ ತಿಳಿಸಬಹುದಾಗಿದೆ. ಕೃಷಿಕವರ್ಗಗಳಾದ ಇವರು ಚರ್ಮದಮಿಣಿ, ಬಾರುಕೋಲು ಮೊದಲಾದುವುಗಳನ್ನು ಉಪಯೋಗಿಸುತ್ತಿರಲಿಲ್ಲವು. ಗತ್ಯಂತರವಿಲ್ಲದೆ ಕಾಲಿಗೆ ಜೋಡುಗಳನ್ನು ಮಾತ್ರವೇ ಉಪಯೋಗಿಸುತ್ತಿದ್ದರಾದರೂ, ಅವುಗಳನ್ನು ಊರೊಳಗೆ ತರುತ್ತಿರಲಿಲ್ಲವು. ಊರಿನ ಹೊರಗೆ ಜೋಡುಗಳನ್ನು ಬಿಟ್ಟು ಬರುವುದಕ್ಕಾಗಿಯೇ ಒಂದು ಮನೆಯು ಕಟ್ಟಲ್ಪಟ್ಟಿರುತ್ತಿದ್ದಿತು. ಇದರ ಹೊರತಾಗಿ ಪ್ರತಿಸೋಮವಾರವೂ ಜಂಗಮಮೂರ್ತಿಗಳನ್ನು ಮನೆಗೆ ಕರೆತಂದು ಪಾದೋದಕಪ್ರಸಾದಗಳ ಸೇವನೆಯನ್ನು ಪ್ರತಿ ಒಬ್ಬರೂ ತಪ್ಪದೆ ಮಾಡುತ್ತಲಿದ್ದರು, ಮತ್ತು ಆ ದಿವಸ ಎತ್ತುಗಳನ್ನು ಬೇಸಾಯಕ್ಕೆ ಹೂಡುತ್ತಲಿರಲಿಲ್ಲವು. ಅವುಗಳಿಗೆ ಸ್ನಾನವಮಾಡಿಸಿ ಪೂಜಾದಿಗಳಿಂದ ಸತ್ಕರಿಸಿ ಎಡೆನೈವೇದ್ಯಗಳಿಂದ ಅವುಗಳನ್ನು ತೃಪ್ತಿಪಡಿಸುತ್ತಲಿದ್ದರು. ಈರೀತಿ ಪೂಜಿಸದಹೊರತು ಹುಡುಗರು, ಮುದುಕರು, ರೋಗಿಷ್ಠರಾದಿಯಾಗಿ ಯಾರೊಬ್ಬರೂ ಆ ದಿವಸ ಬಾಯಲ್ಲಿ ನೀರುಸಹ ಹಾಕುತ್ತಿರಲಿಲ್ಲವು. ಇತ್ಯಾದಿಯಾದ ಈ ಊರಿನವರ ಆಚರಣೆಗಳು ಧರ್ಮಸಮ್ಮತವೂ, ದೈವಸಮ್ಮತವೂ ಆಗಿದ್ದವಲ್ಲದೆ, ಆಚಾರಪ್ರಿಯರಿಗೆ ಮಾರ್ಗದರ್ಶಕವಾಗಿಯೂ ಇದ್ದುವು. ಈ ಗ್ರಾಮವು ಈಚೀಚೆಗೆ ಅಂದರೆ ಸುಮಾರು 25-30 ವರ್ಷಗಳ ಹಿಂದೆ ಮಾತ್ರವೇ ಹಾಳುಬಿದ್ದುದಾಗಿರುತ್ತದೆ. ಇಷ್ಟು ಈಚಿನ ಕಾಲದಲ್ಲೂ ಅಂದರೆ ಅಧುನಿಕಸುಧಾರಣಾಪ್ರವಾಹದ ಜೋರಿನಿಂದ ನಮ್ಮ ಎಷ್ಟೋ ಆಚಾರಗಳಿಗೆ ಅರ್ಧಚಂದ್ರಪ್ರಯೋಗವಾಗಿರುವ ಈಗಿನ ಕಾಲದಲ್ಲು ಸಹ ಈ ಊರಿನವರು ಇಂಥ ಆಚಾರನಿಷ್ಠರಿದ್ದರೆಂದಮೇಲೆ, ಹಿಂದಿನ ಕಾಲದಲ್ಲಿ ಅಂದರೆ ಮೇಲೆ ಹೇಳಿರುವ ಅನ್ನದಾನಿ ಮಲ್ಲಿಕಾರ್ಜುನಾಚಾರ್ಯರಂಥ ಪಂಡಿತೋತ್ತಮರು ಜೀವಿಸಿದ್ದ ಕಾಲದಲ್ಲಿ ಈ ಊರಿನ ಆಚಾರಸಂಪತ್ತು ಎಂಥಾ ಉನ್ನತಾವಸ್ಥೆಯಲ್ಲಿದ್ದಿರಬಹುದೆಂಬುದನ್ನು ಊಹಿಸಿ ತಿಳಿಯಬಹುದಾಗಿದೆ. ಇರಲಿ, ಈ ಊರಿನ ಪಕ್ಕದಲ್ಲಿಯೇ ಸದಾಶಿವಪುರ ಮತ್ತು ಬಸವನಹಾಳು ಎಂಬ ಹಾಳುಬಿದ್ದಿರುವ ಎರಡು ಗ್ರಾಮಗಳಿರುತ್ತವೆ. ಈ ಗ್ರಾಮಗಳು ಕೆಳದಿಸಂಸ್ಥಾನದ ರಾಜರಾಗಿದ್ದ ಸದಾಶಿವನಾಯಕ ಮತ್ತು ಬಸವಪ್ಪನಾಯಕ ಇವರುಗಳ ಹೆಸರಿನಮೇಲೆ ಕಟ್ಟಲ್ಪಟ್ಟಿದ್ದ ಊರುಗಳಾಗಿರಬೇಕು ಮತ್ತು ಕೆಳದಿಯ ದೊರೆಯಾದ ಬಸವಪ್ಪನಾಯಕನ ಪತ್ನಿ ಚೆನ್ನಮ್ಮಾಜಿಯು ಜನ್ಮಸ್ಥಳವಾದ ಕೊಟ್ಟರಹಳ್ಳಿ ಎಂಬ ಗ್ರಾಮವಾದರೂ ಇಲ್ಲಿಯೇ ಇರುತ್ತದೆ. ಈ ಶೀಲವಂತರ ಕೊಪ್ಪದಬಳಿ ಒಂದು ಭಾರೀ ಕೆರೆಯು ಇದೆ. ಅದನ್ನು ಈಚೆಗೆ ನಮ್ಮ ಸರ್ಕಾರದವರು ಹೊಸದಾಗಿ ಕಾಮಗಾರಿಮಾಡಿ ಬಲಪಡಿಸಿರುತ್ತಾರೆ. ಇದು ಸೂಳೆಕೆರೆಗೆ ಎರಡನೆಯದೆಂಬಂತಿದೆ. ಅತಿ ಪ್ರಸಿದ್ಧವಾದ ಮದಗದಕೆರೆಯನ್ನು ಕಟ್ಟಿಸಿದವನಾದ (ಶಕೆ 1426 ರಲ್ಲಿ) ಸದಾಶಿವರಾಯನಾಯಕನೆಂಬ ಕೆಳದಿಯ ರಾಜನೇ ಈ ಕೆರೆಯನ್ನು ಕಟ್ಟಿಸಿದನೆಂದು ಪ್ರತೀತಿಯುಂಟು. ಈ ಕೆರೆಯ ಬಳಿಯಲ್ಲಿಯೇ ಮೇಲೆಹೇಳಿರುವ ಬಿಲ್ವವೃಕ್ಷವಿರುತ್ತದೆ. ಈ ವೃಕ್ಷದ ಮಹತ್ವವೇನೆಂದರೆ—ಇದರ ಪ್ರತಿಯೊಂದು ತಳ್ಳಿಗೂ ಎಂಟರಿಂದ ಇಪ್ಪತ್ತೆರಡರವರೆಗೂ ಎಸಳುಗಳಿರುತ್ತವೆ. ಮೂರು ಎಸಳಿನ ಪತ್ರೆಯು ಈ ಮರದಲ್ಲಿರುವುದೇ ಇಲ್ಲ. ಈ ಮರದ ಬೀಜಗಳು ಬಿದ್ದು ಇದರ ಬಳಿಯಲ್ಲಿಯೇ ಎಷ್ಟೋ ಗಿಡಗಳು ಹುಟ್ಟಿರುತ್ತವೆ ಮತ್ತು ಪ್ರತಿ ವರ್ಷವೂ ಹುಟ್ಟುತ್ತಲೂ ಇರುತ್ತವೆ. ಆದರೆ ಇವುಗಳಲ್ಲೆಲ್ಲಾ ಮೂರು ಎಸಳಿನ ಪತ್ರೆಯು ಇರುತ್ತದೆಯೇ ಹೊರತು, ಮೂಲವೃಕ್ಷದಲ್ಲಿರುವಂತೆ ಹೆಚ್ಚು ಎಸಳಿನ ಪತ್ರೆಯು ಬಿಡುವುದಿಲ್ಲ. ಅಲ್ಲದೆ ಇದರ ಬೀಜವನ್ನು [illegible] ಎಲ್ಲಿ ಹಾಕಿ ಗಿಡಗಳನ್ನೆಬ್ಬಿಸಿದರೂ, ಆ ಪತ್ರೆಗೆ ಮೂರು ಎಸಳುಗಳಾಗುವವೇ ಹೊರತು ಹೆಚ್ಚು ಎಸಳುಗಳಾಗುವುದಿಲ್ಲ. ಹೀಗೆ ಈ ವೃಕ್ಷವು ಮಹತ್ವದ್ದಾಗಿರುವಪ್ರಯುಕ್ತ ಪೂಜಾನಿಷ್ಠರನೇಕರಿಗೆ ಉಪಯೋಗವಾಗಲೆಂದೂ ಚರಿತ್ರೆಕಾರರಿಗೆ ಮೇಲೆ ಹೇಳಿರುವಂತೆ ಕವಿಯ ಜನ್ಮಸ್ಥಳವೇ ಮೊದಲಾದ ಕೆಲ ಸ್ಥಳಗಳ ಪರಿಚಯವಾಗಲೆಂದೂ ಈ ಲೇಖನವನ್ನು ಬರೆದುದಾಗಿದೆ.

ಚೆನ್ನಬಸವಪ್ಪಗೌಡ ಪಾಟೀಲ್, ಕಪ್ಪನಹಳ್ಳಿ.

1917ರಲ್ಲಿ ದಾವಣಗೆರೆಯಲ್ಲಿ ನೆರೆದಿದ್ದ ೮ನೆಯ ಶ್ರೀಮದ್ವೀರಶೈವಮಹಾಸಭೆಯಲ್ಲಿ ಚಿರಸ್ಥಾಯಿಫಂಡಿನ ವಿಚಾರವಾಗಿ ಆದ ನಿರ್ಣಯಗಳು.

ವೀರಶೈವಮಹಾಸಭೆಯ ಚಿರಸ್ಥಾಯಿಫಂಡಿನ ಸಂಬಂಧವಾಗಿ ದಾವಣಗೆರೆಯಲ್ಲಿ ಕೂಡಿದ್ದ ಮಹಾಸಭೆಯಲ್ಲಾದ ರೆಜ್ಯುಲೇಷನನ್ನೂ, ಈ ಫಂಡಿನ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವ ರೂಲ್ಸುಗಳನ್ನೂ ಈ ಸ್ಟಾರ್ ಪತ್ರಿಕಾವಾಚಕರ ತಿಳುವಳಿಕೆಗಾಗಿ ನನಗೆ ತಿಳಿದಮಟ್ಟಿಗೆ ಈ ಕೆಳಗೆ ಕೊಟ್ಟಿರುತ್ತೇನೆ. ಇದನ್ನು ಪತ್ರಿಕಾಕರ್ತರು ವಿಶ್ವಾಸವಿಟ್ಟು ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ. ಬರುವ ಡಿಸೆಂಬರ್ ತಿಂಗಳಲ್ಲಿ ಮಹಾಸಭೆಯನ್ನು ಕೂಡಿಸಲು ಅನುಕೂಲಿಸುವಂತೆ ಚಿರಸ್ಥಾಯಿಫಂಡಿನ ತಾತ್ಕಾಲಿಕ ಸಂಘದವರು ಈವರಿವಿಗೆ ಮಾಡಿರುವ ರೂಲ್ಸುಗಳನ್ನೂ ರೆಜ್ಯುಲೇಷನ್ನುಗಳನ್ನೂ ಈ ಪತ್ರಿಕೆಯಲ್ಲಿ ಕೂಡಲೆ ಪ್ರಕಟಿಸಿದರೆ ಬಹಳ ಅನುಕೂಲವಾಗುತ್ತದೆ.

ಮಹಾಸಭಾಭಿಮಾನಿ.

(೬) ಕಳೆದ ನಾಲ್ಕುವರ್ಷಗಳಿಂದಲೂ ವೀರಶೈವಮಹಾಸಭೆಯು ಸೇರದಿದ್ದುದಕ್ಕೋಸ್ಕರ ಈ ಮಹಾಸಭೆಯು ವಿಷಾದವನ್ನು ಸೂಚಿಸುವುದಲ್ಲದೆ, ಇನ್ನು ಮುಂದೆ ಈ ಸಭೆಯು ಸರಿಯಾಗಿ ಕೂಡುವುದಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಬೇಕೆಂತಲು, ಸಭೆಯ ಶಾಶ್ವತತೆಗೋಸ್ಕರ ಒಬ್ಬೊಬ್ಬರಿಂದ ಒಂದುಸಾವಿರ ರೂ. ಗಳಿಗೆ ಕಡಿಮೆಯಿಲ್ಲದಷ್ಟು ಚಂದಾಹಣವನ್ನು ಕೂಡಿಸಿ ಒಂದು ಫಂಡನ್ನು ಏರ್ಪಡಿಸಬೇಕೆಂತಲು, ಮತ್ತು ಇಂಥ ಚಂದಾದಾರರಿಗೆ ಪ್ರತಿಯೊಂದು ಸಭೆಯಲ್ಲಿಯೂ ಸನ್ಮಾನನೀಯಸ್ಥಳವು ಕಾದಿಡಲ್ಪಡಬೇಕೆಂತಲು ನಿರ್ಧರಿಸುತ್ತದೆ.

(೭) ಶ್ರೀಮದ್ವೀರಶೈವಮಹಾಸಭಾಚಿರಸ್ಥಾಯಿಫಂಡಿನ ವ್ಯವಸ್ಥೆಗೋಸ್ಕರ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ. ಐ. ಇ., ಇವರ ಅಧ್ಯಕ್ಷತೆಯಲ್ಲಿ ಈ ಫಂಡಿಗೆ ಒಂದುಸಹಸ್ರ ರೂ. ಗಳಿಗಿಂತಲೂ ಹೆಚ್ಚಾಗಿ ಚಂದಾ ಕೊಟ್ಟರತಕ್ಕ ಜನಗಳಿಂದ ಕೂಡಿದ ಒಂದು ತಾತ್ಕಾಲಿಕ ಸಂಘವನ್ನು ಏರ್ಪಡಿಸಲು ಈ ಸಭೆಯು ನಿರ್ಧರಿಸುತ್ತದೆ. ಈ ಸಂಘವು ಮಹಾಸಭೆಯ ಸ್ಥಿರತೆಗೋಸ್ಕರ ಯುಕ್ತವಾದ ನಿಬಂಧನೆಗಳನ್ನು ಸಿದ್ಧಗೊಳಿಸಿ ಮುಂದಣ ಮಹಾಸಭೆಯಲ್ಲಿಡುವುದಕ್ಕೂ, ಈ ಫಂಡಿಗೆ ಯಾವ ವೀರಶೈವರಿಂದಲೇ ಆಗಲಿ ಒಂದು ಸಾವಿರ ರೂ. ಗಳಿಗಿಂತಲೂ ಕಡಿಮೆಯಿಲ್ಲದಷ್ಟು ಹಣವನ್ನು ಸ್ವೀಕರಿಸುವುದಕ್ಕೂ, ಈಗ ವಾಗ್ದಾನಮಾಡಿರುವವರಲ್ಲಿ ಹಣವನ್ನು ಕೊಡದೆ ಇರುವವರಿಂದ ಬರಮಾಡಿಕೊಳ್ಳಲು ಆವಶ್ಯಕವಾದ ಏರ್ಪಾಟುಗಳನ್ನು ಮಾಡುವುದಕ್ಕೂ, ಈ ಕಾರ್ಯಗಳಿಗೆ ಬೇಕಾಗುವ ವೆಚ್ಚವನ್ನು ಅಧ್ಯಕ್ಷರ ಅನುಮತಿಯಿಂದ ಮಾಡುವುದಕ್ಕೂ, ಮ|| ಹುಬ್ಬಳ್ಳಿ ಶಿವಪ್ಪ, ಸಿದ್ಧರಾಮಪ್ಪ ಕುಸಗಲ್ ಇವರು ಉದಾರಬುದ್ಧಿಯಿಂದ ಇದರ ವೆಚ್ಚಕ್ಕೋಸ್ಕರ ಕೊಡುವ ಹಣವನ್ನು ಅಂಗೀಕರಿಸುವುದಕ್ಕೂ, ಫಂಡಿನ ವ್ಯವಸ್ಥೆಗಾಗಿ ಬೇಕಾಗುವ ನಿಬಂಧನೆಗಳನ್ನು ಮಾಡಿ ಮುಂದಣ ಮಹಾಸಭೆಯಲ್ಲಿಡುವುದಕ್ಕೂ, ಮತ್ತು ಈ ತಾತ್ಕಾಲಿಕ ಸಂಘವನ್ನು ಬೇಕಾದ ಸ್ಥಳದಲ್ಲಿ ಬೇಕಾದಾಗ ಕೂಡಿಸುವುದಕ್ಕೂ ಈ ಸಂಘವು ಈ ಮಹಾಸಭೆಯಿಂದ ಅಧಿಕಾರವನ್ನು ಹೊಂದಿರುತ್ತದೆ.

(೮) ಮಹಾಸಭಾಚಿರಸ್ಥಾಯಿಫಂಡಿಗೆ ಈಗ ಕೊಡಿರುವ ಮತ್ತು ಇನ್ನು ಮುಂದೆ ಕೊಡುವ ಹಣವನ್ನು ತಾತ್ಕಾಲಿಕಸಂಘದ ಅಧ್ಯಕ್ಷರ ಹೆಸರಿನಲ್ಲಿ ಮೈಸೂರು ಬ್ಯಾಂಕಿನಲ್ಲಿ 'ಫಿಕ್ಸೆಡ್ ಡಿಪಾಜಿಟ್ಟಾಗಿ' ಒಂದುವರ್ಷದ ಮಟ್ಟಿಗೆ ಇಡಬೇಕೆಂದು ಈ ಮಹಾಸಭೆಯು ನಿರ್ಣಯಿಸುತ್ತದೆ.

ಚಿರಸ್ಥಾಯಿಫಂಡಿನ ತಾತ್ಕಾಲಿಕ ಸಂಘದ ಮ್ಯಾನೇಜಿಂಗ ಕಮಿಟಿಯ ರೂಲ್ಸಿನ ಮುಖ್ಯಭಾಗ.

III. 1. ಯಾವತ್ಭಾರತವೀರಶೈವಮಹಾಸಭೆಯು ಸಾಧ್ಯವಾದಮಟ್ಟಿಗೆ ಪ್ರತಿವರ್ಷ ನಡೆಯುವಂತೆ ಮಾಡುವುದು ಈ ಚಿರಸ್ಥಾಯಿಫಂಡಿನ ಉದ್ದೇಶವಾಗಿದೆ.

VI. (1) ಪ್ರತಿವರ್ಷ ಮಹಾಸಭೆಯನ್ನು ನಡಿಸಬೇಕೆಂಬುದು ಫಂಡಿನ ಉದ್ದೇಶವಾಗಿರುವಪ್ರಯುಕ್ತ, ಜನರಲ್ ಕಮಿಟಿಯವರ ಅನುಮೋದನನಿರೀಕ್ಷಣೆಯಿಂದ ಮ್ಯಾನೇಜಿಂಗ್ ಕಮಿಟಿಯವರು ಮಹಾಸಭೆಯನ್ನು ನಡೆಸಲು ತಮಗೆ ಸೂಕ್ತತೋರಿದಷ್ಟು ದ್ರವ್ಯಸಹಾಯ ಮಾಡಬೇಕು. ಯಾವದಾದರು ಕಾರಣದಿಂದ ಯಾವ ವರ್ಷದಲ್ಲಾದರೂ ಮಹಾಸಭೆಯು ನಡೆಯದಿದ್ದಲ್ಲಿ ಮತ್ತು ಅದರ ಮುಂದಣವರ್ಷದಲ್ಲೂ ನಡೆಯುವ ಸಂಭವವಿಲ್ಲದ ಪಕ್ಷದಲ್ಲಿ ಅದರ ಆಚೆ ವರ್ಷದಲ್ಲಿ ಮಹಾಸಭೆಯು ನಡೆಯಲು ತಕ್ಕೇರ್ಪಾಟುಗಳನ್ನು ಜನರಲ್ ಕಮಿಟಿಯವರ ಅನುಮೋದನನಿರೀಕ್ಷಣೆಯಿಂದ ಮ್ಯಾನೇಜಿಂಗ್ ಕಮಿಟಿಯವರು ಮಾಡತಕ್ಕದ್ದು.

(9) (a) ಜನರಿಂದ ಬಂದ ಸಹಾಯದ್ರವ್ಯ, ಪ್ರತಿನಿಧಿಗಳಿಂದಲೂ ಪ್ರೇಕ್ಷಕರಿಂದಲೂ ಬಂದ ಟಿಕೆಟಿನ ಹಣ ಮತ್ತು ಚಿರಸ್ಥಾಯಿಫಂಡಿನಿಂದ ಸಹಾಯಮಾಡಿದ ಹಣ ಇವೆಲ್ಲವೂ ಸೇರಿ ಪ್ರತಿಯೊಂದು ಮಹಾಸಭೆಯ ಆದಾಯವೆಚ್ಚಗಳ ಲೆಕ್ಕವು ಮಹಾಸಭೆಯು ನಡೆದ 3 ತಿಂಗಳೊಳಗಾಗಿ ಮಹಾಸಭೆಯ ಸ್ವಾಗತಸಂಘದವರು ಮ್ಯಾನೇಜಿಂಗ್ ಕಮಿಟಿಯವರಿಗೆ ಕಳಿಸಬೇಕು. ಖರ್ಚು ಕಳೆದು ಹಣವುಳಿದಲ್ಲಿ ಮಹಾಸಭೆಯ ಫಂಡಿಗೆ ಕೊಡಲ್ಪಡತಕ್ಕದ್ದು. ಈ ಕಂಡೀಷನ್ನುಗಳಂತೆ ನಡೆದುಕೊಳ್ಳುವಬಗ್ಗೆ ಮ್ಯಾನೇಜಿಂಗ್ ಕಮಿಟಿಯವರು ತಕ್ಕ ಗ್ಯಾರಂಟಿಯನ್ನು ತೆಗೆದುಕೊಳ್ಳತಕ್ಕದ್ದು.

(10) ಮಹಾಸಭಾಚಿರಸ್ಥಾಯಿಫಂಡಿಗೆ ವಾಗ್ದಾನಮಾಡಿರುವವರಿಂದಲೂ ಇತರರಿಂದಲೂ ಹಣವಸೂಲ್ಮಾಡಲು ಮ್ಯಾನೇಜಿಂಗ್ ಕಮಿಟಿಯವರಿಗೆ ಅಧಿಕಾರವಿರುತ್ತದೆ.

(ಬಸವರಾಜದಿಂದ.)

ವೀರಶೈವಮಹಾಸಭೆಯು.

ಈಗಿನ ಇಪ್ಪತ್ತನೇ ಶತಮಾನದ ಭರಭರಾಟಿಯ ಕಾಲದಲ್ಲಿಯೂ ವೀರಶೈವಸಮಾಜವು ತನ್ನ ಧಾರ್ಮಿಕಸುಧಾರಣೆಯ ತಳಹದಿಯಾದ ವಿದ್ಯೆಯೆಂಬ ವೃಕ್ಷವನ್ನು ನಟ್ಟು ಅದನ್ನು ಪೋಷಿಸಲು ಫಂಡುವಗೈರೆ ಸ್ಥಾಪಿಸಿ ಕಾರ್ಯಮಾಡುತ್ತಿರಲಿಕ್ಕೆ ದೇಶದ ಜನರನ್ನು ಒಂದುಕಡೆ ಕಲಸಿ ಮಹತ್ವದ ಆಲೋಚನೆಗೈಯಲು ಮೊದಲು 1904 ನೇ ಇಸವಿಯಲ್ಲಿ ಧಾರವಾಡದಲ್ಲಿ ಮೊದಲನೆ ಮಹಾಸಭೆಯನ್ನು ನೆರಿಸಿತು. ಅನಂತರ ಇತರ ಕಡೆಗೆ 7-8 ಸಭೆಗಳಾಗಿ ದಾವಣಗೆರೆಯಲ್ಲಿ ಈ ಸಭೆಯು ಸ್ಥಿರವಾಗಿ ನಡೆಯಲು ಒಂದು ಫಂಡು ಕೂಡಿಸಲ್ಪಟ್ಟು ಅದರ ಅಧ್ಯಕ್ಷರು ದಿ. ಬಾ. ಪುಟ್ಟಣ್ಣಶೆಟ್ಟರನ್ನು ಮಾಡಿ ಮೈಸೂರ ಬ್ಯಾಂಕಿನಲ್ಲಿ ಆ ಹಣವನ್ನು ಇಡಲ್ಪಟ್ಟಿತಷ್ಟೇ? ಆದರೆ 1919 ನೇ ಇಸವಿಯಲ್ಲಿ ಬೀರೂರಲ್ಲಿ ಕೂಡಿದ ಮಹಾಸಭೆಯಲ್ಲಿ ಗುರುವಿರಕ್ತರ ವಿಷಯಕ್ಕೆ ಕಲಹಬಂದು ಮುಂದೆ ಸಭೆಯನ್ನು ಮಾಡುವದನ್ನೇ ಬಂದಿಡಲ್ಪಟ್ಟಿತು. ಸಮಾಜದಲ್ಲಿ ಕಲಹವೇಳಲಿ ಬಿಡಲಿ ಸಭೆಯು ಸರಿಯಾಗಿ ನಡೆದುಕೊಂಡು ಹೋಗುವದು ಹಿತಕರವು. ಇದಕ್ಕಾಗಿಯೇ ಫಂಡುಕೂಡಿಸಿಟ್ಟದ್ದು. ಹೀಗಿದ್ದು ಸಭೆಯನ್ನು ಬಾಧು ಇಡಲ್ಪಟ್ಟದು ಯೋಗ್ಯವಲ್ಲವೆಂದು ಅನೇಕರು ಅನೇಕಸಾರೆ ಪತ್ರಗಳಲ್ಲಿ ಬರೆದುಕೊಂಡರೂ ಅದು ಫಲವಾಗಲಿಲ್ಲವು. ಆದರೆ ಈಗ ಸದರಿ ಫಂಡಿನ ಪ್ರಸಿಡೆಂಟರಾದ ದಿ. ಬಾ. ಪುಟ್ಟಣ್ಣಶೆಟ್ಟರು ಈ ಸಾರೆ ಬರುವ ಡಿಸಂಬರದಲ್ಲಿ ಯಾರಾದರೂ ತಮ್ಮ ಪ್ರಾಂತದಲ್ಲಿ ಮಹಾಸಭೆಯನ್ನು ಕರೆಯುವಂತಿದ್ದರೆ ಸದರಿ ಸಭೆಯ ಫಂಡಿನ ಬಡ್ಡಿಯ ಉತ್ಪನ್ನವನ್ನು ಕೊಡಲಾದೀತೆಂದು ಜಾಹೀರಪಡಿಸಿರುತ್ತಾರೆ. ಆದ್ದರಿಂದ ಈಸಾರೆ ಹ್ಯಾಗೂ ಸಭೆಯು ನೆರವೇರಲು ಆತಂಕವಾಗಲಿಕ್ಕಿಲ್ಲವೆಂದು ನಮ್ಮ ಆಶೆಯವು. ಯಾಕೆಂದರೆ, ಬೆಂಗಳೂರ, ಮೈಸೂರವರು ಸಭೆಯನ್ನು ಕರೆಯುವದಿಲ್ಲವಂತೆ! ನಿಜಾಮನಾಡಿನವರು ಬಹುದಿವಸಗಳಿಂದ ಸಭೆಮಾಡಬೇಕೆಂದು ಆಲೋಚಿಸಿದ್ದರು. ಈಗ ಅನುಕೂಲಸ್ಥಿತಿಯು ಬಂದಿರುತ್ತದೆ. ಮಹಾಸಭೆಯೆಂಥ ಕಾಮಧೇನುವನ್ನು ಕೈಬಿಟ್ಟು ಕೊಡದೆ ಕೂಡಲೇ ಜಾಗ್ರತರಾಗಿ ಕಾರ್ಯತತ್ಪರರಾಗಬೇಕು. ಬಹಳ ದಿವಸದಿಂದ ಸಭೆಯು ನಡೆಯದೇ ಇದ್ದ ಮೂಲಕ ಜನರು ಹೆಚ್ಚಾಗಿ ಕೂಡಬಹುದು. ಸಭೆಯನ್ನು ಕರೆದವರಿಗೆ ಖರ್ಚು ಮೈಮೇಲೆ ಬೀಳಲಾರದು ಮೇಲಾಗಿ ಫಂಡಿನ ಹಣವೂ ಹೆಚ್ಚಾಗಿರಲಿಕ್ಕೇ ಬೇಕು.

ಆದರೆ 6-7 ವರ್ಷದಿಂದ ಜನರು ಮಾತ್ರ ಆಲಸ್ಯರಾಗಿರುತ್ತಾರೆ. ಒಂದುವೇಳೆ ಈಸಾರೆ ಯಾವ ಕಡೆಯವರೂ ಈ ಕಾರ್ಯಕ್ಕೆ ಕೈಹಾಕದಿದ್ದರೆ, ದಾವಣಗೆರೆಯವರು ತಮ್ಮಲ್ಲಿಯೇ ಈಸಾರೆ ಸಭೆಯನ್ನು ಕರೆಯಬೇಕೆಂದು ನಾವು ಆ ಪುರನಿವಾಸಿಗಳನ್ನು ಪ್ರಾರ್ಥಿಸುತ್ತೇವೆ. ಯಾಕೆಂದರೆ, ಸಭೆಯು ಸ್ಥಿರವಾಗಿ ನಡೆಯಲು ಫಂಡುವಗೈರೆ ಕೂಡಿಸಿಕೊಟ್ಟವರು ನೀವಾದ್ದರಿಂದ ಸಭೆಗೆ ದುರ್ದೆಶಪ್ರಾಪ್ತವಾಗಿದ್ದ ಕಾಲದಲ್ಲಿ ಪುನರಪಿ ಸಭೆಯನ್ನು ಕರೆದು ಇತಕೋ ನಿಂತರಥವನ್ನು ಸಾಗಿಸಿಕೊಟ್ಟರುವೆವು; ಇನ್ನು ಮುಂದೆ ಸಾಗಿಸಿಕೊಂಡು ಹೋಗುವದು ನಿಮ್ಮ ಕೆಲಸವೆಂದು ಸಮಾಜಕ್ಕೆ ಹೇಳಿದಂತಾಗಿ ನಿಮ್ಮ ಗ್ರಾಮಕ್ಕೆ ಭೂಷಣಬರುವದು. ಮತ್ತು ದಾವಣಗೆರೆಯವರು ಕೈಕೊಟ್ಟರೆ ಆ ಗ್ರಾಮಕ್ಕೆ ಈವರ್ಷ ಸಭೆಯನ್ನು ಕೂಡಿಸುವದು ಅಷ್ಟೇನು ಶ್ರಮದ ಕೆಲಸವಾಗಲಾರದು. ಯಾಕೆಂದರೆ, ದುಡ್ಡಿಲ್ಲದ ಕಾಲಕ್ಕೆ ಸಭೆಯನ್ನು ನೆರಸಿ ಸಹಾಯಮಾಡಿರಲು ಈಗ ಫಂಡಿನ ಹಣವು ಇರುತ್ತಿರಲಿಕ್ಕೆ ಅನುಮಾನಿಸುವದೇಕೆ? ದಾವಣಗೆರೆಯ ಮಹಾಜನರು ಕೂಡಲೇ ಈ ವಿಷಯವನ್ನು ಕೈಕೊಳ್ಳಬೇಕೆಂದು ಪುನಃ ಇನ್ನೊಮ್ಮೆ ಅವರಿಗೆ ನಮ್ಮ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇವೆ.

(ಲೋಕಮತದಿಂದ.)

ವೀರಶೈವಮಹಾಸಭೆಯೂ, ಅದರ ಚಿರಸ್ಥಾಯಿಫಂಡಿನವರೂ.

1904 ರಲ್ಲಿ ಜನ್ಮವನ್ನು ತಾಳಿ, 1917 ರ ವರೆಗೆ ಏಳುತ್ತ ಬೀಳುತ್ತ ತನ್ನ ಏಳೇ ಅಧಿವೇಶನಗಳನ್ನು ಕಂಡ ವೀರಶೈವಮಹಾಸಭೆಯು ಇನ್ನು ಮುಂದೆ ಚಿರಸ್ಥಾಯಿಯಾಗಿ ನಡೆಯಲೆಂದು ಚಿರಸ್ಥಾಯಿಫಂಡು ದಾವಣಗೆರೆಯಲ್ಲಿ ಕೂಡಿಸಲ್ಪಟ್ಟು, ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ನೇತೃತ್ವದಲ್ಲಿ ಒಂದು ಚಿರಸ್ಥಾಯಿಫಂಡಿನ ಕಮಿಟಿಯು ಏರ್ಪಟ್ಟಿತಷ್ಟೆ. ಆದರೆ, ಮಹಾಸಭೆಯು ಮರುವರುಷವೇ ಎಂದರೆ, 1919 ರಲ್ಲಿ ಬೀರೂರಲ್ಲಿ ಸೇರಲು, ವಿರಕ್ತಸಿಂಹಾಸನದವರ ಜಗಳವೆಂಬ ಕೊಡಕಿಗೆ ಶಿಲುಕಿ ಮುಗ್ಗರಿಸಿದುದು ಇನ್ನೂ ಏಳಲಿಲ್ಲ.

ಚಿರಸ್ಥಾಯಿಫಂಡಿನವರಾದರೂ ಕಳೆದ ಏಳುವರ್ಷಗಳಲ್ಲಿ ಕಾರ್ಯತತ್ಪರರಾದುದಕ್ಕೆ ಬಲವಾದ ದೃಷ್ಟಾಂತವಿಲ್ಲ. ಈ ಅವಧಿಯಲ್ಲಿ ಕೆಲವು ಸ್ಥಳದವರು ತಾವು ಮಹಾಸಭೆಯನ್ನು ಮಾಡಬೇಕೆಂದು ಪ್ರಯತ್ನಿಸಿ ಚಿರಸ್ಥಾಯಿಫಂಡಿನವರನ್ನು ಕೇಳಿಕೊಂಡಿದ್ದರೆಂತಲೂ, ಅವರಿಂದ ಸಹಾನುಭೂತಿಪರ ಉತ್ತರವು ಹೊರಡಲಿಲ್ಲವೆಂತಲೂ ಕೇಳುತ್ತೇವೆ. ಇದಕ್ಕೆ ಫಂಡಿನವರು ಸ್ವಯಮಾನ್ಯವಾದ ಕೆಲವು ನಿಬಂಧನೆಗಳನ್ನು ಕಲ್ಪಿಸಿಕೊಂಡಿರುವದೇ ಕಾರಣವೆಂದು ತೋರುತ್ತದೆ. ದಾವಣಗೆರೆಯಲ್ಲಿ ಕೂಡಿದ ಮಹಾಸಭೆಯಲ್ಲಿ ಚಿರಸ್ಥಾಯಿಫಂಡ್ ಕಮಿಟಿಯೊಂದು ಏರ್ಪಟ್ಟಿತಲ್ಲದೆ, ಅಲ್ಲಿ ಯಾವ ನಿಬಂಧನೆಗಳೂ ಏರ್ಪಡಲಿಲ್ಲ. ಇವುಗಳನ್ನು ಕಮಿಟಿಯವರೇ ಮಾಡಿಕೊಂಡಿದ್ದರೆ, ಅವು ಇನ್ನೂ ಮಹಾಸಭೆಯಲ್ಲಿ ಮಾನ್ಯತೆಯನ್ನು ಹೊಂದಿಲ್ಲ. ಅವುಗಳನ್ನು ಈಗ ಜನರ ತಿಳುವಳಿಕೆಗಾಗಿ ಪ್ರಕಟಿಸುವದು ಯುಕ್ತವಾಗಿದೆ.

ಮಹಾಸಭೆಯ ಸಂಬಂಧವಾಗಿ ಲೋಕಮತವೇನಿದೆಯೆಂಬುದು ಈ ಪತ್ರಿಕೆಯಲ್ಲಿ ಈ ಮುಂಚೆ ಪ್ರಕಟವಾಗುತ್ತ ಬಂದ ಲೇಖನಗಳಿಂದ ವಾಚಕರಿಗೆ ವೇದ್ಯವಾಗಿಯೇ ಇದೆ. ಇದುವರೆಗೆ ನಿದ್ರಿಸುತ್ತಾ ಇದ್ದ ಚಿರಸ್ಥಾಯಿಫಂಡಿನವರು ಈಗ ಎಚ್ಚತ್ತು, ಬರುವ ಡಿಸೆಂಬರ್ ತಿಂಗಳಲ್ಲಿ ಮಹಾಸಭೆಯನ್ನು ಮಾಡಬೇಕೆಂದು ಅಪೇಕ್ಷಿಸುವವರಿಗೆ ಫಂಡಿನ ನಿಬಂಧನೆಗಳಿಗೊಳಪಟ್ಟು ಸೂಕ್ತವಾದ ದ್ರವ್ಯಸಹಾಯ ಮಾಡುವದಾಗುತ್ತದೆಂದು ಪ್ರಕಟಿಸಿರುವರು. ಅದು ಇನ್ನೊಂದುಕಡೆ ಪ್ರಕಟವಾಗಿದೆ. ಇದೊಂದು ಸಂತೋಷದ ಸಂಗತಿಯೇ ಸರಿ. ಇದಕ್ಕಾಗಿ ನಾವು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರನ್ನು ಅಭಿನಂದಿಸುವೆವು.

ಇನ್ನು, ಮಹಾಸಭೆಯನ್ನು ಮಾಡಲು ಅನೇಕ ಪ್ರಮುಖರ [illegible] ಮಹಾಸಭೆಯು ಧಾರವಾಡದಲ್ಲಿ ಜನ್ಮತಾಳಿತು, ಅದು [illegible]

ಜಲ್ಲಿಯಲ್ಲಿ ನೆರೆದ್ದು. ಗದಗ, ಹುಬ್ಬಳ್ಳಿಗಳಂಥ ಮುಖ್ಯಪಟ್ಟಣಗಳು ಹೆಚ್ಚಾಗಿ ವೀರಶೈವರವಸತಿಯುಳ್ಳವುಗಳಾಗಿದ್ದು, ಮಹಾಸಭೆಯನ್ನು ಮಾಡಲು ಸರ್ವರೀತಿಯಿಂದಲೂ ಯೋಗ್ಯವಾಗಿವೆ. ಮಹಾಸಭೆಯು ಇದುವರೆಗೂ ನಿಜಾಂರಾಜ್ಯದಲ್ಲಿ ಹೆಜ್ಜೆ ಇಟ್ಟಿಲ್ಲ. ವಿಶೇಷ ವೀರಶೈವರವಸತಿಯುಳ್ಳ ರಾಯಚೂರು, ಗುಲಬರ್ಗಾಗಳಂಥ ನಿಜಾಂರಾಜ್ಯದ ದೊಡ್ಡಪಟ್ಟಣಗಳ ಜನರು ಮಹಾಸಭೆಯನ್ನು ನಡೆಯಿಸಲು ಆತುರಪಡುತ್ತಿದ್ದಾರೆ. ಇವುಗಳಲ್ಲದೆ, ಇನ್ನೂ ಅನೇಕ ಸ್ಥಳದವರು ಮಹಾಸಭೆಯನ್ನು ಮಾಡಿ, ತಮ್ಮ ಕರ್ತೃತ್ವಶಕ್ತಿಯನ್ನೂ, ಸಮಾಜಸೇವೆಯನ್ನೂ ವ್ಯಕ್ತಗೊಳಿಸಲು ಉತ್ಸುಕರಿದ್ದಾರೆ. ಆದುದರಿಂದ ಇವರು ಈಗಲೇ ಕಾರ್ಯತತ್ಪರರಾಗಿ, ಮುಂದಿನ ಡಿಸೆಂಬರ ತಿಂಗಳಲ್ಲಿ ಮಹಾಸಭೆಯನ್ನು ಬಹುಯಶಸ್ವಿಯಾಗಿ ನಡೆಯಿಸಿ, ಕೀರ್ತಿಭಾಜನರಾಗಲೆಂದು ನಾವು ನೆರೆ ನಂಬಿದ್ದೇವೆ.

ಚಿಕ್ಕಮಗಳೂರು ಶ್ರೀ ನರಸಿಂಹರಾಜಒಡೆಯರ್ ಟೌನ್‌ಹಾಲಿನಲ್ಲಿ ನಡೆದ ಮೈಸೂರುಸೀಮೆಯ ಇಂಡಿಯನ್ ಪ್ಲಾಂಟರುಗಳ ೨ ನೇ ಮಹಾಸಭೆಯ ನಡವಳಿಕೆಗಳು

ಮ|| ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆಟಿ.ಸಿ.ಐ.ಇ. ಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಮ|| ಜಿ. ಬಿ. ಹೆಬ್ಬಿಕರ್ ಸಾಹೇಬರೂ ಪ್ಲಾಂಟರುಗಳ ೧ನೇ ಮಹಾಸಭಾ ಅಧ್ಯಕ್ಷರಾಗಿದ್ದ ಮ|| ಬಿ. ಕೆ. ಗರುಡಾಚಾರ್ಯರೂ ಸಭಾಧ್ಯಕ್ಷರ ಪಕ್ಕದಲ್ಲಿ ಕುಳಿತಿದ್ದರು.

ಸ್ವಾಗತಕಮಿಟಿಯ ಛೇರ್ಮನ್ ಮ|| ಬಿ. ಕೇಶವಯ್ಯನವರು ತಮ್ಮ ಭಾಷಣವನ್ನು ಮಾಡಿ ಸಭಾಸದರಿಗೆ ಸ್ವಾಗತವನ್ನು ಬಯಸಿದರು.

೧. ನಮ್ಮ ಸಂಸ್ಥಾನದ ದಿವಾನ್ ಪದವಿಯನ್ನು ಹೊಂದಿದ ನಮ್ಮ ದೇಶೀಯರಾಗಿ ಲೋಕರಂಜಕರಾಗಿರುವ ಶ್ರೀಮಾನ್ ಅಮಾನ್-ಉಲ್-ಮುಲ್ಕ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಎಸ್ಕ್ವಯರ್, ಬಿ.ಎ.,ಸಿ.ಐ.ಇ.,ಓ.ಬಿ.ಇ., ಯವರಿಗೆ ಶುಭವಾದನಗಳನ್ನು ತಂತಿಮೂಲಕ ಕಳುಹಿಸತಕ್ಕದ್ದೆಂದು ಏಕಕಂಠ್ಯವಾಗಿ ನಿರ್ಧರಿಸಲ್ಪಟ್ಟಿತು.

೨. ದೇಶೀಯ ಪ್ಲಾಂಟರುಗಳ ಕಾನ್ಫರೆನ್ಸನ್ನು ವರ್ಷವರ್ಷೇ ನಡೆಯಿಸಬೇಕೆಂತಲೂ ಒಂದೊಂದು ವರ್ಷ ಒಂದೊಂದುಕಡೆ ನಡೆಯಿಸತಕ್ಕದ್ದೆಂತಲೂ ಮೂರನೇ ವರ್ಷದ ಕಾನ್ಫರೆನ್ಸನ್ನು ನಡೆಯಿಸಲು ತಕ್ಕ ಏರ್ಪಾಡುಗಳನ್ನು ಮಾಡತಕ್ಕ ಬಗ್ಗೆ ಒಂದು ಕಾರ್ಯನಿರ್ವಾಹಕಸಭೆಯನ್ನು ಪ್ರತಿವರ್ಷದ ಕಾನ್ಫರೆನ್ಸಿನಲ್ಲಿ ರಚಿಸಬೇಕೆಂತಲೂ ಮುಂದಿನವರ್ಷದ ಕಾನ್ಫರೆನ್ಸನ್ನು ನಡೆಯಿಸಲು ಅವಶ್ಯವಾದ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಅವಶ್ಯವಿದ್ದರೆ ಇತರರನ್ನು ಮೆಂಬರುಗಳನ್ನಾಗಿ ಸೇರಿಸಿಕೊಳ್ಳುವುದಕ್ಕೆ ಅಧಿಕಾರಸಹಿತ ೧೬ ಮಂದಿ ದೊಡ್ಡಮನುಷ್ಯರ ಒಂದು ಕಮಿಟಿಯನ್ನು ನಿರ್ಮಿಸಿರುತ್ತೆಂತಲೂ ತೀರ್ಮಾನಿಸಲಾಯಿತು.

೩. ದೇಶೀಯ ಸಾಹುಕಾರರೂ, ಬ್ಯಾಂಕ್‌ಗಳವರೂ ಕಾಫೀ ವ್ಯವಸಾಯಕ್ಕೆ ಹಣಗಳನ್ನು ಸಾಲಕೊಡುತ್ತಾ ಇಲ್ಲವಾದ್ದರಿಂದ ಪ್ಲಾಂಟರುಗಳು ಅನ್ಯದೇಶೀಯರಿಗೆ ಬಹು ದುಬಾರಿಯಾದ ಬಡ್ಡಿಗಳನ್ನು ತೆರಬೇಕಾಗಿರುವ ಕಾರಣ ಕಾಫೀ ಉತ್ಪತ್ತಿಯ ವಿಶೇಷಭಾಗವು ಅನ್ಯದೇಶೀಯರಿಗೆ ಸಲ್ಲುತ್ತಾ ನಮ್ಮವರಿಗೆ ನಷ್ಟಕ್ಕೆ ಕಾರಣವಾಗಿರುವುದಲ್ಲದೆ, ದೇಶೀಯರ ಐಶ್ವರ್ಯವು ವೃದ್ಧಿಯಾಗುವುದಕ್ಕೆ ಅವಕಾಶವಿಲ್ಲದಂತೆ ಆಗಿರುವುದರಿಂದ, ಪ್ಲಾಂಟರುಗಳಿಗೆ ನ್ಯಾಯವಾದ ಬಡ್ಡಿಗೆ ದೊರೆಯುವಂತೆ ಒಂದು ಜಾಯಿಂಟ್‌ಸ್ಟಾಕ್ ಬ್ಯಾಂಕನ್ನು ಸ್ಥಾಪಿಸತಕ್ಕದ್ದೆಂತಲೂ, ಬ್ಯಾಂಕನ್ನು ಏರ್ಪಾಡು ಮಾಡುವುದಕ್ಕಾಗಿ ೨೪ ಮಂದಿ ದೊಡ್ಡಮನುಷ್ಯರುಗಳ ಒಂದು ಕಮಿಟಿಯನ್ನು ಏರ್ಪಡಿಸಿರುತ್ತೆಂತಲೂ ಸಭೆಯವರೆಲ್ಲರು ಏಕವಾಕ್ಯತೆಯಿಂದ ನಿರ್ಧರಿಸಲ್ಪಟ್ಟಿತು.

೪. ಕಾಫೀ ಪ್ರಾಂತ್ಯವಾದ ಮಲೆನಾಡಿನ ಅಭಿವೃದ್ಧಿಗೆ ಒಂದು ಮುಖ್ಯಕಾರಣವಾದ ರೈಲ್ವೆಯನ್ನು ಕಡೂರಿನಿಂದ ಚಿಕ್ಕಮಗಳೂರುವರೆಗೆ ಹಾಕಲು ಆರ್ಡರನ್ನು ದಯಪಾಲಿಸಿದ್ದಕ್ಕಾಗಿ ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಈ ಕಾನ್ಫರೆನ್ಸಿನವರು ವಂದನೆಗಳನ್ನು ಸಮರ್ಪಿಸತಕ್ಕದ್ದೆಂತಲೂ ಈ ಲೈನ್ನಲ್ಲಿ ಯಾವ ಬದಲಾವಣೆಯೂ ಇಲ್ಲದೆ ನಿಶ್ಚಯವಾಗಿರುವ ಕಡೂರಿನಿಂದ ಸಕ್ರಾಯಪಟ್ಟಣದ ವರೆಗಿನ ಭಾಗದ ಕೆಲಸವನ್ನು ಕೂಡಲೆ ಪ್ರಾರಂಭಿಸುವಂತೆಯೂ ಈ ರೈಲ್ವೆ ಕಾಮಗಾರಿಯ ಪ್ರಾರಂಭೋತ್ಸವವು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರಿಂದ ನಡೆಸಲ್ಪಡುವಂತೆ ಪ್ರಾರ್ಥಿಸಬೇಕೆಂತಲೂ ಇದರಂತೆ ಏರ್ಪಾಟುಗಳನ್ನು ಮಾಡಿಸತಕ್ಕ ಬಗ್ಗೆ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರನ್ನು ಪ್ರಾರ್ಥಿಸತಕ್ಕದ್ದೆಂತಲೂ ಸರ್ವಸಮ್ಮತಿಯಿಂದ ತೀರ್ಮಾನಿಸಲಾಯಿತು.

೫. ಕಾಫೀಪ್ಲಾಂಟರುಗಳ ಪೈಕಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಪ್ಲಾಂಟರುಗಳ ಕಡೆಯಿಂದ ದೇಶೀಯ ಪ್ಲಾಂಟರು ಚುನಾಯಿಸಲ್ಪಟ್ಟಿದೆ. ಯೂರೋಪಿಯನ್ ಪ್ಲಾಂಟರ್ ಒಬ್ಬರಿಗೆ ನಾಮಿನೇಷನ್ ಮೂಲಕ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ತೆಗೆದುಕೊಳ್ಳುತ್ತಾ ಇರುವಂತೆ ಚುನಾವಣೆಯಲ್ಲಿ ಯೂರೋಪಿಯನ್ ಪ್ಲಾಂಟರ್ ಚುನಾಯಿಸಲ್ಪಟ್ಟರೆ ಒಬ್ಬ ದೇಶೀಯ ಪ್ಲಾಂಟರನ್ನು ನಾಮಿನೇಷನ್ ಮೂಲಕ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ತೆಗೆದುಕೊಳ್ಳುವಂತೆ ಏರ್ಪಡಿಸಬೇಕೆಂದು ಮೆ|| ರಾಮಚಂದ್ರ ವಾಸುದೇವರಾಯರು ಸೂಚಿಸಿದುದನ್ನು ಮೆ|| ಬಿ. ಎ. ದೇವೇಗೌಡರು ಅನುಮೋದಿಸಿದರು. ಇದರಂತೆ ಕಾನೂನನ್ನು ತಿದ್ದುಪಡಿ ಮಾಡುವುದು ನ್ಯಾಯವಾದ್ದೆಂತಲೂ, ಈ ರೀತಿ ಏರ್ಪಾಡಾಗತಕ್ಕ ಬಗ್ಗೆ ಲೆಜಿಸ್ಲೇಟಿವ್ ಕೌನ್ಸಿಲ್ ಸೆಕ್ರೆಟರಿಯವರಿಗೆ ಬರೆಸತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

೬. ಫಾರೆಸ್ಟ್, ಹುಲ್ಲುಗಾವಲು ವಗೈರೆ ವಿಚಾರಗಳಲ್ಲಿ ಸರ್ಕಾರದಿಂದ ರೈತರಿಗೆ ಕೊಡಲ್ಪಟ್ಟಿರುವ ರಿಯಾಯಿತಿಗಳು ಕಾಫೀ ಪ್ಲಾಂಟರುಗಳಿಗೆ ಇಲ್ಲದೆ ಇರುವುದರಿಂದ ಪ್ಲಾಂಟರುಗಳಿಗೆ ತೊಂದರೆಗೆ ಕಾರಣವಾಗಿರುವುದಲ್ಲದೆ ಹೀಗೆ ವ್ಯತ್ಯಾಸವಿರುವುದು ನ್ಯಾಯವಲ್ಲವಾದ್ದರಿಂದ, ಸರ್ಕಾರದಿಂದ ರೈತರಿಗೆ ಇರುವ ರಿಯಾಯಿತಿಗಳೆಲ್ಲವೂ ಪ್ಲಾಂಟರುಗಳಿಗೂ ಇರುವಂತೆ ಏರ್ಪಾಡುಮಾಡಿಸಿಕೊಡಬೇಕೆಂದು ಗೌರ್ನಮೆಂಟಿನವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಮೆ|| ಜಾವಳಿ ಕೃಷ್ಣರಾಯರು ಸೂಚಿಸಿದ್ದನ್ನು ಮೆ|| ಬಿ. ಎ. ದೇವೇಗೌಡರು ಅನುಮೋದಿಸಿ ಮೆ|| ಆರ್. ವಿ. ರಾಯರು ಪೋಷಿಸಿದಂತೆ ನಿರ್ಧರಿಸಲ್ಪಟ್ಟಿತು.

೭. ಕಾಫೀಭೂಮಿಗಳಲ್ಲಿರತಕ್ಕ ನೀರು ಸರವುಗಳ ಪಾರ್ಶ್ವಗಳಲ್ಲಿ ೨೫ ಗಜ ಭೂಮಿಯನ್ನು ಸಾಗುವಳಿ ಮಾಡಕೂಡದೆಂದು ಇರುವ ನಿರ್ಬಂಧವು ಅಪ್ರಕೃತವಾದ್ದರಿಂದ ಈ ನಿರ್ಬಂಧವನ್ನು ತಪ್ಪಿಸುವಂತೆಯೂ, ಕಾಫೀ ಜಮೀನಿನಲ್ಲಿ ಯಾಲಕ್ಕಿಯನ್ನು ಬೆಳೆಯಬಾರದೆಂದು ಸರ್ಕಾರದವರು ನಿರೋಧಿಸುತ್ತಿರುವುದು ನ್ಯಾಯವಲ್ಲವಾದ್ದರಿಂದ ಕಾಫೀ ಜಮೀನಿನಲ್ಲಿ ಯಾಲಕ್ಕಿ ಸಾಗುವಳಿ ಮಾಡುವುದಕ್ಕೂ, ಯಾಲಕ್ಕಿ ಜಮೀನಿನಲ್ಲಿ ಕಾಫೀ ಸಾಗುವಳಿಮಾಡುವುದಕ್ಕೂ ಅಡಚಣೆಪಡಿಸದಂತೆ ಆರ್ಡರು ಮಾಡಿಸುವ ಹಾಗೆ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಮೆ|| ಟಿ. ನರಸಿಂಗರಾಯರು ಸೂಚಿಸಿದುದನ್ನು ಮೆ|| ಬಸವೇಗೌಡರು ಅನುಮೋದಿಸಿದ ಪ್ರಕಾರ ತೀರ್ಮಾನಿಸಲಾಯಿತು.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯ ಭಾಗ.

೫ ನೆಯ ಪ್ರಕರಣ.

ದಕ್ಷಿಣಾಫ್ರಿಕೆಗೆ ಹೊರಡಲು ಸನ್ನದ್ಧನಾದುದು.

ನನ್ನ ಅಣ್ಣನ ವಿಚಾರವಾಗಿ ಶಿಫಾರಸು ಮಾಡುವುದಕ್ಕಾಗಿ ನಾನು ಆ ಉದ್ಯೋಗಿಯ ಬಳಿಗೆ ಹೋಗಿದ್ದುದು ಅನುಚಿತವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಆತನ ಅಸಹನೆಗಾಗಿ ಕೋಪವು ಮಿತಿಮೀರಿಹೋಗಿದ್ದಿತು. ನಾನು ೫ ನಿಮಿಷಗಳಿಗಿನ್ನ ಹೆಚ್ಚು ಕಾಲ ಹಿಡಿಯದಂತೆ ಹೇಳಬೇಕಾದುದೆನ್ನೆಲ್ಲಾ ೫ ನಿಮಿಷದಲ್ಲೇ ಹೇಳಿ ಮುಗಿಯಿಸುತ್ತಿದ್ದೆನು. ಆದರೆ ನಾನು ಮಾತನಾಡುವುದೇ ಅವನಿಗಿಷ್ಟವಿರಲಿಲ್ಲವು. ನೀವು ಹೋಗಬಹುದೆಂದು ಆತನು ಮರ್ಯಾದೆಯಿಂದ ನನಗೆ ಹೇಳಬಹುದಾಗಿದ್ದಿತಾದರೂ ಅಧಿಕಾರ ಪಿಶಾಚವು ಬಹಳ ಪ್ರಬಲವಾಗಿದ್ದಿತು. ಆ ಅಧಿಕಾರಿಗೆ ಸೈರಣೆಯು ಕೊಂಚವಾದರೂ ಇಲ್ಲವೆಂದು ನನಗೆ ತರುವಾಯ ತಿಳಿದಿತು. ಆತನು ನೋಡಲು ಬಂದವರನ್ನು ಬಹಳವಾಗಿ ಅವಮಾನಪಡಿಸುತ್ತಲೇ ಇದ್ದನು. ಯಾವಕಾರಣದಿಂದಲಾದರೂ ಇಷ್ಟವಿಲ್ಲದಿದ್ದಲ್ಲಿ ಆತನಿಗೆ ತಡಿಯಲಾರದಷ್ಟು ಕೋಪ ಬರುತ್ತಿದ್ದುದಾಗಿ ನಾನು ಕೇಳಿದ್ದೆನು. ವಕೀಲನಾಗಿ ನಾನು ಆತನ ಕೋರ್ಟಿನಲ್ಲೇ ವಿಶೇಷವಾಗಿ ಕೆಲಸಮಾಡಬೇಕಾಗಿದ್ದಿತು. ಆತನನ್ನು ಪ್ರಶಾಂತನನ್ನಾಗಿ ಮಾಡಲು ಸಾಧ್ಯವಿರಲಿಲ್ಲವು. ಆತನ ಕಟಾಕ್ಷವನ್ನು ಸಂಪಾದಿಸಲು ನಾನೊಪ್ಪಲಿಲ್ಲವು. ಆತನಮೇಲೆ ಕೇಸುಮಾಡುತ್ತೇನೆಂದು ಬೆದರಿಸಿ ಬಂದಮೇಲೆ ಸುಮ್ಮನಿರಲು ನನಗಿಷ್ಟವಿರಲಿಲ್ಲವು. ಈ ಮಧ್ಯೆ ದೇಶಸಂಬಂಧವಾದ ಸಾಮಾನ್ಯ ರಾಜಕೀಯವಿಚಾರವನ್ನು ನಾನು ಗ್ರಹಿಸಲಾರಂಭಿಸಿದೆನು. ಕಥಿಯವಾಡದಲ್ಲಿ ದೊಡ್ಡ ಸಂಸ್ಥಾನಗಳಲ್ಲಿರುವಂತೆಯೇ ಅಲ್ಲಿ ರಾಜಕೀಯ ವಿಚಾರವು ಬಹಳ ಹೆಚ್ಚಾಗಿರುವುದು ಸಹಜವೇ. ಸಂಸ್ಥಾನಗಳ ಮಧ್ಯ ಮನಸ್ತಾಪ, ಅಧಿಕಾರಸಂಬಂಧವಾಗಿ ಉದ್ಯೋಗಸ್ಥರುಗಳಲ್ಲಿ ಮನಸ್ತಾಪ ಮೊದಲಾದುವು ಪ್ರಬಲವಾಗಿದ್ದುವು. ಸಂಸ್ಥಾನಾಧಿಪತಿಗಳು ಯಾವಾಗಲೂ ಪರಾಧೀನರಾಗಿಯೇ ಇರುವರು. ಮುಖಸ್ತುತಿಪರಾಯಣರ ಮಾತಿಗೆ ಕಿವಿಕೊಡುತ್ತಿದ್ದರು. ಪಾಶ್ಚಾತ್ಯ ಉದ್ಯೋಗಿಯ ಬಂಟನನ್ನು ಕೂಡ ಸಂಸ್ಥಾನಾಧಿಪತಿಗಳು ಬಹಳವಾಗಿ ಗೌರವಿಸಬೇಕಾಗಿದ್ದಿತು. ಇನ್ನು ಆ ಉದ್ಯೋಗಿಯ ಶಿರಸ್ತೇದಾರನ ಮಾತನ್ನಂತು ಹೇಳಬೇಕಾದುದೇ ಇಲ್ಲವು. ಅಧಿಕಾರಿಗಿನ್ನ ಶಿರಸ್ತೇದಾರನನ್ನೇ ಹೆಚ್ಚಾಗಿ ಗೌರವಿಸಬೇಕಾಗಿದ್ದಿತು. ಶಿರಸ್ತೇದಾರನ ಇಷ್ಟವೇ ಲಾ. ಅಧಿಕಾರಿಯು ಶಿರಸ್ತೇದಾರನ ಕೈಕೀಲು ಬೊಂಬೆಯಾಗಿದ್ದುದರಿಂದ ಶಿರಸ್ತೇದಾರನ ಆದಾಯವು ಅಧಿಕಾರಿಯ ಸಂಬಳಕ್ಕಿನ್ನ ಹೆಚ್ಚಾಗಿದ್ದಿತು. ಹೀಗೆ ಹೇಳುವುದರಲ್ಲಿ ಕೊಂಚ ಅತಿಶಯೋಕ್ತಿ ಇರಬಹುದಾದರೂ ಸಂಬಳಕ್ಕಿನ್ನ ಹೆಚ್ಚು ದರ್ಜೆಯಲ್ಲಿ ಶಿರಸ್ತೇದಾರನು ಜೀವಿಸುತ್ತಾನೆಂಬ ಮಾತು ನಿಶ್ಚಯವು. ಈ ಪರಿಸ್ಥಿತಿಯು ನನಗೆ ವಿಷಪ್ರಾಯವಾಗಿ ಕಂಡುಬಂದಿತು. ಆ ವಿಷಸಂಪರ್ಕವಾಗದಂತೆ ನನ್ನ ಪರಿಸ್ಥಿತಿಯಲ್ಲಿ ವಾಸಿಸಿಕೊಂಡಿರುವುದು ಹೇಗೆ? ಎಂಬ ಸಮಸ್ಯೆಯನ್ನು ಕುರಿತು ನಾನು ನಿರಂತರದಲ್ಲೂ ಯೋಚಿಸಬೇಕಾಗಿದ್ದಿತು.

ನನಗೆ ಉತ್ಸಾಹವು ಪೂರ್ತಿಯಾಗಿ ತೊಲಗಿಹೋಯಿತು. ಅದನ್ನು ನನ್ನ ಅಣ್ಣನು ಸ್ಪಷ್ಟವಾಗಿ ತಿಳಿದಿದ್ದನು. ಇನ್ನೆಲ್ಲಾದರೂ ನನಗೆ ಉದ್ಯೋಗವು ದೊರಕಿದರೆ ನನಗೆ ಬಹಳ ಅನುಕೂಲವಾಗಿರುವುದೆಂದು ನಾವಿಬ್ಬರೂ ಗ್ರಹಿಸಿದೆವು. ತೊಂದರೆಯಿಲ್ಲದ ಮಂತ್ರಿಪದವಿಯೂ ನ್ಯಾಯವಾದಿ ಉದ್ಯೋಗವೂ ಲಭಿಸುವುದು ಅಸಂಭವವು. ನ್ಯಾಯವಾದಿಯಾಗಿ ಕೆಲಸಮಾಡಲು ಪಾಶ್ಚಾತ್ಯ ಉದ್ಯೋಗಿಯ ಕೂಡ ನಾನು ಮಾಡಿದ ಕಲಹವು ಅಭ್ಯಂತರವಾಗಿದ್ದಿತು. ಪೋರಬಂದರು ಆಗ ಅವರ ಪರಿಪಾಲನಕ್ಕೊಳಪಟ್ಟಿದ್ದಿತು. ಸಂಸ್ಥಾನಾಧಿಪತಿಗೆ ಕೆಲ ಅಧಿಕಾರವನ್ನು ಸಂಪಾದಿಸಲು ನಾನು ಅಲ್ಲಿ ನಿಯಮಿಸಲ್ಪಟ್ಟೆನು. ರೈತರಿಂದ ಹೆಚ್ಚಾದ ಕಂದಾಯವನ್ನು ವಸೂಲ್ಮಾಡುತ್ತಿದ್ದುದರಿಂದ ಆ ವಿಚಾರವಾಗಿ ಅಧಿಕಾರಿಯ ಅಡ್ಮಿನಿಸ್ಟ್ರೇಟರನ್ನು ನೋಡಬೇಕಾಗಿದ್ದಿತು. ಈ ಅಧಿಕಾರಿಯು ಭಾರತೀಯನಾಗಿದ್ದರೂ ಈಚೆಗೆ ಪಾಶ್ಚಾತ್ಯ ಉದ್ಯೋಗಿಯ ಅಹಂಭಾವಕ್ಕಿಂತ ಈತನ ಅಹಂಭಾವವೇ ಹೆಚ್ಚಾಗಿದ್ದಿತು. ಆತನು ಸಮರ್ಥನಾಗಿದ್ದರೂ ಅದರಿಂದ ರೈತರಿಗೆ ಯಾವ ಪ್ರಯೋಜನವೂ ಆದಂತೆ ನನಗೆ ತೋರಲಿಲ್ಲವು. ಸಂಸ್ಥಾನಾಧಿಪತಿಯಾದ ರಾಣಾಯವರಿಗೆ ಕೆಲ ಅಧಿಕಾರವನ್ನು ಸಂಪಾದಿಸಲು ಯೋಚಿಸಿದೆನಾದರೂ ಅದಕ್ಕೆ ತಕ್ಕ ಸಮಾಧಾನವನ್ನು ಮಾಡಲಾರದೆ ಹೋದೆನು. ಅವರ ವಿಷಯವನ್ನು ಅಧಿಕಾರಿಗಳು ಶ್ರದ್ಧೆಯಿಂದ ಗಮನಿಸಲಿಲ್ಲವೆಂದು ಕೂಡ ನನಗೆ ತೋರಿತು. ಈರೀತಿಯಾಗಿ ಕೆಲಸದಲ್ಲು ಕೂಡ ನನಗೆ ಕೊಂಚ ನಿರುತ್ಸಾಹವುಂಟಾಯಿತು. ನನ್ನ ಕಕ್ಷಿದಾರರಿಗೆ ನ್ಯಾಯವು ದೊರೆಯಲಿಲ್ಲವು. ನ್ಯಾಯವನ್ನು ದೊರಕಿಸಲು ನನಗೆ ಯಾವ ಸಾಧನವೂ ತೋರಲಿಲ್ಲ. ಪೊಲಿಟಿಕಲ್ ಏಜಂಟಿಗಾಗಲಿ ಗೌರ್ನರಿಗಾಗಲಿ ಅಪೀಲನ್ನು ಮಾಡಬಹುದು. ಆದರೆ ಅವರು ಅಪೀಲನ್ನು ಹೊಡೆದುಹಾಕಿಬಿಡುವುದೇನೋ ನಿಶ್ಚಯ. ಈ ವಿಧವಾದ ತೀರ್ಪಿಗೆ ಯಾವುದಾದರು ನಿಯಮವು ಇದ್ದರೆ ಚೆನ್ನಾಗಿದ್ದಿತಾದರೂ ಉದ್ಯೋಗಿಯ ಇಷ್ಟವೇ ವಿಧಿಯಾಗಿರುತ್ತಿದ್ದಿತು. ನನಗೆ ಬಹಳ ಕೋಪವುಂಟಾಯಿತು.

"ನಮಗೆ ದಕ್ಷಿಣಾಫ್ರಿಕೆಯಲ್ಲಿ ವ್ಯಾಪಾರ ನಡೆಯುತ್ತದೆ. ನಮ್ಮದೊಂದು ದೊಡ್ಡ ವರ್ತಕಸಂಘವು. ದಕ್ಷಿಣಾಫ್ರಿಕೆಯಲ್ಲಿ 4,00,000 ರೂ. ಗಳಿಗೆ ದಾವಾಮಾಡಿರುತ್ತೇವೆ. ದಾವಾ ಆಗಿ ಬಹಳದಿವಸಗಳಾದರೂ ಇನ್ನೂ ಬಗೆಹರಿಯಲಿಲ್ಲವು. ಅಲ್ಲಿ ದೊಡ್ಡದೊಡ್ಡ ವಕೀಲರುಗಳನ್ನೂ ಬ್ಯಾರಿಸ್ಟರುಗಳನ್ನೂ ನಿಯಮಿಸಿದ್ದೆವು. ನಿಮ್ಮ ತಮ್ಮನನ್ನು ನೀವು ಅಲ್ಲಿಗೆ ಕಳುಹಿಸಿದರೆ ನಮಗೂ ಆತನಿಗೂ ಲಾಭಕರವಾಗಿರುವುದು. ಆತನು ಅಲ್ಲಿ ನಮ್ಮ ನ್ಯಾಯವಾದಿಗೆ ಈ ದಾವಾ ಕುರಿತು ಚೆನ್ನಾಗಿ ತಿಳಿವಳಿಕೆ ಕೊಡಬಹುದು. ಹೊಸದೇಶವನ್ನು ನೋಡುವುದಕ್ಕೂ, ಹೊಸಪರಿಚಯ ಮಾಡಿಕೊಳ್ಳುವುದಕ್ಕೂ ಅವಕಾಶವಾಗುವುದು." ಎಂದು ಪೋರಬಂದರಿನ ಒಬ್ಬ ಮೇಮನು ವರ್ತಕಸಂಘದವರು ನನ್ನ ಅಣ್ಣನಿಗೆ ಕಾಗದ ಬರೆದಿದ್ದರು. ಅದನ್ನು ನನ್ನ ಅಣ್ಣನು ನನಗೆ ಹೇಳಿದನು. ಅಲ್ಲಿ ನಾನು ಕೂಡ ಕೋರ್ಟಿಗೆ ಹೋಗಬೇಕೊ ಇಲ್ಲವೊ ನನಗೆ ಸ್ಪಷ್ಟವಾಗಿ ತಿಳಿಯಲಿಲ್ಲವಾದರೂ ಹೋಗಬೇಕೆಂದು ನನಗೆ ಆಸಕ್ತಿಯುಂಟಾಯಿತು. ಆ ಸಂಘದ ಹೆಸರು ದಾದಾ ಅಬ್ದುಲ್ಲಾ ಕಂಪೆನಿ. ಕೀ|| ಶೇ|| ಸೇಟು ಅಬ್ದುಲ್‌ಕರೀಂ ಝುವಾರಿಯವರು ಆಗ ಅದಕ್ಕೆ ಮುಖ್ಯಸ್ಥರಾಗಿದ್ದರು. ನನ್ನ ಅಣ್ಣನು ನನ್ನನ್ನು ಸೇಟರವರಿಗೆ ಪರಿಚಯಮಾಡಿಸಿದನು. "ಕಷ್ಟವೇನೂ ಇಲ್ಲವು. ಅಲ್ಲಿ ಬಹಳಜನ ದೊಡ್ಡದೊಡ್ಡ ಪಾಶ್ಚಾತ್ಯರು ನಮ್ಮ ಮಿತ್ರರಾಗಿರುವರು. ಅವರೊಡನೆ ನೀವು ಪರಿಚಯಮಾಡಿಕೊಳ್ಳಬಹುದು. ನಮ್ಮ ಅಂಗಡಿಯಲ್ಲಿ ಕೂಡ ನೀವು ಕೆಲಸಮಾಡಬಹುದು. ನಾವು ಜವಾಬನ್ನು ಬಹಳಮಟ್ಟಿಗೆ ಆಂಗ್ಲಭಾಷೆಯಲ್ಲೇ ಅಲ್ಲಿ ನಡೆಸುವುದು. ಆ ಕೆಲಸವನ್ನು ಸಹ ನೀವು ಮಾಡುತ್ತಿರಬಹುದು. ನಿಮಗೆ ಅಲ್ಲಿ ಯಾವ ವೆಚ್ಚವೂ ಇಲ್ಲವು. ನಾವೇ ವಹಿಸಿಕೊಳ್ಳುತ್ತೇವೆ" ಎಂದು ಸೇಟರು ಹೇಳಿದರು. "ನಾನು ಅಲ್ಲಿ ಎಷ್ಟು ಕಾಲವಿರಬೇಕು? ನೀವೆಷ್ಟು ಸಂಬಳವನ್ನು ಕೊಡುವಿರಿ?" ಎಂದು ನಾನು ಕೇಳಿದೆನು. "ಅಲ್ಲಿ ಒಂದು ವರ್ಷಕ್ಕಿನ್ನ ಹೆಚ್ಚಾಗಿರಬೇಕಾದವಶ್ಯವಿಲ್ಲವು. ಹೋಗಿಬರಲು 1 ನೇ ತರಗತಿ ಸ್ಟೀಮರು ಟಿಕೆಟ್ಟು ಕೊಡಿಸಿ 1575 ರೂಪಾಯಿ ಕೊಡುತ್ತೇವೆ" ಎಂದು ಸೇಟರು ಹೇಳಿದರು. ಅಲ್ಲಿಗೆ ನಾನು ಹೋಗುವುದು ನೌಕರನಾಗಲ್ಲದೆ ಬ್ಯಾರಿಸ್ಟರಾಗಲ್ಲವೆಂದು ತಿಳಿದುಕೊಂಡೆನು. ಹೇಗಾದರೂ ಭಾರತದೇಶದಿಂದ ಹೋಗಬೇಕಾಯಿತೆಂದು ನನಗೆ ಆಗ ತೋಚಿತು. ಹೊಸದೇಶವನ್ನು ನೋಡಬಹುದು. ಹೊಸ ವಿಷಯವನ್ನು ತಿಳಿಯಬಹುದು. ಅಣ್ಣನಿಗೆ 1575 ರೂ. ಗಳನ್ನು ಕಳುಹಿಸಬಹುದು. ಎಂದು ಯೋಚಿಸಿ ಕೂಡಲೆ ಸಮ್ಮತಿಸಿದೆನು. ದಕ್ಷಿಣಾಫ್ರಿಕೆಗೆ ಹೊರಡಲು ಸಂಸಿದ್ಧನಾದೆನು.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ ಬೆಂಗಳೂರು.

ಲಗ್ನ ಮೊದಲಾದಕಾರ್ಯಗಳಲ್ಲಿ ಫಂಡಿಗೆ ಬಂದಿರತಕ್ಕ ಹಣದತಪಸೀಲು.—

ಮ|| ಗಳಾದ 1. ಪಾವಗಡದ ಪೋಲೀಸ್ ಇನ್ಸ್‌ಪೆಕ್ಟರ್ ವೈ. ರಾಜಶೇಖರಯ್ಯನವರ ಪುತ್ರಿ ಸೌ|| ನಾಗಮ್ಮನನ್ನು ಮುಳಬಾಗಿಲ್ ನಂಜುಂಡಪ್ಪನವರ ಮಗ ಮಲ್ಲೇಶಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ 10 ರೂ. 2. ಕೋಲಾರದ ಭದ್ರಶೆಟ್ಟರ ಬೈಲಪ್ಪನವರ ಮಗ ಭದ್ರಶೆಟ್ಟರ ಲಗ್ನದಲ್ಲಿ ವರದಪ್ಪಶೆಟ್ಟರಿಂದ ಬೆಂಗಳೂರು ಕಳಸಪ್ಪಶೆಟ್ಟರ ಮೂಲಕ 5 ರೂ. 3. ಡೆಂಕಣಕೋಟೆ ಶೆಟ್ಟರ ವೀರಪ್ಪನವರ ಕುಮಾರ ಶಿವಸಾಯುಜ್ಯವನ್ನು ಹೊಂದಿದ ಡಿ. ವಿ. ಮುದ್ದಪ್ಪನವರ ಆರಾಧನೆಯ ಕಾಲದಲ್ಲಿ ಮೈಸೂರು ವೈ. ವಿರೂಪಾಕ್ಷಯ್ಯನವರ ಮೂಲಕ 10 ರೂ. 4. ಮಾಗಡಿ ತಾ|| ಸೋಲೂರು ಹೋಬಳಿ ಕಂಚುಗಲ್ ಬಂಡೆಮಠದ ಯಜಮಾನ್ ಬಸಪ್ಪನವರ ಪುತ್ರಿ ಸೌ|| ಪಾರ್ವತಮ್ಮನಿಗೂ ಬೈಯಂಡಹಳ್ಳಿ ಚೆನ್ನಪ್ಪನವರ ಪುತ್ರ ಶಿವಯ್ಯನಿಗೂ ನಡೆದ ವಿವಾಹದಲ್ಲಿ ಬೆಂಗಳೂರು ಚಾಮರಾಜಪೇಟೆ ಮಂಡಿ ಎನ್. ಬಿಶೆಟ್ಟಪ್ಪನವರ ಮೂಲಕ 10 ರೂ. 5. ಬಿಡದಿ ಗುರಪ್ಪನವರ ಚೆನ್ನಪ್ಪನವರ ಮಗಳ ನಿಷೇಕಪ್ರಸ್ತದಲ್ಲಿ ಚೆನ್ನಪ್ಪನವರ ಮೂಲಕ 3 ರೂ. 6. ಗುಬ್ಬಿ ತಾ|| ದೊಡ್ಡಗುಣಿ ಸಾಹುಕಾರ್ ಪುಟ್ಟರುದ್ರಪ್ಪನವರ ಕುಮಾರ್ತಿ ಸೌ|| ರುದ್ರಾಣಮ್ಮನನ್ನು ಕ್ಲೋಸ್‌ಪೇಟೆ ಪಾರುಪತ್ತೇಗಾರ್ ಬಿ. ರುದ್ರಪ್ಪನವರ ಕುಮಾರ ಬಿ. ಆರ್. ಶಂಭುರುದ್ರಪ್ಪನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಡಿ. ರುದ್ರಪ್ಪ, ಬಿ.ಎ., ಯವರ ಮೂಲಕ 5 ರೂ. 7. ಕಾನಕಾನಹಳ್ಳಿ ತಾ|| ಮಳೆಕೋಟೆ ಗುರುನಂಜಪ್ಪನವರ ಕುಮಾರ ಭೋಗಯ್ಯನಿಗೆ ಸದರಿ ತಾ|| ಗುಳಗನಹಳ್ಳಿಯಲ್ಲಿರುವ ವೀರಪ್ಪನವರ ಕುಮಾರ್ತಿ ಸೌ|| ಭದ್ರಮ್ಮನನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ವರನಕಡೆಯಿಂದ 3 ರೂ. ವಧುವಿನಕಡೆಯಿಂದ 2 ರೂ. ಸೇರಿ ಶ್ರೀ ನಿರಂಜನ ಶ್ರೀ ಸಿದ್ಧಾಣಸ್ವಾಮಿಗಳವರ ಮೂಲಕ 5 ರೂ. 8. ಕುಣಿಗಲ್ ತಾ|| ಹುಲಿಯೂರು ದುರ್ಗದ ಗುರುಸಿದ್ಧಶಾಸ್ತ್ರಿಗಳ ಮೂಲಕ ಬಸವಲಿಂಗಯ್ಯನವರ ಮನೆಯಲ್ಲಿ ನಡೆಸಿದ ಲಗ್ನದಲ್ಲಿ ವರನಕಡೆಯಿಂದ 3 ರೂ. ವಧುವಿನಕಡೆಯಿಂದ 2 ರೂ. ಒಟ್ಟು 5 ರೂ. 9. ನೊಣವಿನಕೆರೆ ಚಿಕ್ಕಣ್ಣಶೆಟ್ಟರ ಮಕ್ಕಳು ಶಾಂತವೀರಪ್ಪಶೆಟ್ಟರ ಮೂಲಕ ವಡ್ಡರಮಲ್ಲೇನಹಳ್ಳಿ ವೀರಪ್ಪನವರ ಲಗ್ನದಲ್ಲಿ ವರನಕಡೆಯಿಂದ 2 ರೂ. ವಧುವಿನಕಡೆಯಿಂದ 1 ರೂ.. ಮತ್ತು ವಿಘ್ನಸಂತೆ ತೀರ್ಥಯ್ಯನವರ ಮಗಳ ಲಗ್ನದಲ್ಲಿ ವರನಿಂದ 2 ರೂ. ವಧುವಿನಕಡೆಯಿಂದ 1 ರೂ. ಒಟ್ಟು 6 ರೂ. 10. ಚಿತ್ರದುರ್ಗದ ಡಿ|| ಹೊಸದುರ್ಗದಲ್ಲಿರುವ ನಂಜಪ್ಪನವರ ಮಗ ಹೆಚ್. ಯಲ್. ಸಿದ್ಧಪ್ಪನವರ ಲಗ್ನದಲ್ಲಿ ಹೆಚ್. ಸಿ. ಜಂಬುಕೇಶ್ವರಯ್ಯ, ಬಿ.ಎ., ಎಲ್‌ಎಲ್.ಬಿ., ಯವರ ಮೂಲಕ 5 ರೂ. 11. ಯಗಟಿ ಸಣ್ಣಗಂಗಪ್ಪನವರ ಮೂಲಕ ಪುರದ ಪಟೇಲ್ ಬಸಪ್ಪನವರ ಮಗಳು ಸೌ|| ವೀರಮ್ಮನ ಲಗ್ನದಲ್ಲಿ ವಧೂವರರಿಂದ 2 ರೂ. 12. ಬೆಂಗಳೂರು ದಿಬ್ಬೂರು ರುದ್ರಪ್ಪನವರ ಮಕ್ಕಳು ವೀರಪ್ಪನವರು ಶ್ರೀ ನಾಗಪ್ರತಿಷ್ಠೆ ಮಾಡಿಸಿದ ಕಾಲದಲ್ಲಿ ದೇಶದ ಯಜಮಾನ್ ಬಸಪ್ಪನವರ ಮೂಲಕ 10 ರೂ. 13. ಮಾಗಡಿ ತಾ|| ಹಾರೋಹಳ್ಳಿಯಲ್ಲಿರುವ ಚೌದ್ರಿ ರೇವಣ್ಣನವರ ಕುಮಾರ್ತಿಗೂ ಬಸವಣ್ಣನವರ ರೇವಣ್ಣನಿಗೂ ನಡೆದ ಲಗ್ನದಲ್ಲಿ 2 ರೂ. ಮಾಗಡಿ ತಾ|| ತಟವಾಳದ ಗ್ರಾಮದಲ್ಲಿ ಹಾರೋಹಳ್ಳಿ ಪಟೇಲ್ ಸಂಜಪ್ಪನವರ ಭಾವಮೈದಯ|| ಯಲ್ಲಪ್ಪನ ಲಗ್ನದಲ್ಲಿ 2 ರೂ. ಬೆಂಗಳೂರು ಅಕ್ಕಿಪೇಟೆಯಲ್ಲಿ ನಡೆದ ಮಾಗಡಿ ತಾ|| ತಟವಾಳಗ್ರಾಮದ ತಿಮ್ಮಣ್ಣನವರ ಕುಮಾರ ಬಸವಣ್ಣನ ಲಗ್ನದಲ್ಲಿ 2 ರೂ. ಸದರಿ ಅಕ್ಕಿಪೇಟೆಯಲ್ಲಿ ನಡೆದ ಜುಂಗನಹಳ್ಳಿ ಬಸಪ್ಪನವರ ಕುಮಾರನ ನಿಶ್ಚಿತಾರ್ಥದಲ್ಲಿ 1 ರೂ. ಅಕ್ಕಿಪೇಟೆ ಚಿಕ್ಕಮಲ್ಲೇಶಪ್ಪನವರ ಕುಮಾರ್ತಿ ಮಲ್ಲಮ್ಮನನ್ನು ಮಾಗಡಿ ತಾ|| ತಟವಾಳದ ಪರಪ್ಪನವರ ಕುಮಾರ ನಾಗಪ್ಪನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ವರನಕಡೆಯಿಂದ 3 ರೂ., ವಧುವಿನಕಡೆಯಿಂದ 5 ರೂ., ಮತ್ತು ನಿಶ್ಚಿತಾರ್ಥದ ಕಾಲದಲ್ಲಿ 1 ರೂ. ಸೇರಿ ಯಜಮಾನ್ ಮಾದಪ್ಪನವರ ಮೂಲಕ 16 ರೂ. ಜುಮ್ಲಾ 92 ರೂ.

ಜಿ. ಪರಮಶಿವಯ್ಯ, ಸೆಕ್ರೆಟರಿ,
ಮೈ. ವೀ. ವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು.

೧೯೨೬ ನೆಯ ಇಸವಿ ಅಗಸ್ಟ್ ತಾ|| ೧೪ ರಿಂದ ೧೯೨೬ನೆಯ ಇಸವಿ ಅಗಸ್ಟ್ ತಾ|| ೨೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಶ್ರಾವಣ ಶುದ್ಧ ಷಷ್ಠಿಯಿಂದ ಶ್ರಾವಣಶುದ್ಧ ದ್ವಾದಶೀವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ ಸಿಂಹ
14	[1]ಶನಿ	ಷಷ್ಠಿ	54-22	ಚಿತ್ತ	37-36	30
15	ಭಾನು	ಸಪ್ತ	56-10	ಸ್ವಾತಿ	41-14	31
16	[2]ಸೋಮ	ಅಷ್ಟ	56-37	ವಿಶಾ	43-46	32
17	[3]ಮಂಗಳ	ನವ	55-50	ಅನೂ	44-58	1
18	ಬುಧ	ದಶ	53-44	ಜ್ಯೇಷ್ಠ	44-54	2
19	ಗುರು	ಏಕಾ	50-31	ಮೂಲ	43-47	3
20	[4]ಶುಕ್ರ	ದ್ವಾದ	46-26	ಪೂಷಾ	41-36	4

(1) ಶ್ರಾವಣಶನಿವಾರ. (2) ಮಳೆನಕ್ಷತ್ರ-ಮಖಾ ೧ ನೆಯಪಾದ. (3) ಮಂಗಳಗೌರೀವ್ರತಂ. (4) ಮಳೆನಕ್ಷತ್ರ-ಮಖಾ ೨ ನೆಯಪಾದ, ವರಮಹಾಲಕ್ಷ್ಮೀವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮೂರ್ಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವಹಾರಾ ಪಕ್ಷಜ ನಕ್ಷತ್ರ ಮೋಹರಾಜೀಯಾತ್
ಶ್ರೀಮತ್ಕೃಷ್ಣನೃಪಾಲನುತ ಮುಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦]   [ಪರಸ್ಥಳದವರಿಗೆ ೨-೮-೦]   [[illegible] ೩-೮-೦]

ಸಂಪುಟ ೩೯]   ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ಅಗಸ್ಟ್ ತಾರೀಖು ೨೧ ನೆಯ ಶನಿವಾರ.   [ಸಂಚಿಕೆ ೩೪

ಶ್ರೀ ಅ. ಶಿವಮೂರ್ತಿಶಾಸ್ತ್ರಿ ಪುಸ್ತಕ ಭಂಡಾರ ಬಸವ ನಗರಿ ಬೆಂಗಳೂರು

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಶುಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆನ್ಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

32

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ, 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಕೊಳ್ಳೇದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು.)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—10]   ಶಿವಾನುಭವ ಆಫೀಸು ವಿಜಾಪುರ

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ.	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ.	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಷಟ್ಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಸತ್ಯದಜಗತ್ತು   ಮೊದಲು ಇದನ್ನು ಓದಿ ನಂಬಿಗೆ ಇಡಿರಿ.   ಆದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಕೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ರೌಚಿಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಆದರ ಸಂಬಂಧಗಳ ರೋಗನಾಶಕ ಚಾತ್ರ್ಯಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮುಕಂದ, ಮಧುಕಂದ, ಜಸಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿರ್ಮಲೀಬೀಜ ಚಿಕಣದಪಂಚಾಂಗ, ಆಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಜಾಯಪತ್ರಿ, ಸಿತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಬೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕ್ಕರೀಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಆಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭೂಸಾ, ಆವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತೀಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—5]   ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಅದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಶಾಸತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಇಂತಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—44]   ಪೋ. ಬಾ. ೩೧೧, ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO.,
BENARES CITY.

S.N.N. & CO.
BENARES CITY

ನಮ್ಮಲ್ಲಿ ಜರವಾರಿ ರೇಶ್ಮೆ ಮೊಗಟ್ಟಿ, ಜರಿ ಸಾದಾ ಸೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಘಂಟೆ, ಪಾರ್ಥಿವಗಳು, ಪಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಆಗಸ್ಟ್ ತಾ|| ೨೧ ನೆಯ ಶನಿವಾರ.

SIR B. SEAL ON UNIVERSITY IDEAS.

The convocation address delivered by Sir Brajendranath Seal, the Vice-Chancellor of the Mysore University at the Bombay University Convocation on the 17th of August 1926 forms a very instructive though not very easy reading. He referred to the world's educational ideals and problems and the new aims of educational reconstruction. The new aim of education emphasised first on Socialisation of education, secondly on Nationalisation by which the mobilisation of the cultural resources of the nation could take place with a view to the paramount purposes of national expansion and progress. And lastly, the Internationalism of education of which there were evidences all over the world, notably the Viswabharati—the marvellous creation of Dr. Rabindranath Tagore's brain. Sir B. Seal was also alive to the new move in the opposite direction, namely the regional movement by which the utilisation of the man power as well as the nature-power of particular regions could be best secured. Sir B. Seal suggested that work by way of extension lecturs and continuation classes, and by way of mission to the working classes of the city and suberbs could be well carried on by a regional University such as that of Bombay. The latest arrival in the world of education was, according to the learned lecturer, vocational adaptation which aimed at the cultivation of the capabilities of the individual, a thing which of course is most needed for the economic progress of a country. Sir B. Seal dwelt at length on the Indian Educational ideal, which must be a living expression of the Indian mentality, a new construction of the Indian genius in response to the moving forces of the Time Spirit and Universal Humanity. He said that in India they were at the influence of two cultures and civilisations and that it is the melting-pot of humanity, but he felt that Indian civilisation had in its essentials been one of the great civilising forces of human history, as an agelong priest of Humanity and culture to more than half the human race. He found that in India education was organised as an integral element in a man's social status, by which the essential element of social equality suffered and he wanted them to stress the ideals of social equality and social justice so as to redress the balance. He wanted also that the cleavage which the Universities in India had created between the classes and masses should be bridged by socialising education and recreating solidarity. Sir B. Seal felt keenly on the part that the Universities should play in creating a new tradition of humanism, a new interpretation of History which would heal all schisms and discords and dispose them to harmony and international amity. He was sanguine as India offered the grandest example of ethnic and cultural fusion, though the experiment had not always proved successful.

Dealing with the particular problems facing education in India, the linguistic trouble. Early education through a vaguely realised set of foreign symbols led to mal-assimilation and a disturbance of the whole mental system—a disease from which most Uuniversity—educated Indians suffered today. Knowledge did not lead to appropriate action—Reason and will were divorced, with the result that the Indian lived in two worlds, a world of ideas which were impotent and a world of habits which were blind. Sir B. Seal was alive to the fact that no amount of drill and grinding without a habitual social medium of speech could teach the facile and correct use of a difficult foreign idiom like English to a considerable portion of otherwise intelligent and alert people. He suggested therefore three different standards in English, a strict standard to those who would take up literary or Arts courses, a less strict standard for Science course and thirdly a still lower standard for the technological and professional departments (excepting law, teaching and medicine). The eminent lecturer also gave his views on vocational adaptation and technical education of which we of Mysore are fairly conversant. In offering his advice to the graduates, Sir B. Seal spoke of the five lamps which Youth had even as Architecture had its seven. And those were freedom, romance, creativeness, optimism and immortality. He wanted them to be true to themselves which was the golden maxim of the conduct of life.

PSYCHOLOGY OF LABOUR STRIKE.

Yet another labour strike in Bangalore City. This time it was in the Maharaja Mill on 16-8-26. We have entirely refrained from expressing our views on this subject, though strikes like these have been all over India, as we strongly felt that it was a foreign disease and as we confidently considered that the soil of Mysore was not conducive for this infectious disease. Essentially this is a Western problem and its complications are fit subjects for analysis by the Industrialists of the Western Countries.

As journalists we owe a duty to the public and it is therefore that we venture to say what we consider to be the cause of these strikes. In England there are the coal strikes and their developments are still in progress. The capitalists on the one side and the labourers on the other are the real sufferers. Mr. Cook's Unions are the spectators. The labourers are the flesh and bones. The capitalists are their protectors. The labourers are the children of the capitalists. The brains of the labourers are not busy, as their hands and feet are quite busy and active. The intelligentia comes from outside and does all the mischief. When mischief creates troubles, Government have to come in to meet the situation. It then becomes the hardest task of the authorities. The capitalist, the labourer and the intelligentia get to the back ground and leave the authorities of Government to bear the brunt of the situation.

What is then the duty of Government? The capitalist suffers loss. The labourer starves. The intelligentia becomes the most activest body and its tongue is let loose to manufacture trouble. The Government must lay its strong foot on the mischief monger at the earliest stage of the advent of this alien disease into our peaceful country. If this strong step is delayed, it is our considered opinion that the irresponsibles will land us in economic troubles. It is easy to handle the disease in its initial stage and we do not presume to dictate to Government what the measures should be, which are appropriate to keep the intelligentia, a couple of tongues only under control. We shall not have a Mr. Cook to deal with the situation. The Government should not call in the aid of the irresponsible spectator to negotiate the terms. The capitalists and the labourers are the only two parts of the contract and the Government, as the judge, is the only responsible body to settle the differences arising out of the contract.

This is, so far as Mysore is concerned, the psychology of the labour situation and we trust that the Government will deal with the eradication of the disease.

ಸ್ವದೇಶದ ವೃತ್ತಾಂತಗಳು.

ಮೈಸೂರು ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕಸಭೆಯ ಹೊಸಮೆಂಬರುಗಳ ಚುನಾವಣೆಯು 1927 ನೇ ಮಾರ್ಚಿ ತಾ|| 5 ನೆಯ ಶನಿವಾರ ನಡೆಯುವುದಾಗಿ ಈ ವಾರದ ಮೈಸೂರು ಗೆಜೆಟಿನಲ್ಲಿ ಪ್ರಕಟವಾಗಿದೆ.

ಬೆಂಗಳೂರಿನಲ್ಲಿ ಪ್ಲೇಗುರೋಗವು ಪ್ರಾರಂಭವಾಗಿ ಈವರೆಗೆ 1-2 ಮರಣಗಳಾದುದರಿಂದ ಅದರ ಸೋಂಕು ಹರಡದಿರುವುದಕ್ಕಾಗಿ ಮ್ಯುನಿಸಿಪಾಲಿಟಿಯವರು ತಕ್ಕ ಪ್ರಯತ್ನಮಾಡುತ್ತಿರುವರು. ಕಳೆದ ಗುರುವಾರ ಸಾಯಂಕಾಲ ½ ಅಂಗುಲ ಮಳೆಯಾಯಿತು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಭಾನುವಾರ ಬೆಳಗಿನ ರೈಲುಬಂಡಿಯಲ್ಲಿ ರಾಜಧಾನಿಗೆ ಚಿತ್ತೈಸಿದ್ದು ಅದೇ ರಾತ್ರಿ ರೈಲುಬಂಡಿಯಲ್ಲಿ ಪುನಃ ಬೆಂಗಳೂರಿಗೆ ದಯಮಾಡಿಸಿದರು, ಮತ್ತು ನಾಳೆಯದಿವಸ ನಡೆಯುವ ಉಪಾಕರ್ಮಕ್ಕಾಗಿ ಇಂದು ರಾಜಧಾನಿಗೆ ಚಿತ್ತೈಸುವವರಾಗಿರುವರು.

ಈ ದಿವಸ ಮಧ್ಯಾಹ್ನ 1½ ಘಂಟೆಗೆ ರಾಜಧಾನಿಯ ಧರ್ಮಪ್ರಕಾಶ ಡಿ|| ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುವ ಶ್ರೀಕೃಷ್ಣರಾಜಮಿಲ್ಲಿನ 5ನೇ ವಾರ್ಷಿಕ ಜನರಲ್ ಮೀಟಿಂಗಿನ ಅಧ್ಯಕ್ಷತೆಯನ್ನು ವಹಿಸಲು ಸರ್ ಕೆ. ಪಿ. ಪುಟ್ಟಣ್ಣಸೆಟ್ಟರು ನೆನ್ನೆಯಸಾಯಂಕಾಲ ರೈಲುಬಂಡಿಯಲ್ಲಿ ರಾಜಧಾನಿಗೆ ಬಂದರು.

ಕೋಲಾರದ ಮೈಸೂರುಗಣಿಯಿಂದ 2,91,345 ರೂ., ಉರಿಗಾಂಗಣಿಯಿಂದ 1,77,600 ರೂ., ನಂದೀದುರ್ಗಗಣಿಯಿಂದ 1,86,562-12-0 ರೂ., ಮತ್ತು ಛಾಂಪಿಯನ್ ಗಣಿಯಿಂದ 1,49,641 ರೂ., ಒಟ್ಟು 8,05,148-12-0 ರೂ., ಬೆಲೆಯ ಭಂಗಾರವು ಈ ತಾ|| 20 ರಲ್ಲಿ ಬೊಂಬಾಯಿಯ ಟಂಕಸಾಲೆಗೆ ಕಳುಹಲ್ಪಟ್ಟಿತು.

ಲಾಹೋರಿನಲ್ಲಿರುವ ವೆಟರಿನರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬರಲು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಕೆಮಿಸ್ಟ್ರಿ ಅಥವಾ ಬಯಾಲಜಿ ತೆಗೆದುಕೊಂಡು ತೇರ್ಗಡೆಯಾಗಿರುವ ಇಬ್ಬರು ವಿದ್ಯಾರ್ಥಿಗಳಿಗೆ 40 ರೂ. ಮಾಸಾಶನವು ಮೈಸೂರು ಸರ್ಕಾರದಿಂದ ಕೊಡಲ್ಪಡುವುದಾಗಿ ಪ್ರಕಟವಾಗಿದೆ. ಹಿಂದುಳಿದವರ್ಗಗಳ ವಿದ್ಯಾರ್ಥಿಗಳಿಗೆ ವೇತನವು ದೊರಕುವ ಸಂಭವವು ಹೆಚ್ಚಾಗಿರುತ್ತದೆ.

ರಾಜಧಾನಿಯ ಗೂಳೂರು ಶೇಷಣ್ಣನವರ ಬೀದಿಯಲ್ಲಿರುವ ಚಿಲ್ಲರೆಯಂಗಡಿ ಸಾಹುಕಾರ್ ಮ|| ವೀರಣ್ಣನವರ ಚಿಕ್ಕವಯಸ್ಸಿನ ಎರಡನೆಯ ಹೆಂಡಿತಿಯು ಹೊಟ್ಟೆಶೂಲೆಯನ್ನು ತಡೆಯಲಾರದೆ ಕಳೆದ ಸೋಮವಾರ ಮಧ್ಯಾಹ್ನ 1 ಘಂಟೆಯ ಸಮಯದಲ್ಲಿ ಅವರ ಹೊಸ ಅಂಗಡಿಯ ಮನೆಯಲ್ಲಿರುವ ಬಾವಿಗೆಬಿದ್ದು ಮೃತಳಾದಳು. ಈಕೆಗೆ 2 ಗಂಡು ಮತ್ತು ಎರಡು ಹೆಣ್ಣುಮಕ್ಕಳಿರುತ್ತವೆ.

ಕಳೆದ ಶನಿವಾರಸಾಯಂಕಾಲ ರಾಜಧಾನಿಯ ಶ್ರೀಕೃಷ್ಣರಾಜೇಂದ್ರಮಿಲ್ಲುಗಳಲ್ಲಿ ಅನುಪಯುಕ್ತವಾದ ಹತ್ತಿಯರಾಶಿಗೆ ಬೆಂಕಿಯುಬಿದ್ದು ಹೊಗೆಯಾಡುತ್ತಿದ್ದುದನ್ನು ಮನೆಗೆ ಹೊರಡಲು ಸಿದ್ಧರಾಗಿದ್ದ ಕೆಲಸಗಾರರು ಕಂಡು ಕೂಡಲೆ ಬೆಂಕಿಯನ್ನು ಆರಿಸಿಬಿಟ್ಟರು. ಇದರಿಂದ 400-500 ರೂ. ಗಳವರೆಗೆ ನಷ್ಟವಾಯಿತೆಂದೂ ಆ ಕೂಡಲೆ ಬೆಂಕಿಯು ಆರಿಸಲ್ಪಡದಿದ್ದಲ್ಲಿ ಬಹಳ ಅನರ್ಥವಾಗುತ್ತಿದ್ದಿತೆಂದೂ ತಿಳಿಯಬರುತ್ತದೆ.

ಕಳೆದ ಗುರುವಾರ ಮಧ್ಯಾಹ್ನ ಹುಜೂರು ಸೆಕ್ರೆಟರಿ ಮಿ|| ತಂಬೂಸೆಟ್ಟರು, ಮೈಸೂರು ಡಿ|| ಡೆಪ್ಯುಟಿಕಮಿಷನರ್ ಮ|| ರಾಮನಾಥನ್‌ರವರು ಮತ್ತು ಟ್ರಾಫಿಕ್ ಮ್ಯಾನೇಜರ್ ಮಿ|| ಎ. ಎ. ಖಾನ್‌ರವರು ಮೋಟಾರುಬಂಡಿಯಲ್ಲಿ ಚಾಮರಾಜನಗರಕ್ಕೆ ಹೋಗಿದ್ದು ಶ್ರೀಮನ್ಮಹಾರಾಜರವರ ಆಗಮನಾರ್ಥವಾಗಿ ಅಲ್ಲಿಯ ರೈಲ್ವೆಸ್ಟೇಷನ್ನಿನಲ್ಲಿ ಮಾಡಬೇಕಾದ ಏರ್ಪಾಟುಗಳನ್ನು ನೋಡಿಕೊಂಡು ಅದೇ ಸಾಯಂಕಾಲ ರಾಜಧಾನಿಗೆ ಬಂದರು.

ಸರದಾರ್ ಗೋಪಾಲರಾಜಅರಸಿನವರೂ, ಕ್ಯಾಪ್ಟನ್ ನಬೀಖಾನ್‌ರವರೂ ಬೂದಿಪಡಗಕ್ಕೆ ಹೋಗಿದ್ದು ಅಲ್ಲಿ ಬಹಳ ಹಾವಳಿಯನ್ನು ಮಾಡುತ್ತಿದ್ದ ಒಂದು ಸಲಗನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ ಕಳೆದ ಮಂಗಳವಾರ ರಾಜಧಾನಿಯ ಸಯ್ಯಾಜಿರಾವ್‌ರೋಡಿನಲ್ಲಿ ಮೋಟಾರುಬಂಡಿಯಲ್ಲಿ ಕುಳಿತುಕೊಂಡು ಬರುತ್ತಿರುವಾಗ್ಗೆ ಕರ್ಜನ್‌ಪಾರ್ಕ್ ಗೇಟಿನ ಬಳಿ ಅಡ್ಡಲಾಗಿ ಒಂದು ಬೈಸಿಕಲ್ಲನ್ನು ಬಿಟ್ಟುಕೊಂಡು ಬಂದವನಮೇಲೆ ಮೋಟಾರು ನುಗ್ಗದಂತೆ ಮಗ್ಗಲಾಗಿ ತಿರುಗಿಸುವಾಗ್ಯೆ ಬಂಡಿಯು ಗೇಟಿನ ಕಂಭಕ್ಕೆ ತಾಕುಬಡಿದುದರಿಂದ ಅದರ ಮುಂಭಾಗದ ದೂಲಿಯು ಬಗ್ಗಿಕೊಂಡುಬಿಟ್ಟಿತು. ಇದುವಿನಾ ಯಾರಿಗೂ ಯಾವವಿಧವಾದ ಅಪಾಯವೂ ಆಗಲಿಲ್ಲವು.

ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಿಯವರು ಯುವರಾಣಿ ಮತ್ತು ರಾಜಕುಮಾರಿಯರೊಡನೆ ಕಳೆದ ಭಾನುವಾರ ನಂಜನಗೂಡುಮಾರ್ಗವಾಗಿ ಮೋಟಾರುಬಂಡಿಗಳಲ್ಲಿ ಟಿ. ನರಸೀಪುರಕ್ಕೂ ಮೂಗೂರಿಗೂ ದಯಮಾಡಿಸಿದ್ದು ದೇವರುಗಳ ದರ್ಶನಮ್ಮ ಮಾಡಿ ಅದೇ ದಿವಸ ರಾಜಧಾನಿಗೆ ಚಿತ್ತೈಸಿದರು. ಮತ್ತು ಕಳೆದ ಬುಧವಾರ ಬೆಳಗಿನ 7½ ಘಂಟೆಯಲ್ಲಿ ಸ್ಪೆಷಲ್ ಟ್ರೇನಿನಲ್ಲಿ ಹಾಸನದ ಸಮೀಪದಲ್ಲಿರುವ ಮಾವಿನಕೆರೆಗೆ ಚಿತ್ತೈಸಿದ್ದು ಅಲ್ಲಿ ದೇವರಸೇವೆಯನ್ನು ಮಾಡಿ ಮೋಟಾರುಬಂಡಿಗಳಲ್ಲಿ ಹೊಳೇನರಸೀಪುರಕ್ಕೂ ಅಲ್ಲಿಂದ ರಾಂಪುರಕ್ಕೂ ಹೋಗಿ ದೇವರುಗಳ ದರ್ಶನವನ್ನು ಮಾಡಿ ನರಸೀಪುರದಲ್ಲಿ ರೈಲನ್ನು ಹತ್ತಿ ನೆನ್ನೆಯದಿವಸ ಬೆಳಗಿನ 7½ ಘಂಟೆಯಲ್ಲಿ ರಾಜಧಾನಿಗೆ ಹಿಂದಿರುಗಿ ಚಿತ್ತೈಸಿದರು ; ಅಲ್ಲದೆ ಪೌರ್ಣಮಿಯದಿವಸ ನಂಜನಗೂಡಿಗೆ ದಯಮಾಡಿಸುವರು

ಬೆಂಗಳೂರು ಬಿನ್ನಿಮಿಲ್ಲಿನವರು ಬೋನಸ್ಸು ಹಣದ ವಿಚಾರವಾಗಿ ಗೊಂದಲವನ್ನು ಮಾಡಿ ಅನರ್ಥಕ್ಕೆ ಗುರಿಯಾದಂತೆ, ಅಲ್ಲಿಯ ಮಹಾರಾಜಾಮಿಲ್ಲಿನ ಕೆಲಸಗಾರರೂ ಅದೇ ಬೋನಸ್ಸಿನ ವಿಚಾರದಲ್ಲಿ ಗದ್ದಲವನ್ನೆಬ್ಬಿಸಿದ್ದರು. ಆದರೆ ಇ|| ಜನರಲ್‌ರವರು ಮೊದಲಾಗಿ ಪೋಲೀಸ್‌ಅಧಿಕಾರಿಗಳೂ, ಡಿ|| ಮ್ಯಾಜಿಸ್ಟ್ರೇಟರು ಮೊದಲಾಗಿ ಇತರ ಅಧಿಕಾರಿಗಳೂ ಕೂಡಲೆ ಬಂದು ಕೆಲಸಗಾರರಿಗೆ ತಕ್ಕ ಬುದ್ಧಿವಾದವನ್ನು ಹೇಳಿ ಸಮಾಧಾನಪಡಿಸಿದುದರಿಂದ ಇಟಿಗೆಚೂರುಗಳೂ ಕಲ್ಲುಗಳೂ ಎಸೆಯಲ್ಪಟ್ಟುದರಿಂದ ಕಿಟಿಗಿಗಳ ಗಾಜೊಡೆದುಹೋದುದುವಿನಾ ಮತ್ತಾವ ಅನರ್ಥಕ್ಕೂ ಆಸ್ಪದವಾಗಲಿಲ್ಲ. ಇದರಂತೆಯೇ ಬಿನ್ನಿಮಿಲ್ಲಿನ ಗದ್ದಲವು ನಡೆದಾಗ್ಯೆ ಅಧಿಕಾರಿಗಳು ಮುಂಜಾಗರೂಕರಾಗಿದ್ದಲ್ಲಿ ಅಸಮಾಧಾನಕ್ಕೂ ಅನರ್ಥಕ್ಕೂ ಅವಕಾಶವಾಗುತ್ತಿರಲಿಲ್ಲ. ಕೆಟ್ಟಮೇಲೆತಾನೆ ಬುದ್ಧಿ ಬರುವುದು ?

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಟವನ್‌ಹಾಲಿನಲ್ಲಿ ಅರಮನೆಯ ಮುಜರಾಯಿಬಕ್ಷಿ, ರಾಜಕವಿಭೂಷಣ ಮ|| ಲಿಂಗರಾಜಅರಸಿನವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆಯು ಸೇರಿದ್ದು ಆಸ್ಥಾನವಿದ್ವಾನ್ ಮ|| ಎನ್. ಶ್ರೀಕಂಠಶಾಸ್ತ್ರಿಗಳಿಗೆ ಶ್ರೀ ಶ್ರೀಕಂಠೇಶ್ವರನ ಅನುಗ್ರಹದಿಂದ ವಂಶಪಾರಂಪರ್ಯವಾಗಿ ಬಂದಿರುವ ಕವಿತಾಪಾಂಡಿತ್ಯಪ್ರಶಂಸೆಯು ಅಧ್ಯಕ್ಷರಿಂದಲೂ ಇತರರಿಂದಲೂ ಮಾಡಲ್ಪಟ್ಟು ಒಂದು ಭಂಗಾರದ ಕಡಗವು ಅಧ್ಯಕ್ಷರ ಹಸ್ತದಿಂದ ಬಹುಮಾನಿಸಲ್ಪಟ್ಟಿತು. ಸಂಗೀತವಿದ್ವಾನ್ ಮ|| ಬೆಳಕವಾಡಿ ಶ್ರೀನಿವಾಸಯ್ಯಂಗಾರರ ಹಾಡುಗಾರಿಕೆಯೂ ಶಾಕುಂತಳನಾಟಕಸಭೆಯವರ ಚಿತ್ರೇಶಾಪಣಿಯ ನಾಟಕಾಭಿನಯವೂ ನಡೆದುವು. ಪ್ರಭುಪ್ರಜಾಸನ್ಮಾನಿತರಾದ ಕರ್ಣಾಟಕವಿವರ್ಯ ಶ್ರೀಕಂಠಶಾಸ್ತ್ರಿಗಳು ಇಂತಹ ಸನ್ಮಾನಗಳನ್ನು ಅನಂತಾನಂತವಾಗಿ ಹೊಂದುವವರಾಗಲೆಂದು ಹಾರೈಸುತ್ತೇವೆ.

ಬಿಳಿಕೆರೆಯ ಸಮೀಪಗ್ರಾಮಸ್ಥನೊಬ್ಬನು ತನ್ನ ಹೆಂಡಿತಿಯ ನಡತೆಯ ವಿಚಾರದಲ್ಲಿ ಅನುಮಾನಗ್ರಸ್ತನಾಗಿದ್ದು ಕಳೆದ ಶನಿವಾರ ರಾತ್ರಿ ಹೊರಗಿನಿಂದ ಮನೆಗೆ ಬಂದಾಗ ಯಾವನೋ ಒಬ್ಬ ಮನುಷ್ಯನು ಮನೆಯಿಂದ ಹೊರಗೆ ಬಂದುದನ್ನು ಕಂಡು ಕುಪಿತನಾಗಿದ್ದು ರಾತ್ರಿ ಊಟವಾದಮೇಲೆ ಎಲ್ಲರೂ ಮಲಗಿರುವಾಗ್ಯೆ ಹೆಂಡತಿಯನ್ನು ಚೆನ್ನಾಗಿ ಪ್ರಹರಿಸತೊಡಗಿದನು. ಆಕೆಯ ಹತ್ತಿರ ಮಲಗಿದ್ದ 8-9 ವರ್ಷ ವಯಸ್ಸಿನ ಮಗನು ಎಚ್ಚೆತ್ತು ಕೂಗಿಕೊಂಡು ಗದ್ದಲಮಾಡಿದನು. ಆಗ ತಂದೆಯು ಆ ಮಗನನ್ನು ಹೊಡೆದು ಪಕ್ಕೆಯಮೇಲೆ ಒದೆದನು. ಆ ಏಟಿಗೆ ಹುಡುಗನು ಮೂರ್ಛಿತನಾಗಿ ಬೀಳಲು ತಾಯಿಯು ನೆರೆಯವರನ್ನು ಕೂಗಿ ಕರೆದಳು. ಗಂಡನು ಭಯಪಟ್ಟು ಹೊರಕ್ಕೋಡಿಹೋಗಿ ಒಂದು ಬಾವಿಯಲ್ಲಿ ಬಿದ್ದು ಪ್ರಾಣಬಿಟ್ಟಿದ್ದನು. ಮಾರನೆಯದಿನ ಆ ಹುಡುಗನ ಶವವು ಮೈಸೂರು ಆಸ್ಪತ್ರೆಗೆ ಸಾಗಿಸಲ್ಪಟ್ಟು ಮತ್ತು ಎರಡನೆಯದಿವಸ ಬಾವಿಯಲ್ಲಿ ಸಿಕ್ಕಿದ ತಂದೆಯ ಶವವೂ ಆಸ್ಪತ್ರೆಗೆ ತರಲ್ಪಟ್ಟು ಪರೀಕ್ಷಿಸಲ್ಪಟ್ಟುದಾಗಿ ಕೇಳುತ್ತೇವೆ.

ಈ ತಾ|| 27 ನೇ ಶುಕ್ರವಾರ ಸಾಯಂಕಾಲ 4½ ಘಂಟೆಗೆ ಚಾಮರಾಜನಗರ-ನಂಜನಗೂಡು ರೈಲ್ವೆಯ ಆರಂಭೋತ್ಸವವನ್ನು ನಡೆಸುವುದಕ್ಕಾಗಿ ಶ್ರೀಮನ್ಮಹಾರಾಜರವರ ಸ್ವಾರಿಯು ಆ ದಿವಸ ಮಧ್ಯಾಹ್ನ 2 ಘಂಟೆಗೆ ಪ್ರೈವೆಟ್‌ಸೆಕ್ರೆಟರಿ ಸರ್ ಟಾಡ್‌ಹಂಟರ್‌ರವರು, ಏಡಿಕಾಂಗ್ ಮಿ|| ತಾರವರು ಮತ್ತು ಕೆಲ ಸರದಾರರುಗಳೊಡನೆ ಮೋಟಾರುಬಂಡಿಗಳಲ್ಲಿ ಚಾಮರಾಜನಗರಕ್ಕೆ ದಯಮಾಡಿಸಿ ಪುರವಾಸಿಗಳಿಂದಲೂ, ಡಿ|| ಬೋರ್ಡು ಮೆಂಬರುಗಳಿಂದಲೂ ಸುಸ್ವಾಗತಿಸಲ್ಪಟ್ಟು ಚಾಮರಾಜನಗರವಾಸಿಗಳೊಪ್ಪಿಸುವ ವಿಜ್ಞಾಪನಾಪತ್ರವನ್ನು ಸ್ವೀಕರಿಸಿ, ರೈಲ್ವೆಯ ವರದಿಯೋದಲ್ಪಟ್ಟಮೇಲೆ ಡಿ|| ಬೋರ್ಡಿನವರೊಪ್ಪಿಸುವ ವಿಜ್ಞಾಪನಾಪತ್ರವನ್ನು ಅಂಗೀಕರಿಸಿ ಆರಂಭೋತ್ಸವಭಾಷಣವನ್ನು ದಯಪಾಲಿಸಿ 5½ ಘಂಟೆಗೆ ಅದೇ ರೈಲುಬಂಡಿಯಲ್ಲಿ ಪ್ರಯಾಣಮಾಡಿ ರಾಜಧಾನಿಯನ್ನು 7-55 ಕ್ಕೆ ತಲುಪುವರು. ಈ ಆರಂಭೋತ್ಸವಕ್ಕೆ ದಿವಾನರು ದಯಮಾಡಿಸುವರು. ಸಂಸ್ಥಾನದ ದೊಡ್ಡ ಅಧಿಕಾರಿಗಳಿಗೂ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿಸಭೆಗಳ ಮೆಂಬರುಗಳಿಗೂ, ರಾಜಧಾನಿಯ ಮ್ಯು|| ಕೌನ್ಸಿಲರುಗಳಿಗೂ, ಇತರ ದೊಡ್ಡಮನುಷ್ಯರುಗಳಿಗೂ ಆಹ್ವಾನಪತ್ರಿಕೆಗಳು ಕೊಡಲ್ಪಟ್ಟಿವೆ. ಇವರುಗಳಿಗಾಗಿ ಬೆಳಗಿನ 12 ಘಂಟೆಗೊಂದೂ, ಮಧ್ಯಾಹ್ನ 1 ಘಂಟೆಗಿನ್ನೊಂದೂ ರೈಲುಬಂಡಿಗಳು ರಾಜಧಾನಿಯಿಂದ ಚಾಮರಾಜನಗರಕ್ಕೆ ಬಿಡಲ್ಪಡುವುವು. ಮಾರನೆಯದಿವಸದಿಂದ ಪ್ರಯಾಣಿಕರ ಸೌಕರ್ಯಕ್ಕಾಗಿ ಮೂರುವೇಳೆ ಬಂಡಿಗಳು ಬಿಡಲ್ಪಡುವುವು.

ಕೋಲಾರ ಡಿ|| ಬೇತಮಂಗಲಕ್ಕೆ ಸೇರಿದ ಪಿಲ್ಲಗೊಂಡಹಳ್ಳಿಯ ಸಾಕಮ್ಮನೆಂಬ ಬ್ರಾಹ್ಮಣಹೆಂಗುಸು 10 ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದ 24 ವರ್ಷ ವಯಸ್ಸಿನ ಗುಂಡಮ್ಮನೆಂಬ ತನ್ನ ಮಗಳನ್ನು ಕೆಲವರ್ಷಗಳ ಹಿಂದೆ ಮಾಲೂರು ತಾ|| ಬೆಟ್ಟಹಳ್ಳಿಯ ವಾಸಸ್ಥರಾದ ಸುಬ್ಬಾಭಟ್ಟರ ಮನೆಯಲ್ಲಿ ಅವರ ತಾಯಿ ಇಲ್ಲದ ಸಣ್ಣ ಕೂಸನ್ನು ಸಾಕುವುದಕ್ಕಾಗಿ ಕಳುಹಿಸಿಕೊಟ್ಟಿದ್ದಳು. ಆಕೆಯು ಭಟ್ಟರ ಮನೆಯಲ್ಲಿದ್ದುಕೊಂಡು ಆಗಾಗ್ಯೆ ತವರುಮನೆಗೆ ಬಂದುಹೋಗುತ್ತಿದ್ದಳು. ತಾಯಿಯಾದ ಸಾಕಮ್ಮನು ಕಳೆದ ಜನವರಿಯಲ್ಲಿ ಬೆಟ್ಟಹಳ್ಳಿಗೆ ಹೋಗಿ ಹಣಕ್ಕೆ ಬಹಳ ಸಮಯವಾಗಿರುವುದರಿಂದ 200 ರೂಪಾಯಿಗಳನ್ನು ಕೊಡಬೇಕೆಂದು ಸುಬ್ಬಾಭಟ್ಟರನ್ನು ಬಹಳವಾಗಿ ಕೇಳಿದಳಾದರೂ ತನ್ನಲ್ಲಿಲ್ಲವೆಂದು ಭಟ್ಟರು ಹೇಳಿಬಿಟ್ಟರು. ಆದರಮೇಲೆ ಗುಂಡಮ್ಮನು ಮಗಳನ್ನು ಊರಿಗೆ ಕಳುಹಿಸಿಕೊಟ್ಟಲ್ಲಿ ಕೆಲದಿನಗಳವರೆವಿಗಿಟ್ಟುಕೊಂಡಿದ್ದು ಅನಂತರ ಕಳುಹಿಸಿಕೊಡುತ್ತೇನೆಂದು ಹೇಳಿ ಭಟ್ಟರನ್ನೊಡಂಬಡಿಸಿ ಊರಿಗೆ ಕರೆದುಕೊಂಡುಹೋದಳು. ಗುಂಡಮ್ಮನು ಮಾರನೆಯದಿನ ಬೇತಮಂಗಲದ ಪೋಸ್ಟಾಫೀಸಿಗೆ ಹೋಗಿ ಗಂಡನ ಮನೆಯವರಿಂದ ಜೀವನಾಂಶಕ್ಕಾಗಿ ಕಳುಹಿಸಲ್ಪಟ್ಟಿದ್ದ 44 ರೂ. ಮನಿಯಾರ್ಡರನ್ನು ತೆಗೆದುಕೊಂಡುಬಂದು ತಾಯಿಮನೆಯಲ್ಲಿದ್ದಳು. ಎಲ್ಲಿಗೋ ಹೋಗಿದ್ದ ಗುಂಡಮ್ಮನ ಅಣ್ಣ ಶ್ರೀನಿವಾಸಯ್ಯನು ಮನೆಗೆ ಬಂದಮೇಲೆ ಸುಬ್ಬಾಭಟ್ಟರು ಹಣಕೊಡಲಿಲ್ಲವೆಂಬ ಸಂಗತಿಯನ್ನು ತಾಯಿಮುಖದಿಂದ ತಿಳಿದು ಕೋಪಗೊಂಡು ತಂಗಿಯ ಮೈಮೇಲಿದ್ದ ಭಟ್ಟರ ನಗಗಳನ್ನು ಕೊಡದಿದ್ದರೆ ಕೊಂದುಬಿಡುವೆನೆಂದು ಹೆದರಿಸಿ, ಆ ನಗಗಳನ್ನೂ ಅವಳಲ್ಲಿದ್ದ 44 ರೂ. ಗಳನ್ನೂ ತಾಯಿಯ ಮತ್ತು ಇನ್ನಿಬ್ಬರ ಸಹಾಯದಿಂದ ಕಿತ್ತುಕೊಂಡು ಸಕೇಶಿಯಾಗಿದ್ದ ಗುಂಡಮ್ಮನ ತಲೆಯನ್ನು ಆಕೆಯು ಎಷ್ಟು ಅಡ್ಡಿಪಡಿಸಿದರೂ ಕೇಳದೆ ಬೋಳಿಸಿ ಒಂದು ಕೊಠಡಿಯಲ್ಲಿ ಕೂಡಿದ್ದರು. ಒಂದು ವಾರದಮೇಲೆ ಈ ಸಂಗತಿಯು ಸುಬ್ಬಾಭಟ್ಟರಿಗೆ ಗೊತ್ತಾಗಿ ಅವರು ಪೋಲೀಸರಿಗೆ ನಡೆದ ಸಂಗತಿಯನ್ನು ತಿಳಿಸಿ ಪಿಲ್ಲಗೊಂಡನಹಳ್ಳಿಗೆ ಬಂದು ಗುಂಡಮ್ಮನನ್ನು ಸೆರೆಯಿಂದ ಬಿಡಿಸಿ ಅವಳ ನಗಗಳನ್ನೆಲ್ಲಾ ಬರಮಾಡಿಕೊಂಡು ಆಕೆಯನ್ನು ತಮ್ಮೂರಿಗೆ ಕರೆದುಕೊಂಡುಹೋಗಿ ತಾಯಿ ಸಾಕಮ್ಮ, ಅಣ್ಣ ಶ್ರೀನಿವಾಸಯ್ಯ ಮತ್ತಿಬ್ಬರು ಈ ನಾಲ್ವರಮೇಲೆ ಕೋಲಾರದ ಗಣಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ನಡೆಸುತ್ತಾರೆ. 1 ನೇ ಅಪರಾಧಿ ಅಣ್ಣನು ಆ ಕಾಲದಲ್ಲಿ ಗ್ರಾಮದಲ್ಲಿರಲಿಲ್ಲವೆಂದೂ, 2 ಮತ್ತು 3 ನೇ ಅಪರಾಧಿಗಳು ಗುಂಡಮ್ಮನಿಂದ ನಗಗಳನ್ನೂ ಹಣವನ್ನೂ ಕಿತ್ತುಕೊಳ್ಳಲಿಲ್ಲವೆಂದೂ ಬ್ರಾಹ್ಮಣ ಧರ್ಮದಂತೆ ತನ್ನ ತಲೆಯಕೂದಲನ್ನು ತೆಗಿಸಿಬಿಡಬೇಕೆಂದು ಹೇಳಿ ಗುಂಡಮ್ಮನೇ ಒಪ್ಪಿ ಬೋಳಿಸಿಕೊಂಡಳೆಂದೂ 4 ನೆಯಪರಾಧಿಯು ತನಗೆ ಯಾವಸಂಗತಿಯೂ ತಿಳಿಯದೆಂದೂ ಕೈಫಿಯತ್ತನ್ನು ಕೊಟ್ಟಿರುತ್ತಾರೆ.

ಏಸುಕ್ರಿಸ್ತನು ವಿಶ್ವಬ್ರಾಹ್ಮಣನೆ ?

ಎಂ. ಎಸ್. ರಾಮಸ್ವಾಮಯ್ಯರ್‌ರವರ ಸಿದ್ಧಾಂತ.

ಕಳೆದ ತಾ|| 11ರ ಸಾಯಂಕಾಲ ಮದ್ರಾಸು ತಿರುವಳಿಕ್ಕೇಣಿ ಹೈಸ್ಕೂಲಿನಲ್ಲಿ ಮೆ|| ನ್ಯಾಯಮೂರ್ತಿ ರಾಮೇಶಂರವರ ಅಧ್ಯಕ್ಷತೆಯಲ್ಲಿ ಪೋಲೀಸು ಡೆಪ್ಯುಟಿ ಸೂಪರಿಂಟೆಂಡೆಂಟ್ ಮೆ|| ಎಂ. ಎಸ್. ರಾಮಸ್ವಾಮಿ ಅಯ್ಯರ್‌ರವರು ಮೇಲ್ಕಂಡ ವಿಷಯವನ್ನು ಕುರಿತು ಉಪನ್ಯಾಸಮಾಡಿದರು. ಈ ವಿಷಯವನ್ನು ಶ್ರದ್ಧೆಯಿಂದ ಕೇಳಬೇಕೆಂದೂ, ಉಪನ್ಯಾಸಕರು ವಿನೋದಾರ್ಥವಾಗಿ ಈ ನೂತನ ವಿಷಯವನ್ನು ಹೇಳದೆ ನಾಲ್ಕುವರ್ಷಗಳಿಂದಲೂ ಚೆನ್ನಾಗಿ ಆಲೋಚಿಸಿ ನಿರ್ಧರಿಸಿಕೊಂಡು ಹೇಳುತ್ತಾರೆಂದೂ ಅಧ್ಯಕ್ಷರು ತಿಳಿಸಿದರು. ಉಪನ್ಯಾಸಕರು ಹೇಳಿದುದೇನೆಂದರೆ :—

ಜೇಸಸ್ ಕ್ರೈಸ್ಟು ಎಂಬ ಪದವು "ಕೇಶವಕೃಷ್ಣ" ಎಂಬ ಅರವಪದದಿಂದ ಬಂದುದಾಗಿದೆ. ಏಸುಕ್ರಿಸ್ತನ ಮಾತೃಭಾಷೆಯು ಅರವ ಅಥವಾ ತಮಿಳು. ಆತನ ತಂದೆತಾಯಿಗಳು ಅರವಜಾತಿಯವರೇ. ಏಸು ಅರವಜಾತಿಯವನಾದುದರಿಂದಲೇ "ಕ್ರೈಸ್ತ" ಪದದುತ್ಪತ್ತಿಯು ಇಂಡ್ಯಾದಲ್ಲೇ ತಿಳಿದಿರತಕ್ಕುದಾಗಿದೆ. ಕೇಶವನೇ ಕೃಷ್ಣನು. ಅವನನ್ನೇ ಜೇಸಸ್ ಎಂದು ಬೋಧಕರು ಕರೆದರು. ಹಿಂದೂ ಮತ್ತು ಕ್ರೈಸ್ತಮತಗಳಲ್ಲಿಯ ಕೊಂಚ ಹೋಲಿಕೆಯು ಉಭಯಮತಗಳ ಸೇರುವಿಕೆಯಿಂದ ಬಂದುದಾಗಿರದೆ ಕ್ರೈಸ್ತನು ಹಿಂದುವಾಗಿದ್ದುದರಿಂದಲೇ ಬಂದುದಾಗಿದೆ. ಅದುಕಾರಣ ಏಸುವನ್ನು "ನೇಬಿಕ್ರೈಸ್ತ" ಅಂದರೆ ಸಂತಾನ ಕೃಷ್ಣನೆನ್ನುವರು. ರೋಮಿನಲ್ಲಿರುವ ಸೆಂಟ್ ಆಗಸ್ಟಿನ್ ಪುರಾತನಚರ್ಚಿನಲ್ಲಿ ಏಸುಕ್ರಿಸ್ತನು ಕಾಲಂದಿಗೆಹಾಕಿರುವ ಬಾಲಕನಂತೆ ಚಿತ್ರಿಸಲ್ಪಟ್ಟಿದೆ. ಬಾಜಂಟೈನು ಪುರಾತನಚಿತ್ರದಲ್ಲಿ ಏಸುವಿನ ತಾಯಿ ಮೇರಿಯು ಕಪ್ಪುಬಣ್ಣದ ಸ್ತ್ರೀಯಳಾಗಿ ಚಿತ್ರಿಸಲ್ಪಟ್ಟಿದೆ. ತಾಯಿಯು ಕಪ್ಪಾಗಿರುವಾಗ್ಯೆ ಮಗನು ಕಪ್ಪಾಗಿಯೇ ಇರಬೇಕು. ಸೆಂಟ್‌ಮೇರಿಯ ಚರ್ಚಿನಲ್ಲಿ ಏಸುವಿನಚಿತ್ರವನ್ನು ನೋಡಬಹುದು. ಮದ್ರಾಸುದೇಶದವರ ಬಣ್ಣವು ಅಚ್ಚಕಪ್ಪು. ಏಸುವು ಮರಗೆಲಸಮಾಡುವವನು. ಗ್ರೀಕುಪದವಾದ ಟೆಕ್ಟನ್, ಅಂದರೆ ಮರಗೆಲಸವೆಂದರ್ಥವು. ತಮಿಳಿನಲ್ಲಿ 'ತಚ್ಚನ್' ಎನ್ನುವರು. ಗ್ರೀಕ್‌ಭಾಷೆಯಲ್ಲಿ ಕೆಲ ಅರವಪದಗಳಿರುತ್ತವೆ. ಜೇಸಸು ಮರಗೆಲಸದವನ ಅಂದರೆ ಬಡಗಿಯವನ ಮಗ. ಈ ಬಡಗಿಯವರಿಗೆ ಆಚಾರಿ ಎಂದು ಹೆಸರು. ಈ ಬಡಗೀಕುಲಸ್ಥರಂತೆ ಏಸುವು ಜನಿವಾರವನ್ನು ಹಾಕಿಕೊಂಡಿದ್ದನೆ ? ಪಾಲಸ್ಟೈನಿನಲ್ಲಿ ಭಾರತೀಯರಂತೆ ಜನಿವಾರವನ್ನು ಹಾಕಿಕೊಂಡಿರುವ ಪಾರ್ಸಿಗಳು ಬ್ರಾಹ್ಮಣರೇ. ಅವರು ಫಿಲಾಕಟರೀಸ (ಜನಿವಾರವ)ನ್ನು ಧರಿಸುವರು. ಅದರಿಂದ ಪ್ರಮಾಣವನ್ನು ಮಾಡುವರು. ಏಸು ಬಾಲನಾಗಿದ್ದಾಗ್ಯೆ ಉಪನಯನಕಾಲದಲ್ಲಿ ಪಂಚಗವ್ಯವನ್ನು ತೆಗೆದುಕೊಂಡಿದ್ದನು. ಏಸುವು ಜನಿವಾರವನ್ನು ಹಾಕಿಕೊಂಡಿದ್ದಂತೆ ಬೊಂಬೆಯಗಳಲ್ಲೇಕೆ ಕಂಡುಬರುವುದಿಲ್ಲವೆಂದು ಕೇಳಬಹುದು. ಜಡ್ಡಾನ್‌ದಲ್ಲಿ ಜಾನು ಏಸುವಿಗೆ ಬ್ಯಾಪ್ಟೈಜು ಮಾಡಿದುದರಲ್ಲಿ ಘನತೆಯೇನೆಂದರೆ ಸನ್ಯಾಸಿಯೇ ಬೇರೊಬ್ಬನಿಗೆ ಸನ್ಯಾಸಾಶ್ರಮವನ್ನು ಕೊಡಬಲ್ಲನು. ಜಾನು ದೊಡ್ಡ ಹಿಂದುಸನ್ಯಾಸಿ. ಬ್ಯಾಪ್ಟಿಜಂ ಆದನಂತರ ಏಸುವು ಏಡಾರಿಗೆ ಹೋಗಿ ಪುನಃ ನೂತನಪುರುಷನಾಗಿ ಬಂದನು. ಕಾಷಾಯವಸ್ತ್ರವನ್ನು ಧರಿಸಿ ದಂಡಕಮಂಡಲಗಳನ್ನು ಹಿಡಿದುಕೊಂಡಿರುವ ರೀತಿಯಲ್ಲಿರುವುದು 6ನೇ ಶತಮಾನದ ಬೊಂಬೆಗಳನ್ನು ನೋಡಿದಲ್ಲಿ ಗೊತ್ತಾಗುವುದು. ಏಸುವು ಹಿಂದುವಾಗಿದ್ದುದರಿಂದಲೇ ಹಿಂದೂಧರ್ಮದಂತೆ ಸನ್ಯಾಸಾಶ್ರಮ ಸ್ವೀಕಾರಾನಂತರ ಯಜ್ಞೋಪವೀತವನ್ನು ತೆಗೆದುಬಿಟ್ಟನು. ಅದರಿಂದಲೇ ಈಗ ಅವನ ಬೊಂಬೆಗಳನ್ನು ಯಜ್ಞೋಪವೀತವಿಲ್ಲದೆ ಬರೆದಿರುವರು. ಈ ನಿದರ್ಶನವನ್ನು ಎಲ್ಲದರಲ್ಲೂ ಆಧುನಿಕಪಂಡಿತರು ಗುರ್ತಿಸಿಕೊಂಡಿರಬೇಕಾಗಿದೆ. ಏಸುಕ್ರಿಸ್ತನು ಕಮ್ಮಾರಸಿದ್ಧನಾದನು. ಕ್ರೈಸ್ತನು ವಿಶ್ವಕರ್ಮಬ್ರಾಹ್ಮಣನು. ಕ್ರೈಸ್ತಮತವು ಹಿಂದೂಮತವು. ಯಹೂದರು ಭರತಖಂಡದಿಂದ ಬಂದರೆಂದು ಕ್ಲಿಯಾರ್ಚಸು ಬರೆದಿಲ್ಲವೆ ?

ಹೀಗೆ ಏಸುಕ್ರಿಸ್ತನು ಅರವಕುಲದವನೆಂದೂ ಆಚಾರಿ ಎಂದೂ, ಕಪ್ಪುಜಾತಿಯವನೆಂದೂ 12ನೇ ವರ್ಷದಲ್ಲಿ ಜರೂಸಲಮಿಗೆ ಹೋಗಿ ಉಪನಯನವನ್ನು ಮಾಡಿಸಿಕೊಂಡನೆಂದೂ, ದೊಡ್ಡ ಸಿದ್ಧನಾದನೆಂದೂ ಸಿದ್ಧಾಂತಮಾಡಬಹುದು. ತಮಿಳುಭಾಷೆಯಾದ ಸಿತಾರ್ ಎಂಬ ಪದವು ಪಾಶ್ಚಾತ್ಯರಿಗೆ ತಿಳಿಯದುದರಿಂದ ಗುರ್ತಿಸಲಿಲ್ಲ. ಏಸು ಸಿತಾರ್ ಬಡಗಿಯ ಕುಲಸ್ಥರಲ್ಲಿ ಕೆಲರು ವಿಶ್ವಬ್ರಾಹ್ಮಣರಿರುವರು. ಕೇಶವಕೃಷ್ಣಾಚಾರಿಮತವೇ ಕ್ರೈಸ್ತಮತವು. ಶಿಬಿಚಕ್ರವರ್ತಿನಿಯ ಜನ್ಮಭೂಮಿಯಾಗಿಲ್ಲದಿರುವ ಇನ್ನಾವದೇಶವೂ ಶಿಲುಬೆಯಮೇಲೆ ರಕ್ತವನ್ನು ಧಾರೆಗರೆದ ಕ್ರೈಸ್ತನನ್ನು ಕಂಡುದಿಲ್ಲವು" ಎಂದು ರಾಮಸ್ವಾಮಿಅಯ್ಯರ್‌ರವರು ಹೇಳಿ ಅನೇಕ ಬೊಂಬೆಗಳನ್ನು ತೋರಿಸಿದರು.

ಜಮೀನಿಗೆ ನೀರು ಬಿಡುವುದು.

ಈ ಕಾರ್ಯವನ್ನು ಸರ್ಕಾರದವರು ಒಂದು ಪಂಚಾಯತಿಗೆ ವಹಿಸಿರುತ್ತಾರೆ.

ಮೈಸೂರುಸಂಸ್ಥಾನದ ಕೆರೆಗಳ ಏರ್ಪಾಡು ಬಹಳ ಮುಖ್ಯವಾದುದಾಗಿದೆ. ಅಲ್ಲದೆ ಕೆರೆಗಳನ್ನು ಜೀರ್ಣೋದ್ಧಾರಮಾಡುವುದಕ್ಕಾಗಿ ಇನ್ನೂ ಹೆಚ್ಚು ಕಾರ್ಯಕಾರಿಯಾದ ಏರ್ಪಾಡುಗಳನ್ನು ಮಾಡಬೇಕಾದುದು ಸಹ ಆವಶ್ಯಕವಾಗಿರುತ್ತದೆ. ಈ ಉದ್ದೇಶದಿಂದಲೇ ಸರ್ಕಾರದವರು ಇನ್ನು ಮುಂದೆ ಜೀರ್ಣೋದ್ಧಾರಮಾಡುವುದಕ್ಕಾಗಿ ಯಾವಯಾವ ಕೆರೆಗಳನ್ನು ಚುನಾಯಿಸಬೇಕೆಂಬ ವಿಷಯದಲ್ಲಿ ಒಂದುಯುಕ್ತವಾದ ಕಾರ್ಯಕ್ರಮದ ಪಟ್ಟಿಯನ್ನು (ಪ್ರೋಗ್ರಾಮನ್ನು) ತಯಾರಿಸುವುದಕ್ಕೆ ಆವಶ್ಯಕವಾದ ಎಲ್ಲಾ ವಿಷಯಗಳನ್ನೂ ಶೇಖರಿಸುವುದಕ್ಕಾಗಿ ಒಂದು ಟ್ಯಾಂಕ್‌ಸರ್ವೆ ಡಿವಿಜನನ್ನು ಏರ್ಪಡಿಸಿ ತಕ್ಕ ಅಪ್ಪಣೆ ಕೊಡಿಸಿದಾರೆ.

1926 ನೇ ಜೂನ್ ತಾ|| 17, 18 ರಲ್ಲಿ ಮೈಸೂರಿನಲ್ಲಿ ಡೆಪ್ಯುಟಿ ಕಮಿಷನರುಗಳ ಮೀಟಿಂಗುಗಳು ನಡೆದವು. ಕೆರೆಗಳ ನೀರುಸರಬರಾಯಿಯ ವಿಷಯದಲ್ಲಿ ಸಾಕಾದಷ್ಟು ಹತೋಟಿ ಇಲ್ಲದಿರುವಕಾರಣ ದೊರೆಯತಕ್ಕ ನೀರಿನಿಂದ ಎಷ್ಟು ಜಮೀನನ್ನು ಸಾಗುವಳಿಮಾಡಬಹುದೋ ಅದಕ್ಕಿಂತಲೂ ಹೆಚ್ಚಾದಷ್ಟು ಜಮೀನಿನಲ್ಲಿ ತರೀಫಸಲುಗಳನ್ನಿಟ್ಟು ರೈತರುಗಳು ವಿಶೇಷ ನಷ್ಟಕ್ಕೆ ಗುರಿಯಾಗುತ್ತಿದ್ದಾರೆಂದೂ, ಈ ನಷ್ಟವನ್ನು ತಪ್ಪಿಸುವುದು ಸಾಧ್ಯವೆಂದೂ ಸದರಿ ಮೀಟಿಂಗುಗಳಲ್ಲಿ ತಿಳಿಸಲ್ಪಟ್ಟಿತು. ಅಲ್ಲದೆ ನೀರನ್ನು ಈಗ ಉಪಯೋಗಿಸುತ್ತಿರುವ ವಿಧಾನದಲ್ಲಿ ಬಹಳವಾಗಿ ನೀರು ಪೋಲಾಗುತ್ತಿದೆ ಎಂದೂ, ನೀರಿನ ಸರಬರಾಯಿಯು ಇನ್ನೂ ಉತ್ತಮ ರೀತಿಯಲ್ಲಿ ನಡೆಯುವಂತೆ ಕ್ರಮಗೊಳಿಸುವುದಾದರೆ ಈಗಿರುವುದಕ್ಕಿಂತಲೂ ಹೆಚ್ಚು ಜಮೀನನ್ನು ತರಿ ಸಾಗುವಳಿಗೆ ತರುವುದು ಸಾಧ್ಯವೆಂದೂ ತಿಳಿಸಲ್ಪಟ್ಟಿತು. ದೊಡ್ಡ ದೊಡ್ಡ ಕೆರೆಗಳಿಗೆ ನೀರನ್ನು ಒದಗಿಸುವ ಕಾಲುವೆಗಳೆಲ್ಲಾ ಶಿಥಿಲವಾಗಿವೆ ಎಂದೂ, ಗಾರೆಯ ಕೆಲಸವಾಡಿ ಮಡುಬಾಯಿಗಳೇ ಮುಂತಾದುವುಗಳನ್ನು ಒದಗಿಸಲು ತಕ್ಕಷ್ಟುಮಟ್ಟಿಗೆ ಗಮನಕೊಡಲ್ಪಡುತ್ತಾ ಇಲ್ಲವೆಂದೂ ವರದಿಮಾಡಲ್ಪಟ್ಟಿದೆ.

1923 ನೇ ಸೆಪ್ಟಂಬರ್ ತಾ|| 27 ನೇ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟ ನೀರಾವರಿಯ ಮಸೂದಾ ಕಾನೂನಿನಲ್ಲಿ ನೀರಿನ ಸರಬರಾಯಿಯನ್ನು ಕ್ರಮಪಡಿಸುವುದಕ್ಕೂ, ನೀರು ಪೋಲಾಗುವುದನ್ನು ತಪ್ಪಿಸುವುದಕ್ಕೂ ಆವಶ್ಯಕವಾದ ನಿಯಮಗಳು ಇರುತ್ತವೆ. ಮತ್ತು ಸದರಿ ಮಸೂದಾ ಕಾನೂನನ್ನು ಪರ್ಯಾಲೋಚನೆಯ ಬಗ್ಗೆ ಶೀಘ್ರದಲ್ಲಿಯೇ ಪ್ರಜಾಪ್ರತಿನಿಧಿಸಭೆಯವರಿಗು ಮತ್ತು ನ್ಯಾಯವಿಧಾಯಕಸಭೆಯವರಿಗು ಒಪ್ಪಿಸಬೇಕಾಗಿದೆ.

ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ನೀರಾವರಿಯ ಸೆಸ್ ಫಂಡಿನ ಬಾಬಿನಲ್ಲಿ ಒದಗಿಸಿರುವ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಿರುವುದಿಲ್ಲ. ನೀರಾವರಿಯ ಸೆಸ್‌ಫಂಡಿನಲ್ಲಿ ಉಪಯೋಗಿಸಲ್ಪಡದೆ ಉಳಿಯುವ ಶಿಲ್ಕು ಹಣವನ್ನು ಹೊಸದಾಗಿ ರಸ್ತೆಗಳನ್ನು ಏರ್ಪಡಿಸುವುದಕ್ಕಾಗಿ ಉಪಯೋಗಿಸಬೇಕೆಂಬುದಾಗಿ ಚೀಫ್‌ಕಮಿಷನರುಗಳು ಒಂದು ಹುಕುಮನ್ನು ಸಾದರುಮಾಡಿದ್ದರು. ಮಲೆನಾಡಿನಲ್ಲಿರತಕ್ಕ ಕೆರೆಗಳ ದುರಸ್ತಿಯ ಕಾಮಗಾರಿ ಮುಂತಾದುವುಗಳಿಗೆ ಬೇಕಾದಷ್ಟು ಹಣವನ್ನು ಸಂಪೂರ್ಣವಾಗಿ ಒದಗಿಸಿದನಂತರ ಉಳಿಯುವ ಮೊಬಲಗನ್ನು ಹಳೆಯರಸ್ತೆಗಳನ್ನು ದುರಸ್ತು ಮಾಡುವುದಕ್ಕಾಗಲಿ, ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕಾಗಲಿ ಉಪಯೋಗಿಸಲು ಯಾವ ಅಭ್ಯಂತರವೂ ಇರಲಾರದೆಂದು ಸರ್ಕಾರದವರಿಂದ ಭಾವಿಸಲಾಗಿದೆ.

ಮೇಲ್ಕಂಡ ವಿಚಾರಗಳ ಬಗ್ಗೆ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕಿಂತ ಮುಂಚಿತವಾಗಿ ಒಂದು ಕಮಿಟಿಯವರು ಸದರಿ ವಿಚಾರಗಳನ್ನು ಕುರಿತು ಜಾಗರೂಕತೆಯಿಂದ ಪರ್ಯಾಲೋಚಿಸುವುದು ಆವಶ್ಯಕ. ಆದಕಾರಣ ಸರ್ಕಾರದವರು ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳನ್ನು ಸದರಿ ಕಮಿಟಿಯ ಮೆಂಬರುಗಳನ್ನಾಗಿ ನೇಮಕಮಾಡಿರುತ್ತಾರೆ:—ರೆವಿನ್ಯೂಕಮಿಷನರವರು (ಚೇರ್‌ಮನ್‌ರವರು), ಮಿ|| ಕೆ. ಆರ್. ಶೇಷಾಚಾರ್ಯರವರು, ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರ್ ಮಿ|| ಎ. ಕೆ. ಸೈಯದ್‌ತಾಜ್‌ಪೀರಾನ್‌ರವರು, ಮೈಸೂರಿನಲ್ಲಿ ಪ್ಲೀಡರಾಗಿರುವ ಮಿ|| ಬಿ. ನರಸಿಂಗರಾಯರು, ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟ್ ಮಿ|| ಎಚ್. ಎಸ್. ನಂಜುಂಡಯ್ಯನವರು.

ಸದರಿ ಕಮಿಟಿಯವರು ಈ ಕೆಳಗೆ ಕಂಡ ವಿಷಯಗಳನ್ನು ಕುರಿತು ಪರ್ಯಾಲೋಚಿಸಿ ಮುಂದಣ ಸೆಪ್ಟಂಬರ್ ತಿಂಗಳಿನ ಆಖೈರಿನೊಳಗಾಗಿ ಒಂದು ವರದಿಯನ್ನು ಒಪ್ಪಿಸತಕ್ಕದ್ದು. ಸದರಿ ವಿಷಯಗಳು ಯಾವುವೆಂದರೆ :—(1) ನೀರು ಪೋಲಾಗದಂತೆ ಕೆರೆಗಳ ಮತ್ತು ನಾಲೆಗಳ ನೀರಿನ ಸರಬರಾಯಿಯನ್ನು ಕ್ರಮಪಡಿಸಿ ಸಾಗುವಳಿಗೋಸ್ಕರವೇ ನೀರೆಲ್ಲಾ ಉಪಯೋಗವಾಗುವಂತೆ ಮಾಡುವುದು (2) ನೀರಾವರಿಯ ಮಸೂದಾ ಕಾನೂನನ್ನು ಜಾರಿಗೆ ತರುವುದು (3) ಕೆರೆಪಂಚಾಯತಿಯ ರೆಗ್ಯುಲೇಷನಿನ ನಿಬಂಧನೆಗಳನ್ನು ಪರಿಶೀಲಿಸಿ ಆವಶ್ಯಕವಾದ ಬದಲಾವಣೆಗಳನ್ನು ಸೂಚಿಸುವುದು (4) ಮಲೆನಾಡಿನಲ್ಲಿ ನೀರಾವರಿಯ ಸೆಸ್ಸಿನ ಹಣದಲ್ಲಿ ಉಳಿತಾಯವಾದ ಮೊಬಲಗನ್ನು ರಸ್ತೆಗಳನ್ನು ದುರಸ್ತು ಮಾಡುವುದಕ್ಕಾಗಿಯೂ, ಹೊಸದಾಗಿ ರಸ್ತೆಗಳನ್ನು ಏರ್ಪಡಿಸುವುದಕ್ಕಾಗಿಯೂ ಉಪಯೋಗಿಸುವುದು.

(ನ್ಯಾ. ಪ.)

(ಕಂಠೀರವದಿಂದ)

ಬ್ರಾಹ್ಮಣವಿಚಾರ.

ಈ ವಿಷಯದಲ್ಲಿ ಇತ್ತಿತ್ತಲಾಗೆ ಕಂಠೀರವದಲ್ಲಿ ತುಂಬಾ ಲೇಖನಗಳು ಬರತೊಡಗಿವೆ. ಬ್ರಾಹ್ಮಣ್ಯವು ಕರ್ಮದ ಮೇಲೆ ಆಧರಿಸಿರುವುದೆಂದು ಒಬ್ಬರೂ ಜನ್ಮದಮೇಲೆಂದು ಮತ್ತೊಬ್ಬರೂ ಸ್ಮೃತಿಗಳ ಆಧಾರವನ್ನು ತೆಗೆದು ಬರೆದಿರುವರು. ಇದರಲ್ಲಿ ಜುಲಾಯಿ 27 ನೇ ತಾರೀಕಿನ ಕಂಠೀರವದಲ್ಲಿ ಶ್ರೀಯುತ ಡಿ. ಪಿ. ಹೊಳ್ಳರು ಒಂದು ಪಾಂಡಿತ್ಯಪೂರ್ಣವಾದ ಲೇಖನವನ್ನು ಬರೆದಿದ್ದಾರೆ. ಇದನ್ನು ಓದಿದರೆ ಎಂಥ ಕಲ್ಲೆದೆಯವನೂ ದುಃಖಿತನಾಗದಿರನು.

ಶ್ರೀ. ಹೊಳ್ಳರಂತೆ ನಾನು ಸಂಸ್ಕೃತದಲ್ಲಿ ಪಂಡಿತನಲ್ಲ. ಪರಾಶರ ಸ್ಮೃತಿಯಿಂದ ಶ್ಲೋಕಗಳನ್ನು ಉದ್ಧರಿಸುವ ಇಚ್ಛೆಯೂ ನನಗಿಲ್ಲ. ಆದರೆ ಹಿಂದೂಧರ್ಮದ ನಿಜತತ್ವಗಳನ್ನು ಹೊಳ್ಳರಿಗಿಂತ ಚೆನ್ನಾಗಿ ಅರಿತಿರುವೆನೆಂದು ಖಂಡಿತವಾಗಿ ಹೇಳಬಲ್ಲೆನು. ಹಾಗೂ ಆರ್ಯಜನಾಂಗದವನಿದ್ದುದರಿಂದ ದ್ರಾವಿಡರಾದ ಹೊಳ್ಳರಿಗಿಂತ ಕುಲದೃಷ್ಟಿಯಿಂದ ಬ್ರಾಹ್ಮಣ್ಯವು ನನ್ನಲ್ಲಿ ಹೆಚ್ಚಿರುವುದು.

ದೇವರು ಮನುಷ್ಯನಿಗೆ ವಿವೇಕವೆಂಬುದೊಂದನ್ನು ಕೊಟ್ಟಿರುವನು. ನ್ಯಾಯಾನ್ಯಾಯಗಳನ್ನು ವಿಚಾರಿಸುವ ಶಕ್ತಿಯನ್ನು ಕೊಟ್ಟಿರುವನು. ಶ್ರೀ ಹೊಳ್ಳರು ತಮ್ಮ ಲೇಖನವನ್ನು ಬರೆಯುವಾಗ ಇದರ ಉಪಯೋಗವನ್ನು ಮಾಡಿದರೆ ಒಳ್ಳೇದಿತ್ತು.

ಶೂದ್ರನು ಬ್ರಾಹ್ಮಣನಾಗುವುದು ಎಂದೂ ಸಾಧ್ಯವಿಲ್ಲೆಂದೂ ಪ್ರಾಚೀನಕಾಲದಲ್ಲಿ ಶೂದ್ರರು ಬ್ರಾಹ್ಮಣರ ಕರ್ಮಗಳನ್ನು ಮಾಡಿದರೆ ರಾಜರು ಅವರನ್ನು ಶಿಕ್ಷಿಸುತ್ತಿದ್ದರೆಂದೂ ಹೊಳ್ಳರ ಹೇಳಿಕೆ. ಈ ಮಹಶಯರು ಸಂಸ್ಕೃತಪಂಡಿತರು ಮಾತ್ರವೇ ಅಲ್ಲ; [illegible] ಆಗಿರು [illegible] 'ಜಾತೀಯ' [illegible]

ಚಾತುರ್ವರ್ಣ್ಯವೆಂಬ ಸಾಮಾಜಿಕಸಂಸ್ಥೆಯೂ ಮೊದಲು ಆರ್ಯರದು. ದ್ರಾವಿಡರು ವಾಸಿಸುವ ದಕ್ಷಿಣದೇಶಕ್ಕೆ ಬಂದುದು ಆರ್ಯದ್ರಾವಿಡ ಸಂಸರ್ಗವಾದಮೇಲೆ. ಇದು ಸರ್ವಸಮ್ಮತವಾದ ಸಂಗತಿಯು. ಇತಿಹಾಸಜ್ಞರಾದ ಹೊಳ್ಳರೂ ಒಪ್ಪತಕ್ಕದ್ದೇ. ಅಂದಬಳಿಕ ಇವನ್ನು ದ್ರಾವಿಡರಲ್ಲಿ ಆಚರಣೆಗೆ ತಂದವರು ಆರ್ಯರು. ಹೊಳ್ಳರ ಪೂರ್ವಜರನ್ನು ಬ್ರಾಹ್ಮಣರನ್ನಾಗಿ ಮಾಡಿದವರು ಆರ್ಯರೇ. ಆಗಿನಕಾಲದ ಆರ್ಯರು ಬ್ರಾಹ್ಮಣ್ಯವು ಜನ್ಮದಮೇಲಲ್ಲದೆ ಕರ್ಮದಮೇಲಲ್ಲವೆಂಬುದನ್ನು ನಂಬಿದ್ದರೆ ಹೊಳ್ಳರ ಪೂರ್ವಜರು ಬ್ರಾಹ್ಮಣರಾಗುತ್ತಿದ್ದರೆ? ಹೊಳ್ಳರಿಗೆ ಈಗ ಅಹಂಕಾರದಿಂದ ತಲೆಗೆ ಪಿತ್ತವೇರಿದವರಂತೆ ಬರೆಯಲು ಎಡೆಯೇ ಉಳಿಯುತ್ತಿದ್ದಿಲ್ಲ.

ಶೂದ್ರನು ವೇದದ ಒಂದೇ ಅಕ್ಷರವನ್ನು ಉಚ್ಚರಿಸಹತ್ತಿದರೆ ಅವನಿಗೆ ನರಕಪ್ರಾಪ್ತಿಯಂತೆ. ಅಂದರೆ ಹೊಳ್ಳರ ಪೂರ್ವಜರೆಲ್ಲಾ ನರಕಕ್ಕೇನೇ ಹೋಗಿರಬೇಕು. ಧನ್ಯ ಹೊಳ್ಳರೇ ಧನ್ಯ. ನಿಮ್ಮಂತಹರೇ ನಮ್ಮ ಧರ್ಮರಕ್ಷಕರು.

ರಾಗ, ದ್ವೇಷ, ಸಿಟ್ಟು, ಕೃತಘ್ನತೆ, ಕೃಪಣತ್ವ ಇತ್ಯಾದಿಗಳೆಲ್ಲಾ ಶೂದ್ರರ ಹುಟ್ಟುಗುಣಗಳಂತೆ. ಈ ಗುಣಗಳು ಬ್ರಾಹ್ಮಣರಲ್ಲಿ ಇಲ್ಲವೇ? ಹೊಳ್ಳರು ಕಣ್ಣಿದ್ದು ನೋಡುವುದಿಲ್ಲ; ಕಿವಿಯಿದ್ದು ಕೇಳುವುದಿಲ್ಲ. ತಾವು ಬ್ರಾಹ್ಮಣರೆಂಬ ಅಹಂಕಾರದಿಂದ ಇವರ ತಲೆಯೇ ತಿರುಗಿದೆಯೆಂಬುದರಲ್ಲಿ ತಪ್ಪೇನು?

ಹೊಳ್ಳರೇ, ವಾಲ್ಮೀಕಿಋಷಿಯು ಮೊದಲು ಬೇಡನೆಂದು ನಿಮಗೆ ಗೊತ್ತಿರುವುದೆ? ಹೊಳ್ಳರು ಸ್ಮಾರ್ತರೊ, ವೈಷ್ಣವರೊ ನನಗೆ ಗೊತ್ತಿಲ್ಲ. ಏನೇ ಇರಲಿ, ಮಂಗಳೂರುಜಿಲ್ಲೆಯವರಿದ್ದಮೇಲೆ ಮಧ್ವಾಚಾರ್ಯರ ಕುರಿತು ಇವರು ಕೇಳಿರಬೇಕು. ಅವರು ಮಟ್ಟಿಯಲ್ಲಿ ಕೆಲವು ಮೊಗೇರರನ್ನು ಬ್ರಾಹ್ಮಣರನ್ನಾಗಿ ಮಾಡಿದ್ದಾರಲ್ಲಾ! ಅವರಿಗೆ ಹಿಂದೂಧರ್ಮತತ್ವಗಳು ಗೊತ್ತಿರಲಿಲ್ಲವೇ? ಬ್ರಾಹ್ಮಣಕರ್ಮವನ್ನಾಚರಿಸುತ್ತಿದ್ದ ಕನಕದಾಸನ ಸಲುವಾಗಿ ಉಡುಪಿಯ ಕೃಷ್ಣನು ತನ್ನ ಮುಖವನ್ನೇ ತಿರುಗಿಸಿದನಲ್ಲಾ! ಹೊಳ್ಳರು ಹೇಳುವ ಪ್ರಕಾರ ಕೃಷ್ಣದೇವರು ಮಾಡಿದ ಕೆಲಸವು ಹಿಂದೂಧರ್ಮಕ್ಕೇ ವಿರೋಧ. ಅಂದಬಳಿಕ ಇವರ ತತ್ವದ ನಿಜವಾದ ಬೆಲೆಯನ್ನು ವಾಚಕರೇ ಅರಿತುಕೊಳ್ಳಲಿ.

ಗೀತೆಯಲ್ಲಿ ಶ್ರೀಕೃಷ್ಣನು ‘ ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ’ ಎಂದು ಹೇಳಿರುವನು. ಗೀತೆಯನ್ನು ಓದಿದರೆ ಹೊಳ್ಳರಿಗೆ ಇದು ತಿಳಿಯುವದು.

ಇಂತಹ ಜನರು ನಮ್ಮಲ್ಲಿರುವತನಕ ನಮ್ಮ ಹಿಂದೂಸಮಾಜದ ಏಳಿಗೆಯು ಹೇಗಾದೀತು? ಸ್ವಧರ್ಮವನ್ನು ಬಿಟ್ಟು, ಆರ್ಯಧರ್ಮದ ನಿಜತತ್ವವನ್ನು ಅರಿಯದೆ ತಾವು ಬ್ರಾಹ್ಮಣರು ಎನ್ನುವ ಇವರಿಗೆ ಏನನ್ನಬೇಕು? ಇವರು ಭೂಸುರರೊ ನರಕಾಸುರರೊ ವಾಚಕರೇ ನಿಶ್ಚಯಿಸಲಿ.

ಪೂನಾ,
ತಾ॥ 2-8-1926. } ರಂಗರಾವ ರಾ. ತಲಚೇರಕರ.

ಗೃಹಕೃತ್ಯದ ನೋಟೀಸು.

ಸನ್ 1926 ನೆಯ ಇಸವಿ ಜುಲೈ ತಾರೀಖು 12 ರಲ್ಲಿ ಹಾಸನದ ಡಿಸ್ಟ್ರಿಕ್ಟು ಚನ್ನರಾಯಪಟ್ಟಣದ ತಾಲ್ಲೂಕು ಅಣತಿಹೋಬಳಿ ವಳಗೆರೆಹಳ್ಳಿಯಲ್ಲಿರುವ ಮರಿಗೌಡರಮಗ ಬೋರೇಗೌಡನು ಈ ನೋಟೀಸು ಮೂಲಕ ತಿಳಿಯಪಡಿಸುವದೇನೆಂದರೆ:—ನನಗೆ ಒಂದನೇ ನಂಜಪ್ಪನೆಂಬ ಒಬ್ಬ ಗಂಡುಮಗನೂ ಎರಡನೇ ಶಿವನಂಜಪ್ಪನೆಂಬ ಒಬ್ಬ ಗಂಡುಮಗನೂ ಈರೀತಿ ಇಬ್ಬರು ಗಂಡುಮಕ್ಕಳಿರುತ್ತಾರೆ. ಇವರಿಬ್ಬರೂ ವಯಸ್ಕರಾಗಿ ಒಂದನೇ ನಂಜಪ್ಪನೆಂಬವನಿಗೆ ಲಗ್ನವಾಗಿದೆ. ಎರಡನೇ ಶಿವನಂಜಪ್ಪನಿಗೆ ಇನ್ನೂ ಲಗ್ನವಾಗಿಲ್ಲ. ಒಂದನೇ ನಂಜಪ್ಪನೆಂಬುವವನು ಜರಾಯಿತು ಕೆಲಸದಮೇಲೆ ನಿಗಾಯಿಟ್ಟುಕೊಂಡು ಕೆಲಸಮಾಡಿಕೊಂಡು ಹೋಗುವಂತೆಯೂ, ಎರಡನೇ ಶಿವನಂಜಪ್ಪನೆಂಬುವನು ಕುರಿಗಳಮೇಲೆ ನಿಗಾಯಿಡುವಂತೆಯೂ ಗೊತ್ತುಮಾಡಿ ಸದರಿಯವರುಗಳಿಗೆ ಇಸಂ ಒಂದಕ್ಕೆ ಎರಡು ಆಳುಗಳ ಪ್ರಕಾರ ನಾಲ್ಕು ಆಳುಗಳನ್ನು ಇಟ್ಟುಕೊಟ್ಟು ಎರಡನೇ ಶಿವನಂಜಪ್ಪನೆಂಬುವವನಿಗೆ 5 ಸೋಲಿಗೆ ಕುರಿಗಳು ಅಂದರೆ 250 ಕುರಿಗಳನ್ನು ಜೊತೆಮಾಡಿ ಎರಡು ಆಳುಗಳನ್ನು ಸಹ ಸದರಿ ಶಿವನಂಜಪ್ಪನ ವಶಕ್ಕೆ ಕೊಟ್ಟೆನು. ಈಪ್ರಕಾರ ಸದರಿ ಶಿವನಂಜಪ್ಪನು ಕೆಲವು ದಿವಸ ಆಳುಗಳು ಸಹ ಕುರಿಗಳನಿಗಾದಮೇಲೆ ಇದ್ದುಕೊಂಡು ಬರುತ್ತಿದ್ದನಲ್ಲದೆ ನನಗೆ ಸಕಾಲಕ್ಕೆ ಸರಿಯಾಗಿ ಕುರಿಗಳಿಂದ ಬಂದ ಆದಾಯವನ್ನು ನನ್ನ ವಶಕ್ಕೆ ಪಾವತಿಮಾಡುತ್ತಾ ಇದ್ದನು. ಹೀಗಿರುವಲ್ಲಿ ಈಗ ಸುಮಾರು ಮೂರುವರುಷಗಳಕೆಳಗೆ ಕುರಿಗಳಿಗೆ ಹುಲ್ಲು ನೀರಿಗೆ ತೊಂದರೆವುಂಟಾದ ಕ್ಕಾಗಿ ಬಡಗಲ ಪ್ರಾಂತ ಕುರಿಗಳು ಮೇಯ್ಸುವದಕ್ಕೆ ಹೋದವು. ಹೋದಕಾಲದಲ್ಲಿ 5 ಸೋಲಿಗೆ ಕುರಿಗಳಲ್ಲಿ 150 ಕುರಿಗಳನ್ನು ಕುರಿ ಒಂದಕ್ಕೆ 4 ರೂ. ಗಳ ಪ್ರಕಾರ ಮಾರಿಕೊಂಡನೆಂದು ನನಗೆ ಪರಸ್ಪರ ವರ್ತಮಾನತಿಳಿದು ಬಂದುದರಮೇಲೆ ನಾನು ಭಯಗ್ರಸ್ತನಾಗಿ ಹೋಗಿ ನೋಡುವಲ್ಲಿ 5 ಸೋಲಿಗೆ ಕುರಿಗಳಲ್ಲಿ 3 ಸೋಲಿಗೆ ಕುರಿಗಳನ್ನು ಕುರಿಕಾವಲಿಗಿದ್ದವನನ್ನು ತನ್ನಂತೆ ಷರೀಕುಮಾಡಿಕೊಂಡು ಮಾರಿಕೊಂಡಿದ್ದಾಗ್ಯೂ, ಕೂಡ ಮೊಬಲಗನ್ನು ನನ್ನ ವಶಕ್ಕೆ ಪಾವತಿಮಾಡಲಿಲ್ಲ. ಮೊಬಲಗನ್ನು ನಾನು ಕೇಳಿದ್ದಕ್ಕೆ ನನ್ನಮೇಲೆ ಅನಂತವಾಗಿದಿಗರುನಡಿಸಿದ್ದಲ್ಲದೆ, ನನ್ನ ಹತೋಟಿಯನ್ನು ಬಿಟ್ಟು ಸುಮಾರು ಎರಡುವರುಷಗಳ ಪರಿಯಂತರ ಹೋಗಿದ್ದವನು ಅನಂತರ ತನಗೆ ಆಪ್ತರಾದ ಪಂಚಾಯತರನ್ನು ಕರದುಕೊಂಡು ಬಂದನು. ಅವರು ನನಗೆ ಸಂಮತಿಪಡಿಸಿ ಅವನನ್ನು ನನ್ನ ಮನೆಯಲ್ಲಿ ಬಿಟ್ಟು ಹೊದರು. ಈಚೆಗೆ ಕೆಲವು ದಿವಸಗಳು ನನ್ನಲ್ಲಿ ಪೂರ್ತಿಯಾಗಿ ನಂಬಿಕೆಹುಟ್ಟಿಸಿದನು. ಪುನಹ ಬುದ್ಧಿವಂತನಾದನೆಂದು ನನ್ನ ಮನಸ್ಸಿಗೆ ತಿಳಿದುಬಂದದ್ದರಮೇಲೆ ನಂಬಿ ನಾನು ವಯಸ್ಕನಾದ್ದರಿಂದಲೂ ನನ್ನ ಹಿರೀಮಗ ನಂಜಪ್ಪನೆಂಬಾತನು ಯಾವ ತಿಳುವಳಿಕೆ ಇಲ್ಲದವನಾದ್ದರಿಂದಲೂ ಇವನನ್ನೇ ನಾನು ನಂಬಿ ನನಗೆ ಬರತಕ್ಕ ಬಾಕಿಗಳನ್ನು ವಸೂಲ್ಮಾಡುವದಕ್ಕೂ ಹೊರಗಿನಿಂದ ಬಂದ ಮೊಬಲಗನ್ನು ಇರಿಸುವದಕ್ಕೂ ನಾನು ಕೇಳಿದ ಸಕಾಲದಲ್ಲಿ ಕೊಡುವದಕ್ಕೂ ಸಹ ಇವನನ್ನ ನಂಬಿ ಇವನ ಕೈಲಿ ಬೀಗದಕೈ ಕೊಟ್ಟೆನು. ಹೀಗಿರುವಲ್ಲಿ ಸದರಿ ಶಿವನಂಜಪ್ಪನೆಂಬುವನು ಯಾವದೋ ಒಂದು ಕೆಟ್ಟ ನಡತೆಗೆ ಒಳಪಟ್ಟು ಮನೆಯಲ್ಲಿದ್ದ ನಗದು 5000-0-0 ರೂ. ಗಳು ಮತ್ತು 1,000 ರೂ. ಗಳ ದಾಗೀನುಗಳನ್ನು ಸಹ ತೆಗೆದುಕೊಂಡು ದುರ್ನಡತೆಗೆ ಷರೀಕು ಆಗಿರುವದು ನನಗೆ ಪರಸ್ಪರ ತಿಳಿದುಬಂದ್ದದ್ದರಮೇಲೆ ನಾನು ಭಯಗ್ರಸ್ತನಾಗಿ ತನಿಕೆಮಾಡುವಲ್ಲಿ ಮೇಲೆ ನಮೂದಾಗಿರುವ ಮೊಬಲಗು ಮತ್ತು ದಾಗೀನುಗಳು ಹಾಲಿ ಇರಲಿಲ್ಲ. ಏನಾಯಿತು ಎಂಬುದಾಗಿ ಯಾವ ವಿಧದಲ್ಲಿ ಕೇಳಿದಾಗ್ಯೂ ಕೂಡಾ ಹೇಳದೆ ಉಡಾಫೆಮಾಡಿಕೊಂಡು ದಿಗರು ನಡಿಸಿ ತನ್ನಲ್ಲಿದ್ದ ಬೀಗದಕೈಯ್ಯನ್ನು ಮನೆಗೂಟಕ್ಕೆ ತಗಲುಹಾಕಿ ಹೊರಟು ಹೋಗಿ ಸುಮಾರು ಒಂದುವರುಷವಾಯಿತು. ಅಲ್ಲದೆ ಈಚೆಗೆ ಸುಮಾರು 2-3 ತಿಂಗಳಕಾಗಾಯಿತು ತನಗೆ ಆಪ್ತರಾದ ಪಂಚಾಯತರನ್ನು ಕರದುಕೊಂಡು ತನಗೆ ಬರಬೇಕಾದ ಭಾಗಾಂಶವನ್ನು ಮಾಡು ಎಂಬುದಾಗಿ ಪಂಚಾಯತರ ಸಮಕ್ಷಮ ಕೇಳಿದನು. ಅದಕ್ಕೆ ನಾನು ಮೇಲೆ ನಮೂದಾಗಿರುವ ಮೊಬಲಗು ಮತ್ತು ದಾಗೀನುಗಳು ಹಿಂದೆ ಕುರಿಗಳನ್ನು ಮಾರಿಕೊಂಡ ಬಾಬತು 600-0-0 ರೂ. ಗಳು ಇವುಗಳನ್ನು ತಂದುಕೊಟ್ಟಲ್ಲಿ ನಿನಗೆ ಭಾಗಾಂಶವನ್ನು ಮಾಡುತ್ತೇನೆಂಬದಾಗಿ ಸದರಿ ಪಂಚಾಯತರ ಸಮಕ್ಷಮ ಹೇಳಿದ್ದಕ್ಕಾಗಿ ಸದರಿ ಶಿವನಂಜಪ್ಪನೆಂಬುವನು ನನ್ನಮೇಲೆ ಅನಂತವಾಗಿ ದಿಗರುನಡಿಸಿಕೊಂಡು ನನ್ನ ಬಾಬತು ಸ್ಥಿರ ಯ ಚರಸ್ವತ್ತುಗಳನ್ನು ಪರಭಾರೆಮಾಡುತ್ತೇನೆಂಬುದಾಗಿ ನನಗೆ ಭಯೋತ್ಪಾತಮಾಡಿರುವದ್ದರಿಂದ ನಾನು ಭಯಸ್ತನಾಗಿ ಸದರಿ ಶಿವನಂಜಪ್ಪನಿಂದ ಯಾರೇ ಆಗಲಿ ಆಧಾರ ಕ್ರಯ ಭೋಗ್ಯ ದಾನವಗೈರೆ ಇತ್ಯಾದಿ ಮಾಡಿಸಿಕೊಳ್ಳಕೂಡದೆಂತಲೂ ಮತ್ತು ಇವನ ಬಾಬತು ಆಸ್ತಿಗಳು ಮೇಲೆ ನಮೂದಾಗುವ ಮೊಬಲಗ್ಗೆ ಈಡಾಗತಕ್ಕದ್ದೆಂತಲೂ ಈ ಮೂಲಕ ತಿಳಿಸಿರುತ್ತೇನೆ. ಆದ್ದರಿಂದ ಯಾರೇ ಆಗಲಿ ಈಡು ವಗೈರೆ ಮಾಡಿಸಿ ಕೊಂಡಲ್ಲಿ ಮೇಲೆ ನಮೂದಾಗುವ ಮೊಬಲಗೂ, ಮುಂದೆ ನನಗೆ ತಗಲುವ ಖರ್ಚು ನಷ್ಟಗಳಿಗೂ ಜವಾಬುದಾರರಾಗಬೇಕಾಗುತ್ತೆಂಬ ವಿಷಯವನ್ನು ಈ ಮೂಲಕ ತಿಳಿಸಿರುತ್ತೇನೆ.

ತಾ॥ 12-7-1926. ಬೋರೆಗೌಡನ ರುಜು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಮೈಸೂರ್‌ಸ್ಟೇಟ್ ಆಯುರ್ವೇದಿಕ್ ಕಾನ್ಫರೆನ್ಸ್,
ಚಿತ್ರದುರ್ಗ.

ಇದರ ದ್ವಿತೀಯ ಸಮಾವೇಶದ ಸ್ವಾಗತ ಸಮಿತಿಯ ಸಲುವಾಗಿ ತಾ॥ 15-8-26 ನೇ ಭಾನುವಾರ ಚಿತ್ರದುರ್ಗದಲ್ಲಿ ನಿಖಿಲಕರ್ನಾಟಕಾಯುರ್ವೇದಮಂಡಲ ಮತ್ತು ವಿದ್ಯಾಪೀಠದ ಮಂತ್ರಿಗಳಾದ ಶೃಂಗೇರಿ ವಿದ್ವಾನ್ ಕೆ. ಶೇಷಶಾಸ್ತ್ರಿಗಳವರು ಉಪನ್ಯಾಸಕೊಡುವರೆಂಬ ವಿಚಾರವನ್ನು ಈ ಹಿಂದೆ ಪ್ರಕಟಿಸಿದ್ದು ಸರಿಯಷ್ಟೆ, ಆದರೆ ಆ ದಿವಸ ಹಜರತ್ ಡೆಪ್ಯುಟಿ ಕಮಿಷನ್ ಸಾಹೇಬರವರು ಹರಿಹರದ ವಾಲ್ಮೀಕರ ಸಭೆಗೆ ಅಧ್ಯಕ್ಷರಾಗಿ ಹರಿಹರಕ್ಕೆ ದಯಮಾಡಿಸತಕ್ಕವರಿದ್ದುದರಿಂದಲೂ ಹಾಲಿ ಪ್ಲೇಗಿನ ಗಲಾಟೆಯಲ್ಲಿ ಜನಗಳು ಸೇರಲು ಅನಾನುಕೂಲವಾಗುವದೆಂತಲೂ ಮೇಲ್ಕಂಡ ಶಾಸ್ತ್ರಿಗಳವರಿಗೆ ಈ ಸಮಾಚಾರವನ್ನು ತಿಳಿಸಿ ಮತ್ತೊಮ್ಮೆ ಬರುವಂತೆ ಕೇಳಿಕೊಳ್ಳಬೇಕೆಂತಲೂ ಅನೇಕರು ಅಭಿಪ್ರಾಯಪಟ್ಟಿದ್ದರಮೇಲೆ ಸದ್ಯದ ಕೆಲಸವು ನಿಲ್ಲಿಸಲ್ಪಟ್ಟಿದೆ. ಮುಂದೆ ನಡೆಯಬೇಕಾದ ದಿವಸವನ್ನು ಈ ತಿಂಗಳು ಕೊನೆಯಲ್ಲಿ ನಿಷ್ಕರ್ಷಿಸಿ ಹೇಳುತ್ತೇವೆಂದು ನಮ್ಮ ಹಜರತ್ ಡೆಪ್ಯುಟಿಕಮಿಷನ್ ಸಾಹೇಬರವರು ತಮ್ಮ ಉದಾರವಾದ ಮನಸ್ಸಿನಿಂದ ಅಪ್ಪಣೆಕೊಡಿಸಿರುವ ವಿಚಾರವನ್ನು ಈ ಮೂಲಕ ಅರಿಕೆಮಾಡಿಕೊಂಡಿದ್ದೇನೆ.

ಡಿ. ಎಚ್. ಮಸ್ತಾನ್‌ಸಾಹೇಬ್, ಸೆಕ್ರೆಟರಿ.
ಆಯುರ್ವೇದಕಮಿಟಿ, ಚಿತ್ರದುರ್ಗ.

ಏಕಕಾಲದಲ್ಲಿ ದಂಪತಿಗಳ ಮರಣ.

ರಾಯಚೂರುಜಿಲ್ಲಾ ಸಿಂಧನೂರು ತಾ॥ ಹಸ್ಮಕಲ್ಲು ಎಂಬ ಗ್ರಾಮದಲ್ಲಿ ಹಿರೇಮಠದ ಸಿದ್ಧಲಿಂಗಯ್ಯನವರು ಶಿವಪೂಜಾಧುರಂಧರರಾಗಿಯೂ, ಸಾತ್ವಿಕರಾಗಿಯೂ ತಮ್ಮ ಭಕ್ತಮಂಡಲಿಯಿಂದ ಅತ್ಯಂತ ಗೌರವವಿಶ್ವಾಸಗಳಿಂದ ಕಾಣಲ್ಪಡುವವರಾಗಿಯೂ ಇದ್ದು ತಮ್ಮ ಸಾವನ್ನು ಮುಂದಾಗಿ ಅರಿತುಕೊಂಡಿದ್ದು ‘ ನನಗೆ ಈಶಾಜ್ಞೆಯಾಗಿದೆ ಕೂಡಲೆ ಹೊರಡುವವನಾಗಿದ್ದೇನೆಂದು’ ಆಪ್ತೇಷ್ಟಜನರಿಗೆ ತಿಳಿಸಿ ಕಳೆದ ಆಷಾಢ ಬ॥ ೩ ರಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಅವರ ಧರ್ಮಪತ್ನಿ ಗಂಗಮ್ಮನವರು ಪತಿವ್ರತಾಶಿರೋಮಣಿಯಾದ್ದರಿಂದ ವಿಧವೆಯಾಗಿ ಜೀವಿಸಬಾರದೆಂದು ನಿರ್ಧರಿಸಿಕೊಂಡು ಪತಿಯ ಕಳೇಬರಕ್ಕೆ ಮಂಗಳಾರತಿಯನ್ನುಮಾಡುವಾಗ್ಗೆ ‘ನಿಮ್ಮನ್ನು ಬಿಟ್ಟು ನಾನು ನಿಮಿಷಾರ್ಧ ಜೀವಿಸಿರಲಾರೆ’ನೆಂದು ಹೇಳಿ ನಮಸ್ಕಾರಮಾಡಲು ಶವದ ಪಾದಗಳಮೇಲೆ ತಲೆಯಿಟ್ಟವರು ಪುನಃ ಮೇಲಕ್ಕೇಳದೆ ಹಾಗೆಯೇ ಪತಿಯ ಸಹಗಮನಮಾಡಿದರು. ಈ ವಾರ್ತೆಯನ್ನು ಊರಿನವರೂ ನೆರೆಹೊರೆಯ ಗ್ರಾಮದವರೂ ಕೇಳಿ ತಂಡತಂಡವಾಗಿ ಬಂದು ನೋಡಿ ಆಕೆಯ ಪಾತಿವ್ರತ್ಯವನ್ನು ಕೊಂಡಾಡುತ್ತಿದ್ದರು. ದಂಪತಿಗಳ ಶವಗಳು ಒಂದೇ ವಿಮಾನದಲ್ಲಿ ಕುಳ್ಳಿರಿಸಲ್ಪಟ್ಟು ಅತಿವೈಭವದಿಂದ ವಿಧಿವತ್ತಾಗಿ ಸಮಾಧಿಗೊಳಿಸಲ್ಪಟ್ಟವು. ಮೃತದಂಪತಿಗಳಿಗೆ ಮೂವರು ಮಕ್ಕಳುಗಳಿರುತ್ತಾರೆ. ಇದಲ್ಲವೇ ನಿಜವಾದ ಪಾತಿವ್ರತ್ಯ ಮತ್ತು ಸಹಗಮನ?

ಶ್ರೀಶಿವಲಿಂಗಪ್ರತಿಷ್ಠೆಯಲ್ಲಿ ಮಹಮ್ಮದೀಯರ ಕಾರ್ಯದಕ್ಷತೆಯೂ, ಭೂದಾನಸ್ತುತ್ಯಕಾರ್ಯವೂ

ಬೆಳಗಾವ ಜಿ॥ ಪರಸಗಡ ತಾ॥ ಸೈಕಿ ಮುನೀಕಟ್ಟಿಯೆಂಬ ಗ್ರಾಮವು ಅತಿ ಚಿಕ್ಕದಾಗಿದ್ದು ಇಲ್ಲಿ 300 ಜನರ ವಸತಿ ಮಾತ್ರವಿರುತ್ತದೆ. ಇದರಲ್ಲಿ ಹಾಲುಮತದವರೂ ವಾಲ್ಮೀಕಮತದವರೂ ಹೆಚ್ಚಾಗಿದ್ದು ವೀರಶೈವರ ಮನೆಗಳು ಎರಡುಮಾತ್ರ ಇರುವವು. ಇಂಥ ಹಿಂದುಳಿದವರ ಗ್ರಾಮದಲ್ಲಿ ಮಹಮ್ಮದೀಮತದ ಮುಂದಾಳುಗಳಾದ ಬೋರಸಾಹೇಬರೆಂಬವರೊಬ್ಬರು ಇಲ್ಲಿಯ ಸಾರ್ವಜನಿಕ ಕಾರ್ಯಗಳನ್ನು ಅತಿದಕ್ಷತೆಯಿಂದ ಮಾಡುತ್ತಿರುವರಲ್ಲದೆ ಬಹಳ ದಿವಸದಿಂದ ಜೀರ್ಣಸಿದ್ದ ಶ್ರೀಗೋಣೇಶ್ವರದೇವಾಲಯವನ್ನು ಒಂದೇಒಂದುವರ್ಷದಲ್ಲಿ ಈ ಗ್ರಾಮದ ಯಾವತ್ತು ಸದ್ಭಕ್ತವರ್ಯರ ಸಹಾಯದಿಂದ 3-4 ಸಾವಿರರೂಪಾಯಿ ಖರ್ಚುಮಾಡಿ ಶಿಲೆಯಿಂದ ತಯಾರಿಸಿ ಇದೇ ಜೇಷ್ಠ ಬ॥ ೯ ರವಿವಾರದಲ್ಲಿ ಪಂಚಸೂತ್ರದಿಂದ ತಯಾರಿಸಿದ ಶಿವಲಿಂಗಮೂರ್ತಿಯನ್ನು ಹೂಲಿಬೃಹನ್ಮಠದ ವೇ॥ ಬ್ರ॥ ಶ್ರೀ॥ ಸಿ॥ ಶಿವಬಸವಶಾಸ್ತ್ರಿಗಳವರ ಪೌರೋಹಿತ್ಯದಿಂದ ವಿಧಿಪೂರ್ವಕ ಪ್ರತಿಷ್ಠಾಪನೆಗೊಳಿಸಿ ಸಾವಿರಾರುಜನರ ಅನ್ನಸಂತರ್ಪಣೆಯನ್ನು ಅತಿ ಭಕ್ತಿಯಿಂದ ನೆರವೇರಿಸಿದರು. ಈ ಶಿವಲಿಂಗದ ನಿತ್ಯನೈಮಿತ್ತಿಕ ಪೂಜಾಸಮಾರಂಭವು ಯಥಾಪ್ರಕಾರ ಜರಗುವದಕ್ಕಾಗಿ ಮುನವಳ್ಳಿಯ ಗ್ರಾಮದ ಸದ್ಭಕ್ತವರ್ಯರಾದ ದುಂಡಪ್ಪನವರು ಬಾಳಿ ಇವರು ಇದೇ ಶ್ರಾವಣ ಪ್ರಾರಂಭಕ್ಕೆ ಭೂದಾನವನ್ನು ಮಾಡಿ ಸರಕಾರದಲ್ಲಿ ರಿಜಿಸ್ಟರು ಸಹ ಮಾಡಿಸಿ ವ್ಯವಸ್ಥೆಯ ಬಗ್ಗೆ 8 ಜನ ಸಭ್ಯಗೃಹಸ್ಥರನ್ನು ನೇಮಿಸಿದ್ದು ಸ್ತುತ್ಯವಾದದ್ದೆಂದೂ ಈ ದೇವಾಲಯದ ಕಾರ್ಯದಲ್ಲಿ ಅತಿದಕ್ಷತೆಯಿಂದ ತನುಮನಧನವನ್ನರ್ಪಿಸಿದ ಬೋರಸಾಹೇಬರವರಂತೆ ಇನ್ನುಳಿದ ಮಹಮ್ಮದೀಯರು ನಡೆದುಕೊಂಡು ಮಹಾತ್ಮಜೀಯವರು ಹೇಳುವ ಹಿಂದು-ಮಹಮ್ಮದೀಯರ ಐಕ್ಯಕ್ಕೆ ಉತ್ತೇಜನವಾಗಿ ದೇಶದ ಏಳ್ಗೆಯನ್ನು ಮಾಡಿ ದೇವರಪ್ರೀತಿಗೆ ಪಾತ್ರರಾಗಬೇಕೆಂದು ಸೂಚಿಸಿ ಮುನೀಕಟ್ಟಿಗ್ರಾಮದ ಸದ್ಭಕ್ತವರ್ಯರಿಗೂ ಭೂದಾನಮಾಡಿದ ಬಾಳಿ ದುಂಡಪ್ಪನವರಿಗೂ ಶ್ರೀಗೋಣೇಶ್ವರನು ಸುಖಸಂಪತ್ತನ್ನೀಯಲೆಂದು ಅನನ್ಯಭಾವದಿಂದ ಬೇಡುವ, ಓರ್ವ ಭಗವದ್ಭಕ್ತ.

ದೊಡ್ಡಬಳ್ಳಾಪುರಕ್ಕೆ ಮೆ॥ ಕೆ. ಮೆಥಾನ್ ಸಾಹೇಬರವರ ಆಗಮನ.

ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್‌ಜನರಲ್ ಸಾಹೇಬರವರಾದ ಮೆ॥ ಕೆ. ಮೆಥಾನ್ ಬಿ. ಎ. ಯವರು ಆಗಸ್ಟ್ 13 ನೇ ತಾರೀಖು ಪ್ರಾತಃಕಾಲ ದೊಡ್ಡಬಳ್ಳಾಪುರಕ್ಕೆ ದಯೆಮಾಡಿಸಿ ಅಲ್ಲಿ ಎರಡು ದಿನಗಳು ಇದ್ದರು. ಪುರನಿವಾಸಿಗಳೂ, ಅಮಲ್ದಾರ್ ಮ॥ ರಾ॥ ನಾರಾಯಣರಾಯರೂ ಟ್ರಾವಲರ್ಸ್ ಬಂಗ್ಲೆಯ ಹತ್ತಿರ ಸಾಹೇಬರವರಿಗೆ ಸುಖಾಗಮನವನ್ನು ಬಯಸಿದರು. ಎರಡು ದಿನಗಳ ಪರ್ಯಂತ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮತ್ತು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಇವರೊಡನೆ ಇಲ್ಲಿನ ಸ್ಕೂಲುಗಳನ್ನು ಪರಾಂಬರಿಸಿದರು. ಈ ಟೌನಿನಲ್ಲಿ ಎರಡು ಮಿಡಲ್ ಸ್ಕೂಲುಗಳೂ, ಒಂದು ಇನ್‌ಕಂಪ್ಲೀಟ್ ಸ್ಕೂಲೂ, 10 ಪ್ರೈಮರೀ ಸ್ಕೂಲುಗಳೂ ಬಾಲಕ ಬಾಲಕಿಯರಿಗಾಗಿ ಈ ಟೌನಿನ ಬೇರೆ ಬೇರೆ ಭಾಗಗಳಲ್ಲಿ ಇವೆ. ಮ॥ ಟಿ. ಸಿದ್ದಪ್ಪನವರ, ಎ. ಶ್ರೀಕಂಠಪ್ಪನವರ, ಎಸ್. ಚಿಕ್ಕವೀರಶೆಟ್ಟರ ಪ್ರಾರ್ಥನೆಯಂತೆ ಮಧ್ಯಾಹ್ನಾತ್ಪರ ಇಲ್ಲಿನ ಮಿಡಲ್ ಸ್ಕೂಲಿಗೆ ಸಾಹೇಬರವರು ದಯೆಮಾಡಿಸಿ ಸತ್ಕರಿಸಲ್ಪಟ್ಟರು. ಆ ಸಮಯದಲ್ಲಿ ಪುರನಿವಾಸಿಗಳ ಪರವಾಗಿ ಪ್ಲೀಡರ್‌ಗಳಾದ ಮ॥ ಬಿ. ರಾಮಕೃಷ್ಣಯ್ಯನವರೂ, ಮ॥ ಡಿ. ರಾಮಯ್ಯನವರೂ, ಹೈಸ್ಕೂಲನ್ನು ಈ ಊರಿನಲ್ಲಿ ಆರಂಭಿಸಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ಸಾಹೇಬರವರು ಸರ್ಕಾರಕ್ಕೆ ಸದ್ಯದಲ್ಲಿರುವ ದ್ರವ್ಯದ ಅನಾನುಕೂಲ್ಯಗಳನ್ನು ತಿಳಿಸಿ ಈ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ಎಂದು ಅಪ್ಪಣೆಕೊಡಿಸಿದರು. ಅನಂತರ ಇಲ್ಲಿನ ಗರ್ಲ್ಸ್ ಸ್ಕೂಲ್ ಹಾಲಿನಲ್ಲಿ ಪೋಷಕಬೋಧಕ ಸಂಘವೂ, ಉಪಾಧ್ಯಾಯರ ಸಂಘವೂ ಸಾಹೇಬರವರ ಅಧ್ಯಕ್ಷತೆಯಲ್ಲಿ ನಡೆದವು. ಈ ಸಂಘಗಳ ಸೆಕ್ರಿಟರಿಯವರು ಉಪಾಧ್ಯಾಯರ ಸಂಘದ ವಾರ್ಷಿಕ ವರದಿಯನ್ನೂ, ಪೋಷಕಬೋಧಕ ಸಂಘದ ಮುಖ್ಯೋದ್ದೇಶಗಳನ್ನೂ ಓದಿಹೇಳಿದರು. ಅಧ್ಯಕ್ಷರು ಜನಗಳಿಗೂ, ಉಪಾಧ್ಯಾಯರುಗಳಿಗೂ ಬುದ್ಧಿವಾದ ಪೂರ್ವಕವಾಗಿಯೂ, ಸ್ವಾರಸ್ಯವಾಗಿಯೂ ಗಾಂಭೀರ್ಯಯುಕ್ತವಾಗಿಯೂ ಇರುವಂತೆ ಭಾಷಣಮಾಡಿದರು. ಮದ್ರಾಸ್ ಅಧಿಪತ್ಯದಲ್ಲಿಯೂ ಟ್ರಾವನ್‌ಕೋರ್ ಸಂಸ್ಥಾನದಲ್ಲಿಯೂ ಜನಗಳು ಸ್ಕೂಲುಗಳನ್ನು ನಡೆಯಿಸಲು ಬೇಕಾದ ಪರಸ್ಪರ ಸಾಹಾಯಗಳನ್ನು ತಾವಾಗಿಯೇ ಮಾಡುತ್ತಿರುವುದನ್ನು ಈ ಸಂಸ್ಥಾನದಲ್ಲಿಯೂ ಅನುಸರಿಸುವುದು ಉತ್ತಮವೆಂತಲೂ; ಗ್ರಾಮನಿವಾಸಿಗಳು ತಮ್ಮತಮ್ಮ ಗ್ರಾಮಗಳ ಪಾಠಶಾಲೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾ, ಅವುಗಳಿಗೆ ಬೇಕಾಗುವ ಇತರ ಸಾಹಾಯಗಳನ್ನು ಒದಗಿಸಿಕೊಡಬೇಕೆಂತಲೂ; ಉಪಾಧ್ಯಾಯರುಗಳು ನೈರ್ಮಲ್ಯ ನಡೆನುಡಿಗಳ ವಿಚಾರದಲ್ಲಿ ತಾವೇ ನಿದರ್ಶಕರಾಗಿರಬೇಕೆಂತಲೂ; ವಿದ್ಯಾ ಇಲಾಖೆಯ ಮುಖ್ಯ ಉದ್ದೇಶಕ್ಕೆ ವ್ಯತಿರಿಕ್ತವಾಗಿ ತಂದೆ ತಾಯಿಗಳು ಕೆಳಗಿನ ತರಗತಿಗಳಲ್ಲಿ ಓದುತ್ತಿರುವ ತಮ್ಮ ಮಕ್ಕಳನ್ನು ಮುಂದಕ್ಕೆ ಓದಿಸದೆ ತಮ್ಮ ಮನೆಗಳಲ್ಲಿಯೇ ನಿಲ್ಲಿಸಿಕೊಳ್ಳುವ ದುರಭ್ಯಾಸವನ್ನು ತಪ್ಪಿಸಬೇಕೆಂತಲೂ; ಎಲ್ಲರಿಗೂ ಗೊತ್ತಿರುವಂತೆ ಇನ್‌ಫೆಂಟ್ ತರಗತಿಗಳಲ್ಲಿ ಬಹುಮಂದಿ ಮಕ್ಕಳಿದ್ದು ಮೇಲಿನ ತರಗತಿಗಳಲ್ಲಿ ಕಮ್ಮಿಯಾಗಿ ಹುಡುಗರಿರುವುದು ಶೋಚನೀಯವಾಗಿದೆ ಎಂತಲೂ, ಕೊನೇಪಕ್ಷ ವಿದ್ಯಾಭ್ಯಾಸದಲ್ಲಿ ಒಂದು ದರ್ಜೆಯನ್ನಾದರೂ ಪೂರೈಸಿಬಿಡಲು ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಅವಕಾಶ ಕೊಡಬೇಕೆಂತಲೂ ; ಒಂದು ಗ್ರಾಮದ ಫಂಡನ್ನು ಸ್ಕೂಲು ಖರ್ಚಿಗೋಸ್ಕರ ಜನಗಳು ಏರ್ಪಡಿಸಬೇಕೆಂತಲೂ; ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಲೋಸುಗ ಓದುವುದರಲ್ಲಿಯೂ ಆಟಗಳಲ್ಲಿಯೂ ಹೆಚ್ಚು ಮುತುವರ್ಜಿಯನ್ನು ವಹಿಸುವ ಬಾಲಕರಿಗೆ ಪಾರಿತೋಷಿಕವನ್ನು ಕೊಡಲು ಪೋಷಕಬೋಧಕ ಸಂಘದವರು ಒಂದು ಫಂಡನ್ನು ಏರ್ಪಡಿಸಬೇಕೆಂತಲೂ; ಮ॥ ಕೊಂಗಾಡಿಯಪ್ಪನವರು ಸದಾ ಕೆಲಸಮಾಡುತ್ತಿರುವುದು ಸಂತೋಷಾಸ್ಪದವಾಗಿದೆ ಎಂತಲೂ ಅಪ್ಪಣೆಕೊಡಿಸಿದರು. ಸಾಹುಕಾರ್ ಮ॥ ಎಸ್. ಪುಟ್ಟಣ್ಣನವರು ಸಾಹೇಬರವರಿಗೆ ಹಾರತುರಾಯಿಗಳನ್ನು ಒಪ್ಪಿಸಿದರು. ಇನ್ಸ್‌ಪೆಕ್ಟರ್‌ಜನರಲ್ ಸಾಹೇಬರವರು ತಮ್ಮ ಅನೇಕಾನೇಕ ಕೆಲಸಗಳಿದ್ದಾಗ್ಯೂ ಬಿಟ್ಟು ನಮ್ಮ ಪ್ರಾರ್ಥನೆಯನ್ನು ಆದರದಿಂದ ಲಾಲಿಸಿ ದಯಮಾಡಿಸಿದುದಕ್ಕಾಗಿ ಪುರನಿವಾಸಿಗಳ ಮತ್ತು ಉಪಾಧ್ಯಾಯರುಗಳ ಪರವಾಗಿ ರೆಪ್ರಿಸೆಂಟೆಟಿವ್ ಅಸೆಂಬ್ಲಿಮೆಂಬರಾದ ಮ॥ ಎ. ಶ್ರೀಕಂಠಪ್ಪನವರು ಉಚಿತ ಭಾಷೆಯಲ್ಲಿ ವಂದನೆಗಳನ್ನು ಅರ್ಪಿಸಿದರು. ಮಹಾರಾಜರವರ ಶ್ರೇಯಃಪ್ರಾರ್ಥನೆಯಾದನಂತರ ಸಭೆಯು ಮುಕ್ತಾಯವಾಯಿತು. ಭಾನುವಾರ ಸಾಹೇಬರವರು ದೊಡ್ಡಬೆಳವಂಗಲಕ್ಕೆ ದಯೆಮಾಡಿಸಿ ಅಲ್ಲಿನ ಸ್ಕೂಲುಗಳನ್ನು ಪರಾಂಬರಿಸಿಬಂದನಂತರ ಸಾಯಂಕಾಲ ದೊಡ್ಡಬಳ್ಳಾಪುರದ ಜನರು ಜಯಘೋಷಮಾಡುತ್ತಿರಲು ಮೋಟಾರಿನಲ್ಲಿ ಬೆಂಗಳೂರಿಗೆ ಪ್ರಯಾಣಬೆಳಸಿದರು.

ವಿಚಿತ್ರವಾದ ಕೇಸು.

ಮೈಸೂರುತಾಲ್ಲೋಕು ಬುಗತಹಳ್ಳಿಯ ಮಾದಯ್ಯನೆಂಬುವವನು ಒಬ್ಬ ಲಾಯರಮೇಲೂ ಅವರ ಕಕ್ಷಿದಾರನಮೇಲೂ ಚೀಫ್‌ಕೋರ್ಟಿಗೆ ಕೊಟ್ಟಿರುವ ಅರ್ಜಿಯು ವಿಚಾರಣೆಬಗ್ಗೆ ಮೈಸೂರು ಡಿಸ್ಟ್ರಿಕ್ಟುಕೋರ್ಟಿಗೆ ಕಳುಹಿಸಲ್ಪಟ್ಟಿದೆ. ಇದರ ಹಿಯರಿಂಗು ಈ ಆಗಸ್ಟು ತಾ॥ 27 ಕ್ಕೆ ಅತರನ್ನಾಗಿದೆ. ಈ ಅರ್ಜಿಯಲ್ಲಿ ಕಂಡ ವಿಷಯವನ್ನು ಹಳ್ಳೀಜನರು ತಿಳಿದು ಎಚ್ಚರಿಕೆಯಿಂದಿರಬೇಕಾಗಿರುವದರಿಂದ ಇದನ್ನೂ ಇದಕ್ಕೆ ಸಂಬಂಧಪಟ್ಟ ಕೇಸಿನ ನಡವಳಿಕೆಯನ್ನೂ ಮ್ಯಾಜಿಸ್ಟ್ರೇಟರ ಆರ್ಡರನ್ನೂ ನನಗೆ ತಿಳಿದ ಮಟ್ಟಿಗೆ ಕನ್ನಡಕ್ಕೆ ತರ್ಜುಮೆಮಾಡಿ ತಮ್ಮಲ್ಲಿಗೆ ಕಳುಹಿಸಿಕೊಟ್ಟಿರುತ್ತೇನೆ. ತಾವು ದಯೆಯಿಟ್ಟು ನಿರಾಕರಿಸದೆ ತಮ್ಮ ಘನವಾದ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಬಹಳವಿಧವಾಗಿ ಬೇಡುತ್ತೇನೆ.

ಹಳ್ಳೀರೈತರ ಹಿತಚಿಂತಕ.

ಬೆಂಗಳೂರಲ್ಲಿರುವ ಘನಹೊಂದಿದ ಮೈಸೂರು
ಚೀಫ್‌ಕೋರ್ಟಿಗೆ.

ಮಿಸ್‌ಪೆಟಿಷನ್ ನಂ. 1925-26

ಸಿ. ಆರ್. ನಂ. 258/25-26-ಸಿಟಿಮ್ಯಾಜಿಸ್ಟ್ರೇಟ್ ಮೈಸೂರು.

ಅರ್ಜಿದಾರ—ಮೈಸೂರು ತಾಲ್ಲೋಕು ಬುಗತಹಳ್ಳಿಗ್ರಾಮದಲ್ಲಿ ವಾಸವಾಗಿರುವ ಲಿಂಗಾಯತಜಾತಿ ಮಾದಯ್ಯನ ಮಗ ಮಾದಯ್ಯ.

ಕಕ್ಷಿಗಾರರು—(1) ಮೈಸೂರುಸಿಟಿ ದೊಡ್ಡಪೇಟೆಯಲ್ಲಿರುವ ಅಡ್ವೋಕೇಟ್ ಮಿ॥ ಎಂ. ಪಿ. ಭೋಗಯ್ಯ.

(2) ಮೈಸೂರು ತಾಲ್ಲೋಕು ಬುಗತಹಳ್ಳಿಗ್ರಾಮದಲ್ಲಿ ವಾಸವಾಗಿರುವ ಲಿಂಗಾಯತಜಾತಿ 60 ವರ್ಷವಯಸ್ಸಿನ ಜವರಪ್ಪ.

ಅರ್ಜಿದಾರನ ಮನವಿಯೇನೆಂದರೆ—ಕೇಸಿನ ನಿಜಸ್ಥಿತಿಯು ಮತ್ತು ಕಕ್ಷಿಗಾರರ ನಡವಳಿಕೆಯು ಈ ಅರ್ಜಿಗೆ ಲಗತ್ತಿಸಿರುವ ರಿಕಾರ್ಡುಗಳಿಂದ ಸ್ಪಷ್ಟವಾಗಿ ಘನವಾದಕೋರ್ಟಿಗೆ ಗೊತ್ತಾಗುತ್ತದೆ. ಅಡ್ವೋಕೇಟರಿಗೆ ವಿರೋಧವಾಗಿ ಸಿಟಿಮ್ಯಾಜಿಸ್ಟ್ರೇಟರು ಪಟ್ಟಿರುವ ಅಭಿಪ್ರಾಯವು ಬಹಳ ಎಚ್ಚರಿಕೆಯಿಂದಲೂ ಮಿತಿಯಿಂದಲೂ ಇರುವದಾದರೂ ಘನವಾದ ಲಾಯರವೃತ್ತಿಯಲ್ಲಿರುವ ಕೆಲವರು ಹೀನವೃತ್ತಿದವರ ಹೀನನಡತೆಯನ್ನು ವ್ಯಕ್ತಗೊಳಿಸುತ್ತದೆ.

ಮೇಲ್ಕಂಡ ಕ್ರಿಮಿನಲ್‌ಕೇಸಿನಲ್ಲಿ ಮಿ॥ ಭೋಗಯ್ಯನವರು ಅವರ ಕಕ್ಷಿಗಾರನ ಸಮೇತ ಕಂಪ್ಲೇಂಟ್ ಅರ್ಜಿಯನ್ನು ದಾಖಲ್ಮಾಡಿದರು. ಅರ್ಜಿಯು ದಾಖಲಾದತಕ್ಷಣ ಮ್ಯಾಜಿಸ್ಟ್ರೇಟರು ಅರ್ಜಿದಾರನ ವಿಚಾರಣೆಯನ್ನು ಅವನ ಅಡ್ವೋಕೇಟರ ಸಮಕ್ಷಮ ಮಾಡಿದ್ದಲ್ಲಿ, ಅರ್ಜಿದಾರನು ಈ ಕೇಸಿನ ವಿಚಾರವೇ ತನಗೆ ಶುದ್ಧಾಂಗವಾಗಿ ತಿಳಿಯದೆಂತಲೂ, ತನ್ನ ಅಡ್ವೋಕೇಟರಿಗಾಗಿ ಅರ್ಜಿಯನ್ನು ದಾಖಲ್ಮಾಡಿದನಲ್ಲದೆ ತನಗಾಗಿ ಅಲ್ಲವೆಂತಲೂ ಪ್ರಮಾಣಪೂರ್ವಕವಾಗಿ ಹೇಳಿದನು. ಈ ವಿಚಾರವಾಗಿ ಅಡ್ವೋಕೇಟರು ಯಾವ ಮಾತನ್ನೂ ಆಡದೆ ಮೌನವಾಗಿದ್ದರೂ ಅದು ಅವರಿಗೆ ತಕಮಾಡತಕ್ಕದ್ದಾಗಿದೆ.

ಕಂಪ್ಲೇಂಟಿನಲ್ಲಿ ಹೇಳಿರುವ ವಿಚಾರವು ದೇವಯ್ಯನ ಮಗ ದೇವಯ್ಯನಿಗೆ ಅನ್ವಯಿಸುತ್ತದಲ್ಲದೆ ನನಗೆ ಯಾವಸಂಬಂಧವೂ ಇಲ್ಲವು. ಕಂಪ್ಲೇಂಟು ಅರ್ಜಿಯಲ್ಲಿ ಕಂಡ ಅಪರಾಧಿಗಳು ಗ್ರಾಮದಲ್ಲಿ ನನಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಕಂಪ್ಲೇಂಟ್ ಅರ್ಜಿಯಲ್ಲಿ ಕಂಡ ಅಪರಾಧಿಗಳಿಂದ ನನ್ನನ್ನು ಸೆಳೆಯುವದಕ್ಕಾಗಿ ಕಕ್ಷಿಗಾರರು ನನ್ನ ಹೆಸರಿನಿಂದಲೂ ಮತ್ತೆ ಕೆಲವರ ಹೆಸರಿನಿಂದಲೂ ಸುಳ್ಳು ಮೊಖದ್ದಮೆಯನ್ನು ಮಾಡಿಸಿರುತ್ತಾರೆ. ಎರಡನೇ ಕಕ್ಷಿಗಾರನಾದ ಜವರನ ದ್ಯಾವಯ್ಯನೆಂದು ಸುಳ್ಳು ಬರೆದಿರುತ್ತಾನೆ. ಮತ್ತು 1 ನೇ ಕಕ್ಷಿಗಾರರು 2 ನೇ ಕಕ್ಷಿಗಾರನ ಹೆಬ್ಬೆಟ್ಟನಗುರ್ತಿಗೆ ದ್ಯಾವಪ್ಪನ ಹೆಬ್ಬೆಟ್ಟನಗುರ್ತು ಎಂದು ಬರೆದಿರುತ್ತಾರೆ.

ಈ ಅರ್ಜಿದಾರನಾದ ನನಗೆ ಬರೆಯುವದಕ್ಕೆ ಬರುತ್ತದೆ. ನಾನು ಸರ್ಕಾರಕ್ಕೆ ಕಂದಾಯವನ್ನು ಕಟ್ಟಿಕೊಂಡು ನಮ್ಮ ಜನರಲ್ಲಿ ಗೌರವಸ್ಥನಾಗಿದ್ದೇನೆ. ಬೇಲಿಯೆದ್ದು ಹೊಲಮೇಯುವಂತೆ 1 ನೇ ಕಕ್ಷಿಗಾರನು ಮೇಲೆ ಹೇಳಿದ ರೀತಿಯಲ್ಲಿ ನನ್ನ ಹೆಸರಿನಿಂದ ಸುಳ್ಳು ಮೊಖದ್ದಮೆ ಮಾಡಿರುವದು ಬಹಳ ಅನ್ಯಾಯವಾಗಿದೆ. ಒಂದನೇ ಕಕ್ಷಿಗಾರನು ಈಕಷ್ಟಕಾಲದಲ್ಲಿ ತಮ್ಮ ದುಂದುಖರ್ಚಿಗಾಗಿ ಹಣವನ್ನು ಸಂಪಾದಿಸಬೇಕೆಂಬ ಅಭಿಪ್ರಾಯದಿಂದ ಎರಡನೇ ಕಕ್ಷಿಗಾರನನ್ನು ತಮ್ಮ ಸೂತ್ರದಬೊಂಬೆಯಾಗಿ ಮಾಡಿಕೊಂಡಿರುತ್ತಾರೆ. ನಮ್ಮ ಯೂರೋಪಿಯನ್ ಚೀಫ್‌ಜಡ್ಜರ ಕಾಲದಲ್ಲಿ ಇಂಥಾ ಅಕೃತ್ಯಗಳು ಮೊಳಕೆಯಲ್ಲೇ ಸರಿಪಡಿಸಲ್ಪಡದಿದ್ದಲ್ಲಿ ಇದರಿಂದ ಬಹಳ ಕೆಡಕಾಗಿ ನ್ಯಾಯಕ್ಕೇ ಚ್ಯುತಿಯುಂಟಾಗುತ್ತದೆ.

ಈ ಕಾರಣಗಳಿಂದ ಘನಹೊಂದಿದ ಚೀಫ್‌ಜಡ್ಜಿಯವರು ಈ ಕೇಸಿನ ಮತ್ತು ಇದಕ್ಕೆ ಸಂಬಂಧಪಟ್ಟ ಕೇಸುಗಳ ರಿಕಾರ್ಡುಗಳನ್ನೂ ಹೆಬ್ಬೆಟ್ಟು ಗುರ್ತನ್ನು ಬದಲಾಯಿಸುವುದಕ್ಕೆ ಅವಕಾಶವಿಲ್ಲದಂತೆ ಕೂಡಲೇ ತರಿಸಿಕೊಂಡು ಸಂಪೂರ್ಣವಾಗಿ ವಿಚಾರಣೆಮಾಡಿ ನಿಜವಾಗಿ ತಪ್ಪಿತಸ್ಥರಾಗಿರುವವರನ್ನು ಶಿಕ್ಷಿಸಿ ಈ ಮಾಡಲ್‌ಸ್ಟೇಟಿನ ನ್ಯಾಯಸ್ಥಾನದ ಗೌರವವನ್ನು ಕಾಪಾಡಬೇಕಾಗಿ ಬೇಡಿಕೊಳ್ಳುತ್ತೇನೆ.

ಅರ್ಜಿದಾರನ ರುಜು.

ಸಿಟಿ ಮ್ಯಾಜಿಸ್ಟ್ರೇಟ್‌ಕೋರ್ಟು, ಮೈಸೂರು.
ಸಿ. ಆರ್. ನಂ. 258 ಆಫ್ 1925-26.

ಫಿರ್ಯಾದಿ.	ಅಪರಾಧಿಗಳು.
ಮೈಸೂರು ತಾ॥ ಬುಗತಹಳ್ಳಿಗ್ರಾಮದ ಲಿಂಗಾಯುತರ ಜಾತಿ ದ್ಯಾವಯ್ಯನ ಮಗ ದ್ಯಾವಪ್ಪ.	1. ಕಾಳಯ್ಯ 2. ದ್ಯಾವಯ್ಯ 3. ಜವನಯ್ಯ 4. ಸಿದ್ದಪ್ಪ 5. ಮೈಸೂರು ತಾ॥ ಬುಗತಹಳ್ಳಿ ಗ್ರಾಮದ ಎಚ್. ಮಾದಯ್ಯ.

ಪ್ರಮಾಣವಾಗಿ ಹೇಳುತ್ತೇನೆ.

ನನ್ನ ವಾಸಸ್ಥಳ ಬುಗತಹಳ್ಳಿ. ನಾನು ಹುಟ್ಟಿದಲಾಗಾಯಿತು ಇದೇ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಗ್ರಾಮದಲ್ಲಿ ಮುಖಂಡನಾಗಿದ್ದೇನೆ. ಅಲ್ಲದೆ ಆ ಗ್ರಾಮದವರಲ್ಲೆಲ್ಲಾ ನಾನೇ ಹಿರಿಯವನು. ಚಿಕ್ಕಹಳ್ಳಿಯು ನಮ್ಮ ಗ್ರಾಮದಿಂದ 2-3 ಮೈಲಿ ದೂರದಲ್ಲಿದೆ. ಆ ಗ್ರಾಮದಲ್ಲಿ 80-90 ಮನೆಗಳಿವೆ. ನಾನು 20 ರೂಪಾಯಿ ಕಂದಾಯ ಕಟ್ಟುತ್ತೇನೆ. ಚಿಕ್ಕಹಳ್ಳಿಯಲ್ಲೂ ಒಳ್ಳೇ ಕಂದಾಯವನ್ನು ಕಟ್ಟತಕ್ಕ ಭಾರೀಕುಳಗಳಿರುತ್ತಾರೆ. ಚಿಕ್ಕಹಳ್ಳಿಯಲ್ಲಿ ಕನ್ನ ಕಳುವು ನಡೆದ ಸಂಗತಿ ನನಗೆ ತಿಳಿಯದು. ಚಿಕ್ಕಹಳ್ಳಿಗೆ ಒಬ್ಬ ಪಟೇಲನಿದ್ದಾನೆ. ನನಗೂ ಅವನಿಗೂ ಸಂಬಂಧವಿಲ್ಲ. ನಂಜ ಎಂಬುವವನ ಮೇಲೆ ಈ ಕೋರ್ಟಿನಲ್ಲಿ ಕಳವಿನ ಮೊಖದ್ದಮೆ ನಡೆದಿತ್ತೆಂದು ನಾನು ಕೇಳಿದೆನು. ನಮ್ಮ ಲಾಯರು ಈ ಮೊಖದ್ದಮೆಯ ವಿಚಾರವನ್ನು ನನಗೆ ತಿಳಿಸಿದರು. ದೇವಯ್ಯ ಮತ್ತು ನಂಜಯ್ಯ ಸಹ ಮೊಖದ್ದಮೆ ವಿಚಾರ ಹೇಳಿದರು. ಈ ಮೂವರೂ ಅಪರಾಧಿಗೆ ಖುಲಾಸೆಯಾಯಿತೆಂದು ಮತ್ತು ಸಾಕ್ಷಿಗಾರರ ಮೇಲೆ ಪ್ರಾಸಿಕ್ಯೂಷನ್ ಮಾಡಲು ಆರ್ಡರಾಗಿದೆಯೆಂದೂ ನನಗೆ ಹೇಳಿದರು. ಅವರು ಹೇಳಿದ್ದು ನಿಜವೋ ಸುಳ್ಳೋ ಎಂದು ನಾನು ವಿಚಾರಿಸಲಿಲ್ಲ. ಯಾಕೆಂದರೆ ನನ್ನ ಲಾಯರು ಈರೀತಿ ಹೇಳಿರುವರು. ಫಿರ್ಯಾದಿಕಡೆಯ ಸಾಕ್ಷಿಗಳಮೇಲೆ ಪ್ರಾಸಿಕ್ಯೂಷನ್ ಮಾಡಬೇಕೆಂದು ಕೋರ್ಟಿನಿಂದ ಆರ್ಡರಾಗಿತ್ತೆಂದು ನಾನು ಪ್ರಮಾಣವಾಗಿ ಹೇಳಲು ಸಿದ್ಧನಾಗಿದ್ದೇನೆ. ಕೋರ್ಟಿನ ಆರ್ಡರ್ ಕಾಪಿಗೆ ನಾನು ಅರ್ಜಿ ಹಾಕಿರಲಿಲ್ಲ. ಆರ್ಡರ್ ಕಾಪಿಯನ್ನು ನನ್ನ ಲಾಯರು ನನಗೆ ಓದಿ ಹೇಳಿದರು. ಆ ಆರ್ಡರ್‌ಕಾಪಿಯನ್ನು ಓದಿ ಹೇಳಿದ್ದು ನೆನ್ನೆಯದಿವಸ. ಅದಕ್ಕೆ ಮುಂಚೆ ಈ ಆರ್ಡರಿನ ವಿಚಾರವಾಗಿ ಜನರಿಂದ ಕೇಳಿದ್ದೆನು. ಆರ್ಡರಿನಲ್ಲಿ ಕಂಡ ವಿಷಯವನ್ನು ಸ್ಪಷ್ಟವಾಗಿ ತಿಳಿದಿದ್ದು ನೆನ್ನೆಯದಿನವೇ. ನನ್ನ ಲಾಯರು ಆ ಮೊಖದ್ದಮೆಯಲ್ಲಿ ಅವರಿಗೋಸ್ಕರ ಆರ್ಡರ್ ಕಾಪಿಯನ್ನು ತೆಗೆದುಕೊಂಡಿದ್ದರಲ್ಲದೆ ನನಗಾಗಿ ಅಲ್ಲವು. ಅದನ್ನು ಅವರೇ ನನಗೆ ಓದಿಹೇಳಿದರು. ಚಿಕ್ಕಹಳ್ಳಿಯವರ ಮೇಲೆ ಮಾರವಾಡಿಯು ಮಾಡಿದ ಮೊಖದ್ದಮೆಯ ವಿಚಾರವಾಗಿ ನಾನು ನೆನ್ನೆಯದಿವಸ ನನ್ನ ಲಾಯರ ಬಳಿಗೆ ಹೋಗಿದ್ದೆನು. ಆಗ ಮೇಲ್ಕಂಡ ಆರ್ಡರ್ ಕಾಪಿಯನ್ನು ಲಾಯರು ಓದಿಹೇಳಿದರು. ಗ್ರಾಮದ ಹೆಸರನ್ನು ಕೆಡಿಸಿಕೊಳ್ಳದಿರುವದಕ್ಕಾಗಿ ಸಾಕ್ಷಿಗಳಮೇಲೆ ಪ್ರಾಸಿಕ್ಯೂಷನ್ ಮಾಡಬೇಕೆಂದು ಲಾಯರು ನನಗೆ ಹೇಳಿದರು. ಆಗ ನಾನು ಅರ್ಜಿಹಾಕಲೊಪ್ಪಿಕೊಂಡೆನು. ನನ್ನ ಅರ್ಜಿಯಲ್ಲಿ ಕಂಡ 5 ಜನರ ಮೇಲೆ ಈ ಕಂಪ್ಲೇಂಟ್ ಅರ್ಜಿಯನ್ನು ಕೊಟ್ಟಿರುತ್ತೇನೆ. ಹಿಂದಿನ ಮೊಖದ್ದಮೆಯಲ್ಲಿ ಅವರಪೈಕಿ ಯಾರು ಸಾಕ್ಷಿಯಾಗಿ ಬಂದಿದ್ದರೋ ನನಗೆ ತಿಳಿಯದು. ಮತ್ತು ಯಾರಮೇಲೆ ಪ್ರಾಸಿಕ್ಯೂಷನ್ ಆರ್ಡರಾಗಿತ್ತೋ ಅದನ್ನೂ ಕಾಣೆ. 5 ಜನರ ಮೇಲೆ ಪ್ರಾಸಿಕ್ಯೂಷನ್ ಆರ್ಡರಾಗಿದೆ ಎಂದು ನನ್ನ ಲಾಯರು ಹೇಳಿದರು. ಆ ಆರ್ಡರು ಆಗಿ 10-15 ದಿವಸವಾಯಿತು. ಅದರಲ್ಲಿ ಪೋಲೀಸಿನವರು ಪ್ರಾಸಿಕ್ಯೂಷನ್ ಮಾಡಬೇಕೆಂದಿದೆಯೋ ಬೇರೆಯವರು ಮಾಡಬೇಕೆಂದಿದೆಯೋ ನನಗೆ ತಿಳಿಯದು. ಇವರನ್ನು ಪ್ರಾಸಿಕ್ಯೂಷನ್ ಮಾಡಲು ಪೋಲೀಸಿನವರು ಪ್ರಯತ್ನಿಸಿದ್ದಾರೆ ಇಲ್ಲವೆಂದು ನಾನು ತಿಳಿಯುವಬಗೆ ಹೇಗೆ? ಪ್ರಾಸಿಕ್ಯೂಷನ್ ಮಾಡಲು ಪೋಲೀಸಿನವರಿಗಿಷ್ಟವಿಲ್ಲವೆಂದು ನನ್ನ ಅರ್ಜಿಯಲ್ಲಿ ಬರೆದಿರುವುದಕ್ಕೆ ನನ್ನ ಲಾಯರು ಜವಾಬ್ದಾರರು. ಅದಕ್ಕೆ ನಾನು ಜವಾಬ್ದಾರನಲ್ಲ ಮತ್ತು ಆ ವಿಚಾರವೇ ನನಗೆ ತಿಳಿಯದು. ಆ ಜನರು ಯಾವತಕ್ಸೀರಿಗಾಗಿ ಪ್ರಾಸಿಕ್ಯೂಷನ್ ಮಾಡಲ್ಪಟ್ಟಿರುವರೆಂಬುದನ್ನು ನಾನೇನುಬಲ್ಲೆ? ಆ ವಿಚಾರವೆಲ್ಲಾ ನನಗೇನುತಿಳಿಯುವುದು? ನನ್ನ ಲಾಯರನ್ನು ಕೇಳಿ. ನನ್ನ ಲಾಯರು ಎಲ್ಲಾ ಸಂಗತಿಯನ್ನು ಬರೆದರು. ನಾನು ಕಂಪ್ಲೇಂಟ್ ಅರ್ಜಿಗೆ [illegible] ರುಜು ಮಾಡಿದ್ದೇನೆ. ನನ್ನ ಲಾಯರಿಗೆ ನಾನು ಫೀಜೇನನ್ನು ಇನ್ನೂ ಕೊಟ್ಟಿಲ್ಲ. ಯಾವಾಗ ಫೀಜು ಕೊಡಬೇಕೆಂದು ಇನ್ನೂ ಗೊತ್ತುಮಾಡಿಲ್ಲ. ಈ ಕಂಪ್ಲೇಂಟನ್ನು ನನ್ನ ಲಾಯರಿಗೋಸ್ಕರ ತಂದಿರುತ್ತೇನಲ್ಲದೆ ನನಗೋಸ್ಕರನಲ್ಲವೆಂದು ನಾನು ಪ್ರಮಾಣಮಾಡಿ ಹೇಳುತ್ತೇನೆ.

ತರ್ಜುಮೆಮಾಡಿ ಹೇಳಿದ್ದು ಸರಿಯಾಗಿದೆ ಎಂದು ಒಪ್ಪಿಕೊಳ್ಳಲ್ಪಟ್ಟಿತು.

(ರುಜು) ಟಿ. ಜಿ. ರಾಮಯ್ಯರ್, ಸಿಟಿ ಮ್ಯಾಜಿಸ್ಟ್ರೇಟ್.

ಸಿಟಿ ಮ್ಯಾಜಿಸ್ಟ್ರೇಟ್‌ಕೋರ್ಟು, ಮೈಸೂರು.
1925 ನೇ ಅಕ್ಟೋಬರ್ ತಾ॥ 15.
ಹಾಜರು—ಟಿ. ಜಿ. ರಾಮಯ್ಯರ್, ಎಸ್ಕ್ವೈರ್, ಬಿ.ಎ.,
ಸಿಟಿ ಮ್ಯಾಜಿಸ್ಟ್ರೇಟ್.
ಸಿ. ಆರ್. ನಂ. 258 ಆಫ್ 1925-1926.

ಫಿರ್ಯಾದಿ.	ಅಪರಾಧಿಗಳು.
ದ್ಯಾವಪ್ಪ.	1. ಕಾಳಯ್ಯ 2. ದ್ಯಾವಯ್ಯ 3. ಜವನಯ್ಯ 4. ಸಿದ್ದಪ್ಪ 5. ಹೆಚ್. ಮಾದಯ್ಯ.

ಆರ್ಡರು.

ಕ್ರಿ. ಪಿ. ಸಿ. 202 ನೇ ಸೆಕ್ಷನ್ ಪ್ರಕಾರ ಫಿರ್ಯಾದು ತರಲ್ಪಟ್ಟಿದೆ. ಫಿರ್ಯಾದಿಯು ಇನ್ನೊಬ್ಬರ ಹೇಳಿಕೆಯಮೇಲೆ ಈ ಫಿರ್ಯಾದನ್ನು ತಂದಿರುತ್ತಾನಲ್ಲದೆ ಫಿರ್ಯಾದಿನ ಸಂಗತಿಯೇನೂ ಅವನಿಗೆ ಸ್ವತಃ ತಿಳಿಯದು. ಈ ಫಿರ್ಯಾದಿಯು ಪ್ರಮಾಣಮಾಡಿಕೊಟ್ಟಿರುವ ಫಿರ್ಯಾದಿನ ಮೇಲೆ ಮುಂದಿನ ನಡವಳಿಕೆಯನ್ನು ನಡೆಸಲು ತಕ್ಕ ಗ್ರೌಂಡು ಇಲ್ಲವಾದ್ದರಿಂದ ಈ ಫಿರ್ಯಾದನ್ನು ಕ್ರಿ. ಪಿ. ಸಿ. 203 ನೇ ಸೆಕ್ಷನ್‌ಪ್ರಕಾರ ವಜಾಮಾಡಿರುತ್ತೇನೆ. ಈ ಫಿರ್ಯಾದು ಅರ್ಜಿಯನ್ನು ಹಾಜರ್ಮಾಡಿದ ಲಾಯರ ಸಮಕ್ಷಮದಲ್ಲಿ ಫಿರ್ಯಾದಿಯು ಪ್ರಮಾಣಮಾಡಿಕೊಟ್ಟ ಕೈಫಿಯತ್ತು ನಂಬಲ್ಪಡುವದಾದರೆ ವ್ಯಾಜ್ಯಗಳು ಯಾವರೀತಿಯಲ್ಲಿ ಹುಟ್ಟಿಸಲ್ಪಡುವವೆಂಬುದು ಅದರಿಂದ ಗೊತ್ತಾಗುತ್ತದೆ.

(ರುಜು) ಟಿ. ಜಿ. ರಾಮಯ್ಯರ್, ಸಿಟಿ ಮ್ಯಾಜಿಸ್ಟ್ರೇಟ್.
15-10-1925.

ವೇದಾರ್ಥವಿಚಾರ.

(ಲೇಖಾಂಕ ೪.)

(ಲೇಖಕ—ಸ್ವಾಮಿ ವಿರೂಪಾಕ್ಷ ಒಡೆಯರು.)

ಹಿಂದಿನ ಲೇಖದಲ್ಲಿ ತೋರಿಸಿದ ವಿದ್ಯಾರಣ್ಯರು, ಆದಿಶಂಕರಾಚಾರ್ಯರು ಸಕಲ ಮತಗಳನ್ನು ಖಂಡಿಸಿ ದಿಗ್ವಿಜಯಮಾಡಿದರೆಂದು ಬುಡಬುಡಿಕೆಯನ್ನು ಬಾರಿಸುವ ಒಂದಾನೊಂದು « ಶ್ರೀಶಂಕರದಿಗ್ವಿಜಯ » ವೆಂಬ ಗ್ರಂಥವನ್ನು ಬರೆದಿದ್ದು ಅದರಲ್ಲಿ— « ಅಧ್ಯಾಪಯಂತಮಸದರ್ಥನಿರಾಸಪೂರ್ವಂ | ಕಿಂತ್ವಸ್ವತೀರ್ಥಯಶಸಂಸ್ಕೃತಿಭಾಷ್ಯಜಾತಂ ‖ ಆಕ್ಷಿಪ್ಯ ಪಾಶುಪತವೈಷ್ಣವವೀರಶೈವ | ಮಾಹೇಶ್ವರಾನ್ ವಿಜಿತಾಹಸುರೇಶ್ವರಾದ್ಯೈಃ ‖ ಕೇಚಿದ್ವಿಸೃಜ್ಯಮತಮಾತ್ಮಮನುಷ್ಯಶಿಷ್ಯಭಾವಂಗತಾವಿಗತಮತ್ಸರಮಾನದೋಷಾಃ | ಅನ್ಯೇತುಷೋಢ್ಯವಶವೇತ್ಯಜಂಘನ್ಯಚಿತ್ತಾನಿನ್ಯು ! ಕ್ಷಣಂನಿಧನಮುಸ್ಯನಿರೀಕ್ಷಮಾಣಾಃ » ತಪ್ಪು ಅರ್ಥಗಳಿಂದ ವಿಪರೀತ ತಿಳಕೊಂಡಂಥಾ ವಿಷಯಗಳನ್ನೆಲ್ಲಾ ಶಂಕರಾಚಾರ್ಯರು ಹೊಗಳಾಡಿಸುತ್ತ ಪರಿಶುದ್ಧವಾದ ವೈದಿಕಮತವನ್ನು ಕಲಿಸುವವರಾಗಿ ಅನ್ಯಗುರುಗಳು ಯಾವ ಭಾಷ್ಯಾದಿಗಳಿಂದ ಕೀರ್ತಿಯನ್ನು ಹೊಂದಿದ್ದರೋ ಅಂಥಾ ಶ್ರುತಿಭಾಷ್ಯಗಳನ್ನೆಲ್ಲಾ ಆಕ್ಷೇಪಿಸಿ ಪಾಶುಪತ, ವೈಷ್ಣವ, ವೀರಶೈವ ಮೊದಲಾದ ಮತೀಯರನ್ನು ಗೆದ್ದರೆಂತಲೂ, ಅದರಲ್ಲಿ ಕೆಲವರು ತಮ್ಮತಮ್ಮ ಪೂರ್ವಾಚಾರ್ಯರ ಮತಗಳನ್ನು ಬಿಟ್ಟು ಈ ಶಂಕರಾಚಾರ್ಯರ ಶಿಷ್ಯತ್ವವನ್ನು ವಹಿಸಿದರಲ್ಲದೆ ಕೆಲವರು ನೀಚಮನಸ್ಕರಾಗಿ ಶಂಕರಾಚಾರ್ಯರ ಮರಣವನ್ನು ನಿರೀಕ್ಷಿಸುತ್ತಿದ್ದರೆಂತಲೂ ಬಹಳವಾಗಿ ಹೊಗಳಿಕೊಂಡಿರುವರು. ಆದರೆ ಅದೇ ಯಾವ ವಿದ್ಯಾರಣ್ಯರಿಗೆ ಇತರ ಮತಗಳೆಲ್ಲಾ ನಿಂದ್ಯವಾದವುಗಳಾಗಿಯೂ ಶಂಕರಾಚಾರ್ಯರ ಮತವು ಮಾತ್ರ ಪರಿಶುದ್ಧವಾದುದಾಗಿಯೂ ಕಂಡುಬಂತೋ ಅಂಥಾ ವಿದ್ಯಾರಣ್ಯರಿಗೆ ದೀರ್ಘತಮವಾದ ಹುಸಿಗಳ ವಿಷಯವಾಗಿ ಮುಂದಿನ ಈ ಲೇಖಮಾಲೆಯಲ್ಲಿ ತೋರಿಸುವಂಥಾ ಅಬದ್ಧ, ಹೊಲಸುಕಥೆಗಳನ್ನು ವೇದಭಾಷ್ಯದಲ್ಲಿ ಬರೆಯಲು ಹ್ಯಾಗೆ ಮನಸ್ಸಾಯಿತೋ ತಿಳಿಯದಾಗಿದೆ, ಹಾಗೂ ಬ್ರಹ್ಮಸೂತ್ರದ ಶೂದ್ರಾಧಿಕರಣ ಪ್ರಕರಣದಲ್ಲಿ ಶೂದ್ರವಿಷಯವಾಗಿ ವ್ಯಾಸಸೂತ್ರಗಳು ಸಾಮಾನ್ಯವಾಗಿದ್ದು ಅದಕ್ಕೆ ಭಾಷ್ಯಕಾರರಾದ ಶಂಕರಾಚಾರ್ಯರು ಗೋಭಿಲಾದಿ ಸೂತ್ರಗಳ ಇಲ್ಲದ ಸಲ್ಲದ ಪ್ರಮಾಣಗಳನ್ನು ತೋರಿಸುತ್ತ ಶೂದ್ರನು ಶ್ಮಶಾನಸ್ವರೂಪನೆಂತಲೂ ಬ್ರಾಹ್ಮಣರು ವೇದಪಠನ ಮಾಡುತ್ತಿರುವದನ್ನು ಆಕಸ್ಮಾತ್ ಅವನು ಕೇಳಿದಮಾತ್ರಕ್ಕೆ ಅವನ ಕಿವಿಯಲ್ಲಿ ಒಳ್ಳೇ ಕಾಸಿದ ಶೀಸವನ್ನು ಹೊಯ್ಯಬೇಕೆಂತಲೂ ನಿತ್ಯದಲ್ಲಿ ಕೇಳುತ್ತ ಅದನ್ನು ಪಠನೆಮಾಡಿಟ್ಟುಕೊಂಡಲ್ಲಿ ಆ ಶೂದ್ರನ ನಾಲಿಗೆಯನ್ನೇ ಕತ್ತರಿಸಬೇಕು, ಹಾಗೂ ಅವನ ಎದೆಸೀಳಬೇಕು, ಇವೇ ಮೊದಲಾದ ಮಹಾಕಠೋರವಾಕ್ಯಗಳನ್ನು ಸ್ವಲ್ಪವೂ ಪ್ರಾಣಿಗಳಲ್ಲಿ ದಯೆಯನ್ನಿಡದೆ « ದಯಾಹೀನಂಧರ್ಮಂತ್ಯಜೇತ್ ವಿದ್ಯಾಹೀನಂಗುರುಂತ್ಯಜೇತ್ » ಎಂಬ ಶಾಸ್ತ್ರಕಾರರ ವಾಕ್ಯವನ್ನು ಸಹ ವಿಚಾರದಲ್ಲಿತರದೆ ಬರೆದಿರುವ ಹಾಗೂ ಅದರಂತೆ ಬ್ರಾಹ್ಮಣ್ಯವೆಂಬ ದುರಭಿಮಾನದಲ್ಲಿ ಮಗ್ನರಾಗಿರುವ ತಮ್ಮ ಜನಾಂಗಕ್ಕೆ ಬೋಧಿಸುತ್ತ ಅದರಂತೆ ನಡೆಯಿಸಿ ಮಾನವಪ್ರಾಣಿಯ ಪ್ರಗತಿಯನ್ನು ಕುಗ್ಗಿಸಿದ ಶಂಕರಾಚಾರ್ಯರ ಧರ್ಮವು ಹ್ಯಾಗೆ ಗ್ರಾಹ್ಯವೋ ಎಂಬುದನ್ನು ಅವರೇ ಹೇಳಲಿ. ಶಂಕರಾಚಾರ್ಯರ ಉಪದೇಶವು ಕೆಲವಂಶದಲ್ಲಿ ಮಹಾನಿಂದ್ಯಗಾಸ್ಪದವೂ, ಹಾಗೂ ಸಂಕುಚಿತಬುದ್ಧಿಯಿಂದ ರಚಿತವಾದದ್ದೂ ಆಗಿರುವದಲ್ಲದೆ ವೇದಮತಕ್ಕೆ ಸರ್ವಥಾ ವಿರುದ್ಧವಾದದ್ದೆಂದು ನಾನು ಖಂಡಿತ ಹೇಳಬಲ್ಲೆನು. ಪ್ರಾಣಿಮಾತ್ರದಲ್ಲಿ ದಯಾಧರ್ಮ, ಹಾಗೂ ಸಮದೃಷ್ಟಿ ಇಲ್ಲದೆ ಆತ್ಮವಾದವನ್ನು ಮಾಡುವ ಶಂಕರಾಚಾರ್ಯರು ಪೂರ್ಣಜ್ಞರೆಂದು ನಂಬುವಬಗೆ ಹ್ಯಾಗೆ? ಸಂಪೂರ್ಣತತ್ವಜ್ಞರಿಗೆ ಭೇದಭಾವವುಂಟೆ? ಹಾಗೂ « ಆತ್ಮವತ್ ಸರ್ವಭೂತಾನಿ ಯಃಪಶ್ಯತಿಸಪಶ್ಯತಿ » ಎಂಬ ಮನೋಹರವಾದ ವಾಕ್ಯವು ಸಹ ಅವರ ಭಾಷ್ಯದಲ್ಲಿ ಪ್ರತಿಪಾದಿತವಾಗಿದ್ದು ಹೇಳುವದು ಮಾತ್ರ ಹಾಗೆ, ಮಾಡುವದು ಮಾತ್ರ ಹೀಗೆಯೇ, ಎಂಬುವ ನಾಣ್ನುಡಿಗೆ ಅನುಸರಿಸಿ ಪ್ರಪಂಚವು ಮಿಥ್ಯಾ ಎಂದು ಹೇಳುವದನ್ನು ಮಾತ್ರ ಬಲ್ಲರು, ಆದರೆ ಆ ಮಿಥ್ಯವಾದ ಪ್ರಪಂಚದಲ್ಲಿಯ ಸುಖಭೋಗವನ್ನು ಬಿಡಲರಿಯರು, ಮತ್ತು ನಿರ್ಲಜ್ಜರೂ, ನಿರ್ಭೀತರೂ ಆಗಿ ಪ್ರಪಂಚವೆಲ್ಲಾ ನಮಗಾಗಿಯೇ ರಚಿಸಲ್ಪಟ್ಟಿದ್ದು ಪ್ರಪಂಚದಲ್ಲಿಯ ಪದಾರ್ಥಗಳಿಗೂ, ಕರ್ಮಕ್ಕೂ, ಜ್ಞಾನಕ್ಕೂ ನಾವೇ ಅಧಿಕಾರಿಗಳು, ಹಾಗೂ ನಮ್ಮ ದೆಶೆಯಿಂದಲೇ ಎಲ್ಲವನ್ನೂ ಕಾದಿಡತಕ್ಕದ್ದೆಂದು ವಾದಿಸುವದರಲ್ಲಿಯೂ ನಿಪುಣರೆನಿಸಿರುವರು. ವಾಚಕರೇ, ನೋಡಿದಿರಾ, ಎಲ್ಲವೂ ಒಂದೆ ನಮಗೂ ನಿಮಗೂ ಭೇದವಿಲ್ಲವೆಂಬುವ ಬಾಹ್ಯಾಡಂಬರದ ವೇದಾಂತವನ್ನು ಬೋಧಿಸುವ ದ್ವಿಜವೃತ್ತಿಯವರನ್ನು ನಂಬುವಬಗೆ ಹ್ಯಾಗೆ? ಇವರು ದ್ವಿಜನ್ಮರಲ್ಲ, ದ್ವಿಜಿಹ್ವರೆಂಬುವದೇ ನ್ಯಾಯವಾಗಿದ್ದು ಇವರ ವೃತ್ತಿಯೇ ಅವರ ದ್ವಿಜಿಹ್ವತ್ವವನ್ನು ಬೋಧಿಸುತ್ತಿರುವದು, ಇರಲಿ. ಇನ್ನು ಶಂಕರಾಚಾರ್ಯರು ವೀರಶೈವರನ್ನು ಖಂಡಿಸಿ ವೀರಶೈವರನ್ನು ಗೆದ್ದರೆಂತೆ ವಿದ್ಯಾರಣ್ಯರು ಶಂಕರಾಚಾರ್ಯರ ವಿಷಯವಾಗಿ ಹೊಗಳಿಕೊಂಡಿರುವದನ್ನು ನೋಡಿದರೆ ವಿದ್ಯಾರಣ್ಯರ ಮತಿಗೇಡಿತನಕ್ಕೆ ಗತಿಯಿಲ್ಲವೆಂದು ಹೇಳಬೇಕಾಗಿದೆ. ಯಾಕೆಂದರೆ, ಶಂಕರಾಚಾರ್ಯರಂಥಾ ಸಹಸ್ರಾರುಜನರು ಆಗಿಹೋದಾಗ್ಯೂ ಪವಿತ್ರವಾದ ವೀರಶೈವಧರ್ಮವನ್ನು ಖಂಡಿಸಲು ಸಾಧ್ಯವಿಲ್ಲ. ಇಷ್ಟೇ ಅಲ್ಲದೆ ವೀರಶೈವಯತಿಗಳಾದ ಶ್ರೀಪತಿಪಂಡಿತಾಚಾರ್ಯರು ಬರೆದಿರುವ ಶ್ರೀಕರಭಾಷ್ಯದಂಥಾ ಅಪ್ರತಿಮಗೌರವಾರ್ಹವಾದ ಭಾಷ್ಯವನ್ನು ಶಂಕರಾದಿಗಳಂಥಾ ಸಹಸ್ರಾರುಜನರು ಬರೆದರೂ ಬಾರದೆಂತಿರುವ ವೀರಶೈವರ ಶ್ರೀಕರಭಾಷ್ಯಾದಿಗಳನ್ನು ನೋಡಿಯೂ ವೀರಶೈವಮತವನ್ನು ಖಂಡಿಸಿದರೆಂದು ಬರೆದಿರುವದು ಸ್ವಾರ್ಥದ್ಯೋತಕವೆಂಬುವದನ್ನು ವಾಚಕರೇ ಊಹಿಸಲಿ. ಯಾಕೆಂದರೆ, ಒಟ್ಟು ಬ್ರಹ್ಮಸೂತ್ರಗಳಮೇಲೆ 23 ಭಾಷ್ಯಗಳಿದ್ದು ಅವುಗಳಲ್ಲಿಯ ಬ್ರಹ್ಮಸೂತ್ರಗಳಮೇಲಿನ 12 ಮಂದಿ ಶಂಕರ, ರಾಮಾನುಜ, ಮಾಧ್ವ, ವಲ್ಲಭ ಶ್ರೀಕಂಠಾದಿಗಳು ಬರೆದಿರುವ ಭಾಷ್ಯಗಳು ಮಾತ್ರ ತುಲನಾತ್ಮಕದೃಷ್ಟಿಯಿಂದ ಓದಲು ಅರ್ಹವಾಗಿರುವವಲ್ಲದೆ ಅದರಂತೆ ನಾನು ನೂರಾರುಜನ ಬ್ರಾಹ್ಮಣಪ್ರೌಢವಿದ್ಯಾರ್ಥಿಗಳಿಗೆ ಕಲಿಸಿರುವೆನು. ಆದರೆ ಅವೆಲ್ಲಾ ಭಾಷ್ಯಗಳಲ್ಲಿಯೂ ಶ್ರೀಕರದಂಥಾ ಗಣ್ಯವಾದ ಭಾಷ್ಯವು ಯಾವದೂ ಅಲ್ಲವೆಂದು ನಾನು ಸಂಪೂರ್ಣವಾಗಿ ಮನವರಿತುಕೊಂಡಿರುವೆನು. ಶ್ರೀಕರಭಾಷ್ಯಕರ್ತರಾದ ಶ್ರೀಪತಿಪಂಡಿತಾಚಾರ್ಯರಂಥಾ ತತ್ವವೇತ್ತರೂ ವಿಷಯಪ್ರತಿಪಾದನೆಯಲ್ಲಿ ಲೋಕೋತ್ತರಬುದ್ಧಿ ಕುಶಲರೂ, ಸುಲಭ, ಲಲಿತ, ಹಾಗೂ ಸರಳವಾದ ವಾಕ್ಯಶೈಲಿಯಲ್ಲಿ ತತ್ವಜ್ಞಾನದಂಥಾ ಅಗಾಧವಾದ ವಿಷಯವನ್ನು ಪ್ರತಿಪಾದನೆಮಾಡುವ ಸಂಸ್ಕೃತಭಾಷಾಕೋವಿದರೂ ಆದ ಮತ್ತಾವ ಆಚಾರ್ಯರೂ ಅಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆನು.

ಇನ್ನು ಸಾಯಣಾಚಾರ್ಯರು ವೇದವಿಷಯವಾಗಿ ಅನ್ನುವದೇನೆಂದರೆ, « ಲಕ್ಷಣಪ್ರಮಾಣಾಭ್ಯಾಂಹಿವಸ್ತುಸಿದ್ಧಿಃ » ಎಂಬದಾಗಿ ಜಗತ್ತಿನಲ್ಲಿ ಯಾವಾಗಲೂ ಯಾವದಾದರೊಂದು ವಸ್ತುಸಿದ್ಧಿಯು ಲಕ್ಷಣ ಪ್ರಮಾಣಗಳಿಂದಾಗುವದಲ್ಲದೆ ಇವೆರಡೂ ಇಲ್ಲದಂಥಾದ್ದು ಕೇವಲ ಅಸಿದ್ಧಿಯೆಂದು ತಿಳಿಯುವದು ನ್ಯಾಯಜ್ಞರಮತವಾಗಿರುವದರಿಂದ ವೇದಗಳಲ್ಲಿಯೂ ಲಕ್ಷಣ, ಪ್ರಮಾಣಗಳು ಘಟಿಸುವವೋ, ಇಲ್ಲವೋ ಎಂಬುವದನ್ನು ಪೂರ್ವಪಕ್ಷ, ಉತ್ತರಪಕ್ಷ ನಿರ್ದೋಷಪೂರ್ವಕ ಮೊದಲು ಚರ್ಚಿಸಿ ಅನಂತರ ವೇದಪ್ರಯೋಜನವನ್ನು ತೋರಿಸಿರುವರಲ್ಲದೆ ಅದಕ್ಕೆ ಸಂಬಂಧಪಟ್ಟ ಷಡಂಗಾದಿಶಾಸ್ತ್ರಗಳ ಪ್ರಯೋಜನವನ್ನು ಹಾಗೂ ಅವುಗಳ ಮಹತ್ವ, ಆವಶ್ಯಕತೆ ಮೊದಲಾದದ್ದನ್ನು ಪ್ರತಿಪಾದಿಸಿ ಋಗ್, ಯಜುಃ, ಸಾಮ, ಅಥರ್ವಣಗಳೆಂಬ ಮುಖ್ಯಮೂಲಗಳಾದ ನಾಲ್ಕು ವೇದಗಳು ಮಂತ್ರಸಂಹಿತೆಯಂತಲೂ, ಐತರೇಯಾದಿ ಬ್ರಾಹ್ಮಣಗ್ರಂಥಗಳು ಬ್ರಾಹ್ಮಣಸಂಹಿತೆಯಂತಲೂ ವೇದವು ಎರಡುವಿಧವಾಗಿದ್ದು ಈ ಮಂತ್ರ ಬ್ರಾಹ್ಮಣಗಳೆರಡೂ ವೇದವೇ ಆಗಿದ್ದು, « ಮಂತ್ರಬ್ರಾಹ್ಮಣಾತ್ಮಕಯೋರ್ವೇದನಾಮಧೇಯಂ » ಎಂಬದಾಗಿ ಕಾತ್ಯಾಯನರ ವಾಕ್ಯಪ್ರಮಾಣವನ್ನು ತೋರಿಸುತ್ತಾ ತಮ್ಮ ಬ್ರಾಹ್ಮಣೇಪೋಷಲೀಲೆಗೆ ಅನುಕೂಲಗಳಾದ ಅಬದ್ಧ ಐತರೇಯಾದಿ ಜನರು ಬರೆದಿರುವ ಬ್ರಾಹ್ಮಣಗ್ರಂಥಗಳನ್ನು ಆ ಪವಿತ್ರವಾದ ವೇದದ ಹೆಸರಿನಿಂದ ಜೋಡಿಸಿ ಈ ಬ್ರಾಹ್ಮಣಗ್ರಂಥಗಳನ್ನು ವೇದವಂತಲೇ ಮನ್ನಿಸಬೇಕೆಂದು ಪ್ರತಿಪಾದಿಸಿರುವರು. ಹಾಗೂ ಅದರಂತೆ ಅಲ್ಲಲ್ಲಿ ಇವುಗಳಿಗೆ ವೇದದ ಹೆಸರನ್ನು ಕೊಟ್ಟು ವೇದಪ್ರಮಾಣವನ್ನಾಗಿಭಾವಿಸಿ ತೋರಿಸಿರುವರು. ಆದರೆ ಇದು ಸರ್ವಥಾ ತಪ್ಪೆಂದು ನಾವು ಮುಂದಿನ ಲೇಖದಲ್ಲಿ ತೋರಿಸುವೆವು.

ಸಾಯಣಾಚಾರ್ಯರು ವೇದವಿಷಯದಲ್ಲಿ ತೋರಿಸಿದ್ದ ಪೂರ್ವಪಕ್ಷಕಾರರು, ಮೊದಲು ವೇದವೆಂಬುವದೇ ಇಲ್ಲ. ಆದರೆ ಅದರಲ್ಲಿಯ ಯುಗಾದಿಭೇದಗಳನ್ನು ತಂದಿರೆಲ್ಲಿಂದ? ಎಂಬದಾಗಿ ಹೇಳಿ ಮುಂದೆ ಅದಕ್ಕೆ ಉತ್ತರಪಕ್ಷದಿಂದ ಅನೇಕ ಲಕ್ಷಣಪ್ರಮಾಣಗಳಿಂದ ವೇದವೆಂಬವಸ್ತು ಉಂಟೆಂತಲೂ ಅದಕ್ಕೆ ಯುಗಾದಿಭೇದಗಳಿರುವದು ನ್ಯಾಯವೆಂತಲೂ ತೋರಿಸಿರುವರು. ಇನ್ನು ಯುಗಾದಿಭೇದವುಳ್ಳ ಈ ವೇದವು ಉಂಟೆಂದು ನಾವು ಒಪ್ಪಿಕೊಂಡರೂ ಇದು ಪುರುಷರಿಂದ ನಿರ್ಮಿಸಲ್ಪಟ್ಟಿದ್ದೇ ಹೊರ್ತು ಈಶ್ವರನಿರ್ಮಿತ (ಅಪೌರುಷೇಯ) ವೆಂದು ನಾವು ಒಪ್ಪಲಾರೆವು. ಆದರೆ ಕರ್ಮಜನ್ಯಶರೀರಿಗಳಾದ ಜೀವರಾಶಿಗಳಿಂದ ನಿರ್ಮಿಸಲ್ಪಟ್ಟಿಲ್ಲವೆಂದು ನೀವು ಅದಕ್ಕೆ ಹೇಳಬಹುದು. ಆದರೆ ಅದನ್ನು ನಾವು ಒಪ್ಪುವದಿಲ. ಯಾಕೆಂದರೆ, ಇಂಥಿಂಥವರಿಂದ ಇಂಥಾ ವೇದವು ನಿರ್ಮಿಸಲ್ಪಟ್ಟಿರುವದೆಂದು ಸರ್ವತ್ರ ಉಲ್ಲೇಖವಿದ್ದು ಇದು ಪೌರುಷೇಯವೆಂತಲೇ ಹೇಳುವೆವು. ಆದರೆ ಹಾಗಲ್ಲ, ಈ ಪೌರುಷೇಯವಾದಕ್ಕೂ ಹಾಗೂ ವೇದಾಸ್ತಿತ್ವವಾದಕ್ಕೂ ಉಪನಿಷತ್, ಬ್ರಾಹ್ಮಣ, ಆರಣ್ಯಕ, ಸ್ಮೃತಿ, ಪುರಾಣೇತಿಹಾಸಾದಿ ಅನೇಕ ಪ್ರಮಾಣಗಳುಂಟೆಂದು ಹೇಳುವೆವೆಂದಲ್ಲಿ ಅವೆಲ್ಲವೂ ವೇದವನ್ನೇ ಆಶ್ರಯಮಾಡಿಕೊಂಡಿರುವದರಿಂದ ಅವುಗಳನ್ನೇ ನೀವು ಪ್ರಮಾಣವನ್ನಾಗಿ ತೋರಿಸಿದಲ್ಲಿ ತನ್ನ ಹೆಗಲಮೇಲೆ ತಾನೇ ಕೂತಿದ್ದನೆಂಬ ಆತ್ಮಾಶ್ರಯದೋಷಪ್ರಸಂಗ ಬರುವದಲ್ಲದೆ ಎಂಥಾ ನಿಪುಣನಾದಾಗ್ಯೂ « ನಿಪುಣೋಪಿಸ್ವಸ್ಕಂಧಮಾರೋಢುಂನಪ್ರಭವತಿ » ತನ್ನ ಕುತ್ತಿಗೆಯಮೇಲೆ ತಾನೇ ಕೂಡ್ರಲು ಎಂಥಾ ನಿಪುಣನೂ ಸಮರ್ಥನಾಗಲಾರನು. ಹಾಗೂ ವೇದಾಸ್ತಿತ್ವದಲ್ಲಿ ಸರ್ವಜನರ ಪ್ರಸಿದ್ಧಿಯುಂಟೆಂಬುವದೇ ನಿಮಗೆ ಒಳ್ಳೇ ಆಧಾರವಾಗಿದ್ದಲ್ಲಿ ಆಕಾಶವು ಕಪ್ಪು, ನೀಲಿಬಣ್ಣಗಳುಳ್ಳದ್ದಾಗಿರುವದೆಂದು ಏನೊಂದು ವಸ್ತುವಲ್ಲದ ಆಕಾಶಕ್ಕೆ ಕಪ್ಪು, ನೀಲಿಬಣ್ಣಗಳನ್ನಾರೋಪಿಸಿ ಹ್ಯಾಗೆ ಅಜ್ಞರು (ಹುಡುಗರು) ಹೇಳುವರೋ, ಅದರಂತೆ ನೀವಾದರೂ ಭ್ರಾಂತರಾಗಿರುವಿರಿ. ಈರೀತಿಯಾಗಿ ವಾದಿಸುವಲ್ಲಿ ವೇದವಿಷಯಕವಾದ ನಿಮ್ಮ ಲಕ್ಷಣಪ್ರಮಾಣಗಳ್ಯಾವೂ ಚೆನ್ನಾಗಿ ಘಟಿಸುವದಿಲ್ಲವೆಂದು ಪೂರ್ವಪಕ್ಷಮಾಡಿ ಅದಕ್ಕೆ ಉತ್ತರಪಕ್ಷವಾಗಿ ಹೇಳುವದೇನೆಂದರೆ, ಮಂತ್ರ ಬ್ರಾಹ್ಮಣಗಳೆರಡೂ ವೇದದಲ್ಲಿದ್ದು ಅವುಗಳ ಅಸ್ತಿತ್ವದಲ್ಲಿ ಮೇಲೆ ತೋರಿಸಿದ ಶ್ರುತಿಸ್ಮೃತ್ಯಾದಿ ಅನೇಕ ಪ್ರಮಾಣಗಳುಂಟೆಂದು ಆತ್ಮಾಶ್ರಯದೋಷಬರುವವುಗಳನ್ನೇ ಪ್ರಮಾಣವನ್ನಾಗಿ ತೋರಿಸಿ ವೇದವಿಷಯವಾಗಿ ಈ ದೋಷವು ಬರಲಾರದೆಂದು ಹೇಳಿರುವರು. ಹ್ಯಾಗೆಂದರೆ, ಘಟಪಟಾದಿ ಪದಾರ್ಥಗಳು ಸ್ವಪ್ರಕಾಶವಿಲ್ಲವಾದಾಗ್ಯೂ, ಸೂರ್ಯಾದಿಗಳಿಗೆ ಹ್ಯಾಗೆ ಸ್ವಪ್ರಕಾಶವು ಅವಿರುದ್ಧವೋ ಅದರಂತೆ ಅಕುಂಠಿತಶಕ್ತಿಯುಳ್ಳ ವೇದರಾಶಿಗೆ ಸ್ವಪ್ರಕಾಶಕತ್ವವೂ ಹಾಗೂ ಅಸ್ತಿತ್ವದಲ್ಲಿ ತಾನೇ ಪ್ರಮಾಣವಾಗಿ ತೋರಿಸುವದೂ ಇವೇ ಮೊದಲಾದ ಯಾವ ದೋಷಗಳೂ ವೇದವಿಷಯವಾಗಿ ಬರಲಾರವೆಂದು ವೇದಕ್ಕೆ ಸರ್ವಸಾಮರ್ಥ್ಯವನ್ನೂ, ಹಾಗೂ ಸರ್ವಜ್ಞತ್ವವನ್ನೂ ತೋರಿಸಿ ವೇದವನ್ನು ಬಹುರೀತಿಯಾಗಿ ಗೌರವಿಸಿರುವರು.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 6 ನೆಯ ಪ್ರಕರಣ.

ಹಡಗನ್ನು ಸೇರಿದುದು.

ಆಂಗ್ಲದೇಶಕ್ಕೆ ಪ್ರಯಾಣಮಾಡಿದಾಗ್ಗೆ ಬಂಧುವರ್ಗವನ್ನು ಬಿಟ್ಟು ಹೋಗಬೇಕೆಂಬ ಸಂತಾಪವು ನನಗೆ ವಿಶೇಷವಾಗಿದ್ದಿತು, ಆದರೆ ಆಫ್ರಿಕೆಗೆ ಹೊರಡುವ ವೇಳೆಯಲ್ಲಿ ಅಂಥಾ ಸಂತಾಪವೇನೂ ಹುಟ್ಟಲಿಲ್ಲವು. ನನ್ನ ತಾಯಿಯು ನಾನು ಆಂಗ್ಲದೇಶದ [illegible]

ಪ್ರಪಂಚಾನುಭವವು ಕೊಂಚವುಂಟಾಗಿದ್ದಿತು. ಹೊರಗೆ ಪ್ರಯಾಣವಾದುತ್ತಲೇ ಇದ್ದೆನು. ಮಾತುಮಾತಿಗೂ ರಾಜಕೋಟೆಯಿಂದ ಬೊಂಬಾಯಿಗೆ ಹೋಗುತ್ತಲೇ ಇದ್ದೆನು. ಹೆಂಡತಿಯನ್ನು ಬಿಟ್ಟು ಹೋಗಬೇಕೆಂಬ ಯೋಚನೆಯು ಮಾತ್ರ ಹುಟ್ಟಿತು. ನಾನು ಆಂಗ್ಲದೇಶದಿಂದ ಬಂದಮೇಲೆ ಮತ್ತೊಂದು ಮಗುವು ಹುಟ್ಟಿತು. ಸಂಭೋಗಸೌಖ್ಯಾನುಭವಾಸಕ್ತಿಯು ಇನ್ನೂ ಕಡಮೆಯಾಗಿರಲಿಲ್ಲವಾದರೂ ಈಗೀಗೆ ಉದ್ರೇಕವು ಬಹುಮಟ್ಟಿಗೆ ತಗ್ಗಿತು. ಪವಿತ್ರಪ್ರೇಮವು ಸ್ಥಿರಗೊಳ್ಳಲಾರಂಭವಾಯಿತು. ಆಂಗ್ಲದೇಶದಿಂದ ನಾನು ಬಂದಮೇಲೆ ನಾನೂ ನನ್ನ ಹೆಂಡತಿಯೂ ಬಹಳಕಾಲ ಒಂದೇಕಡೆ ವಾಸಿಸಲು ಸಾಧ್ಯವಾಗದಿದ್ದರೂ ನಾನು ಆಕೆಗೆ ಓದನ್ನು ಕಲಿಸಲಾರಂಭಿಸಿದೆನು. ಅದು ಸರಿಯಾಗಿ ಸಾಗಲಿಲ್ಲವಾಗಿ ಆಕೆಯಲ್ಲಿ ಕೊಂಚ ಬದಲಾವಣೆಯನ್ನು ಮಾಡಲುಜ್ಜುಗಿಸಿದೆನು. ಆದುದರಿಂದ ಆವರಭಿವೃದ್ಧಿಯನ್ನು ಕೊನೆಸಾಗಿಸಲು ಕಲೆತಿರಬೇಕೆಂದು ನಾವಿಬ್ಬರೂ ಅಪೇಕ್ಷಿಸಿದ್ದೆವು. ದಕ್ಷಿಣಾಫ್ರಿಕೆಯನ್ನು ನೋಡಬೇಕೆಂಬ ಅಪೇಕ್ಷೆಯು ಪ್ರಬಲವಾಗಿದ್ದುದರಿಂದ ನನಗೆ ವಿಯೋಗವು ದುಸ್ಸಹವಾಗಿ ತೋರಲಿಲ್ಲವು. ಇನ್ನೊಂದುವರ್ಷದಲ್ಲಿ ತಪ್ಪದೆ ಬರುತ್ತೇನೆಂದು ನನ್ನ ಪತ್ನಿಗೆ ಹೇಳಿ ರಾಜಕೋಟೆಯಿಂದ ಬೊಂಬಾಯಿಗೆ ಪ್ರಯಾಣಮಾಡಿದೆನು. ಅಲ್ಲಿ ಅಬ್ದುಲ್ಲಾ ಕಂಪೆನಿ ಏಜಂಟು ನನಗೆ ಸ್ಟೀಮರಿನ ಟಿಕೆಟ್ಟನ್ನು ತೆಗೆದುಕೊಡಬೇಕಾಗಿದ್ದಿತು. ಆ ಸ್ಟೀಮರಿನಲ್ಲಿ ಸ್ಥಳವಿರಲಿಲ್ಲವು. ಆಗ ಹೊರಡದಿದ್ದರೆ ಬೊಂಬಾಯಿನಲ್ಲಿರಬೇಕಾಗಿದ್ದಿತು. ನಾನು ಬಹಳ ಪ್ರಯತ್ನಪಟ್ಟರೂ ಮೊದಲನೆಯ ತರಗತಿಯಲ್ಲಿ ಸ್ಥಳದೊರೆಯಲಿಲ್ಲ. “ನಿಮಗಿಷ್ಟವಿದ್ದಲ್ಲಿ ಡೆಕ್ಕು ಪ್ರಯಾಣಿಕರಾಗಿ ಹೊರಡಬೇಕು. ಸೆಲೂನಿನಲ್ಲಿ ನೀವು ಊಟಮಾಡಲೇರ್ಪಡಿಸುವೆನು” ಎಂದು ಏಜಂಟು ಹೇಳಿದನು. ಬ್ಯಾರಿಸ್ಟರು ಡೆಕ್ಕುಪ್ರಯಾಣಿಕನಾಗಿ ಹೊರಟಲ್ಲಿ ಬಹಳ ಅಗೌರವಕರವೆಂದು ನನಗೆ ತೋರಿತಾದುದರಿಂದ ಅದಕ್ಕೆ ನಾನು ಸಮ್ಮತಿಸಲಿಲ್ಲ. ಏಜಂಟು ನಿಜಸ್ಥಿತಿಯನ್ನು ಹೇಳಲಿಲ್ಲವೆಂದು ಸಹ ನನಗೆ ಅನುಮಾನಹುಟ್ಟಿತು. 1ನೇ ತರಗತಿಯಲ್ಲಿ ಸ್ಥಳವು ದೊರಕಬಹುದೆಂದು ಯೋಚಿಸಿ ನಾನು ಏಜಂಟಿಗೆ ಹೇಳಿ ಸ್ಟೀಮರಿನೊಳಕ್ಕೆ ಹೋಗಿ ಚೀಫ್‌ಆಫೀಸರ ಕೂಡ ಮಾತನಾಡಿದೆನು. “ಸಾಧಾರಣವಾಗಿ ಆಸನಗಳು ಬಿಡುವಾಗಿಯೇ ಇರುವುವಾದರೂ ಈಸಾರಿ ಮೊಜಾಂಬಿಗೆ ಗೌರ್ನರು ಜನರಲ್ಲು ತಮ್ಮ ಪರಿವಾರದೊಡನೆ ಈ ಸ್ಟೀಮರಿನಲ್ಲಿ ಹೊರಡುವರಾದುದರಿಂದ ಎಲ್ಲಾ ಸ್ಥಾನಗಳನ್ನೂ ಅವರೇ ಆಕ್ರಮಿಸಿಕೊಂಡಿರುವರು” ಎಂದು ಹೇಳಿದನು. “ನನಗು ಕೂಡ ಹೇಗಾದರೂ ಒಂದು ಸ್ಥಾನವನ್ನು ನೋಡಲಾಗುವುದಿಲ್ಲವೇ?” ಎಂದು ಕೇಳಿದೆನು. “ನನ್ನ ಬಳಿ ಒಂದು ಸ್ಥಾನವು ಮಿಗಿಸಲಾಗಿರುವುದು. ಅದನ್ನು ಪ್ರಯಾಣಿಕರಿಗೆ ಕೊಡುವ ಪದ್ಧತಿಯಿಲ್ಲವಾದರೂ ನಿಮಗೆ ಕೊಡುತ್ತೇನೆ” ಎಂದು ಆತನು ಹೇಳಿದನು. ನಾನು ಆತನಿಗೆ ನನ್ನ ಕೃತಜ್ಞತೆಯನ್ನು ತಿಳಿಸಿ ಏಜಂಟನನ್ನು ಕೇಳಲು ಆತನು ಟಿಕೆಟ್ಟನ್ನು ಕೊಂಡುಕೊಟ್ಟನು. 1893 ನೇ ಏಪ್ರಿಲಿನಲ್ಲಿ ವಿಶೇಷ ಉತ್ಸಾಹದಿಂದ ನಾನು ದಕ್ಷಿಣಾಫ್ರಿಕೆಗೆ ಹೊರಟೆನು.

ನಾನು ಮೊಟ್ಟಮೊದಲು ಸೇರಿದ ರೇವೆಯು ಲಾಮೂ ಎಂಬುದು. ಬೊಂಬಾಯಿನಿಂದ ಹೊರಟದಿವಸದಿಂದ 13 ನೇ ದಿವಸಕ್ಕೆ ನಮ್ಮ ಹಡಗು ಲಾಮೂಯನ್ನು ಸೇರಿತು. ಹಡಗಿನ ಕ್ಯಾಪ್ಟನ್ನಿಗೂ ನನಗೂ ಬಹಳ ಸ್ನೇಹವುಂಟಾಯಿತು. ಆತನಿಗೆ ಚದರಂಗದಮೇಲೆ ಬಹಳ ಪ್ರೀತಿಯಿದ್ದಿತಾದರೂ ಅನುಭವವಿರಲಿಲ್ಲ. ನನಗೂ ಅದರ ಪರಿಶ್ರಮವಿಲ್ಲದಿದ್ದಾಗ್ಯೂ ಆತನು ಆಡಲು ನನ್ನನ್ನು ಕರೆದನು. ಚದರಂಗವನ್ನು ಕುರಿತು ನಾನು ಬಹಳವಾಗಿ ಕೇಳಿದ್ದೆನಾದರೂ, ಯಾವಾಗಲೂ ಆಡಿದುದಿಲ್ಲ. ಅದಕ್ಕೆ ಒಳ್ಳೇ ಆಲೋಚನಾಶಕ್ತಿಯಿರಬೇಕೆಂದು ಕೇಳಿದ್ದೆನು. ಕ್ಯಾಪ್ಟನ್ನು ಅದನ್ನು ನನಗೆ ಕಲಿಸಿಕೊಡುತ್ತೇನೆಂದನು. ಬಹಳ ಶ್ರದ್ಧೆಯಿಂದ ಕಲಿತುಕೊಳ್ಳುತ್ತಿದ್ದೆನು. ಪ್ರತಿಸಾರಿಯೂ ನಾನೇ ಸೋತುಹೋಗುತ್ತಿದ್ದೆನು. ಅದುಕಾರಣ ಆತನು ಇನ್ನಷ್ಟು ಶ್ರದ್ಧೆಯಿಂದ ಕಲಿಸಲಾರಂಭಿಸಿದನು. ನನಗೆ ಆಯಾಟವು ಬಂದಿತಾದರೂ ನಾ ಕೊಡಲು ಬರಲಿಲ್ಲವು. ಲಾಮೂ ಹತ್ತಿರ ಹಡಗು ನಿಲ್ಲುತ್ತಲೆ ನಾನು ರೇವೆಯನ್ನು ನೋಡಲು ಇಳಿದೆನು. ಕ್ಯಾಪ್ಟನ್ನೂ ಇಳಿದನು. ಈ ರೇವೆಯು ಅಪಾಯಕರವಾದುದೆಂದು ಆತನು ನನ್ನನ್ನು ಎಚ್ಚರಿಸಿದನು. ಅದು ಚಿಕ್ಕ ಪಟ್ಟಣವು. ನಾನು ಪೋಸ್ಟಾಫೀಸಿಗೆ ಹೋದೆನು. ಅಲ್ಲಿ ಭಾರತೀಯರೇ ಕರಣಿಕರಾಗಿದ್ದರು. ಅವರನ್ನು ನೋಡುತ್ತಲೇ ನನಗೆ ಸಂತೋಷವಾಯಿತು. ಅವರಕೂಡ ಮಾತನಾಡಿದೆನು. ಅವರ ಪದ್ಧತಿಯನ್ನು ನೋಡಿ ನನಗೆ ಸಂತೋಷವಾಯಿತು. ಅವನ್ನು ಗೃಹಿಸಲಿಚ್ಛಿಸಿದೆನು. ಡೆಕ್ಕು ಪ್ರಯಾಣಿಕರಲ್ಲಿ ಕೆಲವರೊಡನೆ ನನಗೆ ಪರಿಚಯವಾಗಿದ್ದಿತು. ಕೆಳಗೆ ಅಡಿಗೆಮಾಡಿ ಹಾಯಾಗಿ ಊಟಮಾಡಲು ಅವರು ಕೂಡ ಅಲ್ಲಿಳಿದರು. ನಾನು ಆಫ್ರಿಕೆಯವರನ್ನು ನೋಡಿಕೊಂಡು ಬರುವಷ್ಟರಲ್ಲಿ ಕೊಂಚಹೊತ್ತಾಗಿದ್ದಿತು. ಅಡಿಗೆಮಾಡಿ ಊಟಮಾಡಿದವರು ಒಂದು ದೋಣಿಯನ್ನು ಹತ್ತುತ್ತಿದ್ದಾಗ್ಯೆ ನಾನು ಕೂಡ ಆ ದೋಣಿಯನ್ನೇ ಹತ್ತಿದೆನು. ಆದರಲ್ಲಿ ಜನರು ಬಹಳವಾಗಿದ್ದರು. ಅಲೆಯು ಹೆಚ್ಚಾಗಿದ್ದಿತು. ದೋಣಿಯು ಹಡಗಿನ ಸಮೀಪಕ್ಕೆ ಬಂದಾಗ್ಯೆ ಅದನ್ನು ಏಣಿಗೆ ಕಟ್ಟಿಹಾಕಲು ಅವಕಾಶವಿಲ್ಲದಂತೆ ಸಮುದ್ರವು ಉಲ್ಲೋಲಕಲ್ಲೋಲವಾಗಿದ್ದಿತು. ಸ್ಟೀಮರು ಹೊರಡುವಸಮಯದಲ್ಲಿ ಸೀಟಿ ಹಾಕಲ್ಪಡುವುದು. ಸೇತುವೆಯ ಮೇಲಿನಿಂದ ಕ್ಯಾಪ್ಟನ್ನು ನಮ್ಮ ಅವಸ್ಥೆಯನ್ನು ನೋಡುತ್ತಿದ್ದನಾದುದರಿಂದ ಐದುನಿಮಿಷಗಳಲ್ಲಿ ಬರುವುದಕ್ಕೆ ಅನುಜ್ಞೆಯನ್ನಿತ್ತನು. ಸ್ಟೀಮರಿನ ಬಳಿ ಮತ್ತೊಂದು ದೋಣಿಯಿದ್ದಿತು. ಅದನ್ನು ನನ್ನ ಸ್ನೇಹಿತನೊಬ್ಬನು ನನಗಾಗಿ 10 ರೂಪಾಯಿಗಳಿಗೆ ಮಾತನಾಡಿದನು. ಅಷ್ಟರಲ್ಲಿ ಏಣಿಯನ್ನು ಕೆಳಗೆಬಿಟ್ಟರು. ಅದರಿಂದ ಒಂದು ಹಗ್ಗವನ್ನು ಬಿಟ್ಟು ನನ್ನನ್ನು ಮೇಲಕ್ಕೆ ಸೆಳೆದುಕೊಂಡರು. ಹಡಗು ಹೊರಟಿತು. ಅಡಿಗೆಮಾಡಿ ಊಟಮಾಡಿಕೊಂಡು ಬಂದವರು ಅಲ್ಲಿಯೇ ಉಳಿದುಕೊಂಡರು. ಅಲ್ಲಿಂದ ಮುಂದಕ್ಕೆ ಮೊಂಬಾಸರೇವೆಯು ತರುವಾಯ ಜಾಂಜಿಬಾರು ರೇವೆಯಲ್ಲಿ ಹಡಗು ನಿಂತಿತು. ಜಾಂಜಿಬಾರಿನಲ್ಲಿ 10 ದಿವಸ ಕಳೆದಿತು. ಅಲ್ಲಿ ಮತ್ತೊಂದು ಹಡಗಿಗೆ ಬದಲಾಯಿಸಿಕೊಂಡೆವು.

ಕ್ಯಾಪ್ಟನ್ನಿಗೆ ನನ್ನಮೇಲೆ ಬಹಳ ದಯೆಯಿದ್ದಿತಾದರೂ ಅದರಿಂದ ವಿಪರೀತಫಲವುಂಟಾಯಿತು. ವಿಲಾಸಾರ್ಥವಾಗಿ ಹೊರಕ್ಕೆ ಹೋಗುವ ಬಾ ಎಂದು ನಮ್ಮನ್ನು ಒಬ್ಬ ಆಂಗ್ಲೇಯ ಕ್ಯಾಪ್ಟನ್ನು ಕರೆದನು. ಅದೇತಕ್ಕೋ ನನಗೆ ತಿಳಿಯದು. ನನ್ನ ಸಂಗತಿ ಅವನಿಗೆ ತಿಳಿಯದು. ಒಬ್ಬ ನೀಗ್ರೊ ಸ್ತ್ರೀಯಳಮನೆಗೆ ನಮ್ಮನ್ನು ಕರೆದುಕೊಂಡುಹೋದನು. ನಾವು ಮೂವರಿಗೂ ಮೂರು ಕೊಠಡಿಗಳನ್ನು ತೋರಿಸಿದರು. ಅಲ್ಲಿ ನಾನು ನಾಚುಗೆಯಿಂದ ಬಾಯಿಬಿಡದೆ ಸ್ತಂಭೀಭೂತನಾಗಿ ನಿಂತುಕೊಂಡೆನು. ಆ ಸ್ತ್ರೀಯು ನನ್ನನ್ನು ನೋಡಿ ಏನೆಂದುಕೊಂಡಳೋ ದೇವರಿಗೇ ವೇದ್ಯವು. ಕ್ಯಾಪ್ಟನ್ನು ಕೂಗಲಾಗಿ ಬದುಕಿಕೊಂಡೆ ದೇವರೆ! ಎಂದು ಹೊರಗೆ ಬಂದೆನು. ನಾನು ಆ ವ್ಯಭಿಚಾರಿಣಿಯಲ್ಲಿ ರಮಿಸಲಿಲ್ಲವೆಂದು ಕ್ಯಾಪ್ಟನ್ನು ತಿಳಿದುಕೊಂಡನು. ಮೊದಲು ನನಗೆ ಕೊಂಚ ಲಜ್ಜೆ ಹುಟ್ಟಿದ್ದಿತಾದರೂ ತರುವಾಯ ಧೈರ್ಯ ಹುಟ್ಟಿತು. ಏಕಾಂತಸ್ಥಳದಲ್ಲಿ ಆ ಸ್ತ್ರೀಬಳಿ ಇದ್ದಾಗಲೆಕೂಡ ನಿರ್ಮಲಮನಸ್ಸನ್ನು ಕೊಟ್ಟದ್ದುದಕ್ಕಾಗಿ ದೇವರನ್ನು ಭಕ್ತಿಯಿಂದ ಧ್ಯಾನಿಸಿದೆನು. ಆ ಕೊಠಡಿಯೊಳಕ್ಕೆ ನಾನು ಬರುವುದಿಲ್ಲವೆಂದು ಹೇಳಲು ಧೈರ್ಯಸಾಲದೆಹೋದುದಕ್ಕಾಗಿ ನನಗೆ ವ್ಯಸನವಾಗುತ್ತದೆ. ನನ್ನ ಜೀವಿತದಲ್ಲಿ ಇದು ವ್ಯಭಿಚಾರ ವಿಷಯವಾಗಿ ಮೂರನೆಯ ಪರೀಕ್ಷೆಯು. ಅನೇಕ ಯುವಜನರು ಸದ್ವೃತ್ತನಿಂದಿದ್ದರೂ ಇಂತಹ ಸಂದರ್ಭದಲ್ಲಿ ಪತಿತರಾಗಿದ್ದರೆ, ಆ ಸ್ತ್ರೀಯರು ತಮ್ಮನ್ನು ನಪುಂಸಕರೆಂದು ಭಾವಿಸಿ ಪರಿಹಾಸಮಾಡುವರೆಂಬ ಭೀತಿಯಿಂದ ತಮ್ಮ ನಿಯಮವನ್ನು ಬಿಟ್ಟು ಅವರೊಡನೆ ಸಂಭೋಗಿಸುವರೆಂದು ನಾನು ಭಾವಿಸಿದೆನು. ಇದರಲ್ಲಿ ನನ್ನ ಬುದ್ಧಿವಂತಿಕೆಯೇನೂ ಇಲ್ಲವು. ದಯಾಮಯನಾದ ಭಗವಂತನೇ ನನಗಂತಹ ಶಕ್ತಿಯನ್ನು ಕೊಟ್ಟು ಕಾಪಾಡಿದನು. ಆದರಿಂದ ನನಗೆ ಭಗವಂತನಲ್ಲಿ ವಿಶ್ವಾಸವು ಅಧಿಕವಾಯಿತು. ಜಾಂಜಿಬಾರಿನಲ್ಲಿ ಒಂದು ವಾರ ನಿಲ್ಲಬೇಕಾಗಿಬಂದುದರಿಂದ ನಾನು ವ್ಯಭಿಚಾರಿಣಿಯ ಮನೆಗೆ ಕರೆದುಕೊಂಡುಹೋಗಲ್ಪಟ್ಟಿದ್ದುದು. ಆ ಸುತ್ತಲಪ್ರದೇಶವನ್ನೂ ತಿರುಗಿನೋಡಿದೆನು. ಜಾಂಜಿಬಾರಿನಲ್ಲಿರುವ ವೃಕ್ಷಜಾತಿಯು ಮಲೆಯಾಳದ ವಿನಾ ಬೇರೆಯೆಲ್ಲೂ ಕಂಡುಬರುವುದಿಲ್ಲ. ಆ ದೊಡ್ಡದೊಡ್ಡ ಮರಗಳನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಅಲ್ಲಿ ಹಣ್ಣುಗಳು ಕೂಡ ಬಹಳ ದೊಡ್ಡವು. ಅಲ್ಲಿಂದ ಮುಂದಕ್ಕೆ ಮೊಜಾಂಬಿಗೆ ಹೋದೆವು. ಮೇ ತಿಂಗಳ ಅಂತ್ಯದಲ್ಲಿ ನೆಟಾಲನ್ನು ಸೇರಿದೆವು.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ

ಬೆಂಗಳೂರು.

ಲಗ್ನ ಮೊದಲಾದಕಾರ್ಯಗಳಲ್ಲಿ ಫಂಡಿಗೆ ಬಂದಿರತಕ್ಕ ಹಣದತಪಸೀಲು —

ಮ|| ಗಳಾದ 1. ಮಾಗಡಿ ತಾ|| ಹರ್ತಿಗ್ರಾಮದ ಪಟೇಲ್ ಹೊನ್ನಸಿದ್ಧಯ್ಯನವರ ಲಗ್ನದಲ್ಲಿ ವರನಕಡೆಯಿಂದ 3 ರೂ. ವಧುವಿನಕಡೆಯಿಂದ 2 ರೂ. ತಾವರೆಕೆರೆ ಶೇಕದಾರ್ ಪ್ರಭುವಾರಾಧ್ಯರ ಮೂಲಕ ಒಟ್ಟು 5 ರೂ. 2. ಕಾನಕಾನಹಳ್ಳಿ ತಾ|| ಕೋಡಿಹಳ್ಳಿ ಪುಟ್ಟಣ್ಣನವರ ಮಗಳ ಲಗ್ನದಲ್ಲಿ ವಧೂವರರಿಂದ 3 ರೂ. ಮತ್ತು ನೀಲಕಂಠಪ್ಪನವರ ಮಗನ ಲಗ್ನದಲ್ಲಿ ವಧೂವರರಿಂದ 3 ರೂ. ರೇವಣ್ಣಶೆಟ್ಟರ ಮೂಲಕ ಒಟ್ಟು 6 ರೂ. 3. ಬೆಂಗಳೂರುದಂಡಿನಲ್ಲಿರುವ ಆರಳೇರಿ ಗ್ರಂಧಿಗೆ ಅಂಗಡಿ ವಿಷಕಂಠಪ್ಪನವರ ಮಗ ನಂಜುಂಡಪ್ಪನಿಗೂ ವಡಗೇನಹಳ್ಳಿ ಶೆಟ್ಟರ ಮರಿಯಪ್ಪನವರ ಕುಮಾರ್ತಿ ಶಾರದಮ್ಮನಿಗೂ ನಡೆದ ವಿವಾಹದಲ್ಲಿ ವಧೂವರರಿಂದ ಊದುಬತ್ತಿ ಷಾಪು ಯಸ್. ಕಳ್ಳಪ್ಪನವರ ಮೂಲಕ 6 ರೂ. 4. ಕುಣಿಗಲ್ ತಾ|| ನಿಡಸಾಲೆ ಕಪನಪ್ಪನವರ ನಂಜುಂಡಪ್ಪನವರ ಮಗ ಕಪನಶೆಟ್ಟಿಯ ಲಗ್ನದಲ್ಲಿ ವರನಕಡೆ ನಂಜುಂಡಪ್ಪನವರಿಂದ 3 ರೂ. ವಧುವಿನ ತಂದೆ ದಬ್ಬೆಗಟ್ಟದ ಬಸಪ್ಪನವರಿಂದ 2 ರೂ. ಹುಲಿಯೂರುದುರ್ಗದ ಹುಚ್ಚಪ್ಪದೇವರ ಮೂಲಕ 5 ರೂ. 5. ಗುಬ್ಬಿ ತಾ|| ದೊಡ್ಡಗುಣಿ ಶೆ|| ಬಸಪ್ಪನವರ ಮಗ ಸಿದ್ಧಪ್ಪನಿಗೂ ಶೆಟ್ಟಿಹಳ್ಳಿ ಬವರಪ್ಪನವರ ಮಗಳು ಸಿದ್ಧಬಸಮ್ಮನಿಗೂ ದೊಡ್ಡಗುಣಿಯಲ್ಲಿ ನಡೆಸಿದ ಲಗ್ನದಲ್ಲಿ ವಧೂವರರಿಂದ ಮೂಗನಾಯಕನ ಕೋಟೆ ಉಪ್ಪಣ್ಣಸೆಟ್ಟರ ಮೂಲಕ 2 ರೂ. 6. ಕುಣಿಗಲ್ ತಾ|| ಕೋಡಿಹಳ್ಳಿ ಪಟೇಲ್ ಕಾಳರಾಮೇಗೌಡರಿಂದ ತಮ್ಮ ಊರಿನಲ್ಲಿ ನಡೆದ ಲಗ್ನದ ಬಾಬತು 5 ರೂ. 7. ಶಿರಾಳಕೊಪ್ಪದ ತುರುಕಪ್ಲೆ ಚನ್ನವೀರಪ್ಪನವರಿಗೂ ಚಿಕ್ಕೇರಿ ಊರುವಾಸಿ ಸಂಗೂರು ಜಂಭಪ್ಪನವರ ಮಗಳಿಗೂ ನಡೆದ ಲಗ್ನದಲ್ಲಿ ಸುರಂಜಿ ಜನರಲ್‌ಮರ್ಚೆಂಟ್ ಅಂಡ್ ಕಮಿಷನ್ ಏಜಂಟ್ ಸಿದ್ದಪ್ಪ ಅಂಡ್‌ಸನ್ ರವರ ಮೂಲಕ 2-14-0 ರೂ. 8. ಕುಣಿಗಲ್ ತಾ|| ಕೊತ್ತಗೆರೆ ಬೆಳ್ಳಾವಿ ಹುಚ್ಚವೀರಪ್ಪನವರ ಮೊಮ್ಮಗ ಚನ್ನಬಸಪ್ಪನವರ ಲಗ್ನದಲ್ಲಿ ವಧೂವರರಿಂದ ಚಿಕ್ಕನಾಯಕನಹಳ್ಳಿ ಯಜಮಾನ್ ಸಿದ್ಧಪ್ಪನವರ ಮೂಲಕ 5 ರೂ. 9. ಬೆಂಗಳೂರು ಮಾಮೂಲ್‌ಪೇಟೆ ಟಿ|| ಅಪ್ಪಾಜಪ್ಪನವರ ಗುಮಾಸ್ತೆ ಬಿ|| ರುದ್ರಪ್ಪನವರ ಕುಮಾರ ವೀರಪ್ಪನ ಲಗ್ನದಲ್ಲಿ ತಾಳಕುಂಟೆ ಜಿ. ಆರ್. ನಂಜಪ್ಪನವರ ಮೂಲಕ 1 ರೂ. 10. ಬೆಂಗಳೂರು ಸುಲ್ತಾನ್‌ಪೇಟೆ ಹೋಟಲ್ ಮೈಸೂರು ಚನ್ನಪ್ಪನವರ ಲಗ್ನದಲ್ಲಿ ಶ್ರೀಮದ್ಧಂತಿನಮಠದ ಶಿವಯ್ಯಶಾಸ್ತ್ರಿಗಳ ಮೂಲಕ 2 ರೂ. 11. ಕೃಷ್ಣರಾಜಪೇಟೆ ಬಾ|| ಗಂಗಾಧರಶೆಟ್ಟರ ಮಗ ಹೊನ್ನಯ್ಯನವರ ತಂಗಿ ಸೌ|| ಹೊನ್ನಮ್ಮನಿಗೂ ತುರುವೆಕೆರೆ ಸಬ್ ತಾ|| ಮಾಯಸಂದ್ರದ ಸಮ್ಮತು ಮಲ್ಲೀನಹಳ್ಳಿ ಹುಚ್ಚಣ್ಣನವರ ಮಗ ಕರಿಬಸಯ್ಯನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 4 ರೂ. 12. ಮಾಗಡಿ ಗುರುಸಿದ್ಧಾರಾಧ್ಯರ ಮಗ ಮುರುಘಾರಾಧ್ಯನಿಗೂ ಸೋಲೂರು ಸೆಟ್ಟರು ಶಾಂತಪ್ಪನವರ ಮಗಳು ಸೌ|| ಸರ್ವಮಂಗಳಮ್ಮನಿಗೂ ನಡೆದ ಲಗ್ನದಲ್ಲಿ ಯಜಮಾನ್ ನಂಜುಂಡಪ್ಪನವರು ಮತ್ತು ಗುರುನಂಜಶೆಟ್ಟರು ಇವರುಗಳ ಮೂಲಕ 5 ರೂ. 13. ಚಾಮರಾಜನಗರದ ಶ್ರೀ ವರ್ತಕವರ್ಧಿನೀ ಬ್ಯಾಂಕ್ ಏಜಂಟರಾಗಿದ್ದ ಕೈ|| ಗುರುನಂಜಪ್ಪನವರು ಕಟ್ಟಿಸಿದ ಧರ್ಮಸತ್ರದ ಪ್ರವೇಶೋತ್ಸವದಲ್ಲಿ ಡಿಟೋ ಬ್ಯಾಂಕ್ ಏಜಂಟರಾಗಿರುವ ಪುಟ್ಟವೀರಪ್ಪನವರಿಂದ ಮೈಸೂರು ವೈ. ವಿರೂಪಾಕ್ಷಯ್ಯನವರ ಮೂಲಕ 5 ರೂ. 14. ಬೆಂಗಳೂರು ಚಿಕ್ಕಪೇಟೆ ಅಪ್ಪಣ್ಣಪ್ಪನವರ ಮಲ್ಲಶೆಟ್ಟಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ದೇಶದ ಶೆಟ್ಟರು ಸಿದ್ಧಬಸಪ್ಪಶೆಟ್ಟರ ಮೂಲಕ 5 ರೂ. 15. ಕಾನಕಾನಹಳ್ಳಿ ಪರ್ವತಪ್ಪನವರ ಮಗ ವೀರಭದ್ರಪ್ಪನಿಗೂ ಮಾಗಡಿ ರೇವಣ್ಣನವರ ಮಗಳಿಗೂ ನಡೆದ ಲಗ್ನದಲ್ಲಿ ವಧೂವರರಿಂದ ಪರಶಿವಯ್ಯನವರ ಮೂಲಕ 3 ರೂ. ಒಟ್ಟು 61-14-0 ರೂ.

ಜಿ. ಪರಮಶಿವಯ್ಯ, ಸೆಕ್ರೆಟರಿ,
ವೈ. ವೀ. ವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು.

ಮೈಸೂರುದೇಶದ ಬಡವೀರಶೈವವಿದ್ಯಾರ್ಥಿಗಳಿಗೆ ಸೂಚನೆ.

ದಾವಣಗೆರೆ ವೀರಶೈವವಿದ್ಯಾವರ್ಧಕಫಂಡ್‌ಸಂಘದಿಂದ ಸ್ಕಾಲರ್‌ಷಿಪ್ ಪಡೆಯಲಪೇಕ್ಷೆಯುಳ್ಳ ಲಾ ಕಾಲೇಜ್, ಬಿ.ಎ., ಎಂಟ್ರನ್ಸ್, ಟೆಕ್ನಿಕಲ್ ವಿದ್ಯಾರ್ಥಿಗಳು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ವಾಸಸ್ಥರಾಗಿ ಹೈಸ್ಕೂಲಿನಲ್ಲಿ ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳು ಮತ್ತು ದಾವಣಗೆರೆ ವಾಸಸ್ಥರಾಗಿ ಮಿಡಲ್‌ಸ್ಕೂಲಿನಲ್ಲಿ ಅಭ್ಯಾಸಮಾಡಿರುವ ವಿದ್ಯಾರ್ಥಿಗಳು ಸಹ ಈ ಸಂಘದ ಪ್ರಿಂಟ್ ಫಾರಂನಲ್ಲಿ ಕೆಳಗೆ ನಮೂದಿರುವ ಕಾಲಗಳೊಳಗಾಗಿ ಅಪ್ಲಿಕೇಷನ್‌ಗಳನ್ನು ಹಾಕಿಕೊಳ್ಳತಕ್ಕದ್ದು.

ಷರಾ.

I. (a) ಲಾ ಕಾಲೇಜ್, ಟೆಕ್ನಿಕಲ್, ಹೈಸ್ಕೂಲ್ ಮತ್ತು ಮಿಡಲ್‌ಸ್ಕೂಲಿನ ವಿದ್ಯಾರ್ಥಿಗಳು ಆಗಸ್ಟ್ 30 ನೆ ತಾರೀಖಿನೊಳಗಾಗಿಯು, (b) ಎಂಟ್ರನ್ಸ್ ತರಗತಿ ವಿದ್ಯಾರ್ಥಿಗಳು ಸೆಪ್ಟಂಬರ್ 10 ನೆ ತಾರೀಖಿನೊಳಗಾಗಿಯು (c) ಬಿ.ಎ. ತರಗತಿ ವಿದ್ಯಾರ್ಥಿಗಳು ಸೆಪ್ಟಂಬರ್ 25 ನೆ ತಾರೀಖಿನೊಳಗಾಗಿಯು ಹಾಕಿಕೊಳ್ಳತಕ್ಕದ್ದು.

II. ಅಪ್ಲಿಕೇಷನ್ ಫಾರಂ ಅಪೇಕ್ಷಿಸತಕ್ಕವರು ಪೋಸ್ಟ್ ಖರ್ಚಿಗಾಗಿ ಅರ್ಧಆಣೆ ಸ್ಟಾಂಪು ಕಳುಹಿಸುವದು.

III. ವಾಯಿದೆ ಮೀರಿ ಬರುವ ಅಪ್ಲಿಕೇಷನ್‌ಗಳು ಅಂಗೀಕರಿಸಲ್ಪಡುವದಿಲ್ಲ.

IV. ಮೀಟಿಂಗಿನಲ್ಲಿ ಸ್ಕಾಲರ್‌ಷಿಪ್ ವ್ಯವಸ್ಥೆಯಾದಬಳಿಕ ಮುಂದೆ ಬರುವ ಅರ್ಜಿ ವಗೈರೆಗೆ ನಿಗಾ ಕೊಡುವದಿಲ್ಲ.

V. ಅಪ್ಲಿಕೇಷನ್ನಿನಲ್ಲಿ ನಮೂದಿರುವ ಪ್ರತಿಯೊಂದು ಐಟಂ ವಿಶದವಾಗಿ ಭರ್ತಿಮಾಡಲ್ಪಟ್ಟಿರಬೇಕು, ಹಾಗಿಲ್ಲದ ಭಾಗದಲ್ಲಿ ಖಂಡಿತವಾಗಿಯು ನಿಗಾ ಕೊಡಲಾಗುವದಿಲ್ಲ.

VI. ಈ ಫಂಡಿಗೆ ಬರೆದುಕೊಳ್ಳುವ ಅಡ್ರೆಸ್.—ದಾವಣಗೆರೆ ವೀ ಶೈವವಿದ್ಯಾವರ್ಧಕಫಂಡ್ ಸಂಘದ ಪ್ರೆಸಿಡೆಂಟರವರ ಆಫೀಸಿಗೆ ಎಂತ ಬ ಯಬೇಕೆ ಹೊರತು ಹೆಸರು ನಮೂದಿಸಕೂಡದು.

ತಿರಕಪ್ಪನವರ ಮಠದ ಷಡಾಕ್ಷರಪ್ಪ
President.
D. V. V. F. Sangha, Davangere.

ಅಖಿಲಭಾರತವೀರಶೈವಮಹಾಸಭಾ ಚಿರಸ್ಥಾಯಿಫಂಡು.

ನೋಟೀಸ್.

1926 ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಯಾವದಾದರೂ ಒಂದು ಮುಖ್ಯವಾದ ಸ್ಥಳದಲ್ಲಿ ಶ್ರೀಮದ್ವೀರಶೈವಮಹಾಸಭೆಯನ್ನು ಕೂಡಿಸಲು ಅಪೇಕ್ಷಿಸುವ ವೀರಶೈವಪ್ರಮುಖರು ಸ್ಥಳದ ಜನರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮಹಾಸಭೆಯನ್ನು ನಡೆಯಿಸಲು ಉದ್ಯುಕ್ತಪಡುವದಾದರೆ ಅಖಿಲಭಾರತವೀರಶೈವಚಿರಸ್ಥಾಯಿಫಂಡಿನಿಂದ ಅದರ ನಿಬಂಧನೆಗಳಿಗೆ ಒಳಪಟ್ಟು ಸೂಕ್ತವಾದ ದ್ರವ್ಯಸಹಾಯವನ್ನು ಮಾಡುವದಾಗುತ್ತದೆ. ಮಹಾಸಭಾನಡೆಯಿಸಬೇಕೆಂದಿರುವ ಮಹನೀಯರು ಕಾಲವಿಳಂಬಮಾಡದೆ ಮೇಲ್ಕಂಡ ಕ್ರಮವರಿತು ಅರ್ಜಿಯನ್ನು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ದಯೆಯಿಟ್ಟು ಕಳುಹಿಸಿಕೊಡಬೇಕೆಂದು ಇದರಿಂದ ಸಮಸ್ತ ವೀರಶೈವರಿಗೂ ತಿಳಿಸಿರುತ್ತದೆ.

ರಾಜಸಭಾಭೂಷಣ ದಿವಾನ್‌ಬಹದ್ದೂರ್
ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸಿ.ಐ.ಇ.,
ಛೇರ್‌ಮನ್,
ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡ್,
ತಾ|| 24-7-26. ಬೆಂಗಳೂರುಸಿಟಿ.

ಕೈ|| ಕಬ್ಬಹಳ್ಳಿ ಚೆನ್ನಬಸಪ್ಪನವರ ಸ್ಮಾರಕ.

50-60 ಸಾವಿರ ರೂಪಾಯಿಗಳ ವೆಚ್ಚದಿಂದ ರಾಜಧಾನಿಯಲ್ಲಿ ವೀರಶೈವವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ಆಶ್ರಮವನ್ನು ಏರ್ಪಡಿಸಿ ಸಮಾಜಕ್ಕೆ ಮಹೋಪಕಾರವನ್ನು ಮಾಡಿರುವ ಕೈ|| ಕೆ. ಚೆನ್ನಬಸಪ್ಪನವರ ಸ್ಮರಣಾರ್ಥವಾಗಿ ಅವರ ಭಾವಚಿತ್ರವನ್ನು ಎಣ್ಣೆಬಣ್ಣದಲ್ಲಿ ಬರೆಯಿಸಿ ಅವರಾಶ್ರಮದಲ್ಲಿ ಕಟ್ಟಬೇಕೆಂದು ನಿರ್ಧರಿಸಿ ಅದಕ್ಕಾಗಿ ಚಂದಾದ್ರವ್ಯವನ್ನು ಕೊಟ್ಟಿರುವ ಮತ್ತು ಕೊಡಲೊಪ್ಪಿರುವ ಸಮಾಜಬಾಂಧವರ ಹೆಸರುಗಳನ್ನು ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಈ ಭಾವಚಿತ್ರವನ್ನು ಬರೆಯಲು ಬೆಂಗಳೂರಿನಲ್ಲಿ ಪ್ರಸಿದ್ಧರಾದ ಬಾರ್ಟನ್ ಕಂಪೆನಿಯವರಿಗೆ ವಹಿಸಿದೆ. ಅದು ಇನ್ನು 4-5 ವಾರಗಳಲ್ಲಿ ಸಿದ್ಧವಾಗುವುದು. ಅದರ ಆರಂಭೋತ್ಸವವು ಬರುವ ದಸರಾಮಹೋತ್ಸವಕಾಲದಲ್ಲಿ ನಡೆಸಲ್ಪಡಬೇಕಾಗಿರುವುದರಿಂದ ಚಂದಾವಾಗ್ದಾನಮಾಡಿರುವ ದೊಡ್ಡಮನುಷ್ಯರುಗಳು ಕೂಡಲೆ ಹಣವನ್ನು ದಯೆಯಿಟ್ಟು ಕಳುಹಿಸಿಕೊಡಬೇಕೆಂದೂ, ಈವರೆಗೆ ಕೊಡದೆ ಮತ್ತು ವಾಗ್ದಾನಮಾಡದೆ ಇರುವ ಸಮಾಜಬಾಂಧವರು ಯಥೋಚಿತವಾಗಿ ದ್ರವ್ಯಸಹಾಯಮಾಡಿ ಕೈಕೊಂಡಿರುವ ಸ್ಮಾರಕಕಾರ್ಯವು ನಿರ್ವಿಘ್ನವಾಗಿಯೂ ಪ್ರಶಸ್ತವಾಗಿಯೂ ನಡೆಯುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಇದಕ್ಕಾಗಿ ಫ್ರೆಂಚ್‌ರಾಕ್ಸ್ ಸ್ಪೆಷಲ್‌ಮೇಜಿಸ್ಟ್ರೇಟ್ ಮ|| ಜಿ. ಮಲ್ಲಿಕಾರ್ಜುನಯ್ಯ, ಬಿ.ಎ., ಯವರಿಂದ 10 ರೂ. ಬಂದಿದೆ.

ತಮ್ಮ ವಿಧೇಯ,
ಜಿ. ಪರಮಶಿವಯ್ಯ, ಅಡ್ವೋಕೇಟ್,
ಬೆಂಗಳೂರು ಸಿಟಿ.

೧೯೨೬ ನೆಯ ಇಸವಿ ಅಗಸ್ಟ್ ತಾ|| ೨೧ ರಿಂದ ೧೯೨೬ನೆಯ ಇಸವಿ ಅಗಸ್ಟ್ ತಾ|| ೨೭ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಶ್ರಾವಣ ಶುದ್ಧ ತ್ರಯೋದಶಿಯಿಂದ ಶ್ರಾವಣ ಬಹುಳ ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂ ಮಾ
21	[1]ಶನಿ	ತ್ರಯೋ	41-26	ಉಷಾ	38-41	5
22	[2]ಭಾನು	ಚತು	35-55	ಶ್ರವ	35-7	6
23	[3]ಸೋಮ	ಪೌರ್ಣ	29-57	ಧನಿ	31-4	7
24	[4]ಮಂಗಳ	ಪಾಡ್ಯ	23-56	ಶತ	26-55	8
25	ಬುಧ	ಬಿದಿ	17-37	ಪೂಭಾ	22-43	9
26	ಗುರು	ತದಿ	11-40	ಉಭಾ	18-41	10
27	[5]ಶುಕ್ರ	ಚೌತಿ	6-6	ರೇವ	15-10	11

(1) ಶನಿಪ್ರದೋಷ, ಶ್ರಾವಣಶನಿವಾರ. (2) ಋಗುಪಾಕರ್ಮ. (3) ಯಜುರುಪಾಕರ್ಮ, ಮಳೆನಕ್ಷತ್ರ-ಮಘಾ ೩ ನೆಯಪಾದ. (4) ಮಂಗಳಗೌರೀವ್ರತಂ. (5) ಮಳೆನಕ್ಷತ್ರ-ಮಘಾ, ೪ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.
REGISTERED NO. M. 124.

ಮೈಸೂರು ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತಮೋಹರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾ ಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಶಿಯಂಸದಾಪೂರಿಗೆ ಗೌರೀಶಾಸುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಅಗಸ್ಟ್ ತಾರೀಖು ೨೮ ನೆಯ ಶನಿವಾರ. [ಸಂಚಿಕೆ ೩೫

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಕ್ಷಯಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
33

ಗರ್ಭಿಣೀಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನಿ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರ್ಯಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—11] ಶಿವಾನುಭವ ಆಫೀಸು ವಿಜಾಪುರ

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
ಪರಿಹಾಸ	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦
[illegible]	೦—೮—೦	೦—೧೩—೦
[illegible]	೧—೩—೦	೧—೬—೦
[illegible]		
[illegible]	೧—೦—೦	೧—೬—೦

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ
ಕ್ಷೀಣರಾಗ
ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ
ಕ್ಷೀಣತೆ ಕಾಯ್ದು
ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಆದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ- ಶತಪುಷ್ಪ, ತಾಲಿಮಕಂದ, ಮಧುಕಂದ, ಜಟಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮುರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಬೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮುಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಕಮಾಸದವರೆಗೆ ಕಡಿಮೆ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—6] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕೆಂಡಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಟ್ಟಣ ಕಳುಹಿಸಬಾರದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—45] ಪೋ. ಬಾ. ೫೧. ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO., BENARES CITY.

ನಮ್ಮಲ್ಲಿ ಜರತಾರಿ ರೇಶ್ಮೆ ದೋಗಟಿ, ಜರಿ ಸಾದಾ ಶಾಲೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, [illegible], ಪಾತ್ರೆಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇದೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ [illegible]. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಉಚಿತವಾಗಿ ಕಳುಹಿಸಲಾಗುವುದು.

ವಿಳಾಸ— [illegible]

ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಆಗಸ್ಟ್ ತಾ|| ೨೮ ನೆಯ ಶನಿವಾರ.

ನಂಜನಗೂಡು-ಚಾಮರಾಜನಗರದ ರೈಲ್ವೆ.

ಈ ರೈಲ್ವೆಯ ಆರಂಭೋತ್ಸವವು ನೆನ್ನೆಯ ಮಧ್ಯಾಹ್ನ 4½ ಗಂಟೆಯಲ್ಲಿ ಶ್ರೀಮತ್ ಮಹಾರಾಜರವರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟಿತು. ರಾಣಿಯವಾಸದವರು, ದಿವಾನರಾದಿಯಾಗಿ ಸರ್ಕಾರಿಯಧಿಕಾರಿಗಳೂ, ಡಿ|| ಬೋರ್ಡು ಮೆಂಬರುಗಳು, ಲಾಯರು ವರ್ತಕರಾದಿಯಾಗಿ ಅನೇಕ ಜನರು ಬಂದಿದ್ದರು. ಚಾಮರಾಜನಗರವಾಸಿಗಳೂ, ಮೈಸೂರು ಡಿ|| ಬೋರ್ಡಿನವರೂ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಗಳೂ ಅವುಗಳಿಗೆ ಉತ್ತರವಾಗಿ ಶ್ರೀಮತ್ ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣವೂ ಈ ಪತ್ರಿಕೆಯ ಮತ್ತೊಂದು ಕಡೆಯಲ್ಲಿ ಪ್ರಕಟಿಸಲ್ಪಟ್ಟಿವೆ. ಪ್ರಭುಗಳ ಮತ್ತು ಆ ತಾಲ್ಲೋಕು ಪ್ರಜೆಗಳ ಇಷ್ಟಪ್ರಕಾರ ಈ ನೂತನ ಲೋಹಮಾರ್ಗವು ಏರ್ಪಟ್ಟು ಕಾರ್ಯಮುಖವಾಗಿರುವುದು ಸಂತೋಷಪ್ರದವಾಗಿದೆ. ಈ ಲೋಹಮಾರ್ಗವು ನಂಜನಗೂಡಿನಿಂದ 22 ಮೈಲಿವರೆಗೆ ಮಾತ್ರ ಹಾಕಲ್ಪಟ್ಟಿರುವುದರಿಂದ ಸದ್ಯದಲ್ಲಿ ಇದರಿಂದ ಅಷ್ಟು ಪ್ರಯೋಜನವಾಗುವುದಿಲ್ಲವಾದರೂ ಉತ್ತರೋತ್ತರ ಇರೋಡಿಗೆ ಸಂಬಂಧಿಸಲ್ಪಟ್ಟಲ್ಲಿ ಬೊಂಬಾಯಿನಗರದಿಂದ ಮೈಸೂರು ಮಾರ್ಗವಾಗಿ ಕೊಲಂಬೋವಿಗೆ ಜನರು ನೇರವಾಗಿ ಪ್ರಯಾಣ ಮಾಡಲೂ, ಪದಾರ್ಥಗಳು ಸಾಗಿಸಲ್ಪಡಲೂ ಅನುಕೂಲವಾಗಿ ತನ್ಮೂಲಕ ಈ ಲೋಹಮಾರ್ಗದ ಪ್ರಯೋಜನವು ಹೆಚ್ಚಿ ಸಂಸ್ಥಾನದ ಸಂಪದಭಿವೃದ್ಧಿಯಾಗಲು ಅವಕಾಶವಾಗುವುದರಲ್ಲಿ ಸಂದೇಹವಿಲ್ಲ. ಈ ಲೋಹಮಾರ್ಗದ ಉತ್ಪಾದಕರಾದ ಡಿ|| ಬೋರ್ಡಿನವರೂ ಪ್ರಭುತ್ವದವರೂ ನಮ್ಮ ಸೀಮೆಯ ಎಲ್ಲೆಕಟ್ಟಿನಿಂದ ಮುಂದಕ್ಕೆ ಲೋಹಮಾರ್ಗವನ್ನು ಹಾಕಿ ನಮ್ಮ ಲೋಹಮಾರ್ಗಕ್ಕೆ ಸಂಬಂಧಿಸುವಂತೆ ಮದ್ರಾಸು ಸರ್ಕಾರದವರೊಡನೆ ಪತ್ರವ್ಯವಹಾರವನ್ನು ನಡೆಯಿಸಿ ತಕ್ಕ ಪ್ರಯತ್ನವನ್ನು ಮಾಡಿ ತಮ್ಮ ಉದ್ದಿಷ್ಟಫಲ ಪ್ರಾಪ್ತವಾಗುವಂತೆ ಮಾಡುವವರಾಗಲೆಂದು ಸೂಚಿಸಿ ಹಿಡಿದ ಕಾರ್ಯವನ್ನು ಪೂರೈಸಿದ ಡಿ|| ಬೋರ್ಡಿನವರನ್ನೂ ಅವರಿಗೆ ಸಹಾಯಕರಾಗಿದ್ದ ರೈಲ್ವೆಯ ಶಾಖೆಯವರನ್ನೂ ನಾವು ಅಭಿನಂದಿಸುತ್ತೇವೆ, ಮತ್ತು ಈ ಡಿ|| ಬೋರ್ಡಿನವರ ಮೇಲುಪಂಕ್ತಿಯನ್ನು ಇತರ ಬೋರ್ಡಿನವರೂ ಅನುಸರಿಸಿ ಸಂಪದಭಿವೃದ್ಧಿಗೊಳಿಸಿಕೊಳ್ಳುವವರಾಗಲೆಂದು ಕೋರುತ್ತೇವೆ.

ಅಖಿಲಭಾರತೀಯ ವೀರಶೈವಮಹಾಸಭೆ.

1926ನೇ ಡಿಸೆಂಬರ್ ತಿಂಗಳಲ್ಲಿ ಯಾವುದಾದರೂ ಒಂದು ಮುಖ್ಯಸ್ಥಳದ ವೀರಶೈವರು ಮಹಾಸಭೆಯನ್ನು ನೆರೆಯಿಸಲು ಅಪೇಕ್ಷಿಸಿ ಪ್ರಯತ್ನಿಸುವುದಾದರೆ ವೀರಶೈವಮಹಾಸಭಾಚಿರಸ್ಥಾಯಿಫಂಡಿನಿಂದ ದ್ರವ್ಯಸಹಾಯವು ಮಾಡಲ್ಪಡುತ್ತದೆಂದು ಫಂಡಿನ ಅಧ್ಯಕ್ಷರು ಪ್ರಕಟಿಸಿರುವುದರಮೇಲೆ, ಹುಬ್ಬಳ್ಳಿಯ ವೀರಶೈವಮಹಾಜನರು ಕಳೆದ ತಾ|| 19 ರಲ್ಲಿ ಡಾಕ್ಟರ್ ಸಿ. ಎಸ್. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಬರುವ ಡಿಸೆಂಬರ್ ತಿಂಗಳಲ್ಲಿ ಮಹಾಸಭೆಯನ್ನು ಹುಬ್ಬಳ್ಳಿಯಲ್ಲಿ ನಡೆಯಿಸಬೇಕೆಂದೂ ಇದರ ವೆಚ್ಚಕ್ಕಾಗಿ ಚಿರಸ್ಥಾಯಿಫಂಡಿನವರಿಂದ ಮುಂಗಡವಾಗಿ ಹಣವನ್ನು ಕೇಳಬೇಕೆಂದೂ ನಿರ್ಧರಿಸಿ ಚಿರಸ್ಥಾಯಿಫಂಡಿನವರಿಗೆ ಬರೆದುಕೊಂಡಿರುವ ಲೇಖನವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿತವಾಗಿದೆ. ಹುಬ್ಬಳ್ಳಿಯ ವೀರಶೈವಬಂಧುಗಳು ದೊಡ್ಡವರ್ತಕರೂ, ಹಿಡಿದಕಾರ್ಯವನ್ನು ಸಾಧಿಸುವವರೂ, ಸಮಾಜಾಭಿಮಾನಿಗಳೂ ಆಗಿರುವುದರಿಂದ ಮಹಾಸಭಾಕಾರ್ಯವನ್ನು ಸರ್ವಾಂಗಸುಂದರವಾಗಿ ನಡೆಯಿಸುವರೆಂಬ ಭರವಸೆಯು ನಮಗೆ ಸಂಪೂರ್ಣವಾಗಿರುತ್ತದೆ. ಅದು ಕಾರಣ ಹುಬ್ಬಳ್ಳಿಯ ಸಮಾಜಬಂಧುಗಳು ಗತಪ್ರಾಣವಾಗಿರುವ ವೀರಶೈವಮಹಾಸಭೆಯನ್ನು ಪುನರುಜ್ಜೀವನಗೊಳಿಸಿ ಕೀರ್ತಿಗೂ ಪುಣ್ಯಕ್ಕೂ ಭಾಗಿಗಳಾಗಲೆಂದು ಕೋರುತ್ತೇವೆ.

ದಿವಂಗತರಾದ ವರ್ಧಮಾನಯ್ಯನವರು

ರಾಜಧಾನಿಯಲ್ಲಿ ಪ್ರಸಿದ್ಧ ಶ್ರೀಮಂತರೂ, ಶ್ರೀ ಕೃಷ್ಣರಾಜೇಂದ್ರಮಿಲ್ಲಿನ ಮ್ಯಾನೇಜಿಂಗ್ ಏಜಂಟರುಗಳಲ್ಲಿ ಪ್ರಮುಖರೂ ಆದ ಶ್ರೀಮಂತ ಎಂ. ಎಲ್. ವರ್ಧಮಾನಯ್ಯನವರು ಕಳೆದ 15-16 ತಿಂಗಳುಗಳಿಂದಲೂ ಕ್ಷಯರೋಗಗ್ರಸ್ತರಾಗಿದ್ದು ಪ್ರಸಿದ್ಧ ಡಾಕ್ಟರುಗಳಿಂದ ಚಿಕಿತ್ಸೆಹೊಂದಿದಾಗ್ಯೂ ಗುಣವನ್ನು ಹೊಂದದೆ ಕಳೆದ ಮಂಗಳವಾರ ಮಧ್ಯಾಹ್ನ 1 ಗಂಟೆಯ ಸಮಯದಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿಕೊಂಡು ದಿವಂಗತರಾದರೆಂಬ ಸುದ್ದಿಯನ್ನು ಬರೆಯುವುದಕ್ಕೆ ಅತಿಶಯವಾಗಿ ವಿಷಾದಿಸುತ್ತೇವೆ. ಇವರ ಮರಣವಾರ್ತೆಯನ್ನು ಕೇಳಿ ಅನೇಕ ಅಧಿಕಾರಿಗಳೂ, ಲಾಯರುಗಳೂ, ವರ್ತಕರುಗಳೂ ಅವರು ನಿಧನವಾದ ಸ್ಥಳಕ್ಕೆ ಹೋಗಿ ತಮ್ಮ ದುಃಖವನ್ನು ಪ್ರದರ್ಶಿಸಿ ಬಂದರು, ಮತ್ತು ಶ್ರೀಮತ್ ಮಹಾರಾಜರವರೂ, ಸಾವಿರಾರುಜನ ಮಿತ್ರರೂ ಶ್ರೀಮಂತರು ಬಹು ಚಿಕ್ಕವಯಸ್ಸಿನಲ್ಲೇ ವಿಧಿವಶರಾದುದಕ್ಕಾಗಿ ತಮ್ಮನುತಾಪವನ್ನೂ ನಿಯೋಗದುಃಖಕ್ಕೆ ಪಾತ್ರರಾದ ಅವರ ಕುಟುಂಬಕ್ಕೆ ಸಾನುಭೂತಿಯನ್ನೂ, ತಂತಿಯಮೂಲಕವೂ ಲೇಖಗಳ ಮೂಲಕವೂ ತಿಳಿಸಿದರು.

ಮ|| ವರ್ಧಮಾನಯ್ಯನವರು ರಾಜಧಾನಿಯ ಪ್ರಸಿದ್ಧ ಶ್ರೀಮಂತಮನೆತನದವರಾದ ಕೈ|| ಎಂ. ಲಕ್ಷ್ಮೀಪತಯ್ಯನವರ ಏಕಮಾತ್ರ ಪುತ್ರರಾಗಿದ್ದರು ಮತ್ತು ಅವರಿಗೆ 37 ವರ್ಷ ವಯಸ್ಸುಮಾತ್ರವಾಗಿದ್ದಿತು. ಇವರ 12 ನೆಯ ವಯಸ್ಸಿನಲ್ಲೇ ಇವರ ತಂದೆಯವರು ಪರಲೋಕವಾಸಿಗಳಾದರು. ವಿವೇಕಶಾಲಿನಿಯಾದ ತಾಯಿಯು ಹಾಕಿಕೊಟ್ಟ ಉತ್ತಮಮಾರ್ಗದಲ್ಲಿ ಇವರು ಬಾಲ್ಯದಿಂದಲೂ ನಡೆದು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡಿ ವಿಶ್ವವಿದ್ಯಾಲಯದಿಂದ ಪ್ರಶಸ್ತಿಯನ್ನು ಪಡೆಯದಿದ್ದಾಗ್ಯೂ ಮಿ|| ಡನ್ನಾಂರವರ ಶಿಕ್ಷಣದಿಂದ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಅರ್ಥವ್ಯವಹಾರವನ್ನು ಬಹು ವಿಚಕ್ಷಣೆಯಿಂದಲೂ ಜಾಗರೂಕತೆಯಿಂದಲೂ ನಡೆಯಿಸುತ್ತ ತಮ್ಮ ಪಿತ್ರಾರ್ಜಿತವಾದ ಐಶ್ವರ್ಯವನ್ನು ಬಹುಮಟ್ಟಿಗೆ ಅಭಿವೃದ್ಧಿಗೊಳಿಸಿದರು, ಮತ್ತು ತಾವು ಇನ್ನೂ ಬಾಲ್ಯವಯಸ್ಕರಾಗಿದ್ದರೂ ವಿದ್ಯೆಯ ಪ್ರಯೋಜನವನ್ನು ತಿಳಿದವರಾಗಿದ್ದುದರಿಂದ ವಿದ್ಯೆಯಲ್ಲಿ ಬಹು ಹಿಂದುಳಿದಿದ್ದ ತಮ್ಮ ಜೈನಸಮಾಜದವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಸಂಕಲ್ಪಿಸಿ ತಮ್ಮ ತಂದೆಯವರ ಸ್ಮರಣಾರ್ಥವಾಗಿ ರಾಜಧಾನಿಯಲ್ಲಿ ಕಟ್ಟಿಸಿರುವ ದೇವಾಲಯದ ಆವರಣದಲ್ಲಿ 1 ಲಕ್ಷ ರೂಪಾಯಿವರೆಗೂ ವೆಚ್ಚಮಾಡಿ ಜೈನವಿದ್ಯಾರ್ಥಿಗಳ ವಾಸಕ್ಕಾಗಿ ತಮ್ಮ ತಂದೆಯವರ ಹೆಸರಿನಮೇಲೆ ನಿಲಯವನ್ನು ಕಟ್ಟಿಸಿರುವರು. ಈ ನಿಲಯದಲ್ಲಿ ಈಗ 50 ರ ವರೆಗೆ ವಿದ್ಯಾರ್ಥಿಗಳಿರುತ್ತಾರೆ. ಇವರ ಊಟ ಉಪಚಾರಗಳಿಗೆ ಪ್ರತಿತಿಂಗಳಿನಲ್ಲೂ 500 ರೂ. ವರೆಗೂ ವೆಚ್ಚಮಾಡುತ್ತಿದ್ದರಲ್ಲದೆ, ಈ ನಿಲಯವೂ ದೇವರ ಸೇವೆಯೂ ಸಾರ್ವೋದ್ಧಾರವಾಗಿ ನಡೆದುಕೊಂಡು ಹೋಗಲು ಶಾಶ್ವತವಾದೇರ್ಪಾಟನ್ನು ಮಾಡಿರುವರು. ಇವರು ಲಕ್ಷಾಧೀಶ್ವರರಾಗಿಯೂ ಸರ್ವಸ್ವತಂತ್ರರಾಗಿಯೂ ಇದ್ದರೂ ಇತರರಂತೆ ಯಾವ ವಿಧವಾದ ದುರ್ವ್ಯಸನಕ್ಕೂ ಗುರಿಯಾಗದೆ ಮತ್ತು ಸ್ವಾರ್ಥಪರರಾಗಿರದೆ ನಿಜವಾದ ಜನೋಪಯುಕ್ತ ಕಾರ್ಯವನ್ನು ಮಾಡಬೇಕೆಂದು ಸಂಕಲ್ಪಿಸಿ ಸಮಯನಿರೀಕ್ಷಣೆಯಲ್ಲಿದ್ದರು. ರಾಜಧಾನಿಯಲ್ಲಿ ಜೀವನಕ್ಕೆ ಮಾರ್ಗವಿಲ್ಲದೆ ಕಷ್ಟಪಡುತ್ತಿರುವ ಸಾವಿರಾರು ಜನರಿಗೆ ಜೀವನವಾಗುವಂತಹ ಕೈಗಾರಿಕೆಯು ಸ್ಥಾಪಿತವಾಗಬೇಕೆಂಬ ಶ್ರೀಮತ್ ಮಹಾರಾಜರವರ ಮನೋಗತವನ್ನು ವರ್ಧಮಾನಯ್ಯನವರು ತಿಳಿದು ಶ್ರೀ ಕೃಷ್ಣರಾಜೇಂದ್ರಮಿಲ್ಲನ್ನು ಏರ್ಪಡಿಸಿ ಅದರ ಕಾರ್ಯಭಾರವನ್ನು ತಾವೇ ವಹಿಸಿಕೊಂಡು ನಡೆಯಿಸುತ್ತಿದ್ದರು. ಇದಲ್ಲದೆ ಒಂದು ಅಕ್ಕಿಯ ಮಿಲ್ಲನ್ನೂ, ಎವರ್‌ಫ್ಲೋರ್ ಪ್ರಾಡೆಕ್ಟ್ಸ್ ಎಂಬ ಸುಗಂಧದ್ರಾವಕವನ್ನಿಳಿಸುವ ಮತ್ತು ಕಲ್ಲಾರಿನ ಯಂತ್ರಾಲಯಗಳನ್ನು ಸ್ಥಾಪಿಸಿ ಮ|| ಬಿ. ಸೀತಾರಾಮಾಚಾರ್ಯರ ಸಹಾಯದಿಂದ ಕಷ್ಟಪಟ್ಟು ನಡೆಸುತ್ತಿದ್ದರು. ಸ್ವದೇಶೀಯರ ಪುರೋಭಿವೃದ್ಧಿಯಮೇಲಿನ ಅಭಿಮಾನದಿಂದ ತಾವು ಕೈಕೊಂಡಿರುವ ಕಾರ್ಯಗಳನ್ನು ನಿರ್ವಹಿಸಿ ಶ್ರೀಮತ್ ಮಹಾರಾಜರವರ ಮನೋಗತವನ್ನು ನೆರವೇರಿಸಬೇಕೆಂಬ ಸಂಕಲ್ಪದಿಂದ ತಿಂಗಳಿಗೆ ನಾಲ್ಕಾರುಸಾವಿರರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುವ ಅಧಿಕಾರಿಗಳು ಸಹ ಮಾಡಲಾರದಷ್ಟು ಕೆಲಸವನ್ನು ಮ|| ಬಿ. ಸೀತಾರಾಮಾಚಾರ್ಯರು ಮಿಲ್ಲಿನ ಸಂಬಂಧವಾಗಿ ಸೀಮೆಗೆ ಹೋಗಿರುವಾಗ್ಯೆ ನಿದ್ರಾಹಾರಗಳನ್ನೂ ಲೆಕ್ಕಿಸದೆ ರಾತ್ರಿಯಲ್ಲೂ 2-3 ಘಂಟೆಯವರೆಗೆ ಕೆಲಸಮಾಡುತ್ತಿದ್ದುದರಿಂದ ಅವರ ದೇಹಾರೋಗ್ಯವು ಕೆಟ್ಟುಹೋಗಿದ್ದಿತು. ಇದಲ್ಲದೆ ಕಳೆದವರ್ಷ ಶ್ರವಣಬೆಳಗೊಳದಲ್ಲಿ ಶ್ರೀ ಗೋಮಟೇಶ್ವರಸ್ವಾಮಿಯ ಮಹಾಮಸ್ತಕಾಭಿಷೇಕ ಪೂಜೆಯೂ ಜೈನಮಹಾಸಭೆಯೂ ನಡೆದಾಗ್ಯೆ ಮಹಾಕಾರ್ಯಗಳನ್ನು ಸರ್ವಾಂಗಸುಂದರವಾಗಿ ಮಾಡಬೇಕೆಂದು ಆಹಾರನಿದ್ರೆಗಳನ್ನು ಲಕ್ಷಿಸದೆ 1-2 ತಿಂಗಳವರೆಗೂ ಅವಿಶ್ರಾಂತಶ್ರಮಪಟ್ಟುದರಿಂದ ದೇಹಾರೋಗ್ಯವು ಸಂಪೂರ್ಣವಾಗಿ ಕೆಟ್ಟು ಕಡೆಗೆ ಮೃತ್ಯುವಿನ ಪಾಲಾದರು. ಅವರು ಆ ಕಾಲದಲ್ಲಿ ಅಷ್ಟು ಶ್ರಮವನ್ನೂ ಶ್ರದ್ಧೆಯನ್ನೂ ವಹಿಸದಿದ್ದಲ್ಲಿ ಶ್ರೀಮತ್ ಮಹಾರಾಜರವರ ಸ್ವಾರಿಯು ಅಲ್ಲಿಗೆ ಚಿತ್ತೈಸುತ್ತಿರಲಿಲ್ಲ ಮತ್ತು ಉತ್ಸವವೂ ಅಷ್ಟು ಅಭೂತಪೂರ್ವವಾದ ವಿಜೃಂಭಣೆಯಿಂದ ಜರುಗುತ್ತಿರಲಿಲ್ಲವೆಂದು ನಾವು ಹೇಳಬಲ್ಲೆವು. ಇವರ ಸಾಹಸ ಸಹಾನುಭೂತಿಗಳಿಂದ ಜೈನವಿದ್ಯಾವರ್ಧಕಫಂಡೇರ್ಪಟ್ಟು ಅದರಿಂದ 20-30 ಬಡವಿದ್ಯಾರ್ಥಿಗಳು ವೇತನಗಳನ್ನು ಪಡೆಯುತ್ತಿದ್ದಾರೆ. ಇವರ ವಿದ್ಯಾರ್ಥಿನಿಲಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ, ಆಚಾರನಿಷ್ಠನಾಗಿಯೂ, ಸನ್ಮಾರ್ಗಿಯಾಗಿಯೂ, ವಿಧೇಯನಾಗಿಯೂ ಇರುವುದಲ್ಲದೆ ಸ್ವಮತಗ್ರಂಥವನ್ನು ತಕ್ಕಮಟ್ಟಿಗಾದರೂ ವ್ಯಾಸಂಗಮಾಡಬೇಕೆಂಬ ನಿರ್ಬಂಧವು ಕಲ್ಪಿಸಲ್ಪಟ್ಟು ಅದಕ್ಕಾಗಿ ಒಬ್ಬ ಜೈನಶಾಸ್ತ್ರಿಗಳು ನಿಯಮಿಸಲ್ಪಟ್ಟಿರುತ್ತಾರೆ. ಈ ಏರ್ಪಾಟು ಬಹಳ ಸ್ತುತ್ಯವಾಗಿರುವುದಲ್ಲದೆ ಇತರ ವಿದ್ಯಾರ್ಥಿನಿಲಯಗಳಿಂದ ಅನುಕರಿಸಲ್ಪಡತಕ್ಕುದಾಗಿದೆ. ಇವರು ಬಹು ಅಲ್ಪಕಾಲ ಬಾಳಿದರಾದರೂ ಪುರುಷಜನ್ಮದ ಪುರುಷಾರ್ಥದಲ್ಲಿ ಉತ್ತಮಭಾಗವಾದ ಲೋಕಸೇವಾ ಕಾರ್ಯವನ್ನು ಮಾಡಿ ತಮ್ಮ ಜನ್ಮವನ್ನು ಧನ್ಯವನ್ನಾಗಿ ಮಾಡಿಕೊಂಡು ಅಜರಾಮರವಾದ ಯಶಃಕಾಯವನ್ನು ಭೂತಲದಲ್ಲಿಟ್ಟು ನಶ್ವರವಾದ ಭೌತಿಕಕಾಯವನ್ನುಳಿದರು. ಅವರಲ್ಲಿದ್ದ ಅಕುಟಿಲವಾದ ಧರ್ಮಶ್ರದ್ಧೆಯೂ, ಅಚಲವಾದ ಕಾರ್ಯತತ್ಪರತೆಯೂ, ನಿಶಿತವಾದ ದೇಶಭಕ್ತಿಯೂ, ಸ್ವಜನಾಭಿಮಾನವೂ ವರ್ಧಿಷ್ಣುಗಳಾದ ನಮ್ಮ ಯುವಜನರಲ್ಲಿ ಪ್ರತಿಫಲಿಸತಕ್ಕುವಾಗಿವೆ ಇಂತಹ ಸತ್ಪುತ್ರರತ್ನವನ್ನು ಕಳೆದುಕೊಂಡ ನಮ್ಮ ಸೀಮೆಯ ದುರದೃಷ್ಟವನ್ನು ಏನೆಂದು ಹೇಳೋಣ! ಇವರಿಗೆ ಮೂವರು ಪುತ್ರರೂ, ಇಬ್ಬರು ಪುತ್ರಿಯರೂ, 20-21 ವರ್ಷ ವಯಸ್ಸಿನ ತೃತೀಯ ಪತ್ನಿಯೂ ಇರುವರು. ಪುತ್ರರಲ್ಲಿ ದೊಡ್ಡವನಿಗೆ 11 ವರ್ಷ ವಯಸ್ಸಾಗಿದೆ ಮತ್ತು ಇಬ್ಬರು ಪುತ್ರಿಯರಿಗೂ ವಿವಾಹವಾಗಿದೆ. ಪ್ರಭುಪ್ರಜಾಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದು ಬಹು ಸಣ್ಣವಯಸ್ಸಿನಲ್ಲಿ ವಿಧಿವಶರಾದುದಕ್ಕಾಗಿ ಮೈಸೂರುಸೀಮೆಯೇ ದುಃಖಿಸುತ್ತಿರುವಾಗ್ಯೆ ಅವರ ಪತ್ನೀಪುತ್ರಪುತ್ರ್ಯಾದಿ ಬಂಧುವರ್ಗದವರಿಗೂ ಎಷ್ಟು ದುಃಖಾತಿರೇಕವುಂಟಾಗಿರಬಹುದು! ಮೃತರ ಆತ್ಮಕ್ಕೆ ನಿರಂತರ ಶಾಂತಿಯೂ, ವಿಯೋಗದುಃಖಕ್ಕೆ ಪಾತ್ರರಾದ ಅವರ ಕುಟುಂಬದವರಿಗೆ ಮನಸ್ಸಮಾಧಾನವೂ ಉಂಟಾಗಲೆಂದು ನಾವು ಕೋರುತ್ತೇವೆ.

ಸ್ವದೇಶದ ವೃತ್ತಾಂತಗಳು.

ಪ್ರಜಾಮಿತ್ರ ಎಂಬ ಹೆಸರಿನಿಂದ ಒಂದು ದಿನಪತ್ರಿಕೆಯು ಬೆಂಗಳೂರಿನಲ್ಲಿ ಮ|| ಜಿ. ಆರ್. ಎಸ್. ರಾವ್, ಬಿ. ಎ., ಯವರ ಸಂಪಾದಕತ್ವದಲ್ಲಿ ಈ ತಾ|| 25 ರಿಂದ ಹೊರಡಲುಪಕ್ರಮವಾಗಿದೆ. ಇದರ ಪ್ರಥಮ ಸಂಚಿಕೆಯನ್ನು ನಾವು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿ, ಅದು ತಾನು ಸ್ವರಾಜ್ಯ ಪಾರ್ಟಿಗಾಗಲಿ, ಬ್ರಾಹ್ಮಣರ ಗುಂಪಿಗಾಗಲಿ, ಬ್ರಾಹ್ಮಣೇತರರ ಗುಂಪಿಗಾಗಲಿ ಸೇರಿದವನಾಗಿರದೆ ಎಲ್ಲರ ಗುಂಪಿಗೂ ಸೇರಿದವನಾಗಿದ್ದು ಎಲ್ಲರ ಉನ್ನತಿಗಾಗಿ ಸೇವೆಯನ್ನು ಮಾಡಲು ಸಿದ್ಧನಾಗಿರುವೆನೆಂಬ ತನ್ನ ಉದಾತ್ತಧ್ಯೇಯವನ್ನು ಅಕ್ಷರಶಃ ಪಾಲಿಸಿಕೊಂಡು ಚಿರಜೀವಿಯಾಗಿ ಬಾಳಲೆಂದು ಹರಸುತ್ತೇವೆ.

ಶ್ರೀಮತ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಾದ ಸರ್ ಸಿ. ಟಾಡ್‌ಹಂಟರ್‌ರವರು ಕಳೆದ ಗುರುವಾರ ಬೆಳಗ್ಗೆ ರಾಜಧಾನಿಗೆ ಬಂದು ಪಾರ್ಕ್‌ಹೌಸಿನಲ್ಲಿಳಿದುಕೊಂಡಿರುವರು. ಇವರು ಬೆಳಗಿನ 11½ ಗಂಟೆಗೆ ಸರಿಯಾಗಿ ಆಫೀಸಿಗೆ ಬಂದು ಸಾಯಂಕಾಲ 5-5½ ಗಂಟೆಯವರೆಗೂ ಇದ್ದು ಕೆಲಸಮಾಡಲುಪಕ್ರಮಿಸಿರುವುದಾಗಿ ತಿಳಿಯಬಂದಿದೆ. ಇವರು ಐರೋಪ್ಯರಾದುದರಿಂದಲೂ ಗೌರ್ನರ್ ಉದ್ಯೋಗದವರೆಗೂ ಬ್ರಿಟಿಷ್ ಸರ್ಕಾರದಲ್ಲಿ ಕೆಲಸಮಾಡಿರುವುದರಿಂದಲೂ ಇವರ ವಿಚಾರದಲ್ಲಿ "ಹೊಸದರಲ್ಲಿ ಅಗಸ ಗೋಣಿಯೆತ್ತಿ ಬಡಿದ" ಎಂಬ ಗಾದೆಯು ಅನ್ವಯಿಸುವುದಿಲ್ಲ.

ಮೈಸೂರು ವೈದ್ಯಶಾಲೆಯಲ್ಲಿ ಅಸಿಸ್ಟೆಂಟ್ ಸರ್ಜನರಾಗಿದ್ದು ಪ್ರಸ್ತುತರಾಗಿ ರಾಜಧಾನಿಯ ಮೆಡಿಕಲ್ [illegible] [illegible] ಮಿ|| ದಾರಾಷಾರವರ ಸುಮಾರು 20 ವರ್ಷವಯಸ್ಸಿನ [illegible] ಮಗನು

5-6 ದಿವಸಗಳವರೆಗೆ ವಿಷಮಶೀತಜ್ವರರೋಗಗ್ರಸ್ತನಾಗಿದ್ದು ಕಳೆದ ಮಂಗಳವಾರ ಮಧ್ಯಾಹ್ನ ವಿಧಿವಶನಾದನೆಂದು ತಿಳಿಸಲು ವ್ಯಸನವಾಗುತ್ತದೆ. ಡಾ|| ದಾರಾಷಾಯವರ ಮಕ್ಕಳಲ್ಲೆಲ್ಲಾ ಒಳ್ಳೇ ವಿದ್ಯಾವಂತನಾಗಿ ಬಿ ಎಸ್‌ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ಒಳ್ಳೇ ಅಭಿವೃದ್ಧಿಗೆ ಬರುವವನಾಗಿದ್ದನು. ವರ್ಧಿಷ್ಣುವಾಗಿದ್ದ ಮಗನನ್ನು ಕಳೆದುಕೊಂಡ ಡಾ|| ದಾರಾಷಾಯವರ ದುಃಖಕ್ಕೆ ಪಾರವಿಲ್ಲವಾಗಿದೆ.

ಈ 25ರ ಬೆಳಗ್ಗೆ ರಾಜಧಾನಿಯ ವೈಸ್‌ರಾಯ್‌ರೋಡಿನಲ್ಲಿ ವೇಗವಾಗಿ ಬರುತ್ತಿದ್ದ ಷಾ ಪಸಂದ್‌ಟಾಂಗಾಬಂಡಿಗೆ ಹೂಡಿದ್ದ ಎತ್ತರವಾದ ಕುದುರೆಯು ಯಾವ ಕಾರಣದಿಂದಲೋ ರೇಗಿ ಮನಸ್ಸೋ ಓಡಲುಪಕ್ರಮಿಸಿ ಬಂಡಿಯವನು ಕಡಿವಾಣವನ್ನೆಷ್ಟು ಬಿಗಿಯಾಗಿ ಹಿಡಿದು ನಿಲ್ಲಿಸಲು ಪ್ರಯತ್ನಿಸಿದಾಗ್ಯೂ ದಕ್ಕದೆ ರೈಲ್ವೆಸ್ಟೇಷನ್ನಿನ ಹೊರ ಆವರಣದೊಳಕ್ಕೆ ನುಗ್ಗಿ ಮರದ ಕಟಕಟೆಗೆ ತಾಕುಬಡಿಯಿತು. ಅಷ್ಟರಲ್ಲಿ ಬಂಡಿಹೊಡೆಯುವವನು ಅದನ್ನು ತಿರುಗಿಸಲು ಅದು ತಲೆಕೆಳಗಾಗಿ ಮಗುಚಿಕೊಂಡು ನುಚ್ಚುನೂರಾಯಿತು. ಒಳಗೆ ಕುಳಿತಿದ್ದ ಇಬ್ಬರು ಪ್ರಯಾಣಿಕರು ಬಂಡಿಯು ಮಗುಚಿಕೊಳ್ಳುವದರೊಳಗಾಗಿ ನೆಲದಮೇಲೆ ದುಮ್ಮಿಕ್ಕಿದುದರಿಂದ ಅವರಿಗೇನೂ ಅಪಾಯವಾಗಲಿಲ್ಲ. ಬಂಡಿಹೊಡೆಯುವವನಿಗೂ ದೈವಾಧೀನದಿಂದ ಅಪಾಯಸಂಭವಿಸಲಿಲ್ಲ.

ಅರಮನೆಯ ಮುಂಗಡೆ ಹೊಸದಾಗಿ ಕಟ್ಟಲ್ಪಡುತ್ತಿರುವ ಸಜ್ಜೆಯ ಕೆಲಸವು ಪೂರೈಸುತ್ತ ಬಂದುದರಿಂದ ಅಲ್ಲಿಯ ಕೆಲಸಗಾರರಿಗೆಲ್ಲಾ ಮೊನ್ನೆಯದಿವಸ ಅರಮನೆಯಿಂದ ಮೃಷ್ಟಾನ್ನಭೋಜನವು ಮಾಡಿಸಲ್ಪಟ್ಟು ಶಾಲುಗಳು ಬಹುಮಾನಿಸಲ್ಪಟ್ಟವು. ಅಲ್ಲದೆ ನೆನ್ನೆಯ ಬೆಳಗ್ಗೆ ಶ್ರೀಚಾಮುಂಡೇಶ್ವರೀ ಅಮ್ಮನವರ ಉತ್ಸವಮೂರ್ತಿಯು ಹೊಸ ಸಜ್ಜಿಗೆ ಬಿಜಮಾಡಿಸಲ್ಪಟ್ಟು ಪೂಜೆಮಾಡಲ್ಪಟ್ಟಿತು. ಪರೀಕ್ಷಾರ್ಥವಾಗಿ ಕಟ್ಟಲ್ಪಟ್ಟಿರುವ ಈ ಸಭಾಂಗಣಕ್ಕೆ 3 ಲಕ್ಷ ರೂಪಾಯಿಗಳಮೇಲೆಯೇ ವೆಚ್ಚವಾಗಿರಬೇಕೆಂದು ತೋರುತ್ತದೆ. ಬರುವ ದಸರಾಮಹೋತ್ಸವವು ನಡೆದಮೇಲೆ ಇದರಲ್ಲಿ ಮಾಡಬಹುದಾದ ಬದಲಾವಣೆಯಿಂದ ಪ್ಲಾನು ಅಮೇರಿಕೆಗೆ ಕಳುಹಲ್ಪಟ್ಟು ಕಟ್ಟಡದ ಪ್ರತಿಯೊಂದು ಭಾಗವೂ ತಾಂಡವಾರದಲ್ಲಿ ಎರಕವರಿಸಲ್ಪಟ್ಟು ತರಿಸಲ್ಪಡುವುದೆಂದೂ, ಅದಕ್ಕೆ 20-30 ಲಕ್ಷ ರೂ. ಗಳ ಮೇಲೆಯೇ ವ್ಯಯವಾಗುವುದೆಂದೂ ಕೇಳುತ್ತೇವೆ.

ಕೋಲಾರ ಡಿ|| ಮಾಲೂರು ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರ್ 42 ವರ್ಷ ವಯಸ್ಸಿನ ರಾಮಸ್ವಾಮಿ ಎಂಬಾತನು ಯಾವುದೋ ತಪ್ಪಿತಕ್ಕಾಗಿ ಸಸ್ಪೆಂಡ್ ಮಾಡಲ್ಪಟ್ಟಿದ್ದು ವಿಚಾರಣೆ ನಡೆಯುತ್ತಿರುವಾಗ್ಗೆ, ಅದರ ಫಲಿತಾಂಶವನ್ನು ತಿಳಿಯುವುದಕ್ಕಾಗಿ ಬೆಂಗಳೂರಿಗೆ ಬಂದಿದ್ದು ವಿಚಾರಣೆಯ ಫಲಿತಾಂಶವು ತನಗೆ ವಿರೋಧವಾಗಿದ್ದಿತೆಂದು ತಿಳಿದು ವ್ಯಥೆಪಟ್ಟು ಕಳೆದ ತಾ|| 20 ರಲ್ಲಿ ಬೆಂಗಳೂರುಸಿಟಿ ರೈಲುರಸ್ತೆಯಮೇಲೆ ಹೋಗಿ ಬಂಡಿಯು ಬಹಳ ರಭಸವಾಗಿ ಬರುತ್ತಿರುವಾಗ್ಗೆ ಕಂಬಿಗಳಮೇಲೆ ಕುಳಿತಿದ್ದನು. ಡ್ರೈವರು ದೂರದಿಂದಲೇ ಅವನು ಕುಳಿತಿರುವುದನ್ನು ಕಂಡು ಇಂಜನ್ನನ್ನು ಎಷ್ಟು ಕೂಗಿಸಿದಾಗ್ಯೂ, ಇನ್ಸ್‌ಪೆಕ್ಟರು ಕದಲಲಿಲ್ಲವಾಗಿ ಬಂಡಿಯನ್ನು ನಿಲ್ಲಿಸಿ ಅವನನ್ನು ಹಿಡಿದು ಮೇಲಕ್ಕೆತ್ತಿ ಕಂಬಿಗಳಿಂದ ದೂರವಾಗಿ ನಿಲ್ಲಿಸಿದರು. ಆದರೂ ಇನ್ಸ್‌ಪೆಕ್ಟರು ಕಡೆಯ ಎರಡು ಬಂಡಿಗಳ ಮಧ್ಯೆ ಕಂಬಿಗಳಮೇಲೆ ಬಿದ್ದು ಚಕ್ರಗಳಿಗೆ ಸಿಕ್ಕಿ ಎರಡು ತುಂಡಾಗಿ ಕತ್ತರಿಸಲ್ಪಟ್ಟನು.

ನಂಜನಗೂಡು-ಚಾಮರಾಜನಗರದ ರೈಲ್ವೆಯ ಸಮಾರಂಭ ಮಹೋತ್ಸವದಲ್ಲಿ

ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರ್‌ರವರು ಅಪ್ಪಣೆ ಕೊಡಿಸಿದ ಭಾಷಣ.

(೨೭ನೆಯ ಆಗಸ್ಟ್ ೧೯೨೬)

ಮಹನೀಯರೆ,

ನಾವು ಈ ದಿವಸ ಇಲ್ಲಿಗೆ ಬಂದು, ಇಲ್ಲಿನ ರೈಲು ಮಾರ್ಗದ ಕಾಮಗಾರಿಯನ್ನು ಸಂಪೂರ್ತಿಗೊಳಿಸುವ, ಈ ಮಹೋತ್ಸವವನ್ನು ನೆರವೇರಿಸುವುದು ನಮಗೆ ವಿಶೇಷ ಸಂತೋಷಕರವಾಗಿರುತ್ತದೆ. ಸಮೃದ್ಧವಾದ, ಮತ್ತು ರಮಣೀಯವಾದ, ಮೈಸೂರು ಡಿಸ್ಟ್ರಿಕ್ಟಿನ ಒಂದು ಭಾಗದಲ್ಲಿ, ಈ ರೈಲ್ವೆಯಿಂದ ಪ್ರಯಾಣಸೌಕರ್ಯಗಳುಂಟಾಗುತ್ತವೆ; ಅಲ್ಲದೆ, ನಮ್ಮ ಮನೆತನದೊಡನೆ ಸ್ನಿಗ್ಧವಾದ ಸಂಬಂಧವುಳ್ಳ ಈ ಚಾಮರಾಜನಗರಕ್ಕೂ, ರಾಜಧಾನಿಗೂ, ಇದರಿಂದ ನೇರವಾದ ಪ್ರಯಾಣಸಾಧನವೂ ಏರ್ಪಟ್ಟಂತಾಗುತ್ತದೆ.

ಈ ರೈಲುಮಾರ್ಗವನ್ನು ಏರ್ಪಡಿಸಲು, ಈಗ್ಗೆ 35 ವರ್ಷಗಳಿಂದಲೂ ದೀರ್ಘಾಲೋಚನೆಯೂ, ಚರ್ಚೆಯೂ, ನಡೆದುವು. ಆದಾಗ್ಯೂ, ಆದಿಯಲ್ಲಿ ಸಂಕಲ್ಪಿಸಿದ್ದುದರ ಪೈಕಿ, ಇಷ್ಟು ಸ್ವಲ್ಪ ರೈಲುಮಾರ್ಗವನ್ನು ಮಾತ್ರವೇ ಏರ್ಪಡಿಸುವುದು ಸಾಧ್ಯವಾಯಿತಲ್ಲಾ ಎಂಬ ವಿಷಾದವೊಂದು ಈ ಸಮಯದಲ್ಲಿ ನಮ್ಮ ಮನಸ್ಸಿನಲ್ಲಿದೆ. ಸುಮಾರು ಒಂಬತ್ತು ವರುಷಗಳ ಹಿಂದೆ, ಚಾಮರಾಜನಗರದ ಮ್ಯುನಿಸಿಪಲ್ ಸಭೆಯವರನ್ನು ಉದ್ದೇಶಿಸಿ, ನಾವು ಭಾಷಣ ಮಾಡಿದ್ದೆವು. ನಂಜನಗೂಡಿನಿಂದ ಈರೋಡಿಗೆ ರೈಲನ್ನು ಹಾಕಿಸುವ ಏರ್ಪಾಡು, ಮೈಸೂರು ಸರ್ಕಾರದವರ ರೈಲ್ವೆಯ ಕಾರ್ಯಕ್ರಮದಲ್ಲಿ ಕೇವಲ ಪ್ರಾಮುಖ್ಯವಾಗಿದ್ದಿತೆಂದೂ, ಅದರ ವಿಷಯದಲ್ಲಿ ನಾವೇ ಸ್ವಂತವಾಗಿ ವಿಶೇಷ ಆಸಕ್ತಿಯನ್ನು ವಹಿಸಿದ್ದೆವೆಂದೂ ಆಗ್ಗೆ ತಿಳಿಸಿದ್ದೆವು. ಆದರೆ, ಆಗಿದ್ದ ಸನ್ನಿವೇಶಗಳೀಗ ಮಾರ್ಪಟ್ಟಿವೆ. ಆದಕಾರಣ, ಆ ಮಾರ್ಗವಾಗಿ ಈಗ ಸೀದಾ ರೈಲ್ವೆಯನ್ನು ಏರ್ಪಡಿಸುವುದು ಯುಕ್ತತೋರುವುದಿಲ್ಲ. ಏಕೆಂದರೆ, ಈರೋಡಿನಿಂದ ತಿರುಚನಾಪಳ್ಳಿಗೆ ಹೋಗುವ "ಮೀಟರ್‌ಗೇಜು" ರೈಲು ಮಾರ್ಗವನ್ನು "ಬ್ರಾಡ್‌ಗೇಜು" ರೈಲುಮಾರ್ಗವಾಗಿ ಬದಲಾಯಿಸಬೇಕೆಂದು ನಿಶ್ಚಯ ಮಾಡಲ್ಪಟ್ಟಿದೆ. ಇದರಮೇಲೆ, ಇನ್ನೆರಡು "ಮೀಟರ್‌ಗೇಜು" ರೈಲು ಮಾರ್ಗಗಳನ್ನು ಹಾಕಿಸುವ ಏರ್ಪಾಡು ಸಲಹೆಮಾಡಲ್ಪಟ್ಟಿರುವುದಾಗಿ, ನಮ್ಮ ಸರ್ಕಾರದವರಿಗೆ ಈಚೆಗೆ ವರ್ತಮಾನವು ತಿಳಿಸಲ್ಪಟ್ಟಿದೆ. ಆ ರೈಲುಮಾರ್ಗಗಳು ಯಾವುವೆಂದರೆ: ಗೋಪಿಚೆಟ್ಟಿಪಾಳ್ಯದಿಂದ ಒಂದು ಕಡೆ ಸತ್ಯಮಂಗಲ ಮತ್ತು ಮೆಟ್ಟುಪಾಳ್ಯ, ಇವೆರಡು ಸ್ಥಳಗಳಿಗೂ ಹೋಗುವ ರೈಲುಮಾರ್ಗ; ಮತ್ತು ಮತ್ತೊಂದುಕಡೆ ಗೋಪಿಚೆಟ್ಟಿಪಾಳ್ಯದಿಂದ ತಿರುಪ್ಪೂರು ಮತ್ತು ಧಾರಾಪುರ ಮಾರ್ಗವಾಗಿ ಪಳ್ನಿಗೆ ಹೋಗುವ ರೈಲುಮಾರ್ಗ. ಈ ರೈಲುಮಾರ್ಗಗಳ ಜತೆಗೆ ಪೊಲ್ಲಾಚಿ ದಿಂಡಿಗಲ್ಲು ರೈಲುಮಾರ್ಗವೂ ಸೇರಿದರಂತು, ಉತ್ತರದಲ್ಲಿರುವ ಧಾರವಾಡದಿಂದ ದಕ್ಷಿಣದಲ್ಲಿರುವ ಮಧುರೆಯವರೆಗೂ, ಮಧ್ಯದಲ್ಲಿ ಸ್ವಲ್ಪದೂರ ರೈಲುಮಾರ್ಗವು ಇಲ್ಲದಿರುವುದು ಹೊರತು, ಉಳಿದ ಭಾಗಕ್ಕೆಲ್ಲಾ ನೇರವಾಗಿ ಒಟ್ಟಿಗೆ "ಮೀಟರ್‌ಗೇಜು" ರೈಲುಮಾರ್ಗವು ಏರ್ಪಟ್ಟಂತಾಗುವುದು. ಎಂದರೆ, ಮಧ್ಯದಲ್ಲಿ ಸ್ವಲ್ಪದೂರ ರೈಲಿಲ್ಲದೆ ಹೋಗುವುದು; ಇದೊಂದು ಕೊರತೆಯು ಪರಿಹಾರವಾದಲ್ಲಿ, ಬೊಂಬಾಯಿನಗರದಿಂದ ಹೊರಟವರು, ಮೈಸೂರು ಸಂಸ್ಥಾನದ ಉತ್ತರದ ಗಡಿಯಿಂದ ದಕ್ಷಿಣದ ಗಡಿಯವರೆಗೂ ಪ್ರಯಾಣಮಾಡಿ, ಅಲ್ಲಿಂದ ಕೊಲೊಂಬೋಗೆ ಹೋಗಲು, ನೇರವಾದ ರೈಲುಮಾರ್ಗವು ಏರ್ಪಟ್ಟಂತಾಗುವುದು. ಅದರೆ, ಮಧ್ಯದಲ್ಲಿ ರೈಲಿಲ್ಲದೆ ಹೋಗುವುದು, ಚಾಮರಾಜನಗರದಿಂದ ಸತ್ಯಮಂಗಲದವರೆಗೆ ಮಾತ್ರವೇ. ಚಾಮರಾಜನಗರದಿಂದ ಸತ್ಯಮಂಗಲದವರೆಗಿರುವ ಪ್ರದೇಶದ ಪೈಕಿ, ಸ್ವಲ್ಪ ಭಾಗವು ಮಾತ್ರವೇ ಮೈಸೂರು ಸಂಸ್ಥಾನಕ್ಕೆ ಸೇರಿದೆ. ಉಳಿದ ಸತ್ಯಮಂಗಲದವರೆಗಿರುವ ಪ್ರದೇಶವು, ಮೈಸೂರು ಸಂಸ್ಥಾನಕ್ಕೆ ಸೇರಿಲ್ಲ. ಇಲ್ಲಿಗೆ ಸೇರಿಲ್ಲದ ಭಾಗದಲ್ಲಿ ರೈಲುಮಾರ್ಗವನ್ನೇರ್ಪಡಿಸುವ ಸೂಚನೆಯು ಕಂಡುಬಂದೊಡನೆಯೇ, ಸಂಸ್ಥಾನಕ್ಕೆ ಸೇರಿರುವ ಉಳಿದ ಭಾಗಕ್ಕೆ ರೈಲುಹಾಕಿಸುವ ಪ್ರಯತ್ನವನ್ನು ಕೈಗೊಳ್ಳಲು, ನಮ್ಮ ಸರ್ಕಾರದವರು ಸಿದ್ಧವಾಗಿರುತ್ತಾರೆ. ಅಲ್ಲದೆ, ಈ ಒಟ್ಟು ರೈಲುಮಾರ್ಗವನ್ನೂ ಪೂರ್ತಿಗೊಳಿಸುವುದು ಆವಶ್ಯಕವೆಂಬ ಅಂಶವನ್ನು, ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರಿಗೆ ಒತ್ತಿ ಹೇಳುತ್ತಿದ್ದಾರೆ.

ಸದ್ಯದಲ್ಲಿ, ಈ ರೈಲು ಮಾರ್ಗದ ಒಂದು ಭಾಗದ ಕೆಲಸವು ಮುಗಿದು, ರೈಲು ಸಂಚಾರಕ್ಕೆ ಆರಂಭವಾಗಬಹುದೆಂದು ನಾವು ಈ ದಿವಸ ಅನುಜ್ಞೆಯನ್ನು ಕೊಡುವುದು ಸಾಧ್ಯವಾಯಿತು; ಇದಕ್ಕೆ, ಮೈಸೂರು ಡಿಸ್ಟ್ರಿಕ್ಟ್‌ನವರು ಉತ್ಸಾಹದಿಂದ ಈ ಉದ್ಯಮವನ್ನು ಕೈಗೊಂಡುದೇ ಕಾರಣವಾಗಿದೆ. ಈ ಉದ್ಯಮವನ್ನು ಸರ್ಕಾರದವರು ತಾವೇ ಸ್ವಂತವಾಗಿ ಕೈಗೊಂಡು ನಡೆಯಿಸಬೇಕೆಂಬ ಉದ್ದೇಶದಿಂದ, ೧೯೧೯ನೇ ಇಸವಿಯ ನವೆಂಬರು ತಿಂಗಳಲ್ಲಿ ಕೆಲಸವನ್ನು ಪ್ರಾರಂಭಿಸಿದರು. ಆದರೆ ಸ್ವಲ್ಪಕಾಲ ಕೆಲಸವು ನಡೆಯುವಷ್ಟರಲ್ಲಿಯೇ, ಹಣಕಾಸಿಗೆ ಮುಗ್ಗಟ್ಟಾಯಿತು; ಆದುದರಿಂದ, ಕಾಮಗಾರಿಯನ್ನು ಅಲ್ಲಿಗೇ ನಿಲ್ಲಿಸಬೇಕಾಯಿತು. ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು, ಇದನ್ನು ಡಿಸ್ಟ್ರಿಕ್ಟ್ ಬೋರ್ಡು ರೈಲ್ವೆಯಂತೆ ಭಾವಿಸಿ ಕೆಲಸ ನಡೆಸುವುದಕ್ಕೆ ಸಮ್ಮತಿಸಿದರು. ಆದುದರಿಂದ ಮಾತ್ರವೇ, ಈ ಕಾಮಗಾರಿಯನ್ನು ಮತ್ತೆ ಆರಂಭಿಸಲು ಸಾಧ್ಯವಾಯಿತು. ಡಿಸ್ಟ್ರಿಕ್ಟ್ ಬೋರ್ಡಿನವರು ಈ ಉದ್ಯಮಕ್ಕೆ ಹಣವನ್ನೊದಗಿಸುವುದಕ್ಕಾಗಿ ಒಂದು ಡಿಬೆಂಚರು ಸಾಲವನ್ನು ಏರ್ಪಡಿಸಿದರು; ಅದರಿಂದ ದೊರೆತ 8 ಲಕ್ಷ ರೂಪಾಯಿಗಳನ್ನೂ, ತಾವು ವಸೂಲು ಮಾಡುತ್ತಿದ್ದ ರೈಲ್ವೇ ಸೆಸ್ಸು ಮೊಬಲಗಿನಿಂದ ಬಂದಿದ್ದ ಹುಟ್ಟುವಳಿಯ ಒಂದು ಭಾಗವನ್ನೂ, ಇದಕ್ಕಾಗಿ ವಿನಿಯೋಗಿಸಿದರು. ಡಿಬೆಂಚರು ಸಾಲದ ಏರ್ಪಾಡು ಸುಮುಖವಾಗಿ ಸಾಗುವುದಕ್ಕಾಗಿ, ನಮ್ಮ ಸರ್ಕಾರದವರು ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಡಿಬೆಂಚರು ಸಾಲದ ಹಣದಮೇಲೆ ಶೇಕಡ 7 ರಂತೆ ಬಡ್ಡಿಯು ಸಂದಾಯವಾಗುವ ವಿಷಯದಲ್ಲಿಯೂ, ಮತ್ತು 15 ವರುಷಗಳೊಳಗಾಗಿ ಸಾಲವು ತೀರಿಸಲ್ಪಡುವ ವಿಷಯದಲ್ಲಿಯೂ, ಸರ್ಕಾರದವರು ಖಾತರಿಯನ್ನು ಕೊಟ್ಟದ್ದೊಂದು; ಡಿಬೆಂಚರು ಸಾಲದ ಪತ್ರಗಳಲ್ಲಿ ಜನರಿಗೆ ವಿಶ್ವಾಸ ಹುಟ್ಟಿ, ಅವರು ಅವುಗಳನ್ನು ಉತ್ಸಾಹದಿಂದ ಕೊಂಡುಕೊಳ್ಳುವಂತೆ ಮಾಡಲು, ಇತರ ಏರ್ಪಾಡುಗಳನ್ನು ನಡೆಯಿಸಿದುದೊಂದು; ಇವೆರಡೂ, ನಮ್ಮ ಸರ್ಕಾರದವರು ಮಾಡಿದ ಸಹಾಯಗಳಾಗಿವೆ. ಡಿಬೆಂಚರು ಸಾಲದ ಪತ್ರಗಳನ್ನು ಕೊಂಡುಕೊಂಡು, ಈ ಉದ್ಯಮವು ಪೂರೈಸುವುದಕ್ಕೆ ಅನೇಕ ದೊಡ್ಡಮನುಷ್ಯರು ಸಹಾಯಮಾಡಿದರು; ಅವರಲ್ಲಿ ಬಹುಮಂದಿಗಳು ಈ ದಿವಸ ಇಲ್ಲಿಗೆ ಬಂದಿರುವುದು, ನಮಗೆ ಸಂತೋಷಕರವಾಗಿದೆ. ಡಿಸ್ಟ್ರಿಕ್ಟು ಬೋರ್ಡಿನವರಿಗೋಸ್ಕರ ಈ ರೈಲಿನ ಆಡಳಿತವನ್ನು ನಡೆಯಿಸಿಕೊಡುವ ಷರತ್ತುಗಳನ್ನೂ ಸಹ, ನಮ್ಮ ಸರ್ಕಾರದವರು ಮಂಜೂರುಮಾಡಿರುತ್ತಾರೆ. ಇದು, ಮೈಸೂರುಸಂಸ್ಥಾನದ ರೈಲ್ವೆಯ ಒಂದು ಶಾಖೆಯಾಗಿದ್ದಂತೆ ಭಾವಿಸುವುದು; ಬೋರ್ಡಿನವರ ಪರವಾಗಿ ಸರ್ಕಾರದವರು ಅದರ ಆಡಳಿತವನ್ನು ನಿರ್ವಹಿಸುವುದು; ಇದಕ್ಕೆ ಪ್ರತಿಯಾಗಿ ಒಟ್ಟು ಹುಟ್ಟುವಳಿಯಲ್ಲಿ ಸೇಕಡ 70 ರಷ್ಟು ಮೊಬಲಗನ್ನು ಸರ್ಕಾರದವರು ತೆಗೆದುಕೊಳ್ಳುವುದು; ಈ ಮೇರೆ ಗೊತ್ತಾಗಿದೆ. ಈ ರೈಲುಮಾರ್ಗದ ಮೆಸೆಯಿಂದ, ಎಷ್ಟು ಹುಟ್ಟುವಳಿಯು ಬರುವುದೆಂಬುದಾಗಿ ಮೊದಲು ನಿರೀಕ್ಷಿಸಲ್ಪಟ್ಟಿದ್ದಿತೋ, ಅದಕ್ಕಿಂತಲೂ ಹೆಚ್ಚು ಹುಟ್ಟುವಳಿಯು ಬರುವಂತಾಗಲೆಂದೂ, ಡಿಸ್ಟ್ರಿಕ್ಟ್ ಬೋರ್ಡಿನವರು ಈ ಉದ್ಯಮಕ್ಕಾಗಿ ವೆಚ್ಚಮಾಡಿರುವ ಹಣಕ್ಕೆ ತಕ್ಕಷ್ಟು ಪ್ರತಿಫಲವು ಬರುವಂತಾಗಲೆಂದೂ, ನಾವು ಮನಃಪೂರ್ವಕವಾಗಿ ಹಾರೈಸುತ್ತೇವೆ. ಒಂದುವೇಳೆ, ಪ್ರತ್ಯಕ್ಷವಾಗಿ ಹಣಕಾಸಿನ ರೂಪದಲ್ಲಿ ಇದರಿಂದ ವಿಶೇಷ ಲಾಭವು ದೊರಕದೇ ಇರಬಹುದು. ಆದಾಗ್ಯೂ, ಡಿಸ್ಟ್ರಿಕ್ಟ್ ಬೋರ್ಡಿನವರು, ತಾವು ಈ ಉದ್ಯಮಕ್ಕಾಗಿ ಹಣವನ್ನು ವೆಚ್ಚಮಾಡಿದುದು ಅನುಚಿತವೆಂದು ವಿಷಾದಪಡುವ ಕಾರಣವೇ ಇರದಂತೆ, ಪರೋಕ್ಷವಾಗಿ ಇದರಿಂದ ಎಷ್ಟೋ ಅನುಕೂಲ್ಯಗಳುಂಟಾಗುವುವೆಂಬುದಾಗಿ, ನಮಗೆ ಪೂರ್ಣ ಭರವಸೆಯುಂಟು.

ರೈಲ್ವೆಗಳ ಕಾರ್ಯಕ್ರಮದ ಸಂಬಂಧದಲ್ಲಿ, ಇಂಡಿಯಾ ಸರ್ಕಾರದವರು ಮಾಡಿರುವ ಏರ್ಪಾಡನ್ನೇ, ಇಲ್ಲಿಯೂ ಆಚರಣೆಗೆ ತರಬೇಕೆಂಬ ವಿಚಾರವನ್ನು, ನಮ್ಮ ಸರ್ಕಾರದವರು ಸ್ವಲ್ಪಕಾಲದಿಂದಲೂ ಪರ್ಯಾಲೋಚಿಸುತ್ತಿದ್ದರು. ಡಿಸ್ಟ್ರಿಕ್ಟ್ ಬೋರ್ಡುಗಳವರೇ ಸ್ವಂತವಾಗಿ ರೈಲುಮಾರ್ಗಗಳ ಸ್ವಾಮ್ಯವನ್ನು ವಹಿಸುವುದು, ಈಗ ರೂಢಿಯಲ್ಲಿದೆಯಷ್ಟೆ. ಇದಕ್ಕೆ ಬದಲಾಗಿ, ಡಿಸ್ಟ್ರಿಕ್ಟ್ ಬೋರ್ಡುಗಳವರ ಪರವಾಗಿ, ಸರ್ಕಾರದವರೇ ಆಯಾ ಸ್ಥಳಗಳ ಆವಶ್ಯಕತೆಗಳಿಗೆ ತಕ್ಕಂತೆ ರೈಲುಗಳನ್ನು ಹಾಕಿಸಬೇಕೆಂಬುದೇ, ಆ ಏರ್ಪಾಡು; ಆದರೆ, ಆ ಏರ್ಪಾಡನ್ನು ಅನುಸರಿಸಬೇಕಾದರೆ, ಡಿಸ್ಟ್ರಿಕ್ಟ್ ಬೋರ್ಡುಗಳವರು ಪೂರ್ವಭಾವಿಯಾಗಿ ಎರಡು ವಿಚಾರಗಳಲ್ಲಿ ಖಾತರಿಯನ್ನು ಕೊಡಬೇಕು. ಅವುಗಳು ಯಾವುವೆಂದರೆ: ಮೊದಲನೆಯದು ರೈಲುಗಳಿಂದ ನಷ್ಟವು ಸಂಭವಿಸಿದರೆ, ಡಿಸ್ಟ್ರಿಕ್ಟ್ ಬೋರ್ಡುಗಳವರು ಅದನ್ನು ಕಟ್ಟಿಕೊಡುವುದು; ಎರಡನೆಯದು, ರೈಲು ಮಾರ್ಗಗಳಿಗಾಗಿ ವೆಚ್ಚವಾದ ಹಣದಮೇಲೆ ಕೊಡಬೇಕಾದ ಬಡ್ಡಿಯನ್ನೂ, ಅವರೇ ಪಾವತಿ ಮಾಡುವುದು. ಡಿಸ್ಟ್ರಿಕ್ಟ್ ಬೋರ್ಡುಗಳವರು ಅನುಮತಿಸಿದ ಪ್ರದೇಶಗಳಲ್ಲಿ ರೈಲ್ವೇ ಸೆಸ್ಸನ್ನು ಈಗಿನಂತೆಯೇ ವಸೂಲುಮಾಡಲಾಗುತ್ತದೆ. ಆದರೆ, ಡಿಸ್ಟ್ರಿಕ್ಟ್ ಬೋರ್ಡುಗಳವರು ಖಾತರಿ ಮಾಡಿಕೊಟ್ಟಿರುವ ಮೊಬಲಗುಗಳ ಪಾವತಿಗಾಗಿ ಒಂದು ಫಂಡಿನಂತೆ ಆ ಮೊಬಲಗನ್ನು ಶೇಖರಿಸಲಾಗುತ್ತದೆ.

ಈ ಹೊಸ ಏರ್ಪಾಡನ್ನು ಆಚರಣೆಗೆ ತರುವ ಉದ್ದೇಶದಿಂದ ಸರ್ಕಾರದವರು ಆಯಾ ಸ್ಥಳಗಳ ಆವಶ್ಯಕತೆಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ ನೋಡಬೇಕೆಂದಿರುತ್ತಾರೆ; ಅಲ್ಲದೆ, ಇನ್ನುಮುಂದೆ ರೈಲು ಹಾಕುವುದರಲ್ಲಿ ಅನುಸರಿಸಲು, ಆ ಬಗೆಗೆ ಒಂದು ಕಾರ್ಯಕ್ರಮವನ್ನು ಗೊತ್ತುಮಾಡಿಟ್ಟುಕೊಳ್ಳಬೇಕೆಂಬುದಾಗಿಯೂ ಸಹ, ಸರ್ಕಾರದವರು ಉದ್ದೇಶಿಸಿದ್ದಾರೆ. ಹೀಗೆ ಹೊಸದಾಗಿ ರೈಲು ಮಾರ್ಗಗಳನ್ನು ಏರ್ಪಡಿಸುವುದರಲ್ಲಿ, ಎರಡು ವಿಧದ ರೈಲು ಮಾರ್ಗಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟು, ಅವುಗಳಿಗೆ ಸಂಬಂಧಪಟ್ಟ ಕೆಲಸವನ್ನು ಮುಂಚಿತವಾಗಿ ನಡಿಸಲಾಗುತ್ತದೆ; ಎಂದರೆ, ನಮ್ಮ ದೇಶದಲ್ಲಿ ಈಗ ರೈಲಿರುವ ನಾನಾ ಸ್ಥಳಗಳಿಗೂ ಸ್ವಲ್ಪ ಸ್ವಲ್ಪ ದೂರದಲ್ಲಿ, ರೈಲಿಲ್ಲದೆ ಹಾಗೆಯೇ ಉಳಿದಿರುವ ಪ್ರದೇಶಗಳನ್ನು ಒಟ್ಟುಗೂಡಿಸುವ ರೈಲುಮಾರ್ಗಗಳು; ರೈಲ್ವೆಯು ಏರ್ಪಡುವುದೆಂಬ ಆಶೆಯಿಂದ ರೈಲ್ವೇ ಸೆಸ್ಸು ಪಾವತಿಮಾಡಲ್ಪಡುತ್ತಾ ಇದ್ದಾಗ್ಯೂ, ಈಚಿನ ರೈಲು ಬದಲಾವಣೆಯ ಕಾರ್ಯಕ್ರಮದಿಂದ, ಪ್ರತ್ಯಕ್ಷವಾಗಿ ರೈಲುಗಳ ಪ್ರಯೋಜನವು ಲಭಿಸದಿರುವ ಪ್ರದೇಶಗಳಲ್ಲಿ ಏರ್ಪಡಿಸಬೇಕಾದ ರೈಲುಮಾರ್ಗಗಳು; ಈ ಎರಡುವಿಧದ ರೈಲುಮಾರ್ಗಗಳನ್ನೂ ಏರ್ಪಡಿಸಲು, ಮೊಟ್ಟಮೊದಲು ಪ್ರಾಶಸ್ತ್ಯವನ್ನು ಕೊಡಲಾಗುತ್ತದೆ. ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರ ಉದ್ಯಮಶೀಲತೆಯ ಉದಾಹರಣೆಯನ್ನನುಸರಿಸಿ, ಇತರ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಕೂಡ, ಈ ಹೊಸ ಏರ್ಪಾಡು ಆಚರಣೆಗೆ ತರಲ್ಪಡುವುದರಲ್ಲಿ ಸಹಕರಿಸಿ ವರ್ತಿಸುವರೆಂಬ ವಿಷಯದಲ್ಲಿ ನಮಗೆ ಪೂರ್ಣ ಭರವಸೆಯುಂಟು.

ಈ ರೈಲ್ವೆಯ ಕೆಲಸವನ್ನು ನೆರವೇರಿಸುವುದರಲ್ಲಿ ಅಧ್ಯಕ್ಷರಾಗಿದ್ದ ಸಿಬ್ಬಂದಿಯವರು ಶ್ರದ್ಧೆಯಿಂದ ಕೆಲಸಮಾಡಿ, ಇದು ಶೀಘ್ರವಾಗಿಯೂ, ಸುಸೂತ್ರವಾಗಿಯೂ, ನೆರವೇರುವಂತೆ ಮಾಡಿರುತ್ತಾರೆ; ಇದಕ್ಕಾಗಿ, ಅವರೆಲ್ಲರೂ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಅಂಶವು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರವರೂ, ಮತ್ತು ಬದಲಿಯಾಗಿ ಮೈಸೂರು ರೈಲ್ವೆಗಳ ಏಜೆಂಟರ ಕೆಲಸವನ್ನು ನೋಡುತ್ತಿರುವ ಆಫೀಸರವರೂ, ಓದಿದ ವಿಜ್ಞಾಪನಾಪತ್ರಿಕೆಗಳಲ್ಲಿ ಬಹು ಚೆನ್ನಾಗಿ ವಿವರಿಸಲ್ಪಟ್ಟಿದೆ; ಈ ಭಾಷಣವನ್ನು ಪೂರೈಸುವುದಕ್ಕೆ ಮುಂಚೆ, ನಾವು ಈ ಅಂಶವನ್ನು ವಿಶೇಷ ಸಂತೋಷದಿಂದ ಅನುಮೋದಿಸುತ್ತೇವೆ. ಅದರಲ್ಲಿಯೂ ಮುಖ್ಯವಾಗಿ, ಮಿ|| ಡವ್‌ವಿಲ್ಟನ್‌ರವರೂ, ಮೊದಲು ಇಂಜನಿಯರ್-ಇನ್-ಚೀಫ್ ಹುದ್ದೆಯಲ್ಲಿದ್ದ ಮಿ|| ಶ್ರೀನಿವಾಸಅಯ್ಯಂಗಾರ್‌ರವರೂ, ಅವರ ಬಳಿಕ ಅದೇ ಹುದ್ದೆಗೆ ಬಂದ ಮಿ|| ರಾಮಚಂದ್ರರಾಯರವರೂ, ಮತ್ತು ಎಗ್ಸಿಕ್ಯುಟಿವ್ ಇಂಜನಿಯರವರಾದ ಮಿ|| ರಾಮಯ್ಯನವರೂ, ಉತ್ತಮರೀತಿಯಲ್ಲಿ ಕೆಲಸಮಾಡಿರುವುದಕ್ಕಾಗಿ, ನಮ್ಮ ಮೆಚ್ಚಿಕೆಯನ್ನು ಸೂಚಿಸಲು ಸಂತೋಷವಾಗುತ್ತದೆ. ಮಿ|| ಡವ್‌ವಿಲ್ಟನ್‌ರವರು, ಈದಿವಸ ಇಲ್ಲಿ ಇಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ.

ಇಲ್ಲಿಗೆ ಸಂಬಂಧಪಟ್ಟ ಇತರ ಸ್ಥಳೀಯ ವಿಚಾರಗಳನ್ನು ಕುರಿತು, ಈದಿನ ನಾವು ಪ್ರಸ್ತಾಪಿಸತಕ್ಕವರಾಗಿಲ್ಲ. ಆದಾಗ್ಯೂ, ಚಾಮರಾಜನಗರದ ನಿವಾಸಿಗಳು ಪ್ರಸ್ತಾಪಮಾಡಿರುವ ಎರಡು ನೀರಾವರಿ ಕಾಮಗಾರಿಗಳ ವಿಷಯವನ್ನೂ ಸಹ, ಆಗಲೇ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಪರ್ಯಾಲೋಚಿಸುತ್ತಿದ್ದಾರೆಂಬುದಾಗಿ, ನಾವು ಅವರೆಲ್ಲರಿಗೂ ಭರವಸೆ ಹೇಳುತ್ತೇವೆ.

ಈ ರೈಲ್ವೆಯನ್ನು ಪೂರ್ತಿಗೊಳಿಸಲು ಇನ್ನೊಂದು ಕೆಲಸವು ಮಾತ್ರವೇ ಉಳಿದಿರುತ್ತದೆ. ಕಂಬಿಯನ್ನು ಕೂಡಿಸುವ ಕೊನೆಯ ಫಿಷ್‌ಬೋಲ್ಟನ್ನು ಭದ್ರಪಡಿಸಿದೊಡನೆಯೇ, ಇದರ ಕಾಮಗಾರಿಯು ಮುಗಿಯುತ್ತದೆ. ನಮಗೆ ಒಪ್ಪಿಸಲ್ಪಟ್ಟಿರುವ ಈ ಬೆಳ್ಳಿಯ ಬಿಲ್ಮಡಿಕೆಯಿಂದ (Spanner) ಅದನ್ನು ಭದ್ರಪಡಿಸಿ, ಈ ಕಾಮಗಾರಿಯನ್ನು ಇನ್ನು ಮುಕ್ತಾಯಗೊಳಿಸುತ್ತೇವೆ.

ಮೈಸೂರು ಡಿ|| ಬೋರ್ಡಿನವರೊಪ್ಪಿಸಿದ ವಿಜ್ಞಾಪನಾಪತ್ರಿಕೆ.

(ಇಂಗ್ಲಿಷಿನ ಪರಿವರ್ತನೆ.)

ಶ್ರೀಮತ್ ಮಹಿಸೂರು ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ. ಮಹಾಸ್ವಾಮಿಯವರ ದಿವ್ಯ ಸನ್ನಿಧಿಯಲ್ಲಿ,

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಬಹುಭಯಭಕ್ತಿಗಳಿಂದ ವಿಜ್ಞಾಪಿಸಿಕೊಳ್ಳುವುದೇನೆಂದರೆ:—

1. ನಂಜನಗೂಡು-ಚಾಮರಾಜನಗರ ರೈಲ್ವೆಯ ಆರಂಭೋತ್ಸವವನ್ನು ನಡಿಯಿಸಬೇಕೆಂಬ ನಮ್ಮ ದೀನಪ್ರಾರ್ಥನೆಯನ್ನು ಮಹಾಸ್ವಾಮಿಯವರು ಕರುಣೆಯಿಂದ ಅಂಗೀಕರಿಸಿ ದಯಮಾಡಿಸಿದುದಕ್ಕಾಗಿ ನಮ್ಮ ಭಕ್ತಿಪುರಸ್ಸರವಾದ ಕೃತಜ್ಞತೆಯನ್ನು ಸನ್ನಿಧಿಯಲ್ಲಿ ನಿವೇದಿಸಲು ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿ ಮಹಾಸ್ವಾಮಿಯವರ ಅನುಜ್ಞೆಯನ್ನು ಬೇಡುತ್ತೇನೆ, ಮತ್ತು ಈ ಆರಂಭೋತ್ಸವವು ಮಹಾಸ್ವಾಮಿಯವರ ಅಮೃತಹಸ್ತದಿಂದ ನೆರವೇರಿಸಲ್ಪಡುವ ಸಂತೋಷಭಾಗಿಗಳಾಗಿರುತ್ತೇವೆ.

2. ಚರಿತ್ರಪ್ರಸಿದ್ಧವಾದ ಈ ಸ್ಥಳಕ್ಕೆ ಮಹಾಸ್ವಾಮಿಯವರ ದಿವ್ಯಸ್ವಾರಿಯು 1917 ರಲ್ಲಿ ಚಿತ್ತೈಸಿದ್ದಾಗ್ಗೆ, ಪೂರ್ಣಕರುಣೆಯಿಂದಲೂ ಸಹಾನುಭೂತಿಯಿಂದಲೂ ಅಪ್ಪಣೆಕೊಡಿಸಿದ ದಿವ್ಯವಚನಗಳಿಂದ ಅದರಲ್ಲೂ ಈ ರೈಲ್ವೆಯ ವಿಚಾರದಲ್ಲಿ ಮಹಾಸ್ವಾಮಿಯವರ ವಿಶೇಷ ಆಸಕ್ತಿಯನ್ನು ವ್ಯಕ್ತಪಡಿಸಿದುದರಿಂದ ನಾವು ಉತ್ತೇಜಕರಾಗಿ ಈ ಕಾರ್ಯಕ್ಕೆ ಹಣವನ್ನು ಸಾಲಮಾಡಿ ಒದಗಿಸಲು ನಿರ್ಧರಿಸಿದೆವು. ಸಾಲದ ಹಣಕ್ಕೆ ಬಡ್ಡಿಯನ್ನೂ ಮೂಲಧನವನ್ನೂ ಕೊಡುವ ವಿಚಾರದಲ್ಲಿ ಮಹಾಸ್ವಾಮಿಯ ಸರ್ಕಾರದವರು ಭರವಸೆಯನ್ನು ಕೊಟ್ಟುದರಮೇಲೆ ನಮ್ಮ ಕೆಲಸವು ಸುಲಲಿತವಾದುದಲ್ಲದೆ ಆವಶ್ಯಕವಾದುದಕ್ಕಿಂತ ಹೆಚ್ಚಾಗಿ 2 ತಿಂಗಳವಧಿಯಲ್ಲಿ ಹಣವು ಶೇಖರವಾಯಿತು. ಈ ಸಹಾಯಕ್ಕಾಗಿ ಸರ್ಕಾರದವರನ್ನು ನಾವು ವಂದಿಸುತ್ತೇವೆ. ತಲೆಯೊಂದಕ್ಕೆ ಸರಾಸರಿ 4,000 ರೂ. ಮೇರಿಗೆ 216 ಜನರಿಂದ ಸಾಲದ ಮೊಬಲಗು ಒದಗಿಸಲ್ಪಟ್ಟಿರುವುದು. ಡಿಸ್ಟ್ರಿಕ್ಟ್ ಬೋರ್ಡಿನವರು ಈ ಸಾಲವನ್ನು ತೀರಿಸುವುದಕ್ಕಾಗಿ ಒಂದು ಸಿಂಕಿಂಗ್‌ಫಂಡನ್ನೇರ್ಪಡಿಸಿರುವರು, ಮತ್ತು ಈ ಫಂಡಿಗೆ ಈಗಾಗಲೇ 62,000 ರೂ.ವರೆಗೂ ಶೇಖರವಾಗಿರುತ್ತದೆ.

3. ಸಂಸ್ಥಾನದ ರೈಲ್ವೆಶಾಖೆಯಿಂದಲೇ ಈ ಲೋಹಮಾರ್ಗದ ಕೆಲಸವು ನಡೆಯಲು ಮಹಾಸ್ವಾಮಿಯವರ ಸರ್ಕಾರದವರು ದಯೆಯಿಟ್ಟು ಏರ್ಪಡಿಸಿದರು. ಈ ಲೋಹಮಾರ್ಗನಿರ್ಮಾಣದಲ್ಲಿ ನಿರೀಕ್ಷಿತವಾಗಿದ್ದ ಕಾಲಕ್ಕಿಂತ ಒಂದು ತಿಂಗಳು ಮುಂಚಿತವಾಗಿಯೂ, ವೆಚ್ಚಕ್ಕಿಂತ ಅರ್ಧಲಕ್ಷ ಕಡಿಮೆಯಾಗಿಯೂ ಆದುದು ಸಂಸ್ಥಾನದ ಲೋಹಮಾರ್ಗದ ಚರಿತ್ರೆಯಲ್ಲಿ ಪ್ರಶಂಸಾರ್ಹವಾಗಿದೆ. ರೈಲ್ವೆಯ ಏಜಂಟರಾದ ಮಿ|| ಡೌವಿಲ್ಟನ್‌ರವರು ಈ ಲೋಹಮಾರ್ಗನಿರ್ಮಾಣಕಾರ್ಯದಲ್ಲಿ ಪ್ರಥಮದಿಂದಲೂ ತಮ್ಮ ಘನವಾದ ಸಲಹೆಯನ್ನು ಕೊಟ್ಟು ಸಾಹಾಯ್ಯಕರಿಸಿದುದಕ್ಕಾಗಿ ಬೋರ್ಡಿನವರು ಅವರುಪಕಾರವನ್ನು ಸ್ಮರಿಸುತ್ತಾರಲ್ಲದೆ, ಇಂಜನಿಯರ್ ಇನ್‌ಚೀಫ್‌ರವರಾದ ಮ|| ಕೆ. ಶ್ರೀನಿವಾಸಯ್ಯಂಗಾರರೂ, ಎಕ್ಸಿಕ್ಯುಟಿವ್ ಇಂಜನೀಯರಾದ ಮ|| ರಾಮಯ್ಯನವರೂ, ಆಕ್ಟಿಂಗ್ ಏಜಂಟರಾದ ಖಾನ್ ಬಹದೂರು ಅಬ್ದುಲ್ ಅಜೀಜ್‌ಖಾನ್‌ರವರೂ, ಸೂ|| ಇಂಜನಿಯರ್ ಮ|| ರಾಮಚಂದ್ರರಾಯರವರೂ ವಿಶೇಷ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಕೆಲಸವನ್ನು ಮಾಡಿಸಿದುದಕ್ಕಾಗಿ ಅವರುಗಳನ್ನು ವಂದಿಸುತ್ತೇವೆ.

4. ಒಟ್ಟುತ್ಪನ್ನದಲ್ಲಿ ಶೇಕಡ 70ರಂತೆ ಕೆಲಸನಡೆಯಿಸಲೊಪ್ಪಿ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಒಳ್ಳೇ ಉತ್ಪನ್ನದ ಭರವಸೆಯನ್ನು ಮೊದಲಿಂದಲೂ ಕೊಟ್ಟುಕೊಂಡು ಬರುತ್ತಿರುವುದಕ್ಕಾಗಿ ಮಹಾಸ್ವಾಮಿಯವರ ಸರ್ಕಾರದವರಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ.

5. ಕಷ್ಟಪಟ್ಟು ಕೆಲಸಮಾಡುವವರೂ, ಉತ್ಸಾಹಶೀಲರೂ ಆದ ರೈತರುಗಳು ವಿಶೇಷವಾಗಿ ವಾಸಿಸತಕ್ಕ ಮತ್ತು ವಿಶೇಷ ಆದಾಯಕರವಾದ ಹಿಪ್ಪಲಿನೇರಳೆ ತೋಟಗಳಿಂದ ಸಮೃದ್ಧಿಯಾಗಿರುವ ಪ್ರದೇಶದಲ್ಲಿ ಈ ರೈಲ್ವೆಯು ಹಾಕಲ್ಪಟ್ಟಿರುತ್ತದೆ, ಅಲ್ಲದೆ ಪುಷ್ಟವಾದ ಕೊಳ್ಳೇಗಾಲತಾಲ್ಲೂಕಿಗೆ ಬಹು ಸಮೀಪಸ್ಥರೈಲ್ವೆಸಂಬಂಧವನ್ನು ಕಲ್ಪಿಸಿರುತ್ತದೆ. ಈ ಮಾರ್ಗಾರಂಭದಿಂದ ನಮ್ಮ ಸಂಸ್ಥಾನದಲ್ಲಿ ಫಲಭರಿತವಾದ ಈ ವಿಶಾಲಪ್ರದೇಶದಲ್ಲಿ ಸಂಪದಭಿವೃದ್ಧಿ ಶಕಾರಂಭಮಾಡಿದಂತಾಗುತ್ತದೆ. ಈ ಲೋಹಮಾರ್ಗವು ಮೈಸೂರು ಮತ್ತು ದಕ್ಷಿಣಇಂಡ್ಯಾಗಳ ಮಧ್ಯೆ ನೇರವಾಗಿ ಪ್ರಯಾಣಮಾಡಲು ಅನುಕೂಲವಾಗಿ ತನ್ಮೂಲಕ ಈ ಡಿಸ್ಟ್ರಿಕ್ಟಿನದು ಮಾತ್ರವಲ್ಲದೆ ಸಂಸ್ಥಾನದ ಸಂಪದಭಿವೃದ್ಧಿಸಾಧಕವಾಗುತ್ತದೆಂದು ನಿರೀಕ್ಷಿಸುತ್ತೇವೆ.

6. ಈ ಲೋಹಮಾರ್ಗವನ್ನು ಮಹಾಸ್ವಾಮಿಯವರ ಅಮೃತಹಸ್ತದಿಂದ ಆರಂಭಿಸಬೇಕೆಂದು ಪ್ರಾರ್ಥಿಸುತ್ತೇವಲ್ಲದೆ ಈ ಮಹೋತ್ಸವದ ಜ್ಞಾಪಕಾರ್ಥವಾಗಿ ನಾವು ಮಹಾಸನ್ನಿಧಿಯಲ್ಲಿ ಕೃತಜ್ಞತಾಪೂರ್ವಕವಾಗಿ ಒಪ್ಪಿಸುವ ಈ ಪೆಟ್ಟಿಗೆಯನ್ನು ಸ್ವೀಕರಿಸಬೇಕೆಂದು ವಿನಮ್ರರಾಗಿ ಬೇಡಿಕೊಳ್ಳುತ್ತ,

ಚಾಮರಾಜನಗರ,
ತಾ|| 27ನೇ ಆಗಸ್ಟ್ 1926.

ಮಹಾಸ್ವಾಮಿಯವರ ರಾಜಭಕ್ತಿಯುತ
ಪ್ರಜೆಗಳಾದ ಡಿಸ್ಟ್ರಿಕ್ಟ್ ಬೋರ್ಡಿನ
ಅಧ್ಯಕ್ಷರು ಮತ್ತು ಮೆಂಬರುಗಳು.

ಚಾಮರಾಜನಗರವಾಸಿಗಳ ವಿಜ್ಞಾಪನಾಪತ್ರಿಕೆ

ಶ್ರೀಮತ್ಕರ್ಣಾಟಮುಖ್ಯ್ಯೀ ಸಕಲಸುರವರೈಃ ಸೇವ್ಯಮಾನಾಂಘ್ರಿಪದ್ಮಾ |
[illegible] ಯವಾಲಾನ್ವಯಜಲಧಿಶರಚ್ಚಂದ್ರಿಕಾಚಂದ್ರಚೂಡಾ ||
ಶ್ರೀ[illegible]ನಂದದಾತ್ರೀ ಶ್ರಿತಜನವರದಾ ಸಚ್ಚಿದಾನಂದರೂಪಾ |
ಶ್ರೀ[illegible] ಮುಂಡಿಕಾಂಬಾ ಕಲಯತು ಕುಶಲಂ ಕೃಷ್ಣರಾಜಕ್ಷಿತೀಂದೋಃ ||

ಶ್ರೀಮತ್ಕರ್ಣಾಟಕ ಸಿಂಹಾಸನಾಧೀಶ್ವರ ಶ್ರೀಮನ್ಮಹೀಶೂರ ಮಹಾರಾಜಾ ಹಿಜ್ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಮಹಾಸ್ವಾಮಿಯವರ ದಿವ್ಯ ಸನ್ನಿಧಿಯಲ್ಲಿ :—

ಮಹಾಪ್ರಭುಗಳವರ ಕೃಪಾಕಟಾಕ್ಷವನ್ನು ಪ್ರಾರ್ಥಿಸುತ್ತಿರುವ ಚಾಮರಾಜನಗರವಾಸಿ ಪ್ರಜಾವರ್ಗವು ವಿನಯ ಭಕ್ತಿಪುರಸ್ಸರವಾಗಿ ಒಪ್ಪಿಸುವ ವಿಜ್ಞಾಪನಾ ಪತ್ರಿಕೆ ಮಹಾಸ್ವಾಮಿ.

ಲೋಕವಿಖ್ಯಾತರೂ ಮಹಾಪ್ರಭುಗಳ ಪಿತಾಮಹರೂ ಆದ ಶ್ರೀಮನ್ಮಹಾರಾಜಾ ಮುಮ್ಮಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರ ಕೃಪಾತಿಶಯದಿಂದ ನಿರ್ಮಿತವಾದ ಈ ಚಾಮರಾಜನಗರಕ್ಕೆ ಮಹಾಪ್ರಭುಗಳವರ ಸವಾರಿಯು ಚಿತ್ತೈಸಿರುವದರಿಂದ ನಮಗುಂಟಾಗಿರುವ ಸಂತೋಷ ಕೃತಜ್ಞತೆಗಳನ್ನು ಪ್ರದರ್ಶಿಸಿ ಸುಸ್ವಾಗತವನ್ನು ಬಯಸಲು ಅನುಮತಿಯನ್ನು ಬೇಡಿಕೊಳ್ಳುತ್ತೇವೆ ಮಹಾಸ್ವಾಮಿ.

ಹಿಂದೆ ಮಹಾಸ್ವಾಮಿಯವರು ಇಲ್ಲಿಗೆ ದಯಮಾಡಿಸಿದ್ದಾಗ ಅಪ್ಪಣೆ ದಯಪಾಲಿಸಿದ್ದ ಮೇರೆಗೆ ನಂಜನಗೂಡಿನಿಂದ ಇಲ್ಲಿಗೆ ರೈಲ್ ಮಾರ್ಗವು ನಿರ್ಮಿಸಲ್ಪಟ್ಟು ನಮ್ಮ ಆಶಾಂಕುರವು ಪಲ್ಲವಿಸಿ ಮಹಾಪ್ರಭುಗಳವರ ಆಗಮನದಿಂದ ಫಲದಾಯಕವಾಗಿ ಪರಿಣಮಿಸಿದುದರಿಂದ ಈ ಶುಭದಿನವು ಚಿರಸ್ಮರಣೀಯವಾಗಿರುವದು ಮಹಾಸ್ವಾಮಿ. ನಗರಾಭಿವೃದ್ಧಿಗಾಗಿ ಏರ್ಪಡಿಸಲ್ಪಟ್ಟಿರುವ ರೈಲ್ ಮಾರ್ಗವು ಮಹಾಪ್ರಭುಗಳವರು ಮೊದಲೇ ಅಪ್ಪಣೆಕೊಡಿಸಿದ್ದಂತೆ ಈರೋಡುವರೆಗೂ ಮುಂದುವರಿಯುವದಾದರೆ ಸಂಸ್ಥಾನಾವಳಿಯ ವ್ಯಾಪಾರಾದಿ ಸೌಕರ್ಯಗಳು ಅಭಿವೃದ್ಧಿಗೊಂಡು ದೇಶಾಭ್ಯುದಯ ಉಂಟಾಗುವದರಲ್ಲಿ ಸಂಶಯವಿರುವದಿಲ್ಲ ಮಹಾಸ್ವಾಮಿ.

ಈ ಊರಿಗೆ ಮುಖ್ಯ ಜಲಾಧಾರವಾದ ಚಾಮಸಾಗರ ಕೆರೆಯು ಮಹಾಸ್ವಾಮಿಯವರ ಅನುಗ್ರಹದಿಂದ ಜೀರ್ಣೋದ್ಧಾರವಾಗಿ ಜಲವಸತಿ ದೊರೆಯುವಂತಾದುದಕ್ಕಾಗಿ ನಾವೆಲ್ಲರೂ ಅತ್ಯಂತ ಕೃತಜ್ಞರಾಗಿದ್ದೇವೆ ಮಹಾಸ್ವಾಮಿ. ಈ ಕಾಮಗಾರಿಯ ಸಂಪೂರ್ಣ ಫಲವು ದೊರೆಯಬೇಕಾದಲ್ಲಿ ಈ ಕೆರೆಗೆ ಬರತಕ್ಕ, ಆಳದ ಮಹಾಸ್ವಾಮಿಯವರು ತೆಗೆಯಿಸಿದ್ದ, ಕಾಲ್ವೆ ಮತ್ತು ಅಣೆಕಟ್ಟು ಶಿಥಿಲವಾಗಿ ನೀರು ಬರಲು ತೊಂದರೆಯಾಗಿರುವದರಿಂದ ಇವುಗಳನ್ನು ಕ್ರಮಪಡಿಸಲು ಅಪ್ಪಣೆ ದಯಪಾಲಿಸಿ ಈ ನಗರವಾಸಿಗಳಿಗೆ ಜಲಸಮೃದ್ಧಿಯುಂಟಾಗುವಂತೆ ಅನುಗ್ರಹಿಸಬೇಕೆಂದು ಬೇಡಿಕೊಳ್ಳುತ್ತೇವೆ ಮಹಾಸ್ವಾಮಿ.

ನಮ್ಮ ತಾಲ್ಲೂಕಿನ ಸಂಪದಭ್ಯುದಯಕ್ಕಾಗಿ ಸುವರ್ಣಾವತೀ ನದಿಯೊಂದು ಮುಖ್ಯಾಧಾರವಾಗಿದೆ ಮಹಾಸ್ವಾಮಿ. ಇದರ ಕಾಲುವೆಗಳು ಶಿಥಿಲವಾಗಿರುವದರಿಂದ ಅವುಗಳನ್ನು ಜೀರ್ಣೋದ್ಧಾರಮಾಡಿಸಿ ಕೃಷಿ ಸಂಪತ್ತಿಗೆ ಅನುಕೂಲಪಡಿಸಿಕೊಟ್ಟು ಕಾಪಾಡಬೇಕಾಗಿ ಬೇಡುತ್ತೇವೆ ಮಹಾಸ್ವಾಮಿ.

ಮಹಾಸ್ವಾಮಿಯವರ ಪರಮಾನುಗ್ರಹಕ್ಕೆ ಪಾತ್ರರಾಗಿರುವ ನಾವುಗಳೆಲ್ಲರೂ ಮಹಾಸ್ವಾಮಿಯವರಿಗೂ ರಾಜಕುಟುಂಬದವರಿಗೂ ಕೃಪಾನಿಧಿಯಾದ ಜಗದೀಶ್ವರನು ಸಮಸ್ತ ಸನ್ಮಂಗಳಗಳನ್ನೂ ದಯಪಾಲಿಸಲೆಂಬುದಾಗಿ ನಿರಂತರವೂ ಭಕ್ತಿಯಿಂದ ಪ್ರಾರ್ಥನೆಮಾಡುತ್ತೇವೆ ಮಹಾಸ್ವಾಮಿ.

ಇತಿ,

ಚಾಮರಾಜನಗರ
27-8-1926. } ಮಹಾಸ್ವಾಮಿಯವರ ಪ್ರಜಾವರ್ಗಕ್ಕೆ ಸೇರಿದವರಾದ
ಚಾಮರಾಜನಗರದ ನಿವಾಸಿಗಳು.

ನೋಟೀಸ್.

ದಾವಣಗೆರೆ ವಾಸಿ ಹರಪನಹಳ್ಳಿ ಕೋರಿಮಠದ ಶಾಂತಯ್ಯ ಬಿನ್ ಕೊಟ್ರಯ್ಯ ಎಂಬ 50 ವರ್ಷದ ವಯಸ್ಸಿನ ಇವರು ಸಮಸ್ತಜನರಿಗೂ ತಿಳಿಯಪಡಿಸುವುದೇನೆಂದರೆ.—ಶಾಂತಯ್ಯನಾದ ನನ್ನ ಮಗ ಸುಮಾರು 22 ವರ್ಷದ ರುದ್ರಯ್ಯನೆಂಬುವವನು ದಾವಣಗೆರೆಯಲ್ಲಿ ಬೇರೆ ವಾಸವಾಗಿರುತ್ತಾನೆ. ತಂದೆಯಾದ ನನ್ನ ಆಜ್ಞೆಯಲ್ಲಿರುವುದಿಲ್ಲ. ನನ್ನ ಸ್ವಯಾರ್ಜಿತವಾದ ಆಸ್ತಿಯಲ್ಲಿ ಸದರಿ ರುದ್ರಯ್ಯನಿಗೆ ಏನು ಹಕ್ಕು ಇರುವುದಿಲ್ಲ. ರುದ್ರಯ್ಯನಿಗೆ ಹಕ್ಕು ಇರುವ ಪಿತ್ರಾರ್ಜಿತವಾದ ಆಸ್ತಿಯೇನು ಇರುವುದಿಲ್ಲ. ಈತನಿಗೆ ಯಾರೂ ಸಾಲಕೊಡಕೂಡದು. ಆರೀತಿ ಯಾರಾದರು ಸಾಲ ಕೊಟ್ಟರೆ ಸಾಲಕ್ಕೆ ತಂದೆಯು ಮತ್ತು ತಂದೆಯ ಸ್ವಾಧೀನದಲ್ಲಿರುವ ಸ್ವಯಾರ್ಜಿತವಾದ ಆಸ್ತಿಯು ಬಾಧ್ಯವಾಗಲಾರದು. ಈ ಹಿಂದೆ ಯಾರಾದರೂ ಸಾಲ ಕೊಟ್ಟಿದ್ದಾಗ್ಯೂ, ಅದಕ್ಕೆ ಅವರೇ ಜವಾಬ್ದಾರರೇ ವಿನಃ ತಂದೆಯಾದ ನಾನು ಜವಾಬ್ದಾರನಲ್ಲ. ಇತರ ಯಾವ ಆಸ್ತಿಗೂ ಜವಾಬ್ದಾರಿಯೂ ಇರುವುದಿಲ್ಲ.

ಶಾಂತಯ್ಯನವರ ಎಡಗೈ ಹೆಬ್ಬೆಟ್ಟಿನ ಗುರ್ತಿಗೆ
ರುದ್ರಯ್ಯನ ಬರಹ.
[2—1] ಹರಪನಹಳ್ಳಿ ಕೋರಿಮಠ, ದಾವಣಗೆರೆ.

ಡಾಕ್ಟರ ಚನ್ನಪ್ಪ ಸಂಗಪ್ಪ ಪಾಟೀಲ, ಎಲ್. ಎಮ್. ಅಂಡ್ ಎಸ್. ಅಧ್ಯಕ್ಷರು, ಹುಬ್ಬಳ್ಳಿ ವೀರಶೈವಮಹಾಜನಸಭೆ, ಹುಬ್ಬಳ್ಳಿ ಇವರಿಂದ.

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಸನ್ಮಾನಿತ ಅಧ್ಯಕ್ಷರು, ಅಖಿಲಭಾರತೀಯವೀರಶೈವಮಹಾಸಭೆಯ ಚಿರಸ್ಥಾಯಿಫಂಡ್ ಕಮಿಟಿ, ಬೆಂಗಳೂರ ಇವರ ಸನ್ನಿಧಿಗೆ —

ಮಹಾಶಯರೆ, ಮೇಲ್ಕಂಡ ಹು. ವಿ. ಮಹಾಜನಗಳ ಸಭೆಯ ವತಿಯಿಂದ ನಾನು ತಮ್ಮ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವದೇನಂದರೆ.—

ಹುಬ್ಬಳ್ಳೀಪುರವು ಇತಿಹಾಸಪ್ರಸಿದ್ಧವಾದ ಪ್ರಾಚೀನನಗರವೂ, ವ್ಯವಹಾರೋದ್ಯೋಗಗಳಲ್ಲಿ ಪ್ರಸಿದ್ಧವನ್ನು ಹೊಂದಿ ಮುಂದಾದಂಥ ಮತ್ತು ಅಖಿಲಕರ್ನಾಟಕದ ಹಾಗು ವೀರಶೈವರ ಕೇಂದ್ರಸ್ಥಾನವೂ ಆಗಿದೆ. ಅಖಿಲಭಾರತೀಯವೀರಶೈವಮಹಾಸಭೆಯು ಇಲ್ಲಿ ಈವರೆಗೆ ಒಮ್ಮೆಯು ಕೂಡ ನೆರೆಯದೆ ಇರುವದರಿಂದಲೂ ಈಸಾರೆ ಇಲ್ಲಿಯೇ ನೆರೆಯಿಸಲೇಬೇಕೆಂದು ಬಹುಭಾಗಗಳಿಂದ ಆಗ್ರಹಪೂರ್ವಕವಾದ ವಿನಂತಿಗಳೂ ಸೂಚನೆಗಳೂ ಬಂದಿರುವದರಿಂದಲೂ, ರೈಲು ಮುಂತಾಗ ಎಲ್ಲ ಪ್ರಕಾರದ ಸಾಧನಗಳೂ ಅನುಕೂಲತೆಗಳೂ ವಿಶೇಷವಾಗಿರುವದರಿಂದಲೂ ಈಸಾರೆ ಇದೇ 1926 ನೇ ಡಿಸೆಂಬರತಿಂಗಳಲ್ಲಿ ಹುಬ್ಬಳ್ಳಿ ಪಟ್ಟಣದಲ್ಲಿ ಅಖಿಲಭಾರತೀಯ ವೀರಶೈವಮಹಾಸಭೆಯನ್ನು ನೆರೆಯಿಸಬೇಕೆಂದು ಇಲ್ಲಿಯ ವೀರಶೈವಮಹಾಜನಗಳ ಅಭಿಪ್ರಾಯವದೆ.

ಅ. ಭಾ. ವೀರಶೈವಮಹಾಸಭೆಯನ್ನು ಇಲ್ಲಿ ನೆರೆಯಿಸಿದಲ್ಲಿ ಅಖಿಲಕರ್ನಾಟಕದ ಎಲ್ಲ ಭಾಗಗಳಿಂದ ಹೆಚ್ಚಾಗಿ ಜನಗಳು ಬಂದು ಸೇರುವದರಿಂದ ಮಹಾಸಭೆಯ ವೆಚ್ಚವು ಹೆಚ್ಚಾಗುವಪ್ರಯುಕ್ತ ಸುಮಾರು 10 ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಕೊಡಬೇಕೆಂದು ತಮ್ಮ ಕಮಿಟಿಯ ಸನ್ನಿಧಿಯಲ್ಲಿ ಇಲ್ಲಿಯ ಮಹಾಜನಗಳ ಆಗ್ರಹದ ನಮ್ರವಿನಂತಿಯದೆ.

ಈ ಬಗ್ಗೆ ಇಲ್ಲಿಯ ಮಹಾಜನಗಳ ಸಭೆಯಲ್ಲಿ ಆದ ನಿರ್ಮಾನಗಳ ಒಂದು ಪ್ರತಿಯನ್ನು ಇದರೊಂದಿಗೆ ಇಟ್ಟಿದೆ. ಇದೆಲ್ಲವನ್ನೂ ಅವಲೋಕಿಸಿ ಇಲ್ಲಿಯ ಮಹಾಜನಗಳ ಬೇಡಿಕೆಯನ್ನು ತೀವ್ರ ಪೂರ್ಣಮಾಡಬೇಕಾಗಿ ಆಶಿಸುತ್ತೇನೆ, ಹಾಗು ಉತ್ತರವನ್ನು ನಿರೀಕ್ಷಿಸುತ್ತೇನೆ.

ತಮ್ಮ ವಿಧೇಯ,
ಹುಬ್ಬಳ್ಳಿ,
ತಾ|| 23-8-1926. } C. S. Patil,
ಅಧ್ಯಕ್ಷ,
ಹುಬ್ಬಳ್ಳಿ ವೀರಶೈವಮಹಾಜನಸಭೆ.

ಹುಬ್ಬಳ್ಳಿ ವೀರಶೈವಮಹಾಜನರ ಸಭೆಯು.

ಸ್ಥಳ.—ಶ್ರೀ ಯಾವಗಲ್ಲ ಶಿವಪ್ಪನವರ ಹೊಸಬಂಗಲೆ.
ತಾರೀಖು 19-8-1926 ನೆಯ ಇಸವಿ.

ಈ ಸಭೆಯ ಅಧ್ಯಕ್ಷಸ್ಥಾನವನ್ನು ಡಾಕ್ಟರ ಚನ್ನಪ್ಪನವರು ಪಾಟೀಲ ಎಲ್. ಎಂ. ಅಂಡ್ ಎಸ್. ಇವರು ವಹಿಸಬೇಕೆಂದು ಶ್ರೀ. ಚೆನ್ನಬಸಪ್ಪನವರು ಬೆಂಡಿಗೇರಿ ಇವರು ಸೂಚಿಸಿದರು; ಶ್ರೀ. ಚನ್ನಯ್ಯನವರು ಹಂದಿಗೋಳಮಠ ಇವರು ಅನುಮೋದಿಸಿದರು. ಅದು ಸರ್ವಾನುಮತದಿಂದ ಪಾಸಾಯಿತು.

ನಿರ್ಣಯಗಳು.

(1) ಅಖಿಲಭಾರತೀಯ ವೀರಶೈವಮಹಾಸಭೆಯನ್ನು ಇದೇ 1926ನೇ ಡಿಸೆಂಬರ ತಿಂಗಳ ಸುಮಾರಕ್ಕೆ ಈ ಊರ (ಹುಬ್ಬಳ್ಳಿಯ) ಲ್ಲಿ ಕರೆಯುವದಾಗಬೇಕೆಂತಲೂ, ಮಹಾಸಭೆಯ ವೆಚ್ಚಕ್ಕಾಗಿ ಸುಮಾರು 10 ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಕೊಡುವಬಗ್ಗೆ ಅ. ಭಾ. ವೀ. ಮ. ಚಿರಸ್ಥಾಯಿಫಂಡಿಗೆ (ಬೆಂಗಳೂರ) ವಿನಂತಿಯನ್ನು ಮಾಡಿಕೊಳ್ಳಬೇಕೆಂತಲೂ ಈ ಸಭೆಯ ಅಭಿಪ್ರಾಯವದೆ.

ಸೂಚಕರು.—ರಾವಬಹದ್ದೂರ ಸಿ. ಕೋ. ಕಂಬಳಿ, ಎಲ್‌ಎಲ್.ಬಿ. ಎಮ್. ಎಲ್. ಸಿ.
ಅನುಮೋದಕರು.—ಶ್ರೀ. ಗು. ಮ. ಮಿರ್ಜಿ, ಎಲ್‌ಎಲ್.ಬಿ., ವಕೀಲ.
ಸಮರ್ಥಕರು.—ಶ್ರೀ. ವೀರಪ್ಪನವರು ಹೊಸಕೋಟಿ.
ಇದು ಸರ್ವಾನುಮತದಿಂದ ಪಾಸಾಯಿತು.

(2) ಈ ಬಗ್ಗೆ ಕೆಲಸಮಾಡುವದಕ್ಕೆ ಈ ಸಭೆಯ ಅಧ್ಯಕ್ಷರಿಗೆ ಅಧಿಕಾರಕೊಟ್ಟಿದೆ.

ಸೂಚಕರು.—ಶ್ರೀ. ಶಾಂತಯ್ಯನವರು ಹಿರೇಮಠ.
ಅನುಮೋದಕರು:—ಶ್ರೀ. ಗದಿಗೆಪ್ಪನವರು ಕುಸುಗಲ್ಲ.
ಸರ್ವಾನುಮತದಿಂದ ಪಾಸಾಯಿತು.

ಹುಬ್ಬಳ್ಳಿ,
19-8-1926. } C. S. Patil,
ಸಭೆಯ ಅಧ್ಯಕ್ಷರು.

ಖರೆ ನಕಲು ಇರುತ್ತದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಬಡ ಉಪಾಧ್ಯಾಯರ ತೊಂದರೆಗಳು.

ಪ್ರೈಮರಿಸ್ಕೂಲುಗಳ ಉಪಾಧ್ಯಾಯರಿಗೆ ಆಯಾ ರೇಂಜಿನ ಅ|| ಇ|| ರವರಿಂದ ಸಂಬಳವು ಬಿಲ್ಲಾಗಿ ಬರುತ್ತದೆಯಷ್ಟೆ. 10 ಮೈಲಿ ಒಳಗಿರುವ ಉಪಾಧ್ಯಾಯರುಗಳು ತಾಲ್ಲೂಕು ಕಛೇರಿಗೆ ಹೋಗಿ ಸಂಬಳವನ್ನು ತೆಗೆದುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಅವರಗಿರತಕ್ಕ ತೊಂದರೆಗಳು ಎಲ್ಲರ ಗಮನಕ್ಕೂ ಬರತಕ್ಕವಾಗಿವೆ. ತಾಲ್ಲೂಕು ಕಛೇರಿಗಳಿಗೆ ಬಿಲ್ಲು ಬಂದಮೇಲೇ, ಅಲ್ಲಿಂದ ಬಟವಾಡೆ ಆಗಬೇಕಾದರೆ ಪ್ರತಿತಿಂಗಳ 15 ನೇ ತಾ|| ವರೆಗೂ ಆಗುತ್ತದೆ. ಆದರಮೇಲೆ ಅಲ್ಲಿನ ಗುಮಾಸ್ತರು ಮಾಸ್ಟರನ್ನು ಗಣನೆಗೆತಾರದೆ, ಇತರ ಕೆಲಸಗಳಿಗೆ ಗಮನಕೊಟ್ಟು ಇವರನ್ನು ಕಾಯಿಸುತ್ತಾರೆ. ಚೆನ್ನರಾಯಪಟ್ಟಣದಲ್ಲಿ ಸಾಯಂಕಾಲ 6 ಘಂಟೆವರೆಗೂ ಒಂದು ವೇಳೆ ಕಾಯಬೇಕಾಗಿ ಬಂದಿತು. "ದೇವರು ವರಕೊಟ್ಟರೂ ಪೂಜಾರಿ ಕೊಡ" ಎಂಬಂತೆ, ತಾವು ತಮ್ಮ ಕೈಯಿಂದಲೇ ಕೊಡುವಂತೆ, ಉಪಾಧ್ಯಾಯರನ್ನು ತೃಣೀಕರಿಸಿ ತೊಂದರೆಪಡಿಸುವುದು ಅನ್ಯಾಯ. ಈ ವಿಷಯಕ್ಕೆ ಅಧಿಕಾರಿಗಳ ಗಮನವು ಕೊಡಲ್ಪಡಬೇಕೆಂದು ಬೇಡುತ್ತೇನೆ.

ದುರ್ಜನಶತ್ರು.

ಹರೂರು ಮಾರಿಕಾಂಬೆಯುತ್ಸವದಲ್ಲಿ ಪ್ರಾಣಿಹಿಂಸೆಯನ್ನು ನಿಲ್ಲಿಸಿದುದು.

ಸೊರಬ ತಾ|| ಹರೂರು ಗ್ರಾಮದೇವತೆಯಾದ ಮಾರಿಕಾಂಬೆಯುತ್ಸವವು ಪ್ರತಿವರ್ಷವೂ ನಡೆಯುವಕಾಲದಲ್ಲಿ ಕುರಿ ಕೋಣ ಮೊದಲಾದ ಮೂಗಪ್ರಾಣಿಗಳು ಬಲಿಕೊಡಲ್ಪಡುವುದು ಪದ್ಧತಿಯಾಗಿತ್ತು. ಆದರೆ ಈ ವರ್ಷ ಮ|| ಗಳಾದ ಮಾವಲಿ ಯಜಮಾನ್ ಮಲ್ಲಪ್ಪಗೌಡರು, ಯಜಮಾನ್ ವೀರಪ್ಪಗೌಡರು ಮತ್ತು ತಾವರೇಕೊಪ್ಪದ ಕಾರ್ಭಾರ್ ಸೋಮಪ್ಪಗೌಡರು ಸರ್ವಪ್ರಾಣಿಗಳನ್ನೂ ಮನುಷ್ಯನು ತನ್ನಂತೆಯೇ ಕಂಡು ಪ್ರೀತಿಸುವುದು ಧರ್ಮವಾಗಿರುವದರಿಂದ ಅವನ್ನು ಹಿಂಸೆಪಡಿಸುವುದು ಮಹಾಪಾಪಕರವೆಂದು ಜನರಿಗೆ ಬೋಧಿಸಿ ಹರೂರು ಮತ್ತು ಮಾವಲಿ ಗ್ರಾಮಗಳ ಜನರು ಪ್ರಾಣಿಹಿಂಸೆಯಿಲ್ಲದೆ ಸಾತ್ವಿಕರೀತಿಯಿಂದ ಗ್ರಾಮದೇವತೋತ್ಸವವು ಜರಗುವಂತೆ ಮಾಡಿದ್ದು ಬಹಳ ಶ್ಲಾಘ್ಯವೂ ಪುಣ್ಯಪ್ರದವೂ ಆಗಿರುತ್ತದೆ. ಇದರಂತೆ ಇತರ ಗ್ರಾಮಗಳಲ್ಲೂ ಜನರು ಮಾರಿಕೋತ್ಸವ ಕಾಲದಲ್ಲಿ ಯಾವ ಪ್ರಾಣಿಯನ್ನೂ ಕೊಲ್ಲದೆ ಹಣ್ಣುಕಾಯಿ ಮುಂತಾದ ಫಲಗಳ ಅರ್ಚನೆಯಿಂದಲೂ ಅನ್ನಸಂತರ್ಪಣೆಯಿಂದಲೂ ದೇವತೆಯನ್ನು ತೃಪ್ತಿಗೊಳಿಸಿ ಆಕೆಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುವ,

ಪ್ರಾಣಿಹಿಂಸಾ ಸಂತಾಪಕ.

ಶ್ರೀಮದ್ವೀರಶೈವಮಹಾಜನಗಳಲ್ಲಿ ವಿಜ್ಞಾಪನೆ.

ಮೈಸೂರು ಸ್ಟೇಟ್ ಕಡೂರು ತಾಲ್ಲೂಕು ಯಗಟಿಪುರದ ಶ್ರೀಪ್ರಸನ್ನಮಲ್ಲಿಕಾರ್ಜುನಸ್ವಾಮಿಯವರ ರಥೋತ್ಸವಭಂಗ ವಿಷಯವನ್ನು ಯಾರೋ ಮಹನೀಯರು ಇದೇ ಸ್ಟಾರ್‌ಪತ್ರಿಕೆಯಲ್ಲಿ ತಿಳಿಸಿರತಕ್ಕುದು ಸರ್ವರಿಗೂ ವೇದ್ಯವಾಗಿರುತ್ತದೆ. ವೀರಶೈವಮತಾಭಿಮಾನಿಗಳೂ ಮುಖ್ಯವಾಗಿ ಧರ್ಮೋದ್ಧಾರಕ್ಕಾಗಿ ಅವತರಿಸಿರುವ ಜಗದ್ಗುರುಗಳವರೂ ಈ ವಿಷಯವನ್ನು ಕಂಡೂ ಕೇಳಿಯೂ ಯಾವ ಪ್ರಯತ್ನವನ್ನೂ ಮಾಡದೆ ಸುಮ್ಮನೆ ನಿದ್ರಿಸುತ್ತಿರುವುದನ್ನು ನೋಡಿದರೆ ಅತ್ಯಂತ ವ್ಯಸನವಾಗುತ್ತದೆ. ಅನಾದಿಯಿಂದ ನಡೆದು ಬಂದಿರುವ ವೀರಶೈವ ಅರ್ಚಕರ ಹಕ್ಕನ್ನು ಕೆಲವರು ಬ್ರಾಹ್ಮಣರು ಸಹಿಸಲಾರದೆ ಸ್ವಜಾತಿಯ ಅಧಿಕಾರಿಗಳ ಸಹಾಯದಿಂದ ಅರ್ಚಕರನ್ನು ದೇವಸ್ಥಾನದಿಂದ ಹೊರಹೊರಡಿಸಿ ರಥೋತ್ಸವ ಕಾರ್ಯವನ್ನು ಬ್ರಾಹ್ಮಣ ಅರ್ಚಕರಿಂದ ನಡೆಯಿಸಲು ಪ್ರಯತ್ನಪಟ್ಟು ದೇವತೋತ್ಸವಕ್ಕೆ ಭಂಗತಂದದ್ದಲ್ಲದೆ ವೀರಶೈವಮತಕ್ಕೇನೇ ಅವಮಾನವನ್ನುಂಟುಮಾಡಿರುತ್ತಾರೆ. ವೀರಶೈವಬಂಧುಗಳು ಇಂಥಾ ಅವಮಾನಪರಿಹಾರಕ್ಕೆ ಯಾವ ಪ್ರಯತ್ನವನ್ನೂ ಮಾಡದೆ ಮೌನರಾಗಿರುವದು ಲಜ್ಜಾಸ್ಪದವಾಗಿರುವದರಿಂದ ಮತೋದ್ಧಾರಕರೆಂದು ವಿಜೃಂಭಿಸುತ್ತಿರುವ ಜಗದ್ಗುರುಗಳು ಈಗಲಾದರೂ ತಕ್ಕ ಪ್ರಯತ್ನವನ್ನು ನಡಿಯಿಸಿ ಮತದ ಗೌರವವನ್ನು ಕಾಪಾಡಿ ತಮ್ಮ ಬಿರುದನ್ನು ಕಾಪಾಡಿಕೊಳ್ಳುವರೆಂದು ನಿರೀಕ್ಷಿಸುವ,

ಮತಾಭಿಮಾನಿ.

ಕಾರ್ಕಾರ್ಹಳ್ಳಿ, ತಾ|| ಹಾರೋಹಳ್ಳಿ.

ಈ ಊರಿನ ಸುತ್ತಲೂ ಸುಮಾರು 5-6 ಮೈಲಿ ದೂರದವರೆಗೆ ಸುತರಾಂ ಮಳೆಯಿಲ್ಲದೆ ಪೈರುಗಳೆಲ್ಲಾ ಒಣಗುತ್ತಿವೆ. ಕುಡಿಯುವುದಕ್ಕೆ ನೀರು ಸಿಕ್ಕುವುದೇ ದುರ್ಲಭವಾಗಿದೆ. ಸುತ್ತುಮುತ್ತಲಿರುವ ಅನೇಕ ಊರುಗಳಲ್ಲಿ ಬಿತ್ತನೆಯ ಕೆಲಸವೇ ನಡೆಯಲಿಲ್ಲ. ದನಗಳಿಗೆ ಮೇವಿಲ್ಲದೆ ಸೊಪ್ಪುಸದೆಗಳನ್ನು ಹಾಕುತ್ತಲಿದ್ದಾರೆ. ಇದೇ ತಿಂಗಳು 5 ನೇ ತಾರೀಖಿನಲ್ಲಿ ಹ|| ಡೆಪ್ಯುಟಿ ಕಮಿಷನರ್ ಸಾಹೇಬರವರೂ, ತಾ|| 11, 12 ರಲ್ಲಿ ವಿದ್ಯಾಭ್ಯಾಸದ ಇಲಾಖಾ ಇ|| ಜ|| ಮೆಥ್ಯಾಸ್‌ಸಾಹೇಬರೂ, ಅಗ್ರಿಕಲ್ಚರಲ್ ಯಜ್ಞನಾರಾಯಣ ಅಯ್ಯರ್‌ರವರೂ, ಸಬ್‌ಡಿವಿಜನ್ ಆಫೀಸರವರೂ, ಅಮಲ್ದಾರ್‌ಸಾಹೇಬರವರೂ ಖುದ್ದು ದಯಮಾಡಿಸಿ ಪರಾಂಬರಿಸಿರುತ್ತಾರೆ. ನೀರು ಕೆಟ್ಟಿರುವುದರಿಂದ ಅನೇಕ ಜನರು ಖಾಯಿಲೆಯಾಗುತ್ತಿದ್ದಾರೆ. ನೇಟೀವ್ ಡಾಕ್ಟರ್ ಎಂ. ಎಸ್. ವೆಂಗಟಸ್ವಾಮಯ್ಯನವರು ಅನೇಕ ರೋಗಿಗಳಿಗೆ ಚಿಕಿತ್ಸೆ ಮಾಡುತ್ತಾ ಪ್ರಜಾನುರಾಗಿಗಳಾಗಿರುತ್ತಾರೆ. ಅನೇಕ ಜನರಿಗೆ ಕೂಲಿದೊರಕದೆ ಜೀವನಕ್ಕೆ ಬಹಳ ತೊಂದರೆಯಾಗಿರುತ್ತದೆ. ಈ ವಿಷಯವನ್ನು ಘನಸರ್ಕಾರದವರು ದಿವ್ಯಚಿತ್ತಕ್ಕೆ ತಂದುಕೊಂಡು ಅಭಿಮಾನಪೂರ್ವಕವಾಗಿ ರಿಲೀಫ್ ಕಾಮಗಾರಿಮಾಡಿಸುವುದರ ಮೂಲಕ ಬಡವರ ಕಷ್ಟನಿವಾರಣೆಯಾಗುವಂತೆ ಮಾಡಿ ಕಾಪಾಡಬೇಕೆಂದು ಪ್ರಾರ್ಥಿಸುವ,

ಓರ್ವ ಗ್ರಾಮವಾಸಿ.

ತ್ಯಾಮಗೊಂಡ್ಲುನಲ್ಲಿ ದೇವಸ್ಥಾನದ ಹೀನಸ್ಥಿತಿ.

ಈ ಊರಿನಲ್ಲಿ ಜಮೀನುದಾರರೂ, ವೀರಶೈವಮಂಡಲಿಯ ಪ್ರಮುಖರೂ ಆದ ಮ|| ಪಟೇಲ್ ವೀರಶೆಟ್ಟಪ್ಪನವರು ದೇಶದ ಪೇಟೆಗೆ ಸೇರಿದ ದೊಡ್ಡಪೇಟೆಯ ಮಧ್ಯದಲ್ಲಿ ಶಿಥಿಲವಾಗಿರುವ ಶ್ರೀಬಸವೇಶ್ವರಸ್ವಾಮಿಯ ದೇವಾಲಯವನ್ನು ನೂರಾರುರೂಪಾಯಿಗಳ ವೆಚ್ಚದಿಂದ ಜೀರ್ಣೋದ್ಧಾರಮಾಡುತ್ತಾಯಿದ್ದವರು ಯಾವ ಕಾರಣದಿಂದಲೋ ವರ್ಷಾಂತರಗಳಿಂದ ಕಾಂಗಾರಿ ನಿಲ್ಲಿಸಿಬಿಟ್ಟಿರುತ್ತಾರೆ. ಈರೀತಿ ಅರ್ಧಕೆಲಸಮಾಡಿಸಿ ನಿಲ್ಲಿಸಿರುವುದರಿಂದಲೂ, ದೇವರ ಪೂಜೆಯಿಲ್ಲದೆ ಇರುವುದರಿಂದಲೂ ದೇವಸ್ಥಾನದಲ್ಲಿ ಲಂಟಾನಾವಗೈರೆ ಗಿಡಗಳು ಬೆಳೆದು ಮಲಮೂತ್ರವಿಸರ್ಜನೆಗೆ ಅವಕಾಶವಾಗಿರುವದರಿಂದಲೂ ನೋಡುವವರಿಗೆ ತುಂಬಾ ಅಸಮಾಧಾನವಾಗಿರುತ್ತದೆ. ಊರು ಮುಂದೆ ಇರುವ ಕಾಲುವೆಮಳವು ಸಹಾ ಸರಿಯಾದ ಸ್ಥಿತಿಯಲ್ಲಿಲ್ಲದೆ ಇರುವುದೂ ಶೋಚನೀಯವಾಗಿದೆ. ಇವುಗಳಿಗೆ ಇರತಕ್ಕ ಜಮೀನುಗಳಿಂದ ಬರುವ ವರಮಾನವು ಎಷ್ಟಾಗಿರುತ್ತದೆ. ಅದು ಯಾರಲ್ಲಿದೆ ಎಂಬುದನ್ನು ಕೇಳತಕ್ಕವರು ಯಾರು ? ಈಗಲಾದರೂ ಸದರಿ ಧರ್ಮಾಭಿಮಾನಿಗಳಾದ ಯಜಮಾನ್ ಜವಳಿ ಶಿವಶಂಕರಪ್ಪನವರು, ಇತರ ವೀರಶೈವಮಹನೀಯರು ಮತ್ತು ದೇಶದ ಪೇಟೆಗೆ ಸೇರಿದ ಮ|| ಮಾರಣ್ಣವಗೈರೆ ಇತರ ಜನಾಂಗದವರು ಸಹಾ ಐಕಮತ್ಯದಿಂದ ಮೇಲ್ಕಂಡ ದೇವಸ್ಥಾನ ಮತ್ತು ಮಠಗಳಿಗೆ ಆಗಬೇಕಾದ ಕೆಲಸಗಳನ್ನು ಜಾಗ್ರತೆಮಾಡಿಸಿ ದೇವಸ್ಥಾನದಲ್ಲಿ ಪೂಜೆಯು ನಡೆಯುವಂತೆಯೂ, ಪರಸ್ಥಳದಿಂದ ಬಂದಂಥವರಿಗೆ ಮಠದಲ್ಲಿ ಇಳಿದುಕೊಳ್ಳಲು ಅನುಕೂಲವಾಗಿರುವಂತೆಯೂ ಮಾಡಿ ತಮ್ಮ ಗೌರವಪ್ರತಿಷ್ಠೆಗಳನ್ನು ಕಾಪಾಡಿಕೊಂಡು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಮೋಕ್ಷವನ್ನೂ ಸಂಪಾದಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ದೈವಭಕ್ತ.

ಸೊಂಡೂರುಸ್ಟೇಟಿನ ಜೋಷೀ ಬಾಬಿನ ವಿಷಯ.

ಬಳ್ಳಾರಿಜಿಲ್ಲೆಯಲ್ಲಿ ಸೊಂಡೂರುಸ್ಟೇಟಿಗೆ ಸೇರಿದ ಕಣಿವೇಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ವೀರಶೈವ ಸದ್ಗೃಹಸ್ಥನು ತನ್ನ ಮನೆಯಲ್ಲಿ ವೀರಶೈವಮತಧರ್ಮಾಧಿಕಾರಿಗಳಿಂದ ವಿವಾಹಕಾರ್ಯಗಳನ್ನು ನಡಿಸುವ ಸಮಯದಲ್ಲಿ ಆ ಗ್ರಾಮದ ಬ್ರಾಹ್ಮಣಜೋಯಿಸನು ತನಗೆ ರೂ. 5 ಬಾಬು ಬರತಕ್ಕದ್ದೆಂದು ಸೊಂಡೂರು ದಿವಾನ್ ಕೋರ್ಟಿನಲ್ಲಿ ದಾವಾ ತಂದಿದ್ದನು. ದಿವಾನರವರು ಇದು ಧಾರ್ಮಿಕವಿಚಾರವಾದ್ದರಿಂದ ಈ ವಿಷಯವನ್ನು ಖುದ್ದು ರಾಜರೇ ವಿಚಾರಮಾಡಬೇಕೆಂದು ರಾಜರ ಸನ್ನಿಧಿಗೆ ಕಳುಹಿಸಿಕೊಟ್ಟರು. ಇನ್ನುಮುಂದೆ ರಾಜರ ಸಮ್ಮುಖದಲ್ಲಿಯೇ ಸದರಿ ದಾವೆಯು ವಿಮರ್ಶವಾಗತಕ್ಕದ್ದದೆ. ಈ ವ್ಯಾಜ್ಯಕ್ಕೆ ಸರ್ವವಿಧವಾದ ಸಹಾಯಮಾಡತಕ್ಕದ್ದೆಂದು ಕಣಿವೇಹಳ್ಳಿಯ ರಾ|| ಶ್ರೀ ಜವಳಿ ಮಲ್ಲಪ್ಪನವರು ಕಂಪ್ಲಿಗೆ ಖುದ್ದು ಬಂದು ಅಲ್ಲಿಯ ವೀರಶೈವತರುಣಸಂಘಕ್ಕೆ ಅರಿಕೆಮಾಡಿಕೊಂಡದ್ದರಮೇಲೆ ಸದರಿ ಸಂಘದಿಂದ ಆಗಬೇಕಾದ ಸಹಾಯದ ಬಗ್ಗೆ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟಿವೆ. (1) ಸೊಂಡೂರು ಸ್ಟೇಟಿನಲ್ಲಿ ನಡೆಯುವ ಜೋಯಿಷ್ಯ ಬಾಬಿನ ವ್ಯಾಜ್ಯದ ವಿಷಯಕ್ಕೆ ಅನುಕೂಲವಾದಮಟ್ಟಿಗೆ ಸಾಕ್ಷಿಗಳನ್ನೂ, ಶಾಸ್ತ್ರಾಧಾರಗಳನ್ನೂ, ಪಂಡಿತರನ್ನೂ ಕಳಿಸಲಾಗುತ್ತದೆ. (2) ವ್ಯಾಜ್ಯದ ವಿಷಯವಾಗಿ ವ್ಯಾಜ್ಯದ ಕರ್ತರಿಗೆ ತಮ್ಮ ಇಲಾಖೆಯಿಂದ ದ್ರವ್ಯಸಹಾಯವು ಸರಿಯಾದಷ್ಟು ಸಿಕ್ಕದೆ ಇದ್ದಲ್ಲಿ ಈ ಗ್ರಾಮಕ್ಕೆ ಬಂದರೂ ಸಂಘವು ಗ್ರಾಮದ ಶಕ್ತಿಗನುಸರಿಸಿ ದ್ರವ್ಯಸಹಾಯ ಮಾಡುತ್ತದೆ. (3) ಇದೇ ರೀತಿಯಾಗಿ ಪ್ರತಿ ವೀರಶೈವಸಮಾಜಾಭಿಮಾನಿಯಿಂದ ಸಹಾಯವು ಸದರಿ ವ್ಯಾಜ್ಯಕ್ಕೆ ದೊರೆಯಬೇಕೆಂದು ಕೋರುತ್ತದೆ. ಈ ವ್ಯಾಜ್ಯವು ಸೊಂಡೂರು ಪ್ರಭುತ್ವದವರ ಸನ್ನಿಧಿಗೆ ಹೋಗಿರುವದರಿಂದ ಪ್ರಭುಗಳು ಈ ವಿಷಯವನ್ನು ಚೆನ್ನಾಗಿ ವಿಚಾರಮಾಡಿ ವಿಮರ್ಶೆಮಾಡುತ್ತಾರೆಂದು ಪೂರ್ಣ ನಂಬಿದೆ.

ಮಾದಿನಮಠದ ಸಂಗಣ್ಣಯ್ಯ,
ವೀರಶೈವತರುಣಸಂಘದ ಸೆಕ್ರೆಟರಿ, ಕಂಪ್ಲಿ.

ಬ್ಯಾಡಿಗಿ ಶ್ರೀ ಶಿವಯೋಗೀಶ್ವರವೀರಶೈವಬೋರ್ಡಿಂಗಿನ ಪ್ರಥಮ ವಾರ್ಷಿಕಸಮಾರಂಭವು.

ಕಳೆದ ತಾ|| 12 ರ ಸಾಯಂಕಾಲ 4½ ಘಂಟೆಗೆ ಶ್ರೀ ಶಿವಯೋಗೀಶ್ವರರ ಭಾವಚಿತ್ರದ ಮೆರವಣಿಗೆಯು ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು 6 ಗಂಟೆಗೆ ಶ್ರೀಗಳವರ ಮಠವನ್ನು ಸೇರಿತು. ಮರುದಿನ ಪ್ರಾತಃಕಾಲ 8 ಗಂಟೆಯಿಂದ 10 ರ ವರೆಗೆ ಶ್ರೀ ಶಿವಯೋಗೀಶ್ವರರ [illegible] ನೆರವೇರಿದಮೇಲೆ ಗಣಾರಾಧನೆಯು [illegible] 1½ ಘಂಟೆಯವರೆಗೆ ನಡೆಯಿತು. ಬಳಿಕ 4½ ಇಂದ 6½ ವರೆಗೆ [illegible] ಸಭಾಕಾರ್ಯವು ಪ್ರಾರಂಭವಾಯಿತು. ಮ|| [illegible] ಅಧ್ಯಕ್ಷಸ್ಥಾನ ವಹಿಸಿದ್ದರು. ಬೋರ್ಡಿಂಗು ಮ|| [illegible] ರಿಪೋರ್ಟು ಓದಲ್ಪಟ್ಟಿತು. ತರುವಾಯ ಮುಂದಿನವರ್ಷದ ಚಾಲಕರ ಚುನಾವಣೆಯ ವಿಷಯವು ಹೊರಟು ಮಿ|| ದಾನಪ್ಪ ಕಬ್ಬೂರ ಇವರು ಪ್ರೆಸಿಡೆಂಟರಾಗಿಯೂ, ಕುರುವತ್ತೆಪ್ಪ ಸೆಟ್ರ ಇವರು ಚೇರ್‌ಮನ್ನರಾಗಿಯೂ ಗೊತ್ತುಮಾಡಲ್ಪಟ್ಟರು. ಹಾಗು ಮ್ಯಾನೇಜಿಂಗ ಕಮಿಟಿಯ ಮೆಂಬರರೂ, ಗೌರವಕಾರ್ಯದರ್ಶಿಗಳೂ ಇಂಥಿಂಥವರೇ ಇರಬೇಕೆಂಬ ವಿಷಯವೂ ನಿರ್ಧರಿಸಲ್ಪಟ್ಟಿತು. ಬಳಿಕ ಬೋರ್ಡಿಂಗಿನಲ್ಲಿರತಕ್ಕ ಹುಡುಗರ ಸಂಖ್ಯೆಯ ವಿಷಯವಾಗಿ ಚರ್ಚೆಯು ನಡೆದು, ಹೆಚ್ಚು ಹುಡುಗರನ್ನು ತೆಗೆದುಕೊಂಡರೆ ಖರ್ಚು ಪೂರೈಸಲಿಕ್ಕಿಲ್ಲವಾದ್ದರಿಂದ ವಿದ್ಯಾರ್ಥಿಗಳ ಸಂಖ್ಯೆಯು 30 ಕ್ಕೆ ಮೀರಕೂಡದೆಂದು ಗೊತ್ತುಮಾಡಲ್ಪಟ್ಟಿತು. ತರುವಾಯ ಅಧ್ಯಕ್ಷ ಸಾಹೇಬರು ತಮ್ಮ ಅಮೃತವಾಣಿಯಿಂದ ಸಭಿಕರನ್ನು ಆನಂದಗೊಳಿಸಿ 20 ರೂ. ಗಳನ್ನು ಈ ಬೋರ್ಡಿಂಗಿನ ರಿಜರ್ವಫಂಡಿಗಾಗಿ ಕೊಟ್ಟರು. ಹಾಗು ಈ ಸಭೆಗೆ ಆಗಮಿಸಿದ್ದ ಮಲ್ಲೂರು. ಮೋಟೆ ಬೆನ್ನೂರಗ್ರಾಮಗಳ ಜನರಲ್ಲಿ ಅನೇಕರೂ ಈ ಊರ ಜನರಲ್ಲಿ ಅನೇಕರೂ ದೇಣಿಗಿ ವರ್ಷಾಶನಗಳನ್ನು ಕೊಡಲು ವಾಗ್ದಾನಮಾಡಿದರು. ತರುವಾಯ ಅಧ್ಯಕ್ಷರ ಹಾಗು ಸಭಿಕರ ಅಭಾರಮನ್ನಣೆಯೂ ಹಾರ ತುರಾಯಿ ತಾಂಬೂಲವಿನಿಯೋಗವೂ ಆಗಿ ಮಂಗಲಗಳೊಡನೆ ಸಭಾವಿಸರ್ಜನೆಯಾಯಿತು.

ಸಿ. ಎಸ್. ಹುಂಬಿ, ಸೆಕ್ರೆಟರಿ.

ಮಿಡ್ಲ್‌ಸ್ಕೂಲು ಲಭಿಸಿದುದು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಉತ್ತರಭಾಗದ ಕೊನೆಯ ಪ್ರಾಂತದಲ್ಲಿರುವ ಸಾದರಹಳ್ಳಿಯೇ ಮೊದಲಾದ ಅಕ್ಕಪಕ್ಕದ ಗ್ರಾಮಾಂತರಗಳ ಸ್ಕೂಲುಗಳಿಗೆಲ್ಲ ಕೇಂದ್ರಸ್ಥಾನವಾಗಿ ದಿನೇ ದಿನೇ ಉಚ್ಛ್ರಾಯಸ್ಥಿತಿಯನ್ನು ಹೊಂದುತ್ತಿರುವ ಕಂದಿಕೆರೆಯ ಇ. ಮಿ. "ಸ್ಕೂಲ್ ವರ್ಧಂತಿ" ಆದರ "ಬಡಾವಣೆ ಕಟ್ಟಡದ ಪ್ರವೇಶ" ಈ ಉತ್ಸವಗಳು ಈ ತಿಂಗಳ 12 ನೆಯ ತಾ|| ನಲ್ಲಿ ತುಂಕೂರ್ ಡಿ|| ಇನ್‌ಸ್ಪೆಕ್ಟರರ ಅಧ್ಯಕ್ಷತೆಯಲ್ಲಿಯೂ ರೇಂಜ್ ಇನ್|| ರವರ ಉಪಾಧ್ಯಕ್ಷತೆಯಲ್ಲಿಯೂ ನಡೆಯುವಂತೆ ನಿಶ್ಚಯಿಸಲ್ಪಟ್ಟಿದ್ದ ಸುಮುಹೂರ್ತಕ್ಕೆ ಸರಿಯಾಗಿ "ಈ ಪ್ರಾಂತದ ಬಡಪ್ರಜೆಗಳ ಮೊರೆಯನ್ನು ಲಾಲಿಸಿ ಘನಸರ್ಕಾರದವರು ಮಿಡ್ಲ್‌ಸ್ಕೂಲನ್ನು ದಯಪಾಲಿಸಿರುವ ಸಂತೋಷವಾರ್ತೆಯೂ ಬಂದು ಆ ದಿನವೇ Middle III year ಕ್ಲಾಸು ಆರಂಭವಾಗಲು ಎಲ್ಲರಿಗೂ "ದರಿದ್ರನಿಗೆ ನಿಧಿ ಸಿಕ್ಕಿದಷ್ಟು ಆನಂದವುಂಟಾಯಿತು." "ಮೂರೂಕೂಡಿದ್ದು ಪೂರ್ವಸುಕೃತ" ಎಂಬ ಆರ್ಯೋಕ್ತಿಗನುಸಾರವಾಗಿ ಇವು ಮೂರು ಉತ್ಸವಗಳೂ ಮಿಳಿತವಾಗಿಯೇ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ಮಂಗಳವಾದ್ಯಗಳಿಂದೊಪ್ಪುತ್ತಿದ್ದ ಈ ಮಹೋತ್ಸವಾಂಗದಸಭೆಯಲ್ಲಿ ಮೊದಲೇ ಆಹ್ವಾನಿತರಾಗಿದ್ದ ಅಧ್ಯಕ್ಷರೊಡನೆ ಚಿಕ್ಕನಾಯಕನಹಳ್ಳಿ ಕಸಬಾ ಮಿಡ್ಲ್‌ಸ್ಕೂಲ್ ಹೆ|| ಮಾ|| ರವರೂ, D. P. W. ಖಾತೆಯವರೂ, ರೆವಿನ್ಯೂಖಾತೆಯವರೂ ಸುಖಾಸನಗಳನ್ನಲಂಕರಿಸಿರಲಾಗಿ ಸುತ್ತುಮುತ್ತಿನ ಗ್ರಾಮಾಂತರಗಳ ಪ್ರಮುಖರೇ ಮೊದಲಾದವರಿಂದಲೂ ಕಿಕ್ಕಿರಿದಿದ್ದ ಸಭಾಮಂಟಪವು ಚಿತ್ರವಿಚಿತ್ರ ಕೈಗೆಲಸಗಳಿಂದ ಅತಿಮನೋಹರವಾಗಿ ಕಂಗೊಳಿಸುತ್ತಿತ್ತು. ಆ ಕಾಲದಲ್ಲಿ ಕೇವಲ ಪುಟ್ಟ ಬಾಲಕರಿಂದ ಅತ್ಯಂತ ಚಮತ್ಕಾರದೊಡನೆ ಅಭಿನಯಿಸಲ್ಪಟ್ಟ "ಶ್ರೀ ಯದುರಾಯರ ಚರಿತ್ರೆ" ಎಂಬ ನಮ್ಮ ಶ್ರೀಮನ್ಮಹಾರಾಜರವರ ಮೂಲಪುರುಷರ ಖ್ಯಾತಿಯನ್ನು ಪ್ರದರ್ಶಿಸುವ ನಾಟಕವೂ, ರಸಹಾಸ್ಯಗರ್ಭಿತವೂ ನೀತಿಬೋಧಕವೂ ಆದ ಬಾಲಕರ ಸಂಭಾಷಣೆಯೂ, ವಿದ್ಯಾಭ್ಯಾಸದ ಉಪನ್ಯಾಸಗಳೂ, ಅಧ್ಯಕ್ಷರಿಬ್ಬರ ಯುಕ್ತಿಯುಕ್ತಗಳಾದ ಹಿತೋಕ್ತಿಗಳೂ ಮೇಳೈಸಿ ಪ್ರೇಕ್ಷಕರನ್ನೆಲ್ಲ ಹರ್ಷಸಾಗರದಲ್ಲಿ ಮುಳುಗಿಸಿ ಬೆರಗುಮಾಡಿದ್ದುವು. ಇಷ್ಟಕ್ಕೆಲ್ಲ ಸ್ವಾಮಿಕಾರ್ಯತತ್ಪರರಾಗಿ ಸಹಾಯೋಪಾಧ್ಯಾಯರುಗಳಲ್ಲಿ ಒಡಹುಟ್ಟಿದವರಂತೆ ವರ್ತಿಸುತ್ತಾ ಪ್ರಭುಗಳ ಮತ್ತು ಜನಮಂಡಲಿಯ ವಿಶ್ವಾಸಗೌರವಗಳಿಗೆ ಪಾತ್ರರಾಗಿರುವ ಹೆಡ್ಮಾಸ್ಟರರ ಮುತವರ್ಜಿಯೂ, ವಿದ್ಯಾಭಿಮಾನಿಗಳಾದ ಗ್ರಾಮಮುಖಂಡರ ಬೆಂಬಲವೂ ಅವಕ್ಕೆ ತಕ್ಕಂತೆ ರೇಂಜ್ ಇನ್|| ರವರಾದಿಯಾಗಿ ಪ್ರೋತ್ಸಾಹಕೊಟ್ಟುದರಿಂದುಂಟಾದ ಘನಸರ್ಕಾರದವರ ಪೂರ್ಣದಯೆಯೂ ಮೂಲಾಧಾರಗಳು. ಭಗವಂತನು ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಇತೋಪ್ಯತಿಶಯಗಳಾದ ಸನ್ಮಂಗಳಗಳನ್ನೀಯಲಿ.

ಪ್ರಜಾಮಂಡಲಿ, ಕಂದಿಕೆರೆ.

ಬ್ಯಾಡಿಗಿ ಶ್ರೀಲಿಂಗರಾಜಲೈಬ್ರರಿಯ 5 ನೇ ವರ್ಷದ ಸಮಾರಂಭವು

ಪದ್ಧತಿಯಂತೆ ಕಳೆದ ತಾ|| 12 ನೇ ಗುರುವಾರ (ಶ್ರಾವಣಶುದ್ಧ ೪) ದಿವಸ ಇಲ್ಲಿಯ ಲಿಂಗರಾಜಲೈಬ್ರರಿಯ 5 ನೇ ವರ್ಷದ ಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಅಂದು ಸಾಯಂಕಾಲ 4½ ಘಂಟೆಗೆ ಶ್ರೀಲಿಂಗರಾಜಪ್ರಭುಗಳವರ ಭಾವಚಿತ್ರದ ಮೆರವಣಿಗೆಯು ಭಜನೆ ಬ್ಯಾಂಡವಾದ್ಯಗಳೊಡನೆ ಹೊರಟು ಪುರಪ್ರದಕ್ಷಿಣೆಮಾಡಿಕೊಂಡು 6 ಘಂಟೆಗೆ ಲೈಬ್ರರಿಯು ಇರತಕ್ಕ ಶ್ರೀಗಳವರ ಮಠವನ್ನು ಸೇರಿತು. ತರುವಾಯ ಸಭಾಕಾರ್ಯವು ಪ್ರಾರಂಭವಾಯಿತು. ಇಲ್ಲಿಯ ಸುಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀಯುತ ಕೇಮಚಂದ್ ಶೇಟ್ ಮಾರವಾಡಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕಾರ್ಯಕ್ರಮದ ಮೇರೆಗೆ ಮಿ|| ಸಿದ್ದಪ್ಪಾ ಹುಂಬಿ ಇವರಿಂದ 5 ನೇ ವರ್ಷದ ರಿಪೋರ್ಟು ಓದಲ್ಪಟ್ಟು ಸರ್ವಾನುಮತದಿಂದ ಪಾಸಾಯಿತು. ಆಮೇಲೆ ವೇ|| ಇಂಡೀಮಠ ಶ್ರೀಯುತ ಹಾವೇರಿ, ಶ್ರೀಯುತ ಕ್ಯಾತಾರಿ, ಶ್ರೀಯುತ ಬೆಟಗೇರಿ ಮೊದಲಾದವರ ಸ್ಫೂರ್ತಿದಾಯಕ ಭಾಷಣಗಳಾದವು. ತರುವಾಯ ಲೈಬ್ರರಿಯ ಮುಂದಿನವರ್ಷದ ಚಾಲಕರ ಚುನಾವಣೆಯಾಗಿ ಕಳೆದ ವರ್ಷ ಕಾರ್ಯಭಾರವನ್ನು ವಹಿಸಿದ್ದ ಶ್ರೀಯುತ ಮುರಿಗೆಪ್ಪಾ ಸೆಟ್ಟರು ಇವರು ಪ್ರೆಸಿಡೆಂಟರಾಗಿಯೂ, ಮಿ|| ಫಕ್ಕೀರಪ್ಪ ದಂಡೂರು ಇವರು ಚೇರ್ಮನ್ನರಾಗಿಯೂ, ಮಿ|| ಸಿದ್ದಪ್ಪಾ ಹುಂಬಿ ಇವರು ಸೆಕ್ರೆಟರಿಗಳಾಗಿಯೂ, ಮಿ|| ರುದ್ರಪ್ಪಾ ವೀರಭದ್ರಪ್ಪಾ ವಾಲೀಸೆಟ್ಟರ ಇವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಮಿ|| ಪುಟ್ಟಪ್ಪಾ ಹುಂಬಿ ಟ್ರೆಜರರಾಗಿಯೂ ನಿಯಮಿಸಲ್ಪಟ್ಟರು. ಮ್ಯಾನೇಜಿಂಗ್ ಕಮಿಟಿಯ ಮೆಂಬರರಾದರೂ ಕಳೆದ ವರ್ಷ ಇದ್ದವರೇ ಇರಬೇಕೆಂದು ನಿರ್ಣಯವಾಯಿತು. ಹಾಗೂ ಸಿದ್ಧಪ್ಪಾ ಹುಂಬಿ ಮೊದಲಾದ 5 ಜನರು ಆಜನ್ಮಮ್ಯಾನೇಜಿಂಗ್ ಕಮಿಟಿಯ ಮೆಂಬರರಾಗಿರತಕ್ಕದ್ದೆಂದು ನಿರ್ಣಯವಾಯಿತು. ಬಳಿಕ ಅಧ್ಯಕ್ಷರ ಭಾಷಣವಾಗಿ ಆ ಮಹನೀಯರಿಂದ 5 ರೂಪಾಯಿಗಳ ದೇಣಿಗೆಯು ಕೊಡಲ್ಪಟ್ಟಿತು. ಇನ್ನೂ ಅನೇಕ ಜನರು ಹೊಸದಾಗಿ ವರ್ಗಣಿದಾರರಾದರು. ಈ ಲೈಬ್ರರಿಗೆ ಪ್ರಥಮವರ್ಷದಲ್ಲಿ ೫೦ ಜನ ವರ್ಗಣಿದಾರರಿದ್ದಲ್ಲದೆ 123 ರೂಪಾಯಿಯ ವಾರ್ಷಿಕ ಉತ್ಪನ್ನವೂ ಇತ್ತು. ಈಗ ವರ್ಗಣಿದಾರರ ಸಂಖ್ಯೆಯೂ, ವಾರ್ಷಿಕ ಉತ್ಪನ್ನವೂ ಮೊದಲಿನ ನಾಲ್ಕರಷ್ಟು ಹೆಚ್ಚಾಗಿರುವದೆಂಬ ಸಂಗತಿಯು ಆ ದಿವಸ ಓದಲ್ಪಟ್ಟ ರಿಪೋರ್ಟಿನಿಂದ ಗೊತ್ತಾಯಿತು. ಇದು ಸ್ತುತ್ಯವು. ಹೊಸವರ್ಗಣಿದಾರರ ವರ್ಗಣಿ ಹಾಗೂ ದೇಣಿಗಿ ಸ್ವೀಕರಿಸುವದಾದಮೇಲೆ ಅಧ್ಯಕ್ಷರ ಆಭಾರಮನ್ನಣೆ ಸಂಗೀತಶ್ರವಣ ಹಾರ ತಾಂಬೂಲಗಳ ವಿನಿಯೋಗದೊಡನೆ ಸಭೆಯುವಿಸರ್ಜನೆಯಾಯಿತು. ಈ ಲೈಬ್ರರಿಯ ಮಂಡಳಿಯವರು ಪ್ರತಿಬುಧವಾರಕ್ಕೊಮ್ಮೆ ಸಭೆಕೂಡಿಸಿ ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳಮೇಲೆ ಉಪನ್ಯಾಸಮಾಡುತ್ತಿರುವದನ್ನು ನೋಡಿ ನನ್ನ ಮನಸ್ಸಿಗೆ ಬಹು ಆನಂದವೆನಿಸುತ್ತದೆ.

ಓರ್ವ ವೀರಶೈವತರುಣ.

ಚಿಕ್ಕನಾಯಕನಹಳ್ಳಿ ಶ್ರೀಬನಶಂಕರಿ ಮತ್ತು ಕಾಳಿಕಾದೇವಿಯರ ಉತ್ಸವ.

ಚಿಕ್ಕನಾಯಕನಹಳ್ಳಿಯ ದೇವಾಂಗಮತಸ್ಥರು ತಮ್ಮ ಕುಲದೇವರುಗಳಾದ ಶ್ರೀಬನಶಂಕರಿ ಮತ್ತು ಕಾಳಿಕಾದೇವಿಯರ ಉತ್ಸವವನ್ನು ಟವುನ್ ನಾಲ್ಕು ಬೀದಿಗಳಲ್ಲಿಯೂ ನಡೆಯಿಸುವಂತೆ ತಾಲ್ಲೂಕು ಮ್ಯಾಜಿಸ್ಟ್ರೇಟರವರಲ್ಲಿ ಲೈಸನ್ಸು ತೆಗೆದುಕೊಂಡು ತಾರೀಕು 25-7-26 ನೇ ಭಾನುವಾರ ಬೆಳಿಗ್ಗೆ ಸುಮಾರು 8 ಘಂಟೆಗೆ ಉತ್ಸವವನ್ನು ಹೊರಡಿಸಿಕೊಂಡು ಹೊರಟು ಪೇಟೆಬೀದಿಗೆ ಬಂದರು. ಅಷ್ಟರಲ್ಲಿ ಈ ಗ್ರಾಮದ ಕುರುಬರ ಪೈಕಿ ಸುಮಾರು 200 ಜನರು ಸೇರಿಕೊಂಡು ಉತ್ಸವವನ್ನು ಮುಂದೆ ಬಿಡುವುದಿಲ್ಲವೆಂದು ದೊಂಬಿಮಾಡಿ ಅಡ್ಡಿಪಡಿಸಿದರು. ಆಗ ಪೊಲೀಸ್ ಸಬ್‌ಇನ್‌ಸ್ಪೆಕ್ಟರವರು, ಬ್ಯಾಡಿ ಲೈಸನ್ಸು ಆಗಿರುತ್ತೆ ಎಂದು ಹೇಳಿ ಲೈಸನ್ಸು ತೆಗೆಸಿ ಓದಿ ಹೇಳಿದರು. ಈರೀತಿ ಓದಿಹೇಳಿದರು ಕೂಡ ಅವರು ನಮ್ಮ ಸಂಘದ ಸೆಕ್ರೆಟರಿಗಳಾದ ಮ|| ನೀಲಗಿರಿ ಸಂಜೀವಯ್ಯನವರು ಬಂದು ಹೇಳುವವರೆಗೂ ಉತ್ಸವವನ್ನು ಮುಂದಕ್ಕೆ ಬಿಡುವುದಿಲ್ಲವೆಂದೂ, ಇಲ್ಲಿಯೇ ತಲೆಗಳು ಬಿದ್ದುಹೋಗಲಿ, ಏನುಮಾಡುತ್ತೀರಿ ಮಾಡಿರಿ ಎಂದೂ ಹೇಳುತ್ತ ರಸ್ತೆಯಲ್ಲಿ ಕಿಕ್ಕಿರಿದು ಅಡ್ಡಲಾಗಿ ನಿಂತುಕೊಂಡರು. ಪೊಲೀಸ್ ಸಬ್‌ಇನ್‌ಸ್ಪೆಕ್ಟರವರು ದೊಂಬಿಯನ್ನು ಅಡಗಿಸಿ ಲೈಸನ್ಸ್‌ಪ್ರಕಾರ ಉತ್ಸವವನ್ನು ನಡೆಸಲು ತಕ್ಕ ಸಿಬ್ಬಂದಿ ಇಲ್ಲದ್ದರಿಂದ ದೇವರುಗಳನ್ನು ತಡೆದ ಸ್ಥಳದಲ್ಲಿಯೇ ಕೂಡಿಸಿದರು. ಈ ವಿಚಾರವಾಗಿ ಹುಜೂರ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೆ ನಡೆದ ಸಂಗತಿಯನ್ನು ರಿಪೋರ್ಟು ಮಾಡಿಕೊಳ್ಳಲು ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ತಕ್ಕ ಸಿಬ್ಬಂದಿಯೊಡನೆ ಹೋಗಿ ಉತ್ಸವವನ್ನು ನಡೆಸುವಂತೆ ಡಿ|| ಮ್ಯಾಜಿಸ್ಟ್ರೇಟರು ಅಪ್ಪಣೆ ಕೊಟ್ಟದ್ದರಮೇರೆ ಸೂಪರಿಂಟೆಂಡೆಂಟ್ ಸಾಹೇಬರು ಸಿಬ್ಬಂದಿಯೊಡನೆ ದಯಮಾಡಿಸಿ ತಾರೀಕು 27-7-26 ನೇ ಮಂಗಳವಾರ ಬೆಳಿಗ್ಗೆ ಸುಮಾರು 8 ಘಂಟೆಗೆ ಉತ್ಸವವನ್ನು ಹೊರಡಿಸಿ ನಾಲ್ಕು ಬೀದಿಗಳಲ್ಲಿಯೂ ಉತ್ಸವನಡೆಯಿಸಿ ಮಧ್ಯಾಹ್ನ ಸುಮಾರು 12 ಘಂಟೆಗೆ ಪೂರೈಸಿದರು. ಬಂದಿದ್ದ ಪುರವಾಸಿಗಳೆಲ್ಲರಿಗೂ ಶ್ರೀ ಅಮ್ಮನವರಮಂಗಳಾರತಿ ಪ್ರಸಾದಗಳು ಹಂಚಲ್ಪಟ್ಟುವು. ತಕರಾರು ಮಾಡಿದವರ ಸುಳಿವೇ ಇರಲಿಲ್ಲ. ಈಚೆಗೆ ಸರ್ಕಾರದ ಆರ್ಡರನ್ನು ಉಲ್ಲಂಘಿಸಿ ತಡೆದಿದ್ದ ಕೆಲವು ಜನಗಳಮೇಲೆ ಸರ್ಕಾರದವರು ಕೇಸುನಡೆಸಿರುವುದಾಗಿ ತಿಳಿಯಬಂದಿದೆ. ಹಿಂದೆ ಈ ಉತ್ಸವ ಸಂಬಂಧವಾಗಿ ತಾ|| 1-5-25ರಲ್ಲಿ ಕ್ರಮವಾದ ನಡವಳಿಕೆ ನಡೆದು ಹುಜೂರ್ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರಿಂದ ಲೈಸನ್ಸು ಆಗಿ ಉತ್ಸವವು ನಡೆದಿದ್ದರೂ ಈಗ ಈರೀತಿ ತಡೆಯಲ್ಪಟ್ಟಿದ್ದುದು ತುಂಬಾವಿಷಾದಕರವಾಗಿರುತ್ತದೆ. ಈ ವಿಚಾರವನ್ನು ನ್ಯಾಯಸ್ಥಾನದಲ್ಲಿ ವಾದಿಸಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳಬಹುದಾಗಿತ್ತು. ಹಾಗೆ ಮಾಡದೆ ಈರೀತಿ ಉತ್ಸವವನ್ನು ತಡೆದು ಅನೇಕ ಜನರಿಗೆ ಉತ್ಸಾಹಭಂಗವನ್ನು ಉಂಟುಮಾಡಿ ಅನೇಕ ಕಷ್ಟನಷ್ಟಗಳಿಗೆ ಅವಕಾಶವನ್ನುಂಟುಮಾಡಿದ್ದು ತುಂಬಾ ಅನ್ಯಾಯ. ತಮ್ಮ ಹಕ್ಕನ್ನು ನ್ಯಾಯಸ್ಥಾನದಲ್ಲಿ ಹೋಗಿ ಸಾಧಿಸದೆ ತಾ|| 4-8-26 ರ ರಾತ್ರಿ ಸುಮಾರು 9 ಘಂಟೆಯಲ್ಲಿ ಸುಮಾರು 25-30 ಜನರು ಗುಂಪುಕಟ್ಟಿಕೊಂಡು ಈಕೇಸಿಗೆ ಸಾಕ್ಷಿಗಳಾಗಿರತಕ್ಕವರನ್ನು ಹೊಡೆಯುತ್ತೇವೆ, ಹಲ್ಲು ಮುರಿಯುತ್ತೇವೆ, ಮನೆಗೆ ನುಗ್ಗಿ ದೊಂಬಿಮಾಡುತ್ತೇವೆ ಎಂದು ಮಾತನಾಡಿಕೊಂಡು ಹೆಂಗಸರು ಮಕ್ಕಳಿಗೆ ಭೀತಿಯನ್ನು ತೋರ್ಪಡಿಸಿದುದು ಪೌರುಷವೇ ? ಇದಕ್ಕಿಂತಲೂ ನ್ಯಾಯಸ್ಥಾನದಲ್ಲಿ ವಾದಿಸಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುವುದು ವಿವೇಕಿಗಳ ಕರ್ತವ್ಯವಲ್ಲವೇ ?

ಪುರವಾಸಿ.

ಹೊಸದುರ್ಗತಾಲ್ಲೂಕು ಬೆಲಗೂರು.

ಈ ಗ್ರಾಮವು 500 ಮನೆಗಳಿಂದಲೂ 2000 ಪ್ರಜಾಸಂಖ್ಯೆಯಿಂದಲೂ ಕೂಡಿರುತ್ತದೆ. ಇಲ್ಲಿ ಒಂದು ಬ್ರಾಂಚು ಪೋಸ್ಟಾಫೀಸೂ, ಒಂದು ಇನ್‌ಕಂಪ್ಲೀಟ್ ಮಿಡಲ್‌ಸ್ಕೂಲೂ, ಒಂದು ಗರ್ಲ್ಸ್ ಸ್ಕೂಲೂ ಇರುತ್ತವೆಯಲ್ಲದೆ ಮ್ಯುನಿಸಿಪಾಲಿಟಿ ಸಹ ಇದೆ. ಈ ಗ್ರಾಮದಲ್ಲಿ ಮೇಲ್ಕಂಡ ಸೌಕರ್ಯಗಳಿದ್ದಾಗ್ಯೂ ಇವುಗಳಿಂದ ಗ್ರಾಮದ ಪ್ರಜೆಗಳಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲದಿರುವುದಕ್ಕಾಗಿ ತುಂಬಾ ವಿಷಾದಿಸಬೇಕಾಗಿದೆ. ಇಲ್ಲಿರುವ ಬ್ರಾಂಚ್ ಪೋಸ್ಟಾಫೀಸನ್ನು ಡೈಲಿ ಪೋಸ್ಟಾಗಿ ಮಾಡಿಸಿಕೊಡಬೇಕೆಂತ ಇಲಾಖೆಯ ಮೇಲ್ಪಟ್ಟ ಆಫೀಸರಿಗೆ ಈ ಹಿಂದೆ ಅನೇಕಾವರ್ತಿ ಪ್ರಾರ್ಥಿಸಿಕೊಂಡಾಗ್ಯೂ ಸದರಿ ಅಧಿಕಾರಿಗಳಿಗೆ ದಯೆಬರಲಿಲ್ಲ. ಮತ್ತು ಈ ಆಫೀಸಿಗೆ ಹೆಡ್ಡಾಫೀಸಾದ ಕಡೂರಿನಿಂದ ಬರತಕ್ಕ ಕಾಗದ ಪತ್ರ ವಗೈರೆಗಳೆಲ್ಲಾ ಕಾಲಕ್ಕೆ ಸರಿಯಾಗಿ ಬಾರದೆ ಇರುವುದರಿಂದ ಪ್ರಜೆಗಳ ವ್ಯವಹಾರಕ್ಕೂ ಸುಖದುಃಖವ್ಯಾಪ್ತಿಗಳಿಗೂ ತುಂಬಾ ತೊಂದರೆಯಾಗಿದೆ. ಇಷ್ಟೇ ಅಲ್ಲ, ಮ್ಯುನಿಸಿಪಾಲಿಟಿಯ ಶೋಚನೀಯಸ್ಥಿತಿಯನ್ನು ವಿಸ್ತರಿಸಿ ಬರೆದಲ್ಲಿ ದೊಡ್ಡಚರಿತ್ರೆಯಾಗುವುದು. ಆದ್ದರಿಂದ ಇದ್ದದ್ದರಲ್ಲಿ ಸ್ವಲ್ಪ ಭಾಗವನ್ನು ವಿಸ್ತರಿಸುತ್ತೇನೆ. ಸದರಿ ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ಸರ್ಕಾರೀ ಆಫೀಸರೇ ಆಗಲಿ ಮೆಂಬರುಗಳೇ ಆಗಲಿ ಮ್ಯುನಿಸಿಪಾಲಿಟಿಯ ಅಭಿವೃದ್ಧಿ ವಿಷಯವಾಗಿ ಈವರೆವಿಗೂ ಯಾವ ವಿಧವಾದ ಏರ್ಪಾಡುಗಳನ್ನೂ ಮಾಡಿದಂತೆ ಕಂಡುಬರಲಿಲ್ಲ. ಸ್ಯಾನಿಟರಿ ಮತ್ತು ಇಂಜನಿಯರಿಂಗ್ ಇಲಾಖೆಯವರ ದರ್ಶನವೇ ಸ್ವಪ್ನಾವಸ್ಥೆಯಾಗಿರುತ್ತದೆ. ಅಂದಮೇಲೆ ಮ್ಯುನಿಸಿಪಾಲಿಟಿಯ ಸ್ಥಿತಿಯು ಎಷ್ಟರಮಟ್ಟಿಗೆ ಇದೆಯೆಂಬುದನ್ನು ಸರ್ಕಾರದವರೇ ಪರಾಲೋಚಿಸತಕ್ಕದ್ದಾಗಿದೆ. ಈ ಗ್ರಾಮದ ಸ್ಕೂಲಿನ ಸ್ಥಿತಿಯನ್ನು ಹೇಳಲು ಅಸಾಧ್ಯ. ಬಾಲಕರ ಸಂಖ್ಯೆಯು 150 ರಿಂದ 200 ವರೆಗೆ ಇದ್ದು 4 ಜನ ಮಾಸ್ಟರುಗಳು ಕೆಲಸಮಾಡುತ್ತಿದ್ದಾಗ್ಯೂ ವಿದ್ಯಾಭಿವೃದ್ಧಿಯು ಮಾತ್ರ ಏನೂ ಪ್ರಯೋಜನವಿಲ್ಲದಂತಿರುವುದು. ಅಲ್ಲದೆ ಕಮಿಟಿ ಮೆಂಬರುಗಳು ಕೂಡ ಸ್ಕೂಲಿನ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುತ್ತಿಲ್ಲ. ಈಗ ಶಾಲೆ ವಿದ್ಯಾಭ್ಯಾಸಮಾಡತಕ್ಕ ವಿದ್ಯಾರ್ಥಿಗಳಿಗೆ ಸ್ಥಳವು ಬಹಳಮಟ್ಟಿಗೆ ಕಡಿಮೆಯಾಗಿರುವ ವಿಚಾರವಾಗಿ ಇಲಾಖಾ ಆಫೀಸರವರಿಗೆ ಅನೇಕಾವರ್ತಿ ಪ್ರಾರ್ಥಿಸಿಕೊಂಡಾಗೂ ಅವರಿಗೆ ದಯೆಬರಲಿಲ್ಲ. ಹೊಸಕಟ್ಟಡವನ್ನು ಕಟ್ಟಲು ಶ್ಯಾಂಕ್ಷನ್ ಆಗಿ ಬಂದ ಆರ್ಡರು ಕೂಡ ಮಾಯವಾದಂತೆ ಕಾಣುತ್ತದೆ. ಗರ್ಲ್ಸ್ ಸ್ಕೂಲಿನಲ್ಲಿ 50-60 ಹೆಣ್ಣುಮಕ್ಕಳು ವ್ಯಾಸಂಗಮಾಡುತ್ತಾ ಇದ್ದಾಗ್ಯೂ ಸರ್ಕಾರೀ ಕಟ್ಟಡವಿಲ್ಲದೆಯೂ ಉಪಾಧ್ಯಾಯರುಗಳ ಅಲಕ್ಷ್ಯದಿಂದಲೂ ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ತಕ್ಕ ಸೌಕರ್ಯವಿಲ್ಲದಿರುವುದರಿಂದಲೂ ಬಾಲಕಿಯರ ಸಂಖ್ಯೆಯು ಬಹಳಮಟ್ಟಿಗೆ ಕಡಿಮೆಯಾಗುತ್ತಿದೆ. ಇಲಾಖಾಮುಕ್ತೇಸರುಗಳು ಈ ವಿಷಯವನ್ನು ಮೊದಲು ಗಮನಕ್ಕೆ ತಂದುಕೊಂಡು ಸದರಿ ಸ್ಕೂಲುಗಳನ್ನು ಅಭಿವೃದ್ಧಿಗೆ ತರದಿದ್ದರೆ ಹಿಂದುಳಿದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಖಂಡಿತವಾಗಿ ಮುಂದಕ್ಕೆ ಬರುವಂತಿಲ್ಲ. ಈ ಗ್ರಾಮದ ಕೋ ಆಪರೇಟಿವ್ ಸೊಸೈಟಿಯ ವಿಚಾರವಂತು 'ರಾಯಹೇಳಿಂದ ಭೂಪಕೇಳಿಂದ' ಎಂಬ ಗಾದೆಗೆ ಸರಿಯಾಗಿದೆ. ಇದಕ್ಕೆಲ್ಲಾ ಇಲಾಖೆಯ ಮೇಲ್ಪಟ್ಟ ಆಫೀಸರ ಅಶ್ರದ್ಧೆಯೇ ಕಾರಣವು. ಈ ಗ್ರಾಮಕ್ಕೆ 8 ಮೈಲಿ ಫಾಸಲೆಯಲ್ಲಿ ಸರ್ಕಾರೀ ರಸ್ತೆಗಳಿದ್ದು ಈ ಗ್ರಾಮಕ್ಕೆ ಮಾತ್ರ ಸರ್ಕಾರೀ ರಸ್ತೆ ಇಲ್ಲದಿರುವುದನ್ನು ನೋಡಿದರೆ ಬಹಳ ಮಟ್ಟಿಗೆ ವ್ಯಸನಪಡಬೇಕಾಗುತ್ತದೆ. ಸರ್ಕಾರದವರು ಎಷ್ಟೋ ಸಣ್ಣಸಣ್ಣ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮಾಡಿಸಿಕೊಟ್ಟಿದ್ದರೂ ಇಷ್ಟು ದೊಡ್ಡ ಗ್ರಾಮಕ್ಕೆ ಒಂದು ಆಸ್ಪತ್ರೆಯನ್ನು ಇಡಿಸದೆ ಇರುವುದು ಕೇವಲ ಅನ್ಯಾಯವಾದದ್ದೆಂದೇ ಹೇಳಬೇಕು. ಆದ್ದರಿಂದ ಸರ್ಕಾರದವರು ಈಗಲಾದರೂ ಇಲ್ಲಿ ಒಂದು ಆಸ್ಪತ್ರೆಯನ್ನು ಇಡಿಸಿಕೊಟ್ಟು ಪ್ರಜೆಗಳನ್ನು ಕಾಪಾಡುತ್ತಾರಾಗಿ ನಂಬಿರುತ್ತೇನೆ. ಅಲ್ಲದೆ ಮೇಲ್ಕಂಡ ವಿಚಾರಗಳನ್ನು ತಮ್ಮ ಧರ್ಮಚಿತ್ತಕ್ಕೆ ತಂದುಕೊಂಡು ಬಡಪ್ರಜೆಗಳನ್ನು ಕಾಪಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಸ್ವಗ್ರಾಮಾಭಿಮಾನಿ.

ದಿವಂಗತರಾದ ತ್ಯಾಮಗೊಂಡ್ಲು ಶ್ರೀಮಾನ್ ಚಿಟ್ಲೂರು ಜಯರಾಮಶ್ರೇಷ್ಠಿಯವರು.

ಈ ತಿಂಗಳು 11 ನೇ ತಾರೀಖು ಬುಧವಾರ ಪ್ರಾತಃಕಾಲ 8½ ಘಂಟೆಯವೇಳೆಯಲ್ಲಿ, ಈ ಊರಿನ ವಯೋವೃದ್ಧರೂ, ಉಪಕಾರಿಗಳೂ, ವೈಶ್ಯಸಮಾಜದ ಯಜಮಾನರೂ, ಶ್ರೀಜಯರಾಮಧರ್ಮಾಶ್ರಮ, ತುಲಸೀಕೋಟಿ ಇವುಗಳ ಸ್ಥಾಪಕರೂ ಆದ ಶ್ರೀಯುತ ಜಯರಾಮಶ್ರೇಷ್ಠಿಯವರು ಸ್ವರ್ಗಸ್ಥರಾದರು. ಇವರು ಮಹಾಭಕ್ತಿಯುತರಾಗಿಯೂ, ಖಂಡಿತವಾದಿಗಳಾಗಿಯೂ, ನಗರಶಿರೋಮಣಿಗಳಾಗಿಯೂ ಬಾಳಿದವರು. ಸ್ವರ್ಗಸ್ಥರಾಗುವಾಗ್ಯೆ ಅವರಿಗೆ 66 ವರ್ಷವಯಸ್ಸಾಗಿತ್ತು. ಅವರ ಸ್ಥೂಲದೇಹಕ್ಕೆ ವೇದೋಕ್ತಪ್ರಕಾರವಾಗಿ ದಹನಸಂಸ್ಕಾರಗಳು ಜರುಗಿಸಲ್ಪಟ್ಟುವು. ಜಗದೀಶ್ವರನು ಅವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಆರ್ಯವೈಶ್ಯ ಮಹಾಜನರಿಗೊಂದು ಎಚ್ಚರಿಕೆ.

ನಿಮ್ಮ ಗಾಢನಿದ್ರೆಯಿಂದ ಎಚ್ಚರಗೊಳ್ಳಿ ! ನೀವು ಮಾಡುತ್ತಿರುವ ನಿತ್ಯಕರ್ಮಗಳ ಕಡೆ ದೃಷ್ಟಿಯಿಟ್ಟು, ಅದರ ಅರ್ಥವನ್ನು ತಿಳಿದುಕೊಳ್ಳಿ; ಮುಖ್ಯವಾಗಿ ನೀವು ವಿದ್ಯೆಯಲ್ಲಿ ಹಿಂದುಳಿದಿರುವುದೇ ನಿಮ್ಮ ಸಮಾಜಾಭಿವೃದ್ಧಿಗೆ ದೊಡ್ಡ ಕುಂದಕವಾಗಿದೆ. ಸಂಸ್ಕೃತಭಾಷೆಯಕಡೆ ಲಕ್ಷ್ಯವಿಟ್ಟು, ನಿಮ್ಮ ಬಾಲಕರನ್ನು ತರಬಿಯತುಮಾಡಿ, ನಿಮ್ಮ ವಿಧಿಕರ್ಮಗಳನ್ನು ಇತರರನ್ನು ಅಪೇಕ್ಷಿಸದೇ ಸ್ವತಂತ್ರವಾಗಿ ನಡಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಿ. ಹಿಂದಿನಿಂದ ನಿಮ್ಮನ್ನು ಅನುಸರಿಸಿ ಬರುತ್ತಿರುವ ಪುರಾಣಕರ್ಮಗಳಿಗೆ ಖಂಡಿತವಾಗಿಯೂ ತಿಲಾಂಜಲಿಯನ್ನು ಬಿಡಿ. ಇತರಕಡೆ ಇರುವ ನಿಮ್ಮವರು ಈಗ ಎಚ್ಚೆತ್ತು, ಪೂರ್ವದಿಂದಲೂ ದ್ವಿಜರಿಗುಕ್ತವಾದ ವೇದಕರ್ಮಗಳನ್ನು ಆಚರಣೆಯಲ್ಲಿ ತಂದಹಾಗೆ, ನೀವೂ ಪ್ರಯತ್ನಪಟ್ಟು ಜಾರಿಗೆ ತರುವವರಾಗಿ. ನೀವು ಮಾಡತಕ್ಕ ಪ್ರತಿಯೊಂದು ಕರ್ಮವನ್ನೂ ವೇದಮಂತ್ರಗಳಿಂದ ನಡೆಸಿ ಭಗವಂತನ ಪ್ರೀತಿಗೆ ಪಾತ್ರರಾಗಿ. ಇಲ್ಲದೆ ಹೋದಲ್ಲಿ ಖಂಡಿತವಾಗಿಯೂ, ಕೆಲ ಬ್ರಾಹ್ಮಣರು ಮಾಡುತ್ತಿರುವ ಪ್ರಯತ್ನಗಳಿಂದ ನಿಮ್ಮ ಹೆಸರೇ ಉಳಿಯುವಹಾಗಿಲ್ಲ. ಎಚ್ಚರಿಕೆ ! ಏಳಿ !! ಈ ವಿಚಾರಗಳನ್ನು ಹೆಚ್ಚಾಗಿ ತಿಳಿಯಬೇಕಾದಲ್ಲಿ ಬೆಂಗಳೂರು ಆರ್ಯವೈಶ್ಯಮಹಾಸಭಾ ಸೆಕ್ರೆಟರಿಯವರಿಗಾಗಲೀ ತ್ಯಾಮಗೊಂಡ್ಲು ಆರ್ಯವೈಶ್ಯಸಂಘದ ಸೆಕ್ರೆಟರಿಯವರಿಗಾಗಲಿ ಬರೆದುಕೊಳ್ಳಬಹುದು.

ತ್ಯಾಮಗೊಂಡ್ಲು ಬ್ರಾಹ್ಮಣವೈದಿಕಸಭೆಗೆ ಪ್ರಶ್ನೆ.

ಇಲ್ಲಿಯ ವೈದಿಕಬ್ರಾಹ್ಮಣರು ತಮ್ಮ ಬ್ರಾಹ್ಮಣಿಕೆಯ ವಿಚಾರವಾಗಿ ಮೀಟಿಂಗುಗಳನ್ನು ನಡಿಸುಸುತ್ತಿರುವುದಾಗಿ ಕೇಳುತ್ತೇನೆ. ಈಗಿನ ಅವರ ಸ್ಥಿತಿಗನುಸಾರವಾಗಿ ಕೇಳುವ ಪ್ರಶ್ನೆಗಳಿಗೆ ಮೇಲ್ಕಂಡ ಸಭೆಯವರು ಜವಾಬುಕೊಡಲಿ. ಈ ಪ್ರಶ್ನೆಗಳು ನಿದರ್ಶನಪೂರ್ವಕವಾದುವು. ಇವರು ವೇದಶಾಸ್ತ್ರಗಳನ್ನು ನೋಡಿ ಈಗಿನ ಸಮಾಜಸ್ಥಿತಿಯನ್ನು ಇನ್ನೂ ಅಧೋಗತಿಗೆ ತರುವರೋ ಉನ್ನತಸ್ಥಿತಿಗೆ ತರುವರೋ ನೋಡುವ !

(1) ವ್ಯಭಿಚಾರಿಣಿಯಾಗಿದ್ದು ಸಮಾಜದ ಬಹಿಷ್ಕಾರಕ್ಕೊಳಪಡದ ಬ್ರಾಹ್ಮಣತಿಯ ಹೊಟ್ಟೆಯಲ್ಲಿ ಹುಟ್ಟಿದವನು ಬ್ರಾಹ್ಮಣನೆಂದೆನಿಸಲ್ಪಡುವನೇ ?

(2) ಪಂಚಮಹಾಪಾತಕಗಳ ಪೈಕಿ 'ಸುರಾಪಾನ' 'ಸ್ವರ್ಣಸ್ತೇಯ' 'ಗುರುತಲ್ಪಗಮನ' ಮುಂತಾದವುಗಳಲ್ಲಿ ಯಾವುದಾದರೊಂದನ್ನು ಮಾಡಿ ತಕ್ಕ ಪ್ರಾಯಶ್ಚಿತ್ತವನ್ನು ಹೊಂದದಿರುವವನು ಬ್ರಾಹ್ಮಣನೇ ?

(3) 'ಭೃತಕಾಧ್ಯಾಪನ' (ಅಂದರೆ ಸಂಬಳತೆಗೆದುಕೊಂಡು ಪಾಠ ಹೇಳುವುದು) ಮುಂತಾದ ಉಪಪಾತಕಗಳನ್ನು ಮಾಡಿದವನು ಬ್ರಾಹ್ಮಣನೇ?

(4) 'ಅಧ್ಯಯನ' ಗಳನ್ನು ಮಾಡದಿದ್ದವನು ಬ್ರಾಹ್ಮಣನೇ ?

(5) ಕಾಫಿಕ್ಲಬ್-ಊಟದಹೋಟಲ್ ಮುಂತಾದುವುಗಳನ್ನಿಟ್ಟುಕೊಂಡು ಜಾತಿಮತಭೇಧವಿಲ್ಲದೆ ಎಲ್ಲರ ಎಂಜಲನ್ನು ತೆಗೆದು ಜೀವಿಸುವವನು ಬ್ರಾಹ್ಮಣನೇ ?

(6) ಪಂಚಮರಿಗೂ ಮ್ಲೇಚ್ಛರಿಗೂ ವಿದ್ಯೆಯನ್ನು ಕಲಿಸುವವನು ಬ್ರಾಹ್ಮಣನೇ ?

(7) ಮೆಡಿಕಲ್ ಡಿಪಾರ್ಟುಮೆಂಟಿನಲ್ಲಿಯೂ ಎಕ್ಸೈಸುಡಿಪಾರ್ಟುಮೆಂಟಿನಲ್ಲಿಯೂ ಕೆಲಸಮಾಡುವವನು ಬ್ರಾಹ್ಮಣನೇ ?

ವೈಶ್ಯಕುಲಾಭಿಮಾನಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 7 ನೆಯ ಪ್ರಕರಣ.

ಕೆಲವಿಚಾರದಲ್ಲಾದ ಅನುಭವವು.

ಡರ್ಬನ್ನಿನಲ್ಲಿ ನೇಟಾಲು ಎಂಬ ರೇವುಪಟ್ಟಣವನ್ನು ನೇಟಾಲು ಪೋರ್ಟು ಎಂದು ಕೂಡ ಕರೆಯುವರು. ನನ್ನನ್ನು ಕರೆದುಕೊಂಡು ಹೋಗಲು ಅಬ್ದುಲ್ಲಾಸೇಟರು ಸಮುದ್ರತೀರಕ್ಕೆ ಬಂದಿದ್ದರು. ಹಡಗಿನಲ್ಲಿ ಬರುವ ಬಂಧುಮಿತ್ರರನ್ನು ಇದಿರ್ಗೊಳ್ಳಲು ಅನೇಕ ಜನರು ಹಡಗಿನೊಳಕ್ಕೆ ಹತ್ತಿ ಬಂದರು. ಭಾರತೀಯರನ್ನು ಸರಿಯಾಗಿ ಗೌರವಿಸುವುದಿಲ್ಲವೆಂದು ನಾನು ನಿರೀಕ್ಷಿಸಿದೆನು. ಸೇಟರನ್ನು ಬಲ್ಲ ಅನೇಕರು ಅತನನ್ನು ಕೊಂಚ ತೈಚ್ಛ್ಯಭಾವದಿಂದ ನೋಡುತ್ತಿದ್ದರು. ಆ ತೃಣೀಕಾರವು ಅತನಿಗೆ ಸಾಮಾನ್ಯವಾಗಿದ್ದಿತು. ನನ್ನನ್ನು ನೋಡಿದವರು ಕೂಡ ಸ್ವಲ್ಪ ಮಟ್ಟಿಗೆ ಅದರಂತೆಯೇ ಮಾಡತೊಡಗಿದರು. ನನ್ನ ಉಡುಪು ಇತರ ಭಾರತೀಯರ ಉಡುಪಿನಂತೆಯೇ ವಿಲಕ್ಷಣವಾಗಿದ್ದಿತು. ನಾನು ಫ್ರಾಕುಕೋಟನ್ನು ತೊಟ್ಟುಕೊಂಡು ವಂಗದೇಶೀಯರ ಪಾಗಿನಂತೆ ತಲೆಪಾಗನ್ನು ಧರಿಸಿಕೊಂಡಿದ್ದೆನು. ಸೇಟು ನನ್ನನ್ನು ತನ್ನ ಕಾರ್ಯಸ್ಥಾನಕ್ಕೆ ಕರೆದುಕೊಂಡು ಹೋದನು. ಅಲ್ಲಿ ಆತನ ಕೊಠಡಿಯ ಪಕ್ಕದಲ್ಲೇ ನನಗೊಂದು ಕೊಠಡಿಯನ್ನು ಸಿದ್ಧಪಡಿಸಿದ್ದರು. ನಾನು ಅದರಲ್ಲಿಳಿದುಕೊಂಡೆನು. ಆತನ ಸಂಗತಿ ನನಗೆ ತಿಳಿಯದು, ನನ್ನ ಸಂಗತಿ ಆತನಿಗೆ ತಿಳಿಯದು. ಆತನ ಸಹೋದರನು ನನ್ನ ಕೈಲಿ ಕಳುಹಿಸಿಕೊಟ್ಟ ಕಾಗದವನ್ನು ತೋರಿಸಲು ಆತನಿಗೆ ಇನ್ನಷ್ಟು ಸಂದೇಹವುಂಟಾಯಿತು. ಇದೊಂದು ಅನಾವಶ್ಯಕವಾದ ಅಮಿತವ್ಯಯವೆಂದು ಆತನು ತಿಳಿದುಕೊಂಡನು. ನನ್ನ ವೇಷವೂ ನನ್ನ ನಿತ್ಯಕರ್ಮದ ಪದ್ಧತಿಯೂ ಸಾಹೇಬರ ಪದ್ಧತಿಯಂತೆ ಅನಾವಶ್ಯಕಾಧಿಕವ್ಯಯದಿಂದ ಕೂಡಿರುತ್ತದೆಂದು ಆತನು ಭಾವಿಸಿದನು. ನನಗೆ ವಹಿಸಬೇಕಾದ ಕಾರ್ಯವಾವುದೆಂಬುದು ಆತನಿಗೆ ತೋಚಲಿಲ್ಲವು. ಅವರ ವಿವಾದವು ಟ್ರಾನ್ಸುವಾಲಿನಲ್ಲಿ ನಡೆಯುತ್ತಿದ್ದಿತು. ಹೀಗಿರುವಾಗ್ಗ ನನ್ನನ್ನು ಅಲ್ಲಿಗೆ ಕಳುಹಿಸಲು ಅದರಿಂದ [illegible] ಸಹ ಆತನಿಗೆ ಗೊತ್ತಾಗಲಿಲ್ಲವು. ನಾನು [illegible] ನಂಬಿಗಸ್ಥನೆಂದು ಆತನು ಎಷ್ಟರಮಟ್ಟಿಗೆ ನಂಬಬಲ್ಲನು ? [illegible]

ವನ್ನು ಪರಿಶೀಲಿಸಲು ಆತನು ಪ್ರಿಟೋರಿಯಾದಲ್ಲಿರಲು ಅವಕಾಶವಿರಲಿಲ್ಲ. ಪ್ರತಿವಾದಿಗಳಲ್ಲಿದ್ದರು. ಅವರು ನನ್ನನ್ನು ವಶಪಡಿಸಿಕೊಳ್ಳುತ್ತಾರೋ ಏನೋ? ಎಂಬ ಅನುಮಾನವು ಆತನಿಗೆ ಹುಟ್ಟುವುದು ಸಹಜವಾಗಿದ್ದಿತು. ಈ ವಿವಾದ ವಿನಾ ಇತರ ಕೆಲಸವಾವುದನ್ನೂ ನನಗೆ ಕೊಡಬಹುದೆಂಬುದು ಆತನಿಗೆ ತೋರಲಿಲ್ಲವು. ಅವನ್ನು ಗುಮಾಸ್ತರೇ ನನ್ನಗಿನ್ನ ಚೆನ್ನಾಗಿ ಮಾಡಬಲ್ಲವರಾಗಿದ್ದರು. ಗುಮಾಸ್ತರು ತಪ್ಪನ್ನು ಮಾಡಿದಲ್ಲಿ ಅವರನ್ನು ಶಿಕ್ಷಿಸಬಹುದು. ಆ ನಾನು ತಪ್ಪುಮಾಡಿದಲ್ಲಿ ನನ್ನನ್ನು ಕೂಡ ಹಾಗೆ ಶಿಕ್ಷಿಸಲಾಗುವುದೆ? ಆ ಕೇಸನ್ನು ನನಗೆ ಕೊಡದಿದ್ದಲ್ಲಿ ಆತನು ನನ್ನನ್ನು ಸುಮ್ಮನೆ ಕುಳ್ಳಿರಿಸಿಕೊಂಡಿರಬೇಕಾಗಿದ್ದಿತು.

ಅಬ್ದುಲ್ಲಾಸೇಟಿಗೆ ಓದಲು ಬಾರದಿದ್ದರೂ ಅನುಭವವು ಹೆಚ್ಚಾಗಿದ್ದಿತು. ತನಗೆ ವಿವೇಕವು ಬಹಳವಾಗಿದ್ದಿತೆಂದು ಆತನು ಸಹ ತಿಳಿದುಕೊಂಡಿದ್ದನು. ಬ್ಯಾಂಕು ಮ್ಯಾನೇಜರು, ಪಾಶ್ಚಾತ್ಯವರ್ತಕರು, ನ್ಯಾಯವಾದಿಗಳು ಮೊದಲಾದವರಿಗೆ ತನ್ನ ಭಾವವನ್ನು ತಿಳಿಸುವಷ್ಟಿಗೆ ಆತನು ಆಂಗ್ಲಭಾಷೆಯಲ್ಲಿ ಮಾತನಾಡುತ್ತಿದ್ದನು. ಭಾರತೀಯರು ಆತನನ್ನು ಬಹಳವಾಗಿ ಗೌರವಿಸುತ್ತಿದ್ದರು. ಆಗ ಅಲ್ಲಿದ್ದ ದೊಡ್ಡವರ್ತಕಸಂಘಗಳಲ್ಲಿ ಇವರದೊಂದಾಗಿದ್ದಿತು. ಇಷ್ಟಿದ್ದಾಗ್ಯೂ ಆತನು ಯಾರನ್ನೂ ನಂಬುತ್ತಿರಲಿಲ್ಲ. ಅದು ಅವನ ಸ್ವಭಾವವು. ಅವನಿಗೆ ಮಹಮ್ಮದೀಯಮತದಮೇಲೆ ಅತ್ಯಂತ ವಿಶ್ವಾಸವಿದ್ದಿತು. ಆ ಮತರಹಸ್ಯವನ್ನು ಕುರಿತು ಬೋಧಿಸಬೇಕೆಂಬ ಆಸಕ್ತಿಯು ಆತನಿಗಿದ್ದಿತು. ಆತನಿಗೆ ಅರಬ್ಬಿಭಾಷೆಯು ಬಾರದಿದ್ದರೂ ಖುರಾನು ಮೊದಲಾದ ಗ್ರಂಥಗಳಲ್ಲಿ ತಕ್ಕಮಟ್ಟಿಗೆ ಮಾತ್ರ ಪರಿಚಯವಿದ್ದಿತು. ಆತನ ಸಹವಾಸದಿಂದ ಆ ಮತವನ್ನು ಕುರಿತು ನಾನು ಕೊಂಚ ತಿಳಿದುಕೊಳ್ಳುವವನಾದೆನು. ನಮಗೆ ವಿಶೇಷ ಪರಿಚಯವಾದಮೇಲೆ ಮತವಿಷಯವನ್ನು ಕುರಿತು ತೀಕ್ಷ್ಣವಾಗಿ ಚರ್ಚಿಸಲುಪಕ್ರಮಿಸಿದೆವು. ನಾನು ಹೋದ ಎರಡನೆಯದಿನವೋ ಮೂರನೆಯದಿನವೋ ನನ್ನನ್ನು ಆತನು ದರ್ಬಾರ್ ಕೋರ್ಟಿಗೆ ಕರೆದುಕೊಂಡು ಹೋದನು. ಅಲ್ಲಿ ಅನೇಕ ಜನರೊಡನೆ ನನಗೆ ಪರಿಚಯ ಮಾಡಿಸಿದನು. ತನ್ನ ನ್ಯಾಯವಾದಿಯ ಪಕ್ಕದಲ್ಲೇ ನನ್ನನ್ನು ಕುಳ್ಳಿರಿಸಿದನು. ಮ್ಯಾಜಿಸ್ಟ್ರೇಟು ನನ್ನ ಕಡೆ ದುರುಗುಟ್ಟು ನೋಡುತ್ತ ತಲೆಪಾಗನ್ನು ತೆಗೆದು ಮಡಗುವಂತೆ ಹೇಳಿದನು. ನಾನು ಅದನ್ನಂಗೀಕರಿಸದೆ ಅಲ್ಲಿಂದೆದ್ದು ಹೊರಗೆ ಬಂದೆನು. ಅಲ್ಲೂ ನನಗೆ ಕಲಹವು ಸಿದ್ಧವಾಯಿತು. ಮಹಮ್ಮದೀಯರಂತೆ ಉಡುಪನ್ನು ಧರಿಸಿರುವವರು ತಲೆಪಾಗನ್ನಿಟ್ಟುಕೊಳ್ಳಬಹುದಲ್ಲದೆ ಇತರ ಭಾರತೀಯರು ಕೋರ್ಟಿನೊಳಕ್ಕೆ ಹೋದ ಕೂಡಲೆ ಅದನ್ನು ತೆಗೆದುಬಿಡಬೇಕೆಂದು ಅಬ್ದುಲ್ಲಾಸೇಟು ನನಗೆ ಹೇಳಿದನು.

ಆ ದೇಶದಲ್ಲಿ ಮಹಮ್ಮದೀಯ ವರ್ತಕರೂ ಹಿಂದೂ ಪಾರ್ಸೀ ಗುಮಾಸ್ತರುಗಳೂ ಇರುವರು. ಮಹಮ್ಮದೀಯರು ಅರಬ್ಬಿಯನರೆಂದೂ ಪಾರ್ಸಿಗಳು ಪಾರಸೀಕರೆಂದೂ ಹೇಳಿಕೊಳ್ಳುವರು. ಹಿಂದುಗಳು ಅನುಕೂಲವಾಗಿದ್ದರು. ಈ ಭಾರತೀಯರಲ್ಲಿ ಮೂರುತರಗತಿಗಳಿದ್ದವು. ಗಿರಿಮೆಂಟು ಕೂಲಿಯವರು, ಆಂಧ್ರರು, ದ್ರಾವಿಡರು. ಉತ್ತರಹಿಂದುಸ್ಥಾನದವರು ಮೊದಲಾದ ಕಾರ್ಮಿಕರ ಸಂಖ್ಯೆಯು ಬಹಳ ಹೆಚ್ಚಾಗಿದ್ದಿತು. ಕೂಲಿಯವರು ಐದುವರ್ಷಕಾಲ ಕೆಲಸಮಾಡಲು ಕರಾರನ್ನು ಬರೆದುಕೊಟ್ಟು ಅಲ್ಲಿಗೆ ಹೋದರು. ಆ ಅಗ್ರಿಮೆಂಟು ಗಿರಿಮೆಂಟೆಂದೂ ಗಿರ್ಮಿಂಟು ಎಂದೂ ಬದಲಾವಣೆಯಾಗಿರುವುದು. ಹಾಗೆ ಬರೆದುಕೊಟ್ಟಿರುವವರು ಗಿರಿಮಿತಿಯಾಗಿರುವರು. ಉಳಿದ ಮೂರು ಪಂಗಡಗಳಲ್ಲೂ ವ್ಯಾಪಾರಸಂಬಂಧವನ್ನು ಮಾತ್ರ ಇಟ್ಟುಕೊಂಡಿರುವರು. ಭಾರತೀಯರಲ್ಲಿ ಹೆಚ್ಚುಮಂದಿ ಕೂಲಿಕೆಲಸವನ್ನೇ ಮಾಡುತ್ತಿರುವುದರಿಂದ ಆಂಗ್ಲೇಯರು ಭಾರತೀಯರೆಲ್ಲರನ್ನೂ ಕೂಲಿಯವರೆಂದೂ ಸಾಮಿಯೆಂದೂ ಕರೆಯುತ್ತಿದ್ದರು. ಸಾಮಿ ಎಂಬುದು ಸ್ವಾಮಿಶಬ್ದದ ವಿಕೃತಿ ಅಂದರೆ ತದ್ಭವ. ವೆಂಕಟಸ್ವಾಮಿ, ರಾಮಸ್ವಾಮಿ ಎಂದು ಅನೇಕ ಜನರ ಹೆಸರಿನೊಂದಿಗೆ ಸ್ವಾಮಿ ಎಂಬ ಪದವು ಸೇರಿರುವುದರಿಂದ ಅವರನ್ನು ಹಾಗೆ ಸ್ವಾಮಿ ಎಂದು ಕರೆಯತೊಡಗಿದರು. ಸ್ವಾಮಿ ಅಂದರೆ ಯಜಮಾನನೆಂದು ಅರ್ಥವಾಗುವುದಾದರೂ ಸಾಮಿ ಶಬ್ದವನ್ನು ಆಂಗ್ಲೇಯರು ನೀಚಾರ್ಥದಲ್ಲೇ ವಿನಿಯೋಗಿಸುತ್ತಿದ್ದರು. ಸಾಮಿ ಅಂದರೆ ಕೆಲ ಭಾರತೀಯರಿಗೆ ಕೋಪಬರುತ್ತಿದ್ದಿತು. ಸ್ವಾಮಿ ಅಂದರೆ ಯಜಮಾನ. ನೀವು ಹಾಗೆ ಕರೆದರೆ ನಿಮಗೆ ನಾನು ಯಜಮಾನನಾಗುತ್ತೇನೆಂದು ಕೆಲರು ಯುಕ್ತಿಯಾಗಿ ಹೇಳಿದರೆ ಆಂಗ್ಲೇಯರಲ್ಲಿ ಕೆಲವರಿಗೆ ಸಂಶಯವೂ ಮತ್ತೆ ಕೆಲರಿಗೆ ಆಗ್ರಹವೂ ಹುಟ್ಟುತ್ತಿದ್ದಿತು. ಕೋಪಗೊಂಡವರು ಭಾರತೀಯರನ್ನು ಹಾಗೆಂದು ಬಯ್ಯುತ್ತಿದ್ದರಲ್ಲದೆ ಬೆತ್ತದಿಂದಲೂ ಹೊಡೆಯುತ್ತಿದ್ದರು. ವರ್ತಕರನ್ನು ಕೂಲಿ ವರ್ತಕರೆಂದೂ, ನನ್ನನ್ನು ಕೂಲಿ ಬ್ಯಾರಿಸ್ಟರೆಂದೂ ಅವರು ಕರೆಯುತ್ತಿದ್ದರು. ಕೂಲಿ ಸಬ್ದಾರ್ಥವು ವ್ಯತ್ಯಸ್ತವಾಗಿದೆ. ಅಲ್ಲಿ ಕೂಲಿ ಅಂದರೆ ಭಾರತೀಯನೆಂದು ಏರ್ಪಟ್ಟಿದೆ. ಮಹಮ್ಮದೀಯರಲ್ಲಿ ಕೆಲರು ತಾವು ಕೂಲಿಯವರಲ್ಲವೆಂದೂ ಅರಬ್ಬಿಯನರೆಂದೂ ಹೇಳುತ್ತಿದ್ದರು. ವಿನಯವಂತರಾದ ಆಂಗ್ಲೇಯರು ಅವರ ಕ್ಷಮಾಪಣೆಯನ್ನು ಕೋರುತ್ತಿದ್ದರು. ಭಾರತೀಯನು ತಲೆಪಾಗನ್ನು ತೆಗೆಯಬೇಕೆಂಬ ಅವಮಾನವನ್ನು ಸಹಿಸುವುದಾಗದಿದ್ದುದರಿಂದ ಈ ನಿರ್ಬಂಧವೇಕೆಂದು ನಾನು ಪಾಶ್ಚಾತ್ಯರ ಟೋಪಿಯನ್ನು ಧರಿಸಬೇಕೆಂದು ಯೋಚಿಸಿದೆನು. ಆದರೆ ಅಬ್ದುಲ್ಲಾಸೇಟು ಅದಕ್ಕೆ ಅಂಗೀಕರಿಸಲಿಲ್ಲವು. "ಭಾರತೀಯರೆಲ್ಲರಿಗೂ ಅವಮಾನವಾಗುವುದು. ದೊರೆಯ ಟೋಪಿಯನ್ನಿಟ್ಟುಕೊಂಡರೆ ನಿನ್ನನ್ನು ವೇಯಿಟರು ಎಂದೆನ್ನುತ್ತಾರೇ ಹೊರತು ಆಗಲೂ ಗೌರವಿಸುವುದಿಲ" ಎಂದು ಆತನು ಹೇಳಿದನು.

ಆತನ ಆಲೋಚನೆಯಲ್ಲಿ ಕೊಂಚ ವಿವೇಕವೂ, ದೇಶಾಭಿಮಾನವೂ ಸಂಕುಚಿತಭಾವವೂ ಕೂಡಿದ್ದುವು. ಭಾರತೀಯರು ತಲೆಪಾಗನ್ನು ಇಟ್ಟುಕೊಂಡಿರಬೇಕೆಂಬುದೇ ದೇಶಾಭಿಮಾನವು. ವೇಯಿಟರು ಎಂದು ಎಲ್ಲರನ್ನೂ ಅನ್ನುವುದೇ ಸಂಕುಚಿತಭಾವವು. ವೇಯಿಟರು ಎಂದರೆ ಕುಸ್ನಿಯವನು-ಬಟ್ಲರು. ಗಿರಿಮೆಂಟು ಕೂಲಿಗಳಲ್ಲಿ ಹಿಂದುಗಳೂ, ಮಹಮ್ಮದೀಯರೂ, ಕ್ರೈಸ್ತರೂ ಸೇರಿರುತ್ತಾರೆ. ಗಿರಿಮೆಂಟು ಕೊಟ್ಟು ಅಲ್ಲಿಗೆ ಬಂದವರಲ್ಲಿ ಕೆಲರು ಕ್ರೈಸ್ತರಾದುದರಿಂದ ಅವರ ಮಕ್ಕಳು ಕ್ರೈಸ್ತರಾಗಿ ಏರ್ಪಟ್ಟರು. 1893 ನೇ ವರ್ಷದಲ್ಲೇ ಅಲ್ಲಿ ಭಾರತ ಕ್ರೈಸ್ತರ ಸಂಖ್ಯೆಯು ಹೆಚ್ಚಾಗಿದ್ದಿತು. ಅವರು ಆಂಗ್ಲೇಯರ ಪದ್ಧತಿಯಂತೆ ಉಡುಪನ್ನು ಹಾಕಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ಹೋಟಲುಗಳಲ್ಲಿ ವೇಯಿಟರುಗಳಾಗಿ ಕೆಲಸಮಾಡುತ್ತಿದ್ದರು. ಅವರು ದೊರೆಯ ಟೋಪಿಯನ್ನು ಧರಿಸುತ್ತಿದ್ದರಾದುದರಿಂದ ಅಬ್ದುಲ್ಲಾಸೇಟು ಆ ಟೋಪಿಯನ್ನು ಕುರಿತು ಆರೀತಿ ಹೇಳಿದುದು. ಹೋಟಲುಗಳಲ್ಲಿ ವೇಯಿಟರಾಗಿ ಕೆಲಸಮಾಡುವುದು ಬಹಳ ನೀಚವೆಂದು ಭಾವಿಸಲ್ಪಟ್ಟಿದ್ದಿತು. ಈಗಲೂ ಅನೇಕರು ಹಾಗೆಯೇ ಭಾವಿಸುತ್ತಾರೆ. ಒಟ್ಟಿನಮೇಲೆ ಆತನ ಸಲಹೆಯು ನನಗೆ ಒಪ್ಪಿತವಾಯಿತು. ನಾನು ತಲೆಪಾಗನ್ನು ಇಟ್ಟುಕೊಂಡಿರತಕ್ಕದೆಂಬ ವಿಚಾರವಾಗಿ ಪತ್ರಿಕೆಗಳಲ್ಲಿ ಬರೆದು ಆ ಪದ್ಧತಿಯನ್ನು ಸಮರ್ಥಿಸಿದೆನು. ಪತ್ರಿಕೆಗಳು ಅದನ್ನು ಕುರಿತು ಬಹಳ ಚರ್ಚೆಯನ್ನು ನಡಿಸಿ ನಾನು ಆ ದೇಶಕ್ಕೆ ಆಹ್ವಾನಿಸಲ್ಪಟ್ಟವನಲ್ಲವೆಂದು ನನ್ನನ್ನು ನಿರಸನಮಾಡಿದುವು. ಈ ಪ್ರಕಾರವಾಗಿ ನಾನು ಹೊರಟ ಕೆಲದಿವಸಗಳಲ್ಲೇ ನನ್ನ ಹೆಸರು ಪ್ರಯತ್ನವಿಲ್ಲದೆಯೇ ಪ್ರಖ್ಯಾತವಾಯಿತು. ಕೆಲರು ನನಗೆ ಸಹಾಯಕರಾದರು, ಮತ್ತೆ ಕೆಲರು ನನ್ನ ಸಾಹಸವನ್ನು ಕಠಿಣವಾಗಿ ನಿರಸನಮಾಡಿದರು. ನಾನು ಮಾತ್ರ ಕಡೆಯವರೆಗೂ ತಲೆಯ ಪಾಗನ್ನು ತೆಗೆಯಲೇ ಇಲ್ಲ. ಈ ತಲೆಪಾಗಿನ ನಿರ್ಬಂಧವು ಎಂದು ತಪ್ಪುವುದೋ ಮುಂದೆ ನೋಡಬೇಕಾಗಿದೆ.

ಶ್ರೀ ಬಸವಚರಿತ್ರೆಯ ವಿಮರ್ಶೆ.

ಬಸವಣ್ಣನವರ ಹಿಂದಣಕರ್ನಾಟಕ ಮತ್ತು ವೀರಶೈವಮತ.

1 ನೇ ಪ್ರಕರಣ.

1925 ನೇ ಇಸವಿ ಏಪ್ರಿಲ್ 11 ನೇ ತಾರೀಖಿನ ಸಂಚಿಕೆಯಿಂದ ಮುಂದೆಸಾಗಿದುದು. ಕಾರ್ಯಾಂತರದಿಂದ ಈ ವಿಮರ್ಶೆಯು ಪೂರ್ಣವಾಗದೆ ನಿಂತಿದ್ದು ಸದ್ಯದಲ್ಲಿ ಇದರ ವಿಮರ್ಶೆ ಸರ್ವತ್ರ ಪ್ರಚಾರವಾಗಬೇಕಾಗಿರುವುದು ಆವಶ್ಯಕವಾಗಿರುವುದರಿಂದ ಇದನ್ನು ಪುನಃ ಕೈಕೊಳ್ಳಲಾಗಿದೆ.

ಒಂದು ಕಾರ್ಯವು ಅದು ನಡೆಯುವ ದೇಶದ ಒಳಹೊರಗಣ ಸ್ಥಿತಿಗಳನ್ನು ಹೆಚ್ಚುಕಡಿಮೆಮಾಡಿ ಕರ್ತೃವಿಗೆ ಸಂಬಂಧಿಸಿರಬೇಕು. ಹೀಗಿದ್ದರೆನೆಯೇ ಆ ದೇಶದ ಮತ್ತು ಆ ಕರ್ತೃವಿನ ಪೂರ್ವಾಪರಗಳನ್ನು ಪರ್ಯಾಲೋಚಿಸಿ ಆ ಕಾರ್ಯದಿಂದುಂಟಾಗುವ ಫಲಾಫಲಗಳನ್ನು ನಿರ್ಧರಿಸುವುದು ಯುಕ್ತವಾದುದಾಗಿರುವುದು. ಸದ್ಯದಲ್ಲಿ ಬಸವಣ್ಣನವರ ಅವತಾರಕೃತ್ಯದ ಮಹತ್ವವನ್ನು ತಿಳಿಯಲು ಅವರ ಹಿಂದಣ ಕರ್ನಾಟಕದ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದು ಆವಶ್ಯಕವೇ? ಎಂದು ವಿಚಾರಮಾಡೋಣ. ಬೌದ್ಧಧರ್ಮದಿಂದ ರಾಜ್ಯಕ್ರಾಂತಿಯುಂಟಾಗಿ ಹಿಂದೂರಾಜ್ಯ ಹೋಗಿ ಬೌದ್ಧರಾಜ್ಯವಾದಂತೆ ಬಸವಣ್ಣನವರ ಧರ್ಮಕಾರ್ಯದಿಂದ ಕ್ರಾಂತಿಯುಂಟಾಗಿ ವೀರಶೈವರಾಜ್ಯವಾಯಿತೇ? ಎಂದು ವಿಚಾರಮಾಡಿದರೆ ಧರ್ಮೋದ್ಧಾರಹೇತುವಿನಿಂದ ಮರಾಟೆಯವರು ಶಿವಾಜಿಯ ಕೈಕೆಳಗೆ ರಾಜ್ಯಕಟ್ಟಿದಂತೆ ಬಸವಣ್ಣನವರೇನೂ ಹಾಗೆ ಮಾಡಲಿಲ್ಲ. ಅಲ್ಲದೆ ಬಸವಣ್ಣನವರು ಧರ್ಮಕಾರ್ಯವನ್ನು ತಮ್ಮ 40 ನೇ ವಯಸ್ಸಿನಲ್ಲಿ ಆರಂಭಿಸಿರುವರೆಂಬುವುದರಿಂದಲಂತೂ ಅವರ ಹಿಂದಣ ಕರ್ನಾಟಕದ ಸ್ಥಿತಿಯನ್ನು ತಿಳಿದುಕೊಳ್ಳುವುದು ಈ ಮಹನೀಯನ ಚರಿತ್ರೆಗೆ ಎಷ್ಟರಮಟ್ಟಿಗೆ ಸಹಕಾರಿಯಾಗುತ್ತದೆಂಬ ಎಲ್ಲರಿಗೂ ಹುಟ್ಟಬಹುದಾದ ಶಂಕೆಯು ಈ ಲೇಖಕರಿಗೆ ತೋರಿದುದು ಸಹಜವಾದುದಾಗಿದೆ. ಆದರೆ ಈ ಶಂಕೆಗೆ ಸಮಾಧಾನವನ್ನು ಹೇಳುವಾಗ ಕೊಟ್ಟಿರುವ ಅಲೆಕ್ಸಾಂಡರ್, ನೆಪೋಲಿಯನ್, ಬುದ್ಧ ಮತ್ತು ಯೇಸುಕ್ರಿಸ್ತ ಈ ಮಹನೀಯರುಗಳ ಸಾಮ್ಯಗಳು ಜನಮೋಹಕವಾದುವುಗಳೇ ಹೊರತು ಶಂಕಾಸಮಾಧಾನಕಾರಿಗಳಲ್ಲವೆಂಬುದು ಸ್ಪಷ್ಟಪಡುತ್ತದೆ. ಹೇಗೆಂದರೆ, ಹಿಂದೆ ಹೇಳಿದಂತೆ ಈ ಮಹನೀಯರುಗಳ ಕಾರ್ಯದಿಂದುಂಟಾದ ಪರಿಣಾಮಕ್ಕೂ ಬಸವಣ್ಣನವರ ಕಾರ್ಯದಿಂದುಂಟಾದ ಕಾರದಪರಿಣಾಮಕ್ಕೂ ಬಹಳ ವ್ಯತ್ಯಾಸವಿರುವುದು. ಹಿಂದಣಕರ್ನಾಟಕದ ಸ್ಥಿತಿಯು ಬಸವಚರಿತ್ರೆಗೆ ಸಹಕಾರಿಯಾಗಿರುವುದೆಂಬ ಭ್ರಮೆಯಿಂದ ತತ್ಸಂಬಂಧವಾದ ಚರಿತ್ರೆಯ ಅಂಶಗಳನ್ನು ಕೊಟ್ಟಿರುವರೆಂದು ಯೋಚಿಸಿಯಾದರೂ ಅವುಗಳನ್ನು ವಿಮರ್ಶೆಮಾಡಿ ನೋಡಿದರೆ ಯಥಾರ್ಥವೇನೂ ಹೊರಡುವಂತಿಲ್ಲ. ಆಗಣ ಕರ್ನಾಟಕವು ಒಬ್ಬ ರಾಜನಿಗೆ ಒಳಪಟ್ಟದ್ದಿಲ್ಲ. ಕಲ್ಯಾಣದಲ್ಲಿ ಚಾಳುಕ್ಯರಲ್ಲದೆ ದ್ವಾರಸಮುದ್ರದಲ್ಲಿ ಹೊಯಿಸಳರೇ ಮೊದಲಾದ ಅನೇಕ ರಾಜರು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಆಳುತ್ತಿದ್ದರು. ಈ ಎಲ್ಲಾ ಭಾಗಗಳ ಚರಿತ್ರೆಯನ್ನು ತಿಳಿಸದೆ ಕಲ್ಯಾಣದರಸರ ರಾಜ್ಯಕ್ಕೇನೆಯೇ ಹಿಂದಣಕರ್ನಾಟಕವೆಂದು ಅದರ ಚರಿತ್ರೆಯನ್ನು ಮಾತ್ರವೇ ಕೊಟ್ಟಿರುವದೇಕೆ? ಚಾಳುಕ್ಯಸಂತತಿಗಳೆರಡರಲ್ಲಿ ಮೊದಲನೆಯ ಸಂತತಿಯು ಮಾತ್ರವೇ 4-5 ನೇ ಶತಮಾನಗಳಲ್ಲಿ ಒಳ್ಳೆಯ ಅಭಿವೃದ್ಧಿಸ್ಥಿತಿಯಲ್ಲಿದ್ದಿತು. ಈ ಪುಸ್ತಕದಲ್ಲಿ ಕೊಟ್ಟಿರುವಂತೆ 2 ನೇ ವಿಕ್ರಮಾದಿತ್ಯನು ಕಲ್ಯಾಣದಲ್ಲಿ ಆಳಲಿಲ್ಲ. 3 ನೇಯ ಸೋಮೇಶ್ವರನೆಂಬುವನು ಕಲ್ಯಾಣದಲ್ಲಿ ಆಳಿರುವನು. ಇವರಲ್ಲಿ ಕೊನೆಯವನು ಮುಮ್ಮಡಿತೈಲ. ಈ ಸಂತತಿಯು ಕ್ರಿ. ಶ. 973 ರಿಂದ ಸುಮಾರು 200 ವರ್ಷಗಳವರೆಗೆ ಆಳುತ್ತಾ ನೆರೆಹೊರೆಯ ರಾಜರುಗಳೊಡನೆ ಎಡಬಿಡದೆ ಯುದ್ಧಮಾಡುತಲೇ ಇದ್ದಿತು. ಕೊನೆಯವನಾದ ಮುಮ್ಮಡಿತೈಲನ ಕಾಲದಲ್ಲಿ ಇವನ ಸೇನಾಪತಿಯಾದ ಕಲಚೂರಿವಂಶದ ಬಿಜ್ಜಳನು ದಂಗೆಯೆದ್ದು ರಾಜ್ಯವನ್ನು ಆಕ್ರಮಿಸಿಕೊಂಡಿರುತ್ತಾನೆ. ಇದರಮೇಲಿಂದ ಬಸವಣ್ಣನವರ ತತ್ಪೂರ್ವದ ಕರ್ನಾಟಕದಲ್ಲಿ ಈ ಪುಸ್ತಕದಲ್ಲಿ ಕಂಡುಬರುವಂತೆ ರಾಜಕೀಯಶಾಂತಿ ಇದ್ದಿಲ್ಲ, ಆದರೆ ಹೆಚ್ಚಾಗಿ ಶಾಂತಿಭಂಗವಿತ್ತೆಂದು ಸಿದ್ಧವಾಗುತ್ತದೆ. ಯಾವಮತದಿಂದ ವ್ಯಕ್ತಿಯ ಆಚಾರ ಮತ್ತು ವಿಚಾರ ಸ್ವಾತಂತ್ರ್ಯಗಳಿಗೆ ಅವಕಾಶವಿಲ್ಲದಂತಾಗಿರುತ್ತದೆಯೋ ಅಂಥ ಮತಗಳು ಪ್ರಬಲವಾಗಿರುವ ರಾಷ್ಟ್ರದಲ್ಲಿ ಧಾರ್ಮಿಕಸ್ಥಿತಿಯು ಚೆನ್ನಾಗಿಲ್ಲವೆಂದೇ ತಿಳಿಯಬೇಕೆಂದು ಸೂಚಿಸಿ ಪರ್ಯಾಯದಲ್ಲಿ 12 ನೇ ಶತಮಾನದ ಆದಿಭಾಗದಲ್ಲಿದ್ದ ಶೈವ ಮತ್ತು ವೈಷ್ಣವಮತಗಳು ವ್ಯಕ್ತಿಯ ಆತ್ಮೋನ್ನತಿಗೆ ಪ್ರತಿಬಂಧಕಗಳಾಗಿದ್ದವೆಂಬುದಕ್ಕೆ ಆಯಾ ಮತೀಯರೇ ಉತ್ತರಕೊಡಬೇಕಾಗಿರುವುದು, ಆದರೆ ಈ ಪುಸ್ತಕದಲ್ಲಿ ಕೊಟ್ಟಿರುವ ಸಂಗತಿಗಳಮೇಲಿಂದ ಇದನ್ನು ಸ್ವಲ್ಪಮಟ್ಟಿಗೆ ವಿವೇಚನೆಮಾಡುವುದು ಅಪ್ರಾಸಂಗಿಕವಾಗಲಾರದೆಂದೆಣಿಸಿ ಅದನ್ನೇ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ.

ಶ್ರೀ ರಾಮಾನುಜಾಚಾರ್ಯರು ಕುಲಕ್ಕಿಂತಲೂ ಗುಣವೇ ಪ್ರಾಮುಖ್ಯವೆಂಬುದನ್ನು ಆಚರಣೆಯಲ್ಲಿ ತೋರಿಸಿರುವುದು, ಭಕ್ತಿಯಲ್ಲಿ ಮಿಗಿಲಾಗಿ ಕುಲದಲ್ಲಿ ಕಡಿಮೆಯಾಗಿದ್ದ ಕಂಚಿಪೂರ್ಣನೆಂಬ ಸಾಧುಶಿರೋಮಣಿಯ ಸೇವೆಯನ್ನು ಮಾಡಿ ಆತನ ಪ್ರಸಾದಸೇವನೆಯನ್ನು ಅಪೇಕ್ಷಿಸಿದುದರಿಂದ ವ್ಯಕ್ತಪಡುತ್ತದೆ. ಇವರ ಶಿಷ್ಯಪರಂಪರೆಗೆ ಸಂಬಂಧಪಟ್ಟ ಶ್ರೀ ರಾಮಾನಂದರೂ ಸಹ ಹರಿಭಕ್ತರಾದ ಸದ್ಗುಣಸದಾಚಾರಸಂಪನ್ನರನ್ನೆಲ್ಲಾ ಹೀಗೆಯೇ ಮಾಡಿರುವರು. ಹೀಗಿದ್ದೂ ಲೇಖಕರು ಶ್ರೀ ರಾಮಾನಂದರಂತೆ ಶ್ರೀ ಆಚಾರರೇನೂ ಮಾಡಲಿಲ್ಲವೆಂದು ಹೇಳಿರುವರು. ಇದು ಹೇಗೆಂಬುದೇ ನಮಗೆ ತಿಳಿಯದು. ಶ್ರೀ ಆಚಾರ್ಯರು ಕಂಚಿಪೂರ್ಣನೆಂಬೊಬ್ಬನ ವಿಚಾರವಾಗಿ ಹೀಗೆ ಆಚರಿಸಿ ಉಳಿದವರ ವಿಚಾರವಾಗಿ ಅನ್ಯತ್ರ ಆಚರಿಸಿದ್ದರೆ ಇವರ ಮಾತಿಗೆ ಸ್ವಲ್ಪ ಬೆಲೆ ಇರುತ್ತಿತ್ತು. ಆದರೆ ಸಂಕೋಚಭಾವವನ್ನು ಬಿಟ್ಟು ಕುಲವನ್ನು ನೋಡದೆ ಗುಣವನ್ನು ನೋಡಿ ಜನಸಾಮಾನ್ಯಕ್ಕೆಲ್ಲಾ ತಮ್ಮ ಅಷ್ಟಾಕ್ಷರಮಂತ್ರವನ್ನು ಇವರು ಬೋಧಿಸಿದ್ದೇ ಸಾಕ್ಷಿಯಾಗಿದೆ. ಮೊದಮೊದಲು ಇವರ ಈ ವರ್ತನೆಯನ್ನು ಖಂಡಿಸುತ್ತಿದ್ದ ಇವರ ಗುರುಗಳಾದ ಗೋಷ್ಠಿಪೂರ್ಣರು ಇವರ ಆತ್ಮವಿಕಾಸಕ್ಕೆ ಬೆರಗಾಗಿ ಇವರಿಗೆ ಮನ್ನಾಥ ಎಂಬ ಹೆಸರಿನಿಂದ ಕರೆದುದು ಇದನ್ನು ಇನ್ನೂ ಬಲಪಡಿಸುತ್ತದೆ. ಅಲ್ಲದೆ ಲೇಖಕರು ಹೇಳುವಂತೆ "ಮತಪ್ರಸಾರಣೆ ಕಾರ್ಯವು ಉತ್ತಮವರ್ಣದವರಲ್ಲಿ ಜರುಗುತ್ತಿತ್ತೇ ವಿನಹ ಸಾಮಾನ್ಯಕುಲದವರ ಕಡೆಗೆ ಹೋಗಿರಲಿಲ್ಲ" ವೆಂಬುದು ಯಥಾರ್ಥವಲ್ಲ. ಕೀಳುಕುಲದವರಾದರೂ ಭಕ್ತಿಯಲ್ಲಿ ಮಿಗಿಲಾದ ಸದ್ಗುಣಸದಾಚಾರಸಂಪನ್ನರನ್ನೆಲ್ಲಾ ಶ್ರೀ ರಾಮಾನಂದರು ಸ್ವೀಕರಿಸಿದುದು ಹೀನಾವಸ್ಥೆಯಲ್ಲಿದ್ದ ಜನಗಳ ತಿಳಿವಳಿಕೆಯನ್ನು ಹೆಚ್ಚಿಸಿ ಅವರ ಆತ್ಮೋನ್ನತಿಗೆ ಸಹಾಯಮಾಡಿದ್ದು ತಿಳಿದುಬರುತ್ತದೆ. "ಸ್ತ್ರೀವರ್ಗದ ಆತ್ಮೋನ್ನತಿಗೆ ಆವಶ್ಯಕವಾಗಿದ್ದ ಅನೇಕ ಸ್ವಾತಂತ್ರ್ಯ ಸೌಲಭ್ಯಗಳು ಆ ಕಾಲದಲ್ಲಿರಲಿಲ್ಲ" ಎಂಬುದಕ್ಕೆ ಆಧಾರಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. "ಗುಣಕರ್ಮಾನುಗುಣ್ಯವಾಗಿ ಏರ್ಪಟ್ಟಿದ್ದ ಪ್ರಾಚೀನ ವೈದಿಕಧರ್ಮದ ವರ್ಣಕಲ್ಪನೆಯು ಅಳಿದುಹೋಗಿ ಜನ್ಮವಿಶಿಷ್ಟವಾದ ವರ್ಣಕಲ್ಪನೆಯು ಆ ಕಾಲದಲ್ಲಿ ದೃಢತರವಾಗಿದ್ದಿತು" ಇಲ್ಲಿಯವರೆಗೆ ಮಾಡಿರುವ ವಿವೇಚನೆಯಿಂದ ಇದರ ನಿಜಾಂಶವನ್ನು ವಾಚಕರೇ ಗೊತ್ತುಮಾಡಬಹುದಾಗಿದೆ. "ಭಗವಾನ್ ಗೌತಮಬುದ್ಧನು ಅವತರಿಸುವುದಕ್ಕೆ ಪೂರ್ವದಲ್ಲಿ ಭರತಖಂಡದ ಧಾರ್ಮಿಕಸ್ಥಿತಿಯು ಹೇಗಿದ್ದಿತೋ ಹಾಗೆಯೇ ಸ್ವಲ್ಪ ಹೆಚ್ಚು ಕಡಿಮೆಯಾಗಿ ಶ್ರೀ ಬಸವಣ್ಣನವರು ಅವತರಿಸುವುದಕ್ಕೆ ಮುಂಚೆ ಕರ್ನಾಟಕದ ಧಾರ್ಮಿಕಸ್ಥಿತಿ ಇದ್ದಿತೆಂದು ಹೇಳಬಹುದು." ಗೌತಮಬುದ್ಧನು ಅವತರಿಸುವ ಪೂರ್ವದಲ್ಲಿ ಭರತಖಂಡದ ಧಾರ್ಮಿಕಸ್ಥಿತಿಯನ್ನು ತಿಳಿಸಿದ್ದರೆ ಇದನ್ನು ಯೋಚನೆ ಮಾಡಬಹುದಾಗಿತ್ತು. ಈ ಎಲ್ಲಾ ಕಾರಣಗಳಿಂದ ಹಿಂದೆ ಈ ಲೇಖಕರು ಹೇಳಿರುವಂತೆ "ಬಸವಣ್ಣನವರ ಪೂರ್ವಕರ್ನಾಟಕದ ಧಾರ್ಮಿಕಸ್ಥಿತಿಯು ಒಳ್ಳೆಯ ರೀತಿಯಲ್ಲಿರಲಿಲ್ಲವೆಂದು ತೋರುತ್ತದೆ" ಎಂಬುದು ಸ್ಥಿರಪಟ್ಟಂತಾಗಲಿಲ್ಲವೆಂಬಂಶವನ್ನು ವಾಚಕರ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ವಿಶ್ವಪ್ರೇಮ, ಸದಾಚಾರ, ಸಮಭಾವನೆ ಮೊದಲಾದುವುಗಳು ಬೌದ್ಧಮತದ ಮೂಲತತ್ವಗಳಾಗಿರದೆ ಸರ್ವಸಾಮಾನ್ಯವಾಗಿ ಎಲ್ಲಾ ಮತಗಳಿಗೂ ಅನ್ವಯಿಸತಕ್ಕವುಗಳಾಗಿವೆ. ಶ್ರೀಬಸವಣ್ಣನವರ ಧರ್ಮಕಾರ್ಯಗಳು ಪ್ರಾಚೀನ ವೈದಿಕರೀತಿಗಳನ್ನನುಸರಿಸಿದುವು ಎಂಬುದಕ್ಕೆ ಆಗಮಗಳಿಂದ ಆಧಾರಗಳನ್ನು ಕೊಟ್ಟು ಇಲ್ಲಿ ಪ್ರತಿಪಾದಿಸಿರುವುದು ಬಹುಜಟಿಲವಾದದ್ದೂ ಅಸಂಗತವೂ ಆಗಿರುವುದರಿಂದ ಇದನ್ನು ಮುಂದೆ ಉಪಸಂಹಾರದಲ್ಲಿ ವಿಸ್ತಾರವಾಗಿ ವಿಮರ್ಶೆಮಾಡಲಾಗುತ್ತದೆ. ಈ ಪ್ರಕರಣಕ್ಕೆ ಹಿಂದಣ ಕರ್ನಾಟಕ ಮತ್ತು ವೀರಶೈವಮತವೆಂದು ಹೆಸರಿಟ್ಟುಕೊಂಡು ಕರ್ನಾಟಕದ ಸ್ಥಿತಿಯನ್ನು ಹಾಗೂ ಹೀಗೂ ಸ್ವಲ್ಪ ತಿಳಿಸಿ ಹಿಂದಣ ವೀರಶೈವಮತವಿಚಾರವನ್ನು ಎಳ್ಳಷ್ಟು ಪ್ರತಿಪಾದಿಸದೆ ವೀರಶೈವಮತವು ಬಹುಮಟ್ಟಿಗೆ ಲೋಪವಾಗಿಯೇ ಹೋಗಿದ್ದಿತೆಂಬುದನ್ನು ಹೇಳುವುದು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಬಹುದು. ಆದರೆ ಯಾವ ವಸ್ತುವು ಇಲ್ಲವೋ ಅದರ ವಿಚಾರವನ್ನೇ ಎತ್ತದಿದ್ದರೆ ಅದು ಇಲ್ಲದಿರುವ ಭಾವನೆಯು ಚೆನ್ನಾಗಿ ಸ್ಪಷ್ಟಪಡುವುದೆಂಬ ಕಾರಣದಿಂದಲೋ ಏನೋ ವೀರಶೈವ ಮತವು ಲೋಪವಾದ ಸಂಗತಿಯನ್ನು ಅದರ ಪ್ರಸ್ತಾಪವನ್ನೂ ಎತ್ತದೆ ಬಿಟ್ಟು ಇವರು ಕೊನೆಗೆ ಕೊಟ್ಟಿರುವ "ವೀರಶೈವಮತವು ಬಹುಮಟ್ಟಿಗೆ ಲೋಪವಾಗಿ ಹೋಗಿತ್ತೆಂಬುದು ವಾಚಕರಿಗೆ ವೇದ್ಯವಾಗದಿರಲಾರದೆಂಬ" ವಾಕ್ಯದಿಂದ ಈ ಸ್ಪಷ್ಟತೆಯು ಸ್ಥಿರವಾಗಬಲ್ಲದೇ? ಎಂದು ಶಂಕಿಸುತ್ತೇನೆ. ಈ ಪ್ರಕರಣದ ವಿಮರ್ಶೆಯಿಂದ ಇವರು ಹೇಳುವಂತೆ ಕರ್ನಾಟಕದಲ್ಲಿ ರಾಜಕೀಯ ಶಾಂತತೆಯು ಇರದೆ ಅಶಾಂತತೆ ಇತ್ತು, ಮತ್ತು ಧಾರ್ಮಿಕ ಸ್ಥಿತಿಯು ಒಳ್ಳೆಯ ರೀತಿಯಲ್ಲಿರಲಿಲ್ಲವೆಂದು ತೋರುತ್ತದೆ ಎಂಬುದು ಯಥಾರ್ಥವಾಗಿರದೆ ಹೀಗೆಯೇ ಎಂದು ನಿರ್ಧರಿಸಿ ಹೇಳುವಂತಿಲ್ಲ.

ಬಸವಬಂಧು.

ದಾವಣಗೆರೆ ವೀರಶೈವವಿದ್ಯಾವರ್ಧಕಫಂಡ್ ಸಂಘದ 1925-26ನೆ ಸಾಲಿನ ವಾರ್ಷಿಕ ಆದಾಯವ್ಯಯ ಲೆಕ್ಕ.

ಈ ಸಂಘದ ಕಾರ್ಯನಿರ್ವಾಹಕ ಕಮಿಟಿಯವರ ಪರವಾಗಿ ಶ್ರೀಮನ್ನಿರಂಜನಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯಸ್ವಾಮಿಗಳವರ ಮತ್ತು ಸಭಿಕರ ಶುಭಾಗಮನವನ್ನು ಬಯಸಿ 1925-26 ನೇ ಸಾಲಿನ ಅಂದರೆ 1-7-25 ರಿಂದ 30-6-26 ರ ವರಿವಿಗೆ ಕಮಿಟಿಯವರು ನಡೆಯಿಸಿರುವ ಕಾರ್ಯಕ್ರಮವನ್ನು ಸಂಕ್ಷೇಪವಾಗಿ ತಿಳಿಸುತ್ತೇನೆ.

ಜಮ.

ವ್ಯಾಜ್ ಮತ್ತು ಡಿವಿಡೆಂಡ್ ಮೂಲಕ 4096-10-0. ಪಕ್ಕೆ ಫಂಡ್ ಮೂಲಕ 2451-14-9. ಲಗ್ನಕಾರ್ಯದ ಮೂಲಕ 344-0-0. ಜುಮ್ಲಾ ಉತ್ಪತ್ತಿ 6890-8-9. ಜುಮ್ಲಾ ಖರ್ಚು 5663-6-6. ಖರ್ಚು ಜಾತ ಉತ್ಪತ್ತಿ 1227-2-3.

ಖರ್ಚು.

ಪಕ್ಕೆ ಫಂಡ್ ಖರ್ಚು ಮತ್ತು ವಸೂಲಿಯವರ ಸಂಬಳ 746-10-0. ಬೋರ್ಡಿಂಗ್ ಖರ್ಚಿಗೋಸ್ಕರ 1106-2-0. ಲಾ ಕಾಲೇಜ್, ಆರ್ಟ್ಸ್ ಕಾಲೇಜ್, ಟೆಕ್ನಿಕಲ್, ಎಂಟ್ರನ್ಸ್ ಹೈಸ್ಕೂಲ್ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್ಪಿಗೋಸ್ಕರ 2393-0-0. ದಾವಣಗೆರೆ ಮಿಡ್ಲ್ ಸ್ಕೂಲಿನಲ್ಲಿ ಅಭ್ಯಾಸಮಾಡುತ್ತಿರುವ ಬಡವಿದ್ಯಾರ್ಥಿಗಳ ಪುಸ್ತಕಕ್ಕೋಸ್ಕರ 41-0-0. ಶ್ರೀ ವಿರಕ್ತಮಠದ ರಿಪೇರಿ ಮತ್ತು ಶ್ರೀಗಳವರ ಖರ್ಚಿಗೆ 643-8-9. ಶ್ರೀಗಳವರ ವಾಸದ ಹೊಸಕಟ್ಟಡಕ್ಕೂ 461-1-9. ದಾವಣಗೆರೆ ಸೆಂಟರಿಗೆ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳ ಊಟಕ್ಕೂ 238-14-0. ಆಫೀಸ್ ಖರ್ಚಿಗೆ 26-14-6. ಮನೀಯಾರ್ಡರ್ ಖರ್ಚಿಗೆ 6-3-6. ಜುಮ್ಲಾ ಖರ್ಚು 5663-6-6. ಕಳೆದಸಾಲಿನ ಆಖೈರಿನಲ್ಲಿನ ಮೂಲಧನ 58500-8-6. ತಾ|| 30-6-26 ನೇ ದಿನದವರೆಗೆ ಮೂಲಧನ 59727-10-9. ಇದರ ತಪಶೀಲ್ ವಗೈರೆ ವಾರ್ಷಿಕ ಆಡಾವ್‌ರಿಪೋರ್ಟಿನಲ್ಲಿ ನಮೂದಿಸಿದೆ.

ಪ್ರತಿವರ್ಷವೂ ಸ್ಕಾಲರ್‌ಷಿಪ್ ಅಪೇಕ್ಷಿಸುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿದೆ. ಮೆಂಬರುಗಳಿಂದ ಬರತಕ್ಕ ಬಾಕಿ ವಿಶೇಷವಾಗಿರುತ್ತೆ ಮತ್ತು ಪಕ್ಕೆ ಫಂಡಿನ ವರಮಾನವು ವರ್ಷೇ ವರ್ಷೇ ಬಹಳ ಕಡಿಮೆಯಾಗುತ್ತಿದೆ. ಪ್ರಯುಕ್ತ ವಿದ್ಯಾಭಿಮಾನಿಗಳೂ ಮೆಂಬರುಗಳೂ ಆದ ತಾವು ಪಕ್ಕೆ ಮೊಬಲಗನ್ನು ಕ್ರಮವಾಗಿ ಪಾವತಿಮಾಡಿಸಿ ವಿದ್ಯಾಪ್ರೋತ್ಸಾಹಕಕೊಟ್ಟು ಕೀರ್ತಿಗೆ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇನೆ.

(Sd) ತಿರುಕಪ್ಪನವರ ಮಠದ ಷಡಾಕ್ಷರಪ್ಪ,
ಆನರೆರಿ ಪ್ರೆಸಿಡೆಂಟ್.

೧೯೨೬ ನೆಯ ಇಸವಿ ಅಗಸ್ಟ್ ತಾ|| ೨೮ ರಿಂದ ೧೯೨೬ನೆಯ ಇಸವಿ ಸೆಪ್ಟಂಬರ್ ತಾ|| ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಶ್ರಾವಣ ಬಹುಳ ಪಂಚಮಿಯಿಂದ ಶ್ರಾವಣ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
28	[1] ಶನಿ	ಪಂ-ಷ	1-7 55-14	ಅಶ್ವಿ	12-10	12
29	[2] ಭಾನು	ಸಪ್ತ	53-3	ಭರ	9-58	13
30	[3] ಸೋಮ	ಅಷ್ಟ	50-50	ಕೃತ್ತಿ	8-43	14
31	[4] ಮಂಗಳ	ನವ	49-40	ರೋಹಿ	8-32	15
1	ಬುಧ	ದಶ	49-52	ಮೃಗ	9-33	16
2	ಗುರು	ಏಕಾ	51-18	ಆರ್ದ್ರಾ	11-47	17
3	[5] ಶುಕ್ರ	ದ್ವಾದ	54-3	ಪುನ	15-16	18

(1) ಶ್ರಾವಣಶನಿವಾರ. (2) ಪ್ರಸನ್ನಕೃಷ್ಣಸ್ವಾಮಿರಥಃ. (3) ಜನ್ಮಾಷ್ಟಮಿ, ದಶಫಲವ್ರತಂ, ಮಧ್ವಾರ್ ಸಂಪ್ರದಾಯಕ್ಕೆ ಶ್ರೀಜಯಂತಿ, ಮಳೆನಕ್ಷತ್ರ-ಪುಷ್ಯ ೧ ನೆಯಪಾದ. (4) ಮಂಗಳಗೌರೀವ್ರತಂ, ತೆಂಗಲೆ ಸಂಪ್ರದಾಯಕ್ಕೆ ಶ್ರೀಜಯಂತಿ. (5) ಮಳೆನಕ್ಷತ್ರ-ಪುಷ್ಯ, ೨ ನೆಯಪಾದ.

ಮೈಸೂರು: ಕೃ. ವೆಂಕಟಾಚಲಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತ ಪ್ರಕಟಿತ.

REGISTERED NO M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಣಿತರಾಜಮಂಡಲಹಿತೈಷಾ | ಘನವಿಭವಕೃಷ್ಣರಾಜಾ ಪಕ್ಷ್ಮಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸಗೆ ೧೯೨೬ ನೆಯ ಇಸವಿ ಸಪ್ಟಂಬರ್ ತಾರೀಖು ೪ ನೆಯ ಶನಿವಾರ. [ಸಂಚಿಕೆ ೩೬

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1 ಕ್ಕೆ 0—12—0. ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಕ್ಷಯಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

34

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಮೂರು ಆಣೆ ಸ್ಟಾಂಪು ಕಳುಹಿಸಿದಲ್ಲಿ ಒಂದು ಪಂಚಾಂಗವನ್ನು ಬುಕ್‌ಪೋಸ್ಟು ಮೂಲಕ ರವಾನಿಸುತ್ತೇವೆ.

ವೈದ್ಯ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಶಿವಾನುಭವ.

(ನೂತನ ಕನ್ನಡತ್ರೈಮಾಸಿಕವು)

ವಚನಗ್ರಂಥಗಳು ವೀರಶೈವವಾಙ್ಮಯದಲ್ಲಿ ಎಷ್ಟು ಮಹತ್ವವಾದವುಗಳೆಂಬುದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಪತ್ರಿಕೆಯಲ್ಲಿ ಈ ವಚನಗಳು ಕೊಡಲ್ಪಡುತ್ತವೆ. ಅಲ್ಲದೆ ಅವುಗಳ ಅಭಿಪ್ರಾಯಗಳೂ ವಿದ್ವಜ್ಜನರಿಂದ ಬರೆಯಲ್ಪಡುತ್ತವೆ. ಇದು ೧೨೦ ಪುಟವುಳ್ಳದ್ದಿದ್ದು, ಇದರ ಸಂಪಾದಕರು ರಾ|| ಸಾ|| ಫ. ಗು. ಹಳಕಟ್ಟಿಯವರು ಇದ್ದಾರೆ.

ವರ್ಗಣೀದರಗಳು.

(೧) ಪೋಷಕರು ೧೦ ರೂ. (೨) ಆಶ್ರಯದಾತರು ೫ ರೂ. (೩) ವರ್ಗಣೀದಾರರು ೩ ರೂ. ಅಂಚೆವೆಚ್ಚ ೮ ಆಣೆ. ಬೇರೆ.

[12—12] ಶಿವಾನುಭವ ಆಫೀಸು ವಿಜಾಪುರ

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೪—೦
[illegible]	೦—೮—೦	೦—೧೩—೦
[illegible]	೧—೦—೦	೧—೬—೦
[illegible]	೧—೦—೦	೧—೬—೦

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ
ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೂಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಸಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕನಾದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ನಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೆ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—7] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು [illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ವಿಷಯವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಕಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧೨ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[illegible] ಪೋ. ಬಾ. [illegible], ಮದರಾಸು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

SIROMANY NARAYANACHARYA & CO., BENARES CITY.



ನಮ್ಮಲ್ಲಿ ಜರತಾರಿ ರೇಶ್ಮೆ ಮೊಗಟ, ಜರಿ ಸಾದಾ ಸೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, [illegible], [illegible], ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾಗುವುದು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಉಚಿತವಾಗಿ ಕಳುಹಿಸಲಾಗುವುದು.

ವಿಳಾಸ— [illegible]

ಶಿರೋಮಣಿ ನಾರಾಯಣಾಚಾರ್ಯ, ಬನಾರಸ್ ಸಿಟಿ.

ಸೂಚನೆ.

ಬರುವ ಶನಿವಾರ ಶ್ರೀಗಣೇಶನ ಹಬ್ಬದಿನವಾದ ಪ್ರಯುಕ್ತ ತಾ॥ 11ನೆಯ "ಮೈಸೂರು ಸ್ಟಾರ್" ಪತ್ರಿಕೆಯು ಪ್ರಕಟವಾಗುವುದಿಲ್ಲ.

ಸಂ.

ಮೈಸೂರು ಸ್ಟಾರ್.
೧೯೨೬ ನೆಯ ಇಸವಿ ಸೆಪ್ಟಂಬರ್ ತಾ॥ ೪ ನೆಯ ಶನಿವಾರ.

THE NANJANGUD-CHAMARAJNAGAR RAILWAY.

The historic town of Chamarajnagar was a scene of great joy and jubilation on Friday the 27th of August 1926, when His Highness the Maharaja of Mysore opened the new Railway line between Nanjangud and Chamarajnagar, which the District Board of Mysore was able to construct with the help of the Mysore Railway Department. The arrangements were mostly in the hands of the District Board, whose president is Mr. A. V. Ramanathan, the Deputy Commissioner of the District. It is sometimes an advantage for the head of the District to be the President of the Board as well as it lessens the responsibility of the non-official members of the Board in the work which they might be called upon to share otherwise. In the morning there was a meeting of the District Board when the address to be presented to His Highness the Maharaja was placed before the Board for their formal approval. It was translated into Kannada for the benefit of the members who did not know English, and as the President explained it could not be in Kannada a matter which it appears had met with previous consideration and had to be given up owing to restrictions of time imposed it was agreed that the Kannada version should be printed and sent to Chamarajnagar and other muffusil stations.

The presentation copy of the address which was in parchment was signed by the President, the Vice-President, official members and non-official members in order. Only a very few of them missed signing the same. The Chamarajnagar Municipality and the Mysore Railways had provided sumptuous tea to the invited guests who arrived by two special trains run for the occasion. The crowd that had gathered at the Railway Station and around was a magnificent one numbering over 20,000. Inside the pendal was gathered the *elite* of the District and some from the neighbouring District of Coimbatore including the President of its Board. His Highness the Maharaja accompanied by the Dewan of Mysore drove in State to the Railway Station through the thickly thronged road and on alighting was introduced to the Railway officers who had taken part in the construction of the line. The Chamarajnagar Municipal address in Kannada was read by its Vice-President Mr. Sanganabasappa, and was presented in a beautiful sandalwood casket of Mysore workmanship, the Railway address in English by Khan Bahadur A. A. Khan, the Acting Agent, and the address of the Mysore District Board by Mr. A. V. Ramanathan, both of the latter addresses being presented in beautiful silver caskets. His Highness' speech which was delivered much to the joy of the gathering in Kannada was a very interesting and encouraging one. His Highness spoke of the possible extension of the line to the south towards Satyamangalam, which with the openings the British Government have in view would connect Bombay and Colombo except for a very small portion. His Highness was pleased with the speedy and successful construction of the line which opened up a rich and fertile part of the District and expressed the hope that other Boards would follow suit. After the speech was punctuated with applause frequently His Highness tightened the last fish bolt with the aid of a Silver Spanner and drove away in a special amidst deafening cheers of the crowds. The work of the Agent Mr. Dove Wilson, the Engineer-in-Chief Mr. K. Sreenivasaiengar and of Mr. Ramachandra Rao acting Superintending Engineer and of Mr. M. Ramayya the Executive Engineer who was in direct charge of the construction was appreciated by all including His Highness. We hope that the line will prove a profitable one and we doubt not it will prove so if it is connected with Southern India, or at any rate if facilities for transport by motor are provided liberally with Kollegal and Satyamangala.

THE LATE MR. VARDHAMANIAH.

It is with the deepest regret that we have to record the sad and untimely demise of Mr. M. L. Vardhamaniah. A detailed account of his short and eventful life appeared in Kannada in our last issue. He was a notable figure in Mysore. Though young in years he commanded respect which grey hairs might envy. Born with a silver spoon in his mouth, he was yet meek and humble and in him the poor and the distressed found an accessable and a helping gentleman. He had a rare aptitude for large enterprises as is evidenced by the flotation of the Sri Krishnarajendra Mills Ltd., and other concerns. Of his virtues as a citizen it is agreed on all hands that he had a high sense of patriotism and his unselfish services to the State and his community are well-known to all. He was the accredited leader of the Jain community, which found in him a great and generous patron. His free and well-equipped hostel in Mysore for the students of his community is sufficiently indicative of his deep interest in their progress. There was hardly a single charitable association in Mysore which did not find in him a sympathetic and generous supporter. A public condolence meeting was held under the presidency of Dharmaprakasa D. Banumiah on Thursday the 2nd September 1926 at the Banumiah's High School Hall at which resolutions expressing their sorrow and placing on record his unselfish and patriotic services to the State and to his community and conveying their sentiments to the members of the bereaved family were passed. It is a great loss to the State in general and to the Jain community in particular, who find none to take his place. To the members of his family it is a flaw unimaginable. We hope Providence will give them enough strength to bear the loss with fortitude. May his soul rest in peace.

ವೀರಶೈವಮಹಾಸಭೆ.

ಹುಬ್ಬಳ್ಳಿಯ ವೀರಶೈವಮಹಾಜನರು ಬರುವ ಡಿಶಂಬರ್ ತಿಂಗಳಲ್ಲಿ ಮಹಾಸಭೆಯನ್ನು ತಮ್ಮೂರಿನಲ್ಲಿ ನೆರೆಯಿಸಲು ನಿರ್ಧರಿಸಿ ಅದರ ವೆಚ್ಚಕ್ಕಾಗಿ 10,000 ರೂ. ಗಳನ್ನು ಸಾಹಾಯ್ಯಾಕರಿಸಬೇಕೆಂದು ಮಹಾಸಭಾಚಿರಸ್ಥಾಯಿಫಂಡಿನವರನ್ನು ಕೇಳಿಕೊಂಡಿದ್ದುದಕ್ಕಾಗಿ ಚಿರಸ್ಥಾಯಿಫಂಡಿನ ಅಧ್ಯಕ್ಷರು ಹುಬ್ಬಳ್ಳಿಯ ಮಹಾಜನರನ್ನು ವಂದಿಸಿ ಧನಸಹಾಯದವಿಚಾರವನ್ನು ಪರ್ಯಾಲೋಚಿಸಿ ಕೂಡಲೆ ತಿಳಿಸುತ್ತೇವೆಂದು ಫಂಡಿನ ಅಧ್ಯಕ್ಷರು ಬರೆದಿರುವ ಲೇಖವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿತವಾಗಿರುತ್ತದೆ. ಈ ಚಿರಸ್ಥಾಯಿಫಂಡಿನವರು ಇಷ್ಟರಲ್ಲಿ ಸಭೆಸೇರಿ ದ್ರವ್ಯಸಹಾಯದ ವಿಚಾರವನ್ನು ಪರ್ಯಾಲೋಚಿಸಿ ತಕ್ಕುತ್ತರವನ್ನು ಕೊಟ್ಟಿರಬಹುದು. ಹುಬ್ಬಳ್ಳಿಯ ವೀರಶೈವಬಂಧುಗಳು ಮಹಾಸಭೆಯನ್ನು ಬರುವ ಡಿಶಂಬರಿನಲ್ಲಿ ನೆರೆಯಿಸಲು ನಿರ್ಧರಿಸುವುದು ಎಷ್ಟು ಸಂತೋಷಪ್ರದವಾಗಿರುವುದೋ ಅವರು ಮಹಾಸಭಾಚಿರಸ್ಥಾಯಿಫಂಡಿನಿಂದ 10,000 ರೂ. ದ್ರವ್ಯಸಹಾಯವನ್ನು ಮುಂಗಡವಾಗಿ ಅಪೇಕ್ಷಿಸಿರುವುದು ಅಷ್ಟು ವ್ಯಸನಕರವೂ ಅಯೋಗ್ಯವೂ ಆಗಿರುವುದೆಂದು ಮೊದಲಾಗಿ ಧಾರವಾಡದ ಚಂದ್ರೋದಯಪತ್ರಿಕೆಯು ಖಂಡಿಸಿ ಬರೆದಿರುವುದು. ಹುಬ್ಬಳ್ಳಿಯ ವೀರಶೈವರು ಪರಸಹಾಯಾಪೇಕ್ಷೆಯಿಲ್ಲದೆಯೇ ಮಹಾಸಭೆಯನ್ನು ಅಭೂತಪೂರ್ವವಾದ ವಿಜೃಂಭಣೆಯಿಂದ ನಡೆಯಿಸುವಷ್ಟು ಸಮರ್ಥರಾಗಿರುವರೆನ್ನುವುದರಲ್ಲಿ ಸಂದೇಹವಿಲ್ಲವಾದರೂ ಅಷ್ಟು ಹೆಚ್ಚು ದ್ರವ್ಯಸಹಾಯವನ್ನು ಚಿರಸ್ಥಾಯಿಫಂಡಿನಿಂದ ಅಪೇಕ್ಷಿಸಿರುವುದರ ಕಾರಣವೇನಿರಬಹುದೆಂಬುದನ್ನು ಊಹಿಸಿ ಹೇಳಲು ಸಾಧ್ಯವಿಲ್ಲ. ಆದರೆ "ಯಾವಲ್ಲಿ ಮಹಾಸಭೆಯನ್ನು ಕರೆಯಬೇಕೆಂದು ಎಲ್ಲರಿಗೂ ಅಗತ್ಯವೆಂದು ಕಂಡುಬರುವದೋ ಅಲ್ಲಿಯ ಜನರಿಗೆ ಮಹಾಸಭೆಯನ್ನು ಕೂಡಿಸಲಿಕ್ಕೆ ದ್ರವ್ಯದ ಅನಾನುಕೂಲತೆಯು ಇದ್ದಲ್ಲಿ ಅಂಥವರಿಗೆ ದ್ರವ್ಯಸಹಾಯಮಾಡುವುದು ಮಹಾಸಭೆಯ ಚಿರಸ್ಥಾಯಿಫಂಡಿನ ಉದ್ದೇಶವಿರುತ್ತದೆಂದು ನಮ್ಮ ತಿಳುವಳಿಕೆಯುಂಟು" ಎಂದು ಚಂದ್ರೋದಯಪತ್ರಿಕೆಯು ಬರೆದಿರುತ್ತದೆ. ಮಹಾಸಭಾ ಚಿರಸ್ಥಾಯಿಫಂಡಿನ ಮ್ಯಾನೇಜಿಂಗ್ ಕಮಿಟಿಯವರು ಫಂಡಿನ ಉದ್ದೇಶವನ್ನೂ ಆಶಯವನ್ನೂ ಪ್ರಕಟಿಸಿರುವುದರಲ್ಲಿ "The object of the Fund being to ensure the holding of the Conference every year, the Managing Committee may, subject to approval by the General Committee, render such financial assistance as they may consider fit for the holding of the Conference. If for any reason no such Conference is held in any year, and there is no prospect of its being held in the next year also, the Managing Committee may make preliminary arrangements for the holding of the Conference in the said next year, subject to approval by the General Committee." ಅಂದರೆ, "ಪ್ರತಿವರ್ಷ ಮಹಾಸಭೆಯನ್ನು ನಡಿಸಬೇಕೆಂಬುದು ಫಂಡಿನ ಉದ್ದೇಶವಾಗಿರುವಪ್ರಯುಕ್ತ, ಜನರಲ್‌ಕಮಿಟಿಯವರ ಅನುಮೋದನನಿರೀಕ್ಷಣೆಯಿಂದ ಮ್ಯಾನೇಜಿಂಗ್‌ಕಮಿಟಿಯವರು ಮಹಾಸಭೆಯನ್ನು ನಡಿಸಲು ತಮಗೆ ಸೂಕ್ತತೋರಿದಷ್ಟು ದ್ರವ್ಯಸಹಾಯಮಾಡಬೇಕು. ಯಾವದಾದರು ಕಾರಣದಿಂದ ಯಾವ ವರ್ಷದಲ್ಲಾದರೂ ಮಹಾಸಭೆಯು ನಡೆಯದಿದ್ದಲ್ಲಿ ಮತ್ತು ಅದರ ಮುಂದಣವರ್ಷದಲ್ಲೂ ನಡೆಯುವ ಸಂಭವವಿಲ್ಲದ ಪಕ್ಷದಲ್ಲಿ ಅದರ ಅಜೆವರ್ಷದಲ್ಲಿ ಮಹಾಸಭೆಯು ನಡೆಯಲು ತಕ್ಕೇರ್ಪಾಟುಗಳನ್ನು ಜನರಲ್‌ಕಮಿಟಿಯವರ ಅನುಮೋದನನಿರೀಕ್ಷಣೆಯಿಂದ ಮ್ಯಾನೇಜಿಂಗ್‌ಕಮಿಟಿಯವರು ಮಾಡತಕ್ಕದ್ದು" ಎಂದು ಸ್ಪಷ್ಟವಾಗಿರುವುದರಿಂದ, ದ್ರವ್ಯಾನುಕೂಲತೆ ಇಲ್ಲದವರಿಗೆ ಮಾತ್ರ ಕೊಡಬೇಕೆಂಬುದು ಚಿರಸ್ಥಾಯಿಫಂಡಿನ ಉದ್ದೇಶವಾಗಿರುತ್ತದೆಂದು ಹೇಳಲಿಕ್ಕೆ ಬರುವುದಿಲ್ಲ. ಅದುಕಾರಣ ಹುಬ್ಬಳ್ಳಿಯ ವೀರಶೈವಬಂಧುಗಳು ಚಿರಸ್ಥಾಯಿಫಂಡಿನಿಂದ ದ್ರವ್ಯಸಹಾಯವನ್ನಪೇಕ್ಷಿಸಿರುವುದು ಅನುಚಿತವೇನೂ ಅಲ್ಲವು. ಆದರೆ 10,000 ರೂ. ಗಳ ಸಾಹಾಯ್ಯವನ್ನು ಅಪೇಕ್ಷಿಸಿರುವುದು ಮಾತ್ರ ಬಹಳ ಹೆಚ್ಚೆಂದೂ, ಫಂಡೇರ್ಪಾಟಾದಾರಭ್ಯ ಸಭೆಯು ನಡೆಯಲಿಲ್ಲವಾಗಿ ಅದರ ವೃದ್ಧ್ಯಂಶವು ಮೂಲಧನಕ್ಕೆ ಸೇರಿಸಲ್ಪಟ್ಟಿರುವುದರಿಂದ ಒಂದುವರ್ಷದ ವೃದ್ಧ್ಯಂಶವನ್ನು ಕೊಡಲು ಅವಕಾಶವಿರುವಪ್ರಯುಕ್ತ 3-4 ಸಾವಿರ ರೂ. ಗಳಗಿಂತ ಹೆಚ್ಚಾಗಿ ಅಪೇಕ್ಷಿಸಲು ಅವಕಾಶವಿಲ್ಲವೆಂದೂ ಹೇಳಬಹುದಾಗಿದೆ. ಬಹುಕಾಲದಿಂದ ಎಲ್ಲಿಯೂ ನೆರೆಯದೆ ನಿಂತಿರುವ ಮಹಾಸಭೆಯನ್ನು ಈಸಲ ಕೂಡಿಸಲು ಪ್ರಯತ್ನಿಸಿರುವ ಹುಬ್ಬಳ್ಳಿಯ ವೀರಶೈವಬಂಧುಗಳು ಹೆಚ್ಚು ದ್ರವ್ಯಸಹಾಯವನ್ನಪೇಕ್ಷಿಸಿರುವರೆಂಬ ಕಾರಣದಿಂದ ಅವರನ್ನು ನಿಂದಿಸಿ ನಿರುತ್ಸಾಹಿಗಳನ್ನಾಗಿ ಮಾಡುವುದರ ಬದಲು, ಅವರು ಇಂತಹ ಮಹಾಸಭೆಗಳನ್ನು ಕೂಡಿಸಲು ಸ್ವಸಮರ್ಥರಾಗಿರುವುದರಿಂದ ತಂತಮ್ಮಲ್ಲೇ ಚಂದಾಹಣವನ್ನೆತ್ತಿ ಸಾಲದುದಕ್ಕೆ ಚಿರಸ್ಥಾಯಿಫಂಡಿನ ಸಹಾಯವನ್ನಪೇಕ್ಷಿಸುವುದುತ್ತಮವೆಂದು ಸೂಚಿಸಿ ಮಹಾಸಭೆಯನ್ನು ಕೂಡಿಸಬೇಕೆಂಬ ತಮ್ಮ ಸಂಕಲ್ಪವನ್ನು ಸಾಧಿಸಿ ಅವರು ಕೃತಕೃತ್ಯರಾಗುವಂತೆ ಮಾಡುವುದು ಮಹಾಸಭಾಭಿಮಾನಿಯಾದ ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿರುತ್ತದೆ. ಹಾಗಲ್ಲದೆ ಮಹಾಸಭೆಯನ್ನು ನೆರೆಯಿಸಲು ಪ್ರಯತ್ನಿಸುವವರನ್ನು ಯಾವುದಾದರೊಂದು ನೆಪದಿಂದ ಜರಿದು ನಿರುತ್ಸಾಹಗೊಳಿಸುವುದಾದರೆ, ಮತ್ತಾರೂ ಈ ಕಾರ್ಯಕ್ಕೇ ಪ್ರವೇಶಿಸದೆ ಮಹಾಸಭೆಯು ಯಾವಸ್ಥಳದಲ್ಲಿಯೂ ಕೂಡಲಿಕ್ಕೆ ಅವಕಾಶವಿಲ್ಲದಂತಾಗಿ ಕಡೆಯಲ್ಲಿ ಅದು ನಾಮಾವಶೇಷವಾಗುವುದೆಂಬುದನ್ನು ವೀರಶೈವಬಂಧುಗಳು ಮರೆಯಬಾರದು.

ಶ್ರೀ ವರ್ಧಮಾನಯ್ಯನವರು ದಿವಂಗತರಾದ ನಿಮಿತ್ತವಾಗಿ ನಡೆದ ಶೋಕಸಭೆಗಳು.

ಪ್ರಸಿದ್ಧ ವರ್ತಕರಾದ ಶ್ರೀಯುತ ವರ್ಧಮಾನಯ್ಯನವರು ಸ್ವರ್ಗಸ್ಥರಾದ ನಿಮಿತ್ತ ಶೋಕಪ್ರದರ್ಶನಾರ್ಥವಾಗಿ ಮೈಸೂರು ಪುರನಿವಾಸಿಗಳು ಈ ತಿಂಗಳ ತಾರೀಖು ೨ನೆಯ ಗುರುವಾರ ಸಾಯಂಕಾಲ 5½ ಗಂಟೆಗೆ ಬನುಮಯ್ಯನವರ ಹೈಸ್ಕೂಲ್ ಹಾಲ್‌ನಲ್ಲಿ ಮ॥ ಧರ್ಮಪ್ರಕಾಶಕ ಡಿ. ಬನುಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿದರು. ಮೊಟ್ಟಮೊದಲು ಮ॥ ಧನಕೋಟಿಶೆಟ್ಟರು ಶ್ರೀ ವರ್ಧಮಾನಯ್ಯನವರ ಮರಣನಿಮಿತ್ತವಾಗಿ ಶೋಕವನ್ನು ವ್ಯಕ್ತಪಡಿಸಿ ಮೃತರ ಬಂಧುವರ್ಗಕ್ಕೆ ಸಭಿಕರ ಶೋಕಸಹಾನುಭೂತಿಯನ್ನು ಸೂಚಿಸಬೇಕೆಂದು ಪ್ರಸ್ತಾಪಿಸಿದರು. ಈ ಪ್ರಸ್ತಾವವನ್ನು ಮಿ॥ ಮಹಮ್ಮದ್‌ಸೇಟ್‌ರವರು ಅನುಮೋದಿಸಿ ತಮಗೂ ಶ್ರೀ ವರ್ಧಮಾನಯ್ಯನವರಿಗೂ ಸುಮಾರು 25 ವರ್ಷಗಳಿಂದ ಮಿತ್ರತ್ವವಿದ್ದು ಅವರ ಗುಣಾತಿಶಯಗಳನ್ನು ತಾವು ಚೆನ್ನಾಗಿ ತಿಳಿದಿರುತ್ತೇವೆಂದೂ ಕೆಲವು ಸಂದರ್ಭಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳುಂಟಾಗಿದ್ದರೂ ಅವರು ಸ್ವಲ್ಪವೂ ಮನಸ್ಸಿನಲ್ಲಿಡದೆ ಉತ್ತರಕ್ಷಣದಲ್ಲೇ ನಗುನಗುತ್ತ ಮಾತನಾಡತಕ್ಕ ಸರಸಿಗಳಾಗಿದ್ದರೆಂದೂ, ಅವರು ದೇಶದಲ್ಲಿ ಕೈಗಾರಿಕೆಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಕೆಲವು ಕಾರ್ಖಾನೆಗಳನ್ನೇರ್ಪಡಿಸಿ ಸಾವಿರಾರುಮಂದಿ ಬಡಜನರಿಗೆ ಜೀವನೋಪಾಯವನ್ನು ಕಲ್ಪಿಸಿದ್ದರೆಂದೂ, ಅವರ ಒಡನಾಟದಲ್ಲಿ ಇನ್ನೂ ಕೆಲವುಕಾಲ ಇರುವ ಅದೃಷ್ಟವು ನಮ್ಮಗಳಿಗಿಲ್ಲದೆಹೋದುದು ದೇವರ ಮರ್ಜಿಯೆಂದೂ, ಶ್ರೀ ವರ್ಧಮಾನಯ್ಯನವರು ಅಪೂರ್ವವಾದ ಉತ್ಸಾಹಿವ್ಯಕ್ತಿಯಾಗಿದ್ದರೆಂದೂ ಮುಂತಾಗಿ ಹೇಳಿದರು. ಈ ವಿಷಯವನ್ನು ಆಸ್ಥಾನವಿದ್ವಾನ್ ನ್ಯಾಯತೀರ್ಥ ಎ. ಶಾಂತಿರಾಜಶಾಸ್ತ್ರಿಗಳವರೂ ಮ॥ ಪಿ. ಸಂಗಪ್ಪನವರೂ ಪುಷ್ಟೀಕರಿಸಿ ಸಮರ್ಥನಮಾಡಿದರು. ತರುವಾಯ ಅಡ್ವೋಕೇಟ್ ಮ॥ ಎಚ್. ಸಿ. ದಾಸಪ್ಪ, ಬಿ.ಎ.,ಎಲ್.ಎಲ್.ಬಿ., ಯವರು ಶ್ರೀ ವರ್ಧಮಾನಯ್ಯನವರ ಅಪೂರ್ವವಾದ ಬುದ್ಧಿಶಕ್ತಿ, ಕಾರ್ಯನೈಪುಣ್ಯ, ಪರೋಪಕಾರಬುದ್ಧಿ, ದ್ರವ್ಯದ ಸದ್ವಿನಿಯೋಗ, ನಿರಾಡಂಬರ ಮತ್ತು ನಿರಹಂಕಾರ, ವಿದ್ಯಾಪ್ರೋತ್ಸಾಹ, ಶ್ರವಣಬೆಳ್ಗೊಳದಲ್ಲಿ ನಡೆದ ಪೂಜಾಕಾಲದಲ್ಲಿ ಅವರು ಮಾಡಿದ ಅನುಪಮವಾದ ಅವಿಶ್ರಾಂತಪರಿಶ್ರಮ, ಜನಗಳಿಗೆ ಅವರಲ್ಲಿದ್ದ ಪ್ರೀತಿವಿಶ್ವಾಸ, ಆ ಮಹಾಪುರುಷನ ವಿಯೋಗದಿಂದ ವಿಶೇಷವಾಗಿ ಜೈನಸಮಾಜಕ್ಕೂ ಕೈಗಾರಿಕೆಯ ದೃಷ್ಟಿಯಿಂದ ದೇಶಕ್ಕೂ ಉಂಟಾದ ಹಾನಿ ಮೊದಲಾದ ವಿಷಯಗಳನ್ನು ಕುರಿತು ಸಭಿಕರ ಮನಸ್ಸಿಗೆ ಚೆನ್ನಾಗಿ ತಾಟುವಂತೆ ಸರಸವಾದ ಭಾಷಣವನ್ನು ಮಾಡಿದರು.

ಅನಂತರ ಮೃತಾತ್ಮರ ಗೌರವಾರ್ಥವಾಗಿ ಸಭಿಕರೆಲ್ಲ ಎದ್ದುನಿಂತು ಶೋಕಸೂಚನೆಯ ಪ್ರಸ್ತಾವವನ್ನು ಸರ್ವಾನುಮತದಿಂದ ಪಾಸ್ ಮಾಡಿದಮೇಲೆ ಸಭೆಯು ವಿಸರ್ಜನವಾಯಿತು.

ಮಂಡ್ಯ.

ಶ್ರೀಯುತ ಎಂ. ಎಲ್. ವರ್ಧಮಾನಯ್ಯನವರು ಅಕಾಲಮರಣಕ್ಕೆ ಒಳಗಾದ್ದರಿಂದ ಮಂಡ್ಯದ ಜೈನಸಮಾಜದವರು ಕಳೆದ ತಾ॥ 30 ನೇ ಸೋಮವಾರ ಸಾಯಂಕಾಲ ಜೈನಬಸತಿಯಲ್ಲಿ ಮ॥ ಧರಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ದೇವರ ಪ್ರಾರ್ಥನೆಯನ್ನು ಮಾಡಿ ಶೋಕಸಾಗರದಲ್ಲಿ ಮುಳುಗಿರುವ ಅವರ ಬಂಧುವರ್ಗಕ್ಕೆ ತಮ್ಮ ಶೋಕವನ್ನೂ ಸಹಾನುಭೂತಿಯನ್ನೂ ಸೂಚಿಸಿದರು, ಮತ್ತು ಶ್ರೀಯುತರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಮಾರನೇ ಬೆಳಗ್ಗೆ ದೇವಸ್ಥಾನದಲ್ಲಿ ದೇವರ ಪೂಜೆಮೊದಲಾದವುಗಳನ್ನು ನಡೆಯಿಸಿ ಮಧ್ಯಾಹ್ನ 11 ಘಂಟೆಯಿಂದ 12 ಘಂಟೆಯವರೆಗೆ ಸಮಸ್ತ ಜೈನರು ತಂತಮ್ಮ ಅಂಗಡಿಗಳ ಬಾಗಿಲುಗಳನ್ನು ಹಾಕಿ ತಮ್ಮ ದುಃಖವನ್ನು ತೋರ್ಪಡಿಸಿದರು.

ಸ್ವದೇಶದ ವೃತ್ತಾಂತಗಳು.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿಕೊಂಡು ಬರುವುದಕ್ಕಾಗಿ ದಿವಾನರು ಈ ತಾ॥ 15ರಲ್ಲಿ ಪ್ರಯಾಣಮಾಡುವರು.

ರಾಜಧಾನಿಯಲ್ಲಿ ಈಗ್ಗೆ 5-6 ದಿನಗಳಿಂದಲೂ ಮೋಡವಾಗುತ್ತಿದೆಯಲ್ಲದೆ ಮಳೆಮಾತ್ರ ಬೀಳಲಿಲ್ಲವು. ಆದರೆ ಮೊನ್ನೆ ಸಾಯಂಕಾಲ ಮಾತ್ರ ಅಶ್ವಶಾಲೆಯಸುತ್ತ ಕೊಂಚಪ್ರದೇಶದಲ್ಲಿ 22 ಸೆಂಟುಮಳೆಯಾಯಿತೆಂದು ಕೇಳುತ್ತೇವೆ.

ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯವರೂ, ಯುವರಾಣಿಯವರಾದಿಯಾಗಿ ರಾಣಿವಾಸದವರೂ ಈ ತಾ॥ 2 ರ ರಾತ್ರಿ 10 ಘಂಟೆಗೆ ಸ್ಪೆಷಲ್ ಟ್ರೈನಿನಲ್ಲಿ ಹಾಸನದ ಮಾರ್ಗವಾಗಿ ಬೇಲೂರು ಹಳೇಬೀಡಿಗೆ ಚಿತ್ತೈಸಿದ್ದು ದೇವರದರ್ಶನ ಮಾಡಿಕೊಂಡು ಈ ದಿವಸ ಬೆಳಗ್ಗೆ ರಾಜಧಾನಿಗೆ ಹಿಂದಿರುಗಿ ದಯೆಮಾಡಿಸಿದರು.

ದಿವಾನರ ಕೂಡ ಬಿಕನೀರಿಗೆ ಸ್ಪೆಷಲ್‌ಡ್ಯೂಟಿಯಮೇಲೆ ಹೋಗಿದ್ದ ಮ॥ ಬಾಲಸುಂದರಂ ಅಯ್ಯರ್‌ರವರು ಬೆಂಗಳೂರಿಗೆ ಹಿಂದಿರುಗಿಬಂದು ತಮ್ಮ ರೆವಿನ್ಯೂಕಮಿಷನರುದ್ಯೋಗವನ್ನು ವಹಿಸಿಕೊಂಡುದರಿಂದ ಅವರ ಬದಲು ನೋಡುತ್ತಿದ್ದ ಮ॥ ಬಿ. ರಾಮಸ್ವಾಮಯ್ಯನವರು ಎಕ್ಸೈಸ್‌ಕಮಿಷನರುದ್ಯೋಗಕ್ಕೆ ಹಿಂದಿರುಗಿಬಂದರು.

ನಂಜನಗೂಡು-ಚಾಮರಾಜನಗರರೈಲ್ವೆಯಾರಂಭೋತ್ಸವಕ್ಕಾಗಿ ರಾಧಾನಿಗೆ ಚಿತ್ತೈಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಭಾನುವಾರ ಬೆಳಗ್ಗೆ ಮೋಟಾರುಬಂಡಿಯಲ್ಲಿ ಎಡಿಕಾಂಗ್ ಮಿ॥ ಸಾರವರೊಡನೆ ಬೆಂಗಳೂರಿಗೆ ದಯೆಮಾಡಿಸಿತು, ಮತ್ತು ತಾ॥ 1 ರಲ್ಲಿ ದಿವಾನರವರ ಆಫೀಸಿಗೂ, ಚೀಫ್‌ಕೋರ್ಟಿಗೂ ಚಿತ್ತೈಸಿದ್ದು ಪರಾಮರ್ಶಿಸಿಕೊಂಡು ಬಂದಿತು.

ರಾಜಧಾನಿಯ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮಿ॥ ಟಿ. ಎಸ್. ಅಲ್ಲಿಖಾರ್‌ರವರಿಗೂ ಮೈಸೂರು ಸಂಪದಭ್ಯುದಯಪತ್ರಿಕೆಗೂ ನಡೆದ ಮಾನನಷ್ಟದ ವಿವಾದದಲ್ಲಿ ಅಪರಾಧಿಗೆ ವಿಧಿಸಲ್ಪಟ್ಟಿರುವ ಶಿಕ್ಷೆಯು ಅನ್ಯಾಯವೆಂದು ಡಿಸ್ಟ್ರಿಕ್ಟ್‌ಕೋರ್ಟಿನಲ್ಲಿ ಅಪರಾಧಿಯು ಮಾಡಿರುವ ಅಪೀಲಿನ ಮತ್ತು ಪತ್ರಿಕಾಪ್ರೊಪ್ರೈಟರಾದ ಮ॥ ಎಂ. ವೆಂಕಟಕೃಷ್ಣಯ್ಯನವರನ್ನು ಛಾರ್ಜುಮಾಡದೆ ಬಿಟ್ಟುದು ತಪ್ಪಾದುದರಿಂದ ಪುನಃ ವಿಚಾರಣೆ ಮಾಡಬೇಕೆಂದು ಫಿರ್ಯಾದಿಯು ಅದೇ ಕೋರ್ಟಿಗೆ ಹಾಕಿರುವ ಅರ್ಜಿಯ ವಿಚಾರಣೆಯು ಈ ತಾ॥ 7 ಕ್ಕಿಡಲ್ಪಟ್ಟಿದೆ.

ರಾಜಧಾನಿಯಲ್ಲಿ ಪ್ರಸಿದ್ಧ ಅಡ್ವೊಕೇಟರಾಗಿದ್ದು ಗತಿಸಿದ ಎ. ರಾಮಣ್ಣನವರ ವೃದ್ಧಮಾತೆಯು ಕಳೆದವಾರ ವಿಧಿವಶರಾದರು. ಅವರ ಉತ್ತರಕ್ರಿಯಾದಿಗಳನ್ನೆಲ್ಲಾ ಅವರ ಎರಡನೆಯ ಕುಮಾರರಾದ ಮ॥ ಸುಬ್ಬಣ್ಣನವರು ಬಹಳ ವಿಚಕ್ಷಣೆಯಿಂದಲೂ ಔದಾರ್ಯದಿಂದಲೂ ನೆರವೇರಿಸಿದುದಲ್ಲದೆ ಬ್ರಾಹ್ಮಣರನ್ನು ಸಂತರ್ಪಣೆ ಮತ್ತು ದಕ್ಷಿಣೆಯಿಂದ ತೃಪ್ತಿಗೊಳಿಸಿದಂತೆಯೇ ಶ್ರೀರಾಮಪೇಟೆಯಲ್ಲಿರುವ ಕೊಲ್ಲಿಪಾಕಿಮಠದಲ್ಲಿ ಅಲ್ಲಿಯ ವೀರಶೈವರಿಗೆ ಸಂತರ್ಪಣೆಯನ್ನು ನಡೆಯಿಸಿ ದಕ್ಷಿಣೆಯನ್ನು ಕೊಟ್ಟು ತಮ್ಮ ಔದಾರ್ಯವನ್ನೂ ನಿಷ್ಪಕ್ಷಪಾತತೆಯನ್ನೂ ಪ್ರದರ್ಶಿಸಿದರೆಂದು ಕೇಳಿ ಸಂತೋಷಿಸುತ್ತೇವೆ.

ಮತಸಂಬಂಧವಾದ ಸಂಘಗಳಲ್ಲಿ ಸರ್ಕಾರಿಯಧಿಕಾರಿಗಳು ಅಧ್ಯಕ್ಷ, ಸೆಕ್ರೆಟರಿ ಮೊದಲಾಗಿ ಉದ್ಯೋಗನಿರ್ವಾಹಕರಾಗಿರಕೂಡದೆಂದು ಸರ್ಕಾರದಪ್ಪಣೆಯಾಗಿರುವುದೆಂದು ನಾವು ಹಿಂದೆ ತಿಳಿಸಿದ್ದೆವಷ್ಟೆ. ಈಗ ಆ ರೀತಿ ಇರಕೂಡದೆಂದು ಒಕ್ಕಲಿಗರ ಸಂಘದ ಪ್ರೆಸಿಡೆಂಟರಾಗಿದ್ದ ಬ್ಯಾರಿಸ್ಟರ್ ಮ॥ ಬಿ. ನಾಗಪ್ಪನವರಿಗೂ, ವೈಸ್‌ಪ್ರೆಸಿಡೆಂಟರಾಗಿದ್ದ ಬ್ಯಾರಿಸ್ಟರ್ ಮ॥ ಕೆ. ಎಚ್. ರಾಮಯ್ಯನವರಿಗೂ ಸರ್ಕಾರಿಯಪ್ಪಣೆಯಾದುದರಿಂದ ಆ ಉಭಯ ದೊಡ್ಡಮನುಷ್ಯರುಗಳು ಸಂಘದ ಉದ್ಯೋಗಗಳಿಂದ ನಿವೃತ್ತರಾಗಿ ಸಾಧಾರಣ ಮೆಂಬರುಗಳಾಗಿರುವರು. ಇತರ ಸಂಗಡಗಳ ಸಂಘದಲ್ಲಿ ಸರ್ಕಾರಿಯುದ್ಯೋಗಸ್ಥರು ಇನ್ನೂ ಸೆಕ್ರೆಟರಿ ಮೊದಲಾದ ಉದ್ಯೋಗದಲ್ಲಿರುವುದನ್ನು ನೋಡಿದರೆ ಅವರಿಗಿನ್ನೂ ಸರ್ಕಾರಿಯಪ್ಪಣೆಯು ಆದಂತೆ ತೋರುವುದಿಲ್ಲ.

ರಾಜಧಾನಿಯಲ್ಲಿ ಅಡ್ವೊಕೇಟರಾಗಿರುವ ಮ॥ ಎಂ. ಸಿ. ಭೋಗಯ್ಯ, ಬಿ.ಎ., ಬಿ.ಎಲ್., ರವರ ಮೇಲೂ ಅವರ ಕಕ್ಷಿಗಾರನಮೇಲೂ ಚೀಫ್‌ಕೋರ್ಟಿಗೆ ಹಾಕಲ್ಪಟ್ಟಿದ್ದ ಅರ್ಜಿಯು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಲ್ಲಿಗೆ ವಿಚಾರಣೆಗಾಗಿ ಕಳುಹಲ್ಪಟ್ಟಿದೆಯೆಂದು ಕಳೆದವಾರದ ಸ್ಟಾರ್‌ಪತ್ರಿಕೆಯಲ್ಲಿ ಒಬ್ಬ ಪತ್ರವ್ಯವಹಾರಕರು ತಿಳಿಸಿದ್ದರಷ್ಟೆ. ಇದರ ವಿಚಾರಣೆಯು ನೆನ್ನೆಯದಿವಸ ನಡೆದು ಅರ್ಜಿದಾರನ ಮತ್ತು ಅವನ ಕಡೆಯ ಸಾಕ್ಷಿಗಳ ವಾಂಗ್ಮೂಲವು ತೆಗೆದುಕೊಳ್ಳಲ್ಪಟ್ಟು ಯಾವ್ಯಾವ ವಿಚಾರದಲ್ಲಿ ಛಾರ್ಜುಮಾಡಲ್ಪಡುವುದೆಂಬುದು ಬರುವ ತಾ॥ 8 ರಲ್ಲಿ ತಿಳುಹಲ್ಪಡುವುದಾಗಿ ಹೇಳಲ್ಪಟ್ಟಿತು. ಅರ್ಜಿದಾರನಕಡೆ ಅಡ್ವೊಕೇಟ್ ಮ॥ ಮಿರ್ಲೆ ಸುಬ್ಬರಾಯರೂ, ಅಪರಾಧಿಗಳಕಡೆ ಅಡ್ವೋಕೇಟ್ ಮ॥ ಮಿರ್ಲೆ ಶ್ರೀಕಂಠಯ್ಯನವರೂ ವಕೀಲರುಗಳಾಗಿ ನಿಂತಿರುವರು.

ಕೆಲ ದಿವಸಗಳಹಿಂದೆ ರಾಜಧಾನಿಯ ನಯನಜಕ್ಷತ್ರಿಯ (ಕ್ಷೌರಿಕ) ರು ಶ್ರೀಚಾಮುಂಡೇಶ್ವರಿಯ ಸೇವೆಗಾಗಿ ಬೆಟ್ಟಕ್ಕೆ ಹೋಗಿ ದೇವಸ್ಥಾನದೊಳಗೆ ಪ್ರವೇಶಮಾಡುವಾಗ್ಗೆ, ನೀವು ಗರುಡಗಂಬದಿಂದೀಚೆಗಿರಬೇಕಲ್ಲದೆ ಅದರಿಂದಾಚೆಗೆ ಹೋಗಕೂಡದೆಂದು ಅವರನ್ನು ಅರ್ಚಕರು ತಡೆದುನಿಲ್ಲಿಸಿಬಿಟ್ಟರು. ಆಗ ಅವರುಗಳು ನಾವು ಯಾವಾಗಲೂ ಇತರರಂತೆ ಗರುಡಗಂಬದಿಂದಾಚೆಗೆ ದೇವಸ್ಥಾನದೊಳಕ್ಕೆ ಹೋಗುತ್ತಿದ್ದೆವು. ಈಗ ಇತರರನ್ನು ಬಿಟ್ಟು ನಮ್ಮನ್ನುಮಾತ್ರ ತಡೆಯಲು ಕಾರಣವೇನೆಂದು ಕೇಳಿದರು. ಅದಕ್ಕೆ ಅರ್ಚಕರು, ನೀವು ಯಾರಿಗೂ ತಿಳಿಯದಂತೆ ಜನರಗುಂಪಿನಲ್ಲಿ ನುಸಿದುಹೋಗುತ್ತಿದ್ದಿರಾದುದರಿಂದ ಕಂಡುಹಿಡಿಯಲಾಗುತ್ತಿರಲಿಲ್ಲ; ಈಗ ನೀವು ಒಳಕ್ಕೆ ಪ್ರವೇಶಿಸಲಾಗುವುದಿಲ್ಲವೆಂದು ಉತ್ತರಕೊಟ್ಟರು. ಅದಕ್ಕೆ ಕ್ಷೌರಿಕರು ಕೋಪಿಸಿಕೊಂಡು ಅಮ್ಮನವರ ಸೇವೆಗಾಗಿ ತಂದಿದ್ದ ಅರಶಿನ ಕುಂಕುಮ ಫಲಪುಷ್ಪಗಳನ್ನು ಅರ್ಚಕರವಶಕ್ಕೆ ಕೊಟ್ಟು ದೇವರಿಗುಪಯೋಗಿಸಿಕೊಳ್ಳಿ ಎಂದು ಹೇಳಿ ಅಲ್ಲಿ ನಿಲ್ಲದೆ ಹಿಂದಿರುಗಿಬಿಟ್ಟರು. ಅಂದಿನಿಂದ ಬೆಟ್ಟದಲ್ಲಿರುವ ದೇವಸ್ಥಾನದ ಅರ್ಚಕರಿಗೂ, ಮೇಲ್ವಿಚಾರಣಕರ್ತರಿಗೂ ಯಾರೂ ಕ್ಷೌರ ಮಾಡಕೂಡದೆಂದು ಬೆಟ್ಟದಲ್ಲಿರುವ ಕ್ಷೌರಿಕರಿಗೆ ಕಟ್ಟುಮಾಡಿರುವುದಲ್ಲದೆ ರಾಜಧಾನಿಯಲ್ಲಿರುವ ಸೆಲೂನಿನವರೂ ಇತರರೂ ಮಾಡಕೂಡದೆಂದು ನಿರ್ಧರಿಸಿಕೊಂಡಿರುವರು. ಇದರಿಂದ ಬೆಟ್ಟದ ಅರ್ಚಕರು ಮತ್ತೆ ಕೆಲರು ಕ್ಷೌರಮಾಡಿಸಿಕೊಳ್ಳಲು ಯತ್ನವಿಲ್ಲದೆ ದೀಕ್ಷೆಯನ್ನು ಬಿಟ್ಟಿರುವರು. ಈಗಿನ ಸ್ವಾತಂತ್ರ್ಯಸಾಧನಪ್ರಪಂಚದಲ್ಲಿ ಈ ವಿಧವಾದ ಸಂಕುಚಿತಭಾವವೂ, ಮುಷ್ಕರವೂ ಯಾರಿಗೂ ಸಾಧುವಾದುವಲ್ಲ.

ಭರತಖಂಡದ ವೃತ್ತಾಂತಗಳು.

ಘಾಜಿಪುರದ ಕಲೆಕ್ಟರಾಗಿದ್ದ ಮೆ॥ ಆರ್. ಜಿ. ಡಗ್ಲಾಸ್, ಐ.ಸಿ.ಎಸ್., ರವರು ವಾಂತಿಭೇದಿರೋಗಗ್ರಸ್ತರಾಗಿ ಸತ್ತುಹೋದರು.

ಕಲ್ಲಿಕೋಟೆಗೆ ಸೇರಿದ ಕಪ್ಪಲಿ ದೇವಸ್ಥಾನಪ್ರವೇಶಮಾಡಿ ದೊಂಬಿಮಾಡಿದರೆಂದು 12 ಥಿಯಾಜನರಿಗೆ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರು ವಿಧಿಸಿದ್ದ ಶಿಕ್ಷೆಯು ಸೆಷನ್ಸ್ ಜಡ್ಜಿಯರಿಂದ ಮನ್ನಿಸಲ್ಪಟ್ಟಿತು.

ಸಿಮ್ಲಾದಲ್ಲಿ ನಡೆದ ಒಂದು ಕೊಲೆಯವಿಚಾರಣೆಯಲ್ಲಿ ಅಪರಾಧಿಯು ಹೊಣೆಯಮೇಲೆ ಬಿಡಲ್ಪಟ್ಟನು, ಆದರೆ ಫಿರ್ಯಾದಿಪರ ಸಾಕ್ಷಿ ಹೇಳಿದವರಲ್ಲಿ ನಾಲ್ವರು ಬೇರೆಬೇರೆ ಕೋರ್ಟಿನಲ್ಲಿ ಬೇರೆಬೇರೆ ಸಾಕ್ಷ್ಯವನ್ನು ನುಡಿದರೆಂಬ ಅಪರಾಧಕ್ಕಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ.

ಕುಂಭಕೋಣದಲ್ಲಿ ಎರಡು ಮೋಟಾರುಬಸ್ಸುಗಳು ಜೋಡೆತ್ತಿನಬಂಡಿಗೆ ತಾಕುಬಿಡಿದುದರಿಂದ ಒಂದು ಎತ್ತು ಕೂಡಲೆ ಸತ್ತುಹೋಯಿತು, ಮತ್ತು ಬಂಡಿಯಲ್ಲಿ ಕುಳಿತಿದ್ದ ಇಬ್ಬರು ಹೆಂಗುಸರುಗಳಿಗೆ ಪ್ರಾಣಾಪಾಯಸಂಭವಿಸಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಟ್ಟಾಗ್ಯೂ ಒಬ್ಬಳು ಸತ್ತುಹೋದಳು, ಮತ್ತೊಬ್ಬಳು ಮರಣೋನ್ಮುಖಳಾಗಿರುವಳು.

ಹೊಸದಾಗಿ ಕೆಲಸಕ್ಕೆ ಸೇರತಕ್ಕ ಕಲಾಸಿಯವರಿಗೆ ಸಂಬಳವಲ್ಲದೆ ಹೆಚ್ಚಾಗಿ ಕೊಡಲ್ಪಡುವ 5 ರೂಪಾಯಿಯು ಇತಃಪರ ಕೊಡಲ್ಪಡುವುದಿಲ್ಲವೆಂದು ಬೊಂಬಾಯಿನ ಮ್ಯುನಿಸಿಪಾಲಿಟಿಯವರು ನಿರ್ಧರಿಸಿರುವುದರಮೇಲೆ 1200 ಜನ ಕಕ್ಕಸನ್ನು ಗುಡಿಸುವವರೂ 1300 ಜನ ಬೀದಿಗುಡಿಸುವವರೂ ಕೆಲಸಕ್ಕೆ ಹೋಗದೆ ಮುಷ್ಕರಹಿಡಿದು ನಿಂತುಬಿಟ್ಟಿರುತ್ತಾರೆ.

ದರ್ಭಾಂಗಮಹಾರಾಜರವರ ಅರಮನೆಯಲ್ಲಿ 68,000 ರೂ. ಬೆಲೆಯ 3 ವಜ್ರದುಂಗುರಗಳು ಕಳವಾದುವು. ಇವುಗಳಲ್ಲೊಂದಕ್ಕೆ ಹಾಕಲ್ಪಟ್ಟಿರುವ ಒಂದೇ ಒಂದು ವಜ್ರವು ಗುಲಾಬಿಬಣ್ಣವಿರುವುದಲ್ಲದೆ ಹೊತ್ತುಹೊತ್ತಿಗೆ ನೀಲಿ ಮತ್ತು ಬಿಳೀಬಣ್ಣಗಳಿಗೆ ಬದಲಾಯಿಸುತ್ತದಂತೆ ಮತ್ತು ಅದರೊಂದರ ಬೆಲೆಯೇ 60,000 ರೂ. ಆಗುತ್ತದಂತೆ. ಪೋಲೀಸಿನವರು ಅವನ್ನು ಕಂಡುಹಿಡಿಯಲು ಬಹಳ ಸಾಹಸಪಡುತ್ತಿರುವರು.

ಅಲಹಾಬಾದಿನಲ್ಲಿ ಒಬ್ಬ ಪೋಲೀಸಾಳು ಅನುಮಾನಗ್ರಸ್ತರಾದ ಕೆಲ ಜನರನ್ನು ಠಾಣಕ್ಕೆ ಕರೆದುಕೊಂಡು ಹೋಗುತ್ತಿರುವಾಗ್ಗೆ ಅವರಲ್ಲೊಬ್ಬನು ಪೋಲೀಸಾಳನ್ನು ಪ್ರತಿಭಟಿಸಿ ಗುಂಡಿನಿಂದ ಹೊಡೆದು ಓಡಿಹೋದನು. ಪೋಲೀಸಾಳು ಆಸ್ಪತ್ರೆಗೆ ಸಾಗಿಸಲ್ಪಟ್ಟು ಉಪಚರಿಸಲ್ಪಟ್ಟಾಗ್ಯೂ ಬದುಕದೆ ಸತ್ತುಹೋದನು. ಆ ಘಾತುಕನನ್ನು ಹಿಡಿದುಕೊಟ್ಟವರಿಗೆ 500 ರೂ. ಬಹುಮಾನಿಸಲ್ಪಡುವುದಾಗಿ ಪ್ರಕಟವಾಗಿದೆ.

ಸಿಂದ್ ಹೈದರಾಬಾದಿನಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿಯು ವ್ಯಭಿಚಾರಿಣಿಯೆಂದು ಗ್ರಹಿಸಿ ಆಕೆಯನ್ನೂ ಒಂದು ಮಗುವನ್ನೂ ಕತ್ತರಿಸಿ ತಾನೇ ಪೋಲೀಸು ಠಾಣಾಕ್ಕೆ ಓಡಿಹೋಗಿ ತನ್ನ ಕೃತ್ಯವನ್ನು ಹೇಳಿ ಅವರ ವಶವಾದನು. ಕತ್ತರಿಸಲ್ಪಟ್ಟ ಮಗುವು ಕೂಡಲೆ ಮರಣಹೊಂದಿತು. ಹೆಂಡತಿಯು ಆಸ್ಪತ್ರೆಗೆ ಸಾಗಿಸಲ್ಪಟ್ಟಮೇಲೆ ಸತ್ತುಹೋದಳು ಮತ್ತು ತಾನು ವ್ಯಭಿಚಾರಿಣಿಯಲ್ಲವೆಂದು ಹೇಳಿ ಬರೆಸಿದಳು.

ಕೊರನೂರು ರೈಲ್ವೆಸ್ಟೇಷನ್ನಿನ ಸಮೀಪದಲ್ಲಿ ಒಬ್ಬ ಹೆಂಗುಸೂ ಅವಳ ಹಿಂಗಡೆ 5 ವರ್ಷಗಳ ಮಗಳೂ ರೈಲ್ವೇ ಲೈನಿನಲ್ಲಿ ಹೋಗುತ್ತಿರುವಾಗ್ಗೆ ಸ್ಟೇಷನ್ನಿನಿಂದ ಕಲ್ಲಿಕೋಟೆಗೆ ಹೊರಟ ರೈಲುಬಂಡಿಯು ಬಹಳ ರಭಸದಿಂದ ಬರುತ್ತಿದ್ದುದನ್ನು ತಾಯಿ ಕಂಡು ಹಿಂದೆಬರುತ್ತಿದ್ದ ಮಗಳನ್ನು ಹಿಡಿದುಕೊಳ್ಳಲು ಹೋಗಿ ಉಭಯರೂ ಇಂಜನ್ನಿಗೆ ಸಿಕ್ಕಿ ಹತರಾದರು. ಇವರುಗಳ ಹಿಂದೆ ಬರುತ್ತಿದ್ದ ಗಂಡನು ಅನಾಹುತವನ್ನು ನೋಡಿ ಬಹಳವಾಗಿ ವ್ಯಥೆಪಟ್ಟನು.

ಕಲಕತ್ತಾದಲ್ಲಿ ಪೋಲೀಸಿನವರು ಅನೇಕ ಮನೆಗಳನ್ನು ಶೋಧಿಸಿ 10 ಜನರನ್ನು ಸೆರೆಹಿಡಿದಿರುವರು. ಇವರು ಕಲಕತ್ತಾದಲ್ಲಿ ಕನ್ನಕಳವನ್ನು ನಡಿಸುತ್ತಿರುವ ಗುಂಪಿಗೆ ಸೇರಿದವರಾಗಿರುತ್ತಾರೆ. ಇವರೆಲ್ಲರೂ ರೂಪಾಂತರವನ್ನು ಹೊಂದಿ ಈ ಕೃತ್ಯಗಳನ್ನು ನಡಿಸುತ್ತಿರುವರು. ಇವರಲ್ಲಿ 17 ವೇಳೆ ಕಾರಾಗೃಹವಾಸಶಿಕ್ಷೆಯನ್ನು ಅನುಭವಿಸಿರುವವನು ಫಕೀರನವೇಷವನ್ನು ಧರಿಸಿಕೊಂಡಿದ್ದು ತನ್ನನ್ನು ಪೋಲೀಸರು ಹಿಡಿಯಲಿಕ್ಕೆ ಬಂದಾಗ್ಯೆ 'ನನ್ನ ಸಮೀಪಕ್ಕೆ ಬರಬೇಡಿ, ಹಾಗೇನಾದರು ನನ್ನನ್ನು ಮುಟ್ಟಿದಲ್ಲಿ ನೀವು ಸುಟ್ಟು ಭಸ್ಮವಾಗುತ್ತೀರಿ' ಎಂದು ಬೆದರಿಸಿದನಂತೆ. ಆದರೂ ಸೆರೆಹಿಡಿಯಲ್ಪಟ್ಟನು.

ಪೆನಗೊಂಡದಲ್ಲಿ ಮಳೆಯಿಲ್ಲದಿರುವುದರಿಂದ ವರುಣದೇವರ ಪ್ರೀತ್ಯರ್ಥವಾಗಿ ಕೆಲ ಬ್ರಾಹ್ಮಣರು ಪಶುಯಾಗಮಾಡಲು ಸಂಕಲ್ಪಿಸಿ, ನೂರಾರು ರೂಪಾಯಿಗಳ ಚಂದಾಹಣವನ್ನೆತ್ತಿ ಒಂದು ಆಡಿನಮರಿಯನ್ನು ತಂದು ಅದರ ಮೂಗು ಬಾಯಿಗಳನ್ನು ಬಂಧಿಸಿ ವೇದಮಂತ್ರೋಚ್ಚಾರಣೆಯಿಂದ ಗುದ್ದಿಗುದ್ದಿಕೊಂದು ಅದರ ಮಾಂಸವನ್ನು ಯಾಗಕುಂಡದಲ್ಲಿ ಬೇಯಿಸಿ ಪ್ರಸಾದವನ್ನು ನೆರೆದಿದ್ದ ಬ್ರಾಹ್ಮಣರಿಗೆಲ್ಲ ಹಂಚಿದರು. ಕೆಲ ಶ್ರೀಮಂತರು ಈ ಕ್ರೂರಕೃತ್ಯವನ್ನು ಮಾಡಕೂಡದೆಂದು ಪ್ರತಿಭಟಿಸಿದರಾದರೂ ಪ್ರಯೋಜನವಾಗಲಿಲ್ಲವು ಮತ್ತು ಈ ಯಾಗಕ್ಕೆ ದ್ರವ್ಯಸಹಾಯಮಾಡಿದವರು ಕ್ರೂರಕೃತ್ಯವನ್ನು ನೋಡಿ ಸಹಿಸಲಾರದೆ ದ್ರವ್ಯಸಹಾಯಮಾಡಿದುದಕ್ಕಾಗಿ ಬಹಳ ಪಶ್ಚಾತ್ತಾಪಪಟ್ಟರು.

ಭರತಖಂಡದ ಬೇಸಾಯಸ್ಥಿತಿಯನ್ನು ಪರಿಶೀಲಿಸಿ ಉತ್ತಮಪಡಿಸುವ ಮಾರ್ಗವನ್ನು ಸೂಚಿಸುವುದಕ್ಕಾಗಿ ವೈಸ್‌ರಾಯರಿಂದ ನಿಯಮಿಸಲ್ಪಟ್ಟಿರುವ ರಾಯಲ್ ಕಮಿಷನ್ನಿನವರು ಭರತಖಂಡದ ಮುಖ್ಯಬೇಸಾಯ ಸ್ಥಳಗಳಲ್ಲಿ ಸಂಚರಿಸಿ ಪ್ರಮುಖರೂ ಅನುಭವಸ್ಥರೂ ಆದ ಬೇಸಾಯಗಾರರಿಂದ ಸ್ಥಿತಿಯನ್ನು ತಿಳಿದುಕೊಳ್ಳುವವರಾಗಿರುವರು. ಇವರು ಬರುವ ಅಕ್ಟೋಬರ್ ತಾ॥ 11 ರಿಂದ 18 ರವರೆಗೆ ಸಿಮ್ಲಾದಲ್ಲಿ, ತಾ॥ 21 ರಿಂದ 28 ರವರೆಗೆ ಪೂನಾದಲ್ಲಿ, ತಾ॥ 30 ರಿಂದ ನವಂಬರ್ ತಾ॥ 3 ರವರೆಗೆ ಬೊಂಬಾಯಿನಲ್ಲಿ, ನವಂಬರ್ ತಾ॥ 8 ರಿಂದ 9 ರವರೆಗೆ ಧಾರವಾಡದಲ್ಲಿ, ತಾ॥ 11 ರಿಂದ 13 ರವರೆಗೆ ಬೆಂಗಳೂರಿನಲ್ಲಿ ತಾ॥ 16 ರಿಂದ 20 ರವರೆಗೆ ಕೊಯಮತ್ತೂರಿನಲ್ಲಿ ಮತ್ತು 23 ರಿಂದ 30 ರವರೆಗೆ ಮದ್ರಾಸಿನಲ್ಲಿ ಸಂಚರಿಸಿ ಜನರ ವಾಂಗ್ಮೂಲವನ್ನು ತೆಗೆದುಕೊಳ್ಳುವವರಾಗಿರುವರು.

ವಿದೇಶದ ವೃತ್ತಾಂತಗಳು

ಆಂಗ್ಲದೇಶದ ಮುಖ್ಯಮಂತ್ರಿಯಾದ ಮೆ॥ ಬಾಲ್ಡ್ವಿನ್‌ರವರು ಪತ್ನೀಸಮೇತರಾಗಿ ಯೂರೋಪುಖಂಡದಲ್ಲಿ ಸಂಚರಿಸಿಕೊಂಡುಬರಲು ಎರಡು ತಿಂಗಳ ವಿಶ್ರಾಂತಿಯಿಂದ ಹೊರಟಿರುವರು.

1925 ನೇ ಸಾಲಿನಲ್ಲಿ 222 ಸಾವಿರ ಮಂದಿ ಅಮೇರಿಕೆಯ ಧನಿಕರು ದೇಶಸಂಚಾರಹೊರಟು ಫ್ರಾನ್ಸ್‌ರಾಜ್ಯ ಒಂದರಲ್ಲಿಯೇ 58 ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುವುದಾಗಿ ಪ್ರಕಟವಾಗಿದೆ.

ಅಜೋರೀಯದಲ್ಲಿ ಭಯಂಕರ ಭೂಕಂಪವಾಗಿ ಪೇಯಲು ಪಟ್ಟಣವು ನಾಶವಾಯಿತು. ಇದರಿಂದ 50 ಮಂದಿ ಸತ್ತುಹೋಗಿ ಅನೇಕರು ನೆರಳೂ ಆಹಾರವಿಲ್ಲದೆ ಪೇಚಾಡುತ್ತಿರುವರು. ಇವರ ಸಹಾಯಾರ್ಥವಾಗಿ ಹಡಗುಗಳಲ್ಲಿ ಆಹಾರ ದಿನಸಿಯು ಸಾಗಿಸಲ್ಪಡುತ್ತಿದೆ.

ಮರದ ಪುಡಿಯೊಂದಿಗೆ ಹೆಚ್ಚು ನೀರಿನಲ್ಲಿ ಬೆರೆತಿರುವ ಗಂಧಕಾಮ್ಲವನ್ನು ಸೇರಿಸಿ, ಅದರಿಂದ ಸೋರಿಬರುವ ಸಿಹಿಯಾದ ರಸಕ್ಕೆ ಸುಣ್ಣವನ್ನು ಬೆರೆಸಿ, ಪುಡಿಯನ್ನೂ ರಸವನ್ನೂ ಬೇರೆ ಬೇರೆ ಒಣಗಿಸಿ, ಎರಡನ್ನೂ ಮಿಶ್ರಮಾಡಿ ಕಾಲ್ನಡೆಗಳಿಗೆ ಕೊಟ್ಟರೆ ಅದು ಬಲಕಾರಿಯಾದ ಆಹಾರವಾಗುವುದೆಂದು ಜೆ. ಸಿ. ಆರ್ಚಿಬಾಲ್ಡ್ ಎಂಬುವವರು 'ಸೈನ್ಸ್' ಪತ್ರಿಕೆಗೆ ಬರೆದಿರುತ್ತಾರೆ.

ಲಂಡನ್ ನಗರದಲ್ಲಿರುವ ಕಾರಾಗೃಹಗಳನ್ನು ಪರೀಕ್ಷಿಸಲು ಹೋಗಿದ್ದ ಕಮಿಟಿಯವರ ಮುಂದೆ ಒಬ್ಬ ಬಂದಿಯು ಗಟ್ಟಿಯಾದ ತಂತಿಯಿಂದ ಎಂತಹ ಬೀಗಗಳನ್ನಾದರೂ ತೆಗೆದು ತಪ್ಪಿಸಿಕೊಂಡು ಹೋಗಬಹುದೆಂಬುದನ್ನು ಕಾರ್ಯತಃ ತೋರಿಸಿಕೊಟ್ಟನು. ಇದಕ್ಕಾಗಿ ಕಮಿಟಿಯವರು ಆತನನ್ನು ವಂದಿಸಿ ಜೈಲುಗಳಿಗೆ ಹೊಸತರದ ಬೀಗಗಳನ್ನು ತರಿಸಿಹಾಕಲು ಏರ್ಪಾಡಿಸಿರುವರು.

ಅಮೇರಿಕದ ಮಿನಸೋಟ ಯೂನಿವರ್ಸಿಟಿಗೆ ಸೇರಿದ ವ್ಯವಸಾಯದ ಕಾಲೇಜಿನಲ್ಲಿ ಬಾಳೇಕಾಯಿಯೇ ಮೊದಲಾದ ಕಸುಗಾಯಿಗಳನ್ನು ಹಣ್ಣುಮಾಡಲು ಇಥೆಲೀನ್ ಎಂಬ ಒಂದು ತರದ ವಾಯುವನ್ನು ಉಪಯೋಗಿಸಿ ಪರೀಕ್ಷೆಗಳನ್ನು ನಡೆಸುತ್ತಿರುವರು. ಈ ಹಬೆಯ ದೆಸೆಯಿಂದ ಅವುಗಳು ಬಹು ಬೇಗ ಹಣ್ಣಾಗುವುವಲ್ಲದೆ, ಅವುಗಳ ರುಚಿಯೂ ಸ್ವಭಾವವಾದ ಹಣ್ಣುಗಳಿಗಿಂತ ಹೆಚ್ಚುವುದಾಗಿ ಗೊತ್ತಾಗುತ್ತದೆ.

ಜಪಾನಿನಲ್ಲಿ ನೇಲಿಚಿಷಿ ಎಂಬ ದಿನಪತ್ರಿಕೆಯು 21,20,000 ಪ್ರತಿಗಳು ನಿತ್ಯದಲ್ಲೂ ಪ್ರಕಟವಾಗುತ್ತವಂತೆ. ಅಲ್ಲಿ ರಿಕ್ಷಾ ಎಂಬ ಬಂಡಿಯುಳೆಯುವವರೂ ಪ್ರತಿನಿತ್ಯವೂ ವೃತ್ತಪತ್ರಿಕೆಯನ್ನು ಕೊಂಡುಕೊಂಡು ಓದದೆ ಇರುವುದಿಲ್ಲ. ಆ ಸೀಮೆಯಲ್ಲಿ ಜನರಿಗೆ ಲೋಕವ್ಯವಹಾರಜ್ಞಾನಾಪೇಕ್ಷೆಯು ಎಷ್ಟರಮಟ್ಟಿಗಿದೆ ಎಂಬುದು ವೃತ್ತಪತ್ರಿಕೆಗಳ ಸಂಖ್ಯೆಯಿಂದ ವ್ಯಕ್ತವಾಗುತ್ತದೆ. ಅಂತಹ ಕಾಂಕ್ಷೆಯು ನಮ್ಮ ಭಾರತೀಯರಿಗೆಂದು ಹುಟ್ಟುವುದೋ !

ಲಕ್ಷಾಂತರ ಮೋಟಾರುಕಾರುಗಳನ್ನು ನಿರ್ಮಿಸಿ ಕೋಟ್ಯಂತರ ರೂಪಾಯಿಗಳನ್ನು ಸಂಪಾದಿಸುತ್ತಿರುವ ಫೋರ್ಡ್ ಕಂಪೆನಿಯವರು ಒಬ್ಬ ಜರ್ಮನಿಯ ಶಿಲ್ಪಿಯಿಂದ ಆಕಾಶದಲ್ಲಿ ಸಂಚರಿಸುವ ಮೋಟಾರುಬಂಡಿಯನ್ನು ನಿರ್ಮಿಸಲುಪಕ್ರಮಿಸಿರುವರು. ಈಗ ಸದ್ಯದಲ್ಲಿ ಒಂದು ಯಂತ್ರವು ನಿರ್ಮಿಸಲ್ಪಟ್ಟಿರುವುದು. ಇದಕ್ಕೆ 15 ಅಡಿ ಉದ್ದವೂ 22 ಅಡಿ ಅಗಲವೂ ಇರುವ ರೆಕ್ಕೆಗಳಿವೆ ಮತ್ತು ಇದು 350 ಪೌಂಡು ತೂಕವಿದ್ದು ಘಂಟೆಯೊಂದಕ್ಕೆ 85 ಮೈಲಿಯಂತೆ ಚಲಿಸುತ್ತದೆ.

ಬಾರ್ಸಿಲೋನಾದಿಂದ ವೆಲೆನ್ಸಿಯಾಗೆ ಹೋಗುತ್ತಿದ್ದ ಮೇಯಿಲು ರೈಲುಬಂಡಿಯು ಕಂಬಿಯನ್ನು ಬಿಟ್ಟು ಕೆಳಗೆ ಉರುಳಿದುದರಿಂದ ಪ್ರಯಾಣಿಕರಲ್ಲಿ 16 ಜನರು ಸತ್ತರು, ಮತ್ತು 36 ಜನರಿಗೆ ಅಪಾಯವಾಗಿರುವುದು. ಇದಕ್ಕೆ ದೊಡ್ಡಮಳೆಯು ಬಂದು ಕಂದಿಗಳು ಕುಸಿದುಹೋಗಿದ್ದುದೇಕಾರಣವೆಂದು ತಿಳಿಯಲ್ಪಟ್ಟಿದೆ. ಈ ಅಗಾಧವರ್ಷದಿಂದ ಬಾರ್ಸಿಲೋನಾದ ನೆರೆಗ್ರಾಮಗಳೆಷ್ಟೋ ನಾಶವಾಗಿ 36 ಜನರು ಹತರಾದರು ಮತ್ತು ಬಹಳ ಧನಧಾನ್ಯನಷ್ಟವಾಗಿರುತ್ತದೆ.

ತುರ್ಕಿಯ ಸುಲ್ತಾನನಾಗಿದ್ದು 1922 ರಲ್ಲಿ ಪದಚ್ಯುತನಾಗಿ ಮಾಡಲ್ಪಟ್ಟ ಮಹಮ್ಮದ್‌ಮಹಿದ್ದೀನನ ಹೆಂಡತಿಯು ಗಂಡನೊಡನೆ ಈಜಿಪ್ಟಿಗೆ ಬಂದಿದ್ದವಳು ತನ್ನ ದುರವಸ್ಥೆಯನ್ನು ಸಹಿಸಲಾರದೆ ಆತ್ಮಹತ್ಯಮಾಡಿಕೊಳ್ಳಲೆತ್ನಿಸಿ ನೈಲ್‌ನದಿಯೊಳಕ್ಕೆ ಬಿದ್ದುಬಿಟ್ಟಳು, ಆದರೆ ಕೂಡಲೆ ಸಂರಕ್ಷಿಸಲ್ಪಟ್ಟಳು. ಈಕೆಗೆ ಅಂಗೋರಾ ಸರ್ಕಾರದಿಂದ ಸಲ್ಲುತ್ತಿದ್ದ ಪೆನ್‌ಷನ್ನು ಕಳೆದ ಮೂರು ತಿಂಗಳಿಂದಲೂ ನಿಲ್ಲಿಸಲ್ಪಟ್ಟಿದ್ದುದರಮೇಲೆ ಈಕೆಯು ಧರ್ಮಸಂಸ್ಥೆಯ ಪೋಷಣೆಯಲ್ಲಿದ್ದಳು.

ಪಾಶ್ಚಾತ್ಯ ಜನರಲ್ಲಿ ಪ್ರತಿಯೊಬ್ಬನೂ ಸರಾಸರಿ ವರ್ಷ ಒಂದಕ್ಕೆ 120 ಪವನುಗಳ ಮಾಂಸ; 380 ಪವನುಗಳ ದವಸಧಾನ್ಯಗಳು; 400 ಪವನುಗಳ ಕಾಯಿಪಲ್ಯಗಳು; 20 ಪವನು ಬೆಣ್ಣೆ ಮತ್ತು ಕೆನೆ ಇಷ್ಟನ್ನು ತಿನ್ನುವನೆಂದು ಗೊತ್ತಾಗುತ್ತದೆ. ಇದು ಹೆಚ್ಚಿನ ಆಹಾರವೆಂದೂ, ಇದರಿಂದ ಅಜೀರ್ಣವುಂಟಾಗುವುದೆಂದೂ ವೈದ್ಯರ ಹೇಳಿಕೆ. ಸಾಮಾನ್ಯವಾಗಿ ಪ್ರತಿ ಒಬ್ಬನೂ ಅಜೀರ್ಣರೋಗಪೀಡಿತನಾಗಿರುವನು. ಹಸಿವೆ ಪೂರ್ತಿಯಾಗುವುದಕ್ಕೆ ಮುಂಚೆಯೇ ಊಟದಿಂದ ಏಳುವುದು ಆರೋಗ್ಯಕರವೆಂದು ಒಬ್ಬಾನೊಬ್ಬ ವೈದ್ಯನು ಹೇಳಿರುತ್ತಾನೆ.

ಆಸ್ಪತ್ರೆಗಳಲ್ಲಿ ಯಾರಾದರೂ ರೋಗಿಗಳು ರಕ್ತಹೀನತೆಯಿಂದ ಸಾಯುವವರಾಗಿದ್ದಲ್ಲಿ ಅಂತಹವರಿಗೆ ನಿರೋಗಿಗಳಾದವರ ದೇಹದಿಂದ ರಕ್ತವನ್ನು ತೆಗೆದು ರೋಗಿಗಳ ಶರೀರಕ್ಕೆ ಸೇರಿಸಿ ಅವರನ್ನು ಬದುಕಿಸುವರು. ಹಾಗೆ ರೋಗಿಗಳುಪಯೋಗಕ್ಕಾಗಿ ಪ್ಯಾರಿಸ್‌ನಗರದಲ್ಲಿ ವೈಮಾಂಡ್‌ಬ್ರೀಜ್ ಎಂಬಾತನು 1924 ನೆಯ ನವಂಬರಿಂದ 19 ಸೇರು ರಕ್ತವನ್ನು ತೆಗೆದುಕೊಟ್ಟಿದ್ದಾನಂತೆ ಮತ್ತು ಇಷ್ಟಾದರೂ ತನಗೆ ನಿಶ್ಶಕ್ತಿಯಾಗಲಿ ಆಯಾಸವಾಗಲಿ ಇಲ್ಲವೆಂದು ಹೇಳುತ್ತಾನಂತೆ. ಕಳೆದ ವರ್ಷ ಇವನು ವೈದ್ಯರ ಸಭೆಯಲ್ಲಿ ಪ್ರದರ್ಶಿಸಲ್ಪಟ್ಟಾಗ್ಯೆ, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಬರುವುದಾದರೆ 25,000 ಡಾಲರುಗಳು ಕೊಡಲ್ಪಡುತ್ತದೆಂದು ಹೇಳಲ್ಪಟ್ಟಿತಂತೆ.

ಕೈಗಾರಿಕೆಗಳು ದೇಶದ ಸಂಪತ್ತನ್ನು ಹೆಚ್ಚಿಸುವವೆಂಬುದಕ್ಕೆ ಜರ್ಮನಿಯು ಒಂದು ಉದಾಹರಣೆಯಾಗಿದೆ. ಅಲ್ಲಿನ ಜನರು ಕೈಗಾರಿಕೆಯಲ್ಲಿ ತುಂಬಾ ನಿಪುಣರಾಗಿರುವುದರಿಂದ, ಎಷ್ಟು ಖರ್ಚುವೆಚ್ಚಗಳು ಒದಗಿದರೂ ತಮ್ಮ ಪದಾರ್ಥಗಳನ್ನು ಸುಲಭ ಬೆಲೆಗೆ ಏದೇಶಗಳಲ್ಲಿ ವಿಕರಿಮಾಡುವಷ್ಟು ಅಗ್ಗವಾಗಿ ನಿರ್ಮಿಸುವರು. 1913-14 ನೇ ಸಾಲಿನಲ್ಲಿ ಜರ್ಮನಿಯ ಯುದ್ಧವು ಮೊದಲಾಗುವುದಕ್ಕೆ ಮುಂಚೆ ಆ ದೇಶದಿಂದ ಭರತಖಂಡಕ್ಕೆ ಬಂದ ಸಾಮಾನುಗಳ ಬೆಲೆ 13·66 ಕೋಟಿ ರೂಪಾಯಿಗಳು. 1924-25 ನೇ ಸಾಲಿನಲ್ಲಿ ಅಲ್ಲಿಂದ ಭರತಖಂಡಕ್ಕೆ ಬಂದ ಸಾಮಾನುಗಳ ಕ್ರಯ 15·47 ಕೋಟಿ ರೂಪಾಯಿಗಳು. ಜರ್ಮನಿಯವರು ಭರತಖಂಡದ ಕಚ್ಚಾ ಸಾಮಾನುಗಳಿಗೆ ಒಳ್ಳೇ ಗಿರಾಕಿಗಳಾಗಿರುತ್ತಾರೆ. ಯುದ್ಧಕ್ಕೆ ಮುಂಚೆ 1913-14 ರಲ್ಲಿ ಅವರು ನಮ್ಮ ದೇಶದಲ್ಲಿ ಕೊಂಡ ಕಚ್ಚಾ ಪದಾರ್ಥಗಳ ಬೆಲೆಯು 26 ಕೋಟಿ ರೂಪಾಯಿಗಳು. ಕಳೆದವರ್ಷ ಅವುಗಳ ಬೆಲೆಯು 28 ಕೋಟಿ ರೂಪಾಯಿಗಳಿಗೆ ಏರಿದ್ದಿತು. ಕಚ್ಚಾ ಸಾಮಾನುಗಳನ್ನು ಅಗ್ಗವಾಗಿ ಮಾರಿ, ಅವುಗಳಿಂದಲೇ ತಯಾರಾದ ಉಪಯುಕ್ತ ಪದಾರ್ಥಗಳನ್ನು ಹೆಚ್ಚು ಬೆಲೆಗೆ ಕೊಳ್ಳುವುದರಿಂದ ಕೈಗಾರಿಕೆಗಳಿಲ್ಲದ ನಮ್ಮ ದೇಶದಲ್ಲಿ ಬಹುದ್ರವ್ಯನಷ್ಟವಾಗುವುದೆಂದು ಇದರಿಂದ ಗೊತ್ತಾಗುವುದು.

ನೋಟೀಸ್.

ದಾವಣಗೆರೆವಾಸಿ ಹರಪನಹಳ್ಳಿ ಕೋರೀಮಠದ ಶಾಂತಯ್ಯ ಬಿನ್ ಕೊಟ್ರಯ್ಯ ಎಂಬ 50 ವರ್ಷದ ವಯಸ್ಸಿನ ಇವರು ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—ಶಾಂತಯ್ಯನಾದ ನನ್ನ ಮಗ ಸುಮಾರು 22 ವರ್ಷದ ರುದ್ರಯ್ಯನೆಂಬುವವನು ದಾವಣಗೆರೆಯಲ್ಲಿ ಬೇರೆ ವಾಸವಾಗಿರುತ್ತಾನೆ: ತಂದೆಯಾದ ನನ್ನ ಆಜ್ಞೆಯಲ್ಲಿರುವುದಿಲ್ಲ. ನನ್ನ ಸ್ವಯಾರ್ಜಿತವಾದ ಆಸ್ತಿಯಲ್ಲಿ ಸದರಿ ರುದ್ರಯ್ಯನಿಗೆ ಏನೂ ಹಕ್ಕು ಇರುವುದಿಲ್ಲ. ರುದ್ರಯ್ಯನಿಗೆ ಹಕ್ಕು ಇರುವ ಪಿತ್ರಾರ್ಜಿತವಾದ ಆಸ್ತಿಯೇನು ಇರುವುದಿಲ್ಲ. ಈತನಿಗೆ ಯಾರೂ ಸಾಲಕೊಡಕೂಡದು. ಆರೀತಿ ಯಾರಾದರು ಸಾಲ ಕೊಟ್ಟರೆ ಸಾಲಕ್ಕೆ ತಂದೆಯು ಮತ್ತು ತಂದೆಯ ಸ್ವಾಧೀನದಲ್ಲಿರುವ ಸ್ವಯಾರ್ಜಿತವಾದ ಆಸ್ತಿಯು ಬಾಧ್ಯವಾಗಲಾರದು. ಈ ಹಿಂದೆ ಯಾರಾದರೂ ಸಾಲ ಕೊಟ್ಟಿದ್ದಾಗ್ಯೂ, ಅದಕ್ಕೆ ಅವರೇ ಜವಾಬ್ದಾರರೇ ವಿನಃ ತಂದೆಯಾದ ನಾನು ಜವಾಬ್ದಾರನಲ್ಲ ಮತು ಇತರ ಯಾವ ಆಸ್ತಿಮೇಲೂ ಜವಾಬ್ದಾರಿ ಇರುವುದಿಲ್ಲ.

ಶಾಂತಯ್ಯನವರ ಎಡಗೈ ಹೆಬ್ಬೆಟ್ಟಿನ ಗುರ್ತಿಗೆ
ರುದ್ರಯ್ಯನ ಬರಹ.
ಹರಪನಹಳ್ಳಿ ಕೋರಿಮಠ, ದಾವಣಗೆರೆ.

[2—2]

ಕೈ|| ಕಬ್ಬಹಳ್ಳಿ ಚನ್ನಬಸಪ್ಪನವರ ಸ್ಮಾರಕ.

1. ಸೆಲ್ಯಾಳದ ಶ್ರೀ|| ರಾಜ್ಞಾ ಬೌರಮ್ಮಣ್ಣಿಯವರಿಂದ	ರೂ. 15
2. ಮ|| ಮಲ್ಲಪ್ಪನವರು, ಆರ್. ಎ. ಮೆಂಬರು ಜಗಲೂರು	ರೂ. 10
3. ಮ|| ಎ. ಎಸ್. ಸಂಜುಂಡಪ್ಪನವರು, ಆರ್. ಎ. ಮೆಂಬರು, ಆಲೂರು	ರೂ. 10
4. ಮ|| ಎಂ. ಎಲ್. ನಾಗಣ್ಣನವರು, ಅರಕಲಗೂಡು	ರೂ. 10

ಜಿ. ಪರಮಶಿವಯ್ಯ.

ಮ|| ಶ್ರೀ. ಡಾಕ್ಟರ ಚನ್ನಪ್ಪ ಸಂಗಪ್ಪ ಪಾಟೀಲ ಎಲ್. ಎಂ.
ಅಂಡ್ ಎಸ್. ಹುಬ್ಬಳ್ಳಿ, ವೀರಶೈವಮಹಾಜನರ
ಸಭೆಯ ಅಧ್ಯಕ್ಷರು ಇವರ ಸ|| ಕ್ಕೆ.

ತಮ್ಮ ತಾ|| 23-8-26 ನೇ ಪತ್ರವು ತಲುಪಿ ಸಕಲವು ಅಭಿಪ್ರಾಯವಾಯಿತು. ಹುಬ್ಬಳ್ಳಿಯಲ್ಲಿ ವೀರಶೈವಮಹಾಸಭೆಯನ್ನು 1926 ನೇ ಇಸವಿ ಡಿಸಂಬರ ತಿಂಗಳಲ್ಲಿ ಕೂಡಿಸಬೇಕೆಂದು ಮಾಡಿರುವ ಪ್ರಯತ್ನವು ಪ್ರೋತ್ಸಾಹರ್ಕವಾಗಿದೆ. ಪ್ರಾಚೀನವಾದ ಮತ್ತು ಪ್ರಸಿದ್ಧಿಯಾಗಿರುವ ಹುಬ್ಬಳ್ಳಿಯಲ್ಲಿ ಮಹಾಸಭೆಯನ್ನು ಕೂಡಿಸಿದ್ದಾದರೆ ವೀರಶೈವಸಮಾಜದವರಿಗೆಲ್ಲಾ ಸಂತೋಷವಾಗದೆ ಇರಲಾರದು. ಕರ್ಣಾಟಕ ಮತ್ತು ಮಹಾರಾಷ್ಟ್ರದೇಶಗಳಿಗೆ ಹುಬ್ಬಳ್ಳಿಯು ಮಧ್ಯಪ್ರಾಂತವಾಗಿರುತ್ತೆ. ಅಖಿಲಭಾರತವೀರಶೈವಮಹಾಸಭಾ ಚಿರಸ್ಥಾಯಿಫಂಡಿನಿಂದ ಮಹಾಸಭೆಯನ್ನು ನಡೆಯಿಸುವದಕ್ಕೋಸ್ಕರ ದ್ರವ್ಯಸಹಾಯಮಾಡಬೇಕೆಂಬ ತಮ್ಮ ಅಪೇಕ್ಷೆಯನ್ನು ಕ್ಷಿಪ್ರದಲ್ಲಿ ಕಮಿಟಿಯಲ್ಲಿಟ್ಟು ಅವರು ಈ ವಿಚಾರವಾಗಿ ಮಾಡುವ ತೀರ್ಮಾನವನ್ನು ತಮಗೆ ಸನ್ನದಲ್ಲಿಯೇ ತಿಳಿಸುವದಾಗುತ್ತದೆ. ಇದಲ್ಲದೆ ಹೈದರಾಬಾದ್ ಇಲಾಖಾ ಗುಲ್‌ಬರ್ಗಾದಲ್ಲಿರುವ ವೀರಶೈವಬಂಧುಸಮಾಜದವರು ತಮ್ಮ ಸ್ಥಳದಲ್ಲಿ ಮಹಾಸಭೆಯನ್ನು ನಡೆಸಬೇಕೆಂದು ಉದ್ಯುಕ್ತರಾಗಿ ಪತ್ರವನ್ನು ಬರೆದುಕೊಂಡಿರುತ್ತಾರೆ. ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡಿನ ರೂಲ್ಸ್ ಕಾಪಿಯೊಂದನ್ನು ತಮ್ಮ ಅವಗಾಹನೆಬಗ್ಗೆ ಇದರ ಲಗತಮಾಡಿ ಕಳಿಸಿರುತ್ತೆ.

ತಮ್ಮ ವಿಧೇಯ,
(Sd.) K. P. Puttanna Chetty,
ಚೇರಮನ್
ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡ್.

ಬೆಂಗಳೂರುಸಿಟಿ,
ತಾ|| 26-8-26.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು **ಉತ್ತರವಾದಿ**ಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.......ಸಂಪಾದಕ.

ಲೋಕಲ್ ಸೆಲ್ಫ್‌ಗೌರ್ನ್‌ಮೆಂಟಿನ ಮೆಂಬರುಗಳ ನಿಯಾಮಕ.

ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿಯೂ, ತಾಲ್ಲೂಕು ಬೋರ್ಡು, ಮ್ಯುನಿಸಿಪಲ್ ಬೋರ್ಡು, ಎಕ್ಸೈಜ್ ಲೈಸೆನ್ಸಿಂಗ್ ಬೋರ್ಡು, ಕಂಪಲ್‌ಸರಿ ಎಜುಕೇಷನ್ ಬೋರ್ಡು, ಬೆಂಚ್‌ಮ್ಯಾಜಿಸ್ಟ್ರೇಟ್ ಕೋರ್ಟು ವಗೈರೆ ಸಂಸ್ಥೆಗಳು ಇರುತ್ತವೆಯಷ್ಟೆ. ಇವುಗಳಿಗೆ ಕೆಲವು ಮೆಂಬರುಗಳನ್ನು ಸರ್ಕಾರೀ ಹುದ್ದೇದಾರರುಗಳಿಂದಲೂ ಮತ್ತೆ ಕೆಲವರನ್ನು ಪ್ರಜೆಗಳ ಚುನಾವಣೆಯಿಂದಲೂ, ಇನ್ನೂ ಕೆಲವರನ್ನು ನಾಮಿನೇಷನ್ ಮೂಲಕದಿಂದಲೂ ಚುನಾಯಿಸುವ ಪದ್ಧತಿಯಿರುವುದು ಸರ್ವರಿಗೂ ವೇದ್ಯವೇ ಇರುತ್ತದೆ. ಮೆಂಬರುಗಳ ನಾಮಿನೇಷನ್ ವಿಚಾರದಲ್ಲಿ ತಾ|| ಅಮಲ್‌ದಾರ್‌ರವರು ಮಾಡತಕ್ಕ ಸಲಹೆಯೇ ಮೇಲಿನವರಿಗೂ ಹೋಗಿ ಅಲ್ಲಿ ಅದೇ ಖಾಯಂ ಆಗಿ ಮಂಜೂರಾಗುತ್ತಿರುವುದು ಅನುಭವಸಿದ್ಧವಾದದ್ದು. ಈ ನಾಮಿನೇಷನ್ ಮಾಡುವದಕ್ಕೆ ಅಮಲ್‌ದಾರ್‌ರವರು ಹೊಸಬರಾದ ಸಂದರ್ಭದಲ್ಲಿ ಮತ್ತು ಇನ್ನೂ ಕೆಲವು ಸಂದರ್ಭದಲ್ಲಿ ಅಮಲ್‌ದಾರ್‌ರವರ ಪ್ರೀತಿವಿಶ್ವಾಸಕ್ಕೆ ಪಾತ್ರರಾದವರ ಹೆಸರುಗಳು ಲಿಸ್ಟಿನಲ್ಲಿ ಸೇರಿಸುತ್ತಲೂ ಸ್ಥಳದಲ್ಲಿ ಮಾತುಸರರಾಗಿಯೂ ಅನುಕೂಲಸ್ಥರಾಗಿಯೂ ವಿದ್ಯಾವಂತರಾಗಿಯೂ ಕೆಲಸ ನಿರ್ವಹಿಸತಕ್ಕ ಶಕ್ತಿಯುಳ್ಳವರಾಗಿಯೂ ಇರತಕ್ಕ ಅನೇಕ ಜನರ ಹೆಸರುಗಳನ್ನು ಲಿಸ್ಟಿನಲ್ಲಿ ಬಿಟ್ಟುಬಿಡುತ್ತಲೂ ಇರವುದುಂಟು. ಇದರಿಂದ ಸಂಸ್ಥೆಗಳ ಉದ್ದೇಶವು ನೆರವೇರದೆ ಬೂಟಾಟಿಕೆ ವಿದ್ಯಾಶ್ಯೂನ್ಯದ ದೊಡ್ಡಸ್ತಿಕೆಯ ಮೆಂಬರುಗಳ ಅಭಾದರಣೆ ಮತ್ತು ಅಸಡ್ಡೆ ಇತ್ಯಾದಿ ದೋಷಗಳಿಂದ ಪ್ರಜೆಗಳಿಗೆ ಉಂಟಾಗಬೇಕಾದ ಸೌಲಭ್ಯಗಳಿಗೆ ತುಂಬಾ ಕುಂದಕವುಂಟಾಗುತ್ತಿರುವುದು ಸರ್ಕಾರದವರ ಮತ್ತು ಪ್ರಜೆಗಳ ಅನುಭವದಲ್ಲಿರುವುದು. ಹೀಗೆ ದೋಷಯುಕ್ತವಾದ ವಿಚಾರವನ್ನು ಹೋಗಲಾಡಿಸಿ ಸೆಲ್ಫ್‌ಗೌರ್ನ್‌ಮೆಂಟಿನ ಉದ್ದೇಶವನ್ನು ನೆರವೇರಿಸುವಂಥ ಪ್ರತಿನಿಧಿಗಳನ್ನು ಸರ್ಕಾರದವರು ಚುನಾಯಿಸಬೇಕಾದ್ದು ಮುಖ್ಯ ಕರ್ತವ್ಯವಾಗಿರುತ್ತೆ. ಅಮಲ್‌ದಾರ್‌ರವರ ಅಧ್ಯಕ್ಷತೆಯಲ್ಲಿ ಇತರೆ ಇಲಾಖೆಯ ಆಫೀಸರುಗಳುಳ್ಳ (ಅಂದರೆ ಅಮಲ್‌ದಾರ್‌ರವರ ತಾಪೆಗೊಳಪಡದಿರುವ) ಒಂದು ಕಮಿಟಿಯನ್ನು ಏರ್ಪಡಿಸಿ ಅವರುಗಳ ತೀರ್ಮಾನದಂತೆ ಒಂದು ಲಿಸ್ಟನ್ನು ಕಾನ್‌ಫಿಡೆನ್‌ಷಿಯಲ್ಲಾಗಿ ಕಳಿಸಿಕೊಂಡು ಮುಂಜೂರ್‌ಮಾಡುವದಾದಲ್ಲಿ ದೋಷಗಳು ಕಡಿಮೆಯಾಗಿ ಪ್ರಜೆಗಳಿಗೆ ಕ್ಷೇಮವಾಗುವದರಲ್ಲಿ ಸಂದೇಹವಿಲ್ಲ. ಹೊಸದಾಗಿ ದಿವಾನ್‌ಪದವಿಗೆ ದಯಮಾಡಿಸಿರುವ ಮಿ|| ಅಮಿನ್-ಉಲ್-ಮುಲ್ಕ್ ಮಿರ್ಜಾ ಎಂ. ಇಸ್ಮೈಲ್, ಬಿ. ಎ. ಸಿ. ಐ. ಇ. ಒ. ಬಿ. ಇ. ಯವರು ತಮ್ಮ ಘನವಾದ ಚಿತ್ತಕ್ಕೆ ತಂದುಕೊಂಡು ಸರಿಯಾದ ಅನುಕೂಲವನ್ನು ದಯಪಾಲಿಸುವರೆಂದು ಪ್ರಾರ್ಥಿಸಲ್ಪಟ್ಟಿದೆ.

ಪ್ರಜಾಹಿತೈಷಿ.

ಮ|| ಎಂ. ಎಲ್. ನಾಗಣ್ಣನವರೇ !

ನೀವು ಆಲ್‌ಇಂಡಾ ಮ್ಯೂಚ್ಯುಯಲ್ ಏಡ್ ಅಂಡ್ ಫುರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್ ಎಂಬ ಹೆಸರಿನಿಂದ ಒಂದು ಹೊಸಕಂಪನಿಯನ್ನು ಸ್ಥಾಪಿಸಿ ಅದರ ಸಂಬಂಧವಾಗಿ ಹೊರಡಿಸಿರುವ ಪ್ರಾಸ್ಪೆಕ್ಟಸನ್ನು ಓದಿನೋಡಿದೆನು. ಲೌಕಿಕವ್ಯಾಪಾರವನ್ನು ಬಿಟ್ಟು ಅನೇಕವರ್ಷಗಳವರೆಗೂ ಮಹರ್ಷಿಗಳು ಮೊದಲಾದ ಮಹನೀಯರುಗಳ ಸೇವೆಯಲ್ಲಿದ್ದು ವೇದಾಂತ ವಿಚಾರಪರರಾಗಿದ್ದವರಿಗು ಸಹ ಸುಲಭಸಾಧ್ಯವಿಲ್ಲದಿರುವ ಮೋಕ್ಷಮಾರ್ಗವನ್ನು ನೀವು ನಿಮ್ಮ ಈ ಪ್ರಕಟನಪತ್ರಿಕೆಯಲ್ಲಿ ಬಹುಸುಲಭವಾಗಿ ತಿಳಿಸಿರುವುದರಿಂದ ಎಂಥಾವನಿಗಾದರೂ ಮೋಕ್ಷಾಪೇಕ್ಷೆಯು ಹುಟ್ಟದೆ ಇರುವುದಿಲ್ಲ. ಆದರೆ ನಿಮ್ಮಿಂದ ಕೆಲವು ವಿಷಯಗಳನ್ನು ತಿಳಿದುಕೊಂಡು ಅನಂತರ ನಾನೂ ಷೇರುಹೋಲ್ಡರಾಗಬೇಕೆಂದಿರುತ್ತೇನಾದ್ದರಿಂದ ತಾವು ದಯೆಯಿಟ್ಟು ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಿರೆಂದು ನಂಬಿರುತ್ತೇನೆ.—

1. ಏಷ್ಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡಿನ ಮತ್ತು ಈ ಆಲ್‌ಇಂಡ್ಯಾ ಮ್ಯೂಚ್ಯುಯಲ್ ಏಡ್ ಅಂಡ್ ಫುರ್ ಹೌಸಸ್ ಅಸೋಸಿಯೇಷನ್ ಲಿಮಿಟೆಡ್ಡಿನ ಫೌಂಡರಾಗಿರುವುದಲ್ಲದೆ ಬೇರೆ ಯಾವುದಾದರೂ ಕಂಪೆನಿಯ ಏಜಂಟರಾಗಿದ್ದಿರಾ ?

2. ಹಾಗೆ ಏಜಂಟರಾಗಿದ್ದರೆ ಆ ಕಂಪೆನಿಗಳ ಹೆಸರೇನು ? ಮತ್ತು ಜನಗಳಿಗೆ ಅವುಗಳಿಂದಾದ ಪ್ರಯೋಜನವೇನು ?

3. ನೀವು ಏಜಂಟರಾಗಿದ್ದ ಕಂಪೆನಿಗಳು ಈಗಿರುವವೆ ಅಥವಾ ಹಾಳಾಗಿದ್ದರೆ ಯಾರಿಂದ ಯಾತಕ್ಕಾಗಿ ಹಾಳಾದವು ?

4. ಏಷಿಯಾಟಿಕ್ ಗೌರ್ನಮೆಂಟ್............ಕಂಪೆನಿಯ ರಿಟೈರ್ಡ್ ಮ್ಯಾನೇಜಿಂಗ್ ಡೈರೆಕ್ಟರೆಂದು ಬರೆದುಕೊಂಡಿರುತ್ತೀರಷ್ಟೆ. ನಿಮ್ಮಿಂದಲೇ ಸ್ಥಾಪಿತವಾದ ಈ ಕಂಪೆನಿಯಿಂದ ನೀವು ರಿಟೈರಾಗಲು ಕಾರಣವೇನು ? ನೀವಾಗಿ ಇಷ್ಟಪಟ್ಟು ರಿಟೈರಾದಿರೋ ? ಕಂಪೆನಿಯವರೇ ಮಾಡಿಸಿದರೋ ?

5. ನೀವು ಆ ಕಂಪೆನಿಯ ಡೈರೆಕ್ಟರಾಗಿದ್ದಾಗ ನಿಮ್ಮಿಂದ ಜನರಿಗೆ ಆದ ಪ್ರಯೋಜನವೇನು ?

6. ಈಗ ನೀವು ಹೊಸದಾಗಿ ಸ್ಥಾಪಿಸಿರುವ ಆಲ್‌ಇಂಡ್ಯಾ ಮ್ಯೂಚ್ಯುಯಲ್........ಕಂಪೆನಿಯ ಮೂಲಧನ ರೂ. 1,00,000 ಎಂದು ಪ್ರಕಟಿಸಿದ್ದೀರಿ. ಇಷ್ಟು ಮೂಲಧನವುಳ್ಳ ಕಂಪೆನಿಯ ಆಡಳಿತವನ್ನು ನೋಡುವದಕ್ಕಾಗಿ ಡೈರೆಕ್ಟರುಗಳನ್ನು ನಿಯಮಿಸಿಕೊಂಡಿರುವಿರಷ್ಟೆ. ಇಷ್ಟು ಭಾರೀ ಮೊಬಲಗಿನ ಆಡಳಿತವನ್ನು ನಡೆಸತಕ್ಕವರು ಐಶ್ವರ್ಯವಂತರಾಗಿಯೂ ಮಾತುಬಾರಿಮನುಷ್ಯರಾಗಿಯೂ ಇರಬೇಕಲ್ಲವೆ ? ಹಾಗಾದರೆ ಈಗಿನ ಡೈರೆಕ್ಟರುಗಳಾಗಿರುವವರು ಎಷ್ಟರಮಟ್ಟಿನ ಐಶ್ವರ್ಯವಂತರು ಮತ್ತು ಎಷ್ಟು ಇನಕಂಟ್ಯಾಕ್ಸನ್ನು ಕೊಡುತ್ತಾರೆ, ಮ್ಯುನಿಸಿಪಲ್ ಕಂದಾಯವನ್ನೆಷ್ಟು ಕೊಡುವರು, ಮತ್ತು ಜಮೀನ್ ಕಂದಾಯವನ್ನೆಷ್ಟು ಕೊಡುವರು ?

7. 25 ವರ್ಷ ಮತ್ತು ಇನ್ನೂ ಮುಂದಕ್ಕೆ ಸಂಘದ ಚೀಫ್ ಆರ್ಗನೈಜರಾಗಿರಲು ಕಂಡೀಷನ್ ಮಾಡಿಕೊಂಡಿರುವಿರಿ. ಚೀಫ್ ಆರ್ಗನೈಜರ್ ಅಂದರೇನು ? ಇಷ್ಟು ದೀರ್ಘಕಾಲ ಆರ್ಗನೈಜರಾಗಿರಬೇಕಾದ ಕಾರಣವೇನು ? ಮತ್ತು ನಿಮ್ಮಿಂದ ನೇಮಿಸಲ್ಪಟ್ಟಿರುವ ಡೈರೆಕ್ಟರುಗಳ ಕೂಡ ಕಂಡೀಷನ್ ಮಾಡಿಕೊಂಡರೆ ಸಾಕೆ ?

8. ಮೂಲಧನದ ಬಾಬತು 1,00,000 ಮತ್ತು ಬಾಂಡುಗಳ ಬಾಬತು 50,00,000 ರೂಪಾಯಿಗಳ ಆಡಳಿತವನ್ನು ನಡೆಸುವ ಚೀಫ್‌ಆರ್ಗನೈಜಿಂಗ್ ಡೈರೆಕ್ಟರು ಒಳ್ಳೇ ಐಶ್ವರ್ಯವಂತರಾಗಿರಬೇಕಾದ ಅವಶ್ಯಕತೆಯಿಲ್ಲವೇ ? ಹಾಗಿದ್ದರೆ ನೀವು 20 ಷೇರುಗಳನ್ನು ಮಾತ್ರ ತೆಗೆದುಕೊಂಡಿರುವದರ ಕಾರಣವೇನು ? ನಿಮ್ಮ ಆದಾಯವೇನು ? ಇನಕಂಟ್ಯಾಕ್ಸು, ಮ್ಯುನಿಸಿಪಲ್ ಕಂದಾಯ ಮತ್ತು ಜಮೀನ್ ಕಂದಾಯಗಳನ್ನೆಷ್ಟು ಕೊಡುತ್ತೀರಿ ?

9. ಮನೆಮಠಗಳನ್ನು ಹೆಂಡತಿಯ ಹೆಸರಿಗೆ ಮಾಡಿರತಕ್ಕವರೂ, ಸರ್ಕಾರಿಕೆಲಸದಲ್ಲಿರುವವರೂ, ಇನ್‌ಸಾಲ್ವೆಂಟರುಗಳಾಗಿರುವವರೂ ಡೈರೆಕ್ಟರುಗಳಾಗಿಯೂ ಏಜಂಟರುಗಳಾಗಿಯೂ ಆಗಬಹುದೆ ?

ನಿಜಗಣ್ಣ.

ಚಾಮರಾಜನಗರದ ತಾ|| ಬದನಗುಪ್ಪೆ.

ನಂಜನಗೂಡು-ಚಾಮರಾಜನಗರದ ರೈಲ್ವೆಯ ಪ್ರಾರಂಭೋತ್ಸವಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರ ಸವಾರಿಯು ತಾ|| 27 ನೇ ಶುಕ್ರವಾರ ಸಾಯಂಕಾಲ 4 ಘಂಟೆಗೆ ಸರಿಯಾಗಿ ಈ ಊರಿಗೆ ದಯಮಾಡಿಸಿತು. ಗ್ರಾಮಸ್ಥರು ಊರಿನ ಮಧ್ಯದಲ್ಲಿ ದಿವ್ಯವಾಗಿ ಅಲಂಕರಿಸಿದ್ದ ಹಸರುವಾಣಿ ಚಪ್ಪರದಲ್ಲಿ ಖಾವಂದರವರ ಆಗಮನವನ್ನು ಎದುರುನೋಡುತ್ತಾ ಕಾದಿದ್ದರು. ಎರಡುಪಕ್ಕಗಳಲ್ಲಿಯೂ ಸ್ಕೂಲ್ ಬಾಲಕ ಬಾಲಿಕೆಯರುಗಳು ಸಾಲಾಗಿ ನಿಂತುಕೊಂಡು ಸವಾರಿಯು ಸಮೀಪಕ್ಕೆ ಬಂದೊಡನೆ ಶ್ರೇಯಃಪ್ರಾರ್ಥನಾಪದ್ಯಗಳನ್ನು ಮಧುರವಾಗಿ ಹಾಡುವುದಕ್ಕೆ ಮೊದಲುಮಾಡಿದರು. ಕೂಡಲೆ ಪ್ರಭುಗಳು ಬಹುನಿಧಾನವಾಗಿ ಮೋಟಾರನ್ನು ಬಿಡಿಸುತ್ತ ದಿವಾನ್ ಸಾಹೇಬರವರೊಡನೆ ಚಪ್ಪರದ ಮಧ್ಯದಲ್ಲಿ ಬಂದುನಿಂತ ಒಡನೆ ಗ್ರಾಮ ಮುಖಂಡರುಗಳೊಪ್ಪಿಸಿದ ಫಲಪುಷ್ಪಗಳನ್ನು ಬಹುಪ್ರೀತಿಯಿಂದ ಸ್ವೀಕರಿಸಿ ಒಂದುಮೈಲಿಯವರೆಗೂ ಕಿಕ್ಕಿರಿಯುವಂತೆ ನಿಂತಿದ್ದ ಸಾವಿರಾರುಜನಗಳ ಸಂದಣಿಯನ್ನು ನೋಡಿ ಸಂತೋಷಪಡುತ್ತ ಪ್ರೇಕ್ಷಕರಿಗೆಲ್ಲಾ ಆಹ್ಲಾದವನ್ನುಬೀರಿ ಚಿತ್ತೈಸುವಾಗ್ಗೆ ಗ್ರಾಮದ ಮುಂಭಾಗದಲ್ಲಿ ಈ ಊರಿನ ಅಧಿಕಪಾಟೀಲಮುಖಂಡರುಗಳು ಹಾಕಿದ್ದ ದಿವ್ಯವಾದ ಚಪ್ಪರದಲ್ಲಿಯೂ ಖಾವಂದರವರು ಫಲಪುಷ್ಪಗಳನ್ನು ಸ್ವೀಕರಿಸಿ, ಮುಂದೆ ಚಾಮರಾಜನಗರಕ್ಕೆ ದಯಮಾಡಿಸಿದರು. ನೆರೆದಿದ್ದ ಪ್ರಜೆಗಳೆಲ್ಲರೂ ಖಾವಂದರವರ ಸೌಮ್ಯಮೂರ್ತಿಯನ್ನು ನೋಡಿ ಆನಂದಪಟ್ಟು ಗುಣವರ್ಣನೆಯನ್ನು ಮಾಡುತ್ತ ತಂತಮ್ಮ ಮನೆಗಳಿಗೆ ಹೋದರು. ಅದೇ ಸಾಯಂಕಾಲ 6 ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ಕುಳಿತಿದ್ದ ರೈಲ್ವೆ ಸ್ಪೆಷಲ್‌ಗಾಡಿಯು ಬದನಗುಪ್ಪೆ ಸ್ಟೇಷನ್‌ಗೆ ಬಂದಾಗ್ಯೆ ಪ್ರಭುಗಳು [illegible] ಗಾಡಿಯ ಹೊರಭಾಗದಲ್ಲಿ ಬಂದು ನಿಂತು, ನೆರೆದಿದ್ದ ಸಾವಿರಾರು ಜನರಿಗೆಲ್ಲಾ ದರ್ಶನವನ್ನಿತ್ತು ಅತ್ಯಂತ ಆನಂದವನ್ನುಂಟುಮಾಡಿದರು. ಈ ರೈಲ್ವೆಯಲ್ಲಿ ಈ ಗ್ರಾಮವು ಒಂದು ಸ್ಟೇಷನ್ನು ಆಗಿರುವುದು ಈ ಊರಿನ ಅಭಿವೃದ್ಧಿಗೂ ಸುತ್ತುಮುತ್ತಲಿನ ಗ್ರಾಮಗಳ ಸೌಕರ್ಯಕ್ಕೂ ತುಂಬಾ ಸಹಾಯಕರವಾಗಿರುತ್ತದೆ. ಆದರೆ ಸ್ಟೇಷನ್ ಊರಿಗೆ ಸಮೀಪದಲ್ಲಿದ್ದರೆ ಮತ್ತಷ್ಟು ಅನುಕೂಲವಾಗುತ್ತಿತ್ತು. ಈ ಊರಿನ ಸ್ಕೂಲು ಹಾಲಿ ಬಂದಿರತಕ್ಕ ಮಾಸ್ಟರು ಮ|| ಆರ್. ಕೃಷ್ಣಪ್ಪನವರ ಕಾಲದಲ್ಲಿ ತುಂಬಾ ಅಭಿವೃದ್ಧಿಗೆ ಬಂದಿರುತ್ತೆ. ಇವರ ಪ್ರೋತ್ಸಾಹದಿಂದ ಗ್ರಾಮಸ್ಥರು ಬಹಳ ಶಿಥಿಲವಾಗಿದ್ದ ಸ್ಕೂಲುಕಟ್ಟಡವನ್ನು ಸುಮಾರು 300 ರೂ. ಗಳ ವೆಚ್ಚದಿಂದ ರಿಪೇರಿಮಾಡಿ ಪಕ್ಕದಲ್ಲೇ ಮಾಸ್ಟರಿಗೆ ವಾಸದಮನೆಯನ್ನು ಅನುಕೂಲಪಡಿಸಿ ಕೊಟ್ಟಿರುತ್ತಾರೆ. ಇವರ ಜೊತೆಗೆ ಇನ್ನೊಬ್ಬರು ಸಹಾಯೋಪಾಧ್ಯಾಯರನ್ನು ಕೊಟ್ಟು ಇವರನ್ನು ಇನ್ನೂ ಕೆಲವು ಕಾಲ ಇಟ್ಟುಕೊಡುವುದಾದರೆ ನಮ್ಮ ಸ್ಕೂಲು ಇನ್ನೂ ಅಭಿವೃದ್ಧಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ದಿವಸ ಶ್ರೀಮನ್ಮಹಾರಾಜರವರ ಸವಾರಿಯು ಈ ಊರಿಗೆ ದಯಮಾಡಿಸಿದ್ದುದರ ಜ್ಞಾಪಕಾರ್ಥವಾಗಿ ಇವರ ಪ್ರೋತ್ಸಾಹದಿಂದ - ಶ್ರೀ ಕೃಷ್ಣರಾಜೇಂದ್ರವಾಚಕಶಾಲಾ - ಎಂಬ ಹೆಸರಿನಿಂದ ಒಂದು ರೀಡಿಂಗ್ ರೂಂ ಏರ್ಪಡಿಸಲ್ಪಟ್ಟಿತು. ಮ|| ಗಳಾದ ಚೆನ್ನಬಸಪ್ಪನವರು, ಮರಿಯಾಲದ ಲಿಂಗಪ್ಪನವರು, ಅಪ್ಪಣ್ಣಯ್ಯನ ನಂಜಪ್ಪನವರು ಮತ್ತು ಶಿದ್ದವೀರಪ್ಪನವರು ಈ ರೀಡಿಂಗ್ ರೂಮಿಗೆ ಒಂದೊಂದು ಪತ್ರಿಕೆಯನ್ನು ತರಿಸಿಕೊಡುವುದಾಗಿ ವಾಗ್ದಾನಮಾಡಿದರು. ಇನ್ನು ಮುಂದೆ ಈ ಗ್ರಾಮವು ತುಂಬಾ ಅಭಿವೃದ್ಧಿಗೆ ಬರುವುದೆಂದು ನಂಬಿದ್ದೇನೆ.

ಗ್ರಾಮವಾಸಿ.

ಕರ್ಣಾಟಕ ವಾಲ್ಮೀಕಿನಾಯಕರ ಪರಿಷತ್ತು.

ಶ್ರೀ ಹರಿಹರಮಹಾಕ್ಷೇತ್ರದಲ್ಲಿ ಕಳೆದ ಆಗಸ್ಟ್ ತಾ|| 15, 16, 17 ರಲ್ಲಿ ಈ ಪರಿಷತ್ತಿನ ಕಾರ್ಯಕ್ರಮಗಳು ಅತಿ ವೈಭವದಿಂದ ನೆರವೇರಿದುವು. ಮೊದಲನೆಯದಿವಸ ಈ ಪರಿಷತ್ತಿಗೆ ಸಂಬಂಧಪಟ್ಟ 'ತಳವಾರರ' ಅಥವ 'ಓಲೇಕಾರರ' ಮೊದಲನೆಯ ಸಮ್ಮೇಳನವು ಶ್ರೀಯುತ ಎಸ್. ವೆಂಕಟರಂಗಂ, ಡೆಪ್ಯುಟಿಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್ ಇವರ ಅಧ್ಯಕ್ಷತೆಯಲ್ಲಿ ಚಿತ್ರಕಲಾಕುಶಲತೆಯಿಂದ ನಿರ್ಮಿತವಾಗಿದ್ದ ಭವ್ಯಮಂಟಪದಲ್ಲಿ ಸಾಂಗವಾಗಿ ನೆರವೇರಿತು. ಒಂದುಸಹಸ್ರಕ್ಕಿಂತಲೂ ಅತಿಶಯವಾಗಿ ಸ್ವಕುಲಬಾಂಧವರೂ, ಇತರರೂ ಧಾರವಾಡ, ಹುಬ್ಬಳ್ಳಿ, ಗದಗು ಪ್ರಾಂತಗಳಿಂದಲೂ, ಬಳ್ಳಾರಿ, ಅನಂತಪುರ ಜಿಲ್ಲೆಗಳಿಂದಲೂ, ಮೈಸೂರುದೇಶದ ನಾನಾ ಭಾಗಗಳಿಂದಲೂ ಬಂದು ಸೇರಿದ್ದರು. ನಮ್ಮ ಸರ್ಕಾರದ ಚೀಫ್ ಸೆಕ್ರೆಟರಿಯವರಾದ ಮೆ|| ಪಿ. ಜಿ. ಡಿಸೋಜ, ಬಿ.ಎ., ಬಿ.ಎಲ್., ಇವರ ಅನಿರೀಕ್ಷಿತಾಗಮನದಿಂದ ಸರ್ವರಿಗೂ ಮಹಾನಂದವಾಯಿತು. ಅಧ್ಯಕ್ಷರು ಸರ್ವರಿಗೂ ಹೃದಯಂಗಮವಾಗುವಂತೆ ವಾಲ್ಮೀಕಿನಾಯಕರ ಇತಿಹಾಸಪ್ರಸಿದ್ಧವಾದ ಪೂರ್ವವೃತ್ತಾಂತವನ್ನೂ ಈಗಿನವರ ಸ್ಥಿತಿಗತಿಯನ್ನೂ ಕುರಿತು ಭಾಷಣಮಾಡಿ ಪ್ರಸ್ತುತಕ್ಕೆ ಸಂಬಂಧಪಟ್ಟ ತಳವಾರರ ವೃತ್ತಿಯು ಕೇವಲ ಹೀನವಾಗಿರುವುದಲ್ಲದೆ ಅವರಿಗೆ ಜೀವನನಡೆಯುವುದೇ ದುಸ್ತರವಾಗಿರುವದರಿಂದ ಈ ಸಭೆಯು ನೆರೆದು ಅನನುಕೂಲಗಳನ್ನು ನಿವಾರಿಸುವದಕ್ಕೆ ಬೇಕಾದ ಪ್ರೋತ್ಸಾಹಗಳನ್ನು ಸರ್ಕಾರದವರಿಂದ ಹೊಂದಲು ಪ್ರಾರ್ಥಿಸಿಕೊಳ್ಳಬೇಕಾದ ಈ ಸಮ್ಮೇಳನದ ಉದ್ದೇಶಗಳನ್ನು ಕುರಿತು ಹೇಳಿದರು. ಅನಂತರ ಇಡೀಕರ್ಣಾಟಕದ ವಾಲ್ಮೀಕಿ ನಾಯಕರಲ್ಲಿ ತಳವಾರರ ವೃತ್ತಿಯಲ್ಲಿರುವವರಿಗೆ ಜೀವನಕ್ಕೆ ಅನುಕೂಲವಾಗಿ ನಿಗದಿಯಾದ ಸಂಬಳವನ್ನೂ, ನೌಕರಿ ಇನಾಂ ಜಮೀನುಗಳನ್ನೂ, ಇವರ ಮಕ್ಕಳಿಗೆ ವಿದ್ಯಾಪ್ರೋತ್ಸಾಹಕ್ಕಾಗಿ ಸ್ಕಾಲರ್‌ಷಿಪ್‌ಗಳನ್ನೂ ಕೊಡಬೇಕೆಂಬುದಾಗಿ ಘನಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವಂತೆ ಕೆಲವು ಠರಾವುಗಳು ಪಾಸಾದವು. ಸಭಾಧ್ಯಕ್ಷರ ಆಭಾರವನ್ನು ಮನ್ನಿಸಿ, ಸಭೆಯ ಕಾರ್ಯಗಳು ಸಾಂಗವಾಗಿ ನೆರವೇರಿದ್ದಕ್ಕಾಗಿ ಪರಮೇಶ್ವರನನ್ನು ಸ್ತುತಿಸಿ, ಪುಷ್ಪಮಾಲೆಯಿಂದಲೂ ಗಂಧತಾಂಬೂಲಗಳಿಂದಲೂ ಅಧ್ಯಕ್ಷರನ್ನೂ, ಆಗಮಿಸಿದ್ದ ಸದ್ಗೃಹಸ್ಥರನ್ನೂ ಮರ್ಯಾದಿಸಿದನಂತರ ಇಂಡ್ಯಾಸಾರ್ವಭೌಮರ ಮತ್ತು ಮೈಸೂರು ಮಹಾರಾಜರವರ ಶ್ರೇಯಃಪ್ರಾರ್ಥನಾ ಜಯಘೋಷವು ಮೊಳಗುತ್ತಿರಲು ಮೊದಲನೆಯದಿವಸದ ಸಭೆಯು ವಿಸರ್ಜನೆಯಾಯಿತು. ಎರಡನೇ ಮತ್ತು ಮೂರನೇ ದಿನಸದಲ್ಲಿ ಮ|| ಬಿ. ಎನ್. ಸೀತಾರಾಮಯ್ಯ, ಎಂ.ಎ., ಮಳವಳ್ಳಿ ತಾಲ್ಲೋಕು ಅಮಲ್ದಾರ್ ಇವರ ಅಧ್ಯಕ್ಷತೆಯಲ್ಲಿ ವಾಲ್ಮೀಕಿನಾಯಕರ ಸಮಾಜೋದ್ಧಾರಕಸಭೆಯು ಬಹಳ ವಿಜೃಂಭಣೆಯಿಂದ ನಡೆದಿತು. - ನಮ್ಮ ಸಮಾಜದ ಉನ್ನತಿಯೇ ಇತರ ಸಮಾಜಗಳ ಉನ್ನತಿಯು - ಎಂಬ ಉಚ್ಚಭಾವನೆಯಿಂದ ನಾವು ನಮ್ಮ ಸಮಾಜೋದ್ಧಾರವನ್ನು ಮಾಡಿಕೊಳ್ಳಬೇಕೆಂಬುದೇ ಈ ಪರಿಷತ್ತಿನ ಮುಖ್ಯೋದ್ದೇಶವೆಂದು ಅಧ್ಯಕ್ಷರು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿ ತಮ್ಮ ಸಮಾಜೋದ್ಧಾರಕ್ಕೆ ಅತ್ಯಾವಶ್ಯಕವಾದ ಸಲಹೆಗಳನ್ನು ಸೂಚಿಸಿದರು. ಕಾಲಾನುಕ್ರಮದಲ್ಲಿ ಕಲೆಹಾಕಿರುವ ದುಷ್ಟಸಂಪ್ರದಾಯಗಳನ್ನೂ, ದುರ್ವ್ಯಸನಗಳನ್ನೂ ಖಂಡಿಸಿ ಈ ಪರಿಷತ್ತು ಸಮಾಜೋನ್ನತಿಗೆ ಆಕರವಾದ ಕೆಲವು ನಿಯಮಗಳನ್ನು ಗೊತ್ತುವಳಿಗಳ (ಠರಾವುಗಳ) ಮೂಲಕ ಸರ್ವಾನುಮತದಿಂದ ನಿರ್ಧರಿಸಿ, ವಿದ್ಯಾಪ್ರಸಾರಕ್ಕಾಗಿ ಒಂದು ವಿದ್ಯಾವರ್ಧಕಫಂಡನ್ನು ಸ್ಥಾಪಿಸಿದ್ದಾಯಿತು. ಸಹಾನುಭೂತಿಯುಳ್ಳ ಪರಕುಲಬಾಂಧವರು ಈ ಸಮಯದಲ್ಲಿ ಉದಾರವಾದ ದ್ರವ್ಯಸಹಾಯವನ್ನು ಮಾಡಿದ್ದಕ್ಕಾಗಿ ಈ ಸಭೆಯು ಅವರಿಗೆ ಅತ್ಯಂತ ಕೃತಜ್ಞತೆಯುಳ್ಳದುಬಾಗಿದೆ. ವಿದ್ಯಾಪ್ರಸಾರದ ವಿಷಯದಲ್ಲಿಯೂ, ವಿಶ್ವವಿದ್ಯಾಲಯದಲ್ಲಿ ಶೇರ್ಪಡೆಹೊಂದಿದ ಈ ಜನರ ಬಾಲಕರಿಗೆ ಪ್ರೋತ್ಸಾಹಕೊಡಿಸುವ ವಿಷಯದಲ್ಲಿಯೂ ಘನಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ಒಂದು ಠರಾವು ತೀರ್ಮಾನಿಸಲ್ಪಟ್ಟಿತು. ಹಿಂದೆ ರೂಢಿಯಲ್ಲಿದ್ದ ಕೈಗಾಟಿಗಳನ್ನು ಪುನರುಜ್ಜೀವನಗೊಳಿಸುವಂತೆ ಒಂದು ಗೊತ್ತುವಳಿಯಾಯಿತು. ಈ ಸಂದರ್ಭದಲ್ಲಿ ದಾವಣಗೆರೆ ಪ್ರಾಣಿದಯಾಪ್ರಸಾರಕಸಂಘದ ಮ|| ಸಿದ್ಧಲಿಂಗಯ್ಯನವರೂ ಕುರುಬರ ಸಂಘದ ಮ|| ಸತ್ಯಪ್ಪನವರೂ - ಅಹಿಂಸೆ - ಮತ್ತು ಪ್ರಾಣಿಬಲಿ ಎಂಬ ವಿಷಯವಾಗಿ ಬಹಳ ಉಪಯುಕ್ತವಾದ ಉಪನ್ಯಾಸಗಳನ್ನು ಮಾಡಿದರು. ಮ|| ಶ್ಯಾನುಭೋಗ ನಂಜುಂಡಯ್ಯನವರು ರಾಮಗಿರಿ ಇವರು ಮತೋದ್ಧಾರದ ವಿಚಾರದಲ್ಲೂ - ಖಾದಿಯೇ ಸ್ವರ್ಗಕ್ಕೆ ಹಾದಿ - ಎಂಬ ವಿಚಾರದಲ್ಲೂ ಉಪನ್ಯಸಿಸಿ ಸರ್ವರ ಆದರಕ್ಕೂ ಪಾತ್ರರಾದರು. ಈ ಪರಿಷತ್ತಿನ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನೆರವೇರಿದ್ದಕ್ಕಾಗಿ ಜಗದೀಶನನ್ನು ಪ್ರಾರ್ಥಿಸಿ, ಸಭಾಧ್ಯಕ್ಷರ ಆಭಾರಮನ್ನಿಸಿ, ಸಭೆಗೆ ದಯಮಾಡಿದ್ದ ಸದ್ಗೃಹಸ್ಥರನ್ನು ಸತ್ಕರಿಸಿ ಚಕ್ರವರ್ತಿಸಾರ್ವಭೌಮರ ಮತ್ತು ನಮ್ಮನ್ನಾಳುವ ಮಹಾರಾಜರವರ ಶ್ರೇಯಃಪ್ರಾರ್ಥನಾ ಜಯಘೋಷವು ಮೊಳಗುತ್ತಿರಲು ಸಭೆಯು ಪರಿಸಮಾಪ್ತಿಯಾಯಿತು.

ಪ್ರತ್ಯಕ್ಷದರ್ಶಿ.

ಭಕ್ತಾದಿಗಳಿಗೆ ಎಚ್ಚರಿಕೆ.

ಕಡೂರು ತಾ|| ಯಗಟಿಯ ಶ್ರೀಪ್ರಸನ್ನಮಲ್ಲಿಕಾರ್ಜುನಸ್ವಾಮಿಸನ್ನಿಧಾನದಿಂದ, ಸಮಸ್ತ ಸದ್ಭಕ್ತಾದಿಗಳಿಗೂ ತಿಳಿಯಪಡಿಸುವುದೇನೆಂದರೆ:—

ಶ್ರೀಸ್ವಾಮಿಯ ಗಿರಿಜಾಕಲ್ಯಾಣರಥೋತ್ಸವದ ಆಗಮಕಾರ್ಯದಲ್ಲಿ ವೀರಶೈವರಿಗೂ, ಬ್ರಾಹ್ಮಣರಿಗೂ ಇರುವ ವಿವಾದದ ವಿಚಾರವಾಗಿ ಈ ಚಾಲ್ತಿಸಾಲಿನಲ್ಲಿ ದೇವಾಲಯಕ್ಕೆ ಸರ್ಕಾರದ ಅಧಿಕಾರಿಗಳು ಬೀಗಮುದ್ರೆಮಾಡಿಸಿ, ಎಲ್ಲಾ ದೇವರುಗಳ ಪೂಜೆಯನ್ನು [illegible] ಒಪ್ಪಿಸಿದ ಸಂಗತಿ ಶ್ರೀಮನ್ಮಹಾರಾಜಗೌರ್ನಮೆಂಟಿನವರಿಗೂ [illegible] ಮತ್ತು ಅರ್ಚಕಸಂಘದವರಿಂದ ಹೊರಟಿರುವ ಜನರಲ್‌ರಿಪೋರ್ಟಿನಿಂದಲೂ ಜನಜನಿತವಾಗಿ ಶ್ರುತವಾಗಿರುತ್ತದೆ. ವೀರಶೈವರ ಆಗಮಕಾರ್ಯಾಚರಣೆಗೆ ಕೇವಲ ಬದ್ಧಾದರರಾದ ಕೋಡಿಹಳ್ಳಿಯ ಹಾಲುಮತದ ಭಕ್ತಾದಿಗಳು ತಾವೇ ಈ ದೇವಸ್ಥಾನಕ್ಕೆ ಮಾಲೀಕರೆಂಬ ಕಮ್ಮಿತಿಳುವಳಿಕೆ, ಸ್ವಪ್ರತಿಷ್ಠೆ, ವಿರೋಧಪಾರ್ಟಿಗಳ ಪ್ರೇರೇಪಣೆ ಇವುಗಳಿಂದ ಶ್ರೀಸ್ವಾಮಿಪೂಜೆಯನ್ನು ತಮ್ಮ ಹಾಕ್‌ಲಾಗೋಡಿನಿಂದ ಕ್ರಮಪ್ರಕಾರ ವೀರಶೈವಅರ್ಚಕರಿಂದಲೇ ನಡೆಸಲು ಟೆಂಪರರಿಯಾಗಿ ಸರ್ಕಾರದವರನ್ನು ಅರ್ಜಿಮೂಲಕ ಕೇಳಿಕೊಂಡು ಮಾಮೂಲ್ ಪದ್ಧತಿಗೆ ವಿರೋಧವಾದಾಚರಣೆಯಿಂದ ದೇವರಸೇವೆಗಳು ಅನನ್ವಯವಾಗಿ ನಡೆಯುವಂತೆ ಮಾಡಿರುತ್ತಾರೆ. ಅನೇಕಜನ ಭಕ್ತಾದಿಗಳು ಇವರ ಅನನ್ವಯನಡವಳಿಕೆಯನ್ನು ತಿಳಿದು ದೇವಸ್ಥಾನಕ್ಕೆ ದೇವರಸೇವೆಗಾಗಿ ಬರುವದನ್ನೇ ಬಿಟ್ಟಿರುತ್ತಾರೆ. ನಿಂತ ಪೂಜಾಹಕ್ಕುದಾರರಾದ ಅರ್ಚಕರ ಮತ್ತು ಯಗಟಿ ಮತ್ತು ಯಳ್ಳಂಬಳಸೆ ಬ್ರಾಹ್ಮಣರ ವಿವಾದದ ಆಖೈರ್ ತೀರ್ಮಾನ ಆಗುವವರಿವಿಗೂ ವೀರಶೈವರು ಯಾರಿಂದಲಾದರು ಪೂಜಾದಿಗಳು ನಡಸಿಕೊಳ್ಳಲಿ ಎಂದೂ, ಸರ್ಕಾರದವರು ಪೂಜೆಗೆ ಅವಕಾಶಕೊಟ್ಟಮಾತ್ರವೇ ಕೋಡಿಹಳ್ಳಿಯ ಹಾಲುಮತದ ಭಕ್ತಾದಿಗಳು ದೇವಸ್ಥಾನದ ಧರ್ಮದರ್ಶಿಗಳ ಮತ್ತು ದೇಶದ (ಸೀಮೆಯ) ಬಹುಭಾಗದ ಭಕ್ತಾದಿಗಳ ಯಾವ ವಿಧವಾದ ಅಭಿಪ್ರಾಯವನ್ನೂ ಹೊಂದದೇ ತಮ್ಮ ಮನೆಬಾಗಿಲದೇವರಂತೆ ಪರಿಭಾವಿಸಿಕೊಂಡು ಪರಸ್ಥಳದಿಂದ ಬಂದ ಭಕ್ತಾದಿಗಳಿಗೆ ಅನೇಕವಿಧವಾದ ಕಿರುಕುಳವನ್ನುಂಟುಮಾಡುತ್ತಾರೆಂತಲೂ, ಪಡಿಚೆಟ್ಟಿಗೆ ಪಾರುಪತ್ಯಕೊಟ್ಟರೆ ಹೊಡೆಯಾದಗದ್ದೆ ಕೊಯ್ಯಸಿದನೆಂಬ ಗಾದೆಯಂತೆ ಪರಿಣಮಿಸಿರುತ್ತಾರೆಂತಲೂ ತಿಳಿದುಬಂದಿದೆ. ಈ ದೇವಸ್ಥಾನಕ್ಕೆ ವೇಶದವರಂತೆ ಕೋಡಿಹಳ್ಳಿ ಹಾಲುಮತದವರು ಭಕ್ತರುಗಳಾಗಿರುತ್ತಾರೆಯೇ ಶಿವಾಯಿ, ಮುಜರಾಯಿ ಗೌರ್ನಮೆಂಟಿನವರಾಗಲೀ ಹಿಂದಿನ ರಾಜಾಧಿರಾಜರಾಗಲೀ ಇವರಿಗೇನು ಚಪ್ಪೋಡುವಗೈರೆ ಶಾಸನಕೊಟ್ಟಿಲ್ಲ. ಸಮೀಪಗ್ರಾಮದವರಾದ್ದರಿಂದ ಪ್ರತಿಮಹೋತ್ಸವಕಾಲದಲ್ಲಿ ತಮ್ಮ ಭಕ್ತಿಯಿಂದ ಹೆಚ್ಚುಹೆಚ್ಚಾಗಿ ಸೇವೆಗಳನ್ನುಮಾಡುವ ಪದ್ಧತಿಯಾಗಿರುತ್ತದೆ. ಈಗ 4-5 ತಿಂಗಳಿಂದಲೂ ಈ ಕೋಡಿಹಳ್ಳೀ ಹಾಲುಮತದ ಕೆಲವು ಜನರು ಶ್ರೀಸ್ವಾಮಿಯ ಭಕ್ತಾದಿಗಳಿರುವ ಗ್ರಾಮಾಂತರಗಳಮೇಲೆ ಹೋಗಿ ದೀಪಾರಾಧನೆಕಾಣಿಕೆಯೆಂತಲೂ ಹಂಗಾಮಿ ಅರ್ಚಕರ ಜೀವನಕ್ಕೆಂತಲೂ ರಾಗಿ ದುಡ್ಡು ಮುಂತಾದ್ದನ್ನು ವಸೂಲ್ಮಾಡಿಕೊಂಡು ಸ್ವಪ್ರಯೋಜನಕಾರಿಗಳಾಗಿ ದುರುಪಯೋಗಪಡಿಸುತ್ತಾರೆಂತಲೂ ಪುಕಾರಾಗಿರುತ್ತದೆ. ಹಾಕ್‌ಲಾಗೋಡುಭಕ್ತಿಯಿಂದ ಸ್ವಾಮಿಸೇವಾನಡಿಸುತ್ತೇವೆಂದು ಸರ್ಕಾರಕ್ಕೆ ಬರೆದುಕೊಂಡಿರುವುದೇನು ? ಕುಂಕಾಯುತ್ತೀಯೇನಪ್ಪಾ ತೋಳ ಎಂದರೆ ಸಂಬಳವೇಬೇಡವಪ್ಪಾ ಎಂಬ ಗಾದೆಯಂತೆ, ಡಾಂಭಿಕಭಕ್ತಿಯಿಂದ ಪರರಿಂದ ವಸೂಲ್ಮಾಡಿಕೊಂಡಿದ್ದಕ್ಕೆ ಕ್ರಮವಾದ ಜಮಾಖರ್ಚು ಇಡದೆ ದುರುಪಯೋಗಪಡಿಸುವುದೇನು ? ಈ ವಿವಾದವು ಹುಟ್ಟಿ ಹಕ್ಕುದಾರರಾದ ಅರ್ಚಕರು ತಟಸ್ಥರಾಗಿರುವುದರಿಂದ ಯಾರಿಗೆ ಹಬ್ಬವಾಗಿರುವದೋ ಜನರೇ ಯೋಚಿಸಲಿ. ದೇವಸ್ಥಾನದ ಸೇವಾವಿಗಳಿಗೆ ಬಂದ ಪರಸ್ಥಳದ ಭಕ್ತಾದಿಗಳ ಎಡೆ ನೈವೇದ್ಯಾದಿಗಳಿಗೂ ರುದ್ರಾಭಿಷೇಕ ವಗೈರೆ ಮಹಾಪೂಜಾದಿ ಹೆಚ್ಚುಗಟ್ಟಲೆ ಸೇವಾದಿಗಳಿಗೂ ಅನೇಕ ವಿಧವಾದ ತೊಂದರೆಪಡಿಸುತ್ತಾರೆಂತಲೂ, ಮನಸೋಯಿಚ್ಛೆಯಾಗಿ ರುದ್ರಾಭಿಷೇಕ 1 ಕ್ಕೆ 25 ರೂಪಾಯಿ ಸೇವಾಕೊಡಬೇಕೆಂದು ಕೆಲವರಿಂದ ವಸೂಲ್ಮಾಡಿಕೊಂಡಿರುತ್ತಾರೆಂತಲೂ ತಾ|| 28-2-26 ರ ಬೆಳಿಗ್ಗೆ ರಥದ ಪ್ರೋಟೋಕೆಗಿಸಿದಲಾಗಾಯಿತು ಹಾಗೇ ಇದ್ದ ರಥದಮೇಲಿನ ಕದರಗಳುವಗೈರೆ ಸಾಮಾನುಗಳನ್ನು ಮಾಮೂಲ್ ಪದ್ಧತಿಗೆ ವಿರೋಧವಾಗಿ ಸ್ವೇಚ್ಛೆಯಿಂದ ತಾ|| 9-8-26 ನೆಯ ಬೆಳಗಿನಝಾಮದಲ್ಲಿ ಸ್ಥಳದವರಿಗೆ ಪತ್ತೆಯಿಲ್ಲದಂತೆ ಇಳಿಸಿರುತ್ತಾರೆಂತಲೂ ತಿಳಿದುಬಂದಿರುತ್ತೆ. ರಥೋತ್ಸವವು ಪೂರ್ಣಾಲಂಕಾರದೊಡನೆ ಮಾಮೂಲ್ ಪದ್ಧತಿಯಂತೆ ಜಾಂಡೇವು ವಗೈರೆಹಾಕಿಸಿ ನೆರವೇರಿಸುವದರಲ್ಲಿದ್ದು, ಅದರಂತೆ ಪಡೆಯದೆ ಶ್ರೀಚೌಡೇಶ್ವರೀಜಂಪದ ಸೇವೆಗೂ ಸ್ಥಳೀಕರಿಂದ ನಡೆಸಬೇಕಾದ ಪದ್ಧತಿಯನ್ನು ತಪ್ಪಿಸಿರುತ್ತಾರೆ. ಇದರಿಂದ ಸ್ಥಳದವರ ಮತ್ತು ದೇಶದ ಭಕ್ತಾದಿಗಳ ಜವಾಬ್ದಾರಿಗೆ ಪಾತ್ರರಾಗಿರುತ್ತಾರೆ. ಮುಖ್ಯ ಹಕ್ಕುದಾರರಾದ ಅರ್ಚಕರಿಗೂ ಬ್ರಾಹ್ಮಣರಿಗೂ ಇರುವ ವಿವಾದವು ಆಖೈರುವ್ಯವಸ್ಥೆ ಆಗುವವರಿವಿಗೂ ಹಂಗಾಮಿಸೇವೆವಾಗಿ ನಿಂತಿರುವ ಕೋಡೀಹಳ್ಳಿ ಹಾಲುಮತದವರು ತಾವು ಮುತಾಲೀಕರೆಂದು ಗ್ರಾಮಾಂತರಗಳ ಮೇಲೆ ದುಡ್ಡು ದಿನಸಿಗಳ ವಸೂಲಿಗಾಗಿ ಶ್ರೀಸ್ವಾಮಿಯ ಹೆಸರಿನಮೇಲೆ ಬಂದರೆ ಮುಜರಾಯಿ ಸರ್ಕಾರದವರಿಂದ ತಯಾರಾದ ಮುಜರಾಯಿ ಆಫೀಸರ ಸೈನ್ ಮೊಹರಾದ ರಶೀದಿ ಬುಕ್ಕಿನಲ್ಲಿ ಬರಾವರ್ದು ಆಗಿ ಅದರ ಪಾವತಿ ರಶೀತಿ ಕೊಡದ ವಿನಹ ಯಾರೇ ಬಂದರೂ ಶ್ರೀಸ್ವಾಮಿಯವರ ಸೇವೆಗೆ ಕೊಟ್ಟು ಮೋಸಹೋಗಿ ದುರ್ವಿನಿಯೋಗದ ಫಲಕ್ಕೆ ಭಾಗಿಗಳಾಗಬಾರದೆಂದೂ ಈ ಮೂಲಕ ಪ್ರಸಿದ್ಧಪಡಿಸಿರುತ್ತೆ. ಇನ್ನು ಮುಂದಾದರೂ ಕೋಡಿಹಳ್ಳಿ ಹಾಲುಮತದ ಭಕ್ತಾದಿಗಳು ಸಾರ್ವಜನಿಕ ಭಕ್ತಾದಿಗಳ ಮತ್ತು ಮುಜರಾಯಿ ಗೌರ್ನಮೆಂಟು ಅಧಿಕಾರಕ್ಕೊಳಪಟ್ಟ ದೇವಸ್ಥಾನವೆಂಬುದನ್ನು ಎಚ್ಚರಿಕೆಗೆ ತಂದುಕೊಂಡು ಶ್ರೀಸ್ವಾಮಿಸೇವೆಗೆ ಆಬಾಲವೃದ್ಧರಾದಿಯಾಗಿ ಐಶ್ವರ್ಯವಂತರೂ ಬಡವರೂ ದೇವಸ್ಥಾನಕ್ಕೆ ಬಂದಕಾಲದಲ್ಲಿ ಅವರ ಮನಶ್ಶಾಂತಿಗೂ ಅವರ ಭಕ್ತಿವಿಶ್ವಾಸಕ್ಕೂ ಕುಂದುಬರುವಂತೆ ಹೆಚ್ಚುಗಟ್ಟಲೆಯ ಪಾರುಪತ್ಯವನ್ನು ತೋರಿಸದೆ ಸಾತ್ವಿಕಭಾವದಿಂದ ವರ್ತಿಸಿ ವಿವೇಕಶಾಲಿಗಳಾಗಲೆಂದು ಈ ಮೂಲಕ ಸೂಚಿಸಲಾಗಿದೆ. ಇದ್ದ ಸಂಗತಿ ತಿಳಿಸಿರುತ್ತೇನೆ.

ಶ್ರೀಸ್ವಾಮಿಭಕ್ತ ಮತ್ತು ಶ್ರೀಮಲ್ಲಿಕಾರ್ಜುನಸ್ವಾಮಿಯವರ
ದೇವಸ್ಥಾನದ ಧರ್ಮದರ್ಶಿ ಶಂಕರಪ್ಪ,
ಪುರ್ರಾ ತಾಲ್ಲೂಕು ಕಡೂರು.

ಮಹಾತ್ಮಗಾಂಧಿಯವರ ಸ್ವಚರಿತೆ

(ಸತ್ಯಾನ್ವೇಷಣ).

ಒಂದನೆಯಭಾಗದಲ್ಲಿ 23 ನೆಯ ಪ್ರಕರಣ.

(ಇದು ಈಗತಾನೆ ಎಂಗ್ ಇಂಡ್ಯಾಪತ್ರಿಕೆಯಲ್ಲಿ ಪ್ರಕಟವಾಗಿದೆ.)

1870 ರಲ್ಲಿ ಪ್ಯಾರಿಸ್‌ಪಟ್ಟಣದಲ್ಲಿ ಒಂದು ದೊಡ್ಡಪ್ರದರ್ಶನವು ಜರುಗಿತು. ತತ್ಸಂಬಂಧವಾಗಿ ಅಗಾಧವಾದ ಪ್ರಯತ್ನವು ನಡೆಯುತಿದ್ದುದನ್ನು ಪತ್ರಿಕೆಯಲ್ಲೋದುತ್ತಿದ್ದೆನು. ಪ್ಯಾರಿಸ್‌ಪಟ್ಟಣವನ್ನು ನೋಡಬೇಕೆಂದು ನನಗೆ ಬಹಳ ಆಶೆಯಿದ್ದಿತಾದುದರಿಂದ ಪ್ರದರ್ಶನಕ್ಕೆ ಹೋದಲ್ಲಿ ಎರಡು ಕೆಲಸಗಳೂ ಆಗುವುವೆಂದು ಯೋಚಿಸಿದೆನು. ಪ್ರದರ್ಶನದಲ್ಲಿ ಒಂದು ಉನ್ನತವಾದ ಶಿಖರವೇರ್ಪಡಿಸಲ್ಪಟ್ಟಿದ್ದು ಮುಖ್ಯವಾಗಿದ್ದಿತು. ಅದು ಕಬ್ಬಿಣದಿಂದ ನಿರ್ಮಿಸಲ್ಪಟ್ಟಿದ್ದಿತಲ್ಲದೆ ಅದರ ಎತ್ತರವು 1,000 ಅಡಿಯಿದ್ದಿತು. 1,000 ಅಡಿ ಎತ್ತರದಲ್ಲಿ ಯಾವ ಕಟ್ಟಡವೂ ನಿಲ್ಲುವುದಿಲ್ಲವೆಂದು ಅಗೆಲ್ಲರೂ ತಿಳಿದಿದ್ದರು. ಪ್ರದರ್ಶನದಲ್ಲಿ ಇನ್ನೂ ಅನೇಕ ವಿಶೇಷಪದಾರ್ಥಗಳಿದ್ದುವು. ಪ್ಯಾರಿಸ್ಸಿನಲ್ಲಿ ಒಂದು ಶಾಖಾಹಾರಭೋಜನಶಾಲೆಯು ಇರುತ್ತದೆಂದು ನಾನು ಪತ್ರಿಕೆಯಲ್ಲಿ ಓದಿದ್ದೆನಾದುದರಿಂದ ಅದರಲ್ಲಿ ಒಂದು ಕೊಠಡಿಯನ್ನೇ ಪಡೆದುಕೊಂಡೆನು. ನಾನು ಮಾರ್ಗದಲ್ಲೇ ನಡೆದುಕೊಂಡು ಅಲ್ಲಿಗೆ ಹೋಗಿ ಸೇರಿದೆನು. ಆ ನಗರದಲ್ಲಿ 7 ದಿವಸಗಳಿಂದ ಪಾದಚಾರಿಯಾಗಿಯೇ ಸುತ್ತುದುದರಿಂದ ಅನೇಕ ಭಾಗಗಳನ್ನು ನೋಡಲು ಅನುಕೂಲವಾಯಿತು. ಪ್ರದರ್ಶನಪಟವೂ ವಿವರವನ್ನು ತಿಳಿಸುವ ಪುಸ್ತಕಗಳೂ ನನ್ನ ಬಳಿಯಲ್ಲಿದ್ದುದರಿಂದ [illegible] ಸಾಧ್ಯವಾಗಿದ್ದಿತು. ಆ ಪ್ರದರ್ಶನವು ಬಹಳ ದೊಡ್ಡದು ಮತ್ತು ಅದರಲ್ಲಿ ಅನೇಕ ವಿಧವಾದ ಪದಾರ್ಥಗಳು ಶೇಖರಿಸಲ್ಪಟ್ಟಿದ್ದುವು. ನನಗೆ ಅವೆಲ್ಲವೂ ಜ್ಞಾಪಕವಿಲ್ಲವಾದರೂ ಆ ಶಿಖರವು ಮಾತ್ರ ಚೆನ್ನಾಗಿ ಜ್ಞಾಪಕದಲ್ಲಿದೆ. ಎರಡು ಮೂರುವೇಳೆ ನಾನು ಆ ಶಿಖರದಮೇಲಕ್ಕೆ ಹತ್ತಿದ್ದೆನು. ಮೊದಲನೆಯಂತಸ್ತಿನಲ್ಲಿ ಭೋಜನಕ್ಕೇರ್ಪಾಡಿಸಲ್ಪಟ್ಟಿದ್ದಿತು. ಒಂದುಸಾರಿ ನಾನು ಅಲ್ಲಿ ಊಟಮಾಡಿದೆನು. ಒಂದುವೇಳೆಗೆ 4 ರೂ. ಕೊಡಬೇಕಾಗಿದ್ದಿತಾದರೂ ಊಟವೇನೂ ನನಗೆ ವಿಶೇಷವಾಗಿ ಕಂಡುಬರಲಿಲ್ಲ. ಕೊಟ್ಟ ಹಣವು ಬರೇದಂಡವೇ ಆಗಿದ್ದಿತು.

ಪ್ಯಾರಿಸ್ಸಿನಲ್ಲಿ ದೇವಾಲಯಗಳು.

ಅಲ್ಲಿನ ಹಳೇದೇವಾಲಯಗಳು ನನಗೆ ಜ್ಞಾಪಕವಿವೆ. ಅವುಗಳ ಔನ್ನತ್ಯವನ್ನೂ ಪ್ರಶಾಂತತವನ್ನೂ ನಾನೆಂದಿಗೂ ಮರೆಯಲಾರೆನು. ಅವುಗಳಲ್ಲಿಯ ಅದ್ಭುತವು ಚಿತ್ರಕೆಲಸವಾಗಿದ್ದಿತು. ಚಿತ್ರವು ಬಹುರಮ್ಯವಾಗಿರುವುದಲ್ಲದೆ ಬಣ್ಣದಲ್ಲಿ ಬರೆಯಲ್ಪಟ್ಟಿರುವುದು. ಅದಕ್ಕಾಗಿ ಲಕ್ಷಾಂತರ ಧನವ್ಯಯವಾಗಿರುತ್ತದೆ. ಅಷ್ಟೊಂದು ಹಣವನ್ನು ವೆಚ್ಚಮಾಡಿದವರು ನಿಜವಾಗಿ ದೈವಭಕ್ತಿಯುಳ್ಳವರೆಂದೇ ನನಗೆ ತೋರಿತು. ಪ್ಯಾರಿಸ್‌ಪಟ್ಟಣದಲ್ಲಿಯ ಸೋಕಿ, ತಾಗ, ಸ್ವಾತಂತ್ರ್ಯ ಮೊದಲಾದವುಗಳ ವಿಚಾರವಾಗಿ ನಾನು ಬಹಳವಾಗಿ ಓದಿದ್ದೆನು. ಅವು ಪ್ರತಿಬೀದಿಯಲ್ಲೂ ಗೋಚರವಾಗುತಿದ್ದುವಲ್ಲದೆ ಆ ದೇವಾಲಯಗಳಲ್ಲಿ ಮಾತ್ರ ಇತರಭಾಗಗಳಂತಹವುಗಳಲ್ಲವೆಂದು ನನಗೆ ತೋರಿತು. ಪ್ರಜೆಗಳ ಪದ್ಧತಿಯೂ ಬದಲಾಯಿಸಿದೆ. ಅವರಿಗೆ ವಿನಯವು ವಿಶೇಷವಾಗಿರುವುದು. ಎಂತಹ ಧ್ವನಿಯೂ ಕೇಳುವುದಿಲ್ಲ. ಮೇರಿ ಶಿಲಾವಿಗ್ರಹದ ಹತ್ತಿರ ಯಾವಾಗಲೂ ಯಾರಾದರೊಬ್ಬರು ಪ್ರಾರ್ಥನೆಯನ್ನು ಮಾಡುತ್ತಲೇ ಇರುವರು. ಆ ವಿಗ್ರಹದ ಇದಿರಿಗೆ ಕುಳಿತವರು ಆ ಶಿಲಾವಿಗ್ರಹವನ್ನು ಪ್ರಾರ್ಥಿಸುತ್ತಿರಲಿಲ್ಲವು. ಯಾಥಾರ್ಥವಾಗಿ ಶಕ್ತಿಯುಳ್ಳ ದೇವರನ್ನೇ ಪ್ರಾರ್ಥಿಸುತ್ತಿದ್ದರು. ಅಂದರೆ ಅವರು ಭಗವಂತನ ಶಕ್ತಿಯನ್ನು ಸ್ತುತಿಸುತ್ತಿದ್ದರಲ್ಲದೆ ಅವಮಾನಿಸುತ್ತಿರಲಿಲ್ಲವು. ನನಗೆ ಅದು ಕೊಂಚ ಜ್ಞಾಪಕವಿರುತ್ತದೆ.

ಮನುಷ್ಯನ ಅವಿವೇಕವು.

ಆ ಶಿಖರಸ್ತಂಭದ ಸಂಕೇತವು ನನಗೆ ಸರಿಯಾಗಿ ಜ್ಞಾಪಕವಿಲ್ಲವು. ಪ್ರದರ್ಶನದ ಬಹಳ ವಿವರಣೆಯನ್ನು ಓದಿದೆನು. ಪ್ರಶಂಸನೀಯವಾದವುಗಳನ್ನೂ ನಿರಸನವಾದವುಗಳನ್ನೂ ಓದಿದೆನು. ಟಾಲಸ್ಟಾಯಿರವರು ಅವುಗಳನ್ನು ನಿರಸನಮಾಡಿದವರಲ್ಲಿ ಮುಖ್ಯರು. - ಮನುಷ್ಯನ ಜ್ಞಾನಕ್ಕೆ ಮಾತ್ರವಾಗಿರದೆ ಅವಿವೇಕಕ್ಕಾಗಿಯೇ ಈ ಸ್ತಂಭವು ಪ್ರಯೋಜನವು. ಮಾದಕಪದಾರ್ಥಗಳಲ್ಲೆಲ್ಲ ಹೊಗೆಸೊಪ್ಪು ಅಧಮಾಧಮವು. ಹೆಂಡ ಸಾರಾಯಿಯನ್ನು ಕುಡಿದವನು ಹುಚ್ಚನಾಗುವನು. ಚುಟ್ಟವನ್ನುಸೇದುವವನಬಾಯಿ ಹೊಗೆಯಿಂದ ಆವರಿಸಿಕೊಂಡಿರುವುದಲ್ಲದೆ ಅವನು ಗಾಳೀಮನೆಯನ್ನೂ, ಭಾವಪ್ರಪಂಚವನ್ನೂ ನಿರ್ಮಿಸಲಾರಂಭಿಸುವನು. ಆ ಶಿಖರವೂ ಅಂತಹ ದುರ್ವ್ಯಸನವನ್ನೇ ಉಂಟುಮಾಡುವುದು - ಎಂದು ಟಾಲಸ್ಟಾಯಿರವರು ಬರೆದಿರುವರು. ಆ ಸ್ತಂಭದಲ್ಲಿ ನನಗೆ ಅಂತಹ ಸೌಂದರ್ಯವೂ ಕಂಡುಬರಲಿಲ್ಲವು. ಅದರಿಂದ ಪ್ರದರ್ಶನಕ್ಕಾದರೂ ಯಾವ ಸೌಂದರ್ಯವೂ ಉಂಟಾಗಿರಲಿಲ್ಲ. ಅದು ಹೊಸವಿಷಯವು. ಅದ್ಭುತಾತ್ಮಕತೆಯಿಂದಿದ್ದುದರಿಂದಲೇ ಅದನ್ನು ನೋಡಲು ಸಾವಿರಾರುಜನರು ಬರುತ್ತಿದ್ದರು. ಅದು ಆ ಪ್ರದರ್ಶನದಲ್ಲಿ ಒಂದು ಆಟವಾಗಿದ್ದಿತು. ನಮಗೆ ಯಾವುದರಮೇಲಾದರೂ ಪ್ರೇಮಸಂಬಂಧವಾದ ಆಕರ್ಷಹುಟ್ಟಿತ್ತೆಂದರೆ, ನಾವು ಕೂಡ ಚಿಕ್ಕಮಕ್ಕಳ ಸಮಾನರಾಗುವೆವು. ಅದಕ್ಕೆ ಈ ಸ್ತಂಭವೇ ನಿದರ್ಶನ - ಎಂದು ಮಹಾತ್ಮರು ಬರೆದಿರುವರು.

ಎರಡನೆಯಭಾಗದಲ್ಲಿ 8 ನೆಯ ಪ್ರಕರಣ.

ಪ್ರಿಟೋರಿಯಾಮಾರ್ಗದಲ್ಲಿ

ದರ್ಬನ್ನಿನಲ್ಲಿ ವಾಸಿಸುತ್ತಿದ್ದ ಭಾರತೀಯ ಕ್ರೈಸ್ತರೊಡನೆ ನನಗೆ ಅಲ್ಪಕಾಲದಲ್ಲಿಯೇ ಸಂಬಂಧವೇರ್ಪಟ್ಟಿತು. ಕೋರ್ಟಿನಲ್ಲಿ ದ್ವಿಭಾಷಿಯಾಗಿದ್ದಾತನು ರೋಮನ್ ಕೆಥೋಲಿಕ್ ಕ್ರೈಸ್ತರಾದ ಪಾಲುರವರೊಡನೆಯೂ, ಕೀ|| ಶೇ|| ಸುಭಾನು ಗಾಡ್ಫ್ರೆಯವರೊಡನೆಯೂ ನನಗೆ ಆಗ ಪರಿಚಯವಾಯಿತು. ಸುಭಾನುರವರು ಆಗ ಪ್ರಾಟೆಸ್ಟಂಟ್ ಮಿಷನ್ ಸಂಘದವರ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಅವರ ಕುಮಾರರಾದ ಜೇಮ್ಸ್ ಗಾಡ್ಫ್ರೆಯವರು ಈಚೆಗೆ ಭರತಖಂಡಕ್ಕೆ ಬಂದಿದ್ದ ದಕ್ಷಿಣಾಫ್ರಿಕಾ ಪ್ರತಿನಿಧಿವರ್ಗದವರಲ್ಲೊಬ್ಬರಾಗಿದ್ದರು. ಕೀ|| ಶೇ|| ಪಾರ್ಸಿರುಸ್ತುಂಜಿ ಮತ್ತು ಕೀ|| ಶೇ|| ಆದಂಜೀಮಿಯಾಖಾನ್‌ರವರುಗಳ ಕೂಡ ನನಗೆ ಆಗಲೇ ಪರಿಚಯವಾದುದು. ಅದುವರೆಗೂ ಅವರು ವ್ಯಾಪಾರಸಂಬಂಧದಲ್ಲಿ ಮಾತ್ರ ಆಗಾಗ್ಗೆ ಒಟ್ಟಿಗೆ ಸೇರುತ್ತಿದ್ದರಾದರೂ ಗಾಢಮೈತ್ರಿಯು ಮಾತ್ರ ಉಂಟಾಗಿರಲಿಲ್ಲ. ತರುವಾಯ ಅವರೆಲ್ಲರೂ ಒಟ್ಟಾಗಿ ಸೇರಿ ಕೆಲಸಮಾಡುವುದು ತಟಸ್ಥವಾಯಿತು. ಆ ಸಂಗತಿಯು ಮುಂದೆ ಸ್ಪಷ್ಟಪಡಿಸಲ್ಪಡುವುದು. ಈ ರೀತಿಯಾಗಿ ನಾನು ಬಹಳ ಜನರೊಡನೆ ಪರಿಚಯಮಾಡಿಕೊಂಡಿರುವಾಗ್ಗೆ ಪ್ರಿಟೋರಿಯಾದಲ್ಲಿದ್ದ ನ್ಯಾಯವಾದಿಯಿಂದ ಅಬ್ದುಲ್ಲಾಸೇಟರಿಗೆ ಕೇಸಿನ ಸಂಬಂಧವಾಗಿ ಕಾಗದಬಂದಿತು. ಕೇಸನ್ನು ಸಿದ್ಧಪಡಿಸುವುದಕ್ಕಾಗಿ ನೀವಾಗಲಿ ನಿಮ್ಮ ಪ್ರತಿನಿಧಿಯಾಗಲಿ ಪ್ರಿಟೋರಿಯಾಕ್ಕೆ ಬರಬೇಕೆಂದು ಅದರಲ್ಲಿ ಬರೆಯಲ್ಪಟ್ಟಿದ್ದಿತು. ಸೇಟರು ನನಗೆ ಆ ಕಾಗದವನ್ನು ತೋರಿಸಿ ಪ್ರಿಟೋರಿಯಾಕ್ಕೆ ಹೊರಡುವಿರಾ ? ಎಂದು ಕೇಳಿದರು. ಕೇಸಿನ ಸಂಗತಿಯೇನೂ ನನಗೆ ತಿಳಿದಿರಲಿಲ್ಲವು. ಅದನ್ನು ನನಗೆ ನೀವು ಬೋಧಿಸಿದರೆ ಅದು ನನಗೆ ಗೊತ್ತಾಗುತ್ತದೆಂದು ಹೇಳಿದೆನು. ಆ ಕೇಸಿನ ವಿಚಾರವನ್ನು ನನಗೆ ಅನುಭವಮಾಡಿಕೊಡುವಂತೆ ಸೇಟರು ಗುಮಾಸ್ತನಿಗೆ ಹೇಳಿದರು. ನಾನು ಅದನ್ನು ಗ್ರಹಿಸಲಾರಂಭಿಸಿದಮೇಲೆ ಮೊದಲಿನಿಂದ ತಿಳಿದುಕೊಳ್ಳಬೇಕಾಗಿ ಬಂದಿತು. ನಾನು ಜಾಂಜಿಬಾರಿನಲ್ಲಿದ್ದ ಕೊಂಚ ದಿವಸಗಳಲ್ಲಿ ಪ್ರತಿ ದಿನವೂ ಕೋರ್ಟಿಗೆ ಹೋಗಿ ಕೇಳುತ್ತಿದ್ದೆನು. ಒಬ್ಬ ಪಾರ್ಸಿ ನ್ಯಾಯವಾದಿಯು ಒಬ್ಬ ಸಾಕ್ಷಿಯ ವಿಚಾರಣೆಮಾಡುವಾಗ್ಗೆ ಲೆಕ್ಕದಲ್ಲಿ ಜಮಾಖರ್ಚು ಮೊಬಲಗನ್ನು ಕುರಿತು ಪ್ರಶ್ನೆ ಕೇಳಿದನು. ನನಗೆ ಲೆಕ್ಕದ ಸಂಗತಿಯೇನೂ ತಿಳಿದಿರಲಿಲ್ಲವು. ನಾನು ಅದನ್ನು ಯಾವಾಗಲೂ ಅಭ್ಯಾಸಮಾಡಿದುದಿಲ್ಲವು.

ಸೇಟುಕಂಪೆನಿಯವರ ಕೇಸೂ ಲೆಕ್ಕದ ಮೇಲೆಯೇ ಆಧಾರಪಟ್ಟಿದ್ದಿತು. ಅದನ್ನು ತಿಳಿದುಕೊಳ್ಳುವುದಕ್ಕಾಗಿ ಲೆಕ್ಕದ ಪದ್ಧತಿಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿ ಬಂದಿತು. ಗುಮಾಸ್ತನು ನನಗೆ ಲೆಕ್ಕಗಳ ಸಂಗತಿಯನ್ನೂ ಪ್ರಾಂಸರಿನೋಟುಗಳ ಸಂಗತಿಯನ್ನೂ ತಿಳಿಸಿದನಾದರೂ ನನಗೆ ಗೊತ್ತಾಗಲಿಲ್ಲವು. ಒಂದು ಬುಕ್‌ಕೀಪಿಂಗ್ ಅಂದರೆ ಲೆಕ್ಕವಿಡುವ ಕ್ರಮವನ್ನು ಬೋಧಿಸುವ ಪುಸ್ತಕವನ್ನು ಕೊಂಡುಕೊಂಡು ಓದಿದೆನು. ಆಗ ನನಗೆ ಧೈರ್ಯವುಂಟಾಯಿತು. ಕೇಸಿನ ಸಂದರ್ಭವು ತಿಳಿದಿತು. ಅಬ್ದುಲ್ಲಾಸೇಟರಿಗೆ ಲೆಕ್ಕದ ಸಂಗತಿ ತಿಳಿಯದಿದ್ದರೂ ಅನುಭವವು ಚೆನ್ನಾಗಿದ್ದುದರಿಂದ ಚಿಕ್ಕ ಪ್ರಶ್ನೆಗಳಿಗೆ ಬಹಳ ಶೀಘ್ರವಾಗಿ ಉತ್ತರವನ್ನು ಕೊಡಬಲ್ಲವರಾಗಿದ್ದರು. ನಾನು ಪ್ರಿಟೋರಿಯಾಕ್ಕೆ ಹೊರಡುತ್ತೇನೆಂದು ಸೇಟರಿಗೆ ಹೇಳಿದೆನು. 'ಎಲ್ಲಿವಸತಿಮಾಡುತ್ತೀರಿ ?' ಎಂದು ಅವರೇ ಕೇಳಿದರು. 'ನೀವೇ ಏರ್ಪಾಟುಮಾಡಬೇಕು' ಎಂದು ಹೇಳಿದೆನು. 'ನಾನು ನ್ಯಾಯವಾದಿಯ ಹೆಸರಿನಲ್ಲೂ ನನ್ನ ಸ್ನೇಹಿತರ ಹೆಸರಿನಲ್ಲೂ ಬರೆಯುತ್ತೇನೆ. ನ್ಯಾಯವಾದಿಯು ಇಳಿದುಕೊಳ್ಳಲು ಏರ್ಪಾಟುಮಾಡುವನು. ನಮ್ಮವರಲ್ಲಿ [illegible]

ಕಾಣಿಸಿರುತ್ತದೆ. ನನ್ನ ರಹಸ್ಯವಾದ ಕಾಗದವನ್ನು ಅವರು ಹೇಗಾದರೂ ನೋಡಿದರೆ ನನಗೆ ಬಹಳ ನಷ್ಟವಾಗುತ್ತದೆ. ಅವರ ಪರಿಚಯವನ್ನು ನೀವು ಮಾಡಿಕೊಳ್ಳದಿರುವುದೇ ಉತ್ತಮವು" ಎಂದು ಸೇಟು ಹೇಳಿದರು. "ಪ್ರತಿವಾದಿಯು ಎಲ್ಲಿ ನನಗೆ ಬಿಡಾರವಮಾಡುತ್ತಾರೋ ಅಲ್ಲಿಳಿದುಕೊಳ್ಳುತ್ತೇನೆ. ಇಲ್ಲವಾದಲ್ಲಿ ನಾನೇ ಬಿಡಾರವನ್ನು ಏರ್ಪಡಿಸಿಕೊಳ್ಳುತ್ತೇನೆ. ರಹಸ್ಯ ವಿಚಾರದಲ್ಲಿ ನೀವು ಭಯಪಡಬೇಕಾದುದಿಲ್ಲ. ನನ್ನ ರಹಸ್ಯವು ಯಾರಿಗೂ ತಿಳಿಯುವುದಿಲ್ಲ. ಪ್ರತಿವಾದಿಯರ ಕೂಡ ನಾನು ಪರಿಚಯವನ್ನು ಮಾಡಿಕೊಳ್ಳುವೆನು; ಒಳ್ಳೇ ಮನಸಿನಿಂದ ರಾಜೀಮಾಡಲು ಪ್ರಯತ್ನಿಸುವೆನು. ಇಷ್ಟಾಗಿ ತಾಯಬುಸೇಟರು ಕೂಡ ನಿಮಗೆ ಬಂಧುವಾಗಬೇಕಲ್ಲವೆ?" ಎಂದು ನಾನು ಕೇಳಿದೆನು. ಪ್ರತಿವಾದಿಯಾದ ಸೇಟು ತಾಯಬುಹಾಜೀಖಾನ್ ಮಹಮ್ಮದ್ ರವರು ಅಬ್ದುಲ್ಲಾಸೇಟರಿಗೆ ಸಮೀಪಬಂಧುವೇ. ನಾನು ಹೀಗೆ ಹೇಳಲು ಸೇಟರಿಗೆ ಕೊಂಚ ಚುರುಕುತಟ್ಟಿತು. ನಾನು 6-7 ದಿನಗಳಿಂದ ಡರ್ಬನ್ನಿನಲ್ಲಿ ಇದ್ದುದರಿಂದ ನನ್ನಮೇಲೆ ಕೊಂಚ ವಿಶ್ವಾಸವು ಕೂಡ ಹುಟ್ಟಿದ್ದಿತು. "ಸ....ರೇ. ರಾಜಿಮಾಡಿದರೆ ಒಳ್ಳೆಯದೆ. ನಾವು ಸಮೀಪ ಬಂಧುಗಳಾದುದರಿಂದಲೇ ಅವರ ಸ್ವಭಾವವು ನನಗೆ ಚೆನ್ನಾಗಿ ಗೊತ್ತು. ತಾಯಬುಸೇಟು ರಾಜಿಗೆ ಸುಲಭದಿಂದ ಅಂಗೀಕರಿಸುವವರಲ್ಲ. ನಾವೇನಾದರೂ ಅವಕಾಶ ಕೊಟ್ಟಲ್ಲಿ ನಮ್ಮನ್ನು ತುಳಿಯಲು ನೋಡುವರು. ಆದುದರಿಂದ ನೀವು ಬಹಳ ಜಾಗ್ರತರಾಗಿರಬೇಕು" ಎಂದು ಸೇಟು ಹೇಳಿದರು. "ನೀವು ಸಂಶಯಪಡಬೇಕಾದ ಆಗತ್ಯವಿಲ್ಲವು. ನಾನು ತಾಯಬುಸೇಟರೊಡನಾಗಲಿ ಮತ್ತಾರೊಡನಾಗಲಿ ಮಾತನಾಡಬೇಕಾದ ಅವಶ್ಯವಿಲ್ಲವು. ಏತಕ್ಕಾಗಿ ಈ ದುರ್ವ್ಯಯವು ಎಂಬುದರಮೇಲೆ ರಾಜಿವಿಷಯವನ್ನು ಸೂಚಿಸಿದುದಾಗಿದೆ." ಎಂದು ಹೇಳಿದೆನು. ನಾನು ಡರ್ಬನ್ನಿಗೆ ಹೋದ 7ನೇ ದಿನದಲ್ಲೋ 8ನೇ ದಿನದಲ್ಲೋ ಏನು ಅಲ್ಲಿಂದ ಹೊರಟೆನು. ರೈಲುಬಂಡಿಯ 1ನೇ ತರಗತಿಯಲ್ಲಿ ಸ್ಥಳವನ್ನೇರ್ಪಡಿಸಿದರು. ರಿಜರ್ವ್‍ಮಾಡಿಸಬೇಕಾದಲ್ಲಿ 3½ ರೂಪಾಯಿಯನ್ನು ಹೆಚ್ಚಾಗಿ ಕೊಡಬೇಕು. ಅದರಂತೆ ಕೊಟ್ಟು ರಿಜರ್ವ್‍ಮಾಡಿಸಲು ಏರ್ಪಡಿಸುವೆವೆಂದು ಸೇಟರು ಒತ್ತಿ ಹೇಳಿದರಾದರೂ ಗರ್ವದಿಂದ ನಾನು ನಿರಾಕರಿಸಿದೆನು. "ಇದು ಹೊಸದೇಶವು. ಇದುವರೆಗಾದ ತಂಟೆಯೇ ಸಾಕು. ಹೊಸ ತಂಟೆಗಳನ್ನು ತಂದುಕೊಳ್ಳಬೇಡಿ. ಕ್ಷಣಕಷ್ಟದಿಂದ ಸೌಖ್ಯವನ್ನು ಬಿಡಬಾರದು" ಎಂದು ಹೇಳಿದರು. ನನ್ನ ವಿಷಯದಲ್ಲಿ ನೀವು ಚಿಂತಿಸಬಾರದೆಂದು ನಾನು ಹೇಳಿದೆನು. ರಾತ್ರಿ 9 ಗಂಟೆಗೆ ರೈಲುಬಂಡಿಯು ನೆಟಾಲು ಮುಖ್ಯಪಟ್ಟಣವಾದ ಮಾರಿಟ್ಜ್‍ಬರ್ಗನ್ನು ತಲುಪಿತು. ಒಬ್ಬ ಸೇವಕನು ಬಂದು ಹಾಸಿಗೆಬೇಕೆ? ಎಂದು ಕೇಳಿದನು. ಬೇಕಿಲ್ಲ. ನನ್ನಹತ್ತಿರ ಹಾಸಿಗೆಯಿದೆ ಎಂದೆನು. ಅವನು ಹೊರಟುಹೋದನು. ತರುವಾಯ ಒಬ್ಬ ಪ್ರಯಾಣಿಕನು ಬಂದು ನನ್ನನ್ನು ದುರುಗುಟ್ಟಿಕೊಂಡು ನೋಡಿದನು. ನಾನು ಭಾರತೀಯನಾದುದರಿಂದ ಅವನಿಗೆ ಚಿತ್ತವಿಕಾರವಾಯಿತು. ಎಲ್ಲಿಗೋ ಹೋಗಿ ಇಬ್ಬರುದ್ಯೋಗಿಗಳನ್ನು ಸಂಗಡ ಕರೆದುಕೊಂಡು ಹಿಂತಿರುಗಿ ಬಂದನು. ಅವರೆಲ್ಲರೂ ಸುಮ್ಮನಿದ್ದರು. ಅಷ್ಟರಲ್ಲಿ ಬೇರೊಬ್ಬ ಉದ್ಯೋಗಿಯು ಬಂದು ಎದ್ದೇಳು ಇನ್ನೊಂದುಬಂಡಿಯಲ್ಲಿ ಕುಳ್ಳಿರಿಸುತ್ತೇನೆಂದು ಹೇಳಿದನು. ನನ್ನಹತ್ತಿರ ಒಂದನೇ ತರಗತಿಯ ಟಿಕಿಟ್ಟಿದೆ ಎಂದೆನು. ಇದ್ದರೂ ಇರಲಿ. ನೀನು ಇಲ್ಲಿರಕೂಡದು; ಬೇರೆ ಬಂಡಿಗೆ ಹೋಗಬೇಕು ಎಂದು ಅವನು ಹೇಳಿದನು. ಡರ್ಬನ್ನಿನಲ್ಲಿ ನಾನು ಈ ಬಂಡಿಯಲ್ಲಿ ಕೂತುಕೊಳ್ಳಲು ಅಲ್ಲಿಯ ಅಧಿಕಾರಿಗಳು ಅಂಗೀಕರಿಸಿದರು. ನಾನು ಕದಲುವುದಿಲ್ಲವೆಂದು ತಿಳಿಸಿದೆನು. ಹಾಗಾದರೆ ಪೋಲೀಸಿನವನನ್ನು ಕರೆಯುತ್ತೇನೆ. ಅವನು ನಿನ್ನನ್ನು ದಬ್ಬುತ್ತಾನೆ ಎಂದು ಹೇಳಿದನು. ಹಾಗೆಯೇ ಆಗಲಿ ನಾನುಬೇರೆ ಏಳುವುದಿಲ್ಲವೆಂದೆನು. ಪೋಲೀಸಿನವನು ಬಂದು ನನ್ನ ಕೈಯನ್ನು ಹಿಡಿದು ಹೊರತಳ್ಳಿದನು. ನನ್ನ ಸಾಮಾನುಗಳನ್ನು ಕೂಡ ಹೊರಕ್ಕೆ ಹಾಕಿದನು. ನಾನು ಬೇರೆ ಬಂಡಿಗೆ ಹೋಗುವುದಿಲ್ಲವೆಂದು ಅಂದೆನು. ರೈಲು ಹೊರಟಿತು. ನನ್ನ ಕೈಚೀಲವನ್ನು ಹಿಡಿದುಕೊಂಡು ವೇಟಿಂಗ್‍ರೂಮಿನೊಳಕ್ಕೆ ಹೋಗಿ ಕುಳಿತುಕೊಂಡೆನು. ಉಳಿದ ಸಾಮಾನುಗಳನ್ನು ರೈಲಿನವರು ಭದ್ರಪಡಿಸಿದರು.

ಆಗ ಶೀತಕಾಲವಾಗಿದ್ದಿತು. ಆ ದೇಶದ ಎತ್ತರವಾದ ಪ್ರಾಂತದಲ್ಲಿ ಚಳಿಯು ದುಸ್ಸಹವಾಗಿರುವುದು. ಮಾರಿಟ್ಜ್‍ಬರ್ಗಿನಲ್ಲಿ ಚಳಿಯು ಮತ್ತಷ್ಟು ಜಾಸ್ತಿ. ನನ್ನ ಮೇಲಂಗಿಯು ನನ್ನ ಸಾಮಾನುಪೆಟ್ಟಿಯಲ್ಲಿ ಸಿಕ್ಕಿಹೋಗಿದ್ದಿತು. ಅದನ್ನು ಕೊಡೆಂದು ಕೇಳಿದರೆ ಮತ್ತೆಲ್ಲಿ ಅವಮಾನವಾಗುವುದೋ ಎಂದು ಕೇಳಲಿಲ್ಲ. ಗಡಗಡನೆ ನಡುಗುವ ಚಳಿ ಹುಟ್ಟಿತು. ಆ ಕೊಠಡಿಯಲ್ಲಿ ದೀಪವಿರಲಿಲ್ಲ. ಒಬ್ಬ ಪ್ರಯಾಣಿಕನು ರಾತ್ರಿ 12 ಘಂಟೆಗೆ ಅಲ್ಲಿಗೆ ಬಂದು ನನ್ನಕೂಡ ಮಾತಾಡಲುಪಕ್ರಮಿಸಿದನು. ಆದರೆ ನನಗೆ ಆಗ ಮಾತನಾಡಲು ಇಷ್ಟವಾಗಿರಲಿಲ್ಲವು. ನಾನು ನನ್ನ ಕಾರ್ಯವನ್ನು ಕುರಿತು ಆಲೋಚಿಸತೊಡಗಿದೆನು. ನನ್ನ ಹಕ್ಕಿಗಾಗಿ ಹೋರಾಡಲೇ? ಇಲ್ಲ ಭರತಖಂಡಕ್ಕೆ ಹಿಂದಿರುಗಲೇ? ಇಲ್ಲಿ ಅವಮಾನವನ್ನು ಲೆಕ್ಕಿಸದೆ ಪ್ರಿಟೋರಿಯಾಕ್ಕೆ ಹೋಗಿ ಕೇಸು ಮುಗಿದಮೇಲೆ ಸ್ವದೇಶಕ್ಕೆ ಹೊರಡಲೇ? ನನ್ನ ಕೆಲಸವನ್ನು ನೆರವೇರಿಸದೆ ಸ್ವದೇಶಕ್ಕೆ ಓಡಿಹೋಗುವುದು ಭೀರುತ್ವ (ಹೇಡಿತನ)ವೇ ಆಗುವುದು. ನಾನು ಅನುಭವಿಸಬೇಕಾದ ಕಷ್ಟಗಳು ವರ್ಣದ್ವೇಷವನ್ನು ಪುರಾಣವ್ಯಾಧಿಯಂತೆ ಹುಟ್ಟಿಸುವ ಲಕ್ಷಣವೇ. ಈ ವ್ಯಾಧಿಯನ್ನು ನಿರ್ಮೂಲ ಮಾಡಲು ಪ್ರಯತ್ನಿಸಬೇಕು. ಅನುಕಾರಣ ಪ್ರಾಪ್ತವಾಗುವ ಕಷ್ಟಗಳನ್ನು ಅನುಭವಿಸಲೇ ಬೇಕು. ವರ್ಣದ್ವೇಷವನ್ನು ತೊಲಗಿಸಲು ಅವಶ್ಯಕವಾಗಿರುವಂತೆಯೇ ಅಕ್ರಮವನ್ನೂ ತೊಲಗಿಸಬೇಕಾಗಿದೆ" ಎಂದು ನಾನು ನಿಶ್ಚಯಿಸಿ ರೈಲುಬಂಡಿಯಲ್ಲಿ ಕುಳಿತು ಪ್ರಿಟೋರಿಯಾಕ್ಕೆ ಹೊರಡಲು ಯೋಚಿಸಿದೆನು. ಮಾರನೆಯಬೆಳಿಗ್ಗೆ ರೈಲ್ವೆಯ ಜನರಲ್‍ಮ್ಯಾನೇಜರಿಗೆ ಒಂದು ದೊಡ್ಡ ತಂತಿವಾರ್ತೆಯನ್ನು ಕಳುಹಿಸಿದೆನು. ಅಬ್ದುಲ್ಲಾಸೇಟರಿಗೂ ಕೂಡ ತಿಳಿಸಿದೆನು. ಸೇಟರೂ ಕೂಡಲೆ ಜನರಲ್ ಮ್ಯಾನೇಜರನ್ನು ಕಂಡು ಮಾತನಾಡಿದರು. ರೈಲ್ವೆ ಕೆಲಸಗಾರರ ಚರ್ಯವು ಸಕ್ರಮವಾಗಿದ್ದಿತೆಂದು ಮ್ಯಾನೇಜರನು ಸಮರ್ಥಿಸಿದನು. ಆದರೆ ಮುಂದೆ ನನಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗಿ ಕೆಲಸಗಾರರಿಗೆ ತಂತಿಯಮೂಲಕ ತಿಳಿಸಿರುವುದಾಗಿ ಸೇಟರಿಗೆ ಹೇಳಿದನು. ಮಾರಿಟ್ಜ್‍ಬರ್ಗಿನಲ್ಲೂ, ಇತರ ಸ್ಥಳದಲ್ಲೂ ಇರುವ ಭಾರತೀಯವರ್ತಕರುಗಳಿಗೆ ಸೇಟರು ತಂತೀವಾರ್ತೆಯನ್ನು ಕಳುಹಿಸಿ ನನ್ನ ಕ್ಷೇಮವನ್ನು ವಿಚಾರಿಸಿಕೊಳ್ಳುವಂತೆ ಕೋರಿದ್ದರು. ಮಾರಿಟ್ಜ್‍ಬರ್ಗಿನ ವರ್ತಕರುಗಳು ಸ್ಟೇಷನ್ನಿಗೆ ಬಂದು ತಮಗೆ ಆದ ಅವಮಾನವನ್ನು ನನಗೆ ತಿಳಿಸಿ ಸಾನುಭೂತಿಯನ್ನು ತೋರಿಸಿದರು. ಪ್ರತಿದಿನದಲ್ಲೂ ಭಾರತೀಯರಿಗೆ ಇಂತಹ ಅವಮಾನವು ಜರುಗುತ್ತಲೇ ಇರುವುದೆಂಬ ಬಗೆಗೆ ಅವರು ಅನೇಕ ವಿಷಯಗಳನ್ನು ತಿಳಿಸಿದರು. ಸಾಯಂಕಾಲದವರೆಗೂ ಅವರೊಂದಿಗೆ ಮಾತನಾಡುತ್ತಿದ್ದೆನು. ಅಷ್ಟರಲ್ಲಿ ರೈಲುಬಂಡಿಯು ಬಂದಿತು. ನನಗೊಂದು ಸ್ಥಳವು ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟಿತು. ಅಲ್ಲಿ ಒಂದು ಟಿಕೆಟ್ಟನ್ನು ಕೊಂಡುಕೊಂಡು ಅದೇ ಬಂಡಿಯಲ್ಲಿ ಚಾರ್ಲ್ಸ್ ಪಟ್ಟಣಕ್ಕೆ ಹೊರಟೆನು.

ಲೋಭ.

ಪ್ರಿಯಸಹೋದರರೆ! ನಾನು ಸಾಧಾರಣನೆಂದು ತಿಳಿಯಬೇಡಿ. ಅತ್ಯಂತ ಮೋಹಕಾರಿ, ಗುಪ್ತವಾಗಿದ್ದುಕೊಂಡು ನಿಮಗರಿಯದಂತೆ ನಿಮ್ಮಲ್ಲಿ ಸ್ನೇಹ ಮಾಡಿ ನನ್ನಲ್ಲಿ ನಿಮಗೆ ಪ್ರೇಮಹುಟ್ಟುವವರೆಗೂ ನಿಮ್ಮ ದಾಸಾನುದಾಸನಾಗಿದ್ದು ನೀವು ನನ್ನ ಬಲೆಗೆ ಬಿದ್ದ ತರುವಾಯ ನಿಮ್ಮ ಸರ್ವಸ್ವಾತಂತ್ರ್ಯವನ್ನೂ ತಪ್ಪಿಸಿ ನಿಮ್ಮಮೇಲೆ ಸಂಪೂರ್ಣಾಧಿಕಾರವನ್ನು ಮಾಡುತ್ತ ನಾನೇ ನಾನಾಗಿ ನಿಮ್ಮನ್ನು ಸೂತ್ರಧಾರನು ಬೊಂಬೆಗಳನ್ನು ಕುಣಿಸುವಂತೆ ಕುಣಿಸುತ್ತಾ ನಿಮ್ಮಿಂದ ಮಾಡಬಾರದ ಕೆಲಸಗಳನ್ನು ಮಾಡಿಸುತ್ತ, ಆಡಬಾರದ ಮಾತುಗಳನ್ನಾಡಿಸುತ್ತ ನಿಮಗೆ ಜನ್ಮಶತ್ರುಗಳನ್ನುಂಟುಮಾಡುವ ಮಹತ್ವಾಕಾಂಕ್ಷಿಯಾಗಿರುತ್ತೇನೆ. ನನ್ನನ್ನರಿಯದವರು ಯಾರೂ ಇಲ್ಲ. ನನ್ನ ಪ್ರಸಾದಸೇವೆಯನ್ನು ಹೊಂದದೆ ಇರತಕ್ಕವರೂ ಯಾರೂ ಇಲ್ಲ. ಹೀಗಿದ್ದೂ ನನ್ನ ನಿಜರೂಪವನ್ನರಿತು ನನ್ನನ್ನು ದೂರಪಡಿಸಿದವರು ಯಾರೂ ಇಲ್ಲ. ಇದಲ್ಲವೆ ನನ್ನ ಮಹತ್ವ! ನಾನು ಇಂದಿನವನಲ್ಲ; ಯುಗಾಂತರಗಳಿಂದಲೂ ಇರತಕ್ಕವನು. ನನ್ನ ಕಾರ್ಯಗಳೆಲ್ಲಾ ಸುಲಲಿತವಾಗಿ ನೆರವೇರಿ ನಾನು ದಿನೇದಿನೇ ಅಭಿವೃದ್ಧಿಹೊಂದುತ್ತ ಇನ್ನೂ ಉತ್ಸಾಹಶಾಲಿಗಳಲ್ಲಿ ಉತ್ಸಾಹಶಾಲಿಯಾಗಿ, ಬಲವಂತರಲ್ಲಿ ಬಲವಂತನಾಗಿ, ಅಧಿಕಾರಿಗಳಿಗೆ ಅಧಿಕಾರಿಯಾಗಿ, ಗುರುಗಳಿಗೆ ಗುರುವಾಗಿ ಮೆರೆಯುತ್ತಿದ್ದೇನೆ. ನಾನು ಪ್ರವೇಶಿಸಿದ ಸ್ಥಳದಲ್ಲಿ ನನಗೆ ಅಪಜಯವೆಂಬುದೇ ಇಲ್ಲ. ನನ್ನಂಥ ಮಹತ್ಕಾರ್ಯಗಳನ್ನು ಈವರೆಗೆ ಯಾರೂ ಮಾಡಿಲ್ಲ. ಮತ್ತು ಮುಂದೆಯೂ ಮಾಡಲಾರರು. ಇದರಿಂದಲೇ ನನ್ನ ಪ್ರಭುವು ನನಗೆ ಅತಿಶಯವಾದ ಬಿರುದಾಂಕಿತಗಳನ್ನಿತ್ತು, ಉಚ್ಚಸ್ಥಾನದಲ್ಲಿ ನನ್ನನ್ನು ಕುಳ್ಳಿರಿಸಿ ಅತಿಗೌರವದಿಂದ ಕಾಣುತ್ತಾನೆ. ಎಲ್ಲರಿಗೂ ದಿನಗಳು ಗತಿಸಿದಹಾಗೆಲ್ಲಾ ಮುಪ್ಪು ಆವರಿಸಿ ಬಲಕುಗ್ಗಿ, ಕೊನೆಗೆ ಮರಣವು ಸಹ ಸಂಭವಿಸುತ್ತದೆ; ನನಗಾದರೋ ದಿನೇದಿನೇ ಪ್ರಾಯ ಹೆಚ್ಚುತ್ತಿದೆ. ಪಟ್ಟಾಭಿಷೇಕದಿಂದ ಸಂತೋಷಸಾಮ್ರಾಜ್ಯದಲ್ಲಿ ಕೇಳಬೇಕೆಂದಿದ್ದ ಶ್ರೀರಾಮಚಂದ್ರನನ್ನು ಅರಣ್ಯವಾಸಿಯಾಗುವಂತೆ ಕೈಕೆಯಿಂದ ಅಡ್ಡಿಪಡಿಸಿದವನೂ ನಾನೇ. ಅಣ್ಣತಮ್ಮಂದಿರಿಗೆ ವಂಚಿಸಿ ಮೋಸದ ಜೂಜಿನಿಂದ ಜಯಿಸಿ ಪಾಂಡವರನ್ನು ಅರಣ್ಯವಾಸಿಗಳಾಗುವಂತೆ ಕೌರವರಿಂದ ಮಾಡಿಸಿದವನೂ ನಾನೇ. ಅಜಾತಶತ್ರುವಿನಂತಹ ಮಹಾಸಾತ್ವಿಕ ಮತ್ತು ಧಾರ್ಮಿಕ ಪುರುಷನಿಂದ ತಂದೆಯನ್ನು ಕೊಲ್ಲಿಸಿದವನೂ ನಾನೇ. ಅಲ್ಲಾವುದ್ದೀನನಂತಹ ಮಹಾವೀರಾಧಿವೀರನಿಂದ ಪ್ರೀತಿಪಾತ್ರನಾದ ಮತ್ತು ಪ್ರೀತಿಯಿಂದ ಆಲಿಂಗಿಸಲು ಬಂದ ಚಿಕ್ಕಪ್ಪನನ್ನು ಕೊಲ್ಲಿಸಿದವನೂ ನಾನೇ. ತನ್ನ ಪ್ರತಾಪದಿಂದ ದಿಲ್ಲಿಸಮ್ರಾಟನನ್ನೂ ಬೆರಗುಮಾಡಿದ್ದ, ಮಹಾಸಾತ್ವಿಕನೂ, ಹಿಂದೂಸಾಮ್ರಾಜ್ಯಸ್ಥಾಪಕನೂ ಆಗಿದ್ದ ಶಿವಾಜಿಮಹಾರಾಜನಂತಹ ವೀರಾಧಿವೀರಪ್ರಖ್ಯಾತ ಪುರುಷನು ಹೆಂಡತಿಯಿಂದ ವಿಷಪ್ರಯೋಗವಾಗಿ ಮರಣವನ್ನು ಹೊಂದುವಂತೆ ಮಾಡಿದವನೂ ನಾನೇ. ದೇವದಾನವರಲ್ಲಿ ಆಜನ್ಮದ್ವೇಷವನ್ನು ಹುಟ್ಟಿಸಿರತಕ್ಕವನೂ ನಾನೇ. ಇಂಥಿಂಥ ಮಹತ್ಕಾರ್ಯಗಳನ್ನೇ ಮಾಡಿರುವ ನನಗೆ ಅಸಾಧ್ಯಕಾರ್ಯವೇನುಂಟು? ನನಗೆ ವರರಾದವರನ್ನು ನಾಚಿಕೆಯಿಲ್ಲದೆ ತಿರಿಗಿಸುತ್ತೇನೆ, ಬೇಡಿಸುತ್ತೇನೆ, ಕಾಡಿಸುತ್ತೇನೆ, ದೈನ್ಯವೃತ್ತಿಯನ್ನುಂಟುಮಾಡುತ್ತೇನೆ, ಮಹತ್ವವನ್ನು ಕೆಡಿಸುತ್ತೇನೆ, ನನ್ನವರು, ತನ್ನವರೆಂಬ ಅಭಿಮಾನವನ್ನು ಹೋಗಲಾಡಿಸುತ್ತೇನೆ. ನಾನಿದ್ದಲ್ಲಿ ಬಂದವರು ಸತ್ಯವಂತರಾದರೂ ಅಸತ್ಯವಂತರೆಂದು ತೋರ್ಪಡಿಸುತ್ತೇನೆ. ಅವರಾಡುವ ಮಾತುಗಳೆಲ್ಲಾ ಕಾಪಟ್ಯವೆಂದು ತೋರ್ಪಡಿಸುತ್ತೇನೆ. ವೃಥಾನಿಂದೆಗಳಿಗೆ ಒಳಪಡಿಸುತ್ತೇನೆ. ಸರ್ವಸಂಗಪರಿತ್ಯಾಗಮಾಡಿದವರಿಂದಲಾದರೂ ನಾಸ್ತಿಯೆನಿಸುತ್ತೇನೆ. ಸ್ವಾಭಿಮಾನವೆಂಬ ದುರಹಂಕಾರಕ್ಕೆ ಒಳಪಡಿಸುತ್ತೇನೆ. ನಾನು ಶಾಶ್ವತನೆಂಬ ಮಮಕಾರವನ್ನು ಹುಟ್ಟಿಸುತ್ತೇನೆ. ಆರನ್ನೂ ಅಸ್ಥಿರವೆಂದು ತಿಳಿಯಬೇಡೆಂದು ಬೋಧಿಸುತ್ತೇನೆ. ಎಂಥಾ ಆಪತ್ತಿಗೊಳಗಾಗಿ ನನ್ನನ್ನು ಆಶ್ರಯಿಸಿದರೂ ನಾಸ್ತಿಯೆಂದೆನ್ನುವಂತೆ ಮಾಡುತ್ತೇನೆ. ಕರುಣೆಯನ್ನು ದೂರಮಾಡಿಸುತ್ತೇನೆ. ಕಷ್ಟಪಡತಕ್ಕವರನ್ನು ಕಂಡು ಕನಿಕರಪಡುವುದಕ್ಕೆ ಬದಲು ದೂಷಿಸುವಂತೆಯೂ, ನಗುವಂತೆಯೂ ಮಾಡುತ್ತೇನೆ. ನನ್ನದು ಹೆರವರದು ಎಂಬ ಭೇದಗಳನ್ನು ಹುಟ್ಟಿಸುತ್ತೇನೆ. ಅದ್ವೈತವನ್ನು ನಾಶಮಾಡುತ್ತೇನೆ. ದ್ವೈತವು ತಾನೇ ತಾನಾಗಿರುವಂತೆ ಮಾಡುತ್ತೇನೆ. ಇಂಥಾ ಕ್ರಿಯಾಶಕ್ತಿಯುಳ್ಳ ಮೂರ್ತಿಯಾದ ನನ್ನನ್ನು ಮಾತ್ರ ಆಶ್ರಯಿಸಿದ ನೀವು ಮೋಸಹೋಗದೆ ಎಂದಿಗೂ ಉಳಿದುಕೊಳ್ಳಲಾರಿರಿ. ಮೊದಮೊದಲೇನೋ ನಾನು ಪ್ರೇಮಕಾರಿಯೇ ಹೌದು. ನಿಮಗೆ ಹಿತವಾಗುವಂತೆಯೇ ನಾನು ತೋರ್ಪಡಿಸಿಕೊಳ್ಳುತ್ತೇನೆ. ಇಲ್ಲವಾದರೆ ನನ್ನ ಕಾರ್ಯವಾಗುವುದು ಹೇಗೆ? ನನ್ನನ್ನು ನಂಬಿದವರಿಗೆ ಎಂದಿಗೂ ಶಾಶ್ವತಸುಖವು ದೊರೆಯಲಾರದು. ನೀವೇನೋ ಎಂದಿದ್ದರೂ ಅಶಾಶ್ವತವಾದ ಈ ಜಡದೇಹವನ್ನು ಕಳೆದು ಹೋಗತಕ್ಕವರೇ! ಆದರೆ ನನ್ನನ್ನು ಹೊಂದಿದುದರ ಫಲವಾಗಿ ಇಹಲೋಕದ ಸೌಖ್ಯವನ್ನೂ ಹಾಳುಮಾಡಿಕೊಂಡು ಜನಗಳ ತಿರಸ್ಕಾರಕ್ಕೂ ಒಳಗಾಗಿ ಅಪಕೀರ್ತಿ ಎಂಬ ಶಾಶ್ವತ ದುರ್ನಾಮಕ್ಕೆ ಈಡಾಗುತ್ತೀರಿ. ಕೈಕೆಯು ಉಳಿದಿರುವಳೆ? ಸುಖವನ್ನು ಅನುಭವಿಸಿದಳೆ? ಅದರಂತೆಯೇ ಕೌರವರು, ಅಜಾತಶತ್ರುವು, ಅಲ್ಲಾವುದ್ದೀನ್ ಮತ್ತು ಸೋಯಿರಾಬಾಯಿ ಸಹ ಸುಖವನ್ನು ಹೊಂದಿದರೆ? ಉಳಿದಿರುವರೆ? ಇದರಂತೆ ಮತ್ತೆಷ್ಟು ಉದಾಹರಣೆಗಳನ್ನು ಹೇಳಲಿ? ಬೇಸರಿಲ್ಲದೆ ನಾನು ಮಾಡಿದ ಕಾರ್ಯಗಳನ್ನೆಲ್ಲಾ ಹೇಳಬೇಕೆಂದರೆ ನಿಮಗಾದರೂ ಬೇಸರಬಂದೀತು. ಒಟ್ಟಿನಲ್ಲಿ ನನ್ನ ಹೊಂದಿದವರು ಯಾರೂ ಸುಖಿಸಿಲ್ಲ, ಉಳಿದಿಲ್ಲ, ಅಪಕೀರ್ತಿ ಎಂಬ ದೂರಿಗೆ ಪಾತ್ರರಾಗಿ ನಾಶವನ್ನು ಹೊಂದದೆ ಇಲ್ಲ. ನನ್ನನ್ನು ಹೊಂದದೆ ಇದ್ದ ಶ್ರೀರಾಮಚಂದ್ರನು, ಭರತನೂ ರಾಜ್ಯ ಪಟ್ಟಾಭಿಷೇಕದ ವಿಷಯದಲ್ಲಿ ಎಷ್ಟು ಉದಾರಚರಿತೆಯನ್ನು ಹೊಂದಿದ್ದರೋ ಅಷ್ಟು ಲೋಕಪೂಜ್ಯರಾಗಲಿಲ್ಲವೆ? ಗೌತಮನು ಲೋಕೋಪಕಾರಕ್ಕಾಗಿ ನನ್ನನ್ನು ದೂರೀಕರಿಸಿ ರಾಜ್ಯ, ಹೆಂಡತಿಮಕ್ಕಳು, ಸೌಭಾಗ್ಯಗಳನ್ನು ತೊರೆದುದರಿಂದಲ್ಲವೇ ಅವತಾರಪುರುಷನಾದ ಬುದ್ಧದೇವನಾದುದು? ಶಿಬಿನೃಪಾಲ, ದಧೀಚಿ, ಕರ್ಣಾದಿಗಳು ನನ್ನ ಸುಳಿವನ್ನು ಸಹ ಸಹಿಸದೆಹೋದುದರಿಂದಲ್ಲವೇ ಪರೋಪಕಾರಕ್ಕಾಗಿ ದೇಹಾಭಿಮಾನವನ್ನು ಸಹ ತೊರೆದು ನಶ್ವರವಾದ ಈ ಶರೀರವನ್ನು ಕಳೆದುಕೊಂಡರೂ ಯಶಃಕಾಯದಿಂದ ಸ್ಥಿರವಾಗಿ ನಿಂತಿರುವುದು? ಇದನ್ನೆಲ್ಲಾ ಯೋಚಿಸಿ ನೋಡಿರಿ. ನನ್ನ ವಿಚಾರವನ್ನೇನೋ ನಿಮಗೆ ತಿಳಿಸಿರುವೆನು. ನನಗಧೀನರಾಗಿ ನನ್ನ ಸ್ವೇಚ್ಛಾಚಾರಗಳಿಗೆ ಪ್ರೋತ್ಸಾಹಿಸಿ ದಯಾಶೂನ್ಯರಾಗಿ, ಪ್ರಪಂಚಭ್ರಾಮಕಕ್ಕೆ ಗುರಿಯಾಗಿ ಅಪಯಶಸ್ಸನ್ನು ಹೊಂದುವಿರೋ? ನನ್ನನ್ನು ದೂರೀಕರಿಸಿ ಈ ದೇಹವೂ, ಐಶ್ವರ್ಯವೂ, ಅಧಿಕಾರವೂ ಶಾಶ್ವತವೆಂದು ಮೆರೆಯದೆ "ಪರೋಪಕಾರಾಯಮಿದಂ ಶರೀರಂ" ಎಂಬಂತೆ ದೀನರಿಗೆ ನಿಮ್ಮ ತನು, ಮನ, ಧನಗಳನ್ನಿತ್ತು ಯಶೋವಂತರಾಗುವಿರೋ? ಈಶ್ವರೇಚ್ಛೆಯಿಂದ ನಿಮಗುಂಟಾಗಿರುವ ಬಲವೂ, ಅಧಿಕಾರವೂ, ಸಂಪತ್ತೂ, ಆಯುಸ್ಸೂ ಪರೋಪಕಾರಕ್ಕೆಂದೇ ಭಾವಿಸುತ್ತೀರೋ? ನಿಮ್ಮ ಸ್ವಂತ ಸುಖ ಮತ್ತು ಸ್ವೇಚ್ಛಾಚಾರಗಳಿಗೂ ಸ್ವಾಭಿಮಾನವನ್ನು ಹೆಚ್ಚಿಸುವ ಲೋಕೋಪಕಾರವೆಂದು ತೋರ್ಪಡಿಸುವ ಕಪಟಕಾರ್ಯಗಳಿಗೂ ಉಪಯೋಗವಾಗತಕ್ಕದ್ದೆಂದು ಭಾವಿಸುತ್ತೀರೋ? ಇದನ್ನು ನಿಮ್ಮಗಳ ಆಲೋಚನೆಗೆ ಬಿಟ್ಟಿರುತ್ತೇನೆ. ಸಾರಿ ಕೆಡೆಂದರೆ ದೋಷವಿಲ್ಲೆಂಬುವ ನಾಣ್ಣುಡಿಯಂತೆ ನನ್ನ ನಿಜಸ್ಥಿತಿಯನ್ನೇನೋ ನಾನು ತಿಳುಹಿಸಿರುತ್ತೇನೆ. ನನ್ನ ಕಾರ್ಯವನ್ನೇನೋ ನಾನು ಮಾಡುತ್ತೇನೆ. ಆದ್ದರಿಂದ ನನ್ನಮೇಲೆ ದೋಷವಿಲ್ಲ. ನಾನೇನೋ ನನ್ನ ಪ್ರಭುವಿನ ಆಜ್ಞೆಯಂತೆ ಕಾರ್ಯವನ್ನು ಮಾಡಿ ಹೆಸರುಪಡೆಯಲೇಬೇಕಾಗಿದೆ. ನನ್ನ ವಿಚಾರವಾಗಿ ಇರುವ ಆರ್ಯೋಕ್ತಿ,—

ಲೋಭಃ ಪ್ರಜ್ಞಾ ನಮಾಹಂತಿ | ಪ್ರಜ್ಞಾ ಹಂತಿಹತಾ ಹ್ರಿಯಃ ||
ಹ್ರೀಹಂತಿಬಾಧತೇಧರ್ಮಂ | ಧರ್ಮೋಹಂತ ಹತಃ ಶ್ರಿಯಃ ||

ಬಿ. ಯಸ್. ಶಂಕರಯ್ಯ, ಅಸಿಸ್ಟೆಂಟ್‍ಮಾಸ್ಟರ್,
ಇನ್. ಕಂ. ಮಿಡಲ್‍ಸ್ಕೂಲ್.
ಅನಗೋಡು, ಜಗಳೂರು ತಾಲ್ಲೂಕು.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು.

ಲಗ್ನ ಮೊದಲಾದಕಾರ್ಯಗಳಲ್ಲಿ ಫಂಡಿಗೆ ಬಂದಿರತಕ್ಕ ಹಣದತಪಸೀಲು.—

ಮು|| ಗಳಾದ 1. ಹಾಸನದ ತಾ|| ಯಸಳೂರುಪೇಟೆ ಪಟ್ಟಣಶೆಟ್ಟಿ ನಂಜುಂಡಪ್ಪನವರ ಮೂಲಕ ಅರಸೀಕೆರೆ ತಾ|| ಸರಾಫ್ ಜಿ. ತ್ರಿಯಂಬಕಯ್ಯನವರ ಅಣ್ಣಂದಿರು ಜಿ. ಶಿದ್ಧಲಿಂಗಯ್ಯನವರ ಪುತ್ರ ಜಿ. ಯಸ್. ಬಸವರಾಜಯ್ಯನಿಗೂ ಯಸಳೂರು ಕೊಣಹಳ್ಳಿ ನಂಜಪ್ಪಶೆಟ್ಟರ ಪುತ್ರಿ ಸೌ|| ನಂಜಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 5 ರೂ. 2. ಹಾಸನದ ಹುಣಿಸೇಮರದ ಮಠದ ಶ್ರೀಕಂಠಯ್ಯನವರ ಮಗಳು ಬಸಮ್ಮನಿಗೂ ಸಕಲೇಶಪುರದಲ್ಲಿರುವ ಮುಗಳೂರು ಮಠದ ಚನ್ನಬಸಯ್ಯನವರ ಮಗ ಬಸಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 3 ರೂ., ಮತ್ತು ಸದರಿ ಹಾಸನದ ಹಿರಾಳು ರುದ್ರಪ್ಪನವರ ಮಗಳು ಸೌ|| ಶಾಂತಮ್ಮನಿಗೂ ಚನ್ನರಾಯಪಟ್ಟಣದಲ್ಲಿರುವ ಗೋಸುವಾಳದ ಲಿಂಗಪ್ಪನವರ ಮಗ ಬುಶೆಟ್ಟಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 8 ರೂ. ಕೇಣಿ ಮಹದೇವಪ್ಪನವರ ಮೂಲಕ ಒಟ್ಟು 11 ರೂ. 3. ನೆಲಮಂಗಲದ ತಾ|| ಚಿಕ್ಕನಹಳ್ಳಿಯಲ್ಲಿರುವ ಮುಗಳ್ಳಿ ಮಠದ ರೇವಣ್ಣಯ್ಯನವರ ಮಗ ಸಿದ್ಧಪ್ಪನವರ ಮನೆಯಲ್ಲಿ ದೊಮ್ಮಸಂದ್ರದ ಮಲ್ಲಶೆಟ್ಟಪ್ಪನವರ ಕುಮಾರ್ತಿ ಪುಟ್ಟರುದ್ರಮ್ಮನಿಗೂ ನಿಜಗಲ್ ಮಠದ ವೀರಪ್ಪಶಾಸ್ತ್ರಿಗಳಿಗೂ ನಡೆದ ಲಗ್ನದಲ್ಲಿ ಮಲ್ಲಶೆಟ್ಟಪ್ಪನವರ ಮೂಲಕ 3 ರೂ. 4. ಬೆಂಗಳೂರು ಬಳ್ಳಾಪುರದಪೇಟೆ ಕಂಟ್ರಾಕ್ಟರ್ ಯಂ. ನಾಗಪ್ಪನವರ ಮೊಮ್ಮಗಳಿಗೂ ಹಲಸೂರು ಯಜಮಾನ್ ಕಾಳಪ್ಪನವರ ಮಗನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 30 ರೂ. ಮತ್ತು ಚಾಮರಾಜಪೇಟೆ ಮಂಡಿ ಅಯ್ಯಣ್ಣನವರ ಮನೆಯಲ್ಲಿ ನಡೆದ ಲಗ್ನದಲ್ಲಿ 5 ರೂ. ಒಟ್ಟು ಅರಳೆಪೇಟೆ ದೇಶದ ಯಜಮಾನ್ ಬಸಪ್ಪನವರ ಮೂಲಕ 35 ರೂ. 5. ಬೆಂಗಳೂರು ಅಕ್ಕಿಪೇಟೆಯಲ್ಲಿರುವ ಪಂಡಿತ ಬಸವಲಿಂಗಪ್ಪನವರು ಶ್ರೀ ಜಗದ್ಗುರುಮುರುಘರಾಜೇಂದ್ರಮಹಾಸ್ವಾಮಿಗಳವರ ಹೆಸರಿನಮೇಲೆ ಫಂಡಿಗೆ ಕೊಟ್ಟಿರುವುದು 4 ರೂ. 6. ನೆಲಮಂಗಲದ ತಾ|| ಪಟೇಲ್ ಕಾಳಪ್ಪನವರ ಮನೆಯಲ್ಲಿ ನಡೆದ ಅವರ ಮೊಮ್ಮಗ ಪುಟ್ಟರುದ್ರಪ್ಪನ ಲಗ್ನದಲ್ಲಿ ವಧೂವರರಿಂದ 10 ರೂ. ಮತ್ತು ಕ್ಲೋಸ್‍ಪೇಟೆ ತಾ|| ಸುಗ್ಗನಹಳ್ಳಿ ಲಿಂಗಪ್ಪನವರ ಮನೆಯಲ್ಲಿ ಗೋಣಿಪುರದ ಲಿಂಗಪ್ಪನವರ ಪುತ್ರ ವೀರಪ್ಪನಿಗೂ ಕೆಂಬಣ್ಣನವರ ಪುತ್ರಿ ಸೌ|| ಶಂಕರಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರಿಂದ 5 ರೂ. ಜುಮ್ಲಾ ಚಾಮರಾಜಪೇಟೆ ಮಂಡಿ ಎನ್. ಬಶೆಟ್ಟಪ್ಪನವರ ಮೂಲಕ 15 ರೂ. 7. ಮೈಸೂರು ಡಿ|| ಪೋ|| ಸೂಪರಿಂಟೆಂಡೆಂಟ್ ಕೆ. ಶಿದ್ಧರಾಮಪ್ಪನವರ ಕೆ. ಶಿವಪ್ಪನವರ ಜ್ಯೇಷ್ಠಪುತ್ರ ಲಿಂಗಪ್ಪನಿಗೂ ತಿಬಟೂರು ಮಂಡಿ ತಮ್ಮಯ್ಯನವರ ಪುತ್ರಿ ಸೌ|| ಪಾರ್ವತಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ಜಿ. ಗಂಗಪ್ಪನವರ ಮೂಲಕ 10 ರೂ. 8. ಬೌರಿಂಗ್ ಪೇಟೆ ಚನ್ನಬಸಪ್ಪನವರ (M. R. A.) ಪುತ್ರಿಯ ಲಗ್ನದಲ್ಲಿ ಸ್ಕೂಲ್ ಮಾಸ್ಟರ್ ರಾಚಪ್ಪನವರ ಮೂಲಕ 10 ರೂ. 9. ದೊಡ್ಡಬಳ್ಳಾಪುರದ ಚನ್ನವೀರಪ್ಪನವರ ಮಗಳ ಲಗ್ನದಲ್ಲಿ ಪಿ. ಯಂ. ಬಸಪ್ಪನವರ ಮೂಲಕ 2 ರೂ. 10. ಮಾಗಡಿ ತಾ|| ಸೋಲೂರು ಮುದ್ದನಂಜಪ್ಪನವರ ಮಗ ಸಿದ್ಧಲಿಂಗಪ್ಪನವರಿಗೂ ಅರಿಶಿನಗುಂಟೆ ನಂಜೇದೇವರ ಮಗಳು ಸೌ|| ಗುರುನಂಜಮ್ಮನಿಗೂ ನಡೆದ ಲಗ್ನದಲ್ಲಿ ಬೆಂಗಳೂರು ಅಕ್ಕಿಪೇಟೆ ಟಿ. ಎಸ್. ಅಡವಿಯಪ್ಪನವರ ಮೂಲಕ 1 ರೂ. 11. ಬಿಡದಿ ಜವಳಿಅಂಗಡಿ ವೀರಭದ್ರಪ್ಪನವರ ಕುಮಾರ್ತಿ ಸೌ|| ಶಿವರುದ್ರಮ್ಮನಿಗೂ ಮಾಗಡಿ ಸರಾಫ್ ಪುಟ್ಟಸ್ವಾಮಪ್ಪನವರ ಮಗ ಮುದ್ದವೀರಶೆಟ್ಟಿಗೂ ನಡೆದ ಲಗ್ನದಲ್ಲಿ ಬೆಂಗಳೂರು ಹಳೇ ತರಗುಮಂಡಿ ಬಾಣಾವರದ ಫಾಲನೇತ್ರಪ್ಪನವರ ಮೂಲಕ 3 ರೂ. 12. ಆನೇಕಲ್ ತಾ|| ಸರ್ಜಾಪುರದ ಬೈಲಪ್ಪನವರ ಮಗಳು ಸೌ|| ಪಾರ್ವತಮ್ಮನಿಗೂ ತುಮಕೂರು ಟಿ. ಗುರುನಂಜಯ್ಯ, ಬಿ.ಎ., ಬಿ.ಎಲ್., ರವರಿಗೂ ನಡೆದ ಲಗ್ನದಲ್ಲಿ ವರನಕಡೆಯಿಂದ 5 ರೂ. ವಧುವಿನಕಡೆಯಿಂದ 3 ರೂ. ಮತ್ತು ಟಿ. ರಾಚಪ್ಪನವರ ದಕ್ಷಿಣೆ 4 ಆಣೆ ಸೇರಿ ಜುಮ್ಲಾ ಬೆಂಗಳೂರು ಚಾಮರಾಜಪೇಟೆ ಕಂಟ್ರಾಕ್ಟರ್ ಟಿ. ರಾಚಪ್ಪನವರ ಮೂಲಕ 8-4-0 ರೂ. ಒಟ್ಟು 107-4-0.

ಜಿ. ಪರಮಶಿವಯ್ಯ, ಸೆಕ್ರೆಟರಿ,
ಮೈ. ವೀ. ವಿದ್ಯಾಭಿವೃದ್ಧಿಫಂಡುಸಂಘ. ಬೆಂಗಳೂರು.

೧೯೨೬ನೆಯ ಇಸವಿ ಸೆಪ್ಟಂಬರ್ ತಾ|| ೪ರಿಂದ ೧೯೨೬ನೆಯ ಇಸವಿ ಸೆಪ್ಟಂಬರ್ ತಾ|| ೧೦ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಶ್ರಾವಣ ಬಹುಳ ತ್ರಯೋದಶಿಯಿಂದ ಭಾದ್ರಪದ ಶುದ್ಧ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಮಾಸ
4	[1]ಶನಿ	ತ್ರಯೋ	57-46	ಪುಷ್ಯ	19-53	19
5	ಭಾನು	ಚತು	60	ಆಶ್ಲೇ	25-26	20
6	[2]ಸೋಮ	ಚತು	2-47	ಮಖಾ	31-40	21
7	[3]ಮಂಗಳ	ಅಮಾ	7-50	ಪುಬ್ಬ	38-19	22
8	ಬುಧ	ಪಾಡ್ಯ	13-2	ಉತ್ತ	44-48	23
9	[4]ಗುರು	ಬಿದಿ	17-47	ಹಸ್ತ	50-45	24
10	[5]ಶುಕ್ರ	ತದಿ	21-53	ಚಿತ್ತ	55-53	25

(1) ಶ್ರಾವಣಶನಿವಾರ. (2) ಸರ್ವತ್ರಾಮಾವಾಸ್ಯೆ. (3) ಮಂಗಳಗೌರೀವ್ರತಂ. (4) ಸಾಮಗೋಪಾಕರ್ಮ, ಮಳೆನಕ್ಷತ್ರ-ಪುಬ್ಬ ಆನೆಯುವಾಹನ. (5) ಸ್ವರ್ಣಗೌರೀವ್ರತಂ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಷರಾಜಮಂಡಲಹಿತೈಷಾ | ಘನಪಕ್ಷಕೃತಾವನಾರಾ ಪಕ್ಕಜನಕ್ಷತ್ರ ಮೋಹರಾಜೇಜೂಷ್ |
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ಭಕ್ತಮಾಲಾಕುಲಂ | ಪ್ರೇಮಂಚಿತ್ತಶಿಯಂಸದಾಪುರರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಸೆಪ್ಟಂಬರ್ ತಾರೀಖು ೧೮ ನೆಯ ಶನಿವಾರ. [ಸಂಚಿಕೆ ೩೮

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯು ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೦ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮಕಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಕೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ನಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂಡು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮುಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೦ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತೀಕಮಾಸದವರೆಗೆ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—8] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

SIROMANY NARAYANACHARYA & CO.,
BENARES CITY.

S.U.N.& CO.
BENARES CITY

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಘಂಟೆ, ನಾರ್ಮದೇಶ್ವರಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—9]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿತ್ಥ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೇಣೆ ಪುಣಸಟ್ಟು ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ಬರೆಯ ಬೇಕೆ ಆಡಿಯಾರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—47] ಪೋ. ಬಾ. ೩೧೦, ಮದರಾಸು.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣವಾಗದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಪ್ಲೂಯೆಂಜಾ
ಪ್ಲೇಗುಜ್ವರ

SREE SITHARAMA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ
ರೋಗಗಳನ್ನು
ಗುಣಪಡಿಸುತ್ತವೆ.

35

ಗರ್ಭಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಜಾಹೀರ್ ಸೂಚನೆ.

ವೀರಶೈವವಿದ್ಯಾವರ್ಧಕಫಂಡ್‍ಸಂಘ, ದಾವಣಗೆರೆ.

I. ದಾವಣಗೆರೆಯಲ್ಲಿ ಕಟ್ಟಲ್ಪಡುವ ಚಿಗಟೇರಿ ಹಲ್ಲಾರಾಚಪ್ಪನವರ ಹಾಸ್ಟಲ್ ಕಟ್ಟಡದ ಕೆಲಸವು 1926-27 ನೆ ಸಾಲ್ ಲಾಗಾಯಿತು ಮೂರು ವರ್ಷಗಳಲ್ಲಿ ಕಟ್ಟಿ ಪೂರೈಸತಕ್ಕದ್ದಿರುತ್ತೆ. ಕಂಟ್ರಾಕ್ಟರುಗಳು ತಮ್ಮ ಟೆಂಡರುಗಳನ್ನು ದಾವಣಗೆರೆ ವೀರಶೈವವಿದ್ಯಾವರ್ಧಕಫಂಡ್‍ಸಂಘದ ಪ್ರೆಸಿಡೆಂಟರವರ ಆಫೀಸಿಗೆ 1926 ನೇ ಅಕ್ಟೋಬರ್ 15 ನೇ ತಾರೀಖಿನೊಳಗಾಗಿ ಕಳುಹಿಸತಕ್ಕದ್ದು.

II. ಕಟ್ಟಡಕೆಲಸದ ತಪಶೀಲ್, ಪರಿಮಾಣ ಮತ್ತು ನಿಬಂಧನೆಗಳು ವಗೈರೆ ಅಪೇಕ್ಷಿಸತಕ್ಕವರು ಕೆಳಗಿನ ಅಡ್ರೆಸ್ಸಿಗೆ ಒಂದಾಣೆ ಪೋಸ್ಟು ಸ್ಟಾಂಪು ಕಳುಹಿಸಿದಲ್ಲಿ ತಪಶೀಲ್ ಫಾರಂ ಕಳುಹಿಸಲಾಗುತ್ತೆ.

III. ಹೆಚ್ಚು ಮಾಹಿತಿಗಳನ್ನು ತಿಳಿಯಬೇಕೆಂದಿರುವವರು ಖುದ್ದು ಬಂದು ಕಾಣಬಹುದು.

(Sd.) ಶಿರುಕಪ್ಪನವರ ಮಠದ ಮಹಾಲಿಂಗಪ್ಪ,
PRESIDENT,
The Davangere Veerasaiva
Vidyavardhaka Fund Sangha, Davangere.

ನೋಟೀಸ್.

ದಾವಣಗೆರೆ ಟರ್ರವಾಸಿಗಳಾದ ರಾಜನಹಳ್ಳಿ ಗಂಗಪ್ಪನವರ ಮಕ್ಕಳು ಗೋವಿಂದಪ್ಪ, ಕೃಷ್ಣಪ್ಪ, ವೆಂಕಟಸೆಟ್ಟಿ ಇವರು ಪ್ರಸಿದ್ಧಪಡಿಸಿರುವ ನೋಟೀಸು ಯಾನೆ ಇಸ್ತಿಹಾರು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಮ|| ಅನಂತಸೆಟ್ಟಿ ಯಾನೆ ಆರ್. ಜಿ. ಅನಂತಗುಪ್ತ ಎಂಬ ಹೆಸರುಳ್ಳ ಒಬ್ಬ ತಮ್ಮನು ನಮಗೆ ಇರುತ್ತಾನೆ. ಈತನು ತಕ್ಕಮಟ್ಟಿಗೆ ಇಂಗ್ಲೀಷು ಕಲಿತು ಈಚಿಗೆ ಮೇಧಾಶಕ್ತಿಯಲ್ಲಿ ಸ್ವಲ್ಪ ವ್ಯತ್ಯಸ್ತವಾಗಿ ನಮ್ಮಗಳ ಜೊತೆಯಲ್ಲಿ ವಾಸವಾಗಿರದೆ ಏನೊಂದು ಉದ್ಯೋಗವನ್ನು ಮಾಡದೇ ಮನೆಯಲ್ಲಿ ಸಹೋದರರ ಮಾತನ್ನು ಕೇಳದೆ ಸ್ವೇಚ್ಛೆಯಾಗಿ ತಿರುಗುತ್ತಿರುತ್ತಾನೆ. ನಾವುಗಳು ರಾಜನಹಳ್ಳಿ ಗೋವಿಂದಪ್ಪ ಅಂಡ್ ಬ್ರದರ್ಸ್ ಎಂಬ ಹೆಸರಿನಲ್ಲಿ ದಾವಣಗೆರೆಯಲ್ಲಿ ಇಟ್ಟಿರುವ ಅಂಗಡಿಯಲ್ಲಿ ಈತನು ಯಾತ ತರಹದ ಕೆಲಸವನ್ನು ಮಾಡದೆ ಇರುತ್ತಾನೆ. ನಾವೆಲ್ಲರೂ ಒಟ್ಟು ಕುಟುಂಬದಲ್ಲಿರುತ್ತೇವೆ. ಈತನಿಗೆ ಕುಟುಂಬದ ಮ್ಯಾನೇಜುಮೆಂಟ್ ವಿಷಯದಲ್ಲಿಯಾಗಲಿ ಅಂಗಡಿಯ ಯಾವತರಹದ ಮ್ಯಾನೇಜುಮೆಂಟ್ ವಿಷಯದಲ್ಲಿಯಾಗಲಿ ಕುಟುಂಬದ ಮತ್ತು ಅಂಗಡಿಯ ಲೇಣಿದೇಣಿಗಳ ಸಂಬಂಧದಲ್ಲಿಯಾಗಲಿ ಯಾವ ಅಧಿಕಾರವು ಜವಾಬುದಾರಿಯೂ ಇರುವುದಿಲ್ಲ. ಕುಟುಂಬಕ್ಕೆ ಅಂಗಡಿಗೆ ಬೇಕಾದ ಮಾಲುಗಳು ಸಾಮಾನುಗಳು ಯಾವುದನ್ನು ತರಲು ಕೊಡಲು ಅಧಿಕಾರವಿರುವುದಿಲ್ಲ. ಈತನು ಕುಟುಂಬದ ಆದೇಶಕ್ಕೆ ಯಾವತರಹದ ಲೇಣಿಯನ್ನು ಮಾಡಬೇಕಾದ ಅಗತ್ಯವಿರುವುದಿಲ್ಲ. ಇದುವರೆಗೆ ಸಾಲಮಾಡಿದ್ದಾಗ್ಯೂ ಅದು ಕುಟುಂಬದ ಉಪಯೋಗಕ್ಕೆ ಮತ್ತು ಅಂಗಡಿಯ ಮ್ಯಾನೇಜುಮೆಂಟಿಗೆ ಮಾಡಿದ್ದಲ್ಲ. ಈತನಿಗೆ ಯಾರು ಯಾವತರಹದ ಸಾಲವನ್ನು ಕೊಡತಕ್ಕದ್ದು ಅರೀತ ಈ ಮೊದಲೇ ಮಾಡಿರುವ ಲೇಣಿಗೆ ಮತ್ತು ಇನ್ನು ಮುಂದೆ ಮಾಡಬಹುದಾದ ಲೇಣಿಗೆ ಕುಟುಂಬದ ಇತರ ಮೆಂಬರುಗಳು ಜವಾಬ್ದಾರರಲ್ಲ ಮತ್ತು ಕುಟುಂಬದ ಆಸ್ತಿಯು ಆತನು ಮಾಡಿರುವ ಮಾಡುವ ಸಾಲಕ್ಕೆ ಒಳಪಡುವುದಿಲ್ಲ. ಈತನು ಅಂಗಡಿಗೋಸ್ಕರವಾಗಿ ಎಂಥ ಯಾವಮಾಲನ್ನು ಕಳುಹುವಂತೆ ಕೇಳುತ್ತಾನೋ ಅವುಗಳನ್ನು ಕಳಿಸಬೇಕಾದ್ದಿಲ್ಲ. ಒಂದುವೇಳೆ ಕಳಿಸಿದ್ದಲ್ಲಿ ಆತನ ಜವಾಬ್ದಾರಿಯೇ ವಿನಃ ಬಾಕಿಯವರ ಜವಾಬ್ದಾರಿ ಏನೂ ಇರುವುದಿಲ್ಲ. ಆತನಿಗೆ ಸ್ವಂತವಾದ ಆಸ್ತಿ ಏನೂ ಇರುವುದಿಲ್ಲ. ಕುಟುಂಬದ ಮತ್ತು ಅಂಗಡಿಯ ಮ್ಯಾನೇಜುಮೆಂಟು ಆದೇಶ ಎಲ್ಲಕ್ಕೂ ಈ ಕೆಳಗೆ ರುಜುಹಾಕಿರುವವರು ಜವಾಬ್ದಾರರಾಗಿರುತ್ತಾರೆ.

1. (Sd.) ರಾಜನಹಳ್ಳಿ ಗೋವಿಂದಪ್ಪ,
2. „ „ ಕೃಷ್ಣಪ್ಪ,
3. „ Rajanahalli Venkatasetty.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಸೆಪ್ಟಂಬರ್ ತಾ|| ೧೮ ನೆಯ ಶನಿವಾರ.

THE DEWAN'S TOUR IN TUMKUR.

The tour of the Dewan in the District of Tumkur is bound to be productive of much good. He would be coming in direct contact with the people and getting to know their needs in person. Mr. Mirza M. Ismail is one of the most accessable of Dewans we have had and there should be no reluctance on the part of the people to approach the Dewan frankly with their grievances, unless, of course, the officials were to be too much in the forefront, as it sometimes happen in cases where they want to display their achievements. We do not at any rate expect Mr. K. V. Anantaraman to come in between the Dewan and the people except when absolutely necessary. On the 15th instant the Dewan received the address of the Tumkur Municipal Council, to which he has given a suitable reply. On the 16th instant he opened the Women's Hospital at Tumkur. Referring to the needs of the Tumkur Town, the Dewan spoke of the completion of the water supply scheme which has been delayed owing to the want of pipes which were in the course of being manufactured by the Iron Works and the possibility of the supply of Electricity to Tumkur provided the Municipal Council guaranteed a gross revenue of Rs. 48,000 per annum. He also promised them an Intermediate College from next year. He laid special emphasis on the town improvement and quoted at length from an English journal with regard to the same, where the modern idea of a *whole* city being made beautiful and the meanesses and squalors being done away with are beautifully expressed. He called upon them to aim at a lovelier Tumkur for, in his words, the cities were really made by the good citizenship, the comradeship, the neighbourliness, the vision, sympathy and high purpose of the citizens themselves. This is indeed a great demand, though simple enough, on our citizens. For one thing, our society is very peculiarly constituted, where each community is self-centred which does not admit of much vision. For another, there is not the necessary enlightenment among the masses, which is the condition precedent for a proper living. There is yet another factor which in a way makes the realisation of the ideal a bit difficult, and that is the poverty of the people. With the spread of education among the people and greater economic prosperity among them we are sure we can hasten more speedily towards the ideal which the Dewan holds before us.

ವೀರಶೈವಮಹಾಸಭೆ.

ನಾವು ಹಿಂದಣ ಸಂಚಿಕೆಯಲ್ಲಿ ತಿಳುಹಿದ್ದಂತೆ ಮಹಾಸಭಾಚಿರಸ್ಥಾಯಿಫಂಡಿನ ಕಾರ್ಯನಿರ್ವಾಹಕಸಂಘದವರು ಕಳೆದ ತಾ|| 2 ನೇ ಗುರುವಾರ ಸರ್ ಕೆ.ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದು ಹುಬ್ಬಳ್ಳಿಯಲ್ಲಿ ಮಹಾಸಭೆಯನ್ನು ಬರುವ ಡಿಶೆಂಬರ್ ತಿಂಗಳಲ್ಲಿ ನಡೆಯಿಸುವುದರ ವೆಚ್ಚಕ್ಕಾಗಿ 4,000 ರೂಪಾಯಿಗಳನ್ನು ಕೊಡಲು ನಿರ್ಧರಿಸಿರುವುದಾಗಿ ಹುಬ್ಬಳ್ಳಿಯ ವೀರಶೈವಮಹಾಜನಸಭಾಧ್ಯಕ್ಷರಿಗೆ ಬರೆದಿರುವ ಲೇಖವು ಈ ಪತ್ರಿಕೆಯ ಬೇರೊಂದು ಭಾಗದಲ್ಲಿ ಪ್ರಕಟಿತವಾಗಿರುತ್ತದೆ. ಚಿರಸ್ಥಾಯಿಫಂಡಿನ ಕಾರ್ಯನಿರ್ವಾಹಕಸಂಘದವರು ಹುಬ್ಬಳ್ಳಿಯ ವೀರಶೈವಬಂಧುಗಳ ಸಹಾಯಾಪೇಕ್ಷೆಯಂತೆ 4,000 ರೂ. ಗಳನ್ನು ಕೊಡಲೊಪ್ಪಿ ಗತಪ್ರಾಣವಾಗಿದ್ದ ಮಹಾಸಭೆಯ ಪುನರುಜ್ಜೀವನಕ್ಕೆ ಅವಕಾಶವನ್ನುಂಟುಮಾಡಿಕೊಟ್ಟುದು ಅವರ ಇಂಗಿತಜ್ಞತೆಯನ್ನು ವ್ಯಕ್ತಪಡಿಸುತ್ತದೆ. ಇನ್ನು ಹುಬ್ಬಳ್ಳಿಯ ವೀರಶೈವರು ತಮ್ಮ ಸ್ಥಳ ಮತ್ತು ಕಾಲಪರಿಸ್ಥಿತಿಗಳಿಗನುಗುಣವಾಗಿ ಮಹಾಸಭೆಯನ್ನು ಸಮುಚಿತವಾಗಿ ನಡೆಯಿಸಲು ಚಂದಾಹಣವನ್ನೆತ್ತಲು ತಕ್ಕ ಪ್ರಯತ್ನವನ್ನು ಮಾಡಿ ಕಾರ್ಯನಿರ್ವಾಹಕ ಮತ್ತು ಸ್ವಾಗತಸಂಘಗಳನ್ನು ಸಕಲಗುಣಸಂಪನ್ನರಾದ ದೊಡ್ಡಮನುಷ್ಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿಕೊಂಡು ಮಹಾಸಭೆಯು ನಡೆಯಬೇಕಾದ ಕಾಲವನ್ನು ಮತ್ತು ಸಭೆಯಲ್ಲಿ ಯಾವ ಪಕ್ಷಪಾತತೆಗೂ, ವಾದವಿವಾದಗಳಿಗೂ, ಘರ್ಷಣೆಗೂ, ಮನಸ್ತಾಪಗಳಿಗೂ ಲೇಶಮಾತ್ರವೂ ಎಡೆಗೊಡದೆ ಸರ್ವಸಮಂಜಸವಾಗಿ ಪರ್ಯಾಲೋಚಿಸಿ ನಿರ್ಧರಿಸಬಹುದಾದ ಸಮಾಜಾಭಿವೃದ್ಧಿಕಾರಕ ವಿಷಯಗಳನ್ನು ಗೊತ್ತುಮಾಡುವವರಾಗಬೇಕು. ಅಲ್ಲದೆ ಮಹಾಸಭೆಯು ಇನ್ನು ಮುಂದೆ ಪ್ರತಿವರ್ಷದಲ್ಲೂ ತಪ್ಪದೆ ನಿರ್ವಿಘ್ನವಾಗಿ ನಡೆಯಲು ತಕ್ಕ ವಿಧಿವಿಧಾನಗಳನ್ನು ಮಾಡಬೇಕಾಗಿರುವುದರಿಂದ ದೂರದರ್ಶಿಗಳೂ, ಮಹಾಸಭಾಚಾಲನಸಮರ್ಥರೂ, ಗೌರವಪ್ರತಿಷ್ಠೆಯುಳ್ಳವರೂ ಆದ ವೀರಶೈವ ದೊಡ್ಡಮನುಷ್ಯರನ್ನು ಅಧ್ಯಕ್ಷರನ್ನಾಗಿ ಆರಿಸುವ ವಿಚಾರದಲ್ಲಿ ಎಲ್ಲ ದೇಶದ ವೀರಶೈವ ಪ್ರಮುಖರ ಅಭಿಪ್ರಾಯವನ್ನು ತೆಗೆದುಕೊಳ್ಳುವವರಾಗಬೇಕು. ಹಾಗಲ್ಲದೆ ದಾಕ್ಷಿಣ್ಯಾದಿಗಳಿಗೆ ವಶರಾಗಿ ಬಹುಜನಾಭಿಪ್ರಾಯವನ್ನು ಲಕ್ಷಿಸದೆ ಸ್ವತಂತ್ರಿಸಿ ನಡೆಯುವುದಾದಲ್ಲಿ ಬೀರೂರಿನ ಅನುಭವವನ್ನು ಸ್ಮರಿಸಿಕೊಳ್ಳಬೇಕಾಗಿ ಬಂದೀತು. ಆದರೆ ಹುಬ್ಬಳ್ಳಿಯಲ್ಲಿ ಒಳ್ಳೇ ವಿದ್ಯಾವಂತರಾದ ನ್ಯಾಯವಾದಿಗಳೂ, ನ್ಯಾಯವಿಧಾಯಕಸಭೆಯ ಮೆಂಬರುಗಳೂ, ವಿಚಕ್ಷಣರಾದ ವರ್ತಕರುಗಳೂ, ಸಮಾಜೋದ್ಧಾರವೇ ಆತ್ಮೋದ್ಧಾರವೆಂದು ತಿಳಿದು ಅದಕ್ಕಾಗಿ ಪಾಟುಪಡುತ್ತಿರುವ ಶ್ರೀ ಮೂರುಸಾವಿರಮಠದ ಜಗದ್ಗುರು ಮಹಾಸ್ವಾಮಿಯವರೂ ಇರುವುದರಿಂದ ಯಾವ ವಿಪರ್ಯಾಸಕ್ಕೂ ಅವಕಾಶವಿಲ್ಲದೆ ಮಹಾಸಭಾಕಾರ್ಯವು ಜಯಪ್ರದವಾಗಿ ನಡೆದು ಹುಬ್ಬಳ್ಳಿಯ ನಮ್ಮ ವೀರಶೈವಬಂಧುಗಳಿಗೆ ಕೀರ್ತಿಗೌರವಗಳು ಬರುವುವೆನ್ನುವುದರಲ್ಲಿ ಸಂದೇಹವಿಲ್ಲವು, ಮತ್ತು ಆ ರೀತಿ ಅನುಗ್ರಹಿಸಲೆಂದು ಸಕಲ ಇಷ್ಟಾರ್ಥಸಿದ್ಧಿದಾಯಕನಾದ ಪರಶಿವನನ್ನು ಪ್ರಾರ್ಥಿಸುತ್ತೇವೆ.

ಹುಬ್ಬಳ್ಳಿಯ ಲೋಕಮತಪತ್ರಿಕೆಯು ವೀರಶೈವಮಹಾಸಭಾವಿಚಾರವಾಗಿ ಬರೆದಿರುವ ತನ್ನ ಅಗ್ರಲೇಖದಲ್ಲಿ " ಈ ಮಧ್ಯದಲ್ಲಿ ಹುಬ್ಬಳ್ಳಿಯವರು 10,000 ರೂ. ಗಳ ಧನಸಹಾಯವನ್ನು ಚಿರಸ್ಥಾಯಿಫಂಡಿನಿಂದ ಕೇಳಿದುದು ಅಯೋಗ್ಯವೂ, ವ್ಯಸನಕರವೂ ಎಂದು ಚಂದ್ರೋದಯ ಮತ್ತು ಮೈಸೂರು ಸ್ಟಾರ್ ಪತ್ರಿಕಾಕರ್ತರು ಖಂಡಿಸಿ ಬರೆದಿರುವರು " ಎಂದು ಹೇಳಿರುತ್ತದೆ. ಆದರೆ ನಾವು ಆ ರೀತಿ ಖಂಡಿಸದೆ " ಹುಬ್ಬಳ್ಳಿಯ ವೀರಶೈವರು ಪರಸಾಹಾಯ್ಯಾಪೇಕ್ಷೆಯಿಲ್ಲದೆಯೇ ಮಹಾಸಭೆಯನ್ನು ಅಭೂತಪೂರ್ವವಾದ ವಿಜೃಂಭಣೆಯಿಂದ ನಡೆಯಿಸುವಷ್ಟು ಸಮರ್ಥರಾಗಿರುವರೆನ್ನುವುದರಲ್ಲಿ ಸಂದೇಹವಿಲ್ಲವಾದರೂ ಅಷ್ಟು ಹೆಚ್ಚು ದ್ರವ್ಯಸಹಾಯವನ್ನು ಚಿರಸ್ಥಾಯಿಫಂಡಿನಿಂದ ಅಪೇಕ್ಷಿಸಿರುವುದರ ಕಾರಣವೇನಿರಬಹುದೆಂಬುದನ್ನು ಊಹಿಸಿಹೇಳಲು ಸಾಧ್ಯವಿಲ್ಲವೆಂದೂ, ಬಹುಕಾಲದಿಂದ ಎಲ್ಲಿಯೂ ನಡೆಯದೆ ನಿಂತಿರುವ ಮಹಾಸಭೆಯನ್ನು ಈಸಲ ಕೂಡಿಸಲು ಪ್ರಯತ್ನಿಸಿರುವ ಹುಬ್ಬಳ್ಳಿಯ ವೀರಶೈವಬಂಧುಗಳು ಹೆಚ್ಚು ದ್ರವ್ಯಸಹಾಯವನ್ನಪೇಕ್ಷಿಸಿರುವರೆಂಬ ಕಾರಣದಿಂದ ಅವರನ್ನು ನಿಂದಿಸಿ ನಿರುತ್ಸಾಹಿಗಳನ್ನಾಗಿ ಮಾಡುವುದರ ಬದಲು, ಅವರು ಇಂತಹ ಮಹಾಸಭೆಗಳನ್ನು ಕೂಡಿಸಲು ಸ್ವಸಮರ್ಥರಾಗಿರುವುದರಿಂದ ತಂತಮ್ಮಲ್ಲೇ ಚಂದಾಹಣವನ್ನೆತ್ತಿ ಸಾಲದುದಕ್ಕೆ ಚಿರಸ್ಥಾಯಿಫಂಡಿನ ಸಹಾಯವನ್ನಪೇಕ್ಷಿಸುವುದುತ್ತಮವೆಂದೂ ಸೂಚಿಸಿ ಸಭೆಯನ್ನು ಕೂಡಿಸಬೇಕೆಂಬ ತಮ್ಮ ಸಂಕಲ್ಪವನ್ನು ಸಾಧಿಸಿ ಅವರು ಕೃತಕೃತ್ಯರಾಗುವಂತೆ ಮಾಡುವುದು ಮಹಾಸಭಾಭಿಮಾನಿಯಾದ ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿರುತ್ತದೆ. ಹಾಗಲ್ಲದೆ ಮಹಾಸಭೆಯನ್ನು ನಡೆಯಿಸಲು ಪ್ರಯತ್ನಿಸುವವರನ್ನು ಯಾವುದಾದರೊಂದು ನೆಪದಿಂದ ಜರಿದು ನಿರುತ್ಸಾಹಗೊಳಿಸುವುದಾದರೆ ಮತ್ತಾರೂ ಈ ಕಾರ್ಯಕ್ಕೇ ಪ್ರವೇಶಿಸದೆ ಮಹಾಸಭೆಯು ಯಾವ ಸ್ಥಳದಲ್ಲಿಯೂ ಕೂಡಲಿಕ್ಕೆ ಅವಕಾಶವಿಲ್ಲದಂತಾಗಿ ಕಡೆಯಲ್ಲಿ ಅದು ನಾಮಾವಶೇಷವಾಗುವುದೆಂಬುದನ್ನು ವೀರಶೈವಬಂಧುಗಳು ಮರೆಯಬಾರದು " ಎಂದು ನಾವು ನಮ್ಮ ಕಳೆದ ಸಂಚಿಕೆಯ ಅಗ್ರಲೇಖದಲ್ಲಿ ಬರೆದಿರುತ್ತೇವೆ. ಇಂತಹುದರಲ್ಲಿ ಹುಬ್ಬಳ್ಳಿಯ ವೀರಶೈವರು 10,000 ರೂ. ಗಳ ಸಹಾಯವನ್ನಪೇಕ್ಷಿಸಿರುವುದು ಅಯೋಗ್ಯವೂ, ವ್ಯಸನಕರವೂ ಎಂದು ಸ್ಟಾರ್ ಪತ್ರಿಕೆಯೂ ಖಂಡಿಸಿರುತ್ತದೆಂದು ಹುಬ್ಬಳ್ಳಿಯ ಲೋಕಮತಪತ್ರಿಕೆಯು ಅಸಂಗತವಾಗಿ ಬರೆದಿರುವುದಕ್ಕೋಸ್ಕರ ನಾವು ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ದುರ್ಭರವಾದ ನೀರಿನ ಕಂದಾಯ.

ಕಳೆದ ಸೋಮವಾರ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಸ್ಪೆಷಲ್ ಮೀಟಿಂಗು ನಡೆದು ಕೆಲವಿಷಯಗಳು ಪರ್ಯಾಲೋಚಿಸಲ್ಪಟ್ಟುದರಲ್ಲಿ ರಾಜಧಾನಿಯ ಜನರಿಗೆ ಕುಡಿಯುವ ನೀರು ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯ ಕೃಪಾವಿಶೇಷದಿಂದ ಧರ್ಮಾರ್ಥವಾಗಿ ಒದಗಿಸಲ್ಪಡುವುದೆಂದು ಪ್ರಥಮತಃ ವಾಗ್ದಾನಮಾಡಲ್ಪಟ್ಟಮೇರೆಗೆ ಕೆಲಕಾಲದವರೆಗೂ ನಡೆಯಿಸಲ್ಪಡುತ್ತಿದ್ದು ಅನಂತರ ಕಂದಾಯವು ರಾಜಧಾನಿಯ ನಿವಾಸಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ವಿಧಿಸಲ್ಪಟ್ಟಿತು. ಆದರೂ ಸರ್ಕಾರದವರು ಅಷ್ಟಕ್ಕೇ ತೃಪ್ತರಾಗದೆ ಲಕ್ಷಾಂತರ ರೂಪಾಯಿಗಳು ವೆಚ್ಚವಾಗಿದ್ದಾಗ್ಯೂ ಸಾಕಾದಷ್ಟು ನೀರೊದಗುವುದಿಲ್ಲವಾದುದರಿಂದ ಇನ್ನೂ 3-4 ಲಕ್ಷ ರೂ. ಗಳ ಮೇಲೆಯೇ ವೆಚ್ಚವಾಗಬೇಕಾಗಿರುವ ಪ್ರಯುಕ್ತ ನಲ್ಲಿಯಿಡಲ್ಪಟ್ಟಿರುವ ಪ್ರತಿಯೊಂದು ಮನೆಗೂ ಯಾವ ವ್ಯತ್ಯಾಸವೂ ಇಲ್ಲದೆ ವರ್ಷವೊಂದಕ್ಕೆ 9 ರೂ. ನಂತೆ ಕಂದಾಯವು ವಿಧಿಸಲ್ಪಡಬೇಕೆಂದು ಹೊಸದಾಗಿ ಮಾಡಿರುವ ವಿಧಿಯಿಂದ ಜನರಿಗೆ ಮುಖ್ಯವಾಗಿ ಬಡವರಿಗೆ ಬಹಳ ತೊಂದರೆಯಾಗಿರುವ ಪ್ರಯುಕ್ತ 9 ರೂ. ಮನೆಗಂದಾಯ ಕೊಡತಕ್ಕವರು ನಿಗದಿಯಾದುದಕ್ಕಿಂತ ಹೆಚ್ಚಾಗುಪಯೋಗಿಸುವ ನೀರಿಗೆ ಹೆಚ್ಚು ಛಾರ್ಜನ್ನು ಕೊಡುವುದರ ವಿನಾ ಬೇರೆ ನೀರಿನ ಕಂದಾಯಕೊಡಬೇಕಾಗಿಲ್ಲದಿರುವಂತೆಯೇ ಮಾಡಿಸಿಕೊಡಬೇಕೆಂದೂ, ಒಂದುವೇಳೆ ಅದು ಸಾಧ್ಯವಲ್ಲದಿದ್ದಲ್ಲಿ ಕಂದಾಯದಾರರಿಗೆ ತೊಂದರೆಯೂ, ಸರ್ಕಾರಕ್ಕೆ ಹೆಚ್ಚುನಷ್ಟವೂ ಆಗದಂತೆ ಒಂದು ವಿಧಾನವನ್ನು ಕಂಡುಹಿಡಿಯಲು ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಕೆಲವರನ್ನೂ ನೀರನ್ನೊದಗಿಸುವ ಇಂಜನಿಯರ್ ಶಾಖಾಧಿಕಾರಿಗಳಲ್ಲಿ ಕೆಲವರನ್ನೂ ಒಳಗೊಂಡಿರುವ ಒಂದು ಕಮಿಟಿಯನ್ನೇರ್ಪಡಿಸಿ ಅವರಭಿಪ್ರಾಯದಂತೆ ನಡಿಸಬೇಕೆಂದೂ, ಅದುವರೆಗೆ ಈ 9 ರೂ. ಕಂದಾಯವನ್ನು ವಿಧಿಸದೆ ತಡೆಯಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ನಿರ್ಧರಿಸಲ್ಪಟ್ಟಿತು. ಇದಲ್ಲದೆ ಪೋಸ್ಟಲ್ ಪಾರ್ಸಲ್ ಮೂಲಕ ತರಿಸಲ್ಪಡುವ ಜವಳಿಗೆ ಸುಂಕವನ್ನು ವಿಧಿಸಕೂಡದೆಂದೂ ನಿರ್ಧರಿಸಲ್ಪಟ್ಟಿತು. ನೀರಿನ ಕಂದಾಯದ ವಿಚಾರವು ಕೌನ್ಸಿಲ್ ಮೀಟಿಂಗಿನಲ್ಲಿ ಚರ್ಚಿಸಲ್ಪಡುವಾಗ್ಗೆ, 5 ರೂ. ಮನೆಗಂದಾಯವಿರತಕ್ಕ ಮನೆಗಳಿಗೆ ನೀರಿನ ನಲ್ಲಿಯನ್ನಿಡಿಸಿಕೊಳ್ಳುವ ಸೌಲಭ್ಯವು ಕಲ್ಪಿಸಲ್ಪಟ್ಟುದರ ಮೇಲೆ 8 ಆಣೆ ಕಂದಾಯವಿರತಕ್ಕ ಮನೆಯವರು ಸಹಾ 5 ರೂ. ಮನೆಗಂದಾಯವನ್ನು ಕೊಡಲೊಪ್ಪಿ ನಲ್ಲಿಗಳನ್ನಿಡಿಸಿಕೊಂಡರು. ಈಗ ಅಂತಹವರೆಲ್ಲರೂ ತಾವಾಗಿ ಹೆಚ್ಚಿಸಿಕೊಂಡ 5 ರೂ. ಮತ್ತು ಸರ್ಕಾರದವರು ಹೊಸದಾಗಿ ವಿಧಿಸಲಿಕ್ಕಿರುವ 9 ರೂ. ಇದಲ್ಲದೆ ಜನರಲ್ ವಾಟರು ಮತ್ತು ಲೈಟ್ ಟ್ಯಾಕ್ಸ 4 ರೂ. ಒಟ್ಟು 18 ರೂ. ಗಳನ್ನು ಕೊಡಬೇಕಾಗುವುದು. ನೀರಿನ ಸೌಲಭ್ಯಕ್ಕಾಗಿ ನಲ್ಲಿಗಳನ್ನಿಡಿಸಿಕೊಂಡವರು 9 ರೂ. ಗಳನ್ನು ತಾವು ನಿತ್ಯಜೀವನವನ್ನು ಹೊರೆಯಲು ಕಷ್ಟವಾಗಿರುವ ಈ ಕಾಲದಲ್ಲಿ ಕೊಡಲಾರದೆ ಪೇಚಾಡುತ್ತಿರುವುದರಿಂದ 18 ರೂ. ಗಳನ್ನು ತೆರಲು ಸಾಧ್ಯವಿಲ್ಲದೆ ನಲ್ಲಿಯನ್ನೇ ತೆಗೆಸಿಬಿಟ್ಟು ತಂತಮ್ಮ ಮನೆಕಂದಾಯವನ್ನು ಪುನಃ ವಿಮರ್ಶೆ ಮಾಡಿಸಿ ಬಾಡಿಗೆಯ ದರದಮೇಲೆ ಕಂದಾಯವನ್ನು ವಿಧಿಸಬೇಕೆಂದು ಪ್ರಯತ್ನಪಡುವುದಾದರೆ ಮನೆಗಂದಾಯವು ಒಂದಕ್ಕೆರಡರಷ್ಟೋ ನಾಲ್ಕರಷ್ಟೋ ಕಡಿಮೆಯಾಗಿ ಮ್ಯುನಿಸಿಪಾಲಿಟಿಗೆ ಬಹಳ ನಷ್ಟಸಂಭವಿಸುತ್ತದೆ ಮತ್ತು ಸರ್ಕಾರದವರು ಹೆಚ್ಚು ನೀರನ್ನೊದಗಿಸಲು ಮಾಡಬೇಕಾಗಿರುವ 3-4 ಲಕ್ಷ ರೂ. ಗಳೆಲ್ಲವೂ ಅವರ ಮೇಲೆಯೇ ಬೀಳುತ್ತದೆ. ಆದುದರಿಂದ ಮ್ಯುನಿಸಿಪಾಲಿಟಿಯವರೂ ಸರ್ಕಾರದವರೂ ಮೇಲ್ಕಂಡ ಸಾಧಕಬಾಧಕವಿಚಾರಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ, ರಾಜಧಾನಿಯಲ್ಲಿ ವಾಸಮಾಡುತ್ತೇವೆಂಬ ದೊಡ್ಡಸ್ತಿಕೆಯ ವಿನಾ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಪೇಚಾಡುತ್ತಿರುವ ಬಹುಭಾಗದ ಬಡಪ್ರಜೆಗಳ ಪರಿಸ್ಥಿತಿಯ ಮೇಲೆ ಕನಿಕರವಿಟ್ಟು ಮುಖ್ಯ ಪ್ರಾಣಾಧಾರವಾದ ನೀರಿಗೆ ತೊಂದರೆಯುಂಟಾಗದಂತೆ ಮೊದಲಿದ್ದ ನೀರಿನೇರ್ಪಾಟನ್ನು ಸ್ಥಿರಗೊಳಿಸಿ ರಾಜಧಾನಿಯ ನಿವಾಸಿಗಳ ಕೃತಜ್ಞತೆಗೆ ಪಾತ್ರರಾಗುವಂತೆ ಮಾಡಬೇಕೆಂದು ಕೆಲ ಮೆಂಬರುಗಳು ಸೂಚಿಸಿದರು.

ಸ್ವದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ಆರುತಿಂಗಳಹಿಂದೆ ಸ್ಥಾಪಿತವಾದ ದೇವಾಂಗಬ್ಯಾಂಕ್, ಲಿಮಿಟೆಡ್ಡಿನ ಸ್ಟ್ಯಾಚ್ಯುಟರಿ ಮೀಟಿಂಗು ಇದೇ ತಿಂಗಳು 26 ನೆಯ ತಾರೀಖು ಭಾನುವಾರ ಬೆಂಗಳೂರಲ್ಲಿ ನಡೆಯುವುದು.

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಸರ್ ಸಿ. ಟಾಡ್ ಹಂಟರ್ ರವರು ಕಳೆದ ಭಾನುವಾರ ರಾಜಧಾನಿಗೆ ಬಂದಿದ್ದು ಮಂಗಳವಾರ ರೈಲುಬಂಡಿಯಲ್ಲಿ ಬೆಂಗಳೂರಿಗೆ ಹೋದರು.

ಸಂಸ್ಥಾನದ ಯಂತ್ರಾಲಯಗಳಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವರು ಒಂದು ಕುದುರೆಯ ಶಕ್ತಿಗೆ 1½ ಆಣೆ ದರದಂತೆ ಪವರ್ ಛಾರ್ಜು, ಕೈಗಾರಿಕೆಯ ಅಭಿವೃದ್ಧಿ ಪ್ರೋತ್ಸಾಹಕ್ಕಾಗಿಳಿಸಲ್ಪಟ್ಟಿದ್ದುದು ಈಗ ಪುನಃ 1⅓ ಆಣೆಗಿಳಿಸಲ್ಪಟ್ಟಿರುತ್ತದೆ. ಇದರಂತೆ ಈ ಸೆಪ್ಟಂಬರ್ ತಿಂಗಳಿಂದಲೇ ಅನುಷ್ಠಾನಕ್ಕೆ ತರಲ್ಪಡುವುದು.

ರಾಜಧಾನಿಯ ನರಸಿಂಹರಾಜ ಬೂಲಿವಾರ್ಡು ರೋಡಿನಲ್ಲಿ ಬಾಡಿಗಾರ್ಡ್ಸ್ ಲೈನಿನ ಇದಿರಿಗಿರುವ ದೀಪಾವಳಿಗಳಲ್ಲಿ ಎರಡರ ಪ್ರಕಾಶವು ಭಾನುಕೋಟಿಪ್ರಕಾಶಕ್ಕಿಂತ ಅಧಿಕವಾಗಿರುವುದರಿಂದ ಅಲ್ಲಿ ಸಂಚರಿಸುವ ಜನರು ಕಣ್ಬಿಡಲಾರದೆ ಕತ್ತಲೆಯಲ್ಲಿ ತಡವರಿಸುವಂತೆ ತಿರುಗಾಡಬೇಕಾಗಿದೆಯೆಂದು ಪಾಂಥಿಕರೊಬ್ಬರು ಬರೆದಿರುತ್ತಾರೆ.

ಯಡತೊರೆ ತಾ|| ಹೊಸಕೋಟೆ ಇನಾಂಗ್ರಾಮದಲ್ಲಿ ಪ್ಲೇಗುವ್ಯಾಧಿಯು ಪ್ರಾರಂಭವಾಗಿದ್ದಾಗ್ಯೆ ಮೈಸೂರು ಡಿ|| ರೆಡ್ ಕ್ರಾಸ್ ಸೊಸೈಟಿಯವರ ಬೋಧೆಯಂತೆ ಗ್ರಾಮಸ್ಥರ ಸಹಕಾರದಿಂದ ಇನಾಕ್ಯುಲೇಷನ್ ಕೆಲಸವು ಬಹಳ ತೃಪ್ತಿಕರವಾಗಿ ನಡೆದಿರುವುದು ಸಂತೋಷಪ್ರದವಾಗಿದೆಯೆಂದೂ ಈ ವಿಚಾರವನ್ನು ಎಲ್ಲ ಗ್ರಾಮಪಂಚಾಯಿತಿಗಳ ಚೇರ್ಮನ್ನರುಗಳಿಗೆ ತಿಳುಹಬೇಕೆಂದೂ ಯಡತೊರೆ ತಾ|| ಬೋರ್ಡು ಮೀಟಿಂಗಿನಲ್ಲಿ ನಿರ್ಧರಿಸಲ್ಪಟ್ಟಿರುತ್ತದೆ.

ರಾಜಧಾನಿಯಲ್ಲಿ ನೆರೆಯಿಸಬೇಕೆಂದಿದ್ದ ವೀರಶೈವಮಹಾಸಭೆಯ ಸ್ವಾಗತಸಂಘದ ಸೆಕ್ರೆಟರಿಗಳು ನೆನ್ನೆಯದಿನ ಸಾಯಂಕಾಲ ರಾಜಧಾನಿಯ ಧರ್ಮಪ್ರವರ್ತಕ ಡಿ|| ಬನುಮಯ್ಯನವರ ಹೈಸ್ಕೂಲು ಕಟ್ಟಡದಲ್ಲಿ ರಿಟೈರ್ಡ್ ಪೊಲೀಸ್ ಇನ್ಸ್ಪೆಕ್ಟರ್ ಮ|| ಕೆ. ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಕೆಲ ಮೆಂಬರುಗಳ ಒಂದು ಸಭೆಯು ಸೇರಿಸಿ ವೀರಶೈವಮಹಾಸಭೆಯನ್ನು ಈಸಲ ರಾಜಧಾನಿಯಲ್ಲಿ ನಡೆಯಿಸಲಾಗುವುದಿಲ್ಲವೆಂದು ನಿರ್ಧರಿಸಿದುದಾಗಿ ತಿಳಿಯಬರುತ್ತದೆ.

ಶ್ರೀಮನ್ಮಹಾರಾಜರವರು ಪೂನಾದಲ್ಲಿ ಈಗ ನಡೆಯುತ್ತಲಿರುವ ಕುದುರೆ ಪಂದ್ಯವನ್ನು ಪರಾಮರ್ಶಿಸುವುದಕ್ಕಾಗಿ ಸರದಾರರುಗಳಾದ ಗೋಪಾಲಕೃಷ್ಣ ಅರಸಿನವರು ಚಾಮಪ್ಪಾಜಿ ಅರಸಿನವರು ಏಡಿಕಾಂಗರುಗಳಾದ ಎಸ್. ಜಡ್. ಷಾ ಮತ್ತು ನಬಿಖಾನರವರು ಇವರುಗಳೊಡನೆ ಕಳೆದ ಸೋಮವಾರ ರಾತ್ರಿ 9½ ಗಂಟೆಯಲ್ಲಿ ಸ್ಪೆಷಲ್ ಟ್ರೇನಿನಲ್ಲಿ ಅರಸೀಕೆರೆ ಮಾರ್ಗವಾಗಿ ಪೂನಾಕ್ಕೆ ದಯೆಮಾಡಿಸಿದರು ಮತ್ತು ಮುಂದಣವಾರ ಹಿಂದಿರುಗಿ ಚಿತ್ತೈಸುವವರಾಗಿರುವರು.

ಪುಷ್ಯ ಮಳೆಯು ಸರ್ವತ್ರ ನಡೆಯಿಸಿದುದರಮೇಲೆ ಒಣಗುತ್ತಿದ್ದ ಪೈರುಗಳು ಬದುಕುವಂತಾದುದಲ್ಲದೆ ಬತ್ತಿಹೋಗಿದ್ದ ಕೆರೆಕುಂಟೆಗಳಿಗೆ ನೀರು ಬಂದು ಜನರಿಗುಂಟಾಗಿದ್ದ ಕ್ಷಾಮಭೀತಿಯು ಪರಿಹಾರವಾಯಿತು. ಬೆಂಗಳೂರು ನಿವಾಸಿಗಳು ಕಳೆದ 30-40 ವರ್ಷಗಳಿಂದಲೂ ಅನುಭವಿಸದಿದ್ದ ನೀರಿನ ಕ್ಷಾಮಕ್ಕೆ ಗುರಿಯಾಗಿ ಬಹಳ ಕಷ್ಟಪಡುತ್ತಿದ್ದರು. ಆದರೆ ಈಶ್ವರಾನುಗ್ರಹದಿಂದ ಮಳೆಯು ಯಥೇಚ್ಛವಾಗಿ ಬಂದು ಬೆಂಗಳೂರಿಗೆ ಮುಖ್ಯ ಜೀವನಾಧಾರವಾಗಿರುವ ಹೆಸರಗಟ್ಟ ಜಲಾಶಯಕ್ಕೆ ಸಂಪೂರ್ಣವಾಗಿ ನೀರುಬಂದು ಜನರ ಭಯ ಕುತೂಹಲಗಳನ್ನು ನಿವಾರಣೆಗೊಳಿಸಿತು. ಈಗ ಹೆಸರಗಟ್ಟ ಜಲಾಶಯದಲ್ಲಿ 56 ಅಡಿ ಎತ್ತರದವರೆಗೆ ನೀರು ಶೇಖರವಾಗಿರುತ್ತದೆ, ಮತ್ತು ಇನ್ನು 4-6 ಅಡಿ ನೀರು ಬಂದಲ್ಲಿ ಮೂರುವರ್ಷದವರೆಗೆ ಸಾಕಾಗುತ್ತದೆ.

ಬೆಂಗಳೂರು ಬಿನ್ನಿಮಿಲ್ಲಿನ ಗೊಂದಲದಲ್ಲಿ ಕೂಲಿಯಾಳುಗಳ ಮೇಲೆ ಗುಂಡನ್ನು ಹೊಡೆದ ಪೊಲೀಸರ ವಿಚಾರಣೆಯನ್ನು ಕೆಲ ಸಾಕ್ಷಿಗಳ ಹೇಳಿಕೆಯ ಸಮೇತ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಪೊಲೀಸ್ ಇ|| ಜನರಲ್ ರವರೂ ನಡೆಯಿಸಿ ತಮ್ಮಭಿಪ್ರಾಯದೊಡನೆ ಸರ್ಕಾರಕ್ಕೆ ವರದಿ ಮಾಡಿದ್ದುದರಮೇಲೆ ಪೊಲೀಸರು ಆತ್ಮರಕ್ಷಣೆಗಾಗಿಯೂ, ಮಹಾನರ್ಥವಾಗದಂತೆ ಕಲಹಗಾರರನ್ನು ಅಡ್ಡಿಪಡಿಸುವುದಕ್ಕಾಗಿಯೂ ಗುಂಡನ್ನು ಹೊಡೆದುದು ಅನಿವಾರ್ಯವಾಗಿದ್ದುದರಿಂದ ಅಪರಾಧವಲ್ಲವಾಗಿದ್ದರೂ, ತಲೆಯ ಮೇಲ್ಭಾಗದಲ್ಲಿ ಹೊಡೆದುದು ಮಾತ್ರ ವಿಧಿಗೆ ವಿರುದ್ಧವೆಂದು ಸರ್ಕಾರದವರು ನಿರ್ಧರಿಸಿ ಹಾಗೆ ಹೊಡೆಯಲು ಅಪ್ಪಣೆಯನ್ನು ಕೊಟ್ಟ ಅ|| ಸೂಪರಿಂಟೆಂಡೆಂಟ್ ಮಿ|| ಸಿರಲ್ ರವರನ್ನು ಇನ್ಸ್ಪೆಕ್ಟರ್ ತರಗತಿಗಿಳಿಸಿರುವುದಾಗಿ ಅಪ್ಪಣೆಮಾಡಿರುತ್ತಾರೆ.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲನ್ನು ಸರ್ಕಾರಕ್ಕೆ ವಹಿಸಿಕೊಂಡು ನಡೆಯಿಸುವ ವಿಚಾರದಲ್ಲಿ ಸ್ಕೂಲಿನ ಟ್ರಸ್ಟಿಗಳಿಗೂ ವಿದ್ಯಾಭ್ಯಾಸದ ಇ|| ಜನರಲ್ ರವರಿಗೂ ಪತ್ರವ್ಯವಹಾರನಡೆದು ಸ್ಕೂಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡ 40 ಕ್ಕಿಂತ ಹೆಚ್ಚಾಗಿ ವೀರಶೈವ ವಿದ್ಯಾರ್ಥಿಗಳಿಗೆ ಫ್ರೀಷಿಪ್ ಕೊಡಲು ಖಂಡಿತವಾಗಿ ಆಗುವುದಿಲ್ಲವೆಂದೂ, ಇದಕ್ಕೆ ಟ್ರಸ್ಟಿಗಳೊಪ್ಪದಿದ್ದಲ್ಲಿ ಸರ್ಕಾರಕ್ಕೆ ವಹಿಸಿಕೊಳ್ಳುವುದಿಲ್ಲವೆಂದೂ ಇ|| ಜನರಲ್ ರವರು ಬರೆದಿದ್ದುದರಮೇಲೆ ಟ್ರಸ್ಟಿಗಳು ಸ್ಕೂಲನ್ನು ಸರ್ಕಾರದವರಿಷ್ಟದಂತೆ ವಹಿಸಿಕೊಡುವುದರ ಅಥವಾ ಕೊಡದಿರುವುದರ ಸಾಧಕಬಾಧಕಗಳನ್ನು ಪರ್ಯಾಲೋಚಿಸಿ ತಮ್ಮಭಿಪ್ರಾಯವನ್ನು ಇ||ಜ|| ರವರಿಗೆ ಬರೆದಿರುವುದಾಗಿ ಕೇಳುತ್ತೇವೆ. ಆದರೆ ಟ್ರಸ್ಟಿಗಳ ಆ ಅಭಿಪ್ರಾಯವೇನೆಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲ. ಕಳೆದ ಜೂನ್ ತಿಂಗಳಿಗೆ ಅಂತ್ಯವಾದ ವರ್ಷದಲ್ಲಿ ಸ್ಕೂಲಿನ ಆದಾಯವ್ಯಯಲೆಖ್ಖ ಪರೀಕ್ಷೆಯಲ್ಲಿ 600 ರೂ. ಅಷ್ಟು [illegible]ವಾಗಿರುವುದೆಂದು ತಿಳಿಯಬರುತ್ತದೆ.

ಕೊಡಗಿನಲ್ಲಿರುವ ಮಂಜುನಾಥಯ್ಯನೆಂಬವರು ರಾಜಧಾನಿಯ ಕೋಟೆಮೊಹಲ್ಲಾದಲ್ಲಿರುವ ಮ್ಯುನಿಸಿಪಲ್ ಡೋರ್ ನಂಬರು 1117 ಉಳ್ಳ ತಮ್ಮ ಮನೆಯ ಕಂದಾಯಕ್ಕಾಗಿ ತಾ|| 28-7-26 ರಲ್ಲಿ ಮನಿಯಾರ್ಡರು ಮೂಲಕ ಕಳುಹಿಸಿಕೊಟ್ಟ 11 ಚಿಲ್ಲರೆ ರೂಪಾಯಿ ತಾ|| 30-7-26 ರಲ್ಲಿ ರಾಜಧಾನಿಯ ಮ್ಯುನಿಸಿಪಾಲಿಟಿಗೆ ತಲುಪಿದಾಗ್ಯೂ ಆ ಕೂಡಲೆ ಲೆಖ್ಖದಲ್ಲಿ ಜಮಾ ಬರೆಯಲ್ಪಟ್ಟು ಕ್ಯಾಷಿಯರವಶಕ್ಕೆ ತಲುಪಿಸಲ್ಪಡದೆ ಆಗಸ್ಟ ತಾ|| 27 ರ ವರೆಗೂ ಯಾರ ವಶದಲ್ಲೋ ನಿಂತುಹೋಗಿದ್ದಿತಂತೆ. ಕಂದಾಯವು ಸಂದುದಕ್ಕಾಗಿ ಕ್ರಮವಾದ ರಸೀತಿಯು ಮ್ಯುನಿಸಿಪಾಲಿಟಿಯವರಿಂದ ಬಹಳ ದಿನಗಳವರೆಗೆ ಬಾರದಿದ್ದುದರಮೇಲೆ ಮಂಜುನಾಥಯ್ಯನವರು ಸಂಶಯಪಟ್ಟುಕೊಂಡು ಕೌನ್ಸಿಲ್ ಪ್ರೆಸಿಡೆಂಟರವರಿಗೆ ಬರೆದುಕೊಳ್ಳಲಾಗಿ ಪ್ರೆಸಿಡೆಂಟರು ಕೂಡಲೆ ವಿಚಾರಣೆಮಾಡಿದುದರಲ್ಲಿ ತಾ|| 27-8-26 ರಲ್ಲಿ ಹಣವು ಲೆಖ್ಖಕ್ಕೆ ಜಮಾಕಟ್ಟಲ್ಪಟ್ಟುದಾಗಿ ತಿಳಿಯಬಂದಿತಂತೆ. ಇದೇ ಮ್ಯುನಿಸಿಪಾಲಿಟಿಯಲ್ಲಿ ಶೇಕದಾರರಾಗಿರುವ ಸಯ್ಯದ್ ಗೌಸ್ ಎಂಬವರು ಹಿಂದೊಂದಾವರ್ತಿ ತಮ್ಮಲ್ಲಿಗೆ ಬಂದ ಕಂದಾಯದ ಹಣವನ್ನು ಕೂಡಲೆ ಕ್ಯಾಷಿಯರಿಗೆ ತಲುಪಿಸದೆ 2-3 ದಿನಗಳವರೆಗೆ ತಮ್ಮಲ್ಲೇ ಇಟ್ಟುಕೊಂಡಿದ್ದರೆಂಬ ಅಪರಾಧಕ್ಕೆ ಗುರಿಮಾಡಲ್ಪಟ್ಟು 6 ತಿಂಗಳಕಾಲ ಸಸ್ಪೆಂಡ್ ಮಾಡಲ್ಪಟ್ಟಿದ್ದರೆಂದು ಕೇಳುತ್ತೇವೆ. ಅದರಂತೆಯೇ ಈಗ ಕೊಡಗಿನಿಂದ ಬಂದ ಕಂದಾಯದ ಹಣವನ್ನು ಕೂಡಲೆ ಲೆಖ್ಖಕ್ಕೆ ಜಮಾಕಟ್ಟಿ ಕ್ಯಾಷಿಯರ ವಶಕ್ಕೆ ಕೊಡದೆ 1 ತಿಂಗಳಕಾಲ ತನ್ನಲ್ಲೇ ಇಟ್ಟುಕೊಂಡಿದ್ದ ಉದ್ಯೋಗಸ್ಥನಾವನೇ ಆಗಿರಲಿ ಅವನನ್ನು ವಿಚಾರಿಸಿ ತಕ್ಕ ಶಿಕ್ಷೆಗೆ ಗುರಿಮಾಡಿ ಮ್ಯು|| ಕೌನ್ಸಿಲಿನವರು ತಮ್ಮ ನಿಷ್ಪಕ್ಷಪಾತತೆಯನ್ನು ವ್ಯಕ್ತಗೊಳಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ಜನರು ಹೆಚ್ಚಾಗಿ ತಿರುಗುವ ಮಾರ್ಗಗಳಲ್ಲಿ ಜಲಮಲವಿಸರ್ಜನೆಗೆ ಪ್ರತ್ಯೇಕವಾದ ಸ್ಥಳವೇರ್ಪಡಿಸಲ್ಪಡದಿರುವುದು ಒಂದು ದೊಡ್ಡಕೊರತೆಯಾಗಿದೆ; ಅಲ್ಲದೆ ಅಂತಹ ಸ್ಥಳವಿದ್ದಹೊರತು ಮಾರ್ಗದಲ್ಲಿ ಜಲವಿಸರ್ಜನೆಮಾಡುವವರನ್ನು ದಂಡಿಸಲು ಅವಕಾಶವಿಲ್ಲವಾಗಿದೆ. ಹೀಗಿದ್ದರೂ, ಯಾರಾದರು ಅರಿಯದೆ ಮತ್ತು ಜಲವಿಸರ್ಜನೆಯನ್ನು ತಡೆಯಲಾರದೆ ಮಾರ್ಗದಲ್ಲಿ ಕುಳಿತು ವಿಸರ್ಜಿಸಿದರೆ ಅವರನ್ನು ಪೊಲೀಸಿನವರು ಹಿಡಿದು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿ 2-4 ಆಣೆ ಅರ್ಥದಂಡವನ್ನು ಹಾಕಿಸುತ್ತಾರೆ. ಹಿಂದೆ ಮ|| ಬಿ. ಬಸವಾರಾಧ್ಯರು ಮೈಸೂರುಸಿಟಿಮ್ಯಾಜಿಸ್ಟ್ರೇಟರಾಗಿದ್ದಾಗ್ಯೆ ಪೊಲೀಸಿನವರು ಮಾರ್ಗದಲ್ಲಿ ಮೂತ್ರವಿಸರ್ಜನೆಮಾಡಿದ ಒಬ್ಬ ವೃದ್ಧನನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುವಲ್ಲಿ "ಸ್ವಾಮಿ, ಮಾರ್ಗದಲ್ಲೆಲ್ಲೂ ಮೂತ್ರಿಸಲು ಪ್ರತ್ಯೇಕಸ್ಥಳವಿಲ್ಲದಿದ್ದುದರಿಂದ ಬಾಧೆಯನ್ನು ತಡೆಯಲಾರದೆ ಬರುವ ದಾರಿಯಲ್ಲಿ ವಿಸರ್ಜನೆಮಾಡಿದುದುಂಟು" ಎಂದು ಹೇಳಿಕೊಳ್ಳಲು ಮ್ಯಾಜಿಸ್ಟ್ರೇಟರು ಜಲಮಲವಿಸರ್ಜನೆಯು ಸ್ವಭಾವವಾದುದರಿಂದ ಅದನ್ನು ತಡೆಯಲು ಮನುಷ್ಯರಿಗೆ ಸಾಧ್ಯವಿಲ್ಲವು ಮತ್ತು ಅದಕ್ಕಾಗಿ ಪ್ರತ್ಯೇಕಸ್ಥಳ ಏರ್ಪಡಿಸಲ್ಪಟ್ಟಿಲ್ಲವು. ಆದುದರಿಂದ ಆ ವೃದ್ಧನು ನಿರಪರಾಧಿಯೆಂದು ಹೇಳಿ ಅವನನ್ನು ಬಿಟ್ಟುಬಿಟ್ಟರು. ಇಂತಹ ಜಲವಿಸರ್ಜನೆಯ ಅಪರಾಧಗಳನ್ನು ವಿಚಾರಿಸುವ ವೇಳೆಯಲ್ಲಿ " ದಂಡುದಾಳಿ ತಡೆಯಬಹುದು ಜಲಮಲವನ್ನು ತಡೆಯಬಹುದೆ ಹೆಡ್ಡಮೂರ್ಖ " ಎಂಬ ಗಾದೆಯಂತೆ ಸ್ವಭಾವಕ್ಕೆ ವಿರುದ್ಧವಾಗಿ ನಡೆಯಲು ಮನುಷ್ಯನಿಗೆ ಸಾಧ್ಯವಲ್ಲವೆಂಬುದನ್ನೂ, ಅದಕ್ಕಾಗಿ ಪ್ರತ್ಯೇಕಸ್ಥಳಗಳೇರ್ಪಡಿಸಲ್ಪಟ್ಟಹೊರತು ಜನರು ಅಪರಾಧಿಗಳಾಗಲಾರರೆಂಬುದನ್ನೂ ಮ್ಯಾಜಿಸ್ಟ್ರೇಟರುಗಳು ಪರ್ಯಾಲೋಚಿಸದೆ ಪೊಲೀಸಿನವರು ಹಿಡಿದುಕೊಂಡು ಬಂದಮಾತ್ರಕ್ಕೆ ದಂಡವನ್ನು ವಿಧಿಸುವುದು ಶುದ್ಧ ಅಸಂಗತವು

ಕಾಥೆವಾಡಕ್ಕೆ ಸೇರಿದ ಪೋರ್ಬಂದಿನಲ್ಲಿ ಒಬ್ಬ ಜೂಜುಗಾರನು ತನ್ನ ಮಾವನಿಂದ 4000 ರೂ. ವರೆಗೆ ತೆಗೆದುಕೊಂಡ ಎಲ್ಲವನ್ನೂ ಜೂಜಿನಲ್ಲಿ ಸೋತುಬಿಟ್ಟು ಪುನಃ ಮಾವನು ಹಣವನ್ನು ಕೊಡುವುದಿಲ್ಲವೆಂದು ಹೇಳಿದುದರಮೇಲೆ, ನಿಮ್ಮಪ್ಪನಿಂದ ಹಣವನ್ನು ಕೊಡಿಸದಿದ್ದಲ್ಲಿ ನಿಮ್ಮಪ್ಪನನ್ನೂ ನಿನ್ನ ಇಬ್ಬರು ತಮ್ಮಂದಿರನ್ನೂ ಕೊಂದುಬಿಡುತ್ತೇನೆಂದು ತನ್ನ ಹೆಂಡತಿಗೆ ಹೇಳಿ ಭಯಹುಟ್ಟಿಸಿದನು. ಗಂಡನಿಗೆ ಬುದ್ಧಿ ಕೆಟ್ಟುಹೋಗಿದೆಯೆಂದು ತಿಳಿದು ಆಕೆಯು ಸುಮ್ಮನಿರಲು ಗಂಡನು ಒಂದು ಚೂರಿಯಿಂದ ಆಕೆಯ ಮೈಯಲ್ಲವನ್ನೂ ತಿವಿದು ಗಾಯಪಡಿಸಿ ಕೊಂದುಬಿಟ್ಟು ತಾನೂ ತನ್ನ ಹೊಟ್ಟೆಯನ್ನು ಚೂರಿಯಿಂದ ಬಗೆದುಕೊಂಡು ಪ್ರಾಣಾಪಾಯಸ್ಥಿತಿಯಲ್ಲಿರುವನು.

ಗೋವರ್ಧನಮಠದ ಶ್ರೀ ಶಂಕರಾಚಾರ್ಯಸ್ವಾಮಿಯವರು ದೇವಿಪುರಾಣದಲ್ಲಿ ಹೇಳಿರುವ ಗೋಮತಿಶಿಲೆಯಂತಹ ಒಂದು ಅಪೂರ್ವವಾದ ಶಿಲೆಯನ್ನು ಬಹಳ ಪ್ರಯಾಸಪಟ್ಟು ಹಿಮಾಲಯಪರ್ವತದಿಂದ ಸಂಪಾದಿಸಿ ತಂದಿರುವರು. ಈ ಶಿಲೆಯು ಇತರ ಕಲ್ಲುಗಳಂತೆಯೇ ಬಣ್ಣ ಮೊದಲಾದ ಗುಣಗಳುಳ್ಳದಾಗಿ 3½ ಪೌಂಡು ತೂಕವಿರುತ್ತದೆ. ಆದರೂ ಇದು ನೀರಿನಲ್ಲಿ ಮುಳುಗದೆ ಹೋಲೆ ತೇಲುತ್ತದೆ. ನೀರು ತುಂಬಿದ ಒಂದು ಅರ್ಗಂ ಚಟ್ಟಿಯಲ್ಲಿ ಹಾಕಿದರೆ ಮೊದಲು ಮುಳುಗಿ ಆ ನಂತರ ತೇಲುತ್ತದೆ. ಗಾಳಿಯಾಡದೆ ಬಹಳ ತಣ್ಣಗಿರುವ ಸ್ಥಳದಲ್ಲಿ ನೀರಿನ ಚಟ್ಟಿಯಲ್ಲಿ ಹಾಕಿದರೆ ಅದು ಒಂದೇಕಡೆ ಇರದೆ ಮೀನಿನಂತೆ ಸುತ್ತಲೂ ಸ್ವೇಚ್ಛೆಯಾಗಿ ಓಡಾಡುತ್ತದೆ. ಈ ಕಲ್ಲಿನ ವಿಚಿತ್ರವನ್ನು ನೋಡಿ ವಿಜ್ಞಾನಶಾಸ್ತ್ರಜ್ಞರು ಪರಮಾಶ್ಚರ್ಯಭರಿತರಾಗಿರುತ್ತಾರೆ.

“ ವಿಶ್ವಬಂಧು ” ವಿನ ಚಂದಾದಾರರಲ್ಲಿ ವಿಜ್ಞಾಪನೆ.

ಶ್ರೀಯುತ ವರ್ಧಮಾನಯ್ಯನವರು ದಿವಂಗತರಾದ ದುಃಖಸೂಚಕವಾಗಿ ವಿಶ್ವಬಂಧುಪತ್ರಿಕೆಯ ೬-೭ ನೆಯ ಸಂಚಿಕೆಗಳು ನಿಲ್ಲಿಸಲ್ಪಟ್ಟಿದ್ದುವಷ್ಟೆ. ಬರುವ ಭಾದ್ರಪದ ಬಹುಳ ಪಂಚಮಿಗೆ ಆ ಎರಡು ಸಂಚಿಕೆಗಳೂ ಸೇರಿದ ಸಂಯುಕ್ತಸಂಚಿಕೆಯು, ಶ್ರೀಯುತ ವರ್ಧಮಾನಯ್ಯನವರ ಜೀವನಚರಿತ್ರೆ, ಅವರು ಮಾಡಿರುವ ಉಪನ್ಯಾಸಗಳು ಅವರ ವಿಷಯವಾಗಿ ಅನೇಕರು ಬರೆದ ಲೇಖಗಳು ಅವರ ಭಾವಚಿತ್ರಗಳು ಮೊದಲಾದ ವಿಷಯಗಳನ್ನೊಳಗೊಂಡು ಪುಸ್ತಕಾಕಾರದಿಂದ ಪ್ರಕಟವಾಗುವುದು.

ಸಂಪಾದಕ “ ವಿಶ್ವಬಂಧು ” ಮೈಸೂರು.

ಕೈ|| ಕಬ್ಬಳ್ಳಿ ಚೆನ್ನಬಸಪ್ಪನವರ ಸ್ಮಾರಕ.

ಮುಕ್ಕಾಲುಲಕ್ಷರೂಪಾಯಿಗಳವರೆಗೆ ವೆಚ್ಚಮಾಡಿ ರಾಜಧಾನಿಯ ರೈಲ್ವೆಸ್ಟೇಷನ್ನಿನ ಸಮೀಪದಲ್ಲಿ ವೀರಶೈವವಿದ್ಯಾರ್ಥಿಗಳ ವಾಸಕ್ಕಾಗಿ ಒಂದು ನಿಲಯವನ್ನು ಸ್ಥಾಪಿಸಿ ಸಮಾಜಕ್ಕೆ ಮಹೋಪಕಾರವನ್ನು ಮಾಡಿ ಚಿರಸ್ಮರಣೀಯರಾಗಿರುವ ಆ ಧರ್ಮಿಷ್ಠ ಕಬ್ಬಳ್ಳಿ ಸಾಹುಕಾರ್ ಕೆ. ಚೆನ್ನಬಸಪ್ಪನವರ ಭಾವಚಿತ್ರವನ್ನು ಎಣ್ಣೆಬಣ್ಣದಲ್ಲಿ ಬರೆಯಿಸಿ ಅವರ ವಿದ್ಯಾರ್ಥಿನಿಲಯದಲ್ಲಿ ಕಟ್ಟಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸಬೇಕೆಂದು ಕಳೆದ ಪ್ರಜಾಪ್ರತಿನಿಧಿಸಭಾಧಿವೇಶನಕ್ಕೆ ಮೆಂಬರುಗಳಾಗಿ ದಯೆಮಾಡಿಸಿದ್ದ ವೀರಶೈವದೊಡ್ಡಮನುಷ್ಯರುಗಳು ನಿರ್ಧರಿಸಿ ಚಂದಾಹಣವನ್ನು ವಾಗ್ದಾನಮಾಡಿದುದರಮೇಲೆ ಚಿತ್ರಪಟವನ್ನು ಬರೆದುಕೊಡಲು ಬೆಂಗಳೂರಲ್ಲಿರುವ ಮೆಸರ್ಸ್. ಬಾರ್ಟನ್ ಕಂಪೆನಿಯವರಿಗೆ ವಹಿಸಿರುವ ಸಂಗತಿಯೂ, ಚಂದಾಹಣವನ್ನು ಸಲ್ಲಿಸಿರುವ ದೊಡ್ಡಮನುಷ್ಯರ ಹೆಸರುಗಳೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿತವಾಗಿವೆಯಷ್ಟೆ. ಈಗ ಚಿತ್ರಪಟವು ಬರೆಯಲ್ಪಟ್ಟು ಸಿದ್ಧವಾಗಿರುವುದೆಂದು ಮೇಲ್ಕಂಡ ಕಂಪೆನಿಯವರು ತಿಳಿಸಿರುತ್ತಾರಾದುದರಿಂದ ಚಂದಾಹಣವನ್ನು ವಾಗ್ದಾನಮಾಡಿರುವ ದೊಡ್ಡಮನುಷ್ಯರುಗಳು ಕೂಡಲೆ ಕಳುಹಿಸಿಕೊಡುವುದಲ್ಲದೆ ಚಿತ್ರಪಟದ ಮೇಲ್ಮುಸುಕನ್ನು ತೆಗೆಯುವ ಮಹೋತ್ಸವದ ವೆಚ್ಚವೂ ಸೇರಿ 500 ರೂ. ಗಳ ಮೇಲೆಯೇ ದ್ರವ್ಯಸಹಾಯವಾಗಬೇಕಾಗಿರುವಪ್ರಯುಕ್ತ ತಮ್ಮ ವೀರಶೈವಮಿತ್ರಮಂಡಲಿಯವರಿಂದ ದ್ರವ್ಯಸಹಾಯಮಾಡಿಸಿ ಬರುವ ದಸರಾಮಹೋತ್ಸವಕಾಲದಲ್ಲೇ ಚಿತ್ರಪಟದ ಮೇಲ್ಮುಸುಕನ್ನು ತೆಗೆಯುವ ಮಹೋತ್ಸವವು ಜರುಗುವಂತೆ ಮಾಡುವರೆಂದು ನಂಬಿ ನಿರೀಕ್ಷಿಸುತ್ತೇನೆ. ಪ್ರಜಾಪ್ರತಿನಿಧಿಸಭಾಮೆಂಬರಾದ ಚಿತ್ರದುರ್ಗದ ಸಾಹುಕಾರ್ ವೀರಭದ್ರಪ್ಪನವರು ದಯೆಯಿಟ್ಟು ಕಳುಹಿಸಿಕೊಟ್ಟಿರುವ 10 ರೂ. ಗಳು ಸೇರಿ ಈವರೆಗೆ 200 ರೂ. ಮಾತ್ರ ಶೇಖರವಾಗಿರುತ್ತದೆ.

ಜಿ. ಪರಮಶಿವಯ್ಯ
ಅಡ್ವೊಕೇಟ್, ಬೆಂಗಳೂರು.

ದಿವಾನರ ಸಂಚಾರ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿಕೊಂಡುಬರಲು ಈ ತಾ|| 15 ನೇ ಬುಧವಾರ ಮಧ್ಯಾಹ್ನ ಮೋಟಾರುಬಂಡಿಯಲ್ಲಿ ಪ್ರಯಾಣಮಾಡಿ ಸಾಯಂಕಾಲ ತುಮಕೂರನ್ನು ತಲುಪಿ ಅಲ್ಲಿಯ ಮ್ಯುನಿಸಿಪಲ್ ಕೌನ್ಸಿಲರುಗಳಿಂದಲೂ ಪ್ರಮುಖಜನರಿಂದಲೂ ಮರ್ಯಾದಾಪುರಸ್ಸರವಾಗಿ ಇದಿರುಗೊಳ್ಳಲ್ಪಟ್ಟು ಅವರೊಪ್ಪಿಸಿದ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ, ತಕ್ಕುತ್ತರವನ್ನು ದಯೆಪಾಲಿಸಿದರು, ಮತ್ತು ಅದೇ ಸಾಯಂಕಾಲ ಹೆರಿಗೆಯಾಸ್ಪತ್ರೆಯ ಆರಂಭೋತ್ಸವವನ್ನು ನೆರವೇರಿಸಿದರು. ತಾ|| 16 ನೇ ಗುರುವಾರ ಬೆಳಗಿನ 7 ರಿಂದ 11 ಗಂಟೆಯವರೆಗೆ ಪಟ್ಟಣವನ್ನು ಸುತ್ತಿಕೊಂಡು ಬಂದು ಸ್ಕೂಲುಗಳನ್ನೂ ವಿದ್ಯಾರ್ಥಿನಿಲಯಗಳನ್ನೂ ಇತರ ಸಂಸ್ಥೆಗಳನ್ನೂ ಪರಾಮರ್ಶಿಸಿ ಮಧ್ಯಾಹ್ನ 3 ರಿಂದ 5 ರ ವರೆಗೆ ಜನರಿಂದ ಅರ್ಜಿಗಳನ್ನು ಸ್ವೀಕರಿಸಿದರು ಮತ್ತು ಕೆಲವರಿಗೆ ದರ್ಶನವನ್ನಿತ್ತು ಅವರಕೂಡ ಸಂಭಾಷಿಸಿದರು.

ತಾ|| 17 ನೇ ಶುಕ್ರವಾರ ಬೆಳಿಗ್ಗೆ ಮೈದಳಕೆರೆ, ಸಿದ್ಧಗಂಗೆ ಮತ್ತು ಕ್ಯಾತಸಂದ್ರ ಇವುಗಳನ್ನೂ ಮಧ್ಯಾಹ್ನ 2 ರಿಂದ 5 ರ ವರೆಗೆ ಕಚೇರಿಗಳನ್ನೂ ಪರಾಮರ್ಶಿಸಿ 5½ ಗಂಟೆಯಲ್ಲಿ ಜನರಿಗೆ ದರ್ಶನವನ್ನಿತ್ತು ಅವರು ಹೇಳಿದುದನ್ನು ಕೇಳಿ ಅರ್ಜಿಯನ್ನು ಸ್ವೀಕರಿಸಿದರು.

ತಾ|| 18 ನೇ ಶನಿವಾರ ಬೆಳಿಗ್ಗೆ ತುಮಕೂರಿಂದ ಶಿರಾಕ್ಕೆ ಪ್ರಯಾಣಮಾಡಿ ಕಚೇರಿಗಳನ್ನೂ ಸ್ಕೂಲುಗಳನ್ನೂ ಪರಾಮರ್ಶಿಸಿ ಮಧ್ಯಾಹ್ನ ಜನರನ್ನು ಕಂಡು ಅವರಕೂಡ ಪ್ರಸ್ತಾಪಿಸಿ ಅವರೊಪ್ಪಿಸುವ ಅರ್ಜಿಯನ್ನು ಸ್ವೀಕರಿಸಿ ಸಾಯಂಕಾಲ ತುಮಕೂರಿಗೆ ಹಿಂದಿರುಗಿಬರುವರು.

ತಾ|| 19 ನೆಯ ಭಾನುವಾರ ಬೆಳಿಗ್ಗೆ ತುಮಕೂರಿನಿಂದ ಗುಬ್ಬಿಗೆ ಹೋಗಿ ಅಲ್ಲಿಯ ಕಚೇರಿ ಸ್ಕೂಲುಗಳನ್ನು ನೋಡಿಕೊಂಡು ತಿಪಟೂರಿಗೆ ದಯೆಮಾಡಿಸುವರು. ಅಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳೊಪ್ಪಿಸುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ಅದಕ್ಕೆ ತಕ್ಕುತ್ತರವನ್ನು ಕೊಟ್ಟು ಅಲ್ಲಿಯ ಶ್ರೀ ಜಯದೇವಾಶ್ರಮದಲ್ಲಿ ಪುರನಿವಾಸಿಗಳಿಂದ ಸತ್ಕರಿಸಲ್ಪಟ್ಟು ಕಚೇರಿಯನ್ನೂ ಸ್ಕೂಲುಗಳನ್ನೂ ನೋಡಿಕೊಂಡು ಬಂದು ಮಧ್ಯಾಹ್ನ ಜನರಿಗೆ ದರ್ಶನವನ್ನಿತ್ತು ಅವರು ಹೇಳುವುದನ್ನು ಕೇಳಿ ಅವರು ಕೊಡುವ ಅರ್ಜಿಯನ್ನು ಸ್ವೀಕರಿಸಿ ಅದೇ ಸಾಯಂಕಾಲ ತುಮಕೂರಿಗೆ ಬರುವರು.

ತಾ|| 20 ನೇ ಸೋಮವಾರ ಬೆಳಗಿನ 7 ಗಂಟೆಗೆ ತುಮಕೂರಿನಿಂದ ಕೊರಟಗೆರೆಗೆ ಪ್ರಯಾಣಮಾಡಿ ಊರನ್ನು ನೋಡಿಕೊಂಡು ಅಲ್ಲಿಂದ ಮಧು[illegible] [illegible] [illegible] [illegible] [illegible] [illegible] [illegible]. [illegible] [illegible] ಮಧ್ಯಾಹ್ನ

3 ರಿಂದ 5 ಗಂಟೆಯವರೆಗೆ ಜನರನ್ನು ಕಂಡು ಮಾತನಾಡಿ ಅವರೊಪ್ಪಿಸುವ ಅರ್ಜಿಗಳನ್ನು ತೆಗೆದುಕೊಂಡು ಸಾಯಂಕಾಲ 5½ ಗಂಟೆಗೆ ಬೇಳೇನಹಳ್ಳಿ ಕೆರೆಯನ್ನೂ ತಲಪರಿಗೆಯನ್ನೂ ನೋಡಿಕೊಂಡುಬರುವರು.

ತಾ|| 21 ನೇ ಮಂಗಳವಾರ ಬೆಳಗ್ಗೆ ಬಿಜವಾರಕೆರೆಯನ್ನೂ ಪುರವಾರದವರೆಗಿರುವ ಗ್ರಾಮಗಳನ್ನೂ ಪರಾಮರ್ಶಿಸಿಕೊಂಡು ಹೊಸದಾಗಿ ಮಾಡಿರುವ ಮದ್ದಿಗಿರಿ-ಹಿಂದುಪುರ ಮಾರ್ಗದಲ್ಲಿ ಮದ್ದಿಗಿರಿಗೆ ಹಿಂದಿರುಗಿಬಂದು ಮಧ್ಯಾಹ್ನ ಕಚೇರಿಯನ್ನೂ ಸ್ಕೂಲುಗಳನ್ನೂ ಪರಾಮರ್ಶಿಸಿಕೊಂಡು ಬರುವರು.

ತಾ|| 22 ನೇ ಬುಧವಾರ ಬೆಳಗಿನ 7 ಗಂಟೆಗೆ ಮದ್ದಿಗಿರಿಯಿಂದ ಪಾವಗಡಕ್ಕೆ ದಯಮಾಡಿಸಿ ಕಚೇರಿಗಳನ್ನೂ ಸ್ಕೂಲುಗಳನ್ನೂ ನೋಡಿಕೊಂಡು ಬಂದು ಮಧ್ಯಾಹ್ನ ಜನರನ್ನು ಕಂಡು ಅವರಕೂಡ ಮಾತನಾಡಿ ಅವರು ಕೊಡುವ ಅರ್ಜಿಗಳನ್ನು ಸ್ವೀಕರಿಸುವರು.

ತಾ|| 23 ನೇ ಗುರುವಾರ ಬೆಳಗಿನ 8 ಗಂಟೆಯಲ್ಲಿ ಆಫೀಸರುಗಳ ಮೀಟಿಂಗನ್ನುಮಾಡಿ ಮಧ್ಯಾಹ್ನ ಬೆಂಗಳೂರಿಗೆ ಹೊರಡುವರು.

(ನ್ಯೂ ಮೈಸೂರುಪತ್ರಿಕೆಯಿಂದ.)

ಏಷ್ಯಾಟಿಕ್‌ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಏಷ್ಯಾಟಿಕ್‌ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೆಂಗಳೂರುಸಿಟಿ, ಇದರ ಡೈರೆಕ್ಟರುಗಳಿಗೆ ಕಂಪೆನಿಯ ಮೂಲಧನದ $\frac{1}{10}$ ಭಾಗಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ಸಲ್ಲಿಸಿರುವ ಷೇರುಹೋಲ್ಡರುಗಳು ಕೊಟ್ಟ ನೋಟೀಸೇನಂದರೆ.—

ಮೂಲಧನದ $\frac{1}{10}$ ಭಾಗಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ಸಲ್ಲಿಸಿರುವ ಏಷಿಯಾಟಿಕ್‌ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ಡಿನ ಷೇರುಹೋಲ್ಡರುಗಳಾದ ನಾವು ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ರೂಲ್ಸು ಪ್ರಕಾರ ಷೇರುಹೋಲ್ಡರುಗಳ ಎಕ್ಸ್ಟ್ರಾ ಆರ್ಡಿನರಿ ಜನರಲ್‌ಮೀಟಿಂಗನ್ನು ಈ ಕೆಳಗೆ ಕಂಡ ಉದ್ದೇಶಗಳಿಗಾಗಿ ಬೆಂಗಳೂರುಸಿಟಿಯಲ್ಲಿರುವ ಹೆಡ್‌ಆಫೀಸಿನಲ್ಲಿ ಕೂಡಲೆ ನಡೆಯಿಸಬೇಕಾಗಿ ಈ ನೋಟೀಸಿನಮೂಲಕ ಕೋರುತ್ತೇವೆ.

1. ಮೆಸರ್ಸ್. ಎಂ. ಪಿ. ಭೋಗಯ್ಯ, ಎಲ್. ಬಸಪ್ಪ ಮತ್ತು ಎ. ಜಿ. ರಾಂ, ಇವರುಗಳು ಈ ಕಂಪೆನಿಯು ಡಿವಿಡೆಂಡನ್ನು ಹಂಚುವಸ್ಥಿತಿಯಲ್ಲಿಲ್ಲದಿರುವಾಗ ಪ್ರತಿತಿಂಗಳ ಅಲೋಯನ್ಸಿಗಾಗೆಂದು ಬಹಳ ಹಣವನ್ನು ತೆಗೆದುಕೊಂಡಿರುವದರಿಂದ ಮತ್ತು ಇವರುಗಳು ಮಾಡಿರುವ ಕೆಲಸವು ಅನಾವಶ್ಯಕವೂ, ಅತೃಪ್ತಿಕರವೂ ಆಗಿರುವುದರಿಂದ ಅವರು ಈ ದಿವಸದ ಲಾಗಾಯಿತು ಅಲೋಯನ್ಸ್ ತೆಗೆದುಕೊಳ್ಳುವುದನ್ನು ನಿಲ್ಲಿಸತಕ್ಕದ್ದೆಂದು ರೆಜಲ್ಯೂಷನ್ ಮಾಡುವುದಕ್ಕಾಗಿ.

2. ಈಗಿರುವ 75 ನೇ ಆರ್ಟಿಕಲ್ಲಿನಲ್ಲಿ - ಇವರಲ್ಲಿ ಮೊದಲನೇ 4 ಡೈರೆಕ್ಟರುಗಳಾದ ಮೆಸರ್ಸ್. ಎ. ಜಿ. ರಾಂ. ಎಂ. ಪಿ. ಭೋಗಯ್ಯ, ಎಲ್. ಬಸಪ್ಪ, ಮತ್ತು ಕೆ. ಯು. ಶ್ಯಾಮರಾವ್ ಇವರುಗಳು ಸರದಿ ಪ್ರಕಾರ ತೆಗೆಯಲ್ಪಡದೆ 12 ವರ್ಷಕಾಲದವರೆಗೆ 1924 ನೇ ಮೇ 18 ನೇ ತಾರೀಖಿನಲ್ಲಿ ಈ ಪ್ರತಿಯೊಬ್ಬರ ಕೂಡ ಮಾಡಿಕೊಂಡಿರುವ ಅಗ್ರಿಮೆಂಟಿನ ಪ್ರಕಾರ ತಮ್ಮುದ್ಯೋಗಗಳಲ್ಲಿ (ಡೈರೆಕ್ಟರುಗಳಾಗಿ) ಇರತಕ್ಕುದು ಮತ್ತು ಇವರುಗಳಲ್ಲೊಬ್ಬರಾದ ಮಿ|| ಕೆ. ಯು. ಶ್ಯಾಮರಾವ್‌ರವರು ಡೈರೆಕ್ಟರುಗಳ ಬೋರ್ಡಿನ ಚೇರ್ಮನ್ನರಾಗಿದ್ದು ಡೈರೆಕ್ಟರ ಜನರಲ್‌ಬೋರ್ಡಿನವರಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸತಕ್ಕದ್ದು - ಎಂದಿರುವುದು ಈ ಮೂಲಕ ರದ್ದುಮಾಡಲ್ಪಟ್ಟಿರುವುದಾಗಿ ರೆಜಲ್ಯೂಷನ್ ಮಾಡುವುದಕ್ಕಾಗಿ.

3. 84 ನೇ ಆರ್ಟಿಕಲ್ಲಿನಲ್ಲಿ - 75 ನೇ ಆರ್ಟಿಕಲ್ಲಿನಲ್ಲಿ ಕಂಡ ನಿಬಂಧನೆಗನುಸಾರವಾಗಿ - ಎಂದಿರುವುದು ಈ ಮೂಲಕ ತೆಗೆದುಹಾಕಲ್ಪಟ್ಟಿದೆ ಎಂದು ರೆಜಲ್ಯೂಷನ್ ಮಾಡುವುದಕ್ಕಾಗಿ.

4. 88 ನೇ ಆರ್ಟಿಕಲ್ಲಿನಲ್ಲಿ - ತಾತ್ಕಾಲಿಕ ಅಗ್ರಿಮೆಂಟಿನ ಷರತ್ತುಗಳಿಗನುಗುಣವಾಗಿ ಮತ್ತು 75ನೇ ಆರ್ಟಿಕಲ್ಲಿನಲ್ಲಿ ಹೇಳಿರುವ ಮೇರೆಗೆ - ಎಂಬ ಶಬ್ದಗಳು ತೆಗೆದುಹಾಕಲ್ಪಟ್ಟಿವೆ ಎಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

5. ಕಂಪೆನಿಯ ಡೈರೆಕ್ಟರುಗಳು 1924 ನೇ ಏಪ್ರಿಲ್ ತಾ|| 27 ರಲ್ಲಿ ಮತ್ತು ಮೇ ತಾ|| 18 ರಲ್ಲಿ ಮೈಸೂರಿನಲ್ಲಿ ನಡೆದ ಷೇರುಹೋಲ್ಡರುಗಳ ಜನರಲ್ ಮತ್ತು ಕನ್ಫರ್ಮೇಟರಿ ಮೀಟಿಂಗುಗಳಲ್ಲಿ ಮಾಡಿಕೊಂಡ ಅಗ್ರಿಮೆಂಟುಗಳು ರದ್ದುಪಡಿಸಲ್ಪಟ್ಟಿವೆ ಮತ್ತು ಮೇಲೆ ಹೇಳಿದ ಅಗ್ರಿಮೆಂಟುಗಳು ಲಾಕ್ಕೆ ವಿರೋಧವಾಗಿರುವುದರಿಂದ ಕಂಪೆನಿಯನ್ನು ಬಾಧಿಸುವುದಿಲ್ಲವೆಂದು ರೆಜ್ಯುಲ್ಯೂಷನ್ ಮಾಡುವುದಕ್ಕಾಗಿ.

6. ಕಂಪೆನಿಯೊಡನೆ ಅಗ್ರಿಮೆಂಟ್‌ಮಾಡಿಕೊಂಡಿರುವ ಡೈರೆಕ್ಟರುಗಳು ಅಂದರೆ ಮೆಸರ್ಸ್. ಎಂ. ಪಿ. ಭೋಗಯ್ಯನವರು, ಎಲ್. ಬಸಪ್ಪನವರು ಮತ್ತು ಎ. ಜಿ. ರಾಂರವರು ಇವರುಗಳ ದೆಸೆಯಿಂದಲೂ, ಇತರ ಕಾರಣಗಳಿಂದಲೂ ಕಂಪೆನಿಗೆ ಬಹಳ ನಷ್ಟವಾಗಿರುವುದರಿಂದ ಈ ಮೂವರೂ ಡೈರೆಕ್ಟರುಗಳ ಬೋರ್ಡಿನಿಂದ ವಜಾಮಾಡಲ್ಪಡಬೇಕೆಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

7. 52 ನೇ ಆರ್ಟಿಕಲ್ಲಿನಲ್ಲಿರುವ - ಡೈರೆಕ್ಟರುಗಳಿಂದ ಗೊತ್ತುಮಾಡಲ್ಪಡುವಂತಹ ಮೈಸೂರುಸೀಮೆಯೊಳಗೆ ಯಾವ ಸ್ಥಳದಲ್ಲಾದರು - ಎಂಬ ಶಬ್ದಗಳನ್ನು ಈ ಮೂಲಕ ರದ್ದುಪಡಿಸಿ. - ಡೈರೆಕ್ಟರುಗಳಿಂದ ಗೊತ್ತುಪಡಿಸಲ್ಪಡುವ ಮದ್ರಾಸು ಅಧಿಪತ್ಯದ ಯಾವಸ್ಥಳದಲ್ಲಾದರು - ಎಂಬ ಶಬ್ದಗಳನ್ನು ಸೇರಿಸಬೇಕೆಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

8. 153 ನೇ ಆರ್ಟಿಕಲ್ಲಿನ 2 ನೇ ಪಂಗ್ತಿಯಲ್ಲಿರುವ - ಮೈಸೂರು ಸ್ಟೇಟಿನಲ್ಲಿ - ಎಂಬ ಶಬ್ದಗಳನ್ನು ತೆಗೆದು - ಮದ್ರಾಸು ಅಧಿಪತ್ಯದಲ್ಲೆಲ್ಲಾದರು - ಎಂಬ ಶಬ್ದಗಳನ್ನು ಸೇರಿಸಬೇಕೆಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

9. 159 ನೇ ಆರ್ಟಿಕಲ್ಲಿನ 6 ನೇ ಮತ್ತು 7 ನೇ ಪಂಗ್ತಿಗಳಲ್ಲಿರುವ - ಪಾಲಿಸಿ ಅಥವಾ ಪಾಲಿಸಿಗಳಿಗಾಗಿ ಸಾಲಗಾರರಾಗಿಲ್ಲದಿರುವ ಯಾವ ಮನುಷ್ಯನಾದರು ಎಂಬುದಕ್ಕೆ ಬದಲಾಗಿ ಪಾಲಿಸಿ ಅಥವಾ ಪಾಲಿಸಿಗಳಿಗೆ ಹಣ ಕಟ್ಟುವುದಕ್ಕಾಗಿ ಕಂಪೆನಿಯಿಂದ ಯಾವ ಸಾಲವನ್ನೂ ತೆಗೆದುಕೊಳ್ಳದಿರುವಂಥ ಮನುಷ್ಯನು - ಎಂಬ ಶಬ್ದಗಳನ್ನು ಸೇರಿಸಬೇಕೆಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

10. ಮಿ|| ಕೆ. ಎಸ್. ಭದ್ರಯ್ಯಶೆಟ್ಟರು ಜನರಲ್‌ಬೋರ್ಡಿನ ಡೈರೆಕ್ಟರುಗಳಲ್ಲೊಬ್ಬರಾಗಿ ಚುನಾಯಿಸಲ್ಪಡಬೇಕೆಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

11. ಡೈರೆಕ್ಟರುಗಳ ಬೋರ್ಡಿನಲ್ಲಿ ಖಾಲಿಯಾಗಿರುವ ಸ್ಥಳಗಳಿಗೆ ಇತರರನ್ನು ಡೈರೆಕ್ಟರುಗಳನ್ನಾಗಿ ಚುನಾಯಿಸಿ ಭರ್ತಿಮಾಡಬೇಕೆಂದು ರೆಜ್ಯುಲೇಷನ್ ಮಾಡುವುದಕ್ಕಾಗಿ.

12. 151 ನೇ ಆರ್ಟಿಕಲ್ಲಿನ 2 ನೇ ಪಂಗ್ತಿಯಲ್ಲಿರುವ - ಕಂಪೆನಿಯ ಕೆಲಸಗಳನ್ನು ಅಲ್ಲಿ ನಡಿಸುವುದು - ಎಂಬ ಮಾತುಗಳನ್ನು ತೆಗೆದು - ಕಂಪೆನಿಯ ಕೆಲಸಕಾರ್ಯಗಳನ್ನು ಮದ್ರಾಸಾಧಿಪತ್ಯದಲ್ಲಿರುವ ಹೆಡ್ಡಾಫೀಸಿನಲ್ಲಿ ನಡಿಸುವುದು - ಎಂದು ಸೇರಿಸಬೇಕಾಗಿ ರೆಜ್ಯುಲೇಷನ್ ಮಾಡುವುದಕ್ಕಾಗಿ.

ಅಲ್ಲದೆ ಮೇಲ್ಕಂಡ ಸ್ಪೆಷಲ್ ರೆಜ್ಯುಲೇಷನ್ನುಗಳನ್ನು ಮುವ್‌ಮಾಡಿ ಕನ್ಫರಂಮಾಡುವುದಕ್ಕಾಗಿ ಏಷ್ಯಾಟಿಕ್‌ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ಡಿನ ಮೂಲಧನದಲ್ಲಿ $\frac{1}{10}$ ಕ್ಕೆ ಕಡಮೆಯಿಲ್ಲದಷ್ಟು ಷೇರುಗಳನ್ನು ತೆಗೆದುಕೊಂಡಿರುವ ಈ ಕೆಳಗೆ ರುಜುಮಾಡಿರುವವರಾದ ನಾವುಗಳು ಕಂಪೆನಿಯ ಆರ್ಟಿಕಲ್ಸುಗಳ ನಿಬಂಧನೆಗಳಿಗನುಸಾರವಾಗಿ ಷೇರುಹೋಲ್ಡರುಗಳ ಎಕ್ಸ್ಟ್ರಾ ಆರ್ಡಿನರಿ ಜನರಲ್ ಕನ್ಫರ್ಮೇಟರಿ ಮೀಟಿಂಗನ್ನು ಕ್ಲುಪ್ತಕಾಲದಲ್ಲಿ ಬೆಂಗಳೂರುಸಿಟಿಯಲ್ಲಿರುವ ಹೆಡ್ಡಾಫೀಸ್ ಕಟ್ಟಡದಲ್ಲಿ ನಡಿಸಬೇಕೆಂದು ಈ ನೋಟೀಸ್‌ಮೂಲಕ ತಿಳಿಸಿರುತ್ತೇವೆ.

ಅಖಿಲಭಾರತವೀರಶೈವಮಹಾಸಭಾಚಿರಸ್ಥಾಯಿಫಂಡ್ ಮ್ಯಾನೇಜಿಂಗ್‌ಕಮಿಟಿ ಮೀಟಿಂಗ್.

ತಾ|| 2-9-1926 ನೇ ಗುರುವಾರ ಸಾಯಂಕಾಲ 6 ಘಂಟೆಯಲ್ಲಿ ಬೆಂಗಳೂರುಸಿಟಿ ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಚೆಟ್ಟರು ಕೆಟಿ. ಸಿ. ಐ. ಇ. ಯವರ ಅಧ್ಯಕ್ಷತೆಯಲ್ಲಿ ನೆರೆದು 1926 ನೇ ಡಿಸೆಂಬರ್ ತಿಂಗಳಲ್ಲಿ ವೀರಶೈವಮಹಾಸಭೆಯನ್ನು ಹುಬ್ಬಳ್ಳಿಯಲ್ಲಿ ಕೂಡಿಸಬೇಕೆಂದು ಹುಬ್ಬಳ್ಳಿ ವೀರಶೈವಮಹಾಜನರ ಸಭೆಯಿಂದ ಬಂದಿರುವ ಅಪ್ಲಿಕೇಷನ್‌ವಿಷಯ ಆಲೋಚಿಸಲ್ಪಟ್ಟು ಈಸಲಕ್ಕೆ ಸ್ಪೆಷಿಯಲ್ ಕೇಸಾಗಿ ಚಿರಸ್ಥಾಯಿಫಂಡಿನಿಂದ 4,000 ರೂಪಾಯಿಗಳನ್ನು ಸದರಿ ಫಂಡಿನ ನಿಬಂಧನೆಗಳಿಗೆ ಒಳಪಟ್ಟು ಕೊಡುವದಾಗಿ ಠರಾವು ಮಾಡಲ್ಪಟ್ಟಿತು.

P. Mahadevayya,
ಸೆಕ್ರೆಟರಿ

ತಾ|| 3-9-26. ಅ. ಭ. ವೀ. ಮ. ಚಿ. ಫಂಡ್ ಬೆಂಗಳೂರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ತಿರಸ್ಕೃತಲೇಖಗಳು.

(1) K. Y. Mallasottappa, ಬೆಂಗಳೂರು.—ಬೆಂಗಳೂರು ವೀರಶೈವವಿದ್ಯಾಭಿವೃದ್ಧಿಫಂಡಿಗಾಗಿ ಲಗ್ನಗಳಲ್ಲಿ ತೆಗೆಯಲ್ಪಟ್ಟ ಹಣವು ತೆಗೆದುಕೊಂಡ ದೊಡ್ಡಮನುಷ್ಯರಿಂದ ಫಂಡಿನ ಸೆಕ್ರೆಟರಿಯವರಲ್ಲಿಗೆ ಸಲ್ಲಿಸಲ್ಪಡಲಿಲ್ಲವೆಂದು ಸೆಕ್ರೆಟರಿಯವರು ಉತ್ತರಕೊಟ್ಟಿರುತ್ತಾರೆಂದು ಮೊದಲಾಗಿ ಬರೆದಿರುತ್ತೀರಿ. ಹಣವನ್ನು ತೆಗೆದುಕೊಂಡ ದೊಡ್ಡಮನುಷ್ಯರು ಕಳುಹಿಸಲು ಮರೆತಿರಬಹುದಾದುದರಿಂದ ನೀವು ಆ ದೊಡ್ಡಮನುಷ್ಯರಿಗೆ ಬರೆದು ಅವರಿಂದ ನಿಜಸ್ಥಿತಿಯನ್ನು ತಿಳಿಯುವುದುತ್ತಮವು.—ಸಂ.

ಪೋಲೀಸು ಆಫೀಸರಿಗಾದ ಸನ್ಮಾನ.

ಅಜ್ಜಂಪುರಕ್ಕೆ ಈಗ್ಗೆ 6-7 ತಿಂಗಳ ಕೆಳಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರಾಗಿ ಬಂದಿದ್ದ ಮ|| ಬಿ. ಮೋಹನ್‌ಸಿಂಗ್‌ರವರು ಬಹಳ ಸ್ವಲ್ಪದಿವಸಗಳಲ್ಲಿಯೇ ಶೃಂಗೇರಿಗೆ ವರ್ಗಾಯಿಸಲ್ಪಟ್ಟರು. ಇವರು ಇಲ್ಲಿದ್ದ ಸ್ವಲ್ಪಕಾಲದಲ್ಲಿ ಬಹಳ ಶ್ರದ್ಧೆಯಿಂದಲೂ ನಿಷ್ಪಕ್ಷಪಾತತೆಯಿಂದಲೂ ಸರ್ಕಾರೀ ಕೆಲಸ ಮಾಡಿ ಸಮಸ್ತಜನರ ಪ್ರೀತಿವಿಶ್ವಾಸಕ್ಕೆ ಪಾತ್ರರಾಗಿದ್ದುದರಿಂದ ಇವರು ಸ್ವಲ್ಪಕಾಲದಲ್ಲೇ ವರ್ಗವಾದುದಕ್ಕಾಗಿ ಎಲ್ಲರಿಗೂ ಬಹಳ ವ್ಯಸನವಾಗಿರುತ್ತದೆ, ಮತ್ತು ಇಲ್ಲಿಯ ವರ್ತಕರುಗಳೂ ಇತರರೂ ಮ|| ಬಿ. ಮೋಹನ್‌ಸಿಂಗ್‌ರವರನ್ನು ಬರಮಾಡಿಕೊಂಡು ಒಂದು ಸಭೆಯನ್ನು ನಡಿಸಿ ಅವರ ಗುಣವರ್ಣನೆಯನ್ನುಮಾಡಿ ಸಂಗೀತಶ್ರವಣದಿಂದಲೂ ಗಂಧಪುಷ್ಪ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಿ ಅವರಲ್ಲಿ ತಮಗಿದ್ದ ಪ್ರೀತಿವಿಶ್ವಾಸವನ್ನು ಪ್ರದರ್ಶಿಸಿ ಅವರ ಶ್ರೇಯಃಪ್ರಾರ್ಥನೆಯನ್ನುಮಾಡಿ ಬೀಳ್ಕೊಟ್ಟರು.

ಸ್ಥಳವಾಸಿ.

ಶೆಟ್ಟಿಕೆರೆಯ ಕೊರತೆ.

ಚಿಕ್ಕನಾಯಕನಹಳ್ಳಿ ತಾ|| ಶೆಟ್ಟಿಕೆರೆಗ್ರಾಮದಲ್ಲಿ 500 ಮನೆಗಳೂ 2,000 ಪ್ರಜಾಸಂಖ್ಯೆಯೂ, ಮ್ಯುನಿಸಿಪಾಲಿಟಿಯೂ ಇರುವವು ಮತ್ತು ಇದರ ಸುತ್ತಮುತ್ತ ಅನೇಕ ಗ್ರಾಮಗಳಿರುವವು. ಇಷ್ಟು ದೊಡ್ಡಗ್ರಾಮವಾಗಿದ್ದರೂ ನಿತ್ಯದಲ್ಲೂ ಟಪ್ಪಾಲು ಬರದಿರುವುದರಿಂದಲೂ, ಪೊಲೀಸು ಠಾಣಾ, ಆಸ್ಪತ್ರೆ ಮತ್ತು ಚಿಕ್ಕನಾಯಕನಹಳ್ಳಿ, ತಿಪಟೂರೂ ಮೊದಲಾದ ಗ್ರಾಮಗಳಿಗೆ ಬಂಡಿಗಳು ಹೋಗಿಬರಲು ಸರಿಯಾದ ರಸ್ತೆಯಿಲ್ಲದಿರುವದರಿಂದಲೂ, ಮ್ಯುನಿಸಿಪಾಲಿಟಿಯವರು ಸರಿಯಾಗಿ ನಿಗಾವಣೆ ತೆಗೆದುಕೊಳ್ಳದಿರುವುದರಿಂದ ಜನಾರೋಗ್ಯಕ್ಕೆ ತೊಂದರೆಯಾಗಿರುವುದರಿಂದಲೂ ಈ ಗ್ರಾಮಾಭಿವೃದ್ಧಿಗೆ ಅವಕಾಶವಿಲ್ಲದಂತಾಗಿದೆಯೆಂದು ಅನೇಕಸಾರಿ ಮೇಲ್ಪಟ್ಟ ಅಧಿಕಾರಿಗಳಲ್ಲಿ ಅರಿಕೆಮಾಡಿಕೊಂಡಾಗ್ಯೂ ಅವರ ಚಿತ್ತಕ್ಕೆ ಬರಲಿಲ್ಲ. ಆದ್ದರಿಂದ ಪೋಸ್ಟಲ್ ಅಧಿಕಾರಿಗಳೂ, ಸರ್ಕಾರಿಯಧಿಕಾರಿಗಳೂ ಮೇಲ್ಕಂಡ ಕೊರತೆಗಳನ್ನು ನಿವಾರಿಸಿಕೊಟ್ಟು ಗ್ರಾಮಾಭಿವೃದ್ಧಿಗೆ ಅವಕಾಶವನ್ನುಂಟುಮಾಡಿ ಗ್ರಾಮಸ್ಥರ ಕೃತಜ್ಞತೆಗೆ ಪಾತ್ರರಾಗಬೇಕೆಂದು ಬೇಡುವ.

ಗ್ರಾಮವಾಸಿ.

ಶಿವಲಿಂಗಸ್ಥಾಪನೆ.

ತರೀಕೆರೆ ತಾ|| ಬುಕ್ಕಾಂಬುಧಿಗ್ರಾಮದಲ್ಲಿ ಕಳೆದ 1 ವರ್ಷದಾರಭ್ಯ ಈಶ್ವರಧ್ಯಾನದಲ್ಲಿ ಕಾಲಹರಣಮಾಡುತ್ತಿದ್ದ ಒಬ್ಬ ಶರಣರು ಈ ಗ್ರಾಮಕ್ಕೆ ವಾಯುವ್ಯದಿಕ್ಕಿನಲ್ಲಿ 200 ಗಜ ದೂರದಲ್ಲಿರುವ ಭೈರವೇಶ್ವರನ ಬೆಟ್ಟದಲ್ಲಿ ಹೋದವರ್ಷ ಶ್ರಾವಣಮಾಸದಲ್ಲಿ ಶ್ರೀಮದುಜ್ಜಯಿನಿ ಜಗದ್ಗುರುಗಳು ಭಕ್ತರ ಶ್ರೇಯೋಭಿವೃದ್ಧಿಯನ್ನು ಕೋರಿ ಶಿವಪೂಜಾನುಷ್ಠಾನಮಾಡಿದ ಸ್ಥಳದಲ್ಲಿ ಶಿವಲಿಂಗಪ್ರತಿಷ್ಠೆಯನ್ನು ಪುರನಿವಾಸಿಗಳ ಸಹಾಯದಿಂದ ಹಣ್ಣೆ ಪಟ್ಟದ ಸ್ವಾಮಿಗಳ ಮುಖಾಂತರ ವಿಧ್ಯುಕ್ತವಾಗಿ ಮಾಡಿಸಿ 400-500 ಜನರನ್ನು ಗಣಾರಾಧನೆಯಿಂದ ತೃಪ್ತಿಗೊಳಿಸಿ ಶ್ರೀ ಜಗದ್ಗುರುಗಳಲ್ಲಿ ಬಿನ್ನೈಸಿಕೊಂಡು ಅವರ ಆಶೀರ್ವಾದವನ್ನು ಪಡೆದರೆಂದು ತಿಳಿಸಲು ಸಂತೋಷವಾಗುತ್ತದೆ. ಈ ಶರಣರ ಸತ್ಸಂಕಲ್ಪವನ್ನು ನೆರವೇರಿಸಲು ಬದ್ಧಕಂಕಣರಾಗಿ ನಿಂತಿದ್ದ ಸದರಿ ಗ್ರಾಮದ ಎಚ್. ಪರಪ್ಪ, ಡಿ. ರುದ್ರಪ್ಪ, ಬಿ. ಟಿ. ಗಂಗಪ್ಪಯ್ಯ, ಕೆ. ಗುರುಸಿದ್ದಯ್ಯ ಈ ಸದ್ಭಕ್ತರುಗಳು ಗ್ರಾಮಾಧಿಪತಿಯಾದ ಪಂಚಲಿಂಗೋದ್ಭವ ಶ್ರೀ ವಿರೂಪಾಕ್ಷೇಶ್ವರನ ಸೇವೆಯನ್ನೂ ಮಾಡಿ ಅವನ ಪೂರ್ಣಾನುಗ್ರಹಕ್ಕೆ ಪಾತ್ರರಾಗಲೆಂದು ಕೋರುವ, ದೈವಭಕ್ತ.

ಶ್ರೀ ವೀರಭದ್ರಸ್ವಾಮಿಪ್ರಸಾದಿತನಾಟಕಮಂಡಲಿ.

ಶಿಕಾರಿಪುರ ತಾ|| ಬಳಿಗೆಗ್ರಾಮದಲ್ಲಿ ಹೊನ್ನಪ್ಪಗೌಡರು ಸಾಹುಕಾರ್, ಚೆನ್ನಬಸಪ್ಪನವರು ಮೊದಲಾದ ಮುಖಂಡರು ಚಂದಾಹಣವನ್ನೆತ್ತಿ ಬಾಲಕರುಗಳಿಗೆ ಸಂಗೀತವಿದ್ಯೆಯನ್ನು ಹೇಳಿಸಿ ಮೇಲ್ಕಂಡ ನಾಟಕ ಕಂಪನಿಯನ್ನೇರ್ಪಡಿಸಿರುವರು. ಈ ಕಂಪನಿಯವರು ಸೊರಬ ತಾ|| ಚಂದ್ರಗುತ್ತಿ ರೇಣುಕಾಂಬೆಯ ಜಾತ್ರೆಯಕಾಲದಲ್ಲಿ 3-4 ಆಟಗಳನ್ನು ಆಡಿ ಪ್ರೇಕ್ಷಕರ ಮನಸ್ಸಿಗೆ ಆನಂದವನ್ನುಂಟುಮಾಡಿದ್ದರ ಮೇಲೆ ಬಾಲಭೋಜನ ಪಾರ್ಟಿನ್ನೂ, ಕಲಾವತಿಯ ಪಾರ್ಟನ್ನೂ ಮಾಡಿದ ಬಾಲಕರುಗಳಿಗೆ ಭಂಗಾರದ ಪದಕಗಳನ್ನೂ ರೂಪಾಯಿಗಳನ್ನೂ ಬಹುಮಾನಿಸಿ ಅವರ ಯೋಗ್ಯತೆಯನ್ನು ಕುರಿತು ಬಹಳವಾಗಿ ಶ್ಲಾಘಿಸಿದರು. ಈ ಕಂಪನಿಯವರು ತಮಗೆ ಬಂದೊದಗಿದ್ದ ಕಂಟಕಗಳನ್ನೆಲ್ಲಾ ಪರಿಹರಿಸಿಕೊಂಡು ಇಷ್ಟರಮಟ್ಟಿಗೆ ಶ್ಲಾಘ್ಯವಾಗಿ ನಾಟಕಗಳನ್ನಾಡಿ ಬಹುಮಾನವನ್ನು ಹೊಂದಿರುವದು ಸ್ತೋತ್ರಾರ್ಹವಾಗಿದೆ. ಇವರು ಇನ್ನೂ ಅತಿಶಯವಾಗಿ ನಾಟಕಪ್ರಯೋಗಗಳನ್ನು ಮಾಡಿ ಹೆಚ್ಚು ಬಹುಮಾನಗಳನ್ನು ಹೊಂದಲೆಂದು ಕೋರುವ,

G. N. V., ಸ್ಕೂಲ್ಮಾಸ್ಟರ್.

ಧರ್ಮಕರ್ತರು ಗಮನಿಸತಕ್ಕದ್ದು.

ಕೋಲಾರ ಡಿ|| ಚಿಂತಾಮಣಿ ತಾ|| ಚಿಲಮಕೋಟೆಯ ಮುಕ್ತಗಿರಿಮಠದ ಬಳಿ ಬೆಂಗಳೂರು ಡಿ|| ವಡಗೇನಹಳ್ಳಿಯ ಹು. ರುದ್ರಪ್ಪನವರು, ಚಿಕ್ಕವೀರಣ್ಣನವರು ಮೊದಲಾದ ದೊಡ್ಡಮನುಷ್ಯರುಗಳು ವರ್ಷಕ್ಕೊಂದಾವರ್ತಿ ಬಂದು ಜನರಿಗೆ ಅನ್ನಸಂತರ್ಪಣೆ ಮಾಡಿಸುತ್ತಿರುವರು, ಮತ್ತು ಈ ಸ್ಥಳದಲ್ಲಿ ಜನರು ಇಳಿದುಕೊಳ್ಳಲು ಅನುಕೂಲವಾಗಿರುವಂತೆ ಒಂದು ಛತ್ರವನ್ನು ಈಗ್ಗೆ 25 ವರ್ಷಗಳಲ್ಲಿ ಕಟ್ಟಿಸಿದರು. ಆದರೆ ಕಟ್ಟಡಕ್ಕೆ ಕಿಟಿಕಿ ಬಾಗಿಲುಗಳನ್ನಿಡಿಸಿ ಗಾರೆಗಚ್ಚುಮಾಡಿಸದೆ ಬಿಟ್ಟಿರುವದರಿಂದ ಜನಗಳು ಇಳಿದುಕೊಳ್ಳಲು ಮಾರ್ಗವಿಲ್ಲದಿರುವದಲ್ಲದೆ ಕಟ್ಟಡವು ಶಿಥಿಲವಾಗುತ್ತಿರುವದು. ಹೀಗೆ ಇನ್ನೂ ಸ್ವಲ್ಪಕಾಲ ಬಿಟ್ಟಲ್ಲಿ ಕಟ್ಟಡವು ಸಂಪೂರ್ಣವಾಗಿ ಬಿದ್ದುಹೋಗಿ ಧರ್ಮಕರ್ತರ ಉದ್ದೇಶವು ಸಫಲವಾಗುವುದಿಲ್ಲವಾದ್ದರಿಂದ ಮೇಲ್ಕಂಡ ದೊಡ್ಡಮನುಷ್ಯರು ತಮ್ಮ ಗಮನಕ್ಕೆ ತಂದುಕೊಂಡು ಕೂಡಲೆ ರಿಪೇರಿಮಾಡಿಸಿ ಖರ್ಚುಮಾಡಿದ ದುಡ್ಡು ಸಾರ್ಥಕವಾಗಿ ಜನಗಳಿಗೆ ಉಪಯೋಗವಾಗುವಂತೆಮಾಡಿ ಈಶ್ವರನ ಅನುಗ್ರಹಕ್ಕೆ ಪಾತ್ರರಾಗಲೆಂದು ಕೋರುವ,

ಸ್ಥಳವಾಸಿ.

ಅದವಾನಿ.

ಇಲ್ಲಿಯ ಮ್ಯುನಿಸಿಪಲ್‌ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸುವಾಗ್ಗೆ ಅನೇಕರು ಉಮೇದುವಾರರುಗಳಾಗಿ ನಿಂತು ಪೈಪೋಟಿ ಮಾಡುತ್ತಿದ್ದುದರಿಂದ ಒಬ್ಬರಿಗೊಬ್ಬರಿಗೆ ಮನಸ್ತಾಪ, ದುಡ್ಡು ಖರ್ಚು ಮೊದಲಾದ ಅವ್ಯವಸ್ಥೆಯು ನಡೆಯುತ್ತಿದ್ದಿತು. ಆದರೆ ಈ ವೇಳೆ 6 ಸ್ಥಳಗಳಿಗೆ 6 ಜನರು ಮಾತ್ರ ಉಮೇದುವಾರರಾಗಿ ನಿಂತಿದ್ದುದರಿಂದ ಪೈಪೋಟಿಗೂ ಮನಸ್ತಾಪಕ್ಕೂ ದುಡ್ಡು ಖರ್ಚಿಗೂ ಅವಕಾಶವಿಲ್ಲದೆ ಚುನಾವಣೆಯು ನಿರಾಯಾಸವಾಗಿ ನಡೆದಿತೆಂದು ತಿಳಿಸಲು ಸಂತೋಷವಾಗುತ್ತದೆ. ಬರುವ ಡಿಸೆಂಬರ್ ತಿಂಗಳಲ್ಲಿ ವೀರಶೈವಮಹಾಸಭೆಯನ್ನು ನಡಿಸಲು ಹುಬ್ಬಳ್ಳಿಯ ನಮ್ಮ ವೀರಶೈವಬಂಧುಗಳು ನಿರ್ಧರಿಸಿರುವದಾಗಿ ಈ ಸ್ಟಾರ್‌ಪತ್ರಿಕೆಯಿಂದ ತಿಳಿದು ನಮ್ಮಗಳಿಗೆ ಬಹಳ ಸಂತೋಷವಾಯಿತಲ್ಲದೆ, ಈ ಮಹನೀಯರು ಕೈಕೊಂಡಿರುವ ಈ ಸಮಾಜೋದ್ಧಾರಕ ಕಾರ್ಯವು ನಿರ್ವಿಘ್ನವಾಗಿ ನಡೆಯುವಂತೆ ಆಶೀರ್ವದಿಸಲೆಂದು ಈಶ್ವರನನ್ನು ಪ್ರಾರ್ಥಿಸುತ್ತೇವೆ. ಈ ಮಹಾಸಭೆಯನ್ನು ನಮ್ಮ ಪ್ರಾಂತ್ಯದವರು ನಡಿಸಲು ಯೋಚಿಸಿರುತ್ತಾರೆಂದು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಈ ಪ್ರಾಂತ್ಯದಲ್ಲಿ ಇಂಥಾ ದೊಡ್ಡ ಕಾರ್ಯವನ್ನು ನಡಿಸಿದ ಅನುಭವಸ್ಥರಾಗಲಿ ದೊಡ್ಡ ವಿದ್ಯಾವಂತರಾಗಲಿ ಹೆಚ್ಚಾಗಿಲ್ಲವಾದ್ದರಿಂದ ಈ ವೇಳೆ ಹುಬ್ಬಳ್ಳಿಯಲ್ಲಿ ನಡಿಯುವ ಸಭೆಯನ್ನು ನೋಡಿ ಎಲ್ಲಾ ಸಂಗತಿಗಳ ಅನುಭವಪಡೆದುಕೊಂಡು ಮುಂದಣ ವರ್ಷದಲ್ಲಿ ಮಾಡಲು ಪ್ರಯತ್ನಿಸುವುದು ಶ್ರೇಯಸ್ಕರವು.

ಸ್ಥಳವಾಸಿ.

ಇದಲ್ಲವೇ ಪಿತೃಭಕ್ತಿ ?

ಚಾಮರಾಜನಗರದ ತಾಲ್ಲೂಕು ಕುದೇರುಗ್ರಾಮದ ಸಾಹುಕಾರ್ ವೀರಭದ್ರಪ್ಪನವರು ಕೈಲಾಸವಾಸಿಗಳಾಗಿ ಈಗ್ಗೆ ಸುಮಾರು 9 ತಿಂಗಳ ಮೇಲಾಯಿತು. ಈ ಮಹನೀಯರು ತಮ್ಮ ಜೀವಿತಕಾಲದಲ್ಲಿ ಪರೋಪಕಾರಿಗಳಾಗಿದ್ದುಕೊಂಡು ವೇದಾಂತಮಾರ್ಗವನ್ನು ಅನುಸರಿಸಿ ಲಿಂಗಾಂಗಸಾಮರಸ್ಯವನ್ನು ಅರಿತು ಅಂತ್ಯಕಾಲದಲ್ಲಿ ಶಿವನಾಮಸ್ಮರಣೆಯಿಂದ ಪರಂಧಾಮವನ್ನೈದಿದರು. ಈ ಮಹನೀಯರ ಮಕ್ಕಳುಗಳಾದ ಮ|| ಕೆ. ವಿ. ವೀರಣ್ಣನವರು ಮತ್ತು ಇವರ ತಮ್ಮ ಕೆ. ವಿ. ಶಾಂತವೀರಪ್ಪನವರು ಶಾಸ್ತ್ರಸಮ್ಮತಿಯಿಂದ ತಮ್ಮ ಪಿತೃಗಳವರ ಕ್ರಿಯಾಸಮಾಧಿಯನ್ನು ಮಾಡಿಸಿ ಪಿತೃದೈವಕ್ಕಿಂತಲೂ ಅನ್ಯದೇವರಿಲ್ಲವೆಂದು ಇವರು ಭಾವಿಸಿ ಭಕ್ತಿಯಿಂದ ಪ್ರತಿದಿನವೂ ಪೂಜಿಸುವುದಕ್ಕಾಗಿ ಸುಮಾರು 4,000 ರೂಪಾಯಿಗಳವರೆಗೆ ವೆಚ್ಚಮಾಡಿ ಅಂದವಾದ ಗದ್ದಿಗೆಯನ್ನು ಕಟ್ಟಿಸಿ ಕಳೆದ ತಾ|| 23 ರಲ್ಲಿ ಗದ್ದಿಗೆಗೆ ಸಂಪ್ರೋಕ್ಷಣೆಯನ್ನು ಮಾಡಿಸಿ ಸಾವಿರಾರುಜನಗಳನ್ನು ಸಂತರ್ಪಣೆಯಿಂದ ಸತ್ಕರಿಸಿ ಪಿತೃಭಕ್ತಿಯನ್ನು ತೋರ್ಪಡಿಸಿದುದು ಶ್ಲಾಘ್ಯವಾಗಿದೆ. ಮಾತಾಪಿತೃಗಳ ಭಕ್ತಿಯೇ ಮಕ್ಕಳ ಇಹಪರಸುಖಗಳಿಗೆ ಮುಖ್ಯ ಕಾರಣವೆಂದು ನಂಬಿರುವ ಈ ಸಹೋದರರು ತಂದೆತಾಯಿಗಳನ್ನು ನಿರ್ಲಕ್ಷ್ಯದಿಂದ ಕಾಣುವ ಈಗಿನ ಯುವಕರುಗಳಿಗೆ ಮೇಲುಪಂಕ್ತಿಯಾಗಿರುವರೆನ್ನುವುದರಲ್ಲಿ ಸಂದೇಹವಿಲ್ಲ. ಪಿತೃಭಕ್ತಿಪರರಾದ ಈ ಸಹೋದರರು ತಮ್ಮ ತಂದೆಯವರ ಹೆಸರಿನಲ್ಲಿ ಯಾವುದಾದರೊಂದು ಶಾಶ್ವತವಾದ ವಿದ್ಯಾಭಿವೃದ್ಧಿ ಕಾರ್ಯವನ್ನು ಮಾಡಿ ತಮ್ಮ ಪಿತೃಭಕ್ತಿಯು ಆಚಂದ್ರಾರ್ಕವಾಗಿ ಪ್ರಸಿದ್ಧವಾಗಿರುವಂತೆ ಮಾಡಿ ಪರಮೇಶ್ವರನ ಪೂರ್ಣಾನುಗ್ರಹಕ್ಕೆ ಪಾತ್ರರಾಗಲೆಂದೂ ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಹೊಂದಲೆಂದೂ ಹಾರೈಸುವ,

ಗುಣಗ್ರಾಹಿ.

ಶ್ರೀರಂಭಾಪುರೀ ಜಗದ್ಗುರುಗಳ ಆಗಮನೋತ್ಸವ.

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶಿವಾನಂದ ರಾಜದೇಶೀಕೇಂದ್ರಮಹಾಸ್ವಾಮಿಗಳು ಹಾರನಹಳ್ಳಿ ವೀರಶೈವರ ಪ್ರಾರ್ಥನೆಯಂತೆ ಕಳೆದ ಆಗಸ್ಟು ತಾ|| 12 ರಲ್ಲಿ ಸಮಸ್ತ ಬಿರುದಾವಳಿಗಳಿಂದ ದಯಮಾಡಿಸಿದರು. ಮಹಾಸ್ವಾಮಿಯವರ ಆಗಮನಾರ್ಥವಾಗಿ ಹಾರನಹಳ್ಳಿಯು ತಳಿರುತೋರಣಾದಿಗಳಿಂದಲೂ ಧ್ವಜಪತಾಕೆಗಳಿಂದಲೂ ಚಪ್ಪರಗಳಿಂದಲೂ ಅಲಂಕರಿಸಲ್ಪಟ್ಟಿದ್ದು ಪುರಜನರು ಊರಹೊರಗೆ ಫಲಪುಷ್ಪಾದಿಗಳಿಂದಲೂ ವಾದ್ಯವಿಶೇಷಗಳಿಂದಲೂ ಕಾದುಕೊಂಡಿದ್ದು ಮಹಾಸ್ವಾಮಿಯನ್ನು ಇದಿರ್ಗೊಂಡು ಉತ್ಸವದೊಡನೆ ಪುರಪ್ರವೇಶಮಾಡಿಸಿದರು. ಈ ಉತ್ಸವಕ್ಕಾಗಿ ನೆರೆದಿದ್ದ ಸ್ಥಳಪರಸ್ಥಳದ ಸಾವಿರಾರುಜನರು ಮಹಾಸ್ವಾಮಿಯ ದರ್ಶನದಿಂದ ಪುನೀತರಾದರೆಂದು ಹರ್ಷಧ್ವನಿಮಾಡಿದರು. ಅಸ್ಮದೀಯರು ತಮ್ಮ ಚಪ್ಪರದಲ್ಲಿ ಶ್ರೀಗಳವರಿಗೆ ವಿಜ್ಞಾಪನಾಪತ್ರಿಕೆಯನ್ನೋದಿ ಒಪ್ಪಿಸಿದರು. ಶ್ರೀಗಳು ಅವರಿಗೆ ತಕ್ಕುತ್ತರವನ್ನು ಹಿಂದುಸ್ಥಾನಿಭಾಷೆಯಲ್ಲೇ ಅಪ್ಪಣೆಕೊಡಿಸಿ ಎಲ್ಲರನ್ನೂ ಆಶೀರ್ವದಿಸಿ [illegible] ದಯಮಾಡಿ [illegible] ಸಭಾಮಂಟಪದಲ್ಲಿ [illegible] ಮಾಡಿ ಭಕ್ತಾದಿಗಳೊಪ್ಪಿಸಿದ ಕಾಣಿಕೆ ಫಲಪುಷ್ಪಗಳನ್ನು ಸ್ವೀಕರಿಸಿ ಸಮಸ್ತರನ್ನು ಆಶೀರ್ವದಿಸಿದರು. ಜಗದ್ಗುರುಗಳ ಸವಾರಿಯು ಹಾರನಹಳ್ಳಿಗೆ ಚಿತ್ತೈಸಿದ್ದು ಪುನಃ ಮುಂದಕ್ಕೆ ದಯಮಾಡಿಸುವವರೆಗೂ ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ಮಹಾಸನ್ನಿಧಿಯ ಸೇವೆಯಲ್ಲಿ ನಿರತರಾಗಿದ್ದ ಸಾಹುಕಾರ್ ಗಾಜನೂರು ಚೆನ್ನಪ್ಪನವರು, ಯಜಮಾನ್ ಜವಳಿ ಗುರುಬಸಪ್ಪನವರು, ದಿಮ್ಮಿಮುರಿಗೆಪ್ಪನವರು, ಕಳಶಿ ಬಸವಲಿಂಗಪ್ಪನವರು, ಸಾಹುಕಾರ್ ಪುಟ್ಟಣ್ಣನವರು ಶೆಟ್ಟರು ವೀರಪ್ಪನವರು ಮುಂತಾದ ಪ್ರಮುಖರನ್ನು ಜಗದ್ಗುರುಗಳು ಅವರ ಸೇವೆಗೆ ಮೆಚ್ಚಿ ಆಶೀರ್ವದಿಸಿದರು.

ಗುರುಭಕ್ತ.

ಶ್ರೀಮಜ್ಜಗದ್ಗುರು ಹಿಮವತ್ಕೇದಾರಸಿಂಹಾಸನಾಧೀಶ್ವರರ ಸನ್ನಿಧಿಯಲ್ಲಿ

ಬಳ್ಳಾರಿ ಡಿ|| ಕಂಪ್ಲಿಯ ವೀರಶೈವತರುಣಸಂಘದವರ ವಿಜ್ಞಾಪನೆ.

ಮಹಾಸ್ವಾಮಿಯ ಸವಾರಿಯು ನಮ್ಮ ಕಂಪ್ಲಿಗ್ರಾಮಕ್ಕೆ ಚಿತ್ತೈಸುವ ವಿಚಾರವಾಗಿ ಬಳ್ಳಾರಿ ಡಿ|| ಶಿರಿಗೆರೆ ಮೊಕ್ಕಾಮಿನಿಂದ ಶೀಘ್ರಚರಮೂರ್ತಿಗಳ ಮೂಲಕ ಅಪ್ಪಣೆಕೊಡಿಸಿದ ಶ್ರೀಮುಖವನ್ನು ಭಕ್ತಿಯಿಂದ ಸ್ವೀಕರಿಸಿ ಸದರಿ ವಿಚಾರವನ್ನು ಪರ್ಯಾಲೋಚಿಸಲು ಊರಿನವರು ತಾ|| 30-8-26ರಲ್ಲಿ ರಾ|| ಕರಿಬಸವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಈ ಕೆಳಗೆ ಕಂಡ ತೀರ್ಮಾನಗಳನ್ನು ಮಾಡಿದರು.—(1) ಈಗ ದೇಶಮಧ್ಯದಲ್ಲಿ ನಿರಂಜನ ಜಂಗಮಮೂರ್ತಿಗಳಾದ ವಿರಕ್ತರುಗಳನ್ನು ಮತ್ತು ಶ್ರೀಬಸವಾದಿಪ್ರಮಥರುಗಳನ್ನು ನಿಂದಿಸತಕ್ಕವರಿಗೆ ಮಹಾಸನ್ನಿಧಿಯಲ್ಲಿ ಆಶ್ರಯಕೊಡದೆ ತಕ್ಕ ಪ್ರಾಯಶ್ಚಿತ್ತಮಾಡಬೇಕು. (2) ಸದರಿಯವರ ನಿಂದಾರೂಪವಾದ ಪುಸ್ತಕಗಳನ್ನೂ ಜಾಹಿರಾತುಗಳನ್ನೂ ರದ್ದುಮಾಡುವದಲ್ಲದೆ ಇನ್ನು ಮುಂದೆ ಬರೆದು ಪ್ರಕಟಿಸುವವರಿಗೆ ತಕ್ಕ ಪ್ರಾಯಶ್ಚಿತ್ತಮಾಡುತ್ತೇವೆಂದು ಕಟ್ಟಪ್ಪಣೆ ಮಾಡಬೇಕು. (3) ಹಮ್ಮಿಗಿ ಶಾಂತಪ್ಪಗೆ ಸನ್ನಿಧಿಯಿಂದ ಕೊಟ್ಟಿರುವ ಗುರುಭಕ್ತಕೇಸರಿ ಎಂಬ ಬಿರುದವನ್ನು ರದ್ದುಮಾಡಬೇಕು. (4) ಮೇಲ್ಕಂಡ ನಮ್ಮ ಠರಾವುಗಳಿಗೊಪ್ಪಿ ಅದರಂತೆ ನಡಿಸಿಕೊಡುತ್ತೇವೆಂದು ಲೇಖಮೂಲಕ ಅಪ್ಪಣೆ ಕೊಡಿಸಿದಲ್ಲಿ ನಾವು ಶಿರಸಾವಹಿಸಿ ಮಹಾಸನ್ನಿಧಿಯ ಸವಾರಿಯನ್ನು ನಮ್ಮ ಗ್ರಾಮಕ್ಕೆ ಬಿಜಮಾಡಿಸಿಕೊಂಡು ಯಥಾಶಕ್ತಿ ಕಾಣಿಕೆಯನ್ನೊಪ್ಪಿಸಿ ಮರ್ಯಾದಿಸುತ್ತೇವೆ. ಅಲ್ಲದೆ ಸಮಾಜದ ಗುರುವರ್ಗಗಳಲ್ಲಿ ಕಲಹವನ್ನು ಹಚ್ಚಿ ಸಮಾಜವನ್ನು ಹಾಳ್ಮಾಡಲುದ್ಯುಕ್ತರಾಗಿರುವವರಿಗೂ ಅವರ ಜಾಹಿರಾತುಗಳಿಗೂ ಪುಸ್ತಕಗಳಿಗೂ ಮತೋದ್ಧಾರಕರಾದ ಸಿಂಹಾಸನಾಧಿಪತಿಗಳು ಆಶ್ರಯವನ್ನು ಕೊಟ್ಟಿರುವದು ಆಗದೀ ಲಜ್ಜಾಸ್ಪದವಾಗಿರುವುದರಿಂದ ಅಂಥಾ ಚಳವಳಿಕಾರರನ್ನು ತಕ್ಕ ಪ್ರಾಯಶ್ಚಿತ್ತದಿಂದೆಚ್ಚರಿಸಿ ಸಮಾಜದಲ್ಲಿ ಹುಟ್ಟಿರುವ ಅಶಾಂತಿಯನ್ನು ಹೋಗಲಾಡಿಸಿ ನಮ್ಮಗಳ ಮನಸ್ಸಂತೋಷಪಡಿಸಬೇಕೆಂದು ಭಕ್ತಿಯಿಂದ ಬೇಡುತ್ತೇವೆ.

ಸೆಕ್ರೆಟರಿ
ವೀರಶೈವತರುಣಸಂಘ, ಕಂಪ್ಲಿ.

ಮಾಲೂರು ತಾ|| ಸ್ಕೌಟ್ ಇನ್ವೆಸ್ಟಿಟ್ಯೂರ್ ಮತ್ತು ಉಪಾಧ್ಯಾಯರ ಸಮ್ಮೇಳನ.

ಕಳೆದ ಆಗಸ್ಟ್ 28 ರ ಬೆಳಿಗ್ಗೆ ಮಾಲೂರು ಗೌ|| ಮಿಡ್ಲ್‌ಸ್ಕೂಲ್ ಮೈದಾನದಲ್ಲಿ ಸ್ಕೌಟ್ ಇನ್ವೆಸ್ಟಿಟ್ಯೂರ್ ಸಮಾರಂಭವು ತಾ|| ಅಮಲ್ದಾರ್ ಮ|| ಬಿ. ಆರ್. ಪದ್ಮನಾಭರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಪುರಪ್ರಮುಖರೂ ಸ್ಥಳಪರಸ್ಥಳಗಳ ಬೋಧಕಪೋಷಕರುಗಳೂ ಬಂದಿದ್ದರು. ಡ್ರಿಲ್ ಸ್ಕೌಟ್‌ರ್‍ಯಾಲಿ ಮೊದಲಾದವು ನಡೆದಮೇಲೆ ಮಿಡ್ಲ್‌ಸ್ಕೂಲ್ ಹೆ|| ಮಾಸ್ಟರ್ ಮತ್ತು ಸ್ಕೌಟ್‌ಮಾಸ್ಟರ್ ಆದ ಮ|| ಪಿ. ಎಲ್. ನರಸಿಂಹಯ್ಯನವರು ಸ್ಕೌಟ್ ಇನ್ವೆಸ್ಟಿಟ್ಯೂರ್ ಮಾಡಿದರು. ಮ್ಯು|| ಕೌನ್ಸಿಲರ್ ಮ|| ಎಂ. ವಿ. ರುದ್ರಯ್ಯನವರು ಸ್ಕೌಟಿನ ಉದ್ದೇಶ ಪ್ರಯೋಜನ ಮೊದಲಾದ ವಿಷಯಗಳ ಮೇಲೆ ಉತ್ಕೃಷ್ಟಭಾಷಣಮಾಡಿ, ವಿದ್ಯಾರ್ಥಿಗಳಿಗೆ ಬುದ್ಧಿವಾದಪರವಾದ [illegible]. ಡಿಸ್ಟ್ರಿಕ್ಟ್ ಸ್ಕೂಲ್ ಇನ್ಸ್ಪೆಕ್ಟರು ಮ|| ಎಂ. ಮಾಧವರಾಯರೂ ಕಾಲೋಚಿತವಾದ ಭಾಷಣವನ್ನು ಮಾಡಿದ ಮೇಲೆ ಒಂದು ಸ್ಕೌಟ್ ಅಸೋಸಿಯೇಷನ್ನು ಏರ್ಪಡಿಸಲ್ಪಟ್ಟು ಅಮಲ್ದಾರರು ಪ್ರೆಸಿಡೆಂಟರಾಗಿಯೂ, ಮ್ಯುನ್ಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಬಿ. ಲಕ್ಷ್ಮಣರಾಯರು ಮತ್ತು ಬೌರಿಂಗ್‌ಪೇಟೆ ರೇಂಜ್ ಸ್ಕೂಲ್ ಇನ್ಸ್ಪೆಕ್ಟರಾದ ಮ|| ಕೆ. ಶ್ರೀನಿವಾಸರಾಯರು ಜಾಯಿಂಟ್ ವೈಸ್‌ಪ್ರೆಸಿಡೆಂಟರುಗಳಾಗಿಯೂ ಹೆ|| ಮಾಸ್ಟರ್ ನರಸಿಂಹಯ್ಯನವರೂ ಸ್ಕೌಟ್‌ಮಾಸ್ಟರ್ ಶ್ರೀನಿವಾಸರಾಯರೂ ಸೆಕ್ರೆಟರಿ ಅ|| ಸೆಕ್ರೆಟರಿಗಳಾಗಿಯೂ ಮ್ಯು|| ಕೌ|| ಎಂ. ವಿ. ರುದ್ರಯ್ಯನವರು ಮ|| ಎಲ್. ವೇಮಾರಡ್ಡಿಯವರು ಮೊದಲಾಗಿ 8 ಜನರು ಮೆಂಬರುಗಳಾಗಿಯೂ ಆರಿಸಲ್ಪಟ್ಟರು. ತರುವಾಯ ಅಧ್ಯಕ್ಷರ ಆಭಾರಮನ್ನಣೆಯಿಂದ ಸಭೆಯು ವಿಸರ್ಜನವಾಯಿತು. ಅದೇ ಮಧ್ಯಾಹ್ನ ಉಪಾಧ್ಯಾಯರ ಸಮ್ಮೇಳನವು ಡಿ|| ಇನ್ಸ್|| ಮ|| ಎಂ. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಮ|| ಕೆ. ಶ್ರೀನಿವಾಸರಾಯರು ಸಮ್ಮೇಳನದ ಉದ್ದೇಶವನ್ನೂ ಪ್ರಯೋಜನವನ್ನೂ ತಿಳಿಸಿದಮೇಲೆ ಮ|| ಸಂಪಂಗಿರಾಮಯ್ಯನವರು ವ್ಯಾಕರಣದ ಮಾದರಿಪಾಠವನ್ನೂ, ಮ|| ಗಳಾದ ಟಿ. ವೆಂಕಟೇಶಯ್ಯನವರೂ, ಟಿ. ವೆಂಕಟರಾಮಾಶಾಸ್ತ್ರಿಗಳೂ ಗ್ರಾಮಪಾಠಶಾಲೆಯ ಉಪಾಧ್ಯಾಯರ ಅನುಭವವನ್ನೂ, ರುದ್ರಯ್ಯನವರು ವಿದ್ಯಾಭ್ಯಾಸಕ್ಕೆ ಪೋಷಕರಿಂದಾಗಬೇಕಾದ ಸಹಾಯ್ಯವನ್ನೂ, ಎಲ್. ವೇಮಾರಡ್ಡಿಯವರು ವಿದ್ಯಾಭ್ಯಾಸದಿಂದಾಗತಕ್ಕ ಪ್ರಯೋಜನವನ್ನೂ ಕುರಿತು ಬಹುಸ್ವಾರಸ್ಯವಾಗಿ ಭಾಷಣಗಳನ್ನು ಮಾಡಿದರು. ತರುವಾಯ ಅಧ್ಯಕ್ಷರು ಬೋಧಕರ ಮತ್ತು ಪೋಷಕರ ಕರ್ತವ್ಯವನ್ನು ಕುರಿತು ಬಹಳ ಅನುಭವಪೂರ್ವಕವಾದ ಬುದ್ಧಿವಾದವನ್ನು ಹೇಳಿದರು. ಅನಂತರ ಒಂದು ತಾಲ್ಲೋಕು ವಿದ್ಯಾಭ್ಯಾಸದ ಕಮಿಟಿಯೇರ್ಪಡಿಸಲ್ಪಟ್ಟು ಸ್ಕೌಟ್ ಕಮಿಟಿಯ ಮೆಂಬರುಗಳೇ ಇದಕ್ಕೂ ಮೆಂಬರುಗಳಾಗಿರಬೇಕೆಂದು ಗೊತ್ತುಮಾಡಲ್ಪಟ್ಟಿತು. ಆಮೇಲೆ ವಿದ್ಯಾಭ್ಯಾಸಸಂಬಂಧವಾದ ವಸ್ತುಪ್ರದರ್ಶನವು ಡಿ|| ಡೆ|| ಕಮಿಷನರ್ ಮ|| ಹಿರಣ್ಣಯ್ಯನವರಿಂದ ಆರಂಭಿಸಲ್ಪಟ್ಟು ಉತ್ತಮವಸ್ತುಗಳಿಗೆ ಅವರ ಹಸ್ತದಿಂದ ಬಹುಮಾನಗಳು ಕೊಡಿಸಲ್ಪಟ್ಟವು. ಅದೇ ರಾತ್ರಿ ಬೌರಿಂಗ್‌ಪೇಟೆ ಸ್ಕೂಲ್ಮಾಸ್ಟರ್ ಮ|| ಕೆ. ರಾಮಾಚಾರ್ಯರಿಂದ ಬಲಿಚಕ್ರವರ್ತಿಯ ಕಥಾಕಾಲಕ್ಷೇಪವು ಬಹಳ ಮನೋಹರವಾಗಿ ನಡಿಸಲ್ಪಟ್ಟಿತು. ತಾಲ್ಲೂಕಾಮೂಲೆಯಿಂದ ಈ ಸಮ್ಮೇಳನಗಳಿಗೆ ಬಂದಿದ್ದ ಬೋಧಕರ, ಪೋಷಕರ ಮತ್ತು ವಿದ್ಯಾರ್ಥಿಗಳ ಊಟೋಪಚಾರಾದಿಗಳಿಗೆ ಮಾಲೂರು ಪ್ರೈ|| ಸ್ಕೂಲ್ಮಾಸ್ಟರ್ ಮ|| ಬಿ. ಎಚ್. ಶ್ರೀನಿವಾಸಯ್ಯನವರ ಮೇಲ್ವಿಚಾರಣೆಯಲ್ಲಿ ಬಹಳ ಸಮರ್ಪಕವಾದ ಏರ್ಪಾಟು ಮಾಡಲ್ಪಟ್ಟಿದ್ದಿತು. ಈ ಕಾರ್ಯಗಳ ಸುವ್ಯವಸ್ಥೆಗಾಗಿ ದ್ರವ್ಯಸಹಾಯಮಾಡಿದ ದೊಡ್ಡಮನುಷ್ಯರುಗಳು ವಂದನೀಯರಾಗಿರುತ್ತಾರೆ.

ಪ್ರೇಕ್ಷಕ.

ಸಮೀಪಬಂಧುಗಳು ಗಮನಿಸಬೇಕು.

ಈಗ್ಗೆ ಸುಮಾರು 3 ತಿಂಗಳ ಕೆಳಗೆ ಒಂದು ದಿನ ಮಧ್ಯಾಹ್ನ ಸುಮಾರು 30 ವರುಷ ವಯಸ್ಸಿನ ಒಬ್ಬ ಹೆಂಗಸು ನನ್ನ ಮನೆಗೆ ಬಂದಳು. ಆಕೆ ತಾನು [illegible] ಇದ್ದೆ. ನನ್ನ [illegible] ಮತ್ತು [illegible] ತೋಟದ ಮಧ್ಯದಲ್ಲಿರುತ್ತದೆ. ನಾನು ಆಕೆಯನ್ನು ಕಂಡಕೂಡಲೆ ವಿಚಾರಿಸಲು, ತಾನು ಮೈಸೂರುಸೀಮೆಗೆ ಸೇರಿದ ಚಾಮರಾಜನಗರದ ಕಡೆಯವಳೆಂದೂ, ತಾನು ವೀರಶೈವಮತದವಳೆಂದೂ, ತನ್ನ ಹೆಸರು ಸಂಜಮ್ಮನೆಂದೂ ತನಗೆ ಸ್ವದೇಶದಲ್ಲಿ ಕಾಪಾಡುವ ವಾರಸ್‌ದಾರರಾರೂ ಇಲ್ಲವೆಂದೂ, ತನಗೆ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಗುಂಡ್ಲುಪೇಟೆಯಿಂದ ಈ ದೇಶದ ಕಾಫಿತೋಟಗಳಿಗೆ ಬರುವ ಜನಗಳ ಜೊತೆಯಲ್ಲಿ ಬಂದೆನೆಂದೂ, ದಾರಿಯಲ್ಲಿ ಅನ್ನಾಹಾರಾದಿಗಳಿಗೆ ಮಾರ್ಗವಿಲ್ಲದೆ ತೊಂದರೆಪಟ್ಟು ವಿಚಾರಿಸುತ್ತಾ ಬರಲು ನಮ್ಮ ತೋಟವು ಗೊತ್ತಾಯಿತೆಂದೂ, ತನಗೆ ಅನ್ನಾಹಾರಾದಿಗಳನ್ನು ಕೊಡಬೇಕೆಂದೂ ಹೇಳಿದುದರಮೇಲೆ, ಆಕೆಯ ದೈನ್ಯಭಾವವನ್ನು ನೋಡಿ ಕನಿಕರಪಟ್ಟು ಆಕೆಯ ಅನ್ನಪಾನಾದಿಗಳಿಗೆ ಸೌಲಭ್ಯವನ್ನು ಮಾಡಿಕೊಟ್ಟೆನು. ಹೀಗೆ ಒಂದುವಾರ ಕಳೆಯುವುದರೊಳಗೆ ಮಾರ್ಗಾಯಾಸದಿಂದಲೋ, ಅನ್ನಪಾನಾದಿಗಳ ಅಭಾವದಿಂದ ನಿಶ್ಶಕ್ತಳಾಗಿದ್ದುದರಿಂದಲೋ ಅಕಸ್ಮಾತ್ತಾಗಿ ಛಳಿಜ್ವರ ಬಂದು, ಕೊನೆಗೆ [illegible] ತಿರುಗಿ, ಬಹು ಭಯಂಕರವಾದ ಸ್ಥಿತಿಗೆ ಪರಿಣಮಿಸಿತು. ಆಗ ನಾನು ಡಾಕ್ಟರನ್ನು ಕರಿಸಿ, ತಕ್ಕ ಔಷಧೋಪಚಾರಗಳನ್ನು ಮಾಡಿಸಿದುದರಮೇಲೆ ಗುಣವಾಯಿತು. ಈಕೆಯು ಖಾಯಿಲೆಯ ಅಜ್ಞಾನದಶೆಯಲ್ಲಿ ತನ್ನ ಬಂಧುಜನಗಳನ್ನು ಕುರಿತು ಬಹುಪ್ರಕಾರವಾಗಿ ಹಂಬಲಿಸುತ್ತಿದ್ದಳು. ಈಕೆಯು ನಮ್ಮಲ್ಲಿಗೆ ಬಂದಕಾಲದಲ್ಲಿ ಹೇಳಿದ ವಿಚಾರಗಳಿಗೂ, ಖಾಯಿಲೆಯಲ್ಲಿ ಹೇಳಿದುದಕ್ಕೂ ಅರ್ಥಾರ್ಥಸಂಬಂಧವಿಲ್ಲದೆ ಇರುವ ವಿದ್ಯಮಾನವನ್ನು ನೋಡಿ, ಸಂಶಯಹುಟ್ಟಿದುದರಮೇಲೆ ಆಕೆಯನ್ನು ಬಹುವಿಧವಾಗಿ ವಿಚಾರಿಸಲು, ತಾನು ಮೈಸೂರ್‌ನಗರದ ಸಮೀಪದಲ್ಲಿರುವ ಕರ್ಲಳ್ಳಿ ಎಂಬ ಒಂದು ಹಳ್ಳಿಯ ಪಟೇಲನ ಮಗಳೆಂದೂ, ತನ್ನನ್ನು ಅದರ ಸಮೀಪದಲ್ಲಿರುವ ಒಂದು ಹಳ್ಳಿಗೆ ಲಗ್ನಮಾಡಿದ್ದರೆಂದೂ, ಗಂಡನಮನೆಯವರ ಕ್ರೂರಶಿಕ್ಷೆಯನ್ನು ಸಹಿಸಲಸಾಧ್ಯವಾಗಿ ಮನೆಯನ್ನು ಬಿಟ್ಟುಬಂದೆನೆಂದೂ, ತನ್ನ ತಂದೆಯಮನೆಯವರಿಗೆ ತನ್ನ ಸಮಾಚಾರಗಳನ್ನು ತಿಳಿಸಿ ತನ್ನನ್ನು ತನ್ನ ಜನಗಳಬಳಿಗೆ ಸೇರಿಸುವ ಏರ್ಪಾಡುಮಾಡಿಕೊಡಬೇಕೆಂದೂ ಕೇಳಿಕೊಂಡಪ್ರಕಾರ ಆಕೆಯು ಹೇಳಿದ ವಿಳಾಸಕ್ಕೆ ಒಂದು ರಿಜಿಸ್ಟರ್ಡು ಕಾಗದವನ್ನು ತಾ|| 2-8-26 ರಲ್ಲಿ ಬರೆದೆನು. ಆ ಕಾಗದವು ಆಕೆಯು ಹೇಳಿದ ಮೇಲ್ವಿಳಾಸವು ತಪ್ಪಾಗಿಯೋ, ಇನ್ಯಾವ ಕಾರಣದಿಂದಲೋ ಮೇಲ್ಕಂಡ ತಾ|| ಲಾಗಾಯಿತು ಮೈಸೂರ್‌ಡಿಸ್ಟ್ರಿಕ್ಟಿಗೆ ಸೇರಿದ ಒಂದೆರಡು ತಾಲ್ಲೂಕುಗಳಲ್ಲಿರುವ ಹಳ್ಳಿಗಳನ್ನು ಸುತ್ತಿ ಕೊನೆಗೆ ಡೆಡ್‌ಲೆಟರ್ ಆಫೀಸನ್ನೂ ಸಂದರ್ಶಿಸಿ ಪುನಹ ನನಗೆ ವಾಪಸ್ ಬಂದಿರುತ್ತದೆ. ಆ ಕಾಗದದಮೇಲೆ ನಾನು ಬರೆದ ವಿಳಾಸ ಅಂದರೆ ಹೋಬಳಿ, ಗ್ರಾಮ, ತಾಲ್ಲೂಕ್, ಪೋಸ್ಟಾಫೀಸುಗಳನ್ನು ಪೋಸ್ಟಲ್ ಇಲಾಖಾದವರು ಬದಲಾಯಿಸಿ ಬರೆದು ರವಾನಿಸಿ, ಅದರಂತೆ ವಿಳಾಸದಾರರಲ್ಲಿಗೆ 3-4 ದಫಾ ತೆಗೆದುಕೊಂಡುಹೋಗಿ, ಕೊನೆಗೆ - ವಿಳಾಸದಾರರು ಸಿಕ್ಕದಿದ್ದ ಕಾರಣ ಜಾರಿಗೆ ಅವಕಾಶವಿಲ್ಲ. ವಿಳಾಸದಾರರು ಹೋಗಿರುವ ಸ್ಥಳವೂ ಗೊತ್ತಿಲ್ಲ - ಎಂದು ಇನ್ಡಾರ್ಸ್ ಮಾಡಿ ನನಗೆ ವಾಪಸ್ ಮಾಡಿರುತ್ತಾರೆ. ವಿಳಾಸದಾರರು ದೂರದೇಶದವರಾದುದರಿಂದ ಅವರ ಕೈಗೆ ನೇರಾಗಿ ಹೋಗಿ ತಲುಪಲೆಂಬ ಉದ್ದೇಶದಿಂದ ಪೋಸ್ಟಲ್ ರಿಜಿಸ್ಟರ್ಡು ಲೆಟರನ್ನು ಬರೆದೆನು. ಹಳ್ಳಿಯವರಾಗಿ, ಅನಾಗರೀಕರಾದ ಕಾರಣದಿಂದ ರಿಜಿಸ್ಟರ್ಡು ನೋಟೀಸೆಂದು ಹೆದರಿ ವೃಥಾಕಾರಣವನ್ನು ಬರೆಸಿರಬೇಕಲ್ಲದೆ ಪೋಸ್ಟಲ್ ಇಂಡಾರ್ಸಿನಂತೆ ವಿಳಾಸದಾರನು ಪತ್ತೆಯಾಗದೆ ವಾಪಸ್ ಬಂತೆಂಬ ಊಹೆಗೆ ಅವಕಾಶವಿಲ್ಲ. ವಿಳಾಸದಾರನು ಸರ್ಕಾರೀ ಪಟೇಲನಾದ್ದರಿಂದ ಪೋಸ್ಟಲ್ ಇಲಾಖಾದವರು ಹುಡುಕಿಯೂ ಸಿಕ್ಕದಿರುವುದು ಪರಮಾಶ್ಚರ್ಯವಾಗಿದೆ. ಈಗಲೂ ಮೇಲ್ಕಂಡ ಹೆಂಗಸಿನ ಕೋರಿಕೆಯಂತೆ ಈ ಮೂಲಕ ತಿಳಿಯಪಡಿಸುವದೇನಂದರೆ.—ಆಕೆಯ ವಾರಸ್‌ದಾರರು ಹುಣಸೂರು ತಾ|| ಬಿಳಿಕೆರೆಯ ಹೋಬಳಿ ಕರ್ಣಹಳ್ಳಿ ಪಟೇಲರಾಗಿರಲಿ, ಅಜೂಬಾಜೂ ಗ್ರಾಮದವರಾಗಿರಲಿ, ಇನ್ಯಾರೇ ಆಗಿರಲಿ ಬಂಧುಪ್ರೀತಿಯೂ, ವೀರಶೈವಮತಾಭಿಮಾನವೂ ಉಳ್ಳವರಾಗಿರುವಪಕ್ಷದಲ್ಲಿ ಈಗಲಾದರೂ ಈ ವಿವರಗಳನ್ನು ತಿಳಿದಕೂಡಲೆ ಈ ಕೆಳಗೆ ನಮೂದುಮಾಡುವ ವಿಳಾಸದಾರನಾದ ನನ್ನಲ್ಲಿಗೆ ಬಂದು ನಮ್ಮ ವೀರಶೈವಮತಾಚಾರಾದಿಗಳಿಗೆ ನ್ಯೂನತೆಯಿಲ್ಲದಂತೆ ನನ್ನಿಂದ ಸಂರಕ್ಷಿಸಲ್ಪಡುತ್ತಿರುವ ಮೇಲ್ಕಂಡ ಹೆಂಗಸನ್ನು ಕರೆದುಕೊಂಡುಹೋಗಬಹುದು.

ಪಿ. ಶ್ರೀಕಂಠಪ್ಪ,
ಕಾಫಿಪ್ಲಾಂಟರ್, ಪಾಲಕ್‌ಮೂಲ ಎಸ್ಟೇಟ್,
ಕಾಲಪಟ್ಟಿ ಪೋಸ್ಟ್ (ವೈನಾಡ್) ಮಲಬಾರ್ ಡಿಸ್ಟ್ರಿಕ್ಟ್.

ಭಿಕ್ಷಾವೃತ್ತಿ.

ಪ್ರಪಂಚದಲ್ಲಿ ಆತ್ಮಾವಲಂಬನೆಯಿಂದಲೂ ಸ್ವಾತಂತ್ರ್ಯದಿಂದಲೂ ಬದುಕುವುದಕ್ಕೆ ಅನೇಕ ವೃತ್ತಿಗಳಿರುವವು. ಆದರೂ ಸರ್ವರೂ ತಮ್ಮ ಬುದ್ಧಿಗೂ ಶಕ್ತಿಗೂ ಅನುರೂಪವಾದ ವೃತ್ತಿಗಳಾವುವೋ ಅವುಗಳನ್ನು ತಿಳಿದುಕೊಳ್ಳುವುದಕ್ಕೆ ಸರಿಯಾದ ಅನುಕೂಲಗಳಿಲ್ಲದಿರುವುದರಿಂದಲೂ, ಲಾಭಕರವಾದ ವೃತ್ತಿಯನ್ನು ಹೊಂದುವುದಕ್ಕೆ ಸರಿಯಾದ ಮಾರ್ಗದರ್ಶಕರು ಸಿಕ್ಕದಿರುವುದರಿಂದಲೂ ಭಿಕ್ಷೆಯಿಂದ ಜೀವಿಸುವುದಕ್ಕೆ ಉಪಕ್ರಮಮಾಡುತ್ತಾರೆ. ಎಲ್ಲಾವೃತ್ತಿಗಳಿಗಿಂತಲೂ ಅತ್ಯಂತ ಜಘನ್ಯ (ಹೀನ) ವಾದ ವೃತ್ತಿಯೆಂದರೆ, ಭಿಕ್ಷಾವೃತ್ತಿಯು. ಸಕಲಶಾಸ್ತ್ರವಿಶಾರದರಾದ ಪಂಡಿತೋತ್ತಮರಲ್ಲಿ ಯಾರಾದರೂ ಜನಗಳಿಗೆ ಐಹಿಕಾಮುಷ್ಮಿಕಧರ್ಮಗಳನ್ನು ಬೋಧಿಸುವುದರಲ್ಲಿ ನಿರತರಾಗಿದ್ದರೆ, ಅವರ ಬೋಧನೆಗೆ ಪ್ರತಿಫಲರೂಪವಾಗಿ ಭಿಕ್ಷವನ್ನು ಕೊಡಬಹುದು. ಅಂಗಹೀನರಾಗಿಯೂ, ಬುದ್ಧಿಬಲದಿಂದಲೂ ಭುಜಬಲದಿಂದಲೂ ಜೀವಿಸುವುದಕ್ಕೆ ಶಕ್ತಿಯಿಲ್ಲದವರಾಗಿಯೂ ಇರುವವರು ಕೂಡ ಭಿಕ್ಷದಿಂದ ಜೀವಿಸಬಹುದು. ಇತರರಿಗೆ ಭಿಕ್ಷಾವೃತ್ತಿಯು ಯೋಗ್ಯವಾದುದಲ್ಲ. ವೀರಶೈವರಲ್ಲಿಯೂ ಬ್ರಾಹ್ಮಣರಲ್ಲಿಯೂ ಇನ್ನೂ ಕೆಲವರಲ್ಲಿಯೂ ಆರೋಗ್ಯದೃಢಕಾಯರಾಗಿಯೂ ಬುದ್ಧಿಬಲವುಳ್ಳವರಾಗಿಯೂ ಯಾವ ಕೆಲಸದಲ್ಲಿ ಪ್ರವರ್ತಿಸಿದರೂ ಅದರಲ್ಲಿ ಬೇಕಾದಹಾಗೆ ಸಂಪಾದಿಸುವುದಕ್ಕೆ ಶಕ್ತಿಯುಳ್ಳವರಾಗಿಯೂ ಇರತಕ್ಕವರು ಕೂಡ ಭಿಕ್ಷೆಯಿಂದ ಜೀವಿಸುವುದಕ್ಕುಪಕ್ರಮಮಾಡುತ್ತಾರೆ. ಇದರಿಂದ ಇವರ ಯಾವಜ್ಜೀವವೂ ದರಿದ್ರಾವಸ್ಥೆಯಲ್ಲೇ ಇರಬೇಕಾಗುವುದು. ಭಿಕ್ಷುಕರೆಂದಿಗೂ ಒಳ್ಳೇಪದವಿಗೆ ಬರುವುದಿಲ್ಲ. ಅದರಲ್ಲು ನಮ್ಮ ವೀರಶೈವರಲ್ಲಂತೂ ಭಿಕ್ಷಾವೃತ್ತಿಯು ವಿಶೇಷವಾಗಿದೆ. ಉದರಪೋಷಣೆಗೆ ಸ್ವಲ್ಪ ಕಷ್ಟತೋರಿತೆಂದರೆ ಕಾಷಾಯವಸ್ತ್ರವನ್ನು ಧರಿಸಿ ಭಿಕ್ಷೆಗೆ ಸಿದ್ಧರಾಗುವರು. ಎಷ್ಟೋ ಜನರು ನಮಗೇನು ಶಿವಕೊಟ್ಟ ಜೋಳಿಗೆ ಇದ್ದರೆ ದರಿದ್ರವೇ ಇಲ್ಲವೆಂದು ಹೇಳುವುದನ್ನು ಅನೇಕರು ಕೇಳಿರಬಹುದು. ಇಂಥಾ ಇಪ್ಪತ್ತನೇ ಶತಮಾನದ ಸುಧಾರಿಸಿದ ಕಾಲದಲ್ಲಿಯೂ ನಮ್ಮ ವೀರಶೈವರಲ್ಲಿ ಭಿಕ್ಷುಕರ ವೃಂದವು ಕಡಿಮೆಯಾಗಲಿಲ್ಲವೆಂದು ಹೇಳುವುದು ಲಜ್ಜಾಸ್ಪದವಾದ ಮಾತಾಗಿದೆ. ನಮ್ಮ ವೀರಶೈವರು ವಿದ್ಯೆಯಲ್ಲಿ ಇನ್ನೂ ಎಷ್ಟು ಹಿಂದುಳಿದಿರುವರೆಂಬುದು ಇದರಿಂದಲೇ ವ್ಯಕ್ತಪಡುತ್ತದೆ. ಎಲ್ಲೋ ದೊಡ್ಡದೊಡ್ಡ ಪಟ್ಟಣವಾಸಿಗಳು ಸ್ವಲ್ಪ ಮುಂದುವರಿದರೆ ಇಡೀ ಸಮಾಜವೇ ಮುಂದುವರಿದಂತೆ ಆಯಿತೇ? ಹಳ್ಳಿವಾಸಿಗಳಲ್ಲಿ ವಿದ್ಯಾಭಿರುಚಿಯು ಸ್ವಲ್ಪವೂ ಇರುವುದಿಲ್ಲ. ಕೆಲವು ಮುಖಂಡರು ಸುಧಾರಿಸುವವರೆಯೋ ಪ್ರಯತ್ನಪಡುತ್ತಿದ್ದರೂ [illegible] ಇಲ್ಲ. [illegible] ಇಂಥ [illegible] ಇರಬೇಕು. [illegible] ಭಿಕ್ಷುಕರಿಗೆ ಪ್ರತಿಬಂಧವಿರುವ [illegible] ಸಾಹೇಬರ ರಾಜ್ಯವು ಇತರ ರಾಜ್ಯಗಳಿಗೆ ಭಿಕ್ಷುಕರ ವಿಷಯದಲ್ಲಿ ಮಾದರಿಯಾಗಿದೆ. ಈ ವಿಷಯದಲ್ಲಿ ನನಗೆ ಒಂದು ವಿಷಯವು ನೆನಪಿಗೆ ಬರುತ್ತದೆ. ಅದನ್ನು ಇಲ್ಲಿ ಉದಹರಿಸಿರುತ್ತೇನೆ. ಒಬ್ಬ ಫಕೀರನು ಪ್ರತಿದಿನ ಅಹೋರಾತ್ರಿಯಲ್ಲಿಯೂ ಬಹಳ ಧೈರ್ಯದಿಂದ ಭಿಕ್ಷವೆತ್ತಿ ಉದರಭರಣಮಾಡಿಕೊಳ್ಳುತ್ತಿದ್ದನು. ಒಂದಾನೊಂದುದಿನ ಒಂಟೆಯಮೇಲೆ ಹೋಗುತ್ತಿದ್ದ ಒಬ್ಬ ದೊಡ್ಡಮನುಷ್ಯನನ್ನು ಏನಾದರೂ ಭಿಕ್ಷೆಕೊಡಬೇಕೆಂದು ಕೇಳಿದನು. ಅವನು ಒಂದು ಮೂರುಕಾಸಿನಬಿಲ್ಲೆಯನ್ನು ಕೊಡುವುದಕ್ಕೆ ತೆಗೆದನು. ಅದನ್ನು ತೆಗೆದುಕೊಳ್ಳುವುದಕ್ಕೆ ಈ ಭಿಕ್ಷುಕನು ಒಂಟೆಯ ಸಮೀಪಕ್ಕೆ ಹೋಗಲು ಅದು ಅವನನ್ನು ಝಾಡಿಸಿ ಒದ್ದಿತು, ಈ ಒದೆಯಿಂದ ತುಂಬಾ ಗಾಯವಡೆದು ಕೆಳಕ್ಕೆ ಬಿದ್ದು ಅವನು ಮೂರ್ಛೆಹೋದನು. ಇದನ್ನು ನೋಡಿ ಒಂಟೆಯ ಮೇಲೆ ಸವಾರಿಮಾಡುತ್ತಿದ್ದ ಮನುಷ್ಯನೂ ದಾರಿಯಲ್ಲಿ ಹೋಗುತ್ತಿದ್ದವರೂ ಶೈತ್ಯೋಪಚಾರಗಳಿಂದ ಅವನನ್ನು ಚೇತರಿಸಿಕೊಳ್ಳುವಂತೆಮಾಡಿ ಮನೆಗೆ ಕಳುಹಿಸಿದರು. ಒಂಟೆಯಿಂದಾದ ಗಾಯಗಳು ವಾಸಿಯಾಗುವುದಕ್ಕೆ ಕೆಲವು ದಿನಗಳು ಬೇಕಾದವು. ತರುವಾಯ ಅವನು ಇನ್ನುಮೇಲೆ ಭಿಕ್ಷೆಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿ, ಒಬ್ಬ ವರ್ತಕನಲ್ಲಿ ಜವಾನನಾಗಿ ಸೇರಿದನು. ಕೆಲವು ದಿವಸಗಳಲ್ಲಿ ಅವನಿಗೆ ವ್ಯಾಪಾರಧರ್ಮಗಳೆಲ್ಲಾ ಗೊತ್ತಾದವು. ಅನಂತರ ತಾನೇ ವ್ಯಾಪಾರಮಾಡುವುದಕ್ಕುಪಕ್ರಮಮಾಡಿದನು. ಹಿಡಿದ ಕೆಲಸಗಳೆಲ್ಲಾ ಫಲದಾಯಕಗಳಾದವು. ಸುಮಾರು ಮೂವತ್ತು ವರುಷಗಳು ಕೆಲಸಮಾಡುವುದರಲ್ಲಿ ಲಕ್ಷಾಧೀಶನಾದನು. ತನ್ನ ಸಂಪತ್ತಿಗೆ ಒಂಟೆಯೇ ಮೂಲಕಾರಣವೆಂದು ಭಾವಿಸಿ ಒಂಟೆಗಳನ್ನು ಮನೆದೇವರೆಂದು ಪೂಜಿಸುತ್ತಾ ಇದ್ದನು. ಈ ಮೂಢಭಕ್ತಿ ಹಾಗಿರಲಿ. ಭಿಕ್ಷಾವೃತ್ತಿಯು ಅತ್ಯಂತ ಜಘನ್ಯವಾದುದೆಂಬುದಕ್ಕೂ ಎಲ್ಲಾ ಸ್ತ್ರೀಪುರುಷರು ತಮ್ಮ ಭುಜಬಲದಿಂದಾಗಲಿ ಬುದ್ಧಿಬಲದಿಂದಾಗಲಿ ಜೀವಿಸುವುದುತ್ತಮವೆಂಬುದಕ್ಕೂ ವೈರಾಗ್ಯಚಕ್ರವರ್ತಿಗಳ ವಿನಹಾ ಇನ್ಯಾರೂ ಭಿಕ್ಷೆಯಿಂದ ಜೀವನಮಾಡಬಾರದೆಂಬುದಕ್ಕೂ ಫಕೀರನ ಚರಿತ್ರೆಯು ಆದರ್ಶಪ್ರಾಯವಾಗಿರುವುದು.

Basavanthiah, Patel, Kubatoor.

ನಿಜಗಣ್ಣನವರ ಪ್ರಶ್ನೆಗಳಿಗುತ್ತರ.

[ನಿಜಗಣ್ಣ ಎಂಬುವವರು ಕಳೆದ ತಾ|| 4-9-26 ರ ಸ್ಟಾರ್‌ಪತ್ರಿಕೆಯಲ್ಲಿ ಮ|| ಎಂ. ಎಲ್. ನಾಗಣ್ಣನವರನ್ನು ಕುರಿತು ಕೇಳಿರುವ ಪ್ರಶ್ನೆಗಳಿಗೆ ಮ|| ನಾಗಣ್ಣನವರು ಕೊಟ್ಟಿರುವ ಉತ್ತರದ ಪೀಠಿಕಾಭಾಗವು ಅವರ ಕಂಪೆನಿಯ ಪ್ರಾಸ್ಪೆಕ್ಟಸ್ ಅಂದರೆ ಉದ್ದೇಶ ಮತ್ತು ಪ್ರಯೋಜನವನ್ನು ತಿಳುಹತಕ್ಕುದಾಗಿರುವುದರಿಂದ ಪ್ರಕಟನೆಯ ಛಾರ್ಜಿಲ್ಲದೆ ಉಚಿತವಾಗಿ ಪ್ರಕಟಿಸಲ್ಪಡತಕ್ಕುದಾಗಿಲ್ಲವಾದಪ್ರಯುಕ್ತ ಅದನ್ನು ಬಿಟ್ಟು ಉತ್ತರಗಳನ್ನು ಮಾತ್ರ ಈ ಕೆಳಗೆ ಪ್ರಕಟಿಸಲಾಗಿದೆ, ಮತ್ತು ನಮ್ಮ ಪ್ರಕಟನೆಯ ನಿಯಮದಂತೆ ಛಾರ್ಜನ್ನು ಕೊಟ್ಟಲ್ಲಿ ಆ ಭಾಗವೂ ಪ್ರಕಟಿಸಲಾಗುವುದೆಂದು ಸೂಚಿಸಿದೆ. ಸಂ.]

- ನಿಜಗಣ್ಣ - ಎಂಬುವರ ಇಷ್ಟಪ್ರಕಾರ ಅವರ ಪ್ರಶ್ನೆಗಳಿಗೆ ಉತ್ತರಗಳು ಕ್ರಮವಾಗಿಯೂ ಮತ್ತು ತೃಪ್ತಿಕರವಾಗಿಯೂ ಈ ಕೆಳಗೆ ಕೊಡಲ್ಪಟ್ಟಿವೆ. ಈ ಕೆಳಗಿನ ಉತ್ತರಗಳನ್ನೂ ಮತ್ತು ಸಂಘದ ಪ್ರಕಟನಪತ್ರಿಕೆಗಳನ್ನೂ ಚನ್ನಾಗಿ ನೋಡುವದರಿಂದ ಈ ಪ್ರಶ್ನಕರ್ತೃವು ನಿಜಗಣ್ಣನೋ ಅಥವ ದೋಷಗಣ್ಣನೋ ಎಂಬುವದು ವಾಚಕರಿಗೇನೇ ಗೊತ್ತಾಗುವುದು.

ಮೊದಲನೇ ಪ್ರಶ್ನೆಗೆ ಉತ್ತರ:—ಏಷ್ಯಾಟಿಕ್ ಮತ್ತು ಆಲ್‌ಇಂಡಿಯಾ ಕಂಪನಿಗಳನ್ನು ನಾನು ಸ್ಥಾಪಿಸುವುದಕ್ಕೆ ಪೂರ್ವ ಅಂದರೆ ಈಗ್ಗೆ ಸುಮಾರು 14-15 ವರ್ಷಗಳ ಹಿಂದೆ ಅಮೃತಸರ್‌ನಲ್ಲಿದ್ದ ನ್ಯಾಷನಲ್ ಇನ್ಷೂರೆನ್ಸ್ ಅಂಡ್ ಬ್ಯಾಂಕಿಗ್ ಕಂಪನಿ ಎಂಬ ಒಂದು ಕಂಪನಿಗೆ ಮಾತ್ರ ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಏಜೆಂಟಾಗಿದ್ದೆನು.

2 ನೇ ಪ್ರಶ್ನೆಗೆ ಉತ್ತರ:—ಈ ಅಮೃತಸರ್‌ಕಂಪನಿಯಿಂದ ಮೈಸೂರುದೇಶದಲ್ಲಿ ನೂರಾರುಜನಗಳು ತಮ್ಮ ತಮ್ಮ ಲಗ್ನಕಾಲಗಳಲ್ಲಿ ತಾವು ತಾವು ಕೊಟ್ಟಿದ್ದ ಮೊಬಲಗಿನ ಎರಡರಷ್ಟು ಮೊಬಲಗುಗಳನ್ನು ಪಡೆದಿರುತ್ತಾರೆ.

3 ನೇ ಪ್ರಶ್ನೆಗೆ ಉತ್ತರ:—ಈಗ 10-12 ವರ್ಷಗಳ ಹಿಂದೆ ಲಾಹೋರಿನಲ್ಲಿದ್ದ ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಎಂಬ ದೊಡ್ಡ ಬ್ಯಾಂಕು ನಿಂತುಹೋದ್ದರಿಂದ ಆ ಕಾಲದಲ್ಲಿ ಪಂಜಾಬ್‌ದೇಶದಲ್ಲಿದ್ದ 30-40 ಇತರ ಬ್ಯಾಂಕುಗಳು ಮುಳುಗಿಹೋದುವು. ಈ ಅಮೃತಸರ್ ಕಂಪನಿಯಲ್ಲಿ ಬ್ಯಾಂಕಿಂಗ್ ಡಿಪಾರ್ಟಮೆಂಟ್ ಇದ್ದದ್ದರಿಂದ ಈ ಕಂಪನಿಯೂ ಕೂಡ ಇತರ ಬ್ಯಾಂಕುಗಳಂತೆ ಮುಳುಗಿಹೋಯಿತು.

4 ನೇ ಪ್ರಶ್ನೆಗೆ ಉತ್ತರ:—ಏಷ್ಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ ಲಿಮಿಟೆಡ್ ವೆಂಬುವುದು ನನ್ನಿಂದ ಸ್ಥಾಪಿತವಾದರೂ ಆ ಕಂಪನಿಯು ಸ್ಥಾಪಿತವಾದ ಲಾಗಾಯ್ತು ಹನ್ನೆರಡು ವರುಷಗಳ ಕಾಲ ಒಂದೇ ಸಮನಾಗಿ ಸದರಿ ಕಂಪನಿಯ ಶ್ರೇಯಸ್ಸನ್ನು ನೋಡಿ ಸಹನಮಾಡದೆ ಅದನ್ನು ಹ್ಯಾಗಾದರೂ ಹಾಳುಮಾಡಬೇಕೆಂಬ ಉದ್ದೇಶವಿದ್ದ ಜನಗಳಿಂದ ನನಗೆ ಉಂಟಾದ ತೊಂದರೆಗಳಿಂದ ನಾನು ಬೇಜಾರಾದ್ದರಿಂದಲೂ, ಸದರಿ ಕಂಪನಿಯ ಹೆಡ್ ಆಫೀಸು ಬೆಂಗಳೂರಿಗೆ ವರ್ಗಾಯಿಸಲ್ಪಟ್ಟದ್ದರಿಂದಲೂ ಮತ್ತು ಪರಲೋಕಕ್ಕೆ ಸಾಧಕವಾದ ಮೇಲ್ಕಂಡ ಸಂಘವನ್ನು ಸ್ಥಾಪಿಸಬೇಕೆಂಬ ಉದ್ದೇಶವು ಬಹುಕಾಲದಿಂದ ಇದ್ದದ್ದರಿಂದಲೂ ನನಗೆ ಇನ್ನೂ ಹತ್ತು ವರುಷಗಳಕಾಲ ಖಾಯಂ ಆಗಿ ಅಗ್ರಿಮೆಂಟ್ ಇದ್ದರೂ ಕೂಡ ನನ್ನ ಜೀವಮಾನಾವಧಿ ತಿಂಗಳು ಒಂದಕ್ಕೆ ಒಂದುನೂರು ರೂಪಾಯಿಪ್ರಕಾರ ಪೆನ್ಷನ್‌ಮೇಲೆ ರಿಟೈರಾಗಲು ಒಪ್ಪಿ ನಾನೇ ರಾಜಿನಾಮೆಯನ್ನು ಕೊಟ್ಟೆನಲ್ಲದೆ ಕಂಪನಿಯವರು ನನ್ನನ್ನು ರಿಟೈರ್‌ಮಾಡಿಸಲಿಲ್ಲ.

5 ನೇ ಪ್ರಶ್ನೆಗೆ ಉತ್ತರ:—ಅಮೃತಸರ್ ಕಂಪನಿಯಲ್ಲಿ ನಷ್ಟವನ್ನು ಹೊಂದಿದವರಿಗೆ ಅನುಕೂಲಪಡಿಸುವುದಕ್ಕಾಗಿಯೇ ನನ್ನಿಂದ ಸ್ಥಾಪಿಸಲ್ಪಟ್ಟ ಏಷ್ಯಾಟಿಕ್ ಕಂಪನಿಯು ಸದರಿ ಅಮೃತಸರ್ ಕಂಪನಿಯಲ್ಲಿ ನಷ್ಟಹೊಂದಿದವರ ಪೈಕಿ ಅನೇಕರಿಗೆ 10,000 ರೂಪಾಯಿಗಳ ಮೇಲ್ಪಟ್ಟು ಮೊಬಲಗನ್ನು ಕೊಟ್ಟಿರುತ್ತದೆ. ಇಷ್ಟೇ ಅಲ್ಲದೆ ಸದರಿ ಏಷ್ಯಾಟಿಕ್ ಕಂಪನಿಯಿಂದ ಲಕ್ಷ ರೂಪಾಯಿಗಳ ಮೇಲ್ಪಟ್ಟು ಪಾಲಿಸಿಹೋಲ್ಡರುಗಳಿಗೆ ಬಡ್ಡಿ ಇಲ್ಲದೆಯು ಮತ್ತು ಕಮ್ಮಿ ಬಡ್ಡಿಯಿಂದಲೂ ಸಾಲಗಳು ಮತ್ತು ಗತಿಸಿದ ವಿಮೇದಾರರ ವಾರಸ್ದಾರರುಗಳಿಗೆ ಬೋನಸ್ಸು ಮೊಬಲಗುಗಳು ಕೊಡಲ್ಪಟ್ಟಿವೆ.

6 ಮತ್ತು 8 ನೇ ಪ್ರಶ್ನೆಗಳಿಗೆ ಉತ್ತರ:—ಒಂದು ಸಂಘದ ಅಭಿವೃದ್ಧಿಗೆ ಐಶ್ವರ್ಯವಂತರಾದ ಮ್ಯಾನೇಜಿಂಗ್ ಏಜೆಂಟುಗಳಾಗಲಿ ಅಥವ ಡೈರೆಕ್ಟರುಗಳಾಗಲಿ ಕಾರಣರಲ್ಲ. ಸಂಘದ ಕೆಲಸದಲ್ಲಿ ಅನುಭವವೂ ಮತ್ತು ಅದನ್ನು ನಿರ್ವಹಿಸುವ ಶಕ್ತಿಯೂ ಉಳ್ಳ ಸಂಘಕ್ಕೆ ಅರ್ಹರಾದ ಮ್ಯಾನೇಜಿಂಗ್ ಏಜೆಂಟು ಮತ್ತು ಡೈರೆಕ್ಟರುಗಳು ಅದರ ಅಭಿವೃದ್ಧಿಗೆ ಕಾರಣಭೂತರಾಗುತ್ತಾರೆ. 5,00,000 [illegible] ಮತ್ತು 30-40 ಲಕ್ಷ [illegible]

ವಂತೆ) ಅದನ್ನು ಅಭಿವೃದ್ಧಿಸ್ಥಿತಿಗೆ ತಂದಿರುವಾಗ ಒಂದುಲಕ್ಷ ರೂಪಾಯಿ ಮೂಲಧನವುಳ್ಳ ಈ ಸಂಘದಲ್ಲಿ ಅದೇ ಒಂದುಸಾವಿರ ರೂಪಾಯಿನ ಷೇರುಗಳನ್ನು ತೆಗೆದುಕೊಂಡು ಇದರ ಕಾರ್ಯವನ್ನು ನಿರ್ವಾಹಮಾಡುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ.

ಇಷ್ಟೇ ಅಲ್ಲದೆ ಸಂಘಕ್ಕೋಸ್ಕರ ವಸೂಲಾಗುವ ಮೂಲಧನವು ಮತ್ತು ಬಾಂಡುಮೊಬಲಗುಗಳು ನನ್ನಿಂದಲಾಗಲಿ ಡೈರೆಕ್ಟರುಗಳಿಂದಲಾಗಲಿ ತೆಗೆದುಕೊಳ್ಳಲ್ಪಡದ ಪೂರಾ ಮೊಬಲಗು ಗೌರ್ನಮೆಂಟಿನಲ್ಲಿ ಅಥವ ಗೌರ್ನಮೆಂಟ್ ಸೆಕ್ಯೂರಿಟಿಗಳಲ್ಲಿ ಖಾಯಂ ಆಗಿ ಇಡಲ್ಪಡುತ್ತೆ. ನಾನು ವರ್ಷ ಒಂದಕ್ಕೆ 85 ರೂಪಾಯಿ ಇನ್‌ಕಂಟ್ಯಾಕ್ಸನ್ನು ಮತ್ತು ಕಂದಾಯ ವಗೈರೆಗಳಿಗಾಗಿ ಸರ್ಕಾರಕ್ಕೆ ವರ್ಷ ಒಂದಕ್ಕೆ ಸುಮಾರು 135 ರೂಪಾಯಿಗಳನ್ನು ಕೊಡುತ್ತಿರುತ್ತೇನೆ. ಇತರ ಡೈರೆಕ್ಟರುಗಳಲ್ಲಿ ಯಾರೂ ನನಗಿಂತ ಅನುಕೂಲದಲ್ಲಿ ಕಡಿಮೆಯಾಗಿರಲಾರರು. ಅವರುಗಳ ಅನುಕೂಲಗಳನ್ನು ತಪಶೀಲಾಗಿ ವಿಚಾರಿಸಿ ಅದನ್ನು ಪ್ರಕಟಿಸಲು ನನಗೆ ಅಧಿಕಾರವಿರುವದಿಲ್ಲ. ಈಗಿರತಕ್ಕ ಡೈರೆಕ್ಟರುಗಳು ಕಾನೂನಿನ ಪ್ರಕಾರ ಹಂಗಾಮಿ ಡೈರೆಕ್ಟರುಗಳಾಗಿರುತ್ತಾರೆ. ಈ ಸಂಘದ ಷೇರುದಾರರುಗಳಿಗೆ ಪ್ರತಿವರ್ಷವೂ ನಡೆಯತಕ್ಕ ತಮ್ಮ ಮೀಟಿಂಗಿನಲ್ಲಿ ತಮಗೆ ಇಷ್ಟಬಂದವರನ್ನು ಡೈರೆಕ್ಟರುಗಳನ್ನಾಗಿ ಚುನಾಯಿಸಲು ಅಧಿಕಾರವಿರುತ್ತದೆ.

7 ನೇ ಪ್ರಶ್ನೆಗೆ ಉತ್ತರ :—ಸಂಘವು ವರ್ಷವರ್ಷಕ್ಕೆ ವೃದ್ಧಿಯಾಗುವ ಹಾಗೆ ಮಾಡುವದೇ ನನ್ನ ಕೆಲಸವಾಗಿದೆ. ಕೆಲವು ವರ್ಷಗಳು ನಾನಿದ್ದ ನನ್ನ ಸ್ಥಾನಕ್ಕೆ ಅನುಭವವಿಲ್ಲದವರು ಯಾರಾದರೂ ಬಂದರೆ ನನಗಿರತಕ್ಕಷ್ಟು ಪ್ರೀತಿಯಿಂದ ಅವರು ಕೆಲಸಮಾಡದೆ ಸಂಘದ ಅಭಿವೃದ್ಧಿಗೆ ಕುಂದಕವಾಗುವ ಸಂಭವವಿರುವದರಿಂದ ದೀರ್ಘಕಾಲ ನಾನೇ ಆ ಕೆಲಸದಲ್ಲಿರಬೇಕಾದು ಅವಶ್ಯಕವಾಗಿದೆ. ಸಂಘದಿಂದ ಅಧಿಕಾರವನ್ನು ಪಡೆದಿರತಕ್ಕ ಡೈರೆಕ್ಟರುಗಳು ಕರಾರುಗಳನ್ನು ಮಾಡುವುದಕ್ಕೆ ಅರ್ಹರಾಗಿರುತ್ತಾರೆ.

9 ನೇ ಪ್ರಶ್ನೆಗೆ ಉತ್ತರ :—ಸರಿಗೆ ಮೋಸಪಡಿಸಬೇಕೆಂಬ ದುರುದ್ದೇಶದಿಂದ ತಮ್ಮ ಆಸ್ತಿಗಳೆಲ್ಲವನ್ನು ತಮ್ಮ ಹೆಂಡತಿಯರ ಹೆಸರಿಗೆ ಮಾಡಿ ತಮ್ಮ ಹೆಸರಿನಲ್ಲಿ ಯಾವ ಆಸ್ತಿಯೂ ಇಲ್ಲದೆ ಇರತಕ್ಕವರೂ ಮತ್ತು ಸರ್ಕಾರಿ ನೌಕರಿಯಲ್ಲಿ ಇದ್ದು ನಂಬಿಕೆಗೆ ದ್ರೋಹಮಾಡಿ ಕೆಲಸದಿಂದ ನಿವೃತ್ತರಾದವರೂ ಖಂಡಿತವಾಗಿಯು ಕಂಪನಿಯ ಡೈರೆಕ್ಟರುಗಳಾಗಿರಲು ಅರ್ಹರಲ್ಲ. ಆದರೆ ಪಾಪಭೀತರಾಗಿಯು ಮತ್ತು ಯೋಗ್ಯರಾಗಿಯು ಇರುವವರು ಸ್ಕೂಲ್ ಮೇಸ್ಟರುಗಳಾಗಿದ್ದರೂ ಡೈರೆಕ್ಟರುಗಳಾಗಿರಲು ಅರ್ಹರಾಗುತ್ತಾರೆ.

ಮೈಸೂರು,
ತಾ|| 13-9-1926.

For The All-India Mutual Aid &
Poor Houses Association Ltd.,
M. L. NAGANNAH,
Chief Organizer.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 9 ನೆಯ ಪ್ರಕರಣ.

ಮತ್ತೆ ಕೆಲ ಕಷ್ಟಗಳು.

ಪ್ರಾತಃಕಾಲಕ್ಕೆ ಸರಿಯಾಗಿ ರೈಲುಬಂಡಿಯು ಚಾರ್ಲ್ಸ್‌ಟೌನನ್ನು ತಲುಪಿತು. ಅಲ್ಲಿಂದ ಜೋಹಾನ್ಸ್‌ಬರ್ಗಿಗೆ ಆಗ ರೈಲು ಇರಲಿಲ್ಲ; ಕುದುರೆಯಬಂಡಿಯಲ್ಲಿ ಹೋಗಬೇಕಾಗಿದ್ದಿತು. ಆ ಬಂಡಿಯು ಆ ರಾತ್ರಿ ಸ್ಟಾಂಡರ್ಟನ್ನಲ್ಲಿ ನಿಂತಿದ್ದಿತು. ರಹದಾರಿಬಂಡಿಯ ಟಿಕೆಟ್ಟು ಸಹ ನನ್ನ ವಶದಲ್ಲಿದ್ದಿತು. ಮಾರಿಟ್ಸ್‌ಬರ್ಗಿನಲ್ಲಿ ಒಂದುದಿವಸ ನಿಲ್ಲಬೇಕಾಗಿಬಂದಿತಾದರೂ ಟಿಕೆಟ್ಟು ನಿರುಪಯೋಗವಾಗಲಿಲ್ಲ. ಚಾರಲ್ಸ್‌ಟೌನದಲ್ಲಿದ್ದ ರಹದಾರಿಬಂಡಿಯ ಏಜಂಟಿಗೆ ಅಬ್ದುಲ್ಲಾಸೇಟರು ತಂತೀವಾರ್ತೆಯನ್ನು ಕಳುಹಿಸಿದ್ದರೂ ಆ ಏಜಂಟು ಬಳಿಗೆ ನಾನು ಹೋಗುತ್ತಲೆ ನಾನು ಹೊಸಬನೆಂದು ಗ್ರಹಿಸಿ ಆ ಟಿಕೆಟ್ಟು ನಡೆಯುವುದಿಲ್ಲವೆಂದನು. ಆದೊಂದು ವಿಷಯಕ್ಕಾಗಿ ಬಂಡಿಯೊಳಗೆ ಸ್ಥಳ ಸಾಲುವುದಿಲ್ಲವೆಂಬುದರಮೇಲೆ ಅತನು ಹಾಗೆ ಹೇಳಿದುದಲ್ಲ. ಮತ್ತೊಂದು ಉದ್ದೇಶದಿಂದಲೇ ಅತನು ಹಾಗೆಂದನು. ನಾನು ಅದಕ್ಕೆ ತಕ್ಕ ಉತ್ತರವನ್ನು ಕೊಟ್ಟೆನು. ಪ್ರಯಾಣಿಕರನ್ನು ಬಂಡಿಯೊಳಗಡೆಯೇ ಕುಳ್ಳಿರಿಸಬೇಕೆಂಬ ನಿಬಂಧನೆಯಿದ್ದಿತಾದರೂ ನಾನು ಭಾರತೀಯನೆಂದು ಅವರಭಿಪ್ರಾಯವಾಗಿದ್ದ ಪ್ರಯುಕ್ತ ಬಂಡಿಯಧಿಕಾರಿಯು ನನ್ನನ್ನು ಬಿಳೀಜನರ ಪಕ್ಕದಲ್ಲಿ ಕುಳ್ಳಿರಿಸಕೂಡದೆಂದು ಹೇಳಿದನು. ಅವನನ್ನು ಲೀಡರೆಂದು ಅನ್ನುವರು. ಬಂಡಿಯ ಎರಡುಪಕ್ಕದಲ್ಲೂ ತೋಲುಗಡೆ ಕೂಡ ಕುಳಿತುಕೊಳ್ಳಲು ಸ್ಥಳವಿದ್ದಿತು. ಆ ಸ್ಥಳಗಳೊಂದರಮೇಲೆ ಲೀಡರು ಕುಳಿತುಕೊಂಡು ಹೊರಗಡೆಯಿದ್ದವನನ್ನು ಒಳಗಡೆ ಕುಳ್ಳಿರಿಸಿಕೊಂಡು ಅವನ ಸ್ಥಳದಲ್ಲಿ ಅಂದರೆ ಮೇಲುಗಡೆ ನಾನು ಕುಳಿತುಕೊಳ್ಳುವಂತೆ ನಿಯಮಿಸಿದನು. ಅದು ಅನ್ಯಾಯವೆಂದೂ ಅವಮಾನಕರವೆಂದೂ ನಾನು ಗ್ರಹಿಸಿದೆನಾದರೂ ಮೌನವಾಗಿರುವುದು ಮೇಲೆಂದು ಭಾವಿಸಿದೆನು. ನಾನು ಬಲವಂತದಿಂದ ಒಳಗಡೆ ಕುಳಿತುಕೊಳ್ಳಲೆತ್ನಿಸಲಿಲ್ಲವು. ಇದು ಅನ್ಯಾಯವೆಂದು ವಾದಿಸಿದರೆ ಅವರು ಬಂಡಿಯನ್ನು ಬಿಡದೆ ಹೋಗಬಹುದು. ಅದರಿಂದ ಇನ್ನೊಂದು ದಿವಸ ಬಿದ್ದಿರಬೇಕಾಗುತ್ತದೆ. ಮಾರನೆಯದಿವಸವೇನಾಗುವುದೋ ದೇವರೇ ಬಲ್ಲ. ಈಪ್ರಕಾರವಾಗಿ ಆಲೋಚಿಸಿ ಕೋಚುಮಾನಿನ ಪಕ್ಕದಲ್ಲಿ ಕುಳಿತುಕೊಂಡೆನು. ಮೂರುಗಂಟೆಯಸಮಯಕ್ಕೆ ಬಂಡಿಯು ಪಾರ್ಡಿಕೋಪನ್ನು ತಲುಪಿತು. ಆಗ ಲೀಡರು ಗಾಳಿಗಾಗಿಯೂ ಚುಟ್ಟವನ್ನು ಸೇದಲೂ ನಾನು ಕುಳಿತಿದ್ದ ಸ್ಥಳದಲ್ಲಿ ಅಂದರೆ ಕೋಚುಮಾನಿನ ಪಕ್ಕದಲ್ಲಿ ಕುಳಿತುಕೊಳ್ಳುವುದಕ್ಕಾಗಿ ಕೋಚುಮಾನಿನ ಹತ್ತಿರದಿಂದ ಒಂದು ಹರಕು ಬಟ್ಟೆಯನ್ನು ದೆಗೆದುಕೊಂಡು ಫುಟ್ ಬೋರ್ಡಿನಮೇಲೆ ಹಾಕಿ "ಸ್ವಾಮಿ ನೀವು ಅಲ್ಲಿ ಕುಳಿತುಕೊಳ್ಳಿ ನಾನು ಕೋಚುಮಾನನ ಪಕ್ಕದಲ್ಲಿ ಕುಳಿತುಕೊಳ್ಳುತ್ತೇನೆ" ಎಂದು ಲೀಡರು ನನ್ನೊಡನೆ ಹೇಳಿದನು. ನನಗೆ ಆ ಅವಮಾನವು ದುರ್ಭರವಾಗಿತೋರಿತು. ಒಳಗೆ ಕುಳಿತಿದ್ದ ನನ್ನನ್ನು ನೀವು ಇಲ್ಲಿ ಕುಳ್ಳಿರಿಸಿದಿರಿ. ಯೋಗಲಿ ಎಂದು ಸುಮ್ಮನಿದ್ದೆನು, ಈಗ ನೀವು ಇಲ್ಲಿ ಕುಳಿತುಕೊಂಡು ಚುಟ್ಟಸೇದಲು ನಾನು ನಿಮ್ಮ ಕಾಲಿನ ಹತ್ತಿರ ಕುಳಿತುಕೊಳ್ಳಬೇಕೆಂದು ಹೇಳುತ್ತೀರಿ. ನಾನು ಹಾಗೆ ಕುಳಿತುಕೊಳ್ಳುವುದಿಲ್ಲ ; ಒಳಗೇ ಕುಳಿತುಕೊಳ್ಳುತ್ತೇನೆ ಎಂದು ನಾನು ಹೇಳಲು ಆ ಲೀಡರು ನನ್ನ ಜುಟ್ಟನ್ನು ಹಿಡಿದು ತಿರುಗಿಸಲಾರಂಭಿಸಿದನಲ್ಲದೆ ರಟ್ಟೆಯನ್ನು ಹಿಡಿದೆಳೆಯತೊಡಗಿದನು. ನಾನು ಹಿತ್ತಾಳೆಕಂಬಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆನು. ಒಳಗಡೆಯಿದ್ದವರೆಲ್ಲರೂ ಬಂಡಿಯಿಂದ ಕೆಳಗಿಳಿದು ಈ ವಿಚಿತ್ರವನ್ನು ನೋಡುತ್ತಿದ್ದರು. ಆ ಲೀಡರು ನನ್ನನ್ನು ಬೈದು ಹೊಡೆಯುತ್ತಿದ್ದನು. ನಾನು ಮಾತ್ರ ಸ್ಥಳಬಿಡದೆ ಕುಳಿತಿದ್ದೆನು. ಅತನು ಬಲಿಷ್ಠನು; ನಾನು ದುರ್ಬಲನು. ಅವರಲ್ಲಿ ಕೊಂಚ ಕನಿಕರಹುಟ್ಟಿತು. "ಅಯ್ಯಾ ಅತನನ್ನು ಹೊಡಿಯಲು ಅತನ ತಪ್ಪೇನೂ ಇಲ್ಲವು. ಅವನು ನ್ಯಾಯವಾಗಿಯೇ ಹೇಳಿದನು. ಅಲ್ಲಿ ಅತನು ಕುಳಿತುಕೊಳ್ಳಲು ಸ್ಥಳವಿಲ್ಲದಿದ್ದಲ್ಲಿ ಒಳಗಡೆ ಬಂದು ನಮ್ಮೊಡನೆ ಕುಳಿತುಕೊಳ್ಳುವಂತೆ ಹೇಳು" ಎಂದು ಅವರು ಲೀಡರನ್ನು ಮೂದಲಿಸಿದರು. "ನನಗೇನೂ ಭಯವಿಲ್ಲ" ಎಂದು ಲೀಡರು ಹೇಳಿದನಾದರೂ ಕೊಂಚ ಗರ್ವಭಂಗವಾಗಿ ನನ್ನನ್ನು ಹೊಡೆಯುವುದನ್ನು ಬಿಟ್ಟನು. ಕೋಚುಮಾನನನ್ನು ಹಿಂದಣಮೇಲೆ ಕುಳ್ಳಿರಿಸಿ ತಾನು ಅಲ್ಲಿ ಕುಳಿತುಕೊಂಡನು.

ಕೆಳಗಿಳಿದು ಬಂದಿದ್ದ ಪ್ರಯಾಣಿಕರೆಲ್ಲರೂ ಪುನಃ ಗಾಡಿಯೊಳಕ್ಕೆ ಹೋಗಿ ಕುಳಿತುಕೊಂಡರು. ಬಂಡಿಯು ಹೊರಟಿತು. ನನ್ನ ಎದೆಯು ಢಡಢಡನೆ ಬಡಿದುಕೊಳ್ಳುತ್ತಿದ್ದಿತು. ನಾನು ಪ್ರಾಣಸಹಿತ ಗಮ್ಯಸ್ಥಾನವನ್ನು ತಲುಪುತ್ತೇನೆಯೇ ? ಎಂಬ ಸಂಶಯವು ಸಹ ಹುಟ್ಟಿತು. ಆಗಾಗ್ಗೆ ಲೀಡರು ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದನು. "ಸ್ಟಾಂಡರ್ಟನ್ನಿಂದ ಹೊರಟಮೇಲೆ ನಿನ್ನ ಕೆಲಸ ನೆಟ್ಟಗಾಗುವುದು; ಹುಷಾರು!" ಎಂದು ಹೇಳಿದನು. ಕತ್ತಲೆಯಾದಮೇಲೆ ಬಂಡಿಯು ಸ್ಟಾಂಡರ್ಟನ್ನು ತಲುಪಿತು. ಅಲ್ಲಿ ಕೆಲ ಭಾರತೀಯರು ಕಣ್ಣಿಗೆ ಬೀಳುತ್ತಲೆ ನನಗೆ ಹೋಗಿದ್ದ ಪ್ರಾಣ ಬಂದಿತು. "ಅಬ್ದುಲ್ಲಾಸೇಟರು ನಮಗೆ ತಂತೀವರ್ತಮಾನಕೊಟ್ಟಿದ್ದಾರೆ. ನಿಮ್ಮನ್ನು ಈಸಾಸೇಟರ ಅಂಗಡಿಗೆ ಕರೆದುಕೊಂಡು ಹೋಗಲು ನಾವು ಬಂದಿರುತ್ತೇವೆ" ಎಂದು ಅವರು ಹೇಳುತ್ತಲೆ ನನಗೆ ಬಹಳ ಸಂತೋಷವಾಯಿತು. ಈಸಾಹಾಜೀ ಮೂಸಾಸೇಟರ ಅಂಗಡಿಗೆ ನಾವೆಲ್ಲರೂ ಹೊರಟೆವು. ಸೇಟರೂ ಅವರ ಗುಮಾಸ್ತರೂ ನನ್ನನ್ನು ಮುತ್ತಿಕೊಂಡರು. ನಡೆದ ಸಂಗತಿಯೆಲ್ಲವನ್ನೂ ಅವರಿಗೆ ತಿಳಿಸಿದೆನು. ಅವರು ಬಹಳ ವ್ಯಸನಪಟ್ಟರು. ತಮಗು ಕೂಡ ಇಂತಹ ಅವಸ್ಥೆಯೇ ಉಂಟಾಗಿರುತ್ತದೆಂದು ಹೇಳಿ ನನ್ನನ್ನು ಸಂತೈಸಿದರು. ರಹದಾರಿಬಂಡಿಯ ಕಂಪೆನಿಯೇಜಂಟಿಗೆ ನಾನು ಒಂದು ದೊಡ್ಡ ಕಾಗದವನ್ನು ಬರೆದು ನಡೆದ ಸಂಗತಿಯೆಲ್ಲವನ್ನೂ ವಿವರಿಸಿದ್ದೆನು. ಲೀಡರು ಹೆದರಿಸಿದ್ದ ಸಂಗತಿಯನ್ನೂ ಬರೆದಿದ್ದೆನು. ಮಾರನೆ ಬೆಳಿಗ್ಗೆ ನನಗೆ ಬಂಡಿಯಲ್ಲಿ ಸ್ಥಳವನ್ನೇರ್ಪಡಿಸಿರಬೇಕೆಂದು ತಿಳಿಸಿದ್ದೆನು. "ಸ್ಟಾಂಡರ್ಟನ್ನಿಂದ ದೊಡ್ಡ ಬಂಡಿಯು ಹೊರಡುವುದು. ಬಂಡಿಯಲ್ಲಿ ಲೀಡರು ಬರುವುದಿಲ್ಲ; ಹೊಸಬರು ಬರುತ್ತಾರೆ. ನಿಮಗೆ ಒಳಗಡೆಯೇ ಸ್ಥಳವು ಕೊಡಲ್ಪಡುವುದು" ಎಂದು ಏಜಂಟು ಉತ್ತರವನ್ನು ಕೊಟ್ಟನು. ನನಗೆ ಮನಸ್ಸಮಾಧಾನವಾಯಿತು. ಆ ಲೀಡರಿನಮೇಲೆ ನಾನು ಫಿರ್ಯಾದುಮಾಡಲಿಲ್ಲವಾದರೂ ಅದು ಅಷ್ಟರಲ್ಲೇ ಸಮಾಪ್ತಿಯಾಯಿತು. ಬೆಳಿಗ್ಗೆ ಈಸಾಸೇಟರ ಗುಮಾಸ್ತರು ನನ್ನನ್ನು ಬಂಡಿಯ ಹತ್ತಿರಕ್ಕೆ ಕರೆದುಕೊಂಡು ಬಂದರು. ಒಳಗಡೆ ಸ್ಥಳ ಸಿಕ್ಕಿತು. ಆ ರಾತ್ರಿ ಸುರಕ್ಷಿತವಾಗಿ ಬಂಡಿಯು ಜೋಹಾನ್ಸ್‌ಬರ್ಗನ್ನು ಸೇರಿತು. ಸ್ಟಾಂಡರ್ಟನ್ ಸಣ್ಣ ಗ್ರಾಮವು. ಜೋಹಾನ್ಸ್‌ಬರ್ಗು ದೊಡ್ಡದು. ಅಬ್ದುಲ್ಲಾಸೇಟರು ಜೋಹಾನ್ಸ್‌ಬರ್ಗಿಗು ಕೂಡ ತಂತಿವರ್ತಮಾನ ಕೊಟ್ಟಿದ್ದರು. ಮಹಮ್ಮದು ಕಾಸಿಂಕಾಮರುದ್ದೀನರವರ ಅಂಗಡಿಗೆ ಹೋಗಬೇಕೆಂದು ನನ್ನ ಕೂಡಲೂ ಹೇಳಿದ್ದರು. ಕಾಸಿಂರವರ ಗುಮಾಸ್ತನು ಬಂಡಿಯ ಬಳಿಗೆ ಬಂದಿದ್ದನಾದರೂ ಆತನು ನನ್ನನ್ನು ಗುರ್ತಿಸಲಿಲ್ಲ, ನಾನೂ ಆತನನ್ನು ನೋಡಲಿಲ್ಲ. ಅಲ್ಲಿ ಬಹಳ ಹೋಟೆಲುಗಳಿವೆ. ಅವುಗಳ ಹೆಸರು ಸಹ ನನಗೆ ಗೊತ್ತು. ಒಂದು ಹೋಟೆಲಿಗೆ ಹೋಗಬೇಕೆಂದೆಣಿಸಿ ಗ್ರಾಂಡ್‌ನೇಷನಲ್ ಹೋಟೆಲಿಗೆ ಹೋಗುವುದಕ್ಕಾಗಿ ಬಂಡಿಯನ್ನು ಬಾಡಿಗೆಗೆ ಗೊತ್ತುಮಾಡಿ ಅಲ್ಲಿಗೆ ಹೋಗಿ ನನಗೊಂದು ಕೊಠಡಿ ಬೇಕೆಂದು ಮ್ಯಾನೇಜರಿಗೆ ಹೇಳಲು ಆತನು ಕೊಠಡಿಗಳನ್ನು ನೋಡಿ ಒಂದೂ ಬಿಡುವಿಲ್ಲವೆಂದು ಮರ್ಯಾದೆಯಿಂದ ಹೇಳಿದನು. ಅನಂತರ ಅಲ್ಲಿಂದ ಕಾಸಿಂರವರ ಅಂಗಡಿಗೆ ಬಂಡಿಯನ್ನು ಬಿಡುವಂತೆ ಹೇಳಿ ಅಲ್ಲಿಗೆ ಹೊರಟೆನು. ಅಲ್ಲಿ ಅಬ್ದುಲ್‌ಗನೀಸೇಟರವರು ಒಬ್ಬನನ್ನು ನಿರೀಕ್ಷಿಸಿಕೊಂಡಿದ್ದರು. ಹೋಟೆಲಿನಲ್ಲಿ ನಡೆದ ಸಂಗತಿಯನ್ನು ಅವರಿಗೆ ಹೇಳಲು ಅವರು ಪಕಪಕನೆ ನಕ್ಕು ಭಾರತೀಯರಿಗೆ ಹೋಟೆಲಿನಲ್ಲಿ ಸ್ಥಳಕೊಡುವರೆಂದು ನೀವು ಹೇಗೆ ತಿಳಿದಿರಿ ? ಎಂದು ಅವರು ಕೇಳಿದರು.

ಏನಕ್ಕೆ ಕೊಡುವುದಿಲ್ಲ ? "ಕೆಲದಿವಸ ನೀವು ಇಲ್ಲಿದ್ದಹೊರತು ನಿಮಗೆ ಅದು ಗೊತ್ತಾಗುವುದಿಲ್ಲ. ದುಡಿಗಾಗಿ ನಾನು ಇಲ್ಲಿಗೆ ಬಂದೆನಾದುದರಿಂದ ನಾನು ಈ ಅವಮಾನವನ್ನು ಲೆಕ್ಕಿಸದೆ ಕಾಲವನ್ನು ಕಳೆಯುತ್ತಿದ್ದೇನೆ" ಎಂದು ಅವರು ಭಾರತೀಯರಿಗೆ ಅಲ್ಲಿ ಆಗುತ್ತಿರುವ ಹಿಂಸೆಯನ್ನೆಲ್ಲವನ್ನೂ ವಿವರಿಸಿ ಹೇಳಿದರು. ಗನ್ನಿಸೇಟರನ್ನು ಕುರಿತು ಮುಂದುಮುಂದೆ ಅಧಿಕವಾಗಿ ತಿಳಿಸಲ್ಪಡುವುದು. "ನಿಮ್ಮಂತಹವರಿಗೆ ಈ ದೇಶವು ಕೆಲಸಕ್ಕೆ ಬರುವುದಿಲ್ಲ. ನಾಳೆಯದಿನ ನೀವು ಪ್ರಿಟೋರಿಯಾಕ್ಕೆ ಹೊರಡಬೇಕಾಗಿದೆಯಲ್ಲವೆ ? ನೀವು ಮೂರನೇ ತರಗತಿಯ ಬಂಡಿಯಲ್ಲೇ ಹೊರಡಬೇಕಾಗಿದೆ. ಟ್ರಾನ್ಸ್‌ವಾಲಿನ ಸ್ಥಿತಿಯು ನೇಟಾಲಿನಲ್ಲಿರುವುದಕ್ಕಿಂತ ಅಧ್ವಾನವಾಗಿರುವುದು. ಭಾರತೀಯರಿಗೆ 1 ಮತ್ತು 2 ನೇ ತರಗತಿಗಳ ಟಿಕೆಟ್ಟುಗಳನ್ನು ಯಾವಾಗಲೂ ಕೊಡುವುದಿಲ್ಲ" ಎಂದು ಸೇಟರು ಹೇಳಿದರು. "ನೀವು ಯಾವಾಗಲೂ ಆ ನಿರ್ಬಂಧವನ್ನು ತಪ್ಪಿಸಲು ಪ್ರಯತ್ನಿಸಲಿಲ್ಲವೆ ?" ಎಂದು ನಾನು ಕೇಳಿದೆನು. "ನಾನು ಅನೇಕಸಾರಿ ಬರೆದೆನಾದರೂ ಪ್ರಯೋಜನವಾಗಲಿಲ್ಲ. 1 ಮತ್ತು 2ನೇ ತರಗತಿಗಳಲ್ಲಿ ಪ್ರಯಾಣಮಾಡಲು ನಮ್ಮವರಿಗೂ ಇಷ್ಟವಿಲ್ಲ" ಎಂದುತ್ತರವನ್ನುಕೊಟ್ಟರು. ನಾನು ರೈಲ್ವೆರೂಲ್ಸನ್ನು ತರಿಸಿ ಓದಿದೆನು. ಅದರಲ್ಲಿ ನನಗವಕಾಶವು ದೊರಕಿತು. ಹಳೇಟ್ರಾನ್ಸ್‌ವಾಲ್‌ಚಟ್ಟ ಅಂದರೆ ವಿಧಿಯು ಅಷ್ಟು ಕಠಿಣವಾಗಿರಲಿಲ್ಲವು. ರೈಲ್ವೆರೂಲ್ಸು ಮತ್ತಷ್ಟು ಸುಲಭವಾಗಿದ್ದವು. "ನಾನು 1 ನೇ ತರಗತಿಯಲ್ಲೇ ಪ್ರಯಾಣಮಾಡುವೆನು. ಅದು ಸಾಧ್ಯವಿಲ್ಲದಿದ್ದಲ್ಲಿ ಇಲ್ಲಿಗೆ 37 ಮೈಲಿ ದೂರದಲ್ಲಿರುವ ಪ್ರಿಟೋರಿಯಾಕ್ಕೆ ಪ್ರತ್ಯೇಕ ಬಂಡಿಯನ್ನು ಮಾಡಿಕೊಂಡು ಹೊರಡುವೆನು" ಎಂದು ನಾನು ಸೇಟರಿಗೆ ಹೇಳಿದೆನು. "ಅದರಿಂದ ದುಡ್ಡು ಹೆಚ್ಚಾಗಿ ವೆಚ್ಚವಾಗುವುದು; ಆಲಸ್ಯವು ಕೂಡ ಆಗುವುದು. ಆದುದರಿಂದ 1 ನೇ ತರಗತಿಯಲ್ಲೇ ಹೊರಡುವುದುತ್ತಮ" ಎಂದು ಅವರುಕೂಡ ಸಮ್ಮತಿಸಿದರು. ಅದರಮೇಲೆ "ನಾನೊಬ್ಬ ಬ್ಯಾರಿಸ್ಟರು, ಯಾವಾಗಲೂ 1 ನೇ ತರಗತಿಯಲ್ಲೇ ಪ್ರಯಾಣಮಾಡತಕ್ಕವನು. ಕೂಡಲೆ ಪ್ರಿಟೋರಿಯಾಕ್ಕೆ ಪ್ರಯಾಣಮಾಡಬೇಕಾಗಿದೆ. ಆದ್ದರಿಂದ ಸ್ಟೇಷನ್ನಿಗೆ ಬರುತ್ತೇನೆ. 1 ನೇ ತರಗತಿಯಲ್ಲಿ ತಪ್ಪದೆ ಒಂದು ಸ್ಥಳವನ್ನು ಕೊಡಬೇಕಾಗಿ ಕೋರುತ್ತೇನೆ" ಎಂದು ಸ್ಟೇಷನ್‌ಮಾಸ್ಟರಿಗೆ ಒಂದು ಕಾಗದವನ್ನು ಬರೆದೆನು. ನಾನು ಕೂಲೀ ಬ್ಯಾರಿಸ್ಟರೆಂದು ತಿಳಿದು ಆತನು ಸ್ಥಳವಿಲ್ಲವೆಂದು ಹೇಳಿಬಿಡಬಹುದಾದುದರಿಂದ ಆಂಗ್ಲೇಯರಪದ್ಧತಿಯಂತೆ ಫ್ಯಾಷನ್ನಾಗಿ ಉಡುಪನ್ನು ಹಾಕಿಕೊಂಡು ಸ್ವಯಮಾಗ್ಗಿ ಆತನ ಕೂಡ ಮಾತನಾಡುವುದುತ್ತಮವೆಂದು ತಿಳಿದು ನಾನು ಫ್ರಾಕ್‌ಕೋಟನ್ನೂ ನೆಕ್‌ಟೈಯನ್ನೂ ಧರಿಸಿಕೊಂಡು ಸ್ಟೇಷನ್ನಿಗೆ ಹೋಗಿ ಒಂದು ಸವರನ್ನನ್ನು ಕೊಟ್ಟು 1 ನೇ ತರಗತಿಯ ಟಿಕೆಟ್ಟು ಬೇಕೆಂದು ಕೇಳಿದೆನು. ಆ ಕಾಗದವನ್ನು ಬರೆದಿದ್ದವರು ನೀವೆಯೋ ? ಎಂದು ಸ್ಟೇಷನ್‌ಮಾಸ್ಟರು ಕೇಳಿದನು. "ಹೌದು. ಈ ದಿವಸವೇ ಪ್ರಿಟೋರಿಯಾಕ್ಕೆ ಹೊರಡಬೇಕಾಗಿದೆ. ದಯೆಯಿಟ್ಟು ನನಗೊಂದು ಸ್ಥಳವನ್ನು ಕೊಡಿಸಬೇಕಾಗಿ ಕೋರುತ್ತೇನೆ" ಎಂದು ಹೇಳಿದೆನು. ಆತನು ಆಶ್ಚರ್ಯದಿಂದ ಹುಸಿನಗೆ ನಕ್ಕನು. "ನಾನು ಟ್ರಾನ್ಸ್‌ವಾಲುದೇಶೀಯನಾಗಿರದೆ ಹಾಲೆಂಡುದೇಶಸ್ಥನಾದುದರಿಂದ ನಿಮಗೆ ಸಹಾಯ ಮಾಡುವೆನು. ಆದರೆ ಒಂದು ನಿಬಂಧನೆಯುಂಟು. ನಿಮಗೆ ನಾನೇನೋ ಈಗ 1 ನೇ ತರಗತಿಯ ಟಿಕೆಟ್ಟನ್ನು ಕೊಡುತ್ತೇನೆ. ಮುಂದೆ ಗಾರ್ಡು ನಿಮ್ಮನ್ನು 3 ನೇ ತರಗತಿಗೆ ಹೋಗಬೇಕೆಂದರೆ ನೀವು ರೈಲಿನವರಮೇಲೆ ಫಿರ್ಯಾದು ಮಾಡಕೂಡದು. ನೀವು ಹಾಗೆ ಫಿರ್ಯಾದು ಮಾಡಿದರೆ ನನಗೆ ತೊಂದರೆಬರುತ್ತದೆ. ನೀವು ದೊಡ್ಡಮನುಷ್ಯರೆಂದು ನಾನು ಗುರ್ತಿಸುತ್ತೇನೆ. ತೊಂದರೆ ಇಲ್ಲದೆ ನೀವು ಗಮ್ಯಸ್ಥಾನವನ್ನು ಸೇರುವವರಾಗಿ" ಎಂದು ಆತನು ಹೇಳಿ ಟಿಕೆಟ್ಟನ್ನು ಕೊಟ್ಟನು. ನಾನೂ ಆತನ ಇಷ್ಟಪ್ರಕಾರ ವಂದನಾಪೂರ್ವಕವಾಗಿ ವಾಗ್ದಾನಮಾಡಿದೆನು. ಗನ್ನೀಸೇಟರು ನನ್ನನ್ನು ಸಾಗಕಳುಹಲು ಸ್ಟೇಷನ್ನಿಗೆ ಬಂದಿದ್ದರು. ಅವರು ನಡೆದುದನ್ನೆಲ್ಲಾ ಕೇಳಿ ಬಹಳ ಆಶ್ಚರ್ಯಪಟ್ಟರು. "ದಾರಿಯಲ್ಲಿ ಗಾರ್ಡು ನಿಮಗೆ ತೊಂದರೆಕೊಡದೆ ಇರುವುದಿಲ್ಲ. ಅವನು ಸುಮ್ಮನಿದ್ದರೂ ಪ್ರಯಾಣಿಕರು ಸುಮ್ಮನಿರರು" ಎಂದು ಅವರು ಹೇಳಿ ಎಚ್ಚರಿಸಿದರು. ನಾನು 1 ನೇ ತರಗತಿಯ ಬಂಡಿಯಲ್ಲಿ ಕುಳಿತುಕೊಂಡೆನು. ಬಂಡಿಯು ಹೊರಟಿತು. ಜರ್ಮಿಸ್ಟನ್ ಹತ್ತಿರ ಗಾರ್ಡು ಬಂದು ಟಿಕೆಟ್ಟನ್ನು ವಿಚಾರಿಸಿದನು. ನನ್ನನ್ನು ನೋಡುತ್ತಲೇ ಅವನಿಗೆ ಕೋಪಬಂದಿತು. 3 ನೆಯ ತರಗತಿಗೆ ಹೋಗಬೇಕೆಂದು ಬೆರಳಿನಿಂದ ಸೂಚಿಸಿದನು. ನಾನು 1 ನೇ ತರಗತಿಯ ಟಿಕೆಟ್ಟನ್ನು ತೋರಿಸಿದೆನು. ನಿಮ್ಮ ಹತ್ತಿರ 1 ನೇ ತರಗತಿಯ ಟಿಕೆಟ್ಟಿದ್ದರೂ ಚಿಂತೆಯಿಲ್ಲ, ನೀವು 3 ನೇ ತರಗತಿಯ ಬಂಡಿಗೆ ಹೋಗಿಯೇತೀರಬೇಕು ಎಂದು ಗಾರ್ಡು ಹೇಳಿದನು. ಆ ಬಂಡಿಯಲ್ಲಿ ಒಬ್ಬ ಆಂಗ್ಲೇಯನು ಮಾತ್ರ ಇದ್ದನು. ಆತನು ಗಾರ್ಡನನ್ನು ಕಠಿಣವಾಗಿ ಮೂದಲಿಸಿ "ಅವರ ಹತ್ತಿರ ಫಸ್ಟ್‌ಕ್ಲಾಸ್ ಟಿಕೆಟ್ಟು ಇದ್ದಾಗ್ಯೂ 3 ನೇ ತರಗತಿಗೆ ಹೋಗಬೇಕೆನ್ನುವುದೇತಕ್ಕೆ ? ಅವರು ಈ ಬಂಡಿಯಲ್ಲಿ ಕುಳಿತಿರುವುದರಿಂದ ನಾನೇನೂ ಆಕ್ಷೇಪಿಸುವುದಿಲ್ಲ" ಎಂದು ಆ ಆಂಗ್ಲೇಯನು ಗಾರ್ಡನಕೂಡ ಹೇಳಿದನು. "ಅಯ್ಯಾ ನೀವು ಇಲ್ಲೇ ಕುಳಿತುಕೊಂಡಿರಿ" ಎಂದು ಆತನು ಹೇಳಿದನು. "ಕೂಲಿಯವನಸಂಗಡ ಪ್ರಯಾಣಮಾಡಲು ನಿಮಗೆ ಆಕ್ಷೇಪಣವೇನೂ ಇಲ್ಲದಿರುವಾಗ್ಗೆ ನನಗೇನು ?" ಎಂದು ಗುಣುಗುಟ್ಟುತ್ತ ಗಾರ್ಡು ಹೊರಟು ಹೋದನು.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು.

ಲಗ್ನ ಮೊದಲಾದಕಾರ್ಯಗಳಲ್ಲಿ ಫಂಡಿಗೆ ಬಂದಿರತಕ್ಕ ಹಣದತಪಸೀಲು. —

ಮ|| ಗಳಾದ 1. ಚಾಮರಾಜನಗರದ ತಾ|| ಆಲೂರುಗ್ರಾಮದಲ್ಲಿ ನಡೆದ ಲಗ್ನಗಳ ಬಾಬತು ಅಪ್ಪೆಗೌಡರ ಪುಟ್ಟಬಸಪ್ಪನವರ ಮೂಲಕ 7 ರೂ. 2. ನೆಲಮಂಗಲದ ತೋಟದಪ್ಪನವರ ಮಗಳಿಗೂ ನಾರಸಂದ್ರದ ಶೆಟ್ರು ಪುಟ್ಟಬಸಪ್ಪನವರ ಮಗನಿಗೂ ನಡೆಸಿದ ಲಗ್ನದಲ್ಲಿ ಶೆಟ್ರು ಶಿದ್ಧಬಸಪ್ಪನವರ ಮೂಲಕ 2 ರೂ. 3. ಕಾನಕಾನಹಳ್ಳಿ ಪೇಟೆ ಬೂದಿಕೆರೆ ಕರಿಬಸವಣ್ಣನವರ ಕೊಮಾರ ವೀರಭದ್ರಪ್ಪನಿಗೂ ಪಟೇಲ್ ಮಲ್ಲಪ್ಪನವರ ತಮ್ಮ ರುದ್ರಪ್ಪನವರ ಕುಮಾರ್ತಿ ಸೌ|| ಮುನಿರುದ್ರಮ್ಮನಿಗೂ ನಡೆದ ಲಗ್ನದಲ್ಲಿ ವರನಕಡೆಯಿಂದ 2 ರೂ. ವಧುವಿನಕಡೆಯಿಂದ 1 ರೂ. ಜುಮ್ಲಾ ಶ್ರೀಮನ್ನಿರಂಜನ ನಿರ್ವಾಣಸ್ವಾಮಿಗಳವರ ಮೂಲಕ 3 ರೂ. 4. ಅರಸೀಕೆರೆ ತಾ|| ಹಲ್ಕೂರು ದೊಡ್ಡ ಮೇಟಿಕುರಿಕೆಯಲ್ಲಿರುವ ಬಸವಲಿಂಗೇಗೌಡರ ಮಗ ಪುಟ್ಟರಾಮೇಗೌಡರ ಪುತ್ರಿ ಸೌ|| ಸಿದ್ಧಮ್ಮನಿಗೂ ಸದರಿ ಮೇಟಿಕುರಿಕೆ ಸಾಹುಕಾರ್ ತೋಪೆಗೌಡರ ಪುತ್ರ ಚಿ|| ಪುಟ್ಟಯ್ಯನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ಶಿದ್ಧಶೆಟ್ಟಿಯವರ ಮೂಲಕ 10 ರೂ. 5. ಬೆಂಗಳೂರು ಬಳ್ಳಾಪುರದಪೇಟೆ ಕಂಟ್ರಾಕ್ಟರ್ ಎಂ. ನಾಗಪ್ಪನವರ ಪುತ್ರಿ ಸೌ|| ಶರ್ವಾಣಮ್ಮನ ವಿವಾಹಪ್ರಸ್ತದಲ್ಲಿ ಮಾಡಲ್ ಮುದ್ರಾಕ್ಷರಶಾಲಾ ಟಿ. ಯಜ. ಚನ್ನಪ್ಪನವರ ಮೂಲಕ 3 ರೂ. 6. ಕೊರಟಗೆರೆ ತಾ|| ಜಟ್ಟಿ ಅಗ್ರಹಾರದಲ್ಲಿರುವ ಶೀಕ್ಕಲ್ ಹಿರೇಮಠದ ಪಟ್ಟದ ಶಾಂತಲಿಂಗಸ್ವಾಮಿಗಳವರ ತಮ್ಮ ರೇವಣಾರಾಧ್ಯರ ಲಗ್ನದಲ್ಲಿ 3 ರೂ. ಮತ್ತು ಹಿಂದೂಪುರದ ಸಾಹುಕಾರ್ ಬಜ್ಜಣ್ಣನವರ ಲಗ್ನದಲ್ಲಿ 3 ರೂ. ಜುಮ್ಲಾ ಎ. ಆರ್. ಶ್ರೀಕಂಠಾರಾಧ್ಯರ ಮೂಲಕ 6 ರೂ. 7. ಮಾಗಡಿ ತಾ|| ಕುದೂರು ಹೋಬಳಿ ಅದರಂಗಿ ಮುದ್ದವೀರಯ್ಯನವರ ಮಗಳು ಸೌ|| ಹೊನ್ನಮ್ಮನ ಲಗ್ನದಲ್ಲಿ ವಧೂವರರಿಂದ 2 ರೂ. ಮತ್ತು ಕಾಗಮಡು ಬಂಡಿ ಕಾಳಪ್ಪನವರ ಮಗ ಗಂಗಣ್ಣನ ಲಗ್ನದಲ್ಲಿ ವಧೂವರರಿಂದ 2 ರೂ. ಜುಮ್ಲಾ ಅದರಂಗಿಪಟೇಲ್ ಮುನಿಲಿಂಗಪ್ಪನವರ ಮೂಲಕ 4 ರೂ. 8. ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಕೆ. ವೈ. ಮಲ್ಲಶೆಟ್ಟಪ್ಪನವರ ಕುಮಾರ್ತಿ ಸೌ|| ಅನ್ನಪೂರ್ಣಮ್ಮನ ಲಗ್ನದಲ್ಲಿ ವಧೂವರರಿಂದ ದೇಶದ ಯಜಮಾನ ಬಸವಪ್ಪನವರ ಮೂಲಕ 5 ರೂ. 9. ತುಮಕೂರು ತಾ|| ಹಿರೇಹಳ್ಳಿ ಅಡವಿಯಪ್ಪನವರ ಮಗ ಚಿಕ್ಕಣ್ಣನಿಗೂ ಅರಳೂರು ದೊಡ್ಡಬಸಪ್ಪನವರ ಮಗಳು ಸೌ|| ಅಮ್ಮಯಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ಬೆಂಗಳೂರು ಜವಳಿಯಂಗಡಿ ಬಸಪ್ಪನವರ ಮೂಲಕ 5 ರೂ. 10. ನೆಲಮಂಗಲದ ತಾ|| ಬೇಗೂರು ಹೋಬಳಿ ಚಿಕ್ಕನಹಳ್ಳಿಯಲ್ಲಿರುವ ಮುಗಳಿಹಳ್ಳಿ ಮಠದ ರೇವಣ್ಣಯ್ಯನವರ ಮಗ ಶಿದ್ಧಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ದೊಮ್ಮಸಂದ್ರದ ಶೆಟ್ರು ಮಲ್ಲಶೆಟ್ಟಿಪ್ಪನವರ ಮೂಲಕ 2 ರೂ. 11. ಕ್ಲೋಸ್‌ಪೇಟೆ ತಾ|| ಬಿಡದಿ ಬಾಣಂದೂರು ಶಿದ್ಧಮಲ್ಲಪ್ಪನವರ ಮಗ ಶಿದ್ಧಲಿಂಗಪ್ಪನ ನಿಷೇಕಪ್ರಸ್ತದಲ್ಲಿ ಬೆಂಗಳೂರು ದೊಡ್ಡಪೇಟೆ ಗ್ರಂ|| ಅಂ|| ಗುರುಶಿದ್ಧಪ್ಪನವರ ಮೂಲಕ 2-1-0 ರೂ. ಜುಮ್ಲಾ 49-1-0 ರೂ.

ಪಿ. ಪರಮಶಿವಯ್ಯ, ಸೆಕ್ರೆಟರಿ,
ವೈ. ವೀ. ವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು.

೧೯೨೬ನೆಯ ಇಸವಿ ಸೆಪ್ಟಂಬರ್ ತಾ|| ೧೮ ರಿಂದ ೧೯೨೬ ನೆಯ ಇಸವಿ ಸೆಪ್ಟಂಬರ್ ತಾ|| ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಭಾದ್ರಪದ ಶುದ್ಧ ಏಕಾದಶಿಯಿಂದ ಭಾದ್ರಪದ ಬಹುಳ ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
18	[1] ಶನಿ	ಏಕಾ	12-52	ಶ್ರವ	55-15	2
19	ಭಾನು	ದ್ವಾದ	7-30	ಧನಿ	51-16	3
20	[2] ಸೋಮ	ತ್ರ-ಚ	1-41 54-5	ಶತ	47-6	4
21	[3] ಮಂಗಳ	ಪೌರ್ಣ	49-34	ಪೂಭಾ	42-48	5
22	[4] ಬುಧ	ಪಾಡ್ಯ	43-35	ಉಭಾ	38-40	6
23	[5] ಗುರು	ಬಿದಿ	38-1	ರೇವ	34-56	7
24	ಶುಕ್ರ	ತದಿ	32-42	ಅಶ್ವಿ	33-19	8

(1) ಪರಿವರ್ತನೈಕಾದಶಿ. (2) ಅನಂತಪದ್ಮನಾಭವ್ರತಂ, ಮಳೆನಕ್ಷತ್ರ-ಉತ್ತರೆ ೩ ನೆಯಪಾದ. (3) ಉಮಾಮಹೇಶ್ವರವ್ರತಂ. (4) ಮಹಾಲಯಪಕ್ಷಾರಂಭಃ. (5) ಮಳೆನಕ್ಷತ್ರ-ಉತ್ತರೆ ೪ ನೆಯಪಾದ.

ಮೈಸೂರು: ಶ್ರೀ. ಎಂ. ವೆಂಕಟಕೃಷ್ಣಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧೀಶರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರಾಮಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಸೆಪ್ಟಂಬರ್ ತಾರೀಖು ೨೫ ನೆಯ ಶನಿವಾರ. [ಸಂಚಿಕೆ ೩೯

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ
ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮು ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಸಾಲಿಮಕಂದ, ಮಧುಕಂದ, ಜಸಾಕಂದ, ಸಾಲೀಮಲೀಕಂದ, ಅಶ್ವಗಂದ, ಶ್ರೀಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಠಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಿಪತ್ರಿ, ಜಾಯಪತ್ರಿ, ಪಿಠಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀಕಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಆಡವೀಬೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲಿ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಕಮಾಸದತನಕ ಕಡಿಮೆ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—9] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

SIROMANY NARAYANACHARYA & CO.,
BENARES CITY.

S.U.N.& CO.
BENARES CITY

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟೆ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ, ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಘಾಗಂಟೆ, ನಾರ್ಮಡಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—10]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಅದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಶಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಅಬದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ಮೇಲ್ಪಟ್ಟ ೧೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ [illegible] ಉಪಯೋಗಿಸುತ್ತಾರೆ. ಮಾದರಿಗೆ ಪುಕಟ್ಟೆ ಕಳುಹಿಸಲಾದೀತು.

ಡಬ್ಬಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ [illegible] ಬರೆಯಿರಿ.

ವಿಳಾಸ:—ಸುರುಟುಪನ ಜಿ. ಕಂಪನಿ ಲಿಮಿಟೆಡ್,
[50—48] ಪೋ. ಬಾ. ನಂ. [illegible], ಮದರಾಸು.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆಬಾರದಿದ್ದರೆ, ಇದಿಗೋ ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SITHARAGHAVA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲುಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ
ರೋಗಗಳನ್ನು
ಗುಣಪಡಿಸುತ್ತವೆ.

36

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ನೋಟೀಸ್.

ಹರಿಹರ ತಾಲೂಕ ಮಲೇಬೆನ್ನೂರಲ್ಲಿರುವ ಮ|| ದಸ್ತಗೀರಸಾಹೇಬ್ ಆದಾಪುರದ ಪಟೇಲ್ ಇವರಿಗೆ—ಕೆಳಗೆ ಸಹಿ ಮಾಡುವವನ ಕಡೆಂದಾ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನಂದರೆ—ನೀವು ನನ್ನ ಖಾಸಮಗಳನ್ನು ಈಗ ಅಜಮಾಸ 7-8 ವರ್ಷಗಳ ಕೆಳಗೆ ನಿಶ್ಚಯಮಾಡಿಕೊಂಡು ಹಲಗೇರಿ ಗ್ರಾಮದಲ್ಲಿ ನಮ್ಮ ಜಾತಿ ರಿವಾಜ ಪ್ರಕಾರ ನಾಲ್ಕು ದಾಗೀನೆ ಸಹಾ ನನ್ನ ಮಗಳ ಮೈಮೇಲೆ ಹಾಕಿ ಹೋದಿರಿ. ಆದರೆ ಮಗಳು ವಯಸ್ಸಿಗೆ ಬಂದು 4-5 ವರ್ಷಗಳಾದರೂ ನೀವು ಲಗ್ನಮಾಡಿಕೊಳ್ಳಲಿಲ್ಲಾ. ಎಷ್ಟೋ ಸಾರೆ ನಿಮಗೆ ಲಗ್ನಮಾಡಿಕೊಳ್ಳಲಿಕ್ಕೆ ಹೇಳಿಕಳಿಸಿದ್ದೆವು. ನೀವು ಈ ಬಗ್ಗೆ ಏನೂ ಮಾಡದೆ ಸುಮ್ಮನೆ ಕುಳಿತುಬಿಟ್ಟಿರುತ್ತೀರಿ. ಕಾರಣವೇನು ಅಂತಾ ವಿಚಾರಮಾಡಲಾಗಿ, ನಿಮಗೆ ಮೈಯಲ್ಲಿ ಅಸಾಧ್ಯವಾದ ರೋಗವು ಉಂಟಾಗಿರುತ್ತದೆ ಎಂದು ನಮಗೆ ತಿಳಿಯಬಂತು. ಆದ್ದರಿಂದ ಈಗ ಈ ನೋಟೀಸಿನಿಂದ ನಿಮಗೆ ತಿಳಿಸುವದೇನಂದರೆ ನಾನು ನಿಮಗೆ ನನ್ನ ಮಗಳನ್ನು ಲಗ್ನಮಾಡಿಕೊಡಲಿಕ್ಕೆ ಕಬೂಲು ಇರುವದಿಲ್ಲ. ನಿಮ್ಮ ದಾಗೀನೆಗಳನ್ನು 8 ದಿವಸಗಳ ಒಳಗಾಗಿ ನಮ್ಮಲ್ಲಿಗೆ ಬಂದು ತೆಗೆದುಕೊಂಡುಹೋಗತಕ್ಕದ್ದು. ನಾನು ಬೇರೆಕಡೆಗೆ ನನ್ನ ಮಗಳನ್ನು ಯೋಗ್ಯವಾದ ವರನಿಗೆ ಕೊಟ್ಟು ಲಗ್ನಮಾಡಿಕೊಡುತ್ತೇನೆ. ತಿಳಿಯುವದು.

ಹುಲಗೇರಿ,
ತಾ|| [illegible]

[illegible] ಗೌಡರ ಸಹಿ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಸೆಪ್ಟಂಬರ್ ತಾ|| ೨೫ ನೆಯ ಶನಿವಾರ.

CONFERENCE OF INSPECTING OFFICERS.

In the course of his concluding speech at the Conference of the Inspecting Officers held recently the president Mr. K. Mathan has given *a resume* of the important resolutions passed at the conference. No one who is interested in the education of the State can fail to be struck by the thoroughness with which the Inspector-General of Education is going about his work in the Department. The problems that were tackled at the conference related mainly to the organisation and supervision of the Department. Since, however, the teacher was the primary factor in education the Conference passed a resolution with regard to the necessity of raising the qualifications of teachers and of appointing trained hands, the latter of which is conditioned by the member of normal training institutions in the State. The decision to open Upper Secondary classes in the Zenana Normal School in Mysore would go a great way in meeting the demand for trained Muslim lady teachers. The practice of teachers of Primary Schools training up candidates for the Kannada Lower Secondary Examination is also to be discouraged unless under special permission which depends on the staff they have. The conference has confirmed the decision to do away with the Incomplete Middle Schools. It was also resolved to find better teachers for giving practical instruction and more time within school hours for the same. One of important resolutions relates to the improvement of the office system obtaining in the offices of the Inspectors of schools, the District Inspectors and the Assistant Inspectors, which at present does not show the pending cases, though of course the papers may have been disposed of. The introduction of the system of showing questions pending in the office would go a great way in expediting work in the offices of the Inspectorate. It is a system which should be brought into vogue in every office in all Departments. The conference was alive to the fact that the Assistant Inspectors formed the very back bone of the Inspecting agency and it was decided that no person who has not had at least two years experience as a teacher and who has not had the requisite professional training should be appointed as an Assistant Inspector. We are not sure whether the proposal to grant fixed travelling allowance to the District and Assistant Inspectors would conduce to more efficient work in spite of the provision for touring for a minimum number of days. We are not also sure if that is a practice that obtains elsewhere. It would only be worth being tried as an experiment on the success of which may depend the final adoption. Mr. Mathan spoke of the free education for the children of educational officers and of preference to their sons in the appointments to the Education Department. The former of these proposals has been rightly negatived by Government. We are equally surprised at the second. We are trying in these times to do away with the claims of heredity and this proposal would only perpetuate a monopoly which education is attempting to break. Another very important resolution that was passed at the conference relates to the unification of the Inspectorate—a matter on which Mr. Mathan was keen about in order to introduce more efficency in inspection. The present system of divided responsibility in a District between the Inspecting Officers of Kannada Boys' Schools, Kannada Girls' Schools, the Urdu Boys' Schools and the Urdu Girls' Schools is no doubt wrong in principle and as pointed out by the Inspector-General would work as a great abstacle to readjustments that may have to be effected between various schools in accommodation, furniture and such matters on the one hand and in working out the scheme of compulsory education on the other. Mr. Mathan emphasised the need among the Inspecting Officers to develop a broad and general outlook regarding general problems obtaining in their respective jurisdictions, problems regarding the strength of particular classes of schools, their proper distribution, readjustments of staff, the building contributions, the demand for English and vocational education etc. He also suggested that inspection should mean not only checking and criticism but proper guidance by way of giving model lessons and finally appealed to the inspecting officers to bring about a freshness of outlook and determination not to be over whelmed by mere routine. We are indeed glad to observe the splendid direction the Inspector-General of Education is giving to the officers of the Department and we have no doubt that with the increased interest the public are taking especially after the introduction of the education cess they will appreciate the work more fully and offer greater cooperation to the Department in the achievement of their object.

ಪರಳೀವಿವಾದಾನ್ವತಪರಿಣಾಮ.

ಹೈದರಾಬಾದುಸಂಸ್ಥಾನಕ್ಕೆ ಸೇರಿದ ಪರಳಿಯ ವೈದ್ಯೇಶ್ವರಲಿಂಗಕ್ಕೆ ರುದ್ರಾಭಿಷೇಕವನ್ನು ಅಲ್ಲಿಯ ವೀರಶೈವರು ಅನೂಚಾನವಾಗಿ ಮಾಡಿಕೊಂಡು ಬರುತ್ತಿದ್ದರಾದರೂ, ಲಿಂಗಾಯತರು ಶೂದ್ರರಾದುದರಿಂದ ವೇದೋಕ್ತವಾಗಿ ರುದ್ರಾಭಿಷೇಕವನ್ನು ಮಾಡಲು ಅರ್ಹರಲ್ಲವೆಂದು ಅಸೂಯಾಪರರಾದ ಅಲ್ಲಿಯ ಬ್ರಾಹ್ಮಣರು ಗೊಂದಲವನ್ನೆಬ್ಬಿಸಿ ಸರ್ಕಾರಕ್ಕೆ ಅರ್ಜಿಯನ್ನು ಹಾಕಿಕೊಂಡುದರಮೇಲೆ, ಈ ವಿವಾದಾಸ್ಪದವಿಚಾರವು ಸರ್ಕಾರದವರಿಂದ ಇತ್ಯರ್ಥಗೊಳಿಸಲ್ಪಡುವವರೆಗೂ ಉಭಯಪಕ್ಷದವರೂ ರುದ್ರಾಭಿಷೇಕವನ್ನು ಮಾಡುವುದಿಲ್ಲವೆಂಬ ಬಗೆಗೆ ಅವರುಗಳಿಂದ ಮುಚ್ಚಳಿಕೆಯು ತೆಗೆದುಕೊಳ್ಳಲ್ಪಟ್ಟಿತು. ಅಲ್ಲದೆ ಶಾಸ್ತ್ರಾರ್ಥವಿಚಾರದಿಂದ ವಿವಾದವನ್ನು ಬಗೆಹರಿಸಲು ವೀರಶೈವರ ಪರವಾಗಿ ಶ್ರೀಚೌಡಯ್ಯದಾನಪುರಸಂಸ್ಥಾನಾಧೀಶ್ವರ ಜಗದಾಚಾರ್ಯಸ್ವಾಮಿ ವಿರೂಪಾಕ್ಷ ಒಡೆಯರವರಿಂದಲೂ ಬ್ರಾಹ್ಮಣರಪರವಾಗಿ ಭಾಪಟಶಾಸ್ತ್ರಿಗಳಿಂದಲೂ ಕೂಡಿದ ಒಂದು ಕಮಿಷನ್ನೇರ್ಪಡಿಸಲ್ಪಟ್ಟು ಹೈದರಾಬಾದ್ ಹೈಕೋರ್ಟಿನಲ್ಲಿ ನ್ಯಾಯಾಧಿಪತಿಯಾಗಿದ್ದು ನಿವೃತರಾಗಿದ್ದ ಸ್ವರ್ಗವಾಸಿ ರಾಯಬಾಲಮುಕುಂದರವರು ಸರ್ ಪಂಚರಾಗಿ ನಿಯಮಿಸಲ್ಪಟ್ಟಿದ್ದರು. ಈ ಕಮಿಷನ್ನಿನವರ ಮುಂದೆ ಪ್ರಖ್ಯಾತ ವೀರಶೈವವಿದ್ವಾಂಸರುಗಳಿಂದ ಶಾಸ್ತ್ರಾರ್ಥವು ಮಾಡಲ್ಪಡುತ್ತಿರುವಾಗ್ಗೆ ಭಾಪಟರವರು ಪಲಾಯನರಾಗಲು ಉಳಿದಿಬ್ಬರು ಕಮಿಷನರುಗಳು ಉಭಯಪಕ್ಷದ ಪಂಡಿತರುಗಳ ಸಾಕ್ಷ್ಯಗಳನ್ನು ತೆಗೆದುಕೊಂಡು ತಮ್ಮ ಅಭಿಪ್ರಾಯದೊಡನೆ ಇತ್ಯರ್ಥದ ಬಗೆಗೆ ಮೂವರು ನ್ಯಾಯಾಧೀಶರುಗಳಿಂದ ಕೂಡಿದ 'ಉಮರ್‌ಮಜಹಬ್' ಎಂಬ ನ್ಯಾಯಸ್ಥಾನಕ್ಕೆ ಕಳುಹಿಸಿಕೊಟ್ಟರು. ಆ ನ್ಯಾಯಸ್ಥಾನದಲ್ಲಿ ಉಭಯಪಕ್ಷದ ವಕೀಲರುಗಳ ಆರ್ಗ್ಯುಮೆಂಟು ನಡೆದಿರುವುದಾದರೂ ಇತ್ಯರ್ಥದ ಫಲಿತಾಂಶವು ಮಾತ್ರ ಇನ್ನೂ ಗೊತ್ತಾಗದಿರುವುದು ಸಖೇದಾಶ್ಚರ್ಯಕರವಾಗಿದೆ. ಪರಮತೋತ್ಕರ್ಷಾಸಹಿಷ್ಣುಗಳಾದ ಭಟ್ಟರುಗಳು ವೇದಾರ್ಥವಿಚಾರಣೆಗೆ ಇಂದೂರು ಸಂಸ್ಕೃತಕಾಲೇಜಿನಲ್ಲಿ ವೇದಭಾಷ್ಯಪ್ರೊಫೆಸರಾಗಿದ್ದ ಸ್ವಾಮಿವಿರೂಪಾಕ್ಷ ಒಡೆಯರು ಕಮಿಷನರಾಗಿ ಬರುತ್ತಾರೆಂದು ಪ್ರಕಟವಾದ ಕೂಡಲೆ ಇಂದೂರಿಗೆ ಹೋಗಿ ಅಲ್ಲಿಯ ದಿವಾನರಾದಿಯಾಗಿ ಬ್ರಾಹ್ಮಣಾಧಿಕಾರಿಗಳನ್ನು ಕಂಡು ಶ್ರೀ ಒಡೆಯರವರು ವೇದಾರ್ಥವಿಚಾರಕ್ಕೆ ಕಮಿಷನರಾಗಿ ಬಂದಲ್ಲಿ ತಾವು ಗೆಲ್ಲಲಾಗದೆ ತಮ್ಮ ಬ್ರಾಹ್ಮಣಸಮಾಜಕ್ಕೇ ಅವಮಾನವಾಗುತ್ತಾದುದರಿಂದ ಅವರಿಗೆ ರಜವನ್ನು ಕೊಡಬೇಡಿರೆಂದು ಹೇಳಿಕೊಂಡಿದ್ದುದರಮೇಲೆ ರಜವು ದೊರೆಯಲಿಲ್ಲವಾಗಿ ಸ್ವಾಮಿಒಡೆಯರವರು ಉದ್ಯೋಗಕ್ಕೇ ರಾಜೀನಾಮೆಯನ್ನು ಕೊಟ್ಟು ಹೈದರಾಬಾದಿಗೆ ದಯೆಮಾಡಿ ತಮ್ಮ ಅದ್ಭುತವಿದ್ಯಾವೈದುಷ್ಯ ಪ್ರಭಾವದಿಂದ ಭಟ್ಟರು ಪರಾಜಿತರಾಗಿ ಪಲಾಯನರಾಗುವಂತೆ ಮಾಡಿದ ಸಂಗತಿಯು ಈ ಪತ್ರಿಕಾವಾಚಕರ ಸ್ಮೃತಿಪಥದಲ್ಲಿರುವುದಷ್ಟೆ. ಹೀಗೆ ಊರದರೆ ಜಾರುವ ಜಾರದರೆ ಕುಪ್ಪಳಿಸುವ ಭಟ್ಟರುಗಳು ಈ ಪರಳೀವಿವಾದವು ಇತ್ಯರ್ಥವಾಗುವವರೆಗೆ ರುದ್ರಾಭಿಷೇಕವನ್ನು ಉಭಯಪಕ್ಷದವರೂ ಮಾಡಕೂಡದೆಂದು ನಿರ್ಬಂಧಪಡಿಸಲ್ಪಟ್ಟಿರುವುದರಿಂದ ಇನಾಂದಾರರ ಧರ್ಮಕಾರ್ಯಗಳು ನಡೆಯದೆ ಇನಾಮಿನ ಉದ್ದೇಶಕ್ಕೆ ಭಂಗಬಂದಿರುತ್ತಾದಪ್ರಯುಕ್ತ ರುದ್ರಾಭಿಷೇಕದ ವಿನಾ ಇನಾಂದಾರರ ಇತರಧರ್ಮಕಾರ್ಯಗಳು ನಿರಾತಂಕವಾಗಿ ನಡೆಯಲಪ್ಪಣೆಯಾಗಬೇಕೆಂದು ಹೈದರಾಬಾದು ಪ್ರಭುತ್ವದವರಲ್ಲಿ ಬಿನ್ನೈಸಿಕೊಂಡು ಅವರನುಮತಿಯನ್ನು ಪಡೆದುಕೊಂಡಿದ್ದರು. ಆದರೆ ಇಷ್ಟಕ್ಕೆ ಭಟ್ಟರು ತೃಪ್ತರಾಗದೆ ರುದ್ರಾಭಿಷೇಕವನ್ನು ಸಹ ಮಾಡಲು ತಮಗೆ ಸರ್ಕಾರದಪ್ಪಣೆಯಾಗಿರುತ್ತದೆಂದು ಅಲ್ಲಿಯ ವೃತ್ತಪತ್ರಿಕೆಗಳ ದ್ವಾರ ಪ್ರಕಟಿಸಿ ಕೋಲಾಹಲ ಮಾಡಲುದ್ಯುಕ್ತರಾದರು. ಈ ಸುದ್ದಿಯನ್ನು ಕೇಳಿ ವೀರಶೈವರು ಭಯಭ್ರಾಂತರಾಗಿ ಪ್ರಭುತ್ವದವರಿಗೆ ಅರಿಕೆಮಾಡಿಕೊಳ್ಳಲು ಅವರು ಪೋಲೀಸು ಅಧಿಕಾರಿಗಳಿಂದ ಭಟ್ಟರ ಅಕ್ರಮಾಚರಣೆಯನ್ನು ಅಡ್ಡಿಪಡಿಸಬೇಕಾಗಿ ಬಂದಿತು. ನಿಜಸ್ಥಿತಿಯು ಹೀಗಿರುವಾಗ್ಗೆ ಪರಳೀ ವೈದ್ಯನಾಥೇಶ್ವರನ ರುದ್ರಾಭಿಷೇಕವನ್ನು ಮಾಡಲು ಭಟ್ಟರುಗಳಿಗೆ ನೈಜಾಂಸರ್ಕಾರದಪ್ಪಣೆಯಾಗಿರುವುದೆಂದು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವುದಕ್ಕಾಗಿ ನಾವು ವಿಷಾದಿಸುತ್ತೇವಲ್ಲದೆ ಇದನ್ನು ಯಾರೂ ನಂಬಬಾರದೆಂದು ಕೋರುತ್ತೇವೆ.

ಹತ್ತನೆಯ ವೀರಶೈವಮಹಾಸಭೆ.

ಸಮಾಜಾಭಿವೃದ್ಧಿಕಾಂಕ್ಷಿಗಳೂ, ಕಾರ್ಯದಕ್ಷರೂ ಆದ ಹುಬ್ಬಳ್ಳಿಯ ವೀರಶೈವಬಂಧುಗಳು ಅಖಿಲಭಾರತೀಯ ವೀರಶೈವಮಹಾಸಭೆಯ ಹತ್ತನೆಯ ಅಧಿವೇಶನವನ್ನು ಹುಬ್ಬಳ್ಳಿಯಲ್ಲಿ ಬರುವ ಡಿಶಂಬರ್ ತಿಂಗಳಲ್ಲಿ ನೆರೆಯಿಸಲು ನಿರ್ಧರಿಸಿ ಮುಂದಣ ಕಾರ್ಯಸಿದ್ಧತೆಗಾಗಿ ಸ್ವಾಗತಸಂಘವನ್ನೇರ್ಪಡಿಸಿಕೊಂಡಿರುವ ವಿಚಾರವು ಈ ಪತ್ರಿಕೆಯ ಮತ್ತೊಂದೆಡೆಯಲ್ಲಿ ಪ್ರಕಟವಾಗಿರುವ ಲೇಖದಿಂದ ವ್ಯಕ್ತವಾಗುತ್ತದೆ. ಈ ಸ್ವಾಗತಸಂಘವು ಬೊಂಬಾಯಿ ನ್ಯಾಯವಿಧಾಯಕಸಭೆಯ ಮೆಂಬರರೂ ಪ್ರಸಿದ್ಧ ವಕೀಲರೂ ಆದ ರಾವ್‌ಬಹದ್ದೂರ್ ಎಸ್. ಕಂಬಳಿ, ಬಿ.ಎ., ಎಲ್.ಎಲ್.ಬಿ., ಯವರ ಅಧ್ಯಕ್ಷತೆಯಿಂದಲೂ ವಿದ್ಯಾಪದವೀಧರರೂ, ಪ್ರಸಿದ್ಧ ವರ್ತಕರೂ ಆದ ಸಮಾಜಪ್ರಮುಖರುಗಳ ಸಭ್ಯತ್ವದಿಂದಲೂ ಏರ್ಪಟ್ಟಿರುವುದರಿಂದ ಮಹಾಸಭಾಕಾರ್ಯವು ಸುಲಲಿತವಾಗಿ ನಡೆಯುವುದರಲ್ಲಿ ಸಂದೇಹವಿಲ್ಲ. ಹುಬ್ಬಳ್ಳಿಯ ವೀರಶೈವಬಂಧುಗಳು ವೀರಶೈವಮಹಾಸಭೆಯನ್ನು ತಮ್ಮ ಸ್ಥಳದಲ್ಲಿ ನೆರೆಯಿಸಬೇಕೆಂದು ಸಂಕಲ್ಪಿಸಿದಂತೆ ತತ್ಕಾರ್ಯತತ್ಪರರಾದುದಕ್ಕಾಗಿ ನಾವು ಅವರನ್ನು ಅಭಿನಂದಿಸಿ ಅವರು ಕೈಕೊಂಡಿರುವ ವೀರಶೈವಸಮಾಜಾಭಿವೃದ್ಧಿಗೆ ಮುಖ್ಯಾಧಾರಭೂತವಾದ ಮಹಾಸಭಾಕಾರ್ಯವು ನಿರ್ವಿಘ್ನವಾಗಿಯೂ, ಕೀರ್ತಿಪ್ರದವಾಗಿಯೂ ನಡೆಯಲೆಂದು ಹಾರೈಸುತ್ತೇವೆ.

ಸ್ವದೇಶವ ವೃತ್ತಾಂತಗಳು.

ಈಗ ಯಳಂದೂರಿನಲ್ಲಿ ನಡೆಯುತ್ತಿರುವ ಹೊನ್ನೂರಿನ ಕೊಲೆಮೊಖದ್ದಮೆಯ ಜಡ್ಜ್‌ಮೆಂಟು ಈ ತಾ|| 28 ರಲ್ಲಿ ಹೇಳಲ್ಪಟ್ಟು ಇದಕ್ಕಾಗೇರ್ಪಟ್ಟಿರುವ ಸ್ಪೆಷಲ್‌ಕೋರ್ಟು ವಿಸರ್ಜಿಸಲ್ಪಡುವುದಾಗಿಯೂ, ಶಿಕ್ಷಿತರನ್ನು ಚೆಂಗಾವಲಿನಿಂದ ರಾಜಧಾನಿಗೆ ಕರೆತರಲು ಬಲವಾದ ಸ್ಪೆಷಲ್ ಪೋಲೀಸ್‌ದಳವು ಕಳುಹಿಸಲ್ಪಡುವುದೆಂದೂ ತಿಳಿಯಬರುತ್ತದೆ.

ಕೈ|| ಕಬ್ಬಳ್ಳಿ ಚೆನ್ನಬಸಪ್ಪನವರ ಸ್ಮಾರಕಕಾರ್ಯನಿರ್ವಹಕ್ಕಾಗಿ ಪ್ರಜಾಪ್ರತಿನಿಧಿಸಭಾಮೆಂಬರರಾದ ಬೇಲೂರು ತಾ|| ಬೆಳ್ಳಾವರದ ಮ|| ಬಿ. ಎಂ. ದ್ಯಾವೇಗೌಡರಿಂದ 10 ರೂ. ಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿ ಉಳಿದ ದೊಡ್ಡ ಮನುಷ್ಯರುಗಳು ತಮ್ಮ ವಾಗ್ದಾನದ ಹಣವನ್ನು ಜಾಗ್ರತೆಯಲ್ಲಿ ಕಳುಹಿಸಿಕೊಡಬೇಕೆಂದು ಮ|| ಜಿ. ಪರಮಶಿವಯ್ಯನವರು ಈಮೂಲಕ ಪ್ರಾರ್ಥಿಸುತ್ತಾರೆ.

ಗೋರಿಬಿದನೂರು ತಾ|| ಅಮಲ್ದಾರ್ ಮ|| ಟಿ. ವೆಂಕಟರಂಗಂ, ಬಿ.ಎ., ಎಲ್‌ಎಲ್.ಬಿ., ರವರು ಕೋಲಾರ ಡಿ|| ಗೂ, ಮದ್ಗಿರಿ ತಾ|| ಅಮಲ್ದಾರ್ ಮ|| ಆರ್. ವಿ. ಸೂರಪ್ಪ, ಬಿ.ಎ., ಯವರು ತುಮಕೂರು ಡಿ|| ಗೂ, ನಾಗಮಂಗಲ ತಾ|| ಅಮಲ್ದಾರ್ ಮ|| ಎಚ್. ನಾರಾಯಣರಾವ್, ಬಿ.ಎ., ಯವರು ಮೈಸೂರು ಡಿ|| ಗೂ, ಕಡೂರು ತಾ|| ಅಮಲ್ದಾರ್ ಮ|| ಕೆ. ಅಬ್ದುಲ್‌ಖಾದಿರ್‌ಖಾನ್, ಬಿ.ಎ., ಯವರು ಬೆಂಗಳೂರು ಡಿ|| ಗೂ, ಶಿವಮಗ್ಗ ತಾ|| ಅಮಲ್ದಾರ್ ಮ|| ಜೆ. ಬಿ. ಮಲ್ಲಾರಾಧ್ಯ, ಎಂ.ಎ., ರವರು ಚಿತ್ರದುರ್ಗ ಡಿ|| ಗೂ, ವಿದ್ಯಾಭ್ಯಾಸದ ಅ|| ಇನ್ಸ್‌ಪೆಕ್ಟರ್ ಮ|| ಎಚ್. ಕೆ. ಮಲ್ಲಪ್ಪನವರು ಹಾಸನ ಡಿ|| ಗೂ, ಮ|| ಕೆ. ಸಿ. ಈಪನ್, ಎಂ.ಎ., ಬಿ. ಎಸ್‌ಸಿ., ಯವರು ಶಿವಮಗ್ಗ ಡಿ|| ಗೂ, ಎಕನಾಮಿಕ್ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಇನ್ನೊಂದು ಡಿ|| ಗೆ ಮತ್ತೊಬ್ಬರು ಇಷ್ಟರಲ್ಲೇ ನಿಯಮಿಸಲ್ಪಡುವವರಾಗಿರುವರು.

ಮೈಸೂರು ಅರಮನೆಯ ದರ್ಬಾರುಹಾಲಿನ ಮುಂಭಾಗದಲ್ಲಿ ಮೂರು ದೊಡ್ಡ ಕಮಾನುಗಳು ಹಾಕಲ್ಪಟ್ಟು ಅವುಗಳ ಹಿಂಗಡೆ ಮಧ್ಯಭಾಗದಲ್ಲಿ ಸಿಂಹಾಸನವನ್ನಿಡಲೂ ಅದರ ಉಭಯಪಾರ್ಶ್ವಗಳಲ್ಲಿ ದರ್ಬಾರಿಗಳು ಕುಳಿತುಕೊಳ್ಳಲು ಪಾವಟಿಗೆಗಳೂ ಎಡಬಲಪಾರ್ಶ್ವಗಳಲ್ಲಿ ಗೌಸಣಿಗೆಯಸ್ತ್ರೀಯರು ಕುಳಿತುಕೊಳ್ಳಲು ತಕ್ಕ ಸ್ಥಳಗಳೂ ಏರ್ಪಡಿಸಲ್ಪಟ್ಟು ಅತ್ಯಂತ ಪ್ರಕಾಶವಾದ ವಿದ್ಯುದ್ದೀಪಾವಳಿಯಿಂದ ಸಭಾಂಗಣವು ಅಲಂಕರಿಸಲ್ಪಟ್ಟಿರುತ್ತದೆ. ಕಮಾನುಗಳು ವಿಸ್ತಾರಗೊಳಿಸಲ್ಪಟ್ಟುದರಿಂದ ಸಿಂಹಾಸನಾರೂಢರಾದ ಶ್ರೀಮನ್ಮಹಾರಾಜರವರ ದರ್ಶನವು ಬಹುದೂರದಿಂದ ಸಹ ಮಾಡುವಂತಾಗಿರುವುದು, ಮತ್ತು ಅರಮನೆಯ ಮುಂದಣ ಬೈಲಿನಲ್ಲಿ ದಕ್ಷಿಣಾಭಿಮುಖವಾಗಿ ಪುರುಷರೂ, ಉತ್ತರಾಭಿಮುಖವಾಗಿ ಸ್ತ್ರೀಯರೂ ಕುಳಿತುಕೊಳ್ಳಲು ಉನ್ನತವಾದ ಜಗತಿಗಳೂ ಪಾವಟಿಗೆಗಳೂ ಏರ್ಪಡಿಸಲ್ಪಟ್ಟಿರುವುದು ಪ್ರೇಕ್ಷಕರುಗಳಿಗೆ ಬಹಳ ಅನುಕೂಲವಾಯಿತು, ಆದರೆ ಗಂಡುಸರಿಗಾಗೇರ್ಪಡಿಸಲ್ಪಟ್ಟಿರುವ ಜಗತಿಯು ಬಹಳ ಎತ್ತರವಾಗಿರುವುದರಿಂದ ಅರಮನೆಯ ತಳಭಾಗವು ಪಾರ್ಶ್ವದಲ್ಲಿರುವವರಿಗೆ ಕಾಣಿಸದಂತಾಗಿರುವುದು. ಇದರ ಬದಲು ಮುಂಭಾಗದಲ್ಲಿ ಅಂದರೆ ಮೊದಲು ಜಲೋಕಚೇರಿಯಿದ್ದ ಸ್ಥಳದಲ್ಲಿ ಪುರುಷಪ್ರೇಕ್ಷಕರಿಗೋಸ್ಕರ ಅರ್ಧಚಂದ್ರಾಕೃತಿಯಲ್ಲಿ ಪಾವಟಿಗೆಗಳನ್ನೇರ್ಪಡಿಸಿದ್ದಲ್ಲಿ ಬಹಳ ಅನುಕೂಲವೂ ಅಂದವೂ ಆಗಿರುತ್ತಿದ್ದಿತು. ಈವೇಳೆ ದೈವಾನುಗ್ರಹದಿಂದ ಮಳೆಯಾಗಿ ಕಾಲಸ್ಥಿತಿಯು ಅನುಕೂಲವಾದುದರಿಂದ ಬಹುಜನರು ನೋಟಕ್ಕೆ ಬರಬಹುದಾಗಿ ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯಲ್ಲಿ ಒಬ್ಬ ಅರಸು ಹೋಗುತ್ತಿದ್ದ ವೇಶ್ಯೆಯ ಮನೆಗೆ ಮತ್ತೊಬ್ಬ ಅರಸು ಹೋದುದರಮೇಲೆ ಉಭಯತ್ರರಿಗೂ ಹೊಡೆದಾಟವು ನಡೆದಿದ್ದು ಈಗ್ಗೆ 4-5 ದಿವಸಗಳ ಹಿಂದೆ ಉಭಯತ್ರರೂ ಒಟ್ಟುಗೂಡಿ ಸೂಳೆಗಾಗಿ ಸ್ವಜನರಾದ ನಾವುಗಳು ಕಲಹಮಾಡುವುದು ಯುಕ್ತವಲ್ಲವೆಂದು ಪರಸ್ಪರ ಸಮಾಧಾನ ಮಾಡಿಕೊಂಡು ದೊಡ್ಡ ಪೇಟೆಯಲ್ಲಿ ಲಕ್ಷ್ಮೀನರಸಯ್ಯನವರ ಮನೆಯ

ಇದಿರಿಗಿರುವ ಕಾಫಿಕ್ಲಬ್ಬಿಗೆ ಹೋಗಿ ಬೇಕಾದ ತಿಂಡಿಯನ್ನು ತಿಂದು ಕಾಫಿಯನ್ನು ಕುಡಿಯುವ ಸಮಯದಲ್ಲಿ ಒಬ್ಬ ಅರಸು ಸಕ್ಕರೆ ಸಾಲದೆಂದು ಹೇಳಿದನು. ಕ್ಲಬ್ಬಿನ ಹುಡುಗನು ಸಕ್ಕರೆಯನ್ನು ತರುವುದರೊಳಗಾಗಿ ಮತ್ತೊಬ್ಬರಸು ತನ್ನ ಜೇಬಿನಲ್ಲಿಟ್ಟಿದ್ದ ಕಾಗದದ ಪೊಟ್ಟಣದಿಂದ ಪಾಷಾಣಮಿಶ್ರವಾದ ಕೊಂಚ ಸಕ್ಕರೆಯನ್ನು ತೆಗೆದು ಕಾಫಿಗೆ ಹಾಕಿದನು. ಅದನ್ನು ಕುಡಿದ ಅರಸು ಹೊಟ್ಟೆಯಲ್ಲಿ ಏನೋ ಸಂಕಟವಾಗುತ್ತದೆಂದು ಹೇಳಿ ಮತ್ತೊಬ್ಬ ಅರಸನ ಕೂಡ ಮನೆಗೆ ಹೊರಟನು. ಮಾರ್ಗದಲ್ಲಿ 2-3 ವೇಳೆ ವಾಂತಿಯಾಗಲು ಜತೆಯಲ್ಲಿದ್ದ ಅರಸು ಕೂಡಲೆ ಮನೆಗೆ ಕರೆದುಕೊಂಡುಹೋಗಿ ಬಿಟ್ಟನು. ಅಲ್ಲಿ ಪುನಃ ವಾಂತಿಯೂ ಭೇದಿಯೂ ಆಗಿ ಬಹಳ ಸುಸ್ತಾಗಲು ಕೂಡಲೆ ಪೋಲೀಸಿಗೆ ತಿಳಿಸಿದುದರಮೇಲೆ ಇನ್ಸ್‌ಪೆಕ್ಟರು ಬಂದು ನಡೆದ ವಿದ್ಯಮಾನವನ್ನೆಲ್ಲಾ ವಿಚಾರಿಸಿಕೊಂಡು ಬಹಳ ನಿತ್ರಾಣವಾಗಿ ಪ್ರಜ್ಞೆಯಿಲ್ಲದಿದ್ದ ಅರಸನನ್ನು ಕೃಷ್ಣರಾಜಆಸ್ಪತ್ರೆಗೆ ಬಂಡಿಯಲ್ಲಿ ಸಾಗಿಸಿ ಪರೀಕ್ಷೆ ಮಾಡಿಸಿದರು. ಆ ಅರಸು ಬದುಕುವುದು ಕಷ್ಟವೆಂದು ಹೇಳಿದುದರಮೇಲೆ ಇನ್ಸ್‌ಪೆಕ್ಟರು ಸಿಟಿಮ್ಯಾಜಿಸ್ಟ್ರೇಟರನ್ನು ಕರೆದುಕೊಂಡುಬಂದು ಆ ಅರಸಿನ ವಾಙ್ಮೂಲವನ್ನು ತೆಗೆಸಿಕೊಂಡು ಕಾಫಿಗೆ ಸಕ್ಕರೆಯನ್ನು ಹಾಕಿದ ಅರಸನನ್ನು ಸೆರೆಹಿಡಿದು ವೇಶ್ಯೆಯಮನೆಗೆ ಹೋಗಿ ಆ ಅರಸರಿಬ್ಬರಿಗೂ ನಡೆದ ಕಲಹದ ವಿಚಾರವನ್ನು ಸವಿಸ್ತಾರವಾಗಿ ಕೇಳಿ ಬರೆದುಕೊಂಡು ಸೆರೆಹಿಡಿದಿದ್ದ ಅರಸನನ್ನು ಹೊಣೆಯಮೇಲೆ ಬಿಟ್ಟು ಅವನಮೇಲೆ ಕೇಸನ್ನು ನಡೆಸಿರುವರಂತೆ. ಇತ್ತಲಾಗಿ ಮರಣೋನ್ಮುಖನಾಗಿದ್ದ ಅರಸಿಗೆ ವೈದ್ಯರ ಚಿಕಿತ್ಸೆಯಿಂದ ಗುಣಮುಖವಾಗಿರುವುದಂತೆ. ಈ ವಿವಾದದ ಪರ್ಯವಸಾನವು ಹೇಗಾಗುತ್ತದೋ ನೋಡಬೇಕಾಗಿದೆ.

ಹುಬ್ಬಳ್ಳಿಯ ವೀರಶೈವಸಾರ್ವಜನಿಕಸಭೆಯು.

ತಾ|| ೧೨-೯-೧೯೨೬.

ಸ್ಥಳ—ಓಲೀಮಠ, ಹುಬ್ಬಳ್ಳಿ.

ಈ ಸಭೆಗೆ ಊರೊಳಗಿನ ಎಲ್ಲ ಪ್ರಮುಖರು ಆಗಮಿಸಿದ್ದರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ವೀರಪ್ಪನವರು ಬಿಳಿಅಂಗಡಿ, ಎಲ್‌ಎಲ್.ಬಿ., ವಕೀಲರು, ಹುಬ್ಬಳ್ಳಿ ಇವರು ಸ್ವೀಕರಿಸಬೇಕೆಂದು ರಾವ್‌ಬಹದ್ದೂರ ಕಂಬಳಿಯವರು ಸೂಚಿಸಿದರು. ಶ್ರೀ ಚೆನ್ನಬಸಪ್ಪನವರು ತಂಬದ ಇವರು ಅನುಮೋದಿಸಿದನಂತರ ಅದು ಸರ್ವಾನುಮತದಿಂದ ಪ್ಯಾಸಾಯಿತು.

ನಿರ್ಣಯಗಳು.

ನಿರ್ಣಯಸಂಖ್ಯೆ (೧) ಅ. ಭಾ. ವೀ. ಮಹಾಸಭಾ ಚಿರಸ್ಥಾಯಿಫಂಡಿನವರು (ಬೆಂಗಳೂರ) ಹುಬ್ಬಳ್ಳಿಯಲ್ಲಿ ಇದೇ ೧೯೨೬ನೇ ಡಿಶಂಬರ ತಿಂಗಳಲ್ಲಿ ಮಹಾಸಭೆಯನ್ನು ನೆರೆಯಿಸುವ ಬಗ್ಗೆ ನಾಲ್ಕುಸಾವಿರ ರೂಪಾಯಿಗಳ ಸಹಾಯಕಧನವನ್ನು ಕೊಡುವ ಬಗ್ಗೆ ತೀರ್ಮಾನಮಾಡಿದ್ದಕ್ಕಾಗಿ ಈ ಸಭೆಯು ಮೇಲ್ಕಂಡ ಕಮಿಟಿಯ ಆಭಾರವನ್ನು ಮನ್ನಿಸುತ್ತದೆ, ಹಾಗೂ ಮೇಲ್ಕಂಡ ಧನವನ್ನು ಆದರಪೂರ್ವಕವಾಗಿ ಸ್ವೀಕರಿಸಬೇಕೆಂದು ಅಭಿಪ್ರಾಯಪಡುತ್ತದೆ.

ಸೂಚಕರು—ಶ್ರೀ ಮಹಾರುದ್ರಪ್ಪನವರು ಶೆಟ್ಟರ, ಗಣೇಶಪೇಟೆ.
ಅನುಮೋದಕರು—ಶ್ರೀ ಷಣ್ಮುಖಪ್ಪನವರು, ಬೊಬಲೇಶ್ವರ.
ಸರ್ವಾನುಮತದಿಂದ ಪ್ಯಾಸಾಯಿತು.

ನಿರ್ಣಯಸಂಖ್ಯೆ (೨) ನಿಯಮಾನುಸಾರವಾಗಿ ವರ್ಗಣಿಯನ್ನು ಕೊಟ್ಟು ಇಲ್ಲಿಯ ಸದ್ಗೃಹಸ್ಥರು ಹುಬ್ಬಳ್ಳಿಯಲ್ಲಿ ಇದೇ ೧೯೨೬ನೇ ಡಿಶಂಬರತಿಂಗಳಲ್ಲಿ ನೆರೆಯುವ ಅ. ಭಾ. ವೀ. ಮಹಾಸಭೆಯ ಸ್ವಾಗತಸಂಘದ ಸದಸ್ಯರಾಗತಕ್ಕದ್ದು. ಹಾಗೂ ಸಂಘದಲ್ಲಿ ವರ್ಗಣಿಯನ್ನು ಕೊಟ್ಟ ಬೇರೆಜನರನ್ನು ಸೇರಿಸಿಕೊಳ್ಳುವ ಅಧಿಕಾರವು ಮಹಾಸಭೆಯ ಕಾರ್ಯಕಾರಿಮಂಡಲಕ್ಕೆ ಇರತಕ್ಕದ್ದು. ಹಾಗು ರಾ|| ಬಹಾದ್ದೂರ ಸಿದ್ದಪ್ಪನವರು ಕಂಬಳಿ, ಎಲ್‌ಎಲ್.ಬಿ., ಎಂ.ಎಲ್.ಸಿ., ಇವರು ಸ್ವಾಗತಸಂಘದ ಅಧ್ಯಕ್ಷರಾಗತಕ್ಕದ್ದು.

ಸೂಚಕರು—ಶ್ರೀ ಚಿಕ್ಕೇರಯ್ಯನವರು, ಚಿಕ್ಕೇರಿಮಠ.
ಅನುಮೋದಕರು—ಶ್ರೀ ಬಸಪ್ಪ ತಂಬದ, ವಕೀಲರು.
ಪ್ಯಾಸಾಯಿತು.

ನಿರ್ಣಯಸಂಖ್ಯೆ (೩) ಮಹಾಸಭೆಯ ಕಾರ್ಯನಿರ್ವಾಹಕ್ಕಾಗಿ ಸ್ವಾಗತಸಂಘದ ಸದಸ್ಯರಲ್ಲಿಯ ಕೆಳಗೆ ಬರೆದ ಜನರದೊಂದು ಕಾರ್ಯಕಾರಿಮಂಡಲವನ್ನು ಏರ್ಪಡಿಸಿರುತ್ತದೆ. ಇವರಲ್ಲಿ ಆರುಜನ ಸದಸ್ಯರು ಕೂಡಿದಲ್ಲಿ ಸಭೆಯ ಕಾರ್ಯವು ಜರುಗತಕ್ಕದ್ದು.

ಮ|| ಗಳಾದ

(೧) ಡಾಕ್ಟರ ಚನ್ನಪ್ಪಾ ಸಂಗಪ್ಪಾ ಪಾಟೀಲ, ಎಲ್. ಎಂ. ಅಂಡ್ ಎಸ್. (೨) ಮ|| ಪ್ರಭುಪ್ಪ ಮಾಳಗಿ, ವಕೀಲ. (೩) ಚೆನ್ನಬಸಪ್ಪನವರು, ಬೆಂಡಿಗೇರಿ. (೪) ಚೆನ್ನಬಸಪ್ಪನವರು, ಸಿಂದಗಿ. (೫) ವೀರಪ್ಪನವರು, ಹೊಸಕೋಟಿ. (೬) ಗುರುಸಿದ್ದಪ್ಪ ಮಿರ್ಜಿ ವಕೀಲ, ಎಲ್‌ಎಲ್.ಬಿ. (೭) ಬಸಪ್ಪ ತಂಬದ ವಕೀಲ, ಎಲ್‌ಎಲ್.ಬಿ. (೮) ವೀರಪ್ಪ ಬಿಳಿಅಂಗಡಿ ವಕೀಲ, ಎಲ್‌ಎಲ್.ಬಿ. (೯) ಬಸವಣ್ಣೆಪ್ಪ ಕೆರಿಮನಿ ವಕೀಲ, ಎಲ್‌ಎಲ್.ಬಿ. (೧೦) ವೀರನಗೌಡ್ರು ಪಾಟೀಲ ವಕೀಲ, ಎಲ್‌ಎಲ್. ಬಿ. (೧೧) ಗುರಪ್ಪ ನೀಲಿ. (೧೨) ಕೋಟೆಪ್ಪ ಕವಸಾಲಿ. (೧೩) ಶಿವಪ್ಪ ಯಾವಗಲ್ಲ. (೧೪) ಚನ್ನಪ್ಪ ಗಿಣಿಮಾವ. (೧೫) ಮಹದೇವಪ್ಪ ಕತ್ತಿ (ಚಂಚಲಿ). (೧೬) ಚನ್ನಪ್ಪಗೌಡ್ರು ಪಾಟೀಲ (ಉಣಕಲ್ಲ). (೧೭) ಬಸಟ್ಟೆಪ್ಪ ನೀಲಿ. (೧೮) ವೀರಪ್ಪ ಚನ್ನೂರ. (೧೯) ಸಿದ್ದಪ್ಪ ಮುಂಟೂರಶೆಟ್ಟರ. (೨೦) ಷಣ್ಮುಖಪ್ಪನವರು, ಬೊಬಲೇಶ್ವರ. (೨೧) ಗುರಪ್ಪ ಇರಪಣ್ಣನವರ. (೨೨) ಪರೂತಪ್ಪ, ಮಿರ್ಜಿ. (೨೩) ಗದಿಗೆಪ್ಪ, ಕುಸೂಗಲ್ಲ. (೨೪) ಬಾಪುಗೌಡರು ಗೌಡರ. (೨೫) ಚಂದ್ರಶೇಖರಪ್ಪ ಕೆಂಪಣ್ಣನವರ.

ಸೂಚಕರು—ಶ್ರೀ ತಾಂಡಯ್ಯನವರು ಹಿರೇಮಠ.
ಅನುಮೋದಕರು—ಶ್ರೀ ಗುರಪ್ಪ ಇರಪಣ್ಣನವರ.

ನಿರ್ಣಯಸಂಖ್ಯೆ (೪) ಕೆಳಗೆ ಬರೆದ ಜನರು ಅಧಿಕಾರಿಗಳಾಗಿರತಕ್ಕದ್ದು—

(ಅ) ಸ್ವಾಗತಸಂಘದ ಉಪಾಧ್ಯಕ್ಷರು.

(೧) ಶ್ರೀ ವೀರಪ್ಪ ಬಿಳಿಅಂಗಡಿ ವಕೀಲ. (೨) ಶ್ರೀ ಚೆನ್ನಬಸಪ್ಪ, ಬೆಂಡಿಗೇರಿ. (೩) ಡಾಕ್ಟರ ಚೆನ್ನಪ್ಪ ಪಾಟೀಲ. (೪) ಶ್ರೀ ಚೆನ್ನಬಸಪ್ಪ ಸಿಂದಗಿ. (೫) ಶ್ರೀ ವೀರಪ್ಪ ಹೊಸಕೋಟಿ. (೬) ಶ್ರೀ ಸಿದ್ಧರಾಮಪ್ಪ [illegible], ವಕೀಲ.

(ಆ) ಕಾರ್ಯಕಾರಿಮಂಡಲದ ಅಧ್ಯಕ್ಷರು.

(೧) ಡಾಕ್ಟರ ಚನ್ನಪ್ಪ ಸಂಗಪ್ಪ ಪಾಟೀಲ, ಎಲ್.ಎಂ. ಅಂಡ್ ಎಸ್.

(ಇ) ಕಾರ್ಯದರ್ಶಿಗಳು—

(೧) ಶ್ರೀ ಪ್ರಭುಪ್ಪನವರು ಮಾಳಗಿ, ವಕೀಲ (ಮುಖ್ಯ ಕಾರ್ಯದರ್ಶಿ).
(೨) ,, ಗುರಪ್ಪ ನೀಲಿ (ಸಹಾಯಕ ಕಾರ್ಯದರ್ಶಿ).
(೩) ,, ಗುರುಸಿದ್ದಪ್ಪ ಮಿರ್ಜಿ ವಕೀಲ ಎಲ್‌ಎಲ್.ಬಿ. ,,
(೪) ,, ಕೋಟೆಪ್ಪ ಕವಸಳ್ಳಿ ,,
(೫) ,, ವೀರನಗೌಡರು ಪಾಟೀಲ, ಎಲ್‌ಎಲ್.ಬಿ. ,,
(೬) ,, ಬಸಪ್ಪ ತಂಬದ ವಕೀಲ ,,
(೭) ,, ಚಂದ್ರಶೇಖರಪ್ಪ ಕೆಂಪಣ್ಣನವರ ,,

ಸೂಚಕರು—ಶ್ರೀ ಷಣ್ಮುಖಪ್ಪನವರು ಬೊಬಲೇಶ್ವರ.
ಅನುಮೋದಕರು—ಶ್ರೀ ಗುರುಸಿದ್ದಪ್ಪ ಪಟ್ಟಣಶೆಟ್ಟರ.

ನಿರ್ಣಯಸಂಖ್ಯೆ (೫) ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಮಾಳಗಿಯವರು ಬರುವವರೆಗೆ ಸಹಾಯಕ ಕಾರ್ಯದರ್ಶಿಗಳಾದ ರಾ|| ಗುರುಸಿದ್ದಪ್ಪ ಮಿರ್ಜಿಯವರು ಆಕ್ಟಿಂಗ್ ಜನರಲ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿದ್ದಾರೆ.

ಸೂಚಕರು—ಶ್ರೀ. ಚೆ. ಸಿ. ಕೆಂಪಣ್ಣವರ.
ಅನುಮೋದಕರು—ಶ್ರೀ. ಗ. ಸಿ. ಕುಸೂಗಲ್ಲ.
ಸ. ಪ್ಯಾಸಾಯಿತು.

ನಿರ್ಣಯಸಂಖ್ಯೆ (೬) (ಅ) ಮಹಾಸಭೆಯ ವೆಚ್ಚದ ಬಗ್ಗೆ ಮಹಾಸಭೆಯ ಚಿರಸ್ಥಾಯಿಫಂಡಿನಿಂದ (ಬೆಂಗಳೂರ) ಮಂಜೂರಾದ ನಾಲ್ಕುಸಾವಿರ ರೂಪಾಯಿಗಳ ಸಹಾಯಕದ್ರವ್ಯವನ್ನು ತರಿಸಲಿಕ್ಕೆ ಸ್ವಾಗತಸಂಘದ ಅಧ್ಯಕ್ಷರಾದ ರಾ|| ಬಹಾದ್ದೂರ ಕಂಬಳಿ, ಎಂ. ಎಲ್. ಸಿ. ಹಾಗು ಸಹಾಯಕ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಮತ್ತು ಆಕ್ಟಿಂಗ್ ಜನರಲ್ ಸೆಕ್ರೆಟರಿಯಾದ ಮ|| ಗುರುಸಿದ್ದಪ್ಪ ಮಿರ್ಜಿ ವಕೀಲ, ಎಲ್‌ಎಲ್.ಬಿ., ಇವರಿಗೆ ಅಧಿಕಾರಕೊಟ್ಟಿದೆ.

(ಬ) ಸದರಿ ಹಣವನ್ನು ದಿ ಕರ್ನಾಟಕ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಬ್ರಾಂಚ, ಹುಬ್ಬಳ್ಳಿ. ಈ ಸಂಸ್ಥೆಯಲ್ಲಿ - ಅ. ಭಾ. ವೀ. ಮಹಾಸಭೆಯು ಹುಬ್ಬಳ್ಳಿ " ಈ ಹೆಸರಿನಿಂದ ಠೇವಾಗಿ ಇಡತಕ್ಕದ್ದು, ಹಾಗು ಬೇರೆ ರೀತಿಯಿಂದ ಬಂದ ಹಣವನ್ನು ಸಹ ಮೇಲ್ಕಂಡ ಬ್ಯಾಂಕಿನಲ್ಲಿ ಠೇವಾಗಿ ಇಡತಕ್ಕದ್ದು. ಅವಶ್ಯವಿದ್ದಾಗ ಸದರಿ ಬ್ಯಾಂಕಿನಿಂದ ಹಣವನ್ನು ತೆಗೆಯುವ ಬಗ್ಗೆ ಕಾರ್ಯಕಾರಿಮಂಡಲದ ಅಧ್ಯಕ್ಷರಾದ ಡಾಕ್ಟರ ಸಿ. ಎಸ್. ಪಾಟೀಲ, ಎಲ್. ಎಮ್. ಅಂಡ್ ಎಸ್. ಮತ್ತು ಕಾರ್ಯಕಾರಿಮಂಡಲದ ಸದಸ್ಯರಲ್ಲಿ ಒಬ್ಬರಾದ ಮ|| ವೀರಪ್ಪನವರು ಹೊಸಕೋಟಿ ಈ ಉಭಯತರಿಗೆ ಸಾಮೂಹಿಕ ಅಧಿಕಾರವನ್ನು ಕೊಟ್ಟಿರುತ್ತದೆ.

ಸೂಚಕರು—ಶ್ರೀ. ಗದಿಗೆಪ್ಪ ಕುಸೂಗಲ್ಲ.
ಅನುಮೋದಕರು—ಶ್ರೀ. ಚೆನ್ನಪ್ಪ ಗಿಣಿಮಾವ.
ಸ. ಪ್ಯಾಸಾಯಿತು.

ನಿರ್ಣಯಸಂಖ್ಯೆ (೭) ಮಹಾಸಭೆಯ ಸದಸ್ಯರ ಹಾಗು ಪ್ರೇಕ್ಷಕರ ವರ್ಗಣಿಯ ದರಗಳು ಕೆಳಗೆ ವಿವರಿಸಿದಂತೆ ಇರತಕ್ಕದ್ದು.—

(ಅ) ಸ್ವಾಗತಸಂಘದ ಸದಸ್ಯರು.

ವಿಶಿಷ್ಟ ತರಗತಿ	೧೦೦ ರೂಪಾಯಿ.
೧ನೆಯ ತರಗತಿ	೫೦ ,,
೨ನೆಯ ,,	೨೫ ,,
೩ನೆಯ ,,	೧೦ ,,
೪ನೆಯ ,,	೫ ,,

(ಬ) ಪ್ರತಿನಿಧಿಗಳ ಫೀ ದರ ೫ ರೂಪಾಯಿಗಳು ಮಾತ್ರ.
(ಕ) ಪ್ರೇಕ್ಷಕರ ,, ೨ ರೂಪಾಯಿಗಳು ಮಾತ್ರ.
(ಡ) ಸಭೆಗೆ ಬರತಕ್ಕ ಎಲ್ಲ ಸದಸ್ಯರು ಹಾಗು ಪ್ರೇಕ್ಷಕರು ತಮ್ಮ ಊಟದ ಬಗ್ಗೆ ಹೆಚ್ಚಿನ ಫೀಯನ್ನು ಕೊಡತಕ್ಕದ್ದು.

ಸೂಚಕರು—ಶ್ರೀ. ಚಿಕ್ಕೇರಯ್ಯನವರು, ಚಿಕ್ಕೇರಿಮಠ.
ಅನುಮೋದಕರು—ಶ್ರೀ. ಪರೂತಪ್ಪ, ಮಿರ್ಜಿ.
ಸ. ಪ್ಯಾಸಾಯಿತು.

ನಿರ್ಣಯಸಂಖ್ಯೆ (೮) ಬೇರೆಬೇರೆ ಕಾರ್ಯಗಳ ನಿರ್ವಾಹಕ್ಕಾಗಿ ಕಾರ್ಯಕಾರಿಮಂಡಲದವರಿಗೆ ಬೇರೆಬೇರೆ ಮಂಡಲಗಳನ್ನು ನಿಯಮಿಸಿಕೊಳ್ಳಲಿಕ್ಕೆ ಅಧಿಕಾರವನ್ನು ಕೊಟ್ಟಿದೆ.

ಸೂಚಕರು—ಶ್ರೀ. ಮಿರ್ಜಿ ವಕೀಲ, ಎಲ್‌ಎಲ್.ಬಿ.
ಅನುಮೋದಕರು—ಶ್ರೀ. ಗದಿಗೆಪ್ಪ ಕುಸೂಗಲ್ಲ.
ಸ. ಪ್ಯಾಸಾಯಿತು.

ತುಮಕೂರು ಮೊದಲಾದ ಮ್ಯುನ್ಸಿಪಾಲಿಟಿಗಳು ಒಪ್ಪಿಸಿದ ವಿಜ್ಞಾಪನಾಪತ್ರಿಕೆಗಳಿಗೆ ದಿವಾನರು ದಯಪಾಲಿಸಿದ ಉತ್ತರ.

ತುಮಕೂರು.

ಮ|| ಪ್ರೆಸಿಡೆಂಟರವರೇ, ಮತ್ತು ಸಭಿಕರೇ,

ಈ ಊರಿನ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ತಾವು ಈ ಅಭಿನಂದನಪತ್ರಿಕೆಯನ್ನು ಓದಿದುದನ್ನು ಕೇಳಿ, ನನಗೆ ವಿಶೇಷ ಸಂತೋಷವಾಯಿತು. ತುಮಕೂರು ಪುರನಿವಾಸಿಗಳ ಪರವಾಗಿ ತಾವು ನನ್ನನ್ನು ಆದರದಿಂದ ಬರಮಾಡಿಕೊಂಡಿರುವುದಕ್ಕಾಗಿ, ತಮ್ಮನ್ನು ವಂದಿಸುತ್ತೇನೆ.

ನಿಮ್ಮ ಟವನಿಗೆ ಅತ್ಯವಶ್ಯವಾಗಿ ಆಗಬೇಕಾದ ಅನೇಕ ವಿಷಯಗಳನ್ನು ನೀವು ನಿಮ್ಮ ಅಭಿನಂದನ ಪತ್ರಿಕೆಯಲ್ಲಿ ಸೂಚಿಸಿರುವಿರಿ. ಪ್ರಥಮತಃ, ನೀರು ಸರಬರಾಯಿ ಕಾಮಗಾರಿಯು ಬಹುಜಾಗ್ರತೆಯಾಗಿ ಪೂರೈಸಬೇಕೆಂಬ ವಿಷಯದಲ್ಲಿ ನೀವು ತುಂಬಾ ಕುತೂಹಲವುಳ್ಳವರಾಗಿರುತ್ತೀರಿ; ಇದು ಯುಕ್ತವೇಸರಿ. ಆದರೆ, ನೀರಿನ ಕೊಳಾಯಿಗಳು ಇನ್ನೂ ಬಾರದೇ ಇರುವುದರಿಂದ ಈ ಕೆಲಸವು ತಡವಾಗಲೂ ಕಾರಣವಾಯಿತು. ಕಬ್ಬಿಣದ ಕಾರ್ಖಾನೆಯವರು 1927 ನೆಯ ಇಸವಿಯ ಮೇ ಆಖೈರಿನೊಳಗಾಗಿ ಕೊಳಾಯಿಗಳ ಸರಬರಾಯಿಯನ್ನು ಪೂರೈಸಿಕೊಡುವಂತೆ ಒಪ್ಪಿಕೊಂಡಿರುವುದಾಗಿ ತಿಳಿಯಬರುತ್ತದೆ. ಮುಂದಿನ ಜೂನ್ ತಿಂಗಳೊಳಗಾಗಿ ನೀರನ್ನು ಬಿಡುವುದಕ್ಕೆ ಕೊಳಾಯಿ ಲೈನನ್ನು ಸಿದ್ಧಪಡಿಸಲು ಅನುಕೂಲಿಸುವಂತೆ, 1927 ನೆಯ ಇಸವಿಯ ಮೇ ತಿಂಗಳಿಗಿಂತಲೂ ಇನ್ನೂ ಸಾಧ್ಯವಾದಷ್ಟು ಮುಂಚಿತವಾಗಿಯೇ ಕೊಳಾಯಿಗಳನ್ನು ಸರಬರಾಯಿ ಮಾಡಬೇಕೆಂಬುದಾಗಿ ಅವರಿಗೆ ಬರೆಸಲಾಗುವುದು.

ನಿಮ್ಮ ಟವನಿನ ಡ್ರೈನೇಜ್ ಏರ್ಪಾಡನ್ನು ಪೂರೈಸಬೇಕೆಂಬುದಾಗಿ ನಿಮಗೆ ಕುತೂಹಲವಿರುವುದು. ಈ ವಿಷಯದಲ್ಲಿ ನನಗೆ ಸಂಪೂರ್ಣವಾಗಿ ಸಹಾನುಭೂತಿಯುಂಟು. ಆದರೆ ಮುಂದಿನ ಐದು ವರ್ಷಗಳವರೆಗೆ ವರ್ಷೇ ವರ್ಷೇ 15,000 ರೂಪಾಯಿಗಳಂತೆ ಈ ಕಾರ್ಯಕ್ಕಾಗಿ ಸರ್ಕಾರದವರು ಗ್ರಾಂಟನ್ನು ಕೊಡಬೇಕೆಂದು ಕೇಳಿರುತ್ತೀರಿ. ಈ ಪ್ರಾರ್ಥನೆಯನ್ನು ನಡಿಸಿಕೊಡಲು ಸರ್ಕಾರದವರ ಈಗಿನ ಹಣಕಾಸಿನ ಸ್ಥಿತಿಯಲ್ಲಿ ಸಾಧ್ಯವಿಲ್ಲ. ಸರ್ಕಾರದವರು ಹೋದವರ್ಷವೇ ನಿಮಗೆ 5,000 ರೂಪಾಯಿಗಳ ಸ್ಪೆಷಲ್ ಗ್ರಾಂಟನ್ನು ಕೊಟ್ಟಿರುತ್ತಾರೆ. ಟವನುಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಇಡಲ್ಪಟ್ಟ 1,20,000 ರೂಪಾಯಿಗಳ ಪೈಕಿ, 12,000 ರೂಪಾಯಿಗಳನ್ನು ತುಮಕೂರು ಡಿಸ್ಟ್ರಿಕ್ಟಿಗೋಸ್ಕರ ಕೊಟ್ಟಿರುತ್ತೇವೆ. ಸದರಿ ಗ್ರಾಂಟನ್ನು ಡಿಸ್ಟ್ರಿಕ್ಟುಗಳ ಅಧಿಕಾರಿಗಳು ತಮಗೆ ಯುಕ್ತ ತೋರುವಂತೆ ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿನ ಟವನುಗಳಿಗೆ ಹಂಚುವ ಕೆಲಸವನ್ನು, ಸದರಿ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ವಹಿಸಿರುತ್ತೇವೆ. ಪರಂತು, ಅಂಥಾ ಹಂಚಿಕೆಯು ಸಾಮಾನ್ಯವಾಗಿ ಸರ್ಕಾರದವರ ಮಂಜೂರಾತಿಗೆ ಒಳಪಟ್ಟಿರಬೇಕು. ಪ್ರಕೃತದಲ್ಲಿ ತುಮಕೂರಿನವರು ಈ ಗ್ರಾಂಟಿನ ಪೈಕಿ ತಮಗೆ ಸಲ್ಲತಕ್ಕ ಭಾಗದಿಂದ ತೃಪ್ತರಾಗುವರೆಂದು ನಂಬುತ್ತೇನೆ. ಈ ಮೊಬಲಗಿನಿಂದ ಟವನಿಗೆ ಅವಶ್ಯವಾಗಿರುವ ಮೇಲ್ಪಾಟುಗಳನ್ನು ನೆರವೇರಿಸುವುದಕ್ಕೆ ಸ್ವಲ್ಪಮಟ್ಟಿಗೆ ಸಹಾಯವಾಗುವುದೆಂದು ಭಾವಿಸಿದ್ದೇನೆ.

ತುಮಕೂರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡುವ ಏರ್ಪಾಡಿಗೆ, ಬಂಡವಾಳದ ವೆಚ್ಚದ ಬಾಬತು, ಸುಮಾರು 3½ ಲಕ್ಷ ರೂಪಾಯಿಗಳು ಬೇಕಾಗುವುವೆಂದು ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರು ತಿಳಿಸಿದ್ದಾರೆ. ಈ ಏರ್ಪಾಡು ಲಾಭದಾಯಕವಾಗಿ ಪರಿಣಮಿಸಬೇಕಾದರೆ, ಅದರಿಂದ ವರ್ಷವೊಂದಕ್ಕೆ 40,000 ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಹುಟ್ಟುವಳಿಯು ಬರಬೇಕು. ಇಷ್ಟು ಮೊಬಲಗು ಹುಟ್ಟುವಳಿಯಾಗುವ ಬಗ್ಗೆ, ನಿಮ್ಮ ಮ್ಯುನಿಸಿಪಾಲಿಟಿಯವರು ಖಾತರಿಯನ್ನು ಕೊಡುವುದಾದರೆ, ಸರ್ಕಾರದವರು ಕೇವಲ ಸಂತೋಷದಿಂದ ತನಿಖೆಯ ಕ್ರಮವನ್ನು ಜರುಗಿಸಲು ಹುಕುಂ ಮಾಡುವರು; ಮತ್ತು ಈ ಊರಿಗೆ ವಿದ್ಯುಚ್ಛಕ್ತಿಯ ಪ್ರಯೋಜನಗಳು ಲಭಿಸುವಂತೆ ಮಾಡುವರು.

ಸ್ಕೂಲುಗಳ ವಿಚಾರ. ಬಾಲಕಿಯರ ಹೈಸ್ಕೂಲೊಂದನ್ನು ಏರ್ಪಡಿಸಬೇಕೆಂಬ ತಮ್ಮ ಅರಿಕೆಯನ್ನು ಸರ್ಕಾರದವರು ಸಾವಧಾನದಿಂದ ಪರ್ಯಾಲೋಚಿಸುವರು. ಹಣವು ಒದಗಿದೊಡನೆಯೇ, ಈ ಕೆಲಸವನ್ನು ನಡಿಸಬಹುದಾಗಿದೆ. ಆದರೆ, ಕ್ಷಿಪ್ರದಲ್ಲಿಯೇ ಅವಶ್ಯವಾದ ಹಣವನ್ನು ಒದಗಿಸುವುದಕ್ಕೆ ನಮಗೆ ಸಾಧ್ಯವಾಗುವುದೇ ಎಂಬುದನ್ನು ಖಂಡಿತವಾಗಿ ಹೇಳಲಾರೆನು. ಅಲ್ಲದೆ, ಹೈಸ್ಕೂಲು ತರಗತಿಗಳಿಗೆ ಸೇರತಕ್ಕ ಹುಡಗಿಯರ ಸಂಖ್ಯೆಯು ಪ್ರಾಯಶಃ ತುಮಕೂರಿನಲ್ಲಿ ಅತ್ಯಲ್ಪವಾಗಿರಬಹುದು; ಮತ್ತು ಬೆಂಗಳೂರಿನ ಸ್ಕೂಲುಗಳು ಇಲ್ಲಿಗೆ ಸಮೀಪವಾಗಿವೆ. ಸಂದರ್ಭಗಳು ಹೀಗಿರುವಲ್ಲಿ, ಈ ಸ್ಥಳದಲ್ಲಿ ಪ್ರತ್ಯೇಕವಾಗಿ ಒಂದು ಹೈಸ್ಕೂಲನ್ನು ಏರ್ಪಡಿಸುವುದು ಯುಕ್ತವೇ ಎಂಬ ವಿಷಯದಲ್ಲಿ ಸಂದೇಹಪಡಬೇಕಾಗಿದೆ. ಆದರೂ, ಈ ವಿಷಯವನ್ನು ಪರಿಶೀಲಿಸುವಂತೆ, ವಿದ್ಯಾಭ್ಯಾಸದ ಇಲಾಖೆಯನ್ನು ಕೇಳಲಾಗುವುದು. ಮುಂದಣವರ್ಷ ತುಮಕೂರಿನಲ್ಲಿ ಒಂದು ಇಂಟರ್‌ಮೀಡಿಯೇಟ್ ಕಾಲೇಜನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿರುವುದನ್ನು ತಿಳಿಯಲು, ತಮಗೆ ಸಂತೋಷವಾಗಬಹುದು.

ಪಬ್ಲಿಕ್ ಲೈಬ್ರೆರಿಯ ಬಗ್ಗೆ ಒಂದು ಗ್ರಾಂಟನ್ನು ಕೊಡಬೇಕೆಂಬ ತಮ್ಮ ಪ್ರಾರ್ಥನೆಯನ್ನು ಸಾಧ್ಯವಾದಮಟ್ಟಿಗೂ, ಕೇವಲ ಸುಮುಖವಾಗಿ ಪರ್ಯಾಲೋಚಿಸಲಾಗುವುದು.

ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ನಿಮ್ಮಗಳ ಚಲುವಳಿಗಳನ್ನು ಕೇಳಲು ವಿಶೇಷ ಆಸಕ್ತಿಯುಳ್ಳವನಾಗಿದ್ದೇನೆ. ಮುನಿಸಿಪಾಲಿಟಿಗೆ ಸಂಬಂಧಪಟ್ಟ ಕಾರ್ಯಕಲಾಪಗಳಲ್ಲಿ ನನಗೂ ಸಹ, ವಿಶೇಷ ಆಸಕ್ತಿಯುಂಟು. ಪೌರಕಾರ್ಯಾಭಿವೃದ್ಧಿಯ ಪ್ರಾಮುಖ್ಯತೆಯು, ಈಚೆಗೆ ಎಲ್ಲೆಲ್ಲಿಯೂ ಅಂಗೀಕರಿಸಲ್ಪಡುತ್ತಾ ಇದೆ; ಪೌರಕಾರ್ಯಾಭಿವೃದ್ಧಿಯಲ್ಲಿ ಈಚೆಗೆ ಎಲ್ಲರಿಗೂ ಆದರವುಂಟಾಗುತ್ತಾ ಇದೆ. ಈ ವಿಷಯದಲ್ಲಿ ಪೂರ್ವದೇಶೀಯರಿಗಿಂತಲೂ, ಪಾಶ್ಚಿಮಾತ್ಯರು ಅತಿ ಹೆಚ್ಚಾಗಿ ಆಸಕ್ತಿಯುಳ್ಳವರಾಗಿದ್ದಾರೆ. ಇಂಥಿಂಥಾ ಪಟ್ಟಣದವರು ಇಂಥಿಂಥಾ ಬಗೆಯಲ್ಲಿ ತಮ್ಮ ತಮ್ಮ ನಗರ ರಚನೆಯನ್ನು ಆರಂಭಿಸಿರುವರೆಂಬುದಾಗಿ ನಾವು ಪತ್ರಿಕೆಗಳಲ್ಲಿ ಓದುತ್ತಲೇ ಇರುತ್ತೇವೆ. ಒಂದಿಲ್ಲದಿದ್ದರೆ ಮತ್ತೊಂದು ಪಟ್ಟಣದ ಕಾರ್ಯಕಲಾಪಗಳನ್ನು ಕುರಿತು, ಆಗಾಗ್ಗೆ ಪತ್ರಿಕೆಗಳಲ್ಲಿ ವರ್ತಮಾನವು ಬರುತ್ತಲೇ ಇರುತ್ತದೆ. ಈ ವಿಷಯದಲ್ಲಿ ಇಂಡಿಯಾದೇಶವು ಹಿಂದೆ ಬಿದ್ದಿದೆ. ಜನರ ಸುಖಕ್ಕೆ ಸಾಧಕವಾದ ಇನ್ನೂ ಇತರ ಎಷ್ಟೋ ವಿಚಾರಗಳಲ್ಲಿಯೂ ಅದು ಹಿಂದೆ ಬಿದ್ದಿರುವಂತೆಯೇ ಈ ವಿಷಯದಲ್ಲಿಯೂ ಹಿಂದೆಬಿದ್ದಿದೆ. ನಾವು ಆಲಸರಾಗಿದ್ದುದು ಇನ್ನು ಸಾಕು. ಕಣ್ಣು ತೆರೆದುನೋಡಿ ಕಾರ್ಯಾರಂಭಮಾಡಲು, ಇದೀಗ ತಕ್ಕಸಮಯ!

ನಗರಾಭಿವೃದ್ಧಿಯ ವಿಷಯವನ್ನು ಕುರಿತು ಒಂದು ಆಂಗ್ಲೇಯ ಪತ್ರಿಕೆಯಲ್ಲಿ ಈಚೆಗೆ ಪ್ರಕಟವಾದ ಒಂದು ಲೇಖನದಲ್ಲಿನ ಕೆಲವು ಅಂಶಗಳನ್ನು ನಿಮಗೆ ತಿಳಿಸುತ್ತೇನೆ. ಪಾಶ್ಚಾತ್ಯ ದೇಶಗಳಲ್ಲಿರುವ ಸ್ತ್ರೀಪುರುಷರ ಮನಸ್ಸಿನಲ್ಲಿ ಪೌರಕಾರ್ಯಗಳ ಸಂಬಂಧದಲ್ಲಿ ನವೀನ ಭಾವನೆಯುಂಟಾಗಿರುವುದೆಂಬುದು, ಅದರಿಂದ ತಮ್ಮೆಲ್ಲರಿಗೂ ವೇದ್ಯವಾಗುವುದು. ಅವರ ಮೇಲ್ಪಂಕ್ತಿಯನ್ನನುಸರಿಸುವುದು ಉತ್ತಮ. ಆದರೂ, ಹಿಂದು ಮುಂದು ನೋಡದೆ ಅವರನ್ನು ಅನುಕರಿಸಬೇಕೆಂದು ಅಭಿಪ್ರಾಯವಲ್ಲ. ಒರೆಹಿಡಿದು ನೋಡಿ ಅನುಮೋದಿಸಿದ ನಿಯಮಗಳನ್ನು ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ ನಮ್ಮ ಸ್ವಂತ ರೀತಿಯಲ್ಲಿ ಅನುಸರಿಸಬೇಕೆಂದು ಮಾತ್ರವೇ ತಾತ್ಪರ್ಯ. ಆ ಲೇಖನದ ಸಾರಾಂಶವೇನೆಂದರೆ:—

“ಪ್ರಾಚೀನಕಾಲದ ಭವ್ಯವಾದ ಪ್ರಾರ್ಥನಾಮಂದಿರಗಳ ವಿಷಯದಲ್ಲಿಯೂ, ಸೌಧಗಳಿಂದ ಕೂಡಿದ ಕೋಟೆಗಳ ವಿಷಯದಲ್ಲಿಯೂ ನಮಗಿರುವ ಅಭಿಮಾನವು ಲೇಶಮಾತ್ರವೂ ಕಡಮೆಯಾಗಿಲ್ಲ. ಶಿಲೆಗಳಲ್ಲಿ ಕೆತ್ತಲ್ಪಟ್ಟು, ಪ್ರಾಚೀನಸಂಗತಿಗಳನ್ನು ನಮ್ಮ ನೆನಪಿಗೆ ತರುವ ದಿವ್ಯವಾದ ಸ್ಮಾರಕ ವಸ್ತುಗಳ ವಿಷಯದಲ್ಲಿಯೂ, ನಮಗೆ ಅದೇ ವಿಧವಾದ ಅಭಿಮಾನವುಂಟು. ಆದರೂ, ಮನುಷ್ಯರು ಮೃತಪಡುತ್ತಾ ಇರುವುದನ್ನು ನೋಡುತ್ತಲೇ ಇರುವ ನಮಗೆ, ಪಟ್ಟಣಗಳ ಮೇಲೆ ಉದ್ರೇಕದಿಂದೊಡಗೂಡಿದ ಪ್ರೇಮವು ತಪ್ಪಿಹೋಗಿದೆ; ಅದಕ್ಕೆ ಬದಲಾಗಿ ವಿವೇಕದಿಂದಲೂ, ಮತ್ತು ಶಾಂತತೆಯಿಂದಲೂ ಕೂಡಿದ ಪ್ರೇಮವು ನೆಲೆಗೊಂಡಿದೆ; ಅದು ಅಂತರವಾಗಿಯೂ ಇದೆ. ಅದು ಮನುಷ್ಯ ಜೀವನದ ವಿಷಯದಲ್ಲಿನ ಸಹಾನುಭೂತಿಯನ್ನೂ, ವಿವೇಚನೆಯನ್ನೂ ಅನುಸರಿಸಿ ನಿಂತಿದೆ. ಒಟ್ಟು ಪಟ್ಟಣವೇ ರಮಣೀಯವಾಗಿರಬೇಕೆಂಬುದು ನಮ್ಮ ಇಷ್ಟ. ಕಶ್ಮಲಗಳೂ, ತಿರೆಗೇಡಿತನದ ಚಿನ್ಹೆಗಳೂ ತೊಡೆದುಹೋಗಬೇಕೆಂಬುದು ನಮ್ಮ ಹಾರೈಕೆ. ಬೀದಿಗಳೂ ಚೌಕಗಳೂ ವಿಶಾಲವಾಗಿಯೂ, ನಿರ್ಮಲವಾಗಿಯೂ, ಇರಬೇಕೆಂಬುದು, ನಮ್ಮ ಬಯಕೆ; ಅವುಗಳು ಸುಂದರತರವಾದ ಪ್ರಭೆಯಿಂದ ಕಳಕಳಿಸುತ್ತಾ ಪರಿಷ್ಕಾರವಾಗಿರಬೇಕೆಂಬುದು ನಮ್ಮ ಅಭಿಲಾಷೆ.

“ಮ್ಯುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ಕಾರ್ಯಗಳಲ್ಲಿ ಶ್ರದ್ಧೆಯಿಂದ ಕೆಲಸಮಾಡಿರಿ. ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನಪಡುವ ಭಾರವನ್ನೂ, ಕಷ್ಟವನ್ನೂ, ಇತರರಿಗೆ ವಹಿಸಿ ನೀವು ಸುಖವಾಗಿ ಕುಳಿತಿರಬೇಡಿರಿ. ಸರ್ವಕಾಲದಲ್ಲಿಯೂ ಉದ್ಯಮಶೀಲರಾಗಿರಿ. ನಗರದಲ್ಲಿ ವಾಸಮಾಡುವ ಪ್ರತಿಯೊಬ್ಬರೂ, ಅದರ ವಿಷಯದಲ್ಲಿ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಲೇಬೇಕಾಗಿದೆ. ಅದುದರಿಂದ ಬಿಸಿಲಿಗೂ ಧೂಳಿಗೂ ಮೈಯೊಡ್ಡಿ ಕೆಲಸಮಾಡುವುದಕ್ಕೆ ಅಂಜಿ, ದೂರವಾದ ಏಕಾಂತ ಸ್ಥಳವನ್ನು ಹುಡುಕುವವರ ಹೆಜ್ಜೆಗಳನ್ನು ಹಾಡಿ ಹೊಗಳಲಾರೆ.

“ಆನಂದದ ನೆಲೆಯೆನಿಸಿರುವ ಪಟ್ಟಣ; ಗೌರವದಿಂದಲೂ ಘನತೆಯಿಂದಲೂ ತಮ್ಮ ತಮ್ಮ ಜೀವನ ಪಥವನ್ನು ನಡಿಸಿಕೊಂಡುಬರುವ ಸುಖಜೀವಿಗಳ ವಾಸಸ್ಥಾನವೆನಿಸಿರುವ ಪಟ್ಟಣ; ದೇವಾಲಯಗಳ ಘಂಟಾನಾದ [illegible] ಪಟ್ಟಣ; ಇಂಥ ಪಟ್ಟಣವನ್ನು [illegible]

ಆದಕಾರಣ, ತುಮಕೂರು ನಗರವು ಇನ್ನೂ ಹೆಚ್ಚು ರಮಣೀಯವಾಗುವಂತೆ ಪ್ರಯತ್ನಮಾಡಿರಿ. ಏಕೆಂದರೆ, ಒಂದು ಪಟ್ಟಣದಲ್ಲಿ ವಾಸಮಾಡುವ ಜನಗಳ ಕರ್ತವ್ಯನಿಷ್ಠೆ, ಸೌಹಾರ್ದಭಾವ, ಒತ್ತಾಸೆ, ದೂರದೃಷ್ಟಿ, ಸಹಾನುಭೂತಿ ಮತ್ತು ಘನವಾದ ಉದ್ದೇಶ, ಇವುಗಳಿಂದ ಮಾತ್ರವೇ, ಅದು ಅಭಿವೃದ್ಧಿಗೆ ಬರಬೇಕು.

ಮಹನೀಯರೇ, ತಾವು ನನಗೆ ಮಾಡಿದ ಸತ್ಕಾರಕ್ಕಾಗಿ ಮತ್ತೊಮ್ಮೆ ನಾನು ತಮ್ಮೆಲ್ಲರನ್ನೂ ವಂದಿಸುತ್ತೇನೆ. ಅಲ್ಲದೆ, ಈ ಊರಿನ ಅಭಿವೃದ್ಧಿಗಾಗಿಯೂ, ಇಲ್ಲಿನ ನಿವಾಸಿಗಳ ನೆಮ್ಮದಿಗಾಗಿಯೂ, ನೀವು ಮಾಡುವ ಸಕಲ ಪ್ರಯತ್ನಗಳಿಗೂ, ಮನಃಪೂರ್ವಕವಾಗಿ ನಾನು ಒತ್ತಾಸೆ ಮಾಡುವೆನೆಂದು ಭರವಸೆಕೊಡುತ್ತೇನೆ.

ತುಮಕೂರಿನಲ್ಲಿ ಹೆಂಗಸರ ಆಸ್ಪತ್ರೆಯ ಪ್ರವೇಶಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನ್ ಸಾಹೇಬರು ಅಪ್ಪಣೆ ಕೊಡಿಸಿದ ಭಾಷಣ.

ಮಹಿಳೆಯರೇ ಮತ್ತು ಮಹನೀಯರೇ,

ಈ ದಿವಸ ಇಲ್ಲಿನ ಕಾರ್ಯಗಳಲ್ಲಿ ಭಾಗಿಯಾಗಿ, ಈ ಊರಿನ ಹೆಂಗಸರಿಗೂ ಮತ್ತು ಮಕ್ಕಳಿಗೂ ಸಹ ವಿಶೇಷ ಪ್ರಯೋಜನವಾಗಲೆಂಬ ಉದ್ದೇಶದಿಂದ ಕಟ್ಟಲ್ಪಟ್ಟಿರುವ ಈ ಆಸ್ಪತ್ರೆಯ ಪ್ರವೇಶ ಮಹೋತ್ಸವವನ್ನು ನೆರವೇರಿಸುವ ಸುಯೋಗವು ಲಭಿಸಿರುವುದಕ್ಕಾಗಿ ನಾನು ವಿಶೇಷ ಸಂತೋಷಪಡುತ್ತೇನೆ.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಹೆಂಗಸರು ಮತ್ತು ಮಕ್ಕಳಿಗೋಸ್ಕರವಾಗಿ ಮಾತ್ರವೇ ಸ್ಥಾಪಿಸಲ್ಪಟ್ಟ ಆಸ್ಪತ್ರೆಯು ಇದುವರೆಗೆ ಯಾವುದೂ ಇರಲಿಲ್ಲ. ಈ ಆಸ್ಪತ್ರೆಯನ್ನು ಕಟ್ಟಿದುದರಿಂದ ಬಹುಕಾಲದಿಂದಲೂ ಇದ್ದ ಕೊರತೆಯೊಂದನ್ನು ಪರಿಹರಿಸಿದಂತಾಯಿತು. ತುಮಕೂರು ಮುನಿಸಿಪಾಲಿಟಿಯವರೂ ಮತ್ತು ಡಿಸ್ಟ್ರಿಕ್ಟುಬೋರ್ಡಿನವರೂ ಉದಾರಭಾವದಿಂದ ಈ ಆಸ್ಪತ್ರೆಯನ್ನು ಕಟ್ಟಿಸಿದುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಚಿಕಿತ್ಸೆಯ ಸಾಧನಗಳೆಲ್ಲಾ ಸರಿಯಾಗಿ ಒದಗಿಸಲ್ಪಟ್ಟಿರುವ ಆಸ್ಪತ್ರೆಯೊಂದು ಈ ಊರಿನಲ್ಲಿದೆ. ಆದರೆ ಅಲ್ಲಿ ಸ್ತ್ರೀಯರಿಗೂ ಪುರುಷರಿಗೂ ಚಿಕಿತ್ಸೆಯು ನಡೆಯುತ್ತದೆ. ಆದಕಾರಣ ನಮ್ಮ ದೇಶದ ಹೆಂಗಸರು ಇಂಥಾ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಹೊಂದುವುದು ಕಡಮೆ. ಆದುದರಿಂದ ಸ್ತ್ರೀಯರೇ ಸ್ತ್ರೀಯರಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆಗಳು ಪ್ರತ್ಯೇಕವಾಗಿ ಇರಬೇಕಾದುದು ಅವಶ್ಯಕ.

ಆಸ್ಪತ್ರೆಗಳನ್ನೂ ಡಿಸ್ಪೆನ್ಸರಿಗಳನ್ನೂ ಸ್ಥಾಪಿಸುವುದು ಡಿಸ್ಟ್ರಿಕ್ಟು ಬೋರ್ಡುಗಳು ಮ್ಯುನಿಸಿಪಾಲಿಟಿಗಳು ಮುಂತಾದ ಸಾರ್ವಜನಿಕ ಸಂಸ್ಥೆಗಳ ಮತ್ತು ಸರ್ಕಾರದವರ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ಇನ್ನೂ ಹೆಚ್ಚು ಸಂಖ್ಯೆಯ ವೈದ್ಯಶಾಲೆಗಳನ್ನು ಸ್ಥಾಪಿಸುವುದು ಅತ್ಯಾವಶ್ಯಕ. ಈ ವಿಚಾರವನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು, ಮೈಸೂರು ಸರ್ಕಾರದವರು ಅದಕ್ಕನುಗುಣವಾಗಿ ಕೆಲಸ ನಡಿಸುವರೆಂಬ ವಿಷಯದಲ್ಲಿ ನಾನು ನಿಮಗೆ ಹೊಸದಾಗಿ ಭರವಸೆಯನ್ನು ಕೊಡಬೇಕಾದುದೇ ಇಲ್ಲ. ಹೀಗೆ ಹೊಸ ವೈದ್ಯಶಾಲೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಸರ್ಕಾರದವರು ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಕೆಲಸ ನಡಿಸಲು ಸದ್ಯದಲ್ಲಿ ಯತ್ನವಿಲ್ಲ. ತಕ್ಕಷ್ಟು ಹಣವಿಲ್ಲದ ಕೊರತೆಯೊಂದೇ ಇದಕ್ಕೆ ಕಾರಣ. ತಕ್ಕಷ್ಟು ಸಂಖ್ಯೆಯ ಆಸ್ಪತ್ರೆಗಳೂ ಮತ್ತು ಡಿಸ್ಪೆನ್ಸರಿಗಳೂ ಸ್ಥಾಪಿಸಲ್ಪಡಬೇಕಾದರೆ, ಪಾಶ್ಚಾತ್ಯ ದೇಶಗಳಲ್ಲಿರುವಂತೆ ಖಾಸಗಿ ಜನರು ಮಾಡುವ ಧರ್ಮಸಹಾಯವು ನಮಗೆ ನೆರವಾಗಬೇಕು. ತಮ್ಮ ದೇಶಬಾಂಧವರಿಗೆ ಅವಶ್ಯವಾಗಿರುವ ಇಂಥಾ ಸಹಾಯವನ್ನು ಮಾಡಲು ಇಷ್ಟಪಡುವ ಧನಿಕರೂ ಮತ್ತು ದೊಡ್ಡಮನುಷ್ಯರೂ ಸಹ ಈ ವಿಧದಲ್ಲಿ ಉಪಕಾರಮಾಡುವುದು ಯುಕ್ತವೆಂದೆಣಿಸಬಹುದಾಗಿದೆ. ಲಂಡನ್ ನಗರದಲ್ಲಿ ಪ್ರತಿ 300 ಜನರಿಗೆ ಒಬ್ಬರಂತೆ ರೋಗಿಗಳು ಬಂದರೂ ಕೂಡ, ಆಸ್ಪತ್ರೆಗಳಲ್ಲಿಯೇ ಇಟ್ಟುಕೊಂಡು ಅವರಿಗೆ ಚಿಕಿತ್ಸೆ ಮಾಡುವಷ್ಟುಮಟ್ಟಿಗೆ ಸೌಕರ್ಯಗಳಿರುವುವೆಂಬುದಾಗಿ ವೈದ್ಯದ ಇಲಾಖೆಯ ಅಧಿಕಾರಿಯವರೊಬ್ಬರು ತಿಳಿಸಿರುತ್ತಾರೆ. ಇಂಡಿಯಾ ದೇಶದ ಮಾತೇಬೇರೆ; ಇಲ್ಲಿ ಪ್ರತಿ ಮುವತ್ತುಸಾವಿರ ಮಂದಿಗಳಿಗೆ ಒಬ್ಬರಂತೆ ರೋಗಿಗಳು ಬಂದರೆ ಮಾತ್ರವೇ ಆಸ್ಪತ್ರೆಗಳಲ್ಲಿಟ್ಟುಕೊಂಡು ಅವರಿಗೆ ಚಿಕಿತ್ಸೆ ಮಾಡಲು ಸಾಧ್ಯ. ಇದರ ಮೇಲೋ, ಇಂಡಿಯಾ ದೇಶದಲ್ಲಿ ಅಂಟು ಜಾಡ್ಯಗಳ ಮತ್ತು ಕ್ರಿಮಿ ಸಂಬಂಧವಾದ ರೋಗಗಳ ಹಾವಳಿಯೊಂದು ಕಡೆ; ಆರೋಗ್ಯಕ್ಕೆ ಬಾಧಕವನ್ನುಂಟುಮಾಡುವ ಅನೇಕ ದೇಶಾಚಾರ, ಮತಾಚಾರಗಳ ಸಂಬಂಧವಾದ ಜಡತೆಯೊಂದುಕಡೆ; ಜನಸಾಂದ್ರತೆಯು ಅತಿಯಾಗಿರುವ ಸಂಕಟವೊಂದುಕಡೆ; ಇವುಗಳ ಪರಿಣಾಮ ಫಲವಾಗಿ, ಆರೋಗ್ಯವನ್ನುಳಿಸಿಕೊಳ್ಳಲು ಈ ದೇಶದಲ್ಲಿ ಬಹಳ ಶ್ರಮಪಟ್ಟು ಹೆಣಗಬೇಕಾಗಿ ಬಂದಿದೆ. ದೇಶದ ಸ್ಥಿತಿಯು ಹೀಗಿರುವುದರ ಜತೆಗೆ, ವೈದ್ಯ ಸಹಾಯವು ದೊರೆಯುವ ಸೌಕರ್ಯಗಳೂ ಕೂಡ, ಬಹಳ ಕಡಮೆಯಾಗಿವೆ.

ರೋಗ ಬಂದಮೇಲೆ ಗುಣಮಾಡುವುದಕ್ಕಿಂತ ರೋಗವೇ ಬಾರದಂತೆ ನೋಡಿಕೊಳ್ಳುವುದು ಮೇಲೆಂಬುದು ಆಧುನಿಕ ವೈದ್ಯಶಾಸ್ತ್ರದ ಮೂಲಮಂತ್ರ. ಈ ನಿಯಮವನ್ನು ನಾವೆಂದಿಗೂ ಮರೆಯಕೂಡದು. ಜನರಿಗೆ ಪರಿಶುದ್ಧವಾದ ನೀರು ದೊರೆಯುವಂತೆ ಮಾಡುವುದು; ಪರಿಶುದ್ಧವಾದ ಗಾಳಿಯೂ ಆಹಾರವೂ, ಅವರಿಗೆ ದೊರೆಯುವಂತೆ ಏರ್ಪಡಿಸುವುದು; ಆಹಾರಕ್ಕಾಗಿ ಉಪಯೋಗಿಸುವ ವಸ್ತುಗಳಿಗೆ ಮೋಸದಿಂದ ಇತರ ವಸ್ತುಗಳನ್ನು ಬೆರಸಿ ಯಾರೂ ಮಾರಾಟ ಮಾಡದಂತೆ ನೋಡಿಕೊಳ್ಳುವುದು; ಈ ಮೂರು ವಿಚಾರಗಳಿಗೂ ಗಮನ ಕೊಡಬೇಕಾದುದು ಪ್ರತಿಯೊಂದು ಮ್ಯುನಿಸಿಪಾಲಿಟಿಯವರಿಗೂ ಅವಶ್ಯಕರ್ತವ್ಯವಾಗಿದೆ. ಶುದ್ಧವಾದ ನೀರೂ, ಉತ್ತಮವಾದ ಚರಂಡಿಗಳ ಏರ್ಪಾಡೂ ಇಲ್ಲದಿರುವ ಪಟ್ಟಣವು ಪಟ್ಟಣವೆನಿಸುವುದೇ ಇಲ್ಲ. ಇಂಥಾ ಒಂದು ಪಟ್ಟಣವೂ ಇರಕೂಡದು.

ಈಗ ಪ್ರಪಂಚದಲ್ಲೆಲ್ಲಾ ಆರೋಗ್ಯರಕ್ಷಣೆಯ ಚಳುವಳಿಯು ನಡೆಯುತ್ತಾ ಇದೆ. "ಆರೋಗ್ಯರಕ್ಷಣೆಯೇ ಜನಗಳ ಸುಖದ ತಳಹದಿ. ಆರೋಗ್ಯರಕ್ಷಣೆಯೇ ದೇಶೋನ್ನತಿಯ ಮೂಲಾಧಾರ." ಆದುದರಿಂದಲೇ ಅದಕ್ಕೆ ಹೆಚ್ಚುಗಮನವು ಕೊಡಲ್ಪಡುತ್ತಾ ಇದೆ. ಜನಾರೋಗ್ಯವನ್ನು ಮೇಲ್ಪಡಿಸಲು ನಮ್ಮ ಸರ್ವಸಾಹಸವನ್ನೂ ಪ್ರಯೋಗಿಸಿ ಕೆಲಸ ಮಾಡಬೇಕೆಂಬುದನ್ನು ನಮ್ಮ ಧ್ಯೇಯವಾಗಿಟ್ಟುಕೊಳ್ಳೋಣ. ಪಾಶ್ಚರನೆಂಬ ಪಂಡಿತನು "ಕ್ರಿಮಿಗಳಿಂದ ಹುಟ್ಟುವ ಪ್ರತಿಯೊಂದು ರೋಗವನ್ನು ವಾಸಿಮಾಡಿಕೊಳ್ಳುವುದಕ್ಕೂ ಮನುಷ್ಯರಿಗೆ ಸಾಮರ್ಥ್ಯವುಂಟು." ಎಂದು ಹೇಳಿದ್ದಾನೆ. ಆತನ ನುಡಿಗಳು ನಿಜವಾದವುಗಳು. ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಸಾಂಕ್ರಾಮಿಕ ಜಾಡ್ಯಗಳಿಗೂ ಇತರ ಕ್ರಿಮಿಜಾಡ್ಯಗಳಿಗೂ ಜನರು ತುತ್ತಾಗುವುದನ್ನು ನಮ್ಮ ಅನುಕೂಲ್ಯಗಳಿಗನುಗುಣವಾಗಿ ಅದಷ್ಟುಮಟ್ಟಿಗೂ ಕಡಮೆಮಾಡೋಣ.

ಈ ಆಸ್ಪತ್ರೆಯ ಪ್ರವೇಶ ಮಹೋತ್ಸವವನ್ನು ನೆರವೇರಿಸುವುದರ ಸಂಬಂಧದಲ್ಲಿ, ನಾವು ಇಲ್ಲಿ ಸಭೆ ಸೇರಿರುವೆವಷ್ಟೆ. ಇದರ ವಿಶೇಷ ಸ್ವಭಾವವನ್ನು ಕುರಿತು ಸಾಮಾನ್ಯವಾಗಿ ಈ ರೀತಿ ಮಾತಾಡುತ್ತಾ, ಇಲ್ಲಿ ಜನನಿಯ ಆರೋಗ್ಯವೇ ಜನಾಂಗದ ಆರೋಗ್ಯ. ಮಾತೆಯರ ಆರೋಗ್ಯವು ಕೆಟ್ಟುಹೋದರೆ, ಆರೋಗ್ಯರಕ್ಷಣೆಗಾಗಿ ಮೇಲೆ ಸೂಚಿಸಿದ ಪ್ರಯತ್ನಗಳೆಲ್ಲಾ ವ ಫಲವಾಗುವವೆಂದು ಹೇಳಿದರೂ ಹೇಳಬಹುದು. ಆದರೆ, ಇಷ್ಟೇನೋ ಖಂಡಿತ. ತಾಯಿಯರ ಆರೋಗ್ಯಕ್ಕೆ ಕುಂದುಕ ಉಂಟಾದಲ್ಲಿ, ಈ ಪ್ರಯತ್ನಗಳಿಂದ ಪ್ರಯೋಜನವು ಲಭಿಸುವುದು ಕಡಮೆಯಾಗುವುದು. ರೋಗದಿಂದ ನರಳುವ ಹೆಂಗಸರಿಗೂ, ಮಕ್ಕಳಿಗೂ ಚಿಕಿತ್ಸೆಮಾಡುವುದೊಂದು; ಈ ಡಿಸ್ಟ್ರಿಕ್ಟಿನ ಸ್ತ್ರೀಯರು ತಮಗೂ ತಮ್ಮ ಕುಟುಂಬದವರಿಗೂ ಪೂರ್ಣಾರೋಗ್ಯವುಂಟಾಗುವಂತೆ ಮಾಡಿಕೊಳ್ಳುವ ಬಗೆಯು ಹೇಗೆಂಬ ವಿಚಾರದಲ್ಲಿ ತಕ್ಕ ತಿಳುವಳಿಕೆಯನ್ನುಂಟುಮಾಡುವುದೊಂದು; ಅದಕ್ಕೆ ನವೀನರೀತಿಯ ಶಿಕ್ಷಣೆ ಮತ್ತು ಉದಾಹರಣೆಯನ್ನೊದಗಿಸುವ ಸ್ಥಳವಾಗಿ ಪರಿಣಮಿಸುವುದೊಂದು ; ಇವು ಮೂರು ಈ ಆಸ್ಪತ್ರೆಯಲ್ಲಿ ನಡೆಯುವುವೆಂಬುದಾಗಿ ನನಗೆ ಭರವಸೆಯುಂಟು.

ಪ್ರಾಮುಖ್ಯವಾದ ಈ ವಿಷಯದಲ್ಲಿ ಇನ್ನೂ ಎಷ್ಟೋ ಸಂಗತಿಗಳನ್ನು ಹೇಳಬಹುದಾಗಿದೆ. ಆದರೂ ಹೆಚ್ಚಾಗಿ ಯಾವುದನ್ನೂ ನಾನು ಪ್ರಸ್ತಾಪಿಸುವುದಿಲ್ಲ. ನಾನು ಈ ಉತ್ಸವವನ್ನು ನೆರವೇರಿಸಬೇಕೆಂಬುದಾಗಿ ತಾವುಗಳು ಕೇಳಿದುದಕ್ಕಾಗಿ, ನಾನು ತಮ್ಮೆಲ್ಲರಿಗೂ ವಂದನೆಗಳನ್ನು ಸಮರ್ಪಿಸುತ್ತೇನೆ. ಈ ಆಸ್ಪತ್ರೆಯದೆಸೆಯಿಂದ ಈ ಊರಿನವರ ಅವಶ್ಯಕತೆಗಳಿಗೆ ತಕ್ಕಂತೆ ಅವರಿಗೆ ಪೂರ್ಣಪ್ರಯೋಜನವು ಲಭಿಸಲೆಂಬುದಾಗಿ ನಾನು ತಮ್ಮೆಲ್ಲರ ಪರವಾಗಿಯೂ ಹಾರೈಸುವೆನು. ಈ ಆಸ್ಪತ್ರೆಯಲ್ಲಿನ ಕಾರ್ಯಗಳು ಇನ್ನು ಆರಂಭವಾಗಬಹುದೆಂಬುದಾಗಿ ನಾನು ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆನು.

ತಿಪಟೂರು.

1926 ನೇ ಇಸವಿ ಸೆಪ್ಟಂಬರ್ 19 ನೇ ತಾರೀಖು.

ಮಿ|| ಪ್ರೆಸಿಡೆಂಟರವರೇ, ತಿಪಟೂರು ಮ್ಯುನಿಸಿಪಲ್ ಕೌನ್ಸಿಲಿನ ಮೆಂಬರುಗಳೇ ಮತ್ತು ಸಭಿಕರೆ,

ತಾವುಗಳೆಲ್ಲರೂ ತಮ್ಮ ಊರಿಗೆ ನನ್ನನ್ನು ಆದರದಿಂದ ಬರಮಾಡಿಕೊಂಡಿರುವುದಕ್ಕಾಗಿ ನಾನು ತಮ್ಮೆಲ್ಲರನ್ನೂ ಮನಃಪೂರ್ವಕವಾಗಿ ವಂದಿಸುತ್ತೇನೆ. ನೀವು ಒಪ್ಪಿಸಿರುವ ಅಭಿನಂದನಪತ್ರಿಕೆಯಲ್ಲಿ ನನ್ನಲ್ಲಿ ನಿಮಗಿರುವ ಪ್ರೀತಿವಿಶ್ವಾಸಗಳನ್ನು ಚೆನ್ನಾಗಿ ಸೂಚಿಸಿರುತ್ತೀರಿ. ನಾನು ಇದಕ್ಕಾಗಿ ಬಹಳವಾಗಿ ಸಂತೋಷಿಸುತ್ತೇನೆ.

ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಸಮಸ್ತ ತರಗತಿಗಳವರೊಡನೆಯೂ ಸ್ನಿಗ್ಧವಾಗಿ ಸೇರುವುದು ; ಅವರ ಸ್ಥಿತಿಗತಿಗಳನ್ನೂ, ಮತ್ತು ಅವರ ಆವಶ್ಯಕತೆಗಳನ್ನೂ, ಪ್ರತ್ಯಕ್ಷವಾಗಿ ಪರಿಶೀಲಿಸುವುದು; ಅವರ ಆಶೋತ್ತರಗಳನ್ನು ಅರಿತುಕೊಳ್ಳುವುದು ; ಮತ್ತು ಅವರ ಕಷ್ಟಗಳಲ್ಲಿ ಸಹಾನುಭೂತಿಯನ್ನು ತೋರಿಸುವುದು ; ಈ ವಿಚಾರಗಳಲ್ಲಿ ನನಗೆ ತೀವ್ರಾಭಿಲಾಷೆಯಿರುವುದನ್ನು ನೀವೆಲ್ಲರೂ ಅಭಿನಂದಿಸಿರುತ್ತೀರಿ. ಇದರಿಂದ ನನಗೆ ವಿಶೇಷ ಸಂತೋಷವುಂಟಾಗಿರುತ್ತದೆ. ನಮ್ಮ ದೇಶಕ್ಕೂ, ಮತ್ತು ಪ್ರಖ್ಯಾತರಾದ ನಮ್ಮ ಪ್ರಭುವರ್ಯರಿಗೂ, ಚಿರಸ್ಥಾಯಿಯಾದ ಸೇವೆಯನ್ನು ಸಮರ್ಪಿಸಬೇಕೆಂಬುದಾಗಿ ನನಗೆ ತೀವ್ರಾಭಿಲಾಷೆಯುಂಟೆಂಬುದನ್ನೂ ಸಹ, ನೀವು ಗೊತ್ತುಮಾಡಿಕೊಂಡಿರುವಿರೆಂಬುದಾಗಿ ನನಗೆ ಭರವಸೆಯುಂಟು. ಇದೊಂದೇ ನನಗಿರುವ ಆಕಾಂಕ್ಷೆ; ಇದೊಂದೇ ಸರ್ವದಾ ನನ್ನ ಮನಸ್ಸಿನಲ್ಲಿರುವ ಆಲೋಚನೆ ; ಇದೊಂದೇ ನಾನು ದಿವಾನ್ ಪದವಿಯಲ್ಲಿ ಇರುವರೆಗೂ ಸಾಧಿಸಬೇಕೆಂದಿರುವ ಕರ್ತವ್ಯ; ಈ ಅಂಶವನ್ನು ಕುರಿತು ಮತ್ತೊಂದೆಡೆಯಲ್ಲಿ ನಾನು ಈ ಮೊದಲೇ ಪ್ರಸ್ತಾಪಿಸಿರುತ್ತೇನೆ. ಪೂರ್ಣವಾದ ಸಲಕರಣೆಗಳು ಕೊಡಲ್ಪಟ್ಟಿವೆ ; ಆದಕಾರಣ, ನಾನು ಪೂರ್ತಿಯಾಗಿ ಕರ್ತವ್ಯವನ್ನು ಪರಿಪಾಲಿಸಬೇಕೆಂದು ನಿರೀಕ್ಷಿಸಲ್ಪಡುತ್ತದೆ ; ಅಲ್ಲದೆ ಪೂರ್ತಿಯಾಗಿ ಕೆಲಸವೂ ಮಾಡಿಸಲ್ಪಡುತ್ತದೆ. ಅಸಾಧ್ಯವಾದುದನ್ನು ಯಾರೂ ಸಾಧಿಸಲಾರರು. ನನ್ನಿಂದ ಸಾಧ್ಯವೆನಿಸುವ ಸಮಸ್ತವನ್ನೂ ನಾನು ನೆರವೇರಿಸುತ್ತೇನೆ. ಅವಸರ ಪಡದೆಯೂ, ಮತ್ತು ಆಲಸ್ಯವಿಲ್ಲದೆಯೂ, ನಾನು ನನ್ನ ಕರ್ತವ್ಯವನ್ನು ನೆರವೇರಿಸುತ್ತೇನೆ. ನನ್ನ ದೇಶಬಾಂಧವರು ನನ್ನ ಪ್ರಯತ್ನದಲ್ಲಿ ಸಹಾಯಮಾಡುವರೆಂದೂ, ಮತ್ತು ಸೌಹಾರ್ದ ಭಾವವನ್ನು ತೋರಿಸುವರೆಂದೂ, ಭರವಸೆಯನ್ನಿಟ್ಟು ನನ್ನ ಕರ್ತವ್ಯವನ್ನು ನೆರವೇರಿಸುವೆನು.

ಈ ಪಟ್ಟಣದಲ್ಲಿ ವ್ಯಾಪಾರವು ಅಭಿವೃದ್ಧಿಗೆ ಬರುವ ಸೂಚನೆಯು ತೋರಿಬಂದಿರುವುದನ್ನು ಕೇಳಿ, ನನಗೆ ಸಂತೋಷವಾಯಿತು. ಸಂಸ್ಥಾನದ ವ್ಯಾಪಾರವನ್ನೂ, ಮತ್ತು ಕೈಗಾರಿಕೆಯನ್ನೂ, ಅಭಿವೃದ್ಧಿಪಡಿಸಲು ಸರ್ಕಾರದವರಿಗೆ ವಿಶೇಷ ಆಸಕ್ತಿಯಿದೆ. ತಾವುಗಳೆಲ್ಲರೂ ವ್ಯಾಪಾರದಲ್ಲಿ ಅನುಭವವನ್ನು ಹೊಂದಿರುವಿರಿ. ಆದಕಾರಣ, ಈ ವಿಷಯದಲ್ಲಿ ನೀವು ಕೊಡಬಹುದಾದ ಸಲಹೆಗಳನ್ನು ಆದರದಿಂದ ಸ್ವೀಕರಿಸಲಾಗುವುದು.

ಇನ್ನು, ನಿಮ್ಮ ಅಭಿನಂದನಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿರುವ ಪ್ರಾರ್ಥನೆಗಳ ವಿಚಾರ. ಇವುಗಳಲ್ಲಿ ಬಹುಭಾಗದವುಗಳು, ಸ್ವಲ್ಪ ಕಾಲದಿಂದಲೂ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತವೆ. ಆದಾಗ್ಗೂ, ಒಂದಲ್ಲ ಮತ್ತೊಂದು ಕಾರಣದಿಂದ, ಅದರಲ್ಲಿಯೂ ಮುಖ್ಯವಾಗಿ ದ್ರವ್ಯಾನುಕೂಲವಿಲ್ಲದ ತೊಂದರೆಯಿಂದ, ಎಲ್ಲಾ ಸಂದರ್ಭಗಳಲ್ಲಿಯೂ ನಿಮ್ಮ ಪ್ರಾರ್ಥನೆಗಳನ್ನು ನೆರವೇರಿಸಿಕೊಡುವುದು ಸರ್ಕಾರದವರಿಗೆ ಸಾಧ್ಯವಾಗಿಲ್ಲ.

ಈ ಊರಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಹೈಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿರುವುದನ್ನೂ, ದೂರ ಸ್ಥಳಗಳಿಂದ ಬಹುಮಂದಿ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಓದುತ್ತಿರುವುದನ್ನೂ ಕೇಳಿ, ನನಗೆ ಬಹಳ ಸಂತೋಷವಾಯಿತು. ಮಿಡ್ಲ್ ಸ್ಕೂಲಿಗಾಗಿ ಒಂದು ಹೊಸಕಟ್ಟಡವನ್ನು ಕಟ್ಟಿಸುವುದು ಅತ್ಯಾವಶ್ಯಕವೆಂಬುದು ಸರ್ಕಾರದವರಿಗೆ ಗೊತ್ತಿದೆ. ಈ ವಿಷಯದಲ್ಲಿ ರೆವಿನ್ಯೂ ಇಲಾಖೆಯವರೂ ಮತ್ತು ವಿದ್ಯಾಭ್ಯಾಸದ ಇಲಾಖೆಯವರೂ ವಿಶದವಾಗಿ ಪರಿಶೀಲನೆಮಾಡಿನೋಡಿದ್ದಾರೆ. ಅದರ ಫಲಿತಾಂಶವಾಗಿ ಒಂದು ಕಟ್ಟಡವನ್ನು ಕಟ್ಟುವ ಬಗ್ಗೆ ನಕ್ಷೆಗಳೂ, ಅಂದಾಜುಗಳೂ ತಯಾರಾಗುತ್ತಾ ಇವೆ. ಈ ಟೌನನ್ನು ಅಜಮಾಯಿಷಿಮಾಡುವ ಕಾಲದಲ್ಲಿ, ನಿಮ್ಮೊಡನೆಯೂ, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರೊಡನೆಯೂ, ಆಲೋಚಿಸಿ, ಕಟ್ಟಡದ ಬಗ್ಗೆ ಉಪಯುಕ್ತವಾದ ನಿವೇಶನವನ್ನು ಚುನಾಯಿಸಲು ಪ್ರಯತ್ನಿಸುತ್ತೇನೆ. ಆದಷ್ಟು ಬೇಗ ಕಟ್ಟಡದ ಕೆಲಸವನ್ನು ಕೈಗೊಳ್ಳಲಾಗುವುದೆಂಬ ಅಂಶವನ್ನು, ನೀವುಗಳು ದೃಢವಾಗಿ ನಂಬಿರಬಹುದು.

ಈ ಸ್ಥಳದಲ್ಲಿ ಒಂದು ಜನಾನಾ ಆಸ್ಪತ್ರೆಯನ್ನು ಸ್ಥಾಪಿಸುವುದನ್ನು ಸರ್ಕಾರದವರು ಮಂಜೂರ್‌ಮಾಡಿರುತ್ತಾರೆಂಬುದನ್ನು ಕೇಳಲು ತಮಗೆ ಸಂತೋಷವಾಗಬಹುದು. ಚೀಫ್‌ಇಂಜನಿಯರವರು ಸೀನಿಯರ್ ಸರ್ಜನ್‌ರವರೊಂದಿಗೂ, ಡಿಸ್ಟ್ರಿಕ್ಟುಬೋರ್ಡು ಮತ್ತು ಮ್ಯುನಿಸಿಪಾಲಿಟಿಯವರೊಂದಿಗೂ, ಆಲೋಚನೆಮಾಡಿ ಒಂದು ಕಟ್ಟಡವನ್ನು ಕಟ್ಟಿಸುವುದಕ್ಕಾಗಿ ಪ್ಲಾನುಗಳನ್ನೂ, ಅಂದಾಜುಗಳನ್ನೂ ತಯಾರ್‌ಮಾಡಿಸುತ್ತಿದ್ದಾರೆ. ಸ್ತ್ರೀಯರಿಗೆ ವೈದ್ಯಸಹಾಯವನ್ನೂ ದೊರಕಿಸುವ ವಿಷಯದಲ್ಲಿ ಈಗಿರುವುದಕ್ಕಿಂತಲೂ ಉತ್ತಮವಾದ ಏರ್ಪಾಡುಗಳು ಅವಶ್ಯಕವಾಗಿವೆ. ಈ ವಿಚಾರವಾಗಿ ತುಮಕೂರಿನಲ್ಲಿ ಮೊನ್ನೆತಾನೇ ಪ್ರಸ್ತಾಪಿಸಿದ್ದೇನೆ. ಅದೇ ಅಂಶಗಳನ್ನು ಪುನಃ ಹೇಳಬೇಕಾದ ಅವಶ್ಯಕತೆಯಿಲ್ಲ.

ಗುಬ್ಬಿ ಸಬ್‌ಡಿವಿಜನ್ ಆಫೀಸನ್ನು ತುಮಕೂರಿನಿಂದ ತಿಪಟೂರಿಗೆ ವರ್ಗಾಯಿಸಬೇಕೆಂದು ತಾವು ಮಾಡಿಕೊಂಡಿರುವ ಪ್ರಾರ್ಥನೆಯು ಪೂರ್ತಿಯಾಗಿ ನನ್ನ ಮನಸ್ಸಿಗೆ ಬಂದಿರುವುದೆ; ಆದರೂ, ಆಫೀಸರುಗಳಿಗೂ, ಲಿಖಾವಟ್‌ಸಿಬ್ಬಂದಿಗೂ, ವಾಸಕ್ಕೆ ತಕ್ಕ ಮನೆಗಳನ್ನು ಒದಗಿಸುವವರೆಗೂ, ಈ ವಿಷಯವನ್ನು ಪರ್ಯಾಲೋಚಿಸುವುದು ಸಾಧ್ಯವಿಲ್ಲ.

ಸರ್ಕಾರಿ ನೌಕರರಿಗೆ ಮನೆಗಳನ್ನೊದಗಿಸುವ ಏರ್ಪಾಡೊಂದನ್ನು ನಡೆಸಬೇಕೆಂದು ನೀವು ಉದ್ದೇಶಿಸಿರುವುದೂ, ಇದಕ್ಕಾಗಿ ಮ್ಯುನಿಸಿಪಾಲಿಟಿಯವರು 30,000 ರೂಪಾಯಿಗಳನ್ನು ವೆಚ್ಚಮಾಡಬೇಕೆಂದಿರುವುದೂ, ಸರಿಯಷ್ಟೆ. ಈ ಏರ್ಪಾಡಿನ ಸಂಬಂಧದಲ್ಲಿ ಸರ್ಕಾರದವರು ದ್ರವ್ಯಸಹಾಯಮಾಡಬೇಕೆಂದು ನೀವು ಪ್ರಾರ್ಥಿಸಿರುತ್ತೀರಿ. ನೀವು ಉದ್ದೇಶಿಸಿರುವ ಕೆಲಸವು ಶ್ಲಾಘ್ಯವಾಗಿದೆ. ನೀವು ಕೋರಿರುವಂತೆ ಸರ್ಕಾರದವರು ಸಹಾಯಮಾಡಬೇಕಾದುದೂ ನನ್ನ ಮನಸ್ಸಿಗೆ ಯುಕ್ತವೆಂದೇ ತೋರುತ್ತದೆ. ಈ ವಿಷಯವನ್ನು ವಿಶದವಾಗಿ ಪರಿಶೀಲಿಸುವಂತೆ ಸಂತೋಷದಿಂದ ಅಪ್ಪಣೆಮಾಡುತ್ತೇನೆ. ನಿಮ್ಮ ಪ್ರಾರ್ಥನೆಯನ್ನು ಸಲ್ಲಿಸಲು ಸಾಧ್ಯವಾಗಬಹುದೆಂದೂ, ನನಗೆ ತೋರುತ್ತದೆ. ಇದು ನೆರವೇರಿದಲ್ಲಿ, ತಮ್ಮ ಅರಿಕೆಯಮೇರೆಗೆ, ರೆವಿನ್ಯೂ ಸಬ್ ಡಿವಿಜನ್ ಆಫೀಸನ್ನು ಈ ಸ್ಥಳಕ್ಕೆ ವರ್ಗಾಯಿಸಲು ಅನುಕೂಲವಾಗುವುದು.

ತುಮಕೂರಿನಲ್ಲಿರುವ ಎರಡನೆಯ ಮುನ್ಸೀಫ್ ಕೋರ್ಟನ್ನು ತಿಪಟೂರಿಗೆ ವರ್ಗಾಯಿಸಬೇಕೆಂಬ ವಿಚಾರವು, 1921ನೆಯ ಇಸ್ವಿಯ ಲಾಗಾಯತು ಪರ್ಯಾಲೋಚನೆಯಲ್ಲಿದೆಯೆಂದು ನನಗೆ ತಿಳಿಯಬಂದಿದೆ. ಈ ವಿಚಾರವಾಗಿ ಸರ್ಕಾರದವರಿಗೂ, ಚೀಫ್ ಕೋರ್ಟಿನವರಿಗೂ ಕಾಗದ ಪತ್ರಗಳು ನಡೆದುವು. ಅನಂತರ ಅದನ್ನು "ಲಾಸ್ ಡಿಲೇಸ್ ಕಮಿಟಿ" ಯವರ ಅಭಿಪ್ರಾಯಕ್ಕಾಗಿ ಕಳುಹಿಸಲಾಯಿತು. ಸದರಿ ಕಮಿಟಿಯವರ ವರದಿಯು ಸಿದ್ಧವಾಗಿದೆ. ಅವರು ಈ ವಿಚಾರವನ್ನು ತಮ್ಮ ವರದಿಯಲ್ಲಿ ಚರ್ಚಿಸಿರುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಕಮಿಟಿಯವರ ವರದಿಯು ತಲಪಿದ ಕೂಡಲೆ, ಅದನ್ನು ಪರ್ಯಾಲೋಚಿಸಿ, ನಿಮ್ಮ ಈ ಅರಿಕೆಯ ವಿಷಯವಾಗಿ, ಹುಕುಂ ಸಾದರ್ಮಾಡಲಾಗುವುದು.

ಟವನ್‌ಹಾಲು ಮತ್ತು ಮ್ಯುನಿಸಿಪಲ್ ಆಫೀಸಿಗಾಗಿ ಕಟ್ಟುವ ಕಟ್ಟಡದ ವೆಚ್ಚದ ಪೈಕಿ ಅರ್ಧ ಮೊಬಲಗನ್ನು ಕೊಡಬೇಕೆಂದು ನೀವು ಕೇಳಿರುತ್ತೀರಿ. ಡ್ರೈನೇಜ್ ಮತ್ತು ನೀರು ಸರಬರಾಯಿಯ ಏರ್ಪಾಡುಗಳಿಗೆ ಸಹಾಯದ್ರವ್ಯವನ್ನು ಕೊಡಬೇಕೆಂದೂ, ನೀವು ಅರಿಕೆಮಾಡಿರುತ್ತೀರಿ. ಈ ವಿಷಯಗಳನ್ನು ಸುಮುಖವಾಗಿ ಪರ್ಯಾಲೋಚಿಸಲಾಗುವುದು. ಟವನುಗಳನ್ನು ಉತ್ತಮಸ್ಥಿತಿಗೆ ತಂದು, ಅವು ರಮಣೀಯವಾಗಿರುವಂತೆ ಮಾಡುವ ವಿಷಯದಲ್ಲಿ ನನಗೆ ತುಂಬಾ ಅಭಿರುಚಿಯುಂಟು. ನಾನು ಇದನ್ನು ನಿಮಗೆ ಒತ್ತಿ ಹೇಳಬೇಕಾದುದೇ ಇಲ್ಲ. ಇಂಥಾ ಕಾರ್ಯಗಳಿಗೋಸ್ಕರ ಧಾರಾಳವಾಗಿ ಹಣವನ್ನು ವೆಚ್ಚಮಾಡೋಣವೆಂದರೆ ನಮ್ಮಲ್ಲಿ ತಕ್ಕಷ್ಟು ಹಣವಿಲ್ಲ. ಇದಕ್ಕಾಗಿ ವಿಷಾದಪಡಬೇಕಾಗಿದೆ. ಟವನುಗಳ ಅಭಿವೃದ್ಧಿಕಾರ್ಯಗಳಿಗೆ ಇನ್ನೂ ಹೆಚ್ಚು ಹಣವನ್ನು ಕೊಡುವುದಕ್ಕೆ ಅವಕಾಶವಿದ್ದರೆ ಎಷ್ಟೋ ಚೆನ್ನಾಗಿರುತ್ತಿದ್ದಿತು. ಆದರೆ, ಇನ್ನೂ ಕೆಲವು ಕಾಲದವರೆಗೆ, ಒದಗಿದಷ್ಟು ಹಣವನ್ನೇ ಕೇವಲ ಪ್ರಯೋಜನಕರವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾಗಿದೆ. ಈ ಡಿಸ್ಟ್ರಿಕ್ಟಿಗೆ ಕೊಟ್ಟಿರುವ ಮೊಬಲಗಿನಲ್ಲಿ ನಿಮ್ಮ ಮ್ಯುನಿಸಿಪಾಲಿಟಿಗೆ ಹೆಚ್ಚು ಹಣವು ದೊರೆಯುವುದಿಲ್ಲವೆಂಬುದು ನನಗೆ ಗೊತ್ತಿದೆ. ಆದರೆ ನಿಮ್ಮ ಟವನಿನಲ್ಲಿರುವ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರದವರು ಮಾಡುವ ಪ್ರಯತ್ನಗಳಿಗೆ ನಿಮ್ಮ ಪೈಕಿ ವಿದ್ಯಾವಂತರಾಗಿಯೂ, ಧನಿಕರಾಗಿಯೂ, ಇರುವ ದೊಡ್ಡಮನುಷ್ಯರು ಒತ್ತಾಸೆಮಾಡಿ ವರ್ತಿಸುವಿರೆಂದು, ನನಗೆ ಭರವಸೆಯುಂಟು.

ಮಹನೀಯರೆ, ಈ ಸಂದರ್ಭದಲ್ಲಿ ನಾನು ಮತ್ತೇನನ್ನೂ ಹೇಳಲಿಚ್ಛಿಸುವುದಿಲ್ಲ. ನಿಮ್ಮ ಕುಂದುಕೊರತೆಗಳನ್ನು ಪ್ರತ್ಯಕ್ಷವಾಗಿ ವಿಚಾರಮಾಡಿ ತಿಳಿದುಕೊಳ್ಳುವುದಕ್ಕಾಗಿ, ನಾನು ಇಲ್ಲಿಗೆ ಬಂದಿರುತ್ತೇನೆ. ಈ ವಿಷಯವನ್ನು ನಿಮ್ಮೊಡನೆಯೂ ಈಗ ಇಲ್ಲಿ ಸೇರಿರುವ ಆಫೀಸರುಗಳೊಡನೆಯೂ, ಸ್ವಂತವಾಗಿ ವಿಚಾರಮಾಡಿ, ನಿಮಗಿರುವ ಕುಂದುಕೊರತೆಗಳ ಪೈಕಿ ಕೆಲವನ್ನಾದರೂ ಪರಿಹರಿಸುವುದು ಸಾಧ್ಯವಾಗುವುದಾದರೆ, ನನಗೂ ತೃಪ್ತಿಯಾಗುವುದು; ಅಲ್ಲದೆ ನಿಮಗೂ ಕೂಡ ಅದರಿಂದ ತೃಪ್ತಿಯುಂಟಾಗಬಹುದು.

ನನ್ನನ್ನು ಆದರದಿಂದ ಬರಮಾಡಿಕೊಂಡು ನನಗೆ ಶ್ರೇಯಸ್ಸನ್ನು ಕೋರಿದುದಕ್ಕಾಗಿ, ಮನಃಪೂರ್ವಕವಾಗಿ ತಮ್ಮೆಲ್ಲರನ್ನೂ ಮತ್ತೊಮ್ಮೆ ವಂದಿಸುತ್ತೇನೆ. ಈ ಊರು ಭಾರೀ ವ್ಯಾಪಾರಸ್ಥಳವಾಗಿದೆ. ಇಲ್ಲಿಗೆ ಬಂದು ನಿಮ್ಮೆಲ್ಲರನ್ನೂ ನೋಡುವ ಸುಯೋಗವು ದೊರೆತುದಕ್ಕಾಗಿ ನಾನು ಬಹಳವಾಗಿ ಸಂತೋಷಪಡುತ್ತೇನೆ.

ಮದ್ದಗಿರಿ.

1926 ನೇ ಇಸವಿ ಸೆಪ್ಟಂಬರು 20 ನೇ ತಾರೀಖು.

ಮಿ|| ಪ್ರೆಸಿಡೆಂಟರವರೇ, ಮ್ಯುನಿಸಿಪಲ್ ಕೌನ್ಸಿಲರುಗಳೇ ಮತ್ತು ಸಭಿಕರೇ

ತಾವುಗಳೆಲ್ಲರೂ ನನ್ನನ್ನು ಆದರದಿಂದ ಬರಮಾಡಿಕೊಂಡುದಕ್ಕಾಗಿಯೂ ಮತ್ತು ನೀವು ಒಪ್ಪಿಸಿದ ಅಭಿನಂದನ ಪತ್ರಿಕೆಯಲ್ಲಿ ಅಭಿಮಾನಪೂರ್ವಕವಾದ ಪ್ರಿಯವಚನಗಳನ್ನು ಸೂಚಿಸಿರುವುದಕ್ಕಾಗಿಯೂ ನಾನು ತಮ್ಮೆಲ್ಲರನ್ನೂ ವಂದಿಸುತ್ತೇನೆ. ತಾವೆಲ್ಲರೂ ಶ್ರೀಮನ್ಮಹಾರಾಜರವರಲ್ಲಿ ತಮಗಿರುವ ರಾಜಭಕ್ತಿಯನ್ನು ವಿನಯಪೂರ್ವಕವಾಗಿ ತಿಳಿಸಿರುತ್ತೀರಿ ; ಅಲ್ಲದೆ, ಅವರ ಪ್ರಭುತ್ವದಲ್ಲಿ ನಿಮ್ಮೆಲ್ಲರಿಗೂ ದೊರೆತಿರುವ ಮಹೋಪಕಾರಗಳಿಗಾಗಿ ನಿಮ್ಮ ಕೃತಜ್ಞತೆಯನ್ನು ಸೂಚಿಸಿರುತ್ತೀರಿ ; ಇದನ್ನು ಕಂಡು ನನಗೆ ವಿಶೇಷ ಆನಂದವುಂಟಾಗಿರುತ್ತದೆ. ಈ ದಿವಸ ನಿಮ್ಮೊಡನೆ ಸೇರಿ, ಈ ಊರಿನ ನಾನಾ ಆವಶ್ಯಕತೆಗಳನ್ನೂ ಮತ್ತು ಅವುಗಳನ್ನು ಎಷ್ಟುಮಟ್ಟಿಗೆ ಒದಗಿಸುವುದು ಸಾಧ್ಯವೆಂಬುದನ್ನೂ, ಪರ್ಯಾಲೋಚಿಸುವುದು ನನಗೆ ವಿಶೇಷ ಸಂತೋಷಕರವಾಗಿದೆ.

ಈ ಊರಿನ ಬಳಕೆಗೆ ಸಾಕಾಗುವಷ್ಟು ಪರಿಶುದ್ಧವಾದ ನೀರು ಇಲ್ಲಿ ದೊರೆಯುವುದಿಲ್ಲ. ಇದು ಬಹುಕಾಲದಿಂದಲೂ ಇರುವ ಕೊರತೆಯಾಗಿದೆ. ಈ ಊರಿಗೆ ಸಾಕಾಗುವಷ್ಟು ಶುದ್ಧವಾದ ಕುಡಿಯುವ ನೀರು ಸರಬರಾಯಾಗುವಂತೆ ಯಾವ ಪ್ರಾಜೆಕ್ಟನ್ನಾದರೂ ನಿಮ್ಮ ಮ್ಯುನಿಸಿಪಾಲಿಟಿಯವರು ತಯಾರಿಸಿ ಕಳುಹಿಸುವುದಾದರೆ, ಸರ್ಕಾರದವರು ಅದನ್ನು ಕೇವಲ ಸುಮುಖವಾಗಿ ಪರ್ಯಾಲೋಚಿಸಲು ಸಿದ್ಧವಾಗಿದ್ದಾರೆ.

ಸರ್ಕಾರದವರು ಇಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸುವುದು ಸಾಧ್ಯವಾದುದಕ್ಕಾಗಿ, ತಮ್ಮೆಲ್ಲರಂತೆಯೇ ನಾನೂ ಸಂತೋಷಪಡುತ್ತೇನೆ. ಉತ್ತಮವಾದ ಒಂದು ಕಟ್ಟಡವನ್ನು ಕಟ್ಟಿಸುವ ವಿಷಯವನ್ನು, ಸರ್ಕಾರದವರು ಮುಂದೆ ಪರ್ಯಾಲೋಚಿಸುವವರಾಗಿದ್ದಾರೆ. ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ನಿಮ್ಮೊಡನೆ ಆಲೋಚನೆಮಾಡಿ, ಇಲ್ಲಿನ ಹೈಸ್ಕೂಲು ಕಟ್ಟಡಕ್ಕಾಗಿ ಒಂದು ನಿವೇಶನವನ್ನು ಚುನಾಯಿಸಿದ್ದಾರೆಂಬುದಾಗಿ ತಿಳಿಯಬಂದಿದೆ. ತುಮಕೂರು ಡಿಸ್ಟ್ರಿಕ್ಟಿಗೆ ಸೇರಿ, ಈ ತಾಲ್ಲೂಕಿನ ಸುತ್ತಮುತ್ತಲೂ ಇರುವ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಈ ಹೈಸ್ಕೂಲಿನಿಂದ ವಿಶೇಷ ಪ್ರಯೋಜನವೂ ಮತ್ತು ಅನುಕೂಲವೂ, ಉಂಟಾಗುವುವೆಂದು ನಾನು ನಂಬಿದ್ದೇನೆ.

ಈ ಊರಿಗೋಸ್ಕರ ಒಂದು "ಡ್ರೈನೇಜ್" ಸ್ಕೀಮನ್ನು ಏರ್ಪಡಿಸಲು ಸರ್ಕಾರದವರು ದ್ರವ್ಯ ಸಹಾಯಮಾಡಬೇಕೆಂಬುದಾಗಿ ನೀವೆಲ್ಲರೂ ಪ್ರಾರ್ಥಿಸಿರುತ್ತೀರಿ. ಈ ಪ್ರಾರ್ಥನೆಯೇನೋ ಯುಕ್ತವಾದುದೇ ಹೌದು. ಆದರೂ, ದ್ರವ್ಯಾನುಕೂಲತೆಯು ಉತ್ತಮಗೊಳ್ಳುವವರೆಗೂ, ಸದ್ಯದಲ್ಲಿ ಸರ್ಕಾರದವರು ತಾವು ಇಷ್ಟಪಡುವಷ್ಟು ಮೊಬಲಗನ್ನು ಇದಕ್ಕಾಗಿ ಒದಗಿಸುವುದು ಸಾಧ್ಯವಿಲ್ಲ. ಆದಕಾರಣ, ಸರ್ಕಾರದವರು ತಮಗೆ ಸಾಧ್ಯವಾದಷ್ಟು ಮೊಬಲಗನ್ನು ಮಾತ್ರ ಈಗ ಒದಗಿಸುವರು. ಈ ಜಿಲ್ಲೆಗಾಗಿ [illegible]ದ ಹಣದ ಭಾಗವೊಂದನ್ನು, ಮ್ಯುನಿಸಿಪಾಲಿಟಿಗಳಿಗೆ ಒದಗಿಸಬೇಕಾಗುತ್ತದೆ. ಈ ಡಿಸ್ಟ್ರಿಕ್ಟಿನಲ್ಲಿ ಟೌನುಗಳ ಮೇಲ್ಪಾಡಿಗಾಗಿ 12,000 ರೂಪಾಯಿಗಳನ್ನು ತೆಗೆದಿಟ್ಟಿದೆ. ಈ ಮೊಬಲಗನ್ನು ನಿಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ನಾನಾ ಮ್ಯುನಿಸಿಪಾಲಿಟಿಗಳಿಗೂ ಹಂಚಿಕೊಡುತ್ತಾರೆ. ಆಗ್ಗೆ, ಆ ಮೊಬಲಗಿನಲ್ಲಿ ನಿಮ್ಮ ಊರಿಗೂ ಸಹ, ಒಂದುಭಾಗವು ದೊರಕದೇ ದೊರೆಯುತ್ತದೆ.

ನೀವು ಇಲ್ಲಿ ಸ್ಥಾಪಿಸಬೇಕೆಂದಿರುವ ಮನೆಗಳನ್ನು ಕಟ್ಟಿಸುವ ಪರಸ್ಪರ ಸಹಾಯಸಂಘಕ್ಕೆ, 50,000 ರೂಪಾಯಿಗಳನ್ನು ಸರ್ಕಾರದವರು ಸಾಲವಾಗಿ ಕೊಡಬೇಕೆಂದು ನೀವೆಲ್ಲರೂ ಪ್ರಾರ್ಥಿಸಿರುತ್ತೀರಿ. ಆದರೆ, ಕೂಡಲೆ ಈ ಮೊಬಲಗನ್ನು ಒದಗಿಸುವುದು ಸರ್ಕಾರದವರಿಗೆ ಸಾಧ್ಯವಿಲ್ಲವೆಂದು ತೋರುತ್ತದೆ. ಆದಾಗ್ಗೂ, ನಿಮ್ಮ ಆವಶ್ಯಕತೆಗಳು ಎಷ್ಟುಮಟ್ಟಿನವೆಂಬುದನ್ನು ತನಿಖೆಮಾಡುವಂತೆ ಪರಸ್ಪರ ಸಹಾಯಸಂಘಗಳ ಇಲಾಖೆಯವರನ್ನು ಕೇಳಿ, ಸರ್ಕಾರದವರು ಎಷ್ಟುಮಟ್ಟಿಗೆ ಸಹಾಯಮಾಡುವುದು ಸಾಧ್ಯವೆಂಬುದನ್ನು ಪರ್ಯಾಲೋಚಿಸಿ ನೋಡುವೆನು.

ಈಗ್ಗೆ ಕೆಲವು ವರ್ಷಗಳ ಹಿಂದೆ, ಈ ತಾಲ್ಲೂಕು ಸುಭಿಕ್ಷದ ನೆಲೆಯೆನಿಸಿ ಕಂಗೊಳಿಸುತ್ತಿದ್ದಿತು. ಈಚೆಗೆ ಸರಿಯಾಗಿ ಮಳೆಯು ಬೀಳದೆ ಹೋದುದರ ದೆಸೆಯಿಂದ, ಇಂಥಾ ತಾಲ್ಲೂಕಿಗೆ ಈಗ ದುಸ್ಥಿತಿಯೊದಗಿರುವುದು ಶೋಚನೀಯವಾಗಿದೆ. ಮಳೆಯು ಸರಿಯಾಗಿ ಬೀಳದೇ ಹೋಗುವುದರಿಂದ ಬೆಳೆಗಳು ಕೆಟ್ಟುಹೋಗುವುದನ್ನು ಸಾಧ್ಯವಾದಮಟ್ಟಿಗೂ ಕಡಮೆಮಾಡಿ, ಜನರಿಗೆ ಸಹಾಯಮಾಡಬೇಕೆಂಬ ಉದ್ದೇಶದಿಂದ ಹೊಸ ನೀರಾವರಿಯ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದೂ, ಮತ್ತು ಈಗಿರುವ ನೀರಾವರಿಯ ಸಾಧನಗಳನ್ನು ಮೇಲ್ಪಡಿಸಬೇಕೆಂದೂ, ಸರ್ಕಾರದವರು ತವಕಪಡುತ್ತಿದ್ದಾರೆ. ಆದಕಾರಣ, ಸ್ವರ್ಣಮುಖೀನದಿಯಿಂದ ಬಿಜವರದ ಕೆರೆಗೆ, ಒಂದು ಕಟ್ಟುಕಾಲುವೆಯನ್ನು ಮಾಡಿಸಿಕೊಡಬೇಕೆಂಬ ನಿಮ್ಮ ಸಲಹೆಯನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚಿಸುವರೆಂದು ನಾನು ನಿಮಗೆ ಭರವಸೆ ಹೇಳುತ್ತೇನೆ. ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಲೇಶವೂ ಸಾವಕಾಶವಿಲ್ಲದೆ, ಈ ಪ್ರಾಜೆಕ್ಟಿನ ವಿಚಾರದಲ್ಲಿ ತನಿಖೆಯ ಕ್ರಮಗಳನ್ನು ಜರುಗಿಸಬೇಕೆಂಬುದಾಗಿ ನಾನು ಅವರಿಗೆ ಅಪ್ಪಣೆಮಾಡುತ್ತೇನೆ.

ಗೌರೀಬಿದನೂರಿನಿಂದ ಮದ್ದಗಿರಿಯ ಮಾರ್ಗವಾಗಿ ತುಮಕೂರಿಗೆ ರೈಲನ್ನು ಹಾಕಿಸಿಕೊಡಬೇಕೆಂಬುದಾಗಿ, ನೀವು ಸೂಚಿಸಿರುತ್ತೀರಿ. ಈರೀತಿ ಬ್ರಾಂಚು ಲೈನುಗಳನ್ನು ಏರ್ಪಡಿಸುವುದು ಸರ್ಕಾರದವರು ಅಂಗೀಕರಿಸಿರುವ ಕಾರ್ಯಕ್ರಮವಾಗಿದೆ. ಆದರೆ, ಇನ್ನೂ ಮುಖ್ಯ ಮುಖ್ಯವಾದ ಕೆಲವು ರೈಲು ಮಾರ್ಗಗಳನ್ನು ಏರ್ಪಡಿಸುವ ವಿಚಾರದಲ್ಲಿ ಈಗಾಗಲೇ ಸರ್ಕಾರದವರು ಕ್ರಮ ಜರುಗಿಸುತ್ತಿದ್ದಾರೆ. ಈ ರೈಲುಗಳನ್ನು ಏರ್ಪಡಿಸುವ ಕೆಲಸವನ್ನು ಪೂರ್ತಿಗೊಳಿಸುವವರೆಗೂ, ಮತ್ತಾವ ಹೊಸ ರೈಲುಗಳ ಕೆಲಸವನ್ನೂ ಕೈಗೊಳ್ಳಲು ಸರ್ಕಾರದವರಿಗೆ ಸಾಧ್ಯವಿಲ್ಲ ; ಇದನ್ನು ನೀವೂ ಒಪ್ಪುವಿರೆಂಬುದರಲ್ಲಿ ನನಗೆ ಲೇಶವೂ ಸಂಶಯವಿಲ್ಲ.

ನಿಮ್ಮ ಅಭಿನಂದನಪತ್ರಿಕೆಯಲ್ಲಿ ನೀವು ಸೂಚಿಸಿರುವ ಪ್ರಾರ್ಥನೆಗಳಿಗೆಲ್ಲಾ ನಾನು ಉತ್ತರ ಹೇಳಿರುವೆನೆಂದು ತೋರುತ್ತದೆ. ನಾನು ಇಲ್ಲಿ ಮೊಕ್ಕಾಂಮಾಡಿರುವ ಅವಧಿಯಲ್ಲಿ ನಿಮ್ಮ ಕುಂದುಕೊರತೆಗಳೇನೆಂಬುದನ್ನು ಇನ್ನೂ ವಿಶದವಾಗಿ ತಿಳಿದುಕೊಳ್ಳಲನುಕೂಲಿಸುವುದೆಂದೂ, ಮತ್ತು ಅವುಗಳನ್ನು ಎಷ್ಟರಮಟ್ಟಿಗೆ ಪರಿಹರಿಸುವುದು ಸಾಧ್ಯವೆಂಬುದನ್ನು ನಿಮ್ಮೊಡನೆ ಚರ್ಚೆಮಾಡಲನುಕೂಲಿಸುವುದೆಂದೂ, ನಾನು ಹಾರೈಸುತ್ತೇನೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಶ್ರಾವಣಮಾಸೋತ್ಸವವು.

ಹರಿಹರದಲ್ಲಿರುವ ವಿರಕ್ತಮಠದ ಶ್ರೀಮನ್ನಿರಂಜನಗುರುಶಾಂತಶಿವಯೋಗಿಗಳ ಕೃಪಾಬಲದಿಂದ ಇದೇ ಶ್ರಾವಣ ಶು|| ೧ ರಿಂದ ವೇ|| ಚಂದ್ರಶೇಖರಶಾಸ್ತ್ರಿಗಳು ಸಂದಿಗೋಡ ಇವರಿಂದ ಹನ್ನೊಂದುಜನ ವಿದ್ಯಾರ್ಥಿಗಳ ಸಮೇತ ವೇದೋಕ್ತವಾಗಿ ಸದರೀ ಶಿವಯೋಗಿಗಳ ಪಾದಪೂಜಾ, ಮಹಾರುದ್ರಾಭಿಷೇಕ, ಗಣಾರಾಧನೆ, ಭಜನೆ, ವೇ|| ವೀರಪ್ಪಶಾಸ್ತ್ರಿಗಳು ಹಿರಿಹಾಳ ಇವರಿಂದ ಕೀರ್ತನ ಈ ಪ್ರಕಾರ ಪ್ರತಿದಿನ ನಡೆದು ಶ್ರಾ|| ಬ|| 30 ರಲ್ಲಿ ಮಹಾರುದ್ರಾಭಿಷೇಕ ಮಹಾಗಣಾರಾಧನೆ ನಡೆದು ಸಾಯಂಕಾಲ ಕೀರ್ತನ ನಡೆದು ಭಾದ್ರಪದ ಶು|| ೧ ಮಂಗಳವಾರ ಶಾಂತಿಪೂಜಾ ಗಣಾರಾಧನೆ ಮತ್ತು ಕೀರ್ತನೆ ನಡೆದುವು. ಭಾದ್ರಪದ ಶು|| ೨ ಬುಧವಾರ ವಿಶೇಷ ಅನ್ನಸಂತರ್ಪಣೆಯು ನಡಿಸಲ್ಪಟ್ಟು ಕೀರ್ತನ ಸಮಾಪ್ತಿಗೊಳಿಸಿದಮೇಲೆ ಸಭೆಸೇರಿ ಅನೇಕ ವ್ಯಾಖ್ಯಾತರ ವ್ಯಾಖ್ಯಾನಗಳಾದವು. ನಂತರ ಸದರೀ ಶಾಸ್ತ್ರಿಗಳಿಗೂ ಬಂದಂಥಾ ಮೂರ್ತಿಗಳಿಗೂ ವಿದ್ಯಾರ್ಥಿಗಳಿಗೂ ಸಂಭಾವನೆಯು ತೀರಿದಮೇಲೆ ಮಂಗಲವನ್ನಾಚರಿಸಿ ಕಾರ್ಯಸಮಾಪ್ತಿಗೊಳಿಸಲ್ಪಟ್ಟಿತು.

ಓರ್ವ ಭಕ್ತ.

ಶ್ರೀ ರುದ್ರಾಭಿಷೇಕ.

ತರೀಕೆರೆ ವೀರಶೈವಮಂಡಲಿಯವರು ಪದ್ಧತಿಯಂತೆ ಕಳೆದ ಶ್ರಾವಣ ಶುದ್ಧ 1 ರಿಂದ ಭಾದ್ರಪದ ಶುದ್ಧ 1 ರವರೆಗೆ ದಿನಂಪ್ರತಿ ಟವನ್ ಶ್ರೀ ಬಸವೇಶ್ವರ ಮತ್ತು ಅಮೃತೇಶ್ವರಸ್ವಾಮಿದೇವಸ್ಥಾನಗಳಲ್ಲಿ ಪ್ರಾತಃಕಾಲ ವಿಧ್ಯುಕ್ತವಾಗಿ ಶ್ರೀ ರುದ್ರಾಭಿಷೇಕವನ್ನು ಮಧ್ಯಾಹ್ನ ಗಣಾರಾಧನೆಯನ್ನೂ ಸಾಯಂಕಾಲ ಶಿವಕಥಾಪಂಡಿತರಾದ ದೊಡ್ಡಬಳ್ಳಾಪುರದ ವೇ|| ಶಿವದೇವಶಾಸ್ತ್ರಿಗಳಿಂದ ಶಿವಕಥಾಕಾಲಕ್ಷೇಪವನ್ನೂ ವಿಜೃಂಭಣೆಯಿಂದ ಜರುಗಿಸಿದರು. ಸುಧಾರಿಸಿರುವ ಶಾಸ್ತ್ರಿಗಳಿಂದ ಮಾಡಲ್ಪಟ್ಟ ಶಿವಸಂಕೀರ್ತನವು ಶ್ರೋತೃಗಳಿಗೆ ಆನಂದಕರವಾಗಿದ್ದಿತು. ಶ್ರೀರುದ್ರಾಭಿಷೇಕ ಮತ್ತು ಶಿವಕೀರ್ತನಪೂರ್ತಿಗಾಗಿ ಅಮಾವಾಸ್ಯೆದಿನ ಗಣಾರಾಧನೆ ಮಾಡಲ್ಪಟ್ಟಿತು. ಭಾದ್ರಪದ ಶುದ್ಧ 1 ಬುಧವಾರ ಭಕ್ತವರ್ಗದಿಂದ ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ತಳಿರುತೋರಣಾದಿಗಳಿಂದಲಂಕರಿಸಲ್ಪಟ್ಟು ಮಂಗಳಕರವಾಗಿ ತೋರುತಿದ್ದ ಪೇಟೆ ಮತ್ತು ಟವನಿನ ಅನೇಕಭಾಗಗಳಲ್ಲಿ ಭಜನೆ ಮತ್ತು ಮಂಗಳವಾದ್ಯಗಳೊಡನೆ ಸ್ವಾಮಿ ಉತ್ಸವವು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ವೈಭವವಾಗಿ ನಡೆದು ಶ್ರಾವಣಮಾಸಕಟ್ಟಳೆಯು ಸಂಪೂರ್ಣವಾಯಿತು.

ಪ್ರತ್ಯಕ್ಷದರ್ಶಿ.

ಶ್ರೀಮದ್ದಕ್ಷಿಣಕಾಶೀನಿಜಸಿಂಹಾಸನಾಧೀಶಜಗದಾಚಾರ್ಯ ಸ್ವಾಮಿ ವಿರುಪಾಕ್ಷ ಒಡೆಯರವರ ವ್ಯಾಖ್ಯಾನ.

ಧಾರವಾಡದಲ್ಲಿ ವೀರಶೈವ ಮತ್ತು ಬ್ರಾಹ್ಮಣ ಮೊದಲಾದ ಸಮಸ್ತ ನಾಗರೀಕರ ವಿಜ್ಞಾಪನೆಯ ಮೇರೆಗೆ ಶ್ರೀಜಗದಾಚಾರ್ಯ ಸ್ವಾಮಿ ವಿರೂಪಾಕ್ಷ ಒಡೆಯರವರು ಧಾರವಾಡಕ್ಕೆ ದಯಮಾಡಿಸಿ ಅಲ್ಲಿ ಇದೇ ತಾ|| 12 ರ ದಿವಸ "ರಾಷ್ಟ್ರ ಮತ್ತು ಧರ್ಮ" ಈ ವಿಷಯವಾಗಿ ಬಹುಸ್ವಾರಸ್ಯವಾದ ಒಂದು ವ್ಯಾಖ್ಯಾನವನ್ನು ಕೊಟ್ಟರು. ವ್ಯಾಖ್ಯಾನದಲ್ಲಿ ಶ್ರೀಜಗದಾಚಾರ್ಯ ಒಡೆಯರವರು ಅಂದಿದ್ದೇನಂದರೆ.—ರಾಷ್ಟ್ರ ಮತ್ತು ಧರ್ಮಗಳ ಉನ್ನತಿಯು ಒಂದಕ್ಕೊಂದು ಪರಸ್ಪರ ಅನ್ಯೋನ್ಯ ಸಂಬಂಧವಿದ್ದು ಪ್ರಪಂಚವೆಂಬ ರಥಕ್ಕೆ ಇವೆರಡೂ ರಥದ ಗಾಲಿಗಳಂತೆ ಅಥವಾ ರಥಕ್ಕೆ ಹೂಡಿದ ಅಶ್ವಗಳಂತೆ ಇದ್ದು ಅದರಲ್ಲಿ ಒಂದು ಗಾಲಿ ಅಥವಾ ಅಶ್ವವು ಕುಂಠಿತವಾದರೆ ಹ್ಯಾಗೆ ರಥವು ಮುಂದಕ್ಕೆ ಸಾಗಲಾರದೋ ಅದರಂತೆ ರಾಷ್ಟ್ರದ ಸ್ವಾತಂತ್ರ್ಯವು ಕೂಡ ಧರ್ಮದ ಸ್ವಾತಂತ್ರ್ಯವನ್ನು ಸಂಪಾದಿಸುವದು ಅತ್ಯಾವಶ್ಯಕವಾಗಿದೆ. ಇದುವರೆಗೂ ಇವೆರಡೂ ಗುತ್ತಿಗೆಗಳಾಗಿ ಆಗುತ್ತಿಗೆದಾರರ ಮರ್ಜಿಯಂತೆ ಅವರು ನಡಿಸಿಕೊಂಡು ಇದ್ದುದರಿಂದ ಧರ್ಮವೂ ತಂಜುಹಲಾಕಾಗಿಯೂ ರಾಷ್ಟ್ರವೂ ದಾರಿದ್ರ್ಯಮೊದಲಾದ ದುರ್ದೆಶೆಯುಳ್ಳದ್ದಾಗಿಯೂ ಪರಕೀಯರ ಗುಲಾಮಗಿರಿಗೆ ಆಸ್ಪದವಾಗಿರುವದು. ಅದ್ದರಿಂದ ಇವೆರಡೂ ಗುತ್ತಿಗೆಗಳನ್ನು ತೆಗೆಯುವದು ರಾಷ್ಟ್ರಧರ್ಮೋನ್ನತಿಯ ಮುಖ್ಯ ಕಾರಣವೆಂತಲೂ ಸ್ವಾತಂತ್ರ್ಯವೇ ಸರ್ವಸುಖಕ್ಕೂ ಕಾರಣವೆಂತಲೂ ಬಹುಮಹತ್ವದ ವ್ಯಾಖ್ಯಾನವನ್ನು 1½-2 ತಾಸುಗಳವರೆಗೆ ಎಲ್ಲ ಜನರಿಗೂ ಹೃದಯಂಗಮವಾಗುವಂತೆ ಮಾಡಿದರು. ಈ ವ್ಯಾಖ್ಯಾನಕ್ಕೆ ಶ್ರೋತೃ ಸಮುದಾಯವೂ ವಿಶೇಷವಾಗಿದ್ದಿತು.

ಓರ್ವ ಪ್ರೇಕ್ಷಕ.

ನಿಖಿಲಕರ್ಣಾಟಕಾಯುರ್ವೇದಮಂಡಲ ಮತ್ತು ವಿದ್ಯಾಪೀಠದ ಸ್ಟಾಂಡಿಂಗ್‌ಕಮಿಟಿಯ ದ್ವಿತೀಯ ಸಮಾವೇಶ.

ತಾ|| 8-9-26 ನೇ ಬುಧವಾರ ಸಾಯಂಕಾಲ ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಆಂಧ್ರ ಆಯುರ್ವೇದಫಾರ್ಮಸಿಯವರ ಮಹಡಿಯಮೇಲೆ ಡಾ|| ರಾವ್‌ಬಹದ್ದೂರ್, ಸಿ. ಬಿ. ರಾಮರಾವ್, ಎಂ. ಡಿ. ರಿಟೈರ್ಡ್ ಸರ್ಜನ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಈ ಸಭೆಯಲ್ಲಿ ಬ್ರಂ|| ಶ್ರೀ|| ವಿದ್ವಾನ್ ಕೆ. ಶೇಷಶಾಸ್ತ್ರಿಗಳು ಶೃಂಗೇರಿ, ಮ|| ಗಳಾದ ಬುರ್ಲಿಯವರು ಬಾಗಲಕೋಟೆ, ಪಂಡಿತ ಡಿ. ಎಸ್. ಮಸ್ತಾನ್‌ಸಾಹೇಬ್ ಚಿತ್ರದುರ್ಗ, ನಾರಾಯಣಾಚಾರ್ ಬೆಂಗಳೂರು, ನಾಗಶೇಷಪಂಡಿತರು ಅರಕಲುಗೂಡು, ಕೆ. ಶೇಷಯ್ಯರ್ ಬೆಂಗಳೂರು, ಕೆ. ರಾಮರಾವ್ ಬೆಂಗಳೂರು, ಹೆಚ್. ನರಸಿಂಹಶಾಸ್ತ್ರಿಗಳು ಬೆಂಗಳೂರು, ಡಾ|| ವೆಂಕೋಬರಾಯರು ಬೆಂಗಳೂರು ಮೊದಲಾದವರು ಸನ್ನಿಹಿತರಾಗಿದ್ದರು. ಪ್ರಾರಂಭದಲ್ಲಿ ಧಾರವಾಡದಲ್ಲಾದ ಕಳೆದ ಮೀಟಿಂಗಿನ ಠರಾವುಗಳನ್ನು ಅಧ್ಯಕ್ಷರು ಓದಿದರು. ಆ ಸಮಯದಲ್ಲಿ ಡಾ|| ವೆಂಕೋಬರಾಯರೂ ಹೆಚ್. ನರಸಿಂಹಶಾಸ್ತ್ರಿಗಳವರೂ ಕೆಲವು ಅಪ್ರಕೃತವಾದ ಪ್ರಶ್ನೆಗಳನ್ನು ಮಾಡಿದರು. ಅನುಚಿತವಾದ ಪ್ರಶ್ನೆಗಳನ್ನು ಮಾಡಬೇಡಿರೆಂದು ಅಧ್ಯಕ್ಷರು ಬಹುತರ ಸಮಜಾಯಿಷಿಯನ್ನು ಹೇಳಿದರೂ ಕೇಳದಿದ್ದುದರಮೇಲೆ ಓಟಿಗೆಹಾಕಲು ಸರ್ವರೂ ಅವರ ಪ್ರಶ್ನೆಗಳನ್ನು ಒಪ್ಪಲಿಲ್ಲವಾಗಿ ಸಭೆಯನ್ನು ಬಿಟ್ಟು ಹೊರಡುತ್ತಿರಲು ಚಿತ್ರದುರ್ಗದ ಪಂಡಿತರು ಹೋಗಕೂಡದೆಂದು ತಡೆದರೂ ಲಕ್ಷಿಸದೆ ಹೊರಟುಹೋದರು. ಹಿಂದೆ ಫೆಬ್ರವರಿ ತಿಂಗಳಲ್ಲಿ ನಡೆದ ಮಹಾಸಭೆಯಲ್ಲೂ ಕೂಡ ಈ ಮಹನೀಯರ ಚರ್ಚೆಗಳು ಬಹಳ ನಡೆದಿದ್ದವು. ಅವರು ಹೋದ ನಂತರ ಸಂಧಿಗ್ಧವನಸ್ಪತಿವಿಷಯ, ಜಯಪುರದ ವೈದ್ಯಸಂಘಟನೆ, ಆಲ್ ಇಂಡಿಯಾ ವೈದ್ಯಮಂಡಲಿಯವರ ಠರಾವುಗಳನ್ನು ಜಾರಿಗೆ ತರುವುದು ಸಭ್ಯದ್ರವ್ಯವನ್ನು ಸಲ್ಲಿಸದಿದ್ದ ಮೆಂಬರುಗಳ ವಿಷಯ ಮಹಾಮಂಡಲಕ್ಕೆ ಮೆಂಬರರನ್ನು ಆರಿಸುವುದೇ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಕಮಿಟಿಮೆಂಬರ್.

ಶ್ರೀ ಜಗದ್ಗುರುಮುರುಘರಾಜೇಂದ್ರಫ್ರೀಬೋರ್ಡಿಂಗ್ ಧಾರವಾಡ.

ಇದೇ ತಾ|| 19 ನೇ ಆದಿತ್ಯವಾರ ಪ್ರಾತಃಕಾಲ 8 ಘಂಟೆಯಿಂದ 9 ಘಂಟೆಯವರೆಗೆ ಸದರೀ ಬೋರ್ಡಿಂಗಿನಲ್ಲಿ ಚಿತ್ರದುರ್ಗ ಉಜ್ಜಯನೀಮಠದ ಪಟ್ಟದ್ದೇವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿ, ಶಿವಭಜನೆಯಾದನಂತರ ವೆ|| ಮಾ|| ಮಮದಾಪೂರ ಮಹಾದೇವರ ಸಂಸ್ಕೃತಭಾಷೆಯಮೇಲೆ ಉತ್ಸಾಹಪೂರ್ವಕವಾದ ಭಾಷಣವು ಜರುಗಿತು. ಅದೇ ಕಾಲಕ್ಕೆ ಬೋರ್ಡಿಂಗಿನ ವಿದ್ಯಾರ್ಥಿಗಳಿಗೆ ಸಂಸ್ಕೃತಪಾಠಕ್ರಮಗಳು ಪ್ರಾರಂಭಿಸಲ್ಪಟ್ಟವು. ತದನಂತರ ಹುಬ್ಬಳ್ಳಿ ಟೊಂಗಳೆ ಮಡಿವಾಳಪ್ಪನವರು ಯಾವತ್ತು ವಿದ್ಯಾರ್ಥಿಮಂಡಳಿಗೂ, ಸಕಲ ಭಕ್ತಮಾಹೇಶ್ವರರಿಗೂ ಮೃಷ್ಟಾನ್ನಭೋಜನದೊಂದಿಗೆ ಗಣಾರಾಧನೆಯನ್ನು ಬಹುಸಮರ್ಪಕವಾಗಿ ನೆರವೇರಿಸಿದರು. ಆಮೇಲೆ ಮಧ್ಯಾಹ್ನದ 2 ಘಂಟೆಯಿಂದ 4 ಘಂಟೆಯವರೆಗೆ ರಾ|| ಬಾ|| ಕಂಬಳೀ ಇವರ ಅಧ್ಯಕ್ಷತೆಯ ಕೆಳಗೆ ಪುನಃ ಸಭೆಗೂಡಿ, ರಾಣೆಬೆನ್ನೂರ ಹಾಗೂ ದಾವಣಗೆರೆ ಮಹಾಜನಗಳ ಶಿವಭಜನೆ ಪುರಾಣಗಳೂ, ಶಿವಕೀರ್ತನೆಯೂ ಜರುಗಿದಮೇಲೆ ರಾ|| ಬಾ|| ಬಿ. ಎಲ್. ಪಾಟೀಲ, ಇವರು ನಮ್ಮ ಗುರುಕುಲ ವಿದ್ಯಾರ್ಥಿಗಳು ಪಾಲಿಸತಕ್ಕ ಪವಿತ್ರವಾದ ಕರ್ತವ್ಯಗಳನ್ನು ಕುರಿತು ಆಂಗ್ಲಭಾಷೆಯಲ್ಲಿ ಒಳ್ಳೇ ಪರಿಣಾಮಕಾರಕವಾಗಿ ಭಾಷಣಮಾಡಿದರು. ಡಾಕ್ಟರ್ ಹಿರೇಮಠ ಇವರು "ಬ್ರಹ್ಮಚರ್ಯ" ವಿಷಯದಮೇಲೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಚೆನ್ನಾಗಿ ಪ್ರತಿಬಿಂಬಿಸುವಂತೆ ಉಪನ್ಯಾಸಮಾಡಿದರು. ತರುವಾಯ ಅಧ್ಯಕ್ಷರು ಈ ಬೋರ್ಡಿಂಗವು ಉಳಿದ ಗುರು ವಿರಕ್ತವರ್ಗದವರು ಅನುಕರಿಸಲಿಕ್ಕೆ ತಕ್ಕದ್ದಾಗಿರುತ್ತದೆಂತಲೂ, ಉಳಿದ ಸ್ವಾಮಿಗಳು ಬಹಳ ಹಣದಿಂದ ಕಟ್ಟಿಸಿದಂಥ ತಮ್ಮ ಮಠಗಳಲ್ಲಿ ಆಡಂಬರದೊಡನೆ ವೃಥಾ ಕೂಡದೆ, ಕೆಲವು ವಿದ್ಯಾರ್ಥಿಗಳನ್ನು ಪೋಷಿಸಿ ವಿದ್ಯಾಪ್ರಸಾರಮಾಡಿದರೆ ನಮ್ಮ ಸಮಾಜದ ಏಳಿಗೆಯು ಬಹುತೀವ್ರವೇ ಆಗುವದೆನ್ನಲಿಕ್ಕೆ ಅಡ್ಡೀ ಇಲ್ಲವೆಂತಲೂ ಉದ್ಗಾರಹೊರಡಿಸಿ ಸಮಾರೋಪ ಭಾಷಣಮಾಡಿದರು. ತರುವಾಯ ಶ್ರೀ|| ಸಬರದ ಮಾಸ್ತರರಿಂದ ಅವರೆಲ್ಲರ ಆಭಾರಮನ್ನಣೆಯಾಗಿ ಸರ್ವರಿಗೂ ಶ್ರೀಗಳವರ ಆಶೀರ್ವಾದವಾದಮೇಲೆ ಸಭೆಯು ವಿಸರ್ಜನೆಯಾಯಿತು.

ಗುರುಕುಲವಾಸದ ಓರ್ವ ವಿದ್ಯಾರ್ಥಿ.

ಷಷ್ಟಿಪೂರ್ತಿಶಾಂತ್ಯುತ್ಸವ.

ಕಾರ್ಕಾರ್ಹಳ್ಳಿಯ ಶ್ರೀಯುತ ಗುರುಕಾರ್ ಚನ್ನಬಸವಪ್ಪನವರಿಗೆ ಕಳೆದ ಭಾದ್ರಪದ ಶುದ್ಧ ೧೨ (19-9-26) ನೇ ಭಾನುವಾರಕ್ಕೆ 60 ವರುಷ ಪೂರ್ತಿಯಾದುದರಿಂದ ಸ್ವಗೃಹದಲ್ಲಿ ಉಗ್ರರಥಶಾಂತಿ ಕಾರ್ಯವು ವಿಶೇಷ ವೈಭವದಿಂದ ನೆರವೇರಿತು. ಈ ಕಾರ್ಯಕ್ಕೆ ಸ್ಥಳ ಪರಸ್ಥಳಗಳಿಂದ ಬಂಧುಮಿತ್ರರನೇಕರು ದಯೆಮಾಡಿದ್ದರಲ್ಲದೆ ಜಂಗಮರ ಮತ್ತು ವೈದಿಕರ ಮಂಡಲಿಯು ವಿಶೇಷವಾಗಿ ಸೇರಿದ್ದಿತು. ಇದೇ ಭಾದ್ರಪದ ಶು|| ೧೦ ಶುಕ್ರವಾರದಿಂದ ಶು|| ೧೨ ಭಾನುವಾರದವರೆಗೆ ಈ ಶುಭಕಾರ್ಯವು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಧನ, ಧಾನ್ಯ, ವಸ್ತ್ರ, ಗೋವು, ಅಶ್ವ, ಮಹಿಷಿ ಮೊದಲಾದ ದಾನಗಳನ್ನು ಪಾತ್ರವರಿತು ಮ|| ಚನ್ನಬಸವಪ್ಪನವರು ಕೊಟ್ಟರಲ್ಲದೆ ಈ ದಾನಗಳೆಲ್ಲಕ್ಕಿಂತಲೂ ವಿದ್ಯಾದಾನವು ಶ್ರೇಷ್ಠವಾದುದೆಂಬುದನ್ನರಿತು ಪರಪ್ರೇರಣೆಯಿಲ್ಲದೆ ಮೈಸೂರುವೀರಶೈವವಿದ್ಯಾಭಿವೃದ್ಧಿಫಂಡುಸಂಘಕ್ಕೆ ಭೂದಾನಮಾಡಬೇಕೆಂಬ ಸತ್ಸಂಕಲ್ಪವನ್ನು ಮಾಡಿ ಭೂಮಿಯ ಬೆಲೆಗಾಗಿ 501 ರೂ. ಗಳನ್ನು ಸಂಘದ ಸೆಕ್ರೆಟರಿ ಮ|| ಅಡ್ವೊಕೇಟ್ ಜಿ. ಪರಮಶಿವಯ್ಯನವರಿಗೆ ಸಲ್ಲಿಸಿದರು. ಮ|| ಚನ್ನಬಸವಪ್ಪನವರ ಔದಾರ್ಯವನ್ನೂ, ವಿದ್ಯಾಭಿಮಾನವನ್ನೂ, ಜಾತಿಪ್ರೇಮವನ್ನೂ, [illegible] ರಣದ ಧರ್ಮಬುದ್ಧಿಯನ್ನೂ ಸಭಿಕರೆಲ್ಲರೂ ಕೊಂಡಾಡಿ [illegible] ಅವರ ಕುಟುಂಬಕ್ಕೂ ಶ್ರೀ ಪಾರ್ವತೀಪತಿಯು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದು ಹರಸಿದರು. ನಮ್ಮ ವೀರಶೈವ ಶ್ರೀಮಂತರು ಶ್ರೀಯುತ ಚನ್ನಬಸವಪ್ಪನವರಂತೆ ಸ್ವಗೃಹದಲ್ಲಿ ನಡೆಯುವ ಶುಭಕಾರ್ಯಗಳಲ್ಲಿ ವೀರಶೈವವಿದ್ಯಾಭಿವೃದ್ಧಿಫಂಡುಸಂಘಕ್ಕೆ ಉದಾರವಾಗಿ ಸಹಾಯಮಾಡುವುದಾದರೆ ನಮ್ಮ ಸಮಾಜದಲ್ಲಿ ವಿದ್ಯಾಭಿವೃದ್ಧಿಯಾಗಿ ಹಿಂದುಳಿದ ಸಮಾಜವೆನ್ನಿಸಿಕೊಳ್ಳುವುದಕ್ಕೆ ಬದಲಾಗಿ ಶೀಘ್ರದಲ್ಲೇ ಮುಂದುವರಿದ ಸಮಾಜವೆನ್ನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಶುಭಕಾರ್ಯಕ್ಕೆ ದಯಮಾಡಿದ್ದ ಅತಿಥಿಅಭ್ಯಾಗತರನ್ನು ಮ|| ಕೆ. ಪಿ. ಪರಶಿವಯ್ಯನವರು ಆದರಾತಿಶಯದಿಂದ ಸತ್ಕರಿಸಿ ತಮ್ಮ ಕಾರ್ಯತತ್ಪರತೆಯನ್ನೂ ತಮ್ಮ ಭಾವನವರಾದ ಶ್ರೀಯುತ ಚನ್ನಬಸಪ್ಪನವರಲ್ಲಿ ತಮಗಿರುವ ಅನುರಾಗವನ್ನೂ ವ್ಯಕ್ತಗೊಳಿಸಿದರು. ಸರ್ವರಿಗೂ ಮೃಷ್ಟಾನ್ನ ಭೋಜನವಾದಮೇಲೆ ಕಾರ್ಯವು ಪರಿಸಮಾಪ್ತಿಯಾಯಿತು.

ಅತಿಥಿ.

ಪ್ರವಚನಸಮಾಪ್ತಿ.

ಈ ಶ್ರಾವಣಶುದ್ಧ ೧ ರಿಂದ ಮಾಸಾಂತದವರೆಗೂ ವಿಜಾಪುರದಲ್ಲಿರುವ ಜೋರಾಪುರಹಿರೇಮಠದ ಶ್ರೀ ಶಂಭುಲಿಂಗಸ್ವಾಮಿಗಳಿಂದ ಸ್ವಕೀಯಮಠದಲ್ಲಿ "ಶ್ರೀಮದ್ವೀರಶೈವಸಿದ್ಧಾಂತಶಿಖಾಮಣಿ" ಎಂಬ ಮಹಾಗ್ರಂಥವು ಪ್ರವಚನರೂಪವಾಗಿ ನಿರೂಪಿಸಲ್ಪಟ್ಟಿತು. ಮಹಾಸ್ವಾಮಿಗಳು ಈ ಗ್ರಂಥದ ಮಹಾರ್ಥವನ್ನು ತಮ್ಮ ಸರಳವಾದ ಶೈಲಿಯಿಂದ ಪಾಮರರಿಗೆ ಸಹ ಸ್ಪಷ್ಟವಾಗಿ ತಿಳಿಯುವಂತೆ ವಿಸ್ತರಿಸುತ್ತಿದ್ದರು, ಮತ್ತು ಸ್ವಮತ, ಪರಮತ, ಪಂಡಿತರಿಗೆ ಮಾನ್ಯವಾಗುವಂತೆ ವೇದಾಗಮೋಪನಿಷತ್ತುಗಳ ವಾಕ್ಯಗಳನ್ನು ಉದಹರಿಸುತ್ತಿದ್ದರು. ಇದಲ್ಲದೆ ಎಲ್ಲ ಜಾತಿಯವರಿಗೂ ಪರಿಚಯಸ್ಥರಾದ ಕಬೀರ, ತುಕಾರಾಮ, ಜ್ಞಾನೋಬ, ರಾಮದಾಸ, ನಿಜಗುಣ ಶಿವಯೋಗಿ ಸರ್ಪಭೂಷಣ ಮುಂತಾದ ಸಾಧುಸಂತರ ಶರಣವಾಕ್ಯಗಳನ್ನು ತಮ್ಮ ಸುಸ್ವರವಾದ ಗಾಯನದಿಂದ ಮನೋರಂಜನವಾಗುವಂತೆ ಆ ಗ್ರಂಥದ ವಾಕ್ಯಗಳನ್ನು ಪುಷ್ಟೀಕರಿಸುತ್ತಿದ್ದರು. ಸದ್ಯದಲ್ಲಿ ಎಲ್ಲಕಡೆಗೂ ರೂಢವಾಗಿ ಪರಿಣಮಿಸುವ ಚಹಾಪಾನ ತಂಬಾಕಸೇವನ ಮುಂತಾದ ಅಹಿತಕಾರಕ ವ್ಯಸನಗಳನ್ನು ಹೋಗಲಾಡಿಸುವದಕ್ಕಾಗಿ ದಿನಾಲು ಆ ಬಗ್ಗೆ ಪರಿಪರಿಯಿಂದ ವಿನೋದಗೋಷ್ಠಿಗಳ ಉದಾಹರಣ ನಿರೂಪಣದಿಂದಲೇ ಹಿತಾವಹವಾಗುವಂತೆ ಬೋಧಿಸುವ ಈ ಮಹನೀಯರ ವಾಕ್ಸರಣಿಯು ಮನನೀಯವಾಗಿರುವದು. ಹೀಗೆ ಎಲ್ಲ ರೀತಿಯಿಂದಲೂ ಪ್ರವಚನವು ಜನರ ಮನಸ್ಸನ್ನು ಸೆಳೆಯುತ್ತಿದ್ದುದರಿಂದ ಸ್ವಮತ, ಪರಮತ ಪದವೀಧರರು ಮೊದಲುಗೊಂಡು ಎಲ್ಲತರದ ಸಾವಿರಾರುಜನರಿಂದ ಮಠವು ತುಂಬಹೋಗುತ್ತಿದ್ದಿತು. ಇವರು ಪಂಡಿತರೂ ವಾಕ್ಪಟುಗಳೂ ಆಗಿರುವರಲ್ಲದೆ ಗುರುಸ್ಥಾನಕ್ಕೆ ಒಪ್ಪತಕ್ಕ ಸದಾಚಾರಸಂಪನ್ನರೂ ಆಗಿದ್ದಾರೆ. ಇವರು ಬರೆದ ಅಷ್ಟಾವರಣವಿವೇಕ, ತತ್ವಜ್ಞಾನ, ನಿಜಮುಕ್ತಿತ್ರಿಪದಿ, ಮಹಿಮ್ನಸ್ತೋತ್ರಟೀಕೆ ಮುಂತಾದ ಗ್ರಂಥಗಳಿಂದಲೂ ಬೆಂಗಳೂರು, ದಾವಣಗೇರಿ, ಅಥಣಿ, ಹಾವೇರಿ ಮುಂತಾದ ಸ್ಥಳಗಳಲ್ಲಿ ಮಾಡಿದ ಉಪನ್ಯಾಸಗಳು ವೃತ್ತಪತ್ರಿಕೆಗಳಲ್ಲಿ ಪ್ರಸಿದ್ಧವಾಗಿರುವದರಿಂದಲೂ ಇವರ ಪರಿಚಯವು ಎಲ್ಲರಿಗೂ ಇರುವದು. ಪಂಡಿತರೂ ಸದ್ಗುಣಿಗಳೂ ಆದ ಇಂಥ ಸತ್ಪುರುಷರಿಂದಲೇ ಸಮಾಜಕ್ಕೆ ಒಳ್ಳೆಹಿತವಾಗಬೇಕಾಗಿರುವುದರಿಂದ ಈ ಮಹನೀಯರಿಗೆ ನಾವು ಎಲ್ಲ ರೀತಿಯಿಂದಲೂ ಯೋಗ್ಯಪ್ರೋತ್ಸಾಹವನ್ನೀಯುವದು ಯುಕ್ತವಾಗಿರುವದು.

ಓರ್ವ ವೀರಶೈವ.

ಬಡವನ ಭಾಗ್ಯ.

(ಅರ್ಥಸಾಧಕಪತ್ರಿಕೆಯಿಂದ.)

ಬಡವನ ಭಾಗ್ಯ ಎಂಬ ಮಾತನ್ನು ಕೇಳಿದೊಡನೆ ಎಲ್ಲರಿಗೂ ಆಶ್ಚರ್ಯವಾಗಬಹುದು. ಏಕೆಂದರೆ, ಭಾಗ್ಯ ಎಂದರೆ ಐಶ್ವರ್ಯ ; ಅದಿಲ್ಲದವನನ್ನೇ ಬಡವನೆನ್ನುವರು. ಹಾಗಿರುವಲ್ಲಿ ಬಡವನ ಭಾಗ್ಯವಿನ್ನಾವುದೆಂದು ಸರ್ವರಿಗೂ ಸಂದೇಹ ಬರಬಹುದಲ್ಲವೇ ?

ಭಾಗ್ಯವೆಂದರೆ ಪುಣ್ಯವೆಂದೂ ಅರ್ಥವಾಗುವುದು. ಆದ್ದರಿಂದ ಇಲ್ಲಿ ಬಡವನ ಪುಣ್ಯವೆಂದು ಹೇಳಿದಂತಾಯಿತು. ಹಾಗೆಂದರೂ ಬಡವನನ್ನು ಪುಣ್ಯವಂತನೆನ್ನಬಹುದೇ ? ಎಂಬ ಪ್ರಶ್ನೆ ಹುಟ್ಟಬಹುದು. ನಿಜವಾಗಿಯೂ ಬಡವನನ್ನು ಪುಣ್ಯವಂತನೆನ್ನಬೇಕೇಹೊರತು ಹಣಗಾರರಲ್ಲಿ ಬಹುಮಂದಿಗೆ ಆ ಹೆಸರು ಎಂದಿಗೂ ಸಲ್ಲದು. ಏಕೆಂದರೆ, ಒಳ್ಳೆಯತನದ ಫಲವು ಪುಣ್ಯವೆನಿಸಿಕೊಳ್ಳುತ್ತದೆಯೇಹೊರತು ಹಣವಾಗಲೀ ಬಹುಮಂದಿ ಹಣಗಾರರು ತೋರಿಸುವ ಲೋಭ ಮೊದಲಾದ ಗುಣಗಳಾಗಲೀ ಎಂದಿಗೂ ಪುಣ್ಯವೆಂಬ ಹೆಸರನ್ನು ಪಡೆಯಲಾರವು.

ಎಂದರೆ, ಸಾಮಾನ್ಯವಾಗಿ ಹಣಗಾರರಲ್ಲಿ ಒಳ್ಳೆಯತನವಿರುವುದಿಲ್ಲವೆಂದು ಹೇಳುತ್ತಿರುವ ನನ್ನ ಮೇಲೆ ಧನಿಕರಿಗೆಲ್ಲ ಕೋಪಬರಬಹುದು. ದಯೆಯಿಟ್ಟು ಅಂಥವರೆಲ್ಲರೂ ಸ್ವಲ್ಪ ಸಹನೆಯನ್ನು ತಂದುಕೊಳ್ಳಿರಿ. ಯಾವ ಧನಿಕನಲ್ಲಿ ವಿವೇಕವು ಇರುತ್ತದೆಯೋ ಆತನು ನಿಜವಾಗಿಯೂ ತನ್ನ ಸ್ಥಿತಿಗೆ ತಕ್ಕಂತೆ ಒಳ್ಳೆಯ ನಡೆಯುಳ್ಳವನಾಗಿ ಪುಣ್ಯವಂತನೆಂದೆನಿಸಿಕೊಳ್ಳುತ್ತಾನೆ. ಆದರೆ, ನಿಜವಾಗಿಯೂ ಧನಿಕರಲ್ಲಿ ಹೀಗೆನ್ನಿಸಿಕೊಳ್ಳುವವರು ಬಹಳ ವಿರಳ. ಹೀಗಾಗಲು ಲೋಭವೇ ಮೂಲ. ಈ ಲೋಭಕ್ಕೆ ಧನವೂ ವಿವೇಕರಾಹಿತ್ಯವೂ ಕಾರಣಗಳು. ಸಾಮಾನ್ಯವಾಗಿ ತೊಂಬತ್ತುರೂಪಾಯಿಗಳನ್ನು ಶೇಖರಿಸಿಟ್ಟವನಿಗೆ ಇನ್ನು ಹತ್ತುರೂಪಾಯಿಗಳನ್ನು ಅದಕ್ಕೆ ಸೇರಿಸಿ ಯಾರಿಗಾದರೂ ಸಾಲಕೊಟ್ಟು ಒಂದು ಪತ್ರವನ್ನು ಬರೆಸಿಕೊಳ್ಳುವ ಯೋಚನೆ ಇರುತ್ತದೆಯೇಹೊರತು ಆಗ ತಾನು ಮಾಡಲೇಬೇಕಾದ ತನ್ನ ಯೋಗ್ಯತೆಗೆ ತಕ್ಕ ನ್ಯಾಯವಾದ ವೆಚ್ಚದ ಕಡೆಗೆ ಯೋಚನೆಯೇ ಹೋಗಲಾರದು. ಬಡವನಿಗಾದರೋ ತೊಂಭತ್ತುರೂಪಾಯಿಗಳು ಶೇಖರವಾಗತಕ್ಕ ಸಂಭವವೇ ಬರುವುದು ಅಪೂರ್ವವಾದ್ದರಿಂದ ತಾನು ತನ್ನ ಯೋಗ್ಯತೆಗೆ ತಕ್ಕಂತೆ ಮಾಡಬೇಕಾದ ಸತ್ಕ್ರಿಯೆಗಳಿಗೆ ತನ್ನ ಸ್ವಲ್ಪವಾದ ಸಂಪಾದನೆಯನ್ನೇ ಆದರೂ ಉಪಯೋಗಿಸುವ ವಿಷಯದಲ್ಲಿ ಆತನಿಗೆ ಜಿಪುಣತನ ಹುಟ್ಟಲಾರದು. ಬಡವನು ಚೆನ್ನಾಗಿ ಕಷ್ಟವನ್ನು ಅನುಭವಿಸುತ್ತಿರುವುದರಿಂದ ಆತನಿಗೆ ಇತರರ ಕಷ್ಟವೂ ತಿಳಿದು ನ್ಯಾಯ, ಸತ್ಯ, ಧರ್ಮ, ದಯೆ ಮೊದಲಾದ ಒಳ್ಳೆಯತನಗಳು ಆತನಲ್ಲಿ ಹುಟ್ಟಲು ಅವಕಾಶವಾಗುವುದು. ಧನಿಕನಲ್ಲಾದರೋ ಈ ಗುಣಗಳು ಹುಟ್ಟಲು ಅವಕಾಶ ಕಡಿಮೆ. ಈ ಅಂಶಗಳು ಸ್ಪಷ್ಟಪಡಲು ಒಂದು ಕಥೆಯುಂಟು :—

ಕೈಲಾಸದಲ್ಲೊಂದುದಿನ ಪಾರ್ವತಿಗೆ ಭೂಲೋಕವನ್ನು ನೋಡಬೇಕೆಂದು ಆಸೆಹುಟ್ಟಿ ಪರಮೇಶ್ವರನನ್ನು ಪ್ರಾರ್ಥಿಸಿದಳಂತೆ. ಅದಕ್ಕಾತನು ವೃದ್ಧಬ್ರಾಹ್ಮಣವೇಷವನ್ನು ಧರಿಸಿ ಪಾರ್ವತಿಗೆ ವೃದ್ಧಬ್ರಾಹ್ಮಣಿಯ ವೇಷವನ್ನು ಕೊಟ್ಟು ಆಕೆಯನ್ನು ಕರೆದುಕೊಂಡು ಭೂಲೋಕಕ್ಕೆ ಬಂದು ಒಬ್ಬ ಧನಿಕನ ಮನೆಯಬಾಗಿಲಿಗೆ ಹೋಗಿ ಅಲ್ಲಿದ್ದ ಆಳುಸಂಗಡ ತಮ್ಮಿಬ್ಬರಿಗೂ ಮೂರುದಿನಗಳಿಂದಲೂ ಅನ್ನವಿಲ್ಲವೆಂದೂ ಈ ದಿನ ಈ ಮನೆಯಲ್ಲಿ ಭೋಜನಮಾಡಿಕೊಂಡು ಹೋಗಲು ಬಂದಿದ್ದೇವೆಂದೂ ಈ ಸಂಗತಿಯನ್ನು ಯಜಮಾನನಿಗೆ ತಿಳಿಸಬೇಕೆಂದೂ ಹೇಳಿದನಂತೆ. ಆಳಿಂದ ಈ ವಿಚಾರವನ್ನು ತಿಳಿದ ಯಜಮಾನನು ಅಡುಗೆಯಿಲ್ಲವೆಂದು ಹೇಳಿ ಕಳುಹಿಸಿದನಂತೆ. ಆಗ ಪರಮೇಶ್ವರನು "ಈ ಮನೆಯ ಯಜಮಾನನಿಗೆ ಇನ್ನೂ ಐಶ್ವರ್ಯ ಹೆಚ್ಚಲಿ" ಎಂದು [illegible]

ತಿಯು ಆಶ್ಚರ್ಯಪಟ್ಟು ಈ ದಯಾರಹಿತನಿಗೆ ಹೀಗೆ ಆಶೀರ್ವದಿಸಲು ಕಾರಣವೇನೆಂದು ಪತಿಯನ್ನು ಕೇಳಲು ಆತನು ನಂತರ ತಿಳಿಸುವುದಾಗಿ ಹೇಳಿ ಸ್ವಲ್ಪ ದೂರ ಮುಂದೆ ಹೋಗಲಾಗಿ ಒಬ್ಬ ಬಡಬ್ರಾಹ್ಮಣನ ಮನೆ ಸಿಕ್ಕಿತಂತೆ. ಆ ಮನೆಯೊಳಕ್ಕೆ ಅವರು ಹೋಗಲಾಗಿ ಆ ಮನೆಯ ಯಜಮಾನನೂ ಯಜಮಾನಿಯೂ ಸ್ವಾಮಿಯು ತಮಗೆ ದಯಪಾಲಿಸಿರುವ ಅನುಕೂಲಕ್ಕೆ ತಕ್ಕಂತೆ ಅತಿಥಿಗಳನ್ನು ಆದರಾತಿಶಯದಿಂದ ಸತ್ಕರಿಸಲಾಗಿ ಪರಮೇಶ್ವರನು ಆ ಮನೆಯ ಯಜಮಾನನನ್ನು ಕುರಿತು "ನಿನಗೆ ಇನ್ನೂ ಬಡತನ ಹೆಚ್ಚಲಿ" ಎಂದು ಹರಸಿ ಮುಂದೆ ಹೊರಟನಂತೆ. ಪಾರ್ವತಿಗೆ ಮೊದಲಿಗಿಂತಲೂ ಹೆಚ್ಚು ಆಶ್ಚರ್ಯವಾಗಿ ಇದರ ಮರ್ಮವೇನೆಂದು ಪತಿಯನ್ನು ಕುರಿತು ಕೇಳಲಾಗಿ ಆತನು—ಧನಿಕನು ಧನದ ಗರ್ವದಿಂದ ಕರ್ತವ್ಯಪರಾಙ್ಮುಖನಾದನೆಂದೂ ಅವನಿಗೆ ಇನ್ನೂ ಧನವು ಹೆಚ್ಚಿದರೆ ಅವಿವೇಕವೇ ಮತ್ತಷ್ಟು ಹೆಚ್ಚಿ ತಕ್ಕ ಶಿಕ್ಷೆಯನ್ನು ಹೊಂದಲವಕಾಶವಾಗುತ್ತದೆಂದೂ, ಬಡವನು ತನ್ನ ಬಡತನದಿಂದ ಕರ್ತವ್ಯನಿರತನಾಗಿ ಪುಣ್ಯಸಂಪಾದಿಸಿಕೊಳ್ಳುತ್ತಿರುವುದರಿಂದ ಆತನಿಗೆ ಇನ್ನೂ ಬಡತನ ಹೆಚ್ಚಿದರೆ ಮತ್ತಷ್ಟು ವಿವೇಕಿಯಾಗಿ ಇನ್ನೂ ಸತ್ಕಾರ್ಯನಿರತನಾಗುವುದರಿಂದ, ಸದ್ಗತಿಯನ್ನು ಹೊಂದಲು ಅನುಕೂಲಿಸುತ್ತದೆಂದೂ, ಹೇಳಲಾಗಿ ಪಾರ್ವತಿಯು ಭೂಲೋಕದ ಸ್ವಭಾವವನ್ನು ತಿಳಿದುಕೊಂಡಳಂತೆ.

ವಾಚಕರೇ, ಈ ಲೇಖನದ ನನ್ನ ಉದ್ದೇಶವೇನೆಂದು ತಿಳಿದಿರಾ? ಬಡವರನ್ನು ಭೂಷಿಸಬೇಕೆಂದಾಗಲಿ ಧನಿಕರನ್ನು ದೂಷಿಸಬೇಕೆಂದಾಗಲಿ ನನ್ನ ಅಭಿಪ್ರಾಯವಲ್ಲ. ಧನಿಕರೆಲ್ಲರೂ ಬಡವರಲ್ಲಿ ಸಾಮಾನ್ಯವಾಗಿರುವ ವಿವೇಕಭಾಗ್ಯವನ್ನು ಹೊಂದುವುದಕ್ಕೂ ಬಡವರೆಲ್ಲರೂ ಧನಿಕರಲ್ಲಿರುವ ಧನಭಾಗ್ಯವನ್ನು ಹೊಂದುವುದಕ್ಕೂ ಯತ್ನಿಸಿ ಉಭಯರೂ ಉಭಯ ಭಾಗ್ಯಗಳನ್ನೂ ಅನುಭವಿಸುವವರಾಗಲಿ. ಹಾಗಾದರೆ, ಈ ಪ್ರಪಂಚವೆಲ್ಲವೂ ಭಾಗ್ಯಮಯವೇ ಆಗಿ ಎಲ್ಲರೂ ಇಹಪರಂಗಳೆರಡರಲ್ಲೂ ಸುಖಕ್ಕೆ ಭಾಗಿಗಳಾಗುವುದರಲ್ಲಿ ಅಡ್ಡಿಯಿಲ್ಲ. ಆದರೆ ಅಷ್ಟಾಗಲು ದೈವಾನುಗ್ರಹವೂ ಬೇಕು. ಮೊದಲು ಅದನ್ನು ಹೊಂದಲು ಆತನಾಜ್ಞೆಗೆ ವಿರೋಧವಾಗಿ ಎಂದರೆ ಮನಸ್ಸಾಕ್ಷಿಗೆ ವಿರೋಧವಾಗಿ ಯಾರೂ ನಡೆಯದವರಾಗಲೆಂದು ಹಾರೈಸಿ ಧನಿಕರ ಕ್ಷಮೆಯನ್ನು ಬೇಡಿ ಇಲ್ಲಿ ವಿರಮಿಸುವೆನು.

ಎ. ಸೀತಾರಾಮಯ್ಯ,
ಟೀಚರ್.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 10 ನೆಯ ಪ್ರಕರಣ.

ಪ್ರಿಟೋರಿಯಾದಲ್ಲಿ ಮೊದಲನೆಯದಿನವು.

ದಾದಾ ಅಬ್ದುಲ್ಲಾರವರ ಸ್ನೇಹಿತರು ಯಾರನ್ನಾದರೂ ಸ್ಟೇಷನ್ನಿಗೆ ಕಳುಹಿಸುತ್ತಾರೆಂದು ನಾನು ತಿಳಿದಿದ್ದೆನು. ಪ್ರಿಟೋರಿಯಾದಲ್ಲಿರುವ ಭಾರತೀಯರಾರಿಗಾದರೂ ತಿಳಿಸಿದ್ದಲ್ಲಿ ಅವರೂ ಬರಬಹುದೆಂದು ನಾನು ಭಾವಿಸಿದ್ದೆನು. ಆ ಸ್ನೇಹಿತರು ಯಾರನ್ನೂ ಕಳುಹಿಸಿರಲಿಲ್ಲ. ಆ ದಿವಸ ಭಾನುವಾರವಾಗಿದ್ದುದರಿಂದ ಕಳುಹಿಸಲು ಅವಕಾಶವಾಗಲಿಲ್ಲವೆಂದು ನನಗೆ ತರುವಾಯ ತಿಳಿಯಿತು. ಎಲ್ಲಿಗೆ ಹೋಗಬೇಕೋ ಏನುಮಾಡಬೇಕೋ ಎಂಬುದಾವುದೂ ನನಗೆ ತಿಳಿಯಲಿಲ್ಲವು. ಹೋಟೆಲಿನವರಾರಾದರೂ ಭಾರತೀಯರಾಗಿದ್ದಲ್ಲಿ ನನಗೆ ಇಳಿದುಕೊಳ್ಳಲು ಸ್ಥಳಕೊಡುವರೆಂಬ ಸಂಶಯವು ನನ್ನನ್ನು ಬಾಧಿಸುತ್ತಿತ್ತು. 1913 ರಲ್ಲಿ ಪ್ರಿಟೋರಿಯಾ ಸ್ಟೇಷನ್ನಿನಲ್ಲಿ ಏರ್ಪಾಟು ಸರಿಯಾಗಿರಲಿಲ್ಲವು. ಪ್ರಯಾಣಿಕರ ಸಂಖ್ಯೆಯುಕೂಡ ಕೊಂಚವಾಗಿಯೇ ಇದ್ದಿತು. ಅವರೆಲ್ಲರೂ ಹೊರಟು ಹೋಗುವವರೆಗೂ ನಾನು ಅಲ್ಲೇ ನಿಂತಿದ್ದೆನು. ಅನಂತರ ಟಿಕೆಟ್ಟುಕಲೆಕ್ಟರಿಗೆ ಟಿಕೆಟ್ಟನ್ನು ಕೊಟ್ಟು ಯಾವುದಾದರೂ ಹೋಟೆಲಿನಲ್ಲಾಗಲಿ ಮನೆಯಲ್ಲಾಗಲಿ ಇಳಿಯಲು ಸ್ಥಳವನ್ನು ತೋರಿಸಿಕೊಡುವಿರಾ ಎಂದು ಆತನಿಗೆ ವಿರಾಮವಾದಾಗ ಕೇಳಬೇಕೆಂದೂ, ಸ್ಥಳವು ದೊರಕದಿದ್ದಲ್ಲಿ ಸ್ಟೇಷನ್ನಿನಲ್ಲೇ ಮಲಗಿರಬೇಕೆಂದೂ ಯೋಚಿಸಿದೆನು. ಒಂದುವೇಳೆ ಟಿಕೆಟ್ಟುಕಲೆಕ್ಟರನ್ನು ಕೇಳಿದಲ್ಲಿ ಆತನು ಅನುಮಾನಿಸಬಹುದೆಂಬ ಸಂಶಯವು ಬಾಧಿಸುತ್ತಿದ್ದಿತು. ಎಲ್ಲರೂ ಹೊರಟುಹೋದಮೇಲೆ ನಾನು ಟಿಕೆಟ್ಟುಕಲೆಕ್ಟರಿಗೆ ಟಿಕೆಟ್ಟನ್ನು ಕೊಟ್ಟು ಸ್ಥಳದ ವಿಷಯವನ್ನು ಕುರಿತು ಕೇಳಿದೆನು. ಆತನು ಮರ್ಯಾದೆಯಿಂದಲೇ ಮಾತನಾಡಿದನಲ್ಲದೆ ಸ್ಥಳ ವಿಚಾರದಲ್ಲಿ ಏನು ಸದುಪಾಯವನ್ನು ಮಾಡಲಾರೆನೆಂದನು. ಆಗ ಅಲ್ಲಿ ಅಮೇರಿಕಾ ದೇಶಸ್ಥನಾದ ನೀಗ್ರೋ ನಿಂತಿದ್ದನು. "ನೀವು ಹೊಸದಾಗಿ ಬಂದಂತಿದೆ. ನನ್ನಕೂಡ ಬಂದಲ್ಲಿ ಒಂದು ಚಿಕ್ಕಹೋಟೆಲನ್ನು ತೋರಿಸುವೆನು. ಅದನ್ನು ಒಬ್ಬ ಅಮೇರಿಕಾದೇಶಸ್ಥನಿಟ್ಟಿರುವನು. ಆತನನ್ನು ನಾನು ಚೆನ್ನಾಗಿ ಬಲ್ಲೆನು. ಆತನು ನಿಮಗೆ ಸ್ಥಳಕೊಡುವನು." ಎಂದು ಆ ನೀಗ್ರೋ ಹೇಳಿದನು. ನನಗೆ ನಂಬುಗೆಯು ಹುಟ್ಟಲಿಲ್ಲವಾದರೂ ಆತನ ಅಪ್ರಾರ್ಥಿತಸಹಾಯಕ್ಕಾಗಿ ಕೃತಜ್ಞತೆಯನ್ನು ತಿಳಿಸಿ ಆತನ ಕೂಡ ಹೊರಟೆನು. ಜಾನ್ಸನ್‌ಫ್ಯಾಮಲಿ ಹೋಟೆಲು ಎಂಬ ಸ್ಥಳಕ್ಕೆ ಆತನು ನನ್ನನ್ನು ಕರೆದುಕೊಂಡುಹೋದನು. ಜಾನ್ಸನ್ ಎಂಬಾತನು ಸ್ಥಳಕೊಡಲೊಪ್ಪಿದನಾದರೂ ಆ ರಾತ್ರಿಮಟ್ಟಿಗೆ ಕೊಡುತ್ತೇನೆಂದು ಹೇಳಿದನು. "ಊಟವು ನೀವಿದ್ದೆಡೆಗೆ ಕಳುಹಲ್ಪಡುವುದು. ಅಲ್ಲೇ ನೀವು ಊಟಮಾಡಬೇಕು. ಕಪ್ಪು ಬಿಳುಪು ಜಾತಿಭೇದವು ನನಗಿಲ್ಲವಾದರೂ ಈ ಹೋಟೆಲಿಗೆ ಬರುವವರೆಲ್ಲರೂ ಬಿಳಿಯ ಜನರೇ ಆದುದರಿಂದ ಅವರ ಕೂಡ ಸೇರಿ ನೀವು ಊಟಮಾಡಲು ಅವರು ಅಂಗೀಕರಿಸುವುದಿಲ್ಲ." ಎಂದು ಜಾನ್ಸನು ತಿಳಿಸಿದನು. "ಅದೇ ನನಗೆ ಹತ್ತುಸಾವಿರ" ಒಂದು ರಾತ್ರಿ ನೀವು ನನಗಿಲ್ಲಿರಗೊಟ್ಟುದಕ್ಕಾಗಿ ನಾನು ಕೃತಜ್ಞನಾಗಿರುವೆನು. ಈ ದೇಶಸ್ಥಿತಿಯು ನನಗೆ ಕೊಂಚಮಟ್ಟಿಗೆ ತಿಳಿದಿದೆ. ನಿಮಗೆ ತೊಂದರೆಯಾಗುವಂತೆ ನಾನು ಮಾಡುವುದಿಲ್ಲ. ನೀವು ಅನ್ನವನ್ನು ನಾನಿದ್ದೆಡೆಗೆ ಕಳುಹಿಸಿ, ನಾಳೆಯದಿನ ನಾನು ಬೇರೆ ಏರ್ಪಾಟನ್ನು ಮಾಡಿಕೊಳ್ಳುತ್ತೇನೆ. ಎಂದು ನಾನು ಹೇಳಿದೆನು. ಆತನು ನನಗೊಂದು ಕೊಠಡಿಯನ್ನು ಕೊಟ್ಟನು. ನಾನು ಅದರೊಳಗೆ ಹೋದೆನು. ಒಬ್ಬನೇ ಇದ್ದೆನಾದುದರಿಂದ ಏನೂ ತೋರಲಿಲ್ಲವು. ಹಸಿವಾಗುತ್ತಿದ್ದಿತು. ಸ್ವಲ್ಪ ಹೊತ್ತಿಗೆ ಜಾನ್ಸನು ಸೇವಕನೊಡನೆ ಅನ್ನವನ್ನು ಕಳುಹಿಸದೆ ತಾನೇ ನನ್ನ ಕೊಠಡಿಗೆ ಬಂದು "ಆ ರಾತ್ರಿ ಹೋಟೆಲಿಗೆ ಸ್ವಲ್ಪಜನವೇ ಬಂದಿರುವರು. ನಾನು ನಿಮಗೆ ಊಟಕ್ಕೆ ಇಲ್ಲಿಗೇ ಕಳುಹಿಸುತ್ತೇನೆಂದು ಹೇಳಿದ್ದೆನು. ಆದರೆ ಅದು ನನಗಿಷ್ಟವಿಲ್ಲದೆ ಹೋಟೆಲಿಗೆ ಬಂದವರೊಡನೆ ಹೇಳಲು ನೀವು ಅಲ್ಲಿಗೇ ಬಂದು ಊಟಮಾಡಲು ಅವರು ಸಮ್ಮತಿಸಿದರು. ನೀವು ಇಲ್ಲಿ ಎಷ್ಟು ದಿವಸಗಳು ಬೇಕಾದರೂ ಇರಬಹುದು" ಎಂದು ಜಾನ್ಸನು ಹೇಳಿದನು. ನಾನು ಪುನಃ ವಂದಿಸಿ ಹೋಟೆಲಿನೊಳಕ್ಕೆ ಹೋಗಿ ಆ ರಾತ್ರಿ ಅಲ್ಲೇ ಸರಾಗವಾಗಿ ಊಟಮಾಡಿದೆನು.

ಅಪರಿಮಿತವಾದ ವರ್ಣಭೇದವು.

ಮಾರನೆಯದಿನ ಪ್ಲೀಡರ ಮನೆಗೆ ಹೋದೆನು. ಎ. ಡಬ್ಲ್ಯು. ಬೇಕರ್ ಎಂದು ಆತನ ಹೆಸರು. ಆತನ ಆಕೃತಿಯನ್ನು ಅಬ್ದುಲ್ಲಾಸೇಟರು ನನಗೆ ಮೊದಲೇ ವಿವರಿಸಿ ಹೇಳಿದ್ದರು. ಆತನು ನನ್ನನ್ನು ಮರ್ಯಾದೆಯಿಂದ ಗೌರವಿಸಿದನು. "ಈ ವಿವಾದವು ಬಹಳ ತೊಡಕಾಗಿರುವುದರಿಂದ ದೊಡ್ಡದಾಗಿದೆ. ಅವರಿಗೇ ಬಹಳಜನ ಬ್ಯಾರಿಸ್ಟರುಗಳನ್ನು ನಿಯಮಿಸಿದ್ದಾಗಿದೆ. ನನಗೆ ಬೇಕಾದ ಸಮಾಧಾನವನ್ನು ಮಾತ್ರ ನೀವು ಕೊಟ್ಟರೆ ಸಾಕು. ನೀವು ಇಲ್ಲಿಗೆ ಬಂದುದರಿಂದ ನನಗೆ ಸದುಪಾಯವುಂಟಾಗುವುದು. ನೀವು ಇಳಿದುಕೊಳ್ಳಲು ಇನ್ನೂ ಸ್ಥಳವನ್ನೇರ್ಪಡಿಸಿಲ್ಲ. ನಿಮ್ಮನ್ನು ನೋಡಿದನಂತರ ಮಾಡಬೇಕೆಂದು ಸುಮ್ಮನಿದ್ದೆನು. ಇಲ್ಲಿ ವರ್ಣಭೇದವು ಅಪರಿಮಿತವಾಗಿದೆ. ಆದುದರಿಂದ ವಾಸಸ್ಥಳ ದೊರಕುವುದು ಕಷ್ಟ. ಒಬ್ಬ ಮನುಷ್ಯನ ಹೆಂಡತಿಯು ಬಹಳ ಗರೀಬಳು. ಆಕೆ ನಿಮಗೆ ವಸತಿಸ್ಥಳವನ್ನು ಕೊಡುವಳು. ಆಕೆಗೆ ಕೊಂಚ ಧನದಾಸೆಯನ್ನು ತೋರಿಸಬೇಕು" ಎಂದು ಹೇಳಿ ಪ್ಲೀಡರು ನನ್ನನ್ನು ಆ ಸ್ತ್ರೀಯಳ ಮನೆಗೆ ಕರೆದುಕೊಂಡು ಹೋದನು. ಮೊದಲು ಆತನೊಬ್ಬನೇ ಒಳಕ್ಕೆಹೋಗಿ ಆಕೆಯೊಡನೆ ರಹಸ್ಯವಾಗಿ ಮಾತನಾಡಿದನು. ಆಕೆಯೊಪ್ಪಿಕೊಂಡಳು. ಒಂದು ವಾರಕ್ಕೆ 28 ರೂಪಾಯಿ ಕೊಡಬೇಕೆಂದು ಕೇಳಿದಳು. ಬೇಕರವರು ನ್ಯಾಯವಾದಿ ಆದಾಗ್ಯೂ ಧರ್ಮಪ್ರಚಾರಪರಾಯಣನಾಗಿದ್ದನಲ್ಲದೆ ಮತಗುರುವಾ (ಪ್ರೀಸ್ಟ್) ಗಿ ಕೂಡ ಇದ್ದನು. ಈಗ ಆತನು ಪ್ಲೀಡರುದ್ಯೋಗವನ್ನು ಬಿಟ್ಟಿರುತ್ತಾನೆ. ಆತನು ಈಗಲೂ ಜೀವಿಸಿದ್ದು ಮತಗುರುವಾಗಿ ಮಾತ್ರ ಇರುವನು. ಆತನು ಕೊಂಚ ಧನವನ್ನು ಕಳೆದುಕೊಂಡನಾದರೂ ಅದರಿಂದ ಆತನಿಗೆ ಯಾವ ತೊಂದರೆಯೂ ಇಲ್ಲವು. ಈಗಲೂ ಆತನಿಂದ ನನಗೆ ಕಾಗದವು ಬರುತ್ತಲೇ ಇವೆ. "ಕ್ರೈಸ್ತಮತವೇ ದೊಡ್ಡಮತವು. ಕ್ರೈಸ್ತನೊಬ್ಬನೇ ದೇವರಮಗ. ಜೀವನ್ಮುಕ್ತಿಯು ಆತನ ಮೂಲಕವೇ ದೊರಕಬೇಕು. ಬೇರೆ ಯಾವರೀತಿಯಿಂದಲೂ ದೊರಕುವುದಿಲ್ಲ" ಎಂಬ ವಿಷಯವನ್ನೇ ಕುರಿತು ಯಾವಾಗಲೂ ನನಗೆ ಆತನು ಬರೆಯುತ್ತಿದ್ದಾನೆ.

ಮತಚರ್ಚೆ.

ಮೊದಲನೇಸಾರಿ ನಾನು ಬೇಕರ ಹತ್ತಿರಕ್ಕೆ ಹೋದಾಗಲೇ ಮತವಿಷಯವಾಗಿ ಸಂಭಾಷಣೆಯು ಜರುಗಿತು. "ನಾನು ಹಿಂದು ಜಾತಿಯಲ್ಲಿ ಹುಟ್ಟಿದವನಾದರೂ ನನಗೆ ಮತವಿಷಯವು ಸರಿಯಾಗಿ ತಿಳಿದಿರಲಿಲ್ಲ. ಇನ್ನು ಇತರ ಮತಗಳ ವಿಷಯವಾಗಿ ತಿಳಿದಿದ್ದುದು ಅತ್ಯಲ್ಪವೇ. ನನ್ನ ಸಂಗತಿಯೇ ನನಗೆ ತಿಳಿಯದು. ಎಲ್ಲಿದ್ದೇನೆ? ಯಾರನ್ನು ಪೂಜಿಸುತ್ತೇನೆ? ಯಾರನ್ನು ನಂಬಿರುತ್ತೇನೆ? ಎಂಬ ವಿಷಯವು ಕೂಡ ನನಗೆ ತಿಳಿದಿರಲಿಲ್ಲ. ನನ್ನ ಮತವನ್ನು ಸಾಕಲ್ಯವಾಗಿ ಮತ್ತು ಇತರ ಮತಗಳನ್ನು ಕೂಡ ತಿಳಿದುಕೊಳ್ಳಬೇಕೆಂದಿರುತ್ತೇನೆಂದು ನಾನು ಹೇಳಿದೆನು." "ನಾನೂ ದಕ್ಷಿಣಾಫ್ರಿಕೆಯ ಜನರಲ್ ಮಿಷನ್ ಡೈರೆಕ್ಟರುಗಳಲ್ಲೊಬ್ಬನೂ ಸ್ವಂತ ಧನದಿಂದ ಒಂದು ಚರ್ಚನ್ನು ಕಟ್ಟಿಸಿದೆವು. ಅಲ್ಲಿ ನಾನು ಆಗಾಗ್ಗೆ ಮತಬೋಧೆಯನ್ನು ಮಾಡುತ್ತಿದ್ದೇನೆ. ನಾನು ವರ್ಣಭೇದವನ್ನು ಮಾಡುವುದಿಲ್ಲ. ನನಗೆ ಬೇರೆ ಕೆಲಮಿತ್ರರು ಕೂಡ ಇರುವರು. ನಾವೆಲ್ಲರೂ ಒಂದುಗಂಟೆಗೆ ಸೇರಿ ಜೀವನ್ಮುಕ್ತಿ ಜ್ಞಾನಶಕ್ತಿ ಮೊದಲಾದುವನ್ನು ಪ್ರಸ್ತಾಪಿಸುತ್ತ ದೇವದೇವನನ್ನು ಕೊಂಚಕಾಲ ಪ್ರಾರ್ಥಿಸುವೆವು. ನೀವು ಬರಬೇಕು. ನನ್ನ ಸ್ನೇಹಿತರಿಗೂ ನಿಮಗೂ ಪರಿಚಯಮಾಡಿಸುತ್ತೇನೆ. ಅವರೂ ಸಂತೋಷಪಡುವರು. ನಿಮಗೆ ಕೆಲಮತಗ್ರಂಥಗಳನ್ನು ಕೊಡುತ್ತೇನೆ. ಅವುಗಳಲ್ಲಿ ಮುಖ್ಯವಾಗಿ ಬೈಬಲನ್ನು ನೀವು ಓದಬೇಕೆಂದು ನಾನು ಮುಖ್ಯವಾಗಿ ಕೋರುತ್ತೇನೆ" ಎಂದು ಬೇಕರು ಹೇಳಿದರು. "ನಾನು ಕೃತಜ್ಞನು ಒಂದು ಗಂಟೆಗೆ ತಪ್ಪದೆ ಪ್ರಾರ್ಥನೆಗಾಗಿ ಅಲ್ಲಿಗೆ ಬರಲು ಪ್ರಯತ್ನಿಸುತ್ತೇನೆ" ಎಂದು ನಾನು ತಿಳಿಸಿದೆನು. "ನೀವು ಒಂದು ಗಂಟೆಗೆ ಇಲ್ಲಿಗೆ ಬನ್ನಿ. ನಾವೆಲ್ಲರೂ ಕೂಡಿ ಚರ್ಚಿಗೆ ಹೋಗುವ" ಎಂದು ಆತನು ಹೇಳಿದರೂ ನಾನು ಪುನಃ ಜಾನ್ಸನ್ ಹೋಟೆಲಿಗೆ ಹೋಗಿ ಆತನಿಗೆ ಕೊಡಬೇಕಾದ ಹಣವನ್ನು ಕೊಟ್ಟು ಹೊಸಮನೆಯ ವಾಸಕ್ಕೆ ಹೋದೆನು. ಅಲ್ಲಿ ಸುಖಭೋಜನ ಮಾಡಿದೆನು. ಅಲ್ಲಿ ಯಜಮಾನಿಯು ಬಹಳ ಮರ್ಯಾದೆಯಿಂದ ಆದರಿಸುತ್ತಿದ್ದಳು. ಆಕೆಯ ಅಡಿಗೆಯು ಕೂಡ ಬಹಳ ಶುಚಿಯಾಗಿಯೂ ರುಚಿಯಾಗಿಯೂ ಇದ್ದಿತು. ತ್ವರ್ಯದಲ್ಲೇ ಮನೆಯವರ ಕೂಡ ಪರಿಚಯವು ಚೆನ್ನಾಗಾಯಿತು. ಊಟವಾದನಂತರ ದಾದಾ ಅಬ್ದುಲ್ಲಾಸೇಟರು ಬರೆದುಕೊಟ್ಟಿದ್ದ ಕಾಗದವನ್ನು ತೆಗೆದುಕೊಂಡು ಅವರ ಸ್ನೇಹಿತನ ಮನೆಗೆ ಹೋದೆನು. ಆತನಿಗೂ ನನಗೂ ಕೂಡಲೆ ಸ್ನೇಹವಾಯಿತು. ಭಾರತೀಯರಿಗೆ ಅಲ್ಲಿ ಉಂಟಾಗಿರುವ ತೊಂದರೆಯೆಲ್ಲವನ್ನೂ ಆತನು ವಿವರಿಸಿ ಹೇಳಿದನು. ತನ್ನ ಮನೆಯಲ್ಲೇ ನಾನು ಇರಬೇಕೆಂದು ಆತನು ನನ್ನನ್ನು ಮನಃಪೂರ್ವಕವಾಗಿ ಕೋರಿದನು. ಆದರೆ ನಾನು ಸವಿನಯದಿಂದ ನಿರಾಕರಿಸಿದೆನು. ಆಗಲೇ ವಾಸಸ್ಥಳಕ್ಕೇರ್ಪಾಟಾಗಿದೆ ಎಂದು ಹೇಳಿದೆನು. ನಿಮಗೇನುಬೇಕಾದರೂ ಸಂಶಯವಿಲ್ಲದೆ ನನ್ನನ್ನು ಕೇಳಬಹುದು ಎಂದು ಆತನು ತಿಳಿಸಿದನು. ಸಾಯಂಕಾಲವಾಯಿತು. ನಾನು ಊಟಮಾಡಿಕೊಂಡು ಕೊಠಡಿಗೆ ಹೊರಟೆನು. ಆಗ ನನಗೆ ಮಾಡಲು ಯಾವ ಕೆಲಸವೂ ಇರಲಿಲ್ಲ. ಬೇಕರವರು ಹೇಳಿದ ವಿಷಯದ ಅರ್ಥವು ಹಿಂದುಮತಗ್ರಂಥದಲ್ಲಿಲ್ಲ ದೊರಕುವುದು. ಹಿಂದು ಮತವನ್ನು ಸರಿಯಾಗಿ ತಿಳಿದುಕೊಳ್ಳದೆ ಕ್ರೈಸ್ತ ಮತತತ್ವವನ್ನು ಗ್ರಹಿಸುವುದು ಹೇಗೆ? ಎಂಬ ಆಲೋಚನೆಯು ಹುಟ್ಟಿತು. ಯಾವ ಮತವನ್ನು ಕುರಿತು ಓದಿದರೂ ನಿಷ್ಪಕ್ಷಪಾತವಾಗಿ ಓದಬೇಕು. ಭಗವಂತನು ಸ್ಫುರಿಸಿದ ವಿಷಯವನ್ನೇ ಬೇಕರವರ ಸ್ನೇಹಿತರುಗಳ ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ತಿಳುಹುತ್ತಿರಬೇಕು. ಹಿಂದೂ ಮತತತ್ವವನ್ನು ಗ್ರಹಿಸುವವರೆಗೂ ಯಾವ ಮತವನ್ನೂ ಅಂಗೀಕರಿಸಬಾರದು" ಎಂದು ನಿಶ್ಚಯಿಸಿಕೊಂಡು ಆ ರಾತ್ರಿ ನಿದ್ರೆ ಮಾಡಿದೆನು.

ಮೈಸೂರುಸಂಸ್ಥಾನದ ದಿವಾನ್‌ರವರಾದ ಹಜರತ್ ಅಮೀನ್ ಉಲ್-ಮುಲ್ಕ್ ಮಿ|| ಮಿರ್ಜಾ ಮಹಮದ್ ಇಸ್ಮಾಯಿಲ್ ಸಾಹೇಬ್, ಬಿ.ಎ., ಸಿ.ಐ.ಇ., ಒ. ಬಿ. ಇ., ಯವರ ಮಹಾಸನ್ನಿಧಾನದಲ್ಲಿ.

ತುಮಕೂರು ಪ್ರಾಣಿದಯಾಪ್ರಚಾರಕಸಂಘದವರು ಅತ್ಯಂತ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದೇನೆಂದರೆ :—

ಮಹಾಸ್ವಾಮಿ,

ತಾವು ಮೈಸೂರುದೇಶದ ದಿವಾನಗಿರಿಗೆ ಬಂದ ಸ್ವಲ್ಪದಿನಗಳಲ್ಲೇ ಈ ನಮ್ಮ ತುಮಕೂರಿಗೆ ದಯಮಾಡಿಸಿರುವುದು ನಮ್ಮ ಊರಿನ ಭಾಗ್ಯೋದಯವೆಂದೆಣಿಸುತ್ತೇವೆ. ನಮ್ಮವರಲ್ಲೊಬ್ಬರಾದ ತಮಗೆ ಈ ಶ್ರೇಷ್ಠತಮವಾದ ಪದವಿಯನ್ನು ದಯಪಾಲಿಸಿರುವುದಕ್ಕಾಗಿ ನಮ್ಮನ್ನಾಳುವ ಶ್ರೀಮನ್ಮಹಾರಾಜ ಬಹದ್ದೂರರವರಿಗೆ ನಮ್ಮ ರಾಜಭಕ್ತಿಪೂರಿತವಾದ ಕೃತಜ್ಞತೆಯನ್ನು ಅರ್ಪಿಸಲುಸಂತೋಷಿಸುತ್ತೇವೆ. ನಮ್ಮ ಈ ಸಂಘವು 16-3-26ನೇ ತಾರೀಖಿನಲ್ಲಿ ಈ ಊರಿನ ಮುಖ್ಯವರ್ತಕರಲ್ಲೊಬ್ಬರಾದ ಹಜರತ್ ಅಬ್ದುಲ್ ನಬೀಖಾನ್ ಸಾಹೇಬ್, ರೆಪ್ರಸೆಂಟೇಟೀವ್ ಅಸೆಂಬ್ಲಿಮೆಂಬರ್, ಡಿಸ್ಟ್ರಿಕ್ಟ್ ಬೋರ್ಡ್‌ಮೆಂಬರ್ ಮತ್ತು ಮ್ಯುನಿಸಿಪಲ್ ಕೌನ್ಸಿಲರ್ ಯವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಂಘಕ್ಕೆ ಈ ಊರಿನ ವರ್ತಕಮಂಡಲಿಯವರೂ, ಲಾಯರುಗಳೂ, ಜಮೀನುದಾರರೂ ಇತರೆ ಖಾಸಗಿ ದೊಡ್ಡಮನುಷ್ಯರೂ ಮೆಂಬರುಗಳಾಗಿ ಸೇರಿರುತ್ತಾರೆ. ಈ ಸಂಘಕ್ಕೆ ಇಲ್ಲಿಯವರೆಗೆ 2,900 ರೂ. ಗಳು (ಖರ್ಚುಬಾಕಿ) ಶೇಖರಿಸಲ್ಪಟ್ಟಿವೆ.

ಸಂಘದ ಉದ್ದೇಶಗಳು :—ತುಮಕೂರು ಡಿಸ್ಟ್ರಿಕ್ಟಿನ ಎಲ್ಲಾ ಭಾಗಗಳಲ್ಲಿಯೂ ಈ ಸಂಘದ ಉಪಶಾಖೆಗಳನ್ನು ಏರ್ಪಡಿಸಿ, ಅಲ್ಲಲ್ಲಿ ನಡೆಯುವ ಮಾರಿಜಾತ್ರೆ ಮುಂತಾದ ದಿನಗಳಲ್ಲಿ ಆಗುವ ಪ್ರಾಣಿವಧೆಯನ್ನು ತಪ್ಪಿಸುವುದಕ್ಕೆ ಧರ್ಮೋಪದೇಶಮಾಡುವುದೂ, ವಧೆಗೆಹೋಗುವ ಹಸು, ಎಮ್ಮೆ, ಕೋಣ, ಎತ್ತು ಮೊದಲಾದ ಪ್ರಾಣಿಗಳನ್ನು ಬಿಡಿಸುವುದೂ, [illegible] ಬಾರದ ಮೂಕಜಂತುಗಳನ್ನು ವೃದ್ಧಾಪ್ಯ ಅಥವಾ ಅಂಗಹೀನತೆಯಿಂದ ಅನುಪಯೋಗವಾಗಿ ಪೋಷಿಸಲು ಅರ್ಥಸಂಪತ್ತಿಯುಳ್ಳವರಿಂದ ಕೊಂಡುಕೊಂಡಾಗಲೀ ಅಥವಾ ಧರ್ಮಾರ್ಥವಾಗಿಯಾಗಲೀ ತೆಗೆದುಕೊಂಡು, ಪಿಂಜರುಪೋಲುಗಳನ್ನು ಸ್ಥಾಪಿಸಿ, ಇಲ್ಲಿ ಇಂತಹ ಮೂಕಜಂತುಗಳನ್ನು ಕಾಪಾಡುತ್ತಾ, ಡೈರಿಫಾರಂಗಳನ್ನು ಕಲ್ಪಿಸಿ ಹಾಲು ಮೊಸರು ಯಥೇಚ್ಛವಾಗಿ ಮಕ್ಕಳುಮರಿಗಳಿಗೆ ಸಿಕ್ಕುವಂತೆಯು, ಹಸು ಎಮ್ಮೆಗಳ ತಳಿಗಳನ್ನು ಸಾಕಿ ಉತ್ತಮತರದ ರಾಸುಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಡುವುದು ಮೊದಲಾದ ದೇಶದ ಸಾಂಪತ್ತಿಕಾಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದೇ ಆಗಿರುತ್ತವೆ. ಸಂಘವು ಮಾಡಿರುವ ಕೆಲಸಗಳು :—ಈ ಸಂಘದ ಪ್ರಚಾರಕರು ಮದ್ದಗಿರಿ, ಕೊರಟಗೆರೆ, ಶಿವಗಂಗೆ, ಕೊಡಗೇನಹಳ್ಳಿ, ಮಲ್ಲಸಂದ್ರ, ಮುತ್ಸಂದ್ರ, ಲಕ್ಕೇನಹಳ್ಳಿ, ಪಾಲ್ಸಂದ್ರ, ಮುದಿಗೆರೆ, ಮಣ್ಣಮಾರಿಜಾತ್ರೆ, ಸ್ವಾಮಿದೇವನಹಳ್ಳಿ, ದಂಡಿನಶಿವರ, ಶೀತಕಲ್ಲು, ಕೇರ್ವೆಗಾರಹಳ್ಳಿ, ಮೂಳಸಹಳ್ಳಿಪಟ್ಣ, ಅಕ್ಕಿರಾಮಪುರ ಮುಂತಾದ ಸ್ಥಳಗಳಿಗೆ ಜಾತ್ರೆಕಾಲಗಳಲ್ಲಿ ಹೋಗಿ ಅಲ್ಲಿ ನಡೆಯುತ್ತಿದ್ದ ಅನೇಕ ಪ್ರಾಣಿವಧೆಗಳನ್ನು ಹಿತೋಪದೇಶದಿಂದಲೂ, ಕೀರ್ತನೋಪನ್ಯಾಸಗಳಿಂದಲೂ ಬೋಧನೆಮಾಡಿ, ನೆರೆದ ಜನರೆಲ್ಲರ ಸಮ್ಮತಿಯಿಂದ ಬಹಿರಂಗವಾಗಿ ನಡೆಯುತ್ತಿದ್ದ ಪ್ರಾಣಿಹಿಂಸೆಯನ್ನು ತಪ್ಪಿಸಿ, ಬಹುಜನ ಭಕ್ತಸಮೂಹಗಳಿಂದ ಇನ್ನು ಮುಂದೆ ಈತರದ ಅನಾಗರಿಕವಾದ ಕ್ರೂರಕರ್ಮವನ್ನು ಮಾಡುವುದಿಲ್ಲವೆಂಬತವನ್ನು ಒಳಕೊಂಡ ಅವರ ಮನಃಪೂರ್ವಕವಾದ ಹೇಳಿಕೆಗಳನ್ನು ತೆಗೆದುಕೊಂಡು ಬಂದಿರುತ್ತಾರೆ. ಸತ್ಯಪ್ರಭುಗಳಾದ ತಾವು ಇವೆಲ್ಲವನ್ನೂ ಸಾವಧಾನದಿಂದ ಪರಿಶೀಲಿಸಿ, ವ್ಯವಸಾಯದೃಷ್ಟಿಯಿಂದಲೂ, ಆರೋಗ್ಯದೃಷ್ಟಿಯಿಂದಲೂ, ನಾಗರೀಕತೆಯದೃಷ್ಟಿಯಿಂದಲೂ ಈ ಪ್ರಾಣಿವಧಾನಿರೋಧಕವಾದ ಕಾನೂನನ್ನು ಕ್ಷಿಪ್ರದಲ್ಲೇ ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇವೆ. ಈ ಸಂಘವು ಸ್ಥಾಪಿತವಾದ 6 ತಿಂಗಳಲ್ಲಿ 8 ಮೀಟಿಂಗುಗಳನ್ನು ಮಾಡಿ ಈ ಕೆಳಗೆ ಕಂಡ ಕೆಲವು ಮುಖ್ಯ ತೀರ್ಮಾನಗಳನ್ನು ಮಾಡಿರುತ್ತೆ. ತೀರ್ಮಾನ (1) ನಮ್ಮ ಈ ಮೈಸೂರುಸೀಮೆಯಲ್ಲಿ ಗೋವಧೆಯನ್ನು ನಿಲ್ಲಿಸುವಂತೆ ಕಾನೂನು ಮಾಡಬೇಕೆಂದು ಶ್ರೀಮನ್ಮಹಾರಾಜಾ ಗೌರ್ನಮೆಂಟಿನವರನ್ನು ಕೇಳಿಕೊಳ್ಳಬೇಕು.

(2) ಗೋವಧಾನಿರೋಧಕ ವಿಷಯವಾಗಿ ಕಾನೂನು ಏರ್ಪಡಿಸುವ ವಿಚಾರದಲ್ಲಿ ಸಾಧಕಬಾಧಕಗಳನ್ನು ತಿಳಿಯಲು. ಸರ್ಕಾರದಿಂದ ನಿಯಾಮಿತವಾಗಿರುವ ಕಮಿಟಿಯ ಮೆಂಬರುಗಳು ವಿಶೇಷವಾಗಿ ಬೆಂಗಳೂರಿನವರೇ ಇರುವುದರಿಂದ, ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳ ಪ್ರಾತಿನಿಧ್ಯವು ಬರುವಂತೆ ಕಮಿಟಿಯ ಮೆಂಬರುಗಳ ಸಂಖೆಯನ್ನು ಹೆಚ್ಚಿಸಬೇಕಲ್ಲದೆ, ಕಮಿಟಿಯವರ ಕಾರ್ಯವು ಅಲ್ಲಲ್ಲಿ ತಾಲ್ಲೂಕು, ಹೋಬಳಿಗಳಿಗೆ ಹೋಗಿ ಜನಾಭಿಪ್ರಾಯವನ್ನೂ ಮುಖಂಡರ ವಾಙ್ಮೂಲಗಳನ್ನೂ ತೆಗೆದುಕೊಳ್ಳುವುದರ ಮೂಲಕ ತಿಳಿಯಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳಬೇಕು.

(3) ಈ ಪ್ರಾಣಿದಯಾಪ್ರಚಾರಕಸಂಘದವರು ಗೋವಧಾನಿರೋಧಕ ವಿಷಯದಲ್ಲಿ ಕಾನೂನು ಅತ್ಯಗತ್ಯವೆಂದು ಅಭಿಪ್ರಾಯಪಡುತ್ತಾರೆ ಮತ್ತು ಇತರಪರ್ವಗಳಲ್ಲಿ ಕೋಣವಗೈರೆ ಕಡಿಯುವುದನ್ನು ನಿರೋಧಿಸುವಂತೆ ಕಾನೂನು ಮಾಡಬೇಕೆಂಬದಾಗಿ ಅಭಿಪ್ರಾಯಪಡುತ್ತಾರೆ. 21-6-26 ರಲ್ಲಿ ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರ್ ಬಹದ್ದೂರರವರ 42 ನೇ ವರ್ಷದ ವರ್ಧಂತ್ಯುತ್ಸವವನ್ನು ಈ ಸಂಘದವರು ಬಹಳ ವಿಜೃಂಭಣೆಯಿಂದ ನಡೆಸಿ, ಈ ಊರಿನ ಅನೇಕ ಗೋವುಗಳಿಗೆ ಮೇವುಹಾಕಿ ಮೆರವಣಿಗೆಮಾಡಿ, ಸಾಯಂಕಾಲದಲ್ಲಿ ಹಜರತ್ ಅಬ್ದುಲ್‌ನಬೀಖಾನ್‌ಸಾಹೇಬರವರ ಅಧ್ಯಕ್ಷತೆಯಲ್ಲಿ ಮಹಾರಾಜರಿಗೆ ಶ್ರೇಯಸ್ಸನ್ನು ಕೋರಲು ಒಂದು ಮೀಟಿಂಗನ್ನು ಮಾಡಿ ಈ ಊರಿನ ಮಹಾಜನಗಳ ಆನಂದವನ್ನು ಶ್ರೀಮನ್ಮಹಾರಾಜರವರಿಗೆ ತಂತಿಯ ಮೂಲಕ ವಿಜ್ಞಾಪಿಸಿಕೊಂಡದ್ದಲ್ಲದೆ, ಗೋವಧಾನಿರೋಧಕ ಕಾನೂನು ಆಗಲೇ ಬೇಕೆಂದು ಸಹ ಬಿನ್ನಯಿಸಿಕೊಂಡಿರುತ್ತಾರೆ. ಸಂಘದ ಆವಶ್ಯಕತೆಗಳು :—ಈ ಸಂಘದ ಕೆಲಸವು ಸುಲಲಿತವಾಗಿ ನಡೆಯಲು ಈಗ ಸೌಕರ್ಯಗಳಿಲ್ಲ. ಸಂಘಕ್ಕೆ ಸೇರಿದ ಪ್ರಾಣಿಗಳನ್ನು ಕಟ್ಟಿ ಸಾಕುವುದಕ್ಕೂ, ತಿಂಡಿ ಮೇವುಗಳನ್ನು ದಾಸ್ತಾನು ಇಡುವುದಕ್ಕೂ, ರಾಸುಗಳು ಮೇದು ಬರಲು ಹುಲ್ಲುಗಾವಲುಗಳಿಗೂ ಬಹಳ ತೊಂದರೆಯಾಗಿವೆ. ಆದ್ದರಿಂದ ದಯಾಪ್ರಭುಗಳಾದ ತಾವು ತುಮಕೂರು ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ 10 ಎಕರೆ ಜಮೀನನ್ನು ಮುಫತ್ತಾಗಿ ಕೊಡಿಸಿಕೊಡಬೇಕಲ್ಲದೆ ಒಂದು ವಿಶಾಲವಾದ ಸುಮಾರು 100 ಎಕರೆ ವಿಸ್ತೀರ್ಣವುಳ್ಳ ಜಮೀನನ್ನು ತುಮಕೂರಿಗೆ ಸಮೀಪವಾದ ಯಾವುದಾದರೊಂದು ಸ್ಥಳದಲ್ಲಿ ಗೋಮಾಳಕ್ಕಾಗಿ ಸರಕಾರದಿಂದ ಈ ಸಂಘಕ್ಕೆ ಮುಫತ್ತಾಗಿ ಕಂದಾಯವಿಲ್ಲದಂತೆ ಕೊಡಿಸಬೇಕೆಂದು ಚಿಕ್ಕಪೇಟೆ ಚೌಕದಲ್ಲಿರುವ ವಿದ್ಯಾಭ್ಯಾಸದ ಇಲಾಖೆಯವರ ಖಾಲಿಯಿರುವ ಕಟ್ಟಡವನ್ನು ಸಂಘದವರ ಕಾರ್ಯಗಳಿಗೆ ಅನುಕೂಲಿಸುವಂತೆ ಅವರಿಗೆ ಮುಫತ್ತಾಗಿ ಕೊಡಿಸಬೇಕೆಂದು ಪ್ರಾರ್ಥಿಸುತ್ತೇವೆ. ಮಹಾಸ್ವಾಮಿ.

ಡಿ. ಎಸ್. ಶಾಮರಾಜಪ್ಪ,
ಪ್ರೆಸಿಡೆಂಟ್,
ಪ್ರಾಣಿದಯಾಪ್ರಚಾರಕಸಂಘ, ತುಮಕೂರು.

೧೯೨೬ನೆಯ ಇಸವಿ ಸೆಪ್ಟೆಂಬರ್ ತಾ|| ೨೫ ರಿಂದ ೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಭಾದ್ರಪದ ಬಹುಳ ಚೌತಿಯಿಂದ ಭಾದ್ರಪದ ಬಹುಳ ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
25	[1]ಶನಿ	ಚೌತಿ	28-53	ಭರ	29-24	9
26	ಭಾನು	ಪಂಚ	25-37	ಕೃತ್ತಿ	27-52	10
27	[2]ಸೋಮ	ಷಷ್ಠಿ	23-24	ರೋಹಿ	27-27	11
28	ಮಂಗಳ	ಸಪ್ತ	22-21	ಮೃಗ	28-9	12
29	[3]ಬುಧ	ಅಷ್ಟ	22-36	ಆರ್ದ್ರಾ	30-7	13
30	[4]ಗುರು	ನವ	24-4	ಪುನ	33-35	14
1	ಶುಕ್ರ	ದಶ	26-51	ಪುಷ್ಯ	37-30	15

(1) ಮಹಾಭರಣಿ, [illegible]. (2) ಮಳೆನಕ್ಷತ್ರ-ಹಸ್ತ ೧ ನೆಯಪಾದ, ಗಜಗೌರೀವ್ರತಂ. (3) ಮಧ್ಯಾಷ್ಟಮಿ. (4) ಹರಿಹರವ್ರತಂ, ಮಳೆನಕ್ಷತ್ರ-ಹಸ್ತ ೨ ನೆಯಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಭಸಪಥಕೃತಾವತಾರಾ ಪಶ್ಯಜ್ಞ ವಸ್ತುತ ತೋಷರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಅಕ್ಟೋಬರ್ ತಾರೀಖು ೨ ನೆಯ ಶನಿವಾರ. [ಸಂಚಿಕೆ ೪೦

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ
ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಚಳೆಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇದೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಜಾಯಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಬೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕ್ಕರ್ಮಗಜ, ಆಲದಹಾಲು, ಪಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಹಿಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟಿ, ಸಿಲಾಜತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದವರೆಗೆ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುತವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—10] ಪತ್ತೆ:—ಮಾಲಕ ವೈದ್ಯ ಪ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

SIROMANY NARAYANACHARYA & CO.,
BENARES CITY.

S.U.N.& CO.
BENARES CITY

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ, ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದೀಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—11]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವತ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಇಂತಹ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಿಸಲಾಗುವದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನೂ, [illegible] ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[illegible] ಪೋ. ಬಾ. ೩೧೦, ಮದರಾಸು.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ
ರೋಗಗಳನ್ನು
ಗುಣಪಡಿಸುತ್ತವೆ.

37

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಬಾಳ್ಯದ ವೆಂಕಟಾಚಲಪಂಡಿತರು,

ಬ್ರ್ಯಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೩—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು.

ಲಗ್ನ ಮೊದಲಾದಕಾರ್ಯಗಳಲ್ಲಿ ಫಂಡಿಗೆ ಬಂದಿರತಕ್ಕ ಹಣದತಪಿಸೀಲು. —

ಮ|| ಗಳಾದ 1. ನೆಲಮಂಗಲದ ತಾ|| ಬೇಗೂರು ಚಿಕ್ಕಣ್ಣಶೆಟ್ಟರ ಅಣ್ಣನಪುತ್ರ ಬಿ. ವಿ. ಚೆನ್ನಬಸಪ್ಪನವರಿಗೂ ತಿಪಟೂರು ಚೆನ್ನಬಸಪ್ಪನವರ ಪುತ್ರಿ ಸೌ|| ಭಾಗೀರತಮ್ಮನವರಿಗೂ ನಡೆದ ಲಗ್ನದಲ್ಲಿ 4 ರೂ. ಮತ್ತು ಹೊಸೂರು ದೊಡ್ಡಬಸಪ್ಪನವರ ಪುತ್ರ ವೀರಭದ್ರಪ್ಪನ ಲಗ್ನದಲ್ಲಿ 3 ರೂ. ಜುಮ್ಲಾ ಶಿದ್ದಗಂಗಪ್ಪನವರ ಮೂಲಕ 7 ರೂ. 2. ಕರೋಬನಹಳ್ಳಿ ಮಲ್ಲಶೆಟ್ಟರ ಕುಮಾರಿಗೂ ಗುಬ್ಬಿ ಮುರಿಗೆಪ್ಪನವರ ಕುಮಾರ ಮುಪ್ಪಣ್ಣನವರಿಗೂ ನಡೆದ ಲಗ್ನದಲ್ಲಿ 5 ರೂ. ಮತ್ತು ಚೇಳ್ಯಾಪಿ ಚೆನ್ನಬಸಪ್ಪನವರ ಶಿವರಾಮಯ್ಯನವರ ಕಲ್ಯಾಣದಲ್ಲಿ ನಡೆದ ಲಗ್ನದಲ್ಲಿ 5 ರೂ. ಜುಮ್ಲಾ ಹೊಮ್ಮಂಗಲದ ಗುಬ್ಬಿಯಪ್ಪನವರ ಮೂಲಕ 10 ರೂ. 3. [illegible] ತಾ|| [illegible] ಶಿದ್ದಲಿಂಗಪ್ಪನವರ ಮಗಳು ಸೌ|| [illegible] ಗುಬ್ಬಿಯಲ್ಲಿರುವ ಲಿಂಗಪ್ಪನವರ ರುದ್ರಪ್ಪನಿಗೂ ನಡೆದ [illegible] 3 ರೂ. [illegible] 2 ರೂ. [illegible] ಎ. [illegible] ಮೂಲಕ 5 ರೂ. 4. [illegible]

ಚನ್ನಬಸಪ್ಪನವರ ಅನ್ಸ್ಯರಫತ್ತಾಂತಮಹೋತ್ಸವಕಾಲದಲ್ಲಿ ಸಂಘದ ಸೆಕ್ರೆಟರಿ ಜಿ. ಪರಮಶಿವಯ್ಯನವರ ಮೂಲಕ 501 ರೂ. ಜಮ್ಮಾ 524 ರೂ.

ಜಿ. ಪರಮಶಿವಯ್ಯ, ಸೆಕ್ರೆಟರಿ,
ಮೈ. ವೀ. ವಿದ್ಯಾಭಿವೃದ್ಧಿ ಫಂಡುಸಂಘ, ಬೆಂಗಳೂರು.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೨ ನೆಯ ಶನಿವಾರ.

MYSORE MERCHANTS AND INDUSTRIALISTS.

The Dewan and Members of Council met the merchants and industrialists of Bangalore at a Conference on the 30th September 1926 at the Daly Memorial Hall with the object of exchanging views on the development of trade and industries in Bangalore. The Dewan in his speech expressed the eagerness of His Highness' Government to afford all possible facilities for the protection and expansion of the trades and industries of the city. He regretted that the industrial concerns were scattered all over the city which would not permit of a systematic development of industries and of proper industrial expansion. The Dewan emphasised the need for increased banking facilities though he acknowledged the good work done by the Bank of Mysore. The problem, we think, is one of securing cheap capital and we are doubtful if the Bank of Mysore is at all really helpful there. It may be better than the local bankers but the rate of interest for business capital is far too high, compared to what obtains among the Marwaries and Multanese or the European firms in India. This is just the reason why our traders and industrialists find it difficult to cope with their foreign competitors. More than to their adaptability to the changing conditions of India, the outside merchants owe their success to the cheap capital that is available to them. It was well that the Dewan suggested that the people should help in improving methods of saving by which the availability of cheap capital may be rendered automatic. But we are doubtful if our people are ever accustomed to save in the manner that the outside merchants have been doing or to lead the simple life that the latter do. There is in Mysore a great tendency among the people to spend more than they earn and the policy that came into vogue in recent years that we should increase our wants in order that we might increase our earning still holds ground. Besides, the problem of commercial expansion is one bound up with the general well-being of the masses, the poverty among whom is the prime cause of the general depression in business. It is a commendable suggestion of the Dewan to replace octroi duties by a terminal tax or other substitutes—which we are sure the merchants of the city would welcome. The Dewan desired a closer co-operation between the Economic Conference and the merchants. We are glad to hear that Government are anxious to take stock of the resources of the country and are projecting a scheme for the purpose. He said that large combines had come to stay in business organisation all the world over and our people should have no grievence about them. He appealed to the merchants and industrialists of Bangalore to take steps to improve the trade conditions which were still primitive. It is really very good of Dewan to have brought about such a conference as above which is bound to be of considerable use in focussing attention on business problems and in helping the rectification of remediable defects now existing.

ಸ್ವದೇಶದ ವೃತ್ತಾಂತಗಳು.

ಶ್ರೀರಂಗಪಟ್ಟಣದಲ್ಲಿರುವ ಗುಂಜಬು ತಾಲ್ಲೂಕು ಅಮಲ್ದಾರರ ಮೇಲ್ವಿಚಾರಣೆಯಲ್ಲಿರುವುದು ತಪ್ಪಿಸಲ್ಪಟ್ಟು ಫ್ರೆಂಚ್ ರಾಕ್ಸ್ ಸಬ್‌ಡಿವಿಜನ್ ಆಫೀಸರ ಸ್ವಯಂಮೇಲ್ವಿಚಾರಣೆಗೊಳಪಡಿಸಲ್ಪಟ್ಟಿರುವುದಾಗಿ ಸರ್ಕಾರದಪ್ಪಣೆಯಾಗಿದೆ.

ದೀಕ್‌ದಾರ್ ಚನ್ನಬಸವೇಶ್ವರ ನಾಮಧಾರಿ ಮೌಲಾನಾ ಸಿದ್ದೀಖಿಸು 2 ತಿಂಗಳಕಾಲ ಬೆಂಗಳೂರಿನಲ್ಲಿ ಉಪನ್ಯಾಸಮಾಡಕೂಡದೆಂದು ಅಲ್ಲಿಯ ಸಿಟಿಮ್ಯಾಜಿಸ್ಟ್ರೇಟರು ಅಪ್ಪಣೆಮಾಡಿರುವುದರಮೇಲೆ ಅಪೀಲನ್ನು ಮಾಡಿಕೊಂಡಿದ್ದನು.

ಬರುವ ಅಕ್ಟೋಬರ್ ತಾ|| 11ರಲ್ಲಿ ಮೈಸೂರುಸಂಸ್ಥಾನದ ಪರಸ್ಪರಸಹಾಯಸಂಘಗಳ 13 ನೆಯ ಅಧಿವೇಶನವು ರಾಜಧಾನಿಯ ಟರ್ನ್‌ಹಾಲಿನಲ್ಲಿ ದಿವಾನರವರಿಂದ ಆರಂಭಿಸಲ್ಪಟ್ಟು ಒಂದನೆಯ ಕೌನ್ಸಿಲರ್ ಮಿ|| ಕೆ. ಚಾಂಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ರಾಜಧಾನಿಯಲ್ಲಿ ವಕೀಲರುಗಳಾಗಿರುವ ಮ|| ಗಳಾದ ಎಚ್. ಸಿ. ದಾಸಪ್ಪ, ಬಿ.ಎ., ಎಲ್‌ಎಲ್.ಬಿ., ಯವರು ಮತ್ತು ಟಿ. ಎ. ರುದ್ರಪ್ಪ ಬಿ.ಎ., ಬಿ.ಎಲ್., ರವರು ಶ್ರೀರಂಗಪಟ್ಟಣಪ್ರಾಂತದ ಅನೇಕ ಕಕ್ಷಿಗಾರರ ಅಪೇಕ್ಷೆಯಂತೆ ಶ್ರೀರಂಗಪಟ್ಟಣದಲ್ಲಿ ಒಂದು ಆಫೀಸನ್ನು ಈ ತಾ|| 1 ರಿಂದ ಆರಂಭಿಸಿರುವರು.

ನೆನ್ನೆಯದಿನ ರಾತ್ರಿ ದಿವಾನರು ಭದ್ರಾವತಿಗೆ ಪ್ರಯಾಣಮಾಡಿ ಈ ದಿವಸ ಅಲ್ಲಿಯ ಕಾರ್ಯಕಲಾಪಗಳನ್ನು ಪರಾಂಮರ್ಶಿಸಿಕೊಂಡು ನಾಳೆಯದಿನ ಬೆಳಿಗ್ಗೆ ಬೆಂಗಳೂರನ್ನು ತಲುಪುವರು, ಮತ್ತು ತಾ|| 4 ರಲ್ಲಿ ರಾಜಧಾನಿಗೆ ಬಂದು ದಸರಾಮಹೋತ್ಸವವೂ ಪ್ರಜಾಪ್ರತಿನಿಧಿಸಭಾಧಿವೇಶನ ಕಾರ್ಯವೂ ಪೂರೈಸುವವರೆಗೆ ರಾಜಧಾನಿಯಲ್ಲಿ ನಿಲ್ಲುವವರಾಗಿರುವರು.

ನಂಜನಗೂಡು ತಾ|| ಗುಂಭಹಳ್ಳಿಯ ವಾಸಸ್ಥನಾದ ಬಲಗೈ ಚೆನ್ನಬಸವನು ಎತ್ತುಗಳನ್ನು ಕೊಂಡುತರಲು 50 ರೂ. ಗಳನ್ನು ತೆಗೆದುಕೊಂಡು ಚಿಉವನೆಂಬವನ ಸಂಗಡ ಚಿಕ್ಕರಸಿನಕೆರೆಯೇರಿಯಮೇಲೆ ಹೋಗುತ್ತಿರುವಾಗ್ಗೆ ಯಾರೋ ದುಷ್ಟರು ಅವನನ್ನು ಕೊಂದು ಕೆರೆಯತೂಬಿನಲ್ಲಿ ಬಚ್ಚಿಟ್ಟು ಹಣವನ್ನು ಅಪಹರಿಸಿಕೊಂಡು ಹೋಗಿದ್ದರು. ಈ ಸಮಾಚಾರವನ್ನು ಪೋಲೀಸರು ತಿಳಿದು ದುರಾತ್ಮರನ್ನು ಹಿಡಿಯಲು ಪ್ರಯತ್ನಿಸಿರುವರು.

ದಸರಾಮಹೋತ್ಸವಕ್ಕಾಗಿ ರಾಜಧಾನಿಗೆ ಪರಸ್ಥಳದಿಂದ ಬರುವ ವೈಶ್ಯರಿಗೆ ಸಹುಕಾರ್ ಹತ್ತಿಗುಪ್ಪೆ ಸೂರ್ಯನಾರಾಯಣಶೆಟ್ಟರು ಬೆಂಕಿನವಾಬರಬೀದಿಯಲ್ಲಿರುವ ತಮ್ಮ ಸತ್ರದಲ್ಲೂ ದೇವಾಂಗ ಜನರಿಗೆ ಜವಳಿಯಂಗಡಿ ಮ|| ಶ್ರೀನಿವಾಸಯ್ಯನವರು ಮೊದಲಾದವರು ಕಾಳನ್ನುನಗುಡಿಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲೂ ಭೋಜನಕ್ಕೇರ್ಪಡಿಸಿರುವರು.

ಚಿತ್ರದುರ್ಗ ಡಿಸ್ಟ್ರಿಕ್ಟಿನ ಎಕನಾಮಿಕ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿದ್ದ ಮ|| ಜೆ. ಬಿ. ಮಲ್ಲಾರಾಧ್ಯ ಎಂ.ಎ., ರವರು ಶಿವಮೊಗ್ಗಾ ಡಿ|| ಸೂಪರಿಂಟೆಂಡೆಂಟರಾಗಿಯೂ ಮಿ|| ಎರ್ಸ್‌ರವರು ಶಿವಮೊಗ್ಗ ಡಿ|| ಎ. ಸೂಪರಿಂಟೆಂಡೆಂಟರಾಗಿಯೂ ಬದಲಾಯಿಸಲ್ಪಟ್ಟಿರುತ್ತಾರೆ, ಮತ್ತು ಮ|| ಬಿ. ಸೂರ್ಯನಾರಾಯಣ, ಬಿ.ಎ.,ಬಿ.ಎಸ್‌ಸಿ. ರವರು ಕಡೂರು ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಫ್ರೆಂಚ್‌ರಾಕ್ಸ್ ಡಿವಿಜನ್ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಜಿ. ಶಾಂತವೀರಪ್ಪ, ಬಿ.ಎ., ಯವರು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟು ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಆಫೀಸರಾದ ಮ|| ಆರ್. ಪಿ. ಮಲ್ಲಪ್ಪ, ಬಿ.ಎ., ಎಲ್‌ಎಲ್.ಬಿ. ಯವರು ಇದೇ ಡಿವಿಜನ್ನಿನ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ, ಮ|| ನವನೀತಂನಾಯಡು, ಬಿ.ಎ., ರವರು ಸಬ್‌ಡಿವಿಜನ್ ಆಫೀಸರಾಗಿಯೂ ನಿಯಮಿಸಲ್ಪಡುವರೆಂಬ ವದಂತಿಯಿದೆ.

“ ಹಾಸನದ ಡಿಸ್ಟ್ರಿಕ್ಟು ಮಂಜರಾಬಾದು ತಾ|| ಬ್ಯಾಕರವಳ್ಳಿ ಎಸ್ಟೇಟಿನಲ್ಲಿ ಕಳೆದ ಗುರುವಾರ ಒಂದು ಕೋಳಿಯು ಮರಿಮಾಡಿದ್ದರಲ್ಲಿ ಒಂದು ಕೋಳಿಮರಿಗೆ ಒಂದು ತಲೆಯೂ ಎರಡು ಕೊಕ್ಕುಗಳೂ ಮೂರು ಕಣ್ಣುಗಳೂ ಇದ್ದುವು. ಆ ಮೂರು ಕಣ್ಣುಗಳಲ್ಲಿ ಮಧ್ಯದ ಕಣ್ಣು ಉಳಿದ ಎರಡು ಕಣ್ಣುಗಳಿಗಿಂತ ವಿಶಾಲವಾಗಿಯೂ ಪ್ರಕಾಶಮಾನವಾಗಿಯೂ ಇದ್ದಿತು. ಆದರೆ ಮರಿಯು ಹುಟ್ಟಿದಕೂಡಲೆ ಪ್ರಾಣಬಿಟ್ಟಿತು ” ಎಂದು ಒಬ್ಬರು ತಿಳಿಸಿರುತ್ತಾರೆ.

ರಾಜಧಾನಿಯಲ್ಲಿ ಮೊನ್ನೆಯಿಂದ ಪ್ರತಿ ಸಾಯಂಕಾಲ ಮಳೆಯಾಗುತ್ತಿದೆ. ಕಳೆದ 3-4 ವರ್ಷಗಳಿಂದಲೂ ಇಲ್ಲದಿದ್ದ ಪ್ಲೇಗು ರೋಗವು ತಲೆದೋರಿ ಆಗಲೇ 5-6 ರ ಮೇಲೆಯೇ ಮರಣಗಳಾಗಿವೆ, ಮತ್ತು ಜಡಿಮಳೆಗಾರಂಭವಾಗಿರುವುದರಿಂದ ಈ ಕ್ಷುದ್ರರೋಗವು ಪ್ರಬಲವಾಗುವ ಭೀತಿಯು ಸಹ ಇದೆ. ಆದುದರಿಂದ ಮ್ಯುನಿಸಿಪಾಲಿಟಿಯ ಆರೋಗ್ಯಶಾಖೆಯವರು ರೋಗವು ಹರಡದಂತೆ ಈಗಳಿಂದಲೇ ತಕ್ಕೇರ್ಪಾಟನ್ನು ಚಟುವಟಿಕೆಯಿಂದ ಮಾಡುವವರಾಗಬೇಕು.

ನಂಜನಗೂಡಿನಿಂದ ಚಾಮರಾಜನಗರಕ್ಕೆ ರೈಲುಹಾಕಲ್ಪಟ್ಟಿರುವುದಷ್ಟೆ. ಅಲ್ಲಿಂದ ಮುಂದಕ್ಕೆ ಈರೋಡಿಗೂ ಕೊಯಂಬತ್ತೂರಿಗೆ ರೈಲು ಹಾಕಲ್ಪಟ್ಟ ಹೊರತು ಪ್ರಯೋಜನವಾಗುವುದಿಲ್ಲವೆಂಬುದು ಸರ್ವವಿದಿತವಾದ ವಿಷಯವಾಗಿದೆ. ಆದರೆ ಚಾಮರಾಜನಗರದ ಶ್ರೀಚಾಮರಾಜೇಶ್ವರಬ್ಯಾಂಕ್ ಲಿಮಿಟೆಡ್ಡಿನವರು 95 ಮೈಲಿ ದೂರದಲ್ಲಿರುವ ಕೊಯಂಬತ್ತೂರಿಗೆ ಸತ್ಯಮಂಗಲದ ಮಾರ್ಗವಾಗಿ ಮೋಟಾರುಬಸ್ಸುಗಳನ್ನು ಈ ತಾ|| 7 ರಿಂದ ಬಿಡಲು ಕೊಯಂಬತ್ತೂರು ಡಿಸ್ಟ್ರಿಕ್ಟ್ ಕಲೆಕ್ಟರ ಅಪ್ಪಣೆಯನ್ನು ಪಡೆದಿರುವುದಾಗಿ ತಿಳಿಯಬರುತ್ತದೆ.

ಸಂಸ್ಥಾನದ ಡಿಸ್ಟ್ರಿಕ್ಟ್‌ಬೋರ್ಡುಗಳ ಮೆಂಬರುಗಳಾಗಿ ಚುನಾಯಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತುಕೊಳ್ಳುವವರನ್ನು ಅನಕ್ಷರಸ್ಥರಾದ ಓಟರುಗಳು ಸರಾಗವಾಗಿ ಆರಿಸಲು ಅನುಕೂಲಿಸುವಂತೆ ಅಭ್ಯರ್ಥಿಗಳ ಹೆಸರಿನ ಮುಂದೆ ಸಿಂಹ, ಆನೆ, ಕುದುರೆ, ಪಕ್ಷಿ, ಸೂರ್ಯ, ಮನೆ, ಕರಡಿ, ಮರ, ಬಂಡಿ, ಹುಲಿ, ಹಸು, ಎರಡೆತ್ತುಹೂಡಿದ ನೇಗಲು ಈ ಹನ್ನೆರಡರ ಗುರ್ತುಗಳು ಓಟಿಂಗ್ ಕಾಗದಗಳಮೇಲೆ ಮುದ್ರಿಸಲ್ಪಡಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ. ಅಭ್ಯರ್ಥಿಗಳ ಸಂಖ್ಯೆಯು 12 ಕ್ಕಿಂತ ಹೆಚ್ಚಾದಲ್ಲಿ ಹೇಗೆ ಮಾಡಲ್ಪಡುವುದೋ ?

ಹುಬ್ಬಳ್ಳಿಯ ಮ್ಯುನಿಸಿಪಲ್ ಕೌನ್ಸಿಲರೂ, ಬೊಂಬಾಯಿ ನ್ಯಾಯವಿಧಾಯಕಸಭಾಸಭ್ಯರೂ ಪ್ರಸಿದ್ಧ ವಕೀಲರೂ ಆದ ರಾವ್‌ಬಹದ್ದೂರ್ ಸಿದ್ಧಪ್ಪ ಕಂಬಳಿ, ಬಿ.ಎ., ಎಲ್‌ಎಲ್.ಬಿ., ಯವರ ಧರ್ಮಪತ್ನಿಯವರು ಕಳೆದ ತಾ|| 23 ರಲ್ಲಿ ಶಿವೈಕ್ಯರಾದರೆಂದು ತಿಳಿದು ವಿಷಾದಿಸುತ್ತೇವಲ್ಲದೆ ಪತ್ನಿವಿಯೋಗದುಃಖಕ್ಕೆ ಪಾತ್ರರಾದ ರಾ|| ಬ|| ಕಂಬಳಿಯವರಿಗೂ ಮಾತೃವಿಯೋಗದುಃಖಕ್ಕೆ ಗುರಿಯಾದ ಅವರ ಮಕ್ಕಳುಗಳಿಗೂ ನಮ್ಮ ಅನುತಾಪವನ್ನು ತಿಳಿಸಿ ಮೃತರ ಆತ್ಮಕ್ಕೆ ನಿರಂತರ ಶಾಂತಿಯೂ ದುಃಖಭಾಜನರಿಗೆ ಮನಸ್ಸಮಾಧಾನವೂ ಆಗಲೆಂದು ಕೋರುತ್ತೇವೆ.

ರಾಜಧಾನಿಯ ಒಕ್ಕಲಿಗರ ಹಾಸ್ಟಲಿನಲ್ಲೂ, ಮನ್ನಾರ್ ಕೃಷ್ಣಶೆಟ್ಟರ ವೈಶ್ಯರಹಾಸ್ಟಲಿನಲ್ಲೂ, ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲೂ ಶ್ರೀಗಜಾನನೋತ್ಸವವು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಗೂಳೂರು ಶೇಷಣ್ಣನವರ ಬೀದಿಯಲ್ಲಿರುವ ಸಾಹುಕಾರ್ ವೀರಣ್ಣನವರು ಆಚೆ ಸೋಮವಾರರಾತ್ರಿ ಬ್ರಹ್ಮಶ್ರೀ ಶಿವಕಥಾಪಂಡಿತ ಶಿವಯ್ಯಶಾಸ್ತ್ರಿಗಳ ಕಥಾಕಾಲಕ್ಷೇಪದಿಂದ ಗಣೇಶನ ಮಂಗಳಾರತಿಯನ್ನು ಬಹಳ ಉದಾರವಾಗಿ ನಡೆಯಿಸಿದರು, ಮತ್ತು ಶ್ರೀ ಚಾಮುಂಡೇಶ್ವರಿ ನಾಟಕಸಂಘದವರು ಕಳೆದ ತಾ|| 30 ರಲ್ಲಿ ಗಣಪತಿ ಮಂಗಳಾರತಿಯನ್ನು ವಿಜೃಂಭಣೆಯಿಂದ ಜರುಗಿಸಿ ಸಂಗೀತಶ್ರವಣದಿಂದ ಅತಿಥಿಗಳನ್ನು ಸತ್ಕರಿಸಿದರು.

ಬರಾವರ್ದಾರರಾದ ಶಾನುಭೋಗ ಪಟೇಲರುಗಳಲ್ಲಿ ಯಾರಾದರು ಬೇರೆ ಉದ್ಯೋಗಗಳಿಗೆ ಸೇರಿದ್ದಲ್ಲಿ ತಮ್ಮ ಶಾನುಭೋಗ ಪಟೇಲಿ ಕೆಲಸವನ್ನು ಗುಮಾಸ್ತೆಯವರ ಮೂಲಕ ನಡಿಸುತ್ತಿರುವ ಪದ್ಧತಿಯಿಂದ ತೊಂದರೆಯಾಗುವಪ್ರಯುಕ್ತ ಅದನ್ನು ತಪ್ಪಿಸಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರಾರ್ಥಿಸಲ್ಪಟ್ಟಿದ್ದುದರಮೇಲೆ, ಸರ್ಕಾರ ಅಥವಾ ಇತರ ಉದ್ಯೋಗಗಳನ್ನು ಬಿಡಲಾರದವರು ತಮ್ಮ ಮೈನರುಮಕ್ಕಳ ಹೆಸರಿಗೆ ಬರಾವರ್ದು ಮಾಡಿಸಿ ಅವರು ದೊಡ್ಡವರಾಗುವವರೆಗೂ ಅವರ ಸಮೀಪಬಂಧುವು ಗುಮಾಸ್ತನಾಗಿರಬಹುದೆಂದೂ, ಮಕ್ಕಳಿಲ್ಲದಿದ್ದಲ್ಲಿ ಸಮೀಪಬಂಧುವೇ ಬರಾವರ್ದಾರನಾಗಿ ನಿಯಮಿಸಲ್ಪಡಬೇಕೆಂದೂ ಸರ್ಕಾರದ ಅಪ್ಪಣೆಯಾಗಿದೆ.

ಮಳವಳ್ಳಿ ತಾ|| ಚಿಕ್ಕರಸಿನಕೆರೆಯಿಂದ 9 ಜನ ಹೆಂಗುಸರು ನಿಡಸಾಲೆಯ ಸಂತೆಯಿಂದ ರಾಗಿಯನ್ನು ಕೊಂಡುತರಲು ಬಂಡಿಯಲ್ಲಿ ಕುಳಿತು ಮದ್ದೂರು-ಮಳವಳ್ಳಿ ಮಾರ್ಗವಾಗಿ ಹೋಗುತ್ತಿರುವಾಗ್ಗೆ ಕಳ್ಳರು ಅಡ್ಡಕಟ್ಟಿ ಬಂಡಿಯವನನ್ನು ಹೊಡೆದು ಅನಂತರ ಹೆಂಗುಸರನ್ನು ಬಂಡಿಯಿಂದ ಹೊರಕ್ಕೆಳದುಕೊಂಡು ಅವರನ್ನು ಪ್ರಹರಿಸಲು ಅವರು ಕೂಗಿಕೊಂಡರು. ಈ ಕೂಗನ್ನು ಕೇಳಿ ಹಿಂದೆಬರುತ್ತಿದ್ದ ಗಂಡುಸರು ಹೆದರಬೇಡಿ ಬರುತ್ತೇವೆಂದು ಉತ್ತರಕೊಡಲು ಅದನ್ನು ಕೇಳಿ ಕಳ್ಳರು ಓಡಿಹೋಗುವಾಗ್ಗೆ ಒಬ್ಬನು ಎಡವಿಬಿದ್ದನು. ಕೂಡಲೆ ಅವನನ್ನು ಹೆಂಗುಸರು ಬಹಳ ಧೈರ್ಯದಿಂದ ಹಿಡಿದುಕೊಂಡಿರುವಷ್ಟರಲ್ಲಿ ಗಂಡುಸರು ಬಂದು ಆ ಕಳ್ಳನನ್ನು ಹಿಡಿದುಕೊಂಡು ಮದ್ದೂರು ಪೋಲೀಸಿನವರ ವಶಪಡಿಸಿದರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರೂ, ಪ್ರಸಿದ್ಧ ಚೀನಾಜವಳಿಯ ವರ್ತಕರೂ ಆದ ಮ|| ಯು.ಆರ್. ಲಿಂಗೋಜಿರಾಯರು ಕಳೆದ 3-4 ದಿನಗಳಿಂದ ನ್ಯುಮೋನಿಯಾಜ್ವರ ಪೀಡಿತರಾಗಿದ್ದು ನೆನ್ನೆಯದಿವಸ ಬೆಳಿಗ್ಗೆ ವಿಧಿವಶರಾದರೆಂದು ತಿಳುಹಲು ಅತ್ಯಂತ ಖೇದವಾಗುತ್ತದೆ. ಇವರು ಬಹಳ ನಿಗರ್ವಿಗಳೂ, ಸರಸಿಗಳೂ, ಸ್ನೇಹಪರರೂ ಆಗಿದ್ದು ಬಹುಜನ ಪ್ರಿಯರಾಗಿದ್ದರಲ್ಲದೆ ವ್ಯಾಪಾರದಲ್ಲಿ ಬಹಳ ಮುಂದುವರಿಸಿದ್ದರು. ಇಂತಹ ಗುಣಾಢ್ಯರ ನಿಧನದಿಂದ ಅವರ ಮಿತ್ರಮಂಡಲಿಗೂ ಕುಲಬಾಂಧವರಿಗೂ ಅಪಾರವಾದ ದುಃಖವುಂಟಾಗಿದೆ. ಇವರ ಗತಿಸಿದ ಮೊದಲನೆಯ ಪತ್ನಿಗೆ ಒಬ್ಬ ಪ್ರಾಯಸಮರ್ಥ ಪುತ್ರನೂ ಇಬ್ಬರು ಹೆಣ್ಣುಮಕ್ಕಳೂ ಎರಡನೆಯ ಹೆಂಡಿತಿಗೆ ನಾಲ್ವರು ಚಿಕ್ಕಮಕ್ಕಳುಗಳೂ ಇರುವರು. ಮೃತರ ಆತ್ಮಕ್ಕೆ ಶಾಂತಿಯೂ, ವಿಯೋಗದುಃಖಕ್ಕೆ ಗುರಿಯಾದ ಪತ್ನೀಪುತ್ರಾದಿಗಳಿಗೆ ಮನಸ್ಸಮಾಧಾನವನ್ನೂ ಕೋರುತ್ತೇವೆ.

ಈಗ ಯಡತೊರೆ ಟವನ್ನಿರತಕ್ಕ ಸ್ಥಳವು ಬಹಳ ಸೀತವಾಗಿ ಅನಾರೋಗ್ಯವಾಗಿರುವುದರಿಂದ ಆರೋಗ್ಯವಾದ ಸ್ಥಳದಲ್ಲಿ ಹೊಸದಾಗಿ ಊರನ್ನು ಕಟ್ಟಲು ಮೈಸೂರು ಡಿ|| ಕಮಿಷನರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯೇರ್ಪಡಿಸಲ್ಪಟ್ಟು (1) ಯಡತೊರೆ ಅಪ್ಪರ್‌ಚಾನಲ್ಸ್ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರು (2) ಕೃಷ್ಣರಾಜಸಾಗರದ ಸ್ಪೆಸಲ್‌ಲ್ಯಾಂಡ್ ಅಕ್ವಿಜೆಷನ್ ಆಫೀಸರು (3) ಮೈಸೂರು ಸಬ್‌ಡಿವಿಜನ್ ಆಫೀಸರ್ ಮಿ|| ಟಿ. ಅಬ್ದುಲ್‌ಖಾದರ್‌ರವರು (4) ಯಡತೊರೆ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಅಮಲ್ದಾರ್‌ರವರು (5) ಯಡತೊರೆ ಮ್ಯು|| ಕೌನ್ಸಿಲ್ ವೈಸ್‌ಪ್ರೆಸಿಡೆಂಟರಾದ ಮ|| ದೇವೋಜಿರಾಯರು (6) ಮ|| ಬಳೇ ಸಿದ್ಧಲಿಂಗಸೆಟ್ಟರು ಮೆಂಬರುಗಳಾಗಿಯೂ (7) ಯಡತೊರೆ ಚಾನಲ್ಸ್ ಸಬ್‌ಡಿವಿಜನ್ ಅಸಿಸ್ಟೆಂಟ್ ಇಂಜನಿಯರು ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುವರು. ಈ ಕಮಿಟಿಯವರು ಯಡತೊರೆ ಟವನ್ನನ್ನು ಯಾವಸ್ಥಳದಲ್ಲಿ ಮತ್ತು ಯಾವರೀತಿಯಲ್ಲಿ ಕಟ್ಟಬೇಕೆಂಬುದನ್ನು ಪರ್ಯಾಲೋಚಿಸಿ ತಮ್ಮ ಅಭಿಪ್ರಾಯವನ್ನು ಪ್ರಭುತ್ವದವರಿಗೆ ತಿಳಿಸಿದಮೇಲೆ ಅದರಂತೆ ಅನುಸರಿಸಲ್ಪಡುವುದಾಗಿರುತ್ತದೆ.

ಮೈಸೂರು ಪ್ರಭುತ್ವದವರಿಂದ ನಡಿಸಲ್ಪಡುತ್ತಿರುವ ರೈಲ್ವೆಗಳಲ್ಲಿ ಇಂಟರ್‌ಮೀಡಿಯೆಟ್ ತರಗತಿಯು ಜನೋಪಯುಕ್ತವಾಗಿರುವುದರಿಂದ ತಪ್ಪಿಸಲ್ಪಡಲಾಗದು ಮತ್ತು ಛಾರ್ಜು ತಗ್ಗಿಸಲ್ಪಡಬಾರದು ; ಶಿವಮಗ್ಗ ಮತ್ತು ಬೀರೂರು ಮಧ್ಯೆ ಇಂಟರ್‌ಮೀಡಿಯೆಟ್ ತರಗತಿಯುಪಯೋಗಿಸಲ್ಪಡಬೇಕು ; ಮೀಟರ್‌ಗೇಜಿನಲ್ಲಿ 1 ನೇ ಮತ್ತು 2 ನೇ ತರಗತಿಗಳ ಛಾರ್ಜು ಸದ್ಯದಲ್ಲಿ ಹೆಚ್ಚು ಕಡಮೆ ಮಾಡಲ್ಪಡಬೇಕಾದುದಿಲ್ಲ. 25 ಮೈಲಿಗೆ ಕಡಮೆಯಿಲ್ಲದೆ 1 ನೇ ಮತ್ತು 2 ನೇ ತರಗತಿಗಳಲ್ಲಿ ಪ್ರಯಾಣಮಾಡುವವರು $1\frac{1}{2}$ ಛಾರ್ಜಿನಲ್ಲಿ 5 ದಿವಸಗಳಲ್ಲಿ ಹೋಗಿ ಬರಬಹುದು ಮತ್ತು 25 ಮೈಲಿಯೊಳಗೆ ಪ್ರಯಾಣಮಾಡುವವರು 25 ಮೈಲಿಯ ಛಾರ್ಜನ್ನು ಕೊಡುವುದಾದರೆ $1\frac{1}{2}$ ಛಾರ್ಜಿನಲ್ಲಿ 2 ದಿವಸಗಳೊಳಗೆ ಹೋಗಿ ಬರಬಹುದು ; ರಿಟರ್ನ್ ಟಿಕೆಟ್ಟಿನ ಸೌಲಭ್ಯವು ನ್ಯಾರೋಗೇಜ್ ರೈಲ್ವೆ ಪ್ರಯಾಣಿಕರಿಗೂ ಅನ್ವಯಿಸುವುದು ; ಈ ಬದಲಾವಣೆಯು ಜಾರಿಗೆ ತರಲ್ಪಟ್ಟ 6 ತಿಂಗಳಮೇಲೆ ಅದರ ಫಲಿತಾಂಶವು ಪುನರ್ವಿಮರ್ಶೆ ಮಾಡಲ್ಪಡತಕ್ಕದು ಎಂದು ರೈಲ್ವೆಸ್ಟ್ಯಾಂಡಿಂಗ್ ಕಮಿಟಿಯವರು ಮಾಡಿರುವ ನಿರ್ಧಾರವು ಪ್ರಭುತ್ವದವರಿಂದ ಅಂಗೀಕೃತವಾಗಿರುತ್ತದೆ.

ಯಳಂದೂರು ತಾ|| ಹೊನ್ನೂರು ದೊಂಬಿಕಲಹದಲ್ಲಿ ಅಪರಾಧಿಗಳಾಗಿ ಸೆರೆಹಿಡಿಯಲ್ಪಟ್ಟಿದ್ದ 65 ಜನರಲ್ಲಿ 15 ಜನರು ಡಿಸ್ಚಾರ್ಜುಮಾಡಲ್ಪಟ್ಟು ಉಳಿದವರ ವಿಚಾರಣೆಯು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆದು ಕಳೆದ ಮಂಗಳವಾರ 50 ಜನ ಅಪರಾಧಿಗಳಲ್ಲಿ 4 ಜನರು ಬಿಡಲ್ಪಟ್ಟು 3 ಜನರಿಗೆ 1 ವರ್ಷ, 7 ಜನರಿಗೆ 8 ತಿಂಗಳ, 21 ಜನರಿಗೆ 4 ತಿಂಗಳ ಕಠಿಣಕಾರಾಗೃಹವಾಸಶಿಕ್ಷೆಯೂ, 3 ಜನರಿಗೆ 8 ತಿಂಗಳ, 2 ಜನರಿಗೆ 6 ತಿಂಗಳ ಮತ್ತು 10 ಜನರಿಗೆ 4 ತಿಂಗಳ ಸಾಧಾರಣ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟು 46 ಜನ ಅಪರಾಧಿಗಳೂ ಸಾಯುಧರಾದ ರಿಜರ್ವ್ ಪೋಲೀಸಿನವರ ಬೆಂಗಾವಲಿನಿಂದ ರಾಜಧಾನಿಯ ಕಾರಾಗೃಹಕ್ಕೆ ಕರೆತರಲ್ಪಟ್ಟರು. ಈ ವಿವಾದದ ಸಂದರ್ಭದಲ್ಲಿ ಯಳಂದೂರು ತಾಲ್ಲೂಕು ಅಮಲ್ದಾರರ, ಡಾಕ್ಟರರ ಮತ್ತು ಪೋಲೀಸ್ ಇನ್ಸ್ಪೆಕ್ಟರಮೇಲೆ ಮ್ಯಾಜಿಸ್ಟ್ರೇಟರು ಬಹಳ ಕಠಿಣವಾಗಿ ಬರೆದಿರುವರೆಂದು ತಿಳಿಯಬರುತ್ತದೆ. ಈ ಮೂವರಲ್ಲಿ ಅಮಲ್ದಾರ್ ಮ|| ರಾಮದಾಸಪ್ಪನವರು ಉದ್ಯೋಗದಿಂದ ರಿಟೈರಾದರು. ಉಳಿದ ಡಾಕ್ಟರೂ, ಪೋಲೀಸ್ ಇನ್ಸ್ಪೆಕ್ಟರೂ ಬೇರೆ ಸ್ಥಳಗಳಿಗೆ ವರ್ಗಾಯಿಸಲ್ಪಟ್ಟರು. ಶಿಕ್ಷಿತರಾದ ಅಪರಾಧಿಗಳು ಸೆಷನ್ನಿಗೆ ಅಪೀಲು ಮಾಡುವವರಾಗಿದ್ದಾರೆಂದೂ ಈ ವಿವಾದಕ್ಕೆ ಸಂಬಂಧಪಟ್ಟ ರಿಕಾರ್ಡುಗಳು ಮಾಯವಾಗಿರುತ್ತವೆಂದೂ ತಿಳಿಯಬರುತ್ತದೆ.

ದಸರಾಮಹೋತ್ಸವ.

(ಅಕ್ಷಯನಾಮ ಸಂವತ್ಸರದ ಆಶ್ವಯುಜ ಶುದ್ಧ)

ಅಕ್ಟೋಬರ್ ೧೯೨೬.

೭ ನೇ ಗುರುವಾರ—ಪ್ರಾತಃಕಾಲ ೯ ಘಂಟೆಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವನ್ನು ಬೆಳಸುತ್ತಾರೆ. ದಿವಾನರಿಂದಲೂ, ಖಾಸಾಭಾವಮೈದಂದರಿಂದಲೂ, ಕೌನ್ಸಿಲರ್‌ಗಳಿಂದಲೂ, ಸರದಾರರುಗಳಿಂದಲೂ ಮುಖ್ಯವಾದ ಅರಸುಗಳಿಂದಲೂ ನಜರ್. ಸಾಯಂಕಾಲ ೬ ಘಂಟೆಗೆ ಪಟ್ಟದ ಆನೆ ಕುದುರೆಗಳು ಕೆರೆಬಳಿಗೆ ಬಿಜಮಾಡುವುವು. ೭ ಘಂಟೆಗೆ ದರ್ಬಾರ್. ಸಿವಿಲ್ ಆಫೀಸರುಗಳಿಂದಲೂ ಅರಸುಗಳು ವಗೈರೆ ದರ್ಬಾರಿಗಳಿಂದಲೂ ನಜರ್.

೮ ನೇ ಶುಕ್ರವಾರ—ಪ್ರಾತಃಕಾಲ ೮ ಘಂಟೆಗೆ ಪಟ್ಟದ ಆನೆ ಕುದುರೆಗಳು ಕೆರೆಬಳಿಗೆ ಬಿಜಮಾಡುವುವು. ಸಾಯಂಕಾಲ ೭ ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ ಪೋಲೀಸ್ ಆಫೀಸರುಗಳಿಂದಲೂ ನಜರ್.

೯ ನೇ ಶನಿವಾರದಿಂದ ೧೪ ನೇ ಗುರುವಾರದವರೆಗೆ ಪ್ರಾತಃಕಾಲ ೮ ಘಂಟೆಗೆ ಪಟ್ಟದ ಆನೆ ಕುದುರೆಗಳು ಕೆರೆಬಳಿಗೆ ಬಿಜಮಾಡುವುವು. ಸಾಯಂಕಾಲ ೬ ಘಂಟೆಗೆ ಪಟ್ಟದ ಆನೆ ಕುದುರೆಗಳು ಕೆರೆಬಳಿಗೆ ಬಿಜಮಾಡುವುವು. ೭ ಘಂಟೆಗೆ ದರ್ಬಾರ್.

೧೫ ನೇ ಶುಕ್ರವಾರ—ಪ್ರಾತಃಕಾಲ ೭ ಘಂಟೆಗೆ ಪಟ್ಟದ ಆನೆ ಕುದುರೆಗಳೂ ಆಯುಧವೂ ಕೆರೆಬಳಿಗೆ ಬೆಳಿದು ಅರಮನೆಗೆ ೮ ಘಂಟೆಗೆ ಹಿಂದಕ್ಕೆ ಬಿಜಮಾಡುವುವು. ನಂತರ ಆಯುಧ ಗಜಾಶ್ವಾದಿಗಳ ಪೂಜೆ. ಸಾಯಂಕಾಲ ೭ ಘಂಟೆಗೆ ದರ್ಬಾರ್ (ಯೂರೋಪಿಯನ್ ಗೆಸ್ಟ್ಸ್).

೧೬ ನೇ ಶನಿವಾರ—ಪ್ರಾತಃಕಾಲ ೮ ಘಂಟೆಗೆ ಆಯುಧ, ಗಜಾಶ್ವಗಳು ಬನ್ನೀಮಂಟಪಕ್ಕೆ ಬಿಜಮಾಡುವುವು. ಅನಂತರ ಜಟ್ಟೀಕಾಳಗ. ಸಾಯಂಕಾಲ ೪|| ಘಂಟೆಗೆ ಜಂಬೂಸವಾರಿ.

೧೭ ನೇ ಭಾನುವಾರ—ಸಾಯಂಕಾಲ ೭|| ಘಂಟೆಗೆ ದರ್ಬಾರ್. ಸೆಜ್ಜೆ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದೆ ಇರುವ ಸಿವಿಲ್, ಮಿಲಿಟರಿ ಮತ್ತು ಪೋಲೀಸ್ ಆಫೀಸರುಗಳಿಂದಲೂ ಪ್ರಜಾಪ್ರತಿನಿಧಿಗಳಿಂದಲೂ ನಜರ್.

೧೮ ನೇ ಸೋಮವಾರ—ಸಾಯಂಕಾಲ ೭|| ಘಂಟೆಗೆ ದರ್ಬಾರ್.

ಕೈ|| ಚೆನ್ನಬಸಪ್ಪನವರ ಸ್ಮಾರಕೋತ್ಸವ.

ಈ ಅತ್ಯಾವಶ್ಯಕಕಾರ್ಯಕ್ಕಾಗಿ ಶೇಖರಿಸಲ್ಪಡುತ್ತಿರುವ ದ್ರವ್ಯನಿಧಿಗೆ ಈ ಕೆಳಗೆ ಕಂಡ ಪ್ರಜಾಪ್ರತಿನಿಧಿಸಭಾ ಮೆಂಬರುಗಳಾದ ದೊಡ್ಡಮನುಷ್ಯರುಗಳಿಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ ಮತ್ತು ಮತಾಭಿಮಾನಿಗಳಾದ ಇತರ ದೊಡ್ಡಮನುಷ್ಯರುಗಳು ಕೂಡಲೆ ಸಹಾಯಮಾಡಬೇಕಾಗಿ ಕೋರಿದೆ.

ಮ|| ಗಳಾದ (1) ಡಿ. ಬಸವೇಗೌಡರು 10 ರೂ. (2) ಸೂರಣಗಿ ಸಿದ್ಧಬಸಪ್ಪನವರು 10 ರೂ. (3) ಜೆ. ಎಸ್. ಮುರಿಘಪ್ಪನವರು 10 ರೂ. ಒಟ್ಟು 30 ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು ಸಿಟಿ.

ಬೆಂಗಳೂರು “ ಡ್ಯಾಲಿ ಮೆಮೋರಿಯಲ್ ” ಸಭಾಮಂದಿರದಲ್ಲಿ ನಡೆದ ವರ್ತಕರ ಮತ್ತು ಕೈಗಾರಿಕೆಗಳನ್ನು ನಡೆಸತಕ್ಕವರ ಸಭೆಯಲ್ಲಿ ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

1926 ನೇ ಇಸವಿ ಸೆಪ್ಟಂಬರು 30 ನೇ ತಾರೀಖು ಗುರುವಾರ.

ಮಹನೀಯರೆ,

ಈದಿನ ನಡೆಯತಕ್ಕ ಈ ಸಭೆಗೆ ತಮ್ಮೆಲ್ಲರನ್ನೂ ಆದರದಿಂದ ಬರಮಾಡಿಕೊಳ್ಳುವುದು, ಈ ಸಮಯದಲ್ಲಿ, ನನ್ನ ಮೊದಲನೆಯ ಕರ್ತವ್ಯವಾಗಿರುತ್ತದೆ. ನನಗೂ ಮತ್ತು ತಮ್ಮೆಲ್ಲರಿಗೂ, ಪ್ರಯೋಜನವುಂಟಾಗಲೆಂಬ ಉದ್ದೇಶದಿಂದ, ಈ ಸಭೆಯನ್ನು ಏರ್ಪಡಿಸಲಾಗಿದೆ. ಕೈಗಾರಿಕೆ ಮತ್ತು ವ್ಯಾಪಾರ, ಇವೆರಡೇ ಈ ಸಿಟಿಯ ಅಭಿವೃದ್ಧಿಗೆ ಮುಖ್ಯವಾದ ಆಧಾರ. ಇವೆರಡರ ಯೋಗಕ್ಷೇಮವನ್ನೂ ನೋಡಿಕೊಂಡು, ಅವುಗಳನ್ನು ಮುಂದುವರಿಸಲು ಸಾಧ್ಯವಾದ ಅನುಕೂಲಗಳನ್ನೆಲ್ಲಾ ಒದಗಿಸಬೇಕೆಂಬುದು, ಶ್ರೀಮನ್ಮಹಾರಾಜರವರ ಸರ್ಕಾರದವರ ಆಸೆ. ಈ ವಿಷಯವಾಗಿ ತಮ್ಮಲ್ಲಿ ಪ್ರತಿಯೊಬ್ಬರಿಗೂ, ಮತ್ತು ತಮ್ಮೆಲ್ಲರ ಒಟ್ಟು ಸಮುದಾಯಕ್ಕೂ, ಧರವಸೆ ಕೊಡಲು ಅಪೇಕ್ಷಿಸುತ್ತೇನೆ. ಮಹಾಶಯರೆ, ತಮ್ಮೆಲ್ಲರನ್ನೂ ಸಭೆ ಸೇರಿಸಿರುವುದಕ್ಕೆ ಅನೇಕ ಉದ್ದೇಶಗಳುಂಟು. ಯಾವ ಯಾವ ತೊಂದರೆಗಳು ತಮ್ಮನ್ನು ಬಾಧಿಸುತ್ತಿರಬಹುದು, ಅಲ್ಲದೆ ಪ್ರಕೃತದಲ್ಲಿ ತಮಗಿರುವ ಅನುಕೂಲಗಳನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಏನುಮಾಡಬಹುದು, ಎಂಬುದನ್ನು ನೇರವಾಗಿ ತಮ್ಮಿಂದಲೇ ತಿಳಿಯಬೇಕೆಂಬುದು, ಅವುಗಳ ಪೈಕಿ ಒಂದಾಗಿರುತ್ತದೆ. ಬೆಂಗಳೂರು ಸಿಟಿಯ ವ್ಯಾಪಾರದ ವಿಷಯದಲ್ಲಿ ತಮಗೆ ಸ್ನಿಗ್ಧವಾದ ಸಂಬಂಧವಿರುತ್ತದೆ ; ಆದಕಾರಣ, ಇಲ್ಲಿನ ವ್ಯಾಪಾರವನ್ನು ಅಭಿವೃದ್ಧಿಪಡಿಸಲು ತಾವು ಮಾಡುತ್ತಿರುವ ಪ್ರಯತ್ನಗಳಿಗೆ ಯಾವ ರೀತಿಗಳಲ್ಲಿ ಸರ್ಕಾರದವರು ಉತ್ತಮವಾದ ಸಹಾಯವನ್ನು ಒದಗಿಸಬಹುದೆಂಬುದನ್ನು ತಿಳಿಯಪಡಿಸುವುದು ತಮಗೆ ಸಾಧ್ಯವಾಗುತ್ತದೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಕೈಗಾರಿಕೆಗಳು.

ಬೆಂಗಳೂರು ಸಿಟಿಯಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯತಕ್ಕ ಕೈಗಾರಿಕೆಯ ಉದ್ಯಮಗಳ ಸಂಖ್ಯೆಯು 1916-17 ನೇ ಸಾಲಿನಲ್ಲಿ 48 ಆಗಿದ್ದುದು, 1924-25 ನೇ ಸಾಲಿನಲ್ಲಿ 197 ಕ್ಕೆ ಹೆಚ್ಚಿತೆಂದು ನನಗೆ ತಿಳಿಯಬಂದಿದೆ ; ಆದರೆ ದಿನವೊಂದಕ್ಕೆ ಸರಾಸರಿ 20 ಜನಗಳಿಗೆ ಮೇಲ್ಪಟ್ಟು ಕೆಲಸಗಾರರನ್ನು ಇಟ್ಟುಕೊಂಡಿರುವ ಕಾರ್ಖಾನೆಗಳ ಸಂಖ್ಯೆಯು 44 ಮಾತ್ರವೇ ಆಗಿದೆ. ಈ ಕೈಗಾರಿಕೆಗಳ ಕಾರ್ಖಾನೆಗಳ ಪೈಕಿ, ಬಸವನಗುಡಿ ಮುಂತಾದ (ಎಕ್ಸ್‌ಟೆನ್ಷನು) ಪ್ರದೇಶಗಳಲ್ಲಿ ಸುಮಾರು ಮುವ್ವತ್ತು ಕಾರ್ಖಾನೆಗಳು ಇವೆ. ಕೈಗಾರಿಕೆಗಳನ್ನು ನಡೆಸಲು ಏರ್ಪಡಿಸಲ್ಪಟ್ಟಿರುವ ಸುತ್ತಮುತ್ತಲಿನ ಇತರ ಪ್ರದೇಶಗಳಲ್ಲಿ ಏಳು ಕಾರ್ಖಾನೆಗಳಿವೆ ; ಉಳಿದವು ಜನಸಂದಣಿಯು ಹೆಚ್ಚಾಗಿರುವ ಸಿಟಿಯ ನಾನಾ ಭಾಗಗಳಲ್ಲಿಯೂ ಇವೆ. ಕೈಗಾರಿಕೆಯನ್ನು ಕ್ರಮವಾಗಿ ಅಭಿವೃದ್ಧಿಗೊಳಿಸಲು, ಸರಿಯಾದ ಕಾರ್ಯಕ್ರಮವೊಂದು ನಿಗದಿಯಾಗಿಲ್ಲ. ಕೈಗಾರಿಕೆಯ ಉದ್ಯಮಗಳನ್ನು ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಬೇಕೆಂಬುದಕ್ಕೂ, ಒಂದು ಗೊತ್ತಾದ ಏರ್ಪಾಡು ಇಲ್ಲದಂತಾಗಿದೆ. ಆದಕಾರಣ, ಸಿಟಿಯಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ವಿಶೇಷ ಅಡಚಣೆಯುಂಟಾಗಿರುತ್ತದೆ. ಮೇಲ್ಕಾಣಿಸಿದುಗಳಿಗೆ ಸಂಬಂಧಪಟ್ಟ ವಿಷಯಗಳು ಮ್ಯುನಿಸಿಪಾಲಿಟಿಗಳಿಗೆ ಸೇರಿದವುಗಳೆಂಬುದೇನೋ ತಿಳಿದೇಯಿದೆ. ಆದರೂ, ಸರ್ಕಾರದವರಿಗೂ ಈ ವಿಷಯದಲ್ಲಿ ತೀವ್ರವಾದ ಆಸಕ್ತಿಯುಂಟು. ಆದಕಾರಣ, ಸಿಟಿಯಲ್ಲಿ ವ್ಯಾಪಾರ ನಡೆಯುತ್ತಿರುವ ಮುಖ್ಯ ಸ್ಥಳಗಳ ಸ್ಥಿತಿಗತಿಗಳನ್ನು ಉತ್ತಮಪಡಿಸಿ ವ್ಯಾಪಾರವನ್ನು ಅಭಿವೃದ್ಧಿಗೆ ತರಲು ಯಾವರೀತಿ ಕೆಲಸ ನಡೆಸಬಹುದೆಂಬುದನ್ನು ಪ್ರತ್ಯಕ್ಷವಾಗಿ ತಮ್ಮಿಂದ ತಿಳಿಯಲು ಸರ್ಕಾರದವರು ಕುತೂಹಲಪಡುತ್ತಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ, ಒಂದೊಂದು ವಿಧದ ವಸ್ತುವಿನ ವ್ಯಾಪಾರವೂ, ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಪ್ರದೇಶದಲ್ಲಿ ಒಟ್ಟಾಗಿ ನಡೆಯುವುದು ವಾಡಿಕೆ. ಈ ವಿಷಯವು ತಮಗೂ ತಿಳಿದಿರಬಹುದು. ನಮ್ಮ ಇಂಡಿಯಾ ದೇಶದ ದೊಡ್ಡ ಪಟ್ಟಣಗಳಲ್ಲಿಯೂ ಸಹ ಹಿಂದಣ ಕಾಲದಲ್ಲಿ ಇದೇ ಪದ್ಧತಿಯಿದ್ದಿತು. ಆದರೆ ಈಗ ಅದು ರೂಢಿಯಲ್ಲಿಲ್ಲದೆ ತಪ್ಪಿ ಹೋಗಿದೆ. ಈ ಪದ್ಧತಿಯನ್ನು ಮತ್ತೆ ಆಚರಣೆಗೆ ತರಬೇಕೇ, ಬೇಡವೇ, ಎಂಬ ವಿಷಯದಲ್ಲಿ, ತಾವುಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೋರುತ್ತೇನೆ. ಸಿಟಿಯಲ್ಲಿರುವ ಭಾರಿ ಕೈಗಾರಿಕೆಯ ಕಾರ್ಖಾನೆಗಳಲ್ಲಿ ಸುಮಾರು 8,100 ಮಂದಿಗಳು ಕೆಲಸಮಾಡುತ್ತಿದ್ದಾರೆ. ಇವರೆಲ್ಲರಿಗೂ ತಕ್ಕಂತೆ ವಾಸದ ಮನೆಗಳನ್ನು ಕಟ್ಟಿಸಿ ಕೊಡುವುದನ್ನು ಪರ್ಯಾಲೋಚಿಸಬೇಕಾಗಿದೆ. ಈ ವಿಷಯದಲ್ಲಿಯೂ ಸಹ, ನಿಮ್ಮ ಸಲಹೆಗಳಿಂದ ಎಷ್ಟೋ ಸಹಾಯವಾಗುತ್ತದೆ.

ಸರಕುಗಳನ್ನು ಸಾಗಿಸಲು ಸೌಕರ್ಯಗಳು.

ವ್ಯಾಪಾರವು ಅಭಿವೃದ್ಧಿಯಾಗಬೇಕಾದರೆ ಸಂಚಾರಕ್ಕೆ ಉತ್ತಮವಾದ ರಸ್ತೆಗಳೇ ಮುಂತಾದವುಗಳಿರಬೇಕು , ಸಾಮಾನುಗಳನ್ನು ಸಾಗಿಸಲು ತಕ್ಕ ಅನುಕೂಲಗಳಿರಬೇಕು. ರೈಲ್ವೆಯ ಅನುಕೂಲತೆಗಳು ಹೆಚ್ಚಾದ ಹಾಗೆಲ್ಲಾ, ವ್ಯಾಪಾರವು ವೃದ್ಧಿಯಾಗುವುದು ಖಂಡಿತ. ಆದಕಾರಣ, ಇಂಡಿಯಾದೇಶದ ಇತರ ಕಡೆಗಳಂತೆಯೇ ಮೈಸೂರು ಸಂಸ್ಥಾನದಲ್ಲಿಯೂ ಕೂಡ, ರೈಲ್ವೆಯ ಅನುಕೂಲತೆಗಳನ್ನು ಹೆಚ್ಚಿಸುವ ವಿಚಾರವನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಪರ್ಯಾಲೋಚಿಸಬೇಕಾಗಿದೆ. ಬೆಂಗಳೂರು ಸಿಟಿಯು ರೈಲ್ವೆಯ ಮಧ್ಯರಂಗವಾಗಿರುವುದೇ ಅದರ ಪ್ರಾಮುಖ್ಯತೆಗೆ ಬಹುಮಟ್ಟಿಗೆ ಕಾರಣವಾಗಿದೆ. ಈ ವಿಚಾರದಲ್ಲಿಯೂ, ಮತ್ತು ಇದಕ್ಕೆ ಸಂಬಂಧಪಟ್ಟ ಇತರ ವಿಚಾರಗಳಲ್ಲಿಯೂ, ನಿಮಗೆ ಅನೇಕ ಅನುಕೂಲಗಳು ದೊರೆತಿವೆ. ಇದಕ್ಕೆ “ಚೇಂಬರ್ ಆಫ್ ಕಾಮರ್ಸ್” ಎಂಬ ವಾಣಿಜ್ಯ ಸಂಘವು ಹಗಲಿರುಳೂ ಜಾಗರೂಕತೆಯಿಂದ ಕೆಲಸಮಾಡುತ್ತಾ, ನಿಮಗೆ ಬೇಕಾದ ಸಾಧನಗಳನ್ನೆಲ್ಲಾ ಒದಗಿಸಿಕೊಡಲು ಪ್ರಯತ್ನಿಸುತ್ತಿರುವುದೇ ಕಾರಣ. ಆದಾಗ್ಗ್ಯೂ, ಸಾಮಾನ್ಯವಾಗಿ, ಸಾಮಾನನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಅನುಕೂಲಪಡಿಸುವುದೊಂದು ; ಇದಕ್ಕಿಂತಲೂ ವಿಶೇಷವಾಗಿ ರೈಲ್ವೆಯ ಸೌಕರ್ಯಗಳನ್ನು ಹೆಚ್ಚಿಸಿಕೊಡುವುದೊಂದು ; ಇವೆರಡರಲ್ಲಿಯೂ ಸರ್ಕಾರದವರು ನಿಮಗೆ ಯಾವರೀತಿ ಸಹಾಯಮಾಡಬಹುದಾಗಿದೆಯೆಂಬುದನ್ನು, ನಿಮ್ಮಿಂದ ತಿಳಿದುಕೊಳ್ಳುವುದು ಸರ್ಕಾರದವರಿಗೆ ಅತ್ಯಂತ ಸಂತೋಷಕರವಾಗಿದೆ.

ಬ್ಯಾಂಕು ಲೇವಾದೇವಿಗಳ ಸೌಕರ್ಯಗಳು.

ಬ್ಯಾಂಕುಗಳ ಲೇವಾದೇವಿಯ ಅನುಕೂಲತೆಗಳನ್ನು ಹೆಚ್ಚಿಸುವ ಮತ್ತೊಂದು ವಿಚಾರವಿದೆ. ಮೈಸೂರು ಬ್ಯಾಂಕಿನವರು ಸಮರ್ಪಕವಾದ ರೀತಿಯಲ್ಲಿ ಕೆಲಸಮಾಡಿರುತ್ತಾರೆ. ಈ ಬ್ಯಾಂಕಿನಿಂದ ಮೈಸೂರು ಸಂಸ್ಥಾನದ ವ್ಯಾಪಾರಕ್ಕೆ ಅತ್ಯಂತ ಸಹಾಯವಾಗಿದೆ. ಈ ಬ್ಯಾಂಕಿನಲ್ಲಿ, ಈಗ ಪ್ರತಿ ವರ್ಷವೂ ಮೂರುಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಹಣವನ್ನು ಸಾಲ ಕೊಡುವ ವೈವಾಟು ನಡೆಯುತ್ತಾ ಇದೆ. ಈ ಬ್ಯಾಂಕಿನಿಂದ ಉಂಟಾಗುವ ಪ್ರಯೋಜನದ [illegible] ಸರ್ಕಾರದವರು [illegible] ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ. ಈ ಸಂಸ್ಥಾನದ ಶಾಖಾ ಸ್ಥಳಗಳಲ್ಲಿಯೂ, ಈ ಬ್ಯಾಂಕಿನ ಶಾಖೆಗಳಿವೆ. ಅವುಗಳಲ್ಲಿ ಜನರು ಆಸಕ್ತಿಯಿಂದ ಲೇವಾದೇವಿಯನ್ನು ನಡೆಸುತ್ತಿದ್ದಾರೆ. ಆದರೆ, ಇದರ ಉಪಯೋಗವನ್ನು ಇನ್ನೂ ಹೆಚ್ಚಿಸಬಹುದಾಗಿದೆ. ಈ ಭಾಗದಲ್ಲಿ ತಾವೆಲ್ಲರೂ ಗೊತ್ತಾಗಿ ಸಲಹೆಗಳನ್ನು ತಿಳಿಸಿದರೆ, ನಾನು ಸಂತೋಷದಿಂದ ಅವುಗಳನ್ನು ಪರ್ಯಾಲೋಚಿಸುತ್ತೇನೆ. ಲೇವಾದೇವಿಯ ಸೌಕರ್ಯಗಳನ್ನು ಹೆಚ್ಚಾಗಿ ಕಲ್ಪಿಸಬೇಕೆಂಬ ವಿಷಯವನ್ನು, ಈಚಿನ ವರುಷಗಳಲ್ಲಿ ನಮ್ಮ ಇಂಡಿಯಾದೇಶದ ಜನರು, ವಿಶೇಷ ಆಸಕ್ತಿಯಿಂದ ಪರ್ಯಾಲೋಚಿಸುತ್ತಿದ್ದಾರೆ. ಇದನ್ನು ಪರ್ಯಾಲೋಚಿಸುತ್ತಿರುವಷ್ಟುಮಟ್ಟಿಗೆ, ಅವರು ಮತ್ತಾವುದನ್ನೂ ಪರ್ಯಾಲೋಚಿಸುತ್ತಾ ಇಲ್ಲ. ಇಂಡಿಯನ್ ಕರೆನ್ಸಿ ಕಮಿಷನ್ ಸಭೆಯವರು ಈಚೆಗೆ ತಮ್ಮ ವರದಿಯನ್ನು ಪ್ರಕಟಮಾಡಿದ್ದಾರೆ. ಪರಿಣಾಮದಲ್ಲಿ ವಿಶೇಷ ಪ್ರಯೋಜನವುಂಟಾಗುವಂತೆ ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಬ್ಯಾಂಕುಗಳ ಸಹಾಯದಿಂದ ಲೇವಾದೇವಿಯ ಸೌಕರ್ಯಗಳನ್ನು ಹೆಚ್ಚಿಸುವುದೂ ಸಹ, ಅವುಗಳಲ್ಲೊಂದಾಗಿದೆ. ಈ ವಿಷಯಕ್ಕೆ ತಾವೆಲ್ಲರೂ ಗಮನಕೊಡಬೇಕೆಂದು ಕೋರುತ್ತೇನೆ. ಇಂಡಿಯಾದೇಶದಲ್ಲಿನ ಲೇವಾದೇವಿಯ ಸ್ಥಿತಿಗತಿಗಳನ್ನು ವಿಸ್ತಾರವಾಗಿಯೂ, ಶಾಸ್ತ್ರೀಯವಾಗಿಯೂ, ಪರಿಶೀಲನೆ ಮಾಡಬೇಕೆಂದು ಅವರು ಒತ್ತಿ ಹೇಳಿದ್ದಾರೆ. ಈ ಅಂಶವನ್ನು ತಿಳಿಸುವುದರಲ್ಲಿ “ಇಂಡಿಯಾ ದೇಶದಲ್ಲಿ ಲೇವಾದೇವಿಯು ಸರಿಯಾಗಿ ನಡೆಯಲು ಸೌಕರ್ಯಗಳನ್ನುಂಟುಮಾಡಿ ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಾಧಕವಾಗುವ ಪ್ರತಿಯೊಂದು ಪ್ರಯತ್ನವನ್ನೂ ಮಾಡಬೇಕು.” ಎಂದು ಸದರಿ ಸಭೆಯವರು ಸಲಹೆಮಾಡಿದ್ದಾರೆ. ಇದಲ್ಲದೆ, ಈ ಭಾಗದಲ್ಲಿ ಅಭಿವೃದ್ಧಿಗೆ ಆವಶ್ಯಕವಾದ ಏರ್ಪಾಡುಗಳನ್ನು ಕಲ್ಪಿಸುವಾಗ, ಒಳಪ್ರದೇಶಗಳಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಹಣವನ್ನು ಕಳುಹಿಸುವ ಬಗ್ಗೆ, ಬ್ಯಾಂಕುಗಳಿಗೂ, ಲೇವಾದೇವಿ ಮಾಡುವವರಿಗೂ ಮಾತ್ರವೇ ಅಲ್ಲದೆ, ಜನಸಾಮಾನ್ಯದವರಿಗೂ ಸುಲಭವಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು, ಅವುಗಳನ್ನು ಪ್ರಚಾರಕ್ಕೆ ತರುವ ವಿಷಯಕ್ಕೆ ವಿಶೇಷ ಗಮನಕೊಡಬೇಕೆಂದೂ ಸಹ, ಸದರಿ ಕಮಿಟಿಯವರು ಸಲಹೆಮಾಡಿದ್ದಾರೆ. ಇವುಗಳು ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳು ; ಇವುಗಳು ಇಂಡಿಯಾ ದೇಶದ ಇತರ ಪ್ರದೇಶಗಳಿಗೆ ಸಂಬಂಧಪಟ್ಟಿರುವಷ್ಟರಮಟ್ಟಿಗೆ, ಮೈಸೂರು ದೇಶಕ್ಕೂ, ಸಂಬಂಧಪಟ್ಟಿವೆ: ಮತ್ತು ಈ ವಿಷಯಗಳನ್ನು ಕುರಿತು ನೀವುಗಳು ಹೇಳತಕ್ಕ ಅಂಶಗಳನ್ನು ತಿಳಿದುಕೊಳ್ಳುವುದು ಪ್ರಯೋಜನಕರವಾದುದೇ ಸರಿ. ಲೇವಾದೇವಿಯನ್ನು ಉತ್ಸಾಹದಿಂದ ನಡೆಸಿ, ತನ್ಮೂಲಕ ದೇಶೋನ್ನತಿಗೆ ಸಾಧಕವಾಗುವಂತೆ ಕೆಲಸ ಮಾಡಬಹುದು. ಈ ವಿಷಯವು, ನಮ್ಮ ಸಂಸ್ಥಾನದಲ್ಲಿ ಇನ್ನೂ ಚೆನ್ನಾಗಿ ತಿಳಿವಳಿಕೆಗೆ ಬಂದಿಲ್ಲವೆಂಬ ಸಂಗತಿಯನ್ನು ನಾನು ಹೇಳಬೇಕಾಗಿಯೇ ಇಲ್ಲ. ಇದರ ಪ್ರಾಮುಖ್ಯತೆಯನ್ನು ಜನರು ಇನ್ನೂ ಚೆನ್ನಾಗಿ ಗ್ರಹಿಸಿಕೊಳ್ಳುವಂತೆ ಯಾವುದಾದರೂ ಪ್ರಯತ್ನವನ್ನು ಮಾಡುವುದು ಸಾಧ್ಯವಾಗಿದ್ದಲ್ಲಿ, ಅದನ್ನು ತಮ್ಮಿಂದ ಕೇಳಿ ತಿಳಿದುಕೊಳ್ಳುವುದು ಸರ್ಕಾರದವರಿಗೆ ಸಂತೋಷಕರವೇ ಸರಿ.

ಆಕ್ಟ್ರಾಯಿ ಸುಂಕಗಳು.

ಹಾಲಿ ಜಾರಿಯಲ್ಲಿರುವ ಆಕ್ಟ್ರಾಯಿ ಸುಂಕಗಳ ವಿಷಯದಲ್ಲಿ, ಎಲ್ಲೆಲ್ಲಿಯೂ ಜನರು ಆಕ್ಷೇಪಿಸುತ್ತಿದ್ದಾರೆ. ಇದು ತಮ್ಮೆಲ್ಲರಿಗೂ ತಿಳಿದೇ ಇದೆ. ಈ ಸುಂಕಗಳು ಅನೇಕ ಕಡೆಗಳಲ್ಲಿ ಕೇವಲ ರಹದಾರಿ ಸುಂಕಗಳಾಗಿ ಪರಿಣಮಿಸಿವೆ ; ಆದಕಾರಣ, ವ್ಯಾಪಾರಕ್ಕೆ ಕುಂದಕವನ್ನುಂಟುಮಾಡುವ ಸ್ಥಿತಿಯಲ್ಲಿವೆ. ಮ್ಯುನಿಸಿಪಾಲಿಟಿಗಳಿಗೆ ಬಹುಮಟ್ಟಿಗೆ ಆಕ್ಟ್ರಾಯಿ ಸುಂಕಗಳಿಂದಲೇ ವರಮಾನವು ಬರಬೇಕಾಗಿವೆ. ಆದಕಾರಣ, ಈ ಸುಂಕವನ್ನು ಪೂರ್ತಿಯಾಗಿ ತೆಗೆದುಹಾಕುವುದೂ ಸಾಧ್ಯವಿಲ್ಲ. ಸದರಿ ತೆರಿಗೆಗಳನ್ನು ಒಂದು ಕ್ಲುಪ್ತವಾದ ಅವಧಿಗೆ ಸಲ್ಲಿಸಬೇಕಾದ ತೆರಿಗೆಯನ್ನಾಗಿಯೂ, ಮತ್ತು ಇತರ ವಿಧದಲ್ಲಿ ವಸೂಲ್ಮಾಡತಕ್ಕ ತೆರಿಗೆಯನ್ನಾಗಿಯೂ, ಮಾರ್ಪಡಿಸುವಂತೆ ಸಲಹೆ ಮಾಡಲ್ಪಟ್ಟಿದೆ. ಈ ವಿಷಯವು ನಿಮ್ಮ ಪ್ರಯೋಜನಾಂಶಕ್ಕೆ ಬಹಳಮಟ್ಟಿಗೆ ಸಂಬಂಧಪಟ್ಟಿರುತ್ತದೆ. ಮ್ಯುನಿಸಿಪಾಲಿಟಿಯೇ ಮುಂತಾದ ಸಂಸ್ಥೆಗಳ ವರಮಾನಕ್ಕೆ ಕುಂದಕ ಬಾರದಂತೆಯೂ, ವ್ಯಾಪಾರವು ಯಾವ ಅಡ್ಡಿಯೂ ಇಲ್ಲದೆ ಸಲೀಸಾಗಿ ನಡೆಯುವಂತೆಯೂ ಈ ಅಡಚಣೆಗಳನ್ನು ಹೋಗಲಾಡಿಸುವಂಥ ಕಾರ್ಯಕಾರಿಯಾದ ಸಲಹೆಗಳನ್ನು ನೀವು ಕೊಡುವುದಾದರೆ, ಸರ್ಕಾರದವರು ಅವುಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸುವರು.

ಸಂಸ್ಥಾನದ ವ್ಯಾಪಾರ.

ಸಂಸ್ಥಾನದ ವ್ಯಾಪಾರವು ವಿಶೇಷ ಅಭಿವೃದ್ಧಿಗೆ ಬಂದಿಲ್ಲ. ಸಂಸ್ಥಾನದವರು ರೈಲ್ವೆಯ ಮೂಲಕ ಪರದೇಶಗಳೊಂದಿಗೆ 1913-14 ನೇ ಸಾಲಿನಲ್ಲಿ 1,677 ಲಕ್ಷ ರೂಪಾಯಿಗಳ ವ್ಯಾಪಾರವನ್ನು ನಡೆಸಿದ್ದರು ; ಈಗ 2,528 ಲಕ್ಷ ರೂಪಾಯಿಗಳ ವ್ಯಾಪಾರವನ್ನು ನಡೆಸುತ್ತಿದ್ದಾರೆ. ಹೀಗೆ ಕಂಡುಬರತಕ್ಕ ಆಧಿಕ್ಯಕ್ಕೆ, ಈ ದೇಶದ ನಾಣ್ಯದ ಬೆಲೆಗೂ ಮತ್ತು ಪರದೇಶದ ನಾಣ್ಯದ ಬೆಲೆಗೂ, ಇರತಕ್ಕ ದಾಮಾಷಾಯಿದರದಲ್ಲಿ (ಎಕ್ಸ್‌ಚೇಂಜ್ ದರದಲ್ಲಿ) ಬದಲಾವಣೆಗಳುಂಟಾಗಿರುವುದೇ ಮುಖ್ಯಕಾರಣವಾಗಿರುತ್ತದೆ. ಸಂಸ್ಥಾನದ ಒಟ್ಟು ವ್ಯಾಪಾರವು ಈ ಸಂಸ್ಥಾನದ ಜನರಲ್ಲಿ, ಸರಾಸರಿ ತಲೆಯೊಂದಕ್ಕೆ 40 ರೂಪಾಯಿಗಳಂತೆ ಮಾತ್ರವೇ ಬೀಳುತ್ತದೆ. ಅಲ್ಲದೆ, ಆಮದು ರಫ್ತುಗಳೆರಡೂ ಒಂದೇಸಮವಾಗಿವೆಯೇ ಹೊರತು, ಅವುಗಳು ಹೆಚ್ಚುತ್ತಾ ಇಲ್ಲ.

ಮಹನೀಯರೆ, ತಾವೆಲ್ಲರೂ ವಾಣಿಜ್ಯದಲ್ಲಿ ಅಭಿರುಚಿಯುಳ್ಳವರು. ಆದಕಾರಣ, ತಮ್ಮನ್ನು ಕುರಿತು ಭಾಷಣಮಾಡುವಾಗ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದು ಆವಶ್ಯಕ. ಧಾನ್ಯಗಳ ವ್ಯಾಪಾರವೂ, ಜವಳಿಯ ವ್ಯಾಪಾರವೂ, ಚರ್ಮದ ಮತ್ತು ತೊಗಲಿನ ವ್ಯಾಪಾರವೂ, ಲೋಹಗಳ ವ್ಯಾಪಾರವೂ, ಎಣ್ಣೆಯ ಬೀಜಗಳೇ ಮುಂತಾದ ಇತರ ವಸ್ತುಗಳ ವ್ಯಾಪಾರವೂ, ಒಟ್ಟಿನಲ್ಲಿ ನಮ್ಮ ದೇಶದ ವರ್ತಕರ ಕೈಯಲ್ಲಿಲ್ಲ. ಅವುಗಳೆಲ್ಲಾ ಇಂಡಿಯಾದೇಶದ ಇತರ ಪ್ರಾಂತ್ಯಗಳಿಗೆ ಸೇರಿದವರ ಕೈಯಲ್ಲಿದೆ. ಈ ವಿಷಯವನ್ನು ಅನೇಕಸಾರಿ ತಿಳಿಸಿದುದಾಗಿದೆ. ಹೇಳಿದುದನ್ನೇ ಹೇಳಿ ಹೇಳಿ ಈ ವಿಷಯವು ಹಳೆದು ಬಿದ್ದುಹೋಗಿದೆ. ಅದನ್ನು ಮತ್ತೆ ತಿಳಿಸಬೇಕಾದುದೇ ಇಲ್ಲ. ವ್ಯಾಪಾರ ವಿಷಯದಲ್ಲಿ ನಮ್ಮ ಸ್ಥಿತಿಯನ್ನು ನೋಡಿರಿ; ನಾವು ಈಗ್ಗೆ ಹತ್ತು ವರುಷಗಳ ಹಿಂದೆ ಹೇಗಿದ್ದೆವೋ, ಈಗಲೂ ಪ್ರಾಯಶವಾಗಿ ಹಾಗೆಯೇ ಇದ್ದೇವೆ. ನಾವು ಹೊರದೇಶಗಳ ವರ್ತಕರನ್ನು ಆಕ್ಷೇಪಿಸಲು ಕಾರಣವಿಲ್ಲ. ಇಂಡಿಯಾದೇಶದ ಸ್ಥಿತಿಗತಿಗಳು ಬದಲಾಯಿಸುತ್ತಿರುವುದನ್ನು ಅವರು ಅರಿತುಕೊಂಡರು ; ಅದಕ್ಕೆ ತಕ್ಕಂತೆ ಅವರು ವರ್ತಿಸಿದರು ; ನಮ್ಮ ದೇಶದಲ್ಲಿ ದೊರೆತ ಅನುಕೂಲಗಳನ್ನು ಉಪಯೋಗಿಸಿಕೊಂಡರು; ಅದರಿಂದ ದೊರೆತ ಫಲವನ್ನು ಅನುಭವಿಸುತ್ತಲಿದ್ದಾರೆ ; ಹೊಗಳಿಕೆಗೆ ತಕ್ಕ ಕೆಲಸವನ್ನೇ ಅವರು ಮಾಡಿದಂತಾಯಿತು. ಅವರಮೇಲೆ ದೂರು ಹೊರಿಸುವುದು ಹಾಗಿರಲಿ. ಅವರು ಈ ವಿಷಯದಲ್ಲಿ ಒಗ್ಗಟ್ಟಿನ ಮಾರ್ಗವನ್ನು [illegible] ನಮಗೆ ಮೇಲ್ಪಂಕ್ತಿಯನ್ನು ಹಾಕಿದ್ದಾರೆ. ಇದಕ್ಕಾಗಿ ನಾವು ಅವರನ್ನು ಅಭಿನಂದಿಸಲೇ ಬೇಕು. ಅವರ ಉದಾಹರಣೆಯನ್ನೇ ನಮ್ಮ ದೇಶದವರೂ ಅನುಸರಿಸಬೇಕು. ಜನಗಳು, ನಮ್ಮ ಹುಡುಗರಿಗೆ ದೊಡ್ಡ ವ್ಯಾಪಾರದ [illegible] [illegible] [illegible]. ನಮ್ಮ [illegible]

ರುಗಳು ಕೆಲಸವನ್ನು ಕಲಿತುಕೊಳ್ಳುವುದಕ್ಕೆ ಸಾಧಕವಾದ ಏರ್ಪಾಡುಗಳನ್ನು ಜನಗಳಲ್ಲಿ ಪ್ರಚುರಗೊಳಿಸಬೇಕು ; ಅವರು ಅವುಗಳನ್ನು ಅನುಸರಿಸುವಂತೆ ಮಾಡಬೇಕು ; ಹಣವನ್ನು ಕೂಡಿಡುವ ಮಾರ್ಗಗಳನ್ನು ಉತ್ತಮಪಡಿಸಲು ಅವರು ಸಹಾಯಮಾಡಬೇಕು. ಅವುಗಳನ್ನು ಹೇಗೆ ಉತ್ತಮಪಡಿಸಬೇಕು, ಬಲ್ಲಿರಾ ? ಸುಲಭದರದ ಬಡ್ಡಿಯಲ್ಲಿ ಬಂಡವಾಳವು ಸಾಲವಾಗಿದೊರೆಯಲು ಅನುಕೂಲವಾಗುವಂತೆ ಅವುಗಳನ್ನು ಉತ್ತಮಪಡಿಸಬೇಕು. ವರ್ತಕರು ಇಂಡಿಯಾದೇಶದಲ್ಲಿ ಮಾತ್ರವೇ ಅಲ್ಲದೆ, ವಿದೇಶಗಳಲ್ಲಿಯೂ ಸಂಚಾರಮಾಡಿಕೊಂಡು ಬರಬೇಕು. ಇದರಿಂದ ತಮ್ಮ ದೃಷ್ಟಿಪಥವನ್ನು ವಿಸ್ತರಗೊಳಿಸಿಕೊಳ್ಳಬೇಕು ; ಅಲ್ಲದೆ, ತಾವು ಯಾರೊಡನೆ ವ್ಯಾಪಾರಗಳನ್ನು ನಡೆಸುತ್ತಾರೋ, ಆ ವರ್ತಕರನ್ನು ಕಂಡು, ಅವರೊಡನೆ ಸ್ನೇಹವನ್ನು ವೃದ್ಧಿಪಡಿಸಿಕೊಳ್ಳಬೇಕು. ಈ ಏರ್ಪಾಡುಗಳೆಲ್ಲಾ ನೆನೆಸಿದೊಡನೆಯೇ ಸಿದ್ಧಿಸತಕ್ಕವುಗಳಲ್ಲ ; ಅವುಗಳನ್ನು ಸುಲಭವಾಗಿ ಸಾಧಿಸುವುದಕ್ಕೂ ಆಗುವುದಿಲ್ಲ. ಈ ವಿಷಯವು ನನಗೂ ತಿಳಿದಿದೆ. ಆದರೂ, ಮುಂದಕ್ಕಾದರೂ ನಮ್ಮ ಮನೋರಥವು ಸಿದ್ಧಿಸಬೇಕು. ಆದಕಾರಣ, ನಾವು ಇನ್ನಾದರೂ ಈ ದಾರಿಗಳನ್ನು ಹಿಡಿಯಬೇಕು.

ಈಗ್ಗೆ ಹತ್ತು ವರ್ಷಗಳ ಹಿಂದೆ ಈ ಪಟ್ಟಣದಲ್ಲಿ “ಚೇಂಬರ್ ಆಫ್ ಕಾಮರ್ಸ್” ಎಂಬ ವರ್ತಕರ ಸಂಸ್ಥೆಯೊಂದು ಏರ್ಪಾಡಾಯಿತು. ಆದರೆ, ಇದರ ಶಾಖೆಗಳಾಗಿರುವಂತೆ ಅನೇಕ ವರ್ತಕಸಂಘಗಳನ್ನೇರ್ಪಡಿಸುವುದು ಆವಶ್ಯಕ. ಈ ಸಂಘಗಳು ಅದಕ್ಕೆ ಅಧೀನವಾಗಿ ಕೆಲಸಮಾಡಬೇಕು ; ಅದಕ್ಕೆ ಸಹಾಯಮಾಡಬೇಕು ; ಅದರ ಉದ್ದೇಶ ಸಾಧನೆಗಾಗಿ ನಡೆಯುವ ಪ್ರಯತ್ನಗಳಲ್ಲಿ ಸಹಕರಿಸಿ ವರ್ತಿಸಬೇಕು. ಪರಸ್ಪರವಾಗಿ ಹೊಂದಿಕೆಯಿಂದ ಕೆಲಸಮಾಡುವ ವರ್ತಕಸಂಘಗಳಿದ್ದರೆ ಸಾಕು. ವ್ಯಾಪಾರವಿಷಯಗಳಲ್ಲಿ, ಅದರಷ್ಟುಮಟ್ಟಿಗೆ ಮತ್ತಾವುದೂ ಲಾಭಕರವಾಗಿ ಪರಿಣಮಿಸುವುದಿಲ್ಲ.

ಸಂಪದಭಿವೃದ್ಧಿ ಸಮಾಜ.

ಸಂಪದಭಿವೃದ್ಧಿ ಸಮಾಜವನ್ನು ಮತ್ತೆ ಸರಿಯಾಗಿ ಅನುಗೊಳಿಸುವ ಪ್ರಯತ್ನವು ನಡೆಯುತ್ತಿದೆ ; ಅದಕ್ಕೆ ಮತ್ತೆ ಚೇತನವನ್ನುಂಟುಮಾಡುವ ಕಾರ್ಯಕಲಾಪಗಳು ಮುಂದುವರಿಯುತ್ತಿವೆ ; ಇದು ತಮ್ಮೆಲ್ಲರಿಗೂ ತಿಳಿದೇ ಇರಬಹುದು. ಕೈಗಾರಿಕೆಗಳನ್ನು ನಡೆಸುತ್ತಿರುವವರ ಪ್ರತಿನಿಧಿಗಳೂ, ವರ್ತಕರ ಪ್ರತಿನಿಧಿಗಳೂ, ಇದರಲ್ಲಿ ಮೆಂಬರುಗಳಾಗಿದ್ದಾರೆ. ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿಯೂ, ಮತ್ತು ಜನಗಳ ಉಪಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿಯೂ, ಅನುಸರಿಸಬೇಕಾದ ಏರ್ಪಾಡುಗಳನ್ನು ಅನುಭವದಿಂದ ತಿಳಿದುಕೊಂಡು, ಈ ವಿಷಯದಲ್ಲಿ ಸರ್ಕಾರದವರಿಗೆ ಸಲಹೆ ಹೇಳುವುದು, ಸಂಪದಭಿವೃದ್ಧಿ ಸಮಾಜದ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ. ಈ ವಿಷಯಗಳನ್ನು ಪರ್ಯಾಲೋಚಿಸಿ ವ್ಯವಸ್ಥೆ ಮಾಡುವುದಕ್ಕಾಗಿಯೇ, ಕೈಗಾರಿಕೆ ಮತ್ತು ವಾಣಿಜ್ಯದ ಒಂದು ಸ್ಪೆಷಲ್ ಬೋರ್ಡು ಇದೆ. ಅದು ಸಂಪದಭ್ಯುದಯ ಸಮಾಜದ ಒಂದು ಅಂಗವಾಗಿದೆ. ಈ ಬೋರ್ಡಿನವರು, ಕೈಗಾರಿಕೆ ಮತ್ತು ವ್ಯಾಪಾರದ ಕೆಲಸಗಳನ್ನು ನಡೆಸುವ ಜನರೊಡನೆ ಮಿಳಿತವಾಗಿ ಕೆಲಸಮಾಡಿ, ವಾಣಿಜ್ಯ ಕಾರ್ಯವನ್ನು ವ್ಯವಸ್ಥೆಗೆ ತರುವ ಭಾರಿ ವಿಷಯಗಳ ಪರಿಶೋಧನೆಯಲ್ಲಿ ಅವರಿಗೆ ಸಹಾಯ ಮಾಡುವರೆಂದು, ಸರ್ಕಾರದವರು ನಂಬಿ ನಿರೀಕ್ಷಿಸುತ್ತಿದ್ದಾರೆ. ಬೇಕಾದ ಸಂಗತಿಗಳನ್ನೂ ಲೆಕ್ಕಗಳನ್ನೂ ಶೇಖರಿಸುವುದು ಈ ಬೋರ್ಡಿನವರ ಮುಖ್ಯಕರ್ತವ್ಯವಾಗಿರುತ್ತದೆ. ಯಾವ ಯಾವ ಲೆಕ್ಕಗಳನ್ನು ಶೇಖರಿಸಬೇಕೆಂಬುದನ್ನು ಇವರು ಸೂಚಿಸುತ್ತಾರೆ. ಸದರಿ ಲೆಕ್ಕಗಳು ಶೇಖರವಾದನಂತರ, ಅವುಗಳಿಂದ ತಿಳಿಯಬರುವ ಸಂಗತಿಗಳನ್ನೂ, ನ್ಯೂನಾತಿರೇಕಗಳನ್ನು ಸರಿಪಡಿಸುವ ವಿಧಾನಗಳನ್ನೂ ಬೋರ್ಡಿನವರು ತಿಳಿಸುತ್ತಾರೆ. ವ್ಯಾಪಾರ ಸಂಘಗಳವರು ಈ ಲೆಕ್ಕಗಳನ್ನು ಮಾತ್ರ ದಯೆಯಿಟ್ಟು ಒದಗಿಸಬೇಕಾಗುತ್ತದೆ. ವರ್ತಕರ ಮುಖ್ಯೋದ್ದೇಶಗಳಿಗೆ ಸಹಾಯಕವಾಗಿ ಈ ಬೋರ್ಡಿನವರು ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂಬ ವಿಚಾರವಾಗಿ, ನೀವು ಸಲಹೆಯನ್ನು ಕೊಡಬೇಕೆಂದು ನಾನು ಕೋರುತ್ತೇನೆ.

ಸಂಸ್ಥಾನದ ಕೈಗಾರಿಕೆಯ ಸಾಧನಗಳ ಅಭಿವೃದ್ಧಿ.

ಸಂಸ್ಥಾನದ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಇಲ್ಲಿರುವ ಸಾಧನಗಳು ಯಾವುವೆಂಬ ವಿಚಾರವನ್ನು ನಿರ್ಧರಿಸಲು ಸರ್ಕಾರದವರಿಗೆ ಕುತೂಹಲವಿರುತ್ತದೆ. ಇದಕ್ಕಾಗಿ ಅವರು ಒಂದು ಸ್ಕೀಮನ್ನು ತಯಾರುಮಾಡುತ್ತಿದ್ದಾರೆ. ಸಂಸ್ಥಾನದಲ್ಲಿ ನಡೆಯುತ್ತಿರುವ ಕೈಗಾರಿಕೆಯ ಉದ್ಯಮಗಳಿಗೂ, ವರ್ತಕರಿಗೂ, ವ್ಯಾಪಾರಿಗಳಿಗೂ, ಸ್ನಿಗ್ಧವಾದ ಸಂಬಂಧವುಂಟಾಗುವಂತೆ ಮಾಡುವುದು ಅತ್ಯಾವಶ್ಯಕ. ವಾಣಿಜ್ಯ ರೀತಿಗಳಿಗನುಸಾರವಾಗಿ ನೋಡಿದರೆ, ಸರಕುಗಳನ್ನು ಕಾರ್ಖಾನೆಯಲ್ಲಿ ತಯಾರಿಸುವವರಿಗೂ, ಅವುಗಳನ್ನು ಬಳಸತಕ್ಕವರಿಗೂ, ಯಾವ ಸಂಬಂಧವೂ ಇಲ್ಲ. ವರ್ತಕರು ಕಾರ್ಖಾನೆಯವರಿಂದ ತರಿಸಿ ಅವುಗಳನ್ನು ಬಳಸುವವರಿಗೆ ಮಾರುತ್ತಾರೆ. ಆದಕಾರಣ, ವರ್ತಕರು ಸರಕುಗಳನ್ನು ಬಳಸತಕ್ಕವರೊಡನೆ ಸಂಬಂಧವನ್ನಿಟ್ಟುಕೊಂಡು, ಅವರಿಗೂ, ಕಾರ್ಖಾನೆಯವರಿಗೂ ತಮ್ಮ ಮೂಲಕ ಸಂಬಂಧವಿರುವಂತೆ ಮಾಡುತ್ತಾರೆ. ನಮ್ಮ ಸಂಸ್ಥಾನದಲ್ಲಿ ವ್ಯಾಪಾರವು ಉತ್ತಮಸ್ಥಿತಿಗೆ ಬರಬೇಕಾದರೆ, ವ್ಯಾಪಾರದಲ್ಲಿ ಮುಂದುವರಿದಿರುವ ದೇಶಗಳಲ್ಲಿ ಫಲಕಾರಿಯಾಗಿರುವ ಮಾರ್ಗಗಳನ್ನು, ಇಲ್ಲಿಯೂ ಅವಲಂಬಿಸಬೇಕು. ನಮ್ಮ ದೇಶದ ವ್ಯಾಪಾರವು ನಡೆಯುತ್ತಿರುವ ರೀತಿಯಲ್ಲಿ ಅವ್ಯವಸ್ಥೆಯಿದೆ. ಈ ದೇಶದ ಜನರು ಲಾಭ ಬರತಕ್ಕ ಯಾವುದಾದರೂ ಮಾರ್ಗವು ತಮಗೆ ಗೋಚರವಾಯಿತೆಂದರೆ ಸಾಕು, ಆಕೂಡಲೆ, ಅಲ್ಪಸ್ವಲ್ಪ ಬಂಡವಾಳವನ್ನು ಹಾಕಿಕೊಂಡು, ಅದನ್ನು ಅವಲಂಬಿಸುತ್ತಾರೆ. ಕೆಲವು ವರ್ಷಗಳ ಕಾಲ, ಹಾಗೂ ಹೀಗೂ, ಹೆಣಗಾಡುತ್ತಾರೆ. ಆವೇಳೆಗೆ, ಹೊರಗಿನವರು, ಭಾರಿ ಬಂಡವಾಳವನ್ನು ಹಾಕಿ, ಅವರ ವ್ಯಾಪಾರಕ್ಕೆ ಮುಗ್ಗಟ್ಟನ್ನುಂಟುಮಾಡುತ್ತಾರೆ. ಆಗ ತಮ್ಮ ವ್ಯಾಪಾರವು ಮುಳುಗಿಹೋದರೆ, ತಮಗೆ ಬರುತ್ತಿದ್ದ ಲಾಭವನ್ನು ಪರದೇಶಿಯರು ಕೊಳ್ಳೆಹೊಡೆದರೆಂದು ಗೋಳಿಡುತ್ತಾರೆ; ಕೊನೆಗೆ ಸರ್ಕಾರದವರ ಸಹಾಯವನ್ನು ಪ್ರಾರ್ಥಿಸುತ್ತಾರೆ; ಇದು ಸಾಮಾನ್ಯವಾಗಿ ಪದ್ಧತಿ ಬಿದ್ದುಹೋಗಿದೆ. ಬಲಿಷ್ಠರು ಒಂದಾಗಿ, ಭಾರಿ ಪ್ರಮಾಣದಲ್ಲಿ ವ್ಯಾಪಾರ ನಡೆಸುವುದರಿಂದಲೂ ಪ್ರಯೋಜನವುಂಟು ; ವ್ಯಾಪಾರವೂ, ಜನರಿಗೆ ಕೆಲಸ ದೊರೆಯುವ ಸಂಭವವೂ, ಸರಕುಗಳ ಬೆಲೆಯೂ, ಅದರಿಂದ ಸ್ಥಿಮಿತಕ್ಕೆ ನಿಲುತ್ತವೆ ; ಪ್ರಪಂಚದ ವ್ಯಾಪಾರ ಕ್ರಮದಲ್ಲಿ ಈ ರೀತಿ ಭಾರಿ ಪ್ರಮಾಣದಲ್ಲಿ ಪ್ರವರ್ತಿಸುವುದೂ ಒಂದು ಭಾಗವಾಗಿದೆ. ಈ ಅಂಶಗಳನ್ನು ಮರೆತುಬಿಡುವ ಸಂಭವವೇನೋ ಉಂಟು. ಹಾಗೆ ಮಾಡುವುದು ಸರಿಯಲ್ಲ. ಜನಗಳು ಈಗ ಇರತಕ್ಕ ವಿದ್ಯಮಾನಗಳಲ್ಲಿ ಬಲಿಷ್ಠರ ಕಾರ್ಯಕಲಾಪಗಳೂ ಒಂದು ಮುಖ್ಯಲಕ್ಷಣವಾಗಿರುವುದನ್ನು ಪರ್ಯಾಲೋಚಿಸಿ ಈಗಿನ ಸ್ಥಿತಿಗತಿಗಳಿಗೆ ತಕ್ಕಂತೆ, ತಮ್ಮ ಉದ್ಯಮಗಳನ್ನು ಸಜ್ಜುಗೊಳಿಸಿಕೊಳ್ಳಬೇಕು. ಪ್ರಪಂಚದ ಎಲ್ಲಾ ಭಾಗದಲ್ಲಿಯೂ ವಾಣಿಜ್ಯವ್ಯವಸ್ಥೆಯು ಬದಲಾಯಿಸಲ್ಪಡುತ್ತಲೇ ಇರುತ್ತದೆ. ಇದರ ಪರಿಣಾಮವನ್ನೇ ಪರಿಶೀಲಿಸುತ್ತಿದ್ದು, ಅದನ್ನು ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಿವರಿಸಿ ತಿಳಿಸುವುದು, ಸಂಪದಭಿವೃದ್ಧಿ ಸಮಾಜದವರ ಮುಖ್ಯ ಕರ್ತವ್ಯಗಳಲ್ಲೊಂದಾಗಿದೆ.

ನಮ್ಮ ಸಂಸ್ಥಾನದಲ್ಲಿ ವ್ಯಾಪಾರದ ಸ್ಥಿತಿಗತಿಗಳು ಇನ್ನೂ ವಿಶೇಷ ಹಿಂದುಳಿದಿವೆ. ವಾಣಿಜ್ಯ ಸಂಬಂಧವಾದ ಲೆಕ್ಕಗಳು ಎಷ್ಟು ಮುಖ್ಯವಾದವುಗಳು, ಅವುಗಳಿಗೆ ಎಷ್ಟು ಬೆಲೆಯಿದೆ, ಎಂಬ ವಿಚಾರವು ನಮ್ಮವರ ಮನಸ್ಸಿಗೆ ಇನ್ನೂ ಮಂದಟ್ಟಾಗಿಯೇ ಇಲ್ಲ. ಸಾಹಸದಿಂದ ಮುಂದಾಳಾಗಿ ಕೆಲಸ ಮಾಡುವುದಂತೂ, ನಮ್ಮಲ್ಲಿ ಇಲ್ಲವೇ ಇಲ್ಲ. ಇಲ್ಲಿನ ಈ ಸ್ಥಿತಿಯು ಬದಲಾಯಿಸಬೇಕೆಂದು ಯಾರುತಾನೇ ಕೋರಲೊಲ್ಲರು ? ಇಂಥಾ ಸ್ಥಿತಿಯನ್ನು ಹೋಗಲಾಡಿಸಿ ಉತ್ತಮಪಡಿಸುವುದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ಕೈಗೊಳ್ಳುವ ಭಾರವು, ಬೆಂಗಳೂರಿನ ವ್ಯಾಪಾರದ ಮತ್ತು ಕೈಗಾರಿಕೆಗಳ ಪ್ರತಿನಿಧಿಗಳಾದ ತಮ್ಮೆಲ್ಲರನ್ನೂ ಸೇರಿರುತ್ತದೆ. ಸರ್ಕಾರದವರು ನಿಮಗೆ ಮಾರ್ಗವನ್ನು ತೋರಿಸಲು ಸಿದ್ಧವಾಗಿದ್ದಾರೆ. ಆದರೆ, ಇಂಥಾ ವಿಷಯಗಳಲ್ಲಿ ಆತ್ಮಾವಲಂಬನೆಗಿಂತ ಹೆಚ್ಚಿನದುದು ಯಾವುದೂ ಇಲ್ಲ.

ಸಂಸ್ಥಾನದ ಪ್ರಜೆಗಳು ಇಂಥಾ ವಿಷಯಗಳಲ್ಲಿ ನಿಮ್ಮ ಸಹಾಯವನ್ನು ಇನ್ನು ಮೇಲೆ ದಿನೇದಿನೇ ಹೆಚ್ಚು ಹೆಚ್ಚಾಗಿ ಅಪೇಕ್ಷಿಸುತ್ತಾ ಬರುವರು. ನಿಮ್ಮಂಥಾ ದೇಶಾಭಿಮಾನಿಗಳ ಸಹಾಯವನ್ನು ಅಪೇಕ್ಷಿಸುವುದರಲ್ಲಿ, ಅವರ ಕೋರಿಕೆಯು ನಿರರ್ಥಕವಾಗಲಾರದೆಂದು ನಾನು ಭಾವಿಸುತ್ತೇನೆ. ಈ ಬೆಂಗಳೂರಿನಂಥಾ ನಗರಗಳೇ ಸಂಸ್ಥಾನದ ಅಭಿವೃದ್ಧಿಗೆ ಮುಖ್ಯಾಧಾರ. ಏಕೆಂದರೆ, ಇಲ್ಲಿನವರು ಹಾಕಿದ ಮೇಲುಪಂಙ್ತಿಯನ್ನು ಇತರರು ಅನುಸರಿಸುತ್ತಾರೆ. ಇಂಥಾ ಪಟ್ಟಣಗಳೇ ನಾಗರಿಕತೆಯ ನೆಲೆಯೆನಿಸತಕ್ಕವು. ನಾಗರಿಕತೆಯ ಬೆಳದೀವಿಗೆಯ ಬೆಳಕೂ, ಶಾಖವೂ, ಅಲ್ಲಿಂದಲೇ ಹೊರಟು, ಕತ್ತಲೆ ಕವಿದಿರುವ ಇತರ ದೂರಪ್ರದೇಶಗಳನ್ನು ಬೆಳಕಿನಿಂದ, ಬೆಳಗಿಸಬೇಕು. ಜೀವಕಳೆಯಿಂದ ತುರಿದುಂಬಿಸಬೇಕು.

ಇನ್ನು ಈ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗಲೆಂದು ಅಪ್ಪಣೆ ಕೊಡುತ್ತೇನೆ. ಮಹನೀಯರೇ, ಇನ್ನು ಮುಂದೆ ನಡೆಯಬೇಕಾದ ಕೆಲಸಗಳನ್ನು ತಾವು ನಡೆಸಬಹುದು. ನೀವು ಅವಲಂಬಿಸಿರುವ ನಾನಾ ಬಗೆಯ ವ್ಯಾಪಾರಗಳಲ್ಲಿಯೂ, ಕಸಬುಗಳಲ್ಲಿಯೂ, ನಿಮಗೆ ಕಷ್ಟಗಳೇನಾದರೂ ಇದ್ದರೆ, ಅವುಗಳನ್ನೂ ತಿಳಿಸಬಹುದು ; ಅಲ್ಲದೆ, ಅವುಗಳನ್ನು ಯಾವರೀತಿಯಲ್ಲಿ ನಿವಾರಣೆ ಮಾಡಿಕೊಳ್ಳಬೇಕೆಂದು ನಿಮ್ಮ ಅಭಿಪ್ರಾಯವಿರುವುದೆಂಬುದನ್ನೂ ಸಹ, ಸೂಚಿಸಬಹುದು. ಅದನ್ನು ತಿಳಿದುಕೊಳ್ಳಲು ನನಗೆ ಎಷ್ಟೋ ಸಂತೋಷ. ಸಂಸ್ಥಾನದಲ್ಲೆಲ್ಲಾ ಸಾಮಾನ್ಯವಾಗಿ ವ್ಯಾಪಾರಸ್ಥಿತಿಯು ಉತ್ತಮವಾಗುವುದಕ್ಕೆ ನಿಮಗೆ ಯಾವ ಯಾವ ಅನುಕೂಲತೆಗಳು ಆವಶ್ಯಕವೆಂಬುದನ್ನು ನಿಮ್ಮಿಂದ ತಿಳಿಯಲು ಸರ್ಕಾರದವರು ಸಂತೋಷಪಡುತ್ತಾರೆ. ಈಗಿನ ಸ್ಥಿತಿಗತಿಗಳನ್ನು ಅತಿಕ್ಷಿಪ್ರದಲ್ಲಿಯೇ ಸರಿಪಡಿಸಲು ಸಾಧಕವಾಗುವಂತೆ, ನೀವು ಹೇಳತಕ್ಕ ಸಮಸ್ತ ಅಹವಾಲುಗಳನ್ನೂ, ನೀವುಸೂಚಿಸತಕ್ಕ ಎಲ್ಲಾ ಸಲಹೆಗಳನ್ನೂ, ಶ್ರೀಮನ್ಮಹಾರಾಜರವರ ಸರ್ಕಾರದವರು, ಸಹಾನುಭೂತಿಯಿಂದ ತೀವ್ರವಾಗಿ ಪರ್ಯಾಲೋಚಿಸುವರೆಂಬುದನ್ನು, ತಮಗೆ ಹೊಸದಾಗಿ ತಿಳಿಸಬೇಕಾಗಿಯೇ ಇಲ್ಲ.

ಪ್ರಸಿದ್ಧಪತ್ರಿಕೆ.

ಬೆಂಗಳೂರು ನೀರಿನ ಸರಬರಾಯಿಯ ಹಾಲಿ ಸ್ಥಿತಿಯು ಹೇಗಿದೆಯೆಂಬ ವಿಷಯದಲ್ಲಿ ಈ ಕೆಳಗೆ ನಮೂದಿಸಿರುವ ಪ್ರಸಿದ್ಧಪತ್ರಿಕೆಯು ಜನಗಳ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿದೆ.—

1926ನೆ ಫೆಬ್ರವರಿ 12ನೆ ತಾರೀಖಿನ ಪ್ರಸಿದ್ಧಪತ್ರಿಕೆಯಲ್ಲಿ ತಿಳಿಸಿದಂತೆ 1926ನೆ ಇಸ್ವಿ ಏಪ್ರಿಲ್ 15ನೆ ತಾರೀಖಿನಿಂದ ಬೆಂಗಳೂರಿಗೆ ಎಲಿಮಲ್ಲಪ್ಪಸೆಟ್ಟಿ ಕೆರೆಯಿಂದ ನೀರು ಬಿಡಲಾಯಿತು ; ಇದರ ಜೊತೆಗೆ ಸಾಧ್ಯವಾದವರೆಗೂ ಹೆಸರಘಟ್ಟದ ಕೆರೆಯ ನೀರೂ ಉಪಯೋಗಿಸಲ್ಪಟ್ಟಿತು. ಎಲಿಮಲ್ಲಪ್ಪಸೆಟ್ಟಿ ಕೆರೆಯಿಂದ ಜುಲೈತಿಂಗಳಿನ ಆಚೆಗೆ ನೀರು ದೊರೆಯುವಂತಿರಲಿಲ್ಲ; ಆದಕಾರಣ ಮುಂಗಾರುಮಳೆಗಳು ಬಂದು ಎಂದಿನಂತೆ ಹೆಸರುಘಟ್ಟದ ಕೆರೆಗೆ ನೀರು ಬರುವವರೆಗೂ ಹೊಸಕೋಟೆ ಚಿಕ್ಕಕೆರೆಯಿಂದಲೂ ನೀರನ್ನು ಉಪಯೋಗಿಸಲಾಯಿತು. ಈಚೆಗೆ ಬಿದ್ದ ಮಳೆಗಳಿಂದ ಹೊಸಕೋಟೆ ಚಿಕ್ಕಕೆರೆಯ ಹೊರತು ಇತರ ಕೆರೆಗಳಿಗೆಲ್ಲಾ ತುಂಬಾ ನೀರು ಬಂದಿದೆ. ಹೆಸರುಘಟ್ಟದ ಕೆರೆಯಲ್ಲಿ ನೀರಿನ ಮಟ್ಟವು (25-9-1926 ರಲ್ಲಿ) 40'-6" ರಿಂದ 57'-4½" ವರೆಗೆ ಏರಿತು. ಎಲಿಮಲ್ಲಪ್ಪಸೆಟ್ಟಿ ಕೆರೆಯು ಈಗ ಭರ್ತಿಯಾಗಿದೆ; ಕಲ್ಕೆರೆ ಮತ್ತು ಹುಪ್ಪಿನಕೇ ಕೆರೆಗಳೂ ಮುಕ್ಕಾಲು ಮೂರುವೀಸಪಾಲು ತುಂಬಿವೆ. ಹೆಸರುಘಟ್ಟ ಮತ್ತು ಎಲಿಮಲ್ಲಪ್ಪಶೆಟ್ಟಿ ಕೆರೆಗಳಲ್ಲಿ ಹಾಲಿ ಇರುವ ನೀರು, ಈಗ ಬಳಸುತ್ತಿರುವಂತೆಯೇ ಇನ್ನು ಮುಂದೆಯೂ ನೀರನ್ನು ಬಳಸಿದರೆ ಇನ್ನು 1½ ವರುಷ ಕಾಲ ಬರಬಹುದು ಈಗಿನ ಕಾಲಸ್ಥಿತಿಯನ್ನು ನೋಡಿದರೆ ಮುಂಗಾರುಮಳೆಯಿಂದ ಈ ತಿಂಗಳು ಹೆಸರುಘಟ್ಟದ ಕೆರೆಗೆ ಮತ್ತಷ್ಟು ನೀರು ಬರಬಹುದೆಂದು ತೋರುತ್ತದೆ. ಅಕ್ಟೋಬರು ಮತ್ತು ನವೆಂಬರು ತಿಂಗಳುಗಳಲ್ಲಿಯೂ ನೀರು ಬರಬಹುದು. ಇದರ ಮೇಲೆ, ಹೆಸರುಘಟ್ಟದ ಕೆರೆಗೆ ನೀರುಬರುವ ಸಾಲುಕೆರೆಗಳೆಲ್ಲಾ ಸ್ವಲ್ಪ ಹೆಚ್ಚುಕಡಿಮೆ ಭರ್ತಿಯಾಗಿವೆ. ಆದಕಾರಣ ಮತ್ತೆ ಮಳೆಬಂದರೆ ಅವೆಲ್ಲಾ ಕೋಡಿಬೀಳುತ್ತವೆ. ಹೀಗಾಗುವದಾದರೆ ಹೆಸರುಘಟ್ಟದ ಕೆರೆಯು ಭರ್ತಿಯಾಗಿ ಕೋಡಿಬಿದ್ದರೂ ಬೀಳಬಹುದು. ಹೆಸರುಘಟ್ಟದ ಕೆರೆಯ ಕೋಡಿಗಳನ್ನು ಹಂಗಾಮಿಯಾಗಿ ಎರಡಡಿ ಎತ್ತರಿಸಿ, ಕೋಡಿಬೀಳುವುದಾದರೆ ಹೆಚ್ಚು ನೀರು ಶೇಖರವಾಗುವಂತೆ ಏರ್ಪಾಡನ್ನು ಮಾಡಿದೆ.

ಖಾಯಂ ಏರ್ಪಾಡಿಗೆ ಸಂಬಂಧಪಟ್ಟ ಸ್ವತಃ ಮುಚ್ಚಿಕೊಳ್ಳುವ ಯಂತ್ರಸಾಧನದ ಬಾಗಿಲುಗಳನ್ನು ತಯಾರಿಸುವುದಕ್ಕೆ ಲಂಡನ್ ಪಟ್ಟಣದಲ್ಲಿರುವ ಮೆಸರ್ಸ್ ರ್ಯಾನ್ಸಮ್ ಅಂಡ್ ರೇಪಿಯರ್ ಕಂಪೆನಿಯವರಿಗೆ 1926ನೆ ಇಸ್ವಿ ಸೆಪ್ಟೆಂಬರ್ 2ನೆ ತಾರೀಖಿನಲ್ಲಿ ಬರೆಯಲಾಯಿತು. 1927ನೆ ಫೆಬ್ರವರಿ ಆಖೈರಿನಲ್ಲಿ ಇವು ತಯಾರಾಗಿ ಬರಬಹುದೆಂದು ನಿರೀಕ್ಷಿಸಲಾಗಿದೆ. ಏರಿಯನ್ನು ಬಲಪಡಿಸುವ ಮಣ್ಣಿನ ಕಾಮಗಾರಿಗೂ, ಕೋಡಿಯನ್ನು ಬಲಪಡಿಸುವ ಗಾರೆಯ ಕಾಮಗಾರಿಗೂ ಕಂಟ್ರಾಕ್ಟು ಕೊಟ್ಟಿದೆ. ಇಂಗ್ಲೆಂಡಿನಿಂದ ನಕ್ಷೆಯು ಬಂದಕೂಡಲೆ ಕೆಲಸವನ್ನು ಪ್ರಾರಂಭಿಸಲಾಗುತ್ತದೆ. ಈ ಮಧ್ಯದಲ್ಲಿ ಕೋಡಿಯನ್ನು ತಾತ್ಕಾಲಿಕವಾಗಿ ಎರಡಡಿಯಷ್ಟು ಎತ್ತರಿಸಲಾಗುತ್ತದೆ. ನೀರಿನ ಮಟ್ಟದ ವಿಚಾರದಲ್ಲಿ ಈಚೆಗೆ ಪತ್ರಿಕೆಗಳಲ್ಲಿ ನಾನಾ ಸಂಗತಿಗಳು ಪ್ರಕಟಿಸಲ್ಪಟ್ಟಿವೆ. ಈ ಸಂಬಂಧದಲ್ಲಿ ಈ ಕೆಳಗೆ ನಮೂದಿಸಿರುವ ಕರಾರ್ವಾಕಾ ಸಂಗತಿಗಳನ್ನು ಪ್ರಕಟಿಸಲಾಗಿದೆ :—

ಪೂರ್ವದಲ್ಲಿ ಹೆಸರುಘಟ್ಟದ ಕೋಡಿಯ ಮಟ್ಟವು 50 ಅಡಿಗಳಿರುವಂತೆ ನಿಷ್ಕರ್ಷಿಸಲಾಗಿದ್ದಿತು. ನೀರಿನ ಸರಬರಾಯಿಗಾಗಿ ಕೆರೆಯನ್ನು ಉಪಯೋಗಿಸಲು ಆರಂಭಿಸಿದಮೇಲೆ ಅದನ್ನು 15 ಅಡಿಗಳಷ್ಟು ಎತ್ತರಿಸಲಾಯಿತು. ಆದುದರಿಂದ ಅದರ ಮಟ್ಟವು ಈಗ 65 ಅಡಿಗಳ ಎತ್ತರದಲ್ಲಿದೆ. ನೀರು ಹತ್ತಬೇಕಾದರೆ 40 ಅಡಿ ಮಟ್ಟದಷ್ಟು ನೀರು ಕೆರೆಯಲ್ಲಿರಬೇಕು. ಇದಕ್ಕೆ ಕಡಿಮೆಯಾಗಿದ್ದಲ್ಲಿ ಕೆರೆಯಲ್ಲಿ 33 ಲಕ್ಷ ಘನಅಡಿಗಳ ನೀರು ಮಾತ್ರವೇ ಇರುತ್ತದೆ. ಈ ನೀರು ನಾಲೆಗೆ ಹಾಯುವುದಿಲ್ಲ. ಅದನ್ನು ಯಂತ್ರದಿಂದ ಎತ್ತಬೇಕಾಗುತ್ತದೆ. ಜನಗಳ ತಿಳುವಳಿಕೆಗಾಗಿ ನೀರಿನ ಆಳವನ್ನು 40 ಅಡಿ ಪರಿಮಾಣವಿದ್ದರೆ, ಅಳತೆಯ ಸೌಕರ್ಯಕ್ಕಾಗಿ ಅದನ್ನು 0' (ಸೊನ್ನೆ) ಮಟ್ಟವೆಂದು ಭಾವಿಸಬೇಕೆಂದು ಹುಕುಂ ಆಗಿದೆ. ಇನ್ನುಮುಂದೆ ಮಟ್ಟವನ್ನು ಸೂಚಿಸುವ ಲೆಕ್ಕವು, ಹಿಂದಣ ಈ 40 ಅಡಿಗಳಿಗಿಂತ ಹೆಚ್ಚು ನೀರಿನ ಮಟ್ಟವೆಂಬುದನ್ನು ಸೂಚಿಸುತ್ತದೆ. ಈ ಹೆಚ್ಚು ನೀರು ಉಪಯೋಗಕ್ಕೆ ಸಿದ್ಧವಾಗಿ ದೊರೆಯತಕ್ಕುದಾಗಿದೆ. ನಾನಾಮಟ್ಟಗಳಲ್ಲಿಯೂ ಕೆರೆಯಲ್ಲಿ ಸಿಕ್ಕುವ ನೀರಿನ ಪರಿಮಾಣಗಳನ್ನು ಈ ಕೆಳಗೆ ನಮೂದಿಸಲಾಗಿದೆ.—

	ಹೊಸಲೆಕ್ಕಾಚಾರದ ಮೇಲಣಮಟ್ಟ	ಹಳೆಯಲೆಕ್ಕಾಚಾರದಮೇಲಣಮಟ್ಟ	ಕೆರೆಯಲ್ಲಿ ನಿಂತಿರುವ ನೀರಿನ ಪರಿಮಾಣ
ಕೆರೆಮಟ್ಟ	0'	40.00	33 ಲಕ್ಷ ಘನ ಅಡಿಗಳು
ಕೆರೆಯು ಅರ್ಧ ತುಂಬಿದ್ದಾಗ	12.5'	52.50	1070 ,,
ಕೆರೆಯು ಭರ್ತಿ ಆದಾಗ	25'	65.00	6300 ,,
(ಕೋಡಿಯನ್ನು 2ಅಡಿ ಎತ್ತರಿಸಿದರೆ)	27'	67.00	7010 ,,
(ಕೋಡಿಯನ್ನು 5 ಅಡಿ ಎತ್ತರಿಸಿದಮೇಲೆ)	30'	70.00	9970 ,,

ಆರ್. ರಂಗರಾವ್,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಮುಳವಳ್ಳಿ ತಾ|| ಕಿರಗಾವಲುನಲ್ಲಿರುವ ಮ|| ಗಂದಿಗ ಮಲ್ಲಶೆಟ್ಟರ ಮಕ್ಕಳ ಲಗ್ನದಲ್ಲಿ ಮ|| ಕಿರಗಾವಲು ಮಹಂತಪ್ಪನವರ ಮೂಲಕ ೧ ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಉತ್ತಂಗಿಯ ವಿವಾದದ ವಿಚಾರ.

ಬಳ್ಳಾರಿ ಡಿ|| ಉತ್ತಂಗಿಯಲ್ಲಿ ನಡೆದ ದೊಂಬಿಯ ಕಲಹದಲ್ಲಿ 115 ಜನರು ಪ್ರಾಸಿಕ್ಯೂಷನ್ ಮಾಡಲ್ಪಟ್ಟು ವಿಚಾರಣೆಗೊಳಗಾಗುತ್ತಿರುವರೆಂದೂ ಅಪರಾಧಿಗಳ ಪರ 180 ಜನರು ಮತ್ತು ಪ್ರಾಸಿಕ್ಯೂಷನ್ ಪರ 115 ಜನರು ಸಾಕ್ಷಿಗಳಾಗಿ ನಿಂತಿರುವರೆಂದೂ ಈ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ವಿವಾದದ ವಿಚಾರವನ್ನು ತಿಳಿಯಬೇಕೆಂಬ ಕುತೂಹಲವು ಸಾಧುವೀರಶೈವಪಂಗಡದ ಜನರಿಗೆ ಬಹಳವಾಗಿರುವುದರಿಂದ ಈ ವಿಷಯವನ್ನು ಬಲ್ಲವರು ಪತ್ರಿಕಾದ್ವಾರ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ. ಒಬ್ಬ ಸಾಧುವೀರಶೈವ.

ಅರಿಷಡ್ವರ್ಗ.

ಶಂಕರಯ್ಯ, ಅಸಿಸ್ಟೆಂಟ್‌ಮಾಸ್ಟರ್ ಇನ್|| ಕಂ|| ಮಿಡಲ್ ಸ್ಕೂಲ್ ಅಸಗೋಡು ಜಗಲೂರು ತಾಲ್ಲೂಕು ಈ ಅಡ್ರಸ್ಸು ಉಳ್ಳ ಮಹನೀಯರು ಪ್ರಕಟಿಸಿರುವ ಲೋಭವೆಂಬ ಅರಿಷಡ್ವರ್ಗಗಳಲ್ಲಿ ಮೂರನೆಯದಾದುದರ ಮಹಿಮಾತಿಶಯವನ್ನು ಘನಹೊಂದಿದ ಕಳೆದ ಸೆಪ್ಟೆಂಬರ್ ತಾ|| 4 ರ ಸ್ಟಾರ್ ಪತ್ರಿಕೆಯಲ್ಲಿ ಪ್ರಚಾರಮಾಡಿದ್ದನ್ನು ನೋಡಿ ಬಹಳ ಸಂತೋಷವಾಗಿರುತ್ತೆ. ಈ ಪ್ರಾಜ್ಞರಾದವರು ಮಿಕ್ಕ ಐದು ವರ್ಗಗಳನ್ನು ಅಜ್ಞರ ತಿಳುವಳಿಕೆಗೋಸ್ಕರ ವಿಶದವಾಗಿ ಈ ಸ್ಟಾರ್ ಮೂಲಕ ತಿಳಿಸಿ ನಮ್ಮನ್ನ ಧನ್ಯರನ್ನಾಗಿ ಮಾಡಲು ಪ್ರಾರ್ಥನೆ. ರೇವಣ್ಣ.

ಬುಕ್ಕಾಂಬುದಿಸ್ಕೂಲು ವಿಚಾರ.

ತರೀಕೆರೆ ತಾ|| ಬುಕ್ಕಾಂಬುದಿಯ ಸ್ಕೂಲಿನಲ್ಲಿ ಕಳೆದ 3 ತಿಂಗಳಿಂದಲೂ ವಿದ್ಯಾರ್ಥಿಗಳಿಗೆ ಗಿರಿಜಾಕಲ್ಯಾಣನಾಟಕವು ಹಗಲೂ ರಾತ್ರಿ ಪ್ರಾಕ್ಟಿಸ್ ಮಾಡಿಸಲ್ಪಟ್ಟು ಕಳೆದ ತಿಂಗಳು ತಾ|| 12 ಮತ್ತು 16 ರ ರಾತ್ರಿ ಕಮಿಟಿ ಮೆಂಬರುಗಳೂ ಇತರರೂ ಬರಮಾಡಲ್ಪಟ್ಟಿದ್ದು ನಾಟಕವಾಡಿಸಲ್ಪಟ್ಟಿತಲ್ಲದೆ ತಾ|| 19 ರಲ್ಲಿ ಹೆಂಗಸರಿಗಾಗಿ ಆಡಿಸಲ್ಪಟ್ಟಿತು. ದಸರಾ ರಜಾಕಾಲದಲ್ಲಿ ಪರ ಊರುಗಳಿಗೆ ಹೋಗಿ ನಾಟಕಗಳನ್ನಾಡಿ ದ್ರವ್ಯವನ್ನು ಸಂಪಾದಿಸಬೇಕೆಂದು ಹುಡುಗರಿಗೆ ಕ್ಲಾಸಿನ ಪಾಠಗಳನ್ನು ಸಹ ಹೇಳದೆ ಹಗಲೂ ರಾತ್ರಿ ಪ್ರಾಕ್ಟಿಸ್ ಮಾಡಿಸಲ್ಪಡುತ್ತಿದೆ. ವರ್ಗವಾಗಿ ಹೋಗಿದ್ದ ಹೆಡ್ಮಾಸ್ಟರಿಗೆ ಸ್ಕೂಲು ಕಮಿಟಿಯ ಮೆಂಬರುಗಳು ಶಿಫಾರಸ್ಸುಮಾಡಿ ಅವರನ್ನು ನಿಲ್ಲಿಸಿಕೊಂಡುದರ ಫಲವಿದಾಗಿದೆ. ಕಷ್ಟಪಟ್ಟು ವಿದ್ಯೆಯನ್ನು ಕಲಿಯುವ ಕಾಲದಲ್ಲಿ ಬಾಲಕರುಗಳು ನಾಟಕಗಳನ್ನು ಕಲಿಯುವುದಾದರೆ ಅವರುಗಳು ಎಷ್ಟರಮಟ್ಟಿಗೆ ವಿದ್ಯಾವಂತರಾಗುವರು ಮತ್ತು ಅಂಥಾ ಸ್ಕೂಲಿಗಾಗಿ ಸರ್ಕಾರದಿಂದ ಖರ್ಚು ಮಾಡಲ್ಪಡುವ ಹಣವು ಎಷ್ಟರಮಟ್ಟಿಗೆ ಸಾರ್ಥಕವಾಗುವುದು ? ಎಂಬುದನ್ನು ವಿದ್ಯಾರ್ಥಿಗಳ ತಂದೆತಾಯಿಗಳೂ ವಿದ್ಯಾಭ್ಯಾಸದ ಇಲಾಖೆಯವರೂ ಪರ್ಯಾಲೋಚಿಸಿ ಇಂಥಾ ಅಸಂಗತಗಳು ನಡೆಯದಂತೆ ತಕ್ಕೇರ್ಪಾಟು ಮಾಡುವರೆಂದು ನಿರೀಕ್ಷಿಸುವ, ವಿದ್ಯಾಭಿಮಾನಿ.

ಶ್ರೀ ವೀರಶೈವಾಮೃತಮಹಾಪುರಾಣಸಮಾಪ್ತಿ ಸಮಾರಂಭ.

ಬ್ಯಾಡಗಿ ಶ್ರೀ ಶಿವಯೋಗೀಶ್ವರ ವೀರಶೈವಬೋರ್ಡಿಂಗಿನ ವಿದ್ಯಾರ್ಥಿಗಳಲ್ಲಿ ಸದಾಚಾರಸದ್ಭಕ್ತಿಗಳನ್ನು ಸ್ಥಿರವಾಗಿ ನೆಲಗೊಳಿಸಬೇಕೆಂಬ ವಿಚಾರವನ್ನು ಮನಸ್ಸಿನಲ್ಲಿ ತಂದು ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ಚೆನ್ನಬಸವಸ್ವಾಮಿಗಳವರು ಬೋರ್ಡಿಂಗಿನ ವ್ಯವಸ್ಥಾಪಕ ಕಮಿಟಿಯವರ ಸಮ್ಮತಿಯಿಂದ ಶ್ರಾವಣಮಾಸದಲ್ಲಿ ಪ್ರತಿನಿತ್ಯ ಶ್ರೀ ಮುಪ್ಪಿನಸ್ವಾಮಿಯ ಅಭಿಷೇಕವನ್ನೂ ಶ್ರೀ ವೀರಶೈವಾಮೃತಪುರಾಣಪಠನವನ್ನೂ 1 ತಿಂಗಳು ಅವಿಚ್ಛಿನ್ನವಾಗಿ ನಡೆಯಿಸಿದರು. ಇವುಗಳ ಸಮಾಪ್ತಿಸಮಾರಂಭವನ್ನು ದಾವಣಗೆರೆಯ ಅಜ್ಜಂಪುರದ ಶ್ರೀಯುತ ಸಿದ್ಧರಾಮಪ್ಪ ಶ್ರೇಷ್ಠಿಗಳವರು ಬಹುಭಕ್ತಿಪೂರ್ವಕವಾಗಿ ತಮ್ಮ ಸ್ವಂತಖರ್ಚಿನಿಂದ ವಿಜೃಂಭಣೆಯಾಗಿ ನಡೆಯಿಸಿದರು. ಬಳಿಕ ಹಸ್ತಪತ್ರಿಕೆಯಲ್ಲಿ ಪ್ರಸಿದ್ಧಮಾಡಿದಮೇರೆಗೆ ಸಾಯಂಕಾಲ ಶ್ರೀಗಳವರ ಮಠದಲ್ಲಿಯೇ ಸುಪ್ರಸಿದ್ಧ ವ್ಯಾಪಾರಸ್ಥರೂ ಆಗರ್ಭ ಶ್ರೀಮಂತರೂ ಧರ್ಮನಿಷ್ಠರೂ ದಯಾಪರರೂ ಆದ ದಾವಣಗೆರೆಯ ಅಜ್ಜಂಪುರದ ಶ್ರೀಯುತ ಸಿದ್ಧರಾಮಪ್ಪಶ್ರೇಷ್ಠಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಧಾರ್ಮಿಕವಿಷಯದಮೇಲೆ ಮುದೇನೂರ ಶ್ರೀ ಪಟ್ಟದದೇವರು, ಮಿ. ಇಂಡೀಮಠ ಮಿ. ಕೊಲ್ಹಾಪುರ ಮಿ. ಹಾವೇರಿ ಮಿ. ಸಿದ್ಧಲಿಂಗಪ್ಪ ಬೆಲ್ಲದ ದಾವಣಗೆರೆ ಮಿ. ಕ್ಯಾತಾರಿ ಇವರ ಸ್ಫೂರ್ತಿದಾಯಕಭಾಷಣಗಳಾದವು. ಆಮೇಲೆ ಅಧ್ಯಕ್ಷರ ಮಹತ್ವದ ಭಾಷಣವಾಗಿ ಸಭಾವಿಸರ್ಜನೆಯಾಯಿತು.

ಸಿದ್ಧಪ್ಪಾ ಚೆನ್ನಬಸಪ್ಪಾ ಹೋಳಿ, ಸೆಕ್ರೆಟರಿ,
ಶ್ರೀ-ಮು-ಶಿ-ಬೋರ್ಡಿಂಗ.

ಪ್ರಜಾನುರಾಗಿಗಳಾದ ಡಾಕ್ಟರು.

ಮೊಳಕಾಲ್ಮುರುವಿಗೆ ಡಾಕ್ಟರಾಗಿ ಬಂದಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮ|| ಎಂ. ಎಸ್. ಸಂಜಪ್ಪನವರು ರೋಗಿಗಳಲ್ಲಿ ಬಡವರೂ, ಐಶ್ವರ್ಯವಂತರೂ ಎಂದು ವ್ಯತ್ಯಾಸತೋರದೆ ಪ್ರತಿಯೊಬ್ಬರನ್ನೂ [illegible]ವಿಲ್ಲದೆ ಯಾವಾಗಲೂ ಬಹು ಕರುಣೆಯಿಂದ ಔಷಧವನ್ನು ಕೊಟ್ಟು ಉಪಚರಿಸುತ್ತ ಅತ್ಯಂತ ಜನಾನುರಾಗಿಗಳಾಗಿರುವರು. ಆದರೆ ಯಾರೋ ದುಷ್ಟರು ತಮ್ಮ ಆಕ್ರೋಶವನ್ನು ತೀರಿಸಿಕೊಳ್ಳುವುದಕ್ಕಾಗಿ ಈ ಪ್ರಜಾನುರಾಗಿಗಳಾದ ಡಾಕ್ಟರಮೇಲೆ ಇಲ್ಲದ ಸಲ್ಲದ ಅಪವಾದಗಳನ್ನು ಹೊರಿಸಿ ಸೀನಿಯರ್ ಸರ್ಜನ್ನರವರಿಗೆ ಅರ್ಜಿಯನ್ನು ಬರೆದಿದ್ದುದರಮೇಲೆ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಮೊಳಕಾಲ್ಮುರುವಿಗೆ ದಯಮಾಡಿಸಿ ಟವನ್ನಿನ ಮತ್ತು ಸರಿಹೊರೆ ಗ್ರಾಮಗಳ ಜನರನ್ನು ವಿಚಾರಿಸಿ ನಿಷ್ಪಕ್ಷಪಾತಿಗಳೂ, ದಯಾವಂತರೂ, ನಿಗರ್ವಿಗಳೂ, ಬಡವರ ಪ್ರಾಣಾಧಾರಿಗಳೂ ಆದ ಡಾ|| ಸಂಜಪ್ಪನವರು ಈ ಊರಿಗೆ ಬಂದಾರಭ್ಯ ಆಸ್ಪತ್ರೆಯು ಬಹಳ ಅಭಿವೃದ್ಧಿಗೆ ಬಂದಿರುತ್ತದೆಂದೂ ಇಂಥಾ ಪ್ರಜಾನುರಾಗಿಗಳು ಈವರಿವಿಗೆ ಮತ್ತಾರೂ ಬಂದಿರಲಿಲ್ಲವೆಂದೂ ವ್ಯಕ್ತವಾಯಿತು. ಸರ್ಕಾರೀ ಉದ್ಯೋಗಸ್ಥರಮೇಲೆ ಬರುವ ಅರ್ಜಿಗಳನ್ನು ವಿಚಾರಿಸತಕ್ಕ ಅಧಿಕಾರಿಗಳು, ಅರ್ಜಿಗಳು ಸುಳ್ಳು ಮತ್ತು ದ್ವೇಷದಿಂದ ಬರೆಯಲ್ಪಟ್ಟವು ಎಂದು ಜವರ ಹೇಳಿಕೆಯಿಂದ ಗೊತ್ತಾದಮೇಲೆ ಅಂಥಾ ಸುಳ್ಳು ಅರ್ಜಿಯನ್ನು ಬರೆದವರನ್ನು ಗೊತ್ತುಮಾಡಿ ತಕ್ಕ ಬಂದೋಬಸ್ತುಮಾಡಿದಲ್ಲಿ ಪಾಪಭೀತಿಯಿಂದಲೂ, ದಕ್ಷತೆಯಿಂದಲೂ ಕೆಲಸಮಾಡತಕ್ಕ ಸರ್ಕಾರೀ ಉದ್ಯೋಗಸ್ಥರು ಮತ್ತಷ್ಟು ಶ್ರದ್ಧೆಯಿಂದ ಕೆಲಸಮಾಡಲು ಅವಕಾಶವಾಗುತ್ತದಲ್ಲದೆ ಪುಂಡರಸೊಲ್ಲು ಅಡಗುತ್ತದೆ.

ನಿಷ್ಪಕ್ಷಪಾತಿ.

ವೀರಶೈವಶ್ರೀಮಂತರನಿಧನ.

ಶಿವಮೊಗ್ಗ ಡಿ|| ಸೊರಬ ತಾ|| ಯಣ್ಣೆಕೊಪ್ಪ ಗ್ರಾಮವಾಸಸ್ಥರಾದ ಲಿಂಗಪ್ಪಗೌಡರೆಂಬವರು ಈ ಗ್ರಾಮದ ವೀರಶೈವರಲ್ಲಿ ದೊಡ್ಡಮನುಷ್ಯರಾಗಿಯೂ ಲಕ್ಷಾಧಿಕಾರಿಗಳಾಗಿಯೂ ಇದ್ದು ಬಹುಧರ್ಮಾರ್ಥಿಕ್ಯಕಾರ್ಯಗಳನ್ನು ನಡೆಯಿಸುತ್ತಿದ್ದರು. ಕಳೆದ ಬರಗಾಲದಲ್ಲಿ ಈ ಸೊರಬ ತಾಲ್ಲೂಕಿನ ಮುಕ್ಕಾಲುಭಾಗದ ಜನಗಳಿಗೆ ಈ ಶ್ರೀಮಂತರೇ ತಮ್ಮಲ್ಲಿ ವಂಶಪಾರಂಪರ್ಯವಾಗಿ ಆಪತ್ಸಮಯಕ್ಕೆಂದು ಕಾದಿಟ್ಟಿದ್ದ (ಈರೀತಿ ಈಗಲೂ ಇಡುತ್ತಾರೆ) 300-400 ಖಂಡುಗ ಭತ್ತವನ್ನು ತಡೆಬಿಡುವಿಲ್ಲದೆ ಉದಾರಮನಸ್ಸಿನಿಂದ ಕೊಟ್ಟು ಕಾಪಾಡಿದರು, ಅಲ್ಲದೆ ಬಹುದಿನಗಳಿಂದಲೂ ಸ್ವಗೃಹದಲ್ಲಿ ನಿತ್ಯದಾಸೋಹವು ನಡೆಯುವ ಏರ್ಪಾಡನ್ನೂ ಮಾಡಿರುವರು. ಇದೇ ಗ್ರಾಮದಲ್ಲಿ ಶಿಥಿಲಹೊಂದಿದ್ದ ಶ್ರೀಬಸವೇಶ್ವರಾಲಯವನ್ನು ಸುಮಾರು 2,500 ರೂ.ಗಳಿಗೆ ಮಿಕ್ಕಿಯೇ ಸ್ವಂತ ವೆಚ್ಚಮಾಡಿ ಜೀರ್ಣೋದ್ಧಾರ ಮಾಡಿಸಿರುವರು. ಅಲ್ಲದೆ ಸಮಾಜದ ಮುಖ್ಯ ಕಾರ್ಯಗಳಲ್ಲಿಯೂ ಇವರು ಧಾರಾಳವಾಗಿ ದ್ರವ್ಯಸಹಾಯಮಾಡಿರುತ್ತಾರೆ. ಅನೇಕ ಜನಗಳ ವಿವಾಹಗಳನ್ನು ಸ್ವತಃ ತಮ್ಮ ಮನೆಯಲ್ಲಿಯೇ ವಿಜೃಂಭಣೆಯಿಂದ ಮಾಡಿರುತ್ತಾರೆ. ಅನೇಕ ಅನಾಥ ಮನೆತನಗಳನ್ನು ವ್ಯವಸ್ಥೆಯಿಂದ ಸಾಗಿಸಿ ಉದ್ಧರಿಸಿರುತ್ತಾರೆ. ಇಂಥಾ ಇನ್ನೂ ಅನೇಕಾನೇಕ ಸದ್ಗುಣ ಸಮುಚ್ಚಯದ ಇವರು ಈಗ ಸುಮಾರು 2 ತಿಂಗಳಿನಿಂದಲೂ ಒಂದು ವಿಧವಾದ ವ್ಯಾಧಿಗ್ರಸ್ತರಾಗಿದ್ದು ಕಳೆದ ತಾ|| 10 ನೇ ಶುಕ್ರವಾರ (ಗೌರೀಹಬ್ಬದ ಪುಣ್ಯದಿವಸ) ಹಗಲು 11 ಘಂಟೆಗೆ ಸರಿಯಾಗಿ ಕ್ರಿಯಾಪಾದೋದಕಾದಿಗಳ ಸೇವನೆಯಾದ ಮುಹೂರ್ತದಲ್ಲಿಯೇ ಭಗವನ್ನಾಮಸ್ಮರಣೆಯಿಂದ ಈ ನಶ್ವರದೇಹತ್ಯಾಗ್ಯಮಾಡಿ ಕೈಲಾಸವಾಸಿಗಳಾದರೆಂದು ತಿಳುಹಲು ಅತ್ಯಂತ ವಿಷಾದಪಡುತ್ತೇನೆ. ಈ ಶ್ರೀಮಂತರಿಗೆ ಭಗಿನಿಯರಿಂದೊಡಗೂಡಿದ ಮಲ್ಲಿಕಾರ್ಜುನ ಗೌಡರೆಂಬ ಪೂರ್ಣ ವಯಸ್ಸಿನ ಸುಪುತ್ರರಿರುವರಲ್ಲದೆ ಚಿಕ್ಕ ವಯಸ್ಸಿನ ಒಬ್ಬ ಪತ್ನಿಯೂ ಇರುವರು. ಇವರುಗಳ ದುಃಖವು ಸಹಿಸಲಾರದ ಸಂಕಟವನ್ನುಂಟುಮಾಡುತ್ತದೆ. ಶ್ರೀ ಭಗವಂತನು ಮೃತರ ಆತ್ಮಕ್ಕೆ ನಿತ್ಯಶಾಂತಿಯನ್ನೂ ಕುಟುಂಬದವರಿಗೆ ಮನಸ್ಸಮಾಧಾನವನ್ನೂ ಉಂಟುಮಾಡಲೆಂದು ಬಯಸುತ್ತೇನೆ.

ಶ್ರೀಕಂಠಗೌಡ, ಜಮೀನ್ದಾರ್.

ವೀರಶೈವವಿದ್ಯಾರ್ಥಿನಿಲಯ.

ಹಾಸನದಲ್ಲಿ ವೀರಶೈವವಿದ್ಯಾರ್ಥಿನಿಲಯವೊಂದನ್ನು ಸ್ಥಾಪನೆ ಮಾಡಲೋಸುಗ ವೀರಶೈವರ ಮೊದಲನೆಯ ಸಭೆಯು ಶ್ರೀಪುಷ್ಪಗಿರಿ ಮಹಾಕ್ಷೇತ್ರದಲ್ಲಿ ನಡೆದಿದ್ದುದು ಸರಿಯಷ್ಟೆ. ಈ ವಿಚಾರದ ಎರಡನೆಯ ಸಭೆಯು ಬೇಲೂರು ತಾಲ್ಲೂಕು ಚಿಲ್ಕೂರು ಶ್ರೀಮಠದಲ್ಲಿ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ತಮ್ಮಡಿಹಳ್ಳಿ ಶ್ರೀ ಮಠದ ಚನ್ನಮಲ್ಲದೇಶಿಕೇಂದ್ರ ಮಹಾಸ್ವಾಮಿಗಳವರ ಮತ್ತು ಚಿಲ್ಕೂರು ಶ್ರೀ ಮಠದ ಬಸವರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ 1926 ನೇ ಸೆಪ್ಟಂಬರ್ ತಾ|| 21 ನೇ ಮಂಗಳವಾರ ನಡೆಯಿತು. ಚಂದಾ ಮೊಬಲಗನ್ನು ಶ್ರೀ ಸ್ವಾಮಿಗಳವರ ಖಾಸ್ ಸವಾರಿಯೇ ಆಗಲಿ ಶ್ರೀಮಠದ ಏಜಂಟರವರೇ ಆಗಲಿ ಆಯಾಯ ಗ್ರಾಮಗಳಿಗೆ ಹೋಗಿ ಸಬ್ ಮೀಟಿಂಗನ್ನು ಮಾಡಿ ಚಂದಾ ಮೊಬಲಗನ್ನು ವಸೂಲ್ಮಾಡಬೇಕಾಗಿ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು. ಸಭೆಯಲ್ಲಿಯೇ ಚಂದಾ ಮೊಬಲಗನ್ನು ಶ್ರೀ ಸ್ವಾಮಿಗಳವರ ಸನ್ನಿಧಿಯಲ್ಲಿ ವಾಗ್ದಾನಮಾಡಿರುವವರ ಹೆಸರುಗಳು—ಮ|| ಗಳಾದ 1. ಬೇಲೂರು ತಾ|| ಕಸಬಾ ಹೋಬಳಿ ಮಲ್ಲನಹಳ್ಳಿ ಹೂಲಿಗೌಡರು 100 ರೂ. 2. ಬೇಲೂರು ತಾ|| ಕಸಬಾ ಹೋಬಳಿ ಮಲ್ಲನಹಳ್ಳಿ ವೀರಭದ್ರೇಗೌಡರು 100 ರೂ. 3. ಬೇಲೂರು ತಾ|| ಬಿಕ್ಕೋಡು ಹೋಬಳಿ ರಾಜನಹಳ್ಳಿ ಪಟೇಲ್ ಸಂಜೀಗೌಡರು 50 ರೂ. 4. ಹಾಸನ ತಾ|| ಸಾಲಗಾಮೆ ಹೋಬಳಿ ಬಯಲಳ್ಳಿ ಪಟೇಲ್ ಬಸವೇಗೌಡರು 50 ರೂ. 5. ಚಿಕ್ಕಮಗಳೂರು ತಾ|| ಅಂಬಳೆಮಾಗಣಿ ಆಚ್ಕಿರೆ ಗ್ರಾಮದ ವೀರೇಗೌಡರಮಕ್ಕಳು ರಾಮೇಗೌಡರು 50 ರೂ. 6. ಬೇಲೂರು ತಾ|| ಹಳೇಬೀಡು ಹೋಬಳಿ ಹೆಬ್ಬಾಳು ಮಠದ ವೇ|| ಸಂಜಪ್ಪನವರು 50 ರೂ. 7. ಬೇಲೂರು ತಾ|| ಹಳೇಬೀಡು ಹೋಬಳಿ ಕನಿಕೇನಹಳ್ಳಿ ಮಠಸ್ಥರು ವೇ|| ಲಿಂಗಪ್ಪಯ್ಯನವರು 50 ರೂ. 8. ಬೇಲೂರು ತಾ|| ಹಳೇಬೀಡು ಹೋಬಳಿ ಬಂಡಾರಿಕಟ್ಟೆ ಗ್ರಾಮದ ದೊಡ್ಡಬಸವೇಗೌಡರು 50 ರೂ. 9. ಬೇಲೂರು ತಾ|| ದೊಡ್ಡಿಹಳ್ಳಿ ಮಠಸ್ಥರು ವೇ|| ಬಸವಯ್ಯನವರ ಮಕ್ಕಳು ವೇ|| ಚನ್ನಬಸವಯ್ಯನವರು 25 ರೂ. 10. ಹಾಸನ ತಾ|| ಸಾಲಗಾಮೆ ಹೋ|| ಉಗನೇವು ಗ್ರಾಮಸ್ಥರು ವೇ|| ಶಿವಯ್ಯನವರ ಮಕ್ಕಳು ಸಂಜಪ್ಪನವರು 25 ರೂ. 11. ಬೇಲೂರು ತಾ|| ದೊಡ್ಡಿಹಳ್ಳಿ ಮಠಸ್ಥರು ವೇ|| ಅಪ್ಪಣ್ಣಯ್ಯನವರು ಉರುಫ್ ಚನ್ನಬಸವಯ್ಯನವರು 25 ರೂ. 12. ಬೇಲೂರು ತಾ|| ಹೆಬ್ಬಾಳುಗ್ರಾಮದ ಮ|| ಶೀಗೇಡ ಹಲಿಗೇಗೌಡರು 25 ರೂ. 13. ಹಾಸನ ತಾ|| ಸಾಲಗಾಮೆ ಹೋ|| ಗುಂಡಕಟ್ಟೆಹಳ್ಳಿ ಮಠಸ್ಥರು ವೇ|| ಸಂಜಪ್ಪಯ್ಯನವರು 25 ರೂ. 14. ಬೇಲೂರು ತಾ|| ಹಳೇಬೀಡು ಹೋ|| ಸೂರನಾಯ್ಕನಹಳ್ಳಿ ದೊಡ್ಡಮನೆ ಸಂಜೀಗೌಡರು 25 ರೂ. 15. ಬೇಲೂರು ತಾ|| ಹಳೇಬೀಡು ಹೋ|| ಹಟ್ಟಿಹಳ್ಳಿ ಗ್ರಾಮದ ಮಹಾನಂಜುಂಡೇಗೌಡರು 25 ರೂ. 16. ಬೇಲೂರು ತಾ|| ಕಸಬಾ ಹೋ|| ಚನ್ನಾಪುರಗ್ರಾಮದ ಮಠಸ್ಥರು ವೇ|| ಬಸವಣ್ಣಯ್ಯನವರು 25 ರೂ. ಮೈಸೂರುದೇಶದ ಎಲ್ಲಾ ಡಿಸ್ಟ್ರಿಕ್ಟುಗಳಿಗಿಂತಲೂ ಹಾಸನ ಡಿಸ್ಟ್ರಿಕ್ಟಿನ ವೀರಶೈವರು ವಿದ್ಯೆಯಲ್ಲಿ ಬಹಳ ಹಿಂದುಳಿದವರಾಗಿಯೇ ಇರುತ್ತಾರೆ. ಈ ಡಿಸ್ಟ್ರಿಕ್ಟಿನಲ್ಲಿ ವೀರಶೈವವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೋಸ್ಕರ ಯಾವವಿಧವಾದ ಅನುಕೂಲತೆಯು ಇಲ್ಲದೆ ಇರುವುದರಿಂದ [illegible] ಈ ಮಹಾಕಾರ್ಯಕ್ಕೆ ಮಹಾಭಿಮಾನಿಗಳು ತಮ್ಮ ತಮ್ಮ ಉದಾರವಾದ ಮನಸ್ಸಿನಿಂದ ಶಕ್ತಿಮೀರಿ ಸಹಾಯಮಾಡಿ ಇಹಲೋಕದಲ್ಲಿ ಕೀರ್ತಿಯನ್ನೂ ಪರಲೋಕದಲ್ಲಿ ಮೋಕ್ಷವನ್ನೂ ಸಂಪಾದಿಸುತ್ತಾರೆಂದು ನಂಬಿರುವ. ವಿದ್ಯಾಭಿಮಾನಿ.

ವೀರಶೈವಮಹಾಸಭೆ.

(ಲೇಖಕ—ಶ್ರೀ ಶಿವಾನಂದ ಶಿರಸಿ ಶಂಕರಕಾಲೇಜ, ಯಾದಗಿರಿ.)

ವೀರಶೈವಮಹಾಸಭೆಯ ಸಂಘಟನೆಯು ಈ ವರ್ಷ ಜೋರಿನಿಂದ ನಡೆಯುವ ಲಕ್ಷಣವು ಕಾಣುತ್ತಿರುವದು. ಹುಬ್ಬಳ್ಳಿಯ ಮಹಾಜನಗಳು ಈ ಮಹಾಸಭೆಯ ಸಂಘಟನೆಯ ವಿಷಯದಲ್ಲಿ ವಿಶೇಷ ಪ್ರಯತ್ನಮಾಡುತ್ತಿರುವಂತೆ ತೋರಹತ್ತಿದೆ. ಈ ಸಂಘಟನೆಯ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಉದ್ದುದ್ದ ಲೇಖಗಳೂ ಕಾರ್ಯಕ್ರಮಗಳೂ ಪ್ರಕಟವಾಗುತ್ತಿವೆ. ಈ ಸಂಘಟನೆಯ ಚಾಲಕರು ಮಾತ್ರ ವಿಶೇಷ ಲಕ್ಷ್ಯ ಪೂರೈಸುವದು ಅವಶ್ಯವದೆ. ಮುಂದಾಳುಗಳಂತೆ ಅನುಯಾಯಿಗಳು ಇರುವದೂ, ಮುಂದಾಳುಗಳ ವಿಶಾಲವಿಚಾರಗಳಂತೆ ಅನುಯಾಯಿಗಳ ವಿಚಾರಗಳು ವಿಶಾಲವಾಗಿರುವದೂ ಅತ್ಯಾವಶ್ಯಕ. ಹಾಗಲ್ಲದಿದ್ದರೆ ಇಂಥಹ ಸ್ಥಿತಿಯಲ್ಲಿ ಮಹಾಸಭೆಯ ಸಂಘಟನೆಯ ವಿಷಯಕ್ಕೆ ಬೇಕಾದವರು ಮುಂದೊರಿಯುವದಾದರೆ ಅದರಿಂದ ಆ ವಾತಾವರಣದಲ್ಲಿ ಕ್ಷುಬ್ಧತೆಯುಂಟಾಗಬಹುದು. ವೀರಶೈವಮಹಾಸಭೆಯು ಬೇಕು, ಅದರ ಶಾಖೆಗಳು ಹಬ್ಬಬೇಕು, ಅದರಿಂದ ಧರ್ಮೋನ್ನತಿಯಾಗಬೇಕು ಎಂಬುದು ನಿಜ. ಆದರೆ ಈ ಸಂಘಟನೆಮಾಡುತ್ತಿರುವಾಗ ಅನ್ಯ ಯಾವದೇ ಪಂಗಡಗಳ ವಿಷಯವಾಗಿ ಕುಬುದ್ಧಿಯನ್ನು ಎಂದೂ ಇಟ್ಟುಕೊಳ್ಳಲಾಗದು. ಅನ್ಯಪಂಗಡಗಳ ಸಂಘಟನೆಯೇ ನಮ್ಮ ಒಂದು ಕರ್ತವ್ಯವೆಂದು ಭಾವಿಸಬೇಕು. ದ್ವೇಷ, ಅಸಹಿಷ್ಣುತೆ, ಛಿದ್ರಾನ್ವೇಷಣ ಇವು ಎಂದೂ ಇರಕೂಡದು. ಮಹಾಸಭೆಯನ್ನು ಸ್ಥಾಪಿಸುವಲ್ಲೆಲ್ಲಾ ಇಂಥ ಶುದ್ಧಮನಸ್ಸಿನ ಮುಂದಾಳುಗಳಿರಬೇಕು, ಮತ್ತು ಅನ್ಯಪಂಗಡದವರ ಮನಸ್ಸಿನಲ್ಲಿ ಯಾವದೇಪ್ರಕಾರದ ಸಂಶಯ ಉಂಟಾಗಕೂಡದು. ಇಷ್ಟೇ ಅಲ್ಲ. ಮಹಾಸಭೆಯ ಕಾರ್ಯಕ್ರಮವು ನಡೆಯುತ್ತಿರುವಾಗ ಅನ್ಯಪಂಗಡದವರನ್ನು ಬರಮಾಡಿಕೊಳ್ಳುವದರಲ್ಲಿ ಎಂದೂ ಹಿಂಜರಿಯಬಾರದು. ಹೀಗೆ ಮಹಾಸಭೆಯಾಗಲಿ ತರುಣಸಂಘ ಮೊದಲಾದ ಸಂಘಗಳಾಗಲಿ ಪರಸ್ಪರ ಪ್ರೇಮದಿಂದ ಪರಸ್ಪರ ಸಹಿಷ್ಣುತೆಯಿಂದ ಸಂಘಟನೆಮಾಡಿದಲ್ಲಿ ಪರಿಣಾಮವು ಹಿತವಾಗುವದು. ಈ ಸಭೆಗಳನ್ನು ಅಸಿಧಾರಾವ್ರತದಿಂದ ಪಾಲಿಸುವವರೇ ಬೇಕು. ಇಲ್ಲವಾದರೆ ಅಡಾಡೀ ಜನರ ಕೈಯಲ್ಲಿ ಸಿಕ್ಕಿದರೆ ಅನರ್ಥಪರಂಪರೆಗೆ ಮಾತ್ರ ಕಾರಣವಾಗುವದು. ತರುಣಸಮ್ಮೇಳನ ಮೊದಲಾದ ಸಂಘಗಳು ಇರುವದು ಅವಶ್ಯವಿದ್ದಾಗ್ಯೂ ಅವು ಸಮಾಜದ ಅಭಿವೃದ್ಧಿಯ ವಿಷಯದಲ್ಲಿ ಮಹಾಸಭೆಯ ಅಧೀನವಾಗಿದ್ದರೆ ಮಾತ್ರ ಅವುಗಳಿಂದ ಸಮಾಜದ ಕಲ್ಯಾಣವಾಗುವದು, ಇಲ್ಲವಾದರೆ ಮಹಾಸಭೆಯ ಅಭಿವೃದ್ಧಿಗೆ ವಿಘಾತಕವಾಗಿ ಪರಿಣಮಿಸಬಹುದು. ಎಲ್ಲಾ ಸಾಮಾಜಿಕಸಂಸ್ಥೆಗಳು ಮಹಾಸಭೆಯನ್ನೇ ನೇತೃತ್ವಸ್ಥಾನದಲ್ಲಿಟ್ಟುಕೊಳ್ಳಬೇಕು. ಮಹಾಸಭೆಯೇ ಸರ್ವಸಂಘಗಳ ಐಕ್ಯಸ್ಥಾನ. ಪ್ರತಿಯೊಂದು ಸಾಮಾಜಿಕಸಂಸ್ಥೆಯೂ ಮಹಾಸಭೆಯ ಕಾರ್ಯಕ್ರಮಗಳನ್ನು ಕೃತಿಯಲ್ಲಿ ತರಲಿಕ್ಕೆ ಪ್ರಯತ್ನಿಸಬೇಕು, ಮತ್ತು ಮಹಾಸಭೆಗೆ ಆವಶ್ಯಕವಾದ ಸೂಚನೆಗಳನ್ನು ಮಾಡಬೇಕು. ಹೀಗೆ ಸಾಮಾಜಿಕಸಂಸ್ಥೆಗಳಿದ್ದು ಸಮಾಜದ ಉನ್ನತಿಮಾಡಿಕೊಳ್ಳುತ್ತಾ ಮತ್ತು ಮಹಾಸಭೆಯ ಆಜ್ಞೆಯನ್ನು ಪಾಲಿಸುತ್ತ ಹೋದರೆ ಮಾತ್ರ ಸಮಾಜದ ಉನ್ನತಿಯಾಗಬಹುದು. ಹಾಗಲ್ಲದೆ ಈ ಸಂಸ್ಥೆಗಳು ಸ್ವತಂತ್ರವಾಗಿ ತಮ್ಮ ಮನಬಂದಂತೆ ಕೆಲಸಮಾಡಹತ್ತಿದರೆ ಮಹಾಸಭೆಯ ಸಮಾಜೋನ್ನತಿ ಮೊದಲಾದ ಪ್ರಯತ್ನಗಳು ನಿಷ್ಫಲವಾಗಿ ಮಹಾಸಭೆಯ ಕಾರ್ಯವು ನಿಂತು ಹೋಗಬಹುದು. ಆದ್ದರಿಂದ ಈ ವಿಷಯದಲ್ಲಿ ಮಹಾಸಭೆಯ ಮುಖಂಡರು ಜಾಗರೂಕರಾಗುವದು ಅವಶ್ಯವದೆ. ಇಂಥಾ ಸ್ಥಿತಿಯುಂಟಾಗದಂತೆಯೂ ಸಮಾಜಕ್ಕೆ ಹಿತವಾಗುವಂತೆಯೂ ಈ ಸಂಘಗಳ ಸಂಘಟನೆಯಾಗುವಂತೆ ಸಮಸ್ತ ಮುಖಂಡರೂ ಲಕ್ಷ್ಯ ಪೂರೈಸಿದರೆ ಹಿತವಾಗುವದು. ಈ ಸಂಘಗಳ ವಿಷಯವಾಗಿ ಮಹಾಸಭೆಯ ಚಾಲಕರು ಯೋಗ್ಯವಿಚಾರಮಾಡಿ ಈ ಸಂಘಗಳ ಹಿತಾಹಿತಗಳೇ ಈ ಮಹಾಸಭೆಯ ಹಿತಾಹಿತಗಳೆಂದು ತಿಳಿದು ಇವುಗಳ ವಿಷಯವಾಗಿ ಯೋಗ್ಯವಿಚಾರಮಾಡಬೇಕಾಗಿ ಈ ಲೇಖಕನ ಸವಿನಯಪ್ರಾರ್ಥನೆ.

ದೇವತೋತ್ಸವವನ್ನು ತಡೆಯುವುದು ಧರ್ಮವೇ ?

ಚಿಕ್ಕನಾಯಕನಹಳ್ಳಿ ದೇವಾಂಗದವರು ತಾ|| 25-7-26 ರಲ್ಲಿ ತಮ್ಮ ದೇವರುಗಳಾದ ಬನಶಂಕರಮ್ಮ ಮತ್ತು ಕಾಳಮ್ಮ ದೇವರುಗಳ ಉತ್ಸವವನ್ನು ನಡೆಸುತ್ತಿರುವಾಗ್ಗೆ ಕುರುಬರ ಪೈಕಿ ಕೆಲವರು ದೊಂಬಿಮಾಡಿಕೊಂಡುಬಂದು ಉತ್ಸವವನ್ನು ತಡೆದ ತಪ್ಪಿತಕ್ಕಾಗಿ ಸರ್ಕಾರದವರು ತಿಪಟೂರು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ 13 ಜನಗಳ ಮೇಲೆ ಮೊಕದ್ದಮೆಯನ್ನು ನಡೆಸಿರುತ್ತಾರಷ್ಟೆ. ಮೇಲ್ಕಂಡ ದೇವಾಂಗದವರು ಅನೂಚಾನವಾಗಿ ನಡೆದುಬಂದಿರುವ ಗೌರಿಯುತ್ಸವವನ್ನು ತಾ|| 17-9-26 ರಲ್ಲಿ ಮಾಡುತ್ತಿರುವಾಗ್ಗೆ ವೈಶ್ಯರ ಬೀದಿಯಲ್ಲಿ ಮೇಲ್ಕಂಡ ಮೊಕದ್ದಮೆಯಲ್ಲಿ ಅಪರಾಧಿಗಳಾಗಿರುವ ಕೆಲವರು 40-50 ಜನಗಳನ್ನು ಗುಂಪುಕಟ್ಟಿಕೊಂಡುಬಂದು ಸುಮಾರು ರಾತ್ರಿ 11 ಗಂಟೆಯ ವೇಳೆಯಲ್ಲಿ ತಡೆದು ಉತ್ಸವದಲ್ಲಿ ಭಾಗಿಗಳಾಗಿದ್ದವರನ್ನು ಮನಸ್ವೀ ಬೈದು ಮುಂದಕ್ಕೆ ಬಂದರೆ ಹೊಡೆಯುತ್ತೇವೆ, ದೇವರನ್ನು ಪುಡಿಪುಡಿಮಾಡಿ ಬಿಸಾಡುತ್ತೇವೆಂದು ಅವಮಾನಕರವಾದ ಮತ್ತು ಭಯೋತ್ಪಾದಕರವಾದ ಮಾತುಗಳನ್ನು ಆಡಿದ್ದರಿಂದ ಉತ್ಸವದಲ್ಲಿ ಭಾಗಿಗಳಾಗಿದ್ದ ದೇವಾಂಗದವರು ರಾತ್ರಿವೇಳೆಯಲ್ಲಿ ನಾವೇನಾದರೂ ಮುಂದಕ್ಕೆ ಹೊರಟರೆ ಹೊಡದು ಮರ್ಯಾದೆಗೆ ಕುಂದಕವನ್ನುಂಟುಮಾಡುವರೆಂದು ಹೆದರಿ ಸಮೀಪದಲ್ಲಿದ್ದ ಅಕ್ಕಸಾಲೆಯವರ ಕಾಳಮ್ಮನ ದೇವಸ್ಥಾನಕ್ಕೆ ಗೌರಮ್ಮ ದೇವರನ್ನು ತೆಗೆದುಕೊಂಡು ಹೋಗಿ ಕೂರಿಸಿರುತ್ತಾರೆ. ಉತ್ಸವವನ್ನು ತಡೆದಿರುವವರ ಪೈಕಿ ಕೆಲವರು ಬನಶಂಕರಮ್ಮ ಮತ್ತು ಕಾಳಮ್ಮ ದೇವರ ಉತ್ಸವವನ್ನು ತಡೆದ ತಪ್ಪಿತಕ್ಕಾಗಿ ಕ್ರಿಮಿನಲ್ ಕೋರ್ಟಿನಲ್ಲಿ ಅಪರಾಧಿಗಳಾಗಿದ್ದರೂ ಪುನಃ ಮುಂದಾಳುಗಳಾಗಿ ಬಂದು ಉತ್ಸವವನ್ನು ತಡೆದು ಜನಗಳ ನೆಮ್ಮದಿಗೆ ಭಂಗವನ್ನುಂಟುಮಾಡಿರುವುದು ತುಂಬಾ ಶೋಚನೀಯವಾದ ವಿಷಯವಾಗಿದೆ. ತಾ|| 25-7-26 ರಲ್ಲಿ ಸುಮಾರು 200-300 ಜನಗಳು ಪಬ್ಲಿಕ್ ರೋಡಿನಲ್ಲಿ ದೊಂಬಿಮಾಡಿಕೊಂಡು ಸರ್ಕಾರದ ಆರ್ಡರನ್ನು ಉಲ್ಲಂಘಿಸಿ ಸಿಬ್ಬಂದಿಯನ್ನು ಲಕ್ಷಿಸದೆ ಸುಮಾರು 500-600 ಜನ ಪುರನಿವಾಸಿಗಳೆದುರಿಗೆ ಬನಶಂಕರಮ್ಮ ಮತ್ತು ಕಾಳಮ್ಮ ದೇವರುಗಳ ಉತ್ಸವವನ್ನು ತಡೆದ ಇವರಿಗೆ ಸರ್ಕಾರದ ಸಿಬ್ಬಂದಿಯೇ ಇಲ್ಲದೆ ಎಲ್ಲೋ 50 ಜನಗಳು ಉತ್ಸವಕ್ಕೆ ಭಾಗಿಗಳಾಗಿ ಬಂದಿದ್ದಾಗ್ಗೆ ಉತ್ಸವವನ್ನು ತಡೆದು ಭಯವನ್ನುಂಟುಮಾಡುವುದು ಆಶ್ಚರ್ಯವಲ್ಲ. ಇಂಥಾ ಧೈರ್ಯಶಾಲಿಗಳು ತಾ|| 25-7-26 ರಲ್ಲಿ ತಡೆಯಲ್ಪಟ್ಟ ಉತ್ಸವವನ್ನು ನಡೆಸಲು ಬಂದಿದ್ದ ಅಧಿಕಾರಿಗಳ ಎದುರಿಗೆ ನಿಂತು ಮಾತನಾಡಿದ್ದರೆ [illegible] ಲಾಗುತ್ತಿತ್ತು. ಹಾಗೆ ಮಾಡದೆ ಸಿಬ್ಬಂದಿಯು ಕಡಮೆ ಇರುವಾಗ್ಗೆ ಬಂದು ತಡೆಯುವುದೂ ಸಿಬ್ಬಂದಿಯು ಹೆಚ್ಚಾಗಿರುವಾಗ್ಗೆ ಬಾರದಿರುವುದೂ ಇವರಿಗೆ [illegible], ಅಲ್ಲದೆ ಇದೇ ಒಂದು ದೊಡ್ಡಸ್ಥಿತಿಯೆಂದು [illegible]. [illegible] ಗುತ್ತೆಂಬುದನ್ನು ಇವರು ಯೋಚಿಸುವ ಹಾಗೆಯೇ ಇಲ್ಲ. ಯಾವ ಕಾರಣದಿಂದಲಾದರೂ ಜನಗಳಿಗೆ ಸಂತೋಷವನ್ನುಂಟುಮಾಡುವುದೇ ಈಶ್ವರಪೂಜೆಯೆಂದು ದೊಡ್ಡವರು ಹೇಳುತ್ತಾರೆ. ಕೈಲಾದಮಟ್ಟಿಗೆ ಹಾಗೆ ಇತರರಿಗೆ ಸಂತೋಷವುಂಟಾಗುವ ಇಂಥಹ ಉತ್ಸವಾದಿಗಳಿಗೂ ಇತರ ಸತ್ಕಾರ್ಯಗಳಿಗೂ ಸಹಾಯಕರಾಗಿ ಪುಣ್ಯವನ್ನು ಸಂಪಾದಿಸುವುದು ಮನುಷ್ಯನ ಕರ್ತವ್ಯವು. ಇದಕ್ಕೆ ಪ್ರತಿಯಾಗಿ ದೇವತಾಕಾರ್ಯಗಳಿಗೂ ಇತರ ಸತ್ಕಾರ್ಯಗಳಿಗೂ ಅಡ್ಡಿಮಾಡಿ ಜನಗಳ ಉತ್ಸಾಹವನ್ನು ಭಂಗಮಾಡಿದರೆ ಪಾಪಸಂಘಟನೆಯಾಗುವುದಿಲ್ಲವೆ ? ಒಂದುವೇಳೆ ಇಹಲೋಕದಲ್ಲಿ ಇದರ ಫಲವನ್ನನುಭವಿಸದಿದ್ದರೂ ಪರಲೋಕದಲ್ಲಾದರೂ ಅನುಭವಿಸಿಯೇ ತೀರಬೇಕು. ಆದ್ದರಿಂದ ಕುರುಬರ ಪಂಗಡಕ್ಕೆ ಸೇರಿದ ನಮ್ಮ ಸಹೋದರರು ಇಂಥಹ ಸತ್ಕಾರ್ಯಗಳಿಗೆ ವಿಘ್ನಗಳನ್ನಾಚರಿಸದೆ ಸತ್ಕಾರ್ಯಗಳಲ್ಲಿ ತಾವು ಭಾಗಿಗಳಾಗುವಂತೆ ಅವರಿಗೆ ದೇವರು ಒಳ್ಳೆಯ ಮನಸ್ಸನ್ನು ಕೊಡಲೆಂದು ಹಾರೈಸುತ್ತೇನೆ. ಓರ್ವ ಹಿತಚಿಂತಕ.

ಪರಸ್ಪರಸಹಾಯಸಂಘಗಳ ಇಲಾಖೆಯಲ್ಲಿದು ನ್ಯಾಯವೇ ?

ಪ್ರವ್ಯಾಭಾವದ ದೆಶೆಯಿಂದ ರಾಜ್ಯಾಡಳಿತದ ಎಲ್ಲಾ ಇಲಾಖೆಗಳಲ್ಲೂ ರಿಟ್ರೆಂಚ್‌ಮೆಂಟು ನಡೆದು ಕೋ-ಆಪರೇಟೀವ್ ಸೊಸೈಟಿಗಳ ಇನ್ಸ್‌ಪೆಕ್ಟರ ಸಂಖ್ಯೆಯನ್ನು 33 ಕ್ಕೆ ಕ್ಲಿಪ್ತಮಾಡಿ 4 ಡಿವಿಜನ್ ಅ|| ರಿಜಸ್ಟ್ರಾರವರ ಆಫೀಸುಗಳು ಜಾರಿಗೆ ಬಂದಕೂಡಲೆ ರಿಜಸ್ಟ್ರಾರವರ ಪರ್ಸನಲ್ ಅಸಿಸ್ಟೆಂಟ್ ಸ್ಥಾನವನ್ನು ವಜಾಮಾಡತಕ್ಕದ್ದೆಂದು ನಿರ್ಧರಿಸಿ ಗೌರ್ನಮೆಂಟು ಆರ್ಡರು ಸಾದರಾಯಿತು. ಖಾಯಂ ಇನ್ಸ್‌ಪೆಕ್ಟರುಗಳು ಪ್ರಮೋಷನ್ ಹೊಂದುವದಕ್ಕೂ ಹಂಗಾಮಿ ಇನ್ಸ್‌ಪೆಕ್ಟರುಗಳು ಖಾಯಂ ಆಗುವದಕ್ಕೂ ಅವರುಗಳು ಕೋ-ಆಪರೇಟೀವ್ ಇನ್ಸ್‌ಪೆಕ್ಟರುಗಳ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕೆಂದು ಸಹ ಗೌರ್ನಮೆಂಟು ಆರ್ಡರು ಸಾದರಾಗಿರುತ್ತದೆ. ನಾಲ್ಕು ಡಿವಿಜನ್ ಅ|| ರಿಜಸ್ಟ್ರಾರುಗಳ ಆಫೀಸುಗಳು ಜಾರಿಗೆ ಬಂದಕೂಡಲೆ ಪರ್ಸನಲ್ ಅಸಿಸ್ಟೆಂಟರ (Personal Assistant to the Registrar) ಆಫೀಸು ರದ್ದಾಯಿತು. ಆಫೀಸ್ ಮ್ಯಾನೇಜರು (ಆಗ ಇದ್ದವರು ಮಿ|| ಹೆಚ್. ವೆಂಕಟರಮಣಯ್ಯ, ಬಿ.ಎ.,) ಒಬ್ಬರೇ ಸುಲಲಿತವಾಗಿ ಆಫೀಸಿನ ಮತ್ತು ಇಲಾಖೆಯ ಆಡಳಿತದಲ್ಲಿ ಶ್ರದ್ಧೆಯಿಂದಲೂ, ಇಲಾಖೆಯ ಸಿಬ್ಬಂದಿ ಮತ್ತು ಪ್ರಜೆಗಳ ವಿಶ್ವಾಸ ಮತ್ತು ಪುರೋಭಿವೃದ್ಧಿಯನ್ನೇ ಧ್ಯೇಯವಾಗಿಟ್ಟುಕೊಂಡು ತಾವು ಮಾಡತಕ್ಕ ಡ್ಯೂಟಿಯೇ ದೇವರಪೂಜೆಯೆಂದು ತಿಳಿದು ತ್ರಿಕರಣಶುದ್ಧವಾಗಿ ತಮ್ಮ ನೈಜವಾದ ಸಹಾನುಭೂತಿಯಿಂದ ರಿಜಸ್ಟ್ರಾರವರ ಆಡಳಿತದ ವಿಚಾರದಲ್ಲಿ ಸಹಕಾರಿಯಾಗಿದ್ದು ದಕ್ಷತೆಯಿಂದಲೂ ಕೆಲಸವನ್ನು ನಿರ್ವಹಿಸುತ್ತಿದ್ದರು. ಆದರೆ ಇತ್ತೀಚೆಗೆ ಸಂಘಗಳ ಸಂಖ್ಯೆಯು ಹೆಚ್ಚಾಗಿ ಇದುವರೆಗೂ ನಡೆದಿರುವ ಚಳವಳಿಯ ನಡವಳಿಕೆಗಳನ್ನೂ, ಸಂಸ್ಥೆಗಳನ್ನೂ ದೃಢಪಡಿಸತಕ್ಕದ್ದು ಅವಶ್ಯವೆಂದು ಕಂಡು ರಿಜಸ್ಟ್ರಾರ್ ಸಾಹೇಬರವರಿಗೆ ಪೂರ್ವದಲ್ಲಿದ್ದಂತೆಯೇ ಒಬ್ಬ ಪರ್ಸನಲ್ ಅಸಿಸ್ಟೆಂಟರನ್ನು ಮಹಾರಾಜಾ ಸರ್ಕಾರದವರು ಮಂಜೂರ್ಮಾಡಿದರು. ಆ ಪರ್ಸನಲ್ ಅಸಿಸ್ಟೆಂಟರೇ ಈಗಿರುವ ಮಿ|| ಡಿ. ಕೃಷ್ಣರಾಯರು. ಈ ರಾಯರ ಕುಣಿತಕ್ಕೆ ಸರಿಯಾಗಿ ತಾಳ ಬೀಳುವದಿಲ್ಲವೆಂದು ತಿಳಿದು ಇಲಾಖೆಯ ಒಳಹೊರಗಿನ ಆಡಳಿತದಲ್ಲಿ ಪೂರ್ಣಾನುಭವಿಗಳೂ ಕಾರ್ಯತತ್ಪರರೂ ಪಾಪಭೀತರೂ ಆಗಿದ್ದ ಮ್ಯಾನೇಜರ್ ಮಿ|| ಹೆಚ್. ವೆಂಕಟರಾಮಯ್ಯನವರನ್ನು ಸರ್ಕಲ್ ಇನ್ಸ್‌ಪೆಕ್ಟರನ್ನಾಗಿ ಕಳುಹಿಸಿ ಮತ್ತೊಬ್ಬರನ್ನು ಆಸ್ಥಾನಕ್ಕೆ ತೆಗೆದುಕೊಂಡರು. ಇದು ಒತ್ತಟ್ಟಿಗಿರಲಿ.

ಕೋ-ಆಪರೇಟೀವ್ ಇನ್ಸ್‌ಪೆಕ್ಟರುಗಳ ಪರೀಕ್ಷೆಯನ್ನು ಪ್ಯಾಸ್ ಮಾಡದೆ ಇರುವ ಇನ್ಸ್‌ಪೆಕ್ಟರುಗಳು ಪ್ರಮೋಷನ್ ಹೊಂದುವದಕ್ಕಾಗಲೀ ಖಾಯಂ ಆಗುವದಕ್ಕಾಗಲೀ ಅರ್ಹರಲ್ಲವೆಂದು ಗೌರ್ನಮೆಂಟ್ ಆರ್ಡರು ಸಾದರಾಗಿರುತ್ತಷ್ಟೆ. ಆದರೂ ಮೇಲ್ಕಂಡ ಡಿ. ಕೃಷ್ಣರಾಯರು ಮತ್ತು ಟಿ. ವೆಂಕಟರಮಣಯ್ಯನವರು ಇನ್ಸ್‌ಪೆಕ್ಟರುಗಳಾಗಿದ್ದರೂ ಪರೀಕ್ಷೆಯಲ್ಲಿ ಪ್ಯಾಸುಮಾಡಬೇಕೆಂಬ ನಿರ್ಬಂಧಕ್ಕೆ ತಾವಿಬ್ಬರೂ ಸಿಕ್ಕದಂತೆ ಸಂಧಾನಮಾಡಿ ಇನ್ಸ್‌ಪೆಕ್ಟರಿಂದ ಸಬ್ ಅ|| ರಿಜಸ್ಟ್ರಾರ್ ಪದವಿಗೆ ಏರಿದರು. ಡಿ. ಕೃಷ್ಣರಾಯರು ಸಂಸ್ಥಾನಾಮಳಿ ಕೈಗಾರಿಕೆ ಪರಸ್ಪರಸಹಾಯಸಂಘಗಳ ಇನ್ಸ್‌ಪೆಕ್ಟರಾಗಿಯೂ, ಟಿ. ವೆಂಕಟರಮಣಯ್ಯನವರು ಸಂಸ್ಥಾನಾಮಳಿ ಅಗ್ರಿಕಲ್ಚರಲ್ ಪರಸ್ಪರಸಹಾಯಸಂಘಗಳ ಇನ್ಸ್‌ಪೆಕ್ಟರಾಗಿಯೂ ಇದ್ದರು. ಇವರುಗಳು ಇನ್ಸ್‌ಪೆಕ್ಟರುಗಳಾದಾರಭ್ಯ ಯಾವ ಸರ್ಕಲ್ ಛಾರ್ಜಿನಲ್ಲಿಯೂ ಇರಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಹೀಗಿರುವಲ್ಲಿ ಇವರುಗಳಿಗೆ ಸರ್ಕಲ್ ಕೆಲಸಗಳ ಅನುಭವವು ಎಷ್ಟರಮಟ್ಟಿಗೆ ಇದೆಯೋ ವಾಚಕರೇ ಊಹಿಸಬೇಕು. ಇವರುಗಳಿಂದ ಕೈಗಾರಿಕೆ ಮತ್ತು ಅಗ್ರಿಕಲ್ಚರಲ್ ಸಂಘಗಳು ಎಷ್ಟು ಸ್ಥಾಪನೆಯಾದವು ? ಅವುಗಳ ಪೈಕಿ ಜಾರಿಗೆ ಬಂದವು ಎಷ್ಟು ? ಎಷ್ಟು ಜೀವದಿಂದಿವೆ ? ಎಂದು ಯಾರಾದರೂ ಪ್ರಶ್ನೆಮಾಡಿದಲ್ಲಿ ಧಿಟ್ಟವಾಗಿ ಪ್ರತ್ಯುತ್ತರ ಹೇಳಲು ಶೇಕಡಾ ಒಂದೆರಡಾದರೂ ಜೀವದಿಂದಿವೆಯೆಂದು ಹೇಳಲಾಗುವುದಿಲ್ಲ. ಇದೀಗ ಇಲಾಖೆಯಲ್ಲಿ ಇವರು ಮಾಡಿರುವ ಮೆಹನತ್ತಿನ ಕೆಲಸ ! ಇಂಥಾ ಮಹತ್ತರವಾದ ಅರ್ಹತೆಯನ್ನು ಹೊಂದಿ ಕಡ್ಡಾಯವಾಗಿ ಪ್ಯಾಸುಮಾಡಬೇಕೆಂದಿರುವ ಪರೀಕ್ಷೆಯನ್ನು ಪ್ಯಾಸುಮಾಡದೆ ಇವರುಗಳು ಇನ್ಸ್‌ಪೆಕ್ಟರು ಪದವಿಯಿಂದ ಸಬ್ ಅ|| ರಿಜಸ್ಟ್ರಾರ್ ಪದವಿಗೆ ಏರಿಸಲ್ಪಟ್ಟರು. ಇದಲ್ಲವೆ ಇವರ ಸರ್ವಜನವಶೀಕರಣಮಹಿಮೆ !! ಇವರಿಂದ ಕೈಗಾರಿಕೆ ಮತ್ತು ವ್ಯವಸಾಯಸಂಘಗಳ ಅಭಿವೃದ್ಧಿಯೆಷ್ಟರಮಟ್ಟಿಗಾಗುವುದು ಟೆಕ್ನಿಕಲ್ ಅನುಭವ (Technical Knowledge) ಮೊದಲೇ ಇಲ್ಲ, ಇನ್ಸ್‌ಪೆಕ್ಟರು ಪರೀಕ್ಷೆಯಂತೂ ಪ್ಯಾಸ್‌ಮಾಡಿಯೇ ಇಲ್ಲ. ಇಂಥಾ ಯೋಗ್ಯತಾಪತ್ರಗಳನ್ನ ಹೊಂದಿದವರೇ ಮೇಲಿನ ಅಂತಸ್ತಿಗೆ ಏರಲು ಅರ್ಹರಾದಮೇಲೆ ಟೆಕ್ನಿಕಲ್ ಅನುಭವ ಅವಶ್ಯಕವಿಲ್ಲದ ಸ್ಥಾನಗಳಲ್ಲಿ ಇತರ ಇನ್ಸ್‌ಪೆಕ್ಟರುಗಳಿದ್ದು ತಮ್ಮ ಕೆಲಸಕ್ಕೆ ತಕ್ಕ ಬುದ್ಧಿ ಮತ್ತು ಶಕ್ತಿಯನ್ನು ಹೊಂದಿ ತಮ್ಮ ನಿರ್ವಂಚನೆಯಾದ ಸೇವೆಯನ್ನು ಇಲಾಖೆಗೆ ಧಾರೆಯೆರೆದಿರುವವರಿಗೆ ಪ್ರಮೋಷನ್ನೂ ಇಲ್ಲವಂತೆ ! ಖಾಯಂಕೆಲಸವೂ ಇಲ್ಲವಂತೆ !! ಇದು ನ್ಯಾಯವೆ ? ವಾಚಕರೇ ಊಹಿಸಿ. ಮೇಲೆ ಹೇಳಿದ ಜನರಲ್ ರಿಟ್ರೆಂಚ್‌ಮೆಂಟ್ ಆದ ತರುವಾಯ ಈ ಮಹನೀಯರಿಬ್ಬರ ಪ್ರಮೋಷನ್ನಿಗಾಗಿ ಸ್ಪೆಷಲ್ ರಿಟ್ರೆಂಚ್‌ಮೆಂಟ್ ನಡೆದದ್ದರಲ್ಲಿ 6 ಇನ್ಸ್‌ಪೆಕ್ಟರುಗಳ ಮತ್ತು 4 ಗುಮಾಸ್ತರ ಸ್ಥಾನಗಳು ರದ್ದಾಗಿ ಮೇಲೆ ಹೇಳಿದ 2 ಸಬ್ ಅ|| ರಿಜಸ್ಟ್ರಾರ್ ಸ್ಥಾನಗಳು ಹೊಸದಾಗಿ ನಿರ್ಮಾಣವಾದವು. ಇವು ಆದಕೂಡಲೇ ಇವರುಗಳು ಈ ಸ್ಥಾನಗಳಿಗೆ ಏರಿ ಇವರು ಇದ್ದ 150 ರೂಪಾಯಿನ ಇನ್ಸ್‌ಪೆಕ್ಟರುಗಳ ಸ್ಥಾನಗಳೇ ಇತರ ಎಲ್ಲಾ ಇನ್ಸ್‌ಪೆಕ್ಟರುಗಳಿಗೂ ಸಿಕ್ಕದಂತೆ ರದ್ದಾದವು. ಒಂದುವೇಳೆ ಇವರಿಬ್ಬರಿಗಾಗಿ ಈ ಎರಡು ಇನ್ಸ್‌ಪೆಕ್ಟರುಗಳ ಗ್ರೇಡುಗಳು ಇದ್ದವೆಂದೂ ಇತರ ಇನ್ಸ್‌ಪೆಕ್ಟರುಗಳು ಈ ಗ್ರೇಡನ್ನ ಹೊಂದಲು ಅನರ್ಹರೆಂದೂ ಸರ್ಕಾರದವರು ತೀರ್ಮಾನಿಸಿದಂತೆ ಕಾಣುತ್ತೆ.

ಇವರುಗಳಿಗೆ [illegible] ಸಬ್ ಅ|| ರಿಜಸ್ಟ್ರಾರ್ [illegible]

ಕೊಡಿ ಸುಪರಿರಾರದೆ ರಿಜಿಸ್ಟ್ರಾರ್ ಸಾಹೇಬರವರು ಕರುಣಿಸಿ ಎಲ್ಲಾ ಇನ್ಸ್‌ಪೆಕ್ಟರುಗಳಿಗೂ ಒಂದೇತರವಾದ ಟೈಂಸ್ಕೇಲು (Time Scale Grade) ಗ್ರೇಡನ್ನು ಕೊಡಬೇಕೆಂದು ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದಲ್ಲಿ ಸಬ್ ಅ|| ರಿಜಿಸ್ಟ್ರಾರುಗಳನ್ನು ಅ|| ರಿಜಿಸ್ಟ್ರಾರುಗಳನ್ನಾಗಿ ಮಾಡಬೇಕೆಂಬ ಶಿಫಾರ್ಸು ಸಹ ಸೇರಿದ್ದಿತೆಂಬವಾಗಿ ಕೇಳುತ್ತೇನೆ. ಸಬ್ ಅ|| ರಿಜಿಸ್ಟ್ರಾರುಗಳನ್ನ ಇಷ್ಟು ತ್ವರ್ಯದಲ್ಲಿ ಅ|| ರಿಜಿಸ್ಟ್ರಾರುಗಳನ್ನಾಗಿ ಮಾಡಲು ಅವಕಾಶವಿಲ್ಲದ ರಿಂದಲೋ ಏನೋ ಇನ್ಸ್‌ಪೆಕ್ಟರುಗಳಿಗೆ ದೊರಿಯಬಹುದಾಗಿದ್ದ ಟೈಂಸ್ಕೇಲೂ ಮಂಜೂರಾಗಲಿಲ್ಲವೆಂದು ಕೇಳುತ್ತೇನೆ. ಇವರುಗಳು ಟೆಕ್ನಿಕಲ್ ಅನುಭವವೂ ಇಲ್ಲದೆ ಇನ್ಸ್‌ಪೆಕ್ಟರ್ ಪರೀಕ್ಷೆಯನ್ನೂ ಪ್ಯಾಸ್‌ಮಾಡದೆ ಮೇಲಿಂದಮೇಲೆ ಒಂದು ಪದವಿಯಿಂದ ಮತ್ತೊಂದು ಪದವಿಗೆ ಹೋಗಬೇಕು. ಇವರುಗಳು ಮುಂದಿನ ಪದವಿಗೆ ಹೋದ ಹಾಗೆಲ್ಲಾ ಇವರಿದ್ದ ಹಿಂದಿನಪದವಿಗಳು ರದ್ದಾಗಬೇಕು. ಇತರ ಅನುಭವದಾರರಾದ ಇನ್ಸ್‌ಪೆಕ್ಟರುಗಳಿಗೆ ಪ್ರಮೋಷನ್ನಾಗಲೀ ಬಾಯಂಕೆಲಸವಾಗಲೀ ದೊರಿಯಬೇಕಾದರೆ ಇನ್ಸ್‌ಪೆಕ್ಟರ್ ಪರೀಕ್ಷೆಯನ್ನು ಪ್ಯಾಸ್‌ಮಾಡಿರಬೇಕು. ಇದು ಯಾವ ನ್ಯಾಯವೋ ಕಾಣೆ ! ಡಿ. ಕೃಷ್ಣರಾಯರ ಕೆಲಸಗಳ ಏಚಕ್ಷಣೆಯನ್ನು ಟಿ. ವೆಂಕಟರಮಣಯ್ಯನವರಿಗೆ ಸರ್ವಿಸ್ಸಿನಲ್ಲಿಯೇ ಪ್ರೆಫರೆನ್ಸ ದೊರಕುತ್ತಿರುವ ರೀತಿಯನ್ನೂ ಮುಂದೆ ವಾಚಕರ ಅವಗಾಹನೆಗೆ ತರುತ್ತೇನೆ.

ಕಷ್ಟಾನುಭವಿ.

ಪ್ರಾಚೀನಸದ್ಗ್ರಂಥಗಳ ದುರವಸ್ಥೆಯು ಮತ್ತು ಅದರ ನಿವಾರಣೋಪಾಯವು.

ನಮ್ಮ ಕನ್ನಡನಾಡಿನಲ್ಲಿ ಒಂದು ಬಗೆಯ ಜನರಿರುವರು. ಈ ಜನರನ್ನು ನಿಕ್ಷೇಪಾದಿಗಳನ್ನು ಕಾಯತಕ್ಕ ಸರ್ಪಗಳಿಗೆ ಹೋಲಿಸಬಹುದು. ಸರ್ಪವು ತಾನೂ ಭೋಗಿಸಲರಿಯದು; ಭೋಗಿಸುವವರಿಗೂ ಬಿಟ್ಟುಕೊಡಲಾರದು. ಇದರಂತೆ ಈ ಜನರು ಸಹ ತಮ್ಮ ಬಳಿಯಲ್ಲಿರುವ ಎಷ್ಟೋ ಪ್ರಾಚೀನಸದ್ಗ್ರಂಥಗಳನ್ನು ತಾವೂ ಓದಿ ಪ್ರಸಿದ್ಧಪಡಿಸರು; ಓದಿ ಪ್ರಸಿದ್ಧಪಡಿಸುವವರಿಗೂ ಕೊಡರು. ಈ ಜನರು ಈ ಗ್ರಂಥರೂಪಿ ವಿದ್ವಾಂಸರನ್ನು ಅರ್ಥಾತ್ ಸರಸ್ವತಿಯನ್ನು ಚಿಂದಿಯ ಬಟ್ಟೆಯಲ್ಲೋ; ಕಂಬಳಿಯ ಹರುಕಿನಲ್ಲೋ; ಗೋಣಿಯತಟ್ಟಿನಲ್ಲೋ; ಕಪ್ಪುದಿಯ ಬೊಂತೆಯಲ್ಲೋ; ಬಿಗಿದುಕಟ್ಟಿ ಒಮ್ಮೆ ಯಾವುದೋ ಒಂದು ಮೂಲೆಯಲ್ಲಿ ಇಟ್ಟುಬಿಟ್ಟರೆಂದರೆ ತೀರಿತು ಮುಂದೆ ನೂರಾರು ವರ್ಷಗಳೇ ಏಕೆ ನೂರಾರು ವರ್ಷಗಳಾದರೂ ಅವುಗಳನ್ನು ಅಲ್ಲಿಂದ ಅವರು ಬಯಲಿಗೆ ತೆಗೆಯರು. ಆ ಗ್ರಂಥಗಳೇ ಬೇಕಾದರೆ ಸಂದರ್ಭವದಗಿದಹಾಗೆ ಗೆದ್ದಲಿನ ಸಹಾಯಹೊಂದಿ ಒಲೆಯಲ್ಲಿಬಿದ್ದು ಅಲ್ಲಿಂದ ತಿಪ್ಪೆಗೆ ಹೋಗಿ ಮುಂದೆ ಮಣ್ಣಲ್ಲಿ ಮಾಯವಾಗಬೇಕು, ಅಥವಾ ಮನೆಗೆ ಬೆಂಕಿಯೇನಾದರೂ ಬಿದ್ದು ಅಲ್ಲಿದ್ದ ಎಲ್ಲಾ ಗ್ರಂಥಗಳೂ ಏಕಕಾಲಕ್ಕೆ ಅಗ್ನಿಯಲ್ಲಿ ಅದೃಶ್ಯವಾದರೂ ಆಗಬೇಕು. ಇಷ್ಟಾಗದ ಹೊರತು ಇವರು ಎಂಥ ಆಪ್ತೇಷ್ಟರು ಬರಲಿ, ಎಂಥ ಮಿತ್ರಬಾಂಧವರು ಬರಲಿ, ಎಂಥ ಹಿತಚಿಂತಕರು ಬರಲಿ ಗ್ರಂಥಗಳನ್ನು ಮಾತ್ರ ಹೊರಗೆ ಕೊಡರು. ಬಹುಜನರ ಬಳಕೆಯ ಹಣವನ್ನು ಉಪಾಯಾಂತರದಿಂದ ಗಳಿಸಿ ಅದನ್ನು ನೆಲದಲ್ಲಿ ಹೂಳಿ ಮೇಲೆ ಮಣ್ಣುಮುಚ್ಚಿ ಕಾಯುತ್ತ ಕೂಡ್ರುವವನಾದ ಧನಲೋಭಿಯು ಅರ್ಥಶಾಸ್ತ್ರದ ಪ್ರಕಾರ ಎಂಥ ಸಮಾಜದ್ರೋಹಿ ಎನಿಸುವನೋ ಅದರಂತೆ ಈ ವಿಲಕ್ಷಣದಪ್ರಕಾರ ಗ್ರಂಥರಕ್ಷಕರಾದರೂ ಒಂದು ಬಗೆಯ ಸಮಾಜದ್ರೋಹಿಗಳೇ ಎನ್ನುವುದರಲ್ಲಿ ತಪ್ಪೇನು ? ಈ ರೀತಿಯಾಗಿ ಎಷ್ಟೋ ಜನರು ತಮ್ಮ ಕಡೆಗಿದ್ದ ಗ್ರಂಥಗಳನ್ನು ಹೊರಗೆ ಹೊರಡಿಸದೆ ಹೋಗಿರುವುದರಿಂದಲೇ ಆರ್. ನರಸಿಂಹಾಚಾರ್ಯರು ಬರೆದಿರುವ ಕರ್ಣಾಟಕ ಕವಿಚರಿತ್ರೆಗೆ ನಮ್ಮ ಎಷ್ಟೋ ಗ್ರಂಥಗಳ ಹಾಗೂ ತದ್ಗ್ರಂಥಗಳನ್ನು ಬರೆದ ಕವಿಗಳ ಹೆಸರುಗಳು ಸೇರದೆ ಕೈಬಿಟ್ಟು ಹೋಗಿವೆಯೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ, ಮತ್ತು ಆಚಾರ್ಯರು ಕವಿಚರಿತ್ರೆಯನ್ನು ಬರೆಯಲುಪಕ್ರಮಿಸುವುದಕ್ಕೆ ಪೂರ್ವವೇ ಅಂದರೆ ಎಷ್ಟೋ ಕಾಲಗಳ ಹಿಂದೆಯೇ ನಮ್ಮ ಎಷ್ಟೋ ಗ್ರಂಥಗಳು ನಮ್ಮವರ ಅನಾದರಣೆ ಅಶ್ರದ್ಧೆ ಅವಿಚಾರತನಗಳಿಂದ ಮೇಲೆ ಹೇಳಿರುವಂತೆ ಗೆದ್ದಲು ಬೆಂಕಿ ಮಣ್ಣು ತಿಪ್ಪೆಗಳ ಪಾಲಾಗಿದ್ದವೆಂದೂ ಹೇಳಬಹುದಾಗಿದೆ. ಇಷ್ಟಾದರೂ ಪರಮಾತೀಯರೇ ಆದ ಆರ್. ನರಸಿಂಹಾಚಾರ್ಯರೊಬ್ಬರೇ ಪ್ರಯತ್ನಪಟ್ಟದ್ದರಿಂದಲೇ ನೂರಾರರವರಿವಿಗಿನ ನಮ್ಮ ಕವಿಗಳ ಹೆಸರೂ ಸಾವಿರಾರರವರೆಗಿನ ಗ್ರಂಥಗಳ ಹೆಸರೂ ಬಯಲಿಗೆ ಬಂದಿರುತ್ತವೆ ಎನ್ನುವಾಗ ಒಂದಾನೊಂದು ಕಾಲಕ್ಕೆ ನಮ್ಮಾ ವೀರಶೈವ ಮತದಲ್ಲಿ ಎಂಥ ವಿದ್ವತ್ಸಂಪತ್ತಿದ್ದಿತು, ಎಷ್ಟೊಂದು ಅಮೌಲ್ಯ ಸದ್‌ಗ್ರಂಥರತ್ನಗಳ ಸಂಗ್ರಹವಿದ್ದಿತು, ಎಂಥೆಂಥಾ ಕವಿಪುಂಗವರಿಗೆ ಈ ಮತವು ಜನ್ಮಸ್ಥಾನವಾಗಿದ್ದಿತು ಮತ್ತು ಈ ಮತವು ಅದ್ಯೆಂಥಾ ಉನ್ನತೋನ್ನತ ಸ್ಥಿತಿಯಲ್ಲಿದ್ದಿತು ! ಎಂಬಿತ್ಯಾದಿಗಳೆಲ್ಲವನ್ನೂ ಇಲ್ಲಿ ಬರೆದು ತಿಳಿಸುವುದು ಕೇವಲ ಅಸಾಧ್ಯವೇ ಸರಿ. ಬಹಳವೇಕೆ ವಿಜಯನಗರದಂಥಾ ಲೋಕವಿಖ್ಯಾತ ಸರ್ವಸತ್ತಾಧೀಶ ಸಮ್ರಾಟರ ಅತ್ಯುಚ್ಚ ಸಿಂಹಾಸನದ ಮೇಲೆ ಸಹ ಈ ಮತವು ತನ್ನ ಧರ್ಮಧ್ವಜವನ್ನು ನಿಶ್ಶಂಕೆಯಿಂದ ನೆಲೆಗೊಳಿಸಿತ್ತೆನ್ನುವುದೊಂದರ ಮೇಲಿಂದಲೇ ಆ ಕಾಲದ ನಮ್ಮವರ ಘನತೆಯೂ, ವಿದ್ವದ್ವೈಭವವೂ, ವರ್ಚಸ್ಸೂ, ತೇಜಸ್ಸೂ ಹೇಗಿದ್ದವೆಂಬುದನ್ನು ವಾಚಕರೇ ಕಲ್ಪಿಸಬೇಕು. ಹೀಗೆ ನಮ್ಮವರ ಅತ್ಯುನ್ನತಿಗೆ ಯಾವದು ಮೂಲಕಾರಣವಾಗಿದ್ದಿತೋ, ಅಂಥ ವಿದ್ಯಾಸಂಪತ್ತು ಬರುಬರುತಾ ನಷ್ಟವಾಗುತ್ತ ಬಂದುದರಿಂದಲೇ ನಾವು ಈಗಿನಂಥ ಅತ್ಯವನತ ಸ್ಥಿತಿಗೆ ಗುರಿಯಾಗಿರುವೆವೆಂದು ಧಾರಾಳವಾಗಿ ಹೇಳಬಹುದು. ಪುನಃ ನಾವು ಆ ನಮ್ಮ ಉನ್ನತಾವಸ್ಥೆಗೆ ಮುಟ್ಟಬೇಕಾದರೆ, ನಾವು ಸರ್ವತ್ರ ವಿದ್ವಾಂಸರಾಗಬೇಕಾದುದು ಕೇವಲ ಅಗತ್ಯವಿರುವಂತೆಯೇ ನಮ್ಮ ಪ್ರಾಚೀನ ಸದ್‌ಗ್ರಂಥಗಳ ಪುನರುದ್ಧಾರದೆಸೆಯಿಂದ ಪ್ರಯತ್ನಮಾಡಬೇಕಾದುದು ಸಹ ತುಂಬಾ ಅಗತ್ಯವಾಗಿಯೇ ಇರುತ್ತದೆ. ನಮ್ಮ ಪ್ರಾಚೀನ ಸದ್‌ಗ್ರಂಥಗಳೆಂದರೆ ನಮ್ಮ ಹಿಂದಿನವರ ಶ್ರೇಷ್ಠತೆಯನ್ನು ನಮಗೆ ತೋರಿಸಿಕೊಡುವ ಕೈಗನ್ನಡಿಗಳಂತೆಯೂ ಆ ಶ್ರೇಷ್ಠಸ್ಥಾನಕ್ಕೆ ನಮ್ಮನ್ನು ನೈದು ಮುಟ್ಟಿಸುವ ಹೆದ್ದಾರಿಗಳಂತೆಯೂ ಇಹಪರಗಳ ಸುಖಸದ್ಗತಿಗಳನ್ನು ದೊರಕಿಸಿಕೊಡುವ ಸದ್ಗುರುಗಳಂತೆಯೂ ಸಂಸಾರತಾಪತ್ರಯ ತಪ್ತಚಿತ್ತರಿಗೆ ಧೈರ್ಯ ಸ್ಥೈರ್ಯ, ತುಷ್ಟಿ, ಪುಷ್ಟಿ, ಆನಂದ, ಮಹದಾನಂದವನ್ನೀಯುವ ಸನ್ಮಿತ್ರರಂತೆಯೂ ಇರುತ್ತವೆ. ಇಂಥಾ ಅತ್ಯುಪಯುಕ್ತ ಗ್ರಂಥಗಳನ್ನು ನಾವು ಹಾಳುಮಾಡುವುದೆಂದರೆ ನಮ್ಮ ಮನೆಗೆ ನಾವೇ ಬೆಂಕಿಯನ್ನು ಹೊತ್ತಿಸಿಕೊಂಡಂತೆಯೇ ಸರಿ. ನಮ್ಮ ಹಳೆಯ ಗ್ರಂಥಗಳ ಇಂಥ ಉಪಯುಕ್ತತೆಯನ್ನು ತಿಳಿದೇ ಅವುಗಳ ಪುನರುದ್ಧಾರದ ದೆಸೆಯಿಂದ ಕೆಲ ವೀರಶೈವ ವಿದ್ವಾಂಸರುಗಳು ಪ್ರಯತ್ನನಡೆಯಿಸಿರುವುದು ಕೇವಲ ಸ್ತುತ್ಯವಾಗಿರುತ್ತದೆ. ಒಮ್ಮೆ ಶ್ರೀಕೃಷ್ಣನು ಮುಳುಗಿಹೋಗುತ್ತಿದ್ದ ಗೋವುಗಳನ್ನು ಬದುಕಿಸಿ ಸ್ಥಿರಕೀರ್ತಿಯನ್ನು ಗಳಿಸಿಟ್ಟು ಹೋಗಿರುತ್ತಾನೆ. ಇದರಂತೆ ನಮ್ಮ ಕೆಲ ವಿದ್ವಾಂಸರು ಅಧೋಗತಿಗೆ ಗುರಿಯಾಗಿರುವ ಸದ್‌ಗ್ರಂಥರೂಪೀ ಗೋವುಗಳನ್ನು ಉದ್ಧರಿಸಲು ಬದ್ಧಕಂಕಣರಾಗಿರುವುದರಿಂದ ಇವರ ಕೀರ್ತಿಯಾದರೂ ಶಾಶ್ವತವುಳಿಯತಕ್ಕದ್ದಾಗಿದೆ ಎನ್ನುವಲ್ಲಿ ಸಂದೇಹವೇನು ? ಇದರಂತೆ ಹತ್ತೆಂಟು ಜನರಲ್ಲದೆ ಹಲವು ಪ್ರಮುಖರು ಪ್ರಯತ್ನನಡೆದಲ್ಲಿ ಇನ್ನೂ ನಮ್ಮ ಎಷ್ಟೋ ಗ್ರಂಥಗಳು ಬಯಲಿಗೆ ಬರುವ ಮತ್ತು ಬಯಲಿಗೆ ಬಂದ ಗ್ರಂಥಗಳಿಗೆ ಸ್ಥಿರತೆಯುಂಟಾಗುವ ಸಂಭವವಿರುತ್ತದೆ. ಆದರೆ ಆತರದ ಸತ್ಪ್ರೇರಣೆಯು ಅಂಥವರಿಗೆ ಎಂದಿಗೆ ಉಂಟಾಗುವುದೋ ತಿಳಿಯದು. ಇಷ್ಟರಲ್ಲಿಯೇ ನಮ್ಮ ಮಠಸ್ಥರು, ಉಪಾಧ್ಯಾಯರು, ವಿದ್ಯಾರ್ಥಿಗಳು ಮೊದಲಾದವರು ಇದರ ಕಡೆಗೆ ಲಕ್ಷ್ಯಕೊಟ್ಟಲ್ಲಿ ಎಷ್ಟೊ ಪ್ರಯೋಜನವಾಗುವಂತಿರುತ್ತದೆ. ವಿದ್ಯಾರ್ಥಿಗಳೂ ಉಪಾಧ್ಯಾಯರೂ ತಮಗೆ ಬಿಡುವಿದ್ದವೇಳೆಯಲ್ಲಿ ತಮ್ಮ ತಮ್ಮ ಊರುಗಳಿಗೆ ಬಂದಿರುವಾಗ್ಗೆ ತಮ್ಮ ಹಾಗೂ ತಮ್ಮ ಆಪ್ತೇಷ್ಟರ ಮನೆಗಳಲ್ಲಿ ಹಳೆಯ ಗ್ರಂಥಗಳೇನಾದರೂ ಇವೆಯೇ ? ಎಂಬುದನ್ನು ವಿಚಾರಿಸುತ್ತಿರುವವರಾಗಬೇಕು. ಮಠಸ್ಥರಾದ ನಮ್ಮ ಜಂಗಮಮೂರ್ತಿಗಳಲ್ಲಿ ಕೆಲವರು ಭಕ್ತರಮನೆಗೆ ಹೋಗುವುದೆಂದರೇ ಭೋಜನಮಾಡುವುದಕ್ಕೂ, ದಕ್ಷಿಣೆಯರೊಕ್ಕವನ್ನೆತ್ತಿಕೊಂಡು ಬರುವುದಕ್ಕೂ ಮಾತ್ರವೆಂದಿಷ್ಟೇ ತಿಳಿದಿರುವಂತೆ ತೋರುತ್ತದೆ. ಹೀಗೆ ನಮ್ಮ ಗುರುವರ್ಗದ ಬಹುಭಾಗವು ಇಂಥ ಮೌಢ್ಯಾಂಧಕಾರದ ಮಡುವಿನಲ್ಲಿ ಮುಳುಗಿ ಮೇಲಕ್ಕೇಳದೆ ಹೋದಪ್ರಯುಕ್ತವೇ ನಾವಿಕನಿಲ್ಲದ ನಾವೆಯಂತೆ ನಮ್ಮಾ ಮತವು ಈ ಗತಿಗೆ ಗುರಿಯಾಗುವಂತಾಯಿತೆಂಬುದು ಪ್ರಸಿದ್ಧವಿಷಯವೇ ಆಗಿರುತ್ತದೆ. ದಯಮಾಡಿ ಇನ್ನು ಮುಂದಾದರೂ ಜಂಗಮಮೂರ್ತಿಗಳು ಭಕ್ತರಮನೆಗಳಿಗೆ ಹೋಗಿರುವಾಗ ಪೂರ್ವಗ್ರಂಥಗಳೇನಾದರೂ ಇರುವುವೇ ? ಎಂಬುದನ್ನು ವಿಚಾರಿಸುತ್ತಲಿದ್ದು ಸಿಕ್ಕಿದ ಗ್ರಂಥಗಳನ್ನು ಬಯಲಿಗೆ ತರುವ ಪ್ರಯತ್ನಮಾಡತಕ್ಕದ್ದು. ಇದರಂತೆಯೇ ಇತರರಾದರೂ ತಾವು ಹೋದ ಹೋದ ಕಡೆಗಳಲ್ಲಿ ಈ ಸಂಬಂಧವಾಗಿ ವಿಚಾರಿಸತಕ್ಕದ್ದು. ಅಗತ್ಯವೂ ಅವಸರವೂ ಆಗಿರುತ್ತದೆ. ಇದರಂತೆ ಬಯಲಿಗೆ ಬರುವ ಮತ್ತು ಇಷ್ಟರಲ್ಲಿಯೇ ಬಯಲಿಗೆ ಬಂದು ಅಜ್ಞಾಗದೆ ಇದ್ದ ಕಡೆಗಳಲ್ಲಿಯೇ ಹಾಳಾಗುತ್ತಲಿರುವ ಗ್ರಂಥಗಳನ್ನು ಮೈಸೂರು ವೀರಶೈವವಿದ್ಯಾವರ್ಧಕಸಂಘ, ಧಾರವಾಡ ವೀರಶೈವವಿದ್ಯಾವರ್ಧಕ ಸಂಘಗಳಂಥಾ ದೊಡ್ಡ ಸಂಘದವರು ಅಚ್ಚುಹಾಕಿಸಿ ಗೊತ್ತಾದ ಸ್ಥಳಗಳಲ್ಲಿ ಸಂಗ್ರಹಮಾಡಿಡುವಂತಾಗಬೇಕು. ಇತ್ಯಾದಿಯಾಗಿ ಪ್ರಯತ್ನವು ನಡೆಯುತ್ತ ಬಂದಲ್ಲಿ ಪುರಾತನಗ್ರಂಥಗಳು ಈಗಿದ್ದಷ್ಟಾದರೂ ಉಳಿದುಕೊಳ್ಳಬಹುದೆಂದೂ ಮಹಾಜನರು ಇತ್ತ ತಮ್ಮ ಲಕ್ಷ್ಯವನ್ನು ಪೋರೈಸುವಂತಾಗಬೇಕೆಂದೂ ನನ್ನ ನಮ್ರಸೂಚನೆಯು.

ಚೆನ್ನಬಸವಪ್ಪಗೌಡ ಪಾಟೀಲ್, ಕಪ್ಪನಹಳ್ಳಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 11 ನೆಯ ಪ್ರಕರಣ.

ಕ್ರೈಸ್ತರ ಸಹವಾಸ.

ಮಾರನೆಯದಿನ ಮಧ್ಯಾಹ್ನ 1 ಘಂಟೆಗೆ ಬೇಕರವರ ಪ್ರಾರ್ಥನಾಸಭೆಗೆ ಹೋದೆನು. ಹಾರಿಸ್ಸು ಕನ್ಯೆ, ಗಾಬುಕನ್ಯೆ, ಕೋಟ್ಸರವರು ಮೊದಲಾದವರೊಡನೆ ನನಗೆ ಅಲ್ಲಿ ಬೇಕರವರು ಪರಿಚಯವನ್ನು ಮಾಡಿಸಿದರು. ಎಲ್ಲರೂ ದೇವರಪ್ರಾರ್ಥನೆಮಾಡಲು ಕೈಮುಗಿದುಕೊಂಡು ನಿಂತುಕೊಂಡರು. ನಾನೂ ಅವರಂತೆಯೇ ಕೈಮುಗಿದು ನಿಂತುಕೊಂಡೆನು. ಬಂದಂತಹವರೆಲ್ಲರಸಲುವಾಗಿ ಭಗವಂತನನ್ನು ಪ್ರಾರ್ಥಿಸುವುದು ಪದ್ಧತಿಯು. ಆ ದಿವಸ ಶಾಂತಿಯಿಂದ ಆಚರಿಸಬೇಕು. ಭಗವಂತನಿಗಾಗಿ ಹೃದಯಕವಾಟವನ್ನು ತೆರೆದಿಡಬೇಕು. ನನ್ನನ್ನೂ ಕುರಿತು ಅವರು ಪ್ರಾರ್ಥನೆಮಾಡಿದರು. “ಓ ಪ್ರಭುವೇ, ನಮ್ಮಲ್ಲಿಗೆ ಬಂದಿರುವ ಈ ಹೊಸ ಸಹೋದರನಿಗೆ ಕೂಡ ನಿನ್ನ ದಾರಿಯನ್ನು ತೋರಿಸು. ನಮಗುಂಟುಮಾಡಿರುವ ಶಾಂತಿಯನ್ನು ಈತನಿಗುಂಟುಮಾಡು. ನಮ್ಮನ್ನು ಕಾಪಾಡುವ ಏಸುಕ್ರಿಸ್ತನೇ ಈತನನ್ನೂ ಕಾಪಾಡುವವನಾಗು. ಕ್ರಿಸ್ತನ ಹೆಸರಿನಿಂದಲೇ ಇವೆಲ್ಲವನ್ನೂ ನಾವು ಕೇಳಿಕೊಳ್ಳುತ್ತೇವೆ” ಎಂದು ಅವರೆಲ್ಲರೂ ಪ್ರಾರ್ಥಿಸಿದರು. ಆ ಸಭೆಯಲ್ಲಿ ಸಂಗೀತವನ್ನು ಹಾಡುವುದು, ಪಿಯಾನೋ ಬಾಜಿಸುವುದು ಮೊದಲಾದವೇನೂ ಇರಲಿಲ್ಲವು. ಪ್ರತಿದಿವಸದಲ್ಲೂ ಯಾವುದೋ ಒಂದು ಹೊಸವಿಷಯವನ್ನು ಕುರಿತು ಕೊಂಚಕಾಲ ಪ್ರಾರ್ಥನೆಯನ್ನು ಮಾಡಿದನಂತರ ನಾವೆಲ್ಲರೂ ಊಟಕ್ಕೆ ಹೋಗುತ್ತಿದ್ದೆವು. ಪ್ರಾರ್ಥನೆಯು ಐದುನಿಮಿಷಕಾಲ ಮಾತ್ರ ನಡೆಯುತ್ತಿದ್ದಿತು. ಹಾರಿಸ್ಸು, ಗಾಬುಕನ್ಯೆಯರಿಬ್ಬರೂ ಮಧ್ಯವಯಸ್ಸು ಕಳೆದವರಾಗಿದ್ದರು. ಅವರಿಬ್ಬರಿಗೂ ಮದುವೆಯಾಗಿರಲಿಲ್ಲವು. ಕೋಟ್ಸರವರೂ ವಿರಾಗಿಯೇ. ಪ್ರತಿಭಾನುವಾರ ಸಾಯಂಕಾಲ 4 ಘಂಟೆಗೆ ತಮ್ಮ ಮನೆಗೆ ಟೀ ಕುಡಿಯಲು ಆ ಕನ್ಯೆಯರಿಬ್ಬರೂ ಬರಹೇಳಿದ್ದರು. ಅವರಿಬ್ಬರೂ ಒಟ್ಟಿಗೇ ಒಂದು ಮನೆಯಲ್ಲಿದ್ದರು. ಪ್ರತಿಭಾನುವಾರವೂ ಕೋಟ್ಸರವರಲ್ಲಿಗೆ ಹೋದಾಗ್ಗೆ ಆ ವಾರದಲ್ಲಿ ನಾನು ಮಾಡಿದ ಮತಕಾರ್ಯಗಳ ಪಟ್ಟಿಯನ್ನು ಅವರಿಗೆ ಕೊಡುತ್ತಿದ್ದೆನು. ನಾನೋದಿದ ಗ್ರಂಥಗಳಿಂದ ನನಗುಂಟಾದ ಭಾವವನ್ನು ಕುರಿತು ಅವರಕೂಡ ಚರ್ಚಿಸುತ್ತಿದ್ದೆನು. ತಮ್ಮ ಅನುಭವವನ್ನೂ ತಮಗುಂಟಾದ ಶಾಂತಿಯನ್ನೂ ಕುರಿತು ಆ ಕನ್ಯೆಯರಿಬ್ಬರೂ ಹೇಳುತ್ತಿದ್ದರು. ಕೋಟ್ಸರವರು ನಿಷ್ಕಪಟಿ ಮತ್ತು ಗಾಢವಾದ ಮತಾಭಿಮಾನವುಳ್ಳ ಯುವಕರು. ನಾವಿಬ್ಬರೂ ಕಲತು ಬೇಂಟಿಗೆ ಹೋಗುತ್ತಿದ್ದೆವು. ಇತರ ಕ್ರೈಸ್ತಮಿತ್ರರಲ್ಲಿಗೆ ನನ್ನನ್ನು ಕರೆದುಕೊಂಡುಹೋಗುತ್ತಿದ್ದರು. ನಮ್ಮ ಪರಿಚಯವು ಹೆಚ್ಚಾದಮೇಲೆ ಅವರು ನನಗೆ ಅನೇಕ ಪುಸ್ತಕಗಳನ್ನು ಕೊಡುತ್ತಿದ್ದರು. ಅವೆಲ್ಲವನ್ನೂ ನಾನು ಓದಿ ಅವರಕೂಡ ಚರ್ಚಿಸುತ್ತಿದ್ದೆನು. 1893 ರಲ್ಲಿ ಬಹಳ ಗ್ರಂಥಗಳನ್ನೋದಿದೆನು. ಅವುಗಳ ಹೆಸರೆಲ್ಲವೂ ಈಗ ಜ್ಞಾಪಕವಿಲ್ಲವಾದರೂ ಡಾಕ್ಟರ್ ಪಾರ್ಕರವರ ವ್ಯಾಖ್ಯಾನವು, ಪಿಯರ್ಸ್‌ರವರ ಅಧಿಕಪ್ರಬಲನಿದರ್ಶನವು, ಬಟ್ಲರವರ ಅನಾಲಜಿ ಮೊದಲಾದವುಗಳನ್ನೋದಿದೆನೆಂದು ಹೇಳಬಲ್ಲೆ. ಅವುಗಳಲ್ಲಿಯ ಕೆಲ ಭಾಗಗಳು ಬೋಧವಾಗಲಿಲ್ಲವು. ಕೆಲವನ್ನು ನಂಬಿದೆನು, ಮತ್ತೆ ಕೆಲವನ್ನು ನಂಬಲಿಲ್ಲ. ಬಹು ಪ್ರಬಲಗ್ರಂಥಗಳಲ್ಲೆಲ್ಲಾ ಬೈಬಲು ಮತವೇ ನಿಜವೆಂದು ಬರೆಯಲ್ಪಟ್ಟಿದೆ. ಅದು ನನಗೆ ರುಚಿಸಲಿಲ್ಲವು. ಪಾರ್ಕರವರ ವ್ಯಾಖ್ಯಾನವು ನೀತಿಯನ್ನು ಬೋಧಿಸುತ್ತದೆ. ಬಟ್ಲರವರ ಅನಾಲಜಿ ಗ್ರಂಥವು ಸಾಧಾರಣವಾಗಿ ಬೋಧವಾಗುವುದಿಲ್ಲವಾದುದರಿಂದ ಅದನ್ನು 5-6 ವೇಳೆ ಓದಬೇಕು. ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಲೋಸುಗ ಆ ಗ್ರಂಥವು ಬರೆಯಲ್ಪಟ್ಟಂತಿದೆ. ದೇವರಿದ್ದಾನೆಂಬ ವಿಷಯದಲ್ಲಿ ನನಗೆ ಆಗಲೇ ನಂಬಿಕೆ ಹುಟ್ಟಿದ್ದಿತಾದುದರಿಂದ ಆ ಗ್ರಂಥವಿಷಯಕವಾದವು ನನಗೆ ಅನಾವಶ್ಯಕವಾಗಿದ್ದಿತು. ಏಸುಕ್ರಿಸ್ತನೊಬ್ಬನೇ ಭಗವದವತಾರವಾದುದರಿಂದ ಭಗವಂತನ ಸಾನ್ನಿಧ್ಯವನ್ನು ಕೋರುವವರೆಲ್ಲರೂ ಆತನಮೂಲಕವೇ ಸೇರಬೇಕೆಂಬ ವಿಷಯಸಂಬಂಧವಾದ ವಾದವು ಕೂಡ ನನಗೊಪ್ಪಲಿಲ್ಲವು. ಕೋಟ್ಸರವರಿಗೆ ನನ್ನಮೇಲೆ ವಿಶೇಷಾನುರಾಗವಿದ್ದಿತು. ನನ್ನ ಕೊರಳಲ್ಲಿದ್ದ ತುಲಸೀಮಣಿಯ ಸರವನ್ನು ನೋಡಿದರು. ವೈಷ್ಣವರೆಲ್ಲರೂ ತುಲಸೀಮಣಿಸರವನ್ನು ಧರಿಸುತ್ತಾರೆ. ಅದು ಮೂಢಭಕ್ತಿಯೆಂದು ಅವರು ಭಾವಿಸಿದುದರಿಂದ – ಅದರ ವಿಚಾರವಾಗಿ ನನಗೂ ಅವರಿಗೂ ಈ ಪ್ರಕಾರವಾಗಿ ಸಂಭಾಷಣೆಯು ನಡೆದಿತು.

“ಈ ಸರವನ್ನು ನೀವು ಧರಿಸಕೂಡದು. ನಾನು ಅದನ್ನು ಕಿತ್ತು ಬಿಸಾಡುವೆನು.”

“ಅದನ್ನು ನನಗೆ ನಮ್ಮ ತಾಯಿಯು ಕೊಟ್ಟಳು. ಅದನ್ನು ತೆಗೆಯಕೂಡದು.”

“ನೀವು ಇದನ್ನು ನಂಬುತ್ತೀರಾ ?”

“ಅದರ ಮಹಿಮೆಯು ನನಗೆ ತಿಳಿಯದು. ಅದನ್ನು ತೆಗೆದುಬಿಟ್ಟರೆ ನನಗೆ ಹಾನಿಯಾಗುತ್ತದೆಂದು ತಿಳಿದುಕೊಂಡಿಲ್ಲವೆನು. ನನ್ನ ತಾಯಿಯು ಬಹಳ ವಿಶ್ವಾಸದಿಂದ ತನ್ನ ಕೈಗಳಿಂದಲೇ ಅದನ್ನು ನನ್ನ ಕೊರಳಲ್ಲಿ ಕಟ್ಟಿದಳು. ಅದರಿಂದ ನನಗೆ ಕ್ಷೇಮವಾಗುತ್ತದೆಂಬ ನಂಬಿಕೆಯಿಂದಲೇ ಅವಳು ನನ್ನ ಕೊರಳಿಗೆ ಹಾಕಿರುವುದು. ಕಾಲಕ್ರಮೇಣ ಅದು ಹಳೆಯದಾಗಿ ಸವೆದುಹೋದಲ್ಲಿ ಪುನಃ ನಾನು ಮತ್ತೊಂದು ಸರವನ್ನು ಹಾಕಿಕೊಂಡ ವಿನಾ ಇದನ್ನು ತೆಗೆಯಕೂಡದು” ಎಂದು ನಾನು ಹೇಳಿದೆನು. ನನ್ನ ಮಾತಿನಲ್ಲಿ ಕೋಟ್ಸರವರಿಗೆ ನಂಬಿಕೆಯಿಲ್ಲದಿದ್ದುದರಿಂದ ನಾನು ಹೇಳಿದ್ದನ್ನು ಅವರೊಪ್ಪಲಿಲ್ಲ. ನನ್ನ ಅಜ್ಞಾನವನ್ನು ಪರಿಹರಿಸಬೇಕೆಂದು ಅವರು ಯೋಚಿಸಿದರು. “ಇತರ ಮತಗಳಲ್ಲಿ ಸ್ವಲ್ಪ ಸತ್ಯವಿದ್ದರೂ ಮುಕ್ತಿ ಪಡೆಯಬೇಕೆನ್ನುವವರು ಕ್ರೈಸ್ತರಾದ ಹೊರತು ಸಾಧ್ಯವಿಲ್ಲವು. ಅದೊಂದೇ ಸತ್ಯವಾದ ಮತವು. ಪಾಪವು ಪರಿಹರವಾಗುವುದಕ್ಕೆ ಏಸುಕ್ರಿಸ್ತದೇವರಲ್ಲಿ ಮೊರೆಯಿಡಬೇಕು. ಅದು ವಿನಾ ಎಷ್ಟು ಪುಣ್ಯಕೆಲಸಗಳನ್ನು ಮಾಡಿದರೂ ಪಾಪನಾಶವಾಗುವುದಿಲ್ಲ. ಏಸುಕ್ರಿಸ್ತಮತವನ್ನು ಅವಲಂಬಿಸಿದಲ್ಲಿ ಕ್ರಿಸ್ತನು ದೇವರಲ್ಲಿ ಮನವಿಮಾಡಿಕೊಳ್ಳುತ್ತಾನೆ” ಎಂಬ ನಂಬಿಕೆಯು ನನಗೆ ಹುಟ್ಟಬೇಕೆಂಬುದು ಕೋಟ್ಸರವರ ಅಭಿಪ್ರಾಯವಾಗಿದ್ದಿತು. ಆದುದರಿಂದಲೇ ಅವರು ಅನೇಕ ಪುಸ್ತಕಗಳನ್ನು ನನಗೆ ಕೊಟ್ಟುದು. ನಿಷ್ಠರಾದ ಕೆಲ ಕ್ರೈಸ್ತರೊಡನೆ ನನಗೆ ಪರಿಚಯವನ್ನು ಸಹ ಮಾಡಿಸಿದರು. ಪ್ಲಿಮತ್ ಸೋದರರೆಂಬ ಒಂದು ಬಗೆಯ ಕ್ರೈಸ್ತರು ಕೂಡ ಕೋಟ್ಸರವರ ಮೂಲಕ ನನಗೆ ಪರಿಚಯಸ್ಥರಾದರು. ಕೋಟ್ಸರವರ ಮೂಲಕ ಪರಿಚಯಸ್ಥರಾದವರಲ್ಲಿ ಅನೇಕ ಜನರು ಯೋಗ್ಯರೇ ಆಗಿದ್ದರು. ಅವರೆಲ್ಲರೂ ದೈವಭೀತಿಯುತರು. ಅದು ಕಾರಣ ಪ್ಲಿಮತ್‌ಸೋದರರ ಕುಟುಂಬದಲ್ಲಿ ಒಬ್ಬರು ಮಾಡಿದ ವಾದವು ಮಾತ್ರ ಬಹಳ ಆಶ್ಚರ್ಯಕರವಾಗಿ ತೋರಿತು. “ನಮ್ಮ ಕ್ರೈಸ್ತಮತಸೌಂದರ್ಯವನ್ನು ನೀವು ಗ್ರಹಿಸಲಾರಿರಿ. ನಿಮ್ಮ ಸಂಬಂಧವಾಗಿ ನೀವು ಇದುವರೆಗೆ ಮಾಡಿರುವ ಪಾಪವನ್ನು ಕುರಿತು ಯಾವಾಗಲೂ ನೀವು ಚಿಂತಿಸುತ್ತಿರುವಂತೆ ತೋರುತ್ತದೆ. ಅದನ್ನು ತಿದ್ದಿಕೊಳ್ಳುವುದರಲ್ಲೂ ಪ್ರಾಯಶ್ಚಿತ್ತವನ್ನು ಹೊಂದುವುದರಲ್ಲೂ ನಿಮ್ಮಾಯುಷ್ಯವೆಲ್ಲವೂ ಕಳೆದುಹೋಗುವುದು. ಈ ಪ್ರಕಾರವಾಗಿ ವಿರಾಮವಿಲ್ಲದೆ ಕರ್ಮಮಾಡುತ್ತಿರುವುದಾದರೆ ಮೋಕ್ಷವೆಂತಾಗುವುದು ? ನಿಮಗೆಂದೂ ಶಾಂತಿಯಾಗುವುದಿಲ್ಲವು. ನಾವೆಲ್ಲರೂ ಪಾಪಾತ್ಮರೇ ಎಂದು ನೀವೊಪ್ಪಿಕೊಳ್ಳುವಿರಿ. ಇನ್ನು ನಮ್ಮ ನಂಬಿಕೆಯು ಎಷ್ಟು ಗಟ್ಟಿಯಾಗಿದೆಂಬುದನ್ನು ನೋಡೋಣ. ನಾವು ನೀತಿ ವರ್ತನದಲ್ಲಿರುವುದಕ್ಕೂ ಪಾಪಕಾರ್ಯವನ್ನೆಸಗದಿರುವುದಕ್ಕೂ ಮಾಡುವ ಪ್ರಯತ್ನಗಳೆಲ್ಲ ವ್ಯರ್ಥವೇ. ಆದರೂ ಮೋಕ್ಷವು ದೊರಕಲೇಬೇಕು. ಪಾಪಭಾರವನ್ನು ಸಹಿಸಿಕೊಂಡಿರುವುದು ಹೇಗೆ ? ಅದನ್ನು ಏಸುಕ್ರಿಸ್ತನಮೇಲೆ ಹೊರಿಸಬೇಕು. ದೇವರ ಮಕ್ಕಳಲ್ಲಿ ಪಾಪಮಾಡದಿರುವವನು ಆತನೊಬ್ಬನೇ. ತನ್ನನ್ನ ನಂಬಿದವರಿಗೆ ಶಾಶ್ವತ ಮುಕ್ತಿಯಾಗುವುದೆಂದು ಆತನೇ ಹೇಳಿರುವನು. ಭಗವಂತನ ಅನಂತಾನುಗ್ರಹವು ಅದರಲ್ಲೇ ಇರುವುದು. ಕ್ರಿಸ್ತನು ಪಾಪನಿವಾರಣಾರ್ಥವಾಗಿ ದೇಹವನ್ನು ಬಿಟ್ಟನೆಂದು ನಾವು ನಂಬಿದುದಾದರೆ ನಾವು ಮಾಡಿದ ಪಾಪವು ನಮ್ಮನ್ನು ಒಂಥಿಸುವುದಿಲ್ಲ. ಪಾಪಕಾರ್ಯವನ್ನು ಮಾಡದಿರಲಾಗದು. ಈ ಪ್ರಪಂಚದಲ್ಲಿ ಪಾಪಕಾರ್ಯವನ್ನು ಮಾಡದೆ ಯಾರೂ ಜೀವಿಸಿಕೊಂಡಿರಲಾರರು. ಅದುಕಾರಣವೇ ಮನುಷ್ಯರೆಲ್ಲರೂ ಮಾಡಿದ ಪಾಪಕ್ಕೋಸ್ಕರವೇ ಕ್ರಿಸ್ತನು ತನ್ನ ತನುವನ್ನು ಬಿಟ್ಟನು. ಅದನ್ನು ಅಂಗೀಕರಿಸುವವರಿಗೇ ಶಾಶ್ವತ ಶಾಂತಿಯುಂಟಾಗುವುದು. ನಿಮ್ಮ ಜೀವಿತವು ಎಷ್ಟು ಆಂದೋಳಕರ (ಕಳವಳ)ವಾಗಿರುವುದೆಂಬುದನ್ನೂ ನಮಗೆಷ್ಟು ಶಾಂತಿ ವಾಗ್ದಾನವಾಗಿರುವುದೆಂಬುದನ್ನೂ ನೀವು ಯೋಚಿಸಿರಿ” ಎಂದು ಅವರು ಹೇಳಿದರು. ಈ ವಾದವು ನನ್ನ ಮನಸ್ಸಿಗೊಪ್ಪಲಿಲ್ಲವು. “ಕ್ರೈಸ್ತರೆಲ್ಲರೂ ನಂಬಿರುವಂತಹ ಕ್ರೈಸ್ತಮತವಿದೆಯೇ ಆಗಿದ್ದಲ್ಲಿ ನಾನು ಅದನ್ನು ಅಂಗೀಕರಿಸಲಾರೆನು. ನಾನು ಮಾಡಿದ ನನ್ನ ಪಾಪದಿಂದ ನಾನು ಮುಕ್ತನಾಗಬೇಕು. ಪಾಪಕೃತ್ಯವನ್ನು ಮಾಡದಿರುವಂತೆ ಕಾಪಾಡಬೇಕೆಂದು ನಾನು ಕೋರುತ್ತೇನೆ. ಪಾಪಚಿಂತೆಯೇ ಇಲ್ಲದಂತಿರಬೇಕೆಂದು ನಾನು ಅಪೇಕ್ಷಿಸುತ್ತೇನೆ. ಅದು ಲಭ್ಯವಾಗುವವರೆಗೂ ನಾನು ಹೀಗೆಯೇ ಇರುವೆನು” ಎಂದು ನಾನು ಹೇಳಿದೆನು. “ನಿಮ್ಮ ಪ್ರಯತ್ನವು ನಿಷ್ಫಲವಾದುದು. ನೀವು ನಾನು ಹೇಳಿದುದನ್ನು ಕುರಿತು ಪುನಃ ಚೆನ್ನಾಗಿ ಯೋಚಿಸಿರಿ” ಎಂದು ಅವರು ಹೇಳಿದರು. ತರುವಾಯ ಅವರು ಬಹಳ ಪಾಪಕೃತ್ಯಗಳನ್ನೇ ಮಾಡಿದರೂ ಅವನ್ನು ಕುರಿತು ತಮಗೆ ಯಾವ ಪರಿತಾಪವೂ ಇಲ್ಲವೆಂದು ಅವರು ನನಗೆ ತಿಳಿಸಿದರು. ಈ ವಾದವನ್ನು ಕ್ರೈಸ್ತರೆಲ್ಲರೂ ನಂಬರು. ಕೋಟ್ಸರವರಿಗೆ ದೈವಭೀತಿ ಬಹಳವಾಗಿದ್ದಿತು. ಅವರಹೃದಯವು ಪಾವನವು. ಆತ್ಮಪವಿತ್ರೀಕರಣವು ಸಾಧ್ಯವೆಂದು ಕೂಡ ಅವರು ನಂಬಿದ್ದರು. ಆ ಕನ್ಯೆಯರಿಬ್ಬರುಕೂಡ ಕೋಟ್ಸರವರಂತೆಯೇ ನಂಬಿದ್ದರು. ನಾನು ಓದಿದ ಗ್ರಂಥಗಳು ಭಕ್ತಿಮಯವಾಗಿದ್ದುವು. ಪ್ಲಿಮತ್ತು ಸೋದರರ ವಾತಿನಲ್ಲಿ ನನಗುಂಟಾದ ಸಂಶಯವನ್ನು ಕುರಿತು ಕೋಟ್ಸರವರು ಬಹಳ ಪರಿತಾಪಪಟ್ಟುಕೊಂಡುದರಮೇಲೆ ಕ್ರೈಸ್ತಮತದ ಮೇಲೆ ನನಗೆ ತಿರಸ್ಕಾರಭಾವವಿಲ್ಲವೆಂದು ನಾನು ಅವರಿಗೆ ಹೇಳಿದೆನು. ಬೈಬಲ್ಲಿನ ವಿಚಾರವಾಗಿಯೂ ಅದರ ವ್ಯಾಖ್ಯಾನವಿಚಾರವಾಗಿಯೂ ನನಗೆ ಸಂದೇಹವಿರುತ್ತದೆ.

೧೯೨೬ನೆಯ ಇಸವಿ ಅಕ್ಟೋಬರ್ ತಾ|| ೨ ರಿಂದ ೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಭಾದ್ರಪದ ಬಹುಳ ಏಕಾದಶಿಯಿಂದ ಆಶ್ವಯುಜ ಶುದ್ಧ ಬಿದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾಮಾಸ
2	ಶನಿ	ಏಕಾ	30-42	ಆಶ್ಲೇ	42-58	16
3	1 ಭಾನು	ದ್ವಾದ	35-20	ಮಘಾ	49-9	17
4	2 ಸೋಮ	ತ್ರಯೋ	40-35	ಪುಬ್ಬ	55-45	18
5	ಮಂಗಳ	ಚತು	45-55	ಉತ್ತ	60	19
6	3 ಬುಧ	ಅಮಾ	50-55	ಉತ್ತ	2-17	20
7	4 ಗುರು	ಪಾಡ್ಯ	55-13	ಹಸ್ತ	8-17	21
8	ಶುಕ್ರ	ಬಿದಿ	58-32	ಚಿತ್ತ	13-30	22

(1) ಮಳೆನಕ್ಷತ್ರ-ಹಸ್ತ ೩ ನೆಯಪಾದ. (2) ಸೋಮಪ್ರದೋಷ. (3) ಸರ್ವತ್ರಮಹಾಲಯಾಮಾವಾಸ್ಯ. (4) ನವರಾತ್ರಾರಂಭ, ಮಳೆನಕ್ಷತ್ರ-ಹಸ್ತ ೪ ನೆಯಪಾದ.

ಮೈಸೂರು: ಪ್ರೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೀಯಂಸದಾಪೂರೆಗೆ ಗೌರೀಶಾಸುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸ" ೧೯೨೬ ನೆಯ ಇಸವಿ ಅಕ್ಟೋಬರ್ ತಾರೀಖು ೯ ನೆಯ ಶನಿವಾರ. [ಸಂಚಿಕೆ ೪೧

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೆಯೇನು ನೋಡೋಣ

ಸತ್ಯವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂಧ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಜಾಯಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಜೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—11] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ
ರೋಗಗಳನ್ನು
ಗುಣಪಡಿಸುತ್ತವೆ.
38

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

S.U.N. & CO. BENARES CITY

SIROMANY NARAYANACHARYA & CO.,
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟೆ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—12]

ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಗಮನಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಕಾಸಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಅಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—50] ಪೋ. ಬಾ. ೩೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್‌ಸಂಘದಿಂದ 1926-27 ರಲ್ಲಿ 8 ತಿಂಗಳುಗಳ ವೇತನ ಮಂಜೂರಾಗಿರುವ ವಿದ್ಯಾರ್ಥಿಗಳ ಹೆಸರಿನ ಪಟ್ಟಿ.

ಲಾ ಕಾಲೇಜು ಪೂನಾ—|| ಎಲ್‌ಎಲ್.ಬಿ.

1. ಎಚ್. ಎಫ್. ಪಾಳ್ಯಗಾರ್ 10 ರೂ. 2. ಬಿ. ಬಸವಪ್ಪ 10 ರೂ.

| ಎಲ್‌ಎಲ್.ಬಿ.

3. ಎಂ. ಮಲ್ಲೇಶಯ್ಯ 10 ರೂ. 4. ಬಿ. ಮರಳಯ್ಯ 10 ರೂ. 5. ಎಲ್. ಶಿವಪ್ಪ 10 ರೂ.

ಲಾ ಕಾಲೇಜು ಮದ್ರಾಸು—ಎಫ್.ಎಲ್.

6. ಎಂ. ಎಲ್. ಶ್ರೀಕಂಠಯ್ಯ 10 ರೂ. 7. ಬಿ. ರಾಚಪ್ಪ 10 ರೂ. 8. ಪಿ. ಮುರುಡಪ್ಪ 10 ರೂ. 9. ಎಂ. ಎಸ್. ಶಿವಲಿಂಗಯ್ಯ 10 ರೂ. 10. ವೈ. ಧರ್ಮಪ್ಪ 10 ರೂ.

ಪಚ್ಚೈಪ್ಪನವರ ಕಾಲೇಜು ಮದ್ರಾಸು.

11. ಜಿ. ಶಿವಪ್ಪ ಸೀನಿಯರ್ ಇಂಟರ್‌ಮೀಡಿಯೇಟ್ 5 ರೂ.

ಮಹಾರಾಜ ಕಲೆಜಿಯೇಟ್ ಹೈಸ್ಕೂಲ್ ಮೈಸೂರು—ಎಂಟ್ರೆನ್ಸು.

12. ಕೆ. ಜಿ. ಪುಟ್ಟಣ್ಣಯ್ಯ 5 ರೂ. 13. ಪಿ. ಶಿವರುದ್ರಯ್ಯ 5 ರೂ. 14. ಜಿ. ಎಫ್. [illegible] 5 ರೂ. 15. ಜಿ. ಎಸ್. [illegible] 5 ರೂ.

(ಇನ್ನೂ)

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೯ ನೆಯ ಶನಿವಾರ.

ಮೈಸೂರು ವಾಣಿಜ್ಯಕೈಗಾರಿಕೆಗಳ ಅಭಿವೃದ್ಧಿ.

ದೇಶಾಭ್ಯುದಯಕ್ಕೆ ವಾಣಿಜ್ಯಕೈಗಾರಿಕೆಗಳ ಅಭಿವೃದ್ಧಿಯೇ ಮುಖ್ಯ ಕಾರಣವೆಂಬುದನ್ನು ನಮ್ಮ ಮಂತ್ರಿವರ್ಯರಾದ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್, ಬಿ.ಎ., ಸಿ.ಐ.ಇ., ಒ.ಬಿ.ಇ. ರವರು ಚೆನ್ನಾಗಿ ಅರಿತವರಾಗಿ ಅಂತಹ ವಾಣಿಜ್ಯಕೈಗಾರಿಕೆಗಳ ಅಭಿವೃದ್ಧಿಗೆ ನಮ್ಮ ಸೀಮೆಯಲ್ಲಿರುವ ಕುಂದುಕೊರತೆಗಳನ್ನು ತಿಳಿದುಕೊಂಡು ಅವುಗಳ ಪರಿಹಾರೋಪಾಯವನ್ನು ಪರ್ಯಾಲೋಚಿಸುವ ಬಗೆಗೆ ಕಳೆದ ತಾ|| 30 ರಲ್ಲಿ ಬೆಂಗಳೂರಿನ ವರ್ತಕರ ಮತ್ತು ಕೈಗಾರಿಕೆಯಜಮಾನರ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ನಡೆಯಿಸಿದಾಗ್ಗೆ ಮಾಡಿದ ವಿಚಾರಪೂರ್ಣವಾದ ಭಾಷಣವು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವುದಷ್ಟೆ. ವಾಣಿಜ್ಯಕೈಗಾರಿಕೆಗಳ ಹೀನಸ್ಥಿತಿಯನ್ನು ಕುರಿತು ಪ್ರಸ್ತಾಪಿಸುವಾಗ್ಗೆ '' ನಮ್ಮ ದೇಶದಲ್ಲಿ ಅನೇಕರು ಒಟ್ಟಾಗಿ ಸೇರಿ ಹೆಚ್ಚು ಬಂಡವಾಳವನ್ನು ಹಾಕಿಕೊಂಡು ಧೈರ್ಯೋತ್ಸಾಹದಿಂದ ವ್ಯಾಪಾರಕೈಗಾರಿಕೆಗಳನ್ನು ದೊಡ್ಡಪ್ರಮಾಣದಲ್ಲಿ ಮಾಡದೆ ಒಬ್ಬೊಬ್ಬರೇ ಸ್ವಲ್ಪ ಬಂಡವಾಳದಿಂದ ಅಲ್ಪಪ್ರಮಾಣದಲ್ಲಿ ಮಾಡುತ್ತಿರುವುದೂ, ಕಾಲೋಚಿತವಾಗಿ ಸುಧಾರಿಸಿಕೊಳ್ಳದಿರುವುದೂ, ಪರದೇಶೀಯರು ಬಂದು ನಮ್ಮ ವ್ಯಾಪಾರವನ್ನೆಲ್ಲಾ ವಶಪಡಿಸಿಕೊಂಡು ನಮ್ಮನ್ನು ಮೂಲೆಗೊತ್ತಿರುವರೆಂದು ಗುಣುಗುಟ್ಟುತ್ತಿರುವುದೂ ಸ್ವದೇಶದ ವರ್ತಕ ಕಾರ್ಮಿಕರುಗಳ ಅವನತಿಗೆ ಮುಖ್ಯಕಾರಣವಾಗಿರುತ್ತದೆ. ಹೆಚ್ಚು ಬಂಡವಾಳವನ್ನು ಸ್ವತಃ ಹಾಕಿಕೊಂಡು ದೊಡ್ಡ ಪ್ರಮಾಣದಿಂದ ವಾಣಿಜ್ಯಕೈಗಾರಿಕೆಗಳನ್ನು ನಡೆಯಿಸಲು ಸ್ವದೇಶೀಯರಿಗೆ ಚೈತನ್ಯವಿಲ್ಲವೆಂಬುದು ನಿಜವಾಗಿರುವುದಾದರೂ, ಇವರುಗಳ ಸೌಕರ್ಯಕ್ಕಾಗೇರ್ಪಟ್ಟಿರುವ ಮೈಸೂರು ಬ್ಯಾಂಕಿನ ಧನಸಹಾಯದಿಂದಲೂ, ಸಂಪದಭಿವೃದ್ಧಿಸಮಾಜದ ಕಾಲೋಚಿತವಾದ ಮಾರ್ಗೋಪಾಯ ಸೂಚನೆಯಿಂದಲೂ, ತಮ್ಮ ಜೀವನನಿರ್ವಾಹದ ವೆಚ್ಚವನ್ನು ಕಡಿಮೆಮಾಡುವುದರಿಂದಲೂ ಬಂಡವಾಳವನ್ನು ಹೆಚ್ಚಿಸಿಕೊಂಡು ಕಾಲಾನುಗುಣ್ಯವಾದ ಸುಧಾರಣೆಯಿಂದ ತಮ್ಮ ವಾಣಿಜ್ಯಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿಕೊಂಡು ತಾವು ಐಶ್ವರ್ಯವಂತರಾಗುವುದಲ್ಲದೆ ತಮ್ಮ ದೇಶವು ವಾಣಿಜ್ಯಕೈಗಾರಿಕೆಗಳಲ್ಲಿ ಪ್ರಖ್ಯಾತವಾಗಿರುವ ದೇಶಗಳ ಶ್ರೇಣಿಯಲ್ಲಿ ಸೇರುವಂತೆ ಮಾಡುವವರಾಗಬೇಕು '' ಎಂದು ಪ್ರತಿಯೊಬ್ಬ ಸಭಿಕನ ಮನಸ್ಸಿನಲ್ಲಿ ನಾಟುವಂತೆ ದಿವಾನರು ಅಪ್ಪಣೆಕೊಡಿಸಿದರು. ಇದಕ್ಕಾಗಿ ಬೆಂಗಳೂರುಪಟ್ಟಣದ ವರ್ತಕಕಾರ್ಮಿಕರುಗಳು ಮಾತ್ರವಲ್ಲದೆ ಸಂಸ್ಥಾನದವರೆಲ್ಲರೂ ಕೃತಜ್ಞರಾಗಿರುತ್ತಾರೆ. ಮೈಸೂರು ಬ್ಯಾಂಕು ಮೈಸೂರುದೇಶದ ವರ್ತಕಕಾರ್ಮಿಕರುಗಳಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ಏರ್ಪಟ್ಟಿತಾದರೂ, ದುರಾಶಾಬದ್ಧರಾದ ಲೇವಾದೇವಿ ಮಾಡುವ ಹಣಗಾರರು ತೆಗೆದುಕೊಳ್ಳುವ ಬಡ್ಡಿಗಿಂತಲೂ ಈ ಬ್ಯಾಂಕಿನಲ್ಲಿ ಕಡಮೆ ಬಡ್ಡಿಗೆ ಸಾಲವು ದೊರೆಯುವುದಾದರೂ, ಮಾರ್ವಾಡಿ ಮುಲ್ತಾನಿ ಮೊದಲಾಗಿ ಪರದೇಶದ ವರ್ತಕರುಗಳ ಕೂಡ ಸ್ಪರ್ಧಿಸಲು ಸಾಧ್ಯವಿಲ್ಲ. ಏತಕ್ಕೆಂದರೆ, ಆ ಜನರಿಗೆ ತಮ್ಮ ದೇಶದಲ್ಲಿ ಶೇಕಡ 3-4 ರಂತೆ ಬಡ್ಡಿಗೆ ಹಣವು ದೊರೆಯುವುದರಿಂದಲೂ, ಈ ದುಂದುಗಾರಿಕೆಯ ಶತಮಾನದಲ್ಲಿರುವವರಾದರೂ ಅನೂಚಾನವಾಗಿ ನಡೆದುಬಂದಿರುವ ಅತ್ಯಂತ ಮಿತವ್ಯಯದಲ್ಲಿ ಕಾಲಯಾಪನೆಮಾಡುವ ಸ್ವಭಾವದವರಾದುದರಿಂದಲೂ ಯಥೇಚ್ಛವಾಗಿ ಬಂಡವಾಳವನ್ನು ಹಾಕಿಕೊಂಡು ಶೇಕಡ 5-6 ರಂತೆ ತಮಗೆ ಲಾಭವು ದೊರೆಯುವಹಾಗೆ ವ್ಯಾಪಾರಮಾಡುತ್ತಿರುವುದರಿಂದ ಹೆಚ್ಚು ಬಡ್ಡಿಯನ್ನು ಕೊಟ್ಟು ತಂದಿರುವ ಬಂಡವಾಳದಿಂದಲೂ, ಮಿತವ್ಯಯವನ್ನೇ ಅರಿಯದೆ ದುಂದುಗಾರಿಕೆಯಲ್ಲಿ ಪಾರಂಗತರಾಗಿರುವ ಈ ದೇಶೀಯರನ್ನು ಅವರಕೂಡ ಹೋಲಿಸಲಾಗುವುದಿಲ್ಲ, ಮತ್ತು ಅವರಿಗೆ ಕಡಮೆ ಬಡ್ಡಿಗೆ ಬಂಡವಾಳವು ದೊರೆಯುವಂತೆ ಇವರಿಗೂ ದೊರೆದಹೊರತು ತಮ್ಮ ಬಂಡವಾಳವನ್ನು ಹೆಚ್ಚಿಸಿಕೊಂಡು ಸ್ವಲ್ಪಲಾಭದಿಂದ ವ್ಯಾಪಾರಮಾಡಲು ಸಾಧ್ಯವಿಲ್ಲ. ಹಾಗೆ ಮಾಡಿದಹೊರತು ಆ ಜನರನ್ನು ಸ್ಪರ್ಧಿಸಿ ತಮ್ಮ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವುದೆಂತು ಸ್ವಪ್ನವೇ ಸರಿ. ವಾಣಿಜ್ಯಬೇಸಾಯಕೈಗಾರಿಕೆಗಳಲ್ಲಿ ನಮ್ಮ ಜನರು ಪುಷ್ಟರಾಗಿಲ್ಲದಿದ್ದರೂ ತಮ್ಮ ಶಕ್ತಿಮೀರಿ ವ್ಯಯಮಾಡುವ ದುರಭ್ಯಾಸವುಳ್ಳವರಾಗಿರುವರು. ಇದಕ್ಕೆ ಪ್ರಭುತ್ವದವರೂ ತಕ್ಕಮಟ್ಟಿಗೆ ಉತ್ತರವಾದಿಗಳೆಂದು ಹೇಳಬಹುದಾಗಿದೆ. ಯಾಕೆಂದರೆ, ನಾಟಕಸಿನೀಮಾ ಫಲಾಹಾರಮಂದಿರಗಳ ಬೆಳವಣಿಗೆಗಳನ್ನು ತಡೆಯದೆ ವ್ಯಾಜಾಂತರದಿಂದ ಉತ್ತೇಜನವನ್ನು ಕೊಡುತ್ತಿರುವರು ಮತ್ತು ವಾಣಿಜ್ಯಕೈಗಾರಿಕೆಗಳಲ್ಲಿ ಈ ದೇಶವು ಹಿಂದುಳಿದಿರುವುದಾದರೂ ಪಟ್ಟಣಗ್ರಾಮಗಳನ್ನು ಅಲಂಕಾರವಾಗಿಟ್ಟುಕೊಳ್ಳುವುದು ಅತ್ಯವಸರವೂ ಅವಶ್ಯವೂ ಎಂದು ನಮ್ಮ ದಿವಾನರು ತಮ್ಮ ತುಮಕೂರು ಡಿಸ್ಟ್ರಿಕ್ಟ್ ಪ್ರವಾಸದಲ್ಲಿ ಪುರಪಾಲಕರ ವಿಜ್ಞಾಪನೆಗಳಿಗೆ ಉತ್ತರಕೊಡುವಾಗ್ಗೆ ಅಪ್ಪಣೆಕೊಡಿಸಿರುವರು. ನಿರ್ಜೀವವಾದ ವಸ್ತುಗಳು ಅಲಂಕಾರಯುಕ್ತವಾದಮೇಲೆ ಸಜೀವರಾದ ಜನರೂ ಅಲಂಕಾರಪ್ರಿಯರಾಗುವುದು ಅಸ್ವಭಾವವಲ್ಲ. ಇದರಿಂದ ತಮ್ಮ ಆದಾಯಶಕ್ತಿಯನ್ನರಿಯದೆ ಅವರು ವೆಚ್ಚಮಾಡಬೇಕಾಗುತ್ತದೆ. ಈ ದುರ್ಚಾಳಿಗೆ ಬಿದ್ದವರನ್ನು ಮಿತವ್ಯಯಿಗಳನ್ನಾಗಿ ಮಾಡುವುದು ಸುಲಭಸಾಧ್ಯವಲ್ಲ. ಅದುಕಾರಣವೇ ಪ್ರಜೆಗಳ ದುಂದುಗಾರಿಕೆಗೆ ಪ್ರಭುತ್ವದವರೂ ತಕ್ಕಮಟ್ಟಿಗೆ ಹೊಣೆಯಾಗಿರುವರೆಂದು ನಾವು ಹೇಳಿದುದಾಗಿದೆ. ನಮ್ಮ ವರ್ತಕಕಾರ್ಮಿಕರುಗಳಿಗೆ ಈ ಪರಿಸ್ಥಿತಿಯಲ್ಲಿ ಸಂಪದಭ್ಯುದಯಸಮಾಜದಿಂದ ಎಷ್ಟರಮಟ್ಟಿಗೆ ಸಹಾಯವಾಗುತ್ತದೆಂಬುದನ್ನು ಬಲ್ಲವರೇ ಹೇಳಬೇಕಾಗಿದೆ. ನಮ್ಮ ಹಿಂದಣ ಅನುಭವದಲ್ಲಿ, ನೆಲದಮೇಲೆ ದೋಸೆಯನ್ನು ಬರೆದು ತಿನ್ನಿಸುವುದರವಿನಾ ಮತ್ತು ನಾಲ್ಕಾರುಜನರು ಗುಂಪುಸೇರಿದ ಕಡೆ ವಾಗಾಡಂಬರದಿಂದಲೂ, ಹಾವಭಾವ ವಿಲಾಸಗಳಿಂದಲೂ, ಅಲ್ಪಾಹಾರಾದಿಗಳಿಂದಲೂ, ವೃತ್ತಪತ್ರಿಕೆಗಳಲ್ಲಿ ಹೊಗಳಿಸಿಕೊಳ್ಳುವುದರಿಂದಲೂ ಮೇಲ್ಪಟ್ಟ ಅಧಿಕಾರಿಗಳ ಪ್ರಸನ್ನತೆಯನ್ನು ಸಂಪಾದಿಸಿ ಪ್ರಮೋಷನ್ನನ್ನೋ ಟೈಟಲುಗಳನ್ನೋ ಸಂಪಾದಿಸಿದುದರವಿನಾ ಮತ್ತಾವ ನಿಜವಾದ ದೇಶಾಭ್ಯುದಯಕಾರ್ಯವು ನಡೆದಂತೆ ತೋರುವುದಿಲ್ಲ. ಆದರೆ ಸ್ವಪ್ರಜಾಕ್ಷೇಮವೇ ಸಕಲ ಪುರುಷಾರ್ಥವೆಂದು ತ್ರಿಕರಣಪೂರ್ವಕವಾಗಿ ತಿಳಿದು '' ಸತ್ಯಮೇವೋದ್ಧರಾಮ್ಯಹಂ '' ಎಂಬ ಮಹಾಬಿರುದಾಂಕಿತದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿರುವ ಶ್ರೀಮತ್ಕೃಷ್ಣರಾಜಭೂಪರವರ ಮಹಾಸನ್ನಿಧಿಯಲ್ಲಿ 15 ವರ್ಷಕಾಲ ಅವಿಚ್ಛಿನ್ನವಾಗಿ ಸೇವೆಮಾಡಿ ಅವರ ಛಾಯಾನುವರ್ತಿಗಳಾಗಿರುವ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರ ಅಮಾತ್ಯಪದವಿಯಲ್ಲಿ ಸಂಪದಭಿವೃದ್ಧಿಸಮಾಜವು ಮಹಾಪ್ರಭುವರ್ಯರ ಸತ್ಪ್ರಜೆಗಳನ್ನು ಸಂಪದ್ಯುಕ್ತರನ್ನಾಗಿ ಮಾಡಿ ತನ್ನ ನಾಮಸಾರ್ಥಕಗೊಳಿಸುವುದಾಗಲೆಂದು ಅಪೇಕ್ಷಿಸುತ್ತೇವೆ.

ನವರಾತ್ರಿಯುತ್ಸವ.

ನಮ್ಮನ್ನಾಳುವ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರಒಡೆಯರ್ ಬಹದ್ದೂರ್‌ರವರು ತಮ್ಮ ವಂಶಕ್ರಮಾನುಗತವಾಗಿ ನಡೆದುಬಂದಿರುವ ನವರಾತ್ರಿಯ ಮಹೋತ್ಸವಪದ್ಧತಿಯನ್ನು ಅನುಸರಿಸಿ ಕಳೆದ ತಾ|| 7 ನೆಯ ಗುರುವಾರ ಬೆಳಿಗ್ಗೆ ಮಂಗಳಸ್ನಾನಾನಂತರ ಸಂಧ್ಯಾಕರ್ಮಗಳನ್ನು ನೆರವೇರಿಸಿ ದೇದೀಪ್ಯಮಾನಗಳಾದ ವಸ್ತ್ರಾಭರಣಗಳಿಂದ ವಿಭೂಷಿತರಾಗಿ ಯಥಾಮರ್ಯಾದೆಯಿಂದ ಸಭಾಂಗಣಕ್ಕೆ 9 ಘಂಟೆಗೆ ಚಿತ್ತೈಸಿ ಸ್ವಸ್ತಿವಾಚನ ನವಗ್ರಹಮುಖಿ ಮೊದಲಾದವುಗಳನ್ನು ಪೂರೈಸಿಕೊಂಡು ವಂದಿ ಮಾಗಧರ ಪಠಾಕುಗಳನ್ನು ಗಮನಿಸುತ್ತ ಸಿಂಹಾಸನದ ಬಳಿಗೆ ಬಂದು ಅದನ್ನು ವಿಧಿವತ್ತಾಗಿ ಪೂಜಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಸರದಾರ್ ಗೋಪಾಲಕೃಷ್ಣ ಅರಸಿನವರ ಕರಾವಲಂಬನದಿಂದ ಸಿಂಹಾಸನಾರೋಹಣವನ್ನು ಮಾಡಿದರು. ವಾದ್ಯಗಳು ಭೋರ್ಗರೆದುವು. ಸೈನಿಕರು ಜಯಘೋಷಮಾಡಿದರು. ಪ್ರೇಕ್ಷಕರು ಕರಾಸ್ಫಾಲನದಿಂದ ಕೋಲಾಹಲ ಧ್ವನಿಮಾಡಿದರು. ಕೋಟೆಯ ಕೊತ್ತಲಿನಿಂದ 21 ಗುಂಡುಗಳು ಹಾರಿಸಲ್ಪಟ್ಟವು. ದೇವಸ್ಥಾನಗಳಿಂದಲೂ, ಮಠಗಳಿಂದಲೂ ಬಂದಿದ್ದ ಫಲಮಂತ್ರಾಕ್ಷತೆಗಳು ಶ್ರೀಮನ್ಮಹಾರಾಜರವರಿಗೊಪ್ಪಿಸಲ್ಪಟ್ಟುವು. ಸಾಲಂಕೃತಗಳಾದ ಪಟ್ಟದ ಆನೆ ಕುದುರೆಗಳು ಸಕಲ ರಾಜಮರ್ಯಾದೆಯೊಡನೆ ಆನೆಬಾಗಿಲಿನಿಂದ ದೊಡ್ಡ ಕೆರೆಯಬಳಿಗೆ ಉತ್ಸವಪೂರ್ವಕವಾಗಿ ಹೊರಟವು. ಸಭಿಕರ ಮುಜರೆಯಾದಮೇಲೆ ದಿವಾನರು, ಖಾಸಾ ಭಾವನ್ಮೈದುನರು, ಕೌನ್ಸಿಲರುಗಳು ವೈಸ್‌ಚಾನ್ಸಲರು, ಸರದಾರರುಗಳು ಇವರುಗಳಿಂದ ನಜರೊಪ್ಪಿಸಲ್ಪಟ್ಟಿತು. ವೈದಿಕರುಗಳು ಫಲಮಂತ್ರಾಕ್ಷತೆಗಳನ್ನೊಪ್ಪಿಸಿದರು. ತರುವಾಯ ಸಿಪಾಯಿಗಳು ಮೂರುವೇಳೆ ಸುರೂಟನ್ನು ಹಾರಿಸಿದರು. ಚತುರಂಗಸೇನೆಯ ಮುಜರೆಯಾಯಿತು. ಓಲಗವೂ, ಇಂಗ್ಲಿಷ್ ಮತ್ತು ಕರ್ಣಾಟಬ್ಯಾಂಡುಗಳೂ, ಕಾನ್ಸರ್ಟೂ ಕ್ರಮವರಿತು ಮನೋಹರವಾಗಿ ವಾದ್ಯಮಾಡುತ್ತಿದ್ದುವು. ಪಟ್ಟದಾನೆ ಕುದುರೆಗಳು ಕೆರೆಯಬಳಿ ಪೂಜೆಗೊಂಡು ಯಥಾಮರ್ಯಾದೆಯಿಂದ ಅರಮನೆಯನ್ನು ಸೇರಿದುವು. ಬಳಿಕ ರಾಜಕುಮಾರ ದೇಶರಾಜಅರಸಿನವರು, ದಿವಾನರು ಮೊದಲಾಗಿ ಸಭಿಕರಿಗೆ ಪುಷ್ಪಹಾರ ತಾಂಬೂಲಗಳು ಕೊಡಲ್ಪಟ್ಟು ಸಭಾಂಗಣವು ರಾಣಿವಾಸದವರ ಪ್ರವೇಶಕ್ಕೆ ಸಿದ್ಧಗೊಳಿಸಲ್ಪಟ್ಟಮೇಲೆ ಅವರುಗಳ ನಜರುಗಳು ನಡೆದುವು. ಅಷ್ಟುಹೊತ್ತಿಗೆ 10½ ಘಂಟೆಯಾಗಿದ್ದಿತು. ಅರಮನೆಯ ಮುಂದಣ ವಿಶಾಲವಾದ ಬೈಲಿನಲ್ಲೂ ಉಭಯಪಾರ್ಶ್ವಗಳಲ್ಲಿ ಸ್ತ್ರೀಯರಿಗಾಗಿ ಏರ್ಪಡಿಸಲ್ಪಟ್ಟಿರುವ ಪಾವಟಿಗೆಗಳಮೇಲೂ ಜನರು ಕಿಕ್ಕಿರಿದು ನಿಂತಿದ್ದು ಉತ್ಸವಸಮಾರಂಭವನ್ನು ನೋಡಿ ಸಂತುಷ್ಟರಾಗಿ ಶ್ರೀಮನ್ಮಹಾರಾಜರವರು ಇಂತಹ ಉತ್ಸವಗಳನ್ನು ಅನಂತವಾಗಿ ನಡೆಯಿಸಿ ಪ್ರಜಾಪರಿಪಾಲನೆಯನ್ನು ಮಾಡಿಕೊಂಡಿರಲೆಂದು ಕೋರುತ್ತ ಜಯಜಯಕಾರಗಳನ್ನು ಮಾಡುತ್ತಿದ್ದರು. ಆದಿವಸ ಸಾಯಂಕಾಲ 7 ಘಂಟೆಗೆ ಅದ್ಭುತವಾಗಿ ಅಗಣಿತ ವಿದ್ಯುದ್ದೀಪಾವಳಿಗಳಿಂದ ಕಣ್ಣಿಗೆ ಹಬ್ಬವಾಗಿ ವಿರಾಜಿಸುತ್ತಿದ್ದ ಅರಮನೆಯ ಮುಂಗಡೆ ಪದಾತಿಸೇನೆಯೂ ಪ್ರೇಕ್ಷಕ ಸಮೂಹವೂ ತುಂಬಿರಲಾಗಿ ನೂತನ ಸಭಾಂಗಣದ ಅಪರಿಮಿತ ವಿದ್ಯುಲ್ಲತಾತೇಜಸ್ಸಿನಿಂದ ಅತಿಶಯವಾಗಿ ರಾರಾಜಿಸುತ್ತಿದ್ದ ಸಿಂಹಾಸನವನ್ನು ಶ್ರೀಮನ್ಮಹಾರಾಜರವರು ಅಲಂಕರಿಸಲಾಗಿ ವಾದ್ಯಗಳು ಭೋರ್ಗರೆದು ನಿಂತಕೂಡಲೆ ಕುಸ್ತಿಗಳೂ, ಕತ್ತಿಯ ಪಟಾವರ್ಸೆಗಳೂ, ಪಂಜನ್ನು ವಿಧವಿಧವಾಗಿ ತಿರುಗಿಸುವುದೂ ಆಗುತ್ತಿರುವಾಗ್ಗೆ ಉಳಿದ ಸಭಿಕರ ನಜರೊಪ್ಪಿಸಲ್ಪಟ್ಟಿತು. ಕೆರೆಗೆಹೋಗಿದ್ದ ಪಟ್ಟದಾನೆ ಕುದುರೆಗಳು ಅರಮನೆಗೆ ಬಂದಮೇಲೆ ಸಭಿಕರ ಮುಜರೆಯಾಗಿ ಹಾರತಾಂಬೂಲಗಳ ವಿನಿಯೋಗದಿಂದ 8¾ ಘಂಟೆಯ ಹೊತ್ತಿಗೆ ದರ್ಬಾರು ಮುಗಿದಿತು. ಈ ಪ್ರಕಾರವಾಗಿ ಬರುವ ಶುಕ್ರವಾರದವರೆಗೂ ಪ್ರತಿ ಸಾಯಂಕಾಲ ನಡೆದು ತಾ|| 15 ನೆಯ ಶುಕ್ರವಾರ ಸಾಯಂಕಾಲ ರೆಸಿಡೆಂಟರು ಮೊದಲಾಗಿ ಆಂಗ್ಲೇಯರ ದರ್ಬಾರು ಆಗುವುದು. ತಾ|| 16 ನೆಯ ಶನಿವಾರ ಬೆಳಿಗ್ಗೆ 9 ಘಂಟೆಗೆ ಪಟ್ಟದಾನೆ ಕುದುರೆಗಳೂ, ಪಟ್ಟದಕತ್ತಿಯೂ ಚತುರಂಗಸೇನಾಮರ್ಯಾದೆಯಿಂದ ಬನ್ನಿಯಮಂಟಪಕ್ಕೆ ಹೊರಡುವುವು, ಮತ್ತು ಸಾಯಂಕಾಲ 4 ಘಂಟೆಗೆ ಶ್ರೀಮನ್ಮಹಾರಾಜರವರು ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಸಮಸ್ತ ಬಿರುದಾವಳಿಗಳಿಂದಲೂ ಚತುರಂಗ ಸೇನಾಸಮೂಹದಿಂದಲೂ ಜಂಬೂಸವಾರಿ ಚಿತ್ತೈಸುವರು. ಅರಮನೆಯ ಸಭಾಂಗಣದ ಕಮಾನುಗಳು ತಗ್ಗಾಗಿರುವುದರಿಂದಲೂ ಕಂಭಗಳು ವಿಶೇಷವಾಗಿದ್ದು ದಪ್ಪವಾಗಿರುವುದರಿಂದಲೂ ಸಿಂಹಾಸನಾಸೀನರಾದ ಮಹಾಸ್ವಾಮಿಯವರ ದರ್ಶನವು ಜನರಿಗೆ ಚೆನ್ನಾಗಿ ಆಗುತ್ತಿರಲಿಲ್ಲವಾದ್ದರಿಂದಲೂ, ಸಭಿಕರು ಬಹಳ ಹಿಂದಕ್ಕೆ ಕುಳಿತುಕೊಳ್ಳಬೇಕಾಗಿದ್ದುದರಿಂದಲೂ ಸಿಂಹಾಸನದ ಮುಂಭಾಗದಲ್ಲಿದ್ದ ಪೋರ್ಟಿಕೋ ಎಂಬ ಕಮಾನಿನ ಭಾಗವನ್ನು ಹೊಡೆದುಹಾಕಿ ಬಹಳ ಎತ್ತರವಾದ ಮೂರು ಕಮಾನುಗಳನ್ನು ಹಾಕಿ ಸಿಂಹಾಸನದ ಉಭಯಪಾರ್ಶ್ವಗಳಲ್ಲೂ ದರ್ಬಾರಿಗಳು ಕುಳಿತುಕೊಳ್ಳಲು ವಿಶಾಲವಾದ ಪಾವಟಿಗೆಗಳನ್ನು ಕಟ್ಟಿರುವುದರಿಂದ ಎಷ್ಟುದೂರದಲ್ಲಿ ನಿಂತು ನೋಡಿದರೂ ಮಹಾಸ್ವಾಮಿಯವರ ದರ್ಶನವು ಬಹಳ ಚೆನ್ನಾಗಿ ಆಗುತ್ತದೆ ಮತ್ತು ಹಿಂದುಗಡೆ ಕುಳಿತುಕೊಳ್ಳುತ್ತಿದ್ದುದರಿಂದ ಹೊರಗಡೆ ಏನೂ ಕಾಣದೆ ದರ್ಬಾರಿಗಳಿಗೆ ಬಹಳ ಬೇಸರಿಕೆಯಾಗುತ್ತಿದ್ದುದು ತಪ್ಪಿ ಹೊರಗಡೆ ಬೈಲಿನಲ್ಲಿ ಆಗುವ ವಿಶೇಷವು ತಕ್ಕಮಟ್ಟಿಗೆ ಕಾಣುವಂತಾಗಿರುತ್ತದೆ. ಅರಮನೆಯಿದಿರಿಗಿದ್ದ ಜಿಲೋಕಚೇರಿಯ ಕಟ್ಟಡವೂ, ವಿದ್ಯುದ್ದೀಪದ ಯಂತ್ರಾಲಯವೂ ಹೊಡೆದುಹಾಕಲ್ಪಟ್ಟು ಒಟ್ಟಬೈಲು ಮಾಡಲ್ಪಟ್ಟಿರುವುದರಿಂದ ಸಾವಿರಾರುಜನರು ನಿರಾತಂಕವಾಗಿ ನಿಂತುಕೊಂಡು ಮತ್ತು ಅರಮನೆಯ ಉಭಯಪಾರ್ಶ್ವದಲ್ಲೂ ಅತ್ಯಂತ ವಿಶಾಲವಾದ ಜಗತಿಗಳು ಕಟ್ಟಲ್ಪಟ್ಟಿರುವುದರಿಂದ ಸ್ತ್ರೀಯರು ಕುಳಿತುಕೊಂಡು ಮನಸ್ಸು ದಣಿಯುವವರೆಗೂ ಶ್ರೀಮನ್ಮಹಾರಾಜರವರ ದರ್ಶನವನ್ನು ಮಾಡುವುದಕ್ಕೂ ಬೈಲಿನಲ್ಲಾಗುವ ಆಟಪಾಟಗಳನ್ನು ನಿರಾಯಾಸದಿಂದ ನೋಡುವುದಕ್ಕೂ ಬಹಳ ಅನುಕೂಲವಾಗಿರುತ್ತದೆ. ತ್ರಿನಯನೇಶ್ವರನ ದೇವಾಲಯದಂತೆ ಅದರ ದಕ್ಷಿಣಭಾಗಕ್ಕೆ ಕೊಂಚದೂರದಲ್ಲಿ ಒಂದು ಕೃತಕದೇವಾಲಯವು ತಾತ್ಕಾಲಿಕವಾಗಿ ಬಟ್ಟೆಯಿಂದ ನಿರ್ಮಿಸಲ್ಪಟ್ಟಿದೆ. ಇವೆರಡರ ಮಧ್ಯೆ ಮೂರು ಕಮಾನುಗಳ ಚಪ್ಪರವು ಹಾಕಲ್ಪಟ್ಟು ಕೈ|| ಚಾಮರಾಜಒಡೆಯರವರ ಭಾವಚಿತ್ರವು ಮಧ್ಯದಲ್ಲೂ ಶ್ರೀಮನ್ಮಹಾರಾಜ ಸಹೋದರರ ಭಾವಚಿತ್ರಗಳು ಉಭಯಪಾರ್ಶ್ವದಲ್ಲೂ ಅಲಂಕರಿಸಲ್ಪಟ್ಟಿವೆ. ಅರಮನೆಯ ಸಭಾಂಗಣವೂ, ಹೊರಭಾಗವೂ, ದೇವಸ್ಥಾನಗಳೂ, ಚಿತ್ರಪಟಗಳಿರತಕ್ಕ ಕಮಾನುಗಳೂ, ಕೋಟೆಯ ಉತ್ತರದಕ್ಷಿಣದ್ವಾರಗಳೂ, ಸಹಸ್ರಾರು ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟಿರುವುವಲ್ಲದೆ ಬೈಲಿನಲ್ಲೆಲ್ಲ ದೀಪಸ್ತಂಭಗಳು ನೆಡಲ್ಪಟ್ಟಿವೆ. ಅಲ್ಲಲ್ಲಿಗೆ ಗಿಡಗಳ ಕುಂಡಗಳು ಇಡಲ್ಪಟ್ಟು ಮತ್ತು ಲತಾಗೃಹಗಳೇರ್ಪಡಿಸಲ್ಪಟ್ಟು ನಾನಾಬಣ್ಣದ ವಿದ್ಯುದ್ದೀಪಗಳಿಂದಲಂಕರಿಸಲ್ಪಟ್ಟಿವೆ. ಸಾಲದುದಕ್ಕೆ ದಳವಾಯರ ಮನೆಗೂ ದೀಪಗಳು ಹಾಕಲ್ಪಟ್ಟಿವೆ. ಇವುಗಳೆಲ್ಲವೂ ಹೊತ್ತಿಸಲ್ಪಟ್ಟಾಗ ನಕ್ಷತ್ರಮಂಡಲವೇ ಭೂಮಂಡಲಕ್ಕೆ ಇಳಿದು ಬಂದಂತೆಯೂ, ಜ್ಯೋತಿರ್ಮಂದಿರದಂತೆಯೂ ಭಾಸವಾಗಿ ದಿಗ್ಭ್ರಮೆಯನ್ನುಂಟುಮಾಡುತ್ತದೆ. ಈ ಭರತಖಂಡದ ಮತ್ತಾವಭಾಗದಲ್ಲೂ ಇಲ್ಲದಿರುವ ವಿದ್ಯುದ್ದೀಪೋತ್ಸವದ ವೈಭವವನ್ನು ನೋಡದಿರುವ ಕಣ್ಣು ವ್ಯರ್ಥವೆಂದು ಹೇಳಬೇಕಾಗಿದೆ, ಮತ್ತು ಇದು ಸಮಸ್ತಜನರನ್ನು ಆಕರ್ಷಿಸಿ ಅವರ ಕಣ್ಮನಗಳನ್ನು ಸೂರೆಗೊಳ್ಳತಕ್ಕುದಾಗಿದೆ. ಈ ವಿಭವಂಗಳಿಗೆಲ್ಲ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳನ್ನು ಸಂತೋಷಗೊಳಿಸಬೇಕೆಂಬ ಸತ್ಸಂಕಲ್ಪವೇ ಮುಖ್ಯಕಾರಣವು. ಇಂತಹ ಮಹಾನುಭಾವರನ್ನು ಪ್ರಭುಗಳನ್ನಾಗಿ ಪಡೆದಿರುವ ಮೈಸೂರುದೇಶದ ಪ್ರಜೆಗಳ ಪುಣ್ಯಕ್ಕೆಣೆಯೇ ಇಲ್ಲ. ಕುಲದೇವತೆಯಾದ ಶ್ರೀ ಚಾಮುಂಡಾಂಬಿಕೆಯು ಶ್ರೀಮನ್ಮಹಾರಾಜರವರಿಗೂ ಅವರ ಬಲಭುಜದಂತಿರುವ ಶ್ರೀಮದ್ಯುವರಾಜರಿಗೂ ಈ ಉಭಯರ ಕುಲದೀಪಕರಾದ ಶ್ರೀ ಜಯಚಾಮರಾಜಒಡೆಯರವರಿಗೂ ಉಳಿದ ರಾಜಕುಟುಂಬದವರಿಗೂ ದೀರ್ಘಾಯುರಾರೋಗ್ಯಗಳನ್ನಿತ್ತು ಅವರುಗಳ ಮೂಲಕ ಈ ದೇಶದ ಸುಖಸಂಪದ್ವೈಭವಗಳು ಅಭಿವೃದ್ಧಿಗೊಳ್ಳುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುವೆವು.

ಸ್ವದೇಶದ ವೃತ್ತಾಂತಗಳು.

ಸೀಮೆಗೆ ಪ್ರಯಾಣಮಾಡಿರುವ ಶ್ರೀಮದ್ಯುವರಾಜ ಕಂಠೀರವನರಸಿಂಹರಾಜಒಡೆಯರವರ ಸ್ವಾರಿಯು ಬರುವ ನವಂಬರ್ ತಿಂಗಳ ಅಂತ್ಯಭಾಗದಲ್ಲಿ ಸ್ವದೇಶಕ್ಕೆ ಚಿತ್ತೈಸುವುದಾಗಿರುವುದು.

ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವವು ಬರುವ ನವಂಬರ್ ತಾ|| ೨೭ ನೆಯ ಶನಿವಾರ ಬೆಳಗಿನ ೯½ ಗಂಟೆಗೆ ಜಗನ್ಮೋಹನಪ್ರಾಸಾದದ ಸಭಾಂಗಣದಲ್ಲಿ ನಡೆಯುವುದಾಗಿ ಗೊತ್ತಾಗಿರುತ್ತದೆ.

ಈ ಅಕ್ಟೋಬರ್ ತಾ|| 6 ರಿಂದ ಬರುವ ನವಂಬರ್ ತಾ|| ೨೨ ರ ವರೆಗೆ ತಲಕಾವೇರಿಯಲ್ಲಿ ನಡೆಯುವ ಜಾತ್ರೆಗೆ ಪ್ಲೇಗು ಸೋಂಕಿರುವ ಸ್ಥಳಗಳಿಂದ ಜನರಾರೂ ಹೋಗಕೂಡದೆಂದು ಚೀಫ್‌ಕಮಿಷನರು ಪ್ರಕಟಿಸಿರುತ್ತಾರೆ.

ಹೊನ್ನೂರು ದೊಂಬಿಯ ಕಲಹದ ವಿವಾದದಲ್ಲಿ ಶಿಕ್ಷಿತರಾಗಿರುವವರನ್ನು ಹೊಣೆಯಮೇಲೆ ಬಿಡುವ ವಿಚಾರವು ಸೆಷನ್ಸು ಜಡ್ಜರ ಪರ್ಯಾಲೋಚನೆಗಾಗಿಡಲ್ಪಟ್ಟಿದ್ದುದು ನೆನ್ನೆಯದಿವಸ ನಡೆಯಲಿಲ್ಲವಾಗಿ ಈ ತಾ|| 11 ಕ್ಕಿಡಲ್ಪಟ್ಟಿದೆ.

ಬಾಳೆಹೊನ್ನೂರು ಸಿಂಹಾಸನಾಧೀಶ್ವರರಾದ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಮೈಸೂರುಸಂಸ್ಥಾನದ ಸಿವಿಲ್ ಕೋರ್ಟುಗಳಿಗೆ ಪ್ರತ್ಯಕ್ಷವಾಗಿ ಹೋಗಬೇಕಾದುದಿಲ್ಲವೆಂದು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಈ ತಾ|| 18 ರಲ್ಲಿ ಆರಂಭಗೊಂಡು ನಡೆಯುವ ಮೈಸೂರು ಪ್ರಜಾಪ್ರತಿನಿಧಿಸಭೆಗೆ ಹೋಗಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ನೋಡಲಿಷ್ಟಪಡುವಂತಹವರು ಸ್ಪೆಷಲ್‌ಡ್ಯೂಟಿ ಆಫೀಸರಿಗೆ ಬರೆದು ಟಿಕೆಟ್ಟನ್ನು ಪಡೆಯಬಹುದಾಗಿ ಪ್ರಕಟವಾಗಿದೆ.

ರಾಜಧಾನಿಯ ಸಂಸ್ಕೃತಮಹಾಪಾಠಶಾಲೆಯು ಆರಂಭವಾಗಿ ಅರ್ಧಶತಮಾನವಾದುದರ ಸಂತೋಷಸೂಚಕವಾಗಿ ಅದರ ವರ್ಧಂತ್ಯುತ್ಸವವು ಈ ತಾ|| 20ರಲ್ಲಿ ಶ್ರೀಮನ್ಮಹಾರಾಜರವರಿಂದ ನಡೆಸಲ್ಪಡುವುದು. ಇದಕ್ಕಾಗಿ ವಿಶೇಷಸನ್ನಾಹವು ಸಡಗರದಿಂದ ನಡೆಯುತ್ತಿದೆ.

ಮೈಸೂರು ಕೃಷ್ಣರಾಜಮಿಲ್ಸ್ ಲಿಮಿಟೆಡ್ ಕಂಪೆನಿಯ ಷೇರುದಾರರ ಎಕ್ಸ್‌ಟ್ರಾ ಆರ್ಡಿನರಿ ಜನರಲ್‌ಮೀಟಿಂಗು ಈ ತಾ|| 20ನೆಯ ಬುಧವಾರ ಬೆಳಗಿನ 8½ ಘಂಟೆಗೆ ರಾಜಧಾನಿಯ ಧರ್ಮಪ್ರಕಾಶ ಡಿ. ಬನುಮಯ್ಯನವರ ಸ್ಕೂಲು ಕಟ್ಟಡದಲ್ಲಿ ನಡೆಯಲು ಗೊತ್ತಾಗಿದೆ.

ದಾವಣಗೆರೆ ಸಬ್‌ಡಿವಿಜನ್ ಆಫೀಸರಾಗಿದ್ದ ಮಿ|| ಸಿ. ಸೋಮನಾಥರವರು ಚೀಫ್‌ಕಮಾಂಡೆಂಟರ ಆಫೀಸಿಗೆ ವರ್ಗಾಯಿಸಲ್ಪಟ್ಟುದರಿಂದ ಹಾಸನದಲ್ಲಿ ಸ್ಪೆಷಲ್‌ಮ್ಯಾಜಿಸ್ಟ್ರೇಟರಾಗಿದ್ದ ಮಿ|| ಸಯದ್ ಅಬ್ದುಲ್‌ಕಾಲಕ್‌ರವರು ದಾವಣಗೆರೆ ಸಬ್‌ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಚುನಾವಣೆಯು ಬರುವ ನವಂಬರ್ ತಾ|| 30 ನೆಯ ಮಂಗಳವಾರ ಬೆಳಗಿನ 11 ಘಂಟೆಯಿಂದ ಸಾಯಂಕಾಲ 5 ಘಂಟೆಯವರೆಗೆ ಗೊತ್ತಾದ ಸ್ಥಳಗಳಲ್ಲಿ ನಡೆಯುವುದು. ಈ ಚುನಾವಣೆಗೆ ಉಮೇದುವಾರರಾಗಿ ನಿಲ್ಲತಕ್ಕವರು ಈ ಅಕ್ಟೋಬರ್ ತಾ|| 22 ರೊಳಗೆ ಡಿ|| ಕಮಿಷನರಿಗೆ ಬರೆದುಕೊಳ್ಳಬೇಕು.

ನಂಜನಗೂಡು ತಾ|| ಅಳಗಂಚಿಗ್ರಾಮದಲ್ಲಿ ಕುರುಬರ ಮುದ್ದೇಗೌಡನ ಮನೆಗೆ ಕಳೆದ ತಾ|| 2 ರ ರಾತ್ರಿ ಯಾರೋ ಕಳ್ಳರು ನುಗ್ಗಿ 300 ರೂ. ಗಳನ್ನೂ 200 ರೂ. ನಗಗಳನ್ನೂ ಅಪಹರಿಸಿಕೊಂಡು ಹೋಗಿದ್ದರು. ಪೊಲೀಸ್ ಸೂಪರಿಂಟೆಂಡೆಂಟರು ಈ ದಿವಸ ಅಲ್ಲಿಗೆ ಹೋಗಿದ್ದು ವಿದ್ಯಮಾನವನ್ನು ವಿಚಾರಿಸಿಕೊಂಡು ಬಂದರು. ಕೆಲವರು ಸಂಶಯದಮೇಲೆ ಸೆರೆಹಿಡಿಯಲ್ಪಟ್ಟಿರುತ್ತಾರೆ.

ದಾವಣಗೆರೆ, ಚಿತ್ರದುರ್ಗ, ಮೊದಲಾದ ಸ್ಥಳಗಳಲ್ಲಿ ಪ್ಲೇಗುರೋಗವು ಉಲ್ಬಣಸ್ಥಿತಿಯಲ್ಲಿರುವುದರಿಂದ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ವಿಜಯದಶಮೀಸಮಾರಂಭೋತ್ಸವವು ಸಂಕ್ಷೇಪವಾಗಿ ಚಿತ್ರದುರ್ಗದ ಬೃಹನ್ಮಠದಲ್ಲಿಯೇ ನಡೆಸಲ್ಪಡಲೇರ್ಪಟ್ಟಿದೆಯೆಂದೂ ಪರಸ್ಥಳಗಳಿಗೆ ನಿರೂಪಗಳು ಕಳುಹಲ್ಪಡುವುದಿಲ್ಲವೆಂದೂ ಸಂಸ್ಥಾನದ ಏಜಂಟರು ತಿಳಿಸಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು ಬರುವ ನವಂಬರ್ ತಿಂಗಳಲ್ಲಿ 3 ತಿಂಗಳ ಪ್ರಿವಿಲೆಜ್ ರಜದಮೇಲೆ ಹೋಗುವರೆಂದೂ ಇವರು ಈ ಉದ್ಯೋಗಕ್ಕೆ ಹಿಂದಿರುಗಿ ಬರುವಸಂಭವವಿಲ್ಲವೆಂದೂ ಕೇಳುತ್ತೇವೆ. ಇದು ನಿಜವಾಗಿದ್ದಲ್ಲಿ ಕಾರ್ಯದಕ್ಷರೂ, ಸರಸಿಗಳೂ, ನಿಗರ್ವಿಗಳೂ, ನಿಷ್ಪಕ್ಷಪಾತಿಗಳೂ ಆದ ಮ|| ಮಾಧವರಾಯರ ಸಹಾಯವನ್ನು ಕಳೆದುಕೊಳ್ಳುವುದು ರಾಜಧಾನಿಯ ದುರದೃಷ್ಟವೆಂದೇ ಹೇಳಬೇಕಾಗುವುದು.

ಕೈ|| ಚೆನ್ನಬಸಪ್ಪನವರ ಸ್ಮಾರಕೋತ್ಸವ.

ಈ ಅತ್ಯವಶ್ಯಕರ್ತವ್ಯಕ್ಕಾಗಿ ಶೇಖರಿಸಲ್ಪಡುತ್ತಿರುವ ದ್ರವ್ಯನಿಧಿಗೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳಿಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ ಮತ್ತು ಮತಾಭಿಮಾನಿಗಳಾದ ಇತರ ದೊಡ್ಡಮನುಷ್ಯರುಗಳು ಕೂಡಲೆ ಸಹಾಯಮಾಡಬೇಕಾಗಿ ಕೋರಿದೆ.

ಮ|| ಗಳಾದ (1) ಯಡತೊರೆ ತಾ|| ಬೆಳ್ಳಾಳೆಗ್ರಾಮದಲ್ಲಿರುವ ಆರ್. ಎ. ಮೆಂಬರು ಚನ್ನಪ್ಪನವರಿಂದ 10 ರೂ. (೨) ಚಾಮರಾಜನಗರದ ವೈಸ್‌ಪ್ರೆಸಿಡೆಂಟ್ ಸಂಗನಬಸಪ್ಪನವರಿಂದ 10 ರೂ. (೩) ಅಂತರಸಂತೆ ಪೋಸ್ಟ್‌ಮಾಸ್ಟರು ಎ. ಪಿ. ಶ್ರೀಕಂಠಪ್ಪನವರ ಮೂಲಕ ವೆ. ವೆಂ. ಪುಟ್ಟನಂಜಪ್ಪನವರಿಂದ ೩ ರೂ. ಒಟ್ಟು ೨೩ ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು ಸಿಟಿ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿರುವ ಮಿ|| ಎಂ. ಖಾಜಿಂ, ಎಲ್. ಆರ್. ಸಿ. ಪಿ., ಎಂ. ಆರ್. ಸಿ. ಎಸ್, ರವರು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ, ಇಲ್ಲಿಯ ರೆ|| ಮೆಡಿಕಲ್ ಆಫೀಸರಾದ ಮ|| ಎಸ್. ನಾರಾಯಣಪ್ರಸಾದ್ ಎಲ್. ಎಂ. ಅಂಡ್ ಎಸ್. ರವರು ವಿಕ್ಟೋರಿಯಾ ಆಸ್ಪತ್ರೆಯ ರೆ|| ಮೆ|| ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮ|| ಹಟ್ಟಿರಂಗಯ್ಯಂಗಾರರ ಕುಮಾರರಾದ ಮ|| ಎಂ. ಎಚ್. ಕೃಷ್ಣಯ್ಯಂಗಾರ್ ಎಂ.ಎ., ರವರು ಸೀಮೆಗೆ ಹೋಗಿ ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಡಾಕ್ಟರ್ ಪ್ರಶಸ್ತಿಯನ್ನು ಪಡೆದುಕೊಂಡು ಬಂದಿರುವವರಷ್ಟೆ. ಇವರು ಈಗ ಮೈಸೂರು ಮಹಾರಾಜಾಕಾಲೇಜಿನಲ್ಲಿ ಪ್ರೊಫೆಸರಾಗಿ ನಿಯಮಿಸಲ್ಪಟ್ಟಿರುವರು. ಇವರ ಸಹೋದರರಿಬ್ಬರು ಪಾಶ್ಚಾತ್ಯದೇಶದಲ್ಲಿ ಪ್ರೌಢವಿದ್ಯಾವ್ಯಾಸಂಗವನ್ನು ಸ್ವಾವಲಂಬನದಿಂದ ಮಾಡುತ್ತಿರುವುದು ಪ್ರಶಂಸನೀಯವಾಗಿದೆ.

ರಾಜಧಾನಿಯ ಹೆಲ್ತಾಫೀಸರಾಗಿದ್ದ ಮ|| ಎಂ. ಜಿ. ಶ್ರೀನಿವಾಸರಾವ್ ಪೇಟ್ಕರ್‌ರವರು ಕೋಲಾರದ ಚಿನ್ನದಗಣಿಗೆ ವರ್ಗವಾಗಿ ಹೋದುದರಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದ ಅಸಿಸ್ಟೆಂಟ್ ಸರ್ಜನ್ ಮ|| ಪಿ. ಶ್ಯಾಮರಾಯರು ಆಕ್ಟಿಂಗ್ ಹೆಲ್ತಾಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರಿಗೆ ಸ್ಥಳಪರಿಚಯವೂ ಆರೋಗ್ಯವಿಧಾನಾನುಭವವೂ ಇರುವಂತೆ ತೋರಲಿಲ್ಲ. ಇಂತಹವರನ್ನು ಪ್ಲೇಗುರೋಗವು ಪ್ರಾರಂಭವಾಗಿ ನಿವಾಸಿಗಳಿಗೆ ಭಯವನ್ನುಂಟುಮಾಡಿರುವ ಈ ಸಮಯದಲ್ಲಿ ನಿಯಮಿಸಿರುವುದೇನೂ ಅಷ್ಟು ಉಚಿತವಾಗಿ ತೋರುವುದಿಲ್ಲವಾದುದರಿಂದ ಪ್ರಭುತ್ವದವರು ಸಮರ್ಥರಾದ ಹೆಲ್ತಾಫೀಸರನ್ನು ನಿಯಮಿಸಿ ಬಹುಕಾಲದಿಂದ ಅಡಗಿದ್ದ ರೋಗವು ಪ್ರಬಲಿಸದಂತೆ ಮಾಡುವವರಾಗಬೇಕೆಂದು ಸೂಚಿಸುತ್ತೇವೆ.

(1) ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕಸಭೆಗೂ ಮೆಂಬರುಗಳನ್ನು ಚುನಾಯಿಸುವ ಬಗೆಗೆ ಓಟರುಗಳ ಲಿಸ್ಟು 1926 ನೇ ನವಂಬರ್ ತಾ|| 25 ರ ಗೆಜೆಟ್ಟಿನಲ್ಲಿ ಪ್ರಕಟವಾಗತಕ್ಕುದು. (2) ತತ್ಸಂಬಂಧವಾದ ಆಕ್ಷೇಪಗಳ ಅರ್ಜಿಗಳು 1926 ನೇ ಡಿಸೆಂಬರ್ ತಾ|| 15 ರೊಳಗಾಗಿ ಹಾಕಿಕೊಳ್ಳತಕ್ಕುದು (3) ಇದರ ಮೇಲಿನ ಅಪೀಲನ್ನು 1927 ನೇ ಜನವರಿ ತಾ|| 6 ರೊಳಗೆ ಮಾಡತಕ್ಕುದು (4) ಹೆಚ್ಚುಕಡಿಮೆ ಮಾಡಲ್ಪಟ್ಟಿರುವ ಲಿಸ್ಟು 1927 ನೇ ಫೆಬ್ರವರಿ ತಾ|| 3 ರೊಳಗೆ ಪ್ರಕಟವಾಗತಕ್ಕದ್ದು (5) ಚುನಾವಣೆಗೆ ನಿಲ್ಲತಕ್ಕ ಉಮೇದವಾರರು ತಮ್ಮ ಇಷ್ಟವನ್ನು 1927 ನೇ ಫೆಬ್ರವರಿ ತಾ|| 12 ರೊಳಗೆ ತಿಳಿಸತಕ್ಕದ್ದು (6) ಉಮೇದುವಾರರ ಹೆಸರುಗಳು 1927 ನೇ ಫೆಬ್ರವರಿ 17 ರಲ್ಲಿ ಪ್ರಕಟಿಸಲ್ಪಡುವುದು (7) ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕಸಭೆಯ ಮೆಂಬರುಗಳ ಚುನಾವಣೆಯು 1927 ನೇ ಮಾರ್ಚಿ ತಾ|| 5 ನೇ ಶನಿವಾರದಿವಸ ನಡೆಯತಕ್ಕುದು, ಎಂದು ಈ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಹೊನ್ನಾಳಿ, ಚೆನ್ನಗಿರಿ, ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಅನೇಕ ಹೆಂಗುಸರು ಕೆಂಪುಬಳೆಗಳನ್ನು ಕೈಗಳಿಗೆ ತೊಟ್ಟುಕೊಂಡಿದ್ದವರು ಈಗ ಕೆಲವು ದಿವಸಗಳಿಂದ ಆ ಬಳೆಗಳಲ್ಲಿ ಒಂದುವಿಧವಾದ ಹುಳುಗಳು ಕಾಣಿಸಿಕೊಂಡು ಕೈಗಳು ಬಾತುಕೊಂಡುದರಮೇಲೂ, ಕೆಲರು ಇದರಿಂದ ಸತ್ತುಹೋದುದರ ಮೇಲೂ ಈ ಪ್ರಾಂತಗಳ ಸ್ತ್ರೀಯರು ಕೆಂಪುಬಳೆಗಳನ್ನೊಡೆದುಹಾಕಿ ನಾಡಿನ ಕಪ್ಪುಬಳೆಗಳನ್ನು ತೊಡಲುಪಕ್ರಮಿಸಿರುವರೆಂದು ಶಿವಮೊಗ್ಗ ಡಿ|| ಚಿಲೂರು ಎಂ. ಸಿ. ಎಂ. ಸ್ಕೂಲ್ಮಾಸ್ಟರುಗಳಾದ ಎಂ. ಚೆನ್ನಬಸವಯ್ಯನವರೂ, ಬಿ. ಹಾಲಯ್ಯನವರು ಬರೆದಿರುತ್ತಾರೆ. ಅಲ್ಲದೆ ಹೊಳೇನರಸೀಪುರ ಪ್ರಾಂತದಲ್ಲೂ ಸ್ತ್ರೀಯರು ಬೊಂಬಾಯಿಬಳೆಯಲ್ಲಿ ಹುಳುವಿದೆಯೆಂಬ ಭೀತಿಯಿಂದ ಅವುಗಳನ್ನೊಡೆದುಹಾಕಿ ನಾಡಿನಬಳೆಗಳನ್ನು ಪಯೋಗಿಸುತ್ತಿರುವುದಾಗಿ ಕೇಳುತ್ತೇವೆ. ಪ್ಲೇಗುರೋಗವಾರಂಭವಾದ ತರುಣದಲ್ಲೂ ಇದೇ ಭೀತಿಯು ಜನರಲ್ಲಿ ಹುಟ್ಟಿ ಬೊಂಬಾಯಿ ಬಳೆಗಳನ್ನು ತೊಡುವುದನ್ನೇ ಕೆಲಕಾಲ ಬಿಟ್ಟಿದ್ದರು. ಯಾವನೋ ಚಮತ್ಕಾರಿಯಾದ ದೇಶೀಯ ಬಳೆಗಾರಶೆಟ್ಟಿಯು ಸ್ವಪ್ರಯೋಜನ ದೃಷ್ಟಿಯಿಂದ ಈ ಸುದ್ದಿಯನ್ನು ಹುಟ್ಟಿಸಿರಬಹುದು. ಆದರೆ ಜನರು ಗಾಜಿನಲ್ಲಿ ಹುಳುಗಳಿರುವುದು ಅಸಂಭವವೆಂಬುದನ್ನು ಪರ್ಯಾಲೋಚಿಸದೆ ಎತ್ತೀಯತೆಂದರೆ ಕೊಟ್ಟಿಗೆಯಲ್ಲಿ ಕಟ್ಟೆಂಬ ಲೋಕೋಕ್ತಿಯಂತೆ ಆ ಸ್ವಾರ್ಥಪರನಾದ ಚಮತ್ಕಾರಿ ಬಳೆಗಾರಶೆಟ್ಟಿಯ ಮಾತನ್ನು ನಂಬಿ ಮೋಸಹೋಗುತ್ತಿರುವುದಕ್ಕಾಗಿ ವಿಷಾದಿಸಬೇಕಾಗಿದೆ.

ವರ್ತಮಾನಸಂಗ್ರಹ.

ಜೈನಾದಲ್ಲಿ ಮೀನುಹಿಡಿಯುವ ಹಡಗುಗಳು 130 ಕ್ಕೆ ಮೇಲ್ಪಟ್ಟು ತುಫಾನಿಗೆಸಿಕ್ಕಿ ಮುಳುಗಿಹೋದುದರಿಂದ ಅವುಗಳೊಳಗಿದ್ದ ಹೆಂಗುಸರೂ, ಮಕ್ಕಳೂ, ಗಂಡುಸರೂ ಸೇರಿ 2,000 ದವರೆಗೆ ಜಲಸಮಾಧಿಯನ್ನು ಹೊಂದಿದರು.

ಅಸ್ಸಾಮಿನ ನ್ಯಾಯವಿಧಾಯಕಸಭೆಯಲ್ಲಿ ಧೂಮಪಾನ ನಿಷೇಧಕಶಾಸನವು ಪ್ಯಾಸಾಯಿತು. ಇದರಿಂದ ಐವತ್ತಿಗಿಂತ ಹೆಚ್ಚುಮಂದಿ ಒಂದುಕಡೆ ಸೇರಿ ಧೂಮಪಾನಮಾಡಿದಲ್ಲಿ ೫೦ ರೂ. ಅರ್ಥದಂಡ ಅಥವಾ 1 ತಿಂಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಡುವರು.

ವೇರಾಗರ್ ಕರ್ಡೆಲ್ ಎಂಬಲ್ಲಿ 1½ ಮೈಲಿದೂರ ನೀರಿನಲ್ಲಿ ಈಜಲು ಪಂಥಕಟ್ಟಿಕೊಂಡಿದ್ದ 39 ಜನ ಗಂಡುಸರಲ್ಲೂ 12 ಜನ ಹೆಂಗುಸರಲ್ಲೂ 9 ಗಂಡುಸರೂ, ಹೆಂಗುಸರೆಲ್ಲರೂ ಉತ್ತೀರ್ಣರಾದರು. ಉಳಿದ ಗಂಡುಸರು ಅರ್ಧದಾರಿಯಲ್ಲೇ ಸೋತುನಿಂತುಬಿಟ್ಟರು.

ರಷ್ಯಾರಾಜ್ಯದಲ್ಲಿ ಪ್ರತಿವರ್ಷವೊಂದಕ್ಕೆ 1,00,000 ತೋಳಗಳಿಂದ 10,00,000 ದನಕರುಗಳ ಪ್ರಾಣನಷ್ಟವಾಗುತ್ತಿರುವುದರಮೇಲೆ ಆ ತೋಳಗಳನ್ನು ಬೇಂಟೆಮಾಡಿ ಸಂಹರಿಸುವವರಿಗೆ ವಿಶೇಷವಾದ ಬಹುಮಾನಗಳು ಕೊಡಲ್ಪಡುವುವಾಗಿ ಅಲ್ಲಿಯ ಸರ್ಕಾರದವರು ಪ್ರಕಟಿಸಿರುತ್ತಾರೆ.

ತಿನ್ನವಲ್ಲಿಯ ಸಮೀಪಗ್ರಾಮದಲ್ಲಿ ತರುಣ ತರುಣಿಯರಿಬ್ಬರು ಪರಸ್ಪರವರಿಸಿ ವಿವಾಹಮಾಡಿಕೊಳ್ಳಬೇಕೆಂದು ಸಂಕಲ್ಪಿಸಿಕೊಂಡಿದ್ದುದನ್ನು ತರುಣಿಯ ಮಾತಾಪಿತೃಗಳು ತಿಳಿದು ಅದಕ್ಕೆ ಪ್ರತಿಬಂಧಕವನ್ನುಂಟುಮಾಡಲು ಆ ತರುಣಿ ತರುಣರು ಪರಸ್ಪರ ಅಗಲಿರಲಾರದೆ ಆತ್ಮಹತ್ಯಮಾಡಿಕೊಂಡರು.

ಪೂನಾಪಟ್ಟಣದಲ್ಲಿ ಬಹಳ ಐಶ್ವರ್ಯಯುಕ್ತವಾದ ಜೈನದೇವಾಲಯಕ್ಕೆ ಹಾಕಿದ್ದ 6 ಬೀಗಗಳನ್ನು ಯಾರೋ ಕಳ್ಳರು ಕೆಲದಿನಗಳ ಹಿಂದೆ ಮುರಿದು ಒಳಕ್ಕೆ ನುಗ್ಗಿ ದೇವರಿಗೆ ಧರಿಸಿದ್ದ ನವರತ್ನಖಚಿತವಾದ ಕಿರೀಟ ಮುತ್ತಿನಕಂಠಸರ ಮೊದಲಾಗಿ 1 ಲಕ್ಷ ರೂ. ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿಕೊಂಡು ಹೋದರು ಪೊಲೀಸರು ಆ ಕಳ್ಳರನ್ನು ತಡಕುತ್ತಿದ್ದಾರೆ.

ಅಮೇರಿಕೆಯ ಪೂರ್ವಕರಾವಳಿಯಲ್ಲೂ, ವೆಸ್ಟ್ ಇಂಡೀಸ್ ದ್ವೀಪಗಳಲ್ಲೂ ಘಂಟೆಯೊಂದಕ್ಕೆ 80-90 ಮೈಲಿಗಳ ವೇಗದಿಂದ ಬಿರುಗಾಳಿಯು ಬೀಸಲಾಗಿ ನೂರಾರು ಹಡಗುಗಳು ಮುಳುಗಿ ಹೋದುವು; ಸಾವಿರಾರು ಮರಗಳುರುಳಿದವು; 10-20 ಅಂತಸ್ತುಗಳ ಮನೆಗಳು ಬಿದ್ದು ಹೋದವು ಮತ್ತು ಅಸಂಖ್ಯಾಕಪ್ರಾಣನಷ್ಟವೂ, 75 ಲಕ್ಷರೂಪಾಯಿಗಳಮೇಲೆಯೇ ದ್ರವ್ಯನಷ್ಟವೂ ಆಗಿರುವುವು.

ಟ್ರಾವನ್ಕೂರು ಆಸ್ಪತ್ರೆಯಲ್ಲಿ ಒಬ್ಬ ರೋಗಿಯ ದೇಹಭಾಗದಲ್ಲಿ ಕೆಟ್ಟುಹೋಗಿದ್ದ ಮಾಂಸವನ್ನು ತೆಗೆದು ಹೊಸ ಮಾಂಸವನ್ನು ಹಾಕುವುದಕ್ಕಾಗಿ ಸಹಾಯನಿರಾಕರಣವಾದಿಯಾದ ಕನ್ನಾಡ್ ಕೃಷ್ಣಯ್ಯರ್ ಎಂಬವರು ತಮ್ಮ ದೇಹದಿಂದ ಕೊಂಚ ಮಾಂಸವನ್ನು ಕೊಟ್ಟು ಅದರ ಬಾಧೆಯ ನಿವಾರಣೆಗಾಗಿ ಒಂದುತಿಂಗಳಕಾಲ ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದರಂತೆ. ಇದಲ್ಲವೆ ನಿಜವಾದ ಪರೋಪಕಾರವು ?

ಫೋರ್ಡುಮೋಟಾರುಬಂಡಿಯ ಕಾರ್ಯಾಲಯದ ಯಜಮಾನರೂ ಕೋಟ್ಯಧೀಶ್ವರರೂ ಆದ ಹೆನ್ರಿಫೋರ್ಡ್‌ರವರು ತಮ್ಮ ಕುವರಿಯನ್ನು 78,00,00,000 ರೂಪಾಯಿಗಳ ವರದಕ್ಷಿಣೆಯೊಡನೆ ಪೋಲಾಂಡಿನ ಮಂತ್ರಿಯಾಗಿದ್ದ ಸ್ಕ್ರಿಜೆನಿಸ್ಕಿ ಎಂಬುವವರಿಗೆ ಕೊಟ್ಟು ಲಗ್ನಮಾಡಿ ಕೊಡುವುದಾಗಿ ನಿಶ್ಚಯವಾಗಿರುವುದಂತೆ. ಇಷ್ಟು ಅಗಾಧವಾದ ವರದಕ್ಷಿಣೆಯು ಪ್ರಪಂಚದಲ್ಲಿ ಈವರೆಗೆ ಯಾರೂ ಕೊಟ್ಟಿರುವುದಾಗಿಲ್ಲವು.

ಬಳ್ಳಾರಿಯ ಮಿಷನ್‌ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದ 23 ವರ್ಷವಯಸ್ಸಿನ ರಂಗನಾಥ ಅಯ್ಯರ್ ಎಂಬಾತನು ಕ್ರೈಸ್ತಮತದೀಕ್ಷೆಯನ್ನು ಹೊಂದಲು ತಾನು ಸಮ್ಮತಿಸಲಿಲ್ಲವಾದರೂ ಕೆಲ ಪಾದ್ರಿಗಳು ತನ್ನನ್ನು ಬಲವಂತಪಡಿಸಿ ಲಕ್ನೋಪಟ್ಟಣಕ್ಕೆ ಕರೆದುಕೊಂಡು ಬಂದಿರುತ್ತಾರಾದುದರಿಂದ ಅವರು ತನ್ನನ್ನು ಹಿಂಸಿಸದಂತೆ ಸಂರಕ್ಷಿಸಬೇಕೆಂದು ಲಕ್ನೋ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಂಡಿದ್ದನು.

ಫ್ರಾನ್ಸಿನಲ್ಲಿ ಕೋಟ್ಯಧೀಶ್ವರನಾಗಿರುವ ರೋಜರ್ ವ್ಯಾಟರ್ ಎಂಬಾತನು ಬಾಲಕನಾಗಿರುವಾಗ್ಗೆ ಅವನ ತಾಯಿಯು ಗಂಡನ ಕೂಡ ಕಲಹಮಾಡಿಕೊಂಡು ಹೊರಟು ಹೋದುದರ ಮೇಲೆ ಮಗನು ರಿಕ್ತನಾದ ತಂದೆಯ ಪೋಷಣೆಯಲ್ಲಿದ್ದನು. ಕಲಹವನ್ನು ಮಾಡಿ ಅಗಲಿಹೋದ ತಾಯಿಯು ಅಮೇರಿಕೆಯನ್ನು ಸೇರಿ ಬೇಕಾದಷ್ಟು ಐಶ್ವರ್ಯವನ್ನು ಸಂಪಾದಿಸಿ ಕೆಲದಿನಗಳ ಹಿಂದೆ 240 ಲಕ್ಷ ಫ್ರಾಂಕುಗಳು ಬಾಳುವ ತನ್ನ ಐಶ್ವರ್ಯವೆಲ್ಲವನ್ನೂ ತನ್ನ ಮಗನಿಗೆ ತಲುಪಿಸಬೇಕೆಂದು ತನ್ನ ಲಾಯರ ಹೆಸರಿನಲ್ಲಿ ಮರಣಶಾಸನವನ್ನು ಬರೆದಿಟ್ಟು ಮೃತಳಾದಳು. ಬಡತನದಲ್ಲಿ ಬೆಳೆದ ಬಾಲಕನು ಈಗ ಕೋಟ್ಯಧೀಶ್ವರನಾಗಿ ರೋಜರ್ ವ್ಯಾಟರ್ ಎಂಬ ಹೆಸರಿನಿಂದ ಬಾಳುತ್ತಿರುವನು. ಈಶ್ವರ ಒಲಿದರೆ ಭಿಕ್ಷುಕನು ಲಕ್ಷಿಕನಾಗುವನೆಂಬುದರಲ್ಲಿ ಸಂದೇಹವೇನು ?

ಸೂಚನೆ.

ಶ್ರೀ ಗಿರಿರಾಜಸೂರ್ಯಸಿಂಹಾಸನ ಹೊನ್ನಾಳಿ ಹಿರೇಕಲ್ಮಠದ ಸ್ಥಿರಪಟ್ಟಾಧ್ಯಕ್ಷ ಶ್ರೀ ಚನ್ನರಾಜದೇಶಿಕೇಂದ್ರಮಹಾಸ್ವಾಮಿಗಳ ಸ್ವಾರಿಯು ಹೊನ್ನಾಳಿ ತಾ|| ಬೆಳಗುತ್ತಿಗ್ರಾಮದ ವೀರಶೈವ ಭಕ್ತಮಂಡಳಿಯವರ ಪ್ರಾರ್ಥನೆ ಪ್ರಕಾರ ಈ ಸಂ|| ದ ವಿಜಯದಶಮಿಯಮಹೋತ್ಸವಕ್ಕಾಗಿ ಅಲ್ಲಿಗೆ ದಯಮಾಡಿಸಿ ಆಶ್ವೀಜ ಶು|| ೯ ಶುಕ್ರವಾರ ಅಶ್ವ ಮತ್ತು ಆಯುಧಪೂಜೆಯನ್ನು ನಡಿಸಿ ಶು|| ೧೦ ಶನಿವಾರ ಸಾಯಂಕಾಲ 3 ಘಂಟೆಗೆ ಬಿರುದಾವಳಿ ಸಮೇತ ಅಂದೋಳಿಕಾರೋಹಣದಿಂದ ಅಶ್ವವಡೊಡನೆ ಶಮಿಯಮಂಟಪಕ್ಕೆ ದಯಮಾಡಿಸುವುದರಿಂದ ಪತ್ರಿಕಾಪ್ರಕಾರ ವಿಜಯದಶಮಿಯ ಮಹೋತ್ಸವಕ್ಕಾಗಿ ಬರತಕ್ಕ ಭಕ್ತಾದಿಗಳೆಲ್ಲರೂ ಒಂದು ದಿವಸ ಮುಂಚಿತವಾಗಿ ಬೆಳಗುತ್ತಿ ಗ್ರಾಮಕ್ಕೆ ಬಂದು ಶ್ರೀಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇವೆ.

[illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೯ ನೆಯ ಶನಿವಾರ.

ಮೈಸೂರು ವಾಣಿಜ್ಯಕೈಗಾರಿಕೆಗಳ ಅಭಿವೃದ್ಧಿ.

ದೇಶಾಭ್ಯುದಯಕ್ಕೆ ವಾಣಿಜ್ಯಕೈಗಾರಿಕೆಗಳ ಅಭಿವೃದ್ಧಿಯೇ ಮುಖ್ಯ ಕಾರಣವೆಂಬುದನ್ನು ನಮ್ಮ ಮಂತ್ರಿವರ್ಯರಾದ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್, ಬಿ.ಎ., ಸಿ.ಐ.ಇ., ಒ.ಬಿ.ಇ. ರವರು ಚೆನ್ನಾಗಿ ಅರಿತವರಾಗಿ ಅಂತಹ ವಾಣಿಜ್ಯಕೈಗಾರಿಕೆಗಳ ಅಭಿವೃದ್ಧಿಗೆ ನಮ್ಮ ಸೀಮೆಯಲ್ಲಿರುವ ಕುಂದುಕೊರತೆಗಳನ್ನು ತಿಳಿದುಕೊಂಡು ಅವುಗಳ ಪರಿಹಾರೋಪಾಯವನ್ನು ಪರ್ಯಾಲೋಚಿಸುವ ಬಗೆಗೆ ಕಳೆದ ತಾ|| 30 ರಲ್ಲಿ ಬೆಂಗಳೂರಿನ ವರ್ತಕರ ಮತ್ತು ಕೈಗಾರಿಕೆಯಜನಾನರ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ನಡೆಯಿಸಿದಾಗ್ಗೆ ಮಾಡಿದ ವಿಚಾರಪೂರ್ಣವಾದ ಭಾಷಣವು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುವುದಷ್ಟೆ. ವಾಣಿಜ್ಯಕೈಗಾರಿಕೆಗಳ ಹೀನಸ್ಥಿತಿಯನ್ನು ಕುರಿತು ಪ್ರಸ್ತಾಪಿಸುವಾಗ್ಗೆ "ನಮ್ಮ ದೇಶದಲ್ಲಿ ಅನೇಕರು ಒಕ್ಕಟ್ಟಾಗಿ ಸೇರಿ ಹೆಚ್ಚು ಬಂಡವಾಳವನ್ನು ಹಾಕಿಕೊಂಡು ಧೈರ್ಯೋತ್ಸಾಹದಿಂದ ವ್ಯಾಪಾರಕೈಗಾರಿಕೆಗಳನ್ನು ದೊಡ್ಡಪ್ರಮಾಣದಲ್ಲಿ ಮಾಡದೆ ಒಬ್ಬೊಬ್ಬರೇ ಸ್ವಲ್ಪ ಬಂಡವಾಳದಿಂದ ಅಲ್ಪಪ್ರಮಾಣದಲ್ಲಿ ಮಾಡುತ್ತಿರುವುದೂ, ಕಾಲೋಚಿತವಾಗಿ ಸುಧಾರಿಸಿಕೊಳ್ಳದಿರುವುದೂ, ಪರದೇಶೀಯರು ಬಂದು ನಮ್ಮ ವ್ಯಾಪಾರವನ್ನೆಲ್ಲಾ ವಶಪಡಿಸಿಕೊಂಡು ನಮ್ಮನ್ನು ಮೂಲೆಗೊತ್ತಿರುವರೆಂದು ಗುಣಗುಟ್ಟುತ್ತಿರುವುದೂ ಸ್ವದೇಶದ ವರ್ತಕ ಕಾರ್ಮಿಕರುಗಳ ಅವನತಿಗೆ ಮುಖ್ಯಕಾರಣವಾಗಿರುತ್ತದೆ. ಹೆಚ್ಚು ಬಂಡವಾಳವನ್ನು ಸ್ವತಃ ಹಾಕಿಕೊಂಡು ದೊಡ್ಡ ಪ್ರಮಾಣದಿಂದ ವಾಣಿಜ್ಯಕೈಗಾರಿಕೆಗಳನ್ನು ನಡೆಯಿಸಲು ಸ್ವದೇಶೀಯರಿಗೆ ಚೈತನ್ಯವಿಲ್ಲವೆಂಬುದು ನಿಜವಾಗಿರುವುದಾದರೂ, ಇವರುಗಳ ಸೌಕರ್ಯಕ್ಕಾಗೇರ್ಪಟ್ಟಿರುವ ಮೈಸೂರು ಬ್ಯಾಂಕಿನ ಧನಸಹಾಯದಿಂದಲೂ, ಸಂಪದಭಿವೃದ್ಧಿಸಮಾಜದ ಕಾಲೋಚಿತವಾದ ಮಾರ್ಗೋಪಾಯ ಸೂಚನೆಯಿಂದಲೂ, ತಮ್ಮ ಜೀವನನಿರ್ವಾಹದ ವೆಚ್ಚವನ್ನು ಕಡಿಮೆಮಾಡುವುದರಿಂದಲೂ ಬಂಡವಾಳವನ್ನು ಹೆಚ್ಚಿಸಿಕೊಂಡು ಕಾಲಾನುಗುಣ್ಯವಾದ ಸುಧಾರಣೆಯಿಂದ ತಮ್ಮ ವಾಣಿಜ್ಯಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿಕೊಂಡು ತಾವು ಐಶ್ವರ್ಯವಂತರಾಗುವುದಲ್ಲದೆ ತಮ್ಮ ದೇಶವು ವಾಣಿಜ್ಯಕೈಗಾರಿಕೆಗಳಲ್ಲಿ ಪ್ರಖ್ಯಾತವಾಗಿರುವ ದೇಶಗಳ ಶ್ರೇಣಿಯಲ್ಲಿ ಸೇರುವಂತೆ ಮಾಡುವವರಾಗಬೇಕು" ಎಂದು ಪ್ರತಿಯೊಬ್ಬ ಸಭಿಕನ ಮನಸ್ಸಿನಲ್ಲಿ ನಾಟುವಂತೆ ದಿವಾನರು ಅಪ್ಪಣೆಕೊಡಿಸಿದರು. ಇದಕ್ಕಾಗಿ ಬೆಂಗಳೂರುಪಟ್ಟಣದ ವರ್ತಕಕಾರ್ಮಿಕರುಗಳು ಮಾತ್ರವಲ್ಲದೆ ಸಂಸ್ಥಾನದವರೆಲ್ಲರೂ ಕೃತಜ್ಞರಾಗಿರುತ್ತಾರೆ. ಮೈಸೂರು ಬ್ಯಾಂಕು ಮೈಸೂರುದೇಶದ ವರ್ತಕಕಾರ್ಮಿಕರುಗಳಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ಏರ್ಪಟ್ಟಿತಾದರೂ, ದುರಾಶಾಬದ್ಧರಾದ ಲೇವಾದೇವಿ ಮಾಡುವ ಹಣಗಾರರು ತೆಗೆದುಕೊಳ್ಳುವ ಬಡ್ಡಿಗಿಂತಲೂ ಈ ಬ್ಯಾಂಕಿನಲ್ಲಿ ಕಡಮೆ ಬಡ್ಡಿಗೆ ಸಾಲವು ದೊರೆಯುವುದಾದರೂ, ಮಾರ್ವಾಡಿ ಮುಲ್ತಾನಿ ಮೊದಲಾಗಿ ಪರದೇಶದ ವರ್ತಕರುಗಳ ಕೂಡ ಸ್ಪರ್ಧಿಸಲು ಸಾಧ್ಯವಿಲ್ಲ. ಏತಕ್ಕೆಂದರೆ, ಆ ಜನರಿಗೆ ತಮ್ಮ ದೇಶದಲ್ಲಿ ಶೇಕಡ 3-4 ರಂತೆ ಬಡ್ಡಿಗೆ ಹಣವು ದೊರೆಯುವುದರಿಂದಲೂ, ಈ ದುಂದುಗಾರಿಕೆಯು ಶತಮಾನದಲ್ಲಿರುವವರಾದರೂ ಅನೂಚಾನವಾಗಿ ನಡೆದುಬಂದಿರುವ ಅತ್ಯಂತ ಮಿತವ್ಯಯದಲ್ಲಿ ಕಾಲಯಾಪನೆಮಾಡುವ ಸ್ವಭಾವದವರಾದುದರಿಂದಲೂ ಎಥೇಷ್ಟವಾಗಿ ಬಂಡವಾಳವನ್ನು ಹಾಕಿಕೊಂಡು ಶೇಕಡ 5-6 ರಂತೆ ತಮಗೆ ಲಾಭವು ದೊರೆಯುವಹಾಗೆ ವ್ಯಾಪಾರಮಾಡುತ್ತಿರುವುದರಿಂದ ಹೆಚ್ಚು ಬಡ್ಡಿಯನ್ನು ಕೊಟ್ಟು ತಂದಿರುವ ಬಂಡವಾಳದಿಂದಲೂ, ಮಿತವ್ಯಯವನ್ನೇ ಅರಿಯದೆ ದುಂದುಗಾರಿಕೆಯಲ್ಲಿ ಪಾರಂಗತರಾಗಿರುವ ಈ ದೇಶೀಯರನ್ನು ಅವರಕೂಡ ಹೋಲಿಸಲಾಗುವುದಿಲ್ಲ, ಮತ್ತು ಅವರಿಗೆ ಕಡಮೆ ಬಡ್ಡಿಗೆ ಬಂಡವಾಳವು ದೊರೆಯುವಂತೆ ಇವರಿಗೂ ದೊರೆದಹೊರತು ತಮ್ಮ ಬಂಡವಾಳವನ್ನು ಹೆಚ್ಚಿಸಿಕೊಂಡು ಸ್ವಲ್ಪಲಾಭದಿಂದ ವ್ಯಾಪಾರಮಾಡಲು ಸಾಧ್ಯವಿಲ್ಲ. ಹಾಗೆ ಮಾಡದಹೊರತು ಆ ಜನರನ್ನು ಸ್ಪರ್ಧಿಸಿ ತಮ್ಮ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವುದಂತು ಸ್ವಪ್ನವೇ ಸರಿ. ವಾಣಿಜ್ಯಬೇಸಾಯಕೈಗಾರಿಕೆಗಳಲ್ಲಿ ನಮ್ಮ ಜನರು ಪುಷ್ಟರಾಗಿಲ್ಲದಿದ್ದರೂ ತಮ್ಮ ಶಕ್ತಿಮೀರಿ ವ್ಯಯಮಾಡುವ ದುರಭ್ಯಾಸವುಳ್ಳವರಾಗಿರುವರು. ಇದಕ್ಕೆ ಪ್ರಭುತ್ವದವರೂ ತಕ್ಕಮಟ್ಟಿಗೆ ಉತ್ತರವಾದಿಗಳೆಂದು ಹೇಳಬಹುದಾಗಿದೆ. ಯಾಕೆಂದರೆ, ನಾಟಕಸಿನೀಮಾ ಫಲಾಹಾರಮಂದಿರಗಳ ಬೆಳವಣಿಗೆಗಳನ್ನು ತಡೆಯದೆ ವ್ಯಾಜಾಂತರದಿಂದ ಉತ್ತೇಜನವನ್ನು ಕೊಡುತ್ತಿರುವರು ಮತ್ತು ವಾಣಿಜ್ಯಕೈಗಾರಿಕೆಗಳಲ್ಲಿ ಈ ದೇಶವು ಹಿಂದುಳಿದಿರುವುದಾದರೂ ಪಟ್ಟಣಗ್ರಾಮಗಳನ್ನು ಅಲಂಕಾರವಾಗಿಟ್ಟುಕೊಳ್ಳುವುದು ಅತ್ಯವಸರವೂ ಅವಶ್ಯವೂ ಎಂದು ನಮ್ಮ ದಿವಾನರು ತಮ್ಮ ತುಮಕೂರು ಡಿಸ್ಟ್ರಿಕ್ಟ್ ಪ್ರವಾಸದಲ್ಲಿ ಪುರಪಾಲಕರ ವಿಜ್ಞಾಪನೆಗಳಿಗೆ ಉತ್ತರಕೊಡುವಾಗ್ಗೆ ಅಪ್ಪಣೆಕೊಡಿಸಿರುವರು. ನಿರ್ಜೀವವಾದ ವಸ್ತುಗಳು ಅಲಂಕಾರಯುಕ್ತವಾದಮೇಲೆ ಸಜೀವರಾದ ಜನರೂ ಅಲಂಕಾರಪ್ರಿಯರಾಗುವುದು ಅಸ್ವಭಾವವಲ್ಲ. ಇದರಿಂದ ತಮ್ಮ ಆದಾಯಶಕ್ತಿಯನ್ನರಿಯದೆ ಅವರು ವೆಚ್ಚಮಾಡಬೇಕಾಗುತ್ತದೆ. ಈ ದುರ್ಚಾಳಿಗೆ ಬಿದ್ದವರನ್ನು ಮಿತವ್ಯಯಿಗಳನ್ನಾಗಿ ಮಾಡುವುದು ಸುಲಭಸಾಧ್ಯವಲ್ಲ. ಅದುಕಾರಣವೇ ಪ್ರಜೆಗಳ ದುಂದುಗಾರಿಕೆಗೆ ಪ್ರಭುತ್ವದವರೂ ತಕ್ಕಮಟ್ಟಿಗೆ ಹೊಣೆಯಾಗಿರುವರೆಂದು ನಾವು ಹೇಳಿದುದಾಗಿದೆ. ನಮ್ಮ ವರ್ತಕಕಾರ್ಮಿಕರುಗಳಿಗೆ ಈ ಪರಿಸ್ಥಿತಿಯಲ್ಲಿ ಸಂಪದಭ್ಯುದಯಸಮಾಜದಿಂದ ಎಷ್ಟರಮಟ್ಟಿಗೆ ಸಹಾಯವಾಗುತ್ತದೆಂಬುದನ್ನು ಬಲ್ಲವರೇ ಹೇಳಬೇಕಾಗಿದೆ. ನಮ್ಮ ಹಿಂದಣ ಅನುಭವದಲ್ಲಿ, ನೆಲದಮೇಲೆ ದೋಸೆಯನ್ನು ಬರೆದು ತಿನ್ನಿಸುವುದರವಿನಾ ಮತ್ತು ನಾಲ್ಕಾರುಜನರು ಗುಂಪುಸೇರಿದ ಕಡೆ ವಾಗಾಡಂಬರದಿಂದಲೂ, ಹಾವಭಾವ ವಿಲಾಸಗಳಿಂದಲೂ, ಅಲ್ಪಾಹಾರಾದಿಗಳಿಂದಲೂ, ವೃತ್ತಪತ್ರಿಕೆಗಳಲ್ಲಿ ಹೊಗಳಿಸಿಕೊಳ್ಳುವುದರಿಂದಲೂ ಮೇಲ್ಪಟ್ಟ ಅಧಿಕಾರಿಗಳ ಪ್ರಸನ್ನತೆಯನ್ನು ಸಂಪಾದಿಸಿ ಪ್ರಮೋಷನ್ನನ್ನೋ ಟೈಟಲುಗಳನ್ನೋ ಸಂಪಾದಿಸಿದುದರವಿನಾ ಮತ್ತಾವ ನಿಜವಾದ ದೇಶಾಭ್ಯುದಯಕಾರ್ಯವು ನಡೆದಂತೆ ತೋರುವುದಿಲ್ಲ. ಆದರೆ ಸ್ವಪ್ರಜಾಕ್ಷೇಮವೇ ಸಕಲ ಪುರುಷಾರ್ಥವೆಂದು ತ್ರಿಕರಣಪೂರ್ವಕವಾಗಿ ತಿಳಿದು "ಸತ್ಯಮೇವೋದ್ಧರಾಮ್ಯಹಂ" ಎಂಬ ಮಹಾಬಿರುದಾಂಕಿತದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿರುವ ಶ್ರೀಮತ್ಕೃಷ್ಣರಾಜಭೂಪರವರ ಮಹಾಸನ್ನಿಧಿಯಲ್ಲಿ 15 ವರ್ಷಕಾಲ ಅವಿಚ್ಛಿನ್ನವಾಗಿ ಸೇವೆಮಾಡಿ ಅವರ ಛಾಯಾನುವರ್ತಿಗಳಾಗಿರುವ ಅಮೀನ್-ಉಲ್-ಮುಲ್ಕ್ ಮಿ|| ಮಿರ್ಜಾ ಎಂ. ಇಸ್ಮಾಯಿಲ್‌ರವರ ಅಮಾತ್ಯಪದವಿಯಲ್ಲಿ ಸಂಪದಭಿವೃದ್ಧಿಸಮಾಜವು ಮಹಾಪ್ರಭುವರ್ಯರ ಸತ್ಪ್ರಜೆಗಳನ್ನು ಸಂಪದ್ಯುಕ್ತರನ್ನಾಗಿ ಮಾಡಿ ತನ್ನ ನಾಮಸಾರ್ಥಕಗೊಳಿಸುವುದಾಗಲೆಂದು ಅಪೇಕ್ಷಿಸುತ್ತೇವೆ.

ನವರಾತ್ರಿಯುತ್ಸವ.

ನಮ್ಮನ್ನಾಳುವ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರಒಡೆಯರ್ ಬಹದ್ದೂರ್‌ರವರು ತಮ್ಮ ವಂಶಕ್ರಮಾನುಗತವಾಗಿ ನಡೆದುಬಂದಿರುವ ನವರಾತ್ರಿಯ ಮಹೋತ್ಸವಪದ್ಧತಿಯನ್ನು ಅನುಸರಿಸಿ ಕಳೆದ ತಾ|| 7 ನೆಯ ಗುರುವಾರ ಬೆಳಿಗ್ಗೆ ಮಂಗಳಸ್ನಾನಾನಂತರ ಸಂಧ್ಯಾಕರ್ಮಗಳನ್ನು ನೆರವೇರಿಸಿ ದೇದೀಪ್ಯಮಾನಗಳಾದ ವಸ್ತ್ರಾಭರಣಗಳಿಂದ ವಿಭೂಷಿತರಾಗಿ ಯಥಾಮರ್ಯಾದೆಯಿಂದ ಸಭಾಂಗಣಕ್ಕೆ 9 ಘಂಟೆಗೆ ಚಿತ್ತೈಸಿ ಸ್ವಸ್ತಿವಾಚನ ನವಗ್ರಹಮಖ ಮೊದಲಾದವುಗಳನ್ನು ಪೂರೈಸಿಕೊಂಡು ವಂದಿ ಮಾಗಧರ ಪರಾಕುಗಳನ್ನು ಗಮನಿಸುತ್ತ ಸಿಂಹಾಸನದ ಬಳಿಗೆ ಬಂದು ಅದನ್ನು ವಿಧಿವತ್ತಾಗಿ ಪೂಜಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಸರದಾರ್ ಗೋಪಾಲಕೃಷ್ಣ ಅರಸಿನವರ ಕರಾವಲಂಬನದಿಂದ ಸಿಂಹಾಸನಾರೋಹಣವನ್ನು ಮಾಡಿದರು. ವಾದ್ಯಗಳು ಭೋರ್ಗರೆದುವು. ಸೈನಿಕರು ಜಯಘೋಷಮಾಡಿದರು. ಪ್ರೇಕ್ಷಕರು ಕರಾಸ್ಫಾಲನದಿಂದ ಕೋಲಾಹಲ ಧ್ವನಿಮಾಡಿದರು. ಕೋಟೆಯ ಕೊತ್ತಲಿನಿಂದ 21 ಗುಂಡುಗಳು ಹಾರಿಸಲ್ಪಟ್ಟವು. ದೇವಸ್ಥಾನಗಳಿಂದಲೂ, ಮಠಗಳಿಂದಲೂ ಬಂದಿದ್ದ ಫಲಮಂತ್ರಾಕ್ಷತೆಗಳು ಶ್ರೀಮನ್ಮಹಾರಾಜರವರಿಗೊಪ್ಪಿಸಲ್ಪಟ್ಟುವು. ಸಾಲಂಕೃತಗಳಾದ ಪಟ್ಟದ ಆನೆ ಕುದುರೆಗಳು ಸಕಲ ರಾಜಮರ್ಯಾದೆಯೊಡನೆ ಆನೆಬಾಗಿಲಿನಿಂದ ದೊಡ್ಡಕೆರೆಯಬಳಿಗೆ ಉತ್ಸವಪೂರ್ವಕವಾಗಿ ಹೊರಟವು. ಸಭಿಕರ ಮುಜರೆಯಾದಮೇಲೆ ದಿವಾನರು, ಖಾಸಾಭಾವಮೈದುನರು, ಕೌನ್ಸಿಲರುಗಳು ವೈಸ್‌ಚಾನ್ಸಲರು, ಸರದಾರರುಗಳು ಇವರುಗಳಿಂದ ನಜರೊಪ್ಪಿಸಲ್ಪಟ್ಟಿತು. ವೈದಿಕರುಗಳು ಫಲಮಂತ್ರಾಕ್ಷತೆಗಳನ್ನೊಪ್ಪಿಸಿದರು. ತರುವಾಯ ಸಿಪಾಯಿಗಳು ಮೂರುವೇಳೆ ಸುರೂಟನ್ನು ಹಾರಿಸಿದರು. ಚತುರಂಗ ಸೇನೆಯ ಮುಜರೆಯಾಯಿತು. ಓಲಗವೂ, ಇಂಗ್ಲಿಷ್ ಮತ್ತು ಕರ್ಣಾಟಬ್ಯಾಂಡುಗಳೂ, ಕಾನ್ಸರ್ಟೂ ಕ್ರಮವರಿತು ಮನೋಹರವಾಗಿ ವಾದ್ಯಮಾಡುತ್ತಿದ್ದುವು. ಪಟ್ಟದಾನೆ ಕುದುರೆಗಳು ಕೆರೆಯಬಳಿ ಪೂಜೆಗೊಂಡು ಯಥಾಮರ್ಯಾದೆಯಿಂದ ಅರಮನೆಯನ್ನು ಸೇರಿದುವು. ಬಳಿಕ ರಾಜಕುಮಾರ ದೇಶರಾಜಅರಸಿನವರು, ದಿವಾನರು ಮೊದಲಾಗಿ ಸಭಿಕರಿಗೆ ಪುಷ್ಪಹಾರ ತಾಂಬೂಲಗಳು ಕೊಡಲ್ಪಟ್ಟು ಸಭಾಂಗಣವು ರಾಣೀವಾಸದವರ ಪ್ರವೇಶಕ್ಕೆ ಸಿದ್ಧಗೊಳಿಸಲ್ಪಟ್ಟಮೇಲೆ ಅವರುಗಳ ನಜರುಗಳು ನಡೆದುವು. ಅಷ್ಟುಹೊತ್ತಿಗೆ 10½ ಘಂಟೆಯಾಗಿದ್ದಿತು. ಅರಮನೆಯ ಮುಂದಣ ವಿಶಾಲವಾದ ಬೈಲಿನಲ್ಲೂ ಉಭಯಪಾರ್ಶ್ವಗಳಲ್ಲಿ ಸ್ತ್ರೀಯರಿಗಾಗಿ ಏರ್ಪಡಿಸಲ್ಪಟ್ಟಿರುವ ಪಾವಟಿಗೆಗಳಮೇಲೂ ಜನರು ಕಿಕ್ಕಿರಿದು ನಿಂತಿದ್ದು ಉತ್ಸವಸಮಾರಂಭವನ್ನು ನೋಡಿ ಸಂತುಷ್ಟರಾಗಿ ಶ್ರೀಮನ್ಮಹಾರಾಜರವರು ಇಂತಹ ಉತ್ಸವಗಳನ್ನು ಅನಂತವಾಗಿ ನಡೆಯಿಸಿ ಪ್ರಜಾಪರಿಪಾಲನೆಯನ್ನು ಮಾಡಿಕೊಂಡಿರಲೆಂದು ಕೋರುತ್ತ ಜಯಜಯಕಾರಗಳನ್ನು ಮಾಡುತ್ತಿದ್ದರು. ಆದಿವಸ ಸಾಯಂಕಾಲ 7 ಘಂಟೆಗೆ ಅದ್ಭುತವಾಗಿ ಅಗಣಿತ ವಿದ್ಯುದ್ದೀಪಾವಳಿಗಳಿಂದ ಕಣ್ಣಿಗೆ ಹಬ್ಬವಾಗಿ ವಿರಾಜಿಸುತ್ತಿದ್ದ ಅರಮನೆಯ ಮುಂಗಡೆ ಪದಾತಿಸೇನೆಯೂ ಪ್ರೇಕ್ಷಕ ಸಮೂಹವೂ ತುಂಬಿರಲಾಗಿ ನೂತನ ಸಭಾಂಗಣದ ಅಪರಿಮಿತ ವಿದ್ಯುಲ್ಲತಾತೇಜಸ್ಸಿನಿಂದ ಅತಿಶಯವಾಗಿ ರಾರಾಜಿಸುತ್ತಿದ್ದ ಸಿಂಹಾಸನವನ್ನು ಶ್ರೀಮನ್ಮಹಾರಾಜರವರು ಅಲಂಕರಿಸಲಾಗಿ ವಾದ್ಯಗಳು ಭೋರ್ಗರೆದು ನಿಂತಕೂಡಲೆ ಕುಸ್ತಿಗಳೂ, ಕತ್ತಿಯ ಪಟಾವರ್ಸೆಗಳೂ, ಪಂಜನ್ನು ವಿಧವಿಧವಾಗಿ ತಿರುಗಿಸುವುದೂ ಆಗುತ್ತಿರುವಾಗ್ಗೆ ಉಳಿದ ಸಭಿಕರ ನಜರೊಪ್ಪಿಸಲ್ಪಟ್ಟಿತು. ಕೆರೆಗೆಹೋಗಿದ್ದ ಪಟ್ಟದಾನೆ ಕುದುರೆಗಳು ಅರಮನೆಗೆ ಬಂದಮೇಲೆ ಸಭಿಕರ ಮುಜರೆಯಾಗಿ ಹಾರತಾಂಬೂಲಗಳ ವಿನಿಯೋಗದಿಂದ 8¾ ಘಂಟೆಯ ಹೊತ್ತಿಗೆ ದರ್ಬಾರು ಮುಗಿದಿತು. ಈ ಪ್ರಕಾರವಾಗಿ ಬರುವ ಶುಕ್ರವಾರದವರೆಗೂ ಪ್ರತಿ ಸಾಯಂಕಾಲ ನಡೆದು ತಾ|| 15 ನೆಯ ಶುಕ್ರವಾರ ಸಾಯಂಕಾಲ ರೆಸಿಡೆಂಟರು ಮೊದಲಾಗಿ ಆಂಗ್ಲೇಯರ ದರ್ಬಾರು ಆಗುವುದು. ತಾ|| 16 ನೆಯ ಶನಿವಾರ ಬೆಳಿಗ್ಗೆ 9 ಘಂಟೆಗೆ ಪಟ್ಟದಾನೆ ಕುದುರೆಗಳೂ, ಪಟ್ಟದಕತ್ತಿಯೂ ಚತುರಂಗಸೇನಾಮರ್ಯಾದೆಯಿಂದ ಬನ್ನಿಯಮಂಟಪಕ್ಕೆ ಹೊರಡುವುವು, ಮತ್ತು ಸಾಯಂಕಾಲ 4 ಘಂಟೆಗೆ ಶ್ರೀಮನ್ಮಹಾರಾಜರವರು ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಸಮಸ್ತ ಬಿರುದಾವಳಿಗಳಿಂದಲೂ ಚತುರಂಗ ಸೇನಾಸಮೂಹದಿಂದಲೂ ಜಂಬೂಸ್ವಾರಿ ಚಿತ್ತೈಸುವರು. ಅರಮನೆಯ ಸಭಾಂಗಣದ ಕಮಾನುಗಳು ತಗ್ಗಾಗಿರುವುದರಿಂದಲೂ ಕಂಭಗಳು ವಿಶೇಷವಾಗಿದ್ದು ದಪ್ಪವಾಗಿರುವುದರಿಂದಲೂ ಸಿಂಹಾಸನಾಸೀನರಾದ ಮಹಾಸ್ವಾಮಿಯವರ ದರ್ಶನವು ಜನರಿಗೆ ಚೆನ್ನಾಗಿ ಆಗುತ್ತಿರಲಿಲ್ಲವಾದ್ದರಿಂದಲೂ, ಸಭಿಕರು ಬಹಳ ಹಿಂದಕ್ಕೆ ಕುಳಿತುಕೊಳ್ಳಬೇಕಾಗಿದ್ದುದರಿಂದಲೂ ಸಿಂಹಾಸನದ ಮುಂಭಾಗದಲ್ಲಿದ್ದ ಪೋರ್ಟಿಕೋ ಎಂಬ ಕಮಾನಿನ ಭಾಗವನ್ನು ಹೊಡೆದುಹಾಕಿ ಬಹಳ ಎತ್ತರವಾದ ಮೂರು ಕಮಾನುಗಳನ್ನು ಹಾಕಿ ಸಿಂಹಾಸನದ ಉಭಯಪಾರ್ಶ್ವಗಳಲ್ಲೂ ದರ್ಬಾರಿಗಳು ಕುಳಿತುಕೊಳ್ಳಲು ವಿಶಾಲವಾದ ಪಾವಟಿಗೆಗಳನ್ನು ಕಟ್ಟಿರುವುದರಿಂದ ಎಷ್ಟುದೂರದಲ್ಲಿ ನಿಂತು ನೋಡಿದರೂ ಮಹಾಸ್ವಾಮಿಯವರ ದರ್ಶನವು ಬಹಳ ಚೆನ್ನಾಗಿ ಆಗುತ್ತದೆ ಮತ್ತು ಹಿಂದುಗಡೆ ಕುಳಿತುಕೊಳ್ಳುತ್ತಿದ್ದುದರಿಂದ ಹೊರಗಡೆ ಏನೂ ಕಾಣದೆ ದರ್ಬಾರಿಗಳಿಗೆ ಬಹಳ ಬೇಸರಿಕೆಯಾಗುತ್ತಿದ್ದುದು ತಪ್ಪಿ ಹೊರಗಡೆ ಬೈಲಿನಲ್ಲಿ ಆಗುವ ವಿಶೇಷವು ತಕ್ಕಮಟ್ಟಿಗೆ ಕಾಣುವಂತಾಗಿರುತ್ತದೆ. ಅರಮನೆಯಿದಿರಿಗಿದ್ದ ಜಿಲೋಕಚೇರಿಯ ಕಟ್ಟಡವೂ, ವಿದ್ಯುದ್ದೀಪದ ಯಂತ್ರಾಲಯವೂ ಹೊಡೆದುಹಾಕಲ್ಪಟ್ಟು ಒಟ್ಟಬೈಲು ಮಾಡಲ್ಪಟ್ಟಿರುವುದರಿಂದ ಸಾವಿರಾರುಜನರು ನಿರಾತಂಕವಾಗಿ ನಿಂತುಕೊಂಡು ಮತ್ತು ಅರಮನೆಯ ಉಭಯಪಾರ್ಶ್ವದಲ್ಲೂ ಅತ್ಯಂತ ವಿಶಾಲವಾದ ಜಗತಿಗಳು ಕಟ್ಟಲ್ಪಟ್ಟಿರುವುದರಿಂದ ಸ್ತ್ರೀಯರು ಕುಳಿತುಕೊಂಡು ಮನಸ್ಸು ದಣಿಯುವವರೆಗೂ ಶ್ರೀಮನ್ಮಹಾರಾಜರವರ ದರ್ಶನವನ್ನು ಮಾಡುವುದಕ್ಕೂ ಬೈಲಿನಲ್ಲಾಗುವ ಆಟಪಾಟಗಳನ್ನು ನಿರಾಯಾಸದಿಂದ ನೋಡುವುದಕ್ಕೂ ಬಹಳ ಅನುಕೂಲವಾಗಿರುತ್ತದೆ. ತ್ರಿನಯನೇಶ್ವರನ ದೇವಾಲಯದಂತೆ ಅದರ ದಕ್ಷಿಣಭಾಗಕ್ಕೆ ಕೊಂಚದೂರದಲ್ಲಿ ಒಂದು ಕೃತಕದೇವಾಲಯವು ತಾತ್ಕಾಲಿಕವಾಗಿ ಬಟ್ಟೆಯಿಂದ ನಿರ್ಮಿಸಲ್ಪಟ್ಟಿದೆ. ಇವೆರಡರ ಮಧ್ಯೆ ಮೂರು ಕಮಾನುಗಳ ಚಪ್ಪರವು ಹಾಕಲ್ಪಟ್ಟು ಕೈ|| ಚಾಮರಾಜಒಡೆಯರವರ ಭಾವಚಿತ್ರವು ಮಧ್ಯದಲ್ಲೂ ಶ್ರೀಮನ್ಮಹಾರಾಜ ಸಹೋದರರ ಭಾವಚಿತ್ರಗಳು ಉಭಯಪಾರ್ಶ್ವದಲ್ಲೂ ಅಲಂಕರಿಸಲ್ಪಟ್ಟಿವೆ. ಅರಮನೆಯ ಸಭಾಂಗಣವೂ, ಹೊರಭಾಗವೂ, ದೇವಸ್ಥಾನಗಳೂ, ಚಿತ್ರಪಟಗಳಿರತಕ್ಕ ಕಮಾನುಗಳೂ, ಕೋಟೆಯ ಉತ್ತರದಕ್ಷಿಣದ್ವಾರಗಳೂ, ಸಹಸ್ರಾರು ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟಿರುವುವಲ್ಲದೆ ಬೈಲಿನಲ್ಲೆಲ್ಲ ದೀಪಸ್ತಂಭಗಳು ನೆಡಲ್ಪಟ್ಟಿವೆ. ಅಲ್ಲಲ್ಲಿಗೆ ಗಿಡಗಳ ಕುಂಡಗಳು ಇಡಲ್ಪಟ್ಟು ಮತ್ತು ಲತಾಗೃಹಗಳೇರ್ಪಡಿಸಲ್ಪಟ್ಟು ನಾನಾಬಣ್ಣದ ವಿದ್ಯುದ್ದೀಪಗಳಿಂದಲಂಕರಿಸಲ್ಪಟ್ಟಿವೆ. ಸಾಲದುದಕ್ಕೆ ದಳವಾಯರ ಮನೆಗೂ ದೀಪಗಳು ಹಾಕಲ್ಪಟ್ಟಿವೆ. ಇವುಗಳೆಲ್ಲವೂ ಹೊತ್ತಿಸಲ್ಪಟ್ಟಾಗ ನಕ್ಷತ್ರಮಂಡಲವೇ ಭೂಮಂಡಲಕ್ಕೆ ಇಳಿದು ಬಂದಂತೆಯೂ, ಜ್ಯೋತಿರ್ಮಂದಿರದಂತೆಯೂ ಭಾಸವಾಗಿ ದಿಗ್ಭ್ರಮೆಯನ್ನುಂಟುಮಾಡುತ್ತದೆ. ಈ ಭರತಖಂಡದ ಮತ್ತಾವಭಾಗದಲ್ಲೂ ಇಲ್ಲದಿರುವ ವಿದ್ಯುದ್ದೀಪೋತ್ಸವದ ವೈಭವವನ್ನು ನೋಡದಿರುವ ಕಣ್ಣು ವ್ಯರ್ಥವೆಂದು ಹೇಳಬೇಕಾಗಿದೆ, ಮತ್ತು ಇದು ಸಮಸ್ತಜನರನ್ನು ಆಕರ್ಷಿಸಿ ಅವರ ಕಣ್ಮನಗಳನ್ನು ಸೂರೆಗೊಳ್ಳತಕ್ಕುದಾಗಿದೆ. ಈ ವಿಭವಂಗಳಿಗೆಲ್ಲ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳನ್ನು ಸಂತೋಷಗೊಳಿಸಬೇಕೆಂಬ ಸತ್ಸಂಕಲ್ಪವೇ ಮುಖ್ಯಕಾರಣವು. ಇಂತಹ ಮಹಾನುಭಾವರನ್ನು ಪ್ರಭುಗಳನ್ನಾಗಿ ಪಡೆದಿರುವ ಮೈಸೂರುದೇಶದ ಪ್ರಜೆಗಳ ಪುಣ್ಯಕ್ಕೆಣೆಯೇ ಇಲ್ಲ. ಕುಲದೇವತೆಯಾದ ಶ್ರೀ ಚಾಮುಂಡಾಂಬಿಕೆಯು ಶ್ರೀಮನ್ಮಹಾರಾಜರವರಿಗೂ ಅವರ ಬಲಭುಜದಂತಿರುವ ಶ್ರೀಮದ್ಯುವರಾಜರಿಗೂ ಈ ಉಭಯರ ಕುಲದೀಪಕರಾದ ಶ್ರೀ ಜಯಚಾಮರಾಜಒಡೆಯರವರಿಗೂ ಉಳಿದ ರಾಜಕುಟುಂಬದವರಿಗೂ ದೀರ್ಘಾಯುರಾರೋಗ್ಯಗಳನ್ನಿತ್ತು ಅವರುಗಳ ಮೂಲಕ ಈ ದೇಶದ ಸುಖಸಂಪದ್ವೈಭವಗಳು ಅಭಿವೃದ್ಧಿಗೊಳ್ಳುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುವೆವು.

ಸ್ವದೇಶದ ವೃತ್ತಾಂತಗಳು.

ಸೀಮೆಗೆ ಪ್ರಯಾಣಮಾಡಿರುವ ಶ್ರೀಮದ್ಯುವರಾಜ ಕಂಠೀರವನರಸಿಂಹರಾಜಒಡೆಯರವರ ಸ್ವಾರಿಯು ಬರುವ ನವಂಬರ್ ತಿಂಗಳ ಅಂತ್ಯಭಾಗದಲ್ಲಿ ಸ್ವದೇಶಕ್ಕೆ ಚಿತ್ತೈಸುವುದಾಗಿರುವುದು.

ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವವು ಬರುವ ನವಂಬರ್ ತಾ|| 27 ನೆಯ ಶನಿವಾರ ಬೆಳಗಿನ 9½ ಗಂಟೆಗೆ ಜಗನ್ಮೋಹನಪ್ರಾಸಾದದ ಸಭಾಂಗಣದಲ್ಲಿ ನಡೆಯುವುದಾಗಿ ಗೊತ್ತಾಗಿರುತ್ತದೆ.

ಈ ಅಕ್ಟೋಬರ್ ತಾ|| 6 ರಿಂದ ಬರುವ ನವೆಂಬರ್ ತಾ|| 23 ರ ವರೆಗೆ ತಲಕಾವೇರಿಯಲ್ಲಿ ನಡೆಯುವ ಜಾತ್ರೆಗೆ ಪ್ಲೇಗು ಸೋಂಕಿರುವ ಸ್ಥಳಗಳಿಂದ ಜನರಾರೂ ಹೋಗಕೂಡದೆಂದು ಚೀಫ್‌ಕಮಿಷನರು ಪ್ರಕಟಿಸಿರುತ್ತಾರೆ.

ಹೊನ್ನೂರು ದೊಂಬಿಯ ಕಲಹದ ವಿವಾದದಲ್ಲಿ ಶಿಕ್ಷಿತರಾಗಿರುವವರನ್ನು ಹೊಣೆಯಮೇಲೆ ಬಿಡುವ ವಿಚಾರವು ಸೆಷನ್ಸು ಜಡ್ಜರ ಪರ್ಯಾಲೋಚನೆಗಾಗಿಡಲ್ಪಟ್ಟಿದ್ದುದು ನೆನ್ನೆಯದಿವಸ ನಡೆಯಲಿಲ್ಲವಾಗಿ ಈ ತಾ|| 11 ಕ್ಕಿಡಲ್ಪಟ್ಟಿದೆ.

ಬಾಳೆಹೊನ್ನೂರು ಸಿಂಹಾಸನಾಧೀಶ್ವರರಾದ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಮೈಸೂರುಸಂಸ್ಥಾನದ ಸಿವಿಲ್ ಕೋರ್ಟುಗಳಿಗೆ ಪ್ರತ್ಯಕ್ಷವಾಗಿ ಹೋಗಬೇಕಾದುದಿಲ್ಲವೆಂದು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಈ ತಾ|| 18 ರಲ್ಲಿ ಆರಂಭಗೊಂಡು ನಡೆಯುವ ಮೈಸೂರು ಪ್ರಜಾಪ್ರತಿನಿಧಿಸಭೆಗೆ ಹೋಗಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ನೋಡಲಿಷ್ಟಪಡುವಂತಹವರು ಸ್ಪೆಷಲ್‌ಡ್ಯೂಟಿ ಆಫೀಸರಿಗೆ ಬರೆದು ಟಿಕೆಟ್ಟನ್ನು ಪಡೆಯಬಹುದಾಗಿ ಪ್ರಕಟವಾಗಿದೆ.

ರಾಜಧಾನಿಯ ಸಂಸ್ಕೃತಮಹಾಪಾಠಶಾಲೆಯು ಆರಂಭವಾಗಿ ಅರ್ಧಶತಮಾನವಾದುದರ ಸಂತೋಷಸೂಚಕವಾಗಿ ಅದರ ವರ್ಧಂತ್ಯುತ್ಸವವು ಈ ತಾ|| 20ರಲ್ಲಿ ಶ್ರೀಮನ್ಮಹಾರಾಜರವರಿಂದ ನಡೆಸಲ್ಪಡುವುದು. ಇದಕ್ಕಾಗಿ ವಿಶೇಷಸನ್ನಾಹವು ಸಡಗರದಿಂದ ನಡೆಯುತ್ತಿದೆ.

ಮೈಸೂರು ಕೃಷ್ಣರಾಜಮಿಲ್ಸ್ ಲಿಮಿಟೆಡ್ ಕಂಪೆನಿಯ ಷೇರುದಾರರ ಎಕ್ಸ್‌ಟ್ರಾ ಆರ್ಡಿನರಿ ಜನರಲ್‌ಮೀಟಿಂಗು ಈ ತಾ|| 20ನೆಯ ಬುಧವಾರ ಬೆಳಗಿನ 8½ ಘಂಟೆಗೆ ರಾಜಧಾನಿಯ ಧರ್ಮಪ್ರಕಾಶ ಡಿ. ಬನುಮಯ್ಯನವರ ಸ್ಕೂಲು ಕಟ್ಟಡದಲ್ಲಿ ನಡೆಯಲು ಗೊತ್ತಾಗಿದೆ.

ದಾವಣಗೆರೆ ಸಬ್‌ಡಿವಿಜನ್ ಆಫೀಸರಾಗಿದ್ದ ಮಿ|| ಸಿ. ಸೊರನ್ನಾರವರು ಚೀಫ್‌ಕಮಾಂಡೆಂಟರ ಆಫೀಸಿಗೆ ವರ್ಗಾಯಿಸಲ್ಪಟ್ಟುದರಿಂದ ಹಾಸನದಲ್ಲಿ ಸ್ಪೆಷಲ್‌ಮ್ಯಾಜಿಸ್ಟ್ರೇಟರಾಗಿದ್ದ ಮಿ|| ಸಯದ್ ಅಬ್ದುಲ್‌ಕಾಲಕ್‌ರವರು ದಾವಣಗೆರೆ ಸಬ್‌ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಚುನಾವಣೆಯು ಬರುವ ನವಂಬರ್ ತಾ|| 30 ನೆಯ ಮಂಗಳವಾರ ಬೆಳಗಿನ 11 ಘಂಟೆಯಿಂದ ಸಾಯಂಕಾಲ 5 ಘಂಟೆಯವರೆಗೆ ಗೊತ್ತಾದ ಸ್ಥಳಗಳಲ್ಲಿ ನಡೆಯುವುದು. ಈ ಚುನಾವಣೆಗೆ ಉಮೇದುವಾರರಾಗಿ ನಿಲ್ಲತಕ್ಕವರು ಈ ಅಕ್ಟೋಬರ್ ತಾ|| 22 ರೊಳಗೆ ಡಿ|| ಕಮಿಷನರಿಗೆ ಬರೆದುಕೊಳ್ಳಬೇಕು.

ನಂಜನಗೂಡು ತಾ|| ಅಳಗಂಚಿಗ್ರಾಮದಲ್ಲಿ ಕುರುಬರ ಮುದ್ದೇಗೌಡನ ಮನೆಗೆ ಕಳೆದ ತಾ|| 2 ರ ರಾತ್ರಿ ಯಾರೋ ಕಳ್ಳರು ನುಗ್ಗಿ 300 ರೂ. ಗಳನ್ನೂ 200 ರೂ. ನಗಗಳನ್ನೂ ಅಪಹರಿಸಿಕೊಂಡು ಹೋಗಿದ್ದರು. ಪೊಲೀಸ್ ಸೂಪರಿಂಟೆಂಡೆಂಟರು ಈ ದಿವಸ ಅಲ್ಲಿಗೆ ಹೋಗಿದ್ದು ವಿದ್ಯಮಾನವನ್ನು ವಿಚಾರಿಸಿಕೊಂಡು ಬಂದರು. ಕೆಲವರು ಸಂಶಯದಮೇಲೆ ಸೆರೆಹಿಡಿಯಲ್ಪಟ್ಟಿರುತ್ತಾರೆ.

ದಾವಣಗೆರೆ, ಚಿತ್ರದುರ್ಗ, ಮೊದಲಾದ ಸ್ಥಳಗಳಲ್ಲಿ ಪ್ಲೇಗುರೋಗವು ಉಲ್ಬಣಸ್ಥಿತಿಯಲ್ಲಿರುವುದರಿಂದ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ವಿಜಯದಶಮಿಸಮಾರಂಭೋತ್ಸವವು ಸಂಕ್ಷೇಪವಾಗಿ ಚಿತ್ರದುರ್ಗದ ಬೃಹನ್ಮಠದಲ್ಲಿಯೇ ನಡೆಸಲ್ಪಡಲೇರ್ಪಟ್ಟಿದೆಯೆಂದೂ ಪರಸ್ಥಳಗಳಿಗೆ ನಿರೂಪಗಳು ಕಳುಹಲ್ಪಡುವುದಿಲ್ಲವೆಂದೂ ಸಂಸ್ಥಾನದ ಏಜಂಟರು ತಿಳಿಸಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು ಬರುವ ನವಂಬರ್ ತಿಂಗಳಲ್ಲಿ 3 ತಿಂಗಳ ಪ್ರಿವಿಲೆಜ್ ರಜದಮೇಲೆ ಹೋಗುವರೆಂದೂ ಇವರು ಈ ಉದ್ಯೋಗಕ್ಕೆ ಹಿಂದಿರುಗಿ ಬರುವಸಂಭವವಿಲ್ಲವೆಂದೂ ಕೇಳುತ್ತೇವೆ. ಇದು ನಿಜವಾಗಿದ್ದಲ್ಲಿ ಕಾರ್ಯದಕ್ಷರೂ, ಸರಸಿಗಳೂ, ನಿಗರ್ವಿಗಳೂ, ನಿಷ್ಪಕ್ಷಪಾತಿಗಳೂ ಆದ ಮ|| ಮಾಧವರಾಯರ ಸಹಾಯವನ್ನು ಕಳೆದುಕೊಳ್ಳುವುದು ರಾಜಧಾನಿಯ ದುರದೃಷ್ಟವೆಂದೇ ಹೇಳಬೇಕಾಗುವುದು.

ಕೈ|| ಚೆನ್ನಬಸಪ್ಪನವರ ಸ್ಮಾರಕೋತ್ಸವ.

ಈ ಅತ್ಯವಶ್ಯಕರ್ತವ್ಯಕ್ಕಾಗಿ ಶೇಖರಿಸಲ್ಪಡುತ್ತಿರುವ ದ್ರವ್ಯನಿಧಿಗೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳಿಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ ಮತ್ತು ಮತಾಭಿಮಾನಿಗಳಾದ ಇತರ ದೊಡ್ಡಮನುಷ್ಯರುಗಳು ಕೂಡಲೆ ಸಹಾಯಮಾಡಬೇಕಾಗಿ ಕೋರಿದೆ.

ಮ|| ಗಳಾದ (1) ಯಡತೊರೆ ತಾ|| ಬೆಳ್ಳಳ್ಳಿಗ್ರಾಮದಲ್ಲಿರುವ ಆರ್. ಎ. ಮೆಂಬರು ಚನ್ನಪ್ಪನವರಿಂದ 10 ರೂ. (2) ಚಾಮರಾಜನಗರದ ವೈಸ್‌ಪ್ರೆಸಿಡೆಂಟ್ ಸಂಗನಬಸಪ್ಪನವರಿಂದ 10 ರೂ. (3) ಅಂತರಸಂತೆ ಪೋಸ್ಟ್‌ಮಾಸ್ಟರು ಎ. ಪಿ. ಶ್ರೀಕಂಠಪ್ಪನವರ ಮೂಲಕ ವೆ. ವೇಂ. ಘಟ್ಟಸಂಜಪ್ಪನವರಿಂದ 2 ರೂ. ಒಟ್ಟು 22 ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು ಸಿಟಿ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿರುವ ಮಿ|| ಎಂ. ಖಾಜಿಂ, ಎಲ್. ಆರ್. ಸಿ. ಪಿ., ಎಂ. ಆರ್. ಸಿ. ಎಸ್, ರವರು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ, ಇಲ್ಲಿಯ ರೆ|| ಮೆಡಿಕಲ್ ಆಫೀಸರಾದ ಮ|| ಎಸ್. ನಾರಾಯಣಪ್ರಸಾದ್ ಎಲ್. ಎಂ. ಅಂಡ್ ಎಸ್. ರವರು ವಿಕ್ಟೋರಿಯಾ ಆಸ್ಪತ್ರೆಯ ರೆ|| ಮೆ|| ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮ|| ಹಟ್ಟಿರಂಗಯ್ಯಂಗಾರರ ಕುಮಾರರಾದ ಮ|| ಎಂ. ಎಚ್. ಕೃಷ್ಣಯ್ಯಂಗಾರ್ ಎಂ.ಎ., ರವರು ಸೀಮೆಗೆ ಹೋಗಿ ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಡಾಕ್ಟರ್ ಪ್ರಶಸ್ತಿಯನ್ನು ಪಡೆದುಕೊಂಡು ಬಂದಿರುವವರಷ್ಟೆ. ಇವರು ಈಗ ಮೈಸೂರು ಮಹಾರಾಜಾಕಾಲೇಜಿನಲ್ಲಿ ಪ್ರೊಫೆಸರಾಗಿ ನಿಯಮಿಸಲ್ಪಟ್ಟಿರುವರು. ಇವರ ಸಹೋದರರಿಬ್ಬರು ಪಾಶ್ಚಾತ್ಯದೇಶದಲ್ಲಿ ಪ್ರೌಢವಿದ್ಯಾವ್ಯಾಸಂಗವನ್ನು ಸ್ವಾವಲಂಬನದಿಂದ ಮಾಡುತ್ತಿರುವುದು ಪ್ರಶಂಸನೀಯವಾಗಿದೆ.

ರಾಜಧಾನಿಯ ಹೆಲ್ತಾಫೀಸರಾಗಿದ್ದ ಮ|| ಎಂ. ಜಿ. ಶ್ರೀನಿವಾಸರಾವ್ ಸೇಟ್ಪೆಟ್‌ರವರು ಕೋಲಾರದ ಚಿನ್ನದಗಣಿಗೆ ವರ್ಗವಾಗಿ ಹೋದುದರಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದ ಅಸಿಸ್ಟೆಂಟ್ ಸರ್ಜನ್ ಮ|| ಪಿ. ಶ್ಯಾಮರಾಯರು ಆಕ್ಟಿಂಗ್ ಹೆಲ್ತಾಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರಿಗೆ ಸ್ಥಳಪರಿಚಯವೂ ಆರೋಗ್ಯವಿಧಾನಾನುಭವವೂ ಇರುವಂತೆ ತೋರಲಿಲ್ಲ. ಇಂತಹವರನ್ನು ಪ್ಲೇಗುರೋಗವು ಪ್ರಾರಂಭವಾಗಿ ನಿವಾಸಿಗಳಿಗೆ ಭಯವನ್ನುಂಟುಮಾಡಿರುವ ಈ ಸಮಯದಲ್ಲಿ ನಿಯಮಿಸಿರುವುದೇನೂ ಅಷ್ಟು ಉಚಿತವಾಗಿ ತೋರುವುದಿಲ್ಲವಾದುದರಿಂದ ಪ್ರಭುತ್ವದವರು ಸಮರ್ಥರಾದ ಹೆಲ್ತಾಫೀಸರನ್ನು ನಿಯಮಿಸಿ ಬಹುಕಾಲದಿಂದ ಅಡಗಿದ್ದ ರೋಗವು ಪ್ರಬಲಿಸದಂತೆ ಮಾಡುವವರಾಗಬೇಕೆಂದು ಸೂಚಿಸುತ್ತೇವೆ.

(1) ಪ್ರಜಾಪ್ರತಿನಿಧಿಸಭೆಗೂ ನ್ಯಾಯವಿಧಾಯಕಸಭೆಗೂ ಮೆಂಬರುಗಳನ್ನು ಚುನಾಯಿಸುವ ಬಗೆಗೆ ಓಟರುಗಳ ಲಿಸ್ಟು 1926 ನೇ ನವಂಬರ್ ತಾ|| 25 ರ ಗೇಜೆಟ್ಟಿನಲ್ಲಿ ಪ್ರಕಟವಾಗತಕ್ಕುದು. (2) ತತ್ಸಂಬಂಧವಾದ ಆಕ್ಷೇಪಗಳ ಅರ್ಜಿಗಳು 1926 ನೇ ಡಿಸೆಂಬರ್ ತಾ|| 15 ರೊಳಗಾಗಿ ಹಾಕಿಕೊಳ್ಳತಕ್ಕುದು (3) ಇದರ ಮೇಲಿನ ಅಪೀಲನ್ನು 1927 ನೇ ಜನವರಿ ತಾ|| 6 ರೊಳಗೆ ಮಾಡತಕ್ಕುದು (4) ಹೆಚ್ಚುಕಡಿಮೆ ಮಾಡಲ್ಪಟ್ಟಿರುವ ಲಿಸ್ಟು 1927 ನೇ ಫೆಬ್ರವರಿ ತಾ|| 3 ರೊಳಗೆ ಪ್ರಕಟವಾಗತಕ್ಕದ್ದು (5) ಚುನಾವಣೆಗೆ ನಿಲ್ಲತಕ್ಕ ಉಮೇದವಾರರು ತಮ್ಮ ಇಷ್ಟವನ್ನು 1927 ನೇ ಫೆಬ್ರವರಿ ತಾ|| 12 ರೊಳಗೆ ತಿಳಿಸತಕ್ಕುದ್ದು (6) ಉಮೇದುವಾರರ ಹೆಸರುಗಳು 1927 ನೇ ಫೆಬ್ರವರಿ 17 ರಲ್ಲಿ ಪ್ರಕಟಿಸಲ್ಪಡುವುದು (7) ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕಸಭೆಯ ಮೆಂಬರುಗಳ ಚುನಾವಣೆಯು 1927 ನೇ ಮಾರ್ಚಿ ತಾ|| 5 ನೇ ಶನಿವಾರದಿವಸ ನಡೆಯತಕ್ಕುದು, ಎಂದು ಈ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಹೊನ್ನಾಳಿ, ಚೆನ್ನಗಿರಿ, ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಅನೇಕ ಹೆಂಗುಸರು ಕೆಂಪುಬಳೆಗಳನ್ನು ಕೈಗಳಿಗೆ ತೊಟ್ಟುಕೊಂಡಿದ್ದವರು ಈಗ ಕೆಲವು ದಿನಗಳಿಂದ ಆ ಬಳೆಗಳಲ್ಲಿ ಒಂದುವಿಧವಾದ ಹುಳುಗಳು ಕಾಣಿಸಿಕೊಂಡು ಕೈಗಳು ಬಾತುಕೊಂಡುದರಮೇಲೂ, ಕೆಲರು ಇದರಿಂದ ಸತ್ತುಹೋದುದರಮೇಲೂ ಈ ಪ್ರಾಂತಗಳ ಸ್ತ್ರೀಯರು ಕೆಂಪುಬಳೆಗಳನ್ನೊಡೆದು ಹಾಕಿ ನಾಡಿನ ಕಪ್ಪುಬಳೆಗಳನ್ನು ತೊಡಲುಪಕ್ರಮಿಸಿರುವರೆಂದು ಶಿವಮೊಗ್ಗ ಡಿ|| ಚಿಲೂರು ಎಂ. ಸಿ. ಎಂ. ಸ್ಕೂಲ್ಮಾಸ್ಟರುಗಳಾದ ಎಂ. ಚೆನ್ನಬಸವಯ್ಯನವರೂ, ಬಿ. ಹಾಲಯ್ಯನವರು ಬರೆದಿರುತ್ತಾರೆ. ಅಲ್ಲದೆ ಹೊಳೇನರಸೀಪುರ ಪ್ರಾಂತದಲ್ಲೂ ಸ್ತ್ರೀಯರು ಬೊಂಬಾಯಿಬಳೆಯಲ್ಲಿ ಹುಳುವಿದೆಯೆಂಬ ಭೀತಿಯಿಂದ ಅವುಗಳನ್ನೊಡೆದುಹಾಕಿ ನಾಡಿನಬಳೆಗಳನ್ನುಪಯೋಗಿಸುತ್ತಿರುವುದಾಗಿ ಕೇಳುತ್ತೇವೆ. ಪ್ಲೇಗುರೋಗವಾರಂಭವಾದ ತರುಣದಲ್ಲೂ ಇದೇ ಭೀತಿಯು ಜನರಲ್ಲಿ ಹುಟ್ಟಿ ಬೊಂಬಾಯಿಬಳೆಗಳನ್ನು ತೊಡುವುದನ್ನೇ ಕೆಲಕಾಲ ಬಿಟ್ಟಿದ್ದರು. ಯಾವನೋ ಚಮತ್ಕಾರಿಯಾದ ದೇಶೀಯ ಬಳೆಗಾರಶೆಟ್ಟಿಯು ಸ್ವಪ್ರಯೋಜನ ದೃಷ್ಟಿಯಿಂದ ಈ ಸುದ್ದಿಯನ್ನು ಹುಟ್ಟಿಸಿರಬಹುದು. ಆದರೆ ಜನರು ಗಾಜಿನಲ್ಲಿ ಹುಳುಗಳಿರುವುದು ಅಸಂಭವವೆಂಬುದನ್ನು ಪರ್ಯಾಲೋಚಿಸದೆ ಎತ್ತೀಯಿತೆಂದರೆ ಕೊಟ್ಟಿಗೆಯಲ್ಲಿ ಕಟ್ಟೆಂಬ ಲೋಕೋಕ್ತಿಯಂತೆ ಆ ಸ್ವಾರ್ಥಪರನಾದ ಚಮತ್ಕಾರಿ ಬಳೆಗಾರಶೆಟ್ಟಿಯ ಮಾತನ್ನು ನಂಬಿ ಮೋಸಹೋಗುತ್ತಿರುವುದಕ್ಕಾಗಿ ವಿಷಾದಿಸಬೇಕಾಗಿದೆ.

ವರ್ತಮಾನಸಂಗ್ರಹ.

ಚೈನಾದಲ್ಲಿ ಮೀನುಹಿಡಿಯುವ ಹಡಗುಗಳು 130 ಕ್ಕೆ ಮೇಲ್ಪಟ್ಟು ತುಫಾನಿಗೆಸಿಕ್ಕಿ ಮುಳುಗಿಹೋದುದರಿಂದ ಅವುಗಳೊಳಗಿದ್ದ ಹೆಂಗುಸರೂ, ಮಕ್ಕಳೂ, ಗಂಡುಸರೂ ಸೇರಿ 2,000 ದವರೆಗೆ ಜಲಸಮಾಧಿಯನ್ನು ಹೊಂದಿದರು.

ಅಸ್ಸಾಮಿನ ನ್ಯಾಯವಿಧಾಯಕಸಭೆಯಲ್ಲಿ ಧೂಮಪಾನನಿಷೇಧಕಶಾಸನವು ಪ್ಯಾಸಾಯಿತು. ಇದರಿಂದ ಒಬ್ಬನಿಗಿಂತ ಹೆಚ್ಚುಮಂದಿ ಒಂದುಕಡೆ ಸೇರಿ ಧೂಮಪಾನಮಾಡಿದಲ್ಲಿ 50 ರೂ. ಅರ್ಥದಂಡ ಅಥವಾ 1 ತಿಂಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಡುವವು.

ವೇರಾಗರ್ ಕೋಡ್ವೊರ್ ಎಂಬಲ್ಲಿ 1½ ಮೈಲಿದೂರ ನೀರಿನಲ್ಲಿ ಈಜಲು ಪಂಥಕಟ್ಟಿಕೊಂಡಿದ್ದ 39 ಜನ ಗಂಡುಸರಲ್ಲೂ 12 ಜನ ಹೆಂಗುಸರಲ್ಲೂ 9 ಗಂಡುಸರೂ, ಹೆಂಗುಸರೆಲ್ಲರೂ ಉತ್ತೀರ್ಣರಾದರು. ಉಳಿದ ಗಂಡುಸರು ಅರ್ಧದಾರಿಯಲ್ಲೇ ಸೋಕುನಿಂತುಬಿಟ್ಟರು.

ರಷ್ಯಾರಾಜ್ಯದಲ್ಲಿ ಪ್ರತಿವರ್ಷವೊಂದಕ್ಕೆ 1,00,000 ತೋಳಗಳಿಂದ 10,00,000 ದನಕರುಗಳ ಪ್ರಾಣನಷ್ಟವಾಗುತ್ತಿರುವುದರಮೇಲೆ ಆ ತೋಳಗಳನ್ನು ಬೇಟೆಮಾಡಿ ಸಂಹರಿಸುವವರಿಗೆ ವಿಶೇಷವಾದ ಬಹುಮಾನಗಳು ಕೊಡಲ್ಪಡುವುವಾಗಿ ಅಲ್ಲಿಯ ಸರ್ಕಾರದವರು ಪ್ರಕಟಿಸಿರುತ್ತಾರೆ.

ತಿನ್ನವಲ್ಲಿಯ ಸಮೀಪಗ್ರಾಮದಲ್ಲಿ ತರುಣ ತರುಣಿಯರಿಬ್ಬರು ಪರಸ್ಪರವರಿಸಿ ವಿವಾಹಮಾಡಿಕೊಳ್ಳಬೇಕೆಂದು ಸಂಕಲ್ಪಿಸಿಕೊಂಡಿದ್ದುದನ್ನು ತರುಣಿಯ ಮಾತಾಪಿತೃಗಳು ತಿಳಿದು ಅದಕ್ಕೆ ಪ್ರತಿಬಂಧಕವನ್ನುಂಟುಮಾಡಲು ಆ ತರುಣಿ ತರುಣರು ಪರಸ್ಪರ ಅಗಲಿರಲಾರದೆ ಆತ್ಮಹತ್ಯಮಾಡಿಕೊಂಡರು.

ಪೂನಾಪಟ್ಟಣದಲ್ಲಿ ಬಹಳ ಐಶ್ವರ್ಯಯುಕ್ತವಾದ ಜೈನದೇವಾಲಯಕ್ಕೆ ಹಾಕಿದ್ದ 6 ಬೀಗಗಳನ್ನು ಯಾರೋ ಕಳ್ಳರು ಕೆಲದಿನಗಳ ಹಿಂದೆ ಮುರಿದು ಒಳಕ್ಕೆ ನುಗ್ಗಿ ದೇವರಿಗೆ ಧರಿಸಿದ್ದ ನವರತ್ನಖಚಿತವಾದ ಕಿರೀಟ ಮುತ್ತಿನಕಂಠಸರ ಮೊದಲಾಗಿ 1 ಲಕ್ಷ ರೂ. ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿಕೊಂಡು ಹೋದರು ಪೋಲೀಸರು ಆ ಕಳ್ಳರನ್ನು ತಡಕುತ್ತಿದ್ದಾರೆ.

ಅಮೇರಿಕೆಯ ಪೂರ್ವಕರಾವಳಿಯಲ್ಲೂ, ವೆಸ್ಟ್ ಇಂಡೀಸ್ ದ್ವೀಪಗಳಲ್ಲೂ ಘಂಟೆಯೊಂದಕ್ಕೆ 80-90 ಮೈಲಿಗಳ ವೇಗದಿಂದ ಬಿರುಗಾಳಿಯು ಬೀಸಲಾಗಿ ನೂರಾರು ಹಡಗುಗಳು ಮುಳುಗಿ ಹೋದುವು; ಸಾವಿರಾರು ಮರಗಳುರುಳಿದವು; 10-20 ಅಂತಸ್ತುಗಳ ಮನೆಗಳು ಬಿದ್ದು ಹೋದವು ಮತ್ತು ಅಸಂಖ್ಯಾಕಪ್ರಾಣನಷ್ಟವೂ, 75 ಲಕ್ಷರೂಪಾಯಿಗಳಮೇಲೆಯೇ ದ್ರವ್ಯನಷ್ಟವೂ ಆಗಿರುವುವು.

ಟ್ರಾವನ್ಕೂರು ಆಸ್ಪತ್ರೆಯಲ್ಲಿ ಒಬ್ಬ ರೋಗಿಯ ದೇಹಭಾಗದಲ್ಲಿ ಕೆಟ್ಟುಹೋಗಿದ್ದ ಮಾಂಸವನ್ನು ತೆಗೆದು ಹೊಸ ಮಾಂಸವನ್ನು ಹಾಕುವುದಕ್ಕಾಗಿ ಸಹಾಯನಿರಾಕರಣವಾದಿಯಾದ ಕನ್ನಾಡ್ ಕೃಷ್ಣಯ್ಯರ್ ಎಂಬವರು ತಮ್ಮ ದೇಹದಿಂದ ಕೊಂಚ ಮಾಂಸವನ್ನು ಕೊಟ್ಟು ಅದರ ಬಾಧೆಯ ನಿವಾರಣೆಗಾಗಿ ಒಂದುತಿಂಗಳಕಾಲ ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದರಂತೆ. ಇದಲ್ಲವೆ ನಿಜವಾದ ಪರೋಪಕಾರವು?

ಫೋರ್ಡುಮೋಟಾರುಬಂಡಿಯ ಕಾರ್ಯಾಲಯದ ಯಜಮಾನರೂ ಕೋಟ್ಯಧೀಶ್ವರರೂ ಆದ ಹೆನ್ರಿಫೋರ್ಡ್‌ರವರು ತಮ್ಮ ಕುವರಿಯನ್ನು 78,00,00,000 ರೂಪಾಯಿಗಳ ವರದಕ್ಷಿಣೆಯೊಡನೆ ಪೋಲಾಂಡಿನ ಮಂತ್ರಿಯಾಗಿದ್ದ ಸ್ಕ್ರಿಜೆನಿಸ್ಕ್ ಎಂಬುವವರಿಗೆ ಕೊಟ್ಟು ಲಗ್ನಮಾಡಿ ಕೊಡುವುದಾಗಿ ನಿಶ್ಚಯವಾಗಿರುವುದಂತೆ. ಇಷ್ಟು ಅಗಾಧವಾದ ವರದಕ್ಷಿಣೆಯು ಪ್ರಪಂಚದಲ್ಲಿ ಈವರೆಗೆ ಯಾರೂ ಕೊಟ್ಟಿರುವುದಾಗಿಲ್ಲವು.

ಬಳ್ಳಾರಿಯ ಮಿಷನ್‌ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದ 23 ವರ್ಷವಯಸ್ಸಿನ ರಂಗನಾಥ ಅಯ್ಯರ್ ಎಂಬಾತನು ಕ್ರೈಸ್ತಮತದೀಕ್ಷೆಯನ್ನು ಹೊಂದಲು ತಾನು ಸಮ್ಮತಿಸಲಿಲ್ಲವಾದರೂ ಕೆಲ ಪಾದ್ರಿಗಳು ತನ್ನನ್ನು ಬಲವಂತಪಡಿಸಿ ಲಕ್ನೋಪಟ್ಟಣಕ್ಕೆ ಕರೆದುಕೊಂಡು ಬಂದಿರುತ್ತಾರಾದುದರಿಂದ ಅವರು ತನ್ನನ್ನು ಹಿಂಸಿಸದಂತೆ ಸಂರಕ್ಷಿಸಬೇಕೆಂದು ಲಕ್ನೋ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಂಡಿದ್ದನು.

ಫ್ರಾನ್ಸಿನಲ್ಲಿ ಕೋಟ್ಯಧೀಶ್ವರನಾಗಿರುವ ರೋಜರ್ ಮ್ಯಾಟರ್ ಎಂಬಾತನು ಬಾಲಕನಾಗಿರುವಾಗ್ಯೆ ಅವನ ತಾಯಿಯು ಗಂಡನ ಕೂಡ ಕಲಹಮಾಡಿಕೊಂಡು ಹೊರಟು ಹೋದುದರಮೇಲೆ ಮಗನು ರಿಕ್ತನಾದ ತಂದೆಯ ಪೋಷಣೆಯಲ್ಲಿದ್ದನು. ಕಲಹವನ್ನು ಮಾಡಿ ಅಗಲಿಹೋದ ತಾಯಿಯು ಅಮೇರಿಕೆಯನ್ನು ಸೇರಿ ಬೇಕಾದಷ್ಟು ಐಶ್ವರ್ಯವನ್ನು ಸಂಪಾದಿಸಿ ಕೆಲದಿನಗಳ ಹಿಂದೆ 240 ಲಕ್ಷ ಫ್ರಾಂಕುಗಳು ಬಾಳುವ ತನ್ನ ಐಶ್ವರ್ಯವೆಲ್ಲವನ್ನೂ ತನ್ನ ಮಗನಿಗೆ ತಲುಪಿಸಬೇಕೆಂದು ತನ್ನ ಲಾಯರ ಹೆಸರಿನಲ್ಲಿ ಮರಣಶಾಸನವನ್ನು ಬರೆದಿಟ್ಟು ಮೃತಳಾದಳು. ಬಡತನದಲ್ಲಿ ಬೆಳೆದ ಬಾಲಕನು ಈಗ ಕೋಟ್ಯಧೀಶ್ವರನಾಗಿ ರೋಜರ್ ಮ್ಯಾಟರ್ ಎಂಬ ಹೆಸರಿನಿಂದ ಬಾಳುತ್ತಿರುವನು. ಈಶ್ವರ ಒಲಿದರೆ ಭಿಕ್ಷುಕನು ಲಕ್ಷಿಕನಾಗುವನೆಂಬುದರಲ್ಲಿ ಸಂದೇಹವೇನು?

ಸೂಚನೆ.

ಶ್ರೀ ಗಿರಿರಾಜಸೂರ್ಯಸಿಂಹಾಸನ ಹೊನ್ನಾಳಿ ಹಿರೇಕಲ್ಮಠದ ಸ್ಥಿರಪಟ್ಟಾಧ್ಯಕ್ಷ ಶ್ರೀ ಚೆನ್ನರಾಜದೇಶಿಕೇಂದ್ರಮಹಾಸ್ವಾಮಿಗಳ ಸ್ವಾರಿಯು ಹೊನ್ನಾಳಿ ತಾ|| ಬೆಳಗುತ್ತಿಗ್ರಾಮದ ವೀರಶೈವ ಭಕ್ತಮಂಡಳಿಯವರ ಪ್ರಾರ್ಥನೆ ಪ್ರಕಾರ ಈ ಸಂ|| ದ ವಿಜಯದಶಮಿಯುಮಹೋತ್ಸವಕ್ಕಾಗಿ ಅಲ್ಲಿಗೆ ದಯಮಾಡಿಸಿ ಆಶ್ವೀಜ ಶು|| ೯ ಶುಕ್ರವಾರ ಅಶ್ವ ಮತ್ತು ಆಯುಧಪೂಜೆಯನ್ನು ನಡಿಸಿ ಶು|| ೧೦ ಶನಿವಾರ ಸಾಯಂಕಾಲ 3 ಘಂಟೆಗೆ ಬಿರುದಾವಳಿಸಮೇತ ಅಂದೋಳಿಕಾರೋಹಣದಿಂದ ಅಶ್ವದೊಡನೆ ಶಮೀಮಂಟಪಕ್ಕೆ ದಯಮಾಡಿಸುವುದರಿಂದ ಪದ್ಧತಿಪ್ರಕಾರ ವಿಜಯದಶಮಿಯ ಮಹೋತ್ಸವಕ್ಕಾಗಿ ಬರತಕ್ಕ ಭಕ್ತಾದಿಗಳೆಲ್ಲರೂ ಒಂದು ದಿವಸ ಮುಂಚಿತವಾಗಿ ಬೆಳಗುತ್ತಿಗ್ರಾಮಕ್ಕೆ ಬಂದು ಶ್ರೀಗಳವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇವೆ.

[illegible]

ನಾಗಪುರಿಂದಿಸ್ಟ್ರಿಕ್ಟಿಗೆ ಸೇರಿದ ಸನ್ನಾಲ್ ಎಂಬಲ್ಲಿಯ ಪೋಲೀಸ್ ಇನ್‌ಸ್ಪೆಕ್ಟರ್ ಭಗವಾನ್‌ಪ್ರಸಾದ ತಿವಾರಿಯು ಒಬ್ಬ ಕಾನೆಸ್ಟಬಲೊಡನೆ ಕಳೆದ ತಾ|| ೨೦ ರಲ್ಲಿ ಹಿಂದೆ ಕಾರಾಗೃಹಶಿಕ್ಷೆಯನ್ನು ಅನುಭವಿಸಿ ಅನುಮಾನಗ್ರಸ್ತನಾಗಿರುವ ಸೋನಯಕೋಷ್ಟಿ ಎಂಬುವವನ ಮನೆಗೆ ಹೋಗಿ ಅವನು ಮನೆಯಲ್ಲಿಲ್ಲದಿದ್ದುದನ್ನು ತಿಳಿದು ಅನುಮಾನಪಟ್ಟುಕೊಂಡು ಅವನಿಗಾಗಿ ಕಾದುಕೊಂಡಿದ್ದನು. ಆ ಕಳ್ಳನು ರಾತ್ರಿ ೨ ಗಂಟೆಯಮೇಲೆ ಬಂದುದನ್ನು ನೋಡಿ ತನ್ನ ಲಾಂದ್ರದ ಬೆಳಕನ್ನು ಅವನ ಮುಖಕ್ಕೆ ಹಿಡಿದು ಇಷ್ಟು ಹೊತ್ತಿನಲ್ಲಿ ಮನೆಬಿಟ್ಟು ಎಲ್ಲಿಗೆ ಹೋಗಿದ್ದೆಯೆಂದು ಪ್ರಶ್ನಿಸಿದನು. ಆ ಕಳ್ಳನು ಕೂಡಲೆ ತನ್ನಲ್ಲಿದ್ದ ಪಿಸ್ತೋಲಿನಿಂದ ಇನ್‌ಸ್ಪೆಕ್ಟರಿಗೆ ಗುಂಡು ಹೊಡೆದನು. ಅದು ಅವನ ಕಿವಿಯನ್ನು ಸವರುಕೊಂಡು ಹೋಯಿತು. ಅದರಮೇಲೆ ಪುನಃ ಹೊಡೆದನು. ಅದು ತಲೆಪಾಗಿಗೆ ತಗುಲಿತು. ಆಗ ಇನ್‌ಸ್ಪೆಕ್ಟರೂ ಅವನ ಜತೆಗಾರನೂ ಸಹಸಮಾಡಿ ಆ ಕಳ್ಳನನ್ನು ಬಾಚಿಹಿಡಿದುಕೊಂಡು ಹೋಗಿ ಸೆರೆಯಲ್ಲಿಟ್ಟರು. ಆಗ ಆಕಳ್ಳನಬಳಿ ಅನೇಕ ಕದ್ದ ಆಭರಣಗಳಿದ್ದುವಂತೆ.

ಕಚ್ಚಿನ ಪೋಲೀಸ್ ಕಮೀಷನರಾದ ಖಾನ್‌ಬಹದ್ದೂರ್ ಅಬ್ದುಲ್‌ರಷೀದ್‌ಖಾನರವರ ಪತ್ನಿಯು ಚಿಕ್ಕಮಕ್ಕಳುಗಳೊಡನೆ ರಾಜಕೋಟೆಯಿಂದ ವಧ್ವಾನಿಗೆ ೨ ನೇ ತರಗತಿಯ ರೈಲ್ವೆ ಬಂಡಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ಕೊಂಚ ದೇಹಾಲಸ್ಯವಾಗಿದ್ದುದರಿಂದ ಮಲಗಿಕೊಂಡಿದ್ದರು. ಅವರ ೬ ವರ್ಷದ ಮಗನು ಬಂಡಿಯಬಾಗಿಲು ಬೇಗೋತೆರೆದಿದ್ದುದರಿಂದ ಹೊರಗೆಬಿದ್ದು ಹೋದನು. ತಾಯಿ ಅದನ್ನು ಕಂಡು ಬಂಡಿಯನ್ನು ನಿಲ್ಲಿಸುವುದಕ್ಕಾಗಿ ಅಪಾಯಸೂಚಕವಾದ ಸರಪಳಿಯನ್ನು ಹಿಡಿದೆಳೆದರಾದರೂ ಬಂಡಿಯು ನಿಲ್ಲಲಿಲ್ಲವಾಗಿ ಸರಪಳಿಗೆ ನೇತುಹಾಕಿಕೊಂಡರೂ ಪ್ರಯೋಜನವಾಗಲಿಲ್ಲ. ಹೀಗೆ ಬಂಡಿಯನ್ನು ನಿಲ್ಲಿಸಲು ಮಾಡಿದ ಸಾಹಸವೆಲ್ಲ ನಿಷ್ಫಲವಾದುದರ ಮೇಲೆ ಬಂಡೀ ಹೊರಗಡೆಯ ಹಂತದಮೇಲೆ ಬಂದು ನಿಂತುಕೊಂಡು ದುಮ್ಮಿಕ್ಕಲು ಪ್ರಯತ್ನಿಸುತ್ತಿರುವುದನ್ನು ಪಕ್ಕದ ಬಂಡಿಯಲ್ಲಿದ್ದವರು ಕಂಡು ಸರಪಳಿಯನ್ನೆಳೆದರು. ಆಗಲೂ ಬಂಡಿಯು ನಿಲ್ಲಲಿಲ್ಲ. ಬಂಡಿಯು ನಿಲ್ಲುವುದಿಲ್ಲವೆಂದು ತಿಳಿದು ಆಕೆಯು ಹಂತದಿಂದ ಕೆಳಕ್ಕೆ ದುಮ್ಮಿಕ್ಕಿದಳು. ಅದನ್ನು ಕಂಡು ನೆರೆಯ ಪ್ರಯಾಣಿಕರು ಬಂಡಿಯನ್ನು ನಿಲ್ಲಿಸುವನಂತೆ ವಸ್ತ್ರಗಳನ್ನು ಕಿಟಿಕಿಯಿಂದ ಹೊರಗೆ ಬೀಸಿ ಕೂಗಿಕೊಂಡರು. ಆಗ ಬಂಡಿಯು ನಿಂತಿತು. ಆ ಅಧಿಕಾರಿಯ ಹೆಂಡತಿಯು ಬಂಡಿಯಿಂದ ಕೆಳಗೆ ದುಮ್ಮಿಕ್ಕುವುದನ್ನು ಮೂರನೇ ತರಗತಿಯಲ್ಲಿ ಕುಳಿತಿದ್ದ ಆಕೆಯ ಸೇವಕನು ಕಂಡು ತಾನೂ ದುಮ್ಮಿಕ್ಕಲು ಪ್ರಯತ್ನಿಸಿದಾಗ ಜತೆಯಲ್ಲಿದ್ದ ಪ್ರಯಾಣಿಕರು ಅವನನ್ನು ತಡೆದು ನಿಲ್ಲಿಸಿಬಿಟ್ಟರು. ಆ ಮಗುವು ಬಿದ್ದುಹೋದ ಸ್ಥಳದಿಂದ 1 ಮೈಲಿ ದೂರವೂ ಅದರ ತಾಯಿಯು ಬಿದ್ದು ಹೋದ ಸ್ಥಳದಿಂದ 100 ಗಜ ದೂರವೂ ಬಂಡಿಯು ಹೊರಟು ಹೋಗಿದ್ದಿತು. ದೈವಾನುಗ್ರಹದಿಂದ ಮಳೆಬಂದು ನೆಲದಮೇಲೆ ಹುಲ್ಲು ಚೆನ್ನಾಗಿ ಬೆಳೆದು ಮೃದುವಾಗಿದ್ದುದರಿಂದ ಮಗುವಿಗೂ ಅದರ ತಾಯಿಯಿಗೂ ಪ್ರಾಣಾಪಾಯಸಂಭವಿಸಲಿಲ್ಲವು. ಆದರೆ ಮಗುವು ಬೆನ್ನು ಕೆಳಗಾಗಿಬಿದ್ದುದರಿಂದ ಹಿಂದಲೆಗೆ ಕೊಂಚ ಪೆಟ್ಟುಮಾತ್ರ ತಗಲಿದ್ದಿತು. ತಾಯಿಯು ಬಹಳ ಧೈರ್ಯದಿಂದ ಇಂಜನ್ನಿನಕಡೆ ಮುಖಮಾಡಿಬಿದ್ದುದರಿಂದ ಕೈಕಾಲುಗಳು ಮಾತ್ರ ತರಚಿಕೊಂಡಿದ್ದುದರ ವಿನಾ ಆಕೆಗೆ ಬೇರೆ ಅಪಾಯವಾಗಲಿಲ್ಲವು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ ?

ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳೆಂಬವರ
ಅಜ್ಞತಾಪ್ರಕಾಶದ ಮುಖ್ಯಭಾಗವು.

(1926 ನೇ ಜೂನ್ ತಾ|| 12 ನೆಯ ಸಂಚಿಕೆಯಿಂದ ಮುಂದುವರಿದುದು.)

ಇದಲ್ಲದೆ, ಈ ಶಾಸ್ತ್ರಿಗಳು ಸನ್ಯಾಸಿಗಳಿಗೂ ರೇಣುಕಾದ್ಯಾಚಾರ್ಯರು ಗುರುಗಳೆಂಬ ವಿಷಯದಲ್ಲಿ ಶ್ರೀಕರಭಾಷ್ಯಂ ರಚಿಸಿದ ನಿರಾಭಾರ ವೀರಶೈವ ಯತಿಗಳಾದ ಶ್ರೀಪತಿಪಂಡಿತರು ರೇಣುಕಾದ್ಯಾಚಾರ್ಯರನ್ನು ಸ್ತುತಿಸಿದ್ದಾರೆಂದು ದೃಷ್ಟಾಂತಕೊಟ್ಟಿದ್ದಾರೆ. ಶ್ರೀಪತಿಪಂಡಿತರು "ವರ್ಣಾನಾಂ ಬ್ರಾಹ್ಮಣೋ ಗುರುಃ" ಎಂಬ ಪ್ರಮಾಣಾನುಸಾರವಾಗಿ, ಶಿವಾಶೂದ್ರರಿಗೆ ಬ್ರಾಹ್ಮಣ್ಯವಿಲ್ಲ. ಬ್ರಾಹ್ಮಣ್ಯವಿಲ್ಲದವರಿಗೆ ಗುರುತ್ವವೇ ಇಲ್ಲ. ಗುರುವಿಲ್ಲದವರಿಗೆ ಅಷ್ಟಾವರಣವಿಲ್ಲ. ಅಷ್ಟಾವರಣವಿಲ್ಲದವರಿಗೆ ವೀರಶೈವತ್ವವಿಲ್ಲ. ಅಂತಪ್ಪ ವೀರಶೈವತ್ವವು ತುಪ್ಪವಿಲ್ಲದಿದ್ದರೂ ತುಪ್ಪಹೀರೆಯೆಂಬ ಹೆಸರಿನಂತೆ ಸಂಕೀರ್ಣಜಾತಿಯವರಿಗೆ ವೀರಶೈವನಾಮವು ರೂಢವಲ್ಲದೆ ಅನ್ವರ್ಥವಲ್ಲವೆಂಬರ್ಥವನ್ನು ಶ್ರೀಕರಭಾಷ್ಯದಲ್ಲಿ ಒಂದು ಕಡೆ ಹೇಳಿದ್ದಾರೆ. ಹೀಗಿರುವಲ್ಲಿ ಧರ್ಮಸುಧಾಕರರಿಗೆ ಶ್ರೀಕರಭಾಷ್ಯಕಾರರ ವಿಷಯದಲ್ಲಿ ಹೇಗೆ ಪ್ರಾಮಾಣಿಕಬುದ್ಧಿಯುಂಟಾಯಿತೋ ? ಆಶ್ಚರ್ಯ ! ಹೀಗೆ ಆಸಲಿಗೇ ಮೋಸಬಂದಿರುವಲ್ಲಿ ಗುರುವರ್ಗವನ್ನೆತ್ತುವುದಕ್ಕೆ ಹೊರಟಿರುವ ಈ ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳ ಪ್ರಯತ್ನವು ಬಾವಿಯಲ್ಲಿ ಹೋಮಮಾಡಿದಂತಾಗಿದೆಯಲ್ಲವೇ ? ಮತ್ತು ಶ್ರೀಪತಿಪಂಡಿತರು ಮಹಾತ್ಮರಾದ ರೇಣುಕಾದ್ಯಾಚಾರ್ಯರನ್ನು ಸ್ತುತಿಸಿದ ಮಾತ್ರದಿಂದ ಧರ್ಮಸುಧಾಕರರ ಉದ್ದೇಶವು ಹೇಗೆ ನಿರ್ವಾಹವಾದೀತು ?

ಶ್ರೀಪತಿಪಂಡಿತ, ಮಂಚಣಪಂಡಿತ, ಮಲ್ಲಿಕಾರ್ಜುನಪಂಡಿತ ಎಂದು ಮೂವರು ಪಂಡಿತರು. ಅವರೊಳಗೆ ಈ ಶ್ರೀಪತಿಪಂಡಿತರು ಯಾವ ಪೀಠಾನುಯಾಯಿಗಳೋ ಗೊತ್ತಿಲ್ಲ. ಇವರು ನಿರಾಭಾರಿಯಾಗಿಂದು ಇವರ ಗ್ರಂಥದಿಂದ ಗೊತ್ತಾಗುವುದು. ಸ್ತೋತ್ರಮಾಡುವ ಪದ್ಧತಿಯು ಭಿನ್ನಾಶ್ರಮಗಳಲ್ಲಿಯೂ ಇರುವುದರಿಂದ ಅದು ಪರಸ್ಪರ ಬಾಧಕವಾಗುವುದಿಲ್ಲ. ಅನೇಕ ಗ್ರಂಥಗಳಲ್ಲಿ ಸನ್ಯಾಸಿಗಳು ಗೃಹಸ್ಥಾಶ್ರಮದ ಮಹಾತ್ಮರನ್ನೂ, ಗೃಹಸ್ಥರು ಸನ್ಯಾಸಾಶ್ರಮದ ಮಹಾತ್ಮರನ್ನೂ ಸ್ತುತಿಸಿರುವರು. ಸ್ತೋತ್ರಮಾಡುವುದು ಆಶ್ರಮಕ್ಕೆ ಭಂಗವನ್ನುಂಟುಮಾಡುವುದಿಲ್ಲ. ಈ ವಿಷಯದಲ್ಲಿ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ಧರ್ಮಸುಧಾಕರರಿಗೆ ಇವುಗಳು ತಮ್ಮ ಉದ್ದೇಶವನ್ನು ಸಾಧಿಸಲಾರವು. ಶಾಸ್ತ್ರಗಳಿಂದಲೂ, ವೃದ್ಧವ್ಯವಹಾರಗಳಿಂದಲೂ ಸಾಧಿಸಬೇಕು. ಪ್ರಕೃತದಲ್ಲಿ ಸಕಲಾಶ್ರಮಿಗಳಿಗೂ ಅತಿವರ್ಣಾಶ್ರಮಿಗಳಾದ ವಿರಕ್ತರೇ ಗುರುಗಳೆಂದು ಅನೇಕ ಪ್ರಮಾಣಗಳುಂಟು ; ವೀರಶೈವಾನಂದಚಂದ್ರಿಕೆಯಲ್ಲಿ—

"ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥಶ್ಚ ಭಿಕ್ಷುಕಃ | ಅತಿವರ್ಣಾಶ್ರಮೀ ಚೇತಿ ಕ್ರಮಾಚ್ಛ್ರೇಷ್ಠಾ ವಿಚಕ್ಷಣ || ಗೃಹಸ್ಥೋಽಪಿ ವನಸ್ಥಸ್ಯ ಯತೇರಪ್ಯಂಬುಜೇಕ್ಷಣ | ವಿದ್ಯೋತ್ಕರ್ಷಬಲೇನೈವ ಗುರುರ್ಭವತಿ ನಾನ್ಯಥಾ || ವಾನಪ್ರಸ್ಥಾಶ್ರಮಸ್ಥೋಽಪಿ ತಥಾ ಸನ್ಯಾಸಿನೋಹರೇ | ವಿದ್ಯೋತ್ಕರ್ಷಬಲೇನೈವ ಗುರುರ್ಭವತಿ ನಾನ್ಯಥಾ || ಅತಿವರ್ಣಾಶ್ರಮಾಪ್ಯೇಕೋ ಗುರುಸ್ಸರ್ವಾಧಿಕಾರಿಣಾಂ | ನ ತಸ್ಯಾಪಿ ಭವೇಚ್ಛ್ರೇಷ್ಠೋ ಯಥಾಹಂ ಪುರುಷೋತ್ತಮ || ಅತಿವರ್ಣಾಶ್ರಮೀ ಸಾಕ್ಷಾದ್ಗುರೂಣಾಂ ಗುರುರುಚ್ಯತೇ"

ಈ ಶ್ಲೋಕಗಳು ಉದಾಹರಿಸಲ್ಪಟ್ಟಿವೆ. ಇತ್ಯಾದಿ ಪ್ರಮಾಣಗಳಿಂದ ಸಕಲಾಶ್ರಮಗಳಿಗಿಂತಲೂ ವಿರಕ್ತಾಶ್ರಮವು ಅಧಿಕವಾದುದರಿಂದ ಅತಿವರ್ಣಾಶ್ರಮಿಗಳಾದ ವಿರಕ್ತರಲ್ಲಿರುವ ಪೂಜ್ಯತ್ವವು ಅತ್ಯಧಿಕವಾದದ್ದು. ಅತಿವರ್ಣಾಶ್ರಮಿಗಳಾದ ಸನ್ಯಾಸಿಗಳನ್ನು ನಿಂದಿಸುವುದಕ್ಕಿಂತಲೂ ಬೇರೆ ಪಾಪಕಾರ್ಯಗಳನ್ನು ಮಾಡಬೇಕಾಗಿಲ್ಲವು. ಇದಕ್ಕಿಂತಲೂ ಶಿವದ್ರೋಹವು ಉಂಟೇ ? ಈ ಜಂಗಮದ್ರೋಹವು ಕರ್ಮನಿಷ್ಠನನ್ನು ಭ್ರಷ್ಟನನ್ನಾಗಿ ಮಾಡುತ್ತದೆ. ಆತನ ಕುಲವು ಎಷ್ಟು ಶುದ್ಧವಾದರೂ ಸಂಕೀರ್ಣವಾಗದೆ ಇರಲಾರದು. ಈ ಕೃತ್ಯವು ಮಾಡಿದವರನ್ನು ಯಮಗೃಹಕ್ಕೆ ಅತಿಥಿಗಳನ್ನಾಗಿ ಮಾಡುವುದು. ಹೀಗೆ ಶಿವಾಗಮಗಳು ಸಾರುತ್ತಿದ್ದರೂ ಇದೊಂದನ್ನೂ ಲಕ್ಷಿಸದೆ ದೂಷಿಸುವುದಕ್ಕೆ ಪ್ರವರ್ತಿಸಬಹುದೇ ? ಪ್ರತಿಯೊಂದು ಅಕಾರ್ಯಗಳಿಗೂ ಪ್ರಾಯಶ್ಚಿತ್ತವಿರುವಂತೆ ಈ ಜಂಗಮದ್ರೋಹಕ್ಕೆ ಪ್ರಾಯಶ್ಚಿತ್ತವುಂಟೇ ?

ಧರ್ಮಸುಧಾಕರರೇ ! ಗುರುಸ್ಥಲದ ಕ್ರಿಯಾಗುರುವರ್ಗದವರು ಪ್ರಾಯಶಃ ಬ್ರಹ್ಮಚರ್ಯ, ಗಾರ್ಹಸ್ಥ್ಯವೆಂಬ ಕೆಳಗಣಾಶ್ರಮಗಳಲ್ಲಿರುವುದನ್ನು ಎಲ್ಲರೂ ನೋಡುತ್ತಿದ್ದರೂ ಅಂತಪ್ಪವರನ್ನು ಸನ್ಯಾಸಾಶ್ರಮಿಗಳಿಗೂ ಗುರುಗಳೆಂದು ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ. ಇಷ್ಟು ಕಷ್ಟವೇಕೆ. ಗುರುವರ್ಗದ ಪಟ್ಟಾಧಿಕಾರಿಗಳೂ ಚರಪತಿಗಳೂ ಸನ್ಯಾಸವನ್ನು ತೆಗೆದುಕೊಳ್ಳುವಂತೆ ಮಾಡಿದರೆ ವಿವಾದವೇ ಇಲ್ಲವಲ್ಲಾ ! ಆಗ ಧರ್ಮಶಾಸ್ತ್ರವೂ ವೀರಶೈವಸಿದ್ಧಾಂತವೂ ಸಫಲವಾಗುವುದಿಲ್ಲವೆ ! ಅಧಿಕಾರವಿದ್ದ ಮಾತ್ರದಿಂದ ಪೂಜ್ಯತ್ವದಲ್ಲಿಯೂ ಆಗ್ರಹವೇಕೆ ? ಈ ಆಗ್ರಹವನ್ನು ಬಿಡುವದೊಳ್ಳೆಯದು. ಆಗ್ರಹದಿಂದ ಮತಸುಧಾರಣೆಯಾದೀತೇ ? ಸನ್ಯಾಸಾಶ್ರಮ ಸ್ವೀಕಾರವಾದರೋ ಇನ್ನಾದರೂ ಗುರುವರ್ಗದವರಲ್ಲಿಯೇ ಹೊರತು ಇತರರ ವಶವಾಗಿಲ್ಲ ; ಮುಂದೆ ಹಾಗೂ ಆಗುವ ಸ್ಥಿತಿ ತೋರುತ್ತದೆ. ಸನ್ಯಾಸಾಶ್ರಮವನ್ನು ಸ್ವೀಕರಿಸಿ ಅಷ್ಟಾವರಣದಲ್ಲಿ ಪ್ರಧಾನತಮವಾದ ಜಂಗಮಸ್ಥಾನದಲ್ಲಿರುವ ನಿಮ್ಮ ವಂಶದವರನ್ನು ನೋಡಿ ಸಹಿಸದೆ ಇರುವ ನೀವು ಪರೋತ್ಕರ್ಷವನ್ನು ಸಹಿಸುವಿರೆಂದು ಯಾರು ಹೇಳುವರು ? ಧರ್ಮಸುಧಾಕರರೇ ! ಸಿದ್ಧೇಶ್ವರರೆಂಬ ಮಹಾತ್ಮರು ರೇಣುಕಾಚಾರ್ಯರನ್ನು, ಪರಮಗುರು-ಗುರು-ಜಗದೇಕವಲ್ಲಭ ಮೊದಲಾದ ಶಿಷ್ಯತ್ವ ಬೋಧಕವಿಶೇಷಣವನ್ನು ಕೊಟ್ಟು ಸ್ತುತಿಸಿದಂತೆ ಬರೆದಿದ್ದಾರೆಂದು ನಿರೂಪಿಸಿರುವಿರಿ ? ರೇಣುಕರಿಗೆ ಪರಮಗುರು-ಗುರು-ಜಗದೇಕವಲ್ಲಭ ಎಂದು ವಿಶೇಷಣವನ್ನು ಕೊಟ್ಟಮಾತ್ರದಿಂದ ನಿಮ್ಮ ಉದ್ದೇಶವು ಸಾಧಿತವಾಗಲಿಲ್ಲವು. "ಪರಮಶ್ಚಾಸೌ + ಗುರುಶ್ಚ = ಪರಮಗುರುಃ" ಎಂಬ ವ್ಯುತ್ಪತ್ತಿಯಿಂದ ಶ್ರೇಷ್ಠವಾದ ಗುರುಗಳೆಂದು ಹೇಳಿದ ಹಾಗಾಯಿತೇ ಹೊರತು ತನಗೆ ಗುರುವೆಂದು ಹೇಳಲಿಲ್ಲ. ರೇಣುಕಾಚಾರ್ಯರು ಶಿವನ ಆಜ್ಞಾನುಸಾರವಾಗಿ ಭೂಲೋಕದಲ್ಲಿ ಅವತರಿಸಿ, ಶಿವಮತವನ್ನು ಸ್ಥಾಪಿಸಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡೆದ ಮಹಾತ್ಮರಾದುದರಿಂದ ಬೇಕಾದ ಶಿವನಿಷ್ಠಧರ್ಮಗಳನ್ನೆಲ್ಲಾ ಸೇರಿಸಿ ಅವರನ್ನು ಯಾರಾದರೂ ಸ್ತೋತ್ರಮಾಡಬಹುದು. ತಾವನ್ಮಾತ್ರದಿಂದಲೇ ಸನ್ಯಾಸಾಶ್ರಮಿಗಳಿಗೆ ಗುರುವೆಂದು ಹೇಳಿದಂತಾಗುವುದಿಲ್ಲ. ಒಂದುವೇಳೆ ಮಹತ್ವವಂ ಉದ್ದೇಶಿಸಿ, ಗುರುತ್ವವಂತೋರಿಸಿದ್ದರೂ ಅವರ ಪರಂಪರೆಯವರೆಲ್ಲರೂ ಗುರುಗಳೆಂದು ಎಂದಿಗೂ ಹೇಳುವುದಕ್ಕಾಗಲಾರದು. ಸಕಲ ಪಟ್ಟಾಧಿಕಾರಿಗಳಿಗೂ ಸನ್ಯಾಸಿಗಳೇ ಪರಮಗುರುಗಳೆಂದು ಹೇಳುವಂತೆ ಸಿದ್ಧೇಶ್ವರಸ್ವಾಮಿಗಳು ರೇಣುಕರನ್ನು ಸ್ತುತಿಸಿಲ್ಲವು. ಲೋಕೋದ್ಧಾರಕರಾಗಿರುವ ರೇಣುಕಾಚಾರ್ಯರಿಗೆ ಗುರುತ್ವ ಸೂಚಕ ಶಬ್ದವನ್ನು ಪ್ರಯೋಗಿಸಿರುವರು. ಪರಮಗುರುವೆಂದು ಪ್ರಯೋಗಮಾಡಿದ ಮಾತ್ರದಿಂದ ರೇಣುಕಾಚಾರ್ಯರು ಸಿದ್ಧೇಶ್ವರರಿಗೆ ಪೂಜ್ಯರೆಂಬ ಅರ್ಥವಾಗುವುದಿಲ್ಲ. ಏಕೆಂದರೆ, ಪರಮಗುರುವೆಂದರೆ ಲಿಂಗಧಾರಣಾದಿ ಸಂಸ್ಕಾರಕರ್ತೃಗಳಾದ ಗುರುಗಳೊಳಗೆ ಮುಖ್ಯಗುರುವೆಂದರ್ಥ. ತಾವನ್ಮಾತ್ರದಿಂದ ಧರ್ಮಸುಧಾಕರರಿಗೆ ಯಾವ ಪುರುಷಾರ್ಥವೂ ಇಲ್ಲದುದರಿಂದ ಬೆಟ್ಟಕ್ಕೆ ಕಲ್ಲು ಹೊತ್ತಂತಾಯಿತು.

ಗುರುಸ್ಥಲದ ಪಟ್ಟಾಧಿಕಾರಿ, ಚರಪತಿ ಮುಂತಾದ ಗುರುವರ್ಗದವರೆಲ್ಲರಿಗೂ ಅತಿವರ್ಣಾಶ್ರಮಿಗಳಾದ ಜಂಗಮರೇ ಪೂಜ್ಯರೆಂಬ ವಿಷಯದಲ್ಲಿ ನಾನೊಂದು ಉದಾಹರಣೆಯನ್ನು ಕೊಡುತ್ತೇನೆ: ಶ್ರೀ ರೇಣುಕಗೋತ್ರಸಂಭೂತರಾದ ದನಗೂರು ಮಠದ ಚಿಕ್ಕವೀರದೇಶಿಕೇಂದ್ರರ ಶಿಷ್ಯಶಿರೋಮಣಿಗಳೂ, ಕವಿಸಾರ್ವಭೌಮರೂ ಆದ ಪಟ್ಟಾಧಿಕಾರಿ ಷಡಕ್ಷರಸ್ವಾಮಿಗಳಿಂದ ರಚಿಸಲ್ಪಟ್ಟ ರಾಜಶೇಖರವಿಲಾಸವೆಂಬ ಉದ್ದಾಮವಾದ ಕರ್ನಾಟಚಂಪೂ ಗ್ರಂಥದ ಪೀಠಿಕೆಯಲ್ಲಿ—

"ಅರಿವರ್ಗಧ್ವಂಸನಮಂ ಪೂರ್ಣಸಗಿ ತಳೆದು ಪಂಚಾಂಗಸನ್ಮಂತ್ರಮುಂ ಪೂ | ದ್ವಿರೆಸತ್ವಂ ಸತ್ವಚಾಪಾಲನೆಯನೆಗಳ್ದುಪಾಯಂಗಳಂ ತಾಳ್ದು ಶಕ್ತಿ || ಸ್ಫುರಣಂ ಕೈಗಣ್ಮೆ ತಂತ್ರೋದಿತಗುಣಗಣಮಂ ತಾಳ್ದವೋಘಪ್ರಭುತ್ವಂ | ದೊರೆಕೊಂಡೆಮ್ಮಾಳ್ದನಾದಲ್ಲಮವಿಭುವಿರತಿಶ್ರೀಯಮಂ ಮಾಳ್ಪ ದೇಮ್ಮೊಳ್ ||"

ಎಂಬ ಪದ್ಯವಿದೆ. ಈ ಪದ್ಯದಲ್ಲಿ ಪ್ರಭುಸ್ವಾಮಿಯನ್ನು ರಾಜನಂತೆ ಭಾವಿಸಿ ರಾಜನಿಷ್ಠಧರ್ಮಗಳನ್ನು ಶ್ಲೇಷಮಹಿಮೆಯಿಂದ ಪ್ರಭುಸ್ವಾಮಿಯಲ್ಲಿ ಆರೋಪಿಸಿ ಪ್ರಜಾಸಾಮಾನ್ಯನೊಬ್ಬನು ಪ್ರಜಾನಾಥನನ್ನುದ್ದೇಶಿಸಿ ನಮ್ಮಾಳ್ದ ಮಹಾಸ್ವಾಮಿಯು ನಮಗೆ ಈತಿಬಾಧೆಗಳಂ ತಪ್ಪಿಸಿ ಸೌಖ್ಯವನ್ನುಂಟುಮಾಡಲಿ.....ಎಂದು ಪ್ರಾರ್ಥಿಸುವಂತೆ ಷಡಕ್ಷರಸ್ವಾಮಿಗಳು ತಾನು ಮುಂತಾದ ಸರ್ವಲಿಂಗಧಾರಿ ಶಿವಭಕ್ತರಿಗೂ ರಕ್ಷಕನಾಗಿರುವ ಅಲ್ಲಮಪ್ರಭುವು ನಮಗೆ ವೈರಾಗ್ಯಸಂಪತ್ತನ್ನು ಕರುಣಿಸಲಿ ಎಂದು ಬೇಡಿಕೊಂಡಿದ್ದಾರೆ. ವೀರಶೈವಮತದಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳೇ ಮುಕ್ತಿಸಾಧನಗಳೆಂದೂ, ಭಕ್ತಿಯಲ್ಲಿ ಕಲ್ಯಾಣದ ಬಸವಣ್ಣನೂ, ಜ್ಞಾನದಲ್ಲಿ ಚನ್ನಬಸವಣ್ಣನೂ, ವೈರಾಗ್ಯದಲ್ಲಿ ಪ್ರಭುಸ್ವಾಮಿಯೂ ಅಗ್ರೇಸರರೆಂದೂ ನಮ್ಮ ಪ್ರಾಚೀನ ಮಹಾಶಯರು ನಿರ್ಧರಿಸಿದ್ದಾರೆ. ಅದನ್ನನುಸರಿಸಿ ವೀರಶೈವಬ್ರಹ್ಮಚಾರಿಗಳಾದ ಪಟ್ಟದ ಷಡಕ್ಷರಸ್ವಾಮಿಗಳು ಪ್ರಭುದೇವರನ್ನು ನಮ್ಮ ಸ್ವಾಮಿ ಎಂದು ಸ್ತುತಿಸಿ ಇಷ್ಟಾರ್ಥವಂ ಪ್ರಾರ್ಥಿಸಿದ್ದಾರೆ. ಆದುದರಿಂದ ಈಗಲೂ ಪಟ್ಟಾಧಿಕಾರಿ ಮುಂತಾದವರು ಪ್ರಭುಸೂತ್ರಾನುವರ್ತಿಗಳಾದ ವಿರಕ್ತ ಜಂಗಮರನ್ನು ಪೂಜಿಸಿ ಪ್ರಾರ್ಥಿಸಬೇಕಾದದ್ದು ಪರಮಧರ್ಮವಲ್ಲವೇ ?

ಮರಿತೋಂಟದಾರ್ಯರು ಸಿದ್ಧೇಶ್ವರ ಪುರಾಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಚರಿತ್ರದಂತೆ ಅಲ್ಲಮನ ಚರಿತ್ರೆಯನ್ನೂ ಬರೆದಿರುವರು. ಅದರಲ್ಲಿ ಇವರಿಬ್ಬರಿಗೂ ಇಂತಹ ಮಹತ್ವವಿಶೇಷಣಗಳನ್ನು ಪ್ರಯೋಗಿಸಲಿಲ್ಲವೆಂದು ನಮ್ಮ ಧರ್ಮಸುಧಾಕರರು ತಮ್ಮ ಭಂಗಾರದ ಬಾಯಿಂದ ಹೊರಡಿಸಿದ್ದಾರೆ. ಇದನ್ನು ಕುರಿತು ಸ್ವಲ್ಪ ಆಲೋಚನೆಮಾಡೋಣ. ಮರಿತೋಂಟದಾರ್ಯರು ತಮ್ಮ ಸಿದ್ಧೇಶ್ವರ ಪುರಾಣದಲ್ಲಿ ರೇಣುಕಚರಿತ್ರೆಯ ಯಾವುದೋ ಭಾಗವನ್ನು ಸೂಚಿಸಿದ್ದಾರೆ. ಹಾಗೆ ಸಿದ್ಧರಾಮನ ಚರಿತ್ರವನ್ನಾದರೂ, ಅಲ್ಲಮನ ಚರಿತ್ರವನ್ನಾದರೂ ಬರೆದಂತೆ ಕಾಣುವುದಿಲ್ಲ. ಸಿದ್ಧೇಶ್ವರಪುರಾಣದ ಮೊದಲನೆಯ ಸಂಧಿಯ ೧೦ ನೆಯ ಪದ್ಯವನ್ನು ಪ್ರಭುಚರಿತ್ರೆಯೆಂದೂ, ಅಥವಾ ೧೧ ನೆಯ ಪದ್ಯದಲ್ಲಿರುವ ನಿರುಪಮಗುಣಾಭಿರಾಮಂ ಸಿದ್ಧರಾಮನಂ ಎಂಬ ವಾಕ್ಯವನ್ನೇ ಸಿದ್ಧರಾಮನ ಚರಿತ್ರೆಯೆಂದೂ ನೆನಸಿರಬಹುದು ? ಹ್ಯಾಗಾದರೂ ಆಗಲಿ ಸಿದ್ಧೇಶ್ವರಪುರಾಣದ ೧೦ ನೆಯ ಪದ್ಯವಾವುದೆಂದೊಡೆ.—

ಮಿಸುಪನಿರ್ವಯಲಕಾಯವನಾಂತು ಧರೆಯ ಪಾ | ಲಿಸಲೆಂದು ಬಂದು ವಸುಮತಿಯೊಳತಿ ಸದ್ಭಕ್ತ | ವಿಸರಮಂ ಪಾವನಂಗೈದು ನಿಂದೊಡೆ ಪಜ್ಜುಳಿದೊಡಂ ನೆಳಲಿಲ್ಲದ || ಜಸವೆತ್ತು ಚರಿಸಿ ಸುಜ್ಞಾನಪ್ರಕಾಶದಿಂ | ಬಸವ ಮೊದಲಾದ ಶರಣರ ಹೃದಯದಲ್ಲಿ ರಾ | ಜಿಸುವ ನಿರ್ಮಾಯನೆನಿಪಲ್ಲಮಪ್ರಭುರಾಯನೊಸೆದು ರಕ್ಷಿಪುದೆಮ್ಮನು ||

ಮೇಲಣಪದ್ಯದಲ್ಲಿ ನಿರ್ವಯಲಕಾಯವನಾಂತು, ಧರೆಯಪಾಲಿಸಲೆಂದು ಬಂದು, ಸದ್ಭಕ್ತವಿಸರಮಂ ಪಾವನಂಗೈದು, ಸುಜ್ಞಾನಪ್ರಕಾಶದಿಂ ಬಸವ ಮೊದಲಾದ ಶರಣರ ಹೃದಯದಲ್ಲಿ ರಾಜಿಸುವ, ನಿರ್ಮಾಯನೆನಿಪ ಎಂಬ ವಿಶೇಷಣಗಳಿಂದ ಅಲ್ಲಮಪ್ರಭುವಿಗೆ ವೀರಶೈವಕುಲದೇವತೆಯಾದ ಶಿವನಿಗಿರುವ, ಅಣಿಮಾದ್ಯೈಶ್ವರ್ಯ, ಲೋಕವಿಲಕ್ಷಣನಿರ್ಮಾಯತ್ವ, ಅಘಟಿತಘಟನಾಶಕ್ತಿ, ಅಂತರ್ಯಾಮಿತ್ವ ಮುಂತಾದ ಅಸಾಧಾರಣಯೋಗ್ಯತೆಯನ್ನು ಸಾಧಿಸಿರುವುದರಿಂದಲೇ, ಗುರುಸಾರ್ವಭೌಮತ್ವವು ಸಿದ್ಧವಾಯಿತು. ಇದಕ್ಕಿಂತ ಹೇಳಬೇಕಾದುದೇನು ? ಮಾಯಿಯಾದ ಶಿವನ ಆಜ್ಞಾನುಸಾರವಾಗಿ ಭೂಮಿಯಲ್ಲಿ ಅವತರಿಸಿದ ರೇಣುಕಾಚಾರ್ಯನಿಗಿಂತಲೂ ಮಾಯಾದೂರನಾದ ಅಲ್ಲಮನು ಪೂಜ್ಯನೆಂಬರ್ಥವನ್ನರಿಯದ ಸ್ಥೂಲಬುದ್ಧಿಗಳಿಗೆ ಪರಮಗುರುವೆಂಬ ಶಬ್ದಪ್ರಯೋಗವೇ ದೊಡ್ಡದಾಗಬಹುದು.

ಮತ್ತು "ಮರಿತೋಂಟದಾರ್ಯರು ತಮ್ಮಿಂದ ರಚಿಸಲ್ಪಟ್ಟ ವೀರಶೈವಪ್ರದೀಪಿಕೆಯೆಂಬ ಗ್ರಂಥದಲ್ಲಿ ಮತ್ತು ಚತುಷ್ಷಷ್ಟಿ ಶೀಲಾಚಾರಧುರಂಧರರಾದ ಪಾಲ್ಕುರಿಕೆ ಸೋಮರಿಂದುಕ್ತಮಾದ ಬಸವರಾಜೀಯವೆಂಬ ಗ್ರಂಥದಲ್ಲಿಯೂ, ಸಾಕ್ಷಾದ್ವೀರಶೈವ ಮತೋದ್ಧಾರಕರಾದ ಜಗದ್ಗುರು ರೇಣುಕಾಚಾರ್ಯರಿಂದುಕ್ತಮಾದ ಸಿದ್ಧಾಂತಶಿಖಾಮಣಿಯೆಂಬ ಗ್ರಂಥದಲ್ಲಿಯೂ, ಅನುಕ್ತವಾದುದರಿಂದ ಅನಾದರಿಸಲ್ಪಕ್ಕುದೇ ಸಿದ್ಧಮಕ್ಕುಂ" ಎಂದು ಬರೆದಿರುತ್ತದೆ. ಇದರಲ್ಲಿ ಶ್ರೀ ರೇಣುಕಾಚಾರ್ಯರಿಗೆ ಜಗದ್ಗುರುವೆಂಬ ಪದವನ್ನು ಪ್ರಯೋಗಮಾಡಿತೋರಿಸಿದ್ದಾರೆ—ಎಂದು ನಮ್ಮ ಗುರುಸಿದ್ಧಶಾಸ್ತ್ರಿಗಳು ನಿರೂಪಿಸಿದ್ದಾರೆ. ಆದರೆ ಮರಿತೋಂಟದಾರ್ಯರು ವೀರಶೈವ ಪ್ರದೀಪಿಕೆಯೆಂಬ ಗ್ರಂಥವನ್ನು ಮಾಡಿದ್ದೇ ಸುಳ್ಳು. ವೀರಶೈವಪ್ರದೀಪಿಕೆಯ ಅನುಪೂರ್ವಿಯನ್ನು ಹಿಡಿದು ಬರೆಯಲ್ಪಟ್ಟಿರುವ ಪ್ರಾಚೀನಪುಸ್ತಕವು ಈ ಲೋಕದಲ್ಲಿಯೇ ಇಲ್ಲ. ಯಾವನೋ ಒಬ್ಬನು ಬೇರೆ ಕವಿಯಿಂದ ರಚಿತವಾದ ಬೇರೆ ಹೆಸರುಳ್ಳ ಗ್ರಂಥವನ್ನು ತಲೆಕೆಳಗುಮಾಡಿ, ಅದಕ್ಕೆ ವೀರಶೈವಪ್ರದೀಪಿಕೆಯೆಂಬ ನಾಮವನ್ನಿಟ್ಟು ಅದನ್ನು ಮರಿತೋಂಟದಾರ್ಯರು ಮಾಡಿದರೆಂದು ಬರೆದು ಮುದ್ರಿಸಿ ಪ್ರಸಿದ್ಧಪಡಿಸಿದಂತೆ ತೋರುತ್ತೆ. ಇದಕ್ಕೆ ಸಾಧಕವಾದ ಬಲವತ್ತರ ದೃಷ್ಟಾಂತವು ನಮ್ಮಲ್ಲಿಯೇ ಸಿಕ್ಕುವುದು. ಅದೆಂತಿರಲಿ ಸಿದ್ಧಾಂತಶಿಖಾಮಣಿಯೆಂಬ ಗ್ರಂಥವು ಶಿವಯೋಗಿಕವಿಯಿಂದ ರಚಿಸಲ್ಪಟ್ಟ ಏಕೋತ್ತರಶತಸ್ಥಲಗರ್ಭಿತವಾದ ಸಂಗ್ರಹಗ್ರಂಥವೆಂಬ ಸಂಗತಿಯು ಆ ಗ್ರಂಥದ ಪೀಠಿಕೆಯಲ್ಲಿಯೇ ವ್ಯಕ್ತವಾಗುವುದು. ಶಿವಯೋಗಿಯು ತನ್ನ ಗ್ರಂಥದಲ್ಲಿ ಪ್ರಾಶಸ್ತ್ಯವಂತೋರಿಸುವುದಕ್ಕಾಗಿ ರೇಣುಕಾಚಾರ್ಯರಿಂದ ಅಗಸ್ತ್ಯಮುನಿಗೆ ಬೋಧಿಸಲ್ಪಟ್ಟಿತೆಂಬ ವಿಶೇಷಣವನ್ನು ಕೊಟ್ಟಿದ್ದಾನೆ. ತಾವನ್ಮಾತ್ರದಿಂದ ಸಿದ್ಧಾಂತಶಿಖಾಮಣಿಯು ರೇಣುಕಾಚಾರ್ಯರಿಂದುಕ್ತಮಾದುದೆಂದು ನಂಬಿ ಪ್ರತ್ಯಕ್ಷವಾಗಿ ಮೋಸಹೋಗಿರುವ ಗುರುಸಿದ್ಧಶಾಸ್ತ್ರಿಗಳ ಬುದ್ಧಿಗೆ ವೀರಶೈವಪ್ರದೀಪಿಕೆ ಯಾರಿಂದಲೋ ಕಲ್ಪಿತವಾದದ್ದೇ ಹೊರತು ಮರಿತೋಂಟದಾರ್ಯರಿಂದ ರಚಿಸಲ್ಪಟ್ಟದ್ದಲ್ಲ. ಅದರಲ್ಲಿರುವ ವಿಷಯವನ್ನು ನಂಬುವುದು ಹೇಗೆಂಬ ವಿಚಾರವು ಹುಟ್ಟುವಬಗೆ ಹೇಗೆ ? ಅಯ್ಯೋಪಾಪ ! ಹೊಟ್ಟು ಸಹಿತವಾಗಿ ತಂಡುಲವನ್ನು ಉಪಯೋಗಿಸುವವರಿಗೆ ಯಾರೇನುಮಾಡುವದಕ್ಕಾದೀತು ? ಪ್ರಥಮಭಾಗಂ ಸಂಪೂರ್ಣಂ.

ಕಾಶೀನಾಥಶಾಸ್ತ್ರಿಗಳೂ ಅವರ ಅನುಯಾಯಿಗಳಾದ ಧರ್ಮಸುಧಾಕರ ಗುರುಸಿದ್ಧಶಾಸ್ತ್ರಿಗಳೂ ಮಾಡಿರುವ ವೀರಶೈವ ಸನ್ಯಾಸಾಶ್ರಮವಿಮರ್ಶನವನ್ನು ಸಶಾಸ್ತ್ರೀಯವಾಗಿಯೂ ಯುಕ್ತಿಯುಕ್ತವಾಗಿಯೂ ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿಗಳು ಖಂಡಿಸಿ ಭೂಲೋಕದಲ್ಲಿ ಕರ್ಮಪಾಶಬದ್ಧರಾದ ಸಂಸಾರಿಗಳನ್ನುದ್ಧರಿಸುವುದಕ್ಕಾಗಿ ಅವತರಿಸಿದ ಪಂಚಾಚಾರ್ಯರವರಿಗೆ ಮುಕ್ತಿಯನ್ನು ಕೊಡುವುದಕ್ಕಾಗಿ ಪರಶಿವನೇ ಕೃತ ದ್ವಾಪರ ಯುಗಗಳಲ್ಲಿ ನಿರಂಜನ ಮೊದಲಾದ ರೂಪದಿಂದವತರಿಸಿ ಈ ಕಲಿಯುಗದಲ್ಲಿ ಪ್ರಭುರೂಪದಿಂದವತರಿಸಿರುವುದರಿಂದ ನಿರಂಜನಮೂರ್ತಿಗಳೇ ಸರ್ವಶ್ರೇಷ್ಠರೆಂದೂ, ಮತಸ್ಥಾಪನಾಚಾರ್ಯರುಗಳಿಗೂ ಗುರುಗಳೆಂದೂ ಸಿದ್ಧಾಂತಗೊಳಿಸಿರುವರು. ಸನ್ಯಾಸಾಶ್ರಮವಿಮರ್ಶನವನ್ನು ಖಂಡಿಸುವಾಗ್ಗೆ, ಕಾಶೀನಾಥಶಾಸ್ತ್ರಿಗಳನ್ನು ಹುಚ್ಚುಹಿಡಿದ ಆನೆಗೂ, ಹಂದಿಗೂ, ಸೂರ್ಯನ ಮೇಲೆ ಉಗುಳಲಿಕ್ಕೆ ಹೋಗಿ ತನ್ನ ಮೋರೆಯ ಮೇಲೆ ಉಗುಳಿಕೊಂಡ ದಡ್ಡನಿಗೂ ಹೋಲಿಸಿ ಧನಾಶೆಯಿಂದಲೋ, ಬುದ್ಧಿವಿಪರ್ಯಾಸದಿಂದಲೋ ವಿರಕ್ತರನ್ನು ನಿಂದಿಸಿದ ತನ್ನ ನಾಲಿಗೆಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ಮೊದಲಾಗಿ ವಿವೇಕವನ್ನು ಬೋಧಿಸಿರುವ ಮತ್ತು ಇಂದು ವಿರಕ್ತಮಹಾಶಯರನ್ನು ಶಿಷ್ಯಕೋಟಿಯಲ್ಲಿ ಸೇರಿಸಿದವರು ನಾಳೆ ಪಟ್ಟಾಧಿಕಾರಿ ಚರಪತಿಗಳನ್ನು ಬಿಡುವರೇ ? ಎಂದು ಪಟ್ಟಾಧಿಕಾರಿಗಳನೆಚ್ಚರಿಸಿರುವ ಮೈಸೂರು ಆಸ್ಥಾನವಿದ್ವಾನ್ ಸಿರ್ಸಿ ಗುರುಶಾಂತಶಾಸ್ತ್ರಿಗಳು ತಾವು ಹೇಳಿರುವ ಪಾಪಕಾರ್ಯಕ್ಕೆ ಇನ್ನೂ ಪ್ರಾಯಶ್ಚಿತ್ತವನ್ನು ಹೊಂದದಿರುವ ಕಾಶೀನಾಥಶಾಸ್ತ್ರಿಗಳ ಮೈತ್ರಿಯನ್ನು ಈಚೆಗೆ ಸಂಪಾದಿಸಿ ಅವರನ್ನು ತಮ್ಮ ಮನೆಗೆ ಕರೆದುಕೊಂಡು ಬಂದು ಶೈತ್ಯೋಪಚಾರದಿಂದ ಸತ್ಕರಿಸುತ್ತಿರುವುದೂ, ಅರಮನೆ ಮುಜರಾಯಿಬಕ್ಷಿಯವರ ಪರಿಚಯವನ್ನು ಮಾಡಿಸಿ ತನ್ಮೂಲಕ ಶ್ರೀಮನ್ಮಹಾರಾಜರವರ ದರ್ಶನಭಾಷಣಗಳಿಗೆ ಪಾತ್ರರನ್ನಾಗಿ ಮಾಡಿಸಿದುದೂ ಧನಾಶೆಯಿಂದಲೋ ಬುದ್ಧಿವಿಪರ್ಯಾಸದಿಂದಲೋ ಅವರೇ ಹೇಳಬೇಕಾಗಿದೆ. ಹಸುವಿನ ಕರುವು ಹಂದಿಯಮರಿಯೊಂದಿಗೆ ಆಡಿಕೊಂಡು ಏನನ್ನೋ ತಿನ್ನುವುದನ್ನು ಕಲಿತುಕೊಂಡಂತಾಯಿತು. ಧರ್ಮಬೋಧೆಯಿಂದ ಅಜ್ಞಜನರನ್ನು ಸುಜ್ಞರನ್ನಾಗಿ ಮಾಡುವಂಥವರಾದ ಶಾಸ್ತ್ರಿಗಳು ಪುರಾತನರಂತೆ ನುಡಿದು ಕಿರಾತರಂತೆ ನಡೆಯುತ್ತಿರುವರಾದುದರಿಂದ ಇವರನ್ನು ಆಸ್ಥಾನವಿದ್ವಾಂಸಮಂಡಲಿಗೆ ಶಿಫಾರ್ಸುಮಾಡಿದವರಿಗೂ ಆ ವಿದ್ವಾಂಸಮಂಡಲಿಗೂ ಎಷ್ಟರಮಟ್ಟಿಗೆ ಭೂಷಣವಾಗಿರುವುದೆಂಬುದನ್ನೂ, ಇವರು ವೀರಶೈವವಿದ್ವಾಂಸರೋ ಸ್ವಮತವಿಧ್ವಂಸಕರೋ ? ಎಂಬುದನ್ನೂ ಗುಣಗ್ರಾಹಿಗಳಾದ ಈ ಪತ್ರಿಕಾವಾಚಕರೇ ವಿಮರ್ಶಿಸಿ ಹೇಳಬೇಕಾಗಿದೆ. ಪತ್ರವಿಸ್ತಾರಕ್ಕಾಗಿ ಸಂಪಾದಕರ ಕ್ಷಮೆಯನ್ನು ಬೇಡುವ,

ಗುಣದೋಷವಿಮರ್ಶಕ.

ಶ್ರೀ ಮಹಾಗಣಪತಿಮಂಗಳಾರತಿ.

ಚಿಕ್ಕಮಗಳೂರು ವೀರಶೈವಹಾಸ್ಟಲಿನಲ್ಲಿ ಕಳೆದ ಭಾನುವಾರ ಶ್ರೀ ಮಹಾಗಣಪತಿಮಂಗಳಾರತಿಯು ಬಹಳ ವಿಜೃಂಭಣೆಯಿಂದ ನಡೆಯಿತು. ಎಲ್ಲಾ ಆಫೀಸರುಗಳೂ ಸ್ಕೂಲ್‌ಮಾಸ್ಟರುಗಳೂ ದಯೆಮಾಡಿದ್ದರು. ಮೊದಲು ಸಂಗೀತವೂ, ಅನಂತರ ದೇವರಿಗೆ ಮಂಗಳಾರತಿಯೂ ಆಗಿ ನೆರದಿದ್ದ ಸಭಿಕರಿಗೆಲ್ಲರಿಗೂ ಗಂಧಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು. ಈ ಹಾಸ್ಟಲಿಗೆ ಮ|| ಕೆ. ಮಲ್ಲಪ್ಪನವರು ಮ್ಯಾನೇಜರಾಗಿ ನೇಮಿಸಲ್ಪಟ್ಟಮೇಲೆ, ಮ್ಯಾನೇಜ್‌ಮೆಂಟು ಸರಿಯಾಗಿ ನಡೆಯುತ್ತಿದೆಯಲ್ಲದೆ ಇವರು ಶಾಂತಸ್ವಭಾವದವರಾದುದರಿಂದ ಹಾಸ್ಟಲಿನ ವಿದ್ಯಾರ್ಥಿಗಳೂ ಶಾಂತರೀತಿಯಿಂದ ನಡೆದುಕೊಳ್ಳುತ್ತಿರುವುರೆಂದು ತಿಳಿಸಲು ಸಂತೋಷವಾಗುತ್ತದೆ. ಪ್ರತ್ಯಕ್ಷದರ್ಶಿ.

ಶರಣನುಲಿಯ ಚಂದಪ್ಪನವರಜಾತ್ರೆ.

ಶ್ರೀಮಚ್ಛೂನ್ಯಸಂಪಾದನಾ ನಿರಂಜನಮೂರ್ತಿ ತರೀಕೆರೆ ಎಣ್ಣೆಹೊಳೆಮಠದ ಶ್ರೀನಂದೀ ಉತ್ಸವಸ್ವಾಮಿಗಳವರ ಮಹಾಸನ್ನಿಧಿಯಿಂದ ಮಹಾಸನ್ನಿಧಿಯ ಕೃಪಾಪಾತ್ರರಾದ ಸಮಸ್ತಭಕ್ತಾದಿಗಳಿಗೆ ಈ ಮೂಲಕ ಅಪ್ಪಣೆಕೊಡಿಸುವುದೇನೆಂದರೆ—ತರೀಕೆರೆ ತಾಲ್ಲೂಕು ಶ್ರೀನಂದೀಕ್ಷೇತ್ರದಲ್ಲಿ ಪದ್ಧತಿಪ್ರಕಾರ ಶ್ರೀಶರಣನುಲಿಯ ಚಂದಪ್ಪನವರ ಜಾತ್ರೆಯೂ, ತತ್ಸಂಬಂಧವಾದ ಗಣಾರಾಧನೆಯೂ ಇದೇ ಆಶ್ವಯುಜ ಶುದ್ಧ ಚೌತಿಯ ಲಾಗಾಯಿತು ತ್ರಯೋದಶಿ ಪರ್ಯಂತರ ನಿತ್ಯವೂ ಸಕ್ರಮವಾದ ಉತ್ಸವಾದಿಗಳೊಡನೆ ನಡೆಸಲ್ಪಡುತ್ತವೆ. ಅದ್ದರಿಂದ ಈ ಮಹೋತ್ಸವಕಾರ್ಯಕ್ಕೆ ಸರ್ವರೂ ಆಗಮಿಸಿ ಶ್ರೀ ಶರಣರ ಸೇವಾ ಮತ್ತು ಸನ್ನಿಧಿಯದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕಾಗಿ ಈ ಮೂಲಕ ಅಪ್ಪಣೆಕೊಡಿಸೋಣಾಗಿದೆ.

ವಿ. ಸೂ.—ಶ್ರೀನಂದೀಕ್ಷೇತ್ರವು ತರೀಕೆರೆ ಟವನ್ನಿಗೆ ನಾಲ್ಕು ಮೈಲಿಗಳ ದೂರದಲ್ಲಿ ಲಿಂಗದಹಳ್ಳಿ ರೋಡಿನಲ್ಲಿದೆ.

ಮಹಾಸನ್ನಿಧಿಯ ಅಪ್ಪಣೆಮೇರೆಗೆ—
ಮೊಹಾಟ್‌ದಾರ್ ಎಸ್. ನಂಜಪ್ಪ.

ಗೋಹಿಂಸಾನಿವಾರಣಮಂಡಲಿ, ತಲಕಾಡು.

ಪ್ರಿಯ ಭಾರತಭಾಂಧವರಿರಾ, ಪ್ರಿಯ ಮಾನವಸಹೋದರಿರಾ, ಈಗಿನ ಪ್ರತಿದಿನದ ನಡೆವಳಿಕೆಯಲ್ಲಿಯೂ ಗೋಹಿಂಸಾಕಾರ್ಯಗಳು ಅಸಂಖ್ಯಾಕವಾಗಿ ನಮ್ಮ ದೃಷ್ಟಿಗೆ ಗೋಚರವಾಗುತ್ತಲೇ ಇರುವುವು. ನಾವು ಇಲ್ಲವೇ ನಮ್ಮ ಸಹೋದರರು ಈ ಪಾಪಕಾರ್ಯದಲ್ಲಿ ಯಾವುದಾದರೊಂದು ವಿಧವಾಗಿ ಭಾಗಿಗಳೇ ಆಗಿದ್ದೇವೆ. ಆದುದರಿಂದ ಗೋಹಿಂಸಾನಿವಾರಣಧರ್ಮವು ನಮ್ಮಗಳ ಮುಖ್ಯ ಕರ್ತವ್ಯವಾಗಿದೆ. ಪರಮಪವಿತ್ರವಾದ ಜಾನ್ಹವೀ ಯಮುನಾಪೂತವಾದ ಅಖಿಲಭಾಗ್ಯನಿಧಿಯಾದ ಪರಮಾತ್ಮನ ಪರಮಾವತಾರಗಳಿಂದ ಪಾವನವಾದ ನಮ್ಮ ಪರಮಪೂಜ್ಯಮಹರ್ಷಿಗಳ ಜನ್ಮಸ್ಥಾನವಾದ ಭಾರತವರ್ಷದ ಭಾಗ್ಯಪುತ್ರರಿರಾ, "ಅಹಿಂಸಾಪರಮೋಧರ್ಮಃ" ಎಂಬ ಶ್ರುತಿಸಾರಗರ್ಭಿತವಾದ ವಾಕ್ಯವು ನಿಮ್ಮ ಶ್ರೋತ್ರೇಂದ್ರಿಯಕ್ಕೆ ಗೋಚರವಾಗುವುದಿಲ್ಲವೇ ? ಗೋಕುಲೋದ್ಭವನಾದ ಗೋಪಾಲನ ಗೋರಕ್ಷಣಲೀಲೆಗಳನ್ನು ಮರೆತಿರುವಿರಾ ? ಶ್ರೇಷ್ಠರಾದ ವಸಿಷ್ಠದಿಲೀಪರು ನಂದಿನೀ-ಧೇನುಪೂಜಾಸಕ್ತರಾಗಿದ್ದುದು ನಿಮ್ಮ ಗಣನೆಗೆ ಬೀಳಲಿಲ್ಲವೇ ? ಕ್ಷೀರಾಬ್ಧಿಯಲ್ಲಿ ಲೋಕಮಾತಾ ಸಹೋದರಿಯಾಗಿ ಉದ್ಭವಿಸಿದ ಸಕಲ ಇಷ್ಟಾರ್ಥದಾಯಿನಿಯಾದ ಕಾಮಧೇನುವನ್ನು ಮರೆತಿರಾ ? ಯುಕ್ತಾಯುಕ್ತ ವಿವೇಚನ ವಿಮರ್ಶನ ಜ್ಞಾನಯುಕ್ತರಾದ ಭಾರತೀಯರಿರಾ, ಪವಿತ್ರಳಾದ ಗೋಮಾತೆಯನ್ನು ಸರ್ವಥಾ ನಿರಾಕರಿಸಬೇಡಿರಿ. ಭಾರತಭಾಗ್ಯಕ್ಕೆ ಕಾರಣಗಳಾದ ಗೋವೃಷಭಗಳನ್ನು ಕಟುಕರ ಕತ್ತಿಗೆ ಗುರಿಯಾಗಿಸಬೇಡಿರಿ. ಗೋಸೇವೆಯೇ ದೇಶಸೇವೆಯು ಮತ್ತು ದೇವರಸೇವೆಯು. ಇತಿ ಸ್ವಸ್ತಿಗೋಭ್ಯಃ.

ಗೋಮಾತೆಯ ಚರಣಸೇವಕ, ಟಿ. ಎಸ್. ಸಿದ್ಧಲಿಂಗಪ್ಪ.

ಶ್ರಾವಣಪೂಜಾಮಹೋತ್ಸವ.

ನೈಜಾಂ ಇಲಾಖ ಗುರುಮಠಕಲ್ಲು ಗ್ರಾಮಕ್ಕೆ ಹರದಾರಿ ದೂರದಲ್ಲಿ ಗುಡ್ಡಗಾಡುಗಳ ಮಧ್ಯದಲ್ಲಿ ಬಹುಮನೋಹರವಾದ ಭೋಗಬಂಡೆ ಎಂಬ ಪ್ರೇಕ್ಷಣೀಯವಾದ ಪವಿತ್ರಸ್ಥಲವೊಂದಿರುವದು. ನೂರಾರು ವರ್ಷಗಳ ಹಿಂದೆ ಶಿವೈಕ್ಯರಾದ ಶ್ರೀಮನ್ನೀರಡಗುಂಭದ ಸಿದ್ಧಲಿಂಗಮಹಾಸ್ವಾಮಿಗಳು ಆ ವಿಪಿನಪ್ರದೇಶಕ್ಕೆ ಆಗಾಗ್ಗೆ ಗಮಿಸುತ್ತ ಅಲ್ಲಿ ಅರ್ಚನ ಅನುಷ್ಠಾನಗಳಂ ಮಾಡಿ ಅದನ್ನು ಪಾವನವನ್ನಾಗಿ ಮಾಡಿರುವರು. ಅಲ್ಲಿ ಅವರ ಶಿಷ್ಯರಾದ ಕೈ|| ಶ್ರೀ ಸಿದ್ಧಲಿಂಗಸ್ವಾಮಿಗಳು ಮಠವನ್ನು ಕಟ್ಟಿಸಿರುವರು. ಸೃಷ್ಟಿವೈಚಿತ್ರ್ಯದ ಅಲ್ಲಿಯ ಜಲಾಶಯವನ್ನು ಕಂಡವರಿಗೆ ಆ ಕ್ಷೇತ್ರದ ಯೋಗ್ಯತೆಯು ತಾನಾಗಿ ಗೋಚರವಾಗದಿರದು. ಇಲ್ಲಿ ಗತ ಶ್ರಾವಣ ಶು|| ೫ ಇಂದ ಪ್ರತಿದಿವಸ ನೂರಾರುಜನ ಗಣತೃಪ್ತಿಯೊಡನೆ ಶ್ರೀ ಪಾದಪೂಜೆಯೂ, ಶ್ರೀ ವೀರಶೈವಾಮೃತಮಹಾಪುರಾಣಶ್ರವಣವೂ ಪ್ರಕೃತದ ಸ್ವಾಮಿಗಳವರಿಂದ ಜರುಗಿಸಲ್ಪಟ್ಟಿತು. ತತ್ಸಂಬಂಧವಾದ ಮಂಗಲಾರಾಧನೆಯು ಗತ ಭಾದ್ರಪದ ಶು|| ೧೦ ಯಲ್ಲಿ ನೆರವೇರಿತು. ವರ್ಷಾಕಾಲದ ತೊಂದರೆಯಲ್ಲೂ ಆ ವಿಪಿನಪ್ರದೇಶದಲ್ಲಿ 7-8 ನೂರುಜನ ಮಾಹೇಶ್ವರರು ಪ್ರಮುಖಭಕ್ತರು, ಗೌಡರು, 4 ಸಾವಿರಕ್ಕೆ ಮೇಲ್ಪಟ್ಟು ಮತಾಂತರದವರು ಬಂದಿದ್ದರು. ಮಠಾಧೀಶರಾದ ಶ್ರೀ|| ಸಿದ್ಧಲಿಂಗಸ್ವಾಮಿಗಳವರ ಕರ್ತವ್ಯ ಜಾಗರೂಕತೆಯಿಂದ ಆ ದಿವಸ ಮಳೆಬರುತ್ತಿದ್ದರು ಕೂಡ ನೆರೆದಿದ್ದ ಜನರಿಗೆ ಯಥಾಮತಿ ಭೋಜನಾದ್ಯುಪಚಾರವು ಜರುಗಿ ಮಾಹೇಶ್ವರರಿಗೆ ಶ್ರೀಯುತ ಚಿನ್ನಾಕಾರಗೌಡ ಸಿದ್ಧರಾಮಪ್ಪನವರಿಂದ ದಕ್ಷಿಣೆಯು ಕೊಡಲ್ಪಟ್ಟಿತು. ಆದ್ಯಂತವಾಗಿ ಗುರುಮಠಕಲ್ಲಿನ ಭಕ್ತಮಂಡಲಿಯವರು ಯಥಾಶಕ್ತಿ ಗಣತೃಪ್ತಿಯನ್ನು ಮಾಡುವುದರೊಂದಿಗೆ ಎಲ್ಲತೆರದ ವ್ಯವಸ್ಥೆಗೆ ಲೋಪಬಾರದಂತೆ ಕಾರ್ಯವನ್ನು ಪೂರೈಸಿದರು. ಇದು ಶ್ರೀಮನ್ನಿರಂಜನ ಗುರುಮಠಕಲ್ಲು ಶ್ರೀ|| ಸ್ವಾಮಿಗಳವರ ಸಂಸರ್ಗಮಹಿಮೆಯೇ ಸರಿ. ಶಾಖಾಶಿವಯೋಗಮಂದಿರಕ್ಕೆ ಇದು ಯೋಗ್ಯವಾದಸ್ಥಲವೆಂದರೆ ಅತಿಶಯೋಕ್ತಿ ಎನಿಸದು. ಅಧಿಕಾರಿಗಳಾದ ಶ್ರೀ ಸ್ವಾಮಿಗಳು ಇನ್ನುಳಿದ ಸಮಾಜಸುಧಾರಣೆಯಕಡೆಗೂ ಲಕ್ಷ್ಯಕೊಡುವರೆಂದು ನಂಬಿರುವ,

ಓರ್ವ ಪ್ರತ್ಯಕ್ಷದರ್ಶಿ.

ಫಿಲಡಲ್ಫಿಯಾದಲ್ಲಿ ಮುಷ್ಟಿಕಾಳಗದಲ್ಲಿ ಪ್ರಖ್ಯಾತನಾದ ಡಂಪ್ಸೆಗೂ ಟನ್ ಎಂಬುವವನಿಗೂ ಮುಷ್ಟಿಕಾಳಗವು ನಡೆದಿತು. ಈ ಕಾಳಗವನ್ನು ನೋಡಲು 1,30,000 ಜನರು ಸೇರಿದ್ದರು, ಮತ್ತು ಟಿಕೆಟ್ಟಿನ ಮಾರಾಟದಿಂದ 20,00,000 ಡಾಲರುಗಳುತ್ಪನ್ನವಾಯಿತು. ಕಾಳಗದಲ್ಲಿ ಎತ್ತಿಕೊಳ್ಳುತ್ತಲೆ ಡಂಪ್ಸೆಯು ಟನ್ನಿಯಮೇಲೆ ಬೀಳಲು ನುಗ್ಗಿದನಾದರೂ ಟನ್ನಿಯು ಸಿಕ್ಕದೆ ತಪ್ಪಿಸಿಕೊಂಡು ಉಭಯರೂ ಮುಷ್ಟಿಗಳಿಂದ ಬಲವಾಗಿ ಹೊಡೆದಾಡಿದರು. ಡಂಪ್ಸೆಯು 1 ಮತ್ತು ೨ ನೇ ದಮ್ಮುಗಳಲ್ಲಿ ಟನ್ನಿಯನ್ನು ಸೋಲಿಸಿದನು. ಮೂರನೇ ದಮ್ಮಿನಲ್ಲಿ ಟನ್ನಿಯ ಬಾಯಿನಲ್ಲಿ ರಕ್ತವು ಬಹಳವಾಗಿ ಸುರಿಯುತ್ತಿದ್ದಿತು. ಆದರೂ ಡಂಪ್ಸೆಯನ್ನು ಪೂರಾಹೊಡೆದನು. ಡಂಪ್ಸೆಯು ೪ ನೇ ದಮ್ಮಿನಲ್ಲಿ ಪೂರಾಪೆಟ್ಟನ್ನು ತಿಂದು ರಕ್ತವನ್ನು ಕಾರುತ್ತಿದ್ದುದು ನೋಟಕರಿಗೆ ಬಹಳ ಭಯಂಕರವಾಗಿದ್ದಿತು. ಹತ್ತನೆಯ ದಮ್ಮಿನಲ್ಲಿ ಡಂಪ್ಸೆಯಕಣ್ಣುಗಳು ಮುಚ್ಚಿ ಹೋಗಿದ್ದುವು ಮತ್ತು ಟನ್ನಿಯು ಡಂಪ್ಸೆಯ ಶರೀರಕ್ಕೆ ಪೂರಾಪೆಟ್ಟನ್ನು ಹಾಕಿ ಸೋಲಿಸಿದನು. ನಾಗರಿಕತೆಯಶಿಖರವನ್ನೇರಿರುವ ಪಾಶ್ಚಾತ್ಯರು ಇಂತಹ ಭಯಂಕರವೂ ಹೃದಯದ್ರಾವಕವೂ ಆದ ವಿನೋದಗಳಲ್ಲಿ ಆಸಕ್ತರಾಗಿರುವುದು ಸಖೇದಾಶ್ಚರ್ಯಕರವಾಗಿದೆ.

ದೊಡ್ಡಬಳ್ಳಾಪುರದ ಉಪಾಧ್ಯಾಯರ ಸಂಘ.

ಈ ತಿಂಗಳು ೨ನೇ ತಾ|| ಶನಿವಾರ ದೊಡ್ಡಬಳ್ಳಾಪುರದ ಮಿಡಲ್ ಸ್ಕೂಲು ಹಾಲಿನಲ್ಲಿ ಮೇಲ್ಕಂಡ ಸಂಘದ ಮೀಟಿಂಗು ತುಂಬಾ ಉತ್ಸಾಹದಿಂದ ನೆರವೇರಿತು. ಸಾಗರದ ಸಬ್‌ಡಿವಿಜನ್ ಆಫೀಸರಾದ ಮ|| ಡಿ. ಸಿ. ಸುಬ್ಬರಾಯಪ್ಪ, ಬಿ.ಎ., ಬಿ.ಎಲ್., ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಭೆಗೆ ಮ|| ಗಳಾದ ಡಿ. ಕೊಂಗಾಡಿಯಪ್ಪನವರು, ಕೃಷ್ಣಾಚಾರ್ಯರವರು, ಸೈಯದ್ ಬುರಾನುದ್ದೀನ್ ಸಾಹೇಬ್‌ರವರು, ಸಂಘದ ಮೆಂಬರುಗಳು, ಇನ್ನೂ ಅನೇಕರು ದಯಮಾಡಿಸಿದ್ದರು. ಉಪಾಧ್ಯಾಯರಿಗೆ ಅತ್ಯುಪಯುಕ್ತವಾದ ಉಪನ್ಯಾಸಗಳೂ, ಮಾದರೀಪಾಠಗಳೂ ನಡೆಸಲ್ಪಟ್ಟುವು. ಸಭೆಯು ಮುಕ್ತಾಯವಾಗುವುದಕ್ಕೆ ಮೊದಲು ಅದೇ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದ ಮತ್ತು ಕೆಲವು ವರ್ಷಗಳ ಹಿಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದ ಮ|| ಡಿ. ಸಿ. ಸುಬ್ಬರಾಯಪ್ಪನವರು ಉಚಿತ ಭಾಷೆಯಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ವಿದ್ಯಾಪಾರಂಗತೆಗೆ ಪ್ರಾಥಮಿಕ ವಿದ್ಯಾಭ್ಯಾಸವೇ ಅಸ್ತಿಭಾರವೆಂತಲೂ, ಪ್ರಾಥಮಿಕ ಪಾಠಶಾಲೋಪಾಧ್ಯಾಯರು ಮಕ್ಕಳ ವಿದ್ಯಾಭ್ಯಾಸದಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿರುವರೆಂತಲೂ; ಅನೇಕ ಮುಂದುವರಿದ ದೇಶಗಳಲ್ಲಿ ಘನವಿದ್ವಾಂಸರು ಮೇಲ್ಕಂಡ ವಿಷಯಗಳಿಗೆ ಗಮನಕೊಟ್ಟು, ಆ ಸ್ಥಳಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಮೇಲ್ವಿಚಾರಣೆಗೆ ಅನುಭವಶಾಲಿಗಳೂ ಸಮರ್ಥರೂ ಪ್ರಖ್ಯಾತರೂ ಆದ ಘನವಿದ್ವಾಂಸರೇ ನಿಯಮಿಸಲ್ಪಟ್ಟಿರುವರೆಂತಲೂ ; ಘನ ಸರ್ಕಾರದವರಿಂದ ಸರ್ವಜನೋಪಯುಕ್ತವಾದ ವಿದ್ಯಾಭ್ಯಾಸವು ಪ್ರಚುರವಾಗುತ್ತಿರುವ ನಮ್ಮ ಸಂಸ್ಥಾನದಲ್ಲಿ ಆಧುನಿಕ ವಿದ್ಯಾವಂತರ ಅಭಿಮತಗಳ ಪ್ರಕಾರ ವಿದ್ಯಾಭ್ಯಾಸವು ಶೀಘ್ರದಲ್ಲಿಯೇ ನಡೆಸಲ್ಪಡುವುದರಲ್ಲಿ ಸಂಶಯವಿಲ್ಲವೆಂತಲೂ ; ಈಗಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ಅಲ್ಪ ಸಂಬಳವು ಬರುತ್ತಿದ್ದರೂ ಧೈರ್ಯಗುಂದದೆ ಇರಬೇಕೆಂತಲೂ; ಈಚೆಗೆ ಬೆಂಗಳೂರಲ್ಲಿ ನಡೆದ ಇನ್‌ಸ್ಪೆಕ್ಟಿಂಗ್ ಆಫೀಸರ ಕಾನ್‌ಫರೆನ್‌ಸಿನಲ್ಲಿ ಕೆಳನೌಕರರ ಸಂಬಳವನ್ನು ಪುನರ್ವಿಮರ್ಶಿಸಿ, ಹೆಚ್ಚಿಸಬೇಕೆಂದು ನಮ್ಮ ಘನಹೊಂದಿದ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿರುವರೆಂತಲೂ ಹೇಳಿದರು. ತರುವಾಯ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾದನಂತರ ಸಭೆಯು ಮುಕ್ತಾಯವಾಯಿತು.

ಸಭೆಯಲ್ಲಿದ್ದವನು.

ಬಳ್ಳಾರಿ ಜಿ|| ಕಂಪ್ಲಿಯ ವೀರಶೈವತರುಣಸಂಘದವರ ಅಭಿನಂದನ.

ಸಮಾಜಹಿತವನ್ನೇ ತನ್ನ ಕರ್ತವ್ಯಕರ್ಮವೆಂದು ಬಗೆದಿರುವ (ಸೆಪ್ಟಂಬರ್ ತಾರೀಕು ೧೮ ನೆಯ) ಸ್ಟಾರ್‌ಪತ್ರಿಕೆಯ ೩೮ ನೇ ಸಂಚಿಕೆಯ ೫ ನೇ ಪುಟದ ೧ ನೇ ಕಾಲಮ್ಮಿನಲ್ಲಿ ಕಂಪ್ಲಿ ವೀರಶೈವತರುಣಸಂಘದವರು ಶ್ರೀಮಜ್ಜಗದ್ಗುರು ಹಿಮವತ್ಕೇದಾರದ ಸಿಂಹಾಸನಾಧೀಶ್ವರರ ಸನ್ನಿಧಿಯಲ್ಲಿ ಬಿನ್ನೈಸಿದ ವಿಷಯವು ಗೋಚರವಾಯಿತು. ಕಂಪ್ಲಿಯ ವೀರಶೈವತರುಣರು ನಿಸರ್ಗವಾದ ಸಮಾಜಾಭಿಮಾನದೊಡನೆ ಬರೆದ ಈ ಬರವಣಿಗೆಯು ಇನ್ನುಳಿದ ವೀರಶೈವರಿಗೆ ಮಾರ್ಗದರ್ಶಕವೆಂದೆನ್ನಲು ಯಾವ ಸಂದೇಹವಿಲ್ಲ. ನಮ್ಮ ಗುರುವರ್ಗ್ಯತಿವರ್ಗದವರ ಅಂತಃಕಲಹದ ಮಹಿಮೆಯಿಂದಲೂ, ಅದೂರದರ್ಶಿಗಳೂ ಸಮಾಜದ ಹಿತಶತೃಗಳೂ ಆದ ಕೆಲ ಆಧುನಿಕ ಪಂಡಿತರು ಶ್ರೀ ಬಸವೇಶ್ವರನ ನಿಂದೆಗೆ ತೊಡಗಲು, ನಮ್ಮ ಪೂಜ್ಯರಾದ ಗುರುವರ್ಗದವರು ಅಂತಹ ಧರ್ಮದ್ರೋಹಿಗಳಿಗೆ ಆಶ್ರಯವನ್ನು ಕೊಟ್ಟ ಫಲದಿಂದಲೂ, ಕಲ್ಪವೃಕ್ಷಪ್ರಾಯವಾದ ಮಹಾಸಭೆಯ ಸಂದರ್ಶನವು ಕೆಲ ವರ್ಷಗಳಿಂದಲೂ ಲಭಿಸದಂತಾದುದು ಸಖೇದಾಶ್ಚರ್ಯಕರವು. ಭರತಖಂಡದ ಈಗಿನ ಪರಿಸ್ಥಿತಿಯಲ್ಲಿ ಅಂತ್ಯಜರೇ ಮೊದಲುಗೊಂಡು ಎಲ್ಲಾತರದ ಜನಾಂಗದವರೂ ತಮ್ಮ ಅಭ್ಯುದಯದಕಡೆಗೆ ಲಕ್ಷ್ಯ ಕೊಟ್ಟು ಸಭೆಗಳನ್ನು ಕೂಡಿಸಿ ಮುಂದುವರಿಯಲು ಸಾಹಸಪಡುತ್ತಿದ್ದರೂ, ಮತಸುಧಾರಣೆಗೂ ಸ್ಥಾಪನೆಗೂ ಯಾವ ಜಗದ್ಗುರು ಪೀಠದವರು ಮೂಲಭೂತರೋ, ಅವರೇ ತಟಸ್ಥರಾಗಿ "ಮಡಕೆಯುಣಕಲಿತಂತೆ" ಸಮಾಜದ ಶ್ರೇಯಸ್ಸಿಗೆ ಸಾಧನೀಭೂತವಾದ, ಸಭೆಗಳ ಮತ್ತು ಸುಧಾರಣೆಗಳ ಕಡೆಗೆ ಸ್ವಲ್ಪದಲ್ಲಿಯೂ ಗಮನಕೊಡದೆ ಇರುವುದು ಮತದ ಮಂದಭಾಗ್ಯದ ಮಹಿಮೆಯೆಂದರೆ ಅತಿಶಯೋಕ್ತಿಯಾಗಲಾರದು. ಬರೇ ಶಿಷ್ಯಾರ್ಜನೆಗಾಗಿ ಸಂಚರಿಸುವುದೇ ತಮ್ಮ ಧ್ಯೇಯವೆಂದು ಬಗೆಯುವುದರ ಜತೆಗೆ ನಮ್ಮ ಅಂತಃಕಲಹಗಳನ್ನು ನಿರ್ಮೂಲಗೊಳಿಸುವುದರಲ್ಲಿಯೂ ಪ್ರಮಥರ ನಿಂದೆಗೆ ತೊಡಗಿದ ಪಂಡಿತಮೂರ್ಖರಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡುವುದರಲ್ಲಿಯೂ ಗ್ರಂಥೋದ್ಧರಣಾದಿಕಾರ್ಯಗಳಲ್ಲಿಯೂ ತಮ್ಮ ಅಸಮಸಾಹಸವನ್ನು ವಿನಿಯೋಗಿಸಿದ್ದರೆ ಅವರ ಜಗದ್ಗುರುತ್ವಕ್ಕೆ ಎಷ್ಟೋ ಭೂಷಣಪ್ರದವಾಗುತ್ತಿತ್ತು. ಅಂತಹ ಸಮಯವೆಂದು ಸನ್ನಿಹಿತವಾಗುವುದೋ ದೇವರೇ ಬಲ್ಲ ! ಸ್ವಾಭಾವಿಕವಾಗಿ ಶಿಷ್ಯರು ದೋಷಯುಕ್ತರಾಗುತ್ತಿರುವವರನ್ನು ಎಚ್ಚರಿಸಿ ತಮ್ಮ ಅಮೋಘವಾದ ಸದ್ಬೋಧೆಯಿಂದ ದೋಷಮುಕ್ತರನ್ನಾಗಿ ಮಾಡುವುದು ಗುರುತ್ವದ ಧರ್ಮ. ಹೀಗಿದ್ದು ಶಿಷ್ಯವರ್ಗದವರು ಗುರುವರ್ಗದವರ ಪರಿಸ್ಥಿತಿಗೆ ಬೇಸತ್ತು ಅವರನ್ನು ಬಿರಮಾಡಿಕೊಳ್ಳುವ ಸಂದರ್ಭದಲ್ಲಿ ಈ ತೆರದ ಲೇಖನಗಳಿಗೆ ಅವಕಾಶವಾದುದು ಗುರುವರ್ಗದವರ ಕರ್ತವ್ಯ ಪರಾಙ್ಮುಖತೆಯ ಫಲವೇ ಸರಿ. ಪ್ರಯುಕ್ತ ಅನ್ಯರಿಗೆ ಗುಣಪಾಠವಾದ ಕಂಪಲಿಯ ವೀರಶೈವತರುಣಸಂಘದವರ ನಿರ್ಧಾರಗಳಿಗೆ ತುಂಬಾ ಹರ್ಷಿಸಿ ಈ ಮೂಲಕ ಅವರಿಗೆ ನನ್ನ ಅಭಿನಂದನವನ್ನು ಅರ್ಪಿಸುವೆನು.

ಓರ್ವ ಸತ್ಯವಾದಿ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ,

ಮತಬಾಂಧವರ ಔದಾರ್ಯ.

ಕಾನಕಾನಹಳ್ಳಿಯ ಮ|| ಗುರುಕಾರ್ ಚನ್ನಬಸಪ್ಪನವರ ಉಗ್ರರಥಶಾಂತಿಮಹೋತ್ಸವಕಾಲದಲ್ಲಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಮೂಲಧನಕ್ಕೆ ಅಪ್ರಾರ್ಥರಾಗಿ 501 (ಐನೂರು ಒಂದು) ರೂ. ಮತ್ತು ಅದೇ ಸಮಯದಲ್ಲಿ ದಕ್ಷಿಣೆಗಾಗಿ 1 ರೂ. ಅಂತು 502 ರೂಪಾಯಿಗಳನ್ನು ಈಶ್ವರ ಪ್ರೀತ್ಯರ್ಥವಾಗಿ ಸಂತೋಷದಿಂದ ಕೊಟ್ಟಿರುತ್ತಾರೆ. ಮೇಲ್ಕಂಡ ಧರ್ಮತತ್ಪರರು ಸ್ವಮತಾಭಿಮಾನದಿಂದಲೂ ವಿದ್ಯಾಭಿಮಾನದಿಂದಲೂ ಮಾಡಿದ ಸಹಾಯಕ್ಕಾಗಿ ಅವರಿಗೆ ವೀರಶೈವಸಮಾಜದ ಪರವಾಗಿ ಸಂಘದವರು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾರಲ್ಲದೆ, ಸಮಾಜಬಾಂಧವರಾದ ಇತರರೂ ಅವರ ಮೇಲ್ಪಂಕ್ತಿಯನ್ನು ಅನುಸರಿಸುವರೆಂದು ಪೂರ್ಣ ನಂಬಿರುತ್ತಾರೆ.

ಬೆಂಗಳೂರು, } ಎಂ. ನಾಗಪ್ಪ, ಜಿ. ಪರಮಶಿವಯ್ಯ,
6-10-26. } ಅ|| ಸೆಕ್ರೆಟರಿ. ಸೆಕ್ರೆಟರಿ.

ಶ್ರೀ ಖಾಸ್ಗತ ಶಿವಯೋಗಿವರ್ಯರ ಪುಣ್ಯತಿಥಿ.

ಬಿಜಾಪುರ ಡಿ|| ತಾಳಿಕೋಟಿಯ ಶ್ರೀ ಶಿವಯೋಗಿಗಳ ತಪಃಪ್ರಭಾವದಿಂದ ಪುನೀತವಾಗಿದ್ದು ಅನೇಕ ವರ್ಣಾಶ್ರಮದ ಜನರಿಂದ ಸುಶೋಭಿತವಾಗಿದೆ. ಈ ಪೂರ್ವೋಕ್ತಮಹನೀಯರು ಶಿವಸಾಯುಜ್ಯವನ್ನು ಹೊಂದಿ ಮುವ್ವತ್ತು ವರ್ಷಗಳಾದವು. ತಥಾಪಿ ಅವರು ಹಾಕಿಕೊಟ್ಟ ಕೆಲವು ಪದ್ಧತಿಗಳನ್ನು ಇಲ್ಲಿಯ ಮಹಾಜನರು ನಿರಾತಂಕವಾಗಿ ನಡಿಸುತ್ತಿರುವರು. ಭಿನ್ನಭಿನ್ನ ವೃತ್ತಿಯುಳ್ಳ ಜನರು ಕೂಡ ಈ ಮಹನೀಯರ ವಿಷಯದಲ್ಲಿ ವಿಶೇಷಭಕ್ತಿಯುತರೂ ಪೂಜ್ಯಬುದ್ಧಿಯುಳ್ಳವರೂ ಆಗಿರುವರು. ಇದಕ್ಕೆಲ್ಲ ಮೇಲ್ಕಂಡ ಮಹಾನುಭಾವರ ಬ್ರಹ್ಮತೇಜಸ್ಸೇ ಕಾರಣವಾಗಿರುವದು. ಬ್ರಹ್ಮತೇಜಸ್ಸಿನಿಂದ ಈ ಜಗತ್ತೇ ವಶವಾಗುವದೆಂಬ ಬಗ್ಗೆ ಪೂರ್ವದ ಎಷ್ಟೋ ಉದಾಹರಣೆಗಳುಂಟು. ಮುಖ್ಯ ಬ್ರಹ್ಮಬಲವೇ ಬಲವೆಂದು ವಿಶ್ವಾಮಿತ್ರನು ಎಷ್ಟೋ ವರ್ಷಗಳವರೆಗೆ ಕಠಿಣತಪಸ್ಸನ್ನಾಚರಿಸಿ ಬ್ರಹ್ಮರ್ಷಿ ಆದನು. ಈ ಮಹನೀಯರಾದರೂ ತಮ್ಮ ಬ್ರಹ್ಮತೇಜಸ್ಸನ್ನು ಈ ಗ್ರಾಮದಲ್ಲಿ ಸಂಪೂರ್ಣ ನೆಲೆಗೊಳಿಸಿದ ಕಾರಣ ಸರ್ವರೂ ಭಕ್ತಿಯುತರಾದ್ದರಲ್ಲಿ ಮಹದಾಶ್ಚರ್ಯವೇನೂ ಇಲ್ಲ. ಇರಲಿ, ಈ ಮಹಾನುಭಾವರು ಭಾದ್ರಪದವದ್ಯ ಪಂಚಮಿ ದಿವಸ ಶಿವಸಾಯುಜ್ಯವನ್ನು ಹೊಂದಿದಕಾರಣ ಪ್ರತಿವರ್ಷ ಸದರೀ ದಿವಸ ಪೂಜ್ಯ ಭಕ್ತ್ಯನುಸಾರ ಅನ್ನಸಂತರ್ಪಣಾದಿ ಕಾರ್ಯಗಳು ನಡಿಯುತ್ತಲೇ ಇದ್ದವು. ಆದರೆ ಈ ವರ್ಷ ಮಹನೀಯರ ಕೃಪಾಬಲದಿಂದಲೂ ಮ|| ಹರ್ಡೇಕರ ಮಂಜಪ್ಪನವರ ಸದ್ಬೋಧದಿಂದಲೂ ತರುಣಸಂಘಸ್ಥಾಪನೆಯಾಗಿದೆ. ಈ ತರುಣಸಂಘದವರು ಬಹು ಕಳಕಳಿಯಿಂದ ತಮ್ಮ ಶ್ರಮವನ್ನು ಲಕ್ಷಿಸದೇ ವಿಶೇಷ ದ್ರವ್ಯಸಂಚಯನಮಾಡಿ ಪ್ರತಿವರ್ಷಕ್ಕಿಂತಲೂ ವಿಶೇಷವಾಗಿ ಅನ್ನದಾನಾದಿಗಳನ್ನು ಮಾಡಿದರು. ಸಾಯಂಕಾಲ ತರುಣಸಂಘದ ಪ್ರೆಸಿಡೆಂಟರೂ ಶಿದ್ಧರಾಮಪ್ಪಾ ಅಣ್ಣಾ ಯಲಟ್ಟಿ ಇವರ ಪ್ರಾರ್ಥನೆಯಂತೆ ತಮ್ಮ ಸಂಘದ ಸಜ್ಜನರೂ ದಯಾದಾಕ್ಷಿಣ್ಯಾದಿ ಗುಣಯುಕ್ತರೂ ಜ್ಞಾನವೃದ್ಧರೂ ಶಾಂತಚಿತ್ತರೂ ಆದ ಮ|| ೫ ನೇ ಅ|| ಯ|| ಕೆ|| ಡಿ|| ಇ|| ಶೆಟ್ಟಿ ಸಾಹೇಬರ ಅಧ್ಯಕ್ಷತೆಯಲ್ಲಿ ಮಹಾಸಭೆಯು ನಡೆದಿತು. ಸಭಾರಂಭದಲ್ಲಿ ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳು ಶ್ರೀಮತ್ಪೂಜ್ಯಪಾದರ ಪರವಾದ ಸ್ತೋತ್ರಗಳನ್ನು ಹಾಡಿ ಆನಂದಗೊಳಿಸಿದನಂತರ ಈ ಸಂಸ್ಥಾನಮಠದ ಭಾವೀ ಅಧಿಪತಿಗಳಾದ ಶ್ರೀ ಶಿವಬಸವದೇವರು, ವಿದ್ಯಾರ್ಥಿ ಶಿವಯೋಗಿ ಕಾಶೀಪತಿ ಮೊದಲಾದವರು ಮಹನೀಯರ ಚರಿತ್ರೆಯಮೇಲೂ ಪಾಠಶಾಲಾಧ್ಯಾಪಕ ವೇ|| ಪಂ|| ವಿರುಪಾಕ್ಷಶಾಸ್ತ್ರಿ ಕಾವ್ಯತೀರ್ಥ ಇವರು ವೈರಾಗ್ಯ ವಿಷಯದಮೇಲೂ ಸರ್ವರಿಗೂ ಬೋಧವಾಗುವಂತೆ ಭಾಷಣಗಳನ್ನು ಮಾಡಿದರು. ನಂತರ ಮ|| ಅಮರಗೌಡ ಮಾಸ್ತರ ಇವರೇ ಮೊದಲಾದವರ ಭಾಷಣಗಳಾದವು. ಕಡೆಯಲ್ಲಿ ಅಧ್ಯಕ್ಷಮಹಾಶಯರು ಪೂರ್ವೋಕ್ತವಿಷಯಗಳನ್ನೆಲ್ಲಾ ಕ್ರೋಢೀಕರಿಸಿ ಹೇಳಿದ್ದಲ್ಲದೆ ಬ್ರಹ್ಮಚರ್ಯ ಅಂದರೇನು ಅದರಿಂದಾಗತಕ್ಕ ಮಹತ್ವವೇನು, ಎಂಬ ಬಗ್ಗೆ ಸರ್ವರ ಮನಸ್ಸಿನ ಮೇಲೆ ಪರಿಣಾಮವಾಗುವಂತೆಯೂ ಮಹನೀಯರ ವಿಷಯದಲ್ಲಿ ವಿಶೇಷಪೂಜ್ಯಬುದ್ಧಿ ಉಂಟಾಗುವಂತೆಯೂ ಸರಸವಾಗಿ ಭಾಷಣಮಾಡಿದರು. ಅನಂತರ ಸ್ತೋತ್ರ ಗಾನ ಮಂಗಲಾರತಿಗಳು ಜರುಗಿ ಆಗಮಿಸಿದ್ದ ಮಹಾಜನರಿಗೆ ತಾಂಬೂಲಾದಿಗಳ ವಿನಿಯೋಗದಿಂದ ಸಭೆಯು ವಿಸರ್ಜನೆಮಾಡಲ್ಪಟ್ಟಿತು. ಈ ಮಹತ್ಕಾರ್ಯಕ್ಕೆ ಪೂರ್ವೋಕ್ತ ತರುಣಸಂಘವೇ ಮೂಲಕಾರಣವಾದ್ದರಿಂದ ಸದರಿ ಸಂಘಕ್ಕೆ ಸಂಪೂರ್ಣಗ್ರಾಮವೇ ಋಣಿಯಾಗಿದೆಯೆಂದರೇನೂ ಅತಿಶಯೋಕ್ತಿಯಾಗಲಾರದು. ಸರ್ವತಂತ್ರ ಸ್ವತಂತ್ರನಾದ ಶ್ರೀಖಾಸ್ಗತೇಶನು ಈ ತರುಣಸಂಘಕ್ಕೆ ದೀರ್ಘಾಯುವನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಸ್ಮರಿಸುವ,

ಶ್ರೀ ಖಾಸ್ಗತಸ್ವಾಮಿ ವಾಚನಾಲಯ,
ಸೆಕ್ರೆಟರಿ, ತಾಳಿಕೋಟಿ.

ಮಿಡಲ್‌ಸ್ಕೂಲ್ ಆರಂಭೋತ್ಸವ.

ತುಮಕೂರು ತಾ|| ಹೊನ್ನುಡಿಕೆಗ್ರಾಮವು 450 ಮನೆಗಳಿಂದಲೂ 1,250 ಪ್ರಜಾಸಂಖ್ಯೆಯಿಂದಲೂ, ಸತ್ಪುರುಷಸಾತ್ವಿಕಮಣಿ ಸದ್ಗೃಹಸ್ಥರುಗಳ ಸಮೂಹಗಳಿಂದಲೂ, ದೇವಾಗಾರ ಸತ್ರ ಮೊದಲಾದ ಉತ್ತಮೋತ್ತಮ ಕಟ್ಟಡಗಳಿಂದಲೂ ವಾಪೀಕೂಪತಟಾಕ ಕ್ರಮುಕಾರಾಮಗಳಿಂದಲೂ ಸುತ್ತೆರಡು ಹರದಾರಿಗಳಲ್ಲಿ ಕಂಗೊಳಿಸುತ್ತಿರುವುದು. ನಾಗರೀಕತೆಗೂ, ಪ್ರಜಾಸೌಕರ್ಯಕ್ಕೂ ತಕ್ಕಂತೆ ಒಂದು ಇನ್‌ಕಂಪ್ಲೀಟ್‌ಸ್ಕೂಲ್ ಒಂದು ಪೋಲೀಸ್ ಸ್ಟೇಷನ್, ಒಂದು ಪೋಸ್ಟಾಫೀಸ್, ಒಂದು ಗರ್ಲ್ಸ್‌ಸ್ಕೂಲ್, ಒಂದು ಕೋ-ಆಪರೇಟೀವ್ ಸೊಸೈಟಿ, ಒಂದು ವಿಲೇಜ್‌ಪಂಚಾಯಿತಿ ಆಫೀಸ್ ಇವುಗಳು ಸರ್ಕಾರದಿಂದ ಕೊಡಲ್ಪಟ್ಟು ಕಂಪ್ಲೀಟ್ ಮಿಡಲ್‌ಸ್ಕೂಲ್ ಒಂದನ್ನು ಹೊಂದಬೇಕೆಂಬ ಕುತೂಹಲವು ಈ ಗ್ರಾಮದ ಅಬಾಲವೃದ್ಧರಿಗೂ, ಅಹೋರಾತ್ರಿ ಬಾಧಿಸುತ್ತಿದ್ದಿತು. ಆದರೆ ವರ್ಷಾಂತರಗಳಿಂದ ಮಾಡಲ್ಪಡುತ್ತಿದ್ದ ಈ ಪುರಜನರ ಪ್ರಾರ್ಥನೆಯನ್ನು ಘನವನ್ನುಹೊಂದಿದ ನಮ್ಮ ಮಹಾರಾಜ ಸರ್ಕಾರದವರು ಮನಸ್ಸಿನಲ್ಲಿ ತಂದು 1926 ನೇ ಜುಲೈ ತಾ|| 1 ರಿಂದ ಕಂಪ್ಲೀಟ್ ಮಿಡಲ್‌ಸ್ಕೂಲನ್ನು ಈ ಗ್ರಾಮಕ್ಕೆ ಕೊಟ್ಟು ಪುರಜನರನ್ನು ಸಂತೋಷಾಂಬುಧಿಯಲ್ಲಿ ಮುಳುಗಿಸಿದರು. ತಮ್ಮ ಪ್ರಾರ್ಥನೆನೆರವೇರಿಸಿದುದಕ್ಕಾಗಿ ಈ ಗ್ರಾಮವಾಸಿಗಳು ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ಸಹಸ್ರಾಧಿಕವಂದನೆಗಳನ್ನು ಸಮರ್ಪಿಸುತ್ತಿದ್ದಾರೆ. ಮೇಲೆ ಕಂಡ ಮಿಡಲ್‌ಸ್ಕೂಲ್ ಪ್ರಾರಂಭೋತ್ಸವವನ್ನು ಕಳೆದ ತಾ|| ೨೮ ರಲ್ಲಿ ತುಮಕೂರು ಡಿ|| ವಿದ್ಯಾಭ್ಯಾಸದ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರ್ ಮ|| ಎಂ. ಎ. ತಿರುಮಲಾಚಾರ್, ಬಿ.ಎ., ಯವರ ಅಧ್ಯಕ್ಷತೆಯಲ್ಲಿ ಪುರಜನರೆಲ್ಲರೂ ಕೇವಲ ಅಧಿಕೋತ್ಸಾಹಗಳಿಂದ ಕೂಡಿ ವಿಜೃಂಭಣೆಯಿಂದ ನಡೆಯಿಸಿದರು. ಪ್ರಾತಃಕಾಲ ಅಲಂಕೃತವಾದ ಮಿಡಲ್‌ಸ್ಕೂಲ್ ಮುಂಭಾಗದ ಚಪ್ಪರದಲ್ಲಿ ಅನೇಕ ಮಹನೀಯರೂ, ಉಪಾಧ್ಯಾಯರೂ ಬಾಲಕರೂ ಕಲೆತು ಭಗವಂತನಿಗೆ ಪ್ರಾರ್ಥನೆಯನ್ನರ್ಪಿಸಿ, ಶ್ರೀಮದಿಂಡಿಯಾ ಚಕ್ರವರ್ತಿ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿ ಅವರ ಭಾವಚಿತ್ರಪಟಗಳನ್ನು ವಾದ್ಯಘೋಷಗಳೊಡನೆ ರಾಜಬೀದಿಗಳಲ್ಲೆಲ್ಲಾ ಮೆರವಣಿಗೆಮಾಡಿದರು. ಮಧ್ಯಾಹ್ನ 12 ಘಂಟೆಗೆ ಮೊದಲಾಗಿ ಪುರಜನರೂ ಅಕ್ಕಪಕ್ಕದ ಗ್ರಾಮಸ್ಥರೂ

ತರುಗಳೂ ಉಪಾಧ್ಯಾಯ ಮಂಡಲಿಯವರೂ ಡಿ|| ಇನ್ಸ್‌ಪೆಕ್ಟರ ಅಧ್ಯಕ್ಷತೆಯಲ್ಲೂ ರೇಂಜ್ ಇನ್ಸ್‌ಪೆಕ್ಟರ್ ಮ|| ಚೆಲುವಯ್ಯಂಗಾರರ ಉಪಾಧ್ಯಕ್ಷತೆಯಲ್ಲೂ ಬಾಲಕಬಾಲಕಿಯರಿಂದ ಆಶ್ಚರ್ಯಕರವಾದ ನೀತಿಬೋಧಕವಾದ ಮತ್ತು ಅಭಿನಯಯುಕ್ತವಾದ ಸಂಭಾಷಣೆಗಳು ನಡೆಸಲ್ಪಟ್ಟು ನೋಟಕರ ಮನಸ್ಸಿಗೆ ಆಹ್ಲಾದವನ್ನುಂಟುಮಾಡಿತು. ಇದಾದನಂತರ ಇದೇ ಗ್ರಾಮದ ಗರ್ಲ್ಸ್ ಸ್ಕೂಲ್ ಹೆ|| ಮಾ|| ಮ|| ಟಿ. ಲಕ್ಷ್ಮೀನರಸಿಂಹಶಾಸ್ತ್ರಿಗಳು ವಿದ್ಯಾಭ್ಯಾಸವು ಪುರುಷರಿಗೆ ಹೇಗೋ ಹಾಗೆ ಸ್ತ್ರೀಯರಿಗೂ ಅತ್ಯಾವಶ್ಯಕವೆಂಬುದನ್ನು ಸಪ್ರಮಾಣಗಳೊಡನೆ ಸಭಿಕರಿಗೆ ತಿಳಿಯಪಡಿಸಿದನಂತರ ಮಿಡಲ್ ಸ್ಕೂಲಿಗೆ ಈಗತಾನೆ ಹೆಡ್ಮಾಸ್ಟರಾಗಿ ಬಂದಿರುವ ಪ್ರೌಢವಿದ್ಯಾವಂತರೂ ಜನಸ್ಕೂಲಿನ ಹಿತೈಷಿಗಳೂ ಉತ್ಸಾಹಶೀಲರೂ ಆದ ಮ|| ಸಿದ್ದೀರಯ್ಯನವರು ಸ್ಕೂಲಿನ ಪ್ರಕೃತಸ್ಥಿತಿ ಸರ್ಕಾರದಿಂದ ಮತ್ತು ಗ್ರಾಮಸ್ಥರಿಂದ ಸದ್ಯದಲ್ಲಿ ಆಗಬೇಕಾದ ಸೌಕರ್ಯಗಳು ಇವುಗಳನ್ನು ವಿಸ್ತರಿಸಿದರು. ಇದೇ ಸಂದರ್ಭದಲ್ಲಿ ಮಿಡಲ್‌ಸ್ಕೂಲ್ ಸಹಾಯೋಪಾಧ್ಯಾಯರಾದ ಮ|| ಎಚ್. ಶ್ರೀನಿವಾಸರಾಯರವರು ವಿದ್ಯಾಭ್ಯಾಸದ ಮೂಲತತ್ವಗಳನ್ನು ಬಹು ಸ್ವಾರಸ್ಯವಾಗಿ ವಿವರಿಸಿದರು. ನಂತರ ಪುರಪ್ರಮುಖರಲ್ಲಿ ಮ|| ಹೆಚ್. ಸಿ. ಗುರುವೀರಾರಾಧ್ಯರು ಮತ್ತು ಯಜಮಾನ್ ರುದ್ರಪ್ಪನವರು ಇವರ ಅದ್ಭುತಭಾಷಣಗಳು ನಡೆದನಂತರ ಅಗ್ರಾಸನಾಧಿಪತಿಗಳು ಪಂಡಿತರಿಗೂ ಪಾಮರರಿಗೂ ಸುಲಭವಾಗಿ ತಿಳಿಯುವಂತೆ ವಿದೇಶವಿದ್ಯಾಭ್ಯಾಸಗಳ ನಿದರ್ಶನಗಳನ್ನು ತೆಗೆದುಕೊಂಡು ಶ್ರೋತೃಗಳಿಗೆ ಕೇವಲ ಹರ್ಷಾನಂದವನ್ನುಂಟುಮಾಡಿದರು. ರೇಂಜ್ ಇನ್ಸ್‌ಪೆಕ್ಟರ್‌ರವರೂ ಅನೇಕ ಸಲಹೆಗಳನ್ನು ಕೊಟ್ಟರು. ಮ|| ಎ. ವೆಂಕಟಕೃಷ್ಣಯ್ಯಂಗಾರ್ಯರ ಸಂಗೀತವು ಸರ್ವರಿಗೂ ಆಹ್ಲಾದವನ್ನುಂಟುಮಾಡಿತು. ತಬಲಾ ಭದ್ರಾಚಾರ್ಯರು ಪ್ರತಿಫಲಾಪೇಕ್ಷೆಯಿಲ್ಲದೆ ಸಂಗೀತೋಪಕರಣಗಳ ಸಹಿತ ಬಂದು ಬಹುಮಟ್ಟಿಗೆ ಹರ್ಷಾನಂದವನ್ನುಂಟುಮಾಡಿದರು. ಕಡೆಗೆ ಮಂಗಳಾಚರಣೆಯಾಗಿ ಅಧ್ಯಕ್ಷರಿಗೂ, ಉಪಾಧ್ಯಕ್ಷರಿಗೂ ವಂದನಾಪೂರ್ವಕವಾದ ಪುಷ್ಪಮಾಲಿಕೆಗಳೂ ಸರ್ವರಿಗೂ ಗಂಧಪುಷ್ಪ ತಾಂಬೂಲಗಳೂ ಹಂಚಲ್ಪಟ್ಟವು. ತತ್ಕ್ಷಣದಲ್ಲಿಯೇ ಬಹು ದಿನಗಳಿಂದ ನಿರೀಕ್ಷಿಸಿಕೊಂಡಿದ್ದ ಮೇಘರಾಜನು ಸುವೃಷ್ಟಿಯನ್ನು ಸುರಿಸಿದನು. ಸಭಿಕರ ಮುಖಕಮಲವು ಮತ್ತಷ್ಟು ಉತ್ಸಾಹದಿಂದ ಕೂಡಿ ವಿಕಸಿತವಾಯಿತು. ಕೃಷ್ಣಪಕ್ಷವಾದರೂ ಮ|| ಗುರುವೀರಾರಾಧ್ಯರ ಗ್ಯಾಸ್‌ಲೈಟ್‌ಗಳು ಶುಕ್ಲಪಕ್ಷಾಂತ್ಯವನ್ನು ಸೂಚಿಸುತ್ತಿದ್ದವು. ಈ ಕಮಿಟಿಯ ಸೆಕ್ರೆಟರಿ ಮತ್ತು ಮೆಂಬರುಗಳಾಗಿದ್ದುಕೊಂಡು 3-4 ವರ್ಷಗಳಿಂದ ಈ ಗ್ರಾಮಸ್ಥರ ಪರವಾಗಿ ಮೆಹನತ್ತು ಮಾಡಿದ ಮ|| ಗಳಾದ ಟಿ. ಲಕ್ಷ್ಮೀನರಸಿಂಹಶಾಸ್ತ್ರಿಗಳು, ಸಿ. ಸಿದ್ದೀರಯ್ಯನವರು, ಹೆಚ್. ಶ್ರೀನಿವಾಸರಾಯರು, ಹೆಚ್. ಸಿ. ಗುರುವೀರಾರಾಧ್ಯರು, ಹೆಚ್. ಆರ್. ತಿಮ್ಮರಾಯಗೌಡರವರು, ಯಜಮಾನ್ ಗಂಗಾಧರಪ್ಪನವರು, ಜಿ. ಎನ್. ತಮ್ಮಯ್ಯನವರು (ಜವಳಿ ಅಂಗಡಿ), ಸೋಮಲಿಂಗಯ್ಯನವರು, ಶಿವಗಂಗೈಯ್ಯನವರ ಗಂಗಾಧರಪ್ಪನವರು, ಚಿಲ್ಲಿ ರುದ್ರಪ್ಪನವರು ಪುರಜನರ ದ್ರವ್ಯಸಹಾಯದಿಂದ ಈ ಕಾರ್ಯ ಆಗಮಾಡಿಸಿದುದು ಬಹುಶ್ಲಾಘನೀಯವಾಗಿರುತ್ತದೆ. ಇಷ್ಟೊಂದು ಸಂತೋಷಕ್ಕೆ ದಾರಿಯನ್ನು ಕಲ್ಪಿಸಿದ ಶ್ರೀಮನ್ಮಹಾರಾಜ ಸಹೋದರರಿಗೂ, ವಿದ್ಯಾಭ್ಯಾಸದ ಡ|| ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೂ, ತುಮಕೂರು ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮತ್ತು ರೇಂಜ್ ಇನ್ಸ್‌ಪೆಕ್ಟರ್‌ರವರಿಗೂ ಕಾರ್ಯನಿರ್ವಾಹಕರಾದ ಕಮಿಟಿಯವರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಚಿರಕಾಲ ಕಾಪಾಡಲೆಂದು ಪುರಜನರ ಪರವಾಗಿ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 12 ನೆಯ ಪ್ರಕರಣ.

ಭಾರತೀಯರ ಪರಿಚಯವಾದುದು.

ಕ್ರೈಸ್ತರ ಪರಿಚಯವನ್ನು ಕುರಿತು ವಿಸ್ತಾರವಾಗಿ ಬರೆಯುವುದಕ್ಕೆ ಪೂರ್ವಭಾವಿಯಾಗಿ ನನಗುಂಟಾದ ಇತರ ಅನುಭವವಿಚಾರವನ್ನು ಕುರಿತು ಬರೆಯುವುದು ಆವಶ್ಯಕವು. ದಾದಾ ಅಬ್ದುಲ್ಲಾಸೇಟರು ನೆಟಾಲಿನಲ್ಲಿ ಎಷ್ಟರಮಟ್ಟಿಗೆ ಗೌರವಸ್ಥರಾಗಿದ್ದರೋ ಪ್ರಿಟೋರಿಯಾದಲ್ಲಿ ಶೇಟ್ ತಯಾಬ್ ಹಾಜಿಖಾನ್ ಮಹಮ್ಮದರವರೂ ಅಷ್ಟರಮಟ್ಟಿಗೆ ಗೌರವಸ್ಥರಾಗಿದ್ದರು. ಅವರ ಸಹಾಯವಿಲ್ಲದೆ ಯಾವ ಸಾರ್ವಜನಿಕಕಾರ್ಯವೂ ಜರುಗುತ್ತಿರಲಿಲ್ಲ. ಅಲ್ಲಿಗೆ ಹೋದ ಮೊದಲನೆಯವಾರವೇ ನಾನು ಅವರ ಪರಿಚಯವನ್ನು ಮಾಡಿಕೊಂಡು ಪ್ರಿಟೋರಿಯಾದಲ್ಲಿರುವ ಪ್ರತಿಯೊಬ್ಬ ಭಾರತೀಯನ ಪರಿಚಯವನ್ನು ಮಾಡಿಕೊಳ್ಳಬೇಕೆಂಬ ನನ್ನ ಮನೋಗತವನ್ನು ಸೇಟರಿಗೆ ತಿಳಿಸಿದೆನಲ್ಲದೆ ಅವರ ಪರಿಸ್ಥಿತಿಯನ್ನು ತಿಳಿಸಬೇಕೆಂದು ಸಹ ಕೇಳಿಕೊಂಡೆನು. ಅದಕ್ಕೆ ಅವರು ಸಂತೋಷದಿಂದೊಪ್ಪಿಕೊಂಡರು. ಪ್ರಿಟೋರಿಯಾದಲ್ಲಿರುವ ಭಾರತೀಯರ ಸಭೆಯನ್ನು ನಡೆಯಿಸಿ ಟ್ರಾನ್ಸ್‌ವಾಲಿನಲ್ಲಿರುವ ಭಾರತೀಯರ ಚಿತ್ರವನ್ನು ಹೇಳುವುದೇ ನನ್ನ ಪ್ರಥಮೋದ್ದೇಶವಾಗಿದ್ದಿತು. ಈ ಸಭೆಯು ನಾನು ಪರಿಚಯಕ್ಕಾಗಿ ಪತ್ರವನ್ನು ತಂದಿದ್ದ ಸೇಟ್ ಹಾಜಿ ಮಹಮ್ಮದ್ ಹಾಜಿ ಜೋಸಬ್‌ಸೇಟರ ಮನೆಯಲ್ಲಿ ನೆರೆದುದು. ಈ ಸಭೆಗೆ ಮುಖ್ಯವಾಗಿ ಮೆಮನ್ ವರ್ತಕರುಗಳೇ ಹೆಚ್ಚಾಗಿ ಬಂದಿದ್ದರು. ಅಲ್ಲಿ ಹಿಂದುಗಳೂ ಇದ್ದರು. ಪ್ರಿಟೋರಿಯಾದಲ್ಲಿ ಅವರ ಸಂಖ್ಯೆಯು ಬಹಳ ಕಡಿಮೆಯಾಗಿದ್ದಿತು. ನಾನು ಪ್ರಥಮತಃ ಭಾಷಣಮಾಡಿದುದು ಆ ಸಭೆಯಲ್ಲೇ ಎಂದು ಹೇಳಬಹುದಾಗಿದೆ. ಭಾಷಣವನ್ನು ಮಾಡಲು ನಾನು ಸಿದ್ಧನಾಗಿಯೇ ಹೋಗಿದ್ದೆನು. ವ್ಯಾಪಾರದಲ್ಲಿ ಸತ್ಯಸಂಧತೆ ಇರಬೇಕೆಂಬುದೇ ನನ್ನ ಭಾಷಾವಿಷಯವಾಗಿದ್ದಿತು. ವರ್ತಕರು ತಮ್ಮ ವ್ಯವಹಾರದಲ್ಲಿ ಸತ್ಯಸಂಧರಾಗಿರಲು ಎಂದಿಗೂ ಸಾಧ್ಯವಿಲ್ಲವೆಂದು ಜನರು ಹೇಳುತ್ತಿದ್ದುದನ್ನು ನಾನು ನಂಬಲಿಲ್ಲ ಮತ್ತು ಈಗಲೂ ನಂಬುವುದಿಲ್ಲ. ಹಾಗೆ ಹೇಳುವ ವರ್ತಕಮಿತ್ರರು ಈಗಲೂ ಇರುತ್ತಾರೆ. ವ್ಯಾಪಾರವು ಲೌಕಿಕವಿಷಯವೂ ಸತ್ಯವು ಧಾರ್ಮಿಕವಿಷಯವೂ ಆದುದರಿಂದ ವ್ಯಾಪಾರಕ್ಕೂ ಸತ್ಯಕ್ಕೂ ಪರಸ್ಪರ ಸಂಬಂಧವಿಲ್ಲ. ಅವು ಬೇರೆಬೇರೆ ವಿಷಯವಾಗಿವೆ ಎಂದು ಅವರು ಪ್ರತಿಪಾದಿಸುತ್ತಾರೆ, ಮತ್ತು ವ್ಯಾಪಾರದಲ್ಲಿ ಶುದ್ಧವಾದ ಸತ್ಯವು ಎಂದಿಗೂ ನಡೆಯುವುದಿಲ್ಲವೆಂದೂ ಸಾಧ್ಯವಾದಮಟ್ಟಿಗೆ ಸತ್ಯವನ್ನು ಹೇಳಬಹುದೆಂದೂ ಹೇಳುತ್ತಾರೆ. ಈ ಅಂಶವನ್ನು ನನ್ನ ಭಾಷಣದಲ್ಲಿ ನಾನು ಚೆನ್ನಾಗಿ ಖಂಡಿಸಿ ಅವರ ಕರ್ತವ್ಯದ ಪರಿಜ್ಞಾನವನ್ನುಂಟುಮಾಡಿಕೊಟ್ಟೆನು. ಸ್ವದೇಶದಲ್ಲಿರುವ ವ್ಯಾಪಾರಿಗಳ ಉತ್ತರವಾದಿತ್ವಕ್ಕಿಂತಲೂ ಪರದೇಶದಿಂದ ಬಂದಿರುವ ವ್ಯಾಪಾರಿಗಳ ಉತ್ತರವಾದಿತ್ವವು ಅತ್ಯಧಿಕವಾದುದು. ಏತಕ್ಕೆಂದರೆ, ಈ ಅಲ್ಪಸಂಖ್ಯಾತ ಭಾರತೀಯರ ನಡೆನುಡಿಗಳ ಮೇಲಿಂದ ಭರತಖಂಡದ ಕೋಟ್ಯಂತರ ಜನರ ನಡೆನುಡಿಗಳು ಪರೀಕ್ಷಿಸಲ್ಪಡತಕ್ಕವಾಗಿವೆ. ಆಂಗ್ಲೇಯರ ನಡವಳಿಕೆಗಳಿಂತಲೂ ನಮ್ಮ ಭಾರತೀಯರ ನಡವಳಿಕೆಗಳು ಬಹಳ ಹೀನವಾಗಿದ್ದುದನ್ನು ನಾನು ಅವರ ಗಮನಕ್ಕೆ ತಂದೆನು. ಹಿಂದು, ಮಹಮ್ಮದೀಯ, ಸಿಂಧಿ, ಕಚ್ಛಿ, ಗುಜರಾತಿ, ಪಂಜಾಬಿ, ಸುರತಿ ಮೊದಲಾದ ಭಿನ್ನಭಾವಗಳನ್ನು ಬಿಟ್ಟುಬಿಡಬೇಕೆಂದು ಕಠಿಣವಾಗಿ ಹೇಳಿದೆನು. ಅಲ್ಲಿ ಒಂದು ಸಂಘವನ್ನೇರ್ಪಡಿಸಿ ಅದರಮೂಲಕ ಅಧಿಕಾರಿಗಳಿಗೆ ಅಲ್ಲಿಯ ಭಾರತೀಯರ ಕಷ್ಟನಿವಾರಣೋಪಾಯವನ್ನು ತಿಳಿಸಬೇಕೆಂದು ಸೂಚಿಸಿದೆನು. ನನ್ನ ವಿರಾಮಕಾಲದಲ್ಲಿ ಈ ಸಂಘದ ಕೆಲಸವನ್ನು ಉಚಿತವಾಗಿ ಮಾಡುತ್ತೇನೆಂದು ವಾಗ್ದಾನಮಾಡಿದೆನು. ನಾನು ಹೇಳಿದ ವಿಷಯವೆಲ್ಲವೂ ಸಭಿಕರ ಮನಸ್ಸಿನಲ್ಲಿ ಚೆನ್ನಾಗಿ ನಾಟಿತೆಂದು ತೋರಿತು.

ನನ್ನ ಭಾಷಣವು ಮುಗಿದಮೇಲೆ ಚರ್ಚೆಗೆ ಪ್ರಾರಂಭವಾಗಿ ಅಲ್ಲಿನ ಸಂಗತಿಗಳನ್ನು ಕೆಲರು ನನಗೆ ತಿಳಿಸಿದರು. ಅದರಿಂದ ನನಗೆ ಎಷ್ಟೋ ಉತ್ತೇಜನಕೊಟ್ಟಂತಾಯಿತು. ಆ ಸಭೆಗೆ ಬಂದಿದ್ದವರಲ್ಲಿ ಅತ್ಯಲ್ಪಜನರಿಗೆ ಮಾತ್ರ ಆಂಗ್ಲಭಾಷಾಪರಿಚಯವಿದ್ದಿತೆಂದು ಕಂಡುಬಂದಿತು. ಆ ದೇಶದಲ್ಲಿ ಆಂಗ್ಲಭಾಷಾಪರಿಜ್ಞಾನದಿಂದ ಬಹಳ ಪ್ರಯೋಜನವುಂಟೆಂಬುದರಮೇಲೆ ಅವಕಾಶವಿರುವವರು ಆಂಗ್ಲಭಾಷಾಭ್ಯಾಸಮಾಡಬೇಕೆಂದು ಹೇಳಿದೆನು. ವಯಸ್ಸಾದವರೂ ಕಲಿಯಬಹುದೆಂಬ ಬಗೆಗೆ ಕೆಲ ನಿದರ್ಶನಗಳನ್ನು ಸಹ ಕೊಟ್ಟೆನು, ಮತ್ತು ಒಂದು ತರಗತಿಯನ್ನೇರ್ಪಡಿಸಿದರೆ ಅದರಲ್ಲಿ ಕಲಿಯಲಿಷ್ಟವುಳ್ಳವರೆಲ್ಲರಿಗಾಗಲಿ ಬೇರೆ ಒಬ್ಬೊಬ್ಬರಿಗಾಗಲಿ ಪಾಠ ಹೇಳಿಕೊಡುವೆನೆಂದು ಒಪ್ಪಿಕೊಂಡೆನು. ಅದರಂತೆ ತರಗತಿಯೇರ್ಪಡಿಸಲ್ಪಡಲಿಲ್ಲ, ಆದರೆ ತಮ್ಮ ಸ್ಥಳಗಳಿಗೇ ಬಂದು ಹೇಳಿಕೊಡುವುದಾದರೆ ತಾವು ಕಲಿಯುತ್ತೇವೆಂದು ಕೆಲರೊಪ್ಪಿಕೊಂಡರು. ಅವರಲ್ಲಿ ಇಬ್ಬರು ಮಹಮ್ಮದೀಯರು, ಒಬ್ಬ ಕ್ಷೌರಿಕನು ಮತ್ತೊಬ್ಬನು ರೈಟರೂ ಮಗದೊಬ್ಬನು ಸಣ್ಣ ಅಂಗಡಿಯನ್ನಿಟ್ಟುಕೊಂಡಿದ್ದ ಹಿಂದುವೂ ಆಗಿದ್ದರು. ಇವರೆಲ್ಲರ ಅನುಕೂಲಗಪ್ರಕಾರ ಪಾಠಹೇಳಿಕೊಡಲೊಪ್ಪಿಕೊಂಡೆನು. ಪಾಠಹೇಳಿಕೊಡುವ ಶಕ್ತಿಯು ನನಗುಂಟೆಂಬ ವಿಚಾರದಲ್ಲಿ ನನಗೆ ಅನುಮಾನವಿರಲಿಲ್ಲ, ಮತ್ತು ವಿದ್ಯಾರ್ಥಿಗಳೇ ಬೇಸರಪಟ್ಟುಕೊಳ್ಳಬಹುದಾಗಿದ್ದಿತಲ್ಲದೆ ನನಗೆ ಬೇರೆ ಬೇಸರವಾಗುವಂತಿರಲಿಲ್ಲ. ಎಷ್ಟೋವೇಳೆ ನಾನು ಅವರಲ್ಲಿಗೆ ಹೋದಾಗ್ಯೂ ಅವರಿಗೆ ವಿರಾಮವಿಲ್ಲದಿದ್ದುದರಿಂದ ನಾನು ಸುಮ್ಮನೆ ನೋಡಿಕೊಂಡುಬರಬೇಕಾಗಿದ್ದಿತಾದರೂ ನನ್ನ ಮನಸ್ಸು ಬದಲಾಯಿಸಲಿಲ್ಲ. ಅವರಲ್ಲಿ ಒಬ್ಬನಿಗಾದರೂ ಹೆಚ್ಚು ಇಂಗ್ಲಿಷನ್ನು ಕಲಿಯಬೇಕೆಂಬ ಅಪೇಕ್ಷೆಯಿರಲಿಲ್ಲ. ಆದರೂ ಅವರಲ್ಲಿ ಇಬ್ಬರು 8 ತಿಂಗಳಲ್ಲಿ ತಕ್ಕಮಟ್ಟಿಗೆ ಇಂಗ್ಲಿಷಿನಲ್ಲಿ ಮಾತನಾಡಲು ಮತ್ತು ಲೆಖ್ಖಾಚಾರಮಾಡಲು ಕಲಿತುಕೊಂಡರು. ಕ್ಷೌರಿಕನಿಗೆ ತನ್ನ ಗಿರಾಕಿಗಳ ಕೂಡ ಇಂಗ್ಲಿಷಿನಲ್ಲಿ ಮಾತನಾಡುವಷ್ಟು ಬಂದರೆ ಸಾಕೆಂಬುದು ಅವನ ಕೋರಿಕೆಯಾಗಿದ್ದಿತು. ಈ ವಿಧವಾದ ಅಭ್ಯಾಸದಿಂದ ಇಬ್ಬರು ತಮ್ಮ ಜೀವನವನ್ನು ಸಂಪಾದಿಸಿಕೊಳ್ಳುವಂತಾದರು. ಸಭೆಯಿಂದಾದ ಈ ಪರಿಣಾಮದಿಂದ ನನ್ನ ಮನಸ್ಸಿಗೆ ಸಂತೋಷವಾಯಿತು. ವಾರಕ್ಕೋ ತಿಂಗಳಿಗೋ ಒಂದುವೇಳೆ ಸಭೆಯು ನಡೆಯಬೇಕೆಂದು ನಿರ್ಧರಿಸಲ್ಪಟ್ಟಿದ್ದುದಾಗಿ ನನ್ನ ಸ್ಮರಣೆಯಲ್ಲುಂಟು. ಈ ಸಭೆಗಳು ಬಹುಮಟ್ಟಿಗೆ ಚ್ಯುತಿಯಿಲ್ಲದೆ ನಡೆಯುತ್ತಿದ್ದುವು, ಮತ್ತು ಆ ಕಾಲದಲ್ಲಿ ಸಭಿಕರು ತಮಗೆ ತೋರಿದ ವಿಷಯಗಳನ್ನು ಕುರಿತು ಪರ್ಯಾಲೋಚಿಸುತ್ತಿದ್ದರು. ಇದರಿಂದ ಪ್ರಿಟೋರಿಯಾದಲ್ಲಿ ನನಗೆ ತಿಳಿಯದ ಮನುಷ್ಯನಾಗಲಿ ವಿಚಾರವಾಗಲಿ ಇಲ್ಲದಂತಾಯಿತು. ಅಲ್ಲಿಯ ಸ್ಥಿತಿಗತಿಯ ಪರಿಶ್ರಮದಿಂದ ಬ್ರಿಟಿಷ್ ಏಜಂಟರಾದ ಮಿ|| ಜಾಕೋಬಸ್ ಡಿವೆಟ್‌ರವರ ಪರಿಚಯವನ್ನು ಮಾಡಿಕೊಳ್ಳಬೇಕೆಂಬ ಅಪೇಕ್ಷೆಯುಂಟಾಯಿತು. ನಾನು ಅವರನ್ನು ನೋಡಿದೆನು. ಅವರಿಗೆ ಭಾರತೀಯರ ವಿಚಾರದಲ್ಲಿ ಸಹಾನುಭೂತಿಯಿದ್ದಿತು. ಆದರೆ ಅವರಿಗೆ ಹೆಚ್ಚು ಸಹಾಯವನ್ನು ಮಾಡಲು ಶಕ್ತಿಯಿಲ್ಲವಾದರೂ ಅವರು ತಕ್ಕಮಟ್ಟಿಗಾದರೂ ಸಹಾಯಮಾಡಲು ವಾಗ್ದಾನಮಾಡಿದರಲ್ಲದೆ ಅವಶ್ಯವಿದ್ದಾಗ ಬಂದು ಅವರನ್ನು ನಾನು ನೋಡಬಹುದೆಂದು ಹೇಳಿದರು. ತರುವಾಯ ರೈಲ್ವೆಯಧಿಕಾರಿಗಳ ಕೂಡ ಪತ್ರವ್ಯವಹಾರವನ್ನು ನಡೆಯಿಸಿ ಅವರ ರೂಲ್ಸಿನಂತೆಯೇ ಭಾರತೀಯರಿಗಾಗುತ್ತಿರುವ ಪ್ರಯಾಣದ ತೊಂದರೆಗಳು ಲೇಶಮಾತ್ರವೂ ನ್ಯಾಯವಾದುವಲ್ಲವೆಂದು ತೋರಿಸಿಕೊಟ್ಟೆನು. ಅದರಮೇಲೆ ಶುಚಿಯಾಗಿಯೂ, ದಿಟ್ಟವಾಗಿಯೂ ಉಡುಪನ್ನು ಧರಿಸಿರುವ ಭಾರತೀಯರಿಗೆ ಒಂದನೆಯ ಮತ್ತು ಎರಡನೆಯ ತರಗತಿಗಳ ಟಿಕೆಟ್ಟು ಕೊಡಲ್ಪಡುವುದಕ್ಕೆ ಒಪ್ಪಿಕೊಂಡರು. ಇದರಿಂದ ಭಾರತೀಯರಿಗುಂಟಾಗಿರುವ ಅನ್ಯಾಯವು ನಿವಾರಣೆಯಾದಂತಾಗಲಿಲ್ಲವು. ಏಕೆಂದರೆ ಸ್ವಚ್ಛವಾಗಿಯೂ ದಿಟ್ಟವಾಗಿಯೂ ಬಟ್ಟೆಯನ್ನು ಧರಿಸಿರುವರೆಂಬುದನ್ನು ಸ್ಟೇಷನ್‌ಮಾಸ್ತರೇ ನಿರ್ಧರಿಸಬೇಕಾಗಿದ್ದಿತು. ಭಾರತೀಯರ ಸಂಬಂಧವಾದ ಕೆಲ ಕಾಗದಪತ್ರಗಳನ್ನು ಬ್ರಿಟಿಷ್ ರೆಸಿಡೆಂಟರು ನನಗೆ ತೋರಿಸಿದರು. ಅಂತಹ ಕಾಗದಗಳನ್ನು ತಯಬ್ ಸೇಟರೂ ನನಗೆ ತೋರಿಸಿದ್ದರು. ಭಾರತೀಯರು ಎಷ್ಟು ನಿರ್ದಾಕ್ಷಿಣ್ಯದಿಂದಲೂ ದೌರ್ಜನ್ಯದಿಂದಲೂ ಆರೆಂಜ್ ಫ್ರೀಸ್ಟೇಟಿನಿಂದ ಹೊರಗೆ ದಬ್ಬಲ್ಪಟ್ಟಿದ್ದರೆಂಬುದು ಆ ಪತ್ರವ್ಯವಹಾರಗಳಿಂದ ನನಗೆ ತಿಳಿಯಬಂದಿತು. ಮುಖ್ಯವಾಗಿ ನಾನು ಪ್ರಿಟೋರಿಯಾದಲ್ಲಿದ್ದುದರಿಂದ ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀಸ್ಟೇಟಿನ ಭಾರತೀಯರ ಆರ್ಥಿಕ, ಸಾಮಾಜಿಕ, ನೈತಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ನಾನು ಚೆನ್ನಾಗಿ ತಿಳಿದುಕೊಳ್ಳಲು ಅವಕಾಶವಾಯಿತು. ಈ ಅನುಭವವು ಮುಂದೆ ನನಗೆ ಅನುಕೂಲವಾಗುವುದೆಂಬುದು ಆಗ ಸ್ಫುರಿಸಲಿಲ್ಲ. ಒಂದುವರ್ಷ ಕಾಲಾನಂತರವೋ ವಿವಾದವು ಜಾಗ್ರತೆ ಪೂರೈಸಿದಲ್ಲಿ ಇನ್ನೂ ಮುಂಚಿತವಾಗಿಯೋ ಭರತಖಂಡಕ್ಕೆ ಪ್ರಯಾಣಮಾಡಬೇಕೆಂದು ನಾನು ಆಗ ನಿರ್ಧರಿಸಿದ್ದೆನು. ಆದರೆ ದೈವಸಂಕಲ್ಪವು ಅನ್ಯಥಾ ಆಗಿದ್ದಿತು.

ಶ್ರೀಮದ್ದಕ್ಷಿಣಕಾಶೀ ನಿಜಸಿಂಹಾಸನಾಧೀಶ ಜಗದಾಚಾರ್ಯ ಸ್ವಾಮಿ ವಿರೂಪಾಕ್ಷ ಒಡೆಯರವರಿಂದ ಬರೆಯಲ್ಪಟ್ಟ ವೇದಾರ್ಥವಿಚಾರ.

ಲೇಖಾಂಕ. ೫.

(ಮಹೀಧರನ ಅಶ್ಲೀಲ ಅರ್ಥವು.)

ವೇದ ಮತ್ತು ಷಡಂಗಗಳನ್ನು ಸಾಯನಾಚಾರ್ಯರು ಸ್ತುತಿಮಾಡಿ ಇವುಗಳನ್ನು ಓದುವ ಅಧಿಕಾರಿಗಳು ಯಾರು ಎಂಬುದನ್ನು ವಿಚಾರಮಾಡಿರುವರು. ಹ್ಯಾಗೆಂದರೆ — "ಸ್ತ್ರೀಶೂದ್ರೌನಾಧೀಯೇತಾಂ ತ್ರಯೀನಸ್ಮೃತಿಗೋಚರಾ ಕೃತ್ವಾಬ್ರಾಹ್ಮಣಮಗ್ರತಃ" ಸ್ತ್ರೀಯರಿಗೆ ಉಪನಯನಾದಿ ಸಂಸ್ಕಾರಗಳಿಲ್ಲದ ಪ್ರಯುಕ್ತ ಸ್ತ್ರೀಯರು ಶೂದ್ರಸಮಾನರೆಂದು ಹೇಳಿ ಸ್ತ್ರೀಯರಿಗು ಹಾಗೂ ಶೂದ್ರರಿಗು ವೇದಾಧ್ಯಯನಾಧಿಕಾರವಿಲ್ಲವಾದ್ದರಿಂದ ಅವರೀರ್ವರೂ ಓದಬಾರದು. ಒಂದುವೇಳೆ ಅವರಿಗೆ ಜ್ಞಾನಾಪೇಕ್ಷೆಯಾದಲ್ಲಿ ಪುರಾಣಾದಿಗಳಿಂದ ಅವರು ಜ್ಞಾನಸಂಪಾದನೆ ಮಾಡಿಕೊಳ್ಳಬಹುದು, ಮತ್ತು ಆ ಪುರಾಣಾದಿಗಳನ್ನಾದರೂ ಬ್ರಾಹ್ಮಣರ ಕಡೆಯಿಂದಲೇ ಓದಿಸಿ ತಿಳಿದುಕೊಳ್ಳಬೇಕೇವಿನಾ ಸ್ವತಃ ಓದಬಾರದು. ಅರ್ಥಾತ್ ಸ್ತ್ರೀಯರಿಗೂ ಶೂದ್ರರಿಗೂ ಪುರಾಣಾದಿಗಳನ್ನು ಸಹ ಸ್ವತಃ ಓದುವ ಅಧಿಕಾರವಿಲ್ಲ. ಬ್ರಾಹ್ಮಣರ ಮುಖದಿಂದ ಓದಿಸಿ ಕೇಳಿಕೊಳ್ಳತಕ್ಕದೆಂದಮೇಲೆ ವೇದಕ್ಕೆ ಅಧಿಕಾರ ಉಂಟೆಂಬುವದೆಲ್ಲಿಯದನಾತು? ಶೂದ್ರರು ಶ್ವತಾನಸ್ವರೂಪರಾದ್ದರಿಂದ ಶೂದ್ರಪಂಕ್ತಿಯಲ್ಲಿ ಸೇರಿದ ಸ್ತ್ರೀಜಾತಿಯೂ ಶ್ವತಾನಸ್ವರೂಪವೆಂದು ಹೇಳಿದಂತಾಯಿತು. ಅಂದಮೇಲೆ ತಮ್ಮ ತಾಯಿಯೇ ನಿಷಿದ್ಧವೆನಿಸುವ ಶ್ವತಾನಸ್ವರೂಪವಾದಮೇಲೆ ಆಕೆಯ ಗರ್ಭದಲ್ಲಿ ಜನಿಸಿದವರಾದೀಬ್ರಾಹ್ಮಣನಾಮಧಾರಿಗಳೇನಾಗಬೇಕಾಯಿತು? - "ಯಥಾಶ್ವತಾನಗಂಕಾಷ್ಠ ಮನರ್ಹಂಸರ್ವಕರ್ಮಸು | ತಥಾಬ್ರಾಹ್ಮಣನಾಮಾಯಮನರ್ಹಃ ಸರ್ವಕರ್ಮಸು" ಹ್ಯಾಗೆ ಸುಡುಗಾಡಿನಲ್ಲಿಯ ಕಟ್ಟಿಗೆಯು ಎಲ್ಲ ಕರ್ಮಗಳಲ್ಲಿಯೂ ಅನರ್ಹವೆನಿಸುವದೋ ಅದರಂತೆ ಸ್ತ್ರೀಜಾತಿಯಿಂದಕರಾದೀ ಬ್ರಾಹ್ಮಣನಾಮಧಾರಿಗಳು ಸರ್ವಥಾ ಎಲ್ಲಾ ಧರ್ಮಕರ್ಮದೇಶಗಳಲ್ಲಿ ಅನರ್ಹರಾಗಿರುವದರಿಂದ ಬಾಹ್ಯರನ್ನಾಗಿ ಗಣಿಸತಕ್ಕದ್ದೆಂದು ಯಾಕೆ ಹೇಳಬಾರದು? ಇಷ್ಟೇ ಅಲ್ಲದೆ ಇದೇ ಸಾಯನರು ಮಾಧವರೆಂಬ ನಾಮದಿಂದ ಪರಾಶರ ಮಾಧವ ಗ್ರಂಥದಲ್ಲಿ - ನಶೂದ್ರಾಯಮತಿಂದದ್ಯಾತ್ - ಇತ್ಯಾದಿ ವಾಕ್ಯಗಳಿಂದ ಶೂದ್ರನಿಗೆ ಎಂದೂ ಬುದ್ಧಿ ಕೊಡಬಾರದು. ಅಂದರೆ ಶೂದ್ರನಿಗೆ ಓದುಬರಹ ಸಹ ಕಲಿಸಬಾರದು. ಅವನು ಶಹಣನಾದರೆ ಅಥವಾ ಅವನ ಹತ್ತಿರ ಹೆಚ್ಚಿಗೆ ದುಡ್ಡಿದ್ದರೆ ಅವನು ಬ್ರಾಹ್ಮಣರನ್ನು ಬಾಧಿಸುವನು. ಆದ್ದರಿಂದ ವಿದ್ಯಾಬುದ್ಧಿಯಿಂದ ಅವನನ್ನು ದೂರಿಟ್ಟು ಅವನಲ್ಲಿದ್ದ ದ್ರವ್ಯವನ್ನು ತಕ್ಷಣಕ್ಕೆ ಸುಲಿದುಕೊಳ್ಳಬೇಕೆಂದು ದಡಬಡನೆ ಬರದಿಡುವವರಾದಿವರು ಆಗಿನಕಾಲಕ್ಕೆ ಮಾಪಿಳ್ಳೆಯವರಂತೆ ಬ್ರಾಹ್ಮಣೇತರರಮೇಲೆ ದಂಗೆಸುಲಿಗೆಗಳನ್ನು ಮಾಡಿರಲಿಕ್ಕಿಲ್ಲವೆಂತಾ ಹ್ಯಾಗೆ ಹೇಳುವಿರಿ? ವಾಚಕರೇ, ಈಶ್ವರೀದೇಣಿಗೆಯಾದ ಮಾನವಪ್ರಾಣಿಯ ವಿದ್ಯಾಬುದ್ಧಿ ಧನಸಂಪತ್ತುಗಳನ್ನು ವಂಚಿಸುವವರಾದವರಿಗೆ ಯಾವ ಶಿಕ್ಷೆಯನ್ನು ವಿಧಿಸಬೇಕೆಂಬುವದನ್ನು ನೀವೇ ವಿಚಾರಿಸಿರಿ. ಯಾಕೆಂದರೆ, ಅಜ್ಞರು ರಾತ್ರಿಯಲ್ಲಿ ಕಳ್ಳತನಮಾಡಿದರೆ ನಾಮಧಾರಿಗಳಾದೀ ಬ್ರಾಹ್ಮಣರೆಂಬವರು - ಬ್ರಹ್ಮಜ್ಞಾ ಇತಿತಾಪಸಾ ಇತಿ ದಿವಾಧೂರ್ತೈರ್ಜಗದ್ವಂಚ್ಯತೇ - ಎಂಬ ವಾಕ್ಯದಂತೆ ಹಗಲಕಳ್ಳರಾದಿವರು ಈಶ್ವರವಂಚಕರು ಹಾಗೂ ಮನುಷ್ಯವಂಚಕರೆಂಬೆರಡು ದೋಷಕ್ಕೆ ಪಾತ್ರರಾದಿವರಿಗೆ ಸಾಮಾನ್ಯಶಿಕ್ಷೆಯು ವಿಧಿಸಲ್ಪಡದೆ ಬಲವತ್ತರವಾದ ಶಿಕ್ಷೆಯನ್ನು ವಿಧಿಸುವದೇ ನ್ಯಾಯವಾಗಿರುವದು. ಆದರೆ ಸ್ತ್ರೀಜಾತಿಯ ಗರ್ಭದಲ್ಲಿ ಜನಿಸಿ ಅವರನ್ನೇ ದೂಷಿಸುವವರಾದೀಬ್ರಾಹ್ಮಣರು ಅನ್ಯರನ್ನು ಯಾವರೀತಿಯ ಬುದ್ಧಿಯಿಂದ ಕಾಣುತ್ತಿರಬಹುದೆಂಬುವದನ್ನು ನೀವೇ ಆಲೋಚಿಸಿರಿ. ಎಲ್ಲದರಲ್ಲಿಯೂ ತಮ್ಮದೇ ಮುಂದೆ ಹಾಯಿದಿರಬೇಕೆಂಬ ಗುಟ್ಟುಳ್ಳವರಾದೀ ಬ್ರಾಹ್ಮಣರ ಈರೀತಿಯಾದ ವಂಚಕತ್ವಬುದ್ಧಿಯಿಂದಲೇ ಹಿಂದುಸ್ಥಾನವು ಇಂಥಾ ದುರ್ದಶೆಯನ್ನನುಭವಿಸುತ್ತಾ ಪರಕೀಯರ ಗುಲಾಮಗಿರಿಗೀಡಾಗಿರುವದು. ಇನ್ನು ಸಾಯನರು ಸ್ತ್ರೀಯರ ವಿಷಯವಾಗಿ ಹೀಗೆ ಬರೆದರೆ ಮಹೀಧರನೆಂಬ ಬ್ರಾಹ್ಮಣ ಪಂಡಿತನು ಶುಕ್ಲಯಜುರ್ವೇದದ 23 ನೇ ಅಧ್ಯಾಯದ 15 ನೇ ಮಂತ್ರದಿಂದ 32 ನೇ ಮಂತ್ರದವರೆಗೆ ಸಂಸ್ಕೃತದಲ್ಲಿಯೇ ಅರ್ಥಮಾಡಿ ಭಾಷ್ಯಬರದಿರುವದರಲ್ಲಿ ಯಜ್ಞಮಾಡಿಸುವ ಯಜಮಾನನ ಹೆಂಡತಿಯು ಆ ಯಜ್ಞಾಶ್ವದೊಡನೆ ಭೋಗಮಾಡುವ ಕ್ರಮವನ್ನು ಮಹೀಧರಪಂಡಿತನು ವರ್ಣಿಸಿರುವುದು ಕೇಳಲಿಕ್ಕೆ ಬಹು ಲಜ್ಜಾಸ್ಪದವಾಗಿರುವುದರಿಂದ ಅದನ್ನು ನಾವು ಇಲ್ಲಿ ಉಲ್ಲೇಖಿಸದೆ ಬಿಟ್ಟಿರುತ್ತೇವೆ. ಅದರಲ್ಲಿ ತೋರಿಸಿದಂತೆ ಯಜಮಾನನು ಮೊದಲು ಲಗ್ನವಾದ ಹೆಂಡತಿಯು ಕುದುರೆಯ ಕೂಡ ಭೋಗಕ್ಕಾಗಿ ಕುದುರೆಯ ಕೆಳಗೆ ಮಲಗಿದ್ದವಳನ್ನು ಅಲ್ಲಿ ಕೂತಿದ್ದ ಯಾವತ್ತು ಜನರು ಹಾಗೂ ಅಧ್ವರ್ಯು ಬ್ರಹ್ಮ ಉದ್ಗಾತೃ ಹೋತೃ ಮೊದಲಾದ ಯಾಜ್ಞಿಕರು ಈ ಭೋಗಕಥಾ ಸಂದರ್ಭವನ್ನು ಹೊಗಳುತ್ತ ಮಂತ್ರಗಳನ್ನು ಪಠಿಸತಕ್ಕದ್ದೆಂಬದಾಗಿ ಮಹೀಧರಪಂಡಿತನು ಅರ್ಥಮಾಡುವನು. ವಾಚಕರೇ, ಇಂಥ ನಿರ್ಲಜ್ಜತನದಿಂದ ಸ್ತ್ರೀಯರ ವಿಷಯದಲ್ಲಿ ಈರೀತಿ ಕ್ರೌರ್ಯವಾದ ವೃತ್ತಿಯನ್ನು ತಾಳಿದೀಬ್ರಾಹ್ಮಣ ಯಾಜ್ಞಿಕರ ವೃತ್ತಿಯನ್ನೂ ಸ್ಥಿತಿಗತಿಗಳನ್ನೂ ನೋಡಿದಿರಾ! ಅಯ್ಯೋ ಪಾಪಿಗಳೇ, ಯಾವ ಪರಮಪವಿತ್ರವಾದ ವೇದಮಂತ್ರಗಳಿಗೆ ದಿವಾ ಘಳವಾಗುವದೋ ಅಂಥಾದ್ದನ್ನು ಮರೆಮಾಜಿ ನಿಮ್ಮ ನೈಸರ್ಗಿಕ ದುರ್ಬುದ್ಧಿಗನುಸಾರವಾಗಿ ಈಶ್ವರ ಸೃಷ್ಟಿಯಲ್ಲಿ ಸ್ವಾಭಾವಿಕವಾಗಿ ಬಂದಿರುವ ಸ್ತ್ರೀಪುರುಷ ಭೋಗಗಳನ್ನು ಸಹಿಸಲಾರದೆ ಆ ಸ್ತ್ರೀಜಾತಿಗೆ ಅಶ್ವಭೋಗವನ್ನು ಕಲ್ಪಿಸುವ ನಿಮ್ಮ ಸಾಹಸಕ್ಕೆ ಬೆಲೆಯಿಲ್ಲ. ಆದರೆ ಈರೀತಿ ಯಜ್ಞಮಾಡಿಸುವ ಯಜಮಾನ ಮೊದಲಾದವರ ಪರಸ್ತ್ರೀಯರನ್ನು ಅಶ್ವಭೋಗಕ್ಕೆ ಹಚ್ಚದೆ ಕೇವಲ ಬ್ರಾಹ್ಮಣಂಮನ್ಯರಲ್ಲಿಯೇ ಇಂಥಾ ಅಶ್ವಭೋಗವನ್ನು ಪ್ರೇರಿಸಿದ್ದರೆ ಆ ಬ್ರಾಹ್ಮಣರ ಮಕ್ಕಳು ಮರಿಮಕ್ಕಳೆಲ್ಲವರೂ ಹಯಗ್ರೀವರಾಗಿಯೇ ಹುಟ್ಟುತ್ತಿದ್ದರು, ಮತ್ತು ಇದರಿಂದ ಕುಲದೇವರೆನಿಸಿದ ಹಯಗ್ರೀವೋತ್ಪತ್ತಿಯು ಬ್ರಾಹ್ಮಣರಲ್ಲಿಯೇ ಆಗಿ ಅನಾಯಾಸದಿಂದ ಕುಲದೇವರಾದ ಹಯಗ್ರೀವರ ದರ್ಶನಲಾಭವು ದೊರೆಯುತ್ತಿತ್ತು. ಅಂದಮೇಲೆ ಎಲೈ ಮಹೀಧರಾದಿ ಪಂಡಿತರೇ? ನೀವು ಹೀಗ್ಯಾಕೆ ನಿಮ್ಮವರಲ್ಲಿಯೇ ಈರೀತಿಯಾದ ಅಶ್ವಮೇಧಮಾಡಬೇಕೆಂದು ಹೇಳಲಿಲ್ಲ? ಹಾಗೆ ಬರೆದಿದ್ದರೆ ನಿಮ್ಮ ಭಾಷ್ಯವು ನಿಮ್ಮ ಜಾತಿಗೆ ಒಂದು ಮಹದುಪಕಾರಮಾಡಿದಂತಾಗುತ್ತಿತ್ತಲ್ಲವೆ? ಓಹೋ ಪರರನ್ನು ಮುಣಗಿಸುವುದರಲ್ಲಿ ಕುಶಲರಾದ ನೀವು ಹ್ಯಾಗೆ ಮುಳುಗುವಿರಿ? ಈರೀತಿಯಾದ ಮಹೀಧರ, ಉವ್ವಟಾದಿಗಳ ಅರ್ಥದಿಂದ ವೇದವು ಜಗತ್ತಿನ ಅಪಹಾಸ್ಯಕ್ಕೀಡಾಗಿ ಅದರಲ್ಲಿ ಪ್ರತಿಪಾದಿತವಾಗಿರುವ ನಿಜವಾದ ಯಜ್ಞಯಾಗಕ್ರಿಯೆಗಳು ನಿಂತುಹೋಗಿ ಎಲ್ಲಾ ಜನಾಂಗವೂ ಆ ವೈದಿಕ ಯಜ್ಞಯಾಗಕ್ರಿಯೆಗಳ ಹೆಸರನ್ನೇ ಬಿಟ್ಟು ಬಿಟ್ಟಿರುವರು. ಆದರೆ ಪೂರ್ವಕಾಲದಲ್ಲಿ ವೇದದ ನಿಜವಾದ ಅರ್ಥಪರಂಪರೆಯು ಪ್ರಚಲಿತವಿದ್ದುದರಿಂದ ವೇದವನ್ನು ಋಷಿಗಳು ಪರಿಪರಿಯಾಗಿ ಸ್ತುತಿಸಿರುವರು. ಅದನ್ನು ಮುಂದಿನ ಲೇಖದಲ್ಲಿ ತೋರಿಸುವುದಲ್ಲದೆ ಜನಿವಾರ ಮೊದಲಾದ ವಿಷಯಗಳು ವೇದದಲ್ಲಿ ಹೇಳಲ್ಪಟ್ಟಿಲ್ಲವೆಂಬುದನ್ನು ವಿಚಾರಮಾಡುವೆವು.

ಅಜ್ಜಯ್ಯಶಾಸ್ತ್ರಿ.

೧೯೨೭ನೆಯ ಇಸವಿ ಅಕ್ಟೋಬರ್ ತಾ|| ೯ ರಿಂದ ೧೯೨೭ ನೆಯ ಇಸವಿ ಅಕ್ಟೋಬರ್ ತಾ|| ೧೫ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೯ ನೆಯ ಅಕ್ಷಯನಾಮಸಂವತ್ಸರದ ಆಶ್ವಯುಜ ಶುದ್ಧ ತದಿಗೆಯಿಂದ ಆಶ್ವಯುಜ ಶುದ್ಧ ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಮಾಸ
9	ಶನಿ	ತದಿ	59-26	ಸ್ವಾತಿ	71-42	23
10	1 ಭಾನು	ಚೌತಿ	59-48	ವಿಶಾ	20-45	24
11	ಸೋಮ	ಪಂಚ	59-57	ಅನೂ	22-32	25
12	ಮಂಗಳ	ಷಷ್ಠಿ	58-45	ಜ್ಯೇಷ್ಠ	23-3	26
13	2 ಬುಧ	ಸಪ್ತ	55-45	ಮೂಲ	22-24	27
14	3 ಗುರು	ಅಷ್ಟ	51-42	ಪೂಷಾ	20-44	28
15	4 ಶುಕ್ರ	ನವ	46-48	ಉಷಾ	18-9	29

(1) ಮಳೆನಕ್ಷತ್ರ-ಚಿತ್ತ ೧ ನೆಯಪಾದ. (2) ಕಾಳರಾತ್ರಿ, ಮಹಿಷಾಸುರಸಂಹಾರ, ಸರಸ್ವತೀಪೂಜಾ, ಮಳೆನಕ್ಷತ್ರ-ಚಿತ್ತ ೨ ನೆಯಪಾದ. (3) ದುರ್ಗಾಷ್ಟಮಿ. (4) ಮಹಾನವಮಿ, ಆಯುಧಗಜಾಶ್ವಪೂಜಾ, ಹಯಗ್ರೀವಪೂಜಾ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲಿಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರಾಮ್ಯಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೪-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೭ ನೆಯ ಇಸವಿ ಅಕ್ಟೋಬರ್ ತಾರೀಖು ೧೫ ನೆಯ ಶನಿವಾರ. [ಸಂಚಿಕೆ ೪೨

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ — ಶತಪುಷ್ಪ, ಶಾಲಿಮಕಂದ, ಮಧುಕಂದ, ಜಸಾಕಂದ, ಶಾಲೀಮಲೀಕಂದ, ಅಶ್ವಗಂಧ, ಕ್ರೌಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣಿದಸಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೇಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೇಮಗಜ, ಆಲದಹಾಲು, ನಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂಡು; ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜತ, ಜಾಜೀಕಾಯಿ, ರೂಮಾಮುಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೦ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತೀಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ಪಷ್ಟ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—12] ಪತ್ತೆ:—ಮಾಲಕ ವೈದ್ಯ ಪ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

S.U.N. & CO. BENARES CITY

SIROMANY NARAYANACHARYA & CO.,
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—13]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾದಾರರಿಗೆ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೪-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಶೀಘ್ರಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

(Registered Trade Mark)

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೫೦—1] ಪೋ. ಬಾ. ೫೧೦, ಮದರಾಸು.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

SREE SITHARAGHAVA VAIDYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ
ರೋಗಗಳನ್ನು
ಗುಣಪಡಿಸುತ್ತವೆ.
39

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೪—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೪—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್ ಸಂಘದಿಂದ 1926-27 ರಲ್ಲಿ 8 ತಿಂಗಳುಗಳ ವೇತನ ಮಂಜೂರಾಗಿರುವ ವಿದ್ಯಾರ್ಥಿಗಳ ಹೆಸರಿನ ಪಟ್ಟಿ.

ಮಹಾರಾಜ ಕೊಲಿಜಿಯೇಟ್ ಹೈಸ್ಕೂಲ್ ಮೈಸೂರು—

ಎಸ್.ಎಸ್.ಎಲ್.ಸಿ.

16. ಎಸ್. ರುದ್ರಸ್ವಾಮಿ 3 ರೂ. 17. ಜಿ. ಎನ್. ಲಿಂಗಪ್ಪ 3 ರೂ.
18. ಬಿ. ಕೆ. ರಾಜಶೇಖರಯ್ಯ V ಫಾರಂ 3 ರೂ.

ಡಿ. ಬನುಮಯ್ಯನವರ ಕೊಲಿಜಿಯೇಟ್ ಹೈಸ್ಕೂಲ್—

19. ಬಿ. ಸಿ. ಬಸಪ್ಪ ಎಂಟ್ರನ್ಸ್ 5 ರೂ. 20. ಟಿ. ಹೆಚ್. ರುದ್ರಪ್ಪ ಎಸ್.ಎಸ್.ಎಲ್.ಸಿ. 3 ರೂ.

ಗೌರ್ನಮೆಂಟ್ ಕೊಲಿಜಿಯೇಟ್ ಹೈಸ್ಕೂಲು, ಬೆಂಗಳೂರು—ಎಂಟ್ರನ್ಸು.

21. ಬಿ. ಆರ್. ವೀರಲಿಂಗಯ್ಯ 5 ರೂ. 22. ಎಸ್. ಬಸಪ್ಪ 5 ರೂ. 23. ಕೆ. ಜಯದೇವಪ್ಪ 5 ರೂ. 24. ಎಂ. ಎನ್. ಶಿವಪ್ಪ 5 ರೂ. 25. ಟಿ. ಡಿ. ಶಿವಲಿಂಗಪ್ಪ 5 ರೂ.

26. ಎ. ಸಿದ್ಧರಾಮಯ್ಯ ಎಸ್.ಎಸ್.ಎಲ್.ಸಿ. 3 ರೂ.

V ಫಾರಂ.

27. ಎಂ. [illegible] 3 ರೂ. 28. ಎ. ಮಹದೇವಪ್ಪ 3 ರೂ.

([illegible])

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್, ಮೈಸೂರು.

ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ 70 ನೇ ಆರ್ಟಿಕಲ್ಲನ್ನು ಅನುಸರಿಸಿ ಷೇರುಹೋಲ್ಡರುಗಳ ಎಕ್ಸ್‌ಟ್ರಾರ್ಡಿನರಿ ಜನರಲ್ ಮೀಟಿಂಗು 1926 ನೇ ಅಕ್ಟೋಬರ್ ತಾ|| 23 ನೆಯ ಶನಿವಾರ ಸಾಯಂಕಾಲ 4½ ಘಂಟೆಗೆ ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ಧರ್ಮಪ್ರಕಾಶ ಡಿ. ಬನುಮಯ್ಯನವರ ಕೊಲಿಜಿಯೇಟ್ ಹೈಸ್ಕೂಲು ಕಟ್ಟಡದಲ್ಲಿ ನಡೆದು ಈ ಕೆಳಗೆ ಕಂಡ ರೆಜಲ್ಯೂಷನ್ನುಗಳು ಪರ್ಯಾಲೋಚನೆಗೆ ತರಲ್ಪಟ್ಟು ಅನುಮೋದಿತವಾದಲ್ಲಿ 1926 ನೇ ನವಂಬರ್ ತಾ|| 11 ನೆಯ ಗುರುವಾರ ಸಾಯಂಕಾಲ 4½ ಘಂಟೆಗೆ ಮೇಲ್ಕಂಡ ಸ್ಕೂಲಿನಲ್ಲೇ ನಡೆಯುವ ಷೇರುಹೋಲ್ಡರುಗಳ ಮತ್ತೊಂದು ಮೀಟಿಂಗಿನಲ್ಲಿ ಅವುಗಳನ್ನು ಸ್ಪೆಷಲ್ ರೆಜಲ್ಯೂಷನ್ನುಗಳಾಗಿ ಕನ್‌ಫರಂ ಮಾಡಲು ಇಡಲ್ಪಡುವುವೆಂದು ಈ ಮೂಲಕ ವ್ಯಕ್ತಪಡಿಸಿರುತ್ತೆ.

1. ಪೂರ್ತಿಯಾಗಿ ಸಂದಾಯವಾದ 50 ರೂ. ಷೇರಿನ ಬೆಲೆಯನ್ನು 25 ರೂ. ಗೆ ಇಳಿಸಲ್ಪಡುವುದರ ಮೂಲಕ ನಿಶ್ಚಿತವಾದ ಮೂಲಧನವನ್ನು 40,00,000 ರೂಪಾಯಿಗಳಿಂದ 20,00,000 ರೂ. ಗಳಿಗೆ ಕಡಿಮೆಮಾಡುವುದು, ಮತ್ತು ಸಬ್‌ಸ್ಕ್ರೈಬಾಗದೆ ಇರತಕ್ಕ ಷೇರುಗಳನ್ನೂ ಫರ್‌ಫೀಟಾಗಿ ಕಂಪನಿಗೆ ಸೇರಿಸಿಕೊಳ್ಳಲ್ಪಡುವ ಷೇರುಗಳನ್ನೂ 25 ರೂ. ದರದಂತೆ ವಿಕ್ರಯಿಸುವುದು.

2. 1 ನೇ ರೆಜಲ್ಯೂಷನ್ ಪ್ರಕಾರ ಕಂಪೆನಿಯ ಮೂಲಧನದ ಬೆಲೆಯನ್ನು ಕಡಿಮೆಮಾಡಿದುದರಿಂದುಂಟಾದ ಮಿಗಿತಾಯವನ್ನು ಈ ಕೆಳಗೆ ಕಂಡಂತೆ ವಿನಿಯೋಗಿಸುವುದು—

(i) ಕಟ್ಟಡಗಳು, ಯಂತ್ರಗಳು ಮೊದಲಾದವುಗಳ ಮೊದಲಿನ ಬೆಲೆಯನ್ನು ಈಗಿನ ಬೆಲೆಗನುಗುಣವಾಗಿ ಕಡಮೆ ಮಾಡುವುದು.

(ii) ವೆಚ್ಚಕ್ಕಾಗಿಯೂ, ಷೇರುಗಳ ದಲ್ಲಾಳಿಗಾಗಿಯೂ ಖರ್ಚುಬಿದ್ದಿರುವುದನ್ನೂ 1926 ನೇ ಡಿಸೆಂಬರ್ ತಾ|| 31 ರ ವರೆಗೆ ಆದ ಆದಾಯ ನಷ್ಟದ ಲೆಖ್ಖವನ್ನೂ ವಜಾಮಾಡುವುದು.

3. 1 ನೆ ಮತ್ತು 2 ನೇ ರೆಜಲ್ಯೂಷನ್ನುಗಳಲ್ಲಿ ಕಂಡಂತೆ 1926 ನೇ ಡಿಸೆಂಬರ್ ತಾ|| 31 ರ ಲಾಗಾಯಿತು ಲೆಖ್ಖದಲ್ಲಿ ಕಡಿಮೆಮಾಡಲ್ಪಟ್ಟು ಸರಿಪಡಿಸಲ್ಪಡುವುದು.

4. ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ 108 ನೇ ನಂ. ಆರ್ಟಿಕಲ್ಲನ್ನು ಈ ಕೆಳಗೆ ಕಂಡಪ್ರಕಾರ ತಿದ್ದುಪಡಿ ಮಾಡುವುದು.

"ಸ್ಪೆಷಲ್ ಡೈರೆಕ್ಟರುಗಳು ಮತ್ತು ಅರಮನೆಯ ಡೈರೆಕ್ಟರು ಹೊರತಾಗಿ ಉಳಿದ ಪ್ರತಿಯೊಬ್ಬ ಡೈರೆಕ್ಟರೂ ಕಂಪೆನಿಯಲ್ಲಿ 200 ಕ್ಕೆ ಕಡಮೆಯಿಲ್ಲದೆ ಷೇರುಗಳನ್ನು ತೆಗೆದುಕೊಂಡವರಾಗಿರಬೇಕು......"

5. 1, 2, 3 ಮತ್ತು 4 ನೇ ರೆಜಲ್ಯೂಷನ್ನುಗಳು ಪ್ಯಾಸಾಗಿ ಸ್ಥಿರಗೊಳಿಸಲ್ಪಟ್ಟಮೇಲೆ ಅವುಗಳನ್ನು ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನಲ್ಲಿ ಗರ್ಭೀಕರಿಸುವುದು.

ಬೋರ್ಡಿನವರ ಆಜ್ಞಾನುಸಾರ
ಮೈಸೂರು, 10-10-1926. } ಎಂ. ಎಲ್. ವರ್ಧಮಾನಯ್ಯ ಅಂಡ್ ಕೊ.,
ಮ್ಯಾನೇಜಿಂಗ್ ಏಜೆಂಟ್ಸ್.

ಏಷಿಯಾಟಿಕ್ ಗೌರ್ನಮೆಂಟ್ ಸಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪೆನಿ ಲಿಮಿಟೆಡ್ ಬೆಂಗಳೂರು.

ನೋಟೀಸು.

ಈ ಕೆಳಗೆ ರುಜುಮಾಡಿರುವವರ ಏಜನ್ಸಿಯು ತಪ್ಪಿಸಲ್ಪಟ್ಟಿರುತ್ತದೆಂದು ಕಂಪೆನಿಯ ಬೋರ್ಡಿನವರ ಪರವಾಗಿ ಮ|| ಎಂ. ಪಿ. ಭೋಗಯ್ಯನವರು ಮದ್ರಾಸಿನ ಡೇಲಿನ್ಯೂಸ್‌ಪೇಪರುಗಳಲ್ಲಿ ಪ್ರಕಟಿಸಿರುವ ನೋಟೀಸು ನಿಜವಾದ್ದಲ್ಲವಾದ್ದಲ್ಲದೆ ತಪ್ಪುತಿಳಿವಳಿಕೆಯನ್ನುಂಟುಮಾಡತಕ್ಕದ್ದಾಗಿದೆ. ಮ|| ಎಂ. ಪಿ. ಭೋಗಯ್ಯನವರು ಕಂಪೆನಿಯ ಡೈರೆಕ್ಟರಾಗಿಲ್ಲವಾದ್ದರಿಂದ ಆ ರೀತಿ ಪ್ರಸಿದ್ಧಮಾಡಲು ಅವರಿಗೆ ಅಧಿಕಾರವಿಲ್ಲ. ಅವರು ಪ್ರಕಟಿಸಿರುವ ನೋಟೀಸು ಈ ಕೆಳಗೆ ರುಜುಮಾಡಿರುವ ನಾನು ಮ|| ಎಂ. ಪಿ. ಭೋಗಯ್ಯನವರನ್ನೂ, ಅವರ ಪಾರ್ಟಿಗೆ ಸೇರಿದ ಡಾಕ್ಟರ್ ಎ. ಜೆ. ರಾಂ ಮತ್ತು ಮ|| ಎಲ್. ಬಸಪ್ಪ ಇವರುಗಳನ್ನು ಡೈರೆಕ್ಟರುಗಳ ಸ್ಥಾನದಿಂದ ತೆಗೆದುಹಾಕಬೇಕೆಂದು ಷೇರುಹೋಲ್ಡರುಗಳ ಎಕ್ಸ್‌ಟ್ರಾ ಆರ್ಡಿನರಿ ಮೀಟಿಂಗನ್ನು ಇಚೆಗೆ ನಡೆಸಿದುದರಮೇಲೂ ನಾನೂ ಮತ್ತು ರಿಟೈರ್ಡ್ ಅಸಿಸ್ಟೆಂಟ್ ಇಂಜನೀಯರು ಮಿ|| ಎಸ್. ನಟೇಶಅಯ್ಯರ್‌ರವರೂ ಸೇರಿ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ಓ. ಎಸ್. 9 ಆಫ್ 26-27 ನಂಬರಿನಲ್ಲಿ ಮ|| ಎಂ. ಪಿ. ಭೋಗಯ್ಯನವರನ್ನೂ ಡಾ|| ಎ. ಜೆ. ರಾಂ ರವರನ್ನೂ ಮ|| ಎಲ್. ಬಸಪ್ಪನವರನ್ನೂ ಡೈರೆಕ್ಟರೇಟಿನಿಂದ ತಪ್ಪಿಸಬೇಕೆಂದು ದಾವಾದಾಖಲ್ಮಾಡಿರುವುದರಮೇಲೂ ಮ|| ಭೋಗಯ್ಯನವರು ದ್ವೇಷದಿಂದಲೂ, ಹಠದಿಂದಲೂ ನೋಟೀಸನ್ನು ಪ್ರಕಟಿಸಿರುತ್ತಾರೆ. ಆದುದರಿಂದ ಮೇಲ್ಕಂಡ ಮೂವರುಗಳು ಮಾಡುವ ಯಾವ ಕಾರ್ಯವೂ ಊರ್ಜಿತವಾದುದಲ್ಲ ಮತ್ತು ಕಂಪೆನಿಯನ್ನು ಬದ್ಧಿಸತಕ್ಕದ್ದಾಗಿಲ್ಲ.

ಈ ಕಾರಣಗಳಿಂದ ಈ ಕೆಳಗೆ ರುಜುಮಾಡಿರುವ ನಾನು ಎಂದಿನಂತೆ ಮೇಲ್ಕಂಡ ಕಂಪೆನಿಗೆ ಮದ್ರಾಸು ಪ್ರೆಸಿಡೆನ್ಸಿಯ ಚೀಫ್ ಏಜಂಟರಾಗಿರುತ್ತೇನೆಂದೂ, ಮೆಸರ್ಸ್. ಎಂ. ಪಿ. ಭೋಗಯ್ಯ, ಎ. ಜೆ. ರಾಂ, ಮತ್ತು ಎಲ್. ಬಸಪ್ಪ ಈ ಮೂವರು ಈ ನೋಟೀಗೆ ವಿರೋಧವಾಗಿ ಮಾಡುವ ಯಾವ ಕೆಲಸವನ್ನಾಗಲಿ ಖರಾರನ್ನಾಗಲಿ ಇವರುಗಳಿಗೆ ಸಲ್ಲಿಸುವ ಹಣವನ್ನಾಗಲಿ ಡೈರೆಕ್ಟರುಗಳಾದ ಮೆಸರ್ಸ್. ಎಸ್. ನಟೇಶ ಅಯ್ಯರ್, ಕೆ. ಎಸ್. ಭದ್ರಯ್ಯಸೆಟ್ಟಿ, ದೇಶಮುಖಿ ಎಸ್. ಗೋವಿಂದರಾಜು ಮತ್ತು ಈ ಕೆಳಗೆ ರುಜುಮಾಡಿರುವವನಾದ ನಾನು ಅಂಗೀಕರಿಸುವುದಿಲ್ಲ. ಒಂದುವೇಳೆ ಯಾರಾದರು ಹಾಗೆ ವಿರೋಧವಾಗಿ ನಡೆದುಕೊಂಡಲ್ಲಿ ಅದಕ್ಕೆ ಅವರೇ ಜವಾಬ್ದಾರರಾಗುತ್ತಾರೆ.

(ರುಜು) ಪಿ. ಕಾಳಿಂಗರಾವ್,
ತಾ|| 12-10-26. ಪ್ರೊಪ್ರೈಟರ್,
ಮೆಸರ್ಸ್. ಪಿ. ಕೆ. ರಾವ್ ಅಂಡ್ ಸನ್ಸ್,
(ಚೀಫ್ ಏಜಂಟ್ಸ್ ಮದ್ರಾಸ್ ಪ್ರೆಸಿಡೆನ್ಸಿ)
ಮತ್ತು ಮೇಲ್ಕಂಡ ಕಂಪನಿಯ ಡೈರೆಕ್ಟರು,
289, ತಂಬೂಚೆಟ್ಟಿ ಸ್ಟ್ರೀಟ್, ಮದ್ರಾಸ್.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೧೬ ನೆಯ ಶನಿವಾರ.

DASARA AND BIRTHDAY GUESTS.

SOME CONSTANT FACTORS.

It was both a wise and judicious policy on the part of Government to have proposed to invite members of the Mysore Legislative Council and of the Mysore Representative Assembly by turns to attend the Durbars held during the Birthday of His Highness and the Dasara. The arrangement would permit of all the members of the Legislative Council and quite a good number of the Representative Assembly members to enjoy the privilege of attending the Durbars and of paying their homage in person to His Highness and to partake of the amenities of the seasons. But we are afraid this policy which was adopted with such a good purpose is not kept up and is even sacrificed to political or personal purposes. This is not the first time we have protested against the manner in which the selection of guests is made. There are some constant factors who seem to be the pet children of Government. They have been invited for all the seasons during the last three years. We do not know whether it is done on account of lack of a sense of impartiality or of courage. We would have no voice in questioning the selection of guests by the Government were it not for the fact that this host was only to dispense its hospitality at the cost of public funds. Messrs. M. Venkatakrishnayya, C. Narasimiah and B. Narasinga Rao seem to be the chosen few who form the constant factors. Let it also be remembered that they are all citizens residing in Mysore, who have had their chances many times before the reconstitution of the two bodies and who could in any case enjoy the privileges of the seasons. There seems to be something really wrong somewhere. For, it could not be said that the Government is unaware of the public opinion in the matter. It is somewhat astonishing that Government should be impervious to public opinion on so patently inequitable arrangement. Otherwise, the Government have to answer the charge by a declaration that there is no particular policy in the selection of guests, by which the public could conclude that the absence of policy is made up by diplomacy and rest quiet. We would urge on the members of the two bodies to take up this question at the budget sessions and force out a definite policy from Government which, after all, could only act rightly under healthy public criticism.

CITY ELECTORAL ROLL.

We learn that the City Municipal Council is preparing the list of voters of the city. We do not know whether it is being done in accordance with the amended Regulation whereby not only the person paying the tax to a certain minimum but also the person who has been assessed to the extent of a certain minimum is entitled to be a voter. Thousands of voters used to be left out of the list on the ground that they were in arrears. But there is no longer this bar, and we hope that the Municipal Executive will see to it that they do not omit a single voter who is assessed to pay the minimum tax from being brought on the list. If this rule is strictly adhered to we are sure the list will double itself. We learn that the Bangalore Municipal Council has adopted special measures to make the list as complete and as exhaustive as possible. Our ratepayers are not yet so enlightened as to take the trouble of looking into the preliminary lists prepared and claiming the inclusion of their names if they are omitted. So, the responsibility of preparing the list as correctly as possible rests heavily with the Municipal Council and we hope that it will be done quite satisfactorily. We may also call upon the Municipal Councillors and other leading citizens of Mysore to see that the names of ratepayers which are omitted are included in the supplementary lists.

ಪ್ರಭುತ್ವಪ್ರೇಮಾಸ್ಪದ ಅತಿಥಿಗಳು.

ಶ್ರೀಮನ್ ಮಹಾರಾಜರವರ ದಶರಾ ಮತ್ತು ವರ್ಧಂತಿ ಮಹೋತ್ಸವಗಳಲ್ಲಿ ಸರ್ಕಾರಿಯ ದೊಡ್ಡ ಅಧಿಕಾರಿಗಳೂ ಪರಸ್ಥಳಗಳ ದೊಡ್ಡಮನುಷ್ಯರುಗಳೂ ಅತಿಥಿಗಳಾಗಿ ಆಹ್ವಾನಿಸಲ್ಪಡುತ್ತಿರುವುದರ ಜತೆಗೆ ಮೈಸೂರು ನ್ಯಾಯವಿಧಾಯಕ ಸಭಾಸ್ಥಾಪನೆಯಾದಮೇಲೆ ಅದರ ಸಭ್ಯರುಗಳೂ ಅತಿಥಿಗಳಾಗಿ ಆಹ್ವಾನಿಸಲ್ಪಡುವಂತಾಯಿತು. ಆದರೆ ಈಚೆಗೆ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕಸಭೆಗಳು ಸುಧಾರಣೆಗೊಂಡು ಆರಂಭವಾದಮೇಲೆ ಉಭಯಸಭೆಗಳಿಂದಲೂ ಒಂದೊಂದುವೇಳೆಗೆ ಕೆಲಕೆಲರನ್ನು ಆಹ್ವಾನಿಸುವಂತೇರ್ಪಾಟಾಗಿ ನಡೆದುಕೊಂಡುಬರುತ್ತಿರುವುದು. ಈ ಏರ್ಪಾಟಿನಿಂದ ನ್ಯಾಯವಿಧಾಯಕಸಭೆಯ ಮೆಂಬರರೆಲ್ಲರೂ, ಪ್ರಜಾಪ್ರತಿನಿಧಿಸಭೆಯ ಹಲವು ಮೆಂಬರುಗಳೂ ಅತಿಥಿಗಳಾಗಿ ಬಂದು ಶ್ರೀಮನ್ ಮಹಾರಾಜರವರನ್ನು ಪ್ರತ್ಯಕ್ಷವಾಗಿ ಓಲೈಸಿ ಉತ್ಸವ ವೈಭವವನ್ನು ಅನುಭವಿಸಲು ಅವಕಾಶವುಂಟಾಯಿತು. ಆದರೆ ಯಾವ ಸದುದ್ದೇಶದಿಂದ ಈ ಏರ್ಪಾಟು ಆಗಿರುವುದೋ ಆ ಉದ್ದೇಶದಂತೆ ನಡೆಯದೆ ರಾಜಕೀಯ ಅಥವಾ ಸ್ವಾರ್ಥತೆಯ ಪಕ್ಷಪಾತಕ್ರೀಡಾದಂತೆ ಕಂಡುಬರುತ್ತದೆ. ಅತಿಥಿಗಳನ್ನು ಆಹ್ವಾನಿಸುವುದರಲ್ಲಿ ಪಕ್ಷಪಾತವು ನಡೆಯುತ್ತಿದೆಯೆಂದು ನಾವು ಅನೇಕವೇಳೆ ಉದ್ಘಾಟಿಸಿರುತ್ತೇವೆ. ಆದರೂ ಅದರಿಂದೇನೂ ಪ್ರಯೋಜನವಾದಂತೆ ತೋರುವುದಿಲ್ಲ. ಯಾಕೆಂದರೆ ಕಳೆದ ಮೂರುವರ್ಷಗಳಿಂದಲೂ ಕೆಲರು ಅವಿಚ್ಛಿನ್ನವಾಗಿ ದಸರಾ ಮತ್ತು ವರ್ಧಂತ್ಯುತ್ಸವಗಳಿಗೆ ಆಹ್ವಾನಿಸಲ್ಪಡುತ್ತಿರುವುದನ್ನು ನೋಡಿದರೆ ಅವರುಗಳು ಪ್ರಭುತ್ವದ ಪ್ರೇಮಪುತ್ರರಾಗಿರಬೇಕೆಂದು ತೋರುತ್ತದೆ. ಪಕ್ಷಪಾತಪರಿಜ್ಞಾನ ಅಥವಾ ಧೈರ್ಯವಿಲ್ಲದಿರುವುದೇ ಹೀಗಾಗಲು ಕಾರಣವೇನೋ? ನಮಗೆ ಬೇರೆ ತಿಳಿಯದು. ಪ್ರಜೆಗಳು ಕಂದಾಯ ಕೌಳಿಗೆಯ ರೂಪವಾಗಿ ಸರ್ಕಾರಕ್ಕೆ ತೆರುವ ಹಣವು ಅತಿಥಿಸತ್ಕಾರಕ್ಕುಪಯೋಗವಾಗದಿದ್ದಲ್ಲಿ ಪ್ರಭುತ್ವದವರು ತಮ್ಮ ಇಷ್ಟಬಂದವರನ್ನು ಆಹ್ವಾನಿಸುವುದರಲ್ಲಿ ಯಾರ ಆಕ್ಷೇಪವೇನೂ ಇರುವುದಿಲ್ಲ. ಪ್ರಭುತ್ವದವರ ಪ್ರೇಮಾಸ್ಪದರಲ್ಲಿ ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಬಿ. ನರಸಿಂಗರಾಯರು ಮತ್ತು ಸಿ. ನರಸಿಂಹಯ್ಯನವರು ಈ ಮೂವರು ಮಾತ್ರ ಪ್ರಮುಖರಾಗಿರುತ್ತಾರೆ. ಇವರುಗಳು ರಾಜಧಾನಿಯ ನಿವಾಸಿಗಳಾಗಿದ್ದುಕೊಂಡು ಉಭಯಸಭಾಮೆಂಬರುಗಳೂ ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ಬರುವ ಸೌಲಭ್ಯವನ್ನು ಹೊಂದುವುದಕ್ಕೆ ಪೂರ್ವದಿಂದಲೂ ಅನೇಕವೇಳೆ ಅನುಭವಿಸಿರುತ್ತಾರೆ, ಮುಂದೆಯೂ ಅನುಭವಿಸಲು ಅವಕಾಶವುಳ್ಳವರಾಗಿರುತ್ತಾರೆ. ಇಂತಹದರಲ್ಲಿ ಇವರು ಮೂವರೇ ತಪ್ಪದೆ ಪ್ರತಿಯೊಂದು ರಾಜೋತ್ಸವಕಾಲದಲ್ಲಿ ಅತಿಥಿಗಳಾಗಿ ಬರಲು ಎಲ್ಲಿಯೋ ಏನೋ ಕೈವಾಡ ನಡೆಯುತ್ತಿರಬೇಕು. ಹಾಗಿಲ್ಲದಿದ್ದಲ್ಲಿ ಈ ವಿಚಾರವಾಗಿ ಜನರ ಆಕ್ಷೇಪವೇನೆಂಬುದನ್ನು ಪ್ರಭುತ್ವದವರು ಅರಿತು ಬೆರಳಿನ ಸಂದಿನಲ್ಲಿ ಬಿಟ್ಟುಬಿಡುತ್ತಿರಲಿಲ್ಲ. ಆದುದರಿಂದ ಅತಿಥಿಗಳನ್ನು ಆಹ್ವಾನಿಸುವಲ್ಲಿ ಯಾವ ನಿಯಮವೂ ಇಲ್ಲವೆಂದು ಪ್ರಭುತ್ವದವರು ಮೇಲ್ಕಂಡ ಆಕ್ಷೇಪಗಳಿಗೆ ಸಮಾಧಾನರೂಪವಾಗಿ ತಿಳಿಸಿದಲ್ಲಿ ತಮಗಿಷ್ಟವಾದವರನ್ನು ಇಷ್ಟಬಂದಷ್ಟುವೇಳೆ ಆಹ್ವಾನಿಸುತ್ತಾರೆಂದು ಪ್ರಜೆಗಳು ಸಮಾಧಾನಪಟ್ಟುಕೊಂಡು ಮೌನರಾಗುತ್ತಾರೆ. ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕಸಭೆಗಳ ಮೆಂಬರು ಮುಂದಣ ಬಡ್ಜೆಟ್ ಅಧಿವೇಶನದಲ್ಲಿ ಸರ್ಕಾರಿಯತಿಥಿಗಳ ಸತ್ಕಾರಕ್ಕಾಗಿ ವ್ಯಯವಾಗುವ ಹಣದ ವಿನಿಯೋಗವಿಚಾರವನ್ನು ಚೆನ್ನಾಗಿ ಪರಿಶೀಲಿಸಿ ಉತ್ತರೋತ್ತರ ಆಕ್ಷೇಪಕ್ಕೆ ಆಸ್ಪದವಿಲ್ಲದಂತೆ ಮಾಡುವುದು ಅತ್ಯಾವಶ್ಯವೂ ಅವಸರವೂ ಆಗಿರುತ್ತದೆ.

ರಾಜಧಾನಿಯ ಓಟರ ಲಿಸ್ಟು.

1927 ನೆಯ ಮಾರ್ಚಿ ತಿಂಗಳಲ್ಲಿ ನಡೆಯುವ ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕಸಭೆಯ ಮೆಂಬರುಗಳ ಚುನಾವಣೆಗಾಗಿ ಸಂಸ್ಥಾನದ ಎಲ್ಲ ಕಡೆಯಲ್ಲೂ ಓಟರುಗಳ ಲಿಸ್ಟುಗಳು ಹೊಸದಾಗಿ ಸಿದ್ಧಗೊಳಿಸಲ್ಪಡುತ್ತಿರುವಂತೆ ಈ ರಾಜಧಾನಿಯ ಓಟರುಗಳ ಲಿಸ್ಟು ಇಲ್ಲಿಯ ಮ್ಯುನಿಸಿಪಾಲಿಟಿಯವರಿಂದ ಸಿದ್ಧಗೊಳಿಸಲ್ಪಡುತ್ತಿರುವುದಾಗಿ ತಿಳಿಯಬರುತ್ತದೆ. ಇಂತಿಷ್ಟು ಕಂದಾಯವನ್ನು ಕೊಡತಕ್ಕವರು ಅಂದರೆ, ಓಟರ್ ಲಿಸ್ಟು ಸಿದ್ಧವಾಗುವುದಕ್ಕೆ ಪೂರ್ವವೇ ಕಂದಾಯವನ್ನು ಸಲ್ಲಿಸಿರುವವರು ಮಾತ್ರ ಓಟುಮಾಡಲು ಅರ್ಹರೆಂಬ ವಿಧಿಯು ತಪ್ಪಿಸಲ್ಪಟ್ಟು ಕಂದಾಯವನ್ನು ಸಲ್ಲಿಸಿರಲಿ ಬಾಕಿಯಲ್ಲಿಟ್ಟುಕೊಂಡಿರಲಿ ಇಂತಿಷ್ಟು ಕಂದಾಯ ಕೊಡತಕ್ಕವನಾದ ಪ್ರತಿಯೊಬ್ಬನೂ ಓಟುಮಾಡಲು ಅರ್ಹನೆಂದು ಈಗ ಹೊಸದಾಗಿ ವಿಧಾಯಕವಾಗಿರುತ್ತದೆ. ಓಟರುಗಳ ಲಿಸ್ಟನ್ನು ಸಿದ್ಧಗೊಳಿಸಬೇಕಾದ ವೇಳೆಯಲ್ಲಿ ಮ್ಯುನಿಸಿಪಲ್ ಮುತ್ಸದ್ದಿಗಳು ಜಾಗರೂಕತೆಯಿಂದಲೋ ಅಜಾಗರೂಕತೆಯಿಂದಲೋ ಓಟನ್ನು ಕೊಡಲರ್ಹರಾದವರಿಂದಲೂ ಕಂದಾಯವನ್ನು ವಸೂಲ್ಮಾಡದೆ ಬಿಟ್ಟು ಅವರ ಹೆಸರು ಲಿಸ್ಟಿನಲ್ಲಿ ಸೇರಲವಕಾಶವಿಲ್ಲದಂತೆ ಮಾಡುವುದರಿಂದ ನೂರಾರುಜನರ ಹೆಸರುಗಳು ಬಿಟ್ಟುಹೋಗುತ್ತಿದ್ದುದು ಈ ತಿದ್ದುಪಡಿಯಾದ ರೆಗ್ಯುಲೇಷನ್ನಿನಿಂದ ತಪ್ಪಿ ನಿಯತವಾದಷ್ಟು ಕಂದಾಯವನ್ನು ಕೊಟ್ಟಿರುವವನೂ ಇಲ್ಲದವನೂ ಓಟರ ಲಿಸ್ಟಿಗೆ ದಾಖಲಾಗಲು ಅವಕಾಶವಾದುದರಿಂದ, ಈ ವೇಳೆ ಸಿದ್ಧಗೊಳಿಸಲ್ಪಡುವ ಲಿಸ್ಟುಗಳಲ್ಲಿ ಸಾವಿರಾರು ಹೆಸರುಗಳು ಹೆಚ್ಚಾಗಿ ಸೇರುವಂತಾಗಿರುವುದು. ನಮ್ಮ ಕಂದಾಯದಾರರು ಓಟಿನ ಲಿಸ್ಟಿನಲ್ಲಿ ತಮ್ಮ ಹೆಸರು ಸೇರಿಸಲ್ಪಟ್ಟಿದೆಯೋ ಇಲ್ಲವೆ? ಎಂದು ನೋಡಿ ಬಿಟ್ಟುಹೋಗಿರುವ ಹೆಸರನ್ನು ಸೇರಿಸುವಂತೆ ಕೇಳುವಷ್ಟು ನಾಗರಿಕರಾಗಿಲ್ಲವಾದುದರಿಂದ ಮ್ಯುನಿಸಿಪಾಲಿಟಿಯವರು ಯಾವ ಆಕ್ಷೇಪಕ್ಕೂ ಆಸ್ಪದವಿಲ್ಲದಂತೆ ಸಕ್ರಮವಾದ ಲಿಸ್ಟನ್ನು ತಯಾರ್ಮಾಡಿಸಲೇರ್ಪಡಿಸುವ ಭಾರವು ಅವರಮೇಲೆ ಬಿದ್ದುದಾಗಿರುತ್ತದೆ. ಈ ಹೊಸ ರೆಗ್ಯುಲೇಷನ್ ಪ್ರಕಾರ ಓಟರ ಲಿಸ್ಟನ್ನು ಸಂಪೂರ್ಣವಾಗಿಯೂ ಸಕ್ರಮವಾಗಿಯೂ ಸಿದ್ಧಗೊಳಿಸಲು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ತಕ್ಕೇರ್ಪಾಟನ್ನು ಮಾಡಿರುವುದಾಗಿ ಕೇಳುತ್ತೇವೆ. ಅದರಂತೆ ರಾಜಧಾನಿಯ ಮ್ಯುನಿಸಿಪಾಲಿಟಿಯವರು ಸಹ ಹೊಸ ರೆಗ್ಯುಲೇಷನ್ ಪ್ರಕಾರ ಓಟನ್ನು ಕೊಡಲು ಅರ್ಹರಾದ ಕಂದಾಯದಾರರ ಹೆಸರಾವುದೂ ಬಿಟ್ಟುಹೋಗದಂತೆ ತಯಾರ್ಮಾಡಿಸುವರೆಂದೂ, ಮೊದಲಿನ ಲಿಸ್ಟಿನಲ್ಲಿ ಬಿಟ್ಟುಹೋದ ಹೆಸರುಗಳು ಎರಡನೆಯ ಅಂದರೆ ಸಪ್ಲಮೆಂಟರಿ ಲಿಸ್ಟಿನಲ್ಲಿ ಸೇರುವಂತೆ ಮ್ಯುನಿಸಿಪಲ್ ಕೌನ್ಸಿಲರುಗಳೂ ಪುರಪ್ರಮುಖರೂ ಪ್ರಯತ್ನಿಸಬೇಕೆಂದೂ ಸೂಚಿಸುತ್ತೇವೆ.

ಶ್ರೀಮನ್ ಮಹಾರಾಜರವರ ಜಂಬೂಸ್ವಾರಿಯು.

ನೆನ್ನೆಯರಾತ್ರಿ ಯೂರೋಪಿಯನ್ ದರ್ಬಾರು ನಡೆದು ನವರಾತ್ರಿಯುತ್ಸವವು ಕೊನೆಗಂಡಿತು. ಈ ದಿವಸ ಪ್ರಾತಃಕಾಲ 8 ಘಂಟೆಗೆ ಪಟ್ಟದಾನೆ, ಪಟ್ಟದಕುದರೆ ಮತ್ತು ಪಟ್ಟದ ಕತ್ತಿ ಸಕಲ ರಾಜಬಿರುದಾವಳಿಗಳೊಡನೆಯೂ ನಾನಾವಿಧ ವಾದ್ಯಘೋಷಗಳಿಂದಲೂ ಅರಮನೆಯ ಆನೆಬಾಗಿಲಿನಿಂದ ಉತ್ಸವಪೂರ್ವಕವಾಗಿ ಬನ್ನಿಮಂಟಪಕ್ಕೆ ಹೊರಟವು. ಈ ಮಧ್ಯಾಹ್ನ 4½ ಘಂಟೆಗೆ ಶ್ರೀಮನ್ ಮಹಾರಾಜರವರು ದಿವ್ಯವಸ್ತ್ರಾಭರಣವಿಭೂಷಿತರಾಗಿ ಅಲಂಕೃತವಾದ ಆನೆಯಮೇಲಿನ ಭಂಗಾರದ ಅಂಬಾರಿಯಲ್ಲಿ ಕುಳಿತು ಚತುರಂಗಸೇನೆಯಿಂದಲೂ, ಸರದಾರರುಗಳಿಂದಲೂ, ರಾಜಬಂಧುಗಳಿಂದಲೂ, ಪುರಪ್ರಮುಖರುಗಳಿಂದಲೂ ಕೂಡಿ ನಾನಾವಿಧ ವಾದ್ಯಘೋಷದೊಡನೆ ಉತ್ಸವ ಹೊರಟು ಕೋಟೆಯ ಉತ್ತರದ್ವಾರದಿಂದ ದೊಡ್ಡಪೇಟೆಯ ಮಾರ್ಗವಾಗಿ ಹೊರಟು ಅಲ್ಲಲ್ಲಿಗೆ ಜನರೊಪ್ಪಿಸುವ ಫಲಪುಷ್ಪಗಳನ್ನು ಸ್ವೀಕರಿಸಿ, ಮಾರ್ಗದ ಇಕ್ಕೆಲದಲ್ಲೂ ಮನೆಗಳ ಮಹಡಿಗಳಮೇಲೂ ಕಿಕ್ಕಿರಿದು ನಿಂತಿರುವ ಜನಸಮೂಹವನ್ನು ಅವಲೋಕಿಸುತ್ತ ವಂದಿಸಿದವರನ್ನು ಪ್ರತಿಯಾಗಿ ವಂದಿಸುತ್ತ ಬನ್ನಿಮಂಟಪವನ್ನು ತಲುಪಿ ಅಲ್ಲಿ ಶಮೀ ವೃಕ್ಷಪೂಜೆಯಾದನಂತರ ಅಶ್ವಾರೂಢರಾಗಿ ಸೇನೆಯ ಮರ್ಯಾದೆಯನ್ನು ಕೈಕೊಂಡು ಪುನಃ ಆನೆಯಮೇಲಿನ ಅಂಬಾರಿಯಲ್ಲಿ ಮಂಡಿಸಿ ಯಥಾ ಉತ್ಸವದಿಂದ ರಾತ್ರಿ 9 ಗಂಟೆಯ ಹೊತ್ತಿಗೆ ಅರಮನೆಯನ್ನು ಸೇರಿ ವಿವಾಹಮಂಟಪದಲ್ಲಿ ದರ್ಬಾರನ್ನು ನಡೆಯಿಸುವರು. ಅರಮನೆಯಿಂದ ಹೊರಟಾಗಲೂ ಪುನಃ ಅರಮನೆಯನ್ನು ಸೇರಿದಾಗಲೂ 21-21 ಗುಂಡುಗಳು ಹಾರಿಸಲ್ಪಡುವುವು. ನಾಳೆ ರಾತ್ರಿ ಮತ್ತು ನಾಡಿದ್ದು ರಾತ್ರಿ ವಿವಾಹಮಂಟಪದ ಸಭಾಂಗಣದಲ್ಲಿ ದರ್ಬಾರು ನಡೆದು ಹಿಂದೆ ನಜರ್ ಮಾಡದಿದ್ದವರ ನಜರಾಗುವುದು. ಈ ಮಹೋತ್ಸವಕ್ಕೆ ಮದ್ರಾಸು ಬೊಂಬಾಯಿ ಆಧಿಪತ್ಯಗಳಿಂದಲೂ ಸಂಸ್ಥಾನದ ನಾನಾ ಭಾಗಗಳಿಂದಲೂ ಬಹಳಜನರು ಬಂದಿರುವರು. ಪ್ರತಿನಿತ್ಯದಲ್ಲೂ ಬೆಂಗಳೂರು ಕಡೆಯಿಂದ 6-7 ಟ್ರೇನುಗಳೂ, ಅರಸೀಕೆರೆ ಕಡೆಯಿಂದ 4-5 ಟ್ರೇನುಗಳೂ ಚಾಮರಾಜನಗರದಕಡೆಯಿಂದ 5-6 ಟ್ರೇನುಗಳೂ ಹಿಡಿಯಲಾರದಷ್ಟು ಜನರನ್ನು ತುಂಬಿಕೊಂಡು ಬರುತ್ತಿದ್ದುವು. ಅರಮನೆ ಸಜ್ಜೆಯ ಮುಂಭಾಗವು ಹೊಸದಾಗಿ ಕಟ್ಟಲ್ಪಟ್ಟು ವಿಶೇಷವಾಗಿ ಅಲಂಕರಿಸಲ್ಪಟ್ಟಿರುವುದರಿಂಬುದರ ಮೇಲೆ ಹಿಂದಣವರ್ಷಗಳಿಗಿಂತ ಈಸಲ ಹೆಚ್ಚಾಗಿ ಜನರು ಬಂದಿರುವುದಾಗಿ ತೋರುತ್ತದೆ. ಅರಮನೆಯ ಸೌಂದರ್ಯ ವೈಶಾಲ್ಯಗಳಿಗೆ ತಕ್ಕಂತೆ ಮುಂಭಾಗವು ವಿಶಾಲವಾದ ಬೈಲುಮಾಡಲ್ಪಟ್ಟಿರುವುದರಿಂದ ಬಂದ ಜನರೆಲ್ಲರೂ ನಿಂತುಕೊಂಡು ಮತ್ತು ಸ್ತ್ರೀಯರು ಪ್ರತ್ಯೇಕವಾಗಿ ಕಟ್ಟಲ್ಪಟ್ಟಿರುವ ಜಗತಿಯಮೇಲೆ ಕುಳಿತುಕೊಂಡು ನೋಡಲು ಅನುಕೂಲ ಕಲ್ಪಿಸಲ್ಪಟ್ಟು ಬೈಲೆಲ್ಲವೂ ವಿದ್ಯುದ್ದೀಪಾವಳಿಗಳಿಂದಲಂಕರಿಸಲ್ಪಟ್ಟಿರುವುದರಿಂದ ಪ್ರೇಕ್ಷಕರು ಉತ್ಸವಾನಂದ ಸಾಗರದಲ್ಲಿ ಮುಳುಗಿ ತೇಲುತ್ತ, ಒಡ್ಡೋಲಗದಲ್ಲಿ ದೇವೇಂದ್ರನಂತೆ ಶೋಭಿಸುತ್ತಿರುವ ಶ್ರೀಮನ್ ಮಹಾರಾಜರನ್ನು, ಭರತಖಂಡದ ಮತ್ತಾವ ಭಾಗದಲ್ಲೂ ಇಲ್ಲದಿರುವ ವಿದ್ಯುದ್ದೀಪಾಲಂಕಾರವನ್ನು ನೋಡದಿರುವ ಕಣ್ಣುಗಳೇ ವ್ಯರ್ಥವೆಂದು ಮಾತನಾಡಿಕೊಳ್ಳುತ್ತಿದ್ದರು ಮತ್ತು ಜನರಿಗೆ ಯಾವದರಲ್ಲೂ ಯಾವ ವಿಧವಾದ ನಿರ್ಬಂಧವೂ ಇಲ್ಲದೆ ಸ್ವೇಚ್ಛೆಯಾಗಿ ಸಂಚರಿಸಲು ಸೌಕರ್ಯವನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ಮಹಾರಾಜರವರಿಗೆ ಪ್ರಜೆಗಳಮೇಲಣ ಪ್ರೀತಿಯನ್ನು ಕುರಿತು ಕೊಂಡಾಡುತ್ತ ದೀರ್ಘಾಯುಷ್ಮಂತರಾಗಿದ್ದು ಇಂತಹ ಉತ್ಸವವೈಭವಗಳನ್ನು ಅನಂತಾನಂತವಾಗಿ ನಡಿಸುವವರಾಗಲೆಂದು ಹಾರೈಸುತ್ತಿದ್ದರು.

ಸ್ವದೇಶದ ವೃತ್ತಾಂತಗಳು.

ಬರುವ ನವಂಬರ್ ತಾ|| 8 ರಲ್ಲಿ ದಿವಾನರವರು ಶಿವಮೊಗ್ಗ ಡಿ|| ನಲ್ಲಿ ಸಂಚಾರ ಹೊರಡುವುದಾಗಿ ಕೇಳುತ್ತೇವೆ.

ಈ 22 ನೆಯ ಶುಕ್ರವಾರ ಶ್ರೀಚಾಮುಂಡೇಶ್ವರಿಅಮ್ಮನವರ ರಥೋತ್ಸವವೂ ತಾ|| 24 ನೆಯ ಭಾನುವಾರರಾತ್ರಿ ತೆಪ್ಪೋತ್ಸವವೂ ಜರುಗುವುವು.

ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಕೆ. ಸಿದ್ಧರಾಮಪ್ಪ, ಬಿ.ಎ., ಯವರು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಡುವರೆಂದು ಕೇಳುತ್ತೇವೆ.

ಪ್ರಜಾಪ್ರತಿನಿಧಿಸಭಾಧಿವೇಶನವು ಈ ತಾ|| 18 ನೆಯ ಸೋಮವಾರ ಬೆಳಗಿನ 12 ಘಂಟೆಗೆ ದಿವಾನರ ಅಧ್ಯಕ್ಷತೆಯಲ್ಲಿ ಜಗನ್ಮೋಹನಪ್ರಾಸಾದದ ಸಭಾಂಗಣದಲ್ಲಿ ಆರಂಭಗೊಂಡು ತಾ|| 23 ತಪ್ಪಿದಲ್ಲಿ 26 ರ ವರೆಗೆ ನಡೆಯುವುದು.

ಮೈಸೂರು ಡಿಸ್ಟ್ರಿಕ್ಟ್ ಕೌನ್ಸಿಲಿನವರು ಮೊದಲನೆಯ ಡಿಸ್ಟ್ರಿಕ್ಟ್ ರ್ಯಾಲಿಯಲ್ಲಿ ಉತ್ತೀರ್ಣರಾದ ಸ್ಕೌಟುಗಳಿಗೆ ಈ 18 ನೆಯ ಸೋಮವಾರ ಸಾಯಂಕಾಲ 5½ ಘಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸಿನ ಹೊರ ಆವರ್ಣದಲ್ಲಿ ದಿವಾನರವರಿಂದ ಪಾರಿತೋಷಿಕಗಳನ್ನು ಕೊಡಿಸಲೇರ್ಪಡಿಸಿರುವರು.

ಶಿವಮೊಗ್ಗೆಯಲ್ಲಿ ಸಬ್‌ಜಡ್ಜರಾಗಿರುವ ಮ|| ಬಿ. ಆರ್. ಕೃಷ್ಣಮಾಚಾರ್‌ರವರು ದಸರಾ ರಜದೊಡನೆ 2 ತಿಂಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡಿರುವುದರಿಂದ ಕೋಲಾರದ ಗಣಿಪ್ರದೇಶದಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿದ್ದ ಮ|| ಎಚ್. ಎಂ. ಕೃಷ್ಣಸ್ವಾಮಿಯವರು ಶಿವಮೊಗ್ಗೆಯ ಆಕ್ಟಿಂಗ್ ಸಬ್‌ಜಡ್ಜಿಯರಾಗಿ ನಿಯಮಿಸಲ್ಪಟ್ಟಿರುವರು.

ತಿಪಟೂರಿನಲ್ಲಿ ಹಿಂದು-ಮಹಮ್ಮದೀಯರಿಗೆ ಉತ್ಸವವಿಚಾರವಾಗಿ ಕಲಹವು ನಡೆದಾರಭ್ಯ ಯಾವುದೊಂದು ಉತ್ಸವವು ಆಗಿರಲಿಲ್ಲವು ಆದರೆ ಈ ದಿವಸ ಅಲ್ಲಿಯ ದೇವರುಗಳ ವಿಜಯದಶಮಿಯುತ್ಸವವು ನಡೆಸಲ್ಪಡಲು ತಕ್ಕೇರ್ಪಾಟಾಗಿರುವುದರಿಂದ ಗದ್ದಲವೇನೂ ನಡೆಯದಂತೆ ನೋಡಿಕೊಳ್ಳಲು ರಿಜರ್ವ್ ಪೊಲೀಸ್ ಸಿಬ್ಬಂದಿಯು ಬೆಂಗಳೂರಿಂದ ಕಳುಹಲ್ಪಟ್ಟಿರುವುದಾಗಿ ತಿಳಿಯಬರುತ್ತದೆ.

ಡೆಪ್ಯುಟಿಕಮಿಷನರುಗಳಾದ ಮ|| ಎಸ್. ಹಿರಿಯಣ್ಣಯ್ಯನವರು ಕೋಲಾರದಿಂದ ಬೆಂಗಳೂರಿಗೂ, ಮಿ|| ಟ್ಯಾಜ್ ಪಿರ್ರಾನ್‌ರವರು ಶಿವಮೊಗ್ಗೆಯಿಂದ ಕೋಲಾರಕ್ಕೂ, ವರ್ಗಾಯಿಸಲ್ಪಟ್ಟು ಬೆಂಗಳೂರುಸಿಟಿ ಮ್ಯುನಿಸಿಪಲ್ ಕಮಿಷನರಾದ ಮ|| ಬಿ. ಟಿ. ಕೇಶವಯ್ಯಂಗಾರರು ಶಿವಮೊಗ್ಗೆಯ ಡಿ|| ಕಮಿಷನರಾಗಿಯೂ ಮ|| ಟಿ. ಗೋವಿಂದರಾಯರು ಮ್ಯುನಿಸಿಪಲ್ ಕಮಿಷನರಾಗಿಯೂ ನಿಯಮಿಸಲ್ಪಡುವುದಾಗಿ ತಿಳಿಯಬರುತ್ತದೆ.

ಪೌರಸಾಮಾಜಿಕಸಂಘದ ವಾರ್ಷಿಕಸಮ್ಮೇಳನವು ನಾಳೆಯದಿನಸಾಯಂಕಾಲ 4 ಘಂಟೆಗೆ ರಾಜಧಾನಿಯ ಟೌನ್ ಹಾಲಿನಲ್ಲಿ ರಿಟೈರ್ಡ್ ಚೀಫ್‌ಜಡ್ಜಿಯರಾದ ಧರ್ಮಪ್ರವೀಣ ದಿವಾನ್‌ಬಹದ್ದೂರ್ ಮ|| ಕೆ. ಎಸ್. ಚಂದ್ರಶೇಖರಯ್ಯರ್, ಬಿ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ಜರುಗುವುದು. ಇದೇ ಸಾಯಂಕಾಲ 6 ಘಂಟೆಗೆ ರೇಸ್‌ಕೋರ್ಸಿನಲ್ಲಿ ಮೋಟಾರುಬಂಡಿಗಳನ್ನೋಡಿಸುವ ಪಂದ್ಯವು ನಡೆಯುವುದು. ತಾ|| 19 ನೆಯ ಮಂಗಳವಾರ ಬೆಳಗಿನ 8 ಘಂಟೆಗೆ ಇನಾಂದಾರ್ ಸಂಘದ ಜನರಲ್ ಮೀಟಿಂಗು ಜರುಗುವುದು.

ಶ್ರೀಮನ್ ಮಹಾರಾಜರವರ ಅನುಗ್ರಹದಿಂದಲೂ ಬೆಂಗಳೂರ್ ಡಿಸ್ಟ್ರಿಕ್ಟ್ ಬೋರ್ಡಿನವರ ಪ್ರೋತ್ಸಾಹದಿಂದಲೂ ಕಲಾಕೌಶಲ್ಯ, ಕೈಗಾರಿಕೆ, ಬೇಸಾಯ ಮೊದಲಾದ ಪದಾರ್ಥಗಳ ಪ್ರದರ್ಶನವು ಬರುವ ಡಿಸೆಂಬರ್ ತಾ|| 23 ರಿಂದ 31 ರ ವರೆಗೆ ಬೆಂಗಳೂರು ಕಬ್ಬನ್‌ಪಾರ್ಕಿನಲ್ಲಿ ನಡೆಯಲೇರ್ಪಾಟಾಗಿದೆ. ಪ್ರದರ್ಶಕರಿಗೆ ಬೇಕಾದ ಸಹಾಯವು ಮಾಡಲ್ಪಟ್ಟು ಶ್ರೇಷ್ಠವಾದ ಪದಾರ್ಥಗಳಿಗೆ ಉಚಿತಬಹುಮಾನಗಳು ಕೊಡಲ್ಪಡುವುವು. ಈ ಪ್ರದರ್ಶನಸಂಬಂಧವಾದ ವಿಷಯವನ್ನು ಪ್ರದರ್ಶನ ಕಮಿಟಿಯ ಜಾಯಿಂಟ್ ಸೆಕ್ರೆಟರಿಗಳಿಗೆ ಬರೆದು ತಿಳಿದುಕೊಳ್ಳಬಹುದಾಗಿದೆ.

ನಿರ್ದಯೆಯಿಂದ 5 ನರಹತ್ಯಮಾಡಿದ ಪೊಲೀಸ್ ಇನ್‌ಸ್ಪೆಕ್ಟರ ಕೃತ್ಯವು ತಪ್ಪೆಂದು ಸರ್ಕಾರದವರೊಪ್ಪಿಕೊಂಡಾಗ್ಯೂ ಅಕ್ಷಮ್ಯವಾದ ಅಪರಾಧಕ್ಕೆ ತಕ್ಕ ಶಾಸ್ತಿಯನ್ನು ಮಾಡದೆ ನೆಪಮಾತ್ರಕ್ಕೆ ಸಂಬಳದಲ್ಲಿ ಕೊಂಚ ಕಡಿಮೆಮಾಡಿದಂತೆ ತೋರಿಸಿ ಮೊದಲಿಗಿಂತಲೂ ಹೆಚ್ಚು ಸಂಬಳ ಬರುವಂತಹ ಶಿಕ್ಷೆಗೆ ಗುರಿಮಾಡಿರುವುದರ ನ್ಯಾಯವಿಚಕ್ಷಣೆಯು ವಿಚಿತ್ರವಾಗಿರುತ್ತದೆ. ಮತ್ತು ಜನರ ಮನಸ್ಸು ಮತ್ತಷ್ಟು ಪ್ರಕ್ಷುಬ್ಧವಾಗಿರುತ್ತಾದುದರಿಂದ ನಿಷ್ಪಕ್ಷಪಾತವಾದ ವಿಚಾರಣಾಕಮಿಟಿಯೊಂದನ್ನೇರ್ಪಡಿಸಿ ಅವರ ವಿಚಾರಣೆಯ ಫಲಿತಾಂಶವನ್ನು ಪ್ರಕಟಿಸುವಂತೆ ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ದಿವಾನರನ್ನು ಪ್ರಾರ್ಥಿಸಿ ಅವರಿಂದ ವಾಗ್ದಾನವನ್ನು ತೆಗೆದುಕೊಳ್ಳುವವರಾಗಬೇಕೆಂದು ಸೂಚಿಸುತ್ತೇವೆ.

ರಾಜಧಾನಿಯ ಬ್ರಾಹ್ಮಣಾನಾಥಾಲಯದ ಮುಂಗಡೆ ಮಾರ್ಗವನ್ನು ಸರಿಪಡಿಸುವುದಕ್ಕಾಗಿ ಮಣ್ಣನ್ನು ಕೆತ್ತುತ್ತಿರುವಾಗ್ಗೆ ಅನಾಥಾಲಯದ ಅಧ್ಯಕ್ಷರಾದ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ್ ಮ|| ಎಂ. ವೆಂಕಟಕೃಷ್ಣಯ್ಯನವರು ತನ್ನನ್ನು ಹಿಡಿದು ನೂಕಿ ಕಳ್ಳತನಮಾಡುವುದಕ್ಕೆ ಬಂದಿದ್ದೀಯೆ ಎಂದು ಬೈದು ಪೊಲೀಸಿಗೆ ಕೊಡುತ್ತೇನೆಂದು ಬೆದರಿಸಿ ಅವಮಾನಪಡಿಸಿದರೆಂದೂ, ಮ|| ಎಂ. ಜೆ. ಸುಬ್ರಹ್ಮಣ್ಯಶಾಸ್ತ್ರಿ, ಬಿ.ಎ., ಎಂಬವರು ಒದೆಯುತ್ತೇನೆಂದು ಕಾಲೆತ್ತಿದರೆಂದೂ ಕಂಟ್ರಾಕ್ಟರ್ ಮುಸಲ್ಮಾನನು ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರಿಬ್ಬರಮೇಲೆ ಮಾನನಷ್ಟಕ್ಕಾಗಿ ದಾವಾಮಾಡಿರುತ್ತಾನೆ. ಇದರ ವಿಚಾರಣೆಯು ಬರುವ ನವಂಬರ್ ತಾ|| 11 ಕ್ಕಿಡಲ್ಪಟ್ಟಿದೆ. ಪ್ಲೀಡರ್ ಯತಿರಾಜಯ್ಯಂಗಾರ್‌ರವರು ಫಿರ್ಯಾದಿಪರ ವಕೀಲಿಯನ್ನು ವಹಿಸಿರುವರು.

ರಾಜಧಾನಿಯಲ್ಲಿರುವ ಕಂಗಾಳಿಗಳಿಗೆ ಪ್ರತಿದಿನ ಪ್ರಾತಃಕಾಲ ಗಂಜಿಯೂ, ಮಧ್ಯಾಹ್ನ ಅನ್ನವೂ ಅರಮನೆಯಿಂದ ಹಾಕಿಸಲ್ಪಡುತ್ತಿರುವ ಪದ್ಧತಿಯು ನಾಳೆಯಿಂದ ತಪ್ಪಿಸಲ್ಪಟ್ಟು ಜಯಲಕ್ಷ್ಮೀಪ್ರಾಸಾದದ ಬಳಿ ಹೊಸದಾಗಿ ಕಟ್ಟಿಸಲ್ಪಟ್ಟಿರುವ ಅಶಕ್ತಪೋಷಣಾಲಯದಲ್ಲಿ ಅಂಗವಿಹೀನತೆಯಿಂದ ಅಶಕ್ತರಾಗಿರುವ 100 ಜನರನ್ನು ಇಟ್ಟು ಅವರಿಗೆ ಪ್ರಾತಃಕಾಲದಲ್ಲಿ ಗಂಜಿಯನ್ನೂ, ಮಧ್ಯಾಹ್ನದಲ್ಲಿ ಹಿಟ್ಟನ್ನೂ, ಸಾಯಂಕಾಲದಲ್ಲಿ ಅನ್ನ ಸಾರನ್ನೂ ಹಾಕಿ, ಹಾಸಿಗೆ ಹೊದ್ದಿಕೆಗಳನ್ನು ಕೊಟ್ಟು ಪೋಷಿಸಲು ರಾಜಧಾನಿಯ ಮ್ಯುನಿಸಿಪಾಲಿಟಿಯವರ ಮೇಲ್ವಿಚಾರಣೆಯಿಂದ ನಡೆಯಿಸಲ್ಪಡಲು ನಿರ್ಧರಿಸಲ್ಪಟ್ಟಿರುತ್ತದೆ. ಇವರ ಪೋಷಣೆಗಾಗಿ ಪ್ರತಿ ತಿಂಗಳಿನಲ್ಲೂ ಅರಮನೆಯಿಂದ 500 ರೂ. ಗಳು ಕೊಡಲ್ಪಡುವುದಲ್ಲದೆ ಮ್ಯುನಿಸಿಪಾಲಿಟಿಯಿಂದಲೂ 100 ಅಥವಾ 200 ರೂ. ಕೊಡಲ್ಪಡುವುದು. ಇದು ಸ್ತುತ್ಯವಾದೇರ್ಪಾಟೇಸರಿ. ಆದರೆ ಶ್ರೀಮನ್ ಮಹಾರಾಜರವರಿಂದ ಅಶಕ್ತರ ಪೋಷಣೆಗಾಗಿ ದಯಪಾಲಿಸಲ್ಪಡುವ ದ್ರವ್ಯದಲ್ಲಿ ಒಂದು ಕಾಸೂ ದುರ್ವಿನಿಯೋಗವಾಗದಂತೆ ಮೇಲ್ವಿಚಾರಣಾ ಕಮಿಟಿಯವರು ನೋಡಿಕೊಳ್ಳುವವರಾಗಬೇಕು.

ಕೈ|| ಚೆನ್ನಬಸಪ್ಪನವರ ಸ್ಮಾರಕೋತ್ಸವ.

ಈ ಅತ್ಯಾವಶ್ಯಕರ್ತವ್ಯಕ್ಕಾಗಿ ಶೇಖರಿಸಲ್ಪಡುತ್ತಿರುವ ದ್ರವ್ಯನಿಧಿಗೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳಿಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ ಮತ್ತು ಮತಾಭಿಮಾನಿಗಳಾದ ಇತರ ದೊಡ್ಡಮನುಷ್ಯರುಗಳು ಕೂಡಲೆ ಸಹಾಯಮಾಡಬೇಕಾಗಿ ಕೋರಿದೆ.

(1) ಚಾಮರಾಜನಗರದ ವೈಸ್‌ಪ್ರೆಸಿಡೆಂಟರು ಸಂಗನಬಸಪ್ಪನವರು 10 ರೂ. (2) ಚಿಕ್ಕನಾಯ್ಕನಹಳ್ಳಿ ತಾ|| ಸೆಟ್ಟಿಹಳ್ಳಿ ಬಿ. ಸಿದ್ದಯ್ಯನವರು ಆರ್. ಎ. ಮೆಂಬರು 10 ರೂ. (3) ಮೈಸೂರು ಬ್ಯಾಂಕು ಡೈರೆಕ್ಟರು ಮತ್ತು ಆರ್. ಎ. ಮೆಂಬರು ಟಿ. ನಂಜಪ್ಪನವರು 10 ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು ಸಿಟಿ.

1926 ನೇ ಇಸವಿ ಅಕ್ಟೋಬರು 11 ನೇ ತಾರೀಖು ಸೋಮವಾರದ ದಿನ, ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ನಡೆದ ಪರಸ್ಪರಸಹಾಯಸಂಘಗಳ ಹದಿಮೂರನೆಯ ಸಮ್ಮೇಳನವನ್ನು ಸಮಾರಂಭಗೊಳಿಸುವುದರಲ್ಲಿ, ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

ನಾನು ಈ ದಿವಸ ನಿಮ್ಮೆಲ್ಲರೊಡನೆ ಈ ಸಭೆಯಲ್ಲಿ ಸೇರಿರುವುದು ನನಗೆ ಬಹಳ ಸಂತೋಷಕರವಾಗಿದೆ. ನಮ್ಮ ಮಿತ್ರರಾದ [illegible] ಪ್ರವೀಣ, ರಾವ್‌ಬಹದ್ದೂರ್ ಎಂ. [illegible] ನನಗೆ ಈ

ಭಾಗ್ಯವು ದೊರೆಯಿತು. ಮೈಸೂರು ಸಂಸ್ಥಾನದಲ್ಲಿ ಸಹಕಾರದ ಚಳುವಳಿಯು ಪ್ರಾರಂಭವಾದುದಕ್ಕೆ ಅವರೇ ಕಾರಣಕರ್ತರು. ಆದಕಾರಣ, ಅವರು ಮೈಸೂರು ಸಹಕಾರ ಪ್ರಚಾರಸಂಘಕ್ಕೆ (ಮೈಸೂರ್ ಕೋಆಪರೇಟಿವ್ ಪ್ರಾಪಗ್ಯಾಂಡಿಸ್ಟ್ ಇನ್ಸ್ಟಿಟ್ಯೂಟಿಗೆ) ಅಧ್ಯಕ್ಷರಾಗಿರುವುದು ಯುಕ್ತವಾಗಿಯೇ ಇದೆ. ಈಗ್ಗೆ ಕೆಲವುದಿನಗಳ ಹಿಂದೆ ಮಿ|| ರಾಮರಾಯರವರು ನಾನು ಈ ಸಮ್ಮೇಳನವನ್ನು ಸಮಾರಂಭಗೊಳಿಸಬೇಕೆಂದೂ, ಆಗ್ಗೆ ಒಂದು ಭಾಷಣವನ್ನು ಮಾಡಬೇಕೆಂದೂ, ನನ್ನನ್ನು ಕೇಳಿದರು. ನನಗೆ ಹೀಗೆ ಮಾಡಲು ವ್ಯವಧಾನವು ದೊರೆಯದೆ ಹೋಗಬಹುದೆಂಬ ಶಂಕೆಯಿಂದ ಆ ಕೆಲಸವು ನನ್ನಿಂದ ಸಾಧ್ಯವಿಲ್ಲವೆಂದು ತಿಳಿಸಿಬಿಡೋಣವೇ ಎನ್ನಿಸಿತು. ಆದರೆ, ಕೂಡಲೆ ನನ್ನ ಮನಸ್ಸು ಬದಲಾಯಿಸಿತು. ಅದಕ್ಕೆ ಕಾರಣವೂ ಉಂಟು. ಸಹಕಾರಚಳುವಳಿಯಿಂದ ಎಷ್ಟೋ ಪ್ರಯೋಜನವುಂಟೆಂಬುದು ನನ್ನ ಸಂಪೂರ್ಣವಾದ ನಂಬಿಕೆ; ಅದನ್ನು ವೃದ್ಧಿಗೊಳಿಸುವುದರಲ್ಲಿ ಉದ್ಯುಕ್ತರಾಗಿರುವವರು ಅಮೋಘವಾದ ಕೆಲಸವನ್ನು ಮಾಡುತ್ತಿದ್ದಾರೆಂಬುದು ನನ್ನ ಅಭಿಪ್ರಾಯ. ನಾನು ಈ ಸಮ್ಮೇಳನವನ್ನು ಸಮಾರಂಭಗೊಳಿಸಲು ಒಪ್ಪದೆ ಹೋಗಿದ್ದರೆ, ನನ್ನ ಈ ಮನೋಭಾವನೆಗಳನ್ನು ಬಹಿರಂಗವಾಗಿ ತಿಳಿಸಲು ಒದಗಿದ್ದ ಶುಭಸಮಯವನ್ನು ಕಳೆದುಕೊಳ್ಳಬೇಕಾಗುತ್ತಿದ್ದಿತು. ಅದಕ್ಕೆ ಅವಕಾಶ ಕೊಡಕೂಡದೆಂದು ನಾನು ಈ ಕೆಲಸವನ್ನು ನಿರ್ವಹಿಸಲು ಒಪ್ಪಿಕೊಂಡೆನು.

ಸಮ್ಮೇಳನದ ಪರವಾಗಿ ಮಿ|| ರಾಮರಾಯರವರು ಈಗತಾನೇ ಒಂದು ಅಭಿನಂದನ ಪತ್ರಿಕೆಯನ್ನು ಓದಿದರಷ್ಟೆ; ಅದರಲ್ಲಿ ನನ್ನ ವಿಷಯವಾಗಿಯೂ, ನಾನು ನೆರವೇರಿಸಲು ಪ್ರಯತ್ನಿಸುತ್ತಿರುವ ಕೆಲಸದ ವಿಷಯವಾಗಿಯೂ, ಅವರು ಕೆಲವು ಸಂಗತಿಗಳನ್ನು ತಿಳಿಸಿರುತ್ತಾರೆ. ಅವುಗಳು ವಿಶೇಷ ಪ್ರೀತಿ ವಿಶ್ವಾಸಗಳಿಂದಲೂ, ಉದಾರ ಭಾವದಿಂದಲೂ, ಕೂಡಿವೆ. ಕೇವಲ ಸ್ನೇಹಭಾವದಿಂದಲೂ, ಶುಭಾಕಾಂಕ್ಷೆಯಿಂದಲೂ, ಕೂಡಿರುವ ಇಂಥಾ ಹಾರೈಕೆಗಳೇ, ನನಗೆ ನಿಜವಾಗಿಯೂ ಸಹಾಯಕವಾಗಿ ನಿಲ್ಲತಕ್ಕವುಗಳಾಗಿವೆ. ಇಂಥಾ ಹಾರೈಕೆಗಳೇ, ನನಗೆ ಉತ್ತೇಜನವನ್ನು ಕೊಡತಕ್ಕವುಗಳಾಗಿವೆ. ಏಕೆಂದರೆ, ಸ್ವದೇಶದ ಉನ್ನತಿಗಾಗಿ ಶ್ರಮಿಸುತ್ತಾ, ಕೃತಜ್ಞತೆಗೆ ಪಾತ್ರರಾಗಿರುವವರು ಹೀಗೆ ಹಾರೈಸುತ್ತಿದ್ದಾರೆ; ನಮ್ಮ ದೇಶದಲ್ಲಿ ಅತ್ಯಂತ ಪ್ರಾಜ್ಞರೂ, ದೇಶಸೇವೆಗಾಗಿ ಹಗಲಿರುಳೂ ಕೆಲಸಮಾಡುತ್ತಿರುವವರೂ, ಆದ ಮಹನೀಯರಲ್ಲೊಬ್ಬರು, ಈ ಹಾರೈಕೆಯನ್ನು ಕುರಿತು ಪ್ರಸ್ತಾಪಿಸಿರುತ್ತಾರೆ. ಮಹನೀಯರೆ, ನಾವೆಲ್ಲರೂ ಸಹೋದರಭಾವದಿಂದ ಸೇರಿದ್ದೇವೆ. ಆದರೆ, ನಮ್ಮ ಸಹೋದರಭಾವವು ಕೇವಲ ಬರಿಯ ಬಾಯಿಮಾತಿನಲ್ಲಿ ಕೊನೆಗಾಣದೆ, ಅಥವಾ ಕೇವಲ ಮನೋಭಾವನೆಯಲ್ಲಿ ಕೊನೆಗಾಣದೆ ಕಾರ್ಯರೂಪದಲ್ಲಿ ವ್ಯಕ್ತವಾಗುತ್ತಾ ಇದೆ; ಆದುದರಿಂದ, ತಮ್ಮೊಡನೆ ಸೇರಿರುವುದರಲ್ಲಿ, ನನಗೆ ಇದೊಂದು ಹೆಚ್ಚಿನ ಸಂತೋಷವಾಗಿದೆ. ವಸ್ತುತಃ ನಮ್ಮ ದೇಶಬಾಂಧವರಿಗೆ ಒಳ್ಳೆಯದನ್ನು ಮಾಡುವ ಪ್ರಯತ್ನದಲ್ಲಿ ನಾವು ಉದ್ಯುಕ್ತರಾಗಿರುವುದರಿಂದ ಮಾತ್ರವೇ, ನಮ್ಮ ಈ ಮನೋಭಾವನೆಗಳೂ, ಇಂಗಿತಗಳೂ, ನಮ್ಮಲ್ಲಿ ಉಂಟಾಗಿರುತ್ತವೆ. ಹೀಗೆ ಉದ್ಯುಕ್ತರಾಗಿಲ್ಲದೆ ಹೋದರೆ, ಯಾರಿಗೂ ವಾಸ್ತವಿಕವಾದ ಜ್ಞಾನವೇ ಲಭಿಸುವುದಿಲ್ಲ. ಇತರರಿಗೆ ಒಳ್ಳೆಯದನ್ನು ಮಾಡಲು ನಾವು ಪ್ರಯತ್ನಪಡುವುದಾದರೆ, ಅದರಿಂದ ನಾವು ಮತ್ತಷ್ಟು ವಿವೇಕದಿಂದಲೂ, ಮತ್ತಷ್ಟು ಶ್ರದ್ಧೆಯಿಂದಲೂ, ಕೆಲಸ ಮಾಡುವುದು ಸಾಧ್ಯ. ನಾನು ದಿವಾನ್ ಪದವಿಯಲ್ಲಿರುವ ಅವಧಿಯಲ್ಲಿ ಶ್ರೀಮನ್ಮಹಾರಾಜರವರಿಗೂ, ಅವರ ಪ್ರಜೆಗಳಿಗೂ, ಶಾಶ್ವತವಾಗಿ ನಿಲ್ಲುವಂಥಾ ಸೇವೆಯನ್ನು ಸಮರ್ಪಿಸಬೇಕೆಂಬ ವಿಷಯದಲ್ಲಿ, ನನಗಿರುವ ತೀವ್ರಾಭಿಲಾಷೆಯು ಎಷ್ಟು ಮಟ್ಟಿನದೆಂಬುದನ್ನು ಬಾಯಿಮಾತಿನಲ್ಲಿ ಪೂರ್ಣವಾಗಿ ತಿಳಿಯಹೇಳುವುದು ನನ್ನಿಂದ ಸಾಧ್ಯವೇ ಇಲ್ಲ. ಮಹನೀಯರೆ, ನೀವು ಅವಲಂಬಿಸಿರುವಂಥಾ ಯಾವುದಾದರೂ ನಿರ್ದಿಷ್ಟವಾದ ಸಾಧನದ ಮೂಲಕ, ಶ್ರೀಮನ್ಮಹಾರಾಜರವರ ಪ್ರಜೆಗಳ ಸುಖವು ಹೆಚ್ಚಿ, ಅವರಿಗೆ ಉದಾರಭಾವನೆಗಳುಂಟಾದರೆ ಸಾಕು; ಅವರನ್ನು ಈಗ ದಿಂಡುಗೆಡಿಸುತ್ತಿರುವ ಆತಂಕಗಳು ಪರಿಹಾರವಾದರೆ ಸಾಕು; ಅವರ ಸುತ್ತಲೂ ಕತ್ತಲೆ ಮುಂಕೆ ಕವಿದು, ಅವರ ದೃಷ್ಟಿಯನ್ನೇ ಮಬ್ಬುಗೊಳಿಸುತ್ತಿರುವ ಕ್ಷುದ್ರವಾದ ತೊಂದರೆಗಳೂ, ಚಿಂತೆಗಳೂ, ಅವರನ್ನು ಬಿಟ್ಟು ತೊಲಗಿದರೆ ಸಾಕು. ಈ ಉದ್ದೇಶ ಸಾಧನೆಗಾಗಿ ತಕ್ಕುದೊಂದು ಸಾಧನದ ಮೂಲಕ ಕೆಲಸ ಮಾಡುವುದರಲ್ಲಿ, ನಾನು ಇತರ ವಿಷಯವನ್ನೆಲ್ಲಾ ಮರೆತು ಕೆಲಸಮಾಡಲು ಸಿದ್ಧವಾಗಿರುವೆನು. ನನ್ನ ವಿಷಯವೇ ಮರೆಯಲ್ಪಟ್ಟರೂ ಚಿಂತೆಯಿಲ್ಲ; ಅಂತು ಈ ಮಹದುದ್ದೇಶಗಳು ಮಾತ್ರ ನೆರವೇರಿದರೆ ಸಾಕು. ಈ ವಿಷಯದಲ್ಲಿ ಇಲ್ಲಿ ಸೇರಿರುವ ನಮ್ಮೆಲ್ಲರ ಬಯಕೆಯೂ, ಉದ್ದೇಶವೂ, ಒಂದೇ ಆಗಿರುವುದೆಂಬುದನ್ನು ನಾನು ಬಲ್ಲೆನು. ಆದುದರಿಂದಲೇ, ತಮ್ಮ ಅಭಿನಂದನೆಯ ನುಡಿಗಳಿಗಾಗಿ—ತಾವು ನಿಷ್ಕಲವಾಗಿ ನನ್ನೊಡನೆ ಸಹಕರಿಸಿ ವರ್ತಿಸುವಿರೆಂಬ ವಾಗ್ದಾನವನ್ನು ವಸ್ತುತಃ ಸೂಚಿಸುತ್ತಿರುವ ತಮ್ಮ ಅಭಿನಂದನೆಯ ನುಡಿಗಳಿಗಾಗಿ—ನಾನು ತಮ್ಮನ್ನು ಇನ್ನೊಂದು ಮನಃಪೂರ್ವಕವಾಗಿ ವಂದಿಸುತ್ತಿರುವುದು.

ಕಳೆದ ಒಂದು ಶತಮಾನದಿಂದಲೂ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧವಾದ ಕಾರ್ಯಕ್ಷೇತ್ರದಲ್ಲಿ ನವೀನ ಭಾವನೆಯೊಂದು ಕಳಕಳಿಸುತ್ತಾ ಇದೆ. ಅದು ಸಹಕಾರದ ರೂಪವನ್ನು ತಳೆದು ರಾಜಿಸುತ್ತದೆ. ಈಗಿನ ಬದಲಾವಣೆಯನ್ನು ನೋಡಿದರೆ, ಪ್ರತಿಯೊಬ್ಬರ ಸ್ವಂತ ಪ್ರಯೋಜನವೂ ಸಂಘರೂಪಕ್ಕೆ ಪರಿಣಾಮಹೊಂದಿ, ಎಲ್ಲರಿಗೂ ಒಳ್ಳೆಯದಾಗುವಂತೆ ಕೆಲಸ ನಡೆಯಬೇಕೆಂಬುದೇ, ಅದರ ಮುಖ್ಯ ಲಕ್ಷಣವೆಂದು ನನ್ನ ಮನಸ್ಸಿಗೆ ತೋರುತ್ತದೆ. ಪ್ರತಿಯೊಬ್ಬನ ಸ್ವಂತ ಪ್ರಯೋಜನಕ್ಕೇ ಪ್ರಾಧಾನ್ಯತೆಯಿರುವ ಸ್ಪರ್ಧೆಗೂ, ಸಮುದಾಯದ ಹಿತದಮೂಲಕ ವ್ಯಕ್ತಿಯ ಹಿತಕ್ಕೇ ಹೆಚ್ಚು ಪ್ರಾಧಾನ್ಯತೆ ಇರುವ ಸಹಕಾರಕ್ಕೂ, ಪರಸ್ಪರವಾಗಿ ಇಷ್ಟೊಂದು ಅಂತರವೂ, ವ್ಯತ್ಯಾಸವೂ, ಉಂಟೆಂಬುದು ನನ್ನ ಅಭಿಪ್ರಾಯ. ಸಹಕಾರದ ಏರ್ಪಾಡು ಮೊಟ್ಟಮೊದಲು, ಪಾಶ್ಚಾತ್ಯದೇಶಗಳಲ್ಲಿ ಪ್ರಾರಂಭವಾಯಿತು. ಅಲ್ಲಿಯೂ ಕೂಡ, ಅದು ಇನ್ನೂ ಪೂರ್ಣವಾಗಿ ಅಭಿವೃದ್ಧಿಯಾಗಿಲ್ಲ. ಈ ದೇಶದಲ್ಲಿ ಅದು ಈಗ ೨೦ ವರುಷಗಳಿಂದ ಮಾತ್ರವೇ ಚಾಲ್ತಿಯಲ್ಲಿದೆ. ಇದು ಪ್ರಾರಂಭವಾಗಿ ಇಷ್ಟು ಸ್ವಲ್ಪ ಕಾಲವೇ ಆಗಿದ್ದಾಗ್ಯೂ, ಅದರ ಅಭಿವೃದ್ಧಿಯನ್ನು ನೋಡಿದರೆಮಾತ್ರ, ಎಲ್ಲರಿಗೂ ಆಶ್ಚರ್ಯವುಂಟಾಗುತ್ತದೆ. ಇಂಡಿಯಾದೇಶದ ನಾನಾ ಪ್ರಾಂತ್ಯಗಳ ಪರಸ್ಪರಸಹಾಯ ಸಂಘಗಳ ಇಲಾಖೆಯ ಆಡಳಿತದ ವರದಿಗಳನ್ನು ನೋಡಿದರೆ, ಈ ದೇಶದಲ್ಲಿ ಸಹಕಾರವು ಅಭಿವೃದ್ಧಿಯಾಗುವುದಕ್ಕೆ ಎಷ್ಟು ಅನುಕೂಲವಾದ ಸನ್ನಿವೇಶಗಳಿವೆಯೆಂಬುದು ವ್ಯಕ್ತವಾಗುತ್ತದೆ.

ಪಾಶ್ಚಾತ್ಯರ ಮಾದರಿಯಲ್ಲಿ ವಿಶೇಷ ಬಂಡವಾಳವನ್ನು ಹಾಕಿ, ಭಾರಿ ಭಾರಿ ಕೈಗಾರಿಕೆಯ ಉದ್ಯಮಗಳನ್ನು ಕೈಗೊಂಡು ನಡೆಸಲು, ಶಕ್ತರೂ, ಸಿದ್ಧವಾಗಿರುವವರೂ, ಮತ್ತು ಇಷ್ಟವುಳ್ಳವರೂ, ಆದ ಹಣಗಾರರು ಮೈಸೂರುಸಂಸ್ಥಾನದಲ್ಲಿಲ್ಲ. ಆದಕಾರಣ, ಇಲ್ಲಿನ ಸಂಪದಭಿವೃದ್ಧಿ ಸಾಧನಗಳನ್ನು ರೂಢಿಸಲು, ಸಹಕಾರದ ಅಭಿವೃದ್ಧಿಯೊಂದೇ, ನಮಗಿರುವ ಮಾರ್ಗವೆಂದು ನನಗೆ ತೋರುತ್ತದೆ. ಕಳೆದ ಇಪ್ಪತ್ತುವರುಷಗಳಿಂದಲೂ ಈ ದೇಶದಲ್ಲಿ ಸಹಕಾರದ ಏರ್ಪಾಡು ವಿಶೇಷ ಅಭಿವೃದ್ಧಿಗೆ ಬಂದಿದೆ. ಇದನ್ನು ನೋಡಿದರೆ, ಇನ್ನು ಮುಂದಕ್ಕೂ ಈ ಏರ್ಪಾಡು ಮತ್ತಷ್ಟು ಅಭಿವೃದ್ಧಿಯಾದೀತೆಂಬ ಭರವಸೆಯುಂಟಾಗುತ್ತದೆ. ಮೈಸೂರುಸಂಸ್ಥಾನದಲ್ಲಿ ಒಟ್ಟು 1,600 ಪರಸ್ಪರಸಹಾಯಸಂಘಗಳಿವೆ. ಅವುಗಳಲ್ಲಿ 96,000 ಮಂದಿ ಮೆಂಬರುಗಳಿದ್ದಾರೆ. ಮತ್ತು ಅವುಗಳಲ್ಲೆಲ್ಲಾ ಒಟ್ಟು 98½ ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿ ಕೆಲಸ ನಡೆಸುತ್ತಿದ್ದಾರೆ. ಕೇವಲ ಈ ಲೆಕ್ಕಗಳನ್ನು ಮಾತ್ರವೇ ಪರಿಶೀಲಿಸಿ ನೋಡಿದರೆ, ಇದರಲ್ಲಿ ಯಾವುದೊಂದು ಅತಿಶಯವೂ ಇಲ್ಲವೆಂದು ತೋರಿಬರಬಹುದು. ಆದರೆ, ಇಷ್ಟು ಮಟ್ಟಿನ ಅಭಿವೃದ್ಧಿಯನ್ನೂ ಸಾಧಿಸಿದವರು, ಸ್ವಾರ್ಥತ್ಯಾಗಮಾಡಿ, ತಾಳ್ಮೆಯಿಂದಲೂ, ಸ್ಥಿರಪ್ರಯತ್ನದಿಂದಲೂ, ಒಂದೇಸಮನಾಗಿ ಕೆಲಸಮಾಡಿರುವುದನ್ನು ನೆನೆಸಿಕೊಂಡರೆ, ಇಷ್ಟು ಕೆಲಸವನ್ನು ಸಾಧಿಸಿರುವುದು ಕೇವಲ ಅತಿಶಯವಾದುದೆಂದೇ ತೋರುವುದು; ಅಲ್ಲದೆ, ಸಂಘರೂಪದಲ್ಲಿ ಸಾಮರಸ್ಯದಿಂದಲೂ, ತೀವ್ರತೆಯಿಂದಲೂ ಕೆಲಸಮಾಡಿದರೆ, ಎಂಥಾ ಫಲಗಳನ್ನು ಪಡೆಯಬಹುದೆಂಬುದೂ ಸಹ, ವ್ಯಕ್ತವಾಗುವುದು.

ಆದರೆ, ಮೈಸೂರು ಸಂಸ್ಥಾನದಲ್ಲಿ ನಡೆದಿರುವ ಸಹಕಾರದ ಏರ್ಪಾಡನ್ನು ಸಾಮಾನ್ಯವಾಗಿ ಪರಿಶೀಲಿಸಿ ನೋಡಿದರೆ, ಪ್ರಾಯಶಃವಾಗಿ ಎಲ್ಲಾ ಸಂಘಗಳೂ ಒಂದೇವಿಧದವುಗಳಾಗಿರುವಂತೆ ತೋರುತ್ತದೆ. ಬಹುಮಟ್ಟಿಗೆ ನಮ್ಮ ಸಂಘಗಳೆಲ್ಲಾ, ಕೇವಲ ಲೇವಾದೇವಿಯ ಸಂಘಗಳೇ ಆಗಿವೆ. ಇತರ ವಿಧದ ಕೆಲವು ಸಂಘಗಳೂ ಇರುವುದು ನನಗೆ ಗೊತ್ತಿದೆ. ಅನೇಕ ಲೇವಾದೇವಿಯ ಸಂಘಗಳಲ್ಲಿ, ಲೇವಾದೇವಿಯ ಜೊತೆಗೆ ಇತರ ಕೆಲಸಗಳು ನಡೆಯುತ್ತಿರುವುದೂ, ನನಗೆ ತಿಳಿದಿದೆ. ಆದರೂ ಕೂಡ, ಒಟ್ಟಿನಲ್ಲಿ ನೋಡಿದರೆ, ನಮ್ಮ ದೇಶದಲ್ಲಿ ಲೇವಾದೇವಿಯ ಸಂಘಗಳು ಮಾತ್ರವೇ ಹೆಚ್ಚಾಗಿ ಸ್ಥಾಪಿಸಲ್ಪಟ್ಟು ವೃದ್ಧಿಯಾಗಿವೆ. ಆದರೆ, ಲೇವಾದೇವಿಯ ಸಂಘಗಳಿಂದ ವಿಶೇಷ ಪ್ರಯೋಜನವಿಲ್ಲವೆಂಬುದು ನನ್ನ ಅಭಿಪ್ರಾಯವೆಂದು, ತಮ್ಮಲ್ಲಿ ಯಾರೂ ಭಾವಿಸಕೂಡದು. ನಮ್ಮ ರೈತರಿಗೆ ಅವುಗಳಿಂದ ಸಹಾಯವು ದೊರೆಯದೆ ಇದ್ದರೆ, ನಿರ್ವಾಹವೇ ಇಲ್ಲ. ಆದರೆ, ಅವರಿಗೆ ಹಣವನ್ನೇ ಸಾಲವಾಗಿ ಕೊಟ್ಟರೆ, ಹೆಚ್ಚು ಫಲವಿಲ್ಲ. ಇದರಮೇಲೆಯೋ, ಹಣವನ್ನು ರೈತನ ಕೈಯಲ್ಲಿ ಕೊಟ್ಟರೆ ಸಾಕು; ಪರಿಣಾಮದಲ್ಲಿ ಅವನಿಗೆ ಅದರಿಂದ ಕೇಡಿಗೂ ಮೂಲವಾಗಬಹುದಾಗಿದೆ. ರೈತರಿಗೆ, ಹಣದ ರೂಪದಲ್ಲಿ ಸಹಾಯವು ಅವಶ್ಯವಿಲ್ಲ. ದನಗಳು, ನೇಗಿಲುಗಳು, ವ್ಯವಸಾಯದ ಮುಟ್ಟುಗಳು, ಗೊಬ್ಬರ, ಬೀಜದ ಧಾನ್ಯಗಳು, ಮುಂತಾದವುಗಳನ್ನು ಕೊಂಡುಕೊಳ್ಳುವುದಕ್ಕಾಗಿ, ಅವನಿಗೆ ಹಣವು ಬೇಕಾಗಿರುತ್ತದೆ. ಈ ವಿಚಾರಗಳಲ್ಲಿ, ನೀವುಗಳು ರೈತರಿಗೆ ಸೌಕರ್ಯಗಳನ್ನು, ಒದಗಿಸಬೇಕು. ನಾನಾವಿಧದ ವ್ಯವಸಾಯ ಸಾಮಗ್ರಿಗಳನ್ನೂ, ಮಾರಾಟಮಾಡುವ ಪರಸ್ಪರಸಹಾಯ ಸಂಘಗಳನ್ನೂ, ಸ್ಥಾಪಿಸಿ, ಈ ಕೆಲಸವನ್ನು ಸಾಧಿಸಬೇಕು. ಇದಾದಬಳಿಕ, ರೈತರಿಗೆ ಮತ್ತೊಂದು ಸಹಾಯವು ತೀರ ಆವಶ್ಯಕ; ಅವರು ಬೆಳೆದ ಕಚ್ಚಾ ಸಾಮಾನುಗಳನ್ನು ಲಾಭಕರವಾಗಿ ಮಾರಾಟಮಾಡಲು ಸೌಕರ್ಯಗಳನ್ನು ಒದಗಿಸಬೇಕು. ವ್ಯವಸಾಯದ ಉತ್ಪನ್ನಗಳನ್ನು ಮಾರಾಟಮಾಡುವ ಸಂಘಗಳನ್ನು ಸ್ಥಾಪಿಸುವುದರಿಂದ ಮಾತ್ರವೇ, ಇದು ನೆರವೇರಬೇಕು. ರೈತರು ಮತ್ತೊಂದು ಹೆಜ್ಜೆಯನ್ನು ಮುಂದಿಟ್ಟು, ತಾವು ಬೆಳೆದ ಕಚ್ಚಾ ಸಾಮಾನುಗಳಿಂದ ಕೈಗಾರಿಕೆಯನ್ನು ನಡೆಸಲು ಇಷ್ಟಪಟ್ಟರೆ—ಕಚ್ಚಾ ಸಾಮಾನುಗಳನ್ನೇ ಮಾರುವುದಕ್ಕೆ ಬದಲಾಗಿ ಅವುಗಳಿಂದ ತಾವು ತಯಾರಿಸಿದ ಸಾಮಾನುಗಳನ್ನು ಮಾರಲು ಅಪೇಕ್ಷಿಸಿದರೆ—ಅಲ್ಲಿಗೆ, ಅವರು ಕೈಗಾರಿಕೆಯ ಸಂಬಂಧವಾದ ಸಹಕಾರವನ್ನು ಅವಲಂಬಿಸಿದಂತಾಗುವುದು.

ನಮ್ಮ ದೇಶದ ಜನರಲ್ಲಿ ಈಗ ಸರ್ವೇಸಾಧಾರಣವಾಗಿರುವಷ್ಟು ಮೇಧಾಶಕ್ತಿಯನ್ನು ನೋಡಿದರೆ, ಸಹಕಾರಕ್ರಮವನ್ನು ಅವಲಂಬಿಸಿ ಕೈಗಾರಿಕೆಗಳನ್ನು ನಡೆಸುವುದು, ಎಲ್ಲೋ ಅಲ್ಪಸ್ವಲ್ಪಮಾತ್ರವೇ ಸಾಧ್ಯವೆಂದು ಕೆಲವರು ಹೇಳುವುದನ್ನು ನಾನು ಕೇಳಿದ್ದೇನೆ. ಈ ಅಭಿಪ್ರಾಯವು ನಿಜವಾಗಿದ್ದರೂ ಇರಬಹುದು; ಅಥವಾ ಸುಳ್ಳಾಗಿದ್ದರೂ ಇರಬಹುದು. ನಾನು ಈ ವಿಷಯದಲ್ಲಿ, ನನ್ನ ಅಭಿಮತವಾವುದನ್ನೂ ಸೂಚಿಸಲು, ಇಷ್ಟಪಡುವುದಿಲ್ಲ. ಈ ವಿಷಯವು ಹೇಗಾದರೂ ಇರಲಿ. ಲೇವಾದೇವಿಯ ಸಂಘಗಳ ಜೊತೆಗೆ, ವ್ಯವಸಾಯ ಸಾಮಗ್ರಿಗಳನ್ನು ಸರಬರಾಯಿಮಾಡುವ ಸಂಘಗಳನ್ನೂ, ವ್ಯವಸಾಯದ ಉತ್ಪನ್ನಗಳನ್ನು ಮಾರಾಟಮಾಡುವ ಸಂಘಗಳನ್ನೂ, ಸ್ಥಾಪಿಸಿ ಅಭಿವೃದ್ಧಿಗೊಳಿಸಲು ಈಗ ತಕ್ಕ ಸಮಯವು ಒದಗಿದೆ. ಈ ಮೂರುವಿಧದ ಸಂಘಗಳನ್ನೂ, ಸಾಮರಸ್ಯದಿಂದ ಅಭಿವೃದ್ಧಿಗೊಳಿಸಬೇಕು. ಹಾಗೆ ಮಾಡದೆಹೋದರೆ, ನಿಮ್ಮ ಕೆಲಸವೆಲ್ಲಾ ಅಪೂರ್ಣವೇ ಸರಿ; ಅದರಿಂದ ಕೇಡಾಗುವ ಸಂಭವವೂ ಉಂಟು. ಈ ಅಧಿವೇಶನದಲ್ಲಿ ನೀವು ಚರ್ಚಿಸಬೇಕೆಂದಿರುವ ವಿಷಯಗಳಲ್ಲಿ ಇದೂ ಒಂದಾಗಿದೆ. ಈ ವಿಷಯದಲ್ಲಿ ಚರ್ಚೆಯು ನಡೆದ ಬಳಿಕ, ಒಂದು ನಿರ್ದಿಷ್ಟವಾದ, ನಿರ್ಧರವಾದ ಮತ್ತು ಸಮೀಚೀನವಾದ ಕಾರ್ಯಕ್ರಮವು ಗೊತ್ತಾಗುವುದೆಂದು ನಾನು ಹಾರೈಸುತ್ತೇನೆ.

ಮನೆಗಳನ್ನು ಕಟ್ಟಿಸುವ ಪರಸ್ಪರಸಹಾಯ ಸಂಘಗಳನ್ನು ಸ್ಥಾಪಿಸುವ ಏರ್ಪಾಡು, ಮೈಸೂರು ಸಂಸ್ಥಾನದಲ್ಲಿಯೇ ಮೊಟ್ಟಮೊದಲು ಆರಂಭವಾಯಿತೆಂದು ನನಗೆ ತೋರುತ್ತದೆ. ಆದರೆ, ಮೊದಲು ಮೊದಲು, ಈ ಏರ್ಪಾಡು ಬಹುಚೆನ್ನಾಗಿ ನಡೆಯುವ ಸೂಚನೆಯು ತಲೆದೋರಿದ್ದಿತು. ಆದರೆ, ಸ್ವಲ್ಪಕಾಲ ಅದಕ್ಕನುಗುಣವಾಗಿ ಕೆಲಸ ನಡೆಯಲಿಲ್ಲ. ಅದಕ್ಕೆ ಕಾರಣವೇನೆಂಬುದು ನನಗೆ ತಿಳಿಯದು. ಈಚೆಗೆ ಭಾರೀ ಪ್ರವಾಹಗಳು ಬಂದು, ಅನೇಕ ಮನೆಗಳು ನಿರ್ನಾಮವಾದುವು; ಉಳಿದವುಗಳಲ್ಲಿ ಕೆಲವು ಶಿಥಿಲವಾದುವು. ಆದಕಾರಣ, ಹೊಸದಾಗಿ ಮನೆಗಳನ್ನು ಕಟ್ಟಬೇಕಾಯಿತು. ಮೊದಲು ಸ್ವಲ್ಪಕಾಲ ಮಟ್ಟಾಗಿದ್ದ ಆ ಏರ್ಪಾಡಿಗೆ, ಈ ಸಂದರ್ಭದಲ್ಲಿ ಮತ್ತೆ ಪ್ರಾಣಬಂದಿತು. ಆದರೆ, ಅದು ಶಾಶ್ವತವಾಗಿ ಇಲ್ಲಿ ಬೇರೂರಿ ನಿಲ್ಲುವುದೋ, ಇಲ್ಲವೋ ತಿಳಿಯದು. ಪಾಶ್ಚಾತ್ಯದೇಶಗಳಲ್ಲಿ, ಜನಸಂದಣಿಯು ಮಿತಿಮೀರಿ ಹೆಚ್ಚಾಗಿದೆ. ಆದರೆ, ನಮ್ಮ ದೇಶದ ಜನಸಂದಣಿಯು ಹೀಗೆ ಅತಿ ವಿಶೇಷವಾಗಿಲ್ಲ. ಆದಕಾರಣ, ಸಹಕಾರದ ಅವಲಂಬನೆಯಿಂದ ಮನೆಗಳನ್ನು ಕಟ್ಟುವ ಕಾರ್ಯಕಲಾಪಗಳು ಅಲ್ಲಿ ನಡೆಯುವಷ್ಟುಮಟ್ಟಿಗೆ, ಇಲ್ಲಿ ನಡೆಯಬೇಕಾದ ಆವಶ್ಯಕತೆಯೇನೂ ಇಲ್ಲ. ಆದರೂ, ನಮ್ಮದೇಶದ ಜನರಲ್ಲಿ ಬಹುಮಂದಿಗಳು, ಅನಾರೋಗ್ಯದ ವಸತಿಯೆನಿಸುವ ಮನೆಗಳಲ್ಲಿಯೂ, ಕೆಲವು ಸಂದರ್ಭಗಳಲ್ಲಿ ಕೊಳಕಿನಿಂದ ತುಂಬಿ ಅಸಹ್ಯಕರವಾದ ಮನೆಗಳಲ್ಲಿಯೂ, ವಾಸಮಾಡುತ್ತಾರೆ. ಆದಕಾರಣ, ಇಲ್ಲಿಯೂ ಸ್ವಲ್ಪಮಟ್ಟಿಗೆ ಅಂಥಾ ಆವಶ್ಯಕತೆಯಿದೆ. ಚೊಕ್ಕಟವಾಗಿಯೂ, ಆರೋಗ್ಯಕರವಾಗಿಯೂ, ಪರಿಷ್ಕಾರವಾಗಿಯೂ, ಇರುವ ಸನ್ನಿವೇಶಗಳಲ್ಲಿ ವಾಸಮಾಡುವುದು, ಪರಿಶುದ್ಧವಾದ ಜೀವನಕ್ರಮಕ್ಕೆ ಪ್ರತ್ಯಕ್ಷವಾಗಿ ಸಹಾಯವನ್ನುಂಟುಮಾಡುವುದೆಂಬುದಾಗಿ, ನನಗೆ ಸಂಪೂರ್ಣವಾದ ನಂಬಿಕೆಯುಂಟು. ತನ್ನ ದೇಶಬಾಂಧವರಿಗೆ ಇಂಥಾ ಸನ್ನಿವೇಶಗಳನ್ನು ಪ್ರಯತ್ನಪೂರ್ವಕವಾಗಿ ದೊರಕಿಸುವುದೇ, ಪ್ರತಿಯೊಬ್ಬ ದೇಶಭಕ್ತನ ಕರ್ತವ್ಯವಾಗಿದೆ. ವಿಶೇಷ ಹಣವು ಮುಟ್ಟಿನ ಬೆಂಗಳೂರು, ಮೈಸೂರಿನಂಥಾ ದೊಡ್ಡ ಪಟ್ಟಣಗಳ ಮೇಲ್ಪಾಡು, ಅಷ್ಟೇನೂ ಈಗ ನನ್ನಮನಸ್ಸಿನಲ್ಲಿಲ್ಲ. ಏನಿದ್ದರೂ ಗ್ರಾಮಗಳ ವಿಷಯವೇ, ಈಗ ನನ್ನ ಮನಸ್ಸಿನಲ್ಲಿದೆ. ನಮ್ಮ ದೇಶದ ವಾಯುಗುಣವು ಹಿತಕರವಾಗಿದೆ. ನಮ್ಮ ದೇಶದ ಜನರ ಜೀವನಕ್ರಮವು ಡೌಲಿಗೆ ಆಸ್ಪದವಿಲ್ಲದೆ, ಸರಳತೆಯಿಂದ ಕೂಡಿದೆ. ಇವೆರಡೂ ನಮಗೆ ಅನುಕೂಲವಾಗಿವೆ. ಇಲ್ಲಿನ ಸ್ಥಿತಿಯು ಹೀಗಿರುವುದರಿಂದ, ಒಂದೊಂದು ಹಳ್ಳಿಯನ್ನೂ ಮೇಲ್ಪಡಿಸಲು ವಿಶೇಷ ಹಣವನ್ನು ವೆಚ್ಚಮಾಡಬೇಕಾದ ಆವಶ್ಯಕತೆಯಿಲ್ಲ. ಆದರೂ, ಕೆಲಸಕ್ಕೆ ಪ್ರಾರಂಭಮಾಡಿದಾಗ, ಮೊದಲು ಮೊದಲು ಬಹಳ ಕಷ್ಟವಾಗುವುದು ನಿಜ. ಲೇವಾದೇವಿಯ ಸಂಘಗಳನ್ನು ಸ್ಥಾಪಿಸುವಾಗಲೂ, ಹೀಗೆಯೇ ಕಷ್ಟವಾಯಿತು. ಅಲ್ಲದೆ, ಸಹಕಾರಕ್ಷೇತ್ರದಲ್ಲಿ ಮೊಟ್ಟಮೊದಲು ಕಾಲಿಟ್ಟು, ಆಗ್ಗೆ ಕೆಲಸ ಮಾಡಬೇಕಾಗಿದ್ದಿತು. ಆಗ ಕೆಲಸಕ್ಕೆ ಆರಂಭಮಾಡಿದವರು, ತಮ್ಮನ್ನು ಎದುರಿಸಿದ ತೊಂದರೆಗಳಿಂದ ಎದೆಗೆಟ್ಟು, ಸ್ಥಿರಪ್ರಯತ್ನದಿಂದಲೂ, ದೃಢಸಂಕಲ್ಪದಿಂದಲೂ, ಪ್ರಯತ್ನಗಳನ್ನು ನಡೆಸದೆ ಹೋಗಿದ್ದರೆ, ಅವರು ಸಾಧಿಸಿದಷ್ಟು ಅಭಿವೃದ್ಧಿಯು ಎಂದಿಗೂ ಉಂಟಾಗುತ್ತಿರಲಿಲ್ಲ. ಅವರು ನಡೆಸಿದ ಪ್ರಯತ್ನವು ನಮ್ಮಲ್ಲಿ ಉತ್ಸಾಹವನ್ನುಂಟುಮಾಡುವುದೆಂಬುದು ಸ್ವತಸ್ಸಿದ್ಧವಾಗಿದೆ. ಅಸಹ್ಯವಾಗಿ ಕಾಣುತ್ತಾ ಅನಾರೋಗ್ಯದ ನೆಲೆಯೆನಿಸಿರುವ ನಮ್ಮ ದೇಶದ ಗ್ರಾಮಗಳು ರಮ್ಯವಾಗಿಯೂ, ಆರೋಗ್ಯಕರವಾಗಿಯೂ, ಇರುವಂತೆ ಮಾಡುವುದು; ಅವುಗಳಲ್ಲಿ ಸಾಧಾರಣವಾದ—ಆದರೆ ಅಚ್ಚುಕಟ್ಟಾಗಿರುವ—ಮನೆಗಳನ್ನು ಕಟ್ಟಿಸುವುದು; ಆಟದ ಬಯಲುಗಳನ್ನು ಏರ್ಪಡಿಸುವುದು; ಸ್ಕೂಲುಗಳು, ಪರಸ್ಪರಸಹಾಯಸಂಘಗಳು, ದೇವತಾರಾಧನೆಯ ಸ್ಥಳಗಳು, ಮುಂತಾದ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸುವುದು; ಈ ಕೆಲಸಗಳನ್ನೆಲ್ಲಾ ನೆರವೇರಿಸುವುದು ನಮ್ಮ ಸಂಕಲ್ಪವಾಗಿರಬೇಕು. ನಮ್ಮ ದೇಶದ ಹಳ್ಳಿಗಳನ್ನು ಈ ರೀತಿ ಪರಿಣಾಮಗೊಳಿಸುವುದರಲ್ಲಿ, ಮನೆಗಳನ್ನು ಕಟ್ಟುವ ಪರಸ್ಪರಸಹಾಯ ಸಂಘಗಳಿಂದ ಎಷ್ಟೋ ಸಹಾಯವಾಗುವುದು. ತಾವುಗಳೆಲ್ಲರೂ ಇದಕ್ಕೆ ಗಮನಕೊಡುವುದಾದರೆ ನಾನು ಬಹಳವಾಗಿ ಸಂತೋಷಪಡುವೆನು.

ನಾನು ಮತ್ತೊಂದು ವಿಷಯವನ್ನು ಒತ್ತಿ ಹೇಳಬೇಕಾಗಿದೆ. ಹಣವನ್ನು ಮಿಗಿಸುವ ಗುಣವು ಜನರಲ್ಲಿ ಬೇರೂರುವಂತೆ ಮಾಡಲು, ನಿಮ್ಮ ಸಂಘಗಳು ನೆರವಾಗಬೇಕು. ಮಿತವ್ಯಯದಿಂದ ಹಣವನ್ನು ಮಿಗಿಸಬೇಕೆಂಬುದನ್ನು ಎಲ್ಲರೂ ಬಲ್ಲರು. ಆದರೆ, ಅದನ್ನು ಕಾರ್ಯತಃ ಆಚರಣೆಯಲ್ಲಿಟ್ಟುಕೊಳ್ಳುವುದನ್ನು ಮಾತ್ರ, ಹಲವರು ಅರಿಯರು. ಜನರಲ್ಲಿ ಈ ಗುಣವು ನೆಲೆಗೊಳ್ಳುವಂತೆ ಮಾಡಬೇಕೆಂಬುದೇ, ಪರಸ್ಪರಸಹಾಯಸಂಘಗಳ ಮುಖ್ಯತತ್ವ. ಈರೀತಿ ಮಾಡಬೇಕೆಂಬುದು ನಿಮ್ಮ ಉದ್ದೇಶಗಳಲ್ಲೊಂದಾಗಿದೆ ಎಂಬುದನ್ನು ನಾನು ಬಲ್ಲೆ. ಆದರೆ, ಪ್ರತಿಯೊಂದು ಸಂಘದವರೂ ಇದನ್ನು ತಮ್ಮ ಮುಖ್ಯಕರ್ತವ್ಯವೆಂದು ಭಾವಿಸಿ, ಕೆಲಸ ಮಾಡುವಂತಾಗಲೆಂದು ನನ್ನ ಆಶೆ. ಪ್ರತಿಯೊಂದು ಸಂಘದವರೂ ಮನೆಮನೆಗೂ ಹೋಗಿ, ಪ್ರತಿಕುಟುಂಬದವರಿಗೂ ಈ ವಿಷಯವನ್ನು ಬೋಧಿಸಿ, ಅವರಿಗೆ ಮಿತವ್ಯಯದಿಂದ ಹಣವನ್ನು ಕೂಡಿಡುವುದನ್ನು ಕಲಿಸಿಕೊಡುವಂತಾಗಬೇಕೆಂಬುದು ನನ್ನ ಹಾರೈಕೆ.

ನಿಮ್ನತರಗತಿಯವರನ್ನು ಉದ್ಧರಿಸುವ ವಿಷಯದಲ್ಲಿ ತೀವ್ರವಾಗಿ ಕೆಲಸ ನಡೆಸುವುದನ್ನೂ ಕೂಡ, ನಿಮ್ಮ ಕಾರ್ಯಕ್ರಮದಲ್ಲಿ ಸೇರಿಸಿಕೊಂಡರೆ, ನಾನು ವಿಶೇಷವಾಗಿ ಸಂತೋಷಪಡುವೆನು. ಒಂದು ಸರಪಣಿಯಲ್ಲಿ ಒಂದು ಕೊಂಡಿಯು ದುರ್ಬಲವಾಗಿದ್ದು, ಇತರ ಕೊಂಡಿಗಳೆಲ್ಲಾ ಎಷ್ಟೋ ಮಜಬೂತಾಗಿರಬಹುದು. ಆದರೆ, ಅದರಿಂದ ಒಟ್ಟಿನಲ್ಲಿ ಸರಪಣಿಯು ಬಲವಾದುದೆನಿಸುವುದೇ ಇಲ್ಲ. ದುರ್ಬಲವಾದ ಕೊಂಡಿಯು ಕೀಳುವಷ್ಟು ಎಳೆದರೇ ಸಾಕು. ಸರಪಣಿಯು ಕಿತ್ತುಹೋಗುತ್ತದೆ. ಮಜಬೂತಾದ ಕೊಂಡಿಗಳು ಕೀಳುವಷ್ಟು ಬಲವಾಗಿ ಎಳೆಯಬೇಕಾದುದೇ ಇಲ್ಲ. ಅಂತು, ದುರ್ಬಲವಾದ ಕೊಂಡಿಗೆ ಎಷ್ಟು ಬಲವುಂಟೋ, ಒಟ್ಟು ಸರಪಣಿಯ ಬಲವೂ ಅಷ್ಟೇ ಸರಿ. ನಿಮ್ನತರಗತಿಯವರು ಈಗಿನಂತೆ ಹೀನಸ್ಥಿತಿಯಲ್ಲಿರುವವರೆಗೂ, ಒಟ್ಟಿನಲ್ಲಿ ದೇಶವು ಮುಂದುವರಿದು ಉದ್ಧಾರವಾಗುವ ಹಂಬಲೇ ಇಲ್ಲ. ಒಟ್ಟು ದೇಶವು ಉನ್ನತಸ್ಥಾನವನ್ನೇರಬೇಕಾದರೆ, ನಿಮ್ನತರಗತಿಯವರೂ, ಇತರರಂತೆಯೇ ಮುಂದುವರಿಯಬೇಕು. ಹೀಗಾಗಬೇಕಾದರೆ, ದೃಢಸಂಕಲ್ಪದಿಂದ ಪ್ರಬಲವಾಗಿ ತಾವೆಲ್ಲರೂ ಪ್ರಯತ್ನಮಾಡಲೇಬೇಕು. ಸರ್ಕಾರದವರು ಸಾಧ್ಯವಾದ ಎಲ್ಲಾ ರೀತಿಗಳಲ್ಲಿಯೂ ತಮಗೆ ಸಹಾಯಮಾಡುವರೆಂದು, ಅವರ ಪರವಾಗಿ ನಾನು ತಮ್ಮೆಲ್ಲರಿಗೂ ಭರವಸೆ ಕೊಡಬಲ್ಲೆನು.

ರೈತರು ಸಾಲದ ಹೊರೆಯಿಂದ ಕುಸಿದು ಬೀಳುತ್ತಿರುವುದನ್ನು ತಪ್ಪಿಸಲು ಅವರಿಗೆ ಸಹಾಯಮಾಡಬೇಕೆಂಬುದೂ ಸಹ, ತಮ್ಮ ಪರ್ಯಾಲೋಚನೆಯಲ್ಲಿದೆಯೆಂದು ನಾನು ನಂಬಿದ್ದೇನೆ. ಪರಸ್ಪರ ಸಹಾಯಸಂಘಗಳ ಮೂಲಕ ಈ ಭಾಗದಲ್ಲಿ ಸ್ವಲ್ಪ ಪ್ರಯತ್ನವು ಹಿಂದೆನಡೆಯಿತೆಂದೂ, ಆದರೆ ಒಟ್ಟಿನಲ್ಲಿ ಆ ಪ್ರಯತ್ನವು ಫಲಕಾರಿಯಾಗಿ ಪರಿಣಮಿಸಲಿಲ್ಲವೆಂದೂ, ನನಗೆ ತಿಳಿಯಬಂದಿದೆ. ಭಾರಿ ಸಾಲಗಳನ್ನಾಗಲಿ, ಅಥವಾ ಬಹುಕಾಲದ ಬಳಿಕ ತೀರಿಸಬಹುದಾದ ಸಾಲಗಳನ್ನಾಗಲಿ, ಕೊಡುವುದು ಪರಸ್ಪರಸಹಾಯಸಂಘಗಳಿಂದ ಸಾಧ್ಯವಿಲ್ಲ. ಆದುದರಿಂದಲೇ ಆ ಪ್ರಯತ್ನವು ವಿಫಲವಾಯಿತೆಂದು ನನ್ನ ಮನಸ್ಸಿಗೆ ತೋರುತ್ತದೆ. ಮಲೆನಾಡಿನ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ಈಚೆಗೆ ಒಂದು ಹುಕುಮನ್ನು ಸಾದರುಮಾಡಿದ್ದಾರೆ. ಅದರಲ್ಲಿ ಹೇಳುವ ಪ್ರಕಾರ, ರೈತರ ಸಾಲದ ಹೊರೆಯನ್ನು ತಗ್ಗಿಸುವ ಪ್ರಯತ್ನವನ್ನು, ಜಮೀನು ಅಡಮಾನದ ಬ್ಯಾಂಕುಗಳಿಗೆ ವಹಿಸುವುದು ಅವರ ಉದ್ದೇಶವಾಗಿದೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲೊಂದು; ಹಾಸನ ಡಿಸ್ಟ್ರಿಕ್ಟಿನಲ್ಲೊಂದು; ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲೊಂದು; ಈ ಮೇರೆಗೆ, ಮೂರು ಅಡಮಾನದ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂಬುದಾಗಿ ಸರ್ಕಾರದವರು ಸಂಕಲ್ಪಿಸಿದ್ದಾರೆ. ಆ ಸರ್ಕಾರಿ ಹುಕುಮಿನಲ್ಲಿ ಈ ಏರ್ಪಾಡನ್ನೆಲ್ಲಾ ಸಮಗ್ರವಾಗಿ ಚರ್ಚಿಸಿರುವುದರಿಂದ, ನಾನು ಈಗ ಅದನ್ನು ವಿವರಿಸುವುದಿಲ್ಲ. ತಾವೆಲ್ಲರೂ ಈ ಅಧಿವೇಶನದಲ್ಲಿ ಈ ವಿಷಯವನ್ನು ಚರ್ಚಿಸಿ. ಆ ಬಳಿಕ ನಿರ್ಧರವಾದ ನಿಮ್ಮ ಅಭಿಪ್ರಾಯವನ್ನು ಸರ್ಕಾರದವರಿಗೆ ದಯೆಯಿಟ್ಟು ತಿಳಿಸುವುದಾದರೆ ನನಗೆ ಬಹಳ ಸಂತೋಷವಾಗುವುದು.

ಸಂಸ್ಥಾನದ ಪರಸ್ಪರಸಹಾಯಸಂಘಗಳಿಂದ ಕೊಡಲ್ಪಟ್ಟ ಸಾಲದ ವಸೂಲಾತಿಗಾಗಿ ನಡೆಯುವ ದಾವೆಗಳೇ ಮುಂತಾದ ವ್ಯವಹರಣೆಗಳ ಸಂಖ್ಯೆಯು, ಈಚೆಗೆ ಬಹಳ ಹೆಚ್ಚಾಗುತ್ತಾ ಇದೆ. ಇದರ ದೆಸೆಯಿಂದ ನನಗೆ ಸ್ವಲ್ಪಮಟ್ಟಿಗೆ ಆತಂಕವುಂಟಾಗಿದೆ. ಸಾಲವನ್ನು ಕೊಡುವಾಗ ಚೆನ್ನಾಗಿ ವಿಮರ್ಶೆಮಾಡುವುದು; ಸರಿಯಾದ ಉದ್ದೇಶಗಳಿಗೋಸ್ಕರ ಮಾತ್ರವೇ ಸಾಲಗಳನ್ನು ಕೊಡುವುದು; ಸಾಲವನ್ನು ಕೇಳುವವರು ನಂಬಿಕೆಗೆ ಅರ್ಹರೇ ಎಂಬುದನ್ನು ದೃಢಪಡಿಸಿಕೊಳ್ಳುವುದು; ಸಾಲವನ್ನು ತೆಗೆದುಕೊಂಡವರು ಯಾವ ಉದ್ದೇಶದಿಂದ ಅದನ್ನು ತೆಗೆದುಕೊಂಡರೋ, ಅದೇ ಉದ್ದೇಶಕ್ಕೆಮಾತ್ರವೇ ಹಣವನ್ನು ವಿನಿಯೋಗಿಸುತ್ತಾರೆಯೋ ಎಂಬುದನ್ನು ಪರಿಶೀಲಿಸಿ ನೋಡುತ್ತಾ ಇರುವುದು: ಈ ರೀತಿ ಮಾಡಿದಲ್ಲಿ, ಸಾಲಗಾರರಮೇಲೆ ದಾವಾಮಾಡಿ ಹಣವನ್ನು ಬರಮಾಡಿಕೊಳ್ಳುವ ಆವಶ್ಯಕತೆಯೇ ಇರುವುದಿಲ್ಲವೆಂದೂ, ಒಂದು ವೇಳೆ ಇದ್ದರೂ, ಅದು ಅಲ್ಪಸ್ವಲ್ಪವಾಗಿರಬಹುದೆಂದೂ, ನಾನು ಭಾವಿಸಿದ್ದೆನು. ಆದರೆ, ಹೀಗೆಲ್ಲಾ ನಡೆಸಿಯೂ, ದಾವೆಗಳ ಸಂಖ್ಯೆಯು ಹೆಚ್ಚುತ್ತಿದೆ. ದಾವೆಗಳನ್ನು ದಾಖಲು ಮಾಡಬೇಕಾಗಬಂದ ಸಂಘಗಳಲ್ಲಿ ಆಡಳಿತವು ಸರಿಯಾಗಿ ನಡೆಯುತ್ತಾ ಇಲ್ಲವೆಂದೂ, ಅಲ್ಲಿನ ಆಲಸ್ಯವೇ ಈ ರಗಳೆಗೆಲ್ಲಾ ಕಾರಣವೆಂದೂ, ತೋರುತ್ತದೆ. ಅಂತು, ಇಂಥಾ ಸಂಘಗಳೂ, ಇಂಥಾ ಆಲಸ್ಯದ ಆಡಳಿತವೂ, ಸಹಕಾರವೆಂಬ ದೊಡ್ಡ ಹೆಸರಿಗೇ ಕಳಂಕಪ್ರಾಯವಾಗಿವೆ. ಇವೆರಡು ಕುಂದುಗಳನ್ನೂ ಪರಿಹರಿಸಲು ಅನುಕೂಲಿಸುವಂತೆ ತಾವೆಲ್ಲರೂ ತಕ್ಕರೀತಿಯಲ್ಲಿ ವರ್ತಿಸಬೇಕೆಂಬುದೇ ನನ್ನ ಬಿನ್ನಹ.

ಮತ್ತೊಂದು ವಿಚಾರವನ್ನು ತಾವು ಕೂಡಲೆ ಗಮನಿಸಬೇಕೆಂಬುದು ನನ್ನ ಕೋರಿಕೆಯಾಗಿದೆ; ಅದು ಯಾವುದೆಂದರೆ, ಪರಸ್ಪರಸಹಾಯ ಸಂಘಗಳ ಮೇಲ್ವಿಚಾರಣೆ ಮತ್ತು ತನಿಖೆಯ ವಿಚಾರ. ಈ ಕೆಲಸವನ್ನು ಈಗ ಪರಸ್ಪರಸಹಾಯ ಸಂಘಗಳ ಇಲಾಖೆಯ ರಿಜಿಸ್ಟ್ರಾರರವರೂ, ಅವರ ಕೈಕೆಳಗಣ ಅಧಿಕಾರಿಗಳೂ, ನಡೆಸುತ್ತಿದ್ದಾರೆ. ಈ ವಿಚಾರವು ತಮ್ಮೆಲ್ಲರಿಗೂ ತಿಳಿದೇ ಇದೆ. ಆಯಾ ಕಾಲದ ಆವಶ್ಯಕತೆಗನುಸಾರವಾಗಿ ಆಗಾಗ್ಗೆ, ಆ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಅದನ್ನು ಮತ್ತಷ್ಟು ಹೆಚ್ಚಿಸಬೇಕೆಂಬ ವಿಷಯವು, ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ನನ್ನ ಸಹೋದ್ಯೋಗಿಗಳಾದ ಕೌನ್ಸಿಲಿನ ಮೊದಲನೆಯ ಮೆಂಬರವರು ಅದನ್ನು ಕೂಲಂಕಷವಾಗಿ ಪರ್ಯಾಲೋಚಿಸುವರೆಂದು ನಾನು ನಂಬಿದ್ದೇನೆ. ಆದರೆ, ಪರಸ್ಪರಸಹಾಯದ ಇಲಾಖೆಯ ವೆಚ್ಚವನ್ನು ಹೆಚ್ಚಿಸುತ್ತಾ ಬರುವುದು ಸರ್ಕಾರದವರಿಗೆ ಸಾಧ್ಯವಿಲ್ಲವೆಂಬುದನ್ನು ತಾವೆಲ್ಲರೂ ಅನುಮೋದಿಸಿಯೇ ಅನುಮೋದಿಸುತ್ತೀರಿ. ಈ ವಿಷಯದಲ್ಲಿ ತಾವುಗಳು ಸರ್ಕಾರದವರ ಸಹಾಯಕ್ಕೆ ಬರಲು, ಇದು ತಕ್ಕ ಸಮಯವೆಂದು ನನಗೆ ತೋರುತ್ತದೆ. ಈ ವಿಷಯವು ಮೈಸೂರು ಪರಸ್ಪರಸಹಾಯ ಕಮಿಟಿಯವರಿಂದ ಕೂಲಂಕಷವಾಗಿ ಪರ್ಯಾಲೋಚಿಸಲ್ಪಟ್ಟಿದೆ. ಅವರು ಒಂದು ವರದಿಯನ್ನೊಪ್ಪಿಸಿದ್ದಾರೆ. ಖಾಸಗಿ ಶಿಬ್ಬಂದಿಯೊಂದನ್ನು ಏರ್ಪಡಿಸುವ ವಿಷಯದಲ್ಲಿ ಅವರು ವಿಶದವಾಗಿ ಸಲಹೆಗಳನ್ನೊಪ್ಪಿಸಿದ್ದಾರೆ. ಕಮಿಟಿಯವರು ಸೂಚಿಸಿರುವ ಏರ್ಪಾಡಿನ ವಿಷಯದಲ್ಲಿ ಸರ್ಕಾರದವರು ಹುಕುಂ ಸಾದರು ಮಾಡುವುದಕ್ಕೆ ಮುಂಚಿತವಾಗಿ, ನಿಮ್ಮ ಅಭಿಪ್ರಾಯವನ್ನು ತಿಳಿದುಕೊಳ್ಳಲು ಸರ್ಕಾರದವರಿಗೆ ಇಷ್ಟವುಂಟು.

ಮಹನೀಯರೆ, ನಾನು ಉದ್ದೇಶಿಸಿದ್ದುದಕ್ಕಿಂತಲೂ ಹೆಚ್ಚು ಕಾಲ. ಭಾಷಣ ಮಾಡಿದೆನೆಂದು ತೋರುತ್ತದೆ. ಸಹಕಾರಪ್ರಚಾರಕ ಸಂಘದ (ಮೈಸೂರು ಪ್ರಾಪಗ್ಯಾಂಡಿಸ್ಟ್ ಇನ್ಸ್ಟಿಟ್ಯೂಟಿನ) ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳಿ, ಈ ಭಾಷಣವನ್ನು ಮುಗಿಸುವೆನು. ಈ ಸಂಘದ ಆಶ್ರಯದಲ್ಲಿ ಈ ಸಮ್ಮೇಳನವು ನಡೆಯುವುದಾಗಿದೆ. ಈ ಸಂಘವು ಸ್ಥಾಪಿಸಲ್ಪಟ್ಟುದೊಂದು ಶುಭೋದಯವೆಂದು ನಾನು ಮನಃಪೂರ್ವಕವಾಗಿ ಭಾವಿಸಿದ್ದೇನೆ. ಅದು ಮುಂದೆ ವಿಶೇಷ ಅಭಿವೃದ್ಧಿಗೆ ಬರತಕ್ಕುದಾಗಿದೆಯೆಂದೂ ನನಗೆ ತೋರುತ್ತದೆ. ಸಂಸ್ಥಾನದ ಎಲ್ಲಾ ಸಹಕಾರ ಚಳುವಳಿಗಳನ್ನೂ ಹದಗೂಡಿಸಿ, ವ್ಯವಸ್ಥೆಗೆ ತರುವುದು; ಸಹಕಾರ ತತ್ವಗಳನ್ನು ಜನರಿಗೆ ಬೋಧಿಸುವುದು; ಪ್ರಸಿದ್ಧ ಪತ್ರಿಕೆಗಳನ್ನೂ, ಪತ್ರಿಕೆಗಳನ್ನೂ ಪ್ರಕಟಿಸುವುದು, ಉಪನ್ಯಾಸಗಳನ್ನು ಮಾಡಿಸುವುದು; ಶಿಕ್ಷಣೆಗಾಗಿ ತರಗತಿಗಳೇ ಮುಂತಾದುವುಗಳನ್ನು ಏರ್ಪಡಿಸುವುದು: ಈ ಕೆಲಸಗಳನ್ನು ನಡೆಸುವ ಪ್ರಧಾನ ಸಂಸ್ಥೆಯೊಂದು ಬಹುಕಾಲದಿಂದಲೂ ಆವಶ್ಯಕವಾಗಿದ್ದಿತು. ಈಗ ಈ ಸಂಘವು ಸ್ಥಾಪಿಸಲ್ಪಟ್ಟುದರಿಂದ ಈ ಕೊರತೆಯು ಪರಿಹಾರವಾಯಿತು. ಈ ಸಮ್ಮೇಳನದ ಖಾಯಂ ಕಮಿಟಿಯಾಗಿರುವುದೊಂದು; ತಾವುಗಳು ಇಲ್ಲಿ ನಡೆಸಿದ ತೀರ್ಪುಗಳಿಗನುಸಾರವಾಗಿ ವಾಸ್ತವಿಕವಾಗಿ ಕೆಲಸಗಳು ನಡೆಸಲ್ಪಡುವಂತೆ ನೋಡಿಕೊಳ್ಳುವುದೊಂದು; ಇವೆರಡು ರೀತಿಗಳಲ್ಲಿ ಈ ಸಂಘದವರು ಸಹಕಾರದ ವಿಷಯದಲ್ಲಿ ಕೆಲಸ ನಡೆಸಬಹುದಾಗಿದೆ. ಅವರಿಂದ ನಡೆಯಬಹುದಾದ ಉಪಯೋಗಕರವಾದ ಸೇವೆಗಳಲ್ಲಿ ಇದೂ ಒಂದಾಗಿದೆ. ನೀವು ನಡೆಸುವ ತೀರ್ಪುಗಳನ್ನು ಸರಿಯಾಗಿ ಜೋಡಣೆಗೊಳಿಸಿ, ಅವುಗಳ ವಿಷಯದಲ್ಲಿ ಮುಂದಣ ಕ್ರಮವನ್ನು ನಡೆಸುವುದಕ್ಕಾಗಿ ಆಯಾ ಸಂದರ್ಭಗಳಿಗನುಸಾರವಾಗಿ ಪರಸ್ಪರಸಹಾಯ ಸಂಘಗಳಿಗೋ, ರಿಜಿಸ್ಟ್ರಾರರವರಿಗೋ, ಅಥವಾ ಸರ್ಕಾರದವರಿಗೋ ಈ ಸಂಘದವರು ಕಳುಹಿಸಿಕೊಡಬೇಕೆಂಬುದು ನನ್ನ ಅಭಿಮತ. ಆ ಬಳಿಕ ಆ ರೀತಿಯಲ್ಲಿ ಕ್ರಮಜರುಗಿಸಿದುದರ ಫಲಿತಾಂಶವೇನೆಂಬುದನ್ನು ಬರೆದಿಟ್ಟುಕೊಂಡಿದ್ದು, ಸಮ್ಮೇಳನದ ಮುಂದಣ ಅಧಿವೇಶನದಲ್ಲಿ ವರದಿಮಾಡಬೇಕು: ಸಂಘದವರು ಹೀಗೆಮಾಡಿದರೆ, ನೀವು ಇಲ್ಲಿ ಅವಿಚ್ಛಿನ್ನವಾಗಿ ಕೆಲಸ ನಡೆಸಿದಂತಾಗುತ್ತದೆ. ಅಲ್ಲದೆ, ನಿಮ್ಮ ತೀರ್ಪುಗಳಿಗೆ ಕಾರ್ಯತಃ ಯಾವ ಫಲವೂ ಇಲ್ಲದೆ, ಅವು ಫಲಕಾರಿಯಾಗಬಹುದೆಂಬ ಆಶೆಯಲ್ಲಿಯೇ ಕೊನೆಗಾಣುವ ಕೊರತೆಯೂ, ತಪ್ಪುತ್ತದೆ. ರಾಜಕಾರ್ಯಪ್ರಸಕ್ತ, ರಾವ್ ಬಹದ್ದೂರ್ ಮಿ|| ಎಂ. ರಾಮರಾಯರವರು ಈ ಸಂಘಕ್ಕೆ ಅಧ್ಯಕ್ಷರಾಗಿರುವುದು ಒಂದು ಭಾಗ್ಯವಿಶೇಷವೇ ಸರಿ. ಅವರು ತಮ್ಮ ಸದ್ಗುಣಗಳ ಪ್ರಭಾವದಿಂದಲೂ, ತಮ್ಮ ದೀರ್ಘಕಾಲದ ಅನುಭವದ ಸಹಾಯದಿಂದಲೂ, ಈ ಸಂಸ್ಥೆಯು ಪ್ರಜೆಗಳಿಗೆ ಪ್ರಯೋಜನಕಾರಿಯಾಗಿ ಪರಿಣಮಿಸುವಂತೆ, ಇಲ್ಲಿನ ಕಾರ್ಯಗಳನ್ನು ನಡೆಸಬಲ್ಲರು; ಈ ವಿಷಯದಲ್ಲಿ ಅವರಿಗೆ ವಿಶೇಷ ಅರ್ಹತೆಯುಂಟು. ಅವರ ನೇತೃತ್ವದಲ್ಲಿ ಈ ಸಂಘವು ವೃದ್ಧಿಹೊಂದಿ, ಸಹಕಾರ ಕಾರ್ಯಕಲಾಪಗಳ ವಿಷಯದಲ್ಲಿ ವಿಶೇಷ ಉತ್ತರವಾದಿತ್ವದಿಂದ ಕೂಡಿದ, ಪ್ರಧಾನಸಂಸ್ಥೆಯಾಗಿ ಪರಿಣಮಿಸುವುದೆಂಬ ವಿಚಾರದಲ್ಲಿ ನನಗೆ ಪೂರ್ಣ ಭರವಸೆಯುಂಟು.

ಇನ್ನು ಈ ಸಮ್ಮೇಳನದ ಕಾರ್ಯಗಳು ಆರಂಭವಾಗಬಹುದೆಂದು ನಾನು ಅನುಜ್ಞೆಯನ್ನು ಕೊಟ್ಟಿದ್ದೇನೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಸಜ್ಜನಸಮಾಜಸುಧಾರಣಾಸಭೆ.

ಈ ಮೊದಲೇ ಗೊತ್ತಾದಂತೆ ವೀರಶೈವ ಸಜ್ಜನಸಮಾಜಸುಧಾರಣಾ ಸಭೆಯು 1926 ನೇ ಸೆಪ್ಟಂಬರ್ 26-27 ನೆಯ ತಾರೀಖುಗಳಲ್ಲಿ ಬಾಗಲಕೋಟೆಯಲ್ಲಿ ಇಲಕಲ್ಲ ಶ್ರೀಮಹಾಂತೇಶ ಪಾಠಶಾಲೆಯ ಅಧ್ಯಾಪಕರಾದ ವೇ|| ಗೌರೀನಾಥಶಾಸ್ತ್ರಿಗಳವರ ಅಧ್ಯಕ್ಷತೆಯ ಕೆಳಗೆ ನೆರವೇರಿಸಲ್ಪಟ್ಟಿತು. ಡಾ|| ಚಂದ್ರಶೇಖರಶಾಸ್ತ್ರಿಗಳು, ಹರ್ಡೇಕರ ಮಂಜಪ್ಪನವರು ಮತ್ತು ಮನುದಾಪುರ ಪಂಡಿತ ಮಹದೇವ ದೇಶಿಕರು ಆಗಮಿಸಿದ್ದರು. ಆದವಾನಿ, ಯಾತಗೇರಿ, ಬ್ಯಾಡಗಿ, ಶಿರಸಿ, ಬಂಕಾಪುರ, ಬಳ್ಳಾರಿ, ರೋಣ, ಹುಬ್ಬಳ್ಳಿ, ಧಾರವಾಡ, ಇಲಕಲ್ಲ, ಮುದ್ದೇಬಿಹಾಳ ಮುಂತಾದ ಸ್ಥಳಗಳಿಂದ ನಮ್ಮ ಸಜ್ಜನಸಮಾಜದ ಮಹಾಶಯರು ಬಂದಿದ್ದರು. ಲಗ್ನಪದ್ಧತಿ ಒಳಪಂಗಡಗಳ ಏಕೀಕರಣ, ಕನ್ಯಾವಿಕ್ರಯ ಮತ್ತು ಬಾಲ್ಯವಿವಾಹಗಳ ನಿಷೇಧವನ್ನು ಕುರಿತು ಅಧ್ಯಕ್ಷರೂ, ಚಂದ್ರಶೇಖರಶಾಸ್ತ್ರಿಗಳೂ, ಮಂಜಪ್ಪನವರೂ ಜನರ ಮೇಲೆ ಚೆನ್ನಾಗಿ ಪರಿಣಾಮವಾಗುವಂತೆ ವ್ಯಾಖ್ಯಾನಗಳನ್ನು ಕೊಟ್ಟರು. ಅನಂತರ ಕೆಳಗೆ ಕಾಣಿಸಿದ ಠರಾವುಗಳು ಸರ್ವಾನುಮತದಿಂದ ಪಾಸಾದುವು—(1) ನಮ್ಮ ಸಮಾಜದ ಹೆಣ್ಣುಮಕ್ಕಳ ಲಗ್ನವನ್ನು ಹತ್ತುವರ್ಷಗಳ ಪೂರ್ವದಲ್ಲಿ ಮಾಡಬಾರದೆಂದು ಈ ಸಭೆಯು ನಿರ್ಣಯಿಸುತ್ತದೆ. (2) ನಮ್ಮ ಸಮಾಜದಲ್ಲಿರುವ ಕನ್ಯೆಗಳನ್ನು ಲಗ್ನಮಾಡಿಕೊಡುವಾಗ್ಗೆ ಭೂಮಿ, ಬಂಗಾರ, ಅಥವಾ ದ್ರವ್ಯ ಮೊದಲಾದ ಯಾವರೀತಿಯಿಂದಲೂ ತೆರವನ್ನು ತೆಗೆದುಕೊಳ್ಳಬಾರದೆಂದು ಈ ಸಭೆಯು ನಿರ್ಣಯಿಸುತ್ತದೆ. (3) ಬಾಲ್ಯವಿವಾಹ ಮತ್ತು ಕನ್ಯಾವಿಕ್ರಯ ಇವುಗಳ ನಿಷೇಧವನ್ನು ಕುರಿತು ಕಾರ್ಯಕಾರಿ ಮಂಡಲದವರು ಒಂದು ಪುಸ್ತಕವನ್ನು ಅಚ್ಚುಮಾಡಿಸಿ ಇದೇ ಡಿಸೆಂಬರ್ ತಿಂಗಳೊಳಗಾಗಿ ಪ್ರಸಿದ್ಧಮಾಡತಕ್ಕದ್ದು. (4) 'ಧರ್ಮವೀರ' ಶಂಕರಣ್ಣನವರು ಸಜ್ಜನಶೆಟ್ಟರ ಯಾತಗೇರಿ, ಇವರು ಸಂಸ್ಕೃತಶಾಲೆಯನ್ನು ಸ್ಥಾಪಿಸುವದಕ್ಕಾಗಿ ಒಂದುಲಕ್ಷರೂಪಾಯಿಗಳನ್ನು ಕೊಟ್ಟದ್ದಕ್ಕಾಗಿ ಈ ಸಭೆಯು ಆ ಮಹನೀಯರನ್ನು ಅಭಿನಂದಿಸುತ್ತದೆ. (5) ಈ ಸಂಘದ ತಾತ್ಕಾಲಿಕ ವ್ಯವಸ್ಥಾಪಕ ಕಮಿಟಿಯವರನ್ನೂ, ಈ ಸಭೆಯನ್ನೂ ಶ್ರಮವಹಿಸಿ ಕರೆದ ಮಹಂತಪ್ಪನವರು ಸೂಡಿ ಇವರನ್ನೂ ಈ ಸಭೆಯು ಗೌರವಿಸುತ್ತದೆ.

ಕಾರ್ಯದರ್ಶಿ.

ಗೌರ್ನಮೆಂಟ್ ಸ್ಕೂಲಾದದ್ದು.

ಚಾಮರಾಜನಗರದ ತಾ|| ನಂಜೇದೇವನಪುರದ ಗ್ರಾಮದಲ್ಲಿ ಗ್ರಾಂಟ್ ಸ್ಕೂಲು ಪ್ರಾರಂಭವಾಗಿ 10 ವರ್ಷಗಳಾದವು. ಈ ಸ್ಕೂಲಿಗೆ ನಿಯಮಿಸಲ್ಪಟ್ಟ ಹೆಡ್ಮಾಸ್ಟರ್ ಡಿ. ವೆಂಕಟಪ್ಪನವರು ನಮ್ಮ ಬಾಲಕರಿಗೆ ಶ್ರಮಪಟ್ಟು ವಿದ್ಯಾಭ್ಯಾಸ ಮಾಡಿಸುತ್ತಾ ನಮ್ಮಗಳಿಗೆ ಪ್ರೋತ್ಸಾಹಕೊಟ್ಟುದರ ಮೇಲೆ ಸ್ಕೂಲಿಗೋಸ್ಕರ 600 ರೂ. ಖರ್ಚುಮಾಡಿ ಒಂದು ಹೊಸ ಕಟ್ಟಡವನ್ನೂ, ಫರ್ನೀಚರು ಸಾಮಾನುಗಳನ್ನೂ ಒದಗಿಸಿಕೊಟ್ಟು ಈ ಸ್ಕೂಲನ್ನು ಸರ್ಕಾರಿಯಾಗಿ ಮಾಡಿಸಿಕೊಡಬೇಕೆಂತ ಪ್ರಾರ್ಥಿಸಿದೆವು. ಘನವುಳ್ಳ ಸರ್ಕಾರದವರು ನಮ್ಮಗಳಮೇಲೆ ಕೃಪೆಯಿಟ್ಟು ತಾ|| 20-9-26 ರಿಂದ ಈ ಸ್ಕೂಲನ್ನು ಗೌರ್ನಮೆಂಟ್ ಸ್ಕೂಲಾಗಿ ಮಾಡಲಾಗಿರುತ್ತೆಂದೂ, ಸ್ಕೂಲು ಪ್ರಾರಂಭವಾದ ಲಾಗಾಯ್ತು ಕಷ್ಟಪಟ್ಟು ಕೆಲಸಮಾಡಿದ ಸದರಿ ಡಿ. ವೆಂಕಟಪ್ಪನವರನ್ನೇ ಹೆಡ್ಮಾಸ್ಟರನ್ನಾಗಿ ನೇಮಿಸಿರುತ್ತೆಂದೂ ಹುಕುಂ ಸಾದರಾದುದರ ಮೇಲೆ ನಮ್ಮಗಳ ಪ್ರಾರ್ಥನೆಯಂತೆ ತಾ|| 20 ರ ಸುದಿನ ಎಜುಕೇಷನ್ ಇಲಾಖಾ ಚಾಮರಾಜನಗರದ ರೇಂಜ್ ಇನ್ಸ್ಪೆಕ್ಟರರವರು ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟ ಈ ಸ್ಕೂಲಿಗೆ ದಯಮಾಡಿಸಿ, ಅಧ್ಯಕ್ಷತೆಯನ್ನು ವಹಿಸಿ, ವಿದ್ಯಾಭಿವೃದ್ಧಿಯ ವಿಷಯವಾಗಿ ಉಪನ್ಯಾಸವನ್ನು 2 ಘಂಟೆಕಾಲ ಬಹುಸ್ವಾರಸ್ಯವಾಗಿ ಅಪ್ಪಣೆಕೊಡಿಸಿದರು. ತರುವಾಯ ದೇವರ ಪ್ರಾರ್ಥನೆಯನ್ನೂ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮಾಡಿ ನಮ್ಮಗಳ ಬಾಲಕರುಗಳಿಗೆ ವಿದ್ಯಾಸೌಕರ್ಯವನ್ನು ಕಲ್ಪಿಸಿಕೊಟ್ಟ ಡಿಸ್ಟ್ರಿಕ್ಟ್ ಬೋರ್ಡಿನವರನ್ನೂ, ಅಧ್ಯಕ್ಷರನ್ನೂ ಸಹ ವಂದಿಸಿ ಇವರುಗಳಿಗೆ ಆಯುರಾರೋಗ್ಯಐಶ್ವರ್ಯಾಭಿವೃದ್ಧಿಯನ್ನು ಕೊಡಲೆಂತ ಪರಮೇಶ್ವರನನ್ನು ಧ್ಯಾನಿಸಿ, ಸಭಿಕರಿಗೆ ಗಂಧ, ಪುಷ್ಪ, ತಾಂಬೂಲ, ಮತ್ತು ಬಾಲಕರುಗಳಿಗೆ ಕೊಬರೀಸಕ್ಕರೆ ಇವುಗಳನ್ನು ಹಂಚಿ ಮಂಗಳದೊಡನೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸ್ಕೂಲು ಕಮಿಟಿ ಮೆಂಬರುಗಳು.
9-10-26.
ಛೇರ್ಮನ್ ನಂಜಪ್ಪ,
ಸುಬ್ಬಣ್ಣ,
ಮಲ್ಲಪ್ಪ,
ಪಟೇಲ್ ದೊಡ್ಡಲಿಂಗಪ್ಪ.

ಬೀರೂರಿನ ವೀರಶೈವರ ತಾಟಸ್ಥ್ಯ.

ವೀರಶೈವಶ್ರೀಮಂತರಿಗೆ ಆವಾಸಸ್ಥಾನವಾಗಿಯೂ, ಅಡಿಕೆ, ತೆಂಗು ಮುಂತಾದವುಗಳಿಗೆ ಮುಖ್ಯವಾದ ವ್ಯಾಪಾರಸ್ಥಳವಾಗಿಯೂ ಇದ್ದ ಬೀರೂರು ಈಚೀಚೆಗೆ ಶ್ರೀಮಂತರುಗಳ ಅನಾದರಣೆಯಿಂದಲೂ ಜನರ ಅನೈಕಮತ್ಯದಿಂದಲೂ ಪ್ಲೇಗು ಮೊದಲಾದ ಕ್ಷುದ್ರರೋಗಗಳ ಹಾವಳಿಯಿಂದಲೂ ಬಹಳ ಹೀನಸ್ಥಿತಿಗೆ ಬರುತ್ತಿದೆ ಎಂದು ತಿಳಿಸಲು ಬಹಳ ಖೇದವಾಗುತ್ತದೆ. ಶ್ರೀ ವೀರಭದ್ರಸ್ವಾಮಿಯ ಸೇವೆಗಾಗಿ ಏರ್ಪಡಿಸಲ್ಪಟ್ಟಿರುವ ಫಂಡಿಗೆ ಹಣವನ್ನು ಶೇಖರಿಸುವ ವಿಚಾರದಲ್ಲಿ ಉದಾಸೀನವಾಗಿರುವುದೂ, ಪರಸ್ಪರ ಪ್ರೀತಿವಿಶ್ವಾಸವಿಲ್ಲದಿರುವುದೂ ಮ್ಯುನಿಸಿಪಲ್ ಕೌನ್ಸಿಲ್ ಚುನಾವಣೆಯಲ್ಲಿ ವೀರಶೈವರಿಗೆ ಓಟು ಬರದೆ ಇರಲು ಮುಖ್ಯಕಾರಣಗಳಾಗಿವೆ. ಅಗರ್ಭಶ್ರೀಮಂತರಾದ ಮ|| ಪತ್ರೆ ಚೆನ್ನವೀರಪ್ಪನವರು ಸ್ವಲ್ಪ ಅಭಿಮಾನವಿಟ್ಟು ಶ್ರಮವಹಿಸುವುದಾದರೆ ಶ್ರೀ ವೀರಭದ್ರಸ್ವಾಮಿಯ ಫಂಡಿಗೆ ಹಣವು ಕೂಡಲೆ ಶೇಖರವಾಗುವುದಲ್ಲದೆ ವೀರಶೈವರಲ್ಲಿ ಐಕಮತ್ಯವುಂಟಾಗುವುದರಲ್ಲಿ ಸಂದೇಹವಿಲ್ಲ. ಗ್ರಾಮಾಭಿವೃದ್ಧಿಕಾರ್ಯದಲ್ಲಿ ಮುಂದಾಳುಗಳಾಗಿರುತ್ತಿದ್ದ ದೊಡ್ಡಮನೆ ಮ|| ಹಾಲಪ್ಪನವರೂ ನಮ್ಮ ದುರದೃಷ್ಟದಿಂದ ಈಚೆಗೆ ಮೌನಧಾರಣೆಯನ್ನು ಮಾಡಿರುತ್ತಾರೆ. ಇವರು 2-3 ಸಾವಿರ ರೂಪಾಯಿನ ಸ್ವಂತ ವೆಚ್ಚದಿಂದ ಶ್ರೀ ಭೋಗಮಲ್ಲೇಶ್ವರನ ದೇವಸ್ಥಾನವನ್ನು ಕಟ್ಟಿಸುತ್ತಿರುವರು. ಮತ್ತು ಇಂಥಾ ಧರ್ಮಕಾರ್ಯಗಳನ್ನು ಎಷ್ಟೋ ಮಾಡಿಯೂ ಮಾಡುವವರಾಗಿಯೂ ಇರುವರು. ಆದ್ದರಿಂದ ಈ ಧರ್ಮಿಷ್ಠರು ಇನ್ನುಮೇಲಾದರೂ ಸ್ವಸಮಾಜಾಭಿವೃದ್ಧಿಕಾರ್ಯಗಳ ಮೇಲೆ ಅಭಿಮಾನವನ್ನಿಟ್ಟು ಇಲ್ಲಿಯ ವೀರಶೈವರ ಪೂರ್ವದ ಗೌರವಪ್ರತಿಷ್ಠೆಗಳನ್ನು ಪುನಃ ಉಂಟುಮಾಡುವವರಾಗಬೇಕಾಗಿ ಪ್ರಾರ್ಥಿಸುತ್ತೇನೆ. ಈ ಊರಿಂದ ಎಗಟಿಪುರಕ್ಕೆ ರಸ್ತೆಯನ್ನು ಹಾಕಲು ಈಗ್ಗೆ 7-8 ವರ್ಷಗಳ ಹಿಂದೆ ಏರ್ಪಾಟಾಗಿ ಕೆಲವು ಕಾಂಗಾರಿ ಸಹ ನಡೆದು ಯಾವ ಕಾರಣದಿಂದಲೋ ನಿಲ್ಲಿಸಲ್ಪಟ್ಟಿತು. ಈಗ ಎಗಟಿಪುರಕ್ಕೆ ಕಡೂರಿಂದ ರಸ್ತೆಹಾಕಲ್ಪಡುವ ಏರ್ಪಾಟು ನಡೆಯುತ್ತಿರುವುದನ್ನು ಬೀರೂರಿನವರು ತಿಳಿದು ಬಹಳವಾಗಿ ವಿಷಾದಿಸುತ್ತಾರೆ. ಬೀರೂರಿನಿಂದ ಎಗಟೀಪುರಕ್ಕೆ ಜನರೂ ಬಂಡಿಗಳೂ ತಿರುಗಾಡುವುದು ಹೆಚ್ಚಾಗಿದೆಯೇ ಹೊರತು ಕಡೂರಿನಿಂದ ವಾರಕ್ಕೆ ಹತ್ತಾರುಗಾಡಿಗಳು ತಿರುಗಾಡುವುದೂ ದುರ್ಲಭವಾಗಿರುವುದರಿಂದ, ಯಾವಲ್ಲಿಂದ ಎಗಟಿಪುರಕ್ಕೆ ರಸ್ತೆ ಹಾಕಿದರುತ್ತಮವೆಂಬ ವಿಚಾರದಲ್ಲಿ ಬೀರೂರು ಎಗಟಿಪುರದ ಜನರ ಅಭಿಪ್ರಾಯವನ್ನು ಸರ್ಕಾರದವರು ಕೇಳಿ ಅನಂತರ ಮಾರ್ಗವನ್ನು ಹಾಕಿಸುವುದುತ್ತಮವು. ಹಾಗಲ್ಲದೆ ಮಾಡುವುದಾದರೆ ಕಾರಣಾಂತರದಿಂದ ಹೀನಸ್ಥಿತಿಗಿಳಿಯುತ್ತಿರುವ ಬೀರೂರು ಮತ್ತಷ್ಟು ಕ್ಷೀಣವಾಗುವುದಕ್ಕೂ ಸರ್ಕಾರದ ದುಡ್ಡು ಪ್ರಯೋಜನವಿಲ್ಲದೆ ಹೋಗುವುದಕ್ಕೂ ಕಾರಣವಾಗುತ್ತದೆ.

ಸ್ಥಳಾಭಿಮಾನಿ.

ದಾವಣಗೆರೆಯಲ್ಲಿ ಇಂಟರ್ಮೀಡಿಯೇಟ್ ಕಾಲೇಜಿನ ಅವಶ್ಯಕತೆ ಮತ್ತು ಪುರಜನರ ಕರ್ತವ್ಯ.

ಕರ್ನಾಟಕದ ಮುಖ್ಯ ಪಟ್ಟಣಗಳಲ್ಲಿ ದಾವಣಗೆರೆಯು ಒಂದಾಗಿದೆ. ಈ ಪಟ್ಟಣವು ಪ್ರತಿಯೊಂದು ರೀತಿಯಿಂದಲೂ ಅಭಿವೃದ್ಧಿಯನ್ನು ಹೊಂದುತ್ತಿರುವುದಾದರು ಕೂಡ ವಿದ್ಯಾಭ್ಯಾಸದ ವಿಷಯದಲ್ಲಿ ಅಷ್ಟೊಂದು ಪ್ರಾಶಸ್ತ್ಯವನ್ನು ಪಡೆಯದಿರುವುದೊಂದು ಮಾತ್ರ ಬಹಳ ವಿಷಾದಕರವು. ಮಹನೀಯರುಗಳು ಒಂದು ದೇಶದ ಅಥವಾ ಜನಾಂಗದ ಏಳಿಗೆಯಾಗಬೇಕಾದರೆ ವಿದ್ಯಾಭ್ಯಾಸವು ಹೆಚ್ಚಾಗಿ ಪ್ರಚಾರವಾಗಬೇಕೆಂದು ಅಭಿಪ್ರಾಯಪಡುವರು. ವೀರಶೈವಸಮಾಜದವರ ನಿವಾಸಸ್ಥಾನಗಳಲ್ಲಿ ಅತಿವಿಸ್ತಾರವಾದ ಪಟ್ಟಣವೆಂದರೆ ದಾವಣಗೆರೆಯೊಂದೇ. ಪ್ರತಿಯೊಂದು ವಿಷಯದಲ್ಲಿಯೂ ಹಿಂದುಳಿದ ನಮ್ಮ ವೀರಶೈವಸಮಾಜವು ಈಗೀಗ ಮುಂದುವರಿಯ ಹತ್ತಿದೆ. ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವು ಸಹ ದಾವಣಗೆರೆಯಲ್ಲಿ ಸಾಕಾದಷ್ಟು ಉಂಟು. ಇದೆಲ್ಲಾ ಇದ್ದರುಕೂಡ ಇಲ್ಲಿನ ವಿದ್ಯಾರ್ಥಿಗಳು ಪರಸ್ಥಳಗಳಲ್ಲಿ ಓದುವುದೆಂದರೆ ಬಹಳ ವಿಷಾದಕರವು. ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಒಂದು ಇಂಟರ್ಮೀಡಿಯಟ್ ಕಾಲೇಜನ್ನು ಕೊಡಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ. ಚಿತ್ರದುರ್ಗದಲ್ಲಿ ಕೇವಲ ಧರ್ಮಿಷ್ಠರೂ ಮುಂದಾಳುಗಳೂ ಪುರಪ್ರಮುಖರೂ ಆದ ಅಡ್ವೊಕೇಟ್ ಮ|| ಅನಂತಶೆಟ್ಟರವರು, ವಿದ್ಯಾಭ್ಯಾಸದ ಅಭ್ಯುದಯಕ್ಕೋಸ್ಕರ ಅವಿಶ್ರಾಂತವಾಗಿ ಕೆಲಸಮಾಡುತ್ತಿದ್ದಾರೆ. ಇವರು ತಮ್ಮ ಸ್ಥಳವಾದ ಚಿತ್ರದುರ್ಗದಲ್ಲಿ ಇಂಟರ್ಮೀಡಿಯಟ್ ಕಾಲೇಜು ಸ್ಥಾಪನೆಯಾದರೆ ತಮ್ಮ ಒಂದು ದಿವ್ಯಭವನವನ್ನು ಸ್ಕೂಲ್ ಮಂದಿರಕ್ಕೋಸ್ಕರ ಕೊಟ್ಟು ಸ್ವಾರ್ಥತ್ಯಾಗಮಾಡಲಿಕ್ಕೆ ಸಿದ್ಧರಾಗಿದ್ದಾರೆಂದು ತಿಳಿಯಬರುತ್ತದೆ. ಇದು ಸ್ತುತ್ಯಾರ್ಹವಾದ ವಿಷಯವೇ ಸರಿ. ದಾವಣಗೆರೆಯಲ್ಲಿ ಹೈಸ್ಕೂಲ್ ಕಟ್ಟಡಕ್ಕೆ ಊರಿನಪರವಾಗಿ ಮ|| ಚಿಗಟೇರಿ ಮುರಿಗೆಪ್ಪನವರೊಬ್ಬರೇ ೧೫ ಸಹಸ್ರರೂಪಾಯಿಗಳನ್ನು ಕೊಟ್ಟಿದ್ದು ಬಹು ಸ್ತುತ್ಯವಾದ ಸಂಗತಿಯಾಗಿದೆ. ಇದರಂತೆಯೇ ಇಂಟರ್ಮೀಡಿಯಟ್ ಕಾಲೇಜು ಸ್ಥಾಪನೆಯಾಗುವ ಕೆಲಸದಲ್ಲಿಯು ಸಹ ನಮ್ಮ ದಾವಣಗೆರೆಯ ಬಾಂಧವರು ದೃಢಮನಸ್ಸಿನಿಂದ ಉದಾರವಾದ ಸಹಾಯವನ್ನು ಮಾಡಲಿಕ್ಕೆ ಸಿದ್ಧರಾಗದ ಹೊರ್ತು ಬೇರೊಂದು ಮಾರ್ಗವೇ ಇಲ್ಲ. ಈಗ ಸರ್ಕಾರದವರು ಯಾವ ಊರಿನಲ್ಲಿ ಹೆಚ್ಚು ಸೌಕರ್ಯಗಳು ಮತ್ತು ಉತ್ತೇಜನಗಳು ಇವೆಯೋ ಅಲ್ಲಿಯೇ ವಿದ್ಯಾಭಿವೃದ್ಧಿಯನ್ನು ಮಾಡುತ್ತಾರೆಯೇ ಹೊರ್ತು ಬೇರೆ ಸ್ಥಳಗಳಲ್ಲಿ ಮಾಡುವುದಿಲ್ಲ. ಆದ್ದರಿಂದ ದಾವಣಗೆರೆಯ ಮಹಾಶಯರೇ, ವಿದ್ಯಾಭಿಮಾನಿಗಳೇ, ಧರ್ಮಾಭಿಮಾನಿಗಳೇ ಇಂತಹ ಸುಸಂಧಿಯಲ್ಲಿ ತಮ್ಮ ತನು ಮನ ಧನಗಳಿಂದ ಸರ್ವಪ್ರಯತ್ನಮಾಡಿ ದಾವಣಗೆರೆಯಲ್ಲಿ ವಿದ್ಯಾಭಿವೃದ್ಧಿ ಮಾಡಲೋಸುಗ ಸದರಿ ಇಂಟರ್ಮೀಡಿಯಟ್ ಕಾಲೇಜನ್ನು ಸ್ಥಾಪಿಸುವಹಾಗೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ.

ಓರ್ವವಿದ್ಯಾಭಿಮಾನಿ.

ಮೈಸೂರು ಡಿಸ್ಟ್ರಿಕ್ಟ್ ಸ್ಕೂಲ್ ಇನ್ಸ್ಪೆಕ್ಟರು ಮತ್ತು ಸ್ಕೂಲ್ಮಾಸ್ಟರುಗಳ ವರ್ಗಾವರ್ಗಿ.

ಈ ಡಿಸ್ಟ್ರಿಕ್ಟಿನಲ್ಲಿ ಸ್ಕೂಲುಮಾಸ್ಟರುಗಳ ವರ್ಗಾವರ್ಗಿಯು ಡಿ|| ಇನ್ಸ್ಪೆಕ್ಟರರವರ ಮತ್ತು ಅವರ ಗುಮಾಸ್ತೆರ ಮನಬಂದಂತೆ ನಡೆಯುವುದಾಗಿ ಈ ಕೆಳಗೆ ಕಂಡ ವಿಷಯಗಳಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಸುಮಾರು ಒಂದು ವರ್ಷದ ಕೆಳಗೆ ಮಂಡ್ಯದ ತಾ|| ಕೊತ್ತತ್ತಿಯಿಂದ ಬಿ. ಎನ್. ಕೃಷ್ಣಯ್ಯನವರನ್ನು ಸೋಮನಹಳ್ಳಿ ಪ್ರೈಮರಿ ಸ್ಕೂಲಿಗೂ ತಾ|| 2-8-26 ರಲ್ಲಿ ಹಲ್ಲೇಗೆರೆಯಿಂದ ಕೆರಗೋಡಿಗೆ ವರ್ಗವಾಗಿದ್ದ ಎಚ್. ವೆಂಕಟಕೃಷ್ಣಯ್ಯನವರನ್ನು ಸೋಮನಹಳ್ಳಿ ಸ್ಕೂಲಿಗೂ ವರ್ಗಮಾಡಿದರು. ಹಿಂದೆ ಅವರು ಕೊತ್ತತ್ತಿಯಲ್ಲಿ ಎರಡುವರ್ಷಗಳಕಾಲ ಕೆಲಸಮಾಡಿದ್ದರು. ಅದೇ ಮಾಹೆ 11-13 ರಲ್ಲಿ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರರವರು ಪರಿವಾರಸಹಿತ ಶಿವಪುರದಲ್ಲಿ ಕ್ಯಾಂಪುಮಾಡಿದ್ದರು. ಸೋಮನಹಳ್ಳಿ ಪ್ರೈಮರಿ ಸ್ಕೂಲಿಗೆ ಕೆರಗೋಡಿನಿಂದ ಬಂದಿದ್ದ ಎಚ್. ವೆಂಕಟಕೃಷ್ಣಯ್ಯನವರು ಹೋಗಿ ಅವರ ಭೇಟಿಯನ್ನು ತೆಗೆದುಕೊಂಡು ಮಾತುಕಥೆಗಳನ್ನು ಮುಗಿಸಿಕೊಂಡು ಬಂದರು. 16-8-26 ರಲ್ಲಿ ಯಥಾಪ್ರಕಾರ ಕೊತ್ತತ್ತಿ ಸ್ಕೂಲುಮಾಸ್ಟರು ಬಿ. ಎನ್. ಕೃಷ್ಣಯ್ಯನವರು ಸೋಮನಹಳ್ಳಿ ಸ್ಕೂಲಿಗೂ ಎಚ್. ವೆಂಕಟಕೃಷ್ಣಯ್ಯನವರು ಕೆರಗೋಡಿಗೂ ವರ್ಗಮಾಡಿರುವದರಿಂದ ಅವರನ್ನು ರಿಲೀವ್ ಮಾಡಬೇಕೆಂದು ಹೆಡ್ಮಾಸ್ಟರಿಗೆ ಆರ್ಡರು ಬಂದಿತು. 17-8-26 ರಲ್ಲಿ ಬಿ. ಎನ್. ಕೃಷ್ಣಯ್ಯನವರು ಬಂದು ಚಾರ್ಜು ತೆಗೆದುಕೊಂಡರು. 3-10-26 ರಲ್ಲಿ ಬೇವಿನಹಳ್ಳಿಯಿಂದ ಚಿಕ್ಕಣ್ಣಶೆಟ್ಟಿ ಎಂಬವರು ಬಂದು ಬಿ. ಎನ್. ಕೃಷ್ಣಯ್ಯನವರಿಂದ ಛಾರ್ಜು ತೆಗೆದುಕೊಂಡಿದ್ದಾರೆ. ಕೃಷ್ಣಯ್ಯನವರು ಎಲ್ಲಿಗೆ ಹೋಗಬೇಕೆಂಬುದೇ ಗೊತ್ತಿಲ್ಲ. 2 ತಿಂಗಳಲ್ಲಿ ಒಬ್ಬ ಪ್ರೈಮರಿಸ್ಕೂಲುಮಾಸ್ಟರನ್ನು 3 ಸಲ ಟ್ರಾನ್ಸ್ಫರ್ ಮಾಡಿದರೆ ಅವನಗತಿ ಏನು ಮತ್ತು ಸ್ಕೂಲಿನ ಕೆಲಸ ಎಷ್ಟು ಸಮರ್ಪಕವಾಗಿ ನಡೆಯುತ್ತದೆ? ಎಂಬುದನ್ನು ಮೇಲ್ಪಟ್ಟ ಆಫೀಸರುಗಳು ಯೋಚಿಸಬೇಕಾಗಿದೆ, ಮತ್ತು ಹಾಲಿ ಇರುವ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರರವರು ಎಷ್ಟು ಶ್ರದ್ಧೆಯಿಂದ ಕಾರ್ಯಾಡಳಿತ ನಡೆಸುತ್ತಾರೆಂಬುದು ಇದರಿಂದ ಚೆನ್ನಾಗಿ ವ್ಯಕ್ತಪಡುತ್ತದೆ. ಇದರಂತೆ ಈ ಡಿಸ್ಟ್ರಿಕ್ಟಿನಲ್ಲಿ ಒಬ್ಬೊಬ್ಬ ಮಾಸ್ಟರು 3-4 ದಫೆ ಟ್ರಾನ್ಸ್ಫರ್ ಆಗಿರುವದಾಗಿ ವರ್ತಮಾನಕೇಳಿದ್ದೇನೆ. ಈ ರೀತಿ ವರ್ಗಾವರ್ಗಿಗಳು ನಡೆಸಲು ಏನೋ ಒಂದು ಪ್ರಬಲವಾದ ಕಾರಣವಿರಬಹುದೆಂದು ತೋರುತ್ತದೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಸಹ ಈ ತರಹ ಮನಸ್ಸಿಗೆಬಂದಂತೆ ಕಾರ್ಯಕ್ರಮಗಳು ನಡೆಯುತ್ತಿರುವುದು ಬಹಳ ಶೋಚನೀಯವಾದ ಸಂಗತಿಯಾಗಿದೆ. ಆದ್ದರಿಂದ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಈ ಡಿಸ್ಟ್ರಿಕ್ಟಿನಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟೆಷ್ಟು ಸ್ಕೂಲುಮಾಸ್ಟರುಗಳ ವರ್ಗಾವರ್ಗಿ ನಡೆದಿದೆ ಎಂಬ ವರದಿಯನ್ನು ತರಿಸಿಕೊಂಡು ಮುಂದಾದರೂ ಇಂಥಾ ಅಕ್ರಮಗಳು ನಡೆಯಲವಕಾಶವಾಗದಂತೆ ಈಗಿರತಕ್ಕ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರರವರನ್ನು ಬೇರೆಕಡೆಗೆ ವರ್ಗಾಯಿಸಿ ಬೇರೆಯವರನ್ನು ಕಳಿಸಿದರೆ ಮಕ್ಕಳ ವಿದ್ಯಾಭ್ಯಾಸವು ಕ್ರಮವಾಗಿ ನಡೆಯಲು ಅನುಕೂಲವಾಗುತ್ತದೆ.

ಒಬ್ಬ ಕಮಿಟಿ ಮೆಂಬರು.

ವೀರಶೈವಮಹಾಸಭೆ.

ಬಹಳ ದಿವಸದಿಂದ ಎಲ್ಲೂ ನೆರೆಯದೆ ನಿಂತುಹೋಗಿದ್ದ ವೀರಶೈವ ಮಹಾಸಭೆಯನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಕೂಡಿಸಲು ನಿರ್ಧರಿಸಿ ಅಲ್ಲಿಯ ವೀರಶೈವರು ರಿಸೆಪ್ಷನ್ ಕಮಿಟಿಯನ್ನೂ ಡೆಲಿಗೇಟರ ಹಾಗೂ ವಿಜಿಟರ ಫೀಯನ್ನೂ ಗೊತ್ತುಮಾಡಿರುವ ವಿಚಾರವು ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವದು ಸರಿಯಷ್ಟೆ. ಅಲ್ಲಿಂದೀಚೆಗೆ ಮಹಾಸಭಾಧ್ಯಕ್ಷರನ್ನು ಮತ್ತು ಸಭೆಯಲ್ಲಿ ಚರ್ಚಿಸುವ ವಿಷಯಗಳನ್ನು ಗೊತ್ತುಮಾಡಿರುವ ವಿಚಾರವು ಈವರೆಗೂ ಪ್ರಕಟವಾಗಿಲ್ಲವು. ಡಿಸೆಂಬರ್ ಎಂಬುದು ಇನ್ನು 2½ ತಿಂಗಳು ಮಾತ್ರ ಉಳಿಯಿತು. ಅಲ್ಲದೆ ಬಹುದಿವಸಗಳಿಂದ ನಿಂತುಹೋಗಿರುವ ಮಹಾಸಭೆಯು ನಿರ್ವಿಘ್ನವಾಗಿ ಜರುಗಿ ಮುಂದೆ ಪ್ರತಿ ವರ್ಷದಲ್ಲೂ ತಪ್ಪದೆ ನಡೆಯುವಂತೆಯೂ, ಮಹಾಸಭೆಯಲ್ಲಾದ ನಿರ್ಣಯಗಳು ಅಮಲಿಗೆ ಬರುವಂತೆಯೂ ಮಾಡಬೇಕಾಗಿರುವುದರಿಂದ ಬಹುಜನಾಭಿಪ್ರಾಯವನ್ನು ತೆಗೆದುಕೊಂಡು ಸಭಾಧ್ಯಕ್ಷರನ್ನು ಗೊತ್ತುಮಾಡುವದು ಈಗಿನ ಪರಿಸ್ಥಿತಿಯಲ್ಲಿ ಬಹಳ ಕ್ಷೇಮಕರವು. ಈವರೆಗೆ ಯಾವ ಪ್ರಾಂತ್ಯದಲ್ಲಿ ವೀರಶೈವರು ಹೆಚ್ಚಾಗಿದ್ದರೂ ಈ ಮಹಾಸಭಾಕಾರ್ಯದಲ್ಲಿ ಭಾಗಿಗಳಾಗದೆ ಇರುವರೋ ಮತ್ತು ವಿದ್ಯೆಯಲ್ಲಿ ಹಿಂದುಳಿದಿರುವರೋ ಆ ಪ್ರಾಂತ್ಯದಲ್ಲಿ ಗಣ್ಯರಾಗಿರುವ ದೊಡ್ಡಮನುಷ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ ತನ್ಮೂಲಕ ದೂರ ಇರುವ ಬಂಧುಗಳನ್ನು ಸಮೀಪಗತರನ್ನಾಗಿಮಾಡಿ ಮುಂದಿನ ವರ್ಷ ಈ ಮಹಾಸಭೆಯನ್ನು ತಮ್ಮ ದೇಶದಲ್ಲಿ ಕೂಡಿಸಿ ತಮ್ಮ ಅಭಿವೃದ್ಧಿಸಾಧಕಪ್ರಯತ್ನಗಳನ್ನು ಮಾಡಿಕೊಳ್ಳಲು ಅವರಿಗೆ ಅವಕಾಶವನ್ನುಂಟುಮಾಡಿಕೊಡುವದು ಬಹಳ ಆವಶ್ಯಕವಾಗಿದೆ. ಇದುವರೆಗೆ ನಡೆದ ಮಹಾಸಭಾಕಾಲಗಳಲ್ಲಿ ಡಿಲಿಗೇಟುಗಳಿಗೆ ಊಟದ ವೆಚ್ಚವೂ ಸೇರಿ 5 ರೂ. ವಿಜಿಟರುಗಳಿಗೆ ಊಟವಿಲ್ಲದೆ 2 ರೂ. ಗೊತ್ತುಮಾಡಲ್ಪಟ್ಟಿತ್ತು. ಆಗ ಪರಮನಂಟ್ ಫಂಡಿನ ಸಹಾಯವ್ಯಾವದೂ ಇರಲಿಲ್ಲ. ತಮ್ಮಲ್ಲೇ ವರ್ಗಣಿಕೂಡಿಸಿಕೊಂಡು ಚಪ್ಪರ ಕುರ್ಚಿ ಬೆಂಚು ದೀಪಗಳಿಗೆ ವಿಶೇಷ ಹಣ ಖರ್ಚುಮಾಡಬೇಕಾಗಿತ್ತು. ಈಗಲಾದರೋ ಪರಮನೆಂಟ್ ಫಂಡಿನಿಂದ 4000 ರೂಪಾಯಿ ನಗದಾಗಿ ಆಗಲೇ ಸಂದುಹೋಗಿರುತ್ತದೆ ಮತ್ತು ಹುಬ್ಬಳ್ಳಿಯು ದೊಡ್ಡ ವ್ಯಾಪಾರಸ್ಥಳವಾದ್ದರಿಂದ ಯಾವ ಪದಾರ್ಥಗಳಿಗೂ ಹೆಚ್ಚು ಹಣ ಖರ್ಚುಮಾಡಬೇಕಾಗಿಲ್ಲ. ಇಂಥಾದ್ದರಲ್ಲಿ ಊಟವಿಲ್ಲದೆ ಡೆಲಿಗೇಟುಗಳಿಗೆ 5 ರೂಪಾಯಿ ಫೀ ಗೊತ್ತುಮಾಡಿರುವದು ಬಹಳ ದುಬಾರಿ. ಇದೂ ಅಲ್ಲದೆ ಪೂರ್ವಕ್ಕಿಂತಲೂ ಈಗ ರೈಲುಛಾರ್ಜು ಹೆಚ್ಚಾಗಿದೆ. ಇದನ್ನೆಲ್ಲಾ [illegible]

ಬಹಳ ಪ್ರಯೋಜನವಾಗಿರುವದರಿಂದ ಹುಬ್ಬಳ್ಳಿಯ ರಿಸೆಪ್ಷನ್ ಕಮಿಟಿಯವರು ಚೆನ್ನಾಗಿ ಆಲೋಚಿಸಿ ಯೋಗ ಫೀಯನ್ನು ಗೊತ್ತುಮಾಡಿ ಬಹಳ ಜನರು ಸಭೆಗೆ ಬರುವಂತೆ ಮಾಡುವವರಾಗಬೇಕೆಂದೂ, ಮಹಾಸಭಾ ವಿಚಾರವಾಗಿ ನಡೆಯತಕ್ಕ ವಿಚಾರವನ್ನೂ ಆಯಾ ಕಾಲದಲ್ಲಿ ಸ್ಟಾರ್‌ಪತ್ರಿಕೆಯಲ್ಲಿ ಎಡಿಟರು ಪ್ರಕಟಿಸಬೇಕೆಂದೂ ನನ್ನ ವಿನಂತಿ. ಮಹಾಸಭಾಭಿಮಾನಿ.

[ಹುಬ್ಬಳ್ಳಿಯಲ್ಲಿ ನೆರೆಯುವ ಮಹಾಸಭಾ ವಿಚಾರವಾಗಿ ಯಾವ ಸಂಗತಿಯೂ ನಮಗೆ ತಿಳಿದುಬಂದಕೂಡಲೆ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಸಂ.]

ತಿಪಟೂರು ತಾಲ್ಲೂಕು ಆದಿಕರ್ನಾಟಕರ ಕಾನ್ಫರೆನ್ಸು.

ಈ ತಿಂಗಳು 3 ನೇ ತಾ|| ಭಾನುವಾರ ಮಧ್ಯಾಹ್ನ 1 ಘಂಟೆಗೆ ತಿಪಟೂರು ತಾಲ್ಲೂಕು ಆದಿಕರ್ನಾಟಕ ಕಾನ್ಫರೆನ್ಸು ತಿಪಟೂರು ಆದಿಕರ್ನಾಟಕದ ಸ್ಕೂಲಿನ ಮುಂಭಾಗದಲ್ಲಿ ಹಾಕಲ್ಪಟ್ಟಿದ್ದ ವಿಶಾಲವಾದ ಚಪ್ಪರದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರು ಮ|| ಡಿ. ಎಸ್. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕಾನ್ಫರೆನ್ಸಿಗೆ ಅನೇಕ ದೊಡ್ಡ ಮನುಷ್ಯರುಗಳು ಮತ್ತು ತಾಲ್ಲೂಕಿನ ಎಲ್ಲಾ ಭಾಗದ ಆದಿಕರ್ನಾಟಕರ ಪ್ರತಿನಿಧಿಗಳು ಬಂದಿದ್ದರು. ಹಾಜರಿದ್ದ ಊರಿನ ಪ್ರಮುಖರಲ್ಲಿ ಮ|| ಸಿಂಗ್ರಿ ನಂಜಪ್ಪನವರು, ಪ್ರಜಾಪ್ರತಿನಿಧಿ ಸಭೆಯ ಮೆಂಬರು; ಮ|| ಜಿ. ಕೆ. ಮಲ್ಲಪ್ಪನವರು, ಪ್ರಜಾಪ್ರತಿನಿಧಿ ಸಭೆಯ ಮೆಂಬರು ಮತ್ತು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರು, ಮ|| ಬಿ. ಯಂ. ರಂಗಯ್ಯನಾಯುಡುಯವರು, ತಾಲ್ಲೂಕು ಅಮಲ್ದಾರ್‌ರವರು; ಮ|| ಕೆ. ಸಿ. ಲಿಂಗೇಗೌಡರು, ಸ್ಪೆಷಲ್ ಮ್ಯಾಜಿಸ್ಟ್ರೇಟರವರು; ಮ|| ಎಸ್. ಟಿ. ರಾಘವಾಚಾರ್‌ರವರು, ಹೈಸ್ಕೂಲ್ ಹೆಡ್ಮಾಸ್ಟರ್ ಮ|| ಸೀತಾರಾಮರಾಯರು; ಪ್ಲೀಡರ್ ಮ|| ನಂಜೇಗೌಡರು; ಮ|| ಅಬ್ದುಲ್ ರಹೂಫ್‌ರವರು, ಮ|| ಯಂ. ಬಸವಯ್ಯನವರು, ಮ್ಯುನಿಸಿಪಲ್ ಮೆಂಬರುಗಳು; ಮ|| ಬಿ. ಕಂಟ್ರಾಕ್ಟರ್ ಲಕ್ಷ್ಮಣರಾಯರು, ಮ|| ಜಿ. ಕರಿಸಿದ್ದಪ್ಪನವರು, ಮ|| ಬಿ. ನಂಜಪ್ಪನವರು, ಮ|| ಸಿ. ಸಂಜೀವಯ್ಯನವರು, ಮ|| ಪಿ ಟಿ. ಬಸವಲಿಂಗಯ್ಯನವರು, ವರ್ತಕರುಗಳು; ಮ|| ಮಾಧವರಾಯರು, ಮಿಡಲ್ ಸ್ಕೂಲು ಹೆಡ್ಮಾಸ್ಟರು ಮೊದಲಾದವರೂ ಈ ಕಾನ್ಫರೆನ್ಸಿನಲ್ಲಿ ಆದಿಕರ್ನಾಟಕರ ಗುರುಗಳಾದ ಜಾಂಬವ ಶ್ರೀ ಮಲ್ಲಮುನಿಗಳೂ ಹಾಜರಿದ್ದರು. ಪ್ರೆಸಿಡೆಂಟರವರ ಭಾಷಣವಾದನಂತರ ಮ|| ಬಿ. ನಂಜಪ್ಪನವರು, ಮ|| ಸಿ. ಸೀತಾರಾಮರಾಯರು, ಮ|| ಸಿಂಗ್ರಿನಂಜಪ್ಪನವರು, ಮ|| ಮಾಧವರಾಯರು, ಮ|| ಸಿ. ಲಿಂಗೇಗೌಡರು, ಮ|| ಬಿ. ಯಂ. ರಂಗಯ್ಯನಾಯುಡುಯವರು, ಮ|| ಸಿ. ಟಿ. ಹನುಮಂತಯ್ಯ. ಇವರುಗಳು ಆದಿಕರ್ನಾಟಕರ ಏಳಿಗೆಯ ವಿಚಾರದಲ್ಲಿ ಉಪನ್ಯಾಸಮಾಡಿದರು. ಈ ಕೆಳಗೆ ಕಂಡ ಮುಖ್ಯ ರಿಜಲ್ಯೂಷನ್‌ಗಳು ಈ ಸಭೆಯಲ್ಲಿ ಪಾಸಾದವು.—

1. ಎಲ್ಲಾ ಸ್ಥಳೀಯ ಸಭೆಗಳಿಗೂ ಆದಿಕರ್ನಾಟಕರ ಪ್ರತಿನಿಧಿಗಳನ್ನು ನಾಮಿನೇಷನ್ ಮೂಲಕ ನೇಮಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವುದು.

2. ಎಲ್ಲಾ ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸುಗಳಲ್ಲು ಮತ್ತು ಇತರ ಇಲಾಖೆಗಳಲ್ಲು ವಿದ್ಯಾವಂತರಾದ ಆದಿಕರ್ನಾಟಕ ಜನಗಳಿಗೆ ಹುದ್ದೆಯನ್ನು ಕೊಡುವಂತೆಯೂ ಈಗ ನೇಮಿಸಬೇಕೆಂದಿರುವ ರೆವಿನ್ಯು ಪ್ರೊಬೇಷನರ್ ಸ್ಥಾನಗಳಲ್ಲಿ ಒಂದನ್ನು ಪಂಚಮ ಗ್ರಾಜುಯೇಟಿಗೆ ಕೊಡಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು.

3. ಎ. ಮತ್ತು ಬಿ. ಲಿಸ್ಟುಗಳಲ್ಲಿ ದಾಖಲಾಗಿರುವ ಜಮೀನುಗಳನ್ನು ಆದಿಕರ್ನಾಟಕರಿಗೆ ಅರ್ಧಬೆಲೆಗೆ ಕೊಟ್ಟು ಆ ಜಮೀನುಗಳ ಬೆಲೆಯನ್ನು ಹತ್ತು ವರ್ಷ ಕಂತುಗಳಲ್ಲಿ ವಸೂಲ್‌ಮಾಡುವಂತೆಯೂ ಆ ಜಮೀನುಗಳ ಮೇಲೆ ಮೊದಲನೇ ಐದು ವರ್ಷ ಕಂದಾಯವಿಲ್ಲದಂತೆ ಮಾಡಿ ಮುಂದೆ ಐದು ವರ್ಷ ರಿಯಾಯತಿದರದಮೇಲೆ ಕಂದಾಯವನ್ನು ವಸೂಲ್ ಮಾಡುವಂತೆಯೂ, ಆದಿಕರ್ನಾಟಕ ಜನಗಳಿಗೆ ಮನೆಯನ್ನು ಕಟ್ಟಿಕೊಳ್ಳುವುದಕ್ಕೂ ವ್ಯವಸಾಯೋಪಕರಣಗಳಿಗೂ ಬೀಜಗಳಿಗೂ ಸಾಲವನ್ನು ಕೊಡುವಂತೆಯೂ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು.

4. ಜಾತ್ರೆಯ ಕಾಲಗಳಲ್ಲಿ ದೇವರ ಮುಂದೆ ಬಲಿ ಕೊಡುವುದನ್ನು ಕಟ್ಟಾಂಗವಾಗಿ ಕಾನೂನು ಮೂಲಕ ನಿಲ್ಲಿಸುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು.

5. ಆದಿಕರ್ನಾಟಕರ ಹುಡುಗರಿಗೆ ಮತ್ತು ಹುಡುಗಿಯರಿಗೆ ಮಾದಕದ್ರವ್ಯವನ್ನು ಮಾರದಂತೆಯೂ ದೊಡ್ಡವರಾದ ಗಂಡಸರಿಗೆ ಮಿತವಾಗಿ ಮಾರುವಂತೆಯೂ ನಿರ್ಬಂಧವನ್ನು ಕಲ್ಪಿಸುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು. "ಓರ್ವಪ್ರತ್ಯಕ್ಷದರ್ಶಿ."

ಮಹಾಸಭೆಯಲ್ಲಿ ಚರ್ಚಿಸುವ ವಿಷಯಗಳು ಮತ್ತು ಅಧ್ಯಕ್ಷರ ಚುನಾವಣೆಯು.

ಕಳೆದ ಎಂಟು ವರ್ಷಕಾಲ ಮುಗ್ಗರಿಸಿ ಬಿದ್ದಿದ್ದ ಮಹಾಸಭೆಯನ್ನು ಹುಬ್ಬಳ್ಳಿಯವರು ಮಾಡಲು ಅವರಿಗೆ ಹುರಿದುಂಬಿರುವುದು ಯಾರಿಗೆ ತಾನೆ ಆನಂದವಾಗದು? ಕರ್ನಾಟಕದಲ್ಲಿ ಮುಖ್ಯಜನಾಂಗವಾದ ವೀರಶೈವಸಮಾಜವು ತಡವಾಗಿಯಾದರೂ ಎಚ್ಚರಗೊಂಡುದು ಶುಭಚಿಹ್ನವೇ ಸರಿ. ಈ ಸಾರಿಯಾದರೂ ಹುಬ್ಬಳ್ಳಿಯಲ್ಲಿ ನಡೆಯುವ ಮಹಾಸಭೆಯಲ್ಲಿ ಮಹಾಸಭೆಯ ಸಾರೋದ್ಧಾರಕ್ಕೆ ಅಡ್ಡವಾಗಿರುವ ಮಹತ್ವದಸಂಗತಿಗಳನ್ನು ಕಂಡುಹಿಡಿದು ಶಾಂತತೆಯಿಂದ ವಿಚಾರಮಾಡಿ ಯೋಗ್ಯನಿರ್ಣಯ ಮಾಡುವುದರ ಕಡೆಗೆ ಸಮಾಜದವರೆಲ್ಲರೂ ಮನಮುಟ್ಟಿ ಪ್ರಯತ್ನಮಾಡಿದರೆಂದರೆ ಹುಬ್ಬಳ್ಳಿಯವರ ಕೀರ್ತಿಯು ಮತ್ತಷ್ಟು ಬೆಳಗುವುದು. ಮಹಾಸಭೆಯಲ್ಲಿ ಚಿರಸ್ಥಾಯಿಫಂಡಿನ ನೇಮಗಳು ಮತ್ತು ಅದರ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಯು ಆಗತಕ್ಕದ್ದು ಅವಶ್ಯವಾಗಿದೆ. ಯಾಕೆಂದರೆ ಮಹಾಸಭೆಯ ತಳಹದಿಯಂತಿರುವ ಈ ವಿಚಾರವು ಸರ್ವರ ಅನುಮತಿಯಂತೆ ಸಾಗದೆ ಹೋದಲ್ಲಿ, ಮುಂದಿನ ಕೆಲಸವು ಸರಿಯಾಗಿ ನಡೆಯದು. ಫಂಡಿನ ಈಗಣ ಕಾರ್ಯಕಾರಿಮಂಡಳಿಯವರ ಈವರೆಗಿನ ನಡವಳಿಕೆಯಿಂದ ಸಮಾಜಕ್ಕೆ ಏನೂ ಹಿತವಾಗಿಲ್ಲವೆಂದು ಜನರಾಡಿಕೊಳ್ಳುತ್ತಿರುವುದರಿಂದ ಇವರ ಬದಲಾವಣೆಯಾಗಲೀ ಇವರ ಚುನಾವಣೆಯಾಗಲೀ ಮಹಾಸಭೆಯ ಮುಂದೆ ಆಗುವುದು ಎಲ್ಲರಿಗೂ ಹಿತಕರವಾದುದಾಗಿದೆ, ಮತ್ತು ಫಂಡಿನ ನೇಮಗಳ ಸುಧಾರಣೆಯಾಗುವುದೂ ಅವಶ್ಯವಾಗಿದೆ. ಮಹಾಸಭಾ ಚಿರಸ್ಥಾಯಿಫಂಡಿನ ಮುಖ್ಯ ಕಚೇರಿಯಾದರೂ ಬೆಂಗಳೂರಲ್ಲಿರುವುದಕ್ಕಿಂತ ಅದರ ಉಗಮಸ್ಥಾನದಲ್ಲಿಡುವುದು ಅನುಕೂಲವಾದುದಾಗಿದೆ. ಫಂಡಿಗೆ ಧನಸಹಾಯಮಾಡಿದವರಲ್ಲಿ ದಾವಣಗೆರೆ ಪ್ರಾಂತದವರೇ ಹೆಚ್ಚು ಜನಗಳು ಇರುವುದರಿಂದ ಆಗಾಗ್ಗೆ ನಡೆಯುವ ಮೀಟಿಂಗುಗಳಿಗೆ ವೆಚ್ಚವಿಲ್ಲದೆ ಹೋಗಿಬರಲು ಬಹಳ ಅನುಕೂಲವಾಗುವುದಲ್ಲದೆ ದೂರಪ್ರಯಾಣದ ದೇಹಶ್ರಮವೂ ಉಳಿಯುತ್ತದೆ. ದಾವಣಗೆರೆ ಪಟ್ಟಣವಾದರೂ ಮುಂಬೈ ಮದ್ರಾಸ್ ಮತ್ತು ನೈಜಾಂ ಪ್ರಾಂತಗಳ ನಡುವೆ ಇದ್ದು ದೊಡ್ಡ ವ್ಯಾಪಾರಸ್ಥಳವೂ ಹೆಚ್ಚು ವೀರಶೈವ ಜನವಸತಿಯುಳ್ಳದೂ ಆಗಿದೆ. ಕಾರಣ ಮಹಾಸಭೆಯವರು ಇತ್ತ ಗಮನಕೊಡಬೇಕಾಗಿ ಕೋರಿಕೆ. ಇನ್ನು ಎರಡನೆಯ ವಿಷಯವೆಂದರೆ ಖಾದಿಬಟ್ಟೆಗೆ ಪ್ರೋತ್ಸಾಹಕೊಡುವುದು. ಖಾದಿಯ ವಿಚಾರವು ಮಹಾತ್ಮ ಗಾಂಧಿಯವರಿಂದ ಮುಂದೆ ಬಂದಿರುವುದಾದರೂ ವೀರಶೈವರಿಗೆ ಇದು ಹೊಸ ವಿಷಯವಲ್ಲ. ವೀರಶೈವರ 21 ನೆಯ "ಶೀಲವು" ಖಾದಿಯನ್ನು ತಯಾರಿಸುವುದೂ, ಅದನ್ನು ಧರಿಸುವುದೂ ಆಗಿದೆ. ಅಂದಮೇಲೆ ವೀರಶೈವರಿಗೂ ಖಾದಿಗೂ ಸಂಬಂಧವುಂಟಾಗಿ ನೂರಾರು ವರ್ಷಗಳಾಗಿವೆ. ವೀರಶೈವರು ತಮ್ಮ ಧರ್ಮಕ್ಕೂ ಪೂರ್ವಜರ ಆಚರಣೆಗೂ ವ್ಯತ್ಯಾಸಬಾರದಂತೆ ನಡೆಯಲುಪಕ್ರಮಮಾಡಿದರೆಂದರೆ ದೇಶದ ಪ್ರಗತಿಯಾಯಿತೆಂದು ಹೇಳಬಹುದು ಅಲ್ಲದೆ ವೀರಶೈವರೆಲ್ಲರೂ ಖಾದಿಯ ಕಡೆ ಗಮನಕೊಟ್ಟರೆಂದರೆ ಕೈಲಾಸದಬಾಗಿಲು ತೆರೆದಂತೆಯೇಸರಿ. ಕಾರಣ ವೀರಶೈವಮಹಾಸಭೆಯವರು ಇತ್ತ ಗಮನಕೊಡಬೇಕಾಗಿ ನನ್ನ ಕೋರಿಕೆ. ಇನ್ನು ಮೂರನೇ ವಿಷಯವೆಂದರೆ, ವೀರಶೈವ ಶ್ರೀಮಂತರು ಮುಂದರಿಯಬೇಕಾದ ಬ್ಯಾಂಕಿನ ವಿಚಾರವು. ಕರ್ನಾಟಕದಲ್ಲಿ ಜನಜೀವನಾಧಾರ ಜನಾಂಗವೆನಿಸಿ, ಸಂಪದಭ್ಯುದಯಸಾಧನಗಳಿಂದ ಕೂಡಿದ ವೀರಶೈವಸಮಾಜವು ವ್ಯಾಪಾರದಲ್ಲಿಯೂ ನುರಿತದ್ದಾಗಿದೆ. ರೈತರಿಗೆ ನಾಲ್ಕಾರುತಿಂಗಳು ಸಾಗುವಳಿಯ ಕೆಲಸ ಇದ್ದಂತೆ ಈ ವ್ಯಾಪಾರಸ್ಥರಿಗೆ ಬಹುಶಃ 12 ತಿಂಗಳು ಕೆಲಸವಿರುತ್ತದೆ. ಇವರು ತಮ್ಮ ಲೇವಾದೇವಿಯನ್ನು ಬ್ಯಾಂಕು ಮತ್ತು ಮಾರ್ವಾಡಿ ಗುಜರಜನಗಳಲ್ಲಿ ವಿಶೇಷ ನಡೆಸುತ್ತಲಿದ್ದಾರೆ. ಇದರಿಂದ ಇವರ ಆದಾಯವು ಕಡಮೆಯಾಗಿ ಇವರಿಗೆ ಉತ್ತೇಜನವಿಲ್ಲದೆ ಹೋಗಿದೆ. ವೀರಶೈವರಲ್ಲಿ ಬಂಡವಾಳಸ್ಥರು ಹೆಚ್ಚಿದ್ದಾಗ್ಗೂ ಇವರ ಹಣವು ಬ್ಯಾಂಕು ಮತ್ತು ಮಾರ್ವಾಡಿಗಳಲ್ಲಿ ಕಡಮೆದರದ ಬಡ್ಡಿಯಿಂದ ಉಳಿದಿರುತ್ತದೆ. ಇನ್ನೂ ಕೆಲವರ ಹಣವು ಭೂಗತವಾಗಿರುತ್ತದೆ. ಕಾರಣ ಇಂಥ ಧನಿಕರ ಸಹಾಯದಿಂದ ವೀರಶೈವರದೇ ಒಂದು ಬ್ಯಾಂಕು ಏರ್ಪಾಡಾದಲ್ಲಿ ವ್ಯಾಪಾರಸ್ಥರಿಗೆ ತುಂಬಾ ಅನುಕೂಲವುಂಟಾಗಿ ಆದಾಯಕ್ಕೆ ಅವಕಾಶವಾಗುತ್ತೆ. ನಮ್ಮ ಪ್ರಾಂತ್ಯದಲ್ಲಿನ ವ್ಯಾಪಾರವು ವೀರಶೈವರ ಕೈಯಲ್ಲಿರುವಂತೆ ವ್ಯಾಪಾರಕ್ಕೆ ಮುಖ್ಯ ಬೇಕಾದ ಹಣವು ಬ್ಯಾಂಕ್ ಮತ್ತು ಮಾರ್ವಾಡಿಜನರವಶದಲ್ಲಿದೆ ಎಂದು ಧಾರಾಳವಾಗಿ ಹೇಳಬಹುದು. ಈ ವಿಧವಾದ ಪರಾವಲಂಬನೆಯಿಂದ ವೀರಶೈವರ ಅಭಿವೃದ್ಧಿಯು ಕುಂಠಿತವಾಗುತ್ತಲಿದೆ. ನಮ್ಮ ವ್ಯಾಪಾರಸ್ಥರಂತೂ ಹುಂಡಿ, ವಟ್ಟ, ವ್ಯಾಜು ಮೊದಲಾದುವುಗಳಿಗಾಗಿ ವರ್ಷದಲ್ಲಿ ಆದಾಯದ ಅರ್ಧದಷ್ಟು ಇಲ್ಲವೇ ಭಂಡವಾಳದ ಕಾಲುಭಾಗದಷ್ಟು ಹಣವನ್ನು ಕೊಡುತ್ತಾರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ವೀರಶೈವರ ವ್ಯಾಪಾರ ದೊಡ್ಡದೂ ಇವರ ಅವಿಶ್ರಾಂತಶ್ರಮವು ಹೆಚ್ಚಿನದೂ ಇರುವಂತೆ ಇವರ ಆದಾಯವು ಇಲ್ಲದಿರಲು ಲೇವಾದೇವಿಗೆ ಮುಖ್ಯ ಬೇಕಾದ ಹಣದ ಅನುಕೂಲತೆಯು ಸಮಯಕ್ಕೆ ದೊರೆಯಲವಕಾಶವಿಲ್ಲದಿರುವುದೇ ಕಾರಣವಾಗಿದೆ. ಇರುವ ಅನುಕೂಲಗಳೆಂದರೆ ಸಾಲವು. ಕಾರಣ ವೀರಶೈವರಿಗಾಗಿ ವೀರಶೈವರದೊಂದು ಬ್ಯಾಂಕು ಹುಬ್ಬಳ್ಳಿಯಲ್ಲಿ ಆಗುವುದು ಅತ್ಯವಶ್ಯವಿದೆ. ಈ ಬ್ಯಾಂಕಿನ ಷೇರುಗಳನ್ನು ಸರ್ವರೂ ತೆಗೆದುಕೊಳ್ಳುವಂತೆ 50 ರೂಪಾಯಿಗೆ ಒಂದು ಷೇರಿನಂತೆ ಇಪ್ಪತ್ತುಸಾವಿರ ಷೇರುಗಳನ್ನು ಏರ್ಪಡಿಸಿ ಹತ್ತುಲಕ್ಷ ಭಂಡವಾಳದಿಂದ ಒಂದು ಬ್ಯಾಂಕನ್ನು ಸ್ಥಾಪಿಸಲು ಮಹಾಸಭೆಯವರು ಪ್ರಯತ್ನಮಾಡಬೇಕಾಗಿ ಕೋರಿಕೆ. ಮುಖ್ಯವಾಗಿ ಈ ಬ್ಯಾಂಕಿನ ಆವಶ್ಯಕತೆಯು ಹುಬ್ಬಳ್ಳಿ, ಗದಗ, ಬಾಗಲಕೋಟೆ, ವಿಜಾಪುರ, ಬೆಳಗಾಂ, ಸೊಲ್ಲಾಪುರ, ದಾವಣಗೆರೆ ಮೊದಲಾದ ಕಡೆಯವರಿಗಿರುವುದರಿಂದ ಅವರುಗಳು ಗಮನಕೊಟ್ಟರೆ ಈ ಕಾರ್ಯವಾಗುವುದರಲ್ಲಿ ಸಂದೇಹವಿಲ್ಲ. ಇನ್ನು ಈಸಾರೆ ಹುಬ್ಬಳ್ಳಿಯಲ್ಲಿ ನೆರೆಯುವ ಮಹಾಸಭೆಗೆ ಅಧ್ಯಕ್ಷರನ್ನಾರಿಸುವುದು. ಹುಬ್ಬಳ್ಳಿ ಮಹಾಸಭೆಗೆ ಅಧ್ಯಕ್ಷರಾಗಲು ತಕ್ಕವರೆಂದರೆ—1. ಸರ್ ದೇಸಾಯಿ ಆಲಮೇಲ. 2. ರಾ|| ಸಾ|| ಪಿ. ಜಿ. ಹಳಕಟ್ಟಿಯವರು. 3. ಶ್ರೀಮಂತ ಬಾಪುರಾವ್ ವಕೀಲರು. ಈ ಮೂರುಜನ ಮಹಾಶಯರಲ್ಲಿ ಯಾರನ್ನಾದರೂ ಚುನಾಯಿಸಿಕೊಂಡಲ್ಲಿ ಮಹಾಸಭೆಯ ಕಾರ್ಯವು ಸುಲಲಿತವಾಗಿ ಜರುಗುವುದರಲ್ಲಿ ಸಂದೇಹವಿಲ್ಲ. ಕಾರಣ ಸಮಾಜದವರು ಇತ್ತ ಗಮನಕೊಡಬೇಕಾಗಿ ಕೋರಿಕೆ.

ಪ್ರಭಾಮಣಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 13 ನೆಯ ಪ್ರಕರಣ.

ಟ್ರಾನ್ಸವಾಲಿನ ಶಾಸನವು.

ಟ್ರಾನ್ಸವಾಲಿನಲ್ಲೂ, ಆರೆಂಜ್ ಫ್ರೀಸ್ಟೇಟಿನಲ್ಲೂ ವಾಸಿಸುವ ಭಾರತೀಯರ ಸ್ಥಿತಿಗತಿಗಳೆಲ್ಲವನ್ನೂ ಈ ಸ್ವಕೀಯಚರಿತ್ರೆಯಲ್ಲಿ ವಿವರಿಸಲು ಅವಕಾಶವಿಲ್ಲವು. ಅವನ್ನು ತಿಳಿಯಲಪೇಕ್ಷಿಸುವವರು "ದಕ್ಷಿಣಾಫ್ರಿಕೆಯ ಸಾತ್ವೀಕನಿರೋಧಚರಿತ್ರೆ" ಎಂಬ ಗ್ರಂಥವನ್ನು ಓದಬೇಕು. ಇಲ್ಲಿ ನೋಡಿದುದು ಮಾತ್ರ ವಿವರಿಸಲ್ಪಡುವುದು. 1888 ರಲ್ಲೋ ಅದಕ್ಕೆ ಪೂರ್ವವೋ ಆರೆಂಜ್ ಫ್ರೀಸ್ಟೇಟಿನವರು ಮಾಡಿದ ಶಾಸನದಿಂದ ಭಾರತೀಯರ ಹಕ್ಕೆಲ್ಲವೂ ತೊಲಗಿಸಲ್ಪಟ್ಟಿರುವುದು. ಅವರು ಅಲ್ಲಿನ ಹೋಟಲುಗಳಲ್ಲಿ ವೇಟರುಗಳಾಗಿಯೋ ಕೂಲಿಯವರಾಗಿಯೋ ಇರಬೇಕಾಗಿರುವುದು. ಅಲ್ಲಿ ವರ್ತಕತನಮಾಡುವ ಭಾರತೀಯರಿಗೆ ಕೊಂಚ ನಾಮಮಾತ್ರಕ್ಕೆ ಪರಿಹಾರದ್ರವ್ಯವನ್ನು ಕೊಟ್ಟು ಅವರನ್ನು ಹೊರಗೆ ಹಾಕಿದರು. ಆ ವರ್ತಕರು ಬಹಳವಾಗಿ ವಿಜ್ಞಾಪಿಸಿಕೊಂಡರಾದರೂ ಅಲ್ಲಿ ಅವರ ಮೊರೆಯನ್ನು ಯಾರೂ ಕೇಳಲಿಲ್ಲವು. 1885 ರಲ್ಲಿ ಟ್ರಾನ್ಸವಾಲಿನೊಳಗೆ ಕಠಿಣವಾದ ಒಂದು ಶಾಸನವು ಮಾಡಲ್ಪಟ್ಟಿತು. 1886 ರಲ್ಲಿ ಅದರೊಳಗೆ ಸ್ವಲ್ಪ ಬದಲಾವಣೆಯಾಯಿತು. ಪ್ರತಿಯೊಬ್ಬ ಭಾರತೀಯನೂ 39 ರೂ. ನ ಪ್ರವೇಶಧನವನ್ನು ಕೊಡಬೇಕು. ಭಾರತೀಯರಿಗೆ ನಿವೇಶಸ್ಥಲವಲ್ಲದೆ ಬೇರೆ ಯಾವ ಭೂಮಿಯೂ ಇರಕೂಡದು. ಓಟನ್ನು ಕೊಡುವ ಸ್ವಾತಂತ್ರ್ಯವು ಭಾರತೀಯನಿಗಿಲ್ಲವು. ಈ ನಿಬಂಧನೆಗಳು ಭಾರತೀಯರಿಗೆ ಮಾತ್ರವಲ್ಲದೆ ಏಸ್ಯಾಖಂಡ ವಾಸಿಗಳಿಗೆಲ್ಲ ಅನ್ವಯಿಸುವುವಲ್ಲದೆ ಇತರ ಖಂಡದವರಾರಿಗೂ ಅನ್ವಯಿಸುವುದಿಲ್ಲ. ಈ ಪ್ರತ್ಯೇಕ ನಿಬಂಧನಗಳೇ ಅಲ್ಲದೆ ಬಿಳೀಜನರಿಗೆ ವರ್ತಿಸುವ ನಿಬಂಧನಗಳೆಲ್ಲವೂ ಏಸ್ಯಾಖಂಡದ ವಾಸಿಗಳಿಗೆ ವರ್ತಿಸುವುವು. ಆ ನಿಬಂಧನಗಳ ಪ್ರಕಾರ ಮಾರ್ಗದ ಪಕ್ಕದಲ್ಲಿರುವ ಕಾಲುದಾರಿಯಲ್ಲಿ ನಡೆದು ಹೋಗಲೂ ಭಾರತೀಯರಿಗೆ ಹಕ್ಕಿಲ್ಲವು. ರಾತ್ರಿ 9 ಗಂಟೆಯಮೇಲೆ ಅಪ್ಪಣೆಚೀಟಿಯಿಲ್ಲದೆ ಬೀದಿಗೆ ಹೋಗಕೂಡದೆಂಬ ನಿಬಂಧನೆಯು ಬಹಳಮಟ್ಟಿಗೆ ಭಾರತೀಯರಿಗೆ ಮಾತ್ರ ವರ್ತಿಸುವುದು. ಅರಬ್ಬಿಯವರೆಂದು ಭಾವಿಸಲ್ಪಡುವವರಿಗೆ ಈ ನಿಬಂಧನೆಯು ವರ್ತಿಸುವುದಿಲ್ಲವೆಂದು ಅವರಮೇಲೆ ಅನುಗ್ರಹಿಸಿ ನಿರ್ಣಯಿಸಲ್ಪಟ್ಟಿತು. ಕೆಲವರನ್ನು ವಿನಾಯಿಸಲು ಪೋಲೀಸರಿಗೆ ಅಧಿಕಾರವಿರುತ್ತದೆ. ನಾನು ಸಾಮಾನ್ಯವಾಗಿ ರಾತ್ರಿವೇಳೆಯಲ್ಲಿ ಕೋಟ್ಸ್‌ರವರೊಡನೆ ಬೇಂಟೆಗೆ ಹೋಗುತ್ತಿದ್ದೆವು. ನಾನು ಮನೆಗೆ ಹಿಂದಿರುಗಿ ಬರುವಾಗ್ಗೆ ರಾತ್ರಿ 10 ಗಂಟೆ ಕೂಡ ಆಗುತ್ತಿದ್ದಿತು. ಪೋಲೀಸಿನವರು ನನ್ನನ್ನು ಎಲ್ಲಿ ಸೆರೆಹಿಡಿಯುವರೋ ಎಂದು ಸಹ ಕೋಟ್ಸ್‌ರವರು ಭಯಪಡುತ್ತಿದ್ದರು. ತಮ್ಮ ಕೆಲಸಗಾರರಿಗೆ ಅವರು ಅನುಮತಿ ಚೀಟಿಯನ್ನು ಕೊಡಬಲ್ಲರಲ್ಲದೆ ನನಗೆ ಹೇಗೆ ಕೊಡಲಾಗುತ್ತಿದ್ದಿತು? ಅವರಿಗೆ ಅಂತಹ ಅಭಿಪ್ರಾಯವಿದ್ದಲ್ಲಿ ಅದು ವಿಶ್ವಾಸದ್ರೋಹವಾಗುತ್ತಿತ್ತಲ್ಲವೆ? ಅದುಕಾರಣ ಕೋಟ್ಸರವರು ಮತ್ತೊಬ್ಬ ಮಿತ್ರನು (ಆ ಸ್ನೇಹಿತನ ಹೆಸರು ನನಗೀಗ ಮರೆತು ಹೋಗಿರುವುದು) ನನ್ನನ್ನು ಗೌರ್ನಮೆಂಟ್ ಪ್ಲೀಡರಾದ ಡಾಕ್ಟರ್ ಕ್ರಾಜ್‌ರವರಲ್ಲಿಗೆ ಕರೆದುಕೊಂಡು ಹೋದರು. ನಾನೂ ಡಾಕ್ಟರ್ ಕ್ರಾಜ್‌ರವರೂ ಒಂದೇ ಇನ್ನಿಗೆ ಸೇರಿದ ಬ್ಯಾರಿಸ್ಟರುಗಳೆಂದು ನಮ್ಮ ಸಂಭಾಷಣೆಯಲ್ಲಿ ವ್ಯಕ್ತವಾಯಿತು. ನಾನು ಅನುಮತಿ ಚೀಟಿಯನ್ನು ಪಡೆಯಬೇಕೆಂಬ ವಿಚಾರದಲ್ಲಿ ಆತನು ಕೂಡ ಬಹಳವಾಗಿ ಚಿಂತಿಸಿದನು. ಅನುಮತಿಚೀಟಿಯನ್ನು ಕೊಡದಿದ್ದಲ್ಲಿ ಮರ್ಯಾದೆಯಾಗಿರುವುದಿಲ್ಲವೆಂದು ಒಂದು ಕಾಗದವನ್ನು ಬರೆದು ಕೊಟ್ಟನು. ರಾತ್ರಿ ಬೀದಿಗೆ ಹೋದಲ್ಲಿ ನನ್ನನ್ನು ಪೋಲೀಸಿನವರು ಯಾವಾಗಲೂ ಸೆರೆಹಿಡಿಯಕೂಡದೆಂದು ಅದರಲ್ಲಿ ಬರೆಯಲ್ಪಟ್ಟಿದ್ದಿತು. ನಾನು ಅದನ್ನು ಯಾವಾಗಲೂ ಜೇಬಿನಲ್ಲೇ ಇಟ್ಟುಕೊಂಡಿದ್ದೆನಾದರೂ ಅದರ ಆವಶ್ಯಕತೆಯು ನನಗೆ ಯಾವಾಗಲೂ ಬೀಳಲಿಲ್ಲವು. ಡಾಕ್ಟರ್ ಕ್ರಾಜ್‌ರವರು ನನ್ನನ್ನು ಆಹ್ವಾನಿಸಿದ್ದುದರಮೇಲೆ ನಾನು ಅವರ ಮನೆಗೆ ಆಗಾಗ್ಗೆ ಹೋಗುತ್ತಿದ್ದೆನು. ಅವರಿಗೂ ನನಗೂ ಸ್ನೇಹವುಂಟಾಯಿತು. ಅದರ ಮೂಲಕ ಸುಪ್ರಸಿದ್ಧರಾದ ಅವರ ಸೋದರರೊಂದಿಗೆ ಸಹ ಪರಿಚಯುಂಟಾಯಿತು. ಕ್ರಾಜ್‌ರವರು ಜೋಹಾನ್ಸ್‌ಬರ್ಗಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನಿಯಮಿಸಲ್ಪಟ್ಟರು. ಬೋಯರ ಯುದ್ಧದಲ್ಲಿ ಒಬ್ಬ ಉದ್ಯೋಗಿಯ ಹತ್ಯಮಾಡಿದುದರಿಂದ, ಆತನು ಅವರಮೇಲೆ ಕೇಸುಮಾಡಿದನು. ಅದರಿಂದ ಪ್ಲೀಡರಿಗೆ 7 ವರ್ಷ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿತು. ನ್ಯಾಯಾಧಿಪತಿಗಳು ಆತನ ಬ್ಯಾರಿಸ್ಟರ್ ಸನ್ನದನ್ನು ರದ್ದುಮಾಡಿದರು. ಯುದ್ಧಾನಂತರದಲ್ಲಿ ಡಾಕ್ಟರ್ ಕ್ರಾಜ್‌ರವರು ಬಿಡಲ್ಪಟ್ಟರು. ಅವರು ಪುನಃ ಟ್ರಾನ್ಸವಾಲ್‌ಕೋರ್ಟಿನಲ್ಲೇ ನ್ಯಾಯವಾದಿಯಾಗಿ ಕೆಲಸಮಾಡಲಾರಂಭಿಸಿದರು. ಅವರ ಕೂಡ ನನಗುಂಟಾದ ಮೈತ್ರಿಯು ತರುವಾಯ ನನಗೆ ಬಹಳ ಉಪಕರಿಸಿತು. ನಾನು ಪ್ರೆಸಿಡೆಂಟ್ ಕ್ರೂಗರವರ ಬೀದಿಗೆ ಸಮೀಪವಾಗಿದ್ದ ಬಯಲುಪ್ರದೇಶದಲ್ಲಿ ಬೇಂಟೆಗೆ ಹೋಗುತ್ತಿದ್ದೆನು. ಆ ಬೀದಿಯಲ್ಲೇ ಪ್ರೆಸಿಡೆಂಟ್ ಕ್ರೂಗರವರ ಮನೆಯಿರುವುದು. ಅದಕ್ಕೆ ಆವರಣವಿಲ್ಲವು. ಇತರ ಮನೆಗಳಂತೆಯೇ ಅವರ ಮನೆಯೂ ಇರುವುದಲ್ಲದೆ ವಿಶೇಷವಾಗಿಲ್ಲವು. ಪ್ರಿಟೋರಿಯಾದಲ್ಲಿ ಐಶ್ವರ್ಯವಂತರ ಮನೆಗಳಿಗೆ ಆವರಣಗಳಿರುತ್ತವೆ. ಆ ಮನೆಗಳಿಗೆ ಬಹಳ ಕೆಲಸ ಮಾಡಲ್ಪಟ್ಟಿರುವುದು. ಕ್ರೂಗರವರಿಗೆ ಆಡಂಬರ ಬೇಕಾಗಿರಲಿಲ್ಲವೆಂದು ಎಲ್ಲರೂ ಹೇಳುತ್ತಿದ್ದರು. ಅವರು ಅಧ್ಯಕ್ಷರಾಗಿದ್ದುದರ ನಿದರ್ಶನವಾಗಿ ಒಬ್ಬ ರಕ್ಷಕಭಟನು ಮನೆಯ ಸುತ್ತಲೂ ಗಸ್ತುತಿರುಗುತ್ತಿದ್ದನು. ನಾನು ಅವನಿದಿರಿಗೆ ಹೋಗುತ್ತಿದ್ದೆನಾದರೂ ಅವನು ಯಾವಾಗಲೂ ನನ್ನನ್ನು ಏನೆಂದೂ ಅನ್ನಲಿಲ್ಲವು. ಅಲ್ಲಿ ಪೋಲೀಸು ಆಳುಗಳು ಬದಲಾಯಿಸುತ್ತಿದ್ದರು. ಒಂದು ದಿವಸ ಒಬ್ಬ ಹೊಸಬನಿರುವಾಗ್ಗೆ ನಾನು ಅಲ್ಲಿ ಕಾಲುದಾರಿಯಲ್ಲಿ ಹೋಗುತ್ತಿದ್ದೆನು. ಅವನು ನನ್ನ ಕೂಡ ಏನನ್ನೂ ಹೇಳದೆ ನನ್ನನ್ನು ಹಿಡಿದು ತನ್ನ ಹಿಂದಕ್ಕೆ ನೂಕಿದನು. ನಾನು ಆಗ ದಿಗ್ಭ್ರಾಂತನಾಗಿ ನೀನೇಕೆ ಹೀಗೆಮಾಡಿದೆ? ಎಂದು ಅವನನ್ನು ಕೇಳಿದೆನು. ಅಷ್ಟರಲ್ಲಿ ಕೋಟ್ಸ್‌ರವರು ಕುದುರೆಸ್ವಾರರಾಗಿ ಆ ದಾರಿಯಲ್ಲಿ ಹೋಗುತ್ತಿರುವಾಗ್ಗೆ ಈ ಅವಮಾನವನ್ನು ಕಂಡು ನನ್ನನ್ನು ಕರೆಸಿಕೊಂಡರು. "ಗಾಂಧಿ ನಿನಗಾದ ಅವಮಾನವನ್ನು ನೋಡಿದೆನು. ನನಗೆ ಬಹಳ ವ್ಯಾಕುಲವಾಗಿದೆ. ನೀನು ಮೊಕದ್ದಮೆ ಮಾಡುವುದಾದಲ್ಲಿ ನಾನು ಸಾಕ್ಷಿ ಹೇಳುತ್ತೇನೆ" ಎಂದು ಕೋಟ್ಸರವರು ಹೇಳಿದರು. ತಾವು ಚಿಂತಿಸಬೇಕಾದುದಿಲ್ಲ. ಪೋಲೀಸಿನವನ ದೋಷವೇನೂ ಇಲ್ಲವು. ಆತನಿಗೆ ಬಿಳೀತೊಗಲಿನವರೆಲ್ಲರೂ ಒಂದೇ. ಅವರು ಕೂಲಿಯವರ (ಏಸ್ಯಾಖಂಡದವರ) ನ್ನೆಲ್ಲಾ ಹೀಗೆಯೇ ಎತ್ತಿಹಾಕುತ್ತಿದ್ದರು. ನನ್ನನ್ನು ಕೂಡ ಅವರಂತೆಯೇ ರೇಗಿಸಿದರಾದರೂ ನಾನು ಕೇಸನ್ನು ಮಾಡುತ್ತೇನೆಂದು ತಿಳಿದುಕೊಳ್ಳಲಿಲ್ಲ. ಎಂದು ನಾನು ಹೇಳಿದೆನು. "ನಿಮ್ಮ ಸಹಜಸ್ವಭಾವದಿಂದ ಹೀಗೆ ಹೇಳುತ್ತೀರಿ. ಚೆನ್ನಾಗಿ ಆಲೋಚಿಸಿ. ಇಂತಹವನಿಗೆ ಬುದ್ಧಿಕಲಿಸದೆ ಬಿಡಕೂಡದು" ಎಂದು ಕೋಟ್ಸರವರು ನನ್ನ ಕೂಡ ಹೇಳಿ ಆ ಪೋಲೀಸಿನವನನ್ನು ಮೂದಲಿಸಿದರು. ಆ ಪೋಲೀಸಿನವನು ಡಚ್ಚಿನವನಾದುದರಿಂದ ಡಚ್‌ಭಾಷೆಯಲ್ಲೇ ಅವನಿಗೂ ಕೋಟ್ಸರವರಿಗೂ ಸಂಭಾಷಣೆ ಜರುಗಿತು. ನನಗೆ ಅದು ಅರ್ಥವಾಗಲಿಲ್ಲವು. ಆದರೆ ಕಡೆಯಲ್ಲಿ ಪೋಲೀಸಿನವನು ನನ್ನ ಕ್ಷಮಾಪಣೆಯನ್ನು ಕೋರಿದನು. ನಾನು ಅದಕ್ಕೆ ಮೊದಲೇ ಅವನನ್ನು ಕ್ಷಮಿಸಿದ್ದೆನು ಅಂದಿನಿಂದ ನಾನು ಆ ಬೀದಿಯಲ್ಲಿ ತಿರುಗುವುದನ್ನೇ ಬಿಟ್ಟೆನು. ವೃಥಾ ಇಂತಹ ಅವಮಾನಕ್ಕೆ ಗುರಿಯಾಗಬೇಕೆಂದು ಇತರ ಬೀದಿಗಳಲ್ಲಿ ತಿರುಗಾಡುತ್ತಿದ್ದೆನು.

ಭಾರತೀಯರ ದುರವಸ್ಥೆ.

ಆಗಲಿಂದಲೂ ಭಾರತೀಯರ ದುರವಸ್ಥೆಯನ್ನು ಕುರಿತು ನಾನು ಬಹಳ ತೀಕ್ಷ್ಣವಾಗಿ ಆಲೋಚಿಸತೊಡಗಿದೆನು. ಅದನ್ನು ಕುರಿತು ಭಾರತೀಯರಕೂಡ ಆಲೋಚಿಸಿದೆನು. ಅವಕಾಶವು ದೊರೆತಾಗ ಬ್ರಿಟಿಷ್ ಏಜಂಟಿನಕೂಡ ಚರ್ಚಿಸಿ ಒಂದು ಕೇಸನ್ನು ಕೂಡ ವಿಚಾರಣೆಗೆ ಪರೀಕ್ಷಾರ್ಥವಾಗಿ ಕಳುಹಿಸಲು ಯೋಚಿಸಿದೆನು. ಓದುವುದರಿಂದಲೂ, ಕೇಳುವುದರಿಂದಲೂ, ಸ್ವಾನುಭವದಿಂದಲೂ ಭಾರತೀಯರ ದುರವಸ್ಥೆಯನ್ನು ಗ್ರಹಿಸುವವನಾದೆನು. ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳ ಭಾರತೀಯರಿಗೆ ದಕ್ಷಿಣಾಫ್ರಿಕೆಯು ತಕ್ಕ ಸ್ಥಳವಲ್ಲವೆಂದು ನನಗೆ ತೋರಿತು. ಇದು ನನಗೆ ಮುಖ್ಯವಿಷಯವಾಗಿದ್ದಿತಾದರೂ ದಾದಾ ಅಬ್ದುಲ್ಲಾರವರ ಕೇಸು ಇದಕ್ಕಿಂತಲೂ ಮುಖ್ಯವಾಗಿದ್ದಿತು.

೧೯೨೬ನೆಯ ಇಸವಿ ಅಕ್ಟೋಬರ್ ತಾ|| ೧೬ರಿಂದ ೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೨೨ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ನೆಯ ಅಕ್ಷಯನಾಮಸಂವತ್ಸರದ ಆಶ್ವಯುಜ ಶುದ್ಧ ದಶಮಿಯಿಂದ ಆಶ್ವಯುಜ ಬಹುಳ ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತುಲಾ
16	[1]ಶನಿ	ದಶ	41-19	ಶ್ರವ	14-54	30
17	[2]ಭಾನು	ಏಕಾ	35-31	ಧನಿ	11-5	1
18	[3]ಸೋಮ	ದ್ವಾದ	29-31	ಶತ	7-3	2
19	ಮಂಗಳ	ತ್ರಯೋ	23-27	ಪೂಭಾ	2-49	3
20	[4]ಬುಧ	ಚತು	17-37	ರೇವ	54-44	4
21	ಗುರು	ಪೌರ್ಣ	12-12	ಅಶ್ವಿ	51-26	5
22	[5]ಶುಕ್ರ	ಪಾಡ್ಯ	7-0	ಭರ	48-46	6

(1) ವಿಜಯದಶಮಿ, ಶಮಿಪೂಜಾ, (2) ಮಳೆನಕ್ಷತ್ರ-ಚಿತ್ತ ೩ ನೆಯ ಪಾದ. ಸರ್ವೈಕಾದಶಿ. (3) ಸೋಮಪ್ರದೋಷಃ. (4) ಮಳೆನಕ್ಷತ್ರ-ಚಿತ್ತ ೪ ನೆಯಪಾದ. (5) ಶ್ರೀಚಾಮುಂಡೇಶ್ವರೀ ರಥಃ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರ್ಣ್ಯಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಮಜ್ಞ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ಅಕ್ಟೋಬರ್ ತಾರೀಖು ೨೩ ನೆಯ ಶನಿವಾರ. [ಸಂಚಿಕೆ ೪೩

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದುದ್ದು

ಅಲ್ಪವಯಸ್ಕರಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮು ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಸಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವಂತೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಚಾಯಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜ ಹರಣಖೋರಿ, ಮುಂಗಲೇಬೇದಾಣ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಶರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—13] ಪತ್ತೆ:—ಮಾಲಕ ವೈದ್ಯ ಪ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.



SIROMANY NARAYANACHARYA & CO.,
BENARES CITY.

S.U.N.& CO.
BENARES CITY

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—14]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ [illegible] ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ವೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೧೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೫೦—೩] ಪೋ. ಬಾ. ೩೯೦, [illegible]

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ
ಶೀತ, ನೆಗಡಿ,
ಶೀತವಾತ, ಜ್ವರ,
ಚಳಿಜ್ವರ, ಕೆಮ್ಮಲು,
ಮಲಬದ್ಧ, ಅಜೀರ್ಣ,
ಹೊಟ್ಟೆನೋವು,
ಇಂಫ್ಲೂಯೆಂಜಾ
ಪ್ಲೇಗುಜ್ವರ

THARAGHAVE
AYASALA

ಮಕ್ಕಳ
ಮಂದ, ಎಳವು,
ಜ್ವರಗಳು, ವಾಯು,
ಕೆಮ್ಮಲು, ಮಲಬದ್ಧ,
ಹೊಟ್ಟೆನೋವು
ಇನ್ನೂ ಅನೇಕ
ರೋಗಗಳನ್ನು
ಗುಣಪಡಿಸುತ್ತವೆ.
40

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್,
ಚಿಕ್ಕಪೇಟೆ, ಬೆಂಗಳೂರು
ಸಿಟಿ.

ಹೆಡ್ ಆಫೀಸ್,
ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡ್‌ಸಂಘದಿಂದ 1926-27 ರಲ್ಲಿ 8 ತಿಂಗಳುಗಳ ವೇತನ ಮಂಜೂರಾಗಿರುವ ವಿದ್ಯಾರ್ಥಿಗಳ ಹೆಸರಿನ ಪಟ್ಟಿ.

ಲಂಡನ್ ಮಿಷನ್ ಕೊಲಿಜಿಯೇಟ್ ಹೈಸ್ಕೂಲ್, ಬೆಂಗಳೂರು—

29. ಬಿ. ಜಿ. ಸಿದ್ದಪ್ಪ ಎಂಟ್ರೆನ್ಸು 5 ರೂ.

V ಫಾರಂ.

30. ಬಿ. ನಂಜಪ್ಪ 3 ರೂ. 31. ವೈ. ಕರಿಬಸಪ್ಪ 3 ರೂ.

ಗೌರ್ನಮೆಂಟ್ ಕೊಲಿಜಿಯೇಟ್ ಹೈಸ್ಕೂಲ್, ತುಮಕೂರು—

32. ಕೆ. ಎಸ್. ಶಂಕರಪ್ಪ ಎಂಟ್ರೆನ್ಸು 5 ರೂ. 33. ಪಿ. ಸಿದ್ಧಲಿಂಗಯ್ಯ V ಫಾರಂ 3 ರೂ. 34. ಆರ್. ರೇಣುಕಾರಾಧ IV ಫಾರಂ 3 ರೂ. 35. ಎಂ. ಸದಾಶಿವರಾಜು IV ಫಾರಂ 3 ರೂ.

ವೆಸ್ಲಿಯನ್ ಮಿಷನ್ ಕೊಲಿಜಿಯೇಟ್ ಹೈಸ್ಕೂಲ್, ಬೆಂಗಳೂರು—

36. ಆರ್. ಶಿವಪ್ಪ ಎಸ್.ಎಸ್.ಎಲ್.ಸಿ. 3 ರೂ.

V ಫಾರಂ.

37. [illegible] ಆರ್. [illegible] 3 ರೂ. 38. ಕೆ. ಮುದ್ದುರಾಜ್ಯ 3 ರೂ.

IV ಫಾರಂ.

39. ಎ. ಪಿ. [illegible] 3 ರೂ. 40. ಪಿ. [illegible] 3 ರೂ. 41. ವಿ. [illegible] 3 ರೂ. 42. [illegible] 3 ರೂ. 43. ಎ. [illegible] 3 ರೂ. ([illegible])

ಮೈಸೂರು ಸ್ಟಾರ್.

೧೯೩೬ ನೆಯ ಇಸವಿ ಅಕ್ಟೋಬರ್ ತಾ|| ೨೪ ನೆಯ ಶನಿವಾರ.

THE MYSORE REPRESENTATIVE ASSEMBLY.

THE DEWAN'S ADDRESS.

The Dewan of Mysore marked out a distinct line from that of his predecessors in delivering his address as President of the Mysore Representative Assembly—a line distinct in more ways than one. The review of the work of the different departments in the State he left to the second part which was not read and in his address he referred only to a few items of major importance. But in the past though there used to be a second part also sometimes, still a more exhaustive review of the principal events in the State would be embodied in the addresses read by the Dewans. We may briefly refer to the topics touched upon by the Dewan Saheb. He said that an expert committee was appointed to look into the question of water supply to Bangalore—a problem the anxious nature of which has disappeared since owing to favourable rains, leaving little work to the committee. Another expert committee has been constituted to look into the construction of High Level Canal. We cannot equally vouchsafe to the expert character of the committee where some of the leading non-officials belong to the legal profession. The Dewan said that they have directed their attention towards the revival of the Economic Conference. We have had our say on this. We have only to say now that not much good can come out of spending public funds on Economic Superintendents—whose work could well be distributed between the Village Panchayets, the Amildars and the District Board. There is a wise resolution brought by Mr. D.S. Mallappa and others before the Assembly for the abolition of the posts of Economic Superintendents, and we will await its fate before making further comments. Any way, it would have been better if the Assembly was consulted before the appointments which were once abandoned revived. It is pleasing to hear that Government have sanctioned a three-year programme of major irrigation works. One of the important topics dealt with by the Dewan Saheb was that of the recent labour troubles in Bangalore. Referring to the strike in Binny Mills, the Dewan said that Government had issued an order and that the Assistant Superintendent of Police undoubtedly had grave provocation, and strong reasons for firing on the crowd, and that his fault lay in not exercising sufficient care or discrimination in the firing, for which he had been suitably dealt with and more stringent punishment would have been contrary to justice. What is more, the Dewan Saheb said that he could not think that a committee of non-officials would have pronounced a juster or even a different verdict. This opinion, we may say, savours of over-confidence, and it would be too much for any one to predicate so positively on such a question. There are matters on which the ablest and most disinterested of judges so often differ, and this is one where there is room for difference. If the Dewan was so sure of his position, what could have prevented him from just yielding to public sentiment and getting the same verdict from the mouth of the committee? We really looked for other grounds for not appointing a committee than this serene position. The matter was pressed forward for discussion before the Assembly in the form of an adjournment motion, which was talked out. Dealing with some new lines of Economic work, the Dewan Saheb said that an enquiry into taxation has to be made, and the Economic Conference was a suitable body to look into the question. We are not sure whether there was a demand for such an enquiry from the public or whether the need for this is so immitent. The Dewan emphasised the need for exhibitions, in which he said he was a great believer. We are doubtful if this opinion is shared by the public at large. He expressed the desire of having exhibitions in Villages, Taluks and District headquarters, all of which were to be co-ordinated in a grand exhibition for all Mysore. Exhibitions may be good in themselves, but we doubt very much if in a preeminently agricultural country like ours the exhibitions are going to be of such substantial benefit or would be productive of good in any way commensurate with the expenditure they might involve. There is already something done in this direction during Taluk Conferences and District Conferences and they are, we think, serving the purpose in view. We are afraid we are reverting to the days of show and incurring expenditure at the risk of denying more urgent and necessary demands. We are glad to find that the Dewan is positive about the claims of the State for a share of receipts from Imperial customs, salt, posts and telegraphs and coinage. We hope he will succeed in getting a recognition of our claims.

While referring to the work of the members of the Assembly whose three-year term was coming to a close with this session, the Dewan entered upon a sermon which we regret to state was as impolitic as it was unbecoming and was as uncalled for as it was unwarranted. The Dewan said "some people judge of member's work partly by the number of thousands of words he utters and partly by the intensity and persistence of his opposition to the policy and measures of Government," and went on to say that many words were not better than few and so on—which could not by any stretch of imagination be raised from the level of platitudes. We are shocked to hear that any member who is elected by his constituency is so grossly ignorant or wanting in common sense as to allow himself to be judged by such a standard as suggested by the Dewan—a standard which does not obtain in the Assembly and of which we had not heard till now. What is worse, the Dewan said "a policy of mere opposition to a Government well known to care as much for the people's well-being as does any member of the Assembly is disloyalty to the well-being of the State." In the first place, if Government is so solicitous of people's welfare and if opposition is so unwelcome the Assembly itself is superfluous. In the second place, we cannot understand how opposition of Government policy could be construed as disloyalty to the well-being of the State. Is there any modern country where its own Government well known to care for its people is not subject to the severest of attacks by the opposition. We need hardly say that from the time of the constitution of the Assembly successive Dewans have had nothing but the best of opinion regarding the integrity the sobriety, the judgment and the capacity of the members of the Assembly. The Dewan not satisfied with this admonition went on towards the end dilating on patiotism and service. He spoke of the existence of some self-seeking amidst much devoted service in Mysore, as every where else. He said that it was a sin against both State and self to decline honorary offices because of inability to spare time and a greater sin to accept an office with a view to any personal advantage, and that there are needs of the country which could be satisfied only by people who do not even think or dream of gain. He emphasised also about the need for rigorous self-training and the acquisition of knowledge both comprehensive and remorselessly accurate. We are utterly bewildered at these sentiments, and wonder where came the necessity for this serious moralising in an address meant only to review the events of the administration. Our wonder and disappointment are enhanced in view of the fact that this should have been done when there was hardly any need for such admonition to a body of respectable people who come to render their service honorarily and not for any pay, on behalf of their constituencies and when one sees that this is done before the Resident and other distinguished visitors it becomes inexplicable and painful. It would have been better if the Dewan had just waited for some more years to gain experience of the Assembly before passing these remarks. Further, we may be pardoned if we say that high flown sentiments about service without gain and the like are more proper in the mouth of men who themselves have lived a life of sacrifice. We are sincerely sorry that the Dewan unwittingly perhaps, has created by his words a poor impression of the Assembly in the minds of the outside people, and has seriously injured the prestige of the popular House. We are perfectly aware that the intentions of the Dewan are quite genuine and there is none more keen on the welfare of the people, but we only hope that his earnestness and enthusiasm may not be allowed to outrun his judgment and discretion. We hope that the Dewan will in his concluding address attempt to disabuse the minds of the members from the unfavourable impression created by his speech and alleviate their feelings which have been undoubtedly wounded by the reflections cast by the Dewan.

ಪ್ರಜಾಪ್ರತಿನಿಧಿಸಭೆಯಲ್ಲಿ ದಿವಾನರ ಭಾಷಣ.

ಕಳೆದ 18ನೆಯ ತಾರೀಖಿನಾರಭ್ಯ ನಡೆಯುತ್ತಿರುವ ಪ್ರಜಾಪ್ರತಿನಿಧಿಸಭಾಧಿವೇಶನಾರಂಭಕಾಲದಲ್ಲಿ ದಿವಾನರು ಮಾಡಿದ ಭಾಷಣವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿತವಾಗಿರುತ್ತದೆ. ಸಂಸ್ಥಾನದ ಸಮಸ್ತ ಶಾಖೆಗಳ ಕಾರ್ಯಕಲಾಪಗಳು ಭಾಷಣದ ಪೀಠಿಕಾಭಾಗದಲ್ಲೇ ಸಿಂಹಾವಲೋಕನಮಾಡಲ್ಪಡುತ್ತಿದ್ದುದೂ, ಮುಂದೆ ಪ್ರಭುತ್ವದವರು ಮಾಡಬೇಕೆಂದು ಉದ್ದೇಶಿಸಿರುವ ಮಹಾಕಾರ್ಯಗಳು ಸಂಕ್ಷಿಪ್ತವಾಗಿ ತಿಳುಹಲ್ಪಡುತ್ತಿದ್ದುದೂ ಹಿಂದಣ ಪ್ರತಿಯೊಬ್ಬ ದಿವಾನರಿಂದಲೂ ಆಚರಿಸಲ್ಪಡುವ ಪದ್ಧತಿಯಿದ್ದಿತು. ಈ ದಿವಾನರಾದರೋ ಈ ವೇಳೆ ಆ ಪದ್ಧತಿಯನ್ನು ಬಿಟ್ಟು ತಮ್ಮ ಭಾಷಣವನ್ನು ಮೂರುಭಾಗಗಳನ್ನಾಗಿ ವಿಂಗಡಿಸಿ ಮೊದಲನೆಯ ಭಾಗದಲ್ಲಿ ಕೆಲ ಮುಖ್ಯವಿಷಯಗಳನ್ನು ಮಾತ್ರ ಒಂದು ಅಭೂತಪೂರ್ವವಾದ ವಿವೇಕಬೋಧಾರೂಪದಲ್ಲಿ ಮಾಡಿರುವರು. ಬೆಂಗಳೂರಿನಲ್ಲಿ ಬಹಳ ಕಳವಳವನ್ನುಂಟುಮಾಡಿದ್ದ ಕುಡಿಯುವನೀರಿನ ಕ್ಷಾಮನಿವಾರಣಾಬಗೆಗೆ ಒಂದು ಸಮರ್ಥವಾದ ಕಮಿಟಿಯೇರ್ಪಡಿಸಲ್ಪಟ್ಟಿರುತ್ತದೆ. ಆದರೆ ದೈವಾನುಗ್ರಹದಿಂದ ಈಚೆಗೆ ಮಳೆಯು ಸಮೃದ್ಧಿಯಾಗಿ ಬಂದು ಜನರ ಭೀತಿಯನ್ನೂ ಕಳವಳವನ್ನೂ ನಿವಾರಣಗೊಳಿಸಿರುತ್ತದೆಂದು ದಿವಾನರು ಹೇಳಿರುತ್ತಾರೆ. ಇದರಿಂದ ಆ ಕಮಿಟಿಯ ಕಾರ್ಯಭಾರವೂ ಉಪಯುಕ್ತತೆಯೂ ಕಡಮೆಯಾದುವೆಂದೇ ಹೇಳಬೇಕಾಗಿದೆ. ಇದರಂತೆಯೇ ಮೇಲುಮಟ್ಟದ ನಾಲೆಗಳ ನಿರ್ಮಾಣದಬಗೆಗೆ ಸಮರ್ಥರಾದವರಿಂದ ಕೂಡಿದ ಒಂದು ವಿಚಾರಣಾಕಮಿಟಿಯೇರ್ಪಡಿಸಲ್ಪಟ್ಟಿರುವುದಾಗಿ ತಿಳಿಸಿರುತ್ತಾರೆ. ಈ ಕಮಿಟಿಯಲ್ಲಿ ವಕೀಲಿವೃತ್ತಿಯ ಕೆಲರು ಮೆಂಬರುಗಳಾಗಿರುವುದರಿಂದ ಅದು ಎಷ್ಟರಮಟ್ಟಿಗೆ ನೈಪುಣ್ಯವನ್ನು ಪಡೆದಿರುವುದೋ ನಾವುಬೇರೆ ಕಾಣೆವು. ಸಂಪದಭಿವೃದ್ಧಿಸಮಾಜವು ಪುನರುಜ್ಜೀವನಗೊಳಿಸಲ್ಪಟ್ಟಿರುವುದಾಗಿ ದಿವಾನರು ಅಪ್ಪಣೆಕೊಡಿಸಿರುವರು. ಹಿಂದೆ ಈ ಸಮಾಜನಿರ್ಮಾಣದಿಂದ ನಮ್ಮ ಜನರ ಸಂಪತ್ತು ಎಷ್ಟರಮಟ್ಟಿಗೆ ಅಭಿವೃದ್ಧಿಯಾಗಿರುವುದು ಮತ್ತು ಮುಂದಾದರೂ ಎಷ್ಟರಮಟ್ಟಿಗೆ ಆಗುವುದು ಎಂಬ ವಿಚಾರವಾಗಿ ನಾವು ಇದಕ್ಕೆ ಹಿಂದೆಯೇ ಸವಿಸ್ತಾರವಾಗಿ ಪ್ರಸ್ತಾವಿಸಿರುವೆವಾದುದರಿಂದ ಈಗ ಇನ್ನೂ ಹೆಚ್ಚಾಗಿ ಹೇಳಬೇಕಾದುದಿಲ್ಲವಾಗಿದ್ದರೂ, ಗ್ರಾಮಪಂಚಾಯತಿಗಳೂ, ಅಮಲ್ದಾರರುಗಳೂ ಡಿಸ್ಟ್ರಿಕ್ಟು ಬೋರ್ಡುಗಳೂ ಹೆಚ್ಚು ವೆಚ್ಚವೂ ಶ್ರಮವೂ ಇಲ್ಲದೆ ನಿರ್ವಹಿಸಬಹುದಾದ ಸಂಪದಭಿವೃದ್ಧಿಕಾರ್ಯಗಳ ನಿರ್ವಾಹಕ್ಕಾಗಿ ನಿಯಮಿಸಲ್ಪಟ್ಟಿರುವ ಎಕನಾಮಿಕ್ ಸೂಪರಿಂಟೆಂಡೆಂಟರ ಸಂಬಳ, ಭತ್ಯ ಇತ್ಯಾದಿಗಳಿಗೆ ಬಡರೈತರ ಹಣವು ವೆಚ್ಚವಾಗಲು ಮಾರ್ಗವಾಯಿತೆಂದು ಮಾತ್ರ ಹೇಳಬಹುದಾಗಿದೆ. ಈಗ ನಿಯಾಮಕರಾಗಿರುವ ಎಕನಾಮಿಕ್ ಸೂಪರಿಂಟೆಂಡೆಂಟರುಗಳನ್ನು ತೆಗೆದುಬಿಡಬೇಕೆಂದು ಮ|| ಡಿ. ಎಸ್. ಮಲ್ಲಪ್ಪನವರು ಮತ್ತೆ ಕೆಲರು ಪ್ರತಿನಿಧಿಸಭೆಯಲ್ಲಿ ರೆಜಲ್ಯೂಷನ್ನನ್ನು ತಂದಿರುವರು. ಇದರ ಪರಿಣಾಮವನ್ನು ತಿಳಿದು ಮುಂದೆ ಅದರಮೇಲೆ ವ್ಯಾಖ್ಯಾನ ಮಾಡುವವರಾಗಿರುವೆವು. ಏನೇ ಆಗಲಿ ಪ್ರಜಾಪ್ರತಿನಿಧಿಸಭಾಭಿಪ್ರಾಯವನ್ನು ತಿಳಿದು ಎಕನಾಮಿಕ್ ಸೂಪರಿಂಟೆಂಡೆಂಟರ ನಿಯಾಮಕವನ್ನು ಮಾಡಿದ್ದಲ್ಲಿ ಈ ಚರ್ಚೆಗೆ ಆಸ್ಪದವಿರುತ್ತಿರಲಿಲ್ಲ. ದಯಾರ್ದ್ರಹೃದಯರ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿರುವಂತಹ ಆ ಬಿನ್ನಿಮಿಲ್ಲಿನ ಸರಬಲಿಯ ವಿಚಾರದಲ್ಲಿ ಪ್ರಭುತ್ವದವರು ಮಾಡಿರುವ ಅಪ್ಪಣೆಯನ್ನು ಕುರಿತು ಪ್ರಸ್ತಾವಿಸುವಾಗ್ಗೆ, ಬಿನ್ನಿಮಿಲ್ಲಿನ ಗೊಂದಲದಲ್ಲಿ ಅನಾಹುತವಾಗದಂತೆ ನೋಡಿಕೊಳ್ಳಲು ನಿಯಮಿತರಾಗಿದ್ದ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಅನಿರ್ವಾಹಸಂದರ್ಭದಿಂದ ಜನರ ಗುಂಪಿನಮೇಲೆ ಗುಂಡನ್ನು ಹಾರಿಸಿದುದು ನಿರಾಕ್ಷೇಪವಾಗಿದ್ದಿತಾದರೂ ವಿವೇಚನೆಯಿಂದಲೂ ಎಚ್ಚರಿಕೆಯಿಂದಲೂ ಗುಂಡನ್ನು ಹಾರಿಸದಿದ್ದ ತಪ್ಪಿತಕ್ಕಾಗಿ ತಕ್ಕ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ. ಹಾಗಲ್ಲದೆ ಇದಕ್ಕಿಂತಲೂ ಹೆಚ್ಚು ಶಿಕ್ಷೆಯು ವಿಧಿಸಲ್ಪಟ್ಟಿದ್ದಲ್ಲಿ ಅದು ನ್ಯಾಯವಿರುದ್ಧವಾಗುತ್ತಿದ್ದಿತು. ಅದುಕಾರಣ ಅನೌದ್ಯೋಗಿಕ ದೊಡ್ಡ ಮನುಷ್ಯರುಗಳ ಕಮಿಟಿಯನ್ನು ಏರ್ಪಡಿಸಿದ್ದರೂ ಈಗ ಮಾಡಿರುವುದಕ್ಕಿಂತಲೂ ನಿಷ್ಪಕ್ಷಪಾತವಾದ ಇತ್ಯರ್ಥವನ್ನು ಮಾಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲವೆಂದೂ, ತಾವು ಒಂದನೆಯ ಕೌನ್ಸಿಲರೊಡನೆ ಕೃತ್ಯನಡೆದ ಕೂಡಲೇ ಹೋಗಿ ವಿಚಾರಿಸಿಕೊಂಡು ಬಂದೆವೆಂದೂ ದಿವಾನರು ಅಪ್ಪಣೆಕೊಡಿಸಿರುವರು. ಇಂತಹ ಸಂದರ್ಭಗಳಲ್ಲಿ ಅಷ್ಟು ಭರವಸೆಯಿಂದ ಹೇಳುವುದು ಸಮಂಜಸವಾಗಿಲ್ಲ ಮತ್ತು ಅವರ ಈವಿಧವಾದ ಅಭಿಪ್ರಾಯವನ್ನು ನಾವು ಅನುಮೋದಿಸುವುದಿಲ್ಲ. ಅಂತಹ ಭರವಸೆಯು ತಮಗಿದ್ದಲ್ಲಿ ದಿವಾನರು ಜನರಭಿಪ್ರಾಯದಂತೆ ಅನೌದ್ಯೋಗಿಕ ಜನರ ಕಮಿಟಿಯನ್ನು ಏರ್ಪಡಿಸಿ ಅವರ ಬಾಯಿಂದಲೇ ಅಸ್ತು ಎನಿಸಬಹುದಾಗಿದ್ದಿತು. ಅಂತಹ ಕಮಿಟಿಯನ್ನು ನಿಯಮಿಸದಿರಲು ಈ ಮುಚ್ಚುಮರೆಯ ಮಾತುಗಳಲ್ಲದೆ ವಾಸ್ತವ್ಯವಾದ ಕಾರಣವನ್ನು ಹೇಳಿದ್ದರೆ ಚೆನ್ನಾಗಿರುತ್ತಿದ್ದಿತು. ಈ ವಿಚಾರವು ನೆನ್ನೆಯದಿವಸ ಅಸೆಂಬ್ಲಿಯಲ್ಲಿ ಚರ್ಚಿತವಾಗಿ ಯಾವ ಇತ್ಯರ್ಥವೂ ಇಲ್ಲದೆ ಬೆರಳಿನಸಂದಿನಲ್ಲಿ ಬಿಡಲ್ಪಟ್ಟಿತೆಂದು ತಿಳುಹಲು ವಿಷಾದವಾಗುಗುತ್ತದೆ. ಸಂಪದಭಿವೃದ್ಧಿಕಾರ್ಯವನ್ನು ಕುರಿತು ಹೇಳುವಾಗ್ಗೆ ತೆರಿಗೆಯ ವಿಮರ್ಶೆಯಾಗಬೇಕಾಗಿದೆ ಎಂದೂ, ಈ ಕಾರ್ಯನಿರ್ವಾಹಕ್ಕೆ ಸಂಪದಭಿವೃದ್ಧಿಸಮಾಜವು ತಕ್ಕುದಾಗಿದೆ ಎಂದೂ ಹೇಳಿದರು. ಇಂತಹ ವಿಮರ್ಶೆಯನ್ನು ಮಾಡಲು ಜನರ ಅಪೇಕ್ಷೆಯಾಗಲಿ ಅವಸರವಾಗಲಿ ಇರುವಂತೆ ತೋರುವುದಿಲ್ಲ. ಜನರ ಸಂಪದಭಿವೃದ್ಧಿಗೆ ವಸ್ತುಪ್ರದರ್ಶನವು ಬಹಳ ಅಗತ್ಯವೆಂಬುದರಲ್ಲಿ ತಮಗೆ ಭರವಸೆಯಿರುವುದರಿಂದ ಗ್ರಾಮಗಳಲ್ಲೂ ತಾಲ್ಲೂಕು ಮತ್ತು ಡಿಸ್ಟ್ರಿಕ್ಟುಗಳ ಮುಖ್ಯಸ್ಥಳಗಳಲ್ಲೂ ಪ್ರದರ್ಶನಗಳನ್ನು ನಡೆಯಿಸಿ ಅಲ್ಲಿ ಉತ್ಕೃಷ್ಟವಾಗಿ ಕಂಡುಬಂದವುಗಳು ಸಂಸ್ಥಾನಕ್ಕೆಲ್ಲಾ ಪ್ರಧಾನವಾಗಿ ನಡೆಯುವ ಮಹಾಪ್ರದರ್ಶಶಾಲೆಗೆ ಕಳುಹಲ್ಪಡುವಂತೆ ಮಾಡಬೇಕೆಂದು ತಿಳಿಸಿರುವರು. ಈ ಪ್ರದರ್ಶನಗಳ ವಿಚಾರದಲ್ಲಿ ದಿವಾನರಿಗಿರುವ ಭರವಸೆಯು ಪ್ರಜೆಗಳಿಗೂ ಇರುತ್ತದೆಂದು ಹೇಳಲಾಗುವುದಿಲ್ಲ. ಕೈಗಾರಿಕೆ ವಾಣಿಜ್ಯಾಭಿವೃದ್ಧಿಸ್ಥಳಗಳಲ್ಲಿ ಇಂತಹ ಪ್ರದರ್ಶನಾಲಯಗಳಿಂದ ಪ್ರಯೋಜನವಾಗಬಹುದಲ್ಲದೆ ಬೇಸಾಯವೇ ಮುಖ್ಯವಾಗಿರುವ ನಮ್ಮ ಸೀಮೆಯಂತಹ ದೇಶಗಳಲ್ಲಿ ಯಾವಪ್ರಯೋಜನವೂ ಆಗುವಸಂಭವವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಹಿಂದೆ ರಾಜಧಾನಿಯಲ್ಲಿ ಆಗುತ್ತಿದ್ದ ಮಹಾವಸ್ತುಪ್ರದರ್ಶನದಿಂದ ಯಾವ್ಯಾವ ದೇಶೀಯ ಕೈಗಾರಿಕೆಗಳು ಅಭಿವೃದ್ಧಿಗೆ ಬಂದು ಅವುಗಳ ನಿರ್ಮಾಣಕರ್ತರುಗಳು ಎಷ್ಟರಮಟ್ಟಿಗೆ ಪುಷ್ಟಿವಂತರಾಗಿರುವರೆಂಬುದೂ, ಪ್ರದರ್ಶಕರುಗಳಿಗೆ ಪ್ರೋತ್ಸಾಹಕ್ಕೆ ಬದಲು ನಿರುತ್ಸಾಹವಾಗಿರುವುದೂ, ವಸ್ತುಪ್ರದರ್ಶನಾಲಯವು ವಿಹಾರಸ್ಥಾನವಾಗಿದ್ದುದೂ, ಲಕ್ಷಾಂತರ ರೂಪಾಯಿಗಳು ಯಾವ ಪುರುಷಾರ್ಥವೂ ಇಲ್ಲದೆ ನಿರರ್ಗಳವಾಗಿ ವೆಚ್ಚವಾದುದೂ ಅನುಭವವೇದ್ಯವಾಗಿದೆ. ಅದುಕಾರಣ ಮನಸ್ಸಿನ ಮಂಡಿಗೆಯಂತಿರುವ ಈ ವಸ್ತುಪ್ರದರ್ಶನಕ್ಕೆ ವೆಚ್ಚಮಾಡಲ್ಪಡುವ ಹಣವು ಎಷ್ಟೋ ಉಪಯುಕ್ತವೂ ಅವಸರವೂ ಆದ ಕೆಲಸಗಳಿಗೆ ವ್ಯಯವಾದಲ್ಲಿ ಪ್ರಯೋಜನವಾಗುತ್ತಾದುದರಿಂದ ದಿವಾನರು ಈ ವಸ್ತುಪ್ರದರ್ಶನಗಳ ಬಾಹ್ಯಾಡಂಬರಕ್ಕೆ ಬೆರಗಾಗಿ ದುಂದುವೆಚ್ಚಕ್ಕೆ ಅವಕಾಶವನ್ನುಂಟುಮಾಡದೆ ನಮ್ಮ ದೇಶೀಯರ ಜ್ಞಾನಜೀವನಾಧಾರಗಳಾದ ವಿದ್ಯಾ ಮತ್ತು ವ್ಯವಸಾಯಾಭಿವೃದ್ಧಿಕಾರ್ಯಗಳಿಗೆ ಹೆಚ್ಚು ಗಮನ ಕೊಡುವವರಾಗಲೆಂದು ಸೂಚಿಸುತ್ತೇವೆ. ಸುಂಕಗಳಿಂದಲೂ, ಉಪ್ಪು, ಅಂಚೆ, ತಂತಿಯ ವರ್ತಮಾನ, ಟಂಕಸಾಲೆ ಮೊದಲಾದವುಗಳಿಂದಲೂ ಬರತಕ್ಕ ವರಮಾನವೆಲ್ಲವೂ ಸಾಮ್ರಾಜ್ಯಸರ್ಕಾರದವರಿಗೇ ಸಲ್ಲುತ್ತಿರುವುದರಿಂದ ನಮ್ಮ ಸಂಸ್ಥಾನಕ್ಕೆ ಸಲ್ಲಬೇಕಾದಷ್ಟು ಭಾಗವನ್ನು ನಿರ್ಧರಿಸುವ ವಿಚಾರದಲ್ಲಿ ಪ್ರಯತ್ನ ನಡೆಸಿರುವುದಾಗಿ ಭಾಷಣದಲ್ಲಿ ಹೇಳಲ್ಪಟ್ಟಿದೆ. ಈ ಪ್ರಯತ್ನವು ಫಲಪ್ರದವಾಗಲೆಂದು ಹಾರೈಸುತ್ತೇವೆ.

ಮೂರುವರ್ಷದವಧಿಯು ಪೂರೈಸಿ ಈ ಅಧಿವೇಶದೊಡನೆ ಪರಿಸಮಾಪ್ತಿಗೊಳ್ಳುವ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು ಮೇಲ್ಕಂಡ ಅವಧಿಯಲ್ಲಿ ಮಾಡಿದ ಕಾರ್ಯಗಳನ್ನು ಕುರಿತು ದಿವಾನರು ಪ್ರಸ್ತಾವಿಸುವಾಗ್ಗೆ ಅಪ್ರಕೃತವೂ ಅನುಚಿತವೂ ಆದ ಜ್ಞಾನೋಪದೇಶವನ್ನು ಮಾಡಿರುವುದಕ್ಕಾಗಿ ನಾವು ವಿಷಾದಿಸುತ್ತೇವೆ. ಮುಂದೆ ನಡೆಯುವ ಚುನಾವಣೆಯಲ್ಲಿ ಈಗಿರತಕ್ಕ ಮೆಂಬರುಗಳಲ್ಲಿ ಕೆಲವರು ಬಾರದೆ ಹೋಗಬಹುದೆಂದು ಹೇಳಿರುತ್ತಾರೆ. ಹೀಗೆ ಹೇಳುವುದಕ್ಕೆ ಬದಲು ಮುಂದಣ ಚುನಾವಣೆಯಲ್ಲಿ ನೀವುಗಳು ಕೃತಾರ್ಥರಾಗಿ ಬರುವರೆಂದು ನಿರೀಕ್ಷಿಸುತ್ತೇನೆಂದು ಹೇಳಿದ್ದರೆ ಬಹಳ ಗಂಭೀರವಾಗಿರುತ್ತಿದ್ದಿತು. ಒಬ್ಬ ಮೆಂಬರು ಮಾತಿನಮಳೆಯನ್ನು ಸುರಿಸುವುದರಮೇಲಿಂದಾಗಲಿ, ಪ್ರಭುತ್ವದವರ ಕಾರ್ಯಕ್ರಮುಗಳನ್ನು ಆವೇಶದಿಂದಲೂ, ಮುಷ್ಕರದಿಂದಲೂ ಪ್ರತಿಭಟಿಸುವುದರ ಮೇಲಿಂದಾಗಲೀ ಆ ಮೆಂಬರು ಮಾಡಿದ ಕೆಲಸದ ಯೋಗ್ಯತೆಯನ್ನು ಕೆಲರು ಪರಾಮರ್ಶಿಸುತ್ತಾರೆ. ಈರೀತಿಯಿಂದ ದೇಶಸೇವೆಯ ಅಳತೆಯು ನಿರ್ಧರಿಸಲ್ಪಡತಕ್ಕುದಾಗಿಲ್ಲ, ಮತ್ತು ಆಡಿದ ಮಾತನ್ನೇ ಆಡುವವರ ಮೇಧಾಶಕ್ತಿಯೂ ಲೋಕಾನುಭವವೂ ಕಡಮೆಯೆಂದೇ ಹೇಳಬೇಕಾಗುತ್ತದಲ್ಲದೆ ಸಭೆಯೂ ಶೋಭಿಸುವುದಿಲ್ಲ ಎಂದು ದಿವಾನರು ಅಪ್ಪಣೆಕೊಡಿಸಿರುವರು. ಓಟರುಗಳ ವಿಶ್ವಾಸಕ್ಕೆ ಪಾತ್ರನಾಗಿ ಚುನಾಯಿಸಲ್ಪಟ್ಟು ಮೆಂಬರಾಗಿರುವವನ ಕಾರ್ಯನಿರ್ವಾಹಶಕ್ತಿಯು ನಾವು ಹಿಂದೆ ಯಾವಾಗಲೂ ಕೇಳದಿರುವ ರೀತಿಯಲ್ಲಿ ಅಂದರೆ ದಿವಾನರು ಅಪ್ಪಣೆಕೊಡಿಸಿರುವ ರೀತಿಯಲ್ಲಿ ಗೊತ್ತುಮಾಡಲ್ಪಡುವುದೆಂದೆನ್ನುವುದರಿಂದ ಅತನು ವಜ್ರಶುಂಠನೆಂದು ಹೇಳಿದಂತಾಗುತ್ತದೆ. ಇದಲ್ಲದೆ ಪ್ರಜೆಗಳ ಯೋಗಕ್ಷೇಮದಲ್ಲಿ ಮೆಂಬರರಿಗೆಷ್ಟು ಆಸಕ್ತಿಯಿರುವುದೋ ಅಷ್ಟೇ ಆಸಕ್ತಿಯು ಸರ್ಕಾರದವರಿಗಿದ್ದರು ಕೂಡ ಸರ್ಕಾರದವರನ್ನು ಪ್ರತಿಭಟಿಸುವ ಛಲವನ್ನು ಹಿಡಿಯುವುದಾದರೆ ದೇಶದ ಏಳ್ಗೆಗೆ ಕಲ್ಲೆಳೆದು ದ್ರೋಹಚಿಂತನೆಮಾಡಿದಂತೆಯೇ ಸರಿ ಎಂದು ಹೇಳಿರುವುದಂತು ಇನ್ನೂ ಹೇಯವಾದುದು. ಈ ಪ್ರಜಾಪ್ರತಿನಿಧಿಸಭೆಯು ಆರಂಭವಾದಾರಭ್ಯ ಅದರ ಅಧ್ಯಕ್ಷರಾದ ಪ್ರತಿಯೊಬ್ಬ ದಿವಾನರೂ ಬಹಳ ವಿಚಕ್ಷಣೆಯಿಂದಲೂ ಸಮರ್ಥತೆಯಿಂದಲೂ, ಘನಗಾಂಭೀರ್ಯದಿಂದಲೂ ಪ್ರತಿನಿಧಿಗಳು ವಿಷಯವಿಮರ್ಶೆನಾಡುತ್ತಿದ್ದುದನ್ನು ಮೆಚ್ಚಿಕೊಂಡು ಶ್ಲಾಘಿಸಿರುವರು. ಅಲ್ಲದೆ " ಈ ಸಭೆಯಲ್ಲಿ ಔಚಿತ್ಯವನ್ನು ಮೀರಿದ ಯಾವುದೊಂದು ಚರ್ಚೆಯೂ ನಡೆದಿಲ್ಲ. ಪರಸ್ಪರವಾಗಿ ದೋಷವನ್ನು ಆರೋಪಿಸಿ ವಾಗ್ವಾದಗಳು ಯಾವುವೂ ಜರುಗಿಲ್ಲ. ಇದನ್ನು ನೋಡಿದರೆ ಸಂಸ್ಥಾನದ ಘನತೆಯನ್ನು ಉಳಿಸುವುದು ತಮ್ಮ ಮೇಲಣ ಭಾರವೆಂಬುದನ್ನು ಈ ಸಭೆಯವರು ಚೆನ್ನಾಗಿ ಅರಿತಿರುವರೆಂದು ನನಗೆ ತೋರುತ್ತದೆ. ತಾವುಗಳೆಲ್ಲರೂ ಅಮೋಘವಾದ ದೇಶಸೇವೆ ಮಾಡಿರುವುದಕ್ಕಾಗಿ ಮೈಸೂರುದೇಶೀಯರೆಲ್ಲರೂ ತಮಗೆ ಕೃತಜ್ಞರಾಗಿರಬೇಕಾಗಿದೆ " ಎಂದು ಹೇಳಿರುತ್ತಾರೆ. ಹೀಗೆ ಪರಸ್ಪರ ವಿರೋಧವಾಗಿಯೂ ಅಸಂಬದ್ಧವಾಗಿಯೂ ಹೇಳಿರುವುದನ್ನೆಲ್ಲಾ ನೋಡಿದರೆ ಸರ್ಕಾರದವರನ್ನು ಪ್ರತಿಭಟಿಸಿ ಮಾತನಾಡಬಾರದೆಂಬ ಅಭಿಪ್ರಾಯವು ನಮ್ಮ ದಿವಾನರಿಗಿರುವಂತೆ ಭಾಸವಾಗುತ್ತದೆ. ಪ್ರಭುತ್ವದವರು ಪ್ರಜಾಕ್ಷೇಮದಲ್ಲಿಯೇ ನಿಮಗ್ನರಾಗಿದ್ದಲ್ಲಿ ಮತ್ತು ಪ್ರತಿನಿಧಿಗಳು ಪ್ರತಿಭಟಿಸುವುದು ಅನಂಗೀಕಾರವಾಗಿದ್ದಲ್ಲಿ ಪ್ರತಿನಿಧಿಸಭೆಯೇ ಇರಬೇಕಾದ ಅವಶ್ಯಕತೆಯಿಲ್ಲವು. ಸರ್ಕಾರಿಯಾಡಳಿತವನ್ನು ಕಠಿಣವಾಗಿ ಖಂಡಿಸಿ ಪ್ರತಿಭಟಿಸದೆ ಇರುವ ಆಧುನಿಕದೇಶವಾವುದಾದರೂ ಇರುವುದೇ ? ಇಂತಹುದರಲ್ಲಿ ನಮ್ಮ ದಿವಾನ್ ಸಾಹೇಬರು ಸರ್ಕಾರವನ್ನು ಪ್ರತಿಭಟಿಸುವುದು ದೇಶದ ಏಳ್ಗೆಗೆ ಕಲ್ಲೆಳೆದಂತಾಗುತ್ತದೆಂದು ಹೇಳಿರುವುದರಿಂದಲೇ ತೃಪ್ತರಾಗದೆ, ದೇಶಸೇವಾಕಾರ್ಯವನ್ನು ಗೌರವಾರ್ಥವಾಗಿ ಮಾಡಲು ಕಾಲವ್ಯವಧಾನವಿಲ್ಲವೆಂದು ಹೇಳಿ ತಿರಸ್ಕರಿಸುವುದು ಆತ್ಮದ್ರೋಹ ದೇಶದ್ರೋಹ ಮಾಡಿದಂತಾಗುತ್ತದೆಂದೂ, ಸ್ವಾರ್ಥಸಾಧನದೃಷ್ಟಿಯಿಂದ ಅಂತಹ ಗೌರವಕಾರ್ಯಗಳನ್ನು ವಹಿಸಿಕೊಳ್ಳುವುದಂತು ಮಹಾಪಾತಕವೆಂದೂ, ಸ್ವಪ್ನದಲ್ಲೂ ಸಹ ಯಾವ ಪ್ರಯೋಜನವನ್ನೂ ಚಿಂತಿಸದೆ ದೇಶಸೇವಾಕಾರ್ಯವನ್ನು ಮಾಡತಕ್ಕವರ ಆವಶ್ಯಕತೆಯು ಬಹಳವಾಗಿದೆಯೆಂದೂ, ಬಡವರೂ ಅಜ್ಞಾನಿಗಳೂ ಆದವರು ಮೈಬೆವರನ್ನು ಸುರಿಸಿ ಮಾಡುವ ಕೆಲಸವೇ ವಿದ್ಯಾವಂತರಾಗಲೂ, ದೊಡ್ಡ ಪ್ರಶಸ್ತಿಗಳನ್ನು ಪಡೆಯಲೂ ಕಾರಣವೆಂದು ತಿಳಿದುಕೊಂಡು ದೇಶಸೇವಾಕಾರ್ಯವನ್ನು ಅಚ್ಚುಕಟ್ಟಿನಿಂದಲೂ ಸಮರ್ಪಕತೆಯಿಂದಲೂ ಮಾಡುವುದನ್ನು ಕಲಿಯಬೇಕೆಂದೂ ಮೊದಲಾಗಿ ವಿವೇಕಬೋಧೆಯನ್ನು ಮಾಡಿರುತ್ತಾರೆ. ಪ್ರಭುತ್ವದವರ ಕಾರ್ಯಕಲಾಪಗಳನ್ನು ಸಿಂಹಾವಲೋಕನಮಾಡಿ ಸಂಬಳಸಾರಿಕೆಗಳಿಲ್ಲದೆ ದೇಶಸೇವೆಮಾಡಲು ಬಂದಿರುವ ಪ್ರಜಾಪ್ರತಿನಿಧಿಗಳ ಮುಂದೆ ನಿವೇದಿಸುವ ಸಂದರ್ಭದಲ್ಲಿ ನಮ್ಮ ದೇಶದ ಮತ್ತು ಈ ಸಭೆಯ ಪೂರ್ವಪರಿಚಯವಿಲ್ಲದಿರುವ ಹೊಸ ಬ್ರಿಟಿಷ್ ರೆಸಿಡೆಂಟರವರ ಮತ್ತು ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳು ಮೊದಲಾಗಿ ಪರದೇಶದವರ ಸಮಕ್ಷದಲ್ಲಿ ಈರೀತಿ ಮನೋವೇಧಕ ನೀತಿಬೋಧೆಮಾಡಿರುವುದು ಸಖೇದಾಶ್ಚರ್ಯವಾಗಿರುತ್ತದೆ. ದಿವಾನರು ಇನ್ನೂ ಕೆಲ ವರ್ಷಗಳವರೆಗೆ ಈ ಸಭೆಯ ಅನುಭವವನ್ನು ಮಾಡಿಕೊಂಡು ಅನಂತರ ಅದರ ವಿಚಾರವಾಗಿ ತಮ್ಮಭಿಪ್ರಾಯವನ್ನು ತಿಳುಹಿದ್ದಲ್ಲಿ ಉಚಿತವಾಗಿರುತ್ತಿದ್ದಿತು. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ದೇಶಸೇವಾಕಾರ್ಯವನ್ನು ಮಾಡಬೇಕೆಂಬ ಉದಾತ್ತ ತತ್ವಬೋಧೆಯು ಸ್ವಾರ್ಥತ್ಯಾಗಿಗಳಾದ ಜನರಿಂದ ಮಾಡಲ್ಪಡತಕ್ಕುದಾಗಿರುತ್ತದಲ್ಲದೆ ತಮ್ಮ ಸಂಬಳದಲ್ಲಿ ಒಂದು ಕಾಸು ಕಡಿಮೆಯಾದರೂ ಕಾರ್ಯದಕ್ಷತೆ ಕಡಮೆಯಾಗುವುದೆಂದು ಹೇಳುವವರಿಂದ ಮಾಡಲ್ಪಡತಕ್ಕುದಾಗಿಲ್ಲವು. ನಮ್ಮ ದಿವಾನರಾದ ಮಿ|| ಮಿರ್ಜಾಯವರಿಗೆ ಅಕುಟಿಲವಾದ ದೇಶಾಭಿಮಾನವೂ ಪ್ರಜಾಭಿವೃದ್ಧಿಚಿಂತನೆಯೂ ಇರುವುದೆನ್ನುವುದರಲ್ಲಿ ಲೇಶಮಾತ್ರ ಸಂಶಯವಿಲ್ಲವು. ಆದರೆ ತಮ್ಮ ಉದ್ಯೋಗಾವಧಿಯಲ್ಲಿ ಮೈಸೂರು ಸಂಸ್ಥಾನವನ್ನು ರಾಮರಾಜ್ಯವನ್ನಾಗಿ ಮಾಡಬೇಕೆಂಬ ಕುತೂಹಲದಲ್ಲಿ ಪ್ರಭುತ್ವದವರನ್ನು ಪ್ರತಿಭಟಿಸುವುದು ದೇಶದೇಳ್ಗೆಗೆ ಕಲ್ಲೆಳೆದಂತಾಗುವುದೆಂದೂ, ಪ್ರತಿಫಲವಿಲ್ಲದೆ ದೇಶಸೇವೆಯನ್ನು ಮಾಡಲು ತಿರಸ್ಕರಿಸುವುದು ಮಹಾಪಾಪವೆಂದೂ ಹೇಳಿ ಪ್ರತಿನಿಧಿಸಭೆಗೆ ಆಧಾರಭೂತರೂ ಮರ್ಯಾದಸ್ಥರೂ ಆದ ಮೆಂಬರುಗಳ ಮನಸ್ಸಿಗೆ ಖೇದೆಯನ್ನುಂಟುಮಾಡಿದುದಕ್ಕಾಗಿ ನಾವು ಬಹಳವಾಗಿ ಚಿಂತಿಸುತ್ತೇವೆ. ಒಂದು ಮನೆ ಅಥವಾ ಊರು ನಾಶಮಾಡಲ್ಪಟ್ಟಿತೆಂದು ಹೇಳುವಾಗ್ಗೆ ಕಲ್ಲುಮುಳ್ಳು ಎಳೆಯಲ್ಪಟ್ಟಿತೆಂದು ಹೇಳಲ್ಪಡುವುದು ವಾಡಿಕೆಯಾಗಿದೆ. ಅಂತಹ ಅರಿಷ್ಟಕಾರಕವೂ, ಅವಾಚ್ಯವೂ ಆದ ಶಬ್ದವು ಶ್ರೀಮನ್ಮಹಾರಾಜರವರ ಛಾಯಾನುವರ್ತಿಗಳೆಂದೆನಿಸಿಕೊಂಡಿರುವ ಮಿ|| ಮಿರ್ಜಾಯವರ ಬಾಯಿಯಲ್ಲಿ ಸರ್ವಥಾ ಉಚ್ಚರಿಸಲ್ಪಡತಕ್ಕುದಾಗಿಲ್ಲವು.

ಸ್ವದೇಶದ ವೃತ್ತಾಂತಗಳು.

ಡಿಸ್ಟ್ರಿಕ್ಟು ಮತ್ತು ಸೆಷನ್ಸು ಜಡ್ಜಿಯರುಗಳಾದ ಮ|| ಜಿ. ಶ್ರೀನಿವಾಸಯ್ಯರ್‌ರವರು ಬೆಂಗಳೂರಿನಿಂದ ಶಿವಮೊಗ್ಗೆಗೂ, ಮ|| ಜಿ. ಸತ್ಯಾಜಿರಾಯರು ಶಿವಮೊಗ್ಗೆಯಿಂದ ಬೆಂಗಳೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕೈ|| ಕಬ್ಬಹಳ್ಳಿ ಚೆನ್ನಬಸಪ್ಪನವರ ಸ್ಮಾರಕಪ್ರದರ್ಶನ ಕಮಿಟಿಯವರು ಬರೆಯಿಸಿರುವ ಚೆನ್ನಬಸಪ್ಪನವರ ಎಣ್ಣೆಬಣ್ಣದ ಭಾವಚಿತ್ರಪ್ರತಿಷ್ಠಾಪನೋತ್ಸವವು ನಾಳೆಯದಿವಸ ದಿವಾನರಿಂದ ನೆರವೇರಿಸಲ್ಪಡುವುದು.

ಈ ಸಂಚಿಕೆಯಲ್ಲಿ ಗರ್ಭಿತವಾಗಿರುವ ಮದ್ರಾಸಿನ ಬ್ರಿಟಿಷ್ ಟ್ರೇಡಿಂಗ್ ಕಂಪೆನಿಯವರಲ್ಲಿ ದೊರೆಯುವ ಗಡಿಯಾರ ಮೊದಲಾದ ಪದಾರ್ಥಗಳ ಪ್ರಕಟನಾಪತ್ರಿಕೆಯನ್ನು ನಮ್ಮ ವಾಚಕರು ದಯೆಯಿಟ್ಟು ಗಮನಿಸುವವರಾಗಬೇಕು.

ಕೈ|| ದಳವಾಯಿದೇವರಾಜ ಅರಸಿನವರ ಮಕ್ಕಳೂ, ಸರದಾರ್ ಮ|| ಲಕ್ಷ್ಮೀಕಾಂತರಾಜ ಅರಸಿನವರ ಅಳಿಯಂದಿರೂ ಆದ ಮ|| ಮದನಗೋಪಾಲರಾಜ ಅರಸಿನವರು ದಿವಾನರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ರೈಲ್ವೆ ಇಂಜಿನ್ ಸಂಬಂಧವಾದ ಕೆಲಸಗಳನ್ನು ಕಲಿತುಕೊಂಡು ಬರಲು ದಾಮೋದರದಾಸ್ ಸ್ಕಾಲರ್‌ಷಿಪ್ಪನ್ನು ಮೈಸೂರು ಸರ್ಕಾರದವರಿಂದ ಪಡೆದು ಸೀಮೆಗೆ ಹೋಗಿ ಉತ್ತೀರ್ಣರಾಗಿ ಬಂದಿರುವ ಮ|| ಎ. ಚೆಲುವೇಅರಸಿನವರು ೨೦೦ ರೂ. ಸಂಬಳದಮೇಲೆ ಪ್ರಬೇಷನರಿ ಅಸಿಸ್ಟೆಂಟ್ ಲೋಕೋಸೂಪರಿಂಟೆಂಡೆಂಟರಾಗಿ ಈ ಅಕ್ಟೋಬರ್ ತಾ|| 1 ರಿಂದ ಒಂದು ವರ್ಷದವರೆಗೆ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಶ್ರೀಚಾಮುಂಡೇಶ್ವರೀ ಕರ್ನಾಟಕನಾಟಕಸಭೆಯವರು ಅಭಿನಯಿಸುತ್ತಿರುವ ನಾಟಕಗಳಲ್ಲೆಲ್ಲಾ ಅತ್ಯಂತ ಜನರಂಜಕವಾಗಿರುವ ಆಸ್ಥಾನವಿದ್ವಾನ್ ಮ|| ಎ. ಶ್ರೀಕಂಠಶಾಸ್ತ್ರಿಗಳಿಂದ ವಿರಚಿತವಾದ ರಾಜಸೂಯಯಾಗ ನಾಟಕವು ದಸರಾಮಹೋತ್ಸವದಲ್ಲಿ 7-8 ರಾತ್ರಿ ವಿರಾಮವಿಲ್ಲದೆ ಅಭಿನಯಿಸಲ್ಪಟ್ಟಿತಾದರೂ ಪ್ರೇಕ್ಷಕರಿಗೆ ಬೇಸರವಾಗದೆ ಅಪೇಕ್ಷಿತವಾಗಿರಲು ಕಥಾಸಂವಿಧಾನವೂ, ಅಭಿನಯ ಕೌಶಲ್ಯವೂ, ಡ್ರೆಸ್ಸು ಮತ್ತು ಸೀನರಿಗಳ ಚಿತ್ತಾಕರ್ಷಣವೂ ಮುಖ್ಯಕಾರಣಗಳಾಗಿವೆ. ಕಾಲೋಚಿತವಾಗಿಯೂ ಜನಮನೋರಂಜಕವಾಗಿಯೂ ಇರುವ ನಾಟಕಗಳನ್ನು ರಚಿಸುವಲ್ಲಿ ಸುಪ್ರಖ್ಯಾತರಾಗಿರುವ ಮ|| ಎ. ಶ್ರೀಕಂಠಶಾಸ್ತ್ರಿಗಳಂತಹ ಕವಿಗಳ ಸಹಾಯದಿಂದ ನೀತಿಪ್ರದವಾದ ನವೀನನಾಟಕಗಳನ್ನು ಬರೆಯಿಸಿ ಅಭಿನಯಿಸಿದಲ್ಲಿ ನಾಟಕಮಂಡಳಿಯವರಿಗೆ ಅರ್ಥಪ್ರಯೋಜನವೂ ಪ್ರೇಕ್ಷಕರಿಗೆ ನೀತಿಬೋಧೆಯೂ ಆಗುವುದರಲ್ಲಿ ಸಂದೇಹವಿಲ್ಲವಾದುದರಿಂದ ನಾಟಕಮಂಡಳಿಯವರು ಇದನ್ನು ಗಮನಿಸುವವರಾಗಬೇಕು.

ಕೈ|| ಚೆನ್ನಬಸಪ್ಪನವರ ಸ್ಮಾರಕೋತ್ಸವ.

ಈ ಅತ್ಯವಶ್ಯಕರ್ತವ್ಯಕ್ಕಾಗಿ ಶೇಖರಿಸಲ್ಪಡುತ್ತಿರುವ ದ್ರವ್ಯನಿಧಿಗೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳಿಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ ಮತ್ತು ಮತಾಭಿಮಾನಿಗಳಾದ ಇತರ ದೊಡ್ಡಮನುಷ್ಯರುಗಳು ಕೂಡಲೆ ಸಹಾಯಮಾಡಬೇಕಾಗಿ ಕೋರಿದೆ.

1. ಕೊಳ್ಳೇಗಾಲದ ತಾ|| ಚಿಲ್ಕವಾಡಿ ಶಿವಪ್ಪನವರು 5 ರೂ. 2. ಚಿಕ್ಕಮಗಳೂರು ತಾ|| ಅಲ್ದೂರ್ ಪಟೇಲ್ ರಾಮಪ್ಪಗೌಡರು, ಆರ್. ಎ. ಮೆಂಬರು 10 ರೂ. 3. ದಾವಣಗೆರೆ ತಾ|| ಕಂದಗಲ್ ಪಟೇಲ್ ಚನ್ನಬಸಪ್ಪನವರು, ಆರ್. ಎ. ಮೆಂಬರು 10 ರೂ. 4. ಯಡತೊರೆ ಸಿದ್ಧಲಿಂಗಶೆಟ್ಟರು, ಆರ್. ಎ. ಮೆಂಬರು 10 ರೂ. 5. ಮೈಸೂರು ಡಿ|| ಬೋರ್ಡು ವೈಸ್‌ಪ್ರೆಸಿಡೆಂಟರು ಜಿ. ಮಲ್ಲಣ್ಣನವರು 10 ರೂ. 6. ಗುಂಡ್ಲುಪೇಟೆ ಗುರುಕಾರ್ ನಂಜಪ್ಪನವರು ಆರ್. ಎ. ಮೆಂಬರು 10 ರೂ. 7. ಸಾಗರದ ದಳವಾಯ್ ಬಸವಲಿಂಗಪ್ಪನವರು ಆರ್. ಎ. ಮೆಂಬರು 10 ರೂ. 8. ಸಾಗರದ ಗಾಜನೂರು ಚನ್ನಪ್ಪನವರು, ಆರ್. ಎ. ಮೆಂಬರು 10 ರೂ. 9. ಕೊರಟಗೆರೆ ಯಜಮಾನ್ ಚಂದ್ರಶೇಖರಪ್ಪನವರು, ಆರ್. ಎ. ಮೆಂಬರು 10 ರೂ. 10. ಆರ್. ಪುಟ್ಟಣ್ಣನವರು, ಬಿ.ಎ., ಬಿ.ಎಲ್., ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಮತ್ತು ಅರಮನೆ ಮುನ್ಸಾಹೇಬ್ 10 ರೂ. 11. ಡಾಕ್ಟರ್ ಟಿ. ಎಸ್. ಸಿದ್ದಪ್ಪನವರು 15 ರೂ. 12. ಎಚ್. ಕೆ. ವೀರಬಸವಯ್ಯನವರು, ಬಿ.ಎ., ಬಿ.ಎಲ್., ಮುನಸೀಫರು 5 ರೂ. 13. ಸಿ. ಆರ್. ಗೌಡರು, ಪವರ್ ಮತ್ತು ಲೈಟ್ ಅ|| ಸೂಪರಿಂಟೆಂಡೆಂಟರು 5 ರೂ. 14. ವೈ. ವಿರೂಪಾಕ್ಷಯ್ಯನವರು 10 ರೂ. 15. ಸಿಟ್ರಿ ಬಸಪ್ಪನವರು 5 ರೂ. 16. ಬಿ. ಎಸ್. ಪುಟ್ಟಸ್ವಾಮಿ, ಬಿ.ಎ., ಬಿ.ಎಲ್., ರವರು 5 ರೂ. 17. ಬಿ. ಬಸಪ್ಪನವರು, ಬಿ.ಎಸ್.ಸಿ., ಎಡುಕೇಷನ್ ಸೂಪರ್‌ವೈಜರ್‌ರವರು 5 ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು ಸಿಟಿ.

ಮೈಸೂರು ಪ್ರಜಾಪ್ರತಿನಿಧಿಸಭೆ.

(ಎರಡನೆಯದಿವಸ)

ಪ್ರತಿನಿಧಿಗಳ ಅರಿಕೆ ಮತ್ತು ಸರ್ಕಾರದ ಉತ್ತರ.

ಬಿನ್ನಿಮಿಲ್ಲಿನ ಕೋಲಿಯ ವಿಚಾರವು ನ್ಯಾಯಬದ್ಧವಾಗಿಯೂ ನಿಷ್ಪಕ್ಷಪಾತವಾಗಿಯೂ ಸ್ಪೆಷಲ್‌ಕಮಿಟಿಯವರಿಂದ ಇತ್ಯರ್ಥಗೊಳಿಸಲ್ಪಟ್ಟಿರುವ ಪ್ರಯುಕ್ತ ಅದು ಪುನಃ ಪರ್ಯಾಲೋಚಿಸಲ್ಪಡಬೇಕಾದ ನಿಮಿತ್ತವಿಲ್ಲವೆಂದು ದಿವಾನರು ಮೊದಲನೆಯದಿನ ಅಪ್ಪಣೆಕೊಡಿಸಿದ್ದುದರಮೇಲೆ ಎರಡನೆಯದಿನ ಪುನಃ ಸಭಿಕರು ಏಕವಾಕ್ಯತೆಯಿಂದ ಆ ವಿಚಾರವು ಪರ್ಯಾಲೋಚನೆಗೆ ತೆಗೆದುಕೊಳ್ಳಲ್ಪಡಬೇಕೆಂದು ಅರಿಕೆಮಾಡಿಕೊಳ್ಳಲಾಗಿ ಬರುವ ಶುಕ್ರವಾರ ತೆಗೆದುಕೊಳ್ಳಲ್ಪಡುವುದೆಂದು ವಾಗ್ದಾನಮಾಡಲ್ಪಟ್ಟಿತು. ಅನಂತರ ಮುಂದಣ ವಿಷಯಗಳು ಅರಿಕೆಮಾಡಲ್ಪಟ್ಟವು.—

ಮ|| ಗಳಾದ ಮಹಮ್ಮದ್ ಅಬ್ಬಾಸ್‌ಖಾನ್‌ರವರ ಮತ್ತು ಜಿ. ಪರಮಶಿವಯ್ಯನವರ ಅರಿಕೆ—ಅಮರಾಯ ಮತ್ತು ಹುಲ್ಬನ್ನಿಯ ವರಮಾನವು ಗ್ರಾಮಪಂಚಾಯಿತಿಗೆ ವಹಿಸಲ್ಪಡಬೇಕು. ಇದನ್ನು ಅನೇಕ ಮೆಂಬರುಗಳು ಪುಷ್ಟೀಕರಿಸಿದರು-ದಿವಾನರ ಉತ್ತರ—ಈ ಉತ್ಪತ್ತಿಯನ್ನು ಗ್ರಾಮಪಂಚಾಯಿತಿಗೆ ವಹಿಸಿದಲ್ಲಿ ಸರ್ಕಾರಕ್ಕೆ 2 ಲಕ್ಷ ರೂ. ವರೆಗೆ ನಷ್ಟವಾಗುವುದರಿಂದ ಈಗಿನ ಆರ್ಥಿಕಸ್ಥಿತಿಯಲ್ಲಿ ವಹಿಸಲಾಗುವುದಿಲ್ಲ. ಒಂದನೇ ಕೌನ್ಸಿಲರು—ಈ ಉತ್ಪತ್ತಿಯನ್ನು ಬಿಟ್ಟುಕೊಡುವ ವಿಚಾರವು ಇನ್ನೂ ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದು. ಕೆಲ ಗ್ರಾಮಗಳಲ್ಲಿ ಜನಸಂಖ್ಯೆಯು ಕಡಮೆಯಾಗಿದ್ದರೂ ಉತ್ಪನ್ನವು ಹೆಚ್ಚಾಗಿದೆ, ಮತ್ತೆ ಕೆಲ ಗ್ರಾಮಗಳಲ್ಲಿ ಜನಸಂಖ್ಯೆಯು ಹೆಚ್ಚಾಗಿದ್ದರೂ ಉತ್ಪನ್ನವು ಕಡಮೆಯಾಗಿದೆ. ಈ ವಿಧವಾದ ತೊಂದರೆಗಳಿರುತ್ತವಾದರೂ ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದು ಎಂದು ಹೇಳಿದುದರ ಮೇಲೆ, ಈ ಸಂಬಂಧವಾದ [illegible] ಸಮಗ್ರವಾಗಿ ತಿಳಿಯಬಂದನಂತರ [illegible] ಸಲ್ಲುವುದೆಂದು ದಿವಾನರು [illegible].

[illegible] ಡಾ|| ಎಸ್. [illegible] ಅರಿಕೆ—[illegible]

ಎರಡನೇ ಕೌನ್ಸಿಲರುತ್ತರ—ಏಜಂಟರಿಗೆ ಈಗ ಕೊಡಲ್ಪಡುತ್ತಿರುವ ಕಮಿಷನ್ನು ಬಹಳ ಹೆಚ್ಚಾಗಿರುವುದೆಂದು ತಿಳಿಯಬಂದಿರುವುದರಿಂದ ಇನ್ನೂ ಹೆಚ್ಚಿಸಲ್ಪಡಬೇಕಾದ ಅವಶ್ಯವಿಲ್ಲವು. ದಿವಾನರು—ಈ ಇರ್ಕಾರ್ಪೊರೆಸ್ಸಿನ ಸೌಲಭ್ಯವು ಸ್ವತಂತ್ರ ಕಂಪನಿಗಳನ್ನು ಸ್ಪರ್ಧಿಸುವುದಕ್ಕಾಗಲ್ಲವಾದರೂ ಅದನ್ನು ಪ್ರೋತ್ಸಾಹಿಸುವ ಏಜಂಟರುಗಳ ಸಂಖ್ಯೆಯು ಹೆಚ್ಚಿಸಲ್ಪಡಲಾಗುವುದು.

ಮ|| ಗಳಾದ ಅಬ್ಬಾಸ್‌ಖಾನರವರ ಮತ್ತು ಜಿ. ಪರಮಶಿವಯ್ಯನವರ ಅರಿಕೆ—ವಯಸ್ಕರಾದ ಆಫೀಸರುಗಳ ಉದ್ಯೋಗದ ಅವಧಿಯನ್ನು ಹೆಚ್ಚಿಸುವುದರಿಂದ ಚಿಕ್ಕವಯಸ್ಸಿನ ಆಫೀಸರುಗಳ ಪುರೋಭಿವೃದ್ಧಿಗೆ ಅವಕಾಶವಿಲ್ಲವಾಗಿರುವ ಪ್ರಯುಕ್ತ 250 ರೂ. ಗಳಿಗೆ ಕಡಮೆ ಸಂಬಳವಿಲ್ಲದ ವೃದ್ಧ ಆಫೀಸರುಗಳ ಅಧಿಕಾರದ ಅವಧಿಯನ್ನು ಹೆಚ್ಚಿಸಬಾರದು. ದಿವಾನರುತ್ತರ—ತಾವು ಹೇಳುವುದನ್ನು ನಾನು ಅನುಮೋದಿಸುತ್ತೇನಾದರೂ. ರಾಜ್ಯಾಡಳಿತನಿರ್ವಾಹದೃಷ್ಟಿಯಿಂದ ಇಂತಹ ವಿಚಾರವನ್ನು ಸರ್ಕಾರದವರ ವಿಮರ್ಶೆಗೆ ಬಿಡುವುದುತ್ತಮವು.

ಮೇಲ್ಕಂಡ ಮೆಂಬರುಗಳು ಪುನಃ ಅದೇ ವಿಚಾರದಲ್ಲಿ ಒತ್ತಿ ಹೇಳಿದುದರಮೇಲೆ, ಸರ್ಕಾರದವರ ಕಾರ್ಯನಿರ್ವಾಹಾಧಿಕಾರವನ್ನು ಮೆಂಬರುಗಳು ಅಪೇಕ್ಷಿಸತಕ್ಕುದಲ್ಲವಾದುದರಿಂದ ಅಂತಹ ಅಧಿಕಾರವನ್ನು ಪ್ರತಿನಿಧಿಸಭೆಗೆ ವಹಿಸಿಕೊಡಲಾಗುವುದಿಲ್ಲವೆಂದು ದಿವಾನರು ಅಪ್ಪಣೆಕೊಡಿಸಿದರು.

ತರೀಕೆರೆ ಮ|| ಮಿರ್ ಮಹಮ್ಮದ್‌ರವರ ಅರಿಕೆ—ಈಗ ಸರ್ಕಾರದವರ ಆಲೋಚನೆಯಲ್ಲಿರುವಂತೆ ಕಾಫಿ ಸೆಸ್ಸನ್ನು ·1 ರೂ. ಇಂದ 1·4 ರೂ. ಗೆ ಹೆಚ್ಚಿಸಬಾರದು. ಮ|| ಟಿ. ಬಸಪ್ಪನವರ ಅರಿಕೆ—ಸ್ವದೇಶದಲ್ಲಿ ಕೂಲಿಕಾರರು ಸಿಕ್ಕುವುದಿಲ್ಲವಾದುದರಿಂದ ದಕ್ಷಿಣ ಮತ್ತು ಉತ್ತರ ಕಾನಡಾ ಡಿಸ್ಟ್ರಿಕ್ಟುಗಳಿಂದ ಕೂಲಿಕಾರರನ್ನು ಕರೆಸಬೇಕಾಗಿದೆ. ಇದರಿಂದ ಅನೇಕರು ಸಾಲಗಾರರಾಗಿರುತ್ತಾರೆ. ಇದೂ ಅಲ್ಲದೆ ಕಾಫಿಗಿಂತ ಟೀ ಬೇಸಾಯದ ವ್ಯಾಪಕತೆಯು ಹೆಚ್ಚುತ್ತಿದೆ. ಈ ಸ್ಥಿತಿಯಲ್ಲಿ ಕಾಫಿ ಸೆಸ್ಸು ಹೆಚ್ಚಿಸಲ್ಪಡುವುದಾದರೆ ಪ್ರಸಿದ್ಧವಾದ ಮೈಸೂರುಸೀಮೆಯ ಕಾಫಿಯು ನಾಶವಾಗುವ ಸಂಭವವುಂಟು. ಮ|| ಬಿ. ಕೇಶವಯ್ಯನವರ ಅರಿಕೆ—ಕಾಫಿ ಪರೀಕ್ಷಾಕ್ಷೇತ್ರವು ತೆಗೆದುಹಾಕಲ್ಪಟ್ಟನಂತರ ಸೆಸ್ಸನ್ನು ಹೆಚ್ಚಿಸುವ ವಿಷಯವು ಪರ್ಯಾಲೋಚಿಸಲ್ಪಡಬಹುದು. ದಿವಾನರ ಮತ್ತು ರೆ|| ಕಮಿಷನರುತ್ತರ—ಈ ಸೆಸ್ಸು 15 ವರ್ಷಗಳ ಹಿಂದೆಯೇ ಹೆಚ್ಚಿಸಲ್ಪಡಬೇಕಾಗಿದ್ದಿತಾದುದರಿಂದ ಈಗ ಅದನ್ನು ತಪ್ಪಿಸಲಾಗುವುದಿಲ್ಲ.

ಮಳವಳ್ಳಿ ತಾ|| ಮ|| ವೆಂಕಟಪ್ಪನವರ ಅರಿಕೆ—ಹಕ್ಕುದಾರಿಕೆಯ ಶಾನುಭೋಗಿಕೆಯನ್ನು ತಪ್ಪಿಸಿ ಸಂಬಳದವರನ್ನು ಗೊತ್ತುಮಾಡಿದಲ್ಲಿ ಕ್ಷೇಮವಾಗುವುದು. ಎರಡನೇ ಕೌನ್ಸಿಲರುತ್ತರ—ಹೀಗೆ ಹಕ್ಕುದಾರಿಕೆಯನ್ನು ತಪ್ಪಿಸಿ ಸಂಬಳಗಾರರನ್ನು ನಿಯಮಿಸುವುದರಿಂದ ಸರ್ಕಾರಕ್ಕೆ ಪ್ರತಿ ವರ್ಷ 10 ಲಕ್ಷ ರೂ. ವೆಚ್ಚವಾಗುವುದು. ಅಲ್ಲದೆ ಈಗಿನ ಹಣದ ಮುಗ್ಗಟ್ಟಿನಿಂದ ಆ ರೀತಿ ಮಾಡಲು ಸಾಧ್ಯವಿಲ್ಲ. ಈ ವಿಷಯವು ಅಷ್ಟಕ್ಕೇ ಶಾಂತವಾಗಲಿಲ್ಲವಾಗಿ, ಈ ಹಕ್ಕುದಾರಿಕೆಯಿಂದ ಶಾನುಭೋಗರು ಒಂದೇ ಕಡೆಯಿದ್ದು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲೂ ಪ್ರಪಂಚವ್ಯವಹಾರ ಜ್ಞಾನವನ್ನು ಸಂಪಾದಿಸಲೂ ಮಾರ್ಗವಿಲ್ಲದೆ ಇದ್ದೆಡೆಯಲ್ಲೇ ಕೊಳೆಯುತ್ತಿರಬೇಕಾಗಿರುವುದರಿಂದ ಅವರುಗಳಿಗೆ ಈ ಹಕ್ಕುದಾರಿಕೆಯ ನಿರ್ಬಂಧವನ್ನು ತಪ್ಪಿಸಿ ಸಂಬಳವನ್ನು ಗೊತ್ತುಮಾಡಿದಲ್ಲಿ ಇತರ ಸರ್ಕಾರೀ ಕೆಲಸಗಾರರಂತೆ ಅನುಕೂಲವಾದ ಸ್ಥಳಗಳಿಗೆ ವರ್ಗವಾಗಿ ಹೋಗಲು ಅವಕಾಶವಾಗುತ್ತದೆ, ಅಲ್ಲದೆ ಒಂದೇ ಜಾತಿಯವರು ಗುತ್ತಿಗೆಯಾಗಿ ಅನುಭವಿಸುವುದು ತಪ್ಪಿ ಇತರ ಜಾತಿಯವರೂ ಈ ಉದ್ಯೋಗಕ್ಕೆ ಸೇರಲು ಮಾರ್ಗವಾಗಿ ಅದರಿಂದ ಎಲ್ಲರಿಗೂ ಕ್ಷೇಮವಾಗುತ್ತದೆ ಎಂದು ಮ|| ಜಿ. ಪರಮಶಿವಯ್ಯನವರು ವೃಷ್ಟೀಕರಿಸಿ ಹೇಳಿದರು. ಅದಕ್ಕೆ ಮ|| ಬೇಲೂರು ಶ್ರೀನಿವಾಸಯ್ಯಂಗಾರರು ಕೆಲವ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿರುವ ಶಾನುಭೋಗಿಕೆಯನ್ನು ತಪ್ಪಿಸಬೇಕೆಂದು ಹೋರಾಡುವುದಾಗಿದೆಯಲ್ಲದೆ ಅವರಂತೆಯೇ ಹಕ್ಕುದಾರಿಕೆಯು ಗ್ರಾಮಾಧಿಕಾರಿಗಳ ವಿಚಾರವನ್ನೆತ್ತದಿರುವುದರಿಂದ ಶಾನುಭೋಗರ ಮನಸ್ಸಿಗೆ ಬಹಳ ವ್ಯಥೆಯನ್ನುಂಟುಮಾಡತಕ್ಕುದಾಗಿದೆ. ಆದುಕಾರಣ ಇಂತಹ ಮನೋವೇದಕವಿಷಯಗಳನ್ನು ಚರ್ಚೆಗೆ ತರಗೊಡಬಾರದೆಂದು ಬಹಳ ಆರ್ಭಟಿಸಿ ಹೇಳಿದರು.

ಹುಣಸೂರು, ನಾಗಮಂಗಲ ಮತ್ತು ನಂಜನಗೂಡು ತಾ|| ಮೆಂಬರುಗಳ ಅರಿಕೆ—ತರೀಕಂದಾಯ ವಿಧಾಯಕವಾಗಿರುವ ಭೂಮಿಗಳಿಗೆ ನಾಲಾಗಳಿಂದ ಸಾಕಾದಷ್ಟು ನೀರು ಬಿಡಲ್ಪಡದಿದ್ದರೆ ಮತ್ತು 4 ಆಣೆಗಿಂತ ಕಡಮೆ ಬೆಳೆ ಆದರೆ ಖುಷ್ಕಿಕಂದಾಯವಿಧಿಸಲ್ಪಟ್ಟು ತೆಗೆದುಕೊಳ್ಳಲ್ಪಡಬೇಕು. ಕೆರೆಯಕೆಳಗಿನ ಭೂಮಿಗಳಿಗೆ ನೀರೊದಗಲಿ ಒದಗದಿರಲಿ ತರೀಕಂದಾಯವಿಧಿಸಲ್ಪಡುವುದು. ಅನೇಕ ಕೆರೆಗಳಲ್ಲಿ ನೀರಿಲ್ಲದಿರುವುದರಿಂದ ಎಷ್ಟೋ ವರ್ಷಗಳಿಂದ ಖುಷ್ಕಿಫಸಲಿಡಲ್ಪಡುತ್ತಿದ್ದಾಗ್ಯೂ ತರೀಕಂದಾಯವು ವಿಧಿಸಲ್ಪಡುತ್ತಿದೆ. ಇದು ರೈತರಿಗೆ ಬಹಳ ಅನ್ಯಾಯವಾಗಿರುವುದರಿಂದ ಅಂತಹ ಭೂಮಿಗಳಲ್ಲಿ ತರೀಫಸಲಿಡಲ್ಪಟ್ಟಾಗ ಮಾತ್ರ ತರೀಕಂದಾಯವನ್ನೂ, ಖುಷ್ಕಿಫಸಲಿಡಲ್ಪಟ್ಟಾಗ್ಯೆ ಖುಷ್ಕೀಕಂದಾಯವನ್ನು ವಿಧಿಸುವಂತಾಗಬೇಕು. ರೆವಿನ್ಯೂಕಮಿಷನರುತ್ತರ—ಕೆರೆಗಳಾಗಲಿ ನಾಲೆಗಳಾಗಲಿ ಒಡೆದು ಹೋಗಿದ್ದವೇಳೆಯಲ್ಲಿ ಅರ್ಧ ತರೀಕಂದಾಯವಿಧಿಸಲ್ಪಡುತ್ತಿರುವುದರಿಂದ ಅರಿಕೆಯನ್ನು ನೆರವೇರಿಸಲಾಗುವುದಿಲ್ಲ.

ಬೇಲೂರು ತಾ|| ಮ|| ದ್ಯಾವೇಗೌಡರ ಅರಿಕೆ—ಬೇಸಾಯಗಾರರ ಸಂಖ್ಯೆಯು ಹೆಚ್ಚಿ ಸರ್ಕಾರಕ್ಕೆ ಕಂದಾಯವು ಹೆಚ್ಚಾಗಿ ಬರುವ ಉದ್ದೇಶದಿಂದ ಭೂಮಿಯನ್ನು ಹರಾಜು ಮೊದಲಾದುದನ್ನು ಮಾಡದೆ ಮೊದಲನೇ ದರಖಾಸ್ತುದಾರನಿಗೆ ಕೊಡಿಸುವುದುತ್ತಮ. ರೆ|| ಕಮಿಷನರುತ್ತರ—ಎರಡು ತರಹೆಯ ಭೂಮಿಗಳಿವೆ. ಇವುಗಳಲ್ಲೊಂದು ಬರೀ ಅರ್ಜಿ ಬರೆದುಕೊಂಡ ಮಾತ್ರಕ್ಕೆ ಕೊಡಲ್ಪಡುವುದು, ಮತ್ತೊಂದು ಹರಾಜಿನಲ್ಲಿ ಹೆಚ್ಚು ದರಖಾಸ್ತುದಾರನಿಗೆ ಕೊಡಲ್ಪಡುವುದು. ದರಖಾಸ್ತುಗಳು ಬಂದ ಕೂಡಲೆ ವಿಲೆ ಮಾಡಲ್ಪಡುವಂತೆ ಸರ್ಕಾರದಪ್ಪಣೆಮಾಡಲ್ಪಡುವುದು.

ಚೆನ್ನರಾಯಪಟ್ಟಣದ ಮ|| ನಂಜಪ್ಪನವರು—ಹಿಡುವಳಿ ಜಮಾನಿನಲ್ಲಿ ಗಂಧದ ಮರವನ್ನು ಬೆಳೆಸುವ ವಿಚಾರದಲ್ಲಿ ನಿರ್ಬಂಧವನ್ನು ಕಡಮೆಮಾಡಬೇಕು. ಈ ವಿಚಾರದಲ್ಲಿ ರೂಲ್ಸು ಬಹಳ ಕಠಿಣವಾಗಿರುವ ಪ್ರಯುಕ್ತ ರೈತರು ತಮ್ಮ ಜಮೀನುಗಳಲ್ಲಿ ಬೆಳೆಯುವ ಗಂಧದ ಸಸಿಗಳನ್ನೇ ಕಿತ್ತುಹಾಕಿಬಿಡುತ್ತಾರೆ. ಇದರಿಂದ ಸರ್ಕಾರಕ್ಕೆ ಬಹಳ ನಷ್ಟವಾಗುತ್ತಿರುವ ಪ್ರಯುಕ್ತ ನಿರ್ಬಂಧವನ್ನು ತಪ್ಪಿಸಬೇಕು. ದಿವಾನರುತ್ತರ—ಈ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿರುತ್ತದಲ್ಲದೆ ಕೂಡಲೆ ನಿರ್ಬಂಧವು ಕಡಮೆಮಾಡಲ್ಪಡುವುದು.

ಮುಳಬಾಗಲಿನ ಮ|| ಕೆ. ಶ್ಯಾಮರಾಯರ ಅರಿಕೆ—ಆದಿದ್ರಾವಿಡರಿಗು ಮತ್ತು ಆದಿಕರ್ನಾಟಕರಿಗು ಮನೆಗಳಿಲ್ಲದಿರುವುದರಿಂದ ಮನೆಕಟ್ಟಲು ಬೇಕಾದ ಮರವನ್ನು ಬೆಲೆಯಿಲ್ಲದೆ ಕೊಡಿಸಿಕೊಡಬೇಕು. ದಿವಾನರುತ್ತರ—ಆಯಾ ಡಿಸ್ಟ್ರಿಕ್ಟಿನ ಡೆ|| ಕಮಿಷನರು ಈ ವಿಚಾರದಲ್ಲಿ ಆವಶ್ಯಕವಾದ ಸಹಾಯವನ್ನು ಮಾಡುವರು ಎಂದು ಹೇಳಿದುದಲ್ಲದೆ, ಮನೆ ಕಟ್ಟಲು ಅವಶ್ಯವಾದ ಮರವನ್ನು ಫಾರೆಸ್ಟು ಅಧಿಕಾರಿಗಳೇ ಡೆ|| ಕಮಿಷನರ ಸಿಫಾರ್ಸಿನಮೇಲೆ ಉಚಿತವಾಗಿ ಕೊಡುವಂತೆ ಮಾಡಬೇಕೆಂಬ ಮ|| ಅನಂತಯ್ಯನವರು ಕೊಟ್ಟ ಸೂಚನೆಯನ್ನು ಅನುಮೋದಿಸಿದರು.

ಮೈಸೂರು ಪ್ರಜಾಪ್ರತಿನಿಧಿಸಭೆಯ ದಸರಾ ಅಧಿವೇಶನದಲ್ಲಿ

ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ

೧೯೨೬ ನೆಯ ಇಸವಿ ಅಕ್ಟೋಬರ್ ೧೮ ನೆಯ ತಾರೀಖು.

ಒಂದನೆಯ ಭಾಗ.

ಮಹನೀಯರೆ,

ಆಳುತ್ತಿರುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರ್‌ರವರ ಆಜ್ಞಾನುಸಾರವಾಗಿ, ತಮ್ಮೆಲ್ಲರನ್ನೂ, ಮತ್ತೊಂದು ಅಧಿವೇಶನಕ್ಕೆ ಆದರದಿಂದ ಬರಮಾಡಿಕೊಳ್ಳುವ ಭಾಗ್ಯವು, ನನಗೆ ಲಭಿಸಿರುತ್ತದೆ.

ದಸರಾ ಅಧಿವೇಶನದಲ್ಲಿ ಅದರ ಹಿಂದಣ ಸರ್ಕಾರೀ ಸಾಲಿನಲ್ಲಿ ನಡೆದ ಆಡಳಿತಗಳ ಮತ್ತು ಆಯವ್ಯಯಗಳ ವಿಮರ್ಶೆಯೊಂದನ್ನು ಪ್ರಜಾಪ್ರತಿನಿಧಿಸಭೆಯವರಿಗೆ ಒಪ್ಪಿಸುವ ಪದ್ಧತಿಯಿದೆಯಷ್ಟೆ. ನಾನೂ ಅದನ್ನೇ ಅನುಸರಿಸುತ್ತೇನೆ. ಆದರೆ, ಸದ್ಯದಲ್ಲಿ ಅತಿಮುಖ್ಯವಾದ ಕೆಲವು ಬಾಬುಗಳನ್ನು ಮಾತ್ರವೇ ಪ್ರಸ್ತಾಪಿಸುತ್ತೇನೆ. ತಪಶೀಲು ವಿವರವನ್ನು ಈ ಭಾಷಣದ ಎರಡನೆಯ ಭಾಗದಲ್ಲಿ ತಿಳಿಸಬೇಕೆಂದು ಉದ್ದೇಶಿಸಿರುತ್ತೇನೆ.

ನಾನು ಇದೇ ಸಭೆಯ ಕಳೆದ ಅಧಿವೇಶನದಲ್ಲಿ ಭಾಷಣಮಾಡಿ, ಇಲ್ಲಿಗೆ ನಾಲ್ಕು ತಿಂಗಳುಗಳಾದುವು. ನನ್ನ ಮನಸ್ಸಿಗೇನೋ ಕಾಲಚಕ್ರವು ಇಷ್ಟು ಬೇಗನೆ, ಇಷ್ಟೊಂದುಮಟ್ಟಿಗೆ, ನಿಜವಾಗಿಯೂ ಉರುಳಿಹೋಯಿತೇ, ಎನ್ನಿಸುತ್ತದೆ. ಮಾಡಬೇಕಾದ ಕೆಲಸವೇನೋ ಅತಿ ಹೆಚ್ಚಾಗಿದೆ. ಆದರೆ, ಕಾಲವು ಮಾತ್ರ ಬಹಳ ಸ್ವಲ್ಪವಾಗಿದೆ. ಆದಕಾರಣ, ಕೆಲಸಮಾಡುವಲ್ಲಿ, ಕಾಲವು ಕಳೆದುದೇ ಗೋಚರಕ್ಕೆ ಬರುವುದಿಲ್ಲ. ಈ ನಾಲ್ಕು ತಿಂಗಳುಗಳೂ ನಾಲ್ಕು ವಾರಗಳಂತೆ ಕಳೆದುಹೋಗಿರುವಹಾಗೆ ನನ್ನ ಮನಸ್ಸಿಗೆ ತೋರುತ್ತದೆ ಕಳೆದ ಅಧಿವೇಶನದಲ್ಲಿ ನಾನು ಭಾಷಣಮಾಡಿದಾಗ್ಗೆ, ಎರಡು ವಿಷಯಗಳನ್ನು ವಿವರಿಸಿ ಹೇಳಿದ್ದೆನು ; ಮೊದಲನೆಯದು, ನಾವು ಯಾವಯಾವ ಉದ್ದೇಶಗಳಿಂದ ಕಾರ್ಯಗಳನ್ನು ನೆರವೇರಿಸಬೇಕಾಗಿದ್ದಿತೆಂಬುದು ; ಎರಡನೆಯದು, ಸಂಸ್ಥಾನದ ಆಡಳಿತಗಳನ್ನು ನಡೆಸುವುದರಲ್ಲಿ ಯಾವಯಾವ ಧ್ಯೇಯತತ್ವಗಳನ್ನಿಟ್ಟುಕೊಂಡು ಅವುಗಳನ್ನು ಸಾಧಿಸಬೇಕೆಂಬುದು ; ಇವೆರಡನ್ನೂ ಕುರಿತು ನಾನು ಆಗ್ಗೆ ಪ್ರಸ್ತಾಪಿಸಿದ್ದೆನು. ಎಲ್ಲಕ್ಕಿಂತಲೂ ಮೊದಲು ಪರ್ಯಾಲೋಚಿಸಬೇಕಾಗಿದ್ದ, ಕೆಲವು ಪ್ರಾಮುಖ್ಯ ವಿಚಾರಗಳಿಗೆ ಗಮನಕೊಟ್ಟು, ಅವುಗಳನ್ನು ಪರಿಶೀಲಿಸುವುದರಲ್ಲೇ ಅಲ್ಲಿಂದೀಚೆಗೆ ನಮ್ಮ ಕಾಲವೆಲ್ಲಾ ಬಹುಮಟ್ಟಿಗೆ ಕಳೆದುಹೋಯಿತು. ಬೆಂಗಳೂರುಪಟ್ಟಣಕ್ಕೆ ತಕ್ಕಷ್ಟು ನೀರನ್ನು ಒದಗಿಸಬೇಕಾದ ವಿಷಯವು ಇವುಗಳಲ್ಲೆಲ್ಲಾ ಅತಿಶೀಘ್ರವಾಗಿ ವ್ಯವಸ್ಥೆಯಾಗಬೇಕಾದುದು. ಈ ವಿಷಯವನ್ನು ಪರಿಶೀಲಿಸಲು ವಿಶೇಷ ಪರಿಶ್ರಮವುಳ್ಳ ದೊಡ್ಡಮನುಷ್ಯರನ್ನು ಸೇರಿಸಿ, ಒಂದು ಕಮಿಟಿಯನ್ನು ಏರ್ಪಡಿಸಲಾಗಿದೆ. ಅವರು ಇದಕ್ಕೆ ಸಂಬಂಧಪಟ್ಟ ಅಂಶಗಳನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚಿಸುತ್ತಾ ಇದ್ದಾರೆ. ಅವರು ತಮ್ಮ ಚರ್ಚೆಗಳನ್ನೆಲ್ಲಾ ಮುಗಿಸಿ ಇನ್ನು ಸ್ವಲ್ಪಕಾಲದಲ್ಲಿಯೇ ಸರ್ಕಾರದವರಿಗೆ ತಮ್ಮ ಸಲಹೆಗಳನ್ನೊಪ್ಪಿಸುವರೆಂದು ತೋರುತ್ತದೆ. ಈಚೆಗೆ, ಕಾಲಕ್ಕೆ ಸರಿಯಾಗಿ ಮಳೆಗಳು ಬಿದ್ದುವು ; ಆದಕಾರಣ, ನಮ್ಮ ಸದ್ಯದ ಆತಂಕವು ಪರಿಹಾರವಾಯಿತು. ಇದನ್ನು ತಿಳಿಸಲು ಸಂತೋಷವಾಗುತ್ತದೆ. ಕೃಷ್ಣರಾಜಸಾಗರದಿಂದ ಮೇಲುಮಟ್ಟದ ನಾಲೆಗಳನ್ನು ಏರ್ಪಡಿಸಿ, ನೀರಾವರಿಯನ್ನು ಬಡಾವಣೆಗೊಳಿಸುವ ವಿಷಯದಲ್ಲಿ ಮುಂದಣ ಕ್ರಮಗಳನ್ನು ಜರುಗಿಸಬೇಕಾಗಿದೆ. ಇದೂ ಒಂದು ಪ್ರಾಮುಖ್ಯ ವಿಷಯವೆಂಬುದೇನೋ ನಿಜ ; ಆದರೂ, ಇದನ್ನು ಕೇವಲ ಶೀಘ್ರವಾಗಿ ನಡೆಸಬೇಕಾದ ಆವಶ್ಯಕತೆಯಿಲ್ಲ. ಈ ವಿಚಾರವೂ ಕೂಡ, ಒಂದು ಕಮಿಟಿಯವರ ಪರ್ಯಾಲೋಚನೆಯಲ್ಲಿದೆ. ನೀರಾವರಿಯ ವಿಚಾರಗಳಲ್ಲಿ ವಿಶೇಷ ನಿಪುಣರಾಗಿರತಕ್ಕವರು ಅದರಲ್ಲಿ ಸಭಿಕರಾಗಿದ್ದಾರೆ. ಸರ್ ಎಂ. ವಿಶ್ವೇಶ್ವರಯ್ಯನವರು ಈ ಕಮಿಟಿಗೆ ಅಧ್ಯಕ್ಷರಾಗಿದ್ದಾರೆ. ಇತರ ಕೆಲವು ವಿಚಾರಗಳು, ಎಂದರೆ, ಬಹುಕಾಲದಿಂದಲೂ ನಡೆದು ಬಂದಿರುವ ಅನ್ನಛತ್ರಗಳನ್ನು ಅತ್ಯುತ್ತಮರೀತಿಯಲ್ಲಿ ಉಪಯೋಗಮಾಡಿಕೊಳ್ಳುವಕ್ರಮ, ಶಾನುಭೋಗರು ಹಿಸ್ಸೇ ಪಟ್ಟಿಗಳನ್ನು ಇಡುವಂತೆ ವಿಧಾಯಕವಮಾಡುವುದು ; ಸಂಸ್ಥಾನದಲ್ಲಿ ಗೋವಧೆಯು ನಡೆಯಕೂಡದೆಂದು ನಿರೋಧಿಸಿ, ಕಾನೂನನ್ನು ರಚಿಸುವುದು , ಸುಂಕದ ಕಟ್ಟೆಗಳನ್ನು ಸರಿಯಾದ ಸ್ಥಳಗಳಲ್ಲಿಡಿಸುವುದು ; ಇವೇ ಮುಂತಾದ ವಿಷಯಗಳು ಪರ್ಯಾಲೋಚನೆಯಲ್ಲಿವೆ. ಇವುಗಳನ್ನೆಲ್ಲಾ ಪರಿಶೀಲಿಸಿ ಸಲಹೆಗಳನ್ನೊಪ್ಪಿಸಲು, ಬೇರೆಬೇರೆ ಕಮಿಟಿಗಳು ನೇಮಕಮಾಡಲ್ಪಟ್ಟಿವೆ. ಇವುಗಳಲ್ಲಿ, ಕೆಲವು ಕಮಿಟಿಯವರು, ತಮ್ಮ ಸಲಹೆಯ ಬಗ್ಗೆ ವಹಿಸಲ್ಪಟ್ಟಿದ್ದ ವಿಷಯಗಳನ್ನು, ಈ ಮೊದಲೇ ವಿಮರ್ಶೆಮಾಡಿದ್ದಾರೆ. ಉಳಿದ ಕಮಿಟಿಗಳವರು ತಮ್ಮ ಪರ್ಯಾಲೋಚನೆಗೆ ವಹಿಸಲ್ಪಟ್ಟಿರುವ ವಿಷಯಗಳನ್ನು ಪರಿಶೀಲಿಸುತ್ತಾ ಇದ್ದಾರೆ. ಗ್ರಾಮ ಪಂಚಾಯತಿರೆಗ್ಯುಲೇಷನನ್ನು ಅತ್ಯುತ್ತಮರೀತಿಯಲ್ಲಿ ಆಚರಣೆಗೆ ತರುವ ಮಾರ್ಗವಾವುದೆಂಬ ವಿಚಾರದಲ್ಲಿ ಸರ್ಕಾರದವರು ತನಿಖೆಗಳನ್ನು ನಡೆಸುತ್ತಾ ಇದ್ದಾರೆ.

ಸಂಸ್ಥಾನದ ಮೇಲ್ಮೆಗಾಗಿ ಅನೇಕ ಭಾರಿಭಾರಿ ವಿಷಯಗಳನ್ನು ಪರಿಶೀಲಿಸಿ ವ್ಯವಸ್ಥೆಮಾಡಬೇಕಾಗಿದೆ. ಸಂಸ್ಥಾನದಲ್ಲಿ ಅತ್ಯಂತ ಪ್ರಾಜ್ಞರೆನಿಸಿದವರು, ಈ ಕೆಲಸಕ್ಕೆ ನೆರವಾಗಿ, ಸರ್ಕಾರದವರಿಗೆ ಸಲಹೆ ಹೇಳಲು ಅವಕಾಶವನ್ನು ಕಲ್ಪಿಸುವುದು ಆವಶ್ಯಕವಾಗಿದೆ. ಈ ಉದ್ದೇಶವು ನೆರವೇರುವುದಕ್ಕಾಗಿ, ಸಂಪದಭಿವೃದ್ಧಿ ಸಮಾಜವನ್ನು ಮತ್ತೆ ಉಜ್ಜೀವನಗೊಳಿಸಲಾಯಿತು. ಈಚೆಗೆ, ಅದರ ಒಂದು ಅಧಿವೇಶನವೂ ನಡೆಯಿತು. ಆಗ್ಗೆ, ಸಭಿಕರೆಲ್ಲರೂ ದಯೆಮಾಡಿಸಿದ್ದರು. ಕೇವಲ ಸ್ವಾರಸ್ಯವಾದ ಕೆಲವು ಚರ್ಚೆಗಳು ನಡೆದುವು. ಇವುಗಳಿಂದ ಪ್ರಯೋಜನವಾಗದೆ ಇರಲಾರದೆಂದು, ನಾನು ನಂಬಿರುತ್ತೇನೆ. ಸಂಪದಭಿವೃದ್ಧಿಸಮಾಜದಲ್ಲಿ ಈ ಸಭೆಯವರ ಪ್ರತಿನಿಧಿಗಳೂ ಮೆಂಬರುಗಳಾಗಿದ್ದಾರೆ. ಸಮಾಜದವರಿಗೆ ಇನ್ನು ಮುಂದೆ ಇನ್ನೂ ಭಾರಿಭಾರಿ ಕೆಲಸಗಳನ್ನು ವಹಿಸಬೇಕೆಂಬುದಾಗಿ, ಸರ್ಕಾರದವರು ಉದ್ದೇಶಿಸಿರುತ್ತಾರೆ. ಈ ಕೆಲಸಗಳು ಯಾವುವೆಂಬುದನ್ನು ಮುಂದೆ ತಿಳಿಸುತ್ತೇನೆ.

ನ್ಯಾಯವಿಧಾಯಕಸಭೆ.

1925-26 ನೆಯ ಸಾಲಿನಲ್ಲಿ ನ್ಯಾಯವಿಧಾಯಕಸಭೆಯ ಮೂರು ಅಧಿವೇಶನಗಳು ನಡೆದುವು. ಎಂದಿನಂತೆಯೇ ಈ ಅಧಿವೇಶನಗಳಲ್ಲಿ ನಾನಾವಿಧವಾದ ಕೆಲಸಗಳು ನಡೆದುವು ; ಮತ್ತು ಕೆಲಸವು ಎಂದಿನಂತೆಯೇ, ಹೆಚ್ಚಾಗಿಯೂ ನಡೆಯಿತು. ಹನ್ನೆರಡು ರೆಗ್ಯುಲೇಷನುಗಳು ಅನುಮೋದಿಸಲ್ಪಟ್ಟುವು. ಅವುಗಳಿಗೆ ಶ್ರೀಮನ್ಮಹಾರಾಜರವರ ಮಂಜೂರಾತಿಯನ್ನು ಪಡೆಯಲಾಯಿತು. ಅವುಗಳಲ್ಲಿ ಮುಖ್ಯವಾದುವುಗಳು ಯಾವುವೆಂದರೆ :—

1. ಮೈಸೂರುಸಂಸ್ಥಾನದಲ್ಲಿ ಜಾರಿಯಲ್ಲಿರುವ ರೀಫ್ಯಾ ಇಂಡಿಯನ್ ಪೀನಲ್‌ಕೋಡನ್ನು ಮತ್ತಷ್ಟು ತಿದ್ದುಪಾಟುಮಾಡುವ ರೆಗ್ಯುಲೇಷನು. 2. ಕಾರ್ಖಾನೆಗಳ ರೆಗ್ಯುಲೇಷನನ್ನು ತಿದ್ದುಪಾಟುಮಾಡುವ ರೆಗ್ಯುಲೇಷನು. 3. ಸಿವಿಲ್ ಪ್ರೊಸೀಜರ್ ಕೋಡನ್ನು ಮತ್ತಷ್ಟು ತಿದ್ದುಪಾಟುಮಾಡುವ ರೆಗ್ಯುಲೇಷನು. 4. ಮೈಸೂರು ಅಫೀಸೆಸ್ಸು ರೆಗ್ಯುಲೇಷನು. 5. ಹತ್ತಿಯ ಸನಸುಗಳ ಮೇಲಣ ಸುಂಕದ ವಸೂಲಾತಿಯನ್ನು ತಾತ್ಕಾಲಿಕವಾಗಿ ಹಿಡಿದ
ತಕ್ಕ ರೆಗ್ಯುಲೇಷನು. (ಜರೂರಾತಿ ರೆಗ್ಯುಲೇಷನಿನಂತೆ ಇದು ಮಂಜೂರುಮಾಡಲ್ಪಟ್ಟಿತು.)

ಲೋಕಲ್ ಬೋರ್ಡುಗಳು.

ಡಿಸ್ಟ್ರಿಕ್ಟುಬೋರ್ಡ್ ರೈಲುಗಳ ವಿಷಯದಲ್ಲಿ ಸರ್ಕಾರದವರು ಯಾವರೀತಿಯ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬ ವಿಷಯವು, ಬಹುಕಾಲದಿಂದಲೂ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದಿತು. ಅದನ್ನು ನಿರ್ಧರವಾಗಿ ಗೊತ್ತುಮಾಡಿ, ಅದರ ಷರತ್ತುಗಳನ್ನು ಈಚೆಗೆ ಪ್ರಕಟಿಸಲಾಗಿದೆ. ಸುಂಕಗಳನ್ನು ಹಾಕುವುದು ; ಎಲ್ಲೆಲ್ಲಿ ಸುಂಕದ ಕಟ್ಟೆಗಳನ್ನು ಸ್ಥಾಪಿಸಬೇಕೆಂಬುದನ್ನು ನಿರ್ಧರಿಸುವುದು : ಇವೇ ಮುಂತಾದ ವಿಚಾರಗಳಲ್ಲಿ ಡಿಸ್ಟ್ರಿಕ್ಟು ಬೋರ್ಡುಗಳಿಗೂ, ಮತ್ತು ಮ್ಯುನಿಸಿಪಲ್ ಕೌನ್ಸಿಲುಗಳಿಗೂ, ಇರತಕ್ಕ ಹಕ್ಕುಗಳ ವಿಷಯವಾಗಿ ವಿವಾದಗಳುಂಟಾಗಿವೆ. ಈ ವಿವಾದಗಳನ್ನು ವ್ಯವಸ್ಥೆಮಾಡುವ ವಿಚಾರವನ್ನು ಪರ್ಯಾಲೋಚಿಸಲು, ಸರ್ಕಾರದವರು ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ. ಸಂಸ್ಥಾನದಲ್ಲಿ ಸುಂಕದ ಕಟ್ಟೆಗಳನ್ನು ಹೆಚ್ಚಿಸುವ ವಿಚಾರವನ್ನು ಪರ್ಯಾಲೋಚಿಸಿ ವರದಿಯನ್ನೊಪ್ಪಿಸಲು, ಒಂದು ಕಮಿಟಿಯು ನೇಮಕಮಾಡಲ್ಪಟ್ಟಿದೆ. ಸುಂಕದ ಕಟ್ಟೆಗಳನ್ನು ಹೆಚ್ಚಿಸಿದರೆ, ಹೆಚ್ಚು ವರಮಾನವು ಬರುವಂತಾಗುತ್ತದೆ. ಈ ಹೆಚ್ಚು ವರಮಾನವನ್ನು ಹಳೆಯರಸ್ತೆಗಳನ್ನು ಮೇಲ್ಪಡಿಸುವುದಕ್ಕೂ, ಮತ್ತು ಹೊಸರಸ್ತೆಗಳನ್ನು ಏರ್ಪಡಿಸುವುದಕ್ಕೂ, ಉಪಯೋಗಿಸಬೇಕೆಂಬುದಾಗಿ ಉದ್ದೇಶಿಸಲಾಗಿದೆ.

ಲ್ಯಾಂಡ್ ರೆವಿನ್ಯೂ ಬಾಬು.

ಪ್ರಸಕ್ತಸಾಲಿನಲ್ಲಿ ಕಾಲಸ್ಥಿತಿಗಳು, ಒಟ್ಟಿನಲ್ಲಿ ಸಮರ್ಪಕವಾಗಿದ್ದುವು; ಆದಾಗ್ಯೂ, ಕೆಲವು ಪ್ರದೇಶಗಳಲ್ಲಿ, ಸರಾಸರಿ, ಎಂದಿನಂತೆ ಮಳೆಯು ಬೀಳಲಿಲ್ಲ. ಅದರ ಹಿಂದಣ ವರುಷದಲ್ಲಿ ಸಂಭವಿಸಿದ್ದಂತೆ ಸಂಸ್ಥಾನದ ಯಾವ ಭಾಗದಲ್ಲಿಯೂ ಕೂಡ, ಅಭೂತಪೂರ್ವವಾದ ಭಾರಿಪ್ರವಾಹಗಳು ಬಂದು ನಷ್ಟವೇನೂ ಸಂಭವಿಸಲಿಲ್ಲ.

ನಾನಾ ಡಿಸ್ಟ್ರಿಕ್ಟುಗಳಲ್ಲಿಯೂ, ನೀರಾವರಿ ಸೆಸ್ಸಿನಿಂದ ವರಮಾನವು ಬರುತ್ತಿರುವುದು ಸರಿಯಷ್ಟೆ. ಇದರ ಬಾಬತು ಒಟ್ಟಿನಲ್ಲಿ ಮಿಗುತಾಯವಾಗುವ ಶಿಲ್ಕು ಮೊಬಲಗನ್ನು ವೆಚ್ಚಮಾಡುವ ವಿಷಯವಾಗಿ, ಈ ಸಭೆಯ ಕಳೆದ ಅಧಿವೇಶನದಲ್ಲಿ ವಿಶೇಷ ಚರ್ಚೆಯು ನಡೆಯಿತು. ನೀರಾವರಿಯ ಕಾಮುಗಾರಿಗಳ ವಿಷಯದಲ್ಲಿ, ಮತ್ತಷ್ಟು ಕಾರ್ಯಕಾರಿಯಾದ ಏರ್ಪಾಡುಗಳನ್ನು ಕೈಗೊಳ್ಳಲಾಗುವುದೆಂದು, ಆಗ್ಗೆ ವಾಗ್ದಾನಮಾಡಲಾಗಿದ್ದಿತು. ಅದಕ್ಕನುಗುಣವಾಗಿ ಭಾರಿ ಕೆರೆಕಟ್ಟೆಗಳೇ ಮುಂತಾದವುಗಳ ದುರಸ್ತಿ ಕಾಮಗಾರಿಗಳು ಮೂರುವರುಷದ ಅವಧಿಯಲ್ಲಿ ಮುಗಿಯುವ ಒಂದು ಏರ್ಪಾಡನ್ನು, ಸರ್ಕಾರದವರು ಮಂಜೂರುಮಾಡಿದ್ದಾರೆ. ಈ ವಿಷಯವು ತಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಬಹುದು. ದುರಸ್ತಿ ಕಾಮುಗಾರಿಗಳು ಅತಿಶೀಘ್ರವಾಗಿ ನಡೆಯುವುದು ಆವಶ್ಯಕವಾಗಿರುವ, ಕೆರೆಗಳನ್ನು ಗೊತ್ತುಮಾಡಿ, ಒಂದು ಪಟ್ಟಿಯನ್ನು ಹಾಕಲಾಗಿದೆ. ಆ ಕೆರೆಗಳಲ್ಲಿ ಮುಕ್ಕಾಲುಮೂರುವೀಸ ಪಾಲಿನವುಗಳನ್ನು ಮೂರುವರುಷದೊಳಗಾಗಿಯೇ ಜೀರ್ಣೋದ್ಧಾರಮಾಡಲು ಏರ್ಪಾಡು ಮಾಡಲಾಗುವುದು. ಉಳಿದವುಗಳ ವಿಷಯದಲ್ಲಿ, ನಾಲ್ಕರಿಂದ ಆರುವರುಷಗಳ ಅವಧಿಯಲ್ಲಿ, ದುರಸ್ತಿಯ ಕಾಮುಗಾರಿಗಳನ್ನು ನೆರವೇರಿಸಲು ಪ್ರಯತ್ನಿಸಲಾಗುವುದು. ಚಾಲ್ತಿಸಾಲಿನಲ್ಲಿ ಈ ಕೆಲಸಕ್ಕಾಗಿ 2,61,000 ರೂಪಾಯಿಗಳನ್ನು ಒದಗಿಸಲಾಗುತ್ತದೆ. ಮುಂದೆ ಮೂರು ವರುಷಗಳಕಾಲ, 3 ಲಕ್ಷ ರೂಪಾಯಿಗಳಿಂದ ಹಿಡಿದು 3½ ಲಕ್ಷ ರೂಪಾಯಿಗಳವರೆಗೂ, ಸಾಧ್ಯವಾದಷ್ಟು ಮೊಬಲಗನ್ನು ಒದಗಿಸುತ್ತಾ ಬರುತ್ತೇವೆ. ನೀರಾವರಿ ತೆರಿಗೆಯ ಬಾಬಿನಲ್ಲಿ ಈ ಮೊದಲೇ 10 ಲಕ್ಷ ರೂಪಾಯಿಗಳು ಶೇಖರವಾಗಿವೆ. ಈ ವಿಷಯವು ತಮ್ಮೆಲ್ಲರಿಗೂ ತಿಳಿದೇ ಇದೆ. ಈ ಮೊಬಲಗಿನ ಜತೆಗೆ ಒದಗಿಸಬೇಕಾಗುವ ಉಳಿದ ಹಣವನ್ನು, ಮುಂದೆ ಯಥಾಕಾಲದಲ್ಲಿ ಕೊಡುತ್ತೇವೆ.

ಬೆಂಗಳೂರಿನಲ್ಲಿ ಕೂಲಿಯವರಿಗೆ ಸಂಭವಿಸಿದ ತೊಂದರೆಗಳು.

ಬೆಂಗಳೂರಿನಲ್ಲಿ ಕೂಲಿಯವರಿಗೆ ವಿಶೇಷ ತೊಂದರೆಯು ಸಂಭವಿಸಿತು. ಅದು ಕೇವಲ ವಿಷಾದಕರವಾಗಿದೆ. ಈ ವಿಷಯವನ್ನು ನಾನು ಪ್ರಸ್ತಾಪಿಸಬೇಕೆಂಬುದಾಗಿ, ನೀವು ನಿರೀಕ್ಷಿಸುವಿರೆಂಬುದು ನನಗೆ ಗೊತ್ತಿದೆ. ಕೂಲಿಯವರ ಯೋಗಕ್ಷೇಮವನ್ನು ಕಾಪಾಡುವುದು ; ಅವರಿಗೆ ತೊಂದರೆಗಳುಂಟಾದಾಗ ಅವರ ತೊಂದರೆಗೆ ಕಾರಣವೇನೆಂಬುದನ್ನು ತಾಳ್ಮೆಯಿಂದಲೂ, ಸಹಾನುಭೂತಿಯಿಂದಲೂ, ತನಿಖೆಮಾಡಿ ಸಹಾಯಮಾಡುವುದು ; ಇವೆರಡು ವಿಷಯಗಳಲ್ಲಿಯೂ ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಎಷ್ಟುಮಟ್ಟಿನ ಆಸಕ್ತಿಯೂ, ಉತ್ಸಾಹವೂ, ಇವೆಯೆಂಬುದನ್ನು ನಾನು ಈ ಸಭೆಯವರಿಗೆ ತಿಳಿಸಬೇಕಾದುದೇ ಇಲ್ಲ. ಬೆಂಗಳೂರಿನ ಮಿಲ್ಲುಗಳ ಕೂಲಿಯವರು ಕೆಲಸಕ್ಕೆ ಹೋಗದೆ ಮುಷ್ಕರಹಿಡಿದುಬಿಟ್ಟರು. ಕಳೆದ ಜುಲೈ ಮತ್ತು ಆಗಸ್ಟು ತಿಂಗಳುಗಳಲ್ಲಿ ಇಂಥಾ ಮುಷ್ಕರಗಳು ಮೇಲಿಮೇಲೆ ನಡೆದು, ಗಲಭೆಗಳಿಗೆ ಆಸ್ಪದವಾದುದನ್ನು ನೋಡಿ. ಸರ್ಕಾರದವರಿಗೆ ವಿಸ್ಮಯವೂ ವ್ಯಥೆಯೂ ಉಂಟಾದುವು. ಈ ವಿಧದ ಮುಷ್ಕರಗಳು ಅದೃಷ್ಟವಶದಿಂದ ಈಗ ನಿಂತುಹೋಗಿವೆ. ಕೆಲಸಗಾರರ ಯೋಗಕ್ಷೇಮದಲ್ಲಿ ಸರ್ಕಾರದವರಂತೆಯೇ ಆದರವನ್ನು ವಹಿಸುವವರೆಲ್ಲರೂ, ಕೆಲಸಗಾರರಿಗೆ ಎರಡು ವಿಷಯಗಳನ್ನು ಚೆನ್ನಾಗಿ ಮುಂದಟ್ಟುಮಾಡಿಕೊಡಬೇಕು. ಮೊದಲನೆಯದಾಗಿ, ಕೆಲಸಗಾರರೆಲ್ಲರೂ ಸಂಘರೂಪದಲ್ಲಿ ನಿಂತು ಕೆಲಸಮಾಡಿದರೆ, ಅವರ ಉದ್ದೇಶಗಳು ತಪ್ಪದೆ ನೆರವೇರುವುವೆಂಬ ವಿಷಯ ; ಎರಡನೆಯದಾಗಿ, ಸಿಟ್ಟಿಗೆ ಅವಕಾಶಕೊಟ್ಟು ದಾಂಧಲೆಯನ್ನು ನಡೆಸುವುದು, ಶುದ್ಧ ಅವಿವೇಕವೆಂಬ ವಿಷಯ ; ಇವೆರಡನ್ನೂ ಅವರಿಗೆ ಚೆನ್ನಾಗಿ ಬೋಧಿಸಬೇಕೆಂಬುದಾಗಿ ನನ್ನ ಬಿನ್ನಹ.

ಬಿನ್ನಿಮಿಲ್ಲಿನಲ್ಲಿ ನಡೆದ ಗಲಭೆ.

ಕಾನೂನುಪ್ರಕಾರ ಆಡಳಿತಗಳನ್ನು ನಡೆಸಲು ಉತ್ತರವಾದಿಗಳಾದ ಅಧಿಕಾರಿಗಳು, ಇದರ ಸಂಬಂಧದಲ್ಲಿ, ಬಲಪ್ರಕಾಶಮಾಡುವುದು, ಕೇವಲ ಅವಶ್ಯವಾಗಿ ಪರಿಣಮಿಸಿತು. ಈ ವಿಷಯದಲ್ಲಿ ಸರ್ಕಾರದವರು ಒಂದು ಹುಕುಮನ್ನು ಸಾದರುಮಾಡಿರುತ್ತಾರೆ. ಆದಕಾರಣ, ನಾನು ಈ ಭಾಷಣದಲ್ಲಿ ತಿಳಿಸಬೇಕಾದುದು ಮತ್ತೇನೂ ವಿಶೇಷವಾಗಿಲ್ಲ. ಇಲಾಖೆಯ ದರ್ಪವನ್ನಾಗಲಿ, ಅಥವಾ ಇತರ ದರ್ಪವನ್ನಾಗಲಿ, ಉಳಿಸಿಕೊಳ್ಳಬೇಕೆಂಬ ವಿಷಯವನ್ನೇ ಯೋಚಿಸದೆ, ನ್ಯಾಯಸಮ್ಮತವಾದ ತೀರ್ಮಾನವನ್ನು ಮಾಡಲಾಯಿತು. ಗಲಭೆಯು ನಡೆದಕೂಡಲೇ ನಾನೂ, ನನ್ನ ಸಹೋದ್ಯೋಗಿಗಳಾದ ಕೌನ್ಸಿಲಿನ ಮೊದಲನೆಯ ಮೆಂಬರವರೂ, ಬಿನ್ನಿಮಿಲ್ಲಿನಬಳಿಗೆ ಹೋಗಿ ಎಲ್ಲವನ್ನೂ ನೋಡಿದೆವು. ಮುಷ್ಕರಹಿಡಿದಿದ್ದ ಕೆಲಸಗಾರರೂ, ಪೊಲೀಸಿನವರೂ, ಮಿಲ್ಲಿನ ಅಧಿಕಾರಿಗಳೂ, ಸರ್ಕಾರಿ ಹುದ್ದೇದಾರರೂ, ಹೇಳಬೇಕೆಂದಿದ್ದುದನ್ನೆಲ್ಲಾ ಕೇಳಿದೆವು. ಅದನ್ನೆಲ್ಲಾ ಜಾಗರೂಕತೆಯಿಂದ ಪರ್ಯಾಲೋಚಿಸಿದುದಾಯಿತು. ಅಲ್ಲದೆ, ಈ ವಿಷಯದಲ್ಲಿ ಇತರ ಎಲ್ಲಾ ಸಾಕ್ಷ್ಯಗಳನ್ನೂ ಅಂಗೀಕರಿಸಿ ಪರ್ಯಾಲೋಚಿಸಲಾಯಿತು. ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಿಗೆ ವಿಶೇಷ ಕೋಪೋದ್ರೇಕ ಉಂಟಾಗಲು, ಕಾರಣವು ಖಂಡಿತವಾಗಿಯೂ ಇದ್ದಿತೆಂದು ಕಂಡುಬಂದಿದೆ. ಜನರ ಗುಂಪಿನಮೇಲೆ ಬಂದೂಕುಗಳನ್ನು ಹಾರಿಸಲು ಪ್ರಬಲವಾದ ಕಾರಣಗಳಿದ್ದುದಾಗಿ ಅವರಿಗೆ ತೋರಿಬರಬಹುದಾಗಿದ್ದುದು ಸಹಜವೆನಿಸುವಂಥಾ ಸ್ಥಿತಿಯಿದ್ದುದು

ಸಹ, ಕಂಡುಬಂದಿದೆ. ಆದರೆ, ಬಂದೂಕುಗಳನ್ನು ಹಾರಿಸುವ ವಿಷಯದಲ್ಲಿ, ಅವರು ತಕ್ಕಷ್ಟು ಜಾಗರೂಕತೆಯನ್ನೂ, ವಿವೇಚನೆಯನ್ನೂ, ತೋರ್ಪಡಿಸಿ ಕೆಲಸಮಾಡಲಿಲ್ಲವೆಂದು ತೋರುತ್ತದೆ. ಅವರ ವಿಚಾರದಲ್ಲಿ, ತಕ್ಕಂತೆ ವ್ಯವಹರಿಸಲಾಗಿದೆ. ಅವರಿಗೆ ಈಗ ವಿಧಿಸಿರುವುದಕ್ಕಿಂತಲೂ ಹೆಚ್ಚಿನ ಶಿಕ್ಷೆಯನ್ನು ವಿಧಿಸಿದ್ದರೆ, ಅದು ನ್ಯಾಯಸಮ್ಮತವೆನಿಸುತ್ತಿರಲಿಲ್ಲ. ಖಾಸಗೀ ದೊಡ್ಡಮನುಷ್ಯರಿಂದ ಈ ವಿಷಯವನ್ನೆಲ್ಲಾ ತನಿಖೆಮಾಡಿಸಬೇಕೆಂಬುದಾಗಿ ಕೆಲವರು ಸಲಹೆಮಾಡಿದರು. ಆದರೆ ಖಾಸಗೀ ದೊಡ್ಡಮನುಷ್ಯರೇ ತನಿಖೆಮಾಡಿದ್ದರೂ ಕೂಡ, ಇನ್ನೂ ನ್ಯಾಯಸಮ್ಮತವಾದ ತೀರ್ಪನ್ನಾಗಲಿ, ಅಥವಾ ಇತರ ವಿಧದ ತೀರ್ಪನ್ನಾಗಲಿ, ಅವರು ಕೊಡುವುದು ಸಾಧ್ಯವಾಗುತ್ತಿದ್ದಿತೆಂಬುದಾಗಿ, ನನಗೇನೋ ತೋರುವುದಿಲ್ಲ.

ಈ ಗಲಭೆಯಲ್ಲಿ ಕೆಲವು ಮಂದಿ ಕೆಲಸಗಾರರು ಮೃತಪಟ್ಟರು. ಇಂಥಾ ಸಂದರ್ಭಗಳಲ್ಲಿ ಸಾಧ್ಯವೆನಿಸುವಮಟ್ಟಿಗೂ, ಅವರ ಸಂಸಾರದವರಿಗೆ ತಕ್ಕಷ್ಟು ಪರಿಹಾರದ್ರವ್ಯವು ಕೊಡಲ್ಪಟ್ಟಿತು. ಇದರಿಂದ ನನ್ನ ಮನಸ್ಸಿಗೂ ತೃಪ್ತಿಯುಂಟಾಯಿತು.

ಶೋಚನೀಯವಾದ ಈ ವಿಷಯವು, ಇನ್ನು ಸಾಕು. ಮನಸ್ಸಿಗೆ ಹಿತಕರವಾಗಿರುವ ಇತರ ವಿಷಯಗಳನ್ನು ಕುರಿತು, ಮುಂದೆ ಪ್ರಸ್ತಾಪಿಸುತ್ತೇನೆ.

ರೈಲ್ವೆಯ ಬಡಾವಣೆ

ಶ್ರೀಮನ್ಮಹಾರಾಜರವರು ಕೃಪೆಮಾಡಿ, ಕಳೆದ ಆಗಸ್ಟು ತಿಂಗಳಿನಲ್ಲಿ ನಂಜನಗೂಡು-ಚಾಮರಾಜನಗರದ ರೈಲ್ವೆಯ ಸಮಾರಂಭಮಹೋತ್ಸವವನ್ನು ನೆರವೇರಿಸಿದರು. ಕಳೆದ 35 ವರುಷಗಳಿಂದಲೂ, ಆ ವಿಷಯದಲ್ಲಿ ಸರ್ಕಾರದವರು ದೀರ್ಘಾಲೋಚನೆಯಿಂದ ಚರ್ಚೆಯನ್ನು ನಡೆಸಿದ್ದರು. ಆದಾಗ್ಯೂ, ಆದಿಯಲ್ಲಿ ಸಂಕಲ್ಪಿಸಿದ್ದುದರ ಪೈಕಿ, ಅಷ್ಟು ಸ್ವಲ್ಪ ರೈಲುಮಾರ್ಗವನ್ನು ಮಾತ್ರವೇ ಏರ್ಪಡಿಸುವುದು ಸಾಧ್ಯವಾಯಿತಲ್ಲಾ ಎಂಬುದಾಗಿ, ತಮ್ಮ ಭಾಷಣದಲ್ಲಿ ಮಹಾಸ್ವಾಮಿಯವರು ವಿಷಾದವನ್ನು ಸೂಚಿಸಿದರು. ಮಹಾಸ್ವಾಮಿಯವರ ಪ್ರಜೆಗಳೆಲ್ಲರೂ, ಈ ವಿಷಾದದಲ್ಲಿ ಭಾಗಿಗಳಾಗಿದ್ದಾರೆ. ನಂಜನಗೂಡು-ಚಾಮರಾಜನಗರದ ರೈಲುಮಾರ್ಗವನ್ನು "ಸೌತ್ ಇಂಡಿಯನ್" ರೈಲ್ವೆಯ ಮೀಟರ್ ಗೇಜ್ ಮಾರ್ಗದೊಡನೆ ಸೇರಿಸುವುದು ಸಾಧ್ಯವಾಗುವಂತೆ ಏರ್ಪಾಡು ಮಾಡಲ್ಪಟ್ಟಲ್ಲಿ, ತಮ್ಮ ಸರ್ಕಾರದವರು ಚಾಮರಾಜನಗರದಿಂದ ಮೈಸೂರು ಸಂಸ್ಥಾನದ ಸರಹದ್ದಿನವರೆಗೆ ರೈಲು ಹಾಕಿಸುವ ಕೆಲಸವನ್ನು, ಕೂಡಲೆ ಕೈಗೊಳ್ಳುವುದಾಗಿಯೂ ಸಹ, ಮಹಾಸ್ವಾಮಿಯವರು ಅಪ್ಪಣೆಕೊಡಿಸಿದರು.

ನೇರವಾದ ರೈಲುಮಾರ್ಗವು ಏರ್ಪಡುವಂತೆ ಮಾಡುವ ಈ ಉದ್ಯಮದ ವಿಚಾರದಲ್ಲಿ, ಕೊಯಮುತ್ತೂರು ಡಿಸ್ಟ್ರಿಕ್ಟು ಬೋರ್ಡಿನವರೂ, ಉದಕಮಂಡಲದ ಮುನಿಸಿಪಲ್ ಕೌನ್ಸಿಲಿನವರೂ, ತಾವು ಒತ್ತಾಸೆ ಕೊಡುವುದಾಗಿ ಉತ್ಸಾಹದಿಂದ ತಿಳಿಸಿದ್ದಾರೆ. ಈ ಅಂಶವು ಮೈಸೂರು ಸರ್ಕಾರದವರಿಗೆ ಕೇವಲ ಸಂತೋಷಕರವಾಗಿದೆ. ಈ ರೈಲುಮಾರ್ಗವನ್ನು ಏರ್ಪಡಿಸುವ ವಿಷಯದಲ್ಲಿ ಅವಶ್ಯವಾಗಿರತಕ್ಕ ಖಾತರಿ (ಗ್ಯಾರಂಟಿ) ಯನ್ನು ಕೊಡುವುದಾಗಿ ಕೊಯಮುತ್ತೂರು ಡಿಸ್ಟ್ರಿಕ್ಟು ಬೋರ್ಡಿನವರು ತಮ್ಮ ಸಮ್ಮತಿಯನ್ನು ಸೂಚಿಸಿ, ಒಂದು ನಿರ್ಣಯವನ್ನೂ ರಿಕಾರ್ಡು ಮಾಡಿರುತ್ತಾರೆ. ಮೈಸೂರು ಸಂಸ್ಥಾನದ ಸರಹದ್ದಿನಿಂದ ಆಚೆಗೆ, ಸತ್ಯಮಂಗಲದವರೆಗೆ, ಸುಮಾರು 35 ಮೈಲಿಗಳ ದೂರಕ್ಕೆ ಮಾತ್ರವೇ, ರೈಲು ಹಾಕಬೇಕಾಗುತ್ತದೆ. ಇಷ್ಟುದೂರದವರೆಗೆ ರೈಲುಹಾಕಿಸಿ, ಪ್ರಧಾನಮಾರ್ಗದ ಈ ಮುಖ್ಯಶಾಖೆಯನ್ನು ಏರ್ಪಡಿಸುವುದೇ ತಡ ; ಜನಭರಿತವಾದ ಕೊಯಮುತ್ತೂರು, ಮಧುರೆ, ತಿರುಚನಾಪಳ್ಳಿ ಮತ್ತು ತಂಜಾವೂರು ಈ ಜಿಲ್ಲೆಗಳಿಗೂ, ಮೈಸೂರು ಸಂಸ್ಥಾನಕ್ಕೂ, ಇದರಿಂದ ಕೂಡಲೆ ಪರಸ್ಪರವಾಗಿ ಪ್ರಯಾಣ ಸೌಕರ್ಯವು ಏರ್ಪಡುತ್ತದೆ ; ಇದು ಸಹಜವಾಗಿಯೇ ಇದೆ. ಅಲ್ಲದೆ, ಈ ಲೈನಿನಿಂದ ಮತ್ತೊಂದು ಭಾರಿಪ್ರಯೋಜನವೂ ಉಂಟು. ಇದನ್ನು ಏರ್ಪಡಿಸಿದರೆ, ಬೊಂಬಾಯಿನಗರದಿಂದ ಉದಕಮಂಡಲಕ್ಕೂ, ಮತ್ತು ಬೊಂಬಾಯಿನಗರದಿಂದ ಕೊಲಂಬೋವಿಗೂ, ನೇರವಾಗಿ ಪ್ರಯಾಣಮಾಡಲು ರೈಲುಮಾರ್ಗಗಳು ಒದಗುತ್ತವೆ. ಆಗ್ಗೆ, ಈಗಿರುವಂತೆ ಬಳಸಿಕೊಂಡು ಪ್ರಯಾಣಮಾಡುವ ಆವಶ್ಯಕತೆಯು ತಪ್ಪುತ್ತದೆ; ಅಲ್ಲದೆ, ಈಗಿನಂತೆ ಹೆಚ್ಚು ಕಾಲ ಪ್ರಯಾಣಮಾಡಬೇಕಾಗುವ ತೊಂದರೆಯೂ ತಪ್ಪುತ್ತದೆ. ಅಂತು, ಈ ರೀತಿ ರೈಲು ಏರ್ಪಡಬೇಕೆಂಬುದು ಮೈಸೂರು ಸರ್ಕಾರದವರಿಗೆ ಬಹುಕಾಲದಿಂದಲೂ ಇರತಕ್ಕ ಆಕಾಂಕ್ಷೆತ್ತರವಾಗಿದೆ. ಇದು ಶೀಘ್ರವಾಗಿಯೇ ನೆರವೇರುವುದೆಂಬುದಾಗಿ, ಸರ್ಕಾರದವರು ಪೂರ್ಣಭರವಸೆಯನ್ನಿಟ್ಟುಕೊಂಡಿದ್ದಾರೆ. ಇಂಡಿಯಾದೇಶದ ಈ ಭಾಗಕ್ಕೆ, ಈ ಏರ್ಪಾಡಿನಿಂದ ಎಷ್ಟೊಂದು ಉಪಕಾರವಾಗುವುದೆಂಬುದನ್ನು ಹೇಳಲು ಸಾಧ್ಯವಿಲ್ಲ. ಆದಕಾರಣ, ಸಾಧ್ಯವೆನಿಸುವಷ್ಟು ಜಾಗ್ರತೆಯಾಗಿ ಈ ಏರ್ಪಾಡು ನೆರವೇರಿದರೆ ಸಾಕೆಂಬುದೇ ಸರ್ಕಾರದವರ ಹಾರೈಕೆಯಾಗಿದೆ. ಈಗ, ಮೈಸೂರಿನಿಂದ ಸತ್ಯಮಂಗಲಕ್ಕೆ ಜನರು ಪ್ರಯಾಣಮಾಡಲನುಕೂಲಿಸುವಂತೆ, ಬಾಡಿಗೆಗೆ ಮೋಟಾರು ಬಂಡಿಗಳನ್ನು ಬಿಡುತ್ತಿದ್ದಾರೆ. ಅಲ್ಲದೆ, ಮೈಸೂರಿನಿಂದ ಉದಕಮಂಡಲಕ್ಕೆ ಅಂಚೆ, ಮೋಟಾರು ಬಸ್ಸುಗಳನ್ನು ಬಿಡಬೇಕೆಂದು, ಪೋಸ್ಟಾಫೀಸಿನ ಅಧಿಕಾರಿಗಳು ಪರ್ಯಾಲೋಚಿಸುತ್ತಿದ್ದಾರೆ. ಇವುಗಳು ಸಂತೋಷದ ಸುದ್ದಿಗಳಾಗಿವೆ. ಇದರ ಪರಿಣಾಮವಾಗಿ, ಶೀಘ್ರದಲ್ಲಿಯೇ ಬೊಂಬಾಯಿನಗರದಿಂದ ನೇರವಾದ ರೈಲುಮಾರ್ಗವು ಏರ್ಪಡುವಂತಾದೀತೆಂದು, ನಾನು ನಂಬಿದ್ದೇನೆ.

ಸಂಪದಭಿವೃದ್ಧಿ ಕಾರ್ಯಕ್ಕೆ ಸಂಬಂಧಪಟ್ಟ ಕೆಲವು ಹೊಸಮಾರ್ಗಗಳು.

ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಕೈಗೊಳ್ಳಬಹುದಾದಂಥಾ ಕೆಲವು ಹೊಸಮಾರ್ಗಗಳನ್ನು ಕುರಿತು ಪ್ರಸ್ತಾಪಿಸುವುದಾಗಿ, ತಿಳಿಸಿದ್ದೆನಷ್ಟೆ. ಅವುಗಳ ವಿಚಾರದಲ್ಲಿ ಈಗ ಕೆಲವು ಸಂಗತಿಗಳನ್ನು ತಿಳಿಸುವೆನು. ತೆರಿಗೆಗಳ ವಿಷಯದಲ್ಲಿ ತನಿಖೆಯನ್ನು ನಡೆಸುವುದೇ ಅವುಗಳಲ್ಲಿ ಮೊಟ್ಟಮೊದಲನೆಯದಾಗಿದೆ. ಆದರೆ, ತಾನು ತನಿಖೆಯ ಸುದ್ದಿಯನ್ನೆತ್ತಿದ ಕೂಡಲೆ, ತೆರಿಗೆಯನ್ನು ಹೆಚ್ಚಿಸುವ ಅಪೇಕ್ಷೆಯೇ ಇಂಥಾ ತನಿಖೆಗೆಲ್ಲಾ ಮೂಲವೆಂಬುದಾಗಿ, ತಮ್ಮೆಲ್ಲರಿಗೂ ಎಲ್ಲಿ ಅಭಿಪ್ರಾಯವುಂಟಾಗುವುದೋ ಎಂಬುದಾಗಿ, ನಾನು ಸಂದೇಹಪಡುತ್ತೇನೆ. ತಮ್ಮಲ್ಲಿ ಯಾರೂ ಆ ರೀತಿ ಭಾವಿಸಕೂಡದು. ಮಹನೀಯರೆ, ನನ್ನ ಅಭಿಪ್ರಾಯವೇ ಇಂಥಾ ಭಾವನೆಗೆ ಕೇವಲ ವಿರುದ್ಧವಾದುದು. ಇಷ್ಟಕ್ಕೂ, ತೆರಿಗೆಯನ್ನು ಯಾವುದಾದರೂ ರೀತಿಯಲ್ಲಿ ಕಡಮೆಮಾಡುವುದು ಸಾಧ್ಯವೇ ಎಂಬುದನ್ನು ಪರ್ಯಾಲೋಚಿಸಬೇಕಾದುದೇ, ಇಂಥಾ ತನಿಖೆಯ ಮುಖ್ಯೋದ್ದೇಶವಾಗಿರಬೇಕು. ಹೀಗಾಗಲೆಂಬುದೇ ನನ್ನ ಕೋರಿಕೆ. ತಾವೆಲ್ಲರೂ ಈ ಅಂಶವನ್ನು ಚೆನ್ನಾಗಿ ಗ್ರಹಿಸಬೇಕೆಂಬುದು ನನ್ನ ಬಿನ್ನಹವಾಗಿದೆ. ತೆರಿಗೆಯನ್ನು ವಿಧಾಯಕಮಾಡುವ ಕ್ರಮವು ಧರ್ಮಸಮ್ಮತವಾಗಿಯೂ, ಮತ್ತು ಯುಕ್ತವಾಗಿಯೂ, ಇರುವುದೊಂದು ; ಮತ್ತು ತೆರಿಗೆಯನ್ನು ಅವಶ್ಯಕಂಡಾಗ ಕೂಡಲೆ ಹೆಚ್ಚಿಸಲು, ತೆರಿಗೆಯ ಕ್ರಮದಲ್ಲಿ ಅವಕಾಶವಿರುವುದೊಂದು ; ಈ ಎರಡು ಲಕ್ಷಣಗಳೂ ಇರುವಂತೆ ತೆರಿಗೆಯ ಕ್ರಮವನ್ನು ಹಿತಕರರೀತಿಯಲ್ಲಿ ಏರ್ಪಡಿಸುವುದು ಅವಶ್ಯಕ. ಈ ಪ್ರಪಂಚದಲ್ಲಿರುವ ಅನೇಕ ಜನಾಂಗಗಳವರು ಈ ಅಂಶವನ್ನು ಮಂದಟ್ಟುಮಾಡಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರೂ ಸಹ, ಈ ವಿಧವಾಗಿ ಏರ್ಪಾಡು ಮಾಡಬೇಕೆಂಬುದಾಗಿ ಉದ್ದೇಶಿಸಿದ್ದಾರೆ. ಆ ಉದ್ದೇಶವು ನೆರವೇರಬೇಕೆಂಬುದಾಗಿ ಇತ್ತೀಚಿಗೆ, ತೆರಿಗೆಗಳ ವಿಷಯವನ್ನು ಪರಿಶೀಲಿಸಿ ಸಲಹೆಯನ್ನು ಒಪ್ಪಿಸಲು "ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿ" ಎಂಬ
ಒಂದು ಕಮಿಟಿಯನ್ನು ನೇಮಕ ಮಾಡಿದ್ದರು. ಸದರಿ ಕಮಿಟಿಯವರು ಒಂದು ವರದಿಯನ್ನು ಒಪ್ಪಿಸಿರುತ್ತಾರೆ. ಯಾರುಯಾರು ತೆರಿಗೆಯ ಭಾರವನ್ನು ವಹಿಸುವುದು ಯುಕ್ತವೋ, ಅವರ ವಿಷಯದಲ್ಲಿ ಮಾತ್ರವೇ. ಹೊಸಕ್ರಮದ ಪ್ರಕಾರ ತೆರಿಗೆಗಳು ವಿಧಾಯಕ ಮಾಡಲ್ಪಟ್ಟಿವೆಯೇ ಎಂಬುದೊಂದು ; ಮತ್ತು ತೆರಿಗೆಗಳಿಗೂ, ಮತ್ತು ತೆರಿಗೆಗಳನ್ನು ವಸೂಲುಮಾಡುವ ಕ್ರಮಗಳಿಗೂ, ಇರತಕ್ಕ ಪರಸ್ಪರಸಂಬಂಧವು ಇಂಡಿಯಾದೇಶದ ಈಗಿನ ಸನ್ನಿವೇಶಗಳಲ್ಲಿ ಸಾಧ್ಯವೆನಿಸುವಷ್ಟು ಮಟ್ಟಿಗೆ ಸುಸೂತ್ರವಾಗಿಯೂ ಮತ್ತು ಸರಳವಾಗಿಯೂ ಇರುವಂತೆ ಅತ್ಯುತ್ತಮ ರೀತಿಯಲ್ಲಿ ಏರ್ಪಟ್ಟಿದೆಯೇ ಎಂಬುದೊಂದು ; ಇವೆರಡು ವಿಚಾರಗಳಲ್ಲಿಯೂ ತಕ್ಕ ತೀರ್ಮಾನವನ್ನು ಮಾಡಲು ಅವಶ್ಯವಾದ ಸಂಗತಿಗಳು, ಅವರ ವರದಿಯಲ್ಲಿ ಯಥೇಷ್ಟವಾಗಿ ನಮೂದಿಸಲ್ಪಟ್ಟಿವೆ. ಕಮಿಟಿಯವರ ವರದಿಯು ಈಗ ಇಂಡಿಯಾದೇಶದ ನ್ಯಾಯವಿಧಾಯಕ ಮಂಡಲಿಯವರ ಪರ್ಯಾಲೋಚನೆಯಲ್ಲಿದೆ ; ಮೈಸೂರು ಸಂಸ್ಥಾನದಲ್ಲಿ ನಾವೂ ಕೂಡ, ಇಲ್ಲಿನ ತೆರಿಗೆಯ ಕ್ರಮವನ್ನು ಪರಿಶೀಲಿಸಲು ಉದ್ದೇಶಿಸಿದ್ದೇವೆ. ಆದರೆ, ಈ ಸಭೆಯವರು ಅದರ ವಿಷಯವನ್ನು ಪರಿಶೀಲಿಸಬೇಕೆಂದು ಕೋರಲು, ಸದ್ಯದಲ್ಲಿ ಸಾಧ್ಯವಿಲ್ಲ. ಅದಕ್ಕೆ ಇನ್ನೂ ಸ್ವಲ್ಪ ಕಾಲವು ಬೇಕು. ಈ ಭಾಗದಲ್ಲಿ, ಪ್ರಾರಂಭರೂಪವಾಗಿ ಕೆಲವು ಪರಿಶೀಲನೆಗಳು ನಡೆಯಬೇಕಾಗಿವೆ. ಅವುಗಳು ನಡೆದಲ್ಲದೆ. ಈ ಸಭೆಯವರು ತೆರಿಗೆಯ ವಿಚಾರವನ್ನು ಪರಿಶೀಲಿಸುವಹಾಗಿಲ್ಲ. ಆರಂಭರೂಪದ ಈ ಪರಿಶೀಲನೆಗಳನ್ನು ನಡೆಸಲು, ಸಂಪದಭಿವೃದ್ಧಿ ಸಮಾಜದವರೇ ತಕ್ಕವರಾಗಿದ್ದಾರೆ. ಏಕೆಂದರೆ, ಸಂಪದಭಿವೃದ್ಧಿ ಸಮಾಜದಲ್ಲಿ ಸರ್ಕಾರೀ ಅಧಿಕಾರಿಗಳೂ, ಮತ್ತು ಖಾಸಗಿ ದೊಡ್ಡಮನುಷ್ಯರೂ, ಉಭಯತ್ರರೂ, ಮೆಂಬರುಗಳಾಗಿದ್ದಾರೆ. ಸರ್ಕಾರದವರು ಅನುಸರಿಸಬೇಕೆಂದಿರುವ ನಡವಳಿಕೆಯ ಕ್ರಮವು ಯಾವುದೆಂದರೆ :—ಸರ್ಕಾರದವರು ತೆರಿಗೆಯ ಸಂಬಂಧದ ಪರಿಶೀಲನೆಗಾಗಿ ಒಬ್ಬರು ಆಫೀಸರನ್ನು ನೇಮಕ ಮಾಡುವುದು ; ಮೈಸೂರು ಸಂಸ್ಥಾನದಲ್ಲಿ ವಿಧಿಸಲ್ಪಟ್ಟಿರುವ ಪ್ರತಿಯೊಂದು ತೆರಿಗೆಗೂ, ಮತ್ತು ಹಲವು ತೆರಿಗೆಗಳ ನಾನಾ ಗುಂಪುಗಳಿಗೂ, ಸಂಬಂಧಪಟ್ಟ ವಿದ್ಯಮಾನಗಳ ಕರಾರುವಾಕ್ಕಾ ವಿವರಗಳನ್ನು ಸದರಿ ಆಫೀಸರು ಸಂಗ್ರಹಿಸಿ ಬರೆದಿಡುವುದು ; ಹಾಗೆ ಮಾಡುವುದರಲ್ಲಿ ಹಿಂದಿನ ವಿದ್ಯಮಾನಗಳನ್ನು ಮಾತ್ರವೇ ಸಂಗ್ರಹಿಸದೆ, ಆಯಾ ಕಾಲದವರೆಗಿನ ವಿದ್ಯಮಾನಗಳನ್ನೂ ಅವರು ಶೇಖರಿಸುವುದು; ಆ ಬಳಿಕ, ಪ್ರತಿಯೊಂದು ತೆರಿಗೆಯ ವಿಷಯದಲ್ಲಿಯೂ, ಅಥವಾ ಹಲವು ತೆರಿಗೆಗಳ ನಾನಾ ಗುಂಪುಗಳ ವಿಷಯದಲ್ಲಿಯೂ ಸಹ, ಇಂಡಿಯಾ ಸರ್ಕಾರದವರು ನೇಮಕಮಾಡಿದ್ದ ಕಮಿಟಿಯವರ ಸಲಹೆಗಳು, ಇಲ್ಲಿನ ಸ್ಥಿತಿಗತಿಗಳಿಗೆ ಎಷ್ಟುಮಟ್ಟಿಗೆ ಅನ್ವಯಿಸಲ್ಪಡಬಹುದೆಂಬುದನ್ನು ಸದರಿ ಆಫೀಸರು ಪರಿಶೀಲಿಸಿ ನೋಡಿ, ಆ ಬಳಿಕ ತಮ್ಮ ಸಲಹೆಗಳನ್ನು ಕೊಡುವುದು—ಈ ರೀತಿಯಾಗಿ ಸರ್ಕಾರದವರು ಏರ್ಪಾಡು ಮಾಡಬೇಕೆಂದಿದ್ದಾರೆ. ಇಷ್ಟು ಕೆಲಸಗಳೂ ನೆರವೇರಿ, ಸದರಿ ಆಫೀಸರ ಸಲಹೆಗಳು ಒಪ್ಪಿಸಲ್ಪಟ್ಟ ಬಳಿಕ, ಸರ್ಕಾರದವರು ಅವುಗಳ ವಿಚಾರದಲ್ಲಿ, ಸಂಪದಭಿವೃದ್ಧಿ ಸಮಾಜದವರ ಆಲೋಚನೆಯನ್ನು ಕೇಳುವರು. ಸಂಪದಭಿವೃದ್ಧಿ ಸಮಾಜದವರು ತಮ್ಮ ಅಭಿಪ್ರಾಯವನ್ನು ತಿಳಿಸಿದಮೇಲೆ, ಸರ್ಕಾರದವರು ನಿರ್ದಿಷ್ಟವಾಗಿ ಕೆಲವು ಸಲಹೆಗಳನ್ನು ಮಾಡಿ, ಅವುಗನಳ್ನು ಈ ಸಭೆಯವರ ಅನುಮೋದನೆಗೆ ಒಪ್ಪಿಸುವರು.

ಮತ್ತೊಂದು ಪ್ರಾಮುಖ್ಯ ವಿಚಾರದಲ್ಲಿ ಸಂಪದಭಿವೃದ್ಧಿ ಸಮಾಜದವರ ಆಲೋಚನೆಯನ್ನು ಕೇಳಬೇಕಾಗಿದೆ. ವಸ್ತುಪ್ರದರ್ಶನಗಳನ್ನು (Exhibitions) ಮತ್ತೆ ನಡೆಸುವುದು ಯುಕ್ತವಲ್ಲವೇ, ಎಂಬುದೇ ಆ ವಿಚಾರ. ಮಹನೀಯರೆ, ವಸ್ತುಪ್ರದರ್ಶಗಳಿಂದ ವಿಶೇಷ ಪ್ರಯೋಜನವುಂಟೆಂಬುದೇ ನನ್ನ ಅಭಿಪ್ರಾಯವಾಗಿದೆ. ಅದಕ್ಕೊಂದು ಕಾರಣವೂ ಇದೆ. ಉತ್ತಮವಾದ ಪದಾರ್ಥಗಳು ದೊರೆಯಬೇಕೆಂಬುದಾಗಿ ಆಸೆಪಟ್ಟಮಾತ್ರಕ್ಕೇ ಫಲವಿಲ್ಲ. ಉತ್ತಮ ವಸ್ತುಗಳು ದೊರೆಯಬೇಕಾದರೆ, ಉತ್ತಮ ವಸ್ತುಗಳಿಗೆ ಪುರಸ್ಕಾರವೂ, ಪ್ರಾಶಸ್ತ್ಯವೂ, ಉಂಟೆಂಬುದನ್ನು ತೋರ್ಪಡಿಸಬೇಕು. ಹೀಗೆ ಮಾಡುವುದೇ ಉತ್ತಮವಿಧದ ವಸ್ತುಗಳು ದೊರೆಯುವಂತೆ ಮಾಡುವ ಮುಖ್ಯಮಾರ್ಗ. ಸರ್ವೇಸಾಮಾನ್ಯವಾಗಿ ಈ ವಿಧದ ಏರ್ಪಾಡು ಆಚರಣೆಗೆ ಬಂದರೆ ಸಾಕು ; ಉತ್ತಮವಿಧದ ವಸ್ತುಗಳು ಯಥೇಷ್ಟವಾಗಿ ದೊರೆಯುವಂತಾಗುತ್ತದೆ. ಆದರೆ, ಈ ರೀತಿ ನಡೆಯಬೇಕಾದರೆ ಉತ್ತಮವಿಧದ ವಸ್ತುಗಳನ್ನು ಸಿದ್ಧಮಾಡುವವರಲ್ಲಿ ಆಸೆಯನ್ನೂ, ಮೇಲಾಟವನ್ನೂ, ಉಂಟುಮಾಡಬೇಕು. ಹೀಗೆ ಮಾಡಲು, ಉತ್ತಮವಿಧದ ವಸ್ತುಗಳಿಗೆ ಇನಾಮುಗಳೂ, ಬಹುಮಾನಗಳೂ, ದೊರೆಯುವಂತೆ ಏರ್ಪಡಿಸುವುದೇ ಅತ್ಯುತ್ತಮವಾದ ಮಾರ್ಗ. ಈ ಮಾರ್ಗವನ್ನನುಸರಿಸಿದರೆ, ಜನರಲ್ಲಿ ಸ್ಪರ್ಧೆಯು ಹುಟ್ಟುತ್ತದೆ. ಇನಾಮುಗಳನ್ನೂ, ಬಹುಮಾನಗಳನ್ನೂ ಪಡೆಯಲು ಜನರು ನಾನು ತಾನೆಂದು ಮೇಲಾಡುತ್ತಾರೆ. ಆ ಬಳಿಕ ನಮ್ಮ ಉದ್ದೇಶವು ತಪ್ಪದೆ ನೆರವೇರುವುದೆಂಬುದು ಗೊತ್ತೇ ಇದೆ.

ಜನಸಾಮಾನ್ಯದ ಸಂಪತ್ತನ್ನೂ, ತಿಳವಳಿಕೆಯನ್ನೂ ಮತ್ತು ಶೀಲಸ್ವಭಾವಗಳನ್ನೂ ಅತ್ಯಂತ ಹೆಚ್ಚಾಗಿ ಮೇಲ್ಪಡಿಸಿಕೊಂಡು ಅಭ್ಯುದಯವನ್ನು ಹೊಂದುವುದು ಸಾಧ್ಯವಾಗಿರುವುದು ಎಂಥಾ ದೇಶಗಳಲ್ಲೆಂಬುದನ್ನು ಬಲ್ಲಿರಾ ? ಯಾವ ದೇಶಗಳಲ್ಲಿ ಸಾಮರಸ್ಯದಿಂದಲೂ, ಮತ್ತು ಉತ್ತಮ ವಸ್ತುಗಳಿಗೆ ಪುರಸ್ಕಾರವನ್ನು ಕೊಡಬೇಕೆಂಬ ಕುತೂಹಲದಿಂದಲೂ, ಸಮ್ಮಿಳಿತವಾಗಿ ಕೆಲಸಮಾಡಿದರೋ, ಆ ದೇಶಗಳಲ್ಲಿ ಮಾತ್ರವೇ ಈ ರೀತಿಯಲ್ಲಿ ಅಭ್ಯುದಯವುಂಟಾಗಿರುತ್ತದೆ. ಪ್ರಪಂಚದ ಇತಿಹಾಸವನ್ನು ಓದುವುದರಿಂದ ಈ ಅಂಶವು ಗೊತ್ತಾಗುತ್ತದೆ. ಸಾಮರಸ್ಯದಿಂದ ಕೂಡಿ ಕೆಲಸ ನಡೆಸುವುದರಿಂದ, ಸಾಧನಸಂಪತ್ತುಗಳನ್ನು ಹದವರಿತು ರೂಢಿಸಲು, ಸಹಾಯವಾಗುವುದು. ಉತ್ತಮವಿಧದ ವಸ್ತುಗಳನ್ನು ಮಾತ್ರವೇ ಪುರಸ್ಕರಿಸಿ, ನಿಯತವಾದ ಪ್ರಮಾಣಕ್ಕೆ ಏರದೆ ಇರುವ ಸಾಮಾನ್ಯ ವಸ್ತುಗಳನ್ನು ಕಡ್ಡಾಯವಾಗಿ ತಿರಸ್ಕರಿಸುತ್ತಾ ಬಂದರೆ, ಪದಾರ್ಥಗಳು ಗುಣದಲ್ಲಿ ಮೇಲಾಗುವುವು. ಅದರಿಂದ ಅವುಗಳಿಗೆ ಹೆಚ್ಚು ಬೆಲೆಯು ದೊರೆಯಲು ಅನುಕೂಲವಾಗುವುದು.

ಈ ವಿಧದ ಸ್ಥಿತಿಗತಿಗಳು ನಮ್ಮ ಮೈಸೂರುಸಂಸ್ಥಾನದಲ್ಲಿಯೂ ಉಂಟಾಗುವಂತೆ ಮಾಡಿಕೊಳ್ಳುವ ಬಗೆ ಹೇಗೆಂಬುದನ್ನು ನಾವು ಪರ್ಯಾಲೋಚಿಸಬೇಕಾಗಿದೆ. ಮೊಟ್ಟಮೊದಲು ಸ್ಪರ್ಧೆಯನ್ನು ಉಂಟುಮಾಡಬೇಕೆಂದು ತೋರುತ್ತದೆ. ಜನರಲ್ಲಿ ಸ್ಪರ್ಧೆಯನ್ನುಂಟುಮಾಡುವುದರ ಮೂಲಕ, ಅವರು ನಾನು ತಾನೆಂದು ಮುಂದೆ ಬಂದು, ಉತ್ತಮ ವಿಧದ ವಸ್ತುಗಳನ್ನು ಸಿದ್ಧಮಾಡುವಂತೆ ಏರ್ಪಡಿಸಬೇಕು. ಈ ಉದ್ದೇಶದಿಂದ ಪ್ರತಿಯೊಂದು ಗ್ರಾಮದಲ್ಲಿಯೂ, ಅಥವಾ ಮುಖ್ಯಮುಖ್ಯವಾದ ಗ್ರಾಮಸಮುದಾಯಗಳಲ್ಲಿಯೂ, ವಸ್ತುಪ್ರದರ್ಶನಗಳು ನಡೆಸಲ್ಪಡಬೇಕೆಂಬುದು, ನನ್ನ ಹಾರೈಕೆಯಾಗಿದೆ. ಗ್ರಾಮಸ್ಥರು ತಾವು ಬೆಳೆದ ಎಲ್ಲಾ ವಿಧದ ಬೆಳೆಗಳನ್ನೂ, ಇಂಥಾ ಪ್ರದರ್ಶನಗಳಿಗೆ ಕಳುಹಿಸಿಕೊಡಬೇಕು. ತಾವು ಬೆಳೆದ ಪದಾರ್ಥಗಳು, ಇತರರು ಬೆಳೆದಿರುವುದಕ್ಕಿಂತಲೂ ಕೀಳಾಗಿದೆಯೇ ಎಂಬುದನ್ನು ಪರಿಶೀಲಿಸಿ ನೋಡಬೇಕು. ಉತ್ತಮವಾದ ಬೀಜಗಳನ್ನು ಉಪಯೋಗಿಸುವುದರಿಂದಲೋ, ಅಥವಾ ಉತ್ತಮವಾದ ವ್ಯವಸಾಯದಿಂದಲೋ, ಅವುಗಳು ಗುಣದಲ್ಲಿ ಮತ್ತಷ್ಟು ಮೇಲಾಗುವಂತೆ ಪ್ರಯತ್ನಮಾಡಬೇಕು. ತಮ್ಮ ಪಾಲ್ನದೇನು ಕೀಳಾಗಿದ್ದರೆ ಒಳ್ಳೆಯ ಜಾತಿಯ ಬೀಜದಹೋರಿಗಳು, ಬೀಜದಕೋಣಗಳು, ಮುಂತಾದವುಗಳ ಮೂಲಕ ಅವನ್ನು ಮೇಲುಗೊಳಿಸುವ ಪ್ರಯತ್ನವನ್ನು ಮಾಡಬೇಕು. ಸಂಪದಭಿವೃದ್ಧಿ ಸಂಘಗಳು, ಪರಸ್ಪರಸಹಾಯಸಂಘಗಳು, ಡಿಸ್ಟ್ರಿಕ್ಟ್ ಬೋರ್ಡುಗಳು, ಮುಂತಾದವುಗಳ ಆಶ್ರಯದಲ್ಲಿ, ಗ್ರಾಮಗಳಲ್ಲಿಯೂ, ತಾಲ್ಲೂಕುಗಳಲ್ಲಿಯೂ, ಡಿಸ್ಟ್ರಿಕ್ಟುಗಳಲ್ಲಿಯೂ, ವಸ್ತುಪ್ರದರ್ಶನಗಳು ನಡೆಯಬೇಕು. ಗ್ರಾಮಗಳಲ್ಲಿನ ಪ್ರದರ್ಶನಗಳಿಂದ, ಅತ್ಯುತ್ತಮ ವಸ್ತುಗಳನ್ನು ತಾಲ್ಲೂಕಿನಲ್ಲಿ ನಡೆಯುವ ಪ್ರದರ್ಶನಕ್ಕೆ ಕಳುಹಿಸಿಕೊಡಬೇಕು. ತಾಲ್ಲೂಕು ಪ್ರದರ್ಶನಗಳಿಗೆ ಬಂದಿರುವ ಅತ್ಯುತ್ತಮವಾದ ವಸ್ತುಗಳನ್ನು, ಡಿಸ್ಟ್ರಿಕ್ಟಿನ ವಸ್ತುಪ್ರದರ್ಶನಕ್ಕೆ ಕಳುಹಿಸಿಕೊಡಬೇಕು. ಇದರಿಂದ, ಹಳ್ಳಿಯ ಪ್ರದರ್ಶನಕ್ಕೆ ಬಂದಿರುವ ಪದಾರ್ಥಗಳಿಗಿಂತಲೂ ತಾಲ್ಲೂಕಿಗೆ ಕಳುಹಿಸಿಕೊಡತಕ್ಕ ಪದಾರ್ಥಗಳು ಮತ್ತಷ್ಟು ಉತ್ತಮವಾಗಿಯೂ, ತಾಲ್ಲೂಕಿಗೆ ಕಳುಹಿಸಿಕೊಡತಕ್ಕ ಪದಾರ್ಥಗಳಿಗಿಂತಲೂ ಡಿಸ್ಟ್ರಿಕ್ಟಿಗೆ ಕಳುಹಿಸಿಕೊಡತಕ್ಕ ಪದಾರ್ಥಗಳು ಇನ್ನೂ ಉತ್ತಮವಾಗಿಯೂ, ಇರುವಂತೆ ಏರ್ಪಾಡುಮಾಡಿದಂತಾಗುತ್ತದೆ. ಮತ್ತು ಹಳ್ಳಿಯಲ್ಲಿ ನಡೆಯುವ ಪ್ರದರ್ಶನಗಳಿಗೆ ಎಷ್ಟುಮಟ್ಟಿನ ಗುಣವಿರುವ ಪದಾರ್ಥಗಳನ್ನು ಕಳುಹಿಸಿಕೊಡಬೇಕು ; ತಾಲ್ಲೂಕಿನ ವಸ್ತುಪ್ರದರ್ಶನಗಳಿಗೆ ಗುಣದಲ್ಲಿ ಎಷ್ಟುಮಟ್ಟಿಗೆ ಮೇಲಾಗಿರುವ ಪದಾರ್ಥಗಳನ್ನು ಕಳುಹಿಸಿಕೊಡಬೇಕು ; ಮತ್ತು ಡಿಸ್ಟ್ರಿಕ್ಟಿನಲ್ಲಿ ನಡೆಯುವ ವಸ್ತುಪ್ರದರ್ಶನಗಳಿಗೆ ಎಷ್ಟುಮಟ್ಟಿಗೆ ಮೇಲಾಗಿರುವ ವಸ್ತುಗಳನ್ನು ಕಳುಹಿಸಬೇಕು ; ಎಂಬ ವಿಚಾರಗಳನ್ನೂ ಸಹ, ನಿಗದಿಮಾಡಿದಂತಾಗುತ್ತದೆ. ಹೀಗಿರುವಲ್ಲಿ, ಒಟ್ಟು ಸಂಸ್ಥಾನಕ್ಕೆಲ್ಲಾ ಒಂದು ಸೊಗಸಾದ ವಸ್ತು ಪ್ರದರ್ಶವು ಮತ್ತೆ ನಡೆಯುವಂತೆ ಏರ್ಪಡಿಸಿದರೆ, ಅದರಿಂದ ಎರಡು ಪ್ರಯೋಜನಗಳು ದೊರೆಯುತ್ತವೆ ; ಭಗವಂತನು ನಮಗೆ ಅನುಗ್ರಹಿಸಿರುವ ಪ್ರಾಕೃತಿಕವಾದ ಅನುಕೂಲ್ಯಗಳನ್ನು ಉಪಯೋಗಿಸಿಕೊಂಡು ಎಷ್ಟುಮಟ್ಟಿನ ಮೇಲ್ಮೆಯನ್ನು ಸಾಧಿಸಬಹುದೆಂಬುದೊಂದು ; ಮತ್ತು ಪದಾರ್ಥಗಳನ್ನು ಮಾರುವವರಿಗೂ ಮತ್ತು ಕೊಳ್ಳುವವರಿಗೂ, ಪರಸ್ಪರವಾಗಿ ಸಂಬಂಧವನ್ನು ಕಲ್ಪಿಸುವುದೊಂದು : ಈ ಎರಡು ಪ್ರಯೋಜನಗಳೂ ನಮಗೆ ಲಭಿಸುತ್ತವೆ.

ನಮ್ಮ ದ್ರವ್ಯಾನುಕೂಲತೆಯು ವಿಶೇಷ ತೃಪ್ತಿಕರವಾದ ಸ್ಥಿತಿಗೆ ಇನ್ನೂ ಬಂದಿರುವುದಿಲ್ಲ. ಆದಕಾರಣ, ವಸ್ತು ಪ್ರದರ್ಶನಗಳ ಈ ಏರ್ಪಾಡನ್ನು ಸಮಗ್ರವಾಗಿ ಆಚರಣೆಗೆ ತರುವ ನಮ್ಮ ಮನೋರಥವು ಈಗಿನ ಸ್ಥಿತಿಯಲ್ಲಿ ಎಷ್ಟುಮಟ್ಟಿಗೆ ನೆರವೇರುವುದೋ ತಿಳಿಯದು. ಅಂತು, ಈ ಏರ್ಪಾಡನ್ನು ಇಷ್ಟರಲ್ಲೇ ಸ್ವಲ್ಪಮಟ್ಟಿಗೆ ಪ್ರಾರಂಭಿಸಬೇಕೆಂಬುದು. ಸರ್ಕಾರದವರ ಉದ್ದೇಶವಾಗಿದೆ.

ಇಂಡಿಯಾದೇಶದ ಸಂಸ್ಥಾನಗಳಿಗೆ ಮುಂದೆ ದೊರೆಯಬೇಕಾದ ಸ್ಥಾನ.

ಇಂಡಿಯಾದೇಶದ ಮುಂದಣ ರಾಜ್ಯಾಂಗ ವ್ಯವಸ್ಥೆಯಲ್ಲಿ, ದೇಶೀಯ ಸಂಸ್ಥಾನಗಳಿಗೆ ಯಾವಸ್ಥಾನವು ದೊರೆಯಬೇಕೆಂಬ ವಿಚಾರದಲ್ಲಿ, ಒಂದೆರಡು ಸಂಗತಿಗಳನ್ನು ಸೂಚಿಸುತ್ತೇನೆ. ಈ ವಿಚಾರವು ನಮ್ಮ ಸಂಸ್ಥಾನಕ್ಕೆ ಅತ್ಯಂತ ಪ್ರಾಮುಖ್ಯವಾದುದಾಗಿದೆ. ಈ ವಿಷಯವನ್ನೂ. ಮತ್ತು ಎಲ್ಲಾ ದೇಶೀಯ ಸಂಸ್ಥಾನಗಳಿಗೂ ಸಮಾನವಾಗಿ ಅನ್ವಯಿಸುವ, ಇತರ ವಿಚಾರಗಳನ್ನೂ ಕುರಿತು, ಬಿಕನೀರುಸಂಸ್ಥಾನದಲ್ಲಿ ಚರ್ಚಿಸಲಾಯಿತು. ಈ ಅಂಶವು ತಮಗೆ ತಿಳಿದೇ ಇದೆ. ಈ ವಿಷಯಗಳನ್ನೆಲ್ಲಾ ಕುರಿತು ಪ್ರಾಸಂಗಿಕವಾಗಿ ಚರ್ಚೆಮಾಡುವುದಕ್ಕಾಗಿ ಬಿಕನೀರುಸಂಸ್ಥಾನದಲ್ಲಿ, ಕಳೆದ ಆಗಸ್ಟು ತಿಂಗಳಿನಲ್ಲಿ ಒಂದು ಸಮ್ಮೇಳನವು ನಡೆಯಿತು. ಆ ಸಮ್ಮೇಳನಕ್ಕೆ ಇಂಡಿಯಾದೇಶದ ನಾನಾ ಸಂಸ್ಥಾನಗಳಿಂದಲೂ ಸಹ, ಆಯಾ ಸಂಸ್ಥಾನದ ಪ್ರಭುಗಳ ಕಡೆಯ ಪ್ರತಿನಿಧಿಗು ಬರುವಂತೆ, ಬಿಕನೀರುಸಂಸ್ಥಾನದ ಶ್ರೀಮನ್ಮಹಾರಾಜರವರು ಆಹ್ವಾನವನ್ನು ದಯೆಪಾಲಿಸಿದ್ದರು.

ಆ ಸಮ್ಮೇಳನದಲ್ಲಿ ಚರ್ಚಿಸಿದ ವಿಷಯಗಳನ್ನು ಕುರಿತು, ಇಲ್ಲಿ ವಿಶದವಾಗಿ ಪ್ರಸ್ತಾಪಿಸುವುದಿಲ್ಲ. ದೇಶೀಯ ಸಂಸ್ಥಾನಗಳಿಗೆ ಮುಂದೆ ದೊರೆಯಬೇಕಾದ ಸ್ಥಾನದ ವಿಷಯವು, ಈಗ ಪ್ರಾಮುಖ್ಯವೆನಿಸಿರುವ ಎಲ್ಲಾ ವಿಷಯಗಳಿಗಿಂತಲೂ ಒಂದೆರಡು ಸಂಗತಿಗಳನ್ನು ತಿಳಿಸಬಹುದಾಗಿದೆ.

ಇಂಡಿಯಾದೇಶದಲ್ಲಿ ಪ್ರಜಾಧಿಕಾರಕ್ಕೆ ಪ್ರಾಧಾನ್ಯತೆ ಇರುವ ಆಡಳಿತವಿಧಾನವು ಕ್ರಮಕ್ರಮವಾಗಿ ಅಭಿವೃದ್ಧಿಯಾಗುತ್ತಾ ಬರುವುದಷ್ಟೆ ; ಈರೀತಿ ನಡೆದಹಾಗೆಲ್ಲಾ. ದೇಶೀಯ ಸಂಸ್ಥಾನಗಳಿಗೆ ಒಟ್ಟು ಇಂಡಿಯಾ ದೇಶದ ಆಡಳಿತಕ್ರಮದ ವ್ಯವಸ್ಥೆಯಲ್ಲಿ, ಯಾವವಿಧದ ಸಂಬಂಧವಿರಬೇಕೆಂಬ ವಿಷಯವೂ ಸಹ, ಹೊಸಬಗೆಯಲ್ಲಿ ತೀರ್ಮಾನವಾಗುತ್ತಾ ಬರಬೇಕಾಗುತ್ತದೆ. ಈ ವಿಷಯವನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುವುದೇ ಇಂಡಿಯಾದೇಶದ ಅಭ್ಯುದಯಕ್ಕೂ, ಅಭಿವೃದ್ಧಿಗೂ, ಬಹುಮಟ್ಟಿಗೆ ಸಾಧಕವಾಗುತ್ತದೆ. ಮೈಸೂರು ಸಂಸ್ಥಾನದವರು, ಬ್ರಿಟಿಷ್ ಇಂಡಿಯಾದಲ್ಲಿನ ಒಳ ಆಡಳಿತದಲ್ಲಿ ತಮ್ಮ ಮಾತೂ ಸಾಗಬೇಕೆಂದು ಬಯಸುವವರಲ್ಲ. ಇಲ್ಲಿನ ಒಳ ಆಡಳಿತದಲ್ಲಿಯೂ ಸಹ, ಇದೇ ರೀತಿಯಲ್ಲಿ ಸಂಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವಿರಬೇಕೆಂಬುದೂ, ಬ್ರಿಟಿಷ್ ಸಾರ್ವಭೌಮರವರ ಆಶ್ರಯದಲ್ಲಿ ಇಲ್ಲಿನ ಪ್ರಭುತ್ವವು ನಡೆಯಬೇಕೆಂಬುದೂ, ನಮ್ಮ ಕೋರಿಕೆ. ಬ್ರಿಟಿಷ್ ಇಂಡಿಯಾದವರೊಡನೆ ಸಂಸ್ಥಾನದವರಿಗೆ ಇರತಕ್ಕ ಸಂಬಂಧವು, ತಪಶೀಲು ವಿವರಗಳಲ್ಲಿ ಮಾತ್ರ, ಆಯಾಕಾಲಸ್ಥಿತಿಗೆ ತಕ್ಕಂತೆ ಮಾರ್ಪಡುತ್ತಾ ಬರಬೇಕಾಗುತ್ತದೆ.

ಆದರೆ, ಒಟ್ಟು ದೇಶದ ಸಂಪತ್ತನ್ನೂ ರೂಢಿಸಿ ಅಭಿವೃದ್ಧಿಗೊಳಿಸುವ ವಿಚಾರದಲ್ಲಿ ಮಾತ್ರ, ಯಾವುದೊಂದು ದೇಶೀಯ ಸಂಸ್ಥಾನವೂ ಕೂಡ, ಬ್ರಿಟಿಷ್ ಇಂಡಿಯಾದವರೊಡನೆ ಸೇರದೆ ಪ್ರತ್ಯೇಕವಾಗಿ ನಿಲ್ಲುವುದು ಸಾಧ್ಯವಿಲ್ಲ. ಇಷ್ಟಕ್ಕೂ, ಸಂಪದಭಿವೃದ್ಧಿಯ ವಿಚಾರಗಳಲ್ಲಿ ಪ್ರಪಂಚವನ್ನೇ ಐಕಮತ್ಯದಿಂದ ಒಟ್ಟುಗೂಡಿಸುವ ಕಾರ್ಯಕಲಾಪಗಳು ನಡೆಯುತ್ತಾ ಇವೆ. ನಾನಾ ಜನಾಂಗಗಳವರೂ ಒಮ್ಮತ ಸಮ್ಮತವಾಗಿ ವರ್ತಿಸುವುದು ; ಸಂಪದಭಿವೃದ್ಧಿಗೆ ಸಾಧಕವಾಗುವ ಎಲ್ಲಾ ವಿಷಯಗಳಲ್ಲಿಯೂ ನಾನಾ ಜನಾಂಗಗಳವರೂ ಪರಸ್ಪರವಾಗಿ ಒತ್ತಾಸೆ ಕೊಡುವುದು ; ಈ ರೀತಿಯಲ್ಲಿ ಏರ್ಪಡಿಸಿಕೊಳ್ಳುವ ಆಸಕ್ತಿಯುಂಟಾಗಿದೆ. ಇದು ಒಟ್ಟು ಪ್ರಪಂಚವನ್ನೇ ಆವರಿಸುವ ಕಾರ್ಯಕಲಾಪ. ಇಂಡಿಯಾದೇಶದವರೂ ಇದರಲ್ಲಿ ಭಾಗಿಗಳಾಗುವ ಯೋಗವುಂಟು. ಅಲ್ಲದೆ, ಈ ವಿಷಯದಲ್ಲಿ ಅವರ ಜವಾಬ್ದಾರಿಯೂ, ಅಧಿಕಾರವೂ, ಹೆಚ್ಚುತ್ತಾ ಬರುವುವು. ಇಂಡಿಯಾದೇಶದವರು ವಿದೇಶಗಳ ಜನರೊಡನೆಯೇ ಈ ರೀತಿ ನಡೆಯಬೇಕಾಗುತ್ತದೆ. ಹೀಗಿರುವಲ್ಲಿ ಈ ದೇಶಕ್ಕೆ ಸೇರಿದ ನಾನಾ ಪ್ರಾಂತ್ಯಗಳವರಲ್ಲಿಯೂ, ಅರ್ಥಸಾಧಕ ವಿಚಾರಗಳಲ್ಲಿ ಐಕಮತ್ಯವಿಲ್ಲದೆ ಹೋದರಾದೀತೆ ? ಈ ವಿಚಾರಗಳಲ್ಲಿ ಒಗ್ಗಟ್ಟು ಇದ್ದೇತೀರಬೇಕಾಗುವುದು. ಕ್ರಮಕ್ರಮವಾಗಿ ಎಲ್ಲಾ ವಿಧದ ಅಡಚಣೆಗಳೂ, ಭೇದಭಾವಗಳೂ, ಅಡಗಿಹೋಗಿ, ಎಲ್ಲಾ ಪ್ರಾಂತ್ಯಗಳೂ ಒಟ್ಟುಗೂಡಬೇಕಾಗುವುದು. ಇಂಥಾ ಪ್ರಯತ್ನದಿಂದ, ರಾಜಕೀಯ ವಿಷಯಗಳಲ್ಲಿ ಏಕೀಭಾವವುಂಟಾಗಲು ಸಾಧಕವಾಗುವುದು. ಈ ಕೂಡಲೇ ಒಂದು ಫೆಡರೇಷನ್ನನ್ನು ಸ್ಥಾಪಿಸಿದಲ್ಲಿ, ಅದರ ಮೂಲಕ ರಾಜಕೀಯ ವಿಚಾರಗಳಲ್ಲಿ ಸಾಧಿಸಬಹುದಾದುದಕ್ಕಿಂತಲೂ ಹೆಚ್ಚಿನ ಏಕೀಭಾವವನ್ನು, ಈ ಮಾರ್ಗದಿಂದ ಸಾಧಿಸಬಹುದಾಗಿದೆ. ಏಕೆಂದರೆ, ಸಂಪದಭಿವೃದ್ಧಿ ವಿಚಾರಗಳಲ್ಲಿ ಎಲ್ಲಾ ಪ್ರಾಂತ್ಯಗಳನ್ನೂ ಒಟ್ಟುಗೂಡಿಸಿದರೆ, ಪರಿಣಾಮದಲ್ಲಿ ಉತ್ತಮವಾದ ಫಲವನ್ನು ಪಡೆಯಬೇಕೆಂಬ ಒಂದು ಉದ್ದೇಶವೇ, ಎಲ್ಲರಲ್ಲಿಯೂ ನೆಲೆಗೊಳ್ಳುವುದು. ಅದಕ್ಕನುಗುಣವಾಗಿ ಕಾರ್ಯವನ್ನು ಸಾಧಿಸಲು, ಎಲ್ಲರೂ ಒಂದೇಭಾವವಾಗಿ ತವಕಪಡುವರು. ಆದಕಾರಣ, ಉದ್ದೇಶದಲ್ಲಿಯೂ, ಕಾರ್ಯಸಾಧನೆಯಲ್ಲಿಯೂ, ಏಕೀಭಾವವು ಕಳಕಳಿಸುವಂತಾಗುವುದು. ಹೀಗಾದ ಬಳಿಕ, ರಾಜಕೀಯ ವಿಚಾರಗಳಲ್ಲಿಯೂ, ಏಕೀಭಾವವುಂಟಾಗುವುದು ಗೊತ್ತೇ ಇದೆ. [illegible]

ಆರ್ಥಿಕವಿಚಾರಗಳಲ್ಲಿ ಏಕೀಭಾವವನ್ನುಂಟುಮಾಡುವುದಕ್ಕೆ ಇಂಡಿಯಾ ದೇಶದಲ್ಲಿ - ಇಂಡಿಯನ್ ಕಸ್ಟಮ್ಸ್ ಯೂನಿಯನ್ - ಎಂಬ ಸುಂಕಗಳಿಗೆ ಸಂಬಂಧಪಟ್ಟ ಸಂಘವನ್ನು ಸ್ಥಾಪಿಸಿ ಕೆಲಸ ನಡೆಸುವುದೂ, ಒಂದು ಮುಖ್ಯ ಸಾಧನವಾಗಿದೆ. ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳು ತಕ್ಕಷ್ಟುಮಂದಿ ಆ ಸಂಘದಲ್ಲಿ ಮೆಂಬರುಗಳಾಗಿರಬೇಕು. ಸುಂಕಗಳ ತೆರಿಗೆಯಿಂದ ಇಂಡಿಯಾ ಸರ್ಕಾರದವರಿಗೆ ಹುಟ್ಟುವಳಿಯು ಬರುತ್ತದೆ. ಅಲ್ಲದೆ, (ಉಪ್ಪು, ಅಂಚೆ, ತಂತಿಯ ವರ್ತಮಾನ ಮತ್ತು ಟಂಕಸಾಲೆ ಇವೇ ಮುಂತಾದ) ಇತರ ಬಾಬುಗಳಿಂದಲೂ, ಅವರಿಗೆ ವರಮಾನವು ಬರುತ್ತಾ ಇದೆ. ಇವೆರಡು ಹುಟ್ಟುವಳಿಗಳಿಂದಲೂ ಸಹ, ಆಯಾ ಸಂಸ್ಥಾನಗಳಿಗೆ ಒಂದೊಂದು ಭಾಗವು ಸಲ್ಲಬೇಕಾಗಿದೆ. ಯಾವ ಯಾವ ಸಂಸ್ಥಾನಕ್ಕೆ ಎಷ್ಟೆಷ್ಟು ಭಾಗವು ಸಲ್ಲಬೇಕೆಂಬುದನ್ನು ನಿರ್ಧರಿಸಬೇಕು. ಅಷ್ಟು ಮೊಬಲಗನ್ನು ಆಯಾ ಸಂಸ್ಥಾನಗಳಿಗೆ ಪಾವತಿ ಮಾಡಬೇಕು. ಅಥವಾ ಆಯಾ ಭಾಗದ ಮೊಬಲಗು ಆಯಾ ಸಂಸ್ಥಾನದವರಿಂದ ಸಲ್ಲಿಸಲ್ಪಡಬೇಕಾದ ಮೊಬಲಗಿನ ಒಂದು ಭಾಗವಾಗಿ ಉತಾರವಾಗುವಂತೆ, ಇಂಪೀರಿಯಲ್ ಸರ್ಕಾರದವರಿಂದ ಅಂಗೀಕರಿಸಲ್ಪಡಬೇಕು. ಅಂತು, ಸುಂಕಗಳಿಗೆ ಸಂಬಂಧಪಟ್ಟ ಸಂಘವನ್ನು ಸ್ಥಾಪಿಸಿ ಈ ರೀತಿ ಮಾಡುವುದು, ಆರ್ಥಿಕವಿಚಾರಗಳಲ್ಲಿನ ಏಕೀಭಾವಕ್ಕೆ ಒಂದು ಮುಖ್ಯವಾದ ಸಾಧನವಾಗಿದೆ. ಸುಂಕಗಳೇ ಮುಂತಾದ ಬಾಬುಗಳ ಮೊಬಲಗಿನಲ್ಲಿ, ನಮಗೂ ಭಾಗವು ಸಲ್ಲಬೇಕೆಂದು ಕೋರುವುದು ಯುಕ್ತವಾಗಿದೆಯೆಂಬುದರಲ್ಲಿ ಸಂದೇಹವೇ ಇಲ್ಲ; ಏಕೆಂದರೆ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳ ಜನರು ಸಲ್ಲಿಸುತ್ತಿರುವಂತೆಯೇ, ನಮ್ಮ ಸಂಸ್ಥಾನದ ಜನರೂ ಕೂಡ, ಈ ಬಾಬುಗಳಿಗೆ ಮೊಬಲಗನ್ನು ಸಲ್ಲಿಸುತ್ತಿದ್ದಾರೆ; ಇದರಿಂದ, ಇಂಡಿಯಾ ಸರ್ಕಾರದವರಿಗೆ ಹುಟ್ಟುವಳಿಯು ಬರುತ್ತಾ ಇದೆ. ಆದಕಾರಣ, ಈ ಮೊಬಲಗಿನಲ್ಲಿ ನಮ್ಮ ಸಂಸ್ಥಾನಕ್ಕೂ ಭಾಗವು ಸಲ್ಲುವುದು ನ್ಯಾಯವೇ ಸರಿ. ಈ ವಿಚಾರವು ಇತರ ದೇಶೀಯ ಸಂಸ್ಥಾನಗಳಂತೆಯೇ ಮೈಸೂರು ಸಂಸ್ಥಾನಕ್ಕೂ ಕೂಡ, ಕೇವಲ ಪ್ರಾಮುಖ್ಯವಾದುದು. ಸಿದ್ಧವಾಗಿ ಹಣವು ದೊರೆಯುವುದೆಂಬ ಒಂದು ಕಾರಣದಿಂದ ಮಾತ್ರವೇ, ಇದಕ್ಕೆ ಪ್ರಾಮುಖ್ಯತೆಯಿಲ್ಲ. ಈ ವಿಚಾರದಲ್ಲಿ ಮತ್ತೊಂದು ಪ್ರಬಲವಾದ ಕಾರಣವೂ ಉಂಟು. ಮೇಲೆ ಹೇಳಿದಂತೆ ಮಾಡದೆ ಹೋದಲ್ಲಿ, ಇಂಡಿಯಾದೇಶದ ನಾನಾ ಪ್ರಾಂತ್ಯಗಳನ್ನೂ ಆರ್ಥಿಕವಿಚಾರಗಳಲ್ಲಿ ಏಕೀಭಾವದಿಂದ ಒಟ್ಟುಗೂಡಿಸುವುದು, ಈಗಿನ ಸನ್ನಿವೇಶಗಳಲ್ಲಿ ಅಸಾಧ್ಯವಾಗುತ್ತದೆ. ಈ ಕಾರಣಗಳಿಂದ ಈ ವಿಷಯವು ಅತ್ಯಂತ ಪ್ರಾಮುಖ್ಯವಾದುದಾಗಿದೆ.

ಪ್ರಜಾಪ್ರತಿನಿಧಿಸಭೆ.

ಈ ಸಭೆಯಲ್ಲಿ ಈಗ ಮೆಂಬರುಗಳಾಗಿರುವ ತಾವೆಲ್ಲರೂ ಸಭೆ ಸೇರಿರುವುದರಲ್ಲಿ, ಇದೇ ಕೊನೆಯ ಅಧಿವೇಶನ. ಇನ್ನು ಮುಂದೆ ಬೇರೆ ಚುನಾವಣೆಯು ನಡೆಯಬೇಕಾಗಿರುತ್ತದೆ. ಮಹನೀಯರೆ, ತಮ್ಮಲ್ಲಿ ಕೆಲವರು ಮತ್ತೆ ಈ ಸಭೆಯಲ್ಲಿ ಸೇರಿ, ಕಾರ್ಯವನ್ನು ನಿರ್ವಹಿಸಲು, ಮುಂದೆ ಇಲ್ಲಿಗೆ ಬಾರದೆಹೋಗಬಹುದು. ಆದರೆ, ತಮ್ಮಲ್ಲಿ ಈ ರೀತಿ ಬಾರದೆ ಹೋಗುವವರ ಸಂಖ್ಯೆಯು ಬಹಳ ಕಡಮೆಯಾಗಿರಲೆಂಬುದೇ ನನ್ನ ಹಾರೈಕೆಯಾಗಿದೆ. ತಾವೆಲ್ಲರೂ ಸೇರಿ ಮಹತ್ತರವಾಗಿ ದೇಶಸೇವೆಯನ್ನು ಮಾಡಿರುತ್ತೀರಿ. ಅದಕ್ಕಾಗಿ ಅಭಿನಂದನೆಯನ್ನು ಸಂತೋಷದಿಂದ ಸೂಚಿಸುತ್ತೇನೆ. ಸಮರ್ಪಕವಾಗಿ ಕೆಲಸ ಮಾಡಿದ ಉಲ್ಲಾಸವೊಂದು; ದೊರೆತಿದ್ದ ಪ್ರಾಮುಖ್ಯವಾದ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡು, ದೇಶಸೇವೆ ಮಾಡಿದ ಸಂತೋಷವೊಂದು; ಇವೆರಡರಿಂದಲೂ ಕೂಡಿ, ತಾವುಗಳೆಲ್ಲರೂ ತಮ್ಮ ತಮ್ಮ ಚುನಾವಣೆಯ ಸ್ಥಾನಗಳಿಗೆ ಈ ಸಾರಿ ತೆರಳುವವರಾಗಿದ್ದೀರಿ. ಅನೇಕ ಮಹತ್ಕಾರ್ಯಗಳು ಸಾಧಿಸಲ್ಪಟ್ಟಿವೆ. ಈ ಸಭೆಯ ಸಮಸ್ತ ಪಂಗಡಗಳ ಮೆಂಬರುಗಳೂ ಸಹ, ಪರಸ್ಪರವಾಗಿ ಸೌಹಾರ್ದಭಾವದಿಂದ ಕೆಲಸಮಾಡಿದ್ದಾರೆ. ಇದೇ ವಿಧದ ಸೌಹಾರ್ದಭಾವವು ಇನ್ನು ಮುಂದೆಯೂ, ಇದೇ ರೀತಿಯಲ್ಲಿ ನಡೆದುಬರಲಿ! ಅಲ್ಲದೆ, ಅದು ಇನ್ನುಮುಂದೆ ಮತ್ತಷ್ಟು ವೃದ್ಧಿಯಾಗುತ್ತಲೂ, ಮತ್ತಷ್ಟು ಗಾಢವಾಗುತ್ತಲೂ, ಪರಿಣಾಮ ಹೊಂದಲಿ! ಇವೇ ನನ್ನ ಅಂತರವಾದ ಹಾರೈಕೆಗಳಾಗಿವೆ.

ಒಬ್ಬ ಮೆಂಬರು ನೆರವೇರಿಸಿದ ಕೆಲಸದ ಯೋಗ್ಯತೆಯನ್ನು ಕಂಡುಹಿಡಿದು ಪರಾಮರ್ಶೆಮಾಡುವುದರಲ್ಲಿ, ಕೆಲವರು ತಪ್ಪುದಾರಿಯನ್ನು ಹಿಡಿದು ಮುಂದುವರಿಯುತ್ತಾರೆ. ಅದು ತಮ್ಮೆಲ್ಲರಿಗೂ ತಿಳಿದೇ ಇದೆ. ಒಬ್ಬ ಮೆಂಬರು ಆಡಿದ ಮಾತುಗಳ ಸಂಖ್ಯೆಯು ಎಷ್ಟೆಂಬುದು ಅವರ ಮೊದಲನೆಯ ಪ್ರಶ್ನೆ. ಮೆಂಬರು ಮಾತಿನ ಮಳೆಯನ್ನು ಸುರಿಸಿದಷ್ಟೂ, ಹೆಚ್ಚು ಪ್ರಯೋಜನಕರವಾಗಿ ಕೆಲಸವು ನಡೆಯಿತೆಂಬುದು ಅವರ ಭಾವನೆ. ಸರ್ಕಾರದವರು ಅನುಸರಿಸಬೇಕೆಂದು ಉದ್ದೇಶಿಸಿದ ಕಾರ್ಯಕ್ರಮಕ್ಕೂ, ಸರ್ಕಾರದವರು ನಡೆಸಲಿಚ್ಛಿಸಿದ ವಿಚಾರಣೆಗಳಿಗೂ, ಮೆಂಬರು ಎಷ್ಟು ಸಲ, ಮತ್ತು ಎಷ್ಟು ವಿಶೇಷವಾಗಿ, ಪ್ರತಿಭಟಿಸಿ ಮಾತನಾಡಿದರೆಂಬುದು ಅವರ ಎರಡನೆಯ ಪ್ರಶ್ನೆ. ಇವೆರಡು ಸೂತ್ರಗಳನ್ನೂ ಅನ್ವಯಿಸಿ ದೇಶಸೇವೆಯು ಎಷ್ಟರಮಟ್ಟಿಗೆ ನಡೆಯಿತೆಂಬುದನ್ನು ನಿರ್ಧರಿಸುವುದು, ಸರಿಯಲ್ಲವೆಂದು ತೋರುತ್ತದೆ. ಆಡಿದ ಮಾತುಗಳ ಸಂಖ್ಯೆಯು ಮುಖ್ಯವಲ್ಲ; ಅವುಗಳ ಬೆಲೆಯು ಮುಖ್ಯ. ಆಡಿದ ಮಾತುಗಳನ್ನೇ, ಮತ್ತೆ ಮತ್ತೆ ಆಡುತ್ತಾ ಇರುವವರ, ಮೇಧಾಶಕ್ತಿಯೂ, ಲೋಕಾನುಭವವೂ, ಕಡಮೆಯೆಂದೇ ಹೇಳಬೇಕಾಗುತ್ತದೆ. ಅಲ್ಲದೆ, ಹೀಗೆ ಮಾಡುವುದರಿಂದ, ಒಟ್ಟಿನಲ್ಲಿ ಸಭೆಯೂ ಶೋಭಿಸುವುದಿಲ್ಲ. ಈ ಸಭೆಯ ಮೆಂಬರುಗಳಲ್ಲಿ ಯಾರೊಬ್ಬರ ವಿಷಯವನ್ನೇ ತೆಗೆದುಕೊಳ್ಳಿ; ಅವರಿಗೆ ಪ್ರಜೆಗಳ ಯೋಗಕ್ಷೇಮದಲ್ಲಿ ಎಷ್ಟು ಆಸಕ್ತಿಯುಂಟೋ, ಅಷ್ಟೇ ಆಸಕ್ತಿಯೇ, ಆ ವಿಷಯದಲ್ಲಿ ಸರ್ಕಾರದವರಿಗೂ ಇದೆ. ಈ ವಿಷಯವು ಸಮಸ್ತರಿಗೂ ತಿಳಿದೇ ಇದೆ. ಸರ್ಕಾರದವರ ಮನೋಭಾವವು ಹೀಗಿದ್ದರೂ ಕೂಡ, ಸರ್ಕಾರದವರಿಗೆ ಪ್ರತಿಭಟಿಸಿ ವರ್ತಿಸುವ ಛಲವನ್ನೇ ಯಾರಾದರೂ ಹಿಡಿಯುವುದಾದರೆ, ದೇಶದ ಏಳಿಗೆಗೆ ಕಲ್ಲೆಳೆದು ದ್ರೋಹಚಿಂತನೆ ಮಾಡಿದಂತೆಯೇ ಸರಿ; ದೇಶಭಕ್ತಿಯನ್ನು ಮೂಲೆಗೊತ್ತರಿಸಿದಂತೆಯೇ ಸರಿ. ವಿಲಕ್ಷಣವಾದ ಪರಾಮರ್ಶೆ ಕ್ರಮವೊಂದರ ವಿಚಾರವನ್ನು ಕುರಿತು, ನಾನು ಈ ಮೊದಲೇ ತಿಳಿಸಿದೆನಷ್ಟೆ. ಅದರ ಪ್ರಕಾರ ಪರ್ಯಾಲೋಚಿಸಿ ನೋಡಿದಲ್ಲಿ, ತಮ್ಮಲ್ಲಿ ಎಷ್ಟೋ ಮಂದಿಗಳು ಹಿಂದೆ ಬೀಳಬೇಕಾಗುವುದು. ಏಕೆಂದರೆ, ತಮ್ಮಲ್ಲಿ ಈ ಪರಾಮರ್ಶಕ್ರಮದ ಪ್ರಕಾರ ಹಿಂದೆ ಬೀಳಬೇಕಾದವರೆಲ್ಲರೂ, ಸರ್ಕಾರದವರ ಸದುದ್ದೇಶದಲ್ಲಿ ನಂಬಿಕೆಯನ್ನಿಟ್ಟುಕೊಂಡು ವರ್ತಿಸಿರುತ್ತೀರಿ; ಮೈಸೂರು ಸಂಸ್ಥಾನದ ಅಭಿವೃದ್ಧಿಗೂ, ಅಭ್ಯುದಯಕ್ಕೂ, ಸಾಧಕವಾಗುವಂತೆ ಸರ್ಕಾರದವರು ಮಾಡುವ ಪ್ರಯತ್ನಗಳಲ್ಲಿ ಸಹಕಾರಭಾವದಿಂದ ವರ್ತಿಸಿ, ಒತ್ತಾಸೆ ಕೊಟ್ಟಿರುತ್ತೀರಿ. ಆದುದರಿಂದ, ನೀವು ಹಿಂದೆ ಬೀಳಬೇಕಾಗಿದೆ. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ, ನೀವು ಹಿಂದೆಬೀಳುವಂತಾಯಿತಲ್ಲಾ ಎಂಬುದೇ ನನಗೊಂದು ಸಂತೋಷದ ಸುದ್ದಿ. ಈ ಸಭೆಯಲ್ಲಿ ಔಚಿತ್ಯವನ್ನು ಮೀರಿದ ಯಾವುದೊಂದು ಚರ್ಚೆಯೂ ನಡೆದಿಲ್ಲ. ಪರಸ್ಪರವಾಗಿ ದೋಷವನ್ನು ಆರೋಪಿಸಿ, ವಾಗ್ವಾದಗಳು ಯಾವುವೂ ಜರುಗಿಲ್ಲ. ಇದನ್ನು ನೋಡಿದರೆ, ಸಂಸ್ಥಾನದ ಘನತೆಯನ್ನು ಉಳಿಸುವುದು ತಮ್ಮಮೇಲಣ ಭಾರವೆಂಬುದನ್ನು, ಈ ಸಭೆಯವರು ಚೆನ್ನಾಗಿ ಅರಿತಿರುವರೆಂದು ನನಗೆ ತೋರುತ್ತದೆ. ಮಹನೀಯರೆ, ತಾವುಗಳೆಲ್ಲರೂ ಅಮೋಘವಾದ ದೇಶಸೇವೆಯನ್ನು ಮಾಡಿರುತ್ತೀರಿ. ಇದಕ್ಕಾಗಿ ಮೈಸೂರು ದೇಶದವರೆಲ್ಲರೂ ತಮಗೆ ಕೃತಜ್ಞರಾಗಿರಬೇಕಾಗಿದೆ. ತಾವೆಲ್ಲರೂ ವಿವೇಕವನ್ನೂ, ಉತ್ಸಾಹವನ್ನೂ, ತೋರಿಸಿ, ಸ್ವಾರ್ಥತ್ಯಾಗದಿಂದ ದೇಶಕ್ಕೆ ಉಪಕಾರ ಮಾಡಿರುತ್ತೀರಿ. ಇದಕ್ಕಾಗಿ, ಶ್ರೀಮನ್ಮಹಾರಾಜರವರ ಸರ್ಕಾರದವರು ತಮ್ಮೆಲ್ಲರನ್ನೂ ಅಭಿನಂದಿಸುತ್ತಾರೆ.

ವೈಸ್ರಾಯಿಯವರ ಆಗಮನ.

ನಾನು ಈಗ ಪ್ರಾಮುಖ್ಯವಾದ ಸಂತೋಷವಾರ್ತೆಯೊಂದನ್ನು ತಮಗೆ ತಿಳಿಸಬೇಕಾಗಿದೆ. ತಾವೆಲ್ಲರೂ ಅದನ್ನು ಕೇಳಿ ಆನಂದಪಡುವಿರೆಂದು ನಾನು ನಂಬಿದ್ದೇನೆ. ಮಹಾನುಭಾವರಾದ ವೈಸ್ರಾಯಿಯವರು ಈ ದೇಶಕ್ಕೆ ದಯಮಾಡಿಸುವಂತೆ, ಆಳುತ್ತಿರುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರು, ಅವರಿಗೆ ಆಹ್ವಾನವನ್ನು ಕಳುಹಿಸಿದ್ದರು. ಅದನ್ನು ಅವರು ಅಂಗೀಕರಿಸಿದ್ದಾರೆ. ಅವರು ಮುಂದಣ ಜುಲೈ ತಿಂಗಳಿನಲ್ಲಿ ಇಲ್ಲಿಗೆ ದಯಮಾಡಿಸುವುದಾಗಿ ಉದ್ದೇಶಿಸಿದ್ದಾರೆ. ಸಾಮಾನ್ಯವಾಗಿ ವೈಸ್ರಾಯಿಯವರು ನಮ್ಮ ದೇಶಕ್ಕೆ ಬರುತ್ತಾರೆಂದರೆ ಸಾಕು; ನಮ್ಮ ಸಂಸ್ಥಾನಕ್ಕೆ ಅವರು ದಯಮಾಡಿಸುವ ದಿನವನ್ನೇ ಅತ್ಯಂತ ಸಂತೋಷದಿಂದಲೂ, ಕುತೂಹಲದಿಂದಲೂ, ಎದುರುನೋಡುತ್ತೇವೆ. ಹೀಗೆಂದ ಬಳಿಕ, ಈಗಿನ ವೈಸ್ರಾಯಿಯವರಾದ ಲಾರ್ಡ್ ಇರ್ವಿನ್‌ರವರಂಥಾ ಮಹನೀಯರು ದಯಮಾಡಿಸುವ ವಿಚಾರದಲ್ಲಿ ಹೇಳಬೇಕಾದುದೇನು? ಇದಕ್ಕೆ ಕಾರಣವೂ ಇದೆ. ಲಾರ್ಡ್ ಇರ್ವಿನ್‌ರವರು ಇಲ್ಲಿಗೆ ಬಂದು, ಇನ್ನೂ ಸ್ವಲ್ಪ ಕಾಲವೇ ಆಗಿದೆ. ಆದರೂ, ಇಷ್ಟು ಶೀಘ್ರವಾಗಿಯೇ, ಅವರು, ರಾಜನೀತಿ ಕುಶಲತೆಯಿಂದಲೂ, ಪ್ರಾಜ್ಞತೆಯಿಂದಲೂ ಕೂಡಿದ ತಮ್ಮ ಕೆಲಸಗಳಿಂದ, ಇಂಡಿಯಾದೇಶದ ಪ್ರಜೆಗಳಿಗೆ ಪ್ರೀತಿಪಾತ್ರರಾಗಿದ್ದಾರೆ. ಇದರಮೇಲೋ, ಅವರು ಇಂಡಿಯಾದೇಶದ ಜನರ ಮನೋಭಾವವನ್ನು ಅರಿತುಕೊಂಡು, ಅವರಿಗೆ ಸಹಾಯಮಾಡಬೇಕೆಂಬುದಾಗಿ ತೀವ್ರವಾದ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಘನವಾದ ಈ ಉದ್ದೇಶದ ದೆಸೆಯಿಂದ, ಅವರು ಪ್ರಜೆಗಳಿಗೆ ಮತ್ತಷ್ಟು ಅಚ್ಚುಮೆಚ್ಚಾಗಿದ್ದಾರೆ. ಇಂಥಾ ಮಹನೀಯರಾದ ವೈಸ್ರಾಯಿಯವರು ಇಲ್ಲಿಗೆ ಬರುವವರಾಗಿದ್ದಾರೆ. ಇವರನ್ನು ವಿಶೇಷ ಉತ್ಸಾಹದಿಂದಲೂ, ಆದರದಿಂದಲೂ, ಬರಮಾಡಿಕೊಂಡು ಸತ್ಕರಿಸಬೇಕು. ಮಹನೀಯರಾದ ಒಬ್ಬ ಆಂಗ್ಲೇಯ ದೊಡ್ಡಮನುಷ್ಯರ ಘನತೆಗೂ, ಸ್ನೇಹಪರರಾಗಿರುವ ಭಾರತೀಯರ ಸ್ವಭಾವಕ್ಕೂ, ತಕ್ಕುದೆನಿಸುವ ಪ್ರೀತಿಯಿಂದಲೂ, ಆದರದಿಂದಲೂ, ಅವರನ್ನು ಬರಮಾಡಿಕೊಂಡು ಸತ್ಕರಿಸುವುದು ಯುಕ್ತವಾಗಿದೆ. ಮತ್ತು ಕಾರ್ಯತಃ, ಹಾಗೆ ನಡೆದೂ ನಡೆಯುತ್ತದೆ.

ಪರಿಸಮಾಪ್ತಿ.

ಮಹನೀಯರೆ—"ಮೈಸೂರುಸಂಸ್ಥಾನದ ಸುಖಸಾಧನಗಳನ್ನು, ಮೈಸೂರುದೇಶೀಯರೇ ಅನುಭವಿಸುವಂತಾಗಬೇಕು" ಎಂಬುದಾಗಿ ಕೋರಲ್ಪಡುತ್ತಿರುವುದು ನಮ್ಮೆಲ್ಲರಿಗೂ ತಿಳಿದೇ ಇದೆ. ಇದು ಘನವಾದ ಆಶಯದಿಂದ ತುಂಬಿತುಳುಕುತ್ತಿದೆಯೆಂಬುದರಲ್ಲಿ ಲೇಶವೂ ಅನುಮಾನವಿಲ್ಲ. ಆದರೆ, "ಮೈಸೂರುದೇಶೀಯರು, ಮೈಸೂರುಸಂಸ್ಥಾನದ ಸೇವೆಯನ್ನು ಮಾಡಬೇಕು," ಎಂಬ ಮತ್ತೊಂದು ಕೋರಿಕೆಯೂ ಉಂಟು. ಆದರೆ, ಜನಸಾಮಾನ್ಯದವರಲ್ಲಿಯೂ, ನಮ್ಮ ಕಾರ್ಯಾಲಯಗಳಲ್ಲಿಯೂ, ಇದರ ದಿವ್ಯನಾದವು ಮತ್ತೆ ಮತ್ತೆ ಮೊಳಗಿ, ಅದಕ್ಕನುಗುಣವಾಗಿ ಕೆಲಸನಡೆಯುತ್ತಾ ಇಲ್ಲ. ಆದರೆ, ನಮ್ಮೆಲ್ಲರ ಹೃದಯದಲ್ಲಿಯೂ ಮೈಸೂರುದೇಶೀಯರು ಮೈಸೂರುಸಂಸ್ಥಾನದ ಸೇವೆಯನ್ನು ಮಾಡಬೇಕೆಂಬ ಉದಾತ್ತಭಾವನೆಯು ಉಕ್ಕಿ ಹರಿಯುತ್ತಿದೆಯೆಂದು, ನಾನು ಖಂಡಿತವಾಗಿ ಹೇಳುತ್ತೇನೆ. ಹೀಗಿಲ್ಲದಿರುವ ಸ್ಥಿತಿಯೂ ಉಂಟಾದೀತೆ? ಅಂಥಾ ಸಂಭವವುಂಟಾಗಬಲ್ಲದೆಂಬುದನ್ನು ನಾನು ಊಹಿಸಲೂ ಆರೆ. ಪ್ರಪಂಚವನ್ನೆಲ್ಲಾ ಸುತ್ತಿ, ಸಂಚಾರಮಾಡಿಕೊಂಡು ಬಂದಿರುವ ಮಹನೀಯರು ಏನು ಹೇಳುವರು ಬಲ್ಲಿರಾ? ನಮ್ಮ ದೇಶವು ಪ್ರಪಂಚದಲ್ಲೆಲ್ಲಾ ಅತಿರಮಣೀಯವಾದುವುಗಳ ಗುಂಪಿಗೆ ಸೇರಿದ ದೇಶ; ಪ್ರಕೃತಿಸೌಂದರ್ಯದ ಆಗರವೆನಿಸಿರುವ ದೇಶ; ಹಿತಕರವಾದ ವಾಯುಗುಣವುಳ್ಳ ದೇಶ; ಸಂಪದಭಿವೃದ್ಧಿಯ ಸಾಧನಗಳಿಂದ ನಿಬಿಡವಾಗಿರುವ ದೇಶ; ಇದರ ಮೇಲೆ, ತಾಳ್ಮೆಯಿಂದಲೂ, ಕರುಣೆಯಿಂದಲೂ ಕೂಡಿರುವ ಜನರಿಂದ ತುಂಬಿರುವ ದೇಶ; ಯೋಗ್ಯರಾದ ಜನರು ಭಕ್ತಿಯಿಂದ ಸೇವೆಮಾಡಲು ತಕ್ಕಂಥಾ ದೇಶ; ಹೀಗೆಂಬುದಾಗಿ ಅವರೆಲ್ಲರೂ, ನಮ್ಮ ದೇಶವನ್ನು ವರ್ಣಿಸಿದ್ದಾರೆ. ಇಂಥಾ ದೇಶವನ್ನು ಸೇವಿಸುವ ಯೋಚನೆಮಾಡದೆ, ಯಾವಾಗಲೂ ತನ್ನ ಸ್ವಂತ ಪ್ರಯೋಜನವನ್ನೂ, ತನ್ನ ಬಂಧುಬಳಗಗಳ ಪ್ರಯೋಜನವನ್ನೂ ಮಾತ್ರವೇ, ಎಲ್ಲಕ್ಕಿಂತಲೂ ಹೆಚ್ಚಾಗಿ ಚಿಂತಿಸುತ್ತಿರುವ ಮನುಷ್ಯನ ವರ್ತನೆಯು, ಎಷ್ಟು ಹೇಯವಾದುದು?

ಸ್ವದೇಶಾಭಿಮಾನದ ವಿಷಯದಲ್ಲಿ ನಾವು ನಮ್ಮ ಹೃದಯವನ್ನೇ ಶೋಧಿಸಿ ನೋಡಿ, ಶುದ್ಧವಾದ ಅಂತಃಕರಣದಿಂದ ವರ್ತಿಸಬೇಕು. ನಮ್ಮಲ್ಲಿ ಪ್ರತಿಯೊಬ್ಬನೂ, ತನಗೆ ದೇಶಾಭಿಮಾನವುಂಟೆಂಬುದಾಗಿ ಅಂತರವಾಗಿಯೂ, ಖಚಿತವಾಗಿಯೂ, ನಂಬಿರುವುದೇನೋ ನಿಜ. ಆದರೆ, ಈ ಸಂದರ್ಭದಲ್ಲಿ ಒಂದು ಅಂಶವನ್ನು ವಿಚಾರಮಾಡಬೇಕಾಗಿ ಬರುತ್ತದೆ. ಒಬ್ಬರ ಸ್ವದೇಶಾಭಿಮಾನದ ವಿಷಯದಲ್ಲಿ, ಅವರ ನೆರೆಯವರು ಆಡಿಕೊಳ್ಳುವ ಮಾತುಗಳೇ ಗಟ್ಟಿಯಾಗಿ ನಿಲ್ಲುವ ಪರಿಷ್ಕಾರದ ರುಜುವಾತೆನ್ನಿಸುತ್ತದೆ. ನಮ್ಮ ನೆರೆಯರು ನಮ್ಮನ್ನು ನಿಜವಾದ ದೇಶವತ್ಸಲರೆಂದು ಅಭಿಪ್ರಾಯಪಡುತ್ತಾರೋ? ನಾವು ನಮ್ಮ ನೆರೆಯವರ ಸ್ವದೇಶಾಭಿಮಾನದ ವಿಷಯದಲ್ಲಿ ಏನೆಂದುಕೊಳ್ಳುತ್ತೇವೆ? ನಮ್ಮ ನೆರೆಯವರ ಮನಸ್ಸಿನಲ್ಲಿ, ನಮಲ್ಲಿ ಪ್ರತಿಯೊಬ್ಬರ ವಿಷಯದಲ್ಲೂ, ಯಾವ ಬಗೆಯ ಅಭಿಪ್ರಾಯವಿದೆ? ಅವರು ನಮ್ಮನ್ನು ದೇಶಾಭಿಮಾನಿಗಳೆಂದು ಭಾವಿಸಿದ್ದಾರೆಯೇ? ನಾವು ಈ ಅಂಶಗಳನ್ನು ಒರೆಹಿಡಿದು ನೋಡಬೇಕು. ದೇಶಸೇವೆಯು ವಿಶೇಷವಾಗಿ ನಡೆಯುತ್ತಿರುವುದೇನೋ ನಿಜ. ಆದರೂ, ಈ ಸಂಬಂಧದಲ್ಲಿ ನಾವು ಒಂದು ವಿಷಯವನ್ನು ಒಪ್ಪಿಕೊಳ್ಳಲೇಬೇಕು. ಸ್ವಾರ್ಥಸಾಧನೆಯ ವರ್ತನೆಯೂ, ಸ್ವಲ್ಪಮಟ್ಟಿಗೆ ಇಲ್ಲಿ ನೆಲಸಿದೆ. ಇತರ ದೇಶಗಳಲ್ಲಿರುವಂತೆಯೇ ಇಲ್ಲಿಯೂ ಹೀಗಿದೆ. ಅಧಿಕಾರವೂ, ದೊಡ್ಡಪದವಿಯೂ, ಇರತಕ್ಕ ಯಾವ ಹುದ್ದೇದಾರರೇ ಆಗಲಿ, ಒಂದು ಕೆಲಸಮಾಡಿ ನೋಡಿದರೆ, ಈ ವಿಷಯವು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ತಮ್ಮ ಭೇಟಿಗೆ ಎಷ್ಟು ಜನರು ಬಂದಿದ್ದರು, ಯಾವ ಉದ್ದೇಶದಿಂದ ಬಂದಿದ್ದರು, ಎಂಬುದನ್ನು ಬರೆದಿಟ್ಟುಕೊಂಡಿದ್ದು ನೋಡಲಿ. ಅವರನ್ನು ಕಾಣಲು ಬಂದಿದ್ದವರಲ್ಲಿ, ಬಹುಮಂದಿಗಳು ಸ್ವಂತ ಪ್ರಯೋಜನವನ್ನೋ ತಮ್ಮ ಪಂಗಡದ ಪ್ರಯೋಜನವನ್ನೋ ಸಾಧಿಸಲು ಬಂದಿದ್ದರೆಂಬುದು, ತಾನಾಗಿಯೇ ಗೊತ್ತಾಗುವುದು. ನಮ್ಮ ದೇಶದ ಹಿತವನ್ನು ಸಾಧಿಸುವ ವಿಷಯದಲ್ಲಿ ಮಾತನಾಡಲು, ಅವರಲ್ಲಿಗೆ ಬಂದಿದ್ದವರು ಎಷ್ಟು ಮಂದಿಗಳು ತಾನೇ ಇರುವರು? ಇಂಥಾ ನಡತೆಯು ನಮಗೆ ತರವಲ್ಲ. ನಮ್ಮಲ್ಲಿ ಪ್ರತಿಯೊಬ್ಬರಿಗೂ, ಮತ್ತು ನಮ್ಮ ದೇಶಕ್ಕೂ, ಸಹ ಶ್ರೇಯಸ್ಸು ಉಂಟಾಗಬೇಕಾದರೆ ನಾವು ಉತ್ತಮರೀತಿಯಲ್ಲಿ ವರ್ತಿಸಬೇಕು.

ಇತರ ದೇಶಗಳೊಡನೆ ಹೋಲಿಸಿದಲ್ಲಿ, ನಮ್ಮ ಸಂಸ್ಥಾನದಲ್ಲಿ ಸ್ವಲ್ಪ ಮಂದಿಗಳು ವಾಸವಾಗಿರುವರೆಂದೇ ಹೇಳಬೇಕು. ಜನಸಂಖ್ಯೆಯು ಹೀಗೆ ಕಡಮೆಯಾಗಿರುವುದರಿಂದ, ಇಲ್ಲಿನವರೆಲ್ಲರೂ, ತಮ್ಮ ಸರ್ವ ಪ್ರಯತ್ನವನ್ನೂ ನೆರವೇರಿಸಿ ಕೆಲಸಮಾಡಿ, ದೇಶದ ಅಭ್ಯುದಯವನ್ನು ಸಾಧಿಸಬೇಕಾಗಿದೆ. ಹೀಗೆ ಮಾಡದೆ ಹಿಂದೆಗೆಯುವುದು ಮಹಾ ಪಾಪ. ಉದಾಹರಣೆಗಾಗಿ, ಒಂದು ಮುನಿಸಿಪಾಲಿಟಿಯ ಮೆಂಬರುತನವೋ, ಅಥವಾ ಇತರ ಅಂಥಾ ಅಧಿಕಾರವೋ ತಮಗೆ ಬೇಡವೆನ್ನುವುದು; ತಮಗೆ ಅವಕಾಶವಿಲ್ಲವೆಂಬ ಕಾರಣವನ್ನು ಹೇಳುವುದು; ಹೀಗೆಮಾಡುವುದು ದೇಶಕ್ಕೆ ದ್ರೋಹಮಾಡಿದಂತೆಯೇ ಸರಿ; ಹೀಗೆ ಮಾಡುವುದರಿಂದ ಆತ್ಮದ್ರೋಹದ ಪಾಪವನ್ನು ಕಟ್ಟಿಕೊಂಡಂತೆಯೂ ಆಗುತ್ತದೆ. ಇಂಥಾ ಅಧಿಕಾರವನ್ನಾಗಲಿ, ಇತರ ಹುದ್ದೆಯನ್ನಾಗಲಿ, ಸ್ವಪ್ರಯೋಜನವನ್ನು ಸಾಧಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅಂಗೀಕರಿಸುವುದೂ ಸಹ, ಇದರಂತೆಯೇ ದ್ರೋಹಚಿಂತನೆಯೇ ಸರಿ; ಅದು ಮತ್ತೂ ಪಾಪಕರವೂ ಹೌದು. ಪ್ರಪಂಚದಲ್ಲಿ ಅನೇಕ ದೇಶಗಳು ಮುಂದುವರಿದಿವೆ; ಅಭ್ಯುದಯವನ್ನು ಹೊಂದಿ ಮೆರೆಯುತ್ತಿವೆ. ಅಲ್ಲಿನ ಜನರು ಸ್ವಾರ್ಥತ್ಯಾಗಮಾಡಿ ದೇಶಸೇವೆ ಮಾಡುತ್ತಿರುವುದೇ, ಇದಕ್ಕೆ ಮುಖ್ಯಕಾರಣ. ಹೀಗೆ ದೇಶಸೇವೆ ಮಾಡುವವರು ನಮ್ಮ ದೇಶದಲ್ಲಿಯೂ ಬಹು ಮಂದಿಗಳಿದ್ದಾರೆ. ಆದರೂ, ಇಂಥವರ ಸಂಖ್ಯೆಯು ಈಗಿರುವುದಕ್ಕಿಂತಲೂ ಹತ್ತರಷ್ಟು ಹೆಚ್ಚಾಗುವುದು ಆವಶ್ಯಕ. ಈ ಸಂಸ್ಥಾನದಲ್ಲಿ ಮತ್ತೆ ಕೆಲವು ಕೆಲಸಗಳು ನಡೆಯಬೇಕಾಗಿವೆ. ಸ್ವಂತ ಲಾಭದ ಯೋಚನೆಯನ್ನೂ ಸಹ, ಮಾಡದೆ ಇರುವ, ಲಾಭವು ದೊರೆಯಬೇಕೆಂದು ಲೇಶವೂ ಆಶಿಸದೇ ಇರುವ, ಮಹನೀಯರಿಂದ ಮಾತ್ರವೇ ಅವು ಸಾಧಿಸಲ್ಪಡಬೇಕು. ಇತರರಿಂದ ಅವು ನಡೆಯುವ ಹಾಗಿಲ್ಲ. ಉದಾಹರಣೆಗಾಗಿ, ಜನಸಾಮಾನ್ಯದವರ ತಿಳಿವಳಿಕೆಯನ್ನು ಹೆಚ್ಚಿಸುವ ವಿಷಯವನ್ನು ತೆಗೆದುಕೊಳ್ಳೋಣ. ಜನಸಾಮಾನ್ಯದವರು ಅಜ್ಞಾನದ ಅಂಧಕಾರದಲ್ಲಿ ತತ್ತರಿಸುತ್ತಿದ್ದಾರೆ. ವಿದ್ಯಾವಂತರೆನಿಸಿದ ನಮ್ಮಲ್ಲಿ ಪ್ರತಿಯೊಬ್ಬರೂ, ಈ ವಿಷಯವನ್ನು ನೆನಸಿಕೊಂಡರೇ ಸಾಕು. ನಾವು ನಾಚಿಕೆಯಿಂದ ತಲೆ ತಗ್ಗಿಸಿ ನಿಲ್ಲಬೇಕಾಗುತ್ತದೆ. ನಮ್ಮ ಸ್ಕೂಲುಗಳಲ್ಲಿ ಓದಿದವರೂ ಅವರಿಗಿಂತ ಹೆಚ್ಚಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರೂ ಸಹ, ಬಡವರ ವಿಷಯದಲ್ಲಿಯೂ, ತಿಳಿವಳಿಕೆಯಿಲ್ಲದವರ ವಿಷಯದಲ್ಲಿಯೂ, ತಾವು ನಡೆಸಬೇಕಾದ ಕರ್ತವ್ಯವು ಖಂಡಿತವಾಗಿಯೂ ಉಂಟೆಂಬ ಭಾವನೆಯನ್ನಿಟ್ಟುಕೊಂಡಿರಬೇಕು. ಅವರಿಗೆ ಈ ಭಾವನೆಯನ್ನು ಉಂಟುಮಾಡದೆಹೋದ ಪಕ್ಷದಲ್ಲಿ ಸ್ಕೂಲುಗಳು ಇದ್ದೂ ಸಾರ್ಥಕವಿಲ್ಲ. ಸ್ಕೂಲುಗಳ ಮಾತು ಹಾಗಿರಲಿ. ನಮ್ಮ ವಿಶ್ವವಿದ್ಯಾನಿಲಯವು ಇದ್ದೂ ಸಾರ್ಥಕವಿಲ್ಲ. ಇಷ್ಟಕ್ಕೂ, ವಿಶ್ವವಿದ್ಯಾನಿಲಯದ ವ್ಯಾಸಂಗವು ಸಾಧ್ಯವಾದುದಕ್ಕೆ, ಮೂಲಕಾರಣವು ಯಾವುದು ತಿಳಿಯುವುದೇ? ಅದು ಬಡವರೂ, ಅಜ್ಞಾನಿಗಳೂ ಆದವರು, ಮೈಬೆವರನ್ನು ಸುರಿಸಿ, ತಾಳ್ಮೆಯಿಂದ ಮಾಡುತ್ತಿರುವ ಕೆಲಸವೇ. ಮಹನೀಯರೆ, ನಾನು ಸ್ವಲ್ಪಮಟ್ಟಿಗೆ ಉದ್ರೇಕದಿಂದ ಕೂಡಿ, ಈ ಸಂಗತಿಗಳನ್ನು ಪ್ರಸ್ತಾಪಿಸುತ್ತಿದ್ದೇನೆ. ನನ್ನಲ್ಲಿ ಉದ್ರೇಕವಿದ್ದರೂ, ಮುಂದೆ ಒಳ್ಳೆಯದಾಗುವುದೆಂಬ ಆಶೆಯೂ ಇದೆ; ಭರವಸೆಯೂ ಇದೆ. ನೀವೆಲ್ಲರೂ ನನಗೆ ಒತ್ತಾಸೆ ಕೊಡುವಿರೆಂದು ನಾನು ದೃಢವಾಗಿ ತಿಳಿದಿದ್ದೇನೆ. ನಮ್ಮ ದೇಶಾಭಿಮಾನವು ನಮ್ಮ ಮನಸ್ಸನ್ನು ಸ್ವಶಿಕ್ಷಣದ ಕಡೆಗೆ ಸೆಳೆಯಬೇಕು. ಈ ವಿಧವಾದ ಸ್ವಶಿಕ್ಷಣದ ಬಿಕ್ಕಟ್ಟು, ನಮ್ಮಲ್ಲಿ ಇಲ್ಲದೆ ಹೋದರೆ, ನಾವು ಉತ್ತಮರೀತಿಯಲ್ಲಿ ದೇಶಸೇವೆಯನ್ನು ಮಾಡಲಾಗುವುದಿಲ್ಲ. ಇಲ್ಲಿ ಸೇರಿರುವ ನಾವೆಲ್ಲರೂ, ರಾಜ್ಯಾಡಳಿತಕ್ಕೆ ಸಂಬಂಧಪಟ್ಟಿದ್ದೇವೆ. ನಾವು ಕೆಲಸಮಾಡುವುದು ಮಾತ್ರವೇ ಅಲ್ಲದೆ, ಮಾಡಿದ ಕೆಲಸವು ಅಚ್ಚುಕಟ್ಟಾಗಿದೆಯೋ ಎಂಬುದನ್ನು ನೋಡಿಕೊಳ್ಳುವುದೂ, ನಮ್ಮ ಕೆಲಸವಾಗಿದೆ. ನಾವು ಎಲ್ಲಾ ವಿಷಯಗಳಲ್ಲಿಯೂ ವಿಶೇಷ ತಿಳಿವಳಿಕೆಯನ್ನೂ ಉಂಟುಮಾಡಿಕೊಳ್ಳಬೇಕು. ಅಲ್ಲದೆ, ಹಾಗೆ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ಯಾವುದೊಂದು ಅಂಶವನ್ನೂ ಬಿಡದೆ ಎಲ್ಲವನ್ನೂ ಯಥಾರ್ಥವಾಗಿ ಗ್ರಹಿಸಬೇಕು. ನಾವು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಇದ್ದುದನ್ನು ಇದ್ದಂತೆಯೇ ಅತಿಬೇಗನೆ ಗ್ರಹಿಸಿ, ವಿವೇಚನೆ ಮಾಡುವುದನ್ನು ಕಲಿಯಬೇಕು. ಅಸಂಬದ್ಧವಾದ ಸಂಗತಿಗಳನ್ನೂ, ಅಸಂಬದ್ಧವಾದ ವಾದಗಳನ್ನೂ, ದೂರವಾಗಿ ತಳ್ಳಿಬಿಡಬೇಕು. ಮೇಲು ಮೆರುಗಿಗೆ ಬೆರಗಾಗದೆ, ನಿಜಸ್ಥಿತಿಯನ್ನು ತಿಳಿಯಬೇಕು. ನಮ್ಮ ಕೆಲಸದಲ್ಲಿ ನಿಪುಣರಾಗಬೇಕೆಂಬುದೊಂದು; ಹೀಗೆ ನಿಪುಣರಾಗಿ, ದೇಶಸೇವೆ ಮಾಡುವುದೊಂದು; ಮೇಧಾವಿಗಳೂ, ಗುಣವಂತರೂ, ಆದವರಿಗೆ ಇವೆರಡಕ್ಕಿಂತಲೂ ಉತ್ಸಾಹಜನಕವಾದುದು ಮತ್ತಾವುದೂ ಇಲ್ಲ. ಇವೆರಡೂ ಒಟ್ಟುಗೂಡುವುದೇ ಧನ್ಯತೆಗೆ ದಾರಿ. ಯಶಸ್ಸಿಗೆ ಮೂಲ. ದೇಶಸೇವೆ ಮಾಡಬೇಕೆಂಬ ಘನವಾದ ಉದ್ದೇಶವನ್ನಿಟ್ಟುಕೊಂಡು, ಅದನ್ನು ಸಾಧಿಸುವುದಕ್ಕೋಸ್ಕರ ನಮ್ಮ ಕೆಲಸದಲ್ಲಿ ಪ್ರವೀಣರಾಗಿ, ನಮ್ಮ ಸದ್ಗುಣಗಳನ್ನು ವೃದ್ಧಿಮಾಡಿಕೊಳ್ಳುವುದರಿಂದ ಉಂಟಾಗುವ ಸಂತೋಷವೇ ಸಂತೋಷ. ಮನುಷ್ಯನಿಗೆ ಉಂಟಾಗುವ ಇತರ ಸಂತೋಷಗಳೆಲ್ಲಕ್ಕಿಂತಲೂ, ಇದೇ ಮಿಗಿಲಾದುದು. ಯಾವುದರಿಂದಲೂ ಚ್ಯುತಿಯುಂಟಾಗದ ಸಂತೋಷವೆಂದರೆ, ಇದೇ ಸರಿ; ಯಾವುದರಿಂದಲೂ ಕಂದಿಕುಂದದ ಸಂತೋಷವೆಂದರೆ ಇದೇ ಸರಿ. ಇಂಥಾ ಸಂತೋಷವನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕು; ಮತ್ತು ನಮ್ಮಷ್ಟು ಮುಂದಕ್ಕೆ ಬಾರದೆ ಹೀನಸ್ಥಿತಿಯಲ್ಲಿರುವ ನಮ್ಮ ದೇಶಬಾಂಧವರಿಗೂ, ಈ ಭಾಗ್ಯವು ದೊರೆಯುವಂತೆ, ಸಾಧ್ಯವೆನಿಸುವ ಸಮಸ್ತ ಸಹಾಯಗಳನ್ನೂ ಮಾಡಬೇಕು; ಇದೇ ನಾವಿಟ್ಟುಕೊಳ್ಳಬೇಕಾದ ಮುಖ್ಯ ಗುರಿ. ನಾವು ಹೀಗೆ ಮಾಡುವುದರ ದೆಸೆಯಿಂದಲೇ ಮೈಸೂರು ಸಂಸ್ಥಾನವು ಉನ್ನತಿಯನ್ನು ಪಡೆದು, ಉದ್ಧಾರವಾಗಬೇಕು.

ಮಿರ್ಜಾ ಎಂ. ಇಸ್ಮಾಯಿಲ್,
18ನೇ ಅಕ್ಟೋಬರು 1926. ಮೈಸೂರು ಸಂಸ್ಥಾನದ ದಿವಾನರವರು.

೧೯೨೬ನೆಯ ಇಸವಿ ಅಕ್ಟೋಬರ್ ತಾ|| ೨೩ರಿಂದ ೧೯೨೬ ನೆಯ ಇಸವಿ ಅಕ್ಟೋಬರ್ ತಾ|| ೨೯ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಆಶ್ವಯುಜ ಬಹುಳ ಬಿದಿಗೆಯಿಂದ ಆಶ್ವಯುಜ ಬಹುಳ ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾಮಾಸ
23	¹ಶನಿ	ಬಿದಿ	3-14	ಕೃತ್ತಿ	47-2	7
24	ಭಾನು	ತ-ಚ	0-3 57-17	ರೋಹಿ	46-15	8
25	ಸೋಮ	ಪಂಚ	56-18	ಮೃಗ	46-37	9
26	ಮಂಗಳ	ಷಷ್ಠಿ	56-41	ಆರ್ದ್ರಾ	48-15	10
27	²ಬುಧ	ಸಪ್ತ	58-15	ಪುನ	51-9	11
28	ಗುರು	ಅಷ್ಟ	60	ಪುಷ್ಯ	55-16	12
29	ಶುಕ್ರ	ಅಷ್ಟ	1-51	ಆಶ್ಲೇ	60	13

(1) ಮಳೆನಕ್ಷತ್ರ-ಸ್ವಾತಿ ೧ ನೆಯ ಪಾದ. (೨) ಮಳೆನಕ್ಷತ್ರ-ಸ್ವಾತಿ ೨ ನೆಯ ಪಾದ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಲಕ್ಷ್ಮೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀತಾರಾ ಪರಮಧಿಣಕರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸೆ ೧೯೨೬ ನೆಯ ಇಸವಿ ಅಕ್ಟೋಬರ್ ತಾರೀಖು ೩೦ ನೆಯ ಶನಿವಾರ. [ಸಂಚಿಕೆ ೪೪

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇನು ನೋಡೋಣ

ಸತ್ಯವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ
ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ತಾಲಿಮಕಂದ, ಮಧುಕಂದ, ಜಪಾಕಂದ, ತಾಲೀಮಲೀಕಂದ, ಅಶ್ವಗಂಧ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಜಾಯಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸರ್ಕೀಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಕಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—14] ಪತ್ತೆ:—ಮಾಲಕ ವೈದ್ಯ ಪ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

SIROMANY NARAYANACHARYA & CO.,
BENARES CITY.

S.U.N. & CO.
BENARES CITY

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದೇಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—15]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ [illegible] ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ [illegible] ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಿಸಲಾದೀತು.

ಡಬ್ಬಿ ೧ಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—8] ಪೋ. ಬಾ. ೩೧೦, ಮದರಾಸು.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.
ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಖೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಖೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.
ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆಂಜಾ ಪ್ಲೇಗುಜ್ವರ
ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.
41

ಗೋಪಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.
ಪಾಳ್ಯದ ವೆಂಕಟಾಚಲಪಂಡಿತರು,
ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್‌ಸಂಘದಿಂದ 1926-27 ರಲ್ಲಿ 8 ತಿಂಗಳುಗಳ ವೇತನ ಮಂಜೂರಾಗಿರುವ ವಿದ್ಯಾರ್ಥಿಗಳ ಹೆಸರಿನ ಪಟ್ಟಿ.

ಆರ್. ಬಿ. ಎ. ಎನ್. ಎಂ. ಸ್ಕೂಲ್, ಬೆಂಗಳೂರು ಕಂಟೋನ್ಮೆಂಟ್—
44. ಎಸ್. ವಿರುಪಾಕ್ಷಯ್ಯ. ಎಸ್.ಎಸ್.ಎಲ್.ಸಿ. 3 ರೂ.

ಮರಿಮಲ್ಲಪ್ಪನವರ ಹೈಸ್ಕೂಲ್, ಮೈಸೂರು—ಎಸ್.ಎಸ್.ಎಲ್.ಸಿ.
45. ಎಂ. ಸುಬ್ಬಣ್ಣ 3 ರೂ. 46. ಕೆ. ಶಿವರುದ್ರಪ್ಪ 3 ರೂ. 47. ಬಿ. ಸಿ. ಚನ್ನಬಸಪ್ಪ 3 ರೂ. 48. ಟಿ. ಎನ್. ಲಿಂಗಯ್ಯ 3 ರೂ. 49. ಆರ್. ಎಲ್. ಸಣ್ಣಪ್ಪ 3 ರೂ.

V ಫಾರಂ.

50. ಎ. ಸಿ. ರುದ್ರಾರಾಧ್ಯ 3 ರೂ. 51. ಸಿ. ಸಿದ್ಧಲಿಂಗಯ್ಯ 3 ರೂ. 52. ಎಸ್. ಚಿಕ್ಕವೀರಯ್ಯ 3 ರೂ. 53. ಎಂ. ಸಿ. ನಂಜುಂಡಯ್ಯ 3 ರೂ. 54. ಎನ್. ನಂಜುಂಡಯ್ಯ 3 ರೂ.

IV ಫಾರಂ.

55. ಎಸ್. ರುದ್ರಯ್ಯ 3 ರೂ. 56. ಎ. ಬಿ. [illegible] 3 ರೂ.

ಗೌರ್ನಮೆಂಟ್ ಹೈಸ್ಕೂಲ್, [illegible]—ಎಸ್.ಎಸ್.ಎಲ್.ಸಿ.
57. ಆರ್. ಗಂಗಪ್ಪ 3 ರೂ. 58. ಎಂ. ಸಿದ್ಧರಾಮಯ್ಯ 3 ರೂ. 59. ಎಂ. ಮಲ್ಲಪ್ಪ 3 ರೂ.
60. ಜಿ. [illegible] IV ಫಾರಂ 3 ರೂ. ([illegible]

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಅಕ್ಟೋಬರ್ ತಾ॥ ೩೦ ನೆಯ ಶನಿವಾರ.

THE DEWAN'S CONCLUDING SPEECH.

After the somewhat embittering address on the opening day the public had expected, naturally we believe, that the Dewan would make a more conciliatory speech towards the end of the sessions. But the members of the Representative Assembly have again been treated to a like sermon, which does credit to the patience and charity of the members on the one hand and to the pertinaciousness of the Dewan on the other. Before we speak of the homily we may say that we note with much pleasure and relief the assurance of the Dewan that if actual experience showed that the continuance of the District Economic Superintendents was uncalled for Government would at once abolish the posts. The Dewan was pleased to say again "It may be that, in the printed records of this House the individual records of some of you may not be found to occupy the same length and breadth of space as those of others. But that need hardly be counted against those who chose to be more brief. You will, I am sure, be judged by the electors—as I said in my opening speech not merely according to the length or the frequency of your speeches, but according to the good sense, earnestness and disinterestedness with which, even if silent or saying little, you have sought to secure practical benefits for them. They will also enquire, I think, whether a member thought only of his own sect or party or threw the weight of his vote on the side of the wider interests of the people. I hope that, judged by these standards, you will obtain again the suffrages of your fellow citizens. I shall confidently look forward to greeting many of you here once again." Suppose for a moment that the British Premier had preached this sermon at the parliament—it is no doubt a difficult thing to suppose—what a storm it would have created? What after all, is the length of the speeches of our members here? It would be well worth noting that speakers at the Houses of Parliament go on for hours together so often, and surely they are not met with the scant courtesy that our members who might have spoken for some minutes because nobody does for an hour or any where near it have met with at the hands of the Dewan. If it were only a reflection on the members of the Assembly it is bad enough, but it casts a reflection also on the electors who are given a direction by the Dewan in the matter of judging their representatives. Further, why should long speeches be discounted? Is not silence so often a cloak for empti-headedness? Do not long speeches often display good sense, earnestness and disinterestedness? Why, even the address of a Dewan cannot be given without a great many words and should it be discounted on that account? The Dewan has said elsewhere in the same speech that the citizens must refuse to be a party to improper transactions and refuse to put up with unreasonable delays and irregularities. Have not their representatives on the Assembly a duty to voice their grievances, to get their needs satisfied and wrongs prevented, and do they not come with a full sense of their responsibility? Could it be imagined that their object could be achieved by maintaining silence or saying a little? It is amazing that the Dewan should have thought fit to harp on the same jarring tune. Next, the Dewan has gone far beyond his first address in introducing another standard by which a member of the House has to be judged, namely, whether he has thought only of his sect or party or threw the weight of his vote on the side of the wider interests of the people. We would also like to see the opinion of the members of a modern democratic House if they were given a chance to taste this dish of advice. Why should the Dewan think the opinion of a party is against the wider interests of the State? Has he not himself stated that diversity of opinion there must always be and that it is very law of life, and further, that but for differences of opinion progress would have ceased? When the Viceroy is dilating upon the need for parties with recognised principles and their utility and when the existence of parties is considered inevitable for the progress of a country, here the members are sought to be shown the inconsistency between the parties and the interests of the State. The Dewan wants the members to be judged by these standards in order to obtain the suffrages of their fellow citizens. We may be permitted to state that these standards are neither desirable nor obtainable. If a man has a good cause he must show it to be so and that could only be done with the help of words. Since diversity is the very law of life, diverse schools of thought even in administrative matters are bound to be and parties are bound to develop in consequence. We are very doubtful if the members would be able to obtain the suffrages of the electors by following the standards of the Dewan. Any way practice has shown otherwise and probably what is practicable would always be also profitable and desirable. We may be excused for this frankness, because we are anxious that the voters should select men who hold broad and liberal views about the important questions affecting the welfare of the people at large and not those who might merely talk of the wider interests of the State, which might in the end turn out to be beneficial only to a few and harmful to many.

ದಿವಾನರ ಉಪಸಂಹಾರಭಾಷಣ.

ದಿವಾನರ ಸಭಾರಂಭಭಾಷಣವೆಂಬ ಬೇವಿನ ಪುಷ್ಪಭಕ್ಷಣದಿಂದುಂಟಾದ ಕಹಿಯು ಉಪಸಂಹಾರಭಾಷಣವೆಂಬ ಶರ್ಕರಾಸೇವನೆಯಿಂದ ನಿವಾರಿತವಾಗಿ ಸಿಹಿಯಾಗಬಹುದೆಂದು ನಿರೀಕ್ಷಿಸಿದ್ದೆವು, ಆದರೆ ಮೊದಲಿನಂತೆಯೇ ಪ್ರತಿನಿಧಿಗಳಿಗೆ ಮತ್ತೊಂದು ಹಿತೋಪದೇಶವು ಮಾಡಲ್ಪಟ್ಟಿರುವುದು. ಇದರಿಂದ ಒಂದುಕಡೆ ಪ್ರತಿನಿಧಿಗಳ ಸಹನೆಯೂ, ಔದಾರ್ಯವೂ ಮತ್ತೊಂದುಕಡೆ ದಿವಾನರ ಮುಷ್ಕರಭಾವವೂ ವ್ಯಕ್ತಪಡುವುದರ ವಿನಾ ಮತ್ತಾವ ಪುರುಷಾರ್ಥವೂ ಆಗುವಂತಿಲ್ಲವು. ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರುಗಳಿಂದ ಯಾವ ಪ್ರಯೋಜನವೂ ಕಂಡುಬರದಿದ್ದಲ್ಲಿ ಕೂಡಲೆ ಅವರುಗಳು ತೆಗೆದುಹಾಕಲ್ಪಡುವರೆಂದು ದಿವಾನರು ಅಭಿವಚನವಿತ್ತಿರುವುದು ಸಂತೋಷಪ್ರದವಾಗಿದೆ. ''ಈ ಸಭೆಯ ಮುದ್ರಿತವಾದ ಕಡತದಲ್ಲಿ ನಿಮ್ಮಲ್ಲಿಯ ಕೆಲವೊಬ್ಬರ ಭಾಷಣವೂ ಇತರರಷ್ಟು ಸ್ಥಳವನ್ನಾಕ್ರಮಿಸದೆ ಇರಬಹುದು, ಆದರೆ ಅದು ಬಹು ಮಿತವಾಗಿ ಮಾತನಾಡುವವರಿಗೆ ವಿರುದ್ಧವಾದುದೆಂದು ಭಾವಿಸಲ್ಪಡಬಾರದು. ನಾನು ಆರಂಭಭಾಷಣದಲ್ಲಿ ಹೇಳಿದಂತೆ ಮೌನದಿಂದಾಗಲಿ, ಮಿತಭಾಷೆಯಿಂದಾಗಲಿ ತಮ್ಮ ಹಿತವನ್ನು ಸಾಧಿಸಲು ಶಕ್ಯವಾದ ವಿವೇಚನೆ, ಆಸಕ್ತಿ ಮತ್ತು ನಿಷ್ಪಕ್ಷಪಾತತೆ ಇವುಗಳ ಮೇಲಿಂದ ನಿಮ್ಮ ಯೋಗ್ಯತೆಯನ್ನು ಓಟರುಗಳು ಪರೀಕ್ಷಿಸುತ್ತಾರಲ್ಲದೆ ನೀವು ಮಾರುದ್ದವಾಗಿ ಅಥವಾ ಪದೇಪದೇ ಮಾತನಾಡುವುದರ ಮೇಲಿಂದ ಪರೀಕ್ಷಿಸುವುದಿಲ್ಲ. ಅಲ್ಲದೆ ಪ್ರತಿನಿಧಿಯು ತನ್ನ ಕುಲದವರ ಅಥವಾ ಪಕ್ಷದವರ ಹಿತಸಾಧನೆಗೆ ಮಾತ್ರ ಪ್ರಯತ್ನಿಸಿದನೆ ಅಥವಾ ಸಮಸ್ತಪ್ರಜೆಗಳ ಕ್ಷೇಮಕ್ಕಾಗಿ ತನ್ನ ಓಟನ್ನು ವಿನಿಯೋಗಿಸಿದನೆ? ಎಂಬುದನ್ನು ಸಹ ಅವರುಗಳು ವಿಮರ್ಶಿಸುತ್ತಾರೆ ಈ ವಿಧವಾದ ಯೋಗ್ಯತಾಪರಿಶೀಲನೆಯಿಂದ ನಿಮ್ಮ ಸಹಪಟ್ಟಣಿಗರ ಸಹಾಯವನ್ನು ನೀವು ಪುನಃ ಪಡೆಯುವಿರೆಂದು ನಾನು ಭಾವಿಸುತ್ತೇನೆ. ಇಲ್ಲಿ ನೆರೆದಿರುವ ನಿಮ್ಮಗಳಲ್ಲಿ ಅನೇಕರ ಸುಖಾಗಮನವನ್ನು ಮತ್ತೊಮ್ಮೆ ಬಯಸುವೆನೆಂಬ ಭರವಸೆಯು ನನಗುಂಟು'' ಎಂದು ಹೇಳಿರುವರು. ಇಂತಹ ಜ್ಞಾನೋಪದೇಶವನ್ನು ಆಂಗ್ಲಮಂತ್ರಿಗಳು ಪಾರ್ಲಿಮೆಂಟ್ ಸಭೆಯಲ್ಲಿ ಮಾಡಿದ್ದಾದರೆ ಎಂತಹ ಪ್ರಚಂಡಮಾರುತವೆದ್ದು ಉಲ್ಲೋಲಕಲ್ಲೋಲವಾಗುತ್ತಿದ್ದಿತೋ ಹೇಳಲಾಗುವುದಿಲ್ಲ. ಇಲ್ಲಿ ನಮ್ಮ ಪ್ರಜಾಪ್ರತಿನಿಧಿಗಳಾದರೂ ಮಾಡಿರುವ ಭಾಷಣವು ದೊಡ್ಡದಾಗಿರುವುದು ತಾನೇ ಏನು? ನಮ್ಮ ಪ್ರತಿನಿಧಿಗಳು ಕೆಲ ನಿಮಿಷಗಳವರೆಗೆ ಮಾತನಾಡಿದ ಮಾತ್ರಕ್ಕೆ ಅವರನ್ನು ನಮ್ಮ ದಿವಾನರು ತಿರಸ್ಕರಿಸುವಂತೆ ಪಾರ್ಲಿಮೆಂಟಿನಲ್ಲಿ ಘಂಟೆಯಗಟ್ಟಲೆ ಒಂದೇ ಸಮನಾಗಿ ಮಾತನಾಡಿದರೂ ಯಾರೂ ಅವರನ್ನು ತಿರಸ್ಕರಿಸುವುದಿಲ್ಲ. ಈ ತಿರಸ್ಕಾರವು ಪ್ರತಿನಿಧಿಗಳಿಗೆ ಮಾತ್ರ ಅನ್ವಯಿಸುತ್ತದೆಂದು ಭಾವಿಸಬಾರದು. ಏತಕ್ಕೆಂದರೆ, ದಿವಾನರು ಕೊಟ್ಟ ಸೂಚನೆಯಂತೆ ಪ್ರತಿನಿಧಿಗಳ ಯೋಗ್ಯತಾಪರೀಕ್ಷೆಯನ್ನು ಮಾಡುವ ಓಟರುಗಳಿಗೂ ಅನ್ವಯಿಸದೆ ಇರುವುದಿಲ್ಲ. ದೊಡ್ಡಭಾಷಣಗಳನ್ನೇಕೆ ತಿರಸ್ಕರಿಸಬೇಕು? ಅನೇಕವೇಳೆ ಮೌನಧಾರಣೆಯು ತಲೆಬುರುಡೆಯಲ್ಲಿ ತಿರುಳೇನೂ ಇಲ್ಲವೆಂಬುದರ ಸೂಚಕವಲ್ಲವೆ? ಎಷ್ಟೋ ವೇಳೆ ದೊಡ್ಡಭಾಷಣಗಳು ವಿವೇಕವನ್ನೂ, ಆಸಕ್ತಿಯನ್ನೂ ನಿಷ್ಪಕ್ಷಪಾತತೆಯನ್ನೂ ವ್ಯಕ್ತಪಡಿಸಿರುವುದಿಲ್ಲವೆ? ದಿವಾನರ ಭಾಷಣವಾದರೂ ಸಾಮಾನ್ಯವಾಗಿ ದೊಡ್ಡದಾಗಿಲ್ಲದೆ ಇರುವುದಿಲ್ಲ. ಈ ಕಾರಣದಿಂದ ಅದನ್ನು ತಿರಸ್ಕರಿಸಲಿಕ್ಕಾದೀತೆ? ಜನರು ಅನುಚಿತಕಾರ್ಯಗಳಲ್ಲಿ ಭಾಗಿಗಳಾಗಿರಬಾರದೆಂದೂ, ನಿಷ್ಕಾರಣವಾದ ಆಲಸ್ಯ ಅಕ್ರಮಗಳನ್ನು ಸಹಿಸಿಕೊಂಡಿರಬಾರದೆಂದೂ ದಿವಾನರು ತಮ್ಮ ಭಾಷಣದಲ್ಲಿ ಹೇಳಿರುವರು. ಅದರಂತೆಯೇ ಅವರ ಪ್ರತಿನಿಧಿಗಳು ಸಭೆಯಲ್ಲಿ ಜನರ ಕುಂದುಕೊರತೆಯನ್ನು ನಿವೇದಿಸಿ ಅದರ ಪರಿಹಾರವನ್ನು ಹೊಂದಲು ಪ್ರಯತ್ನಿಸುವುದು ಅವರ ಮುಖ್ಯ ಧರ್ಮವಲ್ಲವೆ? ಅವರು ಮೌನವಾಗಿದ್ದಲ್ಲಿ ಅಥವಾ ಒಂದೆರಡು ಮಾತುಗಳನ್ನಾಡಿದಲ್ಲಿ ಅವರ ಇಷ್ಟಾರ್ಥವು ಸಿದ್ಧಿಸುವುದೆಂದು ಊಹಿಸಲಿಕ್ಕಾದೀತೆ? ತಾಯಿಯು ತನ್ನ ಮಗುವನ್ನು ಬಹಳವಾಗಿ ಪ್ರೀತಿಸುವಳಾದರೂ ಅದು ಅತ್ತಹೊರತು ಹಾಲನ್ನು ಕೊಡುವಳೆ? ಇಂತಹುದರಲ್ಲಿ ನಮ್ಮ ದಿವಾನರು ಮೌನವ್ರತದಿಂದ ಇಷ್ಟಾರ್ಥಸಿದ್ಧಿಯಾಗುವುದೆಂದು ಪುನಃಪುನಃ ಹೇಳಿರುವುದು ಸಖೇದಾಶ್ಚರ್ಯವಾಗಿದೆ ಪ್ರತಿನಿಧಿಯು ತನ್ನ ಕುಲ ಜಾತಿ ಪಕ್ಷವನ್ನು ಹಿಡಿದು ಹೋರಾಡಿದನೆ ಅಥವಾ ಸಮಸ್ತ ಜನರ ಪ್ರಯೋಜನಾರ್ಥವಾಗಿ ತನ್ನ ಓಟನ್ನು ಕೊಟ್ಟನೆ? ಎಂಬುದರ ಮೇಲೆ ಅವನ ಯೋಗ್ಯತೆಯನ್ನು ಓಟರುಗಳು ಗೊತ್ತುಮಾಡಬೇಕೆಂಬ ಒಂದು ವಿಚಿತ್ರಸೂಚನೆಯನ್ನು ದಿವಾನರು ತಮ್ಮ ಉಪಸಂಹಾರಭಾಷಣದಲ್ಲಿ ಕೊಟ್ಟಿರುವರು. ದಿವಾನರ ಈ ವಿಧವಾದ ಹಿತಬೋಧಾಮೃತಪಾನದ ಸವಿಯ ವಿಚಾರದಲ್ಲಿ ಈಗಣ ಪ್ರಜಾಪ್ರಾಬಲ್ಯದ ಸಭಾಮೆಂಬರುಗಳ ಅಭಿಪ್ರಾಯವನ್ನು ಕೇಳಿದಲ್ಲಿ ವ್ಯಕ್ತವಾಗುವುದು. ಪಕ್ಷಾಭಿಮಾನವು ದೇಶಾಭಿಮಾನಕ್ಕೆ ವಿರುದ್ಧವೆಂದು ದಿವಾನರು ಭಾವಿಸುವುದೇತಕ್ಕೆ? ಭಿನ್ನಾಭಿಪ್ರಾಯವು ಜನಜೀವಿತಕ್ಕೆ ಅತ್ಯಾವಶ್ಯಕವಾಗಿರುವುದರಿಂದ ಅದು ಇದ್ದೇ ತೀರಬೇಕೆಂದೂ, ಭಿನ್ನಾಭಿಪ್ರಾಯವಿಲ್ಲದಿದ್ದಲ್ಲಿ ಯಾವ ಅಭ್ಯುದಯವೂ ಆಗುವುದಿಲ್ಲವೆಂದೂ ದಿವಾನರೇ ಹೇಳಿರುವರು. ಅಲ್ಲದೆ ಅಂಗೀಕೃತವಾದ ಧ್ಯೇಯವುಳ್ಳ ಪಕ್ಷ(ಪಾರ್ಟಿ)ಗಳು ಇರುವುದರ ಅವಶ್ಯಕತೆಯನ್ನೂ, ಅವುಗಳ ಪ್ರಯೋಜನವನ್ನೂ ಕುರಿತು ವೈಸ್‌ರಾಯರು ಹೇಳುವಾಗ್ಗೆ ದೇಶಾಭ್ಯುದಯಕ್ಕೆ ಪಾರ್ಟಿಗಳು ಇದ್ದೇತೀರಬೇಕೆಂದು ಅಪ್ಪಣೆಕೊಡಿಸಿರುವರು. ಇಂತಹುದರಲ್ಲಿ ನಮ್ಮ ಪ್ರತಿನಿಧಿಗಳು ಪಕ್ಷಾಭಿಮಾನಿಗಳಾಗಿರುವುದು ದೇಶಾಭ್ಯುದಯಕ್ಕೆ ಕುಂದಕವೆಂದು ದಿವಾನರು ಹೇಳಿರುವುದು ವಿಚಿತ್ರವೇಸರಿ. ಶ್ರೀಮನ್ಮಹಾರಾಜರವರು ತಮ್ಮ ದರ್ಬಾರಿನಲ್ಲಿ ತಮ್ಮ ಬಂಧುವರ್ಗದವರು ನಡುವನ್ನು ಕಟ್ಟಬೇಕಾದುದಿಲ್ಲವೆಂದು ಅಪ್ಪಣೆಕೊಡಿಸಿರುತ್ತಾರೆ. ಇದರಿಂದ ಪ್ರಭುಗಳಿಗೆ ತಮ್ಮ ಬಂಧುಗಳಮೇಲೆ ಮಾತ್ರ ಅಭಿಮಾನವಿರುತ್ತದಲ್ಲದೆ ಪ್ರಜೆಗಳಮೇಲೆ ಅಭಿಮಾನವಿಲ್ಲವೆಂದು ಹೇಳಲಿಕ್ಕಾದೀತೆ? ಇದರಂತೆಯೇ ದಿವಾನರು ಪ್ರತಿನಿಧಿಸಭೆಯಲ್ಲಿ ತಮ್ಮ ಅಧಿಕಾರಿ ವರ್ಗದವರನ್ನು ಎತ್ತರವಾದ ಪೀಠದಮೇಲೆ ಕುಳ್ಳಿರಿಸಿಕೊಂಡು ಮೆಂಬರುಗಳನ್ನು ಕೆಳಭಾಗದಲ್ಲಿ ಕುಳ್ಳಿರಿಸುವುದರಿಂದ ದಿವಾನರಿಗೆ ಮೆಂಬರುಗಳಮೇಲೆ ಅಭಿಮಾನವಿಲ್ಲವೆಂದು ಯಾರಾದರೂ ಭಾವಿಸಿರುವರೆ? ಪ್ರಜಾಭಿಮಾನಾಪೇಕ್ಷಿಗಳಾದ ಮೆಂಬರುಗಳ ಯೋಗ್ಯತೆಯು ತಾವು ಸೂಚಿಸಿರುವ ನವೀನರೀತಿಯಿಂದ ಪರೀಕ್ಷಿಸಲ್ಪಡಬೇಕಾಗಿ ದಿವಾನರು ಇಚ್ಛಿಸುತ್ತಾರೆ. ಇವರು ಸೂಚಿಸಿರುವ ಪರೀಕ್ಷಾವಿಧಾನವು ಅಪೇಕ್ಷಣೀಯವೂ ಅಲ್ಲ, ಸಾಧ್ಯವೂ ಅಲ್ಲ. ಯಾವ ಮನುಷ್ಯನಾಗಲಿ ತಾನು ಹೇಳತಕ್ಕುದು ಎಷ್ಟೋ ಸಕಾರಣವಾಗಿಯೂ ಪ್ರಬಲವಾಗಿಯೂ ಇದ್ದರೂ ಅದನ್ನು ತಕ್ಕ ಮಾತುಗಳಿಂದ ವಿವರಿಸಿ ತಿಳಿಸಿದಹೊರತು ಪ್ರಯೋಜನವಾಗುವುದಿಲ್ಲವೆಂಬುದು ಅನುಭವಸ್ಥರೆಲ್ಲರಿಗೂ ತಿಳಿದೇ ಇದೆ. ಲೋಕದಲ್ಲಿ ಭಿನ್ನಾಭಿಪ್ರಾಯವಿಲ್ಲದಿದ್ದರೆ, ಮತ ಜಾತಿ ಭೇದಗಳೇ ಇರುತ್ತಿರಲಿಲ್ಲ, ಮತ್ತು ಸಭೆಗಳಲ್ಲಿ ಮೆಜಾರ್ಟಿ ಮೈನಾರಟಿಗಳ ಮೇಲೆ ವಿಷಯವಿಮರ್ಶೆ ಮಾಡಲ್ಪಡುತ್ತಿರಲಿಲ್ಲ. ದಿವಾನರಾದರೂ ಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಓಟ್ಟುಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯವಿರುತ್ತಿರಲಿಲ್ಲ. ಹೀಗೆ ಭಿನ್ನಾಭಿಪ್ರಾಯವು ಮನುಷ್ಯನ ನಿತ್ಯವ್ಯವಹಾರದಲ್ಲಿ ಅನಿವಾರಣೀಯವಾಗಿರುವುದರಿಂದ ರಾಜಕೀಯವಿಚಾರದಲ್ಲೂ ಭಿನ್ನಾಭಿಪ್ರಾಯವಿದ್ದು ತನ್ಮೂಲಕ ಪಕ್ಷಗಳೇರ್ಪಡುವುದು ಸ್ವಾಭಾವಿಕವು. ಅದುಕಾರಣ ಮೆಂಬರುಗಳು ದಿವಾನರ ವಿಚಿತ್ರಸೂಚನೆಯನ್ನು ಅನುಸರಿಸಿ ಓಟರುಗಳ ಸಹಾಯವನ್ನು ಪಡೆಯುವುದು ತಾನೆ ನಮಗೆ ಸಂಶಯವಾಗಿದೆ ಸಾಮಾನ್ಯವಾಗಿ ಯಾವುದು ಅನುಷ್ಠೇಯವಾಗಿರುವುದೋ ಅದು ಯಾವಾಗಲೂ ಆದಾಯಕರವೂ ಆವಶ್ಯಕವೂ ಆಗಿರುವುದರಿಂದ ಓಟರುಗಳು, ಸಂಸ್ಥಾನವನ್ನೇ ಉದ್ಧಾರಮಾಡುತ್ತೇವೆಂದು ವಿಜೃಂಭಿಸುವವರಿಂದ ಪರಿಣಾಮದಲ್ಲಿ ಕೆಲವರಿಗೆ ಮಾತ್ರ ಪ್ರಯೋಜನವೂ ಅನೇಕರಿಗೆ ಹಾನಿಯೂ ಉಂಟಾಗುವುದಾದ ಪ್ರಯುಕ್ತ, ಅಂತಹವರನ್ನು ದಿವಾನರ ವಿಚಿತ್ರತಮವಾದ ಸೂಚನೆಯನ್ನನುಸರಿಸಿ ತಮ್ಮ ಪ್ರತಿನಿಧಿಗಳನ್ನಾಗಿ ಆರಿಸದೆ, ಜನಸಾಮಾನ್ಯಕ್ಷೇಮಾಭಿವೃದ್ಧಿ ವಿಷಯದಲ್ಲಿ ವಿಶಾಲೌದಾರ್ಯಭಾವವುಳ್ಳವರನ್ನು ಆರಿಸುವವರಾಗಬೇಕೆಂದು ನಾವು ಸೂಚಿಸುತ್ತೇವೆ.

ಮ॥ ಗಳಾದ ಹುಲಕೋಟಿ ಮತ್ತು ಕಂಬಳಿ ಇವರುಗಳ ಅಭ್ಯರ್ಥಿತ್ವವು.

ಧಾರವಾಡದಲ್ಲಿ ಪ್ರಸಿದ್ಧ ಹೈಕೋರ್ಟು ವಕೀಲರಾಗಿರುವ ಮ॥ ಚೆನ್ನಪ್ಪ ಚೆನ್ನವೀರಪ್ಪ ಹುಲಕೋಟಿ, ಬಿ.ಎ., ಎಲ್.ಎಲ್.ಬಿ., ಇವರು ಭಾರತಶಾಸನಸಭಾ ಸದಸ್ಯರಾಗಿ ಬೊಂಬಾಯಾಧಿಪತ್ಯದ ದಕ್ಷಿಣಭಾಗದಿಂದ ಚುನಾಯಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತಿರುವರು. ಅವರ ವಿದ್ಯಾವೈದುಷ್ಯ, ಕಾರ್ಯದಕ್ಷತೆ, ದೇಶಸೇವಾಭಿರುಚಿ, ಹಿಂದುಳಿದವರ್ಗದವರ ಕಲ್ಯಾಣಾಕಾಂಕ್ಷೆ ಇತ್ಯಾದಿ ವಿಷಯಗಳು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿರುವ ವಿಜ್ಞಾಪನಾಪತ್ರಿಕೆಯಿಂದ ಸುವ್ಯಕ್ತವಾಗುವುವು ಇವರು ವಿದ್ಯಾದಿ ಗುಣಾಧಿಕ್ಯದಿಂದಲೇ ಸಾಮ್ರಾಜ್ಯಶಾಸನಸಭೆಯ ಸದಸ್ಯರಾಗಿರಲು ಅರ್ಹರಾಗಿರುವರಲ್ಲದೆ ಬೊಂಬಾಯಿ ನ್ಯಾಯವಿಧಾಯಕಸಭೆಗೆ ಧಾರವಾಡ ಡಿಸ್ಟ್ರಿಕ್ಟಿನಿಂದ ಆರಿಸಲ್ಪಡಬೇಕಾಗಿರುವ ಎರಡು ಸ್ಥಾನಗಳಿಗೆ ಮೂವರು ವೀರಶೈವರು ಅಭ್ಯರ್ಥಿಗಳಾಗಿ ನಿಂತಿದ್ದವರಲ್ಲಿ ತಾವೂ ಒಬ್ಬರಾಗಿದ್ದು ಸ್ವಸಮಾಜಾಭಿಮಾನಿಗಳ ಅಭಿಪ್ರಾಯದಂತೆ ತಮ್ಮ ಅಭ್ಯರ್ಥಿತ್ವವನ್ನು ಹಿಂದಕ್ಕೆ ತೆಗೆದುಕೊಂಡು ಸ್ವಾರ್ಥತ್ಯಾಗಬುದ್ಧಿಯನ್ನೂ ಸ್ವಸಮಾಜಾಭಿಮಾನವನ್ನೂ ಪ್ರದರ್ಶಿಸಿ ಇತರರಿಗೆ ಮಾರ್ಗದರ್ಶಕರಾಗಿರುವುದರಿಂದಲೂ ಅರ್ಹರಾಗಿರುತ್ತಾರೆ. ಬೊಂಬಾಯಿ ನ್ಯಾಯವಿಧಾಯಕಸಭೆಗೆ ಹುಬ್ಬಳ್ಳಿಯ ಸುಪ್ರಸಿದ್ಧ ವಕೀಲರೂ, ನ್ಯಾಯವಿಧಾಯಕಸಭಾ ಸಭ್ಯರೂ ಮ್ಯುನಿಸಿಪಲ್ ಪ್ರೆಸಿಡೆಂಟರೂ, ಹಿಂದುಳಿದ ವರ್ಗದವರ ಮುಂದಾಳುಗಳೂ, ದೇಶಸೇವಾಪ್ರತಿಫಲವಾಗಿ ರಾವ್ ಬಹದ್ದೂರ್ ಪ್ರಶಸ್ತಿಯನ್ನು ಸಾರ್ವಭೌಮರವರಿಂದ ಪಡೆದವರೂ ಆಗಿರುವ ಮ॥ ಎಸ್. ಟಿ. ಕಂಬಳಿಯವರು ಬೊಂಬಾಯಿ ನ್ಯಾಯವಿಧಾಯಕಸಭಾಸಭ್ಯರಾಗಿ ಆರಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತಿರುತ್ತಾರೆ ಅದುಕಾರಣ ಯಾರು ಹಿಂದುಳಿದ ವರ್ಗದವರ ಪುರೋಭಿವೃದ್ಧಿ ಕಾರ್ಯದೀಕ್ಷಾಬದ್ಧರಾಗಿ ಅಹೋರಾತ್ರಿ ಪಾಟುಪಡುತ್ತಿದ್ದಾರೋ ಅಂತಹ ಮ॥ ಗಳಾದ ಹುಲಕೋಟಿ ಕಂಬಳಿಯವರುಗಳಿಗೆ ಓಟರುಗಳು ಸ್ವಾರ್ಥಪರರೂ ಅಸೂಯಾಳಿಗಳೂ ಆದ ಹಿತಶತೃಗಳ ದುರ್ಬೋಧೆಗೆ ಕಿವಿಗೊಡದೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಆ ಉಭಯ ಮಹಾಶಯರುಗಳು ತಾರ್ಥಕೃರಾಗಿ ಬರುವಂತೆ ಮಾಡಿ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಲ್ಲದೆ ತಮ್ಮ ಓಟಿನ ಅಧಿಕಾರವನ್ನೂ ಸಾರ್ಥಕಪಡಿಸಿಕೊಳ್ಳುವವರಾಗಲೆಂದು ಇಚ್ಛಿಸುತ್ತೇವೆ.

THE UNVEILING CEREMONY OF THE PORTRAIT OF LATE MR. KABBALLI CHENNABASAPPA.

The portrait of the late Mr. Kabballi Chennabasavappa, a great benefactor belonging to the Lingayet community, who met an untimely end in February last was unveiled on Sunday the 24th instant at the Hostel in Mysore which is itself a monument of his generosity, by the Dewan of Mysore before a large and distinguished gathering. After invocation and music an address was presented to the Dewan Saheb which contained a brief history of the life and work of the deceased. The Dewan made a most sympathetic and touching speech which we publish below.—

President and Members of the Chennabasappa
Memorial Committee and Gentlemen:

I am here by the favour of your invitation to join you in honouring the memory of a great benefactor of the Lingayet Community. I had not the pleasure of the personal acquaintance of the late Mr. Kabballi Chennabasappa; but I have heard enough of him and of his work to feel convinced that he must have been a really good man, with an inborn public spirit and a spontaneous flow of benevelence towards his fellow-men. Such men are rare, and when a career of such great promise is so suddenly and tragically cut short, we doubly mourn the loss.

The President of the Memorial Committee has referred in no exaggerated language to the personal qualities and the benefactions of the late Mr. Chennabasappa. A man of wealth and position, he knew that the best use to which he could put them lay in the service of his town, his community, and his country. And he chose that line of service which we most need at the present time—namely, education. In this career of practical philanthrophy, he only upheld the highest traditions of the Lingayet community. We all know what a distinguished contribution this community made in the past to the history, the literature and the economic life of our country. Even to-day, it is playing no mean part in the trade and material prosperity of the State. It is right and proper that such a community should cherish the example of a man like Mr. Chennabasappa—an example of love and solicitude for the community not divorced from, but blended into, love and solicitude for the much wider public that inhabits the State. This I take to be the finest lesson to be learnt from the life of Mr. Chennabasappa. True to the tradition of old, he lived not only on the communal but also on the national plane. That is a lesson of which we stand in particular need to-day. May his portrait, which I am now to unveil, and the fine buildings, which owe their existence to his munificence, serve to remind the members of his and other communities of those great ideals of civic solicitude and active beneficence, which we cherished, and to inspire generations of young men with the ambition to labour strenuously and to live usefully.

Professor A. R. Wadia proposed a hearty vote of thanks to the Dewan and in doing so referred to the wise direction in which charity of the Lingayet philanthrophists flowed as a result of which there has arisen a net work of hostels in the State, one of the most important of which was the institution presented by the late Mr. Chennabasavappa and under whose roof they had met that evening. He was glad to inform the audience that the widow of the deceased had assured to the Hostel the same sympathy and care which her patriotic husband had always evinced. The pleasant function terminated with cheers to His Highness the Maharaja and the Dewan Saheb.

ಕೈ॥ ಚೆನ್ನಬಸಪ್ಪನವರ ಸ್ಮಾರಕೋತ್ಸವ.

ಕಳೆದ ತಾ॥ 24 ನೆಯ ಭಾನುವಾರ ಸಾಯಂಕಾಲ ರಾಜಧಾನಿಯಲ್ಲಿರುವ ಕಬ್ಬಹಳ್ಳಿ ಚೆನ್ನಬಸವಪ್ಪನವರ ವೀರಶೈವಾಶ್ರಮದಲ್ಲಿ ಹಾಕಲ್ಪಟ್ಟಿದ್ದ ಸಾಲಂಕೃತಮಂಟಪದಲ್ಲಿ ಮಂತ್ರಿವರ್ಯರಾದ ಅಮೀನ್-ಉಲ್-ಮುಲ್ಕ್ ಮಿರ್ಜಾ ಇಸ್ಮಾಯಿಲ್, ಸಿ.ಐ.ಇ., ಒ.ಬಿ.ಇ., ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು 60-70 ಸಾವಿರ ರೂ. ವರೆಗೆ ವೆಚ್ಚಮಾಡಿ ಒಂದು ಗುರುಕುಲವಾಸವನ್ನು ನಿರ್ಮಿಸಿ ವೀರಶೈವಸಮಾಜಕ್ಕೆ ಮಹೋಪಕಾರಮಾಡಿ ಯಶಃಕಾಯರಾಗಿರುವ ಕೈ॥ ಚೆನ್ನಬಸವಪ್ಪನವರ ಸ್ಮಾರಕವಾಗಿ ಅವರ ಭಾವಚಿತ್ರಪ್ರತಿಷ್ಠಾಪನೋತ್ಸವವು ಸ್ಮಾರಕಸಮಿತಿಯವರಿಂದ ಬಹುವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು. ಉಭಯ ಕೌನ್ಸಿಲರುಗಳು, ಪ್ರೊಫೆಸರ್ ರೋಲೋ ದಂಪತಿಗಳು, ಚೀಫ್‌ಸೆಕ್ರೆಟರಿ ಮಿ॥ ಡಿಸೌಜರವರು, ವಿದ್ಯಾಭ್ಯಾಸದ ಇ॥ ಜನರಲ್ ಮಿ॥ ಮೆಥ್ಯೂನ್‌ರವರು, ಸೀನಿಯರ್ ಸರ್ಜನ್ ಮಿ॥ ಉಸ್ಮಾನ್‌ರವರು, ವಾಣಿಜ್ಯ ಕೈಗಾರಿಕೆಯ ಡೈರೆಕ್ಟರ್ ಮಿ॥ ಮೆಕ್ಕೆಯವರು, ರೆ॥ ಸೆಕ್ರೆಟರಿ ಮ॥ ರಂಗನಾಥರಾವ್‌ಸಾಹೇಬರು, ರಾಜಧಾನಿಯ ಮ್ಯು॥ ಪ್ರೆಸಿಡೆಂಟ್ ಮ॥ ಎನ್. ಮಾಧವರಾಯರು ಡೆ॥ ಕ॥ ಮ॥ ರಾಮನಾಥನ್‌ರವರು, ಡಿ॥ ಜಡ್ಜ್ ಮ॥ ಎಸ್. ವೆಂಕಟಕೃಷ್ಣಯ್ಯನವರು, ಸಬ್‌ಜಡ್ಜ್ ಮ॥ ಪಿ. ಮಹಾದೇವಯ್ಯನವರು, ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ॥ ಕೆ. ಎಚ್. ರಾಮಯ್ಯನವರು, ಮುನಸೀಫ್ ಮ॥ ಎಚ್. ಕೆ. ವೀರಬಸವಯ್ಯನವರು, ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ॥ ಜಿ. ಮಲ್ಲಿಕಾರ್ಜುನಯ್ಯನವರು, ಅರಮನೆ ಮುಸಾಹೇಬ್ ಮ॥ ಆರ್. ಪುಟ್ಟಣ್ಣನವರು, ಅ॥ ಸೂಪರಿಂಟೆಂಡೆಂಟ್ ಮ॥ ಸಿ. ಆರ್. ಗೌಡರು ಮೊದಲಾಗಿ ಸರ್ಕಾರಿಯಧಿಕಾರಿಗಳೂ, ಮಿ॥ ಅಬ್ಬಾಸ್ ಖಾನ್‌ರವರು ಮೊದಲಾಗಿ ಪ್ರಜಾಪ್ರತಿನಿಧಿಗಳೂ ಮಿ॥ ಮಹಮ್ಮದ್‌ಸೇಟರು ಮೊದಲಾಗಿ ರಾಜಧಾನಿಯ ವರ್ತಕರುಗಳೂ, ಲಾಯರುಗಳೂ ಧರ್ಮಕರ್ತರ ಬಂಧುಮಿತ್ರರುಗಳೂ ಆಹೂತರಾಗಿ ಬಂದಿದ್ದರು. ಸಭಾರಂಭದಲ್ಲಿ ಆಸ್ಥಾನವಿದ್ವಾನ್ ವೇ॥ ಎನ್. ಶ್ರೀಕಂಠಶಾಸ್ತ್ರಿಗಳಿಂದ ರಚಿಸಲ್ಪಟ್ಟ ಸ್ಮಾರಕಪದ್ಯಗಳು ಸಂಗೀತ ವಿದ್ವಾನ್ ಬಿ. ರಾಜಪ್ಪನವರಿಂದ ಇಂಪಾಗಿ ಹಾಡಲ್ಪಟ್ಟಮೇಲೆ ಬಾಲಬಸವರಾಜಸಹೋದರರ ಹಾಡುಗಾರಿಕೆಯಾಗಿ ಸ್ಮಾರಕಸಮಿತಿಯ ಸೆಕ್ರೆಟರಿಯವರಾದ ಮ॥ ಜಿ. ಪರಮಶಿವಯ್ಯನವರಿಂದ ಆಂಗ್ಲಭಾಷೆಯ ವಿಜ್ಞಾಪನಾಪತ್ರಿಕೆಯೋದಲ್ಪಟ್ಟು ಸಭಾಪತಿಗಳಿಗೊಪ್ಪಿಸಲ್ಪಟ್ಟಿತು. ಅನಂತರ ದಿವಾನರು ಪ್ರತ್ಯುತ್ತರವನ್ನು ಕೊಡುವಾಗ್ಗೆ ಆ ಧರ್ಮಶ್ಲೋಕಿಯ ಗುಣವರ್ಣನೆಯನ್ನು ಬೋಧಾರೂಪವಾಗಿ ಮಾಡಿ ಆಶ್ರಮದ ಒಳಾವರ್ಣದಲ್ಲಿ ಅಲಂಕರಿಸಲ್ಪಟ್ಟಿದ್ದ ಕೈ॥ ಚೆನ್ನಬಸವಪ್ಪನವರ ಭಾವಚಿತ್ರದ ಮೇಲು ಮುಸುಕನ್ನು ತೆಗೆದು ಸಭಾಂಗಣಕ್ಕೆ ದಯೆಮಾಡಿಸಿದಮೇಲೆ ಸ್ಮಾರಕಸಮಿತಿಯ ಅಧ್ಯಕ್ಷರಾದ ಶ್ರೀಮಂತ ಚಿಕ್ಕಚೆನ್ನಂಜಪ್ಪಸೆಟ್ಟರು ಪುಷ್ಪಮಾಲಿಕೆಯಿಂದ ಸಭಾಪತಿಗಳನ್ನಲಂಕರಿಸಿದರು. ತರುವಾಯ ಸಭಿಕರಿಗೆ ಪುಷ್ಪಗುಚ್ಛಗಳು ಕೊಡಲ್ಪಟ್ಟು ಶ್ರೀಮನ್ಮಹಾರಾಜರವರ ಮತ್ತು ದಿವಾನರ ಶ್ರೇಯಃಪ್ರಾರ್ಥನೆಯಿಂದ ಸಭಾವಿಸರ್ಜನೆಯಾಯಿತು. ಆ ರಾತ್ರಿ ಧರ್ಮಕರ್ತರ ಪುತ್ರರಾದ ಮ॥ ಕೆ. ಸಿ. ಸುಬ್ಬಣ್ಣನವರು ಸ್ಥಳ ಪರಸ್ಥಳಗಳ ವೀರಶೈವ ಅತಿಥಿಗಳನ್ನು ದಿವ್ಯವಾದ ಔತಣದಿಂದ ಸತ್ಕರಿಸಿದರು. ಮೇಲ್ಕಂಡ ವಿಜ್ಞಾಪನಾಪತ್ರಿಕೆಯೂ, ದಿವಾನರುತ್ತರವೂ ಈ ಪತ್ರಿಕೆಯ ಮತ್ತೊಂದೆಡೆಯಲ್ಲಿ ಮುದ್ರಿತವಾಗಿರುತ್ತವೆ.

ಸ್ವದೇಶದ ವೃತ್ತಾಂತಗಳು.

ರಾಜಧಾನಿಯ ಪಬ್ಲಿಕ್ ಲೈಬ್ರರಿಯಲ್ಲಿ ಹಳೇ ವರ್ತಮಾನಪತ್ರಿಕೆಗಳು ಬರುವ ನವಂಬರ್ ತಾ॥ 7 ನೆಯ ಭಾನುವಾರ ಬೆಳಗಿನ 9 ಘಂಟೆಗೆ ಹರಾಜುಹಾಕಲ್ಪಡುವುವು. ಇಷ್ಟವುಳ್ಳವರು ಹೋಗಿ ತೆಗೆದುಕೊಳ್ಳಬಹುದು.

ಮೈಸೂರು ನ್ಯಾಯವಿಧಾಯಕಸಭಾ ಸಭ್ಯತ್ವವನ್ನು ಬೆಂಗಳೂರ ಅಡ್ವೋಕೇಟ್ ಮ॥ ಬಿ. ವಿ. ರಾಮಸ್ವಾಮಿಸೆಟ್ಟರು ಬಿಟ್ಟುದರಿಂದ ಅವರ ಬದಲು ಮುಷೀರ್ ಉಲ್-ಮುಲ್ಕ್ ಮಿರ್ ಹಂಜಾಹುಸೇನ್‌ರವರು ಸಭ್ಯರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ॥ ಎನ್. ಮಾಧವರಾಯರು ಬರುವ ಜನವರಿ ತಾ॥ 2 ರಲ್ಲಿ ರಜದಮೇಲೆ ಹೋಗುವರೆಂದೂ, ಈಗ ರಜದಮೇಲಿರುವ ಸೀನಿಯರ್ ಅ॥ ಕಮಿಷನರ್ ಮ॥ ಸಿ. ಎಸ್. ಕುಪ್ಪಸ್ವಾಮಯ್ಯಂಗಾರರು ಪ್ರೆಸಿಡೆಂಟರಾಗಿ ಬರುವರೆಂದೂ ಕೇಳುತ್ತೇವೆ.

ಮಾಗಡಿಯ ಕಾಡಿನಲ್ಲಿ ಒಂದು ಹುಲಿಯು ಸ್ಥಳದ ಬೇಟೆಗಾರರಿಂದ ಸೆರೆಹಿಡಿಯಲ್ಪಟ್ಟಿರುವುದಾಗಿ ರಾಜಧಾನಿಗೆ ವರ್ತಮಾನ ಬಂದುದರಮೇಲೆ ಪ್ರಾಣಿಪ್ರದರ್ಶನಾಲಯದ ಸೂಪರಿಂಟೆಂಡೆಂಟರು ಅದನ್ನು ಕೂಡಿಕೊಂಡು ಬರಲು ಒಂದು ಬೋನು ಸಮೇತ ಮೋಟಾರು ಲಾರಿಯನ್ನು ಕಳುಹಿಸಿರುವರು.

ಪ್ರತಿವರ್ಷದಲ್ಲೂ ಆಚರಿಸಲ್ಪಡುವ ತಾತ್ಕಾಲಿಕ ಯುದ್ಧಶಾಂತ್ಯುತ್ಸವವು ಬರುವ ನವಂಬರ್ ತಾ॥ 11 ರಲ್ಲಿ ಆಚರಿಸಲ್ಪಟ್ಟು 2 ನಿಮಿಷಕಾಲ ಎಲ್ಲಾ ಕೆಲಸಕಾರ್ಯಗಳು 11 ಘಂಟೆಗೆ ಸರಿಯಾಗಿ ಸ್ತಬ್ಧವಾಗಿರಬೇಕಾಗಿರುವುದರಿಂದ ಎಲ್ಲಾ ಕೋರ್ಟುಕಚೇರಿಗಳೂ ಆ ದಿವಸ 12 ಘಂಟೆಗೆ ಆರಂಭವಾಗಬೇಕಾಗಿ ಅಪ್ಪಣೆಯಾಗಿದೆ.

ಬರುವ ನವಂಬರ್ ತಾ॥ 27 ರಲ್ಲಿ ನಡೆಯುವ ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನಮಹೋತ್ಸವದಲ್ಲಿ ಕಲಕತ್ತಾ ಟೆಕ್ನೊಲಾಜಿಕಲ್ ಕಾಲೇಜಿನ ಪ್ರೊಫೆಸರಾದ ಸರ್ ಪ್ರಫುಲ್ಲ ಚಂದ್ರರಾಯ್, ಕೆಟಿ. ಸಿ. ಐ. ಇ., ಡಿ. ಎಸ್ ಸಿ. ಪಿ ಎಚ್. ಡಿ. ರವರು ಪಟ್ಟಾಂಚಿತ ವಿದ್ಯಾರ್ಥಿಗಳಿಗೆ ಉಪದೇಶಪರ ಭಾಷಣವನ್ನು ಮಾಡುವವರಾಗಿರುವರು.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯ ಸ್ವಾರಿಯು ತಕ್ಕ ಪರಿವಾರದೊಡನೆ ಕಳೆದ ಬುಧವಾರ ರಾತ್ರಿ 8 ಘಂಟೆಯಲ್ಲಿ ಹಾಸನ-ಅರಸೀಕೆರೆ ಮಾರ್ಗವಾಗಿ ಬೊಂಬಾಯಿಗೆ ತೆರಳಿತು ಮತ್ತು ಬರುವ ನವಂಬರ್ ತಾ॥ 22 ರಲ್ಲಿ ಶ್ರೀಮದ್ಯುವರಾಜರವರು ಸೀಮೆಯಿಂದ ಬೊಂಬಾಯಿಗೆ ದಯಮಾಡಿಸುತ್ತಲೆ ಅವರ ಕೂಡ ರಾಜಧಾನಿಗೆ ಚಿತ್ತೈಸುವುದಾಗಿರುವುದು.

ಕಳೆದವಾರ ರಾಜಧಾನಿಯಲ್ಲಿ ನಡೆದ ಕೈ॥ ಚೆನ್ನಬಸವಪ್ಪನವರ ಸ್ಮಾರಕೋತ್ಸವ ಸಂದರ್ಭದಲ್ಲಿ ತಮ್ಮ ವಶಕ್ಕೆ ಕೊಡಲ್ಪಟ್ಟಿದ್ದ ಫೌಂಟನ್‌ಪೆನ್ನು ಯಾರದೆಂಬುದು ಗೊತ್ತಿಲ್ಲವಾದುದರಿಂದ ಮ॥ ಜಿ. ಪರಮಶಿವಯ್ಯನವರು ಅದರ ವಾರಸದಾರರು ಬಂದಲ್ಲಿ ಕೊಡುವಂತೆ ಹೇಳಿ ನಮ್ಮ ವಶದಲ್ಲಿ ಬಿಟ್ಟು ಹೋಗಿರುತ್ತಾರೆ. ಇದು ಯಾರದಾಗಿರುವುದೋ ಅವರು ನಮ್ಮಲ್ಲಿಗೆ ಬಂದು ತಕ್ಕ ನಿದರ್ಶನವನ್ನು ಕೊಟ್ಟು ತೆಗೆದುಕೊಂಡುಹೋಗಬಹುದು.

ಶ್ರೀಮನ್ಮಹಾರಾಜರವರ ಪ್ರೈವೆಟ್‌ಸೆಕ್ರೆಟರಿಯವರಾದ ಸರ್ ಚಾರ್ಲೆಸ್ ಟಾಡ್‌ಹಂಟರ್‌ರವರು ಈ ನವಂಬರ್ ತಾ॥ 2 ರಿಂದ 1927 ನೇ ಜನವರಿ ತಾ॥ 30 ರ ವರೆಗೆ ರಜದಮೇಲೆ ಹೋಗುವುದರಿಂದ, ಹುಜೂರು ಸೆಕ್ರೆಟರಿಯವರಾದ ಮ॥ ಟಿ. ತಂಬೂಸೆಟ್ಟರು ಆಫಿಸಿಯೇಟಿಂಗ್ ಪ್ರೈವೆಟ್‌ಸೆಕ್ರೆಟರಿಗಳಾಗಿಯೂ, ಅಸಿಸ್ಟೆಂಟ್ ಪ್ರೈವೆಟ್ ಸೆಕ್ರೆಟರಿಯವರಾದ ಮ॥ ಎಸ್. ಪಿ. ರಾಜಗೋಪಾಲಾಚಾರರು ಆಫೀಸಿಯೇಟಿಂಗ್ ಹುಜೂರು ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾದ ಡಾಕ್ಟರ್ ಬಿ. ನಂಜಪ್ಪನವರು ತುಮಕೂರು ಡಿ॥ ಮೆಡಿಕಲ್ ಆಫೀಸರಾಗಿಯೂ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನೇತ್ರ ವೈದ್ಯರಾಗಿದ್ದ ಡಾಕ್ಟರ್ ಕೆ. ಶ್ರೀನಿವಾಸಾಚಾರರು ಶಿವಮೊಗ್ಗೆಯ ಡಿ॥ ಮೆಡಿಕಲ್ ಆಫೀಸರಾಗಿಯೂ, ಡಾ॥ ಪಿ. ಆರ್. ಸುಬ್ಬರಾಯರು ಕೃಷ್ಣರಾಜೇಂದ್ರ ಆಸ್ಪತ್ರೆಯ ನೇತ್ರ ವೈದ್ಯರಾಗಿಯೂ, ಡಾ॥ ಬಿ. ಕೃಷ್ಣಮೂರ್ತಿರಾಯರು ತುಮಕೂರು ಡಿ॥ ಆಸ್ಪತ್ರೆಯಿಂದ ಮೈಸೂರು ಡಿ॥ ಮೆಡಿಕಲ್ ಆಫೀಸರಾಗಿಯೂ, ಡಾ॥ ಎಸ್. ಕೃಷ್ಣಮೂರ್ತಿಯವರು ಮೈಸೂರು ಡಿ॥ ಮೆಡಿಕಲ್ ಛಾರ್ಜಿನಿಂದ ಕೃಷ್ಣರಾಜೇಂದ್ರ ಆಸ್ಪತ್ರೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಾನದ ಸೇವಾವೃತ್ತಿಯಲ್ಲಿದ್ದ 15 ವರ್ಷ ವಯಸ್ಸಿನ ಪುಟ್ಟಗೌರಮ್ಮನೆಂಬವಳು ಒಂದುಸಾವಿರ ರೂಪಾಯಿನ ನೋಟುಗಳನ್ನು ಸನ್ನಿಧಾನದಿಂದ ಅಪಹರಿಸಿಕೊಂಡು ತನ್ನ ತಂದೆಯಾದ ಸುಗಂಧಕಾರಿ ನಂಜಪ್ಪನಿಗೆ ಕೊಟ್ಟಿದ್ದುದು ಗೊತ್ತಾಗಿ ತಂದೆ ಮಗಳಿಬ್ಬರೂ ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದುದರಮೇಲೆ ಗೌರಮ್ಮನಿಗೆ ಕೋರ್ಟು ಮುಚ್ಚಲ್ಪಡುವವರೆಗೆ ಸಾಮಾನ್ಯ ಕಾರಾಗೃಹವಾಸಶಿಕ್ಷೆಯೂ, ತಂದೆಯಾದ ನಂಜಪ್ಪನಿಗೆ 2 ವರ್ಷ ಕಠಿಣ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿತು. ಶಿಕ್ಷಿತಳಾದ ಗೌರಮ್ಮನು ದೂರೀಕರಿಸಲ್ಪಡದೆ ಪುನಃ ಸನ್ನಿಧಾನದ ಸೇವಾವೃತ್ತಿಗೆ ತೆಗೆದುಕೊಳ್ಳಲ್ಪಟ್ಟಿರುವುದಾಗಿ ಕೇಳುತ್ತೇವೆ.

ಸಬ್‌ರಿಜಿಸ್ಟ್ರಿ ಆಫೀಸಿನಲ್ಲಿ ರಿಕಾರ್ಡುಗಳನ್ನು ಹುಡುಕಲು ಮೊದಲನೆಯ ವರ್ಷವೊಂದಕ್ಕೆ 2 ರೂ. ಅನಂತರ ಪ್ರತಿವರ್ಷಕ್ಕೂ 8 ಆಣೆ ಈ ಪ್ರಕಾರವಾಗಿ ಫೀ ತೆಗೆದುಕೊಳ್ಳಲ್ಪಡುವುದರಿಂದ 12 ವರ್ಷದ ರಿಕಾರ್ಡನ್ನು ಹುಡುಕಲು 7-8-0 ರೂ. ಆಗುವುದು. ಇದು ಬಹಳ ಹೆಚ್ಚಾದುದರಿಂದ ಪೂರ್ವದಂತೆ 1-8-0 ರೂ. ಯನ್ನು ವಿಧಿಸಲು ಸಾಧ್ಯವಿಲ್ಲದಿದ್ದಲ್ಲಿ 2 ರೂ. ಯನ್ನು ವಿಧಿಸುವಂತಾಗಬೇಕೆಂದು ಕಳೆದ ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನದಲ್ಲಿ ಪ್ರಾರ್ಥಿಸಲ್ಪಟ್ಟಿದ್ದುದರಮೇಲೆ, ಪತ್ರವನ್ನು ಬರೆದುಕೊಟ್ಟವರ ಬರೆಯಿಸಿಕೊಂಡವರ ಮತ್ತು ಸಾಕ್ಷಿಯನ್ನಪೇಕ್ಷಿಸುವವರ ಹೆಸರನ್ನು, ಪತ್ರದ ತಾರೀಖನ್ನು, ವಿಷಯವನ್ನು, [illegible] ಸಾಕ್ಷಿಯನ್ನು [illegible] ರಿಕಾರ್ಡನ್ನು ಹುಡುಕಲು ಯಾವ ಫೀಯನ್ನು ತೆಗೆದುಕೊಳ್ಳಬಾರದೆಂದೂ, [illegible] ಸಂದರ್ಭದಲ್ಲಿ ರಿಕಾರ್ಡನ್ನು ಹುಡುಕುವ ಫೀಯನ್ನು [illegible] ಇಲ್ಲವೆಂದೂ ಸರ್ಕಾರದವರು [illegible].

ಮೈಸೂರು ಸಂಸ್ಥಾನದ ಮಂತ್ರಿವರ್ಯರಾದ ಶ್ರೀಮಾನ್
ಅಮೀನ್-ಉಲ್-ಮುಲ್ಕ್

ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಬಿ.ಎ.,

ಓ.ಬಿ.ಇ., ಸಿ.ಐ.ಇ., ಯವರ ಸನ್ನಿಧಿಯಲ್ಲಿ.

ಕಬ್ಬಹಳ್ಳಿ ಚೆನ್ನಬಸವಪ್ಪನವರ ಸ್ಮಾರಕಕಮಿಟಿಯ ಪ್ರೆಸಿಡೆಂಟ್ ಮತ್ತು ಮೆಂಬರುಗಳ ವಿಜ್ಞಾಪನೆ.

ಮಹಾಸ್ವಾಮಿ,

ನಾವು ಈ ದಿವಸ ಯಾವ ಮಹಾನುಭಾವರ ಧರ್ಮಕಟ್ಟಡದಲ್ಲಿ ನೆರೆದಿದ್ದೇವೆಯೋ ಆ ಶ್ರೀಮಾನ್ ಕೈಲಾಸವಾಸಿ ಕಬ್ಬಹಳ್ಳಿ ಸಾಹುಕಾರ್ ಚೆನ್ನಬಸವಪ್ಪನವರ ಸ್ಮಾರಕವಾಗಿ ನಾವು ಒಪ್ಪಿಸಿರುವ ಭಾವಚಿತ್ರದ ಪ್ರತಿಷ್ಠಾಪನೋತ್ಸವವನ್ನು ನೆರವೇರಿಸಲು ಒಪ್ಪಿಕೊಂಡು ತಾವು ದಯೆಮಾಡಿಸಿರುವುದಕ್ಕಾಗಿ ತಮಗೆ ನಮ್ಮ ಅನಂತವಂದನೆಗಳನ್ನರ್ಪಿಸುತ್ತೇವೆ. ಈ ದಸರಾ ಮಹೋತ್ಸವಕಾಲದಲ್ಲಿ ನೆರೆಯುವ ಪ್ರಜಾಪ್ರತಿನಿಧಿಸಭೆಯೇ ಮೊದಲಾದ ಸಂಸ್ಥೆಗಳ ಗುರುತರವಾದ ಕಾರ್ಯಸಮುದಾಯಗಳಿದ್ದಾಗ್ಯೂ ನಮ್ಮ ಸಮಾಜದ ದಾನಶೂರರಲ್ಲೊಬ್ಬರ ಸ್ಮಾರಕರೂಪವಾದ ಈ ಮಹೋತ್ಸವದಲ್ಲಿ ಭಾಗಿಗಳಾಗಲು ತಮ್ಮ ಅಮೋಘವಾದ ಕಾಲದಲ್ಲಿ ವಿರಾಮವನ್ನು ಮಾಡಿಕೊಂಡು ತಾವು ಇಲ್ಲಿಗೆ ದಯೆಮಾಡಿರುವುದರಿಂದ ಹಿಂದುಳಿದ ಜನವರ್ಗದವರ ಪುರೋಭಿವೃದ್ಧಿಯಲ್ಲಿ ತಮಗೆ ವಿಶೇಷ ಆಸಕ್ತಿಯೂ ಅಭಿಮಾನವೂ ಇದೆಯೆಂಬುದು ವ್ಯಕ್ತವಾಗುತ್ತದೆ.

ತಮ್ಮ ಅಮೃತಹಸ್ತದಿಂದ ಕೈ|| ಚೆನ್ನಬಸವಪ್ಪನವರ ಭಾವಚಿತ್ರಪ್ರತಿಷ್ಠಾಪನೋತ್ಸವವನ್ನು ನೆರವೇರಿಸಬೇಕೆಂದು ವಿಜ್ಞಾಪಿಸಿಕೊಳ್ಳುವ ಈ ಸಂದರ್ಭದಲ್ಲಿ ಮಹನೀಯರಾದ ಚೆನ್ನಬಸವಪ್ಪನವರ ಜೀವನಚರಿತ್ರೆಯಲ್ಲಿ ಮುಖ್ಯವಾದ ಕೆಲವು ಅಂಶಗಳನ್ನು ಇಲ್ಲಿ ಹೇಳುವುದು ಅನುಚಿತವೆನಿಸಲಾರದು. ಶ್ರೀಮಾನ್ ಚೆನ್ನಬಸವಪ್ಪನವರು 1926 ನೇ ಇಸವಿ ಫೆಬ್ರವರಿ 21 ನೇ ತಾರೀಖಿನಲ್ಲಿ ತಮ್ಮ 45 ನೆಯ ವರ್ಷದಲ್ಲಿ ಬಹಳ ದುಃಖಕರವಾದ ಮೃತಿಗೆ ಆಹುತಿಯಾದರೆಂಬುದು ಸರ್ವರಿಗೂ ಗೊತ್ತಾದ ವಿಷಯವೇ ಆಗಿದೆ. ಇವರು ತಮ್ಮ ಚಿಕ್ಕವಯಸ್ಸಿನಲ್ಲೇ ವಿದ್ಯಾಭ್ಯಾಸದ ಪ್ರಯೋಜನವನ್ನರಿತವರಾಗಿದ್ದು ಈಗ್ಗೆ 12 ವರ್ಷಗಳಿಗೆ ಮುಂಚೆಯೇ ಸ್ವಗ್ರಾಮವಾದ ಕಬ್ಬಹಳ್ಳಿಯಲ್ಲಿ ಸ್ಕೂಲ್ ಕಟ್ಟಡಕ್ಕಾಗಿ 6000 ರೂಪಾಯಿಗಳನ್ನು ಕೊಟ್ಟು ಸದರಿ ಸ್ಕೂಲಿನ ಇಂಗ್ಲಿಷ್ ಮಾಸ್ಟರ ಸಂಬಳದ ಒಂದುಭಾಗವನ್ನು ಸದಾ ಬಡ್ಡಿಯಿಂದ ಕೊಡುವುದಕ್ಕನುಕೂಲಿಸುವಂತೆ 3500 ರೂಪಾಯಿಗಳ ಧನನಿಧಿಯನ್ನು ಏರ್ಪಡಿಸಿದ್ದಲ್ಲದೆ, ಅದೇ ಗ್ರಾಮದಲ್ಲಿ ಬಾಲಿಕೆಯರ ಪಾಠಶಾಲೆಗಾಗಿ ಕಟ್ಟಡವನ್ನು ಸಹ ತಮ್ಮ ಸ್ವಂತ ವೆಚ್ಚದಿಂದಲೇ ಕಟ್ಟಿಸಿಕೊಟ್ಟಿರುತ್ತಾರೆ. ಇವರು ಗ್ರಾಮಾಭಿವೃದ್ಧಿಯ ವಿಚಾರದಲ್ಲಿ ಬಹಳವಾಗಿ ಆಸಕ್ತಿಯುಳ್ಳವರಾಗಿದ್ದುದರಿಂದಲೇ ತಮ್ಮ ಗ್ರಾಮವಾದ ಕಬ್ಬಹಳ್ಳಿಯನ್ನು ನವೀನರೀತಿಯಿಂದ ಅಭಿವೃದ್ಧಿಗೊಳಿಸಿ ರಾಜಮಾರ್ಗಕ್ಕೂ ತಮ್ಮ ಗ್ರಾಮಕ್ಕೂ ಹೋಗಿಬರಲನುಕೂಲಿಸುವಂತೆ ಒಂದು ಮಾರ್ಗವನ್ನೂ, ಗ್ರಾಮನೈರ್ಮಲ್ಯಕ್ಕೆ ಅವಕಾಶವನ್ನೂ ಕಲ್ಪಿಸಿ ಅದು ಮೈಸೂರುದೇಶದಲ್ಲಿ ಮಾದರಿಗ್ರಾಮವೆಂದು ಹೆಸರ್ವಡೆಯುವಂತೆ ಮಾಡಿರುವುದು ಸರ್ವವಿದಿತವಾಗಿದೆ.

ಈ ಸತ್ಪುರುಷರು ತಮ್ಮ ಧರ್ಮವನ್ನು ತಮ್ಮ ಗ್ರಾಮಸ್ಥರಿಗೆ ಮಾತ್ರ ವಿನಿಯೋಗಿಸದೆ ನಮ್ಮ ಸೀಮೆಯಲ್ಲಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾನಿಲಯಕ್ಕೂ 1500 ರೂಪಾಯಿಗಳ ಧನನಿಧಿಯನ್ನು ಮೊಟ್ಟಮೊದಲು ಕೊಟ್ಟು ಇತರರಿಗೆ ಮೇಲ್ಪಂಕ್ತಿಹಾಕಿಕೊಟ್ಟು ಯಶಸ್ವಿಗಳಾಗಿರುತ್ತಾರೆ. ಇವರು ಮೈಸೂರಿನಲ್ಲಿ ವೀರಶೈವ ವಿದ್ಯಾರ್ಥಿಗಳಿಗಿದ್ದ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಒಂದು ಕಟ್ಟಡವನ್ನು ಕಟ್ಟುವುದಕ್ಕೋಸ್ಕರ 30,000 ರೂಪಾಯಿಗಳನ್ನು ವಾಗ್ದಾನಮಾಡಿದ್ದ ಅಮೋಘವಾದ ದಾನವನ್ನು ಬೆಂಗಳೂರಲ್ಲಿರುವ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರ ವೀರಶೈವವಿದ್ಯಾರ್ಥಿನಿಲಯದ ಶಂಕುಸ್ಥಾಪನಾಮಹೋತ್ಸವವನ್ನು ನೆರವೇರಿಸುವಾಗ್ಗೆ ಶ್ರೀಮದ್ಯುವರಾಜರವರು ಬಹಳವಾಗಿ ಶ್ಲಾಘಿಸಿದರು. ಈ ಮಹನೀಯರು ಈಗ ಖಾಲಿ ಇರುವ ಕಟ್ಟಡವನ್ನು ಆವರಣಸಮೇತ 45,000 ರೂ. ಗಳಿಗೆ ಖರೀದಿಗೆ ಕೊಂಡುಕೊಂಡು 15,000 ರೂ. ಗಳನ್ನು ರಿಪೇರಿಗಳಿಗೂ ವಿದ್ಯಾರ್ಥಿಗಳಿಗನುಕೂಲಿಸುವಂತೆ ಹೊಸ ಬದಲಾವಣೆಗಳನ್ನು ಕಲ್ಪಿಸುವುದಕ್ಕೂ ವಿನಿಯೋಗಿಸಿರುತ್ತಾರೆ. ಈ ಸಂದರ್ಭದಲ್ಲಿ ಘನವನ್ನು ಹೊಂದಿದ ನಮ್ಮ ಶ್ರೀಮನ್ಮಹಾರಾಜಸರ್ಕಾರದವರು ಬಹಳ ಉದಾರಮನಸ್ಸಿನಿಂದ ಈ ಕಟ್ಟಡಕ್ಕೋಸ್ಕರ 22,500 ರೂ. ಗಳನ್ನು ದಯಪಾಲಿಸಿದುದಕ್ಕಾಗಿ ನಾವು ಅವರನ್ನು ವಂದಿಸದೆ ಇರಲಾರೆವು.

ಇಷ್ಟೇ ಅಲ್ಲದೆ ಚೆನ್ನಬಸವಪ್ಪನವರ ಈ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದರಲ್ಲಿ ಬದ್ಧಾದರರಾಗಿ ವಿಶೇಷ ಅಭಿಮಾನವನ್ನು ತೋರ್ಪಡಿಸುತ್ತಿದ್ದು ಸಾಯುವವರೆಗೂ ವಿದ್ಯಾರ್ಥಿಗಳ ಹಿತಚಿಂತನೆಯಲ್ಲಿಯೇ ಆಸಕ್ತಿಯುಳ್ಳವರಾಗಿದ್ದರು. ಇವರು ಸಾಯುವುದಕ್ಕೆ ಪೂರ್ವ ನಂಜನಗೂಡು ಹೈಸ್ಕೂಲು ಕಟ್ಟಡಕ್ಕೆ 1500 ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ. ಇದಲ್ಲದೆ ಇವರು ತಾಲ್ಲೂಕು ಬೋರ್ಡು, ಡಿಸ್ಟ್ರಿಕ್ಟು ಬೋರ್ಡು ಮತ್ತು ಪ್ರಜಾಪ್ರತಿನಿಧಿಸಭೆ ಇವುಗಳ ಮೆಂಬರಾಗಿ ಹಲವು ವರ್ಷಗಳವರೆಗಿದ್ದು ಪ್ರಜಾಸೇವೆಯನ್ನು ಸರ್ವಸಮ್ಮತಿಯಿಂದ ಮಾಡಿ ಕೀರ್ತಿಭಾಜನರಾಗಿರುತ್ತಾರೆ. ಇವರ ಸೌಹಾರ್ದಭಾವವೂ, ನಿಗರ್ವವೂ, ಸ್ವಾರ್ಥತ್ಯಾಗಬುದ್ಧಿಯೂ ಅನ್ಯಾದೃಶವಾಗಿದ್ದುವು.

ಈ ಧರ್ಮಾತ್ಮ ಕಬ್ಬಹಳ್ಳಿ ಚೆನ್ನಬಸವಪ್ಪನವರ ಸ್ಮಾರಕವಾಗಿ ಈ ದಿವಸ ಈ ಭವನದಲ್ಲಿ ಅವರ ಭಾವಚಿತ್ರವನ್ನಿಡಬೇಕೆಂದು ನಾವುಗಳು ಉದ್ದೇಶಿಸಿರುತ್ತೇವೆ. ಅಂತಹ ಉದಾರಿಗಳೂ ಸದ್ಗುಣಿಗಳೂ ಆದ ಮಹನೀಯರ ಸ್ಮಾರಕವನ್ನು ನಾವು ಈರೀತಿ ಭಾವಚಿತ್ರದ ಪ್ರತಿಷ್ಠಾಪನೆಯ ಮೂಲಕ ನೆರವೇರಿಸುವುದು ಅವರ ಘನತೆಗೆ ಕಡಮೆಯಾಗಿರುವುದಾದರೂ ನಮ್ಮ ಕೃತಜ್ಞತಾಪ್ರದರ್ಶಕವೆಂದು ನಾವು ಭಾವಿಸಿರುತ್ತೇವೆ.

ತಾವು ಈ ಭಾವಚಿತ್ರಪ್ರತಿಷ್ಠಾಪನಾ ಸಮಾರಂಭವನ್ನು ನೆರವೇರಿಸಲು ದಯೆಯಿಟ್ಟು ಒಪ್ಪಿಕೊಂಡುದಕ್ಕಾಗಿ ತಮ್ಮನ್ನು ಮತ್ತೊಮ್ಮೆ ವಂದಿಸುತ್ತೇವೆ ಮಹಾಸ್ವಾಮಿ.

ತಮ್ಮ ವಿಧೇಯರಾದ
ಕಬ್ಬಹಳ್ಳಿ ಚೆನ್ನಬಸವಪ್ಪನವರ ಸ್ಮಾರಕಕಮಿಟಿಯ
ಪ್ರೆಸಿಡೆಂಟ್ ಮತ್ತು ಮೆಂಬರುಗಳು.

ಮೈಸೂರು,
24-10-1926.

ದಿವಾನರ ಪ್ರತ್ಯುತ್ತರ.

ಚೆನ್ನಬಸವಪ್ಪನವರ ಸ್ಮಾರಕಸಮಿತಿಯ ಅಧ್ಯಕ್ಷರ ಮತ್ತು ಸದಸ್ಯರ ಪ್ರೀತಿಪುರಸ್ಸರವಾದ ಆಮಂತ್ರಣದಮೇಲೆ ಲಿಂಗಾಯಿತಸಮಾಜದ ಆ ಪ್ರಖ್ಯಾತ ಧರ್ಮಿಷ್ಠರ ಸ್ಮಾರಕಕಾರ್ಯವನ್ನು ನೆರವೇರಿಸುವಲ್ಲಿ ತಮ್ಮ ಕೂಡ ಸಮ್ಮಿಳಿತನಾಗಿರುತ್ತೇನೆ. ಕೈ|| ಕಬ್ಬಹಳ್ಳಿಯ ಚೆನ್ನಬಸವಪ್ಪನವರ ಪ್ರತ್ಯಕ್ಷಪರಿಚಯವು ನನಗಿಲ್ಲವಾಗಿದ್ದರೂ ಅವರ ಆತ್ಮವಿಚಾರವಾಗಿಯೂ, ಅವರು ಮಾಡಿರುವ ಕಾರ್ಯಗಳ ವಿಚಾರವಾಗಿಯೂ ನಾನು ಕೇಳಿರುವುದರಲ್ಲಿ ಸ್ವಭಾವಜನ್ಯವಾದ ಸ್ವದೇಶಾಭಿಮಾನವೂ, ಅಪ್ರಾರ್ಥಿತಸ್ವಜನೋಪಕಾರಬುದ್ಧಿಯೂ ಅವರಲ್ಲಿದ್ದುದರಿಂದ ಅವರು ನಿಜವಾಗಿಯೂ ಸತ್ಪುರುಷರೆಂದು ತಿಳಿದಿರುತ್ತೇನೆ. ಅಂತಹವರು ಬಹಳ ವಿರಳ, ಮತ್ತು ಅಂತಹ ಮಹೋಪಕಾರಿಗಳ ಆಕಸ್ಮಿಕವೂ ಹೃದಯದ್ರಾವಕವೂ ಆದ ಮರಣದಿಂದ ನಮ್ಮಗಳಿಗೆ ದ್ವಿಗುಣವಾದ ವ್ಯಸನ ಉಂಟಾಗಿದೆ. ಕೈ|| ಚೆನ್ನಬಸವಪ್ಪನವರ ಆತ್ಮೀಯಗುಣವನ್ನೂ ಧರ್ಮಬುದ್ಧಿಯನ್ನೂ ಸ್ಮಾರಕಸಮಿತಿಯ ಪ್ರೆಸಿಡೆಂಟರವರು ಪ್ರಶಂಸಿಸಿರುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲವು. ತಮ್ಮ ಊರು, ಸಮಾಜ ಮತ್ತು ದೇಶ ಇವುಗಳಿಗೆ ತಮ್ಮೈಶ್ವರ್ಯಗೌರವಗಳು ಸದ್ವಿನಿಯೋಗವಾದಲ್ಲಿ ಸಾರ್ಥಕವಾಗುತ್ತವೆಂಬುದನ್ನು ಅವರು ಚೆನ್ನಾಗಿ ತಿಳಿದಿದ್ದರಲ್ಲದೆ ತತ್ಕಾಲದಲ್ಲಿ ಅತ್ಯಾವಶ್ಯಕವಾಗಿರುವ ವಿದ್ಯಾಭಿವೃದ್ಧಿ ಕಾರ್ಯವನ್ನು ಕೈಕೊಂಡಿದ್ದರು. ಈ ವಿಧವಾದ ಪ್ರತ್ಯಕ್ಷಪರೋಪಕಾರಪ್ರಯತ್ನದಲ್ಲಿ ಲಿಂಗಾಯಿತಸಮಾಜದ ಉದಾತ್ತಸಂಪ್ರದಾಯವನ್ನು ಅನುಸರಿಸಿದರು. ನಮ್ಮ ದೇಶದ ಚರಿತ್ರೆಗೂ, ಭಾಷೆಗೂ, ಸಂಪತ್ತಿಗೂ ಈ ಲಿಂಗಾಯಿತ ಸಮಾಜವು ಹಿಂದೆ ಎಂತಹ ಪ್ರಖ್ಯಾತಸೇವೆಯನ್ನು ಮಾಡಿರುತ್ತದೆಂಬುದನ್ನು ನಾವೆಲ್ಲರೂ ಬಲ್ಲೆವು. ಇಂದಿಗೂ ಸಂಸ್ಥಾನದ ವಾಣಿಜ್ಯ ಮತ್ತು ಕೈಗಾರಿಕೆಯ ಅಭಿವೃದ್ಧಿಯ ವಿಚಾರದಲ್ಲಿ ವಿಶೇಷವಾಗಿ ಸಾಹಾಯ್ಯೀಕರಿಸುತ್ತಿದೆ. ತಮ್ಮವರಿಗೆ ಮಾತ್ರ ಉಪಕರಿಸಬೇಕೆಂಬ ಸಂಕುಚಿತಭಾವವನ್ನಿಡದೆ ಸಂಸ್ಥಾನದ ಸಮಸ್ತ ಪ್ರಜೆಗಳಿಗೂ ಉಪಕಾರಮಾಡಬೇಕೆಂಬ ವಿಶಾಲಭಾವವನ್ನು ನಿದರ್ಶನಮಾಡಿಕೊಟ್ಟ ಕೈ|| ಚೆನ್ನಬಸವಪ್ಪನವರ ಸನ್ಮಾರ್ಗವನ್ನು ಅನುಸರಿಸುವುದು ಎಲ್ಲ ಸಮಾಜದವರಿಗೂ ತಕ್ಕುದಾಗಿದೆ. ಇದು ಕೈ|| ಚೆನ್ನಬಸವಪ್ಪನವರ ಜೀವಿತದಲ್ಲಿ ಅತ್ಯಂತ ಶ್ಲಾಘ್ಯವಾದ ಗುಣಜಾತವಾಗಿರುವುದಾಗಿ ನಾನು ಭಾವಿಸಿರುತ್ತೇನೆ. ಅವರು ಪೂರ್ವಿಕರ ಸಂಪ್ರದಾಯಾನುಸಾರವಾಗಿ ಸ್ವಜನಾಭಿಮಾನಮಾತ್ರವಿಡದೆ ಸಾರ್ವಜನಿಕಾಭಿಮಾನವುಳ್ಳವರಾಗಿದ್ದರು. ಈ ಗುಣಜಾತವೇ ಇಂದಿಗೂ ನಮ್ಮೆಲ್ಲರಿಗೂ ಅತ್ಯಾವಶ್ಯಕವಾಗಿರುವುದು. ನಾನು ಈಗ ಪ್ರತಿಷ್ಠಿಸಲಿಕ್ಕಿರುವ ಅವರ ಭಾವಚಿತ್ರವೂ ಅವರ ಧರ್ಮನಿದರ್ಶಕವಾದ ಈ ಸುಂದರಕಟ್ಟಡವೂ ಅವರ ಸಮಾಜಸೇವಾತತ್ಪರತೆಯನ್ನೂ ಪರೋಪಕಾರಬುದ್ಧಿಯನ್ನೂ ಅವರ ಸಮಾಜದವರ ಮತ್ತು ಇತರರ ಸ್ಮರಣೆಗೆ ತರಲೆಂದೂ, ಕಷ್ಟಪಟ್ಟು ದುಡಿದು ಪರೋಪಕಾರಿಗಳಾಗಿ ಜೀವಿಸುವ ಆಶಯವನ್ನು ಯುವಜನಸಂತತಿಯವರಿಗೆ ಹುಟ್ಟಿಸಲೆಂದೂ ಹಾರೈಸುತ್ತೇನೆ.

ಮೈಸೂರು ಪ್ರಜಾಪ್ರತಿನಿಧಿಸಭೆ.

ಪ್ರತಿನಿಧಿಗಳ ಅರಿಕೆ ಮತ್ತು ಸರ್ಕಾರದುತ್ತರ.

ಶಿಕಾರಿಪುರದ ಮ|| ಪುಟ್ಟಮಲ್ಲಪ್ಪನವರು ಮತ್ತು ಶಿವಮೊಗ್ಗೆಯ ಮ|| ಸಿ. ಸುಬ್ಬರಾಯರ ಅರಿಕೆ—ಶಿಕಾರಪುರದಲ್ಲಿ ಬಹಳ ಅಲ್ಪವಾಗಿಯೂ, ಹಿಂಡವಾಗಿಯೂ ಮಳೆಯಾಗಿ ಜನಕ್ಕೆ ಬಹಳ ತೊಂದರೆಯಾಗಿರುವ ಪ್ರಯುಕ್ತ ಅಂಜನಾಪುರದ ಜಲಾಶಯದ ಕೆಲಸವನ್ನು ಕೂಡಲೆ ಆರಂಭಿಸಿದಲ್ಲಿ ಜನರ ಜೀವನಕ್ಕೆ ಅನುಕೂಲವಾಗುತ್ತದೆ. ಉತ್ತರ—ಈ ಕೆಲಸಕ್ಕೆ 10 ಲಕ್ಷ ರೂ. ವೆಚ್ಚವಾಗುವುದಾಗಿ ಎಸ್ಟಿಮೇಟಾಗಿದೆ ಮತ್ತು ಕೂಡಲೆ ಕಾರ್ಯಾರಂಭಮಾಡಲು ಇಂಜನೀಯರು ತಳಹದಿಯ ಸ್ಥಳವನ್ನು ಪರೀಕ್ಷಿಸಲುಪಕ್ರಮಿಸಿರುವರು. ಮ|| ವೇಣಾರಡ್ಡಿಯವರು ಮತ್ತೆ ಕೆಲರು—ಚಿತ್ರಕೆರೆಗಳ ಜೀರ್ಣೋದ್ಧಾರಕ್ಕಾಗಿ ಹೆಚ್ಚು ಹಣವನ್ನು ಸ್ಯಾಂಕ್ಷನ್ ಮಾಡಬೇಕು. ಉ—ಈ ಸೂಚನೆಯು ಸರ್ಕಾರದವರಿಗೆ ಸಮ್ಮತವಾಗಿದೆ ಮತ್ತು ಇದಕ್ಕಾಗಿ ನೀರಾವರಿ ಸೆಸ್‌ಫಂಡನ್ನು ವಿನಿಯೋಗಿಸಲು ನಿರ್ಧರಿಸಲಾಗಿದೆ. ಈಗ ಕೊಡಲೊಪ್ಪಿರುವ 3 ಲಕ್ಷ ರೂ. ಗಿಂತ ಹೆಚ್ಚಾಗಿ ಕೊಡಲು ಚೀಫ್ ಇಂಜನಿಯರ ಅಭಿಪ್ರಾಯದಂತೆ ಈಗ ಸಾಧ್ಯವಿಲ್ಲವು.

ಶಿವಮೊಗ್ಗೆಯ ಮ|| ಮುರಿಘೆಪ್ಪನವರೇ ಮೊದಲಾದವರ ಅರಿಕೆ—ವಿದ್ಯುದ್ದೀಪಗಳನ್ನೂ ಕೊಳಾಯಿ ನೀರನ್ನೂ ಕೊಡಿಸಬೇಕೆಂದು ದಿವಾನರು ಭದ್ರಾವತಿ ಟವನ್ನಿಗೆ ದಯೆಮಾಡಿದ್ದಾಗ್ಯೆ ಪ್ರಾರ್ಥಿಸಲ್ಪಟ್ಟಿದ್ದಿತು. ಕಬ್ಬಿಣದ ಕಾರ್ಖಾಲಯದ ನೀರು ನದಿಗೆ ಬೀಳುವುದರಿಂದ ನೀರು ಕಲುಷಿತವಾಗುತ್ತಿರುವ ಪ್ರಯುಕ್ತ ಕೂಡಲೆ ಮೇಲ್ಕಂಡ ಪ್ರಾರ್ಥನೆಯನ್ನು ಜಾಗ್ರತೆ ನೆರವೇರಿಸಿಕೊಡಬೇಕು. ಉ—ಎಸ್ಟಿಮೇಟು ಸಿದ್ಧವಾದಮೇಲೆ ಈ ವಿಷಯವು ಪರ್ಯಾಲೋಚಿಸಲ್ಪಡುವುದು. ಅಲ್ಲದೆ ಕೆಲಸಕ್ಕುಪಯೋಗಿಸಲ್ಪಡುವ ನೀರನ್ನು ನದಿಗೆ ಬಿಟ್ಟು ಕಲುಷಿತವನ್ನಾಗಿ ಮಾಡದಂತೆ ತಕ್ಕ ಸೂಚನೆಯು ಕೊಡಲ್ಪಡುವುದು.

ಸಂಸ್ಥಾನದಲ್ಲಿ ಅನೇಕಕಡೆ ರೈಲ್ವೆ ಹಾಕಲ್ಪಡಬೇಕೆಂದು ಕೆಲ ಮೆಂಬರುಗಳು ಅರಿಕೆಮಾಡಿಕೊಂಡುದರಮೇಲೆ, ಸದ್ಯದಲ್ಲಿ ಕಡೂರು-ಚಿಕ್ಕಮಗಳೂರು, ಬೆಂಗಳೂರು—ಹೊಸೂರು ಮತ್ತು ಶಿವಮೊಗ್ಗ—ಅರಸಾಳು ಈ ಮೂರು ರೈಲ್ವೆಗಳನ್ನು ಹಾಕಲು ನಿರ್ಧರಿಸಿ ಇವುಗಳಲ್ಲೆರಡು ಮಾರ್ಗಗಳನ್ನು ಪ್ರಸಕ್ತವರ್ಷದಲ್ಲೇ ಆರಂಭಿಸಲು ತಕ್ಕ ಪ್ರಯತ್ನ ನಡಿಸಲ್ಪಡುವುದು. ಶಿವಮೊಗ್ಗ-ಅರಸಾಳು ರೈಲ್ವೆಯನ್ನು ಹಾಕುವ ವಿಚಾರದಲ್ಲಿ ಈಗ ಶೇಖರವಾಗಿರುವ ರೈಲ್ವೆಸೆಸ್ಸು ಉಪಯೋಗಿಸಲ್ಪಡುವುದಾಗಿದ್ದರೂ, ಡಿಸ್ಟ್ರಿಕ್ಟ್ ಬೋರ್ಡಿನವರು ರೂಪಾಯಿಯೊಂದಕ್ಕೆ ಅರ್ಧಾಣೆಯಂತೆ ಸೆಸ್ಸನ್ನು ಮುಂದೆಯೂ ಕೊಡುವುದಾಗಿದ್ದರೂ ಶೇಕಡ 40 ರಂತೆ ಸರ್ಕಾರದವರಿಗೆ ನಷ್ಟವಾಗುವುದು. ಆದರೂ ತುಂಗಾನದಿಗೆ ಸೇತುವೆಯನ್ನೂ ಶಿವಮೊಗ್ಗೆಯಲ್ಲಿ ರೈಲ್ವೆಸ್ಟೇಷನ್ನನ್ನೂ ಕಟ್ಟಲು ಮತ್ತು ಶಿವಮೊಗ್ಗೆಯಿಂದ ರಾಗಿಹೊಸಹಳ್ಳಿಗೆ ರೈಲ್ವೆಯನ್ನು ಹಾಕಲು ಏರ್ಪಾಟು ನಡೆಯುತ್ತಿದೆ. ಬೆಂಗಳೂರಿಂದ ಹೊಸೂರಿಗೆ ರೈಲ್ವೆಯನ್ನು ಹಾಕುವ ವಿಚಾರದಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ರೈಲ್ವೆಸೆಸ್ಸನ್ನು ವಿಧಿಸಿ ನಷ್ಟವನ್ನು ಕಟ್ಟಿಕೊಡಲು ಒಪ್ಪಿಕೊಳ್ಳುವುದಾದಲ್ಲಿ ಈ ವಿಚಾರವು ಪೂರ್ಣ ಶ್ರದ್ಧೆಯಿಂದ ಪರ್ಯಾಲೋಚಿಸಲ್ಪಡುವುದು. ರೈಲ್ವೆ ಏಜಂಟರೂ ಚೀಫ್ ಇಂಜನೀಯರೂ ಕಡೂರಿಂದ ಚಿಕ್ಕಮಗಳೂರಿಗೆ ಹಾಕಲ್ಪಡಬೇಕೆಂದಿರುವ ಸ್ಥಳಕ್ಕೆ ಹೋಗಿ ಪರೀಕ್ಷಿಸಿ ಸಾಧ್ಯವಾದಲ್ಲಿ ಸಕ್ರೆಪಟ್ಟಣದವರೆಗಾದರೂ ರೈಲ್ವೆಯನ್ನು ಹಾಕಲು ಏರ್ಪಡಿಸುವರು.

3 ನೇ ತರಗತಿಯ ರೈಲ್ವೆ ಪ್ರಯಾಣಿಕರಿಂದ ವಿಶೇಷ ಉತ್ಪತ್ತಿಯಾಗುತ್ತಿರುವುದಾದರೂ ಅವರುಗಳು ಕುರಿಗಳಂತೆ ಬಂಡಿಗಳಲ್ಲಿ ತುಂಬಲ್ಪಡುತ್ತಿರುವುದೂ, ಮೂರನೆಯ ತರಗತಿಯ ಪ್ರಯಾಣಿಕರು ನಿಲ್ಲಲು ತಕ್ಕ ವೇಟಿಂಗ್ ರೂಮು ಇಲ್ಲದಿರುವುದೂ, ಕೆಲವೆಡೆ ನೆರಳೇ ಇಲ್ಲದಿರುವುದೂ, ಇತರ ತರಗತಿಯವರು ಸುಖವನ್ನು ಅನುಭವಿಸುತ್ತಿರುವುದೂ ಬಹಳ ಅನ್ಯಾಯವಾಗಿರುವುದರಿಂದ ಮೂರನೇ ತರಗತಿಯ ಪ್ರಯಾಣಿಕರಿಗೆ ತಕ್ಕ ವೇಟಿಂಗ್‌ರೂಮುಗಳನ್ನೂ ಬಂಡಿಗಳನ್ನೂ ಅನುಕೂಲಪಡಿಸಿಕೊಡಬೇಕೆಂದು ಮತ್ತು ಮೈಸೂರು ರೈಲ್ವೆಸ್ಟೇಷನ್ನಿನಲ್ಲಿ ಪ್ಲಾಟ್‌ಫಾರಂ ಟಿಕೆಟ್ಟು ಇಲ್ಲದೆ ಒಳಕ್ಕೆ ಯಾರನ್ನೂ ಬಿಡದಿರುವ ನಿರ್ಬಂಧದಿಂದ ಪ್ರಯಾಣಿಕರಿಗೆ ಮಹೋತ್ಸವಕಾಲಗಳಲ್ಲಿ ಬಹಳ ತೊಂದರೆಯಾಗಿರುವುದರಿಂದ ಅದನ್ನು ತಪ್ಪಿಸಿಕೊಡಬೇಕೆಂದು ಅನೇಕ ಮೆಂಬರುಗಳು ಅರಿಕೆಮಾಡಿಕೊಳ್ಳಲಾಗಿ, ಸಾಧ್ಯವಾದ ಅನುಕೂಲಗಳನ್ನು ಮಾಡಿಕೊಡುವುದಾಗಿ ದಿವಾನರೂ ರೈಲ್ವೆ ಏಜಂಟರೂ ವಾಗ್ದಾನಮಾಡಿದರು.

ಹೊಸದಾಗಿ ತಿದ್ದುಪಡಿಯಾಗಿರುವ ಮ್ಯುನಿಸಿಪಲ್ ರೆಗ್ಯುಲೇಷನ್ನಿನ ಪ್ರಕಾರ ಎಲ್ಲ ಟವರ್ನ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟರುಗಳು ನೇರವಾಗಿ ಓಟರುಗಳಿಂದಲೇ ಚುನಾಯಿಸಲ್ಪಡುವಂತೆ ಸಾಟಾಗಬೇಕು ಎಂದು ಕೆಲ ಮೆಂಬರುಗಳು ಅರಿಕೆಮಾಡಿಕೊಂಡುದಕ್ಕೆ ಓಟರುಗಳಿಂದಲೇ ಪ್ರೆಸಿಡೆಂಟು ಮತ್ತು ವೈಸ್‌ಪ್ರೆಸಿಡೆಂಟು ಚುನಾಯಿಸಲ್ಪಟ್ಟಲ್ಲಿ ಕೌನ್ಸಿಲಿನ ಮೆಜಾರಟಿ ಓಟುಗಳು ಅವರಿಗೆ ಬಾರದೆ ಇರುವ ಸಂಭವವಿದೆ, ಮತ್ತು ಕೌನ್ಸಿಲರುಗಳಿಂದಲೇ ಚುನಾಯಿಸಲ್ಪಟ್ಟಲ್ಲಿ ಕೌನ್ಸಿಲರ ಮೆಜಾರಿಟಿಯ ಬೆಂಬಲವು ಅವರಿಗಿರುವುದು ಎಂದು ಒಂದನೇ ಕೌನ್ಸಿಲರು ಹೇಳಿದರು. ಅದರಮೇಲೆ ಅನೇಕ ಮೆಂಬರುಗಳು ಓಟರುಗಳಿಂದಲೇ ಚುನಾಯಿಸಲ್ಪಡುವಂತಾಗಬೇಕೆಂದು ಅರಿಕೆಮಾಡಿಕೊಳ್ಳಲಾಗಿ ರಾಜಧಾನಿಯ ಮ್ಯುನಿಸಿಪಾಲಿಟಿಯ ವಿನಾ ಇತರ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟರುಗಳನ್ನು ಕಂದಾಯದಾರರೇ ಚುನಾಯಿಸುವ ವಿಚಾರವನ್ನು ಪರ್ಯಾಲೋಚಿಸುವುದಾಗಿ ದಿವಾನರು ವಾಗ್ದಾನಮಾಡಿದರು.

ಮ|| ಎಚ್. ನಂಜುಂಡರಾಜಅರಸಿನವರ ಅರಿಕೆ—ಭೂಗಂದಾಯದಾರರಿಗೆ ರೈಲ್ವೆ ಮತ್ತು ವಿದ್ಯಾಭ್ಯಾಸದ ಸೆಸ್ಸು ವಿಧಿಸಲ್ಪಟ್ಟಿರುವಂತೆ 30 ರೂ. ಸಂಬಳದಮೇಲಿರುವ ಸರ್ಕಾರೀ ನೌಕರರೂ ಈ ಸೆಸ್ಸಿನಿಂದುಂಟಾಗುವ ರಸ್ತೆ ವಿದ್ಯಾಭ್ಯಾಸ ಮೊದಲಾದ ಸೌಕರಗಳನ್ನು ಅನುಭವಿಸುತ್ತಿರುವುದರಿಂದ ಅವರಿಗೂ ಮೇಲ್ಕಂಡ ಸೆಸ್ಸುಗಳು ವಿಧಿಸಲ್ಪಡಬೇಕು. ಉ—ಇದು ಸಾಧ್ಯವಾದ ಸೂಚನೆಯಲ್ಲವು. ಮೇಲ್ಕಂಡ ಸೆಸ್ಸುಗಳು ಬೇಸಾಯದ ಕಂದಾಯಕ್ಕೆ ಸಂಬಂಧಪಟ್ಟುವಾಗಿವೆ. ಅದರಂತೆ ಮಾಡುವುದಾದರೆ ಇನ್ಕಂಟ್ಯಾಕ್ಸಿನ ಜತೆಗೆ ಮತ್ತೊಂದು ಕಂದಾಯವನ್ನು ವಿಧಿಸಿದಂತಾಗುತ್ತದೆ. ಇದನ್ನು ಕಂದಾಯವಿಚಾರಣಾ ಆಫೀಸರು ಪರ್ಯಾಲೋಚಿಸುವರು.

ಮೊಳಕಾಲ್ಮೂರು ಮ|| ಎಂ. ಎಸ್. ನರಸಿಂಗರಾಯರ ಅರಿಕೆ—ಕೈನೇಗೆಯ ಬಟ್ಟೆಗಳಮೇಲೆ ಸುಂಕವನ್ನು ವಿಧಿಸಿರುವುದರಿಂದ ಅದರ ಪ್ರಸಾರಣೆಗೆ ತೊಂದರೆಯಾಗಿರುವಪ್ರಯುಕ್ತ ಮದ್ರಾಸು ಮೊದಲಾದ ಸ್ಥಳಗಳಲ್ಲಿರುವಂತೆ ಇಲ್ಲೂ ತಪ್ಪಿಸಿ ಸ್ವದೇಶ ಬಟ್ಟೆಯ ಪ್ರಸರಣೆಗೆ ಅನುಕೂಲಪಡಿಸಿಕೊಡಬೇಕು. ಎಂದು ಹೇಳಿದುದನ್ನು ಮ|| ಗಳಾದ ಬಿ. ಉಸ್ಮಾನ್ ಖಾನ್ ರವರೂ ಜಿ. ಪರಮಶಿವಯ್ಯನವರೂ ಪುಷ್ಟೀಕರಿಸಿ ಹೇಳಿದರಲ್ಲದೆ, ಹೊರಗಣ ಬಟ್ಟೆಗಳಮೇಲೆ ಸುಂಕವನ್ನು ತಪ್ಪಿಸುವುದಾದರೆ ಸ್ಥಳದ ಮಗ್ಗದವರು ಹೊರಗಣವರ ಕೂಡ ಸ್ಪರ್ಧಿಸಲಾಗುವುದಿಲ್ಲವಾದುದರಿಂದ ಸ್ಥಳದ ಮಗ್ಗಗಳಲ್ಲಾಗುವ ಬಟ್ಟೆಗಳಸುಂಕವನ್ನು ಮಾತ್ರ ತಪ್ಪಿಸಬೇಕೆಂದು ಮ|| ಜಿ. ಪರಮಶಿವಯ್ಯನವರು ಒತ್ತಿ ಹೇಳಿದರು. ಉ—ನಿಮ್ಮ ಸೂಚನೆಯಂತೆ ಸ್ವದೇಶದ ಬಟ್ಟೆಗಳ ಸುಂಕವನ್ನು ತಪ್ಪಿಸಿದಲ್ಲಿ ಬಹಳ ತೊಂದರೆಯಾಗುವುದು, ಅಲ್ಲದೆ ಪರದೇಶದ ಬಟ್ಟೆಯು ಕಳ್ಳತನದಿಂದ ತರಲ್ಪಡಲವಕಾಶವಾಗಿ ಸಂಸ್ಥಾನಕ್ಕೆ ಬಹಳ ನಷ್ಟವಾಗುವುದು.

ಮಿ|| ಅಬ್ಬಾಸ್‌ಖಾನ್ ರವರ ಅರಿಕೆ—ಮೊಹತರ್ಫಾ ಸುಂಕವು ತಪ್ಪಿಸಲ್ಪಟ್ಟು ಲಾಹೋರು ಮತ್ತು ಪಂಜಾಬಿನಲ್ಲಿರುವಂತೆ ಪದಾರ್ಥಗಳಮೇಲೆ ಟರ್ಮಿನಲ್ ಕಂದಾಯ ವಿಧಿಸಲ್ಪಟ್ಟಲ್ಲಿ ಪ್ರಜೆಗಳಿಗೆ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೆ ನಷ್ಟವು ತಪ್ಪುತ್ತದೆ. ಉ—ಇದು ಸಂಸ್ಥಾನಾಮಳಿಗೆ ಸಂಬಂಧಪಟ್ಟ ತೆರಿಗೆಯಲ್ಲವಾದುದರಿಂದ ಆಯಾ ಸ್ಥಳದ ಮುನಿಸಿಪಾಲಿಟಿಯವರು ತಂತಮ್ಮ ಅನುಕೂಲವರಿತು ಮಾಡಿಕೊಳ್ಳತಕ್ಕುದಾಗಿದೆ. ಆದುದರಿಂದ ಆ ಮ್ಯುನಿಸಿಪಾಲಿಟಿಯವರು ಆದಾಯ ಬರತಕ್ಕ ಉಪಾಯವನ್ನು ಸೂಚಿಸಿದಲ್ಲಿ ಸರ್ಕಾರದವರು ಪರ್ಯಾಲೋಚಿಸುವರು. ಈ ವಿಚಾರವನ್ನು ಪರ್ಯಾಲೋಚಿಸಿ ತಕ್ಕ ಸೂಚನೆಯನ್ನು ಕೊಡುವ ಬಗೆಗೆ ಚೇಂಬರ್ ಆಫ್ ಕಾಮರ್ಸಿನವರ ಒಂದು ಉಪಸಂಘವು ಏರ್ಪಡಿಸಲ್ಪಡುವುದೆಂದು ದಿವಾನರು ಅಪ್ಪಣೆಕೊಡಿಸಿದರು.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಮಳವಳ್ಳಿ ತಾ|| ಹಲಗೂರಲ್ಲಿರುವ ಮ|| ಚಿಕ್ಕಮಾದಪ್ಪನವರ ಕುಮಾರಿ ಸೌ|| ಪುಟ್ಟಮ್ಮನವರ ವಿವಾಹಪ್ರಸ್ತದಲ್ಲಿ ಹಲಗೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಮ|| ಚಿಕ್ಕಸುಬ್ಬಯ್ಯನವರ ಮೂಲಕ 1 ರೂ.

ಓಟರುಮಹಾಶಯರಲ್ಲಿ ವಿಜ್ಞಾಪನೆ.

ಮಹನೀಯರೇ, ಕೃ|| ವಿ|| ವಿ|| ದಕ್ಷಿಣಭಾಗದ ವತಿಯಿಂದ ಇಂಡಿಯನ್ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಬ್ರಾಹ್ಮಣೇತರರ ಪೈಕಿ ನಾನೊಬ್ಬನೇ ಉಮೇದವಾರನಾಗಿ ನಿಂತಿರುತ್ತೇನೆ. ಇದರ ಚುನಾವಣೆಯು ಇದೇ ವರ್ಷ ನವ್ಹೆಂಬರ್ ೧೮ ನೇ ತಾರೀಖು ಗುರುವಾರದಿವಸ ಮುಂಜಾನೆ ೮ ರಿಂದ ೧೨ ರ ವರೆಗೆ ಮತ್ತು ಮಧ್ಯಾಹ್ನದಲ್ಲಿ ೧ ರಿಂದ ೬ ರ ವರೆಗೆ ಪ್ರತಿಯೊಂದು ಜಿಲ್ಲೆಯ ಆಯಾಯ ಪೋಲಿಂಗ್ ಸ್ಟೇಶನಗಳಲ್ಲಿ ಆಗತಕ್ಕದಿರುತ್ತದೆ.

ನಾನು ಮುಂಬಯಿ ವಿಶ್ವವಿದ್ಯಾಲಯದ ಎಲ್.ಎಲ್.ಬಿ., ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ೧೯೧೩ ನೇ ಇಸವಿಯಿಂದ ಉತ್ತಮರೀತಿಯಿಂದ ವಕೀಲಿ ಕೆಲಸಮಾಡಿ ಈ ಅವಧಿಯಲ್ಲಿಯೇ ಹೆಸರಾದ ವಕೀಲರಲ್ಲೊಬ್ಬನಾಗಿರುವದು ಎಲ್ಲರಿಗೂ ವಿದಿತವದೆ. ಧಾರವಾಡಮ್ಯುನಿಸಿಪಾಲಿಟಿಯಲ್ಲಿ ೧೯೧೬ ನೇ ಇಸವಿಯಿಂದ ಲೋಕನಿಯುಕ್ತ ಮೆಂಬರನಿದ್ದು ಈ ಅವಧಿಯಲ್ಲಿ ಸ್ಕೂಲ ಬೋರ್ಡ್ದ ಮ್ಯಾನೇಜಿಂಗ್ ಕಮಿಟಿಯ ಚೇರಮನ್, ವ್ಹಾಯಿಸಪ್ರೆಸಿಡೆಂಟ್ ವ ಪ್ರೆಸಿಡೆಂಟನಾಗಿ ಒಳ್ಳೇ ದಕ್ಷತೆಯಿಂದ ಜನತೆಯ ಹಿತದ ಸಲುವಾಗಿ ಕಳಕಳಿಯಿಂದ ಕೆಲಸಮಾಡಿರುತ್ತೇನೆ, ಮತ್ತು ೧೯೧೬ ನೇ ಸಾಲಿನಿಂದ ಧಾರವಾಡದ ಮ್ಯುನಿಸಿಪಾಲಿಟಿಯ ವತಿಯಿಂದ ಎರಡುಸಾರೆ ಮತ್ತು ಜನರಲ್ಲ ಇಲೆಕ್ಷನದಲ್ಲಿ ಈ ಸಾರೆ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿಗೆ ಆರಿಸಲ್ಪಟ್ಟು ಈ ಅವಧಿಯಲ್ಲಿ ಮ್ಯಾನೇಜಿಂಗ ಕಮಿಟಿಯ ಚೇರಮನ್ ವ ವ್ಹಾಯಿಸ ಪ್ರೆಸಿಡೆಂಟನಾಗಿ ಕೆಲಸಮಾಡುತ್ತ ಬಂದು ಸದ್ಯಕ್ಕೆ ಸದರಿ ಬೋರ್ಡಿನ ಲೋಕನಿಯುಕ್ತ ಮೊದಲನೆಯ ಪ್ರೆಸಿಡೆಂಟನು ವ ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್ನನು ಇರುತ್ತೇನೆ. ಪ್ರಯುಕ್ತ ನನಗೆ ಸ್ಥಾನಿಕ ಸ್ವರಾಜ್ಯದ ಅನುಭವವು ಚೆನ್ನಾಗಿರುತ್ತದೆ. ನಾನು ಧಾರವಾಡ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ಹ ಬ್ಯಾಂಕಿನ ಉತ್ಪಾದಕರಲ್ಲಿ ಒಬ್ಬನಿದ್ದು ೧೯೧೬ ರಿಂದ ಇಂದಿಗೂ ಆ ಬ್ಯಾಂಕಿನ ಡಯರೆಕ್ಟರನಿರುತ್ತೇನೆ. ಮತ್ತು ಕೋ-ಆಪರೇಟಿವ್ಹ ಇನ್ಸ್ಟಿಟ್ಯೂಟ್ ಬಾಂಬೆ ಇದರ ಡಿವ್ಹಿಜನಲ್ ಬ್ರ್ಯಾಂಚ ಧಾರವಾಡ ಇದರ ಪ್ರೆಸಿಡೆಂಟನಿದ್ದೇನೆ. ಆದ್ದರಿಂದ ಸಹಕಾರಿ ತತ್ವಗಳನ್ನೂ ಒಕ್ಕಲಿಗರ ಸಾಂಪತ್ತಿಕ ಅಡಚಣೆಗಳನ್ನೂ ಸಂಪೂರ್ಣವಾಗಿ ಅರಿತವನಿದ್ದೇನೆ. ಸಾರಾಂಶ ಧಾರವಾಡ ಜಿಲ್ಲೆಯ ಬಹುತರ ಯಾವತ್ತೂ ಸಾರ್ವಜನಿಕ ಸಂಸ್ಥೆಗಳಲ್ಲಿದ್ದು ಅವುಗಳ ಕಮಿಟಿಗಳಲ್ಲಿ ಕೆಲಸಮಾಡಿರುತ್ತೇನೆ. ನಾನು ೧೯೨೦ ರಿಂದ ೧೯೨೩ ರ ವರೆಗೆ ಮುಂಬಯಿ ಕಾಯಿದೆ ಕೌನ್ಸಿಲಿನ ಲೋಕನಿಯುಕ್ತ ಮೆಂಬರನಾಗಿ ಶಕ್ತ್ಯನುಸಾರ ಜನಸೇವೆಯನ್ನು ಮಾಡಿರುತ್ತೇನೆ. ೧೯೧೮ ರಿಂದ ಇಲ್ಲಿಯವರೆಗೆ ಲಿಂಗಾಯತ ಎಜ್ಯುಕೇಶನ್ ಫಂಡಿನ ಮ್ಯಾನೇಜಿಂಗ್ ಕಮಿಟಿಯ ಮೆಂಬರನೂ ಸೆಕ್ರೆಟರಿಯೂ ಇದ್ದು ಸಮಾಜಸೇವೆಯನ್ನು ಮನಮುಟ್ಟಿ ಮಾಡಿರುತ್ತೇನೆ, ಮತ್ತು ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯ (ಗಿಲಗಂಚಿ ಅರಟಾಳ ಹಾಯಸ್ಕೂಲಿನ) ಧಾರವಾಡ ಶಾಖೆಯ ಗವ್ಹರ್ನಿಂಗಬಾಡಿಯ ಮೆಂಬರನಿದ್ದೇನೆ.

ಸದ್ಗೃಹಸ್ಥರೇ, ನಾನು ತಮ್ಮೆಲ್ಲರ ಸಹಾನುಭೂತಿಯಿಂದ ಆರಿಸಲ್ಪಟ್ಟಲ್ಲಿ ಕರ್ನಾಟಕ ಏಕೀಕರಣ, ಕರ್ನಾಟಕಕ್ಕೆ ವಿಶ್ವವಿದ್ಯಾಲಯ, ಕರ್ನಾಟಕಕ್ಕೆ ಸ್ವತಂತ್ರ ಇಲಾಖೆ, ಕಲಾಕೌಶಲ್ಯ ವ್ಯಾಪಾರಾಭಿವೃದ್ಧಿ, ಜನಹಿತ ಮತ್ತು ಜನಸ್ವಾತಂತ್ರ್ಯಗಳಿಗೆ ಭಂಗತರುವ ಕಾಯಿದೆ ತೆಗೆದುಹಾಕುವ ಯತ್ನ, ಹಿಂದುಳಿದ ಸಮಾಜಗಳ ಏಳಿಗೆ ಇವೇ ಮುಂತಾದ ಕೆಲಸಗಳನ್ನು ನಾನು ನನ್ನ ಮುಖ್ಯ ಧ್ಯೇಯವಾಗಿ ಇಟ್ಟುಕೊಂಡಿರುತ್ತೇನೆ. ಮತ್ತು ನಾನು ಸರಕಾರದ ಕೂಡ ಯೋಗ್ಯಕಂಡಲ್ಲಿ ಸಹಕಾರದಿಂದ ಕೆಲಸಮಾಡಲಿಕ್ಕೂ ಅಯೋಗ್ಯವಿದ್ದಲ್ಲಿ ಧೈರ್ಯದಿಂದ ವಿರೋಧಿಸಲಿಕ್ಕೂ ಹಿಂಜರಿಯುವದಿಲ್ಲವೆಂದು ಪೂರ್ಣವಾಗಿ ಆಶ್ವಾಸನ ಕೊಡುತ್ತೇನೆ. ನನ್ನ ಮಾತೃಭೂಮಿಯ ಎಲ್ಲ ಸಮಾಜಗಳ ಹಿತಾವಹವಾದ ಸಂಪೂರ್ಣ ಸ್ವರಾಜ್ಯವು ಆದಷ್ಟು ತೀವ್ರ ದೊರೆಯುವದಕ್ಕೆ ಶಕ್ತ್ಯನುಸಾರ ಪ್ರಯತ್ನ ಮಾಡುವೆನು. ಆದ್ದರಿಂದ ತಾವು ತಮ್ಮ ಹಾಗು ತಮ್ಮ ಮಿತ್ರಮಂಡಳಿಯ ಮತಗಳನ್ನು ಕೊಟ್ಟು ನನಗೆ ರಾಷ್ಟ್ರಸೇವೆಯನ್ನು ಮಾಡುವ ಸುಸಂಧಿಯನ್ನು ಒದಗಿಸಿಕೊಡುವಿರೆಂದು ನಂಬಿರುವ,

ತಮ್ಮ ರಾಷ್ಟ್ರಸೇವಕ,
ಚನ್ನಪ್ಪಾ ಚನವೀರಪ್ಪಾ ಹುಲಕೋಟಿ,
ಬಿ.ಎ., ಎಲ್.ಎಲ್.ಬಿ.,
ಹಾಯಕೋರ್ಟ ವಕೀಲ, ಧಾರವಾಡ.

ಧಾರವಾಡ,
ತಾ|| ೧೩-೧೦-೨೬.

ಮತದಾರರಿಗೆ ಸೂಚನೆ.

ನನ್ನ ಗುರ್ತು—ಮತ ಕೊಡುವ ಪತ್ರಿಕೆಯಲ್ಲಿ ನನ್ನ ಹೆಸರು ಕೆಂಪು ಮಸಿಯಿಂದ ಬರದಿರುತ್ತದೆ. ಅದರ ಮುಂದಿನ ಖಾನೆಯಲ್ಲಿ × ಹೀಗೆ ಒಂದೇ ಕತ್ತರಿ ಗುರ್ತು ಮಾಡಬೇಕು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂಪಾದಕ.

ಆಲ್ ಇಂಡಿಯಾ ವೀರಶೈವಮಹಾಸಭಾಚಿರಸ್ಥಾಯಿಫಂಡು.

ಈ ಚಿರಸ್ಥಾಯಿಫಂಡಿನ ತಾತ್ಕಾಲಿಕ ಸಂಘದವರು ಇದೇ ತಿಂಗಳು 3 ನೇ ತಾರೀಖಿನಲ್ಲಿ ಬೆಂಗಳೂರಲ್ಲಿ ನಡೆಸಿದ ಜನರಲ್ ಮೀಟಿಂಗಿನ ವಿದ್ಯಮಾನದ ವಿಷಯವಾಗಿ ಹಾಜರಾಗಿದ್ದ ಕೆಲವು ಡೋನರ್‌ಗಳ ಅಭಿಪ್ರಾಯವನ್ನು ಕೇಳಿದ್ದರಲ್ಲಿ ವಿಧವಿಧವಾಗಿ ಹೇಳಿದ್ದರಮೇಲೆ ನನಗೆ ಸಂದೇಹವುಂಟಾಗಿ ಮಹಾಸಭೆಯು ಬರುವ ಡಿಸಂಬರ್ ತಿಂಗಳಲ್ಲಿ ನಡೆಯುವದಿರುವದರಿಂದ ಹುಬ್ಬಳ್ಳಿಯ ಸತ್ಕಾರಸಂಘಾಧ್ಯಕ್ಷರು ನನ್ನ ಅಭಿಪ್ರಾಯದಬಗ್ಗೆ ಗಮನಕೊಡಬೇಕಾಗಿ ಪ್ರಾರ್ಥನೆ. ದಾವಣಗೆರೆಯಲ್ಲಿ ನಡೆದ 8 ನೇ ವೀರಶೈವ ಮಹಾಸಭೆಯಲ್ಲಿ ಚಿರಸ್ಥಾಯಿಫಂಡು ಶೇಖರವಾಗಿ ಸದರಿ ಫಂಡ್ ಎಲ್ಲಿ ಇರಬೇಕೆಂಬುವುದು ಯಾವಯಾವ ಭಾಗದವರು, ಮೆಂಬರುಗಳಾಗಿರಬೇಕೆಂಬುವುದು ಅಧ್ಯಕ್ಷರು ಯಾರಿರಬೇಕೆಂಬುವುದು ಸಹ ನಿರ್ಧರವಾಗದೆ ಮುಂದಿನ ಮಹಾಸಭೆಯಲ್ಲಿ ತೀರ್ಮಾನವಾಗತಕ್ಕದ್ದೆಂತಲೂ ಅದುವರಿವಿಗೂ ಒಂದು ತಾತ್ಕಾಲಿಕಸಂಘವಿರಬೇಕೆಂತಲೂ, ಈ ಸಂಘಕ್ಕೆ ಮ|| ದಿ|| ಬ|| ಸರ್ ಪುಟ್ಟಣ್ಣಶೆಟ್ಟರವರು ಅಧ್ಯಕ್ಷರಾಗಿರಬೇಕೆಂತಲೂ, ಈ ಫಂಡಿನ ಧನಸಹಾಯ ಮಾಡಿರುವವರೇ ಮೆಂಬರುಗಳಾಗಿರಬೇಕೆಂತಲೂ ಇನ್ನೊಂದು ಮಹಾಸಭೆ ಕೂಡುವದರೊಳಗಾಗಿ ರೂಲ್ಸುಗಳನ್ನು ಮಾಡಿ ಮಹಾಸಭೆಯಲ್ಲಿಡಬೇಕೆಂತಲೂ 8 ನೇ ಮಹಾಸಭೆಯಲ್ಲಿ ರೆಜುಲೂಷನ್ ಆಗಿರುವದು ಸರಿಯಷ್ಟೆ. ಮೊನ್ನೆ 3 ನೇ ತಾರೀಕಿನಲ್ಲಿ ತಾತ್ಕಾಲಿಕಸಂಘದವರು ಮಾಡಿರುವ ರೆಜುಲೂಷನ್ನಲ್ಲಿ 3 ವರುಷದವರಿವಿಗೂ ಮ|| ದಿ|| ಬ|| ಸರ್ ಪುಟ್ಟಣ್ಣಶೆಟ್ಟರವರೇ ಸಂಘದ ಅಧ್ಯಕ್ಷರಾಗಿರಬೇಕೆಂತಲೂ, 4 ಸಾವಿರ ರೂಪಾಯಿಗಳನ್ನು ಹುಬ್ಬಳ್ಳಿಯ ಸತ್ಕಾರಸಂಘದವರಿಗೆ ಕೊಡಬೇಕೆಂತಲೂ ನಿರ್ಧರಿಸಿರುವದಾಗಿ ತಿಳಿಯಬರುತ್ತೆ. ತಾತ್ಕಾಲಿಕಸಂಘದವರು ನಡೆಸಿದ ಜನರಲ್ ಮೀಟಿಂಗಿನ ತೀರ್ಮಾನವು ಇದುವರಿವಿಗೂ ಪ್ಯಾರಿನಲ್ಲಿ ಪ್ರಕಟವಾಗದೆ ಇರುವದರಿಂದಲೂ, ಸದರಿ ಕಮಿಟಿ ಮೆಂಬರುಗಳಿಗೂ ಬಾರದೆ ಇರುವದರಿಂದಲೂ, ನಿಜಾಂಶವು ಗೊತ್ತಾಗುವಂತಿಲ್ಲ. ಆದರೆ ಚಿರಸ್ಥಾಯಿಫಂಡಿನ ವ್ಯವಸ್ಥೆಯು ಈ ಸಾರಿ ನಡೆಯುವ ಮಹಾಸಭೆಯಲ್ಲಿ ತೀರ್ಮಾನವಾಗತಕ್ಕದ್ದಿದ್ದು ತಾತ್ಕಾಲಿಕಸಂಘದವರು 3 ವರುಷದವರಿವಿಗೂ ಪ್ರೆಸಿಡೆಂಟರನ್ನು ಚುನಾಯಿಸಿಕೊಂಡಿರುವದನ್ನು ನೋಡಿದರೆ 8ನೇ ಮಹಾಸಭೆಯ ರೆಜುಲೇಷನ್ನಿಗೆ ವಿರೋಧವಾಗಿರುತ್ತೆ. ಡಿಶಂಬರ್ ತಿಂಗಳಲ್ಲಿ ನಡೆಯುವ ಮಹಾಸಭೆಯಲ್ಲಿ ಚಿರಸ್ಥಾಯಿಫಂಡಿನ ವ್ಯವಸ್ಥೆ ಬಗ್ಗೆ ತಾತ್ಕಾಲಿಕಸಂಘದವರು ಮಾಡಿರುವ ರೂಲ್ಸುಗಳನ್ನು ಸಹಿತ ತರುತ್ತಾರೋ ಇಲ್ಲವೋ ಎಂದು ಸಂದೇಹಪಡಲು ಅವಕಾಶವಾಗಿರುವದರಿಂದ, ಹುಬ್ಬಳ್ಳಿಯ ಸತ್ಕಾರಸಂಘದವರು ಮುಂಚಿತವಾಗಿ ಚಿರಸ್ಥಾಯಿಫಂಡಿನ ತಾತ್ಕಾಲಿಕಸಂಘದ ಪ್ರೆಸಿಡೆಂಟರವರಿಗೆ ಬರೆದು ಜವಾಬು ತರಿಸಿಕೊಳ್ಳಬೇಕಾಗಿಯೂ ಅವರಿಂದ ಬಂದ ಅಭಿಪ್ರಾಯವನ್ನು ಪ್ರಕಟಿಸಬೇಕಾಗಿಯೂ ಕೋರುತ್ತೇನೆ.

ಬಿ. ಚನ್ನವೀರಪ್ಪ.

೧೦ ನೇ ಅ. ಭಾ. ವೀರಶೈವಮಹಾಸಭಾಚಾಲಕರಿಗೆ ಸವಿನಯಸೂಚನೆ.

1. ಬಳ್ಳಾರಿ ಡಿ|| ಹುವಿನಹಡಗಲಿ ತಾ|| ಹೊಳಗುಂದಿಯ ವೀರಶೈವ ತರುಣಸಂಘದ ಸಭೆಯು ಮ|| ಕರಣಂ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 10 ರಲ್ಲಿ ಸೇರಿದ್ದು ಈ ಕೆಳಗೆ ಕಂಡ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟು ನಮ್ಮ ಮಹಾಸಭಾ ಚಾಲಕರಿಗೆ ವಿಜ್ಞಾಪಿಸಿಕೊಳ್ಳುವ ಬಗ್ಗೆ ತೀರ್ಮಾನಿಸಲ್ಪಟ್ಟಿತು. 2. ಇಡೀ ವೀರಶೈವ ಜನಾಂಗದ ಸುಧಾರಣೆಗೆ ತಿಲಕಪ್ರಾಯದಂತಿರುವ ಮಹಾಸಭೆಯು ತನ್ನ ಒಂಭತ್ತನೆಯ ವರ್ಷವನ್ನು ಹಾಗೂ ಹೀಗೂ ಕೊನೆಗಂಡ ನಂತರ ಅದರಲ್ಲಿ ಉಂಟಾದ ಅನೈಕ್ಯವೆಂಬ ಸಂಕೋಲೆಯಿಂದ ಬಂಧಿಸಲ್ಪಟ್ಟು ಗಾಢನಿದ್ರಾವಸ್ಥೆಯಲ್ಲಿದ್ದು ನಮ್ಮ ಹುಬ್ಬಳ್ಳಿಯ ವೀರಶೈವ ಬಂಧುಗಳಿಂದ ನವಚೈತನ್ಯವನ್ನು ಹೊಂದಿ ಬರುವ ಡಿಶಂಬರಿನಲ್ಲಿ ಹುಬ್ಬಳ್ಳಿಯಲ್ಲಿ ನೆರೆಯುತ್ತದೆಂದು ಪತ್ರಿಕಾಮುಖದಿಂದ ತಿಳಿದು ಇಡೀ ಸಮಾಜಕ್ಕೇ ಹಿಡಿಯಲಾರದಷ್ಟು ಆನಂದವಾಗಿದೆ. ಈ ಸ್ತುತ್ಯ ಪ್ರಯತ್ನಕ್ಕಾಗಿ ಈ ಸಂಘವು ನಮ್ಮ ಹುಬ್ಬಳ್ಳಿಯಲ್ಲಿ ವೀರಶೈವ ಬಂಧುಗಳನ್ನು ವಂದಿಸುವದಲ್ಲದೆ ಇಡೀ ಜನಾಂಗವೇ ತುಂಬಾ ಆಭಾರಿಯಾಗಿದೆ, ಮತ್ತು ಹಿಡಿದ ಕಾರ್ಯವನ್ನು ಕೊನೆಗಾಣಿಸುವಂತೆ ಹುಬ್ಬಳ್ಳಿಯ ವೀರಶೈವ ಬಾಂಧವರಿಗೆ ಆಶೀರ್ವದಿಸಲೆಂದು ಈಶ್ವರನನ್ನು ಪ್ರಾರ್ಥಿಸುತ್ತದೆ. ಇಂಥಾ ಮಹತ್ತರವಾದ ಮಹಾಸಭೆಯ ಅಧ್ಯಕ್ಷಪದವಿಯನ್ನು ಮತಾಭಿಮಾನಿಗಳೂ ನಿಷ್ಪಕ್ಷಪಾತಿಗಳೂ ಕಾರ್ಯದಕ್ಷರೂ ಸಮಾಜಸೇವಾದುರಂಧರರೂ ಸುವಿಚಾರಿಗಳೂ ಆದವರಿಗೇನೆ ವಹಿಸಬೇಕೆಂಬುದು ಸೂಜ್ಞರೂ ಪೂರ್ಣವಿಚಾರಿಗಳೂ ಆದ ನಮ್ಮ ಹುಬ್ಬಳ್ಳಿಯ ವೀರಶೈವ ಬಂಧುಗಳಿಗೆ ಸೂಚಿಸಬೇಕಾದ್ದಿಲ್ಲ. ಇಂಥಾ ಘನತರವಾದ ಅಧ್ಯಕ್ಷಸ್ಥಾನವು ಮದ್ರಾಸ್ ಇಲಾಖೆಯವರಿಗೆ ಈವರೆಗೂ ಲಭಿಸಿಲ್ಲವು. ಬಳ್ಳಾರಿಯಲ್ಲಿ ನೆರೆದ 5 ನೆ ಅ. ಭಾ. ಮಹಾಸಭೆಗೆ ಮದ್ರಾಸು ಇಲಾಖೆಯವರು ಶ್ರೀಮಾನ್ ಪುಂಗನೂರು ರಾಜರಿಗೆ ಅಧ್ಯಕ್ಷತೆಯನ್ನು ವಹಿಸಬೇಕೆಂಬುವದಾಗಿ ಅನೇಕರು ಕುತೋಹಲಪಟ್ಟಾಗ್ಯೂ ಆ ರಾಜರವರೇ ನಮ್ಮ ಇಲಾಖೆಯಲ್ಲಿ ನಾವೇ ಅಧ್ಯಕ್ಷರಾಗುವದಕ್ಕಿಂತಲೂ ಬೇರೆ ಇಲಾಖೆಯವರನ್ನು ಈ ಪದವಿಯಿಂದ ಸನ್ಮಾನಿಸತಕ್ಕದ್ದೆಂದು ಹೇಳಿ ಸದ್ಗುಣಿಗಳೂ ಸಮಾಜಸುಧಾರಕರೂ ಆದ ಶ್ರೀ. ವಾರದ ಅಪ್ಪಾಸಾಹೇಬರವರಿಗೆ ವಹಿಸಿ ಗೌರವಿಸಿದ್ದರಿಂದ ಸದರಿ 5 ನೇ ಮಹಾಸಭೆಯು ನಿರ್ವಿಘ್ನತೆಯಿಂದ ಜರುಗಿತು. ಪ್ರಯುಕ್ತ ಈ ಸಾರಿಯ 10 ನೇ ಅ. ಭಾ. ವೀರಶೈವಮಹಾಸಭೆಯ ಅಧ್ಯಕ್ಷಪದವಿಗೆ ವೀರಶೈವ ಅರಸುಮನೆತನದವರೂ ಯೋಗ್ಯರೂ ಸದ್ಗುಣವಂತರೂ ಸಮಾಜಾಭಿಮಾನಿಗಳೂ ವಿದ್ಯಾಭಿಮಾನಿಗಳೂ ಕಾರ್ಯದಕ್ಷರೂ ವಿದ್ಯಾವಂತರೂ ಆಗಿರುವ ಪುಂಗನೂರು ಸಂಸ್ಥಾನದ ಶ್ರೀಮಾನ್ ಚಿಕ್ಕ ರಾಯಲ್ ಯಶೋವಂತ ಬಹದ್ದೂರ್ ಕುಮಾರರಾಜ ಅರಸರಿಗೆ ಅರಿಕೆಮಾಡಿಕೊಂಡು ಸದರಿ ಮಹಾರಾಜರನ್ನೇ ಈ ಅಧ್ಯಕ್ಷರನ್ನಾಗಿ ಆರಿಸಿದುದಾದರೆ ಮದ್ರಾಸು ಇಲಾಖೆಯವರಿಗೆ ಮಾನ್ಯಕೊಟ್ಟಂತಾಗುವದು, ಅಲ್ಲದೆ ಮಹಾಸಭೆಗೂ ಹೆಚ್ಚಿನ ಭೂಷಣವಾಗುವುದು. 4. ಈಗಿನ ಗುರುವರ್ಗದ ವಿರಕ್ತವರ್ಗದವರ ಮನಸ್ತಾಪದಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಪಂಗಡಗಳಾಗಿ ಇಡೀ ನಮ್ಮ ಸಮಾಜವೇ ಅನೈಕ್ಯವೆಂಬ ಜ್ವಾಲೆಗೆ ಸಿಕ್ಕಿ ತುಂಬಾ ಅನರ್ಥಕ್ಕೆ ಕಾರಣವಾಗಿರುವ ವಿಷಯವು ಸರ್ವಶ್ರುತವಾದದ್ದೇ ಅದೆ. ಇಂಥಾ ವಿಷಮಸ್ಥಿತಿಯಲ್ಲಿ ಈ ಚಳವಳಿಯ ಸಂಬಂಧ ಯಾವ ವಿಷಯಗಳ ಚರ್ಚೆಗೂ ಮಹಾಸಭೆಯಲ್ಲಿ ಆಸ್ಪದ ದೊರೆಯದಂತೆಯೂ ಈಗಿನ ಚಳವಳಿಗೆ ಕಾರಣೀಭೂತರಾದ ಗುರುವರ್ಗ ವಿರಕ್ತವರ್ಗಗಳ ವಿಷಯದ ವ್ಯವಸ್ಥೆಯನ್ನಿಡಲು ಈ ಸಂಘವು ನಮ್ಮ ಮಹಾಸಭಾ ಚಾಲಕರನ್ನು ಅತಿ ದೈನ್ಯತೆಯಿಂದ ಕೇಳುತ್ತದೆ. ಸಮಾಜಕ್ಕೆ ಸೂಕ್ತತೋರಿದಲ್ಲಿ ಗುರುವರ್ಗ ವಿರಕ್ತವರ್ಗದಿಂದುಂಟಾದ ಅನೈಕ್ಯತೆಯನ್ನು ಹೋಗಲಾಡಿಸಲು ಎಲ್ಲಾ ಪ್ರಾಂತದ ಮುಖಂಡರಿಂದೊಡಗೂಡಿದ ಒಂದು ಉಪಕಮಿಟಿಯನ್ನು ನೇಮಿಸಿ ನ್ಯಾಯನಿರ್ಣಯಮಾಡಲು ಏರ್ಪಾಟು ಮಾಡಿದ್ದಾದರೆ ನಮ್ಮ ಜನಾಂಗಕ್ಕೇನೆ ಮಹೋಪಕಾರಮಾಡಿದಂತಾಗುತ್ತೆ. ಇದರ ಸುಧಾರಣೆಯ ಭಾರವು ಇಡೀ ಸಮಾಜದವರನ್ನೇ ಅವಲಂಬಿಸಿದೆ ಎಂದು ಬೇರೆ ಹೇಳಬೇಕಾದ್ದಿಲ್ಲ.

ಶಾನುಭೋಗರ ಗವಿಸಿದ್ದಪ್ಪ,
ತರುಣಸಂಘ, ಹೊಳಗುಂದಿ.

ಅಖಿಲಭಾರತೀಯವೀರಶೈವಮಹಾಸಭೆ.

ಬರುವ ಡಿಶಂಬರು ತಿಂಗಳಿನಲ್ಲಿ ಹುಬ್ಬಳ್ಳಿಯಲ್ಲಿ ನೆರೆಯಲಿಕ್ಕಿರುವ ವೀರಶೈವಮಹಾಸಭೆಗೆ ಅಧ್ಯಕ್ಷರನ್ನು ಚುನಾಯಿಸುವ ವಿಷಯವಾಗಿಯೂ ಮಹಾಸಭೆಯಲ್ಲಿ ಚರ್ಚಿಸಲ್ಪಡತಕ್ಕ ಮಹತ್ವವಾದ ವಿಷಯಗಳ ವಿಚಾರವಾಗಿಯೂ ಬಳ್ಳಾರಿಜಿಲ್ಲಾ ಕೂಡ್ಲಿಗಿಯ ವೀರಶೈವತರುಣಸಂಘದವರು ತಾ|| 13-10-26 ರಲ್ಲಿ ಲೋಕಲ್ ಬೋರ್ಡು ಪ್ರೆಸಿಡೆಂಟರಾದ ಮ|| ತಂ|| ಕೊಟ್ರಬಸಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗೆ ಕಾಣಿಸಿರುವ ಸೂಚನೆಗಳನ್ನು ಮಹಾಸಭೆಯ ಸಬ್‌ಜಕ್ಟು ಕಮಿಟಿಯವರಿಗೆ ಕಳುಹಿಸಬೇಕೆಂದು ನಿರ್ಧಾರವಾಯಿತು.—(1) ಶ್ರೀಮದ್ದಕ್ಷಿಣಕಾಶೀ ಚೌಡಯ್ಯದಾನಪುರಸಂಸ್ಥಾನದ ಪಟ್ಟಾಧ್ಯಕ್ಷರಾದ ಶ್ರೀವಿರೂಪಾಕ್ಷ ಒಡೆಯರವರು ಈ ವರ್ಷದ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಸರ್ವ ವಿಷಯದಲ್ಲೂ ಅರ್ಹರಿರುತ್ತಾರೆ. ಸಮಾಜಸೇವೆಗಾಗಿ ಸ್ವಾರ್ಥತ್ಯಾಗಮಾಡಿದ ಈ ಪುಣ್ಯಮೂರ್ತಿಗಳ ವಿಷಯದಲ್ಲಿ ವೀರಶೈವ ಸಮಾಜವು ತುಂಬಾ ಋಣಿಯಾಗಿರುವುದು. (2) ಮಹಾಸಭೆಯು ಜರುಗುವ ಕಾಲಕ್ಕೆ ಮಹಿಳಾಪರಿಷತ್ತನ್ನೂ, ವೀರಶೈವ ವಿದ್ಯಾರ್ಥಿಗಳ ಸಮ್ಮೇಳನವನ್ನೂ ವಿದ್ಯಾವರ್ಧಕಸಂಘಗಳನ್ನೂ, ಪ್ರತಿನಿಧಿಗಳ ಸಮ್ಮೇಳನವನ್ನೂ ನಡೆಸಲು ತಕ್ಕ ಏರ್ಪಾಟುಗಳನ್ನು ಮಾಡಬೇಕು. (3) ಬಲಾತ್ಕಾರ ವಿದ್ಯಾಭ್ಯಾಸವಿಧಿಯನ್ನು ಅನುಷ್ಠಾನಕ್ಕೆ ತಂದು ತನ್ಮೂಲಕ ವೀರಶೈವರಲ್ಲಿ ವಿದ್ಯಾಪ್ರಸಾರಣೆ ಮಾಡಿದ ಪುಣ್ಯಕ್ಕೆ ಭಾಗಿಗಳಾಗಬೇಕೆಂದು ಕರ್ನಾಟಕನಾಡಿನಲ್ಲಿ ಎಲ್ಲಾ ಲೋಕಲ್ ಬೋರ್ಡುಗಳಿಗೂ ವಿನಂತಿಮಾಡುವದಲ್ಲದೆ ಪ್ರೌಢವಿದ್ಯಾಭ್ಯಾಸಕ್ಕೆ ಹೋಗುವ ನಮ್ಮ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀಯನ್ನು ಮಾಫಿಮಾಡಬೇಕೆಂತಲೂ, ಕಲಾನೈಪುಣ್ಯವನ್ನು ಪಡೆಯಲು ಪಾಶ್ಚಾತ್ಯದೇಶಗಳಿಗೆ ಹೋಗಲಿಚ್ಛಿಸುವ ಯೋಗ್ಯವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ (ಸರ್ಕಾರೀವೇತನ) ಕೊಡುವಂತೆಯೂ ಸರ್ಕಾರದವರನ್ನು ಪ್ರಾರ್ಥಿಸಬೇಕು. (4) ಗೋವಧೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ಶಾಸನವನ್ನು ಜಾರಿಯಲ್ಲಿ ತರಬೇಕೆಂದು ಕಾಯಿದೆಮಂಡಳದವರಿಗೆ ವಿನಂತಿಮಾಡಬೇಕು. (5) ನಿಜಾಂ ರಾಜ್ಯದಲ್ಲಿರುವ ಕರ್ನಾಟಕಭಾಗವನ್ನು ಬಿಡಿಸಿಕೊಂಡು ಕರ್ನಾಟಕಏಕೀಕರಣದ ವಿಚಾರದಲ್ಲಿ ಕಾಂಗ್ರೆಸ್ಸಿಗೆ ಸಹಾಯಮಾಡಿ ಕರ್ನಾಟಕವನ್ನು ಒಂದು ಸ್ವತಂತ್ರ ಪ್ರಾಂತವನ್ನಾಗಿ ಮಾಡಲು ಪ್ರಯತ್ನಿಸಬೇಕು. (6) ವೀರಶೈವತರುಣರು ಸೈನಿಕಶಿಕ್ಷಣಹೊಂದಲು ಉತ್ತೇಜನಕೊಡಬೇಕು. (7) ಕರ್ನಾಟಕಭಾಷಾಸೇವೆಯನ್ನು ಮಾಡುತ್ತಲಿರುವ ವೃತ್ತಪತ್ರಿಕಾಕರ್ತರಿಗೂ ಪಂಡಿತರುಗಳಿಗೂ ಉತ್ತೇಜನಕೊಡಬೇಕು. (8) ಸಮಾಜದ ಅನೈಕ್ಯಕ್ಕೂ ಅಶಾಂತಿಗೂ ಹೇತುವಾಗಿರುವ ಗುರುವರ್ಗ ಯತಿವರ್ಗದವರ ಅಂತಃಕಲಹಗಳನ್ನು ಮತ್ತು ಸಾಧುವೀರಶೈವರಿಗೂ ಪಂಚಾಚಾರಪಂಗಡದವರಿಗೂ ಉಂಟಾಗಿರುವ ಪರಸ್ಪರ ದ್ವೇಷಾಸೂಯೆಗಳನ್ನು ಶಮನಮಾಡುವ ಉದ್ದೇಶದಿಂದ ನಿಷ್ಪಕ್ಷಪಾತಿಗಳಾದ ಸದ್ಗೃಹಸ್ಥರ ಒಂದೆರಡು ಕಮಿಟಿಗಳನ್ನೇರ್ಪಡಿಸಿ ತನ್ಮೂಲಕ ಕ್ಲುಪ್ತಕಾಲಾವಧಿಯಲ್ಲಿ ಸ್ಥಲಾಂತರಗಳಲ್ಲಿ ವಿಚಾರಣೆ ನಡೆಯಿಸಿ ಅವರಿಂದ ವರದಿಯನ್ನು ತರಿಸಿಕೊಂಡು ಮುಂದಿನ ಮಹಾಸಭೆಯಲ್ಲಿ ಪರಿಶೀಲನೆಗಾಗಿಡತಕ್ಕದ್ದು. (9) ನಮ್ಮ ಧಾರ್ಮಿಕಸಂಸ್ಥೆಗಳಲ್ಲಿ ಸನಾತನಕಾಲದಲ್ಲಿದ್ದ ಬಿಕ್ಕಟ್ಟು ಸಡಿಲಹೋಗಿರುವದರಿಂದ ಇವುಗಳ ವಿಷಯದಲ್ಲಿ ತಾತ್ಕಾಲಕ್ಕೆ ಆವಶ್ಯಕವಾದ ಸುಧಾರಣೆಗಳುಂಟಾಗುವವರೆಗೂ ಧರ್ಮಶ್ರದ್ಧೆಯುಂಟಾಗಲಾರದು ಮತ್ತು ಧರ್ಮಶ್ರದ್ಧೆಯಿಲ್ಲದ ಹೊರತು ಸಮಾಜವು ಸರ್ವತೋಮುಖವಾಗಿ ಸುಧಾರಿಸಲಾರದು. ಆದುದರಿಂದ ಮಠಮಹಂತ ಮೊದಲಾದ ಧಾರ್ಮಿಕಸಂಸ್ಥೆಗಳಿಗೂ ಮಹಾಸಭೆಗೂ ನಿಕಟಸಂಬಂಧವನ್ನು ಕಲ್ಪಿಸಿ ಒಂದು ಸ್ಕೀಮ್ ತಯಾರುಮಾಡಿಸಿ ಮುಂದಿನ ವರ್ಷದ ಮಹಾಸಭೆಯಲ್ಲಿ ಚರ್ಚೆಗೆ ಇಡಬೇಕು. (10) ಮಹಾಸಭೆಗೆ ಅಂಗವಾಗಿ ಧಾರ್ಮಿಕಪರಿಷತ್ತನ್ನು ಏರ್ಪಡಿಸಿ ಅದರಲ್ಲಿ ಪಂಡಿತರುಗಳು ಮತಧರ್ಮಸಂಬಂಧವಾದ ತೊಡಕಿನ ವಿಚಾರಗಳನ್ನು ಚರ್ಚಿಸಿ ಮಹಾಸಭೆಯ ಅಂಗೀಕಾರಕ್ಕೆ ಒಪ್ಪಿಸುವದಲ್ಲದೆ ಪ್ರಾಚೀನಗ್ರಂಥಗಳ ಶೋಧನೆ ಮತ್ತು ಅವುಗಳ ಪ್ರಕಟನೆ ಮಾಡುವುದರ ಮೂಲಕ ಜನರಲ್ಲಿ ಧರ್ಮಜಾಗ್ರತೆಯನ್ನುಂಟುಮಾಡುವುದಕ್ಕಾಗಿ ಒಂದು ಮಾಸಪತ್ರಿಕೆಯನ್ನಾಗಲಿ ತ್ರೈಮಾಸಿಕಪತ್ರಿಕೆಯನ್ನಾಗಲಿ ಹೊರಡಿಸುತ್ತಾ ನಿರಂತರವೂ ತತ್ಪರರಾಗಿರುವಂತೆ ಮಾಡಬೇಕು. ಇದಕ್ಕೆ ತಗಲುವ ವಿಶಿಷ್ಟ ಖರ್ಚನ್ನು ಆಚಾರಪತಿಗಳು ವಹಿಸುವಂತೆ ಬಿನ್ನಹಮಾಡಿಕೊಳ್ಳಬೇಕು. (11) ಅಲ್ಲಲ್ಲಿ ಸ್ಥಾಪಿತವಾಗಿರುವ ವಿದ್ಯಾವರ್ಧಕಫಂಡುಗಳಿಂದಲೂ ಶರಣರದಾಸೋಹ ಮಠಗಳಿಂದಲೂ ಆಯವ್ಯಯದ ರಿಪೋರ್ಟುಗಳನ್ನು ತರಿಸಿಕೊಂಡು ಅವುಗಳ ಚಾಲಕರನ್ನು ಅಭಿನಂದಿಸುವದಲ್ಲದೆ ಅವುಗಳ ಸುವ್ಯವಸ್ಥೆಯಬಗ್ಗೆ ತಕ್ಕ ಸೂಚನೆಗಳನ್ನು ಕೊಡಬೇಕು. (12) ಆಚಾರ ಮಠಾಧಿಪತಿಗಳೂ ನಿರಂಜನಮೂರ್ತಿಗಳೂ ಮಹಾಸಭೆಯ ವಿಷಯದಲ್ಲಿ ಸುಪ್ರಸನ್ನರಾಗಿ ಅದರ ಕಾರ್ಯಗಳಿಗೆ ನೆರವಾಗುವದಲ್ಲದೆ ಪ್ರತಿ ವರ್ಷವೂ ತಂತಮ್ಮ ಆದಾಯವೆಚ್ಚದ ರಿಪೋರ್ಟನ್ನು ಮಹಾಸಭೆಗೆ ಕಳುಹಿಸಿಕೊಡಬೇಕಾಗಿ ಬಿನ್ನಹಮಾಡಿಕೊಳ್ಳಬೇಕು.

ತ. ಸಂಘದ ಸೆಕ್ರೆಟರಿ.

ಹಾರ್ನಹಳ್ಳಿಯಲ್ಲಾದ ದಸರಾಮಹೋತ್ಸವ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳ ಸವಾರಿಯು ಹಾರ್ನಹಳ್ಳಿಯ ಭಕ್ತವೃಂದದ ಪ್ರಾರ್ಥನೆಯಮೇರೆಗೆ ಇಲ್ಲಿಗೆ ದಯೆಮಾಡಿಸಿ ಶ್ರಾವಣಮಾಸದಲ್ಲಿ ವೇ|| ಪಂಡಿತ ವೃಷಭಲಿಂಗಶಾಸ್ತ್ರಿಗಳಿಂದ ರೇವಣಸಿದ್ಧಪುರಾಣಶ್ರವಣವನ್ನು ನಡೆಸಿ ಭಕ್ತಸಂಕುಲವನ್ನು ಪಾವನಮಾಡಿದ್ದಲ್ಲದೆ ಪುರವಾಸಿಗಳ ಪ್ರಾರ್ಥನೆಯಮೇರೆಗೆ ದಸರಾಮಹೋತ್ಸವವನ್ನು ಪದ್ಧತಿಯಪ್ರಕಾರ ಆಶ್ವಯುಜ ಶು|| ೧ ಮೊದಲ್ಗೊಂಡು ೯ರವರೆಗೆ ಅಲಂಕಾರಶೋಭಿತವಾಗಿದ್ದ ಗಜಾಶ್ವ ಉತ್ಸವಾದಿಗಳನ್ನು ನಡೆಯಿಸಿ ಪ್ರತಿದಿನ ಸಾಯಂಕಾಲ ಮಹಾಪಾದವು ಸರ್ವಾಲಂಕಾರಶೋಭಿತವಾದ ಸಿಂಹಾಸನವನ್ನೇರಿ ನೆರೆದ ಭಕ್ತವೃಂದಕ್ಕೆ ಮಾನವಜನ್ಮ, ವೀರಶೈವಧರ್ಮ, ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರ, ಲಿಂಗಾಂಗಸಾಮರಸ್ಯ, ಜಗದ್ಗುರು ಪಂಚಾಚಾರ್ಯರು ಮೊದಲಾದ ಮಹತ್ವದ ವಿಷಯಗಳಮೇಲೆ ಅಮೌಲ್ಯವೂ, ಶ್ಲಾಘ್ಯವೂ, ತರ್ಕಯುಕ್ತವೂ, ಸಕಲ ನಿಗಮಾಗಮಸಾರಭೂತವೂ ಆದ ಭಾಷಣವನ್ನು ಅಮೃತಮಯವಾಣಿಯಿಂದ ಅಪ್ಪಣೆ ಕೊಡಿಸಿದರು ಮತ್ತು ಸಂಸ್ಥಾನಮಠದ ಏಜಂಟರಾದ ವೇ|| ರಾಘವಾಂಕಾರ್ಯ ಎಚ್. ಎಂ. ರವರ ಮತ್ತು ತುಮಕೂರಿನ ಕೀರ್ತನಕಾರ್ ವೇ|| ಬಿ. ಶಿವಮೂರ್ತಿಶಾಸ್ತ್ರಿಗಳ ಕೀರ್ತನ ಭಾಷಣಗಳಾಗುತ್ತಿದ್ದುವು. ನವಮಿಯದಿವಸ ಆಯುಧಪೂಜಾದಿಗಳೂ, ಉತ್ಸವಾದಿಗಳೂ ಯಾವತ್ತು ಉತ್ತಮರೀತಿಯಿಂದ ನಡೆದವು. ಈ ದಿವಸ ಮಹಾಸ್ವಾಮಿಗಳವರ ಉತ್ಸವವನ್ನು ಕಾಣ್ಬಾರನೋಡಿ ಮನದಣಿಯ ಆನಂದಿಸಲಿಕ್ಕೆ ಇಂತಹ ಹಳ್ಳಿಯಲ್ಲಿ ಹತ್ತು ಹನ್ನೆರ್ಡು ಸಹಸ್ರಜನರು ನೆರೆದಿದ್ದರೆಂದರೆ ಹೇಳುವುದೇನು ? ಈ ಊರು ಹುಟ್ಟಿದಂದಿನಿಂದ ಇಂತಹ ಉತ್ಸವವಾಗಿರಲಿಲ್ಲವೆಂದು ಕಣ್ಣಿಂದ ಕಂಡ ಪ್ರತಿಯೊಂದು ವ್ಯಕ್ತಿಯೂ ಅನ್ನುತ್ತಿತ್ತು. ಹಾವೇರಿ, ಶಿವಮೊಗ್ಗ, ಬೀರೂರು, ದಾವಣಗೆರೆ, ಹರಿಹರ, ಸಾಗರ, ತೀರ್ಥಹಳ್ಳಿ, ನ್ಯಾಮತಿ, ಬೆಂಗಳೂರು, ತುಮಕೂರು ಮೊದಲಾದೆಡೆಗಳಿಂದ ಬಂದು ನೆರೆದಿದ್ದ ಸ್ಥಳ ಪರಸ್ಥಳಗಳ ಮಹಾಜನರಿಗೆ, ಸಂಸ್ಥಾನಮಠದಿಂದಲೂ, ಊರಿನವರಿಂದಲೂ ಊಟದ ಏರ್ಪಾಟು ಸುವ್ಯವಸ್ಥಿತವಾಗಿ ನಡೆದಿದ್ದಿತು. ಸಿಂಹಾಸನಾರೋಹಣವಾದಕೂಡಲೆ ತುಮಕೂರಿನ ಬಿ|| ಶಿವಮೂರ್ತಿಶಾಸ್ತ್ರಿಗಳು ಹಾಗೂ ನ್ಯಾಮತಿ ಶಾಂತವೀರಪ್ಪನವರು ಬರೆದುಕೊಂಡು ಬಂದಿದ್ದ "ಪಂಚರತ್ನಾವಳೀ ರೇಣುಕಪ್ರಬಂಧ" ಎಂಬ ಕವನಗಳನ್ನು ಓದಿ ಮಹಾಸನ್ನಿಧಿಗೆ ಒಪ್ಪಿಸಿದರು. ಇದಾದ ಮರುಕ್ಷಣವೇ ಸಂಸ್ಕೃತ, ಹಿಂದಿ, ಮರಾಟಿ, ಬಂಗಾಲಿ, ತೆಲುಗು, ಕರ್ನಾಟಕಾದಿಭಾಷಾವಿಶಾರದರೂ ಸಂಗೀತಶಾಸ್ತ್ರ ನಿಷ್ಣಾತರೂ ಆದ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಸುಸ್ವರದಿಂದ ಪಂಚಾಚಾರ್ಯಸ್ತೋತ್ರರೂಪಿನ ಸಂಸ್ಕೃತ ಶ್ಲೋಕವನ್ನು ಹಾಡಿ ಮಹತ್ವದ ಭಾಷಣವನ್ನು ಸುಲಲಿತವಾದ ಕನ್ನಡಭಾಷೆಯಲ್ಲಿ ಹೃದಯಂಗಮವಾದ ಶೈಲಿಯಲ್ಲಿ ಅಪ್ಪಣೆಕೊಡಿಸಿದರು. ಆ ವಿಖ್ಯಾತ ವೀರಸಿಂಹಾಸನದಲ್ಲಿ ವಿಜಯದಶಮಿ ಸುಮುಹೂರ್ತದಲ್ಲಿ ಆವೇಶಪೂರ್ವಕವಾಗಿ ಅಪ್ಪಣೆಕೊಡಿಸಿದ ವಿಷಯವು ಬಹು ಮಹತ್ವವೂ ಸರ್ವಜನಸಮಾದರಣೀಯವೂ ಆಗಿದ್ದಿತು. ಅದರ ಸಾರಾಂಶವನ್ನು ಸುಹೃದ ಕರ್ನಾಟಕಬಾಂಧವರ ಸಲುವಾಗಿ ಇಲ್ಲಿ ಸೂಚಿಸಿದೆ.—"ಜಗದ್ಗುರು ರೇಣುಕಾಚಾರ್ಯರ ಪ್ರೇರಣೆಯಮೇರೆಗೆ ವೀರಶೈವಮತಸುಧಾರಣೆಗೂ, ಸಂಸ್ಕೃತ ಕರ್ನಾಟಕಾದಿ ಭಾಷೋದ್ಧಾರಕ್ಕೋಸ್ಕರವಾಗಿಯೂ ನಾವು ಈ ಪೀಠವನ್ನು ಅಲಂಕರಿಸಿದ್ದಾಗಿದೆ. ಸಮಾಜದ ಏಕಮತ್ಯ ನಾಗರೀಕತೆ ಮುಂತಾದುವುಗಳನ್ನು ಬೆಳೆಯಿಸುವುದೇ ನಮ್ಮ ಮುಖ್ಯೋದ್ದೇಶವಾಗಿದೆ. ಶ್ರೀ ಬಸವೇಶ್ವರಾದಿಗಳನ್ನು ನಿಂದಿಸುವವರಿಗೆ ಪೀಠಾಚಾರ್ಯರು ಪ್ರೋತ್ಸಾಹಕೊಡುತ್ತಾರೆಂಬ ನಿರಾಧಾರವಾದ ವಾರ್ತೆ ಸಮಾಜದಲ್ಲಿ ಪ್ರಸರಿಸಿದಂತೆ ಕಾಣುತ್ತದೆ. ನಿಂದೆಯು ಬಹು ಪಾಪಕರವಾದದ್ದು. ಆದ್ದರಿಂದ ಯಾವದೊಂದು ವ್ಯಕ್ತಿಯೂ ಈರೀತಿ ನಿಂದ್ಯವಾದ ಮಾತುಗಳನ್ನು ಆಡತಕ್ಕದ್ದು ಸರಿಯಾದ್ದಲ್ಲ. ಸಮಾಜದಲ್ಲಿ ವಿದ್ಯಾಪ್ರಚಾರವೂ ಸೌಖ್ಯಪ್ರಚಾರವೂ ಆಗಬೇಕೆಂಬುದೇ ನಮ್ಮ ಪರಮಧ್ಯೇಯವು. ಕೈ. ನ್ಯಾಮತಿ ಪಂಡಿತ ಪ್ರಭಯ್ಯನವರು ಬರೆದು ಮುಗಿಸಿದ್ದ ಕರ್ನಾಟಕ ಮಹಾನಿಘಂಟನ್ನು ಅವರ ಬಂಧುಗಳು ನಮಗೆ ಅರ್ಪಿಸಿದ್ದಾರೆ. ಆ ಮಹಾಗ್ರಂಥವನ್ನು ಶೀಘ್ರದಲ್ಲಿಯೇ ಪ್ರಕಟಿಸಿ [illegible]ಗರ ಮುಂದಿಡಲು ಬೇಕಾಗುವ ಸಮರ್ಥರಾಗಿದ್ದಾರೆ. ಹಾರ್ನಹಳ್ಳಿಯ ಭಕ್ತರುಗಳ ಭಕ್ತಿಪೂರ್ವಕವಾದ [illegible] [illegible] [illegible] [illegible]ಗೊಂಡಿದ್ದಾರೆ. [illegible]

ಲಕ್ಷಕ್ಕಿಂತ ಮಿಗಿಲಾದ್ದೆಂದು ಭಾವಿಸಲ್ಪಟ್ಟಿದೆ. ನಿಮಗೆ ಇತೋಪ್ಯತಿಶಯವಾದ ಅಭಿವೃದ್ಧಿಯಾಗಲೆಂದು ಸಹ ಹರ್ಷದಿಂದ ಆಶೀರ್ವದಿಸಿದ್ದೇವೆ. ಈ ಸಲ ಈ ವಿಜಯದಶಮಿಯ ಮಹೋತ್ಸವವು ನಮ್ಮ ಪುಣ್ಯಭೂಮಿಯ ಮಹಾಪ್ರಭುಗಳಾದ ರಾಜರ್ಷಿ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ವಿಜಯಸೂಚಕವೆಂದು ನೀವೆಲ್ಲರೂ ಭಾವಿಸಿ ಜಯಘೋಷದಿಂದ ಹಾರೈಸಿರೆಂದು ಮಹಾಸ್ವಾಮಿಗಳವರು ಅಪ್ಪಣೆಕೊಡಿಸಿದರು. ತಾ|| 17ರಲ್ಲಿಯೂ ದರ್ಬಾರ್ ನಡೆಯಿತು. ಮಹಾಸನ್ನಿಧಿಯ ಮಹತ್ವದ ಭಾಷಣವಾದಮೇಲೆ ಮ|| ಗಳಾದ ಮಂಡಿಘಟ್ಟದ ಬಸವಪ್ಪಗೌಡರವರು, ದುಮ್ಮಿ ಗುರುಶಾಂತಪ್ಪನವರು, ಹೊಸಂತಿ ಮಹಂತಪ್ಪ, ಬಿ.ಎ. ಯವರು ವೇ|| ಏಜಂಟ್ ರಾಘವಾಂಕಾರ್ಯರವರು, ವೇ|| ಪಂಡಿತ ಓಂಕಾರಶಾಸ್ತ್ರಿಗಳು, ವೇ|| ಬಿ. ಶಿವಮೂರ್ತಿಶಾಸ್ತ್ರಿಗಳವರು, ವೇ|| ಫಲಾಹಾರಸ್ವಾಮಿಗಳು ಮೊದಲಾದವರ ಉಪನ್ಯಾಸಗಳಾದುವು. ಜಗದ್ಗುರುಭಕ್ತ.

ಅಮಾತ್ಯರ ಆಗಮನದ ನಿರೀಕ್ಷಣೆಯೂ, ತತ್ಸಂಬಂಧವಾದ ಪೂರ್ವಸಿದ್ಧತೆಯೂ.

ನಮ್ಮ ಸಂಸ್ಥಾನದ ಮಿರ್ಜಾ ದಿವಾನ್ ಸಾಹೇಬರವರು ನಮ್ಮ ಮಲೆನಾಡುಪ್ರಾಂತಕ್ಕೆ ಬರುವ ನವಂಬರ್ ತಿಂಗಳಲ್ಲಿ ದಯಮಾಡಿಸುತ್ತಾರೆಂಬ ವರ್ತಮಾನವುಂಟಾಗಿರುವುದು ಸರಿಯಷ್ಟೆ. ಈಗಾಗಲೇ ರಸ್ತೆಗಳ ತಯಾರಿಯ ಕೆಲಸವು ಒಳ್ಳೇ ಉತ್ಸಾಹದಿಂದಲೂ ತುಂಬಾ ಚಟುವಟಿಕೆಯಿಂದಲೂ ನಡೆಯುತ್ತಿರುವುದು. ಪರಂತು ದಿವಾನ್ ಸಾಹೇಬರವರು ದಯಮಾಡಿಸುವ ದಿಟವಾದ ದಿನವೊಂದು ಗೊತ್ತಾದಲ್ಲಿ, ತಾಲುಮರಗಳೂ, ಮೈಲಿಕಲ್ಲುಗಳೂ, ತೋರಿಗಳೂ, ದೀಪದಕಂಬಗಳೂ ಬಗೆಬಗೆಯ ಸುಣ್ಣಬಣ್ಣಗಳಿಂದ ಬಳಿಯಲ್ಪಟ್ಟು ಕಣ್ಣಿಗೆ ಸೊಗಸಾಗಿ ಕಾಣುವಂತೆ ಅಲಂಕಾರಗೊಳ್ಳಬಹುದು. ಎಷ್ಟೋ ದಿನಗಳಿಂದ ನೆಲಹಿಡಿದು ಕೂತಿದ್ದ ಹಳ್ಳ ದಿಣ್ಣೆ ಕೊರಕಲುಗಳೆಲ್ಲಾ ಸರಿಮಾಡಿಸಲ್ಪಟ್ಟು ಹೊಸಬರಿಗೆ ಯಾವಾಗಲೂ ಹೀಗೆಯೇ ಇರಲಿಕ್ಕೆ ಸಾಕೆಂಬುವಷ್ಟರಮಟ್ಟಿಗೂ ಪಾಡಿಬಟ್ಟೆಗಳು ಸರಿಯಾಗಬಹುದು. ಎಷ್ಟೋ ದಿನಗಳಿಂದ ಎಷ್ಟೋ ದಿವಾನರ ಬರೆಯಟ್ಟರೂ ಆಗದೆ ನಿಂತಿದ್ದ ಕೆಲಸಗಳು ಹೀಗೆ ತಮಗೆ ತಾವೇ ಆಗುವಂತಾದುದು, ಎಲ್ಲರ ಸುಸ್ಮಿತವೇ ಆದರೂ ಮೋಟಾರು ಕಂಪೆನಿಗಳಿಷ್ಟಿನವರಿಗೆ ಮಾತ್ರ ಹೆಚ್ಚಿನ ಸುದೈವವೆಂತಲೇ ಹೇಳಬಹುದು. ಇರಲಿ, ಇದರಂತೆ ನಾನಾ ಇಲಾಖೆಗಳಲ್ಲೂ ಕಾರ್ಯಕಲಾಪಗಳು ನಡೆಯುತ್ತಲಿದ್ದು ಎಷ್ಟೋ ದಿನಗಳಿಂದ ಮೂಲೆಹಿಡಿದು ಮಲಗಿದ್ದ ಕಾಗದಪತ್ರಗಳು ಹೊರಗೆ ಬರಹತ್ತಿರುವವು. ಎಷ್ಟೋ ದಿನಗಳಿಂದ ಮುಂದುಸಾಗದೆ ಮುಗ್ಗುರಿಸಿದ್ದ ಎಷ್ಟೋ ಕೆಲಸಗಳು ಮುಂಬರಿಯತೊಡಗಿರುವವು. ಶಾಲೆಸತ್ರಗಳಲ್ಲಿ ಸಚಿವರ ಗುಣಕಥನರೂಪವಾದ ಪದಪದ್ಯಗಳು, ಬಾಲಬಾಲಿಕೆಯರಿಗೆ ಕಲಿಸಲ್ಪಡುತ್ತಿರುವುವು. ತಾವಿದ್ದ ಕಡೆಯಲ್ಲೇ ಸಚಿವರ ಸಂದರ್ಶನವಾಗುವುದೆಂಬ ಹರುಷವು ಕೃಷಿಕರಿಗುಂಟಾಗಿರುವುದು. ಮಂತ್ರಿವರ್ಯರಾಗಮನವು ನಮ್ಮ ಪ್ರಾಂತಕ್ಕೆ ಆಗಾಗ್ಗೆ ಆಗುತ್ತಲೇ ಇದ್ದರೂ ಆಗಬೇಕಾದಷ್ಟು ಪ್ರಯೋಜನಗಳು ಮಾತ್ರ ಆಗಿರುವದಿಲ್ಲವೆಂಬುದನ್ನು ಮನಗಂಡು ಮುದುಕರಾಗಿರುವ ಜನರು ಸಹ ಹೊಸದಿವಾನರ ದರುಶನಕ್ಕಾಗಿ ಕಾದುಕೊಂಡಿರುವರು. ಹೀಗೆ ಅಮಾತ್ಯರ ಆಗಮನವು ಬಗೆಬಗೆಯ ಜನರಿಂದ ಬಗೆಬಗೆಯಾಗಿ ನಿರೀಕ್ಷಿಸಲ್ಪಟ್ಟಿರುವಂತೆಯೇ ಕೆಲಕೆಲವರ ಚಿತ್ತವೃತ್ತಿಯಲ್ಲೂ ಕೆಲಕೆಲವು ವಿಧವಾದ ಬದಲಾವಣೆಗಳಾಗಿರಲಿಕ್ಕೂ ಬೇಕು. ಹೇಗೆಂದರೆ—ಸ್ಕೂಲು ಹುಡುಗರ ಮನಸ್ಸಿನಲ್ಲಿ ದಿವಾನರವರು ಬಂದಾಗ್ಗೆ ತಮಗೆ ಬಿಡಾಯಿಗೆ ದುಡ್ಡು ಸಿಕ್ಕಬಹುದೆಂಬ ಸಂತೋಷವುಂಟಾಗಿರಬಹುದು. ಉಪಾಧ್ಯಾಯರ ಮನಸ್ಸಿನಲ್ಲಿ ಕೇಳಿದ ಪ್ರಶ್ನೆಗೆ ಹುಡುಗರು ಉತ್ತರ ಕೊಡದೆ ಹೋದರೆ ತಮಗೆಲ್ಲಿ ಕೆಟ್ಟಹೆಸರು ಬರುವುದೋ ಎಂಬ ಸಂಶಯವುಂಟಾಗಿರಬಹುದು. ಹಳ್ಳಿಗಾಡಜನರ ಮನಸ್ಸಿನಲ್ಲಿ ದಿವಾನ್ ಸಾಹೇಬರು ಪರಿವಾರಪರಿಜನರಿಂದಾವೃತರಾಗದೆ ಗ್ರಾಮಾಂತರಗಳಿಗೂ ದಯಮಾಡಿಸುವಂತಾಗಿ ನಿಮ್ಮ ಕಷ್ಟಕಾರ್ಪಣ್ಯಗಳೇನು, ನಿಮ್ಮ ಉದ್ಯೋಗವ್ಯವಹಾರಗಳಿಗೆ ಯಾವ್ಯಾವ ತೊಂದುಕೊರತೆಗಳುಂಟು, ವ್ಯವಸಾಯಕ್ಕೆ ತಕ್ಕಷ್ಟು ನೀರಾವರಿಯ ಸೌಕರ್ಯವುಂಟೆ, ಕೆರೆಕಟ್ಟೆಗಳಿಗೆ ಸಂಬಂಧಪಟ್ಟ, ನಿಮ್ಮ ಅಹವಾಲುಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಲಕ್ಷ್ಯಕೊಡುತ್ತಿದ್ದಾರೆಯೆ, ವೈದ್ಯ, ವಿದ್ಯಾಭ್ಯಾಸ ಪೋಸ್ಟು ಮೊದಲಾದುವುಗಳ ಬಗ್ಗೆ ಸರಿಯಾದ ಅನುಕೂಲತೆಯುಂಟೆ, ಪೋಲೀಸ್ ಪಾರೆಸ್ಟ್ ಮೊದಲಾದ ಇಲಾಖೆಗಳ ನೌಕರರಿಂದ ನಿಮಗೇನಾದರೂ ತೊಂದರೆಯಾಗುತ್ತಿರುವುದುಂಟೆ? ಎಂಬಿತ್ಯಾದಿಯಾಗಿ ತನಿಖೆಮಾಡುವಂತಾದಲ್ಲಿ ತಮ್ಮ ಕಷ್ಟಸುಖಗಳನ್ನೆಲ್ಲಾ ಹೇಳಿಕೊಂಡೇವೆಂಬ ಕುತೂಹಲವುಂಟಾಗಿರಬಹುದು. ಇದರಂತೆಯೇ ಅಧಿಕಾರಿ ಜನರ ಮನಸ್ಸಿನಲ್ಲೂ ಬಗೆಬಗೆಯ ಭಾವನೆಗಳುಂಟಾಗಿರಬೇಕು. ಉದಾಹರಣೆಗಾಗಿ—ಯಾವುದೊಂದು ಸ್ಟೇಷನ್ ಇನ್ಸ್ಪೆಕ್ಷನ್ ಕಾಲಕ್ಕೆ ಈ ಸ್ಟೇಷನ್ ಸರಹದ್ದು ಎಲ್ಲಿಯವರೆಗಿದೆ, ಖಾನೆಸುಮಾರಿ ಬಿಲ್ಲರುಗಳ ಸಂಖ್ಯೆ ಎಷ್ಟು? ಎಂಬಿತ್ಯಾದಿ ಸಾಮಾನ್ಯವಾಗಿ ತನಿಖೆಯು ನಡೆಯುವುದರಬದಲು ಈ ಸ್ಟೇಷನ್ ಸರಹದ್ದಿನಲ್ಲಿ ನಡೆದ ಕನ್ನಾಕಳುವು, ದಂಗೆ, ದರೋಡೆ ಮೊದಲಾದ ಕೇಸುಗಳ ಸಂಖ್ಯೆ ಎಷ್ಟು? ಎಷ್ಟು ಕೇಸುಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಮಾಡಿಸಲ್ಪಟ್ಟಿತು? ಬಿ. ಸೀಟ್ ಕೊಟ್ಟ ಕೇಸುಗಳ ಸಂಖ್ಯೆ ಎಷ್ಟು? ಅವುಗಳೊಂದೊಂದರಲ್ಲೂ ನೀವು ಕೊಟ್ಟ ಆಧಾರವು ಸರಿಯಾದದ್ದೆಂದು ನೀವು ಹೇಗೆ ಧೃಢಪಡಿಸುವಿರಿ? ಯಾವುದೊಂದು ಸ್ಥಳದಲ್ಲಿ ಕೇಸುಗಳ ಸಂಖ್ಯೆಯು ಹೆಚ್ಚಾಗಿರಲು ಕಾರಣವೇನು? ಎಂಬಿತ್ಯಾದಿಯಾಗಿ ಸೂಕ್ಷ್ಮರೀತಿಯಿಂದಲೂ ತನಿಖೆಯು ನಡೆಯುವಂತಾದಲ್ಲಿ ತಮ್ಮ ಲೋಪದೋಷಗಳಲ್ಲಿ (ಲೋಪದೋಷಗಳಿದ್ದರೆ ಮಾತ್ರ) ಬಯಲಿಗೆ ಬರುವುವೋ ಎಂಬ ಭಯವು ತತ್ಸಂಬಂಧಪಟ್ಟವರಿಗೆಲ್ಲಾ ಆಗಿರಲಿಕ್ಕೇ ಬೇಕು. ಹೀಗೆಯೇ ವಾಸ್ತವಿಕರೂ ನ್ಯಾಯಶೀಲರೂ ಪ್ರಭುಸೇವಾನಿಷ್ಠರೂ ಪ್ರಜಾನುರಾಗಿಗಳೂ ಆಗಿರತಕ್ಕ ಅಧಿಕಾರಿಗಳಿಗೆ ಸಂತಸ ಸಮಾಧಾನ ಧೈರ್ಯ ಸ್ಥೈರ್ಯಗಳು ವೃದ್ಧಿಯಾಗಿರಲಿಕ್ಕೂ ಬೇಕು. ಹೀಗೆ ದಿವಾನ್ ಸಾಹೇಬರವರ ಬರುವಿಕೆಯಬಗ್ಗೆ ಬಗೆಬಗೆಯ ಜನರು ಬಗೆಬಗೆಯ ಭಾವನಾಸಹಿತರಾಗಿ ನಿರೀಕ್ಷಿಸಿರುವುದೇನೋ ಸರಿಯೆ. ಆದರೆ ದಿವಾನರಂಥಾ ಭಾರಿಹುದ್ದೇದಾರರ ಬರಹೋಗುವಿಕೆಯೆಂದರೆ ಸಾಮಾನ್ಯವಾದದ್ದಲ್ಲ. ಅವರ ಇಂಥಾ ಒಂದೊಂದು ಸಂಚಾರಕ್ಕೂ ಅವರ ಅಮೌಲ್ಯವಾದ ಎಷ್ಟೋ ವೇಳೆಯೂ ಸರ್ಕಾರದ ಹೇರಳಹಣವೂ ವ್ಯಯವಾಗುತ್ತವೆಂದು ಬೇರೆ ಹೇಳಬೇಕಾಗಿಯೇ ಇಲ್ಲ. ಪರಂತು ಹೀಗೆ ಅರ್ಥಕಾಲಗಳ ವ್ಯಯವಾಗುತ್ತಿದ್ದರೂ ಅವರ ಈತರದ ಸಂಚಾರಕ್ಕಿರುವ ಮುಖ್ಯೋದ್ದೇಶಗಳು ಮಾತ್ರ ಒಳ್ಳೆ ಮಹತ್ವಹಾಗೂ ಮಾನ್ಯವಾದವುಗಳಿರುತ್ತವೆ ಎಂದು ಹೇಳಲು ಯಾರಿಗೂ ಸಂದೇಹವಾಗದು. ಈ ಮುಖ್ಯೋದ್ದೇಶವೆಂದರೆ, ತಮ್ಮ ಆಡಳಿತಕ್ಕೆ ಒಳಪಟ್ಟ ಅಧಿಕಾರಪರಂಪರೆಯಲ್ಲಿ ಕ್ರಮಬದ್ಧತೆಯೂ, ನ್ಯಾಯಶೀಲತೆಯೂ, ರಾಜಭಕ್ತಿಯೂ, ಪ್ರಜಾಪ್ರೇಮವೂ, ದರ್ಪವೂ, ದಕ್ಷತೆಯೂ ಸ್ಥಿರವಾಗಿ ನೆಲೆಗೊಂಡು ಸರಿಯಾಗಿ ಸಾಗಿವೆಯೇ ಅಥವಾ ಇತ್ಯಾದಿಗಳಲ್ಲೇನಾದರೂ ಶೈಥಿಲ್ಯತ್ವವಕಾಶವಾಗಿ ಪ್ರಭುದ್ರೋಹ, ಪ್ರಜಾಹಿಂಸೆ, ಅಲಕ್ಷ್ಯ, ಅನಾದರ, ಅಶ್ರದ್ಧೆ, ಅಹಂಕಾರ, ಅವಿಚಾರತ್ವಾದಿಗಳೇನಾದರೂ ನಡೆಯತೊಡಗಿವೆಯೇ? ಎಂಬವುಗಳನ್ನು ಮತ್ತು ಪ್ರಜೆಗಳಿಗಿರತಕ್ಕ ತೊಂದುಕೊರತೆ ಕಷ್ಟಕಾರ್ಪಣ್ಯಗಳೇನು, ಎಲ್ಲೆಲ್ಲಿ ಯಾವ್ಯಾವ ಸೌಲಭ್ಯ ಸೌಕರ್ಯಗಳನ್ನೊದಗಿಸಿಕೊಡಬೇಕಾದ್ದದೆ ಎಂಬಿತ್ಯಾದಿಗಳನ್ನೂ ಸಾಕ್ಷಾತ್ತಾಗಿ ತಿಳಿದು ಅನುಭವಮಾಡಿಕೊಳ್ಳಬೇಕೆಂಬುದೇ ಆಗಿದೆ. ಈಬಗೆಯ ಉದ್ದೇಶಗಳು ಮಹತ್ವದವಲ್ಲವೆಂದು ಯಾರೇ ಆಗಲಿ ಹೇಗೆ ಹೇಳಿಯಾರು? ಆದರೆ ಈ ವಿಶಿಷ್ಟಪ್ರಕಾರದ ಘನವಾದ ಉದ್ದೇಶಕ್ಕೆ ತಕ್ಕ ಇನ್ನೂ ಹೆಚ್ಚು ಪ್ರಯೋಜನವೂ ಸಂಚಾರಪ್ರಯುಕ್ತವಾಗಿ ವ್ಯಯವಾಗುವ ಅರ್ಥಕಾಲಗಳ ಇನ್ನೂ ಹೆಚ್ಚು ಸದುಪಯೋಗವೂ ಆಗಬೇಕಾಗಿರುವಪಕ್ಷಕ್ಕೆ ಸಮಸ್ತರಿಗೂ ಮುಂಜಾಗ್ರತೆಗೆ ಅವಕಾಶವಾಗುತ್ತಿರುವುದು ತಪ್ಪುವಂತಾಗಬೇಕೆಂದು ಮಾತ್ರ ಎಲ್ಲರಿಗೂ ಅನಿಸದಿರದು. ಎಲ್ಲರಿಗೂ ಎಲ್ಲಿಯವರಿವಿಗೂ ಮುಂಜಾಗ್ರತೆಗೆ ಅವಕಾಶವಿರುವುದೋ ಅಲ್ಲಿಯವರಿವಿಗೂ ನಗರಾವಲೋಕನಮಾಡುವಾಗ ಸಿದ್ಧಾರ್ಥನಿಗೆ ಜಗತ್ತಿನ ತುಂಬಾ ಸ್ವರ್ಗಸೌಖ್ಯವೇ ತುಂಬಿರುವಂತೆ ಭಾಸವಾಗುತ್ತಿದ್ದು ಮುಂಜಾಗ್ರತೆಗೆ ಅವಕಾಶವಾಗದಂತೆ ನಗರಾವಲೋಕನಮಾಡಿದಾಗ್ಗೆ ಮಾತ್ರ ಆತನಿಗೆ ಜಗತ್ತಿನಲ್ಲಿ ದುಃಖವೂ ತುಂಬಿಕೊಂಡಿದೆ ಎಂಬುದರ ಅನುಭವವಾಯಿತು. ಇದರಂತೆ ದೊಡ್ಡದೊಡ್ಡ ಅಧಿಕಾರಿಗಳು ಯಾರ ಮುಂಜಾಗ್ರತೆಗೂ ಅಸ್ಪದವಾಗದಂತೆ ಅಧಿಕಾರಿಗಳ ಹಾಗೂ ಪ್ರಜೆಗಳ ನಿತ್ಯನಡವಳಿಕೆಗಳ ಮನವರಿಕೆಮಾಡಿಕೊಳ್ಳುವಂತಾದಲ್ಲಿ ತುಂಬಾ ಪ್ರಯೋಜನವಾಗಬಹುದು. ಹೀಗಲ್ಲದೆ ಕಾರಣಾಂತರಗಳಿಂದ ಪ್ರಸಿದ್ಧರೀತಿಯ ಸಂಚಾರವೇ ಪ್ರಯೋಜನಕರವಾದದ್ದೂ ಹಾಗು ಗತ್ಯಂತರವಿಲ್ಲದ್ದೂ ಆಗಿರುವ ಪಕ್ಷಕ್ಕೆ ನಾನಾ ಇಲಾಖೆಗಳ ತನಿಖೆಗೂ ಹಾಗು ಪ್ರಜೆಗಳ ಪ್ರಾರ್ಥನೆಗೂ ಹೆಚ್ಚುವೇಳೆಯು ಉಪಯೋಗವನ್ನಾದರೂ ತೆಗೆದುಕೊಳ್ಳುವಂತಾಗಬೇಕು. ಆದರೆ ಹೇಗೆ ಮಾಡಿದರೂ ಮೊದಲನೆಯ ಮಾರ್ಗಕ್ಕಿಂತ ಎರಡನೆಯ ಮಾರ್ಗವು ಯಾವಾಗಲೂ ಅಷ್ಟು ಪ್ರಯೋಜನಕಾರಿಯಾಗಲಾರದು. ಮೃಗರಾಜನಾದ ಸಿಂಹಕ್ಕೆ ಆನೆಯ ಕುಂಭಸ್ಥಳದಲ್ಲಿ ಮುತ್ತುಗಳಿರುವುದರರಹಸ್ಯವು ಶೀಘ್ರವಾಗಿ ಗೊತ್ತಾಗುವಹಾಗೆ ಮಲನಾರ್ಜಾಲಜಂಬುಕ ಜಾಂಬವಾದಿಗಳ ಸಮಗ್ರ ಸಂಗತಿಯೂ ಶೀಘ್ರವಾಗಿ ಗೊತ್ತಾಗುವುದು ಅಸಂಭವವಲ್ಲವೆ? ಇದರಂತೆ ದೊಡ್ಡವರಿಗೆ ದೊಡ್ಡದೊಡ್ಡ ವಿಚಾರಗಳ ಪರಿಚಯವಿರುವುದು, ಮತ್ತು ಪರಿಚಯವಾಗುವುದು ಸಹ ಸಹಜವು. ಆದರೆ ಸಾಮಾನ್ಯರ ಸಂಕುಚಿತ ವಿಚಾರಗಳ ಪರಿಚಯವಿರುವುದು, ಮತ್ತು ಪರಿಚಯವಾಗುವುದು ಸಹ ಅಪರೂಪವೇಸರಿ. ಚಿಕಿತ್ಸೆಯ ಆಗತವಿರುವ ರೋಗಿಯು ತನ್ನ ರೋಗದ ವಿದ್ಯಮಾನವನ್ನೆಲ್ಲಾ ವೈದ್ಯರಲ್ಲಿ ಹೇಳಿಕೊಳ್ಳಬೇಕಾದದ್ದು ಕರ್ತವ್ಯವಿರುವಂತೆ ಪ್ರಜಾಪ್ರಮುಖರಾದವರು ಅನಾನುಕೂಲಗಳನ್ನೆಲ್ಲಾ ಸಂಬಂಧಪಟ್ಟ ಅಧಿಕಾರಿಗಳ ಮನವರಿಕೆಯಾಗುವಂತೆ ನಿವೇದಿಸಿಕೊಳ್ಳಬೇಕಾದದ್ದು ಯಾವಾಗಲೂ ಅವರ ಕರ್ತವ್ಯವಿರುತ್ತದೆ. ರೋಗದ ವಿದ್ಯಮಾನವೇ ಹೊರಪಡದೆ ಹೋದರೆ ವೈದ್ಯರ ಚಿಕಿತ್ಸೆಯು ಒದಗುವುದು ಅಸಂಭವವಿರುವಂತೆ ಪ್ರಮುಖರು ಕರ್ತವ್ಯವಿಮುಖರಾದರೆ ಯಾರು ಮಾಡುವುದೇನು? ಇದರಂತೆ ನಮ್ಮ ಮಲೆನಾಡುಪ್ರಾಂತ್ಯಕ್ಕೆ ದಿವಾನ್ ಸಾಹೇಬರವರ ಆಗಮನವಾಗಲಿಕ್ಕಿರುವುದು ನಮ್ಮಗಳ ಸುದೈವವೇ ಆಗಿರುತ್ತದೆ. ಇಂಥ ಯೋಗ್ಯಸಂಧರ್ಭದಲ್ಲಿ ಮುಖ್ಯವಾಗಿ ಪ್ರಜಾಪ್ರಮುಖರು ಮುಂದೆಬಂದು ಇತ್ತಕಡೆಯ ಕಷ್ಟಕಾರ್ಪಣ್ಯಗಳನ್ನು ನಿವೇದಿಸಿಕೊಳ್ಳಲಿಕ್ಕೂ ತತ್ಸಂಬಂಧವಾದ ಸೌಲಭ್ಯ ಸೌಕರ್ಯಗಳನ್ನು ದೊರಕಿಸಲಿಕ್ಕೂ ಪ್ರಯತ್ನಿಸುವಂತಾಗಬೇಕೆಂದು ನನ್ನ ನಮ್ರಸೂಚನೆಯುಂಟು.

ಚೆನ್ನಬಸವಪ್ಪಗೌಡಪಾಟೀಲ್, ತಪ್ಪನಹಳ್ಳಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 14 ನೆಯ ಪ್ರಕರಣ.

ದಾವಾಮಾಡಲು ಪ್ರಯತ್ನ.

ಪ್ರಿಟೋರಿಯಾದಲ್ಲಿ ನಾನು ವಾಸವಾಗಿದ್ದ ಒಂದು ವರ್ಷದೊಳಗೇನೇ ನನಗೆ ಅಮೌಲ್ಯವಾದ ಅನುಭವವುಂಟಾಯಿತು. ದೇಶಸೇವಾ ವಿಧಾನವನ್ನೂ ಅದಕ್ಕಾಗಿ ನನಗಿದ್ದ ಸಾಮರ್ಥ್ಯದ ಪರಿಮಿತಿಯನ್ನೂ ನಾನು ಅಲ್ಲೇ ಗ್ರಹಿಸಿದವನಾದೆನು. ಅಲ್ಲೇ ನನ್ನೊಳಗಿದ್ದ ಮತಾಸಕ್ತಿಯು ಪ್ರಸ್ಫುಟವಾಯಿತು, ನ್ಯಾಯವಾದಿವೃತ್ತಿಗೆ ಸಂಬಂಧಪಟ್ಟ ಯಥಾರ್ಥಜ್ಞಾನವು ಕೂಡ ನನಗೆ ಹುಟ್ಟಿದುದು. ಅನುಭವಸ್ಥನಾದ ಬ್ಯಾರಿಸ್ಟರ ಆಫೀಸಿನಲ್ಲಿ ಅನುಭವವಿಲ್ಲದ ಬ್ಯಾರಿಸ್ಟರು ಯಾವ್ಯಾವ ವಿಷಯವನ್ನು ಗ್ರಹಿಸಬೇಕೋ ಆ ಸಂಗತಿಯನ್ನು ಕೂಡ ನಾನು ಅಲ್ಲೇ ಗ್ರಹಿಸಿಕೊಂಡೆನು. ನಾನು ನ್ಯಾಯವಾದಿಯಾಗಿ ಕೆಲಸ ಮಾಡಬಹುದೆಂಬ ಧೈರ್ಯವೂ ನನಗೆ ಅಲ್ಲೇ ಹುಟ್ಟಿದುದು. ನ್ಯಾಯವಾದಿಯಾಗಿ ಕೆಲಸಮಾಡಿ ಖ್ಯಾತಿಯನ್ನು ಪಡೆಯಲು ಅವಶ್ಯಕವಾದ ಮುಖ್ಯಾಂಶವನ್ನೂ ನಾನು ಅಲ್ಲೇ ಗ್ರಹಿಸಿದೆನು. ದಾದಾಅಬ್ದುಲ್ಲರವರ ದಾವೆಯು 7,20,000 ರೂಪಾಯಿಗಳಿಗಾಗಿದ್ದುದರಿಂದ ಅದು ಸಾಮಾನ್ಯವಾದುದಲ್ಲ. ವ್ಯಾಪಾರಸಂಬಂಧವಾಗಿ ಆ ದಾವೆಯು ಹುಟ್ಟಿದ್ದುದರಿಂದ ಅದರಲ್ಲಿ ಲೆಕ್ಕವಿಚಾರವು ಬಹಳವಾಗಿದ್ದಿತು. ಕೆಲ ಪ್ರಾಂಸರಿನೋಟುಗಳೂ, ಪ್ರಾಂಸರಿನೋಟುಗಳನ್ನು ಕೊಡಲು ಮಾಡಿದ ವಾಗ್ದಾನವೂ ಆ ದಾವಾಕ್ಕೆ ಆಧಾರವಾಗಿದ್ದುವು. ವಾದಿಯು ಪ್ರಾಸಂರಿನೋಟುಗಳನ್ನು ಬರೆಯಿಸಿಕೊಂಡು ಹಣವನ್ನು ಕೊಡದೆ ಮೋಸಮಾಡಿದರೆಂದು ಪ್ರತಿವಾದಿಗಳ ವಾದವು. ಆ ದಾವಾದಲ್ಲಿ ನ್ಯಾಯಾಂಶವು ಬಹಳವಾಗಿದ್ದಿತು. ಅದು ಬಹಳ ತೊಡಕಾದ ದಾವೆಯು. ಎರಡು ಪಕ್ಷದವರೂ ಸುಪ್ರಸಿದ್ಧರಾದ ವಕೀಲರುಗಳನ್ನೇ ನಿಯಮಿಸಿದ್ದರು. ಆದರಿಂದ ಅವರ ಕೆಲಸಗಳನ್ನು ಪರಿಶೀಲಿಸಲು ನನಗೆ ಒಳ್ಳೇ ಅವಕಾಶವು ದೊರೆಯಿತು. ವಾದಿಪಕ್ಷದ ದಾವೆಯನ್ನು ಸಿದ್ಧಪಡಿಸಿ ಅದಕ್ಕನುಕೂಲವಾದ ಅಂಶಗಳನ್ನು ಅಟರ್ನಿಗೆ ತಿಳಿಸಲು ನಾನು ನಿಯಮಿಸಲ್ಪಟ್ಟೆನು. ನಾನು ಸಿದ್ಧಪಡಿಸಿದ್ದುದರಲ್ಲಿ ಅಟರ್ನಿಯು ಎಷ್ಟನ್ನು ಸ್ವೀಕರಿಸಿದನೋ ಎಷ್ಟನ್ನು ತಿರಸ್ಕರಿಸಿದನೋ ಎಂಬುದನ್ನು ಅಟರ್ನಿಯು ಸಿದ್ಧಪಡಿಸಿದ ಪ್ಲೀಡಿಂಗುಗಳಲ್ಲಿ ನ್ಯಾಯವಾದಿಯು ಎಷ್ಟರಮಟ್ಟಿಗೆ ಉಪಯೋಗಿಸಿಕೊಂಡನೋ ಎಂಬುದು ನನಗೆ ಮುಖ್ಯವಿಷಯವಾಗಿದ್ದಿತು. ಈ ದಾವೆಯನ್ನು ಸಿದ್ಧಪಡಿಸುವಲ್ಲಿ ನನಗಿದ್ದ ಗ್ರಹಣಶಕ್ತಿಯನ್ನೂ, ಸಾಕ್ಷ್ಯವನ್ನು ಸಿದ್ಧಪಡಿಸುವುದರಲ್ಲಿ ನನಗಿದ್ದ ನೈಪುಣ್ಯವನ್ನೂ ನಾನು ಗ್ರಹಿಸಿಕೊಂಡೆನು. ನಾನು ಬಹಳ ಶ್ರದ್ಧೆಯಿಂದ ದಾವಾ ಸಂಬಂಧದಲ್ಲಿ ಕೆಲಸಮಾಡಿದೆನು. ಏಕಾಗ್ರತೆಯಿಂದ ಅದನ್ನು ಸಿದ್ಧಪಡಿಸಿದೆನು. ಓದಬೇಕಾಗಿದ್ದ ರಿಕಾರ್ಡುಗಳೆಲ್ಲವನ್ನೂ ಸಾಂಗವಾಗಿ ಓದಿದೆನು. ಅಬ್ದುಲ್ಲಾಯವರು ಒಳ್ಳೇ ಸಮರ್ಥರು. ಅವರಿಗೆ ನನ್ನಲ್ಲಿ ಸಂಪೂರ್ಣ ವಿಶ್ವಾಸವಿದ್ದುದರಿಂದ ನನ್ನ ಕೆಲಸವು ಸುಲಭವಾಯಿತು. ಲೆಕ್ಕವನ್ನು ಬರೆಯುವ ವಿಧಾನವನ್ನು ಸಹ ಕಲಿತುಕೊಂಡೆನು. ಗುಜರಾತಿಭಾಷೆಯಿಂದ ಅಂಗ್ಲಭಾಷೆಗೆ ಅನೇಕ ಕಾಗದಗಳನ್ನು ಪರಿವರ್ತನೆ ಮಾಡಬೇಕಾಗಿದ್ದುದರಿಂದ ಆ ಸಾಮರ್ಥ್ಯವು ಕೂಡ ನನಗೆ ಹೆಚ್ಚಿತು.

ನಾನು ಮತವಿಷಯದಲ್ಲೂ, ಪ್ರಜಾಹಿತದಲ್ಲೂ ಶ್ರದ್ಧೆಯುಳ್ಳವನಾಗಿದ್ದರೂ ನನ್ನ ಮುಖ್ಯವಾದ ಕೃತಿಯು ವ್ಯಾಜ್ಯವೇ ಆಗಿದ್ದಿತು. ನ್ಯಾಯಶಾಸ್ತ್ರವನ್ನು ಓದುವುದು, ದಾವಾಗಳಲ್ಲಿ ಕೊಡಲ್ಪಟ್ಟ ತೀರ್ಪುಗಳನ್ನು ಓದಿ ಸಿದ್ಧಪಡಿಸುವುದು ಮೊದಲಾದ ಕೆಲಸಗಳನ್ನೇ ನಾನು ಮುಖ್ಯವಾಗಿ ಮಾಡುತ್ತಿದ್ದೆನು. ಎರಡು ಪಕ್ಷದವರ ರಿಕಾರ್ಡು ನನ್ನ ವಶದಲ್ಲಿದ್ದಿತು. ಪ್ರತಿ ಕಾಗದವನ್ನೂ ಸಂಪೂರ್ಣವಾಗಿ ಓದಿದ್ದುದರಿಂದ ದಾವಾವಿಷಯವೆಲ್ಲವೂ ನನಗೆ ಹೃದ್ಗತವಾಗಿದ್ದಿತು. ವಿಷಯಗಳಲ್ಲಿ ಶಕ್ತಿಯಿದ್ದರೆ ಮುಕ್ಕಾಲು ಪಾಲು ಗೆಲ್ಲುವುದು ನಿಶ್ಚಯವೆಂದು ಪಿನ್ಕಟರವರು ಈಚೆಗೆ ಹೇಳಿದ್ದರು. ಒಂದು ಕೇಸಿನಲ್ಲಿ ವಿಷಯವೆಲ್ಲವೂ ನನ್ನ ಕಕ್ಷಿದಾರನಿಗೆ ಅನುಕೂಲವಾಗಿದ್ದಿತು. ನ್ಯಾಯನಿಬಂಧನೆಗಳು ಮಾತ್ರ ಪ್ರತಿಕೂಲವಾಗಿ ಪರಿಣಮಿಸಿದುವು. ನನಗೇನೂ ತೋಚಲಿಲ್ಲವಾಗಿ ದಕ್ಷಿಣಾಫ್ರಿಕೆಯಲ್ಲಿ ಸುಪ್ರಸಿದ್ಧ ನ್ಯಾಯವಾದಿಯಾಗಿದ್ದ ಬ್ಯಾರಿಸ್ಟರ್ ಲಿಯೋನಾರ್ಡರವರ ಸಲಹೆಯನ್ನು ಕೋರಿದೆನು. ಅವರು ಕೂಡ ನನ್ನೊಡನೆ ಏಕೀಭವಿಸಿ "ವಿಷಯವನ್ನು ನಾವು ಸಿದ್ಧಪಡಿಸಿದರೆ ನ್ಯಾಯನಿಬಂಧನೆಗಳನ್ನು ಕುರಿತು ನಾವು ಯೋಚಿಸಬೇಕಾದುದಿಲ್ಲವೆಂದು ನಾನು ಚೆನ್ನಾಗಿ ತಿಳಿದಿರುತ್ತೇನೆ. ಆದುದರಿಂದ ಇನ್ನೊಂದುಸಾರಿ ಚೆನ್ನಾಗಿ ಓದಿಕೊಂಡು ಬನ್ನಿ" ಎಂದು ಹೇಳಿದರು. ನಾನು ಪುನಃ ಶ್ರದ್ಧೆಯಿಂದ ಓದಲಾಗಿ ಹೊಸವಿಷಯಗಳೇ ಗೋಚರಿಸಿದುವು. ಕಡೆಯಲ್ಲಿ ಜಡ್ಜ್‌ಮೆಂಟು ಆದ ಒಂದು ಕೇಸು ಕೂಡ ನನ್ನ ವಾದಕ್ಕೆ ಅನುಕೂಲವಾಗಿ ದೊರಕಿತು. ನಾನು ಬಹಳ ಸಂತೋಷದಿಂದ ಲಿಯೋನಾರ್ಡರವರಿಗೆ ಹೇಳಿದೆನು. "ನಾವು ಗೆಲ್ಲುವುದು ನಿಶ್ಚಯವೇ ಅಲ್ಲದೆ ಯಾವ ನ್ಯಾಯಾಧಿಪತಿಯು ಈ ದಾವೆಯ ವಿಚಾರಣೆಯನ್ನು ನಡೆಸುತ್ತಾನೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವು" ಎಂದು ಅವರು ಹೇಳಿದರು. ದಾದಾ ಅಬ್ದುಲ್ಲಾಸೇಟರ ಮೊಖದ್ದಮೆಯನ್ನು ಸಿದ್ಧಗೊಳಿಸಿದಾಗ ಈ ವಿಷಯಕ್ಕೆಷ್ಟು ಪ್ರಾಮುಖ್ಯತೆಯುಂಟಾಗಿರುತ್ತದೆಂಬುದನ್ನು ನಾನು ಅಷ್ಟು ಸರಿಯಾಗಿ ಗ್ರಹಿಸಿರಲಿಲ್ಲವು. ವಿಷಯಗಳೆಂದರೆ ನಿಜವಾದ ಮಾತು. ನಾವು ನಿಜವನ್ನು ಗ್ರಹಿಸಿ ನಡೆದುಕೊಂಡಲ್ಲಿ ನ್ಯಾಯನಿಬಂಧನೆಯೂ ನಮಗೆ ಅನುಕೂಲವಾಗಿರುವುದು. ಅದರಿಂದ ಅವರಿಗೆ ಜಯವಾಗದೇ ಇರದು. ಆದರೆ ವಾದಿ ಪ್ರತಿವಾದಿಗಳಿಬ್ಬರೂ ಬಂಧುಗಳೇ. ಎರಡು ಪಕ್ಷದವರೂ ಒಂದೇ ಊರಿನಲ್ಲಿ ವಾಸಿಸುತ್ತಿರುವರು. ಈ ದಾವೆಯು ಎಷ್ಟು ಕಾಲ ಜರುಗುವುದೋ ಯಾರಿಗೂ ತಿಳಿಯದು. ಒಂದುವೇಳೆ ಬಹುಕಾಲದವರೆಗೂ ನಡೆದಲ್ಲಿ ಎರಡು ಪಕ್ಷದವರಿಗೂ ಬಹಳ ನಷ್ಟಸಂಭವಿಸುವುದು. ಅದುಕಾರಣ ಅನುಕೂಲವಾದಲ್ಲಿ ತ್ವರೆಯಿಂದಲೇ ದಾವೆಯು ಮುಗಿಯಬೇಕೆಂದು ಉಭಯ ಪಕ್ಷದರೂ ಅಪೇಕ್ಷಿಸಿದರು. ನಾನು ತ್ಯಾಬುಸೇಟರಲ್ಲಿಗೆ ಹೋಗಿ ಮಧ್ಯವರ್ತಿಪರಿಷ್ಕಾರವನ್ನು ಅಂಗೀಕರಿಸಬೇಕೆಂದು ಕೋರಿದೆನು. "ಎರಡು ಪಕ್ಷದವರಿಗೂ ವಿಶ್ವಾಸಪಾತ್ರರಾದವರ ಮಧ್ಯಸ್ತಿಕೆಯು ಉದುರಿಂದರೆ ದಾವೆಯು ತ್ವರಿತದಲ್ಲೇ ಮುಗಿಯುವುದು" ಎಂದು ನಾನು ತಿಳಿಸಿದೆನು. ನ್ಯಾಯವಾದಿಗಳ ಫೀಜು ದಿನದಿನಕ್ಕೆ ಹೆಚ್ಚುತ್ತಿರುವುದು. ಎರಡು ಪಕ್ಷದವರೂ ಅವರನ್ನು ಫಕೀರರನ್ನು ಮಾಡುವುದಕ್ಕೆ ತಕ್ಕಷ್ಟು ಧನವ್ಯಯವಾಗಲು ಈ ಪ್ಲೀಡರಗಳ ಫೀಜೊಂದೇ ಸಾಕು. ಈ ದಾವೆಯಿಂದ ಇತರ ಕೆಲಸಗಳನ್ನು ನೋಡಲು ಅವರಿಗೆ ಅವಕಾಶವಿಲ್ಲದಂತಾಗುವುದು. ಪರಸ್ಪರ ದ್ವೇಷವೂ ಹೆಚ್ಚುವುದು. ನನಗೆ ವಕೀಲಿ ವೃತ್ತಿಯಲ್ಲಿ ಅಸಹ್ಯತೆ ಹುಟ್ಟಲಾರಂಭವಾಯಿತು. ವಕೀಲರುಗಳು ತಮ್ಮ ಕಕ್ಷಿದಾರರಿಗೆ ಅನುಕೂಲವಾದ ವಿಷಯಗಳನ್ನು ತೋರಿಸಿಕೊಟ್ಟಲ್ಲಿ ನೆಟ್ಟಗಾಗುವುದು. ದಾವಾಗೆದ್ದರೂ ವೆಚ್ಚಮಾಡಿದ ಹಣವೆಲ್ಲವೂ ಪ್ರತಿವಾದಿಯಿಂದ ವಾದಿಗೆ ಎಂದಿಗೂ ಸಲ್ಲುವುದಿಲ್ಲ. ಕೋರ್ಟುಫೀಜು ರೂಲ್ಸು ಪ್ರಕಾರವಾಗಿ ಮಿತವಾಗಿಯೇ ಖರ್ಚು ಕೊಡಿಸಲ್ಪಡುವುದು. ಕಕ್ಷಿದಾರನು ವಕೀಲರಿಗೆ ಕೊಟ್ಟ ಹಣವೆಲ್ಲವೂ ಪ್ರತಿವಾದಿಕೈಯಿಂದ ಕೊಡಿಸಲ್ಪಡುವುದಿಲ್ಲ. ಆದುದರಿಂದ ಎರಡು ಪಕ್ಷದವರೂ ಈರೀತಿಯಾಗಿ ನಷ್ಟಪಡದೇ ತಪ್ಪದು. ಅದು ನನಗೆ ಇಷ್ಟವಿಲ್ಲವಾದುದರಿಂದ ರಾಜಿಯನ್ನು ಕುದುರಿಸಲು ಶಕ್ತಿವಂಚನೆಯಿಲ್ಲದೆ ಕೆಲಸಮಾಡಿದೆನು. ಕಡೆಗೆ ತ್ಯಾಬುಸೇಟರೊಪ್ಪಿದರು. ಒಬ್ಬ ಮಧ್ಯವರ್ತಿಯನ್ನು ನಿಯಮಿಸಿದರು. ಆತನು ವಿಚಾರಣೆಮಾಡಿದನು. ದಾದಾ ಅಬ್ದುಲ್ಲಾಯವರಿಗೆ ಅನುಕೂಲವಾಗಿ ತೀರ್ಪನ್ನು ಹೇಳಿದನು. ಆ ಡಿಕ್ರಿಯನ್ನು ಕೂಡಲೆ ಅಮಲಿಗೆ ತಂದಲ್ಲಿ ಅಷ್ಟೊಂದು ಹಣವನ್ನೂ ಒಂದಾವರ್ತಿಗೆ ತ್ಯಾಬುಸೇಟರು ಕೊಡಲಾರರು. ಪೋರುಬಂದರಿನ ಮೆಮನ್ನು ಜನರಲ್ಲಿ ಒಂದು ದೊಡ್ಡ ನಿಯಮವಿರುವುದು. ಅವರು ದಿವಾಳಿಯಾಗಲು ಎಂದಿಗೂ ಅಂಗೀಕರಿಸುವುದಿಲ್ಲ. ಅಂತಹ ಸ್ಥಿತಿಬಂದಲ್ಲಿ ಆತ್ಮಹತ್ಯವನ್ನು ಮಾಡಿಕೊಳ್ಳುವರೆಂದು ನಾನು ಕೇಳಿದ್ದೆನು. ಅಸಲು ಹಣವಾದ 4,81,000 ರೂ. ಗಳನ್ನೂ ದಾವಾ ಖರ್ಚನ್ನೂ ತ್ಯಾಬುಸೇಟು ಒಂದೇಗಂಟಿನಲ್ಲಿ ದಾದಾ ಅಬ್ದುಲ್ಲಾಸೇಟಗೆ ಕೊಡಲಾಗದಿದ್ದರೂ ತ್ಯಾಬುಸೇಟು ದಿವಾಳಿಯಾಗಲು ಅಂಗೀಕರಿಸಲಿಲ್ಲ; ಏನಾದರೂ ಕಡಿಮೆಮಾಡಬೇಕೆಂದು ಕೇಳಿಕೊಳ್ಳಲಿಲ್ಲ. ಆದ್ದರಿಂದ ವಾಯಿದೆಮೇಲೆ ತೀರಿಸಲು ಆತನಿಗೆ ಸುಕರವಾಗಿದ್ದಿತು. ಅದಕ್ಕೆ ಎರಡು ಪಕ್ಷದವರೂ ಸಮ್ಮತಿಸುವಂತೆ ಮಾಡುವುದೂ ಕಷ್ಟಕರವಾಗಿ ನನಗೆ ತೋರಿತು. ಆದರೂ ಕಡೆಗೆ ಆ ಪ್ರಯತ್ನವು ನೆರವೇರಿತು. ತ್ಯಾಬುಸೇಟಗೆ ಬಹಳ ಅನುಕೂಲವಾಗಿ ವಾಯಿದೆ ಕೊಡಲು ದಾದಾ ಅಬ್ದುಲ್ಲಾಯವರು ಅಂಗೀಕರಿಸಿ ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದರು. ನನಗೆ ಬಹಳ ಸಂತೋಷವಾಯಿತು. ವಕೀಲಿನ ಮುಖ್ಯ ಕರ್ತವ್ಯವನ್ನು ನಾನು ಆಗ ಗ್ರಹಿಸಿಕೊಳ್ಳುವವನಾದೆನು. ವಿರೋಧವನ್ನು ಹೋಗಲಾಡಿಸಿ ಪುನಃ ಎರಡು ಪಕ್ಷದವರಿಗೂ ಸ್ನೇಹವನ್ನುಂಟುಮಾಡುವುದೇ ಲಾಯರ ಮುಖ್ಯ ಕರ್ತವ್ಯವು. ಈ ಮುಖ್ಯಾಂಶವು ನನ್ನ ಮನಸ್ಸಿನಲ್ಲಿ ನಾಟಿಹೋಯಿತು. ನಾನು ಇಪ್ಪತ್ತು ವರ್ಷ ಲಾಯರಾಗಿದ್ದೆನು. ಆ ಕಾಲದಲ್ಲಿ ಎಷ್ಟೋ ದಾವಾಗಳಲ್ಲಿ ಹೀಗೆಯೇ ಮಧ್ಯಸ್ತಿಕೆಯ ಮೂಲಕ ಪರಿಷ್ಕಾರವಾಗುಂತೆ ಮಾಡಿದೆನು. ಅದರಿಂದ ನನಗೆ ಯಾವ ನಷ್ಟವೂ ಆಗಲಿಲ್ಲ; ಧನನಷ್ಟವು ಸಹ ಉಂಟಾಗಲಿಲ್ಲ.

೧೯೨೬ನೆಯ ಇಸವಿ ಅಕ್ಟೋಬರ್ ತಾ|| ೩೦ರಿಂದ ೧೯೨೬ ನೆಯ ಇಸವಿ ನವಂಬರ್ ತಾ|| ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಆಶ್ವಯುಜ ಬಹುಳ ನವಮಿಯಿಂದ ಆಶ್ವಯುಜ ಬಹುಳ ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
30	[1]ಶನಿ	ನವ	5-48	ಆಶ್ಲೇ	0-53	14
31	ಭಾನು	ದಶ	10-32	ಮಖಾ	6-50	15
1	ಸೋಮ	ಏಕಾ	15-50	ಪುಬ್ಬ	13-17	16
2	[2]ಮಂಗಳ	ದ್ವಾದ	21-12	ಉತ್ತ	19-50	17
3	[3]ಬುಧ	ತ್ರಯೋ	26-10	ಹಸ್ತ	26-3	18
4	[4]ಗುರು	ಚತು	30-24	ಚಿತ್ತ	31-32	19
5	[5]ಶುಕ್ರ	ಅಮಾ	33-40	ಸ್ವಾತಿ	36-3	20

(1) ಮಳೆನಕ್ಷತ್ರ-ಸ್ವಾತಿ ೩ ನೆಯ ಪಾದ. (2) ಮಳೆನಕ್ಷತ್ರ-ಸ್ವಾತಿ ೪ ನೆಯ ಪಾದ, ಪ್ರದೋಷ. (3) ಚಂದ್ರೋದಯಕಾಲೆ ಅಭ್ಯಂಗಸ್ನಾನಂ. (4) ನರಕಚತುರ್ದಶಿ. (5) ಸರ್ವತ್ರಾಮಾವಾಸ್ಯ, ಕೇದಾರೇಶ್ವರವ್ರತಂ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಕರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸ೯ ೧೯೨೬ ನೆಯ ಇಸವಿ ನವಂಬರ್ ತಾರೀಖು ೬ ನೆಯ ಶನಿವಾರ. [ಸಂಚಿಕೆ ೪೫

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯನು ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮುಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂಧ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜವಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮುಖಾನಾ, ಬೀಜಹರಣಖೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೇರಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—15] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಸಾರಸ್ವತಾಸವ.

ಓದುವುದು ಮರೆತುಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ.

ಸೀಸೆ 1ಕ್ಕೆ ರೂ. 1—0—0 ಪೋಸ್ಟೇಜು ಬೇರೆ.

ಬಾಲಸುಬೋದಯ.

ಮಕ್ಕಳಿಗೆ ಪುಷ್ಟಿಕಾರಿ, ಸಿಹಿಯಾಗಿದೆ. ಕೈಕಾಲು ಸಣ್ಣನಾಗಿ ಹೊಟ್ಟೆ ದಪ್ಪವಾಗಿದ್ದರೂ ತುಂಬಾ ಬಡವಾಗಿದ್ದರೂ ಜೀರ್ಣಿಸದೆ ಭೇದಿಯಾಗುತ್ತಿದ್ದರೂ ಮಲಬದ್ಧವಿದ್ದರೂ ಬಾಲಸುಬೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತದೆ.

ಸೀಸೆ 1ಕ್ಕೆ 0—12—0 ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ದೊಡ್ಡವರ ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ, ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆಂಜಾ ಪ್ಲೇಗುಜ್ವರ

ಮಕ್ಕಳ ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

42

ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. 250 ರಿಂದ 300 ಮಾತ್ರೆಗಳವರೆಗಿರುವ ಸೀಸೆ ಬೆಲೆ 4 ಆಣೆ. 6ಕ್ಕೆ 1-8-0, 12 ಸೀಸೆಗೆ 2-13-0, 25 ಸೀಸೆಗೆ 5-3-0.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಪಾಳ್ಯದ ವೆಂಕಟಾಚಲಪಂಡಿತರು,

ಬ್ರಾಂಚ್ ಆಫೀಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ. | ಹೆಡ್ ಆಫೀಸ್, ಸೀತಾರಾಘವವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೈಸೂರು ವೀರಶೈವವಿದ್ಯಾಭಿವೃದ್ಧಿ ಫಂಡ್ ಸಂಘದಿಂದ 1926-27 ರಲ್ಲಿ 8 ತಿಂಗಳುಗಳ ವೇತನ ಮಂಜೂರಾಗಿರುವ ವಿದ್ಯಾರ್ಥಿಗಳ ಹೆಸರಿನ ಪಟ್ಟಿ.

ಗೌರ್ಮೆಂಟ್ ಹೈಸ್ಕೂಲ್, ಚಿಕ್ಕಬಳ್ಳಾಪುರ.
61. ಪಿ. ಆರ್. ಶಿವರುದ್ರಮೂರ್ತಿ V ಫಾರಂ 3 ರೂ.
62. ಹೆಚ್. ಗೌರಯ್ಯ IV ಫಾರಂ 3 ರೂ.
ಗೌರ್ಮೆಂಟ್ ಹೈಸ್ಕೂಲ್, ಕೋಲಾರ.
63. ಎಸ್. ಗುರುಸಂಗಯ್ಯ V ಫಾರಂ 3 ರೂ.
ಗೌರ್ಮೆಂಟ್ ಹೈಸ್ಕೂಲ್, ಶಿವಮೊಗ್ಗ.
64. ಜಿ. ಚೆನ್ನಬಸವಯ್ಯ IV ಫಾರಂ 3 ರೂ.
ಸಂಸ್ಕೃತಕಾಲೇಜು, ಬನಾರಸ್ ಸಿಟಿ.
65. ಶ್ರೀ ಶಿವಕುಮಾರಸ್ವಾಮಿ ಸಂಸ್ಕೃತ 10 ರೂ.
ಚಾಮರಾಜೇಂದ್ರ ಸಂಸ್ಕೃತಕಾಲೇಜು, ಬೆಂಗಳೂರು.—ಸಂಸ್ಕೃತ.
66. ರಾಜಶೇಖರಾರಾಧ್ಯ 3 ರೂ. 67. ಬಸವಯ್ಯ 3 ರೂ. 68. ಎಂ. ಪಿ. ಬಸವಲಿಂಗಯ್ಯ 3 ರೂ.
ಮೆಡಿಕಲ್ ಕಾಲೇಜು, ಮೈಸೂರು.
69. ಕೆ. ಅಪ್ಪಾಜಿ, ಎಂ.ಬಿ. 15 ರೂ.
ಮೆಡಿಕಲ್ ಕಾಲೇಜು, ಮದ್ರಾಸು.
70. ಬಿ. ಆರ್. ಸಂಗಪ್ಪ, ಎಂ.ಬಿ., ಬಿ.ಎಸ್. [illegible]

SIROMANY NARAYANACHARYA & CO.,
BENARES CITY.

S.U.N. & CO.
BENARES CITY

ನಮ್ಮಲ್ಲಿ ತರವಾರಿ ರೇಷ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿ ಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀ ಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದೇಶ್ವರಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—16]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ. ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಶೀಘ್ರಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಸ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಅದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಸ್ತಕ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ಗಳ್ಳಿಗೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—6] ಪೋ. ಬಾ. ೫೧೦, ಮದರಾಸು.

ಮೆಡಿಕಲ್ ಕಾಲೇಜು, ಬೆಂಗಳೂರು. ಎಲ್.ಎಂ.ಪಿ.

71. ಎಂ. ಅಣ್ಣಾಜಪ್ಪ 5 ರೂ. 72. ಎಂ. ಜಿ. ಸೋಮಶೇಖರಪ್ಪ 5 ರೂ.

ಇಂಜನೀಯರಿಂಗ್ ಕಾಲೇಜು, ಬೆಂಗಳೂರು.—ಬಿ. ಇ.

73. ಟಿ. ಹುಚ್ಚವೀರಯ್ಯ 7 ರೂ. 74. ಕೆ. ಚೆನ್ನಬಸವಯ್ಯ 5 ರೂ.

ಇಂಜನೀಯರಿಂಗ್ ಸ್ಕೂಲು, ಬೆಂಗಳೂರು.

75. ಬಿ. ಆರ್. ಶಂಭುರುದ್ರಪ್ಪ, ಬಿ.ಇ. 3 ರೂ.

ಎಲೆಕ್ಟ್ರಿಕ್ ಇಂಜನೀಯರಿಂಗ್, ಬೆಂಗಳೂರು.

76. ಬಿ. ಗುಂಡಪ್ಪ, ಎಲೆಕ್ಟ್ರಿಕ್ 5 ರೂ.

ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್, ಬೊಂಬಾಯಿ.

77. ಎಂ. ವೀರಪ್ಪ, ಆರ್ಟ್ಸ್ 10 ರೂ.

ಕಲಾಮಂದಿರ, ಬೆಂಗಳೂರು ಸಿಟಿ.—ಆರ್ಟ್ಸ್.

78. ಎಸ್. ಬಿ. ನಂಜಪ್ಪ 3 ರೂ. 79. ಎಚ್. ಸಿದ್ಧರಾಮಯ್ಯ 3 ರೂ.

ಡಾವರ್ಸ್ ಕಾಲೇಜು, ಬೊಂಬಾಯಿ.

80. ಬಿ. ಪಿ. ಬಸಪ್ಪ, ಕಾಮರ್ಸ್ 8 ರೂ.

ಜಿ. ಪರಮಶಿವಯ್ಯ,
ಸೆಕ್ರೆಟರಿ.

ಎಂ. ನಾಗಪ್ಪ,
ಅ|| ಸೆಕ್ರೆಟರಿ.

OFFICE OF THE DIRECTOR OF INDUSTRIES & COMMERCE, BANGALORE.

ಭತ್ತ ಕುಟ್ಟುವ ಮಿಷನ್ ಖರೀದಿಗೆ ದೊರೆಯುತ್ತೆ.

ಡಗ್ಲಾಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾದ ಮತ್ತು ತಕ್ಷಣ ಕೆಲಸಮಾಡತಕ್ಕ ಸ್ಥಿತಿಯಲ್ಲಿರತಕ್ಕ 7 cwt. ಕಂಪ್ಲೀಟ್ ರೈಸ್ ಮಿಲ್—

1. ಹೊಳೇನರಸೀಪುರದ ಲಕ್ಷ್ಮೀಶ್ವರ ರೈಸ್ ಮಿಲ್ ಕಂಪನಿ ಲಿಮಿಟೆಡ್‌ಗೆ ಸೇರಿದ ಈ ಕೆಳಗೆ ಕಂಡ ತಪ್ಸೀಲುಗಳ ಯಂತ್ರಗಳು ಖರೀದಿಗೆ ಕೊಂಡುಕೊಳ್ಳಲು ಇಷ್ಟವುಳ್ಳವರಿಂದ ಟೆಂಡರ್ ಅಂಗೀಕರಿಸಲ್ಪಡುತ್ತೆ.

ಯಂತ್ರಗಳ ತಪ್ಸೀಲು.

22 ಕುದುರೆ ಬಲವುಳ್ಳ ಹಾರನ್ಸ್ ಬಿ ಸೆಕ್ಷನ್ ಗ್ಯಾಸ್ ಇಂಜಿನ್ ಮತ್ತು ಗ್ಯಾಸ್ ಪ್ಲಾಂಟು ಸಹ.

3 ಅಡಿ ಬಾಬ್ತು ಡೊಗ್ಲಾಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾದ ಶೆಲ್ಲರು.

2 ಅಡಿ ಬಾಬ್ತು ಬಿಜೊ ಮೇಕರ್ ಕೋನ್.

18 ಕಂಪಾರ್ಟುಮೆಂಟುಳ್ಳ ಭತ್ತ ಅಕ್ಕಿ ಪ್ರತ್ಯೇಕಿಸತಕ್ಕ ಪ್ಯಾಡಿ ಸಪರೇಟರ್ ಸಕ್ ಅಂಡ್ ಕೋ ಫ್ಯಾನ್ ರಿಡ್ಲ್, ಎರಡು ಡಬ್ಬಲ್ ಎಲಿವೇಟರುಗಳು, ಬೆಲ್ಟಿಂಗ್, ಶಿಫ್ಟಿಂಗ್, ಪುಲ್ಲಿಗಳು ಮತ್ತು ತತ್ಸಂಬಂಧವಾದ ಇತರ ಸಾಮಾನುಗಳು ಸಹ.

2. ಈ ಮಿಲ್ಲು ತಕ್ಷಣ ಕೆಲಸಮಾಡಬಹುದಾದ ಉತ್ತಮವಾದ ಸ್ಥಿತಿಯಲ್ಲಿರುತ್ತೆ.

3. ಖರೀದಿಗೆ ತೆಗೆದುಕೊಳ್ಳಬೇಕ್ಕೆಯುಳ್ಳವರು ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಡೈರೆಕ್ಟರುಗಳಿಗೆ ತಾರೀಖು 31-12-26 ರೊಳಗೆ ತಮ್ಮ ಟೆಂಡರನ್ನು ಒಂದು ಕವರಿನಲ್ಲಿ ಸೀಲ್ ಮೊಹರ್ ಮಾಡಿ ಕವರಿನ ಮೇಲ್ಭಾಗದಲ್ಲಿ ಹೊಳೇನರಸೀಪುರದ ಲಕ್ಷ್ಮೀಶ್ವರ ರೈಸ್ ಮಿಲ್ ಖರೀದಿಯ ಟೆಂಡರೆಂದು ಬರೆದು ಕಳುಹಿಸಬಹುದು. ವಾಯಿದೆ ತಾರೀಖು ಮಿಾರಿದನಂತರ ಟೆಂಡರನ್ನು ಅಂಗೀಕರಿಸಲಾಗುವುದಿಲ್ಲ.

4. ಪ್ರತಿಯೊಬ್ಬರೂ ಟೆಂಡರು ಸಮೇತ 100 ರೂಪಾಯಿಗಳನ್ನು ಡಿಪಾಜಿಟ್ ಮಾಡತಕ್ಕದ್ದು.

5 ಬಾಕಿ ವಿಷಯಗಳನ್ನು ತಿಳಿಯಬೇಕ್ಕಿರುವವರು ಮೈಸೂರು ಡಿವಿಜನ್ ಕೈಗಾರಿಕೆಗಳ ಸೂಪರಿಂಟೆಂಡೆಂಟರವರಿಗೆ ಲಿಖಿತ ಮೂಲಕವಾಗಲೀ ಅಥವಾ ಅವರನ್ನು ನೇರ್ಪಾ ನೋಡಿಯಾಗಲೀ ತಿಳಿದುಕೊಳ್ಳಬಹುದು.

(Sd.) R. Ananthasubramanyam,
for Offg. Director of
Industries and Commerce.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ನವಂಬರ್ ತಾ|| ೬ ನೆಯ ಶನಿವಾರ.

THE DISTRICT ECONOMIC SUPERINTENDENTS.

We had refrained from commenting on the selection of men for the newly-created posts of Economic Superintendents, vainly hoping for an off chance of their abolition on the strength of Mr. D. S. Mallappa's resolution at the Representative Assembly. Now that they are not going to be disturbed, we may just have our small say in the matter. The benevolent Mysore Government is still probably obsessed with the idea that the Brahmin community has a special claim for service in Mysore, and that community has indeed very good reasons to be grateful to the Government for this benevolence. Out of eight appointments that were to be made seven were announced first, of which two were presented to the privileged community. The other five were distributed between the Lingayet, the Christian, the Jain and the Mohammadan communities. When the eighth appointment was yet to be announced we were hoping fondly that it would go to the Vokkaligars who form a very substantial portion of the State population and not a very negligible one either and who stand to benefit to a great extent if these Superintendents are going to turn out any good work. But little were the public aware that that too was reserved to a Brahmin gentleman hailing from Bellary, where he seems th have held a post in the Agriculture Department. The prospects in the Madras Agriculture Department are, so far as we know, not bad, and one's curiosity is naturally roused why he must forsake it for this appointment of uncertain tenure. We are extremely doubtful if our Government has taken any pains to ascerteain the anticedents of this gentleman specially chosen for the eighth place. It would probably reveal a record which is neither creditable to the gentleman nor to the judgment of the Government. There would be some pretence of an excuse if all the appointments were made from men in service already, for, they could then say that there were no candidates in service of the Vokkaligar community, which even in that 'important cadre of Amildars, affecting the welfare of the ryots, has hardly two representatives. But the fact is they have given some of the posts to fresh men and the eighth as already stated has gone to a fresh man. There were fresh men as candidates for the posts belonging to the Vokkaligar and other communities. We do not deny that for any Government it is a difficult job to uproot a tradition so deep-rooted. But that all this should take place in spite of the Miller Committee Report and in this case in spite of more efficient men being available from among the backward communities would no doubt be a surprise to those who do not know the ways of Mysore Government. We can only explain that the law of Karma of the other communities is operating rather rigourously and why should any body be blamed for it. Why should they not take that Mysore Government is only a merciful tool in the hands of an all too merciful Providence? It is so often a very soothing consolation to a Hindu to ascribe his adversities to Karma, and would it not be better for the backward communities to take consolation under such a convenient theory? The Mysore Government has called for candidates for making a selection of Revenue Probationers. We possess no prophetic vision, and so we do not want to forecast the appointments. But we would not wonder if the microscopic Brahmin community were to have a share out of all proportion to its strength even as it had last time, in the name of efficiency of course. Why, has not the efficiency of the Amildary been established so well on the bed-rock of Brahmanism? Heaven, spare us from this efficiency! The people have had enough of it.

DISTRICT JUDGE'S APPOINTMENT.

Since the transfer of Mr. G. Satyaji Rao from the District Court of Shimoga to that of Bangalore to take the place of Mr. G. Sreenivasa Iyer who has gone on leave, Shimoga has been without a District Judge. We are doubtful if this long delay speaks well of the administration of justice in the State. We wonder what accounts for such an unusual procedure. The next senior person in service is Mr. P. Mahadeviah, Sub-judge in Bangalore who could have been appointed to the vacancy in the place of Mr. G. Satyaji Rao. But somehow the appointment is held up and the minds of the people are agitated over it. It is one of those curicus phenomena which we observe here, though not invariably, that whenever the question of the promotion of a non-Brahmin Officer comes up some difficulty or other crops up with the result that either promotion is stopped or the grade is affected to the worse. At a pyscological moment the members of the Bangalore Bar seem to have created some galata and taken exception to the treatment accorded by Mr. Mahadeviah to the members of the Bar and the litigants. It is noteworthy that this protest has come just now when the appointment of the District Judge is pending. Without holding a brief for Mr. Mahadeviah we may say that there are some of the judges belonging to the priestly class whose behaviour is anything but courteous to the Bar or the litigant public, but against whom not a whisper of protest is raised by the Bar which is composed mostly of the same fraternity. The highest judiciary in Mysore is entirely in the hands of Brahmins. It is a recognised policy in British India as in all parts of the world that the judicial appointments should be evenly distributed between different sections of the people. When such is the case, there is this attempt to discount the fitness of Mr. Mahadeviah by these circuitous methods. We can only characterise it as frivolous and vexatious which we hope the Government will discountenance. We trust that Government will do justice and that soon.

THE MYSORE MUNICIPAL COUNCIL.

We are told that Mr. N. Madhava Rao, the popular President of the Mysore City Municipal Council, is going on leave from the 1st of January next year. The matter of his successor is one with which the ratepayers are interested and they are already exercising their minds about it. For aught we know, Mr. Madhava Rao may not return to the place after his leave is over. Rumours are afloat, but nothing very authentic or certain about the likely successor. In some quarters the name of Dr. A. K. Pani who is about to retire after a meritorious service is mentioned. He was formerly the Health Officer of this City and in that capacity did excellent work. We would strongly commend to the kind consideration of Government his name for the Presidentship. He is familiar with the needs of Mysore City, and to tacle the pressing problems of drainage and sanitation and of City improvement in general one cannot find a better person. Besides, he has still plenty of energy with him and it would be but proper not to let go his experience unharnessed and there could be no better way of doing it than by asking him to take charge of the civic development of the capital of Mysore State. We hope that the suggestion commends itself to Government.

ಡಿಸ್ಟ್ರಿಕ್ಟ್ ಜಡ್ಜಿಯವರ ನೇಮಕ.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಜಿ. ಶ್ರೀನಿವಾಸಯ್ಯರ್‌ರವರು ರಜದಮೇಲೆ ಹೋಗಿರುವುದರಿಂದ ಶಿವಮೊಗ್ಗೆಯ ಡಿ|| ಜಡ್ಜಿಯವರಾದ ಮ|| ಜಿ. ಸತ್ಯಾಜಿರಾಯರು ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಆದರೆ ಅವರ ಸ್ಥಾನಕ್ಕೆ ಬೇರೊಬ್ಬರು ಈವರೆಗೂ ನಿಯಮಿಸಲ್ಪಡದಿರುವುದರಿಂದ ನ್ಯಾಯಶಾಖಾಡಳಿತದ ಆಲಸ್ಯಪ್ರದರ್ಶನವಾಗುವುದಲ್ಲದೆ ಕಕ್ಷಿಗಾರರಿಗೆಷ್ಟು ತೊಂದರೆಯಾಗಿರುತ್ತದೆ ಎಂಬುದನ್ನು ಹೇಳಬೇಕಾಗಿಲ್ಲವು. ಈ ಸ್ಥಾನಕ್ಕೆ ಸಬ್ ಜಡ್ಜಿಗಳಲ್ಲಿ ಹಿರಿಯರಾದವರೊಬ್ಬರು ನಿಯಮಿಸಲ್ಪಡತಕ್ಕದಾಗಿದೆ. ಅಂತಹ ಸಬ್ ಜಡ್ಜಿಗಳಲ್ಲಿ ಮ|| ಪಿ. ಮಹಾದೇವಯ್ಯನವರು ಹಿರಿಯರಾಗಿರುತ್ತಾರೆ. ಆದ್ದರಿಂದ ಈಗ ಬಿಡುವಾಗಿರುವ ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಜಡ್ಜಿಯವರ ಸ್ಥಾನಕ್ಕೆ ಅವರೇ ನಿಯಮಿಸಲ್ಪಡಬೇಕಾಗಿದೆ. ಈ ಮಧ್ಯೆ ಮ|| ಮಹಾದೇವಯ್ಯನವರು ಲಾಯರುಗಳಿಗೂ, ಕಕ್ಷಿಗಾರರಿಗೂ ತೊಂದರೆಯನ್ನು ಕೊಡುತ್ತಿರುವರಾದುದರಿಂದ ಅವರುಗಳ ಅನುರಾಗಕ್ಕೆ ಪಾತ್ರರಾಗಿಲ್ಲವೆಂದು ಮೊದಲಾಗಿ ಬೆಂಗಳೂರಿನ ಲಾಯರು ಸಂಘದವರು "ಶಿವಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ" ಒಂದು ಗೊಂದಲವನ್ನು ಹಚ್ಚಿರುವರು. ಹಿಂದುಳಿದ ವರ್ಗದ ಅಧಿಕಾರಿಗಳ ಅಭಿವೃದ್ಧಿಯ ವಿಚಾರವು ಬಂದ ವೇಳೆಯಲ್ಲಿ ಈರೀತಿ ಅಲ್ಲದ ಸಲ್ಲದ ದೋಷಾರೋಪಣೆಗಳನ್ನು ಮಾಡಿ ಕೋಲಾಹಲವನ್ನೆಬ್ಬಿಸಿ ಅವರ ಅಭಿವೃದ್ಧಿಗೆ ಕಲ್ಲುಹಾಕುವುದು ಮುಂಬರಿದ ವರ್ಗದ ಅಸೂಯೆಗಳ ನಿಸರ್ಗಗುಣವಾಗಿದೆ. ಹಾಗಲ್ಲದಿದ್ದರೆ ಕಕ್ಷಿಗಾರರ ಧನ ಮಾನ ಪ್ರಾಣಸಂರಕ್ಷಣಾ ದೀಕ್ಷಾಬದ್ಧರಾಗಿರುವ ಈ ಲಾಯರುಗಳು, ಕಕ್ಷಿಗಾರರನ್ನು ಗದರಿಸಿ ಅವರಮೇಲೆ ಈದಹುಲಿಯಂತೆ ಬೀಳುವವರಾದ ಮತ್ತು ಲಕ್ಷಾಧೀಶ್ವರರನ್ನು ಸಹ ಪಾಪರೆಂದು ಪ್ರಕಟಿಸುವವರಾದ ಸಜಾತೀಯ ನ್ಯಾಯಾಧೀಶರ ವಿಚಾರದಲ್ಲಿ ಚಕಾರ ಶಬ್ದವನ್ನು ಸಹ ಆಡದೆ ಮೌನರಾಗಿರುತ್ತಿದ್ದರೆ? ಅದುಕಾರಣ ಪ್ರಭುತ್ವದವರು ಇಂತಹ ಅಸೂಯಾಪರರ ಪೊಳ್ಳುಕೂಗಿಗೆ ಗಮನ ಕೊಡದೆ ಈಗ ಬಿಡುವಾಗಿರುವ ಡಿ|| ಜಡ್ಜಿಯವರ ಸ್ಥಾನಕ್ಕೆ ಎಲ್ಲ ವಿಧದಲ್ಲೂ ಅರ್ಹರಾಗಿರುವ ಸಬ್ ಜಡ್ಜಿಯವರನ್ನು ನಿಯಮಿಸಿ ತಮ್ಮ ಉಚಿತಜ್ಞತೆಯನ್ನು ವ್ಯಕ್ತಪಡಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು.

ನಮ್ಮ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಎನ್. ಮಾಧವರಾಯರು ಬರುವ ಜನವರಿ ತಾ|| 1 ರಿಂದ ರಜದಮೇಲೆ ಹೋಗುವವರಾಗಿರುವರಲ್ಲದೆ ಮರಳಿ ಈ ಉದ್ಯೋಗದಮೇಲೆ ಬರುವ ಸಂಭವವಿಲ್ಲವೆಂದು ತಿಳಿಯಬರುತ್ತದೆ. ಈವರೆಗೆ ಇಲ್ಲಿಯ ಪ್ರೆಸಿಡೆಂಟರಾಗಿ ಬಂದವರಲ್ಲಿ ಮ|| ಮಾಧವರಾಯರಷ್ಟು ದಕ್ಷತೆಯಿಂದಲೂ, ದರ್ಪದಿಂದಲೂ, ನಿಷ್ಪಕ್ಷಪಾತತೆಯಿಂದಲೂ, ಕರುಣೆಯಿಂದಲೂ, ಉದ್ಯೋಗ ನಿರ್ವಾಹಮಾಡುತ್ತ ಮತ್ತು ಕೌನ್ಸಿಲರುಗಳೊಡನೆ ಸುಹೃದ್ಭಾವದಿಂದಲೂ, ಮೈತ್ರಿಯಿಂದಲೂ ಇದ್ದುಕೊಂಡು ಮಿಾಟಿಂಗುಗಳನ್ನು ಹೂವಿನಸರವೆತ್ತಿದಂತೆ ಬಹು ಸುಲಭವಾಗಿ ನಡಿಸಿಕೊಂಡು ಬರುತ್ತ ಕೌನ್ಸಿಲರುಗಳ, ಕೈಕೆಳಗಿನ ಕೆಲಸಗಾರರ ಮತ್ತು ಪುರಜನರ ಪ್ರೀತಿವಿಶ್ವಾಸಗಳಿಗೂ ಮೆಚ್ಚುಗೆಗೂ ಪಾತ್ರರಾದವರು ಬೇರೊಬ್ಬರಿಲ್ಲವೆಂದು ಹೇಳುವುದು ಅತಿಶಯೋಕ್ತಿಯಲ್ಲವು. ಇಂತಹ ಪ್ರಜಾನುರಾಗಿಗಳಾದ ಅಧಿಕಾರಿಗಳ ಸಂಬಂಧವನ್ನು ರಾಜಧಾನಿಯ ನಿವಾಸಿಗಳು ಕಳೆದುಕೊಳ್ಳುವುದಕ್ಕಾಗಿ ಚಿಂತಾಕ್ರಾಂತರಾಗಿರುವರಲ್ಲದೆ, ಈ ಸ್ಥಾನಕ್ಕೆ ಇನ್ನೆಂತಹವರು ಬರುತ್ತಾರೋ ಎಂದು ಕುತೂಹಲಾವಿಷ್ಟರಾಗಿರುವರು. ಈ ಮಧ್ಯೆ ಉದ್ಯೋಗದಿಂದ ನಿವೃತ್ತರಾಗುವವರಾಗಿರುವ ಡಾ|| ಪಾಣಿಯವರು ಇಲ್ಲಿಯ ಪ್ರೆಸಿಡೆಂಟರಾಗಿ ಬರುವರೆಂಬ ವದಂತಿಯು ಹುಟ್ಟಿದೆ. ಇವರು ನಮ್ಮ ರಾಜಧಾನಿಯಲ್ಲಿ ಬಹುಕಾಲ ಹೆಲ್ತಾಫೀಸರಾಗಿದ್ದು ಇಲ್ಲಿಯ ಜನರ ಆರೋಗ್ಯಾಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡಿದವರಾಗಿಯೂ, ಜನರ ನಡೆನುಡಿಗಳನ್ನು ಅರಿತವರಾಗಿಯೂ, ಕಷ್ಟಪಟ್ಟು ಕೆಲಸಮಾಡಲು ತಕ್ಕ ಶಕ್ತಿವಂತರಾಗಿಯೂ, ಉತ್ಸಾಹಶೀಲರಾಗಿಯೂ ಇರುವುದರಿಂದ ಮ|| ಮಾಧವರಾಯರ ಅಗಲಿಕೆಯಿಂದುಂಟಾಗುವ ಕೊರತೆಯು ಬಹುಮಟ್ಟಿಗೆ ನಿವಾರಣೆಯಾಗುವ ಭರವಸೆಯಿರುವಪ್ರಯುಕ್ತ ಪ್ರಭುತ್ವದವರು ಈ ವಿಚಾರವನ್ನು ಚೆನ್ನಾಗಿ ಪರ್ಯಾಲೋಚಿಸಿ ಡಾ|| ಪಾಣಿಯವರ ಕಾಲೋಚಿತವಾದ ಸಹಾಯವನ್ನು ರಾಜಧಾನಿಯ ನಿವಾಸಿಗಳಿಗೆ ದೊರಕಿಸಿಕೊಡಬೇಕಾಗಿ ಸೂಚಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಯಡತೊರೆ ತಾ|| ಅಕ್ಕಿಹೆಬ್ಬಾಳದ ಸ್ಕೌಟ್ ಅಸೋಸಿಯೇಷನ್ನಿನ ವಾರ್ಷಿಕೋತ್ಸವವು ಈ ತಾ|| 14 ರಲ್ಲಿ ವಿಜೃಂಭಣೆಯಿಂದ ನಡೆಸಲ್ಪಡುವುದು.

ರಿಟೈರ್ಡ್ ಸೀನಿಯರ್ ಸರ್ಜನರಾದ ಡಾಕ್ಟರ್ ಮೈಲ್ವಾಗನಂರವರು ಆಂಗ್ಲದೇಶಪರ್ಯಟನವನ್ನು ಪೂರೈಸಿಕೊಂಡು ಕಳೆದ ಭಾನುವಾರ ಬೆಂಗಳೂರನ್ನು ಸುರಕ್ಷಿತವಾಗಿ ತಲುಪಿದರು.

ರಾಜಧಾನಿಯ ಸಂತೆಪೇಟೆಯಲ್ಲಿರುವ ಮ|| ಬ್ರಹ್ಮಪ್ಪ ತವನಪ್ಪನವರ ಅಂಗಡಿಯಲ್ಲಿ ಶ್ರೀಧನಲಕ್ಷ್ಮೀಪೂಜಾಮಹೋತ್ಸವವು ಈ ತಾ|| 5 ರ ರಾತ್ರಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಮೈಸೂರು ನ್ಯಾಯವಿಧಾಯಕಸಭೆಯ ಮಿಾಟಿಂಗು ಬೆಂಗಳೂರು ಪಬ್ಲಿಕ್ ಆಫೀಸಿನ ಸಭಾಂಗಣದಲ್ಲಿ ಬರುವ ಡಿಸೆಂಬರ್ ತಾ|| 14 ನೇ ಮಂಗಳವಾರ ಮಧ್ಯಾಹ್ನ 12 ಘಂಟೆಗೆ ಆರಂಭಗೊಂಡು ನಡೆಯುವುದು.

ರಾಜಧಾನಿಯ ರೈಲ್ವೆಸ್ಟೇಷನ್ನಿನಿಂದ 3 ಮೈಲಿ ದೂರದಲ್ಲಿರುವ ಕ್ಷಯರೋಗಆಸ್ಪತ್ರೆಯ ರೋಗಿಗಳ ಬೇಸರಿಕೆಯ ಪರಿಹಾರಕ್ಕಾಗಿ ಪ್ರತಿ ಭಾನುವಾರಸಾಯಂಕಾಲ ಅರಮನೆಯ ಕಾನ್ಸರ್ಟ್ ಮೊದಲಾದ ವಾದ್ಯವಾದನವಾಗುವಂತೆ ಶ್ರೀಮನ್ಮಹಾರಾಜರವರಪ್ಪಣೆಯಾಗಿರುತ್ತದೆ.

ಕಳೆದ ಅಕ್ಟೋಬರ್ ತಾ|| 16 ಕ್ಕೆ ಅಂತ್ಯವಾದ ಒಂದು ವಾರದಲ್ಲಿ ಮೈಸೂರುರೈಲ್ವೆಗಳಿಂದ 1,25,600 ರೂ. ಉತ್ಪನ್ನವಾಗಿರುತ್ತದೆ; ಇದರ ಹಿಂದಣ ವಾರದಲ್ಲಿ 65,900 ರೂ. ಮಾತ್ರ ಉತ್ಪನ್ನವಾಗಿದ್ದಿತು. ಇಷ್ಟೊಂದು ಹೆಚ್ಚುತ್ಪನ್ನಕ್ಕೆ ದಸರಾಮಹೋತ್ಸವಕ್ಕಾಗಿ ವಿಶೇಷ ಜನರು ಬಂದು ಹೋದುದು ಕಾರಣವಾಗಿದೆ.

ಬೆಂಗಳೂರಲ್ಲಿರುವ ಹುಚ್ಚರ ಆಸ್ಪತ್ರೆಯ ಹೆಸರನ್ನು "ಬುದ್ಧಿಭ್ರಾಮಕಾಸ್ಪತ್ರೆ" ಎಂದು ಬದಲಾಯಿಸಬೇಕೆಂದು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನದಲ್ಲಿ ಮ|| ಗುಲಾಂ ಅಬ್ಬಾಸ್ ಖಾನ್‌ರವರೂ, ಜಿ. ಪರಮಶಿವಯ್ಯನವರೂ ಅರಿಕೆ ಮಾಡಿಕೊಂಡಿದ್ದುದದರಮೇಲೆ, "ಮಾನಸಿಕ ಆಸ್ಪತ್ರೆ" ಎಂದು ಕರೆಯಲ್ಪಡಬೇಕಾಗಿ ಸರ್ಕಾರದ ಅಪ್ಪಣೆಯಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿಸಭೆಯ ದಸರಾಧಿವೇಶನವು ಕಳೆದ ತಾ|| 26 ರಲ್ಲಿ ಮುಕ್ತಾಯವಾಯಿತಷ್ಟೆ. ಅದರ ಹಿಂದಿನ ಸಾಯಂಕಾಲ ಮೈಸೂರು ಪ್ರಾಗತಿಕಪಕ್ಷಾಧಿಪತಿ ಮ|| ಹೊಸಕೊಪ್ಪ ಕೃಷ್ಣರಾಯಪ್ರಭೃತಿಗಳು ದಿವಾನರನ್ನೂ ಕೌನ್ಸಿಲರು ಮೊದಲಾಗಿ ಮುಖ್ಯಾಧಿಕಾರಿಗಳನ್ನೂ ಮಾಡರ್ನ್ ಹೋಟಲಿಗೆ ಬರಮಾಡಿಕೊಂಡು ಅಲ್ಪಾಹಾರಸಮಾರಾಧನೆಯಿಂದ ಸತ್ಕರಿಸಿದರು.

ಕಳೆದ ತಾ|| 30 ರಲ್ಲಿ ನಡೆದ ರಾಜಧಾನಿಯ ಮ್ಯುನಿಸಿಪಲ್‌ಕೌನ್ಸಿಲ್ ಮಿಾಟಿಂಗಿನಲ್ಲಿ ಕಳೆದ 4 ವರ್ಷಗಳಿಂದಲೂ ಮ್ಯುನಿಸಿಪಲ್‌ಕೌನ್ಸಿಲರಾಗಿದ್ದ ಮ|| ಯು. ಆರ್. ಲಿಂಗೋಜಿರಾಯರು ವಿಧಿವಶರಾದುದಕ್ಕಾಗಿ ಕೌನ್ಸಿಲಿನವರು ತಮ್ಮ ಅನುತಾಪವನ್ನು ಪ್ರದರ್ಶಿಸಿದರಲ್ಲದೆ, ಅರಮನೆಯಿಂದ ಸ್ಥಾಪಿತವಾಗಿರುವ ವೃದ್ಧಾಶ್ರಮದ ಪೋಷಣೆಗಾಗಿ 1,000 ರೂ. ಗಳನ್ನು ಧರ್ಮಮಾಡಿದ ಸೋದರ ಕೌನ್ಸಿಲರು ಧರ್ಮಪ್ರಕಾಶ ಡಿ. ಬನುಮಯ್ಯನವರನ್ನು ಅಭಿನಂದಿಸಿದರು.

ಯಾದಗಿರಿಯಲ್ಲಿ ಪ್ರಕಟವಾಗುವ ಧರ್ಮಸಂಜೀವಿನಿ ಮಾಸಪತ್ರಿಕೆಯು ಮುದ್ರಣದ ಕೊರತೆಯಿಂದ ಸಕಾಲಕ್ಕೆ ಹೊರಡಲವಕಾಶವಿಲ್ಲದಿದ್ದುದರಮೇಲೆ, ಯಾದಗಿರಿ ಶಂಕರಪಾಠಶಾಲೆಯ ಮೆಂಬರುಗಳ ದ್ರವ್ಯಸಹಾಯದಿಂದ ಒಂದು ಮುದ್ರಾಲಯವನ್ನು ಸ್ವಂತವಾಗಿ ಸ್ಥಾಪಿಸಿರುವುದರಿಂದ, ಮುಂದೆ ಧರ್ಮಸಂಜೀವಿನಿ ಪತ್ರಿಕೆಯು ಕ್ರಮವಾಗಿ ಹೊರಡುವುದೆಂದೂ, ಹಿಂದೆರಡುತಿಂಗಳಿಂದ ಪ್ರಕಟವಾಗದಿದ್ದುದಕ್ಕಾಗಿ ಅದರ ಚಂದಾದಾರರು ಕ್ಷಮಿಸಬೇಕೆಂದೂ ಆ ಪತ್ರಿಕಾಸಂಪಾದಕರು ಈಮೂಲಕ ಪ್ರಾರ್ಥಿಸುತ್ತಾರೆ.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನ ಮೇಲ್ವಿಚಾರಣಾಕಮಿಟಿಯವರು ಅಂದರೆ ಟ್ರಸ್ಟಿಗಳು ಸ್ಕೂಲಿನ ಲೆಕ್ಕವನ್ನೂ, ಆಡಳಿತದ ವರದಿಯನ್ನೂ ಪ್ರತಿವರ್ಷದಲ್ಲೂ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಲ್ಲಿಗೆ ಕಳುಹಿಸಿಕೊಡಬೇಕೆಂಬ ನಿರ್ಬಂಧವಿದ್ದಾಗ್ಯೂ, ಕಳೆದ 8-10 ವರ್ಷಗಳಿಂದಲೂ ಕಳುಹಿಸಿಕೊಡದಿರಲು ಕಾರಣವೇನೆಂದು ಡಿಸ್ಟ್ರಿಕ್ಟ್ ಜಡ್ಜಿಯವರು ಟ್ರಸ್ಟಿಗಳನ್ನು ಕೇಳಿದ್ದುದರಮೇಲೆ, ಕೊಂಚ ಕಾಲಾವಧಿಯನ್ನು ಕೊಡಬೇಕೆಂದು ಕಮಿಟಿಯ ಸೆಕ್ರೆಟರಿಯವರು ಕೇಳಿಕೊಂಡಿರಲಾಗಿ ಈ ತಾ|| 11 ರಲ್ಲಿ ಲೆಕ್ಕವು ಕಳುಹಲ್ಪಡಬೇಕೆಂದು ಡಿ|| ಜಡ್ಜಿಯವರ ಅಪ್ಪಣೆಯಾಗಿರುವುದಾಗಿ ಕೇಳುತ್ತೇವೆ.

ಬೊಂಬಾಯಿ ನ್ಯಾಯವಿಧಾಯಕಸಭಾ ಸಭ್ಯರಾಗಿ ಆರಿಸಲ್ಪಡಲು ಹುಬ್ಬಳಿಯ ರಾವ್‌ಬಹದ್ದೂರ್ ಕಂಬಳಿ ವಕೀಲರವರು ಅಭ್ಯರ್ಥಿಗಳಾಗಿ ನಿಂತಿರುವಂತೆ ಧಾರವಾಡದಲ್ಲಿ ವಕೀಲರಾಗಿರುವ ಮ|| ಹೊಸಮನಿ, ಬಿ.ಎ.,ಎಲ್‌ಎಲ್.ಬಿ., ರವರೂ ಅಭ್ಯರ್ಥಿಗಳಾಗಿ ನಿಂತಿರುವರು. ಮ|| ಹೊಸಮನಿಯವರು ವಿದ್ಯಾವಿಭೂಷಿತರಾಗಿರುವರಲ್ಲದೆ ಹಿಂದುಳಿದ ಜನವರ್ಗದವರ ಹಿತಕಾಂಕ್ಷೆಯಿಂದ ದೇಶಸೇವೆಯನ್ನು ಮಾಡಬೇಕೆಂಬ ಕುತೂಹಲವಿಷ್ಟರಾಗಿರುವುದರಿಂದ ಸ್ವಕ್ಷೇಮಾಭಿಲಾಷಿಗಳಾದ ಓಟರುಗಳು ತಮ್ಮ ಮತವನ್ನು ಅವರಿಗೆ ಕೊಟ್ಟು ಕೃತಕೃತ್ಯರಾಗಲೆಂದೂ, ಮ|| ಹೊಸಮನಿಯವರು ತಮ್ಮ ಸತ್ಪ್ರಯತ್ನದಲ್ಲಿ ಜಯಶಾಲಿಗಳಾಗಲೆಂದೂ ಅಪೇಕ್ಷಿಸುತ್ತೇವೆ.

ಬೆಂಗಳೂರು ತಾ|| ಹೆಣ್ಣೂರುವಾಸಸ್ಥನಾದ ಚಿಕ್ಕಪುಟ್ಟಯ್ಯನೆಂಬವನು ತನ್ನ 14 ವರ್ಷವಯಸ್ಸಿನ ಮಗಳನ್ನು ಅವಳ ಮೈಮೇಲಿದ್ದ 400 ರೂ. ನ ಆಭರಣಗಳಸಮೇತವಾಗಿ ಅದೇ ತಾ|| ಸಾದೇನಹಳ್ಳಿಯ ಅಪ್ಪಯ್ಯ ಮತ್ತು ಸಣ್ಣಪ್ಪ ಎಂಬವರು ಅಪಹರಿಸಿಕೊಂಡು ಹೋಗಿ ಅಪ್ಪಯ್ಯನ ಮಗನಾದ ಭೈರನೆಂಬವನಿಗೆ ವಿವಾಹಮಾಡಿಕೊಂಡರೆಂದು ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದುಮಾಡಿದ್ದನು. ಈ ವಿವಾದದ ವಿಚಾರಣೆಯು ಕಳೆದ ತಾ|| 29 ರಲ್ಲಿ ಪೂರೈಸಿ ಹುಡುಗಿಯು 19 ವರ್ಷವಯಸ್ಕಳಾಗಿ ಮೇಜರಳಾಗಿದ್ದು ತನ್ನ ಸೋದರಮಾವನಾದ ಅಪ್ಪಯ್ಯನ ಮಗನನ್ನು ತಾನೇ ವರಿಸಿ ಲಗ್ನವಾದಳೆಂದು ಆಕೆಯ ವಾಜ್ಮೂಲದಿಂದ ವ್ಯಕ್ತಪಟ್ಟುದರಮೇಲೆ ವಿವಾದವು ತಳ್ಳುಪಡಿಮಾಡಲ್ಪಟ್ಟಿತು.

ರಾಜಧಾನಿಯಲ್ಲಿ ಬಡಬಗ್ಗರು ವಾಸಿಸುತ್ತಿರುವ ಬೀದಿಗಳು ಮ್ಯುನಿಸಿಪಾಲಿಟಿಯವರ ಕಟಾಕ್ಷಕ್ಕೆ ಬೀಳದೆ ಹಳ್ಳಕೊಳ್ಳಗಳಿಂದ ನಿಬಿಡವಾಗಿ ತಿರುಗಾಡುವ ಜನರು ಹಗಲೇ ಮುಗ್ಗರಿಸಿ ಬೀಳುತ್ತಿರುವಾಗ್ಗೆ, ಬೀದಿಯ ದೀಪಗಳಿಲ್ಲದೆ ಕತ್ತಲೆಯಲ್ಲಿ ತಿರುಗಾಡುವವರ ಪಾಡನ್ನು ಹೇಳಬೇಕಾದುದಿಲ್ಲವೆಂದೂ, ಈ ವಿಚಾರವನ್ನು ದೀಪದ ಸೂಪರಿಂಟೆಂಡೆಂಟರವರ ಗಮನಕ್ಕೆ ತಂದಾಗ್ಯೂ ಪ್ರಯೋಜನವಾಗದೆ, ಯಾವ ಚ್ಯುತಿಯೂ ಇಲ್ಲದೆ ರಾತ್ರಿಯೆಲ್ಲಾ ವಿದ್ಯುದ್ದೀಪವು ಉರಿಯುತ್ತಿರುವ ಗುಡ್ಡಪ್ರದೇಶದ ಮೃಗಗಳಿಗಿಂತಲೂ ತಮ್ಮ ಸ್ಥಿತಿಯು ಹೀನವಾದುದೆಂದೂ ಒಬ್ಬ ಕಷ್ಟಾನುಭವಿಯು ಬರೆದಿರುತ್ತಾರೆ. ದೊಡ್ಡಬೀದಿಗಳಲ್ಲಿ ವಾಸಿಸುವವರಂತೆಯೇ ಕಂದಾಯವನ್ನು ತೆರುತ್ತಿರುವ ಬಡ ನಿವಾಸಿಗಳ ಕುಂದುಕೊರತೆಗಳ ಕಡೆಗೆ ಸರ್ಕಾರಿಯಧಿಕಾರಿಗಳು ಗಮನ ಕೊಡುವುದು ಅತ್ಯವಶ್ಯವೂ ಅವಸರವೂ ಆಗಿರುತ್ತದೆ.

ರಾಜಧಾನಿಯಲ್ಲಿ ಪಕ್ಷಕ್ಕೊಮ್ಮೆ ಪ್ರಕಟವಾಗುತ್ತಿರುವ ವಿಶ್ವಬಂಧುಪತ್ರಿಕೆಯು ತನ್ನ ಉತ್ಪಾದಕರೂ, ಪೋಷಕರೂ ಆಗಿದ್ದ ಆ ಚಿರಸ್ಮರಣೀಯ ಶ್ರೀಮಂತ ಮೋತಿಚಾನೆ ವರ್ಧಮಾನಯ್ಯನವರ ಸಚಿತ್ರಜೀವನಚರಿತ್ರೆಯನ್ನು ಸ್ಮಾರಕಸಂಚಿಕೆಯನ್ನಾಗಿ ಹೊರಡಿಸಿರುವುದರ ಪ್ರತಿಯೊಂದನ್ನು ನಾವು ಸ್ವಾಭಿಮಾನದಿಂದ ಸ್ವೀಕರಿಸಿರುವೆವು. ಈ ಸ್ಮಾರಕಸಂಚಿಕೆಯಲ್ಲಿ, ಶ್ರೀಮಂತರ ಇಹಲೋಕಯಾತ್ರೆಯಲ್ಲಿ ಬಾಲ್ಯಾರಭ್ಯ ಪರಲೋಕಯಾತ್ರೆಯವರೆಗೂ ನಡೆದಿರುವ ಚರಿತ್ರೆಯು ಕಾಲೋಚಿತ ಭಾವಚಿತ್ರಗಳೊಡನೆ ಮುದ್ರಿಸಲ್ಪಟ್ಟಿರುತ್ತದೆ. ಇದರ ಸಾದ್ಯಂತಾವಲೋಕನದಿಂದ ಕರ್ನಾಟಕಜೈನಸಮಾಜಕ್ಕೆ ಕಿರೀಟಪ್ರಾಯರಾಗಿದ್ದ ಆ ವರ್ಧಮಾನಯ್ಯನವರು ಎಂತಹ ಪರಿಶುದ್ಧಾತ್ಮರೂ, ಸ್ವಜನ ಸ್ವದೇಶಾಭಿಮಾನಿಗಳೂ, ಪ್ರಭುಭಕ್ತಿಪರಾಯಣರೂ, ಪುಶ್ರಮಾಭಿಮಾನಿಗಳೂ ಆಗಿದ್ದು ಚಿರಸ್ಮರಣೀಯರೂ ಆದರ್ಶಪ್ರಾಯರೂ ಆಗಿರುವರೆಂಬುದು ಸುವ್ಯಕ್ತವಾಗುತ್ತದೆ. ಇಂತಹ ಲೋಕೋತ್ತರ ಪವಿತ್ರಾತ್ಮರ ಜೀವನಚರಿತ್ರೆಯನ್ನು ವಿಶ್ವಬಂಧು ಪ್ರಕಟಿಸಿ ತನ್ನ ಕೃತಜ್ಞತೆಯನ್ನು ಪ್ರದರ್ಶಿಸಿದುದಕ್ಕಾಗಿ ನಾವು ಅದನ್ನು ಅಭಿನಂದಿಸುತ್ತೇವೆ.

ಸರ್ ಎಂ. ವಿಶ್ವೇಶ್ವರಯ್ಯನವರ ಸಹೋದರರಾದ ಬೆಂಗಳೂರು ಅಡ್ವೋಕೇಟ್ ಮ|| ಎಂ. ರಾಮಚಂದ್ರರಾಯರು ದಸರಾಮಹೋತ್ಸವದಲ್ಲಿ ರಾಜಧಾನಿಗೆ ಬಂದು ದಿವಾನರ ಬಂಗಲೆಯಲ್ಲಿ ಅವರ ಅತಿಥಿಗಳಾಗಿದ್ದ ವೇಳೆಯಲ್ಲಿ ಅವರು ಎಕ್ಸಿಕ್ಯುಟಿವ್ ಕೌನ್ಸಿಲಿನ ಆನರರಿ ಮೆಂಬರಾಗಿ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವರೆಂಬ ಸುದ್ದಿಯು ಹುಟ್ಟಿ ಎಲ್ಲೆಲ್ಲೂ ಹಬ್ಬಿದುದರಮೇಲೆ, ಮ|| ರಾಯರಿಗೆ ಅವರ ಮಿತ್ರಮಂಡಲಿಯವರಿಂದ ಅಭಿನಂದನಮಳೆಗರೆಯಲ್ಪಟ್ಟು ಕಡೆಯಲ್ಲಿ ಅದು ನಿರಾಧಾರವಾದ ಸುದ್ದಿಯೆಂದು ಪ್ರಕಟವಾಗಿದ್ದಿತು. ಆದರೆ ಶ್ರೀಮನ್ಮಹಾರಾಜರವರ ವಾಗ್ದಾನದ ಪ್ರಕಾರ ಈ ಗೌರವಸ್ಥಾನ ಕಲ್ಪನೆಯಾಗಲೇಬೇಕಾಗಿರುವುದರಿಂದ, ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಯನ್ನು ಬಿಟ್ಟಮೇಲೆ ಯಾವ ಪ್ರಯೋಜನಾಪೇಕ್ಷೆಯಿಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಯಾಲಯ, ಕಾವೇರಿಜಲಾಶಯ ಮೊದಲಾದ ಕಾರ್ಯಗಳಲ್ಲಿ ಕೆಲಸಮಾಡುತ್ತಿರುವುದರ ಪ್ರತಿಫಲವಾಗಿ ಅವರ ಸಹೋದರರು ಆನರರಿ ಕೌನ್ಸಿಲರಾಗಿ ನಿಯಮಿಸಲ್ಪಡುವರೆಂಬ ವದಂತಿಯು ಪುನಃ ಹುಟ್ಟಿ ಪ್ರಬಲವಾಗುತ್ತಿದೆ.

ವರ್ತಮಾನಸಂಗ್ರಹ.

ಚೀನಾರಾಜ್ಯದ ಪೆಕಿಂಗ್ ನಗರದಲ್ಲಿ 18 ವರ್ಷದ ಒಬ್ಬ ಹುಡುಗಿಯನ್ನು ಸಪತ್ನೀಕನೂ, ಕುರೂಪಿಯೂ ಆದ ವೃದ್ಧನಿಗೆ 650 ರೂ. ಗಳಿಗೆ ಮಾರಕೊಡದೆಂದು ತಂದೆಯನ್ನು ಆಕೆಯು ಎಷ್ಟು ಪ್ರಾರ್ಥಿಸಿದರೂ ಕೇಳದಿರಲು ಹುಡುಗಿಯು ಹತಾಶಳಾಗಿ ಮದುವೆಯ ಕಾಲದಲ್ಲಿ ವಿಷಪಾನಮಾಡಿ ಹಸೆಮಣೆಯಮೇಲೆಯೇ ಮೃತಳಾದಳು.

ಇಂಡಿಯಾದೇಶದಲ್ಲಿ ಸುಮಾರು 7 ಕೋಟಿ ಮಂದಿ ಮಹಮ್ಮದೀಯರಿರುವರು. ಇವರಲ್ಲಿ ನಾಲ್ಕು ಕೋಟಿ ಜನರಾದರೂ ವರ್ಷಂಪ್ರತಿ ತಲೆಯೊಂದಕ್ಕೆ ನಾಲ್ಕಾಣೆ ಮೇರೆ ಚಂದಾ ಕೊಡುತ್ತಾ ಬರುವುದಾದರೆ, ಪ್ರತಿವರ್ಷವೂ ಖಿಲಾಫತ್ ಫಂಡಿಗೆ ಒಂದು ಕೋಟಿ ರೂಪಾಯಿಗಳು ಶೇಖರಿಸುತ್ತಾ ಹೋಗುವುವೆಂದು ಮೌಲಾನಾ ಶೌಕತ್‌ಅಲಿಯವರು ಹೇಳಿರುತ್ತಾರೆ.

ಫಿಲಿಪೈನ್ ದ್ವೀಪಗಳಮೇಲೆ ಹರಿಕೇನ್ ಎಂಬ ಪ್ರಚಂಡ ಮಾರುತವು ಕಳೆದ 12 ನೇ ತಾರೀಖಿನಲ್ಲಿ ಬೀಸಿದ್ದರಿಂದ ಅನೇಕ ಊರುಗಳು ನೆಲಸಮವಾಗಿ ಹೋದವು; ಕೆಲವು ಸಕ್ಕರೆ ಕಾರ್ಖಾನೆಗಳು ಸಂಪೂರ್ಣವಾಗಿ ಹಾಳಾದವು. ಇದರಿಂದ ಸುಮಾರು 25 ಕೋಟಿ ರೂ.ಗಳಿಗೆ ಮೇಲ್ಪಟ್ಟು ಆಸ್ತಿಯೆ ಮತ್ತು 600 ಕ್ಕೆ ಮೇಲ್ಪಟ್ಟು ಜನರ ನಷ್ಟವಾಗಿರುತ್ತದೆ. ಗಾಯಪಟ್ಟವರ ಮತ್ತು ಮನೆಮಠಗಳಿಲ್ಲದೆ ಅಲೆಯುತ್ತಿರುವವರ ಸಂಖ್ಯೆಯು ಅಪಾರವಾಗಿದೆ.

ಪಾಟಿಯಾಲಾ ಸಂಸ್ಥಾನದ ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಎಲ್ಲ ಮ್ಯುನಿಸಿಪಲ್ ಆವರಣಗಳಲ್ಲೂ ಪ್ರೈಮರಿ ವಿದ್ಯಾಭ್ಯಾಸವು ನಿರ್ಬಂಧಗೊಳಿಸಲ್ಪಡಬೇಕೆಂತಲೂ, ಕಾಲ್ನಡೆಗಳ ತಳಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಗೂಳಿಗಳನ್ನು 55,000 ರೂಪಾಯಿಗಳ ವೆಚ್ಚದಿಂದ ಸಲಹಬೇಕೆಂತಲೂ, ನೂರಾರು ವ್ಯವಸಾಯಮುಟ್ಟುಗಳನ್ನು ಹಂಚುವುದಕ್ಕಾಗಿ 25,000 ರೂಪಾಯಿಗಳನ್ನು ಖರ್ಚುಮಾಡಬೇಕೆಂತಲೂ ಮಹಾರಾಜರವರು ಅಪ್ಪಣೆಮಾಡಿರುವರು.

ವಿವಾಹ ಮುಂತಾದ ವಿಶೇಷ ಸಮಯಗಳಲ್ಲಿ ದುಂದುವ್ಯಯ ಮಾಡುವವರು ನಮ್ಮ ಹಿಂದೂದೇಶೀಯರೇ ಎಂದು ಪ್ರಸಿದ್ಧವಾಗಿರುತ್ತದೆ. ಆದರೆ ಈಗ ಮೊರಾಕೋದೇಶದ ಸುಲ್ತಾನರು ತಮ್ಮ ಮಗನ ಮದುವೆಗಾಗಿ ಮಾಡುತ್ತಿರುವ ಪ್ರಯತ್ನಗಳು ಅಗಾಧವಾಗಿವೆ. ದೀಪೋತ್ಸವ ಒಂದಕ್ಕೆ 30 ಲಕ್ಷ ಫ್ರಾಂಕುಗಳು ಖರ್ಚಾಗುವವಂತೆ! ಬಡಬಗ್ಗರಿಗೆ ಅನ್ನಹಾಕುವುದಕ್ಕಾಗಿ 16 ಲಕ್ಷ ಫ್ರಾಂಕುಗಳು ಸ್ಯಾಂಕ್ಷನ್ ಆಗಿವೆ. ವಧೂವರರಿಗೆ ಕೊಡುವ ಬಹುಮಾನದ ಪದಾರ್ಥಗಳೇ ಒಂದುಕೋಟಿ ಫ್ರಾಂಕುಗಳ ಬೆಲೆಬಾಳುವವು.

ವಿದ್ಯಾರ್ಥಿಗಳು ರಜಾ ಕಾಲದಲ್ಲಿ ತಂತಮ್ಮ ಊರುಗಳಿಗೆ ಹೋಗಿ ಅಲ್ಲಿನ ಜನರಲ್ಲಿ ನೂತನ ವ್ಯವಸಾಯಕ್ರಮದ ಫಲಗಳನ್ನು ವಿವರಿಸಿ ಹೇಳಬೇಕು. ಸ್ಕೂಲುಗಳಲ್ಲಿರುವ ಬಾಲಕರು 11-12 ವರ್ಷ ವಯಸ್ಕರಾಗುತ್ತಲೇ ಅವರಿಗೆ ಭೂವ್ಯವಸಾಯದಮೇಲೆ ಮನಸ್ಸು ಹುಟ್ಟುವಂತೆ ಶಿಕ್ಷಣ ಕೊಡಬೇಕು. ವ್ಯವಸಾಯದ ಪರೀಕ್ಷಾ ಕೆಲಸಗಳನ್ನು ಒಂದೇ ಕಡೆ ನಡೆಸಬಾರದು ಎಂದು ಪೂನಾನಗರದಲ್ಲಿ ಸೇರಿದ್ದ ಅಗ್ರಿಕಲ್ಚರಲ್ ಕಮಿಷನರವರ ಮುಂದೆ ಅಲ್ಲಿನ ವ್ಯವಸಾಯದ ಇಲಾಖಾ ಡೈರೆಕ್ಟರವರಾದ ಡಾಕ್ಟರ್ ಮಾನ್‌ರವರು ಹೇಳಿರುತ್ತಾರೆ.

ಕೂಚ್‌ಬಿಹಾರಿನ ಮಹಾರಾಣಿಯವರು 1½ ಲಕ್ಷ ರೂ. ಬೆಲೆಬಾಳುವ ನವರತ್ನಖಚಿತವಾದ ತಮ್ಮದೊಂದು ಕಂಠಹಾರವನ್ನು ವಿಕ್ರಯಿಸಲಿಕ್ಕಾಗಿ ಕೇಸರಬಾಯ್ ದೇಬಿಚಂದ್ ಎಂಬ ವರ್ತಕನ ವಶಕ್ಕೆ ಕೊಟ್ಟಿದ್ದರು. ಆ ವರ್ತಕನು ಎರಡು ವರುಷಗಳಾದಾಗ್ಯೂ ಆ ಆಭರಣವನ್ನು ವಿಕ್ರಯಿಸದೆಯೂ ಹಿಂದಿರುಗಿ ಕೊಡದೆಯೂ ಹೋದುದರಮೇಲೆ ನಂಬುಗೆಯ ದ್ರೋಹಕ್ಕಾಗಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ. ಆ ಕಂಠಸರದಲ್ಲಿದ್ದ 88 ಮುತ್ತುಗಳಲ್ಲಿ 68 ಮುತ್ತುಗಳು 1 ಲಕ್ಷ ರೂ. ಗೆ ಯಾರಲ್ಲೋ ಒತ್ತೆ ಇಡಲ್ಪಟ್ಟಿದ್ದುವು; ಮಿಕ್ಕವು ಏನಾದುವೆಂಬುದು ಗೊತ್ತಾಗಿಲ್ಲವು.

ಮೆಡಿಕಲ್ ಕಾಲೇಜು, ಬೆಂಗಳೂರು. ಎಲ್.ಎಂ.ಪಿ.
71. ಎಂ. ಅಣ್ಣಾಜಪ್ಪ 5 ರೂ. 72. ಎಂ. ಜಿ. ಸೋಮಶೇಖರಪ್ಪ 5 ರೂ.
ಇಂಜನೀಯರಿಂಗ್ ಕಾಲೇಜು, ಬೆಂಗಳೂರು.—ಬಿ. ಇ.
73. ಟಿ. ಹುಚ್ಚವೀರಯ್ಯ 7 ರೂ. 74. ಕೆ. ಚೆನ್ನಬಸವಯ್ಯ 5 ರೂ.
ಇಂಜನೀಯರಿಂಗ್ ಸ್ಕೂಲು, ಬೆಂಗಳೂರು.
75. ಬಿ. ಆರ್. ರಂಘುರುಪ್ಪ, ಬಿ.ಇ. 3 ರೂ.
ಎಲೆಕ್ಟ್ರಿಕ್ ಇಂಜನೀಯರಿಂಗ್, ಬೆಂಗಳೂರು.
76. ಬಿ. ಗುಂಡಪ್ಪ, ಎಲೆಕ್ಟ್ರಿಕ್ 5 ರೂ.
ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್, ಬೊಂಬಾಯಿ.
77. ಎಂ. ವೀರಪ್ಪ, ಆರ್ಟ್ಸ್ 10 ರೂ.
ಕಲಾಮಂದಿರ, ಬೆಂಗಳೂರು ಸಿಟಿ.—ಆರ್ಟ್ಸ್.
78. ಎಸ್. ಬಿ. ನಂಜಪ್ಪ 3 ರೂ. 79. ಎಚ್. ಸಿದ್ದರಾಮಯ್ಯ 3 ರೂ.
ದಾವರ್ಸ್ ಕಾಲೇಜು, ಬೊಂಬಾಯಿ.
80. ಬಿ. ಸಿ. ಬಸಪ್ಪ, ಕಾಮರ್ಸ್ 8 ರೂ.

ಎಂ. ನಾಗಪ್ಪ,
ಅ|| ಸೆಕ್ರೆಟರಿ.

ಜಿ. ವರದರಾಜಯ್ಯ,
ಸೆಕ್ರೆಟರಿ.

OFFICE OF THE DIRECTOR OF INDUSTRIES & COMMERCE, BANGALORE.

ಭತ್ತ ಕುಟ್ಟುವ ಮಿಷನ್ ಖರೀದಿಗೆ ದೊರೆಯುತ್ತೆ.

ಡಗ್ಲಾಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾದ ಮತ್ತು ತಕ್ಷಣ ಕೆಲಸಮಾಡತಕ್ಕ ಸ್ಥಿತಿಯಲ್ಲಿರತಕ್ಕ 7 cwt. ಕಂಪ್ಲೀಟ್ ರೈಸ್ ಮಿಲ್—

1. ಹೊಳೇನರಸೀಪುರದ ಲಕ್ಷ್ಮೀಶ್ವರ ರೈಸ್ ಮಿಲ್ ಕಂಪನಿ ಲಿಮಿಟೆಡ್‌ಗೆ ಸೇರಿದ ಈ ಕೆಳಗೆ ಕಂಡ ತಪ್ಸೀಲುಗಳ ಯಂತ್ರಗಳು ಖರೀದಿಗೆ ಕೊಂಡುಕೊಳ್ಳಲು ಇಷ್ಟವುಳ್ಳವರಿಂದ ಟೆಂಡರ್ ಅಂಗೀಕರಿಸಲ್ಪಡುತ್ತೆ.

ಯಂತ್ರಗಳ ತಪ್ಸೀಲು.

22 ಕುದುರೆ ಬಲವುಳ್ಳ ಹಾರಿಸನ್ ಬಿ ಸೆಕ್ಷನ್ ಗ್ಯಾಸ್ ಇಂಜಿನ್ ಮತ್ತು ಗ್ಯಾಸ್ ಪ್ಲಾಂಟು ಸಹ.

3 ಅಡಿ ಬಾಬ್ತು ಡೊಗ್ಲಾಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾದ ಸೆಲ್ಲರು.

2 ಅಡಿ ಬಾಬ್ತು ಬಿಟೊ ಮೇಕರ್ ಕೋನ್.

18 ಕಂಪಾರ್ಟುಮೆಂಟುಳ್ಳ ಭತ್ತ ಅಕ್ಕಿ ಪ್ರತ್ಯೇಕಿಸತಕ್ಕ ಪ್ಯಾಡಿ ಸಪರೇಟರ್ ಸಹ ಅಂಡ್ ಕೋ ಫ್ಯಾನ್ ರಿಪ್ಸ್, ಎರಡು ಡಬ್ಬಲ್ ಎಲಿವೇಟರುಗಳು, ಬೆಲ್ಟಿಂಗ್, ಷಿಫ್ಟಿಂಗ್, ಪುಲ್ಲಿಗಳು ಮತ್ತು ತತ್ಸಂಬಂಧವಾದ ಇತರ ಸಾಮಾನುಗಳು ಸಹ.

2. ಈ ಮಿಲ್ಲು ತಕ್ಷಣ ಕೆಲಸಮಾಡಬಹುದಾದ ಉತ್ತಮವಾದ ಸ್ಥಿತಿಯಲ್ಲಿರುತ್ತೆ.

3. ಖರೀದಿಗೆ ತೆಗೆದುಕೊಳ್ಳಲಪೇಕ್ಷೆಯುಳ್ಳವರು ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಡೈರೆಕ್ಟರುಗಳಿಗೆ ತಾರೀಖು 31-12-26 ರೊಳಗೆ ತಮ್ಮ ಟೆಂಡರನ್ನು ಒಂದು ಕವರಿನಲ್ಲಿ ಸೀಲ್ ಮೊಹರ್ ಮಾಡಿ ಕವರಿನ ಮೇಲ್ಭಾಗದಲ್ಲಿ ಹೊಳೇನರಸೀಪುರದ ಲಕ್ಷ್ಮೀಶ್ವರ ರೈಸ್ ಮಿಲ್ ಖರೀದಿಯ ಟೆಂಡರೆಂದು ಬರೆದು ಕಳುಹಿಸಬಹುದು. ವಾಯಿದೆ ತಾರೀಖು ಮೀರಿದನಂತರ ಟೆಂಡರನ್ನು ಅಂಗೀಕರಿಸಲಾಗುವುದಿಲ್ಲ.

4. ಪ್ರತಿಯೊಬ್ಬರೂ ಟೆಂಡರು ಸಮೇತ 100 ರೂಪಾಯಿಗಳನ್ನು ಡಿಪಾಜಿಟ್ ಮಾಡತಕ್ಕದ್ದು.

5 ಬಾಕಿ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಮೈಸೂರು ಡಿವಿಜನ್ ಕೈಗಾರಿಕೆಗಳ ಸೂಪರಿಂಟೆಂಡೆಂಟರವರಿಗೆ ಲಿಖಿತ ಮೂಲಕವಾಗಲೀ ಅಥವಾ ಅವರನ್ನು ನೇರಾ ನೋಡಿಯಾಗಲೀ ತಿಳಿದುಕೊಳ್ಳಬಹುದು.

(Sd.) R. Ananthasubramanyam,
for Offg. Director of
Industries and Commerce.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ನವಂಬರ್ ತಾ|| ೬ ನೆಯ ಶನಿವಾರ.

THE DISTRICT ECONOMIC SUPERINTENDENTS.

We had refrained from commenting on the selection of men for the newly-created posts of Economic Superintendents, vainly hoping for an off chance of their abolition on the strength of Mr. D. S. Mallappa's resolution at the Representative Assembly. Now that they are not going to be disturbed, we may just have our small say in the matter. The benevolent Mysore Government is still probably obsessed with the idea that the Brahmin community has a special claim for service in Mysore, and that community has indeed very good reasons to be grateful to the Government for this benevolence. Out of eight appointments that were to be made seven were announced first, of which two were presented to the privileged community. The other five were distributed between the Lingayet, the Christian, the Jain and the Mohammadan communities. When the eighth appointment was yet to be announced we were hoping fondly that it would go to the Vokkaligars who form a very substantial portion of the State population and not a very negligible one either and who stand to benefit to a great extent if these Superintendents are going to turn out any good work. But little were the public aware that that too was reserved to a Brahmin gentleman hailing from Bellary, where he seems th have held a post in the Agriculture Department. The prospects in the Madras Agriculture Department are, so far as we know, not bad, and one's curiosity is naturally roused why he must forsake it for this appointment of uncertain tenure. We are extremely doubtful if our Government has taken any pains to ascerteain the anticedents of this gentleman specially chosen for the eighth place. It would probably reveal a record which is neither creditable to the gentleman nor to the judgment of the Government. There would be some pretence of an excuse if all the appointments were made from men in service already, for, they could then say that there were no candidates in service of the Vokkaligar community, which even in that 'important cadre of Amildars, affecting the welfare of the ryots, has hardly two representatives. But the fact is they have given some of the posts to fresh men and the eighth as already stated has gone to a fresh man. There were fresh men as candidates for the posts belonging to the Vokkaligar and other communities. We do not deny that for any Government it is a difficult job to uproot a tradition so deep-rooted. But that all this should take place in spite of the Miller Committee Report and in this case in spite of more efficient men being available from among the backward communities would no doubt be a surprise to those who do not know the ways of Mysore Government. We can only explain that the law of Karma of the other communities is operating rather rigourously and why should any body be blamed for it. Why should they not take that Mysore Government is only a merciful tool in the hands of an all too merciful Providence? It is so often a very soothing consolation to a Hindu to ascribe his adversities to Karma, and would it not be better for the backward communities to take consolation under such a convenient theory? The Mysore Government has called for candidates for making a selection of Revenue Probationers. We possess no prophetic vision, and so we do not want to forecast the appointments. But we would not wonder if the microscopic Brahmin community were to have a share out of all proportion to its strength even as it had last time, in the name of efficiency of course. Why, has not the efficiency of the Amildary been established so well on the bed-rock of Brahmanism? Heaven, spare us from this efficiency! The people have had enough of it.

DISTRICT JUDGE'S APPOINTMENT.

Since the transfer of Mr. G. Satyaji Rao from the District Court of Shimoga to that of Bangalore to take the place of Mr. G. Sreenivasa Iyer who has gone on leave, Shimoga has been without a District Judge. We are doubtful if this long delay speaks well of the administration of justice in the State. We wonder what accounts for such an unusual procedure. The next senior person in service is Mr. P. Mahadeviah, Sub-judge in Bangalore who could have been appointed to the vacancy in the place of Mr. G. Satvaji Rao. But somehow the appointment is held up and the minds of the people are agitated over it. It is one of those curicus phenomena which we observe here, though not invariably, that whenever the question of the promotion of a non-Brahmin Officer comes up some difficulty or other crops up with the result that either promotion is stopped or the grade is affected to the worse. At a pyscological moment the members of the Bangalore Bar seem to have created some galata and taken exception to the treatment accorded by Mr. Mahadeviah to the members of the Bar and the litigants. It is noteworthy that this protest has come just now when the appointment of the District Judge is pending. Without holding a brief for Mr. Mahadeviah we may say that there are some of the judges belonging to the priestly class whose behaviour is anything but courteous to the Bar or the litigant public, but against whom not a whisper of protest is raised by the Bar which is composed mostly of the same fraternity. The highest judiciary in Mysore is entirely in the hands of Brahmins. It is a recognised policy in British India as in all parts of the world that the judicial appointments should be evenly distributed between different sections of the people. When such is the case, there is this attempt to discount the fitness of Mr. Mahadeviah by these circuitous methods. We can only characterise it as frivolous and vexatious which we hope the Government will discountenance. We trust that Government will do justice and that soon.

THE MYSORE MUNICIPAL COUNCIL.

We are told that Mr. N. Madhava Rao, the popular President of the Mysore City Municipal Council, is going on leave from the 1st of January next year. The matter of his successor is one with which the ratepayers are interested and they are already exercising their minds about it. For aught we know, Mr. Madhava Rao may not return to the place after his leave is over. Rumours are afloat, but nothing very authentic or certain about the likely successor. In some quarters the name of Dr. A. K. Pani who is about to retire after a meritorious service is mentioned. He was formerly the Health Officer of this City and in that capacity did excellent work. We would strongly commend to the kind consideration of Government his name for the Presidentship. He is familiar with the needs of Mysore City, and to tacle the pressing problems of drainage and sanitation and of City improvement in general one cannot find a better person. Besides, he has still plenty of energy with him and it would be but proper not to let go his experience unharnessed and there could be no better way of doing it than by asking him to take charge of the civic development of the capital of Mysore State. We hope that the suggestion commends itself to Government.

ಡಿಸ್ಟ್ರಿಕ್ಟ್ ಜಡ್ಜಿಯವರ ನೇಮಕ.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಜಿ. ಶ್ರೀನಿವಾಸಯ್ಯರ್‌ರವರು ರಜದಮೇಲೆ ಹೋಗಿರುವುದರಿಂದ ಶಿವಮೊಗ್ಗೆಯ ಡಿ|| ಜಡ್ಜಿಯವರಾದ ಮ|| ಜಿ. ಸತ್ಯಾಜಿರಾಯರು ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಆದರೆ ಅವರ ಸ್ಥಾನಕ್ಕೆ ಬೇರೊಬ್ಬರು ಈವರೆಗೂ ನಿಯಮಿಸಲ್ಪಡದಿರುವುದರಿಂದ ನ್ಯಾಯಶಾಖಾಡಳಿತದ ಆಲಸ್ಯಪ್ರದರ್ಶನವಾಗುವುದಲ್ಲದೆ ಕಕ್ಷಿಗಾರರಿಗೆಷ್ಟು ತೊಂದರೆಯಾಗಿರುತ್ತದೆ ಎಂಬುದನ್ನು ಹೇಳಬೇಕಾಗಿಲ್ಲವು. ಈ ಸ್ಥಾನಕ್ಕೆ ಸಬ್ ಜಡ್ಜಿಗಳಲ್ಲಿ ಹಿರಿಯರಾದವರೊಬ್ಬರು ನಿಯಮಿಸಲ್ಪಡತಕ್ಕದಾಗಿದೆ. ಅಂತಹ ಸಬ್ ಜಡ್ಜಿಗಳಲ್ಲಿ ಮ|| ಪಿ. ಮಹಾದೇವಯ್ಯನವರು ಹಿರಿಯರಾಗಿರುತ್ತಾರೆ. ಆದ್ದರಿಂದ ಈಗ ಬಿಡುವಾಗಿರುವ ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಜಡ್ಜಿಯವರ ಸ್ಥಾನಕ್ಕೆ ಅವರೇ ನಿಯಮಿಸಲ್ಪಡಬೇಕಾಗಿದೆ. ಈ ಮಧ್ಯೆ ಮ|| ಮಹಾದೇವಯ್ಯನವರು ಲಾಯರುಗಳಿಗೂ, ಕಕ್ಷಿಗಾರರಿಗೂ ತೊಂದರೆಯನ್ನು ಕೊಡುತ್ತಿರುವರಾದುದರಿಂದ ಅವರುಗಳ ಅನುರಾಗಕ್ಕೆ ಪಾತ್ರರಾಗಿಲ್ಲವೆಂದು ಮೊದಲಾಗಿ ಬೆಂಗಳೂರಿನ ಲಾಯರು ಸಂಘದವರು "ಶಿವಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ" ಒಂದು ಗೊಂದಲವನ್ನು ಹಚ್ಚಿರುವರು. ಹಿಂದುಳಿದ ವರ್ಗದ ಅಧಿಕಾರಿಗಳ ಅಭಿವೃದ್ಧಿಯ ವಿಚಾರವು ಬಂದ ವೇಳೆಯಲ್ಲಿ ಈರೀತಿ ಅಲ್ಲದ ಸಲ್ಲದ ದೋಷಾರೋಪಣೆಗಳನ್ನು ಮಾಡಿ ಕೋಲಾಹಲವನ್ನೆಬ್ಬಿಸಿ ಅವರ ಅಭಿವೃದ್ಧಿಗೆ ಕಲ್ಲುಹಾಕುವುದು ಮುಂಬರಿದ ವರ್ಗದ ಅಸೂಯೆಗಳಿಗೆ ನಿಸರ್ಗಗುಣವಾಗಿದೆ. ಹಾಗಲ್ಲದಿದ್ದರೆ ಕಕ್ಷಿಗಾರರ ಧನ ಮಾನ ಪ್ರಾಣಸಂರಕ್ಷಣಾ ದೀಕ್ಷಾಬದ್ಧರಾಗಿರುವ ಈ ಲಾಯರುಗಳು, ಕಕ್ಷಿಗಾರರನ್ನು ಮೂದಲಿಸಿ ಅವರಮೇಲೆ ಈದುಹುಲಿಯಂತೆ ಬೀಳುವವರಾದ ಮತ್ತು ಲಕ್ಷಾಧೀಶ್ವರರನ್ನು ಸಹ ಪಾಪರೆಂದು ಪ್ರಕಟಿಸುವವರಾದ ಸಜಾತೀಯ ನ್ಯಾಯಾಧೀಶರ ವಿಚಾರದಲ್ಲಿ ಚಕಾರ ಶಬ್ದವನ್ನು ಸಹ ಆಡದೆ ಮೌನರಾಗಿರುತ್ತಿದ್ದರೆ? ಅದುಕಾರಣ ಪ್ರಭುತ್ವದವರು ಇಂತಹ ಅಸೂಯಾಪರರ ಪೊಳ್ಳುಕೂಗಿಗೆ ಗಮನಕೊಡದೆ ಈಗ ಬಿಡುವಾಗಿರುವ ಡಿ|| ಜಡ್ಜಿಯವರ ಸ್ಥಾನಕ್ಕೆ ಎಲ್ಲ ವಿಧದಲ್ಲೂ ಅರ್ಹರಾಗಿರುವ ಸಬ್ ಜಡ್ಜಿಯವರನ್ನು ನಿಯಮಿಸಿ ತಮ್ಮ ಉಚಿತಜ್ಞತೆಯನ್ನು ವ್ಯಕ್ತಪಡಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು.

ನಮ್ಮ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಎನ್. ಮಾಧವರಾಯರು ಬರುವ ಜನವರಿ ತಾ|| 1 ರಿಂದ ರಜದಮೇಲೆ ಹೋಗುವವರಾಗಿರುವರಲ್ಲದೆ ಮರಳಿ ಈ ಉದ್ಯೋಗದಮೇಲೆ ಬರುವ ಸಂಭವವಿಲ್ಲವೆಂದು ತಿಳಿಯಬರುತ್ತದೆ. ಈವರೆಗೆ ಇಲ್ಲಿಯ ಪ್ರೆಸಿಡೆಂಟರಾಗಿ ಬಂದವರಲ್ಲಿ ಮ|| ಮಾಧವರಾಯರಷ್ಟು ದಕ್ಷತೆಯಿಂದಲೂ, ದರ್ಪದಿಂದಲೂ, ನಿಷ್ಪಕ್ಷಪಾತತೆಯಿಂದಲೂ, ಕರುಣೆಯಿಂದಲೂ, ಉದ್ಯೋಗ ನಿರ್ವಾಹಮಾಡುತ್ತ ಮತ್ತು ಕೌನ್ಸಿಲರುಗಳೊಡನೆ ಸುಹೃದ್ಭಾವದಿಂದಲೂ, ಮೈತ್ರಿಯಿಂದಲೂ ಇದ್ದುಕೊಂಡು ಮೀಟಿಂಗುಗಳನ್ನು ಹೂವಿನಸರವೆತ್ತಿದಂತೆ ಬಹು ಸುಲಭವಾಗಿ ನಡಿಸಿಕೊಂಡು ಬರುತ್ತ ಕೌನ್ಸಿಲರುಗಳ, ಕೈಕೆಳಗಿನ ಕೆಲಸಗಾರರ ಮತ್ತು ಪುರಜನರ ಪ್ರೀತಿವಿಶ್ವಾಸಗಳಿಗೂ ಮೆಚ್ಚುಗೆಗೂ ಪಾತ್ರರಾದವರು ಬೇರೊಬ್ಬರಿಲ್ಲವೆಂದು ಹೇಳುವುದು ಅತಿಶಯೋಕ್ತಿಯಲ್ಲವು. ಇಂತಹ ಪ್ರಜಾನುರಾಗಿಗಳಾದ ಅಧಿಕಾರಿಗಳ ಸಂಬಂಧವನ್ನು ರಾಜಧಾನಿಯ ನಿವಾಸಿಗಳು ಕಳೆದುಕೊಳ್ಳುವುದಕ್ಕಾಗಿ ಚಿಂತಾಕ್ರಾಂತರಾಗಿರುವರಲ್ಲದೆ, ಈ ಸ್ಥಾನಕ್ಕೆ ಇನ್ನೆಂತಹವರು ಬರುತ್ತಾರೋ ಎಂದು ಕುತೂಹಲಾವಿಷ್ಟರಾಗಿರುವರು. ಈ ಮಧ್ಯೆ ಉದ್ಯೋಗದಿಂದ ನಿವೃತ್ತರಾಗುವವರಾಗಿರುವ ಡಾ|| ಪಾಣಿಯವರು ಇಲ್ಲಿಯ ಪ್ರೆಸಿಡೆಂಟರಾಗಿ ಬರುವರೆಂಬ ವದಂತಿಯು ಹುಟ್ಟಿದೆ. ಇವರು ನಮ್ಮ ರಾಜಧಾನಿಯಲ್ಲಿ ಬಹುಕಾಲ ಹೆಲ್ತಾಫೀಸರಾಗಿದ್ದು ಇಲ್ಲಿಯ ಜನರ ಆರೋಗ್ಯಾಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡಿದವರಾಗಿಯೂ, ಜನರ ನಡೆನುಡಿಗಳನ್ನು ಅರಿತವರಾಗಿಯೂ, ಕಷ್ಟಪಟ್ಟು ಕೆಲಸಮಾಡಲು ತಕ್ಕ ಶಕ್ತಿವಂತರಾಗಿಯೂ, ಉತ್ಸಾಹಶೀಲರಾಗಿಯೂ ಇರುವುದರಿಂದ ಮ|| ಮಾಧವರಾಯರ ಅಗಲಿಕೆಯಿಂದುಂಟಾಗುವ ಕೊರತೆಯು ಬಹುಮಟ್ಟಿಗೆ ನಿವಾರಣೆಯಾಗುವ ಭರವಸೆಯಿರುವಪ್ರಯುಕ್ತ ಪ್ರಭುತ್ವದವರು ಈ ವಿಚಾರವನ್ನು ಚೆನ್ನಾಗಿ ಪರ್ಯಾಲೋಚಿಸಿ ಡಾ|| ಪಾಣಿಯವರ ಕಾಲೋಚಿತವಾದ ಸಹಾಯವನ್ನು ರಾಜಧಾನಿಯ ನಿವಾಸಿಗಳಿಗೆ ದೊರಕಿಸಿಕೊಡಬೇಕಾಗಿ ಸೂಚಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಯಡತೊರೆ ತಾ|| ಅಕ್ಕಿಹೆಬ್ಬಾಳದ ಸ್ಕೌಟ್ ಅಸೋಸಿಯೇಷನ್ನಿನ ವಾರ್ಷಿಕೋತ್ಸವವು ಈ ತಾ|| 14 ರಲ್ಲಿ ವಿಜೃಂಭಣೆಯಿಂದ ನಡೆಸಲ್ಪಡುವುದು.

ರಿಟೈರ್ಡ್ ಸೀನಿಯರ್ ಸರ್ಜನರಾದ ಡಾಕ್ಟರ್ ಮೈಲ್ವಾಗಹಂರವರು ಆಂಗ್ಲದೇಶಪರ್ಯಟನವನ್ನು ಪೂರೈಸಿಕೊಂಡು ಕಳೆದ ಭಾನುವಾರ ಬೆಂಗಳೂರನ್ನು ಸುರಕ್ಷಿತವಾಗಿ ತಲುಪಿದರು.

ರಾಜಧಾನಿಯ ಸಂತೆಪೇಟೆಯಲ್ಲಿರುವ ಮ|| ಬ್ರಹ್ಮಪ್ಪ ತವನಪ್ಪನವರ ಅಂಗಡಿಯಲ್ಲಿ ಶ್ರೀಧನಲಕ್ಷ್ಮೀಪೂಜಾಮಹೋತ್ಸವವು ಈ ತಾ|| 5 ರ ರಾತ್ರಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಮೈಸೂರು ನ್ಯಾಯವಿಧಾಯಕಸಭೆಯ ಮೀಟಿಂಗು ಬೆಂಗಳೂರು ಪಬ್ಲಿಕ್ ಆಫೀಸಿನ ಸಭಾಂಗಣದಲ್ಲಿ ಬರುವ ಡಿಸೆಂಬರ್ ತಾ|| 14 ನೇ ಮಂಗಳವಾರ ಮಧ್ಯಾಹ್ನ 12 ಘಂಟೆಗೆ ಆರಂಭಗೊಂಡು ನಡೆಯುವುದು.

ರಾಜಧಾನಿಯ ರೈಲ್ವೆಸ್ಟೇಷನ್ನಿನಿಂದ 3 ಮೈಲಿ ದೂರದಲ್ಲಿರುವ ಕ್ಷಯರೋಗಆಸ್ಪತ್ರೆಯ ರೋಗಿಗಳ ಬೇಸರಿಕೆಯ ಪರಿಹಾರಕ್ಕಾಗಿ ಪ್ರತಿ ಭಾನುವಾರಸಾಯಂಕಾಲ ಅರಮನೆಯ ಕಾನ್ಸರ್ಟ್ ಮೊದಲಾದ ವಾದ್ಯವಾದನವಾಗುವಂತೆ ಶ್ರೀಮನ್ಮಹಾರಾಜರವರಪ್ಪಣೆಯಾಗಿರುತ್ತದೆ.

ಕಳೆದ ಅಕ್ಟೋಬರ್ ತಾ|| 16 ಕ್ಕೆ ಅಂತ್ಯವಾದ ಒಂದು ವಾರದಲ್ಲಿ ಮೈಸೂರುರೈಲ್ವೆಗಳಿಂದ 1,25,600 ರೂ. ಉತ್ಪನ್ನವಾಗಿರುತ್ತದೆ; ಇದರ ಹಿಂದಣ ವಾರದಲ್ಲಿ 65,900 ರೂ. ಮಾತ್ರ ಉತ್ಪನ್ನವಾಗಿದ್ದಿತು. ಇಷ್ಟೊಂದು ಹೆಚ್ಚುತ್ಪನ್ನಕ್ಕೆ ದಸರಾಮಹೋತ್ಸವಕ್ಕಾಗಿ ವಿಶೇಷ ಜನರು ಬಂದು ಹೋದುದು ಕಾರಣವಾಗಿದೆ.

ಬೆಂಗಳೂರಲ್ಲಿರುವ ಹುಚ್ಚರ ಆಸ್ಪತ್ರೆಯ ಹೆಸರನ್ನು "ಬುದ್ಧಿಭ್ರಾಮಕಾಸ್ಪತ್ರೆ" ಎಂದು ಬದಲಾಯಿಸಬೇಕೆಂದು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನದಲ್ಲಿ ಮ|| ಗುಲಾಮ್ ಅಬ್ಬಾಸ್ ಖಾನ್‌ರವರೂ, ಜಿ. ಪರಮಶಿವಯ್ಯನವರೂ ಅರಿಕೆ ಮಾಡಿಕೊಂಡಿದ್ದುದರಮೇಲೆ, "ಮಾನಸಿಕ ಆಸ್ಪತ್ರೆ" ಎಂದು ಕರೆಯಲ್ಪಡಬೇಕಾಗಿ ಸರ್ಕಾರದ ಅಪ್ಪಣೆಯಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿಸಭೆಯ ದಶರಾಧಿವೇಶನವು ಕಳೆದ ತಾ|| 26 ರಲ್ಲಿ ಮುಕ್ತಾಯವಾಯಿತಷ್ಟೆ. ಅದರ ಹಿಂದಿನ ಸಾಯಂಕಾಲ ಮೈಸೂರು ಪ್ರಾಗತಿಕಪಕ್ಷಾಧಿಪತಿ ಮ|| ಹೊಸಕೊಪ್ಪ ಕೃಷ್ಣರಾಯಪ್ರಭೃತಿಗಳು ದಿವಾನರನ್ನೂ, ಕೌನ್ಸಿಲರು ಮೊದಲಾಗಿ ಮುಖ್ಯಾಧಿಕಾರಿಗಳನ್ನೂ ಮಾಡರ್ನ್ ಹೋಟಲಿಗೆ ಬರಮಾಡಿಕೊಂಡು ಅಲ್ಪಾಹಾರಸಮಾರಾಧನೆಯಿಂದ ಸತ್ಕರಿಸಿದರು.

ಕಳೆದ ತಾ|| 30 ರಲ್ಲಿ ನಡೆದ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಕಳೆದ 4 ವರ್ಷಗಳಿಂದಲೂ ಮ್ಯುನಿಸಿಪಲ್ ಕೌನ್ಸಿಲರಾಗಿದ್ದ ಮ|| ಯು. ಆರ್. ಲಿಂಗೋಜಿರಾಯರು ವಿಧಿವಶರಾದುದಕ್ಕಾಗಿ ಕೌನ್ಸಿಲಿನವರು ತಮ್ಮ ಅನುತಾಪವನ್ನು ಪ್ರದರ್ಶಿಸಿದರಲ್ಲದೆ, ಅರಮನೆಯಿಂದ ಸ್ಥಾಪಿತವಾಗಿರುವ ವೃದ್ಧಾಶ್ರಮದ ಪೋಷಣೆಗಾಗಿ 1,000 ರೂ. ಗಳನ್ನು ಧರ್ಮಮಾಡಿದ ಸೋದರ ಕೌನ್ಸಿಲರು ಧರ್ಮಪ್ರಕಾಶ ಡಿ. ಬನುಮಯ್ಯನವರನ್ನು ಅಭಿನಂದಿಸಿದರು.

ಯಾದಗಿರಿಯಲ್ಲಿ ಪ್ರಕಟವಾಗುವ ಧರ್ಮಸಂಜೀವಿನಿಮಾಸಪತ್ರಿಕೆಯು ಮುದ್ರಣದ ಕೊರತೆಯಿಂದ ಸಕಾಲಕ್ಕೆ ಹೊರಡಲವಕಾಶವಿಲ್ಲದಿದ್ದುದರಮೇಲೆ, ಯಾದಗಿರಿ ಶಂಕರಪಾಠಶಾಲೆಯ ಮೆಂಬರುಗಳ ದ್ರವ್ಯಸಹಾಯದಿಂದ ಒಂದು ಮುದ್ರಾಲಯವನ್ನು ಸ್ವಂತವಾಗಿ ಸ್ಥಾಪಿಸಿರುವುದರಿಂದ, ಮುಂದೆ ಧರ್ಮಸಂಜೀವಿನಿ ಪತ್ರಿಕೆಯು ಕ್ರಮವಾಗಿ ಹೊರಡುವುದೆಂದೂ, ಹಿಂದೆರಡುತಿಂಗಳಿಂದ ಪ್ರಕಟವಾಗದಿದ್ದುದಕ್ಕಾಗಿ ಅದರ ಚಂದಾದಾರರು ಕ್ಷಮಿಸಬೇಕೆಂದೂ ಆ ಪತ್ರಿಕಾಸಂಪಾದಕರು ಈಮೂಲಕ ಪ್ರಾರ್ಥಿಸುತ್ತಾರೆ.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನ ಮೇಲ್ವಿಚಾರಣಾಕಮಿಟಿಯವರು ಅಂದರೆ ಟ್ರಸ್ಟಿಗಳು ಸ್ಕೂಲಿನ ಲೆಕ್ಕವನ್ನೂ, ಆಡಳಿತದ ವರದಿಯನ್ನೂ ಪ್ರತಿವರ್ಷದಲ್ಲೂ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಲ್ಲಿಗೆ ಕಳುಹಿಸಿಕೊಡಬೇಕೆಂಬ ನಿರ್ಬಂಧವಿದ್ದಾಗ್ಯೂ, ಕಳೆದ 8-10 ವರ್ಷಗಳಿಂದಲೂ ಕಳುಹಿಸಿಕೊಡದಿರಲು ಕಾರಣವೇನೆಂದು ಡಿಸ್ಟ್ರಿಕ್ಟ್ ಜಡ್ಜಿಯವರು ಟ್ರಸ್ಟಿಗಳನ್ನು ಕೇಳಿದ್ದುದರಮೇಲೆ, ಕೊಂಚ ಕಾಲಾವಧಿಯನ್ನು ಕೊಡಬೇಕೆಂದು ಕಮಿಟಿಯ ಸೆಕ್ರೆಟರಿಯವರು ಕೇಳಿಕೊಂಡಿರಲಾಗಿ ಈ ತಾ|| 11 ರಲ್ಲಿ ಲೆಕ್ಕವು ಕಳುಹಲ್ಪಡಬೇಕೆಂದು ಡಿ|| ಜಡ್ಜಿಯವರ ಅಪ್ಪಣೆಯಾಗಿರುವುದಾಗಿ ಕೇಳುತ್ತೇವೆ.

ಬೊಂಬಾಯಿ ನ್ಯಾಯವಿಧಾಯಕಸಭಾ ಸಭ್ಯರಾಗಿ ಆರಿಸಲ್ಪಡಲು ಹುಬ್ಬಳಿಯ ರಾವ್‌ಬಹದ್ದೂರ್ ಕಂಬಳಿ ವಕೀಲರವರು ಅಭ್ಯರ್ಥಿಗಳಾಗಿ ನಿಂತಿರುವಂತೆ ಧಾರವಾಡದಲ್ಲಿ ವಕೀಲರಾಗಿರುವ ಮ|| ಹೊಸಮನಿ, ಬಿ.ಎ.,ಎಲ್.ಎಲ್.ಬಿ., ರವರೂ ಅಭ್ಯರ್ಥಿಗಳಾಗಿ ನಿಂತಿರುವರು. ಮ|| ಹೊಸಮನಿಯವರು ವಿದ್ಯಾವಿಭೂಷಿತರಾಗಿರುವರಲ್ಲದೆ ಹಿಂದುಳಿದ ಜನವರ್ಗದವರ ಹಿತಕಾಂಕ್ಷೆಯಿಂದ ದೇಶಸೇವೆಯನ್ನು ಮಾಡಬೇಕೆಂಬ ಕುತೂಹಲವಿಷ್ಟರಾಗಿರುವುದರಿಂದ ಸ್ವಕ್ಷೇಮಾಭಿಲಾಷಿಗಳಾದ ಓಟರುಗಳು ತಮ್ಮ ಮತವನ್ನು ಅವರಿಗೆ ಕೊಟ್ಟು ಕೃತ್ಯಕೃತ್ಯರಾಗಲೆಂದೂ, ಮ|| ಹೊಸಮನಿಯವರು ತಮ್ಮ ಸತ್ಪ್ರಯತ್ನದಲ್ಲಿ ಜಯಶಾಲಿಗಳಾಗಲೆಂದೂ ಅಪೇಕ್ಷಿಸುತ್ತೇವೆ.

ಬೆಂಗಳೂರು ತಾ|| ಹೆಣ್ಣೂರುವಾಸಸ್ಥನಾದ ಚಿಕ್ಕಪುಟ್ಟಯ್ಯನೆಂಬವನು ತನ್ನ 14 ವರ್ಷವಯಸ್ಸಿನ ಮಗಳನ್ನು ಅವಳ ಮೈಮೇಲಿದ್ದ 400 ರೂ. ನ ಆಭರಣಗಳಸಮೇತವಾಗಿ ಅದೇ ತಾ|| ಸಾದೇನಹಳ್ಳಿಯ ಅಪ್ಪಯ್ಯ ಮತ್ತು ಸಣ್ಣಪ್ಪ ಎಂಬವರು ಅಪಹರಿಸಿಕೊಂಡು ಹೋಗಿ ಅಪ್ಪಯ್ಯನ ಮಗನಾದ ಭೈರನೆಂಬವನಿಗೆ ವಿವಾಹಮಾಡಿಕೊಂಡರೆಂದು ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದುಮಾಡಿದ್ದನು. ಈ ವಿವಾದದ ವಿಚಾರಣೆಯು ಕಳೆದ ತಾ|| 29 ರಲ್ಲಿ ಪೂರೈಸಿ ಹುಡುಗಿಯು 19 ವರ್ಷವಯಸ್ಕಳಾಗಿ ಮೇಜರಳಾಗಿದ್ದು ತನ್ನ ಸೋದರಮಾವನಾದ ಅಪ್ಪಯ್ಯನ ಮಗನನ್ನು ತಾನೇ ವರಿಸಿ ಲಗ್ನವಾದಳೆಂದು ಆಕೆಯ ವಾಜ್ಮೂಲದಿಂದ ವ್ಯಕ್ತಪಟ್ಟುದರಮೇಲೆ ವಿವಾದವು ತಳ್ಳುಪಡಿಮಾಡಲ್ಪಟ್ಟಿತು.

ರಾಜಧಾನಿಯಲ್ಲಿ ಬಡಬಗ್ಗರು ವಾಸಿಸುತ್ತಿರುವ ಬೀದಿಗಳು ಮ್ಯುನಿಸಿಪಾಲಿಟಿಯವರ ಕಟಾಕ್ಷಕ್ಕೆ ಬೀಳದೆ ಹಳ್ಳಕೊಳ್ಳಗಳಿಂದ ನಿಬಿಡವಾಗಿ ತಿರುಗಾಡುವ ಜನರು ಹಗಲೇ ಮುಗ್ಗರಿಸಿ ಬೀಳುತ್ತಿರುವಾಗ್ಗೆ, ಬೀದಿಯ ದೀಪಗಳಿಲ್ಲದೆ ಕತ್ತಲೆಯಲ್ಲಿ ತಿರುಗಾಡುವವರ ಪಾಡನ್ನು ಹೇಳಬೇಕಾದುದಿಲ್ಲವೆಂದೂ, ಈ ವಿಚಾರವನ್ನು ದೀಪದ ಸೂಪರಿಂಟೆಂಡೆಂಟರವರ ಗಮನಕ್ಕೆ ತಂದಾಗ್ಯೂ ಪ್ರಯೋಜನವಾಗದೆ, ಯಾವ ಚ್ಯುತಿಯೂ ಇಲ್ಲದೆ ರಾತ್ರಿಯೆಲ್ಲಾ ವಿದ್ಯುದ್ದೀಪವು ಉರಿಯುತ್ತಿರುವ ಗುಡ್ಡಪ್ರದೇಶದ ಮೃಗಗಳಿಗಿಂತಲೂ ತಮ್ಮ ಸ್ಥಿತಿಯು ಹೀನವಾದುದೆಂದೂ ಒಬ್ಬ ಕಷ್ಟಾನುಭವಿಯು ಬರೆದಿರುತ್ತಾರೆ. ದೊಡ್ಡಬೀದಿಗಳಲ್ಲಿ ವಾಸಿಸುವವರಂತೆಯೇ ಕಂದಾಯವನ್ನು ತೆರುತ್ತಿರುವ ಬಡ ನಿವಾಸಿಗಳ ಕುಂದುಕೊರತೆಗಳ ಕಡೆಗೆ ಸರ್ಕಾರಿಯಧಿಕಾರಿಗಳು ಗಮನಕೊಡುವುದು ಅತ್ಯವಶ್ಯವೂ ಅವಸರವೂ ಆಗಿರುತ್ತದೆ.

ರಾಜಧಾನಿಯಲ್ಲಿ ಪಕ್ಷಕ್ಕೊಮ್ಮೆ ಪ್ರಕಟವಾಗುತ್ತಿರುವ ವಿಶ್ವಬಂಧುಪತ್ರಿಕೆಯು ತನ್ನ ಉತ್ಪಾದಕರೂ, ಪೋಷಕರೂ ಆಗಿದ್ದ ಆ ಚಿರಸ್ಮರಣೀಯ ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರ ಸಚಿತ್ರಜೀವನಚರಿತ್ರೆಯನ್ನು ಸ್ಮಾರಕಸಂಚಿಕೆಯನ್ನಾಗಿ ಹೊರಡಿಸಿರುವುದರ ಪ್ರತಿಯೊಂದನ್ನು ನಾವು ಸ್ವಾಭಿಮಾನದಿಂದ ಸ್ವೀಕರಿಸಿರುವೆವು. ಈ ಸ್ಮಾರಕಸಂಚಿಕೆಯಲ್ಲಿ, ಶ್ರೀಮಂತರ ಇಹಲೋಕಯಾತ್ರೆಯಲ್ಲಿ ಬಾಲ್ಯಾರಭ್ಯ ಪರಲೋಕಯಾತ್ರೆಯವರೆಗೂ ನಡೆದಿರುವ ಚರಿತ್ರೆಯು ಕಾಲೋಚಿತ ಭಾವಚಿತ್ರಗಳೊಡನೆ ಮುದ್ರಿಸಲ್ಪಟ್ಟಿರುತ್ತದೆ. ಇದರ ಸಾದ್ಯಂತಾವಲೋಕನದಿಂದ ಕರ್ನಾಟಕಜೈನಸಮಾಜಕ್ಕೆ ಕಿರೀಟಪ್ರಾಯರಾಗಿದ್ದ ಆ ವರ್ಧಮಾನಯ್ಯನವರು ಎಂತಹ ಪರಿಶುದ್ಧಾತ್ಮರೂ, ಸ್ವಜನ ಸ್ವದೇಶಾಭಿಮಾನಿಗಳೂ, ಪ್ರಭುಭಕ್ತಿಪರಾಯಣರೂ, ಪರಿಶ್ರಮಾಭಿಮಾನಿಗಳೂ ಆಗಿದ್ದು ಚಿರಸ್ಮರಣೀಯರೂ ಆದರ್ಶಪ್ರಾಯರೂ ಆಗಿರುವರೆಂಬುದು ಸುವ್ಯಕ್ತವಾಗುತ್ತದೆ. ಇಂತಹ ಲೋಕೋತ್ತರ ಪವಿತ್ರಾತ್ಮರ ಜೀವನಚರಿತ್ರೆಯನ್ನು ವಿಶ್ವಬಂಧು ಪ್ರಕಟಿಸಿ ತನ್ನ ಕೃತಜ್ಞತೆಯನ್ನು ಪ್ರದರ್ಶಿಸಿದುದಕ್ಕಾಗಿ ನಾವು ಅದನ್ನು ಅಭಿನಂದಿಸುತ್ತೇವೆ.

ಸರ್ ಎಂ. ವಿಶ್ವೇಶ್ವರಯ್ಯನವರ ಸಹೋದರರಾದ ಬೆಂಗಳೂರು ಅಡ್ವೋಕೇಟ್ ಮ|| ಎಂ. ರಾಮಚಂದ್ರರಾಯರು ದಸರಾಮಹೋತ್ಸವದಲ್ಲಿ ರಾಜಧಾನಿಗೆ ಬಂದು ದಿವಾನರ ಬಂಗಲೆಯಲ್ಲಿ ಅವರ ಅತಿಥಿಗಳಾಗಿದ್ದ ವೇಳೆಯಲ್ಲಿ ಅವರು ಎಕ್ಸಿಕ್ಯುಟಿವ್ ಕೌನ್ಸಿಲಿನ ಆನರು ಮೆಂಬರಾಗಿ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವರೆಂಬ ಸುದ್ದಿಯು ಹುಟ್ಟಿ ಎಲ್ಲೆಲ್ಲೂ ಹಬ್ಬಿದುದರಮೇಲೆ, ಮ|| ರಾಯರಿಗೆ ಅವರ ಮಿತ್ರಮಂಡಲಿಯವರಿಂದ ಅಭಿನಂದನಮಳೆಗರೆಯಲ್ಪಟ್ಟು ಕಡೆಯಲ್ಲಿ ಅದು ನಿರಾಧಾರವಾದ ಸುದ್ದಿಯೆಂದು ಪ್ರಕಟವಾಗಿದ್ದಿತು. ಆದರೆ ಶ್ರೀಮನ್ಮಹಾರಾಜರವರ ವಾಗ್ದಾನದ ಪ್ರಕಾರ ಈ ಗೌರವಸ್ಥಾನ ಕಲ್ಪನೆಯಾಗಲೇಬೇಕಾಗಿರುವುದರಿಂದ, ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಯನ್ನು ಬಿಟ್ಟಮೇಲೆ ಯಾವ ಪ್ರಯೋಜನಾಪೇಕ್ಷೆಯಿಲ್ಲದೆ ಭದ್ರಾವತಿಯ ಕಬ್ಬುನದ ಕಾರ್ಯಾಲಯ, ಕಾವೇರಿಜಲಾಶಯ ಮೊದಲಾದ ಕಾರ್ಯಗಳಲ್ಲಿ ಕೆಲಸಮಾಡುತ್ತಿರುವುದರ ಪ್ರತಿಫಲವಾಗಿ ಅವರ ಸಹೋದರರು ಆನರು ಕೌನ್ಸಿಲರಾಗಿ ನಿಯಮಿಸಲ್ಪಡುವರೆಂಬ ವದಂತಿಯು ಪುನಃ ಹುಟ್ಟಿ ಪ್ರಬಲವಾಗುತ್ತಿದೆ.

ವರ್ತಮಾನಸಂಗ್ರಹ.

ಚೀನಾರಾಜ್ಯದ ಪೆಕಿಂಗ್ ನಗರದಲ್ಲಿ 18 ವರ್ಷದ ಒಬ್ಬ ಹುಡುಗಿಯನ್ನು ಸಪತ್ನೀಕನೂ, ಕುರೂಪಿಯೂ ಆದ ವೃದ್ಧನಿಗೆ 650 ರೂ. ಗಳಿಗೆ ಮಾರಕೂಡದೆಂದು ತಂದೆಯನ್ನು ಆಕೆಯು ಎಷ್ಟು ಪ್ರಾರ್ಥಿಸಿದರೂ ಕೇಳದಿರಲು ಹುಡುಗಿಯು ಹತಾಶಳಾಗಿ ಮದುವೆಯ ಕಾಲದಲ್ಲಿ ವಿಷಪಾನಮಾಡಿ ಹಸೆಮಣೆಯಮೇಲೆಯೇ ಮೃತಳಾದಳು.

ಇಂಡಿಯಾದೇಶದಲ್ಲಿ ಸುಮಾರು 7 ಕೋಟಿ ಮಂದಿ ಮಹಮ್ಮದೀಯರಿರುವರು. ಇವರಲ್ಲಿ ನಾಲ್ಕು ಕೋಟಿ ಜನರಾದರೂ ವರ್ಷಂಪ್ರತಿ ತಲೆಯೊಂದಕ್ಕೆ ನಾಲ್ಕಾಣೆ ಮೇರೆ ಚಂದಾ ಕೊಡುತ್ತಾ ಬರುವುದಾದರೆ, ಪ್ರತಿವರ್ಷವೂ ಖಿಲಾಫತ್ ಫಂಡಿಗೆ ಒಂದು ಕೋಟಿ ರೂಪಾಯಿಗಳು ಶೇಖರಿಸುತ್ತಾ ಹೋಗುವುವೆಂದು ಮೌಲಾನಾ ಷೌಕತ್‌ಆಲಿಯವರು ಹೇಳಿರುತ್ತಾರೆ.

ಫಿಲಿಫೈನ್ ದ್ವೀಪಗಳಮೇಲೆ ಹರಿಕೇನ್ ಎಂಬ ಪ್ರಚಂಡಮಾರುತವು ಕಳೆದ 12 ನೇ ತಾರೀಖಿನಲ್ಲಿ ಬೀಸಿದ್ದರಿಂದ ಅನೇಕ ಊರುಗಳು ನೆಲಸಮವಾಗಿ ಹೋದವು; ಕೆಲವು ಸಕ್ಕರೆ ಕಾರ್ಖಾನೆಗಳು ಸಂಪೂರ್ಣವಾಗಿ ಹಾಳಾದವು. ಇದರಿಂದ ಸುಮಾರು 25 ಕೋಟಿ ರೂ.ಗಳಿಗೆ ಮೇಲ್ಪಟ್ಟು ಆಸ್ತಿಯ ಮತ್ತು 600 ಕ್ಕೆ ಮೇಲ್ಪಟ್ಟು ಜನರ ನಷ್ಟವಾಗಿರುತ್ತದೆ. ಗಾಯಪಟ್ಟವರ ಮತ್ತು ಮನೆಮಠಗಳಿಲ್ಲದೆ ಅಲೆಯುತ್ತಿರುವವರ ಸಂಖ್ಯೆಯು ಅಪಾರವಾಗಿದೆ.

ಪಾಟಿಯಾಲಾ ಸಂಸ್ಥಾನದ ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಎಲ್ಲ ಮ್ಯುನಿಸಿಪಲ್ ಆವರಣಗಳಲ್ಲೂ ಪ್ರೈಮರಿ ವಿದ್ಯಾಭ್ಯಾಸವು ನಿರ್ಬಂಧಗೊಳಿಸಲ್ಪಡಬೇಕೆಂತಲೂ, ಕಾಲ್ನಡೆಗಳ ತಳಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಗೂಳಿಗಳನ್ನು 55,000 ರೂಪಾಯಿಗಳ ವೆಚ್ಚದಿಂದ ಸಲಹಬೇಕೆಂತಲೂ, ನೂರಾರು ವ್ಯವಸಾಯಮುಟ್ಟುಗಳನ್ನು ಹಂಚುವುದಕ್ಕಾಗಿ 25,000 ರೂಪಾಯಿಗಳನ್ನು ಖರ್ಚುಮಾಡಬೇಕೆಂತಲೂ ಮಹಾರಾಜರವರು ಅಪ್ಪಣೆಮಾಡಿರುವರು.

ವಿವಾಹ ಮುಂತಾದ ವಿಶೇಷ ಸಮಯಗಳಲ್ಲಿ ದುಂದುವ್ಯಯಮಾಡುವವರು ನಮ್ಮ ಹಿಂದೂದೇಶೀಯರೇ ಎಂದು ಪ್ರಸಿದ್ಧವಾಗಿರುತ್ತದೆ. ಆದರೆ ಈಗ ಮೊರಾಕೋದೇಶದ ಸುಲ್ತಾನರು ತಮ್ಮ ಮಗನ ಮದುವೆಗಾಗಿ ಮಾಡುತ್ತಿರುವ ಪ್ರಯತ್ನಗಳು ಅಗಾಧವಾಗಿವೆ. ದೀಪೋತ್ಸವ ಒಂದಕ್ಕೆ 30 ಲಕ್ಷ ಫ್ರಾಂಕುಗಳು ಖರ್ಚಾಗುವವಂತೆ! ಬಡಬಗ್ಗರಿಗೆ ಅನ್ನಹಾಕುವುದಕ್ಕಾಗಿ 16 ಲಕ್ಷ ಫ್ರಾಂಕುಗಳು ಸ್ಯಾಂಕ್ಷನ್ ಆಗಿವೆ. ವಧೂವರರಿಗೆ ಕೊಡುವ ಬಹುಮಾನದ ಪದಾರ್ಥಗಳೇ ಒಂದುಕೋಟಿ ಫ್ರಾಂಕುಗಳ ಬೆಲೆಬಾಳುವವು.

ವಿದ್ಯಾರ್ಥಿಗಳು ರಜಾ ಕಾಲದಲ್ಲಿ ತಂತಮ್ಮ ಊರುಗಳಿಗೆ ಹೋಗಿ ಅಲ್ಲಿನ ಜನರಲ್ಲಿ ನೂತನ ವ್ಯವಸಾಯಕ್ರಮದ ಫಲಗಳನ್ನು ವಿವರಿಸಿ ಹೇಳಬೇಕು. ಸ್ಕೂಲುಗಳಲ್ಲಿರುವ ಬಾಲಕರು 11-12 ವರ್ಷ ವಯಸ್ಕರಾಗುತ್ತಲೇ ಅವರಿಗೆ ಭೂವ್ಯವಸಾಯದಮೇಲೆ ಮನಸ್ಸು ಹುಟ್ಟುವಂತೆ ಶಿಕ್ಷಣ ಕೊಡಬೇಕು. ವ್ಯವಸಾಯದ ಪರೀಕ್ಷಾ ಕೆಲಸಗಳನ್ನು ಒಂದೇ ಕಡೆ ನಡೆಸಬಾರದು ಎಂದು ಪೂನಾನಗರದಲ್ಲಿ ಸೇರಿದ್ದ ಅಗ್ರಿಕಲ್ಚರಲ್ ಕಮೀಷನರವರ ಮುಂದೆ ಅಲ್ಲಿನ ವ್ಯವಸಾಯದ ಇಲಾಖಾ ಡೈರೆಕ್ಟರವರಾದ ಡಾಕ್ಟರ್ ಮಾನ್‌ರವರು ಹೇಳಿರುತ್ತಾರೆ.

ಕೂಚ್‌ಬಿಹಾರಿನ ಮಹಾರಾಣಿಯವರು 1½ ಲಕ್ಷ ರೂ. ಬೆಲೆಬಾಳುವ ನವರತ್ನಖಚಿತವಾದ ತಮ್ಮದೊಂದು ಕಂಠಹಾರವನ್ನು ವಿಕ್ರಯಿಸಲಿಕ್ಕಾಗಿ ಕೇಸರಬಾಯ್ ದೇಸಿಹಂದ್ ಎಂಬ ವರ್ತಕನ ವಶಕ್ಕೆ ಕೊಟ್ಟಿದ್ದರು. ಆ ವರ್ತಕನು ಎರಡು ವರುಷಗಳಾದಾಗ್ಯೂ ಆ ಆಭರಣವನ್ನು ವಿಕ್ರಯಿಸದೆಯೂ ಹಿಂದಿರುಗಿ ಕೊಡದೆಯೂ ಹೋದುದರಮೇಲೆ ನಂಬುಗೆಯ ದ್ರೋಹಕ್ಕಾಗಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ. ಆ ಕಂಠಸರದಲ್ಲಿದ್ದ 88 ಮುತ್ತುಗಳಲ್ಲಿ 68 ಮುತ್ತುಗಳು 1 ಲಕ್ಷ ರೂ. ಗೆ ಯಾರಲ್ಲೋ ಒತ್ತೆ ಇಡಲ್ಪಟ್ಟಿದ್ದುವು; ಮಿಕ್ಕವು ಏನಾದುವೆಂಬುದು ಗೊತ್ತಾಗಿಲ್ಲವು.

ಮೆಡಿಕಲ್ ಕಾಲೇಜು, ಬೆಂಗಳೂರು. ಎಲ್.ಎಂ.ಪಿ.

71. ಎಂ. ಅಣ್ಣಾಜಪ್ಪ 5 ರೂ. 72. ಎಂ. ಜಿ. ಸೋಮಶೇಖರಪ್ಪ 5 ರೂ.

ಇಂಜನೀಯರಿಂಗ್ ಕಾಲೇಜು, ಬೆಂಗಳೂರು.—ಬಿ. ಇ.

73. ಟಿ. ಹುಚ್ಚವೀರಯ್ಯ 7 ರೂ. 74. ಕೆ. ಚೆನ್ನಬಸವಯ್ಯ 5 ರೂ.

ಇಂಜನೀಯರಿಂಗ್ ಸ್ಕೂಲು, ಬೆಂಗಳೂರು.

75. ಬಿ. ಆರ್. ಶಂಭುರುದ್ರಪ್ಪ, ಬಿ.ಇ. 3 ರೂ.

ಎಲೆಕ್ಟ್ರಿಕ್ ಇಂಜನೀಯರಿಂಗ್, ಬೆಂಗಳೂರು.

76. ಬಿ. ಗುಂಡಪ್ಪ, ಎಲೆಕ್ಟ್ರಿಕ್ 5 ರೂ.

ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್, ಬೊಂಬಾಯಿ.

77. ಎಂ. ವೀರಪ್ಪ, ಆರ್ಟ್ಸ್ 10 ರೂ.

ಕಲಾಮಂದಿರ, ಬೆಂಗಳೂರು ಸಿಟಿ.—ಆರ್ಟ್ಸ್.

78. ಎಸ್. ಬಿ. ನಂಜಪ್ಪ 3 ರೂ. 79. ಎಚ್. ಸಿದ್ಧರಾಮಯ್ಯ 3 ರೂ.

ಡಾವರ್ಸ್ ಕಾಲೇಜು, ಬೊಂಬಾಯಿ.

80. ಬಿ. ಪಿ. ಬಸಪ್ಪ, ಕಾಮರ್ಸ್ 8 ರೂ.

ಜಿ. ಪರಮಶಿವಯ್ಯ,
ಸೆಕ್ರೆಟರಿ.

ಎಂ. ನಾಗಪ್ಪ,
ಅ|| ಸೆಕ್ರೆಟರಿ.

OFFICE OF THE DIRECTOR OF INDUSTRIES & COMMERCE, BANGALORE.

ಭತ್ತ ಕುಟ್ಟುವ ಮಿಷನ್ ಖರೀದಿಗೆ ದೊರೆಯುತ್ತೆ.

ಡಗ್ಲಾಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾದ ಮತ್ತು ತಕ್ಷಣ ಕೆಲಸಮಾಡತಕ್ಕ ಸ್ಥಿತಿಯಲ್ಲಿರತಕ್ಕ 7 cwt. ಕಂಪ್ಲೀಟ್ ರೈಸ್ ಮಿಲ್—

1. ಹೊಳೇನರಸೀಪುರದ ಲಕ್ಷ್ಮೀಕರ ರೈಸ್ ಮಿಲ್ ಕಂಪನಿ ಲಿಮಿಟೆಡ್‌ಗೆ ಸೇರಿದ ಈ ಕೆಳಗೆ ಕಂಡ ತಪ್ಸೀಲುಗಳ ಯಂತ್ರಗಳು ಖರೀದಿಗೆ ಕೊಂಡುಕೊಳ್ಳಲು ಇಷ್ಟವುಳ್ಳವರಿಂದ ಟೆಂಡರ್ ಅಂಗೀಕರಿಸಲ್ಪಡುತ್ತೆ.

ಯಂತ್ರಗಳ ತಪ್ಸೀಲು.

22 ಕುದುರೆ ಬಲವುಳ್ಳ ಹಾರನ್ಸ್ ಬಿ ಸೆಕ್ಷನ್ ಗ್ಯಾಸ್ ಇಂಜಿನ್ ಮತ್ತು ಗ್ಯಾಸ್ ಪ್ಲಾಂಟು ಸಹ.

3 ಅಡಿ ಬಾಬ್ತು ಡೊಗ್ಲಾಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾದ ಹೆಲ್ಲರು.

2 ಅಡಿ ಬಾಬ್ತು ಡಿಟೊ ಮೇಕರ್ ಕೋನ್.

18 ಕಂಪಾರ್ಟುಮೆಂಟುಳ್ಳ ಭತ್ತ ಅಕ್ಕಿ ಪ್ರತ್ಯೇಕಿಸತಕ್ಕ ಪ್ಯಾಡಿ ಸಪರೇಟರ್ ಸಕ್ ಅಂಡ್ ಕೋ ಫ್ಯಾನ್ ರಿಡ್ಲ್, ಎರಡು ಡಬ್ಬಲ್ ಎಲಿವೇಟರುಗಳು, ಬೆಲ್ಟಿಂಗ್, ಷಿಫ್ಟಿಂಗ್, ಪುಲ್ಲಿಗಳು ಮತ್ತು ತತ್ಸಂಬಂಧವಾದ ಇತರ ಸಾಮಾನುಗಳು ಸಹ.

2. ಈ ಮಿಲ್ಲು ತಕ್ಷಣ ಕೆಲಸಮಾಡಬಹುದಾದ ಉತ್ತಮವಾದ ಸ್ಥಿತಿಯಲ್ಲಿರುತ್ತೆ.

3. ಖರೀದಿಗೆ ತೆಗೆದುಕೊಳ್ಳಲಪೇಕ್ಷೆಯುಳ್ಳವರು ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಡೈರೆಕ್ಟರುಗಳಿಗೆ ತಾರೀಖು 31-12-26 ರೊಳಗೆ ತಮ್ಮ ಟೆಂಡರನ್ನು ಒಂದು ಕವರಿನಲ್ಲಿ ಸೀಲ್ ಮೊಹರ್ ಮಾಡಿ ಕವರಿನ ಮೇಲ್ಭಾಗದಲ್ಲಿ ಹೊಳೇನರಸೀಪುರದ ಲಕ್ಷ್ಮೀಕರ ರೈಸ್ ಮಿಲ್ ಖರೀದಿಯ ಟೆಂಡರೆಂದು ಬರೆದು ಕಳುಹಿಸಬಹುದು. ವಾಯಿದೆ ತಾರೀಖು ಮೀರಿದನಂತರ ಟೆಂಡರನ್ನು ಅಂಗೀಕರಿಸಲಾಗುವುದಿಲ್ಲ.

4. ಪ್ರತಿಯೊಬ್ಬರೂ ಟೆಂಡರು ಸಮೇತ 100 ರೂಪಾಯಿಗಳನ್ನು ಡಿಪಾಜಿಟ್ ಮಾಡತಕ್ಕದ್ದು.

5 ಬಾಕಿ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಮೈಸೂರು ಡಿವಿಜನ್ ಕೈಗಾರಿಕೆಗಳ ಸೂಪರಿಂಟೆಂಡೆಂಟರವರಿಗೆ ಲಿಖಿತ ಮೂಲಕವಾಗಲೀ ಅಥವಾ ಅವರನ್ನು ಮೊಖ್ತಾ ನೋಡಿಯಾಗಲೀ ತಿಳಿದುಕೊಳ್ಳಬಹುದು.

(Sd.) R. Ananthasubramanyam,
for Offg. Director of
Industries and Commerce.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ನವಂಬರ್ ತಾ|| ೬ ನೆಯ ಶನಿವಾರ.

THE DISTRICT ECONOMIC SUPERINTENDENTS.

We had refrained from commenting on the selection of men for the newly-created posts of Economic Superintendents, vainly hoping for an off chance of their abolition on the strength of Mr. D. S. Mallappa's resolution at the Representative Assembly. Now that they are not going to be disturbed, we may just have our small say in the matter. The benevolent Mysore Government is still probably obsessed with the idea that the Brahmin community has a special claim for service in Mysore, and that community has indeed very good reasons to be grateful to the Government for this benevolence. Out of eight appointments that were to be made seven were announced first, of which two were presented to the privileged community. The other five were distributed between the Lingayet, the Christian, the Jain and the Mohammadan communities. When the eighth appointment was yet to be announced we were hoping fondly that it would go to the Vokkaligars who form a very substantial portion of the State population and not a very negligible one either and who stand to benefit to a great extent if these Superintendents are going to turn out any good work. But little were the public aware that that too was reserved to a Brahmin gentleman hailing from Bellary, where he seems th have held a post in the Agriculture Department. The prospects in the Madras Agriculture Department are, so far as we know, not bad, and one's curiosity is naturally roused why he must forsake it for this appointment of uncertain tenure. We are extremely doubtful if our Government has taken any pains to ascertain the antecedents of this gentleman specially chosen for the eighth place. It would probably reveal a record which is neither creditable to the gentleman nor to the judgment of the Government. There would be some pretence of an excuse if all the appointments were made from men in service already, for, they could then say that there were no candidates in service of the Vokkaligar community, which even in that important cadre of Amildars, affecting the welfare of the ryots, has hardly two representatives. But the fact is they have given some of the posts to fresh men and the eighth as already stated has gone to a fresh man. There were fresh men as candidates for the posts belonging to the Vokkaligar and other communities. We do not deny that for any Government it is a difficult job to uproot a tradition so deep-rooted. But that all this should take place in spite of the Miller Committee Report and in this case in spite of more efficient men being available from among the backward communities would no doubt be a surprise to those who do not know the ways of Mysore Government. We can only explain that the law of Karma of the other communities is operating rather rigourously and why should any body be blamed for it. Why should they not take that Mysore Government is only a merciful tool in the hands of an all too merciful Providence? It is so often a very soothing consolation to a Hindu to ascribe his adversities to Karma, and would it not be better for the backward communities to take consolation under such a convenient theory? The Mysore Government has called for candidates for making a selection of Revenue Probationers. We possess no prophetic vision, and so we do not want to forecast the appointments. But we would not wonder if the microscopic Brahmin community were to have a share out of all proportion to its strength even as it had last time, in the name of efficiency of course. Why, has not the efficiency of the Amildary been established so well on the bed-rock of Brahmanism? Heaven, spare us from this efficiency! The people have had enough of it.

DISTRICT JUDGE'S APPOINTMENT.

Since the transfer of Mr. G. Satyaji Rao from the District Court of Shimoga to that of Bangalore to take the place of Mr. G. Sreenivasa Iyer who has gone on leave, Shimoga has been without a District Judge. We are doubtful if this long delay speaks well of the administration of justice in the State. We wonder what accounts for such an unusual procedure. The next senior person in service is Mr. P. Mahadeviah, Sub-judge in Bangalore who could have been appointed to the vacancy in the place of Mr. G. Satvaji Rao. But somehow the appointment is held up and the minds of the people are agitated over it. It is one of those curious phenomena which we observe here, though not invariably, that whenever the question of the promotion of a non-Brahmin Officer comes up some difficulty or other crops up with the result that either promotion is stopped or the grade is affected to the worse. At a pyscological moment the members of the Bangalore Bar seem to have created some galata and taken exception to the treatment accorded by Mr. Mahadeviah to the members of the Bar and the litigants. It is noteworthy that this protest has come just now when the appointment of the District Judge is pending. Without holding a brief for Mr. Mahadeviah we may say that there are some of the judges belonging to the priestly class whose behaviour is anything but courteous to the Bar or the litigant public, but against whom not a whisper of protest is raised by the Bar which is composed mostly of the same fraternity. The highest judiciary in Mysore is entirely in the hands of Brahmins. It is a recognised policy in British India as in all parts of the world that the judicial appointments should be evenly distributed between different sections of the people. When such is the case, there is this attempt to discount the fitness of Mr. Mahadeviah by these circuitous methods. We can only characterise it as frivolous and vexatious which we hope the Government will discountenance. We trust that Government will do justice and that soon.

THE MYSORE MUNICIPAL COUNCIL.

We are told that Mr. N. Madhava Rao, the popular President of the Mysore City Municipal Council, is going on leave from the 1st of January next year. The matter of his successor is one with which the ratepayers are interested and they are already exercising their minds about it. For aught we know, Mr. Madhava Rao may not return to the place after his leave is over. Rumours are afloat, but nothing very authentic or certain about the likely successor. In some quarters the name of Dr. A. K. Pani who is about to retire after a meritorious service is mentioned. He was formerly the Health Officer of this City and in that capacity did excellent work. We would strongly commend to the kind consideration of Government his name for the Presidentship. He is familiar with the needs of Mysore City, and to tacle the pressing problems of drainage and sanitation and of City improvement in general one cannot find a better person. Besides, he has still plenty of energy with him and it would be but proper not to let go his experience unharnessed and there could be no better way of doing it than by asking him to take charge of the civic development of the capital of Mysore State. We hope that the suggestion commends itself to Government.

ಡಿಸ್ಟ್ರಿಕ್ಟ್ ಜಡ್ಜಿಯವರ ನೇಮಕ.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಜಿ. ಶ್ರೀನಿವಾಸಯ್ಯರ್‌ರವರು ರಜದಮೇಲೆ ಹೋಗಿರುವುದರಿಂದ ಶಿವಮೊಗ್ಗೆಯ ಡಿ|| ಜಡ್ಜಿಯವರಾದ ಮ|| ಜಿ. ಸತ್ಯಾಜಿರಾಯರು ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಆದರೆ ಅವರ ಸ್ಥಾನಕ್ಕೆ ಬೇರೊಬ್ಬರು ಈವರೆಗೂ ನಿಯಮಿಸಲ್ಪಡದಿರುವುದರಿಂದ ನ್ಯಾಯಶಾಖಾಡಳಿತದ ಆಲಸ್ಯಪ್ರದರ್ಶನವಾಗುವುದಲ್ಲದೆ ಕಕ್ಷಿಗಾರರಿಗೆಷ್ಟು ತೊಂದರೆಯಾಗಿರುತ್ತದೆ ಎಂಬುದನ್ನು ಹೇಳಬೇಕಾಗಿಲ್ಲವು. ಈ ಸ್ಥಾನಕ್ಕೆ ಸಬ್ ಜಡ್ಜಿಗಳಲ್ಲಿ ಹಿರಿಯರಾದವರೊಬ್ಬರು ನಿಯಮಿಸಲ್ಪಡತಕ್ಕದಾಗಿದೆ. ಅಂತಹ ಸಬ್ ಜಡ್ಜಿಗಳಲ್ಲಿ ಮ|| ಪಿ. ಮಹಾದೇವಯ್ಯನವರು ಹಿರಿಯರಾಗಿರುತ್ತಾರೆ. ಆದ್ದರಿಂದ ಈಗ ಬಿಡುವಾಗಿರುವ ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಜಡ್ಜಿಯವರ ಸ್ಥಾನಕ್ಕೆ ಅವರೇ ನಿಯಮಿಸಲ್ಪಡಬೇಕಾಗಿದೆ. ಈ ಮಧ್ಯೆ ಮ|| ಮಹಾದೇವಯ್ಯನವರು ಲಾಯರುಗಳಿಗೂ, ಕಕ್ಷಿಗಾರರಿಗೂ ತೊಂದರೆಯನ್ನು ಕೊಡುತ್ತಿರುವರಾದುದರಿಂದ ಅವರುಗಳ ಅನುರಾಗಕ್ಕೆ ಪಾತ್ರರಾಗಿಲ್ಲವೆಂದು ಮೊದಲಾಗಿ ಬೆಂಗಳೂರಿನ ಲಾಯರು ಸಂಘದವರು "ಶಿವಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ" ಒಂದು ಗೊಂದಲವನ್ನು ಹಚ್ಚಿರುವರು. ಹಿಂದುಳಿದ ವರ್ಗದ ಅಧಿಕಾರಿಗಳ ಅಭಿವೃದ್ಧಿಯ ವಿಚಾರವು ಬಂದ ವೇಳೆಯಲ್ಲಿ ಈರೀತಿ ಅಲ್ಲದ ಸಲ್ಲದ ದೋಷಾರೋಪಣೆಗಳನ್ನು ಮಾಡಿ ಕೋಲಾಹಲವನ್ನೆಬ್ಬಿಸಿ ಅವರ ಅಭಿವೃದ್ಧಿಗೆ ಕಲ್ಲುಹಾಕುವುದು ಮುಂಬರಿದ ವರ್ಗದ ಅಸೂಯೆಯುಳ್ಳವರ ನಿಸರ್ಗಗುಣವಾಗಿದೆ. ಹಾಗಲ್ಲದಿದ್ದರೆ ಕಕ್ಷಿಗಾರರ ಧನ ಮಾನ ಪ್ರಾಣಸಂರಕ್ಷಣಾ ದೀಕ್ಷಾಬದ್ಧರಾಗಿರುವ ಈ ಲಾಯರುಗಳು, ಕಕ್ಷಿಗಾರರನ್ನು ಮೂದಲಿಸಿ ಅವರಮೇಲೆ ಈದುಹುಲಿಯಂತೆ ಬೀಳುವವರಾದ ಮತ್ತು ಲಕ್ಷಾಧೀಶ್ವರರನ್ನು ಸಹ ಪಾಪರೆಂದು ಪ್ರಕಟಿಸುವವರಾದ ಸಜಾತೀಯ ನ್ಯಾಯಾಧೀಶರ ವಿಚಾರದಲ್ಲಿ ಚಕಾರ ಶಬ್ದವನ್ನು ಸಹ ಆಡದೆ ಮೌನದಾಗಿರುತ್ತಿದ್ದರೆ? ಅದುಕಾರಣ ಪ್ರಭುತ್ವದವರು ಇಂತಹ ಅಸೂಯಾಪರರ ಪೊಳ್ಳುಕೂಗಿಗೆ ಗಮನಕೊಡದೆ ಈಗ ಬಿಡುವಾಗಿರುವ ಡಿ|| ಜಡ್ಜಿಯವರ ಸ್ಥಾನಕ್ಕೆ ಎಲ್ಲಾ ವಿಧದಲ್ಲೂ ಅರ್ಹರಾಗಿರುವ ಸಬ್ ಜಡ್ಜಿಯವರನ್ನು ನಿಯಮಿಸಿ ತಮ್ಮ ಉಚಿತಜ್ಞತೆಯನ್ನು ವ್ಯಕ್ತಪಡಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು.

ನಮ್ಮ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಎನ್. ಮಾಧವರಾಯರು ಬರುವ ಜನವರಿ ತಾ|| 1 ರಿಂದ ರಜದಮೇಲೆ ಹೋಗುವವರಾಗಿರುವರಲ್ಲದೆ ಮರಳಿ ಈ ಉದ್ಯೋಗದಮೇಲೆ ಬರುವ ಸಂಭವವಿಲ್ಲವೆಂದು ತಿಳಿಯಬರುತ್ತದೆ. ಈವರೆಗೆ ಇಲ್ಲಿಯ ಪ್ರೆಸಿಡೆಂಟರಾಗಿ ಬಂದವರಲ್ಲಿ ಮ|| ಮಾಧವರಾಯರಷ್ಟು ದಕ್ಷತೆಯಿಂದಲೂ, ದರ್ಪದಿಂದಲೂ, ನಿಷ್ಪಕ್ಷಪಾತತೆಯಿಂದಲೂ, ಕರುಣೆಯಿಂದಲೂ, ಉದ್ಯೋಗನಿರ್ವಾಹಮಾಡುತ್ತ ಮತ್ತು ಕೌನ್ಸಿಲರುಗಳೊಡನೆ ಸುಹೃದ್ಭಾವದಿಂದಲೂ, ಮೈತ್ರಿಯಿಂದಲೂ ಇದ್ದುಕೊಂಡು ಮೀಟಿಂಗುಗಳನ್ನು ಹೂವಿನಸರವೆತ್ತಿದಂತೆ ಬಹು ಸುಲಭವಾಗಿ ನಡಿಸಿಕೊಂಡು ಬರುತ್ತ ಕೌನ್ಸಿಲರುಗಳ, ಕೈಕೆಳಗಿನ ಕೆಲಸಗಾರರ ಮತ್ತು ಪುರಜನರ ಪ್ರೀತಿವಿಶ್ವಾಸಗಳಿಗೂ ಮೆಚ್ಚುಗೆಗೂ ಪಾತ್ರರಾದವರು ಬೇರೊಬ್ಬರಿಲ್ಲವೆಂದು ಹೇಳುವುದು ಅತಿಶಯೋಕ್ತಿಯಲ್ಲವು. ಇಂತಹ ಪ್ರಜಾನುರಾಗಿಗಳಾದ ಅಧಿಕಾರಿಗಳ ಸಂಬಂಧವನ್ನು ರಾಜಧಾನಿಯ ನಿವಾಸಿಗಳು ಕಳೆದುಕೊಳ್ಳುವುದಕ್ಕಾಗಿ ಚಿಂತಾಕ್ರಾಂತರಾಗಿರುವರಲ್ಲದೆ, ಈ ಸ್ಥಾನಕ್ಕೆ ಇನ್ನೆಂತಹವರು ಬರುತ್ತಾರೋ ಎಂದು ಕುತೂಹಲಾವಿಷ್ಟರಾಗಿರುವರು. ಈ ಮಧ್ಯೆ ಉದ್ಯೋಗದಿಂದ ನಿವೃತ್ತರಾಗುವವರಾಗಿರುವ ಡಾ|| ಪಾಣಿಯವರು ಇಲ್ಲಿಯ ಪ್ರೆಸಿಡೆಂಟರಾಗಿ ಬರುವರೆಂಬ ವದಂತಿಯು ಹುಟ್ಟಿದೆ. ಇವರು ನಮ್ಮ ರಾಜಧಾನಿಯಲ್ಲಿ ಬಹುಕಾಲ ಹೆಲ್ತಾಫೀಸರಾಗಿದ್ದು ಇಲ್ಲಿಯ ಜನರ ಆರೋಗ್ಯಾಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡಿದವರಾಗಿಯೂ, ಜನರ ನಡೆನುಡಿಗಳನ್ನು ಅರಿತವರಾಗಿಯೂ, ಕಷ್ಟಪಟ್ಟು ಕೆಲಸಮಾಡಲು ತಕ್ಕ ಶಕ್ತಿವಂತರಾಗಿಯೂ, ಉತ್ಸಾಹಶೀಲರಾಗಿಯೂ ಇರುವುದರಿಂದ ಮ|| ಮಾಧವರಾಯರ ಅಗಲಿಕೆಯಿಂದುಂಟಾಗುವ ಕೊರತೆಯು ಬಹುಮಟ್ಟಿಗೆ ನಿವಾರಣೆಯಾಗುವ ಭರವಸೆಯಿರುವಪ್ರಯುಕ್ತ ಪ್ರಭುತ್ವದವರು ಈ ವಿಚಾರವನ್ನು ಚೆನ್ನಾಗಿ ಪರ್ಯಾಲೋಚಿಸಿ ಡಾ|| ಪಾಣಿಯವರ ಕಾಲೋಚಿತವಾದ ಸಹಾಯವನ್ನು ರಾಜಧಾನಿಯ ನಿವಾಸಿಗಳಿಗೆ ದೊರಕಿಸಿಕೊಡಬೇಕಾಗಿ ಸೂಚಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಯಡತೊರೆ ತಾ|| ಅಕ್ಕಿಹೆಬ್ಬಾಳದ ಸ್ಕೌಟ್ ಅಸೋಸಿಯೇಷನ್ನಿನ ವಾರ್ಷಿಕೋತ್ಸವವು ಈ ತಾ|| 14 ರಲ್ಲಿ ವಿಜೃಂಭಣೆಯಿಂದ ನಡೆಸಲ್ಪಡುವುದು.

ರಿಟೈರ್ಡ್ ಸೀನಿಯರ್ ಸರ್ಜನರಾದ ಡಾಕ್ಟರ್ ಮೈಲ್ವಾಗಹಂರವರು ಆಂಗ್ಲದೇಶಪರ್ಯಟನವನ್ನು ಪೂರೈಸಿಕೊಂಡು ಕಳೆದ ಭಾನುವಾರ ಬೆಂಗಳೂರನ್ನು ಸುರಕ್ಷಿತವಾಗಿ ತಲುಪಿದರು.

ರಾಜಧಾನಿಯ ಸಂತೆಪೇಟೆಯಲ್ಲಿರುವ ಮ|| ಬ್ರಹ್ಮಪ್ಪ ತವನಪ್ಪನವರ ಅಂಗಡಿಯಲ್ಲಿ ಶ್ರೀಧನಲಕ್ಷ್ಮೀಪೂಜಾಮಹೋತ್ಸವವು ಈ ತಾ|| 5 ರ ರಾತ್ರಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಮೈಸೂರು ನ್ಯಾಯವಿಧಾಯಕಸಭೆಯ ಮೀಟಿಂಗು ಬೆಂಗಳೂರು ಪಬ್ಲಿಕ್ ಆಫೀಸಿನ ಸಭಾಂಗಣದಲ್ಲಿ ಬರುವ ಡಿಸೆಂಬರ್ ತಾ|| 14 ನೇ ಮಂಗಳವಾರ ಮಧ್ಯಾಹ್ನ 12 ಘಂಟೆಗೆ ಆರಂಭಗೊಂಡು ನಡೆಯುವುದು.

ರಾಜಧಾನಿಯ ರೈಲ್ವೆಸ್ಟೇಷನ್ನಿನಿಂದ 3 ಮೈಲಿ ದೂರದಲ್ಲಿರುವ ಕ್ಷಯರೋಗಆಸ್ಪತ್ರೆಯ ರೋಗಿಗಳ ಬೇಸರಿಕೆಯ ಪರಿಹಾರಕ್ಕಾಗಿ ಪ್ರತಿ ಭಾನುವಾರಸಾಯಂಕಾಲ ಅರಮನೆಯ ಕಾನ್ಸರ್ಟ್ ಮೊದಲಾದ ವಾದ್ಯವಾದನವಾಗುವಂತೆ ಶ್ರೀಮನ್ಮಹಾರಾಜರವರಪ್ಪಣೆಯಾಗಿರುತ್ತದೆ.

ಕಳೆದ ಅಕ್ಟೋಬರ್ ತಾ|| 16 ಕ್ಕೆ ಅಂತ್ಯವಾದ ಒಂದು ವಾರದಲ್ಲಿ ಮೈಸೂರುರೈಲ್ವೆಗಳಿಂದ 1,25,600 ರೂ. ಉತ್ಪನ್ನವಾಗಿರುತ್ತದೆ; ಇದರ ಹಿಂದಣ ವಾರದಲ್ಲಿ 65,900 ರೂ. ಮಾತ್ರ ಉತ್ಪನ್ನವಾಗಿದ್ದಿತು. ಇಷ್ಟೊಂದು ಹೆಚ್ಚುತ್ಪನ್ನಕ್ಕೆ ದಸರಾಮಹೋತ್ಸವಕ್ಕಾಗಿ ವಿಶೇಷ ಜನರು ಬಂದು ಹೋದುದು ಕಾರಣವಾಗಿದೆ.

ಬೆಂಗಳೂರಲ್ಲಿರುವ ಹುಚ್ಚರ ಆಸ್ಪತ್ರೆಯ ಹೆಸರನ್ನು "ಬುದ್ಧಿಭ್ರಾಮುಕಾಸ್ಪತ್ರೆ" ಎಂದು ಬದಲಾಯಿಸಬೇಕೆಂದು ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನದಲ್ಲಿ ಮ|| ಗಳಾದ ಅಬ್ಬಾಸ್ ಖಾನ್‌ರವರೂ, ಜಿ. ಪರಮಶಿವಯ್ಯನವರೂ ಅರಿಕೆ ಮಾಡಿಕೊಂಡಿದ್ದುದರಮೇಲೆ, "ಮಾನಸಿಕ ಆಸ್ಪತ್ರೆ" ಎಂದು ಕರೆಯಲ್ಪಡಬೇಕಾಗಿ ಸರ್ಕಾರದ ಅಪ್ಪಣೆಯಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿಸಭೆಯ ದಶರಾಧಿವೇಶನವು ಕಳೆದ ತಾ|| 26 ರಲ್ಲಿ ಮುಕ್ತಾಯವಾಯಿತಷ್ಟೆ. ಅದರ ಹಿಂದಿನ ಸಾಯಂಕಾಲ ಮೈಸೂರು ಪ್ರಾಗತಿಕಪಕ್ಷಾಧಿಪತಿ ಮ|| ಹೊಸಕೊಪ್ಪ ಕೃಷ್ಣರಾಯಪ್ರಭೃತಿಗಳು ದಿವಾನರನ್ನೂ ಕೌನ್ಸಿಲರು ಮೊದಲಾಗಿ ಮುಖ್ಯಾಧಿಕಾರಿಗಳನ್ನೂ ಮಾಡರ್ನ್ ಹೋಟಲಿಗೆ ಬರಮಾಡಿಕೊಂಡು ಅಲ್ಪಾಹಾರಸಮಾರಾಧನೆಯಿಂದ ಸತ್ಕರಿಸಿದರು.

ಕಳೆದ ತಾ|| ೩೦ ರಲ್ಲಿ ನಡೆದ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಕಳೆದ ೬ ವರ್ಷಗಳಿಂದಲೂ ಮ್ಯುನಿಸಿಪಲ್ ಕೌನ್ಸಿಲರಾಗಿದ್ದ ಮ|| ಯು. ಆರ್. ಲಿಂಗೋಜಿರಾಯರು ವಿಧಿವಶರಾದುದಕ್ಕಾಗಿ ಕೌನ್ಸಿಲಿನವರು ತಮ್ಮ ಅನುತಾಪವನ್ನು ಪ್ರದರ್ಶಿಸಿದರಲ್ಲದೆ, ಅರಮನೆಯಿಂದ ಸ್ಥಾಪಿತವಾಗಿರುವ ವೃದ್ಧಾಶ್ರಮದ ಪೋಷಣೆಗಾಗಿ 1,000 ರೂ. ಗಳನ್ನು ಧರ್ಮಮಾಡಿದ ಸೋದರ ಕೌನ್ಸಿಲರು ಧರ್ಮಪ್ರಕಾಶ ಡಿ. ಬನುಮಯ್ಯನವರನ್ನು ಅಭಿನಂದಿಸಿದರು.

ಯಾದಗಿರಿಯಲ್ಲಿ ಪ್ರಕಟವಾಗುವ ಧರ್ಮಸಂಜೀವಿನೀಮಾಸಪತ್ರಿಕೆಯು ಮುದ್ರಣದ ಕೊರತೆಯಿಂದ ಸಕಾಲಕ್ಕೆ ಹೊರಡಲವಕಾಶವಿಲ್ಲದಿದ್ದುದರಮೇಲೆ, ಯಾದಗಿರಿ ಶಂಕರಪಾಠಶಾಲೆಯ ಮೆಂಬರುಗಳ ದ್ರವ್ಯಸಹಾಯದಿಂದ ಒಂದು ಮುದ್ರಾಲಯವನ್ನು ಸ್ವಂತವಾಗಿ ಸ್ಥಾಪಿಸಿರುವುದರಿಂದ, ಮುಂದೆ ಧರ್ಮಸಂಜೀವಿನಿ ಪತ್ರಿಕೆಯು ಕ್ರಮವಾಗಿ ಹೊರಡುವುದೆಂದೂ, ಹಿಂದೆರಡುತಿಂಗಳಿಂದ ಪ್ರಕಟವಾಗದಿದ್ದುದಕ್ಕಾಗಿ ಅದರ ಚಂದಾದಾರರು ಕ್ಷಮಿಸಬೇಕೆಂದೂ ಆ ಪತ್ರಿಕಾಸಂಪಾದಕರು ಈಮೂಲಕ ಪ್ರಾರ್ಥಿಸುತ್ತಾರೆ.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನ ಮೇಲ್ವಿಚಾರಣಾಕಮಿಟಿಯವರು ಅಂದರೆ ಟ್ರಸ್ಟಿಗಳು ಸ್ಕೂಲಿನ ಲೆಕ್ಕವನ್ನೂ, ಆಡಳಿತದ ವರದಿಯನ್ನೂ ಪ್ರತಿವರ್ಷದಲ್ಲೂ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಲ್ಲಿಗೆ ಕಳುಹಿಸಿಕೊಡಬೇಕೆಂಬ ನಿರ್ಬಂಧವಿದ್ದಾಗ್ಯೂ, ಕಳೆದ 8-10 ವರ್ಷಗಳಿಂದಲೂ ಕಳುಹಿಸಿಕೊಡದಿರಲು ಕಾರಣವೇನೆಂದು ಡಿಸ್ಟ್ರಿಕ್ಟ್ ಜಡ್ಜಿಯವರು ಟ್ರಸ್ಟಿಗಳನ್ನು ಕೇಳಿದ್ದುದರಮೇಲೆ, ಕೊಂಚ ಕಾಲಾವಧಿಯನ್ನು ಕೊಡಬೇಕೆಂದು ಕಮಿಟಿಯ ಸೆಕ್ರೆಟರಿಯವರು ಕೇಳಿಕೊಂಡಿರಲಾಗಿ ಈ ತಾ|| 11 ರಲ್ಲಿ ಲೆಕ್ಕವು ಕಳುಹಲ್ಪಡಬೇಕೆಂದು ಡಿ|| ಜಡ್ಜಿಯವರ ಅಪ್ಪಣೆಯಾಗಿರುವುದಾಗಿ ಕೇಳುತ್ತೇವೆ.

ಬೊಂಬಾಯಿ ನ್ಯಾಯವಿಧಾಯಕಸಭಾ ಸಭ್ಯರಾಗಿ ಆರಿಸಲ್ಪಡಲು ಹುಬ್ಬಳ್ಳಿಯ ರಾವ್ ಬಹದ್ದೂರ್ ಕಂಬಳಿ ವಕೀಲರವರು ಅಭ್ಯರ್ಥಿಗಳಾಗಿ ನಿಂತಿರುವಂತೆ ಧಾರವಾಡದಲ್ಲಿ ವಕೀಲರಾಗಿರುವ ಮ|| ಹೊಸಮನಿ, ಬಿ.ಎ.,ಎಲ್.ಎಲ್.ಬಿ., ರವರೂ ಅಭ್ಯರ್ಥಿಗಳಾಗಿ ನಿಂತಿರುವರು. ಮ|| ಹೊಸಮನಿಯವರು ವಿದ್ಯಾವಿಭೂಷಿತರಾಗಿರುವರಲ್ಲದೆ ಹಿಂದುಳಿದ ಜನವರ್ಗದವರ ಹಿತಕಾಂಕ್ಷೆಯಿಂದ ದೇಶಸೇವೆಯನ್ನು ಮಾಡಬೇಕೆಂಬ ಕುತೂಹಲವಿಷ್ಟರಾಗಿರುವುದರಿಂದ ಸ್ವಪಕ್ಷೀಯಾಭಿಲಾಷಿಗಳಾದ ಓಟರುಗಳು ತಮ್ಮ ಮತವನ್ನು ಅವರಿಗೆ ಕೊಟ್ಟು ಕೃತ್ಯಕೃತ್ಯರಾಗಲೆಂದೂ, ಮ|| ಹೊಸಮನಿಯವರು ತಮ್ಮ ಸತ್ಪ್ರಯತ್ನದಲ್ಲಿ ಜಯಶಾಲಿಗಳಾಗಲೆಂದೂ ಅಪೇಕ್ಷಿಸುತ್ತೇವೆ.

ಬೆಂಗಳೂರು ತಾ|| ಹೆಣ್ಣೂರುವಾಸಸ್ಥನಾದ ಚಿಕ್ಕಪುಟ್ಟಯ್ಯನೆಂಬವನು ತನ್ನ 14 ವರ್ಷವಯಸ್ಸಿನ ಮಗಳನ್ನು ಅವಳ ಮೈಮೇಲಿದ್ದ 400 ರೂ. ನ ಆಭರಣಗಳಸಮೇತವಾಗಿ ಅದೇ ತಾ|| ಸಾದೇನಹಳ್ಳಿಯ ಅಪ್ಪಯ್ಯ ಮತ್ತು ಸಣ್ಣಪ್ಪ ಎಂಬವರು ಅಪಹರಿಸಿಕೊಂಡು ಹೋಗಿ ಅಪ್ಪಯ್ಯನ ಮಗನಾದ ಭೈರನೆಂಬವನಿಗೆ ವಿವಾಹಮಾಡಿಕೊಂಡರೆಂದು ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದುಮಾಡಿದ್ದನು. ಈ ವಿವಾದದ ವಿಚಾರಣೆಯು ಕಳೆದ ತಾ|| 29 ರಲ್ಲಿ ಪೂರೈಸಿ ಹುಡುಗಿಯು 19 ವರ್ಷವಯಸ್ಕಳಾಗಿ ಮೇಜರಳಾಗಿದ್ದು ತನ್ನ ಸೋದರಮಾವನಾದ ಅಪ್ಪಯ್ಯನ ಮಗನನ್ನು ತಾನೇ ವರಿಸಿ ಲಗ್ನವಾದೆನೆಂದು ಆಕೆಯು ವಾಜ್ಮೂಲದಿಂದ ವ್ಯಕ್ತಪಟ್ಟುದರಮೇಲೆ ವಿವಾದವು ತಳ್ಳುಪಡಿಮಾಡಲ್ಪಟ್ಟಿತು.

ರಾಜಧಾನಿಯಲ್ಲಿ ಬಡಬಗ್ಗರು ವಾಸಿಸುತ್ತಿರುವ ಬೀದಿಗಳು ಮ್ಯುನಿಸಿಪಾಲಿಟಿಯವರ ಕಟಾಕ್ಷಕ್ಕೆ ಬೀಳದೆ ಹಳ್ಳಕೊಳ್ಳಗಳಿಂದ ನಿಬಿಡವಾಗಿ ತಿರುಗಾಡುವ ಜನರು ಹಗಲೇ ಮುಗ್ಗರಿಸಿ ಬೀಳುತ್ತಿರುವಾಗ್ಗೆ, ಬೀದಿಯ ದೀಪಗಳಿಲ್ಲದೆ ಕತ್ತಲೆಯಲ್ಲಿ ತಿರುಗಾಡುವವರ ಪಾಡನ್ನು ಹೇಳಬೇಕಾದುದಿಲ್ಲವೆಂದೂ, ಈ ವಿಚಾರವನ್ನು ದೀಪದ ಸೂಪರಿಂಟೆಂಡೆಂಟರವರ ಗಮನಕ್ಕೆ ತಂದಾಗ್ಯೂ ಪ್ರಯೋಜನವಾಗದೆ, ಯಾವ ಜ್ಯೋತಿಯೂ ಇಲ್ಲದೆ ರಾತ್ರಿಯೆಲ್ಲಾ ವಿದ್ಯುದ್ದೀಪವು ಉರಿಯುತ್ತಿರುವ ಗುಡ್ಡಪ್ರದೇಶದ ಮೃಗಗಳಿಗಿಂತಲೂ ತಮ್ಮ ಸ್ಥಿತಿಯು ಹೀನವಾದುದೆಂದೂ ಒಬ್ಬ ಕಷ್ಟಾನುಭವಿಯು ಬರೆದಿರುತ್ತಾರೆ. ದೊಡ್ಡಬೀದಿಗಳಲ್ಲಿ ವಾಸಿಸುವವರಂತೆಯೇ ಕಂದಾಯವನ್ನು ತೆರುತ್ತಿರುವ ಬಡ ನಿವಾಸಿಗಳ ಕುಂದುಕೊರತೆಗಳ ಕಡೆಗೆ ಸರ್ಕಾರಿಯಧಿಕಾರಿಗಳು ಗಮನಕೊಡುವುದು ಅತ್ಯವಶ್ಯವೂ ಅವಸರವೂ ಆಗಿರುತ್ತದೆ.

ರಾಜಧಾನಿಯಲ್ಲಿ ಪಕ್ಷಕ್ಕೊಮ್ಮೆ ಪ್ರಕಟವಾಗುತ್ತಿರುವ ವಿಶ್ವಬಂಧುಪತ್ರಿಕೆಯು ತನ್ನ ಉತ್ಪಾದಕರೂ, ಪೋಷಕರೂ ಆಗಿದ್ದ ಆ ಚಿರಸ್ಮರಣೀಯ ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರ ಸಚಿತ್ರಜೀವನಚರಿತ್ರೆಯನ್ನು ಸ್ಮಾರಕಸಂಚಿಕೆಯನ್ನಾಗಿ ಹೊರಡಿಸಿರುವುದರ ಪ್ರತಿಯೊಂದನ್ನು ನಾವು ಸ್ವಾಭಿಮಾನದಿಂದ ಸ್ವೀಕರಿಸಿರುವೆವು. ಈ ಸ್ಮಾರಕಸಂಚಿಕೆಯಲ್ಲಿ, ಶ್ರೀಮಂತರ ಇಹಲೋಕಯಾತ್ರೆಯಲ್ಲಿ ಬಾಲ್ಯಾರಭ್ಯ ಪರಲೋಕಯಾತ್ರೆಯವರೆಗೂ ನಡೆದಿರುವ ಚರಿತ್ರೆಯು ಕಾಲೋಚಿತ ಭಾವಚಿತ್ರಗಳೊಡನೆ ಮುದ್ರಿಸಲ್ಪಟ್ಟಿರುತ್ತದೆ. ಇದರ ಸಾದ್ಯಂತಾವಲೋಕನದಿಂದ ಕರ್ನಾಟಕಜೈನಸಮಾಜಕ್ಕೆ ಕಿರೀಟಪ್ರಾಯರಾಗಿದ್ದ ಆ ವರ್ಧಮಾನಯ್ಯನವರು ಎಂತಹ ಪರಿಶುದ್ಧಾತ್ಮರೂ, ಸ್ವಜನ ಸ್ವದೇಶಾಭಿಮಾನಿಗಳೂ, ಪ್ರಭುಭಕ್ತಿಪರಾಯಣರೂ, ಸ್ವಧರ್ಮಾಭಿಮಾನಿಗಳೂ ಆಗಿದ್ದು ಚಿರಸ್ಮರಣೀಯರೂ ಆದರ್ಶಪ್ರಾಯರೂ ಆಗಿರುವರೆಂಬುದು ಸುವ್ಯಕ್ತವಾಗುತ್ತದೆ. ಇಂತಹ ಲೋಕೋತ್ತರ ಪವಿತ್ರಾತ್ಮರ ಜೀವನಚರಿತ್ರೆಯನ್ನು ವಿಶ್ವಬಂಧು ಪ್ರಕಟಿಸಿ ತನ್ನ ಕೃತಜ್ಞತೆಯನ್ನು ಪ್ರದರ್ಶಿಸಿದುದಕ್ಕಾಗಿ ನಾವು ಅದನ್ನು ಅಭಿನಂದಿಸುತ್ತೇವೆ.

ಸರ್ ಎಂ. ವಿಶ್ವೇಶ್ವರಯ್ಯನವರ ಸಹೋದರರಾದ ಬೆಂಗಳೂರು ಅಡ್ವೋಕೇಟ್ ಮ|| ಎಂ. ರಾಮಚಂದ್ರರಾಯರು ದಸರಾಮಹೋತ್ಸವದಲ್ಲಿ ರಾಜಧಾನಿಗೆ ಬಂದು ದಿವಾನರ ಬಂಗಲೆಯಲ್ಲಿ ಅವರ ಅತಿಥಿಗಳಾಗಿದ್ದ ವೇಳೆಯಲ್ಲಿ ಅವರು ಎಕ್ಸಿಕ್ಯುಟಿವ್ ಕೌನ್ಸಿಲಿನ ಆನರು ಮೆಂಬರಾಗಿ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವರೆಂಬ ಸುದ್ದಿಯು ಹುಟ್ಟಿ ಎಲ್ಲೆಲ್ಲೂ ಹಬ್ಬಿದುದರಮೇಲೆ, ಮ|| ರಾಯರಿಗೆ ಅವರ ಮಿತ್ರಮಂಡಲಿಯವರಿಂದ ಅಭಿನಂದನಮಳೆಗರೆಯಲ್ಪಟ್ಟು ಕಡೆಯಲ್ಲಿ ಅದು ನಿರಾಧಾರವಾದ ಸುದ್ದಿಯೆಂದು ಪ್ರಕಟವಾಗಿದ್ದಿತು. ಆದರೆ ಶ್ರೀಮನ್ಮಹಾರಾಜರವರ ವಾಗ್ದಾನದ ಪ್ರಕಾರ ಈ ಗೌರವಸ್ಥಾನ ಕಲ್ಪನೆಯಾಗಲೇಬೇಕಾಗಿರುವುದರಿಂದ, ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಯನ್ನು ಬಿಟ್ಟಮೇಲೆ ಯಾವ ಪ್ರಯೋಜನಾಪೇಕ್ಷೆಯಿಲ್ಲದೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆ, ಕಾವೇರಿಜಲಾಶಯ ಮೊದಲಾದ ಕಾರ್ಯಗಳಲ್ಲಿ ಕೆಲಸಮಾಡುತ್ತಿರುವುದರ ಪ್ರತಿಫಲವಾಗಿ ಅವರ ಸಹೋದರರು ಆನರು ಕೌನ್ಸಿಲರಾಗಿ ನಿಯಮಿಸಲ್ಪಡುವರೆಂಬ ವದಂತಿಯು ಪುನಃ ಹುಟ್ಟಿ ಪ್ರಬಲವಾಗುತ್ತಿದೆ.

ವರ್ತಮಾನಸಂಗ್ರಹ.

ಚೀನಾರಾಜ್ಯದ ಪೆಕಿಂಗ್ ನಗರದಲ್ಲಿ 18 ವರ್ಷದ ಒಬ್ಬ ಹುಡುಗಿಯನ್ನು ಸಪತ್ನೀಕನೂ, ಕುರೂಪಿಯೂ ಆದ ವೃದ್ಧನಿಗೆ 650 ರೂ. ಗಳಿಗೆ ಮಾರಕೂಡದೆಂದು ತಂದೆಯನ್ನು ಆಕೆಯು ಎಷ್ಟು ಪ್ರಾರ್ಥಿಸಿದರೂ ಕೇಳದಿರಲು ಹುಡುಗಿಯು ಹತಾಶಳಾಗಿ ಮದುವೆಯ ಕಾಲದಲ್ಲಿ ವಿಷಪಾನಮಾಡಿ ಹಸೆಮಣೆಯಮೇಲೆಯೇ ಮೃತಳಾದಳು.

ಇಂಡಿಯಾದೇಶದಲ್ಲಿ ಸುಮಾರು 7 ಕೋಟಿ ಮಂದಿ ಮಹಮ್ಮದೀಯರಿರುವರು. ಇವರಲ್ಲಿ ನಾಲ್ಕು ಕೋಟಿ ಜನರಾದರೂ ವರ್ಷಂಪ್ರತಿ ತಲೆಯೊಂದಕ್ಕೆ ನಾಲ್ಕಾಣೆ ಮೇರೆ ಚಂದಾ ಕೊಡುತ್ತಾ ಬರುವುದಾದರೆ, ಪ್ರತಿವರ್ಷವೂ ಖಿಲಾಫತ್ ಫಂಡಿಗೆ ಒಂದು ಕೋಟಿ ರೂಪಾಯಿಗಳು ಶೇಖರಿಸುತ್ತಾ ಹೋಗುವುವೆಂದು ಮೌಲಾನಾ ಶೌಕತ್ ಆಲಿಯವರು ಹೇಳಿರುತ್ತಾರೆ.

ಫಿಲಿಪ್ಪೈನ್ ದ್ವೀಪಗಳಮೇಲೆ ಹರಿಕೇನ್ ಎಂಬ ಪ್ರಚಂಡಮಾರುತವು ಕಳೆದ 12 ನೇ ತಾರೀಖಿನಲ್ಲಿ ಬೀಸಿದ್ದರಿಂದ ಅನೇಕ ಊರುಗಳು ನೆಲಸಮವಾಗಿ ಹೋದವು; ಕೆಲವು ಸಕ್ಕರೆ ಕಾರ್ಖಾನೆಗಳು ಸಂಪೂರ್ಣವಾಗಿ ಹಾಳಾದವು. ಇದರಿಂದ ಸುಮಾರು 25 ಕೋಟಿ ರೂ.ಗಳಿಗೆ ಮೇಲ್ಪಟ್ಟ ಆಸ್ತಿಯ ಮತ್ತು 600 ಕ್ಕೆ ಮೇಲ್ಪಟ್ಟ ಜನರ ನಷ್ಟವಾಗಿರುತ್ತದೆ. ಗಾಯಪಟ್ಟವರ ಮತ್ತು ಮನೆಮಠಗಳಿಲ್ಲದೆ ಅಲೆಯುತ್ತಿರುವವರ ಸಂಖ್ಯೆಯು ಅಪಾರವಾಗಿದೆ.

ಪಾಟಿಯಾಲಾ ಸಂಸ್ಥಾನದ ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಎಲ್ಲ ಮ್ಯುನಿಸಿಪಲ್ ಆವರಣಗಳಲ್ಲೂ ಪ್ರೈಮರಿ ವಿದ್ಯಾಭ್ಯಾಸವು ನಿರ್ಬಂಧಗೊಳಿಸಲ್ಪಡಬೇಕೆಂತಲೂ, ಕಾಲ್ನಡೆಗಳ ತಳಿಯನ್ನು ಅಭಿವೃದ್ಧಿಪಡಿಸಲಿಕ್ಕೆ ಗೂಳಿಗಳನ್ನು 55,000 ರೂಪಾಯಿಗಳ ವೆಚ್ಚದಿಂದ ಸಲಹಬೇಕೆಂತಲೂ, ನೂರಾರು ವ್ಯವಸಾಯಮುಟ್ಟುಗಳನ್ನು ಹಂಚುವುದಕ್ಕಾಗಿ 25,000 ರೂಪಾಯಿಗಳನ್ನು ಖರ್ಚುಮಾಡಬೇಕೆಂತಲೂ ಮಹಾರಾಜರವರು ಅಪ್ಪಣೆಮಾಡಿರುವರು.

ವಿವಾಹ ಮುಂತಾದ ವಿಶೇಷ ಸಮಯಗಳಲ್ಲಿ ದುಂದುವ್ಯಯ ಮಾಡುವವರು ನಮ್ಮ ಹಿಂದೂದೇಶೀಯರೇ ಎಂದು ಪ್ರಸಿದ್ಧವಾಗಿರುತ್ತದೆ. ಆದರೆ ಈಗ ಮೊರಾಕೋದೇಶದ ಸುಲ್ತಾನರು ತಮ್ಮ ಮಗನ ಮದುವೆಗಾಗಿ ಮಾಡುತ್ತಿರುವ ಪ್ರಯತ್ನಗಳು ಅಗಾಧವಾಗಿವೆ. ದೀಪೋತ್ಸವ ಒಂದಕ್ಕೆ 30 ಲಕ್ಷ ಫ್ರಾಂಕುಗಳು ಖರ್ಚಾಗುವವಂತೆ! ಬಡಬಗ್ಗರಿಗೆ ಅನ್ನಹಾಕುವುದಕ್ಕಾಗಿ 16 ಲಕ್ಷ ಫ್ರಾಂಕುಗಳು ಸ್ಯಾಂಕ್ಷನ್ ಆಗಿದೆ. ವಧೂವರರಿಗೆ ಕೊಡುವ ಬಹುಮಾನದ ಪದಾರ್ಥಗಳೇ ಒಂದುಕೋಟಿ ಫ್ರಾಂಕುಗಳ ಬೆಲೆಬಾಳುವವು.

ವಿದ್ಯಾರ್ಥಿಗಳು ರಜಾ ಕಾಲದಲ್ಲಿ ತಂತಮ್ಮ ಊರುಗಳಿಗೆ ಹೋಗಿ ಅಲ್ಲಿನ ಜನರಲ್ಲಿ ನೂತನ ವ್ಯವಸಾಯಕ್ರಮದ ಫಲಗಳನ್ನು ವಿವರಿಸಿ ಹೇಳಬೇಕು. ಸ್ಕೂಲುಗಳಲ್ಲಿರುವ ಬಾಲಕರು 11-12 ವರ್ಷ ವಯಸ್ಕರಾಗುತ್ತಲೇ ಅವರಿಗೆ ಭೂವ್ಯವಸಾಯದಮೇಲೆ ಮನಸ್ಸು ಹುಟ್ಟುವಂತೆ ಶಿಕ್ಷಣ ಕೊಡಬೇಕು. ವ್ಯವಸಾಯದ ಪರೀಕ್ಷಾ ಕೆಲಸಗಳನ್ನು ಒಂದೇ ಕಡೆ ನಡೆಸಬಾರದು ಎಂದು ಪೂನಾನಗರದಲ್ಲಿ ಸೇರಿದ್ದ ಅಗ್ರಿಕಲ್ಚರಲ್ ಕಮಿಷನರವರ ಮುಂದೆ ಅಲ್ಲಿನ ವ್ಯವಸಾಯದ ಇಲಾಖಾ ಡೈರೆಕ್ಟರವರಾದ ಡಾಕ್ಟರ್ ಮಾನ್‌ರವರು ಹೇಳಿರುತ್ತಾರೆ.

ಕೂಚಬಿಹಾರಿನ ಮಹಾರಾಣಿಯವರು 1½ ಲಕ್ಷ ರೂ. ಬೆಲೆಬಾಳುವ ನವರತ್ನಖಚಿತವಾದ ತಮ್ಮದೊಂದು ಕಂಠಹಾರವನ್ನು ವಿಕ್ರಯಿಸಲಿಕ್ಕಾಗಿ ಕೇಸರಬಾಯ್ ದೇಚಿಚಂದ್ ಎಂಬ ವರ್ತಕನ ವಶಕ್ಕೆ ಕೊಟ್ಟಿದ್ದರು. ಆ ವರ್ತಕನು ಎರಡು ವರುಷಗಳಾದಾಗ್ಯೂ ಆ ಆಭರಣವನ್ನು ವಿಕ್ರಯಿಸದೆಯೂ ಹಿಂದಿರುಗಿ ಕೊಡದೆಯೂ ಹೋದುದರಮೇಲೆ ನಂಬುಗೆಯ ದ್ರೋಹಕ್ಕಾಗಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ. ಆ ಕಂಠಸರದಲ್ಲಿದ್ದ ೮೩ ಮುತ್ತುಗಳಲ್ಲಿ ೬೮ ಮುತ್ತುಗಳು 1 ಲಕ್ಷ ರೂ. ಗೆ ಯಾರಲ್ಲೋ ಒತ್ತೆ ಇಡಲ್ಪಟ್ಟಿದ್ದುವು; ಮಿಕ್ಕವು ಏನಾದುವೆಂಬುದು ಗೊತ್ತಾಗಿಲ್ಲವು.

ಪರಿಶುದ್ಧವಾದ ಹಾಲು ದೊರೆಯದೆ ಮಕ್ಕಳ ಆರೋಗ್ಯವು ಕೆಟ್ಟು ಅಕಾಲಮರಣವು ಹೆಚ್ಚುತ್ತಿರುವುದರಿಂದಲೂ ಹಾಲಿನ ಬೆಲೆಯು ಬಡ ಜನರಿಗೆ ಲಭ್ಯವಾಗದಿರುವುದರಿಂದಲೂ ಒಂದು ಕೃತಕಹಾಲಿನ ನಿರ್ಮಾಣೋಪಾಯವು ಕಂಡುಹಿಡಿಯಲ್ಪಟ್ಟಿರುವುದಂತೆ. ಈಗ ತಗಡಿನ ಡಬ್ಬಿಗಳಲ್ಲಿ ಹಾಕಲ್ಪಟ್ಟು ಅಂಗಡಿಗಳಲ್ಲಿ ಮಾರಲ್ಪಡುತ್ತಿರುವ ಹಾಲಿನ ಪುಡಿಯನ್ನೂ ಬೆಣ್ಣೆಯನ್ನೂ ತಂದು ತಕ್ಕಷ್ಟು ಪ್ರಮಾಣದಲ್ಲಿ ಬಿಸಿನೀರಿನೊಂದಿಗೆ ಬೆರಸಿ ಕಡೆಯುವ ಯಂತ್ರದಲ್ಲಿ ಹಾಕಿ ಬಹುವೇಗದಿಂದ ಕಡೆದರೆ ಸ್ವಚ್ಛವೂ ಶ್ರೇಷ್ಠವೂ ಆದ ಹಾಲು ಸಿದ್ಧವಾಗುವುದೆಂದೂ, ಇದು ಎಂತಹ ಬೇಸಿಗೆಯಕಾಲದಲ್ಲೂ 24 ಘಂಟೆಯವರಿಗಿಟ್ಟಿದ್ದರೂ ಕೆಡುವುದಿಲ್ಲವೆಂದೂ ಒಂದು ಆಂಗ್ಲಪತ್ರಿಕೆಯು ತಿಳಿಸುತ್ತದೆ.

ಕಳೆದ ತಾ|| 27 ರ ರಾತ್ರಿ ಮಾರ್ಸ್ ಎಂಬ ಮಂಗಳಗ್ರಹವು ಭೂಮಿಗೆ ಬಹು ಸಮೀಪಗ್ರಸ್ತವಾಗಿದ್ದಿತು ಅಂದರೆ 80 ಲಕ್ಷ ಮೈಲಿ ದೂರದಲ್ಲಿದ್ದಿತು. ಹಿಂದೆ ಯಾವಾಗಲೂ ಇಷ್ಟು ಸಮೀಪಗ್ರಸ್ತವಾಗಿರಲಿಲ್ಲವೆಂದೂ, ಈ ಮಂಗಳಗ್ರಹದಲ್ಲಿ ಬಹು ಕಲಾಕೌಶಲ್ಯನಿಪುಣಜನರು ವಾಸವಾಗಿರುವರೆಂದೂ, ಅವರು ಭೂಮಿಯಮೇಲಿರುವ ಜನರಿಗೆ ತಮ್ಮಲ್ಲಿಯ ಸಮಾಚಾರವನ್ನು ವಾಯುವಾರ್ತೆಯಮೂಲಕ ತಿಳುಹುತ್ತಿರುವರೆಂದೂ ಖಗೋಳಶಾಸ್ತ್ರಜ್ಞರು ಹೇಳುತ್ತಿರುವರಲ್ಲದೆ ಮಂಗಳಗ್ರಹದ ಮೇಲ್ಭಾಗವು ಹೇಗಿರುತ್ತದೆಂಬುದನ್ನು ಪ್ರಪಂಚದ ನಾನಾ ಭಾಗದ ಪ್ರಖ್ಯಾತ ಜ್ಯೋತಿಷ್ಕರು ಗ್ರೀನಿಚ್ ಖಗೋಳಶಾಸ್ತ್ರಾಲಯದಲ್ಲಿ ಸೇರಿ ದೂರದರ್ಶಕಯಂತ್ರಸಹಾಯದಿಂದ ಪರೀಕ್ಷಿಸುತ್ತಿರುವರೆಂದೂ ಪ್ರಕಟವಾಗಿದೆ.

ನೋಟೀಸ್.

ಮಂಡ್ಯ ತಾ|| ಕೊಪ್ಪದ ಸಮ್ಮತು ಆಜಿಕಗ್ಗಳ್ಳಿಗ್ರಾಮದಲ್ಲಿರುವ ವೀರಶೈವಮತದ ಸಿದ್ಧಲಿಂಗಪ್ಪನವರ ಮೂರನೇ ಮಗನಾದ ಬಸಪ್ಪನು ಈ ಮೂಲಕ ಸಮಸ್ತಜನರಿಗೂ ತಿಳಿಯಪಡಿಸುವುದೇನಂದರೆ—

ನಮ್ಮ ತಂದೆಗೆ ನಾನು ಮೊದಲಾಗಿ 5 ಜನ ಗಂಡುಮಕ್ಕಳಿರುತ್ತೇವೆ. ಈ ಪೈಕಿ ನನ್ನ ಹಿರಿಯ ಅಣ್ಣನಾದ ಸಿದ್ಧಬಸಪ್ಪನು ನಮ್ಮಗಳಿಗೆ ಮೋಸಪಡಿಸಬೇಕೆಂಬ ದುರುದ್ದೇಶದಿಂದ ಈ ಕೆಳಗೆ ಕಂಡ ನಮ್ಮ ಅವಿಭಕ್ತಕುಟುಂಬದ ಆಸ್ತಿಯನ್ನು ಪರಾಧೀನಮಾಡಲು ಪ್ರಯತ್ನಿಸಿರುವುದಾಗಿ ತಿಳಿಯಬರುತ್ತದೆ. ಆದ್ದರಿಂದ ನಮ್ಮಗಳ ಅನುಮತಿಯಿಲ್ಲದೆ ಸದರಿಯ ಆಸ್ತಿಯನ್ನು ಕ್ರಯ ಭೋಗ್ಯ ಆಧಾರ ಮಾಡಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲವೆಂದೂ, ಅದಕ್ಕೆ ನಮ್ಮಾಸ್ತಿಯಾಗಲಿ ನಾವಾಗಲಿ ಜವಾಬ್ದಾರರಲ್ಲವೆಂದೂ ಈ ಮೂಲಕ ಎಚ್ಚರಿಸಿದೆ. ಆಸ್ತಿಯ ವಿವರ.—

25 ನೇ ಖಾತೆಗೆ ಸೇರಿದ್ದು

1.	ಸರ್ವೆ	2	ನೇ ನಂಬರಿನ	ಊರುಮುಂದಿರುವ ಕುಷ್ಕಿಹೊಲ
2.	,,	4	,,	ಕುಷ್ಕಿ ಮರಳುಹೊಲ
3.	,,	23	,,	ತರೀ ಮೋಗಳಗದ್ದೆ
4.	,,	34	,,	ಕುಷ್ಕಿ ಮೋಗಳಹೊಲ
5.	,,	18	,,	ಕುಷ್ಕಿ ಮುತ್ತೇರಿಬೋರೆ
6.	,,	24	,,	ತರೀಜಮೀನು.

88 ನೇ ಖಾತೆಗೆ ಸೇರಿದ್ದು

7.	ಸರ್ವೆ	25	ನೇ ನಂಬರಿನ	ತರಿ ಬಂಡಳ್ಳಿ ಗದ್ದೆ
8.	,,	26	,,	ಕುಷ್ಕಿ ತೊರೆ ಹೊಲ
9.	,,	32	,,	ತರಿ ಕೇಗಲ ಗದ್ದೆ
10.	,,	33	,,	ಡಿಟೊ

ಬಸಪ್ಪನ ರುಜು.

ಕೈ|| ಚೆನ್ನಬಸವಪ್ಪನವರ ಸ್ಮಾರಕಕ್ಕಾಗಿ ಬಂದ ದ್ರವ್ಯ.

ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳಿಂದ ಬಂದ ಚಂದಾ ಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಮ|| ಗಳಾದ 1. ಹಾಸನದ ಡಿ|| ಎಕಾನಾಮಿಕ್ ಸೂಪರಿಂಟೆಂಡೆಂಟ್ ಹೆಚ್. ಕೆ. ಮಲ್ಲಪ್ಪನವರು 5 ರೂ. 2. ಹಾಸನದ ಸಾಹುಕಾರ್ ಕೇಣಿ ಮಹದೇವಪ್ಪನವರು, ಆರ್. ಎ. ಮೆಂಬರು 10 ರೂ. 3. ಬೆಂಗಳೂರು ಸಬ್‌ಜಡ್ಜ್ ಪಿ. ಮಹದೇವಯ್ಯನವರು, ಬಿ.ಎ., ಬಿ.ಎಲ್., ರವರು 10 ರೂ. 4. ಆನೆಕಲ್ ತಾ|| ಜಿಗಣೆಯಲ್ಲಿರುವ ಪೊನ್ನಗಂಗಪ್ಪನವರು, ಆರ್. ಎ. ಮೆಂಬರು 10 ರೂ. 5. ನಂಜನಗೂಡು ವೈಸ್‌ಪ್ರೆಸಿಡೆಂಟ್ ನಂಜುಂಡಾರಾಧ್ಯರು 3 ರೂ. 6. ಚಿಕ್ಕನಾಯ್ಕನಹಳ್ಳಿ ತಾ|| ಶೆಟ್ಟಿಕೆರೆ ಎಸ್. ಎಂ. ಶಿವಲಿಂಗಪ್ಪನವರು, ಆರ್. ಎ. ಮೆಂಬರು 10 ರೂ. 7. ಶ್ರೀಚೆನ್ನಬಸವೇಶ್ವರಕೃಪಾಪೋಷಿತನಾಟಕ ಕಂಪೆನಿಯ ಪ್ರೊಪ್ರೈಟರ್, ಜಿ. ಎಚ್. ವೀರಣ್ಣನವರು 6 ರೂ. 8. ಮೈಸೂರು ಎಂ. ಪಿ. ಲಿಂಗಪ್ಪಯ್ಯನವರು 5 ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು.

ಕಳೆದ ತಾ|| 24 ರಲ್ಲಿ ನಡೆದ ಸ್ಮಾರಕೋತ್ಸವಕಾಲದಲ್ಲಿ ಓದಲ್ಪಟ್ಟ ಕೈ|| ಚೆನ್ನಬಸವಪ್ಪನವರ ಸ್ಮಾರಕಪದ್ಯಗಳು.

ಶ್ರೀಕರ್ಣಾಟಕಮಂ ಸುವಿ |
ವೇಕದೆಪರಿಪಾಲಿಸೆನ್ನು ನಾಲ್ವಡಿಕೃಷ್ಣ ||
ಕ್ಷ್ಮಾಕಾಂತನ ಕೊಡೆನೆಳಲೊಳ |
ಗೇಕಾಂತಂ ಬಾಳ್ವರಾವೆ ಧನ್ಯರ್ ಧರೆಯೊಳ್ ||೧||
ಜನಪತಿಗುಂ ಜನತತಿಗುಂ |
ಮನಮೆಚ್ಚಿನ ಬಯ್ಕೆಯೆನಿಪ ವಿದ್ಯಾವಿಭವಂ ||
ವಿನಯಾದಿಗಳಂ ಕಲಿಸಲ್ |
ಘನಗುರುಕುಲಮಾದುದಂದು ಗಣಿಸಲ್ಕಾದೊಳ್ ||೨||
ವಿಮಲಂ ಧನಾಢ್ಯನಖಿಲೋ |
ತ್ತಮ ಕಬ್ಬಳ್ಳಿಯನಿವಾಸಿ ಚೆನಬಸವಪ್ಪಂ ||
ಅಮಮಾ ಸ್ವೈವಾಭ್ಯುದಯ |
ಕ್ಕಮಿತಾದರನಾಗಿ ರಚಿಸಿದಂ ಗುರುಕುಲಮಂ ||೩||
ಅರಯೆ ಚೆನಬಸವಪ್ಪನ |
ಧೀರತ್ವಾದ್ಯಖಿಲಗುಣಮನಿತ್ತಲ್ ಬಾಲರ್ ||
ತೋರುವತಿದೀಯಚಿತ್ರ |
ಸ್ಮಾರಕಮಂ ಕಂಡು ಕಲಿಯೆ ಕಲ್ಪಿಸಲಕ್ಕುಂ ||೪||
ಪಿರಿದಿಳೆಯಲ್ಲಿ ಕೃತಜ್ಞತೆ |
ಯರಿದನದಂ ನಮ್ಮ ಸಚಿವ ಮಿರ್ಜಾ ಇಸ್ಮೈಲ್ ||
ಗುರುಕುಲದೆಳೆಯರ್ಗಿಂದಾ |
ವರಗುಣಮಂ ಕಲಿಸಿ ಪೊರೆಯೆಬಂದಂ ದಯೆಯಿಂ ||೫||
ಚೆನಬಸವಪ್ಪನಚಿತ್ರಮಿ |
ದಿನಕರಿಯಿರ್ಪನ್ನೆಗಂವಲಂ ಸೊಗಯಿಕೆ ನ ||
ಮ್ಮಿನಿಯಂ ನಾಲ್ವಡಿಕೃಷ್ಣಾ |
ವನೀಶ್ವರಂ ಪೊರೆಗೆ ಸಾನುಜಂ ಮೈಸೂರಂ ||೬||

ಸಂ|| ಶ್ರೀಕಂಠಶಾಸ್ತ್ರಿ,
24-10-26. ಆಸ್ಥಾನವಿದ್ವಾನ್.

ಪತ್ರವ್ಯವಹಾರ

[illegible] ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಇದು ಕೃತಘ್ನತೆಯಲ್ಲವೆ?

ದೊಡ್ಡಬಳ್ಳಾಪುರ ತಾಲ್ಲೂಕು ಸರ್ವಮಾನ್ಯ ಗೊಲ್ಲಹಳ್ಳಿಯಲ್ಲಿ ಮಳೆಯಿಲ್ಲದೆ ಕೆರೆಕುಂಟೆಗಳೂ ಬತ್ತಿ ಬೆಳೆಯೂ ಒಣಗಿಹೋಗಿ ಜನರಿಗೂ ದನಕರುಗಳಿಗೂ ಬಹಳ ತೊಂದರೆಯಾಗಿದ್ದುದರಮೇಲೆ ಈ ಗ್ರಾಮದೇವರಾದ ಶ್ರೀ ಬಸವೇಶ್ವರನ ಕೃಪೆಯಿಂದ ಕೂಡಲೆ ಮಳೆಯು ಬಂದಲ್ಲಿ ವಿಶೇಷವಾಗಿ ಪೂಜೆ ಪುರಸ್ಕಾರವನ್ನೂ ಮಹಾಗಣಾರಾಧನೆಯನ್ನೂ ಮಾಡುತ್ತೇವೆಂದು ಗ್ರಾಮಸ್ಥರು ಬಹಳ ಭಯಭಕ್ತಿಯಿಂದ ಪ್ರಾರ್ಥಿಸಿಕೊಂಡಿದ್ದರು. ಅದೇ ರಾತ್ರಿ ದೊಡ್ಡಮಳೆಯು ಬಂದು ಕೆರೆಕಟ್ಟೆಗಳೆಲ್ಲ ತುಂಬಿ ನೀರು ಹರಿದುದಲ್ಲದೆ ಹೊಲ ಗದ್ದೆಗಳಲ್ಲೆಲ್ಲಾ ನೀರು ನಿಂತಿದ್ದಿತು. ಹೀಗೆ ಗ್ರಾಮಸ್ಥರ ಪ್ರಾರ್ಥನೆಯನ್ನು ಅಂಗೀಕರಿಸಿ ಬೇಡಿದಿಷ್ಟಾರ್ಥವನ್ನು ಕೊಡುವ ದ್ವಿತೀಯ ಶಂಭುವಾದ ಆ ಬಸವೇಶ್ವರನು ಮಳೆಯನ್ನು ಸುರಿಸಿ ಜನರ ಮನಸ್ಸಿಗೆ ಮಹಾನಂದವನ್ನುಂಟುಮಾಡಿದನಾದರೂ ಗ್ರಾಮಸ್ಥರು ಆ ಮಹಾಸ್ವಾಮಿಯ ಉಪಕಾರವನ್ನು ಮರೆತು ತಮ್ಮ ಪ್ರಾರ್ಥನೆಯಂತೆ ಮಹಾಗಣಾರಾಧನೆಯನ್ನು ಮಾಡದೆ ಕೃತಘ್ನರೆನಿಸಿಕೊಂಡುದುದಕ್ಕಾಗಿ ಚಿಂತಿಸುತ್ತೇನೆ. ಆ ಪರಮದಯಾಳುವಾದ ಶ್ರೀಬಸವೇಶ್ವರಸ್ವಾಮಿಗೆ ಮಾಡಿಕೊಂಡಿರುವ ಹರಕೆಯನ್ನು ಈಗಲಾದರೂ ಗ್ರಾಮಸ್ಥರು ಕೂಡಲೆ ನೆರವೇರಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಿ ಕೃತಜ್ಞರೆಂದೆನಿಸಿಕೊಳ್ಳುವವರಾಗಲೆಂದು ಕೋರುವ,

ಬಸವಭಕ್ತ.

ಐವತ್ತುಸಾವಿರ ರೂಪಾಯಿ ದಾನ.

ವಿದ್ಯಾವಿಭಾಗದ ಡಿ. ಇನ್ಸ್‌ಪೆಕ್ಟರ್ ದೊರೆಗಳವರು ತಾ|| 10-9-26 ರಲ್ಲಿ ಉಷಾಮಠದ ಶ್ರೀ 108 ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಸ್ವಾಮಿ ಮಹಾಸನ್ನಿಧಿಯ ಅಧ್ಯಕ್ಷತೆಯಲ್ಲಿ ನೆರೆದಿದ್ದ ಸಭೆಯಲ್ಲಿ ಮಾಡಿದ ಭಾಷಣದ ಸಂಕ್ಷೇಪವಿವರಣ-ಪೂಜ್ಯಪಾದರಾದ ಸಭಾಧ್ಯಕ್ಷರೇ ಮತ್ತು ಸಭಿಕ ಮಹಾನುಭಾವರೆ, ಈ ದಿನ ಈ ಸಭೆಯಲ್ಲಿ ಕೂಡಿದ ನಾವೆಲ್ಲರೂ ಧನ್ಯರು. ಯಾಕೆಂದರೆ, ಈ ದಿನದ ಸಭೆಯು ಕೇವಲ ದೇಶೋನ್ನತಿ ಮತ್ತು ಜಾತ್ಯೋನ್ನತಿಗಾಗಿ ಕೂಡಿರುವದು. ಆದರೆ ಈ ಎರಡೂ ಲಭಿಸಬೇಕಾದರೆ ನಮ್ಮ ಸಮಾಜದಲ್ಲಿ ವಿದ್ಯಾಪ್ರಚಾರವಾಗಬೇಕು. ಜಗತ್ತಿನಲ್ಲಿ ಪ್ರತಿಯೊಂದುಸಮಾಜವೂ ಕೇವಲ ವಿದ್ಯದಿಂದಲೇ ಮುಂದರಿಯಬೇಕಾಗಿದೆ. ಈ ಭಾರತ ಭೂಮಿಯು ಸೇವಾಭೂಮಿಯೆನಿಸುವದಕ್ಕೆ ಕಾರಣವೇನಂದರೆ, ಪ್ರಾಚೀನಕಾಲದಲ್ಲಿ ಈ ದೇಶವು ಸರ್ವ ವಿದ್ಯೆಗಳಿಗೆ ತೌರಮನೆಯಾಗಿತ್ತು. ಸರ್ವ ದೇಶೀಯ ಜನರು ಈ ದೇಶದಲ್ಲಿ ಬಂದು ವಿದ್ಯಾಧ್ಯಯನಮಾಡಿ ಪಂಡಿತರಾಗುತ್ತಿದ್ದರು. ಆದರೆ ಅಂಥಾ ಭೂಮಿಯಲ್ಲಿಯೇ ನಾವಿದ್ದು ನಮ್ಮ ಪವಿತ್ರ ಸಂತಾನವು ಅನ್ಯದೇಶಕ್ಕೆ ವಿದ್ಯಾಭ್ಯಾಸಕ್ಕಾಗಿ ಹೋಗುವ ಪ್ರಸಂಗಬಂದಿತು. ಇದು ಕೇವಲ ಕಾಲಮಹಿಮೆಯೇಸರಿ. ನಮ್ಮ ಜಗತ್ಪೂಜ್ಯ ಸಭಾಧ್ಯಕ್ಷರು ಕೇವಲ ಅವತಾರಪುರುಷರೆಂದಲ್ಲಿ ಅತಿಶಯೋಕ್ತಿಯಾಗಲಾರದು. ಯಾಕೆಂದರೆ, ಈ ಮಹನೀಯರು ಈ ಸಂಸ್ಥಾನದ ಅಧಿಕಾರವನ್ನು ಹೊಂದಿ ಕೇವಲ ೫ ವರ್ಷಗಳಾಗಿರುವವು. ಆದರೆ ಈ ಪೂರ್ವದಲ್ಲಿ ಈ ಪವಿತ್ರ ಪೀಠದ ಹೀನಸ್ಥಿತಿಯು ಸಭಿಕರಿಗೆ ಗೋಚರವಿರುವುದರಿಂದ ವರ್ಣನೆಮಾಡುವ ಆವಶ್ಯಕವಿಲ್ಲ. ಇಂಥಾ ಹೀನಸ್ಥಿತಿಗೆ ಬಂದಿದ್ದ ಪೀಠವನ್ನು ಸ್ವಲ್ಪಕಾಲದಲ್ಲಿಯೇ ಉನ್ನತಸ್ಥಿತಿಗೆ ತಂದದ್ದಲ್ಲದೆ ಪೂಜ್ಯಪಾದದಿಂದ ಶ್ರೀ ಕೇದಾರನಾಥಸನಾತನಧರ್ಮ ಮಹಾವಿದ್ಯಾಲಯ, ಶ್ರೀ ವಿಶ್ವನಾಥವಿದ್ಯಾಲಯ, ಕನ್ಯಾವಿದ್ಯಾಲಯ, ಪ್ರೈಮರಿಸ್ಕೂಲ, ಶ್ರೀ ಕೇದಾರನಾಥ ಧರ್ಮಾರ್ಥ ಎಲೋಪೆಥಿಕ್ ಔಷಧಾಲಯ, ಶ್ರೀ ವಿಶ್ವನಾಥ ಧರ್ಮಾರ್ಥ ಔಷಧಾಲಯ, ಸದಾವರ್ತ ಮಿಡ್ಲ್‌ಸ್ಕೂಲ ವಿದ್ಯಾರ್ಥಿಗಳಿಗೆ ವರ್ಷಾ 300 ರೂಪಾಯಿ ಶಿಷ್ಯವೃತ್ತಿ ಇವಲ್ಲದೆ ಮಿಡ್ಲ್‌ಸ್ಕೂಲನ್ನು ಕೂಡ ತಮ್ಮ ಉದಾರಾಶ್ರಯದಲ್ಲಿಟ್ಟು ನಡಿಸುತ್ತಿರುವರು. ಇದನ್ನೆಲ್ಲಾ ನೋಡಿ ನನಗೆ ತುಂಬಾ ಸಂತೋಷವಾಗಿರುವದು. ಸಭಿಕರೆ, ಈ ಮಹನೀಯರ ಕೀರ್ತಿಯನ್ನು ನಾನು ಎಷ್ಟು ವರ್ಣಿಸಿದರೂ ತೀರದು. ಉಷಾಮಠವೆಂದರೆ ಬಾಣಾಸುರನ ಮಗಳು ಉಷಾದೇವಿಯು ವಿದ್ಯಾಭ್ಯಾಸಮಾಡಿದ ಸ್ಥಳವು. ಇದಲ್ಲದೆ ಈ ನಮ್ಮೆಲ್ಲ ಸನಾತನಧರ್ಮಿಗಳ ಗುರುಪೀಠವು. ನಾನು ಡಿಸ್ಟ್ರಿಕ್ಟುಬೋರ್ಡಿನ ಕಡೆಯಿಂದ ಸನ್ನಿಧಿಯ ಉದಾರಾಶ್ರಯದಲ್ಲಿ ಅರಿಕೆಮಾಡುವದೇನಂದರೆ, ಸದ್ಯಃ ಮಿಡ್ಲ್‌ಸ್ಕೂಲು ಸಂಸ್ಥಾನದ ಬಿಲ್ಡಿಂಗುಗಳಲ್ಲಿ ನಡೆಯುತ್ತಿರುವದು. ಅದರ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿವರ್ಷ ಹೆಚ್ಚುತ್ತಿರುವದರಿಂದ ಸ್ಥಳವು ಕಡಿಮೆ ಬರುವದು. ಆದ್ದರಿಂದ ಅದಕ್ಕಾಗಿ ಬೇರೆ ಬಿಲ್ಡಿಂಗುಗಳನ್ನು ಕಟ್ಟಿಸುವುದು ಅವಶ್ಯವಿರುವದು. ಬಿಲ್ಡಿಂಗುಗಳ ವಿವರ—ಸ್ಕೂಲಿಗಾಗಿ ದೊಡ್ಡ ಮೂರು ಹಾಲ್‌ಗಳು, ಬೋರ್ಡಿಂಗಿಗಾಗಿ ನಾಲ್ವತ್ತುರೂಮ್ಸು, ಕಿಚನ್‌ಹೌಸ್, ಟೀಚರ ಕ್ವಾರ್ಟರ್ಸ್, ಸರ್ವಂಟ್ಸ್‌ರೂಮ್ಸ್, ವಿದ್ಯಾರ್ಥಿಗಳಿಗೆ ಆಟಕ್ಕಾಗಿ ಫಿಲ್ಡ್ ಮತ್ತೂ ಚಿಕ್ಕ ತೋಟಕ್ಕಾಗಿ ಭೂಮಿ, ನೀರಿನ ವ್ಯವಸ್ಥೆ ಇವೆಲ್ಲವೂ 50,000 ರೂಪಾಯಿ ಖರ್ಚಿನಿಂದ ಪೂರ್ಣವಾಗುವವು. ಆದರೆ ಇವೆಲ್ಲ ಕಾರ್ಯವು ಮಹಾಸನ್ನಿಧಿಯಿಂದಲೇ ಜರಗಬೇಕೆಂದು ನಮ್ಮೆಲ್ಲರ ಪ್ರಾರ್ಥನೆ ಇರುವದು. ಯಾಕೆಂದರೆ, ಈ ಬಡದೇಶದಲ್ಲಿ ಈ ಮಹಾಕಾರ್ಯವು ಮಹಾಸನ್ನಿಧಿಯ ವಿನಾ ಅನ್ಯರಿಂದಾಗಲಾರದು. ಇದಲ್ಲದೆ ಬೋರ್ಡಿನಲ್ಲಿ ದ್ರವ್ಯವಿಲ್ಲ. ಬೋರ್ಡು ಕೇವಲ ಸ್ಕೂಲುಮಾತ್ರ ನಡಿಸಬಲ್ಲದು. ಆದ್ದರಿಂದ ಈ ಬಡಭಕ್ತರನ್ನು ಉದ್ಧರಮಾಡುವಿರೆಂಬದಾಗಿಯೂ ಈ ವಿಷಯದಲ್ಲಿ ಈ ನಮ್ಮೆಲ್ಲರಿಗೆ ಅಪ್ಪಣೆಕೊಡಿಸುವಿರೆಂಬದಾಗಿಯೂ ಪ್ರಾರ್ಥಿಸುತ್ತೇನೆ ಎಂದು ಭಾಷಣವಾದಮೇಲೆ ನಿಮ್ಮೆಲ್ಲರ ಪ್ರಾರ್ಥನೆಯಂತೆ ಬಿಲ್ಡಿಂಗುಗಳನ್ನು ಕಟ್ಟಿಸಿಕೊಡಲು ಒಪ್ಪಿರುತ್ತೇವೆಂದು ಮಹಾಸನ್ನಿಧಿಯಪ್ಪಣೆಯಾಗಲು ಸಭಿಕರು ಜಯಧ್ವಾನಮಾಡಿದರು. ಮಂಗಲಾಚರಣೆಯಿಂದ ಸಭಾವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ಶ್ರೀಮನ್ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀ ವೀರಶೈವಾನಂದಾಶ್ರಮ

ತಿಪಟೂರು.

ಚಿತ್ರದುರ್ಗದ ಶ್ರೀಮನ್ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರ ಸ್ವಾರಿಯು 1909 ರಲ್ಲಿ ಈ ಪ್ರಾಂತ್ಯಕ್ಕೆ ವಿಜಯಂಗೈಸಿದ್ದಾಗ್ಯೆ ಅವಿದ್ಯೆಯೆಂಬ ಅಂಧಕಾರದಲ್ಲಿ ಸಿಕ್ಕಿರುವ ವೀರಶೈವ ಜನಾಂಗದವರನ್ನು ಪರಾಂಬರಿಸಿ. ಈ ಜನರಿಗಿರುವ ಮೌಢ್ಯವನ್ನು ಹೋಗಲಾಡಿಸುವ ಪ್ರಯತ್ನವನ್ನು ಕೈಗೊಂಡು ಅನಾಥರಾದ ವೀರಶೈವವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಕೊಟ್ಟು ಸಾಮಾಜಿಕ, ನೈತಿಕ, ಮತ್ತು ಧಾರ್ಮಿಕ ವಿದ್ಯೆಯನ್ನು ಕಲಿಸಬೇಕೆಂಬ ಸದುದ್ದೇಶವನ್ನು ಇಲ್ಲಿನ ಪ್ರಮುಖರಲ್ಲಿ ತಿಳಿಸಿ ಅವರುಗಳ ಉದಾರವಾದ ಭಕ್ತಿಯನ್ನು ಒಪ್ಪಿಸಿಕೊಂಡು ರಮಣೀಯವೂ, ಭವ್ಯವೂ ಆದ ಕಟ್ಟಡಗಳನ್ನು ಕಟ್ಟಿಸೋಣವಾಯಿತು. ಅನಂತರ 1912 ರಲ್ಲಿ ಶ್ರೀವೀರಶೈವಾನಂದಾಶ್ರಮವೆಂಬ ಅಭಿಧಾನದಿಂದ ಈ ಸಂಸ್ಥೆಯನ್ನು ಸ್ಥಾಪಿಸಿ ಇಂಥಾ ಸಂಸ್ಥೆಗೆ ಸರಿಯಾದ ಮೂರ್ತಿಗಳಿರಬೇಕೆಂದು ಯೋಚಿಸಿ ಘನವಿದ್ವಾಂಸರೂ, ತಪೋನಿಷ್ಠರೂ ಆದ ಶ್ರೀ ಪಂಚಾಕ್ಷರಿಸ್ವಾಮಿಗಳನ್ನು ನೇಮಿಸಿದ್ದರು. ಇವರು ನಮ್ಮಗಳ ದುರ್ದೈವದಿಂದ ಶಿವೈಕ್ಯರಾದರು. ಮಹಾಸನ್ನಿಧಿಯು ಇಂಥಾ ದೊಡ್ಡಸಂಸ್ಥೆಗೆ ಯೋಗ್ಯರಾದ ಮತ್ತೊಬ್ಬ ಮೂರ್ತಿಯನ್ನು ಕ್ಷಿಪ್ರದಲ್ಲಿ ನೇಮಿಸುವ ಆಲೋಚನೆಯಲ್ಲಿರುತ್ತಾರೆ. ಇಲ್ಲಿ ಮಹಾಸನ್ನಿಧಿಯಿಂದ ಕಳೆದ ನಳನಾಮ. ಸಂವತ್ಸರದ ಆಶ್ವೀಜ ಶುದ್ಧ ೧೦ ಶುಕ್ರವಾರ ಶುಭಮುಹೂರ್ತದಲ್ಲಿ ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿ, ವೇದಾಧ್ಯಯನ ಸಂಪನ್ನರಾದ ಒಬ್ಬ ಶಾಸ್ತ್ರಿಗಳನ್ನು ನೇಮಿಸಿ, ವಿದ್ಯಾರ್ಥಿಗಳ ವಾಸಕ್ಕೂ, ಉಚಿತವಾದ ಭೋಜನಕ್ಕೂ, ತಕ್ಕ ಏರ್ಪಾಡುಮಾಡಿದರು. ಕೆಲವು ಕಾಲಾನಂತರ ಲೋವರ್‌ಸೆಕೆಂಡರಿ ಪರೀಕ್ಷೆಯವರಿವಿಗೆ ರಾಜಭಾಷೆಯಾದ ಇಂಗ್ಲೀಷ್ ವಿದ್ಯಾಭ್ಯಾಸಮಾಡುವ ವೀರಶೈವ ಬಡವಿದ್ಯಾರ್ಥಿಗಳಿಗು ಕೂಡ ಉಚಿತವಾಗಿ ಅನ್ನೋದಕಗಳನ್ನು ಕೊಟ್ಟು ಅಭ್ಯಾಸಮಾಡಿಸಬೇಕೆಂಬ ಸದುದ್ದೇಶವನ್ನು ಇಲ್ಲಿನ ಪ್ರಮುಖರಲ್ಲಿ ಆಲೋಚಿಸಿ 30 ಮಂದಿ ಬಡವಿದ್ಯಾರ್ಥಿಗಳ ಅಶನವಸನಗಳಿಗೆ ಏರ್ಪಾಟುಮಾಡಿದರು. ಆಚಾರನಿಷ್ಠರೂ ವೇದಾಧ್ಯಯನವನ್ನೂ, ಸಂಸ್ಕೃತವನ್ನೂ ಚೆನ್ನಾಗಿ ಅಭ್ಯಾಸಮಾಡಿರುವವರೂ ಆದ ಇಬ್ಬರು ಶಾಸ್ತ್ರಿಗಳಿಂದ ಕೂಡಿ ಬಿದಿಗೆಯ ಚಂದ್ರನೋಪಾದಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿರುವ ಈ ಸಂಸ್ಕೃತಪಾಠಶಾಲೆಯಲ್ಲಿ 33 ಮಂದಿ ಬಾಲಕರು ಅಭ್ಯಾಸಮಾಡುತ್ತಿದ್ದಾರೆ. ಈ ಸಂಸ್ಥೆಗೆ ಅಂಗವಾಗಿ ಒಂದು ಫ್ರೀರೀಡಿಂಗ್ ರೂಮು ಸಹ ಶ್ರೀಜಗದ್ಗುರು ಪೂಜ್ಯಪಾದರಿಂದ ಸ್ಥಾಪಿಸಲ್ಪಟ್ಟು ಎಲ್ಲರ ಉಪಯೋಗಕ್ಕಾಗಿ ಲೈಬ್ರರಿಯು ಸಹ ಏರ್ಪಡಿಸಲ್ಪಟ್ಟು ಇಂಗ್ಲೀಷ್ ಮತ್ತು ಕನ್ನಡಾ ಪೇಪರುಗಳೆಲ್ಲವೂ ಬರುವಂತೆ ಅನುಕೂಲ್ಯವು ಕಲ್ಪಿಸಲ್ಪಟ್ಟಿರುತ್ತದೆ. ಇತ್ತೀಚೆಗೆ ಈ ಪುರಪ್ರಮುಖರು ನಮ್ಮ ಶ್ರೀಮನ್ಮಹಾರಾಜಸರ್ಕಾರದವರನ್ನು ಪ್ರಾರ್ಥಿಸಿಕೊಂಡ ಮೇರೆಗೆ 1924 ರಲ್ಲಿ ಹೈಸ್ಕೂಲು ಸ್ಥಾಪಿತವಾದ್ದರಿಂದ ನಮ್ಮ ಶ್ರೀ ಜಗದ್ಗುರುಪೂಜ್ಯಪಾದರು ಈಗಿನ ಕಾಲಕ್ಕನುಸಾರವಾಗಿ ನಮ್ಮ ವೀರಶೈವವಿದ್ಯಾರ್ಥಿಗಳಿಗೆ ಅನುಕೂಲ್ಯವನ್ನುಂಟುಮಾಡುವುದು ಅವಶ್ಯವೆಂದು ಪೂರ್ಣಾಂತಃಕರಣಕ್ಕೆ ತಂದುಕೊಂಡು, ಅದಷ್ಟು ಹೆಚ್ಚುಮಂದಿ ವಿದ್ಯಾರ್ಥಿಗಳನ್ನು ಸೇರಿಸಿ ಉಚಿತವಾಗಿ ಅವರ ಭೋಜನಕ್ಕೂ ವಾಸಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಇಲ್ಲಿನ ಧರ್ಮಾತ್ಮರಾದ ಕಮಿಟಿಯವರಿಗೆ ಅಪ್ಪಣೆಮಾಡಿದ ಮೇರೆಗೆ ಶ್ರೀ ಜಗದ್ಗುರು ಮಹಾಸ್ವಾಮಿಯವರ ಕೃಪಾಬಲದಿಂದ ಈ ಸಂಸ್ಥೆಯು ಈಗ ಮೈಸೂರು ಸೀಮೆಯಲ್ಲಿ ಮೊದಲನೆಯದಾಗಿ ಪರಿಣಮಿಸಿರುತ್ತದೆ. ಈಗ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಫ್ರೀಬೋರ್ಡಿಂಗಿನಲ್ಲಿ ವೈದಿಕ, ಸಂಸ್ಕೃತ, ಇಂಗ್ಲಿಷ್ ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲು ಎಲ್ಲಾ ತರಗತಿಗಳ 95 ಮಂದಿ ವಿದ್ಯಾರ್ಥಿಗಳು ಫ್ರೀಬೋರ್ಡಿಂಗ್ ಮತ್ತು ಲಾಡ್ಜಿಂಗಿನ ಅನುಕೂಲ್ಯಗಳನ್ನು ಹೊಂದಿ ಚೆನ್ನಾಗಿ ಅಭ್ಯಾಸಮಾಡುತ್ತಿದ್ದಾರೆ. ಪ್ರತಿದಿನವೂ ವೇದಾಧ್ಯಯನ ಮತ್ತು ಸಂಸ್ಕೃತಪಾಠಗಳು ಕ್ರಮವಾಗಿ ನಡೆಯುತ್ತಲಿವೆ. ಈ ಶ್ರೀ ವೀರಶೈವಾನಂದಾಶ್ರಮವು ಕಟ್ಟಲ್ಪಟ್ಟಿರುವ ಪ್ರದೇಶವು ಬಹಳ ಬೆಲೆಬಾಳತಕ್ಕದಾಗಿದೆ. ಇಂಥಾ ಪ್ರದೇಶದಲ್ಲಿ ಕಟ್ಟಲ್ಪಟ್ಟಿರುವ ನೇತ್ರಾನಂದಕರವೂ ಭವ್ಯವೂ ಆದ ಕಟ್ಟಡಗಳ ಬೆಲೆಯು 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟಿದ್ದಾಗಿರುತ್ತದೆ. ಆದುಕಾರಣ ಇಂಥಾ ಸಂಸ್ಥೆಯು ಆಚಂದ್ರಾರ್ಕವಾಗಿ ನಡೆಯಲನುಕೂಲಿಸುವಂತೆ ಶ್ರೀ ಜಗದ್ಗುರು ಪೂಜ್ಯಪಾದರು ಒಂದು ಧನರಾಶಿಯನ್ನು ಏರ್ಪಡಿಸಿ - ಶ್ರೀಜಗದ್ಗುರುಜಯದೇವಮುರುಘರಾಜೇಂದ್ರ ಶ್ರೀವೀರಶೈವಾನಂದಾಶ್ರಮದ ಫಂಡ್ ತಿಪಟೂರು" ಎಂಬ ನಾಮಧೇಯವನ್ನಿಟ್ಟು ಈ ಸಂಸ್ಥೆಯನ್ನು ಯಾವ ತೊಂದರೆಯೂ ಇಲ್ಲದೆ ನಡೆಸಿಕೊಂಡು ಬರಲು ಸುಶಿಕ್ಷಿತರೂ, ನಿಷ್ಪಕ್ಷಪಾತಿಗಳೂ, ಧರ್ಮನಿರತರೂ ಆದ 5 ಮಂದಿ ಟ್ರಸ್ಟಿಗಳನ್ನು ನೇಮಕಮಾಡಿ ತಾ|| 22-10-26 ನೆಯ ದಿವಸ ಟ್ರಸ್ಟ್ ಡೀಡನ್ನು ಬರೆಸಿ ಅವರು ಆಚರಿಸಬೇಕಾದ ವಿಷಯಗಳನ್ನೆಲ್ಲಾ ಅದರಲ್ಲಿ ವಿಸ್ತಾರವಾಗಿ ನಮೂದಿಸಿ ಮೈಸೂರು ಸ್ಟೇಟ್‌ಲೋನ್ 1920 ನೇ ಇಸವಿಯ 6¼ ರೂ. ಬಡ್ಡಿ ದರದ 50 ಸಾವಿರ ರೂಪಾಯಿಗಳ ಬಾಂಡುಗಳನ್ನು ಪೂರ್ಣಾನಂದದಿಂದ ಟ್ರಸ್ಟಿಗಳ ವಶಕ್ಕೆ ದಯಪಾಲಿಸಿ ಇದು ಮುಂದೆ ಹೆಚ್ಚಾದ ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿದ ಆನಂದವಾರ್ತೆಯನ್ನು ತಿಳಿಸಲು ತುಂಬಾ ಹರ್ಷಪಡುತ್ತೇನೆ. ಈ ನಮ್ಮ ಶ್ರೀಮನ್ನಿರಂಜನಜಗದ್ಗುರುಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸಿಂಹಾಸನಾರೋಹಣರಾದ ಲಾಗಾಯತಿನಿಂದಲೂ ಕೇವಲ ಹಿಂದುಳಿದಿರುವ ಈ ವೀರಶೈವಜನಾಂಗದವರನ್ನು ಉದ್ಧಾರಮಾಡುವ ಕಾರ್ಯವೇ ಶ್ರೇಷ್ಠವಾದುದೆಂದು ಭಾವಿಸಿ ಈ ಜನಾಂಗವು ಅಭಿವೃದ್ಧಿಗೆ ಬರಬೇಕಾದರೆ ವಿದ್ಯಾಪ್ರಸಾರಣೆಯೇ ಬಹುಮುಖ್ಯವಾದುದೆಂದು ತಮ್ಮ ದಿವ್ಯಚಿತ್ತಕ್ಕೆ ತಂದುಕೊಂಡು ಇಂಡಿಯಾದೇಶದ ಅನೇಕ ಭಾಗಗಳಲ್ಲಿ ವೀರಶೈವವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವು ಸುಲಲಿತವಾಗಿ ನಡೆಯಲನುಕೂಲಿಸುವಂತೆ ಫ್ರೀ ಬೋರ್ಡಿಂಗ್ ಮತ್ತು ಲಾಡ್ಜಿಂಗುಗಳನ್ನೇರ್ಪಡಿಸಿ ಹಿಂದೆ ಯಾರೂ ಮಾಡದೇ ಇದ್ದ ಮಹದುಪಕಾರವನ್ನು ಮಾಡಿಯೂ, ಮಾಡುತ್ತಲೂ ಇರುವುದು ನಮ್ಮ ವೀರಶೈವಜನಾಂಗದ ಅಭಿವೃದ್ಧಿಗೆ ಭರವಸೆಯುಳ್ಳದ್ದಾಗಿರುತ್ತದೆ. ಹಿಂದೆ ಬಸವಾದಿಪ್ರಮಥರು ಬೇಡಿದ್ದನ್ನು ದಯಪಾಲಿಸುತ್ತಿದ್ದರೆಂದು ಪುರಾಣಗಳಲ್ಲಿ ಕೇಳಿರುತ್ತೇವೆ. ಅದಕ್ಕೆ ಈಗ ಈ ಶ್ರೀ ಜಗದ್ಗುರುಮಹಾಸ್ವಾಮಿಗಳು ಅವತಾರಮಾಡಿ ನಡೆಸುತ್ತಿರುವ ಕಾರ್ಯಗಳು ಕೇವಲ ದೃಷ್ಟಾಂತವಾದವುಗಳಾಗಿರುತ್ತವೆಂಬುವುದಕ್ಕೆ ಯಾವ ಸಂಶಯವೂ ಇಲ್ಲವೆಂಬುದನ್ನು ಪ್ರತಿಯೊಬ್ಬ ವೀರಶೈವನೂ ತಿಳಿದ ವಿಷಯವೇ ಆಗಿದೆ. ಈ ಮಹಾಸ್ವಾಮಿಗಳವರು ಪೀಠಕ್ಕೆ ದಯಮಾಡಿಸಿದಾರಭ್ಯದಿಂದಲೂ ಧರ್ಮಗುರುಗಳು ಮಾಡಬೇಕಾದ ಶಾಸ್ತ್ರೀಯವಾದ ಕರ್ತವ್ಯಗಳನ್ನು ಮಾಡಿ ಎಲ್ಲ ಜನಾಂಗದ ಗುರುಗಳಿಗೂ ಮಾರ್ಗದರ್ಶಕರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಓರ್ವ ಸಮಾಜಸೇವಕ.

ಹುಬ್ಬಳ್ಳಿಯಲ್ಲಿ ನೆರೆಯುವ ಶ್ರೀಮದ್ವೀರಶೈವಮಹಾಸಭೆ.

ಅಖಿಲ ವೀರಶೈವರ ಹಿತಾಪೇಕ್ಷೆಯಿಂದ, ಯಾವತ್ತು ಪರಸ್ಪರ ಒಳಭೇದಗಳನ್ನು ಅಳಿಸಿ ಸಾರ್ವತ್ರಿಕವಾದ ಏಕಮತ್ಯವನ್ನು ಬೆಳಸಿ ಧಾರ್ಮಿಕ ಸಾಮಾಜಿಕ ಔದ್ಯೋಗಿಕ ಈ ಮೊದಲಾದ ವಿಷಯಗಳನ್ನು ಸುಧಾರಿಸಿ ಸದಾ ಹಿತವನ್ನು ಬಯಸುವ ಈ ಮಹಾಸಭಾಕಲ್ಪವೃಕ್ಷವನ್ನು ಅಭಿವೃದ್ಧಿಗೊಳಿಸಬೇಕೆಂಬ ಪ್ರತಿಯೊಬ್ಬ ವೀರಶೈವನ ಅಪೇಕ್ಷೆಯಿಂದಲೇ ದಾವಣಗೆರೆಯಲ್ಲಿ ನೆರೆದಿದ್ದ 8 ನೆಯ ಸಭೆಯಲ್ಲಿ ಶ್ರೀಮಜ್ಜಗದ್ಗುರು ಜಯದೇವಮುರುಘರಾಜೇಂದ್ರಮಹಾಸ್ವಾಮಿಗಳವರ ಅಪೇಕ್ಷಾಪೂರ್ವಕವಾದ ಅನುಗ್ರಹದಿಂದ ಮಹಾಸಭೆಯು ಚಿರಸ್ಥಾಯಿಯಫಂಡು ಸ್ಥಾಪಿತವಾಗಿ ಅದರ ಬಡ್ಡಿಯ ಆದಾಯದಿಂದ ಯಾವದೇ ಸಣ್ಣದೊಡ್ಡ ಗ್ರಾಮಗಳಲ್ಲಿ ಮಾಡಿದರೂ ನಿರಾಯಾಸವಾಗಿ ಸಾಗಬೇಕೆಂದು ಯೋಚಿಸಿ ಧನಸಂಚಯಮಾಡಿದ್ದು ಸರ್ವಶ್ರುತವಿದ್ದಾಗ್ಯೂ, ಬೀರೂರಲ್ಲಿ ಮಾತ್ರ ಒಂದುವರ್ಷ ಸಭೆಯು ಜರುಗಿತಲ್ಲದೆ ಮುಂದೆ ಯಾವ ಪಟ್ಟಣಸ್ಥರಿಗೂ ಈ ಸಭೆಯನ್ನು ನಡೆಯಿಸಲು ದುಡ್ಡಿನ ಅನುಕೂಲವಿದ್ದಾಗ್ಯೂ ಕಲಹವಿಲ್ಲದೆ ಸುರಕ್ಷಿತವಾಗಿ ಜರಿಗಿಸುವದು ಸಾಧ್ಯವಿಲ್ಲವೆಂದು ಯಾರೂ ಅದನ್ನು ಬರಮಾಡಿಕೊಳ್ಳಲಿಲ್ಲ. ಆದರೆ ಸುಖದಾಯಕವಾದ ಕಾಮಧೇನುವಿನಂಥಾ ಮಹಾಕಾರ್ಯವನ್ನು ನಿಲ್ಲಿಸಲಿಕ್ಕೆ ಪಂಚಾಚಾರ್ಯರ ಮತ್ತು ವಿರಕ್ತರ ಮನಸ್ತಾಪವೇ ಮುಖ್ಯಕಾರಣವಾಗಿರಬಹುದೆಂದು ತೋರುತ್ತದೆ. ಈ ಈರ್ವರಲ್ಲಿ ನಡೆದ ಗುದ್ದಾಟದಿಂದ ಯಾರಿಗೂ ಸುಖವಾಗಲಿಲ್ಲ. ಇಂಥ ದುರ್ಧರವಾದ ಅಸಹ್ಯಕಲಹವು ಹುಟ್ಟಿದುದು ವೀರಶೈವಜಗತ್ತಿನ ದುರದೃಷ್ಟದಿಂದಲೇ ಎಂದು ಹೇಳಬೇಕಾಗಿದೆ. ಆದುದರಿಂದ ಈಗ ನಾನು ಅತಿ ನಮ್ರಭಾವದಿಂದ ಸಾಷ್ಟಾಂಗವೆರಗಿ ಶ್ರೀ ವಿರಕ್ತಮೂರ್ತಿಗಳಿಗೂ ಶ್ರೀಪಂಚಾಚಾರ್ಯರಿಗೂ ಜನಾಂಗದ ಮುಂದಾಳುಗಳಿಗೂ ಬೇಡಿಕೊಳ್ಳುವದೇನೆಂದರೆ—ನಿಮ್ಮ ನಿಮ್ಮ ಸಾಮರ್ಥ್ಯಗಳನ್ನು ಅಂತಃಕಲಹದ ಪ್ರಸಂಗಕ್ಕೆ ಉಪಯೋಗಿಸುವದಕ್ಕಿಂತ ಈ ಸಾರ್ವತ್ರಿಕ ಹಿತವನ್ನೀಯುವ ಮಹಾಸಭೆಯಂಥಾ ಮಹಾಕಾರ್ಯದಲ್ಲಿ ಇಡೀ ಭಾರತೀಯ ವೀರಶೈವಸಮಾಜವನ್ನು ಏಕೀಕರಿಸಿ, ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮೊದಲಾದನೇಕ ಇಹಪರ ಸೌಖ್ಯಕರವಾದ ಕಾರ್ಯದಲ್ಲಿ ಬುದ್ಧಿಕೌಶಲ್ಯ ತನುಮನಧನಗಳನ್ನು ಉಪಯೋಗಿಸಿ ಸಮಾಜೋನ್ನತಿಯ ಕಾರ್ಯದಲ್ಲಿ ಸ್ವಾಭಿಮಾನವನ್ನೂ ಪರಸ್ಪರ ದ್ವೇಷಭಾವವನ್ನೂ ಉಚ್ಚನೀಚಭಾವವನ್ನೂ ಬಿಟ್ಟು ಪರಸ್ಪರ ಪ್ರೀತಿವಿಶ್ವಾಸವನ್ನುಂಟುಮಾಡಬೇಕೆಂಬ ಸದಿಚ್ಛೆಯಿಂದ ನಮ್ಮ ಧಾರವಾಡಜಿಲ್ಲೆಯ ಪ್ರಸಿದ್ಧ ಹುಬ್ಬಳ್ಳಿಪಟ್ಟಣದ ಬಂಧುಗಳು ವಹಿಸಿಕೊಂಡಿರುವ ಈ ಸತ್ಕಾರ್ಯಕ್ಕೆ ಯಾವತ್ತು ಜನಾಂಗದವರು ಸಹಾಯಮಾಡಿ ಯಾವ ತರಹದಿಂದಲಾದರೂ ವೈಮನಸ್ಸನ್ನು ಬಿಟ್ಟು ಏಕೀಕರಣದಿಂದ ಮಹಾಸಭೆಯ ಕಾರ್ಯವು ಸುರಕ್ಷಿತವಾಗಿ ಜರಗುವಂತೆ ಮಾಡುವವರಾಗಬೇಕು. ಪೂಜ್ಯಪಾದರೇ, ಸಮಾಜದ ಮುಖಂಡರಾದ ಮಹನೀಯರೇ, ಹಿಂದಿನ ಮನಸ್ತಾಪವನ್ನು ಹೋಗಲಾಡಿಸಿ ಪರಸ್ಪರ ಪ್ರೇಮಾಭಿವೃದ್ಧಿಮಾಡಲು ಮಧ್ಯಸ್ಥಗಾರರು ಬೇಕೆಂಬ ಬಯಕೆಯನ್ನು ಈ ಸಂದರ್ಭದಲ್ಲಿ ಮಾಡುವುದು ಶಕ್ಯವಲ್ಲವು. ಏತಕ್ಕೆಂದರೆ—ಆಡು ಕಾಲುಮುರಿದುಕೊಂಡು ಮಲಗಿದರೆ, ಬೇಕಾದವರು ಅದನ್ನು ಎತ್ತಿಕೊಂಡುಹೋಗಿ ಸಂರಕ್ಷಿಸುವದು ಶಕ್ಯವು, ಆದರೆ ಆನೆಯು ಮಲಗಿದರೆ ಅದು ತಾನಾಗಿ ಏಳಬೇಕಲ್ಲದೆ ಅದನ್ನು ಮೇಲಕ್ಕೆತ್ತಲು ಮತ್ತು ಸಮುದ್ರವು ಮೇರೆದಪ್ಪಿ ಹರಿದರೆ ಅದು ತನ್ನಿಂದ ತಾನೇ ಜಗತ್ತನ್ನು ಸಂರಕ್ಷಿಸಬೇಕೆಂಬ ಬುದ್ಧಿಯಿಂದ ಶಾಂತವಾಗಬೇಕಲ್ಲದೆ ಅದನ್ನು ತಡೆಯಲು ಮನುಷ್ಯರಿಗೆ ಶಕ್ಯವಲ್ಲವು. ಮಹನೀಯರಾದ ನಿಮ್ಮ ನಿಮ್ಮ ಮನಸ್ತಾಪದಿಂದಾಗುತ್ತಿರುವ ಅನಾಹುತವನ್ನು ನಿಲ್ಲಿಸುವುದು ಅನ್ಯರಿಗೆ ಶಕ್ಯವಲ್ಲವಾದ್ದರಿಂದ ಮಧ್ಯಸ್ಥರು ಬೇಕಿಲ್ಲ. ಆದರೆ, ಶ್ರೀಜಗನ್ನಿಯಾಮಕನಾದ ಪರಮಾತ್ಮನ ಕೃಪೆಯಿಂದ ಗುರುವರ್ಗ ಯತಿವರ್ಗದವರೂ, ಜನಾಂಗದ ಮುಖಂಡರೂ ದೂರದೃಷ್ಟಿಯಿಂದ ವಿಚಾರಮಾಡಿ ಈ ಸದ್ಯಃಸ್ಥಿತಿಗೆ ಅನುಸರಿಸಿ ಸುಖವಾಗುವ ಮಾರ್ಗವನ್ನು ಅವಲಂಬಿಸಿ ಕಲಹದ್ವೇಷಾದಿಗಳನ್ನು ಮರೆತು ಈ ಹುಬ್ಬಳ್ಳಿಯಲ್ಲಿ ನೆರೆಯುವ ಮಹಾಸಭೆಗೆ ಸಹಾಯಮಾಡಬೇಕೆಂದು ಮತ್ತೊಮ್ಮೆ ವಿಜ್ಞಾಪಿಸುವೆನು.

೧೮೨೪ ನೇ ಸಂವತ್ಸರದಲ್ಲಿ ಸವದತ್ತಿ ಮುಕ್ಕಾಮಿನಲ್ಲಿ ಮಹಾಮಹಿಮರಾದ ಶ್ರೀ ಅಥಣಿ ಶಿವಯೋಗಿಗಳು, ಶ್ರೀ ಬಿದರೀ ಕುಮಾರೇಶ್ವರರು, ಶ್ರೀ ಹಾನಗಲ್ಲ ಸ್ವಾಮಿಗಳು, ಬಳ್ಳಾರಿ ಶ್ರೀ ಮಹನೀಯರು ಅಥಣಿ ಕೈಲಾಸವಾಸಿಗಳಾದ ನೂರಂದಪ್ಪಶೆಟ್ಟರು ಮೊದಲಾದವರೆಲ್ಲರೂ ಕೂಡಿ ವಿರಶೈವ ಸಮಾಜದ ಸುಧಾರಣೆಗೂ ಐಕ್ಯ ಬೆಳೆಸುವದಕ್ಕೂ ಈ ಮಹಾಸಭೆಯನ್ನು ವರ್ಷಕ್ಕೊಮ್ಮೆ ನಡೆಸುವಂತೆ ನಿರ್ಧರಿಸಿದರು. ಅನಂತರ ಪ್ರತಿಯೊಂದು ಸಭೆಗಳಿಗೂ ಹಾನಗಲ್ಲ ಶ್ರೀಗಳು ಅವಿಶ್ರಾಂತ ಶ್ರಮಪಟ್ಟು ಮಹಾಸಭೆಗಳು ನಡಿಯಿಸಲ್ಪಡುವ ಆಯಾಯ ಪಟ್ಟಣಗಳಿಗೆ ಹೋಗಿ ಸಾಹಸಮಾಡುತ್ತಿದ್ದು ಸಭೆಗಳಲ್ಲಿ ಇಲ್ಲದ ಕಲಹಗಳು ಬರಹತ್ತಿದ್ದನ್ನು ಕಂಡು ಈ ವಿಷಯದಲ್ಲಿ ಬೇಸರಗೊಂಡವರಾದರು. ಬೆಳಗಾವ, ನಿಪ್ಪಾಣಿ ಪಟ್ಟಣಗಳಲ್ಲಿ ಶ್ರೀ ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಇವರು ತಮ್ಮ ತನುಮನಧನದಿಂದ ಸಾಹಸಪಟ್ಟು ಬೆಳಗಾವಿಯ ಸಭೆಯನ್ನು ತಮ್ಮ ಸ್ವಂತ ಖರ್ಚಿನಿಂದಲೂ, ನಿಪ್ಪಾಣಿ ಸಭೆಯನ್ನು ರಾವಸಾಹೇಬ ಮಲ್ಲಪ್ಪಣ್ಣಾ ಶಿಂತ್ರೆ ಇವರು ತಮ್ಮ ಸ್ವಂತ ಖರ್ಚಿನಿಂದಲೂ ನಡೆಸಿದರು. ಈ ಸಭೆಯು ಪ್ರಾರಂಭವಾಗುವ ಕಾಲದಲ್ಲಿ ವೀರಶೈವಸಮಾಜದ ಪಿತೃಸ್ವರೂಪರಾದ ಕೈ|| ಲಿಂಗಪ್ಪಾಚಾರ್ಯಪ್ಪಾ ಸರದೇಸಾಯಿ ಶಿರಸಂಗಿಯವರು ಮತ್ತು ಕೈ|| ಶ್ರೀಮಂತ ರಾವಬಹದ್ದೂರ ಮಲ್ಲಪ್ಪಾ ಬಸಪ್ಪಾ ವಾರದ ಸೋಲಾಪೂರ ಇವರು ಈ ಉಭಯ ವಿಭೂತಿಗಳು ಜೀವಿಸಿದ್ದು ಕಾಲಕ್ಕನುಸರಿಸಿ ತಕ್ಕ ಪ್ರೋತ್ಸಾಹವನ್ನು ಕೊಡುತ್ತಿದ್ದರು. ದೇಹವು ಕ್ಷಣಭಂಗುರವಾದರೂ ಕೀರ್ತಿಯು ಅಜರಾಮರ ಎಂಬಂತೆ ಸರದೇಸಾಯರು ರಾವಬಹದ್ದೂರ ವಾರದವರೂ ನಡೆದು ತೋರಿಸಿದ ಸುಮಾರ್ಗವನ್ನು ಸಾಮರ್ಥ್ಯವುಳ್ಳ ಪ್ರತಿಯೊಬ್ಬ ಮನುಷ್ಯನೂ ಕೈಕೊಳ್ಳದ ವಿನಃ ಗತಿಯಿಲ್ಲವು. ನಮ್ಮೀ ವೀರಶೈವಸಮಾಜದ ಪೆಕಿಯಿಂದ ಸತತ ಸಹಾಯಮಾಡಿದ ರಾವಬಹದ್ದೂರ ಸಿ. ಆಯ್. ಇ. ಅರಟಾಳದ ಅಜ್ಜನವರೂ ಆಯಾಯ ಕಾಲಕ್ಕೆ ಸಮಾಜದ ಉನ್ನತಿಯ ಕಾರ್ಯದಲ್ಲಿ ಮನಃಪೂರ್ವಕವಾಗಿ ತನುಮನಧನದಿಂದ ಸಹಾಯಮಾಡಿದ ಮತ್ತು ಸಹಾಯಮಾಡುವಂಥ ವಂಟಮುರಿ ರಾವಬಹದ್ದೂರ ಸರ್ ದೇಸಾಯರೂ ಬೆಂಗಳೂರ ರಾಜಸಭಾಭೂಷಣರಾದ ಸರ್ ಕೆ.ಪಿ. ಪುಟ್ಟಣ್ಣಶೆಟ್ಟರೂ ಇದ್ದಾರೆ. ಈ ತ್ರಿಮೂರ್ತಿಗಳನ್ನು ಮುಂದುಮಾಡಿಕೊಂಡು ಸಮಾಜದಲ್ಲಿ ಹುಟ್ಟಿರುವ ಕಲಹವನ್ನು ಶಾಂತಗೊಳಿಸಿಕೊಂಡು ಪರಸ್ಪರ ಪ್ರೀತಿಯನ್ನು ವೃದ್ಧಿಗೊಳ್ಳಿಸಬೇಕು. ಡಿಸೆಂಬರ್ ತಿಂಗಳು ತೀರ ಸಮೀಪಿಸಿರುವದರಿಂದ ಮಧ್ಯಸ್ಥರ ಏರ್ಪಾಟಿಗೆ ಬಿಲ್‌ಕೂಲ್ ಅವಕಾಶವಿಲ್ಲದ ಕಾರಣ ಈ ಸಮಾಜದ ಹಿತವು ಪ್ರತಿಯೊಬ್ಬನ ಮನೆಯ ಹಿತವೆಂದು ಬಯಸಿ ಪರಸ್ಪರ ಐಕ್ಯವನ್ನು ಬೆಳಸಲು ತಕ್ಕ ವಿಚಾರವನ್ನೇ ಮಾಡಿಕೊಂಡು ಇತರ ಪರಮತೀಯರೇಕೆ ಇಡೀ ರಾಷ್ಟ್ರದವರೇ ಆಶ್ಚರ್ಯಪಡುವಂತೆ ನಮ್ಮ ನಮ್ಮ ಕಲಹವನ್ನು ಮರೆತು ಐಕ್ಯಭಾವವನ್ನು ಬೆಳಸಿ ಜಗತ್ತಿಗೆ ಮಾದರಿಯಾಗಿ ತೋರುವಂತೆ ಜಾಗ್ರತರಾಗಿ ಮಹಾಸಭೆಯ ಕಾರ್ಯವನ್ನು ಮನಮುಟ್ಟಿ ಮಾಡಬೇಕೆಂದು ನಮ್ರತೆಯಿಂದ ಬೇಡಿಕೊಳ್ಳುವ.

ಸಮಾಜಸೇವಕ
ಮಹಾಸಭಾಚಿರಸ್ಥಾಯಿಫಂಡಿನ ಮತ್ತು ಸ್ಟ್ಯಾಂಡಿಂಗ್
ಕಮಿಟಿಯ ಮೆಂಬರ್ ಚನ್ನಪ್ಪಾ ಬಸಪ್ಪಾ ಮುತ್ತೂರ, ರಬಕವಿ.

ಕಾಮ.

ನಮ್ಮ ತಂದೆಗೆ ನಾವಾರುಜನ ಮಕ್ಕಳು. ನಾವು ಪ್ರತಿಯೊಬ್ಬರೂ, ಅತಿಶಯಪರಾಕ್ರಮಿಗಳು. ಅದರಲ್ಲಂತೂ ನಾನೇ ಜ್ಯೇಷ್ಠಪುತ್ರನು. ಆಂದಮೇಲೆ ನನ್ನ ಮಹತ್ವವು ಅತಿಶಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮ್ಮ ವಿಷಯ ಹೇಳಿಕೊಂಡಲ್ಲಿ ನಮ್ಮ ಆಟವು ನಿಂತುಹೋಗುತ್ತೆಂಬ ಆಲೋಚನೆಯಿಂದ ಇದುವರೆಗೂ ಗುಪ್ತವಾಗಿದ್ದೆವು. ಆದರೆ ನನ್ನ ತಮ್ಮನಾದ ಲೋಭಿಯು ಪರೋಪಕಾರಬುದ್ಧಿಯಿಂದ ತನ್ನ ನಿಜಸ್ಥಿತಿಯನ್ನು ತಮ್ಮಗಳ ಇದಿರಿನಲ್ಲಿ ತಿಳುಹಿಸಿರುವುದರಿಂದ ನಾವು ನಮ್ಮ ನಿಜಸ್ಥಿತಿಯನ್ನು ತಿಳುಹಿಸಲೇಬೇಕಾಯಿತು. ಎಂಥಾ ನೀಚರಲ್ಲಾದರೂ ಕಾಲಸ್ಥಿತಿಯಮೇಲೆ ಒಂದಾದರೂ ಸುಗುಣ ಹುಟ್ಟುತ್ತದೆಂಬ ಹಿರಿಯರ ಮಾತಿನಂತೆ ನಾವಾದರೂ ನಮ್ಮಿಂದ ಕೆಡುತ್ತಿರುವ ಮನುಷ್ಯರನ್ನು ಎಚ್ಚರಿಸಲು ಪ್ರಯತ್ನಮಾಡುತ್ತಿದ್ದೇವೆ. ಇದರಮೇಲೂ ಎಚ್ಚತ್ತುಕೊಳ್ಳದೆ ಹೋಗುವ ನಿಮ್ಮ ಕೇಡಿಗೆ ನಾವುಗಳು ಬಾಧ್ಯರಲ್ಲವೆಂದು ಮಾತ್ರ ದೃಢವಾಗಿ ಹೇಳುತ್ತೇವೆ. ನನ್ನ ಸ್ಥಿತಿಯು ಅತಿವಿಚಿತ್ರವಾದದ್ದು. ಪ್ರತಿಯೊಬ್ಬನಿಗೂ ಯುಗಕ್ಕಿಂತ ಯುಗವು ಹೀನವಾಗಿತೋರಿದರೆ ನನಗೆ ಮಾತ್ರ ಯುಗಕ್ಕಿಂತ ಯುಗವು ಉತ್ತಮವಾಗಿ ತೋರುತ್ತದೆ. ನನ್ನ ಪರಾಕ್ರಮವನ್ನು ತೋರಿಸದ ಯುಗವೇ ಇಲ್ಲ. ಆದರೆ ಕೃತಯುಗದಲ್ಲಿ ನನ್ನ ಆಟವು ಸ್ವಲ್ಪವೂ ನಡೆಯುತ್ತಿರಲಿಲ್ಲ. ರೇಣುಕಾದೇವಿಯು ಪ್ರಯತ್ನವಿಲ್ಲದೆ, ಮನೋವಿಕಾರವಿಲ್ಲದೆ, ಆಕಸ್ಮಿಕವಾಗಿ ಗಂಧರ್ವನನ್ನು ದೃಷ್ಟಿಸಿನೋಡಿದ ಮಾತ್ರದಿಂದ ಆಕೆಯ ಪಾತಿವ್ರತ್ಯವು ಭಂಗವಾಗಿ ಅದಕ್ಕೆ ತಕ್ಕ ಪ್ರಾಯಶ್ಚಿತ್ತದಿಂದ ಆಕೆಯು ಪರಿಶುದ್ಧಳಾಗಬೇಕಾಯಿತು. ಇದನ್ನು ನೋಡಿ ಈ ಯುಗದಲ್ಲಿ ನನ್ನ ಪರಾಕ್ರಮಕ್ಕೆ ಅವಕಾಶವಿಲ್ಲವೆಂದು ಗುಪ್ತವಾಗಿ ಕಾಲಕಳೆಯಬೇಕಾಯಿತು. ತ್ರೇತಾಯುಗದಲ್ಲಿ ನನ್ನ ತೇಜಸ್ಸು ಸ್ವಲ್ಪಮಟ್ಟಿಗೆ ಹೆಚ್ಚಿತು. ಅನ್ಯಪುರುಷರನ್ನು ಅನ್ಯಸ್ತ್ರೀಯರೂ, ಅನ್ಯಸ್ತ್ರೀಯರನ್ನು ಅನ್ಯಪುರುಷರೂ ಇಚ್ಛಿಸಿ ಅವರವರ ಒಪ್ಪಿಗೆಯಿಂದ ನನ್ನ ಸೇವಕರಾಗಲು ಅವಕಾಶದೊರೆಯಿತು. ಅಂಥವರಮೇಲೆ ನನ್ನ ಅಧಿಕಾರ ತೋರಿಸಲು ಪ್ರಾರಂಭಿಸಿದೆನು. ರಾವಣೇಶ್ವರನ ಅಂತಃಪುರದಲ್ಲಿ ಅತಿಶಯ ಸ್ತ್ರೀಯರನ್ನು ಕೂಡಿಸಿ ಅವನನ್ನು ಭೋಗಾಸಕ್ತನನ್ನಾಗಿಮಾಡಿ ಪೌಲಸ್ತ್ಯವಂಶೋತ್ಪನ್ನನೂ, ವೇದಮಾರ್ಗನಿಷ್ಠನೂ, ಮಹಾತಪಸ್ವಿಯೂ, ತ್ರೈಲೋಕ್ಯಜಯಶಾಲಿಯೂ ಆದ ಆತನನ್ನು ನನ್ನ ದಾಸಾನುದಾಸನನ್ನಾಗಿಮಾಡಿಕೊಂಡೆನು. ಆದರೇನು? ಪರಸ್ಪರ ಒಪ್ಪಿಗೆಯಿಲ್ಲದೆ ಇದ್ದವರಲ್ಲಿ ನನ್ನ ಪರಾಕ್ರಮವೇನೂ ನಡೆಯುವ ಹಾಗಿರಲಿಲ್ಲ. ಸೀತಾದೇವಿಯ ಮೇಲಿನ ಭೋಗಾಸಕ್ತಿಯಿಂದ ಆ ರಾವಣೇಶ್ವರನು ಆಕೆಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡರೂ ಪಾತಿವ್ರತ್ಯಶಿರೋಮಣಿಯಾದ ಆ ದೇವಿಯ ಒಪ್ಪಿಗೆಯಿರಲಿಲ್ಲವಾದುದರಿಂದ ಆತನು ಸಕಲ ವೈಭವಗಳನ್ನೂ ಕಳೆದುಕೊಂಡು ನಾಶವನ್ನು ಹೊಂದಬೇಕಾಯಿತು. ಇದನ್ನು ನೋಡಿ ನನ್ನ ಅಧಿಕಾರವು ಈ ಯುಗದಲ್ಲೂ ಸಂಪೂರ್ಣನಡೆಯಲಾರದೆಂದು ಭಾವಿಸಿ ಮುಂದಿನ ಯುಗವನ್ನೇ ಕಾದಿದ್ದೆನು. ದ್ವಾಪರಯುಗವೂ ಪ್ರಾಪ್ತವಾಯಿತು. ನನ್ನ ಆಟವು ಹೆಚ್ಚಿತು. ನನ್ನ ತೇಜಸ್ಸಿಗೆ ಕಳೆಯೇರಿತು. ಭೋಗಗಳಿಗೆ ಪ್ರಬಲತ್ವವುಂಟಾಯಿತು. ಬೇರೆ, ಬೇರೆಯವರೇಕೆ? ಸ್ವಜನರಮೇಲೆಯೇ ಭೋಗಾಸಕ್ತಿಯು ಹುಟ್ಟಿತು. ದುರ್ಯೋಧನನು ದ್ರೌಪದಾದೇವಿಯನ್ನು ಅತ್ತಿಗೆಯೆಂಬ ಅಭಿಮಾನದಮೇಲಾದರೂ ಅಪೇಕ್ಷಿಸುವುದನ್ನು ಬಿಟ್ಟನೆ? ಕೂಡಿದ್ದ ಸಭೆಯಲ್ಲಿ ಸೀರೆಯನ್ನು ಸೆಳೆದು ಮಾನಭಂಗಮಾಡಲು ಹೇಸಿದನೆ? ಸಭಾಮಧ್ಯದಲ್ಲಿ ತನ್ನ ದರ್ಪದ ದೌರ್ಜನ್ಯದಿಂದ ಆ ಪತಿವ್ರತಾಶಿರೋಮಣಿಯನ್ನು ತನ್ನ ತೊಡೆಯಮೇಲೆ ಕೂಡಲು ಕರೆಯುವುದಕ್ಕೆ ನಾಚಿದನೆ? ಜಯದ್ರಥನು ವಾದಿಯಲ್ಲಿ ದ್ರೌಪದಾದೇವಿಯು ತನ್ನ ತಂಗಿಯಾಗಬೇಕೆಂಬುದನ್ನು ಸಹ ಲಕ್ಷೀಕರಿಸದೆ ಆಕೆಯನ್ನು ಅಪಹರಿಸಿಕೊಂಡು ಹೋಗಲು ಭಯಪಟ್ಟನೆ? ಇದೇ ಹೀಗಿರುವಾಗ ಇನ್ನು ಅನ್ಯನಾದ ಕೀಚಕನು ಇವರನ್ನು ಬಯಸಿದ್ದು ಆಶ್ಚರ್ಯವೇನು? ಇದನ್ನು ಯೋಚಿಸಿದರೆ ಆ ಯುಗದಲ್ಲಿ ನನ್ನ ಅಧಿಕಾರಪ್ರಾಬಲ್ಯವು ಹೇಗಿತ್ತೆಂಬುದು ವ್ಯಕ್ತವಾಗುತ್ತದೆ. ಆದರೇನು? ಇವರೆಲ್ಲಾ ಹೀಗೆ ಬಯಸಿದ್ದು ಬಯಲಭ್ರಾಂತಿಯಾಯಿತೇಹೊರತು ಇವರುಗಳ ಆಶೆಯೇನೂ ನೆರವೇರಲಿಲ್ಲ. ಈ ಕಾರಣದಿಂದಲೇ ಇವರುಗಳು ನಾಶವಾದದ್ದು. ಇದನ್ನು ನೋಡಿ ನನ್ನ ಅಧಿಕಾರವು ಇನ್ನೂ ಸಂಪೂರ್ಣವಾಗಿ ನೆರವೇರಲಿಲ್ಲವೆಂದು ಭಾವಿಸಿ ತುಂಬಾ ಅಸಮಾಧಾನಪಟ್ಟುಕೊಂಡು ಮುಂದಿನ ಯುಗವನ್ನೇ ಕಾದಿದ್ದೆನು. ಇದೂ ಬಂದಿತು. ಇದೇ ಕಲಿಯುಗ; ನನ್ನ ಪ್ರೀತಿಯುಗ; ನನ್ನ ಅಧಿಕಾರದಯುಗ. ಈಗಲಾದರೋ ನನ್ನ ವಿಷಯದಲ್ಲಿ ಯಾವ ವಾದಿವಾದಸೆಗಳೂ ಇಲ್ಲ, ಯಾವ ಜಾತಿಭೇದವೂ ಇಲ್ಲ; ಯಾವ ಕಟ್ಟಲೆ ನಿಯಮಗಳೂ ಇಲ್ಲ; ಯಾವ ದಂಡಮೋಷಗಳೂ ಇಲ್ಲ. ಯಥೇಷ್ಟವಾಗಿ ನನ್ನ ಆಶೆಯು ನೆರವೇರುತ್ತದೆ. ನನ್ನ ಅಧಿಕಾರಕ್ಕೆ ಎಣೆಯೇ ಇಲ್ಲ. ಸರ್ವರೂ, ನನ್ನದಾಸಾನುದಾಸರೆ! ಸರ್ವರೂ ನನ್ನ ಆಜ್ಞಾನುವರ್ತಿಗಳೇ! ಇದಲ್ಲವೆ ನನ್ನ ತೇಜಸ್ಸಿನ ಬಲ? ನನ್ನ ಸಂಪೂರ್ಣ ಅಧಿಕಾರವನ್ನು ನಾನು ನಡಿಸಿಕೊಳ್ಳಲು ಬಹುಗುಪ್ತವಾಗಿ ಬಹುಕಾಲ ನಿರೀಕ್ಷಿಸಬೇಕಾಯಿತು. ಇಲ್ಲಿಗೇನೋ ನನ್ನ ಇಷ್ಟ ಸಂಪೂರ್ಣವಾಗಿ ನೆರವೇರಿತು. ತುಂಬಾ ತೃಪ್ತನಾದೆನು, ಕೃತಕೃತ್ಯನಾದೆನು. ನಾನು ವಿಶ್ವಸ್ವರೂಪನು. ಹೇಗೆಂದರೆ, ಪ್ರಾಣಿಗಳ ಪಂಚೇಂದ್ರಿಯಗಳಲ್ಲೂ ನಾನೇ ವ್ಯಾಪ್ತನಾಗಿ ಕಣ್ಣಿನಿಂದ ಸಮಸ್ತವನ್ನೂ ನೋಡುವ, ಕಿವಿಯಿಂದ ಸಮಸ್ತ ವಿಷಯವನ್ನೂ ಕೇಳಿ ಗ್ರಹಿಸುವ, ಮೂಗಿನಿಂದ ಆಘ್ರಾಣಿಸುವ, ನಾಲಗೆಯಿಂದ ರುಚಿನೋಡುವ, ಚರ್ಮದಿಂದ ಸ್ಪರ್ಶಮಾಡುವ ಆಸೆಯನ್ನು ಹುಟ್ಟಿಸುತ್ತಾ ಪ್ರತಿಯೊಂದು ಆಶೆಯು ನೆರವೇರಿದ ಕೂಡಲೆ ಮತ್ತೊಂದು ಆಶೆಯನ್ನು ಹುಟ್ಟಿಸುತ್ತಾ ಪಂಚೇಂದ್ರಿಯಗಳಿಂದ ಸದಾ ಭೋಗಪಡುತ್ತಿರುವ ನಾನಲ್ಲದೆ ವಿಶ್ವರೂಪನು ಮತ್ತಾರುಂಟು? ನಾನಿದ್ದಲ್ಲಿ ತೃಪ್ತಿಯೇ ಇಲ್ಲ. ನನ್ನಿಂದ ಆಶೆಯನ್ನು ನೆರವೇರಿಸಿಕೊಂಡವರು ಮತ್ತೂ ಮತ್ತೂ ಆಶಾಬದ್ಧರಾಗುತ್ತಿರುವರೇ ಹೊರ್ತು ಮುಕ್ತರಾಗುವ ಸಂಭವವೇ ಇಲ್ಲ. ಆದರೇನು, ನನ್ನಿಂದ ಯಾರಿಗೂ ಸುಖದೊರೆಯಲಿಲ್ಲ. ಕಷ್ಟಪರಂಪರೆಗೆ ಈಡಾದರು. ಇಷ್ಟಾದರೂ ನನ್ನನ್ನು ಮಾತ್ರ ತಿರಸ್ಕಾರಮಾಡಲಿಲ್ಲ. ಎಂದಮೇಲೆ ನನ್ನ ಮಾಯಾಶಕ್ತಿಯ ಬಲವೆಂತಹುದೆಂಬುದನ್ನು ಯೋಚಿಸಿರಿ. ಒಂದಾನೊಂದು ಕಾಲದಲ್ಲಿ ನನ್ನ ಶಕ್ತಿಯನ್ನು ತ್ರಿಮೂರ್ತಿಗಳಲ್ಲಿ ತೋರಿಸಿದೆನು. ಅವರು ಸಹ ನನ್ನ ಅಧಿಕಾರಕ್ಕೆ ಮರುಳಾಗಿ, ನನಗೆ ಅಧೀನರಾಗಿ ಅನುಸೂಯಾದೇವಿಯ ಮನೆಯಲ್ಲಿ ಶಿಶುಗಳಾಗಿ ಪರಿಬೀಳಬೇಕಾಗಿ ಬಂದು ಕೊನೆಗೆ ಆಕೆಯ ಗರ್ಭವಾಸವನ್ನು ಮಾಡಿ ಆ ಪತಿವ್ರತಾಶಿರೋಮಣಿಗೆ ಪುತ್ರರತ್ನರಾಗಿ ಜನಿಸಬೇಕಾಯಿತು. ಸಾಕ್ಷಾತ್ ದೇವೇಂದ್ರನಲ್ಲಿ ನನ್ನ ಅಧಿಕಾರವನ್ನು ತೋರಿಸಿದೆನು. ಆತನೂ ನನಗೆ ಅಧೀನನಾಗಿ ಮೈಯೆಲ್ಲಾ ಯೋನಿಮಯನಾಗಿ ವ್ಯಥೆಗೀಡಾದನು. ಎಂದಮೇಲೆ ಇನ್ನುಳಿದವರ ಗತಿಯೇನು? ಪ್ರತಿಯೊಬ್ಬನ ಸ್ಥಿತಿಯನ್ನು ವರ್ಣಿಸುತ್ತಾ ಹೋದರೆ ನಿಮಗಾದರೂ ಬೇಸರವಾದೀತು. ಒಟ್ಟಿನಲ್ಲಿ ನನ್ನ ಅಧೀನರಾದವರು ಯಾರೂ ನಾಶವಾಗದೆ ಉಳಿದಿಲ್ಲ. ಇಹಪರಸೌಖ್ಯನಾಶಕ್ಕೆ ನಾನೇ ಮೂಲಕಾರಣನು. ನನಗಧೀನರಾಗದ ರಾಮಚಂದ್ರಸ್ವಾಮಿಯು ಸೂರ್ಪನಖಿಯ ಮಾನಭಂಗಮಾಡಿ ಅದರಿಂದ ಮೊದಮೊದಲು ಕಷ್ಟಪರಂಪರೆಗೆ ಸಿಕ್ಕರೂ ಕೊನೆಗೆ ಅಸಾಧ್ಯಕಾರ್ಯಸಾಧಕನನ್ನು ಮಾಡಿ ಭಗವದಂಶಪುರುಷನಾದನು; ಸಕಲ ಲೋಕಪೂಜ್ಯನಾದನು. ಅರ್ಜುನನು ನನ್ನ ಅಧಿಕಾರಕ್ಕೆ ಒಳಪಡದೆ ಊರ್ವಶಿಯಿಂದ ಶಾಪಗ್ರಸ್ತನಾದರೂ ಅಜ್ಞಾತವಾಸದಿಂದ ಮುಕ್ತನಾಗಲು ಯೋಗ್ಯನಾಗಿ ಲೋಕಪೂಜ್ಯನಾದನು. ಹರಿಶ್ಚಂದ್ರಮಹಾರಾಜನು ನನ್ನ ಅಧಿಕಾರಕ್ಕೆ ಒಳಪಡದೆ ಚಂಡಾಲಸ್ತ್ರೀಯರನ್ನು ತಿರಸ್ಕರಿಸಿದುದರಿಂದ ವಿಶ್ವಾಮಿತ್ರಋಷಿಯ ಕೋಪಕ್ಕೆ ಪಾತ್ರನಾಗಿ ಅನೇಕ ಕಷ್ಟಪರಂಪರೆಗೀಡಾದರೂ ಕೊನೆಗೆ ಸಮಸ್ತ ದೇವತಾನುಗ್ರಹಕ್ಕೆ ಪಾತ್ರನಾಗಿ ಆಚಂದ್ರಾರ್ಕಕೀರ್ತಿವಂತನಾದನು. ಹೀಗೆಯೇ ನನ್ನಿಂದ ಆಗುವ ಕೇಡನ್ನು, ನನ್ನ ಅಧೀನರಾಗದವರಿಗೆ ಉಂಟಾಗಿರುವ ಮೇಲ್ಮೆಗೂ ಉದಾಹರಣೆಗಳನ್ನು ಕೊಡುತ್ತಾ ಹೋದರೆ ಅದಕ್ಕೆ ಕೊನೆಮೊದಲೇ ಇಲ್ಲವಾಗುತ್ತದೆ. ಇದನ್ನರಿತು ನೀವು ಜಾಗ್ರತರಾಗಿರಿ. ನನ್ನ ಅಧೀನರಾಗದೆ ಸುಖಿಗಳಾಗಿರಿ. ನನಗಿನ್ನು ಅಪ್ಪಣೆಕೊಡಿರಿ. ನಿಮಗೆಲ್ಲಾ ಮಂಗಳವಾಗಲಿ.

ಟಿ. ಎಸ್. ಶಂಕರಯ್ಯ, ಅಸಿಸ್ಟೆಂಟ್ ಮಾಸ್ಟರ್,
ಇಂ. ಕಂ. ಮಿಡಲ್‌ಸ್ಕೂಲ್ ಅಸಗೋಡು.

ಬಸವೇಶ್ವರನ ಕೃತಿಗಳು.

(ಲೇಖಕ—ಶ್ರೀಮತ್ಕಾಶೀ ನಿಜಸಿಂಹಾಸನಾಧೀಶ ಜಗದಾಚಾರ್ಯ ರಾಜಗುರು ಸ್ವಾಮಿ ವಿರೂಪಾಕ್ಷ ಒಡೆಯರು.)

ಭರತಖಂಡದಲ್ಲಿ ಮಾತ್ರವಲ್ಲದೆ ಸಮಸ್ತ ಪೃಥ್ವಿಯಲ್ಲಿಯೂ ವೈದಿಕಧರ್ಮಕ್ಕಿಂತ ಪ್ರಾಚೀನಧರ್ಮವು ಮತ್ತೊಂದಾವುದೂ ಇಲ್ಲವೆಂಬುವಲ್ಲಿ ಪಾಶ್ಚಾತ್ಯ, ಪೌರ್ವಾತ್ಯರ ಏಕಮತವಿದ್ದು ಆ ವೈದಿಕಧರ್ಮದಲ್ಲಿ ಕಾಲಗತಿಗನುಸಾರವಾಗಿ ಅನೇಕ ಭಿನ್ನಭಿನ್ನ ಪಂಗಡಗಳಾಗಿ ಅವುಗಳೇ ಬೇರೊಂದು ನಾಮಗಳನ್ನು ಧರಿಸುತ್ತಾ ಬಂದಿರುವವು. ಅವುಗಳಲ್ಲೊಂದಾದ ಮತ್ತು ಈ ಲೇಖದಲ್ಲಿ ತೋರಿಸಿರುವ "ಲಿಂಗಾಂಗಿಧರ್ಮ" ವೆಂಬುದರ ವಿಷಯಕ್ಕೆ ಅನೇಕ ಆಧುನಿಕ ಪಂಡಿತರು ಭಿನ್ನಭಿನ್ನಾಭಿಪ್ರಾಯಗಳನ್ನು ಆಗಾಗ್ಗೆ ಪ್ರಕಟಿಸುತ್ತಾ ಬಂದಿರುವರು. ಅವರಲ್ಲೂ ಮಹಾರಾಷ್ಟ್ರೀಯರ ಕಟಾಕ್ಷವೇ ಈ ಧರ್ಮದ ಮೇಲೆ ಬಹಳ ಇದ್ದಂತೆ ಕಾಣುತ್ತದೆ. ಆದರೆ ನಾನು ಆರುತಿಂಗಳ ಹಿಂದೆಯೇ "ಲಿಂಗಾಂಗಿಧರ್ಮ ಮತ್ತು ಗೀತಾರಹಸ್ಯಾದಿಗ್ರಂಥಗಳು" ಎಂಬ ಮಹಾರಾಷ್ಟ್ರೀಯರು ತಿರಸ್ಕಾರಬುದ್ಧಿಯಿಂದ ಬರೆದ ಎಷ್ಟೋಗ್ರಂಥಗಳಲ್ಲಿಯ ವಾಕ್ಯಗಳನ್ನುದಹರಿಸಿ ಈ ದೊಡ್ಡದಾದ ಲೇಖವನ್ನು "ಧರ್ಮತರಂಗಿಣಿಯ" ಸಂಪಾದಕರ ಕಡೆಗೆ ಕಳಿಸಿದ್ದೆನು. ಅವರು ಅದನ್ನು ಇದುವರೆಗೂ ಪ್ರಕಟಿಸಿದಂತೆ ಕಾಣಲಿಲ್ಲ.

ಇನ್ನು ಮಹಾರಾಷ್ಟ್ರೀಯರ ಅಭಿಪ್ರಾಯವೇನೆಂದರೆ—"ಲಿಂಗಾಯತಧರ್ಮವು ಬಸವಾದಿಗಳಿಂದ ಹುಟ್ಟಿದ್ದು. ಇದೊಂದು ಅಹಂಕಾರಮಾದಾಸ ಮೊದಲಾದವರಂತೆ ನಿರಾಧಾರವಾದ ಭಕ್ತಿ ಸಂಪ್ರದಾಯವಲ್ಲದೆ ಇದರಲ್ಲಿ ಯಾವ ತತ್ವಸಿದ್ಧಾಂತವೂ ಇರದೆ ಸಾಮಾನ್ಯವಾದದ್ದೆಂದು" ನಿಶ್ಚಿತಮಾಡಿರುವರು. ಇವರ ಈ ಅಜ್ಞಸ್ಥಿತಿಯನ್ನು ಹೋಗಲಾಡಿಸಲೋಸುಗ ಮೇಲಿಂದಮೇಲೆ ಮಹತ್ವವಾದ ಲೇಖಗಳನ್ನು ಬರೆದು ಅವರನ್ನು ಜಾಗರೂಕರನ್ನಾಗಿ ಮಾಡುವದು ಲಿಂಗಾಂಗಿಯಾದ ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿದೆ. ಸುಮ್ಮನೆ ಬಿಟ್ಟಲ್ಲಿ ಮುಂದೆ ಮನಬಂದಂತೆ ಬರೆಯುತ್ತಾಹೋಗುವರು. ಇದರಿಂದ ಮುಂದೆ ಧರ್ಮೋನ್ನತಿಗೆ ಬಹಳ ವಿಘ್ನಪ್ರಸಂಗಬರುವದು. ಈ ಲಿಂಗಾಂಗಿ ಧರ್ಮಸುಧಾರಕನು ಬಸವೇಶನು. ಇದು ವೇದಾಗಮಗಳಿಂದ ಬಂದ ವೈದಿಕಧರ್ಮವಿರುವದು. ಉಪನಿಷತ್ ಕಾಲದಲ್ಲಿ ಈ ಧರ್ಮಪ್ರಚಾರವು ವಿಶೇಷವಾಗಿ ನಡೆದು ಪೌರಾಣಿಕಕಾಲದಿಂದ ಶಂಕರ, ರಾಮಾನುಜರ ಕಾಲಗಳವರೆಗೆ ಪರಧರ್ಮಗಳ ಆಘಾತದಿಂದ ದುರ್ದೆಶೆಯನ್ನು ಹೊಂದುತ್ತ ನಡೆದು 1050 ರ ಸುಮಾರಕ್ಕೆ ಪ್ರಭಾತಕಾಲಗಳೂ, ತತ್ವಜ್ಞಶಿರೋಮಣಿಗಳೂ ಆದ ಶ್ರೀಕರಾದಿ ಮಹಾತ್ಮರು ಬ್ರಹ್ಮಸೂತ್ರಾದಿಗಳಿಗೆ ಭಾಷ್ಯಗಳನ್ನು ಬರೆದು ಲಿಂಗಾಂಗಿಧರ್ಮದ ತತ್ವಸಿದ್ಧಾಂತವನ್ನೂ ಉದಾತ್ತವಿಚಾರವನ್ನೂ ಜಗತ್ತಿಗೆ ತೋರ್ಪಡಿಸಿದರು. ಆದರೂ ಧರ್ಮೋನ್ನತಿಗೆ ಸರಿಯಾದ ಅನುಕೂಲವು ಒದಗದ್ದರಿಂದ ಶ್ರೀಕರಾಚಾರ್ಯರಾಗಿ ಹೋದ ನೂರುವರ್ಷಗಳ ಸುಮಾರಕ್ಕೆ ರಾಜಕೀಯಸತ್ತಾದಿಂದ ಕೂಡಿದ ಬಸವೇಶ್ವರನೆಂಬ ಮಹಾಪುರುಷನ ಉದಯವಾಯಿತು. ಲಿಂಗಾಂಗಿಧರ್ಮದ ಶ್ರೇಷ್ಠತ್ವವನ್ನು ತೋರಿಸುವದಕ್ಕಾಗಿಯೇ ಈತನು ಅಲಿಂಗಿಬ್ರಾಹ್ಮಣರಲ್ಲಿ ಜನ್ಮವಂತಾಳಿ ಮುಂದೆ ಲಿಂಗಧಾರಿಯಾದನೆಂಬ ಐತಿಹಾಸಿಕವೃತ್ತಾಂತವು ಲಿಂಗಾಂಗಿಗಳ ಗೌರವವನ್ನು ದ್ಯೋತಿಸುತ್ತದೆ. ಉಚ್ಚಕುಲಶೀಲಗಳಿಂದ ಕೂಡಿದ ಬಸವೇಶ್ವರನು ತನ್ನ ಪ್ರಭಾವದಿಂದಲೂ ಉತ್ಸಾಹ, ದೂರದರ್ಶಿತ್ವ, ಸಹನಶೀಲತ್ವ, ಸುದಾಚಾರವಿಚಾರಗಳಿಂದಲೂ, ರಾಜನೀತಿ, ಧರ್ಮನೀತಿ, ವ್ಯಾವಹಾರಿಕ ಬುದ್ಧಿಕುಶಲತೆಯಿಂದಲೂ, ಸ್ವದೇಶಾಭಿಮಾನದಿಂದಲೂ ಆಗಿನ ಕಾಲದ ಬಿಜ್ಜಳರಾಜನ ಮಂತ್ರಿಪದವಂ ಸಂಪಾದಿಸಿ ಲಿಂಗಾಂಗಿಧರ್ಮವನ್ನು ವಿಶೇಷ ಪ್ರಚಾರಮಾಡಿ ಬಹಳ ಉನ್ನತಿಯಲ್ಲಿ ತಂದನೆಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ರಾಜನು ಜೈನನಿದ್ದಾಗ್ಗೂ ಅವನನ್ನು ಲಕ್ಷೀಕರಿಸದೇ ಏನೊಂದು ಲಿಂಗಾಂಗಿಧರ್ಮವನ್ನುನ್ನತಿಮಾಡಿ ತೋರಿಸಿದನೋ ಅದರಿಂದ ಧರ್ಮದಲ್ಲೆಲ್ಲರೂ ಅಂದರೆ ರಾಜನಿಂದೊಡಿದು ಒಬ್ಬ ಚಂಡಾಲನವರೆಗೆಲ್ಲರೂ ಸ್ವತಂತ್ರರೂ ಸಮಾನಹಕ್ಕುದಾರರೂ ಎಂಬುವದನ್ನು ಕಿತ್ತಿಹಾಕಿ ಕೊಟ್ಟನು. ಅದೇ ಕಿತ್ತಿಯೇ ನವ್ಯ ಬ್ರಿಟಿಷ ಸಾರ್ವಭೌಮರು ಅಂಗೀಕರಿಸಿದ್ದರಿಂದಲೇ ಇವರ ರಾಜ್ಯವು ಬಹುಕಾಲದವರೆಗೆ ನಡೆಯುವ ಸಂಭವವುಂಟಾಗಿ ಬಹುಸುಖಿಕರವಾಗಿರುವದು. ಆದರೆ ಧರ್ಮಕ್ಕೆ ಸರಕಾರವು ಬಾಧ್ಯವಲ್ಲವೆಂಬ ಕಾಯಿದೆಯನ್ನು ತೋರಿಸಿದವರಲ್ಲಿ ಬಸವೇಶನೇ ಮೊದಲನೆಯವನು. ದುಡ್ಡಿನಾಶೆಗಾಗಿ ಮಂತ್ರಿಪದವನ್ನು ವಹಿಸಿ ಹ್ಯಾಗೆ ಹಾಜಿ, ಹಾಜಿ, ಎಂದು ಕಾಲಕಳೆಯು ಹೋಗುವರೋ ಮತ್ತು ಶುಕ್ರನೀತಿಯಲ್ಲಿ - ಯಾವ ಮಂತ್ರಿಗೆ ರಾಜನು ಹೆದರುವದಿಲ್ಲವೋ ಅರ್ಥಾತ್ ರಾಜನಲ್ಲಿ ತನ್ನ ಗಾಂಭೀರ್ಯವನ್ನಿಟ್ಟುಕೊಂಡಿಲ್ಲವೋ ಆ ಮಂತ್ರಿಯು ಕೇವಲ ವಸ್ತ್ರಾದಿಗಳಿಂದ ಅಲಂಕೃತವಾದ ಸ್ತ್ರೀಯ ದಾಸಿಯಿಂದು" ಹೇಳುವಂತೆ ಬಸವೇಶನು ರಾಜನಿಗೆ ಹೆದರಿ ರಾಜ್ಯಭಾರವನ್ನೆಂದೂ ಮಾಡಲಿಲ್ಲ. ಇದಲ್ಲದೆ "ಹಿತಂ ರಾಜ್ಞಶ್ಚಿಕಾಹಿತಂ ಯಲ್ಲೋಕಾನಾಂ ತನ್ನ ಕಾರಯೇತ್" ಎಂಬೀ ಶುಕ್ರನೀತಿವಚನದಂತೆಯೇ ಪ್ರಜೆಗಳಿಗೆ ಅಹಿತವಾದ ಕಾರ್ಯವನ್ನು ಅವನೆಂದೂ ಮಾಡಲಿಲ್ಲ. ಯಾಕೆಂದರೆ, ಅವನ ಚರಿತ್ರದಲ್ಲಿಯೂ ಪ್ರಜೆಗಳ ಅಹಿತಕಾರ್ಯದ ವರ್ಣನೆ ಇಲ್ಲ. ಅಲ್ಲದೆ ಅವನು ಪ್ರಜಾಹಿತಕಾರ್ಯದಲ್ಲಿ ಕೇವಲ ರಾಜಾಜ್ಞೆಯನ್ನು ಸ್ವಪ್ನದಲ್ಲಿಯೂ ಅಪೇಕ್ಷಿಸಿರಲಿಲ್ಲ. ಇದರಿಂದವನು "ಪ್ರಜಾಪ್ರತಿನಿಧಿಸಭೆ" ಯಿಂದಲೇ ರಾಜ್ಯಕಾರ್ಯನಡೆಯಬೇಕೆಂಬ ಅಭಿಪ್ರಾಯವುಳ್ಳವನಿದ್ದನೆಂದು ತಿಳಿಯಬರುತ್ತದೆ. ಅರ್ಥಾತ್ ಪೌರಾಣಿಕಕಾಲದಿಂದಲು ಪ್ರವಾದ ಪ್ರಜಾಸಂಮತಿಪೂರ್ವಕ ರಾಜ್ಯಭಾರವನ್ನು ಪುನಃ ಶುರುಮಾಡಿ ಕೊಟ್ಟವನು, ಮತ್ತು ಸಂಭಾಜಿಯು ಸತ್ತನಂತರ ನಾವೇ ಗಾದಿವಾಲೀಕರೆಂದು ಹೇಳಿ ರಾಜ್ಯವಾಳಿದ ರಾಜದ್ರೋಹಿಗಳಾದ ದುಷ್ಟಸ್ವಾರ್ಥಿ ಪೇಶ್ವೆಯರಂತೆ ಬಸವೇಶನು ತಾನೇ ರಾಜನಾಗಬೇಕೆಂಬಪೇಕ್ಷೆಯುಳ್ಳ ರಾಜದ್ರೋಹಿಯಾಗಿರಲಿಲ್ಲ. ರಾಜ್ಯದ ಸುವ್ಯವಸ್ಥೆಗೆ [illegible] ಬೇಕೆಂತಲೇ ಹೇಳುವ ರಾಜಾಭಿಪ್ರಾಯವು [illegible] ಪಕ್ಷದಲ್ಲಿ ಬಿಜ್ಜಳನು ಸತ್ತನಂತರ ಕಾರ್ಯವನ್ನು ತಾನೇ [illegible] ಪ್ರಯತ್ನ ಮಾಡುತ್ತಿದ್ದನು. ಆದರೆ ಅದು ಅಯೋಗ್ಯವೆಂದು ತಿಳಿದೇ ಮುಂದೆ ಯೋಗ್ಯರಾಜಪುತ್ರದಿಂದ ರಾಜ್ಯದಲ್ಲಿ ಅಶಾಂತಿಯುಂಟಾದೀತೆಂದು ತಿಳಿದು ಮಂತ್ರಿಪದವನ್ನು ತ್ಯಾಗಮಾಡಿ ಹೊರಟುಹೋದನು. ಕೆರೆ, ಭಾವಿ, ಅನ್ನಸತ್ರ, ದೇವಾಲಯ, ವಿದ್ಯಾಲಯ, ಅಶ್ರಮ, ಮಠಮಂಚಾದಿ [illegible]

ಪರಿಶುದ್ಧವಾದ ಹಾಲು ದೊರೆಯದೆ ಮಕ್ಕಳ ಆರೋಗ್ಯವು ಕೆಟ್ಟು ಅಕಾಲಮರಣವು ಹೆಚ್ಚುತ್ತಿರುವುದರಿಂದಲೂ ಹಾಲಿನ ಬೆಲೆಯು ಬಡವರಿಗೆ ಲಭ್ಯವಾಗದಿರುವುದರಿಂದಲೂ ಒಂದು ಕೃತಕಹಾಲಿನ ನಿರ್ಮಾಣೋಪಾಯವು ಕಂಡುಹಿಡಿಯಲ್ಪಟ್ಟಿರುವುದಂತೆ. ಈಗ ತಗಡಿನ ಡಬ್ಬಿಗಳಲ್ಲಿ ಹಾಕಲ್ಪಟ್ಟು ಅಂಗಡಿಗಳಲ್ಲಿ ಮಾರಲ್ಪಡುತ್ತಿರುವ ಹಾಲಿನ ಪುಡಿಯನ್ನೂ ಬೆಣ್ಣೆಯನ್ನೂ ತಂದು ತಕ್ಕಷ್ಟು ಪ್ರಮಾಣದಲ್ಲಿ ಬಿಸಿನೀರಿನೊಂದಿಗೆ ಬೆರಸಿ ಕಡೆಯುವ ಯಂತ್ರದಲ್ಲಿ ಹಾಕಿ ಬಹುವೇಗದಿಂದ ಕಡೆದರೆ ಸ್ವಚ್ಛವೂ ಶ್ರೇಷ್ಠವೂ ಆದ ಹಾಲು ಸಿದ್ಧವಾಗುವುದೆಂದೂ, ಇದು ಎಂತಹ ಬೇಸಿಗೆಯಕಾಲದಲ್ಲೂ 24 ಘಂಟೆಯವರೆಗಿಟ್ಟಿದ್ದರೂ ಕೆಡುವುದಿಲ್ಲವೆಂದೂ ಒಂದು ಆಂಗ್ಲಪತ್ರಿಕೆಯು ತಿಳಿಸುತ್ತದೆ.

ಕಳೆದ ತಾ|| 27 ರ ರಾತ್ರಿ ಮಾರ್ಸ್ ಎಂಬ ಮಂಗಳಗ್ರಹವು ಭೂಮಿಗೆ ಬಹು ಸಮೀಪಗ್ರಸ್ತವಾಗಿದ್ದಿತು ಅಂದರೆ 80 ಲಕ್ಷಮೈಲಿ ದೂರದಲ್ಲಿದ್ದಿತು. ಹಿಂದೆ ಯಾವಾಗಲೂ ಇಷ್ಟು ಸಮೀಪಗ್ರಸ್ತವಾಗಿರಲಿಲ್ಲವೆಂದೂ, ಈ ಮಂಗಳಗ್ರಹದಲ್ಲಿ ಬಹು ಕಲಾಕೌಶಲ್ಯನಿಪುಣಜನರು ವಾಸವಾಗಿರುವರೆಂದೂ, ಅವರು ಭೂಮಿಯಮೇಲಿರುವ ಜನರಿಗೆ ತಮ್ಮಲ್ಲಿಯ ಸಮಾಚಾರವನ್ನು ವಾಯುವಾರ್ತೆಯಮೂಲಕ ತಿಳಿಸುತ್ತಿರುವರೆಂದೂ ಖಗೋಳಶಾಸ್ತ್ರಜ್ಞರು ಹೇಳುತ್ತಿರುವರಲ್ಲದೆ ಮಂಗಳಗ್ರಹದ ಮೇಲ್ಭಾಗವು ಹೇಗಿರುತ್ತದೆಂಬುದನ್ನು ಪ್ರಪಂಚದ ನಾನಾ ಭಾಗದ ಪ್ರಖ್ಯಾತ ಜ್ಯೋತಿಷ್ಯರು ಗ್ರೀನಿಚ್ ಖಗೋಳಶಾಸ್ತ್ರಾಲಯದಲ್ಲಿ ಸೇರಿ ದೂರದರ್ಶಕಯಂತ್ರಸಹಾಯದಿಂದ ಪರೀಕ್ಷಿಸುತ್ತಿರುವರೆಂದೂ ಪ್ರಕಟವಾಗಿದೆ.

ನೋಟೀಸ್.

ಮಂಡ್ಯ, ತಾ|| ಕೊಪ್ಪದ ಸಮ್ಮತು ಆನೆಹಳ್ಳಿಗ್ರಾಮದಲ್ಲಿರುವ ವೀರಶೈವಮಠದ ಸಿದ್ಧಲಿಂಗಪ್ಪನವರ ಮೂರನೇ ಮಗನಾದ ಬಸಪ್ಪನು ಈ ಮೂಲಕ ಸಮಸ್ತಜನಗಳಿಗೂ ತಿಳಿಯಪಡಿಸುವುದೇನಂದರೆ—

ನಮ್ಮ ತಂದೆಗೆ ನಾನು ಮೊದಲಾಗಿ 5 ಜನ ಗಂಡುಮಕ್ಕಳಿರುತ್ತೇವೆ. ಈ ಪೈಕಿ ನಮ್ಮ ಹಿರಿಯ ಅಣ್ಣನಾದ ಸಿದ್ಧಬಸಪ್ಪನು ನಮ್ಮಗಳಿಗೆ ಮೋಸಪಡಿಸಬೇಕೆಂಬ ದುರುದ್ದೇಶದಿಂದ ಈ ಕೆಳಗೆ ಕಂಡ ನಮ್ಮ ಅವಿಭಕ್ತಕುಟುಂಬದ ಆಸ್ತಿಯನ್ನು ಪರಾಧೀನಮಾಡಲು ಪ್ರಯತ್ನಿಸಿರುವುದಾಗಿ ತಿಳಿಯಬರುತ್ತದೆ. ಆದ್ದರಿಂದ ನಮ್ಮಗಳ ಅನುಮತಿಯಿಲ್ಲದೆ ಸದರಿಯವರ ಆಸ್ತಿಯನ್ನು ಕ್ರಯ ಭೋಗ್ಯ ಆಧಾರ ಮಾಡಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲವೆಂದೂ, ಅದಕ್ಕೆ ನಮ್ಮಾಸ್ತಿಯಾಗಲಿ ನಾವಾಗಲಿ ಜವಾಬ್ದಾರರಲ್ಲವೆಂದೂ ಈ ಮೂಲಕ ಎಚ್ಚರಿಸಿದೆ. ಆಸ್ತಿಯ ವಿವರ.—

25 ನೇ ಖಾತೆಗೆ ಸೇರಿದ್ದು

1. ಸರ್ವೆ 2 ನೇ ನಂಬರಿನ ಊರುಮುಂದಿರುವ ಕುಷ್ಕಿಹೊಲ
2. ,, 4 ,, ಕುಷ್ಕಿ ಮರಳುಹೊಲ
3. ,, 23 ,, ತರೀ ಮೋಗಳಗದ್ದೆ
4. ,, 34 ,, ಕುಷ್ಕಿ ಮೋಗಳಹೊಲ
5. ,, 18 ,, ಕುಷ್ಕಿ ಮುತ್ತೇರಿಬೋರೆ
6. ,, 24 ,, ತರೀಜಮೀನು.

88 ನೇ ಖಾತೆಗೆ ಸೇರಿದ್ದು

7. ಸರ್ವೆ 25 ನೇ ನಂಬರಿನ ತರಿ ಬಂಡಳ್ಳಿ ಗದ್ದೆ
8. ,, 26 ,, ಕುಷ್ಕಿ ತೊರೆ ಹೊಲ
9. ,, 32 ,, ತರಿ ಕೆಳಗಲ ಗದ್ದೆ
10. ,, 33 ,, ಡಿಟೊ

ಬಸಪ್ಪನ ರುಜು.

ಕೈ|| ಚೆನ್ನಬಸವಪ್ಪನವರ ಸ್ಮಾರಕಕ್ಕಾಗಿ ಬಂದ ದ್ರವ್ಯ.

ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳಿಂದ ಬಂದ ಚಂದಾಹಣವನ್ನು ವಂದನಾಪೂರಸ್ಸರವಾಗಿ ಸ್ವೀಕರಿಸಿದೆ.

ಮ|| ಗಳಾದ 1. ಹಾಸನದ ಡಿ|| ಎಕಾನಾಮಿಕ್ ಸೂಪರಿಂಟೆಂಡೆಂಟ್ ಹೆಚ್. ಕೆ. ಮಲ್ಲಪ್ಪನವರು 5 ರೂ. 2. ಹಾಸನದ ಸಾಹುಕಾರ್ ಕೇಣಿ ಮಹದೇವಪ್ಪನವರು, ಆರ್. ಎ. ಮೆಂಬರು 10 ರೂ. 3. ಬೆಂಗಳೂರು ಸಬ್‌ಜಡ್ಜ್ ಪಿ. ಮಹದೇವಯ್ಯನವರು, ಬಿ.ಎ., ಬಿ.ಎಲ್., ರವರು 10 ರೂ. 4. ಅರಸೀಕೆರೆ ತಾ|| ಜೆಗಣೆಯಲ್ಲಿರುವ ಹೊನ್ನಗಂಗಪ್ಪನವರು, ಆರ್. ಎ. ಮೆಂಬರು 10 ರೂ. 5. ನಂಜನಗೂಡು ವೈಸ್‌ಪ್ರೆಸಿಡೆಂಟ್ ನಂಜುಂಡಾರಾಧ್ಯರು 3 ರೂ. 6. ಚಿಕ್ಕನಾಯ್ಕನಹಳ್ಳಿ ತಾ|| ಶೆಟ್ಟಿಕೆರೆ ಎಸ್. ಎಂ. ಶಿವಲಿಂಗಪ್ಪನವರು, ಆರ್. ಎ. ಮೆಂಬರು 10 ರೂ. 7. ಶ್ರೀಚೆನ್ನಬಸವೇಶ್ವರಕೃಪಾಪೋಷಿತನಾಟಕ ಕಂಪೆನಿಯ ಪ್ರೊಪ್ರೈಟರ್, ಜಿ. ಎಚ್. ವೀರಣ್ಣನವರು 5 ರೂ. 8. ಮೈಸೂರು ಎಂ. ಪಿ. ಲಿಂಗಪ್ಪಯ್ಯನವರು 5 ರೂ.

ಜಿ. ಪರಮಶಿವಯ್ಯ, ಅಡ್ವೋಕೇಟ್, ಬೆಂಗಳೂರು.

ಕಳೆದ ತಾ|| 24 ರಲ್ಲಿ ನಡೆದ ಸ್ಮಾರಕೋತ್ಸವಕಾಲದಲ್ಲಿ ಓದಲ್ಪಟ್ಟ ಕೈ|| ಚೆನ್ನಬಸವಪ್ಪನವರ ಸ್ಮಾರಕಪದ್ಯಗಳು.

ಶ್ರೀಕರ್ಣಾಟಕಮಂ ಸುವಿ |
ವೇಕದೆ ಪರಿಪಾಲಿಸಿಮ್ಮ ನಾಲ್ವಡಿಕೃಷ್ಣ ||
ಶ್ಯಾಮ್ಮಕಾಂತನ ಕೊಡೆನೆಳಲೊಳ |
ಗೇಕಾಂತಂ ಬಾಳ್ವರಾವೆ ಧನ್ಯರ್ ಧರೆಯೊಳ್ ||೧||

ಜನಪತಿಗುಂ ಜನತತಿಗುಂ |
ಮನಮೆಚ್ಚಿನ ಬಯ್ಕೆಯೆನಿಸೆ ವಿದ್ಯಾವಿಭವಂ ||
ವಿನಯಾದಿಗಳಂ ಕಲಿಸಲ್ |
ಘನಗುರುಕುಲಮಾಡುದರಿಂದು ಗಣಿಸಲ್ಕಾರ್ದೊಳ್ ||೨||

ವಿಮಲಂ ಧನಾಢ್ಯನಖಿಲೋ |
ತ್ತಮ ಕಬ್ಬಳ್ಳಿಯ ನಿವಾಸಿ ಚೆನಬಸವಪ್ಪಂ ||
ಅನುಮಾ ಶೈವಾಭ್ಯುದಯ |
ಕ್ಕಮಿತಾದರನಾಗಿ ರಚಿಸಿದಂ ಗುರುಕುಲಮಂ ||೩||

ಆರಯೆ ಚೆನಬಸವಪ್ಪನ |
ಧೀರತ್ವಾದ್ಯಖಿಲಗುಣಮನಿತ್ತಲ್ ಬಾಲರ್ ||
ತೋರುವ ಕಟವೀಯಚಿತ್ರ |
ಸ್ಮಾರಕಮಂ ಕಂಡು ಕಲಿಯೆ ಕಲ್ಪಿಸಲಕ್ಕುಂ ||೪||

ಪಿರಿದೆಳೆಯಲ್ಲಿ ಕೃತಜ್ಞತೆ |
ಯರಿದೆನದಂ ನಮ್ಮ ಸಚಿವ ಮಿರ್ಜಾ ಇಸ್ಮೈಲ್ ||
ಗುರುಕುಲದೆಳೆಯರ್ಗಿಂದಾ |
ವರಗುಣಮಂ ಕಲಿಸಿ ಪೊರೆಯೆ ಬಂದಂ ದಯೆಯಿಂ ||೫||

ಚೆನಬಸವಪ್ಪನಚಿತ್ರವಿ |
ದಿನಕಶಿಯಿರ್ಪನ್ನೆಗಂ ನಲಂ ಸೊಗಯಿಕೆ ನ ||
ಮ್ಮಿನಿಯಂ ನಾಲ್ವಡಿಕೃಷ್ಣಾ |
ವನೀಶ್ವರಂ ಪೊರೆಗೆ ಸಾನುಜಂ ಮೈಸೂರಂ ||೬||

ಸಂ|| ಶ್ರೀಕಂಠಶಾಸ್ತ್ರಿ,
24-10-26. ಆಸ್ಥಾನವಿದ್ವಾನ್.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಇದು ಕೃತಘ್ನತೆಯಲ್ಲವೆ?

ದೊಡ್ಡಬಳ್ಳಾಪುರ ತಾಲ್ಲೂಕು ಸರ್ವಮಾನ್ಯ ಗೊಲ್ಲಹಳ್ಳಿಯಲ್ಲಿ ಮಳೆಯಿಲ್ಲದೆ ಕೆರೆಕುಂಟೆಗಳೂ ನಿಂತಿದ್ದ ಬೆಳೆಯೂ ಒಣಗಿಹೋಗಿ ಜನರಿಗೂ ದನಕರುಗಳಿಗೂ ಬಹಳ ತೊಂದರೆಯಾಗಿದ್ದುದರಮೇಲೆ ಈ ಗ್ರಾಮದೇವರಾದ ಶ್ರೀ ಬಸವೇಶ್ವರನ ಕೃಪೆಯಿಂದ ಕೂಡಲೆ ಮಳೆಯು ಬಂದಲ್ಲಿ ವಿಶೇಷವಾಗಿ ಪೂಜೆ ಪುರಸ್ಕಾರವನ್ನೂ ಮಹಾಗಣಾರಾಧನೆಯನ್ನೂ ಮಾಡುತ್ತೇವೆಂದು ಗ್ರಾಮಸ್ಥರು ಬಹಳ ಭಯಭಕ್ತಿಯಿಂದ ಪ್ರಾರ್ಥಿಸಿಕೊಂಡಿದ್ದರು. ಅದೇ ರಾತ್ರಿ ದೊಡ್ಡಮಳೆಯು ಬಂದು ಕೆರೆಕಟ್ಟೆಗಳೆಲ್ಲ ತುಂಬಿ ನೀರು ಹರಿದುದಲ್ಲದೆ ಹೊಲ ಗದ್ದೆಗಳಲ್ಲೆಲ್ಲಾ ನೀರು ನಿಂತಿದ್ದಿತು. ಹೀಗೆ ಗ್ರಾಮಸ್ಥರ ಪ್ರಾರ್ಥನೆಯನ್ನು ಅಂಗೀಕರಿಸಿ ಬೇಡಿದಿಷ್ಟಾರ್ಥವನ್ನು ಕೊಡುವ ದ್ವಿತೀಯ ಶಂಭುವಾದ ಆ ಬಸವೇಶ್ವರನು ಮಳೆಯನ್ನು ಸುರಿಸಿ ಜನರ ಮನಸ್ಸಿಗೆ ಮಹಾನಂದವನ್ನುಂಟುಮಾಡಿದನಾದರೂ ಗ್ರಾಮಸ್ಥರು ಆ ಮಹಾಸ್ವಾಮಿಯ ಉಪಕಾರವನ್ನು ಮರೆತು ತಮ್ಮ ಪ್ರಾರ್ಥನೆಯಂತೆ ಮಹಾಗಣಾರಾಧನೆಯನ್ನು ಮಾಡದೆ ಕೃತಘ್ನರೆನಿಸಿಕೊಂಡುದುದಕ್ಕಾಗಿ ಚಿಂತಿಸುತ್ತೇನೆ. ಆ ಪರಮದಯಾಳುವಾದ ಶ್ರೀಬಸವೇಶ್ವರಸ್ವಾಮಿಗೆ ಮಾಡಿಕೊಂಡಿರುವ ಹರಕೆಯನ್ನು ಈಗಲಾದರೂ ಗ್ರಾಮಸ್ಥರು ಕೂಡಲೆ ನೆರವೇರಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಿ ಕೃತಜ್ಞರೆಂದೆನಿಸಿಕೊಳ್ಳುವವರಾಗಲೆಂದು ಕೋರುವ,

ಬಸವಭಕ್ತ.

ಐವತ್ತುಸಾವಿರ ರೂಪಾಯಿ ದಾನ.

ವಿದ್ಯಾವಿಭಾಗದ ಡಿ. ಇನ್‌ಸ್ಪೆಕ್ಟರ್ ದೊರೆಗಳವರು ತಾ|| 10-9-26 ರಲ್ಲಿ ಉಷಾಮಠದ ಶ್ರೀ 108 ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಸ್ವಾಮಿ ಮಹಾಸನ್ನಿಧಿಯ ಅಧ್ಯಕ್ಷತೆಯಲ್ಲಿ ನೆರೆದಿದ್ದ ಸಭೆಯಲ್ಲಿ ಮಾಡಿದ ಭಾಷಣದ ಸಂಕ್ಷೇಪವಿವರಣ-ಪೂಜ್ಯಪಾದರಾದ ಸಭಾಧ್ಯಕ್ಷರೇ ಮತ್ತು ಸಭಿಕ ಮಹಾನುಭಾವರೆ, ಈ ದಿನ ಈ ಸಭೆಯಲ್ಲಿ ಕೂಡಿದ ನಾವೆಲ್ಲರೂ ಧನ್ಯರು. ಯಾಕೆಂದರೆ, ಈ ದಿನದ ಸಭೆಯು ಕೇವಲ ದೇಶೋನ್ನತಿ ಮತ್ತು ಜಾತೋನ್ನತಿಗಾಗಿ ಕೂಡಿರುವದು. ಆದರೆ ಈ ಎರಡೂ ಲಭಿಸಬೇಕಾದರೆ ನಮ್ಮ ಸಮಾಜದಲ್ಲಿ ವಿದ್ಯಾಪ್ರಚಾರವಾಗಬೇಕು. ಜಗತ್ತಿನಲ್ಲಿ ಪ್ರತಿಯೊಂದುಸಮಾಜವೂ ಕೇವಲ ವಿದ್ಯದಿಂದಲೇ ಮುಂದರಿಯಬೇಕಾಗಿದೆ. ಈ ಭಾರತ ಭೂಮಿಯು ಸೇವಾಭೂಮಿಯೆನಿಸುವದಕ್ಕೆ ಕಾರಣವೇನಂದರೆ, ಪ್ರಾಚೀನಕಾಲದಲ್ಲಿ ಈ ದೇಶವು ಸರ್ವ ವಿದ್ಯೆಗಳಿಗೆ ತೌರಮನೆಯಾಗಿತ್ತು. ಸರ್ವ ದೇಶೀಯ ಜನರು ಈ ದೇಶದಲ್ಲಿ ಬಂದು ವಿದ್ಯಾಧ್ಯಯನಮಾಡಿ ಪಂಡಿತರಾಗುತ್ತಿದ್ದರು. ಆದರೆ ಅಂಥಾ ಭೂಮಿಯಲ್ಲಿಯೇ ನಾವಿದ್ದು ನಮ್ಮ ಪವಿತ್ರ ಸಂತಾನವು ಅನ್ಯದೇಶಕ್ಕೆ ವಿದ್ಯಾಭ್ಯಾಸಕ್ಕಾಗಿ ಹೋಗುವ ಪ್ರಸಂಗಬಂದಿತು. ಇದು ಕೇವಲ ಕಾಲಮಹಿಮೆಯೇಸರಿ. ನಮ್ಮ ಜಗತ್ಪೂಜ್ಯ ಸಭಾಧ್ಯಕ್ಷರು ಕೇವಲ ಅವತಾರಪುರುಷರೆಂದಲ್ಲಿ ಅತಿಶಯೋಕ್ತಿಯಾಗಲಾರದು. ಯಾಕೆಂದರೆ, ಈ ಮಹನೀಯರು ಈ ಸಂಸ್ಥಾನದ ಅಧಿಕಾರವನ್ನು ಹೊಂದಿ ಕೇವಲ ೫ ವರ್ಷಗಳಾಗಿರುವವು. ಆದರೆ ಈ ಪೂರ್ವದಲ್ಲಿ ಈ ಪವಿತ್ರ ಪೀಠದ ಹೀನಸ್ಥಿತಿಯು ಸಭಿಕರಿಗೆ ಗೋಚರವಿರುವುದರಿಂದ ವರ್ಣನೆಮಾಡುವ ಆವಶ್ಯಕವಿಲ್ಲ. ಇಂಥಾ ಹೀನಸ್ಥಿತಿಗೆ ಬಂದಿದ್ದ ಪೀಠವನ್ನು ಸ್ವಲ್ಪಕಾಲದಲ್ಲಿಯೇ ಉನ್ನತಸ್ಥಿತಿಗೆ ತಂದದ್ದಲ್ಲದೆ ಪೂಜ್ಯಪಾದರಿಂದ ಶ್ರೀ ಕೇದಾರನಾಥಸನಾತನಧರ್ಮ ಮಹಾವಿದ್ಯಾಲಯ. ಶ್ರೀ ವಿಶ್ವನಾಥವಿದ್ಯಾಲಯ, ಕನ್ಯಾವಿದ್ಯಾಲಯ, ಪ್ರೈಮರಿಸ್ಕೂಲ, ಶ್ರೀ ಕೇದಾರನಾಥ ಧರ್ಮಾರ್ಥ ಎಲೋಪೆಥಿಕ್ ಔಷಧಾಲಯ, ಶ್ರೀ ವಿಶ್ವನಾಥ ಧರ್ಮಾರ್ಥ ಔಷಧಾಲಯ, ಸದಾವರ್ತ ಮಿಡ್ಲ್‌ಸ್ಕೂಲ ವಿದ್ಯಾರ್ಥಿಗಳಿಗೆ ವರ್ಷಾ 300 ರೂಪಾಯಿ ಶಿಷ್ಯವೃತ್ತಿ ಇವಲ್ಲದೆ ಮಿಡ್ಲ್ ಸ್ಕೂಲನ್ನು ಕೂಡ ತಮ್ಮ ಉದಾರಾಶ್ರಯದಲ್ಲಿಟ್ಟು ನಡಿಸುತ್ತಿರುವರು. ಇದನ್ನೆಲ್ಲಾ ನೋಡಿ ನನಗೆ ತುಂಬಾ ಸಂತೋಷವಾಗಿರುವದು. ಸಭಿಕರೆ, ಈ ಮಹನೀಯರ ಕೀರ್ತಿಯನ್ನು ನಾನು ಎಷ್ಟು ವರ್ಣಿಸಿದರೂ ತೀರದು. ಉಷಾಮಠವೆಂದರೆ ಬಾಣಾಸುರನ ಮಗಳು ಉಷಾದೇವಿಯು ವಿದ್ಯಾಭ್ಯಾಸಮಾಡಿದ ಸ್ಥಳವು. ಇದಲ್ಲದೆ ಈ ನಮ್ಮೆಲ್ಲ ಸನಾತನಧರ್ಮಿಗಳ ಗುರುಪೀಠವು. ನಾನು ಡಿಸ್ಟ್ರಿಕ್ಟು ಬೋರ್ಡಿನ ಕಡೆಯಿಂದ ಸನ್ನಿಧಿಯ ಉದಾರಾಶ್ರಯದಲ್ಲಿ ಅರಿಕೆಮಾಡುವದೇನಂದರೆ, ಸದ್ಯಃ ಮಿಡ್ಲ್‌ಸ್ಕೂಲು ಸಂಸ್ಥಾನದ ಬಿಲ್ಡಿಂಗಗಳಲ್ಲಿ ನಡೆಯುತ್ತಿರುವದು. ಅದರ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿವರ್ಷ ಹೆಚ್ಚುತ್ತಿರುವದರಿಂದ ಸ್ಥಳವು ಕಡಿಮೆ ಬರುವದು. ಆದ್ದರಿಂದ ಅದಕ್ಕಾಗಿ ಬೇರೆ ಬಿಲ್ಡಿಂಗುಗಳನ್ನು ಕಟ್ಟಿಸುವುದು ಅವಶ್ಯವಿರುವದು. ಬಿಲ್ಡಿಂಗುಗಳ ವಿವರ—ಸ್ಕೂಲಿಗಾಗಿ ದೊಡ್ಡ ಮೂರು ಹಾಲ್‌ಗಳು, ಬೋರ್ಡಿಂಗಿಗಾಗಿ ನಾಲ್ವತ್ತುರೂಮ್ಸು, ಕಿಚ್ಚನ್‌ಹೌಸ್, ಟೀಚರ ಕ್ವಾರ್ಟರ್ಸ್, ಸರ್ವಾಂಟ್ಸ್ ರೂಮ್ಸ್, ವಿದ್ಯಾರ್ಥಿಗಳಿಗೆ ಆಟಕ್ಕಾಗಿ ಫೀಲ್ಡು ಮತ್ತೂ ಚಿಕ್ಕ ತೋಟಕ್ಕಾಗಿ ಭೂಮಿ, ನೀರಿನ ವ್ಯವಸ್ಥೆ ಇವೆಲ್ಲವೂ 50,000 ರೂಪಾಯಿ ಖರ್ಚಿನಿಂದ ಪೂರ್ಣವಾಗುವವು. ಆದರೆ ಇವೆಲ್ಲ ಕಾರ್ಯವು ಮಹಾಸನ್ನಿಧಿಯಿಂದಲೇ ಜರಗಬೇಕೆಂದು ನಮ್ಮೆಲ್ಲರ ಪ್ರಾರ್ಥನೆ ಇರುವದು. ಯಾಕೆಂದರೆ, ಈ ಬಡದೇಶದಲ್ಲಿ ಈ ಮಹಾಕಾರ್ಯವು ಮಹಾಸನ್ನಿಧಿಯ ವಿನಾ ಅನ್ಯರಿಂದಾಗಲಾರದು. ಇದಲ್ಲದೆ ಬೋರ್ಡಿನಲ್ಲಿ ದ್ರವ್ಯವಿಲ್ಲ. ಬೋರ್ಡು ಕೇವಲ ಸ್ಕೂಲುಮಾತ್ರ ನಡಿಸಬಲ್ಲದು. ಆದ್ದರಿಂದ ಈ ಬಡಭಕ್ತರನ್ನು ಉದ್ಧಾರಮಾಡುವಿರೆಂಬದಾಗಿಯೂ ಈ ವಿಷಯದಲ್ಲಿ ಈ ನಮ್ಮೆಲ್ಲರಿಗೆ ಅಪ್ಪಣೆಕೊಡಿಸುವಿರೆಂಬದಾಗಿಯೂ ಪ್ರಾರ್ಥಿಸುತ್ತೇನೆ ಎಂದು ಭಾಷಣವಾದಮೇಲೆ ನಮ್ಮೆಲ್ಲರ ಪ್ರಾರ್ಥನೆಯಂತೆ ಬಿಲ್ಡಿಂಗುಗಳನ್ನು ಕಟ್ಟಿಸಿಕೊಡಲು ಒಪ್ಪಿರುತ್ತೇವೆಂದು ಮಹಾಸನ್ನಿಧಿಯಪ್ಪಣೆಯಾಗಲು ಸಭಿಕರು ಜಯಧ್ವಾನಮಾಡಿದರು. ಮಂಗಲಾಚರಣೆಯಿಂದ ಸಭಾವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ಶ್ರೀಮನ್ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀ ವೀರಶೈವಾನಂದಾಶ್ರಮ ತಿಪಟೂರು.

ಚಿತ್ರದುರ್ಗದ ಶ್ರೀಮನ್ನಿರಂಜನಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರ ಸ್ವಾರಿಯು 1909 ರಲ್ಲಿ ಈ ಪ್ರಾಂತ್ಯ ವಿಜಯಂಗೈಸಿದ್ದಾಗ್ಯೆ ಅವಿದ್ಯೆಯೆಂಬ ಅಂಧಕಾರದಲ್ಲಿ ಸಿಕ್ಕಿರುವ ವೀರಶೈವ ಜನಾಂಗದವರನ್ನು ಪರಾಂಬರಿಸಿ, ಈ ಜನಗಳಿಗಿರುವ ಮೌಢ್ಯವನ್ನು ಹೋಗಲಾಡಿಸುವ ಪ್ರಯತ್ನವನ್ನು ಕೈಗೊಂಡು ಅನಾಥರಾದ ವೀರಶೈವವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಕೊಟ್ಟು ಸಾಮಾಜಿಕ, ನೈತಿಕ, ಮತ್ತು ಧಾರ್ಮಿಕ ವಿದ್ಯೆಯನ್ನು ಕಲಿಸಬೇಕೆಂಬ ಸದುದ್ದೇಶವನ್ನು ಇಲ್ಲಿನ ಪ್ರಮುಖರಲ್ಲಿ ತಿಳಿಸಿ ಅವರುಗಳ ಉದಾರವಾದ ಭಕ್ತಿಯನ್ನು ಒಪ್ಪಿಸಿಕೊಂಡು ರಮಣೀಯವೂ, ಭವ್ಯವೂ ಆದ ಕಟ್ಟಡಗಳನ್ನು ಕಟ್ಟಿಸೋಣವಾಯಿತು. ಅನಂತರ 1912 ರಲ್ಲಿ ಶ್ರೀವೀರಶೈವಾನಂದಾಶ್ರಮವೆಂಬ ಅಭಿಧಾನದಿಂದ ಈ ಸಂಸ್ಥೆಯನ್ನು ಸ್ಥಾಪಿಸಿ ಇಂಥಾ ಸಂಸ್ಥೆಗೆ ಸರಿಯಾದ ಮೂರ್ತಿಗಳಿರಬೇಕೆಂದು ಯೋಚಿಸಿ ಘನವಿದ್ವಾಂಸರೂ, ತಪೋನಿಷ್ಠರೂ ಆದ ಶ್ರೀ ಪಂಚಾಕ್ಷರಿಸ್ವಾಮಿಗಳನ್ನು ನೇಮಿಸಿದ್ದರು. ಇವರು ನಮ್ಮಗಳ ದುರ್ದೈವದಿಂದ ಶಿವೈಕ್ಯರಾದರು. ಮಹಾಸನ್ನಿಧಿಯು ಇಂಥಾ ದೊಡ್ಡಸಂಸ್ಥೆಗೆ ಯೋಗ್ಯರಾದ ಮತ್ತೊಬ್ಬ ಮೂರ್ತಿಯನ್ನು ಕ್ಷಿಪ್ರದಲ್ಲಿ ನೇಮಿಸುವ ಆಲೋಚನೆಯಲ್ಲಿರುತ್ತಾರೆ. ಇಲ್ಲಿ ಮಹಾಸನ್ನಿಧಿಯಿಂದ ಕಳೆದ ನಳನಾಮ ಸಂವತ್ಸರದ ಆಶ್ವೀಜ ಶುದ್ಧ ೧೦ ಶುಕ್ರವಾರ ಸುಮುಹೂರ್ತದಲ್ಲಿ ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿ, ವೇದಾಧ್ಯಯನ ಸಂಪನ್ನರಾದ ಒಬ್ಬ ಶಾಸ್ತ್ರಿಗಳನ್ನು ನೇಮಿಸಿ, ವಿದ್ಯಾರ್ಥಿಗಳ ವಾಸಕ್ಕೂ, ಉಚಿತವಾದ ಭೋಜನಕ್ಕೂ, ತಕ್ಕ ಏರ್ಪಾಡುಮಾಡಿದರು. ಕೆಲವು ಕಾಲಾನಂತರ ಲೋವರ್‌ಸೆಕೆಂಡರಿ ಪರೀಕ್ಷೆಯವರಿಗೆ ರಾಜಭಾಷೆಯಾದ ಇಂಗ್ಲೀಷ್ ವಿದ್ಯಾಭ್ಯಾಸಮಾಡುವ ವೀರಶೈವ ಬಡವಿದ್ಯಾರ್ಥಿಗಳಿಗು ಕೂಡ ಉಚಿತವಾಗಿ ಅನ್ನೋದಕಗಳನ್ನು ಕೊಟ್ಟು ಅಭ್ಯಾಸಮಾಡಿಸಬೇಕೆಂಬ ಸದುದ್ದೇಶವನ್ನು ಇಲ್ಲಿನ ಪ್ರಮುಖರಲ್ಲಿ ಆಲೋಚಿಸಿ 30 ಮಂದಿ ಬಡವಿದ್ಯಾರ್ಥಿಗಳ ಅಶನವಸನಗಳಿಗೆ ಏರ್ಪಾಟುಮಾಡಿದರು. ಆಚಾರನಿಷ್ಠರೂ ವೇದಾಧ್ಯಯನವನ್ನೂ, ಸಂಸ್ಕೃತವನ್ನೂ ಚೆನ್ನಾಗಿ ಅಭ್ಯಾಸಮಾಡಿರುವವರೂ ಆದ ಇಬ್ಬರು ಶಾಸ್ತ್ರಿಗಳಿಂದ ಕೂಡಿ ಬಿದಿಗೆಯ ಚಂದ್ರನೋಪಾದಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿರುವ ಈ ಸಂಸ್ಕೃತಪಾಠಶಾಲೆಯಲ್ಲಿ 33 ಮಂದಿ ಬಾಲಕರು ಅಭ್ಯಾಸಮಾಡುತ್ತಿದ್ದಾರೆ. ಈ ಸಂಸ್ಥೆಗೆ ಅಂಗವಾಗಿ ಒಂದು ಫ್ರೀರೀಡಿಂಗ್ ರೂಮು ಸಹ ಶ್ರೀಜಗದ್ಗುರು ಪೂಜ್ಯಪಾದರಿಂದ ಸ್ಥಾಪಿಸಲ್ಪಟ್ಟು ಎಲ್ಲರ ಉಪಯೋಗಕ್ಕಾಗಿ ಲೈಬ್ರರಿಯು ಸಹ ಏರ್ಪಡಿಸಲ್ಪಟ್ಟು ಇಂಗ್ಲೀಷ್ ಮತ್ತು ಕನ್ನಡಾ ಪೇಪರುಗಳೆಲ್ಲವೂ ಬರುವಂತೆ ಅನುಕೂಲ್ಯವು ಕಲ್ಪಿಸಲ್ಪಟ್ಟಿರುತ್ತದೆ. ಇತ್ತೀಚೆಗೆ ಈ ಪುರಪ್ರಮುಖರು ನಮ್ಮ ಶ್ರೀಮನ್ಮಹಾರಾಜಸರ್ಕಾರದವರನ್ನು ಪ್ರಾರ್ಥಿಸಿಕೊಂಡ ಮೇರೆಗೆ 1924 ರಲ್ಲಿ ಹೈಸ್ಕೂಲು ಸ್ಥಾಪಿತವಾದ್ದರಿಂದ ನಮ್ಮ ಶ್ರೀ ಜಗದ್ಗುರುಪೂಜ್ಯಪಾದರು ಈಗಿನ ಕಾಲಕ್ಕನುಸಾರವಾಗಿ ನಮ್ಮ ವೀರಶೈವವಿದ್ಯಾರ್ಥಿಗಳಿಗೆ ಅನುಕೂಲ್ಯವನ್ನುಂಟುಮಾಡುವುದು ಅವಶ್ಯವೆಂದು ಪೂರ್ವಾಂತಃಕರಣಕ್ಕೆ ತಂದುಕೊಂಡು, ಆದಷ್ಟು ಹೆಚ್ಚುಮಂದಿ ವಿದ್ಯಾರ್ಥಿಗಳನ್ನು ಸೇರಿಸಿ ಉಚಿತವಾಗಿ ಅವರ ಭೋಜನಕ್ಕೂ ವಾಸಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಇಲ್ಲಿನ ಧರ್ಮಾತ್ಮರಾದ ಕಮಿಟಿಯವರಿಗೆ ಅಪ್ಪಣೆಮಾಡಿದ ಮೇರೆಗೆ ಶ್ರೀ ಜಗದ್ಗುರು ಮಹಾಸ್ವಾಮಿಯವರ ಕೃಪಾಬಲದಿಂದ ಈ ಸಂಸ್ಥೆಯು ಈಗ ಮೈಸೂರು ಸೀಮೆಯಲ್ಲಿ ಮೊದಲನೆಯದಾಗಿ ಪರಿಣಮಿಸಿರುತ್ತದೆ. ಈಗ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಫ್ರೀಬೋರ್ಡಿಂಗಿನಲ್ಲಿ ವೈದಿಕ, ಸಂಸ್ಕೃತ, ಇಂಗ್ಲಿಷ್ ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲು ಎಲ್ಲಾ ತರಗತಿಗಳ 95 ಮಂದಿ ವಿದ್ಯಾರ್ಥಿಗಳು ಫ್ರೀಬೋರ್ಡಿಂಗ್ ಮತ್ತು ಲಾಡ್ಜಿಂಗಿನ ಅನುಕೂಲ್ಯಗಳನ್ನು ಹೊಂದಿ ಚೆನ್ನಾಗಿ ಅಭ್ಯಾಸಮಾಡುತ್ತಿದ್ದಾರೆ. ಪ್ರತಿದಿನವೂ ವೇದಾಧ್ಯಯನ ಮತ್ತು ಸಂಸ್ಕೃತಪಾಠಗಳು ಕ್ರಮವಾಗಿ ನಡೆಯುತ್ತಲಿವೆ. ಈ ಶ್ರೀ ವೀರಶೈವಾನಂದಾಶ್ರಮವು ಕಟ್ಟಲ್ಪಟ್ಟಿರುವ ಪ್ರದೇಶವು ಬಹಳ ಬೆಲೆಬಾಳತಕ್ಕುದಾಗಿದ. ಇಂಥಾ ಪ್ರದೇಶದಲ್ಲಿ ಕಟ್ಟಲ್ಪಟ್ಟಿರುವ ನೇತ್ರಾನಂದಕರವೂ ಭವ್ಯವೂ ಆದ ಕಟ್ಟಡಗಳ ಬೆಲೆಯು 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟದ್ದಾಗಿರುತ್ತದೆ. ಆದುಕಾರಣ ಇಂಥಾ ಸಂಸ್ಥೆಯು ಆಚಂದ್ರಾರ್ಕವಾಗಿ ನಡೆಯಲನುಕೂಲಿಸುವಂತೆ ಶ್ರೀ ಜಗದ್ಗುರು ಪೂಜ್ಯಪಾದರು ಒಂದು ಧನರಾಶಿಯನ್ನು ಏರ್ಪಡಿಸಿ " ಶ್ರೀಜಗದ್ಗುರುಜಯದೇವಮುರುಘರಾಜೇಂದ್ರ ಶ್ರೀವೀರಶೈವಾನಂದಾಶ್ರಮದ ಫಂಡ್ ತಿಪಟೂರು" ಎಂಬ ನಾಮಧೇಯವನ್ನಿಟ್ಟು ಈ ಸಂಸ್ಥೆಯನ್ನು ಯಾವ ತೊಂದರೆಯೂ ಇಲ್ಲದೆ ನಡೆಸಿಕೊಂಡು ಬರಲು ಸುಶಿಕ್ಷಿತರೂ, ನಿಷ್ಪಕ್ಷಪಾತಿಗಳೂ, ಧರ್ಮನಿರತರೂ ಆದ 5 ಮಂದಿ ಟ್ರಸ್ಟಿಗಳನ್ನು ನೇಮಕಮಾಡಿ ತಾ|| 22-10-26 ನೆಯ ದಿವಸ ಟ್ರಸ್ಟ್ ಡೀಡನ್ನು ಬರೆಸಿ ಅವರು ಆಚರಿಸಬೇಕಾದ ವಿಷಯಗಳನ್ನೆಲ್ಲಾ ಅದರಲ್ಲಿ ವಿಸ್ತಾರವಾಗಿ ನಮೂದಿಸಿ ಮೈಸೂರು ಸ್ಟೇಟ್‌ಲೋನ್ 1920 ನೇ ಇಸವಿಯ $6\frac{1}{4}$ ರೂ. ಬಡ್ಡಿ ದರದ 50 ಸಾವಿರ ರೂಪಾಯಿಗಳ ಬಾಂಡುಗಳನ್ನು ಪೂರ್ಣಾನಂದದಿಂದ ಟ್ರಸ್ಟಿಗಳ ವಶಕ್ಕೆ ದಯಪಾಲಿಸಿ ಇದು ಮುಂದೆ ಹೆಚ್ಚಾದ ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿದ ಆನಂದವಾರ್ತೆಯನ್ನು ತಿಳಿಸಲು ತುಂಬಾ ಹರ್ಷಪಡುತ್ತೇನೆ. ಈ ನಮ್ಮ ಶ್ರೀಮನ್ನಿರಂಜನಜಗದ್ಗುರುಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸಿಂಹಾಸನಾರೋಹಣರಾದ ಲಾಗಾಯತಿನಿಂದಲೂ ಕೇವಲ ಹಿಂದುಳಿದಿರುವ ಈ ವೀರಶೈವಜನಾಂಗದವರನ್ನು ಉದ್ಧಾರಮಾಡುವ ಕಾರ್ಯವೇ ಶ್ರೇಷ್ಠವಾದುದೆಂದು ಭಾವಿಸಿ ಈ ಜನಾಂಗವು ಅಭಿವೃದ್ಧಿಗೆ ಬರಬೇಕಾದರೆ ವಿದ್ಯಾಪ್ರಸಾರಣೆಯೇ ಬಹುಮುಖ್ಯವಾದುದೆಂದು ತಮ್ಮ ದಿವ್ಯಚಿತ್ತಕ್ಕೆ ತಂದುಕೊಂಡು ಇಂಡಿಯಾದೇಶದ ಅನೇಕ ಭಾಗಗಳಲ್ಲಿ ವೀರಶೈವವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವು ಸುಲಲಿತವಾಗಿ ನಡೆಯಲನುಕೂಲಿಸುವಂತೆ ಫ್ರೀ ಬೋರ್ಡಿಂಗ್ ಮತ್ತು ಲಾಡ್ಜಿಂಗುಗಳನ್ನೇರ್ಪಡಿಸಿ ಹಿಂದೆ ಯಾರೂ ಮಾಡದೇ ಇದ್ದ ಮಹದುಪಕಾರವನ್ನು ಮಾಡಿಯೂ, ಮಾಡುತ್ತಲೂ ಇರುವುದು ನಮ್ಮ ವೀರಶೈವಜನಾಂಗದ ಅಭಿವೃದ್ಧಿಗೆ ಭರವಸೆಯುಳ್ಳದ್ದಾಗಿರುತ್ತದೆ. ಹಿಂದೆ ಬಸವಾದಿಪ್ರಮಥರು ಬೇಡಿದ್ದನ್ನು ದಯಪಾಲಿಸುತ್ತಿದ್ದರೆಂದು ಪುರಾಣಗಳಲ್ಲಿ ಕೇಳಿರುತ್ತೇವೆ. ಅದಕ್ಕೆ ಈಗ ಈ ಶ್ರೀ ಜಗದ್ಗುರುಮಹಾಸ್ವಾಮಿಗಳು ಅವತಾರಮಾಡಿ ನಡೆಸುತ್ತಿರುವ ಕಾರ್ಯಗಳು ಕೇವಲ ದೃಷ್ಟಾಂತವಾದವುಗಳಾಗಿರುತ್ತವೆಂಬುವುದಕ್ಕೆ ಯಾವ ಸಂಶಯವೂ ಇಲ್ಲವೆಂಬುದನ್ನು ಪ್ರತಿಯೊಬ್ಬ ವೀರಶೈವನೂ ತಿಳಿದ ವಿಷಯವೇ ಆಗಿದೆ. ಈ ಮಹಾಸ್ವಾಮಿಗಳವರು ಪೀಠಕ್ಕೆ ದಯಮಾಡಿದಾರಭ್ಯದಿಂದಲೂ ಧರ್ಮಗುರುಗಳು ಮಾಡಬೇಕಾದ ಶಾಸ್ತ್ರೀಯವಾದ ಕರ್ತವ್ಯಗಳನ್ನು ಮಾಡಿ ಎಲ್ಲಾ ಜನಾಂಗದ ಗುರುಗಳಿಗೂ ಮಾರ್ಗದರ್ಶಕರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಓರ್ವ ಸಮಾಜಸೇವಕ.

✓ಹುಬ್ಬಳ್ಳಿಯಲ್ಲಿ ನೆರೆಯುವ ಶ್ರೀಮದ್ವೀರಶೈವಮಹಾಸಭೆ.

ಅಖಿಲ ವೀರಶೈವರ ಹಿತಾಪೇಕ್ಷೆಯಿಂದ, ಯಾವತ್ತು ಪರಸ್ಪರ ಒಳಭೇದಗಳನ್ನು ಅಳಿಸಿ ಸಾರ್ವತ್ರಿಕವಾದ ಐಕಮತ್ಯವನ್ನು ಬೆಳಸಿ ಧಾರ್ಮಿಕ ಸಾಮಾಜಿಕ ಔದ್ಯೋಗಿಕ ಈ ಮೊದಲಾದ ವಿಷಯಗಳನ್ನು ಸುಧಾರಿಸಿ ಸದಾ ಹಿತವನ್ನು ಬಯಸುವ ಈ ಮಹಾಸಭಾಕಲ್ಪವೃಕ್ಷವನ್ನು ಅಭಿವೃದ್ಧಿಗೊಳಿಸಬೇಕೆಂಬ ಪ್ರತಿಯೊಬ್ಬ ವೀರಶೈವನ ಅಪೇಕ್ಷೆಯಿಂದಲೇ ದಾವಣಗೆರೆಯಲ್ಲಿ ನೆರೆದಿದ್ದ 8 ನೆಯ ಸಭೆಯಲ್ಲಿ ಶ್ರೀಮಜ್ಜಗದ್ಗುರು ಜಯದೇವಮುರುಘರಾಜೇಂದ್ರಮಹಾಸ್ವಾಮಿಗಳವರ ಅಪೇಕ್ಷಾಪೂರ್ವಕವಾದ ಅನುಗ್ರಹದಿಂದ ಮಹಾಸಭೆಯು ಚಿರಸ್ಥಾಯಿಯಾಗುಂಡು ಸ್ಥಾಪಿತವಾಗಿ ಅದರ ಬಡ್ಡಿಯ ಆದಾಯದಿಂದ ಯಾವದೇ ಸಣ್ಣದೊಡ್ಡ ಗ್ರಾಮಗಳಲ್ಲಿ ಮಾಡಿದರೂ ನಿರಾಯಾಸವಾಗಿ ಸಾಗಬೇಕೆಂದು ಯೋಚಿಸಿ ಧನಸಂಚಯಮಾಡಿದ್ದು ಸರ್ವಶ್ರುತವಿದ್ದಾಗ್ಯೂ, ಬೀರೂರಲ್ಲಿ ಮಾತ್ರ ಒಂದುವರ್ಷ ಸಭೆಯು ಜರುಗಿತಲ್ಲದೆ ಮುಂದೆ ಯಾವ ಪಟ್ಟಣಸ್ಥರಿಗೂ ಈ ಸಭೆಯನ್ನು ನಡೆಯಿಸಲು ದುಡ್ಡಿನ ಅನುಕೂಲವಿದ್ದಾಗ್ಯೂ ಕಲಹವಿಲ್ಲದೆ ಸುರಕ್ಷಿತವಾಗಿ ಜರಿಗಿಸುವದು ಸಾಧ್ಯವಿಲ್ಲವೆಂದು ಯಾರೂ ಅದನ್ನು ಬರಮಾಡಿಕೊಳ್ಳಲಿಲ್ಲ. ಆದರೆ ಸುಖದಾಯಕವಾದ ಕಾಮಧೇನುವಿನಂಥಾ ಮಹಾಕಾರ್ಯವನ್ನು ನಿಲ್ಲಿಸಲಿಕ್ಕೆ ಪಂಚಾಚಾರ್ಯರ ಮತ್ತು ವಿರಕ್ತರ ಮನಸ್ತಾಪವೇ ಮುಖ್ಯಕಾರಣವಾಗಿರಬಹುದೆಂದು ತೋರುತ್ತದೆ. ಈ ಈರ್ವರಲ್ಲಿ ನಡೆದ ಗುದ್ದಾಟದಿಂದ ಯಾರಿಗೂ ಸುಖವಾಗಲಿಲ್ಲ. ಇಂಥ ದುರ್ಧರವಾದ ಅಸಹ್ಯಕಲಹವು ಹುಟ್ಟಿದುದು ವೀರಶೈವಜಗತ್ತಿನ ದುರದೃಷ್ಟದಿಂದಲೇ ಎಂದು ಹೇಳಬೇಕಾಗಿದೆ. ಆದುದರಿಂದ ಈಗ ನಾನು ಅತಿ ನಮ್ರಭಾವದಿಂದ ಸಾಷ್ಟಾಂಗವೆರಗಿ ಶ್ರೀ ವಿರಕ್ತಮೂರ್ತಿಗಳಿಗೂ ಶ್ರೀಪಂಚಾಚಾರ್ಯರಿಗೂ ಜನಾಂಗದ ಮುಂದಾಳುಗಳಿಗೂ ಬೇಡಿಕೊಳ್ಳುವದೇನೆಂದರೆ—ನಿಮ್ಮ ನಿಮ್ಮ ಸಾಮರ್ಥ್ಯಗಳನ್ನು ಅಂತಃಕಲಹದ ಪ್ರಸಂಗಕ್ಕೆ ಉಪಯೋಗಿಸುವದಕ್ಕಿಂತ ಈ ಸಾರ್ವತ್ರಿಕ ಹಿತವನ್ನೀಯುವ ಮಹಾಸಭೆಯಂಥಾ ಮಹಾಕಾರ್ಯದಲ್ಲಿ ಇಡೀ ಭಾರತೀಯ ವೀರಶೈವಸಮಾಜವನ್ನು ಏಕೀಕರಿಸಿ, ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮೊದಲಾದನೇಕ ಇಹಪರ ಸೌಖ್ಯಕರವಾದ ಕಾರ್ಯದಲ್ಲಿ ಬುದ್ಧಿಕೌಶಲ್ಯ ತನುಮನಧನಗಳನ್ನು ಉಪಯೋಗಿಸಿ ಸಮಾಜೋನ್ನತಿಯ ಕಾರ್ಯದಲ್ಲಿ ಸ್ವಾಭಿಮಾನವನ್ನೂ ಪರಸ್ಪರ ದ್ವೇಷಭಾವವನ್ನೂ ಉಚ್ಚನೀಚಭಾವವನ್ನೂ ಬಿಟ್ಟು ಪರಸ್ಪರ ಪ್ರೀತಿವಿಶ್ವಾಸವನ್ನುಂಟುಮಾಡಬೇಕೆಂಬ ಸದಿಚ್ಛೆಯಿಂದ ನಮ್ಮ ಧಾರವಾಡಜಿಲ್ಲೆಯ ಪ್ರಸಿದ್ಧ ಹುಬ್ಬಳ್ಳಿಪಟ್ಟಣದ ಬಂಧುಗಳು ವಹಿಸಿಕೊಂಡಿರುವ ಈ ಸತ್ಕಾರ್ಯಕ್ಕೆ ಯಾವತ್ತು ಜನಾಂಗದವರು ಸಹಾಯಮಾಡಿ ಯಾವ ತರಹದಿಂದಲಾದರೂ ವೈಮನಸ್ಸನ್ನು ಬಿಟ್ಟು ಏಕೀಕರಣದಿಂದ ಮಹಾಸಭೆಯ ಕಾರ್ಯವು ಸುರಕ್ಷಿತವಾಗಿ ಜರಗುವಂತೆ ಮಾಡುವವರಾಗಬೇಕು. ಪೂಜ್ಯಪಾದರೇ, ಸಮಾಜದ ಮುಖಂಡರಾದ ಮಹನೀಯರೇ, ಹಿಂದಿನ ಮನಸ್ತಾಪವನ್ನು ಹೋಗಲಾಡಿಸಿ ಪರಸ್ಪರ ಪ್ರೇಮಾಭಿವೃದ್ಧಿ ಮಾಡಲು ಮಧ್ಯಸ್ಥಗಾರರು ಬೇಕೆಂಬ ಬಯಕೆಯನ್ನು ಈ ಸಂದರ್ಭದಲ್ಲಿ ಮಾಡುವುದು ಶಕ್ಯವಲ್ಲವು. ಏತಕ್ಕೆಂದರೆ—ಆಡು ಕಾಲುಮುರಿದುಕೊಂಡು ಮಲಗಿದರೆ, ಬೇಕಾದವರು ಅದನ್ನು ಎತ್ತಿಕೊಂಡುಹೋಗಿ ಸಂರಕ್ಷಿಸುವದು ಶಕ್ಯವು, ಆದರೆ ಆನೆಯು ಮಲಗಿದರೆ ಅದು ತಾನಾಗಿ ಏಳಬೇಕಲ್ಲದೆ ಅದನ್ನು ಮೇಲಕ್ಕೆತ್ತಲು ಮತ್ತು ಸಮುದ್ರವು ಮೇರೆದಪ್ಪಿ ಹರಿದರೆ ಅದು ತನ್ನಿಂದ ತಾನೇ ಜಗತ್ತನ್ನು ಸಂರಕ್ಷಿಸಬೇಕೆಂಬ ಬುದ್ಧಿಯಿಂದ ಶಾಂತವಾಗಬೇಕಲ್ಲದೆ ಅದನ್ನು ತಡೆಯಲು ಮನುಷ್ಯರಿಗೆ ಶಕ್ಯವಲ್ಲವು. ಮಹನೀಯರಾದ ನಿಮ್ಮ ನಿಮ್ಮ ಮನಸ್ತಾಪದಿಂದಾಗುತ್ತಿರುವ ಅನಾಹುತವನ್ನು ನಿಲ್ಲಿಸುವುದು ಅನ್ಯರಿಗೆ ಶಕ್ಯವಲ್ಲವಾದ್ದರಿಂದ ಮಧ್ಯಸ್ಥರು ಬೇಕಿಲ್ಲ. ಆದರೆ, ಶ್ರೀಜಗನ್ನಿಯಾಮಕನಾದ ಪರಮಾತ್ಮನ ಕೃಪೆಯಿಂದ ಗುರುವರ್ಗ ಯತಿವರ್ಗದವರೂ, ಜನಾಂಗದ ಮುಖಂಡರೂ ದೂರದೃಷ್ಟಿಯಿಂದ ವಿಚಾರಮಾಡಿ ಈ ಸದ್ಯಃಸ್ಥಿತಿಗೆ ಅನುಸರಿಸಿ ಸುಖವಾಗುವ ಮಾರ್ಗವನ್ನು ಅವಲಂಬಿಸಿ ಕಲಹದ್ವೇಷಾದಿಗಳನ್ನು ಮರೆತು ಈ ಹುಬ್ಬಳ್ಳಿಯಲ್ಲಿ ನೆರೆಯುವ ಮಹಾಸಭೆಗೆ ಸಹಾಯ ಮಾಡಬೇಕೆಂದು ಮತ್ತೊಮ್ಮೆ ವಿಜ್ಞಾಪಿಸುವೆನು.

೧೮೨೪ ನೇ ಸಂವತ್ಸರದಲ್ಲಿ ಸವದತ್ತಿ ಮುಕ್ಕಾಮಿನಲ್ಲಿ ಮಹಾಮಹಿಮರಾದ ಶ್ರೀ ಅಥಣಿ ಶಿವಯೋಗಿಗಳು, ಶ್ರೀ ಬಿದರೀ ಕುಮಾರೇಶ್ವರರು, ಶ್ರೀ ಹಾನಗಲ್ಲ ಸ್ವಾಮಿಗಳು, ಬಳ್ಳಾರಿ ಶ್ರೀ ಮಹನೀಯರು ಅಥಣಿ ಕೈಲಾಸವಾಸಿಗಳಾದ ನೂರಂದಪ್ಪಶೆಟ್ಟರು ಮೊದಲಾದವರೆಲ್ಲರೂ ಕೂಡಿ ವೀರಶೈವ ಸಮಾಜದ ಸುಧಾರಣೆಗೂ ಐಕ್ಯ ಬೆಳಸುವದಕ್ಕೂ ಈ ಮಹಾಸಭೆಯನ್ನು ವರ್ಷಕ್ಕೊಮ್ಮೆ ನಡೆಸುವಂತೆ ನಿರ್ಧರಿಸಿದರು. ಅನಂತರ ಪ್ರತಿಯೊಂದು ಸಭೆಗಳಿಗೂ ಹಾನಗಲ್ಲ ಶ್ರೀಗಳು ಅವಿಶ್ರಾಂತ ಶ್ರಮಪಟ್ಟು ಮಹಾಸಭೆಗಳು ನಡಿಯಿಸಲ್ಪಡುವ ಆಯಾಯ ಪಟ್ಟಣಗಳಿಗೆ ಹೋಗಿ ಸಾಹಸಮಾಡುತ್ತಿದ್ದು ಸಭೆಗಳಲ್ಲಿ ಇಲ್ಲದ ಕಲಹಗಳು ಬರಹತ್ತಿದ್ದನ್ನು ಕಂಡು ಈ ವಿಷಯದಲ್ಲಿ ಬೇಸರಗೊಂಡವರಾದರು. ಬೆಳಗಾವ, ನಿಪ್ಪಾಣಿ ಪಟ್ಟಣಗಳಲ್ಲಿ ಶ್ರೀ ಶಿವಮೂರ್ತಿಸ್ವಾಮಿ ಕಣಬರ್ಗಿಮಠ ಇವರು ತಮ್ಮ ತನುಮನಧನದಿಂದ ಸಾಹಸಪಟ್ಟು ಬೆಳಗಾವಿಯ ಸಭೆಯನ್ನು ತಮ್ಮ ಸ್ವಂತ ಖರ್ಚಿನಿಂದಲೂ, ನಿಪ್ಪಾಣಿ ಸಭೆಯನ್ನು ರಾವಸಾಹೇಬ ಮಲ್ಲಪ್ಪಣ್ಣಾ ಶಿಂತ್ರೆ ಇವರು ತಮ್ಮ ಸ್ವಂತ ಖರ್ಚಿನಿಂದಲೂ ನಡೆಸಿದರು. ಈ ಸಭೆಯು ಪ್ರಾರಂಭವಾಗುವ ಕಾಲದಲ್ಲಿ ವೀರಶೈವಸಮಾಜದ ಪಿತೃಸ್ವರೂಪರಾದ ಕೈ|| ಲಿಂಗಪ್ಪಾ ಚಾಯಪ್ಪಾ ಸರದೇಸಾಯಿ ಶಿರಸಂಗಿಯವರು ಮತ್ತು ಕೈ|| ಶ್ರೀಮಂತ ರಾವಬಹಾದ್ದೂರ ಮಲ್ಲಪ್ಪಾ ಬಸಪ್ಪಾ ವಾರದ ಸೋಲಾಪೂರ ಇವರು ಈ ಉಭಯ ವಿಭೂತಿಗಳು ಜೀವಿಸಿದ್ದು ಕಾಲಕ್ಕನುಸರಿಸಿ ತಕ್ಕ ಪ್ರೋತ್ಸಾಹವನ್ನು ಕೊಡುತ್ತಿದ್ದರು. ದೇಹವು ಕ್ಷಣಭಂಗುರವಾದರೂ ಕೀರ್ತಿಯು ಅಜರಾಮರ ಎಂಬಂತೆ ಸರದೇಸಾಯರು ರಾವಬಹಾದ್ದೂರ ವಾರದವರೂ ನಡೆದು ತೋರಿಸಿದ ಸುಮಾರ್ಗವನ್ನು ಸಾಮರ್ಥ್ಯವುಳ್ಳ ಪ್ರತಿಯೊಬ್ಬ ಮನುಷ್ಯನೂ ಕೈಕೊಳ್ಳದ ವಿನಃ ಗತಿಯಿಲ್ಲವು. ನಮ್ಮೀ ವೀರಶೈವಸಮಾಜದ ವಿಕೆಯಿಂದ ಸತತ ಸಹಾಯಮಾಡಿದ ರಾವಬಹಾದ್ದೂರ ಸಿ. ಆಯ್. ಇ. ಅರಟಾಳದ ಅಜ್ಜನವರೂ ಆಯಾಯ ಕಾಲಕ್ಕೆ ಸಮಾಜದ ಉನ್ನತಿಯ ಕಾರ್ಯದಲ್ಲಿ ಮನಃಪೂರ್ವಕವಾಗಿ ತನುಮನಧನದಿಂದ ಸಹಾಯಮಾಡಿದ ಮತ್ತು ಸಹಾಯಮಾಡುವಂಥ ವಂಟಮುರಿ ರಾವಬಹಾದ್ದೂರ ಸರ್ ದೇಸಾಯರೂ ಬೆಂಗಳೂರ ರಾಜಸಭಾಭೂಷಣರಾದ ಸರ್ ಕೆ.ಪಿ. ಪುಟ್ಟಣ್ಣಶೆಟ್ಟರೂ ಇದ್ದಾರೆ. ಈ ತ್ರಿಮೂರ್ತಿಗಳನ್ನು ಮುಂದುಮಾಡಿಕೊಂಡು ಸಮಾಜದಲ್ಲಿ ಹುಟ್ಟಿರುವ ಕಲಹವನ್ನು ಶಾಂತಗೊಳಿಸಿಕೊಂಡು ಪರಸ್ಪರ ಪ್ರೀತಿಯನ್ನು ವೃದ್ಧಿಗೊಳ್ಳಿಸಬೇಕು. ಡಿಸಂಬರ್ ತಿಂಗಳು ತೀರ ಸಮೀಪಿಸಿರುವದರಿಂದ ಮಧ್ಯಸ್ಥರ ಏರ್ಪಾಟಿಗೆ ಬಿರ್‌ಕೂಲ್ ಅವಕಾಶವಿಲ್ಲದ ಕಾರಣ ಈ ಸಮಾಜದ ಹಿತವು ಪ್ರತಿಯೊಬ್ಬನ ಮನೆಯ ಹಿತವೆಂದು ಬಯಸಿ ಪರಸ್ಪರ ಐಕ್ಯವನ್ನು ಬೆಳಸಲು ತಕ್ಕ ವಿಚಾರವನ್ನೇ ಮಾಡಿಕೊಂಡು ಇತರ ಪರಮತೀಯರೇಕೆ ಇಡೀ ರಾಷ್ಟ್ರದವರೇ ಆಶ್ಚರ್ಯಪಡುವಂತೆ ನಮ್ಮ ನಮ್ಮ ಕಲಹವನ್ನು ಮರೆತು ಐಕ್ಯಭಾವವನ್ನು ಬೆಳಸಿ ಜಗತ್ತಿಗೆ ಮಾದರಿಯಾಗಿ ತೋರುವಂತೆ ಜಾಗ್ರತರಾಗಿ ಮಹಾಸಭೆಯ ಕಾರ್ಯವನ್ನು ಮನಮುಟ್ಟಿ ಮಾಡಬೇಕೆಂದು ನಮ್ರತೆಯಿಂದ ಬೇಡಿಕೊಳ್ಳುವ.

ಸಮಾಜಸೇವಕ
ಮಹಾಸಭಾಧಿರಸ್ಥಾಯಿಫಂಡಿನ ಮತ್ತು ಸ್ಟ್ಯಾಂಡಿಂಗ್
ಕಮಿಟಿಯ ಮೆಂಬರ್ ಬಸಲಿಂಗಪ್ಪಾ ಬಸಪ್ಪಾ ಮುತ್ತೂರ, ರಬಕವಿ.

ಕಾಮ.

ನಮ್ಮ ತಂದೆಗೆ ನಾವಾರುಜನ ಮಕ್ಕಳು. ನಾವು ಪ್ರತಿಯೊಬ್ಬರೂ, ಅತಿಶಯಪರಾಕ್ರಮಿಗಳು. ಅದರಲ್ಲಂತೂ ನಾನೇ ಜ್ಯೇಷ್ಠಪುತ್ರನು. ಆಂದಮೇಲೆ ನನ್ನ ಮಹತ್ವವು ಅತಿಶಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮ್ಮ ವಿಷಯ ಹೇಳಿಕೊಂಡಲ್ಲಿ ನಮ್ಮ ಆಟವು ನಿಂತುಹೋಗುತ್ತೆಂಬ ಆಲೋಚನೆಯಿಂದ ಇದುವರೆಗೂ ಗುಪ್ತವಾಗಿದ್ದೆವು. ಆದರೆ ನಮ್ಮ ತಮ್ಮನಾದ ಲೋಭಿಯು ಪರೋಪಕಾರಬುದ್ಧಿಯಿಂದ ತನ್ನ ನಿಜಸ್ಥಿತಿಯನ್ನು ತಮ್ಮಗಳ ಇದಿರಿನಲ್ಲಿ ತಿಳುಹಿಸಿರುವುದರಿಂದ ನಾವು ನಮ್ಮ ನಿಜಸ್ಥಿತಿಯನ್ನು ತಿಳುಹಿಸಲೇಬೇಕಾಯಿತು. ಎಂಥಾ ನೀಚರಲ್ಲಾದರೂ ಕಾಲಸ್ಥಿತಿಯಮೇಲೆ ಒಂದಾದರೂ ಸುಗುಣ ಹುಟ್ಟುತ್ತದೆಂಬ ಹಿರಿಯರ ಮಾತಿನಂತೆ ನಾವಾದರೂ ನಮ್ಮಿಂದ ಕೆಡುತ್ತಿರುವ ಮನುಷ್ಯರನ್ನು ಎಚ್ಚರಿಸಲು ಪ್ರಯತ್ನಮಾಡುತ್ತಿದ್ದೇವೆ. ಇದರಮೇಲೂ ಎಚ್ಚತ್ತುಕೊಳ್ಳದೆ ಹೋಗುವ ನಿಮ್ಮ ಕೇಡಿಗೆ ನಾವುಗಳು ಬಾಧ್ಯರಲ್ಲವೆಂದು ಮಾತ್ರ ದೃಢವಾಗಿ ಹೇಳುತ್ತೇವೆ. ನನ್ನ ಸ್ಥಿತಿಯು ಅತಿವಿಚಿತ್ರವಾದದ್ದು. ಪ್ರತಿಯೊಬ್ಬನಿಗೂ ಯುಗಕ್ಕಿಂತ ಯುಗವು ಹೀನವಾಗಿತೋರಿದರೆ ನನಗೆ ಮಾತ್ರ ಯುಗಕ್ಕಿಂತ ಯುಗವು ಉತ್ತಮವಾಗಿ ತೋರುತ್ತಿದೆ. ನನ್ನ ಪರಾಕ್ರಮವನ್ನು ತೋರಿಸದ ಯುಗವೇ ಇಲ್ಲ. ಆದರೆ ಕೃತಯುಗದಲ್ಲಿ ನನ್ನ ಆಟವು ಸ್ವಲ್ಪವೂ ನಡೆಯುತ್ತಿರಲಿಲ್ಲ. ರೇಣುಕಾದೇವಿಯು ಪ್ರಯತ್ನವಿಲ್ಲದೆ, ಮನೋವಿಕಾರವಿಲ್ಲದೆ, ಆಕಸ್ಮಿಕವಾಗಿ ಗಂಧರ್ವನನ್ನು ದೃಷ್ಟಿಸಿನೋಡಿದ ಮಾತ್ರದಿಂದ ಆಕೆಯ ಪಾತಿವ್ರತ್ಯವು ಭಂಗವಾಗಿ ಅದಕ್ಕೆ ತಕ್ಕ ಪ್ರಾಯಶ್ಚಿತ್ತದಿಂದ ಆಕೆಯು ಪರಿಶುದ್ಧಳಾಗಬೇಕಾಯಿತು. ಇದನ್ನು ನೋಡಿ ಈ ಯುಗದಲ್ಲಿ ನನ್ನ ಪರಾಕ್ರಮಕ್ಕೆ ಅವಕಾಶವಿಲ್ಲವೆಂದು ಗುಪ್ತವಾಗಿ ಕಾಲಕಳೆಯಬೇಕಾಯಿತು. ತ್ರೇತಾಯುಗದಲ್ಲಿ ನನ್ನ ತೇಜಸ್ಸು ಸ್ವಲ್ಪಮಟ್ಟಿಗೆ ಹೆಚ್ಚಿತು. ಅನ್ಯಪುರುಷರನ್ನು ಅನ್ಯಸ್ತ್ರೀಯರೂ, ಅನ್ಯಸ್ತ್ರೀಯರನ್ನು ಅನ್ಯಪುರುಷರೂ ಇಚ್ಛಿಸಿ ಅವರವರ ಒಪ್ಪಿಗೆಯಿಂದ ನನ್ನ ಸೇವಕರಾಗಲು ಅವಕಾಶದೊರೆಯಿತು. ಅಂಥವರಮೇಲೆ ನನ್ನ ಅಧಿಕಾರ ತೋರಿಸಲು ಪ್ರಾರಂಭಿಸಿದೆನು. ರಾವಣೇಶ್ವರನ ಅಂತಃಪುರದಲ್ಲಿ ಅತಿಶಯ ಸ್ತ್ರೀಯರನ್ನು ಕೂಡಿಸಿ ಅವನನ್ನು ಭೋಗಾಸಕ್ತನನ್ನಾಗಿಮಾಡಿ ಪೌಲಸ್ತ್ಯವಂಶೋತ್ಪನ್ನನೂ, ವೇದಮಾರ್ಗನಿಷ್ಠನೂ, ಮಹಾತಪಸ್ವಿಯೂ, ತ್ರಿಲೋಕಜಯಶಾಲಿಯೂ ಆದ ಆತನನ್ನು ನನ್ನ ದಾಸಾನುದಾಸನನ್ನಾಗಿಮಾಡಿಕೊಂಡೆನು. ಆದರೇನು? ಪರಸ್ಪರ ಒಪ್ಪಿಗೆಯಿಲ್ಲದೆ ಇದ್ದವರಲ್ಲಿ ನನ್ನ ಪರಾಕ್ರಮವೇನೂ ನಡೆಯುವ ಹಾಗಿರಲಿಲ್ಲ. ಸೀತಾದೇವಿಯ ಮೇಲಿನ ಭೋಗಾಸಕ್ತಿಯಿಂದ ಆ ರಾವಣೇಶ್ವರನು ಆಕೆಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡರೂ ಪಾತಿವ್ರತ್ಯಶಿರೋಮಣಿಯಾದ ಆ ದೇವಿಯು ಒಪ್ಪಿಗೆಯಿರಲಿಲ್ಲವಾದುದರಿಂದ ಆತನು ಸಕಲ ವೈಭವಗಳನ್ನೂ ಕಳೆದುಕೊಂಡು ನಾಶವನ್ನು ಹೊಂದಬೇಕಾಯಿತು. ಇದನ್ನು ನೋಡಿ ನನ್ನ ಅಧಿಕಾರವು ಈ ಯುಗದಲ್ಲೂ ಸಂಪೂರ್ಣನಡೆಯಲಾರದೆಂದು ಭಾವಿಸಿ ಮುಂದಿನ ಯುಗವನ್ನೇ ಕಾದಿದ್ದೆನು. ದ್ವಾಪರಯುಗವೂ ಪ್ರಾಪ್ತವಾಯಿತು. ನನ್ನ ಆಟವು ಹೆಚ್ಚಿತು. ನನ್ನ ತೇಜಸ್ಸಿಗೆ ಕಳೆಯೇರಿತು. ಭೋಗಗಳಿಗೆ ಪ್ರಬಲತ್ವವುಂಟಾಯಿತು. ಬೇರೆ, ಬೇರೆಯವರೇಕೆ? ಸ್ವಜನರಮೇಲೆಯೇ ಭೋಗಾಸಕ್ತಿಯು ಹುಟ್ಟಿತು. ದುರ್ಯೋಧನನು ದ್ರೌಪದಾದೇವಿಯನ್ನು ಅತ್ತಿಗೆಯೆಂಬ ಅಭಿಮಾನದಮೇಲಾದರೂ ಅಪೇಕ್ಷಿಸುವುದನ್ನು ಬಿಟ್ಟನೆ? ಕೂಡಿದ್ದ ಸಭೆಯಲ್ಲಿ ಸೀರೆಯನ್ನು ಸೆಳೆದು ಮಾನಭಂಗಮಾಡಲು ಹೇಸಿದನೆ? ಸಭಾಮಧ್ಯದಲ್ಲಿ ತನ್ನ ದರ್ಪದ ದೌರ್ಜನ್ಯದಿಂದ ಆ ಪತಿವ್ರತಾಶಿರೋಮಣಿಯನ್ನು ತನ್ನ ತೊಡೆಯಮೇಲೆ ಕೂಡಲು ಕರೆಯುವುದಕ್ಕೆ ನಾಚಿದನೆ? ಜಯದ್ರಥನು ವಾದಿಯಲ್ಲಿ ದ್ರೌಪದಾದೇವಿಯು ತನ್ನ ತಂಗಿಯಾಗಬೇಕೆಂಬುದನ್ನು ಸಹ ಲಕ್ಷೀಕರಿಸದೆ ಆಕೆಯನ್ನು ಅಪಹರಿಸಿಕೊಂಡು ಹೋಗಲು ಭಯಪಟ್ಟನೆ? ಇದೇ ಹೀಗಿರುವಾಗ ಇನ್ನು ಅನ್ಯನಾದ ಕೀಚಕನು ಇವರನ್ನು ಬಯಸಿದ್ದು ಆಶ್ಚರ್ಯವೇನು? ಇದನ್ನು ಯೋಚಿಸಿದರೆ ಆ ಯುಗದಲ್ಲಿ ನನ್ನ ಅಧಿಕಾರಪ್ರಾಬಲ್ಯವು ಹೇಗಿತ್ತೆಂಬುದು ವ್ಯಕ್ತವಾಗುತ್ತದೆ. ಆದರೇನು? ಇವರೆಲ್ಲಾ ಹೀಗೆ ಬಯಸಿದ್ದು ಬಯಲಭ್ರಾಂತಿಯಾಯಿತೇಹೊರತು ಇವರುಗಳ ಆಶೆಯೇನೂ ನೆರವೇರಲಿಲ್ಲ. ಈ ಕಾರಣದಿಂದಲೇ ಇವರುಗಳು ನಾಶವಾದದ್ದು. ಇದನ್ನು ನೋಡಿ ನನ್ನ ಅಧಿಕಾರವು ಇನ್ನೂ ಸಂಪೂರ್ಣವಾಗಿ ನೆರವೇರಲಿಲ್ಲವೆಂದು ಭಾವಿಸಿ ತುಂಬಾ ಅಸಮಾಧಾನಪಟ್ಟುಕೊಂಡು ಮುಂದಿನ ಯುಗವನ್ನೇ ಕಾದಿದ್ದೆನು. ಇದೂ ಬಂದಿತು. ಇದೇ ಕಲಿಯುಗ; ನನ್ನ ಪ್ರೀತಿಯುಗ; ನನ್ನ ಅಧಿಕಾರದಯುಗ. ಈಗಲಾದರೋ ನನ್ನ ವಿಷಯದಲ್ಲಿ ಯಾವ ವಾವಿವರಸೆಗಳೂ ಇಲ್ಲ, ಯಾವ ಜಾತಿಭೇದವೂ ಇಲ್ಲ; ಯಾವ ಕಟ್ಟಲೆ ನಿಯಮಗಳೂ ಇಲ್ಲ; ಯಾವ ದಂಡದೋಷಗಳೂ ಇಲ್ಲ. ಯಥೇಷ್ಟವಾಗಿ ನನ್ನ ಆಶೆಯು ನೆರವೇರುತ್ತದೆ. ನನ್ನ ಅಧಿಕಾರಕ್ಕೆ ಎಣೆಯೇ ಇಲ್ಲ. ಸರ್ವರೂ, ನನ್ನದಾಸಾನುದಾಸರೆ! ಸರ್ವರೂ ನನ್ನ ಆಜ್ಞಾನುವರ್ತಿಗಳೇ! ಇದಲ್ಲವೆ ನನ್ನ ತೇಜಸ್ಸಿನ ಬಲ? ನನ್ನ ಸಂಪೂರ್ಣ ಅಧಿಕಾರವನ್ನು ನಾನು ನಡಿಸಿಕೊಳ್ಳಲು ಬಹುಗುಪ್ತವಾಗಿ ಬಹುಕಾಲ ನಿರೀಕ್ಷಿಸಬೇಕಾಯಿತು. ಇಲ್ಲಿಗೇಸೋ ನನ್ನ ಇಷ್ಟ ಸಂಪೂರ್ಣವಾಗಿ ನೆರವೇರಿತು. ತುಂಬಾ ತೃಪ್ತನಾದೆನು, ಕೃತಕೃತ್ಯನಾದೆನು. ನಾನು ವಿಶ್ವಸ್ವರೂಪನು. ಹೇಗೆಂದರೆ, ಪ್ರಾಣಿಗಳ ಪಂಚೇಂದ್ರಿಯಗಳಲ್ಲೂ ನಾನೇ ವ್ಯಾಪ್ತನಾಗಿ ಕಣ್ಣಿನಿಂದ ಸಮಸ್ತವನ್ನೂ ನೋಡುವ, ಕಿವಿಯಿಂದ ಸಮಸ್ತ ವಿಷಯವನ್ನೂ ಕೇಳಿ ಗ್ರಹಿಸುವ, ಮೂಗಿನಿಂದ ಆಘ್ರಾಣಿಸುವ, ನಾಲಗೆಯಿಂದ ರುಚಿನೋಡುವ, ಚರ್ಮದಿಂದ ಸ್ಪರ್ಶಮಾಡುವ ಆಸೆಯನ್ನು ಹುಟ್ಟಿಸುತ್ತಾ ಪ್ರತಿಯೊಂದು ಆಶೆಯು ನೆರವೇರಿದ ಕೂಡಲೆ ಮತ್ತೊಂದು ಆಶೆಯನ್ನು ಹುಟ್ಟಿಸುತ್ತಾ ಪಂಚೇಂದ್ರಿಯಗಳಿಂದ ಸದಾ ಭೋಗಿಸಪಡುತ್ತಿರುವ ನಾನಲ್ಲದೆ ವಿಶ್ವರೂಪನು ಮತ್ತಾರುಂಟು? ನಾನಿದ್ದಲ್ಲಿ ತೃಪ್ತಿಯೇ ಇಲ್ಲ. ನನ್ನಿಂದ ಆಶೆಯನ್ನು ನೆರವೇರಿಸಿಕೊಂಡವರು ಮತ್ತೂ ಮತ್ತೂ ಆಶಾಬದ್ಧರಾಗುತ್ತಿರುವರೇ ಹೊರ್ತು ಮುಕ್ತರಾಗುವ ಸಂಭವವೇ ಇಲ್ಲ. ಆದರೇನು, ನನ್ನಿಂದ ಯಾರಿಗೂ ಸುಖದೊರೆಯಲಿಲ್ಲ. ಕಷ್ಟಪರಂಪರೆಗೆ ಈಡಾದರು. ಇಷ್ಟಾದರೂ ನನ್ನನ್ನು ಮಾತ್ರ ತಿರಸ್ಕಾರಮಾಡಲಿಲ್ಲ. ಎಂದಮೇಲೆ ನನ್ನ ಮಾಯಾಶಕ್ತಿಯು ಬಲವೆಂತಹುದೆಂಬುದನ್ನು ಯೋಚಿಸಿರಿ. ಒಂದಾನೊಂದು ಕಾಲದಲ್ಲಿ ನನ್ನ ಶಕ್ತಿಯನ್ನು ತ್ರಿಮೂರ್ತಿಗಳಲ್ಲಿ ತೋರಿಸಿದೆನು. ಅವರು ಸಹ ನನ್ನ ಅಧಿಕಾರಕ್ಕೆ ಮರುಳಾಗಿ, ನನಗೆ ಅಧೀನರಾಗಿ ಅನುಸೂಯಾದೇವಿಯ ಮನೆಯಲ್ಲಿ ಶಿಶುಗಳಾಗಿ ಪರಿಬೀಳಬೇಕಾಗಿ ಬಂದು ಕೊನೆಗೆ ಆಕೆಯ ಗರ್ಭವಾಸವನ್ನು ಮಾಡಿ ಆ ಪತಿವ್ರತಾಶಿರೋಮಣಿಗೆ ಪುತ್ರರತ್ನರಾಗಿ ಜನಿಸಬೇಕಾಯಿತು. ಸಾಕ್ಷಾತ್ ದೇವೇಂದ್ರನಲ್ಲಿ ನನ್ನ ಅಧಿಕಾರವನ್ನು ತೋರಿಸಿದೆನು. ಆತನೂ ನನಗೆ ಅಧೀನನಾಗಿ ಮೈಯೆಲ್ಲಾ ಯೋನಿಮಯನಾಗಿ ವ್ಯಥೆಗೀಡಾದನು. ಎಂದಮೇಲೆ ಇನ್ನುಳಿದವರ ಗತಿಯೇನು? ಪ್ರತಿಯೊಬ್ಬನ ಸ್ಥಿತಿಯನ್ನು ವರ್ಣಿಸುತ್ತಾ ಹೋದರೆ ನಿಮಗಾದರೂ ಬೇಸರವಾದೀತು. ಒಟ್ಟಿನಲ್ಲಿ ನನ್ನ ಅಧೀನರಾದವರು ಯಾರೂ ನಾಶವಾಗದೆ ಉಳಿದಿಲ್ಲ. ಇಹಪರಸೌಖ್ಯನಾಶಕ್ಕೆ ನಾನೇ ಮೂಲಕಾರಣನು. ನನಗಧೀನರಾಗದ ರಾಮಚಂದ್ರಸ್ವಾಮಿಯು ಶೂರ್ಪನಖಿಯ ಮಾನಭಂಗಮಾಡಿ ಅದರಿಂದ ಮೊದಮೊದಲು ಕಷ್ಟಪರಂಪರೆಗೆ ಸಿಕ್ಕಿದರೂ ಕೊನೆಗೆ ಅಸಾಧ್ಯಕಾರ್ಯಸಾಧಕನನ್ನು ಮಾಡಿ ಭಗವದಂಶಪುರುಷನಾದನು; ಸಕಲ ಲೋಕಪೂಜ್ಯನಾದನು. ಅರ್ಜುನನು ನನ್ನ ಅಧಿಕಾರಕ್ಕೆ ಒಳಪಡದೆ ಊರ್ವಶಿಯಿಂದ ಶಾಪಗ್ರಸ್ತನಾದರೂ ಅಜ್ಞಾತವಾಸದಿಂದ ಮುಕ್ತನಾಗಲು ಯೋಗ್ಯನಾಗಿ ಲೋಕಪೂಜ್ಯನಾದನು. ಹರಿಶ್ಚಂದ್ರಮಹಾರಾಜನು ನನ್ನ ಅಧಿಕಾರಕ್ಕೆ ಒಳಪಡದೆ ಚಂಡಾಲಸ್ತ್ರೀಯರನ್ನು ತಿರಸ್ಕರಿಸಿದುದರಿಂದ ವಿಶ್ವಾಮಿತ್ರಋಷಿಯ ಕೋಪಕ್ಕೆ ಪಾತ್ರನಾಗಿ ಅನೇಕ ಕಷ್ಟಪರಂಪರೆಗೀಡಾದರೂ ಕೊನೆಗೆ ಸಮಸ್ತ ದೇವತಾನುಗ್ರಹಕ್ಕೆ ಪಾತ್ರನಾಗಿ ಆಚಂದ್ರಾರ್ಕಕೀರ್ತಿವಂತನಾದನು. ಹೀಗೆಯೇ ನನ್ನಿಂದ ಆಗುವ ಕೇಡಿಗೂ, ನನ್ನ ಅಧೀನರಾಗದವರಿಗೆ ಉಂಟಾಗಿರುವ ಮೇಲ್ಮೆಗೂ ಉದಾಹರಣೆಗಳನ್ನು ಕೊಡುತ್ತಾ ಹೋದರೆ ಅದಕ್ಕೆ ಕೊನೆಮೊದಲೇ ಇಲ್ಲವಾಗುತ್ತದೆ. ಇದನ್ನರಿತು ನೀವು ಜಾಗ್ರತರಾಗಿರಿ. ನನ್ನ ಅಧೀನರಾಗದೆ ಸುಖಶಾಲಿಗಳಾಗಿರಿ. ನನಗಿನ್ನು ಅಪ್ಪಣೆಕೊಡಿರಿ. ನಿಮಗೆಲ್ಲಾ ಮಂಗಳವಾಗಲಿ.

ಟಿ. ಎಸ್. ಶಂಕರಯ್ಯ, ಅಸಿಸ್ಟೆಂಟ್ ಮಾಸ್ಟರ್,
ಇಕ್ಕ. ಕಂ. ಮಿಡಲ್‌ಸ್ಕೂಲ್ ಅಸಗೋಡು.

ಬಸವೇಶ್ವರನ ಕೃತಿಗಳು.

(ಲೇಖಕ—ಶ್ರೀಮದ್ದಕ್ಷಿಣಕಾಶೀ ನಿಜಸಿಂಹಾಸನಾಧೀಶ ಜಗದಾಚಾರ್ಯ ರಾಜಗುರು ಸ್ವಾಮಿ ವಿರೂಪಾಕ್ಷಒಡೆಯರು.)

ಭರತಖಂಡದಲ್ಲಿ ಮಾತ್ರವಲ್ಲದೆ ಸಮಸ್ತ ಪೃಥ್ವಿಯಲ್ಲಿಯೂ ವೈದಿಕಧರ್ಮಕ್ಕಿಂತ ಪ್ರಾಚೀನಧರ್ಮವು ಮತ್ತೊಂದೂ ಇಲ್ಲವೆಂಬುವಲ್ಲಿ ಪಾಶ್ಚಾತ್ಯ, ಪೌರ್ವಾತ್ಯರ ಏಕಮತವಿದೆ. ಆ ವೈದಿಕಧರ್ಮದಲ್ಲಿ ಕಾಲಗತಿಯನುಸಾರವಾಗಿ ಅನೇಕ ಭಿನ್ನಭಿನ್ನ ಪಂಗಡಗಳಾಗಿ ಅವುಗಳೇ ಬೇರೊಂದು ನಾಮಗಳನ್ನು ಧರಿಸುತ್ತಾ ಬಂದಿರುವವು. ಅವುಗಳಲ್ಲೊಂದಾದ ಮತ್ತು ಈ ಲೇಖದಲ್ಲಿ ತೋರಿಸಿರುವ "ಲಿಂಗಾಂಗಿಧರ್ಮ" ವೆಂಬುದರ ವಿಷಯಕ್ಕೆ ಅನೇಕ ಆಧುನಿಕ ಪಂಡಿತರು ಭಿನ್ನಭಿನ್ನಾಭಿಪ್ರಾಯಗಳನ್ನು ಆಗಾಗ್ಗೆ ಪ್ರಕಟಿಸುತ್ತಾ ಬಂದಿರುವರು. ಅವರಲ್ಲೂ ಮಹಾರಾಷ್ಟ್ರೀಯರ ಕಟಾಕ್ಷವೇ ಈ ಧರ್ಮದ ಮೇಲೆ ಬಹಳ ಇದ್ದಂತೆ ಕಾಣುತ್ತದೆ. ಆದರೆ ನಾನು ಆರುತಿಂಗಳ ಹಿಂದೆಯೇ "ಲಿಂಗಾಂಗಿಧರ್ಮ ಮತ್ತು ಗೀತಾರಹಸ್ಯಾದಿಗ್ರಂಥಗಳು" ಎಂಬ ಮಹಾರಾಷ್ಟ್ರೀಯರು ತಿರಸ್ಕಾರಬುದ್ಧಿಯಿಂದ ಬರೆದ ಎಷ್ಟೋ ಗ್ರಂಥಗಳಲ್ಲಿಯ ವಾಕ್ಯಗಳನ್ನುದಹರಿಸಿ ಈ ದೊಡ್ಡದಾದ ಲೇಖವನ್ನು "ಧರ್ಮತರಂಗಿಣಿಯು" ಸಂಪಾದಕರ ಕಡೆಗೆ ಕಳಿಸಿದ್ದೆನು. ಅವರು ಅದನ್ನು ಇದುವರೆಗೂ ಪ್ರಕಟಿಸಿದಂತೆ ಕಾಣಲಿಲ್ಲ.

ಇನ್ನು ಮಹಾರಾಷ್ಟ್ರೀಯರ ಅಭಿಪ್ರಾಯವೇನೆಂದರೆ—"ಲಿಂಗಾಯತಧರ್ಮವು ಬಸವಾದಿಗಳಿಂದ ಹುಟ್ಟಿದ್ದು. ಇದೊಂದು ಆಡಾಣೆರಾಮದಾಸ ಮೊದಲಾದವರಂತೆ ನಿರಾಧಾರವಾದ ಭಕ್ತಿಪಂಥವಿರುತ್ತದಲ್ಲದೆ ಇದರಲ್ಲಿ ಯಾವ ತತ್ವಸಿದ್ಧಾಂತವೂ ಇರದೆ ಸಾಮಾನ್ಯವಾದದ್ದೆಂದು" ನಿಶ್ಚಿತಮಾಡಿರುವರು. ಇವರ ಈ ಅಜ್ಞಸ್ಥಿತಿಯನ್ನು ಹೋಗಲಾಡಿಸಲೋಸುಗ ಮೇಲಿಂದ ಮೇಲೆ ಮಹತ್ವವಾದ ಲೇಖಗಳನ್ನು ಬರೆದು ಅವರನ್ನು ಜಾಗರೂಕರನ್ನಾಗಿ ಮಾಡುವದು ಲಿಂಗಾಂಗಿಯಾದ ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆ. ಸುಮ್ಮನೆ ಬಿಟ್ಟಲ್ಲಿ ಮುಂದೆ ಮನಬಂದಂತೆ ಬರೆಯುತ್ತಾಹೋಗುವರು. ಇದರಿಂದ ಮುಂದೆ ಧರ್ಮೋನ್ನತಿಗೆ ಬಹಳ ವಿಘ್ನಪ್ರಸಂಗಬರುವದು. ಈ ಲಿಂಗಾಂಗಿ ಧರ್ಮಸುಧಾರಕನು ಬಸವೇಶನು. ಇದು ವೇದಾಗಮಗಳಿಂದ ಬಂದ ವೈದಿಕಧರ್ಮವಿರುವದು. ಉಪನಿಷತ್‌ಕಾಲದಲ್ಲಿ ಈ ಧರ್ಮಪ್ರಚಾರವು ವಿಶೇಷವಾಗಿ ನಡೆದು ಪೌರಾಣಿಕಕಾಲದಿಂದ ಶಂಕರ, ರಾಮಾನುಜರ ಕಾಲಗಳವರೆಗೆ ಪರಧರ್ಮಗಳ ಆಘಾತದಿಂದ ದುರ್ದಶೆಯನ್ನು ಹೊಂದುತ್ತ ನಡೆದು 1050 ರ ಸುಮಾರಕ್ಕೆ ಪ್ರತಿಭಾಶಾಲಿಗಳೂ, ತತ್ವಜ್ಞಶಿರೋಮಣಿಗಳೂ ಆದ ಶ್ರೀಕರಾದಿ ಮಹಾತ್ಮರು ಬ್ರಹ್ಮಸೂತ್ರಾದಿಗಳಿಗೆ ಭಾಷ್ಯಗಳನ್ನು ಬರೆದು ಲಿಂಗಾಂಗಿಧರ್ಮದ ತತ್ವಸಿದ್ಧಾಂತವನ್ನೂ ಉದಾತ್ತವಿಚಾರವನ್ನೂ ಜಗತ್ತಿಗೆ ತೋರ್ಪಡಿಸಿದರು. ಆದರೂ ಧರ್ಮೋನ್ನತಿಗೆ ಸರಿಯಾದ ಅನುಕೂಲವು ಒದಗದ್ದರಿಂದ ಶ್ರೀಕರಾದ್ಯಾಚಾರ್ಯರಾಗಿ ಹೋದ ನೂರುವರ್ಷಗಳ ಸುಮಾರಕ್ಕೆ ರಾಜಕೀಯಸತ್ತಾದಿಂದ ಕೂಡಿದ ಬಸವೇಶ್ವರನೆಂಬ ಮಹಾಪುರುಷನ ಉದಯವಾಯಿತು. ಲಿಂಗಾಂಗಿಧರ್ಮದ ಶ್ರೇಷ್ಠತ್ವವನ್ನು ತೋರಿಸುವದಕ್ಕಾಗಿಯೇ ಈತನು ಆಲಿಂಗಿಬ್ರಾಹ್ಮಣರಲ್ಲಿ ಜನ್ಮವೆಂತಾಳಿ ಮುಂದೆ ಲಿಂಗಧಾರಿಯಾದನೆಂಬ ಐತಿಹಾಸಿಕವೃತ್ತಾಂತವು ಲಿಂಗಾಂಗಿಗಳ ಗೌರವವನ್ನು ದ್ಯೋತಿಸುತ್ತಿದೆ. ಉಚ್ಚಕುಲಶೀಲಗಳಿಂದ ಕೂಡಿದೀಬಸವೇಶ್ವರನು ತನ್ನ ಪ್ರಭಾವದಿಂದಲೂ ಉತ್ಸಾಹ, ದೂರದರ್ಶಿತ್ವ, ಸಹನಶೀಲತ್ವ, ಶುದ್ಧಾಚಾರವಿಚಾರಗಳಿಂದಲೂ, ರಾಜನೀತಿ, ಧರ್ಮನೀತಿ, ವ್ಯಾವಹಾರಿಕ ಬುದ್ಧಿಕುಶಲತೆಯಿಂದಲೂ, ಸ್ವದೇಶಾಭಿಮಾನದಿಂದಲೂ ಆಗಿನಕಾಲದ ಬಿಜ್ಜಳರಾಜನ ಮಂತ್ರಿಪದವಂ ಸಂಪಾದಿಸಿ ಲಿಂಗಾಂಗಿಧರ್ಮವನ್ನು ವಿಶೇಷ ಪ್ರಚಾರಮಾಡಿ ಬಹಳ ಉನ್ನತಿಯಲ್ಲಿ ತಂದನೆಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ರಾಜನು ಜೈನನಿದ್ದಾಗ್ಯೂ ಅವನನ್ನು ಲಕ್ಷೀಕರಿಸದೇ ಏನೆಂದು ಲಿಂಗಾಂಗಿಧರ್ಮದುನ್ನತಿಮಾಡಿ ತೋರಿಸಿದನೋ ಆದರಿಂದ ಧರ್ಮದಲ್ಲೆಲ್ಲರೂ ಅಂದರೆ ರಾಜನಿಂದಹಿಡಿದು ಒಬ್ಬ ಚಂಡಾಲನವರೆಗೆಲ್ಲರೂ ಸ್ವತಂತ್ರರೂ ಸಮಾನಹಕ್ಕುದಾರರೂ ಎಂಬುವದನ್ನು ಕಿತ್ತಿಹಾಕಿ ಕೊಟ್ಟನು. ಅದೇ ಕಿತ್ತಿಯನ್ನೇ ನಮ್ಮ ಬ್ರಿಟಿಷ ಸಾರ್ವಭೌಮರು ಅಂಗೀಕರಿಸಿದ್ದರಿಂದಲೇ ಇವರ ರಾಜ್ಯವು ಬಹುಕಾಲದವರೆಗೆ ನಡೆಯುವ ಸಂಭವವುಂಟಾಗಿ ಬಹುಸುಖಕರವಾಗಿರುವದು. ಆದರೆ ಧರ್ಮಕ್ಕೆ ಸರಕಾರವು ಬಾಧ್ಯವಲ್ಲವೆಂಬ ಕಾಯಿದೆಯನ್ನು ತೋರಿಸಿದವರಲ್ಲಿ ಬಸವೇಶನೇ ಮೊದಲನೆಯವನು. ದುಡ್ಡಿನಾತೆಗಾಗಿ ಮಂತ್ರಿಪದವನ್ನು ವಹಿಸಿ ಹ್ಯಾಗೆ ಹಾಜಿ, ಹಾಜಿ, ಎಂದು ಕಾಲಕಳೆದು ಹೋಗುವರೋ ಮತ್ತು ಶುಕ್ರನೀತಿಯಲ್ಲಿ "ಯಾವ ಮಂತ್ರಿಗೆ ರಾಜನು ಹೆದರುವದಿಲ್ಲವೋ ಅರ್ಥಾತ್ ರಾಜನಲ್ಲಿ ತನ್ನ ಗಾಂಭೀರ್ಯವನ್ನಿಟ್ಟುಕೊಂಡಿಲ್ಲವೋ ಆ ಮಂತ್ರಿಯು ಕೇವಲ ವಸ್ತ್ರಾದಿಗಳಿಂದ ಅಲಂಕೃತಳಾದ ಸ್ತ್ರೀಯಳ ದಾಸಿಯೆಂದು" ಹೇಳುವಂತೆ ಬಸವೇಶನು ರಾಜನಿಗೆ ಹೆದರಿ ರಾಜ್ಯಭಾರವನ್ನೆಂದೂ ಮಾಡಲಿಲ್ಲ. ಇದಲ್ಲದೆ "ಹಿತಂರಾಜ್ಞಃ ಪ್ರಜಾಹಿತಂ ಯಲ್ಲೋಕಾನಾಂ ತನ್ನ ಕಾರಯೇತ್" ಎಂಬೀ ಶುಕ್ರನೀತಿವಚನದಂತೆಯೇ ಪ್ರಜೆಗಳಿಗೆ ಅಹಿತವಾದ ಕಾರ್ಯವನ್ನ ಅವನೆಂದೂ ಮಾಡಲಿಲ್ಲ. ಯಾಕೆಂದರೆ, ಅವನ ಚರಿತ್ರದಲ್ಲೆಲ್ಲಿಯೂ ಪ್ರಜೆಗಳ ಅಹಿತಕಾರ್ಯದ ವರ್ಣನೆ ಇಲ್ಲ. ಅಲ್ಲದೆ ಅವನು ಪ್ರಜಾಹಿತಕಾರ್ಯಗಳಲ್ಲಿ ಕೇವಲ ರಾಜಾಜ್ಞೆಯನ್ನು ಸ್ವಪ್ನದಲ್ಲಿಯೂ ಅಪೇಕ್ಷಿಸಿರಲಿಲ್ಲ. ಇದರಿಂದವನು "ಪ್ರಜಾಪ್ರತಿನಿಧಿಸಭೆ" ಯಿಂದಲೇ ರಾಜ್ಯಕಾರ್ಯನಡೆಯಬೇಕೆಂಬ ಅಭಿಪ್ರಾಯವುಳ್ಳವನಿದ್ದನೆಂದು ತಿಳಿಯಬರುತ್ತದೆ. ಅರ್ಥಾತ್ ಪೌರಾಣಿಕಕಾಲದಿಂದ ಲುಪ್ತವಾದ ಪ್ರಜಾಸಂಮತಿಪೂರ್ವಕ ರಾಜ್ಯಭಾರವನ್ನು ಪುನಃ ಶುರುಮಾಡಿಕೊಟ್ಟನು, ಮತ್ತು ಸಂಭಾಜಿಯು ಸತ್ತನಂತರ ನಾವೇ ಗಾದೀವಾಲೀಕರೆಂದು ಹೇಳಿ ರಾಜ್ಯವಾಳಿದ ರಾಜದ್ರೋಹಿಗಳಾದ ದುಷ್ಟಸ್ವಾರ್ಥಿ ಪೇಶ್ವೆಯರಂತೆ ಬಸವೇಶನು ತಾನೇ ರಾಜನಾಗಬೇಕೆಂಬಪೇಕ್ಷೆಯುಳ್ಳ ರಾಜದ್ರೋಹಿಯಾಗಿರಲಿಲ್ಲ. ರಾಜ್ಯದ ಶೂನ್ಯಾವಸ್ಥೆಗೆ ಶಾಸಕನಾದ ರಾಜಪೋರ್ವನು ಬೇಕೆಂತಲೇ ಹೇಳುವ ರಾಜಾಧಿಕಾರಿಯು ಹಾಗಿರದಿದ್ದ ಪಕ್ಷದಲ್ಲಿ ಬಿಜ್ಜಳನು ಸತ್ತನೆಂಬ ವಾರ್ತೆಯನ್ನು ಕೇಳಿ ತಾನೇ ರಾಜನೆನಿಸಿಕೊಳ್ಳಲು ಪ್ರಯತ್ನಮಾಡುತ್ತಿದ್ದನು. ಆದರೆ ಅದು ಅಯೋಗ್ಯವೆಂದು ತಿಳಿದೇ ಮುಂದೆ ಯೋಗ್ಯರಾಜನಿದ್ದರಿಂದ ರಾಜ್ಯದಲ್ಲಿ ಅಶಾಂತತೆಯುಂಟಾದೀತೆಂದು ತಿಳಿದು ಮಂತ್ರಿಪದವನ್ನು ತ್ಯಾಗಮಾಡಿ ಹೊರಟುಹೋದನು. ಕೆರೆ, ಭಾವಿ, ಅನ್ನಸತ್ರ, ದೇವಾಲಯ, ವಿದ್ಯಾಲಯ, ಆಶ್ರಮ, ಮಠಮಾನ್ಯಾದಿ ಕಾರ್ಯ

ಗಳನ್ನು ವಿಪುಲವಾಗಿ ರಚಿಸಿ ಹಾಗೂ ಪರರಾಷ್ಟ್ರದ ವಿಘಾತವೆಂದೂ ಬಿಜ್ಜಳನ ರಾಜ್ಯಕ್ಕಾಗಬಾರದೆಂದು ಸೈನ್ಯರಚನಾ ಮೊದಲಾದದ್ದನ್ನು ಬಹು ದಕ್ಷತೆಯಿಂದ ಮಾಡಿದನೆಂಬುವದಕ್ಕೆ ಅವನ ಮಂತ್ರಿಪದಕಾಲದಲ್ಲಿ ಯಾವದೊಂದು ಪರರಾಷ್ಟ್ರದ ಸಂಗಡ ಬಿಜ್ಜಳನ ಯುದ್ಧವಾಗದಿದ್ದದ್ದೇ ಇದಕ್ಕೆ ಸಾಕ್ಷಿಯು. ಇದಲ್ಲದೆ ಒಂದುಲಕ್ಷದ ತೊಂಭತ್ತಾರುಸಾವಿರ ಮಹಾಯೋಧರುಗಳಾದ ಜಂಗಮರನ್ನು ಧರ್ಮಸಂರಕ್ಷಣೆಗಾಗಿಯೂ, ರಾಜ್ಯಸಂರಕ್ಷಣೆಗಾಗಿಯೂ ಗುಪ್ತರೀತಿಯಿಂದ ಕಾದುಕೊಂಡಿದ್ದನು. ಈ ಯೋಧರೆಲ್ಲಾ ಬಹುತೇಕ ಸನ್ಯಾಸಿಗಳು ಇವರು ನಿರಭಿಲಾಷಿಗಳಾಗಿದ್ದರು. ಇದರಿಂದ ಅವನ ರಾಜನೀತಿಕುಶಲತೆಯು ವ್ಯಕ್ತವಾಗುವದು. ರಾಷ್ಟ್ರದಲ್ಲಿ ಸರ್ವರೂ ಉದ್ಯೋಗಿಗಳಾಗಬೇಕೆಂಬುವದೇ ಅವನ ಅತುರ್ಲಿತ ಪ್ರಯತ್ನವು. ಅವನ ಕಾಯಕವಾಕ್ಯವನ್ನುಗಳೆಲ್ಲಾ ಸ್ವದೇಶಾಭಿಮಾನದಿಂದ ತುಂಬಿತುಳುಕುತ್ತವೆ. ಸಾಂಸಾರಿಕಸುಖೋತ್ತರದನಕ್ಕೆ ಧರ್ಮವೇ ಮೂಲವಾದದ್ದೆಂದು ಅವನು ಬಾಹ್ಯಾಂತರದಲ್ಲಿ ಭಾವಿಸಿ ಧರ್ಮಚಳವಳಿಯನ್ನೇ ಮೊದಲು ಎಬ್ಬಿಸಿದನು. ಆಗಿನಕಾಲದ ಕೆಲವು ದುಷ್ಟಸ್ವಾರ್ಥಿಗಳು ತಮ್ಮ ಸ್ವಾರ್ಥದಲ್ಲಿ ಮದಾಂಧರಾಗಿ ಅವನ ಅಂತರಿಕ ತತ್ವವನ್ನು ತಿಳಿಯದೆ ಅವನ ದೇಶೋನ್ನತಿಯ ಕಾರ್ಯದಲ್ಲಿ ಬಹುವಿಘ್ನಗಳನ್ನು ಮಾಡಿದರು. ಆದರೂ ಅವನು ಮಹಾಸಹಾನ್ಯಗ್ರಹಿಯಾದ್ದರಿಂದ ಅವನ ಜಯಭೇರಿಯೇ ದಿಗಂತದವರೆಗೂ ಮೊಳಗಿತು. ರಾಷ್ಟ್ರಕಾರ್ಯಸುಧಾರಣೆಗಾಗಿ ಅವನು ಮೊದಲು ಧರ್ಮಸುಧಾರಕನಂತೆ ವ್ಯವಹರಿಸಿ ಅವನಿಗೆ "ಧರ್ಮಸತ್ತಾ" "ರಾಜ್ಯಸತ್ತಾ" ಗಳೆರಡೂ ಅವನಗಿಸಿದ್ದರಿಂದ ಎರಡನ್ನೂ ಸಾಧಿಸುತ್ತ ಹೋದನು. ಆದರೆ "ರಾಮದಾಸಾದಿ" ಸಾಮಾನ್ಯರಿಗೆ ರಾಜಸತ್ತೆಯ ಸಾಮರ್ಥ್ಯವಿಲ್ಲದ್ದರಿಂದ "ಮುಖ್ಯ ಹರಿಕಥಾನಿರೂಪಣ ದುಸರೇತೆ ರಾಜಕಾರಣ" ಎಂದು ಬರೇಡುಮುತಿಯನ್ನು ಬಾರಿಸುತ್ತಾ ರಾಜಕೀಯ ವಿಚಾರವನ್ನು ಧರ್ಮನಿಮಿತ್ತದಿಂದ ಕಪಟವೇಷಿಗಳಾಗಿ ಬೋಧಿಸಿದರು. ಆದರೆ "ಸುದುಸದಾಶಾಪಟ್ಯದಾಕ್ಷೀಹರಂ" ಎಂಬ ನೀತಿವಾಕ್ಯವನ್ನನುಸರಿಸಿ ಬಸವೇಶನು ಕಪಟ್ಯವಂಧರಿಸದೆ ನಿರ್ಭೀತನಾಗಿ ಧರ್ಮನೀತಿ, ರಾಜನೀತಿಗಳ ಕೀರ್ತಿಗಳನ್ನು ಬಹಿರಂಗದಲ್ಲಿ ಸ್ವತಃ ಆಚರಿಸಿ ತೋರಿಸಿದನು. ರಾಷ್ಟ್ರದ ಐಕ್ಯಕ್ಕೆ ಧರ್ಮವೇ ಮೂಲಕಾರಣವೆಂದು ತಿಳಿದು ಧರ್ಮದಚಳವಳಿಮಾಡಿದನು. ಇತರರಾಗಿ ದೇಶಾಭಿಮಾನದಿಂದ ರಾಷ್ಟ್ರದಲ್ಲಿ ಒಂದೇ ಧರ್ಮವಾಗಿ ಆ ರಾಷ್ಟ್ರದ ದ್ರವ್ಯವು ಎರಡನೇ ರಾಷ್ಟ್ರಕ್ಕೆ ಹೋಗಕೂಡದೆಂದು ಅರ್ಥಾತ್ ಕರ್ನಾಟಕಪ್ರಾಂತದ ದ್ರವ್ಯವು ಮಹಾರಾಷ್ಟ್ರಕ್ಕೆ ಹೋಗಬಾರದೆಂದು ಭಾವಿಸಿ ದಲ್ಲಿ ಆ ಕರ್ನಾಟಕವಾಸಿಗಳಿಗೆ ಬೇಕಾದ ಪದಾರ್ಥಗಳನ್ನು ತನ್ನ ರಾಷ್ಟ್ರದಲ್ಲಿಯೇ ತಯಾರಿಸಲಿಕ್ಕೆ ಜನರು ಉದ್ಯುಕ್ತರಾಗಿರೆಂದು ಹೇಳಿ ಅವರಿಗೆ ಬೇಕಾದ ಪ್ರೋತ್ಸಾಹ ಕೊಡಲು ಸಿದ್ಧನಾದನು. ಇದರಿಂದ ಪರರಾಷ್ಟ್ರದ ಅಪೇಕ್ಷೆಯು ಉಳಿಯದೆ ಹೋಗಿ ರಾಷ್ಟ್ರದಲ್ಲೆಲ್ಲರೂ ಸಮಯಾನುಸಾರ ಪದಾರ್ಥಗಳ ಅನುಕೂಲತೆಯದೆಸೆಯಿಂದ ಚಂಡಾಲನನ್ನು ಸಹ ಬಂಧುವಿನಂತೆಭಾವಿಸಲಾರಂಭವಮಾಡಬೇಕಾಯಿತು. ಇದಕ್ಕಾಗಿ ಬಸವೇಶನು ತಾನೇ ಮೊದಲು ಚಂಡಾಲನು ತನ್ನ ಬಂಧುವೆಂದು ಲಿಂಗಧಾರಣವೆಂಬ ಧರ್ಮನಿಮಿತ್ತವಂ ಬಾಹ್ಯದಲ್ಲಿ ತೋರಿಸಿ ಅವನನ್ನು ತನ್ನಲ್ಲಾ ವರಿಸಿಕೊಂಡನು. ಆ ಲಿಂಗಧಾರಣ ಮತ್ತು ಸದ್ಬೋಧದಿಂದವನನ್ನು ಪವಿತ್ರಾಚರಣೆಗೆ ಹಚ್ಚಿ ಈ ಚಂಡಾಲನು ಈಶ್ವರಪುತ್ರನಾಗಿ ದೇಶಬಾಂಧವನಾದ್ದರಿಂದ ಇವನ ಬಂಧುತ್ವವು ಚಿರಕಾಲ ಉಳಿಯಬೇಕೆಂಬುವ ಉದಾಹರಣೆಗಾಗಿ ಶ್ರೇಷ್ಠ ಬ್ರಾಹ್ಮಣರೆಂದು ಹೇಳಿಸಿಕೊಳ್ಳುವವರಲ್ಲಿಯೇ ಶರೀರಸಂಬಂಧವನ್ನಾಡಿಸಿದನು. ಅವನೇ ಹರಳಯ್ಯನೆಂಬ ಮಾದಿಗನು ಮತ್ತು ಮಧುವಯ್ಯನೆಂಬ ಬ್ರಾಹ್ಮಣನು. ಈ ಬ್ರಾಹ್ಮಣನ ಮಗಳನ್ನು ಹರಳಯ್ಯನ ಮಗನಿಗೆ ಕೊಡಿಸಿದನು. ಆಹಾ! ಬಸವೇಶನ ವಿಶ್ವಾತ್ಮ, ವಿಶ್ವಸ್ವರೂಪ, ವಿಶ್ವಕುಟುಂಬತ್ವಕ್ಕೆ ಬೆಲೆ ಇಲ್ಲ. ಯಾವ ಈಶ್ವರನ ಪುತ್ರರಿಗೆ ಚಂಡಾಲರೆಂದು ಹೆಸರಿಟ್ಟು ಸ್ವಾರ್ಥಿಗಳು ಅವರನ್ನು ಕಂಡಾಕ್ಷಣಕ್ಕೆ ಸಚೈಲಸ್ನಾನವಂ ಮಾಡುತ್ತಿದ್ದರೋ ಅಂಥಾ ಸ್ವಾರ್ಥವಿಚಾರವನ್ನು ನಿರ್ಮೂಲಿಸಿ ಜಗತ್ಕಲ್ಯಾಣಮಾಡಿದ ಬಸವೇಶನಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಸ್ವಲ್ಪವೇ ಸರಿ. ಈಗ ಬಾಸು, ಪಟೇಲರುಗಳು ಕೌನ್ಸಿಲದಲ್ಲಿ ತಂದಿರುವ ವೈವಾಹಿಕಬಿಲ್ಲುಗಳಿಂದ ಅವರು ಒಳ್ಳೇ ಉದಾತ್ತವಿಚಾರದಿಂದ ಜನರಲ್ಲಿ ಈ ಬಿಲ್ಲುಗಳನ್ನು ಹೊಸವಾಗಿ ಬೋಧಮಾಡಿರುವರೆಂಬ ಗೌರವಕ್ಕಾಸ್ಪದರಾಗಿರುವರು. ಆದರೆ ಈವತ್ತಿಗೆ 700 ವರ್ಷದ ಹಿಂದೆಯೇ ಬಸವೇಶನು ಇಂಥಾ ರಾಷ್ಟ್ರೈಕ್ಯಹಿತಕರ ಕೃತಿಗಳನ್ನು ಸಹ ಪರಿತಿಯಿಂದ ಆಚರಣೆಯಲ್ಲಿ ತಂದು ತೋರಿಸಿ ಜಗತ್ತಿಗುದಾಹರಣೆ ಮಾಡಿಟ್ಟಿರುವನು.

ರಾಮಕೃಷ್ಣಾದಿಗಳು ವಿಶ್ವಕುಟುಂಬಿಗಳಿದ್ದರೆಂದು ಹೇಳುವ ಕಥೆಗಳು ಭಾಗವತ, ಭಗವದ್ಗೀತಾದಿಗಳಲ್ಲಿಯೇ ಅಡಗಿಹೋದವು. ಆದರೆ ಅವರು ಕೃತಿಯಿಂದ ಇಂಥಾ ಲೋಕೋತ್ತರವಾದ ಉದಾಹರಣೆಗಳನ್ನಾಚರಿಸಿ ತೋರಿಸಿದ್ದಲ್ಲಿಯೂ ಕಂಡುಬರುವದಿಲ್ಲ. ಅವರು ಕೇವಲ ಬಾಯಿಮಾತಿನ ವೇದಾಂತಿಗಳು ಮತ್ತು ಬ್ರಾಹ್ಮಣರಪೋಷಕರಾದರು. ಇದನ್ನೆಲ್ಲಾ ಮರೆತು ಆಧುನಿಕ ಕೆಲವು ದುಷ್ಟರು ಪರಧರ್ಮವೆಂಬ ಮಾತ್ಸರ್ಯ ದೆಸೆಯಿಂದ ಗ್ರಸ್ತರಾಗಿ ಬಸವೇಶನ ವಿಷಯದಲ್ಲಿ ಮನಬಂದಂತೆ ಕೂಗುವದನ್ನು ನೋಡಿದರೆ ಅವರು ಎಂಥಾ ಮೂರ್ಖರಿರಬೇಕೆಂಬುದನ್ನು ವಾಚಕರೇ ಊಹಿಸಲಿ. ಇನ್ನು ಲಿಂಗಾಂಗಿಗಳಲ್ಲಿಯೇ ಕೆಲವರು ಬಸವೇಶನು ನಮ್ಮ ಧರ್ಮವನ್ನು ಕೆಡಿಸಿದನೆಂದು ಹೇಳುವದಾಗಿ ಕೇಳುವೆನು. ಆದರೆ ಅವರು ಬಸವನ ಉದಾತ್ತಕೃತಿಗಳನ್ನೂ ತತ್ವಗಳನ್ನೂ ತಿಳಿಯದ ಮೂಢರೆಂದು ಹೇಳಬಹುದು. ಲಿಂಗಾಂಗಿ ಧರ್ಮದಲ್ಲಿ ಅಂಥಾಮಹಿಮಾಶಾಲಿಗಳಾದ ಉಪದೇಶಕರು ಒಂದುವೇಳೆ ಕೆಲವುಕಾಲ ವಿಪುಲವಾಗಿ ಉದಯಿಸದಿದ್ದರೂ ಧರ್ಮವು ಶಿಥಿಲವಾಗಬಾರದೆಂದು ಬಸವೇಶನು ಅದರ ಕಟ್ಟಳೆಗಳನ್ನು ಬಹುರೀತಿಯಾಗಿ ಬಂಧಿಸಿದನು. ಹ್ಯಾಗೆಂದರೆ—ಧರ್ಮತತ್ವಗಳನ್ನು ತಿಳಿಸುವದಕ್ಕಾಗಿಯೂ, ಧರ್ಮದ ಆಚಾರ, ವಿಚಾರ, ವ್ಯಾವಹಾರಿಕ ನ್ಯಾಯನಿರ್ಣಯಗಳು ಸಹ ಅನ್ಯರಲ್ಲಿ ಹೋಗದಂತೆಯೂ, ನೀತಿಭ್ರಷ್ಟತೆಯಾಗದಂತೆಯೂ, ಪರಧರ್ಮದ ದುರ್ಬೋಧೆಯಿಂದ ಸ್ವಧರ್ಮತ್ಯಾಗಿಗಳಾಗದಂತೆಯೂ ಪ್ರತಿಬಂಧಿಸುವ ಮಠಗಳನ್ನು ಬಹಳವಾಗಿ ಅಲ್ಲಲ್ಲಿಗೆ ನಿರ್ಮಿಸಿ ಅವುಗಳಿಂದಲೇ ಧಾರ್ಮಿಕ ವಿಷಯಗಳ ನಿರ್ಣಯವಾಗುವಂತೆಯೂ, ವ್ಯಾವಹಾರಿಕ, ವೈದ್ಯಕೀಯ, ನ್ಯಾಯನಿರ್ಣಯಕ್ಕಾಗಿಯೂ, ಅವುಗಳ ಉನ್ನತಿಯ ಪ್ರೋತ್ಸಾಹಕ್ಕಾಗಿಯೂ ಪ್ರತಿ ಒಂದು ಗ್ರಾಮದಲ್ಲಿ ಶ್ರೇಷ್ಠಿ (ಶೆಟ್ಟಿ), ಬಣಕಾರ, ಪಂಚಾಯತರು ಎಂಬ ಪಂಚಾಯತ ಸಭೆಗಳನ್ನು ಏರ್ಪಡಿಸಿ ಇವಕ್ಕೆ ಶ್ರೇಷ್ಠಿ, ಬಣಕಾರರೇ ಮುಖ್ಯಾಧಿಕಾರಿಗಳಾಗಿರುವಂತೆಯೂ ಅವರು ಪಂಚರನುಮತಿಯಂತೆ ನಡೆಯಬೇಕಾಗಿಯೂ ನಿರ್ಣಯಿಸಿದನು. ಆದರೆ ಧಾರ್ಮಿಕ ವಿಷಯನಿರ್ಣಯದಲ್ಲಿ ಈ ಶ್ರೇಷ್ಠಿ, ಬಣಕಾರರ ಅಧಿಕಾರವೇನೂ ಇಲ್ಲ. ಧಾರ್ಮಿಕ ವಿಷಯದಲ್ಲಿ ಗುರುವಿನಾಜ್ಞೆಯಂತೆ ನಡೆಯುವದೇ ಇವರ ಕರ್ತವ್ಯವು. ಧಾರ್ಮಿಕ ನಿರ್ಣಯವೆಲ್ಲಾ ಗುರುವಿನಿಂದಲೇ ತೀರತಕ್ಕದ್ದು. ಆಯಾಯ ಗ್ರಾಮಗಳಲ್ಲಿಯ ಮಠದವರಿಗೆ ಅನುಕೂಲರಾಗಿ ಅವರ ಸೇವಾ, ಹಾಗೂ ಸಮಾಜಸೇವಾ ಮಾಡುವದರುದ್ದಿಶ್ಯವಾಗಿ ಗಣಾಚಾರಿ, ಮಠಪತಿ ಎಂಬುವರನ್ನು ನಿಯಮಿಸಿ ಇನ್ನೂ ಮೇಲಿನ ಪೀಠದವರಿಗೆ ಆಗಾಗ್ಗೆ ಧಾರ್ಮಿಕ ವೃತ್ತಾಂತಗಳನ್ನು ತಿಳಿಸಲುದ್ದಿಶ್ಯ ಕೆಲ ಕಾಯಕದಯ್ಯನವರನ್ನು ನಿಯಮಿಸಿ ಇವರನ್ನು ಆಯಾಯ ಭಾಗದ ಪೀಠಾಧೀಶ್ವರರ ಅಧೀನಮಾಡಿದನು. ಇವರು ಎಂಟುದಿನಕ್ಕೊಮ್ಮೆ ಪ್ರತಿ ಒಂದು ಗ್ರಾಮಕ್ಕೂ ತಣಿಬಹಾಕುತ್ತಾ ಆಯಾಯ ಗ್ರಾಮದ ಧಾರ್ಮಿಕಾದಿ ವೃತ್ತಾಂತಗಳನ್ನು ಪೀಠದವರಿಗೆ ತಿಳಿಸುವರು. ಈ ಕಾಯಕದವರು ಪೀಠದವರ ಡಿಟೆಕ್ಟಿವ್ (ಗುಪ್ತ) ಪೋಲಿಸರೆಂದರೂ ಅತಿಶಯೋಕ್ತಿಯಾಗಲಾರದು. ಈ ಕಾಯಕದವರಿಗೆ ಅವರ ಮಹತ್ಕಾರ್ಯದ ಜವಾಬದಾರಿಯು ಸಾಧಾರಣವಿಲ್ಲ. ಇವರು ತಮ್ಮ ಶರೀರವನ್ನು ದುಡಿಸಿ (ಶಾರೀರಿಕಶ್ರಮದಿಂದ) ಧರ್ಮೋನ್ನತಿ ಮಾಡುವವರಾದ್ದರಿಂದ "ಕಾಯೇನ ಧರ್ಮೋನ್ನತಿರ್ಭೀ ಕ್ರಿಯತೆ ಇತಿಕಾಯಕಾಃ" ಎಂಬ ವ್ಯಾಖ್ಯಾನವುಳ್ಳ ನಾಮಕ್ಕರ್ಹರಾಗಿರುವರು. ದರ ಒಂದು ಗ್ರಾಮಕ್ಕೆ ಅಂದರೆ ಅಲ್ಲಿಯ ಜನರು ಬಹುತೇಕ ಪರಗ್ರಾಮಕ್ಕೆ ಯಾರೂ ಹೋಗದ ದಿವಸವೆಂದರೆ ಸಂತೆಯ ದಿವಸವಿದ್ದು ಆ ದಿವಸವೇ ಇವರು ಆಯಾಯ ಗ್ರಾಮಗಳ ಮುಕ್ಕಾಂ ಮಾಡುತ್ತಾ ಜನರು ತಮ್ಮ ವ್ಯಾಪಾರ, ಉದ್ಯೋಗ, ಕ್ರಯ, ವಿಕ್ರಯಗಳಿಂದ ನಿವೃತ್ತರಾಗಿ ದಣಿದು ಸಾಯಂಕಾಲಕ್ಕೆ ತಮ್ಮ ತಮ್ಮ ಮನೆಯನ್ನು ಸೇರಿ ಆರಾಮತೆಗೆದುಕೊಳ್ಳುವ ವ್ಯಾಳ್ಯಕ್ಕೆ ದರ ಒಂದು ಮನೆಗೆ ಹೋಗಿ ಧರ್ಮದ ಮಂಗಲವಿಜಯಧ್ವನಿಯುಳ್ಳ ಘಂಟಾನಾದವಂ ಮಾಡುವರು. ಒಳಗಿದ್ದವರು ಹೊರಗೆ ಬರ್ರಿ ಎಂದು ಕರೆಯುವದು ಅಮಂಗಲವೆಂದು ತಿಳಿದು ಈ ಘಂಟಾನಾದದ ಪ್ರಾಘಾತ ಹಾಕಿದಂತೆ ಕಾಣುತ್ತದೆ. ಈ ಮಂಗಲನಾದವನ್ನು ಕೇಳಿದಾಕ್ಷಣಕ್ಕೆ ಒಳಗಿದ್ದವರೆಲ್ಲರೂ ಹೊರಗೆಬಂದು ಆ ಜಂಗಮರ ಪಾದಕ್ಕೆರಗಿ ಧರ್ಮದ ಆಚಾರವಿಚಾರಪರವಾದ ಕುಶಲಪ್ರಶ್ನೆಗಳಾಗಿ ಅವರು ತಪ್ಪಿದವನ್ನು ತಿದ್ದಲಿಕ್ಕೆ ಎಚ್ಚರಕೊಟ್ಟು ಜ್ಞಾನಬೋಧಕನೂ, ಧರ್ಮಶಾಸಕನೂ ಆದ ಗುರುವಿನ ನಾಮವನ್ನು ಮರೆಯಬೇಡಿರೆಂದು ಹೇಳಿ ಅಭಯದಾನವನ್ನು ಕೊಟ್ಟು ಹೊರಟುಹೋಗುವರು. ಇವರು ಈ ಗುರುವಿನ ನಾಮೋಚ್ಚಾರಣೆಯ ಕಾರಣವೆಂದರೆ ನೀವು ಅಧರ್ಮಿಗಳಾಗಿ ನಡದಲ್ಲಿ ಆ ಗುರುಗಳು ನಿಮಗೆ ದಂಡಶಾಸನಮಾಡುವರಲ್ಲದೆ ಅವರ ಶಾಸನವು ಬಹು ಹೆಚ್ಚಿನದೆಂಬ ಭಯಭಕ್ತಿ ತೋರಿಸುವ ಉದ್ದೇಶವಿದ್ದು ಹ್ಯಾಗೆ ರಾಜ್ಯದಲ್ಲಿ ಅರಾಜಕತೆಯಾಗಬಾರದೆಂದು ಮೇಲಿಂದ ಮೇಲೆ ಬಾದಶಾಹೀಶಾಸನವು ನೆನಪಿನಲ್ಲುಳಿಯಬೇಕಾಗಿ ಬಾದಶಾಹೀ ಜಾಹಿರನಾಮೆಗಳು ಹಂಚಲ್ಪಡುವವೋ ಅದರಂತೆಯೇ ಗುರುನಾಮೋಚ್ಚಾರಣೆಯ ಪ್ರಾಘಾತವಿರಬಹುದು.

ಪಂಡಿತ ಗುರುಬಸವಶಿವಾಚಾರ್ಯಸ್ವಾಮಿ, ಸಂಸ್ಥಾನ ಕ್ಯಾಸನೂರ್.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 15 ನೆಯ ಪ್ರಕರಣ.

ಮತಸಂಚಲನ.

ನನ್ನ ಸ್ನೇಹಿತರಾದ ಕ್ರೈಸ್ತರ ಪರಿಚಯವನ್ನು ಕುರಿತು ಪುನಃ ಈ ಪ್ರಕರಣವನ್ನು ಬರೆದಿರುತ್ತೇನೆ. ನನ್ನ ಮುಂದಿನ ಸ್ಥಿತಿಯನ್ನು ಕುರಿತು ಬೇಕರವರು ಬಹಳ ಆಲೋಚನಾಪರರಾಗಿದ್ದರು. ವೆಲಿಂಗ್ಟನ್ ಸಮಾವೇಶಕ್ಕೆ ನನ್ನನ್ನು ಅವರು ಕರೆದುಕೊಂಡುಹೋಗಿದ್ದರು. ಪಾಪಪರಿಹಾರಾರ್ಥವಾಗಿ ಕೆಲವರ್ಷಗಳಿಗೊಂದಾವರ್ತಿ ಪ್ರಾಟೆಸ್ಟೆಂಟ್ ಕ್ರೈಸ್ತರುಗಳು ಇಂತಹ ಸಮಾವೇಶವನ್ನು ಮಾಡುವರು. ಅದು ಮತೋದ್ಧರಣವೆಂದು ಸಹ ಹೇಳಬಹುದು. ಸುಪ್ರಸಿದ್ಧರಾದ ರೆವರೆಂಡ್ ಆಂಡ್ರ್ಯೂಸ್ ಮುರ್ರೆರವರು ಆ ಸಮಾವೇಶದ ಅಧ್ಯಕ್ಷರಾಗಿದ್ದರು. ಆ ಸಭೆಯಲ್ಲಿ ಮತವಿಷಯಕೋತ್ಸಾಹವೂ ಉದ್ರೇಕವೂ ಬಹಳ ಪ್ರಬಲವಾಗಿದ್ದುದರಿಂದಲೂ, ಅಲ್ಲಿಗೆ ಬಂದವರೆಲ್ಲರೂ ಕ್ರೈಸ್ತಮತಾಭಿಮಾನಾವೇಶಭರಿತರಾಗಿದ್ದುದರಿಂದಲೂ ನನ್ನನ್ನು ಅಲ್ಲಿಗೆ ಕರೆದುಕೊಂಡುಹೋದಲ್ಲಿ ನಾನು ತಪ್ಪದೆ ಕ್ರೈಸ್ತಮತವನ್ನು ಸ್ವೀಕರಿಸುವಂತೆ ಮಾಡಬಹುದೆಂದು ಬೇಕರವರ ಆಶೆಯಾಗಿದ್ದಿತು. ಬೇಕರವರಿಗೆ ದೈವಪ್ರಾರ್ಥನೆಯಲ್ಲಿ ಪ್ರಬಲವಾದ ನಂಬಿಕೆಯಿದ್ದಿತು. ಅದೆಯೇ ಅವರಿಗೆ ಮುಖ್ಯಾಧಾರವು. "ಮನಃಪೂರ್ವಕವಾಗಿ ಮಾಡಿದ ದೇವರಪ್ರಾರ್ಥನೆಯನ್ನು ಭಗವಂತನು ತಪ್ಪದೆ ಲಾಲಿಸುವನು. ಬ್ರಿಸ್ಟಲಿನಲ್ಲಿ ಜಾರ್ಜ್‌ಮುಲ್ಲರ್‌ರವರು ಐಹಿಕವಿಷಯಕ್ಕೂ ಕೂಡ ಅನುಕ್ಷಣದಲ್ಲೂ ಭಗವಂತನನ್ನು ಪ್ರಾರ್ಥಿಸುತ್ತಿರುವುದರಿಂದ ಕಾರ್ಯಸಾಫಲ್ಯವನ್ನು ಹೊಂದುತ್ತಿದ್ದರು. ಇಂತಹ ಆಸ್ತಿಕಶಿಖಾಮಣಿಭಕ್ತರು ಕೆಲವರಿರುವರು" ಎಂದು ಬೇಕರ್‌ರವರು ಹೇಳುತ್ತಿದ್ದರು. ನಾನು ಆ ಬೋಧೆಯನ್ನು ಶ್ರದ್ಧೆಯಿಂದ ಕೇಳುತ್ತಿದ್ದೆನು. "ನನಗೆ ಭಗವತ್ಪ್ರೇರಣ ಆ ರೀತಿ ಆದಲ್ಲಿ ನಾನು ಕ್ರೈಸ್ತನಾಗಲು ಎಷ್ಟುಮಾತ್ರಕ್ಕೂ ಸಂಶಯಪಡತಕ್ಕವನಲ್ಲ. ನಾನು ಬಹಳ ಕಾಲದಿಂದಲೂ ಅಂತರಾತ್ಮದ ಆಜ್ಞೆಯ ಪ್ರಕಾರವೇ ನಡೆದುಕೊಳ್ಳುತ್ತಿರುವೆನು. ಅದೆಯೇ ನನಗೆ ಬಹಳ ಸಂತೋಷಕರವು. ಆ ಆಜ್ಞೆಗೆ ವ್ಯತಿರೇಕವಾಗಿ ನಡೆಯುವುದು ನನಗೆ ಬಹಳ ದುಃಖಕರವಾಗಿದ್ದಿತು" ಎಂದು ನಾನು ತಿಳಿಸಿದೆನು. ವೆಲಿಂಗ್ಟನ್ನಿಗೆ ಹೊರಟೆವು. ನನ್ನನ್ನು ಕೂಡ ಕರೆದುಕೊಂಡುಹೋದುದರಿಂದ ಬೇಕರವರಿಗೆ ಬಹಳ ತೊಂದರೆಯುಂಟಾಯಿತು. ಕಪ್ಪುಮನುಷ್ಯನಾದ ನನ್ನನ್ನು ಜತೆಯಲ್ಲಿರಿಸಿಕೊಳ್ಳಬೇಕಾಗಿದ್ದುದರಿಂದ ಬೇಕರವರಿಗೆ ಬಹಳ ಅಸೌಕರ್ಯವನ್ನು ಸಹಿಸಿಕೊಳ್ಳಬೇಕಾಗಿ ಬಂದಿತು. ಮಾರ್ಗದಲ್ಲಿ ಭಾನುವಾರ ಪ್ರಾಪ್ತವಾಯಿತು. ಕ್ರೈಸ್ತರು ಆ ದಿವಸ ಪ್ರಯಾಣ ಮಾಡಕೂಡದಾದುದರಿಂದ ಆ ದಿವಸ ಒಂದುಕಡೆ ನಾವೆಲ್ಲರೂ ತಂಗಿದೆವು. ಸ್ಟೇಷನ್‌ಹೋಟಲಿನೊಳಕ್ಕೆ ನನ್ನನ್ನೂ ಕರೆದುಕೊಂಡುಹೋಗುವ ವಿಚಾರದಲ್ಲಿ ಬೇಕರವರಿಗೂ ಮ್ಯಾನೇಜರಿಗೂ ಬಹಳ ಹೋರಾಟವಾಯಿತು. ನನ್ನನ್ನು ಒಳಕ್ಕೆ ಬರಗೊಡಲು ಕಟ್ಟಕಡೆಗೆ ಮ್ಯಾನೇಜರು ಅಂಗೀಕರಿಸಿದನಾದರೂ ಎಲ್ಲರ ಕೂಡ ಕುಳಿತು ಸಹಪಂಕ್ತಿಭೋಜನ ಮಾಡಲು ಆತನು ಎಷ್ಟುಮಾತ್ರಕ್ಕೂ ಒಪ್ಪಲಿಲ್ಲವು. ಆಸ್ತಿಕರಾದ ಅನೇಕ ಕ್ರೈಸ್ತರು ಆ ಸಭೆಗೆ ಬಂದಿದ್ದರು. ಅವರ ವಿಶ್ವಾಸವನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ರೆವರೆಂಡ್ ಮುರ್ರೆಯವರ ಸಂಗಡ ನಾನು ಸೇರಿಕೊಂಡೆನು. ನನ್ನಂತಹ ಅನೇಕ ಜನರು ಪ್ರಾರ್ಥಿಸುತ್ತಿದ್ದುದನ್ನು ನಾನು ನೋಡಿ ಅವರ ಭಕ್ತಿಗೀತಗಳಲ್ಲಿ ಕೆಲವು ನನಗೆ ಬಹಳ ಸಂತೋಷವನ್ನುಂಟುಮಾಡಿದುವು. ಅವು ಬಹಳ ಮನೋಹರವಾಗಿದ್ದುವು. ಆ ಸಭೆಯು ಮೂರುದಿವಸಗಳವರೆಗೆ ಜರುಗಿತು. ಆ ಸಭೆಗೆ ಬಂದಿದ್ದವರ ಭಕ್ತಿ ಶ್ರದ್ಧೆಗಳಿಗೆ ನಾನು ಸಂತೋಷಪಟ್ಟೆನಲ್ಲದೆ ಅಷ್ಟುಮಾತ್ರಕ್ಕೆ ನಾನು ಹಿಂದೂಮತವನ್ನು ಪರಿತ್ಯಜಿಸಿ ಕ್ರೈಸ್ತಮತವನ್ನು ಸ್ವೀಕರಿಸಲು ನನಗೆ ಆವಶ್ಯಕತೆಯು ಕಂಡುಬರಲಿಲ್ಲವು. ಕ್ರೈಸ್ತನಾದರೆ ಮುಕ್ತಿಯಾಗುವುದು ಇಲ್ಲದಿದ್ದಲ್ಲಿ ಮುಕ್ತಿಯಾಗುವುದಿಲ್ಲವೆಂಬುದನ್ನು ನಾನು ನಂಬುವುದಿಲ್ಲ. ಆ ಸಂಗತಿಯನ್ನು ನಾನು ಬಹಳಜನ ಕ್ರೈಸ್ತರಿಗೆ ತಿಳಿಸಿದೆನು. ಅದು ಅವರ ಮನಸ್ಸಿಗೆ ಬಹಳ ಕಷ್ಟವಾಗಿದ್ದಿತೆಂದು ಕೂಡ ನಾನು ಗ್ರಹಿಸಿದೆನು. ಆದರೂ ಗತ್ಯಂತರವಿರಲಿಲ್ಲ.

ನನಗೆ ಬಹಳ ಅಭ್ಯಂತರವಿದ್ದಿತು. ಏಸುಕ್ರಿಸ್ತನೊಬ್ಬನೇ ದೇವರಮಗನಾದುದರಿಂದ ಭಗವದವತಾರನಾದ ಆತನನ್ನು ನಂಬಿದವರಿಗೆಲ್ಲ ಮೋಕ್ಷವಾಗುವುದೆಂಬುದನ್ನು ನಂಬದಿದ್ದೆ. ದೇವರಿಗೆ ಮಕ್ಕಳಿರುವುದಾದರೆ ನಾವೆಲ್ಲರೂ ದೇವರ ಮಕ್ಕಳೇ ಆಗುವೆವು. ಏಸುಕ್ರಿಸ್ತನನ್ನು ದೇವರೆಂದೆನ್ನುವವನೂ ದೇವರೇ ಆದರೆ ಪ್ರತಿಮನುಷ್ಯನನ್ನು ಕೂಡ ದೇವರೆಂದೆನ್ನುವವನೂ ದೇವರಾಗಬೇಕಾಗುವುದು. ಏಸುಕ್ರಿಸ್ತನು ತನ್ನ ಮರಣದಿಂದಲೂ, ತನ್ನ ರಕ್ತದಿಂದಲೂ ಮನುಷ್ಯರ ಪಾಪವನ್ನೆಲ್ಲ ತೊಲಗಿಸಿದನು ಎಂಬ ವಿಷಯಕ್ಕೆ ಸಾಂಕೇತಿಕಾರ್ಥವೇನಾದರೂ ಇರಬೇಕಲ್ಲದೆ ಪ್ರತಿಪದಾರ್ಥದ ಪ್ರಕಾರ ಆ ವಾಕ್ಯವನ್ನು ನಂಬಲು ನನ್ನ ಬುದ್ಧಿಗೆ ಖಂಡಿತವಾಗಿದ್ದಿತು. ಅದನ್ನು ನಾನು ನಂಬದಿದ್ದೆನು. ಮನುಷ್ಯರಲ್ಲದೆ ಇತರ ಜಂತುಗಳಿಗೆ ಜೀವ (ಆತ್ಮ) ವಿಲ್ಲವೆಂದು ಕ್ರೈಸ್ತರು ನಂಬರು. ಆ ಜಂತುಗಳ ಜೀವಿತವು ಮರಣದೊಡನೆ ಸೇರಿಕೊಳ್ಳುವುದೆಂದು ಅವರಭಿಪ್ರಾಯವು. ನನ್ನ ಅಭಿಪ್ರಾಯವು ಅದಕ್ಕೆ ವ್ಯತಿರಿಕ್ತವು. ಏಸುಕ್ರಿಸ್ತನು ಜನರ ಮೇಲ್ಮೆಗಾಗಿ ಪ್ರಾಣಬಿಟ್ಟನು. ಆತನು ತ್ಯಾಗಮೂರ್ತಿ; ದೊಡ್ಡ ಮತಬೋಧಕನು ಎಂದು ನಾನು ನಂಬುವೆನಲ್ಲದೆ ಆತನು ಅಕಳಂಕನಾದ ಮಾನವನೆಂದೂ, ಮನುಷ್ಯರಲ್ಲಿ ಅಕಳಂಕರಾದವರು ಅವನ ವಿನಾ ಮತ್ತಾರೂ ಹುಟ್ಟಲಿಲ್ಲವೆಂದೂ ನಾನು ನಂಬುವುದಿಲ್ಲ. ಆತನು ಶಿಲುಬೆಯಮೇಲೆ ಪ್ರಾಣವನ್ನು ಬಿಟ್ಟುದರಿಂದ ಮಾನವಪ್ರಪಂಚಕ್ಕೆ ದೊಡ್ಡ ಆದರ್ಶಪುರುಷನಾದನೆಂದು ನಾನು ನಂಬುತ್ತೇನಲ್ಲದೆ ಆ ಮರಣದಿಂದ ಅದ್ಭುತವಾದ ಅಪೂರ್ವಮಹಿಮೆಯಾಯಿತೆಂದು ನಾನು ಗ್ರಹಿಸುವುದಿಲ್ಲ. ಇತರ ಮತಗಳಲ್ಲಿಯ ಭಕ್ತರ ಜೀವಿತಕ್ಕಿನ್ನ ಕ್ರೈಸ್ತಭಕ್ತನ ಜೀವಿತದಲ್ಲಿ ನನಗೆ ಅಷ್ಟು ಆಧಿಕ್ಯವು ತೋರಲಿಲ್ಲವು. ಇತರ ಮತದವರ ಜೀವಿತವು ಕೂಡ ಅಂತಹ ಸಂಸ್ಕಾರವನ್ನು ನಾನು ಗ್ರಹಿಸಿದವನಾಗಿದ್ದೆನು. ತತ್ವವಿಚಾರವಾಗಿ ಕ್ರೈಸ್ತರ ಸಿದ್ಧಾಂತದಲ್ಲಿ ನನಗೆ ಯಾವ ವಿಶೇಷವೂ ಕಂಡುಬರಲಿಲ್ಲ. ತ್ಯಾಗವಿಷಯದಲ್ಲಿ ಹಿಂದುಗಳು ಕ್ರೈಸ್ತರನ್ನು ಬಹಳವಾಗಿ ಮೀರಿಸಿರುತ್ತಾರೆ. ಎಲ್ಲ ಮತಗಳಲ್ಲೂ ಕ್ರೈಸ್ತಮತವೇ ಶ್ರೇಷ್ಠವಾದುದೆಂದೂ, ಘನವಾದುದೆಂದೂ ನಾನು ನಂಬುವುದು ಅಸಂಭವವು. ನಾನು ಈಚೆಗೆ ಈ ಭಾವವನ್ನು ಕ್ರೈಸ್ತರ ಇದಿರಿಗೆ ತಿಳಿಸುತ್ತಿದ್ದುದರ ಮೇಲೆ ಅವರು ಕೊಡುತ್ತಿದ್ದ ಪ್ರತ್ಯುತ್ತರವು ನನಗೆ ತೃಪ್ತಿಕರವಾಗಿರುತ್ತಿರಲಿಲ್ಲವು. ಹಿಂದುಮತವೇ ಶ್ರೇಷ್ಠಮತವೆಂಬ ನಂಬಿಕೆಯು ಕೂಡ ನನಗೆ ಆಗ ಹುಟ್ಟಲಿಲ್ಲವು. ಹಿಂದುಮತದಲ್ಲಿರುವ ಲೋಪವು ಸಹ ನನಗೆ ಚೆನ್ನಾಗಿ ಗೊತ್ತಿದ್ದಿತು. ಅಸ್ಪೃಶ್ಯತೆಯು ಹಿಂದುಮತದಲ್ಲಿ ಒಂದು ಭಾಗವಾಗಿದ್ದರೆ ಅದು ಬಹಳ ಅನರ್ಥವೇ. ಹಿಂದುಮತದಲ್ಲಿ ಎಷ್ಟೋ ಸಿದ್ಧಾಂತಗಳು ಇರುವುದು ನನಗೆ ಒಡಂಬಡಲಿಲ್ಲವು. ವೇದವು ಅಪೌರುಷೇಯವೆನ್ನುವುದನ್ನು ನಾನು ಗ್ರಹಿಸಿದವನಾಗಿರುತ್ತೇನೆ. ವೇದವು ಅಪೌರುಷೇಯವಾಗಿದ್ದಲ್ಲಿ ಬೈಬಲ್ಲೂ ಖುರಾನೂ ಏಕೆ ಅಪೌರುಷೇಯವಾಗಕೂಡದು? ಕ್ರೈಸ್ತರು ನನ್ನನ್ನು ಕ್ರೈಸ್ತನನ್ನಾಗಿ ಮಾಡಲಪೇಕ್ಷಿಸುತ್ತಿದ್ದಂತೆಯೇ ಮಹಮ್ಮದೀಯರು ಕೂಡ ನನ್ನನ್ನು ಮಹಮ್ಮದೀಯನನ್ನಾಗಿ ಮಾಡಲಪೇಕ್ಷಿಸುತ್ತಿದ್ದರು. ನಾನು ರಾಯಚಂದುಭಾಯಿ ಮೊದಲಾದವರಿಗೆ ಮತವಿಷಯವನ್ನು ಕುರಿತು ಭಾರತದೇಶಕ್ಕೆ ಬರೆಯಲು ಅವರು ಉತ್ತರವನ್ನು ಕೊಟ್ಟರು. ರಾಯಚಂದುಭಾಯಿರವರ ಲೇಖದಿಂದ ನನ್ನ ಮನಸ್ಸಿಗೆ ಬಹಳ ಶಾಂತಿಯುಂಟಾಯಿತು. "ತೊಂದರೆ ಪಡಬೇಡ; ಹಿಂದುಮತಗ್ರಂಥಗಳನ್ನು ಶ್ರದ್ಧೆಯಿಂದ ಓದಬೇಕಾಗಿದೆ." ಎಂದು ಬರೆಯಲ್ಪಟ್ಟಿದ್ದಿತು. ನಿಷ್ಪಾಕ್ಷಿಕವಾಗಿ ಪರೀಕ್ಷಿಸಿದಲ್ಲಿ ಹಿಂದುಮತದಲ್ಲಿರುವ ಉತ್ತಮಭಾವವೂ, ಜೀವಸ್ವರೂಪನಿರ್ಣಯವೂ, ತ್ಯಾಗವೂ ಮತ್ತಿನ್ನಾವ ಮತದಲ್ಲೂ ಇಲ್ಲವೆಂದು ನಾನು ಗ್ರಹಿಸುವವನಾದೆನು. ಸೇಲ್‌ರವರು ಖುರಾನನ್ನು ಆಂಗ್ಲಭಾಷೆಗೆ ಪರಿವರ್ತಿಸಿದ್ದರು. ನಾನು ಆ ಆಂಗ್ಲಗ್ರಂಥವನ್ನು ಕೊಂಡು ಓದಲುಪಕ್ರಮಿಸಿದೆನು. ಮಹಮ್ಮದೀಯಮತವನ್ನು ಕುರಿತ ಇನ್ನೂ ಕೆಲ ಗ್ರಂಥಗಳನ್ನು ಕೂಡ ಕೊಂಡೆನು. ಆಂಗ್ಲದೇಶದಲ್ಲಿದ್ದ ನನ್ನ ಮಿತ್ರರಾದ ಕ್ರೈಸ್ತರಿಗೆ ಬರೆಯಲು ಅವರಲ್ಲೊಬ್ಬರು ಎಡ್ವರ್ಡ್‌ಮೆಯಿಟಲಾಂಡ್‌ರವರಿಗೂ ನನಗೂ ಲೇಖಪರಿಚಯವನ್ನು ಮಾಡಿಸಿದರು. ತಾವೂ ಅನ್ನಾಕಿನ್ಸ್‌ಫರ್ಡ್‌ರವರೂ ಸೇರಿ ಬರೆದ 'ದಿ ಫರ್ಫೆಕ್ಟ್ ವೇ' ಎಂಬ ಗ್ರಂಥವನ್ನು ಮೆಯಿಟ್‌ಲಂಡ್‌ರವರು ನನಗೆ ಕಳುಹಿಸಿಕೊಟ್ಟರು. ಪ್ರಸ್ತುತದಲ್ಲಿ ಕ್ರೈಸ್ತರಿಗಿರುವ ನಂಬಿಕೆಯನ್ನು ಆ ಗ್ರಂಥವು ಖಂಡಿಸುತ್ತದೆ. "ನ್ಯೂ ಇಂಟರ್‌ಪ್ರಿಟೇಷನ್ ಆಫ್ ಬೈಬಲ್" ಎಂಬ ಗ್ರಂಥವನ್ನು ಕೂಡ ಮೆಯಿಟ್‌ಲೆಂಡ್‌ರವರು ಕಳುಹಿಸಿಕೊಟ್ಟರು. ಆ ಎರಡು ಗ್ರಂಥಗಳೂ ನನ್ನ ಮನಸ್ಸಿಗೊಪ್ಪಿದುವು. ಅವು ಹಿಂದುಮತಕ್ಕನುಗುಣ್ಯವಾಗಿದ್ದುವು. 'ದಿ ಕಿಂಗಡಂ ಆಫ್ ಗಾಡ್ ಈಜ್ ವಿಧಿನ್ಯು' ಎಂಬ ಗ್ರಂಥವನ್ನು ಟಾಲಸ್ಟಾಯಿರವರು ಬರೆದಿರುವರು. ಅದನ್ನು ಓದಿದುದರಿಂದ ನನಗೆ ಅಪರಿಮಿತವಾದ ಆನಂದವುಂಟಾಯಿತು. ನಾನು ಅದನ್ನು ಎಂದಿಗೂ ಮರೆಯುವಂತಿಲ್ಲ. ಆ ಗ್ರಂಥದಲ್ಲಿ ಸ್ವತಂತ್ರಾಲೋಚನೆಯೂ, ಉತ್ತಮವಾದ ನೀತಿಯೂ, ಸತ್ಯವೂ ತಿಳಿಸುವುದರಲ್ಲಿ ಕೋಟ್ಸ್‌ರವರು ಕೊಟ್ಟ ಗ್ರಂಥಗಳೆಲ್ಲ ಅದು ಮೀರಿದುದಾಗಿರುವುದು. ಈ ರೀತಿಯಾಗಿ ನನ್ನ ಕೃಷಿಯು ಕ್ರೈಸ್ತಮಿತ್ರರ ಆಲೋಚನೆಗೆ ಭಿನ್ನವಾಗಿ ಪರಿಣಮಿಸಿತು. ಎಡ್ವರ್ಡ್ ಮೇಟ್ಲೆಂಡ್‌ರವರಿಗೂ ನನಗೂ ಬಹಳಕಾಲದವರೆಗೆ ಪತ್ರವ್ಯವಹಾರ ನಡೆಯುತ್ತಿದ್ದಿತು. ರಾಯಚಂದುಭಾಯಿರವರು ಜೀವಿಸಿರುವವರೆಗೂ ಅವರಿಗೂ ನನಗೂ ಪತ್ರವ್ಯವಹಾರವು ನಡೆಯುತ್ತಲೇ ಇದ್ದಿತು. ಪಂಚೀಕರಣ, ಮಣಿರತ್ನಮಾಲ, ಯೋಗವಾಸಿಷ್ಠದಲ್ಲಿ ಮುಮುಕ್ಷುಪ್ರಕರಣ, ಹರಿಭದ್ರಸೂರಿ ವಿರಚಿತ ಷಡ್ದರ್ಶನಸಮುಚ್ಚಯ ಮೊದಲಾದ ಗ್ರಂಥಗಳನ್ನು ರಾಯಚಂದುಭಾಯಿರವರು ಕಳುಹಿದರು. ನಾನು ಅವೆಲ್ಲವನ್ನೂ ಓದಿದೆನು. ಆದುದರಿಂದ ನಾನು ಕ್ರೈಸ್ತರಿಗೆ ಯಾವಾಗಲೂ ಕೃತಜ್ಞನೇ ಆಗಿರುವೆನು. ಮತವಿಷಯದಲ್ಲಿ ಮೊದಲು ನನಗೆ ಆಸ್ತಿಕತ್ವವನ್ನು ಹುಟ್ಟಿಸಿದವರು ಅವರೇ ಆದುದರಿಂದ ನಾನು ಅವರುಪಕಾರವನ್ನು ಎಂದಿಗೂ ಮರೆಯಲಾರೆನು. ಬಹಳ ವೇಳೆ ನನಗೆ ಅಂತಹ ಸಹಚರ್ಯವು ಲಭಿಸಿದ್ದಿತು.

೧೯೨೬ನೆಯ ಇಸವಿ ನವಂಬರ್ ತಾ|| ೬ ರಿಂದ ೧೯೨೬ ನೆಯ ಇಸವಿ ನವಂಬರ್ ತಾ|| ೧೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಕಾರ್ತೀಕ ಶುದ್ಧ ಪಾಡ್ಯಮಿಯಿಂದ ಕಾರ್ತೀಕ ಶುದ್ಧ ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಮಾಸ
6	[1]ಶನಿ	ಪಾಡ್ಯ	35-39	ವಿಶಾ	39-22	21
7	ಭಾನು	ಬಿದಿ	36-21	ಅನೂ	41-29	22
8	[2]ಸೋಮ	ತದಿ	35-45	ಜ್ಯೇಷ್ಠ	42-18	23
9	[3]ಮಂಗಳ	ಚೌತಿ	33-55	ಮೂಲ	41-58	24
10	ಬುಧ	ಪಂಚ	30-56	ಪೂಷಾ	40-29	25
11	ಗುರು	ಷಷ್ಠಿ	26-57	ಉಷಾ	38-4	26
12	[4]ಶುಕ್ರ	ಸಪ್ತ	22-16	ಶ್ರವ	34-52	27

(1) ದೀಪಾವಳೀ, ಕಾಮಧೇನುಪೂಜಾ, ಚಂದ್ರದೀಪದಾನಂ, ಮಳೆನಕ್ಷತ್ರ-ವಿಶಾಖ ೧ನೆಯ ಪಾದ. (2) ಕಾರ್ತೀಕಸೋಮವಾರ. (3) ಮಳೆನಕ್ಷತ್ರ-ವಿಶಾಖ ೨ ನೆಯಪಾದ. (4) ಮಳೆನಕ್ಷತ್ರ-ವಿಶಾಖ ೩ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾಜ್ಞಾಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಙ್ಕಜನೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮುಂಚಿತ್ರಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೪-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸನ್ ೧೯೨೬ ನೆಯ ಇಸವಿ ನವಂಬರ್ ತಾರೀಖು ೧೩ ನೆಯ ಶನಿವಾರ. [ಸಂಚಿಕೆ ೪೬

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆನೆಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉಲಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮುಕಂದ, ಮಧುಕಂದ, ಜಸಾಕಂದ, ಶಾಲೀಮುಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತೀಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—16] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹಶಕ್ತಿಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ), ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿ ಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

SIROMANY NARAYANACHARYA & CO.,
BENARES CITY.

S.U.N.&CO.
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದೀಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—17]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೪-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕಳುಹಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗಕಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೀಣೆ ಪುಣಪಟ್ಟಿ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೫೦—೬] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಒಬ್ಬ ಸ್ಪೇನ್ ದೇಶದ ಚೋರಶಿಖಾಮಣಿಗೆ ನಾನಾ ಅಪರಾಧಗಳಿಗಾಗಿ ಈಗತಾನೆ 483 ವರ್ಷ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟಿರುವುದು. ಹಿಂದೆ 1839 ನೇ ಜುಲೈ ತಿಂಗಳಲ್ಲಿ ದಕ್ಷಿಣಸ್ಪೇನಿನಲ್ಲಿ ಸರ್ಕಾರೀಕಾಗದಪತ್ರಗಳ ಸೃಷ್ಟನೆಮಾಡಿದ 217 ಅಪರಾಧಗಳಿಗಾಗಿ ಆಲ್ವಾಮೇಯರಿಗೆ 14 ವರ್ಷ ಶಿಕ್ಷೆ ವಿಧಿಸಲ್ಪಡಬೇಕಾಗಿದ್ದುದಕ್ಕೆ 3083 ವರ್ಷ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿದ್ದಿತು. ಅಪರಾಧಿಗಳ ಆಯುಃಪರಿಮಿತಿಯನ್ನು ಅನುಸರಿಸಿ ನ್ಯಾಯಾಧೀಶರು ಶಿಕ್ಷೆಯನ್ನು ವಿಧಿಸದೆ ಸೆಕ್ಷನ್ನನುಸರಿಸಿ ಅಷ್ಟು ದೀರ್ಘಕಾಲ ಶಿಕ್ಷೆಯನ್ನು ಕೊಡುವುದಾಗಿದೆಯೆಂದು ತೋರುತ್ತದೆ. ಇನ್ನೊಬ್ಬ ಚಿಕಾಗೋದೇಶಸ್ಥನು ತನ್ನ ಹೆಂಡತಿಯ ಹೆಸರಿಗೆ ಬಂದಿದ್ದ ಕಾಗದವನ್ನೊಡೆದ ಅಪರಾಧಕ್ಕಾಗಿ ಅವನಿಗೆ ನ್ಯಾಯಾಧೀಶನು ೨೫ ಸೆಕೆಂಡುಗಳ ಶಿಕ್ಷೆಯನ್ನು ವಿಧಿಸಿ ತನ್ನ ಗಡಿಯಾರವನ್ನೇ ನೋಡುತ್ತಿದ್ದು ೨೫ ಸೆಕೆಂಡು ಆದ ಕೂಡಲೇ ಅವನನ್ನು ವಿಮುಕ್ತಗೊಳಿಸಿದನು.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ನವಂಬರ್ ತಾ|| ೧೩ ನೆಯ ಶನಿವಾರ.

JOURNALISM.

It was a very informing and interesting address that the Rt. Hon'ble V. S. Srinivasa Sastri delivered in Bangalore recently on Journalism. Though himself not a journalist, it can hardly be denied that few can speak with the same authority and with the same sympathy and knowledge as he. He has travelled all the world over and seen what journalism is in the West. In India his life has been cast in close intimacy with a number of leading journals and he is thoroughly conversant with Indian journalism. The first topic he touched upon was with regard to recruitment to journalism. He said that if it has to serve the community as a whole in the future it must draw to it men of the best type, men of very high ideals who have received the best in education, culture and training that the country could give. This is no doubt an ideal which does obtain in our country—with notable exceptions of course. The higher task of the journalist, he said, was to teach the public, and unlike the task of a teacher to school boys his task is much more difficult for he has to deal with adults. Talking of organising journalism in India he said that the moment the Government shows any interest in journalism, even if it is in such an excellent and model State as Mysore, that newspaper is sure to go to the dogs. Further, news tutored by Government, views censored by Government as it were would be the utter negation of what they called the freedom of the press. As regards the improvement of journalism he was of opinion that any attempt to imitate western journalism would be futile as both the wealth and popular culture of the West were lacking in India. Progress in journalism depended on the progress of society itself. At present they would get the sort of journals that they deserved. How eloquently true is this statement. He spoke of the tottering nature of many a journal some of which were the outcome of men who seek influence and prestige. We would not wonder if the existence of some of our journals could also be ascribed to this desire. He wanted the conditions under which the subordinate staff of a paper works to be improved. It is only if their security and contentment could be assured that it would be possible to attract better men to journalism. The absence of better conditions had affected the moral character of some journals which could not be blamed. Journalism had a high mission in society and in the politics of the country and he wanted them to see that it fulfilled its mission. In his words—“ It is the journalist who catches the new spirit before others do it. It is the journalist in whom the widest aspiration has got to be aroused. It is in him that the anguish and the humiliation of our people have got to come to the finest issue. It is in him that the best thought has got to be developed and made to bear its proper fruit to the community.” How few realise this mission? This is indeed an ideal which is worthy to be followed and let us hope with changing times journalism in Mysore and in India will be what it ought to be.

ವೀರಶೈವಸಮಾಜದ ದುರ್ದೈವವು.

“ ಇಂದಿನ ಪ್ರಪಂಚಕ್ಕೆ ಬೇಕಾಗಿರುವುದು ಸಂಸ್ಕೃತದಲ್ಲಿ ಉಕ್ತವಾಗಿರುವ ಪಾರಮಾರ್ಥಿಕವಿಚಾರ. ಇದನ್ನು ಮತ್ತೆ ಯಾವ ವಿದ್ಯೆಯಾಗಲಿ, ಸಾಹಿತ್ಯವಾಗಲಿ, ಇಷ್ಟು ವಿಶದವಾಗಿ ಹೇಳಿಲ್ಲ. ಇಂಥಾ ತತ್ವದ ಸಾಕ್ಷಾತ್ಕಾರವೇ ಜಗತ್ತಿನಲ್ಲಿ ಈಗ ಹೆಚ್ಚುತ್ತಲೇ ಬರುತ್ತಲಿರುವ ಕ್ಲೇಶಗಳನ್ನು ನಿವಾರಣೆಮಾಡಬಲ್ಲುದು. ಮನುಷ್ಯನು ಈ ಪಾಶದಿಂದ ಬಿಡುಗಡೆ ಹೊಂದುವುದು ಹೇಗೆ? ಎಂಬುದೇ ಈ ಕಾಲದ ಜಿಜ್ಞಾಸೆ. ಈ ಬಂಧನವು ನಿವೃತ್ತಿಯಾಗಿ ಮೋಕ್ಷವು ದೊರೆತರೆ, ಬಹುಕಾಲದಿಂದ ಮನುಷ್ಯನು ಪಡೆಯಬೇಕೆಂದಿರುವ ನಿಜವಾದ ಸ್ವಾತಂತ್ರ್ಯಸುಖವನ್ನು ಪಡೆದಂತಾಗುವುದು. ಇಂಥಾ ಮುಕ್ತಿಗೆ ಸಂಸ್ಕೃತವೇ ಸಾಧಕವು'' ಎಂದು ನಮ್ಮನ್ನಾಳುವ ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರವರು ರಾಜಧಾನಿಯ ಸಂಸ್ಕೃತಮಹಾಪಾಠಶಾಲೆಯ ಪಂಚಾಶತ್ಸಂವತ್ಸರ-ಜೂಬಿಲಿ-ಮಹೋತ್ಸವಸಂದರ್ಭದಲ್ಲಿ ಅಪ್ಪಣೆ ಕೊಡಿಸಿರುವರು. ಇಂತಹ ಜ್ಞಾನಭಂಡಾರವೂ, ಮುಕ್ತಿಸಾಧಕವೂ ಆದ ಆ ಮಹಾಸಂಸ್ಕೃತಭಾಷೆಯಲ್ಲಿ ಪ್ರೌಢಿಮೆಯನ್ನು ಪಡೆಯಲು ದಾಕ್ಷಿಣಾತ್ಯ ವೀರಶೈವರಿಗೆ ಅವಕಾಶವಿಲ್ಲದಿದ್ದ ಮಹಾಕೊರತೆಯ ನಿವಾರಣೆಗಾಗಿ ಒಂದುಲಕ್ಷ ರೂಪಾಯಿಯನ್ನು ಆತ್ಮಸಂತೋಷದಿಂದ ವ್ಯಯಮಾಡಿ ಶಂಕರ ಸಂಸ್ಕೃತಮಹಾಪಾಠಶಾಲೆಯನ್ನು ಯಾದಗಿರಿಯಲ್ಲಿ ಸ್ಥಾಪಿಸಿದ ಆ ಧರ್ಮವೀರ ಶಂಕರಣ್ಣನವರು ಆಕಸ್ಮಿಕ ವಾತರೋಗಪೀಡಿತರಾಗಿ ಈ ತಾ|| ೯ ರಲ್ಲಿ ಪರಮಪದವನ್ನು ಹೊಂದಿದರೆಂದು ತಿಳುಹಲು ಅತ್ಯಂತಖೇದವಾಗುತ್ತದೆ. ಇವರ ಮರಣವಾರ್ತಾಲೇಖವು ಭಾವಚಿತ್ರಸಮೇತ ಬೇರೊಂದುಭಾಗದಲ್ಲಿ ಪ್ರಕಟಿತವಾಗಿರುತ್ತದೆ.

ಲೋಕದಲ್ಲಿ ದಾನಗಳಲ್ಲೆಲ್ಲ ಅನ್ನದಾನವು ಶ್ರೇಷ್ಠವಾದುದೆಂದು ಭಾವಿಸಲ್ಪಟ್ಟಿರುವುದಾದರೂ, ಅದು ತಾತ್ಕಾಲಿಕ ತೃಪ್ತಿಯನ್ನುಂಟುಮಾಡುವುದಾದುದರಿಂದ, ಶಾಶ್ವತತೃಪ್ತಿಯನ್ನುಂಟುಮಾಡುವ ವಿದ್ಯಾದಾನವು ಎಲ್ಲಕ್ಕಿಂತಲೂ ಮಿಗಿಲಾದುದು. ಈ ತತ್ವವನ್ನರಿತೇ ಕೈ|| ಸಿರಸಂಗಿದೇಸಾಯರು ಅಪುತ್ರವಂತರಾಗಿದ್ದರೂ ತಮ್ಮ ಸಂತಾನಾಭಿವೃದ್ಧಿಯಮೇಲೆ ಲಕ್ಷ್ಯವಿಡದೆ ವರ್ಷವೊಂದಕ್ಕೆ 40-50 ಸಾವಿರ ರೂ. ವರೆಗೆ ವರಮಾನವಿರುವ ತಮ್ಮ ದೇಶಗತಿಯನ್ನೂ, ಅವರಂತೆಯೇ ಅಪುತ್ರವಂತರಾಗಿದ್ದ ಬೆಂಗಳೂರಿನ ಕೈ|| ಸೂಲಬಲೆ ಶಾಮಣ್ಣನವರು 60-70 ಸಾವಿರ ರೂ. ಬೆಲೆ ಬಾಳುವ ತಮ್ಮ ಚರಸ್ಥಿರಾಸ್ತಿಯನ್ನೂ, ಪುತ್ರವಂತರಾಗಿದ್ದ ಕೈ|| ಕಬ್ಬಹಳ್ಳಿ ಚೆನ್ನಬಸವಪ್ಪನವರು 60-70 ಸಾವಿರ ರೂ. ಗಳನ್ನೂ ವೀರಶೈವರ ವಿದ್ಯಾಭಿವೃದ್ಧಿಗಾಗಿ ದಾನಮಾಡಿ ಶಾಶ್ವತ ಕೀರ್ತಿಯನ್ನು ಪಡೆದು ಪ್ರಮಥಶ್ರೇಣಿಯಲ್ಲಿ ಸೇರಿ ವೀರಶೈವರಿಂದ ಪೂಜಿಸಲ್ಪಡುತ್ತಿರುವರು. ಈ ಪುರುಷಪುಂಗವರಂತೆ ಅಪುತ್ರವಂತರಾದ ಯಾದಗಿರಿಯ ಶ್ರೀಮಂತ ಶಂಕರಣ್ಣನವರು ಪರಮಪವಿತ್ರವಾದ ಗೀರ್ವಾಣಭಾಷಾಭ್ಯಾಸಕ್ಕಾಗಿ ಈಗ್ಗೆ 2 ವರ್ಷಗಳ ಕೆಳಗೆ 1 ಲಕ್ಷ ರೂ. ಗಳನ್ನು ದಾನಮಾಡಿ ಮಹಾಪಾಠಶಾಲೆಯನ್ನು ಸ್ಥಾಪನಗೊಳಿಸಿ ಗುಣಗ್ರಹಣಪರವಾದ ಲೋಕಾಭಿನಂದನಕ್ಕೆ ಪಾತ್ರರಾಗಿದ್ದರು, ಮತ್ತು ಈ ಮಹಾಪಾಠಶಾಲೆಯು ನಿರಾತಂಕವಾಗಿ ನಡೆದುಕೊಂಡು ಹೋಗಲು ತಮ್ಮ ಅವಸಾನಕಾಲದಲ್ಲಿ 50,000 ರೂ. ಗಳನ್ನು ದಾನಮಾಡಿದರು. ಮನುಷ್ಯಜನ್ಮ ಸಾರ್ಥಕ್ಯಕ್ಕೆ ದಾನಗುಣವೇ ಮುಖ್ಯವು, ಮತ್ತು ಧನಿಕನ ಧನವು ಪರಹಿತಕ್ಕಾಗುಪಯೋಗವಾಗದಿದ್ದಲ್ಲಿ ಅದಕ್ಕೆ ಸಾರ್ಥಕತೆಯುಂಟಾಗುವುದಿಲ್ಲ. ಸತ್ಪಾತ್ರವರಿತು ಮಾಡುವ ದಾನಗುಣವು ಈಶ್ವರಾನುಗ್ರಹದಿಂದ ಲಭ್ಯವಾಗಬೇಕಲ್ಲದೆ ಪರರನ್ನು ನೋಡಿ ಕಲಿತುಕೊಂಡರೆ ಬರತಕ್ಕುದಲ್ಲ. ಬಲಿಷ್ಠರಿಂದ ಬಲಹೀನರಿಗೆ ಸಾಹಾಯ್ಯವಾಗಬೇಕೆಂಬುದೇ ಈಶ್ವರನ ಸಂಕಲ್ಪವು. ಪರರಿಗೆ ತನ್ನಿಂದ ಯತ್ಕಿಂಚಿತ್ ಉಪಕಾರವಾದರೂ ಆದೀತೇ ? ಎಂದು ಯಾವಮನುಷ್ಯನು ನಿರೀಕ್ಷಿಸಿಕೊಂಡು ತನ್ನ ಇಹಲೋಕಯಾತ್ರೆಯನ್ನು ಸಾಗಿಸುವನೋ ಅವನೇ ಈಶ್ವರಸಂಕಲ್ಪಕ್ಕೆ ಅನುಗುಣವಾಗಿ ನಡೆಯುವವನೆಂದು ಭಾವಿಸಲ್ಪಡುವನು. ಅವನಮೇಲೆ ಈಶ್ವರಾನುಗ್ರಹವಿರುತ್ತದೆಂಬುದಕ್ಕೆ ಅವನ ಸ್ವಾರ್ಥತ್ಯಾಗಬುದ್ಧಿಯೇ ಮುಖ್ಯಚಿಹ್ನೆಯಾಗಿರುವುದು. ಹೀಗೆ ಸ್ವಮತೋದ್ಧಾರಕ್ಕಾಗಿ ಅವತರಿಸಿದ್ದ ಧರ್ಮವೀರ ಶಂಕರಣ್ಣನವರನ್ನೂ, ಕಬ್ಬಹಳ್ಳಿಯ ಚೆನ್ನಬಸವಪ್ಪನವರನ್ನೂ ಒಂದುವರ್ಷಕಾಲದೊಳಗಾಗಿ ಕಳೆದುಕೊಂಡ ಈ ವೀರಶೈವಸಮಾಜದ ದುರ್ದೈವವನ್ನು ಎಷ್ಟು ಹೇಳಿದರೂ ತೀರದುದಾಗಿದೆ. ಆದರೆ ಭಗವತ್ಸಂಕಲ್ಪಕ್ಕೆ ಅನ್ಯಥಾ ಇಲ್ಲವಾದುದರಿಂದ ಮೃತರ ಆತ್ಮಕ್ಕೆ ಶಾಶ್ವತಸುಖವೂ, ಅವರ ಧರ್ಮಪತ್ನಿಯವರಿಗೆ ದುಃಖಸಮಾಧಾನವೂ ಅನುಗ್ರಹಿಸಲ್ಪಡಲೆಂದು ಕೋರುತ್ತೇವೆ.

ವೀರಶೈವರ ಕೈಪಿಡಿ.

ವೀರಶೈವರ ಪ್ರಾಚೀನತ್ವ, ಉದ್ಧಾರ, ಪ್ರಸಾರ, ಧರ್ಮತತ್ವ, ಧರ್ಮಾಚರಣೆ, ಸಮಾಜರಚನೆ, ಧಾರ್ಮಿಕ ಲೌಕಿಕ ವಾಙ್ಮಯ, ಶಿಕ್ಷಣಕ್ರಮ, ವೈದಿಕ ರಾಜಕೀಯವೃತ್ತಿ, ಕೃಷಿ, ವಾಣಿಜ್ಯ ಮೊದಲಾದ ಪ್ರಾಚೀನ ಮತ್ತು ಅರ್ವಾಚೀನ ವಿಷಯಗಳಿಂದ ಕೂಡಿದ ಒಂದು ಪುಸ್ತಕವನ್ನು “ ವೀರಶೈವರ ಕೈಪಿಡಿ ” ಎಂಬ ಹೆಸರಿನಿಂದ ಬರೆದು ಬರುವ ಡಿಶಂಬರ್ ತಿಂಗಳಲ್ಲಿ ನಡೆಯುವ ವೀರಶೈವಮಹಾಸಭಾ ಕಾಲದಲ್ಲಿ ಪ್ರಕಟಿಸಲು ಧಾರವಾಡದ ಕರ್ನಾಟಕ ಲಿಂಗಾಯತ ಎಜ್ಯುಕೇಷನಲ್ ಸೊಸೈಟಿಯ ಮ|| ಗಳಾದ ಎಸ್. ಬಸವನಾಳ, ಎಂ.ಎ., ರವರು ಮತ್ತು ಎಚ್. ಎಫ್. ಕಟ್ಟೀಮನಿ, ಬಿ.ಎ., ರವರು ಸಂಕಲ್ಪಿಸಿ ಮೇಲ್ಕಂಡ ವಿಷಯಗಳಲ್ಲಿ ಅನುಭವಪೂರ್ವಕವಾದ ವಿಶೇಷ ಸಂಗತಿಗಳನ್ನು ಸಮಾಜಬಾಂಧವರು ಆದಷ್ಟು ಜಾಗ್ರತೆಯಲ್ಲಿ ಬರೆದು ತಮಗೆ ಕಳುಹಬೇಕೆಂದು ಕೋರಿರುತ್ತಾರೆ. ಮಹಾಸಭಾ ಸಮ್ಮೇಳನದಲ್ಲಿ ಮತಸುಧಾರಕ ವಿಷಯಗಳನ್ನು ಪರ್ಯಾಲೋಚಿಸಿ ನಿರ್ಧಾರಗಳನ್ನು ಮಾಡಲು ಈ ಕೈಪಿಡಿಯು ಸಾಹಾಯ್ಯಕಾರಿಸುವುದರಿಂದ ವೀರಶೈವಮತಾಭಿಮಾನಿಗಳು ಕೈಪಿಡಿಯ ಸಂಪಾದಕರ ಕೋರಿಕೆಯನ್ನು ನೆರವೇರಿಸುವವರಾಗಲೆಂದು ಅಪೇಕ್ಷಿಸುತ್ತೇವೆ.

ಕಳೆದ 21 ತಿಂಗಳಲ್ಲಿ ಬ್ರಿಟಿಷ್ ಆಕಾಶಯಾನಿಕರು 20,00,000 ಮೈಲಿ ವಿಸ್ತೀರ್ಣದಲ್ಲಿ 25,000 ಪ್ರಯಾಣಿಕರ ಸಮೇತ ಯಾವುದೊಂದು ಅಪಾಯವಿಲ್ಲದೆ ಸಂಚರಿಸಿರುತ್ತಾರೆ.

ಗ್ರೇಟರ್ ಲಂಡನ್ ಪಟ್ಟಣದಲ್ಲಿ ಬೀದಿಗಳ ವಿಸ್ತೀರ್ಣವು 2,300 ಮೈಲಿಗಳಿದ್ದು ಅವುಗಳ ಪೋಷಣೆಗಾಗಿ ಒಂದುವರ್ಷಕ್ಕೆ 3,90,00,000 ರೂ. ವ್ಯಯವಾಗುತ್ತದಂತೆ. ಹಾಗಾದರೆ ಆ ಪಟ್ಟಣದ ಉತ್ಪನ್ನವೆಷ್ಟಿರಬೇಕು ?

ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರರ ಚುನಾವಣೆ.

ಮೈಸೂರು ನ್ಯಾಯವಿಧಾಯಕಸಭೆಯ ತೀರ್ಮಾನದಂತೆ ನೂತನವಾಗಿ ರಚಿಸಲ್ಪಡಬೇಕಾಗಿರುವ ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟ್‌ಬೋರ್ಡುಗಳಿಗೆ ಮೆಂಬರುಗಳನ್ನು ಚುನಾಯಿಸುವ ಕಾಲ ಸಮೀಪಿಸಿರುವುದರಿಂದ, ಈ ಚುನಾವಣೆಯಲ್ಲಿ ಹಿಂದುಳಿದ ಪಂಗಡಗಳ ಓಟರುಗಳು ಗಮನದಲ್ಲಿಡಬೇಕಾದ ವಿಷಯವನ್ನು ಕುರಿತು ಪ್ರಜಾಮಿತ್ರಮಂಡಲಿಯವರು ಕೊಟ್ಟಿರುವ ಎಚ್ಚರಿಕೆಯು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿರುತ್ತದೆ. ವಿದ್ಯಾವಿಹೀನತೆಯಿಂದಲೂ, ರಾಜಕೀಯ ವಿಚಾರಮೌಢ್ಯದಿಂದಲೂ ಹಿಂದುಳಿದವರೆನಿಸಿಕೊಂಡಿರುವವರು ತಮ್ಮ ಕುಂದುಕೊರತೆಗಳನ್ನು ತಿಳಿದವರಾಗಿ ನಿರ್ವಂಚನೆಯಿಂದ ಸರ್ಕಾರದವರಲ್ಲಿ ನಿವೇದಿಸಿ ಹಿತವನ್ನು ಸಾಧಿಸಬಲ್ಲವರಾರೆಂಬುದನ್ನು ಅರಿತುಕೊಂಡು ಡಿ|| ಬೋರ್ಡುಗಳಲ್ಲಿ ಅವರುಗಳು ತಮ್ಮ ಪ್ರತಿನಿಧಿಗಳಾಗಿರಲು ತಮ್ಮ ಸಮ್ಮತಿ ಅಂದರೆ ಓಟನ್ನು ಕೊಟ್ಟು ಕೃತಕೃತ್ಯರಾಗಬೇಕಲ್ಲದೆ, ತಮ್ಮ ಹಿತಚಿಂತಕರಂತೆ ನಟಿಸುವ ಸ್ವಾರ್ಥಪರರ ಮರುಳುಮಾತಿಗೆ ಬೆರಗಾಗಿ ತಮ್ಮ ಕಾಲಿನಮೇಲೆ ತಾವೇ ಕಲ್ಲನ್ನು ಹಾಕಿಕೊಂಡು ಅನಂತರ ಗೋಳಾಡುವುದು ವಿವೇಕವಲ್ಲವಾದುದರಿಂದ ಪ್ರಜಾಮಿತ್ರಮಂಡಲಿಯವರ ಹಿತಸೂಚನೆಯನ್ನು ಗಮನಿಸಿ ನಡೆಯಲೆಂದು ಕೋರುವೆವು.

ಸ್ವದೇಶದ ವೃತ್ತಾಂತಗಳು.

ಕಳೆದ ಅಕ್ಟೋಬರ್ ತಾ|| 23 ಕ್ಕೆ ಅಂತ್ಯವಾದ ಒಂದು ವಾರದಲ್ಲಿ ಮೈಸೂರು ರೈಲ್ವೆಗಳಿಂದ 83,800 ರೂ. ಗಳುತ್ಪನ್ನವಾಗಿರುತ್ತದೆ. ಕಳೆದವರ್ಷ ಇದೇ ಕಾಲದಲ್ಲಿ 62,734 ರೂ. ಮಾತ್ರ ಉತ್ಪನ್ನವಾಗಿದ್ದಿತು.

ಪೋಲೀಸ್ ಕಾನೆಸ್ಟಬಲ್ ರಾಮಲಿಂಗ್ ಎಂಬವನು ವೆಂಕಟಮ್ಮನೆಂಬವಳನ್ನು ದುರುದ್ದೇಶದಿಂದ ಎತ್ತಿಕೊಂಡುಹೋಗಿದ್ದ ಅಪರಾಧಕ್ಕಾಗಿ ರಾಜಧಾನಿಯ ಅ|| ಸೆಷನ್ಸು ಜಡ್ಜರಿಂದ 3 ವರ್ಷ ಕಠಿಣಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ರಾಜಧಾನಿಯ ಶ್ರೀಚಾಮುಂಡೇಶ್ವರೀ ಕರ್ನಾಟಕನಾಟಕ ಸಂಘದವರು ಈ ರಾತ್ರಿ ತಮ್ಮ ಲೋಕರಂಜಕವಾದ ರಾಜಸೂಯಯಾಗನಾಟಕವನ್ನು ಅಭಿನಯಿಸಿ ಅದರುತ್ಪನ್ನವನ್ನು ಸಂಘದ ಅಧಿದೇವತೆಯಾದ ಶ್ರೀಚಾಮುಂಡಾಂಬಿಕಾಸೇವೆಗೆ ವಿನಿಯೋಗಿಸುವವರಾಗಿರುವರು.

ಬೆಂಗಳೂರಲ್ಲಿ ಸಬ್‌ಜಡ್ಜಿಯವರಾಗಿದ್ದ ಮ|| ಸಿ. ಮಹಾದೇವಯ್ಯನವರು ಶಿವಮೊಗ್ಗೆಯ ಆಕ್ಟಿಂಗ್ ಡಿಸ್ಟ್ರಿಕ್ಟ್‌ಜಡ್ಜಿಯವರಾಗಿಯೂ, ರಾಜಧಾನಿಯ ಅಡಿಷನಲ್ ಮುನಸೀಫರಾಗಿದ್ದ ಮ|| ಎಚ್. ಕೆ. ವೀರಬಸವಯ್ಯನವರು ಬೆಂಗಳೂರು ಆಕ್ಟಿಂಗ್ ಸಬ್‌ಜಡ್ಜರಾಗಿಯೂ, ತುಮಕೂರಿನ ಅಡ್ವೋಕೇಟ್ ಮ|| ಜಿ. ರುದ್ರಪ್ಪ, ಬಿ.ಎ., ಎಲ್.ಎಲ್.ಬಿ., ರವರು ರಾಜಧಾನಿಯ ಆಕ್ಟಿಂಗ್ ಅಡಿಷನಲ್ ಮುನಸೀಫರಾಗಿಯೂ ನಿಯಮಿಸಲ್ಪಟ್ಟಿರುವರು.

ದಿವಾನರು ಶಿವಮೊಗ್ಗ ಡಿಸ್ಟ್ರಿಕ್ಟ್ ಸಂಚಾರಕ್ಕೆ ಈ ತಾ|| 10 ರಲ್ಲಿ ಹೊರಡುವುದು ತಪ್ಪಿ ಇಷ್ಟರಲ್ಲೇ ದಿಲ್ಲಿಗೆ ಪ್ರಯಾಣಮಾಡಿ ಅಲ್ಲಿ 1 ಪಕ್ಷದ ಕಾಲದವರೆಗಿದ್ದು ಬರುವವರಾಗಿರುವರು, ಮತ್ತು ತತ್ಸಂಬಂಧವಾಗಿ ಕಳೆದ ಮಂಗಳವಾರ ರಾಜಧಾನಿಗೆ ಬಂದು ಖಾಸಬಂಗಲೆಯಲ್ಲಿ ಶ್ರೀಮನ್ಮಹಾರಾಜರವರ ದರ್ಶನವನ್ನು ತೆಗೆದುಕೊಂಡು ಬೆಳಗಿನ 9 ಘಂಟೆಯಿಂದ 11 ಘಂಟೆಯವರೆಗೆ ಸಂಭಾಷಿಸುತ್ತಿದ್ದು ಅದೇ ದಿವಸ ಬೆಂಗಳೂರಿಗೆ ಮರಳಿ ಪ್ರಯಾಣಮಾಡಿದರು.

ಬೆಳಗಾಂ ಡಿಸ್ಟ್ರಿಕ್ಟಿಗೆ ಸೇರಿದ ಬೈಲಹೊಂಗಲದಲ್ಲಿ ಪ್ರತಿ ಸೋಮವಾರ ಪ್ರಕಟವಾಗುವ ತರುಣಕರ್ನಾಟಕವೃತ್ತಪತ್ರಿಕೆಯನ್ನು ವಿನಿಮಯದಿಂದ ಸ್ವೀಕರಿಸಿರುತ್ತೇವೆ. ರಾಜಕೀಯ ಸಾಮಾಜಿಕ, ನೈತ್ತಿಕ, ಸಾಂಪತ್ತಿಕ ವಿಷಯವಿವೇಚನೆಯನ್ನು ತನ್ನ ಮುಖ್ಯಧ್ಯೇಯವಾಗುಳ್ಳ ಈ ನೂತನಬಂಧುವು ಚಿರಂಜೀವಿಯಾಗಿಬಾಳಿ, ಕರ್ನಾಟಕದ ವರ್ತಮಾನಪತ್ರಿಕೆಗಳಲ್ಲೆಲ್ಲ ಉತ್ತಮವಾದುದೆಂದೆನಿಸಿಕೊಳ್ಳಬೇಕೆಂಬ ತನ್ನ ಆಕಾಂಕ್ಷೆಯನ್ನು ಪೂರೈಸಿಕೊಳ್ಳುವುದಾಗಲೆಂದು ಹರಸುತ್ತೇವೆ.

ರಾಜಧಾನಿಯ ಅನೇಕ ಬೀದಿಗಳಲ್ಲಿ ದೀಪಗಳಿಲ್ಲದಿರುವುದರಿಂದ ಕಗ್ಗತ್ತಲೆಯಲ್ಲಿ ತಿರುಗಾಡುವ ಮುದುಕರೋಟರುಗಳಿಗೆ ಬಹಳ ಹಿಂಸೆಯಾಗಿರುವುದಲ್ಲದೆ ಜಾರಚೋರರಿಗೆ ಅನುಕೂಲವಾಗಿರುತ್ತದೆ. ಇದೇ ತೊಂದರೆಯು ಬೆಂಗಳೂರಿನಲ್ಲೂ ಉಂಟಾಗಿದೆಯಂತೆ. ಹೀಗಿದ್ದರೂ ಒಂದಕ್ಕೆ ಹತ್ತರಷ್ಟು ಆದಾಯವನ್ನು ಹೊಂದುತ್ತಿರುವ ವಿದ್ಯುದ್ದೀಪದ ಶಾಖೆಯವರು ತಮ್ಮ ಆದಾಯಕ್ಕೆ ಮೂಲಾಧಾರರಾದ ಜನರ ಕಷ್ಟವನ್ನು ಪರಿಹರಿಸಲು ಗಮನಕೊಡದಿರುವುದು ಬಹಳ ಶೋಚನೀಯವಾಗಿರುತ್ತದೆ.

ಶ್ರೀಮನ್ಮಹಾರಾಜರವರು ಮೊನ್ನೆಯದಿವಸ ಪ್ರಾತಃಕಾಲ ಇಲವಾಲದವರೆಗೆ ಮೋಟಾರುಬಂಡಿಯಲ್ಲಿ ಪ್ರಯಾಣಮಾಡಿ ಅಲ್ಲಿ ನಿರೀಕ್ಷಿಸಿಕೊಂಡಿದ್ದ ಅರಸುಮಕ್ಕಳುಗಳೊಡನೆ ಕುದುರೆಸ್ವಾರಿಯಿಂದ ಶ್ರೀಕಂಠಗಣ್ಣಸ್ವಾಮಿಯ ಗದ್ದುಗೆಗೆ ದಯಮಾಡಿಸಿದ್ದು ಅದೇ ಸಾಯಂಕಾಲ ರಾಜಧಾನಿಗೆ ಚಿತ್ತೈಸಿದರು. ಸರದಾರರುಗಳಾದ ಗೋಪಾಲರಾಜ ಅರಸಿನವರು, ಗೋಪಾಲಕೃಷ್ಣಅರಸಿನವರು, ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು ಮತ್ತೆ ಕೆಲರು ರಾಜಧಾನಿಯಿಂದ ಮೋಟಾರುಬಂಡಿಯಲ್ಲಿ ಹೋಗಿದ್ದು ಬಂದರು.

ರಾಜಧಾನಿಯಲ್ಲಿರುವ ಸರ್ಕಾರಿಯ ಆಯುರ್ವೇದಿಕ್ ಕಾಲೇಜಿನಲ್ಲಿ ಶ್ರೀಧನ್ವಂತರಿ ಜಯಂತ್ಯುತ್ಸವವು ಕಳೆದ ತಾ|| 3ನೇ ಬುಧವಾರ ಸಾಯಂಕಾಲ ಅರಮನೆಯ ಮುಜರಾಯಿಬಕ್ಷಿ ರಾಜಕವಿಭೂಷಣ ಎಚ್. ಲಿಂಗರಾಜಅರಸಿನವರ ಅಧ್ಯಕ್ಷತೆಯಲ್ಲಿ ನಡೆದಿತು. ಅನೇಕ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಈ ಕಾಲೇಜಿನ ವಿದ್ಯಾರ್ಥಿ ಮ|| ಬಿ. ವೆಂಕಟೇಶಶಾಸ್ತ್ರಿಗಳು ಆಯುರ್ವೇದ ವಿಷಯವಾಗಿ ಉಪನ್ಯಾಸಮಾಡಿದ ಮೇಲೆ ಅಧ್ಯಕ್ಷರು ಕಾಲೋಚಿತವಾದ ಭಾಷಣಮಾಡಿ ಸಭಿಕರನ್ನು ಆನಂದಗೊಳಿಸಿದರು.

ಮೈಸೂರು ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಬಿಲ್ಲನೆಂಬುವವನು ಮಾಯಿ ಎಂಬುವವಳನ್ನಿಟ್ಟುಕೊಂಡಿದ್ದನು. ಅವಳು ತನ್ನ ಜೀವನಕ್ಕೇನನ್ನೂ ಸಂಪಾದಿಸಿ ತಂದುಹಾಕುತ್ತಿಲ್ಲನೆಂದು ಪಿರ್ಯಾಲಿಸಿ ಜಗಳವಾಡಿದುದರಮೇಲೆ ಬಿಲ್ಲನು ರೇಗಿ ಮಾಯಿಯನ್ನು ಹೊಡೆದನು. ಅದರಿಂದ ಅವಳು ಸತ್ತುಹೋಗಲು ಬಿಲ್ಲನು ತಲೆತಪ್ಪಿಸಿಕೊಂಡು ಓಡಿಹೋಗಿದ್ದನು. ಪೋಲೀಸಿನವರು ಅವನನ್ನು ಹಿಡಿದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ, ಅಪರಾಧಿಯು ಕೋಪೋದ್ರೇಕದಿಂದ ಹೊಡೆದನಲ್ಲದೆ ಕೊಲ್ಲಬೇಕೆಂಬ ಅಭಿಪ್ರಾಯದಿಂದ ಹೊಡೆಯಲಿಲ್ಲನೆಂದು ತೀರ್ಮಾನಿಸಿ ಒಂದು ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಮೈಸೂರು ಪ್ರಜಾಮಿತ್ರಮಂಡಲಿ ಯವರಿಂದ—

ಡಿಸ್ಟ್ರಿಕ್ಟ್‌ಬೋರ್ಡ್ ಓಟರುಮಹಾಶಯರಿಗೆಚ್ಚರಿಕೆ.

ನ್ಯಾಯವಿಧಾಯಕಸಭೆಯಲ್ಲಿ ವಿಶೇಷ ತೊಡಕುಗಳಿಂದ ಪಾರಾಗಿ ಈಗತಾನೇ ಜಾರಿಗೆ ಬಂದಿರುವ ಡಿಸ್ಟ್ರಿಕ್ಟ್ ಬೋರ್ಡ್ ರೆಗ್ಯುಲೇಷನ್ನನುಸರಿಸಿ ಹೊಸದಾಗಿ ನಿರ್ಮಿಸಲ್ಪಡುವ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮೆಂಬರುಗಳ ಚುನಾವಣೆಯು ನಡೆಯಲು ಉಪಕ್ರಮವಾಗಿದೆ. ಈ ಸಮಯದಲ್ಲಿ ನಾವು ಎಚ್ಚರಿಕೆಯನ್ನು ತಪ್ಪಿ ಮೈಮರೆತರೆ ಅದರಿಂದ ವಿಶೇಷವಾದ ಕೆಡಕೂ, ಜನಸಾಮಾನ್ಯದ ಏಳ್ಗೆಗೆ ಕುಂದಕವೂ ಒಂದೊದಗುವುದು ಖಂಡಿತ. ಪ್ರಜಾಪ್ರತಿನಿಧಿಸಭೆಯಲ್ಲೂ, ನ್ಯಾಯವಿಧಾಯಕಸಭೆಯಲ್ಲೂ ದೇಶದ ಏಳ್ಗೆಗೆ ಅತ್ಯಾವಶ್ಯಕವಾದ ಮೇಲ್ಕಂಡ ರೆಗ್ಯುಲೇಷನ್ನು ಚರ್ಚೆಗೆ ತರಲ್ಪಟ್ಟಾಗ ಅದನ್ನು ಜಾರಿಗೆ ತರಕೂಡದೆಂದು ಸಮಯ ದೊರೆತಾಗಲೆಲ್ಲ ಮುಷ್ಕರದಿಂದ ಪ್ರತಿಬಂಧಕಗಳನ್ನು ತಂದೊಡ್ಡಿದವರು ಯಾರೆಂಬುದು ತಮಗೆ ತಿಳಿದೇ ಇದೆ. ದೇಶದ ಬಹು ಸಂಖ್ಯಾಕರಾದ ಹಿಂದುಳಿದ ಜನಾಂಗಗಳ ಪುರೋಭಿವೃದ್ಧಿಯಲ್ಲಿ ಆಕಾಂಕ್ಷೆಯುಳ್ಳವರು ಹೆಚ್ಚು ಹೆಚ್ಚಾಗಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಚುನಾಯಿಸಲ್ಪಟ್ಟ ಹೊರತು ದೇಶಕ್ಕೆ ಕ್ಷೇಮವಾಗಲಾರದು. ಆದುದರಿಂದ ಸಾಧ್ಯವಾದಷ್ಟು ಪ್ರಯತ್ನಪಟ್ಟು ನಿಮ್ಮ ಕ್ಷೇಮಚಿಂತಕರೂ ನಿಮ್ಮಗಳ ಪುರೋಭಿವೃದ್ಧಿಯನ್ನು ಮುಂದುವರಿಸಲು ಕುತೂಹಲ ಮತ್ತು ಶ್ರದ್ಧೆಯುಳ್ಳವರೂ ಆದ ಪ್ರತಿನಿಧಿಗಳನ್ನೇ ನೀವು ಆರಿಸಬೇಕಾಗಿ ನಮ್ಮ ವಿಜ್ಞಾಪನೆ. ನಿಮ್ಮಗಳ ಸೌಕರ್ಯಕ್ಕಾಗಿಯೇ ನಾವು ಜನ್ಮವನ್ನೆತ್ತಿರುತ್ತೇವೆಂದು ಠಕ್ಕು ಮಾತುಗಳನ್ನಾಡುವ ಸ್ವಾರ್ಥಪರರು ನಿಮ್ಮ ನಿಮ್ಮಲ್ಲೇ ಪರಸ್ಪರ ಸ್ಪರ್ಧೆಯನ್ನು ಹುಟ್ಟಿಸಿ, ವಿಶೇಷವಾದ ಪ್ರೋತ್ಸಾಹವನ್ನು ಮಾಡಿ, ಉಪಾಯಾಂತರದಿಂದ ತಮ್ಮ ಕಾರ್ಯವನ್ನು ಸಿದ್ಧಿಸಿಕೊಳ್ಳಲು ಪ್ರಯತ್ನಪಡುತ್ತಲಿರುವರು. ನೀವು ದೇಶಾಭ್ಯುದಯವನ್ನೇ ಮುಖ್ಯವಾಗಿ ಗಮನಕ್ಕೆ ತಂದುಕೊಂಡು, ಆಯಾಯ ತಾಲ್ಲೂಕುಗಳಿಂದ ಎಷ್ಟು ಮೆಂಬರುಗಳು ಆರಿಸಲ್ಪಡಬೇಕೊ ಅಷ್ಟು ಉಮೇದುವಾರರನ್ನು ಮಾತ್ರ ನಿಮ್ಮ ಪರವಾಗಿ ಚುನಾವಣೆಗೆ ನಿಲ್ಲಿಸಿ, ಅವರು ಖಂಡಿತವಾಗಿಯೂ ಚುನಾವಣೆಯಲ್ಲಿ ತೇರ್ಗಡೆಯಾಗುವಂತೆ ಮಾಡತಕ್ಕುದು ಅತ್ಯವಶ್ಯವು. ಹಾಗಲ್ಲದೆ ಅನೇಕರು ಚುನಾವಣೆಗೆ ನಿಂತಲ್ಲಿ, ಓಟುಗಳು ಚೆಲ್ಲಾಪಿಲ್ಲಿಯಾಗಿ ನಮ್ಮ ಹಿತಸಾಧನೆಗೆ ಕುಠಾರಪ್ರಾಯರಾದ ಇದಿರಾಳಿಗಳು ಜಯಶಾಲಿಗಳಾಗಲು ಸುಲಭಸಾಧ್ಯವಾಗುವುದು.

ರಾವ್ ಸಾಹೇಬ್ ಎಚ್. ಚನ್ನಯ್ಯ, ಪ್ರೆಸಿಡೆಂಟ್.
ಮಹಮ್ಮದ್ ಅಬ್ಬಾಸ್ ಖಾನ್, ವೈಸ್ ಪ್ರೆಸಿಡೆಂಟ್.
ಜಿ. ಪರಮಶಿವಯ್ಯ, ಸೆಕ್ರೆಟರಿ.

ಕೈ|| ಚೆನ್ನಬಸವಪ್ಪನವರ ಸ್ಮಾರಕಕ್ಕಾಗಿ ಬಂದ ದ್ರವ್ಯ.

ಈ ಕೆಳಗೆ ಕಂಡ ದೊಡ್ಡಮನುಷ್ಯರಿಂದ ಬಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಟಿ. ರಾಚಪ್ಪನವರು, ಕಂಟ್ರಾಕ್ಟರು ಮತ್ತು ಆನರರಿ ಮ್ಯಾಜಿಸ್ಟ್ರೇಟರು, ಬೆಂಗಳೂರು ರೂ. 10.

ಜಿ. ಪರಮಶಿವಯ್ಯ, ಅಡ್ವೊಕೇಟ್, ಬೆಂಗಳೂರು.

ಧರ್ಮವೀರ ಶಂಕರಣ್ಣನವರ ಶೋಚನೀಯ ಮರಣವು.

(ಪುನಃ ಐವತ್ತುಸಾವಿರ ರೂಪಾಯಿಗಳ ದಾನ)

ವೀರಶೈವಸಮಾಜದ ಧಾರ್ಮಿಕ ವಿದ್ಯೆಯ ವೃದ್ಧಿಗಾಗಿ ಎರಡುವರ್ಷಗಳ ಕೆಳಗೆ ಒಂದು ಲಕ್ಷ ರೂಪಾಯಿಗಳನ್ನು ದಾನಮಾಡಿ ಅತುಲವಾದ ಕೀರ್ತಿಯನ್ನು ಸಂಪಾದಿಸಿದ ಧರ್ಮವೀರ ಸಜ್ಜನಶೆಟ್ಟಿಶಂಕರಣ್ಣನವರು ಯಾದಗಿರಿ ಇವರು ಇದೇ ಕಾರ್ತೀಕ ಶು|| ೪ ಅಂದರೆ ತಾ|| 9-10-26 ರಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲಿಕ್ಕೆ ಅತ್ಯಂತ ವಿಷಾದವುಂಟಾಗುತ್ತದೆ. ಈ ಧರ್ಮವೀರರು ವಾರದ ಅಪ್ಪಾಸಾಹೇಬರು, ಶಿರಸಂಗಿದೇಸಾಯರು, ಗುಬ್ಬಿ ತೋಟದಪ್ಪನವರು, ಕಬ್ಬಹಳ್ಳಿಚೆನ್ನಬಸವಪ್ಪನವರು ಮೊದಲಾದ ಮಹನೀಯರ ಮಾಲಿಕೆಯಲ್ಲಿ ಸೇರಿದವರು. ಇವರು ತಾವು ಸ್ಥಾಪಿಸಿದ ಸಂಸ್ಕೃತ ಕಾಲೇಜಿನ ದೆಸೆಯಿಂದ ಒಳ್ಳೇ ಕಳಕಳಿಯಿಂದ ಕಾರ್ಯವನ್ನು ಮಾಡುತ್ತಿದ್ದರು. ಇವರ ಆಕಸ್ಮಿಕ ಮರಣದಿಂದ ಇವರ ಸಂಸ್ಥೆಗೂ ಇವರ ಕುಟುಂಬಕ್ಕೂ ಸಮಾಜದ ಇತರ ಕಾರ್ಯಗಳಿಗೂ ಅಪಾರವಾದ ಹಾನಿಯಾಯಿತು. ಧರ್ಮವೀರರ ಶ್ರೇಷ್ಠಗುಣಗಳನ್ನು ಎಷ್ಟು ಹೊಗಳಿದರೂ ತೀರದುದಾಗಿರುತ್ತದೆ. ಇವರ ಪ್ರಕೃತಿಯು ಬಹಳ ದೃಢವಾಗಿದ್ದಿತಾದರೂ ಎಂಟೇ ದಿನಗಳಲ್ಲಿ ಧರ್ಮವೀರರಿಗೆ ವಾತರೋಗಪ್ರಾಬಲ್ಯವಾಗಿ ಅವರ ಇಹಲೋಕಯಾತ್ರೆಯು ಮುಗಿಯಿತು. ಆದಿನ ಪ್ರಾತಃಕಾಲ ೮ ಘಂಟೆಗೆ ಧರ್ಮವೀರರ ಮರಣವಾರ್ತೆಯನ್ನು ಕೇಳಿದಕೂಡಲೆ ಯಾದಗಿರಿಗ್ರಾಮದ ಬಾಜಾರವು ಮುಚ್ಚಲ್ಪಟ್ಟಿತಲ್ಲದೆ ಸಾವಿರಾರು ಜನರು ತಮ್ಮ ವ್ಯಾಪಾರೋದ್ಯೋಗಗಳನ್ನು ಬಿಟ್ಟು ಗುಂಪುಗುಂಪಾಗಿ ಮೃತರ ದರ್ಶನಕ್ಕೆ ಬರುತ್ತಿದ್ದರು. ಸಾಯಂಕಾಲಕ್ಕೆ ಮೆರವಣಿಗೆಯು ಮುಖ್ಯಬಾಜಾರದಲ್ಲಿ ಹೊರಟಿತು. ಜನಸಂದಣಿಯು ಅತಿಶಯವಾಗಿತ್ತು. ಉತ್ಸವದಲ್ಲಿ ಇವರ ಕಾಲೇಜಿನ ೪೦ ಜನ ವಿದ್ಯಾರ್ಥಿಗಳು ಶಿವಭಜನೆಯನ್ನು ಮಾಡುತ್ತಿದ್ದರು. ಅನೇಕ ವಾದ್ಯಗಳು ಘೋರ್ಗರೆಯುತ್ತಿದ್ದುವು. ಹಿಂದಿನ ಬರಗಾಲದಲ್ಲಿ ಇವರು ಬಡವರಿಗೆ ಅನ್ನದಾನವನ್ನು ಮಾಡಿದ ಕೀರ್ತಿಯನ್ನು ಹೊಗಳುತ್ತ ಎಷ್ಟೋಜನ ಹಳ್ಳಿಹಳ್ಳಿಗಳಿಂದ ಬಂದವರು ದುಃಖವನ್ನು ಪ್ರಕಟಿಸುತ್ತಿದ್ದರು. ಸಾಯಂಕಾಲ ೬ ಘಂಟೆಗೆ ಶವಸಂಸ್ಕಾರವು ಒಳ್ಳೇ ವಿಜೃಂಭಣೆಯಿಂದ ನಡೆಯಿತು. ಧರ್ಮವೀರರು ತಮ್ಮ ಮರಣಕ್ಕೆ ಎರಡು ದಿನಗಳ ಹಿಂದೆ ಶ್ರೀಮನ್ನಿರಂಜನ ಶಾಂತವೀರಸ್ವಾಮಿಗಳವರು ಗುರುಮಠಕಲ್ಲ (ಶಂಕರಣ್ಣನವರು ಸ್ಥಾಪಿಸಿದ ಸಂಸ್ಥೆಯ ಪ್ರೆಸಿಡೆಂಟರು) ಇವರನ್ನು ಬರಮಾಡಿಕೊಂಡು ತಾವು ಮಾಡಿದ ಕಾಲೇಜಿನ ಖರ್ಚಿಗಾಗಿ ವರ್ಷಕ್ಕೆ ೧೨ ಸಾವಿರ ಉತ್ಪನ್ನವಾಗಬೇಕೆಂತಲೂ ಅದಕ್ಕಾಗಿ ಒಂದು ಸ್ವತಂತ್ರ ಫ್ಯಾಕ್ಟರಿಯನ್ನು ಸ್ಥಾಪಿಸಬೇಕೆಂತಲೂ ಕಡಮೆಬಿದ್ದ 50,000 ರೂಪಾಯಿಗಳನ್ನು ಪುನಃ ಕೊಡುತ್ತೇನೆಂತಲೂ ಶ್ರೀಗಳವರಿಗೆ ವಚನವನ್ನು ಕೊಟ್ಟರು. ಅದರ ಮರುದಿನವೇ ಧರ್ಮವೀರರ ಪ್ರಕೃತಿಯು ಬಹಳವಾಗಿ ಕೆಟ್ಟಿತು. ವಾಚಕರೇ, ನೋಡಿದಿರಾ ಧರ್ಮವೀರರ ಕೃತಿಯನ್ನು ! ಇವರ ಈ ಅಗಾಧವಾದ ದಾನವು ಸ್ವಸಮಾಜಕ್ಕೆ ಆಶ್ಚರ್ಯವನ್ನುಂಟುಮಾಡುವಂಥಾದ್ದೂ, ಉಳಿದ ಶ್ರೀಮಂತರಿಗೆ ಮಾರ್ಗದರ್ಶಕವಾದದ್ದೂ ಲೋಭಿಗಳಿಗೆ ನಾಚಿಕೆಯನ್ನು ಹುಟ್ಟಿಸುವಂಥಾದ್ದೂ ಆಗಿರುತ್ತದೆ. ಆದರೆ ಈ ಪುಣ್ಯಾತ್ಮರು ಇನ್ನೂ ಕೆಲವು ದಿನಗಳವರೆಗೆ ಜೀವಿಸಿದ್ದರೆ ಸಮಾಜದ ಇನ್ನೂ ಎಷ್ಟೋ ಧರ್ಮ ಕಾರ್ಯಗಳಾಗುತ್ತಿದ್ದುವು. ಈಶ್ವರೇಚ್ಛೆಗೆ ಮಾಡುವುದೇನು! ಸದ್ಯಕ್ಕೆ ಧರ್ಮವೀರರ ಪತ್ನಿ ಗಂಗಮ್ಮನವರಿಗೆ ಅಪಾರವಾದ ವ್ಯಸನವುಂಟಾಗಿರುವದು. ಶಂಕರಣ್ಣನವರಿಗೆ ಮರಣಸಮಯದಲ್ಲಿ 70 ವರ್ಷವಯಸ್ಸಾಗಿದ್ದಿತು. ದೇವರು ಇವರ ಆತ್ಮಕ್ಕೆ ಶಾಂತಿಯನ್ನು ಕೊಟ್ಟು ಇವರ ಕುಟುಂಬಕ್ಕೆ ಸಮಾಧಾನವನ್ನುಂಟುಮಾಡಲೆಂದು ಪ್ರತಿಯೊಬ್ಬ ಲಿಂಗಾಂಗಿಯು ಪ್ರಾರ್ಥಿಸಬೇಕಾಗಿದೆ. ಧರ್ಮವೀರರು ಸತ್ಯಸಂಧರಾಗಿಯೂ, ಪಾಪಭೀರುಗಳಾಗಿಯೂ, ಸಮಾಜದ ಅಭಿಮಾನವುಳ್ಳವರಾಗಿಯೂ, ವಾರದ ಅಪ್ಪಾಸಾಹೇಬರೇ ಮೊದಲಾದವರಿಂದ ಖಾಲಿಯಾದ ಧರ್ಮಸ್ಥಲವನ್ನು ಭರ್ತಿಮಾಡಿದವರಾಗಿಯೂ, ಎಷ್ಟೋ ದಿನಗಳಿಂದ ಸಮಾಜದ ಪ್ರಮುಖರು ಸ್ಥಾಪಿಸಬೇಕೆಂದಿದ್ದ ಸಂಸ್ಕೃತಕಾಲೇಜನ್ನು ಸ್ವಂತ ಸ್ಥಾಪಿಸಿದವರಾಗಿಯೂ ಇದ್ದರು. ಇಂಥಾ ಪುಣ್ಯಾತ್ಮರನ್ನು ಕಳೆದುಕೊಂಡ ಸಮಾಜದ ದೌರ್ಭಾಗ್ಯವನ್ನು ಈ ಲೇಖಕನು ವರ್ಣನೆಮಾಡಲಾರನು. ಮುಂದಿನವಾರ ಸ್ಟಾರ್ ಪತ್ರಿಕೆಯ ವಾಚಕರಿಗಾಗಿ ಧರ್ಮವೀರರ ಸಂಕ್ಷಿಪ್ತಚರಿತ್ರೆಯನ್ನು ಕೊಡುವೆನು.

ಧರ್ಮವೀರ ಶಂಕರಣ್ಣನವರು.

ಚಂದ್ರಶೇಖರಶಾಸ್ತ್ರಿ, ವ್ಯಾಕರಣತೀರ್ಥ
ಶಂಕರಕಾಲೇಜು, ಯಾದಗಿರಿ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ABSOLUTELY INCORRECT STATEMENT.

Sir,

May I request the favour of your hospitality regarding the publication of a few lines underneath.

A short note under the caption “Judge and Bar” appeared on page 8 of the Hindu dated the 1st instant. That paper's correspondent thought it expedient to telegraph the news on that date. I wish the correspondent had shown the same vigilance with regard to other matters that disturb the equanimity of the legal circles. It may be remembered that on the eve of the courts closing for summer, under the guise of exposing an anomaly in the Insolvency Regulation an item of news concerning the same Judge was published.

If the Insolvency Regulation and its administration by this particular Judge were really anomalous how is it we do not find in the various sessions of the Representative Assembly and of the Legislative Council subsequently held the question has not been raised in any form viz., interpellation, representation, resolution, an amending bill, etc., It is also curious that the Advocate whose name appeared then is the chief organiser of the movement now.

The time chosen for the movement is most regrettable. There was a vacancy in the post of a Dist ict Judge. The Judge concerned is the senior most man who has Already acted once and papers with divergent nominations were under the consideration of the Government and at that psycological hour that some Advocates should have resented the action of the Judge who did nothing more than clap into Jail one of the numerous Judgment-debtor clientele for non-payment of a debt founded on a decree passed after contest overruling the defendant's “dishonest” plea is really unfortunate. Regret will be made more poignant when it is learnt that the gratitude for saving ones personal liberty and the right of free persuit of ones calling should have been repaid thus.

Another sad feature is that people of one community alone should have joined in a movement which would cause irrepairable damage to the Judge who is thrown amidst a bar when the number belonging to other different denominations is in a hopeless minority.

The meeting was not open to the press and the President of the meeting in response to the sense of the majority enjoined on all the members present at the meeting not to give publicity to the proceedings and yet the correspondent of the Hindu seems to have been egged on to telegraph to that paper a version which is misleading. Now that the matter has appeared in the press I shall give you a correct version of it. Mr K T. B. Iyengar made certain allegations against the Judge. He was supported by Mr. M. P. Somasekhar Rao and others. The truth of these statements was denied by Mr. C. Nagappa-who I may be allowed to mention is the Editor-in-Chief of the Mysore Law Journal—who was present and who it was that opposed Mr. Bhashyam's junior in that particular case which gave rise to this movement. A Committee has been formed to sift the truth, if any, out of these conflicting statements made by various advocates. The Law Association consists of more than 120 members. The ostensible object of the requisition as disclosed in writing was a non-committal one and some senior gentlemen signed the requisition under the impression that there was no communal or personal venom behind it. But when they found to their dismay that the younger folk were being led by people whose statements were liable to be challenged, the revered seniors of the Bar showed their resentment by refusing to participate in the meeting. About 40 actually attended the meeting and even then the resolution was not accepted. The statement that a committee was appointed to report on the conduct of the Judge is absolutely incorrect. The function of the Committee is merely to find out which set of the advocates is to be believed. The statement that great sensation prevails is likewise untrue. Excepting the disappointment in the bosoms of Messrs. K. T.

Bhashyam and M. P. Somasekhara Rao, who engineered a similar ineffectual organisation to besmirch the fair name of the late Chief Judge, nobody else is in the least perturbed. In fairness to the Hindu Correspondent, to the Judge concerned and to the majority of the Advocates I request that you will kindly give publicity to this letter.

FAIRPLAY.

JUDGE AND BAR.

THE OTHER SIDE OF THE PICTURE.

Sir,

As the article published in the Hindu dated 1st Nov. on page 8 under the heading "Judge and Bar" is likely to create some erroneous impressions in the minds of the readers, I request you to kindly publish the following letter in your valuable paper in public interests:—

The sudden agitation of a certain section of the Lawyers against the Subordinate Judge has taken the public by surprise. If the Law Association considers itself competent to discuss the merits of a case decided by a Judge instead of leaving the aggrieved party to pursue the remedy open to him under the law, there is no need to have courts of appeal or revision. It is said that both the mover and the seconder admitted that they had no personal knowledge of what took place in court in the particular case referred to in their proposition, and it is understood that both of them were playing billiards in the Century Club when the said case was heard and decided. They are said to have complained against the Judge's order committing a judgment-debtor to jail though it was based on a decree passed after contest, disbelieving the defendant's plea of discharge in a suit on a pro-note, and that the question of treatment of lawyers was added on as a rider to it. If so, it is not clear how the Law Association proceeded to discuss the validity of the said order before it was set aside by a competent court. It is also stated that their statements were contradicted by other members, who were men of some standing and position in the Bar, that the latter pointed out that the Association should not commit themselves to any action without satisfying themselves about the truth of the alleged complaint, that their caution was not heeded and that some members became considerably excited and had to be separated from each other to prevent an actual fight. It is definitely stated that the proposed resolution was not accepted by the meeting, that a committee was formed with a view to find which statement was true, and that nothing more was done at the meeting. In the face of these facts, misleading reports have been caused to be published in newspapers in order to prejudice the minds of the public against the Judge, although the Law Association itself has not arrived at any decision. Further, the President of the meeting is said to have required all the members present to treat the proceedings as confidential and not to give them publicity, and it remains to be seen what action the Law Association will take against the offending members. The Bangalore Law Association is said to consist of more than 120 members, and out of these nearly 80 members most of whom are seniors and experienced men are said to have declined to attend the meeting suspecting communal prejudice and personal grudge behind the movement. If treatment received was really at the bottom of the agitation why have they not held similar meetings to protest against other Judges against whom also they are complaining? Did they ever think of taking any such action against a Judge of their own community who was notorious for using unparliamentary language every day on the Bench? Why did they assign for him a soft corner in their hearts? There is an insinuation in the newspaper article that clients were also not properly treated. Can the 40 lawyers most of whom are juniors point out a single instance in which any party has complained that he has not received proper treatment of the Judge from the time that he took charge of this court? If the thoory of treatment had any foundation why did they not represent it before the District Judge or the Chief Judge at the time of their inspection of the court in 1924, 1925 and 1926? Are such lawyers likely to have kept quiet if they had really any cause for complaint? Can it be supposed that the Judge who gave no room for such complaint from 2 years and 2 mounths suddenly changed his treatment of lawyers a few days ago? Has he not been frequently inviting suggestions for possible improvements from the members of the Bar in open Court? Has he not heard their representations and made arrangements to meet their wishes in the following matters:—

(a) Hot to sit on the Bench after 5 P.M. and allowing Lawyers to go after 5 P.M.

(b) Permitting Lawyers to have an interval for lunch in the course of the day;

(c) Reserving extra seats in Court for Lawyers;

(d) Changes regarding the arrangement and calling of execution cases in court on execution days;

(e) Special facilities for issuing Refund Cheques;

(f) Arrangements to have a list of cases put up in which cheques for decree amounts are ready for issue;

(g) Instructions to the office Staff to furnish all possible information to Lawyers from Registers, Records, etc.

(h) Extension of time to pay process till 5 P.M. on the dates of hearing to prevent cases being disposed of for non-payment of process;

(j) Adjournments to file written statements in all cases in which lawyers are engaged;

(k) Hearing representations and receiving applications after 5 P.M. even in chambers while doing office work.

2. The Judge is a straight, outspoken and strict officer. He refuses to grant unnecessary adjournments and strictly enforces the rule issued by the Chief Court, and this is not liked by those lawyers who expect frequent adjournments without sufficient grounds. He takes particular care to scrutinze every plaint, before granting even an exparte decree in order to satisfy himself that the claim is not barred by limitation, as required by the imperative provision of law in this respect, and discovers that dates of documents and endorsements are altered and tampered with in order to save limitation, and points out the desirability of discouraging such things in public interests, and this unavoidably displeases a certain class of people who show their teeth at him.

3: No judge who possesses a proper conception of his responsibilities can afford to neglect these duties in order to please such people. It may be that he does not always talk softly and sweetly with respect to such matters. It may be that he does not always gild his expressions when he calls upon erring parties to explain their conduct with respect to such documents produced in court. But this depends upon individual temperament cultivated principles and previous training. If judges are required to sacrifice their independence and work only with a view to please the lawyers, the consequences may be disastrous to the administration of justice. In my humble opinion, the people concerned ought to be thankful to the judge for the good advice given in their own interests and for his omission to take severe notice in the matter. The organizers of this meeting who are said to have gone from door to door asking some lawyers to attend the meeting could not have forgotten how often they themselves have enjoyed such indulgence at the hands of the judge. It is a sad commentary on human nature that those who were saved by the judge should happen to be the very persons to raise an agitation against him. Even his worst enemies dare not state that he is not treating all alike. If it is said that he is strict, it must be said to his credit that he is so towards young and old. junior and senior. Brahman and Non-Baahman. The judge is known to be a man of spotless character and it may be stated without fear of contradiction that no lawyer can impeach it. Is it proper that the Law Association which contains an overwhelming majority of members of one community should lend its name to an agitation of this description against a judge of another community? Is it desirable that the Law Association should risk its reputation by indentifying itself in such a coutroversy which is sure to create bitterness of feeling and disturb the harmony between the Bench and the Bar? A lawyer is a member of an Association of 120 people. He meets them and speaks to them almost every day, and he can spread a rumour about a judge through a hundred mouths. A judge, on the other hand, has no such Association behind his back and has no opportunities to meet all the hundred people to contradict the rumour. His tongue and hands are tied. and he has no power even to prosecute persons who spread false and malicious rumours without the sanction of the Government. Thus, a judge is placed on an unequal footing and has not got similar facilities. Under these circumstances, is it fair for the Law Association, the members of which are officers of court whose duty it is to help and co-operate with the court in the administration of justice, to throw its weight in support of 1 or 2 of its members on their complaint against a judicial order founded on a decree legally passed against a defendent after contest before satisfyibg themselves about the truth of the said complaint? Is it consistent with good taste that the Law Association should encourage such agitation at the psychological moment when the question of the Judge's promotion is under consideration before Government? If the object of the organizers was not to prejudice the minds of the higher authorities against the Judge where was the necessity for having so hurriedly convened the meeting? **And why was incorrect and misleading report published in the newspapers before the Committee has sent its report, and before the Law Association has given its decision? Could this communal agitation have been inspired by an influential somebody who has been disappointed by the recent happening of certain events which have upset his calculations and turned the scales against him and undermined the enormous influence which he was exercising hitherto?** I place the above facts before the public and leave them to draw their own inferences.

TRUTH.

ವೀರಶೈವ ಮಹಾಸಭಾಸೇರಲು ಅನುಕೂಲವೇಳೆ.

ಈಸಾರಿಯ ಡಿಸ್ಟ್ರಿಕ್ಟು ಬೋರ್ಡ್ ಮೆಂಬರರುಗಳ ಚುನಾವಣೆಯು ಬರುವ ಡಿಶಂಬರ್ ತಾ|| 20 ರಿಂದ 30 ರವರಿವಿಗೂ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ನಡೆಯತಕ್ಕದ್ದಾಗಿರುತ್ತದೆ. ಬಹುತರಹಾ ಇದೇ ಕಾಲಕ್ಕೇ ಯಾವತ್ತೂ ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ಚುನಾವಣೆಯು ನಡೆಯತಕ್ಕದ್ದಾಗಿರುವುದು. ಹೀಗಿರುವಾಗ ಅದೇ ಕಾಲದಲ್ಲೇ ಕದಾಚಿತ್ ಮಹಾಸಭೆಯು ಸೇರುವುದಾದರೆ ಈ ಪ್ರಾಂತದ ಬಹುಜನರಿಗೆ ದೊಡ್ಡ ತೊಂದರೆಯಾಗುವ ಸಂಭವವಿದೆ. ಪ್ರಯುಕ್ತ ಮಹಾಸಭೆಯ ರಿಸೆಪ್ಷನ್ ಕಮಿಟಿಯವರು ಸಭೆಯನ್ನು ಸೇರಿಸುವ ಕಾಲವನ್ನು ಗೊತ್ತುಪಡಿಸುವಾಗ್ಗೆ ಈ ವಿಷಯವನ್ನು ಅಗತ್ಯವಾಗಿ ಆಲೋಚನೆಗೆ ತೆಗೆದುಕೊಳ್ಳುವಂತಾಗಬೇಕು. ಮಹಾಸಭೆಯು ಡಿಶಂಬರ್ 30 ರಿಂದ ಪ್ರಾರಂಭವಾಗುವುದು ಎಲ್ಲರಿಗೂ ತುಂಬಾ ಅನುಕೂಲ ಕಾಲವಾಗಿರುತ್ತದೆ. ರಿಸೆಪ್ಷನ್ ಕಮಿಟಿಯವರು ಈ ವಿಷಯದಲ್ಲಿ ತಮ್ಮ ತೀರ್ಮಾನವನ್ನು ಆದಷ್ಟು ಜಾಗ್ರತೆ ಪ್ರಸಿದ್ಧಪಡಿಸುವುವಂತಾಗಬೇಕು.

ಚನ್ನಬಸವಪ್ಪಗೌಡ ಪಾಟೀಲ್, ಕಪ್ಪನಹಳ್ಳಿ.

ಹತ್ತನೇ ವೀರಶೈವಮಹಾಸಭೆಯ ಚಾಲಕರಿಗೆ ವಿನಂತಿ.

ಹುಬ್ಬಳ್ಳಿಯಲ್ಲಿ ನೆರೆಯುವ ಹತ್ತನೇ ವೀರಶೈವಮಹಾಸಭೆಯ ಅಧ್ಯಕ್ಷಸ್ಥಾನದಸಲುವಾಗಿ ವೃತ್ತಪತ್ರಿಕೆಗಳಲ್ಲಿ ಅನೇಕ ಜನರು ಹೆಸರುಗಳನ್ನು ಸೂಚಿಸಿರುತ್ತಾರಷ್ಟೆ. ಅದರಲ್ಲಿ ಕೆಲವರು ಮುಂಬಯಿಪ್ರಾಂತದವರಿಗೂ ಕೆಲವರು ಮದ್ರಾಸುಪ್ರಾಂತದವರಿಗೂ ಇನ್ನು ಕೆಲವರು ಹಿಂದಕ್ಕೆ ಈ ಬಹುಮಾನಪದವು ಸಿಕ್ಕ ಜನರ ಹೆಸರುಗಳನ್ನು ಸಹ ಸೂಚಿಸಿರುತ್ತಾರೆ. ಈಸಾರೆ ಮುಂಬಯಿ ಕರ್ನಾಟಕಪ್ರಾಂತದಲ್ಲಿ ಈ ಸಭೆಯು ಕೂಡುವದು ಇರುವದರಿಂದ ಇದರ ಲಾಭವು ನಮ್ಮ ಪ್ರಾಂತದವರಿಗೆ ಕೊಡುವದಕ್ಕಿಂತ ಬೇರೆ ಪ್ರಾಂತದವರಿಗೆ ಕೊಡುವದು ಹೆಚ್ಚು ಮಹತ್ವದ್ದು ಇರುತ್ತದೆ. ಈವರೆಗೆ ಈ ಬಹುಮಾನಪದವು ನಿಜಾಮು ಪ್ರಾಂತದವರಿಗೆ ಒಮ್ಮೆಯಾದರೂ ದೊರೆತಿರುವದಿಲ್ಲ. ಕಾರಣ ಅತ್ತಕಡೆಗೆ ಲಕ್ಷಕೊಟ್ಟು ಅಧ್ಯಕ್ಷರನ್ನು ಆರಿಸುವ ವಿಚಾರವನ್ನು ಸಭೆಯ ಚಾಲಕರು ಮಾಡುವರೆಂದು ನಂಬಿದ್ದೇನೆ. ಅಲ್ಲಿ ವಿದ್ಯಾನಂತರೂ ಹೈಕೋರ್ಟ್ ವಕೀಲರೂ ಸಮಾಜದ ಪ್ರಮುಖರಲ್ಲಿ ಒಬ್ಬರು ಪರಳಿ ವೈಜನಾಥಲಿಂಗದ ವ್ಯಾಜ್ಯದಲ್ಲಿ ತಮ್ಮ ತನು ಮನ ಧನವನ್ನು ಸೂರೆಮಾಡಿದ ನಿರ್ಮಲದ ದೇಶಮುಖರಾದ ಬಾಪುರಾವ್ ಹೈಕೋರ್ಟ್ ವಕೀಲ ಇವರು ಇರುತ್ತಾರೆ. ಅವರನ್ನು ಆರಿಸುವದು ಎಲ್ಲ ರೀತಿಯಿಂದಲೂ ಸಯುಕ್ತವಾಗಿ ಇರುತ್ತದೆ.

ಓರ್ವ ಮಹಾಸಭೆ ಹಿತಚಿಂತಕ.

ಚಳ್ಳಕೆರೆಯಲ್ಲಿ ಪ್ಲೇಗುಪದ್ರವ.

ಈ ಚಳ್ಳಕೆರೆ ಟವನಿನಲ್ಲಿ ಪ್ಲೇಗು ಪ್ರಾಪ್ತವಾಗಿ 20-25 ದಿನಗಳಾಗುತ್ತ ಬಂದು 4 ಮರಣಗಳು ಮಾತ್ರವಾಗಿ ಈಚೆಗೆ 3-4 ದಿನಗಳಿಂದ ಮರಣವೇನೂ ಆಗಿಲ್ಲವು. ಆದರೆ ಅಲ್ಲಲ್ಲಿ ಇಲಿಗಳು ಮಾತ್ರ ಇನ್ನೂ ಬೀಳುತ್ತಲೇ ಇವೆ. ಊರಿನ ಅರ್ಧಭಾಗವು ಬಿಡಲ್ಪಟ್ಟು ಉಳಿದರ್ಧಭಾಗವು ಬಿಡಲ್ಪಡುವುದರಲ್ಲಿದೆ. ಈಗ 1-2 ದಿನಗಳಿಂದ ಮೋಡ ಮುಸುಕಿ ತುಂತುರಹನಿ ಬಿದ್ದುದರಿಂದ ಕ್ಯಾಂಪಿನಲ್ಲಿರುವ ಕಷ್ಟವು ಬಹಳ ವಿಷಾದಕರವಾಗಿದೆ. ಟವನ್ನಿನಲ್ಲಿ ಪ್ರೆಸಿಡೆಂಟರು ಇಲ್ಲದಿದ್ದಾಗ್ಯೂ, ವೈಸ್‌ಪ್ರೆಸಿಡೆಂಟರು ಬಹಳ ದಕ್ಷತೆಯಿಂದ ಟವನ್ ಜನಗಳಿಗೆ ಇನಾಕ್ಯುಲೇಷನ್ ಮಾಡಿಸುವದಕ್ಕೆ ಟೆಲಿಗ್ರಾಂ ಕೊಟ್ಟು ಬೇರೆ ಡಾಕ್ಟರನ್ನು ಕರೆಯಿಸಿ 800-900 ಜನಗಳಿಗೆ ಇನಾಕ್ಯುಲೇಷನ್ ಮಾಡಿಸಿದರು, ಅಲ್ಲದೆ ಛಾರಿಸ್ಟು ಇಲಾಖೆಗೆ ಬರಸಿ ಷೆಡ್ ಸಾಮಾನುಗಳನ್ನು ತರಿಸಿ ಬಡಬಗ್ಗರಿಗೆ ಪ್ರೆಸಿಡೆಂಟರ ಆರ್ಡರಿನ ಮೇರೆಗೆ ಉಚಿತವಾಗಿ ಕೊಟ್ಟು ಟವನ್ನಿನ ಕ್ಷೇಮಚಿಂತನೆಯನ್ನು ಬಹಳ ಶ್ರದ್ಧೆಯಿಂದ ನಡೆಸಿಕೊಂಡುಬರುತ್ತಾ ಇದ್ದಾರೆ. ಇವರ ಸಹಾಯಕ್ಕಾಗಿ ಮುನಿಸಿಪಲ್ ಕೌನ್ಸಿಲರ್ ಮ|| ಗಳಾದ ಸುಬ್ಬರಾಯರು, ಜಗನ್ನಾಥರಾಯರು, ಮಹಮ್ಮದಲ್ಲಿ ಸಾಹೇಬರು ಅಲ್ಲದೆ ಚಿತ್ರದುರ್ಗದ ಕಂಟ್ರಾಕ್ಟುದಾರ್ ಕಾಳಪ್ಪನವರು ಸಹ ಹೆಚ್ಚಿನ ಶ್ರದ್ಧೆಯಿಂದ ಕೆಲಸ ನಡೆಸುತ್ತಾ ಇದ್ದಾರೆ. ಇನ್ನು ಮುಂದೆಯೂ ಇದೇ ರೀತಿ ಶ್ರದ್ಧೆಯಿಂದ ಅನುಕೂಲಮಾಡಿ ಕೊಡುತ್ತಾರೆಂತ ನಂಬಿರುತ್ತೇನೆ.

ಪ್ರಜಾಹಿತೈಷಿ.

ಓರ್ವ ವೀರಶೈವಶ್ರೀಮಂತರ ನಿಧನ.

ಭಾರೀ ಜಮೀನ್ದಾರರೂ, ಪ್ರಮುಖರೂ, ಗುಣಾಢ್ಯರೂ, ಲಕ್ಷಾಧೀಶರೂ ಆಗಿದ್ದ ಸೊರಬ ತಾ|| ಎಣ್ಣೆಕೊಪ್ಪದ ಶ್ರೀಮಂತ ಲಿಂಗಪ್ಪಗೌಡರ ನಿಧನದಿಂದ ಈ ಮಲೆಪ್ರಾಂತಕ್ಕೆ ಅಪಾರ ಹಾನಿಯುಂಟಾಯಿತೆಂದು ತಿಳಿಸಲು ವಿಷಾದವೆನಿಸುತ್ತದೆ. 1918 ನೇ ಇಸವಿಯಲ್ಲಿ ಪ್ರಾಪ್ತವಾಗಿದ್ದ ಕ್ಷಾಮದ ಕಾಲಕ್ಕೆ ಈ ಶ್ರೀಮಂತರು ಕೇವಲ ಉದಾರಬುದ್ಧಿಯಿಂದ 300-400 ಖಂಡುಗಗಟ್ಟಲೆ ಧಾನ್ಯವನ್ನು ಬಡಜನರಿಗೆ ಕೊಟ್ಟು ಸಂರಕ್ಷಣೆಮಾಡದೆ ಹೋಗಿದ್ದರೆ ಇತ್ತಕಡೆಯ ಬಹುಭಾಗದ ಜನರು ಅಶನಾಭಾವದಿಂದ ಮೃತ್ಯುವಶರಾಗುತ್ತಿದ್ದರೆಂದು ಹೇಳಬಹುದಾಗಿದೆ. ಈಚೆಗೆ ಇವರು ಸ್ವಗ್ರಾಮದಲ್ಲಿ ಒಂದು ಬಸವೇಶ್ವರದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕಾಗಿ ಸಾವಿರಾರು ರೂಪಾಯಿಗಳವರಿವಿಗೆ ಖರ್ಚುಮಾಡಿ ತತ್ಸಂಬಂಧವಾದ ದೊಡ್ಡ ಸಮಾರಾಧನೆ ಮಾಡಿಸಬೇಕೆಂಬ ಸತ್ಸಂಕಲ್ಪವುಳ್ಳವರಾಗಿಯೂ ಇದ್ದರು. ಹಾಗು ಸ್ವಮತಸ್ಥರಾದ ವೀರಶೈವಕ್ಷತ್ರಿಯ ವಿದ್ಯಾರ್ಥಿಗಳ ಸಲುವಾಗಿ ವಿದ್ಯಾರ್ಥಿಭವನ ಒಂದನ್ನು ಕಟ್ಟಿಸಿಕೊಡಬೇಕೆಂಬ ಸದಿಚ್ಛೆಯುಳ್ಳವರಾಗಿಯೂ ಇದ್ದರು. ಶ್ರೀಮಂತಿಕೆಯ ಸದುಪಯೋಗಮಾಡುವ ವಿಷಯದಲ್ಲಿ ಇವರು ಇತರ ಶ್ರೀಮಂತರಿಗೆ ಮಾರ್ಗದರ್ಶಕರಾಗಿದ್ದರೆಂದು ಹೇಳಬಹುದು. ಹೀಗೆ ನಾನಾವಿಧವಾಗಿ ಈ ಶ್ರೀಮಂತರ ಧರ್ಮಕಾರ್ಯಾಸಕ್ತಚಿತ್ತವು ಇನ್ನೂ ವಿಸ್ತೃತವಾಗುತಲಿದ್ದ ಯೋಗ ವೇಳೆಯಲ್ಲೇ ಇವರು ವಿಧಿವಶರಾದದ್ದು ಕೇವಲ ವಿಷಾದಕರ ಸಂಗತಿಯೇ ಸರಿ. ಈಶ್ವರೇಚ್ಛೆಯೇ ಹೀಗಿದ್ದಲ್ಲಿ ಮಾಡತಕ್ಕದ್ದೇನು! ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ ಮೃತರ ಕುಟುಂಬಕ್ಕೆ ಸಮಾಧಾನಗಳನ್ನೂ ಕರುಣಿಸಲೆಂದೂ ಪ್ರಾರ್ಥಿಸಿ, ಈ ಲೇಖನವನ್ನು ಮುಗಿಸುತ್ತೇನೆ.

ಲೇಖಕ.—ಚನ್ನಬಸವಪ್ಪಗೌಡ ಪಾಟೀಲ್, ಕಪ್ಪನಹಳ್ಳಿ.

ಅತಿಥಿಸತ್ಕಾರ.

ಮೈಸೂರು ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರು ದಸರಾಮಹೋತ್ಸವಕ್ಕೆ ಈಸಲ ರಾಜಧಾನಿಗೆ ದಯಮಾಡಿದ್ದ ಸಮಸ್ತ ಕುಂಚಿಟಿಗ ಮಹನೀಯರಿಗೂ ತಮ್ಮ ಸ್ವಂತಖರ್ಚಿನಿಂದ ಏರ್ಪಡಿಸಿರುವ ಕುಂಚಿಟಿಗ ವಿದ್ಯಾರ್ಥಿಗಳ ಫ್ರೀ ಬೋರ್ಡಿಂಗ್‌ಹೋಮಿನಲ್ಲಿ ಉಚಿತವಾಗಿ ಭೋಜನಕ್ಕೆ ಅನುಕೂಲಪಡಿಸಿಕೊಟ್ಟಿದ್ದರಲ್ಲದೆ ಬಾಡಿಗೆ ಇಲ್ಲದೆ ಮುಫತ್ತಾಗಿ ರೂಮುಗಳನ್ನು ಒದಗಿಸಿಕೊಟ್ಟಿದ್ದರು. ಸುಮಾರು 200 ಮಂದಿಯವರಿವಿಗೆ ಕುಂಚಿಟಿಗ ಸ್ತ್ರೀಪುರುಷರು ದಸರಾ ಪೂರೈಸುವವರೆಗೂ ಇವರ ಆದರಾತಿಥ್ಯಕ್ಕೆ ಭಾಗಿಗಳಾಗಿದ್ದರು. ಮ|| ರಾ|| ಸಾಹುಕಾರರು ಪ್ರತಿದಿವಸವೂ ಬೆಳಿಗ್ಗೆ ಸಾಯಂಕಾಲ ಎರಡುವೇಳೆಯಲ್ಲಿಯೂ ಹಾಸ್ಟಲಿಗೆ ದಯಮಾಡಿಸಿ ಅಲ್ಲಿದ್ದ ಎಲ್ಲರ ಕ್ಷೇಮವನ್ನು ವಿಚಾರಮಾಡುತ್ತಲೂ ಊಟದ ಸುವ್ಯವಸ್ಥೆಯನ್ನು ನೋಡಿ ಪರಮಾನಂದಭರಿತರಾಗಿ ನೀತಿಬೋಧಕವಾದ ವಿಷಯಗಳನ್ನು ಹೇಳುತ್ತಲೂ ಸರ್ವರನ್ನೂ ಸಂತೋಷಪಡಿಸುತ್ತಿದ್ದರು. ಇವರು ಏರ್ಪಡಿಸಿರುವ ಫ್ರೀಬೋರ್ಡಿಂಗ್‌ಹೋಮಿನಲ್ಲಿ 30-40 ಮಂದಿ ವಿದ್ಯಾರ್ಥಿಗಳಿರುವರು. ಇವರು ಈ ಅತಿಥಿಸತ್ಕಾರಕ್ರಮವನ್ನು ಕೈಗೊಂಡು 3-4 ವರ್ಷಗಳಾಗಿರುವುದು. ಹಾಸ್ಟಲ್ ವಿದ್ಯಾರ್ಥಿ ಮ|| ರಾ|| ಆರ್. ದಾಸಪ್ಪನವರು ತಮ್ಮ ಸಹಾಧ್ಯಾಯಿಗಳಾದ ವಿದ್ಯಾರ್ಥಿಗಳೊಂದಿಗೆ ಬಹಳ ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಕುಲಸೇವೆಗಿಂತಲೂ ಮಿಗಿಲಾದ ಭಾಗ್ಯವಿಲ್ಲೆಂಬುದನ್ನು ಅರಿತು ವಿಚಕ್ಷಣೆಯಿಂದ ಪೋಷಕಮಹಾಶಯರ ನಿಜವಾದ ಇಂಗಿತವನ್ನು ಪ್ರತ್ಯಕ್ಷತಃ ಪ್ರಕಾಶಪಡಿಸಲು ಮಹಸೇವಾತತ್ಪರರಾಗಿದ್ದರು. ಮ|| ರಾ|| ಬನುಮಯ್ಯನವರ ಈ ವಿಧವಾದ ಧರ್ಮಕಾರ್ಯವು ಸರ್ವರಿಗೂ ಆದರ್ಶವಾಗಿರುವುದಲ್ಲದೆ ಕುಂಚಿಟಿಗಮತದ ಅಭಿವೃದ್ಧಿಯನ್ನೇ ಹಗಲಿರುಳೂ ಬಯಸುತ್ತಿರುವ ಈ ಮಹನೀಯರಿಗೆ ಕುಂಚಿಟಿಗ ಸಮಾಜವೇ ಋಣಿಯಾಗಿರುವುದೆಂದು ಹೇಳಿದರೂ ಅತಿಶಯೋಕ್ತಿಯಾಗಲಿಕ್ಕಿಲ್ಲವು. ಈ ಮಹನೀಯರ ಈ ತೆರನಾದ ಧರ್ಮಕಾರ್ಯಗಳೂ ಅತಿಥಿಸತ್ಕಾರವೂ ಸ್ತುತ್ಯರ್ಹವಾಗಿವೆ. ಕುಂಚಿಟಿಗಮತಬಾಂಧವರ ಪರವಾಗಿ ಇವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಈ ಮೂಲಕ ಬಹಳ ಸಂತೋಷದಿಂದ ಸಮರ್ಪಿಸುತ್ತೇನೆ. ಇವರ ಧರ್ಮಕಾರ್ಯವು ದಿನಕ್ರಮೇಣ ಇತೋಪ್ಯತಿಶಯವಾಗಿಯೂ ವಂಶಪಾರಂಪರ್ಯಾನುಗುಣವಾಗಿಯೂ ಅಭಿವೃದ್ಧಿಯನ್ನೈದಲೆಂದೂ, ಭಗವಂತನು ಈ ಮಹನೀಯರಿಗೂ ಇವರ ಕುಟುಂಬಕ್ಕೂ ಚಿರಕಾಲ ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ಕಾಪಾಡಲೆಂದೂ ಪ್ರಾರ್ಥಿಸುತ್ತೇನೆ.

ಟಿ. ವಿ. ಮುತ್ತಯ್ಯ,
ಶೀತಕೊರಟಿಗೆರೆ ಸಬ್‌ತಾಲ್ಲೂಕು.

ಮಿಲ್ಲರ್‌ಕಮಿಟಿರಿಪೋರ್ಟು ಇನ್ನೂ ಜೀವದಲ್ಲಿದೆಯೋ?

ನೆಲಮಂಗಲದ ಟೌನ್ ಮ್ಯುನಿಸಿಪಲ್ ಮೇಸ್ತ್ರಿಕೆಲಸವು ಖಾಲಿ ಬಿದ್ದು ಗೆಜೆಟ್ಟಿನಲ್ಲಿ ಘಾಯಿಸ್ ಆಗಿ ಸದರಿ ಕೆಲಸವನ್ನು ಒಬ್ಬ ಬ್ರಾಹ್ಮಣ ನೌಕರನಿಗೆ ಕೊಟ್ಟಿದ್ದರಮೇಲೆ ರಿಕಾರ್ಡುನಡೆದು ಹ|| ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರು ರದ್ದುಪಡಿಸಿ ಬೇರೆ ಹಿಂದುಳಿದ ಪಂಗಡಕ್ಕೆ ಸೇರಿದ ಲಾಯಖು ಮನುಷ್ಯನನ್ನು ಚುನಾಯಿಸಬೇಕೆಂದು ಆರ್ಡರಾಗಿದ್ದರೂ ಆ ಆರ್ಡರು ಯಾವ ಮೂಲೆಯನ್ನೋ ಸೇರಿಬಿಟ್ಟು ಈಚೆಗೆ ಹಿಂದೆ ನೇಮಕವಾಡಿದ್ದ ಇಸಮನ್ನೇ ಖಾಯಂಮಾಡಬೇಕೆಂತ ಆರ್ಡರಾಗಿರುವುದಾಗಿ ಕೇಳುತ್ತೇನೆ. ನೆಲಮಂಗಲದ ತಾ|| ಬೋರ್ಡು ಆಫೀಸಿನಲ್ಲಿ ಒಂದು ಅಟೆಂಡರ್ ಕೆಲಸ ಖಾಲಿಬಿದ್ದು ಸುಮಾರು ಒಂದುವರ್ಷವಾಯಿತು. ಈ ಕೆಲಸವು ಒಬ್ಬ ಬ್ರಾಹ್ಮಣನಿಗೆ ಕೊಡಲ್ಪಟ್ಟಿರುವದಲ್ಲದೆ ತಹಲ್‌ವರೆಗೆ ಗೆಜೆಟ್ಟಿನಲ್ಲಿ ಘಾಯಿಸ್ ಆಗಿರುವುದಿಲ್ಲ. ಇದೇ ತಾ|| ಆಫೀಸಿನಲ್ಲಿ ಒಂದು ಎರಡನೇಗ್ರೇಡ್ ಗುಮಾಸ್ತೆ ಕೆಲಸವು ಖಾಲಿಬಿದ್ದು 7-8 ತಿಂಗಳಾಗಿದ್ದರೂ ಈವರೆಗೆ ಗೆಜೆಟ್ಟಿಗೆ ಘಾಯಿಸ್‌ಮಾಡಲು ಕಳುಹಿಸದೆ ಅದನ್ನು ಸಹ ಒಬ್ಬ ಬ್ರಾಹ್ಮಣಸ್ನೇಹಿತನಿಗೆ ನೌಕರೂರುಮಾಡಿಸಿ ಈ ಕೆಲಸವನ್ನು ಅವರಿಗೆ ಖಾಯಂ ಆಗಿ ಏರ್ಪಾಡುಮಾಡುವದರಲ್ಲಿರುವದಾಗಿ ವರ್ತಮಾನಕೇಳುತ್ತೇನೆ. ಅಲ್ಲದೆ ಇನ್ನೊಂದು ಎರಡನೇಗ್ರೇಡು ಗುಮಾಸ್ತೆ ಖಾಯಂ ಇಸಂ ರಜಾ ಪಡೆದುಕೊಂಡು 6-7 ತಿಂಗಳಾದಾಗ್ಯೂ, ಅದನ್ನು ಸಹ ಗೆಜೆಟ್ಟಿನಲ್ಲಿ ಘಾಯಿಷ್‌ಮಾಡಿಸದೆ ಒಬ್ಬ ಬ್ರಾಹ್ಮಣ ಉಮೇದುವಾರನನ್ನು ನೌಕರೂರ್ ಮಾಡಿಕೊಂಡಿರುತ್ತಾರೆ. ಹಾಲಿ ನಗದಿಗುಮಾಸ್ತೆಯು ಬೇರೆ ಕೆಲಸಕ್ಕೆ ಹೋಗಿರುವುದಾಗಿಯೂ ಈಗ ಈ ಕೆಲಸವು ಖಾಲಿಬೀಳುವುದಾಗಿಯೂ ವರ್ತಮಾನವಿದೆ. ಇದು ಸಹ ಯಾರಿಗೂ ಗೋಚರವಾಗದಂತೆ ಅವರ ಪಾಲೇ ಆಗುವದರಲ್ಲಿ ಯಾವ ಸಂಶಯವೂ ಇರುವದಿಲ್ಲ.

ಮೇಲ್ಕಂಡಂತೆ ಅವರವರಿಗೆ ಬೇಕಾದಹಾಗೆ ಅನುಕೂಲಗಳು ನಡೆಯುತ್ತಾಯಿದ್ದಾಗ್ಯೂ ಕೇಳತಕ್ಕ ಮಹನೀಯರೇ ಇರುವಂತೆ ತೋರುವದಿಲ್ಲ. ರಿಕ್ರೂಟ್‌ಮೆಂಟ್ ಬೋರ್ಡಿನವರು ತರಿಸಿಕೊಳ್ಳತಕ್ಕ ತಃಖ್ತೆಗಳಲ್ಲಿ ಏನು ತಗಾದೆಮಾಡಿ ಅವರ ಕಣ್ಣಿಗೆ ಮಣ್ಣೆರಚಿರುತ್ತಾರೋ? ಬೋರ್ಡಿನವರೇ ಕಣ್ಣುಬಿಟ್ಟು ನೋಡುತ್ತಾಯಿಲ್ಲವೋ? ತಿಳಿಯದು. ಇದೇ ವಿಚಾರದಲ್ಲಿ ಹಿಂದುಳಿದ ಪಂಗಡಗಳ ಉಮೇದುವಾರರನೇಕರು ರಿಕ್ರೂಟ್‌ಮೆಂಟ್ ಬೋರ್ಡಿಗು ಸಹ ಅರ್ಜಿಹಾಕಿಕೊಂಡು ಮೇಲ್ಕಂಡ ಖಾಲಿಸ್ಥಾನಗಳು ಗೆಜೆಟ್ಟಿನಲ್ಲಿ ಬರಬಹುದೆಂದು ಕಾದುಕಾದು ಕಡೆಗೆ ಆಶಾಭಂಗರಾಗಿ ಹೋದರು. ಈರೀತಿ ನಡೆಯುತ್ತಿರುವ ಸಂದರ್ಭದಲ್ಲಿ ಮಿಲ್ಲರ್‌ಕಮಿಟಿ ರಿಪೋರ್ಟು ಜೀವದಲ್ಲಿದೆಯೋ? ಎಂಬ ಅಂಶವನ್ನು ವಿಚಾರಿಸಲು ನಮ್ಮ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳ ಪೈಕಿ ಯಾರಾದರೂ ಪ್ರಶ್ನಿಸಲು ಸಮರ್ಥಿಸುವರೆ? ಇಂಥಾ ವಿಚಾರಗಳಿಗೆ ಪ್ರವೇಶಿಸದಿದ್ದಲ್ಲಿ ಮುಂದಿನ ಚುನಾವಣೆಯಲ್ಲಿ ಇವರು ಓಟು ಪಡೆಯಲು ಅರ್ಹರೆ?

An Enquirer.

ವೀರಶೈವತರುಣಸಂಘ, ಬೆಂಗಳೂರು.

ತಾ|| 31-10-1926 ನೇ ಭಾನುವಾರ ಸಾಯಂಕಾಲ 5½ ಗಂಟೆಯಲ್ಲಿ ಬೆಂಗಳೂರು ಸಿಟಿ ಶ್ರೀ ಜಗದ್ಗುರುಜಯದೇವ ವೀರಶೈವವಿದ್ಯಾರ್ಥಿನಿಲಯದಲ್ಲಿ ಮ|| ಜಿ. ಶಾಂತವೀರಪ್ಪ, ಬಿ.ಎ., ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿದ್ದಿತು. ಬೆಂಗಳೂರಲ್ಲಿರುವ ಬೇರೆ ಬೇರೆ ವೀರಶೈವವಿದ್ಯಾರ್ಥಿನಿಲಯಗಳ ಅನೇಕಮಂದಿ ವಿದ್ಯಾರ್ಥಿಗಳು, ವರ್ತಕರು ಮೊದಲಾಗಿ ಸುಮಾರು 70 ಜನ ವೀರಶೈವ ದೊಡ್ಡಮನುಷ್ಯರು ಸಭೆಗೆ ದಯಮಾಡಿಸಿದ್ದರು. ಸಭೆಯಲ್ಲಿ ವೀರಶೈವತರುಣಸಂಘ (Y. M. V. A.) ದ ಪುನರುಜ್ಜೀವನದ ವಿಚಾರವಾಗಿ ಮೊದಲು ಅಧ್ಯಕ್ಷರಿಂದ ಸ್ಫೂರ್ತಿದಾಯಕವಾದ ಭಾಷಣವಾದ ಮೇಲೆ ಸಂಘದ ಕಾರ್ಯಕ್ರಮದ ವಿಷಯದಲ್ಲಿ ಸಭಿಕರಿಂದ ಸೂಚನೆಗಳು ತರಲ್ಪಟ್ಟು ಕಡೆಯಲ್ಲಿ ಈ ಕೆಳಗೆಕಂಡ ನಿರ್ಧಾರಗಳು ಮಾಡಲ್ಪಟ್ಟವು.—

1. ಬೆಂಗಳೂರು ವೀರಶೈವತರುಣಸಂಘ (Y.M.V.A.) ವನ್ನು ಪುನರುಜ್ಜೀವನಗೊಳಿಸತಕ್ಕದ್ದು. 2. ಬೆಂಗಳೂರಲ್ಲಿರುವ ಎಲ್ಲ ವೀರಶೈವ ವಿದ್ಯಾರ್ಥಿಗಳೂ ಈ ಸಂಘಕ್ಕೆ ಮೆಂಬರುಗಳಾಗಬೇಕೆಂದು ಅವರನ್ನು ಆಹ್ವಾನಿಸತಕ್ಕದ್ದು. 3. ನಮ್ಮ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿರತಕ್ಕ ಎಲ್ಲ ವೀರಶೈವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳನ್ನು ಈ ಸಂಘದ ಮೆಂಬರುಗಳನ್ನಾಗಿ ಸೇರಿಸುವಂತೆ ಆಯಾ ವಿದ್ಯಾರ್ಥಿನಿಲಯಗಳ ಅಧಿಕಾರಿಗಳನ್ನು ಕೇಳತಕ್ಕದ್ದು. 4. ಬೆಂಗಳೂರಿನ ಮತ್ತು ಇತರ ಸ್ಥಳಗಳ ವೀರಶೈವ ದೊಡ್ಡಮನುಷ್ಯ (ಹಿರಿಯ) ರು ಈ ಸಂಘಕ್ಕೆ ಮೆಂಬರುಗಳಾಗುವಂತೆಯೂ, ಈ ಸಂಘದ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ತಕ್ಕ ದ್ರವ್ಯಸಹಾಯ ಮಾಡುವಂತೆಯೂ ಅವರನ್ನು ಪ್ರಾರ್ಥಿಸತಕ್ಕದ್ದು. 5. ಬೆಂಗಳೂರಿನ ಮೆಂಬರುಗಳು ಮುಂದೆ ಸಂಘದವರಿಂದ ಗೊತ್ತುಮಾಡಲ್ಪಡುವ ಚಂದಾಹಣಗಳನ್ನು ತಿಂಗಳಿಗೊಂದಾವರ್ತಿ ಕೊಡತಕ್ಕದ್ದು. 6. ಸದ್ಯದಲ್ಲಿ ಪರಸ್ಥಳದ ಮೆಂಬರುಗಳು ಚಂದಾವೊಬಲಗನ್ನು ಕೊಡಬೇಕಾದುದಿಲ್ಲ. 7. ಸಂಘದ ಪ್ರೋತ್ಸಾಹದಿಂದ ಬೆಂಗಳೂರಲ್ಲಿ ಸದ್ಯಃ ಒಂದು ರೀಡಿಂಗ್ ರೂಮು, ಲೈಬ್ರರಿ, ವ್ಯಾಯಾಮಸಂಘ (Sports Club) ಇವುಗಳನ್ನು ಸ್ಥಾಪಿಸಲಿಕ್ಕೆ ಪ್ರಯತ್ನಮಾಡತಕ್ಕದ್ದು. 8. ಸಂಘದ ಉದ್ದೇಶಗಳನ್ನು ಅನುಸರಿಸಿ ಕಾರ್ಯಕ್ರಮಸಂಬಂಧವಾದ ನಿಬಂಧನೆ (ರೂಲು) ಗಳನ್ನು ಗೊತ್ತುಮಾಡುವುದಕ್ಕೋಸ್ಕರ ಈ ಕೆಳಗೆಕಂಡ ದೊಡ್ಡಮನುಷ್ಯರುಗಳಿಂದೊಡಗೂಡಿದ ಕಮಿಟಿಯು ನೇಮಕಮಾಡಲ್ಪಟ್ಟಿತು.—

ಮ|| ಗಳಾದ ಪಿ. ಎಂ. ಬಸಪ್ಪನವರು (ಪ್ರೆಸಿಡೆಂಟ್). ಸಿ. ವೀರಪ್ಪನವರು, ಬಿ.ಎ., (ಜನರಲ್ ಸೆಕ್ರೆಟರಿ). ಟಿ. ಎನ್. ಚನ್ನಪ್ಪನವರು (ಲೋಕಲ್ ಸೆಕ್ರೆಟರಿ).

ಮೆಂಬರುಗಳು.—ಮ|| ಗಳಾದ (1) ಜಿ. ಶಾಂತವೀರಪ್ಪನವರು, ಬಿ.ಎ., (2) ಇ. ರುದ್ರಪ್ಪನವರು. (3) ಜಯದೇವಪ್ಪನವರು. (4) ಪಿ. ಮಲ್ಲಪ್ಪನವರು. (5) ಬಿ. ಬಸವಲಿಂಗಪ್ಪನವರು. (6) ಜಿ. ತಮ್ಮಯ್ಯನವರು, ಬಿ.ಎ. (7) ಎಚ್. ಪುಟ್ಟಸ್ವಾಮಿಯವರು. (8) ಎನ್. ಚನ್ನಪ್ಪನವರು, ಬಿ.ಎ., ಎಲ್‌ಎಲ್.ಬಿ. (9) ಈ ಸಂಘದ ಕಾರ್ಯಕಾರಿ (Working Committee) ಮಂಡಳಿಯವರು ಸಂಘಕ್ಕೆ ಬೆಂಗಳೂರಲ್ಲಿರುವ ಎಲ್ಲ ವೀರಶೈವ ವಿದ್ಯಾರ್ಥಿನಿಲಯಗಳೂ ವೀರಶೈವಸಂಘದವರೂ ತಮ್ಮ ಪಕ್ಷದಿಂದ ಒಬ್ಬೊಬ್ಬರನ್ನು ಪ್ರತಿನಿಧಿಯನ್ನಾಗಿ ಚುನಾಯಿಸಿ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳತಕ್ಕದು. (10) ಈ ಸಂಘದ ಮೀಟಿಂಗುಗಳನ್ನು ನಡೆಯಿಸಲಿಕ್ಕೆ ಶ್ರೀ ಜಗದ್ಗುರುಜಯದೇವ ವಿದ್ಯಾರ್ಥಿನಿಲಯದಲ್ಲಿ ಅವಕಾಶಕೊಟ್ಟಿರುವುದಕ್ಕಾಗಿ ಮೇಲೆ ಕಂಡ ವಿದ್ಯಾರ್ಥಿನಿಲಯದ ಸೆಕ್ರೆಟರಿಯವರಿಗೆ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸತಕ್ಕದ್ದು.

ಸಿ. ವೀರಪ್ಪ, ಜನರಲ್ ಸೆಕ್ರೆಟರಿ.

ವೀರಶೈವಮಹಾಸಭೆ.

ಪ್ರಪಂಚದಲ್ಲಿ ಯಾವದೊಂದು ಸಾರ್ವಜನಿಕ ಕಾರ್ಯಾರಂಭಮಾಡುವುದು ಎಷ್ಟು ಸುಲಭವೋ ಅದನ್ನು ನೆರವೇರಿಸುವದು ಅಷ್ಟು ಸುಲಭವಲ್ಲವೆಂದು ಅನುಭವಿಗಳು ಹೇಳಿದಿರರು, ಮತ್ತು ಕಾರ್ಯವನ್ನು ನೆರವೇರಿಸದಿದ್ದರೆ ಎಷ್ಟು ನಿಂದೆಯು ಸಂಪ್ರಾಪ್ತಿಸುವದೋ ಕಾರ್ಯನಿರ್ವಾಹದಿಂದಷ್ಟು ಪ್ರೋತ್ಸಾಹವು ಲಭಿಸುವದಿಲ್ಲವೆನ್ನುವದನ್ನೂ ಸ್ಮರಿಸಬೇಕು. ಕೆಲ ಮಹಾಕಾರ್ಯದ ಪ್ರತಿಫಲಗಳಾದರೂ ಪ್ರಥಮದಲ್ಲಿ ಗಿರಿಯನ್ನಗೆದರೆ ಇಲಿಗಳು ಲಭಿಸಿದಂತಾಗುವವು. ಬಹಿರ್ಗತವಾದ ಈ ಅಲ್ಪಫಲವನ್ನೇ ಉಪಲಕ್ಷಿಸಿ ಎಂತಹ ಮಹಾಕಾರ್ಯ ನಿರ್ವಾಹದಿಂದಲಾದರೂ ಇಷ್ಟೇ ಫಲವು ಲಭಿಸಬಹುದೆಂದು ಭ್ರಮಿಸುವವರೂ ಕೆಲವರಿರುವರು. ಭಾರತೀಯರೆಲ್ಲರ ಶ್ರೇಯೋಭಿವೃದ್ಧಿಗೆ ಹೇತುವಾದ ದೇಶೀಯಮಹಾಸಭಾ (ಕಾಂಗ್ರೆಸ್) ವೃಕ್ಷದ ದುರ್ಬಲತೆಗೆ ನಾಯಕರ ಮತಭೇದವೆಂಬ ತಳಹುಳುಗಳು ಹೇಗೆ ಕಾರಣವೋ ಹಾಗೆಯೇ ಆಯಾ ಪ್ರಾಂತದಲ್ಲಿಯ ಮತಭೇದ ವೈಷಮ್ಯಾದಿಗಳೇ ಇಡೀ ವೀರಶೈವಜನಾಂಗೋದ್ಧರಣಾಗ್ರಭೂಮಿಯಾದ ಮಹಾಸಭೆಯಂತಹ ಕಾರ್ಯವನ್ನಿಷ್ಟು ದಿನಗಳವರೆಗೆ ನಿರೋಧಿಸಿದವು. ಇಪ್ಪತ್ತೈದುವರ್ಷಗಳವರೆಗೆ ಯೋಗ್ಯವರನಿಗಾಗಿ ಕಾದುಕೊಂಡಿದ್ದ ಯುವತಿಗೆ ಬುದ್ಧಿವಂತನೂ ಸುಂದರನೂ ಆದ ಪತಿಯು ಸಿಕ್ಕಂತೆ ಇಷ್ಟುವರ್ಷಗಳಿಂದ ಇದಿರುನೋಡುತ್ತಿರುವ ನವ್ಯಾ ಮಹಾಸಭಾಕನ್ಯೆಗೆ ಕುಸಲಮತಿಗಳೂ ವಿದ್ಯಾವಂತರೂ ಧನವಂತರೂ ಆದ ಹುಬ್ಬಳ್ಳಿ ವೀರಶೈವಮಹಾಜನಗಳು ಲಭಿಸಿದುದು ಯೋಗ್ಯವೇ. ಆದರೆ ಹೇಗಾದರೂ ಕನ್ಯೆಯು ನಿಮ್ಮ ಅಧೀನಳಾಗಿರುವದರಿಂದ ಭೂಷಣಾಂಬರಾದಿರಹಿತವಾಗಿಯೇ ವಿವಾಹ (ಸಭಾಸಮ್ಮೇಳನ) ವನ್ನು ನೆರವೇರಿಸುವುದರ ಮೂಲಕ ಯಥಾರ್ಥವನ್ನೇ ಮರೆತು ಶಕುಂತಲಾದುಷ್ಯಂತರ ಚರಿತ್ರೆಯನ್ನು ಮಾತ್ರ ಸ್ಮರಣೆಗೊಳಿಸಬಾರದು. ಸಭಾವಧುವಿಗೆ ಅಧ್ಯಕ್ಷರ ಚುನಾವಣೆಯಾದಿ ಕಾರ್ಯಗಳೇ ಭೂಷಣಾಂಬರಗಳು, ಮತ್ತು ಕೇವಲ ಸ್ವಾರ್ಥಕ್ಕೆ ಸಂಬಂಧಿಸದಿರುವ ಸಾಮಾಜಿಕ ಚರ್ಚೆಯೂ ವೀರಶೈವಸಂಪದಭ್ಯುದಯವೇ ಮೊದಲಾದ ವಿಷಯವಿವೇಚನೆಯೂ ಯಥಾರ್ಥವಾದ ಉದ್ದೇಶವು. ಈಸಲ ಅಧ್ಯಕ್ಷಪದವಿಯನ್ನು ಜ್ಞಾನವಯೋವೃದ್ಧರೂ ಕಾರ್ಯಧುರಂಧರರೂ ಆದ ಹೈದರಾಬಾದಿನ ನಿರ್ಮಲದೇಶಮುಖ ಶ್ರೀಮಂತ ಬಾಪುರಾವ್ ಹೈಕೋರ್ಟು ವಕೀಲರಿಗೇನೇ ಅರ್ಪಿಸಬೇಕೆಂದು ಒಂದೆರಡುವರ್ಷಗಳಿಂದ ಘೋಷಿಸುತ್ತಿರುವ ಪತ್ರಿಕೆಗಳನ್ನು ಸಾಕರವಲೋಕಿಸದೆ ಇರಲಾರರು. ಹೇಗೆ ಗತವತ್ಸರದಲ್ಲಿ ಹಿಂದುಳಿದ ಸ್ತ್ರೀಯರೇ ಅಖಿಲಭಾರತದೇಶೀಯಮಹಾಸಭೆಗೆ ಅಧ್ಯಕ್ಷರಾದರೋ ಹಾಗೆಯೇ ಈ ವರ್ಷದಲ್ಲಿ ಹಿಂದುಳಿದ ನಿಜಾಂದೇಶದ ವೀರಶೈವರೇ ಅಖಿಲಭಾರತವೀರಶೈವಮಹಾಸಭೆಗೆ ಅಧ್ಯಕ್ಷರಾಗಲು ಯೋಗ್ಯರೆಂದರೆ ಅತಿಶಯೋಕ್ತಿಯಲ್ಲ. ಆಂಧ್ರದೇಶದ ವೀರಶೈವಜನಗಳಿಗೆ ಈ ಮಹಾಸಭಾಕಾರ್ಯಗಳು ತಿಳಿಯುವದಕ್ಕಾಗಿ ಹೈದ್ರಾಬಾದ ಶ್ರಾಫ್‌ಬಜಾರಿನಿಂದ ಪ್ರಕಟಿಸಲ್ಪಡುವ -ಗೋಲ್ಕೊಂಡ- ಪತ್ರಿಕೆಯಲ್ಲೂ, ಮದ್ರಾಸ್ ತಂಬುಚೆಟ್ಟಿಬೀದಿಯಿಂದ ಹೊರಡುವ ಆಂಧ್ರಪತ್ರಿಕೆಯಲ್ಲೂ ಮಹಾಸಭೆಯ ಸರ್ವವಿಷಯಗಳನ್ನು ಆಂಧ್ರಭಾಷೆಯಿಂದ ಪ್ರಕಟಿಸಿ ಸಭೆಯನ್ನು ಜಯಪ್ರದವಾಗಿ ನೆರವೇರಿಸಿರೆಂದು ಹುಬ್ಬಳ್ಳಿಯ ವೀರಶೈವಮಹಾಜನಗಳಲ್ಲಿ ವಿಜ್ಞಾಪನೆ.

ಚಿದಿರೇಮಠದ ವೀರಭದ್ರಶರ್ಮ.

೧೦ ನೇ ವೀರಶೈವಮಹಾಸಭೆಯು.

ಬರುವ ಡಿಶಂಬರ್ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಜರಗುವ ವೀರಶೈವ ಮಹಾಸಭೆಗೆ ಅಧ್ಯಕ್ಷರನ್ನು ಚುನಾಯಿಸುವ ವಿಷಯವಾಗಿಯೂ ಸಭೆಯಲ್ಲಿ ವಿವೇಚಿಸತಕ್ಕ ಮಹತ್ವದ ವಿಷಯಗಳ ವಿಚಾರವಾಗಿಯೂ ನಮ್ಮೀಸಮಾಜದ ಮುಂದೆ ಒಂದೆರಡು ಮಾತುಗಳನ್ನು ಆಡುವದು ಯೋಗ್ಯವೆಂದು ಭಾವಿಸಿ ತಿಳಿದಮಟ್ಟಿಗೆ ನನ್ನ ಅಭಿಪ್ರಾಯವನ್ನು ಈ ಕೆಳಗೆ ಕೊಟ್ಟಿದ್ದೇನೆ. ಅದನ್ನು ಸಭಾಚಾಲಕರು ಗಮನಿಸಬೇಕಾಗಿ ವಿನಂತಿಯು.

ಅಧ್ಯಕ್ಷರನ್ನು ಆರಿಸುವ ಬಗ್ಗೆ

(1) ನಿಜಾಮು ಇಲಾಖೆಯ ಶ್ರೀಮಂತ ಭಾವುರಾವ ದೇಶಮುಖ ಹೈಕೋರ್ಟ ವಕೀಲ್ ಹೈದರಾಬಾದು.

(2) ಬೆಳಗಾಂಜಿಲ್ಲೆಯ ಶ್ರೀಮಂತ ದಾನಪ್ಪಗೌಡಾ ಇನಾಮುದಾರ್ ಸಾ|| ನೇಗಿಲಹಾಳ.

(3) ಶ್ರೀಮಂತ ಶಾಂತಪ್ಪ ಸಿಂತ್ರೆ ಸಾ|| ಕುರ್ಲಿ.

(4) ವಿಜಾಪುರಜಿಲ್ಲೆಯ ಶ್ರೀಮಂತ ಶಿವಲಿಂಗರಾವ ಜಗದೇವರಾವ ದೇಶಮುಖ ಆಲಮೇಲ.

(5) ಶ್ರೀಮಂತ ಸಂಗಪ್ಪ ಅಮೀನಗವಡಾ ದೇಸಾಯಿ ರಕ್ಕಸಗಿ.

(6) ಮದ್ರಾಸ್ ಇಲಾಖೆಯ ಶ್ರೀಮನ್ಮಹಾರಾಜ ಚಿಕ್ಕರಾಯಲ್ ಯಶವಂತ ಬಹದ್ದೂರ್ ಕುಮಾರರಾಜ ಸಾ|| ಪುಂಗನೂರು.

(7) ಶ್ರೀಮಂತ ಪಂಪನಗೌಡಾ ಪಾಟೀಲ ಸಾ|| ಹೊಳೆಗುಂದಿ ಜಿಲ್ಲಾ ಬಳ್ಳಾರಿ.

ಈ ಪ್ರಕಾರ ವೀರಶೈವಮತದ ಎಂಟುಜನ ಮಹನೀಯರು ಪರಜಿಲ್ಲೆಯವರೂ ಸಮಾಜಪ್ರಿಯರೂ ಕರ್ತವ್ಯದಕ್ಷರೂ ಉದಾರರೂ ವಿದ್ಯಾವಂತರೂ ವೀರಶೈವ ಸಮಾಜೋದ್ಧಾರಕರೂ ಶ್ರೀಮಂತರೂ ಇರುತ್ತಾರೆ. ಕಾರಣ ಇವರಲ್ಲಿ ಯಾರನ್ನಾದರೂ ಅಧ್ಯಕ್ಷಸ್ಥಾನಕ್ಕೆ ನೇಮಿಸಿದರೆ ಮಹಾಸಭೆಯ ಕಾರ್ಯಗಳು ಮತ್ತು ಉದ್ದೇಶಗಳು ಸುಲಭರೀತಿಯಿಂದ ಕೊನೆಗಾಣಲು ಸಂದೇಹವೇ ಇಲ್ಲ.

ಚರ್ಚಿಸತಕ್ಕ ವಿಷಯಗಳ ಬಗ್ಗೆ—(1) ಲಿಂಗಾಯತರಲ್ಲಿ ಪಂಚಮಸಾಲಿ, ಬಣಜಿಗ, ಬಣಗಾರ, ಶಿವಸಿಂಪಿಗ ಕೊಡುಒಕ್ಕಲಿಗ. ನರವಾಲರೆಡ್ಡಿ ಪಾಕನಾಕರೆಡ್ಡಿ, ಮಲವರು ಮೊದಲಾದ ಅನೇಕ ಜಾತಿಗಳುಂಟು. ಇವರಲ್ಲಿ ಕೆಲವರು ಪರಸ್ಪರರ ಮನೆಗೆ ಊಟ ಉಪಚಾರಕ್ಕೆ ಹೋಗುವದಿಲ್ಲ; ಶರೀರಸಂಬಂಧಮಾಡುವದಿಲ್ಲ. ಇದರಿಂದ ವೀರಶೈವರಲ್ಲಿ ಅನೈಕ್ಯವುಂಟಾಗಿ ಸಮಾಜಕ್ಕೆ ಬಹು ರೀತಿಯಿಂದ ಹಾನಿಯಾಗಿರುತ್ತದೆ. ಕಾರಣ ಅಷ್ಟಾವರಣಕ್ಕೆ ಯೋಗ್ಯರಾದ (ಜಂಗಮರು ಊಟಕ್ಕೆ ಹೋಗುವ) ವೀರಶೈವರ ಯಾವತ್ತು ಜಾತಿಯವರಲ್ಲಿ ಪರಸ್ಪರರು ಶರೀರಸಂಬಂಧಮಾಡಬೇಕೆಂದು ನನ್ನ ವಿನಂತಿ ಅದೆ. (2) ಬಾಲ್ಯವಿವಾಹ, ವೃದ್ಧವಿವಾಹ, ಬಹುಪತ್ನಿತ್ವ, ಕನ್ಯಾವಿಕ್ರಯ ವರದಕ್ಷಿಣೆ ಲಗ್ನ ಮೊದಲಾದವುಗಳಲ್ಲಿ ಮಾಡುವ ದುಂದುಗಾರಿಕೆ ಇವುಗಳ ನಿಷೇಧಮಾಡುವದು. (3) ವಿಧವೆಯರ ಯೋಗ್ಯವ್ಯವಸ್ಥಾ ಮಾಡುವದು. (4) ಧಾರವಾಡ ಅಥವಾ ಹುಬ್ಬಳ್ಳಿಯಲ್ಲಿ ಲಿಂಗಾಯತರ ಇಂಗ್ಲೀಷ್ ಕಾಲೇಜನ್ನು ಸ್ಥಾಪಿಸುವದು. (5) ಲಿಂಗಾಯತ ಸಮಾಜವು ವಿದ್ಯೆಯಲ್ಲಿ ಹಿಂದುಳಿದಿರುವದರಿಂದ ಆದಷ್ಟು ಪ್ರಯತ್ನಮಾಡಿ ನಮ್ಮ ವಿದ್ಯಾರ್ಥಿಗಳು ಇಂಗ್ಲೆಂಡ್ ಅಮೇರಿಕಾ ಮೊದಲಾದ ಪರದೇಶಗಳಿಗೆ ಹೋಗಿ ಕಲಿಯಲಿಕ್ಕೆ ಸರಕಾರದವರಿಂದ ಧನಸಹಾಯಬೇಡತಕ್ಕದ್ದು. (6) ಸರಕಾರದಲ್ಲಿ ದೊಡ್ಡದೊಡ್ಡ ನೌಕರಿಗಳನ್ನು ಎಲ್ಲಕ್ಕೂ ಮೊದಲು ಕೊಡುವಂತೆ ಬೇಡುವದು. (7) ಲಿಂಗಾಯತರಲ್ಲಿ ಒಕ್ಕಲತನಮಾಡುವವರೇ ವಿಶೇಷವಿರುವುದರಿಂದ ಹೊಲದೊಳಗಿನ ಪೀಕನ್ನು ಉಡಾಳ ದನಗಳು ಜಿಗರಿಗಳು ಕಾಡಮೃಗಗಳು ಮೊದಲಾದ ಹಿಂಡುಗಳು ತಿಂದು ನಾಶಮಾಡುತ್ತವೆ. ಇವುಗಳ ನಿವಾರಣೋಪಾಯವನ್ನು ಮಾಡಲಿಕ್ಕೆ ಸರಕಾರಕ್ಕೆ ತಿಳಿಸುವದು. (8) ಲಿಂಗಾಯತರಲ್ಲಿ ಯಾರಾದರೂ ಕುಲಗೆಟ್ಟು ಹೋದರೆ ಅವರನ್ನು ಪುನಃ ಲಿಂಗಾಯತ ಸಮಾಜದಲ್ಲಿ ತೆಗೆದುಕೊಳ್ಳುವದು. (9) ಶಿದ್ದೀಕನೆಂಬ ಮುಸಲ್ಮಾನ ಮನುಷ್ಯನು ಹಿಂದೂಧರ್ಮವನ್ನು ನಶಿಸುವದಕ್ಕಾಗಿ ತಾನೇ ಚೆನ್ನಬಸವೇಶ್ವರನೆಂದು ದುರ್ಬೋಧಮಾಡುತ್ತಲಿದ್ದಾನೆ. ಇದರಿಂದ ನಮ್ಮ ಧರ್ಮಕ್ಕೆ ಗ್ಲಾನಿಬರಬಹುದು. ಕಾರಣ ಅವನ ಸಲುವಾಗಿ ಯೋಗ್ಯವ್ಯವಸ್ಥಾ ಮಾಡುವದು. (10) ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಈಗ 3-4 ವರ್ಷಗಳಿಂದ ಒಂದೇ ವರ್ಷದ ಶಿಕ್ಷಣವನ್ನು ಕೊಡುತ್ತಾರೆ. ಅದು ಮೊದಲಿನಂತೆ ಮೂರು ವರ್ಷದ ಶಿಕ್ಷಣ ಕೊಡಬೇಕು. ಯಾಕೆಂದರೆ ಈ ನಮ್ಮ ನಾಡಿನಲ್ಲಿ ಕನ್ನಡಭಾಷೆಯೇ ಮುಖ್ಯವಾಗಿರುವದರಿಂದ ಟ್ರೇನಿಂಗ್ ಕಾಲೇಜಿನ ಏಳ್ಗೆಯೇ ನಮ್ಮ ಕನ್ನಡನಾಡಿನ ಏಳ್ಗೆಗೆ ಕಾರಣ. ಈ ಬಗ್ಗೆ ಸಭೆಯಲ್ಲಿ ವಿಚಾರಿಸುವದು.

ರಾಮಪ್ಪಾ ಗೋಜನೂರ್ ಸಾ|| ಕವಡಿ,
ಟಿ. ಎಲ್ ಬಿ. ಮೆಂಬರ್.

ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನು ನಿರೋಧಗೊಳಿಸುವ ವಿಚಾರದಲ್ಲಿ ಮೈಸೂರು ಗೌರ್ನಮೆಂಟಿನಿಂದ ಸಾದರಾಗಿರುವ ಈ ಕೆಳಗೆ ನಮೂದಿಸಿರುವ ಪ್ರಶ್ನಾವಳಿಗೆ ಗೋಸಂರಕ್ಷಣಾಭಿಮಾನಿಗಳು ಸಮಂಜಸವಾದ ಉತ್ತರಗಳನ್ನು ಬರೆದು 15-11-1926 ರೊಳಗಾಗಿ ನಮ್ಮ ಸಂಘದ ಆಫೀಸಿಗೆ ಕಳುಹಿಸಿಕೊಡಬೇಕಾಗಿ ಕೋರಿಕೆ,

ತುಮಕೂರು, 26-10-1926. } ಡಿ. ಎಸ್. ಶ್ಯಾಮರಾಜಪ್ಪ,
ಪ್ರೆಸಿಡೆಂಟ್, ಪ್ರಾಣಿದಯಾಪ್ರಚಾರಕಸಂಘ.

"ಕಾಪಿ."

ಗೋವಧೆಯನ್ನು ನಿರೋಧಗೊಳಿಸುವ ವಿಚಾರ.

G. O. ನಂಬರ್ ಪಿ. 710-26—ಲೆಜಿಸ್. 12-26-1,
ತಾರೀಖು 10ನೆಯ ಆಗಸ್ಟ್ 1926.

ಪ್ರಶ್ನಾವಳಿ.

(1) ಸಾಕ್ಷಿಯ ಹೆಸರು.
(2) ವಯಸ್ಸು.
(3) ಕಸಬು.
(4) ವಾಸಸ್ಥಳ.
(5) ಜಾತಿ, ಪಂಗಡ ಅಥವಾ ಮತ.

(6) ನಿಮಗೆ (i) ದನಗಳ ತಳಿಯನ್ನು ಮೇಲ್ಪಡಿಸುವುದರಲ್ಲಿ, (ii) ಹೈನದಮನೆಯ ಕೆಲಸವನ್ನು ನಡೆಸುವುದರಲ್ಲಿ, (iii) ತೊಗಲಿನ ಮತ್ತು ಚರ್ಮದ ವ್ಯಾಪಾರವನ್ನು ನಡೆಸುವುದರಲ್ಲಿ, (iv) ದನದ ಮಾಂಸವನ್ನು ಮಾರುವುದರಲ್ಲಿ, (v) ಗೋಶಾಲೆಗಳ ಕೆಲಸವನ್ನು ನಡೆಸುವುದರಲ್ಲಿ, (vi) ಸಾಮಾನ್ಯವಾಗಿ ಪಶುಗಳ ವಿಷಯದಲ್ಲಿ ವಿಶೇಷ ವಿಧದಲ್ಲಿ ಅನುಭವ ಅಥವಾ ತಿಳುವಳಿಕೆ ಏನಾದರೂ ಇದ್ದಲ್ಲಿ ಆ ಅಂಶಗಳನ್ನು ದಯೆಯಿಟ್ಟು ತಿಳಿಸಿರಿ.

ಸೂಚನೆ:—ಈ ಪ್ರಶ್ನೆಗಳ ಸಂಬಂಧದಲ್ಲಿ -ಹಸು- ಅಥವಾ -ಗೋವು- ಎಂದರೆ ಹೋರಿಯ ವರ್ಗಕ್ಕೆ ಸೇರಿದ ಹೆಣ್ಣುಪ್ರಾಣಿಯೆಂದು ಅರ್ಥ. -ದನ- ಎಂದರೆ ಎತ್ತಿನ ಮತ್ತು ಕೋಣದ ವರ್ಗಗಳ ಎಲ್ಲಾ ವಿಧದ ಕಾಲ್ನಡೆಗಳೆಂದು ಅರ್ಥ.

1. ಸಂಸ್ಥಾನದಲ್ಲಿ ಗೋವಧೆಯು ನಡೆಯದಂತೆ ಅಡ್ಡಿಪಡಿಸುವುದು ಅವಶ್ಯಕವೆಂದು ನೀವು ಭಾವಿಸುವಿರಾ?

2. ಹಾಗೆ ಭಾವಿಸಿದಲ್ಲಿ ಅದಕ್ಕೆ ಕಾರಣಗಳೇನು? ಅವು ಮತಸಂಬಂಧವಾದವುಗಳೇ ಅಥವಾ ಆರ್ಥಿಕಸ್ಥಿತಿಗೆ ಸಂಬಂಧಪಟ್ಟವುಗಳೇ ಅಥವಾ ಪ್ರಾಣಿಗಳಲ್ಲಿ ದಯೆಯಿಡಬೇಕೆಂಬ ಭಾವನೆಗೆ ಸಂಬಂಧಪಟ್ಟವುಗಳೇ ಅಥವಾ ಪಂಗಡಗಳಲ್ಲಿ ಸೌಹಾರ್ದಭಾವವೂ, ಸಮಾಧಾನವೂ ಮತ್ತು ಸಾಮರಸ್ಯವೂ ಇರಬೇಕೆಂಬುದಕ್ಕೆ ಸಂಬಂಧಪಟ್ಟವುಗಳೇ? ನಿಮ್ಮ ಕಾರಣಗಳನ್ನು ಅವುಗಳ ಪ್ರಾಮುಖ್ಯತೆಗನುಸಾರವಾಗಿ ಕ್ರಮವಾಗಿ ಬರೆಯಿರಿ.

3. (a) ಗೋವಧೆಯನ್ನು ನಿರೋಧಪಡಿಸುವುದರಲ್ಲಿ, ಗರ್ಭವನ್ನು ಧರಿಸಿರುವ ಮತ್ತು ಹಾಲು ಕೊಡುತ್ತಿರುವ ಹಸುಗಳನ್ನು ಕೊಲ್ಲಕೂಡದೆಂದು ನಿರೋಧಗೊಳಿಸಬೇಕೆಂಬುದು ನಿಮ್ಮ ಇಷ್ಟವೆ? ಅಥವಾ ಗೊಡ್ಡಾಗಿರುವ ಹಸುಗಳನ್ನೂ ಮತ್ತು ಮುದಿಯಾಗಿರುವ ಹಸುಗಳನ್ನೂ ಕೂಡ, ಕೊಲ್ಲಕೂಡದೆಂಬುದು ನಿಮ್ಮ ಇಷ್ಟವೆ?

(b) ಹೋರಿಗಳನ್ನೂ ಎತ್ತುಗಳನ್ನೂ ಅವು ಮುದಿಯಾಗಿದ್ದರೂ ಅಥವಾ ಇತರ ವಿಧದಲ್ಲಿ ನ್ಯೂನತೆಯುಳ್ಳವುಗಳಾಗಿದ್ದರೂ ಸಹ ಕೊಲ್ಲಕೂಡದೆಂಬುದು ನಿಮ್ಮ ಇಷ್ಟವೆ? ಎಮ್ಮೆಗಳು, ಕರುಗಳು ಮತ್ತು ಎಮ್ಮೆಯ ಕಡಸುಗಳು ಮತ್ತು ಹಸುವಿನ ಕಡಸುಗಳು, ಇವುಗಳನ್ನೂ ಸಹ, ಕೊಲ್ಲಕೂಡದೆಂದು ನಿರೋಧಗೊಳಿಸಬೇಕೆಂಬುದು ನಿಮ್ಮ ಅಭಿಪ್ರಾಯವೆ?

4. ಮೈಸೂರುಸಂಸ್ಥಾನದಲ್ಲಿಯಾಗಲಿ, ಅಥವಾ ಅದರ ಯಾವುದಾದರೂ ಒಂದು ಭಾಗದಲ್ಲಿಯಾಗಲಿ ಒಂದು ವರುಷದಲ್ಲಿ, ಕಸಾಯಿ ಮನೆಗಳಲ್ಲಿ ಅಥವಾ ಹೊರಗಡೆ ಈಗ ಕೊಲ್ಲಲ್ಪಡುತ್ತಿರುವ ದನಗಳಲ್ಲಿ ನಾನಾ ತರಗತಿಯವುಗಳ ಸುಮಾರು ಸಂಖ್ಯೆಯು ಎಷ್ಟು? ನೀವು ಯಾವುದಾದರೂ ಒಂದು ಪ್ರದೇಶವನ್ನು ಕುರಿತು ಈ ಸಂಖ್ಯೆಯನ್ನು ಸೂಚಿಸುವುದಾದರೆ, ಆ ಪ್ರದೇಶವು ಯಾವುದೆಂಬುದನ್ನು ತಿಳಿಸಿರಿ?

(1) ಗರ್ಭಧರಿಸಿದ ಮತ್ತು ಹಾಲುಕೊಡುವ ಹಸುಗಳು.

(2) ಗೊಡ್ಡು ಬಿದ್ದ ಮತ್ತು ಮುದಿಯಾದ ಹಸುಗಳು.

(3) ಹೋರಿಗಳು.
(4) ಮುದಿಯಾದ ಅಥವಾ ಇತರ ವಿಧದಲ್ಲಿ ನ್ಯೂನತೆಯಿರುವ ಎತ್ತುಗಳು.
(5) ಎಮ್ಮೆಗಳು.
(6) ಹಸುಗಳ ಮತ್ತು ಎಮ್ಮೆಗಳ ಕಡಸುಗಳು.
(7) ಎಮ್ಮೆಗಳ ಮತ್ತು ಹಸುಗಳ ಕರುಗಳು.

5. ಸಂಸ್ಥಾನದಲ್ಲಿ ದನಗಳನ್ನು ವಧೆಮಾಡುವ ಮುಖ್ಯ ಸ್ಥಳಗಳು ಯಾವುವು ? ಮತ್ತು ಅಂಥಾ ಸ್ಥಳಗಳಲ್ಲಿ ಪ್ರತಿಯೊಂದರಲ್ಲಿಯೂ ಕೊಲ್ಲಲ್ಪಡುವ ನಾನಾವಂಗಡದ ದನಗಳ ಸರಾಸರಿ ಸಂಖ್ಯೆಯು ಎಷ್ಟು ? ಈ ಕೆಳಗೆ ನಮೂದಿಸಿರುವ ಪ್ರತಿಯೊಂದು ವಂಗಡದ ಗಣನೆಗಳ ವಿಷಯದಲ್ಲಿಯೂ, ಸುಮಾರು ಲೆಕ್ಕವನ್ನು ನಮೂದಿಸಿರಿ :—
(1) ಗರ್ಭಧರಿಸಿದ ಮತ್ತು ಹಾಲುಕೊಡುವ ಹಸುಗಳು.
(2) ಗೊಡ್ಡಾದ ಮತ್ತು ಮುದಿಯಾದ ಹಸುಗಳು.
(3) ಹೋರಿಗಳು.
(4) ಮುದಿಯಾದ ಅಥವಾ ಇತರ ವಿಧದಲ್ಲಿ ನ್ಯೂನತೆಯಿರುವ ಎತ್ತುಗಳು.
(5) ಎಮ್ಮೆಗಳು.
(6) ಹಸುಗಳ ಮತ್ತು ಎಮ್ಮೆಗಳ ಕಡಸುಗಳು.
(7) ಹಸುಗಳ ಮತ್ತು ಎಮ್ಮೆಗಳ ಕರುಗಳು.

6. ಸಾಮಾನ್ಯವಾಗಿ.
(a) ಕಸಾಯಿಮನೆಗಳಲ್ಲಿ.
(b) ದನದಮಾಂಸವನ್ನು ಮಾರುವುದರಲ್ಲಿ.
(c) ತೊಗಲನ್ನು ಹದಮಾಡುವುದರಲ್ಲಿ.
(d) ಚರ್ಮದಿಂದ ಸಾಮಾನುಗಳನ್ನು ತಯಾರುಮಾಡುವುದರಲ್ಲಿ.
(e) ದನದಮಾಂಸವನ್ನು ಅಥವಾ ತೊಗಲನ್ನು ರಫ್ತುಮಾಡುವುದರಲ್ಲಿ, ಎಷ್ಟು ಜನಗಳು ಕೆಲಸಮಾಡುತ್ತಿದ್ದಾರೆ ?

7. ಕಟುಕರಾಗಲಿ ಅಥವಾ ಅವರ ಮುಖಾಂತರ (ಏಜಂಟು) ರಾಗಲಿ ವಧೆಮಾಡುವದಕ್ಕಾಗಿ ಯಾರಿಂದ ದನಗಳನ್ನು ಪಡೆದುಕೊಳ್ಳುತ್ತಾರೆ ?

8. ಸಂಸ್ಥಾನದಲ್ಲಿ ದನದಮಾಂಸಕ್ಕೋಸ್ಕರ ಉತ್ತಮವಾದ ತಳಿಯನ್ನು ಪಡೆಯುವುದಕ್ಕಾಗಿಯೂ, ಮತ್ತು ರಾಸುಗಳ ಸಂಖ್ಯೆಯು ಕಡಮೆಯಿಲ್ಲದೆ ಒಂದೇಸಮನಾಗಿರುವುದಕ್ಕಾಗಿಯೂ, ಯಾವುದಾದರೂ ಏರ್ಪಾಡು ನಡೆಸಲ್ಪಡುತ್ತಿದೆಯೆ ? ಮತ್ತು ಹಾಗೆ ನಡೆಸಲ್ಪಡುತ್ತಿದ್ದಲ್ಲಿ ಎಲ್ಲಿ ನಡೆಸಲ್ಪಡುತ್ತಿದೆ. ಮತ್ತು ಎಷ್ಟರಮಟ್ಟಿಗೆ ನಡೆಸಲ್ಪಡುತ್ತಿದೆ ?

9. ವಧೆಮಾಡುವುದಕ್ಕಾಗಿ ಮಾರಲ್ಪಡುವ ಒಂದು ಹಸುವಿನ ಅಥವಾ ಎತ್ತಿನ ಸರಾಸರಿ ಬೆಲೆಯೆಷ್ಟು ?

10. ದನದಮಾಂಸವನ್ನು ಸಾಮಾನ್ಯವಾಗಿ ಆಹಾರಕ್ಕೆ ಉಪಯೋಗಿಸುವ ಪಂಗಡಗಳೂ ಮತ್ತು ತರಗತಿಗಳೂ ಯಾವುವು ?

11. ಇತರ ಮಾಂಸಗಳ ಬೆಲೆಯೊಡನೆ ಹೋಲಿಸಿ ನೋಡಿದರೆ ದನದ ಮಾಂಸವು ಅಗ್ಗವೋ ? ತಗ್ಗೋ ? ?

12. (a) ಹಸುಗಳನ್ನು ಮತ್ತು (b) ಇತರ ಎಲ್ಲಾವಿಧದ ದನಗಳನ್ನೂ, ಕೊಲ್ಲಕೂಡದೆಂದು ನಿರೋಧಗೊಳಿಸಿದರೆ ಒಟ್ಟಿನಲ್ಲಿ ಸಂಸ್ಥಾನದ ಆಹಾರದ ಸರಬರಾಜಿಗೆ ಕುಂದಕವೇನಾದರೂ ಉಂಟಾದೀತೆ ? ಉಂಟಾಗುವ ಪಕ್ಷದಲ್ಲಿ ನಮ್ಮ ದೇಶದ ಆಹಾರವಸ್ತುಗಳ ಉತ್ಪನ್ನದ ಈಗಿನ ಸ್ಥಿತಿಯಲ್ಲಿ ಅದಕ್ಕೆ ಅವಕಾಶಕೊಡಬಹುದೆ ?

13. ಕರುಗಳನ್ನು ಸಾಕುವುದಕ್ಕಾಗಲಿ, ಅಥವಾ ಹಾಲು ಕೊಡುವುದಕ್ಕಾಗಲಿ ಉಪಯೋಗವಿಲ್ಲದ ಹಸುಗಳನ್ನು ಸಾಮಾನ್ಯವಾಗಿ ಯಾವರೀತಿ ವಿಲೇಮಾಡುತ್ತಾರೆ ?

14. ಅವುಗಳನ್ನು ಉಳುವುದಕ್ಕಾಗಿ ಅಥವಾ ಗಾಡಿಗೆ ಕಟ್ಟುವುದಕ್ಕಾಗಿ ಅಥವಾ ಇತರ ಕೆಲಸಗಳಿಗಾಗಿ ಉಪಯೋಗಿಸುತ್ತಾರೆಯೆ ? ಅಥವಾ ಕಸಾಯಿಮನೆಯಲ್ಲಿ ಕೊಲ್ಲುವುದಕ್ಕಾಗಿ ಮಾರುತ್ತಾರೆಯೆ ? ಮತ್ತು ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ?

15. ಈಗ ದನಗಳನ್ನು ಕೊಲ್ಲುತ್ತಿರುವರೀತಿಯನ್ನು ನೋಡಿದರೆ, ದನದ ತಳಿಯ ವಿಷಯದಲ್ಲಿಯೂ ಮತ್ತು ವ್ಯವಸಾಯದ ಮುಂತಾದ ವಿಷಯದಲ್ಲಿಯೂ, ಅದರ ಪರಿಣಾಮ ಫಲವೇನು?

16. ಎಲ್ಲಾ ವಿಧದ ಹಸುಗಳನ್ನೂ ಕಾಪಾಡುತ್ತಾಬಂದರೆ, ತಳಿಯು ಯಾವ ವಿಧದಲ್ಲಿ ಪರ್ಯವಸಾನ ಹೊಂದುವುದೆಂಬುದು ನಿಮ್ಮ ಅಭಿಪ್ರಾಯ ?

17. ಸ್ಥಳದ ಯಾವಯಾವ ತಳಿಗಳ ಹಸುಗಳಿಂದ ದಿನಕ್ಕೆ ಸರಾಸರಿ ಎಷ್ಟೆಷ್ಟು ಹಾಲು ದೊರೆಯುತ್ತದೆ?

18. ಗೋವಧೆಯು ನಡೆಯಕೂಡದೆಂದು ನಿರೋಧಪಡಿಸಿದರೆ, ಸಂಸ್ಥಾನದಲ್ಲಿ ದೊರೆಯುವ ಹಾಲಿನ ಪ್ರಮಾಣವು ಹೆಚ್ಚುವುದೆಂದು ನಿಮ್ಮ ಅಭಿಪ್ರಾಯವೆ ? ಅದು ಹಾಗೆ ಹೆಚ್ಚುವುದಾದರೆ, ಸುಮಾರು ಎಷ್ಟು ಹೆಚ್ಚಾಗುವುದೆಂಬುದನ್ನು ನೀವು ಅಂದಾಜುಮಾಡಬಲ್ಲಿರಾ ? ಅದರಿಂದ ಹಾಲಿನ ಬೆಲೆಯಲ್ಲೇನಾದರೂ ವ್ಯತ್ಯಾಸವುಂಟಾಗುವುದೇ ?

19. ಗೋವಧೆಯನ್ನು ನಿರೋಧಗೊಳಿಸಿದರೆ ಸಂಸ್ಥಾನದಲ್ಲಿ ಶಿಶುಗಳ ಮರಣವು ಕಡಮೆಯಾಗುವುದೆಂದು ನಿಮ್ಮ ಅಭಿಪ್ರಾಯವೆ ?

20. ಗೋವಧೆಯು ನಡೆಯಕೂಡದೆಂದು ಅಡ್ಡಿಮಾಡಿದರೆ ಸಂಸ್ಥಾನದಲ್ಲಿ ಈಗ ದೊರೆಯುವ ಮೇವು ಸಾಕಾಗುವುದೆ ? ಅಥವಾ ಸಾಲದೆಹೋಗುವುದೇ ?

21. ಅದರಿಂದ ಸಂಸ್ಥಾನದಲ್ಲಿ ಗೊಬ್ಬರದ ಪ್ರಮಾಣವು ಸುಮಾರು ಎಷ್ಟರಮಟ್ಟಿಗೆ ಹೆಚ್ಚಬಹುದು ?

22. ಅದು ಒಂದುವೇಳೆ ಹೆಚ್ಚುವುದಾದರೆ, ಅದರ ಆಧಿಕ್ಯಕ್ಕೂ, ಮತ್ತು ವಧೆಮಾಡಕೂಡದೆಂದು ನಿರೋಧಗೊಳಿಸಿದ ಹಸುಗಳನ್ನು ಕಾಪಾಡುವ ವೆಚ್ಚಕ್ಕೂ ಸರಿಹೋಗುವುದೆ ?

23. ಗೋವಧೆಯನ್ನು ನಿರೋಧಗೊಳಿಸಿದರೆ ಸಂಸ್ಥಾನದಲ್ಲಿ ತೊಗಲಿನ ವ್ಯಾಪಾರಕ್ಕೇನಾದರೂ ಕುಂದಕವುಂಟಾಗುವುದೇ ? ಹಾಗಾದರೆ ಯಾವರೀತಿಯಲ್ಲಿ ಉಂಟಾಗುವುದು ?

24. ಸ್ವಾಭಾವಿಕವಾಗಿ ಮರಣಹೊಂದಿದ ಹಸುವಿನ ತೊಗಲಿಗೂ, ವಧೆಮಾಡಲ್ಪಟ್ಟ ಹಸುವಿನ ತೊಗಲಿಗೂ, ಬೆಲೆಯಲ್ಲಿರುವ ವ್ಯತ್ಯಾಸವೇನು ?

25. (a) ಮುದಿಯಾದ ಮತ್ತು ಉಪಯೋಗವಿಲ್ಲದ ಹಸುಗಳನ್ನೂ ಕಾಪಾಡಬೇಕಾಗಿ ಬಂದಲ್ಲಿ ಅವುಗಳ ಮಾಲೀಕನು ಇತರ ಉಪಯೋಗಕರವಾದ ದನಗಳನ್ನು ಕಾಪಾಡಲು ಹೆಚ್ಚು ಕಷ್ಟಪಡಬೇಕಾಗಿಬರುತ್ತದೆಯೆ ?

(b) ಹಾಗಿದ್ದ ಪಕ್ಷದಲ್ಲಿ, ಮುದಿಯಾದ ಮತ್ತು ಉಪಯೋಗವಿಲ್ಲದ ದನಗಳನ್ನು ರಕ್ಷಿಸುವ ವಿಷಯದಲ್ಲಿ ನಿಮ್ಮ ಸಲಹೆಗಳೇನು ?

26. ನಿಮ್ಮ ಪ್ರಾಂತ್ಯಗಳಲ್ಲಿ ಗೋಶಾಲೆಗಳಾಗಲಿ, ಕೆಲಸಕ್ಕೆ ಉಪಯೋಗವಿಲ್ಲದ ಪ್ರಾಣಿಗಳ ರಕ್ಷಣಾಲಯ (ಪಿಂಜ್ರಾಪೋಲು) ಗಳಾಗಲಿ, ಇವೆಯೆ ?
(i) ಅವುಗಳ ಸಂಖ್ಯೆಯು ಎಷ್ಟು ?
(ii) ಅವುಗಳಲ್ಲಿ ಎಷ್ಟು ಹಸುಗಳನ್ನೂ ಮತ್ತು ಇತರ ದನಗಳನ್ನೂ ಸಾಕುತ್ತಿದ್ದಾರೆ.
(iii) ಅವುಗಳಿಗೆ ತಗಲುವ ವೆಚ್ಚವೆಷ್ಟು ? ವೆಚ್ಚಕ್ಕೆ ಹಣವನ್ನು ಯಾವರೀತಿಯಲ್ಲಿ ಒದಗಿಸುತ್ತಾರೆ ?

27. ಸರ್ಕಾರದವರು ಗೋಶಾಲೆಗಳನ್ನೂ, ಪಿಂಜ್ರಾಪೋಲುಗಳನ್ನೂ ಸ್ಥಾಪಿಸಿ ನಡೆಸಿಕೊಂಡು ಬರಬೇಕೆಂಬುದು ನಿಮ್ಮ ಅಭಿಪ್ರಾಯವೆ? ಯಾವ ಸ್ಥಳಗಳಲ್ಲಿ ಅವರು ಹಾಗೆಮಾಡಬೇಕು ? ವೆಚ್ಚವು ಎಷ್ಟಾಗಬಹುದು ?

28. ವಧೆಮಾಡುವುದಕ್ಕಾಗಿ (a) ಹಸುಗಳನ್ನೂ ಮತ್ತು (b) ಇತರ ದನಗಳನ್ನೂ, ಮಾರಕೂಡದೆಂದು ಅಥವಾ ರಫ್ತುಮಾಡಕೂಡದೆಂದು ನಿರೋಧಗೊಳಿಸಿ ಕಾನೂನನ್ನು ವಿಧಾಯಕಮಾಡಬೇಕೆಂಬುದು ನಿಮ್ಮ ಅಭಿಪ್ರಾಯವೆ? ಹಾಗಿದ್ದರೆ, ಈ ಏರ್ಪಾಡು ಕಾರ್ಯಕಾರಿಯಾಗಿ ಪರಿಣಮಿಸಲು ಯಾವಯಾವ ಕ್ರಮಗಳನ್ನು ಜರುಗಿಸಬೇಕೆಂದು ನೀವು ಸಲಹೆಮಾಡುತ್ತೀರಿ ?

29. ಇಲ್ಲವಾದರೆ, (a) ಹಸುಗಳನ್ನೂ, (b) ಇತರ ದನಗಳನ್ನೂ, ವಧೆಮಾಡುವ ಉದ್ದೇಶದಿಂದ ನೆರೆಹೊರೆಯ ಬ್ರಿಟಿಷ್ ಪ್ರಾಂತ್ಯಗಳಿಗೆ ಸಾಗಿಸಿಕೊಂಡು ಹೋಗುವುದನ್ನು ತಪ್ಪಿಸಲು, ಯಾವ ಏರ್ಪಾಡುಗಳನ್ನು ಮಾಡಬೇಕೆಂದು ನೀವು ಸಲಹೆಮಾಡುತ್ತೀರಿ ?

30. ಮೈಸೂರುಸಂಸ್ಥಾನಕ್ಕೆ ದನದಮಾಂಸವನ್ನು ಆಮದುಮಾಡಕೂಡದೆಂದು ನಿರೋಧಗೊಳಿಸುವುದೂ, ನಿಮಗೆ ಸಮ್ಮತವೆ ?

31. ಮತಾಚಾರಕ್ಕೆ ವಿರುದ್ಧವೆಂಬ ಕಾರಣದಮೇಲೆ ಗೋವಧೆಯು ನಿಲ್ಲಿಸಲ್ಪಡಬೇಕೆಂದು ನೀವು ಅಪೇಕ್ಷಿಸುವುದಾದರೆ, ನೀವು ಆಧಾರಗ್ರಂಥಗಳೆಂದು ಭಾವಿಸುವ ಯಾವ ಮತಗ್ರಂಥಗಳಲ್ಲಿ ಗೋವಧೆಯನ್ನು ನಿಷೇಧಗೊಳಿಸಿದ್ದಾರೆಂಬುದನ್ನು ನಮಗೆ ತಿಳಿಸುವಿರಾ ? ಅಥವಾ ಕೇವಲ ಮತಸಂಪ್ರದಾಯವನ್ನೂ, ಮನೋಭಾವನೆಯನ್ನೂ, ಮುಂದಿಟ್ಟುಕೊಂಡು ಗೋವಧೆಯು ನಡೆಯಕೂಡದೆಂದು ನೀವು ಹೇಳುವಿರೋ ?

32. ಗೋಮೇಧಯಜ್ಞವನ್ನು (i) ನಡೆಸಲೇಬೇಕೆಂಬ ವಿಧಿಯಿರುವ (ii) ನಡೆಸಬಹುದೆಂದು ಅನುಮತಿಯನ್ನು ಕೊಟ್ಟಿರುವ, (a) ನಿಮ್ಮ ಸ್ವಂತ ಅಥವಾ (b) ಅನ್ಯಮತದ ವಿಧಿಗಳಾಗಲಿ, ಅಥವಾ ನಿಯಮಗಳಾಗಲಿ, ಯಾವುದಾದರೂ ಉಂಟೋ ? ಈ ವಿಚಾರವು ಹೇಳಲ್ಪಟ್ಟಿರುವುದು ಯಾವ ಗ್ರಂಥಗಳಲ್ಲೆಂಬುದನ್ನು ನಮಗೆ ತಿಳಿಸುವಿರಾ ? ಅಥವಾ ಮಿತವ್ಯಯ ಮತ್ತು ಅನುಕೂಲವನ್ನುಂಟುಮಾಡುವುದೆಂಬ ಕಾರಣದಮೇಲೆ ಈ ವಿಧದ ಯಜ್ಞವು ನಡೆಸಲ್ಪಡುತ್ತಿದ್ದಿತೆ ?

33. ಗೋವಧೆಯನ್ನು ನಡೆಸಕೂಡದೆಂದು ನಿರೋಧಗೊಳಿಸುವುದಕ್ಕಾಗಿ ಕಾನೂನನ್ನು ವಿಧಿಸುವುದು ಯುಕ್ತವೆ ? ಅಥವಾ ಇನ್ನಾವುದಾದರೂ ಇತರ ವಿಧದಲ್ಲಿ ಗೋವಧೆಯು ನಡೆಯದಂತೆ ನಿರೋಧಗೊಳಿಸಬಹುದೆಂಬುದು ನಿಮ್ಮ ಅಭಿಪ್ರಾಯವೆ ?

34. ಗೋವಧೆಯು ನಡೆಯಕೂಡದೆಂಬ ವಿಚಾರದಲ್ಲಿ ಕಾನೂನನ್ನು ವಿಧಿಸುವುದು ಅವಶ್ಯಕವೆಂದು ಭಾವಿಸುವುದಾದರೆ, ಸರ್ಕಾರದವರೇ ಪ್ರತ್ಯಕ್ಷವಾಗಿ ಪ್ರವರ್ತಿಸಿ ನಿರೋಧದ ಕಾನೂನನ್ನು ಜಾರಿಗೆ ತರಲು ಕ್ರಮ ನಡೆಸಬೇಕೆ ? ಅಥವಾ ಅವರು ಪರೋಕ್ಷವಾಗಿ ಮ್ಯುನಿಸಿಪಾಲಿಟಿಗಳ ಅಥವಾ ಇತರ ಸ್ಥಳೀಯ ಸಂಸ್ಥೆಗಳ ಮೂಲಕ, ಆ ಬಗ್ಗೆ ಕ್ರಮ ಜರುಗಿಸಬೇಕೆ ?

35. ಇಂಥಾ ಕಾನೂನಿನಿಂದ ಯಾವುದಾದರೂ ಜಾತಿಯವರಿಗೆ ಅಥವಾ ಪಂಗಡಗಳವರಿಗೆ ತೊಂದರೆಯಾಗುವ ಸಂಭವವುಂಟೆ ? ಹಾಗಿದ್ದ ಪಕ್ಷದಲ್ಲಿ ಯಾರಿಗೆ ತೊಂದರೆಯಾಗುವುದೆಂಬುದನ್ನು ತಿಳಿಸಿರಿ ಮತ್ತು ಎಷ್ಟರಮಟ್ಟಿಗೆ ತೊಂದರೆಯಾಗುವುದೆಂಬುದನ್ನೂ ತಿಳಿಸಿರಿ.

36. ಈ ಕಾನೂನಿನ ದೆಸೆಯಿಂದ, ಪ್ರಜಾವರ್ಗದವರಲ್ಲಿ ಬಹುಮಂದಿಗಳು ತಮಗೆ ನಷ್ಟವಾಯಿತೆಂದು ಭಾವಿಸುವುದಾದರೆ, ಅವರ ಮನಸ್ಸಿಗೆ ಸಮಾಧಾನವಾಗುವಂತೆ ಮಾಡಲು ಯಾವ ಏರ್ಪಾಡನ್ನು ನಡೆಸಬೇಕೆಂಬುದಾಗಿ ನೀವು ಸಲಹೆಮಾಡುತ್ತೀರಿ ?

37. ಗೋವಧೆಯ ದೆಸೆಯಿಂದ ಸಂಸ್ಥಾನದಲ್ಲಿ, ಪಂಗಡಗಳಲ್ಲಿ ಪರಸ್ಪರವಾಗಿ ವೈಮನಸ್ಯವುಂಟಾಗಿ ಗಲಭೆಗೂ, ದೊಂಬಿಗೂ, ಅವಕಾಶವಾಗದ ಯಾವುದಾದರೂ ಸಂದರ್ಭಗಳನ್ನು ನೀವು ಹೇಳಬಲ್ಲಿರಾ ? ಅವು ನಡೆದುದು ಯಾವ ಸ್ಥಳಗಳಲ್ಲಿ ?

38. ಹಸುಗಳ ಸಂರಕ್ಷಣೆಯೂ, ಅವುಗಳ ಪೋಷಣೆಯೂ ಸರಿಯಾಗಿ ನಡೆಯಲು ಕಾನೂನನ್ನು ವಿಧಿಸುವುದರ ಹೊರತು, ಮತ್ತಾವುದಾದರೂ ಇತರ ಏರ್ಪಾಡುಗಳನ್ನು ನೀವು ಸಲಹೆಮಾಡಬಲ್ಲಿರಾ ?

39. ಗೋವಧೆಯು ನಡೆಯಕೂಡದೆಂದು ನಿರೋಧಗೊಳಿಸುವ ವಿಷಯದಲ್ಲಿ ನೀವು ಇತರ ಮತ್ತಾವ ಸಂಗತಿಗಳನ್ನಾದರೂ ತಿಳಿಸುವುದಿದೆಯೆ ?

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 16 ನೆಯ ಪ್ರಕರಣ.

ತಾನೊಂದನ್ನು ಬಗೆದರೆ ದೈವವೊಂದನ್ನು ಬಗೆದಿತು.

ದಾವಾದಲ್ಲಿ ರಾಜಿಕಬೂಲಾದುದರಿಂದ ಅವರ ಕೆಲಸವು ನನಗೆ ತೀರಿತು. ಅನುಕಾರಣ ನಾನು ಪ್ರಿಟೋರಿಯಾದಲ್ಲಿರಬೇಕಾದ ಪ್ರಮೇಯವೇನೂ ಕಂಡುಬರಲಿಲ್ಲವಾಗಿ ಪುನಃ ಡರ್ಬನಿಗೆ ಹೊರಟೆನು. ಅಲ್ಲಿಂದ ಭರತಖಂಡಕ್ಕೆ ಹೊರಡಲು ಕೂಡ ಸನ್ನಾಹಮಾಡುವವನಾದೆನು. ನನ್ನನ್ನು ಸುಮ್ಮನೆ ಹೋಗಗೊಡಲು ಅಬ್ದುಲ್ಲಾಸೇಟರು ಒಪ್ಪಲಿಲ್ಲವಾಗಿ ಸಿಡನ್ಹಾಮಿನಲ್ಲಿ ನನ್ನ ಗೌರವಾರ್ಥವಾಗಿ ಒಂದು ಸಂತೋಷಕೂಟಕ್ಕೇರ್ಪಡಿಸಿದರು. ಆ ದಿವಸವೆಲ್ಲ ಸಿಡನ್ಹಾಮಿನಲ್ಲೇ ಇರಲು ನಿಶ್ಚಯಿಸಿದೆನು. ನಾನು ವೃತ್ತಪತ್ರಿಕೆಗಳನ್ನು ತಿರುಗಿಸಿ ನೋಡುತ್ತಿರುವಾಗ್ಗೆ ಒಂದು ಪತ್ರಿಕೆಯ ಒಂದುಭಾಗದಲ್ಲಿ "ಭಾರತೀಯರ ನಿಯೋಜಕಸ್ವಾತಂತ್ರ್ಯವು (ಇಂಡಿಯನ್ ಫ್ರಾಂಛೈಜ್)" ಎಂಬ ಶಿರೋಲೇಖದಲ್ಲಿ ಒಂದು ವ್ಯಾಸವು ಬರೆಯಲ್ಪಟ್ಟಿದ್ದುದು ನನ್ನ ಕಣ್ಣಿಗೆ ಬಿದ್ದಿತು. ನೆಟಾಲು ಶಾಸನಸಭೆಗೆ ಪ್ರತಿನಿಧಿಗಳನ್ನು ಆರಿಸಲು ಭಾರತೀಯರಿಗಿರುವ ಹಕ್ಕನ್ನು ತಪ್ಪಿಸಲು ಒಂದು ಚಟ್ಟವು (ಆಕ್ಟು) ಶಾಸನಸಭೆಯಲ್ಲಿ ಉಪಪಾದಿಸಲ್ಪಟ್ಟ ವಿಷಯವೂ ಆ ವ್ಯಾಸದಿಂದ ನನಗೆ ತಿಳಿಯಬಂದಿತು. ಆ ವಿಷಯವು ಅವರಿಗೆ ತಿಳಿದಿರಲಿಲ್ಲವು. ಇತರರು ಕೂಡ ತಮಗೇನೂ ತಿಳಿಯುವುದಿಲ್ಲವೆಂದರು. ಅಬ್ದುಲ್ಲಾಸೇಟರನ್ನು ಕೇಳಿದೆನು. "ನಮಗೆ ಈ ವಿಷಯವೇನು ತಿಳಿಯುವುದು ? ವ್ಯಾಪಾರದ ವಿಚಾರದಲ್ಲಿ ಮಾತ್ರ ನಾವು ತಿಳಿಯಬೇಕಾಗಿದೆ. ಆರೆಂಜ್‌ಫ್ರೀಸ್ಟೇಟಿನಲ್ಲಿ ನಮ್ಮ ವ್ಯಾಪಾರವೆಲ್ಲವೂ ಸ್ವಾಧೀನಪಡಿಸಿಕೊಳ್ಳಲ್ಪಟ್ಟಿತೆಂದು ನೀವು ತಿಳಿದಿರಬಹುದು ! ಅದನ್ನು ಕುರಿತು ನಾನು ಕೊಂಚ ಪ್ರಯತ್ನಪಟ್ಟೆನು. ಆದರೆ ಲಾಭವೇನೂ ಬರಲಿಲ್ಲವು. ಇದಕ್ಕೆ ನಮಗೆ ಪಾಂಡಿತ್ಯವಿಲ್ಲವು. ನ್ಯಾಯಶಾಸ್ತ್ರಗಳನ್ನು ಓದಿದವರಲ್ಲವು. ವರ್ತಮಾನಪತ್ರಿಕೆಗಳನ್ನು ಓದಿದರೂ ವ್ಯಾಪಾರವಿಚಾರವನ್ನು ಮಾತ್ರ ನೋಡುವೆವು. ಚಟ್ಟವನ್ನು ಕುರಿತು ನಮಗೇನುತಾನೆ ತಿಳಿಯುವುದು ? ಎಲ್ಲ ವಿಷಯಗಳಲ್ಲೂ ನಾವು ಅಲ್ಲಿ ಪಾಶ್ಚಾತ್ಯ ಲಾಯರುಗಳನ್ನೇ ನಂಬಿಕೊಂಡಿರಬೇಕಾಗಿದೆ" ಎಂದು ಅಬ್ದುಲ್ಲಾರವರು ಹೇಳಿದರು. "ಇಲ್ಲೇ ಹುಟ್ಟಿ ವಿದ್ಯಾಧಿಕಾರದ ಭಾರತೀಯ ವಕೀಲರು ಬಹಳ ಜನರಿರುವರಷ್ಟೆ. ಅವರು ನಿಮಗೇನೂ ಸಹಾಯಮಾಡುವಂತಿಲ್ಲವೆ ?" ಎಂದು ನಾನು ಕೇಳಿದೆನು. "ಅವರೇ ? ಅವರು ನಮ್ಮಲ್ಲಿಗೆ ಬರುವುದೇ ಇಲ್ಲ. ಅವರನ್ನು ನಾವು ಲೆಕ್ಕಿಸುವುದಿಲ್ಲ. ಅವರೆಲ್ಲರೂ ಕ್ರೈಸ್ತರಂತೆಯೇ ಕ್ರೈಸ್ತಮತಾಧಿಕಾರಿಗಳಾದ ಬಿಳಿಜನರ ಮಾತಿಗೆ ಅವರು ಇದಿರಾಡಲಾರರು." ಆ ಮತಾಧಿಕಾರಿಯು ಇಲ್ಲಿ ಪ್ರಭುತ್ವದವರಿಗೆ ಭೃತ್ಯರಲ್ಲವೆ ? ಎಂದು ಸೇಟರಂದರು. ಆದರಿಂದ ನನಗೆ ಹೊಸಭಾವವು ಹುಟ್ಟಿತು. ಈ ಕ್ರೈಸ್ತಯುವಕರಲ್ಲಿ ಸ್ವದೇಶಾಭಿಮಾನವನ್ನು ಹುಟ್ಟಿಸಿ ಅವರನ್ನು ನಮ್ಮವರನ್ನಾಗಿ ಮಾಡಬೇಕು. ಕ್ರೈಸ್ತರಾಗುವುದು ಇದಕ್ಕಾಗಿಯೇ ? ಕ್ರೈಸ್ತರಾದ ಮಾತ್ರಕ್ಕೆ ಭಾರತದೇಶಸಂಬಂಧವು ಅವರಿಗೆ ತಪ್ಪುವುದೇ ?" ಎಂದು ನನ್ನಲ್ಲಿ ನಾನು ತರ್ಕಿಸಿದೆನು. ನಾನು ಆಗ ಪ್ರಯಾಣೋನ್ಮುಖನಾಗಿದ್ದುದರಿಂದ ನನ್ನ ಅಭಿಪ್ರಾಯವನ್ನು ಯಾರಿಗೂ ತಿಳಿಸಲಿಲ್ಲವು. "ಈ ಚಟ್ಟವನ್ನು ಒಪ್ಪುವುದಾದಲ್ಲಿ ನಿಮ್ಮ ಕಷ್ಟವು ಇನ್ನೂ ಹೆಚ್ಚುವುದು, ಮತ್ತು ಭಾರತೀಯರ ಆತ್ಮಗೌರವಕ್ಕೆ ಕುಂದಕಬರುವುದು" ಎಂದು ಮಾತ್ರ ನಾನು ಅಬ್ದುಲ್ಲಾರವರಕೂಡ ಹೇಳಿದೆನು. "ಹಾಗೆಯೇ ಆಗಬಹುದು. ಈ ಎಣಿಕೆಯ ಮೂಲವೃತ್ತಾಂತವನ್ನು ತಿಳಿಸುತ್ತೇನೆ ಕೇಳಿ. ನಮಗೆ ಅದರ ಸಂಗತಿಯೇನೆಂಬುದು ತಿಳಿಯದು. ಸುಪ್ರಸಿದ್ಧ ಅಟರ್ನಿಯಾದ ಎಸ್ಕೊಂಬಿಯವರೇ ಮೊದಲು ಇದನ್ನು ಕುರಿತು ನಮಗೆ ಬೋಧಿಸಿದರು. ಎಸ್ಕೊಂಬಿಯವರು ನಿರ್ಭಯರಾಗಿ ವಾದಿಸುತ್ತಿದ್ದುದರಿಂದ ವಾರ್ಫ್ ಇಂಜನಿಯರಿಗೂ ಅವರಿಗೂ ವಿರೋಧವುಂಟಾಯಿತು. ಚುನಾವಣೆಯಲ್ಲಿ ತಮಗೆ ಓಟುಬಂದಂತೆ ವಾರ್ಫ್ ಇಂಜನೀಯರು ಪ್ರಚಾರಮಾಡುವರೋ ಏನೋ ಎಂದು ಎಸ್ಕೊಂಬಿಯವರು ನಮಗೆ ನಮ್ಮ ಓಟಿನವಿಚಾರವನ್ನು ತಿಳಿಸಿದರು. ಆದರಿಂದ ನಾವೆಲ್ಲರೂ ಓಟರುಗಳಾಗಿ ನಮ್ಮ ಹೆಸರುಗಳನ್ನು ಬರೆಯಿಸಿ ಚುನಾವಣೆಯಲ್ಲಿ ಎಸ್ಕೊಂಬಿಯವರಿಗೇ ಓಟನ್ನು ಕೊಟ್ಟೆವು. ಆದರೆ ಈ ಹಕ್ಕಿನ ಮೇಲೆ ನಮಗೆ ಅಂತಹ ಆದರವು ಇರಲಿಲ್ಲವು. ಆ ಹಕ್ಕು ಬಹಳ ಮುಖ್ಯವಾದುದೆಂದು ನೀವು ಈಗ ಹೇಳುವುದರಿಂದ ನಾವು ಅದರ ಮಹತ್ವವನ್ನು ಗ್ರಹಿಸುವವರಾದೆವು. ನಾವೇನು ಮಾಡಬೇಕೆಂಬುದನ್ನು ದಯೆಯಿಟ್ಟು ತಿಳಿಸಿ" ಎಂದು ಅಬ್ದುಲ್ಲಾರವರು ಕೇಳಿದರು.

ಈ ಸಂಭಾಷಣೆಯು ಎಲ್ಲರೆದಿರಿಗೆ ಜರುಗಿತು. ಎಲ್ಲರೂ ಶ್ರದ್ಧೆಯಿಂದ ಕೇಳುತ್ತಿದ್ದರು. "ಸ್ವಾಮಿ ಗಾಂಧಿಯವರೇ! ನಾನು ಹೇಳುವುದನ್ನು ಕೇಳಿ. ನೀವು ಈಗ ಪ್ರಯಾಣವನ್ನು ನಿಲ್ಲಿಸಿ ಇನ್ನೊಂದು ತಿಂಗಳಕಾಲ ಇಲ್ಲಿರಬೇಕು. ನೀವು ಹೇಗೆ ನಿರ್ಣಯಿಸಿದರೆ ನಾವು ಹಾಗೆ ನಡೆದುಕೊಳ್ಳುತ್ತೇವೆ" ಎಂದು ಅವರಲ್ಲೊಬ್ಬನು ನನ್ನ ಕೂಡ ಹೇಳಿದನು. "ಹೌದು, ಹೌದು. ನಿಜ, ನಿಜ. ಅಬ್ದುಲ್ಲಾರವರೇ ! ನೀವು ಗಾಂಧಿಯವರನ್ನು ಈಗ ಹೋಗಗೊಡಬಾರದು" ಎಂದು ಎಲ್ಲರೂ ಹೇಳಿದರು. ಅಬ್ದುಲ್ಲಾರವರು ಬಹಳ ದೂರದೃಷ್ಟಿಯುಳ್ಳವರು. "ಈಗ ನಾನು ಅವರನ್ನು ನಿಲ್ಲಿಸಬೇಕಾದ ಅಗತ್ಯವಿಲ್ಲ. ಅಲ್ಲದೆ ಅವರನ್ನು ನಿಲ್ಲಿಸಲು ನನಗೆಷ್ಟು ಹಕ್ಕಿರುವುದೋ ನಿಮಗೂ ಅಷ್ಟು ಹಕ್ಕಿರುವುದು. ಆದರೆ ನೀವು ಹೇಳಿದ ಮಾತು ಮಾತ್ರ ನಿಜವು. ಈಗ ಹೊರಡಕೂಡದೆಂದು ನಾವೆಲ್ಲರೂ ಅವರನ್ನು ಕೋರುತ್ತೇವೆ. ಆದರೆ ಅವರು ಬ್ಯಾರಿಸ್ಟರಲ್ಲವೆ ? ಅವರನ್ನು ಇಲ್ಲಿ ನಾವು ನಿಲ್ಲಿಸಿಕೊಂಡಲ್ಲಿ ಅವರ ಫೀಜಿನವಿಚಾರವೇನು ?" ಎಂದು ಅಬ್ದುಲ್ಲಾರವರು ಹೇಳಿದರು. ಫೀಜುಮಾತನ್ನೆತ್ತುತ್ತಲೇ ನನಗೆ ಕಷ್ಟವಾಗಿತೋರಿತು. "ಅಬ್ದುಲ್ಲಾರವರೇ ! ಫೀಜಿನ ಮಾತು ಅವಶ್ಯವಿಲ್ಲ. ದೇಶಸೇವಾವಿಷಯದಲ್ಲಿ ಫೀಜನ್ನು ಕೋರುವುದಿಲ್ಲ. ನಾನು ಇಲ್ಲಿದ್ದಾಗ್ಯೂ ಭಾರತಮಾತಾಸೇವಕನಾಗಿಯೇ ಇರುವೆನು. ಆದರೆ ಇವರೆಲ್ಲರೊಡನೆ ನನಗೆ ಪರಿಚಯವಿಲ್ಲವೆಂಬುದನ್ನು ನೀವು ಬಲ್ಲಿರಿ. ಅವರೆಲ್ಲರನ್ನೂ ತೋರಿಸುತ್ತೇನೆಂದು ನೀವು ಹೇಳಿದುದಾದರೆ ಇನ್ನೊಂದು ತಿಂಗಳಕಾಲ ಇರಲು ನಾನು ಸಿದ್ಧನಾಗಿದ್ದೇನೆ. ನೀವು ನನಗೇನನ್ನೂ ಕೊಡಬೇಕಾದುದಿಲ್ಲವಾದರೂ, ಈ ಆಂದೋಳನವನ್ನು ನಡೆಯಿಸಲು ಕೊಂಚ ಹಣವು ಮುಖ್ಯವಾಗಿರಬೇಕು. ನೀವು ತಂತ್ರಿವಾರ್ತೆಯನ್ನು ಕೊಡಬೇಕು. ಕೆಲ ಪತ್ರಿಕೆಗಳನ್ನು ಅಚ್ಚುಮಾಡಿಸಬೇಕು. ಕೆಲವೆಡೆ ಹೋಗಬೇಕು. ಇಲ್ಲಿಯ ನ್ಯಾಯವಾದಿಗಳ ಸಲಹೆಗಳನ್ನು ತೆಗೆದುಕೊಳ್ಳಬೇಕು. ನನಗಿಲ್ಲಿಯ ನ್ಯಾಯಶಾಸ್ತ್ರಗ್ರಂಥಗಳು ಕೂಡ ಬೇಕಾಗಿವೆ. ಇವಕ್ಕೆಲ್ಲ ಆರಂಭದಲ್ಲಿ ಹಣವಿರಬೇಕು. ಹಣವಿದ್ದರೂ ಒಬ್ಬನಿಂದ ಇದು ಸಾಧ್ಯವಿಲ್ಲವಾದುದರಿಂದ ನೀವೆಲ್ಲರೂ ಸಹಾಯಮಾಡಬೇಕು" ಎಂದು ನಾನು ಹೇಳಿದೆನು. "ಭಗವಂತನು ಮಹಾದ್ಭುತಾಚಿಂತ್ಯಶಕ್ತಿಸಂಪನ್ನನು ಮತ್ತು ದಯಾಮಯನು. ಧನಕ್ಕೂ ಮನುಷ್ಯರಿಗೂ ಯಾವ ಕೊರತೆಯೂ ಉಂಟಾಗುವುದಿಲ್ಲ. ನೀವು ಇಲ್ಲಿರಲು ಅಂಗೀಕರಿಸಿದರೆ ಎಲ್ಲವೂ ಸರಿಯಾಗಿ ಜರಗುವುದು" ಎಂದು ಅವರೆಲ್ಲರೂ ಏಕಕಂಠ್ಯವಾಗಿ ನುಡಿದರು. ಈರೀತಿಯಾಗಿ ನನ್ನನ್ನು ಬೀಳ್ಕೊಡಲು ಸಮಾವೇಶವಾದ ಸಭಾಕಾರ್ಯನಿರ್ವಾಹಕಸಂಘಸಭೆಯು ಪರಿಣಮಿಸಿತು. "ಹಾಗಾದರೆ ತ್ವರೆಯಿಂದ ಸತ್ಕಾರಭೋಜನವನ್ನು ಮಾಡಿ ಮನೆಗೆ ಹೋಗೋಣ" ಎಂದು ನಾನಂದೆನು. ಮಾಡಬೇಕಾದ ಕಾರ್ಯವನ್ನು ಕುರಿತು ನಾನು ನನ್ನೊಳಗೇನೇ ಆಲೋಚಿಸುತ್ತಿದ್ದೆನು. ಓಟರುಗಳ ಪಟ್ಟಿಗಳಲ್ಲಿರುವ ಭಾರತೀಯರ ಹೆಸರುಗಳನ್ನು ತಿಳಿದುಕೊಂಡೆನು. ಇನ್ನೊಂದು ತಿಂಗಳಕಾಲ ಅಲ್ಲಿ ನಿಲ್ಲಲು ನಿಶ್ಚಯಿಸಿದೆನು. ಈರೀತಿಯಾಗಿ ದಕ್ಷಿಣಾಫ್ರಿಕೆಯಲ್ಲಿ ನನ್ನನ್ನು ನಿಲ್ಲಿಸಲು ಭಗವಂತನು ಸಂಕಲ್ಪಿಸಿ ಎಲ್ಲ ಜಾತೀಯ ಗೌರವರಕ್ಷಣಾರ್ಥವಾಗಿ ಸಂಗ್ರಾಮವನ್ನು ನಡಿಸಲು ಬೀಜವನ್ನೂ ನಾಟಿದನು.

೧೯೨೬ ನೆಯ ಇಸವಿ ನವೆಂಬರ್ ತಾ|| ೧೩ ರಿಂದ ೧೯೨೬ ನೆಯ ಇಸವಿ ನವೆಂಬರ್ ತಾ|| ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಕಾರ್ತಿಕ ಶುದ್ಧ ಅಷ್ಟಮಿಯಿಂದ ಕಾರ್ತಿಕ ಶುದ್ಧ ಪೌರ್ಣಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ವೃಶ್ಚಿ
13	ಶನಿ	ಅಷ್ಟ	16-5	ಧನಿ	31-9	28
14	ಭಾನು	ನವ	11-13	ಶತ	27-7	29
15	¹ಸೋಮ	ದ-ಏ	5-20 54-5	ಪೂಭಾ	22-52	30
16	²ಮಂಗಳ	ದ್ವಾದ	53-30	ಉಭಾ	18-3	1
17	³ಬುಧ	ತ್ರಯೋ	48-8	ರೇವ	14-50	2
18	⁴ಗುರು	ಚತು	43-18	ಅಶ್ವಿ	11-26	3
19	⁵ಶುಕ್ರ	ಪೌರ್ಣ	39-18	ಭರ	8-31	4

(1) ಕಾರ್ತಿಕ ಸೋಮವಾರ. (2) ಮಳೆನಕ್ಷತ್ರ-ವಿಶಾಖ ೪ ನೆಯ ಪಾದ, ಸ್ಮಾರ್ತಾನಾಂ ಉತ್ಥಾನದ್ವಾದಶಿ, (3) ಪ್ರದೋಷಃ, ವೈಷ್ಣವಾನಾಂ ಉತ್ಥಾನದ್ವಾದಶಿ, ಪುಷ್ಪಬೃಂದಾವನೋತ್ಸವಃ. (4) ವೈಕುಂಠಚತುರ್ದಶಿ. (5) ಧರ್ಮಸ್ಥಳದಲ್ಲಿ ದೀಪೋತ್ಸವ, ಶಿವದೀಪಃ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ನವೆಂಬರ್ ತಾರೀಖು ೨೦ ನೆಯ ಶನಿವಾರ. [ಸಂಚಿಕೆ ೪೭

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇಯೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಷ್ಟಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದುದ್ದು

ಅಲ್ಪವಯಸ್ಸಿಗಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಪಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸಂಗಕರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಸಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮು ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಮಾತ್ರೆಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮುಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೇಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಬೋರಿ, ಮುಂಗಲೇಚೇದಾಣಿ, ಮರ್ದನೀಕಟ್ಟಿಗೆ, ಶತಾವರಿ, ಸಕೀಲಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಆವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಶರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—17] ಪತ್ತೆ:—ಮಾಲಕ ವೈದ್ಯ ಷ್ಟಿ. ಎಸ್. ಕಾಪಸೆ, ಮು. ಪೋ. ಮಿರಜ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹತತ್ವಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ). ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿ ಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

SIROMANY NARAYANACHARYA & CO.,
BENARES CITY.

S.U.N.& CO.
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಘಾಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—18]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಶೀಘ್ರಾತಿಶೀಘ್ರ ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕ್ಕಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—6] ಕ್ಲೋ. ಬಾ. ಪೋ., ಮದರಾಸ್ಸು.

(Registered Trade Mark)

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸಹ)
ವೀರಶೈವ ಶಿವಪೂಜಾವಿಧಿ।	೦—೧೨—೦	[illegible] ೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಕಥೆ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಲಂಡನ್ ನಗರದಲ್ಲಿರುವ ಒಂದಾನೊಂದು ಕ್ಷಯಾಸ್ಪತ್ರೆಯ ವಿಳಾಸಕ್ಕೆ ಕೆಲವು ದಿನಗಳ ಹಿಂದೆ ಬಂದ ಒಂದು ಸಾಮಾನ್ಯ ಲಕೋಟೆಯಲ್ಲಿ ಆಸ್ಪತ್ರೆಯ ಉಪಯೋಗಕ್ಕಾಗಿ ೨೦ ಸಾವಿರ ಸವರಿನ್‌ಗಳ ಒಂದು ಹುಂಡಿಯು ಇದ್ದಿತು. ಅದರ ಜತೆಯಲ್ಲಿ ಮತ್ತಾವ ಕಾಗದವೂ ಇರಲಿಲ್ಲ.

ಪ್ರಪಂಚದ ಮೇಲೆಲ್ಲಾ ತಾಮ್ರದ ಧಾರಣೆಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಸುಮಾರು ೨೦ ಕೋಟಿ ಸವರಿನ್‌ಗಳ ಮೂಲಧನದಿಂದ ಅಮೇರಿಕ, ಇಂಗ್ಲೆಂಡ್, ಬೆಲ್ಜಿಯಂ, ಫ್ರಾನ್ಸ್ ಮತ್ತು ಜರ್ಮನಿ ರಾಜ್ಯಗಳ [illegible] ವರ್ತಕರು ಸೇರಿ ಒಂದು ಭಾರಿ ಕಂಪನಿಯನ್ನು ಅಮೇರಿಕದಲ್ಲಿ ಏರ್ಪಡಿಸಿಕೊಂಡಿರುವರು.

ಸುಣ್ಣಕಲ್ಲನ್ನು ಸುಡುವಾಗ ಹೊರಡುವ ಹಬೆಯನ್ನು ಶೇಖರಿಸಿ, ಅದನ್ನು ಕಲ್ಲಿದ್ದಲು ತುಂಬಿದ ಪಾತ್ರೆಗಳ ಮುಖಾಂತ್ರ ಹೋಗುವಂತೆ ಮಾಡಿ, ಹೊರಗೆ ಬರುವ ಹಬೆಯ ಶಕ್ತಿಯಿಂದ, ಇಂಗ್ಲೆಂಡಿನ ಶೀತ್‌ಫೀಲ್ಡ್ ಎಂಬ [illegible] ಎಂಜಿನ್‌ಗಳನ್ನು ತಿರುಗಿಸಿ, ಆ ಊರಿನಲ್ಲೆಲ್ಲಾ ಅದೇ ಶಕ್ತಿಯಿಂದಲೇ ವಿದ್ಯುಚ್ಛಕ್ತಿಯ ದೀಪಗಳನ್ನು ಹತ್ತಿಸುತ್ತಾರೆ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ನವಂಬರ್ ತಾ|| ೨೦ ನೆಯ ಶನಿವಾರ.

ELECTIONS.

The elections to the Mysore Assembly and the Mysore Council are very near before us. The results of some elections in the neighbouring Madras Presidency, when certain currents of influence are similar to those of yours, are rather startling. Indeed but for these uncommon and surprising results, we would not have been awakened to warn in time the body Electorate in our State against a gaping danger into which, we are afraid, we are likely to be drawn unawaringly by people, who were all in the past in the fore-front of religion, society and politics, things which pay handsomely the troubles of winning the fore-front rank. It was easily done unaided in the past, but in the present whereinto the Western light of civilization and self consciousness have made their way, the required aid comes from the minds of the men who easily fall a prey to nice words and expressions of self-Government, Swarajya, Home-Rule etc. This, we believe, accounts for some of the mishaps in the Madras Presidency. Still the real people's pulse is strong there, and we hope that such as have strayed into enemy's camp, will soon repent and revert to the fold of friendship and self-protection.

To come to our own affairs, we would ask the people who are entitled to exercise the right on behalf of their own interests, to consider what their interests are without being confused with what they are and how they are attained in the western countries. In the West there are no castes, but there are other divisions equally sharp and unbending to compromise as castes are in India. They call them political divisions, because those countries began with political development alone, religion being a question of secondary consideration. Still religion played its part in England and other countries in shaping the present constitution. With us caste, as part of religion—received all the consideration in the past and has developed into a form from which it has become difficult to escape all on a sudden even by adopting western principles in toto. It will be a mistake to do so. What has come to stay with us through centuries, surviving persecution sometimes has its merits in the land of ours. The castes must therefore safeguard their political interests, so long as castes are retained. It will be difficult for one to forget one's caste entirely and serve interests of the kind which recognise no caste, in this part of the country at any rate. The Unionists, the conservatives, the Radicals, the Liberals, and the Labourites have their defined principles in England. In like manner the Republicans, the Progressivists etc., in other western countries. The principles are defined and they follow them religiously. We have our castes, and they can be classed into groups without conflicting interests, and these groups must carry out their principles politically. That is what has been done or is in the course of development ever since representative institutions came into existence in our midst. The interests of a group of 13 lakhs or of 8 lakhs of people cannot be merged in the interests of an insulated group of two lakhs. Let us explain. The 13 and 8 lakhs of groups have certain interests in common–such as agriculture and trade as professions. Then are other groups—major and minor which can claim and do claim commonness with the major groups of 13 lakhs and 8 lakhs. One has to sympathise with the other so long as there is a common field of labour, so long as there are not seperatists, so long as they do not say that anything is a monopoly of their own learning or occupation. The creed of commonness is in the sympathy. "Come along; we will read the same book." "Come along; we will worship the same God side by side." These are the simple truths, which constitute sympathy and love. These are the simple truths which have constituted a political mohamedanism and a political christianity. One outside those religions must love them for their good principles in religion and brother-hood. The Hindu lacks it. The principle of caste must prevail, so long as the brother-hood which has knit all mohamedans and all christians into one all over the face of the earth has not been the gift of the Hindu. A day will certainly come when this brotherhood amongst the Hindus will provide the universal brotherhood. But before that day comes, each group which has lived through thousands of years, must safe-guard its own interests. Each limb must be strong to function. A weak limb and a strong limb cannot function together, though it might be possible for each to function separately. So we are. Let us try to grow strong to join hands with those already strong. It is an attempt to reach the stronger. It is an attempt to reach a common ground on a higher plane. The idea is a noble one and why should anybody scoff at it. There is everything positive and constructive about it. There is nothing negative as hatred or pulling down any community or people. The elections to come must be fought on the principles enunciated above, and we welcome honest criticism. Each must fight for his cause till there is no cause for fight. What are elections but fights for causes? Let us not deceive others, and let us not be deceived by others. Where the cause is common, there let us combine.

The proceedings of some meetings of the Legislative Council and the Representative Assembly are lying before us on our table. The speeches and discussions of the Representatives are there. The speeches relating to local self-Government, relating to Sanskrit Education, relating to the extension of franchise, relating to the aspirations of the backward communities are writ large in print. In a series of articles hereafter we intend to discuss whether the mandates of the electorate have been faithfully carried out or not in respect of the subjects referred to above. We implore to suggest that no vote be wasted on persons who aspire to go to the Assembly or to the Council to grind their own selfish interests. The past deeds into which we propose to go in detail will disclose the real minds. We would now warn against thoughtlessness in giving the vote. It deserves profound thinking.

ಯೋಗಕ್ಷೇಮಂ ವಹಾಮ್ಯಹಂ.

ರಾಜಧಾನಿಯ ಸಂಸ್ಕೃತಮಹಾಪಾಠಶಾಲೆಯ ಜ್ಯೂಬಿಲಿಯುತ್ಸವ ಸಮಯದಲ್ಲಿ ಶ್ರೀಮನ್ಮಹಾರಾಜರವರು ಸಂಸ್ಕೃತವಿದ್ಯಾ ಪ್ರಾಶಸ್ತ್ಯವನ್ನು ಕುರಿತು ಪ್ರಸ್ತಾವಿಸುವಾಗ್ಗೆ “ ಸಂಸ್ಕೃತದಲ್ಲಿ ಉಪದಿಷ್ಟವಾಗಿರುವ ಜ್ಞಾನ, ಶಿಕ್ಷಣ, ಮಾನವಧರ್ಮ ಇವುಗಳನ್ನು ಮತ್ತೆ ಯಾವ ನವೀನ ಅಥವಾ ಪ್ರಾಚೀನ ವಿದ್ಯೆಯೂ ಅಷ್ಟು ಚೆನ್ನಾಗಿ ತಿಳಿಸಲಾರದು. ಬಾಹ್ಯವಸ್ತು ಪರಿಜ್ಞಾನದಿಂದಲೇ ಸಂಸ್ಕೃತವಿದ್ಯೆಯ ಬೆಲೆಯನ್ನು ಗೊತ್ತುಮಾಡತಕ್ಕುದಲ್ಲ. ಏಕೆಂದರೆ, ಅದು ಆತ್ಮವಿದ್ಯೆಯಿಂದ ಈ ಜ್ಞಾನಕ್ಕೆ ಅಧಿಷ್ಠಾನವಾದ ಜ್ಞಾತೃವನ್ನು ಸಾಕ್ಷಾತ್ಕಾರಮಾಡಿಕೊಳ್ಳುವುದಕ್ಕೆ ದಾರಿತೋರಿಸಿಕೊಡುತ್ತದೆ. ಇಂಥ ಕಾರ್ಯವು ಮತ್ತೆ ಯಾವ ಸಾಹಿತ್ಯದಿಂದಲೂ ಇಷ್ಟರಮಟ್ಟಿಗೆ ನಡೆಯಲಾರದು. ಈ ಸಂಸ್ಕೃತವಿದ್ಯೆಯನ್ನು ಶುಷ್ಕವಿದ್ಯೆಯೆಂದು ತಿರಸ್ಕರಿಸುವಹಾಗಿಲ್ಲ. ಇದರ ಶ್ರೇಷ್ಠತೆಯು ಇದರ ಫಲಗಳಿಂದ ತಿಳಿಯಲ್ಪಡುತ್ತದೆ. ಇದರಿಂದ ಭರತಖಂಡದಲ್ಲಿ ಕಲೆಗಳು ಉತ್ಪನ್ನವಾಗಿರುವುವಲ್ಲದೆ ಒಂದು ಸ್ವತಂತ್ರವಾದ ನಾಗರಿಕತೆಯೇ ಹುಟ್ಟಿದೆ. ಈಗ ಪ್ರಾಚ್ಯಕಲೆಯೆಂಬುದು ಒಂದು ಸ್ವತಂತ್ರವಾದ ನೂತನಪ್ರಪಂಚ. ಇದರ ಪರಿಚಯದಿಂದ ಒಂದು ನವೀನಜ್ಞಾನವು ಹುಟ್ಟುವಂತಿದೆ. ಈ ಪ್ರಾಚ್ಯಕಲೆಯಲ್ಲಿರುವ ಅಪೂರ್ವ ವೈಲಕ್ಷಣ್ಯಗಳು ಬಹುಮಟ್ಟಿಗೆ ಇಂಡಿಯಾದೇಶದಲ್ಲಿಯೇ ಹುಟ್ಟಿದವುಗಳಾಗಿವೆ. ಗುಡಿ ಗೋಪುರ ಮುಂತಾದ ವಾಸ್ತುರೀತಿ ವಿಶೇಷ, ನಟರಾಜ ಅಥವಾ ಬುದ್ಧ ಮುಂತಾದ ಶಿಲ್ಪವಿದ್ಯಾವಿಷಯ, ಅಜಂಟಾ ಚಿತ್ರಗಳ ರಮ್ಯರೇಖಾ ವಿನ್ಯಾಸ, ರಾಗ ರಾಗಿಣಿಗಳಲ್ಲಿರುವ ನಾದ ಮಾಧುರ್ಯ-ಈ ಕಲಾಸೌಭಾಗ್ಯದಲ್ಲಿರುವ ಗೂಢಾರ್ಥವನ್ನು ತಿಳಿಯಪಡಿಸಬೇಕಾದರೆ ಸಂಸ್ಕೃತಸಾಹಿತ್ಯ ತತ್ವವೊಂದರಿಂದಲೇ ಸಾಧ್ಯ. ಸಂಸ್ಕೃತವಿದ್ಯೆಯ ತೇಜಸ್ಸೇ ಪ್ರಾಚ್ಯಕಲಾಶಾಖೆಗಳೆಲ್ಲವನ್ನೂ ಬೆಳಗಿ, ವಿಮರ್ಶಿಸಿ ಪುನರುಜ್ಜೀವನಗೊಳಿಸಿರುವುದು ” ಎಂದು ಅಪ್ಪಣೆಕೊಡಿಸಿರುವರು. ಜ್ಞಾನ, ಶಿಕ್ಷಣ, ಮಾನವಧರ್ಮಗಳನ್ನೂ, ಜೀವನಾಧಾರವಾದ ಮತ್ತು ಲೋಕೋತ್ತರವಾದ ಕಲಾಸೌಭಾಗ್ಯದ ಗೂಢಾರ್ಥವನ್ನೂ ತಿಳಿದು ಸಂಸಾರ ಕ್ಲೇಶಪಾಶದಿಂದ ಮುಕ್ತನಾಗಿ ನಿತ್ಯಸುಖಸ್ವಾತಂತ್ರ್ಯಗಳನ್ನು ಪಡೆಯಬೇಕೆಂಬುದು ಪ್ರತಿಯೊಬ್ಬ ವಿವೇಕಿಯ ಆಶಯವಾಗಿರುತ್ತದೆ. ಆದರೆ ಈ ನಿಃಶ್ರೇಯಸವು ಸಂಸ್ಕೃತವಿದ್ಯೆಯಿಂದಲ್ಲದೆ ಮತ್ತಾವುದರಿಂದಲೂ ಸಾಧ್ಯವಿಲ್ಲವೆಂಬುದು ಮಹಾಪ್ರಭುಗಳ ಭಾಷಣದಿಂದ ವ್ಯಕ್ತವಾಗುತ್ತದೆ. ಅಂತಹ ಇಹಪರಸುಖಸಾಧಕವಾದ ಸಂಸ್ಕೃತವಿದ್ಯಾರತ್ನವು ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಸರ್ಕಾರೀಸಂಸ್ಕೃತ ಮಹಾಪಾಠಶಾಲಾರ್ಣವದಲ್ಲಿ ವಿನಾ ಮತ್ತೆಲ್ಲಿಯೂ ಲಭ್ಯವಲ್ಲವು. ಈ ಸರ್ವಜನೋಪಯುಕ್ತವಾದ ರತ್ನವು ಕಾಲವಿಶೇಷದಿಂದ ಘಟಸರ್ಪಗಳ ವಶವಾಗಿ ಇತರರಿಗೆ ಅಲಭ್ಯವಾಗಿರುತ್ತದೆ. ಈ ರತ್ನಪ್ರಭೆಯನ್ನು ಹೊಂದಲು ಸಂಸ್ಥಾನದ ಕೆಲ ವರ್ಗದವರು ಮುಖ್ಯವಾಗಿ ವೀರಶೈವರು ಕಳೆದ 20-30 ವರ್ಷಗಳಿಂದಲೂ ಸಾಹಸಪಟ್ಟುದರಮೇಲೆ ಬೆಂಗಳೂರಿನ ಮಹಾಪಾಠಶಾಲೆಗೆ ಇತರರೂ ಸೇರಿಸಲ್ಪಡುವಂತಾಯಿತು, ಆದರೂ ವೇದ ಪ್ರಯೋಗ ಪಾಠಗಳು ಮಾತ್ರ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಕಾದಿಡಲ್ಪಟ್ಟುವು. ರಾಜಧಾನಿಯ ಮಹಾಪಾಠಶಾಲಾ ಪ್ರವೇಶಕ್ಕೆ ಮಾತ್ರ ಇತರ ವರ್ಗದವರಿಗೆ ಅವಕಾಶಕೊಡಲ್ಪಡಲ್ಲಿಲ್ಲವು. “ ಸಂಸ್ಕೃತವನ್ನು ಓದುವವರ ಮುಖ್ಯಕರ್ತವ್ಯವೇನೆಂದರೆ, ಕೇವಲ ಬಾಹ್ಯಾಂಶಗಳನ್ನೂ, ಶಬ್ದಭಾಗವನ್ನೂ ದೊಡ್ಡದಾಗಿ ಭಾವಿಸದೆ, ಆತ್ಮಶಿಕ್ಷಣಕ್ಕೂ ಪರಮವಿದ್ಯೆಗೂ ಗೌರವವನ್ನು ಕೊಡಬೇಕು. ಈ ಮಹಾಪಾಠಶಾಲೆಯಂಥ ವಿದ್ಯಾಸ್ಥಾನದಲ್ಲಿ ಶಿಕ್ಷಿತರಾಗುವವರು ತಮ್ಮ ಗಮನವೆಲ್ಲವನ್ನೂ ಅಂತಸ್ಸಾರದ ಮೇಲಿಟ್ಟು ಜೀವನವನ್ನು ಪರಮಜ್ಞಾನಕ್ಕೆ ಅನುಕೂಲವಾಗುವಂತೆ ಹೊಂದಿಸಿಕೊಂಡು ಹೋದಹೊರತು ವಿದ್ವಾಂಸರೆನಿಸಿಕೊಳ್ಳಲಾರರು. ಏಕೆಂದರೆ, ಇಂಥಾ ಜ್ಞಾನವೇ ಸಂಸ್ಕೃತಜ್ಞಾನದ ಸಾರ. ಹೀಗೆ ವಿದ್ವಾಂಸರಾದವರು ಜ್ಞಾನಜ್ಯೋತಿಯನ್ನು ತೋರಿಸುತ್ತ, ಪರಮವಿದ್ಯೆ, ಸತ್ಯಧರ್ಮ, ಇವುಗಳಿಗೆ ಅವತಾರಸ್ವರೂಪರಾಗಿ ಬ್ರಾಹ್ಮಣ್ಯಸಾರವಾದ ಆತ್ಮಾನಾತ್ಮವಿವೇಕ, ಚಿತ್ತಸ್ಥೈರ್ಯ, ಚಾರಿತ್ರಶುದ್ಧಿ, ಭಯರಹಿತವಾದ ಆಚಾರ ಇವುಗಳಿಗೆ ಆದರ್ಶಪ್ರಾಯರಾಗಬೇಕು. ಆತ್ಮ ವಿದ್ಯಾಸಾಧನೆಗೆ ಬೇಕಾಗುವ ಸಹಾಯಸಂಪತ್ತಿಯನ್ನು ಇತರರಿಗೂ ಒದಗಿಸಿಕೊಡಲು ತಕ್ಕ ಸಾಮರ್ಥ್ಯವನ್ನೂ ಅಧಿಕಾರವನ್ನೂ ಪಡೆದರೆ ಅಂಥವರನ್ನು ‘ ಯೋಗಕ್ಷೇಮಂ ವಹಾಮ್ಯಹಂ ’ ಎಂದು ಭರವಸೆಕೊಟ್ಟಿರುವ ಜಗನ್ನಿಯಾಮಕನು ಎಂದಿಗೂ ಕೈಬಿಡುವುದಿಲ್ಲ. ಇಂಥ ಮಹನೀಯರು ತಮ್ಮ ಜೀವಮಾನದಲ್ಲಿ ಸಂಪಾದಿಸತಕ್ಕ ಜ್ಞಾನಭಂಡಾರವು ಅವರಿಗೆ ಸರಸ್ವತೀಪ್ರಸಾದರೂಪವಾದ ಒಂದು ದೊಡ್ಡ ನಿಧಿ. ಈ ನಿಧಿಯು ಯಾರಿಗೆ ಲಭ್ಯವಾಗುವುದೋ ಅವರೇ ಧನ್ಯರು ” ಎಂದು ಮಹಾಸ್ವಾಮಿಯವರು ಅಪ್ಪಣೆಕೊಡಿಸಿರುವರು. ಅದರಂತೆ ಸಂಸ್ಕೃತಜ್ಞಾನಸಾರವಾದ ಪರಮಜ್ಞಾನಕ್ಕೆ ಅನುಕೂಲವಾಗುವಂತೆ ತಮ್ಮ ಜೀವನವನ್ನು ಹೊಂದಿಸಿಕೊಂಡು ಹೋಗುವ ಮತ್ತು ಜ್ಞಾನಜ್ಯೋತಿಯನ್ನು ತೋರಿಸುತ್ತ ಪರಮವಿದ್ಯೆ, ಸತ್ಯಧರ್ಮ ಇವುಗಳಿಗೆ ಅವತಾರಸ್ವರೂಪರಾಗಿದ್ದುಕೊಂಡು ಬ್ರಾಹ್ಮಣ್ಯಸಾರವಾದ ಆತ್ಮಾನಾತ್ಮವಿವೇಕ ಚಿತ್ತಸ್ಥೈರ್ಯಾದಿ ಗುಣಗಳಿಗೆ ಆದರ್ಶಪ್ರಾಯರಾಗಿರುವ ವಿದ್ವಾಂಸರಾರಾದರೂ ಈಗಿರುವರೆ ? ಅಂತಹವರಿದ್ದಲ್ಲಿ ಆತ್ಮವಿದ್ಯಾಸಾಧನೆಗೆ ಅವಶ್ಯಕವಾದ ಸಂಸ್ಕೃತವಿದ್ಯೆಯನ್ನು ಇತರರಿಗೆ ಹೇಳಿಕೊಡಲು ತಿರಸ್ಕರಿಸಿ, ಮಹಾಪಾಠಶಾಲೆಗೆ ಅವರ ಪ್ರವೇಶವಾದ ಮಾತ್ರಕ್ಕೆ ತಾವು ಪಾಠಶಾಲೆಯನ್ನು ಬಿಟ್ಟು ಹೋಗುತ್ತೇವೆಂದು ಬೆದರಿಸಿ ರಾಜಧಾನಿಯ ಮಹಾಪಾಠಶಾಲೆಯನ್ನು ತಮ್ಮ ಜಹಗೀರಿಯನ್ನಾಗಿ ಮಾಡಿಕೊಳ್ಳುತ್ತಿದ್ದರೆ? ಆತ್ಮವಿದ್ಯಾಸಾಧನೆಗೆ ಬೇಕಾಗುವ ಸಹಾಯಸಂಪತ್ತನ್ನು ಇತರರಿಗೂ ಒದಗಿಸಿಕೊಡುವವರನ್ನು “ ಯೋಗಕ್ಷೇಮಂ ವಹಾಮ್ಯಹಂ ” ಎಂದು ಭರವಸೆಯನ್ನು ಕೊಟ್ಟಿರುವ ಜಗನ್ನಿಯಾಮಕನು ಎಂದಿಗೂ ಕೈಬಿಡುವುದಿಲ್ಲ. ಹಾಗಲ್ಲದೆ ಅಂತಹ ಆತ್ಮವಿದ್ಯಾ ಸಹಾಯಸಂಪತ್ತನ್ನು ಇತರರಿಗೆ ಒದಗಿಸಿಕೊಡಲು ತಿರಸ್ಕರಿಸುವವರನ್ನು ಕೈಬಿಡದೆ ಇರುವುದುಂಟೆ? ಹೇಗೆ ಜಗನ್ನಿಯಾಮಕನ ಆಜ್ಞಾನುಸಾರ ಅಜ್ಞಾನಾಂಧಕಾರದಲ್ಲಿರುವವರಿಗೆ ಜ್ಞಾನಜ್ಯೋತಿಯನ್ನು ತೋರಿಸದೆ ಅವರನ್ನು ಮತ್ತಷ್ಟು ಅಜ್ಞಾನಾಂಧಕಾರದಲ್ಲಿ ದೂಡುವಂತಹ ಸ್ವಾರ್ಥಪರರಾದ ವಿದ್ವಾಂಸರುಗಳನ್ನು ಪ್ರೋತ್ಸಾಹಿಸುವುದು ಜಗನ್ನಿಯಾಮಕನ ಸಂಕಲ್ಪಕ್ಕೆ ವಿರೋಧವಾಗಿ ನಡೆದಂತಾಗುವುದಾದುದರಿಂದ, ಗೋಪಾಲರಾದಿಯಾಗಿ ಭೂಪಾಲರವರೆಗೂ ಅಂತಹವರ ಕೈಬಿಡುವ ಸಮಯವು ಕ್ಷಿಪ್ರದಲ್ಲಿಯೇ ಬರುವುದು. ಅದುಕಾರಣ ಕಳೆದ 50 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಶ್ರೀಮನ್ಮಹಾರಾಜರವರ ಕೃಪಾವಿಶೇಷದಿಂದ ನಡೆದುಕೊಂಡು ಬರುತ್ತಿರುವ ರಾಜಧಾನಿಯ ಸಂಸ್ಕೃತಮಹಾವಿದ್ಯಾಶಾಲೆಯ ಪಂಡಿತರುಗಳು ಮುಕ್ತಿಸಾಧಕವಾದ ಸಂಸ್ಕೃತವಿದ್ಯಾ ಜ್ಞಾನಜ್ಯೋತಿಯನ್ನು ಸಮಸ್ತರಿಗೂ ತೋರಿಸುವುದರ ಮೂಲಕ ಜಗನ್ನಿಯಾಮಕನ ಸಂಕಲ್ಪವನ್ನೂ ಮಹಾಪ್ರಭುಗಳ ಆಶೋತ್ತರವನ್ನೂ ಸಾರ್ಥಕಪಡಿಸಿ ಲೋಕವಂದ್ಯರಾಗಲೆಂದು ಕೋರುತ್ತೇನೆ.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಭಾನುವಾರ ಮಿತಪರಿವಾರದೊಡನೆ ಉದಕಮಂಡಲಕ್ಕೆ ಚಿತ್ತೈಸಿತು. ಏಡಿಕಾಂಗರಾದ ಮಿ|| ಪಾರವರು ತಮ್ಮ ಮಗುವಿಗೆ ಕೊಂಚ ದೇಹಾಲಸ್ಯವಾಗಿದ್ದುದರಿಂದ ಉದಕಮಂಡಲಕ್ಕೆ ಹೊರಡಲಿಲ್ಲವು.

ಮೈಸೂರು ನ್ಯಾಯವಿಧಾಯಕಸಭೆಗೂ, ಪ್ರಜಾಪ್ರತಿನಿಧಿಸಭೆಗೂ ಮೆಂಬರುಗಳನ್ನು ಚುನಾಯಿಸುವದಕ್ಕೆ 1927 ನೇ ಇಸವಿ ಮಾರ್ಚಿ ತಾ|| 5 ನೇ ಶನಿವಾರಕ್ಕೆ ಬದಲಾಗಿ ಮಾರ್ಚಿ ತಾ|| 12ನೇ ಶನಿವಾರ ಗೊತ್ತುಮಾಡಿರುವುದಾಗಿ ಪ್ರಕಟವಾಗಿದೆ.

ಶಿವಮೊಗ್ಗ ಡಿಸ್ಟ್ರಿಕ್ಟು ಚೆನ್ನಗಿರಿಯು 1927 ನೆಯ ಇಸವಿಯಿಂದ ಮೈಸೂರು ಲೋವರ್ ಸೆಕೆಂಡರೀ ಪರೀಕ್ಷೆಯ ಸೆಂಟರಾಗಿ ಮಾಡಲ್ಪಟ್ಟಿರುವುದರಿಂದ, ಈ ಸೆಂಟರಿಗೆ ಪರೀಕ್ಷೆಗಾಗಿ ಬರತಕ್ಕ ವಿದ್ಯಾರ್ಥಿಗಳ ಊಟಕ್ಕೂ ವಾಸಕ್ಕೂ ಏರ್ಪಡಿಸಲ್ಪಡುವುದಾಗಿ ಒಬ್ಬ ವಿದ್ಯಾಭಿಮಾನಿಗಳು ಬರೆದಿರುತ್ತಾರೆ.

ಈ ಸಲ ನವರಾತ್ರ್ಯುತ್ಸವಕ್ಕಾಗಿ ರಾಜಧಾನಿಗೆ ಪರಸ್ಥಳಗಳಿಂದ ಬಂದಿದ್ದ ರೈಲ್ವೆಪ್ರಯಾಣಿಕರಿಗೆ ವಿಶೇಷಾದರದಿಂದ ಸಹಾಯಮಾಡಿದ ಸ್ಕೌಟುಗಳನ್ನು ರೈಲ್ವೆಯ ಅಧಿಕಾರಿಗಳು ಕೃತಜ್ಞತಾಪುರಸ್ಸರವಾಗಿ ಬರಮಾಡಿಕೊಂಡು ಆತಿಥ್ಯವನ್ನು ಕೊಟ್ಟು ಅವರನ್ನು ಫಲಾಹಾರಾದಿಗಳಿಂದ ತೃಪ್ತಿಪಡಿಸಿದರೆಂದು ಕೇಳಿ ಸಂತೋಷಪಡುತ್ತೇವೆ.

ಕೊಳ್ಳೇಗಾಲ ತಾಲ್ಲೂಕು ಮಧುವನಹಳ್ಳಿಯ ಮಹಮ್ಮದ್ ಸಾಬಿ ಎಂಬವನು ಯಳಂದೂರು ತಾ|| ಎರಗಂಬಹಳ್ಳಿಯಿಂದ 10-11 ವರ್ಷ ವಯಸ್ಸಿನ ಅಮೀರ್‌ಬಾಯಿ ಎಂಬ ಮಹಮ್ಮದೀಯ ಹುಡುಗಿಯನ್ನು ಎತ್ತಿಕೊಂಡುಹೋಗಿದ್ದ ಅಪರಾಧಕ್ಕಾಗಿ ರಾಜಧಾನಿಯ ಅಸಿಸ್ಟೆಂಟ್ ಸೆಷನ್ಸುಕೋರ್ಟಿನಲ್ಲಿ ವಿಚಾರಣೆಗೊಂಡು ಎರಡುವರ್ಷ ಕಠಿಣಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

1926 ನೇ ಇಸವಿ ಡಿಸೆಂಬರ್ ತಾ|| 20 ರಲ್ಲಿ ಮುಂದಣ ನ್ಯಾಯವಿಧಾಯಕಸಭೆಯು ನಡೆಯುವುದೆಂದು ಪ್ರಕಟಿಸಿದ್ದನ್ನು ರದ್ದುಮಾಡಿ 1926 ನೇ ಇಸವಿ 3 ನೇ ನವಂಬರ್ 2221 ನೇ ನೋಟೀಫಿಕೇಷನ್ನಲ್ಲಿ ತಿಳಿಯಿಸಿರುವಂತೆ ಸಭೆಯು ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿ 1926 ನೇ ಇಸವಿ ಡಿಸೆಂಬರ್ ತಾ|| 14 ರಲ್ಲಿ ಮಧ್ಯಾನ್ಹ 12 ಘಂಟೆಗೆ ಸರಿಯಾಗಿ ನಡೆಯುವುದಾಗಿ ಪ್ರಕಟಿಸಿರುತ್ತಾರೆ.

ಡೆಪ್ಯುಟಿ ಚೀಫ್ ಇಂಜನಿಯರಾಗಿದ್ದು ನಿವೃತ್ತಿಸುಖವನ್ನು ಅನುಭವಿಸುತ್ತಿದ್ದ ಮ|| ವೈ. ಶ್ರೀನಿವಾಸರಾಯರು ಕಳೆದವಾರ ವಿಧಿವಶರಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ಇವರು ತಮ್ಮ ಏಕಮಾತ್ರಪುತ್ರರ ವಿಯೋಗದುಃಖವನ್ನು ಮೊಮ್ಮಕ್ಕಳುಗಳ ಲಾಲನೆಪಾಲನೆಗಳಿಂದಲೂ, ಸ್ತ್ರೀಸಮಾಜ ಸುಧಾರಣೆ ಮೊದಲಾದ ಸದ್ವರ್ತನದಿಂದಲೂ ಕಾಲಯಾಪನೆಮಾಡುತ್ತ ಬಹುಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದರು.

ಚೆನ್ನಪಟ್ಟಣದಲ್ಲಿ ನಡೆದ ಕೊಲೆಯ ವಿಚಾರಣೆಗೆ ಸಿಕ್ಕಿದ್ದ 13 ಜನ ಅಪರಾಧಿಗಳಲ್ಲಿ ದಾಸಬಣಜಿಗರ ಪಂಡಿತ ರಾಮಯ್ಯನಿಗೂ ಕೃಷ್ಣಯ್ಯನಿಗೂ ಒಂದು ವರ್ಷ ಕಠಿಣಕಾರಾಗೃಹವಾಸಶಿಕ್ಷೆಯು ಮತ್ತು ಸರಾಫ್ ನರಸಿಂಹಯ್ಯನಿಗೂ ರಾಮಕೃಷ್ಣಯ್ಯನಿಗೂ 6 ತಿಂಗಳ ಕಠಿಣಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟು ಉಳಿದ 9 ಜನ ಅಪರಾಧಿಗಳು ಬಿಡಲ್ಪಟ್ಟರು. ಶಿಕ್ಷಿತರಾದ ಅಪರಾಧಿಗಳು ಚೀಫ್ ಕೋರ್ಟಿಗೆ ಅಪೀಲನ್ನು ಮಾಡುವವರಾಗಿರುವರು.

ಡೆಹಲಿಪಟ್ಟಣದಲ್ಲಿ ಇಷ್ಟರಲ್ಲೆ ನಡೆಯುವ ರಾಜಕೀಯ ಸಭೆಯಲ್ಲಿ ನಮ್ಮ ಮೈಸೂರುಸಂಸ್ಥಾನದ ರಾಜಕೀಯ ವಿಚಾರಗಳ ವಿಷಯದಲ್ಲಿ ಇಂಡಿಯಾ ಸರ್ಕಾರದ ಪ್ರತಿನಿಧಿಗಳೊಡನೆ ಸೇರಿ ಮಾತನಾಡುವ ಉದ್ದೇಶದಿಂದ ಈ ತಿಂಗಳು 12 ನೇ ತಾ|| ಶುಕ್ರವಾರ ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರೂ ನಮ್ಮ ದಿವಾನರೂ, ರೆವಿನ್ಯೂ ಕಮಿಷನರೂ ದಿವಾನರ ಪ್ರೈವೇಟ್ ಸೆಕ್ರೆಟರಿಯವರೂ ದೆಹಲಿಗೆ ಪ್ರಯಾಣಮಾಡಿರುವರು. ಬಹುಶಃ 2-3 ವಾರಗಳೊಳಗಾಗಿ ಹಿಂದಿರುಗಿಬರುವರೆಂದು ವರ್ತಮಾನವಿರುತ್ತದೆ.

ರಾಜಧಾನಿಯ ಅನೇಕ ಬೀದಿಗಳಲ್ಲಿ ದೀಪಗಳಿಲ್ಲದಿರುವುದರಿಂದುಂಟಾಗಿರುವ ತೊಂದರೆಯ ನಿವಾರಣೆಗಾಗಿ ವೈದ್ಯುತಶಾಖೆಯವರಿಗೆ ಮಾಡಿಕೊಂಡ ಪ್ರಾರ್ಥನೆಯು ಅರಣ್ಯರೋದನವಾಗಿಪರಿಣಮಿಸಿರುತ್ತದೆಂದು ಜನರು ಪಶ್ಚಾತ್ತಾಪಪಡುತ್ತಿದ್ದಾರೆ. ಈ ಶಾಖೆಗೆ ಬೇಕಾದ ಸಾಮಗ್ರಿಗಳು ಸ್ಟೋರ್ಸ್ಪರ್ಚೇಜ್ ಕಮಿಟಿಯವರಿಂದ ಒದಗಿಸಲ್ಪಡಬೇಕಾಗಿರುತ್ತದೆಂದೂ ಅವರು ಈವರೆಗೆ ಒದಗಿಸಿಕೊಟ್ಟಿಲ್ಲವಾದುದರಿಂದ ತಾವು ಸ್ವತಂತ್ರಿಸಿ ಯಾವ ಏರ್ಪಾಟುಮಾಡಲಿಕ್ಕಿಲ್ಲವೆಂದೂ ವೈದ್ಯುತಶಾಖೆಯವರು ಹೇಳುತ್ತಿರುವುದಾಗಿ ತಿಳಿಯಬರುತ್ತದೆ. ಅಂತು ಇಂತು ಗಂಡಹೆಂಡಿರ ಕಲಹದಲ್ಲಿ ಕೂಸುಬಡವಾಯಿತು.

ರಾಜಧಾನಿಯ ದೇವರಾಜಮೊಹಲ್ಲ ಮೂವರು ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಒಬ್ಬರು ಗತಿಸಿದುದರಿಂದ ಅವರ ಬದಲು ಮತ್ತೊಬ್ಬರನ್ನು ಕಳೆದ ಸೋಮವಾರ ಚುನಾಯಿಸಲು ಗೊತ್ತಾಗಿದ್ದಿತು. ಮ|| ಗಳಾದ ಅಡ್ವೋಕೇಟ್ ಕೆ. ರಾಮಸ್ವಾಮಯ್ಯನವರು, ಪ್ಲೀಡರ್ ಎಚ್. ಸುಬ್ಬರಾಯರು ಮತ್ತು ಎ. ಸುಬ್ಬಣ್ಣನವರು ಉಮೇದುವಾರರಾಗಿ ನಿಂತಿದ್ದರು. ಆದರೆ ಓಟರುಗಳ ಲಿಸ್ಟನ್ನು ಪ್ರಕಟಿಸಿದಂತೆ ಉಮೇದುವಾರರ ಲಿಸ್ಟನ್ನು ಮ್ಯುನಿಸಿಪಾಲಿಟಿಯವರು ಪ್ರಕಟಿಸಲಿಲ್ಲವಾಗಿ ಚುನಾವಣೆ ನಡೆಯಕೂಡದೆಂದು ಮ|| ಎಚ್. ಸುಬ್ಬರಾಯರು ಒಂದು ಅಡ್ಡಿಯನ್ನೊಡ್ಡಿದುದರಿಂದ ಚುನಾವಣೆಯು ಆ ದಿವಸ ನಡೆಯದೆ ನಿಂತುಹೋಯಿತು. ಮುಂದೆ ಯಾವಾಗ ನಡೆಯುವುದೆಂಬುದು ಇನ್ನೂ ಪ್ರಕಟವಾಗಿಲ್ಲ.

ರಾಜಧಾನಿಯಲ್ಲಿ ವಿಷಮಶೀತಜ್ವರದೊಂದಿಗೆ ಪ್ಲೇಗುರೋಗವು ಪ್ರಾಪ್ತವಾಗಿ ಮರಣಗಳಾಗಲುಪಕ್ರಮಿಸಿರುವುದರಮೇಲೆ ಸ್ಯಾನಿಟರಿಕಮಿಷನರ್ ಸಾಹೇಬರು ರಾಜಧಾನಿಗೆ ಚಿತ್ತೈಸಿ ಇಲ್ಲಿಯ ಹೆಲ್ತಾಫೀಸರ ಕೂಡ ಕೆಲ ಸ್ಥಳಗಳನ್ನು ಪರಾಮರ್ಶಿಸಿದ ಶಾಸ್ತ್ರಮಾಡಿ ಹೋದರಂತೆ. ಊರಿನಲ್ಲಿ ಅದರಲ್ಲೂ ಐರೋಪ್ಯರ ಕ್ಲಬ್ಬು, ಥಿಯಸಾಫಿಕಲ್ ಸೊಸೈಟಿ, ಶ್ರೀಕೃಷ್ಣರಾಜೇಂದ್ರಮಿಲ್ಲ್ ಆಫೀಸು, ಎ. ಎ. ಷುಕರ್ ಸೇಟ್ ಅಂಡ್ ಸನ್ಸರವರ ಜವಳಿಅಂಗಡಿ ಇವುಗಳ ಇದಿರಿಗಿರುವ ಬೈಲುಪ್ರದೇಶದಿಂದ ಬರುವ ದುರ್ಗಂಧವು ಸಹಿಸಲಶಕ್ಯವಾಗಿರುವುದನ್ನು ವರ್ಣಿಸಲು ಸಾಧ್ಯವಿಲ್ಲವು. ಇದರಿಂದ ನಮ್ಮ ರಾಜಧಾನಿಯ ಸ್ಥಿತಿಯಾದರೋ “ ತೋಟದ ಹೊರಗೆ ಶೃಂಗಾರ ಒಳಗೆ ಗೋಣಿಸೊಪ್ಪು ” ಎಂಬ ಗಾದೆಗೆ ಸರಿಯಾಗಿದೆಯೆಂದು ಜನರು ಆಡಿಕೊಳ್ಳಲವಕಾಶವಾಗಿರುವುದಕ್ಕಾಗಿ ವಿಷಾದಪಡಬೇಕಾಗಿದೆ.

ಕೃಷ್ಣರಾಜಸಾಗರ ವರ್ಕ್ಸಿನಲ್ಲಿ ಎ. ಆರ್. ಲಕ್ಷ್ಮಣ ಮೊದಲಿಯಾರ್ ಎಂಬೊಬ್ಬ ಸಬ್ ಓವರ್ಸಿಯರು ತನ್ನ ವಶಕ್ಕೆ ಸರ್ಕಾರದವರು ಕೊಟ್ಟಿದ್ದ ಡೈನಾಮೈಟ್, ಪೆಟ್ಲುಪ್ಪು ಮೊದಲಾದ ವಸ್ತುಗಳಲ್ಲಿ ಕಳ್ಳತನದಿಂದ 200 ಪೌಂಡು ಡೈನಾಮೈಟನ್ನೂ 2,000 ಪೌಂಡು ಪೆಟ್ಲುಪ್ಪನ್ನೂ ಇನ್ನೂ ಕೆಲವು ಸಾಮಾನುಗಳನ್ನೂ ರಾಜಧಾನಿಗೆಸಾಗಿಸಿ ಇಬ್ರಾಹಿಂಖಾನ್ ಎಂಬೊಬ್ಬ ವರ್ತಕನಿಗೆ 250 ರೂ. ಗಳಿಗೆ ಮಾರಿದನೆಂದೂ ತನ್ನ ಉಗ್ರಾಣದಿಂದ ಆ ಪದಾರ್ಥಗಳು ಕಳ್ಳತನವಾದುದಕ್ಕಾಗಿ ಪರಿಮಾಣವು ಕಡಮೆಯಾಯಿತೆಂದು ಪೊಲೀಸಿಗೆ ವರದಿಮಾಡಿದನೆಂದೂ ಅನಂತರ ಪೊಲೀಸಿನವರು ಅದನ್ನು ವಿಚಾರಣೆಮಾಡಿ ಇಂಡಿಯನ್ ಪೆನಲ್ ಕೋಡ್ 409ನೇ ಸೆಕ್ಷನ್ ಪ್ರಕಾರ ಆ ಮೊದಲಿಯಾರ್ರನ್ನೂ ಕೃತ್ಯಕ್ಕೆ ಸಂಬಂಧಪಟ್ಟ ಇತರರನ್ನೂ ಕ್ರಿಮಿನಲ್ ವಿಚಾರಣೆಗೆ ಗುರಿಮಾಡಿದರು. ಈ ಮೊಕದ್ದಮೆಯು ಫ್ರೆಂಚ್ ರಾಕ್ಸ್ ಮೇಜಿಸ್ಟ್ರೇಟರ ಕೋರ್ಟಿನಿಂದ ಮೈಸೂರುಸಿಟಿ ಮೇಜಿಸ್ಟ್ರೇಟರ ಕೋರ್ಟಿಗೆ ವರ್ಗಾಯಿಸಲ್ಪಟ್ಟಿರುತ್ತದೆ ಆಗಲೆ ಕೆಲ ಸಾಕ್ಷಿಗಳು ವಿಚಾರಣೆ ಮಾಡಲ್ಪಟ್ಟರೆಂದೂ ಮೊಕದ್ದಮೆಯು ಈ ತಿಂಗಳು 21ಕ್ಕೆ ಪುನಃ ನಡೆಯುವುದೆಂದೂ ತಿಳಿಯಬರುತ್ತದೆ.

ರಾಜಧಾನಿಯಿಂದ ಮಡಕೆರೆ, ಬೆಂಗಳೂರು, ನಂಜನಗೂಡು ಮೊದಲಾದ ಪರಸ್ಥಳಗಳಿಗೆ ಹೊರಡುವ ಮೋಟಾರುಬಸ್ಸುಗಳು ಈಗ ಟವನ್‌ಹಾಲಿನಿದಿರಿಗಿರುವ ದೊಡ್ಡಗಡಿಯಾರದ ಬಳಿ ನಿಂತುಕೊಳ್ಳುತ್ತಿವೆ. ಇದರಿಂದ ತಿರುಗಾಡುವ ಜನರಿಗೆ ಬಹಳ ತೊಂದರೆ ಎಂದು ಕೆಲರು ಮ್ಯುನಿಸಿಪಲ್ ಕೌನ್ಸಿಲಿಗೆ ಅರ್ಜಿ ಬರೆದಿದ್ದುದರ ಮೇಲೆ ಮ್ಯುನಿಸಿಪಲ್ ಪ್ರೆಸಿಡೆಂಟರೂ ಮೈಸೂರು ಡಿ|| ಡೆಪ್ಯುಟಿಕಮಿಷನರೂ ಬಸ್ಸುಗಳು ನಿಲ್ಲಲು ಒಂದು ಸ್ಥಳವನ್ನು ಗೊತ್ತುಮಾಡಬೇಕಾಗಿ ಕಳೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ತೀರ್ಮಾನಿಸಲ್ಪಟ್ಟಿರುತ್ತದೆಂದೂ, ಊರ ಹೊರಗಣ ಇರುವ ಉಕ್ಕಡಗಳ ಬಳಿ ಬಸ್ಸುಗಳು ನಿಲ್ಲುವಂತೆ ಏರ್ಪಡಿಸುವ ಸಂಭವವಿರುತ್ತದೆಂದೂ ಕೇಳುತ್ತೇವೆ. ಜನಸಂದಣಿ ಕಡಿಮೆಯಾಗಿರುವ ಸ್ಥಳದಲ್ಲಿ ಈ ಬಸ್ಸುಗಳು ನಿಲ್ಲುವಂತೆ ಏರ್ಪಡಿಸುವುದು ಅವಶ್ಯಕವಾಗಿರುವುದು, ಆದರೆ ಊರಹೊರಗಣ ಉಕ್ಕಡದ ಬಳಿಯಲ್ಲಿ ನಿಲ್ಲುವಂತೆ ಏರ್ಪಡಿಸಿದಲ್ಲಿ ನಂಜನಗೂಡಿಗೆ ಬಸ್ಸಿನಲ್ಲಿ ಹೋಗುವುದರ ಛಾರ್ಜು 8 ಆಣೆ ಆದರೆ ಊರಿನೊಳಗಿಂದ ಉಕ್ಕಡಕ್ಕೆ ಹೋಗಲು ಟಾಂಗಾ ಬಾಡಿಗೆ 8 ಆಣೆ ಕೊಡಬೇಕಾಗುತ್ತದೆ. ಆದ್ದರಿಂದ ಮ್ಯುನಿಸಿಪಾಲಿಟಿಯವರು ಪ್ರಯಾಣಿಕರಿಗಿರುವ ಈ ತೊಂದರೆಯನ್ನು ಚೆನ್ನಾಗಿ ಪರ್ಯಾಲೋಚಿಸಿ ಊರೊಳಗೆ ಜನಸಂದಣಿ ಹೆಚ್ಚಾಗಿಲ್ಲದ ಸ್ಥಳವನ್ನು ಬಸ್ಸುಗಳು ನಿಲ್ಲುವುದಕ್ಕಾಗಿ ಗೊತ್ತುಮಾಡುವುದು ಸೂಕ್ತವಾಗಿರುತ್ತದೆ.

ಹುಡುಗತಪ್ಪಿಸಿಕೊಂಡಿದ್ದಾನೆ.

ಬಳ್ಳಾರಿ ಡಿಸ್ಟ್ರಿಕ್ಟ್ ಹೊಸಪೇಟೆಯಲ್ಲಿರುವ ಮಹಂತಿನಮಠದ ಗುರುವಯ್ಯನವರ ಮಗ 12-13 ವರ್ಷವಯಸ್ಸಿನ ಸಿದ್ಧಯ್ಯನೆಂಬ ಹುಡುಗನು ಈಗ್ಗೆ 8-9 ದಿವಸಗಳಹಿಂದೆ ಮನೆಯನ್ನು ಬಿಟ್ಟು ಹೋದವನು ಈವರೆಗೂ ಹಿಂದಿರುಗಿ ಬಂದಿಲ್ಲ ಮತ್ತು ಅವನು ಎಲ್ಲಿದ್ದಾನೆಂಬುದು ಸಹ ಗೊತ್ತಾಗಲಿಲ್ಲ. ಆದ್ದರಿಂದ ಮೇಲ್ಕಂಡ ಸಿದ್ಧಯ್ಯನೆಂಬ ಹುಡುಗನು ಯಾವ ಗ್ರಾಮಕ್ಕಾದರೂ ಬಂದಿದ್ದಲ್ಲಿ ಅಲ್ಲಿಯವರು ಕೃಪೆಯಿಟ್ಟು ಈ ಕೆಳಗೆ ಕಂಡ ನನ್ನ ಅಡ್ರೆಸ್ಸಿಗೆ ಬರೆದು ತಿಳಿಸಿದಲ್ಲಿ ಆ ಸ್ಥಳಕ್ಕೆ ಬಂದು ಹುಡುಗನನ್ನು ಕರೆದುಕೊಂಡು ಬರುವೆನು.

ಮಹಂತಿನಮಠದ ಗುರುವಯ್ಯ,
ಹೊಸ್ಪೇಟೆ, ಬಳ್ಳಾರಿ ಡಿ||

ಮೈಸೂರು ಪ್ರಜಾಮಿತ್ರಮಂಡಲಿಯವರಿಂದ

(2)

ಡಿಸ್ಟ್ರಿಕ್ಟ್‌ಬೋರ್ಡ್ ಓಟರುಮಹಾಶಯರಿಗೆ ಎಚ್ಚರಿಕೆ!

ಒಂದು ಎರಡು ಅಥವಾ ಮೂರು ಮೆಂಬರುಗಳು ಚುನಾಯಿಸಲ್ಪಡಲು ಅವಕಾಶವಿರುವ ಕೆಲವು ತಾಲ್ಲೂಕುಗಳಲ್ಲಿ ಹಿಂದುಳಿದ ಜನಾಂಗಗಳಿಗೆ ಸೇರಿದ ಮೆಂಬರುಗಳು 5 ಅಥವಾ 6 ಜನರಂತೆ ಉಮೇದುವಾರರಾಗಿ ನಿಂತಿರುತ್ತಾರೆ. ಓಟುಗಳು ಅವರವರಲ್ಲೆ ಚಲ್ಲಾಪಿಲ್ಲಿಯಾಗಿ ಅವರ ಪೈಕಿ ಒಬ್ಬರಾದರು ಚುನಾವಣೆಯಲ್ಲಿ ತೇರ್ಗಡೆಯಾಗಲು ಯತ್ನವಿಲ್ಲದಂತಾಗಿ, ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಿಂದುಳಿದ ಜನಾಂಗಗಳ ಪ್ರತಿನಿಧಿಗಳು ಸಾಕಾದಷ್ಟು ಜನರು ಇಲ್ಲದೆ ಅವರ ಪುರೋವೃದ್ಧಿಗೆ ಅವಕಾಶವಿಲ್ಲದಂತಾಗುತ್ತದೆ. ಸದರಿ ಬೋರ್ಡುಗಳಲ್ಲಿ ಗ್ರಾಮಾಂತರ ಪ್ರಜೆಗಳ ಹಿತಕಾಂಕ್ಷಿಗಳೂ, ಹಿಂದುಳಿದ ಜನಾಂಗಗಳ ಪುರೋಭಿವೃದ್ಧಿಯಲ್ಲಿ ಆಸಕ್ತರೂ ಆದ ಮೆಂಬರುಗಳ ಸಂಖ್ಯೆಯು ಹೆಚ್ಚಾಗಿ ಇದ್ದ ಹೊರತು, ದೇಶದಲ್ಲಿರತಕ್ಕ ಬಹುಸಂಖ್ಯಾಕರಾದ ಪ್ರಜೆಗಳು ಮುಂದುವರಿಯಬೇಕೆಂಬ ನಮ್ಮ ಧ್ಯೇಯವು ಕೈಗೂಡುವಂತಿಲ್ಲ. ಗ್ರಾಮಾಂತರ ಪ್ರದೇಶಗಳ ವಿದ್ಯಾಭ್ಯಾಸಕ್ರಮವೂ, ರಸ್ತೆಗಳೂ, ಆಸ್ಪತ್ರೆ ಮೊದಲಾದ ಉಪಯುಕ್ತ ಕಾರ್ಯಗಳು ಸಮರ್ಪಕವಾಗಿ ನಡೆಯಬೇಕಾದರೆ ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಿ ಹಿಂದುಳಿದ ಜನಾಂಗಗಳ ಪ್ರತಿನಿಧಿಗಳು ಹೆಚ್ಚಾಗಿ ಇದ್ದೇ ಇರಬೇಕು. ಮೇಲ್ಕಂಡ ವಿಚಾರಗಳನ್ನೆಲ್ಲಾ ನಿಮ್ಮ ಗಮನಕ್ಕೆ ತಂದುಕೊಂಡು, ಆಯಾಯ ತಾಲ್ಲೂಕುಗಳಿಂದ ಎಷ್ಟೆಷ್ಟು ಮೆಂಬರುಗಳು ಆರಿಸಲ್ಪಡಬೇಕೊ ಅಷ್ಟೇ ಉಮೇದುವಾರರನ್ನು ನಿಲ್ಲಿಸಿ ಕೃತಕೃತ್ಯರಾಗಬೇಕಾಗಿ ಸವಿನಯಪ್ರಾರ್ಥನೆ.

ಬೆಂಗಳೂರು, } ರಾವ್ ಸಾಹೇಬ್ ಚೆನ್ನಯ್ಯ, ಪ್ರೆಸಿಡೆಂಟ್,
16-11-26. } ಮಹಮ್ಮದ್ ಅಬ್ಬಾಸ್ ಖಾನ್, ವೈ|ಪ್ರೆಸಿಡೆಂಟ್
ಜಿ. ಪರಮಶಿವಯ್ಯ, ಸೆಕ್ರೆಟರಿ.

MR. P. MAHADEVAYYA CONTRADICTS.

(The Evening Mail, Bangalore published the following under the above heading in its issue dated 10-11-26).

Mr. P. Mahadevayya, Subordinate Judge, Bangalore (now transferred to Shimoga to act as District and Sessions Judge) communicates to us to say that the imputations against him contained in our article, "The Bench and the Bar" in our issue of 3rd November 1926 are false and misleading. He also says that the imputations are such as to injure his reputation. In gladly publishing this contradiction, coming as it does from a high and responsible official, we sincerely assure Mr. Mahadevayya that it never was, nor is, our intention to defame him but only to remove any obstacle in the smooth working of the machinery of justice and to prevent the happening of anything which may tend to impare public confidence in the administration of justice. As we believe that it is no part of the character of a gentleman to give unnecessary pain to any person, we really feel sorry that our last week's note should have caused him great pain and resentment. Nor is it part of journalistic etiquette not to give due and prompt publicity to a contradiction that comes from the other side. We take Mr. Mahadevayya at his word and gladly accept his contradiction.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ನೂರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಸಮಾಜಗಳಲ್ಲಿ ಪರಸ್ಪರ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಮನಸ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟು ಲೇಖಕರ ಸಂಪೂರ್ಣ ಹೆಸರು ವಿಳಾಸ ಮತ್ತು ಚಂದಾನಂಬರು ತಿಳುಹಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧ ಲೇಖನಗಳು ಆಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕರೂ ಖಂಡಿತವಾಗಿ ಗಮನಿಸಬೇಕು.

ಸಂಪಾದಕ.

ತಿರಸ್ಕೃತಲೇಖ.

(1) ಬುಕ್ಕಾಂಬುದಿ ಬದರೈತ—ನಿಮ್ಮ ಸ್ಕೂಲು ಹೆಡ್ಮಾಸ್ಟರ ವಿಚಾರವನ್ನು ಕುರಿತು ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್‌ರವರಿಗೆ ಬರೆದುಕೊಂಡಲ್ಲಿ ನಿಮ್ಮ ಇಷ್ಟಾರ್ಥವು ನೆರವೇರಬಹುದು. (2) ಬಿ. ಸಿದ್ಧಯ್ಯನವರು—ಸಂಸ್ಥಾನದ ವರ್ತಕರ ಮತ್ತು ಕೈಗಾರಿಕೆ ಜನರ ಸಮ್ಮೇಳನವು ಎಂಬ ನಿಮ್ಮ ಲೇಖವು ಬೇರೆ ಪತ್ರಿಕೆಯಲ್ಲಿ ಪ್ರಕಟವಾಗಿರುವುದರಿಂದ ಪುನಃ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಪ್ರಮೇಯವು ಕಂಡುಬರುವುದಿಲ್ಲ. (3) ಸರ್ವಪಶುಪ್ರಾಣಿ ಶ್ರೇಯೋಭಿಲಾಷಿ—ನಿಮ್ಮ ಭಾರತಮಾತೆಯ ರಕ್ತಾಂಬರಲೇಖವು ಅಸ್ಪಷ್ಟವಾಗಿರುವುದರಿಂದ ತಿರಸ್ಕರಿಸಲ್ಪಟ್ಟಿದೆ.

ದೇವತಾಸೇವೆ.

ದಾವಣಗೆರೆ ತಾ|| ಹಿರೆತೊಗಲೇರಿಗ್ರಾಮದಲ್ಲಿ ಪ್ಲೇಗುರೋಗವು ಪ್ರಾರಂಭವಾಗಿದ್ದುದರಮೇಲೆ, ಅಲ್ಲಿಯ ಶ್ರೀಮಂತರುಗಳಾದ ಸಣ್ಣಗೌಡರ ಚೆನ್ನಬಸವಪ್ಪನವರು ಮತ್ತು ಗೌಡರ ಚೆನ್ನಬಸಪ್ಪನವರು 2-3 ತಿಂಗಳುಗಳಿಂದಲೂ ದೇವರಪೂಜೆ ದಾಸೋಹ ಮೊದಲಾದ ಸೇವೆಯನ್ನು ಮಾಡುವಂತೆ ಗ್ರಾಮಸ್ಥರಿಗೆ ಪ್ರೋತ್ಸಾಹಿಸಿದ್ದಲ್ಲದೆ ಕಳೆದ ಮಹಾನವಮಿಯಲ್ಲಿ ರುದ್ರಾಭಿಷೇಕಾದಿಗಳನ್ನು ಮಾಡಿಸಿದರು. ಜನರಾದರೂ ಪೈಪೋಟಿಯಿಂದ ದೇವರಸೇವೆಯನ್ನು ಮಾಡುತ್ತಿದ್ದರಲ್ಲದೆ ಸಾವಿರಾರು ಜನರಿಗೆ ದಾಸೋಹವನ್ನು ಮಾಡಿಸಿ ತೃಪ್ತಿಗೊಳಿಸಿದರು. ಸಣ್ಣಗೌಡರ ಚೆನ್ನಬಸಪ್ಪನವರು ಬಸವೇಶ್ವರದೇವಾಲಯದ ಜೀರ್ಣೋದ್ಧಾರಕ್ಕಾಗಿ 500 ರೂ. ಗಳನ್ನು ಕೊಟ್ಟಿರುವರು. ಇತರ ದೈವಭಕ್ತರೂ ಮ|| ಗೌಡರ ಮೇಲುಪಙ್ಕ್ತಿಯನ್ನು ಅನುಸರಿಸಿ ಶ್ರೀಬಸವೇಶ್ವರನ ಅನುಗ್ರಹಕ್ಕೆ ಪಾತ್ರರಾಗುವರೆಂದು ನಿರೀಕ್ಷಿಸುತ್ತೇನೆ.

ಒಬ್ಬ ದೈವಭಕ್ತ.

ಸಣ್ಣನೌಕರರ ವರ್ಗಾವರ್ಗಿಯಿಂದಾಗತಕ್ಕ ನಷ್ಟ.

ದೊಡ್ಡಬಳ್ಳಾಪುರಕ್ಕೆ ಕಳೆದ ಮೇ ತಿಂಗಳಲ್ಲಿ ವರ್ಗವಾಗಿ ಬಂದಿದ್ದ ಹಿಂದುಳಿದ ಪಂಗಡಕ್ಕೆ ಸೇರಿದ ಶೇಕದಾರರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತ ಜನರ ಅನುರಾಗವನ್ನು ಸಂಪಾದಿಸಿಕೊಂಡಿದ್ದರು. ಇವರು ಬಂದು ಇನ್ನೂ 7 ತಿಂಗಳು ತುಂಬುವದರೊಳಗಾಗಿ ಸಾಸಲು ಹೋಬಳಿಗೆ ವರ್ಗಾಯಿಸಲ್ಪಟ್ಟು ಅಲ್ಲಿ ಕಳೆದ ಜನವರಿಯಿಂದ ಫೆಬ್ರವರಿವರೆಗೆ ಕೆಲಸಮಾಡುತ್ತಿರುವಷ್ಟರಲ್ಲಿ ದೊಡ್ಡಬೆಳವಂಗಲಕ್ಕೂ ಅಲ್ಲಿಂದ 6 ತಿಂಗಳೊಳಗಾಗಿ ಬೆಂಗಳೂರು ತಾಲ್ಲೂಕಿಗೂ ವರ್ಗಾಯಿಸಲ್ಪಟ್ಟಿದ್ದರು. ಹೀಗೆ ಒಂದುವರ್ಷದೊಳಗಾಗಿ ಮೂರುಸಲ ವರ್ಗಮಾಡಿದ್ದಲ್ಲಿ ವರ್ಗವಾದ ಹೋಬಳಿಯವರ ಸ್ಥಿತಿಯನ್ನು ತಿಳಿದು ಕೆಲಸಮಾಡಲು ಸಾಧ್ಯವೆ, ಮತ್ತು ಇದರಿಂದ [illegible]

ದಾದವರಿಗೆ ನಷ್ಟವೂ ಕಷ್ಟವೂ ಆಗುವ್ವದಲ್ಲದೆ ಸರ್ಕಾರಕ್ಕೂ ಟ್ರಾವಲಿಂಗ್ ಭತ ದಿಂದ ನಷ್ಟವಾಗುವುದಿಲ್ಲವೆ? ಇದೊಂದನ್ನೂ ಮೇಲ್ಪಟ್ಟ ಅಧಿಕಾರಿಗಳು ಗಮನಿಸದೆ ಮನಸ್ಸಿಗೆ ಬಂದಂತೆ ವರ್ಗಮಾಡುವುದು ಆಶ್ಚರ್ಯವಾಗಿದೆ. ಈ ವಿಷಯವನ್ನು ಲೆಜಿಸ್ಲೇಟಿವ್ ಕೌನ್ಸಿಲನಲ್ಲಿ ಹಿಂದುಳಿದವರ್ಗದ ಮೆಂಬರುಗಳು ತಮ್ಮ ವರ್ಗದ ನೌಕರರಿಗಾಗುವ ತೊಂದರೆಯನ್ನು ಸರ್ಕಾರದವರ ಗಮನಕ್ಕೆ ತಂದು ಇತಃಪರ ನಡೆಯದಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಬಡನೌಕರರ ಹಿತೈಷಿ.

ಮೂಡಿ ಹೊಸಸ್ಕೂಲ್‌ಕಟ್ಟಡದ ಪ್ರವೇಶ ಮತ್ತು ಶಾರದಾಪೂಜೆ.

ಸೊರಬ ತಾ॥ ಆನವಟ್ಟಿ ಹೋಬಳಿ ಮೂಡಿ ಪ್ರೈಮರಿ ಬಾಯ್ಸ್ ಸ್ಕೂಲ್ ಕಟ್ಟಡದ ಕೆಲಸವು ಕಳೆದ 6-7 ವರ್ಷಗಳಿಂದ ನಡೆಯುತ್ತಲಿದ್ದು ಈ ವರ್ಷ ಪೂರಯಿಸಿತು. ಕಳೆದ ತಾ॥ 13 ನೇ ಬುಧವಾರ ಈ ಹೊಸ ಸ್ಕೂಲ್ ಕಟ್ಟಡದ ಪ್ರವೇಶವು ಶಾರದಾಪೂಜೆಯ ಸಂಗಡ ಮ॥ ದೇವಪ್ಪ ಒಡಿಯರ್‌ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಗ್ರಾಮಸ್ಥರೆಲ್ಲರೂ ಹಾಜರಾಗಿದ್ದರು. ಗರ್ಲ್ಸ್‌ಸ್ಕೂಲ್ ಮಾಸ್ತರಾದ ಮ॥ ಬಿ. ಬಸವಲಿಂಗಯ್ಯನವರು ತಮ್ಮ ಸ್ಕೂಲಿನ ಬಾಲಿಕೆಯರ ಸಂಗಡ ಅಗಮಿಸಿ ಮನೋಹರವಾದ ಸಂಗೀತದಿಂದ ಸಭಿಕರ ಮನಸ್ಸನ್ನೆಲ್ಲಾ ಆನಂದಗೊಳಿಸಿದರು. ಆಮೇಲೆ ಬೆಂಗಳೂರ ಸೆಂಟ್ರಲ್ ಕಾಲೇಜಿನ ಬಿ.ಎ. ತರಗತಿಯಲ್ಲಿ ಅಭ್ಯಾಸಮಾಡುತ್ತಿರುವ ಎಂ. ಎಸ್. ದುಂಡಪ್ಪ ಎಂಬವರು ಬಹಳ ಮನೋಹರವಾಗಿಯೂ, ಗಂಭೀರವಾಗಿಯೂ ಒಂದು ಉಪನ್ಯಾಸಮಾಡಿದರು. ಅಧ್ಯಕ್ಷರ ಭಾಷಣವಾದಮೇಲೆ ಶಾರದಾಪೂಜೆಯು ನಡಿಸಲ್ಪಟ್ಟಿತು. ಶಾರದಾಸ್ತೋತ್ರ ಮಹಾರಾಜರವರ ಶ್ರೇಯಃಪ್ರಾರ್ಥನೆಗಳಾಗಿ ಫಲತಾಂಬೂಲಾದಿಗಳು ಕೊಡಲ್ಪಟ್ಟು ಸಭೆಯು ಬಹಳ ಸಂತೋಷದಿಂದ ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ತಾಲ್ಲೂಕು ಶಾನುಭೋಗರ ಮೀಟಿಂಗು.

ದಾವಣಗೆರೆ ತಾ॥ ಮಾಯಕೊಂಡಗ್ರಾಮದ ಶ್ರೀಚೆನ್ನಕೇಶವಸ್ವಾಮಿ ದೇವಾಲಯದಲ್ಲಿ ಈ ತಾಲ್ಲೂಕಿನ ಶಾನುಭೋಗರಸಂಘದ ಮೀಟಿಂಗು ಆಣಜಿ ತಾ॥ ಸಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ॥ 24 ರಲ್ಲಿ ನಡೆಯಿತು. 24 ಜನ ಮೆಂಬರುಗಳು ಬಂದಿದ್ದರು. ಶ್ಯಾನುಭೋಗರ ಕರ್ತವ್ಯ ಕಾಲೋಚಿತವಾಗಿ ಸುಧಾರಣೆಮಾಡಿಕೊಳ್ಳುವದು, ಕೋಟಿತಳವಾರರ ಪ್ರೀತಿವಿಶ್ವಾಸವನ್ನು ಸಂಪಾದಿಸಿ ಪಟೇಲರುಗಳೊಡನೆ ಐಕಮತ್ಯದಿಂದ ನಡೆದುಕೊಳ್ಳುವದು ಇತ್ಯಾದಿ ವಿಷಯಗಳಮೇಲೆ ಮಾಯಗೊಂಡ ಶೇಕದಾರ್ ಮ॥ ಸೂರ್‍ಯನಾರಾಯಣರಾಯರು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದಮೇಲೆ ಸಂಘದ ಸೆಕ್ರೆಟರಿಯವರು ಆದಾಯವೆಚ್ಚದ ರಿಪೋರ್ಟನ್ನೋದಿದರು. ಅನಂತರ ಸಂಘದ ಹಣದಲ್ಲಿ ಶೇಕಡ 10 ರಷ್ಟನ್ನು ಸೆಂಟ್ರಲ್ ಕಮಿಟಿಗೆ ಕಳುಹಿಸಿಕೊಟ್ಟು ಉಳಿದ ಹಣವನ್ನು ಸೆಕ್ರೆಟರಿಯವರ ಹೆಸರಿನಲ್ಲಿ ತಾಲ್ಲೂಕು ಸೇವಿಂಗ್ಸಿನಲ್ಲಿಡಬೇಕೆಂತಲೂ, ಅವಶ್ಯಬಿದ್ದಲ್ಲಿ ಸೆಕ್ರೆಟರಿಯವರು 5 ರೂ. ವರೆಗೆ ಉಪಯೋಗಿಸಿ ಸಂಘದ ಕೆಲಸವನ್ನು ನಡೆಸಬೇಕೆಂತಲೂ ಮುಂದಲ ಮೀಟಿಂಗು ಇದೇ ತಾ॥ ಹಾಲವರ್ತಿಗ್ರಾಮದಲ್ಲಿ ತಾ॥ ಮ॥ ಪ್ರಾಣೇಶರಾಯರ ಆತಿಥ್ಯದಲ್ಲಿ ನಡೆಯಬೇಕೆಂತಲೂ ತೀರ್ಮಾನಿಸಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭಾವಿಸರ್ಜಿಸಲ್ಪಟ್ಟಿತು.

ಓರ್ವ ಸಭಿಕ.

ಹೊಳವನಹಳ್ಳಿ ದೊಡ್ಡ ಮುರುಘಾಮಠ.

ತುಮಕೂರು ಡಿ॥ ಕೊರಟಗೆರೆ ಸಬ್ ತಾ॥ ಹೊಳವನಹಳ್ಳಿಯಲ್ಲಿರುವ ದೊಡ್ಡ ಮುರುಘಾಮಠಾಧ್ಯಕ್ಷತೆಗೆ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರಿಂದ ನಿಯಮಿಸಲ್ಪಟ್ಟಿರುವ ಶ್ರೀ ಸಿದ್ಧಲಿಂಗಸ್ವಾಮಿಗಳು ಇಲ್ಲಿಗೆ ದಯಮಾಡಿಸಿ 10-15 ದಿವಸಗಳು ಮಾತ್ರವಾಗಿದ್ದರೂ ಮಠಾಭಿವೃದ್ಧಿ, ಭಕ್ತರುಗಳ ಐಕಮತ್ಯ, ವಿದ್ಯಾಭಿವೃದ್ಧಿ ಮೊದಲಾದ ಕಾರ್ಯಗಳಲ್ಲಿ ನಿರತರಾಗಿರುವರೆಂದೂ, ವೀರಶೈವತರುಣಸಂಘದವರು 100 ರೂಪಾಯಿವರೆಗಿನ ದವಸಧಾನ್ಯವನ್ನು ಮಠಕ್ಕೆ ಸಹಾಯಮಾಡಿರುವರಲ್ಲದೆ ಮುಂದೆಯೂ ಮಾಡುವುದಾಗಿ ವಾಗ್ದಾನಮಾಡಿರುತ್ತಾರೆಂದೂ ತಿಳಿಸಲು ಸಂತೋಷವಾಗುತ್ತದೆ. ಈ ಗ್ರಾಮದ ತರುಣಸಂಘದವರ ಮೇಲ್ಪಂಗ್ತಿಯನ್ನು ಅನುಸರಿಸಿ ನೆರೆ 33 ಗ್ರಾಮದ ತರುಣರೂ ಮಠಾಭಿವೃದ್ಧಿಗಾಗಿ ಸಹಾಯಮಾಡಲು ವಾಗ್ದಾನಮಾಡಿರುತ್ತಾರೆ. ಕಳೆದ ತಾ॥ 10 ರಲ್ಲಿ ಮಠದ ಶ್ರೀಗಳ ಸಭಾಧ್ಯಕ್ಷತೆಯಲ್ಲಿ ಗ್ರಾಮದ ವೀರಶೈವಮಂಡಲಿಯವರು ಒಡ್ಡರಹಳ್ಳಿ ಕಸ್ತೂರಿದಾಸರಿಂದ ಶಿವಕೀರ್ತನೆಯನ್ನೂ, ತರುಣರಿಂದ ಭಜನೆಯನ್ನೂ ಮಾಡಿಸಿದರು. ಅನಂತರ ಸಭಾಧ್ಯಕ್ಷ ಪೂಜ್ಯಪಾದರು ವೀರಶೈವಧರ್ಮ ಪ್ರಾಣಿಹಿಂಸೆ ಮೊದಲಾದ ವಿಷಯಗಳಮೇಲೆ ಶ್ಲಾಘ್ಯವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನು ಆನಂದಾಬ್ಧಿಯೊಳಗೆ ಮುಳುಗಿಸಿದರು. ನೆರೆದಿದ್ದ ಸಭಿಕರು ಮಹಾಸ್ವಾಮಿಯವರ ವಾಗ್ಝರಿಯನ್ನೂ ಪಾಂಡಿತ್ಯವನ್ನೂ ಬಹಳವಾಗಿ ಕೊಂಡಾಡಿದರು.

ಶೆಟ್ಟರ ಮರಿಯಪ್ಪ, ರಾಂಪುರ.

ನೇಟಿವ್ ಆಸ್ಪತ್ರೆ ಆರಂಭೋತ್ಸವ.

ಹೊಸದುರ್ಗ ತಾ॥ ಬೆಲಗೂರು ಗ್ರಾಮವು 500 ಮನೆಗಳಿಂದಲೂ 2,500 ಪ್ರಜಾಸಂಖ್ಯೆಯಿಂದಲೂ ಭರಿತವಾಗಿದೆ. ನಾಗರಿಕತೆಗೂ ಪ್ರಜಾಸೌಕರ್ಯಕ್ಕೂ ತಕ್ಕಂತೆ ಒಂದು ಇಙ್ಕಂಪ್ಲೀಟ್ ಮಿಡ್ಲ್ ಸ್ಕೂಲು ಒಂದು ಪೋಲೀಸ್‌ಸ್ಟೇಷನ್ ಒಂದು ಪೋಸ್ಟಾಫೀಸು ಒಂದು ಗರ್ಲ್ಸ್ ಸ್ಕೂಲು ಒಂದು ಕೋಆಪರೇಟಿವ್ ಸೊಸೈಟಿ ಒಂದು ವಿಲೇಜ್ ಪಂಚಾಯಿತಿ ಆಫೀಸು ಇವುಗಳು ಸರ್ಕಾರದಿಂದ ಕೊಡಲ್ಪಟ್ಟು ಒಂದು ಕಂಪ್ಲೀಟ್ ಮಿಡ್ಲ್‌ಸ್ಕೂಲ್ ಒಂದು ಆಸ್ಪತ್ರೆ ಒಂದು ರಸ್ತೆ ಇವುಗಳನ್ನು ಈ ಗ್ರಾಮಕ್ಕೆ ಹೊಂದಬೇಕೆಂಬ ಕುತೂಹಲವು ಈ ಗ್ರಾಮದ ಪ್ರಜೆಗಳಿಗೆ ಅಹೋರಾತ್ರಿಯಲ್ಲಿಯೂ ಬಾಧಿಸುತ್ತಿದೆ. ಅನರೆ ವರ್ಷಾಂತರಗಳಿಂದ ಮಾಡಲ್ಪಡುತ್ತಿರುವ ಈ ಗ್ರಾಮದ ಪ್ರಜೆಗಳ ಪ್ರಾರ್ಥನೆಯನ್ನು ಘನಸರ್ಕಾರದವರು ಮನಸ್ಸಿಗೆ ತಂದು 1926ನೇ ಅಕ್ಟೋಬರ್ ತಾ॥ 16 ರಿಂದ ಒಂದು ನೇಟಿವ್ ಆಸ್ಪತ್ರೆಯನ್ನು ಈ ಗ್ರಾಮಕ್ಕೆ ಕೊಟ್ಟು ಪುರಜನರನ್ನು ಸಂತೋಷಪಡಿಸಿರುತ್ತಾರೆ. ಇದೇ ರೀತಿ ಪ್ರಜೆಗಳ ಪ್ರಾರ್ಥನೆಗಳನ್ನು ಸರ್ಕಾರದವರು ಮನಸ್ಸಿಗೆ ತಂದುಕೊಂಡು ಬಡಪ್ರಜೆಗಳನ್ನು ಕಾಪಾಡುತ್ತಾರಾಗಿ ನಂಬಿರುತ್ತೇನೆ. ಮೇಲ್ಕಂಡ ನೇಟಿವ್ ಆಸ್ಪತ್ರೆಯ ಆರಂಭೋತ್ಸವವು ತಾರೀಖು 16-10-26ರಲ್ಲಿ ಈ ಗ್ರಾಮದ ವಿಲೇಜ್ ಪಂಚಾಯಿತಿ ಛೇರ್‌ಮನ್ ಸಾಹುಕಾರ್ ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಪುರಜನರೆಲ್ಲರೂ ಕೇವಲ ಅದರೋತ್ಸಾಹಗಳಿಂದ ಕೂಡಿ ವಿಜೃಂಭಣೆಯಿಂದ ನಡಸಿದರು. ಇಷ್ಟೊಂದು ಸಂತೋಷಕ್ಕೆ ದಾರಿಯನ್ನು ಕಲ್ಪಿಸಿಕೊಟ್ಟ ನಮ್ಮ ಶ್ರೀಮನ್ಮಹಾರಾಜ ಸಹೋದರರಿಗೂ, ವಿಲೇಜ್ ಪಂಚಾಯಿತಿ ಚೇರ್‌ಮನ್‌ರವರಿಗೂ ಕಮಿಟಿ ಮೆಂಬರುಗಳಿಗೂ ಭಗವಂತನು ಆಯುರಾರೋಗ್ಯೈಶ್ವರ್ಯಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ವಿದ್ಯಾಧಿಕಾರಿಗಳು ದಯೆಯಿಟ್ಟು ಗಮನಿಸುವರೆ?

ತುಮಕೂರು ತಾಲ್ಲೂಕ್ (ಕರೂರ್) ನಾಗವಲ್ಲಿ ಸ್ಕೂಲಿನ ಹೆಡ್ಮಾಸ್ಟರಾದ ದಯಾಳು ಮ॥ ಕೆ. ನಾರಣಯ್ಯಂಗಾರ್‍ರವರು ಫರ್ಲೋರಜ ತೆಗೆದುಕೊಂಡನಂತರ ಈ ಸ್ಕೂಲಿನ ಸ್ಥಿತಿಯು ಹವಾಬದಲಾವಣೆಯಿಂದಲೋ ಅಧಿಕಾರದರ್ಪದಿಂದಲೋ ಬಹುಮಟ್ಟಿಗೆ ವ್ಯತ್ಯಾಸವಾಗಿದೆ. ಈ ಸ್ಕೂಲಿಗೆ ಸುಮಾರು 3 ಮೈಲಿ ದೂರದಲ್ಲಿರುವ ಹೊನಸಿಕೆರೆ ಎಂಬ ಗ್ರಾಮದಿಂದ ಬರುತ್ತಿದ್ದ 5 ಜನ ವೀರಶೈವ ವಿದ್ಯಾರ್ಥಿಗಳು ಆಕ್ಟಿಂಗ್ ಹೆಡ್ಮಾಸ್ಟರ್ ಕಾಲದಲ್ಲಿ ಸ್ಕೂಲಿಗೆ ಬರದೆ ನಿಂತುಬಿಟ್ಟಿರುತ್ತಾರೆ. ಇದಕ್ಕೆ ಕಾರಣವೇನಂದರೆ ಈಗೆ ಕೆಲವು ದಿವಸಗಳ ಹಿಂದೆ ಕ್ಲಾಸಿನಲ್ಲಿ ಮೇಲ್ಕಂಡ ವೀರಶೈವರ ಈ ವಿದ್ಯಾರ್ಥಿಗಳನ್ನೇ ನಿರ್ದೇಶಿಸಿ ಈ ವಪ್ರಕುಂತ ಹುಡುಗರಿಗೆ ಬಡಿದುಕೊಳ್ಳುವುದು ಕಷ್ಟ ಎಂದು ಹೇಳಿ ಕ್ರೂರವಾಗಿ ದಂಡಿಸಿದುದರಮೇಲೆ ಸದರಿ ಬಾಲಕರು ತಮ್ಮ ತಮ್ಮ ತಂದೆತಾಯಿಗಳಿಗೆ ಈ ಮಾತುಗಳನ್ನು ತಿಳಿಸಲು, ಪೋಷಕರು ಬಂದು ಮೇಲ್ಕಂಡ ಮಾಸ್ಟರನ್ನು ಈ ರೀತಿ ನಿಂದಿಸಬಹುದೇ ಎಂಬುದಾಗಿ ಕೇಳಲು ನೀವು ಕೇಳುವುದಕ್ಕೆ ಅರ್ಹರಲ್ಲ ಮತ್ತು ಯಾವ ಅಪ್ಪಣೆಯಿಂದ ಒಳಗೆ ಪ್ರವೇಶಿಸಿದಿರಿ? ಎಂಬುದಾಗಿ ಗದ್ದರಿಸಿ ಜವಾನನ್ನು ಕರೆದು ಮುಂಚೆ ಆಚೆಗೆ ತಳ್ಳಿಬಿಡು ಎಂದು ಅಪ್ಪಣೆಮಾಡಿದರು ಇವರ ದೆಶೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಭಂಗವುಂಟಾಗಿರುವುದಲ್ಲದೆ ಮುಂದೆ ಸೇರುವ ಈಗ ಹಾಲಿ ಸೇರಿರುವ ವೀರಶೈವ ವಿದ್ಯಾರ್ಥಿಗಳಿಗೂ ಸಹ ಎಷ್ಟರಮಟ್ಟಿನ ವಿದ್ಯಾಭಿವೃದ್ಧಿಯಾಗಬಹುದೋ ಎಂಬುದನ್ನು ಇಲಾಖಾಪ್ರಭುಗಳು ಗಮನಕ್ಕೆ ತಂದು ಮತದ್ವೇಷವನ್ನೇ ಮುಖ್ಯವೃತ್ತಿಯಾಗಿಟ್ಟುಕೊಂಡಿರುವ ಮೇಲ್ಕಂಡ ಮಾಸ್ಟರ ವಿಷಯದಲ್ಲಿ ಸರಿಯಾದ ಏರ್ಪಾಡುಮಾಡಿ ಮೇಲ್ಕಂಡ ವಿದ್ಯಾರ್ಥಿಗಳ ತೊಂದರೆಯನ್ನು ತಪ್ಪಿಸಿ ಕಾಪಾಡುತ್ತಾರೆಂತ ನಂಬಿದೇನೆ.

ಒಬ್ಬ ಪ್ರತ್ಯಕ್ಷದರ್ಶಿ.

ಶ್ರೀಕರಭಾಷ್ಯದ ಮುದ್ರಕರಿಗೆ ಸವಿನಯಸೂಚನೆ.

ಯಾವುದೊಂದು ಸಮಾಜವು ಉನ್ನತಿಯನ್ನು ಹೊಂದಬೇಕಾದರೂ ಆಯಾ ಮತದ ಪ್ರಾಚೀನಗ್ರಂಥಗಳ ತತ್ವಗಳು ಸರ್ವತ್ರ ಪ್ರಸರಿಸಬೇಕಾಗುವುದು. ಆದ್ದರಿಂದಲೇ ಪೂರ್ವಕಾಲದ ಋಷಿಗಳೂ ಆಚಾರ್ಯರೂ ಸರ್ವಭಾಷೆಗಳಿಗೂ ಮೂಲವಾದ ಗೀರ್ವಾಣಭಾಷೆಯಲ್ಲಿಯೇ ತಮ್ಮ ತಮ್ಮ ಮನಸ್ಸಿನ ವಿಚಾರಗಳನ್ನು ಬರೆದಿಟ್ಟಿರುವರು. ಈ ಉದಾತ್ತವಿಷಯಗಳನ್ನು ವಿಚಾರಮಾಡುವುದಕ್ಕೆ ಅನ್ಯಸಮಾಜದವರು ಪ್ರಾಚೀನಗ್ರಂಥಗಳ ಉದ್ಧಾರಕ್ಕಾಗಿ ಪ್ರಯತ್ನಮಾಡುವಂತೆ ನಮ್ಮ ಸಮಾಜದವರು ಪ್ರಾಚೀನಗ್ರಂಥಗಳಲ್ಲೊಂದಾದ ಶ್ರೀಕರಭಾಷ್ಯವನ್ನು ಉದ್ಧಾರಗೊಳಿಸುವದಕ್ಕಾಗಿ ಪ್ರಯತ್ನಮಾಡುವ ಸಂಗತಿಯು ಈ ಸ್ಟಾರ್ ಪತ್ರಮುಖಾಂತರ ತಿಳಿದುಬರುತ್ತದೆಂಬುವದು ಆತ್ಮಾನಂದದ ವಿಷಯವಾಗಿದೆ. ಆದರೆ ಈ ಭಾಷ್ಯವು ನಾಗರೀಲಿಪಿಯಲ್ಲಿ ಮುದ್ರಿತವಾದರೆ ಕರ್ನಾಟಕ ಮಹಾರಾಷ್ಟ್ರ ದ್ರಾವಿಡ ಮೊದಲಾದ ದೇಶಗಳ ವೀರಶೈವರಿಗೂ ಸ್ವದೇಶ ಪರದೇಶಗಳ ಪಂಡಿತರಿಗೂ ನೋಡಲಿಕ್ಕೆ ಅನುಕೂಲವಾಗುವದಲ್ಲದೆ, ಪರಮತಸ್ಥರು ಮಾಡುವ ಕುತರ್ಕಗಳಾದರೂ ಇದರಿಂದ ದೂರಾಗಬಹುದೆಂದು ಕಂಡುಬರುತ್ತದೆ. ಕರ್ನಾಟಕ ಭಾಷೆಯಲ್ಲಿ ಮುದ್ರಿತವಾದರೆ ಕರ್ನಾಟಕಪಂಡಿತರಿಗಷ್ಟೇ ಉಪಯೋಗವಾಗುವದಲ್ಲದೆ, ಮಹಾರಾಷ್ಟ್ರ ದ್ರಾವಿಡ ಮೊದಲಾದ ವೀರಶೈವ ಬಂಧುಗಳಿಗೂ ವೀರಶೈವಮತದ ನಿಜತತ್ವವನ್ನು ತಿಳಿಯಲಪೇಕ್ಷಿಸುವ ಸ್ವದೇಶ ಪರದೇಶಗಳ ಪಂಡಿತರಿಗೂ ಏನೂ ಪ್ರಯೋಜನವಾಗುವದಿಲ್ಲ. ಆದ್ದರಿಂದ ವಿಚಾರಿಗಳಾದ ಪ್ರಸಾರಕರು ದೇವನಾಗರಿ ಲಿಪಿಯಲ್ಲಿಯೇ ಮುದ್ರಿಸಬೇಕಾಗಿ ನಮ್ಮ ಆತ್ಮಾಗ್ರಹದ ಸೂಚನೆಯು, ಮತ್ತು ಲಾಭೈಕದೃಷ್ಟಿಯಿಂದ ಮುದ್ರಿತವಾಗದೆ ಸರ್ವರಿಗೂ ಇದರ ತತ್ವವನ್ನು ತಿಳಿಕೊಳ್ಳಲಿಕ್ಕೆ ಅನುಕೂಲವಾಗುವಂತೆ ಕಲ್ಪಿಸಿಕೊಟ್ಟರೆ, ಗ್ರಂಥಪ್ರಸಾರವು ತೀವ್ರವಾಗುವದಲ್ಲದೆ ಅಲ್ಪ ಕಾಲದಲ್ಲಿಯೇ ಪುನರ್ಮುದ್ರಣಲಾಭವಾದರೂ ದೊರಕಬಹುದು.

ಪಿ. ಚಂದ್ರಶೇಖರಶಾಸ್ತ್ರಿ, ನ್ಯಾಯತೀರ್ಥ.

ಗೌಡಸಾರಸ್ವತಬ್ರಾಹ್ಮಣಸಂಘ, ಚಿಕ್ಕಮಗಳೂರು.

ಚಿಕ್ಕಮಗಳೂರು ಟವನ್ನಿನಲ್ಲಿರುವ ಗೌಡಸಾರಸ್ವತ ಬ್ರಾಹ್ಮಣರುಗಳು ತಮ್ಮ ಸ್ವಜನಗಳ ಶ್ರೇಯೋಭಿವೃದ್ಧಿಗೂ ಯಶಸ್ಸಿಗೂ ಕಾರಣವಾಗುವಂತೆ ಈಗ್ಗೆ ಸುಮಾರು 3 ತಿಂಗಳಿನಿಂದ ಈ ಟವನ್ನಿನಲ್ಲಿ ಒಂದು ಸಂಘವನ್ನು ಏರ್ಪಡಿಸಿಕೊಂಡಿರುವರು. ಇದಕ್ಕೆ ಚಿಕ್ಕಮಗಳೂರಿನಲ್ಲಿ ಮುಖಂಡರಾದ ಸಾಹುಕಾರ ಮ॥ ಬಿ. ಎಚ್. ಹನುಮಂತಪ್ಪನವರು ಪ್ರೆಸಿಡೆಂಟರಾಗಿಯೂ, ಮ॥ ಗಳಾದ ಬಿ. ಎಚ್. ವಾಸುದೇವಪ್ಪೈಗಳು ಸೆಕ್ರೆಟರಿಯಾಗಿಯೂ, ಡಾಕ್ಟರ್ ಶ್ರೀಯುತ್ ಕೆ. ರಾಮಚಂದ್ರ ಭಗತ್‌ರವರು ಟ್ರೆಜರರ್ ಆಗಿಯೂ ಕೆಲಸ ನಡಿಸುತ್ತಲಿರುವರು. ಅಲ್ಲದೆ ಮ॥ ಗಳಾದ (1) ಬಿ. ಎಸ್. ಮಾಧವರಾಯರು (2) ಎಚ್. ಎಸ್. ವೆಂಕಟೇಶಯ್ಯನವರು (3) ಜಿ. ಅಣ್ಣಪ್ಪ ಕಮ್ತಿಯವರು (4) ಎ. ನಾರಾಯಣಪೈಗಳು (5) ಕೆ. ವಾಸುದೇವಪ್ರಭುಗಳು (6) ಎಂ. ರಾಮಪ್ರಭುಗಳು (7) ಸಿ. ನಾರಾಯಣ ಕೃಷ್ಣಮಲ್ಯರು ಈ ಕಾರ್ಯನಿರ್ವಾಹಕಸಂಘದ ಕಮಿಟಿ ಮೆಂಬರುಗಳಾಗಿ ತಿಂಗಳಿಗೆ 2 ಸಾರಿ ತಪ್ಪದೆ ಮೀಟಿಂಗ್ ನಡಿಸುತ್ತಾ ಬಹಳ ಶ್ರದ್ಧೆವಹಿಸಿ ಸಂಘದ ಉದ್ದೇಶಗಳನ್ನು ಸಫಲಗೊಳಿಸುತ್ತಿದ್ದಾರೆ. ಸಂಘದ ಉದ್ದೇಶವು ಈ ಟವನ್ನಿನಲ್ಲಿ ಸಂಘದ ಮೂಲಧನವನ್ನು ಹೆಚ್ಚಿಸುತ್ತಾ 1 ದೇವಾಲಯಸ್ಥಾಪನೆ, ಜನಗಳಲ್ಲಿ ವ್ಯಾಪಾರಾಭಿವೃದ್ಧಿ, ವ್ಯವಸಾಯ, ಕೈಗಾರಿಕೆ ಈ ಏರ್ಪಾಟುಗಳನ್ನು ಮತ್ತು ಬ್ರಾಹ್ಮಣ ವಿದ್ಯಾರ್ಥಿಗಳು ಸೇವಾಧರ್ಮವನ್ನು ತೊರೆದು ಸ್ವಾವಲಂಬನದಿಂದ ಬದುಕುವ ಏರ್ಪಾಟು ಮಾಡತಕ್ಕದ್ದು ಸಂಘದ ಮುಖ್ಯ ಉದ್ದೇಶವಾಗಿರುತ್ತದೆ. ಈ ಸಂಘಸ್ಥಾಪನೆ ಆದ ಸ್ವಲ್ಪಕಾಲದಲ್ಲಿಯೇ ಮೂಲಧನಕ್ಕಾಗಿ 1000 ರೂ. ಗಳ ವರೆಗೆ ಶೇಖರವಾಗಿ ಸಂಘದ ಮೆಂಬರುಗಳಿಗೂ ಮತ್ತು ಮಠಸ್ಥರಿಗೂ ವ್ಯಾಪಾರ ಮೊದಲಾದ್ದಕ್ಕೆ ಇತರರಲ್ಲಿ ಹೋಗದ ರೀತಿ ನ್ಯಾಯವಾದ ಬಡ್ಡಿಯಿಂದ ಸಾಲಗಳನ್ನು ಕೊಡುತ್ತಾ ಸಕಾಲದಲ್ಲಿ ಅವರುಗಳಿಂದ ಬರಮಾಡಿಕೊಳ್ಳುತ್ತ ಬಹಳ ಮುತವರ್ಜಿಯಿಂದ ಕೆಲಸ ನಡಿಸುತ್ತಲಿದೆ. ಮೂಲಧನ 20 ಸಾವಿರ ರೂಪಾಯಿಗಳು ಜಮಾ ಆದೊಡನೆ ಸಂಘದ ಪೂರ್ಣ ಉದ್ದೇಶವನ್ನು ನೆರವೇರಿಸಬೇಕೆಂಬ ಆಲೋಚನೆಯಿಂದಲೂ ಐಕಮತ್ಯದಿಂದಲೂ ಕೆಲಸಗಳು ತೃಪ್ತಿಕರವಾಗಿ ನಡಿಯುತ್ತಲಿವೆ.

ಸಮಾಜಾಭಿಮಾನಿ.

ಸಂಸ್ಕೃತಪಾಠಶಾಲಾಸ್ಥಾಪನೆ.

ಬಳ್ಳಾರಿಜಿಲ್ಲಾ ಹುವ್ವಿನಹಡಗಲಿ ತಾಲ್ಲೂಕು ಹಿರೇಹಡಗಲಿ ಗ್ರಾಮದಲ್ಲಿ (ತಾ॥ 6-11-1926 ರ) ಮಧ್ಯಾಹ್ನ 3 ಘಂಟೆಗೆ ಪುರಪ್ರಮುಖರಾದ ಶ್ರೀ ಹಾಲಸ್ವಾಮಿಗಳು, ಪಾಟೀಲ ಶಿವರುದ್ರಗೌಡರು, ಹಮ್ಮಿಗಿ ಶಾಂತಪ್ಪ, ಕೊಂಪಿ ವೀರಣ್ಣಪ್ಪ, ಬಟರಹಳ್ಳಿ ಮುತ್ತಪ್ಪ ಆಲೂರು ಚೆನ್ನಪ್ಪ ಸಾಮಂತ್ರಿ ಕೊಟ್ರಪ್ಪ, ಪಿ. ಎಂ. ಪರಮೇಶ್ವರಯ್ಯ, ಮಠದ ಹುಚ್ಚಯ್ಯ, ಮುಂತಾದ ಅನೇಕ ಭಕ್ತಮಹೇಶ್ವರಾದಿಮಂಡಲಿಯು ಸಭೆಸೇರಿದ್ದರು. ವಿದ್ಯಾರ್ಥಿಗಳಿಂದ ಮಂಗಲಸ್ತುತಿಯಾದನಂತರ ಶ್ರೀ ಹಾಲಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಬಳಿಕ ಪಾಟೀಲ ಶಿವರುದ್ರಗೌಡರು ನಮ್ಮ ಗ್ರಾಮದಲ್ಲಿ ಮಹೇಶ್ವರರ ಸಂಖ್ಯೆಯು ವಿಶೇಷವಾಗಿದ್ದು ವೈದಿಕವಿದ್ಯಾಪ್ರಸಾರವಾಗದಿರುವದು ಬಹು ಖೇದಾಸ್ಪದವಾಗಿದೆ. ಆದುದರಿಂದ ಪ್ರಥಮದಲ್ಲಿ ಗುರುವರ್ಗದವರು ಸುಧಾರಣೆ ಹೊಂದುವದೇ ಮುಖ್ಯವಾದದ್ದು. ಈ ಬಗ್ಗೆ ಸರ್ವರೂ ಐಕಮತ್ಯದಿಂದ ವಿದ್ಯಾಭಿವೃದ್ಧಿಯ ಕಡೆಗೆ ಲಕ್ಷ್ಯವಿಟ್ಟು ಒಂದು ಪಾಠಶಾಲಾ ಏರ್ಪಾಟುಮಾಡುವದು ಅತ್ಯಂತಯೋಗ್ಯವದೆಂದು ಸೂಚನಾ ತಂದರು. ಇದಕ್ಕೂ ಅಧ್ಯಕ್ಷರೂ ಸಭಿಕರೂ ಅನುಮೋದಿಸಿ ಕೂಡಲೆ ಒಂದು ಸಂಸ್ಕೃತಪಾಠಶಾಲೆಯನ್ನು ಸ್ಥಾಪನಮಾಡಿದರು. ಅನಂತರ ಇದೇ ಗ್ರಾಮದ ಪುರಾಣಿಕಮಠದ ಕೈ॥ ಫಕೀರಶಾಸ್ತ್ರಿಗಳವರ ಪೌತ್ರರಾದ ಶ್ರೀ ವಿರೂಪಾಕ್ಷಶಾಸ್ತ್ರಿಗಳನ್ನು ಪಾಠಶಾಲಾಧ್ಯಾಪಕರನ್ನಾಗಿ ನಿಯಮಿಸಿ ಸರ್ವರ ಅಭಿಪ್ರಾಯದಂತೆ ಅಧ್ಯಕ್ಷರಿಂದ ಈ ಶಾಲೆಗೆ ಶ್ರೀ ಗುರುವರ್ಗಧರ್ಮಸುಧಾರಕ ಪಾಠಶಾಲಾ ಎಂದು ನಾಮಕರಣವು ಮಾಡಲ್ಪಟ್ಟಿತು. ಬಳಿಕ ಶಾಸ್ತ್ರಿಗಳು ವಿದ್ಯಾವಿಷಯವಾಗಿಯು ಮತ್ತು ಆಧುನಿಕ ಪದ್ಧತಿಯನ್ನು ಅಂದರೆ—ಈಗ ಪ್ರತಿಯೊಬ್ಬ ಗುರುಸ್ಥಲದವ (ಜಂಗಮ) ರು ತಂತಮ್ಮ ಸದ್ಧರ್ಮಗಳೆನನುಸರಿಸಿರದೆ ಕೆಲವರು ವ್ಯಾಪಾರ ಒಕ್ಕಲತನ ಕೈಗಾರಿಕೆ ಗುಮಾಸ್ತಿಕೆ ಭಿಕ್ಷಾಟನ ಮೊದಲಾದ ಅನ್ಯವೃತ್ತಿಗಳಿಂದ ಕಾಲಹರಣಮಾಡುತ್ತ ಧಾರ್ಮಿಕವಿಚಾರದಕಡೆಗೆ ಮನಗೊಡದೆ ಇರುವದರಿಂದಲೇ ನಮ್ಮ ಸಮಾಜವು ದುರ್ದೆಶೆಯುಳ್ಳದ್ದಾಗಿದೆ. ಇನ್ನಾದರೂ ಸಕಲ ವೀರಶೈವರೂ ಧಾರ್ಮಿಕವಿದ್ಯಾಭಿವೃದ್ಧಿಯ ಬಗ್ಗೆ ಲಕ್ಷ್ಯಕೊಟ್ಟು ಕೈಕೊಂಡ ಕಾರ್ಯಗಳು ಉತ್ತರೋತ್ತರಾಭಿವೃದ್ಧಿಯಾಗುವಂತೆ ಧೃಢಪ್ರಯತ್ನ ಪಡತಕ್ಕದ್ದೆಂದು ಬೋಧಿಸಿದರು. ಇದಕ್ಕೆ ಸಭಿಕರೆಲ್ಲರೂ ಅನುಮೋದನಕೊಟ್ಟು ಪಾಠಶಾಲೆಗೆ ಬರುವ ಪರಸ್ಥಳದ ವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಕೊಡಲು ನಿರ್ಧರಿಸಿ ಮುಂದೆ ಪಾಠಶಾಲಾಭಿವೃದ್ಧಿಗಾಗಿ ಚಂದಾಹಣ ಕೂಡಿಸಲು ಮತ್ತೊಂದು ಮೀಟಿಂಗು ಏರ್ಪಾಟುಮಾಡುವದಾಗಿ ನಿರ್ಣಯಿಸಿ ಶ್ರೀ ಪಾರ್ವತೀಪರಮೇಶ್ವರರ ಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ಗೋರಿಬಿದನೂರು ತಾ॥ ಮುದಗೆರೆ.

ಈ ಗ್ರಾಮದ ಕೆರೆತುಂಬಿ 8 ವರ್ಷಗಳಾಗಿದ್ದರು ಈಸಲ ಭರ್ತಿಯಾಗಿ ಜನರಿಗೆಲ್ಲಾ ಸಂತೋಷವನ್ನುಂಟುಮಾಡಿದೆ. ಫಸಲು ಚೆನ್ನಾಗಿದೆ, ಕೆರೆಗೆ ನೀರುಬರಲು ಸರಿಯಾದ ಆಶ್ರಯವಿಲ್ಲ. ಇಲ್ಲಿನ ಪ್ರೈಮರಿ ಸ್ಕೂಲು ತುಂಬಾ ಅಭಿವೃದ್ಧಿಯಲ್ಲಿರುವುದಾದರೂ ಪಾಠಶಾಲಾಕಟ್ಟಡವು ವಿಶಾಲವಾಗಿಲ್ಲದೆ ಹರಕು ಮುರುಕು ಪ್ರದೇಶದಲ್ಲಿ ಬಾಲಕರು ಪಾಠಕಲಿಯಬೇಕಾಗಿದೆ. ಇಲ್ಲಿಯ ಮದ್ದಗಿರಿ ಗೋರಿಬಿದನೂರು ರಾಜಮಾರ್ಗದ ಬಳಿ ಆರ್ಯವೈಶ್ಯ ಶ್ರೀ॥ ವೆಂಕಟನಾರಣಶ್ರೇಷ್ಠಿಯವರು ಸುಮಾರು ಎರಡುಸಾವಿರ ರೂಪಾಯಿ ಮುಟ್ಟಿಸಿ ಒಂದು ವಿಶಾಲವೂ ನೀರು ನೆಳಲುಗಳಿಗೆ ಅನುಕೂಲವೂ ಪ್ರಯಾಣಿಕರ ಸೌಕರ್ಯಕ್ಕೆ ತಕ್ಕುದೂ ಆದ ಧರ್ಮಸತ್ರವನ್ನು ಕಟ್ಟಿಸಿರುವರು ಇವಕ್ಕೆ ಪ್ರಭುತ್ವದವರ ಸಹಾಯವು ಒದಗಬೇಕಾದುದು ಆವಶ್ಯಕವಾಗಿದೆ. ಇದೇ ಗ್ರಾಮವಾಸಿಯೂ ಹುಟ್ಟು ಬಡವನೂ ಭಾರಿ ಸಂಸಾರಿಯೂ ಆಗಿರುವ ಮೈಲಾರಿಯಪ್ಪನೆಂಬನನು ಊರಬಳಿ ಒಂದು ಸಿಹಿನೀರುಭಾವಿಯನ್ನು ಕಟ್ಟಿಸಿ ಗ್ರಾಮಕ್ಕೆಲ್ಲಾ ಮಹದುಪಕಾರಮಾಡಿರುವನು. ಅಲ್ಲದೆ ಒಂದು ಮಂಟಪವನ್ನೂ ಕೈದೋಟವನ್ನೂ ನಿರ್ಮಿಸಿ ಛಾಯಾವೃಕ್ಷಗಳನ್ನು ನೆಡಿಸಿ ಪ್ರಜಾನುರಾಗಿಯಾಗಿರುವನು ಆದ್ದರಿಂದ ಈತನು ಸರ್ಕಾರದ ಉತ್ತೇಜನಕ್ಕೆ ಯೋಗ್ಯನೆಂದು ಹೇಳಬೇಕಾದ್ದಿಲ್ಲ. ಈ ಗ್ರಾಮದ ಛೇರ್‌ಮ್ಯಾನ್‌ರವರು ಕೇವಲ ಮುತುವರ್ಜಿವಹಿಸಿ ಕೆಲಸಮಾಡುತ್ತಾರೆ. ಗ್ರಾಮಪಾಕೀಜಾ ಚೆನ್ನಾಗಿದೆ. ಆದರೆ ಊರಿನ ಪಕ್ಕದಲ್ಲಿಯೇ ತಿಪ್ಪೆ ಹಳ್ಳಗಳಿರುವುದರಿಂದಲೂ, ಸುತ್ತಲೂ ಬಂದರುಗಳ್ಳಿಬೆಳೆದು ಹಾವು ಮೊದಲಾದ ದುಷ್ಟಪ್ರಾಣಿಗಳಿಗೆ ಅವಕಾಶವಾಗಿರುವುದರಿಂದಲೂ, ಇವುಗಳನ್ನು ನೆಲಸಮಮಾಡಿಸಿದಲ್ಲಿ ತುಂಬಾ ಉಪಯೋಗವಾಗುತ್ತದೆ ವಿಲೇಜ್ ಪೋಸ್ಟ್‌ಮ್ಯಾನ್ ನಾರಾಯಣಸಾಮಿಯು ಶ್ರದ್ಧೆಯಿಂದಲೂ ನಂಬಿಗೆಯಿಂದಲೂ ಕೆಲಸಮಾಡುತ್ತಾ ಜನಪ್ರಿಯನಾಗಿದ್ದಾನೆ. ಒಬ್ಬನ ಕಾಗದಗಳನ್ನು ಮತ್ತೊಬ್ಬನ ಕೈಗೆ ಕೊಡುವುದು ಒಂದೂರಿನ ಪ್ರವೇಶಸೂಚನಾರುಜುವನ್ನು ಮತ್ತೊಂದೂರಿನಲ್ಲಿ ಮಾಡಿಸಿಕೊಳ್ಳುವುದು ಮೊದಲಾದುವು ಯಾವುವೂ ತಲೆದೋರಿಲ್ಲ. ಇಂಥಾ ಪ್ರಾಮಾಣಿಕ ಸೇವಕನು ನಿಜವಾಗಿಯೂ ಇಲಾಖೆಯವರ ಕೃಪೆಗೆ ಅರ್ಹನಾಗಿದ್ದಾನೆ. ಕ್ರಮದಂತೆ ಈ ವರ್ಷವೂ ಶ್ರೀ ವಿದ್ಯಾಗಣಪತಿಯುತ್ಸವವು ಸಾಹುಕಾರ್ ನಂಜುಂಡಯ್ಯನವರ ಮುಂದಾಳುತನದಲ್ಲಿ ವಿಜೃಂಭಣೆಯಿಂದ ಜರುಗಿತು ಇಲ್ಲಿನ ಶ್ರೀಮಂತ ಶ್ರೀ॥ ಬೈಲಪ್ಪನವರು ಸ್ಕೂಲುಕಟ್ಟಡಕಟ್ಟಿಸಿಕೊಡುವುದಾಗಿ ತಿಳಿಯಬರುತ್ತದೆ. ಈ ಧರ್ಮಮಾರ್ಗಾವಲಂಬಿಗಳು ಆದಷ್ಟು ಶೀಘ್ರವಾಗಿ ಕಾರ್ಯೋನ್ಮುಖರಾಗಿ ಭಗವತ್ಪ್ರೀತಿಗೆ ಪಾತ್ರರಾಗಲಿ ಎಂದು ಹಾರೈಸುವೆನು.

ಸ್ವಗ್ರಾಮಾಭಿಮಾನಿ.

---

೧೦ ನೆಯ ಶ್ರೀಮದ್ವೀರಶೈವಮಹಾಸಭಾ, ಹುಬ್ಬಳ್ಳಿ.

ಸ್ವಾಗತಸಂಘದ ಸೆಕ್ರೆಟರಿಯವರಿಗೆ ವಿನಂತಿ.

ಧರ್ಮಾಭಿಮಾನಿಗಳಾದ ತಾವು ಈ ವರ್ಷ ಮಹಾಸಭೆಯನ್ನು ನೆರವೇರಿಸಲು ಒಪ್ಪಿಕೊಂಡದ್ದಕ್ಕಾಗಿ ಸಮಾಜದವರು ತುಂಬಾ ತಮ್ಮ ರುಣಿಯಾಗಿದ್ದಾರೆ. ಡಿಶಂಬರ ತಿಂಗಳು ತೀರ ಸಮೀಪಿಸಿತಾದರೂ, ಸಭೆಯ ಬಗ್ಗೆ ಯಾವತರಹದ ತಯಾರಿಯ ಚಟವಟಿಕೆಯು ಕಂಡುಬರಲಿಲ್ಲ. ಇನ್ನುಮೇಲೆ ಈರೀತಿ ಸಾವಕಾಶಮಾಡಲಿಕ್ಕೆ ಸಮಯವಿಲ್ಲ. ನನ್ನ ಮತಿಗೆ ತೋರಿದ ಕೆಲವು ವಿಷಯಗಳನ್ನು ಸೂಚನಾರ್ಥವಾಗಿ ತಮಗೆ ಸೂಚಿಸಿರುವೆನು. ಅದನ್ನು ತಾವು ದಯೆಯಿಟ್ಟು ಗಮನಿಸುವವರಾಗಬೇಕು. ಊರಲ್ಲಿ ತಿಲಾಂಶವಾದರೂ ದ್ವೈತವಿಲ್ಲದೆ ಎಲ್ಲರೂ ಏಕೀಭವಿಸಿ ಒಮ್ಮನಸ್ಸಿನಿಂದ ಈ ಸಭೆಯ ಕೆಲಸಕ್ಕೆ ಸಹಾಯಮಾಡಲು ಎಲ್ಲರ ಮನಸ್ಸು ಸಮಾಧಾನಹೊಂದುವಂತೆ ಸ್ವಾಗತಸಂಘದ ಎಲ್ಲ ಮೆಂಬರರು ಸ್ಥಳೀಕರಲ್ಲಿ ದ್ವೈತ ಇದ್ದರೆ ಏಕೀಕರಣಮಾಡಬೇಕು. ಪುರನಿವಾಸಿಗಳಾದ ವೀರಶೈವಜನಾಂಗದವರೆಲ್ಲರೂ ಪ್ರತಿಯೊಬ್ಬನ ಮನೆಯಕೆಲಸವಾಗಿಯೂ, ಜಗತ್ತಿಗೇ ಸುಖವುಂಟುಮಾಡುವಂಥಾದ್ದಾಗಿಯೂ ಇರುವ ಈ ಮಹಾಕಾರ್ಯದ ವಿಷಯದಲ್ಲಿ ನಿಮ್ಮ ನಿಮ್ಮ ಖಾಸಗಿ ದ್ವೇಷಾಸೂಯಾದಿಗಳನ್ನು ಬಿಟ್ಟು ನಿಮ್ಮ ಸ್ಟ್ಯಾಂಡಿಂಗ್ ಕಮಿಟಿಯವರಿಗೆ ಪೂರ್ಣ ಸಹಾಯಮಾಡಿ ತಾವೆಲ್ಲರೂ ಕೈಕೊಂಡಿರುವ ಈ ಸತ್ಕಾರ್ಯವು ನಿರ್ವಿಘ್ನವಾಗಿ ಸಾಂಗವಾಗುವಂತೆ ಮಾಡಬೇಕೆಂದು ಮತ್ತು ಈ ಕೆಲಸದಲ್ಲಿ ಯಾರೂ ವೈಕಗೆಯಬಾರದೆಂದು ವಿಜ್ಞಾಪಿಸುವೆನು. ಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ, ಸ್ಟ್ಯಾಂಡಿಂಗ್‌ಕಮಿಟಿಯ ಮೆಂಬರರಾದ ದಿವಾನಬಹಾದ್ದೂರ ಮಣಸಿನಕಾಯಿ ಶಾಂತವೀರಪ್ಪ ಅಣ್ಣನವರ ಮತ್ತು ನಿಮ್ಮ ಸ್ಥಾನಿಕ ಮೊದಲಾದ ಮುಖ್ಯಜನರ ಸಮ್ಮತಿಯಿಂದ ಪ್ರೆಸಿಡೆಂಟರ ನಿವಡಣೂಕೆಯನ್ನು ಜಾಗ್ರತ ಗೊತ್ತುಮಾಡಬೇಕು. ಬಳ್ಳಾರಿಯಲ್ಲಿ ನೆರೆದಿದ್ದ ಸಭೆಯಲ್ಲಿ ಮಾತ್ರ ಪುಂಗನೂರ ಮಹಾರಾಜರನ್ನು ಪ್ರೆಸಿಡೆಂಟರನ್ನು ಮಾಡುವ ಬಗ್ಗೆ ನಮ್ಮ ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್‌ರಾದ ಮಣಸಿನಕಾಯಿ ಸಾಹೇಬರು ಮೊದಲಾದ ಆ ಕಾಲದಲ್ಲಿಯ ಮುಂದಾಳುಗಳು ಒಪ್ಪಿಕೊಂಡಂತೆಯೇ ಆಗಿರುತ್ತದೆ. ಕಾರಣ ಈ ವೇಳೆ ಆ ಪ್ರಭುಗಳನ್ನೇ ಸಭಾಧ್ಯಕ್ಷರನ್ನಾಗಿ ಆರಿಸುವದು ಉಚಿತವಾಗಿ ತೋರುತ್ತದೆ. ವಾಲಂಟೀಯರು ರಾಷ್ಟ್ರೀಯ ಸಭೆಯಲ್ಲಿ ಪ್ರತಿನಿಧಿಗಳ ವ್ಯವಸ್ಥೆಯ ಕೆಲಸವನ್ನು ಚಟುವಟಿಯಿಂದ ವಿನಯಯುತವಾಗಿಯೂ, ಶ್ರೀತಿಪೂರ್ವಕವಾಗಿಯೂ ಮಾಡುತ್ತಿದ್ದರು. ಆ ರೀತಿ ವಾಲಂಟೀಯರ ಜನರು ಒಳ್ಳೇ ಪ್ರಾಮಾಣಿಕತೆಯಿಂದಲೂ, ಆದರಬುದ್ಧಿಯಿಂದಲೂ ನಮ್ಮ ಮಹಾಸಭಾ ಕೆಲಸವಮಾಡುವಂತೆ ಈಗಿನಿಂದಲೇ ಅವರನ್ನು ಗೊತ್ತುಪಡಿಸಿ ತಾಲೀಮುಮಾಡಿಸಿಯೂ ಮತ್ತು ವಿಷಯಗಳನ್ನು ಕಲಿಸಬೇಕು. ರಾಷ್ಟ್ರಹಿತಬಂಧುವಾದ ಬೆಳಗಾವಿಯ ಕಾಂಗ್ರೇಸದ ಸ್ವಾಗತಸಂಘದ ಪ್ರೆಸಿಡೆಂಟ ಗಂಗಾಧರರಾವ ದೇಶಪಾಂಡೆಯವರು ಸಹಿತ ಪ್ರತಿಯೊಬ್ಬ ಮೆಂಬರರಿಗೂ ವಾಲಂಟೀಯರಿಗೂ ತಮ್ಮ ಮನೋದ್ಗಾರಗಳನ್ನು ಪ್ರತಿದಿವಸದ ಹಗಲಿರುಳೂ ತಮ್ಮ ಮನೆಯ ಕೆಲಸಕ್ಕಿಂತಲೂ ಹೆಚ್ಚಿನಕೆಲಸವೆಂದು ಭಾವಿಸಿ ತಯಾರಿಸಿ ಬೆಳಗಾವಿಯಲ್ಲಿ ಮಾಡಿದ ದೇಶಸೇವೆಯ ಕಾರ್ಯದಕ್ಷತೆಯನ್ನು ನೀವೆಲ್ಲರೂ ಪ್ರತ್ಯಕ್ಷವಾಗಿ ಕಂಡವರೇ ಇರುತ್ತೀರಿ. ಆದರಂತೆಯೇ ಮಹಾಸಭಾ ಸ್ವಾಗತಸಂಘದ ಮುಖ್ಯಸ್ಥರು ಈ ವಿಷಯದಲ್ಲಿ ಲಕ್ಷ್ಯಗೊಟ್ಟು ಕಾರ್ಯನಿರ್ವಾಹಕಸಂಘವೊಂದನ್ನೂ ವಾಲಂಟೀಯರ ಸಂಘವೊಂದನ್ನೂ ಏರ್ಪಡಿಸಿ ಮನಮುಟ್ಟಿ ದುಡಿಯುವಂಥ ಸುಜ್ಞನರನ್ನೂ ಉಮೇದವಾರ ಪಟುಗಳನ್ನೂ ಗೊತ್ತುಪಡಿಸಿ ದಿನಾಲು ತಾಲೀಮು ಮಾಡಿಸಿ ಅವರವರ ಕರ್ತವ್ಯಗಳನ್ನು ಅವರವರ ಮನಸ್ಸಿನಲ್ಲಿ ತುಂಬಿಸಿದರೆ ಸ್ವಾಗತಸಂಘದ ಪ್ರೆಸಿಡೆಂಟರಿಗೂ ಸೆಕ್ರೆಟರಿಯವರಿಗೂ ತ್ರಾಸವಿಲ್ಲದೆ ಬಂದ ಪ್ರತಿನಿಧಿ ಪ್ರೇಕ್ಷಕಾದಿ ಅತಿಥಿಗಳಿಗೂ ಸೌಕರ್ಯವಾಗುವದು ಮತ್ತು ಸಭೆಯ ಕಾರ್ಯವು ಸುರಕ್ಷಿತ ಜರಗುವದು. ಈ ಬಗ್ಗೆ ತಾತ್ಸಾರಮಾಡಲಿಕ್ಕಿಲ್ಲೆಂದು ನಂಬಿರುವೆನು.

ಸಭಾಮಂಟಪವನ್ನು ಸೊಲ್ಲಾಪೂರದವರು ಮಹಾಸಭಾಕಾಲಕ್ಕೆ ಶ್ರೀ ಸಿದ್ಧರಾಮೇಶ್ವರ ಕೆರೆಯ ಮಧ್ಯದಲ್ಲಿರುವ ದೇವಾಲಯದ ಎದುರಿನ ಪಟಾಂಗಣದಲ್ಲಿ ಕಬ್ಬಿಣದ ಕಂಭ ಕಮಾನಗಳಿಂದಲೂ ಚಿರಕಾಲಬಾಳುವಂತೆ ಮಾಡಿರುವಂತೆಯೇ ನೀವಾದರೂ ನಮ್ಮ ಶ್ರೀ ಜಗದ್ಗುರು ಸಿದ್ಧೇಶ್ವರಮಠದ ಸ್ವಾಮಿಗಳು ಕೊಡ್ರುವ ಮಹಾಲಿನ ಎದುರಿನಲ್ಲಿಯ ಪಟಾಂಗಣದಲ್ಲಿ ಮಂಟಪದ ಕಬ್ಬಿಣದ ಕಮಾನಸ್ತಂಭಗಳು ಚಿರಕಾಲ ಉಳಿಯುವಂತೆ ಮಾಡಿದರೆ, ಮುಂದೆ ಇಂಥ ಮಹಾಪ್ರಸಂಗ ಬಿದ್ದಾಗ್ಯೆ ಉಪಯೋಗಕ್ಕೆ ಬರುವದು. ಹಾಗಲ್ಲದೆ ಪೆಂಡಾಲನ್ನು ಹಾಕುವದಾದರೆ ಅದರ ಖರ್ಚು ಈಗಿನಷ್ಟಕ್ಕೇ ಉಪಯೋಗಬಿದ್ದು ಮುಂದೆ ಉಪಯೋಗಬೀಳದಂತೆ ಬೇರೆ ಕಡೆಗೆ ಹಾಕಿಸುವದಕ್ಕಿಂತಲೂ ಮಠದ ಪಟಾಂಗಣದಲ್ಲಿಯೇ ಮಾಡುವದು ಉತ್ತಮವು. ಈ ಸ್ಥಳವು ಸೊಲ್ಲಾಪೂರದ ಸಭೆಯ ಪಟಾಂಗಣಕ್ಕಿಂತಲೂ ಸಣ್ಣದೇನೂ ಅಲ್ಲ. ಈ ಸೂಚನೆಯು ಉಚಿತವೆಂದು ತೋರಿದರೆ ಸುಜ್ಞರಾದ ನೀವೆಲ್ಲರೂ ವಿಚಾರಮಾಡಿ ನೆರವೇರಿಸಬೇಕೆಂದು ಸೂಚಿಸಿರುತ್ತೇನೆ. ಮಹಾಸಭೆಯಲ್ಲಿ ಯಾವಯಾವ ವಿಷಯಗಳನ್ನು ಚರ್ಚಿಸಬೇಕೆಂಬುದನ್ನು ನಿರ್ಣಯಿಸಿ ಪ್ರಸಿದ್ಧಪಡಿಸುವದಕ್ಕೆ ಇನ್ನು ಸಾವಕಾಶಮಾಡಬಾರದು. ವಿಷಯಗಳನ್ನು ನೇಮಿಸುವದು ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ ದಿವಾನಬಹಾದ್ದೂರರನ್ನು ರಾವಬಹಾದ್ದೂರ ದೇವಿ ಹೊಸೂರ ಚೆನ್ನಬಸಪ್ಪಾ ಅಣ್ಣಾ ಶೆಟ್ಟರನ್ನು ಸಭಾ ಮೂಲ ಉತ್ಪಾದಕರಲ್ಲಿ ಒಬ್ಬರಾಗಿರುವ ಮ॥ ಸವದತ್ತಿಯ ಮೂಗಪ್ಪಣ್ಣನವರನ್ನೂ ಬರಮಾಡಿಕೊಂಡು ವಿಚಾರಿಸಿ ವಿಷಯಗಳ ನೇಮಿಸಿ ಪತ್ರಿಕೆಗಳನ್ನು ತೀವ್ರವೇ ಹೊರಡಿಸಬೇಕೆಂದು ವಿಜ್ಞಾಪಿಸುತ್ತೇನೆ. ಸ್ಥಳ ಪರಸ್ಥಳದ ತರುಣವಿದ್ಯಾರ್ಥಿಗಳು ಮತ್ತು ಉದ್ಯೋಗ ವ್ಯವಹಾರಮಾಡತಕ್ಕ ತರುಣ ಉಮೇದವಾರರು ವಾಲಂಟೀಯರ ಆಗಲಪೇಕ್ಷಿಸುವವರು ಇದೇ ತಿಂಗಳ ೨೫ ನೇ ತಾರೀಖಿನೊಳಗಾಗಿ ಬಂದು ಸ್ವಾಗತಕಮಿಟಿಯ ಪ್ರೆಸಿಡೆಂಟರಿಗೆ ಭೆಟ್ಟಿಯಾಗಿ ತಮ್ಮ ಹಾಜರೀ ಹಚ್ಚುವಂತೆ ಸೆಕ್ರೆಟರಿಯವರ ಹೆಸರಿನಿಂದ ವರ್ತಮಾನಪತ್ರಗಳಲ್ಲಿ ಪ್ರಸಿದ್ಧಪಡಿಸಬೇಕು. ಮೇಲೆ ಬರೆದ ಎಲ್ಲ ವಿಷಯಗಳನ್ನು ಸ್ವಾಗತಸಂಘದ ಕಮಿಟಿಯ ಜನರಿಗೆ ಬರೆದು ತಿಳುಹಿಸುವಂಥ ವಿಷಯಗಳೇನೂ ಅಲ್ಲ. ಆದರೆ, ತಮ್ಮ ಕೆಲಸ ಬಾಹುಳ್ಯದಲ್ಲಿ ಈ ಸಭೆಯ ಕೆಲಸವು ಮಹತ್ವವಿದ್ದು ದಿವಸಗಳು ತೀವ್ರ ಸಮೀಪಿಸಿರುವವಾದರೂ ಯಾವತರದ ಚಟವಟಿಕೆಯೂ ಕಂಡುಬಾರದ್ದರಿಂದಲೂ, ನಾನೊಬ್ಬನೇ ಈ ಸಭೆಯ ಸೇವಾನುಸೇವಕನಾದದ್ದರಿಂದಲೂ ನನ್ನ ಕರ್ತವ್ಯಕ್ಕನುಸರಿಸಿ ತ್ವರೆಮಾಡುವದಕ್ಕೆ ವಿಜ್ಞಾಪಿಸಿಕೊಂಡಿರುವೆನು. ಹಿಂದಾದ ಪ್ರತಿಯೊಂದು ಸಭೆಯಲ್ಲೂ ಕೃಪಾಸಾಗರ ಕೈಲಾಸವಾಸಿ ನೂರಂದಪ್ಪಣ್ಣಾಶೆಟ್ಟಿ ಅಥಣಿ ಇವರು ಸಭೆಯು ಜರಗುವ ಪ್ರತಿಯೊಂದುಸ್ಥಳಕ್ಕೆ ಒಂದು ತಿಂಗಳ ಮುಂಚಿತವಾಗಿ ಹೋಗಿನಿಂತು ತನುಮನಧನಗಳಿಂದ ಮನಃಪೂರ್ವಕವಾಗಿ ಸಮಾಜಸೇವಾಕಾರ್ಯಕ್ಕೆ ಬೇಸರಿಸದೆ ಸಣ್ಣ ದೊಡ್ಡ ಕೆಲಸವೆನ್ನದೆ ಪೂರ್ವತಯಾರಿಯನ್ನು ಮಾಡುತ್ತಿದ್ದರು. ಆ ಮಹಾಪುರುಷರು ಈ ಕಾಲಕ್ಕೆ ಇಲ್ಲದಿರುವದು ಖೇದಜನಕವಾಗಿರುತ್ತದೆ. ಆದರೆ, ಪ್ರತಿಯೊಬ್ಬ ವೀರಶೈವನೂ ಅವರಂತೆಯೇ ಸಮಾಜಕಾರ್ಯಕ್ಕೆ ನಡುಕಟ್ಟಿ ನಿಂತು ಕೈಲಾಸವಾಸಿಗಳು ಇಲ್ಲದ್ದರಿಂದಾದ ಕೊರತೆಯನ್ನು ಹೋಗಲಾಡಿಸಲು ದೇವರು ಅನೇಕ ವ್ಯಕ್ತಿಗಳಲ್ಲಿ ಅಂಥಾ ಶಕ್ತಿಯನ್ನು ಕೊಡಲೆಂದು ಬೇಡಿಕೊಳ್ಳುವೆನು.

ಬಸಟ್ಟೆಪ್ಪಾ ಬಸಪ್ಪಾ ಮುತ್ತರ ರಬಕವಿ,
ಮಹಾಸಭಾ ಚಿರಸ್ಥಾಯಿಫಂಡಿನ ಮತ್ತು
ಸ್ಟ್ಯಾಂಡಿಂಗ್‌ಕಮಿಟಿಯ ಮೆಂಬರ.

ಅಖಿಲಭಾರತೀಯ ಗೋರಕ್ಷಕಮಂಡಲಾಧ್ಯಕ್ಷರಾದ ಮಹಾತ್ಮ ಮೋಹನದಾಸ್ ಗಾಂಧಿಯವರಿಗೆ ಗೋಸಂರಕ್ಷಣೆಯ ಬಗ್ಗೆ ಕಳುಹಿಸಿದ ಪ್ರಬಂಧದ ಮುಖ್ಯಸಾರಾಂಶವು.

ಲೇಖಕ :—ಶಿವಶಂಕರಪ್ಪ. ಮಧುವಿನಹಳ್ಳಿ.

ಪ್ರಿಯಭಾರತೀಯ ಮಾನವಸಹೋದರರೇ ?

ಜಗದೀಶನಿಂದ ಸೃಷ್ಟಿಸಲ್ಪಟ್ಟಿರುವ ಈ 84 ಲಕ್ಷ ವಿಧವಾದ ಜೀವರಾಶಿಗಳಲ್ಲೆಲ್ಲಾ 'ಉತ್ತಮಂ ಮಾನುಷಂಜನ್ಮ' ಎಂಬ ಮಹದ್ವಚನಾನುಸಾರವಾಗಿ ಮನುಷ್ಯಜನ್ಮವೇ ಶ್ರೇಷ್ಠವೆಂಬುದು ಸಕಲರಿಗೂ ತಿಳಿದಂಶವಾಗಿದೆ. ಹೀಗಿದ್ದರೂ ಹೇಯೋಪಾದೇಯಜ್ಞಾನವುಳ್ಳ ಈ ಮಾನವರು ಅಶಾಶ್ವತವಾದ ದ್ರವ್ಯಸಂಪಾದನೆಗಾಗಿ ಸಕಲ ದೇವತಾಮಯವಾಗಿಯೂ, ಪಾವನಸ್ವರೂಪಿಗಳಾಗಿಯೂ, ಶುಭದರ್ಶನಗಳುಳ್ಳವುಗಳಾಗಿಯೂ, ಪೂಜ್ಯಪ್ರಾಣಿಗಳಾಗಿಯೂ, ಸ್ವಜನ್ಮಮರಣೋಭಯಗಳಿಂದ ವ್ಯರ್ಥವಲ್ಲದವುಗಳಾಗಿಯೂ, ಪರೋಪಕಾರಮಾಡುವುದರಲ್ಲಿ ಅದ್ವಿತೀಯವಾಗಿ ಅತ್ಯಂತ ಶ್ರೇಷ್ಠಪ್ರಾಣಿಗಳಾಗಿಯೂ, ಬಹುಶಾಂತಸ್ಮರಣಿಸ್ವಭಾವಗಳುಳ್ಳವುಗಳಾಗಿಯೂ. ಒಂದುಸಾರಿ ನಮಸ್ಕರಿಸಿದ ಮಾತ್ರದಿಂದಲೇ ಸರ್ವಪಾಪಗಳನ್ನೂ ಪರಿಹರಿಸತಕ್ಕುವಾಗಿಯೂ, ಪೂಜೆಮಾಡಿದ್ದೇ ಆದಲ್ಲಿ ಸರ್ವ ಇಷ್ಟಾರ್ಥಗಳನ್ನೂ ಈಡೇರಿಸತಕ್ಕುವುಗಳಾಗಿಯೂ, ಪೃಥ್ವಿಯಲ್ಲಿ ರಾರಾಜಿಸುತ್ತಾ ಲೋಕೋದ್ಧಾರಕ್ಕಾಗಿ ಧರೆಗೆಬಂದ ದೇವತೆಗಳಂತೆ ಮೆರೆಯುತ್ತಿರುವ ಈ ಮೂಗುಜೀವಿಗಳಾದ ಗೋವು ಮತ್ತು ಬಸವಣ್ಣಗಳನ್ನು ಅಪಾರವಾದ ಕಷ್ಟದಿಂದ ಹಿಂಸಿಸುತ್ತಿರುವರಲ್ಲಾ! ಇಷ್ಟೇ ಅಲ್ಲದೆ ಸ್ವಲ್ಪ ವೃದ್ಧಾಪ್ಯದಶೆಯನ್ನು ಹೊಂದಿತೆಂದರೆ ನಿಷ್ಕರುಣೆಗಳಾಗಿ ಕೊಲ್ಲುವುದಕ್ಕೆ ಕಟುಕರಿಗೆ ಮಾರುತ್ತಿರುವರಲ್ಲಾ!! ಇವುಗಳ ಮಹತ್ವವನ್ನು ಇಷ್ಟೆಂದು ವರ್ಣಿಸುವುದಕ್ಕೆ ಈ ಮಾನವರ ಮಾತಂತಿರಲಿ, ಬ್ರಹ್ಮಾದಿದೇವತೆಗಳೂ, ದ್ವಿಸಹಸ್ರಜಿಹ್ವೆಗಳುಳ್ಳ ಆದಿಶೇಷನೂ ಶಕ್ತರಲ್ಲ. ಏಕೆಂದರೆ, ಈ ಗೋವುಗಳ ಕಾಲುಗಳೊಳಗೆ ಪರಮೇಶ್ವರನೂ, ನಾಲಿಗೆಯಲ್ಲಿ ಶಾರದೆಯೂ, ಹೊಟ್ಟೆಯಲ್ಲಿ ಷಣ್ಮುಖನೂ, ಮುಖದಲ್ಲಿ ಬ್ರಹ್ಮನೂ, ಹುಬ್ಬುಗಳಲ್ಲಿ ದೇವೇಂದ್ರನೂ, ಕಣ್ಣುಗಳಲ್ಲಿ ಸೂರ್ಯಚಂದ್ರರೂ, ಕಿವಿಗಳಲ್ಲಿ ಅಶ್ವಿನೀದೇವತೆಗಳೂ, ಗೊರಸುಗಳಲ್ಲಿ ಶಂಕರನೂ, ರೋಮಕೂಪಗಳಲ್ಲಿ ಋಷಿಗಳೂ, ವಾಸಮಾಡುವರು. ಅವುಗಳ ಹಾಲಿನಲ್ಲಿ ಅಮೃತವೂ ಪಕ್ಕೆಗಳಲ್ಲಿ ಸರ್ವಲೋಕಗಳೂ ಇರುವುವು. ಇನ್ನು ವೃಷಭಗಳೋ ಅಂದರೆ, ಪ್ರಪಂಚದ ಮೂಲಧರ್ಮವೂ, ಸಾಕ್ಷಾತ್ ಪಶುಪತಿಯ ಚಿದಂಶವೂ ಸೇರಿ ವೃಷಭಗಳಾಗಿರುವವೆಂದು ಒಂದೇಮಾತಿನಲ್ಲಿ ಮುಗಿಸಬಹುದು. ಇಷ್ಟೇ ಅಲ್ಲ. ಇವುಗಳಿಂದಲೇ ಈ ಪ್ರಪಂಚವೆಲ್ಲಾ ನಿಂತಿರುವುದು. ಅಂದರೆ, ಈ ಪ್ರಪಂಚಕ್ಕೆ ಇವೇ ಆಧಾರವಾಗಿರುವುವು. ಇಷ್ಟು ಮಹತ್ವವುಳ್ಳವುಗಳಾಗಿದ್ದರೂ ಇವು ನಮ್ಮಗಳ ಮನೆಯಲ್ಲಿ ಸೇವೆಮಾಡುತ್ತಾ ಆಜ್ಞಾಧೀನರಾಗಿದ್ದು ಆಬಾಲವೃದ್ಧರಿಗೂ ಅತ್ಯವಶ್ಯವಾಗಿ ಬೇಕಾದ ಅಮೃತ (ಕ್ಷೀರ) ವನ್ನಿತ್ತು ಹಗಲಿರುಳೆನ್ನದೆ ಬಿಸಿಲುಮಳೆಯೆನ್ನದೆ ಕೆಲಸಮಾಡಿ ಬಡವರನ್ನು ಧನವಂತರನ್ನಾಗಿಮಾಡುತ್ತಾ ಕಾಲಯಾಪನೆಮಾಡುತ್ತಿರುವುವು. ಈ ವಿಚಾರದಲ್ಲಿ ಹಿಂದೆ ಶ್ರೀಮದ್ದಯಾನಂದಸರಸ್ವತಿಯವರು ಸಹ ಸಾಧಾರಣವಾದ ಒಂದು ಗೋವಾದ್ದು ತನ್ನ ಮರಣಾವಧಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮತ್ತು ಗಂಡುಕರುಗಳ ಮೂಲಕ 3,99,760 ಜನಗಳಿಗೆ ಒಂದುಬಾರಿಗೆ ಸಾಕಾಗುವಷ್ಟು ಆಹಾರವನ್ನು ಒದಗಿಸಿಕೊಡುತ್ತದೆಂದೂ, ಮತ್ತು ಒಂದು ಹೋರಿಯು ತನ್ನ ಜೀವಮಾನಕಾಲದಲ್ಲಿ ಕನಿಷ್ಠಪಕ್ಷ 50,000 ಜನಕ್ಕೆ ಒಂದುಬಾರಿಗೆ ಸಾಕುವಷ್ಟು ಆಹಾರವನ್ನು ಭೂಮಿಯಮೂಲಕವಾಗಿ ಒದಗಿಸಿಕೊಡುತ್ತದೆಂದೂ ಲೆಕ್ಕಿಸಿ ವಿವರಿಸಿರುವರು. ಹೀಗಿರುವಲ್ಲಿ ಇವುಗಳನ್ನು ಕೊಲ್ಲುವ ಮತ್ತು ಕೊಲ್ಲಲು ಮಾರುವ ಮಾನವರಿಗೆ ಅದೆಂತಹ ಪಾಪಸಂಘವಿಸಬಹುದು. ಈ ವಿಚಾರದಲ್ಲಿ ಮಹಾಭಾರತದಲ್ಲಿ—

ಶ್ಲೋಕ ॥ ಯಾವಂತಿ ಪಶುರೋಮಾಣಿ ಪಶುಗಾತ್ರೇಷುಭಾರತ ।
ತಾವದ್ವರ್ಷ ಸಹಸ್ರಾಣಿ ಪತಂತಿನರಕೇಷುಚ ॥

ಅಂದರೆ, "ಯಾವನು ಯಾವ ಪ್ರಾಣಿಯನ್ನು ಹಿಂಸಿಸಿ ಹತಮಾಡುವನೋ ಅವನು ಆ ಪ್ರಾಣಿಯ ಶರೀರದಮೇಲಿರುವ ರೋಮಗಳಷ್ಟು ಸಹಸ್ರವರ್ಷ ನರಕಯಾತನೆಯನ್ನು ಹೊಂದುತ್ತಾನೆ" ಎಂದು ಹೇಳಿರುವುದು. ಈ ಪ್ರಾಣಿವಧೆಯು ಪರದೇಶದಲ್ಲಿ ನಡೆಯುವುದೆಂಬ ಮಾತಂತಿರಲಿ. ಯಾವದೇಶವು ಸಿರಿಸಂಪತ್ತುಗಳಿಂದ ತುಂಬಿ ಲಕ್ಷ್ಮಿಗೆ ನಿವಾಸಸ್ಥಾನವಾಗಿ, ದೇವಾಧಿದೇವತೆಗಳ ಅವತಾರಸ್ಥಳವಾಗಿ, 'ಭೂಲೋಕದಲ್ಲಿ ಎಲ್ಲಿಯಾದರೂ ಸ್ವರ್ಗವಿದ್ದರೆ ಇಂಡಿಯಾದೇಶದಲ್ಲೇ ಇರುವುದು' ಎಂಬದಾಗಿ ಯುರೋಪರೇ ಮೊದಲಾದ ಪಾಶ್ಚಾತ್ಯರುಗಳಿಂದಲೂ ಹೊಗಳಿಸಿಕೊಳ್ಳುತ್ತಾ ಇರುವುದೋ ಮತ್ತು ಯಾವ ದೇಶದಲ್ಲಿ ಹಿಂದೆ ಚತುರ್ವಿಧವರ್ಣಾಶ್ರಮದವರೂ ಈ ಗೋವು ಬಸವಣ್ಣಗಳನ್ನು ದೇವರೆಂದುಭಾವಿಸಿ ಪೂಜೆಮಾಡುತ್ತಿದ್ದರೋ ಅಂಥಾ ಈ ಭರತಖಂಡ (ಇಂಡಿಯಾದೇಶ) ದಲ್ಲಿ ಈಗ ವರ್ಷ ಒಂದಕ್ಕೆ 54 ಲಕ್ಷ ಈ ಮೂಗುಜೀವಿಗಳು ಕಟುಕರ ಕೈಕತ್ತಿಗೆ ಆಹುತಿಯಾಗುತ್ತಿರುವುವು. ಇಷ್ಟೇ ಅಲ್ಲದೆ 34 ಲಕ್ಷ ಪ್ರಾಣಿಗಳು ಪ್ರತಿವರ್ಷವೂ ಪರದೇಶಗಳಿಗೆ ಕೊಲ್ಲುವುದಕ್ಕೆ ಕಳುಹಲ್ಪಡುತ್ತಿರುವುವು. ಬೊಂಬಾಯಿಯ ಹತ್ತಿರದಲ್ಲಿರುವ ಭಾಂದ್ರ ಎಂಬಲ್ಲಿ ಒಂದು ಅತ್ಯಾಶ್ಚರ್ಯಕರವಾದ ಯಂತ್ರವನ್ನಿಟ್ಟಿರುವರು. ಆ ಯಂತ್ರವು ಪ್ರತಿದಿನವೂ 200 ಗೋವುಗಳನ್ನೂ 75 ಎಮ್ಮೆಗಳನ್ನೂ ಲೆಕ್ಕವಿಲ್ಲದಷ್ಟು ಕರುಗಳನ್ನೂ ಕೊಲ್ಲುತ್ತಿರುವುದು. ಇದೇಕೆನ್ನುವಿರೋ? ಅಲ್ಲಿ ಇವುಗಳ ರಕ್ತವನ್ನು ಕಾಯಿಸಿ ಡಬ್ಬಿಗಳಲ್ಲಿ ತುಂಬಿ ಜಾನ್‌ಸನ್‌ಸಕ್ಕರೆಯನ್ನು (ಪರದೇಶಿ ಸಕ್ಕರೆಯನ್ನು) ಶುದ್ಧಮಾಡುವುದಕ್ಕಾಗಿ ಪರದೇಶಗಳಿಗೆ ಕಳುಹಿಸುವರು. ಕೊಬ್ಬು ಗಿರಣಿಯ ಬಟ್ಟೆಗಳನ್ನು ನಯವಾಗಿಮಾಡುವುದಕ್ಕಾಗಿ ದೊಡ್ಡದೊಡ್ಡ ಮಿಲ್ಲುಗಳಿಗೆ ಕಳುಹಿಸಲ್ಪಡುತ್ತಿರುವುದು. ಮದ್ರಾಸ್ ಅಧಿಪತ್ಯ ಒಂದರಲ್ಲಿಯೇ ಪ್ರತಿದಿನವೂ ನೂರಾರು ಗೋವುಗಳಿಗೆ ಕಮ್ಮಿ ಇಲ್ಲದೆ ಹತವಾಗುತ್ತಿರುವುವು. ಹೀಗಿರುವುದರಿಂದಲೇ ಇವುಗಳಿಂದ ಜನರಿಗೆ ಲಭಿಸುತ್ತಿದ್ದ ಲಕ್ಷಾಂತರಜನರ ಆಹಾರಧಾನ್ಯವು ಕಡಮೆಯಾಗಿ ಎಷ್ಟು ಮಳೆಬಂದರೂ ಆಹಾರವಸ್ತುಗಳ ಧಾರಣೆಯು ಕಡಮೆಯಾಗದೇನೆ ಇದೆ. ಈ ಮೂಲಕಾರಣವನ್ನರಿಯದೆ "ಈಗ್ಗೆ ಹತ್ತಿಪ್ಪತ್ತು ವರ್ಷಗಳಿಂದಲೂ ಪೀಡಿಸುತ್ತಿರುವ ಈ ಮಹಾಕ್ಷಾಮವು ಇನ್ನೆಂದಿಗೆ ತೊಲಗುವುದೋ ಎಂದು ಎಲ್ಲರೂ ಚಿಂತಿಸುತ್ತಿರುವರು. ಆದರೆ "ಲತಾಯಾಂ ಪೂರ್ವಲೂನಾಯಾಂ ಪ್ರಸೂನಸ್ಯೋದ್ಭವಃಕುತಃ" ಎಂಬಂತೆಯೂ, "ನಷ್ಟೇಮೂಲೇನೈವಫಲಂನಪುಷ್ಪಂ" ಎಂಬಂತೆಯೂ ಇರುವ ಈ ಪ್ರಮಾಣಾನುಸಾರವಾಗಿ ವೃಕ್ಷದಮೂಲವನ್ನೇ ಕಡಿದು ಫಲಪುಷ್ಪಗಳನ್ನು ಕೋರುವವರ ಹಾಗೆ ಕ್ಷಾಮಕ್ಕೆ ಮೂಲಕಾರಣವಾದ ಪ್ರಾಣಿವಧೆಯನ್ನು ಮಾಡುತ್ತಲೇ ಇದ್ದು ಅದರ ನಿವಾರಣೆಯನ್ನು ಹಾರೈಸುವುದು ಅದೆಂತಹ ಮತಿಗೆಟ್ಟ ವಚನವೋ ಯೋಚಿಸಿರಿ. ಆದ್ದರಿಂದ ಪ್ರಾಣಿಹಿಂಸೆಯೇ ಮಾನವರು ಅಧೋಗತಿ ಹೊಂದುವುದಕ್ಕೆ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಹೀಗಿರುವುದರಿಂದಲೇ ವೇದಗಳೂ ಕೂಡ "ಅಹಿಂಸಾಪರಮೋಧರ್ಮಃ, ಅಧರ್ಮಃ ಪ್ರಾಣಿನಾಂವಧಃ" ಅಂದರೆ, ಅಹಿಂಸೆಗಿಂತ ಶ್ರೇಷ್ಠವಾದ ಧರ್ಮವಿಲ್ಲ, ಹಿಂಸೆಗಿಂತ ಬೇರೆ ಅಧರ್ಮವಿಲ್ಲ ಎಂಬದಾಗಿ ಘಂಟಾಘೋಷವಾಗಿ ಸಾರುತ್ತಿರುವುವು. ಮತ್ತು "ಸರ್ವಯಜ್ಞೇಷುಯದ್ದಾನಂ । ಸರ್ವತೀರ್ಥೇಷುಯತ್ಫಲಂ ॥ ಸರ್ವದಾನಫಲಂವಾಪಿ । ತನ್ನತುಲ್ಯಮಹಿಂಸಯಾ ॥" ಅಂದರೆ, "ಅಶ್ವಮೇಧಾದಿ ಯಾಗಗಳಲ್ಲಿ ಯಾವ ದಾನಫಲವಿರುವುದೋ, ಸಪ್ತಸಾಗರತೀರ್ಥಸ್ನಾನಗಳಲ್ಲಿ ಏನು ಫಲವಿರುವುದೋ, ಗೋದಾನಾದಿ ಷೋಡಶಮಹಾದಾನಗಳಲ್ಲಿ ಯಾವ ಫಲವಿರುವುದೋ ಅದೆಲ್ಲವೂ ಅಹಿಂಸೆಯ ಕೋಟಿಫಲಗಳಲ್ಲಿ ಒಂದಾಗಲಾರದು, ಅರ್ಥಾತ್ ಅಹಿಂಸೆಯಿಂದ ಲಭಿಸುವ ಫಲದ ಕೋಟಿಯ ಅಂಶವೂ ಆಗಲಾರದು" ಎಂದು ಪೂರ್ವಜಮುನಿವರ್ಯರು ವಿವರಿಸಿರುವರು. ಹೀಗೆ ಈ ಅಹಿಂಸಾಮಹತ್ವವನ್ನೂ ಗೋಮಾತೆಯಾದಿಯಾದ ಮೂಗುಜೀವಿಗಳ ಮಹತ್ವವನ್ನೂ ವಿವರಿಸಿಯೇ ವೇದಗಳೂ ಕೂಡ ಅತ್ಯಧಿಕವಾಗಿ ಪೂಜ್ಯತೆಯನ್ನು ಹೊಂದಿರುವುವು. ಭಾರತವು ಈ ವಿಚಾರವನ್ನೇ ಬಣ್ಣಿಸಿ "ಭಾರತಃಪಂಚಮೋವೇದಃ" ಎಂದು ಹೇಳಿಸಿಕೊಂಡಿರುವುದು. ಇಷ್ಟೇ ಅಲ್ಲದೆ ಈ ಅಹಿಂಸಾ ಮತ್ತು ಗೋಸಂರಕ್ಷಣೆಯ ಫಲವನ್ನು ವರ್ಣಿಸಿವರ್ಣಿಸಿ ನಾರದಾದಿಪೂಜ್ಯಪಾದರಾದ ಮಹರ್ಷಿಗಳೂ ಶ್ರೀಬುದ್ಧದೇವನೂ ಜಗದ್ವಿಖ್ಯಾತರಾದರು. ಈ ವಿಚಾರಗಳನ್ನು ವರ್ಣಿಸಿ ಬಣ್ಣಿಸಿಯೇ ಶ್ರೀಕೃಷ್ಣ, ಭೀಷ್ಮ ಮೊದಲಾದವರೂ ತ್ರಿಲೋಕವಿಖ್ಯಾತರಾಗಿ ದಂಡನಾರ್ಹರಾದರು. ಹೀಗಿದ್ದರೂ ನಮ್ಮ ಮಾನವರಲ್ಲನೇಕರು ಅನುದಿನವೂ ಪ್ರಾಣಿವಧ ಪ್ರವರ್ತಕರಾಗಿ ಮಾಂಸಭಕ್ಷಕರಾಗಿ ತಾವೇ ತಾವಾಗಿ ಮೆರೆಯುತ್ತಿರುವರು. ಈ ಮಾಂಸಾಹಾರ ವಿಚಾರದಲ್ಲಿ "ಮಾಂಸಾಶೀಚಣಿತಾಚರಃ" ಅಂದರೆ, ಪ್ರಾಣಿಗಳನ್ನು ಕೊಂದು ತಿನ್ನುವವರು ಮಾನವರೂಪೀ ರಾಕ್ಷಸರೆಂದು ನಾರಾಯಣಸ್ಮೃತಿಯು ಭೇರಿನಾದದಂತೆ ಹೇಳುತ್ತಿರುವುದು. ಮತ್ತು ಪೂರ್ವದಲ್ಲಿ ಧರ್ಮರಾಜನು ದೇವಗುರುವಾದ ಬೃಹಸ್ಪತ್ಯಾಚಾರ್ಯರನ್ನು ಕುರಿತು ಧರ್ಮ (ಪುಣ್ಯ) ದ ವಿಚಾರವಾಗಿ ಪ್ರಶ್ನಿಸಲು "ನೂರುವರ್ಷಗಳು ಕ್ರಮವಾಗಿ ತಪಸ್ಸುಮಾಡುವುದೂ, ಮಾಂಸವನ್ನು ತಿನ್ನದೆ ಬಿಡುವುದೂ ಸಮಾನ ಪುಣ್ಯಗಳೆಂದು ವಿವರಿಸಿರುವರು. ಅಲ್ಲದ ಅಖಂಡಬ್ರಹ್ಮಚಾರಿಯಾಗಿದ್ದು ಸ್ವೇಚ್ಛಾಮರಣಶಕ್ತಿಯನ್ನು ಪಡೆದ ಭೀಷ್ಮರೂ ಕೂಡ "ತಪಸ್ಸಿನಿಂದಲೂ, ದಾನದಿಂದಲೂ ಬ್ರಹ್ಮಲೋಕಪ್ರಾಪ್ತಿಯಾಗುವುದು ಅಸಾಧ್ಯವಾದರೂ ಮಾಂಸವನ್ನು ತಿನ್ನದೇ ಬಿಟ್ಟ ಪುಣ್ಯಾತ್ಮನಿಗೆ ಆ ಲೋಕವು ಲಭಿಸುವುದು ಬಹಳ ಸುಲಭವೆಂದು ಅನೇಕ ಧರ್ಮಸೂಕ್ಷ್ಮಗಳನ್ನು ಉದಾಹರಿಸಿ ಧರ್ಮರಾಜನಿಗೆ ನಿರೂಪಿಸಿರುವರು. ಆದ್ದರಿಂದ ಮಾಂಸಾಹಾರವು ತುಂಬಾ ಪಾಪಕರವೆಂದೂ ನರಕಕ್ಕೆ ಹೋಗುವ ಮಾರ್ಗವನ್ನು ತಿಳಿಸತಕ್ಕುದೆಂದೂ ನಿಸ್ಸಂದೇಹವಾಗಿ ಹೇಳಬಹುದು. ಆದರೆ ಒಂದು ಹಣಗಿನ್ನಲ್ಲಿರುವ ಜನಗಳ ಕೈಕೆ ಯಾರೇ ಆಗಲಿ ಆ ಹಣಗೆ ಅಪಾಯವನ್ನು ಮಾಡಿದರೂ ಆ ಕೇಡು ಆ ಹಡಗಿನಲ್ಲಿರುವವರಿಗೆಲ್ಲಾ ಹೇಗೆ ಸಂಭವಿಸುವುದೋ ಹಾಗೆಯೇ ಪ್ರಪಂಚವೆಂಬ ಈ ಹಡಗಿನಲ್ಲಿ ಸದಾಚಾರಿಗಳೂ ದುರಾಚಾರಿಗಳೂ ವಾಸಮಾಡುತ್ತಿರುವುದರಿಂದ ದುರಾಚಾರಿಗಳಿಂದ ಸಂಭವಿಸಿದ ವಿಪತ್ತನ್ನು ಸದಾಚಾರಿಗಳೂ ಅನುಭವಿಸಬೇಕಾಗುತ್ತದೆ. ಆದ್ದರಿಂದ ಓ ಮಹನೀಯರಿರಾ! ಈ ಲಾಗಾಯತು ಗೋಹತ್ಯವನ್ನು ಮಾಡದೇ ಇದ್ದು ಮತ್ತು ಅಂತಕಸಮಾನರಾದ ಕಟುಕರಿಗೆ ಈ ಮೂಗಪ್ರಾಣಿಗಳನ್ನು ಮಾರಕೂಡದೆಂದು ನಿಬಂಧನೆಯನ್ನು ಮಾಡಿ ಅಲ್ಲಲ್ಲಿ ಗೋಸಂರಕ್ಷಣೆಯ ಶಾಲೆಗಳನ್ನು ಸ್ಥಾಪಿಸಿ ಅಲ್ಲಿ ಒಮ್ಮನಸ್ಸಿನಿಂದ ಎಲ್ಲರೂ ಪ್ರಾಣಿಸಂರಕ್ಷಣೆಯ ಕಾರ್ಯದಲ್ಲಿ ನಿರತರಾಗಿರಿ! ಈ ಶುಭಕಾರ್ಯದಿಂದ ಬಹಳಮಟ್ಟಿಗೆ ರೋಗೋಪದ್ರವಗಳು ಕಡಮೆಯಾಗುವುವು. ಮಂಕಾಗಿರುವ ಲೋಕಕ್ಕೆಲ್ಲಾ ಕಳೆಯೇರುವುದು. ಜನಗಳಲ್ಲಿ ಪರಸ್ಪರ ದ್ವೇಷಾಸೂಯೆಗಳು ತೊಲಗಿ ಐಕಮತ್ಯವೆಂಬುದು ಅಭಿವೃದ್ಧಿಹೊಂದಿ ನಾವು ಬಯಸುತ್ತಿರುವ "ಸ್ವರಾಜ್ಯ" ವೆಂಬುದು ಕ್ಷಿಪ್ರದಲ್ಲೇ ಕೈಸೇರುವುದು. ಇಷ್ಟೇ ಅಲ್ಲದೆ "ಅಹಿಂಸಾಂ ಪ್ರತಿಷ್ಠಾಯಾಂ । ತತ್ಸವಿಧೋವೈರತ್ಯಾಗಃ ॥" ಅಂದರೆ, ಯಾರ ಹೃದಯದಲ್ಲಿ ಅಹಿಂಸೆಯು ಸ್ಥಿರವಾಗಿರುವುದೋ ಅವರ ಸನ್ನಿಧಿಯಲ್ಲಿ ಘೋರವಾದ ಹುಲಿಗಳೂ, ಸಿಂಹಗಳೂ, ಕ್ರೂರಸರ್ಪ ಮುಂತಾದ ಪ್ರಾಣಿಗಳೂ ಕೂಡ ವೈರವನ್ನು ಬಿಟ್ಟು ಸ್ನೇಹಭಾವದಿಂದಿರುವುವು. ಎಂಬ ಪತಂಜಲಿ ಯೋಗಸೂತ್ರದಂತೆ ಕ್ರೂರಪ್ರಾಣಿಗಳೆಲ್ಲಾ ಸಾಧುಗಳಾಗಿ ವರ್ತಿಸುವುವು. ಆದುಕಾರಣ ಸಮಸ್ತ ದೇಶಬಾಂಧವರೂ ಅಹಿಂಸಾಧರ್ಮಾವಲಂಬಿಗಳಾಗಿ ಗೋಮಾತೆಯ ಕೃಪಾಪಾತ್ರರಾಗುವುದರ ಮೂಲಕ ಪಶುಪತಿಯ ಪೂರ್ಣಕಟಾಕ್ಷಕ್ಕೆ ಪಾತ್ರರಾಗುವರೆಂದುನಂಬಿ ಗೋಸಂರಕ್ಷಣಾಪ್ರವರ್ತಕರಾದ ಮಹನೀಯರುಗಳಿಗು ಮತ್ತು ಈ ಲೇಖಕ್ಕೆ ತಮ್ಮ ಪತ್ರಿಕೆಯಲ್ಲಿ ಅವಕಾಶಕೊಟ್ಟು ಪ್ರಕಟಿಸಿದ ಈ ಸ್ಟಾರ್‌ಪತ್ರಿಕಾಸಂಪಾದಕರಿಗೂ ಬಾಲಕನಾದ ನನ್ನ ಅನಂತವಂದನೆಗಳನ್ನು ಸಮರ್ಪಿಸಿ ಇದನ್ನು ವಿರಮಿಸುತ್ತೇನೆ.

ಹಾಸನದಲ್ಲಿ ನಡೆದ ಚಿತ್ರದುರ್ಗದ ಶ್ರೀಮನ್ಮಹಾನಿರಂಜನ ಜಗದ್ಗುರುಜಯದೇವಮುರುಘರಾಜೇಂದ್ರಮಹಾಸ್ವಾಮಿಗಳವರ ದಿವ್ಯಾಗಮನಮಹೋತ್ಸವ.

ಶ್ರೀಮಹಾಸ್ವಾಮಿಗಳವರ ಬಾಸಾಸ್ವಾರಿಯು ಅರಸೀಕೆರೆಯಿಂದ ಹಾರ್ನಹಳ್ಳಿಯ ಮಾರ್ಗವಾಗಿ ತಾ॥ 26-10-1926 ನೇ ಮಂಗಳವಾರ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಈ ಊರಿಗೆ ದಯೆಮಾಡಿಸಿತು. ಘನಹೊಂದಿದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಆರ್ಡರುಪ್ರಕಾರ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಪೋಲೀಸುಶಾಖಾಮುಖ್ಯಾಧಿಕಾರಿಗಳು ಕ್ರಮವಾದ ಸಿಬ್ಬಂದಿಯೊಡನೆ ನಿಯತವಾದ ಸ್ಥಳದಲ್ಲಿ ನಿರೀಕ್ಷಿಸಿಕೊಂಡು ಮಾಡಿದ ಏರ್ಪಾಡುಗಳು ಬಹಳ ಚೆನ್ನಾಗಿದ್ದುವು. ಶ್ರೀಗಳವರ ಸ್ವಾರಿಯು ಪುರಪ್ರವೇಶಕ್ಕೆ ಪಕ್ರಮವಾದ ಕೂಡಲೆ ಈ ಊರು ಕೃಷ್ಣರಾಜಮೊಹಲ್ಲಾ ಎಕ್ಸ್‌ಟೆನ್ಷನ್ ಚೌಕದಬಳಿ ಟವನ್ ಮ್ಯುನಿಸಿಪಲ್ ಇಲಾಖೆಯಿಂದ ತಯಾರಾಗಿದ್ದ ಚಪ್ಪರಕ್ಕೆ ದಯೆಮಾಡಿಸುವದನ್ನು ನಿರೀಕ್ಷಿಸಿಕೊಂಡಿದ್ದ ಟೌನ್ ಮ್ಯುನಿಸಿಪಲ್ ಪ್ರೆಸಿಡೆಂಟರು, ಸರ್ಕಾರದ ಮುಖ್ಯಾಧಿಕಾರಿಗಳು ಅಡ್ವೊಕೇಟರು, ಪ್ಲೀಡರುಗಳು, ವಿದ್ವನ್ಮಣಿಗಳು, ವೇದಮೂರ್ತಿಗಳು, ಮ್ಯುನಿಸಿಪಲ್ ಕೌನ್ಸಿಲರ್‌ಗಳು, ಪುರಪ್ರಮುಖರಾದ ಸಕಲ ಮತೀಯರು, ಗ್ರಾಮದ ಪಟೇಲರವರು, ಪೇಟೆ ಶೆಟ್ಟರು ಯಜಮಾನರು ಮುಂತಾದ ವೈವದವರು ಸಹ ಶ್ರೀಗಳವರ ಸುಖಾಗಮನವನ್ನು ಬಯಸಿ, ಅಸಾಧಾರಣವಿಶ್ವಾಸಪ್ರದರ್ಶಕವಾದ ಫಲಪುಷ್ಪಾದಿಗಳನ್ನು ಟವನ್ ಮ್ಯುನಿಸಿಪಲ್ ಪ್ರೆಸಿಡೆಂಟರೊಪ್ಪಿಸಿದನಂತರ ಸರ್ವರೂ ಸಮರ್ಪಿಸಿದರು. ಶ್ರೀಗಳವರು ಸರ್ವರಿಗೂ ದರ್ಶನವನ್ನಿತ್ತು, ಕುಶಲಪ್ರಶ್ನಾನಂತರ ಮಂಗಲೋಕ್ತಿಯನ್ನಪ್ಪಣೆಮಾಡಿಸಿ ಸರ್ವಾಲಂಕೃತದಿಂ ಸಿದ್ಧವಾಗಿದ್ದ ದಿವ್ಯಾಂದೋಳನವನ್ನು ಆರೋಹಣಮಾಡಿದರು. ಮಹೋತ್ಸವಕ್ಕೆ ಅಂಗವಾಗಿದ್ದ ಸಕಲ ಬಿರುದಾವಳಿಗಳೂ, ನಾನಾವಿಧವಾದ್ಯಗಳೂ, ಮಂಗಲಧ್ವಜಪತಾಕೆಗಳೂ, ದಿವ್ಯವಾದ ಚತುರಂಗಬಲವೂ ಸ್ಥಳಪರಸ್ಥಳಗಳಿಂದ ಅಸಂಖ್ಯಾತವಾಗಿನೆರೆದಿದ್ದ ಪ್ರೇಕ್ಷಕರ ಕಣ್ಮನಗಳನ್ನು ಸೆಳೆಯುತ್ತಿದ್ದವು. ಈ ಮಹಾವೈಭವದೊಡನೆ ಉತ್ಸವವು ರಾಜವೀಧಿಯಲ್ಲಿ ಬರುತ್ತಿರುವಾಗ್ಗೆ ಘನಹೊಂದಿದ ಈ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರಿಂದೊಪ್ಪಿಸಲ್ಪಟ್ಟ ಫಲಪುಷ್ಪಾದಿಗಳನ್ನು ಶ್ರೀಗಳವರು ಆತ್ಮಾನಂದದಿಂದ ಸ್ವೀಕರಿಸಿ, ಅವರ ಶ್ರೇಯೋಭಿವೃದ್ಧಿಯನ್ನು ಹಾರೈಸಿ, ಮುಂದಕ್ಕೆ ಹೊರಟು ಮ್ಯುನಿಸಿಪಲ್ ಆಫೀಸ್‌ಬಳಿ ಹಾಕಿಸಿದ್ದ ಚಪ್ಪರಕ್ಕೆ ಆಗಮಿಸಿದ ಕೂಡಲೆ ಟವನ್ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರು ಫಲಪುಷ್ಪಾದಿಗಳನ್ನರ್ಪಿಸಿದರು. ಶ್ರೀಗಳವರು ಸ್ವೀಕರಿಸಿ ಮುಂದಕ್ಕೆ ದಯೆಮಾಡಿಸುವಲ್ಲಿ ಸುಪ್ರಸಿದ್ಧರಾದ ಅಡ್ವೊಕೇಟ್ ರಂಗಸ್ವಾಮಿಯವರು ತಮ್ಮ ಸತ್ರದ ಬಳಿಗೆ ಸ್ವಾರಿಯು ಆಗಮಿಸುವದನ್ನೇ ನಿರೀಕ್ಷಿಸಿಕೊಂಡಿದ್ದು ಶ್ರೀಗಳವರ ಸುಖಾಗಮನಪ್ರಸಂಗಾನಂತರ ರಜತಪಾತ್ರೆಯೊಡನೆ ಫಲಪುಷ್ಪಾದಿಗಳನ್ನು ವಿಶ್ವಾಸಪುರಸ್ಸರವಾಗಿ ಸಮರ್ಪಿಸಿದರು. ಶ್ರೀಗಳವರು ಸ್ವೀಕರಿಸಿ, ಇವರ ಶ್ರೇಯೋಭಿವೃದ್ಧಿಯನ್ನು ಕುರಿತು ಯುಕ್ತವಾದ ಭಾಷಣಮಾಡಿ, ಅಡ್ವೊಕೇಟರವರ ಪ್ರಾರ್ಥನಾಪ್ರಕಾರ ಅವರ ಪಿತಾಮಹರಿಂದ ಪ್ರತಿಷ್ಠಿತಮಾಗಿದ್ದ ಶ್ರೀಮಲ್ಲಿಕಾರ್ಜುನದೇವಾಲಯಕ್ಕೆ ಮಹೋತ್ಸವ ಪೂರೈಸಿದನಂತರ ದಯೆಮಾಡಿಸಲು ವಚನವನ್ನಿತ್ತು ಅಲ್ಲಿಂದ ಗುಂಡಾಭಕ್ತರು ಹಾಕಿಸಿದ್ದ ಚಪ್ಪರಕ್ಕೆ ದಯೆಮಾಡಿ, ಆ ಸಮಾಜದವರಿಂದ ಭಕ್ತಿಪುರಸ್ಸರವಾಗಿ ಸಮರ್ಪಿಸಿದ ಫಲಾದಿಗಳನ್ನು ಅಂಗೀಕರಿಸಿ, ಅವರಿಗೆ ಆಶೀರ್ವಾದವನ್ನಿತ್ತು, ಅಂಗಡಿಬೀದಿಯಲ್ಲಿ ಮಹಮ್ಮದೀಯರು ವಿಶ್ವಾಸಪೂರ್ವಕವಾಗಿ ಹಾಕಿಸಿದ್ದ ಚಪ್ಪರಕ್ಕೂ ಉತ್ಸವವು ದಯೆಮಾಡಿತು. ಅಲ್ಲಿ ಮಹಮ್ಮದೀಯರು ಸಮರ್ಪಿಸಿದ ಫಲಾದಿಗಳನ್ನೂ ಅಡ್ರೆಸ್ಸನ್ನೂ ಶ್ರೀಗಳವರು ಆತ್ಮಾನಂದದಿಂದ ಅಂಗೀಕರಿಸಿ ಐಕಮತ್ಯದಿಂದ ಸರ್ವಸುಖವು ಪ್ರಾಪ್ತಿಯಾಗುವುದೆಂದಪ್ಪಣೆಯನ್ನಿತ್ತು, ಅಲ್ಲಿಂದ ಶ್ರೀಸಿದ್ಧೇಶ್ವರಸ್ವಾಮಿದೇವಾಲಯದಬಳಿ ಪಟೇಲ್ ಸಿದ್ದೇಗೌಡರು ಹಾಕಿಸಿದ್ದ ಚಪ್ಪರಕ್ಕೆ ದಯೆಮಾಡಿ ಫಲಾದಿಗಳನ್ನು ಅಂಗೀಕರಿಸಿ, ಅವರಿಗೆ ಕೃಪಾಶೀರ್ವಾದವನ್ನಿತ್ತು, ಅಲ್ಲಿಂದ ದೊಡ್ಡಬಾಗಲು ಮಾರ್ಗವಾಗಿ ಹೊಸಲೈನ್‌ಗೆ ಹೊರಟು ಅಮಾರ್ ಮೊಹಲ್ಲಾ ಮಹಮ್ಮದೀಯರ ಚಪ್ಪರಕ್ಕೆ ಚಿತ್ತೈಸಿ ಅವರಿಂದ ಅರ್ಪಿಸಲ್ಪಟ್ಟ ಅಡ್ರೆಸ್ ಮತ್ತು ಫಲಪುಷ್ಪಾದಿಗಳನ್ನು ಸ್ವೀಕರಿಸಿ, ಕಾಲೋಚಿತವಾದ ಭಾಷಣವನ್ನಪ್ಪಣೆಮಾಡಿ, ಹೊಸಲೈನ್‌ಚೌಕದಲ್ಲಿ ಭಂಡಾರಿಗಳು ಹಾಕಿಸಿದ್ದ ಚಪ್ಪರಕ್ಕೆ ದಯೆಮಾಡಿ ಅವರನ್ನನುಗ್ರಹಿಸಿ. ಅಲ್ಲಿಂದ ಪಲ್ಲೇದ ನಾಗಪ್ಪನವರು, ಬೆಳಗೋಡು ಹೊಸಮನೆ ಮುಪ್ಪಿನಪ್ಪನವರು, ದಿನಸಿಮಂಡಿ ಸೋಮಯ್ಯನವರು, ಜ್ಯೋತಿಷಣದವರು, ಹಾಕಿಸಿದ್ದ ಚಪ್ಪರಗಳಲ್ಲಿ ಭಕ್ತಿಯುಕ್ತವಾಗಿ ಸಮರ್ಪಿಸಲ್ಪಟ್ಟ ಫಲಾದಿಗಳನ್ನು ಸ್ವೀಕರಿಸಿ, ಸರ್ವರಿಗೂ ಆಶೀರ್ವಾದವನ್ನಿತ್ತು, ಅಲ್ಲಿಂದ ಅರಳೇಪೇಟೆಗೆ ಹೊರಟು ಹಿರಿಯಾಳು ಕರಿಬಸಪ್ಪನವರು, ಪಿ. ರುದ್ರಪ್ಪನವರು, ಬಿ. ಸಿದ್ಧಪ್ಪನವರು, ಮರಾಠಜನಗಳು ಸಹ ಹಾಕಿಸಿದ್ದ ಚಪ್ಪರಗಳಿಗೂ ದಯೆಮಾಡಿ ಸರ್ವರಿಂದಲೂ ಸಮರ್ಪಿಸಿದ ಫಲಪುಷ್ಪ ನೀರಾಜನಾದಿಗಳಂ ಅಂಗೀಕರಿಸಿ, ದರ್ಶನಾಶೀರ್ವಾದವನ್ನಿತ್ತು ಅಲ್ಲಿಂದ ಹಿಂದಿರುಗಿ, ಈ ಊರು ಅರಳೇಪೇಟೆ ಸಾಹುಕಾರ್ ಮಹದೇವಪ್ಪನವರು ರಚಿಸಿದ್ದ ದರ್ಬಾರು ಚಪ್ಪರಕ್ಕೆ ಸ್ವಾರಿಯು ಚಿತ್ತೈಸಿ ಪಲ್ಲಕ್ಕಿಯಿಂದಿಳಿದು ಸಭಾಮಂಟಪದಲ್ಲಿ ರಚಿತವಾಗಿದ್ದ ರತ್ನಸಿಂಹಾಸನದಲ್ಲಿ ಮಂಡಿಸಿದ [illegible] [illegible]

ಗಳಿಂದ ವೇದಘೋಷವು ಮಾಡಲ್ಪಟ್ಟಿತು. ಶ್ರೀಮಠದ ಸರ್ವಾಧಿಕಾರಿಗಳಾದ ಲಿಂಗಪ್ಪನವರು ಈ ಮಹಾಪೀಠದ ವಿಚಾರವನ್ನೂ, ಶ್ರೀಗಳವರು ಪಟ್ಟಾಧಿಕಾರವನ್ನು ಸ್ವೀಕರಿಸಿದ ಲಾಗಾಯತು ಅಸಾಧಾರಣತ್ಯಾಗವನ್ನುವಹಿಸಿ, ದೇಶಪರ್ಯಟನಮಾಡಿ, ಅಲ್ಲಲ್ಲಿ ನೆಲೆಗೊಂಡಿದ್ದ ಅವಿದ್ಯಾಂಧಕಾರವನ್ನು ಅಸಂಖ್ಯಾತವಾದ ಧನವ್ಯಯದಿಂದ ಹೋಗಲಾಡಿಸುತ್ತಾ ಬಂದಂತೆಯೇ ಈ ಗ್ರಾಮಕ್ಕೆ ಸವಾರಿಯು ದಯಮಾಡಿತೆಂಬ ವಿಷಯವನ್ನೂ ಇದಕ್ಕಾಗಿ ಸಕಲ ಭಕ್ತಾದಿಗಳೂ ಉದಾರವಾಗಿ ಮಹತ್ತಾದ ಸೇವಾ ನಡೆಯಿಸಬೇಕೆಂಬ ಅಂಶವು ಸಕಲಮತೀಯರಿಗೂ ಗೋಚರವಾದ ಕೂಡಲೆ ಏಕಮತ್ಯದಿಂದ ವೀರಶೈವ ಸಮಾಜದೊಡನೆ ಬೆರೆದು ಮಹೋತ್ಸವಪ್ರಾರಂಭಿಸಲಾಗಾಯಿತು. ಅಯ್ಯರ್‌ವರೆಗೂ ಇದು ಅಸಾಧಾರಣತ್ಯಾಗವಹಿಸಿದಬಗ್ಗೆ ಬ್ರಾಹ್ಮಣರಾದಿಯಾಗಿ ಸಕಲವರ್ಣಾಶ್ರಮದವರಿಗೂ, ನ್ಯಾಯಶೀಲರಾದ ಗೌರ್ನಮೆಂಟ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೂ ಉಳಿದ ಪದವೀಧರರಿಗೂ, ಸಕಲ ಏರ್ಪಾಡುಗಳನ್ನು ತೃಪ್ತಿಕರವಾಗಿ ನಡೆಯಿಸಿಕೊಟ್ಟ ಪೊಲೀಸ್‌ಶಾಖಾ ಸೂಪರಿಂಟೆಂಡೆಂಟ್ ಸಾಹೇಬರವರೂ, ತಾಲ್ಲೂಕು ಅಮಲ್ದಾರ್ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳಿಗೂ ಜಗದೀಶನು ಪೂರ್ಣಾಯುಸ್ಸನ್ನೀಯಲೆಂತ ಏಜಂಟರು ಪ್ರಾರ್ಥಿಸಿದನಂತರ ಮಹಾಸ್ವಾಮಿಯವರು ನೆರೆದಿದ್ದ ಸಭಿಕರಿಗೆ ಮಹದಾನಂದವಾಗುವಂತೆ ಸಾಮಾಜಿಕ, ನೈತಿಕ, ಧಾರ್ಮಿಕ, ವಿಚಾರಗಳನ್ನೆತ್ತಿ ಮಾತನಾಡಿದರು. ಮಠಮಾನ್ಯಾಂತರದ ವಿದ್ವನ್ಮಣಿಗಳು ಶ್ರೀಗಳವರ ಪ್ರಭಾವ, ದೇಶಪರ್ಯಟನದಿಂದುಂಟಾಗುವ ಪ್ರಯೋಜನ ಅವಿದ್ಯಾಂಧಕಾರನಿವಾರಣೆ, ಈ ಪುರಪ್ರವೇಶದಿಂದ ಸರ್ವರಿಗೂ ಉಂಟಾದ ಮಹದಾನಂದ ವಿಚಾರಗಳನ್ನು ಕುರಿತು ಭಾಷಣಮಾಡಿದರು. ಸಾಹುಕಾರ್ ಮಹದೇವಪ್ಪನವರು ನೆರೆದಿದ್ದ ಸಭಿಕರಿಗೆಲ್ಲಾ ಗಂಧಪುಷ್ಪ ಫಲತಾಂಬೂಲಾದಿಗಳನ್ನು ವಿನಿಯೋಗಿಸಿದನಂತರ ಜಯರವದೊಡನೆ ಸಭೆಯು ಮುಕ್ತಾಯವಾಯಿತು. ಅನಂತರ ಶ್ರೀಗಳವರು ಅಡ್ವೊಕೇಟ್ ಮ॥ ರಂಗಸ್ವಾಮಿಯವರಿಗೆ ಕೊಟ್ಟಿದ್ದ ವಾಗ್ದಾನವನ್ನು ನೆರವೇರಿಸಲು ಮೇನಾದಲ್ಲಿ ಮೂರ್ತಿಗೊಂಡು ವಿಜಯವಾದ್ಯದೊಡನೆ ಅವರ ದೇವಾಲಯಕ್ಕೆ ದಯಮಾಡಿಸುವದನ್ನು ನಿರೀಕ್ಷಿಸುತ್ತಾ ಇದ್ದ ಅಡ್ವೊಕೇಟರವರು ನಿರತಿಶಯಾನಂದದಿಂ ಶ್ರೀಗಳವರನ್ನು ಬರಮಾಡಿಕೊಂಡನಂತರ ಮಹಾಪೀಠದಲ್ಲಿ ಶ್ರೀಗಳವರು ಮೂರ್ತಿಗೊಂಡ ಕೂಡಲೆ ಈ ಊರಲ್ಲಿರುವ ವಿದ್ವಾನ್ ವೇ॥ ಬ್ರ॥ ಶ್ರೀ ಸಿದ್ಧಾಂತ ಶ್ಯಾಮಶಾಸ್ತ್ರಿಗಳವರು ಗುರುತತ್ವ ಮತ್ತು ಅಧಿಕಾರಯುಕ್ತವಾದ ಶಿಷ್ಯಲಕ್ಷಣ, ಪರಸ್ಪರ ಸಂಬಂಧ, ಸನ್ಯಾಸಾಶ್ರಮದ ಪೂಜ್ಯತೆ, ಜಗತ್ತನ್ನು ಆವರಿಸಿರುವ ಮಾಯಾರೂಪವಾದ ಹೊನ್ನು ಹೆಣ್ಣು ಮಣ್ಣೆಂಬ ನಾಶಸ್ವರೂಪ ಧರ್ಮವಿಚಾರ ಇವುಗಳನ್ನು ಕುರಿತು ಲಲಿತವಾಗಿ ಮಾಡಿದ ಭಾಷಣವು ಬಹು ಸ್ವಾರಸ್ಯವಾಗಿತ್ತು. ಇವರ ಮಾತನ್ನೇ ಶ್ರೀಗಳವರು ಪುಷ್ಟೀಕರಿಸಿ, ದ್ವೈತನೆಂಬುವದು ಶಿವಶಕ್ತಿಯರ ಪದಾರ್ಥವೆಂತಲೂ, ವಿಚಾರದಿಂದ ಅನುಭವಿಸುವ ಪರಮ ಸುಜ್ಞಾನಿಗಳಿಗೆ ಪರಮಾರ್ಥಸ್ವರೂಪವಾಗಿರುವವೆಂತಲೂ, ಅಜ್ಞಾನದಿಂದ ಅನುಭವಿಸುವ ಜಡಜೀವಿಗಳಿಗೆ ಮಾಯಾಸ್ವರೂಪವಾಗಿರುವವೆಂತಲೂ, ಇದರ ಪರಿಹಾರಕ್ಕೆ ಗುರುದೇವತಾನುಗ್ರಹವೂ ಇದಕ್ಕಾಗಿ ಭಕ್ತಿಜ್ಞಾನ ವೈರಾಗ್ಯದಿಂದೊಡಗೂಡಿದ ಸಕಲೈಶ್ವರ್ಯಪ್ರದವಾದ ಸದ್ಧರ್ಮವೇ ಮೂಲಭೂತವೆಂತಲೂ, ಸಂಸ್ಕಾರಯುಕ್ತವಾದ ಇಂಥಾ ಫಲವು ಮ॥ ರಂಗಸ್ವಾಮಿಯವರಿಗೂ ಇವರ ಕುಟುಂಬಕ್ಕೂ, ಪೋಷ್ಯವರ್ಗಕ್ಕೂ ಲಭ್ಯವಾಗಲೆಂದಪ್ಪಣೆಕೊಡಿಸಿ ಅಲ್ಲಿಂದ ಹೊರಟು ಪೇಟೆಯ ವೈಶ್ಯರವರಿಂದ ಅನುಕೂಲಪಡಿಸಿದ್ದ ಬಿಡಾರ ಅಂದರೆ ಶ್ರೀಗಳವರ ಸೂತ್ರಕ್ಕೆ ಸಂಬಂಧಪಟ್ಟ ತಣ್ಣೀರುಹಳ್ಳವೆಂಬ ಮಠಕ್ಕೆ ಸ್ವಾರಿಯು ಬಿಜಯಮಾಡಿಸಿತು. ಮಾರನೇದಿವಸದ ಲಾಗಾಯತು ಭಕ್ತಿಯುಕ್ತ ಭಕ್ತರ ಗೃಹಗಳಲ್ಲಿ ಭಿಕ್ಷಾದಿಪೂಜಾದಿಗಳು ಪ್ರತಿದಿವಸವೂ ನಡೆಯುತ್ತಿವೆ. ಇಂಥಾ ಮಹೋತ್ಸವವನ್ನು ನಾವುಗಳು ಯಾವಾಗಲೂ ನೋಡಿರಲಿಲ್ಲವೆಂತಲೂ ಸಕಲಮತೀಯರೂ ಏಕಮತ್ಯದಿಂದ ಮಹಾಕಾರ್ಯಮಾಡಿದ್ದು ಸಂಸ್ಥಾನದ ಎಲ್ಲಕಡೆಗೂ ಮೇಲ್ಪಂಕ್ತಿಯಾಗಿರುತ್ತೆಂತಲೂ ಅನೇಕರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಮಹದಾನಂದಕ್ಕೆ ಈ ಗ್ರಾಮದ ಪಾಟೀಲ್ ಸಿದ್ದೇಗೌಡರೂ, ಪೇಟೆ ವೈಶ್ಯರವರೂ ಸಾ॥ ಮಹದೇವಪ್ಪನವರುಗಳ ಪರಮಾಸ್ತಿಯರ ಸಮ್ಮತ ಕಾರ್ಯವಿವೇಚನೆ ಲೋಕಾನುಭವ, ಗುರುಭಕ್ತಿ ಮುಂತಾದವೇ ಕಾರಣವಾಗಿರುತ್ತೆಂಬುವದನ್ನು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ಮಾಹೇ ತಾರೀಖು 11 ನೇ ಗುರುವಾರ ರಾತ್ರಿ ಶ್ರೀಗಳವರ ಬಿಡಾರದಮಠದಲ್ಲಿ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಅ॥ ದ॥ ಕಮಿಷನರ್ ಸಾಹೇಬರವರೇ ಮುಂತಾಗಿ ಸರ್ಕಾರಿ ಪದವೀಧರರೂ ವಿಬುಧಮಂಡಲಿಯೂ ಪುರಪ್ರಮುಖ ಸಮುದಾಯವೂ ನೆರೆದು ಸರ್ವರಿಕಂಗಳಿಗೆ ಮಂಗಳವನ್ನುಂಟುಮಾಡಿತು. ಪ್ರಥಮದಲ್ಲಿ ವೇ॥ ಬ್ರ॥ ಶ್ರೀ॥ ಸಿದ್ಧಾಂತ ಶ್ಯಾಮಶಾಸ್ತ್ರಿಗಳವರು ಸಕಲವರ್ಣಾಶ್ರಮದವರೂ ಪರಸ್ಪರ ಅಸೂಯಾದಿಗಳನ್ನು ಬಿಟ್ಟು ಸರ್ವತತ್ವಸಿದ್ಧಾಂತವೂ ಅಷ್ಟರಿಗೆ ಒಂದೇ ಸ್ವರೂಪಕ್ಕೆ ಹೊಂದುವದೆಂಬ ನಿಜವಾದ ಭಾವನೆಯನ್ನಳವಡಿಸಿಕೊಂಡು ಐಹಿಕಸುಖಕ್ಕೆ ಏಕಮತ್ಯವೂ, ಪರಮಾರ್ಥಕ್ಕೆ ಸನ್ಮಾರ್ಗಜ್ಞಾನವೂ ಇವುಗಳು ಪರಿಣಾಮಪದವಾದಾವೆಂತಲೂ, ಯಾವ ವರ್ಣಾಶ್ರಮದವರಾದರೂ ಪರಮಪೂಜ್ಯರು ದಯಮಾಡಿದಲ್ಲಿ ಸರ್ವರ ವಿಶ್ವಾಸವೂ ಏಕರೂಪವಾಗಿರಬೇಕೆಂತಲೂ ಭಾಷಣಮಾಡಿದರು. ಅನಂತರ ಅಡ್ವೊಕೇಟ್ ಮ॥ ರಂಗಸ್ವಾಮಿಯವರು ಈ ಮಲೆನಾಡು ಜನಗಳ ಮೌಢ್ಯವೆಂಬ ರೋಗವನ್ನು ಹೋಗಲಾಡಿಸಲು ಸುಜ್ಞಾನಚಂದ್ರೋದಯವೆಂಬ ಮಹಾಪ್ರಯೋಗವು ಅವಶ್ಯಕವಾಗಿರುತ್ತೆಂತಲೂ, ತದಂಗಭೂತವಾಗಿ ಒಂದು ವಿದ್ಯಾನಿಲಯವನ್ನು ಈ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿ ಸ್ಥಾಪಿಸಲು ಮಹಾಸ್ವಾಮಿಗಳು ಕೃಪೆಮಾಡಬೇಕೆಂತಲೂ ಸಹ ಸರ್ವರಿಗೂ ಹೃದಯಂಗಮವಾಗುವಂತೆ ಉಪನ್ಯಾಸಮಾಡಿದರು. ಅದನ್ನನುಸರಿಸಿ ವೇ॥ ಬ್ರ॥ ಶ್ರೀ॥ ಸುಬ್ರಾಯಶಾಸ್ತ್ರಿಗಳವರು ಶ್ರೀಮಠದ ಅನುಂದಾನಂದ ವೈಭವವನ್ನೂ ಶ್ರೀಗಳವರ ಸದ್ಗುಣಗಳ ಅನ್ಯಾದೃಶವಾದ ಮಹಿಮೆಯನ್ನೂ ಕಥನಮಾಡಿದರು. ತರುವಾಯ ಎಜುಕೇಷನಲ್ ಸೂಪರಿಂಟೆಂಡೆಂಟ್ ಎಚ್. ಕೆ. ಮಲ್ಲಪ್ಪನವರು ಮ॥ ರಂಗಸ್ವಾಮಿಯವರ ಉಪನ್ಯಾಸದಲ್ಲಿ ಲಕ್ಷ್ಯವಾದ ವಿದ್ಯಾನಿಲಯದ ವಿಷಯದಲ್ಲಿ ಶ್ರೀಗಳವರನ್ನು ಪ್ರಾರ್ಥಿಸಿದರು. ಆ ತರುವಾಯ ಶ್ರೀಗಳವರು ತಮ್ಮ ನಿರುಪಮವಾಣಿಯಿಂದ ಸಕಲರ ಮನಸ್ಸನ್ನು ಛೇದಿಸಿ ಅಂತರ್ಬಹಿರ್ವ್ಯಾಪ್ತವಾದ ಪರಶಿವನ ಮುಖ್ಯತತ್ವಾರ್ಥವನ್ನು ಬೋಧಿಸುವದರ ದ್ವಾರಾ ಸರ್ವಮತೀಯರಿಗೂ ಜಗದೀಶನಿಂದ ಮಂಗಳವುಂಟಾಗುವದೆಂದು ಹಾರೈಸಿ ಸಕಲರಿಗೂ ಗಂಧಪುಷ್ಪಾದಿಗಳನ್ನು ಕೊಡಿಸಿ ವಿದ್ವನ್ಮಣಿಗಳಿಗೆ ಬಹುಮಾನಗಳನ್ನು ಕೊಡಿಸಿದರು. (1) ಸ್ಥಳದ ಜೋಯಿಸರು ಶಂಭುದೇವರಭಟ್ಟರಿಗೆ ಶಾಲು (2) ವೇ॥ಬ್ರ॥ಶ್ರೀ॥ ಸಿದ್ಧಾಂತಶ್ಯಾಮಶಾಸ್ತ್ರಿಗಳಿಗೆ ಶಾಲು ನಗದು 50 ರೂಪಾಯಿ, (3) ವೇ॥ಬ್ರ॥ಶ್ರೀ॥ ಮಂಜುನಾಥಶಾಸ್ತ್ರಿಗಳು, (4) ವೇ॥ ಬ್ರ॥ ಶ್ರೀ॥ ಶ್ರೀನಿವಾಸಶಾಸ್ತ್ರಿಗಳು, (5) ಮಠದ ಶ್ರೀಕಂಠಯ್ಯನವರು (6) ಕನ್ನಡ ಸ್ಕೂಲು ಹೆ॥ ಮಾ॥ ವೀರಣ್ಣನವರು ಇವರುಗಳಿಗೆ ಶಾಲುಗಳು ಸಭಾದಲ್ಲಿ ನೆರೆದಿದ್ದ ಎಲ್ಲಾ ವೈದಿಕರಿಗೂ ಉಚಿತವಾಗಿ ದ್ರವ್ಯರೂಪಕವಾದ ಬಹುಮಾನಗಳಾದನಂತರ ಬಾರು ಇಲಾಖೆಗೂ, ವಾಜಗಳಿಗೂ ಅಂಜುಮನ್ ಎಜಮಾನರಿಗೂ ಸನ್ಮಾನಗಳಿತ್ತು ಸಕಲರಿಗೂ ಫಲಪುಷ್ಪಾದಿಗಳನ್ನು ಕೊಡಿಸಿ ಶಿಷ್ಯವರ್ಗದವರಿಗೆ ಆಶೀರ್ವದಿಸಿ ಮಹದಾನಂದದಿಂದ ಸಭೆಯನ್ನು ಉಪಸಂಹರಿಸಿದರು. ತಾ॥ 12ನೇ ಶುಕ್ರವಾರ ಬೆಳಗಿನ 9 ಘಂಟೆಗೆ ಸವಾರಿಯು ದೊಡ್ಡಗದ್ದವಳ್ಳಿಗೆ ದಯಮಾಡಿಸಿತು.

ಪ್ರ

ಮಹಾತ್ಮಗಾಂಧಿಯವರ ಸ್ವಚರಿತೆ.

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 17 ನೆಯ ಪ್ರಕರಣ.

ನೆಟಾಲಿನಲ್ಲಿ ಸ್ಥಿರವಾಗಿ ನಿಂತುದು.

1893 ರಲ್ಲಿ ನೆಟಾಲಿನಲ್ಲಿ ಹಾಜೀ ಮಹಮ್ಮದ್ ಹಾಜೀ ದಾದಾಸೇಟ್‌ರವರು ಮುಖ್ಯನಾಯಕರಾಗಿ ಭಾವಿಸಲ್ಪಡುತ್ತಿದ್ದರು. ಧನಸಂಪದದಲ್ಲಿ ಅಬ್ದುಲ್ಲಾ ಹಾಜೀ ಆದಂಸೇಟರೇ ಅಗ್ರಗಣ್ಯರಾಗಿದ್ದರೂ ವ್ಯವಹಾರದಲ್ಲಿ ಹಾಜೀ ದಾದಾರವರಿಗೇ ಹಾಜೀ ಆದಂ ಮೊದಲಾದವರು ಅಗ್ರಸ್ಥಾನವನ್ನು ಕೊಡುತ್ತಿದ್ದರು. ಅಬ್ದುಲ್ಲಾಸೇಟರವರ ಮನೆಯೊಳಗೆ ಹಾಜೀ ದಾದಾರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿಯೋಜಕ ಸ್ವಾತಂತ್ರ್ಯ ಚಟ್ಟದ (ಆಕ್ಟ್) ನ್ನು ನಿರೋಧಿಸಲು ಒಂದು ತೀರ್ಮಾನವು ಅನುಮೋದಿಸಲ್ಪಟ್ಟಿತು. ಅನೇಕ ಜನರು ವಾಲಂಟಿಯರುಗಳಾಗಿ ಸೇರಿಸಲ್ಪಟ್ಟರು. ನೆಟಾಲಿನಲ್ಲಿ ಹುಟ್ಟಿದ ಭಾರತೀಯರು (ಅವರಲ್ಲಿ ಅನೇಕರು ಭಾರತೀಯ ಕ್ರೈಸ್ತ ಯುವಕರೇ) ಕೂಡ ಆ ಸಭೆಗೆ ಆಹ್ವಾನಿಸಲ್ಪಟ್ಟಿದ್ದರು. ಡರ್ಬನ್ ಕೋರ್ಟಿನ ದ್ವಿಭಾಷಿಗಳಾದ ಪಾಲರವರೂ ಮಿಷನ್ ಸ್ಕೂಲಿನ ಪ್ರಧಾನೋಪಾಧ್ಯಾಯರಾದ ಸುಭಾನುಗಡ್ಡಿಯವರೂ ಆ ಸಭೆಗೆ ಬಂದಿದ್ದರು. ಅವರುಗಳ ಪ್ರೋತ್ಸಾಹದಿಂದಲೇ ಅನೇಕ ಕ್ರೈಸ್ತಯುವಕರು ಕೂಡ ಬಂದಿದ್ದರು. ಅವರೆಲ್ಲರೂ ವಾಲಂಟಿಯರಾಗಿ ಸೇರಿದರು. ದಾವೂದ್ ಮಹಮ್ಮದ್‌ಸೇಟರು, ಮಹಮ್ಮದ್ ಕಾಶಿಂ. ಕಮ್ರುದ್ದೀನ್, ಆದಂಜೀ ಮಿಯಾಖಾನ್, ಎ. ಕೋಲಂದವೇಲುಪಿಳ್ಳೆ. ಸಿ. ಲಚ್ಚೀರಾಂ, ರಂಗಸಾಮಿ ಪಡಯಾಚಿ, ಅಮಾದ್‌ಜೀವ ಮೊದಲಾಗಿ ಬಹಳ ವರ್ತಕರುಗಳು ವಾಲಂಟಿಯರುಗಳಾಗಿ ಸೇರಿದರು. ಪಾರ್ಸಿ ರುಸ್ತುಂಜೀಯವರು ಮೊದಲೇ ಸೇರಿದ್ದರು. ಮಾಣಿಕ್ಜಿ, ಜೋಷಿ, ನರ್ಸೀರಾಂ ಮೊದಲಾದ (ದಾದಾ ಅಬ್ದುಲ್ ಕಂಪೆನಿ ಮೊದಲಾದ ಕಂಪೆನಿಗಳ) ಗುಮಾಸ್ತರು ಕೂಡ ಸೇರಿದರು. ಅವರಲ್ಲಿ ಅನೇಕರು ರಾಜಕೀಯವಿಚಾರದಲ್ಲಿ ಪ್ರವೇಶಿಸಿದ್ದವರಲ್ಲಿ ಬಹಳ ವಿಪತ್ತು ಆ ಆಕ್ಟಿನಿಂದ ಭಾರತೀಯರಿಗುಂಟುಮಾಡತಕ್ಕದಾಗಿದ್ದುದರಿಂದ ಅಂತಹವರೆಲ್ಲರೂ ಸಾಹಸಮಾಡಿ ಈ ಉದ್ಯಮದಲ್ಲಿ ಸೇರಿದರು. ದೊಡ್ಡ ಕುಟುಂಬದವರು, ನೀಚವೃತ್ತಿಯವರು, ಧನಿಕರು, ಬಡವರು, ಯಜಮಾನರು, ಸೇವಕರು, ಹಿಂದುಗಳು, ಮಹಮ್ಮದೀಯರು, ಪಾರ್ಸೀಗಳು, ಕ್ರೈಸ್ತರು, ಘೂರ್ಜರರು, ದ್ರಾವಿಡರು, ಸಿಂಧೂದೇಶೀಯರು ಮೊದಲಾಗಿ ಎಲ್ಲ ವಿಭೇದದವರೂ ಇದ್ದರು. ಇವರೆಲ್ಲರೂ ಭಾರತಮಾತೆಯ ಮಕ್ಕಳೂ ಸೇವಕರೂ ಆಗಿರುವವರೇ. ಆಕ್ಟು ಮೊದಲನೆಯಾವರ್ತಿ ವಾಚಿಸಲ್ಪಟ್ಟು ಅನುಮೋದಿತವಾಯಿತು. ಎರಡನೆಯಾವರ್ತಿಯು ಕೂಡ ಅನುಮೋದಿಸಲ್ಪಡಲು ಸಿದ್ಧವಾಗಿದ್ದಿತು. ಭಾರತೀಯರಾರೂ ಈ ಆಕ್ಟಿಗೆ ಪ್ರತಿಕೂಲವಾಗೇನನ್ನೂ ಹೇಳಲಿಲ್ಲವಾದುದರಿಂದ ಅವರು ನಿಯೋಜಕಾರ್ಹತೆಗೆ ಅನರ್ಹರೆಂಬುದಕ್ಕೆ ಅಷ್ಟೇ ಸಾಕೆಂದು ಪ್ರತಿಪಕ್ಷದವರು ಶಾಸನಸಭೆಯಲ್ಲಿ ವಾದಿಸಿದರು. ಈ ವಿಷಯಗಳನ್ನೆಲ್ಲ ನಾನು ಸಭೆಯಲ್ಲಿ ವಿವರಿಸಿದೆನು. ಆ ಆಕ್ಟಿನ ವಿಚಾರವಾಗಿ ನಡೆಯುತ್ತಿದ್ದ ಚರ್ಚೆಯನ್ನು ನಿಲ್ಲಿಸಬೇಕೆಂದು ಶಾಸನಸಭಾಧ್ಯಕ್ಷರಿಗೂ ಪ್ರಧಾನ ಮಂತ್ರಿ ಸರ್ ಜಾನ್ ರಾಬಿನ್‌ಸನ್‌ರವರಿಗೂ ದಾದಾ ಅಬ್ದುಲ್‌ರವರ ಮಿತ್ರರಾದ ಎಸ್ಕೋಂಬ್‌ರವರಿಗೂ ತಂತಿವಾರ್ತೆಯನ್ನು ಕಳುಹಿದೆನು. ಎರಡುದಿನಗಳವರೆಗೂ ಚರ್ಚೆಯು ನಿಲ್ಲಿಸಲ್ಪಡುವುದೆಂದು ಶಾಸನಸಭಾಧ್ಯಕ್ಷರು ಕೂಡಲೇ ನನಗೆ ತಂತೀವಾರ್ತೆಯಿಂದ ತಿಳಿಸಿದುದರಮೇಲೆ ನಮಗೆ ಸಂತೋಷವಾಯಿತು.

ಶಾಸನಸಭೆಯವರಿಗೆ ಕೊಡಬೇಕಾದ ಅರ್ಜಿಯನ್ನು ಬರೆದೆನು. ಅದರಲ್ಲಿ ಅನೇಕರ ರುಜುಮಾಡಿಸಬೇಕಾಗಿದ್ದುದರಿಂದ ನಾಲ್ಕು ಪ್ರತಿಗಳನ್ನು ಬರೆಯಿಸುವುದು ಅವುಗಳಲ್ಲೊಂದನ್ನು ವರ್ತಮಾನಪತ್ರಿಕೆಗೆ ಕಳುಹಿಸುವುದು ಈ ಕಾರ್ಯಗಳೆಲ್ಲವೂ ಆ ರಾತ್ರಿಯೊಳಗೇ ನಡೆಯಬೇಕಾಗಿದ್ದುದರಿಂದ ಆಂಗ್ಲಭಾಷಾಜ್ಞಾನವಿರುವ ವಾಲಂಟಿಯರುಗಳೂ ಇತರರೂ ಆ ರಾತ್ರಿ ಆ ಕೆಲಸಗಳಲ್ಲೇ ಉದ್ಯುಕ್ತರಾಗಿದ್ದರು. ಆರ್ಥರವರ ಅಕ್ಷರವು ಬಹಳ ಚೆನ್ನಾಗಿದ್ದುದರಿಂದ ಅವರೇ ಮೊದಲನೆಯ ಪ್ರತಿಯನ್ನು ಬರೆದರು. ಅದನ್ನು ನೋಡಿ ಹೇಳಲು ಇತರರು ಉಳಿದ ಪ್ರತಿಗಳನ್ನು ಬರೆದರು. ಆ ರೀತಿಯಾಗಿ ಏಕಕಾಲದಲ್ಲಿ 5 ಪ್ರತಿಗಳು ಸಿದ್ಧವಾದುವು. ವಾಲಂಟಿಯರುಗಳೂ ವರ್ತಕರುಗಳೂ ಸ್ವಂತ ಬಂಡಿಗಳಲ್ಲೂ ಬಾಡಿಗೆ ಬಂಡಿಗಳಲ್ಲೂ ಸುತ್ತಿ ಜನರ ರುಜುಗಳನ್ನು ಬಹಳ ಜಾಗ್ರತೆಯಲ್ಲಿ ಮಾಡಿಸಿಕೊಂಡುಬಂದರು. ಅರ್ಜಿಯನ್ನು ಕಳುಹಿಸಿದೆನು. ಪತ್ರಿಕೆಯವರು ಕೂಡ ಅದನ್ನು ಪ್ರಕಟಿಸಿ ಅನುಕೂಲವಾಗಿ ಮುಖ್ಯವಾದ ವ್ಯಾಸವನ್ನೂ ಬರೆದರು. ಶಾಸನ ಸಭೆಯಲ್ಲಿ ಕೂಡ ಸದಭಿಪ್ರಾಯವೇ ಹುಟ್ಟಿತು. ಅದರ ವಿಚಾರವಾಗಿ ಚರ್ಚೆಯು ನಡೆದು ಪ್ರತಿಪಕ್ಷದವರ ವಾದವು ದುರ್ಬಲವಾಗಿದ್ದರೂ ಆಕ್ಟು ಅನುಮೋದಿಸಲ್ಪಟ್ಟಿತು. ಅದು ಹಾಗೆಯೇ ಆಗುವುದೆಂದು ನಾನು ತಿಳಿದಿದ್ದೆನಾದರೂ ಆ ಆಂದೋಳನದಿಂದ ಭಾರತೀಯರಲ್ಲಿ ನೂತನೋತ್ಸಾಹವು ಹುಟ್ಟಿತು. ಏಕಮತ್ಯವು ಮುಖ್ಯವೆಂದು ಎಲ್ಲರಿಗೂ ಮನದಟ್ಟಾಯಿತು. ರಾಜಕೀಯ ವಾಣಿಜ್ಯಸಂಬಂಧದಲ್ಲಿ ಹಕ್ಕನ್ನು ಸಂಪಾದಿಸಲು ಆಂದೋಳನಮಾಡುವುದು ಮುಖ್ಯಕರ್ತವ್ಯವೆಂದು ಎಲ್ಲರೂ ಗ್ರಹಿಸಿದರು. ಆಗ್ಗೆ ರಿಪ್ಪನ್ ಪ್ರಭುಗಳು ಆಂಗ್ಲದೇಶದಲ್ಲಿಯು ಅಧಿನಿವೇಶಗಳಿಗೆ ಮಂತ್ರಿಯಾಗಿದ್ದರು. ಒಂದು ದೊಡ್ಡ ಮಹಜರನ್ನು ಅವರಿಗೆ ಕಳುಹಿಸಿಕೊಡಲು ನಿಶ್ಚಯಿಸಿದೆನು. ಅದು ದೊಡ್ಡ ಕೆಲಸವಾಗಿದ್ದುದರಿಂದ ಒಂದುದಿನದಲ್ಲಿ ಆಗುವುದಾಗಿರಲಿಲ್ಲ. ವಾಲಂಟಿಯರುಗಳು ಅದರ ವಿಚಾರದಲ್ಲಿ ಬಹಳ ಶ್ರದ್ಧೆಯಿಂದ ಕೆಲಸಮಾಡಿದರು. ನಾನು ಬಹಳ ಚೆನ್ನಾಗಿ ಪರ್ಯಾಲೋಚಿಸಿ ಆ ಅರ್ಜಿಯನ್ನು ಬರೆದೆನು. ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ಓದಿದೆನು. "ನಮಗೆ ಭಾರತದೇಶದಲ್ಲಿಯ ನಿಯೋಜಕ ಸ್ವಾತಂತ್ರ್ಯವಿರುವುದಲ್ಲದೆ ನೆಟಾಲಿನಲ್ಲೂ ಅಂತಹ ಸ್ವಾತಂತ್ರ್ಯಕ್ಕೆ ಅರ್ಹತೆಯಿರುವುದು. ಆ ಹಕ್ಕನ್ನುಪಯೋಗಿಸುವವರು ಭಾರತೀಯರಲ್ಲಿ ಬಹಳ ಸ್ವಲ್ಪಮಂದಿಯಿರುವುದರಿಂದ ಆ ಹಕ್ಕನ್ನು ಭಾರತೀಯರಿಗೆ ಕೊಡಬೇಕು" ಎಂದು ನಾನು ಬರೆದೆನು. ಹತ್ತುಸಾವಿರಜನರ ಕೈಯಿಂದ ಹದಿನೈದುದಿನಗಳಲ್ಲಿ ರುಜುಮಾಡಿಸಿದರು. ಆ ಕೆಲಸದಲ್ಲಿ ಅವರಿಗೆ ಪಾಲನಾರಿಕೆಯಿಲ್ಲವು. ಆ ದೇಶದ ನಾನಾಭಾಗದಲ್ಲಿ ಚದರಿಹೋಗಿದ್ದ ಭಾರತೀಯರೆಲ್ಲರಿಂದಲೂ ಹಸ್ತಾಕ್ಷರವನ್ನು ಹಾಕಿಸಬೇಕಾಗಿದ್ದಿತು. ಆ ವಿಷಯವನ್ನು ಸರಿಯಾಗಿ ತಿಳಿಯಹೇಳಿ ಅವರುಗಳ ಸಮ್ಮತಿಪಡಿಸಿಯೇ ರುಜುಮಾಡಿಸಬೇಕಲ್ಲದೆ ಹಾಗೆಯೇ ಯಾರಕೈಯಿಂದಲೂ ರುಜುಮಾಡಿಸಕೂಡದೆಂದು ಗೊತ್ತುಮಾಡಿದ್ದಿತು. ಅದುಕಾರಣ ಆ ಕಾರ್ಯಕ್ಕೆ ಅರ್ಹರಾದವರನ್ನೇ ಏರ್ಪಡಿಸಬೇಕಾಗಿ ಬಂದಿತು. ಗ್ರಾಮಗಳು ಒಂದರಿಂದೊಂದು ದೂರವಾಗಿದ್ದುವು. ಬಹಳ ಜನರು ನೆರವಾದ ಹೊರತು ಕಾರ್ಯವು ತ್ವರೆಯಾಗಿ ಮುಗಿಯುವಂತಿರಲಿಲ್ಲವು. ಅದಕ್ಕಾಗಿ ತಕ್ಕವರನ್ನೇ ನಿಯಮಿಸಿದೆನು. ಅವರೆಲ್ಲರೂ ಬಹಳ ಉತ್ಸಾಹದಿಂದ ಮನಃಪೂರ್ವಕವಾಗಿ ಕೆಲಸಮಾಡಿದರು. ಅವರುಗಳಲ್ಲಿ ದಾವೂದ್ ಮಹಮ್ಮದ್‌ಸೇಟರು ರುಸ್ತುಂಜಿ ಆದಂಜೀ ಮಿಯ್ಯಾಖಾನ್, ಅಮದುಜೀ ಇವರುಗಳ ಹೆಸರುಗಳನ್ನು ನಾನು ಮುಖ್ಯವಾಗಿ ಸ್ಮರಿಸತಕ್ಕದಾಗಿದೆ. ಅವರುಗಳೇ ಬಹಳಜನರಿಂದ ರುಜುಮಾಡಿಸಿದುದು. ದಾವೂದ್‌ಸೇಟ್‌ರವರು ತಮ್ಮ ಬಂಡಿಯಲ್ಲಿ ಹಗಲೆಲ್ಲಾ ತಿರುಗುತ್ತಿದ್ದರು. ಅವರೆಲ್ಲರೂ ತಮ್ಮ ವೆಚ್ಚವೆಲ್ಲವನ್ನೂ ತಮ್ಮ ಕೈಯಿಂದಲೇ ಹಾಕಿದರು. ದಾದಾ ಅಬ್ದುಲ್ಲಾಸೇಟರ ಮನೆಯು ಮುಖ್ಯ ಬಿಡಾರವಾಗಿಯೂ ಕಾರ್ಯಾಲಯವಾಗಿಯೂ ಮಾಡಿಕೊಳ್ಳಲ್ಪಟ್ಟಿದ್ದಿತು. ನನಗೆ ಸಹಾಯವನ್ನು ಮಾಡುತ್ತಿದ್ದ ವಿದ್ಯಾರ್ಥಿಕರಾದ ಸ್ನೇಹಿತರುಗಳೂ ಇತರರೂ ಅಬ್ದುಲ್ಲಾಸೇಟರ ಮನೆಯಲ್ಲೇ ಊಟಮಾಡುತ್ತಿದ್ದರು. ಪ್ರತಿಸಭ್ಯನೂ ದೇಶಾಭಿಮಾನದಿಂದ ಬಹಳ ಹಣವನ್ನು ಖರ್ಚುಮಾಡಿದನು. ಕಡೆಯಲ್ಲಿ ಮಹಜರನ್ನು ಅಧಿನಿವೇಶದ ಮಂತ್ರಿಗೆ ಕಳುಹಿಸಿಕೊಟ್ಟೆನು. 1000 ಪ್ರತಿಗಳನ್ನು ಅಚ್ಚುಹಾಕಿಸಿಟ್ಟುಕೊಂಡು ನನಗೆ ತಿಳಿದಿದ್ದ ಪತ್ರಿಕೆಗಳಲ್ಲಿ ಕಳುಹಿಸಿಕೊಟ್ಟೆನು. ಅದರಿಂದ ನೆಟಾಲಿನ ಪರಿಸ್ಥಿತಿಯು ಭರತಖಂಡದಲ್ಲಿರುವವರಿಗೆಲ್ಲ ಆಗಲೇ ಚೆನ್ನಾಗಿ ಗೊತ್ತಾಯಿತಲ್ಲದೆ ಅದಕ್ಕೆ ಮೊದಲು ತಿಳಿದಿರಲಿಲ್ಲ. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಭಾರತೀಯರಿಗೆ ಅನುಕೂಲವಾಗಿ ಅಗ್ರಲೇಖನವನ್ನು ಬರೆಯಿತು. ಆಂಗ್ಲದೇಶದಲ್ಲಿಯ ನಾನಾ ಪಕ್ಷಗಳ ಪತ್ರಿಕೆಗಳಿಗೂ ರುಜುಗಳು ಹಾಕಲ್ಪಟ್ಟಿದ್ದ ಮಹಜರುಗಳನ್ನು ಕಳುಹಿಸಕೊಟ್ಟೆನು. ಲಂಡನ್ ಟೈಮ್ಸ್ ಪತ್ರಿಕೆಯು ಕೂಡ ನನಗೆ ಅನುಕೂಲವಾಗಿಯೇ ಬರೆದುದರಿಂದ ಅಧಿನಿವೇಶದ ಮಂತ್ರಿಯು ಆಕ್ಟನ್ನು ತಿರಸ್ಕರಿಸಬಹುದೆಂದು ಕುತೂಹಲಪಟ್ಟುಕೊಂಡಿದ್ದೆನು.

ಆ ಪರಿಸ್ಥಿತಿಯಲ್ಲಿ ನಾನು ಭರತಖಂಡಕ್ಕೆ ಹೊರಡಲು ಅವಕಾಶವಿರಲಿಲ್ಲವು. ಅಲ್ಲಿಯ ಭಾರತೀಯರೆಲ್ಲರೂ ನಾನು ಅಲ್ಲೇ ಸ್ಥಿರವಾಗಿ ನಿಲ್ಲಬೇಕೆಂದು ನನ್ನನ್ನು ಸಾವಿರವಿಧವಾಗಿ ಕಾಡುವವರಾದರು. ನನಗಿದ್ದ ತೊಂದರೆಯನ್ನು ಅವರಿಗೆ ತಿಳಿಸಿದೆನು. ಅವರಿಂದಾಗಲೀ ರಾಜಕೀಯ ಫಂಡಿನಿಂದಾಗಲೀ ಹಣವನ್ನು ತೆಗೆದುಕೊಂಡು ಅಲ್ಲಿರಲು ನನಗಿಷ್ಟವಿರಲಿಲ್ಲವು. ಒಳ್ಳೇ ನೆರೆಯಲ್ಲಿ ಒಳ್ಳೇ ಮನೆಯಲ್ಲಿ ಪ್ರತ್ಯೇಕವಾಗಿ ವಾಸವಾಗಿರಬೇಕು. ಬ್ಯಾರಿಸ್ಟರ ದರ್ಜೆಗೆ ತಕ್ಕಂತಿರದಿದ್ದರೆ ಭಾರತೀಯರೆಲ್ಲರಿಗೂ ಅಗೌರವವುಂಟಾಗುವುದು. ಹಾಗಿರಲು ಒಂದು ವರ್ಷಕ್ಕೆ ಕನಿಷ್ಠಪಕ್ಷ 4500 ರೂಪಾಯಿ ಬೇಕಾಗುವುದು. ಆದುದರಿಂದ ಅಷ್ಟರಮಟ್ಟಿಗಾದರೂ ನನಗೆ ಫೀಜು ಗಿಟ್ಟುವಹಾಗೆ ದಾವಾಗಳನ್ನು ನನಗೆ ಕೊಡುತ್ತೇವೆಂದು ಭಾರತೀಯರು ವಾಗ್ದಾನಮಾಡಿದರೆ ನಾನು ಅಲ್ಲಿರಲು ಸಾಧ್ಯವಾಗುವುದೆಂದು ಅವರಿಗೆ ಹೇಳಿದೆನು. "ನಿಮಗೆ ದಾವಾಕೊಡುವಾಗ್ಗೆ ಫೀಜನ್ನು ಪ್ರತ್ಯೇಕವಾಗಿ ಕೊಡುವೆವು. ರಾಜಕೀಯಫಂಡಿಗೆ ನಾವು ಚಂದಾಹಣವನ್ನು ಸುಲಭವಾಗಿ ಕಳುಹಿಸುತ್ತಿರುತ್ತೇವೆಯಾದುದರಿಂದ ಅದರಿಂದಲೂ ನೀವು ವರ್ಷಕ್ಕೆ 4500 ರೂ. ನಂತೆ ತೆಗೆದುಕೊಳ್ಳಬೇಕೆಂದು ಕೋರುತ್ತೇವೆ" ಎಂದು ಅವರುಗಳು ಹೇಳಿದರು. ರಾಜಕೀಯವಿಚಾರದಲ್ಲಿ ಬ್ಯಾರಿಸ್ಟರಾಗಿ ನಾನೇನೂ ಮಾಡತಕ್ಕುದಿಲ್ಲವು. ನಿಮ್ಮೆಲ್ಲರ ಕೈಯಿಂದಲೂ ನಾನು ಕೆಲಸಮಾಡಿಸುತ್ತಿರಬೇಕು. ರಾಜಕೀಯಫಂಡಿಗಾಗಿ ನಾನು ನಿಮ್ಮನ್ನು ಕೇಳಬೇಕಾಗಿದೆ. ರಾಜಕೀಯ ಕಾರ್ಯಗಳಿಗಾಗಿಯೇ ಸಾಲಿಗೆ 1500 ರೂ. ಬೇಕಾಗುವುದು. ಇದರಮೇಲೆ ನನಗೂ ಆ ಫಂಡಿನಿಂದ 4500 ರೂ. ಕೊಡಲು ಹೇಗೆ ಸಾಧ್ಯವು? ಅದಕ್ಕಾಗಿ ಕೇಳಲು ನನಗೆ ಬಾಯಿ ಹೇಗೆಬರುವುದು? ಅದು ಆಗತಕ್ಕುದಲ್ಲ ಮತ್ತು ಅದಕ್ಕೆ ಸಮ್ಮತಿಸುವುದೂ ಇಲ್ಲ" ಎಂದು ಹೇಳಿದೆನು. "ನಿಮ್ಮೊಡನೆ ನಮಗೆ ಚೆನ್ನಾಗಿ ಪರಿಚಯವಾಗಿರುವುದು. ನೀವು ಅನಾವಶ್ಯಕವಾಗಿ ಏನನ್ನೂ ತೆಗೆದುಕೊಳ್ಳುವವರಲ್ಲವೆಂದು ನಾವು ಗ್ರಹಿಸಿರುವೆವು. ಹೀಗಿರುವದರಿಂದಲೇ ನಾವು ನಿಮ್ಮನ್ನು ಕೋರುತ್ತೇವೆ. ಹಾಗೆ ನಿಮಗೆ ಬೇಕಾದ ಧನವನ್ನು ಒದಗಿಸಿಕೊಡುವುದು ನಮ್ಮ ಕೆಲಸವಲ್ಲವೆ?" ಎಂದು ಅವರು ಕೇಳಿದರು. "ಈಗ ನಿಮಗೆ ಹುಟ್ಟಿರುವ ನೂತನೋತ್ಸಾಹದಿಂದಲೂ ನನ್ನ ಮೇಲೆ ಹುಟ್ಟಿರುವ ಪ್ರೇಮದಿಂದಲೂ ಹೀಗೆ ಹೇಳುತ್ತಿರುವಿರಿ. ಈ ಉತ್ಸಾಹವೂ ಪ್ರೇಮವೂ ಯಾವಾಗಲೂ ಹೀಗೆಯೇ ಇರುವುದೆಂದು ಯಾರು ಹೇಳಬಲ್ಲರು? ನಾನು ಕೆಲ ಕೆಲ ವಿಷಯಗಳಲ್ಲಿ ನಿಮ್ಮ ಮೇಲನ್ನು ಕೋರಿ ಕಠಿಣವಾಗಿ ಮಾತಾಡಬೇಕಾದ ಪ್ರಮೇಯವು ಕೂಡ ತಟಸ್ಥವಾಗಬೇಕಾಗುವುದು. ಆಗಲೂ ಕೂಡ ನೀವು ನನ್ನನ್ನು ಪ್ರೀತಿಸುತ್ತೀರೆಂದು ಹೇಳಲು ಸಾಧ್ಯವೆ? ಅದುಕಾರಣ ರಾಜಕೀಯಸೇವಾಕಾರ್ಯಕ್ಕಾಗಿ ನಾನು ಏನನ್ನೂ ತೆಗೆದುಕೊಳ್ಳುವುದಿಲ್ಲ. ನೀವೆಲ್ಲರೂ ನಿಮ್ಮ ದಾವೆಗಳನ್ನು ನನಗೆ ಕೊಡಲು ವಾಗ್ದಾನಮಾಡಿದರೆ ಸಾಕು. ಅದು ಕೂಡ ನಿಮಗೆ ಕಷ್ಟವಾಗಬಹುದು. ನಾನು ಬ್ಯಾರಿಸ್ಟರಾದರೂ ಪಾಶ್ಚಾತ್ಯನಲ್ಲವಾದುದರಿಂದ ಕೋರ್ಟಿನಲ್ಲಿ ಜಡ್ಜಿಗಳು ನನ್ನ ವಾದವನ್ನು ಹೇಗೆ ಪುರಸ್ಕರಿಸುವರೋ ತಿಳಿಯದು. ಕೋರ್ಟಿನಲ್ಲಿ ನಾನು ಚೆನ್ನಾಗಿ ವಾದಿಸಲಾಗುವುದೋ ಇಲ್ಲವೋ ಎಂಬುದು ಕೂಡ ಈಗ ತಿಳಿಯದು. ಆದರೆ ನೀವು ನಿಮ್ಮ ದಾವೆಗಳನ್ನು ನನಗೆ ಕೊಡುವುದರಿಂದ ನಿಮಗೆ ಸ್ವಲ್ಪ ನಷ್ಟವಾಗಬಹುದು. ಆದರೂ ನೀವು ದಾವೆಗಳನ್ನು ನನಗೆ ಕೊಡುತ್ತೇವೆಂದು ವಾಗ್ದಾನಮಾಡಿದುದಕ್ಕಾಗಿ ನಾನು ಬಹಳ ಸಂತುಷ್ಟನಾಗಿರುವೆನು" ಎಂದು ತಿಳಿಸಿದೆನು. ಒಂದು ವರ್ಷದವರೆಗೆ ತಮ್ಮ ದಾವೆಗಳನ್ನೆಲ್ಲ ನನಗೇ ಕೊಡಲು 20 ಜನ ವರ್ತಕರುಗಳು ವಾಗ್ದಾನಮಾಡಿದರು. ನಾನು ಭರತಖಂಡಕ್ಕೆ ಹೊರಡಬೇಕೆಂದಿದ್ದಾಗ ನನಗೆ ಬಹುಮಾನವಾಗಿ ಕೊಡಬೇಕೆಂದಿದ್ದ ಧನದಲ್ಲಿ ದಾದಾ ಅಬ್ದುಲ್ಲಾಸೇಟರು ಬೇಕಾದ ಗೃಹೋಪಕರಣ ಸಾಮಗ್ರಿಗಳನ್ನೆಲ್ಲ ಕೊಂಡುಕೊಟ್ಟರು. ಈ ಪ್ರಕಾರವಾಗಿ ನಾನು ನೆಟಾಲಿನಲ್ಲಿ ನೆಲೆಯಾಗಿ ನಿಂತೆನು.

೧೯೨೬ನೆಯ ಇಸವಿ ನವಂಬರ್ ತಾ॥ ೨೦ ರಿಂದ ೧೯೨೬ ನೆಯ ಇಸವಿ ನವಂಬರ್ ತಾ॥ ೨೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಕಾರ್ತಿಕ ಬಹುಳ ಪಾಡ್ಯಮಿಯಿಂದ ಕಾರ್ತಿಕ ಬಹುಳ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಮಾಸ
20	ಶನಿ	ಪಾಡ್ಯ	36-13	ಕೃತ್ತಿ	6-44	5
21	ಭಾನು	ಬಿದಿ	34-14	ರೋಹಿ	5-45	6
22	[1]ಸೋಮ	ತದಿ	33-26	ಮೃಗ	5-24	7
23	ಮಂಗಳ	ಚೌತಿ	33-51	ಆರ್ದ್ರಾ	7-7	8
24	ಬುಧ	ಪಂಚ	35-8	ಪುನ	9-53	9
25	ಗುರು	ಷಷ್ಠಿ	38-28	ಪುಷ್ಯ	13-40	10
26	[2]ಶುಕ್ರ	ಸಪ್ತ	42-44	ಆಶ್ಲೇ	18-36	11

(1) ಕಾರ್ತಿಕ ಸೋಮವಾರ. ಮಳೆನಕ್ಷತ್ರ-ಅನೂರಾಧ ೨ ನೆಯ ಪಾದ, (2) ಮಳೆನಕ್ಷತ್ರ-ಅನೂರಾಧ ೩ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರ್ಹಪರಮಧಿಗತರಾಜಮಂಡಲಹಿಕ್ಕೆಷಾ | ಘನಪಕ್ಷಕೃತಾವತಾರಾ ಪಶ್ಯಜ್ಞ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಪದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸಕ ೧೯೨೬ ನೆಯ ಇಸವಿ ನವಂಬರ್ ತಾರೀಖು ೨೭ ನೆಯ ಶನಿವಾರ. [ಸಂಚಿಕೆ ೪೮

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಆದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಸ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮುಕಂದ, ಮಧುಕಂದ, ಜಪಾಕಂದ, ಶಾಲಿಮಲಿಕಂದ, ಅಶ್ವಗಂಧ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಖೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕ್ಕೀಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಿಕೆ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—18] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SHRI SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹತತ್ವಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆ ನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ), ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿ ಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

SIROMANY NARAYANACHARYA & CO.,
BENARES CITY.

S.U.N. & CO.
BENARES CITY

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟೆ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದೀಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—19]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಏನಾದರೊಬ್ಬ ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಇಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ.

(Registered Trade Mark)

ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ಗಳ್ಳೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—7] ಪೋ. ಬಾ. ೪೧೦, ಮದರಾಸು.

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ॥ ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಮೋಟಾರುಬಂಡಿಯ ಯಜಮಾನರ ಉತ್ತರವಾದಿತ್ವ.

ಬೊಂಬಾಯಿ ಪಟ್ಟಣವಾಸಿ ಸುಗ್‌ದ್ಯೋಯಾರಿ ಎಂಬವರು ಮೋಟಾರುಬಂಡಿಯಲ್ಲಿ ಸ್ವಾರಿಮಾಡುತ್ತಿರುವಾಗ್ಗೆ ಆ ಬಂಡಿಯನ್ನು ನಡಿಸುವವನು ಮಾರ್ಗದಲ್ಲಿ ಹೋಗುತ್ತಿದ್ದ 150 ರೂ. ಸಂಬಳದ ಒಬ್ಬ ಮಿಲ್ ಕೆಲಸಗಾರನ ಮೇಲೆ ಬಂಡಿಯನ್ನು ಹರಿಸಿ ಕೊಂದುಬಿಟ್ಟುದಕ್ಕೋಸ್ಕರ ಸತ್ತವನ ಹೆಂಡತಿ ಮಕ್ಕಳು ಬಂಡಿನಡಿಸುವವನ ಅಜಾಗರೂಕತೆಗಾಗಿ ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಬಂಡಿಯ ಯಜಮಾನನ ಮೇಲೆ ಬೊಂಬಾಯಿ ಹೈಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದರು. ಬಂಡಿನಡಿಸುವವನ ಅಜಾಗರೂಕತೆಯಿಂದ ಆ ಮಿಲ್ಲಿನ ಕೆಲಸಗಾರನು ಸತ್ತುಹೋದನೆಂದು ಸಾಕ್ಷಿಯ ವಿಚಾರಣೆಯಿಂದ ದೃಢಪಟ್ಟುದರಮೇಲೆ ಅಂತಹ ಅಜಾಗರೂಕನಾದ ಡ್ರೈವರನ್ನು ಇಟ್ಟುಕೊಂಡಿದ್ದುದಕ್ಕಾಗಿ ಬಂಡಿಯ ಯಜಮಾನನು 45,000 ರೂ. ಗಳ ಪರಿಹಾರ ದ್ರವ್ಯವನ್ನು ಕೋರ್ಟುಖರ್ಚು ಸಮೇತ ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಅದ್ದರಿಂದ ಬಂಡಿಯ ಯಜಮಾನರುಗಳು ಡ್ರೈವರನ್ನು ಆರಿಸಿಕೊಳ್ಳುವಲ್ಲಿ ಜಾಗರೂಕರಾಗಿರಬೇಕು.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ನವಂಬರ್ ತಾ|| ೨೭ ನೆಯ ಶನಿವಾರ.

ELECTIONS.

(Communicated)

(II)

The device of "Divide and rule" has succeeded in dismantling the strong-hold of the Justice Party in Madras. They were a strong majority in the last elections. They are now only 20 strong. The weak among the party have yielded to the soft preachings of the Swarajists and have gone over to the latter party and have succeeded in winning the votes. Some have succeeded as Independents. Some of the stalwarts have failed, due to their over-confidence, while the mind of their constituencies was being stealthily tampered with. The masses are easily led and are taken by novel ideas placed before them. Add to them, want of proper organisation. These are the principal causes for the failure of the Justice party in Madras. These are good lessons to us. Whether such "Divide and Rule" device is at work or not could easily be perceived by an investigation in the interior of the country where the voters are likely to be an easy prey to the deviser. The leaders of the people's party should go on a tour and stop the propaganda, if it is at work. The disease could be cured easily at the early stages of its destructive work. When it is advanced cure becomes impossible, however powerful the antidotes employed are.

The heavy volumes of the Legislative Council proceedings for June 1925, September 1925, and February 1926, will give us an idea of the performances of the members elected to represent the District interests in particular, and people's interests in general. The discussions relating to Budget allotment for Primary Education will show that the honorable member sent from Tumkur is silent. He attacks the Head of the Education Department in the matter of admission of students to the IV Form. He opposes the introduction of the Village Panchayet Regulation. He joins the reactionaries headed by the member for the Mysore District in bringing forward an "adjournment motion" in connection with the Bills relating to Local self-Government. This motion of adjournment was supported by the following honorable members.—Messrs. B. Narasinga Rao, Venkataramayya, H. Krishna Rao, D. Venkatesayya, N.S. Nanjundayya, C. Narasimhayya, M. Venkatakrishnayya, M. Ramachandra Rao, B. K. Garudachar, M. Shama Rao, C. Srikanteswara Iyer, Ramachandra Rao Scindia, B. L. Byanna and B. Abdul Rahiman. And these are the members who as representatives of the people opposed the introduction of Bills which bestowed self-Government on the people. What support did the proposals to extend Sanskrit Education and the study of the Vadas and Proyogas to all classes of people receive at the hands of these representatives? They were not there on their own behalf, nor on behalf of any particular community or class. And still they opposed the Local Self-Government Scheme. The amendments proposed by the same group with one or two exceptions, were not popular. We would urge on the attention of the persons who have the right to vote to go through these volumes carefully to see who were their real representatives and who were not. We intended to deal with the performance of each District member, but we find the clique so well-bound in alliance and voting in a body against the introduction of Bills which were for the benefit of the rural population, so that what applies to one applies to all members forming the clique.

We would suggest to voters to use their free mind unfettered by influences and we are confident that right candidates will receive the majority of their votes, candidates who fight for the rights of the people and not for the privileges of any small section of the people. The Assembly and the Council under the Reforms in Mysore are the free gifts of our Beloved Soverign who in the solicitude of love for his people has bestowed on them so much of freedom of action and scope for sharing the responsibilities of Government, so that, we should judge well and judge correctly before our vote is given to one who is one of us, who works for us, who identifies his interests with our interests who has no privileges apart from our privileges and who stands on no higher plane than the plane of those who send him to the Assembly or Council.

ಅಖಿಲಭಾರತೀಯ ವೀರಶೈವಮಹಾಸಭೆ.

ಈ ಮಹಾಸಭೆಯ ಅಧಿವೇಶನವನ್ನು ಹುಬ್ಬಳ್ಳಿಯಲ್ಲಿ ನೆರವೇರಿಸಲು ಅಲ್ಲಿಯ ವೀರಶೈವಬಂಧುಗಳು ನಿರ್ಧರಿಸಿ ಸತ್ಕಾರಸಂಘವನ್ನೇರ್ಪಡಿಸಿರುವ ವಿಚಾರವು ಈ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದಷ್ಟೆ. ಈ ಸತ್ಕಾರಸಂಘಾಧ್ಯಕ್ಷರಾದ ರಾವ್ ಬಹದ್ದೂರು ಕಂಬಳಿಯವರು ಬೊಂಬಾಯಿ ನ್ಯಾಯವಿಧಾಯಕಸಭಾ ಮೆಂಬರಾಗಿ ಚುನಾಯಿಸಲ್ಪಡಲು ಅಭ್ಯರ್ಥಿಗಳಾಗಿ ನಿಂತು ತತ್ಸಂಬಂಧ ಪ್ರಯತ್ನಶೀಲರಾಗಿದ್ದುದರಿಂದಲೂ ಆ ಪ್ರಾಂತದ ವೀರಶೈವರು ಚುನಾವಣೆಯ ಸಂಭ್ರಮಯುಕ್ತರಾಗಿದ್ದುದರಿಂದಲೂ ಮಹಾಸಭೆಯು ಕೂಡುವ ಕಾಲ, ಅದರ ಅಧ್ಯಕ್ಷರನ್ನು ಆರಿಸುವ ವಿಚಾರ, ಚರ್ಚಿಸಬೇಕಾದ ವಿಷಯ ಇವುಗಳನ್ನು ಕುರಿತು ಯಾವ ಕಾರ್ಯಭಾಗವನ್ನು ನಡೆಸಲು ಅವಕಾಶವಾಗಲಿಲ್ಲವೆಂದು ಹೇಳಬಹುದಾಗಿದೆ. ಈಗಲಾದರೊ ಆ ಚುನಾವಣೆಯ ಕಾರ್ಯಕಲಾಪವು ಮುಗಿದು ಹುಬ್ಬಳ್ಳಿಯ ವೀರಶೈವಬಂಧುಗಳು ಮಹಾಸಭಾ ಕಾರ್ಯೋನ್ಮುಖರಾಗಲು ಸನ್ನದ್ಧರಾಗಿರುವರಲ್ಲದೆ ಸ್ವಾಗತಸಂಘಾಧ್ಯಕ್ಷರಾದ ರಾ|| ಬ|| ಕಂಬಳಿಯವರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳ ಚುನಾವಣೆಯಲ್ಲಿ ಅತ್ಯಧಿಕವಾದ ಅಂದರೆ 16,863 ಓಟುಗಳನ್ನು ಪಡೆದು ಜಯಶೀಲರಾಗಿ ಸಮಾಜಕ್ಕೇ ಗೌರವಪ್ರತಿಷ್ಠೆಗಳನ್ನುಂಟುಮಾಡಿರುತ್ತಾರೆಂದು ತಿಳುಹಲು ಪರಮಾನಂದವಾಗುತ್ತದೆ. ಇದಕ್ಕಾಗಿ ನಾವು ರಾ|| ಬ|| ಕಂಬಳಿಯವರನ್ನು ಅಭಿನಂದಿಸಿ ಹಿಂದುಳಿದ ವರ್ಗದವರ ಹಿತಸಾಧನಕಾರ್ಯವನ್ನು ಇತೋಪ್ಯತಿಶಯವಾಗಿ ಮಾಡಿ ಕೀರ್ತಿಪ್ರತಿಷ್ಠೆಯನ್ನು ಪಡೆಯುವವರಾಗಲೆಂದು ಹಾರೈಸುತ್ತೇವೆ. ಸಭಾಚಾಲಕರಾದ ನಮ್ಮ ಹುಬ್ಬಳ್ಳಿಯ ವೀರಶೈವಬಂಧುಗಳು ಡಿಸಂಬರು ತಿಂಗಳು ಸಮೀಪಿಸಿದುದರಿಂದ ತತ್ಕಾರ್ಯೋನ್ಮುಖರಾಗಿ 1927 ನೆಯ ಜನವರಿ ತಾ|| 1 ಮತ್ತು 2 ರಲ್ಲಿ ಆವಶ್ಯಕತೋರಿದರೆ ತಾ|| 3 ರಲ್ಲಿ ಸಹ ಮಹಾಸಭೆಯು ನಡೆಯಬೇಕೆಂದು ಗೊತ್ತುಮಾಡಿರುವುದಾಗಿಯೂ, ಮಹಾಸಭಾಧ್ಯಕ್ಷತೆಯನ್ನು ವಹಿಸಲು ಬಿಜಾಪುರದ ಪ್ಲೀಡರ್ ರಾವ್ ಸಾಹೇಬ್ ಪಿ. ಜಿ. ಹಳಕಟ್ಟಿ, ಬಿ.ಎ., ಎಲ್.ಎಲ್.ಬಿ., ಯವರು ಸಮ್ಮತಿಸಿರುವುದಾಗಿಯೂ ಮಹಾಸಭಾ ಸ್ವಾಗತಸಂಘದ ಸೆಕ್ರೆಟರಿಯವರು ತಂತೀವಾರ್ತೆಯಿಂದ ನಮಗೆ ತಿಳಿಸಿರುತ್ತಾರೆ. ಡಿಸಂಬರ್ ತಿಂಗಳಲ್ಲಿ ತಾ|| 24 ರಿಂದ ಜನವರಿ ತಾ|| 1 ರ ವರೆಗೆ ಭರತಖಂಡದ ಪ್ರತಿಯೊಂದುಭಾಗದ ಕೋರ್ಟು ಕಚೇರಿಗಳಿಗೂ ವಿದ್ಯಾಶಾಲೆಗಳಿಗೂ ವಿರಾಮವಿರುವುದರಿಂದ ಪ್ರತಿಯೊಂದು ಸಾರ್ವಜನಿಕ ಹಾಗೂ ಜಾತಿ ಮತಗಳ ಸಭೆಗಳು ನಡೆಯಲೇರ್ಪಟ್ಟಿರುತ್ತವೆ. ಅದರಂತೆಯೇ ನಮ್ಮ ವೀರಶೈವಮಹಾಸಭಾಧಿವೇಶನವಾದರೂ ಈವರೆಗೆ ಮೇಲ್ಕಂಡ ವಿರಾಮಕಾಲದಲ್ಲಿಯೇ ನಡೆದಿರುವುದಾಗಿದೆ. ಅಂತಹುದರಲ್ಲಿ ಹುಬ್ಬಳ್ಳಿಯ ಸಭಾಚಾಲಕರು ಮಾತ್ರ ಮಹಾಸಭಾಧಿವೇಶನವು ರಜವು ಪೂರೈಸಿ ಸರ್ವರೂ ತಂತಮ್ಮ ಉದ್ಯೋಗದ ಮೇಲೆ ಹೋಗಿರಬೇಕಾದ ಕಾಲದಲ್ಲಿ ಅಂದರೆ ಜನವರಿ ತಾ|| 1 ರಿಂದ 3 ರ ವರೆಗೆ ನಡೆಯುವಂತೆ ಗೊತ್ತುಮಾಡಿರುವುದರ ಕಾರಣವು ಗೊತ್ತಾಗಲಿಲ್ಲ. ಈ ಕಾಲವು ಸರ್ಕಾರಿಯ ಉದ್ಯೋಗಸ್ಥರಿಗೂ, ವಿದ್ಯಾಶಾಲೆಯವರಿಗೂ, ಲಾಯರುಗಳಿಗೂ, ಕಕ್ಷಿಗಾರರಿಗೂ, ಬೇರೆಯವರಿಗೂ ಅನುಕೂಲವಲ್ಲವಾದುದರಿಂದ ಸ್ವಾಗತಸಂಘದವರು ಚೆನ್ನಾಗಿ ಪರ್ಯಾಲೋಚಿಸಿ ಎಲ್ಲ ಉದ್ಯೋಗದ ಸಮಾಜಬಾಂಧವರು ಒಂದು ಮಹಾಸಭೆಯನ್ನು ಶೋಭಾಯಮಾನಗೊಳಿಸಲು ಅನುಕೂಲಿಸುವಂತೆ ಸಾರ್ವತ್ರಿಕ ವಿರಾಮಕಾಲವಾದ ಡಿಸಂಬರ್ ತಾ|| 25 ರಿಂದ 31 ರೊಳಗೆ ಅನುಕೂಲವಾದ ಎರಡು ಅಥವಾ ಮೂರು ದಿವಸಗಳಲ್ಲಿ ಸಭೆಯು ನಡೆಯುವಂತೆ ಗೊತ್ತುಮಾಡಬೇಕಾಗಿ ಸೂಚಿಸುತ್ತೇವಲ್ಲದೆ ಆ ರೀತಿ ನೆರವೇರಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಗೋವಧನಿರೋಧಕ ಶಾಸನ.

ಮೈಸೂರು ಸಂಸ್ಥಾನಕ್ಕೆ ಕೃಷಿಯೇ ಪ್ರಧಾನವು. ಅಂತಹ ಕೃಷಿಕರ್ಮಕ್ಕೆ ಗೋವುಗಳೇ ಮುಖ್ಯಾಧಾರವು, ಮತ್ತು ಹಿಂದುಗಳಿಗೆ ಪರಮಪವಿತ್ರವೂ ಇಷ್ಟಾರ್ಥಸಿದ್ಧಿದಾಯಕವೂ ಆಗಿ ಅವರುಗಳಿಂದ ಪೂಜಿಸಲ್ಪಡುತ್ತಿರುವುವು. ಅದುಕಾರಣ ಪ್ರತ್ಯಕ್ಷ ಕಾಮಧೇನುಗಳಾದ ಗೋವುಗಳ ವಧೆಯು ನಮ್ಮ ಸಂಸ್ಥಾನದಲ್ಲಿ ನಿಲ್ಲಿಸಲ್ಪಡಲು ಒಂದು ಶಾಸನವೇರ್ಪಡಬೇಕೆಂದು ಗೋಪೂಜಕರೂ, ಧರ್ಮತತ್ಪರರೂ, ಪ್ರಾಣಿದಯಾಪರರೂ ಆದ ಶ್ರೀಮನ್ಮಹಾರಾಜರವರಲ್ಲಿ 'ಅಹಿಂಸಾಪರಮೋಧರ್ಮಃ' ಎಂಬ ವ್ರತಶೀಲರಾದ ಪ್ರಜೆಗಳು ನಾನಾಮುಖವಾಗಿ ಪ್ರಾರ್ಥಿಸಿಕೊಂಡುದರಮೇಲೆ ಗೋವಧನಿರೋಧಕಶಾಸನದ ಸಾಧಕಬಾಧಕಗಳನ್ನು ಪರ್ಯಾಲೋಚಿಸುವ ಬಗೆಗೆ ಒಂದು ಕಮಿಟಿಯೇರ್ಪಡಿಸಲ್ಪಟ್ಟಿರುತ್ತದೆ. ಈ ಕಮಿಟಿಯವರು ಗೋವಧೆಯನ್ನು ನಿರೋಧಿಸುವ ವಿಚಾರವಾಗಿ ಕೊಟ್ಟಿರುವ 39 ಪ್ರಶ್ನೆಗಳಿಗೆ ಉತ್ತರವನ್ನು ಈ ನವಂಬರ್ ತಾ|| 30 ರೊಳಗೆ ಕಮಿಟಿಯವರಲ್ಲಿಗೆ ಕಳುಹಿಸಿಕೊಡಬೇಕೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಈ ಪ್ರಶ್ನೆಗಳು ಹಿಂದೆ ಈ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತವೆ. ಆ ಪ್ರಶ್ನೆಗಳಿಗೆ ವಿಶ್ವಬಂಧು ಸಂಪಾದಕರಾದ ಆಸ್ಥಾನವಿದ್ವಾನ್ ನ್ಯಾಯತೀರ್ಥ ವೇ|| ಶಾಂತಿರಾಜಶಾಸ್ತ್ರಿಗಳು ಬರೆದಿರುವ ಉತ್ತರಗಳು ಬಹಳ ಸಮಂಜಸವಾಗಿರುವುದರಿಂದ ಅವನ್ನು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿಸಿರುತ್ತೇವೆ. ಗೋವಧನಿರೋಧಕಕಮಿಟಿಯವರು ಈ ಉತ್ತರಗಳನ್ನೂ ಇತರರು ಕೊಡುವ ಸಯುಕ್ತಿಕವಾದ ಉತ್ತರಗಳನ್ನೂ ಚೆನ್ನಾಗಿ ಪರ್ಯಾಲೋಚಿಸಿ ಗೋವಧನಿರೋಧಕಶಾಸನದ ಸಾಧಕವನ್ನೂ ಆವಶ್ಯಕತೆಯನ್ನೂ ಕುರಿತು ಸದಭಿಪ್ರಾಯವನ್ನು ಕೊಟ್ಟು ಭೂಲೋಕದ ಕಾಮಧೇನುವಿನ ಕೃಪೆಗೂ, ಆ ಜಗದ್ರಕ್ಷಕನಾದ ಪರಮೇಶ್ವರನ ವಾಹನವಾಗಿರುವ ವೃಷಭಕುಲ ಸಂರಕ್ಷಣೆಮಾಡಿದ ಪುಣ್ಯಕ್ಕೂ, ಗೋಪೂಜಕರ ಚಿರಕೃತಜ್ಞತೆಗೂ ಪಾತ್ರರಾಗುತ್ತಾರಲ್ಲದೆ ಅಶಕ್ತವೂ ಅಂಗಹೀನವೂ ಆದ ದನಕರುಗಳ ಪೋಷಣೆಯಿಂದ ಸಶಕ್ತವೂ ಉಪಯುಕ್ತವೂ ಆದ ಗೋವುಗಳ ಮೇವಿಗೆ ಅಭಾವವಾಗುತ್ತಾದುದರಿಂದ ಅಂತಹವುಗಳು ಸಂರಕ್ಷಿಸಲ್ಪಡದೆ ಸಂಹರಿಸಲ್ಪಡಬೇಕೆಂಬ ಹಾಸ್ಯಾಸ್ಪದವಾದ ಅಭಿಪ್ರಾಯವನ್ನು ಅನುಮೋದಿಸಿ ಆ ಧರ್ಮಸ್ವರೂಪನಾದ ವೃಷಭೇಶನ ಅವಿಶ್ವಾಸಕ್ಕೆ ಪಾತ್ರರಾಗುವುದಿಲ್ಲವೆಂದು ನಾವು ನಂಬುತ್ತೇವೆ.

ಇವರಲ್ಲವೇ ಸತ್ಪುತ್ರರು ?

ಚಿತ್ರದುರ್ಗ ತಾ|| ಹೊಳಲ್ಕೆರೆಯಲ್ಲಿ ಓದುವ ವೀರಶೈವ ಬಡವಿದ್ಯಾರ್ಥಿಗಳ ಸಹಾಯಾರ್ಥವಾಗಿ ಅದೇ ಊರಿನ ಮ|| ಮುರುಘಪ್ಪನವರು ತಮ್ಮ ತಂದೆಯವರಾದ ಕೈ|| ಗುರುಶಾಂತಪ್ಪನವರ ಸಂಕಲ್ಪದಂತೆ 20,000 ರೂಪಾಯಿಗಳನ್ನು ಪುದುವಟ್ಟಾಗಿ ಸರ್ಕಾರದವರ ವಶದಲ್ಲಿಟ್ಟು ಅದರ ವೃದ್ಧ್ಯಂಶದಲ್ಲಿ ಅರ್ಧವನ್ನು ವೀರಶೈವಬಡವಿದ್ಯಾರ್ಥಿಗಳಿಗುಪಯೋಗಿಸಬೇಕೆಂದೂ, ಉಳಿದ ಅರ್ಧವನ್ನು 1932 ರ ವರೆಗೆ ತಮಗೇ ಕೊಡಬೇಕೆಂದೂ ಅನಂತರ ವೃದ್ಧ್ಯಂಶವನ್ನೆಲ್ಲಾ ವಿದ್ಯಾರ್ಥಿಗಳಿಗೇನೇ ವಿನಿಯೋಗಿಸಬೇಕೆಂದೂ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಪ್ರಾರ್ಥಿಸಿಕೊಂಡಿರುವರು. ಮ|| ಮುರುಘಪ್ಪನವರ ಧರ್ಮೌದಾರ್ಯವನ್ನು ಪ್ರಭುತ್ವದವರು ಶ್ಲಾಘಿಸಿ ತಮ್ಮ ಮೆಚ್ಚುಗೆಯನ್ನು ಅವರಿಗೆ ಇ|| ಜನರಲ್‌ರವರ ಮೂಲಕ ತಿಳುಹಿಸಿರುವರು. ದಾನಗಳಲ್ಲೆಲ್ಲ ಶಾಶ್ವತವಾದ ವಿದ್ಯಾದಾನಕ್ಕಾಗಿ 20,000 ರೂ. ಗಳನ್ನು ವಿನಿಯೋಗಿಸಬೇಕೆಂಬ ಕೈ|| ಗುರುಶಾಂತಪ್ಪನವರ ಸತ್ಸಂಕಲ್ಪವನ್ನು, ಪಿತೃವಾಕ್ಯವನ್ನು ತೃಣವಾಗಿ ಪರಿಗಣಿಸುವ ಈ ನವನಾಗರಿಕಯುಗದಲ್ಲಿ, ಅಕ್ಷರಶಃ ಪರಿಪಾಲಿಸಿ ಕೈಲಾಸವಾಸಿಗಳಾದ ತಮ್ಮ ತಂದೆಯವರಿಗೆ ಈಶ್ವರಸನ್ಮಾನವಾಗುವಂತೆ ಮಾಡಿದ ಮ|| ಮುರುಘಪ್ಪನವರಲ್ಲವೆ ಸತ್ಪುತ್ರರು ? ಇವರಿಗೆ ಪರಮೇಶ್ವರನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಡಾಕ್ಟರ್ ಎ. ಕೆ. ಪಾಣಿಯವರು ಕುಷ್ಟರೋಗನಿವಾರಣಾಕಮಿಟಿಯ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಸೀಮೆಗೆ ದಯೆಮಾಡಿಸಿರುವ ಶ್ರೀಮದ್ಯುವರಾಜರವರು ಬರುವ ಡಿಸಂಬರ್ ತಾ|| 3 ರಲ್ಲಿ ಬೊಂಬಾಯಿಪಟ್ಟಣವನ್ನು ತಲುಪುವರಾಗಿ ವದಂತಿಯಿದೆ.

ನಾಳೆಯದಿನ ಪೇಟೆ ಟೌನ್ ಹಾಲಿನಲ್ಲಿ ರಾಜಧಾನಿಯ ಹಿಂದಿಭಾಷಾಸೇವಾಸಮಾಜದ ಪ್ರಥಮ ಕಾನ್ವೋಕೇಷನ್ನು ಸರ್ ಪ್ರಫುಲ್ಲಚಂದ್ರರಾಯರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಉದಕಮಂಡಲಕ್ಕೆ ಚಿತ್ತೈಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಬುಧವಾರ ಸಾಯಂಕಾಲ ಸತ್ಯಮಂಗಲ-ಚಾಮರಾಜನಗರ ಮಾರ್ಗವಾಗಿ ರಾಜಧಾನಿಗೆ ದಯೆಮಾಡಿಸಿತು.

ಈ ತಾ|| 30 ನೆಯ ಮಂಗಳವಾರ ಮೈಸೂರು ಡಿಸ್ಟ್ರಿಕ್ಟುಬೋರ್ಡು ಮೆಂಬರುಗಳ ಚುನಾವಣೆಯು ನಡೆಯುವುದರಿಂದ ಆ ದಿವಸ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಎಲ್ಲ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ರಜವು ಕೊಡಲ್ಪಟ್ಟಿರುವುದು.

ರಾಜಧಾನಿಯ ಲಕ್ಷ್ಮೀಪುರದಲ್ಲಿರುವ ಗೌರ್ನಮೆಂಟ್ ಮಿಡ್ಲ್ ಸ್ಕೂಲಿನ ಶ್ರೀಜಯಚಾಮರಾಜಕಬ್ ಪ್ಯಾಕ್ಕಿನವರು ತಮ್ಮ ಪ್ರಥಮ ಮತ್ತು ದ್ವಿತೀಯ ವಾರ್ಷಿಕೋತ್ಸವವನ್ನು ನೆನ್ನೆಯ ದಿವಸ ಸಾಯಂಕಾಲ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಕೆ. ಮೆಥ್ಯೂರವರ ಅಧ್ಯಕ್ಷತೆಯಲ್ಲಿ ಜರುಗಿಸಿದರು.

ಮೈಸೂರು ವಿಶ್ವವಿದ್ಯಾಲಯದವರ ಪ್ರೋತ್ಸಾಹದಿಂದ ಪ್ರಾಕ್ತನವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್, ಎಂ. ಎ., ಎಂ. ಆರ್. ಎ. ಎಸ್., ರವರು ಕನ್ನಡಭಾಷಾಚಾರಿತ್ರಕ ವಿಷಯವಾಗಿ ಈ ತಾ|| 29 ರಿಂದ ಡಿಸಂಬರ್ ತಾ|| 3 ರ ವರೆಗೆ 5 ಉಪನ್ಯಾಸಗಳನ್ನು ಮಹಾರಾಜಾಕಾಲೇಜಿನ ಉಪನ್ಯಾಸಮಂದಿರದಲ್ಲಿ ಪ್ರತಿದಿನ ಸಾಯಂಕಾಲ 6 ಗಂಟೆಯಿಂದ ಮಾಡುವರಾದುದರಿಂದ ಕನ್ನಡಭಾಷಾಭಿಮಾನಿಗಳು ಆಹ್ವಾನಿಸಲ್ಪಟ್ಟಿರುವರು.

ದಿವಂಗತರಾದ ವೈಣಿಕಶಿಖಾಮಣಿ ಶೇಷಣ್ಣನವರ ಸ್ಮಾರಕಕ್ಕಾಗಿ ಬೆಂಗಳೂರು ಶ್ರೀಕೃಷ್ಣಗಾಯನ ಸಮಾಜದವರು ಏರ್ಪಡಿಸಿರುವ ಧನನಿಧಿಗೆ ಸಹಾಯಮಾಡಲು ಅನೇಕ ಸಂಗೀತವಿದ್ವಾಂಸರುಗಳು ತಮ್ಮ ಪಾಂಡಿತ್ಯಪ್ರದರ್ಶನ ಮಾಡುತ್ತಿರುವರು. ಬರುವ ಡಿಸಂಬರ್ ತಾ|| 5ರಲ್ಲಿ ಬೆಂಗಳೂರಿನ ಗಾನವಿಶಾರದೆ ಸುಂದರಮ್ಮನ ಗಾನವು ಬೆಂಗಳೂರು ಶಂಕರಯ್ಯ ಹಾಲಿನಲ್ಲಿ ನಡೆಯುವುದಾದುದರಿಂದ ಗಾನವಿದ್ಯಾ ಪಕ್ಷಪಾತಿಗಳು ದಯೆಮಾಡಿಸಿ ಪ್ರೋತ್ಸಾಹಿಸಬೇಕಾಗಿ ಕೋರಲ್ಪಟ್ಟಿದೆ.

ಈದಿವಸ ಪ್ರಾತಃಕಾಲ ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವವು ಚಾನ್ಸಲರಾದ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಜರುಗಿತು. ಬಿ. ಎ. ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಡಿಗ್ರಿಗಳೂ ಪಾರಿತೋಷಿಕಗಳೂ, ಹಿಂದೆ ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರಾಗಿದ್ದ ಮುಸೀರ್-ಉಲ್-ತಾಲಿಂ ಮಿ|| ಎಚ್. ಜೆ. ಭಾಭಾ ಎಂ. ಎ., ರವರಿಗೆ ಡಾಕ್ಟರ್ ಆಫ್ ಲಿಟರೇಚರ್ ಎಂಬ ಪ್ರಶಸ್ತಿಯೂ ಕೊಡಲ್ಪಟ್ಟಮೇಲೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಬಂದಿರುವ ಶುದ್ಧಸ್ವದೇಶೀವ್ರತಶೀಲರೂ, ಮಹಾತ್ಮ ಗಾಂಧಿಯವರ ಅನುಯಾಯಿಗಳೂ ಆದ ಸರ್ ಪ್ರಫುಲ್ಲಚಂದ್ರರಾಯರವರು ನೂತನ ಪಟ್ಟಾಂಚಿತರನ್ನು ಕುರಿತು ಒಂದು ಶ್ಲಾಘ್ಯವಾದ ಜ್ಞಾನೋಪದೇಶಕ ಭಾಷಣವನ್ನು ಮಾಡಿದರು. ಅವರ ಭಾವವು ಅವರ ಹೆಸರಿಗೆ ತಕ್ಕಂತೆ ಪ್ರಫುಲ್ಲವಾಗಿರುವುದು.

ಕೊಳ್ಳೇಗಾಲ ತಾ|| ಮಧುವನಹಳ್ಳಿಯಲ್ಲಿರುವ ಮ|| ನೊ. ಸಂಗಪ್ಪನವರ ಪತ್ನಿಯವರು ಈಗ್ಗೆ 3 ವರ್ಷಗಳ ಹಿಂದೆ ಒಂದು ಹೆಣ್ಣು ಮತ್ತೊಂದು ಗಂಡು ಅವಳಿಜವಳಿಮಕ್ಕಳನ್ನು ಹೆತ್ತಿದ್ದರು. ಅವು ಕ್ಷೇಮವಾಗಿರುತ್ತವೆ. ಆಕೆಯು ಪುನಃ ಗರ್ಭಧಾರಣೆಮಾಡಿ ಕಳೆದ ತಾ|| 16 ರ ಮಧ್ಯಾಹ್ನದಲ್ಲಿ ಒಂದುಗಂಡು ಮತ್ತೊಂದು ಹೆಣ್ಣು ಈ ಪ್ರಕಾರ ಎರಡು ಮಕ್ಕಳನ್ನು ಪ್ರಸವಿಸಿದ್ದಲ್ಲದೆ ಅದೇ ರಾತ್ರಿಯಲ್ಲಿ ಇನ್ನೊಂದು ಗಂಡುಮಗುವನ್ನು ಹಡೆದರು. ಅವುಗಳಲ್ಲಿ ಎರಡು ಮಕ್ಕಳು 2 ದಿವಸಗಳವರೆಗೂ ಬದುಕಿದ್ದು ಅನಂತರ ಸತ್ತುಹೋದುವು, ಮತ್ತು ಉಳಿದ ಹೆಣ್ಣುಮಗುವೂ 3 ನೆಯದಿವಸ ಮರಣಹೊಂದಿತು. ಈ ಆಶ್ಚರ್ಯಕರವಾದ ಜನನವಾರ್ತೆಯನ್ನು ನೆರೆಹೊರೆಗ್ರಾಮಸ್ಥರುಗಳು ಕೇಳಿ ತಂಡತಂಡವಾಗಿ ಬಂದು ನೋಡಿ ಕಾಲವೈಚಿತ್ರ್ಯವನ್ನು ಪರಿಪರಿಯಾಗಿ ವರ್ಣಿಸುತ್ತ ಆಶ್ಚರ್ಯಮಗ್ನರಾಗಿದ್ದರೆಂದು ಮ|| ಬಿ. ಸದಾಶಿವಶರ್ಮರವರು ತಿಳಿಸಿರುತ್ತಾರೆ.

ಕಡೂರು ತಾ|| ಬೀರೂರು ನಿವಾಸಿಗಳಾದ ಮ|| ಎಚ್. ಎಂ. ಶಿವಲಿಂಗಪ್ಪಯ್ಯನವರೂ, ಮ|| ಚೆನ್ನಬಸವಾರಾಧ್ಯಸ್ವಾಮಿಯವರೂ, ಮ|| ಯು. ಎಸ್. ಶ್ರೀಕಂಠಶರ್ಮರವರೂ, ಮ|| ಎಸ್. ಎ. ರುದ್ರಯ್ಯನವರೂ ಅದೇ ಊರಿನ ಕಾಫಿಪ್ಲಾಂಟರ್ ಶ್ರೀಮಂತ ಚೆನ್ನವೀರಪ್ಪ ಶಿವಪ್ಪ ಇವರುಗಳ ಆಸ್ತಿಯ ವಿಚಾರದಲ್ಲಿ ದುಂಡಾವರ್ತಿನಡೆಸಿದರೆಂಬ ಅಪರಾಧಕ್ಕೆ ಗುರಿಮಾಡಲ್ಪಟ್ಟಿದ್ದುದರಮೇಲೆ ಚಿಕ್ಕಮಗಳೂರು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಅವರುಗಳು ಒಳ್ಳೇ ನಡತೆಯಿಂದಿರುವ ಬಗೆಗೆ ಹೊಣೆಯನ್ನು ತೆಗೆದುಕೊಂಡು ಬಿಟ್ಟಿದ್ದರು. ಇದರಮೇಲೆ ಅಪರಾಧಿಗಳು ಚೀಫ್ ಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರಲಾಗಿ ಕಳೆದ ಸೆಪ್ಟಂಬರ್ ತಿಂಗಳಲ್ಲಿ ದೋಷಮುಕ್ತರಾಗಿ ಮಾಡಲ್ಪಟ್ಟರೆಂದು ತಿಳುಹಲು ಸಂತೋಷವಾಗುತ್ತದೆ. ಮ|| ಶಿವಲಿಂಗಪ್ಪಯ್ಯನವರು ಅಪರಾಧಕ್ಕೆ ಗುರಿಮಾಡಲ್ಪಟ್ಟಿದ್ದುದರಿಂದ ಬೀರೂರು ಟೌನ್ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರ ಉದ್ಯೋಗವನ್ನೂ, ಡಿ|| ಬೋರ್ಡಿನ ಮೆಂಬರತನವನ್ನೂ ಬಿಟ್ಟುಬಿಡಬೇಕಾಗಿ ಬಂದಿದ್ದಿತು.

ಕಳೆದ ತಾ|| 23 ರಲ್ಲಿ ಚಾಮರಾಜನಗರದಿಂದ ಚೆನ್ನಮಲ್ಲಪ್ಪ ಮತ್ತು ಶಿವಪ್ಪ ಎಂಬಿಬ್ಬರು ಮೆಣಸಿನಕಾಯಿಯನ್ನು ಬಂಡಿಯಲ್ಲಿ ತುಂಬಿಕೊಂಡು ಮರಳ್ಳಿಸಂತೆಗೆ ಹೋಗಿ ಮಾರಾಟಮಾಡಿ 500-600 ರೂ. ಗಳ ಸಮೇತ ಅದೇಸಾಯಂಕಾಲ ಹಿಂದಿರುಗಿ ಬರುತ್ತಿರುವಾಗ್ಯೆ ಚಾಮರಾಜನಗರದಿಂದಾಚೆ 3 ಮೈಲಿದೂರದಲ್ಲಿರುವ ದೊಸಗರೆಬಸವನಹಳ್ಳದ ಮಂಗಳಸೇತುವೆಯ ಹತ್ತಿರ 4 ಜನರು ಎತ್ತುಗಳ ಮುಂದೆ ಪಟಾಸನ್ನು ಹಾರಿಸಿ ಇಬ್ಬರು ಎತ್ತುಗಳ ಮೂಗುದಾರವನ್ನು ಹಿಡಿದುಕೊಂಡು ಬಂಡಿಯನ್ನು ನಿಲ್ಲಿಸಿದರು. ಉಳಿದಿಬ್ಬರು ಬಂಡಿಯ ಹಿಂಭಾಗದಲ್ಲಿ ಪುನಃ ಪಟಾಸನ್ನು ಹಾರಿಸಿ ಬಂಡಿಯೊಳಕ್ಕೆ ನತ್ತಿ ಚೆನ್ನಮಲ್ಲಪ್ಪನನ್ನೂ ಶಿವಪ್ಪನನ್ನೂ ದೊಣ್ಣೆಯಿಂದ ಹೊಡೆದು ಛರ್ಜಿಯಿಂದ ತಿವಿಯುತ್ತಿರುವಲ್ಲಿ ಚೆನ್ನಮಲ್ಲಪ್ಪನು ಅಲ್ಪಸ್ವಲ್ಪ ಗಾಯವನ್ನು ಹೊಂದಿ ತಪ್ಪಿಸಿಕೊಂಡನು. ಶಿವಪ್ಪನಿಗೆಮಾತ್ರ ಪ್ರಾಣಾಪಾಯವಾಗಿದ್ದುದರಮೇಲೆ ಅವನು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಟ್ಟಾಗ್ಯೂ ಗುಣವನ್ನು ಹೊಂದದೆ 3 ದಿವಸಗಳ ಹಿಂದೆ ಸತ್ತುಹೋದನು. ಡಿ|| ಪೋಲೀಸು ಸೂಪರಿಂಟೆಂಡೆಂಟರು ವಿದ್ಯಮಾನವನ್ನು ವಿಚಾರಿಸಲು ಕೃತ್ಯನಡೆದ ಸ್ಥಳಕ್ಕೆ ಹೋಗಿದ್ದರು.

ಗುಂಡ್ಲುಪೇಟೆ ತಾ|| ತೆರಕಣಾಂಬಿಯವಾಸಸ್ಥಳಾದ ಸಾವಿತ್ರಮ್ಮನೆಂಬ ಓರ್ವ ಬ್ರಾಹ್ಮಣತಿಯು ತನ್ನ 14 ನೆಯ ವರ್ಷದಲ್ಲೇ ಪತಿಯನ್ನು ಕಳೆದುಕೊಂಡು ವಿಧವೆಯಾಗಿದ್ದವಳು ಅದೇ ಸ್ಥಳದ ಗುರುಲಿಂಗಾಚಾರಿ ಎಂಬ ಒಬ್ಬ ಅರ್ಕಸಾಲೆಯವನನ್ನು ತನ್ನ ಉಪಪತಿಯನ್ನಾಗಿ ಮಾಡಿಕೊಂಡಿದ್ದು ಅವನಿಗೆ ತನ್ನ ಆಸ್ತಿಯಲ್ಲಿ 400 ರೂ. ಗಳನ್ನು ಸಾಲವಾಗಿಕೊಟ್ಟು ಕೆಲ ಕಾಲಾನಂತರ ಮೈಸೂರು ಚಾಮುಂಡಿಬೆಟ್ಟಕ್ಕೆ ಬಂದು ಹೋಟಲನ್ನು ಮಡಗಿಕೊಂಡಿದ್ದಳಲ್ಲದೆ ದೇವಸ್ಥಾನದ ಗೊಲ್ಲರಚಾಕರಿಯಲ್ಲಿದ್ದ ಒಬ್ಬ ತುಂಡಾಂಡಿಗನನ್ನು ಉಪಪತಿಯನ್ನಾಗಿ ಮಾಡಿಕೊಂಡು ಆಗಾಗ್ಗೆ ತೆರಕಣಾಂಬಿಗೆ ಹೋಗಿ ಗುರುಲಿಂಗಾಚಾರಿಯಿಂದ ಬಡ್ಡಿಯನ್ನು ವಸೂಲುಮಾಡಿಕೊಂಡು ಬರುತ್ತಿದ್ದಳು. ಆದರೆ ಕಳೆದ ಅಕ್ಟೋಬರ್ ತಿಂಗಳಲ್ಲಿ ತೆರಕಣಾಂಬಿಗೆ ಹೊರಟಾಗ್ಗೆ ಮಿಂಡಗಾರ ಗೊಲ್ಲನು ಸಂಗಡ ಬರಲು ಆಕೆಯು ಅವನನ್ನು ಗುರುಲಿಂಗಾಚಾರಿಯ ತಮ್ಮನ ಮನೆಯಲ್ಲಿರಿಸಿ ಊಟಕ್ಕೆ ಎಡೆಯನ್ನು ಕಳುಹಿಸಿಕೊಡುತ್ತಿದ್ದಳು, ಮತ್ತು ಗುರುಲಿಂಗಾಚಾರಿಯು ಬಡ್ಡಿಹಣವನ್ನು ಕೂಡಲೆ ಕೊಡದೆ, ಕಾಲಹರಣಮಾಡಿದುದರಮೇಲೆ ಹೆಚ್ಚುದಿವಸ ಆ ಊರಿನಲ್ಲಿರಬೇಕಾಗಿ ಬರಲು, ಊರಿಗೆ ಹಿಂದಿರುಗಿ ಹೋಗುವಂತೆ ಗೊಲ್ಲರವನಿಗೆ ಹೇಳಿ ಎಡೆಯನ್ನು ಕಳುಹಿಸುವುದನ್ನು ನಿಲ್ಲಿಸಿಬಿಟ್ಟಳು. ಅದರಮೇಲೆ ಆ ಗೊಲ್ಲರವನು ಅವಳ ನಡತೆಯ ವಿಚಾರದಲ್ಲಿ ಸಂಶಯಪಟ್ಟು ನಿರಾಶನಾಗಿದ್ದನು. ಮಾರನೆಯದಿನ ಆ ಊರಿನ ಹೊರಗೆ ಒಂದು ಮರಕ್ಕೆ ಅವನ ಶವವು ನೇತುಹಾಕಲ್ಪಟ್ಟಿದ್ದುದನ್ನು ಪೊಲೀಸರು ತಿಳಿದು ಆ ಹೆಣವನ್ನು ತೆಗೆದು ವಿಚಾರಮಾಡುತ್ತಿರುವಾಗ್ಗೆ ಆ ಸ್ವೈರಿಣಿಯು ಬಂದು ಗೊಲ್ಲನ ಶವವನ್ನು ಕುರಿತು ನನಗೋಸ್ಕರ ಸಂಗಡ ಬಂದು ಪ್ರಾಣಬಿಟ್ಟೆಯಾ ? ಎಂದು ಹೇಳುತ್ತಿದ್ದುದನ್ನು ಪೊಲೀಸರು ಕೇಳಿ ಆಕೆಯನ್ನು ವಿಚಾರಿಸಲಾಗಿ ಪೂರ್ವೋತ್ತರಸಂಗತಿಯು ಆಕೆಯವಾಙ್ಮೂಲದಿಂದ ಹೊರಪಟ್ಟಿತೆಂದೂ, ಮರಣವು ಆತ್ಮಹತ್ಯದಿಂದಾದುದೋ ಕೊಲೆಯಿಂದಾದುದೋ ಇನ್ನೂ ನಿರ್ಧರವಾಗಿಲ್ಲವೆಂದೂ ತಿಳಿಯಬರುತ್ತದೆ.

ಮೈಸೂರು ಪ್ರಜಾಮಿತ್ರಮಂಡಲಿಯವರಿಂದ

ಡಿಸ್ಟ್ರಿಕ್ಟುಬೋರ್ಡು ಓಟರುಮಹಾಶಯರಿಗೆ ಎಚ್ಚರಿಕೆ.

(3)

ಯಾವ ಯಾವ ತಾಲ್ಲೂಕಿನಿಂದ ಎಷ್ಟೆಷ್ಟು ಮೆಂಬರುಗಳು ಆರಿಸಲ್ಪಡಬೇಕೋ, ಅಷ್ಟಷ್ಟು ಜನರಿಗೂ ಓಟನ್ನು ಕೊಡಲು ಒಬ್ಬ ಓಟರಿಗೆ ಅಧಿಕಾರವಿದೆ. ಎಂದರೆ, ಬೆಂಗಳೂರು ತಾಲ್ಲೂಕಿನಿಂದ ಮೂರು ಜನರನ್ನು ಆರಿಸಬೇಕಾಗಿದೆ. ಬೆಂಗಳೂರು ತಾಲ್ಲೂಕಿನಲ್ಲಿರತಕ್ಕ ಒಬ್ಬ ಓಟರು ತನಗೆ ಬೇಕಾದ ಮೂರು ಜನರಿಗೆ ಓಟನ್ನು ಕೊಡಬಹುದು. ಆದರೆ, ಉಮೇದುವಾರರಲ್ಲಿ ಕೆಲವರು ತಮಗೇ ಎಲ್ಲರಿಗಿಂತಲೂ ಹೆಚ್ಚಾದ ಓಟುಗಳು ಬರಬೇಕೆಂಬ ಸ್ವಾರ್ಥತೆಯಿಂದ ತಮ್ಮೊಬ್ಬರಿಗೆ ಮಾತ್ರ ಓಟನ್ನು ಕೊಟ್ಟು, ಉಳಿದ ಎರಡು ಓಟುಗಳನ್ನು ಬೇರೆ ಯಾರಿಗೂ ಕೊಡದಂತೆ ಓಟರುಗಳನ್ನು ಪ್ರೋತ್ಸಾಹಿಸಬಹುದು. ಹಾಗೆ ಮಾಡುವುದರಿಂದ ನಮಗೆ ಬೇಕಾದ ಮೂರು ಜನರನ್ನು ಕಳುಹಿಸುವುದಕ್ಕೆ ಬದಲು, ಒಬ್ಬರನ್ನು ಮಾತ್ರ ಚುನಾವಣೆಮಾಡಿದಂತಾಗುತ್ತದೆ. ಇದರಿಂದ ನಮ್ಮ ಹಿತಕಾಂಕ್ಷಿಗಳು ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಹೆಚ್ಚು ಸಂಖ್ಯಾಕರಾಗಿದ್ದುಕೊಂಡು ನಮಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಲು ಯತ್ನವಿಲ್ಲದಂತಾಗುವುದು. ಒಂದು ತಾಲ್ಲೂಕಿನಿಂದ ನಮ್ಮ ಹಿತವನ್ನು ಸಾಧಿಸತಕ್ಕವರು ಒಬ್ಬರಿಗೆ ಬದಲು ಮೂರುಜನರಿದ್ದರೆ, ಅವರಿಂದ ಆ ತಾಲ್ಲೂಕಿಗಾಗಲಿ ಜನಸಮುದಾಯಕ್ಕಾಗಲಿ ಎಷ್ಟು ಪ್ರಯೋಜನವಾಗುತ್ತದೆಂಬುದನ್ನು ಹೇಳಬೇಕಾದುದಿಲ್ಲ. ನಮ್ಮ ಅಭಿವೃದ್ಧಿಯನ್ನು ಕೋರತಕ್ಕವರು ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಿ ಅಲ್ಪಸಂಖ್ಯಾಕರಾಗಿದ್ದರೆ, ಅವರಿಂದ ಯಾವ ಕೆಲಸವೂ ಸಾಧಿಸಲ್ಪಡಲು ಅವಕಾಶವಿಲ್ಲ. ಏತಕ್ಕೆಂದರೆ, ಪ್ರತಿಯೊಂದು ಕೆಲಸವೂ ಮೆಂಬರುಗಳ ಬಹುಮತವನ್ನನುಸರಿಸಿಯೇ ನಡೆಯತಕ್ಕದ್ದಾಗಿದೆ. ಹೆಚ್ಚು ಜನರಿಗೆ ಓಟನ್ನು ಕೊಡತಕ್ಕ ಅಧಿಕಾರವನ್ನು ಒಬ್ಬ ಉಮೇದುವಾರನ ಪರವಾಗಿ ಮಾತ್ರ ಉಪಯೋಗಿಸುವುದರಿಂದ, ಹಾಗೆ ಓಟುಮಾಡತಕ್ಕವರು ತಮಗಿರತಕ್ಕ ಹಕ್ಕನ್ನು ಸಂಪೂರ್ಣವಾಗಿ ಉಪಯೋಗಿಸದ ದೋಷಕ್ಕೆ ಪಾತ್ರರಾಗುವರಲ್ಲದೆ, ನಮ್ಮ ಪುರೋಭಿವೃದ್ಧಿಗೆ ಪ್ರತಿಬಂಧಕವನ್ನು ತಂದೊಡ್ಡಿದಂತಾಗುವುದು.

ರಾವ್ ಸಾಹೇಬ್ ಚೆನ್ನಯ್ಯ, ಪ್ರೆಸಿಡೆಂಟ್,
ಮಹಮ್ಮದ್ ಅಬ್ಬಾಸ್ ಖಾನ್, ವೈಸ್‌ಪ್ರೆಸಿಡೆಂಟ್,
ಜಿ. ಪರಮಶಿವಯ್ಯ, ಸೆಕ್ರೆಟರಿ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ,

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘದಿಂದ ಬೆಂಗಳೂರು ಡಿಸ್ಟ್ರಿಕ್ಟುಬೋರ್ಡಿಗೆ ಒಬ್ಬರನ್ನು ಮೆಂಬರನ್ನಾಗಿ ಚುನಾವಣೆಮಾಡಿ ಕಳುಹಿಸಿಕೊಡಬಹುದೆಂಬ ಹಕ್ಕನ್ನು ಘನಸರ್ಕಾರದವರು ದಯೆಪಾಲಿಸಿರುವುದರಿಂದ ಸಂಘದ ಮೆಂಬರುಗಳಲ್ಲಿ ಯಾರುಬೇಕಾದರೂ ಉಮೇದುವಾರರಾಗಿ ನಿಲ್ಲಬಹುದು. ಓಟರು (ಮೆಂಬರು) ಗಳ ಪಟ್ಟಿಯು ಸಂಘದ ಸೆಕ್ರೆಟರಿಯವರ ಆಫೀಸಿನಲ್ಲಿ ಪ್ರಚುರಪಡಿಸಲ್ಪಟ್ಟಿರುತ್ತದೆ. ಯಾರ ಹೆಸರಾದರೂ ಬಿಟ್ಟುಹೋಗಿದ್ದಲ್ಲಿ ಅವರುಗಳ ಹೆಸರನ್ನು ಬೆಂಗಳೂರು ಡಿ|| ಡೆಪ್ಯುಟಿಕಮಿಷನರವರಿಗೆ ತಾ|| 10-12-26 ರೊಳಗಾಗಿ ಬರೆದುಕೊಳ್ಳಬೇಕು. ಉಮೇದುವಾರರಾಗಲು ಅಪೇಕ್ಷೆಪಡುವವರು ತಮ್ಮ ಅಭಿಲಾಷೆಯನ್ನು ಡಿಸಂಬರು 15 ರ ಒಳಗಾಗಿ ಬೆಂಗಳೂರು ಡೆಪ್ಯುಟಿಕಮಿಷನರ್‌ರವರಿಗೆ ಬರೆದುಕೊಳ್ಳತಕ್ಕದ್ದು. ಚುನಾವಣೆಯು 31-12-26 ರ ಮಧ್ಯಾಹ್ನ 12 ರಿಂದ ಸಾಯಂಕಾಲ 5 ಘಂಟೆಯವರೆಗೆ ಬೆಂಗಳೂರು ಸಿಟಿ ಶೇಷಾದ್ರಿ ರೋಡಿನಲ್ಲಿರುವ ಶ್ರೀ ಜಗದ್ಗುರುಜಯದೇವ ಮುರುಘರಾಜೇಂದ್ರ ವೀರಶೈವಹಾಸ್ಟಲ್ ಕಟ್ಟಡದಲ್ಲಿ ನಡೆಯುವುದು.

ಬೆಂಗಳೂರು, } ಎಂ. ನಾಗಪ್ಪ, ಜಿ. ಪರಮಶಿವಯ್ಯ,
26-11-26. } ಅ|| ಸೆಕ್ರೆಟರಿ. ಸೆಕ್ರೆಟರಿ.

ಕೈ|| ಕಬ್ಬಹಳ್ಳಿ ಚೆನ್ನಬಸವಪ್ಪನವರ ಸ್ಮಾರಕಕ್ಕಾಗಿ ಬಂದ ದ್ರವ್ಯ.

ಈ ಕೆಳಗೆ ಕಂಡ ದೊಡ್ಡಮನುಷ್ಯರಿಂದ ಬಂದ ಚಂದಾಹಣವನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿದೆ.

ಟಿ. ಬಿ. ಮಲ್ಲೇಗೌಡರು ಕಾಫಿಪ್ಲ್ಯಾಂಟರು ಚಿಕ್ಕಮಗಳೂರು 15 ರೂ.

ಜಿ. ಪರಮಶಿವಯ್ಯ, ಅಡ್ವೊಕೇಟ್, ಬೆಂಗಳೂರು.

ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸಿನಿಂದ ಪ್ರಸಿದ್ಧಪತ್ರಿಕೆ.

"ಮೈಸೂರುಸಂಸ್ಥಾನದಲ್ಲಿ ಮಾಪಿಳ್ಳೆಗಳಿಗೆ ಒಂದು ವಸಾಹತನ್ನು ಕಲ್ಪಿಸುವವಿಚಾರ" ಎಂಬ ಶಿರೋನಾಮೆಯಲ್ಲಿ ಈ ಮಾಹೆ 1 ನೇ ತಾರೀಖಿನ "ವೆಲ್ತ್ ಆಫ್ ಮೈಸೂರು" ಎಂಬ ವರ್ತಮಾನಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ಲೇಖನವನ್ನು ಬರೆದಿರುವರು. ಈ ವಿಚಾರದಲ್ಲಿ ಸರ್ಕಾರದವರು ಸಾದರಪಡಿಸಿರುವ ಹುಕ್ಕುಮಿನ ವಿಷಯದಲ್ಲಿ ದೋಷಾರೋಪಣೆಮಾಡಿರುತ್ತಾರೆ. ಇವರಿಗೆ ಈ ವಿಚಾರದಲ್ಲಿ ತಪ್ಪುತಿಳುವಳಿಕೆ ಇರುವಂತೆ ಕಂಡುಬರುತ್ತದೆ. ವಸಾಹತನ್ನು ಕಲ್ಪಿಸುವ ಏರ್ಪಾಡಿನಿಂದ ಮಾಪಿಳ್ಳೆಯವರಿಗೆ ಮಾತ್ರ ಪ್ರಯೋಜನವಾಗುವಂತೆ ಉದ್ದೇಶಿಸಲಾಗಿದೆಯೆಂಬುದು ನಿಜವಲ್ಲ. ನಿಜವಾದ ಅಂಶಗಳೇನೆಂದರೆ.—ಭದ್ರಾವತಿ ಕಬ್ಬಿಣದಕಾರ್ಖಾನೆಗಾಗಿ ಸೌದೆಯನ್ನು ಕಡಿಯುವುದಕ್ಕಾಗಿ ಭದ್ರಾವತಿ ಸಮೀಪದಲ್ಲಿ ಆ ಸ್ಥಳದ ಕೂಲಿಗಾರರು ದೊರೆಯದೇ ಇರುವ ಪ್ರಯುಕ್ತ, ವರುಷವರುಷವೂ ಪಶ್ಚಿಮಘಟ್ಟಗಳಿಂದ ಕೂಲಿಗಾರರನ್ನು ಬರಮಾಡಿಕೊಳ್ಳುವುದು ವಾಡಿಕೆಯಾಗಿರುತ್ತದೆ. ಈ ರೀತಿಯಾಗಿ ಹೊರಗಡೆಯಿಂದ ಕೂಲಿಯವರನ್ನು ಬರಮಾಡಿಕೊಳ್ಳುವುದು ತುಂಬಾ ಅನಾನುಕೂಲವಾಗಿ ಕಂಡುಬಂದಿರುತ್ತದೆ. ಏಕೆಂದರೆ, ಕೂಲಿಗಾರರು ಅವರಿಂದ ಕೆಲಸ ನಡೆಯಬೇಕಾದ ಸಮಯದಲ್ಲಿ, ಏಕದಂ ಸದರಿ ಕಾರ್ಖಾನೆಯನ್ನು ಬಿಟ್ಟು ಹೊರಟುಹೋಗುತ್ತಾರೆ. ಈ ಕಾರಣದಿಂದ ಫಾರೆಸ್ಟ್ ಕನ್ಸರ್ವೇಟರವರು ರೆವಿನ್ಯೂ ಇಲಾಖೆಯವರ ಆಲೋಚನೆಯನ್ನು ಕೇಳಿ ಒಂದು ಏರ್ಪಾಡನ್ನು ತಯಾರ್ಮಾಡಲಾಗಿ, ಸರ್ಕಾರದವರು ಅದನ್ನು ಮಂಜೂರ್ಮಾಡಿದರು. ಇದರಿಂದ ಕೂಲಿಯವರು ಯಾರೇ ಆಗಲಿ ಭದ್ರಾವತಿ ಸಮೀಪದಲ್ಲಿ ಖಾಯಮ್ಮಾಗಿ ನಿಲ್ಲುವುದಕ್ಕೂ ಮತ್ತು ವರುಷವೆಲ್ಲಾ ಕೆಲಸಕ್ಕೆ ದೊರೆಯುವುದಕ್ಕೂ ಸಹ ಅವರಿಗೆ ಉತ್ತೇಜನ ಕೊಡುವುದಕ್ಕೆ ಅವಕಾಶವಾಯಿತು. ಈ ಏರ್ಪಾಡನ್ನು ಮಾಪಿಳ್ಳೆಯವರಿಗೆ ಮಾತ್ರ ಸೂಚಿಸಿರುವುದಿಲ್ಲ. ಭದ್ರಾವತಿ ಕಬ್ಬಿಣದಕಾರ್ಖಾನೆಯಲ್ಲಿ ಕೆಲಸಮಾಡುತ್ತಿರುವ ಎಲ್ಲಾ ತರಗತಿಯ ಕೂಲಿಯವರಿಗೂ ಅನ್ವಯಿಸುತ್ತದೆ.

ಗೋವಧನಿರೋಧಕಪ್ರಶ್ನಾವಳಿಗುತ್ತರ.

ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನು ನಿರೋಧಗೊಳಿಸುವ ವಿಚಾರದಲ್ಲಿ ಸರ್ಕಾರದಿಂದ ಕೊಡಲ್ಪಟ್ಟಿರುವ ಪ್ರಶ್ನಾವಳಿಯು ಕಳೆದ ತಾ|| 13ನೆಯ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದಷ್ಟೆ. ಆ ಪ್ರಶ್ನೆಗಳಿಗೆ ಅನುಕ್ರಮವಾಗಿ ಆಸ್ಥಾನವಿದ್ವಾನ್ ನ್ಯಾಯತೀರ್ಥ ವೇ|| ಶಾಂತಿರಾಜಶಾಸ್ತ್ರಿಗಳಿಂದ ಬರೆಯಲ್ಪಟ್ಟಿರುವ ಉತ್ತರಗಳು ಈ ಕೆಳಗೆ ಕೊಡಲ್ಪಟ್ಟಿವೆ.—

1ನೇ ಪ್ರಶ್ನೆಗೆ ಉತ್ತರ—ಸಂಸ್ಥಾನದಲ್ಲಿ ಗೋವಧೆಯು ನಡೆಯದಂತೆ ಅಡ್ಡಿಪಡಿಸುವುದು ಬಹಳ ಆವಶ್ಯಕವೆಂದು ನಾವು ಭಾವಿಸುತ್ತೇವೆ.

2ನೇ ಪ್ರಶ್ನೆಗೆ—ಗೋವುಗಳ ಪವಿತ್ರತೆಯನ್ನೂ ಪೂಜ್ಯತೆಯನ್ನೂ ಅನೇಕಗ್ರಂಥಗಳಲ್ಲಿ ವರ್ಣಿಸಿರುವುದರಿಂದಲೂ, "ಅಹಿಂಸಾಪರಮೋಧರ್ಮಃ" ಎಂಬುದು ಸರ್ವಮತ ಸಾಮಾನ್ಯವಾದ ನಿಯಮವಾಗಿರುವುದರಿಂದಲೂ ಕೃಷಿಪ್ರಧಾನವಾದ ಮತ್ತು ಹೆಚ್ಚಾಗಿ ಗೋರಸಜೀವಿಯಾದ ಹಿಂದುಸ್ಥಾನಕ್ಕೆ ಗೋವಧೆಯು ಅತ್ಯಂತ ಹಾನಿಕಾರಕವಾಗಿರುವುದರಿಂದಲೂ ಗೋವಧನಿರೋಧವು (a) ಮತಸಂಬಂಧವಾಗಿಯೂ (b) ಆರ್ಥಿಕಸ್ಥಿತಿಗೆ ಸಂಬಂಧಪಟ್ಟುದಾಗಿಯೂ (c) ಶ್ರೀಮನ್ಮಹಾರಾಜರವರು ಮೊದಲಾಗಿ ಸಂಸ್ಥಾನದ ಬಹುಮಂದಿಗಳು ಗೋಪೂಜಕರಾಗಿರುವುದರಿಂದ ಪಂಗಡಗಳಲ್ಲಿ ಸೌಹಾರ್ದಭಾವವನ್ನುಂಟುಮಾಡುವುದಕ್ಕೆ ಸಹಕಾರಿಯಾಗಿಯೂ (d) ಸಮಾಧಾನವನ್ನುಂಟುಮಾಡುವುದಾಗಿಯೂ (e) ಸಾಮರಸ್ಯವನ್ನುಂಟುಮಾಡುವುದಾಗಿಯೂ ಇದೆ. ಎಲ್ಲಾ ಪ್ರಾಣಿಗಳಮೇಲೆಯೂ ದಯೆಯನ್ನಿಡಬೇಕೆಂದಿರುವಾಗ ಬಹು ಪ್ರಯೋಜನಕಾರಿಯಾದ ಮತ್ತು ಸಾಧುವಾದ ಗೋವುಗಳ ವಿಷಯದಲ್ಲಿ ಹೇಳಬೇಕಾದುದೇ ಇಲ್ಲವು. ಗೋವಧೆಯಿಂದ ಸೌಹಾರ್ದಭಾವವೂ ಸಮಾಧಾನವೂ, ಸಾಮರಸ್ಯವೂ ತಪ್ಪಿ ಹಿಂದುಸ್ಥಾನದಲ್ಲಿ ಅನೇಕ ಕಡೆ ಕದನ ಕಡಿದಾಟಗಳಾದುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಯಾವವಿಧದಿಂದ ನೋಡಿದರೂ ಗೋವಧನಿರೋಧವು ಪರಮಾವಶ್ಯಕವೆಂದು ಕಂಡುಬರುತ್ತದೆ.

3ನೇ ಪ್ರಶ್ನೆಗೆ—ಗೋವುಗಳು ಪವಿತ್ರಜೀವಿಗಳೆಂದು ಹಿಂದುಗಳಿಂದ ಪರಿಗಣಿಸಲ್ಪಟ್ಟಿರುವುದರಿಂದ ಧಾರ್ಮಿಕದೃಷ್ಟಿಯಿಂದಲೂ, ಕೃಷಿಗೆ ಗೊಬ್ಬರವು ಮುಖ್ಯಸಾಮಗ್ರಿಯಾಗಿರುವುದರಿಂದ ಆರ್ಥಿಕದೃಷ್ಟಿಯಿಂದಲೂ, ಗೋವು ಗೊಡ್ಡಾಗಿಯಾದರೂ ಇರಲಿ ಮುದಿಯಾಗಿಯಾದರೂ ಇರಲಿ ಯಾವ ಗೋವುಗಳನ್ನೂ ವಧೆಮಾಡಬಾರದೆಂಬುದೇ ನಮ್ಮಿಷ್ಟ.

(b) ಪ್ರಶ್ನೆಗೆ—ಹೋರಿಗಳೂ ಎತ್ತುಗಳೂ ಮುದಿಯಾಗಿದ್ದರೂ ಇತರವಿಧದಲ್ಲಿ ನ್ಯೂನತೆಯುಳ್ಳವುಗಳಾಗಿದ್ದರೂ ಅವುಗಳನ್ನೂ ಕೊಲ್ಲಕೂಡದೆಂಬುದೂ, ಅವುಗಳು ದುಡಿಯುವವರೆಗೆ ದುಡಿಸಿ ಆಮೇಲೆ ಕೃತಘ್ನತೆಯಿಂದ ಕೊಲ್ಲುವಂತಹ ಕಠಿನಭಾವವು ಮನುಷ್ಯನಲ್ಲಿ ಉಂಟಾಗಬಾರದೆಂಬುದೂ ನಮ್ಮ ಇಷ್ಟ. ದಯೆಯಿಂದಮೇಲೆ ಅವುಗಳೂ ದಯೆಗೆ ಪಾತ್ರಗಳು. ಅವುಗಳಿಂದ ಕೃಷಿಗೆ ಗೊಬ್ಬರವಾಗುವುದು. ಮೇಲೆ ಹೇಳಿದ ಕಾರಣಗಳಿಂದ ಎಮ್ಮೆಗಳನ್ನೂ, ಕರುಗಳನ್ನೂ, ಎಮ್ಮೆಯ ಕಡಸುಗಳನ್ನೂ, ಹಸುವಿನ ಕಡಸುಗಳನ್ನೂ ಕೊಲ್ಲಕೂಡದೆಂದು ನಿರೋಧಗೊಳಿಸಬೇಕೆಂಬುದು ನಮ್ಮ ಅಭಿಪ್ರಾಯ.

4ನೇ ಪ್ರಶ್ನೆಗೆ—ಮೈಸೂರುನಗರದಲ್ಲಿ ವರ್ಷ ಒಂದಕ್ಕೆ ಸುಮಾರು ಮೂರುಸಾವಿರ ಗೋವುಗಳೂ ಐನೂರು ಎಮ್ಮೆಗಳೂ ಕೊಲ್ಲಲ್ಪಡುತ್ತವೆಂದು ತಿಳಿದುಬರುತ್ತದೆ. ಇದರ ಸರಿಯಾದ ವಿವರವನ್ನೂ ಈ ಪ್ರಶ್ನೆಗೆ ಸಂಬಂಧಪಟ್ಟ ೧ ರಿಂದ ೭ ರ ವರೆಗಿನ ಅಂತಃಪ್ರಶ್ನೆಗಳ ಉತ್ತರವನ್ನೂ ಘನಸರ್ಕಾರದವರು ಆಯಾ ಮ್ಯುನಿಸಿಪಾಲಿಟಿಗಳಿಂದಲೂ ಸ್ಥಳೀಯ ಸಂಸ್ಥೆಗಳಿಂದಲೂ ತಿಳಿದುಕೊಳ್ಳುವುದು ಸಾಧ್ಯ.

5ನೇ ಪ್ರಶ್ನೆಗೆ—ಸಂಸ್ಥಾನದಲ್ಲಿ ದನಗಳನ್ನು ವಧೆಮಾಡುವ ಮುಖ್ಯ ಸ್ಥಳಗಳು ಬೆಂಗಳೂರು-ಕಂಟೋನ್ಮೆಂಟ್, ಮೈಸೂರು, ಕೋಲಾರ-ಚಿನ್ನದ ಗಣಿ ದಾವಣಗೆರೆ. ಈ ಪೈಕಿ ಮೈಸೂರಲ್ಲಿ ಕೊಲ್ಲಲ್ಪಡುವ ದನಗಳ ಸರಾಸರಿ ಸಂಖ್ಯೆಯು ಮೇಲೆ ನಾಲ್ಕನೆಯ ಉತ್ತರದಲ್ಲಿ ತೋರಿಸಲ್ಪಟ್ಟಿದೆ. ೧ ರಿಂದ ೭ ರವರೆಗಿನ ಅಂತಃಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಲು ನಮಗೆ ಸಾಧ್ಯವಿಲ್ಲ. ಅದನ್ನು ತಿಳಿಯುವುದು ಸರ್ಕಾರದವರಿಗೆ ಸಾಧ್ಯ.

6ನೇ ಪ್ರಶ್ನೆಗೆ—ಮೈಸೂರಿನಲ್ಲಿ ೧೨ ದನದಮಾಂಸವನ್ನು ಮಾರುವ ಅಂಗಡಿಗಳು ಇವೆ. ಕಸಾಯಿಮನೆಗಳು ಸುಮಾರು ಇಪ್ಪತ್ತು ಇರಬಹುದು. ಗೋಮಾಂಸಮಾರುವವರು ಸುಮಾರು ಇಪ್ಪತ್ತುಜನರು ಇರಬಹುದು. ಚರ್ಮದ ಸಾಮಾನುಗಳನ್ನು ಮಾಡುವವರು ಇನ್ನೂರು ಜನರಿರಬಹುದು.

7ನೇ ಪ್ರಶ್ನೆಗೆ—ತಿಳುವಳಿಕೆಯಿಲ್ಲದ ರೈತರು ಮೊದಲಾದ ಜನರಿಂದ ವಧೆಗೆಂದು ಹೇಳದೆ ಅವರನ್ನು ವಂಚಿಸಿ ಸಂತೆ ಮೊದಲಾದ ಸ್ಥಾನಗಳಲ್ಲಿ ಪಡೆಯುತ್ತಾರೆ. ದನಗಳನ್ನು ಮಾರುವ ಆ ಜನರಿಗೆ ಸಾಮಾನ್ಯವಾಗಿ ದನಗಳನ್ನು ವಧೆಗೋಸ್ಕರ ತಾವು ಮಾರುತ್ತೇವೆಂಬ ಪರಿಜ್ಞಾನವಾಗಲಿ ಹಾಗೆ ಮಾಡುವುದರಿಂದ ತಮಗೆ ಮಹಾಪಾತಕವು ಸಂಭವಿಸುವುದೆಂಬ ಪರಿಜ್ಞಾನವಾಗಲಿ, ದೇಶದ ಆರ್ಥಿಕಸ್ಥಿತಿಗೆ ಹಾನಿತಟ್ಟುವುದೆಂಬ ಪರಿಜ್ಞಾನವಾಗಲಿ ಇರುವುದಿಲ್ಲ.

8ನೇ ಪ್ರಶ್ನೆಗೆ—ಸಂಸ್ಥಾನದಲ್ಲಿ ದನದ ಮಾಂಸಕ್ಕೋಸ್ಕರ ಉತ್ತಮವಾದ ತಳಿಯನ್ನು ಪಡೆಯುವುದಕ್ಕಾಗಿ ಎಲ್ಲಿ ಏರ್ಪಾಡು ನಡೆಸಲ್ಪಡುತ್ತಿರುವುದೆಂಬುದು ನಮಗೆ ತಿಳಿಯದು. ಉತ್ತಮವಾದ ತಳಿಯನ್ನು ಪಡೆಯುವುದಕ್ಕಾಗಿಯೂ ರಾಸುಗಳ ಸಂಖ್ಯೆಯನ್ನು ವೃದ್ಧಿಪಡಿಸುವುದಕ್ಕಾಗಿಯೂ ಅದು ಕಡಮೆಬೀಳದೆ ಒಂದೇಸಮನಾಗಿರುವುದಕ್ಕಾಗಿಯೂ ಕೆಲವು ಅಮೃತಮಹಲ್ ವಿನಾ ಬೇರೆ ಯಾವ ಏರ್ಪಾಡೂ ನಡೆಸಲ್ಪಟ್ಟೂ, ಪಡುತ್ತಲೂ ಇರುವುದು ನಮ್ಮ ಗೋಚರಕ್ಕೆ ಬಂದಿಲ್ಲ. ಸೇರ್ವೆಗಾರರೇನೋ ಕೊಂಚಮಟ್ಟಿಗೆ ಉತ್ತಮವಾದ ತಳಿಯನ್ನು ಪಡೆಯುವುದಕ್ಕಾಗಿ ಪ್ರಯತ್ನಿಸುತ್ತಿರುತ್ತಾರೆ. ದಿನೇ ದಿನೇ ಗೋಚರಿ ಭೂಮಿಯು ಕಡಮೆಯಾಗುತ್ತ ಬರುತ್ತಿರುವುದು ಕಂಡುಬರುತ್ತದೆ. ಗ್ರಾಮಾಂತರಗಳ ಹುಲ್ಲುಗಾವಲುಗಳು ತಪ್ಪಿಸಲ್ಪಡುತ್ತಿವೆ. ಕಾಡುಗುಡ್ಡಗಳ ಹುಲ್ಲು ಜಂಗಲಿಯ ಕಾನೂನಿಗೊಳಪಟ್ಟಿದೆ. ಅಂತು ಇಂತು ದನಗಳಿಗೆ ಬಾಯಿತುಂಬ ಹುಲ್ಲಿಗೂ ಅಭಾವವಾಗಿರುವುದರಿಂದ ಇದ್ದ ರಾಸುಗಳನ್ನು ಕಾಪಾಡುವುದೇ ಕಷ್ಟವಾಗಿದೆ.

9ನೇ ಪ್ರಶ್ನೆಗೆ—ಒಂದು ಹಸುವಿನ ಅಥವಾ ಎತ್ತಿನ ಸರಾಸರಿ ಬೆಲೆಯು ಸುಮಾರು 7-8 ರೂಪಾಯಿಗಳಾಗಬಹುದು.

10ನೇ ಪ್ರಶ್ನೆಗೆ—ಸಾಮಾನ್ಯವಾಗಿ ದನದಮಾಂಸವನ್ನು ಆಹಾರಕ್ಕೆ ಉಪಯೋಗಿಸುವವರು ಕಡೆದರ್ಜೆಯ ಕ್ರಿಶ್ಚಿಯನ್ನರು ಮತ್ತು ಮಹಮ್ಮದೀಯರು. ಆದಿಕರ್ನಾಟಕರು ಮತ್ತು ಆದಿದ್ರಾವಿಡರು ಮಾಂಸಕ್ಕೋಸ್ಕರ ದನಗಳನ್ನು ವಧೆಮಾಡುವುದಿಲ್ಲ. ಆ ಮಾಂಸವನ್ನು ಭಕ್ಷಿಸುವುದುಂಟು. ಈ ನಾಲ್ಕು ಪಂಗಡಗಳಲ್ಲಿಯೂ ಉತ್ತಮರು ದನದ ಮಾಂಸವನ್ನು ಭಕ್ಷಿಸುವುದು ತಿಳಿದುಬರುವುದಿಲ್ಲ.

11ನೇ ಪ್ರಶ್ನೆಗೆ—ದನದ ಮಾಂಸವು ಸ್ವಲ್ಪ ಅಗ್ಗವಾಗಿರಬಹುದು. ಆದರೆ ಈ ಅಗ್ಗಕ್ಕೂ ದನಗಳ ಪವಿತ್ರತೆ ಮತ್ತು ಆರ್ಥಿಕಪ್ರಯೋಜನ ಇವುಗಳಿಗೂ ಹೋಲಿಕೆಯಲ್ಲಿ ಅಜಗಜಾಂತರ ವ್ಯತ್ಯಾಸವಿರುವುದರಿಂದ ಅಗ್ಗವಾಗಿರುವಿಕೆಯು ಅವುಗಳ ವಧೆಗೆ ಎಂದೂ ಸಾಧಕವಾಗಬಾರದು. ಅದಕ್ಕಿಂತಲೂ ಅಗ್ಗವಾಗಿ ಆ ಪರಿಮಾಣದಲ್ಲಿ ಕೆಲವು ಧಾನ್ಯಗಳೂ ಸಿಕ್ಕಬಹುದು. ಅಲ್ಲದೆ ಈಗಿನ ಆಹಾರಿಕ ಶಾಸ್ತ್ರಜ್ಞರು ಮಾಂಸಭಕ್ಷಣವು ಹಾನಿಕಾರಕವೆಂದೂ ಸಸ್ಯಾಹಾರವೇ ಮನುಷ್ಯ ವರ್ಗಕ್ಕೆ ಸ್ವಾಭಾವಿಕವೆಂದೂ ಹೇಳುತ್ತಿದ್ದಾರೆ.

12ನೇ ಪ್ರಶ್ನೆಗೆ—(a) ಹಸುಗಳನ್ನೂ (b) ಇತರ ಎಲ್ಲಾ ವಿಧದ ದನಗಳನ್ನೂ ಕೊಲ್ಲಕೂಡದೆಂದು ನಿರೋಧಗೊಳಿಸಿದರೆ ಒಟ್ಟಿನಲ್ಲಿ ಸಂಸ್ಥಾನದ ಆಹಾರದ ಸರಬರಾಯಿಗೆ ಕುಂದಕವುಂಟಾಗಲಾರದು. ಹಾಗೆ ನಿರೋಧಗೊಳಿಸಿದರೆ ಒಂದುವೇಳೆ ಸ್ವಲ್ಪ ಜನರಿಗೆ ಸ್ವಲ್ಪ ಕುಂದುಕವುಂಟಾದರೂ ಹಾಗೆ ನಿರೋಧಗೊಳಿಸದಿದ್ದರೆ ಅದಕ್ಕಿಂತಲೂ ಸಹಸ್ರಾಂಶ ಅಧಿಕವಾಗಿ ಮಕ್ಕಳಿಗೂ ರೋಗಿಗಳಿಗೂ ಜನಗಳಿಗೂ ಎಲ್ಲರಿಗೂ ಹಾಲು ತುಪ್ಪ ಮುಂತಾದ ಗೋರಸಪದಾರ್ಥಗಳ ಸರಬರಾಯಿಗೆ ಮತ್ತು ಕೃಷಿಗೆ ಬೇಕಾದ ಗೊಬ್ಬರದ ಸರಬರಾಯಿಗೆ ಹೆಚ್ಚು ಕುಂದುಕವುಂಟಾಗುವುದು. ನಮಗೆ ತಿಳಿದಹಾಗೆ ಒಂದೆ ರೂಪಾಯಿಗೆ ಹತ್ತು ಹನ್ನೆರಡು ಸೇರು ಅಪ್ಪಟ ಹಾಲೂ ಐದು ಆರು ಸೇರು ಅಪ್ಪಟ ಬೆಣ್ಣೆಯೂ ದೊರೆಯುತ್ತಿದ್ದುದು ತಪ್ಪಿಹೋಗಿ ಈಗಿನ ಕಾಲದಲ್ಲಿ ರೂಪಾಯಿಗೆ ಮೂರುಸೇರು ಅಪ್ಪಟ ಹಾಲೂ ಎರಡುಸೇರು ಅಪ್ಪಟ ಬೆಣ್ಣೆಯೂ ದೊರೆಯುವುದು ಕಷ್ಟವಾಗಿದೆ. ಹಾಲಿಗೆ ಅರ್ಧಕ್ಕರ್ಧ ನೀರು ಬೆರೆತಿರುತ್ತದೆ. ಮಾರಿ ಉಳಿದ ಹಾಲು ಮರುದಿವಸವೂ ಅಪ್ಪಟ ಹಾಲೆಂದು ಮಾರಲ್ಪಡುತ್ತದೆ. ತುಪ್ಪಕ್ಕೆ ಕಡಲೆಕಾಯಿಯ ಎಣ್ಣೆಯೋ ಚರ್ಬಿಯೋ ಮಿಶ್ರವಾಗಿರುತ್ತದೆ. ಬೆಣ್ಣೆಗೆ ಮೈದ ಹಿಟ್ಟೋ ಕಿವುಚಿದ ಅನ್ನವೋ ಮಿಶ್ರವಾಗಿರುತ್ತದೆ. ಇದರಿಂದ ಜಾತಿಕುಲಧರ್ಮವೂ, ಮನುಷ್ಯರ ಆರೋಗ್ಯವೂ ಕೆಟ್ಟುಹೋಗುತ್ತದೆ. ಈ ಅನರ್ಥಗಳಿಗೆಲ್ಲ ಗೋಸಂತತಿಯ ಹ್ರಾಸವೇ ಕಾರಣ. ನಮ್ಮ ದೇಶದಲ್ಲಿ ಯಥೇಚ್ಛವಾಗಿ ಆಹಾರ್ಯವಸ್ತುಗಳ ಉತ್ಪತ್ತಿಯಿರುವುದರಿಂದ ದನಗಳನ್ನು ಕೊಲ್ಲಕೂಡದೆಂದು ನಿರೋಧಗೊಳಿಸುವುದಕ್ಕೆ ಅವಕಾಶವನ್ನು ಧಾರಾಳವಾಗಿ ಕೊಡಬಹುದು.

13ನೇ ಪ್ರಶ್ನೆಗೆ—ಅಂತಹ ಹಸುಗಳನ್ನು ತಿಳುವಳಿಕೆಯಿಲ್ಲದ ಕೆಲವರು ಉಳುಮೆಗೆ ಉಪಯೋಗಿಸುವುದೂ ಇನ್ನು ಕೆಲವರು ವಧೆಗೋಸ್ಕರ ಮಾರುವುದೂ ಕಂಡುಬರುತ್ತದೆ. ಕೆಲವರು ಗೊಬ್ಬರಕ್ಕಾಗಿ ಸಾಕುವುದೂ ಉಂಟು.

14ನೇ ಪ್ರಶ್ನೆಗೆ—ಅವುಗಳನ್ನು ಉಳುವುದಕ್ಕಾಗಿ ಉಪಯೋಗಿಸುವುದೂ ಕಸಾಯಿಮನೆಯಲ್ಲಿ ಕೊಲ್ಲುವುದಕ್ಕಾಗಿ ಮಾರುವುದೂ ಹೆಚ್ಚಾಗಿದೆ. ಗಾಡಿಗೆ ಕಟ್ಟುವುದಕ್ಕಾಗಿಯೂ ಇತರ ಕೆಲಸಗಳಿಗಾಗಿಯೂ ಉಪಯೋಗಿಸುವುದು ಅಪರೂಪ.

15ನೇ ಪ್ರಶ್ನೆಗೆ—ಈಗ ದನಗಳನ್ನು ದೂರಾಲೋಚನೆ ಇಲ್ಲದೆ ಕೊಲ್ಲುತ್ತಿರುವ ರೀತಿಯನ್ನು ನೋಡಿದರೆ ದನದ ತಳಿಯ ವಿಷಯದಲ್ಲಿಯೂ ವ್ಯವಸಾಯ ಮುಂತಾದ ವಿಷಯದಲ್ಲಿಯೂ ಬಹಳ ಶೋಚನೀಯವಾದ ಮತ್ತು ದೇಶಕ್ಕೆ ಮಹಾಹಾನಿಕರವಾದ ಪರಿಸ್ಥಿತಿಯುಂಟಾಗುವುದೆಂದು ತೋರುತ್ತದೆ.

16ನೇ ಪ್ರಶ್ನೆಗೆ—ಎಲ್ಲಾ ವಿಧದ ಹಸುಗಳನ್ನೂ ಕಾಪಾಡುತ್ತಬಂದರೆ ಆಯಾ ಜಾತಿಯ ತಳಿಯು ಪೋಷಕನ ಪೋಷಣೆ ವಿಚಕ್ಷಣೆಗಳಿಗನುಸಾರವಾಗಿ ದೇಶದಲ್ಲಿ ಗೋಸಂತತಿಯು ಪೂರ್ವದಂತೆ ಯಥೇಷ್ಟವಾಗಿ ವೃದ್ಧಿಯಾಗಿ ಸಾಕಾದಷ್ಟು ಗೋರಸಪದಾರ್ಥಗಳಿಗೂ, ಕೃಷಿಗೂ, ಗೊಬ್ಬರಕ್ಕೂ ಕೊರತೆಯಿಲ್ಲದಂತಾಗುವುದು; ಮನುಷ್ಯಕೋಟಿಯಲ್ಲಿ ಆರೋಗ್ಯವು ನೆಲೆಗೊಳ್ಳುವುದು; ಮಕ್ಕಳು ಆರೋಗ್ಯದೃಢಕಾಯರಾಗಿ ಬೆಳೆಯುವವು.

17ನೇ ಪ್ರಶ್ನೆಗೆ—ಸರಾಸರಿ ಒಂದು ಹಸುವಿನಿಂದ ಎಷ್ಟೇ ಕಡಿಮೆಯೆಂದರೂ ವರ್ಷಕ್ಕೆ ಸುಮಾರು 720 ಸೇರು ಹಾಲು ದೊರೆಯುವುದರಲ್ಲೇನೂ ಸಂದೇಹವಿಲ್ಲ. ಇದರ ಸರಿಯಾದ ವಿವರವು ವ್ಯವಸಾಯದ ಇಲಾಖೆಯವರಿಂದ ತಿಳಿಯುವುದು ಸಾಧ್ಯ.

18ನೇ ಪ್ರಶ್ನೆಗೆ—ಗೋವಧೆಯು ನಡೆಯಕೂಡದೆಂದು ನಿರೋಧಪಡಿಸಿದರೆ ಸಂಸ್ಥಾನದಲ್ಲಿ ದೊರೆಯುವ ಹಾಲಿನ ಪ್ರಮಾಣವು ಹೆಚ್ಚುವುದೊಂದೇ ಅಲ್ಲದೆ ಆರೋಗ್ಯವೂ ಕೃಷಿಯಿಂದ ಬೆಳೆಯೂ ಹೆಚ್ಚುವುದೆಂದು ನಮ್ಮ ಅಭಿಪ್ರಾಯ. ಹಾಲಿನ ಪ್ರಮಾಣವು ಎಷ್ಟೇ ಕಡಿಮೆಯೆಂ[illegible] ಈಗಿರುವುದಕ್ಕಿಂತ ದ್ವಿಗುಣವಾಗಿ ಹೆಚ್ಚುವುದರಲ್ಲೇನೂ ಸಂದೇಹವಿಲ್ಲ. ಈ ಲೆಕ್ಕದಿಂದ ಹಾಲಿನ ಬೆಲೆಯು ಅರ್ಧಕ್ಕರ್ಧ ಕಡಿಮೆಯಾದಂತಾಗುವುದು.

19ನೇ ಪ್ರಶ್ನೆಗೆ—ಗೋವಧೆಯನ್ನು ನಿರೋಧಗೊಳಿಸಿದರೆ ಸಂಸ್ಥಾನದಲ್ಲಿ ಶಿಶುಗಳ ಮರಣವು ಕಡಮೆಯಾಗುವುದರಲ್ಲೇನೂ ಸಂದೇಹವಿಲ್ಲವೆಂದು ನಮ್ಮ ಅಭಿಪ್ರಾಯ.

20ನೇ ಪ್ರಶ್ನೆಗೆ—ಗೋವುಗಳ ಮೇವಿಗೆ ಪ್ರತಿಬಂಧಕವಾದ ಸರ್ಕಾರಿ ನಿಬಂಧನೆಗಳನ್ನು ಘನಸರ್ಕಾರದವರು ರದ್ದುಪಡಿಸಿದರೆ ಗೋವಧೆಯು ನಡೆಯಕೂಡದೆಂದು ಅಡ್ಡಿಮಾಡುವುದರಿಂದ ವೃದ್ಧಿಯಾಗುವ ಗೋಸಂತತಿಗೆ ಮೇವು ಸಾಕಾಗುವುದು ಮಾತ್ರವಲ್ಲದೆ ಇನ್ನಷ್ಟು ಗೋವುಗಳಿದ್ದರೂ ಮೇವು ಸಾಕಾಗುವುದೆಂದು ನಮ್ಮ ನಂಬಿಕೆ. ಜಗನ್ನಿಯಾಮಕನಾದ ಭಗವಂತನು ಬೇರೆ ಅನಂತಪ್ರಾಣಿವರ್ಗಕ್ಕೆ ಆಹಾರವನ್ನು ಕಲ್ಪಿಸುವಾಗ ಮುಖ್ಯವಾದ ಗೋಜಾತಿಗೆ ಕಲ್ಪಿಸದಿರುವನೆಂದು ಹೇಳಲಾಗುವುದಿಲ್ಲ.

21ನೇ ಪ್ರಶ್ನೆಗೆ—ಗೋವಧನಿರೋಧಮಾಡುವುದರಿಂದ ಸಂಸ್ಥಾನದಲ್ಲಿ ಗೊಬ್ಬರದ ಪ್ರಮಾಣವು ಗೋವುಗಳು ಹೆಚ್ಚಿದಂತೆಲ್ಲಾ ಹೆಚ್ಚುವುದು. ಗೋವುಗಳು ದ್ವಿಗುಣವಾದರೆ ಗೊಬ್ಬರದ ಪ್ರಮಾಣವೂ ದ್ವಿಗುಣವಾಗುವುದು; ತ್ರಿಗುಣವಾದರೆ ತ್ರಿಗುಣವಾಗುವುದು.

22ನೇ ಪ್ರಶ್ನೆಗೆ—ಗೊಬ್ಬರದ ಆಧಿಕ್ಯಕ್ಕೂ ಗೋವಧನಿರೋಧದಿಂದ ಉಳಿಯುವ ಗೋವುಗಳ ರಕ್ಷಣೆಯ ವೆಚ್ಚಕ್ಕೂ ಸರಿಹೋಗಲಾರದು. ಅಂದರೆ ವೆಚ್ಚವು ಕಡಿಮೆಯಾಗಿ ಗೊಬ್ಬರದ ಆಧಿಕ್ಯವೇ ಹೆಚ್ಚಾಗುವುದು. ಸಾಮಾನ್ಯವಾಗಿ ಗ್ರಾಮಾಂತರಗಳಲ್ಲಿ ಗೋವುಗಳನ್ನು ಸಾಕುವುದಕ್ಕಾಗಿ ದುಡ್ಡು ಖರ್ಚುಮಾಡುವುದಿಲ್ಲ. ಅವು ದೈವನಿರ್ಮಿತವಾದ ಹುಲ್ಲು ಸೊಪ್ಪುಗಳನ್ನು ತಿಂದು ನೀರನ್ನು ಕುಡಿದು ಜೀವಿಸಬಲ್ಲುವು. ಆದರೆ ಗೋಚರಿಭೂಮಿಯ ಪ್ರತಿಬಂಧಕವು ಮಾತ್ರ ತಪ್ಪಬೇಕು. ಹಾಲಿಗೋಸ್ಕರ ಗೋವುಗಳನ್ನು ಕಾಪಾಡುವುದಕ್ಕಾಗಿ ಪಟ್ಟಣಗಳಲ್ಲಿ ದುಡ್ಡು ಖರ್ಚುಮಾಡುವುದಕ್ಕೂ ಗ್ರಾಮಾಂತರಗಳಲ್ಲಿ ದನಗಳಿಗೆ ಹೆಚ್ಚು ಬೆಲೆಯೂ ಬಹುಮಾನವೂ ಬರಬೇಕೆಂದು ದುಡ್ಡು ಖರ್ಚುಮಾಡುವುದಕ್ಕೂ ಗೊಬ್ಬರದ ಆಧಿಕ್ಯಕ್ಕೂ ಮಾತ್ರ ವ್ಯತ್ಯಾಸವಿದೆ. ಅಂದರೆ ಗೊಬ್ಬರದ ಆಧಿಕ್ಯಕ್ಕಿಂತ ಆ ಸಂದರ್ಭದಲ್ಲಿ ವೆಚ್ಚವು ಹೆಚ್ಚಾಗುವುದು. ಆದರೆ ಆ ವೆಚ್ಚದ ತುಲನೆಯು ಗೊಬ್ಬರದೊಡನೆಯಾಗತಕ್ಕುದಲ್ಲ; ಹಾಲಿನೊಡನೆಯೂ ರಾಸಿನ ಬೆಲೆಯೊಡನೆಯೂ ಆಗತಕ್ಕುದು.

23ನೇ ಪ್ರಶ್ನೆಗೆ—ಗೋವಧೆಯನ್ನು ನಿರೋಧಗೊಳಿಸಿದರೆ ಸಂಸ್ಥಾನದಲ್ಲಿ ತೊಗಲಿನ ವ್ಯಾಪಾರಕ್ಕೆ ಹೆಚ್ಚಿನ ಕುಂದಕವೇನೂ ಉಂಟಾಗಲಾರದು. ಸಂಸ್ಥಾನದ 60 ಲಕ್ಷ ಪ್ರಜೆಗಳಲ್ಲಿ ತೊಗಲಿನ ವ್ಯಾಪಾರದಿಂದ ಜೀವಿಸುವ ನೂರಾರುಮಂದಿಗಳಿಗೆ ಸ್ವಲ್ಪ ಕುಂದಕವಾದಂತೆ ತೋರಿದರೂ ಗೋಸಂಖ್ಯೆಯು ಹೆಚ್ಚುವುದರಿಂದ ಅವುಗಳ ಕಾಲಮೃತ್ಯುವಿನಿಂದ ಯಥೇಚ್ಛವಾಗಿ ತೊಗಲು ದೊರೆತು ಈ ನ್ಯೂನತೆಯು ದೂರವಾಗುವುದು, ಮತ್ತು ತೊಗಲಿನ ವ್ಯಾಪಾರದಿಂದ ಜೀವಿಸುವ ಜನಸಂಖ್ಯೆಗಿಂತಲೂ ಗೋವಧನಿರೋಧದಿಂದ ಉಪಕಾರವನ್ನು ಹೊಂದುವ ಜನಸಂಖ್ಯೆಯು ಸಹಸ್ರಾಂಶ ಹೆಚ್ಚಾಗಿರುವುದು. ವ್ಯಾಪಾರಕ್ಷೇತ್ರವು ವಿಶಾಲವಾಗಿರುವುದರಿಂದ ತೊಗಲಿನ ವ್ಯಾಪಾರಿಕರು ಬೇರೆ ವ್ಯಾಪಾರವನ್ನು ಮಾಡಿಯೂ ಜೀವಿಸಬಲ್ಲರು. ಆದರೆ ಗೋವುಗಳ ಅಭಾವದಿಂದ ಜೀವಿಸಲಾಗುವುದಿಲ್ಲ. ಹಾಗೆ ನೋಡಿದರೆ ಆ ತೊಗಲಿನ ವ್ಯಾಪಾರಿಕರಿಗೂ ಕ್ಷೀರಾದಿಗೋರಸಪದಾರ್ಥಗಳ ಆವಶ್ಯಕತೆಯು ಇದ್ದೇ ಇರುವುದು. ಅವರ ಶಿಶುಗಳಿಗೂ ರೋಗಿಗಳಿಗೂ ಔಷಧ-ಲೇಹ್ಯಾದಿಗಳಿಗೂ ಕ್ಷೀರಘೃತಾದಿ ಗೋರಸವಿದ್ದೇ ತೀರಬೇಕು. ಅವರಿಗೂ ಮಾಂಸವನ್ನು ತಿನ್ನಿಸಲಾಗುವುದಿಲ್ಲ. ಪಾದರಕ್ಷೆಗಳು ರಬ್ಬರ್ ಮೊದಲಾದುವುಗಳಿಂದಲೂ ಆಗುವುವು.

24ನೇ ಪ್ರಶ್ನೆಗೆ—ಸ್ವಾಭಾವಿಕವಾಗಿ ಮರಣಹೊಂದಿದ ಹಸುವಿನ ತೊಗಲಿಗೂ ವಧೆಮಾಡಲ್ಪಟ್ಟ ಹಸುವಿನ ತೊಗಲಿಗೂ ಬೆಲೆಯಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದು. ಈ ವ್ಯತ್ಯಾಸವನ್ನು ತದ್ವಿಷಯಕವಾದ ಶಾಸ್ತ್ರಜ್ಞಾನವಿರುವವರು ಸರಿಪಡಿಸಿಕೊಳ್ಳಬಲ್ಲರು. ಆ ವ್ಯತ್ಯಾಸದ ಅಲ್ಪಪ್ರಯೋಜನಕ್ಕಾಗಿ ಆ ಅನಾಥ ಮೂಗಪ್ರಾಣಿಗಳನ್ನು ವಧೆಮಾಡುವುದು ನ್ಯಾಯವಲ್ಲ.

25ನೇ ಪ್ರಶ್ನೆಗೆ—(a) ಮುದಿಯಾದ ಮತ್ತು ಉಪಯೋಗವಿಲ್ಲದ ಹಸುಗಳನ್ನು ಮಾಲಿಕನು ಉಪಯೋಗಕರವಾದ ಇತರ ದನಗಳ ಜೊತೆಯಲ್ಲಿ ಮೇಯಿಸುವ ಏರ್ಪಾಡು ಮಾಡಿದರೆ ಸಾಕಾಗಿದೆ. ಅವುಗಳಿಗಾಗಿ ಬೇರೆ ಕಷ್ಟಪಡಬೇಕಾದುದಿಲ್ಲ. ಉಪಯೋಗಕರವಾದ ಹಸುಗಳಿಗೆ ಮನೆಯಲ್ಲಿ ತಿಂಡಿಹಾಕುವಂತೆ ಆ ಅನುಪಯೋಗ (ಗೊಬ್ಬರದಿಂದ ಉಪಯೋಗ)ವೆನ್ನುವ ಹಸುಗಳಿಗೆ ಹಾಕಬೇಕೆಂಬುದು ನಮ್ಮ ಅಭಿಪ್ರಾಯವಲ್ಲ. ಹಾಗೆ ತಿಂಡಿಯನ್ನು ಹಾಕುವುದೂ, ಹಾಕದಿರುವುದೂ ಮಾಲೀಕನ ದಯಾಭಾವ ಮತ್ತು ಕೃತಜ್ಞತೆಯನ್ನನುಸರಿಸಿರುವುದು. ನಾದಾರಿಯಾದ ದನಗಳು ಹೆಚ್ಚು ಆಹಾರವನ್ನು ತೆಗೆದುಕೊಳ್ಳುವುದೂ ಇಲ್ಲವೆಂಬುದು ಗಮನಿಸಬೇಕಾದ ವಿಷಯ. (b) ಮುದಿಯಾದ ಮತ್ತು ಉಪಯೋಗವಿಲ್ಲದ ದನಗಳನ್ನು ರಕ್ಷಿಸುವುದಕ್ಕಾಗಿ ಸರ್ಕಾರದವರು ಯಥೇಚ್ಛವಾಗಿ ಗೋಮಾಳಗಳನ್ನು ಬಿಡಬೇಕು. ಮಾಲೀಕನು ಬೇರೆ ದನಗಳೊಡನೆ ಆ ಅನಾಥಪ್ರಾಣಿಗಳೂ ಮೇಯುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು.

26ನೇ ಪ್ರಶ್ನೆಗೆ—ನಮ್ಮ ಪ್ರಾಂತದಲ್ಲಿ ಒಂದು ಪ್ರಾಣಿರಕ್ಷಣಾಲಯ (ಪಿಂಜ್ರಾಪೋಲ್) ಇದೆ. ಇದರಲ್ಲಿ ೧೨ ದನಗಳು ಸಾಕಲ್ಪಡುತ್ತವೆ. ಇದಕ್ಕಾಗಿ ಸಿಬ್ಬಂದಿ ಖರ್ಚು ಸೇರಿ ತಿಂಗಳಿಗೆ ಸುಮಾರು ೫೦ ರೂಪಾಯಿ ವೆಚ್ಚವಾಗುವುದು. ಈ ವೆಚ್ಚವು ಧರ್ಮಾತ್ಮರು ಕೊಟ್ಟಿರುವ ಧರ್ಮದ ಫಂಡಿನಿಂದ ನಡೆಯುತ್ತಿದೆ. ಗೊಬ್ಬರದಿಂದಾಗುವ ಉತ್ಪತ್ತಿಯು ಖರ್ಚಿನಲ್ಲಿ ಸೇರಿಲ್ಲ.

27ನೇ ಪ್ರಶ್ನೆಗೆ—ಘನಸರ್ಕಾರದವರು ಗೋಶಾಲೆಗಳನ್ನೂ ಪಿಂಜರಾಪೋಲ್‌ಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರಬೇಕೆಂದು ನಮ್ಮ ಅಭಿಪ್ರಾಯವಲ್ಲ. ಗೋವಧೆಯನ್ನು ಮಾಡದಂತೆ ಕಾನೂನುಮಾಡಿಕೊಟ್ಟರೆ ಸಾಕು. ಪ್ರಜೆಗಳು ತಮ್ಮ ದನಗಳನ್ನು ತಾವೇ ಕಾಪಾಡಿಕೊಳ್ಳುವರು. ಇದರಮೇಲೆ ಸರ್ಕಾರದವರು ಗೋಶಾಲೆಗಳನ್ನೂ ಪಿಂಜರಾಪೋಲ್‌ಗಳನ್ನೂ ಸ್ಥಾಪಿಸುವುದಾದರೆ ಅದು ಪ್ರಜೆಗಳಿಗೆ ಬಹಳ ಅನುಕೂಲವೂ ಸಂತೋಷಕರವೂ ಆಗಿರುವುದು.

28ನೇ ಪ್ರಶ್ನೆಗೆ—ವಧೆಮಾಡುವುದಕ್ಕಾಗಿ (a) ಹಸುಗಳನ್ನೂ (b) ಇತರ ದನಗಳನ್ನೂ ಮಾರಕೂಡದೆಂದೂ ರಫ್ತುಮಾಡಕೂಡದೆಂದೂ ನಿರೋಧಗೊಳಿಸಿ ಕಾನೂನನ್ನು ವಿಧಾಯಕಮಾಡಬೇಕೆಂಬುದು ನಮ್ಮ ಅಭಿಪ್ರಾಯ. ಈ ಏರ್ಪಾಡು ಕಾರ್ಯಕಾರಿಯಾಗಿ ಪರಿಣಮಿಸುವುದಕ್ಕಾಗಿ ಘನಸರ್ಕಾರದವರು ಗೋಮಹತ್ತ್ವವನ್ನೂ ಗೋರಕ್ಷಣಮಾಡುವ ಕ್ರಮವನ್ನೂ ಬೋಧಿಸುವ ಉಪನ್ಯಾಸಕರನ್ನಿಡುವ ಮೂಲಕವೂ ತದ್ವಿಷಯಕವಾದ ಪುಸ್ತಕಗಳನ್ನು ಪ್ರಕಾಶಪಡಿಸುವ ಮೂಲಕವೂ ಪ್ರಜೆಗಳಿಗೆ ತಿಳುವಳಿಕೆಯನ್ನುಂಟುಮಾಡುವುದಲ್ಲದೆ ವಧೆಮಾಡಿದವರಿಗೆ ಯಥೋಚಿತವಾದ ಅರ್ಥದಂಡವನ್ನೂ ಶಿಕ್ಷೆಯನ್ನೂ ವಿಧಿಸುವ ಕಾನೂನನ್ನು ಮಾಡಿ ಗೆಜೆಟ್ ಛಾಯಿಪ್‌ಮಾಡುವ ಮೂಲಕವೂ ಇಸ್ತಿಹಾರ್ ಮೂಲಕವೂ ಎಲ್ಲರಿಗೂ ತಿಳಿಸಬೇಕೆಂಬುದು ನಮ್ಮ ಸಲಹೆ.

29ನೇ ಪ್ರಶ್ನೆಗೆ—ವಧೆಮಾಡುವವರು ಸಾಮಾನ್ಯವಾಗಿ ೬-೮ ರೂಪಾಯಿಯೊಳಗಿನ ಕಡಿಮೆ ಬೆಲೆಯ ದನಗಳನ್ನು ವಧೆಮಾಡುತ್ತಾರಲ್ಲದೆ ವಧೆಯಿಂದಾಗುವ ಸ್ವಲ್ಪ ಪ್ರಯೋಜನಕ್ಕಾಗಿ ಹೆಚ್ಚು ಬೆಲೆಯ ದನಗಳನ್ನು ತೆಗೆದುಕೊಂಡು ವಧೆಮಾಡುವುದಿಲ್ಲ. ಆದುದರಿಂದ ಸರ್ಕಾರದವರು ೪೦-೫೦ ರೂಪಾಯಿಗಿಂತ ಕಡಿಮೆ ಬೆಲೆಯ (a) ಹಸುಗಳನ್ನೂ (b) ಇತರ ದನಗಳನ್ನೂ ಸಂಸ್ಥಾನದ ಸರಹದ್ದಿನ ಹೊರಗೆ ಒಯ್ಯಕೂಡದೆಂದೂ ಅದೂ ವಧೆಗೋಸ್ಕರ ಒಯ್ಯಲ್ಪಡುತ್ತದೆಯೋ ಇಲ್ಲವೇ ಎಂಬುದನ್ನು ತಿಳಿದು ವಧೆಗಾದರೆ ಕೊಡಕೂಡದೆಂದೂ ಕಾನೂನನ್ನು ಮಾಡಿ ಗ್ರಾಮಾಂತರಗಳಲ್ಲೂ ಇಸ್ತಿಹಾರ್‌ಮೂಲಕ ತಿಳಿಸಿ ಅದರ ತನಿಖೆಯ ಕೆಲಸವನ್ನು ಉಕ್ಕಡಗಳಲ್ಲಿರುವವರಿಗೂ ಸಂಸ್ಥಾನದ ಸರಹದ್ದುಗಳಲ್ಲಿರುವ ಟೋಲಿನವರಿಗೂ ವಹಿಸಿ ಮೇಲೆ ನಿಗಾ ನೋಡಬೇಕೆಂಬುದು ನಮ್ಮ ಸಲಹೆ.

30ನೇ ಪ್ರಶ್ನೆಗೆ—ದನದ ಮಾಂಸವನ್ನು ಆಮದುಮಾಡಕೂಡದೆಂದು ನಿರೋಧಪಡಿಸುವುದೇ ನಮ್ಮ ಸಮ್ಮತ. ಹಾಗೆ ಮಾಡದಿದ್ದರೆ ಗೋವಧನಿರೋಧದ ಉದ್ದೇಶವು ನೆರವೇರಿದಂತಾಗುವುದಿಲ್ಲ.

31ನೇ ಪ್ರಶ್ನೆಗೆ—ಗೋವಧೆಯು ಮತಾಚಾರಕ್ಕೆ ವಿರುದ್ಧವೆಂಬ ವಿಷಯವು ಯಜುರ್ವೇದದಲ್ಲಿಯೂ, ಮನುಧರ್ಮಶಾಸ್ತ್ರದಲ್ಲಿಯೂ, ಯಾಜ್ಞವಲ್ಕ್ಯಸ್ಮೃತಿಯಲ್ಲಿಯೂ, ಪರಾಶರಮಾಧವೀಯದಲ್ಲಿಯೂ, ಹೇಮಾದ್ರಿಪ್ರಾಯಶ್ಚಿತ್ತಕಾಂಡದಲ್ಲಿಯೂ, ಪ್ರಾಯಶ್ಚಿತ್ತೇಂದುಶೇಖರದಲ್ಲಿಯೂ, ವೈದ್ಯನಾಥೀಯಪ್ರಾಯಶ್ಚಿತ್ತಕಾಂಡದಲ್ಲಿಯೂ, ಭಾರತ ಭಾಗವತಾದಿ ಗ್ರಂಥಗಳಲ್ಲಿಯೂ ಹೇಳಲ್ಪಟ್ಟಿದೆ. ಇನ್ನೂ ಕೆಲವು ಆಧಾರಗಳು “ಗೋಮಹಾತ್ಮೆ” ಯೆಂಬ ಪುಸ್ತಕದಲ್ಲಿದೆ. ಅಲ್ಲದೆ ಗೋವಧನಿರೋಧವು ಮತಸಂಪ್ರದಾಯಕ್ಕೂ ಮನೋಭಾವಕ್ಕೂ ಸಂಬಂಧಪಟ್ಟುದೂ ಆಗಿದೆ.

32ನೇ ಪ್ರಶ್ನೆಗೆ—ವೇದಗಳೂ ಧರ್ಮಶಾಸ್ತ್ರಗಳೂ ತಮ್ಮ ವಾಕ್ಯಗಳ ಅರ್ಥವು ಇದೇ ಸರಿಯೆಂದು ಅವು ಹೇಳುವುದಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆ ವಾಕ್ಯಗಳಿಗೆ ಅರ್ಥಮಾಡುವವರು ಮನುಷ್ಯರು. ಕೆಲವು ಶಬ್ದಗಳಿಗೆ ಒಂದೊಂದಕ್ಕೆ ಅನೇಕ ಅರ್ಥಗಳಿವೆ. ಅಂಥಾ ಶಬ್ದಗಳಿಗೆ ಪಂಡಿತರುಗಳು ತಂತಮ್ಮ ಬುದ್ಧ್ಯನುಸಾರವಾಗಿ ಅರ್ಥಮಾಡುತ್ತಾರೆ. ಆದುದರಿಂದ ಗೋಮೇಧಯಜ್ಞವನ್ನು ಮಾಡಬೇಕೆಂಬ ವಿಧಿಯಿದ್ದರೂ “ಗೋಮೇಧ” ಶಬ್ದದಲ್ಲಿರುವ “ಗೋ” ಶಬ್ದಕ್ಕೆ ಗೋವುಗಳೆಂದು ಅರ್ಥವಲ್ಲ. ಗೋವಿನ ಪವಿತ್ರತೆಯನ್ನೂ ಅದರಿಂದ ಜನರಿಗಾಗುವ ಉಪಕಾರವನ್ನೂ ಅನೇಕ ಧರ್ಮಗ್ರಂಥಗಳಲ್ಲಿ ವರ್ಣಿಸಿರುವುದರಿಂದ ಅಂತಹ ಗೋವನ್ನೇ ಕೊಲ್ಲಬೇಕೆಂದು ಆ ಗ್ರಂಥಗಳೇ ಎಂದಿಗೂ ಅಭಿಪ್ರಾಯಪಡುವುದಿಲ್ಲ. ಹೀಗಿರುವಾಗ ಕೆಲವರು “ಗೋ” ಶಬ್ದಕ್ಕೆ ಗೋವುಗಳೆಂದೂ “ಗೋಮೇಧಯಜ್ಞ” ವೆಂದರೆ ಗೋವುಗಳನ್ನು ಯಜ್ಞಮಾಡಬೇಕೆಂದೂ ಅರ್ಥಮಾಡಿರುವುದೂ ಮಾಡುವುದೂ ಸರ್ವಥಾ ಅಸಂಗತವಾಗಿದೆ. ಈ ಮಾತು ದಯಾನಂದ ಸರಸ್ವತಿಯ “ಸತ್ಯಾರ್ಥಪ್ರಕಾಶ” ವೆಂಬ ಗ್ರಂಥದಿಂದಲೂ ಗೊತ್ತಾಗುತ್ತದೆ. ಆದುದರಿಂದ ಗೋ ಶಬ್ದಕ್ಕೆ ಗೋವುಗಳೆಂದು ಅರ್ಥವಲ್ಲ. ಇಲ್ಲಿ ಗೋ ಶಬ್ದಕ್ಕೆ ಇಂದ್ರಿಯಗಳೆಂದು ಅರ್ಥಮಾಡಬೇಕು. ಗೋಮೇಧಯಜ್ಞವೆಂದರೆ ಇಂದ್ರಿಯಗಳನ್ನು ನಿಗ್ರಹಿಸುವುದೆಂದರ್ಥವು.

33ನೇ ಪ್ರಶ್ನೆಗೆ—ಗೋವಧೆಯನ್ನು ನಡೆಸಕೂಡದೆಂದು ನಿರೋಧಗೊಳಿಸುವುದಕ್ಕಾಗಿ ನಾವು ಮೇಲೆ ೨೮ ನೆಯ ಉತ್ತರದಲ್ಲಿ ಹೇಳಿದಂತೆ ಉಪನ್ಯಾಸಕರನ್ನಿಡುವುದೂ ಗೋಮಹತ್ತ್ವವನ್ನು ಬೋಧಿಸುವ ಪುಸ್ತಕಗಳನ್ನು ಪ್ರಕಟಿಸುವುದೂ ಉಪನ್ಯಾಸಕರನ್ನಿಡುವುದೂ ಅಲ್ಲದೆ ಕಾನೂನನ್ನು ವಿಧಿಸಲೇಬೇಕು. ಕಾನೂನಿನ ಭಯವಿಲ್ಲದಿದ್ದರೆ ಇನ್ನಾವ ವಿಧದಿಂದಲೂ ಗೋವಧೆಯು ನಿಲ್ಲದು.

34ನೇ ಪ್ರಶ್ನೆಗೆ—ಗೋವಧೆಯನ್ನು ನಡೆಸಕೂಡದೆಂದು ಕಾನೂನನ್ನು ವಿಧಿಸುವ ವಿಚಾರದಲ್ಲಿ ಸರ್ಕಾರದವರೇ ಪ್ರತ್ಯಕ್ಷವಾಗಿ ಪ್ರವರ್ತಿಸಿ ನಿರೋಧದ ಕಾನೂನನ್ನು ಜಾರಿಗೆ ತರಲು ಕ್ರಮ ನಡಿಸಬೇಕು, ಮತ್ತು ಮ್ಯುನಿಸಿಪಾಲಿಟಿಗಳ ಮೂಲಕವೂ ಸ್ಥಳೀಯ ಸಂಸ್ಥೆಗಳ ಮೂಲಕವೂ ಆ ಬಗ್ಗೆ ಕ್ರಮ ನಡೆಸಬೇಕು.

35ನೇ ಪ್ರಶ್ನೆಗೆ—ಗೋವಧನಿರೋಧದ ಕಾನೂನಿನಿಂದ ಮೇಲೆ ಹತ್ತನೆಯ ಉತ್ತರದಲ್ಲಿ ಹೇಳಿದ ಗೋಮಾಂಸಭಕ್ಷಕರಿಗೂ ೨೩ ನೆಯ ಉತ್ತರದಲ್ಲಿ ಹೇಳಿದ ತೊಗಲಿನ ವ್ಯಾಪಾರಿಕರಿಗೂ ಸ್ವಲ್ಪ ತೊಂದರೆಯಾಗುವ ಸಂಭವವಿರಬಹುದು. ಈ ತೊಂದರೆಯು ಅನಿವಾರಣೀಯವಾದುದಲ್ಲ; ನಿವಾರಣೀಯವಾದುದೇ. ಆದರೆ ಗೋವಧನಿರೋಧದ ಕಾನೂನನ್ನು ಮಾಡದಿದ್ದರೆ ಆರೋಗದೃಷ್ಟಿಯಿಂದಲೂ ಆರ್ಥಿಕದೃಷ್ಟಿಯಿಂದಲೂ ಧಾರ್ಮಿಕದೃಷ್ಟಿಯಿಂದಲೂ ದೇಶದ ಅಸಂಖ್ಯಜನರಿಗುಂಟಾಗುವ ತೊಂದರೆಯು ಮಾತ್ರ ನಿವಾರಣೀಯವಾದುದಲ್ಲ.

36ನೇ ಪ್ರಶ್ನೆಗೆ—ಈ ಕಾನೂನಿನ ದೆಸೆಯಿಂದ ಪ್ರಜಾವರ್ಗದವರಲ್ಲಿ ತಮಗೆ ನಷ್ಟವಾಯಿತೆಂದು ಭಾವಿಸುವವರು ಬಹುಮಂದಿಗಳಲ್ಲ. ಹಾಗೆ ಭಾವಿಸುವವರು ಸ್ವಲ್ಪಮಂದಿಗಳು. ಅವರು ಈ ಕಾನೂನಾಗುವುದಕ್ಕೆ ವಿರೋಧಮಾಡದಂತೆ ಆಯಾ ಪಂಗಡದ ಹತ್ತಾರುಮುಖಂಡರೊಡನೆ ಸಂಸ್ಥಾನದ ಪ್ರಧಾನಾಧಿಕಾರಿಗಳು ಕಲೆತು ಮಾತನಾಡಿ ಆ ಮುಖಂಡರ ಮೂಲಕ ಆಯಾ ಪಂಗಡದವರ ಮನಸ್ಸಿಗೆ ಸಮಾಧಾನವಾಗುವಂತೆ ಮಾಡಬೇಕು; ಸರ್ಕಾರದವರೂ ಬೋಧಿಸಬೇಕು. ಇದರ ಹೊರತು ಬೇರೆ ಸಾಧನಗಳು ನಮಗೆ ತೋರುವುದಿಲ್ಲ.

37ನೇ ಪ್ರಶ್ನೆಗೆ—ಗೋವಧೆಯ ದೆಸೆಯಿಂದ ಸಂಸ್ಥಾನದಲ್ಲಿ ಬಹುಭಾಗ ಪ್ರಜೆಗಳಿಗೆ ಅಂತರಂಗಿಕವಾದ ದುಃಖವುಂಟಾಗಿದ್ದರೂ ತಾವು ಕೊರಗಿ ಸರ್ಕಾರದವರಲ್ಲಿ ಮೊರೆಯಿಡುತ್ತ ಬಂದಿದ್ದಾರಲ್ಲದೆ ಇದುವರೆಗೆ ಸಂಸ್ಥಾನದ ಹೊರಗಿನವರ ಹಾಗೆ ವೈಮನಸ್ಯವನ್ನೂ ಗಲಭೆಯನ್ನೂ ದೊಂಬಿಯನ್ನೂ ಯಾವ ಸ್ಥಳದಲ್ಲಿಯೂ ಸಂಸ್ಥಾನದ ಪ್ರಜೆಗಳು ನಡೆಸಿರುವುದು ತಿಳಿದುಬರುವುದಿಲ್ಲ. ಈಗ ಕಾನೂನಾಗದಿದ್ದರೆ ಹೀಗೆಯೇ ಮುಂದೆಯೂ ಇರುವುದೆಂದು ಹೇಳಲಾಗುವುದಿಲ್ಲ.

38ನೇ ಪ್ರಶ್ನೆಗೆ—ಹಸುಗಳ ಸಂರಕ್ಷಣೆಯೂ ಅವುಗಳ ಪೋಷಣೆಯೂ ಸರಿಯಾಗಿ ನಡೆಯಲು ಸರ್ಕಾರದವರು ಕಾನೂನನ್ನು ವಿಧಿಸಬೇಕಾದುದಿಲ್ಲ. ಗೋವಧೆಯಾಗದಂತೆಯೂ ಮಿತಿಮೀರಿ ಭಾರವನ್ನು ಹಾಕಿ ನಿರ್ದಯತೆಯಿಂದ ಹೊಡೆಯುವವರಿಗೆ ಶಿಕ್ಷಿಸುವಂತೆಯೂ ಕಾನೂನನ್ನೂ, ಗೋಮಾಳಗಳನ್ನು ಬಿಡುವ ಏರ್ಪಾಡನ್ನೂ ಮಾಡಿದರೆ ಸಾಕು. ಎರಡನೆಯದಾಗಿ ಸಂರಕ್ಷಣೆಗೂ ಪೋಷಣೆಗೂ ತಕ್ಕ ತಿಳುವಳಿಕೆಯನ್ನೂ ಪ್ರೋತ್ಸಾಹವನ್ನೂ ಕೊಡುವ ಏರ್ಪಾಡನ್ನು ಘನಸರ್ಕಾರದವರು ಮಾಡಬೇಕು.

39ನೇ ಪ್ರಶ್ನೆಗೆ—ಗೋವಧೆಯು ನಡೆಯಕೂಡದೆಂದು ನಿರೋಧಗೊಳಿಸುವ ವಿಷಯದಲ್ಲಿ ನಾವು ಹೇಳಬೇಕಾದ ಸಂಗತಿಗಳನ್ನೆಲ್ಲ ಮೇಲೆ ಹೇಳಿದೆವು. ಕೊನೆಗೆ ನಾವು ಹೇಳುವ ಮಾತಿಷ್ಟು—ಗೋಸಂತತಿಯ ವಿಷಯದಲ್ಲಿ ಇದುವರೆಗೆ ಅಲಕ್ಷ್ಯ ಮಾಡಿಕೊಂಡುಬಂದಂತೆ ಇನ್ನೂ ಅಲಕ್ಷ್ಯ ಮಾಡುತ್ತಬಂದರೆ ಮುಂದೆ ಪ್ರಜೆಗಳು ಬಹಳ ಕಷ್ಟನಷ್ಟಗಳಿಗೀಡಾಗುವುದನ್ನು ಘನಸರ್ಕಾರದವರು ನೋಡಿ ಮರುಗುವ ಕಾಲವು ಸಂಭವಿಸೀತು. ಮಹನೀಯರಾದ ಕಮಿಟಿಯವರು ದೂರಾಲೋಚನೆಯಿಂದ ಅಪ್ರತ್ಯಕ್ಷವಕಾಶವಾಗದಂತೆಯೂ ಗೋಪೂಜಾನಿರತರೂ ಧರ್ಮಮೂರ್ತಿಗಳೂ ಆದ ನಮ್ಮ ಶ್ರೀಮನ್ಮಹಾರಾಜರವರ ಕೀರ್ತಿಲತೆಯು ದಿಗಂತ ವ್ಯಾಪ್ತವಾಗುವಂತೆಯೂ ಮಾಡಿ ಪ್ರಜೆಗಳಿಗೂ ಮಹಾಸ್ವಾಮಿಯವರ ಅನುಗ್ರಹಕ್ಕೂ ಕೀರ್ತಿಗೂ ಪಾತ್ರರಾಗಬೇಕೆಂದೂ ಗೋವಧನಿರೋಧದಿಂದ ಗೋಸಂತತಿಯು ವೃದ್ಧಿಯಾಗುವಂತೆ ಕಮಿಟಿಯವರಿಗೆ ಪುತ್ರ ಪೌತ್ರಾಭಿವೃದ್ಧಿಯಾಗಲೆಂದೂ ನಮ್ಮ ಮನಃಪೂರ್ವಕವಾದ ಹಾರೈಕೆಯಾಗಿದೆ.

ಪತ್ರವ್ಯವಹಾರ.

☛ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂಪಾದಕ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಸಮಾಜಗಳಲ್ಲಿ ಪರಸ್ಪರ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಮನಸ್ಯವನ್ನು ವೃದ್ಧಿಗೊಳಿಸುವ ಲೇಖಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟು ಲೇಖಕರ ಸಂಪೂರ್ಣ ಹೆಸರು ವಿಳಾಸ ಮತ್ತು ಚಂದಾನಂಬರು ತಿಳುಹಲ್ಪಟ್ಟ ವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧ ಲೇಖಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕನೂ ಖಂಡಿತವಾಗಿ ಗಮನಿಸಬೇಕು.—ಸಂಪಾದಕ.

ತಿರಸ್ಕೃತಲೇಖ.

ಮಹಾಸಭೆಯ ಹಿತಚಿಂತಕರು.—ಮಹಾಸಭಾಚಾಲಕರಿಗೆ ಸವಿನಯ ಸೂಚನೆ ಎಂಬ ನಿಮ್ಮ ಲೇಖವು ಪ್ರಕಟನಾರ್ಹವಾಗಿಲ್ಲವು.

೧೦ನೇ ವೀರಶೈವಮಹಾಸಭಾ ವಿಚಾರ.

ಅಧ್ಯಕ್ಷರ ಚುನಾವಣೆ.

ಹುಬ್ಬಳ್ಳಿಯಲ್ಲಿ ಈಸಾರಿನೆರೆಯುವ 10 ನೆಯ ವೀರಶೈವಮಹಾಸಭೆಗೆ ಅಧ್ಯಕ್ಷರನ್ನು ಇಂಗ್ಲಿಷ್ ಮತ್ತು ಸಂಸ್ಕೃತಭಾಷಾಪ್ರವೀಣರೂ, ಕನ್ನಡಭಾಷಾಭಿಮಾನಿಗಳೂ, ಮಹಾರಾಷ್ಟ್ರಭಾಷೆಯ ವಾಙ್ಮಯವನ್ನರಿತವರೂ, ವೀರಶೈವಧರ್ಮಗ್ರಂಥಗಳಲ್ಲಿ ನಿಷ್ಣಾತರೂ, ಉತ್ಸಾಹಶೀಲತರುಣರೂ, ಗಿಲಗಂಜ ಅರಟಾಳ್ ಹೈಸ್ಕೂಲ್ ಸ್ಥಾಪಕರೂ, ಮುಂಬಯಿ ವಿಶ್ವವಿದ್ಯಾಲಯದ ಸದಸ್ಯರೂ, ವೀರಶೈವಧರ್ಮಾಭಿವೃದ್ಧಿಗಾಗಿ ಅಹೋರಾತ್ರಿ ಶ್ರಮಪಡುವವರೂ, ಎಂ. ಎ. ಪದವಿಧರರೂ ಆದ ಶ್ರೀಯುತ ಮಹರುದ್ರಪ್ಪ ರೇವಪ್ಪಣ್ಣಾ ಸಾಖರ ಎಂಬವರನ್ನು ಚುನಾಯಿಸಬೇಕೆಂದು ನಮ್ಮ ಆಗ್ರಹದ ಸೂಚನೆಯು.

ಓರ್ವ ಮಹಾಸಭಾಭಿಮಾನಿ.

ಸಭೆಸೇರುವ ವಿಷಯದಲ್ಲಿ ಸಂಶಯ.

ವೀರಶೈವಸಮಾಜಕ್ಕೆ ಕಲ್ಪವೃಕ್ಷದೋಪಾದಿಯಲ್ಲಿರುವ ಮಹಾಸಭೆಯು ಇದುವರೆವಿಗೂ ನಡೆಯದೆ ಸಮಾಜಕ್ಕೆ ಮಹಾಹಾನಿಯುಂಟಾಗಿದ್ದ ಸಮಯದಲ್ಲಿ ಹುಬ್ಬಳ್ಳಿಯ ವೀರಶೈವಮಹಾಜನಗಳು ಮುಂದೆನಿಂತು ತಮ್ಮಲ್ಲಿ ಈಸಾರಿ 10 ನೇ ವೀರಶೈವಮಹಾಸಭೆಯನ್ನು ಸೇರಿಸುವ ಏರ್ಪಾಡುಮಾಡಿದುದು ಸ್ತೋತ್ರಾರ್ಹವೂ ಅಭಿನಂದನೀಯವೂ ಆಗಿದೆ. ಹುಬ್ಬಳ್ಳಿಯವರು ಮಹಾಸಭೆಯನ್ನು ಯಶಸ್ವಿಯಾಗಿ ನೆರವೇರಿಸಲು ಕಂಕಣಬದ್ಧರಾಗಿ ಸ್ವಾಗತಸಂಘವೇ ಮೊದಲಾದ ಕಾರ್ಯನಿರ್ವಾಹಕ ಕೆಲಸಗಳಲ್ಲಿ ಈ ಮೊದಲೇ ತೊಡಗಿದ್ದರಾದರೂ ಕೌನ್ಸಿಲ್ ಚುನಾವಣೆಯ ಕಾಲವು ಸಮೀಪಿಸಿದ್ದರಿಂದ ಆ ವಿಷಯವಾಗಿ ಎಲ್ಲರೂ ಪ್ರಯತ್ನಿಸಬೇಕಾಗಿ ಬಂದುದರಿಂದ ಮಹಾಸಭೆಯ ವಿಷಯವನ್ನು ಅಲ್ಲಿಗೇ ನಿಲ್ಲಿಸಿದ್ದರು. ಈ ಅವಧಿಯೊಳಗಾಗಿಯೇ ಅನೇಕರು ಮಹಾಸಭೆಯ ವಿಷಯವಾಗಿಯೂ, ಅಧ್ಯಕ್ಷರ ಚುನಾವಣೆಯೇ ಮೊದಲಾದ ವಿಷಯವಾಗಿಯೂ ಲೇಖಗಳನ್ನು ಬರೆಯುತ್ತಾ ಇದ್ದು ಚುನಾವಣೆಯ ಕಾಲವು ಕಳೆಯುವುದನ್ನು ನಿರೀಕ್ಷಿಸುತ್ತಿದ್ದರು. ಚುನಾವಣೆಯ ಕಾಲವೂ ಕಳೆದದ್ದಾಯಿತು. ಇನ್ನೂ ಮಹಾಸಭೆಯ ವಿಷಯದ ನಡವಳಿಕೆಗಳನ್ನು ಬೇಗನೆ ನೋಡಬೇಕೆಂಬ ಆತುರದಿಂದ ನಿರೀಕ್ಷಿಸುತ್ತಿರುವಾಗ ಸ್ವಾಗತಸಂಘದವರು ಸಭೆಯ ವಿಷಯವಾಗಿ ಇದುವರೆವಿಗೂ ಯಾವುದೊಂದು ವಿಷಯವನ್ನೂ ಪ್ರಕಟಿಸದಿರುವುದನ್ನು ನೋಡಿ ಮಹಾಸಭೆಯ ಕಾಲವು ಕೇವಲ ಸಮೀಪಿಸಿದ್ದರಿಂದ ಈಸಾರಿ ಮಹಾಸಭೆಯನ್ನು ನಡೆಯಿಸುವರೋ ಇಲ್ಲವೋ ಎಂಬ ಸಂಶಯವುಂಟಾಗಿದೆ. ಹುಬ್ಬಳ್ಳಿಯ ಮಹಾಜನಗಳು ಸಮಾಜಹಿತಕಾರ್ಯಮಾಡುವುದರಲ್ಲಿ ಅತ್ಯಂತ ಉತ್ಸಾಹಶಾಲಿಗಳಾದುದರಿಂದ ಈ ಕೊಂಚದಿವಸದ ಅವಧಿಯೊಳಗಾಗಿಯೇ ಖಂಡಿತವಾಗಿ ಮಹಾಸಭೆಯನ್ನು ಅತ್ಯಂತ ಯಶಸ್ವಿಯಾಗಿ ಜರುಗಿಸುವರೆಂಬನಂಬಿಗೆಯಿದೆ. ಕಾರಣ ಹುಬ್ಬಳ್ಳಿಯ ಬಾಂಧವರು ಈ ವಿಷಯದಲ್ಲಿ ಜಾಗ್ರತರಾಗಿ ಮುಂದಿನ ಕೆಲಸವನ್ನು ನೆರವೇರಿಸಿ ಸಮಾಜದವರ ಚಿರಕೃತಜ್ಞತೆಗೆ ಪಾತ್ರರಾಗದಿರಲಾರರಾಗಿ ನಂಬಿರುವ,

ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

ಸಭಾಚಾಲಕರು ಪರಿಶೀಲಿಸಬೇಕು.

ಇದೇ ವರ್ಷದ ಡಿಶಂಬರು ತಿಂಗಳಲ್ಲಿ ವೀರಶೈವಮಹಾಸಭೆಯು ಹುಬ್ಬಳ್ಳಿಯಲ್ಲಿ ಕೂಡುವದೆಂದು ವೀರಶೈವಬಂಧುಗಳಿಗೆ ಆನಂದಾತುರವು ಹೆಚ್ಚಿ ಡಿಶಂಬರು ಯಾವಾಗ ಬಂದೀತೆಂದು ನಿರೀಕ್ಷಿಸುತ್ತಿರುವರೆಂಬುದನ್ನು ಹೇಳಲಸಾಧ್ಯವಾಗಿದೆ. ಹೀಗಿರುವಾಗ ಹುಬ್ಬಳ್ಳಿಯ ಮಹಾಸಭಾಚಾಲಕರಿಗೆ ಶ್ರೀಮಚ್ಛಂಕರನು ಸ್ವಲ್ಪ ಯೋಚನೆಯನ್ನು ಕೊಟ್ಟಿರುವನಾಗಿ ಕೇಳುತ್ತೇನೆ. ಅದು ಆ ಮಹಾತ್ಮನಿಂದಲೇ ಪರಿಹಾರವಾಗಬೇಕಾಗಿದೆ. ಏನಂದರೆ, ಹುಬ್ಬಳ್ಳಿಪಟ್ಟಣವು ಬಹುಜನಶ್ರೇಣಿಯುಳ್ಳದ್ದಾಗಿರುವುದರಿಂದ ಅದಕ್ಕೆ ನೀರಿನ ಕೊರತೆಯು ಯಾವಾಗಲೂ ತುಂಬಾ ಇರುವದು ಎಲ್ಲರಿಗೂ ಗೊತ್ತಿದ್ದ ಮಾತೇಸರಿ. ಇದರಲ್ಲಿ ವೀರಶೈವಬಂಧುಗಳಿಗೆ ಹುಬ್ಬಳ್ಳಿಯು ಮಧ್ಯಸ್ಥಳವಾಗಿರುವದರಿಂದಲೂ, ಬೀರೂರ ನಂತರ ಮಹಾಸಭೆಯು ಎಲ್ಲಿಯೂ ಕೂಡದಿದ್ದದ್ದರಿಂದ ಜನಸಮೂಹವು ಹೆಚ್ಚಾಗಿ ಸೇರುವದರಿಂದಲೂ, ಮೊದಲೇ ಹುಬ್ಬಳ್ಳಿಯಲ್ಲಿ ಟೈಂಪ್ರಕಾರ ನೀರು ಬಿಡುತ್ತಿರುವಾಗ ಮಳೆಯಾಗದೆ ಹೋದದ್ದರಿಂದಲೂ ಪ್ರತಿಯೊಂದು ಪ್ರಾಣಿಮಾತ್ರಕ್ಕೆಲ್ಲಾ ಅನ್ನಕ್ಕಿಂತಲೂ ನೀರು ಅವಶ್ಯವಾದದ್ದರಿಂದಲೂ ಮಹಾಸಭಾಚಾಲಕರಿಗೆ ಇದೊಂದು ದೊಡ್ಡಯೋಚನೆ ಬೀಳಬೇಕಾಗಿದೆ. ಭಗವಂತನು ಅವರನ್ನು ಈ ರೀತಿ ಯೋಚನೆಯಲ್ಲಿ ಕೆಡಹದೆ ಇನ್ನಾದರೂ ತಕ್ಷಣವೇ ತನ್ನ ಕೃಪಾದೃಷ್ಟಿಯಿಂದ ಮಳೆಯನ್ನು ದಯಪಾಲಿಸಿ ಮಹಾಸಭಾಚಾಲಕರನ್ನೂ ವೀರಶೈವಬಂಧುಗಳನ್ನೂ ತೃಪ್ತಿಪಡಿಸಲೆಂದು ಪ್ರಾರ್ಥಿಸುತ್ತೇನೆ. ಹುಬ್ಬಳ್ಳಿಯ ಮಹಾಜನಗಳು ಕೌನ್ಸಿಲ್ ಮತ್ತು ಲೋಕಲ್ ಚುನಾವಣೆಯ ಗಲಾಟೆಯಲ್ಲಿ ಸಿಕ್ಕಿದ್ದರು, ಅದರ ಮಹಾಸಭೆಯ ದಿವಸವು ಸಮೀಪಿಸಿರುವದರಿಂದಲೂ ಇಲೆಕ್ಷನ್ ಪೂರೈಸಿದ್ದರಿಂದಲೂ ಅಧ್ಯಕ್ಷರ ನಿರ್ಣಯವನ್ನೂ ಕಾರ್ಯಕ್ರಮಗಳನ್ನೂ ಕೂಡಲೆ ಪ್ರಕಟಪಡಿಸಬೇಕಾಗಿಯೂ, ಮಹಾಸಭೆಯು ಯಾವಾಗಲೂ ಮದ್ರಾಸ ಇಲಾಖೆಯಲ್ಲಿ ಆಗದೆ ಇರುವದರಿಂದಲೂ, ಅಲ್ಲಿಯವರು ಅಧ್ಯಕ್ಷಸ್ಥಾನವನ್ನು ಕೂಡ ಯಾವಾಗಲೂ ವಹಿಸದೆ ಇರುವದರಿಂದಲೂ ಈಗ ಆ ಪ್ರಾಂತದ ಮುಖಂಡರೂ ಪರಳೀ ವೈಜನಾಥಲಿಂಗದ ವ್ಯಾಜ್ಯದಲ್ಲಿ ಶಿರಸಾವಹಿಸಿ ಪ್ರಯತ್ನಪಟ್ಟವರೂ ಆದವರಲ್ಲಿ ದೇಶಮುಖ ಬಾಪೂರಾವ್, ಹೈಕೋರ್ಟು ವಕೀಲರು ಒಬ್ಬರಾಗಿರುವುದರಿಂದ ಅವರಿಗೆ ಅಧ್ಯಕ್ಷಸ್ಥಾನವನ್ನು ಕೊಡಬೇಕಾಗಿಯೂ ಬಹುಜನ ಅಪೇಕ್ಷಿಪಡುತ್ತಿರುವದು ಸರಿಯಷ್ಟೆ. ಆದರೆ ಇವರಿಗೆ ಕನ್ನಡ ಮಾತಾಡಲಿಕ್ಕೆ ಬರುವದಿಲ್ಲವಾಗಿ ತಿಳಿಯಬರುತ್ತದೆ. ಕಾರಣ ಮಹಾಸಭಾಚಾಲಕರು ಕೂಡಲೆ ಇದನ್ನು ಚೆನ್ನಾಗಿ ಪರಿಶೀಲಿಸಬೇಕಾಗಿಯೂ ಸದರೀಯವರಿಗೆ ಕನ್ನಡ ಬರುತ್ತಿರುವಭಾಗದಲ್ಲಿ ಮುಖ್ಯ ಮೈಸೂರ ಪ್ರಾಂತದವರಿಗಿಂತಲೂ ಇವರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸಿ ಈಗ ಮುಂದುವರಿಯುತ್ತಿರುವ ಆ ಪ್ರಾಂತದ ವೀರಶೈವಬಂಧುಗಳನ್ನು ತೃಪ್ತಿಪಡಿಸಬೇಕೆಂಬುದಾಗಿಯೂ ಮಹಾಸಭಾಚಾಲಕರನ್ನು ಪ್ರಾರ್ಥಿಸುತ್ತೇನೆ.

ಗದಗಿನಮಠದ ಅಂದಾನಯ್ಯ, ದಾವಣಗೆರೆ.

ಅಧ್ಯಕ್ಷತೆ.

ಮಹಾಸಭೆಯ ಅಧ್ಯಕ್ಷತೆಯ ವಿಚಾರವಾಗಿ ಅನೇಕ ಸಲಹೆ ಸೂಚನೆಗಳು ಪ್ರಕಟವಾಗುತ್ತಿರುವುದು ವೀರಶೈವಮಹಾಜನರ ಸಾರ್ವಜನಿಕವಿಷಯದಲ್ಲಿ ಅವರುಗಳಿಗೆ ಹುಟ್ಟಿರುವ ನವಚೇತನವನ್ನೂ, ಕರ್ತವ್ಯತತ್ಪರತೆಯನ್ನೂ ವ್ಯಕ್ತಪಡಿಸುತ್ತಲಿದೆ. ಇದು ಶುಭಸೂಚಕವೂ ಸಂತೋಷಪ್ರದವೂ ಆಗಿರುವುದಲ್ಲದೆ ಹಿಂದಿನಂತೆ ಇನ್ನು ಮುಂದೆ ಈ ಸಂಸ್ಥೆಯು ಒಬ್ಬಿಬ್ಬ ವ್ಯಕ್ತಿಗಳನ್ನು ಅವಲಂಬಿಸಿಕೊಂಡಿರದೆ ವೀರಶೈವಸಮಾಜದ ಪುರೋಭಿವೃದ್ಧಿಯನ್ನು ಎಡಬಿಡದೆ ಸಾಧಿಸಲು ನಿರಾತಂಕವಾಗಿ ಕಾರ್ಯನಡೆಸಿಕೊಂಡು ಹೋಗಬಲ್ಲದೆಂಬುದಾಗಿ ನೆನಸಬಹುದಾಗಿದೆ. ಇಂತಹ ಘನತರವಾದ ಉದ್ದೇಶವು ಸಾಧಿಸಲ್ಪಡಬೇಕಾದರೆ ಯೋಗ್ಯ ಅಧ್ಯಕ್ಷರು ಬೇಕೆಂಬುದನ್ನು ಬೇರೆಹೇಳಬೇಕಾಗಿಲ್ಲ. ಇದರ ನಿದರ್ಶನಾರ್ಥವಾಗಿ ಹಿಂದಿನ ಅಧ್ಯಕ್ಷರುಗಳನ್ನು ನೆನಸಿಕೊಂಡರೆ ಸಾಕಾಗಿದೆ. ಆದುದರಿಂದ ಅಧ್ಯಕ್ಷತೆಯ ವಿಚಾರವು ಎಲ್ಲರ ಲಕ್ಷ್ಯದಲ್ಲಿ ಬಂದಿರುವುದು ಸ್ವಾಭಾವಿಕವಾಗಿದೆ. ಕೆಲವರು ಬಿಜಾಪುರದ ಮ|| ಹಳಕಟ್ಟಿಯವರನ್ನು ಅವರವಚನಶಾಸ್ತ್ರ ಕಾರ್ಯಕ್ಕಾಗಿಯೂ, ಇನ್ನು ಕೆಲವರು ಹೈದರಾಬಾದಿನ ಮ|| ಬಾಪುಸಾಹೇಬರನ್ನು ಪರಳಿ ವ್ಯಾಜ್ಯದಲ್ಲಿಮಾಡಿದ ಅವರ ಸಮಾಜಸೇವೆಗಾಗಿಯೂ, ಸೊಲ್ಲಾಪುರದ ಮ|| ಪಾಟೀಲರವರನ್ನು ಅವರ ಧರ್ಮಕಳಕಳಿಗಾಗಿಯೂ ಸೂಚಿಸಿರುತ್ತಾರೆ. ಆದರೆ ಸಿಂದಿಗಿ ವೀರಶೈವತರುಣಸಭೆಯವರು “ವಿದ್ವನ್ಮಣಿಗಳೂ, ಸಮಾಜಸೇವಕರೂ, ಧರ್ಮದಕಳಕಳಿಯುಳ್ಳವರೂ, ಸ್ವಾರ್ಥತ್ಯಾಗಿಗಳೂ, ದೇಶದ ಮತ್ತು ಜನಾಂಗದ ಸ್ಥಿತಿಗಳನ್ನು ಅರಿತುಕೊಂಡು ಅವಿಶ್ರಾಂತಶ್ರಮಪಡುತ್ತಿರುವವರೂ ಅಧ್ಯಕ್ಷಸ್ಥಾನಕ್ಕೆ ಅತ್ಯಾವಶ್ಯಕವೆಂಬುದರಮೇಲೆ ಮ|| ಮಂಜಪ್ಪನವರನ್ನು ಸೂಚಿಸಿರುತ್ತಾರೆ. ಈ ಮ|| ಮಂಜಪ್ಪನವರಿಗಿಂತ ಇತೋಪ್ಯತಿಶಯವಾದ ಗುಣಗಳಿಂದ ಕೂಡಿದ ಚಿತ್ರದುರ್ಗದ ಮ|| ಭೀಮರಾಜರು ಸರ್ವವಿಧದಿಂದಲೂ ಯೋಗ್ಯರಿದ್ದಾರೆ. ಇವರ ಉಪನ್ಯಾಸಶೈಲಿ, ವಾಗ್ವೈಖರಿ, ಗಂಭೀರ ಮತ್ತು ಸುಶ್ರಾವ್ಯವಾದವಾಣಿ, ಜನವಶೀಕರಣ ಮತ್ತು ಆಕರ್ಷಣಶಕ್ತಿ ಇವುಗಳು 1923 ರಲ್ಲಿ ಬ್ಯಾಡಗಿಯಲ್ಲಿ ನಡೆದ ಶ್ರೀ ಜಗದ್ಗುರುಗಳವರ ದಸರಾಮಹೋತ್ಸವದಲ್ಲಿ ಚೆನ್ನಾಗಿ ವ್ಯಕ್ತಪಟ್ಟು ಅಶೇಷ ಜನಸ್ತುತಿಗೆ ಪಾತ್ರರಾಗಿರುವರು. ಇವರ ಅಸಾಧಾರಣ ಮೇಧಾಶಕ್ತಿಯೂ, ಅದಕ್ಕೆ ತಕ್ಕ ನಡೆನುಡಿಯೂ, ಮತತತ್ತ್ವವಿವೇಚನೆಯೂ ಇವರ ಕೀರ್ತನೋಪನ್ಯಾಸಗಳಿಂದ ಜನಸಾಮಾನ್ಯಕ್ಕೆಲ್ಲಾ ತಿಳಿದುಬಂದಿರುವುದು. ಜನಸೇವೆಗಾಗಿ ಇವರು ಅವಿಶ್ರಾಂತಶ್ರಮಪಡುತ್ತಿರುವುದು ದೀನಜನೋದ್ಧರಣ, ಧರ್ಮೋತ್ತೇಜನ ಮೊದಲಾದ ಸಂಸ್ಥೆಗಳ ಸ್ಥಾಪನಚಾಲನಗಳಲ್ಲಿ ಒಡೆದು ಮೂಡುತ್ತಿರುವುದು. ಇಂತಹ ಗುಣಾಢ್ಯರನ್ನು ಆರಿಸಿದರೆ “ಇಡೀ ವರ್ಷವೆಲ್ಲಾ ಮಹಾಸಭೆಯು ನಿರ್ಧರಿಸಿದ ವಿಧಾಯಕ ಕಾರ್ಯವನ್ನು ಆಚರಣೆಗೆ ತರಲು ಇಂಥವರಿಂದಲೇ ಸಾಧ್ಯವಾಗುವುದರಿಂದ” ಈಸಾರೆ ಜನಸೇವಕ ಮ|| ಭೀಮರಾಜರನ್ನು ಮಹಾಸಭಾ ಅಧ್ಯಕ್ಷಸ್ಥಾನಕ್ಕೆ ಆರಿಸಿ ಸಭಾಕಾರ್ಯವು ಸಾಂಗೋಪಾಂಗವಾಗಿ ನೆರವೇರುವಂತೆ ಮಾಡುವರೆಂದು ನಿರೀಕ್ಷಿಸಿದೆ.

ಮಹಾಸಭಾಭಿಮಾನಿ.

ಆನಂದಮಯನಾದ ಅಧ್ಯಕ್ಷನು ಬೇಕು.

ಲಕ್ಷ್ಮಿಯ ಪ್ರೀತಿಪುತ್ರರೂ ಶಾರದೆಯ ಪ್ರೇಮದ ಮಕ್ಕಳೂ ಆದ ಮಹಾಜನರು ನಾನಾಡುವ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಮಾತುಗಳ ಮುಖ್ಯ ಧ್ಯೇಯವನ್ನು ಮುಂದುಮಾಡುವರಾಗಿ ನಂಬಿದ್ದೇನೆ. ವೀರಶೈವ ಮಹಾಸಭಾಂಗನೆಯು ನವ (9) ಜನ್ಮಗಳಿಂದ ಅನುರೂಪನಾದ ವರನನ್ನು ಹೊಂದಿ ಇಚ್ಛಿತ ಫಲಗಳನ್ನು ಪಡೆಯದೆ ಇನ್ನುಮೇಲೆ ಭೂಮಿಯಲ್ಲಿ ಹುಟ್ಟಲೇಬಾರದೆಂದು ಬಹುದಿವಸಗಳಿಂದ ಬಿಟ್ಟಿದ್ದಳು. ಹಿಡಿದ ಕೆಲಸವನ್ನು ಬಿಡುವದು ಒಳ್ಳೆಯವರ ತಿಳುವಳಿಕೆಯಲ್ಲವೆಂದು ವಿದ್ಯಾಬುದ್ಧಿ ಧನದಿಂದ ವೃದ್ಧಿಹೊಂದಿದ ಬ್ಯಾಲಕೆಯಲ್ಲಿ ಜನ್ಮವೆತ್ತಿ ಇಂದು ಯೌವನಕ್ಕೆ ಬಂದಿರುವಳು. ಹುಬ್ಬಳ್ಳಿಯ ಮಹಾಜನರಾದರೂ ಯೋಗ್ಯವರನನ್ನು ಹುಡುಕುವದಕ್ಕೆ ಆಲೋಚಿಸುತ್ತಿರುವರು. ಅಲ್ಪಾವಧಿಯಲ್ಲಿ ಈ ಕಾರ್ಯವು ನೆರವೇರುವದು. ಆದ್ದರಿಂದ ತನ್ನ ಮನೋಬಯಿಕೆಗಳನ್ನು ಪೂರ್ಣಮಾಡುವವರನ್ನು ಹುಡುಕಬೇಕೆಂದು ತನ್ನ ಪೋಷಕರಿಗೆ ತಿಳುಹಲು ಸಭಾಂಗನೆಯು ಅಲ್ಪಸ್ವಲ್ಪ ವಿಶ್ವಾಸಿಕನಾದ ನನಗೆ ತನ್ನ ಮನಸ್ಸಿನ ಗುಟ್ಟನ್ನು ಗಟ್ಟಿಯಮನಸ್ಸುಮಾಡಿ ಅಂಜುತ್ತಅಂಜುತ್ತ ಹೇಳಿದಳು. “ಹಿಂದಿನ ಒಂಭತ್ತು ಜನ್ಮಗಳಲ್ಲಿ ನನ್ನ ಪೋಷಕರು ಐಶ್ವರ್ಯದ ಆಡಂಬರಕ್ಕೂ ವಿದ್ಯಾಬುದ್ಧಿಗೂ ಮೆಚ್ಚಿ ತೋರಿಸಿದ ವರನಿಗೆ ಕೈಕೊಟ್ಟು ನೋಡಿದೆನು. ಅವನಿಂದ ನನ್ನ ಯಾವ ಮನೋರಥಗಳೂ ಕೈಗೂಡಲಿಲ್ಲ. ನನ್ನ ಇಚ್ಛೆಗಳೆಂದರೆ ವೀರಶೈವಸಮಾಜದ ಅಭಿವೃದ್ಧಿ, ಐಕ್ಯತೆ, ಸದಾಚಾರ, ಧರ್ಮಾಭಿಮಾನ, ಸ್ವಧರ್ಮಕ್ಕೆ ಪರಧರ್ಮದವರು ಮಾಡುವ ಕೋಲಾಹಲದ ಕಟ್ಟು ಮುಖ್ಯವಾಗಿ ನನ್ನಂಗವಾದ ಸ್ತ್ರೀಸಮಾಜಕ್ಕೆ ಬೇಕಾದ ಧರ್ಮಶಿಕ್ಷಣ, ದೇವಭಾಷೆಯ ಪುನರುದ್ಧಾರ, ಕನ್ನಡಭಾಷೆಯ ಏಳ್ಗೆ, ಕನ್ನಡನಾಡಿನಲ್ಲಿ ಸುಖಶಾಂತಿಗಳು, ಬಸವಾದಿ ಪ್ರಮಥರ ನಡೆನುಡಿಗಳನ್ನು ಪ್ರತಿಯೊಬ್ಬ ವೀರಶೈವನ ಮನಸ್ಸಿನಲ್ಲಿ ಬಿಂಬಿಸುವದು ಇವೇ ಮೊದಲಾದ ಇನ್ನೂ ಕೆಲವು ಸಂಕ್ಷಿಪ್ತ ವಿಚಾರಗಳಿರುವವು. ಇವೆಲ್ಲವನ್ನೂ ಪೂರೈಸುವಂಥಾ ಸ್ವಯಂಸೇವಕನು, ಸತ್ಯಸಂಧನು, ಹಳ್ಳಿಪಳ್ಳಿಗಳಲ್ಲಿ ಧರ್ಮತತ್ವವನ್ನು ಪಸರಿಸುವವನು, ಸದಾಚಾರಿಯು, ಸದಾಶಾಂತನು, ವಿಷಯಗಳ ವೈರಿಯು, ವಿರಾಗಿಯು, ಆದ ಪುರುಷನನ್ನು ವರಿಸಬೇಕೆಂದು ನನ್ನ ಮನಸ್ಸು ಪರಿಪರಿಯಿಂದ ಬೇಡುತ್ತದೆ.” ಅಂತೂ ಇಂತೂ ಈಸಾರಿ ಸಭಾಂಗನೆಯು ಶ್ರೀಮಂತರ ವೇಷ ಆರಾಮಕ್ಕೂ ಆಂಗ್ಲವಿದ್ಯಾ ಪ್ರೌಢಿಮೆಗೂ ಅಧಿಕಾರಕ್ಕೂ ಬೇಸತ್ತು ಸಾವಿತ್ರಿ ಅನುಸೂಯಾ ಅರುಂಧತಿಯರಂತೆ ಶಾಂತಮೂರ್ತಿಗಳಾದ ವನವಿಹಾರಿಗಳಿಗೆ ಮಾಲೆಯನ್ನು ಹಾಕಬೇಕೆಂಬ ಇಚ್ಛೆಯನ್ನೂ ತೋರಿಸುವಳು. ಶ್ರೀಮಂತರ ಸಂತೋಷಕ್ಕಾಗಲಿ ವಿದ್ಯಾವಿಚಾರದ ಅಧಿಕಾರಕ್ಕಾಗಲಿ ಪೋಷಕರು ಸಭಾಂಗನೆಯ ಮನೋಭಂಗ [illegible]? ಅವಳ ಇಚ್ಛೆಯಂತೆ [illegible] ಸಭಾಂಗನೆಗೆ ಪ್ರೀತಿಪಾತ್ರರಾದ ಕೆಲವು ಮಹನೀಯರ ಹೆಸರುಗಳನ್ನು ನಾನು ಇಲ್ಲಿ ಹೇಳದಿರಲಾರೆನು—(1) ಸದ್ಗುಣಗಳಿಂದ ಮಂಡಿತರಾಗಿ ಹುಚ್ಚರಂತೆ ಊರೂರು ತಿರುಗಿ ಸಮಾಜಸೇವೆ ಮಾಡುವ ಸಾಧುಶಿರೋಮಣಿ ಹರ್ಡೇಕರ ಮಂಜಪ್ಪನವರು. (2) ಪ್ರಪಂಚಸುಖಕ್ಕೆ ಮೋಹಿಸದೆ ಸಮಾಜೋನ್ನತಿಗಾಗಿ ಬರುವ ಕಷ್ಟನಷ್ಟಗಳನ್ನು ಸಹಿಸಿ ಪುರಾತನರು ಹೂಳಿಟ್ಟ ವಚನನಿಧಿಯನ್ನು ಹೊರಗೆಳೆದು ದೇಶದಲ್ಲೆಲ್ಲಾ ಪಸರಿಸುವ ರಾವಬಹದ್ದೂರ ಹಳಕಟ್ಟಿ ವಕೀಲರು. (3) ಹಿಂದುಳಿದ ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕಾಗಿ ಹಗಲಿರುಳು ತನುಮನಧನಗಳನ್ನು ಸವಿಸಿ ವೀರಶೈವಧರ್ಮತತ್ವಗಳನ್ನು ಮಹಾರಾಷ್ಟ್ರಭಾಷೆಯಲ್ಲಿ ಪ್ರಚುರಪಡಿಸುವ ರಾ|| ಶ್ರೇಷ್ಠಿಯವರು ಇವರುಗಳಲ್ಲಿ ಯಾರಾದರೊಬ್ಬ ಮಹನೀಯರು ಮಹಾಸಭೆಯ ಅಧ್ಯಕ್ಷಪದವನ್ನು ಆರೋಹಣಮಾಡಿದ್ದಾದರೆ ನಮ್ಮ ವೀರಶೈವಮಹಾಸಭಾಂಗನೆಯ ಇಚ್ಛಿತಫಲಗಳು ಪೂರ್ತಿಯಾದಂತಾಗಿ ಹಿಂದುಳಿದ ವೀರಶೈವಸಮಾಜವು ಮುಂದೆಬರುವದರಲ್ಲಿ ಏನೂ ಸಂದೇಹವಿಲ್ಲ.

ಶ್ರೀಮೃತ್ಯುಂಜಯದೇವರು, ಮಾಡಳ್ಳಿ,
ಶಂಕರಸಂಸ್ಕೃತಕಾಲೇಜ, ಯಾದಗಿರಿ.

ಶ್ರೀ ದಕ್ಷಿಣಕಾಶಿ ಚೌಡಯ್ಯದಾನಪುರಸಂಸ್ಥಾನದ ಶ್ರೀಜಗದಾಚಾರ್ಯ ಸ್ವಾಮಿವಿರೂಪಾಕ್ಷ ಒಡೆಯರವರ ಸನ್ನಿಧಿಯಲ್ಲಿ ನಮಸ್ಕಾರಪೂರ್ವಕವಾದ ಬಿನ್ನಹ.

ಮಹಸ್ವಾಮಿಯ ಸವಾರಿಯು ಮೈಸೂರುಸೀಮೆಯ ಕಡೂರು ತಾ|| ಯಗಟಿಪುರದ ಕ್ಷೇತ್ರಕ್ಕೆ ದಯಮಾಡಿಸುವುದಾಗಿ ಕಳೆದ ಜುಲೈ ತಾ|| 17 ಮತ್ತು ಆಗಸ್ಟು ತಾ|| 7 ನೆಯ ಇದೇ ಸ್ಟಾರ್‌ಪತ್ರಿಕಾಮುಖೇನ ಅಪ್ಪಣೆ ಕೊಡಿಸಿರುವುದು ಸರಿಯಷ್ಟೆ. ಆ ಲಾಗಾಯಿತು ಈ ಸ್ಥಳದ ಸುತ್ತುಮುತ್ತಲ ಪ್ರದೇಶದ ಬಹುಭಾರದ ಶ್ರೀಸ್ವಾಮಿಭಕ್ತರುಗಳು ಮಹಾಸವಾರಿಯು ಯಾವಾಗ ದಯೆಮಾಡಿಸುವದೋ ಎಂದು ಬಹುಕುತೂಹಲದಿಂದ ನಿರೀಕ್ಷಣೆಮಾಡಿಕೊಂಡಿರುತ್ತಾರಾದ್ದರಿಂದ, ಬಹಳ ಜನರ ಬಯಕೆಯಂತೆ ಮಹಾಪಾದವು ಕೃಪೆಮಾಡಿ ಆದಷ್ಟು ಜಾಗ್ರತೆ ಈಕಡೆ ದಯಮಾಡಿಸಿ ದರ್ಶನಾಶೀರ್ವಾದವನ್ನಿತ್ತು ದಯಪಾಲಿಸಿರುವ ಅಭಯವಚನವನ್ನು ನೆರವೇರಿಸಿಕೊಡಬೇಕಾಗಿಯೂ, ದಯಮಾಡಿಸತಕ್ಕ ಪ್ರೋಗ್ರಾಂ ವಗೈರೆ ಆನಂದವಾರ್ತೆಗಳನ್ನು ಈದೇ ಸ್ಟಾರ್‌ಪತ್ರಿಕಾಮುಖೇನ ಪ್ರಸಿದ್ಧಪಡಿಸಬೇಕಾಗಿಯೂ ಪ್ರಾರ್ಥಿಸುವ,

ಮಹಾಸ್ವಾಮಿಯ ಭಕ್ತ.

ಅಭಿನಂದನ.

ಮ|| ಪಂಡಿತಪ್ಪ ರಾಯಪ್ಪ ಅಣ್ಣ ಚಿಕ್ಕೋಡಿ ಬಿ.ಎ., ಮತ್ತು ರಾವಬಹಾದ್ದೂರ ಷಣ್ಮುಖಪ್ಪ ಲಿಂಗಪ್ಪ ಅಣ್ಣಾ ಅಂಗಡಿ ಬಿ.ಎ., ಎಲ್‌ಎಲ್.ಬಿ., ಈ ಉಭಯತರು ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರರಾಗಿ ಆರಿಸಲ್ಪಟ್ಟು ಬಂದ ಬಗ್ಗೆ ಅಭಿನಂದನವನ್ನು ಮಾಡುವ ಸಲುವಾಗಿ ಬನಹಟ್ಟಿ (ಸಂಸ್ಥಾನಜಮಖಂಡಿ)ಯಲ್ಲಿ ಈ ತಾ|| 22 ನೇ ಸೋಮವಾರ ಸಾಯಂಕಾಲ ಜಾಹೀರ ಸಭೆಯು ಸೇರಿ “ತಾ|| 9-11-26 ದಿವಸ ಬೆಳಗಾವಿ ಜಿಲ್ಲೆಯ ಮತದಾರರು ಕೊಟ್ಟ ಮತಗಳನ್ನು ತಾ|| 20-11-26 ದಿವಸ ಎಣಿಸಿದುದರಲ್ಲಿ, ಮ|| ಗಳಾದ ಪಂಡಿತಪ್ಪ ರಾಯಪ್ಪ ಅಣ್ಣ ಚಿಕ್ಕೋಡಿ, ಬಿ.ಎ.,ರವರು ಎಲ್ಲಕ್ಕಿಂತ ಹೆಚ್ಚು ಅಂದರೆ, 11,410 ಮತಗಳನ್ನು ಪಡೆದು, ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾಗಿ ಬಂದ ಬಗೆಗೂ, ರಾ|| ಬ|| ಷಣ್ಮುಖಪ್ಪ ಲಿಂಗಪ್ಪ ಅಣ್ಣಾ ಅಂಗಡಿ, ಬಿ.ಎ., ಎಲ್‌ಎಲ್.ಬಿ., ರವರು 9,545 ಮತಗಳನ್ನು ಪಡೆದು, ಎರಡನೆಯ ಮೆಂಬರಸ್ಥಾನಕ್ಕೆ ಆರಿಸಿ ಬಂದುದರ ಬಗೆಗೂ, ಜಮಖಂಡಿಸಂಸ್ಥಾನದೊಳಗಿನ ಬನಹಟ್ಟಿಗ್ರಾಮನಿವಾಸಿಗಳು ಜಾಹೀರಸಭೆಯನ್ನು ಕೂಡಿಸಿ ಉಭಯತರನ್ನು ಅಭಿನಂದಿಸುವದಲ್ಲದೆ, ಕೌನ್ಸಿಲಿನಲ್ಲಿ ಜನಹಿತಕಾರ್ಯಗಳನ್ನು ಹೆಚ್ಚುಹೆಚ್ಚು ಮಾಡಿ ಅವರು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಶ್ರೀಕಾಡಸಿದ್ಧೇಶ್ವರನನ್ನು ಬೇಡಿಕೊಳ್ಳುತ್ತಾರೆ” ಎಂದು ನಿರ್ಣಯವನ್ನು ಸರ್ವಾನುಮತದಿಂದ ಮಾಡಿದರು.

ವಿರೂಪಾಕ್ಷಪ್ಪ ಅಪ್ಪಣ್ಣಪ್ಪ ಬಾಣಕಾರ, ಜಾಹೀರಸಭೆಯ ಪ್ರೆಸಿಡೆಂಟ್.

ಚಳ್ಳಕೆರೆ ಟವನ್ನಿನ ಸ್ಥಿತಿ.

ಈ ಚಳ್ಳಕೆರೆ ಟವ್ನ್ ಮ್ಯುನಿಸಿಪಲ್ ಕಂಟ್ರಾಕ್ಟನ್ನು ಬಹಳದಿವಸಗಳಿಂದ ಇಲ್ಲಿಯ ಪಟೇಲರೊಬ್ಬರೇ ಮಾಡುತ್ತಿದ್ದರು. ಈ ವರ್ಷ ಹೆಚ್ಚು ಜನರಿಗೆ ಕಂಟ್ರಾಕ್ಟು ಕೊಡಲ್ಪಟ್ಟದ್ದರಿಂದ ಕೆಲಸಗಳು ಜಾಗ್ರತೆಯಿಂದಲೂ ಸಮರ್ಪಕತೆಯಿಂದಲೂ ನಡೆಯಲವಕಾಶವಾಯಿತು. ಆದರೆ ಮಾಡಿದ ಕೆಲಸಗಳಿಗೆ ಬಹಳ ದಿನಗಳಾದರೂ ಹಣ ಕೊಡಲ್ಪಡದಿರುವುದರಿಂದ ಕಂಟ್ರಾಕ್ಟರುಗಳು ಜಿಗುಪ್ಸಿತರಾಗಿದ್ದಾರೆ. ಈ ಟವ್ನ್ ಕಂದಾಯ ವಸೂಲಿಯಲ್ಲಿ ಕೌನ್ಸಿಲರುಗಳಾಗಲೀ ವೈಸ್‌ಪ್ರೆಸಿಡೆಂಟರಾಗಲೀ ಮುತವರ್ಜಿವಹಿಸದೆ ಇರುವುದರಿಂದ ಅನೇಕವರ್ಷಗಳ ಬಾಕಿ ನಿಂತುಹೋಗಿರುತ್ತದೆ. ಇದರಿಂದ ಟವ್ನ್ ಮ್ಯುನಿಸಿಪಲ್ ಕೆಲಸಗಳು ನಡೆಯಲು ಹಣವಿಲ್ಲದೆ ತೊಂದರೆಯಾಗಿರುತ್ತದೆಂದು ಹೇಳಬೇಕಾಗಿಲ್ಲ. ಹಿಂದೆ ಇದ್ದ ಮ್ಯುನಿಸಿಪಲ್ ಅಧಿಕಾರಿಗಳು ಈ ವಿಚಾರದಲ್ಲಿ ಏನು ರಿಕಾರ್ಡುಮಾಡಿರುವರೆಂಬುದು ಸಹ ಗೊತ್ತಾಗುವುದಿಲ್ಲ. ಇನ್ನುಮೇಲಾದರೂ ಮು|| ಕೌನ್ಸಿಲರುಗಳೂ ವೈಸ್‌ಪ್ರೆಸಿಡೆಂಟರೂ ಮುತವರ್ಜಿಯಿಂದ ಕಂದಾಯದ ಬಾಕಿ ವಸೂಲಿ ಮಾಡಿಸಲು ತಕ್ಕೇರ್ಪಾಟನ್ನು ಮಾಡುವವರಾಗಬೇಕು. ಈ ತಾ|| ನಲ್ಲಿ ಸೇಂದಿ ವನಗಳು ವಿಶೇಷವಾಗಿವೆ. ಕೆಲ ಗ್ರಾಮ ನೌಕರರುಗಳು ಸ್ವಪ್ರಯೋಜನಕ್ಕಾಗಿಯೂ ಇತರರ ಸಹಾಯಕ್ಕಾಗಿಯೂ ಸೇಂದಿ ಮರಗಳನ್ನು ಕಡಿಸಿರುವುದಾಗಿ ಡೆ|| ಕಮಿಷನರಿಗೂ, ಡಿವಿಜನ್‌ಸಾಹೇಬರಿಗೂ ಅರ್ಜಿಗಳು ಹೋಗಿದ್ದುದರಮೇಲೆ ಸಬ್‌ಡಿವಿಜನ್ ಆಫೀಸರು ತನಿಖೆಗಾಗಿ ದಯಮಾಡಿಸಿದ್ದರು. ಆದರೆ ಮರ ಕಡಿದಿರುವ ವಿಚಾರವು ಗೊತ್ತಾದರೂ ಸ|| ಆಫೀಸರು ಸ್ವತಃ ವಿಚಾರಣೆ ನಡೆಸದೆ ಕೈಕೆಳಗಿನ ನೌಕರರಿಗೆ ವಹಿಸಿದ್ದಂತೆ ತಿಳಿಯಬರುತ್ತದೆ. ಇದರಿಂದ ಎಷ್ಟರಮಟ್ಟಿಗೆ ನ್ಯಾಯ ದೊರೆಯುತ್ತದೆಂಬುದನ್ನು ಹೇಳಬೇಕಾಗಿಲ್ಲ. ಇಲ್ಲಿಯ ಪಟೇಲರಿಗೆ ವಿಲೇಜ್ ಮುನಸೀಫ್ ಕೆಲಸ ಬೇರೆ ದೊರೆತಿರುತ್ತದೆ.

ಟವ್ನ್ ನಿವಾಸಿ.

ಬೆಂಕಿಯ ಅನಾಹುತ.

ಚನ್ನಗಿರಿ ತಾಲ್ಲೂಕು ಕತ್ತಲಗೆರೆಗ್ರಾಮದಲ್ಲಿ ಈ ತಾ|| 16 ರ ಮಧ್ಯಾಹ್ನ 1 ಗಂಟೆಯಹೊತ್ತಿನಲ್ಲಿ ಆದಿಕರ್ನಾಟಕರ ಮನೆಗೆ ಅಕಸ್ಮಾತ್ತಾಗಿ ಬೆಂಕಿಬಿದ್ದು ಸುತ್ತುಮುತ್ತಲಿನ 4-5 ಮನೆಗಳನ್ನು ನಾಶಮಾಡಿತು. ಇದು ಎಲ್ಲಾ ರೈತರಿಗೂ ಸುಗ್ಗಿಯಕಾಲವಾದ್ದರಿಂದ ಮನೆಯಬಾಗಿಲುಗಳನ್ನು ಭದ್ರಪಡಿಸಿಕೊಂಡು ಹೆಂಗುಸರು ಮಕ್ಕಳಾದಿಯಾಗಿ ಎಲ್ಲರೂ ಹೊಲಗಳಿಗೆ ಹೋಗಿರುವ ಸಮಯವಾದ್ದರಿಂದ ಮನೆಯೊಳಗಿನ ಯಾವ ಸಾಮಾನುಗಳನ್ನೂ ತೆಗೆಯುವ ಅವಕಾಶವಾಗಲಿಲ್ಲ. ಆಕಸ್ಮಿಕವಾದ ಈ ಸಂಘಟನೆಯಿಂದ ಈ ಗ್ರಾಮವೇ ಭಸ್ಮೀಭೂತವಾಗಿ ಹೋಗಬೇಕಾಗಿದ್ದಿತು. ಆದರೆ ಗ್ರಾಮದ ಪೋಲೀಸ್ ಪಟೇಲ್ ಬಸಪ್ಪನವರು, ಸ್ಕೂಲ್ ಕಮಿಟಿ ಮೆಂಬರುಗಳಾದ [illegible]

ಮಾಸ್ಟರ್ ಬಿ. ಮಲ್ಲಪ್ಪನವರು, ಇವರ ಅಣ್ಣಂದಿರಾದ ನಂಜಪ್ಪಗೌಡರು, ಈ ಐದುಜನಗಳು ಮಾಡಿದ ಸಾಹಸವು ಅತಿಶ್ಲಾಘನೀಯವಾದದ್ದಾಗಿದೆ. ಒಳ್ಳೇ ಮಧ್ಯಾಹ್ನದ ಸಮಯ; ಸೂರ್ಯನಪ್ರಚಂಡತಾಪದವೇಳೆ ಉತ್ಕಟವಾದ ಬೆಂಕಿ. ಈ ಸಂದರ್ಭದಲ್ಲಿ ಹತ್ತಿರಕ್ಕೆ ಹೋಗುವುದೇ ದುಸ್ತರವಾಗಿದ್ದಾಗ್ಯೂ, ಪರೋಪಕಾರಬುದ್ಧಿಯುಳ್ಳ ಈ ಮಹನೀಯರುಗಳು ಒಳ್ಳೇ ಧೈರ್ಯಮಾಡಿ ಈ ಊರಿನಲ್ಲಿ ಸೇದುವಭಾವಿಗಳ ಹೊರತು ಬೇರೆ ಸ್ವತಂತ್ರಜಲವಸತಿಗಳಿಲ್ಲದೆ ಸಕಾಲಕ್ಕೆ ನೀರು ಒದಗುವುದು ದುಸ್ತರವಾದಾಗ್ಯೂ, ಸಮಯೋಚಿತವಾದ ಬುದ್ಧಿಯಚಾತುರ್ಯದಿಂದ ಜಗ್ಗಲ್ಲಿಯನ್ನು ಕಡಿದುತಂದು ಬೆಂಕಿಯಲ್ಲಿ ಹಾಕುತಾ ಬಂದುದರಿಂದ ಬೆಂಕಿಯ ಅರ್ಭಟವು ಕುಗ್ಗುತ್ತಾ ಬಂದಿತು. ಮೇಲೆಮೇಲೆ ನೀರನ್ನೂ ಉಪಯೋಗಿಸುತ್ತಿದ್ದರು. ಇದರಿಂದ 4-5 ಮನೆಗಳು ಸಂಪೂರ್ಣವಾಗಿ ಸುಟ್ಟಾಗ್ಯೂ, ಇಡೀ ಗ್ರಾಮದ ಕಲ್ಯಾಣಮಾಡಿದರೆಂದು ಹೇಳಬಹುದು. ಈ ಮಹನೀಯರುಗಳಿಗೆ ದೇವರು ಆಯುರಾರೋಗ್ಯ ಪುತ್ರಪೌತ್ರಾದಿ ಸಕಲಸಂಪತ್ತನ್ನೂ ಉಂಟುಮಾಡಲೆಂದು ಹಾರೈಸುತ್ತೇನೆ. ಲೋಕದಲ್ಲಿ ಇಂಥ ಸ್ವಾರ್ಥತ್ಯಾಗಿಗಳಾದ ಮಹಾನುಭಾವರು ದುರ್ಲಭರೆಂದು ಹೇಳಬೇಕು. ಮನೆಗಳನ್ನು ಸುಟ್ಟುಕೊಂಡು ಇರುವವರು ಕೇವಲ ಬಡಜನಗಳಾದಾಗ್ಯೂ, ಸಂಗೀತವಿದ್ಯಾಪ್ರವೀಣರಾಗಿದ್ದಾರೆ. ಓಲಗ ಊದುವುದೇ ಇವರ ಮುಖ್ಯ ಕಸಬಾಗಿದ್ದು, ತಮ್ಮ ಸಾಧನಗಳೆಲ್ಲಾ ಕಳೆದುಕೊಂಡು, ನಿರಾಧಾರಿಗಳಾಗಿ ಮರಗಳ ಕೆಳಗೆ ವಾಸಮಾಡುತ್ತಿರುವ ಹಿಂದುಳಿದ ಜನಾಂಗದವರಾದ ಈ ಜನಗಳಿಗೆ ದಯಾಳು ಸರ್ಕಾರವು ಮನೆವಾರುಗಳನ್ನು ಕಟ್ಟಿಕೊಳ್ಳಲು ಸಹಾಯಮಾಡುವುದಾಗಿ ನಂಬಿರುತ್ತೇನೆ.

ಎಂ. ಮಲ್ಲಪ್ಪ, ಕತ್ತಲಗೆರೆ ಸ್ಕೂಲ್‌ಮಾಸ್ಟರ್.

ದುಷ್ಟನಿಗ್ರಹ, ಶಿಷ್ಟಪರಿಪಾಲನೆ.

ಮಂಜರಾಬಾದು ತಾ॥ ನಲ್ಲಿ ಸಕಲೇಶಪುರವನ್ನು ಬಿಟ್ಟರೆ ವ್ಯಾಪಾರ, ಜನಸಂಖ್ಯೆ ಮತ್ತು ಐಶ್ವರ್ಯದಲ್ಲಿ ಎಸಳೂರುಪೇಟೆಯೇ ಹೆಸರ್ಗೊಂಡಿರುವುದು. ಇದನ್ನರಿತು ಸರ್ಕಾರವು ಇಲ್ಲಿಗೆ ಆಸ್ಪತ್ರೆ, ಪೋಲೀಸ್ ಮತ್ತು ಸ್ಕೂಲುಗಳನ್ನು ಒದಗಿಸಿರುವುದಲ್ಲದೆ ಒಂದು ವಿಶೇಷ ಮುನ್ಸೀಫ್ ಕೋರ್ಟನ್ನೂ ವಿಶೇಷ ಪಂಚಾಯಿತಿಯನ್ನೂ ಒದಗಿಸಿರುತ್ತದೆ. ಇವೆಲ್ಲಕ್ಕೂ ಇಲ್ಲಿನ ಪಟೇಲರೇ ಯಜಮಾನರಾಗಿಯೂ, ಸಹಾಯಕರಾಗಿಯೂ ಇರುತ್ತಾರೆ. ಇವರು ಕೇವಲ ಗುಣೈಕಪಕ್ಷಪಾತಿಗಳು ಮತ್ತು ಸ್ವಾಮಿಕಾರ್ಯಧುರಂಧರರು ಆಗಿರುವರು. ಇದು ಮಲೆನಾಡು ಎಲ್ಲೆಲ್ಲೂ ಕಾಡುಗಳೂ, ಗುಡ್ಡಗಳೂ ಇವೆ. ಈ ಗ್ರಾಮದ ಸುತ್ತಲೂ ಲಂಟಾನಾಗಿಡಗಳು ಅತಿಯಾಗಿ ಬೆಳೆದಿವೆ. ಈ ಪೊದೆಗಳಲ್ಲಿ ಸುಮಾರು ಒಂದುವರ್ಷದಿಂದಲೂ ಒಂದು ಚಿರತೆಯು ಸೇರಿಕೊಂಡು ಸುತ್ತಲ ಗ್ರಾಮಗಳ ನಾಯಿ, ಆಡು, ಕೋಳಿ ಮತ್ತು ಹಂದಿಗಳನ್ನೆಲ್ಲಾ ಹಿಡಿದು ತಿನ್ನುತ್ತಿತ್ತು. ಈಗ್ಗೆ 2 ತಿಂಗಳಿನಲ್ಲಿ ಈ ಗ್ರಾಮದ ಡಾಕ್ಟರ್ ಎಸ್. ಪಿ. ರಾಜಣ್ಣನವರು ಬಹು ಪ್ರೇಮದಿಂದ ಸಾಕಿಕೊಂಡಿದ್ದ ನಾಯಿಯನ್ನು ತಿಂದಿತು. ಇದರಿಂದ ಎಲ್ಲರಿಗೂ ವ್ಯಸನವಾಗಿ ಈ ದುಷ್ಟಪ್ರಾಣಿಯನ್ನು ನಾಶಪಡಿಸಬೇಕೆಂದು ನಿಶ್ಚಯಿಸಿದರು. ಆದರೇನು, ಚಿರತೆಯು ದಿನೇ ದಿನೇ ಧೈರ್ಯವನ್ನವಲಂಬಿಸಿ ಗೋವುಗಳನ್ನು ತಿನ್ನಲಾರಂಭಿಸಿತು. ಕೋವಿಗಳಿಲ್ಲದವರು ಪಶ್ಚಾತ್ತಾಪಪಡುತ್ತಿದ್ದರು. ಇದ್ದವರು ಭೂತದಯೆಯನ್ನು ತೋರಿಸುತ್ತಿದ್ದರು. ಇದರಿಂದ ಅದರ ಹಾವಳಿ ಮಿತಿಮೀರಿತು. ಇದನ್ನು ನೋಡಿ ಈ ಗ್ರಾಮದ ಪಟೇಲ್ ಮ॥ ಶಾಂತಮಲ್ಲೇಗೌಡರು ಒಂದುದಿನವೆಲ್ಲಾ ಕಾದು 17-11-26 ನೇ ಸಾಯಂಕಾಲ 6 ಗಂಟೆ ಸಮಯದಲ್ಲಿ ಒಂದೇ ಗುಂಡಿನಿಂದ ಈ ದುಷ್ಟಪ್ರಾಣಿಯನ್ನು ಯಮಸದನಕ್ಕಟ್ಟಿ “ಮಲ್ಲ” (ಜಟ್ಟಿ) ರೆಂಬ ಹೆಸರನ್ನು ಸಾರ್ಥಕಪಡಿಸಿಕೊಂಡರು. ತಾ॥ 18-11-26 ರಲ್ಲಿ ಅದರ ಕಳೇಬರವನ್ನು ಊರಿನಲ್ಲೆಲ್ಲಾ ಮೆರವಣಿಗೆಮಾಡಿಸಿದರು. ಸುತ್ತಲಗ್ರಾಮಗಳಿಂದ ಅನೇಕರು ಇದನ್ನು ನೋಡಲು ಬಂದಿದ್ದರು. ಆಬಾಲವೃದ್ಧರಾದಿಯಾಗಿ ಸರ್ವರೂ ಶತ್ರುನಾಶವಾದದ್ದಕ್ಕಾಗಿ ಸಂತೋಷವನ್ನು ಸೂಸುತ್ತಲೂ, ಈ ಸಂತೋಷಕ್ಕೆ ಕಾರಣರಾದ ನಮ್ಮ ಪಟೇಲರನ್ನು ಹರಸುತ್ತಲೂ ಕಾಲಕಳೆಯುತ್ತಿದ್ದರು. ಇವರು ಉದಾಸೀನಮಾಡಿದ್ದರೆ ಸಾಧುಪ್ರಾಣಿಗಳಿಗೆ ಒದಗುತ್ತಿದ್ದ ತೊಂದರೆಗಳನ್ನು ವಿವರಿಸುವಂತಿರಲಿಲ್ಲ. ಪರಮೇಶ್ವರನು ದುಷ್ಟನಿಗ್ರಹಕ್ಕಾಗಿಯೇ ಇವರನ್ನು ಸೃಷ್ಟಿಸಿರುವನೆಂದು ಎಲ್ಲರೂ ಹೊಗಳುತ್ತಿದ್ದರು. ಇವರಂತೆಯೇ ಇತರ ಮಹನೀಯರೂ ಮನಗೊಟ್ಟಲ್ಲಿ ಈ ನಾಡು ಸೊಬಗಿನಬೀಡಾಗುವುದರಲ್ಲಿ ಸಂದೇಹವೇ ಇಲ್ಲ. ಪರಮೇಶ್ವರನು ಸದರೀ ಗೌಡರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನಿತ್ತು ಸಲಹಲೆಂದು ಪ್ರಾರ್ಥಿಸುತ್ತೇನೆ. ಪ್ರತ್ಯಕ್ಷದರ್ಶಿ.

ಗೋರಕ್ಷಣೆಯೂ, ವೃತ್ತಾಂತಪತ್ರಿಕೆಯೂ.

ತಾ॥ 18-11-26 ನೇ ವೃತ್ತಾಂತಪತ್ರಿಕೆಯ ಸಂಪಾದಕೀಯ ಲೇಖನದಲ್ಲಿ ‘ಹಸುಗಳ ಸಂರಕ್ಷಣೆ’ ಎಂಬ ಶಿರೋನಾಮೆಯಿಂದ ಒಂದು ಲೇಖನವು ಬರೆಯಲ್ಪಟ್ಟಿರುವುದು. ಅದನ್ನು ನೋಡಿ ಬಹುದುಃಖವಾಗಿ ಈ ಲೇಖನವನ್ನು ಬರೆಯಬೇಕಾಯಿತು. ಆರ್ಥಿಕ ಮತ್ತು ಪೌಷ್ಟಿಕದೃಷ್ಟಿಯಿಂದ ಗೋರಕ್ಷಣೆಯು ಅತ್ಯಂತ ಮಹತ್ವದ್ದೆಂದು ಅನೇಕಾನೇಕರು ಹೊಗಳುತ್ತಿರುವಾಗ ಪತ್ರಿಕಾಸಂಪಾದಕರು ಮಾತ್ರ ಹಾಗೆ ಭಾವಿಸದೆ ‘ನಮ್ಮ ದೇಶದಲ್ಲಿ ಬೆಳೆಯತಕ್ಕ ಹುಲ್ಲು, ಕಡ್ಡಿ ಎಲ್ಲಾ ಅಜನ್ಮಾವಧಿಯೂ ಉಪಯೋಗಕ್ಕೆ ಬಾರದ ದನಗಳ ಮೇವಿಗಾಗಿ ವಿಯೋಗವಾಗುತ್ತಲಿದೆ. ಈಗ ಅಲ್ಪಸ್ವಲ್ಪವಾದರೂ ಪ್ರಯೋಜನವಾಗುವಂಥಾ ಕಾಲ್ನಡೆಗಳಿಗೆ ಅರಹೊಟ್ಟೆ ಹಾಕಿ ಅವುಗಳಿಂದಾಗುವ ಸಂಪೂರ್ಣ ಫಲವನ್ನು ಪಡೆಯಲು ಸಾಧ್ಯವಿಲ್ಲದಂತಾಗಿದೆ’ ಎಂದು ಮಿ॥ ಸ್ಮಿತ್‌ರವರು ಹೇಳಿರುವ ಉದಾಹರಣೆಯನ್ನು ಕೊಟ್ಟು ‘ಇದು ಮತಸಂಬಂಧವಾದ ವಿಷಯವು ಮಾತ್ರವೇ ಅಲ್ಲದೆ ಸಂಪದಭಿವೃದ್ಧಿಗೆ ಸೇರಿದ ವಿಷಯವೂ ಆಗಿರುವುದರಲ್ಲಿ ಸಂಶಯವಿಲ್ಲ. ನಿಪುಣರು ಹೇಳಿರುವಂತೆ ನಮ್ಮ ದೇಶವು ಉಪಯೋಗವಿಲ್ಲದೆ ಬೆಳೆಯುತ್ತಿರುವ ಕಾಲ್ನಡೆಗಳಿಗೆಲ್ಲಾ ಆಹಾರವನ್ನೊದಗಿಸುವುದು ಸಾಧ್ಯವಲ್ಲ. ಕೆಲವು ಮಾತ್ರ ಇದ್ದು ಹೆಚ್ಚಾಗಿಯೂ, ಪುಷ್ಟಿಯಾಗಿಯೂ ತಿನ್ನುವಂತಾದರೆ ಎತ್ತುಗಳು ಮತ್ತಷ್ಟು ಕಷ್ಟಪಟ್ಟು ದುಡಿಯುವಂತೆಯೂ ಹಸುಗಳು ಇನ್ನೂ ಯಥೇಚ್ಛವಾಗಿ ಹಾಲು ಕೊಡುವಂತೆಯೂ ಆಗುವುದು’ ಎಂಬುದಾಗಿ ಅಭಿಪ್ರಾಯಪಟ್ಟಿರುವರು. ಸಂಪಾದಕರೇ, ನಿಮ್ಮ ಅಭಿಪ್ರಾಯವನ್ನು ನೋಡಿ ಎಂತಹ ದಡ್ಡನಾದರೂ ನಗುವುದರಲ್ಲಿ ಸಂದೇಹವಿಲ್ಲ. ಗೋವುಗಳ (ಅವು ಪುಷ್ಟಿಯಾದವುಗಳೇ ಆಗಲಿ, ಬಡಕಲೇ ಆಗಲಿ) ಮಹತ್ವವು ಇಡೀ ಪ್ರಪಂಚಕ್ಕೇ ಗೊತ್ತಾಗಿ ಅನೇಕಾನೇಕ ಯೂರೋಪಿಯನ್ ಮಹಾಶಯರು ಗೋವುಗಳ ಉಪಯೋಗವನ್ನೂ ಅವುಗಳ ರಕ್ಷಣೆಯ ಆವಶ್ಯಕತೆಯನ್ನೂ ಹೇಳಿರುವುದನ್ನು ಅರಿಯಿರಾ? ಆ ಮಹಾಶಯರು ಹೇಳಿರುವ ಅಭಿಪ್ರಾಯದಲ್ಲಿ ಸೂಚಿಸಿರುವುದಕ್ಕಿಂತ ಆ ಮೂಕಪ್ರಾಣಿಯಾದ ಗೋವಿನಿಂದ ಮನುಷ್ಯನಿಗೆ ಎಷ್ಟು ಮಹತ್ವವಿದೆ ಎಂಬುದು ಕೆಳಗಿನ ಪದ್ಯಗಳಿಂದಲೇ ವ್ಯಕ್ತವಾಗುತ್ತದಲ್ಲವೆ?

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ ।
ಸುಟ್ಟರೆ ನೊಸಲಿಗೆ ವಿಭೂತಿಯಾದೆ ।
ತಟ್ಟದೇಹಾಕಿದರೆ ಮೇಲುಗೊಬ್ಬರವಾದೆ ।
ನೀನಾರಿಗಾದೆಯೋ ಎಲೆಮಾನವಾ ॥
ಹಾದಿಬೀದಿಯಲಿರುವ ಕಸದಹುಲ್ಲನುಮುಕುಶಿ ।
ಮೇದು ಮನೆಗೈದಿ ನಾನಮೃತವೀವೆ ॥
ಅದನುಂಡು ನನಗೆರಡುಬಗೆವ ಮಾನವಾ ಹೇಳು ।
ನೀನಾರಿಗಾದೆಯೋ ಎಲೆಮಾನವಾ ॥

ಬಡಕಲುಗಳಿಗೆ ಆಹಾರವನ್ನು ಕೊಡುವುದರಿಂದ ಉತ್ತಮವಾದ ರಾಸುಗಳಿಗೆ ಆಹಾರವಿಲ್ಲದೆ ಹೋಗುತ್ತದೆ ಎಂಬ ನಿಮ್ಮ ಅಭಿಪ್ರಾಯದಂತೆ ನಮ್ಮ ದೇಶದಲ್ಲಿ ಕೆಲಸವನ್ನು ಮಾಡಲು ಶಕ್ತಿಯಿಲ್ಲದ ಮುದುಕರಾದ ಜನಗಳಿರುವ ಪ್ರಯುಕ್ತ ಅವರಿಗೆ ಆಹಾರಪದಾರ್ಥಗಳನ್ನು ಕೊಡುವುದರಿಂದ ಕೆಲಸಮಾಡತಕ್ಕವರೂ, ಯೌವನಸ್ಥರೂ ಅದವರಿಗೆ ಹೆಚ್ಚಾಗಿ ಆಹಾರವಿಲ್ಲದೆ ಹೋಗುತ್ತದೆಯಾದಕಾರಣ, ಯೌವನಸ್ಥರು ಮಾತ್ರ ಇದ್ದು ಹೆಚ್ಚಾಗಿಯೂ ಪುಷ್ಟಿಯಾಗಿಯೂ ತಿಂದು ಮತ್ತಷ್ಟು ಕಷ್ಟಪಟ್ಟು ದುಡಿಯಬಹುದಾದುದರಿಂದ, ಮುದುಕರಿಗೆಲ್ಲಾ ಆಹಾರವನ್ನು ಕೊಡದೆ ಗುಂಡಿನಿಂದ ಹೊಡೆದೋ ಭಾವಿಗೆ ತಳ್ಳಿಯೋ ಪ್ರಾಣವನ್ನು ತೆಗೆಯಬೇಕು ಎಂಬುದಾಗಿಯೂ ಅಭಿಪ್ರಾಯಪಟ್ಟಿದ್ದರೆ ಚೆನ್ನಾಗಿದ್ದಿತು. ಆದರೆ ಆರೀತಿ ಮಾಡದೆ ಮೂಕಪ್ರಾಣಿಗಳ ವಿಷಯದಲ್ಲಿ ಮಾತ್ರ ಈರೀತಿಯಾದ ಅಭಿಪ್ರಾಯಪಟ್ಟಿರಲು ಕಾರಣವೇನೋ ತಿಳಿಯದು. ಸಂಪಾದಕರೇ, ವೃಥಾ ಇಂತಹ ಅಭಿಪ್ರಾಯಪಡುವುದಕ್ಕಿಂತ ಗೋವಧಾನಿರೋಧಕ ಕಾನೂನನ್ನು ಮಾಡಿರುವ ಯಾವ ರಾಜ್ಯಗಳಲ್ಲಿ ಮುದಿಯಾದ ಪ್ರಾಣಿಗಳೇ ಆಗಲೀ, ಯೌವನದ ಪ್ರಾಣಿಗಳೇ ಆಗಲೀ ಆಹಾರವಿಲ್ಲದೆ ಬಳಲುತ್ತಿವೆ ಎಂಬುದನ್ನಾದರೂ ಉದಾಹರಣಾರ್ಥವಾಗಿ ಹೇಳಬಹುದಾಗಿದ್ದಿತಲ್ಲವೆ? ವರ್ಷವೊಂದಕ್ಕೆ ಹಿಂದೂದೇಶದಲ್ಲಿ 65 ಲಕ್ಷ ಗೋವುಗಳು ಸಂಹರಿಸಲ್ಪಡುತ್ತಿದ್ದಾಗ್ಯೂ ಇನ್ನೂ ಮುದಿಯಾದ ಗೋವುಗಳು ಯಥೇಚ್ಛವಾಗಿರುವವೆಂದಮೇಲೆ ಮುದಿಯಾದ ಗೋವುಗಳು ಸಂಹರಿಸಲ್ಪಡದೆ ಒಳ್ಳೇ ಗೋವುಗಳೇ ಸಂಹರಿಸಲ್ಪಡುತ್ತವೆಂಬುದರಲ್ಲಿ ಸಂಶಯವಿಲ್ಲ. ಸೈನ್ಯಕ್ಕೆ ಆಹಾರವನ್ನು ಒದಗಿಸುವ ಯಾವ ಕಸಾಯಿಖಾನೆಯಲ್ಲಿ ನೋಡಿದರೂ 20-25 ರೂಪಾಯಿ ಬೆಲೆಯ ಒಳ್ಳೇ ಹಸುಗಳು ಕೊಲ್ಲಲ್ಪಡುತ್ತವಾದುದರಿಂದ ಒಳ್ಳೇ ದನಗಳ ಸಂಖ್ಯೆಯು ವರ್ಷೇ ವರ್ಷೇ ಕಡಮೆಯಾಗಿ ಭಾರತೀಯರಿಗೆ ಮುಖ್ಯೋದ್ಯೋಗವಾದ ವ್ಯವಸಾಯವನ್ನು ಮಾಡಲು ಮುಖ್ಯಸಾಧನವಾದ ಗೋವುಗಳಿಲ್ಲದೆ ಭಾರತೀಯರು ಬಡತನವನ್ನು ಅನುಭವಿಸಬೇಕಾಗಿದೆ. ಆದಕಾರಣ ನಮ್ಮ ದೇಶದಲ್ಲಿ ಪ್ರತಿವರ್ಷ ಸಂಹರಿಸಲ್ಪಡುವ ಈ ಗೋವುಗಳ ಸಂಖ್ಯೆಯು ನಿಂತಾಗಲೇ ದನಗಳು ಇನ್ನೂ ಕಷ್ಟಪಟ್ಟು ದುಡಿಯತಕ್ಕವುಗಳೂ, ಯಥೇಚ್ಛವಾಗಿ ಹಾಲನ್ನು ಕೊಡತಕ್ಕವುಗಳೂ ಆಗುವುವೇ ಹೊರತು ತಮ್ಮ ಅಭಿಪ್ರಾಯದಂತೆ ಮುದಿಯಾದ ದನಗಳ ಆಹಾರವನ್ನು ಅಪಹರಿಸುವುದರಿಂದ ಎಂದಿಗೂ ಫಲದಾಯಕವಾಗುವುದಿಲ್ಲ. ಈ ವಿಷಯವನ್ನು ನಿಧಾನವಾಗಿ ಆಲೋಚಿಸಿ, ವೃತ್ತಾಂತಪತ್ರಿಕೆಯ ಎಡಿಟರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದರೆ ಚೆನ್ನಾಗಿದ್ದಿತಲ್ಲವೆ?

ವೃಷಭೇಶ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 18 ನೆಯ ಪ್ರಕರಣ.

ವರ್ಣನಿರೋಧವು.

ನ್ಯಾಯಸ್ಥಾನಕ್ಕೆ ಚಿಹ್ನೆಯಾಗಿರಲು ಚತುರಮತಿಯಾದ ವೃದ್ಧಸ್ತ್ರೀಯು ತ್ರಾಸನ್ನು ಏರುಪೇರಿಲ್ಲದೆ ನಿಷ್ಪಕ್ಷಪಾತವಾಗಿ ಹಿಡಿದುಕೊಂಡಿರುವಂತೆ ಚಿತ್ರಿಸಲ್ಪಟ್ಟಿದ್ದಿತು. ಮನುಷ್ಯನ ಬಾಹ್ಯಸ್ವರೂಪವನ್ನು ನೋಡಿ ಮೋಸಹೋಗದ ಅವನ ಸಹಜವಾದ ಯೋಗ್ಯತೆಯನ್ನು ಗುರ್ತಿಸಿಯೇ ನ್ಯಾಯನಿರ್ಣಯಿಸಲು ಭಗವಂತನು ಧರ್ಮದೇವತೆಯನ್ನು ನಿಯಮಿಸಿರುವನು. ಈ ಸಿದ್ಧಾಂತಕ್ಕೆ ವಿರುದ್ಧವಾಗಿ ಕೆಲಸಮಾಡಿ ಚಿಹ್ನೆಯನ್ನು ನಿರರ್ಥಕಮಾಡುವಂತೆ ಉನ್ನತ ನ್ಯಾಯವಾದಿಸಮಿತಿಯವರು ಪ್ರಯತ್ನಿಸಿದರು. ನನ್ನನ್ನು ಸುಪ್ರೀಂಕೋರ್ಟು ಅಡ್ವೊಕೇಟಾಗಿ ಅಂಗೀಕರಿಸಬೇಕೆಂದು ಕೋರಿಕೊಂಡೆನು. ಅಂಗ್ಲದೇಶದಲ್ಲಿ ನನಗೆ ಕೊಡಲ್ಪಟ್ಟ ಬ್ಯಾರಿಸ್ಟರ್ ಪಟ್ಟವನ್ನು ಬೊಂಬಾಯಿ ಹೈಕೋರ್ಟಿನವರಿಗೆ ತಿಳಿಸಿದಲ್ಲದೆ ಆ ಕೋರ್ಟಿನಲ್ಲಿ ವಾದಿಸಲು ಅವರ ಅನುಮತಿಯು ಕೊಡಲ್ಪಡುವುದಿಲ್ಲವಾದುದರಿಂದ ಅದನ್ನು ಅವರಿಗೆ ತಿಳಿಸಿ ಅವರಿಂದ ಪ್ರವೇಶಪಟ್ಟವನ್ನು ಪಡೆದುಕೊಂಡಿದ್ದೆನು. ಅದು ಆಗ ನನ್ನಲ್ಲಿಯೇ ಇದ್ದಿತು. ನನ್ನ ಯೋಗ್ಯತೆಯ ವಿಚಾರವಾಗಿ ಇಬ್ಬರು ಸ್ಥಳೀಯ ದೊಡ್ಡಮನುಷ್ಯರಿಂದ ಯೋಗ್ಯತಾಪತ್ರವನ್ನು ಪಡೆದು ಅರ್ಜಿಯನ್ನು ಹಾಕಿಕೊಳ್ಳಬೇಕಾಗಿದ್ದುದರಿಂದ ಅಬ್ದುಲ್ಲಾಸೇಟರ ಮೂಲಕ ನನಗೆ ಪರಿಚಿತಸ್ಥರಾದ ಇಬ್ಬರು ಪಾಶ್ಚಾತ್ಯ ಉದ್ಯೋಗಸ್ಥರಿಂದ ಯೋಗ್ಯತಾಪತ್ರವನ್ನು ಸಂಪಾದಿಸಿದೆನು. ಪಾಶ್ಚಾತ್ಯರಿಂದ ಪಡೆದುಕೊಂಡಲ್ಲಿ ಅದಕ್ಕೆ ಮಹತ್ವವು ಹೆಚ್ಚೆಂದು ತಿಳಿದೇ ನಾನು ಆರೀತಿಮಾಡಿದೆನು. ಒಬ್ಬ ಬ್ಯಾರಿಸ್ಟರ ಮೂಲಕ ಅಪ್ಲಿಕೇಷನ್ನನ್ನು ಕೊಡಬೇಕು. ಸಾಧಾರಣವಾಗಿ ಅಟರ್ನಿ ಜನರಲ್ಲೇ ಇಂತಹ ಅಪ್ಲಿಕೇಷನ್ನನ್ನು ಒಪ್ಪಿಸುವುದು. ದಾದಾ ಅಬ್ದುಲ್ಲಾ ಕಂಪೆನಿಯವರ ನ್ಯಾಯವಾದಿಯಾದ ಎಸ್ಕೊಂಬಿಯವರೇ ಅಟರ್ನಿ ಜನರಲ್ ಆದುದರಿಂದ ಅವರನ್ನು ಕೇಳಿಕೊಳ್ಳಲು ಅವರು ಮನಃಪೂರ್ವಕವಾಗಿ ಅಂಗೀಕರಿಸಿದರು. ಅದರಮೇಲೆ ನ್ಯಾಯವಾದಿಸಂಘದವರು ಪ್ರಾತಿಕೂಲ್ಯವನ್ನು ವಹಿಸಿ ನನಗೆ ನೋಟೀಸನ್ನು ಕೊಟ್ಟರು. ಅಂಗ್ಲದೇಶದಲ್ಲಿ ದೊರೆತ ಪಟ್ಟವನ್ನು ಅಪ್ಲಿಕೇಷನ್ನಿನ ಕೂಡ ಕಳುಹಿಸಲಿಲ್ಲವೆಂಬುದು ಒಂದು ಆಕ್ಷೇಪವಾಗಿದ್ದರೂ ಅದು ಮುಖ್ಯವಾದುದಲ್ಲವು. “ಮೊದಲು ಅಡ್ವೊಕೇಟರನ್ನು ಸೇರಿಸಿಕೊಳ್ಳುವ ವಿಷಯವಾಗಿ ನಿಬಂಧನೆಗಳನ್ನು ಮಾಡುವವೇಳೆಯಲ್ಲಿ ಬಿಳಿಯಜನರೇ ಅಲ್ಲದೆ ಇತರ ಜಾತಿಯವರು ಕೂಡ ದರಖಾಸ್ತು ಮಾಡುವರೆಂಬ ಅಭಿಪ್ರಾಯವಿರಲಿಲ್ಲ. ನೇಟಾಲುದೇಶಾಭಿವೃದ್ಧಿಗೆ ಯೂರೋಪುಖಂಡವಾಸಿಗಳ ಕೃಷಿಯೇ ಪ್ರಧಾನವಾಗಿ ಇರಬೇಕು. ಇತರ ಜಾತಿಯವರಿಗೂ ಪ್ರವೇಶಸೌಕರ್ಯವನ್ನುಂಟುಮಾಡಿಕೊಟ್ಟಲ್ಲಿ ಕ್ರಮೇಣ ಅವರ ಸಂಖ್ಯೆಯು ಹೆಚ್ಚಬಹುದು. ಹಾಗಾದಲ್ಲಿ ಯೂರೋಪುಖಂಡವಾಸಿಗಳ ರಕ್ಷಣೆಗೆ ಭಂಗವುಂಟಾಗುವುದು” ಎಂಬುದೇ ಮುಖ್ಯವಾದ ಆಕ್ಷೇಪಣೆಯು. ಅವರು ತಮ್ಮ ಪಕ್ಷವಾಗಿ ವಾದಿಸಲು ಒಬ್ಬ ಪ್ರಸಿದ್ಧ ನ್ಯಾಯವಾದಿಯನ್ನು ನಿಯಮಿಸಿದರು. ಆತನು ಕೂಡ ದಾದಾ ಅಬ್ದುಲ್ಲಾ ಕಂಪೆನಿಯವರ ವಕೀಲನಾಗಿದ್ದುದರಿಂದ ಒಂದುಸಾರಿ ಬಂದು ತನ್ನನ್ನು ನೋಡಬೇಕೆಂದು ಅಬ್ದುಲ್ಲಾಸೇಟರಿಂದ ಹೇಳಿಕಳುಹಿಸಿದನು. ನಾನು ಹೋಗುತ್ತಲೆ ಆತನು ನನ್ನ ಕೂಡ ಮುಚ್ಚುಮರೆಯಿಲ್ಲದೆ ಮಾತನಾಡಿದನು. ಪೂರ್ವೋತ್ತರವೇನೆಂದು ಕೇಳಲು ನಾನು ಸಂಪೂರ್ಣವಾಗಿ ಹೇಳಿದೆನು. “ಈಗ ನನ್ನ ಸಂಶಯನಿವಾರಣೆಯಾಯಿತು. ನೀವು ಈ ಅಧಿನಿವೇಶನದಲ್ಲಿ ಹುಟ್ಟಿದವರೇನೋ ಎಂದು ಮೊದಲು ನನಗೆ ಅನುಮಾನಹುಟ್ಟಿತು. ಅಂಗ್ಲದೇಶದಲ್ಲಿ ನಿಮಗೆ ಕೊಡಲ್ಪಟ್ಟಿರುವ ಪಟ್ಟವನ್ನು ನೀವು ಕಳುಹದೆ ಇದ್ದುದರಿಂದ ನನ್ನ ಸಂದೇಹವು ಮತ್ತಷ್ಟು ಹೆಚ್ಚಾಗಿದ್ದಿತು. ಪಾಶ್ಚಾತ್ಯ ವರ್ತಕರುಗಳಿಂದ ತೆಗೆದುಕೊಂಡ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿಕೊಟ್ಟಿರಿ. ಅವರಿಗೆ ನಿಮ್ಮ ಸಂಗತಿಯೇನು ತಿಳಿಯುವುದು, ಅವರಿಗೂ ನಿಮಗೂ ಪರಿಚಯವು ಯಾವ ಕಾಲದಿಂದ ಉಂಟಾಯಿತು? ಅದುಕಾರಣ ಅವರಲ್ಲಿ ನನಗೆ ಯಾವ ಗೌರವವೂ ಇಲ್ಲವು” [illegible] ತನು ಹೇಳಿದನು. “[illegible] ನನಗೆ ಈ ದೇಶದವರೆಲ್ಲರೂ ಹೊಸಬರೇ. ಅಬ್ದುಲ್ಲಾಸೇಟರ ಕೂಡಾ ಇಲ್ಲಿಗೆ ಬಂದಮೇಲೆಯೇ ಪರಿಚಯವುಂಟಾದುದು” ಎಂದು ಹೇಳಿದೆನು.

ಆತನು ಹಾಗೆ ಹೇಳಿದುದರಿಂದ ನನಗೆ ಬಹಳ ಕೋಪಬಂದಿತಾದರೂ ಅದನ್ನು ಹಾಗೆಯೇ ಅಡಗಿಸಿಕೊಂಡೆನು. ಅಬ್ದುಲ್ಲಾಸೇಟರವರಿಂದ ನಾನು ಯೋಗ್ಯತಾಪತ್ರಿಕೆಯನ್ನು ಕಳುಹಿಸಿದ್ದಲ್ಲಿ ಅದು ಕೆಲಸಕ್ಕೆ ಬಾರದೆಂದೂ ಐರೋಪ್ಯಖಂಡವಾಸಿಗಳೇ ಕೊಡಬೇಕೆಂದೂ ಅವರು ಅನ್ನುತ್ತಿದ್ದರು. ಇಷ್ಟಾಗಿ ನನ್ನನ್ನು ನ್ಯಾಯವಾದಿಯಾಗಿ ಸೇರಿಸಿಕೊಳ್ಳುವುದಕ್ಕೂ ನನ್ನ ಕುಲಗೋತ್ರ ವಿಚಾರಣೆಗೂ ಯಾವ ಸಂಬಂಧವುಂಟು? “ಈ ವಿವರವನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ನ್ಯಾಯವಾದಿಸಂಘಕ್ಕೆ ಯಾವ ಅಧಿಕಾರವೂ ಇಲ್ಲವೆಂಬುದೇ ನನ್ನ ಅಭಿಪ್ರಾಯವಾಗಿದ್ದರೂ ನೀವು ಕೋರಿದಪ್ರಕಾರ ಅಬ್ದುಲ್ಲಾಸೇಟರಿಂದ ಯೋಗ್ಯತಾಪತ್ರವನ್ನು ಪಡೆದುಕೊಂಡು ಕಳುಹಿಸಿಕೊಡುವೆನು” ಎಂದು ನಾನು ಪ್ರಸಿದ್ಧ ನ್ಯಾಯವಾದಿಗೆ ಹೇಳಿದೆನು. ಅದೇ ಪ್ರಕಾರ ಸೇಟರವರಿಂದ ಯೋಗ್ಯತಾಪತ್ರವನ್ನು ಬರೆಯಿಸಿಕೊಂಡು ಆ ನ್ಯಾಯವಾದಿಗೆ ಕಳುಹಿಸಿಕೊಟ್ಟೆನು. ಆತನು ಅದರಿಂದ ತೃಪ್ತನಾದಾಗ್ಯೂ ನ್ಯಾಯವಾದಿಸಂಘದವರು ಮಾತ್ರ ಆತನ ಸಲಹೆಯನ್ನು ಕೇಳದೆ ಉನ್ನತನ್ಯಾಯಸ್ಥಾನದಲ್ಲಿ ನನ್ನ ದರಖಾಸ್ತನ್ನು ಪ್ರತಿಭಟಿಸಲು, ಮುಖ್ಯ ನ್ಯಾಯಾಧಿಪತಿಯು ಅವರ ಆಕ್ಷೇಪಣೆಯನ್ನು ತೃಣೀಕರಿಸಿದನು. “ಇಂಗ್ಲೆಂಡಿನಲ್ಲಿ ಕೊಡಲ್ಪಟ್ಟ ವಿದ್ಯಾಪ್ರಶಸ್ತಿಯ ಸರ್ಟಿಫಿಕೇಟನ್ನು ಕಳುಹಿಸಲಿಲ್ಲವೆಂಬ ಆಕ್ಷೇಪವು ಸಲ್ಲದು. ಈತನು ಮೋಸಮಾಡಿದನೆಂದು ಯಾರಾದರು ದೃಢಪಡಿಸಿದಲ್ಲಿ ಆತನ ಹೆಸರನ್ನು ತೆಗೆದುಹಾಕುವುದಲ್ಲದೆ ಆತನಮೇಲೆ ಕೇಸನ್ನು ಸಹ ಮಾಡಬಹುದು. ನ್ಯಾಯಶಾಸ್ತ್ರವು ವರ್ಣಭೇದವನ್ನು ಪುರಸ್ಕರಿಸುವುದಿಲ್ಲ. ಅದುಕಾರಣ ಗಾಂಧಿಯವರ ದರಖಾಸ್ತನ್ನು ನಿರಾಕರಿಸಲು ಕೋರ್ಟಿನವರಿಗೆ ಅಧಿಕಾರವಿಲ್ಲ. ನಾನು ದರಖಾಸ್ತನ್ನು ಅಂಗೀಕರಿಸಿರುತ್ತೇನೆ. ಗಾಂಧಿಯವರೇ, ನೀವು ಪ್ರಮಾಣವನ್ನು ಮಾಡಬಹುದು” ಎಂದು ಮುಖ್ಯ ನ್ಯಾಯಾಧಿಪತಿಯು ಅಪ್ಪಣೆಕೊಡಿಸಿದುದರಮೇಲೆ ನಾನೆದ್ದು ರಿಜಿಸ್ಟ್ರಾರರ ಮುಂದೆ ಪ್ರಮಾಣಮಾಡಿದೆನು. “ಗಾಂಧಿಯವರೇ ಇನ್ನು ಮುಂದೆ ನೀವು ಕೋರ್ಟಿನ ನಿಬಂಧನೆಗಳಿಗೆ ಬದ್ಧರಾಗಿರಬೇಕಲ್ಲದೆ ನಿಮ್ಮ ತಲೆಪಾಗನ್ನು ತೆಗೆದುಬಿಡಬೇಕು. ಇಲ್ಲಿಯ ಬ್ಯಾರಿಸ್ಟರು ಧರಿಸುವ ಉಡುಪಿನ ಪದ್ಧತಿಯನ್ನೇ ನೀವೂ ಅವಲಂಬಿಸಬೇಕು” ಎಂದು ಮುಖ್ಯ ನ್ಯಾಯಾಧೀಶರು ಕೂಡಲೆ ನನಗೆ ಹೇಳಿದರು. ನಾನು ಎಲ್ಲವನ್ನೂ ಒಪ್ಪಿಕೊಳ್ಳದೆ ಇರುವುದು ಅಕ್ರಮವಾಗಿಲ್ಲದಿದ್ದರೂ ಆ ಸಂದರ್ಭದಲ್ಲಿ ಪ್ರತಿಕೂಲನಾಗಿರುವುದು ಉಚಿತವಲ್ಲವೆಂದು ಯೋಚಿಸಿದೆನು. ಮುಂದಿದೆ ಮುಸುಗಿನೊಳಗಿನಗುದ್ದು. ಆಗ ಬಹಳ ಕಾರ್ಯಭಾಗನಡೆಯಿಸಬೇಕಾಗಿರುವುದು. ಈಗೇತಕ್ಕೆ ಅದಕ್ಕಾಗಿ ಅಷ್ಟು ಸಂರಂಭಪಡುವುದು? ತಲೆಪಾಗನ್ನು ತೆಗೆಯುವ ವಿಚಾರವಾಗಿ ಹೋರಾಡಲು ಅದ್ಯಾವ ಮಹಾ ದೊಡ್ಡ ವಿಷಯವೆಂದು ನಾನು ಆಲೋಚಿಸಿದೆನು. ಮೊದಲು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತಲೆಪಾಗನ್ನು ತೆಗೆಯಲು ನಾನೊಪ್ಪಲಿಲ್ಲವಾದರೂ ಈಗ ಹೈಕೋರ್ಟಿನಲ್ಲಿ ದೂರದೃಷ್ಟಿಯಿಂದ ತಲೆಪಾಗನ್ನು ತೆಗೆದುಬಿಟ್ಟೆನು. ನಾನು ಅದಕ್ಕೊಪ್ಪಿಕೊಂಡುದುದು ಅಬ್ದುಲ್ಲಾಸೇಟರು ಮೊದಲಾದವರ ಮನಸ್ಸಿಗೆ ಸರಿಬೀಳಲಿಲ್ಲವು. ಅದು ನನ್ನ ದೌರ್ಬಲ್ಯವೆಂದೇ ಅವರು ತಿಳಿದುಕೊಂಡರು. “ತಲೆಪಾಗನ್ನು ತೆಗೆಯುವುದಿಲ್ಲವೆಂದು ಮುಷ್ಕರಮಾಡಬೇಕಾಗಿದ್ದಿತು” ಎಂದು ಅವರಂದರು. ನಾನು ಬಹಳಮಟ್ಟಿಗೆ ಸಮಾಧಾನವನ್ನು ಹೇಳಿದೆನು. ಯಾವ ದೇಶಕ್ಕೆ ಹೋದರೂ ಆ ದೇಶಾಚಾರವನ್ನು ಅನುಸರಿಸಬೇಕೆಂಬ ಸಾಮತಿಯನ್ನು ಮೀರಕೂಡದೆಂದು ಸಹ ಹೇಳಿದೆನು. “ಭರತಖಂಡದಲ್ಲಿ ನ್ಯಾಯಾಧಿಪತಿಯಾಗಲಿ ಉದ್ಯೋಗಿಯಾಗಲಿ ತಲೆಪಾಗನ್ನು ತೆಗೆಯಬೇಕೆಂದು ಹೇಳಿದ್ದಲ್ಲಿ ನಾನು ತೆಗೆಯುವುದಿಲ್ಲವೆಂದು ಹೇಳಬಹುದಾಗಿದ್ದಿತಲ್ಲದೆ ನೇಟಾಲಿನಲ್ಲಿ ವಕೀಲನಾಗಿ ಕೆಲಸಮಾಡಬೇಕೆಂದು ಅಪೇಕ್ಷಿಸಿದ ನಾನು ಅಲ್ಲಿಯ ಪದ್ಧತಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯಾದುದಲ್ಲವು” ಎಂದು ನಾನು ಅವರಿಗೆ ಹೇಳಿದೆನು. ಕಡೆಗೂ ಅವರು ಯಾವುದೋ ಒಂದು ವಿಧವಾಗಿ ಒಪ್ಪಿಕೊಂಡರಾದರೂ ಮನಃಪೂರ್ವಕವಾಗಿ ಸಮ್ಮತಿಸಿದರೆಂದು ನಾನು ಹೇಳಲಾರೆನು. ನಾನು ಮೊದಲಿನಿಂದಲೂ ಸತ್ಯಕ್ಕೆ ಕಟ್ಟುಬಿದ್ದಿರುವುದರಿಂದ ರಾಜೀಸಮಾಧಾನ ತ್ಯಾಗದಿಂದುಂಟಾಗುವ ಸೌಂದರ್ಯವನ್ನು ನಾನು ಗ್ರಹಿಸಿಕೊಂಡಿರುವೆನು. ಸತ್ಯಾಗ್ರಹಕ್ಕೆ ಇದು ಅತ್ಯಾವಶ್ಯಕವೆಂದೂ ನಾನು ಅನಂತರ ಗ್ರಹಿಸಿಕೊಂಡೆನು. ಅದರಿಂದ ಮಿತ್ರರಿಗೆ ಅನೇಕವೇಳೆ ನನ್ನ ಮೇಲೆ ಆಗ್ರಹವುಂಟಾದರೂ, ನನಗೆ ಪ್ರಾಣಾಪಾಯವುಂಟಾಗುವುದಾಗಿದ್ದರೂ ತಟಸ್ಥನಾದೆನು. ಸತ್ಯವು ವಜ್ರದಹಾಗೆ ಕಠಿಣತಮವಾಗಿದ್ದರೂ ಪುಷ್ಪದಂತೆ ಬಹಳ ಕೋಮಲವಾಗಿ ಆಗುವುದು. ಈರೀತಿಯಾಗಿ ನ್ಯಾಯವಾದಿಸಂಘದವರು ನನ್ನ ಅರ್ಜಿಯನ್ನು ಆಕ್ಷೇಪಿಸಿದುದರಿಂದ ನನ್ನ ಸಂಗತಿಯು ದೇಶದಲ್ಲಿ ಮತ್ತಷ್ಟು ಹೆಚ್ಚಾಗಿ ಹರಡಿತು. ವರ್ತಮಾನಪತ್ರಿಕೆಗಳು ನ್ಯಾಯಾಧೀಶಸಂಘದವರ ಚರ್ಯವನ್ನು ಬಹಳವಾಗಿ ಖಂಡಿಸಿ ಬರೆದುವು. ಅವರು ಈರ್ಷೆಯಿಂದಲೇ ಹಾಗೆ ಮಾಡಿದರೆಂದು ಸಹ ಬರೆದುವು. ಅದರಿಂದ ನನ್ನ ಶ್ರಮವು ಕಡಿಮೆಯಾಯಿತು.

೧೯೨೬ನೆಯ ಇಸವಿ ನವೆಂಬರ್ ತಾ॥ ೨೭ ರಿಂದ ೧೯೨೬ ನೆಯ ಇಸವಿ ಡಿಶಂಬರ್ ತಾ॥ ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೯ ನೆಯ ಅಕ್ಷಯನಾಮಸಂವತ್ಸರದ ಕಾರ್ತಿಕ ಬಹುಳ ಅಷ್ಟಮಿಯಿಂದ ಕಾರ್ತಿಕ ಬಹುಳ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಮಾಸ
27	ಶನಿ	ಅಷ್ಟ	41-10	ಮಖಾ	24-26	12
28	ಭಾನು	ನವ	53-7	ಪುಬ್ಬ	30-49	13
29	[1]ಸೋಮ	ದಶ	58-10	ಉತ್ತ	37-23	14
30	ಮಂಗಳ	ಏಕಾ	60	ಹಸ್ತ	43-48	15
1	[2]ಬುಧ	ಏಕಾ	3-35	ಚಿತ್ತ	49-32	16
2	[3]ಗುರು	ದ್ವಾದ	7-46	ಸ್ವಾತಿ	54-24	17
3	ಶುಕ್ರ	ತ್ರಯೋ	10-54	ವಿಶಾ	58-5	18

(1) ಮಳೆನಕ್ಷತ್ರ-ಅನೂರಾಧ ೪ನೆಯಪಾದ; ಕಾರ್ತಿಕ ಸೋಮವಾರ. (2) ಸರ್ವತ್ರೈಕಾದಶಿ. (3) ಪ್ರದೋಷ, ಮಳೆನಕ್ಷತ್ರ-ಜ್ಯೇಷ್ಠ ೧ ನೆಯಪಾದ.

ಮೈಸೂರು: ವ್ಯ. ವಿರೂಪಾಕ್ಷಯ್ಯನವರಿಂದ ಲೈಟ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಪ್ರತಿಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧೀಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಮಜನಹೃತ್ತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ರಾಮಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸಕ್ ೧೯೨೬ ನೆಯ ಇಸವಿ ಡಿಸೆಂಬರ್ ತಾರೀಖು ೪ ನೆಯ ಶನಿವಾರ. [ಸಂಚಿಕೆ ೪೯

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ— ಶತಪುಷ್ಪ, ಶಾಲಿಮಕಂದ, ಮಧುಕಂದ, ಜಸಾಕಂದ, ಶಾಲೀಮಲೀಕಂದ, ಅಶ್ವಗಂಧ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಶಾಲೀಮಖಾನಾ, ಬೀಜಹರಣಬೋರಿ, ಮುಂಗಲೇಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀಲಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಲಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೪೮ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ಪಷ್ಟ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—19] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳು.

SREE SITHARAGHAVA VAIDYASALA

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹತತ್ವಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ). ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

SIROMANY NARAYANACHARYA & CO.,
BENARES CITY.

S.U.N.& CO.
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—20]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ. ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಶೀಘ್ರಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ನ್ವಸ ವಾಗುವ ವ್ಯಾಧಿಗಳು ಯಾವವಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೧೬ ವ್ಯಾಧಿಗಳನ್ನೂ ನ್ವಸಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಗಚಟ್ಟಿ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧೨ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ಬರೆಯುತಕ್ಕ ಅರಿಯಿರಿ.

(Registered Trade Mark)

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—8] ಪೋ. ಬಾ. ೩೦೦, ಮದರಾಸು.

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೃ॥ ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಳನಾಟಕ	೧—೦—೦	೧—೬—೦

ಆಯುರ್ವೇದ ಸುಲಭಚಿಕಿತ್ಸೆಗಳು.

ದಾವ್ಯಾದಿಚೂರ್ಣ.

ಮರದರಿಶಿನ
ಅಮೃತಬಳ್ಳಿ
ಆಲದಬೇರು
ಮಾವಿನಚಕ್ಕೆ
ಅತ್ತಿಚಕ್ಕೆ
ಮುಳ್ಳುಕೀರೆಬೇರು
ದೇವದಾರುಚಕ್ಕೆ
ನಾಗಕೇಸರಿ
ಅಗಳುಕುಂಬ
ಸೊಗದೇಬೇರು
ಕಾಚಿ

ಇವೆಲ್ಲವನ್ನೂ ಸಮಭಾಗದಿಂದ ಚೂರ್ಣಿಸಿ ಹೊತ್ತು ಒಂದಕ್ಕೆ ೬೦ ರಿಂದ ೧೨೦ ಗ್ರೇನ್‌ವರಿಗೆ ಜೇನುತುಪ್ಪದಿಂದ ಸೇವಿಸಿದರೆ ಪ್ರದರರೋಗವು ಪರಿಹಾರವಾಗುವುದು.

ಚಂದನಾದಿಚೂರ್ಣ.

ರಕ್ತಚಂದನ
ಅತಿಮಧುರ
ದ್ರಾಕ್ಷಿಹಣ್ಣು
ಖರ್ಜೂರ
ದಾಳಿಂಬದ ಓಟಿ
ಜಾಜಿಕಾಯಿ
[illegible]
ಏಲಕ್ಕಿ
ಲವಂಗ
ದಾಲಚಿನ್ನಿ
ನಾಗಕೇಸರಿ
ಕಕ್ಕೋಲ
ಜಾಪತ್ರೆ
[illegible]
ಶುಂಠಿ
ಅಳಲೇಕಾಯಿ
ತಾರೇಕಾಯಿ
ಹಿಪ್ಪಲಿ
ದೇವದಾರು
ಜಾಯಿಕಾಯಿ
[illegible]

ಮಂಜಿಷ್ಠ
ಗಂಡುತುರಚಿ
ಆಸಾಢೀಬೇರು
ನೆಗ್ಗಿಲು
ಅಶ್ವಗಂಧೀ
ಕಿರುನೆಲ್ಲಿ
ನೆಲಗುಂಬಳದಗೆಡ್ಡೆ
ಕೊತ್ತುಂಬರೀಬೀಜ
ಹಿಪ್ಪಲಿ
ಮೆಣಸು
ಅಗಿಲು
ಹುಣಿಸೆಕಡ್ಡಿ
ನೈವಲೆಗೆಡ್ಡೆ
ಮೋಡಿ
ಹಾಲೆಬೇರು

ಎಲ್ಲವನ್ನೂ ಸಮಾಂಶವಾಗಿ ಚೂರ್ಣಿಸಿ ವಸ್ತ್ರಗಾಳಿತವಾದಿ | ರಿಂದ || ತೊಲದಷ್ಟು ಸೇವಿಸಿದರೆ ರಕ್ತಪಿತ್ತ, ರಕ್ತಕಾಸ, ರಾಜಯಕ್ಷ್ಮ, ಪಾಂಡು, ಬಿಕ್ಕಳಿಕೆ, ಕಾಮಾಲೆ, ಹಲೀಮಕ, ಪ್ರದರ, ರಕ್ತದೋಷ, ಪಿತ್ತರೋಗಗಳು, ಯೋನಿಶೂಲ, ಅಂಗದಾಹ ಇವುಗಳು ಸಂಹಾರವಾಗುವುವು.

ಹಾಸನದ ಟವರ್ ಮ್ಯುನಿಸಿಪಾಲಿಟಿ.

ಹದಿನೆಂಟನೇ ದನಗಳ ಪ್ರದರ್ಶನದ ಪ್ರಸಿದ್ಧಪತ್ರಿಕೆ.

ಹಾಸನ ಟವರ್ ಮುಸಾಫರ್ ಖಾನಾ ಮತ್ತು ಸಂತೆಮಾಳದ ಅಜುಬಾಜು ಮೈದಾನಗಳಲ್ಲಿ ಮತ್ತು ಸುತ್ತಮುತ್ತಲೂ ಇರುವ ಹೊಲಗಳಲ್ಲಿ ಸಹ ಮಾಮೂಲುಮೇರೆ 1927 ನೇ ಜನವರಿ ಮಾಹೆ ತಾರೀಖು 4, 5 ಮತ್ತು 6 ನೇ ಮಂಗಳವಾರ, ಬುಧವಾರ ಮತ್ತು ಗುರುವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತದೆಂಬ ಅಂಶವನ್ನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಪ್ರದರ್ಶನಕ್ಕೆ ಬರತಕ್ಕ ರಾಸುಗಳ ಪೈಕಿ ಉತ್ತಮವಾದ ರಾಸುಗಳಿಗೆ ಧಾರಾಳವಾಗಿ ಬಹುಮಾನಗಳು ಕೊಡಲ್ಪಡುತ್ತೆ.

ಪ್ರದರ್ಶನಕ್ಕೆ ಬರತಕ್ಕ ಪ್ರತಿಯೊಂದು ರಾಸಿಗೂ ಒಂದಾಣೆಯಂತೆ ಫೀ ವಸೂಲ್ಮಾಡಲ್ಪಡುವುದು.

ಬಾಕಿವಿಷಯಗಳಿಗೆ 25-11-1926ರ ಮರ್ಸಂ ಮೈಸೂರು ಗೆಜೆಟ್ II A ಭಾಗದ 594 ಮತ್ತು 595 ನೇ ಪುಟಗಳಲ್ಲಿ ಛಾಯಿಸಾಗಿರುವ ಅಸಲು ಇಸ್ತಿಹಾರನ್ನು ನೋಡುವದು.'

S. P. Bramhappa,
ತಾ|| 29-11-1926. ವೈಸ್‌ಪ್ರೆಸಿಡೆಂಟ್ ಮತ್ತು
[3—1] ಛೇರ್ಮನ್, ಮ್ಯಾನೇಜಿಂಗ್ ಕಮಿಟಿ.

ಮೈಸೂರು ಸ್ಟಾರ್.

೧೯೨೬ ನೇಯ ಇಸವಿ ಡಿಸೆಂಬರ್ ತಾ|| ೪ ನೇಯ ಶನಿವಾರ.

SIR P. C. RAY'S CONVOCATION ADDRESS

It was one of the most thoughtful addresses that Sir P. C. Ray delivered at the convocation of the Mysore University on the 27th of November. It strikes a timely warning to those who have the destiny of the State in their hands, and on whom is the responsibility to direct education in the State. A more convincing and passionate appeal for University reform could not have been made by any one qualified to do so. He has spoken with courage and with frankness—brutal frankness, as he himself says so often. It is easy for most people to note the defects of present day University education, its limitations, and its dangers. The large output of graduates who come of the university and who guided themselves strangled in life for want of employment and for want of capacity to face the life's struggles has been a source of the greatest concern in this State as well as elsewhere in British India. Dr. P. C. Ray's analysis of these defects and his suggested reforms are equally remarkable. He began his address with the deserving remark that "the problem of education, here or elsewhere, has in the main, not been handled with that intelligence and sagacity which it deserves." He regretted the disproportionate of rush to obtain degrees and of universities allowing their halls to be used as "Marts" and not "Mines." He was not satisfied with the attempt to minimise the defects of a purely examining body into a teaching one which he characterised as a commercial coaching establishment, which was still far away from the motto "Advancement of Learning." The learned Doctor distinguished the functions of the school from those of the university, and in a pregnant and vivid line said "whilst general education is a necessity—so beautifully represented in the Soviet Educational Poster by a blinded man about to fall down a precipice—and to-day a birth right with most, the higher cultural centres are useless for their immediate purposes. He spoke of the deplorable deficiency of the secondary system which in his view was due considerably to the foreign medium of instruction, and of the system of compulsory lectures in the University which system was much the same as in schools and had some striking to say about the notion of regarding universities as preserves for certain ball-marked their portals should be thrown open to anyone who has given evidence of originality or keeness. He was sure that if a census was taken of the world's greatest men and women the majority would be found to be non-University men. This statement must be made a present of to most of our friends in our country who talk of efficiency and culture as attaching to degrees. In talking of the regional character of some Universities, to which class, our University belongs, be warned against the adding of faculty after faculty without due consideration to our regional needs. Sir P. C. Ray was anxious that so far as the Science faculties were concerned regional considerations must prevail so that there would not only be economy in education but the University would be made into a living consulting body on matters of technical importance, and that the discoveries of the expert investigators of the University might bring wealth and fame to the State. There is no doubt an evidence of working towards this ideal, but yet we are very far from it, nor or we freed altogether from the desire for multiplying faculties regardless of country's needs. He apprehended danger even in the over output of the technological department, unless productive industries did not increase or the men did not realise the dignity of manual labour. He regretted the existing social and educational systems were the cause of the intellectual and physical torpor of the youth. He wanted them also to pause and think of the austere system of our past and to see that the Mysore University did not spare itself in checking elements in its educational system which might tend to subvert self-help in the student community. "Live hard" he said and yours will be the golden harvest. Sir P. C. Ray must really have had a peep into the present day life of Mysore students. It is sad that the student community is going farther and farther from this life of simplicity, encouraged, we may say, by the fine amenities provided for them by the University on the premises of the educational institutions and outside. Sir P. C. Ray emphasised the need for greater inter-relationship between Universities and the establishment of more research institutes. The concluding part of his address dealt with the main defect of the modern Universities noticed in the beginning "the collosal waste of national intelligence" and "how unqualified for the practical matters of life we emerge out of this machinery." He quoted the strinking analysis of the situation by Mr. K. Sreenivasiengar of Madras, where out of 18,500 graduates only 56 had taken to science, and where cried Mr. Sreenivasiengar "You will search in vain for any solid contribution to the sum of human knowledge amongst this magnificent number of 18,500." Sir P. C Ray spoke in anguish of the inordinate in same craze—almost a mania—for securing a degree, which is mostly due to the high premium put on it by the Government. Even in the West Edison and Henry Ford and Mr. Morris (Lord of England) had spoken against this sort of University training. It is well that the powers-that-be in Mysore realise the exact worth of the mere degrees, so that they may not attach too much importance to the same and talk of degrees in connection with recruitment to the various sections of Administration. Let those critics also who talk of competitive examination for every thing also note and learn. Mysore, nay, the whole of India ought to be thankful to Sir P. C. Ray for sounding this eloquent and timely note of warning which we sincerely hope will not go unheeded.

ELECTIONS.

(Communicated)

III

The more one reads the proceedings of the Representative Assembly and Legislative Council, the more would the reader be convinced of "who it is that represents the interests of the masses and of the un-educated." The Representative Assembly was to begin with, called an Assembly of the Raiyets. But the loudest speakers in the Assembly were not Rajyets. They were others. By all the means they were able to command, they would go to the Assembly season after season, and some have even completed their 30 years in the peoples' service. What is the service they leave rendered to people, whom they represented? They have safe-guarded their own interests, and the raiyet was left to himself. Their performances were unknown to the people, who sent them on the annual pilgrimage to Mysore. It is only recently that people have come to open their eyes and are able to see who their real representatives are. The Legislative Council proceedings have made things yet more clear. The latest volume for June, 1926 is the bulkiest in size. Let it be examined.

Mr. M. Venkatakrishnayya of Mysore is hailed as the most respected person of Mysore. He is called the G.O.M. of Mysore. He was supposed to be the liberal of liberals in Mysore. But when the interests of his own class are concerned—he comes out in his true colours. When on the subject of Primary Education he says, "without the head, the body is not likely to live." And he further adds, "If the world has benefitted to any considerable extent by education, it is by higher education." Examine these two statements and pass the verdict, "whether the representative holding these opinions is the peoples' man." The head is a part of the body. But he means otherwise. He means the super-brains. The body does live without super-brains. On the contrary the brains cannot live without the body. The body is the essential. The people are all important. Primary Education is essential, and University Education is of secondary importance. The greatest benefit to the world is in the mass education. The greatest contributions to the world's discoveries have been made by men who had not received the so-called higher education. The greatest social service has been rendered by men of no academical distinction. Higher Education must be one of natural growth—an evolution of mass education.

The said member's interpellation No. 14 in the Council of June, 1926, is extra-ordinary. He wants luxurious accomodation at Bangalore for the members of the Council in the same way as they have at Mysore—palaces to live and fine dishes to eat. This is the peoples' representative.

Yet again! He refers to a case of a Hunsur official, when he handles the Village Panchayet Bill. He forgets that it was at a time when monopoly was in full swing. That official was different from the official of to-day. Tooth and nail he has opposed the Village Government.

One more deed of the G.O.M. is illustrative of the true man. He champions the cause of an officer in the Agricultural Department for a Personal Allowance of Rs. 100. Who is that officer? A brother of an old friend. This is how peoples' interests are represented.

The Hon'ble member for Kolar District is the Satyamurthi of Mysore. He is very strong and emphatic in his expressions. He has stood strongly by the side of the Hon'ble member for Mysore District in fighting against the passing of the Local Self-Government Bills. It is better to quote him in this connection. He says in opposing the second reading of the Village Panchayet Regulation. "I wish heartily to join the chorus with Dewan Bahadur Srikanteswara Iyer in the last funeral note that he sung on these unfortunate (for him only) Local Self-Government Bills. I would go further and propose a decent burial." The Dewan Bahadur was really a Bahadur as a Government officer. His word was law, and him this peoples' represetative heartily joins to molest a measure intended to reconstruct the rural Government. He wants to contest his candidature in the next elections on this measure of village re-constitution. He says, "I should very gladly welcome any challenge from any elected member of this house to contest the next election on this only ground, whether the present bill is a good measure and calculated to promote the interests of the country. I would contest in any constituency in the State." Bravo!!! All is good in the Bills. The majority of the members in the Panchayet are non-officials. They are given the guide and advice of an official who is responsible constitutionally to Government. This guide and advice was condemned by a clique. The enormous good contained in the Bills is rejected, because there is the wholesome check in the shape of discretion by an official. Throw away the whole cup of milk because it is held in a silver cup. No cup we want. The milk must stand without the cup—gold or silver. This is the logic. With this logic, the following District representatives have opposed the Bills i.e. Messrs. B. Narasinga Rao, D. Venkataramayya, N. S. Nanjundayya, H. Venkataramayya, C. Narasimhayya and B. Abdul Rahman. Their creed seems to be, "Away with the Local Self-Government Bills. This is their challenge. Will the electorates accept this creed? Will their mandate be, "we do not want Local Self-Government." "We do not want sound guid and advice." "We do not want good control." Ponder and see.

ಸ್ವದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಗುರುವಾರ ಮೋಟಾರುಬಂಡಿಯಲ್ಲಿ ಬೆಂಗಳೂರಿಗೆ ಚಿತ್ತೈಸಿತು.

ದಿಲ್ಲಿಗೆ ಹೋಗಿದ್ದ ದಿವಾನರು ಕಳೆದ ಬುಧವಾರ ಬೆಂಗಳೂರಿಗೆ ದಯಮಾಡಿಸಿದರು. ರೆವಿನ್ಯೂಕಮಿಷನರ್ ಮ|| ಸಿ. ಎಸ್. ಬಾಲಸುಂದರಂಅಯ್ಯರ್‌ರವರು ದಿಲ್ಲಿಗೆ ಹೋಗಿರಲಿಲ್ಲವು.

ರಿಟೈರ್ಡ್ ಚೀಫ್ ಜಡ್ಜಿಯವರಾದ ದಿವಾನ್ ಬಹದ್ದೂರ್ ಮ|| ಕೆ. ಎಸ್. ಚಂದ್ರಶೇಖರಅಯ್ಯರ್, ಬಿ.ಎ., ಬಿ.ಎಲ್., ರವರು ಮೈಸೂರು ವಿಶ್ವವಿದ್ಯಾಲಯದ ಫೆಲೋ ಆಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೊಂಬಾಯಿಗೆ ದಯಮಾಡಿಸಿರುವ ಮಹಾಮಾತೃಶ್ರೀ ವಾಣಿವಿಲಾಸಸನ್ನಿಧಿಯು ಈ ತಾ|| 9 ರಲ್ಲಿ ಬೊಂಬಾಯಿ ಪಟ್ಟಣವನ್ನು ಬಿಟ್ಟು ಅರಸೀಕೆರೆ ಮಾರ್ಗವಾಗಿ ತಾ|| 11 ರಲ್ಲಿ ರಾಜಧಾನಿಯನ್ನು ತಲುಪುವುದಾಗಿರುವುದು.

ಹಾಸನ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳ ಚುನಾವಣೆಯು ಈ ತಾ|| 15 ರಲ್ಲೂ, ತುಮಕೂರು ಡಿ|| ಬೋರ್ಡಿನ ಚುನಾವಣೆಯು ತಾ|| 20 ರಲ್ಲೂ, ಕಡೂರು ಡಿ|| ಬೋರ್ಡಿನ ಚುನಾವಣೆಯು ತಾ|| 24 ರಲ್ಲೂ ನಡೆಯುವುದರಿಂದ ಆಯಾ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಸಮಸ್ತ ಕೋರ್ಟು ಕಚೇರಿಗಳಿಗೆ ರಜವು ಕೊಡಲ್ಪಟ್ಟಿರುತ್ತದೆ.

ಮುಂದಣ ತಾ|| 12 ನೇ ಭಾನುವಾರ ಸಾಯಂಕಾಲ 6 ಘಂಟೆಗೆ ರಾಜಧಾನಿಯ ಹಳೇಅಗ್ರಹಾರದಲ್ಲಿ ಚಿಕ್ಕಬಸವೇಶ್ವರದೇವಸ್ಥಾನದಲ್ಲಿರುವ ವೀರಶೈವಾನಾಥಾಲಯದ ವಾರ್ಷಿಕ ಮೀಟಿಂಗು ಬೆಂಗಳೂರಿನ ಡಾಕ್ಟರ್ ಟಿ. ಎಸ್. ನಂಜಪ್ಪ, ಎಂ. ಬಿ., ಸಿ. ಎಂ., ರವರ ಅಧ್ಯಕ್ಷತೆಯಲ್ಲಿ ನಡೆಯುವುದರಿಂದ ವೀರಶೈವಮತಾಭಿಮಾನಿಗಳು ಆ ಕಾಲಕ್ಕೆ ದಯೆಯಿಟ್ಟು ದಯಮಾಡಿಸಬೇಕೆಂದು ಅನಾಥಾಲಯದ ಮೇಲ್ವಿಚಾರಕಸಂಘಾಧ್ಯಕ್ಷರು ಅಪೇಕ್ಷಿಸುತ್ತಾರೆ.

ವೀರಶೈವಮಹಾಸಭೆಯು ಹುಬ್ಬಳ್ಳಿಯಲ್ಲಿ ಸೇರುವ ಕಾಲ ಮತ್ತು ಅದರಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳು ಸ್ವಾಗತ ಮಂಡಳಿಯವರಿಂದ ನಿರ್ಧರಿಸಲ್ಪಟ್ಟಿರುವುದು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿಸಲ್ಪಟ್ಟಿದೆ. ಮಹಾಸಭೆಗೆ ಬರತಕ್ಕ ಪ್ರತಿನಿಧಿಗಳು 5 ರೂ. ಗಳನ್ನು ಪ್ರವೇಶಕ್ಕಾಗಿ ಕೊಟ್ಟು ಊಟದ ವ್ಯವಸ್ಥೆಯನ್ನು ಸ್ವತಃ ಮಾಡಿಕೊಳ್ಳಬೇಕೆಂದು ಸ್ವಾಗತಮಂಡಳಿಯವರು ಮೊದಲು ನಿರ್ಧರಿಸಿದ್ದುದನ್ನು ತಪ್ಪಿಸಿ ಪ್ರತಿನಿಧಿಗಳು 5 ರೂ. ಪ್ರವೇಶಧನ ಕೊಟ್ಟಲ್ಲಿ ಊಟದ ವ್ಯವಸ್ಥೆಯು ಸ್ವಾಗತಮಂಡಳಿಯವರಿಂದಲೇ ಮಾಡಲ್ಪಡುವುದಾಗಿ ಈಚೆಗೆ ನಿರ್ಧರಿಸಿರುವುದು ಯುಕ್ತವಾಗಿದೆ.

ರಾಜಧಾನಿಯ ಕಾರಂಜಿಕೆರೆಯ ಮೇಲ್ಗಡೆ ನರಸಿಂಹರಾಜಬೂಲಿವಾರ್ಡಿನಲ್ಲಿ ಬಾಡಿಗಾರ್ಡ್ಸಿನವರಿಗೆ ಅಂಚೆಯಕಾಗದವನ್ನು ಕೊಡುವವನ ಪ್ರತಿಮೆಯು ಗಾರೆಯಿಂದ ಮಾಡಲ್ಪಟ್ಟು ನಿಲ್ಲಿಸಲ್ಪಟ್ಟಿರುವುದಷ್ಟೆ. ಇದರ ಪೂರ್ವಭಾಗದಲ್ಲಿ ಆಜಾನುಬಾಹು ಅಂಗರಕ್ಷನ ಪ್ರತಿಮೆಯು ನಿಲ್ಲಿಸಲ್ಪಟ್ಟಿದೆ. ಈ ಪ್ರತಿಮೆಯನ್ನು ನೋಡಿದಲ್ಲಿ ನಿಜವಾಗಿಯೂ ಮನುಷ್ಯನೇ ನಿಂತಿರುವನೆಂದು ಎಂತಹವರಿಗೂ ಭಾಸವಾಗುವಷ್ಟು ಕೌಶಲ್ಯದಿಂದ ಮಾಡಲ್ಪಟ್ಟಿರುತ್ತದೆ. ಈ ಕೈಗಾರಿಕೆಗಳು ನಮ್ಮ ದೇಶದ ಕಾರೇಗಾರರ ಕುಶಲಮತಿಯನ್ನು ಪ್ರದರ್ಶಿಸುವವಲ್ಲದೆ ಸಂಸ್ಥಾನಕ್ಕೇ ಪ್ರತಿಷ್ಠೆಯನ್ನುಂಟುಮಾಡತಕ್ಕವಾಗಿವೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರೂ ಪ್ರಸಿದ್ಧ ಕಂಟ್ರಾಕ್ಟರೂ ಆದ ಮ|| ಬಿ. ಮುನಿವೆಂಕಟಪ್ಪನವರು ಇಂಗ್ಲೆಂಡು ಮೊದಲಾದ ಪಾಶ್ಚಾತ್ಯದೇಶಪರ್ಯಟನಮಾಡಿ ಕಟ್ಟಡಗಳ ನಿರ್ಮಾಣಕ್ರಮ ಮೊದಲಾದ ವಿಶೇಷಸಂಗತಿಗಳನ್ನು ಕಣ್ಣಾರ ನೋಡಿ ತಿಳಿದುಕೊಂಡುಬರಲು ಕಳೆದ ಬುಧವಾರ ವೇಳೆಗ್ಗೆ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡಿದರು. ಅಲ್ಲಿಂದ ಈ ರಾತ್ರಿ ಬೊಂಬಾಯಿಗೆ ಪ್ರಯಾಣಮಾಡಿ ತಾ|| 7 ರ ಬೆಳಿಗ್ಗೆ ಬೊಂಬಾಯಿ ರೇವೆಯಲ್ಲಿ ಜೆನಾವಾ ಎಂಬ ಸ್ಟೀಮರನ್ನು ಹತ್ತಿ ಪ್ರಯಾಣಮಾಡುವರು. ರಾಜಧಾನಿಯಲ್ಲೂ ಬೆಂಗಳೂರಿನಲ್ಲೂ ಇವರ ಮಿತ್ರಮಂಡಲಿಯವರು, ಸುಖಪ್ರಯಾಣಮಾಡಿ ಕ್ಷೇಮದಿಂದ ಹಿಂದಿರುಗುವವರಾಗಲೆಂದು ಹರಸಿ ಬೀಳ್ಕೊಟ್ಟರು.

ರಾಜಧಾನಿಯ ಮ್ಯುನಿಸಿಪಲ್‌ಕೌನ್ಸಿಲ್ ಮೀಟಿಂಗು ಬರುವ ತಾ|| 13 ನೆಯ ಸೋಮವಾರ ಮ|| ಎ. ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯುವುದೇ ಕಡೆಯೆಂದು ತೋರುತ್ತದೆ. ಯಾಕೆಂದರೆ ಅವರು ಈ ತಾ|| 23 ರಲ್ಲಿ ರಜದಮೇಲೆ ಹೋಗಿ ಪುನಃ ಬರುವ ಸಂಭವವಿಲ್ಲವು. ಕಳೆದ ಮಂಗಳವಾರ ನಡೆದ ಮೀಟಿಂಗಿನಲ್ಲಿ ಈಗ ಅನಿತ್ಯವಾಗಿರುವ ಹೆಲ್ತಾಫೀಸರಿಗೆ 100 ರೂ. ಕುದುರೆಯ ಅಲೋಯೆನ್ಸ್ ಕೊಡಬೇಕೆಂದು ನಿರ್ಧರವಾಯಿತಂತೆ. ಹಿಂದೆ ರೆವಿನ್ಯೂ ಆಫೀಸರಿಗೆ 100 ರೂ. ಅಲೋಯೆನ್ಸ್ ಕೊಡಬೇಕೆಂಬ ವಿಚಾರವು ಚರ್ಚೆಗೆಬಂದು 50 ರೂ. ಮೇಲೆ ಕೊಡಲಾಗುವುದಿಲ್ಲವೆಂದು ನಿರ್ಧರವಾಗಿದ್ದಿತು. ಬ್ರಾಹ್ಮಣ ಬ್ರಾಹ್ಮಣೇತರ ಆಫೀಸರುಗಳಿಗೆ ಇರತಕ್ಕ ವ್ಯತ್ಯಾಸವಿಷ್ಟೇ! ಮತ್ತು ಸರ್ ಪ್ರಫುಲ್ಲಚಂದ್ರರಾಯರವರ ಉಪದೇಶಫಲವಾದರೂ ಇದೆಯೇ !!

ಕಳೆದ ತಾ|| 27 ರಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವದಲ್ಲಿ ಸರ್ ಪ್ರಫುಲ್ಲಚಂದ್ರರಾಯರವರು ಮಾಡಿದ ಭಾಷಣವು ಅತ್ಯಂತ ಪ್ರಶಂಸನೀಯವೂ ಬೋಧಕವೂ ಆಗಿದ್ದಿತು. ಈ ಭಾಷಣದ ಕನ್ನಡಪರಿವರ್ತನವು ಈ ಪತ್ರಿಕೆಯ ಬೇರೊಂದು ಸ್ಥಳದಲ್ಲಿ ಮುದ್ರಿಸಲ್ಪಟ್ಟಿದೆ. ಈಗಿನ ವಿಶ್ವವಿದ್ಯಾಲಯಗಳ ಕಾರ್ಯಕ್ರಮದಲ್ಲಿರುವ ನ್ಯೂನತೆಗಳನ್ನು ಕೊಂಚವೂ ಮುಚ್ಚುಮರೆಯಿಲ್ಲದೆ ನಿರ್ಭೀತಿಯಿಂದ ಉದ್ಘಾಟಿಸಿ ಅವುಗಳನ್ನು ವಿಶ್ವವಿದ್ಯಾಲಯದ ಉದ್ದೇಶ ಸಾಫಲ್ಯಕ್ಕೆ ತಕ್ಕಂತೆ ಮಾರ್ಪಡಿಸುವ ವಿಧಾನವನ್ನು ಸಕಾರಣವಾಗಿಯೂ ಸಮಂಜಸವಾಗಿಯೂ ಪ್ರಫುಲ್ಲರಂತೆ ಈವರೆಗೆ ಯಾರೂ ಹೇಳಿಲ್ಲವು. ಆದುಕಾರಣ ಅವರ ಭಾಷಣವನ್ನು ಪ್ರತಿಯೊಬ್ಬ ವಿದ್ಯಾಭಿಮಾನಿಯೂ ಗಮನಿಸತಕ್ಕುದಾಗಿದೆ.

ಮೈಸೂರು ಸಂಸ್ಥಾನದಲ್ಲಿನ ಗ್ರಾಮಪುನರ್ನಿರ್ಮಾಣಕ್ಕೆ ಆವಶ್ಯಕವಾದ ಅಭಿವೃದ್ಧಿ ಕಾರ್ಯಗಳನ್ನು 1926-27 ನೇ ವರ್ಷದಲ್ಲಿ ನಡೆಸಲು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿರುವ 1,30,000 ರೂ. ಗಳಲ್ಲಿ ಗ್ರಾಮಪಂಚಾಯಿತಿಗಳ ಸಂಬಂಧವಾಗಿ ಇನ್ಸ್‌ಪೆಕ್ಟರುಗಳನ್ನೂ ಕ್ಲಾರ್ಕುಗಳನ್ನೂ ನಿಯಮಿಸಲು ಮತ್ತು ಪಂಚಾಯಿತಿಯ ಸ್ಥಾಪನೆಗಾಗಿ ಸಹಾಯಮಾಡಲು 30,000 ರೂ. ಗಳನ್ನು ತೆಗೆದಿಟ್ಟು ಉಳಿದ 1,00,000 ರೂಪಾಯಿನಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ 20,000 ರೂ., ಕೋಲಾರ ಮತ್ತು ಬೆಂಗಳೂರು ಡಿ|| ಗಳೊಂದೊಂದಕ್ಕೆ 13,000 ರೂ., ಹಾಸನ ಡಿ|| ಗೆ 10,000 ರೂ. ಕಡೂರು ಡಿ|| ಗೆ 8,000 ರೂ., ಉಳಿದ ಮೂರು ಡಿ|| ಗಳಲ್ಲಿ ಪ್ರತಿಯೊಂದಕ್ಕೂ 12,000 ರೂ. ಈ ಪ್ರಕಾರ ಹಂಚಿ ಡೆ|| ಕ|| ರವರು ತಂತಮ್ಮ ತಾಲ್ಲೂಕು ಅಮಲ್ದಾರರುಗಳ ಮತ್ತು ಡಿ|| ಅಮಲ್ದಾರರುಗಳ ಮೂಲಕ ಪಂಚಾಯಿತಿಗಳಿಗೆ ತಂತಮ್ಮ ವಶಕ್ಕೆ ಕೊಡಲ್ಪಟ್ಟಿರುವ ಮೊಬಲಗನ್ನು ಹಂಚಿ ಕೊಡತಕ್ಕುದೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ಪ್ರೌಢವಿದ್ಯಾಭ್ಯಾಸಕ್ಕಾಗಿ 1921 ರಲ್ಲಿ ಅಮೇರಿಕೆಗೆ ಹೋಗಿದ್ದ ತಿಪಟೂರಿನ ಮ|| ಎಂ. ಸಿ. ತುಮ್ಮಿನಕಟ್ಟೆಯವರು ಅಲ್ಲಿಯ ಇಲಿನೋಯಿಸ್ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರವನ್ನು ಅಭ್ಯಾಸಮಾಡಿ 1923 ರಲ್ಲಿ ಬಿ.ಎಸ್‌ಸಿ. ಪರೀಕ್ಷೆಯಲ್ಲೂ, 1924 ರಲ್ಲಿ ಇನ್ನೂ ಪ್ರೌಢತರವಾದ ಎಂ.ಎಸ್‌ಸಿ. ಪರೀಕ್ಷೆಯಲ್ಲೂ, 1926 ರಲ್ಲಿ ಪ್ರೌಢತಮವಾದ ಪಿ.ಎಚ್‌ಡಿ. ಪರೀಕ್ಷೆಯಲ್ಲೂ ಪ್ರಶಸ್ತಿಗಳನ್ನು ಪಡೆದು ಸ್ವದೇಶವನ್ನು ಸುಖವಾಗಿ ತಲುಪಿರುವರೆಂದು ತಿಳುಹಲು ಸಂತೋಷವಾಗುತ್ತದೆ. ಇವರು ಇನ್ನೂ 23-24 ವರ್ಷ ವಯಸ್ಕರಾಗಿರುವರು ಮತ್ತು ಪಾಶ್ಚಾತ್ಯ ದೇಶದಲ್ಲಿ 5 ವರ್ಷಕಾಲ ಬಿಳೇಜನರ ಮಧ್ಯೆ ವಾಸಮಾಡುತ್ತಿದ್ದರಾದರೂ ಅವರ ನಡೆಯನ್ನು ಅನುಕರಣಮಾಡದೆ ನಿಗರ್ವಿಗಳಾಗಿಯೂ ಆಚಾರಶೀಲರಾಗಿಯೂ ಇರುವುದು ಬಹಳ ಪ್ರಶಂಸನೀಯವಾಗಿರುವುದಲ್ಲದೆ ಪರದೇಶಗಮನವುಳ್ಳ ಯುವಕರಿಗೆ ಅನುಕರಣೀಯವಾಗಿದೆ. ಇಂತಹ ಅಮೋಘವಾದ ಪ್ರಶಸ್ತಿಗಳನ್ನು ಪಡೆದು ತಮ್ಮ ವೀರಶೈವಸಮಾಜಕ್ಕೂ ದೇಶಕ್ಕೂ ಗೌರವವನ್ನುಂಟುಮಾಡಿದುದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ.

ಚಿತ್ರದುರ್ಗ ಡಿ|| ಹೊಳಲ್ಕೆರೆಯ ತಾ|| ಚೆನ್ನಪಟ್ಟಣದ ಕಾಲಿವೆಹಳ್ಳಿ ಮಠದ ಕೈ|| ಗುರುಶಾಂತಪ್ಪಯ್ಯನವರ ಮರಣಶಾಸನದಪ್ರಕಾರ 20,000 ರೂ. ಗಳನ್ನು ಸರ್ಕಾರದ ಬ್ಯಾಂಕಿನಲ್ಲಿ ಪುದುವಟ್ಟಾಗಿಟ್ಟು ಅದರ ವೃದ್ಧ್ಯಂಶವನ್ನು ಹೊಳಲ್ಕೆರೆಯ ಅನಾಥ ವೀರಶೈವವಿದ್ಯಾರ್ಥಿಸಹಾಯಕಸಂಘದ ಪೋಷಣಾರ್ಥವಾಗಿ ಉಪಯೋಗಿಸಬೇಕೆಂದು ಸರ್ಕಾರದವರಿಗೆ ಬಿನ್ನೈಸಿಕೊಂಡಿರುವ ಮತ್ತು ಸರ್ಕಾರದವರು ಕೈ|| ಗುರುಶಾಂತಪ್ಪನವರ ಧರ್ಮಬುದ್ಧಿಯನ್ನು ಶ್ಲಾಘಿಸಿ ತಮ್ಮ ಮೆಚ್ಚುಗೆಯನ್ನು ಧರ್ಮಕರ್ತರ ಮಕ್ಕಳಾದ ಮ|| ಮುರುಘಪ್ಪಯ್ಯನವರಿಗೂ ಅವರ ಸಹೋದರರಾದ ಮ|| ಸದಾಶಿವಯ್ಯನವರಿಗೂ ತಿಳಿಸಿರುವ ವಿಚಾರವು ಕಳೆದವಾರದ ಸ್ಟಾರ್‌ಪತ್ರಿಕೆಯಲ್ಲಿ ತಿಳುಹಲ್ಪಟ್ಟಿರುವದಷ್ಟೆ. ವೃದ್ಧ್ಯಂಶವಿನಿಯೋಗವನ್ನು ಧರ್ಮಕರ್ತರ ಮಕ್ಕಳೂ ಅನಾಥವಿದ್ಯಾರ್ಥಿಸಹಾಯಸಂಘದ ಪ್ರೆಸಿಡೆಂಟರೂ ಆದ ಮ|| ಮುರುಘಪ್ಪಯ್ಯನವರು ಮರಣಶಾಸನದಲ್ಲಿ ಪಂಚಾಯಿತರಾಗಿ ನಿಯಮಿಸಲ್ಪಟ್ಟಿರುವ ಮ|| ಗಳಾದ (1) ದಾವಣಗೆರೆ ಉರುಕೊಂಡೆ ಗುದ್ಲೆಪ್ಪನವರು (2) ವಿ. ವಿ. ಪ್ರೆಸ್ ಪ್ರೊಪ್ರೈಟರ್ ರುದ್ರಪ್ಪನವರು (3) ನಂದನ ಹೊಸೂರು ಪಟೇಲ್ ಬಸಪ್ಪನವರು (4) ಹೊಳಲ್ಕೆರೆ ಗಡ್ಡದ್ದೇವರು ಮಠದ ಮಹಾದೇವಪ್ಪಯ್ಯನವರು (5) ಹೊಳಲ್ಕೆರೆ ಮುರುಳುಸಿದ್ಧೇಶ್ವರಮಠದ ಹುಚ್ಚೀರಪ್ಪಯ್ಯನವರು ಈ ಐವರ ಸಾಹಾಯ್ಯದಿಂದ ನಡೆಯಿಸಬೇಕೆಂದು ಮಾಡಿರುವ ನಿರ್ಧಾರವನ್ನು ಸರ್ಕಾರದವರು ಅನುಮೋದಿಸಿರುತ್ತಾರೆ.

ವರ್ತಮಾನಸಂಗ್ರಹ.

ಕಲಕತ್ತಾದಲ್ಲಿ ಒಂದು ಜೂಟಿನ ಕಾರ್ಯಾಲಯಕ್ಕೆ ಬೆಂಕಿಯು ಬಿದ್ದು 35,000 ಬೇಲುಗಳು ಸುಟ್ಟುಹೋಗಿ ೨ ಲಕ್ಷ ರೂ. ವರೆಗೆ ನಷ್ಟಸಂಭವಿಸಿತು.

ಪ್ರಯಾಗದಲ್ಲಿ ಪ್ರತಿವರ್ಷವೂ ಮಾಘಮಾಸದಲ್ಲಿ ನಡೆಯುವ ಮಹಾಕುಂಭಮೇಳವು 1927 ನೇ ಏಪ್ರಿಲ್ ತಿಂಗಳಲ್ಲಿ ಅತಿಶಯವಾಗಿ ನಡೆಯುವುದಾಗಿದೆ. ಆ ಕಾಲದಲ್ಲಿ ಯಾತ್ರಾರ್ಥಿಗಳು ಬಹಳವಾಗಿ ಸೇರುವುದರಿಂದ ತಕ್ಕ ಪೋಲೀಸುಕಾವಲನಿಟ್ಟು ವೈದ್ಯಸಹಾಯವನ್ನು ಮಾಡಲು ತಕ್ಕೇರ್ಪಾಟು ಈಗಿನಿಂದಲೇ ನಡೆಯುತ್ತಿರುವುದು.

ವಿಧುರರಾದ ಪುರುಷರು ಪುನರ್ವಿವಾಹ ಮಾಡಿಕೊಳ್ಳಲು ಅವರಿಗೆ ಹೇಗೆ ಅಧಿಕಾರಸ್ವಾತಂತ್ರ್ಯವಿರುತ್ತದೋ ಹಾಗೆಯೇ ವಿಧವೆಯರಾದ ಸ್ತ್ರೀಯರು ಪುನಃ ಮದುವೆಮಾಡಿಕೊಳ್ಳಲು ಅವರಿಗೆ ಅಧಿಕಾರವಿರುತ್ತದೆ. ಆದರೆ ಅಂತಹ ಸ್ತ್ರೀಪುರುಷರು ವಿಧವೆವಿಧುರರಾಗುವುದಕ್ಕೆ ಪೂರ್ವ ಪ್ರೌಢವಯಸ್ಕರಾಗಿದ್ದಲ್ಲಿ ಪುನರ್ವಿವಾಹಕ್ಕೆ ಅರ್ಹರಲ್ಲವೆಂದು ಮಹಾತ್ಮಗಾಂಧಿಯವರು ಅಭಿಪ್ರಾಯಪಟ್ಟಿರುತ್ತಾರೆ.

ನಮ್ರತೆಯೂ ಪತಿಸೇವೆಯೂ ಭಾರತಸ್ತ್ರೀಯರ ಸ್ವಭಾವಸಿದ್ಧವಾದ ನಡವಳಿಕೆಗಳೆಂದೂ, ಸ್ವಾತಂತ್ರ್ಯವೂ ಪುರುಷಸಮಾನತ್ವವೂ ಪಾಶ್ಚಾತ್ಯಸ್ತ್ರೀಯರ ಆಕಾಂಕ್ಷೆಗಳೆಂದೂ ಮಹಾತ್ಮಗಾಂಧಿಯವರ ಶಿಷ್ಯಳಾಗಿರುವ ಮಿಸ್. ಸ್ಲೇಡ್ ಎಂಬ ಆಮೇರಿಕೆಯ ನಾರೀಮಣಿಯು ಹೇಳಿರುತ್ತಾಳೆ. ಪಾಶ್ಚಾತ್ಯಸ್ತ್ರೀಯರ ನಡೆನುಡಿಗಳನ್ನು ಅನುಕರಿಸಲು ತವಕಪಡುತ್ತಿರುವ ಭಾರತಮಹಿಳೆಯರು ಮಹಾತ್ಮರ ಶಿಷ್ಯಳ ಮನೋಭಿಪ್ರಾಯವನ್ನು ಲಕ್ಷಿಸುವವರಾಗಬೇಕು.

ಹೈದರಾಬಾದುಸಂಸ್ಥಾನದಲ್ಲಿ ನಾಗುಂಡ ಡಿಸ್ಟ್ರಿಕ್ಟಿಗೆ ಸೇರಿದ ಭೋಂಗೀರ್ ಎಂಬ ಗ್ರಾಮವಾಸಸ್ಥನಾದ ಸಾನೇದಾರನೆಂಬವನ ಹೆಂಡಿತಿಯು 1924 ನೆಯ ವರ್ಷದಲ್ಲಿ ಒಂದು ಮಗುವನ್ನು ಹೆತ್ತಳು. ಆ ಮಗುವು ಹುಟ್ಟಿದ 3 ದಿನಗಳಮೇಲೆ ಮಾಯವಾಗಿ ಎಷ್ಟು ಹುಡುಕಿದರೂ ದೊರಕಲಿಲ್ಲ. ಆಕೆಗೆ ಪುನಃ 1925 ರಲ್ಲಿ ಗರ್ಭೋತ್ಪತ್ತಿಯಾಗಿ ನವಮಾಸತುಂಬಲು ಹೆರಿಗೆಗಾಗಿ ಆಕೆಯ ಗಂಡನು ಬೇರೊಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಆಕೆಯನ್ನು ಅಲ್ಲಿರಿಸಿ ಜನಿಸಿದ ಮಗುವು ಹಿಂದಿನಹಾಗೆ ಮಾಯವಾಗದಿರುವಂತೆ ತಕ್ಕ ಕಾವಲನ್ನಿರಿಸಿದನು. ಆದರೂ ಮಗುವು ಜನಿಸಿದ 5ನೇ ದಿವಸದಲ್ಲಿ ಮಾಯವಾಯಿತು ಮತ್ತು ಎಷ್ಟು ಸಾಹಸಪಟ್ಟು ಹುಡುಕಿದಾಗ್ಯೂ ಮಗುವು ಸಿಕ್ಕಲಿಲ್ಲ, ಅಲ್ಲದೆ ಅದೇನಾಯಿತೆಂಬುದು ಸಹ ಗೊತ್ತಾಗಲಿಲ್ಲ. ಇದರಮೇಲೆ ಆ ಮಗುವಿನ ತಂದೆತಾಯಿಗಳಿಗೂ ಗ್ರಾಮಸ್ಥರಿಗೂ ಆಶ್ಚರ್ಯವೂ ಭಯವೂ ಉಂಟಾಗಿದ್ದಿತು. ಆ ಹೆಂಗುಸು ಪುನಃ ಮೂರನೆಯವೇಳೆ ಗರ್ಭವತಿಯಾಗಲು ಆಕೆಯ ಗಂಡನು ಹಿಂದಿನ ಎರಡು ಮಕ್ಕಳೂ ಭೂತಪಿಶಾಚಗಳ ಕಾಟದಿಂದ ಮಾಯವಾಗಿರಬೇಕೆಂದು ಭಾವಿಸಿ ಹೆರಿಗೆಯ ಮನೆಯಲ್ಲಿ ಜನರನ್ನು ಕಾವಲಿಟ್ಟು ಹೊರಗಡೆ ಬಾಗಿಲಿಗೆ ಬೀಗಮುದ್ರೆಯನ್ನು ಮಾಡಿ ಹೊರಗಡೆ ಅನೇಕ ಜನರೊಡನೆ ಕಾವಲಾಗಿದ್ದನು. ಇಷ್ಟೆಲ್ಲಾ ದಿಗ್ಬಂಧನವಾಗಿದ್ದಾಗ್ಯೂ ಈ ಮೂರನೆಯ ಮಗುವೂ ಹುಟ್ಟಿದ ಕೂಡಲೆ ಮಾಯವಾಯಿತಂತೆ! ಹೀಗಾದುದರಕಾರಣವನ್ನು ಕಂಡುಹಿಡಿಯಲು ಪೋಲೀಸರಾದಿಯಾಗಿ ಅನೇಕರು ಪ್ರಯತ್ನಿಸಿರುವರು.

ಬೊಂಬಾಯಿನಲ್ಲಿ ಸುಂದರಾಬಾಯಿ ಎಂಬವಳು ಕಳೆದ ಅಕ್ಟೋಬರಿನಲ್ಲಿ ಒಂದುದಿವಸ ಮಾರ್ಗದಲ್ಲಿ ನಿಂತಿರುವಾಗ್ಗೆ ಒಬ್ಬ ಮನುಷ್ಯನು ಅವಳ ಸಮೀಪಕ್ಕೆ ಬಂದು ತನ್ನ ಹೆಂಡಿತಿಯಂತೆ ಆಕೆಯನ್ನು ಸಂಬೋಧಿಸಿ "ನೀನು ಮನೆಯನ್ನು ಬಿಟ್ಟು ಬಂದಿದ್ದೀಯೆ. ಮನೆಗೆ ನಡೆ" ಎಂದು ಅವಳ ಸೆರಗನ್ನು ಹಿಡಿದೆಳೆಯುತ್ತ ಅವಳು ತನಗೂ ಅವನಿಗೂ ಯಾವ ಸಂಬಂಧವೂ ಇಲ್ಲವೆಂದು ಎಷ್ಟು ವಿಧವಾಗಿ ಹೇಳಿದರೂ ಕೇಳದೆ ಅವಳನ್ನು ಒಂದು ಕುದುರೆಯ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ತನ್ನ ಮನೆಗೆ ಕರೆದುಕೊಂಡುಹೋದನು. ಆಗ ನೆರೆಹೊರೆಯವರು ಇವರ ಕಲಹವನ್ನು ಕೇಳಿ ಅವಳು ಅವನ ಹೆಂಡಿತಿಯೆಂಬುದನ್ನು ನಂಬಲಿಲ್ಲವಾದರೂ ಅವನು ಬಲವಂತಪಡಿಸುತ್ತಿದ್ದುದರಮೇಲೆ ಆಕೆಯು ಪೋಲೀಸರಲ್ಲಿ ದೂರು ಹೇಳಿಕೊಂಡಳು. ಅವರು ಅದರಮೇಲೆ ಅವನನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಲ್ಲಿ ಅವನು ಕೋರ್ಟಿನಲ್ಲೂ ಅವಳು ಮನೆಯನ್ನು ಬಿಟ್ಟು ಹೋಗಿದ್ದ ತನ್ನ ಹೆಂಡಿತಿಯೆಂದೇ ವಾದಿಸಿದನು. ಆದರೂ ಕೋರ್ಟಿನವರು ಅವನ ಹೇಳಿಕೆಯನ್ನು ನಂಬಲಿಲ್ಲ ಮತ್ತು ಎಲ್ಲಿಯೋ ಹೊರಟು ಹೋಗಿದ್ದ ಅವನ ನಿಜವಾದ ಹೆಂಡಿತಿಯು ಅಕಸ್ಮಾತ್ತಾಗಿ ದೊರಕಿದವಳನ್ನು ಕೋರ್ಟಿನಲ್ಲಿ ಫಿರ್ಯಾದಿಯಳ ಪಕ್ಕದಲ್ಲಿ ನಿಲ್ಲಿಸಿ ಹೋಲಿಸಿದುದರಲ್ಲಿ ಇಬ್ಬರ ಹೋಲಿಕೆಯೂ ಒಂದೇಯಾಗಿದ್ದಿತು. ಅದರ ಮೇಲೆ ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಬಿಡುಗಡೆಮಾಡಿ ಅವನಿಂದ ಫಿರ್ಯಾದಿಗೆ ಅವಳ ವೆಚ್ಚಕ್ಕಾಗಿ ೨೦ ರೂ. ಗಳನ್ನು ಕೊಡಿಸಿದರು. ಇದರಿಂದ ಭ್ರಾಂತಿವಿಲಾಸಕಥೆಯು ಸ್ಮರಣೆಗೆ ಬರುತ್ತದೆ.

ಮೈಸೂರು ಪ್ರಜಾಮಿತ್ರಮಂಡಲಿಯವರಿಂದ

(೪)

ಡಿಸ್ಟ್ರಿಕ್ಟ್‌ಬೋರ್ಡು ಓಟರುಮಹಾಶಯರಿಗೆ ಎಚ್ಚರಿಕೆ!

ಸಂಸ್ಥಾನದೊಳಗೆ ಇರತಕ್ಕ ಡಿಸ್ಟ್ರಿಕ್ಟ್‌ಬೋರ್ಡುಗಳ ಚುನಾವಣೆಯು ಈ ಡಿಸೆಂಬರ್ ಮಾಹೆ ಅಖೈರಿನ ಒಳಗಾಗಿ ನಡೆ

ಯತಕ್ಕದ್ದಾಗಿದೆ. ಆಯಾಯ ಡಿಸ್ಟ್ರಿಕ್ಟುಗಳಲ್ಲಿ ಚುನಾವಣೆ ನಡೆಯತಕ್ಕ ದಿನಗಳನ್ನು ನಿರ್ಧರಿಸಿ ಘನ ಸರ್ಕಾರದವರು ಆ ದಿನಗಳನ್ನು ರಜಾದಿನಗಳನ್ನಾಗಿ ಗಣಿಸಿರುತ್ತಾರೆ. ಓಟನ್ನು ಕೊಡಲು ಅರ್ಹತೆಯುಳ್ಳ ಓಟರುಗಳೆಲ್ಲರೂ ಆ ದಿನ ತಮಗೆ ಇತರ ಕೆಲಸಗಳು ಎಷ್ಟಿದ್ದಾಗ್ಯೂ ಬಿಟ್ಟು ಓಟುಕೊಡಲು ಗೊತ್ತುಪಡಿಸಿರುವ ಸ್ಥಳಗಳಿಗೆ ಹೋಗಿ ಓಟನ್ನು ಕೊಡಲು ತಮಗೆ ದೊರೆತಿರುವ ಅಮೌಲ್ಯವಾದ ಹಕ್ಕನ್ನು ಕಾರ್ಯತಃ ವ್ಯಕ್ತಪಡಿಸಿ ಕೃತಾರ್ಥರಾಗಬೇಕಾಗಿ ಪ್ರಾರ್ಥನೆ. ಈಗ ಚುನಾವಣೆಯಾಗತಕ್ಕ ಮೆಂಬರುಗಳು ಇನ್ನು ಮೂರುವರ್ಷಗಳವರೆಗೂ ನಿಮ್ಮ ಕ್ಷೇಮಚಿಂತನೆಯಲ್ಲೇ ಇರತಕ್ಕವರೆಂದು ನಿರೀಕ್ಷಿಸಲ್ಪಟ್ಟಿದೆಯಾಗಿ, ನಿಮ್ಮ ಗ್ರಾಮಾಂತರಗಳ ಅಭಿವೃದ್ಧಿಯು ಅವರನ್ನೇ ಹೊಂದಿರತಕ್ಕದ್ದಾಗಿರುತ್ತೆ. ಆದುದರಿಂದ ನಿಜವಾಗಿಯೂ ನಿಮ್ಮ ಪುರೋಭಿವೃದ್ಧಿಯನ್ನು ಮುಂದುವರಿಸತಕ್ಕ ಉಮೇದುವಾರರಿಗೇನೆಯೇ ನೀವು ನಿಮ್ಮ ಓಟುಗಳನ್ನು ಕೊಟ್ಟು ಮತ್ತು ನಿಮ್ಮ ಬಂಧುವರ್ಗದವರಿಂದಲೂ ಮಿತ್ರಮಂಡಲಿಯವರಿಂದಲೂ ಓಟುಗಳನ್ನು ಕೊಡಿಸಿ ಅವರು ಚುನಾವಣೆಯಲ್ಲಿ ತೇರ್ಗಡೆಯನ್ನು ಹೊಂದುವಂತೆ ಮಾಡಿ ದೇಶದಲ್ಲಿರತಕ್ಕ ಅಸಂಖ್ಯಾತರಾದ ಹಿಂದುಳಿದ ವರ್ಗಗಳವರು ವಿದ್ಯೆಯಲ್ಲೂ, ಸಂಪದಭಿವೃದ್ಧಿಯಲ್ಲೂ ಮುಂದುವರಿಯಲು ಅವಕಾಶಗಳನ್ನು ಕಲ್ಪಿಸಿಕೊಟ್ಟು ದೇಶಸೇವೆಯನ್ನು ಮಾಡಿದ ಕೀರ್ತಿಗೆ ಭಾಗಿಗಳಾಗಬೇಕಾಗಿ ಸವಿನಯ ಪ್ರಾರ್ಥನೆ.

ರಾವ್‌ಸಾಹೇಬ್ ಎಚ್. ಚನ್ನಯ್ಯ, ಪ್ರೆಸಿಡೆಂಟ್.
ಮಹಮ್ಮದ್ ಅಬ್ಬಾಸ್ ಖಾನ್, ವೈಸ್‌ಪ್ರೆಸಿಡೆಂಟ್.
ಜಿ. ಪರಮಶಿವಯ್ಯ ಸೆಕ್ರೆಟರಿ.

ಆಚಾರ್ಯಪ್ರಫುಲ್ಲಚಂದ್ರರಾಯರವರು

ಕಳೆದ ತಾ|| 27 ರಲ್ಲಿ ಜರುಗಿದ ಮೈಸೂರು ವಿಶ್ವವಿದ್ಯಾಲಯದ ಪಟ್ಟಪ್ರದಾನಮಹೋತ್ಸವದಲ್ಲಿ ಮಾಡಿದ ಉಪನ್ಯಾಸ.

ಈ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರು ಸಾಹಿತ್ಯಚಕ್ರವರ್ತಿಯವರಾಗಿರುವುದರಿಂದ ಅವರ ಸನ್ನಿಧಿಯಲ್ಲಿ ನಿಂತು ಉಪನ್ಯಾಸಮಾಡಲು ನನಗೆ ಬಹಳ ಸಂಕೋಚವಾಗುತ್ತದೆ. ತಾವು ದಯೆಯಿಂದಲೂ, ತಾಳ್ಮೆಯಿಂದಲೂ ಸಹಾಯ್ಯಾಕರಿಸಿ ನನ್ನೀ ಉದ್ಯಮವನ್ನು ಸಾಂಗಗೊಳಿಸುವವರಾಗಬೇಕು.

ಹತ್ತುವರ್ಷಗಳ ಹಿಂದೆ ಈ ವಿಶ್ವವಿದ್ಯಾಲಯ ಪ್ರಾರಂಭೋತ್ಸವವು ಜರುಗಿದಾಗ ನಾನು ಇಲ್ಲಿಗೆ ಬರುವ ಭಾಗ್ಯವು ಲಭಿಸಿದ್ದಿತು. ಆಗಲಿಂದಲೂ ಇದರ ಅಭಿವೃದ್ಧಿಯನ್ನು ನಾನು ಬಹಳ ಶ್ರದ್ಧೆಯಿಂದ ಗಮನಿಸುತ್ತಿರುವೆನು. ಆದರೆ ಈಪ್ರಕಾರವಾಗಿ ಪಟ್ಟಪ್ರದಾನಸಭೆಯಲ್ಲಿ ಉಪನ್ಯಾಸಮಾಡಲು ನನ್ನನ್ನು ಆಹ್ವಾನಿಸುವರೆಂದು ನಾನು ತಿಳಿದಿರಲಿಲ್ಲವು. ನೀವು ನನ್ನನ್ನು ಈರೀತಿ ಗೌರವಿಸಿದುದಕ್ಕೋಸ್ಕರ ನಾನು ಮನಃಪೂರ್ವಕವಾಗಿ ಕೃತಜ್ಞತೆಯನ್ನು ತಿಳಿಸುವಲ್ಲಿ ನನಗುಂಟಾದ ಅಧಿಕಸಂತೋಷವನ್ನು ಪ್ರದರ್ಶಿಸತಕ್ಕವನಾಗಿದ್ದೇನೆ.

ಮೈಸೂರುಸಂಸ್ಥಾನವು ಭರತಖಂಡದ ದೇಶೀಯಸಂಸ್ಥಾನಗಳಲ್ಲೆಲ್ಲ ಅಗ್ರಗಣ್ಯವಾದುದೆಂದು ಹೇಳಬಹುದು. ಈ ವಿಶ್ವವಿದ್ಯಾಲಯಾಭಿವೃದ್ಧಿಯನ್ನು ಇತರ ಸಂಸ್ಥಾನಗಳಲ್ಲಿಯ ವಿದ್ವಾಂಸರುಗಳೇ ಅಲ್ಲದೆ ಬ್ರಿಟಿಷ್ ಇಂಡ್ಯಾದವರು ಕೂಡ ಬಹಳ ಶ್ರದ್ಧೆಯಿಂದ ನಿರೀಕ್ಷಿಸುತ್ತಿರುವರು. ವಿದ್ಯಾವಿಷಯದಲ್ಲಿ ನನಗೆ ಮೂವತ್ತುವರ್ಷಗಳ ಅನುಭವವಿರುವುದರಿಂದ ಆಧುನಿಕ ವಿಶ್ವವಿದ್ಯಾಲಯಗಳಲ್ಲಿಯ ಲೋಪಗಳು, ವಿಶ್ವವಿದ್ಯಾಲಯಗಳ ವಿದ್ಯಾವಿಧಾನ ಮೊದಲಾದ ವಿಷಯಗಳಮೇಲೆ ನನಗುಂಟಾಗಿರುವ ಅಭಿಪ್ರಾಯವನ್ನು ಈ ಸಮಯದಲ್ಲಿ ತಿಳಿಸಲು ಅಪೇಕ್ಷಿಸುತ್ತೇನೆ. ಉನ್ನತವಿದ್ಯೆಯನ್ನು ಅಭಿವೃದ್ಧಿಗೊಳಿಸುವ ಸಮಸ್ಯೆಯನ್ನು ಸೂಕ್ಷ್ಮಬುದ್ಧಿಯಿಂದ ಪರೀಕ್ಷಿಸಲು ಈವರೆಗೆ ಯಾರೂ ಪ್ರಯತ್ನಿಸಲಿಲ್ಲವೆಂಬುದು ನನ್ನ ಅಭಿಪ್ರಾಯವು. ಬ್ರಿಟಿಷಿನವರು ಭರತಖಂಡವನ್ನು ಪರಿಪಾಲಿಸಲುಪಕ್ರಮಿಸಿದಮೇಲೆ ವಿದ್ಯಾವಿಧಾನವನ್ನು ನಿರ್ಣಯಿಸುವ ಬಾಧ್ಯತೆಯನ್ನು ಅವರೇ ವಹಿಸಿದರು. ಬ್ರಿಟಿಷಿನವರು ತಮ್ಮ ದೇಶದಲ್ಲಿಯ ವಿದ್ಯಾವಿಧಾನವನ್ನೇ ಈ ದೇಶದಲ್ಲೂ ಸ್ಥಾಪಿಸಿದರು.

ಪ್ರಾಚೀನವಿಶ್ವವಿದ್ಯಾಲಯಗಳಲ್ಲಿ ಕೇವಲ ಸಾಹಿತ್ಯವೇ ಬೋಧಿಸಲ್ಪಡುತ್ತಿದ್ದಿತು. ಈಗಿನ ವಿಶ್ವವಿದ್ಯಾಲಯಗಳಲ್ಲಾದರೋ ಸಾಹಿತ್ಯವೂ ವೃತ್ತಿವಿದ್ಯೆಯೂ ಬೋಧಿಸಲ್ಪಡುತ್ತವೆ. ಪ್ರಾಚೀನ ಮತ್ತು ಮಧ್ಯಕಾಲಗಳಲ್ಲಿ ಸ್ವತಂತ್ರವೃತ್ತಿಗಳು ಬಹಳ ಹೊರಪಡಲಿಲ್ಲವು. ಆದರೂ ಆ ದಿನಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಲಿಚ್ಛಿಸುವವರು ಮಾತ್ರ ಕಲಾಶಾಲೆಗಳಲ್ಲಿ ಓದುತ್ತಿದ್ದರು. ಈ ಪ್ರಕಾರ ಸ್ವತಂತ್ರವೃತ್ತಿಗಳು ಬಹಳವಾಗಿ ತಲೆಯೆತ್ತಿದ್ದುದರಮೇಲೆ ಸಾಂಘಿಕ ಆರ್ಥಿಕಾದಿ ಅವಶ್ಯಕತೆಯಿಂದ ಅನೇಕ ಮಂದಿ ಕಲಾಶಾಲೆಗೆ ಸೇರುವವರಾದರು. ಕ್ರಮಕ್ರಮವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಬಂದುದರಮೇಲೂ ವೃತ್ತಿಗಳಲ್ಲಿ ಅವಕಾಶಗಳು ತಗ್ಗುತ್ತಬಂದುದರಮೇಲೂ ವಿಶ್ವವಿದ್ಯಾಲಯಗಳು ಸಾಹಿತ್ಯನಿಕ್ಷೇಪವಾಗುವುದರಬದಲು ಪಟ್ಟಗಳ ಅಂಗಡಿಗಳಾಗೇರ್ಪಟ್ಟಿರುವುದರಿಂದ ನವೀನವಿದ್ಯಾವಿಧಾನವು ನಿರೋಪಯೋಗವೆಂಬ ವಿಷಯವು ಚೆನ್ನಾಗಿ ವ್ಯಕ್ತವಾಗುತ್ತದೆ.

ಇದರಿಂದ ವಿವೇಕವಂತರಾದವರು ಈವರೆಗೆ ಪರೀಕ್ಷಕವಾಗಿದ್ದುದನ್ನು ಈಗ ಬೋಧಕಗಳನ್ನಾಗಿ ಮಾರ್ಪಡಿಸುತ್ತಿರುವರು. ಪರೀಕ್ಷೆಯು ಕೂಡ ಅವಶ್ಯಕವಾಗಿರುವುದರಿಂದ ಅದನ್ನು ಸಂಪೂರ್ಣವಾಗಿ ಬಿಡಲವಕಾಶವಿಲ್ಲವು. ಆದರೆ ಬೋಧನದಲ್ಲಿರುವಷ್ಟೇ ಪರೀಕ್ಷೆಯಲ್ಲೂ ಅಧಿಕವಾದ ಶ್ರದ್ಧೆಯನ್ನು ವಹಿಸಿದುದಾದರೆ ಅವು ವಾಣಿಜ್ಯಬೋಧಕಸ್ಥಾನವಾಗುವುವು. ಸಿವಿಲ್‌ಸರ್ವಿಸ್ ಮೊದಲಾದ ಪರೀಕ್ಷೆಗಳಿಗೆ ಸಿದ್ಧಗೊಳಿಸುವಂತಹ ಸಂಸ್ಥೆಗಳು ಪ್ರತ್ಯೇಕವಾಗಿರಬೇಕಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಜ್ಞಾನಾಭಿವೃದ್ಧಿಯೇ ಪ್ರಧಾನಾಂಶವಾಗಿರಬೇಕು.

ಈ ರೀತಿಯಾಗಿ ವಿದ್ಯಾಲಯಗಳಲ್ಲಿ ವಿಭಾಗಗಳನ್ನು ಮಾಡಿದುದಾದರೆ ಭಾರವು ಅತ್ಯಧಿಕವಾಗುವುದಲ್ಲದೆ ಪ್ರಾಶಸ್ತ್ಯಕಡಿಮೆಯಾಗುವುದು. ಪಾಠಶಾಲೆಗಳಿಗೂ ಕಲಾಶಾಲೆಗಳಿಗೂ ಭೇದವು ತಪ್ಪದೇ ಇರಬೇಕು. ನಮ್ಮ ಜೀವಿತದಲ್ಲಿ ಮನುಷ್ಯೇತರ ಜೀವಸಂಬಂಧದಲ್ಲೂ ವಿಜ್ಞಾನಸಂಬಂಧದಲ್ಲೂ ವಿಭಜನವು ಉಂಟಾಗದೆ ಇರದು. ಮೊದಲನೆಯ ವಿಭಾಗದಿಂದ ಸಾಂಘಿಕ ಸ್ವಭಾವ ಬಾಧ್ಯತಾದಿಗಳು ಹುಟ್ಟಿ ವಿಜ್ಞಾನ ವಿಷಯದಿಂದ ದುರ್ಬಲರಾದವರನ್ನು ನಿತ್ಯರುಚಿಯಿಂದ ಮೂಲೆಗೊತ್ತುವ ಪ್ರಯತ್ನ ನಡೆಯುವುದಲ್ಲದೆ ಜ್ಞಾನಾಭಿವೃದ್ಧಿಯನ್ನುಂಟುಮಾಡುವ ಪ್ರಯತ್ನವು ನಡೆಯುವುದಿಲ್ಲ. ಮನುಷ್ಯರೆಲ್ಲರಿಗೂ ಸ್ವಲ್ಪಮಟ್ಟಿಗೆ ಮನೋವಿಜ್ಞಾನವನ್ನು ವಿಕಸನಗೊಳಿಸುವುದು ಕಷ್ಟವಲ್ಲವು, ಆದರೆ ನಿರ್ಮಾಣಶಕ್ತಿಯುಳ್ಳ ವಿಜ್ಞಾನವು ಎಲ್ಲರಿಗೂ ಲಭಿಸುವುದಿಲ್ಲ. ಅಂತಹುದನ್ನು ಉಂಟುಮಾಡಬೇಕಾದಲ್ಲಿ ಅಂತಹ ಸಂಸ್ಥೆಯು ಇತರ ವಿದ್ಯಾಲಯಗಳಿಗೆ ಭಿನ್ನವಾಗಿಯೇ ಇರಬೇಕು. ಸಾಮಾನ್ಯ ವಿದ್ಯೆಯು ಎಲ್ಲರಿಗೂ ಅತ್ಯಗತ್ಯವಾಗಿರುವುದು (ಪರ್ವತಾಗ್ರದಿಂ

ಸಿದ್ಧನಾಗಿದ್ದ ಒಬ್ಬ ಕುರುಡನ ಚಿತ್ರದ ದ್ವಾರ ಇದನ್ನು ಸೋವಿಯಟ್ಟು ವಿದ್ಯಾಪ್ರಚುರಣಶಾಖೆಯವರು ಚೆನ್ನಾಗಿ ತಿಳಿದುಕೊಂಡರು). ಆದ್ದರಿಂದ ಉನ್ನತವಿದ್ಯಾಸ್ಥಾನಗಳಿಂದ ಸದ್ಯಃಫಲವುಂಟಾಗುವುದಲ್ಲದೆ ಅವು ಎಲ್ಲರಿಗೂ ಉಪಯುಕ್ತವಾದವುಗಳಲ್ಲ. ಆದುಕಾರಣ ಮೇಧಾಶಕ್ತಿಯನ್ನನುಸರಿಸಿಯೇ ವಿದ್ಯಾಲಯಗಳಲ್ಲಿ ವಿಭಾಗವಾಗಬೇಕು.

ಕೆಲವೃತ್ತಿಗಳಿಗೆ ಸ್ತ್ರೀಯರನ್ನೂ ಪುರುಷರನ್ನೂ ಅರ್ಹರನ್ನಾಗಿ ಮಾಡುವ ವಿದ್ಯೆಯನ್ನು ಕಲಿಸುವುದೊಂದು. ಕೇವಲ ಜ್ಞಾನವನ್ನು ವೃದ್ಧಿಗೊಳಿಸುವುದು ಮತ್ತೊಂದು. ಇವೆರಡೂ ಭೌತಿಕವಾಗಿಯೂ ನೈತಿಕವಾಗಿಯೂ ಭಿನ್ನವಾಗಿದ್ದರೂ ಎರಡಕ್ಕೂ ಪರಸ್ಪರ ಆಧಾರವಿರುವುದು ಸ್ಪಷ್ಟವಾಗಿದೆ. ಈಗಿನ ವಿಜ್ಞಾನಾಭ್ಯಾಸವು ಒಂದು ಶತಮಾನದವರೆಗೂ ಉಪಯೋಗವಾಗುವುದಾದರೂ ಕ್ರಮವಾಗಿ ಬಲಹೀನವಾಗುವುದರಿಂದ ಮಾನವಸಂಘಾಭಿವೃದ್ಧಿಗೆ ನೂತನವಿಜ್ಞಾನಾಭ್ಯಾಸವು ಅವಶ್ಯಕವೆಂದು ಪ್ರಜೆಗಳು ಗ್ರಹಿಸುವರು. ಆದುದರಿಂದ ಈಗ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ವಿಶೇಷ ಉಪಯುಕ್ತವಾದ ವಿದ್ಯಾಬೋಧೆಯನ್ನು ಅಭಿವೃದ್ಧಿಗೊಳಿಸಲು ಸ್ವತಂತ್ರಪರಿಶೋಧನೆಯು ಆಗಬೇಕು. ಸದ್ಯಃ ಉಪಯೋಗಾಪೇಕ್ಷೆಯಿಂದಲ್ಲದೆ ಜ್ಞಾನಾಪೇಕ್ಷೆಯಿಂದ ಪರಿಶೋಧನಮಾಡುವವನಿಗೂ ಪ್ರಸ್ತುತ ಉಪಯೋಗಾಪೇಕ್ಷೆಯಿಂದಲೇ ಪರಿಶೋಧನಮಾಡುವವನಿಗೂ ಬಹಳ ವ್ಯತ್ಯಾಸವಿಲ್ಲವು. ಅವೆಲ್ಲವೂ ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟವುಗಳೇ ಆಗಿವೆ. ಈ ಪರಿಶೋಧಕರು ತಂತಮ್ಮ ವೃತ್ತಿಗಳನ್ನು ಚೆನ್ನಾಗಿ ಗ್ರಹಿಸಬೇಕು. ಹಾಗೆ ನಡೆದರೆ ಶುದ್ಧ ವಿಜ್ಞಾನವು ಯಾವಾಗಲೂ ಅಭಿವೃದ್ಧಿಯಾಗುತ್ತಲೇ ಇರುವುದು. ಇದಿಯೇ ನನ್ನ ಆಶಯವಾದುದರಿಂದ ಎಲ್ಲರಿಗೂ ತಕ್ಕುದಾದ ಪದ್ಧತಿಯನ್ನೇ ನಾವು ಅವಲಂಬಿಸಬೇಕು.

ಈಗ ಭರತಖಂಡದ ವಿಶ್ವವಿದ್ಯಾಲಯಗಳಲ್ಲಿ ವಿದೇಶಭಾಷೆಯಲ್ಲೇ ವಿದ್ಯೆಯು ಕಲಿಸಲ್ಪಡುತ್ತಿರುವುದು. ಇದು ಮೊದಲನೆಯ ಅಪರಾಧವು. ನಮ್ಮ ಮೇಧಾಶಕ್ತಿಯು ಸ್ತಬ್ಧವಾಗಲು ಇದೆಯೇ ಮುಖ್ಯಕಾರಣವೆಂಬ ವಿಷಯವನ್ನು ಕೂಡ ಈಗತಾನೆ ನಮ್ಮ ದೇಶೀಯರು ಗ್ರಹಿಸಿರುವರು. ಇದುವರೆಗೆ ಇದನ್ನು ಗ್ರಹಿಸದಿದ್ದುದು ಬಹಳ ವ್ಯಸನಕರವು. ಈ ಆಂಗ್ಲಭಾಷೆಯನ್ನು ಮುಖ್ಯವಾಗಿಟ್ಟುಕೊಳ್ಳದೆ ತೊಲಗಿಸಿದಲ್ಲಿ ಬಹಳ ಹಾನಿಯಾಗುತ್ತದೆಂದು ಸುಪ್ರಸಿದ್ಧರಾದ ವಿದ್ಯಾಧಿಕರಲ್ಲಿ ಕೂಡ ಕೆಲರು ಭಾವಿಸಿರುವುದು ಮತ್ತಷ್ಟು ಆಶ್ಚರ್ಯಕರವು. ಆಂಗ್ಲಭಾಷಾದಿಯಾಗಿ ವಿದೇಶಭಾಷೆಗಳನ್ನು ಮುಖ್ಯವಾಗಿ ಅಭ್ಯಾಸಮಾಡಬೇಕಾದುದೇ. ಅವನ್ನು ಅಭ್ಯಾಸಮಾಡುವುದರಿಂದ ನೂತನ ಆಶಯವೂ ಅವಕಾಶವೂ ಗೋಚರಿಸುವುವು. ಷೇಕ್ಸ್‌ಪಿಯರು ಮಿಲ್ಟನ್ನು ಮೊದಲಾದ ಮಹಾಕವಿಗಳು ಯಾವಭಾಷೆಯಲ್ಲಿ ಗ್ರಂಥಗಳನ್ನು ಬರೆದರೋ ಆ ಭಾಷೆಯು ನಿರಾಕರಿಸಲ್ಪಡುವುದರಿಂದ ಕ್ಷಯಿಸುವುದೆಂದು ಭಯಪಡುವುದು ಅವಿವೇಕವು. ವಿದ್ಯೆಯನ್ನು ಕಲಿಯುವುದಕ್ಕೆ ಮಾತ್ರ ಅದು ಸಾಧನವಾಗಿರಕೂಡದು. ವಿದ್ಯಾರ್ಥಿಯು ಅನೇಕ ವಿಷಯಗಳನ್ನು ಗ್ರಹಿಸುವುದು ಅವಶ್ಯಕವು. ಹುಟ್ಟಿದಾರಭ್ಯ ಯಾವ ಭಾಷೆಯು ನಿರಂತರವೂ ವಾಡಿಕೆಯಾಗಿರುವುದೋ ಆ ಭಾಷೆಯಲ್ಲೇ ಕಲಿತರೆ ಸಕಲ ವಿಷಯವನ್ನೂ ಬಹಳ ಶೀಘ್ರವಾಗಿ ಗ್ರಹಿಸಲಾಗುವುದು. ಗಣಿತ, ಚರಿತ್ರೆ, ಆರ್ಥಿಕ, ರಾಜಕೀಯ, ತರ್ಕ, ಭೂಗೋಳ ಮೊದಲಾದವುಗಳನ್ನು ಕೂಡ ಅಷ್ಟು ಸುಲಭವಾಗಿ ಅಭ್ಯಾಸಮಾಡಲವಕಾಶವಾಗುವುದು. ನಾವು ವಿದ್ಯಾಮಂದಿರವನ್ನು ಸ್ಥಿರವಾಗಿಯೂ, ಮಹೋನ್ನತವಾಗಿಯೂ ನಿರ್ಮಿಸಬೇಕೆಂಬ ಕೋರಿಕೆಯೇ ತಳಹದಿಕಲ್ಲಾಗಿರಬೇಕು.

ಮಾಧ್ಯಮಿಕವಿದ್ಯೆಯ (ಸೆಕೆಂಡರೀ ಎಡ್ಯುಕೇಷನ್ನ)ನ್ನು ಸರಿಯಾಗಿ ವೃದ್ಧಿಗೊಳಿಸಿದರೆ ವಿಶ್ವವಿದ್ಯಾಲಯದ ಮೇಲೆ ಬಿದ್ದಿರುವ ಭಾರವು ಬಹಳಮಟ್ಟಿಗೆ ತಗ್ಗುವುದು. ಪಾಠಶಾಲೆಯಲ್ಲೇ ಸಂಪೂರ್ಣಯಾಗಬೇಕಾಗಿರುವ ವಿಷಯಗಳಲ್ಲಿ ಬಹುಭಾಗವು ಈಗ ಕಲಾಶಾಲೆಗಳಲ್ಲಿ ಕೂಡ ಹೇಳಿಕೊಡಲ್ಪಡದೆ ತಟಸ್ಥವಾಗುತ್ತದೆ. ಈ ಕೊರತೆಯು ನಿವಾರಣೆಯಾದಲ್ಲಿ ಕಲಾಶಾಲೆಯ ಹೆಸರು ಸಾರ್ಥಕವಾಗುವುದು. ಪಟ್ಟ (ಡಿಗ್ರಿ) ಪರೀಕ್ಷೆ ಕೊಟ್ಟಮೇಲೆ ಉನ್ನತವಿದ್ಯೆಯನ್ನು ಕಲಿಯುವುದರಲ್ಲು ಕೂಡ ಪಾಠಗಳನ್ನು ಬರೆಯಬೇಕೆಂದು ಕೆಲರು ಈಗಲೂ ನಿರ್ಬಂಧಪಡಿಸುತ್ತಿರುವರು. ಕಾಲಾಶಾಲೆಗಳಲ್ಲಿ ವಿಷಯನಿರ್ಣಯ ಸ್ವಾತಂತ್ರ್ಯ ವ್ಯಾಜದಿಂದ ವಿದ್ಯಾರ್ಥಿಗಳು ಸೋಮಾರಿಗಳಾಗಿರಬೇಕೆಂಬುದು ನನ್ನ ಅಭಿಪ್ರಾಯವಲ್ಲವು. ಮೇಧಾಶಕ್ತಿಗೆ ತಕ್ಕಂತೆ ನಿರಂತರವೂ ಪರಿಶ್ರಮವು ಜರುಗುತ್ತಲೇ ಇರಬೇಕು. ಕಲಾಶಾಲೆಗಳ ವಿದ್ಯಾರ್ಥಿಗಳ ಮೇಧಾಶಕ್ತಿಯು ವೃದ್ಧಿಯಾಗಬೇಕಾದಲ್ಲಿ ನಿರ್ಬಂಧೋಪನ್ಯಾಸ, ಪಾಠಲೇಖನ ಮೊದಲಾದವುಗಳು ನಿಲ್ಲಿಸಲ್ಪಡಬೇಕು. ಉಪನ್ಯಾಸಗಳಿಂದ ಉಪದೇಶವು ಜರುಗುವಹಾಗೆ ಕಂಡುಬರುವುದಾದರೂ ವಿದ್ಯಾರ್ಥಿಯು ಶ್ರದ್ಧೆಯುಳ್ಳವನಾಗಿದ್ದರೆ ಅಂತಹ ಉಪನ್ಯಾಸಗಳಿಗೆ ಹೋಗದೇನೆಯೇ ಅಧಿಕ ಕೃಷಿಯನ್ನು ಆತನು ಮಾಡಲಾಗುವುದು. “ವಿದ್ಯೆಗೆ ಗ್ರಂಥವೇ ಅಲ್ಲದೆ ಉಪನ್ಯಾಸವು ಪ್ರಧಾನವಲ್ಲವೆಂದು ಅಂಗೀಕರಿಸಿದಲ್ಲಿ ವ್ಯಕ್ತಿ ಕಾಲಸ್ಥಲಾದಿ ನಿರ್ಬಂಧವು ಅನವಶ್ಯಕವೆಂದು ಸ್ಪಷ್ಟವಾಗುವುದು. ಟ್ರಿನಿಟಿಕಲಾಶಾಲೆಯ (ಕಾಲೇಜಿನ)ಲ್ಲಿ ಮಹಾಭೋಗಯುತವಾದ ಕೊಠಡಿಯಲ್ಲಿ ಹಗಲು 11 ಘಂಟೆಗೆ ಒಬ್ಬ ಯುವಕನು ಯಾವ ವಿಷಯವನ್ನು ಓದುವನೋ ಆ ವಿಷಯವನ್ನೇ ಹಗಲುವೇಳೆಯಲ್ಲಿ ಜೀವನಾರ್ಥವಾಗಿ ಕೆಲಸಮಾಡುತ್ತಿರುವ ಮತ್ತೊಬ್ಬ ಯುವಕನು ರಾತ್ರಿವೇಳೆ ಗ್ಲಾಸ್ಗೋ ಪಟ್ಟಣದಲ್ಲಿ ತನ್ನ ಗುಡಿಸಿಲಿನಲ್ಲೇ ಓದಲಾಪನು” ಎಂದು ಎಚ್. ಜಿ. ವೇಲ್ಸ್‌ರವರು ಬರೆದಿರುವರು. ಉಪನ್ಯಾಸದಲ್ಲಿ ಉಪಾಧ್ಯಾಯನು ತನ್ನ ಭಾವವನ್ನು ಪ್ರದರ್ಶಿಸುತ್ತಿರುವನು. ಅದರಿಂದ ವಿದ್ಯಾರ್ಥಿಗಳು ಸಾಧಾರಣವಾಗಿ ಆತನನ್ನು ಪ್ರಶ್ನಿಸಲು ಅವಕಾಶವಿರುವುದಿಲ್ಲ. ಆದುದರಿಂದ ಕೆಲ ಕಲಾಶಾಲೆಗಳಲ್ಲಿ ಪಾಠಪ್ರವಚನ ಪದ್ಧತಿಯನ್ನು ಬದಲಾಯಿಸುತ್ತಿರುವರು. ಇದರಿಂದ ಕೊಂಚ ಒಳ್ಳೆಯದಾಗುವುದಾದರೂ ವಿದ್ಯಾರ್ಥಿಯ ಸ್ವಯಂಕೃಷಿಗೆ ಅವಕಾಶವಿಲ್ಲದಂತಾಗಿದೆ. ಹಾಗಲ್ಲದೆ ಕೆಲ ಗ್ರಂಥಗಳಲ್ಲಿಯ ಕೆಲ ವಿಷಯಗಳನ್ನು ಮಾತ್ರ ವಿವರಿಸಿ ಹೇಳಿದರೆ ವಿದ್ಯಾರ್ಥಿಗಳು ಅವನ್ನು ಓದಿ ತಿಳಿದುಕೊಂಡು ಸ್ವತಂತ್ರ ಕೃಷಿಯಿಂದ ಅಂದರೆ ಪ್ರಯತ್ನವಿಶೇಷದಿಂದ ಕೇಳಿದ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಕೊಡಲಾಪರು. ತರುವಾಯ ಕಲಾಶಾಲೆಯಲ್ಲಿ ಕೆಲ ವಿದ್ಯಾರ್ಥಿಗಳೊಡನೆಯೂ ಉಪಾಧ್ಯಾಯರುಗಳೊಡನೆಯೂ ಚರ್ಚಿಸಿ ನಿರ್ಧರಿಸಿಕೊಳ್ಳಲಾಗುವುದು. ಇದು ಮೊಟ್ಟಮೊದಲು ಕಷ್ಟತರವಾಗಿ ತೋರಿದರೂ ಕ್ರಮೇಣ ಸ್ವತಂತ್ರಾಲೋಚನಾಶಕ್ತಿಯು ದ್ದೀಪನವಾಗದಿರದು. ಇದಕ್ಕೆ ಸೆಕೆಂಡರಿ ಪಾಠಶಾಲೆಗಳಲ್ಲಿ ಬಹಳ ಅಭಿವೃದ್ಧಿಗೊಳಿಸುವುದು ಮುಖ್ಯವು. ಉಪನ್ಯಾಸ ಪದ್ಧತಿಯನ್ನು ನಿಲ್ಲಿಸಿದಮೇಲೆ ಉಪಾಧ್ಯಾಯರ ಕೆಲಸವೇನು? ಉಪಾಧ್ಯಾಯರ ಉದ್ಯೋಗವು ಸ್ವತಂತ್ರ ಪರಿಶೋಧನೆಯೇ; ನೂತನ ವಿಷಯಗಳನ್ನು ಕಂಡುಹಿಡಿದು ಅವನ್ನು ಬೋಧಿಸುವುದು ಮತ್ತು ಅವನ್ನು ಕುರಿತು ಚರ್ಚಿಸುವುದು. ಈ ಪ್ರಕಾರವಾಗಿ ವಿಜ್ಞಾನ ಪೌರರಾಜ್ಯದಲ್ಲಿ ಅನ್ವೇಷಣವು ಯಾವಾಗಲೂ ಜರುಗುತ್ತಿರಬೇಕು. “ಕಲಾಶಾಲೆಗಳಲ್ಲಿ ಬೋಧನಾಕೌಶಲ್ಯವು ಈಗ ಮುಖ್ಯವು” ಎಂದು ಬೆರ್ಟ್ರಾಂಡ್ ರಸಲ್‌ರವರು ಹೇಳಿರುತ್ತಾರೆ.

ಬಂಗಾಳದಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸವಿಧಾನವು ಬಹಳ ಲೋಪಭೂಯಿಷ್ಠವಾಗಿದೆ. ಆದರೆ ಪೋಸ್ಟ್ ಗ್ರಾಜ್ಯುಏಟ್ ವಿಧಾನವು ಮಾತ್ರ ಕೀರ್ತಿಶೇಷರಾದ ಅಶುತೋಷಮುಖರ್ಜಿಯವರ ಪ್ರಯತ್ನವಿಶೇಷದಿಂದ [illegible] ಅಭಿವೃದ್ಧಿಯನ್ನು ಹೊಂದಿದೆ. ವಿಶ್ವವಿದ್ಯಾಲಯದಲ್ಲಿ ವಿಜ್ಞಾನವಿಷಯಕವಾಗಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಆದರೆ ಧನಾಭಾವದಿಂದ ತೊಂದರೆಯು ಸಂಭವಿಸುತ್ತಿದೆ. ಉದಾರಿಗಳಾದ ಐಶ್ವರ್ಯವಂತರು ಹೇರಳವಾಗಿ ಧನಸಹಾಯಮಾಡಿರುವ ಶಾಖೆಗಳಲ್ಲಿ ಮಾತ್ರ ಕೆಲಸವು ಶ್ರೇಷ್ಠವಾಗಿ ನಡೆಯುತ್ತಿದೆ. ಉಳಿದವುಗಳಲ್ಲಿ ಧನಾಭಾವದಿಂದ ಅಭಿವೃದ್ಧಿಗೆ ಅವಕಾಶವಿಲ್ಲವು. ಸೈನ್ಸು ಕಾಲೇಜುಗಳಿಗೆ ಯಾವ ಧನಸೌಕರ್ಯವೂ ಇಲ್ಲ. ಅಲ್ಲಿ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ನಿರಂತರ ಸಾಹಚರ್ಯದಿಂದ ಉಂಟಾಗಿರುವ ಅನ್ಯೋನ್ಯತೆಯು ಬಹಳ ಪ್ರಶಂಸನೀಯವು. ಆರ್ಟ್ಸ್ ಕಾಲೇಜಿನಲ್ಲಿ ಉಪಾಧ್ಯಾಯರು ಕೂಡ ಅಖಂಡಪಾಂಡಿತ್ಯಸಂಪನ್ನರೇ ಆಗಿದ್ದರೂ ಅಲ್ಲಿ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ನಿರಂತರ ಸಾಹಚರ್ಯಾದಿಗಳಿಗೆ ಅವಕಾಶವಿಲ್ಲವು. ಅದು ಬಹಳ ನಷ್ಟವೆಂದೇ ನಾನು ತಿಳಿದಿರುವೆನು. ಈ ಲೋಪವು ಕ್ರಮೇಣ ನಿವಾರಣೆ ಆಗಬೇಕಲ್ಲದೆ ಕಾರ್ಯನಿರ್ವಾಹಕ ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯವು ಸಂಪೂರ್ಣವಾಗಿಲ್ಲವು. ಸೋವಿಯಟ್ ರಷ್ಯಾದಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯವನ್ನು ಕೊಟ್ಟಿರುವುದರಿಂದ ಬಹಳ ಮೇಲುಂಟಾಗಿದೆ. ಅದುಕಾರಣ ನಾವೂ ಈ ನೂತನಪದ್ಧತಿಯನ್ನು ಕೂಡಲೆ ಅವಲಂಬಿಸಬೇಕು.

ಕೆಲ ಪರೀಕ್ಷೆಗಳಲ್ಲಿ ಕೃತಾರ್ಥರಾದಹೊರತು ವಿಶ್ವವಿದ್ಯಾಲಯಗಳಿಗೆ ಸೇರಿಸಕೊಳ್ಳಬಾರದೆಂಬ ನಿರ್ಬಂಧವು ಸರಿಯಾದುದಲ್ಲವು. ವಿಶ್ವವಿದ್ಯಾಲಯವು ದೊಡ್ಡ ಪರಿಶೋಧಕಸ್ಥಾನವಾಗಿದ್ದು ಮೇಧಾವಿಗಳಾದವರೆಲ್ಲರಿಗೂ ಅದರಲ್ಲಿ ಪ್ರವೇಶಕ್ಕೆ ಅವಕಾಶವಿರಬೇಕು. ಪ್ರಪಂಚದಲ್ಲಿ ಮೇಧಾವಿಗಳೆಂದು ಕೀರ್ತಿಪಡೆದಿರುವವರಲ್ಲಿ ಪರೀಕ್ಷೆಯನ್ನು ಕೊಡದಿರುವವರು ಎಷ್ಟೋ ಮಂದಿಗಳಿರುವರು. ಮಹಾಕವಿ ಷೇಕ್ಸ್‌ಪಿಯರಿಗೆ ಗ್ರೀಸುಲಾಟಿನ್ ಭಾಷೆಯ ಪರಿಚಯವು ಅತ್ಯಲ್ಪವಾಗಿದ್ದಿತು. ಕೇಶವಚಂದ್ರಸೇನು, ರವೀಂದ್ರಮಹಾಕವಿ, ಅದ್ಭುತವಾದ ನಾವಲ್ ಕಥೆಗಳನ್ನು ಬರೆದ ಶರಚ್ಚಂದ್ರ ಛಟರ್ಜಿ, ನಾಟಕ ಬರೆದವರಲ್ಲಿ ಅಗ್ರಗಣ್ಯನಾದ ಗಿರೀಶಚಂದ್ರ ಘೋಷು ಮೊದಲಾದವರು ಪಟ್ಟ ಅಂದರೆ ಡಿಗ್ರಿಗಳನ್ನು ಕಣ್ಣಿನಲ್ಲಿ ಸಹ ನೋಡಿದವರಲ್ಲವು. ಇದರಿಂದ ವಿಶ್ವವಿದ್ಯಾಲಯದಲ್ಲಿ ಮೇಧಾವಿಗಳನ್ನು ಬಹಿಷ್ಕರಿಸುತ್ತಿರುವ ಪದ್ಧತಿಯು ತಪ್ಪೆಂದು ಹೇಳುವುದು ನಿಜವಲ್ಲದೆ ಅತಿಶಯೋಕ್ತಿಯೆಂದು ನಾನು ಭಾವಿಸುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಮೇಧಾವಿಗಳಿಗೆ ಸ್ಥಳಾವಕಾಶವಿರಬೇಕು. ಪ್ರಜೆಗಳು ವಿಶ್ವವಿದ್ಯಾಲಯಗಳ ಸ್ವಾತಂತ್ರ್ಯವನ್ನು ಕಾಪಾಡಬೇಕು. ವಿಶ್ವವಿದ್ಯಾಲಯಗಳು ಸಾಮಾನ್ಯ ವಿದ್ಯೆಯನ್ನು ಕಲಿಸುವುದಿಲ್ಲ. ಪಟ್ಟಗಳನ್ನು ಕೊಡುವುದಿಲ್ಲ. ಪ್ರಪಂಚಕ್ಕೆಲ್ಲ ನೂತನವಿಷಯಗಳನ್ನು ಬೋಧಿಸುವ ಮಹನೀಯರಾದ ವಿದ್ವಾಂಸರ ಸಹಾಯಕರಾಗಿಯೂ, ಕಾರ್ಯದರ್ಶಿಗಳಾಗಿಯೂ, ಪ್ರತ್ಯೇಕ ವಿದ್ಯಾರ್ಥಿಗಳಾಗಿಯೂ ಕೆಲಸಮಾಡಲಿಷ್ಟವುಳ್ಳ ಯುವಕರು ಮಾತ್ರವೇ ವಿಶ್ವವಿದ್ಯಾಲಯಗಳಿಗೆ ಹೋಗುವರು. ಎಂದು ವೇಲ್ಸರವರು ಬರೆದಿರುತ್ತಾರೆ.

ಮೈಸೂರು ವಿಶ್ವವಿದ್ಯಾಲಯವು ರಾಷ್ಟ್ರೀಯವು. ಇದರ ವಿಜಯಕ್ಕೆ ಸಂಸ್ಥಾನದ ಪ್ರಭುತ್ವದವರ ಉದಾರಭಾವನೇ ಮುಖ್ಯಕಾರಣವು. ಬಂಗಾಳಕ್ಕಾಗಿ ಕಲಕತ್ತಾದಲ್ಲಿ ಒಂದು ವಿಶ್ವವಿದ್ಯಾಲಯವಿರುವಾಗ್ಗೆ ಢಾಕ್ಕಾದಲ್ಲಿ ಮತ್ತೊಂದು ವಿಶ್ವವಿದ್ಯಾಲಯವನ್ನು ಏರ್ಪಡಿಸಿದರು. 16 ಗಂಟೆಯ ಕಾಲದಲ್ಲಿ ಸುಲಭವಾಗಿ ಪ್ರಯಾಣಮಾಡಿ ತಲುಪಬಹುದಾದಷ್ಟು ದೂರದಲ್ಲಿ ಮತ್ತೊಂದು ವಿಶ್ವವಿದ್ಯಾಲಯ ಸ್ಥಾಪನೆಗೆ ಆವಶ್ಯಕತೆಯೇನಿದ್ದಿತೋ? ಕಲಕತ್ತಾ ವಿಶ್ವವಿದ್ಯಾಲಯದಲ್ಲಿ ಕಲಿಸಲ್ಪಡದಿರುವ ವ್ಯವಸಾಯ, ನಾರು, ಚರ್ಮ, ಕಾಡುಪದಾರ್ಥಗಳು ಇವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಢಾಕ್ಕಾದಲ್ಲಿ ಹೇಳಿಕೊಡಲ್ಪಡುವಂತೆ ಏರ್ಪಡಿಸಿದ್ದರೆ ಉತ್ತಮವಾಗಿರುತ್ತಿದ್ದಿತಲ್ಲವೆ? ಸ್ಥಾನಿಕಾವಶ್ಯಕತೆಯನ್ನು ಗಮನಿಸದೆ ಒಂದೇ ಮಾದರಿಯ ವಿಶ್ವವಿದ್ಯಾಲಯಗಳನ್ನೇರ್ಪಡಿಸುವುದು ನಿರುಪಯೋಗವೆಂದು ನಾನು ಭಾವಿಸಿರುತ್ತೇನೆ. ಅಂತಹ ಸಂಸ್ಥೆಗಳಿಗೆ ವಿಶ್ವವಿದ್ಯಾಲಯವೆಂಬ ದೊಡ್ಡ ಹೆಸರನ್ನಿಡಬಾರದು. ಆದುದರಿಂದ ನೀವು ಈ ವಿಶ್ವವಿದ್ಯಾಲಯದ ರಾಷ್ಟ್ರೀಯ ಪರಿಸ್ಥಿತಿಯನ್ನು ಗಮನಿಸದೆ ಪರಕೀಯ ವಿಷಯಗಳನ್ನು ಸುಮ್ಮನೇ ಸೇರಿಸುತ್ತಿರುವುದು ನಿಷ್ಫಲವು. ನಿಮ್ಮ ದೇಶಕ್ಕೆ ಉಪಯುಕ್ತವಾದ ಶಾಸ್ತ್ರವಿಷಯಗಳನ್ನೇ ಬೋಧಿಸುವುದು ಬಹಳ ಲಾಭಕರವು. ಅದರಿಂದ ಕ್ರಮಕ್ರಮವಾಗಿ ವಿಶ್ವವಿದ್ಯಾಲಯದ ಆದಾಯವು ಕೂಡ ಹೆಚ್ಚಿ ಅದು ಪರಾಧೀನತೆಯಿಂದ ವಿಮುಕ್ತವಾಗುವುದು. ಈ ಸಂಸ್ಥಾನದಲ್ಲಿ ಅನೇಕ ಪರಿಶ್ರಮಗಳು ಏರ್ಪಡಿಸಲ್ಪಟ್ಟಿರುತ್ತವೆ. ವಿದ್ಯಾರ್ಥಿಗಳಿಗೆ ಇವು ಅಭ್ಯಾಸ ಸೌಕರ್ಯವನ್ನುಂಟುಮಾಡುವುವು. ಅವರು ತಮಗೆ ಬೇಕಾದ ಪರಿಶ್ರಮವನ್ನೇ ಅವಲಂಬಿಸುವರು. ವಿಶ್ವವಿದ್ಯಾಲಯ ಪರಿಶೋಧಕರು ಪರಿಶೋಧನಗಳನ್ನು ಮಾಡಿ ಧನವನ್ನೂ ಕೀರ್ತಿಯನ್ನೂ ಪಡೆಯಲು ಕೂಡ ಇವು ಸಹಾಯಕವಾಗುವುವು. ಕಲಕತ್ತಾದಲ್ಲಿ ನಮಗೆ ಈ ಸದುಪಾಯವು ಲಭ್ಯವಲ್ಲವು. ಅಲ್ಲಿ ಪ್ರಭುತ್ವದವರ ಪರಿಶ್ರಮವು ಕೊಂಚಮಟ್ಟಿಗಿದೆ. ಆದಾದರೂ ನಮಗೆ ಅಪ್ರಾಪ್ಯವೇ.

ನಿಮ್ಮ ವಿಶ್ವವಿದ್ಯಾಲಯದಲ್ಲಿ ಟೆಕ್ನಾಲಜಿ ಶಾಖೆಯನ್ನೇರ್ಪಡಿಸಲು ಯೋಚಿಸಿರುವುದಾಗಿ ವೈಸ್‌ಛಾನ್ಸಲರು ತಿಳಿಸಿದರು. ಕಲಕತ್ತಾ ವಿಶ್ವವಿದ್ಯಾಲಯದಲ್ಲಿ 6 ತಿಂಗಳ ಹಿಂದೆ ಈ ಶಾಖೆಯೇರ್ಪಡಿಸಲ್ಪಟ್ಟಿತು. ಆಗ ನನ್ನ ಶಿಷ್ಯನೂ, ಸಹಕಾರಿಯೂ ಆದ ಪ್ರವೀಣನೊಬ್ಬನು ಪ್ರಧಾನಾಧಿಕಾರಿಯಾಗಿ ನಿಯಮಿಸಲ್ಪಟ್ಟನು. ಆತನು ಸ್ವದೇಶದಲ್ಲೂ ವಿದೇಶದಲ್ಲೂ ಚೆನ್ನಾಗಿ ಬೋಧನಾಕ್ರಮವನ್ನು ಕಲಿತಿರುವನು. ಸ್ಥಳಪರಿಸ್ಥಿತಿಯನ್ನು ಅನುಸರಿಸಿ ಆತನು ದೊಡ್ಡನೈಪುಣ್ಯವನ್ನು ಕೊಂಚಮಟ್ಟಿಗೆ ವಿರಮಿಸಿ ಪ್ರಸ್ತುತ ಉಪಯೋಗಕ್ಕೆ ಪಟ್ಟವನ್ನು ಕೊಡಬೇಕಾಗಿ ಬಂದಿತು. ಕೀರ್ತಿಶೇಷರಾದ ಸರ್ ರಸವಿಹಾರಿ ಘೋಷುರವರು ವಿಶೇಷ ಧನಸಹಾಯಮಾಡಿದುದರಿಂದಲೇ ಈ ಶಾಖೆಯೇರ್ಪಟ್ಟಿತು. ಪರಿಶೋಧನಮಾಡಿ ರಾಷ್ಟ್ರದ ಪರಿಶ್ರಮಗಳನ್ನು ಅಭಿವೃದ್ಧಿಗೊಳಿಸಲನುಕೂಲಿಸುವಂತೆ ಪೋಸ್ಟ್ ಗ್ರಾಜ್ಯುಏಟ್ ಶಿಕ್ಷೆಯು ಅವಶ್ಯಕವು. ಈ 6 ತಿಂಗಳಿಂದ ಅಭ್ಯಾಸಮಾಡಿದ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗುತ್ತಿದೆ. ಪರಿಶ್ರಮದಲ್ಲಿ ಅವಕಾಶವು ಕೂಡ ವೃದ್ಧಿಯಾಗಬೇಕು. ಇದೂ ಅಲ್ಲದೆ ಸ್ವಂತನಾಗಿ ಕೆಲಸಮಾಡಲು ನೀಚತ್ವವೂ ದುರ್ಭಾವವೂ ಯುವಜನರಲ್ಲಿ ತೊಲಗಬೇಕು. ಹಾಗೆ ತೊಲಗಿದಲ್ಲಿ ಸ್ವತಂತ್ರವಾಗಿಯೇ ಅವರು ಚೆನ್ನಾಗಿ ಧನಾರ್ಜನೆಯನ್ನು ಮಾಡುವರು. ಕಲಕತ್ತಾದಲ್ಲಿ ವಿದ್ಯಾಗಂಧವನ್ನರಿಯದ ಕೆಲರು 500 ರೂ. ಮೊದಲ್ಗೊಂಡು 50,000 ರೂ. ವರೆಗೆ ಪೆಟ್ಟಿಗೆಪೆಟ್ಟಿಗೆಯಲ್ಲಿ ಸಾಬಾನುಮಾಡಿ ಮಾರುತ್ತಿರುವರು. ಎಲ್ಲ ಕೆಲಸವನ್ನೂ ಅವರು ತಾವೇ ಮಾಡಿ ಚೆನ್ನಾಗಿ ಲಾಭವನ್ನು ಹೊಂದುತ್ತಿರುವರು. ವಿದ್ಯಾಧಿಕರಾದ ಯುವಕರೆಲ್ಲರೂ ಕುರ್ಚಿ ಮೇಜಾ ಸುಲೋಚನಾದಿಗಳಿಂದ ಅಲಂಕೃತರಾಗಿರುವರೇ ಹೊರತು ಕುಟುಂಬವನ್ನು ಪೋಷಿಸಲಾರದವರಾಗಿದ್ದಾರೆ. ಇನ್ನಾದರೂ ಅವರು ಗ್ರಹಿಸಿಕೊಳ್ಳಬೇಕು. ಲಾರ್ಡ್‌ಲೆವರ್ ಹಾಲಂರವರು ಒಂದು ಸಣ್ಣ ಅಂಗಡಿಯಲ್ಲಿ ಸೇವಕರಾಗಿ ಸೇರಿದ್ದರು. ಅದೇರೀತಿಯಾಗಿ ಯುವಕರು ಕಾರ್ಯಾರಂಭಮಾಡಬೇಕು. ವಿದ್ಯಾವಂತರು ತಮಗೆ ಅವಿದ್ಯಾವಂತರಿಗಿನ್ನ ಹೆಚ್ಚು ಅವಕಾಶವಿರುವುದೆಂದು ಗ್ರಹಿಸಿಕೊಳ್ಳಬೇಕು. ನಮ್ಮ ಯುವಕರ ಈ ದುರವಸ್ಥೆಗೆ ನಮ್ಮ ಸಾಂಘಿಕಸ್ಥಿತಿಯೂ ವಿದ್ಯಾವಿಧಾನವೂ ಕಾರಣವಾಗಿವೆ. ಕೆಲರಿಗೆ ಆಗರ್ಭಶ್ರೀಮಂತಿಕೆಯಿಂದ ಮಿತಿಮೀರಿದ ಭೋಗಪರಾಯಣತೆಯು, ಮತ್ತೆ ಕೆಲರಿಗೆ ದುರ್ಭರವಾದದಾರಿದ್ರ್ಯವು ಜಾತಿಯಲ್ಲಿ ಸರ್ವಜನಾಧಾರಕವಾಗಿ ಆಶಯವು ಇಲ್ಲದಿರುವುದು ಮೊದಲಾದವುಗಳಿಂದ ಇಂತಹ ದುರ್ದಶೆ ಪ್ರಾಪ್ತವಾಗಿದೆ. ಈಗಿನ ವಿದ್ಯಾವಿಧಾನವು ಅವರನ್ನುದ್ಧರಿಸುವುದರ ಬದಲು ಅವರನ್ನು ಅಧೋಗತಿಗಿಳಿಸುತ್ತಿರುವುದು.

ಪತ್ರವ್ಯವಹಾರ.

☛ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ಸೀ ವರ್ಣಿಸಿ ಮಾರುಮಾರುದ್ದ ಲೇಖಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಸಮಾಜಗಳಲ್ಲಿ ಪರಸ್ಪರ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಮನಸ್ಯವನ್ನು ವೃದ್ಧಿಗೊಳಿಸುವ ಲೇಖಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟು ಲೇಖಕರ ಸಂಪೂರ್ಣ ಹೆಸರು ವಿಳಾಸ ಮತ್ತು ಚಂದಾನಂಬರು ತಿಳುಹಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧ ಲೇಖಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕನೂ ಖಂಡಿತವಾಗಿ ಗಮನಿಸಬೇಕು.—ಸಂಪಾದಕ.

ತಿರಸ್ಕೃತಲೇಖ.

(1) ದಾವಣಗೆರೆ ಆನೆಗೊಂಡದ ಮುಪ್ಪಣ್ಣ—ವೀರಶೈವಮಹಾಸಭಾಧ್ಯಕ್ಷರು ಗೊತ್ತುಮಾಡಲ್ಪಟ್ಟಿರುವುದರಿಂದ ತದ್ವಿಷಯಕವಾದ ಪತ್ರವ್ಯವಹಾರವು ಅಪ್ರಕೃತವು.

ಗೋರಕ್ಷಣಾಭಿಮಾನಿಗಳಲ್ಲಿ ವಿನಂತಿ.

ಮಹನೀಯರೇ, ಮೈಸೂರು ಸರ್ಕಾರದವರಿಂದ ನಿಯಮಿಸಲ್ಪಟ್ಟ ಕಮಿಟಿಯವರು ಗೋರಕ್ಷಣೆಯ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರವನ್ನು ನವಂಬರ್ ಆಖೈರಿನೊಳಗೆ ಕಳುಹಿಸಬೇಕೆಂಬುದಾಗಿ ತಿಳುಹಿಸಿದ್ದುದು ಸರಿಯಷ್ಟೆ. ಈಗ ಈ ಅವಧಿಯನ್ನು 15 ದಿವಸಗಳಿಗೆ ಹೆಚ್ಚಿಸಿರುವರು. ಎಂದರೆ ಡಿಸಂಬರ್ 15 ರೊಳಗೆ ಉತ್ತರವನ್ನು ಕಳುಹಿಸಬೇಕಾಗಿ ಆರ್ಡರ್‌ಮಾಡಿರುವುದರಿಂದ ಇದುವರೆವಿಗೂ ಉತ್ತರವನ್ನು ಕಳುಹಿಸದಿರುವ ಮಹನಿಯರು ಡಿಸಂಬರ್ 15 ನೇ ತಾರೀಖಿನ ಒಳಗೆ ದಯವಿಟ್ಟು ಸರ್ಕಾರದವರಿಗೆ ಕಳುಹಿಸಬೇಕಾಗಿ ಕೋರಿಕೆ.

ಸೆಕ್ರೆಟರಿ, ಪ್ರಾಣಿದಯಾಜ್ಞಾನಪ್ರಸಾರಕಸಂಘ, ದಾವಣಗೆರೆ.

ಸ್ತುತ್ಯವಾದ ದೇವರಸೇವೆ.

ಚಿಕ್ಕನಾಯಕನಹಳ್ಳಿ ತಾ|| ಹಡವದಕಟ್ಟೆಗ್ರಾಮದ ಬೊಮ್ಮೇಗೌಡರ ಮಗ ಚಿಕ್ಕತಮ್ಮೇಗೌಡರು ಬಹಳ ಗುಣಾಢ್ಯರಾಗಿರುವರಲ್ಲದೆ ದೈವಭಕ್ತಿಯುತರಾಗಿ ಅದೇ ಗ್ರಾಮದಲ್ಲಿರುವ ಈಶ್ವರದೇವಸ್ಥಾನದ ಜೀರ್ಣೋದ್ಧಾರ ಮಾಡಿಸಿ ನಿತ್ಯಗಟ್ಟಲೆ ಮತ್ತು ಹೆಚ್ಚುಗಟ್ಟಲೆ ಪೂಜೆಯು ನಿರಾತಂಕವಾಗಿ ನಡೆಯಲು ತಕ್ಕ ದ್ರವ್ಯಸಹಾಯಮಾಡಿರುತ್ತಾರೆ. ಅಲ್ಲದೆ ಇದೇ ತಾಲ್ಲೂಕು ಕುಪ್ಪೂರುಗದ್ದಿಗೆಯಲ್ಲಿರುವ ಶ್ರೀಮರುಳಸಿದ್ಧೇಶ್ವರಸ್ವಾಮಿಮಠದಲ್ಲಿ ನಡೆಯತಕ್ಕ ನಿತ್ಯದಾಸೋಹವನ್ನೂ, ಕಾರ್ತೀಕಮಾಸದಲ್ಲಿ ಬಹಳ ವಿಜೃಂಭಣೆಯಿಂದ ನಡೆಯುವ ಕೃತ್ತಿಕೋತ್ಸವವನ್ನೂ ನೋಡಿ ಸಂತುಷ್ಟರಾಗಿ ಈ ಪುಣ್ಯಕೆಲಸಗಳಿಗಾಗಿ ಸಹಾಯಮಾಡಿ ದೇಹಸಾರ್ಥಕವಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ ಕಳೆದ ತಾ|| 11 ರಲ್ಲಿ ಶೀಗೆಬಾಗಿಯಲ್ಲಿ ಒಂದುಸಾವಿರರೂಪಾಯಿ ಬೆಲೆಬಾಳುವ ತಮ್ಮ ತೋಟವನ್ನೂ ಮೂರುಸಾವಿರರೂಪಾಯಿಗಳ ಆಧಾರ ವ್ಯಸಾಲಪತ್ರಗಳನ್ನೂ ಕುಪ್ಪೂರು ಗದ್ದಿಗೆಮಠದ ವೀರಪ್ಪದೇವರ ಹೆಸರಿಗೆ ದಾನಶಾಸನಬರೆದುಕೊಟ್ಟು ರಿಜಿಸ್ಟರ್‌ಮಾಡಿಸಿದರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಈ ದೈವಭಕ್ತರಿಗೆ ಪರಮೇಶ್ವರನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುವ, ಗುಣೈಕಪಕ್ಷಪಾತಿ.

ಗುಂಡ್ಲುಪೇಟೆ ತಾ|| ತೆರಕಣಾಂಬಿಯಲ್ಲಿ ಗೋವಿನಮಾರಾಟ.

ಈ ಗ್ರಾಮದಲ್ಲಿ ಸಕಾಲಕ್ಕೆ ಸರಿಯಾಗಿ ಮಳೆಯಿಲ್ಲದೆ ಆಹಾಕಾರವುಂಟಾಗಿರುತ್ತದೆ. ಕುಡಿಯುವ ನೀರಿಗೆ ಕಷ್ಟವಾಗಿರುತ್ತದೆ. ಈ ಊರಿನಲ್ಲಿ ಪ್ರತಿ ಗುರುವಾರವೂ ನಡೆಯುವ ಸಂತೆಯಲ್ಲಿ ದನಗಳ ವ್ಯಾಪಾರವೇ ಭಾರಿಯಾಗಿ ಕಟುಕರಿಗೆ ಬಿಕರಿಮಾಡತಕ್ಕದ್ದಾಗಿದೆ. ದುಡ್ಡಿನ ಆಸೆಗೋಸ್ಕರ ಅನೇಕ ಜನರು ಇದೇ ಒಂದು ಕಸಬನ್ನಾಗಿ ಭಾವಿಸಿ ಇದರಿಂದಲೇ ಜೀವನ ಮಾಡುತ್ತಿದ್ದಾರೆ. ಮನುಷ್ಯನ ಪ್ರಾಣವನ್ನು ಕಾಪಾಡತಕ್ಕ ಕಾಮಧೇನುಗಳು ಇರತಕ್ಕ ಆಜೂಬಾಜೂ ಗ್ರಾಮಗಳಲ್ಲದೆ ಅನೇಕದೂರ ಘಾಸಲೆ ಗ್ರಾಮಗಳಿಗೆ ಹೋಗಿ ತಿಳುವಳಿಕೆಯಿಲ್ಲದ ಜನಗಳಿಗೆ ಪ್ರೋತ್ಸಾಹಗಳನ್ನು ಕೊಟ್ಟು ಆ ಮೂಗಪ್ರಾಣಿಗಳು ಪ್ರತಿಸಂತೆಗೂ ಹೆಚ್ಚು ಹೆಚ್ಚಾಗಿ ಬರುವ ಏರ್ಪಾಡುಮಾಡಿ ಅವುಗಳನ್ನು ಯಮಪುರಿಗೆ ಸಾಗಿಸತಕ್ಕ ದಾರಿಮಾಡುತ್ತಲಿದ್ದಾರೆ. ಬಡರೈತನಾದ ನಾನು ಈ ಸಂತೆಯಲ್ಲಿ ಕೆಲವು ಜನಗಳಿಗೆ ಈರೀತಿ ಪಾಪಕೃತ್ಯವನ್ನು ಮಾಡಬೇಡಿರಿ ಎಂದು ಹೇಳಿದ್ದಕ್ಕೆ ನನ್ನ ಮಾತನ್ನು ಧಿಕ್ಕರಿಸಿಬಿಟ್ಟರು. ಈ ಸಂತೆಗೆ ಸುಮಾರು ಎರಡು ಮೂರುಸಾವಿರಗಳವರೆಗೂ ರಾಸುಗಳು ಬರುತ್ತವೆ. ಐದು ಆರು ಸಾವಿರ ರೂಪಾಯಿಗಳವರೆಗೂ ಇದರ ವ್ಯಾಪಾರ ನಡೆಯುತ್ತಾ ಇದೆ. ದಯೆಯುಳ್ಳ ಗೋರಕ್ಷಣಸಂಘದವರು ಈ ಸಂತೆಗೆ ದಯೆಮಾಡಿಸಿ ಈ ಕೊಲೆಯನ್ನು ಮಾಡತಕ್ಕ ಜನಗಳಿಗೆ ಬೋಧಿಸಿ ಗೋಹಿಂಸೆಯನ್ನು ನಿಲ್ಲಿಸಬೇಕಾಗಿಯೂ ಧರ್ಮಿಷ್ಠರಾದ ಜನರು ಈ ಗ್ರಾಮದಲ್ಲಿ ಒಂದು ಗೋರಕ್ಷಣಸಂಘವನ್ನು ಏರ್ಪಡಿಸಿ ಪುಣ್ಯಶಾಲಿಗಳಾಗಬೇಕಾಗಿಯೂ ಪ್ರಾರ್ಥನೆ. ಗೋಹಿತಚಿಂತಕ.

10 ನೆಯ ವೀರಶೈವಮಹಾಸಭೆಯ ಸ್ವಾಗತಸಂಘದ ಸೆಕ್ರೆಟರಿಯವರಲ್ಲಿ ವಿನಂತಿ.

ಈ ಸಾರಿ ತಮ್ಮಲ್ಲಿ ನಡೆಯುವ ಮಹಾಸಭೆಗೆ ಮ|| ರಾ|| ಹಳಕಟ್ಟಿಯವರನ್ನು ಅಧ್ಯಕ್ಷರನ್ನಾಗಿ ಆರಿಸಿದುದು ಸಂತೋಷದ ಸಂಗತಿಯೇ ಸರಿ. ಆದರೆ ಸಭೆಯು 1927 ನೆಯ ಇಸವಿ ಜನವರಿ 1 ಮತ್ತು 2 [illegible] ತಾರೀಖಿನಲ್ಲಿ ನೆರವೇರುವುದೆಂಬುದಾಗಿ ಪ್ರಕಟಿಸಿರುವುದನ್ನು ನೋಡಿ ಬಹು ವಿಷಾದವಾಯಿತು. ಏಕೆಂದರೆ ಮಹಾಸಭೆಯು ಸಮಾಜದ ಬಡವರಿಗೂ ಬಲ್ಲಿದರಿಗೂ ಅಧಿಕಾರಿಗೂ ಅನಧಿಕಾರಿಗೂ ಎಲ್ಲರಿಗೂ ಇಷ್ಟವಾಗಿರುವುದು. ಪ್ರತಿಯೊಬ್ಬನೂ ಮಹಾಸಭೆಗೆ ಬರಲು ಉತ್ಸಾಹಿತನಾಗಿರುವನು. ಅದರಲ್ಲೂ ಬಹುದಿವಸಗಳಿಂದ ಸಭೆಯು ಸೇರದೆ ಇದ್ದುದರಿಂದ ಈ ಸಾರಿಯ ಸಭೆಗಂತೂ ಬಹುಜನಗಳು ಬರುವುದರಲ್ಲಿ ಸಂಶಯವಿಲ್ಲ. ಹೀಗಿರುವಾಗ ಸರ್ಕಾರಿ ಅಧಿಕಾರಿಗಳು, ವಕೀಲರುಗಳು ಮೊದಲಾದವರಿಗೆ ಜನವರಿ 1ನೇ ತಾರೀಖಿಗೆ ರಜವು ಮುಗಿದು ತಮ್ಮ ತಮ್ಮ ಕೆಲಸದಮೇಲೆ ಹೋಗಬೇಕಾಗುತ್ತದೆ. ಇದನ್ನರಿತೇ ಇದುವರೆವಿಗೂ ಆದ ಮಹಾಸಭೆಗಳು ಎಲ್ಲರಿಗೂ ಅನುಕೂಲವಿರುವ ಡಿಸಂಬರು ತಿಂಗಳು ಅಂತ್ಯಭಾಗದಲ್ಲಿ ನಡೆಯುತ್ತಿದ್ದು ಎಲ್ಲರೂ ಸಭೆಗೆ ಬರಲು ಅನುಕೂಲವಾಗಿದ್ದಿತು. ಆದರೆ ಈ ಸಾರಿ ಮಾತ್ರ ಸಭೆಯು ಜನವರಿಯಲ್ಲಿ ಸೇರುವುದರಿಂದ ಸಮಾಜದ ಅನೇಕರು ಸಭೆಗೆ ಬರಲು ಅನುಕೂಲವಾಗುವುದಿಲ್ಲ. ಆದಕಾರಣ ಸ್ವಾಗತಸಂಘದವರು ಮೈಸೂರುಸ್ಟಾರ್ ಪತ್ರಿಕಾಕರ್ತರು ಈ ಮೊದಲೇ ಸೂಚಿಸಿರುವಂತೆ ಸಭೆಯ ಕಾಲವನ್ನು ಎಲ್ಲರಿಗೂ ಅನುವಾಗುವ ತಾರೀಖಿಗೆ ಬದಲಾಯಿಸುವರಾಗಿ ಪೂರ್ಣನಂಬಿರುವ,

ತಮ್ಮ
ಆನೆಕೊಂಡದ ಮುಪ್ಪಣ್ಣ, ದಾವಣಗೆರೆ.

ವೀರಶೈವತರುಣಸಂಘ, ಸಿದ್ದಾಪುರ.

ತುಮಕೂರಿನ ಕೀರ್ತನಕಾರರಾದ ವೇ|| ಬಿ. ಶಿವಮೂರ್ತಿಶಾಸ್ತ್ರಿಗಳು ಸಿದ್ದಾಪುರಕ್ಕೆ ಬಂದು ಇದುವರೆಗೆ ಹದಿನೈದು ಇಪ್ಪತ್ತು ಕೀರ್ತನೆಗಳನ್ನು ನಡಿಸಿದರು. ಈ ಪ್ರಾಂತ್ಯದಲ್ಲಿ ಬಹುಮಟ್ಟಿಗೆ ಮರಾಠೀ ಕೀರ್ತನಕಾರರ ಆರ್ಭಟವು ಹೆಚ್ಚಾಗಿರುವುದು. ಇಂತಹ ಸಮಯದಲ್ಲಿ ಸದರಿ ಕೀರ್ತನಕಾರರು ಈ ಊರಿಗೆ ದಯಮಾಡಿಸಿ ತಮ್ಮ ಅಮೋಘವಾದ ಕೀರ್ತನಭಾಷಣಗಳಿಂದ ಇಲ್ಲಿನ ಜನತೆಗೆ ಧರ್ಮಜಾಗೃತಿಯನ್ನೂ ಕರ್ಣಾಟದೇಶಬಾಷಾಭಿಮಾನವನ್ನೂ ಹೆಚ್ಚಿಸಿದುದು ಆತ್ಮಾನಂದದ ಸಂಗತಿಯಾಗಿರುತ್ತದೆ. ಕೀರ್ತನೆಯಲ್ಲಿ ಮರಾಠಿಯವರೇ ಮೇಲೆಂದು ಭಾವಿಸಿದ್ದ ಹಲವು ಜನರು ಇವರ ಕೀರ್ತನೆಯನ್ನು ಕೇಳಿದಮೇಲೆ ತಮ್ಮ ಅಭಿಪ್ರಾಯವನ್ನು ಬದಲಾಯಿಸಿ ಕನ್ನಡನಾಡು ಸಕಲಕಲಾವಿಲಾಸಮಂದಿರವೆಂಬುದನ್ನು ನೆರೆನಂಬಿದರು. ಸಿದ್ದಾಪುರದ ವೀರಶೈವತರುಣಸಂಘದವರು ಶ್ರೀ ಬಸವೇಶ್ವರದೇವಾಲಯದಲ್ಲಿ ತಾರೀಖು 22-11-26 ನೇ ಸೋಮವಾರದಿವಸ ಶ್ರೀ ಬಸವರಾಜೇಂದ್ರವಿಜಯ ಎಂಬ ಆಖ್ಯಾನವನ್ನು ಸದರಿ ಶಾಸ್ತ್ರಿಗಳವರಿಂದ ನಡಿಸಿ ಇವರು ಈ ಊರಿಗೆ ಬಂದುದರ ಸ್ಮಾರಕವಾಗಿ ಈ ತಾಲ್ಲೂಕಿನ ಮಾಮಲೆದಾರರಾದ ರಾವ್‌ಸಾಹೇಬ್ ಎಸ್. ಆರ್. ಕುಲಕರ್ಣಿ ಮಹಾಶಯರ ಮುಖೇನ ಸುವರ್ಣಪದಕವನ್ನು ಸಮರ್ಪಿಸಿದರು. ಕರ್ಣಾಟಕ ಕೀರ್ತನಕಾರರು ಮೇಲ್ಕಂಡ ಶಾಸ್ತ್ರಿಗಳಂತೆ ತಮ್ಮ ಕೀರ್ತನೋಪನ್ಯಾಸಗಳಲ್ಲಿ ಕರ್ಣಾಟಕ ಏಕೀಕರಣ, ಪತ್ರಿಕಾಪ್ರಚಾರ, ಗೋರಕ್ಷಣ, ಹಿಂದೂ ಸನಾತನ ಧರ್ಮ, ಪಂಚಮೋದ್ಧರಣ ಮೊದಲಾದ ಮಹತ್ವದ ವಿಷಯಗಳನ್ನು ಸೇರಿಸಿ ಹೇಳುವುದಾದರೆ ನಮ್ಮ ದೇಶಕ್ಕೆ ಬಹುಬೇಗನೆ ಮೇಲ್ಮೆಯಾಗುವುದರಲ್ಲಿ ಅನುಮಾನವಿಲ್ಲ. ವೀರಶೈವತರುಣಸಂಘದ, ಸೆಕ್ರೆಟರಿ.

ಶ್ರೀಮಲ್ಲಿಕಾಂಬಾಪುರಾಣ ಸಮಾಪ್ತಿ.

ಹಿರಿಯೂರು ತಾ|| ಗನ್ನಾಯ್ಕನಹಳ್ಳಿ ಗ್ರಾಮದ ವೀರಶೈವಮಹನೀಯರುಗಳು ತಾ|| 18-10-1926 ನೇ ಸೋಮವಾರದಿಂದ 10 ದಿವಸಗಳ ಪರಿಯಂತರ ಚೆನ್ನಕವಿ ರಚಿತವಾದ ಮಲ್ಲಿಕಾಂಬಾ ಚರಿತ್ರೆಯನ್ನು ಗಂಗಾಧರೇಶ್ವರನ ದೇವಾಲಯದಲ್ಲಿ ಪ್ರತಿ ಸಾಯಂಕಾಲ ಮ|| ರಾ|| ಪಟೇಲ್ ಜಿ. ಲಿಂಗಾರಡ್ಡಿಯವರಿಂದ ಓದಿಸಿ ಮತ್ತು ಮ|| ಗಳಾದ ಟಿ. ಪುರುದ ಬಸಯ್ಯನವರಿಂದಲೂ ವೈಶ್ಯರ ಗೋಪಾಲಯ್ಯನವರಿಂದಲೂ ಅರ್ಥಮಾಡಿಸಿ ಕೇಳಿ ಆನಂದಪರವಶರಾಗಿ ಕೊನೆಯದಿವಸ ಅಜುಬಾಜು ಗ್ರಾಮದವರನ್ನು ಕರೆಯಿಸಿಕೊಂಡು ಮಹಾಮಂಗಳಾರತಿಯಾದನಂತರ ಅತಿ ವೈಭವದೊಡನೆ ಉತ್ಸವ ನಡಸಿ ಪಾನಕ ಫಲಹಾರಗಳಿಂದ ತೃಪ್ತಿಪಡಿಸಿದುದು ಸ್ತೋತ್ರಾರ್ಹವಾಗಿದೆ. ಪಾನಕಫಲಹಾರಗಳನ್ನು ಕೊಡತಕ್ಕ ಕಾಲದಲ್ಲಿ ಮ|| ಗಳಾದ ರುದ್ರಯ್ಯಗಳ ಬಸಪ್ಪನವರೂ, ಚಿಕ್ಕಹನುಮಯ್ಯನವರೂ, ಪಟೇಲ್ ಚೆನ್ನಬಸಯ್ಯನವರೂ ಬಂದ ಜನಗಳನ್ನು ವಿಚಕ್ಷಣೆಯಿಂದ ನೋಡಿಕೊಳ್ಳುತ್ತಿದ್ದರೆಂದು ತಿಳಿಸಲು ಸಂತೋಷವಾಗುತ್ತದೆ. ಈ ಕಾರ್ಯಭಾಗಕ್ಕೆಲ್ಲಾ ಮುಖ್ಯಾಧ್ಯಕ್ಷರಾದ ತಿಪ್ಪಯ್ಯನವರ ಪ್ರೋತ್ಸಾಹಬಲವಿದ್ದುದು ಚೆನ್ನಾಗಿ ವ್ಯಕ್ತವಾಗುತ್ತಾ ಇತ್ತು. ಸದರಿ ತಿಪ್ಪಯ್ಯನವರು ಹಿರಿಯೂರು ವೀರಶೈವವಿದ್ಯಾವರ್ಧಕಸಂಘದ ವೈಸ್‌ಪ್ರೆಸಿಡೆಂಟರಾಗಿದ್ದೂ ಸಂಘವು ನಿದ್ರಾವಸ್ಥೆಯಲ್ಲಿರುವದು ತಾಲ್ಲೋಕು ವೀರಶೈವರ ದುರ್ದೈವವೆಂದು ಭಾವಿಸಬೇಕಾಗಿದೆ. ಗ್ರಾಮಕಾರ್ಯವನ್ನು ಜಯವಾಗಿ ಮಾಡುತ್ತಿರುವ ತಿಪ್ಪಯ್ಯನವರ ದೃಷ್ಟಿಯು ಸಂಘದಕಡೆಗೆ ತಿರುಗುವದಾದರೆ ಸಂಘವು ಊರ್ಜಿತಸ್ಥಿತಿಗೆ ಬರುವದರಲ್ಲಿ ಯಾವ ಸಂದೇಹವೂ ಇಲ್ಲ. ಅತ್ಯಂತ ಉತ್ಸಾಹದಿಂದ ಪುರಾಣ ಪೂರೈಸಿದಾರಭ್ಯ ಗ್ರಾಮದಲ್ಲಿ ಪ್ರತಿನಿತ್ಯವೂ ಭಜನೆಯೂ ಪ್ರತಿಸೋಮವಾರ ಗಂಗಾಧರೇಶ್ವರನ ಉತ್ಸವವೂ ಗ್ರಾಮದ ದೈವದವರ ಐಕ್ಯಮತ್ಯದಿಂದ ನಡೆಯುತ್ತಿರುವುದು ಶ್ಲಾಘನೀಯವಾಗಿದೆ. ಓರ್ವ ಪ್ರತ್ಯಕ್ಷದರ್ಶಿ.

ಓರ್ವ ಮುಸಲ್ಮಾನಗೃಹಸ್ಥರ ಗೋರಕ್ಷಣಾಭಿಮಾನ !

ದಾವಣಗೆರೆ ಗೋರಕ್ಷಣಸಂಘದ ಮಹಾಶಯರ ಸನ್ನಿಧಾನಂಗಳಿಗೆ.—

ಕಾರ್ಕಾರ್ಹಳ್ಳಿ ತಾಲ್ಲೂಕು ಸೋಮನಹಳ್ಳಿ ಗ್ರಾಮವಾಸಿಯಾದ ಬಿ. ಮಹಮುದ್ ಹಯಾತ್‌ಸಾಹೇಬನ ಸಲ್ಲಾಂ. ಮಹಾನುಭಾವರೇ, ನಾನೊಬ್ಬ ಸಾಧಾರಣ ವಿದ್ಯಾವಂತನಾಗಿದ್ದೇನೆ. ದೇವರು ನನಗೆ ಅರಬ್ಬಿಯಲ್ಲಿ ಖುರಾನ್ ಓದಲು ಉರ್ದು, ಕನ್ನಡ, ತೆನುಗು, ಅರವುಭಾಷೆಗಳನ್ನು ತಕ್ಕಮಟ್ಟಿಗೆ ಓದಲು ಬರೆಯಲು ಶಕ್ತಿಯನ್ನು ದಯಪಾಲಿಸಿರುತ್ತಾನೆ. ಗೋಮಾಯಿ ಖುರ್ಬಾನಿ ವಿಚಾರದಲ್ಲಿ ನನ್ನ ಮನಸ್ಸಿಗೆ ಬಹು ನೋವಾಗಿರುವದನ್ನು ಬರೆಯಲು ಸಾಧ್ಯವಿಲ್ಲ. ಈಗ ಮಹಾನುಭಾವರಾದ ತಾವುಗಳು ಗೋಮಾತೆಯ ಕೊಲೆಯನ್ನು ತಪ್ಪಿಸಲು ತನು, ಮನ ಧನಗಳನ್ನು ಅರ್ಪಿಸಿ ಕೆಲಸಮಾಡುತ್ತಿರುವುದನ್ನು ಕೇಳಿ ಸಂತೋಷಪಟ್ಟು ಪ್ರತಿದಿನವೂ ನಮಾಜಿನಂತರ “ಅಲ್ಲಾಹು, ನೀನು ದೇಶೋದ್ಧಾರಕ್ಕಾಗಿ ಕಳುಹಿಸಿದಂತಹ ಪರಮ ಉಪಕಾರಿಯಾದ ಗೋಮಾತೆಯನ್ನು ಕೊಲೆಯಿಂದ ತಪ್ಪಿಸು. ಗೋಮಾಯಿಗಾಗಿ ಕಷ್ಟಪಡುವ ಈ ಸಂಘದವರಿಗೆ ತಕ್ಕ ಸಹಾಯವನ್ನು ಒದಗಿಸು. ನಮ್ಮ ಗೌರ್ನಮೆಂಟಿಗೂ, ದಯಾರ್ದ್ರಹೃದಯರಾದ ಮಹಾಸ್ವಾಮಿಯವರಿಗೂ ಗೋಮಾತೆಯ ಕಷ್ಟನಿವಾರಣೆಮಾಡುವಂತೆ ಮನಸ್ಸನ್ನು ದಯಪಾಲಿಸು. ನಮ್ಮ ಹಿಂದೂ, ಮುಸ್ಲಿಂಭಾಯಿಗಳಲ್ಲಿ ಐಕ್ಯಮತ್ಯವನ್ನುಂಟುಮಾಡು. ಗೋಮಾಯಿಮೇಲೆ ನಮ್ಮ ಭಾಯಿಗಳಿಗಿರುವ ಹಟವನ್ನು ಬಿಡಿಸಿ ಕಾಪಾಡು” ಎಂಬುದಾಗಿ ಪ್ರಾರ್ಥಿಸುತ್ತೇನೆ. ಮಹನಿಯರೇ, ತಮ್ಮ ಸಂಘದಲ್ಲಿ ಗೋಮಾತೆಯ ರಕ್ಷಣಾರ್ಥವಾಗಿ ಪ್ರಚುರಪಡಿಸಿರುವ ಪುಸ್ತಕ, ಪ್ರಕಟನೆ ಮೊದಲಾದವುಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡುವಿರೆಂದು ನಂಬಿರುತ್ತೇನೆ. ಇಲ್ಲಿ ಪ್ರತಿ ಶುಕ್ರವಾರವೂ ಮಸೀದಿಯಲ್ಲಿ ಗೋಮಾತೆಯ ವಿಚಾರವಾಗಿ ಉಪನ್ಯಾಸಮಾಡುತ್ತಿದ್ದೇನೆ. ಯಾ ರಹಿಮಾನ್, ಗೋಮಾತೆಯ ಖುರ್ಬಾನಿಮಾಡದಂತೆ ಬುದ್ಧಿಯನ್ನು ಕರುಣಿಸು.

Copy. ಇತಿ, ಗೋರಕ್ಷಣಾಭಿಲಾಷಿ,
26-11-1926. ಬಿ. ಮಹಮ್ಮದ್ ಹಯಾತ್ ಸಾಹೇಬ್.

ಚಿಮ್ಮಲಗಿಯ ಶ್ರೀ ಸಿದ್ಧಲಿಂಗ ಶಿವಯೋಗಿವರ್ಯರ ಮಹೋತ್ಸವ.

ಚಿಮ್ಮಲಗಿಯು ಶ್ರೀ ಷಟ್ಸ್ಥಲಬ್ರಹ್ಮಿ ಪೂಜ್ಯರಾದ ಮಲ್ಲಿಕಾರ್ಜುನ ಶಿವಯೋಗಿಗಳ ಕೃಪಾಕಟಾಕ್ಷದಿಂದಲೂ ಮಹಾಪಾದಸ್ಪರ್ಶದಿಂದಲೂ ಕೃಷ್ಣಾನದಿಯ ಪ್ರವೇಶದಿಂದಲೂ ಪುಣ್ಯಕ್ಷೇತ್ರಸಮಾನವಾಗಿ ಸರ್ವಸಂಪತ್ತಿನಿಂದ ಒಡಗೂಡಿರುವದು ಸರ್ವಜನರ ಕೇಳಿಕೆಯಲ್ಲಿದೆ. ಈ ಪುಣ್ಯಮಯ ಪಟ್ಟಣದಲ್ಲಿ ಶೋಭಿಸುವ ಶ್ರೀ ಹಿರೇಮಠದಲ್ಲಿ ಪದ್ಧತಿಪ್ರಕಾರ ಕಳೆದ ಶ್ರಾವಣ ಶುದ್ಧ ೧ ರಿಂದಾ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳ ಗದ್ದಿಗೆಯ ರುದ್ರಾಭಿಷೇಕ ಶಿವಭಜನಾ ಪುರಾಣಶ್ರವಣಾದಿ ಕಾರ್ಯಗಳು ನಿರ್ವಿಘ್ನವಾಗಿ ಜರುಗಿದವು, ಮತ್ತು ಭಾದ್ರಪದ ಶುದ್ಧ ೮ ಪ್ರಾತಃಕಾಲ ಹತ್ತುಘಂಟೆಯಿಂದ ಸಾಯಂಕಾಲದ ಹತ್ತುಘಂಟೆಯವರೆಗೂ ಸ್ವಪರಸ್ಥಳಗಳಿಂದ ಬಂದಿದ್ದ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯಾಯಿತು ಮತ್ತು ಭಾದ್ರಪದ ಶುದ್ಧ ೯ ಗುರುವಾರ ಪ್ರಾತಃಕಾಲ ಆರುಘಂಟೆಗೆ ಮೊದಲೇ ಅನೇಕ ವೈಭವಗಳಿಂದ ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಸದರಿ ಮಹಾಸ್ವಾಮಿಗಳ ಭಾವಪಟವನ್ನು ಸ್ಥಾಪಿಸಿ ಮಠದಲ್ಲಿಯ ಜಂಗಮವಟುಗಳ ವೇದಘೋಷ ಇತರ ಯಾವತ್ತೂ ಜಾತಿಯ ಜನರ ಶಿವಭಜನಾ ಮತ್ತು ಸರ್ವಮಂಗಲ ವಾದ್ಯಗಳೊಡನೆ ಪಲ್ಲಕ್ಕಿಯು ಗುರ್ತಿಸಿದ ಸ್ಥಾನಪರ್ಯಂತರ ಸಾಗಿ ಪುನಃ ಸ್ವಸ್ಥಾನಕ್ಕೆ ಬಂದು ಮುಟ್ಟಿದಮೇಲೆ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಪುರಾಣದ ಮಹಾರ್ಥವನ್ನು ತಮ್ಮ ಸರಳವಾದ ಶೈಲಿಯಿಂದ ಪಾಮರರಿಗು ಸಹಾ ತಿಳಿಯುವಂತೆ ಬೋಧಿಸುತ್ತಿದ್ದರು. ಸ್ವಮತ ಪರಮತ ಪಂಡಿತರಿಗೆ ಮಾನ್ಯವಾಗುವಂತೆ ಶುದ್ಧವಾಕ್ಯಗಳನ್ನು ಉದಹರಿಸುತ್ತಾ ಎಲ್ಲ ಜಾತಿಯವರಿಗೂ ಗುರುತಿನವರಾದ ಶರೀಫ ಸಾಹೇಬ ಶ್ರೀ ಘನಮಠ ಶಿವಯೋಗಿ ಶ್ರೀ ಷಡಕ್ಷರದೇವರು ಮೊದಲಾದ ಸತ್ಪುರುಷರ ಸದ್ವಾಕ್ಯಗಳನ್ನು ತಮ್ಮ ಅಸ್ಖಲಿತವಾಣಿಯಿಂದ ಮನೋರಂಜನವಾಗುವಂತೆ ಪುರಾಣವನ್ನು ಪುಷ್ಟೀಕರಿಸುತ್ತಿದ್ದರು. ಸದ್ಯದಲ್ಲಿ ಎಲ್ಲಕಡೆಗೂ ಹಬ್ಬಿದ ಚಹಾಪಾನ, ತಂಬಾಕಸೇವನ ಮುಂತಾದ ಅಹಿತ ದುರ್ವ್ಯಸನಗಳನ್ನು ದೂರಮಾಡುವದಕ್ಕಾಗಿ ಪರಿಪರಿಹಾಸ್ಯಮಾತುಗಳಿಂದಲೇ ಹಿತವಾಗುವಂತೆ ಬೋಧಿಸುವ ಈ ಮಹನೀಯರ ವಾಕ್‌ಸರಣಿಯು ಮಾನನೀಯವಾಗಿರುವದು. ಇವರು ಪಂಡಿತರೂ ವಕ್ತೃತ್ವಶಾಲಿಗಳೂ ಆಗಿರುವರಲ್ಲದೆ ಗುರುಸ್ಥಾನಕ್ಕೆ ಒಪ್ಪತಕ್ಕ ಸದಾಚಾರಸಂಪನ್ನರೂ ಆಗಿದ್ದಾರೆ. ಶಿವಯೋಗಿಭಕ್ತ.

ಶ್ರೀ ಭೂಕೈಲಾಸವಾರಣಾಸೀಪುರಮಧ್ಯಸ್ಥವಿರಾಜಮಾನ
ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರು ಶಿವಲಿಂಗಶಿವಾಚಾರ್ಯ
ಮಹಾಸ್ವಾಮಿಗಳವರ ದಿವ್ಯಸನ್ನಿಧಿಯಿಂದ

ಸಮಸ್ತ ವೀರಶೈವಸಮುದಾಯಕ್ಕೆ ಶ್ರುತಪಡಿಸುವದೇನಂದರೆ—

ವಿದ್ಯಾಪೀಠವಾದ ಶ್ರೀ ಕಾಶೀಕ್ಷೇತ್ರಕ್ಕೆ ಬಂದು ಸಂಸ್ಕೃತವಿದ್ಯಾಭ್ಯಾಸಮಾಡತಕ್ಕ ವಿದ್ಯಾರ್ಥಿಗಳ ದೆಸೆಯಿಂದ ತಾ|| 14-9-1926 ನೇ ದಿವಸ ಪ್ರಸಿದ್ಧಪಡಿಸಿದ ನಿಯಮಗಳು.—(1) ಇಲ್ಲಿಗೆ ವಿದ್ಯಾಭ್ಯಾಸಮಾಡಲಿಕ್ಕೆ ಬರತಕ್ಕ ವಿದ್ಯಾರ್ಥಿಗಳು 16 ವರ್ಷ ವಯಸ್ಸಿನೊಳಗಿನವರಾಗಿದ್ದು ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕು. (2) ವಿದ್ಯಾರ್ಥಿಗಳು ಬರುವಕಾಲಕ್ಕೆ ತಮ್ಮ ನಡತೆಯ ಬಗ್ಗೆ ಆ ಊರ ಮಠದವರ ಮತ್ತು ಮುಖ್ಯಜನರ ಸಹಿಪತ್ರವನ್ನು ತೆಗೆದುಕೊಂಡುಬರಬೇಕು. (3) ವಿದ್ಯಾರ್ಥಿಗಳು ಪಂಚಕಾವ್ಯ ಪಂಚಚಂಪೂ ಪಂಚನಾಟಕಗಳನ್ನೂ ಕೆಲವು ವೈದಿಕ, ಜ್ಯೋತಿಷ, ಮತಗ್ರಂಥಗಳನ್ನೂ ಓದಿದವರಾಗಿದ್ದು ತಮ್ಮ ಅಭ್ಯಾಸದ ವಿಷಯಕ್ಕೆ ಪಾಠಶಾಲಾಧ್ಯಾಪಕರಕಡೆಯಿಂದ ಪ್ರಮಾಣಪತ್ರವನ್ನು ತೆಗೆದುಕೊಂಡುಬರಬೇಕು. (4) ಇಲ್ಲಿಗೆ ಬಂದಮೇಲೆ ನ್ಯಾಯ, ವ್ಯಾಕರಣ, ವೇದಾಂತ, ಸಾಂಖ್ಯ, ಯೋಗ, ಮೀಮಾಂಸಾ ಮುಂತಾದ ಶಾಸ್ತ್ರಗಳ ಪೈಕಿ ಯಾವದಾದರೊಂದು ಶಾಸ್ತ್ರವನ್ನು ಸಂಪೂರ್ಣವಾಗಿ ಅಭ್ಯಾಸಮಾಡುವವರೆಗೆ ಇದ್ದು ಗೌರ್ನಮೆಂಟ್ ಸಂಸ್ಕೃತಕಾಲೇಜುಗಳಲ್ಲಿ ಪ್ರತಿವರ್ಷ ಪರೀಕ್ಷಾಕೊಡುತ್ತ ಉತ್ತೀರ್ಣರಾಗಿ ಸರ್ಟಿಫಿಕೇಟನ್ನು ಪಡೆದುಕೊಂಡು ಹೋಗಬೇಕು. (5) ಇಲ್ಲಿಂದ ಸರ್ಟಿಫಿಕೇಟನ್ನು ಪಡೆದುಹೋದ ವಿದ್ವಾಂಸರು ತಮ್ಮ ತಮ್ಮ ದೇಶದಲ್ಲಿ ಪಾಠಶಾಲಾಧ್ಯಾಪಕರಾಗಿಯೇ ಆಗಲಿ ಯಾವದಾದರೊಂದು ಸ್ಥಾನಕ್ಕೆ ಅಧಿಕಾರಿಗಳಾಗಿಯೇ ಆಗಲಿ ನಿಯಮಿತರಾದಲ್ಲಿ ತಮಗೆ ಬರತಕ್ಕ ಆದಾಯದಲ್ಲಿ ಒಂದುನೂರು ರೂಪಾಯಿಗಳಿಗೆ ಐದುರೂಪಾಯಿಗಳಂತೆ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲಫಂಡಿಗೆ ಕೊಡುತ್ತ ಫಂಡಿನ ವೃದ್ಧಿಯನ್ನು ಮಾಡುತ್ತಿರಬೇಕು. (6) ಇಲ್ಲಿರತಕ್ಕ ವಿದ್ಯಾರ್ಥಿಗಳು ಆಚಾರವಂತರಾಗಿಯೂ, ಧರ್ಮನಿಷ್ಠೆಯುಳ್ಳವರಾಗಿಯೂ, ಭೇದಬುದ್ಧಿಯಿಲ್ಲದವರಾಗಿಯೂ ತಮ್ಮ ಅಭ್ಯಾಸದಲ್ಲಿ ನಿರತರಾಗಿಯೂ, ಅನ್ಯವ್ಯವಹಾರ ಬಿಟ್ಟವರಾಗಿಯೂ ಇರಬೇಕು.

ಈ ಮೇಲ್ಕಂಡ ನಿಯಮಗಳನ್ನು ಅನುಸರಿಸದೇ ಇದ್ದಂಥ ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳುವದಿಲ್ಲ. ಯಾಕೆಂದರೆ, ಕೆಲವು ವಿದ್ಯಾರ್ಥಿಗಳು ಏನೂ ಸಂಸ್ಕೃತಜ್ಞಾನವಿಲ್ಲದಲೇ ಶ್ರೀ ಕಾಶೀಕ್ಷೇತ್ರದಲ್ಲಿ ಓದಲಿಕ್ಕೆ ಬಂದು ತಮ್ಮ ವಯಸ್ಸನ್ನು ಮುಪ್ಪುಮಾಡಿ ವ್ಯರ್ಥ ಕಾಲಹರಣಮಾಡುತ್ತಿರುವರು. ಕೆಲವರು ದೇಶದಲ್ಲಿದ್ದರೆ ಯಾರೂ ದ್ರವ್ಯಸಹಾಯಮಾಡುವದಿಲ್ಲವೆಂದು ತಿಳಿದು ಕಾಶಿಗೆ ಓದುವ ನಿಮಿತ್ತವಾಗಿ ಬಂದು ಉತ್ತಮರೀತಿಯಿಂದ ಅಭ್ಯಾಸವನ್ನು ಮಾಡದೆ ಒಬ್ಬೊಬ್ಬ ವಿದ್ಯಾರ್ಥಿಯು ಬೇರೆ ಬೇರೆ ಗ್ರಾಮದವರ ಕಡೆಯಿಂದ ಪರಸ್ಪರ ತಿಳಿಯದಂತೆ ಹಣವನ್ನು ತರಿಸಿಕೊಂಡು ದ್ರವ್ಯಸಂಚಯವನ್ನು ಮಾಡುತ್ತ ಸ್ವಾರ್ಥಪರರಾಗಿ ಅನ್ಯವ್ಯವಹಾರಕ್ಕೋಸ್ಕರ ಉಪಯೋಗಿಸುತ್ತಿರುವರು. ಮತ್ತೆಕೆಲವರು ದುರ್ವರ್ತನದಲ್ಲಿ ನಿರತರಾಗಿ ಧನಾಭಿಲಾಷೆಯುಳ್ಳ ಪಂಡಿತರಿಗೆ ಧನವನ್ನು ಕೊಟ್ಟು ಬಹುಮಾನಪತ್ರಿಕೆಯನ್ನು ಪಡೆದುಕೊಂಡು ಅನ್ನದಾನ, ವಿದ್ಯಾದಾನ, ಧನದಾನಮಾಡುವವರ ಯಾವದೊಂದು ಉಪಕಾರವನ್ನೂ ಸ್ಮರಿಸದೆ ವಿದ್ಯಾ ಧರ್ಮೋನ್ನತಿಗೆ ವ್ಯಾಘಾತಕವಾಗಿ ಸ್ವೇಚ್ಛಾಚಾರದಿಂದ ಸಂಚರಿಸುತ್ತಿರುವರು. ಇಂಥವರನ್ನು ನೋಡಿ ನಮ್ಮ ವೀರಶೈವಮತೀಯರೆಲ್ಲರೂ ಈ ಸಂಸ್ಕೃತವಿದ್ಯೆಯಿಂದ ಏನೂ ಪ್ರಯೋಜನವಿಲ್ಲವೆಂದೂ, ಈ ಅಧ್ಯಯನವನ್ನು ಮಾಡಿದವರಿಗೆ ಲೌಕಿಕಜ್ಞಾನವಿರುವದಿಲ್ಲವೆಂದೂ, ಇವರಿಂದ ಸಮಾಜದವರಿಗೆ ಯಾವದಾದರೊಂದು ಪ್ರತ್ಯುಪಕಾರವಾಗುವದಿಲ್ಲವೆಂದೂ, ತಮ್ಮ ತಮ್ಮ ಉದರಪೋಷಣೆ ಮಾಡಿಕೊಳ್ಳಲಿಕ್ಕೆ ಅಸಮರ್ಥರಾಗಿ ಭಿಕ್ಷಾವೃತ್ತಿಯಿಂದ ತಿರುಗುತ್ತಿರುವರೆಂದೂ ನಿರ್ಧರಿಸಿ ಕೆಲ ಕೆಲವು ಭಾಗದಲ್ಲಿದ್ದ ಸಂಸ್ಕೃತಪಾಠಶಾಲೆಗಳನ್ನು ತೆಗೆದು ರಾಜಕೀಯ ವಿದ್ಯಾಪ್ರಸಾರಮಾಡುವದರಲ್ಲಿ ಪ್ರೋತ್ಸಾಹವುಳ್ಳವರಾಗಿ ಪ್ರತ್ಯುಪಕಾರವನ್ನು ಹೊಂದುತ್ತಲಿರುವರು. ಅವರಂತೆ ಇವರಾದರೂ ಆಯಾ ಶಾಸ್ತ್ರಗಳಲ್ಲಿ ಉತ್ತಮ ಪಾಂಡಿತ್ಯವನ್ನು ಸಂಪಾದನಮಾಡಿಕೊಂಡು ಮಹೋನ್ನತಿಯನ್ನು ಮಾಡುವರೆಂದೂ ಅನ್ನ-ವಿದ್ಯಾ-ಧನ ದಾನಮಾಡಿದವರಿಗೆ ಪ್ರತ್ಯುಪಕಾರಗಳನ್ನು ಮಾಡುವರೆಂದೂ ತಿಳಿದು ಈ ನಿಯಮಗಳನ್ನು ಪ್ರಸಿದ್ಧಮಾಡಿರುತ್ತೇವೆ. ಮತ್ತು ಇಲ್ಲಿ ಸಂಸ್ಕೃತವಿದ್ಯಾಭ್ಯಾಸಮಾಡಬಿಚ್ಛಿಸುವ ವಿದ್ಯಾರ್ಥಿಗಳಿಗೆ ಧನಸಹಾಯಮಾಡತಕ್ಕಂಥ ಜನರು ಆ ವಿದ್ಯಾರ್ಥಿಗಳ ಅಭ್ಯಾಸ ಮುಂತಾದವುಗಳ ಬಗ್ಗೆ ಶ್ರೀ ಸನ್ನಿಧಿಗೆ ತಾವು ಆಯಾ ವಿದ್ಯಾರ್ಥಿಗಳಿಗೆ [illegible]

ತಿಮುಕೊಳ್ಳುತ್ತಿರಬೇಕು. ಈ ವಿಷಯಕ್ಕಾಗಿಯೇ ಈ ಪತ್ರಿಕೆಯು ಪ್ರಕಟಿಸಲ್ಪಡುತ್ತಿದೆ. ಪ್ರಕಾಶಕ.—ಸಂಸ್ಥಾನ ಜಂಗಮವಾಡೀಮಠದ ಏಜಂಟ್, ಬನಾರಸ್ ಸಿಟಿ.

ಹಿಂದುಸ್ಥಾನದ ಬೇರೆಬೇರೆ ರಾಜ್ಯಗಳಲ್ಲಿ ಗೋವುಗಳನ್ನು ಕೊಂದವರಿಗೆ ಆಗುವ ಶಿಕ್ಷೆಯು.

ಹೈದರಾಬಾದು—ಬಕರೀದ ಮುಂತಾದ ಯಾವ ಕಾಲದಲ್ಲಿಯೂ ಗೋವುಗಳನ್ನು ಕೊಲ್ಲಕೂಡದು.

ಬರೋಡ—ಬಕರೀದ ಮುಂತಾದ ಯಾವ ಕಾಲದಲ್ಲಿಯೂ ಹಸು, ಎತ್ತು ಕರುಗಳನ್ನು ಕೊಲ್ಲಕೂಡದು. ಕೊಂದವರು ಪಿ. ಕೋ. ಮೇರೆಗೆ ಶಿಕ್ಷೆಗೆ ಗುರಿಯಾಗುವರು.

ಕಾಶ್ಮೀರ—ಯಾವ ಮನುಷ್ಯನೇ ಆಗಲಿ ಗೋವುಗಳನ್ನು ಕೊಲ್ಲಲು ಪ್ರಯತ್ನಿಸಿದರೇ ಆಗಲಿ, ಕೊಂದರೇ ಆಗಲಿ ೧೯ ವರ್ಷದವರೆಗೆ ಸಜವನ್ನಾಗಲೀ ಜುಲ್ಮಾನೆಯನ್ನಾಗಲೀ ಇವೆರಡನ್ನೂ ಕೂಡಿಯೇ ಆಗಲಿ ಅನುಭವಿಸಬೇಕಾಗುವುದು.

ರಾಜಪುತ್ರಸಂಸ್ಥಾನಗಳು—ಗೋವುಗಳನ್ನು ಖಂಡಿತವಾಗಿಯೂ ಕೊಲ್ಲಕೂಡದೆಂದು ಅಪ್ಪಣೆಮಾಡಲಾಗಿದೆ. ಹಾಗೆ ಕೊಂದವರು ತುಂಟತನವನ್ನು ಮಾಡಿದ ರೀತಿ ಭಾವಿಸಲ್ಪಟ್ಟು ಶಿಕ್ಷಿಸಲ್ಪಡುವರು.

ಬಿಕನೀರ—ಇದು ಹಿಂದುರಾಜ್ಯವಿರುವದರಿಂದ ಗೋಹತ್ಯವನ್ನು ಮಾಡಿದವರು ಮಹಾಪಾಪವನ್ನು ಮಾಡಿದಹಾಗಾಗುತ್ತದೆಂದು ಪರಿಗಣಿಸಲ್ಪಡುತ್ತಾರಲ್ಲದೆ ಹಾಗೆ ಮಾಡಿದವರಿಗೆ ೧೦ ವರ್ಷ ಸಜವನ್ನಾಗಲೀ ೧೦ ಸಾವಿರ ರೂಪಾಯಿ ಜುಲ್ಮಾನೆಯನ್ನಾಗಲೀ ವಿಧಿಸಲಾಗುತ್ತದೆ.

ಡುಂಗಪುರ—ಯಾರೇ ಆಗಲೀ ಹಸು, ಎತ್ತು ಮತ್ತು ಕರುಗಳನ್ನು ಕೊಂದರೆ ೧೦ ವರ್ಷ ಕಠಿಣಕಾರಾಗೃಹವಾಸಶಿಕ್ಷೆಯನ್ನಾಗಲೀ ಈ ಶಿಕ್ಷೆಯನ್ನು ಜುಲ್ಮಾನೆಯೊಡನೆಯೇ ಆಗಲಿ ಅನುಭವಿಸಬೇಕಾಗುತ್ತದೆ.

ಬಾನಸಾವರ—ಗೋವುಗಳನ್ನು ಕೊಂದವರು ೧೦ ವರ್ಷ ಕಠಿಣಕಾರಾಗೃಹವಾಸ ಶಿಕ್ಷೆಯನ್ನೂ, ಜುಲ್ಮಾನೆಯನ್ನೂ ಅನುಭವಿಸಬೇಕಾಗುವದು. ಅಲ್ಲದೆ ಇತರ ಭಾಗದಿಂದ ಸಂಸ್ಥಾನದೊಳಗೆ ಗೋಮಾಂಸವನ್ನು ತಂದರೇ ಆಗಲಿ, ತರಲು ಪ್ರಯತ್ನಿಸಿದರೇ ಆಗಲಿ ೬ ತಿಂಗಳ ಸಜವನ್ನು ಜುಲ್ಮಾನೆಯೊಂದಿಗೆ ಅನುಭವಿಸಬೇಕಾಗುವದು.

ರಾಜಕೋಟ—ಈ ಸಂಸ್ಥಾನದ ಸರಹದ್ದಿನಲ್ಲಿ ಯಾರೂ ಗೋವುಗಳನ್ನು ಕೊಲ್ಲಕೂಡದು ಮತ್ತು ಕಟುಕರಿಗೆ ಮಾರಲೂ ಕೂಡದು ಹಾಗೆ ಮಾಡಿದರೆ ೬ ತಿಂಗಳ ಕಠಿಣಶಿಕ್ಷೆಗೂ, ೧೦ ರೂ. ಅರ್ಥದಂಡಕ್ಕೂ ಗುರಿಯಾಗಬೇಕು. ಯಾರಾದರು ಕೊಲ್ಲುತ್ತಿದ್ದುದನ್ನಾಗಲಿ ಕಟುಕರಿಗೆ ಮಾರುತ್ತಿದ್ದುದನ್ನಾಗಲಿ ತೋರಿಸಿದವರಿಗೆ 5 ರೂ. ಬಹುಮಾನ ಕೊಡಲ್ಪಡುವುದು.

ಪನ್ನಸಂಸ್ಥಾನ—ಗೋವುಗಳನ್ನು ಕೊಂದರೇ ಆಗಲಿ, ಕೊಲ್ಲುವ ಉದ್ದೇಶದಿಂದ ಇತರ ರಾಜ್ಯಗಳಿಗೆ ಕಳುಹಿಸಿದರೇ ಆಗಲಿ, 6 ತಿಂಗಳು ಸಜ ಅಥವಾ ೫೦೦ ರೂ. ದಂಡ ತಪ್ಪಿದಲ್ಲಿ ಎರಡನ್ನೂ ಅನುಭವಿಸಬೇಕಾಗುವುದು.

ರೀವಾಸಂಸ್ಥಾನ—ಹಸು, ಎತ್ತು ಮತ್ತು ಕರು ಮುಂತಾದವುಗಳನ್ನು ಕೊಲ್ಲಕೂಡದು, ಅಲ್ಲದೆ ಇವುಗಳನ್ನು ಸಂಸ್ಥಾನದ ಹೊರಗೆ ಮಾರಲೂ ಕೂಡದು. ಹಾಗೆ ಮಾಡಿದರೆ ೫ ವರ್ಷ ಸಜವನ್ನು ಮತ್ತು ಛಡಿಹೊಡೆತವನ್ನು ಅನುಭವಿಸಬೇಕಾಗುತ್ತದೆ.

ನವನಗರ—ಗೋವುಗಳನ್ನು ಕೊಂದವರು ೩ ವರ್ಷ ಸಜವನ್ನಾಗಲಿ ೧೦೦೦ ರೂಪಾಯಿ ಜುಲ್ಮಾನೆಯನ್ನಾಗಲಿ ಎರಡನ್ನೂ ಕೂಡಿಯೇ ಆಗಲಿ ಅನುಭವಿಸಬೇಕಾಗುವುದು.

ವಾನ್‌ಕನೇರ—ಯಾರೇ ಆಗಲಿ ಕಟುಕರಿಗೆ ಹಸುಗಳನ್ನು ಮಾರಿದರೆ ಅಥವಾ ಕೊಂದರೆ ೬ ತಿಂಗಳು ಕಠಿಣಕಾರಾಗೃಹವಾಸ ಶಿಕ್ಷೆಯನ್ನಾಗಲಿ, ೨೦೦ ರೂ. ಜುಲ್ಮಾನೆಯನ್ನಾಗಲಿ ಎರಡನ್ನೂ ಕೂಡಿಯೇ ಆಗಲಿ ಅನುಭವಿಸಬೇಕಾಗುವುದು. ಅಲ್ಲದೆ ಕಟುಕರಿಗೆ ಹಸುಗಳನ್ನು ಮಾರಿದ್ದಾಗಲಿ, ಕೊಂದದ್ದಾಗಲೀ ತೋರಿಸಿದವರಿಗೆ 5 ರೂ. ಬಹುಮಾನ ಕೊಡಲಾಗುತ್ತದೆ.

ಮಾಂಡಲೆ (ಬರ್ಮಾ) ಯ ಹಿಸ್ಪಸಂಸ್ಥಾನ—ಯಾರೂ ಯಾವ ಕಾರಣದಿಂದಲೂ ಗೋವುಗಳನ್ನು ಕೊಲ್ಲಕೂಡದು. ಇಷ್ಟೇ ಅಲ್ಲದೆ ವರ್ಷದಲ್ಲಿ ೪ ದಿವಸ ಯಾವ ಪ್ರಾಣಿಗಳನ್ನು ಸಹ ಕೊಲ್ಲಕೂಡದು. ಹಾಗೆ ಕೊಂದರೆ ಕ್ರೂರವಾದ ಶಿಕ್ಷೆ ಮಾಡಲಾಗುವುದು.

ಕೊಲ್ಹಾಪುರ—ಯಾರೇ ಆಗಲಿ ಗೋವುಗಳನ್ನು ಕೊಂದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಸೊಂಡೂರು—ಈ ಸಂಸ್ಥಾನದಲ್ಲಿ ಯಾರೂ ಗೋವುಗಳನ್ನು ವಧ ಮಾಡಕೂಡದು, ಮತ್ತು ಸಂಸ್ಥಾನದಿಂದ ಗೋವುಗಳನ್ನು ಹೊರಗೆ ಕಳುಹಿಸಕೂಡದು, ಹಾಗೆ ಮಾಡಿದಲ್ಲಿ ಶಿಕ್ಷೆಗೆ ಗುರಿಯಾಗುವರು.

ಹಿಂದೂದೇಶದ ಅನೇಕ ರಾಜ್ಯಗಳಲ್ಲಿ ಈರೀತಿಯಾಗಿ ಗೋವಧ ಪ್ರತಿಬಂಧವನ್ನು ಮಾಡಿರುವಾಗ ನಮ್ಮ ಮೈಸೂರು ರಾಜ್ಯವು ಏನುಮಾಡಿದೆ ಎಂಬುದಾಗಿ ಎಲ್ಲರೂ ಯೋಚಿಸುತ್ತಿರುವರು. ನಮ್ಮ ಘನಸರ್ಕಾರದವರಾದರೂ ಗೋವಧನಿರೋಧವನ್ನು ಮಾಡಲು ಒಂದು ಕಮಿಟಿಯನ್ನು ನಿಯಮಿಸಿರುವರು. ಸದ್ಯದಲ್ಲಿಯೇ ಕಮಿಟಿಯವರಾದರೂ ಈ ವಿಷಯವಾದ ಕಾನೂನನ್ನು ಮಾಡತಕ್ಕವರಾಗಿರುವರು. ಮುಸಲ್ಮಾನ್ ಮತ್ತು ಕ್ರೈಸ್ತಬಾಂಧವರೇ ದೇಶಾಭ್ಯುದಯದ ಮೇಲೆಯೂ, ನಿಮ್ಮ ಸಹೋದರರಾದ ಹಿಂದುಗಳ ಮೇಲೆಯೂ ಅಭಿಮಾನವಿಟ್ಟು ಗೋವುಗಳ ರಕ್ಷಣಕಾರ್ಯದಲ್ಲಿ ಸಹಾನುಭೂತಿಯ ತೋರಿಸಿ ಹಿಂದುಗಳ ಪ್ರೀತಿಗೂ, ಆಚಂದ್ರಾರ್ಕವಾದ ಕೀರ್ತಿಗೂ ಭಾಗಿಗಳಾಗಬೇಕಾಗಿ ಅಪೇಕ್ಷಿಸುವ,

ಸೆಕ್ರೆಟರಿ,
ಪ್ರಾಣಿದಯಾಜ್ಞಾನಪ್ರಸಾರಕಸಂಘ, ದಾವಣಗೆರೆ.

ಹುಬ್ಬಳ್ಳಿ ೧೦ ನೇ ಅಖಿಲಭಾರತವೀರಶೈವಮಹಾಸಭೆ.

ಮಹಾಸಭಾ ಸ್ವಾಗತಮಂಡಳದವರು ಕಳೆದ ತಾ|| 24-11-1926 ರಲ್ಲಿ ಸಭೆಸೇರಿದ್ದು ಈ ಕೆಳಗೆ ಕಂಡ ಠರಾವುಗಳನ್ನು ಮಾಡಿರುತ್ತಾರೆ.

1 ನೇ ಠರಾವು—ಹುಬ್ಬಳ್ಳಿ 10 ನೇ ಅ|| ಭಾ|| ವೀ|| ಮಹಾಸಭೆಗೆ ಬಿಜಾಪುರದ ರಾವಸಾಹೇಬ ಫಕೀರಪ್ಪನವರು ಗುರುಬಸಪ್ಪನವರು ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ., ಇವರೇ ಅಧ್ಯಕ್ಷರಾಗಬೇಕೆಂದು ಬಹುಶಃ ಎಲ್ಲ ಪ್ರಾಂತಗಳ ವೀರಶೈವರು ವರ್ತಮಾನಪತ್ರ ಮೊದಲಾದವುಗಳ ಮೂಲಕ ತಿಳಿಸಿದ್ದನ್ನು ಈ ಸ್ವಾಗತಮಂಡಳದವರು ಸರ್ವಾನುಮತದಿಂದ ಅಂಗೀಕರಿಸುತ್ತಾರೆ.

2 ನೇ ಠರಾವು—ಹುಬ್ಬಳ್ಳಿ 10 ನೇ ಅ|| ಭಾ|| ವೀ|| ಮಹಾಸಭೆಯು ಇದೇ ಬರುವ ಜನವರಿ ತಾರೀಖು 1 ಮತ್ತು 2 (ಶನಿವಾರ ಮತ್ತು ಆದಿತ್ಯವಾರ) ಅವಶ್ಯಬಿದ್ದರೆ ತಾರೀಖು 3 (ಸೋಮವಾರ) ಶ್ರೀ ಮೂರುಸಾವಿರಮಠದ ಪ್ರೆಸ್ಸಿನ ಪಟಾಂಗಣದಲ್ಲಿ ಕೂಡಿಸತಕ್ಕದ್ದೆಂದು ಈ ಸ್ವಾಗತಮಂಡಳದವರು ನಿರ್ಧರಿಸುತ್ತಾರೆ.

3 ನೇ ಠರಾವು—ಮಹಾಸಭೆಯಲ್ಲಿ ಇಡತಕ್ಕ ವಿಷಯಗಳು ಮುಖ್ಯವಾಗಿ ಕೆಳಗೆ ಕಾಣಿಸಿದವುಗಳು ಇರತಕ್ಕದ್ದೆಂದು ಈ ಸ್ವಾಗತಮಂಡಳದವರು ನಿರ್ಧರಿಸುತ್ತಾರೆ.—(1) ಮಹಾಸಭೆಯ ಘಟನೆಯು. (2) ಕರ್ನಾಟಕದ ಏಕೀಕರಣ. (3) ಕರ್ನಾಟಕಕ್ಕೆ ವಿಶ್ವವಿದ್ಯಾಲಯವು. (4) ವೀರಶೈವರ ಸ್ವತಂತ್ರವಾದ ಕಾಲೇಜ, ಹೈಸ್ಕೂಲುಗಳು ವ ಸಂಸ್ಕೃತಕಾಲೇಜು ಮತ್ತು ಪಾಠಶಾಲೆಗಳು. (5) (ಅ) ಒಕ್ಕಲತನ, ಕೈಗಾರಿಕೆ, ವ್ಯಾಪಾರ. (ಬ) ಕರ್ಣಾಟಕಕ್ಕೆ ಸ್ವತಂತ್ರ ಔದ್ಯೋಗಿಕ ಆರ್ಥಿಕ(ವ್ಯಾಪಾರಿ) ಕಾಲೇಜ ಮತ್ತು ಶಾಲೆಗಳು. (6) ಸ್ತ್ರೀ ಶಿಕ್ಷಣ. (7) ವೀರಶೈವರ ಇತಿಹಾಸವನ್ನು ಪ್ರಸಿದ್ಧಿಸುವದು. (8) ಗೋರಕ್ಷಣೆ. (9) (ಅ) ವೀರಶೈವರ ಮೇಲೆ ಪರಧರ್ಮದವರ ಆಘಾತ ತಡೆಯುವಿಕೆ. (ಬ) ಶುದ್ಧಿ ಚಳವಳಿ. (10) ಖಾದೀ ಪ್ರಸಾರ. (11) ಬ್ರಿಟಿಷ, ಮೈಸೂರ, ನಿಜಾಮ ಮೊದಲಾದ ಸಂಸ್ಥಾನಗಳ ಸರಕಾರೀ ನೌಕರಿಗಳಲ್ಲಿ ವೀರಶೈವರ (ಜನಸಂಖ್ಯಾಪ್ರಮಾಣದ ಮೇಲಿಂದ) ಸರಿಯಾದ ಸೇರ್ಪಡೆ. (12) ಮಹಾಸಭೆಯೂ ಅದರ ನಿರ್ಣಯಗಳೂ.

4 ನೇ ಠರಾವು—ಶ್ರೀಯುತ ಎಸ್. ಎಸ್. ಬಸವನಾಳ, ಎಂ.ಎ., ಶ್ರೀಯುತ ಎಚ್. ಎಫ್. ಕಟ್ಟೀಮನಿ, ಬಿ.ಎ., ಶ್ರೀಯುತ ಮಂಜಪ್ಪನವರು ಹರ್ಡೇಕರ, ಶ್ರೀಯುತ ಚಿಕ್ಕೀರಯ್ಯನವರು ಚಿಕ್ಕೀರಯ್ಯನವರ, ಶ್ರೀಯುತ ಎಸ್. ಎಸ್. ಮಳೀಮಠ, ಬಿ.ಎ., ಎಲ್‌ಎಲ್.ಬಿ., ವಕೀಲ, ಶ್ರೀಯುತ ಜಿ. ಎಂ. ಮಿರ್ಜಿ, ಬಿ.ಎ., ಎಲ್‌ಎಲ್.ಬಿ., ವಕೀಲ ಮತ್ತು ಶ್ರೀಯುತ ಚಂದ್ರಶೇಖರಪ್ಪ, ಸಿ. ಕೆಂಪಣ್ಣನವರ ಈ ಏಳುಜನರು ಕೂಡಿ ತಯಾರಿಸಿ ಕೊಟ್ಟ ಅಖಿಲಭಾರತವೀರಶೈವಮಹಾಸಭೆಯ ಘಟನೆ (Draft Constitution) ಯನ್ನು ಸ್ವಾಗತಮಂಡಳದವರ ವತಿಯಿಂದ ಪ್ರಸಿದ್ಧಿಸತಕ್ಕದ್ದೆಂದು ಈ ಸ್ವಾಗತಸಂಘವು ನಿರ್ಧರಿಸುತ್ತದೆ.

5 ನೇ ಠರಾವು—ಪುನರ್ವಿಚಾರಮಾಡಿ ಮಹಾಸಭೆಯ ಪ್ರತಿನಿಧಿಗಳ ಫೀ ಐದುರೂಪಾಯಿ ಇರತಕ್ಕದ್ದೆಂದೂ, ಸದರೀಯವರಿಗು ಮತ್ತು ಸ್ಥಳಿಕರಲ್ಲದ ಸ್ವಾಗತಸಂಘದ ಸದಸ್ಯರಿಗು ಊಟದ ವ್ಯವಸ್ಥೆಯಾಗಬೇಕೆಂದು ಈ ಸ್ವಾಗತಸಂಘವು ನಿರ್ಧರಿಸುತ್ತದೆ.

6 ನೇ ಠರಾವು—ಮಹಾಸಭೆಯ ಸ್ವಾಗತಸಂಘದ ಸದಸ್ಯರಿಗೆ ಮತ್ತು ಪ್ರತಿನಿಧಿಗಳಿಗೆ ಮಾತ್ರ ಮಹಾಸಭೆಯಲ್ಲಿ ಭಾಗ ತೆಗೆದುಕೊಳ್ಳಲಿಕ್ಕೆ ಮತ್ತು ಮತ ಕೊಡಲಿಕ್ಕೆ ಅಧಿಕಾರವಿರತಕ್ಕದ್ದೆಂದು ಈ ಸ್ವಾಗತಸಂಘವು ನಿರ್ಧರಿಸುತ್ತದೆ.

7 ನೇ ಠರಾವು—ಮಹಾಸಭೆಗೆ ಹಿಂದುಸ್ಥಾನದ ಎಲ್ಲ ಕಡೆಯಿಂದಲೂ ಜಮಿನದಾರರು ಮತ್ತು ರೈತಜನರು ಹೆಚ್ಚಾಗಿ ಬರುವ ಸಂಭವವಿರುವದರಿಂದ ಮಹಾಸಭೆಯ ಕಾಲಕ್ಕೆ ಒಂದು ಶೇತಕಿ ಪ್ರದರ್ಶನವನ್ನು ನಡಿಸುವ ವ್ಯವಸ್ಥೆ ಮಾಡಿಸುವಬಗ್ಗೆ ಮುಂಬಯಿ ಸರಕಾರದ ಶೇತಕಿ ಖಾತೆಯ ಡೈರೆಕ್ಟರರಿಗೆ ವಿನಂತಿಮಾಡಿಕೊಳ್ಳತಕ್ಕದ್ದೆಂದು ಈ ಸ್ವಾಗತಸಂಘವು ನಿರ್ಧರಿಸುತ್ತದೆ.

ಜಿ. ಎಂ. ಮಿರ್ಜಿ, ಆನರೇರಿ ಸೆಕ್ರೆಟರಿ,
10 ನೇ ಅ|| ಭಾ|| ವೀ|| ಸಭಾ, ಹುಬ್ಬಳ್ಳಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 19 ನೆಯ ಪ್ರಕರಣ.

ನೆಟಾಲಿನ ಭಾರತೀಯರ ಕಾಂಗ್ರೆಸ್ಸು.

ವಕೀಲವೃತ್ತಿಯು ನನಗೆ ಅಪ್ರಧಾನವಾಗಿಯೇ ಇದ್ದಿತು. ನಾನು ಭಾರತೀಯರ ಹಕ್ಕಿನ ವಿಚಾರದಲ್ಲಿ ಏಕಾಗ್ರತೆಯಿಂದ ಕೆಲಸಮಾಡದಿದ್ದ ವಿನಾ ನಾನು ನೆಟಾಲಿನಲ್ಲಿದ್ದುದು ಸಾರ್ಥಕವಾಗುತ್ತಿರಲಿಲ್ಲ. ಅಧಿವೇಶನದ ಮಂತ್ರಿಗೆ ಮಹಜರನ್ನು ಕಳುಹಿದ ಮಾತ್ರಕ್ಕೆ ಸಾಲದು. ಅದನ್ನು ಕುರಿತು ಯಾವಾಗಲೂ ಆಂದೋಳನವನ್ನು ಮಾಡದಿದ್ದಲ್ಲಿ ಆ ಮಂತ್ರಿಗೆ ಚುರುಕು ತಟ್ಟದು. ಅದಕ್ಕಾಗಿ ಒಂದು ಶಾಶ್ವತಸಂಸ್ಥೆಯನ್ನೇರ್ಪಡಿಸುವುದು ಅವಶ್ಯವೆಂದು ನಿರ್ಧರಿಸಿದೆನು. ಅಬ್ದುಲ್ಲಾಸೇಟರು ಮೊದಲಾದ ಸ್ನೇಹಿತರಿಗೆ ನಾನು ತಿಳುಹಲು ಅವರೆಲ್ಲರೂ ಆಲೋಚಿಸಿ ಶಾಶ್ವತಸಂಸ್ಥೆಯನ್ನೇರ್ಪಡಿಸಬೇಕೆಂದು ನಿರ್ಧರಿಸಿದರು. ಅದಕ್ಕೇನು ಹೆಸರಿಡಲ್ಪಡಬೇಕೆಂಬುದು ನನಗೆ ಸ್ಫುರಿಸಲಿಲ್ಲ. ಕಾಂಗ್ರೆಸ್ ಅಂದರೆ ಕನ್ಸರ್ವೇಟಿವುಗಳಿಗೆ ಕಂಟಕಪ್ರಾಯವಾಗಿದ್ದಿತಾದರೂ ಭಾರತದೇಶಕ್ಕೆ ಕಾಂಗ್ರೆಸ್ಸು ಪ್ರಾಣಾಧಾರವು. ಅದುಕಾರಣ ಕಾಂಗ್ರೆಸಿನಲ್ಲಿ ನೆಟಾಲಿನಲ್ಲಿಯ ಭಾರತೀಯರಿಗು ಕೂಡ ಆದರಣೆಯನ್ನು ಹುಟ್ಟಿಸುವುದು ಅವಶ್ಯವಾಗಿದ್ದಿತು. ಈ ವಿಷಯದಲ್ಲಿ ಸಂಶಯಪಡುವುದು ಅಂಜುಪುರಕತನವೇ ಆಗುವುದು. ಆದುದರಿಂದ ಈ ವಿಷಯವೆಲ್ಲವನ್ನೂ ನನ್ನ ಸ್ನೇಹಿತನಿಗೆ ತಿಳಿಸಿ ಆ ಸಂಸ್ಥೆಗೆ "ನೆಟಾಲು ಇಂಡಿಯನ್ ಕಾಂಗ್ರೆಸ್ಸು" ಎಂದೇ ಹೆಸರಿಡಬೇಕೆಂದು ನಾನು ಸೂಚಿಸಿದೆನು. ಅವರೆಲ್ಲರೂ ಅಂಗೀಕರಿಸಿದರು. ಮೇ 22 ನೆಯ ತಾರೀಖಿನಲ್ಲಿ ಇಂಡಿಯನ್ ಕಾಂಗ್ರೆಸ್ಸು ಈ ಪ್ರಕಾರವಾಗಿ ಪ್ರಾರಂಭವಾಯಿತು. ಆ ದಿವಸ ದಾದಾ ಅಬ್ದುಲ್ಲಾಸೇಟರ ಮನೆಯ ವಿಶಾಲವಾದ ಹಜಾರವು ಸಭಿಕರಿಂದ ತುಂಬಿಹೋಗಿದ್ದಿತು. ಅಲ್ಲೆಲ್ಲರೂ ವಿಶೇಷೋತ್ಸಾಹಶೀಲರಾಗಿದ್ದರು. ನಿಬಂಧನೆಗಳಲ್ಲಿ ಕಾಠಿಣ್ಯವೇನೂ ಇರಲಿಲ್ಲವು. ಮಾಸಿಕಚಂದಾ ಮಾತ್ರ 3 ರೂ. ಎಂದು ಗೊತ್ತುಮಾಡಲ್ಪಟ್ಟಿದ್ದಿತು. ಅದನ್ನು ಕೊಟ್ಟವರೇ ಸಭಿಕರಾಗಿರಬೇಕಾಗಿದ್ದುದು. ಧನಿಕರಾದವರು ಮಾತ್ರ ಹೆಚ್ಚಾಗಿ ಕೊಡಬೇಕೆಂದು ನಿರ್ಣಯಿಸಲ್ಪಟ್ಟಿತು. ಅಬ್ದುಲ್ಲಾಸೇಟರು ಮೊದಲು ರಾಜುವಾದಿ ತಿಂಗಳಿಗೆ ಮೂವತ್ತು ರೂಪಾಯಿಗಳನ್ನು ಕೊಡುತ್ತೇವೆಂದು ಬರೆದರು. ಮತ್ತಿಬ್ಬರು 30 ರೂಪಾಯಿಗಳನ್ನು ಕೊಡುತ್ತೇವೆಂದು ಬರೆದರು. ಮಗದಿಬ್ಬರೂ ಅದೇರೀತಿ ಕೊಡುತ್ತೇವೆಂದು ಬರೆದರು. ನಾನು ತಿಂಗಳಿಗೆ 15 ರೂ. ಚಂದಾಹಾಕಿದೆನು. ಅದು ನನ್ನ ಸ್ಥಿತಿಗೆ ಹೆಚ್ಚಾಗಿದ್ದಿತಾದರೂ ಅಸಾಧ್ಯ ಮಾತ್ರವಾಗಿರಲಿಲ್ಲವು. ದೇವರಕೃಪೆಯಿಂದ ನಾನು ಅದೇರೀತಿ ಕೊಡುತ್ತ ಬಂದೆನು. ಇನ್ನೂ ಅನೇಕ ಜನರು ಕೂಡ ತಿಂಗಳಿಗೆ 15 ರೂ. ಕೊಡುವುದಾಗಿ ಬರೆದರು. ಉಳಿದವರೆಲ್ಲರೂ ತಿಂಗಳಿಗೆ 7 ರೂ. ಕೊಡಲೊಪ್ಪಿ ಬರೆದರು. ಆದರೆ ಯಾರೂ ಸರಿಯಾಗಿ ಚಂದಾ ಕೊಡುತ್ತಿರಲಿಲ್ಲವು. ಡರ್‌ಬನ್‌ಪಟ್ಟಣದಲ್ಲಿ ವಾಸಿಸುತ್ತಿದ್ದವರು ಸಹ ಅನೇಕವೇಳೆ ಕೇಳಿದ ಹೊರತು ಕೊಡುತ್ತಿರಲಿಲ್ಲ. ಇತರ ಸ್ಥಳಗಳಲ್ಲಿದ್ದವರನ್ನು ಸಹ ಕೇಳುವುದಕ್ಕೇ ಅವಕಾಶವಿರಲಿಲ್ಲ. ನಾನು ಸೆಕ್ರೆಟರಿಯಾಗಿದ್ದುದರಿಂದ ಚಂದಾವಸೂಲಿಯಭಾರವು ನನ್ನ ಮೇಲೆ ಬಿದ್ದಿತು. ಕಡೆಗೆ ಗುಮಾಸ್ತನು ಹಗಲೆಲ್ಲ ಚಂದಾವಸೂಲಿಮಾಡುವ ಸ್ಥಿತಿಯು ಸಹ ಒದಗಿತು. ಅವನಿಗೆ ಕಷ್ಟವಧಿಕವಾಯಿತು. ಅದು ಸರಿಯಲ್ಲವೆಂದು ಚಂದಾವನ್ನು ವರ್ಷಕ್ಕೊಂದಾವರ್ತಿ ಮುಂಚಿತವಾಗಿಯೇ ಸಲ್ಲಿಸಬೇಕೆಂದು ನಿಬಂಧನಮಾಡುವುದು ಅವಶ್ಯವೆಂದು ನನಗೆ ತೋರಿತು. ಆ ವಿಷಯವಾಗಿ ಸಭೆಗೂಡಿಸಿರುವಲ್ಲಿ ಎಲ್ಲರೂ ಅಂಗೀಕರಿಸಿದರು. ವರ್ಷಚಂದಾ 40 ರೂ. ಗೆ ಕಡಿಮೆಯಾಗಿರಕೂಡದೆಂದು ನಿರ್ಣಯಿಸಲ್ಪಟ್ಟಿತು. ಅದರಿಂದ ಬಹಳ ತೊಂದರೆಯು ಕಡಿಮೆಯಾಯಿತು. ಸಾಲಮಾಡಿ ದೇಶಸೇವೆಯನ್ನು ಮಾಡಕೂಡದೆಂದು ಮೊದಲೇ ನಾನು ಗ್ರಹಿಸಿಕೊಂಡಿದ್ದೆನು. ಧನವಿಷಯದಲ್ಲಿ ವಾಗ್ದಾನದಮೇಲೆ ಎಷ್ಟು ಮಾತ್ರಕ್ಕೂ ನಂಬಿಕೊಂಡಿರಕೂಡದು. ಚಂದಾವನ್ನು ಹಾಕುವವರಲ್ಲದೆ ಎಲ್ಲಿಯೂ ಯಾರೂ ಆ ಹಣವನ್ನು ಕೂಡಲೆ ಕೊಡುವುದಿಲ್ಲ. ನೆಟಾಲು ಭಾರತೀಯರು ಅದೇರೀತಿ ಮಾಡಿದರು. ಹಣವು ಬಂದಹೊರತು ಕೆಲಸಮಾಡಕೂಡದೆಂದು ನಿರ್ಣಯಿಸಿಕೊಂಡಿದ್ದುದರಿಂದ ನೆಟಾಲು ಕಾಂಗ್ರೆಸ್ಸು ಯಾವಾಗಲೂ ಸಾಲಕ್ಕೆ ಗುರಿಯಾಗಲಿಲ್ಲ. ನನ್ನ ಸಹಕಾರಿಗಳು ಸಭ್ಯರನ್ನು ಸೇರಿಸಲು ಬಹಳ ಚುರುಕಾಗಿ ಕೆಲಸಮಾಡುತ್ತಿದ್ದರು. ಅದು ಅವರಿಗೆ ಉತ್ಸಾಹಕರವಾಗಿದ್ದುದರಿಂದ ಅವರಿಗೆ ಬಹ[illegible]ವವು ಸಹ ಆಯಿತು. ಹೊಸಬರು ಬಹಳಜನ ಚಂದಾಹಣವನ್ನು ನಗದಾಗಿ ಕೊಟ್ಟೇ ಮೆಂಬರುಗಳಾಗಿ ಸೇರಿದರು. ದೂರದ ಗ್ರಾಮಗಳಲ್ಲಿ ವಾಸಮಾಡುತ್ತಿದ್ದವರಿಗೆ ಈ ವಿಷಯವು ಸರಿಯಾಗಿ ತಿಳಿದಿರಲಿಲ್ಲವು. ಅವರ ಮನಸ್ಸಿಗೆ ಹಿಡಿಯುವಂತೆ ಹೇಳಲು ಅವಕಾಶವಿರಲಿಲ್ಲವು. ಆದರೆ ಅಲ್ಲಿದ್ದ ದೊಡ್ಡವರ್ತಕರು ಮಾತ್ರ ನಮಗೆ ಆಹ್ವಾನವನ್ನು ಕಳುಹುತ್ತಿದ್ದರು.

ಆಹ್ವಾನವು ಬರುತ್ತಿದ್ದುದರಮೇಲೆ ನಾನು ಸಂಚಾರವನ್ನು ಮಾಡುತ್ತಿದ್ದೆನು. ಒಂದುವೇಳೆ ನಮ್ಮನ್ನು ಕರೆಯಿಸಿಕೊಂಡಿದ್ದಾತನು 80 ರೂ. ಕೊಡುವನೆಂದು ನಾನು ನೆನೆಸಿದ್ದೆನು. ಆದರೆ ಅವನು 40 ರೂ. ಯನ್ನು ಸಹ ಕೊಡಲಾರೆನೆಂದನು. ಅಷ್ಟಕ್ಕೇ ನಾವೊಪ್ಪಿಕೊಂಡರೆ ಉಳಿದವರು ಕೂಡ ಅದರಂತೆಯೇ ಕೊಡುವರು. ರಾತ್ರಿ ಬಹಳ ಹೊತ್ತಾಗಿದ್ದಿತು. ಆದರೂ ಭೋಜನವಾಗಿರಲಿಲ್ಲ. ಆತನು ಮಾತ್ರ ಪಟ್ಟುಹಿಡಿದಿದ್ದನು. ಆ ಪಟ್ಟಣದಲ್ಲಿಯ ಇತರ ವರ್ತಕರು ಹೇಳಿದರು ಕೂಡ ಆತನು ಕೇಳಲಿಲ್ಲವು. ನನ್ನ ಕೂಡ ಬಂದಿದ್ದವರಿಗೆ ಅವನ ಮೇಲೆ ಬಹಳ ಕೋಪಬಂದಿತಾದರೂ ಅವರು ತಮ್ಮಲ್ಲೇ ಅಡಗಿಸಿಕೊಂಡರು. ಆ ರಾತ್ರಿ ನಮ್ಮೆಲ್ಲಾರಿಗೂ ಊಟವೂ ಇಲ್ಲ ನಿದ್ರೆಯೂ ಇಲ್ಲ. ಒಂದೇ ಪಟ್ಟುಹಿಡಿದು ಕುಳಿತಿದ್ದೆವು. ಮಾರನೆ ಬೆಳಿಗ್ಗೆ ಆತನ ಮನಸ್ಸು ಕರಗಿತು. ಆಗ ಅವನು 80 ರೂ. ಯನ್ನು ಕೊಟ್ಟನು ಮತ್ತು ನಮಗೆ ಔತಣವನ್ನು ಸಹ ಮಾಡಿಸಿದನು. ಅದರಿಂದ ನಮ್ಮ ಕಾರ್ಯವು ಇತರ ಪಟ್ಟಣಗಳಲ್ಲಿ ಕೂಡ ಬಹಳ ಚುರುಕಿನಿಂದ ನಡೆದಿತು. ಹೆಚ್ಚು ಹಣವನ್ನು ಸಂಗಡ ಮಡಗಿರಕೂಡದೆಂದು ನಾನು ಮೊದಲೇ ತಿಳಿದಿದ್ದೆನು. ತಿಂಗಳಿಗೊಂದಾವರ್ತಿ ಅವಶ್ಯಕವಿದ್ದಲ್ಲಿ ವಾರಕ್ಕೊಂದಾವರ್ತಿ ಸಭೆಯನ್ನು ನಡೆಯಿಸುತ್ತಿದ್ದೆವು. ಹಿಂದಣ ಸಭೆಯ ನಿವೇದಿಕೆಯ (ಪ್ರೊಸೀಡಿಂಗ್ಸ್) ನ್ನು ಮೊದಲು ಓದಿ ಅನಂತರ ಇತರ ವಿಷಯಗಳಮೇಲೆ ಚರ್ಚೆಯು ನಡೆಯುತ್ತಿದ್ದಿತು. ಆಫೀಸಿನಲ್ಲಿ ಸೈಕ್ಲೋಸ್ಟೈಲ್ ಎಂಬ ಬರವಣಿಗೆಯ ಯಂತ್ರವು ಇಡಲ್ಪಟ್ಟಿದ್ದಿತು. ಅದರಿಂದ ರಸೀತಿಯ ಮತ್ತು ರಿಪೋರ್ಟಿನ ನಕಲುಗಳು ತೆಗೆಯಲ್ಪಡುತ್ತಿದ್ದುವು. ಮೆಂಬರುಗಳ ಸಂಖ್ಯೆಯೂ, ಆದಾಯವೂ ಹೆಚ್ಚಿದಮೇಲೆ ಅಚ್ಚುಮಾಡಿಸಲುಪಕ್ರಮಿಸಿದೆನು. ಅದುವರೆಗೆ ಸೈಕ್ಲೋಸ್ಟೈಲಿನಲ್ಲೇ ಬರವಣಿಗೆಯ ಕೆಲಸವೆಲ್ಲಾ ನಡೆಯುತ್ತಿದ್ದಿತು. ಪ್ರತಿಸಂಘದಲ್ಲೂ ಇಂತಹ ಏರ್ಪಾಟು ಆವಶ್ಯಕವಾಗಿದ್ದರೂ ಎಲ್ಲರೂ ಸಾಧಾರಣವಾಗಿ ಹಾಗೆ ಮಿತವಾಗಿ ವ್ಯಯಮಾಡುವುದಿಲ್ಲ. ಅದುಕಾರಣ ಈ ಸಣ್ಣ ವಿಷಯವನ್ನು ಕೂಡ ಇತರರ ಉಪಯೋಗಕ್ಕಾಗಿ ಇಲ್ಲಿ ವಿವರಿಸಿರುತ್ತೇನೆ. ಚಂದಾಹಣ ಕೊಟ್ಟವರಲ್ಲಿ ಬಹಳ ಜನರು ರಸೀತಿಯನ್ನು ಕೇಳದೆ ಹೋಗುತ್ತಿದ್ದರು. ನಾನು ಜ್ಞಾಪಿಸಿ ರಸೀತಿಯನ್ನು ಕೊಡುತ್ತಿದ್ದೆನು. ಲೆಕ್ಕವು ಬಹಳ ಜಾಗ್ರತೆಯಿಂದ ಬರೆಯಲ್ಪಡುತ್ತಿದ್ದಿತು. 1894 ನೇ ವರ್ಷದ ಲೆಕ್ಕವು ಈ ಹೊತ್ತಿಗೂ ಇಂಡ್ಯಾ ಕಾಂಗ್ರೆಸ್ಸು ಆಫೀಸಿನಲ್ಲಿ ಜೋಪಾನವಾಗಿರುತ್ತದೆಂದು ನಾನು ನಂಬುತ್ತೇನೆ. ಯಾವ ಸಂಘಕ್ಕಾದರೂ ಲೆಕ್ಕವು ಕ್ರಮವಾಗಿರಬೇಕಾದುದು ಅತ್ಯಾವಶ್ಯಕವು. ಹಾಗಿಲ್ಲದಿದ್ದಲ್ಲಿ ಕೆಟ್ಟಹೆಸರು ಬರದೆಯಿರುವುದಿಲ್ಲ. ಲೆಕ್ಕವು ಸರಿಯಾಗಿದ್ದಲ್ಲಿ ನಿತ್ಯಸತ್ಯವ್ರತವನ್ನು ಸರಿಯಾಗಿ ನೆರವೇರಿಸಬೇಕಾದ ಅಗತ್ಯವಿರುವುದಿಲ್ಲ. ಕಾಂಗ್ರೆಸ್ಸು ಅಲ್ಲಿ ಹುಟ್ಟಿದ ಭಾರತೀಯವಿದ್ಯಾರ್ಥಿಕಾರಿಗು ಕೂಡ ಸೇವೆಮಾಡಿರುತ್ತದೆ. ಅದಕ್ಕಾಗಿ ಕಲೋನಿಯಲ್ ಬಾರ್ನ್ ಇಂಡಿಯನ್ ಎಡ್ಯುಕೇಷನಲ್ ಅಸೋಸಿಯೇಷನ್ ಎಂಬ ಹೆಸರಿನಿಂದ ಒಂದು ಸಂಘವು ಕಾಂಗ್ರೆಸ್ಸಿನವರ ಮೇಲ್ವಿಚಾರಣೆಯಲ್ಲಿ ಏರ್ಪಡಿಸಲ್ಪಟ್ಟಿತು. ಆ ಸಂಘದಲ್ಲಿ ವಿದ್ಯಾರ್ಥಿಗಳಾದ ಭಾರತೀಯ ಯುವಕರೇ ಹೆಚ್ಚಾಗಿ ಮೆಂಬರರಾಗಿದ್ದರು. ಅವರಿಗೆ ಕೊಂಚ ಚಂದಾವಿಧಿಸಲ್ಪಟ್ಟಿತು. ಅವರು ಕಷ್ಟವೆಂದು ಹೇಳಿದಲ್ಲಿ ಅವರಲ್ಲಿ ಭಾವನಾಶಕ್ತಿಯನ್ನು ವೃದ್ಧಿಗೊಳಿಸುವುದು, ಭಾರತೀಯರಿಗೆ ಸೇವೆಮಾಡುವುದು ಅವರಿಗೆ ಅಧಿಕವಾಗಿ ಅವಕಾಶವನ್ನುಂಟುಮಾಡುವುದು ಮೊದಲಾದ ಕೆಲಸಗಳನ್ನು ಈ ಉಪಸಂಘವು ಮಾಡುತ್ತಿದ್ದಿತು. ವಕ್ತೃತ್ವವನ್ನು ಹೆಚ್ಚಿಸಲು ವಾದಪ್ರತಿವಾದವನ್ನು ಮಾಡುವ ಸಭೆಯು ಕೂಡ ಜರುಗುತ್ತಿದ್ದಿತು. ಮೆಂಬರುಗಳು ಬಂದು ವ್ಯಾಸವನ್ನೋದುವುದು, ಉಪನ್ಯಾಸಮಾಡುವುದು, ಚರ್ಚಿಸುವುದು ಮೊದಲಾದ ಕಾರ್ಯಗಳನ್ನು ಸಹ ಮಾಡುತ್ತಿದ್ದರು. ಒಂದು ಚಿಕ್ಕಪುಸ್ತಕಭಂಡಾರವು ಸಹ ಏರ್ಪಟ್ಟಿತು. ಕಾಂಗ್ರೆಸ್ಸಿನವರು ಅಧಿಕವಾಗಿ ಪ್ರಚಾರಮಾಡುವವರಾದರು. ನೆಟಾಲಿನ ಪರಿಸ್ಥಿತಿಯ ಯಥಾರ್ಥವನ್ನು ಆಂಗ್ಲಭಾರತ ದಕ್ಷಿಣಾಫ್ರಿಕಾದೇಶೀಯರಿಗೆ ತಿಳುಹುತ್ತಿದ್ದರು. ಅದಕ್ಕೆ ನಾನು ಎರಡು ಹಸ್ತಪತ್ರಿಕೆಗಳನ್ನು ಬರೆದಿದ್ದೆನು. "ದಕ್ಷಿಣಾಫ್ರಿಕೆಯ ಬ್ರಿಟಿಷರೆಲ್ಲರಿಗೂ" ಎಂಬ ಶಿರೋಲೇಖದಿಂದೊಂದನ್ನೂ "ಭಾರತೀಯರ ನಿಯೋಜಕಸ್ವಾತಂತ್ರ್ಯವು" ಎಂಬ ಶಿರೋಲೇಖದಿಂದ ಮತ್ತೊಂದನ್ನೂ ಪ್ರಕಟಿಸಿದೆನು. ನಾನು ಬಹಳ ಶ್ರದ್ಧೆಯಿಂದ ಅವನ್ನೋದಿ ಬಹಳ ಎಚ್ಚರಿಕೆಯಿಂದ ನಿದರ್ಶನಗಳೊಡನೆ ಸಹ ಬರೆದೆನು. ಅವನ್ನು ಅಚ್ಚುಮಾಡಿಸಿ ಕೂಡಲೆ ಹಂಚಿಸಿದೆನು. ಅದರಿಂದ ದಕ್ಷಿಣಾಫ್ರಿಕೆಯಲ್ಲಿ ಹೆಚ್ಚುಮಂದಿ ಆಂಗ್ಲೇಯರು ಭಾರತೀಯರಿಗೆ ಅನುಕೂಲರಾದರು. ಭಾರತದೇಶದ ಎಲ್ಲ ಪಕ್ಷದವರೂ ಚುರುಕಾಗಿ ಸಾಹಾಯ್ಯಮಾಡತೊಡಗಿದರು. ದಕ್ಷಿಣಾಫ್ರಿಕೆಯ ಭಾರತೀಯರಿಗೆ ತಮ್ಮ ನಿಜಸ್ಥಿತಿಯು ಸ್ಪಷ್ಟವಾಯಿತು.

೧೯೨೬ನೆಯ ಇಸವಿ ಡಿಸೆಂಬರ್ ತಾ|| ೪ ರಿಂದ ೧೯೨೬ ನೆಯ ಇಸವಿ ಡಿಸೆಂಬರ್ ತಾ|| ೧೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಕಾರ್ತಿಕ ಬಹುಳ ಚತುರ್ದಶಿಯಿಂದ ಮಾರ್ಗಶಿರ ಶುದ್ಧ ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಮಾಸ
4	ಶನಿ	ಚತು	12-52	ಅನೂ	60	19
5	[1]ಭಾನು	ಅಮಾ	13-31	ಜ್ಯೇಷ್ಠ	60	20
6	ಸೋಮ	ಪಾಡ್ಯ	12-56	ಜ್ಯೇಷ್ಠ	1-0	21
7	ಮಂಗಳ	ಬಿದಿ	11-3	ಮೂಲ	30-55	22
8	ಬುಧ	ತದಿ	8-5	ಉಷಾ	58-8	23
9	[2]ಗುರು	ಚೌ-ಉ	4-11-55-48	ಶ್ರವ	56-5	24
10	[3]ಶುಕ್ರ	ಷಷ್ಠಿ	54-44	ಧನಿ	51-21	25

(1) ಮಳೆನಕ್ಷತ್ರ-ಜ್ಯೇಷ್ಠ ೨ ನೆಯಪಾದ. (2) ಮಳೆನಕ್ಷತ್ರ-ಜ್ಯೇಷ್ಠ ೩ ನೆಯಪಾದ, ನಾಗರಪಂಚಮಿ. (3) ಚಂಪಾಷಷ್ಠಿ, ಸುಬ್ರಹ್ಮಣ್ಯಸ್ವಾಮಿ ರಥ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಾಧಿಗತರಾಜಮಂಡಲಹಿತೈಷಾ | ಘನಸಫಲಕೃತಾವತಾರಾ ಪಶ್ಯಜ್ಜನಕೃತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾತಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೀಯಿಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸರ್ ೧೯೨೬ ನೆಯ ಇಸವಿ ಡಿಸೆಂಬರ್ ತಾರೀಖು ೧೧ ನೆಯ ಶನಿವಾರ. [ಸಂಚಿಕೆ ೫೦

ಸತ್ಯದಜಗತ್ತು   ಮೊದಲು ಇದನ್ನು ಓದಿ ನಂಬಿಗೆ ಇಡಿರಿ.   ಆದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜದ್ದಿನ ಬಹುಗುಣದಾಯಕ ಪಾಕವನ್ನು ಇದೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಣಮೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರ್ಮಗಜ, ಆಲದಹಾಲು, ವಾಕೇರಿಭಾತಾ, ಗೋಕುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಕಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—20]   ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

SIROMANY NARAYANACHARYA & CO.,
BENARES CITY.

S.U.N. & CO.
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.—   [50—21]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃಷಭಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
[illegible]ಟಕಲ್ಪಮಂಜರಿ	೦—೮—೦	೦—೧೩—೦
[illegible] ಪರಿಶಿಷ್ಟಿಯ	೧—೦—೦	೧—೬—೦
ಅಭಿನವ ಕಾಳಿದಾಸ ಕೃ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ [illegible]	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಅದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಶಂಕಳ್ಳೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪೈಸಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಡಿಕಟ್ಟು ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ಗಳ್ಳೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[60—9]   ಪೋ. ಬಾ. [illegible]

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹತತ್ವಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ), ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರುಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ.   ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.   ಮ್ಯಾನೇಜರ್.

ಹಾಸನದ ಟೌನ್ ಮ್ಯುನಿಸಿಪಾಲಿಟಿ.

18 ನೇ ದನಗಳ ಪ್ರದರ್ಶನದ ಪ್ರಸಿದ್ಧಪತ್ರಿಕೆ.

ಹಾಸನ ಟೌನ್ ಮುಸಾಫರ್‌ಖಾನಾ ಮತ್ತು ಸಂತೆಮಾಳದ ಆಜುಬಾಜು ಮೈದಾನಗಳಲ್ಲಿ ಮತ್ತು ಸುತ್ತಮುತ್ತಲೂ ಇರುವ ಹೊಲಗಳಲ್ಲಿ ಸಹ ಮಾಮೂಲುಮೇರೆ 1927 ನೇ ಜನವರಿ ಮಾಹೆ ತಾರೀಖು 4, 5 ಮತ್ತು 6ನೇ ಮಂಗಳವಾರ, ಬುಧವಾರ ಮತ್ತು ಗುರುವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತದೆಂಬ ಅಂಶವನ್ನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಪ್ರದರ್ಶನಕ್ಕೆ ಬರತಕ್ಕ ರಾಸುಗಳ ಪೈಕಿ ಉತ್ತಮವಾದ ರಾಸುಗಳಿಗೆ ಧಾರಾಳವಾಗಿ ಬಹುಮಾನಗಳು ಕೊಡಲ್ಪಡುತ್ತೆ.

ಪ್ರದರ್ಶನಕ್ಕೆ ಬರತಕ್ಕ ಪ್ರತಿಯೊಂದು ರಾಸಿಗೂ ಒಂದಾಣೆಯಂತೆ ಫೀ ವಸೂಲ್ಮಾಡಲ್ಪಡುವುದು.

ಬಾಕಿವಿಷಯಗಳಿಗೆ 25-11-1926ರ ಮಯ್ಸೂರು ಗೆಜೆಟ್ II A ಭಾಗದ 594 ಮತ್ತು 595 ನೇ ಪುಟಗಳಲ್ಲಿ ಛಾಯಿಪಾಗಿರುವ ಅಸಲು ಇಸ್ತಿಹಾರನ್ನು ನೋಡುವದು.

S. P. Bramhappa,
ತಾ|| 29-11-1926.   ವೈಸ್‌ಪ್ರೆಸಿಡೆಂಟ್ ಮತ್ತು
ಛೇರ್ಮನ್, ಮ್ಯಾನೇಜಿಂಗ್ ಕಮಿಟಿ.

ಈ ದೇಶದಲ್ಲಿ ಬೆಂಗಳೂರಿನ ಸಂಸ್ಥೆಯು ಅನೇಕಾನೇಕವಾಗಿ ಏರ್ಪಡಲು ಅವಕಾಶವಿರುವುದು. ಈಗ ನಡೆಯಬೇಕಾಗಿರುವುದು ಸಮಷ್ಟಿ ಕಾರ್ಯವಲ್ಲದೆ ವ್ಯಷ್ಟಿ ಕಾರ್ಯವಲ್ಲವು. ಈ ಕೇಂದ್ರಸ್ಥಾನವು ಸ್ಥಾನಿಕಾಭಿಮಾನವನ್ನು ಬಿಟ್ಟು ದೇಶಹಿತಕ್ಕಾಗಿ ಕೆಲಸಮಾಡಬೇಕು.

ಈವರೆಗೆ ನಡೆಯುತ್ತಿರುವ ವಿಶ್ವವಿದ್ಯಾಲಯ ವಿದ್ಯೆಯು ಕೇವಲ ನಿರುಪಯೋಗವು. 1920 ರಲ್ಲಿ ವೈಸ್‌ಛಾನ್ಸಲರಾಗಿದ್ದ ಕೆ. ಶ್ರೀನಿವಾಸಯ್ಯಂಗಾರರೇ ಈ ವಿಷಯವನ್ನು ಸ್ಪಷ್ಟೀಕರಿಸಿದ್ದರು.

ಮದ್ರಾಸು ವಿಶ್ವವಿದ್ಯಾಲಯದಲ್ಲಿ ಪಟ್ಟವನ್ನು ಅಂದರೆ ಡಿಗ್ರಿಯನ್ನು ಪಡೆದಿರುವ 18,500 ಜನರಲ್ಲಿ 3,700 ಜನರು ಸರ್ಕಾರಿಯುದ್ಯೋಗಸ್ಥರಾಗಿಯೂ 3,700 ಜನರು ಉಪಾಧ್ಯಾಯರಾಗಿಯೂ, 6,000 ಜನರು ವಕೀಲರುಗಳಾಗಿಯೂ ಆದರು; 765 ಮಂದಿ ಮಾತ್ರ ವೈದ್ಯಪರೀಕ್ಷೆಯನ್ನು ಕೊಟ್ಟಿದ್ದರು; 100 ಮಂದಿ ವಾಣಿಜ್ಯವನ್ನು ಅವಲಂಬಿಸಿದರು: 56 ಮಂದಿ ವಿಜ್ಞಾನಶಾಸ್ತ್ರವನ್ನು ಓದಿದ್ದರು. ಈ 18,500 ಜನರಲ್ಲೂ ಸಾರ್ಥಕವಾದ ದೇಶಹಿತವನ್ನು ಕೋರಿದವನೊಬ್ಬನಾದರೂ ಕಂಡುಬರಲಿಲ್ಲ. ಎಂದು ಶ್ರೀನಿವಾಸಯ್ಯಂಗಾರರು ಹೇಳಿದರು.

ಈ ವರ್ಷ 1,450 ಮಂದಿ ಡಿಗ್ರಿಗಳನ್ನು ತೆಗೆದುಕೊಳ್ಳುವುದಕ್ಕಾಗಿ ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನವರು ಎರಡು ಪಟ್ಟಪ್ರದಾನ ಸಭೆಗಳನ್ನು ಜರುಗಿಸಲು ನಿಶ್ಚಯಿಸಿರುವರು. ಗುರುವಾರ ಮಧ್ಯಾಹ್ನ 2 ಗಂಟೆಗೂ ಅದೇ ಸಾಯಂಕಾಲ 4½ ಗಂಟೆಗೂ ಸಭೆಗಳು ಜರುಗುವುದಾಗಿ ಅಸೋಸಿಯೇಟೆಡ್ ಪ್ರೆಸ್ಸಿನವರು ಪ್ರಕಟಿಸಿರುವರು.

ಕಲಕತ್ತಾ ಮದ್ರಾಸು ವಿಶ್ವವಿದ್ಯಾಲಯಗಳು ಯಂತ್ರಶಾಲಗ್ರಾಜ್ಯುಏಟುಗಳನ್ನು ಅಪರಿಮಿತವಾಗಿ ತಯಾರುಮಾಡುತ್ತಿರುವುವು. ಈ ಭ್ರಾಂತಿಯು ಉನ್ಮಾದವಾಗಿ ಪರಿಣಮಿಸುತ್ತಿದೆ. ಜ್ಞಾನಜೀವಿತಕ್ಕೆ ಇದು ವಿಷಕ್ರಿಮಿಯಾಗಿ ಪರಿಣಮಿಸುತ್ತಿದೆ. ಈ ಪಟ್ಟ ಅಂದರೆ ಡಿಗ್ರಿಪಡೆದ ಪಂಡಿತರುಗಳು ಪ್ರಪಂಚಯಾತ್ರೆಯನ್ನು ನಡಿಸಬೇಕಾಗಿ ಬಂದಾಗ ಯಾವುದಕ್ಕೂ ನಿಷ್ಪ್ರಯೋಜಕರಾಗಿ ಪರಿಣಮಿಸುವರು. “ಪೂರ್ವಪದ್ಧತಿಯ ಕಾಲೇಜುಗಳ ಗ್ರಾಜ್ಯುಏಟುಗಳಿಗೆ ನಾನು ಒಂದು ಕಾಸನ್ನೂ ಕೊಡುವುದಿಲ್ಲ” ಎಂದು ಎಡಿಸನ್ನರವರು ಹೇಳಿರುತ್ತಾರೆ. “ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿಯು ಶೂನ್ಯ ; ಆಲೋಚನಾಶಕ್ತಿಯಿಲ್ಲವೇ ಇಲ್ಲ. ಇಂತಹವರಿಗೆ ಎಷ್ಟು ಡಿಗ್ರಿಗಳಿದ್ದರೂ ಪ್ರಯೋಜನವೇನು?” ಎಂದು ಹೆನ್ರೀಫೋರ್ಡ್ಡರವರು ಅಂದಿರುತ್ತಾರೆ. “ವ್ಯಾಪಾರಕ್ಕೆ ವಿಶ್ವವಿದ್ಯಾಲಯಪಾಂಡಿತ್ಯವು ಸಂಪೂರ್ಣವಾಗಿ ನಿಷ್ಫಲವು. ಸಾಧಾರಣವಾಗಿ ಈ ಪಂಡಿತರಾರೂ ನನಗೆ ಕೆಲಸಕ್ಕೆ ಬರುವುದಿಲ್ಲ. ವಾಣಿಜ್ಯಕ್ಕೆ ಪ್ರವೇಶಿಸಲು ಅವರಿಗೆ ಸಾಮರ್ಥ್ಯವಿಲ್ಲವು. ಅವರಿಗೆ ಏನಾದರೂ ಇದ್ದಲ್ಲಿ ಅಲ್ಲಿಗೆ ಪ್ರವೇಶಮಾಡುತ್ತಲೇ ಅದೂ ನಾಶವಾಗುವುದು. ಅವರು ಕಷ್ಟಪಟ್ಟು ಕೆಲಸಮಾಡುವವರಲ್ಲ; ವಿಲಾಸದಲ್ಲೂ ಭೋಗದಲ್ಲೂ ಕಾಲಕಳೆಯುವವರು” ಎಂದು ಅಂಗ್ಲದೇಶದಲ್ಲಿ ಪ್ಲೋರ್ಟ್ ಎಂದು ಪ್ರಖ್ಯಾತರಾದ ಮಾರಿಸ್‌ರವರು ಹೇಳಿದರೆಂದು ತಂತೀವಾರ್ತೆಯನ್ನು ನಾನು ಈಗತಾನೆ ನೋಡಿದೆನು.

ನನಗೆ 30 ವರ್ಷದಿಂದ ಬಂಗಾಳಾದಲ್ಲಿಯು ಅನೇಕ ಪರಿಶ್ರಮಗಳಲ್ಲಿ ಬಹಳ ಅನುಭವವಿರುವುದು. ಗ್ರಾಜ್ಯುಏಟರುಗಳನ್ನು ಕುರಿತು ನನ್ನ ಅನುಭವವನ್ನು ತಿಳಿಸುವುದಾದರೂ ಇದೆಯೆ ಎಂದು ಹೇಳುವೆನು.

ಉಪನ್ಯಾಸಮಾಡಬೇಕೆಂದು ನೀವು ನನ್ನನ್ನು ಕೋರಿದರೆ ಗ್ರಾಜ್ಯುಏಟುಗಳಿಂದ ಕೂಡಿದ ಈ ಸಭೆಯಲ್ಲಿ ನಾನು ಹೀಗೆ ಧರ್ಮೋಪದೇಶಮಾಡಲು ನನಗೂ ಸಂಕೋಚವಾಗಿಯೇ ಇದೆ. ವಿಶ್ವವಿದ್ಯಾಲಯದ ವಿದ್ಯೆಯನ್ನು ನಿರಸನಮಾಡುವ ಅಭಿಪ್ರಾಯವು ನನಗೆಷ್ಟುಮಾತ್ರಕ್ಕೂ ಇಲ್ಲ. ಲೋಪವನ್ನು ತೋರಿಸಬೇಕೆಂಬುದೇ ನನ್ನ ಮನೋಗತವು. ನಿಜವಾಗಿ ಆಸಕ್ತಿಯಿರುವವರ ವಿನಾ ಇತರರು ವಿಶ್ವವಿದ್ಯಾಲಯಕ್ಕೆ ಹೋಗಬಾರದು. ವಿಶ್ವವಿದ್ಯಾಲಯವು ಸಾಹಿತ್ಯವಿಜ್ಞಾನಕ್ಕೂ ಪರಿಶೋಧನಕ್ಕೂ ನಿಲಯವಾಗಿರಬೇಕು. ಸರಸ್ವತೀಪಾದಪದ್ಮಾರಾಧನೆಗೆ ತಮ್ಮ ಜೀವಿತವನ್ನು ಸಮರ್ಪಿಸಬೇಕೆನ್ನುವವರು ಮಾತ್ರವೇ ವಿಶ್ವವಿದ್ಯಾಲಯವನ್ನು ಸೇರಬೇಕು. ಸಾಮ್ರಾಜ್ಯ ವಿಶ್ವವಿದ್ಯಾಲಯ ಮಹಾಸಭೆಗೆ ಪ್ರತಿನಿಧಿಯಾಗಿ ಕಲಕತ್ತಾ ವಿಶ್ವವಿದ್ಯಾಲಯದವರು ನನ್ನನ್ನು ಎರಡುವೇಳೆ ಕಳುಹಿಸಿದ್ದುದರ ಮೇಲೆ ಬ್ರಿಟಿಷ್ ದೇಶದಲ್ಲಿ ಅನೇಕ ಕಲಾಶಾಲೆಯವರ ಆತಿಥ್ಯದಲ್ಲಿದ್ದೆನು. ಆ ಕಲಾಶಾಲೆಗಳು ಮಹಾಪ್ರಯೋಜನಕರವಾದುವು. ನಮ್ಮವಾದರೋ ನಿಸ್ಸಾರವಾದುವು. ಆಕ್ಸ್‌ಫರ್ಡ್ ಕೇಂಬ್ರಿಡ್ಜ್ ಕಲಾಶಾಲೆಗಳಿಂದ ಕವಿಗಳು, ವಾಗ್ಮಿಗಳು, ಶಾಸ್ತ್ರಕೋವಿದರು, ರಾಜನೀತಿಜ್ಞರು ಮೊದಲಾದವರು ಆಗಿರುವರು. ಅವುಗಳಿಗೆ ಸೇರಬೇಕೆನ್ನುವವರು ಅಲ್ಪಮತಿಗಳಾಗಿದ್ದರೂ ಪಂಡಿತರ ಗೋಷ್ಠಿಯ ದೆಸೆಯಿಂದ ಸಾಹಿತ್ಯಸಂಪನ್ನರಾಗುವರು. ಈರೀತಿಯಾಗಿ ವಿಶ್ವವಿದ್ಯಾಲಯಗಳು ಪಾಂಡಿತ್ಯವಿಜ್ಞಾನಕ್ಕೆ ನಿಲಯವಾಗಿರಬೇಕು. ಕೇಂಬ್ರಿಡ್ಜ್ ಟ್ರಿನಿಟೀಕಲಾಶಾಲೆಯಿಂದ ನ್ಯೂಟನ್ನರವರೊಬ್ಬರೇ ಅಲ್ಲದೆ ಪಂಡಿತಶ್ರೇಷ್ಠರಾದ ಮೆಕಾಲೆಯವರು ಕೂಡ ಹೊರಟಿರುವರು.

ವಿಶ್ವವಿದ್ಯಾಲಯದ ಪ್ರಯೋಜನವನ್ನು ದೇಶೀಯರು ಸರಿಯಾಗಿ ತಿಳಿದುಕೊಂಡರೆ ಸ್ವಲ್ಪಕಾಲದಲ್ಲಿಯೇ ಅತ್ಯದ್ಭುತವಾದ ಪರಿವರ್ತನ (ಬದಲಾವಣೆಯು) ವಾಗುವುದು. ರೋಗ ದಾರಿದ್ರ್ಯ ಮೊದಲಾದ ಅರಿಷ್ಟವೆಲ್ಲವೂ ನಿವಾರಣೆಯಾಗುವುವು ; ಮನುಷ್ಯರಲ್ಲಿ ಉನ್ನತಭಾವವು ಅಭಿವೃದ್ಧಿಯಾಗುವುದು ಎಂದು ಆಚಾರ್ಯ ಪ್ರಫುಲ್ಲಚಂದ್ರರಾಯರವರು ಅಪ್ಪಣೆಕೊಡಿಸಿದರು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖನಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಸಮಾಜಗಳಲ್ಲಿ ಪರಸ್ಪರ ಏಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖನಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಮನಸ್ಯವನ್ನು ವೃದ್ಧಿಗೊಳಿಸುವ ಲೇಖನಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖನಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟು ಲೇಖಕರ ಸಂಪೂರ್ಣ ಹೆಸರು ವಿಳಾಸ ಮತ್ತು ಚಂದಾನಂಬರು ತಿಳುಹಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯ[illegible]ನಾಸಂಬಂಧ ಲೇಖನಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕನೂ ಖಂಡಿತವಾಗಿ ಗಮನಿಸಬೇಕು.—ಸಂಪಾದಕ.

ತಿರಸ್ಕೃತಲೇಖ.

(1) ಓರ್ವ ವಿಲೇಜು ಪ್ರಜಾಹಿತೈಷಿ—ನೀವು ಸಂಬೋಧಿಸಿರುವ ದೊಡ್ಡಮನುಷ್ಯರು ಸ್ಟಾರ್‌ಪತ್ರಿಕೆಯ ಚಂದಾದಾರರಲ್ಲವಾದುದರಿಂದ ನಿಮ್ಮ ವಿಜ್ಞಾಪನಾಪತ್ರಿಕೆಯನ್ನು ಅವರಿಗೆ ನೇರವಾಗಿ ಬರೆದುಕೊಳ್ಳುವುದು. (2) 2575 ನೇ ಚಂದಾದಾರರು—ನಿಮ್ಮ ಪೋಸ್ಟು ಕಾರ್ಡುಗಳನ್ನೋದುವುದು ಅಸಾಧ್ಯವಾದುದರಿಂದ ಪ್ರಕಟಿಸಲು ಯತ್ನವಿಲ್ಲವಾಯಿತು. (3) 4943 ನೇ ವರ್ಗಣಿದಾರ ರಾಯಚೂರು—ವೀರಶೈವಮಹಾಸಭಾಧ್ಯಕ್ಷರು ಗೊತ್ತಾಗಿರುವುದರಿಂದ ತದ್ವಿಷಯಕವಾದ ನಿಮ್ಮ ಲೇಖವು ಅಪ್ರಕೃತವು.

ನಿಜಗುರುಸೇವೆ.

ಆಶ್ಚರ್ಯವನ್ನು ಏನುಹೇಳೋಣ ! ಭಗವಂತನ ಮಹಿಮೆಯು ಎಂಥಾದ್ದು !! ಸದ್ಗುರುಸೇವೆಯಿಂದ ಎಂಥೆಂಥ ಸತ್ಫಲಗಳುಂಟಾಗುತ್ತವೆ!!! ಮೇಲುಕೋಟೆಯ ಹಿರೇಕುರುಹಿನ ಶೆಟ್ಟಿ ಮತದವರು ವೇಷಧಾರಿ ಗುರುಗಳನ್ನು ವಂದನಾಪೂರ್ವಕ ದೂರೀಕರಿಸಿ ನಿಜಗುರುವನ್ನು ಹಿಡಿದದ್ದರಿಂದ ಎಂಥಾ ಸತ್ಪರಿಣಾಮಗಳುಂಟಾಗುತ್ತಲಿವೆ? ಇವರಲ್ಲಿ ಔದಾರ್ಯ, ಭಗವದ್ಭಕ್ತಿ, ಗುರುಸೇವೆ, ಕುಲಾಭಿಮಾನ ಮೊದಲಾದ ಸದ್ಗುಣಗಳು ಅಭಿವೃದ್ಧಿಯನ್ನು ಹೊಂದುತ್ತಲಿವೆ. ಇದಕ್ಕೆ ದೃಷ್ಟಾಂತವಾಗಿ ಈ ಜನರಲ್ಲಿ ಧನಾಢ್ಯರಾದ ಮ॥ ಉ॥ ಮಲ್ಲಶೆಟ್ಟರವರು ಶ್ರೀ ಯೋಗಾನರಸಿಂಹಸ್ವಾಮಿಯವರಿಗೆ ಹರಸಿಕೊಂಡಿದ್ದ ಮೇರೆಗೆ ತಮ್ಮ ಏಕಮಾತ್ರಪುತ್ರನನ್ನು ಶ್ರೀ ನೃಸಿಂಹ ಪರ್ವತಾರೋಹಣಮಾಡಿಸುವ ಉತ್ಸವವನ್ನು ಬಹಳ ವಿಜೃಂಭಣೆಯಿಂದಲೂ ವಿತರಣೆಯಿಂದಲೂ ನಡಿಸಿದರು. ಗೊಡೆಗಳಲ್ಲಿ ಫಲಪುಷ್ಪತಾಂಬೂಲಾದಿಗಳನ್ನು ತೆಗೆಸಿಕೊಂಡು ಮಂಗಳವಾದ್ಯ ಮತ್ತು ಹರಿಹರಭಜನೆ ಸಮೇತ ಊರಲ್ಲಿ ಮೆರವಣಿಗೆ ಹೊರಟು ಶ್ರೀ ಚೆಲ್ವನಾರಾಯಣಸ್ವಾಮಿಯವರ ದೇವಸ್ಥಾನವನ್ನು ಪ್ರದಕ್ಷಿಣೆಮಾಡಿಕೊಂಡು ಈ ಊರಿನ ಮುಖ್ಯವಾದ ಬೀದಿಗಳಲ್ಲಿ ಹಾದು ಶ್ರೀ ಕಲ್ಯಾಣಿಸರೋವರವನ್ನು ಸೇರಿ ಅಲ್ಲಿ ಕ್ರಮಪ್ರಕಾರ ಪೂಜಾದಿಗಳನ್ನು ನೆರವೇರಿಸಿ ಅಲ್ಲಿಂದ ಶ್ರೀ ಯೋಗಾನೃಸಿಂಹಸ್ವಾಮಿಯವರ ಸನ್ನಿಧಿಯವರೆಗೂ ಪ್ರತಿಮೆಟ್ಟಲಿಗೊಂದು ತೆಂಗಿನಕಾಯಿಯನ್ನು ಒಡೆದು ಶ್ರೀ ನೃಸಿಂಹರಿಗೆ ಅಭಿಷೇಕ, ಅರ್ಚನೆ, ನೈವೇದ್ಯಗಳನ್ನು ಮಾಡಿಸಿ ಸಾಯಂಕಾಲ ನೇತ್ರಾನಂದಕರವಾದ ದೀಪಾರಾಧನೆಯನ್ನು ನೆರವೇರಿಸಿ ಅಲ್ಲಿಂದ ಹೊರಟು ತಾವು ಅಂದವಾಗಿಯೂ, ವಿಶಾಲವಾಗಿಯೂ ಕಟ್ಟಿಸಿರುವ ತಮ್ಮ ನೂತನಭವನದಲ್ಲಿ ತಮ್ಮ ಕುಲಸ್ಥರಿಗೆಲ್ಲಾ ಸಂತರ್ಪಣೆಯನ್ನು ಮಾಡಿಸಿ ಅವರನ್ನೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿ ಅವರವರ ಮನೆಗಳಿಗೆ ಕಳುಹಿಸಿಕೊಟ್ಟರು. ಆಬಾಲವೃದ್ಧರೆಲ್ಲರೂ ತೃಪ್ತಿ ಸಂತೋಷಗಳಿಂದ ಸಾಹುಕಾರರ ಚಿರಂಜೀವಿಯನ್ನು ಆಶೀರ್ವದಿಸಿ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಇದಲ್ಲವೇ ಐಶ್ವರ್ಯಕ್ಕೆ ತಕ್ಕ ಔದಾರ್ಯ ? ಓರ್ವ ಪ್ರತ್ಯಕ್ಷದರ್ಶಿ.

ಪ್ರಸಿದ್ಧ ದಲಾಲಿಗಳ ಮರಣ.

ದಾವಣಗೆರೆಯಲ್ಲಿ ಪ್ರಸಿದ್ಧ ದಲಾಲಿ ವ್ಯಾಪಾರಿಗಳಾಗಿದ್ದ ಶ್ರೀಯುತ ಚಾರ್ಮಣ್ಣನವರ ಬಸವಲಿಂಗಪ್ಪನವರು ಕಳೆದ ತಾ॥ 2 ನೆಯ ಗುರುವಾರ ಶಿವಾಧೀನರಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಇವರು ಬಾಲ್ಯದಲ್ಲಿ ಬಡವರಾಗಿದ್ದು, ಪ್ರಾಪ್ತವಯಸ್ಸಿಗೆ ಬಂದೊಡನೆ ಕಡುಧೈರ್ಯ, ಸಾಹಸ, ಮತ್ತು ಪರಿಶ್ರಮಗಳಿಂದ ವ್ಯಾಪಾರವನ್ನು ನಡಸುತ್ತ ದಾವಣಗೆರೆಯ ದಲಾಲರಲ್ಲಿ ಗಣ್ಯರೆನಿಸಿದ್ದರು. ಇವರ ವೆಗ್ಗಳಕಂಠದ ವಾಗ್ಝರಿಯಲ್ಲಿ ಬಿರುನುಡಿಗಳಿದ್ದರೂ, ಮನಸ್ಸಿನಲ್ಲಿ ಕಾಪಟ್ಯವಿರದೆ ಕನಿಕರವಿದ್ದಿತು. ದ್ರವ್ಯಾರ್ಜನೆಯಲ್ಲಿ ಸದಾ ನಿರತರೆನಿಸಿದ್ದರೂ, ಧರ್ಮಾಭಿಮಾನದ ಕಡೆಗೆ ಇವರ ಮನಸ್ಸು ಒಲಿದಿತ್ತು. ಇವರು ತಮ್ಮ ಆಪ್ತೇಷ್ಟಬಂಧುಬಾಂಧವರೊಂದಿಗೆ ಉಳವಿಯ ಮಹಾಕ್ಷೇತ್ರಯಾತ್ರೆಯನ್ನು ಬಲುಸಂಭ್ರಮದೊಡನೆ ಮಾಡಿದಂದಿನಿಂದ ಆ ಮಹಾಸ್ವಾಮಿಯ ಪರಂಪರಾಗತವಾದ “ಜಗದ್ಗುರುಮುರಘೇಂದ್ರ ದಿಗ್ವಿಜಯ” ವಾರ್ತೆಯನ್ನು ಕೇಳುವುದೆಂದರೆ ಇವರ ಮನಸ್ಸಿಗೆ ಬಲುಹರ್ಷವೆನಿಸಿತ್ತು. ಇದಕ್ಕಾಗಿ ಇವರು ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸನ್ನಿಧಿಯನ್ನು ತಮ್ಮ ಗೃಹಕ್ಕೆ ಆಗಾಗ್ಗೆ ಬಿಜಯಂಗೈಸಿಕೊಂಡು ತಮ್ಮ ನೈಜವಾದ ಭಕ್ತಿಯನ್ನು ತೋರ್ಪಡಿಸುತ್ತಿದ್ದರು. ಅಖಿಲಭಾರತವೀರಶೈವಮಹಾಸಭೆಯ ಚಿರಸ್ಥಾಯಿಫಂಡಿಗೆ ಇವರು ಮೂರುಸಾವಿರ ರೂಪಾಯಿಗಳನ್ನು ಕೊಟ್ಟರು. ವ್ಯಾಪಾರದಲ್ಲಿನ ಇವರ ಅಖಂಡಧೈರ್ಯವನ್ನು ಜನರು ಶ್ಲಾಘಿಸುತ್ತಿದ್ದರು. ಇವರ ವಿಯೋಗದಿಂದ ದಾವಣಗೆರೆಯ ವ್ಯಾಪಾರಿಗಳಲ್ಲಿ “ಕಡುಗಲಿ” ಯೊಂದು ಕಣ್ಮರೆಯಾದಂತಾಯಿತು. ದುಃಖಸೂಚಕವಾಗಿ ಆದಿನ ವ್ಯಾಪಾರವು ನಿಲ್ಲಿಸಲ್ಪಟ್ಟು ಇವರ ಸ್ಮಶಾನಯಾತ್ರೆಗೆ ಸಹಸ್ರಾರುವರೆಗೆ ಜನರು ಸೇರಿದ್ದರು. “ಜಾತಸ್ಯಮರಣಂ ಧ್ರುವಂ” ಎಂಬಂತೆ ಹುಟ್ಟಿದವರು ಸಾಯಲೇಬೇಕಾದ್ದರಿಂದ ದುಃಖಿಸುವ ಅವರ ಸತಿಪುತ್ರಾನುಜರು ಮನಸ್ಸಮಾಧಾನಹೊಂದುವವರಾಗಲೆಂದೂ, ಮೃತರ ಆತ್ಮಕ್ಕೆ ಭಗವಂತನು ಶಾಂತಿಕೊಡಲೆಂದೂ ಹಾರೈಸುವ,

ಗುಣಗ್ರಾಹಿ.

ಜಗದ್ಗುರು ಭಜನಾಮಂದಿರಸ್ಥಾಪನೆ.

ತರೀಕೆರೆ ತಾ॥ ನಾರಣಾಪುರದ ಶ್ರೀ ಭಜನಾಮಂದಿರ ಮತ್ತು ವಾಚನಾಲಯಗಳ ಸೆಕ್ರೆಟರಿಯವರಾದ ವೇ॥ ಎಸ್. ನಂಜುಂಡಾರಾಧ್ಯ ಹಿರೇಮಠ ಇವರ ಆಹ್ವಾನದ ಮೇರೆಗೆ ಕಳೆದ ತಾ॥ 28 ನೇ ಸಾಯಂಕಾಲ ಊರಿನ ಪ್ರಮುಖಜನಗಳು ಭಜನಾಮಂದಿರದಲ್ಲಿ ಸಭೆಯನ್ನಲಂಕರಿಸಿದ್ದರು. ಸೆಕ್ರೆಟರಿಯವರು ‘ಊರಿನ ಜನರಲ್ಲಿ ಪರಸ್ಪರ ಹಬ್ಬಿರುವ ಅಂತಃ ಕಲಹಗಳ ದೆಸೆಯಿಂದ ಈ ಭಜನಾಮಂದಿರದ ಕಾರ್ಯಕ್ರಮಗಳು ಸರಿಯಾದ ರೀತಿ ನಡೆಯಲಾರವಾದಕಾರಣ ಈ ಕಾರ್ಯವು ನಿಲ್ಲಿಸಲ್ಪಡಬೇಕೆ ? ಸರ್ವರೂ ಏಕೀಕರಿಸಿ ಮುಂದೆ ಕೆಲವುಕಾಲವಾದರೂ ನಿರಾತಂಕವಾಗಿ ನಡೆಯುವಂತೆ ತಕ್ಕ ಏರ್ಪಾಡುಗಳನ್ನು ಮಾಡುವದರ ಮೂಲಕ ನಡಿಸಲ್ಪಡಬೇಕೆ ?’ ಎಂಬ ವಿಷಯವನ್ನು ಸಭಿಕರಮುಂದೆ ತಂದರು. ಜನಗಳಲ್ಲಿ ಪರಸ್ಪರ ದ್ವೇಷಾಸೂಯಾದಿಗಳು ಪ್ರಬಲಿಸಿ ಊರಿನ ಮುಖ್ಯದೇವತಾಕಾರ್ಯಾದಿಗಳು ನಿಂತುಹೋಗಿರುವ ಈ ಕಾಲದಲ್ಲಿ ಐಕಮತ್ಯದಿಂದ ನಡಿಸಬೇಕಾದ ಭಜನೆಯ ಕಾರ್ಯವು ಮುಂದೆ ಎಷ್ಟರಮಟ್ಟಿಗೆ ಸಕ್ರಮವಾಗಿ ನಡೆದೀತು ? ಎಂಬ ಶಂಕೆಗೊಳಗಾಗಿ ಸಭಿಕರು ಪ್ರತ್ಯುತ್ತರವನ್ನು ಕೊಡಲಾರದೆ ಮೌನದಿಂದಿದ್ದರು. ಆಗ ಶಿವಕೀರ್ತನೆಗ್ರಂಥಮಾಲಾ ಲೇಖಕರಾದ ಮ॥ ರಾ॥ ಎಚ್. ಕಂಬಸವಪ್ಪ, ಶಾಲಾಮಾಸ್ತರರು ಎದ್ದು ನಿಂತು ‘ಭಜನೆ’ ಎಂಬ ಪದದರ್ಥವನ್ನೂ ; ಗುರು, ದೈವಭಜನೆಯನ್ನು ನಿಶ್ಚಲಭಕ್ತಿಯಿಂದ ಮಾಡುವದರಿಂದ ಇಹಪರಗಳಲ್ಲಿ ಲಭಿಸಬಹುದಾದ ಫಲ ವಿಶೇಷಗಳನ್ನೂ ತಕ್ಕ ಉದಾಹರಣೆಗಳಿಂದ ಬೋಧಿಸಿದರಲ್ಲದೆ ಪ್ರಕೃತದಲ್ಲಿ ಒದಗಿರುವ ಷಷ್ಟ್ಯಾಬ್ದಾಂತ್ಯವತ್ಸರದ ದುಷ್ಕಾಲದೋಷ ಶಾಂತಿಗಾಗಿ ಇನ್ನೂ ಕೆಲವುಕಾಲ ಸಕ್ರಮವಾಗಿ ಭಜನಾಕಾರ್ಯವನ್ನು ನಡಸಲೇಬೇಕೆಂದೂ ; ಇದಕ್ಕಾಗಿ ಜನಗಳು ತಮ್ಮತಮ್ಮಲ್ಲಿ ಬೇರೂರಿರುವ ಅಂತಃ[illegible]ವನ್ನು ಈ ಸತ್ಕಾರ್ಯದ ಮೇಲೆ ಪ್ರಯೋಗಿಸದೆ ಸರ್ವರೂ ಏಕೀಕರಿಸಿ ಗುರು, ದೈವಭಕ್ತಿಯನ್ನು ಪ್ರದರ್ಶಿಸುವದರ ಮೂಲಕ ಜ್ಞಾನ ಮತ್ತು ಸುಖಪ್ರದಾಯಕರಾದ ಸದ್ಗುರು ಮತ್ತು ಶಂಕರಾನುಗ್ರಹಕ್ಕೆ ಪಾತ್ರರಾಗಿ ಕ್ಷಾಮಡಾಮರ ರೋಗೋಪದ್ರವಾದಿಗಳ ಬಾಧೆಯಿಂದ ಪಾರಾಗಬಹುದೆಂದೂ ; ಮತಧರ್ಮತತ್ವವನ್ನರಿಯದೆ ತರುಣರ ಮೌಢ್ಯವನ್ನು ಕಳೆಯುವದಕ್ಕಾಗಿ ಮತೋತ್ಕರ್ಷ, ನೀತಿಬೋಧಪ್ರದವಾದ ಕೆಲವು ಮತಗ್ರಂಥಗಳನ್ನು ಸಂಗ್ರಹಿಸಿ ‘ಶ್ರೀ ಜಯದೇವಮುರುಘರಾಜೇಂದ್ರ ವಾಚನಾಲಯ’ ದಲ್ಲಿ ಒಂದು ಲೈಬ್ರರಿಯನ್ನು ಸ್ಥಾಪಿಸುವದು ಅನುಕೂಲವಾದುದೆಂದೂ; ವಾಚನಾಲಯಕ್ಕೆ ಇನ್ನೂ ಕೆಲವು ವೃತ್ತಾಂತಪತ್ರಿಕೆಗಳನ್ನು ತರಿಸಲೇಬೇಕೆಂದೂ ಮಾಡಿದ ಭಾಷಣವು ಸಭಿಕರ ಮನಸ್ಸನ್ನು ಭೇದಿಸಿ ಅಂಕುರಿಸಿದ್ದ ವೈಕಲ್ಯವನ್ನು ದೂರಮಾಡಿತು. ಅನಂತರ ಸೇರಿದ್ದ ಸಭಿಕರು ಈ ಭಜನಾಕಾರ್ಯವನ್ನು ನಡೆಯಿಸಿಕೊಂಡುಬರುವುದಾಗಿಯೂ ; ರೀಡಿಂಗ್‌ರೂಮ್ ಮತ್ತು ಲೈಬ್ರರಿಗೆ ಪತ್ರಿಕಾಪುಸ್ತಕಗಳನ್ನು ಸಂಗ್ರಹಿಸುವ ಬಗ್ಗೆ ತಮ್ಮ ತಮ್ಮ ಶಕ್ತ್ಯನುಸಾರ ದ್ರವ್ಯಸಹಾಯ ಮಾಡುವುದಾಗಿಯೂ; ಎಚ್. ಕಂಬಸವಪ್ಪನವರು ಕೆಲವು ಮತಗ್ರಂಥಗಳನ್ನು ಲೈಬ್ರರಿಗೆ ಉಚಿತವಾಗಿ ಕೊಡುವುದಾಗಿಯೂ ; ಸೆಕ್ರೆಟರಿಯವರು ಒಂದು ಮಾಸಪತ್ರಿಕೆ, ಒಂದು ವಾರಪತ್ರಿಕೆ ಈ ರೀತಿ ಎರಡು ಪತ್ರಿಕೆಗಳನ್ನು ರೀಡಿಂಗ್‌ರೂಮಿನ ಹೆಸರಿಗೆ ತಾವು ತರಿಸುವುದಾಗಿಯೂ ವಾಗ್ದಾನಮಾಡಿದರು. ಬಳಿಕ ಶ್ರೀ ಜಗದ್ಗುರು ಮತ್ತು ಪರಶಿವ ಭಜನೆಯು ಸುಶ್ರಾವ್ಯವಾಗಿ ಬಾಲಕರಿಂದ ನಡಿಸಲ್ಪಟ್ಟು ಮಂಗಳಾನಂತರ ಸಭಿಕರಿಗೆ ಪುಷ್ಪತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ತರುವಾಯ ಶ್ರೀಬಸವೇಶ್ವರನಾಮಸಂಕೀರ್ತನೆಯಿಂದ ಸಭೆಯು ಮುಕ್ತಾಯವಾಯಿತು. ಓರ್ವ ಸಭಿಕ.

ವೀರಶೈವಮಹಾಸಭೆಯು ಜರುಗುವ ಕಾಲವು ಅನುಕೂಲವಿಲ್ಲವು.

1927 ನೇ ಜನವರಿ ತಾರೀಕು 1 ಮತ್ತು 2 ಅಥವ ವಿದ್ದಲ್ಲಿ 3 ರಲ್ಲಿ ಸಹ ವೀರಶೈವಮಹಾಸಭೆಯು ಕೂಡುವುದೆಂದು ಹುಬ್ಬಳ್ಳಿಯ ಸ್ವಾಗತಮಂಡಳಿಯವರು ಪ್ರಕಟಿಸಿರುವದರಮೇಲೆ, ಆ ಕಾಲವು ಸರ್ಕಾರೀ ಉದ್ಯೋಗಸ್ಥರಿಗೂ ಸ್ಕೂಲಿನವರಿಗೂ ವಕೀಲರು ಮತ್ತು ಕಕ್ಷೀಗಾರರಿಗೂ ಅನುಕೂಲವಿಲ್ಲದ್ದರಿಂದ ಕ್ರಿಸ್ತಮಸ್ ರಜಾಕಾಲದಲ್ಲಿ ಸಭೆ ನೆರೆಯುವುದು ಸರ್ವರಿಗೂ ಅನುಕೂಲವೆಂದು ಈ ಸ್ಟಾರ್‌ಪತ್ರಿಕಾ ಎಡಿಟರು ಸೂಚಿಸಿದ್ದರು. ಆದರೂ ಸ್ವಾಗತಮಂಡಳಿಯವರು ಆರೀತಿ ಕಾಲಬದಲಾವಣೆಮಾಡಿದ್ದು ಈ ವರೆಗೆ ಪ್ರಕಟವಾಗದಿರುವದನ್ನು ನೋಡಿದರೆ ಆರೀತಿ ಬದಲಾಯಿಸಲು ಅವರಿಗಿಷ್ಟವಿಲ್ಲವೆಂದು ತೋರುತ್ತದೆ. ಬಹಳ ವರ್ಷಗಳಿಂದ ನಿಂತುಹೋಗಿರುವ ಮಹಾಸಭೆಯು ಹುಬ್ಬಳ್ಳಿಯಲ್ಲಿ ಸೇರುವುದೆಂದು ಕೇಳಿ ಬಹಳ ಸಂತೋಷಪಟ್ಟು ಸಭೆಗೆ ಹೋಗಲು ಅನೇಕರು ಕುತೂಹಲಪಟ್ಟುಕೊಂಡಿರುತ್ತಾರೆ. ಆದರೆ ಕೋರ್ಟುಕಚೇರಿಗಳೂ ಸ್ಕೂಲುಗಳೂ ಜನವರಿ 3 ನೇ ತಾರೀಕಿನಲ್ಲಿ ತೆರೆಯಲ್ಪಡುತ್ತವಾದ್ದರಿಂದ ಅವುಗಳಿಗೆ ಹೋಗತಕ್ಕವರು 2 ನೇ ತಾರೀಕಿನೊಳಗೇ ಸ್ವಸ್ಥಳಗಳಲ್ಲಿರಬೇಕಾಗುತ್ತದೆ. ಆದ್ದರಿಂದ ಜನವರಿಗೆ ಮೊದಲೇ ಮಹಾಸಭೆಯು ಕೂಡುವುದಾದರೆ ನಮ್ಮಂಥ ಸರ್ಕಾರಿಯ ಉದ್ಯೋಗಸ್ಥರೂ ವಕೀಲರೂ, ಸ್ಕೂಲ್ಮಾಸ್ತರೂ ವಿದ್ಯಾರ್ಥಿಗಳೂ ಸಭೆಗೆ ಬರಲು ಅನುಕೂಲವಾಗುತ್ತದೆ, ಇಲ್ಲವಾದಲ್ಲಿ ಅನೇಕರು ಬರಲಾಗುವುದಿಲ್ಲ. ಆದ್ದರಿಂದ ಸ್ವಾಗತಮಂಡಳಿಯವರು ಈ ಸೂಚನೆಯನ್ನು ಅಲಕ್ಷಿಸದೆ ಸಮಸ್ತರಿಗೂ ಅನುಕೂಲಿಸುವಂತೆ ಸಭಾಕಾಲವನ್ನು ಗೊತ್ತುಮಾಡಬೇಕೆಂದು ಒತ್ತಿ ಹೇಳುತ್ತೇನೆ.

ಒಬ್ಬ ಸರ್ಕಾರಿ ಉದ್ಯೋಗಸ್ಥ.

[ಇಂತಹ ಲೇಖನಗಳು ಮೈಸೂರುದೇಶದ ಮತ್ತು ಹೊರಗಡೆಯ ಅನೇಕ ಸ್ಥಳಗಳಿಂದ ಬಹಳವಾಗಿ ಬಂದಿರುತ್ತವೆ. ಆದರೆ ಅವೆಲ್ಲವುಗಳ ಆಶಯವೂ ಒಂದೇ ಆಗಿರುವುದರಿಂದ ಈ ಸ್ಟಾರ್‌ಪತ್ರಿಕೆಯಲ್ಲಿ ಪ್ರಕಟಿಸಲಿಲ್ಲವಾಗಿ ಆಲೇಖಕರುಗಳು ದಯೆಯಿಟ್ಟು ಕ್ಷಮಿಸಬೇಕಾಗಿ ಆಶಿಸುತ್ತೇವೆ.—ಸಂ.]

ವೀರಶೈವರೇ ಇತ್ತ ಗಮನಿಸಿರಿ.

ಕರ್ಣಾಟಕಕವಿಚರಿತಕರ್ತರಾದ ಪ್ರಾಚ್ಯವಿದ್ಯಾವೈಭವ ಪ್ರಾಕ್ತನವಿಮರ್ಶ ವಿಚಕ್ಷಣ ರಾವಬಹದ್ದೂರ ರಾ॥ ನರಸಿಂಹಾಚಾರ್ಯ ಎಂ. ಎ., ಎಂ. ಆರ್. ಎ. ಎಸ್. ಬೆಂಗಳೂರು ಕ॥ ಕವಿಚರಿತೆಯ 3 ನೆಯ ಭಾಗವನ್ನು ಪೂರ್ತಿಗೊಳಿಸುವದಕ್ಕಾಗಿ ಅನೇಕ ವಿಷಯಗಳ ಬಗ್ಗೆ ನಮಗೆ ಬರೆದಿರುವರು. ನಾವು ಅವರಿಗೆ ಹಾನಗಲ್ಲ ವಿರಕ್ತಮಠದ ಕುಮಾರ ವಿಭು (ಸ್ವಾಮಿ) ಕವಿಲಿಂಗ, ಹಡಪದ ಅಪ್ಪಣ್ಣನವರ ಧರ್ಮಪತ್ನಿಯಾದ ಲಿಂಗಮ್ಮನವರ ವಚನ, ಕಡಕೊಳ್ಳದ ಮಹಂತಸ್ವಾಮಿಗಳ ವಚನಗಳು, ಕದಿರೆ ತಿಪ್ಪವ್ವೆಗಳ ವಚನಗಳೇ ಮೊದಲಾದ ಅನೇಕ ವಿಷಯಗಳನ್ನು ತಿಳಿಸಿದುದಲ್ಲದೆ ಕವಿಚರಿತೆಯ 1 ನೇ ಭಾಗದ ತಿದ್ದಿದ ಮುದ್ರಣದಲ್ಲಿರುವ ಒಂದೆರಡು ನ್ಯೂನತೆಗಳನ್ನು ಸಹ ತೋರಿಸಿಕೊಟ್ಟದ್ದೆನು, ಹಾಗೂ ಕವಿಚರಿತೆಯಲ್ಲಿ ವೀರಶೈವಕವಿಗಳ ಸಂಖ್ಯೆಯು ಹೆಚ್ಚಾಗಿ ಬೆಳೆಯಲೆಂಬ ಸದುದ್ದೇಶದಿಂದ “ಬಸವರಾಜ” ಪತ್ರಿಕೆಯಲ್ಲಿ ಕಳೆದ ತಿಂಗಳಲ್ಲಿ “ವೀರಶೈವರೇ ಗದ್ದುಗೆಯಮೇಲಿನ ಗಂಟನ್ನು ಬಿಚ್ಚಿರಿ” ಎಂಬ ಶಿರೋಲೇಖದಮೇಲೆ ಪ್ರಾಚೀನಗ್ರಂಥಗಳನ್ನು ನನ್ನಕಡೆಗೆ ಕಳುಹಿಸಬೇಕೆಂದು ಅರಿಕೆಮಾಡಿಕೊಂಡಿದ್ದೆನು. ಈ ಬಗ್ಗೆ ಸಾಕಾದಷ್ಟು ಗ್ರಂಥಗಳು ಕರಗತವಾಗಲಿಲ್ಲ. ದೊರೆದಿಷ್ಟು ಗ್ರಂಥಗಳ ಮೇಲಿಂದಲೇ ವಿಷಯಗಳನ್ನು ಕ್ರೋಢೀಕರಿಸಿ ಸದರಿ ನರಸಿಂಹಾಚಾರ್ಯರಿಗೆ ತಿಳಿಸಲು ಅವರು ಈ ಕೆಳಗೆ ವಿವರಿಸಿದಂತೆ ಪತ್ರ ಬರೆದಿದ್ದಾರೆ.

ಶ್ರೀಮಾನ್ ದಾವಣಗೆರೆ ನಿಶಾನಿಮಠದ ಶಾಂತವೀರಾರ್ಯರ ಸನ್ನಿಧಿಯಲ್ಲಿ ವಿಜ್ಞಾಪನೆ. ನೀವು ಪ್ರೀತಿಯೊಡನೆ ರಿಜಿಸ್ಟರ್ ಪ್ಯಾಕೆಟ್ ಮೂಲಕ ಕಳುಹಿಸಿಕೊಟ್ಟ ಕವಿಗಳ ವಿಷಯವಾದ ಅಂಶಗಳು ತಲಪಿ ಬಹಳ ಸಂತೋಷವಾಯಿತು. ನೀವು ಅಭಿಮಾನದೊಡನೆ ನನಗೋಸ್ಕರ ಇಷ್ಟು ಶ್ರಮವಹಿಸಿದ್ದಕ್ಕಾಗಿ ಬಹಳ ಕೃತಜ್ಞನಾಗಿದ್ದೇನೆ. ನಾನು ಮೈಸೂರಿಗೆ ಯೂನಿವರ್ಸಿಟಿ ಸಂಬಂಧದಲ್ಲಿ ಕನ್ನಡಭಾಷೆಯ ಚರಿತ್ರದ ವಿಷಯವಾಗಿ ಉಪನ್ಯಾಸಗಳನ್ನು ಮಾಡುವುದಕ್ಕೋಸ್ಕರ ಪ್ರಯಾಣಮಾಡಿ ಅಲ್ಲಿ 5-6 ದಿವಸವಿದ್ದು ನೆನ್ನೆತಾನೆ ಇಲ್ಲಿಗೆ ಬಂದು ಸೇರಿದೆನು. ಬಂದಕೂಡಲೆ ನಿಮ್ಮ ಪ್ಯಾಕೆಟ್ಟನ್ನು ನೋಡಿ ಬಹಳ ಸಂತೋಷವಾಯಿತು. ಆಧುನಿಕಕವಿಗಳ ಹೆಸರುಗಳನ್ನೂ, ಮಾಹಿತಿಯನ್ನೂ ಕೊಟ್ಟಿದ್ದೀರಿ. ಈ ಅಂಶಗಳನ್ನು ಸಾಧ್ಯವಾದಮಟ್ಟಿಗೆ 3 ನೆಯ ಸಂಪುಟದ ಉಪೋದ್ಘಾತದಲ್ಲಿ ಸೇರಿಸಲು ಪ್ರಯತ್ನಪಡುತ್ತೇನೆ. ನೀವು ಬರೆದ ಅಂಶಗಳನ್ನು ತಕ್ಕಮಟ್ಟಿಗೆ ನೋಡಿದ್ದರಲ್ಲಿ ಹಲವು ಹೊಸವಿಷಯಗಳು ಇರುವಂತೆ ತಿಳಿಯುತ್ತದೆ. ಮೈಸೂರಲ್ಲಿದ್ದಾಗ ಕರಿಬಸವಶಾಸ್ತ್ರಿಗಳವರ ಮನೆಯಲ್ಲಿ ಇದ್ದ ಓಲೆಪುಸ್ತಕಗಳನ್ನು ಶೋಧಿಸುವಾಗ ಎರಡು ಹೊಸಗ್ರಂಥಗಳು ಸಿಕ್ಕಿದವು. (1) ಸಿದ್ಧಲಿಂಗಾರ್ಯಕೃತ ಮಳಯರಾಜಯ್ಯನ ಕಾವ್ಯ. (2) ಸಿದ್ಧರಾಮೇಶಕೃತ ಷಟ್ಸ್ಥಲತಿಲಕ ಮೊದಲನೆಯದು ವಾರ್ಧಕಷಟ್ಪದಿ 34 ಸಂಧಿ. ಎರಡನೆಯದು ವಾರ್ಧಕಷಟ್ಪದಿ ವೃತ್ತ ಕಂದ ಸಹ. ಎರಡೂ ಒಳ್ಳೆಯ ಗ್ರಂಥಗಳು. ಇವುಗಳ ವಿಷಯವನ್ನು ಉಪೋದ್ಘಾತದಲ್ಲಿ ಸೇರಿಸುತ್ತೇನೆ. ನೀವು ಕ॥ ಕವಿಚರಿತೆಯ 1 ನೇ ಭಾಗದಲ್ಲಿ ತೋರಿಸಿರುವ ತಪ್ಪುಗಳನ್ನು ತಿದ್ದುತ್ತೇನೆ. ಮೈಸೂರಲ್ಲಿ ಉಪನ್ಯಾಸದ ಆರಂಭದ ದಿವಸ ರಾಜಶ್ರೀವಿಭೂಷಣ ಲಿಂಗರಾಜೇಅರಸಿನವರು ಅಧ್ಯಕ್ಷರಾಗಿದ್ದರು. ಪ್ರತಿದಿನವೂ ಅನೇಕ ಜನರು ಸೇರುತ್ತಿದ್ದರು ಇತ್ಯಾದಿ.

ಮಲ್ಲೇಶ್ವರ,
ಬೆಂಗಳೂರು.
5-12-26.

ಇನ್ನುಮೇಲೆಯಾದರೂ ವೀರಶೈವರು ಪ್ರಾಚೀನಗ್ರಂಥಗಳನ್ನು ಕಳುಹಿಸಿದ್ದಲ್ಲಿ ಅವುಗಳ ವಿಮರ್ಶನೆಯನ್ನು ಮಾಡಿ ಕ॥ ಕವಿಚರಿತೆಗಾರರಲ್ಲಿಗೆ ಕಳುಹಿಸಿಕೊಡುವೆನು. ದಯೆಯಿಟ್ಟು ವೀರಶೈವಬಾಂಧವರು ಪ್ರಾಚೀನಗ್ರಂಥೋದ್ಧಾರದ ಕಡೆಗೆ ಲಕ್ಷ್ಯ ಕೊಡಬೇಕಾಗಿ ಪ್ರಾರ್ಥನೆ.

ತಮ್ಮ ವಿನಮ್ರ,
ನಿಶಾನಿಮಠದ ಶಾಂತವೀರಾರ್ಯರು, ದಾವಣಗೆರೆ.

ನೈಜಾಮ ಸೇಡಂಗ್ರಾಮದ ಬಸವೇಶ್ವರ ಧರ್ಮಾದಾಯದ ಸುಧಾರಣೆ.

ನಿಜಾಮ ಇಲಾಖೆಯಲ್ಲಿ ಭಾರೀ ವ್ಯಾಪಾರದ ಅನೇಕ ಗ್ರಾಮಗಳಿರುವವು. ಗುಲಬುರ್ಗಾ ತಾಲ್ಲೂಕು ಸೇಡಂಗ್ರಾಮವು ಅಂಥವುಗಳಲ್ಲಿ ಒಂದಾಗಿದೆ. ಯಾಕೆಂದರೆ, ಇಲ್ಲಿ ಒಂದು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಗಳ ಧಾನ್ಯ ವ್ಯಾಪಾರವಾಗುವದೆಂದು ಕರುಡಗಿರಿಯ ಲೆಖ್ಖದಿಂದ ತಿಳಿಯಬರುತ್ತದೆ. ಇಂಥಾ ಭಾರೀ ವ್ಯಾಪಾರದಮೇಲೆ ಶೇಕಡಾ 4 ಆಣೆಯಂತೆ ಶ್ರೀ ಬಸವೇಶ್ವರದೇವರ ನಾಮದಿಂದ ಧರ್ಮಾದಾಯವನ್ನು ತೆಗೆಯುವರು. ಇಷ್ಟು ದೊಡ್ಡ ಉತ್ಪನ್ನವು ಈ ಪ್ರದೇಶದಲ್ಲಿ ಮತ್ತೆಲ್ಲಿಯೂ ಇಲ್ಲ. ಈ ಹಣದಿಂದ ಇಷ್ಟುದಿವಸಗಳವರೆಗೆ ಯಾವ ಸತ್ಕಾರ್ಯಗಳನ್ನೂ ಮಾಡದೆ ಇದ್ದ ಪ್ರಯುಕ್ತ ಮಾರವಾಡಿಗಳಿಗೂ ವೀರಶೈವರಿಗೂ ಕಲಹ ನಡೆದು 50 ಸಹಸ್ರ ರೂಪಾಯಿಗಳನ್ನು ಕೋರ್ಟಿಗಾಗಿ ಉಭಯಪಕ್ಷದವರೂ ಹಾಳುಮಾಡಿದರು. ಕಡೆಗೆ ಸುಪರಿಣಾಮವು ಹೊರಡದೆ ಮೊದಲಿದ್ದಂತೆಯೇ ಉಳಿಯಿತು. ಅದಕ್ಕೋಸ್ಕರವಾಗಿ ಗುರುಮಠಕಲ್ಲ ಶ್ರೀಮನ್ನಿರಂಜನ ಶಾಂತವೀರ ಮಹಾಸ್ವಾಮಿಗಳವರು ಸರ್ವರ ಕೋರಿಕೆಯ ಪ್ರಕಾರ ಕಳೆದ ಭಾದ್ರಪದ ಶುದ್ಧ ೧೦ ರಲ್ಲಿ ಇಲ್ಲಿಗೆ ದಯೆಮಾಡಿಸಿ ಅಹೋರಾತ್ರಿ ಪರಿಶ್ರಮಪಟ್ಟು ಸರ್ವರ ಭಾವನೆಗಳನ್ನು ಏಕೀಕರಿಸಿದರಲ್ಲದೆ, ಅಪಾರವಾದ ಹಣವು ವ್ಯರ್ಥವಾಗಿ ಹಾಳಾಗುತ್ತಿರುವದನ್ನು ನಿಲ್ಲಿಸಿ ಸರ್ವರೂ ತೃಪ್ತರಾಗಲು ಯೋಗ್ಯಯೋಜನೆಯನ್ನು ತೆಗೆಯದಿದ್ದರೆ ಗತ್ಯಂತರವಿಲ್ಲವೆಂದು ತಿಳಿದು ಇದೇ ಕಾರ್ತೀಕ ಶು॥ ೬ ಗುರುವಾರ ಮಹಾಸ್ವಾಮಿಗಳ ಅಪ್ಪಣೆಯಮೇರೆಗೆ ಬಸವೇಶ್ವರ ದೇವಾಲಯದ ಭವ್ಯಮಂದಿರದಲ್ಲಿ ಪುರಪ್ರಮುಖರು ಉತ್ಸವಪೂರ್ವಕವಾಗಿ ಕರೆದುಕೊಂಡುಬಂದಿದ್ದ ವಿಜಾಪೂರ ರಾವಸಾಹೇಬ ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ., ಯವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಗೂಡಿಸಲ್ಪಟ್ಟಿತು. ಈ ಸಭೆಗೆ ಜಿಲ್ಲಾ ಪೋಲೀಸ ಮೊಹತಮಿನ ಸಾಹೇಬರೂ, ತಾ॥ ಸರ್ಕಲ್ ಸಾಹೇಬರೂ, ವಿಜಾಪೂರು ಧನಶೆಟ್ಟಿ ಶಂಕರಪ್ಪನವರೂ, ಯಾದಗಿರಿ ಶಂಕರಕಾಲೇಜದ ಪ್ರಿನ್ಸಿಪಾಲ ಚಂದ್ರಶೇಖರಶಾಸ್ತ್ರಿಗಳೂ, ಗುಲಬುರ್ಗಾ ಕೋಠಾರಿ, ಬಿ.ಎ., ಎಲ್‌ಎಲ್.ಬಿ., ವಕೀಲರೂ, ಸ್ಕೂಲ ಹೆಡ್ಮಾಸ್ಟರ್ ಮಜಹರ ಅಲ್ಲಿಸಾಹೇಬರೂ, ಇಳಕಲ್ಲ ಕಂಠೀ ರುದ್ರಪ್ಪನವರೂ, ನಾಗರಾಳ ವಕೀಲ ಗುರುಶಾಂತಯ್ಯನವರೂ, ಸೂಲೇಪೇಟೆ ವಕೀಲ ನಾಗಪ್ಪನವರೂ, ಚಿತಾಪೂರ ವಕೀಲ ಶರಣಪ್ಪನವರೂ ಆಗಮಿಸಿದ್ದರಲ್ಲದೆ ಇನ್ನೂ ಅನೇಕ ಸ್ಥಲಪರಸ್ಥಲದ ಪುಢಾರಿಗಳು ಬಂದಿದ್ದರು. ಪ್ರಥಮದಲ್ಲಿ ವಕೀಲ ನಾಗಪ್ಪನವರು ಸ್ವಾಗತಪರ ಭಾಷಣವನ್ನು ಮಾಡಿದನಂತರ ಕೋಠಾರಿ ವಕೀಲರು ಇಂಥ ಘನವಾದ ಸಭೆಗೆ ಅಧ್ಯಕ್ಷರಾಗಲು ರಾವಸಾಹೇಬ ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ., ಯವರೇ ಸಕಲರೀತಿಯಿಂದಲೂ ಯೋಗ್ಯರಾಗಿರುವರೆಂದು ಸಮರ್ಥಿಸಿದರು. ಅದಕ್ಕೆ ವಕೀಲ ನಾಗಪ್ಪನವರು ಅನುಮೋದನ ಕೊಟ್ಟದ್ದಕ್ಕೆ ಸರ್ವರೊಪ್ಪಿಗೆಯಾಗಿ ರಾ॥ ಸಾ॥ ಹಳಕಟ್ಟಿಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಸಭೆಯ ಉದ್ದೇಶಕ್ಕನುಗುಣವಾದ ಧಾರ್ಮಿಕ, ಔದ್ಯೋಗಿಕವಿಷಯಗಳ ಬಗ್ಗೆ ಸರಸವಾದ ಭಾಷಣವನ್ನು ಮಾಡಿದರು. ಅನಂತರ ಸಮಿಪಗ್ರಾಮಗಳ ಪ್ರಮುಖಜನಗಳು ಕೂಡಿ ಬಹುಜನರ ಸಹಿಗಳಿಂದ ಬಸವೇಶ್ವರದೇವರ ಧರ್ಮಾದಾಯವನ್ನು ಸುವ್ಯವಸ್ಥೆ ಮಾಡುವ ಯೋಗ್ಯಜನರಿಗೆ ವಹಿಸಬೇಕೆಂತಲೂ ದೇಶಹಿತಕ್ಕಾಗಿ ಅದು ವಿನಿಯೋಗವಾಗಬೇಕೆಂತಲೂ ಕೊಟ್ಟ ಅರ್ಜಿಯ ಮೇಲೆ ಚರ್ಚೆಗಳು ನಡೆದು ಕಡೆಗೆ ಅಧ್ಯಕ್ಷರು ಮಹಾಸ್ವಾಮಿಗಳವರ ಅಭಿಪ್ರಾಯವನ್ನು ತಿಳಿದುಕೊಂಡು ಬಹುಯುಕ್ತಿಯಿಂದ ಸರ್ವರೂ ಒಪ್ಪುವಂತೆ ಕೆಳಗೆ ವಿವರಿಸಿದ ತಮ್ಮ ಅಭಿಪ್ರಾಯವನ್ನು ಮುಂದಿಟ್ಟರು. ಅನೂಚಾನವಾಗಿ ನಡೆದುಕೊಂಡುಬಂದ ದೇವಪೂಜಾದಿಗಳನ್ನು ನೆರವೇರಿಸುತ್ತಿರಬೇಕಲ್ಲದೆ ಒಂದು ಶಿಕ್ಷಣಾಲಯ, ಒಂದು ಔಷಧಾಲಯ, ಗೋರಕ್ಷಣ, ಸದಾವರ್ತ ಈ ಸಂಸ್ಥೆಗಳನ್ನು ಸ್ಥಾಪಿಸಬೇಕೆಂತಲೂ, ಇವುಗಳ ಸುವ್ಯವಸ್ಥೆಗಾಗಿ ಮಹಾಸ್ವಾಮಿಗಳವರನ್ನೇ ಪ್ರಸಿಡೆಂಟರನ್ನಾಗಿಯೂ, 11 ಜನರನ್ನು ಮ್ಯಾನೇಜಿಂಗ್‌ಕಮಿಟಿ ಮೆಂಬರುಗಳನ್ನಾಗಿಯೂ 49 ಜನರನ್ನು ಜನರಲ್‌ಕಮಿಟಿ ಮೆಂಬರುಗಳನ್ನಾಗಿಯೂ ಇಂತಿಂಥವರನ್ನೇ ಮಾಡಬೇಕೆಂತಲೂ, ಸೆಕ್ರೆಟರಿ ಖಜಾನದಾರರನ್ನು ಮಾಡಲು ಮತಭೇದವಿದ್ದಪ್ರಯುಕ್ತ ಯೋಗ್ಯರನ್ನು ಆರಿಸಿಕೊಳ್ಳಲು ಮ್ಯಾನೇಜಿಂಗ್‌ಕಮಿಟಿಗೆ ತಾತ್ಕಾಲಿಕ ಅಧಿಕಾರವನ್ನು ಕೊಡಬೇಕೆಂತಲೂ ಹೆಚ್ಚಾಗಿ ಉಳಿದ ಹಣವನ್ನು ಕಮಿಟಿಯ ಅಭಿಪ್ರಾಯದ ಪ್ರಕಾರ ಸಾರ್ವಜನಿಕ ಕಾರ್ಯಗಳಿಗೆ ವಿನಿಯೋಗಿಸಬೇಕೆಂತಲೂ ಸೂಚಿಸಿದರು. ಈ ವಿಷಯಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು. ಅನಂತರ ವಿಜಾಪೂರ ಧನಶೆಟ್ಟಿ ಶಂಕರಪ್ಪನವರು ಮತಾಭಿಮಾನೋದ್ರೇಕದಿಂದ ರಾ॥ ಸಾ॥ ಹಳಕಟ್ಟಿಯವರು ಈವರೆವಿಗೂ ವೀರಶೈವಸಮಾಜಸುಧಾರಣೆಗಾಗಿ ದಿವಾರಾತ್ರಿ ಶ್ರಮಪಡುತ್ತಿರುವ ವಿಷಯಗಳನ್ನು ವಿಶದವಾಗಿ ಹೇಳಿ ಸಭಿಕರನ್ನು ಆನಂದಗೊಳಿಸಿ ಪೋಲೀಸ ಮೊಹತಮಿನ ಸಾಹೇಬರ ಸದ್ವರ್ತನವನ್ನು ನೋಡಿ ತಮಗಾದ ಸಂತೋಷವನ್ನು ವ್ಯಕ್ತಪಡಿಸಿದರು. ಆಮೇಲೆ ಕೋಠಾರೆ ವಕೀಲರೂ ಸ್ಕೂಲ ಹೆಡ್ಮಾಸ್ತರ ಸಾಹೇಬರೂ ಉರ್ದುಭಾಷೆಯಲ್ಲಿ ಸಂಸ್ಥೆಯ ವಿಷಯವಾಗಿ ಸಮಯೋಚಿತ ಭಾಷಣವನ್ನು ಮಾಡಿದರು. ಕಡೆಗೆ ಮಹಾಸ್ವಾಮಿಗಳವರು ಎಲ್ಲ ವಿಷಯಗಳ ಬಗ್ಗೆ ಸಂಕ್ಷೇಪವಾಗಿಯೂ ರಾ॥ ಸಾ॥ ಹಳಕಟ್ಟಿಯವರು ವೀರಶೈವರ ಐತಿಹಾಸಿಕ ಧಾರ್ಮಿಕ ವಾಙ್ಮಯಗಳಿಗಾಗಿ ಎಷ್ಟು ಶ್ರದ್ಧೆಯಿಂದ ದೀರ್ಘಪ್ರಯತ್ನ ಮಾಡುತ್ತಿರುವರೆಂಬ ಸಂಗತಿಯನ್ನು ಅಪ್ಪಣೆಕೊಡಿಸಿದನಂತರ ಸರ್ವರಿಗೂ ಪುಷ್ಪಮಾಲಿಕೆಗಳು ಹಾಕಲ್ಪಟ್ಟು ಮಹಾಸ್ವಾಮಿಗಳವರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮರುದಿವಸ ರಾ॥ ಸಾ॥ ಹಳಕಟ್ಟಿಯವರು ಈ ದೇಶದಲ್ಲಿ ಕನ್ನಡಪ್ರಾಂತವು ಎಷ್ಟಿದೆ ಎಂಬುದನ್ನೂ ನೂರಾರು ಹಳೇ ದೇಗುಲಗಳಿಂದ ಕೂಡಿದ ಈ ಗ್ರಾಮದ ಪ್ರಾಚೀನ ಇತಿಹಾಸವನ್ನೂ, ಶಿಲಾಲಿಪಿಗಳನ್ನೂ ಶೋಧನೆಮಾಡಿಕೊಂಡರು. ಇವರ ಶೋಧಕಬುದ್ಧಿಯನ್ನೂ ಅವಿಚ್ಛಿನ್ನವಾದ ಪ್ರಯತ್ನವನ್ನೂ ಶಾಂತತೆಯನ್ನೂ ನೋಡಿ ಬೆರಗಾದೆವು. ನಮ್ಮೂರ ಧರ್ಮಾದಾಯದ ಅನಂತತೊಂದರೆಗಳನ್ನು ಸುಧಾರಿಸಲು 1½ ತಿಂಗಳಿಂದಲೂ ಮಹತ್ತರವಾದ ಪ್ರಯತ್ನಮಾಡಿ ನಮ್ಮಗಳನ್ನು ಸನ್ಮಾರ್ಗಕ್ಕೆ ಹಚ್ಚಿದ ಮಹಾಸ್ವಾಮಿಗಳವರನ್ನು ಅನನ್ಯಭಾವದಿಂದ ಸ್ತುತಿಸಿ ಈ ಲೇಖನವನ್ನು ವಿರಮಿಸುವೆನು.

ಓರ್ವ ಪುರನಿವಾಸಿ.

ಶ್ರೀಕ್ಷೇತ್ರಕಾಶಿಯಲ್ಲಿ ವೀರಶೈವವಿದ್ಯಾರ್ಥಿಮಂದಿರದ ಅಭ್ಯುದಯವು.

ಪ್ರತಿಯೊಂದು ಸಮಾಜವೂ ಸಂಪೂರ್ಣ ಉನ್ನತಿಯನ್ನೈದಬೇಕಾದರೆ ಆ ಸಮಾಜದ ಧಾರ್ಮಿಕ, ನೈತಿಕ, ರಾಜಕೀಯ, ಔದ್ಯೋಗಿಕ ಮೊದಲಾದ ಅವಯವಗಳು ಪರಿಪೂರ್ಣತೆಯನ್ನು ಹೊಂದಬೇಕಾಗುತ್ತವೆ. ಪ್ರಕೃತದಲ್ಲಿ ನಮ್ಮ ವೀರಶೈವಸಮಾಜವು ಮೇಲಿನ ಸಮಸ್ತ ಪ್ರಧಾನ ಅಂಗಗಳಿಂದ ಅಷ್ಟೊಂದು ಭವ್ಯತೆಯನ್ನು ಹೊಂದಿಲ್ಲವೆಂಬುದು ಪ್ರತಿಯೊಬ್ಬ ವೀರಶೈವನಿಗೂ ತಿಳಿದ ಸಂಗತಿಯೇ ಇರುವದು. ರಾಜಕೀಯ, ಔದ್ಯೋಗಿಕ ಶಿಕ್ಷಣಗಳ ಸಲುವಾಗಿ ಸಮಾಜದಲ್ಲಿ ಅಲ್ಲಲ್ಲಿಗೆ ತಕ್ಕಮಟ್ಟಿಗೆ ಪ್ರಯತ್ನಗಳು ನಡೆದಿದ್ದು ಫಲರೂಪದಿಂದ ಕಂಡುಬರುತ್ತಲಿವೆ. ಸಮಾಜವೆಂಬ ಪುರುಷನ ಶಿರಃಪ್ರಾಯವಾದ ಧಾರ್ಮಿಕಶಿಕ್ಷಣವು ಪರಿಪೂರ್ಣತೆಯನ್ನು ಹೊಂದದಿದ್ದರೆ ಅದು ಶಿರವರಿದ ಮುಂಡದಂತೆ ನಿಜವಾಗಿ ಅಸಹ್ಯತೆಯಿಂದ ತೊಳಲಬೇಕಾಗುವದು. ಈ ಧಾರ್ಮಿಕಶಿಕ್ಷಣದಿಂದ ಸಮಾಜವು ಪರಿಪುಷ್ಟವಾಗಬೇಕಾದರೆ ವೇದವೇದಾಂಗಗರ್ಭಿತವಾದ ಗೀರ್ವಾಣಭಾಷೆಯು ಸಮಾಜದ ಪ್ರತಿಯೊಂದು ಮೂಲೆಯಲ್ಲಿಯೂ ಪ್ರಚಲಿಸಬೇಕಾಗುವುದು. ಸದ್ಯಃ ಯಾವದೊಂದು ಸಮಾಜವು ಇಲ್ಲವೆ ದೇಶವು ಒಳ್ಳೇ ಊರ್ಜಿತಸ್ಥಿತಿಯನ್ನು ಹೊಂದಿದೆಯೆಂದು ಹೇಳಿದರೆ, ಅದಕ್ಕೆ ಸಂಸ್ಕೃತಭಾಷೆಯ ಪ್ರಾಮುಖ್ಯತೆಯೇ ಮೂಲಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದು. ಈ ಮಾತಿಗೆ ಅನೇಕ ದೃಷ್ಟಾಂತಗಳನ್ನು ಪ್ರಾಜ್ಞರಾದ ವಾಚಕರ ಅವಗಾಹನೆಗೆ ಈಗ ತಂದು ಕೊಡುವದು ವಿಹಿತವಾಗಲಾರದು. ಈ ವಿದ್ಯೆಯು ಉತ್ತರಹಿಂದುಸ್ಥಾನದಲ್ಲಿ ಅದರಲ್ಲಿಯೂ ವಿಶೇಷವಾಗಿ ಕಾಶಿ ಮಹಾಪಟ್ಟಣದಲ್ಲಿ ಬಹುಪ್ರಾಚೀನಕಾಲದಿಂದ ಅವ್ಯಾಹತವಾಗಿಯೂ ಸುವ್ಯವಸ್ಥಿತವಾಗಿಯೂ ನಡೆಯುತ್ತ ಬಂದಿದೆ. ಪ್ರಕೃತದಲ್ಲಿ ಸರಕಾರದಿಂದ ಸಹಾಯವನ್ನು ಹೊಂದುತ್ತಿದ್ದ 318 ಕಾಲೇಜುಗಳೂ ನೂರಾರು ಸಂಸ್ಕೃತಮಹಾವಿದ್ಯಾಲಯಗಳೂ ಸುರಕ್ಷಿತವಾಗಿ ನಡೆದಿರುವವಲ್ಲದೆ ಗೌರ್ನಮೆಂಟಿನ ಅಧಿಕಾರದಲ್ಲಿರುವ ವಿಕ್ಟೋರಿಯಸಂಸ್ಕೃತಕಾಲೇಜ ಎಂಬ ಪ್ರಧಾನವಿದ್ಯಾಲಯವೂ ಬಹುಪ್ರಾಚೀನಕಾಲದಿಂದ ಚೆನ್ನಾಗಿ ನಡೆಯುತ್ತ ಬಂದಿರುತ್ತದೆ. ಈ ಎಲ್ಲ ಶಾಲೆ ಕಾಲೇಜುಗಳಲ್ಲಿ ಸುಮಾರು 10-12 ಸಾವಿರ ಸಂಸ್ಕೃತವಿದ್ಯಾರ್ಥಿಗಳು ಅಧ್ಯಯನಮಾಡುತ್ತಲಿದ್ದಾರೆ. ಇಂಥ ಸಂಸ್ಕೃತೋನ್ನತಿಯ ಕಾಲದಲ್ಲಿ ಇಲ್ಲಿಯ ಸಂಸ್ಕೃತವಿದ್ಯಾಲಯಗಳಲ್ಲಿ ನಮ್ಮ ಸಮಾಜಬಾಂಧವರ (ವೀರಶೈವವಿದ್ಯಾರ್ಥಿಗಳ) ಜನಸಂಖ್ಯೆಯು 30 ಕ್ಕೆ ಹೆಚ್ಚಿಲ್ಲವೆಂದು ಹೇಳುವದು ಸಮಾಜಕ್ಕೆ ಬಹುಲಜ್ಜಾಸ್ಪದವಾದ ಸಂಗತಿಯು. 30-35 ಲಕ್ಷ ವೀರಶೈವರ ಜನಸಂಖ್ಯೆಯೆತ್ತ, ಕೇವಲ 30 ಜನ ಸಂಸ್ಕೃತಾಭ್ಯಾಸಿಗಳ ಸಂಖ್ಯೆಯೆತ್ತ ! ಇವುಗಳಿಗೆ ಭೂಮ್ಯಾಕಾಶಗಳಷ್ಟು ಅಂತರವೇ ಸರಿ. ಈ ಪ್ರಮಾಣದಮೇಲಿಂದ ಸಮಾಜದ ಅಧೋಗತಿಯು ಬಹುಸ್ಪಷ್ಟವಾಗಿ ಕಂಡುಬರುತ್ತದೆ. ಇದು ಅತ್ಯಂತ ವಿಷಾದಕರಸಂಗತಿಯು. ಧಾರ್ಮಿಕವಿದ್ಯಾಭ್ಯಾಸದ ಈ ತೊಂದರೆಯು ನಮ್ಮ ಸಮಾಜದಲ್ಲಿ ಉಂಟಾಗಿರಲಿಕ್ಕೆ ಅನೇಕ ಪ್ರಬಲವಾದ ಕಾರಣಗಳಿರುತ್ತವೆ. ಅವುಗಳ ನಿವಾರಣೆಯ ಬಗ್ಗೆ ಸಮಾಜದ ಮುಖಂಡರು ಒಳ್ಳೇ ಕಳಕಳಿಯಿಂದ ತನುಮನಧನಗಳಿಂದ ಹೆಣಗಾಡಿದರೆ ಕ್ಷಿಪ್ರದಲ್ಲಿಯೇ ನಮ್ಮ ಸಮಾಜವು ಸುಧಾರಿಸಿದ ಸಮಾಜಗಳ ಗಣನೆಯಲ್ಲಿ ನಿಶ್ಚಯವಾಗಿ ಬರುವದು. ಈ ಕ್ಷೇತ್ರದಲ್ಲಿ ಇತರ ಜಾತಿಯ ಮತ್ತು ದೇಶದ ಸಂಸ್ಕೃತ ವಿದ್ಯಾರ್ಥಿಗಳಿಗೆ ಎಷ್ಟೋ ಅನ್ನಸತ್ರಗಳೂ ಎಷ್ಟೋ ಸ್ವತಂತ್ರ ಸಂಸ್ಕೃತ ವಿದ್ಯಾಲಯಗಳೂ ಇರುತ್ತವೆ. ಇಂಥ ಸೌಕರ್ಯಗಳು ನಮ್ಮ ಬಾಂಧವರಿಗೆ ಒಂದೂ ಇಲ್ಲದೆ ಇರುವುದು ಸಂಸ್ಕೃತವಿದ್ಯಾರ್ಥಿಗಳಿಗೆ ಮತ್ತು ವೀರಶೈವ ಸಮಾಜಕ್ಕೆ ಬಹುದೊಡ್ಡ ದುರ್ದೆಶೆಯೇ ಸರಿ. ಅತ್ಯಲ್ಪ ಪ್ರಮಾಣದಿಂದಲಾದರೂ ನೂರಾರುವರ್ಷಗಳಿಂದ ನಡೆದುಬಂದಿದ್ದ ಅನ್ನಸಹಾಯವು ಈಗ ಸಂಪೂರ್ಣವಾಗಿ ಲೋಪವನ್ನು ಹೊಂದಿದೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಭೋಜನದ ತೊಂದರೆಯನ್ನು ಪ್ರತ್ಯಕ್ಷವಾಗಿ ಕಂಡ ಮಹನೀಯರು ಈಗ ಸುಮಾರು 30-31 ವರ್ಷಗಳ ಕೆಳಗೆ ಕಾಶೀವಾಸಕ್ಕೆ ಬಂದಾಗ ತಮ್ಮ ಅಂತ್ಯಕಾಲದಲ್ಲಿ ರಾಣಿ ರೇವಮ್ಮಾಜಿ ಕೊಡಗು ಇವರು 1 ಲಕ್ಷರೂಪಾಯಿ ಬೆಲೆ ಬಾಳುವ ಇಡೀ ಆಸ್ತಿಯನ್ನೇ ವೀರಶೈವ ಸಮಾಜಕ್ಕೆ ಧಾರೆಯೆರೆದುಕೊಟ್ಟದ್ದು, “ಧರ್ಮಕೊಟ್ಟದ್ದನ್ನು ಕರ್ಮಕಚ್ಚಿಕೊಂಡು ಹೋಯಿತು” ಎಂಬುವಂತೆ ಹಾಳುಭಾವಿಯ ಪಾಲು ಆದಂತಾಯಿತು. ಇನ್ನೊಂದು ಇಲ್ಲಿಯ ವೀರಶೈವವಿದ್ಯಾರ್ಥಿಗಳ ಭೋಜನದ ಕಾರ್ಯವೆಂದ ಬಳಿಕ ಸ್ವತಂತ್ರವಿದ್ಯಾಲಯ, ಮತ್ತು ವಸತಿಗೃಹಗಳ ಸೌಕರ್ಯವಂತೂ ದೂರವೇ ಉಳಿಯಿತು. ಇಂಥ ಅನೇಕ ತೊಂದರೆಗಳಿಂದ ಪ್ರತಿಹತರಾಗಿದ್ದರು. ಈ ವೀರಶೈವ ಸಂಸ್ಕೃತವಿದ್ಯಾರ್ಥಿಗಳ ದುರವಸ್ಥೆಯನ್ನು ಕಂಡು ಈ ಎಲ್ಲ ಅನನುಕೂಲತೆಗಳನ್ನು ದೂರಮಾಡುವದಕ್ಕಾಗಿ ವಿದ್ಯಾರ್ಥಿದಶೆಯಲ್ಲಿಯೇ ಇದ್ದ ಕೈ॥ ಗುರುಸಿದ್ಧದೇವರು ಯಕ್ಕುಂಡಿ, ಮತ್ತು “ಕವಿರತ್ನ” ಪಂ. ಗೌರಿಶಂಕರಶಾಸ್ತ್ರಿಗಳು ಮೈಸೂರು ಈ ಉಭಯ ಮಹನೀಯರು ಸ್ತುತ್ಯವಾದ ಮಹತ್ಪರಿಶ್ರಮದಿಂದ ಸನ್ 1916ನೇ ಇಸವಿಯಲ್ಲಿ “ವೀರಶೈವ ವಿದ್ಯಾರ್ಥಿಮಂದಿರ” ಎಂಬದೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಇದು ಸಮಾಜೋದ್ಧಾರ ಕರ್ತೃಗಳಾದ ಕೆಲವು ಶ್ರೀಗಳವರಿಂದಲೂ ಉದಾರಸದ್ಗೃಹಸ್ಥರ ಅಲ್ಪಸ್ವಲ್ಪ ಸಹಾಯದಿಂದಲೂ, ವಿದ್ಯಾವರ್ಧಕಫಂಡುಗಳಿಂದಲೂ 9 ವರ್ಷಗಳ ವರೆಗೆ ಅಂದರೆ, 1926 ನೇ ಏಪ್ರಿಲ್ ತಿಂಗಳವರೆಗೆ ಹಾಗೂ ಹೀಗೂ ನಡೆಯುತ್ತಾಬಂದು ದ್ರವ್ಯನ್ಯೂನತೆಯೇ ಮೊದಲಾದ ಅನೇಕ ಕಾರಣಗಳಿಂದ ರಾಹುಗ್ರಸ್ತಸುಧಾಕರನಂತೆ ಕಳೆಗುಂದುತ್ತಬಂತು. ಈ ಸಂಕಟದಿಂದ ವಿಮುಕ್ತತೆಯನ್ನು ಹೊಂದಿಸಿ ಪುನಃ ವೃದ್ಧಿಗೆ ತರುವದಕ್ಕಾಗಿ ವೀ. ವಿ. ಮಂದಿರದ ಅಭಿಮಾನವುಳ್ಳ ಶಾಸ್ತ್ರಿವೃಂದವು ವಿದ್ಯಾಪಕ್ಷಪಾತಿಗಳೂ ಸಮಾಜಹಿತೈಷಿಗಳೂ ಆದ ಶ್ರೀಮನ್ಮಹಾರಾಜನಿರಂಜನಜಗದ್ಗುರು ಗುರುಸಿದ್ಧ ಮಹಾಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ ಈ ಮಹಾನುಭಾವರ ಸನ್ನಿಧಿಯಲ್ಲಿ ಪ್ರತ್ಯಕ್ಷವಾಗಿ ಪ್ರಾರ್ಥಿಸಿಕೊಳ್ಳಲಾಗಿ ಸದರಿ ಮಹಾಸ್ವಾಮಿಗಳು ಸನ್ನಿಧಿಯ ಸಂಸ್ಥೆಯ ವತಿಯಿಂದ ವೀ. ವಿ. ಮಂದಿರಕ್ಕೆ ಪ್ರತ್ಯೇಕವಾದ ಬಾಡಿಗೆಯ ವಸತಿಗೃಹವೊಂದನ್ನು ಏರ್ಪಾಡುಮಾಡಿಸಿಕೊಟ್ಟಿರುವರು. ಇದರಿಂದ ಕಾಶಿಯಲ್ಲಿರತಕ್ಕ ವೀ. ವಿದ್ಯಾರ್ಥಿಗಳ ಕೊರತೆಯೊಂದು ಹಿಂಗಿದಂತಾಯಿತು. ಇದಕ್ಕಾಗಿ ಧರ್ಮಾಭಿಮಾನಿಗಳೂ ವಿದ್ಯಾಭಿಮಾನಿಗಳೂ ಸದರಿ ಮಹಾನುಭಾವರನ್ನು ಅಭಿನಂದಿಸುವದು ಶ್ರೇಯಸ್ಕರವು. ಈಗ ಕಲ್ಪಿಸಲ್ಪಟ್ಟ ಮಹಾಸನ್ನಿಧಿಯ ಸಂಸ್ಥೆಯ ಸಹಾಯವು ಪುರೋಭಿವೃದ್ಧಿಯನ್ನು ಹೊಂದುತ್ತ ವೀ. ವಿ. ಮಂದಿರವು ಚಿರಕಾಲದವರೆಗೆ ಸ್ಥಿರವಾಗಿರಲೆಂಬದಾಗಿ ಹಾರೈಸುತ್ತೇವೆ.

ಸೆಕ್ರೆಟರಿ,
ವೀರಶೈವ ವಿದ್ಯಾರ್ಥಿಮಂದಿರ.

ಶ್ರೀಮದ್ದಕ್ಷಿಣಕಾಶೀ ನಿಜಸಿಂಹಾಸನಾಧೀಶ ಜಗದಾಚಾರ್ಯ ರಾಜಗುರು ಸ್ವಾಮಿ ವಿರೂಪಾಕ್ಷ ಒಡೆಯರವರಿಂದ ಬರೆಯಲ್ಪಟ್ಟ

ಬಸವೇಶ್ವರನಕೃತಿಗಳು

(ಹಿಂದಿನಿಂದ ಮುಂದೆಸಾಗಿದುದು).

ಈ ಕಾಯಕದಯ್ಯನವರು ಗ್ರಾಮಕ್ಕೆ ಬಂದರೆ ಆಯಾಯ ಪ್ರಾಂತದ ಪೀಠದವರ ಪ್ರತಿನಿಧಿಗಳಾದ ಮಠದವರಲ್ಲೇ ಇಳಿಯತಕ್ಕದ್ದು, ಮತ್ತು ಇವರು ಬಿನ್‌ಪಗಾರದಿಂದ ಧರ್ಮೋನ್ನತಿಮಾಡುವಲ್ಲಿ ಕಟಿಬದ್ಧರಾಗಿದ್ದುದರಿಂದ ಇವರಿಗೆ ಉಪದೇಶಮಾಡಿದ ಪ್ರತಿಯೊಂದು ಮನೆಯವರು ಒಂದೊಂದು ಸೈ ಅಥವಾ ಒಂದೊಂದುಬಳ್ಳಿಯಂತೆ ಕೊಡಬೇಕೆಂದು ನಿಯಮಮಾಡಿದನು. ಬಸವೇಶ್ವರನು ತಾನು ಸ್ವ[illegible]ಭಕ್ತನೆನಿಸಿ ಗುರುಭಕ್ತಿಯನ್ನು ಶಿರಸಾಮನ್ನಿಸುತ್ತಾ ನಡೆದು ಗುರುವಿನ ದರ್ಜೆಯನ್ನು ಬಹಳ ಹೆಚ್ಚಿಸಿದನು. ಈ ಹೊತ್ತಿಗೂ ಆ ದರ್ಜೆಯು ಎಷ್ಟೋಮಟ್ಟಿಗೆ ಕಾಯಮ್ ಉಳಿದಿದ್ದು ಲಿಂಗಾಂಗಿಧರ್ಮದ ಗುರುಗಳ ಸತ್ತಾ, ಪೂಜ್ಯತೆ ಆದರಗಳಿದ್ದಷ್ಟು ಜಗತ್ತಿನಲ್ಲಿಯ ಮತ್ತಾವಜಾತಿಯ ಗುರುಗಳಲ್ಲಿಯೂ ಕಂಡುಬರುವದಿಲ್ಲ. ಗುರುವಿನ ಇಷ್ಟು ಮಹತ್ವವನ್ನು ಬೆಳಸಲಿಕ್ಕೆ ಬಸವೇಶನೇ ಆದಿಕಾರಣನು. ಈ ವಿಷಯಕವಾಗಿ ಗುರುವರ್ಗದವರು ಅವನ ಉಪಕಾರವನ್ನೆಷ್ಟು ಮನ್ನಿಸಿದರೂ ಸಾಲದು. ಮೇಲೆ ತೋರಿಸಿದಂತೆ ಕಾಯಕದಯ್ಯನವರು ಗ್ರಾಮಗಳ ಸ್ಥಿತಿಗತಿಗಳನ್ನು ಆಗಾಗ್ಗೆ ಮೇಲಿನ ಪೀಠದವರಿಗೆ ತಿಳಿಸುವರು. ಅನಂತರ ಪೀಠದವರು, ಕಾಯಕದವರು ಆ ಗ್ರಾಮಕ್ಕೆ ಹೋಗಿ ಎಲ್ಲಾ ವಿಚಾರಮಾಡಿ ಬೋಧೆಮಾಡಿದರೋ ಇಲ್ಲವೋ ? ಆ ಗ್ರಾಮಗಳಲ್ಲಿಯ ಹೆಚ್ಚು ಕಡಿಮೆ ಸ್ಥಿತಿಗತಿಗಳನ್ನೇನು ಕಾಯಕದವರು ತಿಳಿಸಿರುವರು, ಅದು ಹೌದೋ ಅಲ್ಲವೋ ಎಂದು ಪೂರ್ಣ ಶೋಧನೆಮಾಡಲಿಕ್ಕೂ ಹೆಚ್ಚು ಕಡಿಮೆ ಅಂದರೆ ಯಾರಾದರೂ ದುರ್ಮಾರ್ಗಿಗಳಾಗಿ ನಡೆಯುತ್ತಿದ್ದಲ್ಲಿ ಅಥವಾ ಮತ್ತೇನಾದರೂ ಧರ್ಮಾಂತರಾದಿ ವಿಪರೀತಸ್ಥಿತಿಗಳಿದ್ದಲ್ಲಿ ಅವುಗಳನ್ನು ವಿಚಾರಿಸಿ ಅವುಗಳ ನಿರ್ಮೂಲನಾರ್ಥವಾದ ಉಪದೇಶಮಾಡಲಿಕ್ಕೆ ಕಟ್ಟೀಕಾಯಕದಯ್ಯದವರೆಂದು ಹೆಸರಿಟ್ಟು (ಇವರು ಘಂಟೆಕಾಯಕದವರಿಗಿಂತ ಸ್ವಲ್ಪ ಹೆಚ್ಚಿನ ಪಹರೆದವರು) ಅವರನ್ನು ಕಳಿಸುವರು. ಅವರು ಗ್ರಾಮಕ್ಕೆ ಹೋಗಿ ಅಲ್ಲಿಯ ಮಠದವರಿಂದ ಸರ್ವವೃತ್ತಾಂತವನ್ನು ತಿಳಿದುಕೊಂಡು ಆ ಊರ ಓಣಿಓಣಿಗಳ ಮಧ್ಯದಲ್ಲಿಯ ಒಂದು ವಿಶಾಲವಾದ ಕಟ್ಟೀಹಿಡಿದು ತಮ್ಮ ಆಸನಹಾಕಿಕೊಂಡು ಕೂತು ಘಂಟಾನಾದಮಾಡಿದರೆಂದರೆ ಆ ಓಣಿಯ ಸಮಸ್ತ ಜನರೂ ಆ ಜಂಗಮರ ಸನ್ನಿಧಿಗೆ ಬಂದು ನಮಸ್ಕರಿಸಿ ಅವರು ಪರ್ಯಾಯದಿಂದ ಹೇಳುವ ಉಪದೇಶವನ್ನು ಕೇಳಿ ಅಂದರೆ ಯಾವನು ಯಾವ ಧರ್ಮವಿರೋಧಕೃತಿಮಾಡುತ್ತಿರುವನೋ ಅವನಿಗೇನೇ ಅವರ ಉಪದೇಶದ ಮರ್ಮವು ತಗಲಿ ಆ ಪುಣ್ಯಾಪಾಪದ ಫಲವಿಶಿಷ್ಟ ಕರ್ಮದಿಂದ ಜಾಗ್ರತನಾಗುವಂತೆಮಾಡಿ ಗುರುಪೀಠಸನ್ನಿಧಿಗೆ ತೆರಳುವರು. ಘಂಟೆಕಾಯಕದವರಂತೆ ನಿತ್ಯ 8-10 ಮೈಲು ತಿರುಗಿ ಆಯಾಯ ಗ್ರಾಮದ ಮಠದವರಿಂದ ಗ್ರಾಮದ ವಾರ್ತೆಯನ್ನು ತಿಳಿದೇ ತೀರಬೇಕು. ಹ್ಯಾಗೆ ಪೋಲೀಸಸಿಪಾಯಿಯವರ ದಿವಸ ಕೆಲವು ಗ್ರಾಮಗಳ ತನಖಿಹಾಕಿ ಅಲ್ಲಿಯ ಗೌಡ ಶಾನುಭೋಗರಿಗೆ ಭೆಟ್ಟಿಯಾಗಿ ಗ್ರಾಮಸುರಕ್ಷತೆಯ ಸಹಿ ವಗೈರೆ ತೆಗೆದುಕೊಂಡು ಠಾಣಾಕ್ಕೆ ಹೋಗಿ ತಿಳಿಸುವ ಪದ್ಧತಿಯೋ ಹಾಗೆ ಇವರಾದರೂ 8 ದಿವಸಕ್ಕೊಮ್ಮೆ ಗುರುಪೀಠಕ್ಕೆ ಹೋಗಿ ತಾವು ಸಂಚರಿಸಿದ ಗ್ರಾಮವಾರ್ತೆಯನ್ನೆಲ್ಲಾ ಗುರುಪೀಠಕ್ಕರಿಕೆಮಾಡಿಕೊಳ್ಳತಕ್ಕದ್ದೆಂಬ ನಿರ್ಬಂಧವು ಘಂಟೆಕಾಯಕದವರಿಗೆ ಇದ್ದಂತೆ ಕಟ್ಟೀಕಾಯಕದಯ್ಯನವರಿಗಿಲ್ಲ. ಯಾಕೆಂದರೆ, ಇವರು ಅವರಿಗಿಂತ ಸ್ವಲ್ಪ ಹೆಚ್ಚಿನವರೂ, ಬುದ್ಧಿವಾನರೂ ಇರುವದರಿಂದ ಇವರು ಯಾವ ಗ್ರಾಮದಲ್ಲಿ ಧಾರ್ಮಿಕ ಸ್ಪೆಷಲ್ ಕೇಸುಗಳು ಇರುವವೋ ಅಲ್ಲಿಗೇನೇ ಗುರುವಿನಾಜ್ಞೆಯಂತೆ ಹೋಗಿ ಅಲ್ಲಿ ಉಪದೇಶಮಾಡಿ ಬರುವರು. ಹಾಗೂ ತಿಂಗಳಿಗೆ 15 ದಿವಸ ಸಹಜರೀತಿಯಿಂದಾದರೂ ಉಪದೇಶಾರ್ಥಸಂಚಾರಮಾಡಿ ಮತ್ತೆ ಗುರುಪೀಠದ ಠಾಣಕ್ಕೆ ಪರತಬರುವರು. ಆವಾಗ್ಗೆ ಗ್ರಾಮದವರು ಅವರಿಗೆ ದಾನಧರ್ಮವನ್ನು ಮಾಡುವರು. ಇವರು ಉಪದೇಶಮಾಡಿಹೋದನಂತರ ಘಂಟೆಯವರು ತಾವು ಬರುವಂತೆ ಪುನಃ ಆ ಗ್ರಾಮಕ್ಕೆ ಹೋಗಿ ಮಠದಲ್ಲಿಳಿದು ದುರ್ಮಾರ್ಗಿಗಳ ವಿಷಯವಾಗಿ ಮಠದವರಿಗೆ ಕೇಳಲು ಅವರು ಇನ್ನೂ ದುರ್ಮಾರ್ಗತನಬಿಟ್ಟಿಲ್ಲೆಂದು ಹೇಳಿದಲ್ಲಿ ತಾವು ಸ್ವತಃ ಹಮೇಷಾ ಹೋಗುವಂತೆ ಅವರ ಮನೆಗೆ ಉಪದೇಶಾರ್ಥಹೋಗಿ ಉಪದೇಶಮಾಡಿ ಪ್ರತ್ಯಕ್ಷ ಎಲ್ಲಾ ದುರ್ಮಾರ್ಗಿಗಳ ಪರಿಸ್ಥಿತಿ ತಿಳಿದುಕೊಂಡು ಪುನಃ ಪೀಠದವರಿಗೆ ತಿಳಿಸಲು ಆಕ್ಷಣಕ್ಕೆ ಗುರುಪೀಠದವರು “ಕಂಬದಕೆಕ್ಕೆ” ಕಾಯಕದಯ್ಯನವರಿಗೆ ನೀವು ಹೋಗಿ ನಿಮ್ಮ ಸತ್ಯಾಗ್ರಹದಿಂದ ಈ ದುರ್ಮಾರ್ಗಿಯನ್ನು ಸನ್ಮಾರ್ಗಿಯನ್ನಾಗಿಮಾಡಿ ಬನ್ನಿರೆಂದು ಆಜ್ಞಾಪಿಸುವರು. ಮಹಾಸತ್ಯಾಗ್ರಹಿಗಳಾದ ಈ ಕಂಬದಕೆಕ್ಕೆಕಾಯಕದವರು ಕೂಡಲೇ ಆ ಗ್ರಾಮಕ್ಕೆ ಹೋಗಿ ಆ ದುರ್ಮಾರ್ಗಿಯ ಮನೆಯಬಾಗಲದೊಳಗಿನ ಅವನ ಮನೆಯ[illegible]ನೊಳಗಿನ ಕಂಬಕ್ಕೆ ಕೆಕ್ಕೆಹಾಕಿಕೊಂಡು ನಿಂತುಬಿಡುವರು. ಈರೀತಿಯಾಗಿ 1-2 ದಿವಸಗಳವರೆಗೂ ಸತತವಾಗಿ ಮೌನವ್ರತ ಉಪವಾಸಗಳಿಂದ ಕಾಲಕಳೆಯಲು “ಜಗತ್ತಿನಲ್ಲಿ ಸರ್ವಾಂತರ್ಯಾಮಿಯಾದ ಆತ್ಮವು ಒಂದೇ ಆಗಿದ್ದು ಆ ಜಂಗಮನ ಆತ್ಮದ ಮನವು ಆ ದುರ್ಮಾರ್ಗಿಯನ್ನು ಅಥವಾ ಅವನ ಕುಟುಂಬದವರನ್ನು ಅಥವಾ ಅವನ ಮನೆಯ ನೆರೆಹೊರೆಯ ಜನರನ್ನು ದಮಿಸದೆ ಎಂದೂ ಬಿಡಲಾರದೆಂಬೀ ತತ್ವಸಿದ್ಧಾಂತಕ್ಕೊಳಪಟ್ಟ ಆ ದುರ್ಮಾರ್ಗಿಯು “ಸ್ವಾಮಿ ಇನ್ನು ನಾನು ನನ್ನ ದುರ್ಮಾರ್ಗವನ್ನು ಬಿಟ್ಟು ತಮ್ಮಾಜ್ಞೆಯಂತೆ ವರ್ತಿಸುವೆನು. ತಾವು ಈ ವ್ರತದಿಂದ ನಿವೃತ್ತರಾಗಿ ನನ್ನಲ್ಲಿ ಈ ಹೊತ್ತಿನ ದಿವಸ ಶಿವಾರ್ಚನಾದಿಗಳನ್ನು ಮಾಡಿ ನನಗೆ ಸುಖಸಂತೋಷಪೂರ್ವಕವಾದ ಆಶೀರ್ವಚನವನ್ನಿತ್ತು ನನ್ನನ್ನು ಪುನೀತನನ್ನಾಗಿ ಮಾಡಬೇಕೆಂದು ಬೇಡಲು ಆಗ್ಗೆ ಅವರು ಆ ಕಂಭದಕೆಕ್ಕೆಯನ್ನು ಬಿಟ್ಟು ಅವನ ಮನೆಯಲ್ಲಿ ಸ್ನಾನ ಶಿವಾರ್ಚನಾದಿಗಳನ್ನು ತೀರಿಸಿಕೊಂಡು ಗುರುಪೀಠಕ್ಕೆ ಹೋಗಿ ನಡೆದ ವೃತ್ತಾಂತವನ್ನೆಲ್ಲಾ ಗುರುಗಳಿಗೆ ಅರಿಕೆಮಾಡಿಕೊಳ್ಳುವರು. ಈರೀತಿಯಾಗಿ ನಡೆಯುವಲ್ಲಿ ಪುನಃ ಘಂಟೆಕಾಯಕದವರು ತಮ್ಮ ನಿಯಮದಂತೆ ಆ ಗ್ರಾಮಕ್ಕೆ ಹೋಗಿ ವಿಚಾರಿಸಲು ಅವನು ತನ್ನ ಕಲಿತ ಸ್ವಭಾವವನ್ನು ಬಿಟ್ಟಿಲ್ಲೆಂಬ ವಾರ್ತೆಯು ತಿಳಿದರೆ ಅದರಂತೆ ಪುನಃ ಪೀಠಕ್ಕೆ ತಿಳಿಸುವರು. ಆಗ್ಗೆ ಪೀಠದವರು ಹೋದಸಾರಿಗಿಂತಲೂ ಭೀಕ್ಷಣಪ್ರದನಾದ ಸತ್ಯಾಗ್ರಹಿಗಳನ್ನು ಕಳಿಸುವರು. ಇವರು ಮುಳ್ಳಾವಿಗೆಕಾಯಕದವರು. ಗುರ್ವಾಜ್ಞಾನುಸಾರ ಈ ಮುಳ್ಳುಕಾಯಕದಯ್ಯನವರು ಆ ಗ್ರಾಮಕ್ಕೆ ಹೋಗಿ ಅಲ್ಲಿಯ ಮಠದವರಿಂದ ಸರ್ವವೃತ್ತಾಂತವನ್ನು ತಿಳಿದು ರೌದ್ರಾವತಾರವೇಷವುಳ್ಳವರಾಗಿ ಆ ದುರ್ಮಾರ್ಗಿಯ ಮನೆಯಬಾಗಲಿಗೆ ಬಂದು, ಎಲೈ ಪುರುಷನೇ, ನೀನು ಲಿಂಗಾಂಗಿಧರ್ಮವನ್ನು ನಷ್ಟಮಾಡುವಿಯಾದ್ದರಿಂದ ನಿನ್ನ ಧರ್ಮಬಂಧುವಾದ ನಾನು ನಿನ್ನೀ ಅಧರ್ಮವು ನಷ್ಟವಾಗಿ ನಿನಗೆ ಧಾರ್ಮಿಕಬುದ್ಧಿ ಹುಟ್ಟುವದಕ್ಕಾಗಿ ನನ್ನ ಆತ್ಮದಮನದಿಂದ ದೇಹಕ್ಲೇಶಮಾಡಿಕೊಳ್ಳುವೆನೆಂದು ಅವನ ಬಾಗಿಲಿನ ಹೊರಗೆ ನಿಂತು ಗಂಭೀರವಾಣಿಯಿಂದುಚ್ಚರಿಸಿ ಕಬ್ಬಿಣದಮುಳ್ಳುಳ್ಳ ಅವಿಗೆಯನ್ನು ಹತ್ತಲಿಕ್ಕೆ ಹೋಗಲು ನೆರೆಯವರು ಅದೇಕ್ಷಣಕ್ಕೆ ಅಲ್ಲಿ ಮಿಲಿತರಾಗಿ ಸ್ವಾಮಿ, ಹೀಗೆ ತಾವು ಮಾಡಕೂಡದು, ನಾವು ಈಗಲೇ ಮನೆಯಜಮಾನನಿಗೆ ಬೋಧೆಮಾಡಿ ತಮ್ಮಾಜ್ಞೆಯಂತೆ ವರ್ತಿಸಲು ಹಚ್ಚುವೆವು. ಅದಕ್ಕೆ ನಾವು ಸಾಕ್ಷೀಭೂತರಿರುವೆವೆಂದು ಹೇಳಿ, ಆ ಯಜಮಾನನಿಗೆ, ಎಲೈ ಯಜಮಾನನೆ, ಸರ್ವಥಾ ನೀನು ಈ ಗುರುದ್ರೋಹ, ಧರ್ಮದ್ರೋಹಾದಿಗಳಿಗೊಳಗಾಗಬೇಡ, ಧಾರ್ಮಿಕನಾಗಿವರ್ತಿಸುವೆನೆಂದು ಮನಃಪೂರ್ವಕ ಒಪ್ಪಿಕೊ ಎಂದು ಅವರು ಬೋಧಿಸಿದನಂತರ ಅವನು ಸ್ವಾಮಿ, ನನ್ನದು ತಪ್ಪಾಯಿತು ; ನಾನುತಪ್ಪದೇ ಧರ್ಮಿಷ್ಠನಾಗಿ ನಡೆಯುವೆನು. ಇತ್ಯಾದಿ ಮಾತುಗಳನ್ನು ಆ ಯಜಮಾನನು ಹೇಳಿದಮೇಲೆ ಅವರಿಗೆ ಯೋಗ್ಯದಕ್ಷಿಣಾದಿಗಳನ್ನು ಕೊಟ್ಟು ಊಟೋಪಚಾರಗಳನ್ನು ಮಾಡಿ ಕಳಿಸಿ ಆ ಯಜಮಾನನು ಸನ್ಮಾರ್ಗಿಯಾಗಿ ನಡೆಯಲು ಹತ್ತುವನು. ಈರೀತಿ ಪ್ರತಿ ಗ್ರಾಮಕ್ಕೂ ಧರ್ಮವಿವೇಚನಾರ್ಥವಾಗಿ ವಿಪುಲಮಠಗಳನ್ನು ಮಾಡಿ ಅವರ ಸೇವೆಗೆ ಬೇಕಾದ ಸೇವಕರನ್ನೂ ತಯಾರಿಸಿಕೊಟ್ಟು ಈರೀತಿಯಾದ ಧರ್ಮಬಂಧುತ್ವಪ್ರಚಾರದ ಯೋಜನೆಯನ್ನು ಬಸವೇಶನು ಮಾಡಿದ್ದರಿಂದಲೇ ಜಗತ್ತಿಗೆ ಈ ಧರ್ಮ [illegible] ಯೋಗ್ಯಮಹಿಮಾಶಾಲಿಯಾದ [illegible] ಗುರು

ಗಳಾಗದೆ ಇದ್ದರೂ, ಪರಧರ್ಮದ ಎಷ್ಟೋ ಆಘಾತಗಳು ಮೇಲಿಂದಮೇಲೆ ಈ ಧರ್ಮಕ್ಕೆ ಒದಗಿದರೂ ಧರ್ಮವು ಈ ಮಹತ್ತರಬಂಧನದಿಂದ ಸ್ವಲ್ಪವೂ ಶಿಥಿಲವಾಗದೆ ಉತ್ತರೋತ್ತರ ವೃದ್ಧಿಯನ್ನೇ ಹೊಂದುತ್ತ ಹೋಗಿರುವದು. ಇದರಿಂದ ವೀರಶೈವರು ಬಸವೇಶನ ಎಷ್ಟು ಉಪಕಾರಮನ್ನಿಸಿದರೂ ಸ್ವಲ್ಪವೇ ಸರಿ. ಈ ಕಂಬದಕೆಕ್ಕೆ, ಮುಖ್ಯಾವಿಗೆ ಮೊದಲಾದ ವೀರಶೈವರ ಧರ್ಮೋನ್ನತಿಯ ವ್ರತಗಳಲ್ಲಿ ಆತ್ಮದಮನರೂಪವಾದ ಸತ್ಯಾಗ್ರಹವಿಲ್ಲವೆಂದು ಯಾವನು ತಾನೇ ಹೇಳುವನು? ಈಗಿನ ಮಹಾತ್ಮಗಾಂಧಿ ಮೊದಲಾದವರು ಈ ಸತ್ಯಾಗ್ರಹವ್ರತವನ್ನು ಶೋಧಿಸಿ ಹೊಸದಾಗಿ ಕಂಡು ಹಿಡಿದಾಚರಿಸುವರೆಂಬ ಪ್ರಖ್ಯಾತಿಗೆ ಕಾರಣರಾಗಿರುವರು. ಆದರೆ ಧಾರ್ಮಿಕ ರಾಜಕೀಯ ವಿಷಯಗಳೆರಡನ್ನೂ ಸಾಧಿಸಿಕೊಳ್ಳುವ ಮೂಲೋಪಾಯವೇ ಆತ್ಮದಮನರೂಪವಾದ "ಸತ್ಯಾಗ್ರಹ" ವೆಂದು ದೂರದರ್ಶಿಯಾದ ಬಸವೇಶನೆಂಬ ಪುಣ್ಯಾತ್ಮನು ಏಳುನೂರುವರ್ಷಗಳ ಹಿಂದೆಯೇ ಪರಿಶೋಧಿಸಿ ಅದರಂತೆ ಆಚರಿಸಲಿಕ್ಕೆ ಹಚ್ಚಿ ಜಗತ್ತಿಗೆ ಕಿತ್ತಿಹಾಕಿದನು. ಆ ಕಿತ್ತಿಯನ್ನೇ ಮಹಾತ್ಮಗಾಂಧಿ ಮೊದಲಾದವರು ತೀಡಲು ಸುರುಮಾಡಿದ್ದು. ಇಂಥಾ ರಾಷ್ಟ್ರಧರ್ಮಗಳ, ಉನ್ನತಿಗಾಗಿ ಆತ್ಮದಮನರೂಪವಾದ ಸತ್ಯಾಗ್ರಹವ್ರತವನ್ನು ಬೋಧಿಸಿ, ಮತ್ತು ತಾನೂ ಅದನ್ನಾಚರಿಸಿ ಹೋದ ಸತ್ಯಾಗ್ರಹವ್ರತದ ಮೊದಲನೇ ಶಿಕ್ಷಣ (ಬೋಧಕ) ಮರ್ಯಾದೆಯನ್ನು ಪಡೆದ ಬಸವೇಶನೇ ಧನ್ಯನು.

ಇನ್ನು ಬಸವೇಶನು ಶಂಡರಿಗೆ ಲಿಂಗಧಾರಣಮಾಡಿಸಿದ್ದು ಬಹಳ ತಪ್ಪುಮಾಡಿದನೆಂದು ಕೆಲವು ಅಜ್ಞರು ನಿಂದಿಸುತ್ತಿರುವರು. ಅದು ಅವರ ತಪ್ಪುತಿಳುವಳಿಕೆಯು. ಯಾಕೆಂದರೆ, ಬಸವೇಶನು ಲಿಂಗಧಾರಣವನ್ನು ಸರ್ವರಿಗೆ ಮಾಡಿಸಿದ್ದು ಎಂಥಾ ಮಹತ್ಕಾರ್ಯವೆಂಬುವದನ್ನು ಎಷ್ಟು ಹೇಳಿದರೂ ತೀರದು. ಹಾಗೂ ಲಿಂಗಧಾರಣಕೃತಿಯು ಶಾಸ್ತ್ರಮರ್ಯಾದೆಗೂ ವಿರೋಧವಿಲ್ಲ. ಹ್ಯಾಗೆಂದರೆ, "ಸ್ತ್ರೀಯೋಬಾಲಾಸ್ತಥಾವೃದ್ಧಾಃ ಖಂಜಾಃ ಕುಬ್ಜಾ ನಪುಂಸಕಾಃ | ಸುಲ್ಲಿಂಗಧಾರಣಾದೇವಮುದ್ರಸಾ ಏವತೇ ಶಿವೇ || ಬ್ರಾಹ್ಮಣಾಃ ಕ್ಷತ್ರಿಯಾವೈಶ್ಯಾಃ ಶೂದ್ರಾಶ್ಚಾನ್ಯಜಾತಯಃ ಲಿಂಗಧಾರಣಮಾತ್ರೇಣ ಶಿವ ಏವನಸಂಶಯಃ || ಯಸ್ಯಾಸ್ತಿಭಕ್ತಿರೀಶಾನೇವೀರಶೈವ ಮಹಾಶ್ರಯೇ | ಭಕ್ತಿಮಾತ್ರಪವಿತ್ರಾಹಿ ಸರ್ವೇ ಏವಾಧಿಕಾರಿಣಃ" ಎಂದು ಸಮಸ್ತರಿಗೆ ಲಿಂಗಧಾರಣ ಅಧಿಕಾರವುಂಟೆಂಬ ಪಾರಮೇಶ್ವರಾಗಮವಚನದಂತೆ ಬಸವೇಶನು ಲಿಂಗಧಾರಣಮಾಡಿಸಿಕೊಳ್ಳಲಿಕ್ಕೆ ಸರ್ವರಿಗೂ ಬೋಧೆಮಾಡಿದನು. ಇದರಲ್ಲಿ ಅವನಿಗೆ ಅಂತರೀಕ ದೇಶಾಭಿಮಾನದ ಕಳಕಳಿ ಇದ್ದು ಇದರಿಂದಲೇ ಲಿಂಗಾಂಗಿಧರ್ಮವು ಸಾರ್ವತ್ರಿಕ ಸಾರ್ವಭೌಮವಾಗುವದೆಂತಲೂ ರಾಷ್ಟ್ರೋನ್ನತಿಯಾಗುವದೆಂತಲೂ ನಂಬಿದ್ದನು. ಎಲ್ಲಿ ನೋಡಿದರೂ ಲಿಂಗವನ್ನೇ ಕಾಣಬೇಕೆಂಬೀ ಈಶ್ವರಾಸ್ತಿಕಬುದ್ಧಿಯು ಮೊದಲನೇ ಅವನ ದ್ಯೋತನೆಯು ಈ ಧರ್ಮದಂಥಾ ಉದಾತ್ತ ತತ್ವವು ಮತ್ತಾವ ಧರ್ಮದಲ್ಲಿಯೂ ಇಲ್ಲದ್ದರಿಂದ ಐಹಿಕಾಮುಷ್ಮಿಕ ಸುಖಗಳೆರಡನ್ನೂ ಬಹುಸುಲಭವಾಗಿ ಸಾಧಿಸಬಹುದೆಂಬ ವಿಚಾರಮಾಡಿ ಸರ್ವತ್ರ ಒಂದೇ ಲಿಂಗಾಂಗಿಧರ್ಮವಾದಲ್ಲಿ ರಾಷ್ಟ್ರದ ಐಕ್ಯವು ಉಳಿಯುವದೆಂಬ ಎರಡನೇ ಹೇತುವು. ಸರ್ವವೂ ಲಿಂಗಮಯವಾದದ್ದೆಂದು ಅಧ್ಯಾತ್ಮವಿಚಾರ ತೋರಿಸುವ ಮೂರನೇ ಹೇತುವು. ಇನ್ನು ಸರ್ವಸಾಮಾನ್ಯವಾಗಿ ಲಿಂಗಾಂಗಿಧರ್ಮವನ್ನೇ ಅಭಿವೃದ್ಧಿಮಾಡುವ ಅಭಿಮಾನವಂತೂ ಬಾಹ್ಯಾಂತರದಲ್ಲಿಯೂ ಇದ್ದದ್ದೇ. ಒಬ್ಬ ಲಿಂಗಾಂಗಿಯು ಸಾಂಸಾರಿಕ ಪದಾರ್ಥಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದಲೇ ಆಗಲಿ ಕೂಲಿ, ನೌಕರಿ, ಮೊದಲಾದ ನಿಮಿತ್ಯದಿಂದಲೇ ಆಗಲಿ ಎರಡನೇ ಅಲಿಂಗಿಯವರ ಕಡೆಗೆ ಹೋಗಬಾರದೆಂಬ ಮುಖ್ಯ ಸ್ವದೇಶೀಭಾವದಿಂದ ಲಿಂಗಾಂಗಿಧರ್ಮಾಭಿಮಾನ ಉಳಿಯಲೆಂತಲೂ ಸರ್ವರಿಗೂ ಅಂದರೆ ಅಗಸರು, ಕುಂಬಾರರು, ಕ್ಷೌರಿಕರು, ಮೊದಲಾದವರಿಗೂ ಲಿಂಗಧಾರಣಮಾಡಿಸಿದನು. ಇವನೇ ಸ್ವದೇಶಾಭಿಮಾನದ ಸ್ವದೇಶೀ ಚಳವಳಿಯ ಮೊದಲನೇ ಶಿಕ್ಷಕನು. ಇವನು ಸರ್ವಪ್ರಾಣಿಮಾತ್ರಕ್ಕೂ ನಿಷ್ಪಕ್ಷಪಾತದಿಂದ ಹಿತಚಿಂತಕನಾದ್ದರಿಂದಲೇ ಇವನಿಗೆ ನಂದಿ, ವೃಷಭಾದಿ ಅವತಾರವೆಂದು ಹೊಗಳಿದರು. ಆದರೆ "ಲೋಕಾನ್ನಂದಯತೀತನಂದಿಃ ವೃಷಂ ಧರ್ಮಂ ಭಾತೀತಿವೃಷಭಃ" ಇತ್ಯಾದಿ ಶಬ್ದಗಳು ಲೋಕೋನ್ನತಿ, ದೇಶೋನ್ನತಿ, ಧರ್ಮೋನ್ನತಿಗಳನ್ನು ಬೋಧಿಸುತ್ತಿದ್ದು ಅದರಂತೆ ಅವನು ಕೃತಿಗಳನ್ನೇಮಾಡಿದ್ದರಿಂದ ಅವನಿಗೆ ಈ ನಾಮಗಳು ಸರ್ವಥಾ ಸಾರ್ಥಕಗಳಾಗಿರುವವು. ಬಸವೇಶನ ರಾಜನೀತಿಯು ಚಾಣಾಕ್ಯನ ರಾಜನೀತಿಗಿಂತಲೂ ಬಹು ಉಚ್ಚದರ್ಜೆಯ ವಿಚಾರವುಳ್ಳದ್ದಿತ್ತು. ಹ್ಯಾಗೆಂದರೆ, ಇವನು ಚಾಣಾಕ್ಯನಂತೆ ಸ್ವಾರ್ಥಿಯಲ್ಲ ಹಾಗೂ ಸ್ವಾರ್ಥಾಪಮಾನಾದಿಗಳಿಂದ ಪ್ರೇರಿತನೂ ಅಲ್ಲ. ವೇಶ್ವಾದಿಗಳಂತೆ ಒಬ್ಬರ ರಾಜ್ಯ ಕಸುಕೊಳ್ಳಬೇಕೆಂಬ ದುರಾಶೆಯುಳ್ಳ ಕುಟಿಲನಲ್ಲ. ಆದರೆ ಲೋಕದಲ್ಲಿ ರಾಜನಿಂದ ಅನ್ಯಾಯವಾಗದಂತೆ ಪ್ರಜಾಸಮ್ಮತಿಪೂರ್ವಕ ರಾಜ್ಯದಾಡಳಿತನಡೆದು ರಾಜಪ್ರಜೆಗಳೀರ್ವರೂ ಸುಖದಿಂದರಬೇಕೆಂಬುವದೇ ಬಸವೇಶನ ಮುಖ್ಯ ರಾಜನೀತಿಯ ತತ್ವವು. ಚಾಣಾಕ್ಯನು ಮಹಾಕ್ರೂರನು, ತನ್ನಪಮಾನದುದ್ದಿಶ್ಯ ನವನಂದಾದಿಗಳನ್ನು ಕೊಲ್ಲಿಸುವ ಆತ್ಮಾಹಿಂಸಾಪ್ರೇರಿತ ರಾಕ್ಷಸೀಕೃತಿಯುಳ್ಳವನು, ಮತ್ತು ಧರ್ಮಾಧರ್ಮ ಪಾಪಪುಣ್ಯಾದಿಗಳ ವಿಚಾರರಹಿತನು. ಆದರೆ ಬಸವೇಶನು ಈರೀತಿ ಕೃತಿಗಳನ್ನು ಸ್ವಪ್ನದಲ್ಲಿಯೂ ಆಚರಿಸದವನಲ್ಲ. ಇನ್ನು ಯಾರಾದರೊಂದುವೇಳೆ ತಪ್ಪುತಿಳುವಳಿಕೆಯಿಂದ ಬಸವೇಶನು ಬಿಜ್ಜಳನನ್ನು ಕೊಲ್ಲಿಸಿದನೆಂದು ರಾಜದ್ರೋಹವನ್ನು ಅವನಮೇಲೆ ಆರೋಪಿಸಬಹುದು. ಆದರೆ ಈ ಹಿಂಸಾವೃತ್ತಾಂತವು ಬಸವೇಶನಿಗೆ ಸ್ವಪ್ನದಲ್ಲಿಯೂ ಗೊತ್ತಿರಲಿಲ್ಲ. ಯಾರೋ ಧರ್ಮದ ದುರಭಿಮಾನದಿಂದ ಪ್ರೇರಿತರಾಗಿ ಕೊಂದರು. ಅಂತೂ ಕೊಂದವರು ಮಾತ್ರ ವೀರಶೈವರು. ಆದರೆ ಇಷ್ಟರಿಂದಲೇ ಬಸವೇಶನಿಗೆ ಆ ಕಲಂಕವು ಹತ್ತಲಾರದು. ಯಾಕೆಂದರೆ, ರಾಜ್ಯದಾಶೆಯಿಂದ ಬಸವೇಶನು ತಾನಾಗಿಯೇ ಬಿಜ್ಜಳನನ್ನು ಕೊಲ್ಲಿಸಿದ್ದರೆ ಬಿಜ್ಜಳನು ಸತ್ತನೆಂಬ ವಾರ್ತೆಯನ್ನು ಕೇಳಿದಾಕ್ಷಣಕ್ಕೆ ತನ್ನಲ್ಲಿ ಗುಪ್ತದಿಂದ ಕಾದಿಟ್ಟದ್ದ ಒಂದುಲಕ್ಷದ ತೊಂಭತ್ತಾರುಸಾವಿರ ಮಹಾಸೈನಿಕರೊಂದಿಗೆ ಮುತ್ತಿಗೆಹಾಕಿ ತಾನು ರಾಜನೆಂದು ಜಯಭೇರಿಯನ್ನು ಹೊಡಿಸುತ್ತಿದ್ದನು. ಆದರೆ ಹಾಗೆಮಾಡದೆ ಅವನು ಸಹಾತ್ಕ್ಷಣಕ್ಕೆ ನಿರಪೇಕ್ಷಬುದ್ಧಿಯಿಂದ ದುಃಖಿತನಾಗಿ ಮಂತ್ರಿಪದವನ್ನು ಸಹ ತ್ಯಾಗಮಾಡಿ ಆ ಸ್ಥಳವನ್ನೇಬಿಟ್ಟು ಹೊರಟುಹೋದನೆಂಬ ವಾರ್ತೆಯೇ ಇವನ ಔದಾರ್ಯದ್ಯೋತಕವು. ಇನ್ನು ಲಿಂಗಾಂಗಿಧರ್ಮಪ್ರಚಾರಮಾಡಿದನೆಂದಾಕ್ಷಣಕ್ಕೆ ಇವನು ಅನ್ಯಾಯಮಾಡಿದನೆಂದೆನ್ನಬಹುದೆ? ಹಾಗಲ್ಲ, ಅಶೋಕ, ಅಕಬರಾದಿಗಳೂ ಸ್ವಧರ್ಮಪ್ರಚಾರವನ್ನು ಮಾಡುತ್ತ ರಾಜ್ಯವನ್ನಾಳಿದರೂ ಅವರು ಮಹಾಶ್ರೇಷ್ಠ ಪುರುಷರೆಂದು ಐತಿಹಾಸಿಕರಿಂದ ಹ್ಯಾಗೆ ವರ್ಣಿಸಲ್ಪಟ್ಟಿರುವರೋ ಅದರಂತೆಯೇ ಬಸವೇಶನೂ ವಿಶ್ವಾತ್ಮ, ಏಕ್ಯಕುಟುಂಬಿಯಾದ್ದರಿಂದ ಮಹಾಶ್ರೇಷ್ಠಪುರುಷನೆಂತಲೇ ಹೇಳಬಹುದು. ರಾಷ್ಟ್ರೋನ್ನತಾದಿಗಳಿಗೆ ಮುಖ್ಯ ಕಾರಣವು, "ಸರ್ವಂಧರ್ಮಮೂಲಂ" ಎಂಬ ನೀತಿವಾಕ್ಯದಂತೆ ಸರ್ವಕ್ಕೂ ಧರ್ಮವೇ ಮೂಲವೆಂದು ತಿಳಿದು ಅದರುನ್ನತಿಯಿಂದಲೇ ರಾಷ್ಟ್ರೋನ್ನತಿಯಾಗುವದೆಂದು ಕಂಡುಹಿಡಿದು ಆ ಧರ್ಮಸ್ಫೂರ್ತಿಯಿಂದ ಪ್ರೇರಿತನಾಗಿ ಮಹಾಸೌಮ್ಯವರ್ತನದಿಂದಲೇ ಸರ್ವವನ್ನು ಸಾಧಿಸಿದನು. ಇಂಥಾ ಲೋಕೋತ್ತರ ರಾಜನೀತಿಜ್ಞನೂ ಧರ್ಮವೀರನೂ ಆದ ಬಸವೇಶನನ್ನು ತನ್ನ ಗರ್ಭದಿಂದ ಕೊಟ್ಟ ಭೂಮಾತೆಯೇ ಧನ್ಯಳು. ಅಂಥಾ ಧರ್ಮವೀರಪುರುಷನಿಂದಲಂಕೃತವಾದ ಲಿಂಗಾಂಗಿಧರ್ಮವೇ ಧನ್ಯಾ ಧನ್ಯ! ಮಹಾಧನ್ಯ!!

ಅಜ್ಞ [illegible]

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 20 ನೆಯ ಪ್ರಕರಣ.

ಬಾಲಸುಂದರ.

ನಾವು ಮನಃಪೂರ್ವಕವಾಗಿ ಅಪೇಕ್ಷಿಸುವ ಪವಿತ್ರತಮವಾದ ಕೋರಿಕೆಯೆಲ್ಲವೂ ತಪ್ಪದೆ ನೆರವೇರುವುದು. ನನ್ನ ಜೀವಿತದಲ್ಲಿ ಈ ವಿಷಯವಾಗಿ ಅನೇಕ ನಿದರ್ಶನವಾಗಿರುವುದು. ತಿರುಪೆಯವರಿಗೆ ಸೇವೆಮಾಡಬೇಕೆಂದೇ ನಾನು ಮನಃಪೂರ್ವಕವಾಗಿ ಕೋರುತ್ತಿದ್ದೆನು. ನನಗೆ ನಿರಂತರವೂ ತಿರುಪೆಯವರ ಗೋಷ್ಠಿಯನ್ನೇ ಭಗವಂತನು ಕಲ್ಪಿಸಿದ್ದನು. ನೆಟಾಲಿನ ಇಂಡಿಯನ್ ಕಾಂಗ್ರೆಸ್ಸಿನಲ್ಲಿ ನೆಟಾಲಿನಲ್ಲಿ ಹುಟ್ಟಿದ ಭಾರತೀಯ ಗುಮಾಸ್ತರು ಮೊದಲಾದವರು ಸೇರಿದ್ದರಲ್ಲದೆ ಗಿರಿಮೆಂಟ್ ಕೂಲಿಯವರೂ ಇತರ ಕೆಲಸಗಾರರೂ ಇನ್ನೂ ಅದರಲ್ಲಿ ಸೇರಿರಲಿಲ್ಲವು. ಅವರು ಚಂದ ಕೊಡಲಾರದವರಾಗಿದ್ದುದರಿಂದ ಅದರಲ್ಲಿ ಸೇರಲು ಅವಕಾಶವಿರಲಿಲ್ಲ. ಅವರ ಸೇವೆ ಮಾಡಬೇಕೆಂದೇ ಕಾಂಗ್ರೆಸ್ಸಿನವರ ಪ್ರೀತಿಯನ್ನು ಸಂಪಾದಿಸಬೇಕಾಗಿದ್ದುದು. ಅಂತಹ ಅವಕಾಶವು ಆಕಸ್ಮಿಕವಾಗಿ ತಪ್ಪಿತು. ನಾನು ಲಾಯರಾಗಿ ಪ್ರಾಕ್ಟಿಸ್‌ಮಾಡಲಾರಂಭಿಸಿ ಎರಡು ಮೂರು ತಿಂಗಳುಗಳು ಮಾತ್ರವೇ ಆಗಿದ್ದಿತು. ಕಾಂಗ್ರೆಸ್ಸು ಶೈಶವಾವಸ್ಥೆಯಲ್ಲಿದ್ದಿತು. ಹಾಗಿರುವಾಗ್ಗೆ ಒಂದು ದಿವಸ ಒಬ್ಬ ಅರವರವನು ನಡುಗುತ್ತ ಅಳುತ್ತ ನನ್ನ ಸಮಿಪಕ್ಕೆ ಬಂದನು. ಅವನ ಬಟ್ಟೆಯು ಚಿಂದಿಯಾಗಿದ್ದಿತು. ಮುಂದಣ ಹಲ್ಲೆರಡು ಬಿದ್ದುಹೋಗಿದ್ದುವು. ಬಾಯಿಯಿಂದ ರಕ್ತವು ಬರುತ್ತಿದ್ದಿತು. ಅವನು ತಲೆಯ ರುಮಾಲನ್ನು ಕೈಯಲ್ಲಿ ಹಿಡಿದುಕೊಂಡು ಆ ಸ್ಥಿತಿಯಲ್ಲಿ ನನ್ನಿದಿರಿಗೆ ಬಂದು ನಿಂತನು. ಅವನ ಯಜಮಾನನು ಅವನನ್ನು ಬಲವಾಗಿ ಹೊಡೆದಿದ್ದನು. ನನ್ನ ಗುಮಾಸ್ತನು ಕೂಡ ಆ ಅರವನಾದುದರಿಂದ ಆ ಕೂಲಿಯವನ ಸಮಾಚಾರವನ್ನೆಲ್ಲ ಅರವಭಾಷೆಯಲ್ಲೇ ಕೇಳಿ ತಿಳಿದುಕೊಂಡು ನನಗೆ ಇಂಗ್ಲಿಷಿನಲ್ಲಿ ತಿಳಿಯಹೇಳಿದನು. ಆ ಕೂಲಿಯವನ ಹೆಸರು ಬಾಲಸುಂದರ. ಡರ್ಬನ್ನಿನಲ್ಲಿ ಸುಪ್ರಖ್ಯಾತನಾದ ಒಬ್ಬ ಐರೋಪ್ಯದೇಶೀಯನ ಬಳಿ ಅವನು ಗಿರಿಮೆಂಟ್ ಕೂಲಿಯಾಗಿದ್ದನು. ಆ ಪಾಶ್ಚಾತ್ಯನು ದುರಾಗ್ರಹದಿಂದ ಮೈಮರೆತು ಬಾಲಸುಂದರನನ್ನು ಬಲವಾಗಿ ಚೆತ್ತದಿಂದ ಹೊಡೆದಿದ್ದನು. ಅದರಿಂದ ಅವನ ಹಲ್ಲುದುರಿಹೋಗಿದ್ದುದು. ಆಗ ಬಾಲಸುಂದರನನ್ನು ಒಬ್ಬ ಡಾಕ್ಟರನ ಬಳಿಗೆ ಕಳುಹಿದೆನು. ಅಲ್ಲಿಯ ಡಾಕ್ಟರೆಲ್ಲರೂ ಪಾಶ್ಚಾತ್ಯರೇ ಆಗಿದ್ದರು. ಬಾಲಸುಂದರನಿಗೆ ತಗುಲಿದ್ದ ಪೆಟ್ಟಿನ ವಿಷಯವನ್ನು ತಿಳಿಸಿ ಸರ್ಟಿಫಿಕೇಟನ್ನು ಡಾಕ್ಟರಿಂದ ತೆಗೆದುಕೊಂಡು ಬಾಲಸುಂದರನನ್ನು ಮ್ಯಾಜಿಸ್ಟ್ರೇಟರ ಬಳಿಗೆ ಕರೆದುಕೊಂಡುಹೋಗಿ ಆತನ ವಾಙ್ಮೂಲವನ್ನು ಬರೆಯಿಸಿದೆನು. ಮ್ಯಾಜಿಸ್ಟ್ರೇಟರಿಗೆ ಬಹಳ ಕೋಪಬಂದಿತು. ಅಪರಾಧಿಯಾದ ಪಾಶ್ಚಾತ್ಯನಿಗೆ ಸಮನ್ಸ್ ಕಳುಹಿಸಿದರು.

ಅಪರಾಧಿಗೆ ಶಿಕ್ಷೆಮಾಡಿಸಬೇಕೆಂಬುದು ನನ್ನ ಅಭಿಪ್ರಾಯವಾಗಿರಲಿಲ್ಲ. ಬಾಲಸುಂದರನು ಬರೆದುಕೊಟ್ಟ ಅಗ್ರಿಮೆಂಟನ್ನು ರದ್ದುಮಾಡಿಸಬೇಕೆಂಬುದು ನನ್ನ ಇಷ್ಟವಾಗಿದ್ದಿತು. ನಾನು ಗಿರಿಮೆಂಟ್ ಕೂಲಿ ನಿಬಂಧನೆಯನ್ನು ಓದಿದೆನು. ಗಿರಿಮೆಂಟಿಲ್ಲದ ಕೂಲಿಯು ಮುಂದಾಗಿ ತಿಳಿಸದೆ ಕೆಲಸಕ್ಕೆ ಬಾರದೇನೇ ನಿಂತುಕೊಂಡುಬಿಟ್ಟರೆ ಯಜಮಾನನು ಸಿವಿಲ್‌ಕೋರ್ಟಿನಲ್ಲಿ ದಾವಾ ಮಾಡಬೇಕು. ಗಿರಿಮೆಂಟ್ ಬರೆದುಕೊಟ್ಟವನು ಹಾಗೆ ಕೆಲಸಕ್ಕೆ ಬಾರದೆ ನಿಂತುಹೋದಲ್ಲಿ ಕ್ರಿಮಿನಲ್‌ಕೋರ್ಟಿನಲ್ಲಿ ದಾವಾ ಮಾಡಬೇಕು. ಕೂಲಿಗೆ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಡುವುದು. ಅದುಕಾರಣ ಗಿರಿಮೆಂಟ್ ಪದ್ಧತಿಯು ಗುಲಾಮಗಿರಿಯೆಂದೇ ಸರ್ ವಿಲಿಯಂಹಂಟರವರು ಹೇಳಿರುವರು. ಗುಲಾಮನಂತೆಯೇ ಗಿರಿಮೆಂಟ್‌ಕೂಲಿಯು ಸಹ ಯಜಮಾನನ ಸೊತ್ತಿಗೆ ಸಂಬಂಧಪಟ್ಟವನೇ. ಬಾಲಸುಂದರನು ಗಿರಿಮೆಂಟನ್ನು ರದ್ದುಮಾಡಿಸಿಕೊಳ್ಳಲು ಎರಡುಮಾರ್ಗಗಳು ಮಾತ್ರವಿದ್ದುವು. ಗಿರಿಮಿಂಟ್ ಕೂಲಿಯವರ ರಕ್ಷಕೋದ್ಯೋಗಿ (ಪ್ರೊಟೆಕ್ಟರ) ಗೆ ತಿಳಿಸಿದಲ್ಲಿ ಆತನು ಗಿರಿಮೆಂಟನ್ನು ರದ್ದುಮಾಡಿಸುವನು, ಇಲ್ಲವಾದಲ್ಲಿ ಬೇರೊಬ್ಬ ಯಜಮಾನನಲ್ಲಿಗೆ ಬದಲಾಯಿಸುವನು. ಎರಡನೆಯ ಪದ್ಧತಿಯಲ್ಲಿ ಯಜಮಾನನೇ ಗಿರಿಮೆಂಟನ್ನು ರದ್ದುಪಡಿಸುವಂತೆ ಮಾಡಲು ನಾನು ಯಜಮಾನನಲ್ಲಿಗೆ ಹೋಗಿ "ನೀವು ಬಾಲಸುಂದರನನ್ನು ಹೊಡೆದುದಕ್ಕಾಗಿ ನಿಮ್ಮಮೇಲೆ ದಾವಾಮಾಡಿ ನಿಮಗೆ ಶಿಕ್ಷೆಮಾಡಿಸಬೇಕೆಂಬುದು ನನ್ನ ಇಷ್ಟವಲ್ಲವು. ನೀವು ಅವನನ್ನು ಗಟ್ಟಿಯಾಗಿ ಹೊಡೆದಿರುವುದರಿಂದ ಗಿರಿಮೆಂಟನ್ನು ನೀವು ಇನ್ನೊಬ್ಬರಿಗೆ ಬದಲಾಯಿಸಿದರೆ ನಾನು ಸುಮ್ಮನಿರುವೆನು" ಎಂದು ನಾನು ಹೇಳಲು ಅದಕ್ಕೆ ಆತನು ಕೂಡಲೆ ಒಪ್ಪಿಕೊಂಡನು. ಪ್ರೊಟೆಕ್ಟರಿಗೆ ಹೇಳಲು ಬೇರೊಬ್ಬ ಯಜಮಾನನನ್ನು ಕುದುರಿಸಿದರೆ ನಾನೂ ಅಂಗೀಕರಿಸುತ್ತೇನೆಂದು ಆತನು ಹೇಳಿದನು. ಅಂತಹವನು ಪಾಶ್ಚಾತ್ಯನೇ ಆಗಿರಬೇಕು. ಗಿರಿಮೆಂಟ್ ಕೂಲಿಯವರನ್ನಿಟ್ಟುಕೊಳ್ಳಲು ಭಾರತೀಯರಿಗೆ ಅಧಿಕಾರವಿಲ್ಲವು. ಪಾಶ್ಚಾತ್ಯರಲ್ಲಿ ನನಗೆ ಆಗ ಪರಿಚಿತಸ್ಥರಾದವರು ಬಹಳ ಸ್ವಲ್ಪಜನರೇ ಇದ್ದರು. ಅವರಲ್ಲೊಬ್ಬರೊಪ್ಪಿಕೊಂಡರು. ಅದಕ್ಕಾಗಿ ಆತನಿಗೆ ನಾನು ನನ್ನ ಕೃತಜ್ಞತೆಯನ್ನು ತಿಳಿಸಿದೆನು. ಮ್ಯಾಜಿಸ್ಟ್ರೇಟು ಕೇಸನ್ನು ವಿಚಾರಿಸಿ ಅಪರಾಧಿಯು ತಪ್ಪಿತಸ್ಥನೆಂದು ನಿರ್ಧರಿಸಿದನು. ಬಾಲಸುಂದರನು ಬೇರೊಬ್ಬ ಯಜಮಾನನಲ್ಲಿಗೆ ಹೋಗಲು ಅಪರಾಧಿಯೊಪ್ಪಿದುದನ್ನು ಮ್ಯಾಜಿಸ್ಟ್ರೇಟೊಪ್ಪಿಕೊಂಡನು. ಈ ವಿಷಯವು ಗಿರಿಮೆಂಟ್ ಕೂಲಿಯವರಿಗೆಲ್ಲ ತಿಳಿದಿತು. ಅವರಿಗೆ ಅದರಿಂದ ನನ್ನಲ್ಲಿ ಗೌರವಭಾವವುಂಟಾಯಿತು. ಅದಕ್ಕೆ ನಾನು ಸಂತೋಷಪಟ್ಟುಕೊಂಡೆನು. ಗಿರಿಮೆಂಟ್ ಕೂಲಿಗಳು ಪ್ರತಿದಿನವೂ ನನ್ನಲ್ಲಿಗೆ ಬಂದು ತಮ್ಮ ಕಷ್ಟಸುಖಗಳನ್ನು ಹೇಳಿ ಹೋಗುತ್ತಿದ್ದರು. ಬಾಲಸುಂದರನ ಕೇಸಿನ ವಿಚಾರವು ಮದ್ರಾಸಿನವರಿಗೆ ಕೂಡ ತಿಳಿದಿರುವುದು. ಮದ್ರಾಸುಪ್ರಾಂತದಿಂದ ಗಿರಿಮಿಂಟಿನಮೇಲೆ ಹೋಗಿದ್ದವರಿಗೆಲ್ಲ ಇತರ ಗಿರಿಮಿಂಟ್ ಕೂಲಿಯವರ ಮೂಲಕ ಈ ಸಂಗತಿ ತಿಳಿದಿದ್ದಿತು. ಆ ಕೇಸಿನಲ್ಲಿ ವಿಶೇಷಸಂಗತಿಯೇನೂ ಇಲ್ಲದಿದ್ದರೂ ಗಿರಿಮೆಂಟ್ ಕೂಲಿಯವರ ಪಕ್ಷವಾಗಿ ನಿರ್ಭಯದಿಂದ ಕೆಲಸಮಾಡಲು ಒಪ್ಪಿಕೊಂಡು ಭಾರತೀಯನೊಬ್ಬನು ನೆಟಾಲಿನಲ್ಲೇ ಇದ್ದಾನೆಂಬ ವಾರ್ತೆಯನ್ನು ಕೇಳಿದವರಿಗೆ ಸಂತೋಷವೂ, ಆಶ್ಚರ್ಯವೂ ಧೈರ್ಯವೂ ಹುಟ್ಟುವುವು. ಬಾಲಸುಂದರನು ತಲೆಯ ರುಮಾಲನ್ನು ಕೈಯಲ್ಲಿ ಹಿಡಿದುಕೊಂಡು ನನ್ನಲ್ಲಿಗೆ ಬಂದನೆಂದು ಮೇಲೆ ವಿವರಿಸಿದ್ದೇನೆ. ಅದರಲ್ಲಿ ಒಂದು ವಿಚಾರಪೂರ್ವಕವಾದ ವಿಷಯವಿರುತ್ತದೆ. ಗಿರಿಮೆಂಟು ಕೂಲಿಯು ಪಾಶ್ಚಾತ್ಯನಿದಿರಿಗೆ ಹೋಗಬೇಕಾದಾದರೆ ಬರೀತಲೆಯಲ್ಲಿರಬೇಕು. ತಲೆಯಮೇಲೆ ಟೋಪಿಗೆಯಾಗಲಿ ರುಮಾಲಾಗಲಿ ಇದ್ದರೆ ಅದನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡೇ ಹೋಗಬೇಕೆಂದು ಅಲ್ಲಿಯ ಪಾಶ್ಚಾತ್ಯರು ವಿಧಿಸಿರುವರು. ಅದು ಭಾರತೀಯರಿಗೆ ಬಹಳ ಅವಮಾನಕರವು. ಎರಡು ಕೈಗಳಿಂದಲೂ ಸಲಾಂಮಾಡಿದರು ಕೂಡ ಆ ಪಾಶ್ಚಾತ್ಯರಿಗೆ ತೃಪ್ತಿಯಾಗುವುದಿಲ್ಲ. ನನ್ನಿದಿರಿಗೆ ಬಂದಾಗಲೂ ಕೂಡ ಹಾಗೆ ಮಾಡದಿದ್ದಲ್ಲಿ ಅಪರಾಧವಾಗುವುದೇನೋ ಎಂಬ ಸಂಶಯದಿಂದ ಬಾಲಸುಂದರನು ತನ್ನತಲೆಯ ಬಟ್ಟೆಯನ್ನು ಕೈಲಿ ಹಿಡಿದುಕೊಂಡೇ ಬಂದಿದ್ದನು. ಅದು ನನಗೆ ಬಹಳ ಅವಮಾನವಾಗಿ ತೋರಿ ತಲೆಬಟ್ಟೆಯನ್ನು ಸುತ್ತಿಕೊಳ್ಳುವಂತೆ ಹೇಳಿದೆನು. ಆತನು ಸಂಶಯಪಟ್ಟುಕೊಂಡೇಸುತ್ತಿಕೊಂಡನಲ್ಲದೆ ಆತನ ಮುಖದಲ್ಲಿ ಸಂತೋಷಸೂಚನೆಯು ಮಾತ್ರ ನನಗೆ ಕಂಡುಬಂದಿತು. ಸೋದರಮನುಷ್ಯನನ್ನು ಅವಮಾನಪಡಿಸುವುದರಿಂದ ತನಗೆ ಅಧಿಕ ಗೌರವವುಂಟಾಗುವುದೆಂದು ಮನುಷ್ಯನಾದವನು ಹೇಗೆ ಭಾವಿಸುವನೋ ನಾನು [illegible].

ವಂದನಾರ್ಪಣ.

ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುಗಳ ಚುನಾವಣೆಯ ಚಳವಳಿಯನ್ನು ನಡೆಸಿದ್ದ ಗುಂಡ್ಲುಪೇಟೆ ತಾಲ್ಲೋಕ್ ಎಲ್ಲಾ ದೊಡ್ಡಮನುಷ್ಯರುಗಳ ಸನ್ನಿಧಾನದಲ್ಲಿ ವಿಜ್ಞಾಪನೆ.

ಮಹಾಶಯರೆ, ತಾವು ಈ ತಾಲ್ಲೋಕಿನಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿಗೆ ನನ್ನನ್ನೂ ಒಬ್ಬ ಮೆಂಬರಾಗಿ ಚುನಾವಣೆಮಾಡಿ ಗೌರವಿಸಿರುವುದಕ್ಕಾಗಿ ತಮ್ಮೆಲ್ಲರಿಗೂ ನಾನು ವಂದನೆಯನ್ನು ತಿಳಿಸುತ್ತೇನೆ. ಅಭಿಮಾನಶಾಲಿಗಳಾದ ತಮ್ಮಿಂದ ಲಭ್ಯವಾದ ಈ ಗೌರವಸ್ಥಾನದಲ್ಲಿ ನಾನು ಮಾಡಬೇಕಾದ ಪ್ರಜಾ ಮತ್ತು ಪ್ರಭುಸೇವೆಯೇ ಮೊದಲಾದ ಕಾರ್ಯಕ್ರಮಗಳೂ ಉತ್ತಮರೀತಿಯಲ್ಲಿ ಪರಿಣಮಿಸಿ ತನ್ಮೂಲಕ ತಮ್ಮ ಚುನಾವಣೆಯ ಕುಶಲತೆಯು ಸಾರ್ಥಕವಾಗುವಂತೆ ಅನುಗ್ರಹಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಘನತೆಯುಳ್ಳ ನಮ್ಮ ಸರ್ಕಾರದವರ ಅವಗಾಹನೆಗೆ ನಾನು ತರಬೇಕಾದ ಗ್ರಾಮಾಂತರಗಳಲ್ಲಿನ ಕುಂದುಕೊರತೆಗಳನ್ನು ಆಯಾ ಗ್ರಾಮದ ಪ್ರಮುಖರು ಮತ್ತೂ ಪ್ರಾಜ್ಞರಾದ ತಾವು ಆಗಿಂದಾಗ್ಗೆ ದಯಿಮಾಡಿ ನನಗೆ ಸೂಚಿಸುತ್ತಿರಬೇಕಾಗಿ ಬೇಡುತ್ತೇನೆ.

ಗುರ್ಕಾರ್ ನಂಜಪ್ಪ,
ಗುಂಡ್ಲುಪೇಟೆ.

ಸೊರಬತಾಲ್ಲೂಕಿನಲ್ಲಿರುವ ಡಿ|| ಬೊ|| ಓಟರುಮಹಾಶಯರಲ್ಲಿ ವಿಜ್ಞಾಪನೆ.

ಇದೇ 1926 ನೇ ಡಿಶಂಬರ್ ತಾ|| 20 ರಲ್ಲಿ ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಚುನಾವಣೆಗೆ ನಾನು ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ರೈತರಪರವಾಗಿಯೂ ರೈತರುಗಳಿಗಿರುವ ಕಷ್ಟವನ್ನು ತಿಳಿದವನಾಗಿಯೂ ಸ್ವತಹ ಅನುಭವಿಸಿದವನಾಗಿಯೂ ಇರುತ್ತೇನೆ. ಮುಖ್ಯ ರೈತರುಗಳಿಗೆ ಬೇಕಾಗುವ ಕೆರೆಕಾಮಗಾರಿ ಹೆಚ್ಚು ನೀರಿನ ಸರಬರಾಯಿ, ರಸ್ತೆ, ವ್ಯವಸಾಯಕ್ಕೆ ಬೇಕಾಗುವ ಮರಮುಟ್ಟುಗಳ ವಿನಾಯತಿ ವಿದ್ಯಾಭ್ಯಾಸ ಇನ್ನೂ ಅನೇಕವಿಧದಲ್ಲಿರುವ ತೊಂದರೆಗಳನ್ನು ಸಾಧ್ಯವಾದಮಟ್ಟಿಗೆ ನಿವಾರಿಸಿ ಪ್ರಜಾಸೇವೆ ಮಾಡಬೇಕೆಂಬುದೇ ನನ್ನ ಮುಖ್ಯ ಉದ್ದೇಶವಾಗಿದೆ. ಸರ್ವ ಓಟರುಗಳು ದಯವಿಟ್ಟು ನನ್ನ ಹೆಸರಿಗೆ ಒಂದು ಓಟನ್ನು ಕೊಡಬೇಕಾಗಿ ಈಮೂಲಕ ಪ್ರಾರ್ಥಿಸುತ್ತೇನೆ. ನನ್ನ ಹೆಸರು ಈ ಕೆಳಗೆ ಬರದಂತೆ ಇದ್ದು ಅದರ ಮುಂದೆ ಸಿಂಹದ ಗುರ್ತು ಇರುತ್ತದೆ.

ಸರ್ವಜನಹಿತೈಷಿ.
ಬಸವಂತಯ್ಯ ಪಟೇಲ ಕುಬಟೂರು (ಸಿಂಹ).

ಚಿತ್ರದುರ್ಗಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆ.

ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಡಿಸ್ಟ್ರಿಕ್ಟ್‌ಬೋರ್ಡು ಓಟರುಮಹಾಜನಗಳಲ್ಲಿ ವಿಜ್ಞಾಪನೆ.

ಅನೇಕಜನ ಬಂಧುಮಿತ್ರರ ಪ್ರೋತ್ಸಾಹದಿಂದಲೂ ನನ್ನ ಕೈಲಾದಮಟ್ಟಿಗೆ ತಮ್ಮೆಲ್ಲರಸೇವೆ ಮಾಡಬೇಕೆಂಬ ಅಭಿಪ್ರಾಯದಿಂದಲೂ ಈ ವರ್ಷ ಇದೇ ತಿಂಗಳು 31 ನೇ ತಾರೀಖಿನಲ್ಲಿ ನಡೆಯುವ ಚಿತ್ರದುರ್ಗದ ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಗೆ ಹೊಳಲ್ಕೆರೆ ತಾಲ್ಲೂಕಿನಿಂದ ನಾನು ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ಬೋರ್ಡು ಮೀಟಿಂಗುಗಳಲ್ಲಿ ನ್ಯಾಯವಾದ ಮತ್ತು ತಮ್ಮೆಲ್ಲರಿಗೂ ಉಪಯೋಗವಾಗತಕ್ಕ ವಿಷಯಗಳಿಗಾಗಿ ನಾನು ಯಾರೊಬ್ಬರ ದಯೆದಾಕ್ಷಿಣ್ಯ ಭಯಗಳಿಗೆ ಒಳಗಾಗದೆ "ದೇಶದ ಹಿತವೇ ನನ್ನ ಹಿತವೆಂದೂ" "ದೇಶಸೇವೆಯೇ ಈಶಸೇವೆಯೆಂದೂ" ತಿಳಿದು ಕೆಲಸಮಾಡಲು ನನ್ನ ಕೈಲಾದಮಟ್ಟಿಗೆ ಪ್ರಯತ್ನಿಸುತ್ತೇನೆಂದು ಈಮೂಲಕ ತಮ್ಮೆಲ್ಲರಿಗೂ ವಾಗ್ದಾನಮಾಡುತ್ತೇನೆ. ಈಗ ಚುನಾಯಿಸತಕ್ಕ ಮೆಂಬರುಗಳು ಇನ್ನು 3 ವರ್ಷಕಾಲ ನಿಮ್ಮ ಪುರೋಭಿವೃದ್ಧಿಯನ್ನು ಬಯಸತಕ್ಕವರೆಂದು ಎಣಿಸಲ್ಪಟ್ಟು ಅವರಿಂದ ನಿಮ್ಮ ಗ್ರಾಮಾಂತರಗಳ ಪುರೋಭಿವೃದ್ಧಿಯಾಗಬೇಕಾಗಿರುತ್ತೆಂಬ ಅಂಶವನ್ನು ತಾವು ಈ ಸಂದರ್ಭದಲ್ಲಿ ಚೆನ್ನಾಗಿ ಜ್ಞಾಪಕದಲ್ಲಿಡಬೇಕಾಗಿ ನನ್ನ ಕೋರಿಕೆ. ಮೆಂಬರಾದರೆ ಸಾಕು, ನಮ್ಮ ಕೆಲಸವೆಲ್ಲಾ ಪೂರೈಸಿತು ಎಂಬುವವರಿಗೆ ಮಾತ್ರ ಓಟನ್ನು ಕೊಡಬೇಡಿ. ನಿಮ್ಮ ಹಿತಕ್ಕಾಗಿ ಹೊಡೆದಾಡುವವರಿಗೆ ಮಾತ್ರ ಓಟನ್ನು ಕೊಡಿ. ಹೆಚ್ಚಿಗೆ ಹೇಳತಕ್ಕದ್ದೇನಿದೆ. ನಾವು ಮಾಡುವ ಕಾರ್ಯಗಳಿಂದಲೇ ನಮ್ಮ ಯೋಗ್ಯತೆಯು ಒರೆಹಚ್ಚಬೇಕಾಗಿದೆ. ಆದುದರಿಂದ ಈಸಾರಿ ತಾವುಗಳೆಲ್ಲರೂ ನನ್ನಲ್ಲಿ ನಂಬಿಕೆಯಿಟ್ಟು ತಮ್ಮ ಅಮೋಘವಾದ ಓಟನ್ನು ನನಗೆ ಕೊಡಬೇಕಲ್ಲದೆ ತಮ್ಮ ಬಂಧುಮಿತ್ರರ ಓಟುಗಳನ್ನು ನನಗೆ ಕೊಡಿಸಿ ಡಿಸ್ಟ್ರಿಕ್ಟ್‌ಬೋರ್ಡಿಗೆ ನನ್ನನ್ನು ಕಳುಹಿಸಿ ತಮ್ಮೆಲ್ಲರ ಸೇವೆಮಾಡಲು ನನಗೆ ಅವಕಾಶಕೊಡುವುದರಮೂಲಕ ನನ್ನ ಯೋಗ್ಯತೆಯಒರೆಹಚ್ಚಿ ಪರೀಕ್ಷಿಸಬೇಕಾಗಿ ಪ್ರಾರ್ಥನೆ. ಈ ಚುನಾವಣೆಯಲ್ಲಿ ನನಗೆ "ಆನೆ" ಎಂಬ ಅಡ್ಡಹೆಸರಿದೆ. ಎಂಬ ಅಂಶವನ್ನು ತಾವೆಲ್ಲರೂ ಜ್ಞಾಪಕದಲ್ಲಿಡಬೇಕಾಗಿ ವಿನಂತಿ.

ತಮ್ಮ ವಿಧೇಯ,
ಜಿ. ಚೆನ್ನಪ್ಪ, ಬಿ.ಎ., ಎಲ್‌ಎಲ್.ಬಿ., ಅಡ್ವೊಕೇಟು ದಾವಣಗೆರೆ.

೧೯೨೬ನೆಯ ಇಸವಿ ಡಿಶಂಬರ್ ತಾ|| ೧೧ ರಿಂದ ೧೯೨೬ ನೆಯ ಇಸವಿ ಡಿಶಂಬರ್ ತಾ|| ೧೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಮಾರ್ಗಶಿರ ಶುದ್ಧ ಸಪ್ತಮಿಯಿಂದ ಮಾರ್ಗಶಿರಶುದ್ಧ ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿ ಧನು
11	ಶನಿ	ಸಪ್ತ	48-51	ಶತ	47-20	26
12	[1] ಭಾನು	ಅಷ್ಟ	42-45	ಪೂಭಾ	43-5	27
13	ಸೋಮ	ನವ	36-48	ಉಭಾ	38-50	28
14	ಮಂಗಳ	ದಶ	31-3	ರೇವ	34-51	29
15	[2] ಬುಧ	ಏಕಾ	25-40	ಅಶ್ವಿ	31-16	1
16	[3] ಗುರು	ದ್ವಾದ	21-6	ಭರ	28-20	2
17	ಶುಕ್ರ	ತ್ರಯೋ	17-10	ಕೃತ್ತಿ	26-7	3

(1) ಮಳೆನಕ್ಷತ್ರ-ಜ್ಯೇಷ್ಠ ೪ ನೆಯಪಾದ. (2) ಮಳೆನಕ್ಷತ್ರ-ಮೂಲ ೧ ನೆಯಪಾದ, ಧನುರ್ಮಾಸಪೂಜಾರಂಭಃ, ಸರ್ವತ್ರೈಕಾದಶಿ. (3) ಪ್ರದೋಷ, ಮಾರ್ಗಶಿರಲಕ್ಷ್ಮೀವ್ರತಂ, ಮುಕ್ಕೋಟಿದ್ವಾದಶಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸಕ ೧೯೨೬ ನೇಯ ಇಸವಿ ಡಿಸೆಂಬರ್ ತಾರೀಖು ೧೮ ನೇಯ ಶನಿವಾರ. [ಸಂಚಿಕೆ ೫೧

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದಿನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ದೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮ ಧಾತುಪೌಷ್ಟಿಕ ಅದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಗಂಧ, ಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಹರಹಜೋರಿ, ಮುಂಗಲೇಚೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸರ್ಕೇನಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದತನಕ ಕಡಿಮೇ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—21] ಪತ್ತೆ:—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹತತ್ವಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ). ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರುಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿ ಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಗೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO.,
BENARES CITY.

S.U.N. & CO.
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—22]
ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿವಾಸಿ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕಾಕಲ್ಲಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಕೈ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ.



ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್.
[50—10] ಪೋ. ಬಾ. ೫೧, ಮದರಾಸು.

ಹಾಸನದ ಟೌನ್ ಮ್ಯುನಿಸಿಪಾಲಿಟಿ.

18 ನೇ ದನಗಳ ಪ್ರದರ್ಶನದ ಪ್ರಸಿದ್ಧಪತ್ರಿಕೆ.

ಹಾಸನ ಟೌನ್ ಮುಸಾಫರ್‌ಖಾನಾ ಮತ್ತು ಸಂತೆಮಾಳದ ಆಜುಬಾಜು ಮೈದಾನಗಳಲ್ಲಿ ಮತ್ತು ಸುತ್ತಮುತ್ತಲೂ ಇರುವ ಹೊಲಗಳಲ್ಲಿ ಸಹ ಮಾಮೂಲುಮೇರೆ 1927 ನೇ ಜನವರಿ ಮಾಹೆ ತಾರೀಖು 4, 5 ಮತ್ತು 6ನೇ ಮಂಗಳವಾರ, ಬುಧವಾರ ಮತ್ತು ಗುರುವಾರಗಳಲ್ಲಿ ದನಗಳ ಪ್ರದರ್ಶನವು ನಡಿಸಲ್ಪಡುತ್ತದೆಂಬ ಅಂಶವನ್ನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ಪ್ರದರ್ಶನಕ್ಕೆ ಬರತಕ್ಕ ರಾಸುಗಳ ಪೈಕಿ ಉತ್ತಮವಾದ ರಾಸುಗಳಿಗೆ ಧಾರಾಳವಾಗಿ ಬಹುಮಾನಗಳು ಕೊಡಲ್ಪಡುತ್ತೆ.

ಪ್ರದರ್ಶನಕ್ಕೆ ಬರತಕ್ಕ ಪ್ರತಿಯೊಂದು ರಾಸಿಗೂ ಒಂದಾಣೆಯಂತೆ ಫೀ ವಸೂಲ್ಮಾಡಲ್ಪಡುವುದು.

ಬಾಕಿವಿಷಯಗಳಿಗೆ 25-11-1926ರ ಮರ್ಕ್ಯಂ ಮೈಸೂರು ಗೆಜೆಟ್ II A ಭಾಗದ 594 ಮತ್ತು 595 ನೇ ಪುಟಗಳಲ್ಲಿ ಫಾಯಿಸಾಗಿರುವ ಅಸಲು ಇಸ್ತಿಹಾರನ್ನು ನೋಡುವದು.

S. P. Bramhappa,
ತಾ|| 29-11-1926. ವೈಸ್‌ಪ್ರೆಸಿಡೆಂಟ್ ಮತ್ತು
ಛೇರ್‌ಮನ್, ಮ್ಯಾನೇಜಿಂಗ್ ಕಮಿಟಿ

(ಮಹಾಸಭೆಯು ನಡೆಯುವದಿಲ್ಲ.)

ಜಾಹೀರಪ್ರಕಟಣೆ.

೧೦ನೆಯ ಅಖಿಲಭಾರತವೀರಶೈವಮಹಾಸಭೆಯು ಇದೇ ಬರುವ ತಾರೀಖು ೧ ಮತ್ತು ೨ ಜಾನೇವಾರಿ ೧೯೨೭ನೇ ಇಸವಿಯ ದಿವಸ ಹುಬ್ಬಳ್ಳಿಯಲ್ಲಿ ಮಾಡತಕ್ಕದ್ದೆಂದು ಈ ಮೊದಲೇ ಪ್ರಸಿದ್ಧವಾಗಿತ್ತಷ್ಟೆ; ಆದರೆ ಸದ್ಯಕ್ಕೆ ಮಹಾಸಭಾ ಕೂಡಿಸುವದನ್ನು ನಿಲ್ಲಿಸಿರುತ್ತದೆ.

ಪಿ. ಎಫ್. ಮಾಳ್ಗಿ,
ಮುಖ್ಯಕಾರ್ಯದರ್ಶಿ,
೧೦ನೇ ಅಖಿಲಭಾರತವೀರಶೈವ
ಮಹಾಸಭಾ ೧೯೨೬ ಹುಬ್ಬಳ್ಳಿ.

ಹುಬ್ಬಳ್ಳಿ,
೧೪-೧೨-೨೬.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಡಿಸೆಂಬರ್ ತಾ|| ೧೮ ನೆಯ ಶನಿವಾರ.

A REGRETTABLE DECISION.

We very much regret to note that the Reception Committee of the Veerasaiva Mahasabha of Hubli has decided against holding the Mahasabha as previously notified. We do not know what ill fates are working against the holding of this Mahasabha in the recent years. The first session of the Sabha was held in Dharwar in 1904 and for these 22 years we have had no more than 9 annual conferences, the last of which being held nearly ten years ago at Birur. We need hardly say that this unfortunate cessation of annual gatherings of all India Lingayets is neither creditable to this large and influential community nor productive of any good to the vast masses forming the community. We really thought that after the grievous disappointments in Bangalore and Mysore where attempts were made to hold the Sabha, the enterprising and practical minded men of Hubli led by no less a person than Rao Sahib S. T. Kambli, M.L.C., would certainly make the Sabha a distinct success and thus gain the generous approbation and sincere gratitude of the entire community. We hope that if there are still chances for reconsideration of this sad decision our Hubli friends in whom our faith is not yet lost will avail themselves of such chances and bring the Conference to a speedy realisation.

A BANGALORE CIVIC SENSATION.

The subject of payment of the award re the acquisition by the Bangalore City Municipal Council of a piece of land belonging to the Mahant Mutt, has created a good deal of needless and surprising sensation. The point of dispute is whether Yejman Basappa and others who are the alleged trustees should be paid the award or not. The difficulty has arisen from the fact that a large and responsible body of the Lingayet community which the award affects has given a petition through a lawyer to the Municipal Council against the payment on the ground that the said Yejman Basappa and others are not the proper trustees. It would appear that a section of the Municipal Council and even the Municipal advocate are in favour of granting the award to Yejman Basappa and others in spite of the objection petition. It is somewhat strange that this view is held by some of the legal luminaries on the Council. We should think that when there is objection against the right of the awardee to receive payment of the award the matter should be referred to the District Court for decision and the awarding party should not take upon itself the responsibility of adjudicating on rival claims. This we thought was not a very big proposition of law. Anyway there is the fight which has led to some side shows which are by no means very praise-worthy. We hope that there would be greater harmony and less of strife in the civic administration of the premier Municipality in the State.

ELECTIONS.

(Contributed)

V

The next elections to the Assembly and the Council are the true tests to determine the popular will. The country's good depends upon the goodwill of the representatives of these two bodies. These representatives are to guard the interests of the people as a whole. The interests of the whole body of the people consist in Elementary and Middle School education, in the Village Reconstruction, in the moral, material, and social education of the masses. Which are the people whom progress in these directions would affect most? They are the Backward classes. Who will represent the interest of these classes best? It is their own leaders. It is those that feel where the shoe pinches. It is those that have been kept in the back-ground. The Vokkaligars are the back-bone of the country. The Adidravidas and the Adikarnatakas have suffered the most. The Kurubars are a great industrial class. These and others who are in the majority and whose representation in the Public Services is very inadequate, are the people who should appear in large numbers for deliberations in the Assembly and the Council. They have a right to be there. Their interest ought to be preserved in safe hands—in hands which are loyal, in hands which are not for exclusive privileges, in hands which are strong and un-yielding to flattery, and in hands which co-operate with Government in all good things. The movement of non-co-operation is blind. It misleads and leads back to the state of monopolisation of all that is good in a social life. It will lead to no growth of constitutional and orderly life. It will lead to disorder and confusion, and out of these cometh back the rule of intelligentia. To guard against the misleading attitude of a few, a well-informed organisation should set out to awaken the minds of the ryots, merchants and craftsmen in the interior of the country. If it is not done, the old thing will repeat and then will come back into the Assembly and the Council the same set of gentlemen, who will say that the Vedas are the property of no people except the chosen few and who will surely oppose popular aspirations. It is highly desirable that the electorates should think seriously and select their men before they go to give their votes.

Literacy in the State is so low, between 6 and 7 per cent only. Who are the people forming the remaining 93 and 94 per cent? They are the Adikarnatakas, Vokkaligars, Kurubars, Lingayets etc. Who cultivate and produce food for the country? Who weave the cloths to wear? Who rear the cattle to give us milk and butter? This large proportion of the population cannot and should not be forgotten in returning representatives to the Assembly and the Council. No class ought to be excluded. No class ought to be unrepresented or under-represented. It is not communialism that is advocated. It is equal, impartial and proportionate representation. It un-fortunately means communal representation. That cannot be helped in a country like India.

Large funds for Primary Education is necessary. Villages ought to be reconstructed on a popular basis with wise guidance. The distribution of Muzrai Funds should be thoroughly revised. The question of Inam lands has to be considered from the root source of their existence. These problems cannot be unselfishly handled and fairly decided by people who have monopolized them. The Vokkaligars, the Lingayets, the Kurubars, the Depressed classes, and all other communities should come in due proportion to their strength. Then will the Assembly and the Council be truly representative.

ಚಿಂತಾಸ್ಪದನಿರ್ಧಾರ.

ವೀರಶೈವಮಹಾಸಭಾ ಸ್ವಾಗತಮಂಡಳಿಯವರು ಬರುವ ಜನವರಿ ತಾ|| 1 ಮತ್ತು 2 ರಲ್ಲಿ ಮಹಾಸಭಾಧಿವೇಶನವನ್ನು ಹುಬ್ಬಳ್ಳಿಯಲ್ಲಿ ನೆರೆಯಿಸುವುದಾಗಿ ನಿರ್ಧರಿಸಿ, ರಾವ್‌ಸಾಹೇಬ್ ಮ|| ಪಿ. ಜಿ. ಹಳಕಟ್ಟಿಯವರು ಸಭಾಧ್ಯಕ್ಷತೆಯನ್ನು ವಹಿಸಲು ಸಮ್ಮತಿಸಿರುತ್ತಾರೆಂದೂ, ಸಭೆಯಲ್ಲಿ ಇಂತಿಂತಹ ವಿಷಯಗಳು ಚರ್ಚಿಸಲ್ಪಟ್ಟು ನಿರ್ಧಾರಗಳು ಮಾಡಲ್ಪಡುವುವೆಂದೂ ಪ್ರಕಟಿಸಿದ್ದುದರಮೇಲೆ ಚಾತಕಪಕ್ಷಿಯು ವರ್ಷವನ್ನು ನಿರೀಕ್ಷಿಸಿಕೊಂಡಿರುವಂತೆ ಮಹಾಸಭಾಪುನರುಜ್ಜೀವನವನ್ನು ನಿರೀಕ್ಷಿಸಿಕೊಂಡಿರುವ ವೀರಶೈವರು ಸಭಾಧಿವೇಶನಕ್ಕೆ ಹೋಗಬೇಕೆಂದು ಕುತೂಹಲವಿಷ್ಟರಾಗಿರುವಲ್ಲಿ ಮಹಾಸಭೆಯನ್ನು ನೆರೆಯಿಸುವುದಿಲ್ಲವಾಗಿ ಸ್ವಾಗತಮಂಡಳಿಯವರು ನಿರ್ಧರಿಸಿರುವುದು ಅತ್ಯಂತ ಚಿಂತಾಸ್ಪದವಾಗಿದೆ. ಈ ಮಹಾಸಭೆಯು 1904ರಲ್ಲಿ ಧಾರವಾಡದಲ್ಲಿ ಜನ್ಮವನ್ನೆತ್ತಿ, ಕಳೆದ 22 ವರ್ಷಗಳಕಾಲಾವಧಿಯಲ್ಲಿ ಅದರ 9 ಅಧಿವೇಶನಗಳು ಮಾತ್ರ ನಡೆದು 1918ರಲ್ಲಿ ಬೀರೂರಿನಲ್ಲಿ ಜೇರೂರಿತು. ಅಲ್ಲಿಂದೀಚೆಗೆ ಯಾರ ಪಾಪಾಚರಣೆಯಿಂದಲೋ ನಡೆಯದೆಹೋಗಿರುವುದು ಅತ್ಯಂತ ಖೇದಕರವು. ಈ ಮಹಾಸಭೆಯು ಪ್ರತಿವರ್ಷದಲ್ಲೂ ಅವಿಚ್ಛಿನ್ನವಾಗಿ ನಡೆದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಒಂದು ಚಿರಸ್ಥಾಯಿಫಂಡು ಏರ್ಪಟ್ಟಿದ್ದರೂ ಯಾವ ಸ್ಥಳದಲ್ಲೂ ನೆರೆಯದಿರುವುದು ಪ್ರಬಲವಾದ ವೀರಶೈವಸಮಾಜಕ್ಕೆ ಕಳಂಕವೂ ತದನುಯಾಯಿಗಳಿಗೆ ನಷ್ಟಕಾರಕವೂ ಆಗಿರುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಬಹಳ ಉತ್ಸಾಹಶಾಲಿಗಳೂ, ಕಾರ್ಯದಕ್ಷರೂ ಆದ ಹುಬ್ಬಳ್ಳಿಯ ವೀರಶೈವಬಂಧುಗಳು ಪ್ರಸಿದ್ಧವಕೀಲರೂ, ಸಮಾಜಸೇವಾಧುರೀಣರೂ, ಬೊಂಬಾಯಿ ಲೆಜಿಸ್ಲೆಟಿವ್ ಕೌನ್ಸಿಲ್‌ಮೆಂಬರೂ ಆದ ರಾವ್‌ಸಾಹೇಬ್ ಎಸ್. ಟಿ. ಕಂಬಳಿ, ಬಿ.ಎ., ಎಲ್‌ಎಲ್.ಬಿ., ರವರ ಯಾಜಮಾನ್ಯದಲ್ಲಿ ಮಹಾಸಭೆಯನ್ನು ಜಯಪ್ರದವಾಗಿ ನಡೆಯಿಸಿ, ಮಹಾಸಭೆಯನ್ನು ನೆರೆಯಿಸುತ್ತೇವೆಂದು ವಿಜೃಂಭಿಸುತ್ತಿದ್ದ; ಬೆಂಗಳೂರು ಮತ್ತು ಮೈಸೂರು ವೀರಶೈವರುಗಳಿಂದುಂಟಾದ ಆಶಾಭಂಗವನ್ನು ನಿವಾರಣೆಮಾಡಿ ವೀರಶೈವಸಮಾಜದ ಮೆಚ್ಚಿಗೆಗೂ ಚಿರಕೃತಜ್ಞತೆಗೂ ಪಾತ್ರರಾಗುವರೆಂಬ ಭರವಸವು ಸಂಪೂರ್ಣವಾಗಿದ್ದಿತು. ಆದುಕಾರಣ ಹುಬ್ಬಳ್ಳಿಯ ವೀರಶೈವಬಂಧುಗಳು ಈಗಲೂ ಕಾಲಾತೀತವಾಗದಿರುವುದರಿಂದ ಪುನರಪಿ ಪರ್ಯಾಲೋಚಿಸಿ ಹಿಡಿದಕಾರ್ಯವನ್ನು ಬಿಡದೆ ನೆರವೇರಿಸಿ ಮಹಾಸಭಾಪುನರುಜ್ಜೀವನಗೊಳಿಸಿದ ಮಹಾಪುಣ್ಯಕ್ಕೂ ಕೀರ್ತಿಪ್ರತಿಷ್ಠೆಗೂ ಭಾಜನರಾಗದೆ ಇರಲಾರರೆಂದು ನಾವು ನಿರೀಕ್ಷಿಸುತ್ತೇವೆ ಮತ್ತು ಆ ದಯಾಮಯನಾದ ಪರಮೇಶ್ವರನು ಅವರುಗಳಿಗೆ ಅಂತಹ ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಬೆಂಗಳೂರು ಪೌರಕಾರ್ಯಗೊಂದಲ.

ಬೆಂಗಳೂರುಸಿಟಿ ಮ್ಯುನಿಸಿಪಲ್ ಕೌನ್ಸಿಲಿನವರು ಅಲ್ಲಿಯ ಮಹಂತಿನಮಠಕ್ಕೆ ಸೇರಿದ ಕೊಂಚ ಭೂಮಿಯನ್ನು ಕೊಂಡಿರುವುದಕ್ಕಾಗಿ ಕ್ರಯದ ಮೊಬಲಗನ್ನು ಕೊಡುವ ವಿಚಾರದಲ್ಲಿ ನಿಷ್ಪ್ರಯೋಜಕವೂ, ಆಶ್ಚರ್ಯಕರವೂ ಆದ ಗೊಂದಲವುಂಟಾಗಿರುತ್ತದೆ. ಮಹಂತಿನಮಠದ ಟ್ರಸ್ಟಿಗಳೆಂದು ಹೇಳಿಕೊಳ್ಳುವ ಯಜಮಾನ್ ಬಸವಪ್ಪ ಪ್ರಭೃತಿಗಳಿಗೆ ಕ್ರಯದ ಹಣವು ಕೊಡಲ್ಪಡಬೇಕೆ ಬೇಡವೇ ಎಂಬುದು ಒಂದು ಕಠಿಣ ಸಮಸ್ಯೆಯಾಗಿ ಪರಿಣಮಿಸಿರುವುದು. ಇದಕ್ಕೆ ಯಜಮಾನ ಬಸವಪ್ಪ ಪ್ರಭೃತಿಗಳು ಮಹಂತಿನಮಠದ ಕ್ರಮವಾದ ಟ್ರಸ್ಟಿಗಳಲ್ಲವಾದುದರಿಂದ ಮಠದ ಜಾಗಕ್ಕಾಗಿ ಮ್ಯುನಿಸಿಪಾಲಿಟಿಯಿಂದ ಸಲ್ಲಬೇಕಾಗಿರುವ ಕ್ರಯದ ಹಣವು ಅವರುಗಳಿಗೆ ಕೊಡಲ್ಪಡಕೂಡದೆಂದು ಬೆಂಗಳೂರಿನ ಅನೇಕ ವೀರಶೈವಪ್ರಮುಖರು ಮ್ಯುನಿಸಿಪಾಲಿಟಿಗೆ ಲಾಯರ್ ನೋಟೀಸನ್ನು ಕೊಡಿಸಿರುವುದು ಕಾರಣವಾಗಿದೆ. ಹೀಗೆ ಲಾಯರಿಂದ ತಡೆಯನೋಟೀಸು ಕೊಡಲ್ಪಟ್ಟಿರುವುದಾದರೂ ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳೂ ಮ್ಯುನಿಸಿಪಲ್ ಅಡ್ವೊಕೇಟರೂ ಯಜಮಾನ್ ಬಸವಪ್ಪನವರು ಮತ್ತೆ ಕೆಲರಿಗೆ ಕ್ರಯದ ಮೊಬಲಗನ್ನು ಕೊಡಿಸಬೇಕೆಂದು ಹಟವಿಡಿದಿರುವಂತೆ ಕಂಡುಬರುವುದು. ಮ್ಯುನಿಸಿಪಲ್ ಕೌನ್ಸಿಲರಾಗಿರುವ ನ್ಯಾಯವಾದಿಗಳು ಸಹ ಈರೀತಿ ಅಭಿಪ್ರಾಯಪಟ್ಟಿರುವುದು ಆಶ್ಚರ್ಯವೇಸರಿ. ಅವಾರ್ಡಾಗಿರುವ ಹಣವನ್ನು ಪಡೆದುಕೊಳ್ಳುವ ವಿಚಾರದಲ್ಲಿ ತಕರಾರು ಬಂದರೆ, ಡಿಸ್ಟ್ರಿಕ್ಟ್ ಜಡ್ಜಿಯವರು ಅದನ್ನು ಬಗೆಹರಿಸಬೇಕಲ್ಲದೆ ಅವಾರ್ಡುಮಾಡಿರುವವರೇ ಅದರ ಭಾರವನ್ನು ವಹಿಸತಕ್ಕುದಾಗಿಲ್ಲವೆಂದು ನಮಗೆ ತೋರುತ್ತದೆ. ಇದು ಅಂತಹ ಕಠಿಣವಾದ ನ್ಯಾಯವಿಮರ್ಶೆಯಾಗಿಲ್ಲವೆಂದು ನಮಗೆ ತೋರುವುದಾದರೂ ಪಕ್ಷಾಭಿಮಾನದಿಂದ ಈರೀತಿ ಕಠಿಣ ಪ್ರಸಂಗವಾಗಿ ಪರಿಣಮಿಸಿರುವುದು ಮಾತ್ರ ಲಜ್ಜಾಸ್ಪದವಾಗಿದೆ. ಆದುಕಾರಣ ಸಂಸ್ಥಾನಕ್ಕೇ ಕಣ್ಣಿನಂತಿರುವ ಈ ಬೆಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಪೌರಕಾರ್ಯವು ಯಾವ ಗೊಂದಲಕ್ಕೂ ಆಸ್ಪದವಿಲ್ಲದೆ ಸುಲಲಿತವಾಗಿ ನಡೆದುಕೊಂಡು ಹೋಗುವುದೆಂದು ನಿರೀಕ್ಷಿಸುತ್ತೇವೆ.

ಸ್ವದೇಶಿಪ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಮದ್ರಾಸಿನಿಂದ ನೆನ್ನೆಯರಾತ್ರಿ 10 ಘಂಟೆಯಲ್ಲಿ ಬೆಂಗಳೂರಿಗೆ ಚಿತ್ತೈಸುವುದಾಗಿ ನಿರೀಕ್ಷಿಸಲ್ಪಟ್ಟಿದ್ದಿತು.

ಕಾಕನಕೋಟೆಯ ಕಾಡಿನಲ್ಲಿ ಒಂದು ಆನೆಯು ಹಳ್ಳಕ್ಕೆ ಬಿದ್ದಿರುವುದರಿಂದ ಅದನ್ನು ಹಿಡಿದುತರುವ ಏರ್ಪಾಟು ನಡೆದಿರುವುದಾಗಿ ಕೇಳುತ್ತೇವೆ.

ಕಳೆದ ತಾ|| 14 ರಲ್ಲಿ ಆರಂಭಗೊಂಡು ನಡೆಯುತ್ತಿರುವ ನ್ಯಾಯವಿಧಾಯಕಸಭೆಯ ಕಡೇ ಅಧಿವೇಶನವು ಈಹೊತ್ತು ಮುಕ್ತಾಯವಾಗಬಹುದು.

ಕೋಲಾರ ತಾ|| ಅಮಲ್ದಾರ್ ಮ|| ಆರ್. ತಮ್ಮಾಜಿರಾಯರು ಆಕ್ಟಿಂಗ್ ಸ್ಪೆಷಲ್‌ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟು ಹಾಸನದ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಸೀಮೆಗೆ ದಯಮಾಡಿಸಿದ್ದ ಶ್ರೀಮದ್ಯುವರಾಜರವರು ಈ ತಾ|| 17 ರಲ್ಲಿ ಬೊಂಬಾಯಿಪಟ್ಟಣವನ್ನು ಸುರಕ್ಷಿತವಾಗಿ ತಲುಪಿದರು ಮತ್ತು ಮಹಾಮಾತೃಶ್ರೀಯವರೊಡನೆ ನಾಳೆಯದಿವಸ ಬೆಂಗಳೂರಿಗೆ ದಯಮಾಡಿಸುವುದಾಗಿ ತಿಳಿಯಬರುತ್ತದೆ.

ಭೂಗಂದಾಯವನ್ನು ಕೊಡಲು ತಪ್ಪಿದವರು ದಂಡದ್ರವ್ಯವನ್ನು ಕೊಡಬೇಕೆಂದು ಹೊಸದಾಗಿ ಗೊತ್ತುಮಾಡಿದ್ದ ವಿಧಿಯನ್ನು ಪ್ರಜಾಪ್ರತಿನಿಧಿಗಳ ಪ್ರಾರ್ಥನೆಯಂತೆ ಮತ್ತೊಂದು ಅಪ್ಪಣೆಯಾಗುವವರೆಗೂ ಅನುಷ್ಠಾನಕ್ಕೆ ತರಲಾಗದೆಂದು ಸರ್ಕಾರದ ಅಪ್ಪಣೆಯಾಗಿರುತ್ತದೆ.

ರಾಜಧಾನಿಯಲ್ಲಿ ಒಂದು ಮಗುವು ಟಾಂಗಾಬಂಡಿಗೂ ಇನ್ನೊಂದುಮಗುವು ಮೋಟಾರುಬಂಡಿಗೂ ಸಿಕ್ಕಿ ಮೃತವಾದುವೆಂದೂ ಮತ್ತೊಂದು 5 ತಿಂಗಳ ಮಗುವು ಮಲಗಿರುವಾಗ್ಗೆ ಕೋತಿಯಿಂದ ಪರಚಲ್ಪಟ್ಟು ಕೃಷ್ಣರಾಜಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವುದೆಂದೂ ಕೇಳುತ್ತೇವೆ.

ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಶ್ರೀಮುರುಘರಾಜೇಂದ್ರ ಮಹಾಸ್ವಾಮಿಗಳ ಸವಾರಿಯು ಹಾಸನ ಡಿ|| ಆಲೂರಿನಿಂದ ಈ ದಿವಸ ಸಕಲಮರ್ಯಾದೆಯೊಡನೆ ಹೊರಟು ಹಳೇಕೋಟೆಯಲ್ಲಿ ತಂಗಿದ್ದು ತಾ|| 20 ನೆಯ ಸೋಮವಾರ ಬೆಳಗಿನ 10 ಘಂಟೆಗೆ ಹೊಳೇನರಸೀಪುರವನ್ನು ತಲುಪುವುದಾಗಿ ಗೊತ್ತಾಗಿರುತ್ತದೆ.

ರಾಜಧಾನಿಯ ಗೌರ್ನಮೆಂಟ್ ಆಯುರ್ವೇದಿಕ್ ಕಾಲೇಜಿನ ಹೆಡ್ಮಾಸ್ಟರಾದ ಡಾಕ್ಟರ್ ಟಿ. ಕೃಷ್ಣಯ್ಯಂಗಾರ್ಯರು ಕೆಲದಿನಗಳಿಂದ ಅಸ್ವಸ್ಥರಾಗಿ ಉದ್ಯೋಗದಮೇಲೆ ಬರುತ್ತಿಲ್ಲವೆಂದು ತಿಳುಹಲು ವಿಷಾದವಾಗುತ್ತದೆ. ಇವರು ಲೋಕಪ್ರಿಯರೂ ಬಡರೋಗಿಗಳ ಆಧಾರಿಗಳೂ ಆಗಿರುವುದರಿಂದ ಇವರಿಗೆ ಜಾಗ್ರತೆ ಆರೋಗ್ಯವಾಗಲೆಂದು ಸಮಸ್ತರೂ ಹಾರೈಸುತ್ತಾರೆ.

ರಾಜಧಾನಿಯಲ್ಲಿರುವ ಮೂರನೆಯ ರಾಜಕುಮಾರಿಯವರ ಪ್ರಾಸಾದದಲ್ಲಿ ಕೆಲ ಆಭರಣಗಳು ಕಳುವಾಗಿ ಕಾಶಿಪಟ್ಟಣದಲ್ಲಿ ಸಿಕ್ಕಿರುವುದಾಗಿ ವರ್ತಮಾನಬಂದುದರಮೇಲೆ ರಾಜಧಾನಿಯ ಪೋಲೀಸು ಅ|| ಸೂಪರಿಂಟೆಂಡೆಂಟ್ ಮಿ|| ಸಿರಾಜುದ್ದೀನ್‌ರವರು ಕಾಶಿಪಟ್ಟಣಕ್ಕೆ ಹೋಗಿರುವುದಾಗಿಯೂ, ಪ್ರಾಸಾದದಲ್ಲಿದ್ದ ಡ್ರೆಸ್ಸಿಂಗ್ ಬಾಯಿಯು ಪಲಾಯನನಾಗಿರುವುದಾಗಿಯೂ ವದಂತಿಯಿದೆ.

ಕಡೂರು ಡಿ|| ಡೆ|| ಕಮಿಷನರ್ ಮ|| ಜೆ. ಬಿ. ಹೆಬ್ಲೀಕರ್‌ರವರು ಈ ತಾ|| 11 ರಿಂದ 3 ವಾರಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮ|| ಎಚ್. ವಿ. ರಾಮಸ್ವಾಮಿಯವರು ಆಕ್ಟಿಂಗ್ ಡಿ|| ಡೆ|| ಕ|| ರವರಾಗಿ ಕಡೂರಿಗೂ, ಅ|| ಕಮಿಷನರ್ ಮಿ|| ಮಹಮ್ಮದ್ ಇಸ್ಮಾಯಿಲ್‌ಷರೀಫ್‌ರವರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಛಾರ್ಜಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಮ್ಯುನಿಸಿಪಲ್ ಕಂಟ್ರಾಕ್ಟನ್ನು ಮಾಡಿಕೊಂಡಿರುವ ಒಬ್ಬ ಮಹಮ್ಮದೀಯರು ಮ|| ಎಂ. ವೆಂಕಟಕೃಷ್ಣಯ್ಯನವರ ಮೇಲೂ ಮತ್ತೊಬ್ಬರಮೇಲೂ ಮಾನನಷ್ಟಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟ್‌ಕೋರ್ಟಿನಲ್ಲಿ ಮಾಡಿರುವ ವಿವಾದದ ವಿಚಾರಣೆಯ ಸಂಬಂಧದಲ್ಲಿ ಕಳೆದವಾರ ಫಿರ್ಯಾದಿಪರ 6 ಸಾಕ್ಷಿಗಳ ವಿಚಾರಣೆಯು ನಡೆದು ಇನ್ನಿಬ್ಬರು ಸಾಕ್ಷಿಗಳ ವಿಚಾರಣೆಗಾಗಿ ಬರುವ ಜನವರಿ ತಾ|| 3ಕ್ಕೆ ಮುಂದರಿಸಲ್ಪಟ್ಟಿರುವುದು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮ|| ಎನ್. ಮಾಧವರಾಯರು ಜನವರಿ ತಾ|| 3 ರಿಂದ 3 ವಾರಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವಪ್ರಯುಕ್ತ ರಜದಮೇಲಿರುವ ಅಫಿಸಿಯೇಟಿಂಗ್ ಡೆ|| ಕಮಿಷನರಾದ ಮ|| ಸಿ. ಎಸ್. ಕುಪ್ಪಸ್ವಾಮಿ ಅಯ್ಯಂಗಾರರು ಮೇಲ್ಕಂಡ ಅವಧಿಯವರೆಗೆ ಅಥವಾ ಬೇರೊಂದು ಅಪ್ಪಣೆಯಾಗುವವರೆಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಅಫಿಸಿಯೇಟಿಂಗ್ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಪವರ್ ಮತ್ತು ಲೈಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರಾದ ಮ|| ಸಿ. ಆರ್. ಗೌಡರು ಕೋಲಾರದ ಚಿನ್ನದಗಣಿಗೆ ವರ್ಗಪಟ್ಟಿರುವುದರಿಂದ, ಸಿ. ಪಿ. ಎಸ್. ಕ್ಲಬ್ಬಿನ ಮೆಂಬರುಗಳು ಮ|| ಗೌಡರನ್ನು ನಾಳೆಯದಿನ ಮಧ್ಯಾಹ್ನ ತಮ್ಮ ಕ್ಲಬ್ಬಿಗೆ ಬರಮಾಡಿಕೊಂಡು ಅಲ್ಪಾಹಾರದಿಂದಲೂ ಸಂಗೀತಶ್ರವಣಾದಿಗಳಿಂದಲೂ ಸತ್ಕರಿಸಿ ಅವರಲ್ಲಿ ತಮಗಿರುವ ಅನುರಾಗವನ್ನು ಪ್ರದರ್ಶಿಸುವವರಾಗಿರುವರು. ಸ್ನೇಹಪರರೂ, ಸರಸಿಗಳೂ, ನಿಗರ್ವಿಗಳೂ, ಜನಾನುರಾಗಿಗಳೂ ಆದ ಮ|| ಗೌಡರು ವರ್ಗಪಟ್ಟು ಹೋಗುವುದರಿಂದ ಅನೇಕರಿಗೆ ವ್ಯಾಕುಲನಾಗಿರುತ್ತದೆ.

ಕಳೆದ ತಾ|| 16 ರಲ್ಲಿ ಬೆಂಗಳೂರಿಂದ ಆನೇಕಲ್ಲಿಗೆ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಹೋಗುತ್ತಿದ್ದ ಮೋಟಾರು ಬಸ್ಸು ಮಡಿವಾಳವನ್ನು ಬಿಟ್ಟು ಕೊಂಚದೂರ ಹೋದಮೇಲೆ ಡ್ರೈವರಿನ ಪಕ್ಕದಲ್ಲಿ ಕುಳಿತಿದ್ದ ಅಡ್ವೊಕೇಟ್ ಮ|| ಎಂ. ಶೇಷಾದ್ರಿಯವರು ಡ್ರೈವರಿನ ಅನುಮತಿಯಿಂದ ಬಂಡಿಯನ್ನು ನಡೆಯಿಸುತ್ತಿರುವಾಗ್ಗೆ ಎತ್ತಿನಬಂಡಿಗೆ ತಾಕುಬಡಿದು ಮಗ್ಗುಲಲ್ಲಿದ್ದ ಹಳ್ಳಕ್ಕಿಳಿದಿತು. ಇದರಿಂದ ಒಳಗಿದ್ದ ಪ್ರಯಾಣಿಕರು ಹೊರಗಡೆ ಬೀಳಲಾಗಿ ಕೆಲವರಿಗೆ ಪೆಟ್ಟುಬಿದ್ದಿತಲ್ಲದೆ ಬಂಡಿಯನ್ನು ನಡಿಸುತ್ತಿದ್ದ ಲಾಯರಿಗೂ ಇನ್ನೊಬ್ಬನಿಗೂ ಘೋರಾಪೆಟ್ಟು ಬಿದ್ದಿತು. ಪೆಟ್ಟುತಿಂದಿದ್ದವರಲ್ಲಿ ಅನೇಕರು ತಂತಮ್ಮ ಸ್ಥಳಗಳಿಗೆ ನಡೆದುಕೊಂಡು ಹೋದರು; ಉಳಿದವರು ಮತ್ತೊಂದು ಬಸ್ಸಿನಲ್ಲಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಹೊಂದುತ್ತಿರುವರು. ದೈವಾಧೀನದಿಂದ ಈ ಅಪಾಯವು ಕೊಂಚದರಲ್ಲೇ ಪರ್ಯವಸಾನವಾಯಿತಲ್ಲದೆ ಇನ್ನು ಕೊಂಚದೂರದಲ್ಲಿ ಸಂಭವಿಸಿದ್ದರೆ ಆಳವಾದ ಕುಂಟೆಗೆ ಬಿದ್ದು ಪ್ರಾಣಹಾನಿಯಾಗುತ್ತಿದ್ದಿತು.

ಶಿವಮಗ್ಗ ಡಿ|| ಚೆನ್ನಗಿರಿ ತಾ|| ಸಂತೆಬೆನ್ನೂರಲ್ಲಿರುವ ಶ್ರೀರಾಮಚಂದ್ರದೇವಸ್ಥಾನದ ಜೀರ್ಣೋದ್ಧಾರಕಮಿಟಿಯವರು ಭಕ್ತಾದಿಗಳಿಂದ ಚಂದಾದ್ರವ್ಯವನ್ನೆತ್ತಿ ತಾಲ್ಲೂಕು ಅಧಿಕಾರಿಗಳಿಂದಲೂ 500 ರೂ. ವರೆಗೆ ಸಹಾಯವನ್ನು ಹೊಂದಿ ಈಗ್ಗೆ 5 ತಿಂಗಳ ಕೆಳಗೆ ಕೆಲಸಕ್ಕುಪಕ್ರಮಿಸಿದರು. ಅದರಮೇಲೆ ಆ ಊರಿನ ಮಹಮ್ಮದೀಯರು ಈ ದೇವಸ್ಥಾನವನ್ನು ಕಟ್ಟಿದಲ್ಲಿ ತಮ್ಮ ಕುದ್ಬಾ ಮತ್ತು ಬಕರೀದು ಹಬ್ಬಕಾಲಗಳಲ್ಲಿ ನಮಾಜು ಮಾಡಲು ತೊಂದರೆಯಾಗುತ್ತಾದುದರಿಂದ ಕಟ್ಟಡಕ್ಕೆ ಅವಕಾಶಕೊಡಕೂಡದೆಂದು ಅರ್ಜಿಗಳನ್ನು ಬರೆದುಕೊಂಡುದರ ಮೇಲೆ, ಕೂಡಲೆ ಕಟ್ಟಡದ ಕೆಲಸವನ್ನು ನಿಲ್ಲಿಸಬೇಕೆಂದೂ ಹಾಗೆ ನಿಲ್ಲಿಸದೆ ಹೋದಲ್ಲಿ ಶಿಕ್ಷೆಗೆ ಗುರಿಮಾಡಬೇಕೆಂದೂ ಶಿವಮಗ್ಗಾ ಡಿ|| ಡೆ|| ಕಮಿಷನರು ಚೆನ್ನಗಿರಿ ತಾ|| ಅಮಲ್ದಾರರಿಗೆ ಅಪ್ಪಣೆಮಾಡಿದರು. ಅವರು ಆದೇಪ್ರಕಾರ ಜೀರ್ಣೋದ್ಧಾರಕಮಿಟಿಯವರಿಗೆ ತಿಳಿಸಿ ಕೆಲಸವನ್ನು ತಡೆದುಬಿಟ್ಟಿರುವರು. ಈ ದೇವಸ್ಥಾನವು ಬಹಳ ಪುರಾತನವಾಗಿರುವುದಲ್ಲದೆ ಮಹಮ್ಮದೀಯರು ಮೇಲ್ಕಂಡ ಹಬ್ಬಕಾಲದಲ್ಲಿ ನಮಾಜು ಮಾಡುವ ಬೈಲುಪ್ರದೇಶದಿಂದ 100 ಗಜಗಳ ದೂರದಲ್ಲಿದ್ದು ಯಾವ ರೀತಿಯಿಂದಲೂ ಮಹಮ್ಮದೀಯರ ನಮಾಜಿಗೆ ಆಡಚಣೆಯನ್ನುಂಟುಮಾಡುವುದಿಲ್ಲವಾದರೂ ಬರೀ ಅಸೂಯೆಯಿಂದ ಈರೀತಿ ಆತಂಕಪಡಿಸಿರುತ್ತಾರಾದಪ್ರಯುಕ್ತ ಘನಸರ್ಕಾರದವರು ತಕ್ಕ ವಿಚಾರಣೆಯಿಂದ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಅವಕಾಶ ಕೊಡಬೇಕೆಂದು ಆ ಊರಿನ ಹಿಂದುಪ್ರಜೆಗಳು ಸರ್ಕಾರಕ್ಕೆ ಬಿನ್ನೈಸಿಕೊಂಡಿರುವರಲ್ಲದೆ ದಿವಾನರಿಗೆ ತಂತಿಯಮೂಲಕ ಪ್ರಾರ್ಥಿಸಿಕೊಂಡಿರುವರಾದರೂ ಇನ್ನೂ ಯಾವ ಉತ್ತರವೂ ಬಂದಿಲ್ಲವಾಗಿ ತಿಳಿಯಬರುತ್ತದೆ.

ದಿವಾನರ ಸಂಚಾರ.

(1927 ನೇ ಜನವರಿ ತಾ|| 2 ರಿಂದ 14 ರವರೆಗೆ).

ಜನವರಿ ತಾ|| 2 ರ ರಾತ್ರಿ 9½ ಘಂಟೆಗೆ ಪೂನಾರೈಲ್ವೆ ಮೇಲುಬಂಡಿಯಲ್ಲಿ ಪ್ರಯಾಣಮಾಡಿ ತಾ|| 3 ರ ಬೆಳಗಿನ 6½ ಘಂಟೆಗೆ ಶಿವಮುಗ್ಗೆಯನ್ನು ತಲುಪುವರು. ಅದೇ ಮಧ್ಯಾಹ್ನ 4½ ಘಂಟೆಯಲ್ಲಿ ತಿರುಪಲಯ್ಯನವರ ಸತ್ರದ ಶಂಕುಸ್ಥಾಪನಾಮಹೋತ್ಸವವನ್ನು ಜರುಗಿಸಿ 5½ ಘಂಟೆಗೆ ಮ್ಯುನಿಸಿಪಾಲಿಟಿಯವರಿಂದ ನಡಿಸಲ್ಪಡುವ ವನವಿಹಾರೋತ್ಸವಸತ್ಕಾರವನ್ನು ಕೈಕೊಳ್ಳುವರು.

ತಾ|| 4 ರ ಬೆಳಿಗ್ಗೆ ಪಟ್ಟಣವನ್ನು ಸುತ್ತಿ ಪರಾಮರ್ಶಿಸುವರು. ಅದೇ ಸಾಯಂಕಾಲ 5 ಘಂಟೆಗೆ ಶಿವಮಗ್ಗೆಯ ಹೊಸ ಕ್ಲಬ್ ಕಟ್ಟಡದ ಆರಂಭೋತ್ಸವವನ್ನು ನಡೆಯಿಸುವರು. ಅನಂತರ 5½ ಘಂಟೆಗೆ ಶಿವಮಗ್ಗಾ ಕ್ಲಬ್ಬಿನವರಿಂದ ನಡೆಯಿಸಲ್ಪಡುವ ಟೀ ಪಾರ್ಟಿಯಲ್ಲಿ ಭಾಗಿಗಳಾಗುವರು.

ತಾ|| 5 ರ ಬೆಳಗಿನ 8 ಘಂಟೆಗೆ ಸೂಳೆಕೆರೆಗೆ ಪ್ರಯಾಣಮಾಡಿ ಕೆರೆಯನ್ನೂ ನಾಲೆಗಳು ಮೊದಲಾದುವನ್ನೂ ನೋಡಿಕೊಂಡು ಸಾಧ್ಯವಾದಲ್ಲಿ ಮಿ|| ವೆಲ್ಬರ್‍ನ್ ಘೋರ್ಸ್‌ರವರ ಭೂಸ್ಥಿತಿಯನ್ನು ಪರಾಮರ್ಶಿಸಿ ಸೂಳೆಕೆರೆಯಲ್ಲಿ ಅಲ್ಪಾಹಾರವನ್ನು ತೆಗೆದುಕೊಳ್ಳುವರು. ಮಧ್ಯಾಹ್ನ 3 ಘಂಟೆಗೆ ಸೂಳೆಕೆರೆಯಿಂದ ಚೆನ್ನಗಿರಿಗೆ ಬರುವರು. ಅಲ್ಲಿಂದ ಸಾಯಂಕಾಲ 5 ಘಂಟೆಗೆ ಶಿವಮಗ್ಗೆಗೆ ಪ್ರಯಾಣಮಾಡುವರು.

ತಾ|| 6 ರ ಮಧ್ಯಾಹ್ನ 1 ಘಂಟೆಗೆ ಹೊನ್ನಗಿರಿಗೆ ಹೊರಟು ಸಾಯಂಕಾಲ 5 ಘಂಟೆಯಲ್ಲಿ ಹೊನ್ನಾಳಿ ನವಾಬರಿಂದ ನಡಿಸಲ್ಪಡುವ ಟೀ ಪಾರ್ಟಿಯಲ್ಲಿ ಭಾಗಿಗಳಾಗಿದ್ದು ಸಾಯಂಕಾಲ 6 ಘಂಟೆಗೆ ಶಿವಮಗ್ಗೆಗೆ ಹಿಂದಿರುಗಿ ಹೊರಡುವರು.

ತಾ|| 7 ರ ಬೆಳಗಿನ 7½ ಘಂಟೆಯಲ್ಲಿ ಶಿವಮಗ್ಗೆಯಿಂದ ಶಿಕಾರಿಪುರಕ್ಕೆ ಹೋಗಿ ಮಧ್ಯಾಹ್ನ 3 ಘಂಟೆಗೆ ಅಲ್ಲಿಂದ ಶಿರಾಳಕೊಪ್ಪ ಮಾರ್ಗವಾಗಿ ಸೊರಬಕ್ಕೆ ಬಂದು ಅಲ್ಲಿ ತಂಗುವರು.

ತಾ|| 8 ರ ಮಧ್ಯಾಹ್ನ 4 ಘಂಟೆಯಲ್ಲಿ ಸೊರಬದಿಂದ ಹೊರಟು ಸಾಗರಕ್ಕೆ ಬಂದು ಸಾಯಂಕಾಲ 5½ ಘಂಟೆಗೆ ಸಾಗರದ ಮ್ಯುನಿಸಿಪಾಲಿಟಿಯವರಿಂದ ಒಪ್ಪಿಸಲ್ಪಡುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ಆ ರಾತ್ರಿ ಅಲ್ಲಿ ತಂಗುವರು.

ತಾ|| 9 ರ ಮಧ್ಯಾಹ್ನ ಗರಸೊಪ್ಪಾಜಲಪಾತಕ್ಕೆ ಹೋಗಿ ನೋಡಿಕೊಂಡು ಸಾಗರಕ್ಕೆ ಹಿಂದಿರುಗಿಬರುವರು.

ತಾ|| 10 ರ ಮಧ್ಯಾಹ್ನ 5½ ಘಂಟೆಯಲ್ಲಿ ಸಾಗರಟರ್ನ್ ಮ್ಯುನಿಸಿಪಾಲಿಟಿಯವರಿಂದ ನಡೆಸಲ್ಪಡುವ ಟೀ ಪಾರ್ಟಿಯಲ್ಲಿ ಭಾಗಿಯಾಗಿರುವರು.

ತಾ|| 11 ರ ಬೆಳಗಿನ 7½ ಘಂಟೆಯಲ್ಲಿ ಸಾಗರದಿಂದ ಹೊರಟು ಕಲ್ಲೂರುಕಟ್ಟೆಯನ್ನು ರಾತ್ರಿ 9 ಘಂಟೆಗೆ ತಲುಪುವರು. ಅಲ್ಲಿಂದ ಹೊರಟು 11 ಘಂಟೆಗೆ ನಗರವನ್ನು ತಲುಪಿ ಅಲ್ಲಿ ಊಟಮಾಡುವರು. ಮಧ್ಯಾಹ್ನ 4 ಘಂಟೆಗೆ ತೀರ್ಥಹಳ್ಳಿಗೆ ಪ್ರಯಾಣಮಾಡಿ ಅಲ್ಲಿಯ ಮ್ಯುನಿಸಿಪಾಲಿಟಿಯವರೊಪ್ಪಿಸುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ಆ ರಾತ್ರಿ ಅಲ್ಲಿ ತಂಗುವರು.

ತಾ|| 12 ರ ಬೆಳಗಿನ 8 ಘಂಟೆಯಲ್ಲಿ ಟವನ್ನನ್ನು ಪರಾಮರ್ಶಿಸುವರು. ಮಧ್ಯಾಹ್ನ 2 ರಿಂದ 3 ಘಂಟೆಯವರೆಗೆ ಬಂದ ಜನರಿಗೆ ದರ್ಶನವನ್ನಿತ್ತು ಅವರೊಡನೆ ಸಂಭಾಷಿಸುವರು. ಮಧ್ಯಾಹ್ನ 3 ಘಂಟೆಯಲ್ಲಿ ಮ್ಯುನಿಸಿಪಾಲಿಟಿಯಿಂದ ನಡಿಸಲ್ಪಡುವ ಪಾರ್ಟಿಯಲ್ಲಿ ಭಾಗಿಗಳಾಗಿದ್ದು 3½ ಘಂಟೆಗೆ ಆಗುಂಬೆಗೆ ಹೋಗಿ ಸಾಯಂಕಾಲ 7 ಘಂಟೆಗೆ ತೀರ್ಥಹಳ್ಳಿಗೆ ಹಿಂದಿರುಗಿ ಬರುವರು.

ತಾ|| 13 ರ ಬೆಳಗಿನ 8 ಘಂಟೆಯಲ್ಲಿ ತೀರ್ಥಹಳ್ಳಿಯಿಂದ ಶಿವಮಗ್ಗೆಗೆ ಹೊರಟು ಅಲ್ಲಿ ಮಧ್ಯಾಹ್ನ 2 ಘಂಟೆಗೆ ಆಫೀಸರುಗಳ ಮೀಟಿಂಗನ್ನು ನಡಿಸುವರು. ತರುವಾಯ ರಾತ್ರಿ 8½ ಘಂಟೆಯಲ್ಲಿ ಶಿವಮಗ್ಗೆಯಿಂದ ಪೂನಾ ರೈಲ್ವೆ ಮೇಲುಬಂಡಿಯಲ್ಲಿ ಹೊರಟು ತಾ|| 14 ರ ಬೆಳಗಿನ 6½ ಘಂಟೆಯಲ್ಲಿ ಬೆಂಗಳೂರನ್ನು ಸೇರುವರು.

ಪ್ರಜೆಗಳ ಆರೋಗ್ಯ.

ವೈದ್ಯ ಇಲಾಖೆಯಲ್ಲಿ ಸುಮಾರು 30 ವರ್ಷಗಳ ದೀರ್ಘಾನುಭವವನ್ನು ಪಡೆದಿರುವ ಮೈಸೂರು ಸಂಸ್ಥಾನದ ರಿಟೈರ್ಡ್ ಸ್ಯಾನಿಟರಿ ಕಮಿಷನರಾದ ಡಾಕ್ಟರ್ ಎ. ಕೆ. ಪಾಣಿಯವರು ಈ ವಿಚಾರದಲ್ಲಿ ಸರ್ ರೊನಾಲ್ಡ್ ರಾಸ್‌ರವರಿಗೆ ಮುಂದೆ ಹೇಳುವ 11 ಸಲಹೆಗಳನ್ನು ಕೊಟ್ಟಿರುವರು.—

1. ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಾಲಿಟಿಗಳಲ್ಲಿ ಇರುವ ಹೆಲ್ತ್ ಆಫೀಸರುಗಳಿಗೆ ಮೆಡಿಕಲ್ ಆಫೀಸರುಗಳಿಗಿಂತ ಶೇಕಡ 50 ರಷ್ಟು ಹೆಚ್ಚು ತಲಬನ್ನು ಕೊಡಬೇಕು. ಹೆಲ್ತ್ ಆಫೀಸರುಗಳಿಗೆ ಬೇರೆ ವರಮಾನವಿಲ್ಲದ್ದರಿಂದ ಇದನ್ನು ಕೊಡಬೇಕಾಗಿದೆ. ಇವರ ಪೆನ್ಷನ್ ದರವನ್ನೂ ಹೆಚ್ಚಿಸಬೇಕು.

2. ಪ್ರತಿ ಮ್ಯುನಿಸಿಪಾಲಿಟಿಯಲ್ಲಿಯೂ ಈಗಿರುವ ಸ್ಯಾನಿಟರಿ ಆಫೀಸರ ಜತೆಯಲ್ಲಿ ಸರ್ಕಾರದವರು ನಾಮಿನೇಟ್ ಮಾಡಬಹುದಾದ ಇಬ್ಬರು ಅಥವಾ ಮೂರು ಮಂದಿ ಮೆಡಿಕಲ್ ಅಧಿಕಾರಿಗಳು ಕೌನ್ಸಿಲಿನಲ್ಲಿರಬೇಕಲ್ಲದೆ, ಅವರ ಅಭಿಪ್ರಾಯವನ್ನು ದ್ರವ್ಯಾಭಾವದ ನೆಪದಿಂದ ತಿರಸ್ಕರಿಸಬಾರದು.

3. ಅನಾರೋಗ್ಯಕರವಾದ ಮನೆಮಠಗಳನ್ನು ಕಟ್ಟದಂತೆ ನಿರೋಧಿಸಬೇಕು. ಪ್ಲಾನನ್ನು ಮತ್ತು ನಿವೇಶನವನ್ನು ಹೆಲ್ತ್ ಆಫೀಸರು ಅನುಮೋದಿಸದಲ್ಲದೆ ಕಟ್ಟಡಕ್ಕೆ ಲೈಸೆನ್ಸ್ ಕೊಡಕೂಡದು.

4. ಪೌರಶುದ್ಧತೆಯ ಕೆಲಸವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಅನೇಕ ಊರುಗಳಲ್ಲಿ ವಹಿಸಿಕೊಂಡಿರುವುದಿಲ್ಲ. ಇದನ್ನು ಆರೋಗ್ಯ ಇಲಾಖೆಯವರಿಗೆ ವಹಿಸಿರುವುದರಿಂದ, ಇವರ ನ್ಯಾಯವಾದ ಕಾರ್ಯಕ್ಕೆ ವಿರಾಮವಿಲ್ಲದಂತೆ ಆಗಿದೆ.

5. ಮನೆಗಳಲ್ಲಿ ಅನುಸರಿಸಬೇಕಾದ ಆರೋಗ್ಯನಿಯಮಗಳನ್ನು ಬಹುಮಟ್ಟಿಗೆ ಅಶ್ರದ್ಧೆಯಿಂದ ಕಾಣುತ್ತಿರುವರು. ಹೆಚ್ಚಿನ ಜನರು ಒಂದೆಡೆ ವಾಸಮಾಡುವುದು, ಗಾಳಿ ಬೆಳಕುಗಳಿಲ್ಲದಿರುವುದು, ಕಕ್ಕಸುಗಳನ್ನು ಎತ್ತಿಸದಿರುವುದು, ಕೊಳೆ ಕಸವನ್ನು ಹರಡಿರುವುದು ಇವೆಲ್ಲಾ ತಪ್ಪಬೇಕು.

6. ಆರೋಗ್ಯವಿಚಾರಗಳಲ್ಲಿಯೂ ನೈರ್ಮಲ್ಯದ ವಿಷಯದಲ್ಲಿಯೂ ಜನರಿಗೆ ತಿಳುವಳಿಕೆ ಕೊಡಲು ಪ್ರತಿಮ್ಯುನಿಸಿಪಾಲಿಟಿಯಲ್ಲಿ ಅವಕ್ಕೆ ಸಂಬಂಧಪಟ್ಟ ಭೂತಕನ್ನಡಿ, ಚಲನ ಚಿತ್ರಗಳು ಇವೇ ಮುಂತಾದವುಗಳೂ ಸಿಬ್ಬಂದಿಯೂ ಇರಬೇಕು.

7. ಎಲ್ಲಾ ಪಾಠಶಾಲೆಗಳಲ್ಲಿಯೂ ಮಕ್ಕಳಿಗೆ ಆರೋಗ್ಯಶಾಸ್ತ್ರವನ್ನು ಬಲಾತ್ಕಾರಪಾಠವಾಗಿ ನಿಯಮಿಸಬೇಕು.

8. ಮಲೇರಿಯಜ್ವರ ಬಂದಾಗ ಕ್ವಿನೀನನ್ನು ಹರಡುವುದು ಮಾತ್ರವಲ್ಲದೆ, ಅನಾರೋಗ್ಯವನ್ನು ಹುಟ್ಟಿಸುವ ಸೊಳ್ಳೆಗಳನ್ನು ನಾಶಪಡಿಸುವ ಪ್ರಯತ್ನ ಮಾಡಬೇಕು.

9. ಬಹುಪಾಲುಜನರಿಗೆ ಸೊಳ್ಳೆಯ ಜೀವಮಾನಚರಿತ್ರೆಯು ತಿಳಿದಿಲ್ಲವಾಗಿ ಸ್ಕೂಲುಗಳಲ್ಲಿಯೂ ಪಬ್ಲಿಕ್ಕಿನಲ್ಲಿಯೂ, ಇದನ್ನು ತಿಳಿಸಲು ಪ್ರಯತ್ನಪಡಬೇಕು.

10. ಮ್ಯುನಿಸಿಪಾಲಿಟಿಗಳಲ್ಲಿ ವೈದ್ಯ ಇಲಾಖಾ ಅಧಿಕಾರಿಗಳು ಮುಖ್ಯಾಧಿಕಾರಿಗಳಾಗಿರಬೇಕಾದುದು ಯುಕ್ತವಾಗಿದೆ.

11. ಇದುವರೆಗೆ ರೋಗಬಂದಾಗ ಅದನ್ನು ಹೋಗಲಾಡಿಸುವ ಪ್ರಯತ್ನಗಳೇ ನಡೆಯುತ್ತಿವೆ. ಮುಂದೆ ಇದರ ಜತೆಗೆ ರೋಗಬಾರದಂತೆ ಅಡ್ಡಿಪಡಿಸತಕ್ಕ ಕೆಲಸಗಳಿಗೆ ಹೆಚ್ಚು ಗಮನಕೊಡಬೇಕಾಗಿದೆ.

ವರ್ತಮಾನಸಂಗ್ರಹ.

ಅಮೇರಿಕೆಯಲ್ಲಿ 53 ಗಂಟೆಗಳ ಒಂದು ಗೊಂಚಲು ತಯಾರಾಗುತ್ತಿದೆಯೆಂದೂ, ಇದನ್ನು ಬಾರಿಸುವಾಗ ಇದರ ಪ್ರತಿಧ್ವನಿಯು ಬ್ರಿಟನ್, ಐರ್ಲೆಂಡ್, ದಕ್ಷಿಣಆಫ್ರಿಕ, ಹಿಂದುಸ್ಥಾನ, ಆಸ್ಟ್ರೇಲಿಯಗಳಿಗೆ ಕೇಳಬರುವುದೆಂದೂ ತಿಳಿಯಬರುತ್ತದೆ.

ಗುಜರನ್ವಾಲಾದ ಡಾಕ್ಟರ್ ಗಯಾನಚಂದ್ ಎಂಬವರು ತಮ್ಮ ಹೆಂಡತಿಯನ್ನೂ ಮತ್ತೊಬ್ಬ ಬಂಧುವನ್ನೂ ಕೊಲೆಮಾಡಿದಪರಾಧಕ್ಕಾಗಿ ಸೆಷನ್ಸು ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ "ನನ್ನ ಬಂಧುವಾದ ಕಿರ್ಪಾರಾಂ ಎಂಬಾತನ ನಡವಳಿಕೆಯಿಂದ ಪ್ರಕ್ಷುಬ್ಧನಾಗಿ ಸಮಯ ನಿರೀಕ್ಷಿಸಿಕೊಂಡಿದ್ದು, ಪಿಸ್ತೂಲನ್ನು ಹಾರಿಸಲು ಕಲಿತಿದ್ದ ನನ್ನ ಹೆಂಡತಿಯ ಮೂಲಕ ಅವನನ್ನು ಗುಂಡಿನಿಂದ ಹೊಡೆಯಿಸಿ ಕೊಲ್ಲಿಸಿದೆನು. ಹೀಗೆ ಶತ್ರು ನಾಶವಾದ ಮೇಲೆ ನನ್ನ ಹೆಂಡತಿಯ ಅಪೇಕ್ಷೆಯಂತೆ ಅವಳನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ ನಿಜಕ್ಷಾತ್ರಧರ್ಮದಿಂದ ನಾನೇ ಸೆರೆಯಾಳಾದೆನು. ಇದರಿಂದ ನಾನು ಅಪರಾಧಿಯಾಗಿರುವುದರಿಂದ ಆತ್ಮರಕ್ಷಣೆಗಾಗಿ ಏನನ್ನೂ ಹೇಳತಕ್ಕುದಿಲ್ಲ" ವೆಂದು ಸ್ಟೇಟ್ಮೆಂಟನ್ನು ಕೊಟ್ಟಿರುವನು.

ಬೊಂಬಾಯಿಪಟ್ಟಣದಲ್ಲಿ ಕೆಲಸಮಾಡಿ ಜೀವಿಸಲಾರದ ಒಬ್ಬ ಸೋಮಾರಿಯು ತನ್ನ ಹೆಂಡತಿಯನ್ನು ಅಮ್ನಾಬಾಯಿ ಎಂಬ ತಲೆಹಿಡಿಕಿಯ ಸಹಾಯದಿಂದ ವ್ಯಭಿಚಾರಕ್ಕೆ ಗುರಿಮಾಡಿ ಆಳಿಗೆ ಹಿಂಸೆಯನ್ನೂ ಮನೋವೇದೆಯನ್ನೂ ಉಂಟುಮಾಡಿದ

ಅಪರಾಧಕ್ಕಾಗಿ 4 ವರ್ಷ ಕಠಿಣಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟನು.

ಮಧ್ಯಪ್ರಾಂತಕ್ಕೆ ಸೇರಿದ ದುರ್ಗಾ ಡಿಸ್ಟ್ರಿಕ್ಟಿನ ಭಿಮೋರಿ ಎಂಬ ಊರಿನ ಧನವೀರತುಲಾರಾಂಜಿ ಎಂಬವರು ಸುಮಾರು 3 ಲಕ್ಷ ರೂಪಾಯಿಗಳು ಬಾಳುವ ತಮ್ಮ ಸ್ಥಿರ ಆಸ್ತಿಯನ್ನೆಲ್ಲಾ ಅಲ್ಲಿನ ಆರ್ಯಪ್ರತಿನಿಧಿಸಭೆಯವರಿಗೆ ಕೊಟ್ಟು ಛತ್ತೀಸ್‌ಘರ್ ಡಿಸ್ಟ್ರಿಕ್ಟಿನಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುವರು.

ಗೌಹತಿಯಲ್ಲಿ ಜರಗಲಿಕ್ಕಿರುವ ರಾಷ್ಟ್ರೀಯ ಸಭೆಗಾಗಿ ಅಸ್ಸಾಮ್-ಬಂಗಾಳ ರೈಲ್ವೆ ಕಂಪೆನಿಯವರಿಂದ 'ಪಾಂಡು ಫ್ಲೇಗ್ ಸ್ಟೇಶನ್' ಎಂಬ ಹೊಸ ಸ್ಟೇಶನ್ನೊಂದು ಸ್ಥಾಪಿಸಲ್ಪಟ್ಟಿರುವುದು. ಟಿಕೆಟಿನ ದರಗಳು ಮದ್ರಾಸಿನಿಂದ 1 ನೇ ತರಗತಿಗೆ ರೂ. 170, 2 ನೇ ತರಗತಿಗೆ ರೂ. 85-0-0 ಮೇಲ್ ಇಂಟರ್ ತರಗತಿಗೆ ರೂ. 40-13-0, ಆರ್ಡಿನರಿ ಇಂಟರ್ ತರಗತಿಗೆ ರೂ. 37-11-0, ಮೇಲ್ ಮೂರನೇ ತರಗತಿಗೆ ರೂ. 32-9-0; ಆರ್ಡಿನರಿ ಮೂರನೇ ತರಗತಿಗೆ ರೂಪಾಯಿ 25-7-9 ಗೊತ್ತುಮಾಡಲ್ಪಟ್ಟಿರುವುವು.

ಹೈದರಾಬಾದ್ ಸಂಸ್ಥಾನದಲ್ಲಿ ಹಿಂದೆ ಮಂತ್ರಿಗಳಾಗಿದ್ದ ಸರ್ ಕೃಷ್ಣಪ್ರಸಾದ್‌ರವರು ಈಗ ಪುನಹ ಅಲ್ಲಿನ ಎಕ್ಸಿಕ್ಯುಟಿವ್ ಕೌನ್ಸಿಲ್ (ಕಾರ್ಯನಿರ್ವಾಹಕಮಂಡಲಿಯ) ಪ್ರೆಸಿಡೆಂಟರಾಗಿ ನೇಮಕವಾಗಿರುವರೆಂದು ಕೇಳುತ್ತೇವೆ. ಅಲ್ಲಿನ ರಾಜ್ಯಾಡಳಿತದ ವಿಷಯದಲ್ಲಿ ಈಚೆಗೆ ಅನೇಕ ಆಕ್ಷೇಪಣೆಗಳು ಹೊರಪಟ್ಟಿದ್ದರಿಂದ, ಬ್ರಿಟಿಷ್ ಸರ್ಕಾರದವರ ಅಭಿಪ್ರಾಯದಂತೆ ಹೈದರಾಬಾದಿನ ನೈಜಾಮರವರು ಕೆಲವು ಮಂದಿ ಅಧಿಕಾರಿಗಳನ್ನು ತೆಗೆದುಹಾಕಿ ಶಕ್ತರೂ ನಿಸ್ಪೃಹರೂ ಆದವರನ್ನು ನೇಮಿಸುತ್ತಿರುವರು.

'ಸ್ತ್ರೀವ್ಯಾಮೋಹದಿಂದ ಇಂದೂರು ರಾಜ್ಯಪದವಿಯೆನ್ನು ಬಿಟ್ಟುಕೊಟ್ಟು ಈಗ ಪಾಶ್ಚಾತ್ಯ ದೇಶಸಂಚಾರದಲ್ಲಿರುವ ಮಹಾರಾಜರಿಂದ ಆರಂಭಿಸಲ್ಪಟ್ಟಿದ್ದ ರಾಜಭವನವು ಈಗತಾನೆ ಪೂರೈಸಿರುತ್ತದೆ. ಇದರಲ್ಲಿ 33 ಕೊಠಡಿಗಳಿವೆ ಮತ್ತು ಲಕ್ಷಾಂತರ ರೂಪಾಯಿವರೆಗಿನ ಅಲಂಕಾರ ಪದಾರ್ಥಗಳು ಸೀಮೆಯಿಂದ ತರಿಸಲ್ಪಟ್ಟಿರುತ್ತವೆಯಲ್ಲದೆ ವಿಮಾನದಮನೆಯ ಅಲಂಕಾರವಸ್ತುಗಳಿಗಾಗಿ 30 ಸಾವಿರ ರೂ. ವರೆಗೆ ವ್ಯಯವಾಗಿರುತ್ತದೆ. ಒಟ್ಟು ಕಟ್ಟಡಕ್ಕೆ 30 ಲಕ್ಷ ರೂ. ವರೆಗೂ ವ್ಯಯವಾಗಿರುವುದಂತೆ. ಪ್ರಜೆಗಳು ಕಷ್ಟಪಟ್ಟು ದುಡಿದು ಕೊಟ್ಟ ಕಂದಾಯದ ಹಣವು ಪ್ರಭುಗಳ ವಿಲಾಸಕ್ಕಾಗಿ ಅನಾವಶ್ಯಕವಾಗುತ್ತಿರುವುದು ಎಷ್ಟು ವಿಷಾದಕರವೆಂಬುದನ್ನು ಹೇಳಬೇಕಾಗಿಲ್ಲ.

ಬೈಸಿಕಲ್‌ಸ್ವಾರಿಯಿಂದ ಭೂಪ್ರದಕ್ಷಿಣೆಯನ್ನು ಮಾಡಿಕೊಂಡುಬರಲು ಹೊರಟ ನಾಲ್ವರು ಬಂಗಾಳಾ ಯುವಕರನ್ನು ಸತ್ಕರಿಸಲು ಕಲಕತ್ತಾ ಪಟ್ಟಣದ ನಿವಾಸಿಗಳು ಕಳೆದ ತಾ|| 12 ರಲ್ಲಿ ಒಂದು ಪ್ರಚಂಡಸಭೆಯನ್ನು ಆ ಪಟ್ಟಣದ ಮೇಯರವರ ಅಧ್ಯಕ್ಷತೆಯಲ್ಲಿ ನೆರೆಯಿಸಿ ಆ ನಾಲ್ವರ ಧೈರ್ಯಸ್ಥೈರ್ಯವನ್ನು ಕೊಂಡಾಡಿ ಅವರು ಸುಖವಾಗಿ ಭೂಪ್ರದಕ್ಷಿಣೆ ಮಾಡಿಕೊಂಡು ಬರುವವರಾಗಲೆಂದು ಹರಸಿದರು. ಅವರಿಗೆ ಬಿ. ಎಸ್. ಎ. ಸೈಕಲ್ ಕಂಪೆನಿಯವರು ನಾಲ್ಕು ಬೈಸಿಕಲ್ಲುಗಳನ್ನೂ ಬೇರೆರಡು ಕಂಪೆನಿಯವರು ನಾಲ್ಕು ಪಿಸ್ತೂಲುಗಳನ್ನೂ ಮಗದೊಬ್ಬರು ಛಾಯಾಗ್ರಾಹಿಯಂತ್ರಸಾಮಗ್ರಿಗಳನ್ನೂ ಉಚಿತವಾಗಿ ಕೊಟ್ಟರು, ಮತ್ತು ಅವರ ಹಿತಚಿಂತಕರು ಅವರುಗಳ ಜೀವವಿಮೆಯನ್ನು ಮಾಡಿಸಿದರು.

ಬಂಗಾಳಾ ಆಧಿಪತ್ಯದಲ್ಲಿ ಯೂನಿವರ್ಸಿಟಿವಿದ್ಯಾಭ್ಯಾಸಕ್ಕೆ 37½ ಲಕ್ಷ ರೂಪಾಯಿಗಳೂ, ಸೆಕೆಂಡರಿವಿದ್ಯಾಭ್ಯಾಸಕ್ಕೆ 24½ ಲಕ್ಷ ರೂಪಾಯಿಗಳೂ ವ್ಯಯವಾಗುತ್ತಿರುವಲ್ಲಿ, ಗ್ರಾಮಾಂತರಗಳ ಪ್ರೈಮರಿ ವಿದ್ಯಾಭ್ಯಾಸಕ್ಕೆ ಮಾತ್ರ 31 ಲಕ್ಷರೂ. ವ್ಯಯವಾಗುವುದು. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಸರಾಸರಿ ಕಾಲೇಜಿನಲ್ಲಿ 121½ ರೂಪಾಯಿಗಳೂ, ಹೈಸ್ಕೂಲಿನಲ್ಲಿ 6¼ ರೂಪಾಯಿಗಳೂ, ಪ್ರೈಮರಿ ಸ್ಕೂಲುಗಳಲ್ಲಿ ಸ್ವಲ್ಪ ಕಡಿಮೆ 2 ರೂಪಾಯಿಗಳೂ ವ್ಯಯವಾಗುವುವೆಂದು ಗೊತ್ತಾಗುತ್ತದೆ. ಗ್ರಾಮಾಂತರಗಳಲ್ಲಿ ವಿದ್ಯಾರ್ಜನೆಯಿಲ್ಲದೆ ಜನರು ನಷ್ಟಪಡುತ್ತಿರುವರು. ಪಟ್ಟಣಗಳಲ್ಲಿ ಯೂನಿವರ್ಸಿಟಿ ವಿದ್ಯಾಭ್ಯಾಸಮಾಡಿದವರು ಉದ್ಯೋಗವಿಲ್ಲದೆ ಅಲೆಯುತ್ತಿರುವರು. ಗ್ರಾಮಾಂತರಗಳ ಜನರ ದ್ರವ್ಯವು ನಿರುದ್ಯೋಗವನ್ನು ಹೆಚ್ಚಿಸಲಿಕ್ಕೆ ವಿನಿಯೋಗವಾಗುತ್ತದೆಯೇ ಹೊರತು ಆ ಜನರ ಅಭಿವೃದ್ಧಿಮಾರ್ಗಗಳಿಗೆ ಸಾಕಾದಷ್ಟು ವಿನಿಯೋಗವಾಗುತ್ತಿಲ್ಲ.

ಈಸ್ಟ್‌ಇಂಡಿಯನ್ ರೈಲ್ವೆ ಸಬ್‌ಡಿವಿಜನ್ ಆಫೀಸರಾದ ಮಿ|| ಲ್ಯೂಯಿಸ್‌ರವರು ಧನ್ಬಾಡಿಗೆ ಸರ್ಕೀಟು ಹೋಗಿರುವಾಗ್ಯೆ ಆ ಊರಿನ ನೆರೆಪ್ರದೇಶದಲ್ಲಿ ಒಂದು ನರಭಕ್ಷಕ ಹುಲಿಯ ಕಾಟವು ಬಹಳವಾಗಿರುವುದನ್ನು ಕೇಳಿ ತಮ್ಮ ಕೈಕೆಳಗಿನ ಅಧಿಕಾರಿಯೊಡನೆ ಆ ಹುಲಿಯ ಬೇಟೆಮಾಡಲು ಹೊರಟರು. ಸಾಯುಧರಾದ ಲ್ಯೂಯಿಸ್‌ರವರೂ ನಿರಾಯುಧರಾದ ಸಹಾಯೋದ್ಯೋಗಿಯೂ ಆ ಹುಲಿಯನ್ನು ಪ್ರತಿಭಟಿಸಿ ನಿಂತಿರುವಾಗ್ಗೆ ಅಧಿಕಾರಿಯು ಹುಲಿಗೆ ಗುರಿಕಟ್ಟಿ ಗುಂಡನ್ನು ಹೊಡೆದರು. ಅದು ತಗುಲಿತಾದರೂ ಹುಲಿಯು ಅವರಮೇಲೆ ಬಿದ್ದಿತು. ಆಗ ಅವರು ಪುನಃ ಗುಂಡನ್ನು ಹೊಡೆದರಾದರೂ ಹುಲಿಗೆ ತಗಲಲಿಲ್ಲವಾಗಿ ಅದು ಅವರನ್ನು ಹಿಡಿದು ಕೆಳಕ್ಕೆ ಕೆಡವಿಬಿಡಲು ಸಮೀಪದಲ್ಲಿ ನಿರಾಯುಧರಾಗಿದ್ದ ಸಹಾಯೋದ್ಯೋಗಿಯು ಕೆಳಗೆ ಬಿದ್ದಿದ್ದ ಕೈಕೊಡಲಿಯನ್ನು ತೆಗೆದುಕೊಂಡು ಹುಲಿಯ ತಲೆಯಮೇಲೆ ಹೊಡೆದರು. ಅದು ಆ ಅಧಿಕಾರಿಯನ್ನು ಬಿಟ್ಟು ಇವರ ಮೇಲೆ ಬಿದ್ದು ಇವರ ತೋಳನ್ನು ಬಗಿದುಬಿಟ್ಟು ಪುನಃ ದೊಡ್ಡ ಅಧಿಕಾರಿಯಮೇಲೆ ಬಿದ್ದು ಅವರನ್ನು ಕೊಂದುಬಿಟ್ಟಿತು. ಸಹಾಯೋದ್ಯೋಗಿಯು ಬಹಳ ಸಾಹಸಪಟ್ಟು ಸಮೀಪದಲ್ಲಿದ್ದ ರೈಲ್ವೆಸ್ಟೇಷನ್ನಿಗೆ ಬಂದು ಅಲ್ಲಿಂದ ಧನಬಾಡು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವರು. ಇವರು ಹಿಂದೊಂದು ಸಂದರ್ಭದಲ್ಲಿ ಹುಲಿಯ ಕೈಗೆ ಸಿಕ್ಕಿದ್ದ ಒಬ್ಬ ಐರೋಪ್ಯನನ್ನು ಬಿಡಿಸಿ ಅವನ ಪ್ರಾಣರಕ್ಷಣೆ ಮಾಡಿದ್ದರಂತೆ.

ಜರೂರು ನೋಟೀಸ್.

ಬೆಂಗಳೂರುಸಿಟಿಯಲ್ಲಿರುವ ಏಸಿಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಆಶೂರೆನ್ಸ್ ಕಂಪೆನಿ ಲಿಮಿಟೆಡ್ ಷೇರುದಾರರುಗಳಿಗೆ ಈ ನೋಟೀಸಿನ ಮೂಲಕ ತಿಳಿಯಪಡಿಸುವದೇನೆಂದರೆ—ಮೆಸರ್ಸ್. ಪಿ. ಕಾಳಿಂಗರಾಯರು ಮತ್ತು ಕೆ. ಎಸ್. ಭದ್ರಯ್ಯಶೆಟ್ಟರು ಈ ಕಂಪೆನಿಗೆ ವಿರುದ್ಧವಾಗಿ ನಡೆಸಿದ ಕಾರ್ಯಭಾಗವನ್ನು ಅನುಸರಿಸಿ ಕೆಲವರು ಷೇರುಹೋಲ್ಡರುಗಳು ತಾ|| 30-9-1926 ರಲ್ಲಿ ಮತ್ತು ತಾ|| 16-10-1926 ರಲ್ಲಿ ನಡೆಯಿಸಿದ ಎಕ್ಸ್‌ಟ್ರಾ ಆರ್ಡಿನರಿ ಜನರಲ್ ಮತ್ತು ಕನ್‌ಫರ್ಮೇಟರಿ ಮೀಟಿಂಗುಗಳಲ್ಲಿ ಮಾಡಿದ ರೆಜ್ಯುಲೇಷನ್ನುಗಳನ್ನು ತಿರಸ್ಕರಿಸಿರುವುದಾಗಿ ಮೈಸೂರುಸೀಮೆಯ ಜಾಯಿಂಟ್ ಸ್ಟಾಕ್ ಕಂಪೆನಿಗಳ ರೆಜಿಸ್ಟ್ರಾರ್‌ರವರು ತಮ್ಮ ತಾ|| 19-11-1926 ರ 895 ನಂ. ಕಾಗದದ ಮೂಲಕ ತಿಳಿಸಿರುತ್ತಾರೆ. ಕಂಪೆನಿಯ ಪ್ರಕೃತ ಆಡಳಿತವು ಬಹಳ ಸಮರ್ಪಕವಾಗಿನಡೆಯುತ್ತ ಕಂಪೆನಿಯು ಒಳ್ಳೇ ಅಭಿವೃದ್ಧಿಗೆ ಬರುತ್ತಿರುವ ಈಗಿನ ಸ್ಥಿತಿಯಲ್ಲಿ ಅದನ್ನು ಹಾಳ್ಮಾಡಬೇಕೆಂಬ ದುರುದ್ದೇಶದಿಂದ ಮೇಲ್ಕಂಡ ಷೇರುದಾರರುಗಳ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವವರು ಕಾರ್ಯಭಾಗವನ್ನು ನಡೆಸುತ್ತಿರುವರೆಂದು ತಾ|| 5-10-1926 ರ ಮತ್ತು 18-10-1926 ರ ನ್ಯೂಸ್‌ಪೇಪರುಗಳಲ್ಲಿ ಪ್ರಚುರಪಡಿಸಲ್ಪಟ್ಟಿರುವುದರಿಂದ ಅದೇ ವಿಚಾರವನ್ನು ಪುನಃ ಹೇಳಬೇಕಾದುದಿಲ್ಲ. ಅವರುಗಳಿಂದ ನಡೆಯಿಸಲ್ಪಟ್ಟ ಮೀಟಿಂಗುಗಳಲ್ಲಿ ಪ್ಯಾಸಾದ ರೆಜ್ಯುಲೇಷನ್ನುಗಳನ್ನು ರದ್ದುಮಾಡಿರುತ್ತದೆಂದು ಮೈಸೂರು ಜಾಯಿಂಟ್ ಸ್ಟಾಕ್ ಕಂಪೆನಿಗಳ ರೆಜಿಸ್ಟ್ರಾರ್‌ರವರು ತೀರ್ಮಾನಿಸಿರುತ್ತಾರಾದ್ದರಿಂದ, ಮೇಲ್ಕಂಡ ಗೊಂದಲಕಾರರು ಸ್ವಾರ್ಥಪರತೆಯಿಂದ ಅಪಮಾನಕರವೂ ನ್ಯಾಯವಿರುದ್ಧವೂ ಆದ ಸಂಗತಿಗಳನ್ನು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಿ ಮತ್ತು ಕಂಪೆನಿಯ ಷೇರುದಾರರುಗಳಲ್ಲಿ ಬಹಳವಾಗಿ ಹರಡಿ ತನ್ಮೂಲಕ ಕಂಪೆನಿಗೆ ಬರತಕ್ಕ ಪಾಲಿಸಿ ಮತ್ತು ಬಾಂಡುಗಳ ಹಣದ ವಾಯಿದೆ ಕಳೆದುಹೋಗಿ ನಷ್ಟಸಂಭವಿಸಬೇಕೆಂಬುದು ಅವರ ಉದ್ದೇಶವಾಗಿರುತ್ತದೆ. ಅಲ್ಲದೆ ಮೇಲ್ಕಂಡ ಗೊಂದಲಕಾರರ ಸಂಗಡ ಸೇರಿಕೊಂಡಿದ್ದ ಷೇರುಹೋಲ್ಡರುಗಳು ಕಂಪೆನಿಯ ಕಾರ್ಯನಿರ್ವಾಹಕರಿಂದ ಬಹಳ ಸರಳವಾಗಿ ನಡೆಯಿಸಲ್ಪಡುತ್ತಿರುವ ಕಾರ್ಯಕ್ಕೆ ಅಡಚಣೆಯನ್ನುಂಟುಮಾಡಲು ತಾವು ಕೈಕೊಂಡ ಕಾರ್ಯಭಾಗದಿಂದುಂಟಾದ ಅಪಾಯವನ್ನು ಈಗಲಾದರೂ ತಿಳಿದುಕೊಳ್ಳುವವರಾಗಬೇಕು.

ಈ ಕಂಪೆನಿಗೆ ಮದ್ರಾಸಿನಲ್ಲಿ ಚೀಫ್ ಏಜಂಟರಾಗಿದ್ದ ಮೆಸರ್ಸ್. ಕಾಳಿಂಗರಾವ್ ಅಂಡ್ ಸನ್ಸರವರ ಏಜನ್ಸಿಯು 1926 ನೇ ಸೆಪ್ಟಂಬರ್ ತಾ|| 30 ರಿಂದ ತಪ್ಪಿಸಲ್ಪಟ್ಟಿರುವ ಪ್ರಯುಕ್ತ ಯಾರೂ ಅವರುಗಳಿಗೆ ಹಣವನ್ನು ಪಾವತಿಮಾಡಕೂಡದೆಂದು ಪುನಃ ಜ್ಞಾಪಿಸುತ್ತೇವೆ. ಮದ್ರಾಸಾಧಿಪತ್ಯದ ಅನೇಕ ಡಿಸ್ಟ್ರಿಕ್ಟುಗಳಲ್ಲಿರುವ ಕಂಪೆನಿಯ ಬ್ಯಾಂಕುಗಳು ಯಾವವೆಂದು ಡಿವಿಜನಲ್ ಏಜನ್ಸಿ ಆಫೀಸುಗಳ ಮೂಲಕ ತಿಳಿದುಕೊಂಡು ಆ ಬ್ಯಾಂಕುಗಳಿಗೆ ಕಟ್ಟುವ ಅಥವಾ ಬೆಂಗಳೂರುಸಿಟಿಯಲ್ಲಿರುವ ಹೆಡ್ಡಾಫೀಸಿಗೆ ನೇರವಾಗಿ ಕಳುಹಿಸುವ ಹಣವು ಮಾತ್ರ ಕಂಪೆನಿಯವರಿಂದ ಅಂಗೀಕರಿಸಲ್ಪಡುತ್ತದೆ.

ಮದ್ರಾಸು ಆಧಿಪತ್ಯದಲ್ಲಿರುವ ಈ ಕಂಪೆನಿಯ ಷೇರುಹೋಲ್ಡರುಗಳ ಸೌಕರ್ಯಕ್ಕಾಗಿ (1) ಕೊಯಮತ್ತೂರು ಡಿಸ್ಟ್ರಿಕ್ಟ್ ಈರೋಡು (2) ಗೋದಾವರಿ ಡಿಸ್ಟ್ರಿಕ್ಟ್ ಕೋಕಿನಾಡ (3) ಮದ್ರಾಸುಪಟ್ಟಣದಲ್ಲಿ ಸದ್ಯಕ್ಕೆ ಲಿಂಗಚೆಟ್ಟಿಸ್ಟ್ರೀಟು ಈ ಸ್ಥಳಗಳಲ್ಲಿ ಡಿವಿಜನಲ್ ಏಜನ್ಸಿ ಆಫೀಸುಗಳು ಏರ್ಪಡಿಸಲ್ಪಟ್ಟಿವೆ.

ಮೇಲ್ಕಂಡ ದೊಡ್ಡಮನುಷ್ಯರುಗಳು ಈಗಿನ ಡೈರಕ್ಟರುಗಳಿಂದ ಕಂಪೆನಿಯ ಆಡಳಿತವನ್ನು ಕಸುಕೊಳ್ಳುವುದಕ್ಕಾಗಿ 1926 ನೇ ಅಕ್ಟೋಬರ್ ತಿಂಗಳ ಆರಂಭದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಕೆಲವು ಮೊಖದ್ದಮೆಗಳನ್ನು ದಾಖಲ್ಮಾಡಿರುತ್ತಾರೆ. ಅವರಿಷ್ಟಪ್ರಕಾರ ಮೊಖದ್ದಮೆಗಳು ಇನ್ನೂ ಫೈಸಲಾಗದೆ ಹಾಗೆಯೇ ಇವೆ.

. ಕಂಪೆನಿಯ ಷೇರುದಾರರುಗಳು ಮುಖ್ಯವಾಗಿಯೂ ಇತರ ಜನರು ಸಾಮಾನ್ಯವಾಗಿಯೂ ಮೆಸರ್ಸ್. ಪಿ. ಕಾಳಿಂಗರಾವ್ ಮತ್ತು ಕೆ. ಎಸ್. ಭದ್ರಯ್ಯಚೆಟ್ಟಿ ಇವರುಗಳು ವರ್ತಮಾನಪತ್ರಿಕೆಗಳಲ್ಲೂ ಇತರ ವಿಧದಲ್ಲೂ ಪ್ರಕಟಿಸಿರುವ ವಿಷಯಗಳಿಗೆ ಗಮನಕೊಡದೆ ಕಂಪೆನಿಗೆ ಸಹಕಾರಿಗಳಾಗಿದ್ದುಕೊಂಡು ಕಂಪೆನಿಯು ಅಭಿವೃದ್ಧಿಯನ್ನು ಹೊಂದುವಂತೆ ಕಂಪೆನಿಯ ಕಾರ್ಯನಿರ್ವಾಹಕರಿಗೆ ಸಹಾಯಮಾಡಬೇಕಲ್ಲದೆ ಮೆಸರ್ಸ್. ಪಿ. ಕಾಳಿಂಗರಾಯರು ಮತ್ತು ಭದ್ರಯ್ಯಸೆಟ್ಟರು ಕಂಪೆನಿಗೆ ವಿರೋಧವಾಗಿ ನಡಿಸುವ ಕಾರ್ಯಭಾಗದಲ್ಲಿ ಪ್ರತ್ಯಕ್ಷವಾಗಿಯೇ ಆಗಲಿ ಪರೋಕ್ಷವಾಗಿಯೇ ಆಗಲಿ ಯಾವ ಸಹಾಯವನ್ನೂ ಮಾಡಕೊಡದೆಂದು ಪ್ರಾರ್ಥಿಸುತ್ತೇವೆ.

(ರುಜು) ಎಂ. ಪಿ. ಭೋಗಯ್ಯ, ಬಿ.ಎ.,ಬಿ.ಎಲ್.,
25 ನವಂಬರ್ 1926. ಡೈರೆಕ್ಟರುಗಳ ಬೋರ್ಡಿನ ಪರವಾಗಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟಿದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ಸಿಗೆ ವರ್ಣಿಸಿ ಮಾರುಮಾರುದ್ದ ಲೇಖಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಸಮಾಜಗಳಲ್ಲಿ ಪರಸ್ಪರ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಶಮ್ಯವನ್ನು ವೃದ್ಧಿಗೊಳಿಸುವ ಲೇಖಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪ[illegible]ಯು ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟು ಲೇಖಕರ ಸಂಪೂರ್ಣ ಹೆಸರು ವಿಳಾಸ ಮತ್ತು ಚಂದಾನಂಬರು ತಿಳುಹಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧ ಲೇಖಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕನೂ ಖಂಡಿತವಾಗಿ ಗಮನಿಸಬೇಕು.—ಸಂಪಾದಕ.

ತಿರಸ್ಕೃತಲೇಖ.

(1) ಶಿವಪೂಜೆಗೌಡ ಪ—ಆಕಾಲದಲ್ಲಿ ವೀರ್ಯನಷ್ಟವೆಂಬ ನಿಮ್ಮ ಲೇಖವು ನಮ್ಮ ನಿಬಂಧನೆಗೆ ವಿರುದ್ಧವಾಗಿ ಬರೆಯಲ್ಪಟ್ಟಿರುವುದರಿಂದಲೂ ಎಲ್ಲರಿಗೂ ತಿಳಿದ ವಿಷಯವಾಗಿರುವುದರಿಂದಲೂ ಪ್ರಕಟಿಸಲ್ಪಡಲಿಲ್ಲವು.

ಪುಸ್ತಕದಾನ.

ಶ್ರೀಮನ್ನಿರಂಜನಜಗದ್ಗುರು ಮುರುಘಾಮಠದ ಗುರುಕುಲವಾಸದ ವಿದ್ಯಾರ್ಥಿಗಳ ವಾಚನಾಲಯಕ್ಕೆ ಧಾರವಾಡದ ಒಬ್ಬ ವಕೀಲರು ಸುಮಾರು 360 ರೂಪಾಯಿ ಬೆಲೆಬಾಳುವ 270 ಇಂಗ್ಲೀಷು, ಸಂಸ್ಕೃತ, ಕನ್ನಡ, ಮರಾಠಿ ಪುಸ್ತಕಗಳನ್ನು ಬಸವಾದಿ ಪ್ರಮಥರ ಸ್ಮರಣಾರ್ಥವಾಗಿ ಉಚಿತವಾಗಿ ಕೊಟ್ಟಿರುವರೆಂಬದನ್ನು ತಿಳಿಸಲು ಆನಂದವಾಗುತ್ತದೆ. ಸಮಾಜಬಂಧುಗಳು ಬಡವಿದ್ಯಾರ್ಥಿಗಳ ವಾಚನಾಲಯಕ್ಕೆ ಇದೇ ರೀತಿ ಸಹಾಯಮಾಡುವರೆಂದು ತುಂಬಾ ನಂಬಿರುವ, ವ್ಹಿ. ಆರ್. ಕೊಪ್ಪರ,
ಆನರರಿ ಸೆಕ್ರೆಟರಿ, ಲಾಯಬ್ರರಿ.

ಶ್ರೀ ರುದ್ರೇಶ್ವರಸ್ವಾಮಿಯ ಕಾರ್ತೀಕಸೇವೆ.

ಅರಸೀಕೆರೆ ತಾ|| ಹಲ್ಕೂರುಗ್ರಾಮದಲ್ಲಿ ಕಳೆದ ಕಾರ್ತೀಕ ಶು|| 1 ರಿಂದ ಬಹುಳ 30 ರವರೆಗೂ ಶ್ರೀ ರುದ್ರೇಶ್ವರಸ್ವಾಮಿಯವರಿಗೆ ರಾತ್ರಿವೇಳೆ ಭಜನೆ ಮಂಗಳಾರತಿ ವಗೈರೆ ಸೇವಾರ್ಥವು ಬಹಳ ವಿಜೃಂಭಣೆಯಿಂದ ನಡೆಯುತ್ತಿದ್ದು ಮಾರನೆಯದಿವಸ ಕೆಂಡದಾರ್ಚನೆಯೂ ಗ್ರಾಮದ ಎಲ್ಲಾ ದೇವರುಗಳ ಉತ್ಸವವೂ ಜರುಗಿದುವು. ಈ ಗ್ರಾಮದ ಸಾಹುಕಾರ್ ಗೊಡಚಪ್ಪಶೆಟ್ಟರು, ಸಾಹುಕಾರ್ ರುದ್ರಪ್ಪಶೆಟ್ಟರು, ಬಾಣಾವರದ ರುದ್ರಶೆಟ್ಟರು, ಪಟೇಲ್ ರಂಗೇಗೌಡರು, ಮ|| ಪುಟ್ಟಪ್ಪಶೆಟ್ಟರು ಮತ್ತು ಮ|| ನಿಂಗೋಜರಾವ್ ವಗೈರೇರಿಂದ ಮೇಲ್ಕಂಡ ದೇವಕೋತ್ಸವವು ಅತಿ ವೈಭವದೊಡನೆ ನಡೆಸಲ್ಪಟ್ಟು ಪಾನಕ ಫಲಹಾರಾದಿಗಳಿಂದ ಭಕ್ತರುಗಳು ತೃಪ್ತಿಗೊಳಿಸಲ್ಪಟ್ಟರೆಂದು ತಿಳಿಸಲು ಸಂತೋಷವಾಗುತ್ತದೆ. ಮೇಲ್ಕಂಡ ದೊಡ್ಡಮನುಷ್ಯರುಗಳಿಗೆ ಶ್ರೀ ರುದ್ರೇಶ್ವರನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ. ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರುಮುರುಘಾರಾಜೇಂದ್ರ ಫ್ರೀ ಬೋರ್ಡಿಂಗ್, ಧಾರವಾಡ.

ನಮ್ಮ ಸಂಸ್ಥೆಯ ಕೀರ್ತನಾಸಂಘದ ವತಿಯಿಂದ ಕಳೆದ ತಾ|| 4 ನೇ ದಿವಸ ಮೈಸೂರ ಸ್ಟೇಟ ಹುಣಸೇಗಟ್ಟದ ಆರಾಧ್ಯಮಠದ ವೇ|| ಶಿವಕೀರ್ತನಭೂಷಣ ಜಿ. ನಂಜುಂಡಾರಾಧ್ಯರು "ಭದ್ರಾಯು" ಹಾಗೂ ಮರುದಿವಸ "ಮಾರ್ಕಂಡೇಯ" ಇವರ ಕೀರ್ತನಗಳನ್ನು ಬಹುರಮ್ಯವಾಗಿಯೂ ಬೋಧಪರವಾಗಿಯೂ ಮಾಡಿದ್ದಲ್ಲದೆ, ತಾವು ಹೋಗುವ ಕಾಲಕ್ಕೆ ವಿದ್ಯಾರ್ಥಿಗಳೆಲ್ಲರಿಗೂ ಬೋಧಪರಭಾಷಣಮಾಡಿದರು. ತಾ|| 8 ರಲ್ಲಿ ರಾಮದುರ್ಗದ ವೇ|| ಸಂಗಮನಾಥಶಾಸ್ತ್ರಿಗಳವರು "ನಾಟ್ಯನಮಿತ್ತಂಡಿ" ಹಾಗೂ ಮರುದಿವಸ "ಬಿಜ್ಜಮಹಾದೇವಿ" ಇವರ ಕೀರ್ತನೆಗಳನ್ನು ಬಹುರಸಿಕವಾಗಿ ಮಾಡಿರು. ಉಭಯ ಶಾಸ್ತ್ರಿಗಳವರು ನಮ್ಮ ಬಡಸಂಸ್ಥೆಯಿಂದ ಏನೂ ತೆಗೆದುಕೊಳ್ಳದೆ ಭಕ್ತಿಪೂರ್ವಕವಾಗಿ ಕೀರ್ತನಸೇವೆ ಮಾಡಿದ್ದಕ್ಕಾಗಿ ನಾವೆಲ್ಲರೂ ಅವರಿಗೆ ಅತ್ಯಂತ ಆಭಾರಿಯಾಗಿದ್ದೇವೆ. ಆಗಾಗ್ಗೆ ಇಂತಹ ಕೀರ್ತನಕಾರರು ನಮ್ಮ ಗುರುಕುಲವಾಸಕ್ಕೆ ಆಗಮಿಸಿ ನಮಗೆ ಬೋಧಾಮೃತಪಾನಮಾಡಿಸಲೆಂದು ನಾವೆಲ್ಲರೂ ಶ್ರೀ ಶಿವಯೋಗಿಯನ್ನು ಕುರಿತು ಪ್ರಾರ್ಥಿಸುತ್ತೇವೆ.

ವಿ|| ಸಾರಂಗಮಠ,
ಕೀರ್ತನಾಸಂಘದ ಸೆಕ್ರೆಟರಿ.

ವೀರಶೈವಕ್ಷತ್ರಿಯರಲ್ಲಿ ಮೊದಲನೇ ಗ್ರಾಜ್ಯುಯೇಟು.

ಸದ್ಯದ ಇಪ್ಪತ್ತನೆಯ ಶತಮಾನವೆಂದರೆ ಮನುಷ್ಯಮಾತ್ರರ ಪರಮಾವಧಿ ಜಾಗ್ರತೆಯ ಕಾಲವೆಂದು ಹೇಳಬಹುದು. ಇಂಥ ಕಾಲದಲ್ಲಿ ಸಹ ವೀರಶೈವಕ್ಷತ್ರಿಯ ಸಮಾಜವು ಎಚ್ಚೆತ್ತು ಕಣ್ದೆರೆಯದಿರುವುದು ಈ ಮತದ ಕೇವಲ ದುರ್ದೈವವೇ ಸರಿ. ಒಂದಾನೊಂದುಕಾಲದಲ್ಲಿ ಈ ಮತವು ಇತರ ವಿಷಯಗಳಂತೆ ವಿದ್ಯಾವಿಷಯದಲ್ಲೂ ಬಹುಮುಂದುವರಿದಿದ್ದಿತು. ಇದಕ್ಕೆ ಕೆಳದಿಯ ದೊರೆಯಾಗಿದ್ದ ಬಸವರಸನಿಂದ ಬರೆಯಲ್ಪಟ್ಟಿರುವ ಶಿವತತ್ವರತ್ನಾಕರವೆಂಬ ಮಹಾಗ್ರಂಥದ ಒಂದು ಉದಾಹರಣೆಯೇ ಸಾಕಾಗಿದೆ. ಇಂಥ ಅಪಾರವಾದ ವಿದ್ಯಾಸಂಪತ್ತು ಬಹುಸ್ವಲ್ಪಕಾಲದಲ್ಲೇ ನಷ್ಟವಾಗಿ ಮತವು ಈಗಿನಂಥ ಅವಿದ್ಯಾಂಧಕಾರದಿಂದ ಆವರಿಸಲ್ಪಡುವಂತಾದುದು ಕಾಲಮಹಿಮೆಯೇ ಸರಿ. ಮತಕ್ಕೆ ಪ್ರಾಪ್ತವಾಗಿರುವ ಇಂಥ ಶೋಚನೀಯಸ್ಥಿತಿಯಲ್ಲಿ ಮ|| ಡಿ. ಎಸ್. ಗುರುಬಸವಪ್ಪ ಎಂಬವರು ಈಸಾರಿಯ ಮೈಸೂರು ಯೂನಿವರ್ಸಿಟಿ, ಬಿ.ಎಸ್‌ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದು ತುಂಬಾ ಸಂತೋಷಕರವಾದ ಸಂಗತಿಯಾಗಿರುತ್ತದೆ. ಮಿ|| ಡಿ. ಎಸ್. ಗುರುಬಸವಪ್ಪನವರು ಮುಂದೆ ಬೊಂಬಾಯಿ ಯೂನಿವರ್ಸಿಟಿಯ ಎಂ.ಎಸ್‌ಸಿ. ಪರೀಕ್ಷೆಗೆ ಓದಬೇಕೆಂಬ ಅಭಿಲಾಷೆಯುಳ್ಳವರಾಗಿಯೂ ಅಭ್ಯಾಸವು ಪೂರೈಸಿದಬಳಿಕ ಒಂದು ಸ್ವತಂತ್ರ ಪಾಠಶಾಲೆಯನ್ನು ಪ್ರಾರಂಭಿಸಿ, ಆ ಮೂಲಕ ಮತಾಭಿವೃದ್ಧಿಯ ದೆಸೆಯಿಂದ ಯತ್ನಮಾಡಬೇಕೆಂಬ ಸಂಕಲ್ಪವುಳ್ಳವರಾಗಿಯೂ ಇರುತ್ತಾರೆ. ಆದ್ದರಿಂದ ಮತಾಭಿಮಾನಿಗಳು ಇವರಿಗೆ ಸಹಾಯಮಾಡಬೇಕಾದ್ದು ಕೇವಲ ಅಗತ್ಯವಾದ್ದಿರುತ್ತದೆ. ವೀರಶೈವಕ್ಷತ್ರಿಯಸಮಾಜದ ಮೊದಲನೆಯ ಗ್ರಾಜ್ಯುಯೇಟರಾದ ಈ ಡಿ. ಎಸ್. ಗುರುಬಸವಪ್ಪನವರಿಗೆ ದಯಾಮಯನಾದ ದೇವರು ಶ್ರೇಯಸ್ಸನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಚೆನ್ನಬಸವಪ್ಪಗೌಡ, ಪಾಟೀಲ್, ಕಪ್ಪನಹಳ್ಳಿ.

ಸೊರಬತಾಲ್ಲೂಕಿನಲ್ಲಿ ಕಾಡಾನೆಹಿಡಿದ ವಿಚಾರ.

ಸೊರಬದ ತಾಲ್ಲೂಕು ಪ್ರಾಂತ್ಯದಲ್ಲಿ ಪ್ರಾಣಿಗಳನ್ನು ಹಿಂಸೆಪಡಿಸಿ ಫಸಲು ನಷ್ಟಮಾಡುತ್ತಾ ಇದ್ದ ಕಾಡಾನೆಯ ವಿಚಾರದಲ್ಲಿ ರೈತರುಗಳು ಅನೇಕ ಅರ್ಜಿಗಳನ್ನು ಬರೆದುಕೊಂಡಿದ್ದುದರಮೇಲೆ ಗೌರ್ನಮೆಂಟ್ ಫಾರೆಸ್ಟ ಡಿಪಾರ್ಟ್‌ಮೆಂಟಿನಿಂದ ಕಾಡಾನೆ ಹಿಡಿಯಲು ಆನೆಗಳನ್ನು ಕಳಿಸಿಕೊಟ್ಟರು. ಅವುಗಳ ಮಾಹುತ ಶರಬತ್ತಾಲಿ ಮೊದಲಾದವರು ಹುನವಳ್ಳಿಯ ಗ್ರಾಮದಲ್ಲಿ ತಂಗಿದ್ದರು. ಸೊರಬ ತಾ|| ಹೆಗ್ಗೋಡು ಪಾ|| ಪುಟ್ಟಪ್ಪಗೌಡರು ಸದರಿ ಆನೆ ಮಾಹುತರನ್ನು ಕರಸಿಕೊಂಡು ತಮ್ಮ ಪ್ರಾಂತ್ಯದಲ್ಲಿರುವ ಕಾಡಾನೆಯನ್ನು ಹಿಡಿಸಲು ಪ್ರಯತ್ನಮಾಡಿದರು. ಆ ಕಾಡಾನೆಯು ಈ ಆನೆಗಳನ್ನು ಹೊಡೆದು 8-10 ಗಾಯಗಳನ್ನು ಮಾಡಲಾಗಿ ಮಾಹುತರು ಹೆದರಿ ಆನೆ ಹಿಡಿಯಲು ಸಾಧ್ಯವಿಲ್ಲವೆಂದು ಹಟಸ್ಥರಾಗಲು ಪಾ|| ಪುಟ್ಟಪ್ಪಗೌಡರು ಅವರಿಗೆ ಧೈರ್ಯವನ್ನು ಹೇಳಿ ಪುನಃ ಪ್ರಯತ್ನಪಟ್ಟು ಕಾಡಾನೆ ಹಿಡಿಯಲು ಮಾಹುತರಿಗೆ ಬೇಕಾದ ಸಲಕರಣೆಗಳನ್ನೊದಗಿಸಿಕೊಡುತ್ತಾ ಹಗಲೂ ರಾತ್ರಿ ಮಾಹುತರೊಂದಿಗೇ ಇದ್ದು ಅವರಿಗೆ ತುಂಬಾ ಪ್ರೋತ್ಸಾಹಕೊಟ್ಟು ಸ್ವಂತ ಖಾಸವಿಂದ ಗುಂಡಿ ತೋಡಿಸಿ ತಾ|| 3-11-26 ನೇ ಸಾಯಂಕಾಲ 10 ಗಂಟೆ ಸಮಯಕ್ಕೆ ಗುಂಡಿಯಲ್ಲಿ ಆನೆಯನ್ನು ಕೆಡವಿದರು. ಪಾ|| ಪುಟ್ಟಪ್ಪಗೌಡರು ಇಷ್ಟು ಶ್ರಮವಹಿಸಿ ಆಹಾರನಿದ್ರೆಯನ್ನು ಲಕ್ಷಿಸದೆ ಸ್ವಂತಹಣ ಖರ್ಚುಮಾಡಿ ಫಸಲುನಷ್ಟಕಾರಿಯಾಗಿದ್ದ ಆ ದುಷ್ಟ ಆನೆಯನ್ನು ಬಂಧಿಸಿ ಅದರ ಹಾವಳಿಯನ್ನು ತಪ್ಪಿಸಿದುದಕ್ಕಾಗಿ ಈ ಪ್ರಾಂತದ ರೈತಜನರು ಅವರಿಗೆ ತುಂಬಾ ಕೃತಜ್ಞರಾಗಿರುತ್ತಾರೆ. ಇವರು ಹುಲಿಶಿಕಾರಿಯಲ್ಲಿ ಬಹಳ ಶಕ್ತರಾಗಿರುತ್ತಾರೆ ಮತ್ತು ಹುಲಿಗಳನ್ನು ಜೀವದಿಂದ ಹಿಡಿಯಲು ಬೋನನ್ನು ಸಹ ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿ 10-12 ಹುಲಿಗಳನ್ನು ಹಿಡಿದಿದ್ದಾರೆ. ಆದ್ದರಿಂದ ಈರೀತಿ ಪ್ರಾಣಭೀತಿಯಿಲ್ಲದೆ ದುಷ್ಟಮೃಗಗಳ ಕೂಡ ಹೋರಾಡುವ ಇವರಿಗೆ ನಮ್ಮ ಶ್ರೀಮನ್ಮಹಾರಾಜ ಸರ್ಕಾರದವರು ತಕ್ಕ ಬಹುಮಾನವನ್ನು ದಯಪಾಲಿಸುವುದು ನ್ಯಾಯವಾಗಿದೆ.

ಪ್ರತ್ಯಕ್ಷದರ್ಶಿ, ಕುಪ್ಪೆ ಪಾ|| ಬಸಪ್ಪಗೌಡ.

ಹುಣಸಮಾರನಹಳ್ಳಿಯ ವಿದ್ಯಾರ್ಥಿಗಳಿಗಾದ ಪಂಡಿತರ ಸದ್ಬೋಧೆ.

ಇದೇ ಡಿಸಂಬರ್ ತಾರೀಕು 14 ರಲ್ಲಿ ಕ್ಯಾಸನೂರುಸಂಸ್ಥಾನದ ಪಂಡಿತ ವೇ|| ಗುರುಬಸವಶಿವಾಚಾರ್ಯಸ್ವಾಮಿಗಳವರು ಹುಣಸಮಾರನಹಳ್ಳಿಯ ಮಠಕ್ಕೆ ಆಗಮಿಸಿ ಮಠದ ಶ್ರೀಸ್ವಾಮಿಗಳವರ ದರ್ಶನಭಾಷಣಾನಂತರ ಇಲ್ಲಿನ ಫ್ರೀ ಬೋರ್ಡಿಂಗಿನ ಏರ್ಪಾಟುಗಳನ್ನು ಮತ್ತು ಸ್ಕೂಲ್‌ನ್ನು ನೋಡಿ ಸಂತುಷ್ಟರಾಗಿ ಸಾಯಂಕಾಲ 6 ಘಂಟೆಗೆ ಶ್ರೀಮಠದ ಮಹಡಿಯ ಮೇಲೆ ಶ್ರೀಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಫ್ರೀ ಬೋರ್ಡಿಂಗಿನ ವಿದ್ಯಾರ್ಥಿಗಳ ಪರವಾಗಿ ಬ್ರಹ್ಮಚರ್ಯ ಮಾತಾಪಿತೃಭಕ್ತಿ ಗುರುದೇವತಾಸೇವಾ ರಾಜಭಕ್ತಿ ಮುಂತಾದ ವಿಷಯಗಳನ್ನು ಮತ್ತು ಸದಾಚಾರ ಅಷ್ಟಾವರಣ ಪಂಚಾಚರ ಮೊದಲಾದ ವಿಷಯಗಳನ್ನು ಕುರಿತು ವೇದಾಗಮ ಪ್ರಮಾಣಗಳಿಂದ ಶ್ರೋತೃಗಳ ಚಿತ್ತದಲ್ಲಿ ಬಿಂಬಿಸುವಂತೆ ಸರಸವಾಗಿ ಉಪನ್ಯಾಸವನ್ನು ಮಾಡಿದರು. ತರುವಾಯ ಬೆಂಗಳೂರು ನಿರಂಜನ ಶಂಕರದೇವರ ಮಠದ ಶಂಕರಸ್ವಾಮಿಗಳು ಈ ದಿವಸ ಶ್ರೀಪಟ್ಟದಸ್ವಾಮಿಗಳವರು ಇಲ್ಲಿಗೆ ಆಗಮಿಸಿ ಅಪ್ಪಣೆ ಕೊಡಿಸಿದ ಅಂಶಗಳನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿಟ್ಟು ಅನುಷ್ಠಾನಮಾಡುವದರಿಂದ ಸಮಾಜದ ಮತ್ತು ದೇಶದ ಸೇವಾತತ್ಪರರಾಗಿ ಚತುರ್ವಿಧ ಪುರುಷಾರ್ಥಗಳನ್ನು ಪಡೆಯುವರೆಂತ ಅಪ್ಪಣೆಕೊಡಿಸಿದರು. ಆಮೇಲೆ ಸದರೀ ವಿದ್ಯಾರ್ಥಿಗಳ ಪೈಕಿ ರುದ್ರಮುನಿಆರಾಧ್ಯನೆಂಬ ವಿದ್ಯಾರ್ಥಿಯು ಶ್ರೀಗಳವರು ಅಪ್ಪಣೆಕೊಡಿಸಿದ ವಿಷಯಗಳನ್ನು ನಾವುಗಳು ಸದಾ ಜ್ಞಾಪಕದಲ್ಲಿಟ್ಟು ಅನುಷ್ಠಾನಮಾಡುತ್ತೇವೆಂತಲೂ ಶ್ರೀಗಳವರು ಕೃಪೆಯಿಟ್ಟು ದಯಮಾಡಿ ನಮ್ಮಗಳಿಗೆಲ್ಲಾ ಸದ್ಬೋಧೆಯನ್ನು ಅನುಗ್ರಹಿಸಿದ್ದರಿಂದ ನಾವುಗಳು ಕೃತಾರ್ಥರಾದೆವೆಂತಲೂ ವಿಜ್ಞಾಪಿಸಿಕೊಂಡನಂತರ ಸದರೀ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಚೆನ್ನರಾಮಯ್ಯನವರು ಎದ್ದು ಪಂಡಿತ ಶ್ರೀಯವರು ಅನುಗ್ರಹವಿಟ್ಟು ಇಲ್ಲಿಗೆ ಆಗಮಿಸಿದ್ದರಿಂದಲೂ ಇಂಥಾ ಸದುಪದೇಶವನ್ನು ಮಾಡಿದ್ದರಿಂದಲೂ ಉಪಾಧ್ಯಾಯರಾದ ನಾವು ಮತ್ತು ನಮ್ಮ ವಿದ್ಯಾರ್ಥಿಗಳು ಸಹ ಧನ್ಯರಾದೆವೆಂತಲೂ ಶ್ರೀಗಳವರು ಮಠದಲ್ಲಿ ವೀರಶೈವ ಒಕ್ಕಲಿಗ ಮಹಮ್ಮದೀಯರು ಮುಂತಾದ ಕೋಮಿನ ವಿದ್ಯಾರ್ಥಿಗಳಿಗೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಅವರನ್ನು ಆದರಿಸುತ್ತಿರುವುದರಿಂದ ವೀರಶೈವಸಮಾಜದವರೇ ಅಲ್ಲದೆ ಇತರರು ಸಹ ಕೃತಜ್ಞರಾಗಿರುವರೆಂತಲೂ ಹೇಳಿದಮೇಲೆ ಅಧ್ಯಕ್ಷರಾದ ಸ್ವಾಮಿಗಳವರು ಉಪಸಂಹಾರಭಾಷಣವನ್ನು ಮಾಡಿದರು.

ಎಸ್. ತೋಂಟದಾರ್ಯ, ಏಜಂಟ್, ಹುಣಸಮಾರನಹಳ್ಳಿ ಮಠ.

ಶ್ರೀ ರುದ್ರೇಶ್ವರನ ಕಾರ್ತಿಕೋತ್ಸವವು.

ವಿಜಾಪೂರ ಜ|| ಬಾಗೇವಾಡಿ ತಾ|| ಪೈಕಿ ಸುಪ್ರಸಿದ್ಧ ಪುಣ್ಯಸ್ಥಳವಾದ ನಿಡಗುಂದಿ ಶ್ರೀ ರುದ್ರೇಶನ ಕಾರ್ತೀಕಮಾಸದ ಉತ್ಸವವು ದರವರ್ಷದ ಪದ್ಧತಿಯಂತೆ ಈ ವರ್ಷವಾದರೂ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟು 500 ಜನರವರೆಗೆ ಗಣತೃಪ್ತಿ ಪಡಿಸಲ್ಪಟ್ಟಿತು. ಈ ವರ್ಷದ ಉತ್ಸವದಲ್ಲಿ ಒಂದು ಆಶ್ಚರ್ಯವಾದ ಮಹತ್ವವು ನಡೆದಿತು. ಅದೇನಂದರೆ, ಶ್ರೀ ರುದ್ರೇಶನ ಪಲ್ಲಕ್ಕಿ ಉತ್ಸವವು ಮಹಾಸ್ವಾಮಿಗಳ ಭಾವಪಟಸಮೇತ ಜಂಗಮವಟುಗಳ ವೇದಘೋಷ ಇತರ ಯಾವತ್ತು ಜಾತಿಯಜನರ ಶಿವಭಜನಾ ಮತ್ತು ಉತ್ಸವಕ್ಕಾಗಿ ಬಂದಿದ್ದ ನೂರಾರುಜನ ನಾರೀಮಣಿಯರು ಪಂಚಾರತಿಗಳನ್ನು ಬೆಳಗುವುದು ಅಲ್ಲದೆ ಸರ್ವಮಂಗಲವಾದ್ಯಗಳೊಡನೆ ಪಲ್ಲಕ್ಕಿಯು ಗುರ್ತಿಸಿದ ಸ್ಥಾನಪರ್ಯಂತ ಸಾಗಿ ಪುನಃ ಸ್ವಸ್ಥಾನಕ್ಕೆ ಬಂದು ಮುಟ್ಟದಮೇಲೆ ಇಲ್ಲಿಯ ಕರ್ತೃ ಗದ್ದಿಗೆಯ ಪ್ರದಕ್ಷಿಣೆಮಾಡುವ ಸಮಯದಲ್ಲಿ ಪಾಲಕಿಯ ಮುಂದಿನ ಕೊಂಬನ್ನು ಹೊತ್ತಿದ್ದವರು ಬಿಟ್ಟಿದ್ದಾಗ್ಯೂ ಹಿಂದೆ ಹೊತ್ತಿದ್ದ 4 ಜನರ ಆಧಾರದಮೇಲೆ ನಿಂತಿದ್ದಿತು. ಇದನ್ನು ನೋಡಿ ಎಲ್ಲ ಭಕ್ತಮಹೇಶ್ವರರು ಆಶ್ಚರ್ಯಚಕಿತರಾದರಲ್ಲದೆ ಏನುಮಹತ್ವವೆಂದು ಶ್ರೀ ರುದ್ರೇಶನ ಮಹಿಮೆಯನ್ನು ಕೊಂಡಾಡುತ್ತಿದ್ದರು. ಆಮೇಲೆ ಸದರಿ ಶ್ರೀಗಳು ಬ್ರಾಹ್ಮೀಮುಹೂರ್ತಲಿಂಗಪೂಜಾ ವಿಷಯದಮೇಲೆ ಉಪನ್ಯಾಸವನ್ನು ತಮ್ಮ ಅಮೃತಮಯವಾದ ವಾಣಿಯಿಂದ ಆಬಾಲವೃದ್ಧರಿಗೂ ತಿಳಿಯುವಂತೆ ವ್ಯಾಖ್ಯಾನಕೊಟ್ಟರಲ್ಲದೆ ಸದ್ಯದಲ್ಲಿ ಎಲ್ಲ ಕಡೆಯಲ್ಲಿ ಪ್ರಸರಿಸಿರುವ ಚಹಾಪಾನ ತಂಬಾಕಸೇವನ ಮುಂತಾದ ಅಹಿತದುರ್ವ್ಯಸನಗಳನ್ನು ದೂರಮಾಡುವದಕ್ಕಾಗಿ ಅನೇಕತರದ ನೀತಿವಾಕ್ಯಗಳನ್ನು ಬೋಧಿಸಿದರು. ಈ ಮಹಿಮರ ವಾಕ್ಪಟುತ್ವವು ಅತ್ಯಂತ ಶ್ಲಾಘ್ಯವಾಗಿದೆ ಅಲ್ಲದೆ ಇವರು ಗುರುಸ್ಥಾನಕ್ಕೆ ತಕ್ಕವರಾಗಿರುತ್ತಾರೆಂಬದಾಗಿ ಸಭಿಕರು ಸಂತೋಷದಿಂದ ತಮ್ಮ ಆನಂದವನ್ನು ವ್ಯಕ್ತಗೊಳಿಸಿದರು. ತರುವಾಯ ವೇ|| ಸಂಗಯ್ಯ ಪತ್ರಿ ಇವರು ಉಪಸಂಹಾರಭಾಷಣಮಾಡಿದರು. ಸದ್ಭಕ್ತರು ತಮ್ಮ ತಮ್ಮ ಶಕ್ತ್ಯನುಸಾರ ಗುರುಕಾಣಿಕೆಯನ್ನರ್ಪಿಸಿದರಲ್ಲದೆ ಈ ಕಾರ್ಯಭಾರವನ್ನು ವಹಿಸಿದ ವೇ|| ಸಂಗಯ್ಯನವರು ಪತ್ರಿ ಮ|| ಶ್ರೀಯುತ ಸಂಗನಬಸಪ್ಪಾ ಪಾಸಿ ದುಂಡಪ್ಪಾ ರೇವಡಿ ರುದ್ರಪ್ಪಾ ಕೆರೂರ ಸಾ|| ರಾಮದುರ್ಗ ಈ ಸದ್ಭಕ್ತಪುಂಗವರಿಗೆ ಇದೇಪ್ರಕಾರ ಇಂಥಾ ಸತ್ಕಾರ್ಯದ ಕಡೆಗೆ ಮನಸ್ಸು ಹುಟ್ಟುವಂತೆ ಶ್ರೀ ರುದ್ರೇಶನು ಅನುಗ್ರಹಿಸಿ ಸನ್ಮಂಗಳವನ್ನುಂಟುಮಾಡಲೆಂದು ಹಾರೈಸಿದರು. ಓರ್ವ ರುದ್ರೇಶ್ವರನ ಭಕ್ತ.

ದೇವನೂರಿನಲ್ಲಿ ಕಾರ್ತೀಕೋತ್ಸವವೈಭವ.

ಉತ್ತರದೇಶದಿಂದ ಮೈಸೂರು ಪ್ರಾಂತ್ಯಕ್ಕೆ ಶ್ರೀಮನ್ನಿರಂಜನ ಗುರುಮಲ್ಲೇಶ್ವರಸ್ವಾಮಿಯವರು ದಯಮಾಡಿಸಿ ನಂಜನಗೂಡು ತಾಲ್ಲೂಕು ದೇವನೂರಿಗೆ ಬಂದಮೇಲೆ ಇಲ್ಲಿ ಅನೇಕ ಮಹಿಮೆಗಳನ್ನು ತೋರಿಸಿದ್ದರಿಂದ, ಅನೇಕ ಗ್ರಾಮದವರು ಈ ಮಹಾತ್ಮರ ಶಿಷ್ಯರಾದರು. ಪ್ರಾಚೀನ್ಯವೂ ಸದರಿ ಮಠದಲ್ಲಿ ಸ್ವಾಮಿ ದರ್ಶನಕ್ಕೆ ಬರುವ ಮಂಡಲಿಗೆಲ್ಲಾ ಸಂತರ್ಪಣೆ ನಡೆಯುವದಲ್ಲದೆ ಶ್ರಾವಣ, ಕಾರ್ತೀಕ, ಮಾಘಮಾಸಗಳ ಸೋಮ, ಶುಕ್ರವಾರಗಳಲ್ಲಿ ಸಹಸ್ರಾರುಜನರಿಗೆ ಸಂತರ್ಪಣೆ ನಡೆಯುವುದು. ಗುರುಸ್ವಾಮಿಯವರು ಶಾಲಿವಾಹನಶಕ ೧೮೩೧ ನೇ ವಿಕಾರಿಸಂವತ್ಸರದ ಜ್ಯೇಷ್ಠ ಬಹುಳ ತದಿಗೆ ಸೋಮವಾರ ಲಿಂಗೈಕ್ಯರಾದ್ದರಿಂದ, ಈ ಸ್ಥಳದಲ್ಲಿ ಶ್ರೀಮನ್ನಿರಂಜನ ಚಿಟ್ಟನಪುರದ ಶ್ರೀಗಳವರೂ, ಈ ಮಠದ ದಾಸೋಹಮೂರ್ತಿ ರಾಚಪ್ಪಸ್ವಾಮಿಯವರೂ ಶಿಷ್ಯಮಂಡಲಿಯವರಿಂದ ದ್ರವ್ಯವನ್ನು ಕೂಡಿಸಿ 30 ಅಂಕಣಗಳುಳ್ಳ ಶಿಲಾಮಂಟಪವನ್ನೂ, ಅದರ ಸುತ್ತಲೂ ಭಕ್ತವೃಂದವು ಇಳಿದುಕೊಳ್ಳಲನುಕೂಲವಾಗಿ ನೂರಾರು ಅಂಕಣಗಳುಳ್ಳ ಕಟ್ಟಡವನ್ನೂ ಕಟ್ಟಿಸಿ ಸ್ವಾಮಿಪೂಜೆಗೋಸ್ಕರ ಮಠದ ಹಿಂದುಗಡೆ ಮನೋಹರವಾದ ಪೂದೋಟವನ್ನು ಏರ್ಪಡಿಸಿರುವರು. ಪ್ರತಿನಿತ್ಯವೂ ಪ್ರಾತಃಕಾಲ 8 ಘಂಟೆಯಲ್ಲೂ, ಸಾಯಂಕಾಲ 6 ಘಂಟೆಯಲ್ಲೂ ಅನೇಕ ವಾದ್ಯಗಳ ಸಮೇತ ಪೂಜೆ ನಡೆಸಲ್ಪಡುವುದು. ಪ್ರತಿವರ್ಷ ಜ್ಯೇಷ್ಠ ಬ|| ೩ ದಿವಸ ಅನೇಕ ಭಕ್ತಮಾಹೇಶ್ವರರಿಗೆ ಮಹಾರಾಧನೆ ನಡೆಸಲ್ಪಡುವುದು. ಕಳೆದ ಕಾರ್ತೀಕಮಾಸ 21-22 ನೇ ತೇದಿಯಲ್ಲಿ ಮೈಸೂರು ನಾಟಕ ಸುಬ್ಬಣ್ಣನವರ ಮೊಮ್ಮಕ್ಕಳು ಸುಮಾರು 11 ವರ್ಷದ ಮದನಮೋಹನಚಂದ್ರರವರು ಸಿತಾರು, ಬ್ಯಾಂಜೊ, ಜಲತರಂಗ್, ಘಂಟಾತರಂಗ್, ಲೋಹತರಂಗ್, ಕೊಳಲು ಮೊದಲಾದ ಕೆಲವು ವಾದ್ಯಗಳೊಡನೆ ನಡೆಸಲ್ಪಟ್ಟ ಗಾಯನವು ಮಠದ ಮುಂದುಗಡೆ ಕಿಕ್ಕಿರಿಯುವಂತೆ ನೆರೆದಿದ್ದ ಸಭಿಕಮಹಾಶಯರ ಮನಸ್ಸನ್ನು ಉತ್ಸಾಹಗೊಳಿಸಿದುದಲ್ಲದೆ ಪ್ರತಿಯೊಬ್ಬನೂ ಬಿಟ್ಟ ಕಣ್ಣನ್ನು ಬಿಟ್ಟಂತೆ ಸ್ತಬ್ಧನಾಗಿದ್ದ. ಈ ಸಣ್ಣವಯಸ್ಸಿನಲ್ಲಿ ವೀರಶೈವಮತೀಯನಾದ ಈ ಬಾಲಕನಿಗೆ ಇಂತಹ ಅದ್ಭುತವಿದ್ಯೆಯು ಪ್ರಾಪ್ತವಾಗಿರುವುದು ಈಶ್ವರನ ಅನುಗ್ರಹವಲ್ಲದೆ ಮತ್ತೆ ಬೇರೆಯಲ್ಲವೆಂದು ಹೇಳುತ್ತ ಸರ್ವರೂ ಕೊಂಡಾಡಿದರು. ದೀಪೋತ್ಸವದಿಂದಲೂ, ನಾನಾವಾದ್ಯಘೋಷದಿಂದಲೂ, ಸಭಿಕರ ಆನಂದೋತ್ಸಾಹದಿಂದಲೂ ಸಭಾಂಗಣವು ನೋಡಿದವರಿಗೆ ಭೂಕೈಲಾಸವೆಂದು ತೋರುತ್ತಿದ್ದಿತು. ಈ ವೈಭವಕ್ಕೆ ಆ ಜಗದ್ಗುರು ಮಲ್ಲೇಶನ ಅನುಗ್ರಹವೇ ಕಾರಣವು. ಬಿ. ಪುಟ್ಟಮಲ್ಲಯ್ಯ,

ಸ್ಕೂಲ್‌ಮಾಸ್ಟರ್, ದೊಡ್ಡಿಂದುವಾಡಿ.

ಶ್ರೀರಂಗಪಟ್ಟಣದ ತಾ|| ಕ್ಯಾತನಹಳ್ಳಿಯ ವೃತ್ತಾಂತ.

ಈ ಗ್ರಾಮದಲ್ಲಿ ಹವಾಬದಲಾವಣೆಯಿಂದಲೋ ಏನೋ ಪ್ರತಿಯೊಂದು ಮನೆಯಲ್ಲೂ ತಪ್ಪದೆ ಖಾಯಿಲೆಗಳು ಇದ್ದೇ ಇವೆ. ಖಾಯಿಲೆಯವರ ಸಹಾಯಾರ್ಥವಾಗಿ ಘನಸರ್ಕಾರದವರು ಇಲ್ಲಿನ ಗ್ರಾಮರಕ್ಷಣಸಭೆಯವರ ಪ್ರಾರ್ಥನೆಯನ್ನಂಗೀಕರಿಸಿ ವಾರಕೊಂದಾವೃತ್ತಿ ಈ ಗ್ರಾಮಕ್ಕೆ ಫ್ರಂಚ್‌ರಾಕ್ಸ್ ಆಸ್ಪತ್ರೆಯ ಡಾಕ್ಟರೂ ಮಿಡ್‌ವೈಫರೂ ಬರುವಂತೆಮಾಡಿಕೊಟ್ಟಿದ್ದು ಈಗ್ಗೆ ಒಂದುತಿಂಗಳಿಂದಲೂ ಬಾರದಂತೆಮಾಡಿಬಿಟ್ಟಿರುತ್ತಾರೆ. ಇದಕ್ಕೆ ಕಾರಣವೇನೆಂಬುದು ಗೊತ್ತಾಗಿರುವುದಿಲ್ಲ. ಈ ಸಂಗತಿಯನ್ನು ಸದರಿ ಸಭೆಯವರು ಅರಿಕೆಮಾಡಿಕೊಂಡು 15 ದಿವಸದಮೇಲಾಯಿತೆಂದು ತಿಳಿಯಬಂದರೂ ಯಾವ ಜವಾಬೂ ಇಲ್ಲವಂತೆ; ಇಲ್ಲಿಗೆ ಆಸ್ಪತ್ರೆ ಕೊಡಬೇಕೆಂದು ನಡೆಸುತ್ತಿದ್ದ ಕರೆಸ್‌ಪಾಂಡೆನ್ಸಿಗೆ ಯಾವ ಇತ್ಯರ್ಥವೂ ಇಲ್ಲವಂತೆ. ಇದು ಇಷ್ಟು ದೊಡ್ಡಗ್ರಾಮವಾಗಿ ಸದಾ ಮಲೇರಿಯಾಸಂಬಂಧವಾದ ಖಾಯಿಲೆಗಳು ಇಲ್ಲೂ ಸುತ್ತಮುತ್ತಣ ಗ್ರಾಮಗಳಲ್ಲೂ ಅಧಿಕವಾಗಿರುವುದರಿಂದ ಇಲ್ಲಿಗೆ ಜರೂರು ಒಂದು ಆಸ್ಪತ್ರೆಯನ್ನು ಕೊಡಬೇಕಾದುದು ಅತ್ಯಗತ್ಯವಾದುದಾಗಿದೆ. ಸದ್ಯಕ್ಕೆ ಮೊದಲಿದ್ದಂತೆ ವಾರಕ್ಕೊಂದಾವೃತ್ತಿಯಾದರೂ ಡಾಕ್ಟರನ್ನು ಇಲ್ಲಿಗೆ ಕಳುಹಿಸಿಕೊಡುವಂತೆ ಸರ್ಕಾರದವರು ಶೀಘ್ರದಲ್ಲೇ ದಯೆಯಿಟ್ಟು ಆರ್ಡರ್‌ಮಾಡಿ ಕಳುಹಿಸಿಕೊಡುತ್ತಾರೆಂದು ನಂಬಿರುತ್ತೇನೆ. ಇಲ್ಲಿನ ಒಕ್ಕಲಿಗರ ಹಾಸ್ಟಲಿಗೆ ಇನ್ನೂ ಸಾಕಾದಷ್ಟು ಬಾಲಕರು ಒದಗದಿರುವುದರಿಂದ ನಮ್ಮ ರೈತಾಬಿಜನಗಳಲ್ಲಿ ಎಷ್ಟರಮಟ್ಟಿನ ಮೌಢ್ಯವಿರುವುದೆಂಬುದು ವ್ಯಕ್ತವಾಗುವುದು. ತಿಳಿವಳಿಕಸ್ಥರ ಸದ್ಬೋಧನೆಯಿಂದ ಮುಂದಾದರೂ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸುತ್ತೇನೆ. ಇಲ್ಲಿನ ಪ್ರೈಮರಿಸ್ಕೂಲ್ ಹೆಡ್‌ಮಾಸ್ಟರ (ಹಿಂದುಳಿದವರ ವಿದ್ಯಾಭಿವೃದ್ಧಿಯಲ್ಲಿ ಸಹನೆ ಇಲ್ಲದ) ಅನಾದರಣೆಯಿಂದ ಪ್ರೈಮರಿಸೆಕ್ಷನ್ನಿನ ವೃದ್ಧಿಗೆ ಭಂಗವಾಗಿರುವುದೆಂದೂ, ಈ ಭಾಗಕ್ಕೆ 25 ರೂ. ತಲಬಿನಲ್ಲಿ ವಿದ್ಯಾಭ್ಯಾಸಪ್ರೋತ್ಸಾಹಕರಾದ ಹೆಡ್ಮಾಸ್ಟರನ್ನಾದರೂ ಕಳುಹಿಸಿಕೊಟ್ಟಲ್ಲಿ ಕೂಡಲೇ ಸ್ಕೂಲು ಅತ್ಯುನ್ನತಸ್ಥಿತಿಗೆ ಬರವುದೆಂದೂ ಜನರು ಆಡುಕೊಳ್ಳುತ್ತಿರುತ್ತಾರೆ. ಈ ಗ್ರಾಮದಿಂದಲೂ ನೆನ್ನೆ ನಡೆದ ಡಿ|| ಬೋರ್ಡಿನ ಮೆಂಬರ್‌ಶಿಪ್ಪಿಗೆ ಮ|| ಚಿಟ್ಟೀಗೌಡರು ನಿಂತಿದ್ದು ಉತ್ತೀರ್ಣರಾದ್ದದಕ್ಕೆ ನಮ್ಮ ಗ್ರಾಮಾಂತರ ಪ್ರಜೆಗಳೊಡನೆ ನಾನು ಸಂತೋಷಪಡುತ್ತೇನೆ. ಇಷ್ಟರಲ್ಲೇ ಹಿಂದೆ ನಡೆದು ನಿಂತುಹೋಗಿರುವ ಮೈಸೂರುಸೀಮೆಯ ಪಟೇಲರ ಎರಡನೇ ಕಾನ್ಫರೆನ್ಸು ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಮುಂದಣ ಫೆಬ್ರುವರಿ ಅಂತ್ಯದೊಳಗೆ ನಡೆಯುವುದಾಗಿ ವದಂತಿ ಇದೆ. ಇದನ್ನು ಈ ತಾಲ್ಲೂಕಿನ ಪಟೇಲರಾದಿಯಾಗಿ ಎಲ್ಲರೂ ಏಕೀಭವಿಸಿ ಆದಷ್ಟು ಶೀಘ್ರದಲ್ಲೇ ನಡಿಸಿ ಗ್ರಾಮಾಂತರ ಪ್ರಜೆಗಳ ಅಭಿವೃದ್ಧಿಯಲ್ಲಿ ತಮಗಿರುವ ಉತ್ಸಾಹವನ್ನು ಪ್ರಕಾಶಪಡಿಸುತ್ತಾರಾಗಿ ನೆನಸುತ್ತೇನೆ.

ಓರ್ವ ಪ್ರಜಾಭಿಮಾನಿ.

ಇದೆಯೋ ವೀರಶೈವಮುಖಂಡರ ವರ್ತನ?

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಬೆಂಗಳೂರು ಗುಬ್ಬಿ ನಾಟಕಮಂದಿರದಲ್ಲಿ ಮ|| ವೆಂಕಟಕೃಷ್ಣಯ್ಯನವರ ಸ್ಮಾರಕಫಂಡಿನ ಏರ್ಪಾಡಿಗೋಸ್ಕರ ಅಧ್ಯಕ್ಷತೆಯನ್ನು ವಹಿಸಿ ಕಾರ್ಯನಡೆಸುವರೆಂದು ವಿಶ್ವಕರ್ನಾಟಕಪತ್ರಿಕೆಯಿಂದ ತಿಳಿದುಬರುತ್ತದೆ. ವೀರಶೈವರಿಗಿದೊಂದು ಕಠಿಣಪ್ರಸಂಗವೇ ಸರಿ. ಏಕೆಂದರೆ, ಇದರಿಂದ ಸರ್ ಶೆಟ್ಟರು ವೀರಶೈವಮುಖಂಡರೋ ಅಲ್ಲವೋ ಎಂಬುದನ್ನು ನಿರ್ಧರಿಸಬೇಕಾಗಿದೆ. ಮ|| ವೆಂಕಟಕೃಷ್ಣಯ್ಯನವರು ಸರ್ಕಾರೀ ಸಂಸ್ಕೃತಕಾಲೇಜುಗಳಿಗೆ ವೀರಶೈವರ ಪ್ರವೇಶವನ್ನು ತಡೆಯುವುದರಲ್ಲಿ ಅಗ್ರಗಣ್ಯರಾದವರು, ಹಿಂದುಳಿದವರ್ಗದವರಲ್ಲಿ ಒಬ್ಬರಾದ ವೀರಶೈವರ ಲೌಕಿಕಾಭಿವೃದ್ಧಿಗೆ ಸಹಾಯಕಾರಿಗಳಾದ ಮಿಲ್ಲರ್‌ಕಮಿಟಿ ವರದಿಯನ್ನೂ, ರಡ್ಡೀ ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನೂ ಖಂಡನೆಮಾಡುವುದರಲ್ಲಿ ಪ್ರತಿಭಾಶಾಲಿಗಳು ಮತ್ತು ವೀರಶೈವರಲ್ಲಿ ದ್ವೇಷಾಸೂಯೆಗಳನ್ನು ಹುಟ್ಟಿಸಿ ಪಕ್ಷಪ್ರತಿಪಕ್ಷಗಳನ್ನೇರ್ಪಡಿಸುವ ಲೇಖನಗಳಿಗೆ ಅವಕಾಶಕೊಟ್ಟು ವೀರಶೈವಸಮಾಜದ ಅಭಿವೃದ್ಧಿಗೆ ಕುಠಾರಪ್ರಾಯರಾಗಿರುವವರು. ಅಂದಮೇಲೆ ಇವರು ವೀರಶೈವರ ವಿರೋಧಿಗಳೆಂಬುದರಲ್ಲಿ ಸಂಶಯವೇ ಇಲ್ಲ. ಇಂತಪ್ಪವರ ಸ್ಮಾರಕಫಂಡಿನ ಸಹಾಯಕ್ಕೆ ಸರ್ ಶೆಟ್ಟರು ಕೈಹಾಕಿರುವದು ವೀರಶೈವಸಮಾಜದ ಮೇಲಿನ ಅನಾದರಣೆಯೋ ಸರ್ವಜನಾನುರಾಗಿಗಳಾಗಬೇಕೆಂಬ ಭ್ರಾಂತಿವಿಲಾಸವೋ ತಿಳಿಯದು. ಮೊನ್ನೆ ನಡೆದ ಬಾಳೆಹಳ್ಳಿ ಸಿಂಹಾಸನದ ಪಟ್ಟಾಧಿಕಾರಸಂಬಂಧಕಾರ್ಯವನ್ನು ಹಿಂದೆಂದೂ ವಹಿಸದಿದ್ದ ಶ್ರದ್ಧಾಭಕ್ತಿಗಳಿಂದ ನಡೆಸಿದುದು ಇವರ ಅತುಳವಾದ ಧರ್ಮನಿಷ್ಠೆಯನ್ನು ಬೆಳಗುವುದಾದರೂ, ಇದಕ್ಕೆ ಬೇರೆಕಾರಣವಿಹ್ಯೆಂಬುದು ಮೊನ್ನೆ ಉಡುಪಿಯಲ್ಲಿ ನಡೆದ ಹಿಂದೂಧರ್ಮಾದಾಯ ದೇವಾದಾಯ ರಕ್ಷಣಸಭೆಗೆ ಇವರು ಕಳುಹಿಸಿದ ಸಹಾನುಭೂತಿಪರವಾದ ಪತ್ರದಿಂದ ಸ್ಪಷ್ಟಪಡುತ್ತದೆ. ಮಠಾಧಿಪತಿಗಳ ಅನಾಚಾರ ಅವ್ಯವಸ್ಥೆಗಳಿಂದ ಧರ್ಮಾದಾಯವು ಅಪಾತ್ರಯ ಮತ್ತು ದುರುಪಯೋಗವಾಗಲು ಅವಕಾಶವುಂಟಾಗಿರುವುದನ್ನು ತಪ್ಪಿಸಲು ಏರ್ಪಾಡಾದ ಒಂದು ಕಾನೂನನ್ನು ಖಂಡಿಸುವ ಸಭೆಗೆ ಸಹಾನುಭೂತಿಪರವಾದ ಪತ್ರವನ್ನು ಕಳುಹಿಸಿರುವ ಇವರು ಸರ್ಕಾರದಿಂದ ನೇಮಕವಾದ ವೀರಶೈವೇತರರಿಂದ ಕೂಡಿದ ಕಮಿಟಿಯಿಂದ ವೀರಶೈವರ ಗುರುಗಳನ್ನು ಅರಿಸುವ ಏರ್ಪಾಡನ್ನು ಒಪ್ಪಿದುದೇಕೆ? ಹೀಗೆ ಒಂದುಕಡೆ ತಮಗನುಕೂಲವಾದಾಗ ಸರ್ಕಾರದವರು ಧರ್ಮಪೀಠಗಳ ವಿಚಾರದಲ್ಲಿ ಕೈಹಾಕಬಹುದೆಂತಲೂ, ಇನ್ನೊಂದುಕಡೆ ಕೈಹಾಕಬಾರದೆಂತಲೂ ಹೇಳುತ್ತಾ ಹೋಗುವುದು ಮುಖಂಡತ್ವದ ಲಕ್ಷಣವೋ? ವೀರಶೈವಮುಖಂಡರೆಂಬವರ ಇಂಥಾ ಅಸಂಗತವರ್ತನಗಳಿಂದ ವೀರಶೈವರ ಅಭಿವೃದ್ಧಿಯು ಎಷ್ಟರಮಟ್ಟಿಗಾಗುವುದೆಂಬುದನ್ನು ವಾಚಕರೆಲ್ಲರೂ ಊಹಿಸಬೇಕಾಗಿರುವುದು. ಸರ್ ಶೆಟ್ಟರು ಮ|| ವೆಂಕಟಕೃಷ್ಣಯ್ಯನವರ ಸ್ಮಾರಕಫಂಡಿನ ಏರ್ಪಾಡಿಗೋಸ್ಕರ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವುದು ವೀರಶೈವರಿಗೇನೂ ಸಂಬಂಧವಿಲ್ಲ ಮತ್ತು ಅವರುಗಳಿಗೆ ಈ ವಿಚಾರದಲ್ಲಿ ಸಹಾನುಭೂತಿಯು ಸಹ ಇಲ್ಲ. ಆದುದರಿಂದ ಭ್ರಾಂತರಾಗಿ ಯಾರೂ ಮೋಸಹೋಗಬಾರದೆಂದು ವೀರಶೈವಸಮಾಜಬಂಧುಗಳಲ್ಲಿ ನನ್ನ ವಿನಂತಿಯು.

ಸಮಾಜಸೇವಕ.

ಶ್ರೀಮದ್ರಂಭಾಪುರೀಜಗದ್ಗುರುಗಳ ಆಂದೋಳಿಕೋತ್ಸವ.

ಶ್ರೀ ಜಗದ್ಗುರು ಶಿವಾನಂದರಾಜದೇಶಿಕೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಸವಾರಿಯು ಶಿಕಾರಿಪುರದ ಸಮಸ್ತ ಭಕ್ತಮಾಹೇಶ್ವರರ ಪ್ರಾರ್ಥನಾನುಸಾರವಾಗಿ ಹಾರ್ನಹಳ್ಳಿಯಿಂದ ಈ ತಾ|| 6 ನೇ ಸೋಮವಾರ ಮಧ್ಯಾಹ್ನ 3 ಘಂಟೆಗೆ ದಯೆಮಾಡಿಸಿತು. ಸಾಗರದ ಸಬ್‌ಡಿವಿಜನ್ ಆಫೀಸರವರು ಅಮಲ್ದಾರರು ಮತ್ತು ಪೋಲೀಸ್ ಇನ್ಸ್‌ಪೆಕ್ಟರವರು ಸರಿಯಾದ ಸಿಬ್ಬಂದಿಯೊಡನೆ ನಿಯಮಿತಸ್ಥಳದಲ್ಲಿ ಕಾಯುತ್ತಕೊಂಡಿದ್ದರು. ಶ್ರೀ ಜಗದ್ಗುರುಗಳವರ ಸವಾರಿಯು ಪುರಪ್ರವೇಶಕ್ಕೆ ಉದ್ಯುಕ್ತವಾದಕೂಡಲೇ ನಿರೀಕ್ಷಿಸಿಕೊಂಡಿದ್ದ ಸರ್ಕಾರೀ ಮುಖ್ಯಾಧಿಕಾರಿಗಳೂ ಡಾಕ್ಟರ್‌ಸಾಹೇಬರೂ ಹೊಳೇಹೊನ್ನೂರು ಸೂಡಿ ಹಿರೇಬೆಂಡೀಗೇರಿ ಮೊದಲಾದ ಗ್ರಾಮಗಳಿಂದ ಬಂದಿದ್ದ ಪಟ್ಟಚರಾಧಿಕಾರಿಗಳೂ ಶಾಸ್ತ್ರಿಗಳೂ ಪಂಡಿತರೂ ಪುರಪ್ರಮುಖರಾದ ಸಕಲಮತೀಯರೂ ಶ್ರೀ ಜಗದ್ಗುರುಗಳಿಗೆ ಅಸಾಧಾರಣವಾದ ಭಕ್ತಿಯಿಂದ ಫಲಪುಷ್ಪಾದಿಗಳನ್ನು ಅರ್ಪಿಸಿದನಂತರ ಮಹಾಸ್ವಾಮಿಯವರು ಸರ್ವರಿಗೂ ದರ್ಶನವನ್ನಿತ್ತು ಕುಶಲಪ್ರಶ್ನಾನಂತರ ಮಂಗಲಘೋಷದೊಡನೆ ಆಂದೋಳವನ್ನು ಆರೋಹಣಮಾಡಿ ಸಮಸ್ತ ಬಿರುದಾವಳಿಗಳೊಡನೆ ಪಂಡಿತರ ವೇದಘೋಷದಿಂದಲೂ ಭಕ್ತಮಾಹೇಶ್ವರರು ಮಧ್ಯದಲ್ಲಿ ಉಚ್ಚರಿಸುವ ಜಯಘೋಷದಿಂದಲೂ ಶಿವಮೊಗ್ಗಾ ಟೋಲಗೇಟಿನಿಂದ ಹುಚ್ಚರಾಯನ ದೇವಸ್ಥಾನದ ಮುಂಭಾಗದ ಮಾರ್ಗದಲ್ಲಿ ಹೊರಟು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕರಿಸಿ ಹಾಕಿದ್ದ ಚಪ್ಪರಗಳಿಂದ ಶೋಭಾಯಮಾನವಾಗಿ ತೋರುವ ರಾಜಬೀದಿಗಳಲ್ಲಿ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆದು ರಾತ್ರಿ 9 ಘಂಟೆಗೆ ಪೇಟೆ ನಂದೀಶ್ವರನ ದೇವಾಲಯದಲ್ಲಿ ಅತಿಮನೋಹರವಾಗಿ ರಚಿಸಿದ ಜಾಜ್ವಲ್ಯಮಾನವಾದ ಸಿಂಹಾಸನಾರೋಹಣಮಾಡಿದನಂತರ ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ಸಕಲರಿಗೂ ಆತ್ಮಾನಂದವಾಗುವಂತೆ ಐಕ್ಯಮತ್ಯ ಮತಪ್ರಚಾರಕ್ಕೆ ಕಾರಣವಾದ ವಿದ್ಯಾ ಇವುಗಳನ್ನು ಕುರಿತು ಸರಸವಾಗಿ ಅಪ್ಪಣೆಕೊಡಿಸಿದರು. ತರುವಾಯ ಇಲ್ಲಿಯ ಪ್ರಮುಖರಾದ ಪ|| ರಾ|| ಶ್ರೀನಿವಾಸದೀಕ್ಷಿತರು ಶ್ರೀ ಜಗದ್ಗುರುಸವಾರಿಯ ಆಗಮನದಿಂದಾದ ಆನಂದವನ್ನು ಪ್ರಕಟಿಸಿದ್ದಲ್ಲದೆ ಇಂದಿಗೆ ನಮ್ಮಗಳ ಪಾಪವೂ ತಾಪವೂ ದುಃಖವೂ ನಾಶವಾದುವೆಂದು ಭಾಷಣಮಾಡಿದರು. ಅಲ್ಲಿಗೆ ಪೂಜಾಸಮಯವಾದಕಾರಣ ಧರ್ಮಪ್ರಭುಗಳಾದ ಶ್ರೀಮನ್ಮಹಾರಾಜರವರ ಶ್ರೇಯೋಭಿವೃದ್ಧಿಗಾಗಿ ಶ್ರೀ ಜಗದ್ಗುರುಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಶ್ರೀ ಜಗದ್ಗುರುಗಳವರ ಮಹೋತ್ಸವಕ್ಕೆ 15 ಸಾವಿರ ಮೇಲ್ಪಟ್ಟು ಜನರು ಸೇರಿದ್ದರು. ಪರಸ್ಥಳದ ಜನರಿಗೆ ಶ್ರೀ|| ಸಂಸ್ಥಾನದಿಂದಲೂ ಪುರಜನಗಳಿಂದಲೂ ಭೋಜನದ ವ್ಯವಸ್ಥೆಯು ಚೆನ್ನಾಗಿ ಮಾಡಲ್ಪಟ್ಟಿತ್ತು. ಮರುದಿವಸ ಶ್ರೀ ಜಗದ್ಗುರುಗಳು ಸಿಂಹಾಸನಾರೋಹಣಮಾಡಿದನಂತರ ವೈಸ್‌ಪ್ರೆಸಿಡೆಂಟ್ ಮ|| ಹಾಲಕಟ್ಟಿ ಶಿವಪ್ಪನವರೇ ಮೊದಲಾದ ಸದ್ಗೃಹಸ್ಥರಿಂದ ಅಲಂಕರಿಸಲ್ಪಟ್ಟ ಸಭೆಯಲ್ಲಿ ಸಂಸ್ಥಾನದ ಏಜಂಟ್ ಎಚ್. ಎಂ. ರಾಘವಾಂಕಪ್ಪಯ್ಯನವರಿಂದ ಶಿವಕೀರ್ತನೆಯು ಅತಿಮನೋಹರವಾದ ಸಂಗೀತ ಪ್ರೌಢಿಮೆಯಿಂದ ಸರ್ವರ ಮನಸ್ಸನ್ನು ಆಕರ್ಷಿಸುವಂತೆ ಮಾಡಲ್ಪಟ್ಟು ತರುವಾಯ ಮ|| ರುದ್ರಪ್ಪಶಾಸ್ತ್ರಿಗಳು ಮ|| ರಾಚೋಟಪ್ಪನವರು ಮ|| ನ್ಯಾಸಡಗಿ ಹೋಳಿಬಸಪ್ಪನವರು ಐಕ್ಯಮತ್ಯ, ವಿದ್ಯಾ ಮತ್ತು ಭಕ್ತಿ ಇವುಗಳ ವಿಷಯವಾಗಿ ಸರ್ವರಿಗೂ ತಿಳಿಯುವಂತೆ ಭಾಷಣಮಾಡಿದರು. ಮಹಾಸನ್ನಿಧಿಯು ಸದರಿಯವರ ಭಾಷಣಗಳ ಮುಖ್ಯಸಾರವನ್ನು ಗಂಭೀರವಾದವಾಣಿಯಿಂದ ಸಕಲರಿಗೂ ತಿಳಿಯುವಂತೆ ರಮ್ಯವಾಗಿ ಅಪ್ಪಣೆಕೊಡಿಸಲಾಗಿ ಸಭೆಯಲ್ಲಿ ಕೂಡಿದ ಸಕಲಧರ್ಮದವರೂ ಇಂದಿಗೆ ನಮ್ಮ ಜನ್ಮವು ಕೃತಾರ್ಥವಾಯಿತೆಂದು ಶ್ರೀ ಜಗದ್ಗುರುಗಳನ್ನು ಕೊಂಡಾಡುತ್ತ ಅಪ್ಪಣೆ ಹೊಂದಿ ತಮ್ಮ ತಮ್ಮ ಮನೆಗಳಿಗೆ ಹೋದರು. ಶ್ರೀ ಜಗದ್ಗುರುಮಹಾಸನ್ನಿಧಿಯಲ್ಲಿ ಪ್ರತಿನಿತ್ಯವೂ ಕೀರ್ತನ ಶಿವಪುರಾಣ ಉಪನ್ಯಾಸಗಳು ಜರಗುತ್ತಲೇ ಇರುವುವು. ಇಂದಿಗೆ ಶಿಕಾರಿಪುರವು ಸಾಕ್ಷಾತ್ಕೈಲಾಸದಂತೆ ಒಪ್ಪುತ್ತಿರುವುದೆಂದು ತಿಳುಹಿಸುವದಕ್ಕೆ ಅತ್ಯಂತ ಸಂತೋಷವಾಗುತ್ತದೆ.

ಹಾಲಕಟ್ಟಿ ಶಿವಪ್ಪ,
ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್, ಶಿಕಾರಿಪುರ.

ರಾ|| ಸಾ|| ಎಂ. ಹಂಪಯ್ಯ, ಎಂ.ಎಲ್.ಸಿ. ರವರ ಸತ್ಕಾರ.

ಗುಂತಕಲ್ಲಿನಲ್ಲಿರುವ ರಾವ್‌ಸಾಹೇಬ್ ಮ|| ಎಂ. ಹಂಪಯ್ಯನವರು ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಾಗಿ ಮದ್ರಾಸ್ ಗೌರ್ನರ್ ಸಾಹೇಬರವರಿಂದ ನಾಮಿನೇಷನ್ ಮಾಡಲ್ಪಟ್ಟದ್ದಕ್ಕೆ ಉರುವಕೊಂಡೆಯಲ್ಲಿರುವ ಮಹಾಜನರು ದೊಡ್ಡಸಭೆಯನ್ನು ಮಾಡಿಸಿದ್ದರು. ಮ|| ರಾವ್‌ಸಾಹೇಬ್ ಎಂ. ಹಂಪಯ್ಯನವರು ತಮ್ಮ ಮಿತ್ರರೊಂದಿಗೆ ಮೋಟಾರಿನಲ್ಲಿ ಡಿಶಂಬರ್ ತಾ|| 12 ನೇ ಭಾನುವಾರ ಪ್ರಾತಃಕಾಲ 10 ಘಂಟೆಗೆ ಗುಂತಕಲ್ಲಿನಿಂದ ಪ್ರಯಾಣಮಾಡಿದರು. ಉರುವಕೊಂಡ ಎಂಬ ಗ್ರಾಮವನ್ನು ತಳಿರುತೋರಣಗಳಿಂದಲೂ ಸಾರಣೆಕಾರಣೆಗಳಿಂದಲೂ ಅಲಂಕರಿಸಿದ್ದರು. 2 ಮೈಲಿನ ದೂರದಲ್ಲಿ ಪುರಪ್ರಮುಖರು ಉಚಿತಮರ್ಯಾದೆಗಳಿಂದ ನಿರೀಕ್ಷಿಸಿಕೊಂಡಿದ್ದು ಮೋಟಾರಿನಿಂದ ಬಿಜಮಾಡಿಸಿದ ಕೂಡಲೇ ರಾವ್‌ಸಾಹೇಬ್ ಎಂ. ಹಂಪಯ್ಯನವರಿಗೆ ಹಾರಾತುರಾಯಿಗಳನ್ನು ಸಮರ್ಪಿಸಿದರು. ಹೈಸ್ಕೂಲ್ ಹೆಡ್ಮಾಸ್ಟರ್ ಮ|| ವೆಂಕಟಾಚಾರ್ಯರು ತಮ್ಮ ಶಿಷ್ಯರ ಸ್ಕೌಟ್ ಟ್ರೂಪನ್ನು ಏರ್ಪಡಿಸಿ ಕೃತಜ್ಞತೆಯನ್ನು ತೋರಿಸಿದ ಅನಂತರ ಮ್ಯಾಜಿಸ್ಟ್ರೇಟರು ಮ|| ವಿ. ಸುಬ್ಬರಾಯರು ಪುರಪ್ರಮುಖರ ಪರಿಚಯಮಾಡಿಸಿದರು. ಮಂಗಳವಾದ್ಯಗಳ ಸಮೇತ ಮೆರವಣಿಗೆಮಾಡಿಕೊಂಡು ಉತ್ಸವ ಹೊರಟರು. ವೇದಮೂರ್ತಿ ಕರಿಬಸವಸ್ವಾಮಿಗಳು ತಮ್ಮ ಮಠದಿಂದ ಆನೆಯನ್ನು ಮರ್ಯಾದೆಗಾಗಿ ಕಳುಹಿಸಿದ್ದರು. ಶ್ರೀಸೋಮೇಶ್ವರದೇವಸ್ಥಾನದ ಮುಂಭಾಗದಲ್ಲಿ ಪುರಪ್ರಮುಖರು 3,000 ದೀನಜನರನ್ನು ಸಾಲಾಗಿ ಕುಳ್ಳಿರಿಸಿ ಅವರಿಗೆ ಮೃಷ್ಟಾನ್ನ ಭೋಜನಮಾಡಿಸಿದರು. ದೀನಜನರು ಭೋಜನಮಾಡುತ್ತಿರುವ ಕಾಲ

ದಲ್ಲಿ ರಾವ್‌ಸಾಹೇಬರವರಿಗೆ ಜಯವಾಗಲೆಂದು ಜಯಜಯಧ್ವನಿಮಾಡಿ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ರಾವ್‌ಸಾಹೇಬರವರು ಬಟ್ಟೆಬರೆಗಳನ್ನೂ ಹಣ್ಣುಹಂಪಲುಗಳನ್ನೂ ಬಡಜನರಿಗೆ ಕೊಟ್ಟು ತೃಪ್ತಿಪಡಿಸಿದರು. ಬಂಗ್ಲೆ ಬಳಿಗೆ ಬರುವಾಗ್ಗೆ 2½ ಘಂಟೆ ಆಯಿತು. ಬಂದ ಅತಿಥಿಗಳಿಗೆಲ್ಲಾ ಮೃಷ್ಟಾನ್ನಭೋಜನವು ಮಾಡಿಸಲ್ಪಟ್ಟಿತು. ಬಳಿಕ ಶ್ರೀಶಿವಬಸವಸ್ವಾಮಿಗಳ ಮಠಕ್ಕೆ ದಯಮಾಡಿಸಿದರು. ಮಠದ ಏಜಂಟರು ಮಠದ ಮುಂಭಾಗದಲ್ಲಿ ಉಚಿತಸನ್ಮಾನಗಳಿಂದ ಇದಿರ್ಗೊಂಡು ಮಠದೊಳಕ್ಕೆ ಕರೆದುಕೊಂಡು ಹೋದಮೇಲೆ ಶ್ರೀಗಳವರು ಫಲಪ್ರಸಾದಗಳನ್ನು ಕೊಟ್ಟು ಸಕಲ ಮಂಗಳವಾಗಲೆಂದು ಹರಸಿದರು. ಅಲ್ಲಿಂದ ಹೈಸ್ಕೂಲಿನ ಆವರಣದಲ್ಲಿ ಏರ್ಪಡಿಸಿದ್ದ ಮಹಾಸಭೆಗೆ ದಯಮಾಡಿಸಿದರು. ಸುಮಾರು 2 ಸಾವಿರ ಜನರು ಸೇರಿದ್ದರು. ದೇವರಪ್ರಾರ್ಥನೆಯಾಗಿ ಪುರಪ್ರಮುಖರು ಸನ್ಮಾನಪತ್ರಗಳನ್ನು ಸಮರ್ಪಿಸಿದರು. ಅನೇಕರು ಶ್ರೇಷ್ಠತಮವಾದ ಉಪನ್ಯಾಸಗಳಿಂದ ರಾವ್‌ಸಾಹೇಬರನ್ನು ಶ್ಲಾಘಿಸಿದರು. ರಾವ್‌ಸಾಹೇಬರವರು ಮೈಸೂರುದೇಶದಲ್ಲಿ ದೇವಾಂಗಸಂಘವನ್ನು ದೇವಾಂಗಬ್ಯಾಂಕನ್ನೂ ದೇವಾಂಗಹಾಸ್ಟಲನ್ನೂ ಏರ್ಪಡಿಸಿರುವ ವಿಷಯವಾಗಿಯೂ, ಆಹಾರವಿಹಾರಗಳಲ್ಲಿ ಮತ್ತು ನಡೆನುಡಿಗಳಲ್ಲಿ ಈ ಜನರನ್ನು ಸುಶಿಕ್ಷಿತರನ್ನಾಗಿಮಾಡಿರುವ ವಿಷಯವಾಗಿಯೂ, ಮ|| ಡಿ. ಕೊಂಗಾಡಿಯಪ್ಪನವರು ವಿಶದವಾಗಿ ತಿಳಿಸಿದರು. ರಾವ್‌ಸಾಹೇಬರವರು ಹಸನ್ಮುಖರಾಗಿ ಅಪ್ಪಣೆಕೊಡಿಸಿದ್ದೇನೆಂದರೆ—ನಾನು ಯಾವ ಪಕ್ಷಕ್ಕೂ ಸೇರಿದವನಲ್ಲ. ಪ್ರಜಾಸೇವೆಯೇ ನನ್ನ ಮುಖ್ಯ ಕರ್ತವ್ಯವು. ಯುಕ್ತಾಯುಕ್ತವಿಚಕ್ಷಣೆಯಿಲ್ಲದೆ ಸರಕಾರದವರನ್ನು ಆಕ್ಷೇಪಿಸುವ ಕಾರ್ಯಗಳಲ್ಲಿ ನಾನು ಪ್ರವರ್ತಿಸುವವನಲ್ಲ. ಸಾಧ್ಯವಾಗಿಯೂ ನ್ಯಾಯವಾಗಿಯೂ ಇರುವಮಟ್ಟಿಗೆ ಜನರ ಕಷ್ಟಸುಖಗಳಕಡೆಗೆ ಗಮನಕೊಟ್ಟು ಸೇವೆಮಾಡುತ್ತೇನೆ. ಈಗ ದಯಮಾಡಿಸಿರುವ ಮಿನಿಸ್ಟರ್ ಮ|| ಎ. ರಂಗನಾಥಮೊದಲಿಯಾರರು ನನಗೆ ಚಿರಪರಿಚಿತರು. ಅವರು ಸೀಡೆಡ್ ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿ ಜನರ ಕಷ್ಟಸುಖಗಳನ್ನು ಪ್ರತ್ಯಕ್ಷವಾಗಿ ನೋಡಿ ಸಾಧ್ಯವಾದ ಸಹಾಯಗಳನ್ನು ಮಾಡಲು ಒಪ್ಪಿಕೊಂಡಿದ್ದಾರೆ. ಕುಡಿಯುವ ನೀರಿನ ವಿಷಯದಲ್ಲಿ ತಿಮ್ಮನಚೆರುವಿನಲ್ಲಿ ಮಾಡಿದಂತೆಯೇ ಇಲ್ಲಿಯೂ ಮಾಡಿಸಬೇಕೆಂದಿರುತ್ತೇನೆ. ಮಂತ್ರಿಗಳ ಸನ್ನಿಧಿಯಲ್ಲಿ ಅರಿಕೆಮಾಡಿ ಹೈಸ್ಕೂಲ್‌ಕಟ್ಟಡವನ್ನು ಬರುವ ವರ್ಷದಲ್ಲಿ ಮಂಜೂರುಮಾಡಿಸಲಿಕ್ಕೆ ಬೇಕಾದ ಪ್ರಯತ್ನಮಾಡುತ್ತೇನೆ. ಉರುಮಕೊಂಡೆಯಲ್ಲಿ ನಮ್ಮ ಸಹೋದರರು ಗರ್ಲ್ಸ್‌ಸ್ಕೂಲನ್ನು ಕಟ್ಟಿಸಿಕೊಡಬೇಕೆಂದು ಅಪೇಕ್ಷಿಸುತ್ತಾರೆ. ಕೂಡಿದಮಟ್ಟಿಗೂ ಬೇಗ ಈ ಭಾಗದಲ್ಲಿ ಸಹಾಯಮಾಡಿ ಕಟ್ಟಿಸಿಕೊಡುತ್ತೇನೆ. ನಾವು ಯಾವ ಕೆಲಸದಲ್ಲಿ ಅಭಿವೃದ್ಧಿಹೊಂದಬೇಕಾಗಿದ್ದರೂ ಐಕಮತ್ಯವೂ ವಿದ್ಯಾಭಿವೃದ್ಧಿಯೂ ಮುಖ್ಯವಾಗಿರಬೇಕು. ಆದ್ದರಿಂದ ತಾವೆಲ್ಲರೂ ಸಹಾಯಕರಾಗಿರಬೇಕೆಂದು ಕೋರುತ್ತೇನೆ. ತಾವು ಮಾಡಿದ ಸತ್ಕಾರಕ್ಕಾಗಿ ವಂದಿಸುತ್ತೇನೆ. ಈರೀತಿ ಅಪ್ಪಣೆಕೊಡಿಸಿದರು. ರಾವ್‌ಸಾಹೇಬರವರಿಗೂ ಸಭಿಕರಿಗೂ ಗಂಧಪುಷ್ಪಾದಿಗಳು ಸಮರ್ಪಿಸಲ್ಪಟ್ಟನಂತರ ಶ್ರೀಚಕ್ರವರ್ತಿಗಳ ಶ್ರೇಯಃಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಯಿತು. ಹೈಸ್ಕೂಲ್ ಹೆಡ್ಮಾಸ್ಟರ್ ಮ|| ವೆಂಕಟಾಚಾರ್ಯರು ಅತಿಥಿಗಳನ್ನು ಫಲಾಹಾರಾದಿಗಳಿಂದ ಸತ್ಕರಿಸಿ ಗೌರವಿಸಿ ಕಳುಹಿಸಿದರು.

ಡಿ. ಕೊಂಗಾಡಿಯಪ್ಪ.

ಶ್ರೀಜಗದ್ಗುರುಮುರುಘರಾಜೇಂದ್ರಸ್ವಾಮಿಯವರ ಆಗಮನೋತ್ಸವ.

ಶ್ರೀಮನ್ಮಹಾರಾಜ ನಿರಂಜನಜಗದ್ಗುರುಜಯದೇವಮುರುಘರಾಜೇಂದ್ರ ಮಹಾಸ್ವಾಮಿಗಳವರ ದಿವ್ಯಸವಾರಿಯು ದೊಡ್ಡಗದ್ವಳ್ಳಿ ಮೊಕ್ಕಾಮಿನಿಂದ ಕಳೆದ ತಾ|| 20 ರ ಪ್ರಾತಃಕಾಲ 10 ಘಂಟೆಗೆ ಆಲೂರಿಗೆ ಸಕಲ ಬಿರದಾವಳಿಗಳೊಂದಿಗೆ ದಯಮಾಡಿಸಿತು. ಊರೆಲ್ಲವೂ ತಳಿರುತೋರಣಗಳಿಂದಲೂ ಚಿತ್ರಕೆಲಸಗಳಿಂದ ವಿರಾಜಿಸುತ್ತಿದ್ದ ಮಂಟಪಗಳಿಂದಲೂ, ಧ್ವಜಪತಾಕೆಗಳಿಂದಲೂ ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಜನಗಳ ಸಂದಣಿಯಂತೂ ಹೇಳತೀರದುದಾಗಿತ್ತು. ಚಿಕ್ಕಮಕ್ಕಳೆಲ್ಲರೂ ಅಲಂಕಾರಮಾಡಿಕೊಂಡು ದೊಡ್ಡವರಿಗಿಂತ ಮುಂಚೆಯೇ ಶ್ರೀಗಳವರ ಆಗಮನವನ್ನು ಆತ್ಮಾತುರದಿಂದ ನಿರೀಕ್ಷಿಸುತ್ತಿದ್ದರು. ಹೆಣ್ಣುಮಕ್ಕಳು ತಮ್ಮ ಮನೆಗಳ ಮುಂದೆ ಸಾರಿಸಿ ರಂಗವಲ್ಲಿಯರಚನೆಯಲ್ಲಿ ತಮ್ಮ ಕೌಶಲ್ಯವನ್ನು ತೋರಿಸಿದ್ದರು. ಸಕಾಲಕ್ಕೆ ಆಲೂರು ಊರೊಳಗಿನಿಂದ ಸಕಲ ಬಿರದಾವಳಿಗಳೊಡಗೂಡಿ ಸರ್ಕಾರೀ ಅಧಿಕಾರಿಗಳಾದಿಯಾಗಿ ಪುರಪ್ರಮುಖರು ಆಹ್ವಾನಮಂಟಪದ ಬಳಿ ಶ್ರೀಗಳವರ ಆಗಮನವನ್ನು ನಿರೀಕ್ಷಿಸುತ್ತಿರಲು ಮಹಾಸ್ವಾಮಿಯ ದಿವ್ಯಸವಾರಿಯು 10 ಘಂಟೆಗೆ ಸರಿಯಾಗಿ ಮಂಟಪದಬಳಿಗೆ ಬಿಜಯಂಗೈಸಿತು. ಕೂಡಲೆ ಕಹಳೆಗಳು ಘೋರ್ಗರೆದವು ವಾದ್ಯನಿನಾದವು ಗಗನವನ್ನು ಮುಟ್ಟಿ, ಒಬ್ಬರ ಮಾತು ಮತ್ತೊಬ್ಬರಿಗೆ ಕೇಳಿಸದಂತೆ ಮಾಡಿದ್ದಿತು. ಸ್ವಾಮಿಯ ಆಗಮನಾನಂತರ ಅಮಲ್ದಾರ್ ಮ|| ಸೈಯದ್‌ಅಬ್ದುಲ್‌ಅಲಿಂರವರು ಮುಜರೆಯನ್ನು ಮಾಡಿದರು. ಅನಂತರ ಮಿಕ್ಕ ಸರ್ಕಾರೀ ಅಧಿಕಾರಿಗಳಿಂದಲೂ, ಖಾಸಗಿಜನಗಳಿಂದಲೂ ಮುಜರೆಯು ಅರ್ಪಿಸಲ್ಪಟ್ಟಿತು. ಶ್ರೀಗಳವರು ಸರ್ವರಿಗೂ ತಮ್ಮ ದಿವ್ಯವಾಣಿಯಿಂದ ಆಶೀರ್ವಾದಮಾಡಿ ಜನಸಮೂಹವನ್ನು ಆನಂದಗೊಳಿಸಿದರು. ಅನಂತರ ಜಗದ್ಗುರುಗಳವರು ಸುವರ್ಣಖಚಿತವಾದ ರಜತಪಲ್ಲಕ್ಕಿಯಲ್ಲಿ ಮಂಡಿಸಲು ಉತ್ಸವವು ಮುಂದೆಸಾಗಿ ಮ|| ರೈಸ್‌ಮಿಲ್ ಪ್ರೊಪ್ರೈಟರ್ ನಂಜುಂಡಪ್ಪನವರು ವಿಚಿತ್ರಕೌಶಲ್ಯದಿಂದ ತಮ್ಮ ಭವನದ ಮುಂದೆ ರಚಿಸಿದ್ದ ಮಂಟಪದೊಳಗೆ ಬರಲು ಮ|| ನಂಜುಂಡಪ್ಪನವರು ಮಹಾಸನ್ನಿಧಿಗೆ ಫಲಪುಷ್ಪಾದಿಗಳಿಂದ ಪೂರಿತವಾದ ತಟ್ಟೆಯಲ್ಲಿ ನಜರನ್ನು ಒಪ್ಪಿಸುತ್ತಿರಲು ಹೆಣ್ಣುಮಕ್ಕಳು ಆರತಿಯೊಂದಿಗೆ ಮಂಗಳವನ್ನು ಹಾಡುತ್ತಿರುವಾಗ್ಗೆ ಶ್ರೀಗಳವರು ಕೃಪಾದೃಷ್ಟಿಯಿಂದ ಆಶೀರ್ವದಿಸಲು ಉತ್ಸವವು ಮುಂದೆಸಾಗಿತು. ಅನಂತರ ಕಛೇರಿಯ ಮುಂದೆ ರಚಿಸಿದ್ದ ಮ್ಯುನಿಸಿಪಲ್ ಚಪ್ಪರದಲ್ಲಿ ಮೆಂಬರುಗಳೊಡಗೂಡಿದ ವೈಸ್‌ಪ್ರೆಸಿಡೆಂಟರು ಬಸಪ್ಪನವರು ಫಲಪುಷ್ಪಗಳನ್ನೊಪ್ಪಿಸಲು ಶ್ರೀಗಳವರು ಆಶೀರ್ವದಿಸಿ ಮುಂದೆ ತೆರಳಿ ಪುರಪ್ರಮುಖರುಗಳಾದ ಮ|| ಪಣೆಯೂರು ಸಿದ್ದಲಿಂಗಪ್ಪನವರು, ಶೀಲನ ಉರುಬಸಪ್ಪನವರು, ಬಕಿಟ್ಟಪ್ಪನವರು ಇವರುಗಳು ಹಾಕಿಸಿದ್ದ ಭವ್ಯವಾದ ಚಪ್ಪರಗಳಲ್ಲಿ ಶ್ರೀಗಳವರು ನಜರೊಪ್ಪಿಸಿಕೊಂಡು ಆಶೀರ್ವಾದವನ್ನು ದಯಪಾಲಿಸಿದರು. ಅನಂತರ ಮುಂದೆ ಮಹಮ್ಮದೀಯರು ತಮ್ಮ ಅಂಜುಮನ್, ಇಷಾಕ್, ಇಸ್ಲಾಮಿಯ ಮುಂದೆ ವಿಚಿತ್ರತಮವಾಗಿ ಅಲಂಕರಿಸಿದ್ದ ಮಂಟಪದಲ್ಲಿ ಶ್ರೀಗಳವರನ್ನು ಇದಿರ್ಗೊಂಡು ಫಲಪುಷ್ಪಗಳನ್ನೊಪ್ಪಿಸಿ ಉರ್ದುಭಾಷೆಯಲ್ಲಿ ಅಡ್ರೆಸನ್ನೋದಿ ಒಪ್ಪಿಸಲು ಮಹಾಸ್ವಾಮಿಯವರು ಬಹಳ ಸಂತೋಷದಿಂದ ಮುಸಲ್ಮಾನಪ್ರಮುಖರೊಂದಿಗೆ ಸಂಭಾಷಿಸಿ ತಮ್ಮ ದಿವ್ಯವಾಣಿಯಿಂದ ಅವರೆಲ್ಲರ ಮನಸ್ಸನ್ನು ಆನಂದಗೊಳಿಸಿದರು. ಅಲ್ಲಿಂದ ಮುಂದೆ ಉತ್ಸವವು ಮೊರಸುಗ್ರಾಮಕ್ಕೆ ದಯಮಾಡಿಸಲು ಅಲ್ಲಿ ಗಣಪತಿದೇವಾಲಯದ ಮುಂದೆ ಹಾಕಿದ್ದ ಮಂಟಪದಲ್ಲಿ ಮ|| ಪಟೇಲ್ ವೀರಭದ್ರಗೌಡರು, ಶಿದ್ಧರಾಮಪ್ಪಶೆಟ್ಟರು, ಶಿದ್ದೇಗೌಡರು ಆದಿಯಾಗಿ ಪ್ರಮುಖರು ನಜರನ್ನೊಪ್ಪಿಸಿ ಆಶೀರ್ವಾದವನ್ನು ಪಡೆದರು. ತರುವಾಯ ಮೊರಸುಕೊಪ್ಪಲಿನ ಮುಂದೆ ಕೊಪ್ಪಲಿನಗ್ರಾಮಸ್ಥರು ಫಲಪುಷ್ಪಗಳನ್ನೊಪ್ಪಿಸಿ ಆಶೀರ್ವಾದವನ್ನು ಹೊಂದಿದರು. ಅಲ್ಲಿಂದ ಉತ್ಸವವು ಊರೊಳಗೆ ಸಾಗಿ ಚಾವಡಿಯ ಮುಂದೆ ಹಾಕಿದ್ದ ಮಂಟಪದಲ್ಲಿ ಮ|| ಪಟೇಲ್ ಮಲ್ಲೇಶಗೌಡರು, ಗುರುಲಿಂಗೇಗೌಡರು, ಕೆಂಚೇಗೌಡರು ಇತ್ಯಾದಿ ಪ್ರಮುಖರೊಪ್ಪಿಸಿದ ಫಲಪುಷ್ಪಗಳನ್ನು ಶ್ರೀಗಳವರು ಸ್ವೀಕರಿಸಿ ಅವರೆಲ್ಲರನ್ನೂ ಆಶೀರ್ವದಿಸಿ ಉತ್ಸವವನ್ನು ಮುಕ್ತಾಯಗೊಳಿಸುವ ಉದ್ದಿಷ್ಟ ಚಾವಡಿಯಲ್ಲಿ ದರ್ಬಾರನ್ನು ನೆರೆಸಿದರು. ಅಷ್ಟುಹೊತ್ತಿಗೆ ಮಧ್ಯಾಹ್ನ 3 ಘಂಟೆಯಾಗಿತ್ತು. ಇಷ್ಟುವೇಳೆಯವರೆಗೂ ಭಕ್ತಿಶ್ರದ್ಧೆಗಳಿಂದ ಹಿಂಬಾಲಿಸುತ್ತಿದ್ದ ಅಮಲ್ದಾರ್ರವರು, ಡಾಕ್ಟರ್ರವರು, ಪೊಲೀಸು ಇನ್ಸ್‌ಪೆಕ್ಟರ್ರವರು ಮೊದಲಾಗಿ ಸರ್ಕಾರಿ ಅಧಿಕಾರಿಗಳನ್ನು ಶ್ರೀಗಳವರು ಗೌರವಿಸಿ ಅಪ್ಪಣೆಯನ್ನಿತ್ತು ನೆರೆದಿದ್ದ ಭಕ್ತವೃಂದವನ್ನು ಆಶೀರ್ವದಿಸಿ ಸಭೆಯನ್ನು ಮುಕ್ತಾಯಗೊಳಿಸಿ ಮೇನಾದಲ್ಲಿ ಠಿಕಾಣಿಗೆ ದಯಮಾಡಿಸಿದರು. ಪೊಲೀಸು ಸಿಬ್ಬಂದಿಯ ಏರ್ಪಾಡು ಇನ್ಸ್‌ಪೆಕ್ಟರವರಿಂದ ಬಹಳ ಸಮರ್ಪಕವಾಗಿ ಮಾಡಲ್ಪಟ್ಟಿತ್ತು. ಭಕ್ತವೃಂದವು ಮಹಾಜಗದ್ಗುರುವಿನ ಉತ್ಸವಾನಂದಭರದಲ್ಲಿ ಹಸಿವು ತೃಷೆಯನ್ನು ಸಹ ಮರೆತು ಮಹಾಸ್ವಾಮಿಯನ್ನು ಹಿಂಬಾಲಿಸುತ್ತಿದ್ದಿತು ಮತ್ತು ಆ ದಿವಸವೆಲ್ಲಾ ಊರಿನ ಆಬಾಲವೃದ್ಧರಾದಿಯಾಗಿ ಪ್ರತಿಯೊಬ್ಬರ ಬಾಯಿನಲ್ಲೂ ಉತ್ಸವ ವೈಭವದ ಮಾತುವಿನಾ ಬೇರೆಯಿಲ್ಲವು.

ಜಗದ್ಗುರುಭಕ್ತ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ 21 ನೆಯ ಪ್ರಕರಣ.

45 ರೂಪಾಯಿ ತಲೆಗಂದಾಯ.

ಬಾಲಸುಂದರನ ವ್ಯವಹಾರದಿಂದ ನನಗೂ ಗಿರಿಮೆಂಟ್‌ಕೂಲಿಗಳಿಗೂ ಒಂದುವಿಧವಾದ ಸಂಬಂಧವುಂಟಾಯಿತು. ಅವರಮೇಲೆ ದೊಡ್ಡ ಕಂದಾಯವನ್ನು ವಿಧಿಸಬೇಕೆಂದು ಸರ್ಕಾರದವರು ಪ್ರಯತ್ನಿಸಿದಾಗ ನನಗೆ ಗಿರಿಮೆಂಟ್‌ಕೂಲಿಯವರ ವಿಷಯವಾಗಿ ಪಟ್ಟುಹಿಡಿದು ಕೆಲಸಮಾಡಬೇಕೆಂಬ ಉತ್ಸಾಹವುಂಟಾಯಿತು. 1894 ರಲ್ಲಿ ಪ್ರತಿಯೊಬ್ಬ ಗಿರಿಮೆಂಟ್‌ಕೂಲಿಯ ಮೇಲೂ ವರ್ಷಕ್ಕೆ 325 ರೂ. ತಲೆಗಂದಾಯ ವಿಧಿಸಬೇಕೆಂದು ನೆಟಾಲು ಸರ್ಕಾರದವರು ಉದ್ದೇಶಪಟ್ಟರು. ಈ ವಿಷಯವು ನನಗೆ ತಿಳಿದಕೂಡಲೆ ಕಾಂಗ್ರೆಸ್ಸಿನ ಮುಂದೆ ಈ ಪ್ರಸ್ತಾಪವನ್ನಿಟ್ಟೆನು. ಅದಕ್ಕೆ ಪ್ರತಿಕೂಲ ಪ್ರಯತ್ನಮಾಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಈ ಕಂದಾಯದ ಪೂರ್ವಚರಿತ್ರೆಯನ್ನು ವಿವರಿಸುತ್ತೇನೆ. ನೆಟಾಲಿನಲ್ಲಿ ಕಬ್ಬಿನ ವ್ಯವಸಾಯವನ್ನು ವಿಶೇಷವಾಗಿ ಮಾಡಲು ಒಳ್ಳೇ ಅವಕಾಶವಿದೆಯೆಂದು 1860 ರಲ್ಲಿ ನೆಟಾಲಿನಲ್ಲಿರುವ ಆಂಗ್ಲೇಯರಿಗೆ ತೋರಿತು. ಇವಕ್ಕೆ ಕೂಲಿಜನರು ಬೇಕಾಗಿದ್ದರು. ನೆಟಾಲಿನಲ್ಲಿರುವ ಜೂಲುಜನರಿಗೆ ಈ ಕೆಲಸವನ್ನು ಮಾಡಲು ಶಕ್ತಿಸಾಲದು. ಅವರಮೇಲೆ ಭರತಖಂಡದಿಂದ ಕೂಲಿಜನರನ್ನು ಕರೆಸಬೇಕೆಂದು ನೆಟಾಲು ಸರ್ಕಾರದವರು ನಿರ್ಧರಿಸಿ ಭಾರತಪ್ರಭುತ್ವದವರಿಗೆ ತಮ್ಮ ಮನೋಗತವನ್ನು ತಿಳಿಸಿದರು. 5 ವರ್ಷಗಳವರೆಗೆ ನೆಟಾಲಿನಲ್ಲಿ ಕೆಲಸಮಾಡಿ ಅನಂತರ ಭೂಮಿಯಮೇಲೆ ಎಲ್ಲ ಹಕ್ಕುಂಟಾಗಿ ಅಲ್ಲೇ ಸ್ಥಿರವಾಗಿ ನಿಲ್ಲಬಹುದೆಂಬ ಒಪ್ಪಂದದಮೇಲೆ ಭಾರತೀಯರನ್ನು ಕೂಲಿಗಾಗಿ ಕಳುಹಲು ಭಾರತಪ್ರಭುತ್ವದವರು ಅಂಗೀಕರಿಸಿದರು. ಈರೀತಿಯಾಗಿ ನೆಟಾಲಿನಲ್ಲಿ ಕಬ್ಬಿನ ವ್ಯವಸಾಯಾಭಿವೃದ್ಧಿ ಮಾಡಬೇಕೆಂದು ಬಿಳೀಜನರುದ್ದೇಶಿಸಿದರು. ಭಾರತೀಯರು ನೆಟಾಲಿನಲ್ಲಿ ಬರೇಕಬ್ಬಿನ ವ್ಯವಸಾಯದಿಂದ ತೃಪ್ತರಾಗದೆ ತರಕಾರಿಯನ್ನು ಬೆಳೆಯಲುಪಕ್ರಮಿಸಿದರು; ಮಾವಿನಗಿಡಗಳನ್ನು ಬೆಳೆಸಿದರು; ಬರೇವ್ಯವಸಾಯದಿಂದಲೇ ತೃಪ್ತರಾಗಿ ಸುಮ್ಮನಿರದೆ ವ್ಯಾಪಾರವನ್ನು ಮಾಡಲಾರಂಭಿಸಿದರು. ಕೂಲಿಮಾಡಲು ಹೋದವರು ಒಳ್ಳೇ ಧನವಂತರಾದರು; ಮನೆಮಠ ಭೂಮಿಕಾಣಿಗಳನ್ನು ಕೊಂಡುಕೊಂಡರು. ಈ ವಿಧವಾಗಿ ಭಾರತೀಯರು ವ್ಯಾಪಾರಮಾಡುತ್ತ ಐಶ್ವರ್ಯವಂತರಾಗುತ್ತಿದ್ದರು. ಇದರಿಂದ ಬಿಳೀಜನರಿಗೆ ಭಯವುಂಟಾಯಿತು. ಭಾರತೀಯರು ವ್ಯಾಪಾರದಲ್ಲಿ ನಿಪುಣರೆಂಬುದು ಮೊದಲು ಅವರಿಗೆ ತಿಳಿದಿರಲಿಲ್ಲ. ಎಲ್ಲೋ ಭೂಮಿಯನ್ನುತ್ತು ಜೀವಿಸುತ್ತಿದ್ದರೆಂದು ಆ ಬಿಳೀಜನರು ಭಾವಿಸಿದ್ದರು. ಆದಾಗ್ಗೂ ಭಾರತೀಯರು ವ್ಯಾಪಾರದಲ್ಲಿ ಆಂಗ್ಲೇಯರಕೂಡ ಸ್ಪರ್ಧಿಸುವುದನ್ನು ಸಹಿಸಿಕೊಂಡಿರದಂತಾಯಿತು.

ಈ ರೀತಿಯಾಗಿ ಭಾರತೀಯರಮೇಲಣ ದ್ವೇಷಕ್ಕೆ ಪ್ರಾರಂಭವಾಯಿತು. ಈ ದ್ವೇಷವು ವೃದ್ಧಿಯಾಗಲು ಬೇರೆ ಕೆಲ ಕಾರಣಗಳುಂಟಾದುವು. ಭಾರತೀಯರ ಜೀವಿತವಿಧಾನವು ಒಂದು ಪರ್ಯಾಯವಾಗಿದ್ದಿತು. ಅವರ ನಿರಾಡಂಬರವೂ, ಅಲ್ಪಲಾಭದಿಂದ ತೃಪ್ತಿಹೊಂದುವ ಸ್ವಭಾವವೂ, ಅಪರಿಶುದ್ಧವಾದ ಪ್ರದೇಶದಲ್ಲಿ ವಾಸಮಾಡುವುದೂ, ಮತವಿಷಯಕವಾದ ಭೇದವೂ ಆಂಗ್ಲೇಯರಿಗೆ ಭಾರತೀಯರಮೇಲಿನ ದ್ವೇಷವನ್ನು ಹೆಚ್ಚಿಸಿದುವು. ಭಾರತೀಯರಿಗೆ ಓಟಿಂಗ್ ಅಂದರೆ ಚುನಾವಣೆಯಧಿಕಾರವು ಇಲ್ಲದಂತೆಮಾಡಿ ಗಿರಿಮೆಂಟ್ ಕೂಲಿಯವರಮೇಲೆ ತಲೆಗಂದಾಯವನ್ನು ವಿಧಿಸಬೇಕೆಂದು ನೆಟಾಲು ಸರ್ಕಾರದವರು ತೀರ್ಮಾನಿಸಿದರು. ಅಗ್ರಿಮೆಂಟಿನಲ್ಲಿ ಸೂಚಿಸಿದ್ದ 5 ವರ್ಷಕಾಲಗಡುವು ತೀರುವುದಕ್ಕೆ ಮೊದಲೇ ಕೂಲಿಯವರನ್ನು ಭಾರತದೇಶಕ್ಕೆ ಕಳುಹಿಸಿಬಿಡಬೇಕೆಂದು ಸರ್ಕಾರದವರು ಯೋಚಿಸಿದರು, ಆದರೆ ಇದಕ್ಕೆ ಭಾರತಪ್ರಭುತ್ವದವರು ಒಪ್ಪಲಿಲ್ಲವು. ಅವರಮೇಲೆ ಅಗ್ರಿಮೆಂಟ್‌ಕಾಲವು ಮುಗಿಯುತ್ತಲೇ ಭಾರತೀಯರು ಭರತಖಂಡಕ್ಕೆ ಹೋಗಬೇಕೆಂದೂ, ಹಾಗಲ್ಲದಿದ್ದಲ್ಲಿ ನೆಟಾಲಿನಲ್ಲೇ ಇರಲಿಷ್ಟಪಟ್ಟವರು ಎರಡುಸಂವತ್ಸರಕ್ಕೊಂದಾವರ್ತಿ ಹೊಸ ಅಗ್ರಿಮೆಂಟನ್ನು ಮಾಡಿಕೊಂಡು ಮೊದಲಿನ ಸಂಬಳದಮೇಲೆಯೇ ಕೆಲಸಮಾಡುತ್ತಿರಬೇಕೆಂದೂ ನೆಟಾಲು ಪ್ರಭುತ್ವದವರು ಕೆಲ ಷರತ್ತು (ಕಟ್ಟಳೆ) ಗಳನ್ನು ಮಾಡಿದರು. ಇದೂ ಅಲ್ಲದೆ ಅಗ್ರಿಮೆಂಟ್ ಕಾಲವು ಮುಗಿಯುತ್ತಲೇ ಭಾರತದೇಶಕ್ಕೆ ಹೋಗದೆ ನೆಟಾಲಿನಲ್ಲಿ ಉಳಿದುಕೊಳ್ಳುವ ಭಾರತೀಯರೆಲ್ಲರೂ ವರ್ಷವೊಂದಕ್ಕೆ 350 ರೂ. ತಲೆಗಂದಾಯವನ್ನು ಕೊಡುವಂತೆ ಮಾಡಬೇಕೆಂದು ನೆಟಾಲು ಪ್ರಭುತ್ವದವರುದ್ದೇಶಪಟ್ಟರು. ಈ ವಿಷಯವನ್ನೆಲ್ಲಾ ಸಮಗ್ರವಾಗಿ ತಿಳಿಸಿ ಭಾರತಪ್ರಭುತ್ವದವರು ಈ ಸೂಚನೆಯನ್ನು ಅನುಮೋದಿಸುವಂತೆ ಮಾಡಲು ಸರ್ ಹೆನ್ರಿಬಿನ್ಸು ಮತ್ತು ಮೇಸನ್ನುರವರು ರಾಯಭಾರಿಗಳಾಗಿ ಕಳುಹಲ್ಪಟ್ಟರು. ಆಗ ಲಾರ್ಡ್ ಎಲಿಜಿನ್‌ರವರು ಭರತಖಂಡದ ವೈಸ್‌ರಾಯರಾಗಿದ್ದರು. 350 ರೂ. ಕಂದಾಯವನ್ನು ವಿಧಿಸುವುದು ಅನ್ಯಾಯವೆಂದು ಅವರು ಅಭಿಪ್ರಾಯಪಟ್ಟು, 40 ರೂ. ಕಂದಾಯವನ್ನು ವಿಧಿಸಬಹುದೆಂದು ತಮ್ಮ ಸಮ್ಮತಿಯನ್ನಿತ್ತರು. ವೈಸ್‌ರಾಯರು ಈರೀತಿ ಅಭಿಪ್ರಾಯಪಟ್ಟುದೂ ಅಕ್ರಮವೆಂದು ಆಗ ಹೇಳಿದ್ದನಲ್ಲದೆ ಈಗಲೂ ಹೇಳುತ್ತೇನೆ. ಎಲಿಜಿನ್‌ವೈಸ್‌ರಾಯರು ಆ ರೀತಿ ಅಭಿಪ್ರಾಯಪಟ್ಟಾಗ್ಗೆ ನೆಟಾಲಿನಲ್ಲಿರುವ ಭಾರತೀಯರ ಕಷ್ಟಸುಖವನ್ನು ಪರ್ಯಾಲೋಚಿಸಲಿಲ್ಲ. ಒಂದು ಕುಟುಂಬದ ಕೂಲಿಯವನು ಅವನ ಹೆಂಡತಿ, 16 ವರ್ಷವಯಸ್ಸಿನ ಮಗ ಮತ್ತು 13 ವರ್ಷವಯಸ್ಸಿನ ಮಗಳು ಇಂತಿಷ್ಟು ಜನರ ಕುಟುಂಬವು ಒಂದುವರ್ಷದಲ್ಲಿ 160 ರೂ. ಕಂದಾಯ ಕೊಡಬೇಕಾಗಿದ್ದಿತು. ಈ ಕುಟುಂಬದಲ್ಲಿ ಸಂಪಾದಿಸುವವನು ಗಂಡನೊಬ್ಬನೇ. ಒಬ್ಬ ಮನುಷ್ಯನಿಗೆ ಒಂದುತಿಂಗಳಲ್ಲಿ ಸರಾಸರಿ 9 ರೂ. ಕೂಲಿಬರುತ್ತಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಅಷ್ಟು ಹೆಚ್ಚು ಕಂದಾಯವನ್ನು ವಿಧಿಸುವುದು ಎಷ್ಟು ಅಕ್ರಮವಾದುದೆಂದು ಬೇರೆ ಹೇಳಬೇಕಾದುದಿಲ್ಲ. ಪ್ರಪಂಚದಲ್ಲಿ ಬೇರೆ ಯಾವ ಚಟ್ಟವೂ ಅಂದರೆ ಶಾಸನವೂ ಇಷ್ಟು ವಿಪರೀತ ಭೀಕರವಾಗಿರಲಿಲ್ಲವು.

ಈ ಕಂದಾಯವನ್ನು ನಿರೋಧಿಸಲು ಕೂಡಲೇ ಆಂದೋಳನವನ್ನಾರಂಭಿಸಿದೆವು. ನೆಟಾಲು ಭಾರತ ಕಾಂಗ್ರೆಸ್ಸಿನವರು ಸುಮ್ಮನಿದ್ದದ್ದರೆ ವೈಸ್‌ರಾಯರು 335 ರೂಪಾಯಿಗಳ ಕಂದಾಯವನ್ನೇ ಅಂಗೀಕರಿಸಿಬಿಡುತ್ತಿದ್ದರು. ಈ 335 ರೂ. ಕಂದಾಯಕ್ಕೆ ಬದಲು 40 ರೂ. ಗಳನ್ನು ವಿಧಿಸಿದುದು ಕಾಂಗ್ರೆಸ್ಸಿನವರ ಆಂದೋಳನದ ಫಲವೆಂತಲೇ ಹೇಳಬಹುದು. ಒಂದುವೇಳೆ ಸ್ವಬುದ್ಧಿಯಿಂದಲೇ ಭಾರತಪ್ರಭುತ್ವದವರು 335 ರೂ. ಕಂದಾಯಕ್ಕೆ ಬದಲು 40 ರೂ. ಕಂದಾಯವಿಧಿಸಬೇಕೆಂದು ಅಭಿಪ್ರಾಯಪಟ್ಟದ್ದರೂ ಅದು ಕೂಡ ಅನ್ಯಾಯವೇ ಎಂದು ಹೇಳಬೇಕಾಗುತ್ತದೆ. ಭಾರತೀಯರ ಕ್ಷೇಮವನ್ನು ಸಂರಕ್ಷಿಸುವ ಬಾಧ್ಯತೆಯುಳ್ಳ ವೈಸ್‌ರಾಯರು ಇಂತಹ ಅಮಾನುಷವಾದ ಕಂದಾಯವನ್ನು ಅನುಮೋದಿಸಬಾರದಾಗಿದ್ದಿತು. 40 ರೂ. ಕಂದಾಯವನ್ನು ವಿಧಿಸುವುದು ಕೂಡ ಅಕ್ರಮವೇ. ಈ ಕಂದಾಯವನ್ನು ವಿಧಿಸಕೂಡದೆಂದು ಭಾರತೀಯರು ಪಟ್ಟಿನಿಂದ ಆಂದೋಳನವನ್ನು ಮಾಡುತ್ತಿದ್ದರು. ಆದರೂ ಅವರ ಆಶಯವು ಪೂರ್ತಿಯಾಗಲು 20 ವರ್ಷಕಾಲ ಹಿಡಿದಿತು. ಕೇವಲ ನೆಟಾಲಿನ ಭಾರತೀಯರೇ ಅಲ್ಲದೆ ದಕ್ಷಿಣಾಫ್ರಿಕೆಯ ಭಾರತೀಯರೆಲ್ಲರೂ ಒಟ್ಟುಗೂಡಿ ದೊಡ್ಡ ಆಂದೋಳನವನ್ನು ನಡೆಯಿಸಬೇಕಾಗಿ ಬಂದಿತು. ಗೋಕಲೆಯವರೂ ಈ ಆಂದೋಳನದಲ್ಲಿ ಭಾಗಿಗಳಾಗಿದ್ದರು. ಕೆಲಭಾರತೀಯರು ಕಾರಾಗೃಹಕ್ಕೆ ಹೋದರು ಮತ್ತೆ ಕೆಲವರು ಮರಣಹೊಂದಿದರು. ಸತ್ಯವು ಕಡೆಯಲ್ಲಿ ಜಯಹೊಂದಿತು. ಭಾರತೀಯರು ಆಂದೋಳನವನ್ನು ನಡೆಸದೆ ನೆಟಾಲು ಕಾಂಗ್ರೆಸ್ಸಿನವರು ಅಶ್ರದ್ಧೆಯಿಂದ ಇದ್ದಿದ್ದರೆ ಈ ಹೊತ್ತಿನವರೆಗೆ ದಕ್ಷಿಣಾಫ್ರಿಕಾ ಭಾರತೀಯರಿಗೂ ಭರತಖಂಡಕ್ಕೂ ದೊಡ್ಡ ಅವಮಾನಕರವಾದ ಈ ತಲೆಗಂದಾಯವು ಎತ್ತಲ್ಪಡದೆ ಇರುತ್ತಿರಲಿಲ್ಲ.

ಕಡೂರುತಾಲ್ಲೋಕು ಓಟರುಗಳಲ್ಲಿ ವಿಜ್ಞಾಪನೆ.

ಬರುವ ತಾ|| 23 ನೇ ಗುರುವಾರ ಈ ತಾಲ್ಲೋಕಿನಿಂದ ಮೂವರನ್ನು ಕಡೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಮೆಂಬರುಗಳನ್ನಾಗಿ ಚುನಾಯಿಸಲು ಗೊತ್ತಾಗಿರುವುದು ಸರಿಯಷ್ಟೆ. ಈ ಚುನಾವಣೆಗೆ ಉಮೇದುವಾರರಾಗಿ ನಿಂತಿರುವ 7 ಜನರಲ್ಲಿ ವೀರಶೈವರೊಬ್ಬರೇ ಆಗಿರುತ್ತಾರೆ ಮತ್ತು ಈ ತಾಲ್ಲೋಕಿನ ಓಟರುಗಳಲ್ಲಿ ವೀರಶೈವರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಆದ್ದರಿಂದ ಹಿಂದುಳಿದ ವರ್ಗಗಳ ಓಟರುಮಹಾಶಯರುಗಳು, ಸ್ವಕಾರ್ಯಸಾಧನೆಗೆ ಪ್ರೋತ್ಸಾಹಿಸಿ ಕಡೆಯಲ್ಲಿ “ಹೊಳೆ ದಾಟಿದಮೇಲೆ ಅಂಬಿಗನ ಮಿಂಡ” ಎಂಬ ಗಾದೆಯನ್ನು ಸ್ಮರಿಸಿಕೊಳ್ಳುವಂತೆ ಮಾಡುವ ಇಂದ್ರಜಾಲಕರ ಮಾತಿಗೆ ಮರುಳಾಗದೆ ಸ್ವಕುಲಾಭಿಮಾನದ ಮೇಲೆ ದೃಷ್ಟಿಯಿಟ್ಟು ಹಿಂದುಳಿದ ವರ್ಗದವರನ್ನು ಮೆಂಬರುಗಳನ್ನಾಗಿ ಚುನಾಯಿಸಿ ತಮ್ಮ ಹಿತಸಾಧನೆಗೆ ಅವಕಾಶವನ್ನು ಕಲ್ಪಿಸಿಕೊಳ್ಳುವವರಾಗಬೇಕೆಂದು ಪ್ರಾರ್ಥಿಸುವ,

ಒಬ್ಬ ಓಟರು.

ಕನ್ನಡ ಸಣ್ಣಕಥೆಗಳ ಸ್ಪರ್ಧೆ.

Kannada Short Story Competition

(ನಂದಳಿಕೆ ಲಕ್ಷ್ಮೀನಾರಣಪ್ಪನವರ ಜ್ಞಾಪಕಾರ್ಥವಾಗಿ ಏರ್ಪಟ್ಟದ್ದು).

ನಿಯಮಗಳು.

(1) ಮೆಟ್ರಿಕ್ ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ವಿಶ್ವವಿದ್ಯಾಲಯದ ಯಾವುದಾದರೊಂದು ಪರೀಕ್ಷೆಗೆ ಓದುತ್ತಿರುವ ಕರ್ನಾಟಕ ವಿದ್ಯಾರ್ಥಿಗಳಾರಾದರೂ ಈ ಸ್ಪರ್ಧೆಗೆ ಕಥೆಗಳನ್ನು ಕಳುಹಬಹುದು. (2) ಸ್ಪರ್ಧೆಗೆ ಬರುವ ಕಥೆಗಳಲ್ಲಿ ಶ್ರೇಷ್ಠತಮವಾದುದನ್ನು ಬರೆದವರಿಗೆ “ಮುದ್ದಣ ಪದಕ” ಎಂಬ ಸ್ವರ್ಣಪದಕವು ಬಹುಮಾನವಾಗಿ ಕೊಡಲ್ಪಡುವುದು. ಸ್ವರ್ಣಪದಕವು ದೊರೆಯದ ಕಥೆಗಳಲ್ಲಿ ಶ್ರೇಷ್ಠವಾದುವೆಂದು ಪರಿಗಣಿತವಾದುವುಗಳಿಗೆ ದ್ರವ್ಯರೂಪವಾದ ಅಥವಾ ಪುಸ್ತಕರೂಪವಾದ ಬಹುಮಾನವನ್ನು ಸಂಘವು ಕೊಡಬಹುದು (3) ಕಥೆಯು ಸ್ವಕಲ್ಪಿತವಾದದ್ದಾಗಿಯೂ ಇದುವರೆಗೂ ಪ್ರಕಟವಾಗದ್ದಾಗಿಯೂ ಇರಬೇಕು. (4) ಒಂದಕ್ಕಿಂತಲೂ ಹೆಚ್ಚು ಕಥೆಗಳನ್ನು ಒಬ್ಬರೇ ಸ್ಪರ್ಧೆಗೆ ಕಳುಹಲಾಗದು. (5) ಕಥೆಯನ್ನು ಕಾಗದದ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರದಲ್ಲಿ ಬರೆಯಬೇಕು. (6) ಬಹುಮಾನವನ್ನು ಪಡೆದ ಕಥೆಯನ್ನು “ಪ್ರಬುದ್ಧ ಕರ್ನಾಟಕ” ದಲ್ಲಿ ಪ್ರಕಟಿಸುವ ಹಕ್ಕು ಸಂಘಕ್ಕೆ ಇರುತ್ತದೆ. (7) ಲೇಖಕರು ತಮ್ಮ ಹೆಸರು, ವಿಳಾಸ, ತಾವು ಓದುವ ಪಾಠಶಾಲೆ, ತರಗತಿ ಇವುಗಳನ್ನು ಪ್ರತ್ಯೇಕ ಕಾಗದದಲ್ಲಿ ಕಳುಹಿಸಬೇಕು. (8) ಸ್ಪರ್ಧೆಗೆ ಬಂದ ಕಥೆಗಳನ್ನು ಹಿಂದಕ್ಕೆ ಕಳುಹಲಾಗುವುದಿಲ್ಲ. (9) ಸ್ಪರ್ಧೆಗೆ ಸೇರುವವರು ತಮ್ಮ ಕಥೆಗಳನ್ನು ಪ್ರವೇಶಧನವಾದ ಎಂಟುಆಣೆಗಳೊಡನೆ 1927 ನೆಯ ಜನವರಿ ತಿಂಗಳು 5 ನೆಯ ತಾರೀಖಿನೊಳಗೆ ತಲಪುವಂತೆ ರಿಜಿಸ್ಟರ್ಡ್ ಪೋಸ್ಟು ಮೂಲಕ ಉಪಾಧ್ಯಕ್ಷರ ಹೆಸರಿಗೆ ಕಳುಹಿಸಬೇಕು. ಸ್ಪರ್ಧೆಯ ಫಲಿತಾಂಶವು “ಪ್ರಬುದ್ಧ ಕರ್ನಾಟಕ” ದ ಕಾಮನಸಂಚಿಕೆಯಲ್ಲಿ ಪ್ರಕಟಿತವಾಗುವುದು.

ಕರ್ನಾಟಕ ಸಂಘ
ಸೆಂಟ್ರಲ್ ಕಾಲೇಜು, ಬೆಂಗಳೂರು. }

ಟಿ. ಎಸ್. ವೆಂಕಣ್ಣಯ್ಯ,
ಉಪಾಧ್ಯಕ್ಷ.

೧೯೨೬ನೆಯ ಇಸವಿ ಡಿಸೆಂಬರ್ ತಾ|| ೧೮ ರಿಂದ ೧೯೨೬ ನೆಯ ಇಸವಿ ಡಿಸೆಂಬರ್ ತಾ|| ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಮಾರ್ಗಶಿರ ಶುದ್ಧ ಚತುರ್ದಶಿಯಿಂದ ಮಾರ್ಗಶಿರ ಬಹುಳ ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ಮಾ
18	[1]ಶನಿ	ಚತು	14-16	ರೋಹಿ	25-0	4
19	[2]ಭಾನು	ಪೌರ್ಣ	12-23	ಮೃಗ	24-53	5
20	[3]ಸೋಮ	ಪಾಡ್ಯ	11-43	ಆದ್ರ್ರಾ	25-55	6
21	ಮಂಗಳ	ಬಿದಿ	12-18	ಪುನ	28-13	7
22	[4]ಬುಧ	ತದಿ	14-44	ಪುಷ್ಯ	31-44	8
23	[5]ಗುರು	ಚೌತಿ	17-21	ಆಶ್ಲೇ	36-26	9
24	ಶುಕ್ರ	ಪಂಚ	21-34	ಮಘ	42-6	10

(1) ಮಳೆನಕ್ಷತ್ರ-ಮೂಲ ೨ ನೆಯಪಾದ. (2) ಅಂಧಕಾಸುರಸಂಹಾರ. (3) ಆಂದ್ರೋತ್ಸವ. (4) ಮಳೆನಕ್ಷತ್ರ-ಮೂಲ ೩ ನೆಯಪಾದ, (5) ಮಾರ್ಗಶಿರಲಕ್ಷ್ಮೀವ್ರತಂ.

ಮೈಸೂರು: ವೈ. ವಿಶ್ವನಾಥಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಮಜ ಸಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾತಲಿತ ಸಾಧುಗ್ರಾಮಾಲವಾಲಂಪಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೧-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೩೯] ಮೈಸೂರು ಸ್ಟಾರ್ ಸಕ ೧೯೨೬ ನೆಯ ಇಸವಿ ಡಿಸೆಂಬರ್ ತಾರೀಖು ೨೫ ನೆಯ ಶನಿವಾರ. [ಸಂಚಿಕೆ ೫೨

ಸತ್ಯದಜಗತ್ತು ಮೊದಲು ಇದನ್ನು ಓದಿ ನಂಬಿಗೆ ಇಡಿರಿ. ಅದೇನು ನೋಡೋಣ

ಸತ್ವವನ್ನು ಪರೀಕ್ಷಿಸಿರಿ ಮತ್ತು ಅಶಕ್ತತೆಯಿಂದ ಮುಕ್ತರಾಗುವಿರಿ.

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೆ, ಇವರ ಹಿಂದುಸ್ಥಾನ ಸರಕಾರದಲ್ಲಿ ರಿಜಿಷ್ಟರ ಆದುದ್ದು

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ, ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದ ಮೇಲೆ ಆದ ಕ್ಷೀಣತೆ, ಜಾಗರಣೆಯಿಂದ ಆಗುವ ಬಾಧೆಯು, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ವಿಸ್ಮೃತಿ ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಮುಟ್ಟಾದಾಗ ಹೊಟ್ಟೆ ಕಡಿಯೋಣ, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ಶೌಚಕ್ಕೆ ಸಾಫವಾಗಿ ರಕ್ತಶುದ್ಧಿಯು ಆಗುತ್ತದೆ, ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಅವರ್ಣನೀಯ ಮತ್ತು ಕಾಯಮು ಧಾತುಪೌಷ್ಟಿಕ ಆದರ ಸಂಬಂಧದ ರೋಗನಾಶಕ ಖಾತ್ರಿಯ ಮತ್ತು ಜಿದ್ದಿನ ಬಹುಗುಣದಾಯಕ ಪಾಕವನ್ನು ಇಡೀ ಜಗತ್ತಿನೊಳಗೆ ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ಶರೀರಸಂಪತ್ತು ಕಾಯ್ದುಕೊಳ್ಳುವ ಮತ್ತು ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿ ಸಮಾಧಾನ ಹೊಂದಬೇಕು. ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಮೌಲ್ಯ ಮತ್ತು ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧುಕಂದ, ಜಹಾಕಂದ, ಶಾಲೀಮಲೀಕಂದ, ಅಶ್ವಗಂದ, ಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಷದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜ ಹರಣಖೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸರ್ಕೀಮಗಜ, ಅಲದಹಾಲು, ನಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಳಭೂಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಯು ಬರುವ ಕಾರ್ತಿಮಾಸದವರೆಗೆ ಕಡಿಮೆ ದರದಿಂದ ೫| ರೂ. ಗೆ ಸಿಗುವದು. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೬ ಡಬ್ಬಿಗಳನ್ನು ತರಿಸುವವರು ೫ ರೂಪಾಯಿ ಅಡ್ವಾನ್ಸ ಕಳಿಸಬೇಕು. ಪತ್ತೆ ತಿಳಿಯುವಂತೆ ಸ್ವಚ್ಛ ಬರೆಯಬೇಕು.

೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

[50—22] ಪತ್ತೆ:—ಮಾಲಕ ವೈದ್ಯ ಪ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ತಾಂಬೂಲದೊಡನೆಯಾಗಲಿ, ಹಾಗೇ ಯಾಗಲೀ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ದೇಹತತ್ವಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರಾಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧವಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತೂ ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ). ವಾಯು, ಶೀತ, ಮಂದ, ಕೆಮ್ಮಲು, ನೆಗಡಿ, ಜ್ವರ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು, ಹಳೆಯಜ್ವರ, ಕಂಪ, ಮಲಬದ್ಧ, ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ, ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂರಬೇಕಾದವರಿಗೂ, ಘೋಷಾಸ್ತ್ರೀಯರಿಗೂ, ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾದುದಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರ ಬಳಿಗೆ ಅಲೆಯುವುದು ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳವರೆಗಿರುವ 1 ಸೀಸಾ ಬೆಲೆ 4 ಆಣಾ ಮಾತ್ರವೇ. [ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.]

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ವಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

SIROMANY NARAYANACHARYA & CO.,
BENARES CITY.

S.U.N. & CO.
BENARES CITY.

ನಮ್ಮಲ್ಲಿ ತರವಾರಿ ರೇಶ್ಮೆ ಮೊಗಟ, ಜರಿ ಸಾದಾ ಶೀರೆ, ಕಾಶ್ಮೀರ್ ಶಾಲು, ರುದ್ರಾಕ್ಷಿಗಳು, ಗೌರಿಶಂಕರ ಬಾಣಲಿಂಗ, ಸ್ಫಟಿಕಮಣಿ, ಸ್ಫಟಿಕ ಶ್ರೀಚಕ್ರಗಳು, ನೇಪಾಳ ಕಸ್ತೂರಿ, ಜಗನ್ನಾಥಜಾಗಂಟೆ, ನಾರ್ಮದಿಗಳು, ಹಿತ್ತಾಳೆಪಾತ್ರೆ ಮತ್ತು ಮೂರ್ತಿಗಳು, ಸಾಲಿಗ್ರಾಮ, ಸುದರ್ಶನಚಕ್ರಗಳು ಇವೇ ಮುಂತಾದ ಮಾಲುಗಳನ್ನು ಕೋರುವವರಿಗೆ ಯೋಗ್ಯವಾದ ಕ್ರಯಕ್ಕೆ ವಿ. ಪಿ. ಮೂಲಕ ಕಳುಹಿಸಲಾದೀತು. ಈ ಮಾಲುಗಳ ವರ್ಣನೆಯ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು.

ವಿಳಾಸ.— [50—23]

ಶಿರೋಮಣಿ ನಾರಾಯಣಾಚಾರ್ಯ, ಕಾಶೀಕ್ಷೇತ್ರ.

ಮೈಸೂರುಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೪—೦
ಸಟೀಕಾಕರ್ಣಾಟಕಶಬ್ದಮಂಜರಿ	೦—೮—೦	೦—೧೪—೦
ಸಟೀಕಾ ಶತಕತ್ರಯ	೧—೦—೦	೧—೬—೦
ಅಭಿನವ ಕಾಳಿದಾಸ ಶ್ರೀ|| ಬಸಪ್ಪಶಾಸ್ತ್ರಿಗಳಿಂದ ರಚಿತವಾದ ಕನ್ನಡ ಶಾಕುಂತಲನಾಟಕ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಕಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕ ಪುಗಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—11] ಪೋ. ಬಾ. ೧೮೦, ಮದರಾಸು.

ಮಕಮಲ್ಲು ಪಾಲೀಷುಬಟ್ಟೆಯಂತೆ ಉಪಯೋಗಿಸಲ್ಪಡಲು ಅತ್ಯುತ್ತಮವಾದುದು. ಬೆಳ್ಳಿ ಭಂಗಾರದ ಒಡವೆಗಳನ್ನೂ, ಮೆರಗು ಕೊಟ್ಟಿರುವ ವಸ್ತುಗಳನ್ನೂ, ನಯವಾದ ತೊಗಲಿನ ಸಾಮಾನುಗಳನ್ನೂ ‘ಶಾಮಾಯಿ’ ಚರ್ಮದಿಂದ ಪಾಲೀಷುಮಾಡುವುದು ವಾಡಿಕೆಯಲ್ಲಿದೆ. ಆದರೆ ಮಕಮಲ್ಲು ಅದಕ್ಕಿಂತಲೂ ಹೆಚ್ಚು ಪ್ರಯೋಜನವಾದುದು ಮತ್ತು ಬಾಳಿಕೆಬರುವುದು.

ಶ್ವಾಸಕೋಶ ಸಂಬಂಧವಾದ ರೋಗಗಳು ಹಸುಗಳಿಗೆ ಬಾರದಂತೆ ನಿರೋಧಿಸುವ ರಸವಿಶೇಷವನ್ನು ಶಿಡುಬಿನ ಮೂಲಕ ಅವುಗಳ ರಕ್ತಕ್ಕೆ ಸೇರಿಸುವುದರಿಂದ, ಅವುಗಳ ಹಾಲನ್ನು ಉಪಯೋಗಿಸುವ ಜನಸಮುದಾಯದಲ್ಲಿ ಕ್ಷಯರೋಗವು ಹರಡದಂತೆ ಅಡ್ಡಿಪಡಿಸಲಾಗುತ್ತದೆಂದು ಯೂರೋಪಿನ ವೈದ್ಯರೊಬ್ಬರು ಕಂಡುಹಿಡಿದಿರುವರು. ರೋಗಾದಿಗಳಿಂದ ನರಳುವ ಕಾಲ್ನಡೆಗಳ ಹಾಲನ್ನು ಉಪಯೋಗಿಸುವದರಿಂದ, ಕ್ಷಯರೋಗವು ಮಕ್ಕಳಿಗೂ ದುರ್ಬಲರಿಗೂ ಹರಡುವುದೆಂದು ವೈದ್ಯರ ನಂಬಿಕೆಯಾಗಿದೆ. ಆದುದರಿಂದ ಹಸುಗಳಿಗೆ ಶ್ವಾಸಕೋಶ ಸಂಬಂಧ ರೋಗಗಳು ಬರದಂತೆ ಸ್ಪಾಲಿಂಗರ್ ಎಂಬವರು ಕಂಡುಹಿಡಿದಿರುವ ಉಪಾಯವು ಅತಿಶ್ರೇಷ್ಠವಾದುದೆಂದು ಸರ್ ಹ್ಯಾರಿಬ್ರೂಸ್ ಪೋರ್ಟರ್ ಎಂಬ ಪ್ರಸಿದ್ಧ ವೈದ್ಯರು ಹೇಳುವರು.

ಪತ್ರಿಕಾವಾಚಕರಲ್ಲಿ ವಿಜ್ಞಪ್ತಿ.

ಅನಿವಾರ್ಯಸಂದರ್ಭದಿಂದ ಮೈಸೂರು ಸ್ಟಾರ್ ಪತ್ರಿಕೆಯ ತಾ|| 1—1—1927 ರ ಸಂಚಿಕೆಯು ಹೊರಡುವುದಿಲ್ಲವಾದಪ್ರಯುಕ್ತ ನಮ್ಮ ಪ್ರಿಯವಾಚಕಮಹಾಶಯರ ಕ್ಷಮೆಯನ್ನು ಬೇಡುವೆವು.—ಸಂ.

ಮೈಸೂರು ಸ್ಟಾರ್.

೧೯೨೬ ನೆಯ ಇಸವಿ ಡಿಸೆಂಬರ್ ತಾ|| ೨೫ ನೆಯ ಶನಿವಾರ.

THE MYSORE LEGISLATIVE COUNCIL.

The session of the Legislative Council which has just closed after a sitting for six days had a heavy agenda to get through, which included several important bills. The one most vital was that relating to the Record of Rights, which curiously enough met with opposition from a section of the House. There could be no two opinions with regard to the purpose it would serve. It would obviate so much fraud and remove so much room for disputes and the consequent recourse to courts both criminal and civil. This was a measure long overdue, and we know that when a popular Amildar wanted the Shanbhogues who are the record keepers to submit the *hisse path* whenever required even the District head took up an unsympathetic attitude. The ryots would be so grateful to Government for the introduction of this salutary measure. The attitude that the oppositionists took in desiring a postponement of the consideration of the bill was un-understandable. There seemed to have been some nervousness evinced by the House when the Bill to afford relief to the agriculturists was introduced. This is a matter where the members have to take a very large liberal view of the situation. We do not want to have our full say now since its introduction has been postponed to a later date. One thing we may say. Agriculture being the main industry of the State, it needs to be protected specially against a tendency to borrow indiscriminately on the one hand and the grabbing hand of money-lenders on the other. We are glad to note the confident and optimistic tenor of the Dewan Saheb's speech in connection with these bills. Among the resolutions, it would appear that the resolution regarding the recruitment to the Education Department was moved by Mr. Nanjundaiya of Hassan in very moving terms. We cannot recall occassions when he has not been moving in his utterances. He talked of the old time bogey about "efficiency." This bogey has long been exploded. Anyway the Dewan's remarks on this theory of efficiency are worth quoting—"The mere possession of Degrees, however, does not necessarily constitute—it may be a strong indication of—efficiency, for there are other forms of merit which have to be taken into consideration in judging of a man's efficiency and suitability for employment in Public Service—enthusiasm, sense of duty, initiative and energy. The measure of a man's efficiency is the extent to which he is endowed with these qualities." We are doubtful if this definition of efficiency will ever satisfy our Brahmin friends with whom efficiency and degrees are more or less synonymous terms, and who want requisites other than degrees for efficiency to take a second or no place at all. An allied resolution regarding the abolition of the system of nomination was moved by Mr. M. Venkatakrishnayya. It simply shows that the order on the Miller Committee Report is still acting like a nightmare on these protaganists of "efficiency", and no efforts are enough to extol the supreme virtue of degrees as stamping the hall mark of efficiency on humanity. Anybody will move and go a-head but not the Mysore social hierarchy. Dr. P. C. Ray has exposed the emptiness and the hollowness of mere Degrees in a telling, eloquent and incontrovertible manner. But it does not pay the priestly politician of Mysore to subscribe to that fact. He has got to praise his goods to find a proper market for them, and all his goods consist only in Degrees. Let the degree holder be divested of his degree and let us see if he is worth anything, if he can accomplish anything. Anyway, we hope this theory of efficiency will not be trotted out hereafter for sometime to come at least. We congratulate the Dewan on the stand he has taken with regard to this principle of recruitment. In his words "It (nomination) seems to be the only practical way in which inequalities of representation in the Public Service can set right. Indeed, it is found necessary and desirable to reserve this power even in regard to public bodies. The principle is the same, and is, to my mind, a perfectly sound one." We trust that these wise words of an impartial Dewan will not fall on idle ears. The parting words of Dr. Ray at Mysore were "why should the Brahmins grudge the non-Brahmins' appointments? Why do the Brahmins want a monopoly in Public Service?" Well, let us hope that on this issue our friends will raise no more fights and exercise that grand and sublime spirit of resignation which they say was once their pride and supreme virtue.

ELECTIONS.

(Contributed)

VI

Here is a revelation for the Hassan District Electorate to examine. Here is the real heart, which had been kept secretly buried within the studied walls of the body of the Representative of the Hassan District in the Legislative Council. The mighty "we", returned unopposed, has appeared in "True Colours." The reperesentative of 584,000 of the Hassan District has disclosed himself for the first time. Was it the mandate of 584,000 minus 20,400 (Brahmins) to say that there was "contamination" in them? Would 183,700 Vakkaligars, 89,800 Adikarnatakas, 84,500 Lingayets, 45,500 Kurubars and others of the Hassan District permit their representative to state that the high ideals of Education are being "contaminated" on account of recruitment as per Government Order on the Miller Committee Report. Would they still continue to be represented by a gentleman, who cares to guard the interests of a community forming only 3·5% of the total population of the Hassan District in preference to those who form 31·4% (Vakkaligars), 14·5% (Lingayets), and 7·8% (Kurubars) of the District population? Are 183,700 Vakkaligars, 84,500 Lingayets, and 45,500 of Kurubars of Hassan District so poor in their brain power and in intellectual capacity, as not to be able to find one person to represent their interests in the Council? Would it be right to say in a popular Government like the one blessed by our beloved Raja Rishi that the element of Vakkaligar, Lingayet or Kurubar will contaminate the Education Service? If these major communities in the District do keep quiet, and permit themselves to be blasphemed, what is the fate of the other Hindus, Musalmans, and Christians in the District?

And what of the Adikarnatakas? This District once abounded with these people. They formed the staying power of the Malnad areas of the District. They were the asset of the country. That population has now dwindled down to 90,000. The Malnad Gowdas are the power to-day. The Adikarnatakas were rendered un-important, on account of the "inferiority" alluded to them, and to the notions of "contamination" entertained about them. If he is treated like a brother, would the planters have complained of scarcity of labour for the coffee industry? Do the Gowdas of Malnad also wish to dwindle themselves into insignificance like the Adikarnatakas? Will they not be up and guage the correct situation? If in the Education System the Vakkaligar, Lingayet, Kurubar and others are taken as "contaminating" the system, then one element alone gets itself overbearingly strong. This strong element will draw away all the intellectual blood and in the end will burst in brain fever. The head and other limbs will all die. That is how we stand to-day as regards education. It is ill distributed amongst the people whose common property it is. Who is responsible for this state of affairs? Not the Gods of Heaven. It is man paramount. This is manifest in the "contamination" address of the 1926 December sitting of the Council. The Hassan District Electorates should consider seriously what harm they have done to themselves by sending a gentleman, who carries in his mouth a "contamination" in respect of the interests of the Backward Classes in the Education Service of the State. The Vakkaligars are sufficiently strong in this District. A Vakkaligar is alone a true representative of the people of this District in the Council. Why was there a mistake in the past? Because we did not think of our own interests. Now it is high time that we should think seriously enough and send such a person to the Council, who will be a sincere friend and not merely an "intellectual giant," who creates a terrible lot of sound.

ನ್ಯಾಯವಿಧಾಯಕಸಭಾಧಿವೇಶನ.

ಮೈಸೂರು ನ್ಯಾಯವಿಧಾಯಕಸಭಾಧಿವೇಶನವು ಆರು ದಿನಗಳವರೆಗೆ ನಡೆದು ಕಳೆದ ಸೋಮವಾರ ಮುಕ್ತಾಯಗೊಂಡಿತು. ಈ ಅವಧಿಯಲ್ಲಿ ಅನೇಕ ಪ್ರಾಮುಖ್ಯ ಬಿಲ್ಲುಗಳೂ ವಿಷಯಗಳೂ ಪರ್ಯಾಲೋಚಿಸಲ್ಪಟ್ಟು ಅವುಗಳಲ್ಲಿ ಕೆಲವು ಇತ್ಯರ್ಥಗೊಳಿಸಲ್ಪಟ್ಟವು. ಇವುಗಳಲ್ಲಿ ರೈತರ ರಿಕಾರ್ಡು (ಲೆಖ್ಖಪತ್ರ) ಗಳಿಗೆ ಸಂಬಂಧಪಟ್ಟ ಬಿಲ್ಲು ಬಹು ಪ್ರಾಮುಖ್ಯವಾಗಿದ್ದಿತಾದರೂ ಕೆಲ ಮೆಂಬರುಗಳು ಅದನ್ನು ವಿರೋಧಿಸಿದುದು ಸಖೇದಾಶ್ಚರ್ಯವಾಗಿದೆ. ಇದರಿಂದಾಗತಕ್ಕ ಮಹತ್ಪ್ರಯೋಜನ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲವೇ ಇಲ್ಲ. ಈ ಬಿಲ್ಲು ಅನುಷ್ಠಿತವಾದಲ್ಲಿ ರೈತರು ಮೋಸಹೋಗುವುದು ತಪ್ಪುವುದಲ್ಲದೆ ಪರಸ್ಪರ ಕಲಹಮಾಡಿಕೊಂಡು ಕ್ರಿಮಿನಲ್ ಮತ್ತು ಸಿವಿಲ್ ಕೋರ್ಟುಗಳಿಗೆ ಹತ್ತುವುದೂ ತಪ್ಪುತ್ತದೆ. ಇದು ಬಹಳಕಾಲದ ಹಿಂದೆಯೇ ಆಗಬೇಕಾಗಿದ್ದಿತು. ಅವಶ್ಯಕವಿದ್ದ ವೇಳೆಯಲ್ಲಿ ಹಿಸ್ಸೆಪಟ್ಟಿಯನ್ನೊಪ್ಪಿಸಬೇಕೆಂದು ಪ್ರಜಾನುರಾಗಿಯಾದ ಒಬ್ಬ ಅಮಲ್ದಾರರು ಅಪೇಕ್ಷಿಸಿದ ಸಂದರ್ಭದಲ್ಲಿ ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿಗಳು ಕೂಡ ನಿಷ್ಕರುಣರಾಗಿ ವರ್ತಿಸಿದುದು ನಮ್ಮ ಸ್ಮೃತಿಪಥದಲ್ಲಿರುವುದು. ಈ ಅತ್ಯವಶ್ಯವಾದ ವಿಧಿಯನ್ನು ಅನುಷ್ಠಾನಕ್ಕೆ ತಂದಲ್ಲಿ ರೈತರು ಸರ್ಕಾರಕ್ಕೆ ಬಹಳ ಕೃತಜ್ಞರಾಗಿರುವರು. ಇಂತಹ ಮಹೋಪಕಾರಕ ಬಿಲ್ಲನ್ನು ಪ್ಯಾಸ್ ಮಾಡಿಸದೆ ಮುಂದಕ್ಕೆ ಹಾಕಿಸಲು ಪ್ರಯತ್ನಪಟ್ಟ ಮೆಂಬರುಗಳ ಆಶಯವೇನಾಗಿದ್ದಿತೆಂಬುದು ಗೊತ್ತಾಗಲಿಲ್ಲವು. ಸಾಲಗಾರರಾದ ಬೇಸಾಯಗಾರರ ಕಷ್ಟನಿವಾರಕಬಿಲ್ಲು ಉಪಪಾದಿಸಲ್ಪಟ್ಟಾಗ ಕೆಲ ಮೆಂಬರುಗಳು ವಿಷಣ್ಣವದನರಾದಂತೆ ತೋರುತ್ತದೆ. ಈ ವಿಷಯವಾದರೋ ಮೆಂಬರುಗಳಿಂದ ಬಹಳ ಸೂಕ್ಷ್ಮವಾಗಿ ಪರ್ಯಾಲೋಚಿಸಲ್ಪಡತಕ್ಕದಾಗಿದ್ದಿತು. ಇದು ಮುಂದಣ ಪರ್ಯಾಲೋಚನೆಗಿಡಲ್ಪಟ್ಟಿರುವುದರಿಂದ ಇದರ ವಿಚಾರವಾಗಿ ನಮ್ಮ ಅಭಿಪ್ರಾಯವನ್ನು ಸಮಗ್ರವಾಗಿ ಹೇಳಲಿಷ್ಟವಿಲ್ಲವಾದರೂ ಬೇಸಾಯವು ಸಂಸ್ಥಾನದ ಮುಖ್ಯ ವೃತ್ತಿಯಾಗಿರುವುದರಿಂದ ಒಂದು ಕಡೆ ರೈತನು ಮನಸ್ವೀ ಸಾಲಮಾಡುವುದನ್ನೂ, ಇನ್ನೊಂದುಕಡೆ ಧನಪಿಶಾಚಗ್ರಸ್ತನಾದ ಹಣಗಾರನ ಕೈಗೆ ಸಿಕ್ಕಿ ಸುಲಿಸಿಕೊಳ್ಳುವುದನ್ನೂ ತಪ್ಪಿಸುವುದು ಅತ್ಯಾವಶ್ಯಕವೂ ಅವಸರವೂ ಆಗಿರುವುದೆಂದು ಮಾತ್ರ ಹೇಳುವವರಾಗಿರುವೆವು. ಈ ಬಿಲ್ಲುಗಳ ಸಂಬಂಧದಲ್ಲಿ ಮಾತನಾಡುವಾಗ್ಗೆ ದಿವಾನರು ತಮ್ಮ ಸಾನುಭೂತಿಯನ್ನೂ ವಿಶ್ವಾಸವನ್ನೂ ತೋರಿಸಿದುದು ಸಂತೋಷಪ್ರದವಾಗಿದೆ. ರೆಜಲ್ಯೂಷನ್ನುಗಳಲ್ಲಿ ವಿದ್ಯಾಭ್ಯಾಸದ ಶಾಖೆಗೆ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುವ ವಿಚಾರವಾಗಿ ಹಾಸನದ ಮ|| ನಂಜುಂಡಯ್ಯನವರು ಉಪಪಾದಿಸಿದ ರೆಜ್ಯುಲ್ಯೂಷನ್ನು ಬಹು ಚಮತ್ಕಾರವಾಗಿರುವುದು. ಎಫಿಷೆನ್ಸಿ (ಸಾಮರ್ಥ್ಯ) ವಿಚಾರದಲ್ಲಿ ಪೂರ್ವಕಾಲದ ಆ ಮಹಾಭೂತವನ್ನು ಕುರಿತು ಪ್ರಸ್ತಾವಿಸಿದರು. ಆ ಮಹಾಭೂತವು ಯಾವಾಗಲೋ ಡೈನಾಮೇಟಿನಿಂದ ಹಾರಿಸಲ್ಪಟ್ಟು ಬಹುದಿನಗಳಾದುವು. ಮುಖ್ಯವಾಗಿ ಈ ಸಮರ್ಥತೆಯ ವಿಚಾರದಲ್ಲಿ ದಿವಾನರು ಅಪ್ಪಣೆಕೊಡಿಸಿದ ಮಾತುಗಳು ಚಿರಸ್ಮರಣೀಯವಾಗಿರುವುವು. "ಪಟ್ಟವನ್ನು, ಅಂದರೆ ಡಿಗ್ರಿಗಳನ್ನು ಹೊಂದಿರುವುದು ಯೋಗ್ಯತೆಯೆ, ಅಥವಾ ಸಾಮರ್ಥ್ಯದ ಪ್ರಬಲಚಿಹ್ನೆಯಾಗಿರುವುದಾದರೂ ಸರ್ಕಾರಿಯುದ್ಯೋಗನಿರ್ವಾಹಕ್ಕೆ ಆಸಕ್ತಿ, ಕರ್ತವ್ಯಜ್ಞಾನ, ಉತ್ಸಾಹ ಈ ಗುಣಗಳು ಮನುಷ್ಯನಿಗೆ ಮುಖ್ಯವಾಗಿರಬೇಕಾಗಿರುವುದರಿಂದ ಬರೇ ಡಿಗ್ರಿಗಳನ್ನು ಪಡೆದಿರುವುದರಿಂದಲೇ ಸಾಮರ್ಥ್ಯವನ್ನು ಗೊತ್ತುಮಾಡತಕ್ಕುದಾಗಿಲ್ಲವು. ಈ ಗುಣಗಳು ಎಷ್ಟರಮಟ್ಟಿಗೆ ಮನುಷ್ಯನಿಗಿರುತ್ತವೋ ಅವನ ಕಾರ್ಯನಿರ್ವಾಹಶಕ್ತಿಯೂ ಅಷ್ಟರಮಟ್ಟಿಗಿರುತ್ತದೆ" ಎಂದು ದಿವಾನರು ಅಪ್ಪಣೆಕೊಡಿಸಿದರು. ಎಫಿಷೆನ್ಸಿಯೂ ಡಿಗ್ರಿಯೂ ಹೆಚ್ಚುಕಡಿಮೆ ಪರ್ಯಾಯಶಬ್ದಗಳೇ ಎಂದು ತಿಳಿದುಕೊಂಡಿರುವ ಮತ್ತು ಎಫಿಷೆನ್ಸಿಯು ಎರಡನೆಯದಾಗಿರಲು ಅಥವಾ ಅವಶ್ಯವೇ ಇಲ್ಲದಿರಲು ಡಿಗ್ರಿಗಳಿಗಿಂತಲೂ ಹೆಚ್ಚಾದ ಸಾಮರ್ಥ್ಯವಿರಬೇಕೆಂದು ಅಪೇಕ್ಷಿಸುವ ಬ್ರಾಹ್ಮಣಮಿತ್ರರುಗಳಿಗೆ ಈ ತತ್ವಾರ್ಥವು ತೃಪ್ತಿಕರವಾಗಿರುತ್ತದೆಂಬುದು ಮಾತ್ರ ಸಂಶಯವು. ನಿಯತವಾದ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವುದರ ಜತೆಗೆ ಕೆಲರನ್ನು ನಾಮಿನೇಟ್ ಮಾಡುವ ಪದ್ಧತಿಯು ತಪ್ಪಿಸಲ್ಪಡಬೇಕೆಂಬ ಬಗೆಗೆ ಮ|| ಎಂ. ವೆಂಕಟಕೃಷ್ಣಯ್ಯನವರು ಒಂದು ರೆಜ್ಯುಲೇಷನ್ನನ್ನು ಉಪಪಾದಿಸಿದರು. ಇದರಿಂದ ಎಫಿಷೆನ್ಸಿಯನ್ನು ಮುಖ್ಯಲಕ್ಷಣವನ್ನಾಗಿಟ್ಟುಕೊಂಡಿರುವವರಿಗೆ ಮಿಲ್ಲರ್ ಕಮಿಟಿಯ ಮೇಲಿನ ಆರ್ಡರು ಈಗಲೂ ದುಸ್ಸ್ವಪ್ನಪ್ರಾಯವಾಗಿರುತ್ತದೆಂಬುದು ತಾನಾಗಿ ವ್ಯಕ್ತವಾಗುತ್ತದೆ, ಮತ್ತು ಎಫಿಷೆನ್ಸಿಯ ಮುಖ್ಯಲಕ್ಷಣವಾದ ಡಿಗ್ರಿಗಳ ಮುದ್ರೆಯನ್ನು ಮನುಷ್ಯರ ಮೇಲೊತ್ತುವುದರ ಮಹತ್ವವನ್ನು ಹೊಗಳಲು ಪಾರವೇ ಇಲ್ಲವು. ಯಾರ ಅಭಿಪ್ರಾಯವಾದರೂ ಪ್ರಯತ್ನವಿಶೇಷದಿಂದ ಸುಧಾರಿತವಾಗುವುದು ಸಾಧ್ಯವು, ಆದರೆ ನಮ್ಮ ಮೈಸೂರು ಸರ್ಕಾರಿಯುದ್ಯೋಗವನ್ನು ಗುತ್ತಿಗೆಹಿಡಿದಿರುವವರ ಅಭಿಪ್ರಾಯವು ಮಾತ್ರ ಹಾಗಲ್ಲವು. ಈ ಡಿಗ್ರಿಗಳಲ್ಲಿ ಹುರಳಿಲ್ಲವೆಂಬುದನ್ನು ಡಾಕ್ಟರ್ ಪ್ರಫುಲ್ಲಚಂದ್ರರಾಯರವರು ಯಾರ ಖಂಡನೆಗೂ ಅವಕಾಶವಿಲ್ಲದಂತೆಯೂ ಮನಸ್ಸಿಗೆ ತಟ್ಟುವಂತೆಯೂ ತಮ್ಮ ಭಾಷಣದಲ್ಲಿ ವಿಮರ್ಶಿಸಿ ಹೇಳಿರುವರು. ಆದರೆ ನಮ್ಮ ಮೈಸೂರಿನ ರಾಜಕೀಯ ಬ್ರಾಹ್ಮಣನು ಮಾತ್ರ ಅದನ್ನು ಅನುಮೋದಿಸತಕ್ಕವನಾಗಿಲ್ಲ. ವ್ಯಾಪಾರಸ್ಥನು ತನ್ನ ಪದಾರ್ಥವನ್ನು ಹೊಗಳುವಂತೆ ಈ ರಾಜಕೀಯಬ್ರಾಹ್ಮಣನು ಡಿಗ್ರಿಗಳೆಂಬ ಪದಾರ್ಥವನ್ನು ಹೊಗಳತಕ್ಕುದಾಗಿದೆ. ಈ ಡಿಗ್ರಿಯನ್ನು ಪಡೆದುಕೊಂಡಿರುವವನು ಅದನ್ನು ಬಿಟ್ಟುಬಿಟ್ಟಲ್ಲಿ ಏನಾದರೂ ಬೆಲೆಬಾಳುತ್ತಾನೆಯೇ ಮತ್ತು ಏನನ್ನಾದರೂ ಮಾಡಬಲ್ಲನೆ ಎಂಬುದು ವಿಚಾರಣೀಯವಾಗಿರುವುದು. ಈ ಉದ್ಯೋಗಸಾಮರ್ಥ್ಯದ ತತ್ವವು ಕೆಲ ಕಾಲದಮಟ್ಟಿಗಾದರೂ ಬೋಧಿಸಲ್ಪಡದಿರುವುದೆಂದು ನಿರೀಕ್ಷಿಸುತ್ತೇವೆ ಮತ್ತು ರೆಕ್ರೂಟ್‌ಮೆನ್ಟಿನ ವಿಚಾರದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ಸೂತ್ರವನ್ನು ಸಾಧಿಸಿದುದಕ್ಕಾಗಿ ದಿವಾನರನ್ನು ನಾವು ಅಭಿನಂದಿಸುತ್ತೇವೆ. "ಸರ್ಕಾರಿಯುದ್ಯೋಗದಲ್ಲಿ ಪ್ರತಿಯೊಂದು ವರ್ಗದ ಪ್ರಾತಿನಿಧ್ಯವಿರುವುದರಲ್ಲೇನಾದರೂ ವ್ಯತ್ಯಾಸವಿದ್ದರೆ ಅದನ್ನು ಸರಿಪಡಿಸುವುದಕ್ಕಾಗಿ ಈ ನಾಮಿನೇಷನ್ ಪದ್ಧತಿಯನ್ನು ಅನುಸರಿಸಿರುವುದಾಗಿದೆ. ಡಿ|| ಬೋರ್ಡು ಮ್ಯುನಿಸಿಪಾಲಿಟಿಗಳೇ ಮೊದಲಾಗಿ ಪ್ರಜಾಸಂಸ್ಥೆಗಳಲ್ಲೂ ಈ ಅಧಿಕಾರವನ್ನಿಟ್ಟುಕೊಳ್ಳುವುದು ಅತ್ಯವಶ್ಯವು. ತತ್ವವೇನೋ ಒಂದೇಯಾಗಿರುವುದರಿಂದ ಅದು ಬಹಳ ವಿಹಿತವಾಗಿರುವುದೆಂದು ನನ್ನ ಮನಸ್ಸಿಗೆ ತೋರುತ್ತದೆ" ಎಂದು ದಿವಾನರು ಅಪ್ಪಣೆಕೊಡಿಸಿರುವರು. ನಿಷ್ಪಕ್ಷಪಾತಿಗಳಾದ ನಮ್ಮ ಮಂತ್ರಿವರ್ಯರ ಬುದ್ಧಿವಾದವು ಸೋಮಾರಿಗಳ ಕಿವಿಗೆ ಬಿದ್ದು ನಿಷ್ಪ್ರಯೋಜಕವಾಗುವುದಿಲ್ಲವೆಂದು ನಾವು ನಂಬುತ್ತೇವೆ. ಡಾಕ್ಟರ್ ಪ್ರಫುಲ್ಲರವರು ಮೈಸೂರನ್ನು ಬಿಟ್ಟು ತೆರಳುವಾಗ್ಗೆ ಬ್ರಾಹ್ಮಣೇತರರು ಸರ್ಕಾರಿಯ ಉದ್ಯೋಗವನ್ನು ಹೊಂದುವುದರಲ್ಲಿ ಬ್ರಾಹ್ಮಣರೇಕೆ ಅಸೂಯೆಪಡಬೇಕು? ಸರ್ಕಾರಿಯ ಉದ್ಯೋಗವು ತಮಗೆ ಮಾತ್ರ ಗುತ್ತಿಗೆಯಾಗಿರಬೇಕೆಂದು ಬ್ರಾಹ್ಮಣರು ಅಪೇಕ್ಷಿಸುವುದೇಕೆ?" ಎಂದು ಹೇಳಿರುವರು. ಈ ಬುದ್ಧಿವಾದಗಳನ್ನು ಅನುಸರಿಸಿಯಾದರೂ ನಮ್ಮ ಬ್ರಾಹ್ಮಣಸ್ನೇಹಿತರುಗಳು ಇತಃಪರ ಹೋರಾಡದೆ ಒಂದಾನೊಂದುಕಾಲದಲ್ಲಿ ತಮ್ಮ ಗೌರವಪ್ರತಿಷ್ಠೆಗಳಿಗೆ ಹೇತುವಾಗಿದ್ದಿತೆಂದು ಹೇಳಿಕೊಳ್ಳುವ ಆ ಮಹಾಘನವಾದ ತಾಳ್ಮೆಯನ್ನು ಅನುಷ್ಠಿಸುವವರಾಗಲಿ.

ರೆವಿನ್ಯೂ ಪ್ರೊಬೇಷನರುಗಳು.

ರೆವಿನ್ಯೂ ಪ್ರೊಬೇಷನರಿ ಉದ್ಯೋಗಗಳನ್ನು ಅಪೇಕ್ಷಿಸಿ ನಮ್ಮ ಸೀಮೆಯ ಎಲ್ಲ ವರ್ಗದ ಗ್ರಾಜ್ಯುಯೇಟುಗಳಲ್ಲಿ ಕೆಲರು ಉಮೇದುವಾರರಾಗಿದ್ದರು. ಇವರುಗಳಲ್ಲಿ ಅರ್ಹರಾದ ಆರು ಜನರನ್ನು ಆರಿಸಲು ಸರ್ಕಾರದವರಿಂದೇರ್ಪಡಿಸಲ್ಪಟ್ಟಿದ್ದ ಕಮಿಟಿಯವರ ಅಭಿಪ್ರಾಯದಂತೆ ಮ|| ಗಳಾದ (1) ಕೆ. ಪಿ. ರಾಮನಾಥಯ್ಯ, ಎಂ.ಎ. (2) ಬಿ. ರಾಚಪ್ಪ, ಬಿ.ಎ. (3) ಕೆ. ತಿಪ್ಪೆರುದ್ರಯ್ಯ, ಬಿ.ಎ. (4) ಜಾರ್ಜ್ ಮೆಥ್ಯೂ, ಬಿ.ಎಸ್‌ಸಿ. (5) ಎಸ್. ಕಲೀಲ್, ಬಿ.ಎ., ಬಿ.ಎಲ್. (6) ಎಲ್. ಮುನಿಸ್ವಾಮಿ, ಬಿ.ಎ. ಇವರುಗಳನ್ನು ರೆವಿನ್ಯೂ ಪ್ರೊಬೇಷನರುಗಳನ್ನಾಗಿ ನಿಯಮಿಸಿ ಬರುವ ಜನವರಿ ತಾ|| 1 ರಿಂದ ಎರಡುವರ್ಷಗಳ ಕಾಲದವರೆಗೆ ತಿಂಗಳೊಂದಕ್ಕೆ 80 ರೂ. ಸಂಬಳದಮೇಲೆ ಅಮಲ್ದಾರಿ ಅಥವಾ ಡೆಪ್ಯುಟಿ ಅಮಲ್ದಾರಿ ಉದ್ಯೋಗ ನಿರ್ವಾಹಕ್ಕೆ ಅವಶ್ಯಕವಾದ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಬೇಕೆಂದೂ, ಅನಂತರ ಅಮಲ್ದಾರಿ ಅಥವಾ ಡೆ|| ಅಮಲ್ದಾರಿ ಉದ್ಯೋಗವು ಬಿಡುವಾದಂತೆ ಕೊಡಲ್ಪಡುವುದೆಂದೂ ಸರ್ಕಾರದಪ್ಪಣೆಯಾಗಿದೆ. ಈ ರೆವಿನ್ಯೂ ಪ್ರೊಬೇಷನರುಗಳಲ್ಲದೆ, ಮ|| ಗಳಾದ ಯು. ಕೆ. ಸೋಮಪ್ಪ, ಬಿ. ಎ., ಮತ್ತು ಆರ್. ಮುತ್ತೋಜಿರಾವ್ ಸಿಂಧ್ಯಾ, ಬಿ.ಎ. ಈ ಉಭಯರು ಪೊಲೀಸು ಪ್ರೊಬೇಷನರುಗಳಾಗಿ ನಿಯಮಿಸಲ್ಪಟ್ಟು ಬರುವ ಜನವರಿ ತಾ|| 1 ರಿಂದ ಎರಡು ವರ್ಷಕಾಲ ತಿಂಗಳೊಂದಕ್ಕೆ 80 ರೂ. ಸಂಬಳದಮೇಲೆ ಕಾರ್ಯಾನುಭವ ಮಾಡಿಕೊಳ್ಳುತ್ತ ಪೊಲೀಸು ಶಾಖೆಗೆ ಅವಶ್ಯಕವಾದ ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ ಉದ್ಯೋಗದಲ್ಲಿ ಸ್ಥಿರಗೊಳಿಸಲ್ಪಡುವರೆಂದೂ ಸರ್ಕಾರದಪ್ಪಣೆಯಾಗಿರುವುದು. ಈ ಪ್ರೊಬೇಷನರುಗಳ ನಿಯಾಮಕವು ಈ ವೇಳೆ ತಕ್ಕಮಟ್ಟಿಗೆ ಸಮರ್ಪಕವಾಗಿರುತ್ತದೆ. ಮೇಲ್ಕಂಡ 8 ಜನರಲ್ಲಿ ವೀರಶೈವರಾದ ಮ|| ಕೆ. ತಿಪ್ಪೆರುದ್ರಯ್ಯನವರು ಕಳೆದವರ್ಷ ಬಿ. ಎ. ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದು ಎಂ. ಎ. ಪರೀಕ್ಷೆಗೆ ವ್ಯಾಸಂಗಮಾಡುತ್ತಿದ್ದರು ಮತ್ತು ಮ|| ಯು. ಎಸ್. ಕಾಳಪ್ಪನವರು ಸರ್ ಕೆ. ಪಿ. ಪುಟ್ಟಣ್ಣಸೆಟ್ಟರ ಅಳಿಯಂದರಾದ ಬೆಂಗಳೂರು ದಂಡಿನ ಮ್ಯುನಿಸಿಪಲ್ ಕೌನ್ಸಿಲರೂ ದೊಡ್ಡ ಕಂಟ್ರಾಕ್ಟರೂ ಆದ ಮ|| ಯು. ಎಸ್. ಕಾಳಪ್ಪನವರ ಕುಮಾರರು. ಈ ವರ್ಧಿಷ್ಣುಗಳಾದ ವೀರಶೈವ ತರುಣರು ಈಗ ಲಭ್ಯವಾಗಿರುವ ಕೆಲಸದ ಅನುಭವವನ್ನು ಚೆನ್ನಾಗಿ ಮಾಡಿಕೊಂಡು ಕ್ಲುಪ್ತವಾದ ಅವಧಿಯೊಳಗೆ ನಿಯತವಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅಮಲ್ದಾರಿ ಉದ್ಯೋಗವನ್ನು ಪಡೆದು ನಿಸ್ಪೃಹತೆಯಿಂದಲೂ ನಿಷ್ಪಕ್ಷಪಾತತೆಯಿಂದಲೂ ದಕ್ಷತೆಯಿಂದಲೂ ಕಾರ್ಯನಿರ್ವಾಹಮಾಡಿ ಪ್ರಭುತ್ವದವರ ಮೆಚ್ಚಿಗೆಗೂ ಜನಾನುರಾಗಕ್ಕೂ ಪಾತ್ರರಾಗಿ ಇತೋಪ್ಯತಿಶಯವಾದ ಅಭಿವೃದ್ಧಿಯನ್ನು ಹೊಂದಿ ಸಮಾಜಕ್ಕೆ ಗೌರವವನ್ನುಂಟುಮಾಡುವವರಾಗಲೆಂದು ಕೋರುತ್ತೇವೆ.

ರಾಷ್ಟ್ರೀಯಮಹಾಸಭೆ.

ನಲವತ್ತೊಂದನೆಯ ರಾಷ್ಟ್ರೀಯಮಹಾಸಭಾಧಿವೇಶನವು ಅಸ್ಸಾಂಪ್ರಾಂತದಲ್ಲಿ ಬ್ರಹ್ಮಪುತ್ರಾನದೀತೀರದಲ್ಲಿರುವ ಗೌಹತಿಪುರ ಸಮೀಪದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟಿರುವ ಪಾಂಡುನಗರದಲ್ಲಿ ನಾಳೆಯದಿವಸ ಮದ್ರಾಸಿನ ಮ|| ಎಸ್. ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗುವುದು. ಸ್ವದೇಶೀ ವಸ್ತುಪ್ರದರ್ಶನವು ಈ ದಿವಸ ಮಹಾತ್ಮರಿಂದ ಆರಂಭಿಸಲ್ಪಡುವುದು. ಮಹಾತ್ಮರು, ಶ್ರೀನಿವಾಸಯ್ಯಂಗಾರರು, ಪಂಡಿತ ಮೋತಿಲಾಲ ನೆಹರುಯವರು, ಪಂಡಿತ ಮದನಮೋಹನ ಮಾಲವಿಯಾರವರು, ಸರೋಜಿನಿದೇವಿಯವರು ಮೊದಲಾದ ದೇಶಸೇವಾಧುರೀಣರಲ್ಲದೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಕೂಲಿಕಾರರ ಪಕ್ಷದ ಸಭಾಸದರಾಗಿರುವ ಲಾರೆನ್ಸ್‌ರವರು, ಸ್ಕ್ವಾಯರ್‌ರವರು ಅಮೇರಿಕೆಯ ಪತ್ರಸಂಪಾದಕರಾದ ಸ್ಟಾನ್ಲೆರವರು ಮತ್ತು ಮಹಾತ್ಮರ ಶಿಷ್ಯರಾಗಿರುವ ಸ್ಲೇಡ್ ಮತ್ತು ಲೀಸ್ಟರ್‌ರವರು ಬಂದಿರುವರು. ಇವರಲ್ಲದೆ ಎಲ್ಲ ರಾಜಕೀಯಪಕ್ಷದ ಪ್ರತಿನಿಧಿಗಳು ಸುಮಾರು 2000 ದವರೆಗೂ ಪ್ರೇಕ್ಷಕರು 1000 ದವರೆಗೂ ಬರುವುದಾಗಿ ನಿರೀಕ್ಷಿಸಲ್ಪಟ್ಟಿದ್ದರು. ಮಹಾಸಭಾ ಮಂಟಪವೂ, ಸಭಿಕರ ಬಿಡಾರಗಳೂ ಖಾದಿಯಿಂದಲೇ ನಿರ್ಮಿತವಾಗಿರುವುವು. ಹಿಮವತ್ಪರ್ವತದ ನೆರೆಯಲ್ಲಿ ಗುಡ್ಡಗಳಿಂದ ಪರಿವೃತವಾಗಿ, ಬ್ರಹ್ಮಪುತ್ರಾನದೀ ಜಲದಿಂದ ಪವಿತ್ರವಾಗಿ ಸ್ವಭಾವದ ಫಲವೃಕ್ಷಗಳ ಸೊಬಗಿನಿಂದ ಕೂಡಿರುವ ಅಸ್ಸಾಂ ಭಾಗವು ರಾಷ್ಟ್ರಸಭಾಯಾತ್ರಿಕರಿಗೆ ಕಣ್ಣುಹಬ್ಬವನ್ನುಂಟುಮಾಡದಿರದು. ಚಳಿಯ ಬಾಧೆಯು ಅತ್ಯಧಿಕವಾಗಿರುವುದಾದರೂ ಪ್ರಕೃತಿಯ ರಮಣೀಯತೆಯಿಂದ ಜನರ ಕ್ಲೇಶವೆಲ್ಲವೂ ನಿವಾರಿತವಾಗುವುದು. ಪಾಂಡವರು ಕೆಲದಿನ ಈ ಸ್ಥಳದಲ್ಲಿ ವಾಸವಾಗಿದ್ದರೆಂಬ ಪ್ರತೀತಿಯಮೇಲೆ ರಾಷ್ಟ್ರಸಭಾ ಪ್ರದೇಶಕ್ಕೆ ಪಾಂಡುನಗರವೆಂಬ ನಾಮಕರಣಮಾಡಲ್ಪಟ್ಟಿರುವುದು. ನಾನಾಪಕ್ಷಗಳ ಏಕೀಕರಣ ಪ್ರಯತ್ನಕ್ಕಾಗಿ ಎಲ್ಲ ಪಕ್ಷಗಳ ಮುಖಂಡರೂ ಮಹಾಸಭೆಯಲ್ಲಿ ಸಮ್ಮಿಳಿತರಾಗಿರುವರು. ಆದರೆ ಈ ಪ್ರಯತ್ನವು ಎಷ್ಟರಮಟ್ಟಿಗೆ ಸಫಲವಾಗುವುದೋ ನಿರೀಕ್ಷಣೀಯವಾಗಿದೆ.

ಸ್ವದೇಶಿಯ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಮಹಾಮಾತೃಶ್ರೀಯವರ ಸಮೇತ ಈ ತಾ|| 22ರ ಬೆಳಿಗ್ಗೆ ಬೆಂಗಳೂರಿಗೆ ದಯೆಮಾಡಿಸಿದರು.

ಮೈಸೂರು ಬ್ಯಾಂಕು ಕ್ರಿಸ್ತಮಸ್ ಹಬ್ಬಕ್ಕಾಗಿ ಈ ತಾ|| 25, 27, 28, 30 ಮತ್ತು 31 ರಲ್ಲೂ ಬರುವ ಜನವರಿ ತಾ|| 1 ರಲ್ಲೂ ಮುಚ್ಚಲ್ಪಡುವುದು.

ಮೈಸೂರು ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಡಾ|| ವ್ರಜೇಂದ್ರನಾಥಶೀಲರವರಿಗೆ ಕ್ರಿಸ್ತಮಸ್ ಹಬ್ಬದೊಡನೆ 1 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆ.

ರಾಜಧಾನಿಯ ಹಾರ್ಡ್‌ವಿಕ್ ಕಾಲೇಜಿನಬಳಿ ಇರುವ ಗತಿಸಿದ ದರ್ಬಾರ್ ಬಕ್ಷಿ ಎಚ್. ಲಿಂಗರಾಜಅರಸಿನವರ ಮನೆಗೆ ಆಚೆಮೊನ್ನೆರಾತ್ರಿ ಯಾರೋ ಕಳ್ಳರು ನುಗ್ಗಿ 15-20 ಸಾವಿರ ರೂ. ಬೆಲೆಯ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋಗಿರುವುದಾಗಿಯೂ ಪೊಲೀಸರು ಕಳ್ಳರನ್ನು ತಡಕುತ್ತಿರುವುದಾಗಿಯೂ ವರ್ತಮಾನವಿದೆ.

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ರೆಸಿಡೆಂಟರವರ ಪತ್ನಿಯವರಿಂದ ಆರಂಭಿಸಲ್ಪಟ್ಟ ಕಲಾಕೌಶಲ್ಯ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನಾಲಯವು ಬಹಳ ಸಮರ್ಪಕವಾಗಿ ನಡೆದು ಇಂದಿಗೆ ಮುಕ್ತಾಯವಾಗುವುದು. ಪ್ರೇಕ್ಷಕರ ಸಂಖ್ಯೆಯು ವಿಶೇಷವಾಗಿದ್ದಿತು ಮತ್ತು ಅವರ ವಿಹಾರಾರ್ಥವಾಗಿ ಅರಮನೆಯ ಕಾನ್ಸರ್ಟ್ ಬ್ಯಾಂಡು ರಾಜಧಾನಿಯಿಂದ ಕಳುಹಲ್ಪಟ್ಟಿದ್ದಿತು.

ರಾಜಧಾನಿಯ ಪ್ರಾಣಿಪ್ರದರ್ಶನಾಲಯಕ್ಕೆ ಹೊಸದಾಗಿ ಚಮರಿಮೃಗಗಳು ತರಲ್ಪಟ್ಟಿರುತ್ತವೆ. ಇವುಗಳ ಬೆಲೆ ಒಂದೊಂದಕ್ಕೆ 80 ರೂ. ಎಂತಲೂ ಇವುಗಳ ವಾಸಸ್ಥಳಗಳಿಂದಿಲ್ಲಿಗೆ ಸಾಗಿಸುವ ವೆಚ್ಚವು ಸೇರಿ 1000 ರೂ. ವರೆಗೆ ಮುಟ್ಟಿರುವುದೆಂತಲೂ ತಿಳಿಯಬರುತ್ತದೆ. ಈ ಮೃಗಗಳು ಟಿಬೆಟ್ಟು ಮತ್ತು ಹಿಮಾಲಯ ಪರ್ವತದಲ್ಲಿ ವಾಸಿಸುವುವಾದುದರಿಂದ ಪ್ರಾಣಿಪ್ರದರ್ಶನಾಲಯದ ಹಿಂಭಾಗದಲ್ಲಿ ಅಂದರೆ ಡ್ಯಾಲಿ ಅವೆನ್ಯೂರೋಡು ಪಕ್ಕದಲ್ಲಿರುವ ಮರಗಳ ನೆಳಲಿನಲ್ಲಿ ಬಿಡಲ್ಪಟ್ಟಿರುವುವಾದರೂ ಇವುಗಳಲ್ಲೊಂದು ಇಲ್ಲಿಯ ಉಷ್ಣವನ್ನು ತಡೆಯಲಾರದೆ ಅಸ್ವಸ್ಥವಾಗಿದ್ದು 4 ದಿವಸಗಳ ಹಿಂದೆ ಸತ್ತುಹೋಯಿತು. ಈ ಮೃಗಗಳ ಮೈಯೆಲ್ಲಾ ಕೂದಲುಮಯವಾಗಿರುವುದಲ್ಲದೆ ಕೂದಲು ರೇಷ್ಮೆಯಂತೆ ಮೃದುವಾಗಿಯೂ ನುಣುಪಾಗಿಯೂ ಇರುವುದು.

ಶಿವಮೊಗ್ಗ ಡಿ|| ಪೊಲೀಸ್ ಸೂಪರಿಂಟೆಂಡೆಂಟರಾಗಿದ್ದು ಗತಿಸಿದ ಮ|| ಬಿ. ಅಬ್ದುಲ್‌ಗನ್ನಿಯವರ ಬದಲು ಚೆನ್ನಪಟ್ಟಣದ ಅ|| ಪೊ|| ಸೂ|| ಮಿ|| ಸಿ. ಎವರಾರ್ಡ್‌ರವರು ಶಿವಮೊಗ್ಗೆಯ ಆಕ್ಟಿಂಗ್ ಡಿ|| ಪೊ|| ಸೂಪರಿಂಟೆಂಡೆಂಟರಾಗಿಯೂ, ಯಡತೊರೆ ತಾ|| ಪೊಲೀಸ್ ಇನ್ಸ್‌ಪೆಕ್ಟರ್ ಮ|| ಎಚ್. ಸಿದ್ಧರಾಜಅರಸಿನವರು ಚೆನ್ನಪಟ್ಟಣದ ಆಕ್ಟಿಂಗ್ ಅ|| ಪೊ|| ಸೂಪರಿಂಟೆಂಡೆಂಟರಾಗಿಯೂ, ಬೆಂಗಳೂರು ಡಿ|| ಪೊ|| ಸೂಪರಿಂಟೆಂಡೆಂಟ್ ಮ|| ಜಿ. ಶಾಂತವೀರಪ್ಪ, ಬಿ.ಎ., ರವರು ಉದ್ಯೋಗದಿಂದ ನಿವೃತ್ತರಾಗುವ ಮ|| ಆರ್. ಶ್ಯಾಮರಾಯರ ಬದಲು ಪೊ|| ಇ|| ಜನರಲ್‌ರವರ ಆಕ್ಟಿಂಗ್ ಅಸಿಸ್ಟೆಂಟರಾಗಿಯೂ ರಾಜಧಾನಿಯ ಅ|| ಪೊ|| ಸೂ|| ಮಿ|| ಶಿರಾಜುದ್ದೀನ್ ಮಹಮ್ಮದ್‌ರವರು ಬೆಂಗಳೂರು ಡಿ|| ಆಕ್ಟಿಂಗ್ ಸೂಪರಿಂಟೆಂಡೆಂಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ವೀರಶೈವ ಅನಾಥಾಲಯದ ವಾರ್ಷಿಕೋತ್ಸವವು ಕಳೆದ 12 ನೇ ಭಾನುವಾರ ಡಾ|| ಟಿ. ಎಸ್. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಆಗ್ಗೆ ಓದಲ್ಪಟ್ಟ ಆಲಯದ ವರದಿಯೂ ಅಧ್ಯಕ್ಷರಿಗೊಪ್ಪಿಸಲ್ಪಟ್ಟ ಅಭಿನಂದನಪತ್ರಿಕೆಯೂ ಬೇರೊಂದೆಡೆಯಲ್ಲಿ ಮುದ್ರಿತವಾಗಿರುತ್ತವೆ. ಈ ಅನಾಥಾಲಯವು 1922 ರಲ್ಲಿ ಪ್ರಾರಂಭವಾದಾಗ್ಗೆ ಮೂವರು ವಿದ್ಯಾರ್ಥಿಗಳನ್ನು ಪೋಷಿಸುತ್ತಿದ್ದುದು ಈಗ ವೀರಮ್ಮನವರ ದಾನದ್ರವ್ಯದ ವೃದ್ಧ್ಯಂಶದಿಂದಲೂ ಧರ್ಮಾತ್ಮರ ಚಂದಾದ್ರವ್ಯ ಸಹಾಯದಿಂದಲೂ 35 ವಿದ್ಯಾರ್ಥಿಗಳನ್ನು ಪೋಷಿಸುತ್ತಿರುವುದು ಸಂತೋಷಪ್ರದವಾಗಿರುವುದಲ್ಲದೆ ಇದರ ಕಾರ್ಯನಿರ್ವಾಹಕಮಂಡಳಿಯವರ ಪ್ರಯತ್ನವಿಶೇಷವು ಪ್ರಶಂಸನೀಯವಾಗಿದೆ. ಮತ್ತು ಈ ಅನಾಥಾಲಯಕ್ಕೆ ಪ್ರತಿಯೊಬ್ಬನೂ ಶಕ್ತಿವಂಚನೆಯಿಲ್ಲದೆ ದ್ರವ್ಯಸಹಾಯಮಾಡುವುದು ಧರ್ಮವಾಗಿದೆ.

ರಾಜಧಾನಿಯ ಆಕ್ಟಿಂಗ್ ಅಡಿಷನಲ್ ಮುನಸೀಫರಾಗಿದ್ದ ಮ|| ಜೆ. ರುದ್ರಪ್ಪ, ಎಂ.ಎ., ಎಲ್‌ಎಲ್.ಬಿ., ರವರ ಉದ್ಯೋಗದವಧಿಯು ಈ ತಾ|| 22 ಕ್ಕೆ ಮುಗಿದುದರಿಂದ ಫಸ್ಟ್ ಮುನಸೀಫರಿಗೆ ಛಾರ್ಜನ್ನು ಕೊಟ್ಟು ಸ್ವಸ್ಥಳಕ್ಕೆ ಹೊರಟರು. ಶಿವಮೊಗ್ಗೆಯ ಮುನಸೀಫರು ಒಂದು ತಿಂಗಳು ರಜವನ್ನು ಪಡೆದುಕೊಂಡಿರುವುದರಿಂದ ಮ|| ರುದ್ರಪ್ಪನವರು ಅಲ್ಲಿಯ ಆಕ್ಟಿಂಗ್ ಮುನಸೀಫರಾಗಿ ನಿಯಮಿಸಲ್ಪಡುವ ಸಂಭವವಿರುತ್ತದೆ. ಇವರ ಜೋಡಿಗ್ರಾಮವಾದ ಮಾದಗೊಂಡನಹಳ್ಳಿಯ ಒಬ್ಬ ರೈತನು ದುಷ್ಟಜನರ ಪ್ರೇರಣೆಯಿಂದ ಮ|| ರುದ್ರಪ್ಪನವರ ಮೇಲೂ ಅವರ ನೆಂಟರಿಷ್ಟರಮೇಲೂ ತುಮಕೂರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ದೊಂಬಿಕಲಹದ ಕೇಸು ತಿರಸ್ಕೃತವಾಯಿತೆಂದು ತಿಳಿಸಲು ಸಂತೋಷವಾಗುತ್ತದೆ. ಹೀಗೆ ಗಣ್ಯರಾದ ದೊಡ್ಡ ಮನುಷ್ಯರುಗಳ ಮೇಲೆ ತರಲ್ಪಡುವ ಸುಳ್ಳು ಮೊಕದ್ದಮೆಗಳನ್ನು ಹಿಡಿದು ಕಾರ್ಯಭಾಗವನ್ನು ನಡೆಯಿಸುವ ಪೊಲೀಸು ಅಧಿಕಾರಿಗಳ ನಡವಳಿಕೆಯು ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದವರ ಗಮನಕ್ಕೆ ತರಲ್ಪಟ್ಟು ಖಂಡಿಸಲ್ಪಡತಕ್ಕದಾಗಿದೆ.

ಮದ್ರಾಸು ಪ್ರಾಂತದಲ್ಲಿ ವೀರಶೈವವಿದ್ಯಾರ್ಥಿಗಳಿಗೆ ಯಾವ ವಿಧವಾದ ಪ್ರೋತ್ಸಾಹವೂ ಇಲ್ಲದೆ ಬಹಳ ತೊಂದರೆಯಾಗಿದ್ದುದರಮೇಲೆ ಬಳ್ಳಾರಿಯ ಮ|| ಗಳಾದ ತೋಗರಿ ವೀರಪ್ಪನವರು, ಹೀರದ ಕರಿಬಸಪ್ಪನವರು ಮೊದಲಾದ ಪ್ರಮುಖ ಮತಾಭಿಮಾನಿಗಳು ಬಳ್ಳಾರಿಯಲ್ಲಿ ಒಂದು ವೀರಶೈವವಿದ್ಯಾವರ್ಧಕ ಫಂಡನ್ನು ಏರ್ಪಡಿಸಿ 76,000 ರೂ. ವರೆಗೆ ಧನವನ್ನು ಶೇಖರಿಸಿ ಅದರ ವೃದ್ಧ್ಯಂಶದಿಂದ ಒಂದು ಆಂಗ್ಲ ಸಂಸ್ಕೃತಪಾಠಶಾಲೆ ನಡೆಸುತ್ತಿರುವರಲ್ಲದೆ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುತ್ತಿರುವರು. ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗುತ್ತಿರುವುದರಿಂದ ಎಲ್ಲರಿಗೂ ವೇತನವನ್ನು ಕೊಡಲು ಧನಸಹಾಯ ಕಡಿಮೆಯಾಗಿರುವಪ್ರಯುಕ್ತ ಒಂದು ಲಾಟರಿಯೇರ್ಪಡಿಸಲ್ಪಟ್ಟಿರುವುದು. ತತ್ಸಂಬಂಧವಾದ ಪ್ರಕಟನಪತ್ರಿಕೆಯು ಮತ್ತೊಂದುಕಡೆ ಮುದ್ರಿಸಲ್ಪಟ್ಟಿದೆ. ಈ ಲಾಟರಿಯಿಂದ ಎರಡುವಿಧವಾದ ಪ್ರಯೋಜನವಿರುವುದರಿಂದ ವಿದ್ಯಾಭಿಮಾನಶಾಲಿಗಳೆಲ್ಲರೂ ಲಾಟರಿ ಟಿಕೆಟ್ಟುಗಳನ್ನು ಕೊಂಡು ತಮ್ಮದೃಷ್ಟಪರೀಕ್ಷೆ ಮಾಡುವುದಲ್ಲದೆ ಬಡವಿದ್ಯಾರ್ಥಿಗಳಿಗೆ ಸಹಾಯಮಾಡುವವರಾಗಲೆಂದು ಕೋರುತ್ತೇವೆ.

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡುಸಂಘ.

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿಗೆ

ಮೈಸೂರು ವೀರಶೈವವಿದ್ಯಾಭಿವೃದ್ಧಿಫಂಡು ಸಂಘದಿಂದ ಒಬ್ಬರನ್ನು ಮೆಂಬರನ್ನಾಗಿ ಚುನಾವಣೆಮಾಡಿ ಕಳುಹಿಸಿಕೊಡುವ ಹಕ್ಕನ್ನು ಘನಸರ್ಕಾರದವರು ದಯೆಪಾಲಿಸಿ ಸದರಿ ಚುನಾವಣೆಯು ತಾ|| 31-12-1926 ರಲ್ಲಿ ನಡೆಯಲು ಗೊತ್ತುಮಾಡಲ್ಪಟ್ಟಿದ್ದುದು, ಸಂಘದವರ ಪ್ರಾರ್ಥನೆಯಮೇರೆಗೆ ತಾ|| 6-1-1927 ನೇ ಗುರುವಾರ ಮಧ್ಯಾಹ್ನ 12 ರಿಂದ ಸಾಯಂಕಾಲ 5 ಘಂಟೆಯವರೆಗೆ ಬೆಂಗಳೂರುಸಿಟಿ ಶೇಷಾದ್ರಿರೋಡಿನಲ್ಲಿರುವ ಶ್ರೀಜಗದ್ಗುರುಜಯದೇವಮುರುಘರಾಜೇಂದ್ರ ವೀರಶೈವ ಹಾಸ್ಟಲ್ ಕಟ್ಟಡದಲ್ಲಿ ನಡೆಯುವಂತೆ ಬೆಂಗಳೂರು ಡಿ|| ಡೆಪ್ಯುಟಿಕಮೀಷನರವರು ನಿರ್ಧರಿಸಿರುತ್ತಾರೆ. ಈ ಚುನಾವಣೆಗೆ ಈ ಕೆಳಗೆ ಕಂಡ ಇಬ್ಬರು ದೊಡ್ಡಮನುಷ್ಯರುಗಳು ಉಮೇದುವಾರರಾಗಿ ನಿಂತಿರುವರು.

1. ಮ|| ಟಿ. ರಾಚಪ್ಪನವರು (ಸಿಂಹ).
2. ಮ|| ಎಂ. ನಾಗಪ್ಪನವರು (ಆನೆ).

ಜಿ. ಪರಮಶಿವಯ್ಯ,
ಸೆಕ್ರೆಟರಿ, ಮೈಸೂರು ವೀರಶೈವ
ವಿದ್ಯಾಭಿವೃದ್ಧಿ ಫಂಡುಸಂಘ.

ಬೆಂಗಳೂರು,
ತಾ|| 22-12-26.

ವರ್ತಮಾನಸಂಗ್ರಹ.

ಬಿಸಿಬಿಸಿಯಾದ ನೀರಿನಿಂದ, ಹಣೆಯ ಎರಡು ಪಾರ್ಶ್ವಗಳಿಗೂ ಶಾಖಕೊಟ್ಟಲ್ಲಿ ಅತ್ಯಧಿಕವಾದ ತಲೆನೋವು ಸಹ ಕೆಲ ಸಂದರ್ಭಗಳಲ್ಲಿ ವಾಸಿಯಾಗುತ್ತೆಂದು ಒಬ್ಬ ಪ್ರಸಿದ್ಧ ವೈದ್ಯರು ತಿಳಿಸುತ್ತಾರೆ.

ಕರಾಚಿಯಲ್ಲಿ ಮಾರ್ವಾಡಿಯವರು ವಾಸಿಸುವ ಬೀದಿಯಲ್ಲಿ ಹೊಸದಾಗಿ ಕಟ್ಟಲ್ಪಡುತ್ತಿದ್ದ ಎರಡು ಅಂತಸ್ತುಗಳ ಮನೆಯು ಬಿದ್ದುಹೋಗಿ ಕಲ್ಲುಕೆಲಸಮಾಡುತ್ತಿದ್ದವರಲ್ಲಿ ಐವರು ಸತ್ತುಹೋದರು ಮತ್ತೆ ಕೆಲವರು ಪೆಟ್ಟನ್ನು ತಿಂದು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು.

ಕಳೆದ ಘೋರಯುದ್ಧಕ್ಕಾಗಿ ಬ್ರಿಟಿಷ್ ಸರ್ಕಾರದವರು ಅಮೇರಿಕೆಯವರಲ್ಲಿ ಮಾಡಿಕೊಂಡಿರುವ ಭಾರಿಸಾಲದಲ್ಲಿ ಅವರು ಇದುವರೆಗೆ 212 ಕೋಟಿರೂಪಾಯಿಗಳನ್ನು ತೀರಿಸಿರುವರು. ಕಳೆದವಾರ ಪಾವತಿಮಾಡಿದ ಭಸ್ಮಾಹೆ ಕಂತು 26½ ಕೋಟಿ ರೂಪಾಯಿಗಳಾಗಿದ್ದಿತು.

ಪದಚ್ಯುತರಾದುದಲ್ಲದೆ ವಂಶಶೇಷವಿಲ್ಲದಂತೆ ಹತರಾದಂಥ ರಷ್ಯಾ ರಾಜಮನೆತನದವರಿಗೆ ಸೇರಿದ ಆಭರಣಗಳನ್ನೂ ಅವರು ಸಂಗ್ರಹಿಸಿದ್ದ ಅಪೂರ್ವ ವಸ್ತುಗಳನ್ನೂ ಈಗಿನ ಸೋವಿಯಟ್ ಸರ್ಕಾರದವರು ಕ್ಷಿಪ್ರದಲ್ಲಿಯೇ ಹರಾಜುಹಾಕುವವರಾಗಿದ್ದಾರೆ. ಇವುಗಳ ಬೆಲೆ ಸುಮಾರು 75 ಕೋಟಿ 75 ಲಕ್ಷ ರೂಪಾಯಿಗಳು ಬಾಳಬಹುದೆಂದು ಅಂದಾಜಾಗಿದೆ.

ಬರೋಡಾಸಂಸ್ಥಾನದ ದಿವಾನರಾದ ಸರ್ ಮನುಭಾಯಿ ಮೆಹತಾರವರು ಮೂರುತಿಂಗಳನಂತರ ಉದ್ಯೋಗದಿಂದ ನಿವೃತ್ತರಾಗುವರೆಂದೂ, ತರುವಾಯ ಮಿ॥ ಬಟ್ಲೇರಾರ್ ಫೀಲ್ಡ್ ರವರು ದಿವಾನರಾಗಿರಲೊಪ್ಪಿಕೊಂಡು ಅವರೆಗೆ ಮನುಭಾಯಿಯವರ ಸಹಾಯದಿಂದ ಸಂಸ್ಥಾನದಾಡಳಿತಾನುಭವವನ್ನು ಮಾಡಿಕೊಳ್ಳುವವರಾಗಿರುವರೆಂದೂ ಪ್ರಕಟವಾಗಿದೆ.

ಬರುವ ಜನವರಿ ತಾ॥ 5, 6 ಮತ್ತು 7 ರಲ್ಲಿ ಯೂವದ್ಭಾರತ ಮಹಿಳಾವಿದ್ಯಾಭ್ಯಾಸಮಹಾಸಭೆಯು ಪೂನಾಪಟ್ಟಣದ ಫರ್ಗೂಸನ್ ಕಾಲೇಜಿನಲ್ಲಿ ಬರೋಡಾ ಮಹಾರಾಣಿಯವರಿಂದ ಆರಂಭಿತವಾಗಿ ನಡೆಯುವುದು. ಡಾಕ್ಟರ್ ಬಜೆನ್ಸರವರ ಪತ್ನಿಯವರು ಈ ಮಹಾಸಭಾ ಕಾರ್ಯದರ್ಶಿಗಳಾಗಿರುವರು ಮತ್ತು 60 ಜನ ಸ್ತ್ರೀಯರು ಪ್ರತಿನಿಧಿಗಳಾಗಿ ಬರುವರಲ್ಲದೆ ಅನೇಕ ಸ್ತ್ರೀಯರು ಪ್ರೇಕ್ಷಕರಾಗಿ ಬರುವವರಾಗಿರುತ್ತಾರೆ.

ಅಸ್ಸಾಂಪ್ರಾಂತ್ಯಕ್ಕೆ ಸೇರಿದ ಗೌಹತಿಯಲ್ಲಿ ಈ ತಾ॥ 26 ನೇ ಭಾನುವಾರ ಆರಂಭಗೊಂಡು ನಡೆಯುವ ರಾಷ್ಟ್ರೀಯ ಮಹಾಸಭಾಧಿವೇಶನಕ್ಕೆ ಮಹಾತ್ಮ ಗಾಂಧಿಯವರು ಹೋಗುವರು. ಆಗ್ಗೆ ಅಲ್ಲಿಯ ಮ್ಯುನಿಸಿಪಾಲಿಟಿಯವರು ಅವರ ಸುಖಾಗಮನವನ್ನು ಬಯಸಿ ಒಂದು ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಲು ನಿರ್ಧರಿಸಿರುವರು. ಭರತಖಂಡದಲ್ಲಿ ನಿರ್ಮಿತವಾದ ವಸ್ತುಗಳ ಪ್ರದರ್ಶನಾಲಯದ ಆರಂಭೋತ್ಸವವು ಮಹಾತ್ಮರಿಂದ ನೆರವೇರಿಸಲ್ಪಡುವುದು.

ಬಾಲ್ಯವಿವಾಹವನ್ನು ನಿರೋಧಿಸುವ ಒಂದು ಶಾಸನವು ಬರೋಡಾ ಸಂಸ್ಥಾನದಲ್ಲಿ ಕಳೆದ ೨೦ ವರ್ಷಗಳಿಂದ ಜಾರಿಯಲ್ಲಿದ್ದರೂ, ಅದು ಅಷ್ಟು ತೃಪ್ತಿಕರವಾಗಿ ನಡೆಯುತ್ತಿರುವುದರಲ್ಲಿ ಅಲ್ಲಿನ ಗಾಯಕವಾಡ ಮಹಾರಾಜರವರಿಗೆ ನಂಬಿಕೆ ಸಾಲದೆ, ಈಗ ಒಂದು ಕಮಿಷನನ್ನು ಏರ್ಪಡಿಸಿ, ಎಲ್ಲಾ ಪಂಗಡಗಳ ಮುಖಂಡರ ಅಭಿಪ್ರಾಯವನ್ನು ಸಂಗ್ರಹಿಸಿ, ಮುಂದೆ ಯಾವ ಬದಲಾವಣೆ ಮಾಡಬೇಕೆಂಬುದನ್ನು ಸೂಚಿಸಬೇಕೆಂದು ಅಪ್ಪಣೆಮಾಡಿರುವರು.

ಪಶ್ಚಿಮತೀರದಲ್ಲಿ ಇಗತ್ಪುರಿರೈಲ್ವೆಸ್ಟೇಷನ್ನಿನಿಂದ 24 ಮೈಲಿ ದೂರದಲ್ಲಿರುವ ಭಂಡಾರಧರವೆಂಬಲ್ಲಿ ವಿಲ್ಸನ್‌ಡ್ಯಾಂ ಎಂಬ ಹೆಸರಿನಿಂದ ಒಂದು ದೊಡ್ಡ ಜಲಾಶಯವು 1909 ರಲ್ಲಿ ಕಟ್ಟಲ್ಪಡಲುಪಕ್ರಮಿಸಲ್ಪಟ್ಟು ಕೆಲದಿನಗಳ ಕೆಳಗೆ ಬೊಂಬಾಯಿ ಗೌರ್ನರವರಿಂದ ಅದರ ಆರಂಭೋತ್ಸವವು ನೆರವೇರಿಸಲ್ಪಟ್ಟಿತು. ಈ ಜಲಾಶಯನಿರ್ಮಾಣಕ್ಕೆ 84 ಲಕ್ಷ ರೂ. ವೆಚ್ಚವಾಗಿರುವುದಲ್ಲದೆ ಇದರ ಕಾಲುವೆಗಳಿಗಾಗಿರುವುದೂ ಸೇರಿ ಒಟ್ಟು 1½ ಕೋಟಿ ರೂ. ವೆಚ್ಚವಾಗಿರುವುದು.

ಕತ್ತಲಿನಲ್ಲಿ ದೂರದಲ್ಲಿರುವ ಪದಾರ್ಥಗಳನ್ನು ಪುರಸ್ಕಾರವಾಗಿ ತೋರಿಸಬಲ್ಲ ಒಂದುವಿಧವಾದ ಕಿರಣಗಳನ್ನು ಜಾರ್ಜ್ ಬೇರ್ಡ್ ಎಂಬವರು ಕಂಡುಹಿಡಿದಿರುವರಂತೆ! ಕಿರಣಗಳು ಕಣ್ಣಿಗೆ ಕಾಣದಿದ್ದರೂ, ಆ ಕಿರಣರಾಶಿಯು ಯಾರಮೇಲೆ ಬೀಳುವುದೋ ಅವರು ತಮಗೆ ಸಹ ತಿಳಿಯದಂತೆ ನೋಡುವವರಿಗೆ ಕಂಡುಬರುವರಂತೆ! ಸಮುದ್ರಪ್ರಯಾಣಕಾಲದಲ್ಲಿ ಮಂಜು ಮುಸುಕಿದ್ದಾಗ್ಯೂ ಈ ಕಿರಣಗಳ ಸಹಾಯದಿಂದ ಇದಿರಿಗೆ ಬರುವ ಅಡಚಣೆಗಳನ್ನು ಮೊದಲೇ ಕಂಡು ಸುರಕ್ಷಿತವಾಗಿ ಹೋಗಬಹುದಂತೆ!

ಬಾಲ್ಕನ್ ದೇಶಸ್ಥರು ದೀರ್ಘಜೀವಿಗಳೆಂದೂ, ಇದಕ್ಕೆ ಅವರುಗಳು ಮಜ್ಜಿಗೆಯನ್ನು ಯಥೇಚ್ಛವಾಗಿ ಉಪಯೋಗಿಸುತ್ತಿರುವುದೇ ಮುಖ್ಯ ಕಾರಣವೆಂದೂ ತಿಳಿಯಬಂದಿದೆ. ಸಮುದ್ರಮಥನಕಾಲದಲ್ಲಿ ಹುಟ್ಟಿದ ವಿಷವನ್ನು ಪರಮೇಶ್ವರನು ಪಾನಮಾಡಿದಾಗ್ಗೆ ಮಜ್ಜಿಗೆಯನ್ನು ಸೇವಿಸಿದ್ದಲ್ಲಿ ಆ ವಿಷವು ಕಂಠದಲ್ಲಿ ನಿಲ್ಲದೆ ಪರಿಹಾರವಾಗುತ್ತಿದ್ದಿತೆಂದು ವೈದ್ಯರತ್ನಾಕರ ಗ್ರಂಥದಲ್ಲಿ ಹೇಳಲ್ಪಟ್ಟಿರುವುದರಿಂದ ಈ ಮಜ್ಜಿಗೆಯ ಮಹತ್ತ್ವವೆಷ್ಟೆಂಬುದೂ ಈ ವಿಚಾರವು ಹೊಸದೇನೂ ಅಲ್ಲವೆಂಬುದೂ ತಾನಾಗಿಯೇ ವ್ಯಕ್ತವಾಗುತ್ತದೆ.

ಬರೋಡಾ ಮಹಾರಾಜರವರು ತಮ್ಮ ಉತ್ತರರಾಜ್ಯಾಧಿಕಾರಿಯಾದ ಮೊಮ್ಮಗನಿಗೆ ಮುಂದಣ ಸಂವತ್ಸರದಲ್ಲಿ ವಿವಾಹವನ್ನು ಮಾಡಲು ನಿಶ್ಚಯಿಸಿ ತಮ್ಮ ಮಹರಾಟಾ ಕುಲದವರಲ್ಲೇ ಅಲ್ಲದೆ ರಜಪುತ್ರಕುಲದಲ್ಲೂ ಒಳ್ಳೆಯ ರೂಪುಲಾವಣ್ಯಾದಿ ಸದ್ಗುಣಸಂಪನ್ನೆಯೂ ಸದ್ವಂಶೀಯೆಯೂ ಆದ ಕನ್ಯೆಯನ್ನು ಗೊತ್ತುಮಾಡುವುದಕ್ಕಾಗಿಯೂ ವಿವಾಹಮಹೋತ್ಸವವು ರಾಜಪದವಿಗೆ ತಕ್ಕಂತೆ ನಡೆಯಲು ಕಾರ್ಯಕ್ರಮವನ್ನು ನಿರ್ಧರಿಸುವುದಕ್ಕಾಗಿಯೂ ರಾಜಕುಟುಂಬದಲ್ಲೂ ಆಪ್ತೇಷ್ಟರಲ್ಲೂ ಕೆಲವರನ್ನು ಆರಿಸಿ ಕಮಿಟಿಯ ಮೆಂಬರುಗಳನ್ನಾಗಿ ಮಾಡಿರುವರು.

ಚಿಟಗಾಂಗಿನ ವಾಸಸ್ಥನಾದ ರಜನಿನಾಥನೆಂಬವನು ತನ್ನ ಹೆಂಡತಿಯನ್ನು ಕೆಲ ಮಹಮ್ಮದೀಯರು ಎತ್ತಿಕೊಂಡು ಹೋಗಿ ತಮ್ಮ ಮತಕ್ಕೆ ಸೇರಿಸಿಕೊಂಡರೆಂದು ಅವರ ಮೇಲೆ ಚಿಟಗಾಂಗಿನ ಡಿಸ್ಟ್ರಿಕ್ಟ್‌ಕೋರ್ಟಿನಲ್ಲಿ ದಾವಾ ಮಾಡಿದ್ದನು. ಅದರ ಮೇಲೆ ವಿಚಾರಣೆನಡೆಯುವ ಕಾಲದಲ್ಲಿ ಫಿರ್ಯಾದಿಯ ಹೆಂಡತಿಯು "ನಾನು ಆತ್ಮಸಂತೋಷದಿಂದ ಮಹಮ್ಮದೀಯಮತಕ್ಕೆ ಸೇರಿಕೊಂಡೆನು. ನನ್ನ ಗಂಡನು ನನ್ನಂತೆಯೇ ಮಹಮ್ಮದೀಯ ಮತವನ್ನವಲಂಬಿಸಿದಲ್ಲಿ ಅವನ ಕೂಡ ಬಾಳ್ವೆಮಾಡುತ್ತೇನೆ. ಅವನು ಒಪ್ಪದಿದ್ದಲ್ಲಿ ಮದುವೆಯ ಬಂಧನವನ್ನು ತಪ್ಪಿಸಿಕೊಡಬೇಕು" ಎಂದು ಹೇಳಿದಳು. ಮದುವೆಯು ಹಿಂದೂಧರ್ಮಶಾಸ್ತ್ರರೀತಿಯಾಗಿ ನಡೆದಿರುವುದರಿಂದ ಮಹಮ್ಮದೀಯಶಾಸ್ತ್ರವು ಈ ವಿವಾಹಬಂಧವಿಮೋಚನೆಗೆ ಅನ್ವಯಿಸುವುದಿಲ್ಲವೆಂದು ನ್ಯಾಯಾಧಿಪತಿಯು ತೀರ್ಮಾನಿಸಿ ಅಪರಾಧಿಗಳನ್ನು ದೋಷಮುಕ್ತರನ್ನಾಗಿ ಮಾಡಿದನು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಪತ್ರವ್ಯವಹಾರಕರಿಗೆ ಸೂಚನೆ.

ಯಾರ ಮನಃಕ್ಲೇಶಕ್ಕೂ ಅವಕಾಶವಿಲ್ಲದೆ ಸರ್ವಜನೋಪಯುಕ್ತವಾಗಿರುವ ವಿಷಯಗಳು ಅತ್ಯಂತ ಸಂಕ್ಷೇಪವಾಗಿ ಕಾಗದದ ಒಂದುಕಡೆ ಮಾತ್ರ ಬಹಳ ಸ್ಫುಟವಾಗಿ ಬರೆಯಲ್ಪಟ್ಟದ್ದವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂದು ಕಂಠೋಕ್ತವಾಗಿ ಎಚ್ಚರಿಸಿದ್ದರೂ ಲೇಖಕರು ಗಮನಿಸದೆ, ಸ್ವಾಮಿಗಳ ಮತ್ತು ದೇವರುಗಳ ಉತ್ಸವವನ್ನೂ ತಮಗೆ ಬೇಕಾದ ಜನರ ಗುಣವನ್ನೂ ಮನಸ್ವೀ ವರ್ಣಿಸಿ ಮಾರುಮಾರುದ್ದ ಲೇಖಗಳನ್ನು ಬರೆಯುತ್ತಿರುವರು. ಮತ್ತೆ ಕೆಲವರು ಸಮಾಜಗಳಲ್ಲಿ ಪರಸ್ಪರ ಐಕಮತ್ಯವನ್ನೂ ಸೌಹಾರ್ದವನ್ನೂ ಉಂಟುಮಾಡುವ ಲೇಖಗಳನ್ನು ಬರೆಯುವುದರ ಬದಲು ದೂಷಣೆಮಾಡಿ ವೈಶಮ್ಯವನ್ನು ವೃದ್ಧಿಗೊಳಿಸುವ ಲೇಖಗಳನ್ನು ಬರೆಯುತ್ತಿರುವರು. ಇದೂ ಅಲ್ಲದೆ ಕೆಲವರು ಸುಳ್ಳು ಹೆಸರುಗಳನ್ನು ಕೊಟ್ಟು ಬರೆಯುತ್ತಿರುವರು. ಇಂತಹ ಲೇಖಗಳನ್ನು ಪ್ರಕಟಿಸುವುದರಿಂದ ಜನರಿಗೆ ಹಿತವಾಗುವುದಕ್ಕೆ ಬದಲು ಮಹಾನರ್ಥವಾಗುವುದರಿಂದ ಇತಃಪರ ಆಯಾ ಪ್ರಾಂತಗಳಲ್ಲಿಯ ಸಾರ್ವಜನಿಕವಾದ ವಿಷಯಗಳು ಯಥಾರ್ಥವಾಗಿಯೂ ನಿರಾಕ್ಷೇಪಕರವಾಗಿಯೂ ಬರೆಯಲ್ಪಟ್ಟು ಲೇಖಕರ ಸಂಪೂರ್ಣ ಹೆಸರು ವಿಳಾಸ ಮತ್ತು ಚಂದಾನಂಬರು ತಿಳುಹಲ್ಪಟ್ಟವಿನಾ ಈ ಸ್ಟಾರ್ ಪತ್ರಿಕೆಯಲ್ಲಿ ಖಂಡಿತವಾಗಿಯೂ ಮುದ್ರಿಸಲ್ಪಡುವುದಿಲ್ಲವೆಂಬುದನ್ನೂ, ಜನರ ನೈತಿಕ ಸಾಮಾಜಿಕ ಮತ್ತು ರಾಜಕೀಯಸುಧಾರಣಾಸಂಬಂಧ ಲೇಖಗಳು ಅಗತ್ಯವಾಗಿ ಪ್ರಕಟಿಸಲ್ಪಡುವುವೆಂಬುದನ್ನೂ ಪ್ರತಿಯೊಬ್ಬ ಪತ್ರವ್ಯವಹಾರಕನೂ ಖಂಡಿತವಾಗಿ ಗಮನಿಸಬೇಕು.—ಸಂಪಾದಕ.

ಮಾದಮಂಗಲದಲ್ಲಿ ನಡೆದ ಮಹಾಗಣಾರಾಧನೆ.

ಬೌರಿಂಗಪೇಟೆ ತಾ॥ ಮಾದಮಂಗಲದಲ್ಲಿರುವ ಶ್ರೀ ನಂಜುಂಡಸ್ವಾಮಿಗಳ ಅಪ್ಪಣೆಯಮೇರೆ ಪ್ರತಿವರ್ಷದಲ್ಲೂ ನಡೆಯುತ್ತಿರುವ ದಾಸೋಹಮಠದ ಶ್ರೀ ಬಸವಲಿಂಗಸ್ವಾಮಿಗಳ ಗದ್ದುಗೆಯ ಮಹಾಪೂಜೆಯೂ ತತ್ಸಂಬಂಧವಾದ ಮಹಾಗಣಾರಾಧನೆಯೂ ಕಳೆದ ತಾ॥ 1 ರಲ್ಲಿ ಸ್ಥಳದ ಭಕ್ತರುಗಳಿಂದ ಬಹು ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ಚಿತ್ರದುರ್ಗದ ಜಗದ್ಗುರು ಪೀಠಕ್ಕೆ ಸೇರಿದ ಸೂಲೂರುಮಠದ ಚರಮೂರ್ತಿಗಳೂ ಬೆಂಗಳೂರು ತಿಪ್ಪಶೆಟ್ಟರ ಮಠದ ಶ್ರೀ ನಂಜುಂಡದೇಶಿಕೇಂದ್ರಸ್ವಾಮಿಗಳೂ ನೆರೆಗ್ರಾಮಗಳಿಂದ ನೂರಾರು ಭಕ್ತಮಾಹೇಶ್ವರರುಗಳೂ ಆಗಮಿಸಿದ್ದರು. ಈ ಗ್ರಾಮದ ಭಕ್ತರು ಉಭಯ ಶ್ರೀಗಳನ್ನೂ ಉತ್ಸವಪೂರ್ವಕವಾಗಿ ಬರಮಾಡಿಕೊಂಡು ಮರ್ಯಾದಿಸಿ ತಮ್ಮ ನಿಶ್ಚಲಭಕ್ತಿಯನ್ನು ಪ್ರದರ್ಶಿಸಿ ಶ್ರೀಗಳ ಆಶೀರ್ವಾದಾನುಗ್ರಹಕ್ಕೆ ಪಾತ್ರರಾದರು. ಈರೀತಿ ಮಾದಮಂಗಲದ ಭಕ್ತರುಗಳು ವಿಶೇಷೋತ್ಸಾಹದಿಂದ ಗುರುದೇವತಾಭಕ್ತಿಯನ್ನು ಪ್ರದರ್ಶಿಸಿದುದು ಪ್ರಶಂಸನೀಯವಾಗಿದೆ ಮತ್ತು ಇದೇ ರೀತಿ ಪ್ರತಿವರ್ಷದಲ್ಲೂ ದೇವತೋತ್ಸವಗಳನ್ನು ನಡೆಯಿಸಿ ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂದು ಕೋರುವ,

ದೈವಭಕ್ತ.

ಷಡಕ್ಷರಕವಿಯ ವಿಷಯಕ್ಕೆ ಕಿಟಲ್‌ಸಾಹೇಬರ ತಪ್ಪು ಅಭಿಪ್ರಾಯ.

(ಲೇಖಕ—ವೇ॥ ನಿರಾನಿಮಠದ ಶಾಂತವೀರಾರ್ಯರು, ದಾವಣಗೆರೆ.)

ರೆವರೆಂಡ್ ಕಿಟಲ್‌ಸಾಹೇಬರು ಹಾಗೂ ರೈಸ್‌ಸಾಹೇಬರು ಕನ್ನಡನಾಡಿಗೆಲ್ಲ ತುಂಬಾ ಪರಿಚಿಯವುಳ್ಳವರಾಗಿರುವರು. ರೆ॥ ಕಿಟಲ್‌ಸಾಹೇಬರು ಅತ್ಯಂತ ಮಾನಸಿಕಶ್ರಮಸಹಿಷ್ಣುತೆಯಿಂದ ಅಮೋಘವಾದ ಕನ್ನಡ-ಇಂಗ್ಲಿಷ್ ನಿಘಂಟನ್ನು ಬರೆದು ಕನ್ನಡಿಗರ ವಿಶೇಷವಾದ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇವರು ಹಲವು ಕನ್ನಡ ಪುಸ್ತಕಗಳಿಗೆ ಉಪೋದ್ಘಾತವನ್ನು ಬರೆದಿರುವರು. ರೆ॥ ಕಿಟಲ್‌ಸಾಹೇಬರು ರಾಜಶೇಖರವಿಲಾಸದೊಳಗಿನ "ರೇಣುಕಾರ್ಯಪಂಡಿತ ಮಹಾಮರುಳಾರ್ಯರ ಮಾಯಿದೇವರಂ | ಜಾಣನಜಕ್ಕಣಾರ್ಯನ ಜಗನ್ನುತ ಮಲ್ಲಣಮಲ್ಲಣಾರ್ಯರಂ || ಪ್ರೀಣಿತಶಂಭುಶಂಕರಹರೀಶ್ವರರಾಘವಕೇಶಿರಾಜರಂ | ಮಾಣದೆಬಣ್ಣಿಸುತ್ತೆರಗಿ ನೋಂಪಡೆವೆಂ ಪರಮಾರ್ಥಸಿದ್ಧಿಯಂ" ಈ ಪದ್ಯದಲ್ಲಿ ಬಂದಿರುವ "ಕೇಶಿರಾಜರಂ" ಎಂಬುದನ್ನು ಓದಿ ಶಬ್ದಮಣಿದರ್ಪಣದ ಉಪೋದ್ಘಾತವನ್ನು ಬರೆಯುವಾಗ ಷಡಕ್ಷರದೇವನು ಶಬ್ದಮಣಿದರ್ಪಣದ ಕರ್ತೃವಾದ ಕೇಶಿರಾಜನನ್ನು ಸ್ತುತಿಸಿರುವನೆಂದು ಬರೆದಿರುವರು. ಇವರು ಷಡಕ್ಷರನ ವಿಷಯದಲ್ಲಿ ಚೆನ್ನಾಗಿ ಅಭ್ಯಾಸಮಾಡಿದಂತೆ ಕಾಣುವುದಿಲ್ಲ. ಯಾಕೆಂದರೆ, ಷಡಕ್ಷರಿಯು ವೀರಶೈವಧರ್ಮನಿಷ್ಠಾತನು. ಇವನು ಶಿವ ಹಾಗು ತತ್ಸಂಬಂಧ ಶಿವಶರಣರವಿನಾ ಉಳಿದವರನ್ನು ಸ್ವಪ್ನದಲ್ಲಿಯೂ ಸ್ಮರಿಸಲಾರನು. ಶಬ್ದಮಣಿದರ್ಪಣಕರ್ತೃ ಜೈನಮತಾವಲಂಬಿಯು. ಷಡಕ್ಷರಿಯು ಸ್ತೋತ್ರಮಾಡಿರುವ ಕೇಶಿರಾಜನಿದ್ದುದು 1260 ರಲ್ಲಿ. ಪಾಲ್ಕುರಿಕೆಸೋಮಾರಾಧ್ಯರು ರಚಿಸಿದ ಗಣಸಹಸ್ರದಲ್ಲಿರುವ ವೀರಶೈವಧರ್ಮನಿಷ್ಠರಾದ ಕೊಂಡಗೂಳಿ ಕೇಶಿರಾಜನಿದ್ದುದು 1160 ರಲ್ಲಿ. ಇವರು ಪ್ರತಿದಿನವೂ ಶಿವತನ್ನು ಎಂಟುಕೋಟೀಶಗಳಿಂದ ಸ್ತುತಿಸುತ್ತಿದ್ದರೆಂದೂ ಬಸವೇಶ್ವರನೊಡನೆ ಸಂಗಮೇಶ್ವರಕ್ಕೆ ಹೋದಂತೆಯೂ ತಿಳಿಯಬರುತ್ತದೆ. ಶಬ್ದಮಣಿದರ್ಪಣದ ಅಧಿಕಾರಿಗಳು ಪುನರ್ಮುದ್ರಣದ ಕಾಲದಲ್ಲಿ ಈ ವಿಷಯವನ್ನು ಗಮನಕ್ಕೆ ತಂದು ತಿದ್ದಬೇಕಾಗಿ ಈ ಮೂಲಕ ಸೂಚಿಸುತ್ತೇನೆ.

ವೀರಶೈವರೇ ಇತ್ತಗಮನಿಸಿರಿ.

ಪ್ರಾಚ್ಯವಿದ್ಯಾವೈಭವ ಪ್ರಾಕ್ತನವಿಮರ್ಶ ವಿಚಕ್ಷಣ ರಾವಬಹದ್ದೂರ್ ರಾ॥ ನರಸಿಂಹಾಚಾರ್ಯರವರ ಪತ್ರಾಭಿಪ್ರಾಯ.—

ಶ್ರೀಮಾನ್ ದಾವಣಗೆರೆ ನಿರಾನಿಮಠದ ಶಾಂತವೀರಾರ್ಯರ ಸನ್ನಿಧಿಯಲ್ಲಿ ಮಾಡುವ ವಿಜ್ಞಾಪನೆ.

ನಿಮ್ಮ ಎರಡನೆಯ ಕಾರ್ಡಿನಿಂದ ಹುಬ್ಬಳ್ಳಿಯಲ್ಲಿ ನಡೆಯಬೇಕಾದ ಸಭೆ ನಿಂತುಹೋಯಿತೆಂದು ಕೇಳಿ ಮನಸ್ಸಿಗೆ ಬಹಳ ವ್ಯಸನವಾಯಿತು. ನಿಮ್ಮ ಮೊದಲನೆಯ ಕಾರ್ಡಿಗೆ ನಾನು ಕೂಡಲೆ ಜವಾಬು ಬರೆಯಲು ಅನುಕೂಲಿಸಲಿಲ್ಲ. ಕನ್ನಡ ಪಂಡಿತಪರೀಕ್ಷೆಯ ಪರೀಕ್ಷಕರ ಅಧ್ಯಕ್ಷನಾಗಿರುವುದರಿಂದ ಈ ಪರೀಕ್ಷಕಸಭೆಯನ್ನು ನಡೆಸುವುದಕ್ಕೆ ಮೈಸೂರಿಗೆ ಹೋಗಬೇಕಾಯಿತು. ಬಂದಮೇಲೆ ನೀವು ಕಳುಹಿಸಿದ್ದ ಟಿಪ್ಪಣಿಗಳನ್ನು ಓದಿ ನೆನ್ನೆ ತಾನೆ ಮುಗಿಸಿದೆನು. ನೀವು ನನಗೋಸ್ಕರ ಬಹಳ ಶ್ರಮವಹಿಸಿ ಇಷ್ಟು ವಿಷಯಗಳನ್ನು ಬರೆದು ಕಳುಹಿಸಿದುದಕ್ಕಾಗಿ ಬಹಳ ಕೃತಜ್ಞನಾಗಿದ್ದೇನೆ. ಕುಮಾರವಿಭುವಿನ ಭಿಕ್ಷುಕನುಹೇಶವಿಲಾಸದ ವಿಷಯವಾಗಿ ಬಹಳ ಪುಟಗಳು ಬರೆಯೋಣವಾಗಿದೆ. ನಾನು ಈ ಗ್ರಂಥದಿಂದ 3 ಪದ್ಯಗಳನ್ನು ಮಾತ್ರ ತೆಗೆದುಕೊಂಡಿದ್ದೇನೆ. ಬಸವಪುರಾಣ ಲೀಲಾಮೃತದಿಂದ 2 ಪದ್ಯವನ್ನು ಮಾತ್ರ ತೆಗೆದುಕೊಂಡಿದ್ದೇನೆ ಕವಿತಸ್ವಾರಸ್ಯವಿಲ್ಲ. ಕದಿರೆಕಾಯಕದ ರೆಬ್ಬವ್ವೆ ಎಂದಿರಬೇಕು. ರೆಮ್ಮವ್ವೆ ಎಂಬುದು ತಪ್ಪು ಎಂದು ಬರೆದಿದ್ದೀರಿ. ಆದರೆ ಇನ್ನೂ ಒಬ್ಬಳು ರೆಮ್ಮವ್ವೆ ಎಂಬವಳ ವಚನಗಳು ದೊರೆತಿವೆ. ಅವಳ ಅಂಕಿತವು ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ. ಇವಳಲ್ಲದೆ ಮತ್ತೊಬ್ಬ ಕನ್ನಡಿಕಾಯಕದ ರೆಮ್ಮಮ್ಮ ಎಂಬವಳು ವಚನಗಳನ್ನು ಬರೆದು ಸದ್ಗುರುಸಂಗ ನಿರಂಗಲಿಂಗ ಎಂಬ ಅಂಕಿತವನ್ನು ಉಪಯೋಗಿಸಿದ್ದಾಳೆ. ಹೀಗೆ ಮೂವರು ವಚನಕಾರ ಸ್ತ್ರೀಯರು ಒಂದೇ ಹೆಸರಿನಿಂದ ದೊರೆದಿದ್ದಾರೆ. ಈ ಮೂವರ ಹೆಸರಿನಲ್ಲಿಯೂ "ರೆಬ್ಬೆ" ಎಂದು ಇಂಬೇಕೆನ್ನುತ್ತೀರಾ? ಹಾಗೆನ್ನುವುದಕ್ಕೆ ಪ್ರಮಾಣ ಉಂಟೆ ತಿಳಿಸಿರಿ. ವಚನಕಾರರಲ್ಲಿ ಉಗ್ಗಡಿಸುವ ಗಬ್ಬದೇವಯ್ಯ ಎಂದು ನೀವು ಬರೆದಿದ್ದೀರಿ. ನನಗೆ ಬಿಬ್ಬದೇವಯ್ಯ ಎಂದು ವಚನಗಳೊಡನೆ ದೊರೆತಿದೆ. ಇತ್ಯಾದಿ.

ಮಲ್ಲೇಶ್ವರ, ಬೆಂಗಳೂರು.

ವೀರಶೈವಮಹನೀಯರೇ!

ನಿಮ್ಮಲ್ಲಿ ಪ್ರಾಚೀನ ತಾಳಓಲೆಗ್ರಂಥಗಳು ವಚನಶಾಸ್ತ್ರಕ್ಕೆ ಸಂಬಂಧಪಟ್ಟವುಗಳಿರಲಿ ಬೇರೆ ಯಾವ ತರಹದ ತಾಳೆಯೋಲೆಪ್ರತಿಗಳಿರಲಿ ಅವುಗಳನ್ನು ದಯವಿಟ್ಟು ಕಳುಹಿಸಿರಿ. ಈಗ ಪ್ರಾಚೀನಗ್ರಂಥಗಳ ವಿಮರ್ಶನೆಯು ಬಹು ಕೂಲಂಕಷವಾಗಿ ನಡೆಯುತ್ತಿದೆ. ಈ ಸುಸಮಯವನ್ನು ತಾವು ದುರ್ಲಕ್ಷಿಸದೆ ಈ ದಿವಸವೇ ನಮ್ಮ ಕಡೆಗೆ ರವಾನಿಸಿರಿ. ನಾವು ತೀವ್ರವೇ ತಮ್ಮಲ್ಲಿಗೆ ಪುನಃ ರವಾನಿಸುವೆವು.

ಗ್ರಂಥಜೀರ್ಣೋದ್ಧಾರೇಚ್ಛು
ನಿರಾನಿಮಠದ ಶಾಂತವೀರಾರ್ಯರು, ದಾವಣಗೆರೆ.

ಶ್ರೀಕರಭಾಷ್ಯೋಪನ್ಯಾಸ.

ತಾ॥ 10-12-1926 ನೇ ಸಾಯಂಕಾಲ 6 ಘಂಟೆಗೆ ಬೆಂಗಳೂರು ಸಿಟಿ ಶೇಷಾದ್ರಿರೋಡಿನಲ್ಲಿರುವ ಶ್ರೀ ಜಗದ್ಗುರುಜಯದೇವ ಮುರುಘರಾಜೇಂದ್ರ ವೀರಶೈವಹಾಸ್ಟಲಿನಲ್ಲಿ ದಿವಾನ್‌ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿತ್ತು. ಈ ಸಭೆಗೆ ಶ್ರೀಮತ್ಸ ಪಂಡಿತರುಗಳು, ಮ॥ ಗಳಾದ ಸಂಸ್ಕೃತಕಾಲೇಜ್ ಪ್ರಿನ್ಸಿಪಾಲ್ ವೆಂಕಟರಮಣಯ್ಯನವರು, ರಿಟೈರ್ಡ್ ಸರ್ಕಲ್ ಇನ್ಸ್‌ಪೆಕ್ಟರ್ ಮ॥ ಡಿ. ವೆಂಕಟರಾಮಯ್ಯನವರು, ಹಯವದನರಾಯರು, ಅಡ್ವೋಕೇಟ್ ನಂಜುಂಡಪ್ಪನವರು, ಸ್ಪೆಷಲ್‌ಮ್ಯಾಜಿಸ್ಟ್ರೇಟ್ ಜಿ. ಮಲ್ಲಪ್ಪನವರು, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ್ ಮತ್ತು ಎಂ. ಎಲ್. ಇ. ಫಂಡ್ ಸೆಕ್ರೆಟರಿ ಜಿ. ಪರಮಶಿವಯ್ಯನವರು, ಅ॥ ಸೆಕ್ರೆಟರಿ ಎಂ. ನಾಗಪ್ಪನವರು, ಸ್ಪೆಷಲ್ ಮ್ಯಾಜಿಸ್ಟ್ರೇಟ್ ಜಿ. ಮಲ್ಲಿಕಾರ್ಜುನಯ್ಯನವರು, ಸಬ್‌ಜಡ್ಜ್ ಎಚ್. ಕೆ. ವೀರಬಸವಯ್ಯನವರು, ಡೈರಿ ಕೆಂಚಪ್ಪನವರು, ದೇಶದ ಯಜಮಾನ್ ಬಸಪ್ಪನವರು, ದೇಶದ ಶೆಟ್ಟರು ಶಿದ್ಧಬಸಪ್ಪಶೆಟ್ಟರು, ಇನ್‌ಕಂಟ್ಯಾಕ್ಸ್ ಇನ್ಸ್‌ಪೆಕ್ಟರ್ ಜಿ. ಕೆ. ರುದ್ರಾರರು, ಮ್ಯುನಿಸಿಪಲ್ ಕೌನ್ಸಿಲರ್ ಪಿ. ಎಂ. ಬಸಪ್ಪನವರು, ಮೈಸೂರ್ ಬ್ಯಾಂಕ್ ಡೈರೆಕ್ಟರ್ ಟಿ. ನಂಜಪ್ಪನವರು, ಕ್ಯಾಪ್ಟನ್ ವೈ. ವಿಶ್ವನಾಥಯ್ಯನವರು ಇನ್ನೂ ಅನೇಕ ದೊಡ್ಡ ಮನುಷ್ಯರುಗಳೂ, ನೂರಾರುಜನ ಶ್ರೋತೃಜನಗಳೂ ಆಗಮಿಸಿದ್ದರು. ಆ ಕಾಲದಲ್ಲಿ ಶ್ರೀ ಕ್ಯಾಸನೂರು ಮಹಾಸಂಸ್ಥಾನದ ಪಟ್ಟಾಧ್ಯಕ್ಷ ಪಂಡಿತ ಗುರುಬಸವಶಿವಾಚಾರ್ಯಸ್ವಾಮಿಗಳವರು ಮೊದಲು ಶ್ರೀಕರಭಾಷ್ಯಕ್ಕೆ ಸಿದ್ಧಾಂತಶಿಖಾಮಣಿ ಲಘುಸೂತ್ರವೃತ್ತಿಗಳಿಂದ ಸಮೂಲಕತ್ವವನ್ನೂ ವಸ್ತುನಿರ್ದೇಶ ವಿಷಯದಲ್ಲಿ ಎಂಟು ಪೂರ್ವಪಕ್ಷಗಳನ್ನೂ ತೋರಿಸಿ ಆಮೇಲೆ ಉತ್ತರರೂಪಗಳಿಂದ ರಾಮಾನುಜ-ಮಧ್ವ-ವಲ್ಲಭ-ಶಂಕರಾಚಾರ್ಯರುಗಳ ಸಿದ್ಧಾಂತಗಳನ್ನು ವಿಸ್ತರಿಸಿ, ಅವುಗಳಲ್ಲಿರುವ ತ್ಯಾಜ್ಯಾತ್ಯಾಜ್ಯ ವಿಷಯಗಳನ್ನು ವ್ಯಕ್ತಗೊಳಿಸಿ ಮೇಲೆ ಹೇಳಿದ ಎಲ್ಲಾ ಪೂರ್ವಪಕ್ಷಗಳಿಗೂ, ಉತ್ತರಪಕ್ಷಗಳಾದ ಸರ್ವಶ್ರುತಿಗಳ ಏಕಾನ್ವಯವುಳ್ಳ ಶ್ರೀಪತಿಪಂಡಿತಾಚಾರ್ಯರ ಸಿದ್ಧಾಂತವನ್ನು ಪ್ರದರ್ಶಿಸಿ ನಾಸ್ತಿಕವಾದಖಂಡನ, ಮಾಯಾವಾದಖಂಡನ, ಜಗನ್ಮಿಥ್ಯಾವಾದಖಂಡನ, ವಿಶೇಷಾದ್ವೈತಮಂಡನ, ಕಾರುಣ್ಯಕಲ್ಯಾಣ, ಅಷ್ಟಾವರಣ ಪಂಚಾಚಾರ, ಪರಮಶಿವಷಟ್‌ಸ್ಥಲ, ಪರಬ್ರಹ್ಮೈಕ್ಯ ಮುಕ್ತಿ, ಲಿಂಗಧ್ಯಾನಧಾರಣ, ಪೂಜಾದ್ಯುಪಾಸನ, ಶರೀರಸಂಸ್ಕಾರಗಳಲ್ಲಿ ಸ್ತ್ರೀಪುರುಷರಿಗಿರುವ ಸಮಾನಾಧಿಕಾರ, ಲಿಂಗಾಂಗಿಗಳ ಪುನರ್ಜನ್ಮನಿಷೇಧ ಮೊದಲಾದ ವಿಷಯಗಳನ್ನು ವೀರಶೈವಮತದ ಭಾಷ್ಯಗಳಲ್ಲಿ ಒಂದಾದ ಮತ್ತು ಅಧ್ಯಾಯಗಳಿಂದಲೂ 16 ಪಾದಗಳಿಂದಲೂ, 172 ಅಧಿಕರಣಗಳಿಂದಲೂ 544 ಸೂತ್ರಗಳಿಂದಲೂ ಕೂಡಿದ ಶ್ರೀಕರಭಾಷ್ಯದ ಮುಖ್ಯಾಭಿಪ್ರಾಯವನ್ನು ವೇದಾಗಮೋಪನಿಷತ್ ಪ್ರಮಾಣವಾಕ್ಯಗಳೊಡನೆ ಶ್ರೋತೃಗಳ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ 6 ಘಂಟೆಯಿಂದ 9 ಘಂಟೆಯವರೆಗೆ ಅತಿಪ್ರಗಲ್ಭವಾದ ವಾಗ್ವೈಖರಿಯಿಂದ ವ್ಯಾಖ್ಯಾನಮಾಡಿದರು. ಅನಂತರ ಪಂಡಿತ ಸ್ವಾಮಿಗಳವರು ನಮ್ಮಗಳ ಪ್ರಾರ್ಥನೆಯಪ್ರಕಾರ ಬೆಂಗಳೂರಿಗೆ ದಯಮಾಡಿಸಿ 3 ತಿಂಗಳಿಂದಲೂ ಶ್ರೀಕರಭಾಷ್ಯವನ್ನು ಪರಿಶೋಧಿಸಿ ಪೂರೈಸಿದ್ದಲ್ಲದೆ ನಮ್ಮಗಳ ಅಪೇಕ್ಷೆಯಂತೆ ಸದರಿ ಭಾಷ್ಯದ ಸಾರವನ್ನು ವಿದ್ವಜ್ಜನಮಂಡಿತವಾದ ಈ ಸಭೆಯಲ್ಲಿ ಸಂಕ್ಷೇಪವಾಗಿ ಬೋಧಿಸಿದ್ದಕ್ಕಾಗಿ ಧನ್ಯವಾದವನ್ನು ಸಮರ್ಪಿಸುತ್ತೇನೆಂದು ಅಧ್ಯಕ್ಷರಾದ ಸರ್ ಸೆಟ್ಟರವರು ಹೇಳಿ ಕಾಶ್ಮೀರಶಾಲನ್ನೂ ಹಾರತುರಾಯಿಗಳನ್ನೂ ಸಭೆಯಲ್ಲಿ ಸ್ವಾಮಿಗಳಿಗೆ ಒಪ್ಪಿಸಿದರು. ಅನಂತರ ಪ್ರಿನ್ಸಿಪಾಲರೇ ಮೊದಲಾದ ವಿದ್ವಜ್ಜನರು ಶ್ರೀಗಳ ವ್ಯಾಖ್ಯಾನವಿಷಯದಲ್ಲಿ ತಮಗುಂಟಾದ ಆನಂದವನ್ನು ಸದಭಿಪ್ರಾಯದೊಡನೆ ವ್ಯಕ್ತಗೊಳಿಸಿದಮೇಲೆ ಸರ್ ಪುಟ್ಟಣ್ಣಶೆಟ್ಟರೇ ಮೊದಲಾಗಿ ಸಮಾಜದ ಮುಂದಾಳುಗಳನ್ನು ಶ್ರೀಪಟ್ಟದ ಮಹಾಸ್ವಾಮಿಗಳು ಫಲಮಂತ್ರಾಕ್ಷತೆಗಳಿಂದ ಆಶೀರ್ವದಿಸಿದರು.

ಪ್ರತ್ಯಕ್ಷದರ್ಶಿ.

ಚನ್ನಪಟ್ಟಣ ತಾಲ್ಲೂಕು ಕೋ-ಆಪರೇಟೀವ್ ಕಾನ್‌ಫರೆನ್ಸ್.

ಚನ್ನಪಟ್ಟಣದ 3 ನೇ ತಾಲ್ಲೂಕು ಕೋ-ಆಪರೇಟಿವ್ ಕಾನ್‌ಫರೆನ್ಸು ಇದೇ ಮಾಹೆ ತಾ॥ 9 ನೇ ಬೃಹಸ್ಪತಿವಾರ ಚನ್ನಪಟ್ಟಣದ ಸೊಸೈಟಿಯ ಕಟ್ಟಡದಲ್ಲಿ ನಡೆಯಿತು. ಈ ಸಮ್ಮೇಳನಕ್ಕೆ ಚನ್ನಪಟ್ಟಣದ ತಾಲ್ಲೂಕು ಪರಸ್ಪರ ಸಹಾಯಸಂಘಗಳ ಪೈಕಿ 25 ಸಂಘಗಳ ಪರವಾಗಿ 62 ಪ್ರತಿನಿಧಿಗಳು ಬಂದಿದ್ದರು. ಆಹ್ವಾನಿಸಲ್ಪಟ್ಟ ಸರ್ಕಾರೀ ಆಫೀಸರುಗಳ ಪೈಕಿ ಮೈಸೂರುಸೀಮೆಯ ಕೋ-ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್ ಮ॥ ಕೆ. ಎಚ್. ರಾಮಯ್ಯನವರು, ಕೈಗಾರಿಕೆಯ ಡೈರೆಕ್ಟರು ಮಿ॥ ಜಹರುದ್ದೀನ್ ಮೆಕ್ಕೆಸಾಹೇಬರು ಬೆಂಗಳೂರು ಡಿವಿಜನ್ ಕೈಗಾರಿಕೆ ಸೂಪರೆಂಟೆಂಡೆಂಟ್ ಮ॥ ಜ. ಎಸ್. ಗಿರಮೋಜಿರಾಯರು, ಕೋ-ಆಪರೇಟೀವ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮ॥ ಪಿ. ಕೃಷ್ಣರಾಯರು, ಬೆಂಗಳೂರು ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟ್ ಮಿ॥ ಅಬ್ದುಲ್‌ಖಾದರ್ ಖಾನ್‌ಸಾಹೇಬರು, ಸಬ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮ॥ ಟಿ. ವೆಂಕಟರಮಣಯ್ಯನವರು, ಟೆಕ್ಸ್‌ಟೈಲ್ ಅಸಿಸ್ಟೆಂಟ್ ಮ॥ ಎಂ. ಕೃಷ್ಣರಾಯರು, ಅಮಲ್ದಾರ್ ಮ॥ ಚೆಲ್ಲಪ್ಪಯ್ಯರ್‌ರವರು, ರೇಷ್ಮೆಫಾರಂ ಆಫೀಸರ್ ಮ॥ ಗೋವಿಂದರಾಯರು, ಮೈಸೂರು ಬ್ಯಾಂಕ್ ಮೇನೇಜರ್ ಮ॥ ಎ. ಎಸ್. ಮಲ್ಲಪ್ಪನವರು ಮತ್ತು ಪರಸ್ಥಳಗಳ ದೊಡ್ಡಮನುಷ್ಯರು ದಯೆಮಾಡಿಸಿದ್ದರು. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್‌ಸಾಹೇಬರೂ, ಕ್ಲೋಸ್‌ಪೇಟೆ ಸಬ್‌ಡಿವಿಜನ್ ಆಫೀಸರೂ, ಮೈಸೂರು, ಶಿವಮೊಗ್ಗ, ತುಮಕೂರು ಡಿವಿಜನ್‌ಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರೂ ಇತರ ಕಾರ್ಯಗಳ ನಿಮಿತ್ತ ಸಮ್ಮೇಳನಕ್ಕೆ ಬರಲು ಸಾಧ್ಯವಿಲ್ಲವಾಗಿಯೂ, ಕಾರ್ಯಗಳು ಜಯಪ್ರದವಾಗಿ ನಡೆಯಲು ಹಾರೈಸುವುದಾಗಿಯೂ ಬರೆಸಿದ್ದರು. ತಾ॥ 9 ನೇ ಪ್ರಾತಃಕಾಲ ನೂಲುವಸ್ಪರ್ಧೆಗೆ ಏರ್ಪಾಟಾಗಿತ್ತು. 11 ಜನಗಳು ಸ್ಪರ್ಧೆಯಲ್ಲಿ ಸೇರಿದ್ದರು. ಕಾನ್‌ಫರೆನ್ಸಿನಿಂದ ಮೊದಲನೇ ಬಹುಮಾನವೂ, ಮ॥ ಸರಾಫ್ ವೆಂಕಟಗಿರಿಯಪ್ಪನವರಿಂದ ಎರಡನೇ ಬಹುಮಾನವೂ, ಮ॥ ವಿ. ವೆಂಕಟಪ್ಪನವರಿಂದ ಮೂರನೇ ಬಹುಮಾನವೂ ಕೊಡಲ್ಪಟ್ಟವು. 11 ವರ್ಷದ ನಾರಾಯಣರಾವ್‌ಗೆ ಒಂದನೇ ನಂಬರು 130 ಗಜ ದಾರವನ್ನು ತೆಗೆದುದಕ್ಕಾಗಿ 1 ನೇ ಬಹುಮಾನವೂ, ನಾಗಪ್ಪ ಎಂಬುವವನಿಗೆ 2 ನೇ ಬಹುಮಾನವೂ, ಒಬ್ಬ ಹೆಂಗುಸಿಗೆ 3 ನೇ ಬಹುಮಾನವೂ ಕೊಡಲ್ಪಟ್ಟವು. ಮೆಂಬರುಗಳು ತಯಾರಿಸಿದ್ದ ನೂಲಿನ ಪ್ರದರ್ಶನವು ಜನಗಳನ್ನು ಆಕರ್ಷಿಸಿದ್ದಿತು. ಮಧ್ಯಾಹ್ನ 1 ಘಂಟೆಗೆ ಸಮ್ಮೇಳನವು ಉಪಕ್ರಮವಾಯಿತು. ಸ್ವಾಗತಕಮಿಟಿಯಪರವಾಗಿ ಶೆಟ್ಟಿಹಳ್ಳಿ ಸೊಸೈಟಿಯ ಸೆಕ್ರೆಟರಿಯವರು ಈರೀತಿ ಅಡ್ರೆಸ್ ಓದಿದರು.—

ಮಹನೀಯರೆ, ತಮಗೆ ಹೆಚ್ಚಾದ ದೇಹಶ್ರಮವಾದರೂ ಇತರ ಕಾರ್ಯಗೌರವಗಳಿದ್ದರೂ ನಮ್ಮ ಆಹ್ವಾನಕ್ಕೆ ಗೌರವಕೊಟ್ಟು ಬಂದುದಕ್ಕಾಗಿ ಸ್ವಾಗತಕಮಿಟಿಯಪರವಾಗಿ ನಿಮ್ಮನ್ನು ವಂದಿಸುತ್ತೇನೆ. ತಾಲ್ಲೂಕು ಸಂಘಗಳ ಪ್ರತಿನಿಧಿಗಳನೇಕರು ಈಗ ಸಮ್ಮೇಳನಕ್ಕೆ ದಯೆಮಾಡಿಸಿ, ಏಕಕಾರ್ಯದಲ್ಲಿ ಎಂದರೆ, ನಮ್ಮ ಅರ್ಥಸಾಧನೆಯಲ್ಲಿ ನಿರತರಾಗಿರುವ ನಮಗೆ ನಮ್ಮ ಮನೆಗಳಲ್ಲಿ ಮದುವೆ ಮೊದಲಾದ ಕಾಲಗಳಲ್ಲಿ ನೆಂಟರಿಷ್ಟರೆಲ್ಲರೂ ಸೇರಿದಾಗ ಆಗುವ ಸಂತೋಷವು ಈದಿನದ ಕೂಟದಲ್ಲಿ ಉಂಟಾಗಿರುವದು. ಈ ವಿಧವಾದ ಸಮ್ಮೇಳನದಲ್ಲಿ ಪ್ರತಿಯೊಬ್ಬನಲ್ಲಿಯೂ ಒಂದುವಿಧವಾದ ಸ್ವಾತಂತ್ರ್ಯವೂ, ಅನ್ಯೋನ್ಯ ವಿಶ್ವಾಸವೂ ಇರುವದು. ಡಿಸ್ಟ್ರಿಕ್ಟ್ ಮತ್ತು ಪ್ರಾವಿನ್ಷಿಯಲ್ ಸಮ್ಮೇಳನಗಳಲ್ಲಿ ಸೇರುವ ಸದಸ್ಯರುಗಳು ನಾನಾಪ್ರದೇಶಗಳಿಂದ ಬಂದಿರುವದರಿಂದ ಪರಸ್ಪರ ಪರಿಚಯವಿರುವದಿಲ್ಲ. ನಮ್ಮ ಸಮ್ಮೇಳನದಲ್ಲಿರುವಂತೆ ಅದರಲ್ಲಿ ಸಹೋದರಭಾವವು ಅಷ್ಟಿರುವದಿಲ್ಲ. ಇಲ್ಲಿಯಾದರೊ ನಮ್ಮ ಆಶೆಗಳೂ ನಮ್ಮ ಕಷ್ಟಸುಖಗಳೂ ಸುಮಾರು ಒಂದೇ ಆಗಿರುವುದರಿಂದ ನಾವುಗಳು ಸೇರಿ ಚರ್ಚಿಸುವದು ಹೆಚ್ಚು ಪ್ರಯೋಜನವನ್ನು ಉಂಟುಮಾಡತಕ್ಕದೆಂಬುದಕ್ಕೆ ಯಾವ ಸಂದೇಹವೂ ಇರುವದಿಲ್ಲ. ಅಷ್ಟೇಕೆ? ಕಾರ್ಯತಃ ನೋಡೋಣ—ಈ ಮೂರುವರ್ಷಗಳ ಹಿಂದೆ ಇಲ್ಲಿ ನಾವು ಒಟ್ಟುಗೂಡಿ ನಮ್ಮ ಸ್ಥಿತಿಯನ್ನು ಪರೀಕ್ಷಿಸಿದಾಗ ತಲೆತಗ್ಗಿಸುವಂತಿತ್ತು. ನಮ್ಮ ದುಸ್ಥಿತಿಯನ್ನು ಕಂಡು ವಿಷಾದಪಟ್ಟು ನಾವುಗಳೆಲ್ಲಾ ಸೊಂಟ ಕಟ್ಟಿ ಕೆಲಸ ಮಾಡದೆಹೋದಲ್ಲಿ ನಮ್ಮ ತಾಲ್ಲೂಕಿಗೆ ಅವಮಾನವಾಗುವದೆಂದೂ ಜನಸೇವೆಯೇ ದೇವರಸೇವೆಯೆಂದೂ ನಮ್ಮ ಇನ್ಸ್‌ಪೆಕ್ಟರು ಮಾಡಿದ ಭಾಷಣವನ್ನು ನಾವು ಮರೆಯಬಲ್ಲವೆ? ಅಗ್ರಾಸನವನ್ನು ವಹಿಸಿದ್ದ ನಮ್ಮ ರಿಜಿಸ್ಟ್ರಾರ್ ಸಾಹೇಬರು ಸೊಸೈಟಿಯವರನ್ನು ಪ್ರತ್ಯೇಕವಾಗಿ ಕರೆದು ಬುದ್ಧಿವಾದವನ್ನು ಹೇಳಿ ಮುಂದಿನ ಕಾರ್ಯಗಳಲ್ಲಿ ಉತ್ಸಾಹವನ್ನು ತುಂಬಿದುದು ನಮ್ಮಲ್ಲಿ ನಿಂತುಹೋಗಿದೆ. ಮುಂದಿನ ಸಮ್ಮೇಳನದಲ್ಲಿ, ಸೆಂಟ್ರಲ್‌ಬ್ಯಾಂಕಿನ ಸಾಲಕ್ಕೆ ಇಷ್ಟಿಷ್ಟು ಮೊಬಲಗನ್ನು ಕೊಟ್ಟೆವೆಂದು ಧೈರ್ಯವಾಗಿ ಹ॥ ರಿಜಿಸ್ಟ್ರಾರ್‌ರವರಲ್ಲಿ ಹೇಳಲು ಸಮರ್ಥರಾದೆವು. ಬಿದ್ದುಹೋಗಿದ್ದವರು ಚೇತರಿಸಿಕೊಂಡು ಎದ್ದೆವು. ಅಲ್ಲಿಂದೀಚೆಗೆ ನಾವು ಮಾಡಿರುವ ಕೆಲಸವನ್ನು ನೋಡಿದರೆ ನಾವೂ ಮುಂದರಿದುಹೋಗಲು ಶಕ್ತರೆಂದು ಸಂತೋಷವಾಗುತ್ತದೆ. ಪ್ರಾವಿನ್ಷಿಯಲ್ ಬ್ಯಾಂಕಿನವರು ಚನ್ನಪಟ್ಟಣಕ್ಕೆ ಸಾಲವನ್ನು ಕೊಡಲಾಗುವುದಿಲ್ಲವೆಂದು ಹೇಳಿಕೊಳ್ಳುತ್ತಿದ್ದರು. ವಾಯಿದೆಯನ್ನು ಕೊಡಲು ಆಗುವದಿಲ್ಲವೆಂದು ನಿಷ್ಕರುಣೆಗಳಾಗಿ ಹೇಳುತ್ತಿದ್ದರು. ಆದರೆ ಈಗ ಹೊಸಸಾಲಗಳನ್ನು ಮಂಜೂರ್ಮಾಡಿ ವಾಯಿದೆಯನ್ನು ಬಡಾಯಿಸಲು ಸಿದ್ಧರಾಗಿರುವರು. ನಮ್ಮ ತಾಲ್ಲೂಕಿನ ಮರ್ಯಾದೆಯನ್ನು ನಾವು ಕಳೆಯಲಿಲ್ಲ. ಸೊಸೈಟಿಗಳನ್ನು ಸೇರಲು ತಲೆಹಾಕದಿದ್ದವರು ಪಟ್ಟಣದಲ್ಲೂ, ಗ್ರಾಮಾಂತರಗಳಲ್ಲೂ ಹೊಸಮೆಂಬರುಗಳು ಸೇರುತ್ತಿರುತ್ತಾರೆ. ಬಂಡವಾಳವನ್ನು ಹೆಚ್ಚುಮಾಡಿಕೊಳ್ಳಲು ನಿಜವಾದ ಪ್ರಯತ್ನವನ್ನು ಮಾಡಿರುವರು. ಇದಲ್ಲದೆ, ಗ್ರಾಮಾಂತರಗಳಲ್ಲಿ ಗ್ರಾಮಾಭಿವೃದ್ಧಿ ಫಂಡೆಂತಲೂ, ಲೈಬ್ರರಿ ಎಂತಲೂ, ಕಾಮನ್ ಫಂಡೆಂತಲೂ, ಮಕ್ಕಳ ಡಿಪಾಜಿಟ್ಟೆಂತಲೂ, ಹೊಸಮಾತುಗಳು ಪ್ರಾರಂಭವಾದುದು ನಮಗೆ ಹೆಮ್ಮೆಯುಂಟಾಗಬೇಕಲ್ಲವೆ? ವ್ಯವಸಾಯಸಾಮಗ್ರಿಗಳನ್ನು ಮೆಂಬರುಗಳಿಗೆ ಒದಗಿಸಿರುವೆವು. ಈ ಪ್ರಯತ್ನಗಳನ್ನು ನೋಡಿದರೆ ನಾವು ಮುಂದರಿಯಲಿಲ್ಲವೆಂದು ಯಾರು ಹೇಳುವರು? ಇದಕ್ಕೆಲ್ಲಾ ನಮ್ಮ ಸಮ್ಮೇಳನವೇ ಕಾರಣವೆಂದು ಧೈರ್ಯವಾಗಿ ಹೇಳಬಹುದು. ನಮ್ಮ ಇನ್ಸ್‌ಪೆಕ್ಟರು ಗ್ರಾಮಕ್ಕೆ ಬಂದಾಗ, ಷೇರು ಎಷ್ಟು ಹೆಚ್ಚಾಯಿತು? ಮೆಂಬರುಗಳ ಸಂಖ್ಯೆಯು ಎಷ್ಟು? ವ್ಯವಸಾಯದ ಕೆಲಸವೇನು? ಬಾಕಿಪಟ್ಟಿಯಲ್ಲಿ ಮುಂದೆ ನಡೆಯುವ ಕಾನ್‌ಫರೆನ್ಸಿನಲ್ಲಿ ಏನು ರಿಪೋರ್ಟನ್ನು ಓದುವಿರಿ? ಇವೇ ಮೊದಲಾದ ಪ್ರಶ್ನೆಗಳನ್ನು ಕೇಳಿದಾಗ ನಮಗೆ ಏನುಗತಿಯಪ್ಪ, ಏನೂಮಾಡದಿದ್ದರೆ ರಿಜಿಸ್ಟ್ರಾರರ ಸಮಕ್ಷಮದಲ್ಲಿ ಅವಮಾನವಾಗುತ್ತೆಂಬ ಭಯವು ಸಂಪೂರ್ಣವಾಗಿತ್ತು. ಹೀಗೆ ನಮ್ಮ ಕೆಲಸಕಾರ್ಯಗಳನ್ನು ನಡಿಸಿ ಮುಂದವರಿಯಬೇಕೆಂಬ ಕುತೂಹಲದಲ್ಲಿರುವಾಗ ನಮ್ಮ ತಾಲ್ಲೂಕಿಗೆ-ಡಿಸ್ಟ್ರಿಕ್ಟಿಗೆ ಮುಖ್ಯವಾದ ದಾಯರಿ ಸೊಸೈಟಿಯ ಪ್ರೆಸಿಡೆಂಟ್ ಮಿ॥ ಸಾಹುಕಾರ್ ಮಹಮದ್‌ಖಾಸಿಂಖಾನ್ ಸಾಹೇಬರು ನಮ್ಮ ಏಳಿಗೆಯಲ್ಲಿ ತಮ್ಮ ವಿಶ್ವಾಸವನ್ನು ತೋರಿ ಭಲಾ! ಭಲಾ!! ಮಲಗಿದ್ದವರು ಎದ್ದು, ಅನಂತರ ಓಡಲು ಪ್ರಾರಂಭಿಸಿರಾ? ಮುಂದೆ ಓಡಿದವರಿಗೆ ನನ್ನದೊಂದು ಬಹುಮಾನವಿರಲಿ ಎಂದು ಒಂದು ಬೆಳ್ಳಿಯಬಟ್ಟಲನ್ನು ಗ್ರಾಮಾಂತರ ಸಂಘಗಳಲ್ಲಿ ಉತ್ತಮವಾದ ಸಂಘಕ್ಕೆ ಕೊಡಲು ಒಪ್ಪಿಸಿರುವದರಿಂದ ನಮ್ಮ ತಾಲ್ಲೂಕಿನ ಸಂಘಗಳು ಮೈಸೂರು ಸೀಮೆಗೆ ಉತ್ತಮವೆಂದೆನಿಸಲು ಸಿದ್ಧವೆಂಬೆನು? ನಾವು ಚರ್ಚೆಗೆ ಇಟ್ಟುಕೊಂಡಿರುವ ವಿಷಯಗಳು ತಮ್ಮ ಮೇಲ್ಮೆಗೆ ಬಹಳ ಸಹಕಾರಿಯಾಗಿ ಕಂಡುಬರುವದರಿಂದ ಸೂಕ್ತವಾದ ಸೂಚನೆಗಳನ್ನು ಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ನಮ್ಮ ಕಾರ್ಯವನ್ನು ಸಫಲಗೊಳಿಸಲು ಇಲ್ಲಿಗೆ ದಯಮಾಡಿಸುವ ದೊಡ್ಡಮನುಷ್ಯರಿಗೆ ಮತ್ತೊಮ್ಮೆ ಸುಸ್ವಾಗತವನ್ನು ಬಯಸಿ ಮೈಸೂರಿನ ಪ್ರಜೆಗಳ ಹಿತಚಿಂತನೆಯಲ್ಲಿ ಮಗ್ನರಾಗಿ ಅವರ ದೋಷಗಳನ್ನು ತಿದ್ದಿ ಸನ್ಮಾರ್ಗಿಗಳನ್ನಾಗಿ ಮಾಡಲೂ ಬಡತನವನ್ನು ನೀಗಿಸಲೂ, ನಮ್ಮಲ್ಲಿ ಭ್ರಾತೃಭಾವನೆಯನ್ನು ಹುಟ್ಟಿಸಲೂ ಸರ್ವಪ್ರಯತ್ನವನ್ನು ಮಾಡುತ್ತಿರುವ ನಮ್ಮ ಪ್ರಜಾನುರಾಗಿಗಳಾದ ರಿಜಿಸ್ಟ್ರಾರ್ ಮ॥ ಕೆ. ಎಚ್. ರಾಮಯ್ಯ, ಬಿ.ಎ., ಬಾರ್-ಅಟ್-ಲಾ ರವರು ಈ ದಿನದ ಸಮ್ಮೇಳನದ ಕಾರ್ಯವನ್ನು ನೆರವೇರಿಸಬೇಕಾಗಿ ಅವರನ್ನು ಪ್ರಾರ್ಥಿಸುತ್ತೇನೆ. ಎಂದು ಸೆಕ್ರೆಟರಿಯವರು ಹೇಳಿದಮೇಲೆ ಅಗ್ರಾಸನಾಧಿಪತಿಗಳು ಚನ್ನಪಟ್ಟದ ತಾಲ್ಲೂಕಿನ ಸಹಕಾರಿಗಳು ಮಾಡುತ್ತಿರುವ ಸಾಹಸವು ಸಂತೋಷಕರವೆಂತಲೂ, ಸಂಘಗಳ ಮೂಲಕ ನಮ್ಮ ಆರ್ಥಿಕ, ನೈತಿಕ, ಸಾಂಘಿಕ ಸ್ಥಿತಿಯನ್ನು ಹೇಗೆ ಮಾರ್ಪಡಿಸಿಕೊಳ್ಳಬಹುದೆಂಬ ವಿಷಯವಾಗಿಯೂ ಜನಗಳ ಮನಸ್ಸಿಗೆಹಿಡಿಯುವಂತೆ ಉಪನ್ಯಾಸನಮಾಡಿದರು.

ಸೊಸೈಟಿಗಳ ಇನ್ಸ್‌ಪೆಕ್ಟರು, ರೇಷ್ಮೆ ಸೊಸೈಟಿಯ ಇನ್ಸ್‌ಪೆಕ್ಟರು ಮತ್ತು ವ್ಯವಸಾಯದ ಇನ್ಸ್‌ಪೆಕ್ಟರು ರಿಪೋರ್ಟುಗಳನ್ನು ಓದಿದರು. ಹಿಂದಿನಸಾಲಿಗಿಂತಲೂ ಸೊಸೈಟಿಯ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆದಿರುವಂತೆ ಕಂಡುಬಂತು. ವ್ಯವಸಾಯದ ವಿಷಯದಲ್ಲಿಚರ್ಚೆಗಳು ನಡೆದವು. ಸೊಸೈಟಿಗಳಿಗೆ ವ್ಯವಸಾಯದ ಡಿಪೋನಿಂದ ಸಾಮಗ್ರಿಗಳನ್ನು ಒದಗಿಸಲು ತಕ್ಕ ಏರ್ಪಾಟಿರತಕ್ಕದ್ದೆಂದೂ, ನೇಗಿಲುಗಳು ಅಕಸ್ಮಾತ್ ಕೆಟ್ಟುಹೋದಲ್ಲಿ ಸರ್ಕಾರದವರು ಸರಿಮಾಡಿಸಿಕೊಡಬೇಕೆಂದೂ, ಗ್ರಾಮಾಂತರಗಳಲ್ಲಿ ವ್ಯವಸಾಯೋಪಕರಣಗಳ ಪ್ರಯೋಜನವನ್ನು ಹೆಚ್ಚಾಗಿ ಪ್ರಚಾರಮಾಡಬೇಕಾಗಿಯೂ ಅಪೇಕ್ಷಿಸಲ್ಪಟ್ಟಿತು. ಆ ಸಂಘಗಳು 35 ನೇಗಿಲುಗಳನ್ನೂ 10 ಪಲ್ಲ ಭತ್ತವನ್ನೂ, 4 ಪಲ್ಲ ರಾಗಿಯನ್ನೂ, ಕಡಲೆಕಾಯಿಯನ್ನೂ, ಮೆಂಬರುಗಳಿಗೆ ಹಂಚಿದ್ದವೆಂದು ತಿಳಿಯಬಂತು. ಸುಮಾರು 900 ರೂ. ಗಳು ಇದಕ್ಕಾಗಿ ಉಪಯೋಗಿಸಲ್ಪಟ್ಟಿತು. ರೇಷ್ಮೆ ವ್ಯವಸಾಯದ ವಿಷಯದಲ್ಲಿ ಚರ್ಚೆನಡೆದು ಮಿಶ್ರಜಾತಿಯ ಬಿತ್ತನೆಯನ್ನು ಸೊಸೈಟಿಗಳಲ್ಲೇ ತಯಾರಿಸಬೇಕೆಂದೂ, ಸೊಸೈಟಿಗಳ ಮೆಂಬರುಗಳು ಸಿಲ್ಕ್ ಫಾರಂನಿಂದ ಬಿತ್ತನೆ ತರಿಸಬೇಕಾಗಿದ್ದಲ್ಲಿ ರೇಷ್ಮೆ ಸೊಸೈಟಿಗಳ ಇನ್ಸ್‌ಪೆಕ್ಟರ ಮುಖೇನ ಹೋಗುವವನ್ನು ತಪ್ಪಿಸಬೇಕೆಂದೂ, ರೇಷ್ಮೆ ಫಾರಂ ಆಫೀಸರು ಸೊಸೈಟಿಗಳು ಆಗುವದಕ್ಕೆ ಮೊದಲು ಆ ಗ್ರಾಮಗಳಿಗೆ ದಯಮಾಡಿಸಿ ಸಾಕಾಣಿಕೆಯಲ್ಲಿ ಬುದ್ಧಿವಾದವನ್ನು ಕೊಡುತ್ತಿದ್ದಂತೆ ಈಗಲೂ ಏರ್ಪಡಿಸಬೇಕೆಂದೂ ಈ ಸೊಸೈಟಿಗಳಿಗೆ ಹೆಚ್ಚು ಹಣವು ಬೇಕೆಂದೂ, ಅಭಿಪ್ರಾಯಪಟ್ಟರು. ಕಮಿಟಿಯ ಮೆಂಬರುಗಳ ಕರ್ತವ್ಯ, ಪ್ರಧಾನಬ್ಯಾಂಕುಗಳಿಂದ ದ್ರವ್ಯಸಹಾಯಪಡೆಯುವದು, ಸಹಕಾರ ಪ್ರಚಾರಕ ಸಂಘ, ಬಾಕಿಗಳನ್ನು ವಸೂಲ್ಮಾಡುವ ವಿಷಯ ಕೈಗಾರಿಕೆ ಸೊಸೈಟಿ, ಆದಿಕರ್ನಾಟಕ ಸೊಸೈಟಿ ಈ ವಿಷಯಗಳು ಚರ್ಚಿಸಲ್ಪಟ್ಟವು. ಪ್ರತಿಮಿತವಿಲ್ಲದ ಜವಾಬ್ದಾರಿ ಸಂಘಗಳು ತಮ್ಮ ಮೆಂಬರುಗಳ ಆಸ್ತಿಪಟ್ಟಿಯನ್ನು ತಯಾರಿಸಿ, ಜನರಲ್ ಮೀಟಿಂಗುಗಳಲ್ಲಿ ಪ್ರತಿವರ್ಷವೂ ಚರ್ಚಿಸಿ ಬದಲಾವಣೆಗಳನ್ನು ರಿಕಾರ್ಡುಮಾಡತಕ್ಕದ್ದು. ಪ್ರಧಾನ ಬ್ಯಾಂಕಿನವರು, ಆಸ್ತಿಪಟ್ಟಿಯ ಆಧಾರದಮೇಲೆ ಸೊಸೈಟಿಗಳಿಗೆ ಕೊಡಬಹುದಾದ ಸಾಲದ ಪರಿಮಿತಿಯನ್ನು ನಿರ್ಧರಿಸತಕ್ಕದ್ದೆಂದೂ, ಅವಶ್ಯಕಬಿದ್ದಾಗ ಸಾಲದ ದರಖಾಸ್ತುಗಳನ್ನು ಅಜಮಾಯಿಷಿಮಾಡಿ ಕಮಿಟಿಯವರೇ ಸಾಲವನ್ನು ತರಿಸಲು ಅವಕಾಶವಿರಬೇಕೆಂದೂ ತೀರ್ಮಾನವಾಯಿತು. ಸೊಸೈಟಿಯ ಜವಾಬ್ದಾರಿಯ ಮೇಲೆ, ವ್ಯವಸಾಯ, ಕೈಗಾರಿಕೆ, ವ್ಯಾಪಾರ ಈ ಉದ್ದೇಶಗಳಿಗಾಗಿ ಒಂದು ವರ್ಷದ ವಾಯಿದೆಗೆ ಸಾಲವನ್ನು ತರಿಸಿಕೊಳ್ಳಲು ಅವಕಾಶ ಕೊಡಬೇಕಾಗಿ ತೀರ್ಮಾನವಾಯಿತು. ಚನ್ನಪಟ್ಟಣದಲ್ಲಿ ಸಹಕಾರ ಪ್ರಚಾರಕ ಸಂಘದ ಶಾಖೆಯನ್ನು ಸ್ಥಾಪಿಸಬೇಕೆಂದು ಗೊತ್ತಾಯಿತು. ಕೈಗಾರಿಕೆಯ ಡೈರೆಕ್ಟರು ಸಾಹೇಬರು ರಾಟೆಯನ್ನುಪಯೋಗಿಸುವ ವಿಚಾರದಲ್ಲೂ ಕೈಗಾರಿಕೆಯ ವಿಷಯದಲ್ಲೂ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಸಬ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮ॥ ಟಿ. ವೆಂಕಟರಮಣಯ್ಯನವರು ನೂಲುವ ವಿಷಯದಲ್ಲಿ ಸರ್ಕಾರದವರು ತೋರಿಸಿರುವ ಸೌಕರ್ಯಗಳನ್ನು ಕುರಿತು ಪ್ರಸ್ತಾಪಿಸಿದರು. ಮುಂದಿನ ವರ್ಷದಲ್ಲಿ ನಡೆಯುವ ನೂಲಿನ ಸ್ಪರ್ಧೆಯಲ್ಲಿ ಗೆದ್ದವರಿಗೆ ಮೊದಲನೇ ಬಹುಮಾನವಾಗಿ 25 ರೂ. ಗಳ ಒಂದು ಬೆಳ್ಳಿಯ ಬಟ್ಟಲನ್ನು ಕೊಡುವದಾಗಿ ಮ॥ ಸರಾಫ್ ವೆಂಕಟಗಿರಿಯಪ್ಪನವರು ವಾಗ್ದಾನಮಾಡಿದರು. ಚನ್ನಪಟ್ಟಣದ ತಾಲ್ಲೂಕು ಚಕ್ಕರೆ ಮ॥ ಚನ್ನೇಗೌಡರು ಹತ್ತಿಯನ್ನು ಒಂದು ಎಕರೆ ಮಟ್ಟಿಗಾದರೂ ಹಾಕಿ ಉತ್ತಮವಾಗಿ ಬೆಳೆದವರಿಗೆ 35 ರೂ. ಗಳ ಬಹುಮಾನಕೊಡುವದಾಗಿ ವಾಗ್ದಾನಮಾಡಿದರು. ವರ್ಷಾದ್ಯಂತವೂ ಹತ್ತಿಯನ್ನು ನೂತು 72 ಘೌಂಡಿಗೆ ಕಡಿಮೆಯಿಲ್ಲದೆ ದಾರವನ್ನು ತಯಾರಿಸಿದವರಿಗೆ ಕಾನ್‌ಫರೆನ್ಸ್ ಕಮಿಟಿಯವರು ತಾಲ್ಲೂಕು ಸಂಘಗಳ ಫಂಡಿನಿಂದ ವಸೂಲ್ಮಾಡಿ ಒಂದು ಬಹುಮಾನವನ್ನು ಕೊಡಬೇಕಾಗಿ ಸೂಚಿಸಲ್ಪಟ್ಟಿತು. ಕೈಗಾರಿಕೆಯ ಸಂಘದ ವಿಷಯ ಚರ್ಚೆನಡೆದು ಬೂಟ್ ತಯಾರಿಸುವ ಸಂಘಕ್ಕೆ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಒಂದು ಸ್ಥಳವನ್ನು ಕೊಡುವದಾಗಿ ಡೈರೆಕ್ಟರು ಅಪ್ಪಣೆಕೊಟ್ಟರು. ನೆಯ್ಗೆ ಕಸಬನ್ನು ಕಲಿಯಲು ಅಪೇಕ್ಷಿಸಿದಲ್ಲಿ ಸಹಾಯಮಾಡುವದಾಗಿ ತಿಳಿಸಿದರು. ಶೆಟ್ಟಿಹಳ್ಳಿ ಆದಿಕರ್ನಾಟಕ ಸೊಸೈಟಿಗೆ ಸರ್ಕಾರದಿಂದ, ಅವರು ಅಪೇಕ್ಷಿಸಿರುವ ಜಮೀನು ಕೊಡಿಸಿಕೊಟ್ಟಲ್ಲಿ ಕೇವಲ ಬಡವರಾದ ಈ ಜನಗಳು ಹೊಸಗ್ರಾಮವನ್ನು ಕಟ್ಟಿ ವ್ಯವಸಾಯದಿಂದ ಜೀವಿಸಲು ಅನುಕೂಲವಾಗುವದೆಂದು ಪ್ರಾರ್ಥಿಸಿದರು. ಖಾಸಿಗಿ ದೊಡ್ಡಮನುಷ್ಯರು ಸೊಸೈಟಿಗಳನ್ನು ಸೇರಿ ನಿಸ್ಪೃಹತ್ವದಿಂದ ಕೆಲಸಮಾಡಿ ದೇಶಸೇವೆಯನ್ನು ಮಾಡಬೇಕೆಂದು ಸಭಾಧ್ಯಕ್ಷರು ಅಪ್ಪಣೆಕೊಡಿಸಿದರು. ದಾಯರಿ ಸೊಸೈಟಿಯ ಪ್ರೆಸಿಡೆಂಟ್ ಮಿ॥ ಸಾಹುಕಾರ್ ಮಹಮುದ್‌ಖಾಸಿಂಖಾನ್‌ಸಾಹೇಬರು ಉತ್ತಮವಾದ ಸೊಸೈಟಿಗೆ ಬಹುಮಾನಿಸಲು ಒಂದು ಬೆಳ್ಳಿಯಬಟ್ಟಲನ್ನು ಕೊಟ್ಟಿರುವದಕ್ಕಾಗಿ ಅತ್ಯಂತ ಸಂತೋಷಪಟ್ಟು ಹಿಂದಿನಸಾಲಿನ ಕೆಲಸದಲ್ಲಿ ಸಮರ್ಪಕವೆಂದು ನಿರ್ಧರಿಸಲ್ಪಟ್ಟ ಮಂಗಳವಾರಪೇಟೆ ಶ್ರೀರಾಮದೇವರ ಕೋ ಆಪರೇಟಿವ್ ಸೊಸೈಟಿಗೆ ಆ ಬಟ್ಟಲನ್ನು ಬಹುಮಾನವಾಗಿ ಕೊಟ್ಟರು. ಮುಂದಿನ ಎರಡು ವರ್ಷಗಳಲ್ಲೂ ಸಾಹಸಪಟ್ಟು ಕೆಲಸಮಾಡಿ ಉತ್ತಮವೆನಿಸಿಕೊಂಡಲ್ಲಿ ಅದು ಸೊಸೈಟಿಯ ಸ್ವತ್ತಾಗುವದೆಂದು ತಿಳಿಸಿದರು. ಪ್ರೆಸಿಡೆಂಟರಿಗೂ ಡೈರೆಕ್ಟರಿಗೂ ಹಾರತುರಾಯಿ ಸಮರ್ಪಿಸಲ್ಪಟ್ಟಮೇಲೆ ಸಭಿಕರಿಗೆಲ್ಲಾ ಪುಷ್ಪವಿನಿಯೋಗವಾಯಿತು. ಅನೇಕವಿಧವಾಗಿ ಬುದ್ಧಿವಾದವನ್ನು ದಯಪಾಲಿಸಿದ ಅಗ್ರಾಸನಾಧಿಪತಿಗಳಿಗೂ, ಡೈರೆಕ್ಟರಿಗೂ ವಂದನೆಗಳನ್ನು ಅರ್ಪಿಸಿದಮೇಲೆ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನೆಯಿಂದ ಸಮ್ಮೇಳನವು ಮುಕ್ತಾಯವಾಯಿತು.

ಒಬ್ಬ ಸಹಕಾರಿ.

ರಾಜಧಾನಿಯ ವೀರಶೈವ ಅನಾಥಾಲಯದ ರಿಪೋರ್ಟು.

ರಾಜಧಾನಿಯಲ್ಲಿರುವ ವೀರಶೈವ ಅನಾಥಾಲಯದ ವಾರ್ಷಿಕೋತ್ಸವವು ಈ ಡಿಸೆಂಬರ್ ತಾ॥ 12 ರಲ್ಲಿ ಬೆಂಗಳೂರು ಡಾಕ್ಟರ್ ಟಿ. ಎಸ್. ನಂಜಪ್ಪನವರ ಅಧ್ಯಕ್ಷತೆಯಲ್ಲಿ ನೆರೆದಿದ್ದಾಗ್ಗೆ ಈ ಕೆಳಗೆ ಕಂಡ ರಿಪೋರ್ಟು ಓದಲ್ಪಟ್ಟು ಅಧ್ಯಕ್ಷರಿಗೆ ಅಭಿನಂದನಪತ್ರಿಕೆಯೊಪ್ಪಿಸಲ್ಪಟ್ಟಿತು.—

ಈ ವೀರಶೈವ ಅನಾಥಾಲಯವನ್ನು ವೇ॥ ಮಧುವನಹಳ್ಳಿ ಸ್ವಾಮಿಗಳೂ, ಮ॥ ರಾ॥ ಗಳಾದ ಟಿ. ಯಂ. ಸಿದ್ದಪ್ಪನವರೂ, ಅಕ್ಕಿಅಂಗಡಿ ಶಾಂತಲಿಂಗಪ್ಪನವರೂ, ಹುಜೂರು ಊಳಿಗದ ಕೋಟೆ ನಂಜಪ್ಪನವರೂ, ಗಂಡಿಸಿ ಶಿವನಂಜಪ್ಪನವರೂ, ಪಂಡಿತ ಪುಟ್ಟರಾಜಅರಸಿನವರೂ, ಬಿ. ಮಲ್ಲಪ್ಪನವರೂ ಸನ್ 1917-18 ರಲ್ಲಿ ಪ್ರಾರಂಭಮಾಡಿ ಮಹಾಜನಗಳ ಸಹಾಯವನ್ನು ಪಡೆಯುತ್ತ ಸುಮಾರು 2 ವರ್ಷಗಳವರಿಗೆ ನಡೆಯಿಸುತ್ತಿದ್ದರು. ಅನಂತರ ಈ ಅನಾಥಾಲಯವು ಕಾರಣಾಂತರಗಳಿಂದ ನಿಂತುಹೋದುದರಿಂದಲೂ, ಪುನರುಜ್ಜೀವನಗೊಳಿಸಬೇಕೆಂಬ ಅಪೇಕ್ಷೆಯಿಂದಲೂ ವೀರಮ್ಮನವರು ಟ್ರಸ್ಟಿಗಳನ್ನು ಏರ್ಪಡಿಸಿ, ಟ್ರಸ್ಟ್‌ಡೀಡ್ ಮೂಲಕ ತಮ್ಮ ಚರಸ್ಥಿರ ಆಸ್ತಿಗಳನ್ನೆಲ್ಲಾ ಅನಾಥಾಲಯಕ್ಕೆ ವಹಿಸಿದರು. ಈ ವೀರಮ್ಮನವರು ಗುಬ್ಬಿ ತಾಲ್ಲೂಕು ಕಡಬಾಲವೆಂಬ ಗ್ರಾಮದಲ್ಲಿ ಪ್ರಸಿದ್ಧರೂ, ಪರೋಪಕಾರನಿರತರೂ, ಗುರುಜಂಗಮ ಪ್ರೇಮಿಗಳೂ ಆದ ಶ್ರೀಯುತ ನಂಜುಂಡಪ್ಪನವರ ಧರ್ಮಪತ್ನಿಯವರಾದ ಭದ್ರಮ್ಮನವರ ಗರ್ಭಾಂಬುಧಿಯಲ್ಲಿ 1873 ನೆಯ ಇಸವಿಯಲ್ಲಿ ಜನ್ಮವೆತ್ತಿದರು. ಇವರಿಗೆ ನಾಲ್ಕುಜನ ಸಹೋದರಿಯರಿದ್ದರು. ಅವರುಗಳೊಳಗೆ ವೀರಮ್ಮನವರಲ್ಲಿ ನೆಲಗೊಂಡಿರುವ ಸೌಶೀಲ್ಯವೂ, ಸಾದ್ಗುಣ್ಯವೂ, ಪರೋಪಕಾರ ಆಸಕ್ತಿಯೂ, ದೈವಗುರುಗಳಲ್ಲಿ ಅಸಾಧಾರಣವಾದ ಭಕ್ತಿಯೂ, ಬಂಧುಗಳಲ್ಲಿ ನೈಜವಾದ ಪ್ರೇಮವೂ, ಸ್ವಮತದಲ್ಲಿ ನಿಷ್ಠೆಯೂ ಮುಂತಾದ ಸದ್ಗುಣಗಳು ಜನಗಳ ಮನಸ್ಸನ್ನು ಆಕರ್ಷಿಸುತ್ತಿದ್ದುವು. ಈ ವೀರಮ್ಮನವರ ಗುಣಾತಿಶಯಗಳು ಇವರ ಮಾತಾಪಿತೃಗಳಿಗಂತೂ ಅತ್ಯಂತ ಆಶ್ಚರ್ಯವನ್ನುಂಟುಮಾಡುತ್ತಿದ್ದುವು. ಇವರನ್ನು ತಮ್ಮ 12 ನೆಯ ವರ್ಷದಲ್ಲಿ ರಾಜಧಾನಿಯಲ್ಲಿದ್ದ ಶ್ರೀ॥ ಭದ್ರಪ್ಪನವರಿಗೆ ಕೊಟ್ಟು ವಿವಾಹಮಾಡಿದರು. ಇವರು ನಮ್ಮ ಮೈಸೂರು ನಗರಕ್ಕೆ ಬಂದಮೇಲೂ ಪೂರ್ವದಂತೆಯೇ ವಿದ್ಯಾರ್ಥಿಗಳಿಗೂ ಇತರ ಅತಿಥಿ ಅಭ್ಯಾಗತರಿಗೂ ಯಥೋಚಿತವಾಗಿ ಸಹಾಯವನ್ನು ಮಾಡುತ್ತಲೇ ಇದ್ದು, ಪಾರಮಾರ್ಥಿಕವಾದ ಸಂಸ್ಕಾರವು ದಿನೇ ದಿನೇ ಹೆಚ್ಚುತ್ತಲಿದ್ದು, ತಮ್ಮ ನಾಲ್ವತ್ತನೆಯ ವರ್ಷದಲ್ಲಿ ಉದಾರಬುದ್ಧಿಯಿಂದ ತಮ್ಮ ಸ್ವಾಧೀನದಲ್ಲಿದ್ದ ಸುಮಾರು ಆರು ಸಾವಿರ ರೂಪಾಯಿಗಳು ಬಾಳುವ ಚರಸ್ಥಿರ ಆಸ್ತಿಗಳನ್ನು ವೀರಶೈವ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿದ್ವಾರಾ ಶಿವಪ್ರೀತಿಯಾಗಲೆಂದು ದಾನಮಾಡಿದರು. ಇವರು ತಮ್ಮ ಆಸ್ತಿಗಳನ್ನೆಲ್ಲಾ ದಾನಮಾಡುವುದಕ್ಕೆ ಮೊದಲೇ ಗಣಪತಿ ದೇವಸ್ಥಾನ ಮುಂತಾದ ಕೆಲವು ದೇವಾಲಯಗಳಿಗೆ ಬೆಳ್ಳಿಕವಚ ಮುಂತಾದುವುಗಳನ್ನು ಮಾಡಿಸುತ್ತಾ ದೇವರಸೇವೆಯಲ್ಲಿಯೂ ವಿಶೇಷವಾಗಿ ನಿರತರಾಗಿದ್ದರು. ಇವರು ಮಾಡಿದ ದಾನದ ಉದ್ದೇಶವನ್ನು ಸಫಲಗೊಳಿಸುವುದಕ್ಕಾಗಿ ಇವರು ಮಾಡಿದ ದಾನದ್ರವ್ಯದ ಆಧಾರದಿಂದ ಶ್ರೀ ಚಿಕ್ಕಬಸವೇಶ್ವರ ದೇವಸ್ಥಾನದಲ್ಲಿ ವೀರಶೈವ ಅನಾಥಾಲಯವು 1922 ರಲ್ಲಿ ಪ್ರಾರಂಭವಾಯಿತು. ಪ್ರಾರಂಭಕಾಲದಲ್ಲಿ ವೀರಮ್ಮನವರ ದಾನದ್ರವ್ಯದ ಬಡ್ಡಿಯಿಂದ ಮೂರುಜನ ವಿದ್ಯಾರ್ಥಿಗಳಿಗೆ ಮಾತ್ರ ಭೋಜನವಾಗುತ್ತಲಿತ್ತು. ಇವರು ದಾನಶಾಸನವನ್ನು ಬರೆಯುವ ಕಾಲದಲ್ಲಿ ಕೋಟೆಯೊಳಗಿರುವ ತ್ರಿಣಯನೇಶ್ವರ ದೇವಸ್ಥಾನದಲ್ಲಿ ನಡೆಯುವ ಮಾರ್ಕಂಡೇಯೋತ್ಸವಕ್ಕಾಗಿ ಪ್ರತಿವರ್ಷದಲ್ಲಿಯೂ 25 ರೂಪಾಯಿಗಳನ್ನೂ, ವೀರನಗೆರೆ ಬಸವೇಶ್ವರ ದೇವಸ್ಥಾನಕ್ಕೆ ದಾನದ್ರವ್ಯದಲ್ಲಿ 200 ರೂಪಾಯಿಗಳ ಉತ್ಪತ್ತಿಯನ್ನೂ ಕೊಡಬೇಕೆಂದು ಬರೆದಪ್ರಕಾರ ಹಾಗೆಯೇ ನಡೆಯಿಸಿಕೊಂಡು ಬರುತ್ತಲಿದೆ.

ಈ ದಾನಶಾಸನಕ್ಕೆ ಮ॥ ರಾ॥ ಗಳಾದ ಅತ್ತಿಗೋಡು ಬಸಪ್ಪನವರ, ಟಿ. ಯಂ. ಸಿದ್ದಪ್ಪನವರೂ, ಕೋಟೆ ನಂಜಪ್ಪನವರೂ, ಬಿ. ಚಿಕ್ಕಮ[illegible] ನವರೂ, ಎನ್. ಬಸಪ್ಪನವರೂ, ಸಿ. ದಾಸಪ್ಪನವರೂ, ಹುಜೂ[illegible] ಬಸವಲಿಂಗಪ್ಪನವರೂ, ಪಂಡಿತ ಪುಟ್ಟರಾಜೇಅರಸಿನವರೂ ಇ[illegible] ಟ್ರಸ್ಟಿಗಳಾಗಿಯೂ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷ[illegible] ಬರು ಪ್ರೆಸಿಡೆಂಟರಾಗಿಯೂ ಇರತಕ್ಕದ್ದೆಂದು ಬರೆದ ಪ್ರಕಾರ ಇವರ [illegible] ಕೆಯಂತೆ ಮೇಲ್ಕಂಡವರೆಲ್ಲರೂ ಟ್ರಸ್ಟಿಗಳಾಗಿಯೇ ಇರುತ್ತಾರೆ. ಇ[illegible] ಗಳಲ್ಲಿ ಡೆಪ್ಯುಟಿಕಮಿಷನರವರು ಮಾತ್ರ ಪ್ರೆಸಿಡೆಂಟರಾಗಿರಲು ಅನುಮತಿ[illegible] ಇದ್ದುದರಿಂದ ಇವರ ಸ್ಥಾನಕ್ಕೆ ಡಾಕ್ಟರ್ ಟಿ. ಎಸ್. ಸಿದ್ದಪ್ಪನವರ ಟ್ರಸ್ಟಿಗಳಾಗಿರುವದಲ್ಲದೆ ಪ್ರೆಸಿಡೆಂಟರಾಗಿಯೂ ಇರತಕ್ಕದೆಂದು ತಾ॥ 13-4-1921 ರಲ್ಲಿ ಚುನಾಯಿಸಿಕೊಂಡಿರುತ್ತದೆ. ಈ ಟ್ರಸ್ಟಿಗಳ ಪೈಕಿ ಮ॥ ಅತ್ತಿಗೋಡು ಬಸಪ್ಪನವರು ಶಿವಾಧೀನವಾದುದರಿಂದ ಅವರ ಬದಲು ತಾ॥ 10-4-1909ರಲ್ಲಿ ಮ॥ ಗಂಡಿಸಿ ಶಿವನಂಜಪ್ಪನವರನ್ನು ತೆಗೆದುಕೊಂಡಿತು. ಮ॥ ಕೋಟೆ ನಂಜಪ್ಪನವರು ಮತ್ತು ಬಿ. ಚಿಕ್ಕಮಲ್ಲಪ್ಪನವರು ಶಿವಾಧೀನರಾದುದರಿಂದ ಇವರ ಸ್ಥಾನಕ್ಕೆ ತಾ॥ 11-6-1925ರಲ್ಲಿ ಮ॥ ಹುಜೂರು ಊಳಿಗದ ಪುಟ್ಟಬಸಪ್ಪನವರನ್ನೂ, ಚಾಮಪ್ಪನವರನ್ನೂ ಟ್ರಸ್ಟಿಗಳನ್ನಾಗಿ ತೆಗೆದುಕೊಂಡಿದೆ. ಪ್ರೆಸಿಡೆಂಟರು ಮತ್ತು ಟ್ರಸ್ಟಿಗಳು ಶ್ರಮವಹಿಸಿ ವೀರಮ್ಮನ ಫಂಡಿನಿಂದಲೂ, ರಾಜಧಾನಿಯ ವೀರಶೈವಮಹಾಜನಗಳ ಮಾಸಿಕ ಚಂದಾರೂಪದಿಂದಲೂ ಧಾನ್ಯರೂಪದಿಂದಲೂ ಸಹಾಯವನ್ನು ಪಡೆದು ವಿದ್ಯಾರ್ಥಿಗಳ ಸಂಖ್ಯೆಯು ಅನಾಥಾಲಯದಲ್ಲಿ ಹೆಚ್ಚುವಂತೆ ಪ್ರಯತ್ನಮಾಡಿದರು. ಇಷ್ಟರೊಳಗಾಗಿಯೇ ನಮ್ಮ ದಯಾಳು ಸರ್ಕಾರದವರು 1924 ನೆಯ ಡಿಸೆಂಬರ್ ಲಾಗಾಯ್ತು ನಮ್ಮ ಅನಾಥಾಲಯಕ್ಕೆ ಮಾಹೆಯಾನಾ 50 ರೂ. ಗ್ರ್ಯಾಂಟು ಬರುವಂತೆ ಅಪ್ಪಣೆಮಾಡಿರುತ್ತಾರೆ. ಮತ್ತು ಕೈ॥ ಬಸವಮ್ಮಯ್ಯನವರ ಫಂಡಿನಿಂದ ಮಾಹೆಯಾನಾ 35 ರೂಪಾಯಿಗಳು ಮತ್ತು ಮರಿಮಲ್ಲಪ್ಪನವರ ಹೈಸ್ಕೂಲಿನಿಂದ ಮಾಹೆಯಾನಾ 8 ರೂಪಾಯಿಗಳು, ಮೆಸಾನಿಕ್ ಲಾಡ್ಜಿನಿಂದ ಮಾಹೆಯಾನಾ 10 ರೂಪಾಯಿಗಳೂ ಸಹಾಯವಾಗುತ್ತಲಿವೆ. ಪ್ರಕೃತದಲ್ಲಿ ನಮ್ಮ ವೀರಶೈವ ಅನಾಥಾಲಯದಲ್ಲಿ ಪ್ರಾರಂಭದಲ್ಲಿ ಅಂದರೆ 1922-23 ರಲ್ಲಿ ಮೂರುಜನ ವಿದ್ಯಾರ್ಥಿಗಳಿಗೆ ಮಾತ್ರ ಭೋಜನವಾಗುತ್ತಿತ್ತು. 1923-24 ರಲ್ಲಿ 12 ಜನ ವಿದ್ಯಾರ್ಥಿಗಳು ಭೋಜನಮಾಡುವುದಕ್ಕೆ ಉಪಕ್ರಮವಾಯಿತು. 1924-25 ರಲ್ಲಿ 22 ಜನ ಅನಾಥರಾದ ವಿದ್ಯಾರ್ಥಿಗಳಿಗೂ, 1925-26 ರಲ್ಲಿ 30 ಜನ ವಿದ್ಯಾರ್ಥಿಗಳಿಗೂ ಅನುಕೂಲವಾಯಿತು. 1926-27 ರಲ್ಲಿ 35 ಜನ ವಿದ್ಯಾರ್ಥಿಗಳಿಗೆ ಭೋಜನಕ್ಕೆ ಅನುಕೂಲವಾಗಿದೆ.

ಈ ರೀತಿಯಾಗಿ ನಮ್ಮ ಅನಾಥಾಲಯವು ಧರ್ಮನಿರತಳಾದ ವೀರಮ್ಮನವರ ಧರ್ಮಸಹಾಯದಿಂದ ಊರ್ಜಿತವಾಗಿರುವುದು ಸರಿಯಷ್ಟೆ. (ಅನಾಥಾಲಯವೆಂಬ ಕಲ್ಪವೃಕ್ಷಕ್ಕೆ ವೀರಮ್ಮನವರು ಬೀಜಭೂತರಾಗಿರುವುದರಿಂದ) ಇವರು ಶಿವಲೋಕದಲ್ಲಿ ನಿತ್ಯಾನಂದವನ್ನು ಹೊಂದಿರುವುದಲ್ಲದೆ, ಐಹಿಕದಲ್ಲಿಯೂ ತಮ್ಮ ಕೀರ್ತಿಶರೀರವನ್ನು ಯಾವಾಗಲೂ ಉಳಿದಿರುವಂತೆ ಮಾಡಿಕೊಂಡಿರುವುದರಿಂದ ಧರ್ಮಸಹಾಯಮಾಡಿದವರ ವರ್ಗದಲ್ಲಿ ಇವರೂ ಸೇರುವುದರಿಂದ ವೀರಮ್ಮನವರ ವಿಚಾರದಲ್ಲಿ ನಾವುಗಳೆಲ್ಲರೂ ಋಣಿಗಳಾಗಿರಬೇಕಾಗಿದೆ. ಮತ್ತು ಅನಾಥಾಲಯಕ್ಕೆ ಮಾಹೆಯಾನ 50 ರೂಪಾಯಿಗಳನ್ನು ಸಹಾಯಮಾಡಿದ ಮೈಸೂರು ಮಹಾರಾಜರವರ ಸರ್ಕಾರಕ್ಕೂ ಮತ್ತು ಸಹಾಯಮಾಡುವ ಪ್ರವೃತ್ತಿಯನ್ನು ಸರ್ಕಾರಕ್ಕೆ ಹುಟ್ಟಿಸಿದ ಒಂದನೇ ಕೌನ್ಸಿಲರ್ ಮ॥ ರಾ॥ ಕೆ. ಆರ್. ಶ್ರೀನಿವಾಸೈಯಂಗಾರ್‌ರವರಿಗೂ, ಮುಜರಾಯಿ ಕಮಿಷನರ್ ಮ॥ ರಾ॥ ಸಿ. ಎಸ್. ಬಾಲಸುಂದರಮುದ್ಲಿಯಾರ್‌ರವರಿಗೂ, ವಿದ್ಯಾಭ್ಯಾಸದ ಇನ್ಸ್. ಜನರಲ್ ಮ॥ ರಾ॥ ಕೆ. [illegible] ರವರಿಗೂ, ಮೈಸೂರು ಡೆಪ್ಯುಟಿಕಮಿಷನರ್ ಮ॥ ರಾ॥ [illegible] ರವರಿಗೂ, ಮೈಸೂರು ಮ್ಯುನಿಸಿಪಲ್ [illegible] ಮ॥ ರಾ॥ ಸಿ. [illegible]

ಪಾಲಾಚಾರ್‌ರವರಿಗೂ, ಸರ್ಕಲ್ ಇನ್ಸ್. ಡಾಕ್ಟರ್ ಪಾಲ್‌ಚಿನ್ನಪ್ಪನವರಿಗೂ ಮತ್ತು ಅರಮನೆಯಿಂದ ಮಾಹೆಯಾನ 40 ಸೇರು ಅಕ್ಕಿಯನ್ನು ಸಹಾಯಮಾಡಿಸಿದ ಮ|| ರಾ|| ಎಸ್. ಪಿ. ರಾಜಗೋಪಾಲಾಚಾರ್‌ರವರಿಗೂ, ಮುಜರಾಯಿಭಕ್ಷಿ ರಾಜಕವಿಭೂಷಣ ಲಿಂಗರಾಜಅರಸಿನವರಿಗೂ ವಂದಿಸುತ್ತೇನೆ. ಮೈಸೂರು ಮೆಸಾನಿಕಲ್‌ಲಾಡ್ಜಿನ, ಮರಿಮಲ್ಲಪ್ಪನವರ ಹೈಸ್ಕೂಲಿನ ಬಸವಮ್ಮಯ್ಯನವರ ಫಂಡಿನ ಮೆಂಬರುಗಳಿಗೂ ಈ ಅನಾಥಾಲಯಕ್ಕೆ ಮೊದಲಿನಿಂದಲೂ ಧಾನ್ಯರೂಪವಾಗಿಯೂ ದ್ರವ್ಯರೂಪವಾಗಿಯೂ ಸಹಾಯ ಮಾಡಿದ ಮತ್ತು ಮಾಡುತ್ತಲಿರುವ ರಾಜಧಾನಿಯ ಮತ್ತು ಪರಸ್ಥಳದ ಅಖಿಳ ಮಹಾಜನಗಳಿಗೂ ವಂದಿಸುತ್ತೇನೆ. ಮತ್ತು ಈ ಅನಾಥಾಲಯದ ಉಪಯೋಗಕ್ಕಾಗಿ ಚಿಕ್ಕ ಬಸವೇಶ್ವರ ದೇವಸ್ಥಾನದಲ್ಲಿ ಸ್ಥಳವನ್ನು ಉಚಿತವಾಗಿ ಬಿಟ್ಟುಕೊಟ್ಟಿರುವ ದೇವಸ್ಥಾನದ ಕಮಿಟಿ ಪ್ರೆಸಿಡೆಂಟ್ ಮ|| ರಾ|| ಬಿಡದಿ ಭಕ್ಷಿ ಮುದ್ದರಾಜೇಅರಸಿನವರಿಗೂ, ಆ ಕಮಿಟಿಯ ಇತರ ಮೆಂಬರುಗಳಿಗೂ ವಂದಿಸುತ್ತೇನೆ. ಈ ಅನಾಥಾಲಯದ ಮ್ಯಾನೇಜರ್ ಕೆಲಸವನ್ನು ಸಮರ್ಪಕವಾಗಿ ಯಾವ ನ್ಯೂನಾತಿರೇಕಗಳಿಲ್ಲದೆ ತೃಪ್ತಿಕರವಾಗಿ ಅನಾಥಾಲಯವು ಪ್ರಾರಂಭವಾದ ಲಾಗಾಯ್ತು 1924 ನೇ ಇಸವಿ ಜುಲೈ ಆಖೈರು ವರಿವಿಗೂ ತುಂಬಾ ಮುತುವರ್ಜಿಯಿಂದ ಕಾರ್ಯನಿರ್ವಾಹಮಾಡುತ್ತಿದ್ದು ಮೃತಪಟ್ಟ ಕೋಟೆ ನಂಜಪ್ಪನವರ ಆತ್ಮಕ್ಕೆ ಸುಖಶಾಂತಿಯನ್ನು ಉಂಟುಮಾಡಲೆಂದು ಈಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ಇವರ ತರುವಾಯ ನಿಯಾಮಕರಾದ ಹುಣಸೂರು ಊಳಿಗದ ಮ|| ಪುಟ್ಟಬಸಪ್ಪನವರೂ, ಚಾಮಪ್ಪನವರೂ ಅತ್ಯಂತ ವಿಚಕ್ಷಣೆಯಿಂದ ಅನಾಥಾಲಯದ ಕಾರ್ಯವನ್ನು ಜರುಗಿಸುತ್ತಿರುವುದಲ್ಲದೆ ಕಮಿಟಿ ಮೆಂಬರುಗಳ ಸಲಹೆಯಿಂದ ಈ ಅನಾಥಾಲಯವು ಬಾಲಚಂದ್ರನಂತೆ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಲಿದೆಯೆಂಬ ಅಂಶವನ್ನು ನಿಮಗೆ ತಿಳಿಸಲು ಹರ್ಷಿಸುತ್ತೇನೆ. ಮತ್ತು ಈಗಿರುವ ಸ್ಥಳವು ವಿದ್ಯಾರ್ಥಿಗಳ ವಾಸಕ್ಕೆ ಸಾಕಾಗುವುದಿಲ್ಲವಾದುದರಿಂದ ಪ್ರತ್ಯೇಕವಾದ ಕಟ್ಟಡವನ್ನು ಕಟ್ಟಿಸುವಂತೆಯೂ ಮತ್ತು ಈ ಅನಾಥಾಲಯಕ್ಕೆ ಮೊದಲಿಗಿಂತಲೂ ವಿಶೇಷವಾದ ಸಹಾಯವನ್ನು ಕೊಡುವಂತೆಯೂ ಮಹಾಜನಗಳೆಲ್ಲರ ಹೃದಯದಲ್ಲಿ ಪರಮೇಶ್ವರನು ಪ್ರೇರಿಸುವುದಲ್ಲದೆ ಈ ಪುಣ್ಯ ಕಾರ್ಯದಿಂದ ವಿದ್ಯಾರ್ಥಿಗಳಿಗೆ ವಿಶೇಷವಾದ ವಿದ್ಯಾಲಾಭ ಉಂಟಾಗಿ ಮತದಲ್ಲಿ ಧಾರ್ಮಿಕ, ನೈತಿಕ, ತಾತ್ವಿಕ ಮುಂತಾದ ಸಂಪತ್ತುಗಳು ಹೆಚ್ಚಲೆಂದು ಈ ಅನಾಥಾಲಯದ ಟ್ರಸ್ಟಿಗಳು ಶ್ರೀಸಾಂಬಮೂರ್ತಿಯನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತಾರೆ.

ಟಿ. ಎಸ್. ಸಿದ್ದಪ್ಪ, ಪ್ರೆಸಿಡೆಂಟ್.

ಅಭಿನಂದನಪತ್ರಿಕೆ.

ನಮ್ಮ ರಾಜಧಾನಿಯಲ್ಲಿ ಪೂರ್ವಕಾಲದಿಂದಲೂ ಪ್ರಸಿದ್ಧಿಪಡೆದ ತಿರುಮಾಳಿಗೆವಂಶದವರು ಶ್ರೀರಂಗಪಟ್ಟಣ ಮೈಸೂರುಗಳಲ್ಲಿ ತಮ್ಮ ವಂಶಪಾರಂಪರ್ಯದಿಂದಲೂ ಕರ್ಣಾಟಕ ವೈದ್ಯವನ್ನು ಮಾಡುತ್ತ ಅರಮನೆಯಲ್ಲಿ ಗುರಿಕಾರತನದಲ್ಲಿದ್ದು ತ್ರಿಕರಣಶುದ್ಧವಾದ ರಾಜಭಕ್ತಿಯನ್ನು ಪ್ರದರ್ಶಿಸುತ್ತ ನಮ್ಮನ್ನಾಳಿದ ಶ್ರೀಮುಮ್ಮಡಿಕೃಷ್ಣರಾಜಒಡೆಯರ್ ಬಹದ್ದೂರ್‌ರವರಿಗೂ ಇವರ ವಂಶೀಕರಿಗೂ ಪ್ರೇಮಪಾತ್ರರಾಗಿದ್ದು, ಜಹಗೀರಿಯನ್ನೂ, ಅನೇಕ ಬಹುಮಾನಗಳನ್ನೂ ಪಡೆದು ಸುಪ್ರಸಿದ್ಧರಾದುದು ಸರಿಯಷ್ಟೆ. ತಾವು ಈ ವಂಶದಲ್ಲಿ ಹುಟ್ಟಿದ ತಿರುಮಾಳಿಗೆ ಸಿದ್ದಪ್ಪನವರ ಪುತ್ರರೆನಿಸಿ ಎಂ. ಬಿ. ಸಿ. ೧. ಎಂಬ ಡಾಕ್ಟರ್ ಪರೀಕ್ಷೆಯನ್ನು ಕೊಟ್ಟು ದೊಡ್ಡ ಅಧಿಕಾರದಲ್ಲಿ ಪ್ರದರ್ಶಿಯುಕ್ತರಾಗಿ, ಅನೇಕ ಡಿಸ್ಟ್ರಿಕ್ಟುಗಳಲ್ಲಿ ಅಸಾಧಾರಣವಾದ ವಿದ್ಯಾ ಬುದ್ಧಿ [illegible]ಗಳಿಂದ ಜನಗಳು ಮೆಚ್ಚುವಂತೆಯೂ, ದೇವರು ಮೆಚ್ಚುವಂತೆಯೂ, [illegible]ವನ್ನು ಮಾಡಿ, ಆಯಾಯ ಡಿಸ್ಟ್ರಿಕ್ಟಿನ ಪ್ರಜೆಗಳಿಂದ ಸುವರ್ಣ ಬಾಲ್ಲಿ[illegible] ಮೊದಲಾದ ಅನೇಕ ಬಹುಮಾನಗಳನ್ನು ಪಡೆದು, ಅರಮನೆಯ ಬಿಡೋಪ್ಪಾ ನೌಕರಿಮಾಡಿ ನಮ್ಮ ಮಹಾಪ್ರಭುಗಳ ಪ್ರೇಮವನ್ನೂ ಸಂಪಾದಿಸಿ[illegible]ಯಲ್ಲಿದ್ದ[illegible]ವಯಸ್ಸಿನಲ್ಲಿ ವಿಶ್ರಾಂತಿಸುಖವನ್ನು ಹೊಂದಿರುತ್ತಿರುವುದು ಸರ್ವರಿಗೂ [illegible]ದರಲ್ಲಿ [illegible]ವೇ ಆಗಿದೆ. ತಾವು ತುಮಕೂರಿನಲ್ಲಿ ಅಧಿಕಾರ ಮಾಡುತ್ತಿರುವಾಗ ಸಾ[illegible]ತಲ್ಲಿ ಒಂದು ಬಾಲಿಕಾಪಾಠಶಾಲೆಯನ್ನು ಕಟ್ಟಿಸುವುದಕ್ಕಾಗಿ ತುಂಬಾ ಶ್ರಮವನ್ನು ವಹಿಸಿ ನಿಮ್ಮ ಅಮೋಘವಾದ ಕಾಲವನ್ನೂ, ದ್ರವ್ಯವನ್ನೂ, ವ್ಯಯಮಾಡಿ, ಕೈಕೊಂಡಿದ್ದ ಧರ್ಮಕಾರ್ಯವನ್ನು ಸಫಲಗೊಳಿಸಿದಿರಿ. ಬಾಲಿಕಾಪಾಠಶಾಲೆಯ ಕಟ್ಟಡದ ಧನಾರ್ಜನೆಗಾಗಿ ಒಂದು ನಾಟಕವನ್ನು ಸಹ ತಮ್ಮ ಸ್ವಂತ ಖರ್ಚಿನಿಂದ ಏರ್ಪಡಿಸಿದ್ದುದನ್ನು ತಿಳಿದು ನಮ್ಮ ಮಹಾಪ್ರಭುವರ್ಯರು ಪರಾಂಬರಿಸಿ ಶ್ಲಾಘಿಸಿದ್ದುದೂ ಅನೇಕರಿಗೆ ತಿಳಿದ ವಿಷಯವೇ ಆಗಿದೆ. ತಾವು ಅಧಿಕಾರಮಾಡಿದ ಡಿಸ್ಟ್ರಿಕ್ಟುಗಳಲ್ಲಿ ಅನೇಕರು ನಿಮ್ಮ ಸ್ವಜನಾದ ಉಪಕಾರಗಳನ್ನು ಈಗಲೂ ವಿಶೇಷವಾಗಿ ಶ್ಲಾಘಿಸುತ್ತಲಿದ್ದಾರೆ. ಇದಲ್ಲದೆ ಹಿಂದೆ ಎರಡನೆಯ ವೀರಶೈವಮಹಾಸಭೆಯನ್ನು ಬೆಂಗಳೂರಿನಲ್ಲಿ ನಡಿಸಬೇಕೆಂದು ನಿರ್ಧರಿಸಿದಾಗ ತಾವು ಸ್ವಾಗತಸಂಘದ ಸೆಕ್ರೆಟರಿಯಾಗಿದ್ದು ಸಭಾಕಾರ್ಯವನ್ನು ಸಾಂಗಗೊಳಿಸುವುದಕ್ಕಾಗಿ ಬದ್ಧಕಂಕಣರಾಗಿದ್ದುದರಿಂದ ಮೂರುತಿಂಗಳು ರಜವನ್ನು ಪಡೆದು ಸಭಾಕಾಲದಲ್ಲಿ ಬಂದೊದಗಿದ ಅನೇಕಾನೇಕ ವಿಘ್ನಗಳನ್ನೆಲ್ಲಾ ಕ್ಲೇಶವಿಲ್ಲದೆ ಕಾಲೋಚಿತವಾದ ಸಂವಿಧಾನಗಳಿಂದ ಪರಿಹರಿಸಿ ಮಹಾಸಭಾಕಾರ್ಯವನ್ನು ತೃಪ್ತಿಕರವಾಗಿ ನಡೆಸಿ, ಮೈಸೂರುಸಂಸ್ಥಾನದ ವೀರಶೈವಜನಗಳಿಗೆಲ್ಲಾ ಗೌರವವನ್ನುಂಟುಮಾಡಿರುತ್ತೀರಿ. ಈ ಸಭೆಯ ಸ್ವಾಗತಕಮಿಟಿಯ ಮೆಂಬರುಗಳೆಲ್ಲಾ ಪ್ರಾಮುಖ್ಯತೆಯನ್ನು ಹೊಂದಿ ಸಭೆಯ ಕಾರ್ಯವನ್ನೆಲ್ಲಾ ತಾವೇ ವಹಿಸಿಕೊಂಡು ಈ ಮಹಾಸಭಾಕಾರ್ಯದ ಪ್ರಾರಂಭದಲಾಗಾಯಿತು ಆಖೈರುವರಿವಿಗೂ ತುಂಬಾ ಶ್ರಮವಹಿಸಿ, ಶಾಂತಿಯಿಂದಲೂ, ಸೈರಣೆಯಿಂದಲೂ, ಶ್ರದ್ಧೆಯಿಂದಲೂ, ಕ್ಷಮೆಯಿಂದಲೂ ಪ್ರಾರಂಭಿಸಿದ ಕಾರ್ಯಕ್ಕೆ ಜಯವನ್ನುಂಟುಮಾಡಿ ಯಶಸ್ವಿಗಳಾದಿರೆಂಬ ವಿಷಯವು ನಮ್ಮಗಳೆಲ್ಲರ ಜ್ಞಾಪಕದಲ್ಲಿ ಇದ್ದೇ ಇರುವುದು. ತಾವು ಅನೇಕ ವರ್ಷಗಳ ಹಿಂದೆ ವಿಶ್ರಾಂತಿಯನ್ನು ಹೊಂದಿದ್ದರೂ ಅಸ್ವಸ್ಥರಾಗಿರುವ ಅನೇಕರು ತಮ್ಮಿಂದ ಚಿಕಿತ್ಸೆಯನ್ನು ಹೊಂದಿಯೂ ಹೊಂದುತ್ತಲೂ ಇರುವುದರಿಂದ ಅನೇಕರು ತಮ್ಮಲ್ಲಿ ಕೃತಜ್ಞತಾಭಾವವನ್ನು ತೋರ್ಪಡಿಸುತ್ತಲಿದ್ದಾರೆ. ಮತ್ತು ತಾವು ವೈದ್ಯಚಿಕಿತ್ಸೆಯಲ್ಲಿ ಪ್ರಸಿದ್ಧರಾಗಿರುವುದಲ್ಲದೆ ನೇತ್ರ ವೈದ್ಯ ಚಿಕಿತ್ಸೆಯಲ್ಲಿಯೂ ಅದ್ವಿತೀಯರಾಗಿರುವುದರಿಂದ ತಮ್ಮ ಸ್ವಪ್ರೌಢಿಮೆಗಳನ್ನು ನೋಡಿ ಬೆಂಗಳೂರು ಪಟ್ಟಣದಲ್ಲಿರುವ ವಿದ್ಯಾರ್ಥಿಗಳ ದೇಹಾರೋಗ್ಯದ ಪರೀಕ್ಷೆಯಲ್ಲಿ ನಿಯಮಿಸಿ ಮಾಹೆಯಾನ ಇದಕ್ಕಾಗಿ 200 ರೂ. ಗಳನ್ನು ಗೌರ್ನಮೆಂಟಿನವರು ತಮಗೆ ಅಲೋಯನ್ಸ್ ಕೊಡುತ್ತಲಿರುವುದು ಸ್ತುತ್ಯವಾದ ವಿಷಯವಾಗಿದೆ. ತಾವು ಸ್ನೇಹಪರರಾಗಿ ಅನೇಕಸಾವಿರ ರೂಪಾಯಿಗಳನ್ನು ಸ್ನೇಹಿತರಿಗಾಗಿ ವ್ಯಯಮಾಡಿರುತ್ತೀರಿ. ತಾವು ಮಾಡಿರುವ ಮತಸೇವಾ ಪ್ರಜಾಸೇವಾ ಮುಂತಾದ ಸತ್ಕಾರ್ಯಗಳು ಸರ್ವರಿಂದಲೂ ಶ್ಲಾಘನೀಯವಾದುವುಗಳಾಗಿವೆ. ತಮ್ಮ ಗಾಂಭೀರ್ಯವಾದ ಹೃದಯದಲ್ಲಿ ಸ್ವಭಾವಸಿದ್ಧವಾಗಿ ನೆಲೆಗೊಂಡಿರುವ ಪರೋಪಕಾರಹಿತಚಿಂತನೆ ಮುಂತಾದ ಸದ್ಗುಣಗಳು ನಮ್ಮನ್ನು ಆಕರ್ಷಿಸುವುದರಿಂದ ಈ ಅನಾಥಾಲಯದಮೇಲೂ ಪೂರ್ಣ ಕಟಾಕ್ಷವಿಟ್ಟು ತಮ್ಮ ಅಮೋಘವಾದ ಸಹಾಯವನ್ನು ಕೊಟ್ಟು ವಿದ್ಯಾಭಿವೃದ್ಧಿಪಡಿಸುವುದಲ್ಲದೆ, ತಮ್ಮ ಕೀರ್ತಿಕಾಯವನ್ನು ಭೂಲೋಕದಲ್ಲಿ ಶಾಶ್ವತವಾಗಿ ನೆಲೆಗೊಳ್ಳುವಂತೆ ಪ್ರೇರಿಸಲೆಂದು ಅಪಾರ ಕರುಣಾಕರನಾದ ಪಾರ್ವತೀಪತಿಯನ್ನು ಪ್ರಾರ್ಥಿಸುತ್ತೇವೆ. ಮತ್ತು ತಾವು ಅಖಿಳ ಕಾರ್ಯಗೌರವಗಳನ್ನೆಲ್ಲಾ ಬಿಟ್ಟು ಇಷ್ಟು ವಿನಯಪೂರ್ವಕವಾದ ಆಮಂತ್ರಣವನ್ನು ಸ್ವೀಕರಿಸಿ, ಶ್ರಮವಹಿಸಿ ಬೆಂಗಳೂರಿನಿಂದ ಇಲ್ಲಿಗೆ ದಯಮಾಡಿಸಿ ಕಮಿಟಿಯವರು ಕೈಗೊಂಡಿರುವ ನಮ್ಮ ಅನಾಥಾಲಯದ ವಾರ್ಷಿಕಮಹೋತ್ಸವದ ಕಾರ್ಯವನ್ನು ಸಾಂಗಗೊಳಿಸಿದುದಕ್ಕಾಗಿ ನಾವೆಲ್ಲರೂ ತಮಗೆ ಕೃತಜ್ಞರಾಗಿರುತ್ತೇವೆ. ತಮಗೆ ಜಗದೀಶ್ವರನು ಇತೋಪ್ಯತಿಶಯವಾಗಿ ಆಯುರಾರೋಗ್ಯಭಾಗ್ಯಗಳನ್ನು ದಯೆಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಪ್ರೆಸಿಡೆಂಟ್ ಮತ್ತು ಕಮಿಟಿ ಮೆಂಬರುಗಳು,
ವೀರಶೈವ ಅನಾಥಾಲಯ, ಮೈಸೂರು.

ಮದ್ರಾಸು ವೀರಶೈವವಿದ್ಯಾವರ್ಧಕಸಂಘ, ಬಳ್ಳಾರಿ.

ವೃ|| ಬಡತನದಿಂದ ಕಂದಿದೆಳೆಮಕ್ಕಳು ದೈನ್ಯದೆ ಬಂದು ವಿದ್ಯೆಯಂ |
ಪಡೆಯುವೆವೆಂದು ಕೈಗಳೆರಡಂ ತವೆ ಜೋಡಿಸಿ ದೇಹಿ ಯೆಂದು ಬಾಯ್||
ಬಿಡುತಿರೆ ನಾಸ್ತಿ ಯೆನ್ನದೆ ಸಹಾಯವ ಮಾಳ್ಪ ಸುಬುದ್ಧಿ ಭಾಗ್ಯಮಂ|
ಕೊಡುಗೆ ನಿರಂತರಂ ನಿಮಗೆ ಸತ್ಕೃಪೆಯಿಂ ಗಿರಿಜಾಧವಂ ಶಿವಂ ||

ಮಾನವರ ಏಳಿಗೆಗೆ ವಿದ್ಯೆಯೇ ಸಾಧನವು. ವಿದ್ಯೆಯನ್ನು ಕಲಿಯಲು ಮಕ್ಕಳೇ ಯೋಗ್ಯರು. ಮುಂದೆ ಲೋಕದಲ್ಲಿ ಕರ್ತವ್ಯವನ್ನು ವಹಿಸುವವರೂ ಮಕ್ಕಳೇ. ಆದಕಾರಣ ಮಕ್ಕಳಿಗೆ ವಿದ್ಯೆಯನ್ನು ಕಲಿಸುವದು ಧರ್ಮಗಳಲ್ಲೆಲ್ಲಾ ಮುಖ್ಯವಾಗಿರುವುದು. ಮಕ್ಕಳಿಗೆ ವಿದ್ಯೆಯನ್ನು ಕಲಿಸುವ ಉದ್ದೇಶದಿಂದಲೇ ಈ ಸಂಘವು ಸ್ಥಾಪಿತವಾಗಿ ಈಗ್ಗೆ 9 ವರ್ಷಗಳು ಕಳೆದವು. ಅಂದಿನಿಂದ ಸುಮಾರು 76,000 ರೂಪಾಯಿಗಳು ಶೇಖರವಾಗಿ ಇದಕ್ಕೆ ಬಡ್ಡಿ ವರ್ಷ 1 ಕ್ಕೆ ಸುಮಾರು 4,800 ರೂಪಾಯಿ ಬರುತ್ತದೆ. ಈ ಸ್ವಲ್ಪ ಆದಾಯದಿಂದಲೇ ಒಂದು ಸಂಸ್ಕೃತಾಂಗ್ಲ ಸ್ಕೂಲು ಜರುಗುತ್ತಿರುವದು ಮತ್ತು ಹೈಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಓದುತ್ತಿರುವ 46 ವಿದ್ಯಾರ್ಥಿಗಳಿಗೆ ವೇತನವು ಸಲ್ಲುತ್ತಿರುವದು. ಅಲ್ಲದೆ 18 ಜನ ವಿದ್ಯಾರ್ಥಿಗಳು ಹಾಸ್ಟಲಿನಲ್ಲಿ ಉಚಿತವಾಗಿ ಭೋಜನಮಾಡುತ್ತಿರುವರೆಂದು ಹೇಳಲು ಎಷ್ಟೋ ಸಂತೋಷವಾಗುತ್ತಿರುವದು. ಆದಾಗ್ಯೂ ಈ ಸಂತೋಷದೊಂದಿಗೇನೆ ಒಂದು ದೊಡ್ಡ ಸಂಕಟವು ತೋರುತ್ತಿರುವದು. ಅದೇನಂದರೆ, ಹೆಚ್ಚಾಗಿ ಬಂದ ವಿದ್ಯಾರ್ಥಿಗಳು "ನಾವು ವಿದ್ಯೆಯನ್ನು ಕಲಿಯುವವು. ನಮ್ಮ ತಾಯಿತಂದೆಗಳು ಬಡವರು, ವಿದ್ಯಾವರ್ಧಕವೆಂಬ ಹೆಸರನ್ನು ಧರಿಸಿರುವ ಓ ವಿದ್ಯಾವರ್ಧಕಸಂಘವೇ, ನಮಗೆ ವೇತನವನ್ನು ಕೊಡು" ಎಂದು ಬಾಯಿತೆಗೆದು ಕೈಯೊಡ್ಡಿ ಬೇಡುವಾಗ, ಆದಾಯವು ಮುಗಿಯಿತು; ಕೊಡಲು ಶಕ್ತಿಯಿಲ್ಲವೆಂದು ಹೇಳಿ ಅವರ ಆಶಾಭಂಗಮಾಡುವಾಗ ಉಂಟಾಗುವ ಸಂಕಟಕ್ಕಿಂತ ದೊಡ್ಡಸಂಕಟವು ಬೇರೆಯಿಲ್ಲ. ಸಾಕಾಗುವಷ್ಟು ಹಣವು ಶೇಖರವಾಗುವವರೆಗೂ ಈಸಂಕಟವು ನಮ್ಮಿಂದ ತೊಲಗಲಾರದು. ನಮ್ಮಲ್ಲಿ ಮಹಾಸ್ವಾಮಿಗಳೂ, ಧನಿಕರೂ ಅನೇಕರಿದ್ದಾಗ್ಯೂ ಈಸಂಕಟವನ್ನು ನಿವಾರಿಸಲು ಬೇಕಾಗುವಷ್ಟು ಧನವು ಶೇಖರಿಸಲು ಸಾಧ್ಯವಾಗಲಿಲ್ಲ. ವಿದ್ಯಾರ್ಥಿಗಳಾಗಿ ದೇಹಿಯೆಂದು ಬರುವ ಬಡಮಕ್ಕಳಿಗೆಲ್ಲಾ ನಾಸ್ತಿಯೆನ್ನದೆ ವೇತನವನ್ನು ಕೊಡಬೇಕೆಂದರೆ ಧನಬಾಹುಳ್ಯವು ಆವಶ್ಯಕವು. ಅಷ್ಟು ಧನವನ್ನೊದಗಿಸಬೇಕಾದರೆ ಧರ್ಮವಿರುದ್ಧವಾಗದ ಒಂದು ರ್ಯಾಫಲ್ ಅನ್ನು ಮಾಡುವದೇ ಯುಕ್ತವೆಂದು ನಮ್ಮಲ್ಲಿ ಕೆಲವರು ಸೂಚಿಸಿದರು. ಅದನ್ನು ಎಲ್ಲರೂ ಅಂಗೀಕರಿಸಿ ಈಗ ಒಂದು ಧರ್ಮದ ರ್ಯಾಫಲ್ ಪ್ರಾರಂಭಮಾಡಿದ್ದೇವೆ. ಒಂದು ರೂಪಾಯಿ ಬೆಲೆಯ ಒಂದುಲಕ್ಷ ಚೀಟಿಗಳಿಂದ ಒಂದು ಲಕ್ಷ ರೂಪಾಯಿಗಳ ಜಮೆಯಲ್ಲಿ ಒಂದುಸಾವಿರದ ಒಂದುನೂರು ಬಹುಮಾನಗಳಿಗೆ ಇಪ್ಪತ್ತೈದುಸಾವಿರ ರೂಪಾಯಿಗಳೂ ಇತರ ಖರ್ಚುಗಳೂ ಹೋಗಲಾಗಿ ಉಳಿದ ಮೊತ್ತವು ಈಸಂಘಕ್ಕೆ ಸೇರಿಸಲ್ಪಡುವದು. ಮಿತ್ರರೆ ಮತ್ತು ಯಶೋಭಿಲಾಷಿಗಳೆ, ಈ ಧರ್ಮರೂಪವಾದ ಚೀಟಿಯದ್ವಾರಾ ವಿದ್ಯಾವರ್ಧಕಸಂಘಕ್ಕೆ ನೀವೆಲ್ಲಾ ಅನೇಕದ್ರವ್ಯವನ್ನು ಕೊಟ್ಟಂತಾಗುತ್ತದಾದಕಾರಣ ನಿಮ್ಮಲ್ಲಿಗೆ ಕಮಿಟಿಯವರು ಕಳಿಸುವ ರ್ಯಾಫಲ್ ಬುಕ್ಕುಗಳಲ್ಲಿರುವ ಚೀಟಿಗಳನ್ನು ನೀವು ಕೊಳ್ಳುತ್ತಾ ನಿಮ್ಮ ಮಿತ್ರರಿಗೂ ಕೊಳ್ಳುವಂತೆ ಪ್ರೋತ್ಸಾಹಮಾಡುತ್ತಾ ಬಾಲಕರ ವಿದ್ಯೋನ್ನತಿಗೆ ಸಹಾಯ ಮಾಡಬೇಕು. ಈ ರ್ಯಾಫಲ್ಲಿನಿಂದ ಅನೇಕರಿಗೆ ಗೂಢವಾಗಿದ್ದ ಅದೃಷ್ಟಭಾಗ್ಯವು ವ್ಯಕ್ತವಾಗಿ ಕೈಸೇರುತ್ತದೆ. ಅನೇಕರು ಬಹುಮಾನಗಳನ್ನು ಪಡೆಯಲು ಇದೊಂದು ಸುಸಮಯವು. ಆದಾಗ್ಯೂ ಬಹುಮಾನವು ನನಗೆ ಸಿಕ್ಕುವದೋ ಇಲ್ಲವೋ ಎಂದು ಸಂಕೋಚಪಟ್ಟು ಚೀಟಿಯನ್ನು ಕೊಳ್ಳಲು ಯಾರೂ ಹಿಂಜರಿಯಬಾರದು. ಒಂದುವೇಳೆ ಬಹುಮಾನ ಸಿಕ್ಕದಿದ್ದರೂ ಲಾಟರಿಯಲ್ಲಿ ಉಳಿದ ಧನವಷ್ಟೂ ಬಡಮಕ್ಕಳ ವಿದ್ಯೆಗೆ ವಿನಿಯೋಗಿಸಲ್ಪಡುತ್ತಾದುದರಿಂದ ಆ ಪುಣ್ಯವು ಮಾತ್ರ ಸಿಕ್ಕೇತೀರುವದು. ಕ್ಷಣಿಕವಾದ ಬಹುಮಾನಕ್ಕಿಂತಲೂ ನಿತ್ಯವಾದ ವಿದ್ಯಾದಾನಪುಣ್ಯವು ಶ್ರೇಷ್ಠವು. ಆದಕಾರಣ ಈ ಧರ್ಮಕಾರ್ಯಕ್ಕೆ ಮನಸಾ ಸಹಾಯಮಾಡುವಂತೆ ವಿದ್ಯಾನಿಧಿಯಾದ ಪರಮಾತ್ಮನು ಸರ್ವರನ್ನೂ ಪ್ರೇರಿಸಲಿ.

ಹೀರದ ಕರಿಬಸಪ್ಪ, ತೊಗರಿ ವೀರಪ್ಪ,
ಸೆಕ್ರೆಟರಿ. ಪ್ರೆಸಿಡೆಂಟು.

ತಾ|| ಕ|| ಚೀಟಿಗಳನ್ನು ಮಾರಲಪೇಕ್ಷೆಯುಳ್ಳವರು ತಮ್ಮ ಪೂರ್ತಿ ವಿಳಾಸವನ್ನು ಸೆಕ್ರೆಟರಿಯವರಿಗೆ ತಿಳಿಸಿದರೆ ಅವರಿಗೆ ಚೀಟಿಗಳ ಬುಕ್ಕುಗಳು ಕಳಿಸಲ್ಪಡುವವು. ಒಂದು ಬುಕ್ಕಿಗೆ 25 ಚೀಟಿಗಳಿರುತ್ತವೆ. ಬುಕ್ಕು ಪೂರಾ ಮಾರಿದವರಿಗೆ ಬಹುಮಾನವಾಗಿ ಬುಕ್ಕಿನ ಕಡೇಭಾಗದಲ್ಲಿ ಪ್ರತ್ಯೇಕಚೀಟಿಯೊಂದು ಇರುತ್ತದೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

(ಸತ್ಯಾನ್ವೇಷಣ).

ಎರಡನೆಯಭಾಗದಲ್ಲಿ ೨೨ ನೆಯ ಪ್ರಕರಣ.

ವಿವಿಧಮತಗಳ ಸಿದ್ಧಾಂತಪರಿಶೀಲನ.

ನಾನು ಸಂಘದ ಸೇವೆಗಾಗಿ ಸಂಕಲ್ಪಮಾಡಿದುದರ ಕಾರಣವು ಆತ್ಮಜ್ಞಾನಸಂಪಾದನಾಭಿಲಾಷೆಯೆಂದು ಹೇಳಬಹುದು. ಸೇವೆಯೇ ಉತ್ಕೃಷ್ಟವಾದ ಮತವೆಂಬುದು ನನ್ನ ಅಭಿಪ್ರಾಯವು. ಸೇವೆಯ ಮೂಲಕದಿಂದಲೇ ಭಗವಂತನ ಸಾನ್ನಿಧ್ಯವನ್ನು ಹೊಂದಬಹುದೆಂಬುದು ನನ್ನ ನಂಬಿಕೆಯು. ನಾನು ಅಪೇಕ್ಷಿಸದೆಯೇ ಭರತಖಂಡದ ಸೇವೆಮಾಡುವ ಭಾಗವು ನನಗೆ ಲಭಿಸಿರುತ್ತದೆ. ಕಥವಾಡದಿಂದ ಯಾವ ಮೋಸವೂ ಇಲ್ಲದೆ ಜೀವನಕ್ಕೆ ಧನಸಂಪಾದನೆಮಾಡುವ ಉದ್ದೇಶದಿಂದ ನಾನು ದಕ್ಷಿಣಾಫ್ರಿಕೆಗೆ ಹೋಗಿದ್ದುದು. ಆದರೆ ದಕ್ಷಿಣಾಫ್ರಿಕೆಯಲ್ಲಿ ನಾನು ಭಗವದನ್ವೇಷದಲ್ಲೂ ಆತ್ಮಜ್ಞಾನ ಸಂಪಾದನೆಯಲ್ಲೂ ನಿರತನಾಗಿದ್ದೆನು. ಭಗವದನ್ವೇಷಣೋತ್ಸಾಹವು ನನಗೆ ಅಧಿಕವಾಗಿದ್ದಿತು. ಈ ವಿಚಾರದಲ್ಲಿ ನನ್ನ ಕ್ರೈಸ್ತಮಿತ್ರರುಗಳ ಪ್ರೋತ್ಸಾಹವು ಬಲವತ್ತರವಾಗಿದ್ದಿತು. ಡರ್ಬಾನ್ನಿನಲ್ಲಿ ಸ್ಪೆನ್ಸರು ವಾಲ್ಟನ್ನರವರು ದಕ್ಷಿಣಾಫ್ರಿಕಾಜನರಲ್ ಮಿಷನ್ನಿನ ಅಧ್ಯಕ್ಷರಾಗಿದ್ದರು. ಅವರ ಕುಟುಂಬದವರೊಡನೆ ನನಗೆ ಪರಿಚಯವುಂಟಾಯಿತು. ವಾಲ್ಟನ್ನರವರು ಬಹಳ ಒಳ್ಳೆ ಮನುಷ್ಯರು. ಕ್ರೈಸ್ತಮತಕ್ಕೆ ಸೇರಬೇಕೆಂದು ಅವರು ನನ್ನನ್ನು ಯಾವ ವಿಧದಿಂದಲೂ [illegible]. ಅವರ [illegible] ಕೃತ್ಯಗಳನ್ನು ಪರಿಶೀಲಿಸಲು ನನಗೆ ಅವಕಾಶವಿದ್ದಿತು. ವಾಲ್ಟನ್ನರವರ ಪತ್ನಿಯು ವಿವೇಕಶಾಲಿನಿಯಾದ ಸಾಧ್ವೀಮಣಿಯು. ಆ ದಂಪತಿಗಳಲ್ಲಿ ನನಗೆ ಬಹಳ ಗೌರವವಿದ್ದಿತು. ನನಗೂ ಅವರಿಗೂ ಇದ್ದ ಭೇದವನ್ನು ಮೊದಲೇ ಉಭಯತ್ರರೂ ತಿಳಿದುಕೊಂಡೆವು. ಭೇದವನ್ನು ಅಂಗೀಕರಿಸಿ ಮೈತ್ರಿಯನ್ನು ಕೊನೆಸಾಗಿಸಿದೆವು. ಆ ದಂಪತಿಗಳ ನಮ್ರತೆ, ತಾಳ್ಮೆ, ಕಾರ್ಯದೀಕ್ಷೆ ಇತ್ಯಾದಿ ಸದ್ಗುಣಗಳು ಪ್ರತ್ಯೇಕವಾಗಿ ಪ್ರಶಂಸಿಸಲ್ಪಡತಕ್ಕವಾಗಿವೆ. ಈ ಕುಟುಂಬದವರಲ್ಲಿ ನನಗೆ ಸ್ನೇಹವುಂಟಾದುದರಿಂದ ಮತವಿಷಯಕವಾಗಿ ಹೆಚ್ಚು ಜ್ಞಾನಸಂಪಾದನೆಮಾಡಬೇಕೆಂಬ ಅಭಿಲಾಷೆಯು ನನಗೆ ಅಧಿಕವಾಯಿತು. ಪ್ರಿಟೋರಿಯಾದಲ್ಲೇ ಇದಕ್ಕಾಗಿ ಹೆಚ್ಚು ಕಾಲ ವಿನಿಯೋಗಿಸಲು ಅವಕಾಶವುಂಟಾಗಲಿಲ್ಲ. ಆದರೂ ಅವಕಾಶದೊರತಾಗಲೆಲ್ಲ ನಾನು ಮತಗ್ರಂಥಗಳನ್ನೇ ಓದುತ್ತಿದ್ದೆನು. ಮಾಕ್ಸ್‌ಮುಲ್ಲರ್‌ರವರು ಬರೆದ 'ಭಾರತಸಂದೇಶ' ವೆಂಬ ಗ್ರಂಥವನ್ನೋದಿದೆನು. ದಿವ್ಯಜ್ಞಾನಸಮಾಜದವರಿಂದ ಪ್ರಕಟಿಸಲ್ಪಟ್ಟ ಉಪನಿಷತ್ತು (ಆಂಗ್ಲಭಾಷಾ ಪರಿವರ್ತನ) ಗಳನ್ನು ಓದಿದೆನು. ಈ ಗ್ರಂಥಗಳನ್ನು ಓದಿದುದರಲ್ಲಿ ಕೊಂಚಮಟ್ಟಿಗೆ ಹಿಂದುಮತದಲ್ಲಿ ಗೌರವವೂ ವಿಶ್ವಾಸವೂ ಉಂಟಾಯಿತು. ಹಿಂದುಮತದ ಘನತೆಯನ್ನು ಗ್ರಹಿಸಲಿಷ್ಟಪಟ್ಟೆನು. ಆದರೆ ಇತರ ಮತಗಳ ವಿಚಾರದಲ್ಲಿ ದುರಭಿಪ್ರಾಯಹುಟ್ಟಲಿಲ್ಲವು. ವಾಷಿಂಗ್‌ಟನ್ ಇರ್ವಿಂಗ್‌ರವರು ಬರೆದ "ಮಹಮ್ಮದನೂ, ಆತನ ಅನುಚರರೂ" ಎಂಬ ಗ್ರಂಥವನ್ನೂ "ಜರಸ್ಟ್ರೇನಿನ ಬೋಧೆ" ಎಂಬ ಗ್ರಂಥವನ್ನೂ ಓದಿದೆನು. ಈ ವಿಧವಾಗಿ ಇತರ ಮತಗಳ ಸಿದ್ಧಾಂತವನ್ನು ಕೂಡ ಗ್ರಹಿಸುವವನಾದೆನು. ಓದಿದುದನ್ನು ಆಚರಣೆಯಲ್ಲಿ ತರಲು ಕ್ರಮೇಣ ಏರ್ಪಟ್ಟಿತು. ಯೋಗಾಭ್ಯಾಸವನ್ನುಪಕ್ರಮಿಸಿದೆನು. ಈ ಸಮಯದಲ್ಲೇ ಟಾಲಸ್ಟಾಯಿರವರ ಗ್ರಂಥವನ್ನು ಹೆಚ್ಚಾಗಿ ಓದಿದೆನು. ಈಶ್ವರನ ದಯೆಗೂ, ಪ್ರೇಮಕ್ಕೂ ಕೊನೆಮೊದಲಿಲ್ಲವೆಂದು ಗ್ರಹಿಸಿಕೊಂಡೆನು.

ಇನ್ನೊಂದು ಕ್ರೈಸ್ತಕುಟುಂಬದ ಪರಿಚಯವಾಯಿತು. ಪ್ರತಿ ಭಾನವಾರವೂ ವೆಸ್ಲಿಯನ್ ಚರ್ಚಿಗೆ ಹೋಗುತ್ತಿದ್ದೆನು ಮತ್ತು ಆ ಕುಟುಂಬದವರ ಜತೆಯಲ್ಲಿ ಕಲೆತು ಊಟಮಾಡುತ್ತಿದ್ದೆನು. ಚರ್ಚಿನಲ್ಲಿ ನಡೆಯುತಿದ್ದ ದೇವರ ಪ್ರಾರ್ಥನಾ ಉಪನ್ಯಾಸದಲ್ಲಿ ನನಗಷ್ಟು ನಂಬುಗೆಯಿರಲಿಲ್ಲವು. ಚರ್ಚಿನಲ್ಲಿ ಕೂಡುತ್ತಿದ್ದವರಲ್ಲಿ ದೈವಭಕ್ತಿಯು ಅಷ್ಟಾಗಿದ್ದುದು ಕಂಡುಬರುತ್ತಿರಲಿಲ್ಲ. ಅಭ್ಯಾಸದ ಮೇರೆಗೆ ಚರ್ಚಿಗೆ ಹೋಗುವವರಾಗಿದ್ದರು. ಚರ್ಚಿನಲ್ಲಿ ಆಗಾಗ್ಗೆ ನಾನು ತೂಗಡಿಸುತ್ತಿದ್ದೆನು. ತೂಗಡಿಕೆಯಿಂದ ಎಚ್ಚತ್ತಲೇ ನನಗೆ ಬಹಳ ನಾಚುಗೆಯಾಗುತ್ತಿದ್ದಿತು. ಆದರೆ ನನ್ನಂತೆಯೇ ಅನೇಕರು ತೂಗಡಿಸುತ್ತಿದ್ದುದರಿಂದ ಅಷ್ಟು ವ್ಯಥೆಯುಂಟಾಗುತ್ತಿರಲಿಲ್ಲವು. ಚರ್ಚಿಗೆ ಹೋಗುವುದು ನಿಷ್ಪ್ರಯೋಜನವೆಂದು ತಿಳಿದುಕೊಂಡೆನು. ಆ ಕ್ರೈಸ್ತಕುಟುಂಬದವರೊಡನೆ ಉಂಟಾಗಿದ್ದ ಸ್ನೇಹವು ತಪ್ಪಿಹೋಯಿತು. ಮನೆಯಜಮಾನಗಿತ್ತಿಯು ಯೋಗ್ಯಳಾಗಿದ್ದರೂ ಅಷ್ಟು ವಿಶಾಲಮನಸ್ಕಳಾದ ಸಾಧ್ವಿಯಾಗಿರಲಿಲ್ಲವು. ನಾನು ಮತವಿಷಯವಾಗಿ ಚರ್ಚಿಸುತ್ತಿದ್ದೆ. ನಾನು ಮತವಿಷಯಕುರಿತು ಚರ್ಚಿಸುತ್ತಿದ್ದ ದಿವಸ ಕ್ರಿಸ್ತನ ಜೀವಿತಕ್ಕೂ ಬುದ್ಧನ ಜೀವಿತಕ್ಕೂ ಇರುವ ವ್ಯತ್ಯಾಸವನ್ನು ವಿವರಿಸುತ್ತಿದ್ದೆನು. "ಗೌತಮನ ದಯೆಯು ಮನುಷ್ಯಮಾತ್ರಕ್ಕೇ ಅಲ್ಲದೆ ಎಲ್ಲ ಜಂತುಗಳಮೇಲೂ ಪ್ರಸರಿಸಿದ್ದಿತು. ಆತನ ಭುಜದ ಮೇಲೆ ಮೇಕೆಯಿರುವುದು ಆತನಿಗಿದ್ದ ಅಪಾರ ಭೂತದಯೆಯ ನಿದರ್ಶನವು. ಕ್ರೈಸ್ತನ ಜೀವಿತದಲ್ಲಿ ಹೀಗೆ ಅಪಾರವಾದ ಭೂತದಯೆಯಿದ್ದುದು ಕಂಡುಬರುವುದಿಲ್ಲ" ಎಂದು ನಾನು ಹೇಳುತ್ತಿದ್ದೆನು. ಈ ಮಾತಿನವೇಶದಿಂದ ಯಜಮಾನಗಿತ್ತಿಗೆ ಅಸಂತೃಪ್ತಿಯುಂಟಾಯಿತು. ಅಷ್ಟರಲ್ಲಿ ಈ ಪ್ರಸ್ತಾಪವನ್ನು ಬಿಟ್ಟು ಭೋಜನಶಾಲೆಗೆ ಹೊರಟೆನು. ಅವರಿಗೆ ಐದುವರ್ಷ ವಯಸ್ಸಿನ ಒಬ್ಬ ಬಾಲಕನಿದ್ದನು. ಈ ಬಾಲನಿಗೂ ನನಗೂ ಸ್ನೇಹವಿದ್ದಿತು. ಅವನು ಮಾಂಸವನ್ನು ತಿನ್ನದಿರುವುದಕ್ಕಾಗಿ ಮಾಂಸವನ್ನು ತಿನ್ನುವುದು ದೂಷ್ಯವೆಂದೂ ಹಣ್ಣನ್ನು ತಿನ್ನುವುದು ಶ್ರೇಷ್ಠವೆಂದೂ ಹೇಳಿದೆನು. ಆ ಬಾಲನು ನನ್ನ ಮಾತನ್ನು ಲಾಲಿಸಿ ಮಾಂಸ ತಿನ್ನುವುದನ್ನು ಬಿಟ್ಟನು. ಆದರೆ ಅವನ ತಾಯಿಗೆ ಕೋಪ ಬಂದು ಎರಡನೆಯವಾರ ನಾನು ಅವರ ಮನೆಗೆ ಹೋಗುತ್ತಲೆ "ಅಯ್ಯಾ, ನಿಮ್ಮ ಸ್ನೇಹದೆಸೆಯಿಂದ ನನ್ನ ಮಗನು ನಷ್ಟಪಡುತ್ತಾನೆಂದು ಹೇಳಲು ವ್ಯಸನವಾಗುತ್ತದೆ. ಪ್ರತಿನಿತ್ಯದಲ್ಲೂ ಮಾಂಸವನ್ನು ತಿನ್ನುವುದಿಲ್ಲ. ಮಾಂಸವನ್ನು ತಿನ್ನದಿದ್ದರೆ ಅವನು ದುರ್ಬಲನಾಗುತ್ತಾನೆ. ನಾನು ನೋಡಿ ಸೈಸಲಾರೆನು. ಆದುದರಿಂದ ನೀವು ನನ್ನ ಮಗನೊಡನೆ ಹೆಚ್ಚಾಗಿ ಮಾತನಾಡಬಾರದು" ಎಂದು ಆಕೆಯು ಹೇಳಿದಳು. ನಾನು ಆಕೆಯ ಮನೋಗತವನ್ನು ತಿಳಿದುಕೊಂಡೆನು. ಪರಿಸ್ಥಿತಿಯು ವ್ಯತ್ಯಾಸವಾಗುವುದಾಗಿ ತೋರಿತು. ಆದರಮೇಲೆ "ನಾನು ಏನನ್ನು ತಿನ್ನುತ್ತಿದ್ದೆನೋ ಅದನ್ನು ಬಿಟ್ಟುಬಿಡುತ್ತಿದ್ದೆನೋ ಅದನ್ನು ಬಾಲಕನು ನೋಡಿಕೊಂಡಿದ್ದೇ ಪ್ರತ್ಯೇಕ ಬೋಧಕನಾಗಿದ್ದುದಕ್ಕಿಂತ ಹೆಚ್ಚು ಗುಣಪಾಠವನ್ನು ಹೇಳಿಕೊಡುತ್ತಿರಲಿಲ್ಲ. ಆದುದರಿಂದ ನಾನು ಇಲ್ಲಿಗೆ ಬಾರದಿರುವುದೇ ಮೇಲೆಂದು ಭಾವಿಸುತ್ತೇನೆ. ಅಲ್ಲದೆ ಇದರಿಂದ ನಮ್ಮ ಸ್ನೇಹಕ್ಕೆ ಭಂಗವುಂಟಾಗುವುದು ನನಗಿಷ್ಟವಿಲ್ಲ" ಎಂದು ನಾನು ಹೇಳಿದೆನು. ನಟ್ಟನಿರನ್ನು ಬಿಟ್ಟು ನಮಗೆ ವಂದನೆ ಎಂದು ಮನೆ ಯಜಮಾನಗಿತ್ತಿಯು ಹೇಳಿದಳು.

೧೯೨೬ನೆಯ ಇಸವಿ ಡಿಸೆಂಬರ್ ತಾ|| ೨೫ ರಿಂದ ೧೯೨೬ ನೆಯ ಇಸವಿ ಡಿಸೆಂಬರ್ ತಾ|| ೩೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೪೮ ನೆಯ ಅಕ್ಷಯನಾಮಸಂವತ್ಸರದ ಮಾರ್ಗಶಿರ ಬಹುಳ ಷಷ್ಠಿಯಿಂದ ಮಾರ್ಗಶಿರ ಬಹುಳ ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುರ್ಮಾ
25	[1]ಶನಿ	ಷಷ್ಠಿ	26-30	ಪುಬ್ಬ	48-25	11
26	ಭಾನು	ಸಪ್ತ	32-1	ಉತ್ತ	55-0	12
27	ಸೋಮ	ಅಷ್ಟ	37-29	ಹಸ್ತ	60	13
28	[2]ಮಂಗಳ	ನವ	42-33	ಹಸ್ತ	1-30	14
29	ಬುಧ	ದಶ	46-52	ಚಿತ್ತ	7-17	15
30	[3]ಗುರು	ಏಕಾ	50-14	ಸ್ವಾತಿ	12-18	16
31	[4]ಶುಕ್ರ	ದ್ವಾದ	51-56	ವಿಶಾ	16-9	17

(1) ಮಹಾನಕ್ಷತ್ರ-ಮೂಲ ೪ ನೆಯಪಾದ. (2) ಮಹಾನಕ್ಷತ್ರ-ಪೂರ್ವಾಷಾಢ ೧ ನೆಯಪಾದ. (3) ಸರ್ವತ್ರೈಕಾದಶಿ, ಮಾರ್ಗಶಿರ ಲಕ್ಷ್ಮೀವ್ರತಂ. (4) ಮಹಾನಕ್ಷತ್ರ-ಪೂರ್ವಾಷಾಢ ೨ ನೆಯಪಾದ.

ಮೈಸೂರು: ಶ್ರೀ. [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.







ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಶರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಕಜ್ಞ ನಕ್ಷತ್ರ ಶೋಚರಾಜೀಯಾತ್ ||
ಶ್ರೀನುತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀತಾಂಶೋಜ್ವಲಯಶಃಪ್ರತಾಪವಿಫುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿ ಶ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಲೈಬ್ರರಿಗೆ ೩-೮-೦]

[ಪರಸ್ಥಳದವರಿಗೆ ೨-೮-೦]

ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦]

[ಸಂಚಿಕೆ ೧

ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಜನವರಿ ತಾರೀಖು ೫ ನೆಯ ಶನಿವಾರ

ಸಂಪುಟ ೪೨]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ೀಕ ವೀರಶೈವ ವಿವಾಹವಿಧಿ	೦— ೮—೦	೦—೧೩—೦
ಟ್ಟ ಬಿದ್ದಾ	೦— ೪—೦	೦— ೯—೦
ರುಹೀಲಚರಿತ್ರೆ	೦— ೫—೦	೦—೧೦—೦
ದ್ದೇರು	೦— ೪—೦	೦— ೯—೦
ಸ್ವಾ	೦— ೪—೦	೦— ೯—೦
ಸಿತೇಶ್ವರಚಿತ	೦— ೧—೦	೦— ೬—೦
ಸವೇಶ್ವರವಚನ	೦— ೮—೦	೦—೧೩—೦
ೀಕ ಕರ್ನಾಟಕಶಬ್ದಮಂಜರಿ	೦— ೮—೦	೦—೧೩—೦
ೀಕ ಕರಕೈಫಿಯ	೧— ೦—೦	೧— ೭—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

೧೯೨೮ನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಸ್ಯೋಗುವವರಿಂದ ನಂಬ[illegible] ಸಾವಕಾಶವಿಲ್ಲ [illegible] ನೇಯ್ದ | ಮಾದಿಗಳಿಗೆ

¼ ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲಕ್ಷ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು, ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಸಿದ್ಧ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷ ಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಿಂಗಿ ಲಿಂಗರಾಜ ಆಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಏಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎನ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

13

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳವುಳ್ಳದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳವುಳ್ಳದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರಾ ಹಣ ನಮ್ಮ ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುವುದು. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ ಕಡಿಮೆ ದರದಲ್ಲಿ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್ ಗಟ್ಟಲೆ ತರಿಸುವವರು ಡಜನ್ 1 ಕ್ಕೆ 3 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0, 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಆರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[50—8]

"ಭಿಷಗ್‌ರತ್ನ ಪಾಳ್ಯದ ವೆಂಕಟಾಚಲಪಂಡಿತರ" ಆಯುರ್ವೇದೀಯ ಸಿದ್ಧೌಷಧಗಳು.

ಬಂದ ಬಳಿಕ ಪೇಚಾಡುವುದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮಯಹರ ಕಸ್ತೂರಿಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧-೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕೆಡಕನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಶೀತವಾತ, ಜ್ವರ, ಚಳಿಜ್ವರ, ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ, ಮಲಬದ್ಧ, ಪ್ಲೇಗು ಜ್ವರ, ಇನ್‌ಫ್ಲುಯೆಂಜ, ರಕ್ತಹೀನತೆ, ದುರ್ಬಲ ಇವುಗಳನ್ನೂ, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲು, ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದಿಗಳು ಹಿಡಿತ ಮಲಬದ್ಧ, ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನೂ ಗುಣಪಡಿಸುತ್ತವೆ. ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ. ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಷ್ಠಾಸ್ತ್ರೀಯ ರಿಗೂ ಅಗತ್ಯ[illegible]ಕಾರಿ. [illegible] 1 ಕ್ಕೆ 0—4—0 ಮಾದಿಗಳಿಗೆ ಸುಗ್ಗಿ ಜನಗಳಿಗ [illegible] ನ್ನಗಳೂ ಲೆಖ್ಖವಿಲ್ಲದಷ್ಟು ನಷ್ಟವನ್ನು ಹೊಂದು 250 ರಿಂದ 300 ಮಾತ್ರೆಗಳಿಪವಾಗಿರು[illegible]ಸವಪ್ಪನವರು ಈ ವಿಚಾರ ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ 8 ಆಣೆ, 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 ರೂಪಾಯಿ 25 ಕ್ಕೆ 5—3—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಭಿಷಗ್‌ರತ್ನ
ಪಾಳ್ಯದ ವೆಂಕಟಾಚಲಪಂಡಿತರ",
ಶ್ರೀ ಸೀತಾರಾಘವವೈದ ಶಾಲಾ,
ಹೆಡ್ಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚು ಮಾಡುತ್ತದೆ. ಮೂರು ಚಿಟಿಕೆ

(Registered Trade Mark)

ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಗಸಟ್ಟೆ ಕಳುಹಿಸಲಾರೆವು.

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50 11]

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿನ್ನು

ಪ್ರಸಿದ್ಧವಾದ ಮೊಳಕಾಲ್ಮುರು ರೇಶಿಮ್ನ ಕೇಳಿ

ರೇಶ್ಮೆವಸ್ತ್ರ—1 ನೇ ನಂ. ತೊಲ 1ಕ್ಕೆ ಹೀಗಿರುತ್ತಿ
ರೇಶ್ಮೆಮೊಗಟ—1 ನೇ ನಂ. ತೊಲ 1ಕ್ಕೆ ಎಲೆ ಕುಳಿತು
ರೇಶ್ಮೆ ಕೈವಸ್ತ್ರ—1 ಕ್ಕೆ 0—11—0 ಡಜನ್ 1ಕ್ಕೆ ಳವು ಬಿಸಿಯಾಗಿ

ಒಂದುಸಲ ತರಿಸಿ ನೋಡಿರಿ. ಮಾಲಿನಲ್ಲಿ ಬಿಸಿದಿನ ಕಿಟಿಕಿಯಿಂದ ವಾಪಸು ಮಾಡಿರಿ. ಪೋಸ್ಟೇಜ್ ಜಾಸ್ತಿ ಹಣ ವ್ಯಾಯು ಯಜಮಾನನು ಕೂಡಲೆ ಕೆಳಗಿಳಿದು ತನ್ನ

ನಮ್ಮ ಅಡ್ರೆಸ್—
ಎಂ. ಎಸ್. ಗಂಗಣ್ಣ ಊರಿ ತ್ತಾನು ಮಲಗಿದ್ದ
ರೇಶ್ಮೆ ಜರಿಯಿಯಿಡ್ಡವಾರಿ[illegible]
ಬುದ್ಧಿ [illegible]

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಭುವನಭೂಷಣಾವತಾರಾ ಪಕ್ಷ್ಮಜ್ಞ ನಕ್ಷತ್ರ ತೋಷರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೀಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ಲೈಬ್ರರಿಗೆ ೩-೮-೦]
[ಪರಸ್ಥಳದವರಿಗೆ ೨-೮-೦]
ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦]

[ಸಂಚಿಕೆ ೧
ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಜನವರಿ ತಾರೀಖು ೫ ನೆಯ ಶನಿವಾರ

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ನಿಬ್ಬಾ	೦—೪—೦	೦—೯—೦
ರುಶೀಲಚರಿತ್ರೆ	೦—೫—೦	೦—೧೦—೦
ದ್ದ	೦—೪—೦	೦—೯—೦
ನ್ನ	೦—೪—೦	೦—೯—೦
ತೀರೇಶ್ವರಶತಕ	೦—೧—೦	೦—೬—೦
ಸವೇಶ್ವರವಚನ	೦—೮—೦	೦—೧೩—೦
ಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಹೋಗುವರೆಂಬ ನಂಬ ... ಸಾವಕಾಶವಿಲ್ಲ ... ನೇಯ್ದು

¼ ಸೈಜಿನ 200 ದೊಡ್ಡ ಪೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಹಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳ ಭಾವಚಿತ್ರ, ಇನ್ನೂ ಇದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಿಂಗಿ ಲಿಂಗರಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡುವ ಗ್ರಂಥವು. ಬೆಂಗಳೂರಿನ ಮಹಾಸಭಾ ಕಾಲದಲ್ಲಿ ಮಾರಿ ಬಾಕಿ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಚ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

13

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳವುಳ್ಳದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳವುಳ್ಳದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರಾ ಹಣವನ್ನು ನಮ್ಮ ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್‌ಗಳಲ್ಲಿ ತರಿಸುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0. 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಮಣಿಯಾರ್ಡರ್ ರವಾನಿಸುವ ವಿಳಾಸ—

[50—8]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

“ ಭಿಷಗ್‌ರತ್ನ ಪಾಳ್ಯದ ವೆಂಕಟಾಚಲಪಂಡಿತರ ” ಆಯುರ್ವೇದೀಯ ಸಿದ್ಧೌಷಧಗಳು.

ಬಂದ ಬಳಿಕ ಪೇಚಾಡುವುದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮಯಹರ ಕಸ್ತೂರಿಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧-೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕೆಡಕನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಶೀತವಾತ, ಜ್ವರ, ಚಳಿಜ್ವರ, ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ, ಮಲಬದ್ಧ, ಪ್ಲೇಗು ಜ್ವರ, ಇನ್‌ಫ್ಲುಯಂಜ, ರಕ್ತಹೀನತೆ, ದುರ್ಬಲ ಇವುಗಳನ್ನೂ, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲು, ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದಿಗಳು ಹಿಡಿತ ಮಲಬದ್ಧ, ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನೂ ಗುಣಪಡಿಸುತ್ತವೆ. ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ. ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಷ್ಠಾಸ್ತ್ರೀಯ ರಿಗೂ ಆರೋಗ್ಯಕಾರಿ.

1 ಕ್ಕೆ 0—4—0

ಮಾದಿಗಳಿಗೆ ಸುಗ್ಗಿ ಜನಗಳಿಗೆ ... ಲೂ ಲೆಖ್ಖವಿಲ್ಲದಷ್ಟು ನಷ್ಟವನ್ನು ಹೊಂದು

250 ರಿಂದ 300 ಮಾತ್ರೆಗಳಿರುವ ಸೀಸೆ ... ಪ್ಪನವರು ಈ ವಿಚಾರ ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ 8 ಆಣೆ, 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 ರೂಪಾಯಿ 25 ಕ್ಕೆ 5—3—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

“ ಭಿಷಗ್‌ರತ್ನ
ಪಾಳ್ಯದ ವೆಂಕಟಾಚಲಪಂಡಿತರ ”,
ಶ್ರೀ ಸೀತಾರಾಘವವೈದ ಶಾಲಾ,
ಹೆಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟಿಕೆ ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50 11] ಪೋ. ಬಾ. ೫೧೧, ಮದರಾಸು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿದನ್ನು

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆ ಸೀರೆ

ರೇಶ್ಮೆವಸ್ತ್ರ—1 ನೇ ನಂ. ಕೊಲ 1ಕ್ಕೆ ಹೀಗಿರುತ್ತಿ
ರೇಶ್ಮೆ ಮೊಗಟು—1 ನೇ ನಂ. ಕೊಲ 1ಕ್ಕೆ ಎಲೆ ಕುಳಿತು
ರೇಶ್ಮೆ ಕೈವಸ್ತ್ರ—1 ಕ್ಕೆ 0—11—0 ಡಜನ್ 1ಕ್ಕೆ ಅವು ಬಿಸಿಯಾಗ

ಒಂದುಸಲ ತರಿಸಿ ನೋಡಿರಿ. ಮಾಲಿನಲ್ಲಿ ಏನಿದ್ದರೆ ಟಿಕೆಟಿಯಿಂದ ವಾಪಸು ಮಾಡಿರಿ. ಪೋಸ್ಟೇಜ್ ಚಾರ್ಜು ಹಣ ಖರ್ಚು ನಾಯಿಯು ಯಜಮಾನನು ಕೂಡಲೆ ಕೇಳಿಗೆ ಇದು ತನ್ನ ಮಲಗಿದ್ದ

ನಮ್ಮ ಅಡ್ರೆಸ್—
ಎಂ. ಎಸ್. ಗಂಗಣ್ಣ ಅಂಡ್ ಸನ್ಸ್,
ರೇಶ್ಮೆ ಬಟ್ಟೆ ವ್ಯಾಪಾರಿಗಳು,
ಮೊಳಕಾಲ್ಮುರು, ಚಿತ್ರದುರ್ಗ ಡಿ.

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಜನವರಿ ತಾ|| ೫ ನೆಯ ಶನಿವಾರ.

ವಾರ್ಧಿಕ್ಯದಲ್ಲೂ ಯೌವನಸೌಖ್ಯ.

ನಮ್ಮ ಪೂರ್ವೀಕರು ಆಹಾರ ವ್ಯಾಯಾಮ ವಿಶ್ರಾಂತಿ ಮೊದಲಾದ ವಿಚಾರಗಳಲ್ಲಿ ಎಚ್ಚರಿಕೆಯಾಗಿ ಇರುತ್ತಿದ್ದರಾದುದರಿಂದ ಅವರಿಗೆ ವಾರ್ಧಿಕ್ಯ ಪ್ರಾಪ್ತಿಯಾದಾಗ್ಯೂ ಈಗಿನಕಾಲದ ಯೌವನಸ್ಥರಿಗಿಂತ ದೇಹಧಾರಾಢ್ಯವುಳ್ಳವರಾಗಿರುತ್ತಿದ್ದರು. ಅವರು ಈಗಿನವರಂತೆ ದಿನಕ್ಕೆ ನಾಲ್ಕಾರುಸಾರಿ ಆಹಾರವನ್ನು ತೆಗೆದುಕೊಳ್ಳುತ್ತಿರಲಿಲ್ಲ. ದಿವಸಕ್ಕೆ ಎರಡುವೇಳೆ ಪುಷ್ಟಿಕರವಾದ ಊಟವನ್ನು ಕ್ಲುಪ್ತಕಾಲದಲ್ಲಿ ಮಾಡುತ್ತಿದ್ದರು. ಮುಂಜಾನೆ ಎದ್ದು ಊರಿಂದಾಚೆ ಬಹಿರ್ದೇಶಕ್ಕೆ ಹೋಗಿ ಮಲವಿಸರ್ಜನೆಮಾಡಿ ಸ್ನಾನಾದಿಶೌಚಕರ್ಮಗಳನ್ನೂ ತೀರಿಸಿಕೊಂಡು ಮನೆಗೆ ಬರುತ್ತಿದ್ದರು. ಹಲ್ಲುಗಳನ್ನು ಬೇವಿನಕಡ್ಡಿ, ಮಾವಿನಎಲೆ ಮೊದಲಾದ ಶುಚೀಕರಣ ಸಾಮಗ್ರಿಗಳಿಂದ ಸ್ವಚ್ಛಮಾಡುತ್ತಿದ್ದರು. ದೇಹದಣಿಯುವಂತೆ ಕೆಲಸಮಾಡುತ್ತಿದ್ದರು. ಸಂಧ್ಯಾಕಾಲದಲ್ಲಿ ತಂತಮ್ಮ ಮನೆಗಳನ್ನು ಸೇರಿ ಭೋಜನಾನಂತರ ಹೊತ್ತಿಗೆಮುಂಚೆ ಮಲಗಿಕೊಂಡು ಸುಖವಾಗಿ ಸಾಕಾದಷ್ಟು ನಿದ್ರೆಯನ್ನು ಮಾಡುತ್ತಿದ್ದರು. ಮನಸ್ಸು ಚಂಚಲವಾಗುವಂತಹ ನಾಟಕವೇ ಮೊದಲಾದ ವಿನೋದಗಳಲ್ಲಿ ರಾತ್ರಿಯವೇಳೆ ದೀರ್ಘಕಾಲ ಕಳೆದು ಕೆಟ್ಟವಾಯುವನ್ನು ಸೇವಿಸುತ್ತ ನಿದ್ರೆಕೆಡುತ್ತಿರಲಿಲ್ಲ. ಹೊಗೇಬತ್ತಿ ಸೇದುವುದು, ಕಾಫಿ, ಟಿ ಮೊದಲಾದ ಮಾದಕಪದಾರ್ಥಗಳನ್ನು ಸೇವಿಸುವುದು ಇವೇ ಮೊದಲಾದ ದುರಭ್ಯಾಸಗಳು ಅವರಿಗಿರಲಿಲ್ಲ. ಈ ಕಾರಣಗಳಿಂದ ಅವರು ದೀರ್ಘಾಯುಗಳಾಗಿರುತ್ತಿದ್ದರಲ್ಲದೆ ವಯಸ್ಸಾದಮೇಲೂ ಕಾಯಪುಷ್ಟಿಯುಳ್ಳವರಾಗಿ ಯೌವನಸುಖವನ್ನನುಭವಿಸುತ್ತಿದ್ದರು. ಅನೇಕರಿಗೆ ಮೂರುನಾಲ್ಕು ಮಂದಿ ಪತ್ನಿಯರಿದ್ದು ಎಪ್ಪತ್ತು ಎಂಭತ್ತನೇ ವಯಸ್ಸಿನಲ್ಲು ಸಹ ಸಂತಾನಾಭಿವೃದ್ಧಿಯು ಆಗುತ್ತಿದ್ದಿತು. ಆದರೆ ಅವರು ಆಹಾರ, ನಿದ್ರೆ ಸ್ತ್ರೀಸಂಭೋಗ ಮೊದಲಾದ ವಿಚಾರಗಳಲ್ಲಿ ಬಹುಮಿತಿಯಿಂದಲೂ ಎಚ್ಚರಿಕೆಯಿಂದಲೂ ನಡೆದುಕೊಳ್ಳುತ್ತಿದ್ದರು. ಆದುದರಿಂದಲೇ ಆ ಕಾಲದಲ್ಲಿ ವಿಷಯಾಸಕ್ತಿಯು ಈ ನವೀನಕಾಲದಹಾಗೆ [illegible]ದೆಶೆಯನ್ನು ಹೊಂದಿರಲಿಲ್ಲ. ಈ ಕಾಲದ ತರುಣ[illegible] ಪತ್ನಿಯರನ್ನು ವೇಶ್ಯೆಯರಹಾಗೆ ಭಾವಿಸಿಕೊಂಡು ಅವರ ಯೌವನವನ್ನು ಸೂರೆಗೊಳ್ಳುತ್ತಿರಲಿಲ್ಲ. ಅವರನ್ನು ಸಚ್ಛಗೃಹಿಣಿಯರಂತೆ ಭಾವಿಸಿಕೊಂಡು ವಿಶೇಷವಾದ ಗೌರವದಿಂದಲೂ ಅಕುಟಿಲ ಪ್ರೀತಿವಿಶ್ವಾಸಗಳಿಂದಲೂ ಕಾಣುತ್ತಿದ್ದರು ಇಂತಹ ಜೀವನವೃತ್ತಿಯಿಂದ ಅವರು ಎಪ್ಪತ್ತನೇ ವಯಸ್ಸಿನಲ್ಲೂ ಯೌವನಸುಖವನ್ನು ಅನುಭವಿಸುತ್ತಿದ್ದರೆಂದರೆ ಅತಿಶಯೋಕ್ತಿಯಾಗದು.

ಶರೀರದ ಅವಯವಗಳು ಸಮರ್ಪಕವಾಗಿ ತಂತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಬೇಕಾದರೆ ನಾವು ಸೇವಿಸುವ ಆಹಾರ ನೀರು ಮತ್ತು ಗಾಳಿ ಇವುಗಳ ವಿಚಾರದಲ್ಲಿ ವಿಶೇಷವಾದ ಎಚ್ಚರಿಕೆಯುಳ್ಳವರಾಗಿ ನಿರ್ದುಷ್ಟವಾದ ವಸ್ತುಗಳನ್ನು ಮಾತ್ರ ಸೇವಿಸಬೇಕು. ಆಹಾರದಲ್ಲಿ ಸ್ವಾಭಾವಿಕವಾದ ಸಸ್ಯಾಹಾರವೂ, ಫಲಾಹಾರವೂ ವಯಸ್ಸಾದವರಿಗೆ ಅಮೂಲ್ಯವಾದುವುಗಳಾಗಿರುವುವು. ಮಾಂಸಾಹಾರವೇ ಮೊದಲಾದ ಪ್ರಾಣಿಸಂಬಂಧವಾದ ಆಹಾರಗಳು ಮಲಿನವಾದುವುಗಳಾದುದರಿಂದ ಅವು ನಿಷೇಧಿಸಲ್ಪಡಬೇಕು. ಲೋಕದಲ್ಲಿ ದೀರ್ಘಾಯುಗಳಾದವರೆಲ್ಲರೂ ಸರ್ವಸಾಧಾರಣವಾಗಿ ಸಸ್ಯಾಹಾರಿಗಳೆಂಬುದು ಚರಿತ್ರಪ್ರಸಿದ್ಧವಾಗಿರುವುದು. ಪಾಶ್ಚಾತ್ಯರಲ್ಲಿ ಈ ನವೀನಕಾಲದಲ್ಲಿಯು ಸಹ ನೂರುವರ್ಷದ ಮೇಲೆ ವಯಸ್ಸಾದಾಗ್ಯೂ ಕಾಯಪುಷ್ಟಿಯಿಂದ ಸುಖಜೀವಿಗಳಾಗಿರುವವರು ಅನೇಕರಿರುತ್ತಾರೆ. ಸಕಲಸಂಪತ್ತು ವೈಭವಗಳಿಂದ ಶೋಭಾಯಮಾನವಾಗಿದ್ದ ನಮ್ಮ ಭರತಖಂಡದಲ್ಲಿ ದೀರ್ಘಾಯುಗಳೂ, ಆರೋಗದೃಢಕಾಯವುಳ್ಳವರೂ ಅತಿವಿರಳರಾದುದಕ್ಕೆ ಕಾರಣವೇನಿರಬಹುದೆಂಬ ಪ್ರಶ್ನೆಯು ಹುಟ್ಟಬಹುದು. ಅದರ ಉತ್ತರವು ಸುಲಭವಾಗಿಯೇ ಇರುವುದು. ಅದೇನೆಂದರೆ, ನಮ್ಮ ಪೂರ್ವೀಕರು ಆಯಾ ಮತಗಳ ಧರ್ಮಕ್ಕನುಗುಣವಾದ ಶೀಲಸ್ವಭಾವಗಳಿಂದ ಆಚರಿಸುತ್ತಿದ್ದರು. ಪೂರ್ವಾಚಾರಪದ್ಧತಿಗಳು ಆರೋಗ್ಯದಾಯಕವಾಗಿದ್ದುದರಿಂದ ಅವರು ದಿನಚರಿಯಲ್ಲಿ ಮಾಡುವ ಕೆಲಸಗಳೆಲ್ಲವೂ ಆರೋಗ್ಯಕ್ಕಾಗಿಯೇ ಎಂದು ಬಾಯಿಂದ ಹೇಳಿಕೊಳ್ಳುತ್ತಿರಲಿಲ್ಲವಾದರೂ ವಸ್ತುತಃ ಅವರ ಆಚಾರಗಳು ಸಂಪೂರ್ಣವಾದ ಆರೋಗ್ಯಶಾಸ್ತ್ರಾನುಸಾರವಾದುವುಗಳಾಗುತ್ತಿದ್ದುವು. ಇದಕ್ಕೆ ನಿದರ್ಶನವಾಗಿ ಒಂದೆರಡು ಉದಾಹರಣೆಗಳನ್ನು ಸೂಚಿಸಿದರೆ ಸಾಕಾಗುವುದು. ಉಷಃ
ಲದಲ್ಲೆದ್ದು ಸ್ನಾನಾಶೌಚಾದಿಗಳಾದನಂತರ ಸೂರ್ಯಾರಾ
ಅಶ್ವತ್ಥವೃಕ್ಷ ಪ್ರದಕ್ಷಿಣೆ, ಹೆಜ್ಜೆನಮಸ್ಕಾರ ಮೊದಲಾದ
ರ್ಣನೆಯನೆಪದಿಂದಮಾಡಿದ ಸಾಧನೆಯು ಮತಾಚಾರಾ
ದುದಲ್ಲದೆ ಅತ್ಯುತ್ತಮವಾದ ಅಂಗಸಾಧನೆಯಾಗಿರು
ನವೀನಕಾಲದ ಪಾಶ್ಚಾತ್ಯ ಶಾಸ್ತ್ರಜ್ಞರು ತಾವು
ಕುಹಿಡಿದಿರುವೆವೆಂದು ಹಿಗ್ಗುತ್ತಿರುವರು. ಈ
ರತೀಯರಲ್ಲಿ ಪ್ರಾಚೀನಕಾಲದಿಂದಲೂ
ವೆಂದು ತಿಳಿದ ಪಾಶ್ಚಾತ್ಯರು ಪರಮಾ
ರ ಪ್ರಾಚೀನ ನಾಗರೀಕತೆಯನ್ನು
ವರು. ಆದುದರಿಂದ ನಮ್ಮವರು
ದ್ಧಿಗಾಗಿ ಪಾಶ್ಚಾತ್ಯ ನಿಯಮಗಳನ್ನು ಅರಿತು ಅಭ್ಯಾಸಿಸಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ. ಪ್ರತಿಯೊಬ್ಬನೂ ಅವನವನ ಮತಧರ್ಮದಲ್ಲಿ ಉಕ್ತವಾಗಿರುವ ವಿಧಿಗನುಸಾರವಾಗಿ ಆಚಾರವ್ಯವಹಾರಗಳನ್ನು ಕ್ರಮಪಡಿಸಿಕೊಂಡು ಶೀಲಸ್ವಭಾವದಿಂದ ವರ್ತಿಸುವವನಾದರೆ ಇಹಲೋಕದ ಸುಖಸಂಪತ್ತಿಗೆ ಆವಶ್ಯಕವಾದ ಸೌಲಭ್ಯವೆಲ್ಲವೂ ಸಕಲರಿಗೂ ಸುಲಭಸಾಧ್ಯವಾಗುವುದೆಂದರೆ ಎಂದಿಗೂ ಅತಿಶಯೋಕ್ತಿಯಾಗಲಾರದು.

ಮಹಾತ್ಮ ಗಾಂಧಿಯವರ ಭಾಷಣ.

ಡೆಲ್ಲಿ ತೀರ್ಮಾನದಲ್ಲಿ ಕೆಲವು ಪರಸ್ಪರ ವಿರುದ್ಧ ವಿಷಯಗಳಿವೆಯೆಂಬುದು ಮುಖಂಡರಿಗೆ ತಿಳಿಯಬಂದಿತು. ಈಗ ನಾನು ಸೂಚಿಸಿರುವ ಠರಾವು ಎಲ್ಲಪಂಗಡಗಳವರಿಗೂ ಸಮಾಧಾನಕರವಾಗಿದೆ. ಈಗ ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯವುಳ್ಳ ಎರಡು ಪಂಗಡಗಳಿರುವುದೇನೂ ವಿಷಾದಕರವಾದುದಲ್ಲ. ಆದರೆ, ಎರಡು ಪಂಗಡಗಳವರ ಕಿತ್ತಾಟದಲ್ಲಿ, ಕಾರ್ಯತಃ ಆಚರಣೆಗೆ ತರಲಾರದಂತಹ ತೀರ್ಮಾನಕ್ಕೆ ಬರುವುದಾದರೆ ಅದು ವಿಷಾದಕರವಾಗುವುದು ನೆಹರು ವರದಿಯು ಪ್ರಕಟಿಸಲ್ಪಟ್ಟಾಗ ನಮ್ಮ ವಿರೋಧಿಗಳು ಕೂಡ ಅದನ್ನು ಹೊಗಳಿದರು. ಈ ವರದಿಯು ಸಾಮಾನ್ಯವಾದುದಲ್ಲ. ದೇಶಾಭಿಮಾನಿಗಳೆಂದೂ, ಭಾರತಮಾತೆಯ ಸೇವೆಗಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರದಿರುವರೆಂದೂ ಪ್ರಖ್ಯಾತರಾಗಿರುವವರು ಸೇರಿ ರಚಿಸಿದ ವರದಿಯು.

ಈ ವರದಿಯ ಹೃದಯವು ಚಕ್ರಾಧಿಪತ್ಯದೊಳಗಿನ ಸ್ವಾತಂತ್ರ್ಯ. ಹೃದಯವನ್ನು ತಿವಿದರೆ, ಶರೀರವು ನಾಶವಾಗುವುದೆಂದು ಡಾ|| ಅನ್ಸಾರಿಯವರು ಹೇಳಿರುವುದನ್ನು ಮರೆಯಬೇಡಿ.

ಸ್ವಾತಂತ್ರ್ಯವೆಂಬುದಕ್ಕೆ ಅನೇಕ ಅಪಾರ್ಥವನ್ನು ಕಲ್ಪಿಸಿದ್ದಾರೆ. ನಮ್ಮ ಸ್ವಾತಂತ್ರ್ಯವು ದೇಶದಲ್ಲಿ ನಮಗೆ ಎಷ್ಟು ಬಲವಿದೆಯೆಂಬುದರ ಮೇಲೆ ನಿರ್ಧರವಾಗಬೇಕು. ನೇಪಾಳದವರ ಸ್ವಾತಂತ್ರ್ಯವೂ ಅಮೇರಿಕದವರ ಸ್ವಾತಂತ್ರ್ಯವೂ ಒಂದೇ ಅಲ್ಲ. ಹಾಗೆಯೇ ಸ್ವಾತಂತ್ರ್ಯವು ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ವಿಧವಾಗಿದೆ. ಆದುದರಿಂದ 'ಸ್ವಾತಂತ್ರ್ಯ' ವೆಂಬ ಪದದಿಂದ ಜನಸಾಮಾನ್ಯರಲ್ಲಿ ಬುದ್ಧಿ ಭ್ರಮಣೆಯುಂಟಾಗುವಂತೆ ಮಾಡಬಾರದು. ನನಗೆ ಜನಸಾಮಾನ್ಯರ ಮನಸ್ಸು ಸ್ವಲ್ಪಗೊತ್ತಿದೆ ಅವರನ್ನು ಬಲೆಗೆಳೆಯಲು ಪ್ರಯತ್ನಿಸಬೇಡಿ.

ಮದರಾಸು ಕಾಂಗ್ರೆಸ್‌ನಲ್ಲಿ ಸಂಪೂರ್ಣ ಸ್ವಾತಂತ್ರ್ಯವು ನಮ್ಮ ಧ್ಯೇಯವಾಗಿರಬೇಕೆಂದು ತೀರ್ಮಾನವಾಗಿತ್ತು. ಕಾಂಗ್ರೆಸ್ಸಿನ ಧ್ಯೇಯವು ಯಾವಾಗಲೂ ಸಂಪೂರ್ಣ ಸ್ವಾತಂತ್ರ್ಯವೇ. ಈಗ ನಾನು ಸೂಚಿಸಿರುವ ಠರಾವಿನಿಂದ ಆ ಧ್ಯೇಯವನ್ನು ಸಾಧಿಸಲು ಅಡಚಣೆಯೇನೂ ಇಲ್ಲ. ಈಗ ನಾವು ಕೇಳುವ ಚಕ್ರಾಧಿಪತ್ಯದೊಳಗಿನ ಸ್ವಾತಂತ್ರ್ಯವು ಇನ್ನೆರಡು ವರ್ಷಗಳಲ್ಲಿ ನಮಗೆ ಲಭಿಸದಿದ್ದರೆ, ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡಿ ಪ್ರಾಣ ಬಿಡೋಣ.

ಮಾತೃಭೂಮಿಯ ಘನತೆ ಗೌರವಗಳಲ್ಲಿ ನಿಮ್ಮಂತೆಯೇ ನನಗೂ ಆಶೆಯಿದೆ. ಸಂಪೂರ್ಣಸ್ವಾತಂತ್ರ್ಯವೇ ನನ್ನ ಧ್ಯೇಯ. 'ಈ ಮುದುಕನೇನೋ ದೇಶಸೇವೆ ಮಾಡಿದ್ದಾನೆ, ಆದರೆ ಈಗ ಈತನನ್ನು ಒಂದುಕಡೆ ಕೂಡಿಸಿರೋಣ' ಎಂದು ನೀವು ನನ್ನನ್ನು ಉದಾಸೀನದಿಂದ ಕಾಣಲಾಗದು. ನಾನೂ ನಿಮ್ಮೊಡನೆ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ ನಡೆಯುತ್ತಿರುವ ಸಿಪಾಯಿಯೆಂದು ಭಾವಿಸಬೇಕು. ಆದರೆ ನೀವು, 'ಇಲ್ಲ. ನೀವು ವಿಶ್ರಾಂತಿ ಹೊಂದಬೇಕೆಂದು ವೈದ್ಯರು ಹೇಳಿದ್ದಾರೆ. ನಿಮಗೆ ವಿಶ್ರಾಂತಿ ಆವಶ್ಯಕ. ಆದುದರಿಂದ ನೀವು ಒಂದುಕಡೆ ಕುಳಿತುಕೊಳ್ಳಿ. ನಾವು ಓಡುತ್ತೇವೆ. ನಿಮ್ಮೊಡನೆ ನಡೆಯಬೇಕಾದರೆ ನಾವು ಅಂಬೆಗಾಲಿಟ್ಟು ತೆವಳಬೇಕು. ಈರೀತಿ ಹಾಳು ಸ್ಥಿತಿಯಲ್ಲಿ ತೆವಳಿ ಸಾಕಾಗಿದೆ' ಎಂದು ಹೇಳುವುದಾದರೆ, ಮಹರಾಯರಂತೆ ಓಡಿರಿ ನಾನು ಮೂಲೆಯಲ್ಲೇ ಕುಳಿತಿರುತ್ತೇನೆ.

ಆದರೆ, ಇಲ್ಲಿ ವ್ಯಕ್ತಿಗಳನ್ನು ನೋಡಬೇಡಿ. ನಿಮ್ಮ ಅಧ್ಯಕ್ಷರಿಗೆ ಒತ್ತಾಸೆ ಕೊಡುವುದಕ್ಕಾಗಿ ಇದನ್ನಂಗೀಕರಿಸಿರೆಂದು ನಾನು ನಿಮ್ಮನ್ನು ಕೇಳಿಕೊಳ್ಳುವುದಿಲ್ಲ. ಅಂತಹ ಒತ್ತಾಸೆ ಅವರಿಗೆ ಬೇಕಾಗಿಲ್ಲ. ಅವರಿಗೆ ಒತ್ತಾಸೆ ಬೇಕೆಂದು ಭಾವಿಸುವುದು ಅವರಿಗೊಂದು ಅಪಮಾನಮಾಡಿದಂತಾಗುವುದು. ಆದುದರಿಂದ ಯಾರ ದಾಕ್ಷಿಣ್ಯಕ್ಕಾಗಿಯೂ ಕೆಲಸಮಾಡಬೇಡಿ. ನಿಮ್ಮ ಮನಸ್ಸಿಗೆ ಉಚಿತತೋರಿದಂತೆ ನಡೆದುಕೊಳ್ಳಿ.

ಈ ವರದಿಯು ನಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳುವುದಕ್ಕೆ ಒಂದು ಸಾಧನೆಯೇ ಹೊರತು, ಇದೇ ಅಂತ್ಯವಲ್ಲ. ಗಮ್ಯಸ್ಥಾನವನ್ನು ಮುಟ್ಟುವುದಕ್ಕೆ ಇದು ಪ್ರಾರಂಭ.

ಸ್ವಾತಂತ್ರ್ಯವು ಕಲಿಯುವಿಕೆಯಿಂದ ಲಭಿಸುವುದಿಲ್ಲ. ರಕ್ತ ಸುರಿಸುವುದರಿಂದಲೇ ಬರತಕ್ಕದ್ದು. ವರದಿಯಲ್ಲಿ ಕಂಡ ಸ್ವಾತಂತ್ರ್ಯವು ಬರಬೇಕಾದರೂ ನಾವು ರಕ್ತಹರಿಸಬೇಕು. ಆದುದರಿಂದ ಇದನ್ನು ಮನಃಪೂರ್ವಕವಾಗಿ ದೇಶಾಭಿಮಾನಿದೃಷ್ಟಿಯಿಂದ ಅಂಗೀಕರಿಸಿ, ಅದರಂತೆ ಸಾಧಿಸಲು ದೇವರನ್ನು ಪ್ರಾರ್ಥಿಸಿರಿ.

ರಾಷ್ಟ್ರೀಯ ಸಭೆಯಲ್ಲಾದ ನಿರ್ಧಾರಗಳು.

ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ಸಾರ್ವಭೌಮ ಸರ್ಕಾರದವರು ಕೊಡುವುದಾದರೆ ಅದಕ್ಕೆ ಭಾರತೀಯರು ಒಪ್ಪಿಕೊಂಡು ಮುಂದೆ ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸುವ ಯೋಚನೆಯನ್ನು ಮಾಡಬೇಕೆಂದು ಮಹಾತ್ಮಜಿಯವರು ರಾಷ್ಟ್ರೀಯಸಭೆಯಲ್ಲಿ ಮಾಡಿದ ನಿರ್ಣಯ[illegible] ಸರ್ವಪಕ್ಷೀಯ ಮುಂದಾಳುಗಳು ಬಹುಮತದಿಂದ ಅಂಗೀಕರಿಸಿದರು. ಈ ಮುಂದಾಳುಗಳಲ್ಲಿ 1350 ಮಂದಿ ಸ್ವರಾಜ್ಯವಾದಿಗಳೂ, 973 ಮಂದಿ ಸ್ವಾತಂತ್ರ್ಯವಾದಿಗಳೂ ಇದ್ದರು.

ಚೀಣೀಯರು ಅಂತಃಕಲಹವನ್ನು ಪೂರೈಸಿ ಮೊದಲು ರಾಷ್ಟ್ರೀಯ ಪ್ರಭುತ್ವವನ್ನು ಸ್ಥಾಪಿಸಿಕೊಂಡು [illegible]ಶೀಯರ ಪ್ರಾಬಲ್ಯವನ್ನು ತಡೆದುದಕ್ಕಾಗಿ ಭಾರತ ರಾಷ್ಟ್ರೀಯ ಸಭೆಯವರು ಅಭಿನಂದನವನ್ನು ಕಳುಹಿಸಬೇಕೆಂದೂ, ಚೀಣರಂತೆಯೇ ಈಜಿಪ್ಟ್, ಸಿರಿಯ, ರೊಟ್ಟೈನ್, ಇರಾಕ್ ಮೊದಲಾದ ದೇಶೀಯರು ಸಹ ಪರದಾಸ್ಯವನ್ನು ತಪ್ಪಿಸಿಕೊಂಡು ಸ್ವತಂತ್ರರಾಗಲೆಂದು ಹಾರೈಸುವುದಾಗಿ ಅವರಿಗೆ ತಿಳಿಸಬೇಕೆಂದೂ, ಸಾಮ್ರಾಜ್ಯತ್ವವನ್ನು ನಿರ್ಮೂಲಮಾಡುವುದಾಗಿ ಸ್ಥಾಪಿಸಿರುವ ಸಂಘದ ಮುಂದಿನ ಅಧಿವೇಶನವನ್ನು ಹಿಂದುಸ್ಥಾನದಲ್ಲಿ ನಡೆಸಬೇಕೆಂದೂ ಸಭೆಯವರು ನಿರ್ಧರಿಸಿದರು.

ಸರ್ಕಾರದವರು ಬರ್ದೋಲಿಯ ರೈತರಮೇಲೆ ಅನ್ಯಾಯಕೈವಾರಿ ಹೆಚ್ಚು ಕಂದಾಯವನ್ನು ವಿಧಿಸಿದ್ದರಿಂದ ಅಲ್ಲಿನ ರೈತರು ಶ್ರೀಯುತ ವಲ್ಲಭಭಾಯ್ ಪಟೇಲ್‌ರವರನ್ನು ಮುಂದಾಳುಗಳನ್ನಾಗಿಟ್ಟುಕೊಂಡು ನ್ಯಾಯವನ್ನು ಸಾಧಿಸಿ ಸರ್ಕಾರದವರು ತಮ್ಮ ತಪ್ಪನ್ನು ತಿಳಿದುಕೊಳ್ಳುವಂತೆ ಸತ್ಯಾಗ್ರಹವನ್ನು ಆಚರಿಸಿ ಅಂತ್ಯದಲ್ಲಿ ವಿಜಯವನ್ನು ಹೊಂದಿದರು. ಇದಕ್ಕಾಗಿ ಶ್ರೀ ವಲ್ಲಭಭಾಯಿಯವರನ್ನು ರಾಷ್ಟ್ರೀಯ ಸಭೆಯವರು ಅಭಿನಂದಿಸಿದರು.

ಪಂಡಿತ ಜವಾಹಿರ್‌ಲಾಲ್ ನೆಹರು ರವರು ಹಿಂದಿ[illegible]ರ ರಾಜಕೀಯ ವಿಚಾರಗಳಲ್ಲಿ ವಿದೇಶೀಯರಿಗೆ ಸಹಾಯವನ್ನು[illegible] ಮಾಡುವುದಕ್ಕಾಗಿ ನಾನಾ ದೇಶಗಳಲ್ಲಿ ರಾಷ್ಟ್ರೀಯ ಸಭೆಯ ಶಾಖೆಗಳನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ತಂದರು. ಇದನ್ನು ಲಾಲ ಗಿರಿಧರ್‌ಲಾಲ್ ರವರು ಅನುಮೋದಿಸಿದರು. ಸಭೆಯು ಲಂಡನ್ ನ್ಯೂಯಾರ್ಕ್ ನಗರಗಳಲ್ಲಿರುವ ಹಿಂದುಸ್ಥಾನದ ಸಂಘಗಳನ್ನು ಶಾಖೆಗಳನ್ನಾಗಿ ಮಾಡಿಕೊಳ್ಳುವುದಾಗಿ ಒಪ್ಪಿಕೊಂಡರು. ಇದರಂತೆಯೇ [illegible] ದೇಶಗಳಲ್ಲಿಯೂ ಶಾಖೆಗಳನ್ನು ಸ್ಥಾಪಿಸುವ ಸಲಹೆಯನ್ನು ಸ್ವೀಕರಿಸಿದರು. ಇದಕ್ಕಾಗಿ ಕಾರ್ಯಕಾರಿ ಸಮಿತಿಯವರಿಗೆ [ಆವ]ಶ್ಯಕವಾದ ಅಧಿಕಾರವು ಕೊಡಲ್ಪಟ್ಟಿತು.

ಭಾರತೀಯರ ಸ್ವಾತಂತ್ರ್ಯಸಾಧನೆಯಲ್ಲಿ ಜರ್ಮನರು ತಮ್ಮ ಸಹಾನುಭೂತಿಯನ್ನು ಸೂಚಿಸಿರುವರು. ಕಳೆದವಾರ ಆ ದೇಶದಲ್ಲಿ ನಡೆದ ಯುವಕರ ಸಮ್ಮೇಳನದಲ್ಲಿ ನಮ್ಮ ಸ್ವಾತಂತ್ರ್ಯಸಾಧನದಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸುವ ನಿರ್ಣಯಗಳನ್ನು ಏಕಮತದಿಂದ ಅನುಮೋದಿಸಿದರು. ಹಿಂದುಸ್ಥಾನದ ಯುವಕರ ಸಂಘಗಳಿಗೆಲ್ಲ ಜರ್ಮನ್ ಯುವಕ ಸಂಘದವರು ಉತ್ತೇಜಕವಾದ ಹಿತೋಕ್ತಿಯನ್ನು ಸೂಚಿಸಿರುವರು. ಲೋಕದಲ್ಲಿ ಸೋದರ ಸೌಹಾರ್ದವು ನೆಲೆಗೊಳ್ಳಬೇಕಾದರೆ ಎಲ್ಲ ದೇಶಗಳ ಯುವಕರೂ ವರ್ಣವೈಷಮ್ಯವನ್ನೂ, ಜಾತಿಭೇದವನ್ನೂ ಮರೆತು ಕೃಷಿಮಾಡಬೇಕು. ಪ್ರಪಂಚದಲ್ಲಿ ಜನಾಂಗ ಸ್ವಾತಂತ್ರ್ಯವು ಸ್ಥಾಪನೆಯಾಗಬೇಕಾದರೆ ಮೊದಲು ಆರ್ಥಿಕ ಸ್ವಾತಂತ್ರ್ಯವು ನೆಲೆಗೊಳ್ಳಬೇಕು. ಸಾಮ್ರಾಜ್ಯತ್ವವು ನಿರ್ಮೂಲವಾಗಿ ಸರ್ವಸಮಾನತ್ವವು ಚಿರಸ್ಥಾಯಿಯಾಗಬೇಕು.

ಬ್ರಿಟೀಷರು ಹಿಂದುಸ್ಥಾನದಲ್ಲಿ ತಮಗಿರುವ ಆರ್ಥಿಕ ಸಂಪತ್ತಿನ ಲಾಭಕ್ಕಾಗಿ ಈ ರಾಜ್ಯವನ್ನು ಬಿಟ್ಟುಹೋಗಲು ಒಡಂಬಡಲೊಲ್ಲರು. ಬ್ರಿಟನ್ನಿನಲ್ಲಿ ತಯಾರಾದ ಸಾಮಾನುಗಳನ್ನು ಈ ದೇಶಕ್ಕೆ ತಂದು ವಿಶೇಷ ಲಾಭವನ್ನು ಸಂಪಾದಿಸುತ್ತಿದ್ದಾರೆ. ಈ ದೇಶದಿಂದ ತೆಗೆದುಕೊಂಡು ಹೋದ ಹತ್ತಿ ಸೆಣಬು ಮೊದಲಾದ ಹಸಿ ಪದಾರ್ಥಗಳನ್ನು ಸಾಮಾನುಗಳಿಗೆ ಪರಿವರ್ತನೆಮಾಡಿ ಒಂದಕ್ಕೆ ಹತ್ತರಷ್ಟು ಲಾಭವನ್ನು ನಮ್ಮಿಂದಲೇ ಸಂಪಾದಿಸುವರು. ಇದೊಂದನ್ನು ತಪ್ಪಿಸಿದರೆ ಹಿಂದುಸ್ಥಾನದ ಆರ್ಥಿಕಸಂಪತ್ತು ಬಹುಮಟ್ಟಿಗೆ ಉತ್ತಮವಾಗುವುದಲ್ಲದೆ ಬ್ರಿಟಿಷರಿಗೆ ಜ್ಞಾನೋದಯವಾಗಿ ಅಧೀನರಾಜ್ಯಗಳಿಂದ ತಮಗಿರುವ ಲಾಭಕ್ಕಾಗಿಯಾದರೂ ಅವರನ್ನು ಸರಿಸಮಾನರಂತೆ ಗಣಿಸುವ ಬುದ್ಧಿಯು ಅವರಿಗುಂಟಾಗುವಂತೆ ಮಾಡಬಹುದು. ಇದಕ್ಕಾಗಿ ಬ್ರಿಟಿಷರಿಂದ ತಯಾರಾದ ಸಾಮಾನುಗಳಿಗೆ ಭಾರತೀಯರು ಬಹಿಷ್ಕಾರ ಹಾಕಬೇಕೆಂದು ಆಂಧ್ರದೇಶದ ಪ್ರತಿನಿಧಿಗಳಾದ ಶ್ರೀ ವಿಶ್ವನಾಥರವರು ಒಂದು ನಿರ್ಣಯವನ್ನು ತಂದರು. ಇದು ಸಭೆಯವರಿಂದ ಅಂಗೀಕೃತವಾಯಿತು.

ಪ್ರಪಂಚದ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಎಲ್ಲೆಲ್ಲಿಯೂ ಯುದ್ಧದಭಯವು ಪ್ರಸರಿಸುತ್ತಿರುವುದು. ಹಿಂದುಸ್ಥಾನವು ಬ್ರಿಟಿಷರ ಅಧೀನದಲ್ಲಿರುವುದರಿಂದ ಇದುವರೆಗೂ ನಡೆದ ಯುದ್ಧಗಳಲ್ಲೆಲ್ಲ ಬ್ರಿಟಿಷರು ಹಿಂದುಸ್ಥಾನದ ಜನಧನಗಳನ್ನು ತಮ್ಮ ಸ್ವಕಾರ್ಯಸಾಧನೆಗಾಗಿ ಉಪಯೋಗಿಸಿಕೊಂಡಿರುವರು. ಹಿಂದಿಯರಮೇಲೆ ಯಾವ ವೈರವೂ ಇಲ್ಲದಿರುವ ಜನಾಂಗಗಳ ಮೇಲೆ ಹಿಂದೆ ಬ್ರಿಟಿಷರ ಪರವಾಗಿ ಯುದ್ಧಮಾಡಿ ನಿರಪರಾಧಿಗಳಾದ ಜನಾಂಗಗಳ ಸ್ವಾತಂತ್ರ್ಯವನ್ನು ನೀಗಿದುದಾಯಿತು. ಇನ್ನುಮುಂದೆ ಯುದ್ಧವಾಗುವುದಾದರೆ ಬ್ರಿಟಿಷರು ದೇಶದ ಸಹಾಯವನ್ನು ಪಡೆಯಲಪೇಕ್ಷಿಸಿದರೆ ಅದಕ್ಕೆ ಪ್ರತಿಭಟಿಸಬೇಕು. ನಮ್ಮ ದೇಶದಲ್ಲಿ ಬ್ರಿಟಿಷರು ಸಾಕಿಕೊಂಡಿರುವ ಸೈನ್ಯವು ದೇಶರಕ್ಷಣೆಗೆಂದು ಹೇಳುತ್ತಿರುವುದು ನಿಜವಾದುದಲ್ಲ. ಬ್ರಿಟಿಷ್ ಸಾಮ್ರಾಜ್ಯರಕ್ಷಣೆಗೆಂದು ಹೇಳಿದರೆ ಅದು ಸತ್ಯವಾಕ್ಕೆಂದು ನಂಬಬಹುದು. ಆದುದರಿಂದ ಬ್ರಿಟಿಷರು ಇನ್ನುಮುಂದೆ ಮಾಡಬಹುದಾದ ಯುದ್ಧಗಳಲ್ಲಿ ಭಾರತೀಯರ ಸಹಾನುಭೂತಿಯಿಂದ ಮಾಡುವುದಾದರೆ ಸರಿ ಹಾಗಲ್ಲದೆ ಸರ್ಕಾರದ [illegible]ತ ಬ್ರಿಟಿಷರಿಗಾಗಿ ಯುದ್ಧಕ್ಕೆ ಹೋಗುವುದಾದರೆ ಅಂತಹ [illegible]ದಿನಗಳಲ್ಲಿ ಭಾರತೀಯರು ಭಾಗಿಗಳಲ್ಲವೆಂಬುದನ್ನು ಎಲ್ಲ [ಜ]ನಾಂಗಗಳಿಗೂ ತಿಳಿಯಪಡಿಸಬೇಕೆಂದು ಡಾ|| ಅನ್ಸಾರಿಯವರು ತಂದ ನಿರ್ಣಯವನ್ನು ಸಭೆಯವರು ಅಂಗೀಕರಿಸಿದರು.

ಕುದುರೆಮರಿಯು ಮಗುವನ್ನು ರಕ್ಷಿಸಿತು.

ಅಮೇರಿಕೆಯ ಒಂದು ಗ್ರಾಮದಲ್ಲಿ ಒಂದು ಕುದುರೆಮರಿಯು ಎರಡುವರ್ಷದ ಒಂದು ಮಗುವಿನೊಡನೆ ಅಸಾಧಾರಣವಾದ ಪ್ರೀತಿಯಿಂದ ಸ್ನೇಹವಾಗಿದ್ದಿತ್ತು. ಮಗುವು ಕುದುರೆಯ ಬಳಿಗೆ ಹೋದಾಗ ಆ ಪ್ರಾಣಿಯು ಸಾಧುವಾಗಿ ನಮ್ರತೆಯಿಂದ ಮಗುವನ್ನು ಮುದ್ದಾಡುತ್ತಿತ್ತು. ಈ ಕುದುರೆಯು ಕಾಡುಪ್ರಾಣಿಯಾದದ್ದರಿಂದ ದೊಡ್ಡವರು ಸಹ ಅದರ ಸಮೀಪಕ್ಕೆ ಹೋಗಲು ಅಂಜಿಕೊಳ್ಳುತ್ತಿದ್ದರು. ಮಗುವಿನೊಡನೆ ಮಾತ್ರ ಕುದುರೆಯು ಕುರಿಯಮರಿಯಷ್ಟು ಸಾಧುವಾಗಿರುತ್ತಿತ್ತು. ಮಗುವು ಕುದುರೆಯ ಮೂಗನ್ನು ಹಿಡಿದು ಎಳೆದು ಸಂತೋಷದಿಂದ ಚಪ್ಪಾಳೆ ಹೊಡೆದಾಗ್ಯೂ ಮರಿಯು ಆನಂದ ಪಡುತ್ತಿತ್ತೇ ವಿನಾ ರೇಗುತ್ತಿರಲಿಲ್ಲ. ಹೀಗಿರುತ್ತಿರಲು ಒಂದುದಿನ ಮಗುವು ಮನೆಯಲ್ಲಿರಲಿಲ್ಲ. ತಾಯಿಯು ಇದನ್ನು ಕಂಡು ಭೀತಿಗೊಂಡು ನೆರೆಮನೆಯ ಹಂಗಿಸಿನೊಡನೆ ಊರೆಲ್ಲ ಹುಡುಕಲಾರಂಭಿಸಿದಳು. ಆ ಊರಿನಲ್ಲಿದ್ದ ಕೆರೆಯ ಸಮೀಪದಲ್ಲಿ ಒಂದು ಆಶ್ಚರ್ಯಕರವಾದ ನೋಟವು ಕಾಣಿಸಿತು. ಕುದುರೆಮರಿಯು ನೀರಲ್ಲಿ ಬಿದ್ದಿದ್ದ ಮಗುವಿನ ಬಟ್ಟೆಗೆ ಬಾಯಿಹಾಕಿ ಹಲ್ಲಿನಿಂದ ಭದ್ರವಾಗಿ ಹಿಡಿದು ನೀರಿನಿಂದ ಈಚೆಗೆ ತೆಗೆಯುತ್ತಿತ್ತು. ಮಗುವು ಪ್ರಜ್ಞೆತಪ್ಪಿ ಶೈತ್ಯದಿಂದ ಮೈಯೆಲ್ಲ ನೀಲಿಗಟ್ಟಿತ್ತು. ಮಗುವು ಮುಳುಗದಂತೆ ಕುದುರೆಯು ಅದನ್ನು ಎಷ್ಟು ಹೊತ್ತಿನವರೆಗೂ ಹಾಗೆಯೇ ಹಿಡಿದಿತ್ತೋ ತಿಳಿಯಲಿಲ್ಲ. ಉಪಚಾರವಾದನಂತರ ಮಗುವು ಬದುಕಿಕೊಂಡಿತು.

ಒಳದೇಶದ ವೃತ್ತಾಂತಗಳು.

ಲ್ಪಟ್ಟು, ದಕ್ಷರಾದ ಜನರನ್ನೊಳಗೆ ಧಾನ ಸಿ. ಐ., ಯವರ
ಪ್ರೋತ್ಸಾಹಿಸಲ್ಪಡತಕ್ಕದ್ದಾಗಿರು ಕ್ಕೊಡನೆ ಈ ತಾ||
ತಯಾರಾದ ಜನಗಳನ್ನು ಸೇರ್ಪ
ಗಳೆಲ್ಲರಿಗೂ ಕೋವಿ ಉ
ಪ್ರತಿಯೊಬ್ಬ ಸಬ್ ಇನ್ಸ್‌ಪೆ ಶಂಕರಪ್ಪ, ಬಿ. ಎ., ಯ
ಬೇಕು. ಪೋಲೀಸ್ ಇಲಾಖರಾಗಿ ನಿಯಮಿಸಲ್ಪಟ್ಟು
ಕೊಡತಕ್ಕದ್ದು. ಸರ್ಕಾರಿ ರ್ಗಾಯಿಸಲ್ಪಟ್ಟಿರುವರು.
ತೆಗೆ ತಕ್ಕಂತೆ ಸ್ಥಾನ ದ
ಸರ್ಕಾರೀಹುದ್ದೆಗೆ ಚುಃ ಸ್ಥಾಪಿಸುವ ಉದ್ದೇಶ
ಚುನಾಯಿಸತಕ್ಕದ್ದು. ರು ಗಲಭೆಗೆ ಸಂಬಂಧಪಟ್ಟ
ಇದಕ್ಕಾಗಿ ಸರ್ಕಾರ ಮೊಕದ್ದಮೆಗಳನ್ನು ಹಿಂದಕ್ಕೆ
ವಶ್ಯಕವು. ಈಗ ಕೈ ನರಮೇಲಿನ ಮೊಕದ್ದಮೆಗಳು
ರುವ ಸ್ವಾತಂತ್ರ
ವುದು. ಈ ಸ್ವಾತ
ಕೋರುವುದಿಲ್ಲ. ವಿದ್ಯುಚ್ಛಕ್ತಿಯ ಕಾರ್ಯಾಲಯದಲ್ಲಿ
|| ಮುದ್ಗಲ್‌ರವರ ತಮ್ಮನೂ, ಅವರ
ಪ್ರಜೆಗಳ ಮೋಟಾರ್ ಬಂಡಿಯಲ್ಲಿ ಪ್ರಯಾಣ
ವನ್ನು ತಾವೆಸ್ಮಿಕವಾಗಿ ಗಾಡಿಯು ತಲೆಕೆಳಗಾಗಿ
ಈಗ ಕ್ಯೊ ಯಿಯವರು ಮೃತರಾದರೆಂದೂ ತಮ್ಮನಿ
ಈಗೆ 10 ಮೋಟಾರು ನಡೆಸುವವನಿಗೂ ಪೂರಾ ಪೆಟ್ಟು
ಹಿಂದೆ ತಿಯಲ್ಲಿರುವರೆಂದೂ ತಿಳಿಯಬರುತ್ತದೆ.
ದೇಶಕ್ಕೆ
ರಾಜ್ಯ ತಾರೀಖು ಪ್ರಾತಃಕಾಲ ರಾಜಧಾನಿಯಲ್ಲಿ
ಮುಂ ಶಾಸ್ತ್ರಜ್ಞರ ಸಮ್ಮೇಳನವು ಜಗನ್ಮೋಹನ
ಮುಮ್ಮಡಿ ಕೃಷ್ಣರಾಜರವರಿಂದ ಪ್ರಾರಂಭಿಸಲ್ಪಟ್ಟ
ಸ್ವಾಮಿಯವರು ಮೈಸೂರಿನ ಆರ್ಥಿಕಪರಿಸ್ಥಿತಿ
ಸ್ಥಾನದ ಭೂಗರ್ಭದ ಸಂಪತ್ತಿಯನ್ನೊಳಗೊಂ
ಅನ್ನೂ, ಮನುಷ್ಯನ ಸೌಕರ್ಯಕ್ಕಾಗಿ ಸ್ವಾಭಾ
ಉಪಯುಕ್ತರೂಪಕ್ಕೆ ಪರಿವರ್ತಿಸುವ ಕಸ
ದಾಗುವ ದೇಶಾಭ್ಯುದಯವನ್ನೂ ಪ್ರತಿಪಾ
ಕ್ತವಾದ ಭಾಷಣವನ್ನು ಜನಗಳಿಗೆ ಮನನ
ಡಿದರು. ಈ ಸಮ್ಮೇಳನವು ಎರಡುನೂರು
ಯನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ
ವಿಚಾರಣಾಸಮಿತಿ ವರದಿಯ ಸಾರಾಂಶವು
ರುವುದು. ಈ ವರದಿಯು ಸರ್ಕಾರದವರಿಂದ
ಗೋಪ್ಯವಾಗಿ ಇಡಲ್ಪಟ್ಟಿತ್ತಾದರೂ ಹೊರ
ಕಾರಿಗೆ ಇದು ಹೇಗೆ ತಿಳಿಯಿತೋ ಗೊತ್ತಾಗ
ಯವರ ಮುಂದೆ ಗೋಪ್ಯದಲ್ಲಿ ಹೇಳಿದ ಸಾ
ಅದಕ್ಕೆ ಸಂಬಂಧಪಟ್ಟ ಪಕ್ಷದವರಿಗೆ ಹೇಗೊ
ದ ಅನೇಕ ಮೊಕದ್ದಮೆಗಳು ಪ್ರಾರಂಭವಾ
ಸಹ ಸರ್ಕಾರದವರು ವಿಚಾರಮಾಡಿ ಗೋಪ್ಯದ
ಹೇಗೆ ಹೊರಬಿದ್ದಿತೆಂಬುದನ್ನು ಕಂಡುಹಿಡಿಯ
ದರೂ ವರದಿಯ ಸಮಾಚಾರವು ಹೇಗೆ ಹೊರಬಿ
ಕಂಡುಹಿಡಿದು ಇನ್ನುಮುಂದೆ ಸರ್ಕಾರದ
ಹೋಗದಂತೆ ಕಾಪಾಡಿಕೊಳ್ಳುವ ಏರ್ಪಾಡುಗಳನ್ನು
ಮಹಾಜನಗಳು ನಂಬಿರುತ್ತಾರೆ.
ಯಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರಿಂದ
ಹುತ್ತಿದ್ದ ಮೈಸೂರು ಪೇಟ್ರಿಯಟ್, ಸಾಧ್ವಿ ಮತ್ತು ಸಂಪದಭ್ಯುದಯಪತ್ರಿಕೆಗಳ ಮುದ್ರಣಕ್ಕೆ ಸರ್ಕಾರದವರು ಕೊಟ್ಟಿದ್ದ ಹುಕುಮ್ಮು ವಾಪಸ್ಸು ತೆಗೆದುಕೊಳ್ಳಲ್ಪಟ್ಟಿರುವುದಾಗಿ ನೋಟೀಸು ಬಂದುದರಿಂದ ಮೇಲ್ಕಂಡ ಪತ್ರಿಕೆಗಳ ಪ್ರಕಟನೆಯನು ನಿಲ್ಲಿಸಿ, 50 ವರ್ಷಗಳ ಹಿಂದೆ ತಾವು ಪ್ರಕಟಿಸುತ್ತಿದ್ದ ಹಿತಬೋಧಿನಿ ಪತ್ರಿಕೆಯನ್ನು 1929 ನೇ ಜನವರಿ ತಾ|| 5 ರಿಂದ ಪ್ರತಿದಿನವಲ್ಲೂ ಹೊರಡಿಸಲುಪಕ್ರಮಿಸಿರುವುದಾಗಿ ಈ ನೂತನ ಪತ್ರಿಕೆಯ ಅಗ್ರಲೇಖದಲ್ಲಿ ಬರೆಯಲ್ಪಟ್ಟಿದೆ. ಇದುವರೆಗೆ ನಡೆಯುತ್ತಿದ್ದ ಪೇಟ್ರಿಯಟ್, ಸಂಪದಭ್ಯುದಯ ಮತ್ತು ಸಾಧ್ವಿಪತ್ರಿಕೆಗಳನ್ನು ನಿಲ್ಲಿಸಬೇಕೆಂದು ಸರ್ಕಾರದವರು ಆರ್ಡರನ್ನು ಮಾಡಿ ಅದರೊಡನೆಯೇ 50 ವರ್ಷಗಳ ಹಿಂದೆ ನಡೆಯುತ್ತಿದ್ದ ಹಿತಬೋಧಿನಿ ಮಾಸಪತ್ರಿಕೆಯನ್ನು ದಿನಚರಿಯಾಗಿ ಹೊರಡಿಸಲು ಅನುಜ್ಞೆಯನ್ನಿತ್ತಿರುವುದರ ಕಾರಣವು ತಿಳಿಯಲಿಲ್ಲ.

ಭರತಖಂಡದ ವೃತ್ತಾಂತಗಳು.

ದಕ್ಷಿಣ ಆಫ್ರಿಕೆಯಲ್ಲಿ ಹಿಂದುಸ್ಥಾನದ ರಾಯಭಾರಿಗಳಾಗಿದ್ದ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳವರು ಹಿಂದುಸ್ಥಾನಕ್ಕೆ ಹಿಂತಿರುಗಿ ಹೊರಟಿರುವರು. ಈ ಮಹನೀಯರು ಆ ದೇಶದಲ್ಲಿರುವ ಭಾರತೀಯರಿಗೆ ಮಾಡಿದ ಉಪಕಾರಕ್ಕಾಗಿ ಅಲ್ಲಿನವರು ಶ್ರೀ ಶಾಸ್ತ್ರಿಗಳವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಸತ್ಕರಿಸಿದರು. ಶ್ರೀ ಶಾಸ್ತ್ರಿಗಳವರ ರಾಜತಂತ್ರವಿಶಾರದತೆಯಿಂದ ನಮ್ಮ ದೇಶೀಯರ ಸ್ಥಿತಿಯು ಆಫ್ರಿಕೆಯಲ್ಲಿ ಬಹುತರವಾಗಿ ಉತ್ತಮವಾಯಿತು.

ಹಿಂದುಸ್ಥಾನದ ರಾಜಧಾನಿಯಾದ ಡೆಲ್ಲಿಪಟ್ಟಣದ ಸುತ್ತಮುತ್ತಲಿನ ಪ್ರದೇಶವನ್ನು ಒಟ್ಟುಗೂಡಿಸಿ ಒಂದು ಹೊಸ ಸಂಸ್ಥಾನವನ್ನು ಮಾಡಬೇಕೆಂಬ ಆಲೋಚನೆಯಿರುವುದು. ಈ ಸಂಸ್ಥಾನಕ್ಕೆ ಆಗ್ರ, ರೋಹಿಲ್‌ಖಂಡ್, ಮೀರಠ್‌ಖಂಡ್, ಅಂಬಲ ಎಂಬ ನಾಲ್ಕು ಡಿಸ್ಟ್ರಿಕ್ಟ್‌ಗಳೂ ಸೇರುವುವು. ಈ ಪ್ರಾಂತದ ಜನಸಂಖ್ಯೆಯು 1,81,00,000. ಇವರು ಭಾಷೆಯಲ್ಲಿಯೂ, ನಾಗರಿಕತೆಯಲ್ಲಿಯೂ, ಚರಿತ್ರೆಯಲ್ಲಿಯೂ ಒಂದೇ ಬುಡಕಟ್ಟಿನವರಾದುದರಿಂದ ಸೌಹಾರ್ದದಿಂದ ನಡೆದುಕೊಂಡು ಹೋಗುವರೆಂಬ ನಂಬಿಕೆಯಿರುವುದು.

[illegible] ಕೋಟು ಸಿದೆ. ವಿಚಾರಣೆಗೆ ಸಾವಕಾಶವಿಲ್ಲವೆಂಬುದು ಇದರಲ್ಲಿ ನೇಯ್ಗೆ [illegible] ಬಾಯಿಯು [illegible] ಮೇಸ್ತ್ರಿಯೊಬ್ಬನು ತನ್ನ ಕೈಕೆಳಗಿನ ಕೆಲಸಗಾರರನ್ನು ದಂಡಿಸಿ ಕೆನ್ನೆಗೆ ಹೊಡೆದುದಕ್ಕಾಗಿ ಕೂಲಿಗಾರರು ಸಮಯವನ್ನು ಕಾದಿದ್ದು ವಿರಾಮಕಾಲದಲ್ಲಿ ಆತನ ಮೇಲೆ ಬಿದ್ದು ಚೆನ್ನಾಗಿ ಪ್ರಹರಿಸಿದರು. ವಿಶೇಷವಾಗಿ ಘಾತಪಟ್ಟು ಮೇಸ್ತ್ರಿಯು ಮೃತನಾದನು. ಇಷ್ಟಕ್ಕೆ ತೃಪ್ತರಾಗದೆ ಕೋಪಾವಿಷ್ಟರಾದ ಕೂಲಿಗಾರರು ಇತರ ಅಧಿಕಾರಸ್ಥರನ್ನು ಹುಡುಕಿಕೊಂಡು ಹೋದರು. ಅವರು ತಮ್ಮ ಸ್ಥಾನದಲ್ಲಿಲ್ಲದಿರಲು ಕೆಲಸಗಾರರು ಸ್ವಸ್ಥವಾಗಿ ತಮ್ಮ ಕೆಲಸದಮೇಲೆ ಹೋದರು ಪೋಲೀಸ್ ಅಧಿಕಾರಿಗಳು ಬಂದು 25 ಜನರನ್ನು ಕೈದಿಸಲ್ಪಟ್ಟಿರುವರು.

ಮನುಷ್ಯನಿಗೆ ಬರುವ ರೋಗಗಳೆಲ್ಲ ಬಹುತರವಾಗಿ ಜೈತನ್ಯಾಂಶ ಕಡಿಮೆಯುಳ್ಳ ಆಹಾರಸೇವನೆಯಿಂದಲೇ ಉತ್ಪನ್ನವಾಗುವುವೆಂದು ವೈದ್ಯಶಾಸ್ತ್ರಜ್ಞರು ಪರಿಶೋಧನೆಗಳಿಂದ ನಿರ್ಧರಿಸಿರುವರು. ಹಿಂದುಸ್ಥಾನದಲ್ಲಿಯಂತೂ ಈ ವಿಧವಾದ ಆಹಾರಸೇವನೆಯು ಜನಗಳ ಬಡತನದ ದೆಸೆಯಿಂದ ಸರ್ವಸಾಧಾರಣವಾಗಿ ಎಲ್ಲೆಲ್ಲಿಯೂ ರೂಢಮೂಲವಾಗಿರುವುದು ಸಕಲರಿಗೂ ತಿಳಿದ ವಿಚಾರವಾಗಿರುತ್ತದೆ. ಆದುದರಿಂದ ಸರ್ಕಾರದವರು ಜನಗಳಲ್ಲಿ ರೋಗ ರುಜಿನಗಳನ್ನು ಕಡಿಮೆಮಾಡಬೇಕಾದರೆ ಬಡಜನರಿಗೆ ಸುಲಭ ಜೀವನೋಪಾಯವನ್ನು ಕಲ್ಪಿಸಿ ಪುಷ್ಟಿಕರವಾದ ಆಹಾರವು ಸುಲಭ ಬೆಲೆಗೆ ದೊರೆಯುವಂತೆ ಮಾಡುವುದು ಅತ್ಯಾವಶ್ಯಕವಾಗಿರುವುದು.

ಆಹಾರ ಪದಾರ್ಥಗಳಲ್ಲಿ ಜಿಡ್ಡುಪದಾರ್ಥವು ಶರೀರಪುಷ್ಟಿಗೆ ಅತ್ಯಾವಶ್ಯಕವಾಗಿರುವುದು. ಸ್ವಭಾವಸ್ಥಿತಿಯಲ್ಲಿರುವ ಎಳ್ಳು, ಬಾದಾಮಿ, ತೆಂಗಿನಕಾಯಿ ಮೊದಲಾದ ಎಣ್ಣೆಯ ಬೀಜಗಳು ಅತಿಪುಷ್ಟಿಕರವಾದ ಆಹಾರದ್ರವ್ಯವುಳ್ಳವುಗಳಾಗಿವೆ. ಈ ಪದಾರ್ಥಗಳು ನಮ್ಮ ದೇಶದಲ್ಲಿ ಯಥೇಚ್ಛವಾಗಿ ಬೆಳೆಯುವುವು. ಇವನ್ನು ಆಹಾರಕ್ಕಾಗಿ ಉಪಯೋಗಿಸುವ ರೂಢಿಯು ಸಾಮಾನ್ಯವಾಗಿರುವುದು. ಹೀಗಿದ್ದಾಗ್ಯೂ ಈ ದೇಶದಿಂದ ವಿದೇಶಕ್ಕೆ ಬಟ್ಟೆಯತಯಾರಿಗಾಗಿ ತೆಗೆದುಕೊಂಡು ಹೋಗುವ ಹತ್ತಿಯೊಡನೆ ಇರುವ ಬೀಜದಿಂದ ಒಂದು ವಿಧವಾದ ಎಣ್ಣೆಯನ್ನು ತೆಗೆದು ಅದಕ್ಕೆ ಹತ್ತಿತುಪ್ಪವೆಂಬ ಹೆಸರನ್ನು ಕೊಟ್ಟು ಬೆಣ್ಣೆಕಾಸಿದ ತುಪ್ಪಕ್ಕೆ ಸರಿಸಮಾನವೆಂದು ಹೇಳಿ ಅಂಗಡಿಗಳಲ್ಲಿ ಮಾರಾಟಮಾಡಲ್ಪಡುತ್ತಿರುವುದು. ಇದು ಅನಾರೋಗ್ಯಕ್ಕೆ ಕಾರಣವಾದುದೆಂದೂ, ಹಾನಿಕರವೆಂದೂ ವೈದ್ಯರು ನಿರ್ಧರಿಸಿರುವರು. ಅಮೇರಿಕೆಯಲ್ಲಿಯೂ ಇತರ ಪಾಶ್ಚಾತ್ಯದೇಶಗಳಲ್ಲಿಯೂ ಪರದೇಶದಿಂದ ಆಮದಾಗುವ ಆಹಾರಪದಾರ್ಥಗಳನ್ನು ಪರಿಶೋಧಿಸಿ ಅವು ಅನಾರೋಗ್ಯಕರವಾದುವೆಂದು ಗೊತ್ತಾದಪಕ್ಷದಲ್ಲಿ ಅಂತಹ ವಸ್ತುಗಳನ್ನು ದೇಶದೊಳಕ್ಕೆ ಬರದಂತೆ ಕಾಯಿದೆಗಳಿಂದ ನಿಷೇಧಿಸುವರು. ಭಾರತದೇಶವು ಮಾತ್ರ ಸ್ವತಂತ್ರವಿಲ್ಲವಾದುದರಿಂದ ಇಂತಹ ಕಾನೂನುಗಳಿಗವಕಾಶವಿಲ್ಲದೆ ವಿದೇಶದಿಂದ ಎಷ್ಟು ಹಾನಿಕರವಾದ ವಸ್ತುಗಳನ್ನಾದರೂ ತರಿಸಿಕೊಂಡು ಅದಕ್ಕೆ ಲಕ್ಷಾಂತರಗಟ್ಟಲೆ ನಮ್ಮ ಹಣವನ್ನು ಪ್ರತಿವರ್ಷವೂ ವಿದೇಶೀಯರಿಗೆ ಅರ್ಪಿಸಬೇಕಾಗಿರುವುದು.

ವಿದೇಶದ ವೃತ್ತಾಂತಗಳು.

ಅಮೇರಿಕಾದೇಶದಲ್ಲಿ ಚುಟ್ಟ ತಯಾರುಮಾಡುವ ಯಂತ್ರಗಳು ಸದರಿ ಚುಟ್ಟಗಳನ್ನು ತಾವಾಗಿಯೇ ಮಾರುತ್ತವೆಯಂತೆ. ಕೊಂಡುಕೊಳ್ಳುವವರು ನಾಣ್ಯವನ್ನು ಅದರೊಳಕ್ಕೆ ಹಾಕಿದ ಕೂಡಲೆ ಒಂದು ಚುಟ್ಟವನ್ನು ಈಚೆಗೆಕಳುಹಿಸಿ "ನಿಮಗೆ ವಂದನೆ" ಎಂದು ಹೇಳುವುವಂತೆ.

ಬೆಲ್ಜಿಯಮಿಗೆ ಸೇರಿದ ಟರ್ನ್ಹೌಟಿಗೆ ಉತ್ತರದಲ್ಲಿರುವ ಪ್ರದೇಶದಲ್ಲೆಲ್ಲ ಜಲಪ್ರಳಯವಾಗಿದೆ. ಭೀಕರವಾದ ಗಾಳಿಯು ಬೀಸುತ್ತಿದ್ದುದರಿಂದ ಷಲ್ಡು ನದಿಯಲ್ಲಿ ಪ್ರವಾಹವು ಉಕ್ಕಿ 7000 ಎಕರೆ ಭೂಮಿಯಮೇಲೆ ನೀರುಹರಿದು 10000 ಜನರಿಗೆ ಬಹಳ ನಷ್ಟಸಂಭವಿಸಿರುತ್ತದೆ.

ಷಾಂಗೆದಲ್ಲಿ ವಿದೇಶ ಪೋಲೀಸಿನವರು ಆಂಗ್ಲದಾದಿಯನ್ನು ಎತ್ತುಕೊಂಡು ಹೋದ ಚೀನೀಯರ ಮನೆಯನ್ನು ಮುತ್ತಿಗೆ ಹಾಕಲು ಅವರು ಆ ದಾದಿಯನ್ನು ಕೊಂದುಹಾಕಿದರು. ಹೀಗೆ ಕೊಲೆಮಾಡಿದ ಮೂವರು ಚೀನೀಯರಿಗೆ ನ್ಯಾಯಸ್ಥಾನದಲ್ಲಿ ಮರಣದಂಡನೆಯು ವಿಧಿಸಲ್ಪಟ್ಟಿತು.

ಮುಂದೆ ಫ್ರೆಂಚರ ರಾಜಕೀಯವು ವಿಷಮಾವಸ್ಥೆಯನ್ನು ಹೊಂದುವುದೆಂದು ಹೇಳಲ್ಪಡುತ್ತಿದೆ. ಸೆನೇಟರು, ಪಾರ್ಲಮೆಂಟು ಸಭ್ಯರ ಸಂಬಳವನ್ನು ಹೆಚ್ಚಿಸಕೂಡದೆಂದು ಪಾಯಿಂಕೇರು ವಾದಿಸಿದರಾದರೂ ಸೆನೇಟರಲ್ಲಿ 140 ಜನರು ಸಂಬಳವನ್ನು ಹೆಚ್ಚಿಸಬೇಕೆಂದು ಅಭಿಪ್ರಾಯಪಡಲಾಗಿ ಪಾಯಿಂಕೇರಿಗೆ ಈ ವಿಚಾರದಲ್ಲಿ ಪರಾಜಯವಾಯಿತು.

ತುರ್ಕಿ ಮತ್ತು ಅಫ್ಘಾನಿಸ್ಥಾನದೇಶಗಳಲ್ಲಿ ಸರ್ಕಾರಿ ಉದ್ಯೋಗಸ್ಥರೂ ಇತರ ಜನಗಳೂ ಯೂರೋಪಿನವರಂತೆ ಉಡುಪನ್ನು ಧರಿಸುವ ಸುಧಾರಣಾಕ್ರಮವನ್ನು ರೂಢಿಯಲ್ಲಿತರುತ್ತಿರುವರಷ್ಟೆ. ಈಗ ಪರ್ಷಿಯಾದೇಶದಲ್ಲಿಸಹ ಇದೇರೀತಿಯ ಸುಧಾರಣೆಯು ಉಪಕ್ರಮವಾಗಿರುವುದು. ಮತಸಂಬಂಧವಾದ ಉದ್ಯೋಗಗಳಲ್ಲಿ ಇರುವವರಿಗೆ ಮಾತ್ರ ಈ ನಿಯಮವು ಅನ್ವಯಿಸುವುದಿಲ್ಲ.

ರಷ್ಯಾ ದೇಶದಲ್ಲಿ ಚಳಿಗಾಲದ ಶೈತ್ಯಾಧಿಕ್ಯದಿಂದ ಪೂರ್ವಭಾಗದ ಪ್ರಾಂತದಲ್ಲಿ ತೋಳಗಳು ತಂಡೋಪತಂಡವಾಗಿ ಗ್ರಾಮಾದಿಗಳಿಗೆ ನುಗ್ಗಿ ಜನಗಳಿಗೆ ಉಪದ್ರಕೊಡುತ್ತಿರುವುದರಿಂದ ರೈತರೂ ವರ್ತಕರುಗಳೂ ಲೆಖ್ಖವಿಲ್ಲದಷ್ಟು ನಷ್ಟವನ್ನು ಹೊಂದುತ್ತಿರುವುವು. ಸುಂಕದವರಿಗೆ ಮೋಸಮಾಡಿ ಸಾಮಾನುಗಳನ್ನು ವಿದೇಶಕ್ಕೆ ಸಾಗಿಸುತ್ತಿದ್ದವರಲ್ಲಿ ಕೆಲ ಜನರು ತೋಳಗಳ ಬಾಯಿಗೆ ತುತ್ತಾದರು.

ಪಾಶ್ಚಾತ್ಯನಗರಗಳಲ್ಲಿ ಜನಸಂದಣಿಯು ಅಧಿಕವಾದುದರಿಂದ ವಯಸ್ಸಾದ ಜನಗಳಿಗೆ ಸರಿಯಾದ ವಿಶ್ರಾಂತಿ ದೊರೆಯದೆ ಅವರು ಹಗಲೆಲ್ಲ ನಿದ್ರಿಸುತ್ತ ರಾತ್ರಿಯಲ್ಲಿ ಎಚ್ಚರವಾಗಿದ್ದು ನಿಶ್ಶಬ್ದವಾಗಿರುವ ಸ್ಥಳಗಳಲ್ಲಿ ಆನಂದದಿಂದ ತಿರುಗಾಡುತ್ತ ಆತಂಕವಿಲ್ಲದೆ ವಿಹರಿಸುವರು. ಆ ವೇಳೆಯಲ್ಲಿ ನವನಾಗರಿಕತೆಯ ಗೊಂದಲವು ಇಲ್ಲದೇ ಇರುವುದರಿಂದ ಪ್ರಾಚೀನಕಾಲದಂತಹ ನೆಮ್ಮದಿಯೂ ಶಾಂತಿಯೂ ಗೋಚರವಾಗುವುದು.

ಅಮೇರಿಕೆಯ ಒಂದು ಕಾಡಿನಲ್ಲಿ ತನ್ನ ನಾಯಿಯನ್ನು ಕರೆದುಕೊಂಡು ಹೋಗುತ್ತಿದ್ದ ಯಜಮಾನನೊಬ್ಬನು ಎದುರಿಗೆ ಬಂದು ನಾಯಿಯಮೇಲೆಬಿದ್ದ ತೋಳನನ್ನು ಕತ್ತುಹಿಸಿಗಿಹಾಕಿ ಕೊಲ್ಲುವ ಪ್ರಯತ್ನದಲ್ಲಿ ಒಂದು ಕೈಯೆಲ್ಲವೂ ಆ ಕ್ರೂರಪ್ರಾಣಿಯಿಂದ ಅಗಿದುಹಾಕಲ್ಪಟ್ಟಿತು. ಇಷ್ಟರಲ್ಲಿ ನಾಯಿಯು ತನ್ನ ಯಜಮಾನನಿಗೆ ಸಂಭವಿಸಿದ ಅಪಾಯವನ್ನು ನೋಡಿ ಆ ತೋಳನ ಮೇಲೆಬಿದ್ದು ಅದನ್ನು ಕೊಂದು ತನ್ನ ಯಜಮಾನನನ್ನು ರಕ್ಷಿಸಿತು.

ಬರ್ಮುಡಾ ದ್ವೀಪದಲ್ಲಿ ಒಬ್ಬ ನೀಗ್ರೊ ಬೆಸ್ತರವನು ಶಿಳ್ಳುಹಾಕುವ ಸಳ್ಳೆಯನ್ನು ಹಿಡಿದಿರುವನು. ಇದು ಗಾತ್ರದಲ್ಲಿ ಅಗಾಧವಾಗಿರುವುದು. ಇದು ಶಿಳ್ಳುಹಾಕಿದಾಗ ಬಿರುಗಾಳಿಯು ಮೊರೆಯುವಂತೆ ಶಬ್ದವಾಗುವುದು. ಈ ದ್ವೀಪದಲ್ಲಿ ಅನೇಕ ಪ್ರಾಣಿವೈಚಿತ್ರ್ಯಗಳಿರುವುವು. ಹಂದಿಯಂತೆ ಗುರುಗುಟ್ಟುವ ಮೀನೊಂದು ಮೀನು, ಆಳಿಲಾಕಾರದಲ್ಲಿರುವ ಬೊಗಳುವ ಮೀನೊಂದು, ಬೆಕ್ಕಿನಂತಿರುವ ಮಿಯಾವ್ ಎನ್ನುವ ಮೀನು, ತಮಟೆಬಡಿದಂತೆ ಶಬ್ದಮಾಡುವ ಡಮರುಗದ ಮೀನು, ಗುಟುರುಹಾಕುವ ದನದಜಾತಿಯ ಮೀನು ಇನ್ನೂ ನಾನಾವಿಧವಾದ ವಿಚಿತ್ರಧ್ವನಿಮಾಡುವ ಮೀನುಗಳು ಈ ಬರ್ಮುಡಾದ್ವೀಪದಲ್ಲಿ ಯಥೇಚ್ಛವಾಗಿರುವುವಂತೆ.

ಒಂದಾನೊಂದು ನಾಯಿಯು ಸೋಫಾದಮೇಲೆ ಹತ್ತಿದಾಗಲೆಲ್ಲ ತನ್ನ ಯಜಮಾನನಿಂದ ಶಿಕ್ಷಿಸಲ್ಪಡುತ್ತಿದ್ದಿತು. ಇದನ್ನು ತಿಳಿದುಕೊಂಡು ತನ್ನ ಯಜಮಾನನು ಬರುವ ಶಬ್ದವನ್ನು ಕೇಳಿದಕೂಡಲೆ ಸೋಫಾದಿಂದ ಕೆಳಗಿಳಿದುಬಿಡುತ್ತಿತ್ತು. ಹೀಗಿರುತ್ತಿರಲು ಒಂದುದಿನ ಯಜಮಾನನು ಸೋಫಾದಮೇಲೆ ಕುಳಿತುಕೊಂಡು ಪಕ್ಕದಲ್ಲಿ ಕೈಯಿಟ್ಟುಕೊಳ್ಳಲು ಆ ಸ್ಥಳವು ಬಿಸಿಯಾಗಿದ್ದಿತು. ಅದನ್ನು ಪರೀಕ್ಷಿಸಬೇಕೆಂದು ಮರುದಿನ ಕಿಟಿಕಿಯಿಂದ ಆ ಸ್ಥಳವನ್ನು ನೋಡುತ್ತಿರಲು ನಾಯಿಯು ಯಜಮಾನನು ಬರುವುದನ್ನು ತಿಳಿದು ಸೋಫಾದಿಂದ ಕೂಡಲೆ ಕೆಳಗಿಳಿದು ತನ್ನ ಮುಂಗಾಲುಗಳನ್ನು ಅದರಮೇಲೆ ಊರಿ ನಾನು ಮಲಗಿದ ಸ್ಥಳವನ್ನು ತಣ್ಣಗೆ ಮಾಡಲು ಬಾಯಿಯಿಂದ [illegible]ತ್ತಿ[illegible] ನಾಯಿಗಳಿಗೆ ಈ ವಿಧವಾದ ಬುದ್ಧಿ[illegible] ಆಶ್ಚರ್ಯವಲ್ಲವೆ!

[illegible] ಲೋಕಣ್ಣ,
[illegible] ವ್ಯಾಪಾರಿಗಳು,
ಹಿರಿಯೂರು, ಚಿತ್ರದುರ್ಗ ಡಿ||

ಅಮೇರಿಕೆಯಲ್ಲಿ ಸ್ತ್ರೀಯರು ಅಂಗಸಾಧನೆಯಲ್ಲಿಯೂ, ಆಟಪಾಟಗಳಲ್ಲಿಯೂ ಗಂಡಸರಂತೆ ಸಮಭಾಗಿಗಳಾಗುತ್ತಿರುವರು. ಓಡುವ ಪಂದ್ಯದಲ್ಲಿ ಮಾತ್ರ, ಅವರು ಒಂದುಸಾವಿರ ಗಜಕ್ಕೆ ಮೀರಿ ಓಡಲಾಗದೆಂದೂ, ಅವರ ಗಾಂಭೀರ್ಯಕ್ಕೆ ಅದು ಕುಂದಕವಾದುದೆಂದೂ ನಿರ್ಧರಿಸಿರುವರು. ದೇಹದಂಡನೆಗೂ, ಮಾನಮರ್ಯಾದೆಗೂ ಇರುವ ಸಂಬಂಧವು ಅಮೇರಿಕೆಯರಿಗೆ ವಿಶೇಷವಾಗಿ ತಿಳಿದಂತೆ ತೋರುತ್ತದೆ. ದಮ್ಮು ಬರುವುದರಿಂದ ನೀತಿಗೆ ಕುಂದಕಬರುವುದೇನೊ?

ನಾಟಕವಾಡುವುದರಲ್ಲಿ ಒಂದು ಅಂಕವಾದ ಮತ್ತೊಂದು ಅಂಕವು ಬರುವುದಕ್ಕೆ ಮಧ್ಯೆ ಕಾಲವಿಳಂಬವಾಗುವುದು. ಇದನ್ನು ತಪ್ಪಿಸುವುದಕ್ಕಾಗಿ ಪ್ಯಾರಿಸ್‌ನಗರದಲ್ಲಿ ಒಂದು ಹೊಸ ನಮೂನೆಯ ನಾಟಕಶಾಲೆಯು ನಿರ್ಮಿಸಲ್ಪಡುತ್ತಿರುವುದು. ಇದರಲ್ಲಿ 2-3 ಅಂತಸ್ತಿನ ವೇದಿಕೆಗಳಿರುವವು. ಮೊದಲನೇ ವೇದಿಕೆಯಲ್ಲಿ 1 ಅಂಕವು ಪೂರ್ತಿಯಾದೊಡನೆಯೇ 2 ನೇ ವೇದಿಕೆಯು ಯಂತ್ರಗಳ ಸಹಾಯದಿಂದ ಕೆಳಕ್ಕೆ ಇಳಿಸಲ್ಪಡುವುದು. ಈ ಏರ್ಪಾಡಿನಿಂದ ನಾಟಕದ ಕಾಲಾವಧಿಯು ಬಹುಮಟ್ಟಿಗೆ ಕಡಮೆಯಾಗಿ ನೋಟಕರಿಗೆ ಅನುಕೂಲವಾಗುವುದು.

ಕಾಬೂಲಿನಲ್ಲಿದ್ದ ವಿದೇಶೀಯ ರಾಯಭಾರಿಗಳೂ ಅವರ ಸಂಸಾರಗಳೂ ಸುರಕ್ಷಿತವಾಗಿ ಪೆಷಾವರಿಗೆ ಆಕಾಶಯಾನಗಳಲ್ಲಿ ತಲಪಿದುವು. ದಂಗೆಕೋರರೊಡನೆ ಶಾಂತಿಸಂಧಾನಗಳನ್ನು ನಡೆಸಲು ಏರ್ಪಾಡುಗಳಾಗುತ್ತಿರುವುವು. ಮೊನ್ನೆ ದಂಗೆಕೋರರು ಕಾಬೂಲನ್ನು ಸಮೀಪಿಸಿದಾಗ ಬ್ರಿಟಿಷ್ ರಾಯಭಾರಿಗಳ ವಾಸಸ್ಥಳಗಳ ಮೇಲೆ ಸಿಡಿಮದ್ದಿನ ಗುಂಡುಗಳ ಮಳೆಯು ಸುರಿಯಿತಂತೆ ಅಮಾನುಲ್ಲಾ ರಾಜರು ಕಾಬೂಲಿನಲ್ಲಿಯೇ ಇದ್ದುಕೊಂಡು ದಂಗೆಯನ್ನು ಅಡಗಿಸುವ ತರದೂದಿನಲ್ಲಿರುವರು. ರಾಣೀವಾಸದವರು ಕಾಂದಹಾರಿನಲ್ಲಿ ಸುರಕ್ಷಿತವಾಗಿರುವರು ರಾಜಿಯಾಗಿ ಇಷ್ಟರಲ್ಲೇ ಶಾಂತಿಯಾಗುವ ಸಂಭವವು ತೋರುತ್ತಿರುವುದು.

ದಂಗೆಕೋರರು ಕಾಬೂಲಿನಿಂದ ಸ್ವಲ್ಪದೂರದವರೆಗೂ ಸರ್ಕಾರದ ಸೈನಿಕರಿಂದ ಓಡಿಸಲ್ಪಟ್ಟಿರುವರು. ಚಳಿಗಾಲವು ಪ್ರಬಲವಾಗಿರುವುದರಿಂದ ಹೊಡೆದಾಟವು ಕಡಮೆಯಾಗಿರುವುದು. ಅಮಾನುಲ್ಲರಾಜರಿಗೆ ದೇಶದ ನಾನಾ ದಿಕ್ಕುಗಳಿಂದ ಜನಧನಸಹಾಯವು ಬಂದೊದಗುತ್ತಿರುವುದು. ಜಲಾಲಬಾದ್ ನಗರವು ಸರ್ಕಾರದವರ ವಶವಾಗಿರುವುದು. ದಂಗೆಕೋರರೊಡನೆ ಶಾಂತಿಸಂಧಾನವು ನಡೆಸುವ ಯೋಚನೆ ಇರುವುದು. ಕಾಬೂಲಿ[illegible] ವಿದೇಶ ಸ್ತ್ರೀಪುರುಷರು ಸುರಕ್ಷಿತವಾಗಿ ಕಾಬೂಲಿನಿಂದ ಹಿಂದುಸ್ಥಾನಕ್ಕೆ ಆಕಾಶಯಾನಗಳಲ್ಲಿ ಸಾಗಿಸಲ್ಪಟ್ಟಿರುವರು. ಯೂರೋಪಿಯನರ ಹೆಂಗಸರೂ ಮಕ್ಕಳೂ ಅವರವರ ದೇಶಕ್ಕೆ ಕಳುಹಿಸಲ್ಪಟ್ಟರು.

ಜಪಾನ್ ಸಾಮ್ರಾಜ್ಯದಲ್ಲಿ ಗ್ರಾಮಾಂತರಗಳ ಆಡಳಿತವು ಗ್ರಾಮನಿವಾಸಿಗಳಿಂದಲೇ ನಡೆಸಲ್ಪಡುವುದು. ಕಂದಾಯವನ್ನು ವಸೂಲುಮಾಡುವುದು, ಗ್ರಾಮಪಂಚಾಯತರನ್ನು ಚುನಾಯಿಸುವುದು, ಯಜಮಾನನ್ನು ಗೊತ್ತುಮಾಡಿಕೊಳ್ಳುವುದು, ಗ್ರಾಮದ ಉತ್ಪನ್ನದ ಹಣವನ್ನು ಗ್ರಾಮಾಭ್ಯುದಯಕ್ಕಾಗಿಯೇ ವಿನಿಯೋಗಿಸುವುದು ಇವೆಲ್ಲವೂ ಗ್ರಾಮನಿವಾಸಿಗಳಿಂದಲೇ ನಡೆಯುವುವು. ಈ ಕಾರಣದಿಂದ ಗ್ರಾಮವಾಸಿಗಳು ರಾಜ್ಯಾಡಳಿತದಲ್ಲಿ ಭಾಗಿಗಳಾಗಿ ರಾಜಕೀಯ ವಿಚಾರದಲ್ಲಿ ಕಾರ್ಯತಃ ಅನುಭವವನ್ನು ಸಂಪಾದಿಸುವರು. ಈ ರೀತಿಯಲ್ಲಿ ಆಡಳಿತದ ಕೆಲಸದಲ್ಲಿ ನುರುಗಿದವರಿಗೆ ಉತ್ತರವಾದಿತ್ವದ ಸರ್ಕಾರವೆಂದರೇನೆಂಬುದು ಚೆನ್ನಾಗಿ ಅರ್ಥವಾಗುವುದು.

ಜನಗಳಿಗೆ ನೆಗಡಿಯು ಪ್ರಾಪ್ತವಾಗಿ ಕೆಲ ಕಾಲಾನಂತರ ಶ್ವಾಸಕೋಶಗಳು ವ್ಯಾಧಿಗ್ರಸ್ತವಾಗುವುದರಿಂದ ಅನೇಕರು ಪ್ರಾಣವನ್ನೊಪ್ಪಿಸಿರುವರು. ಜಾರ್ಜ್ ಸಾರ್ವಭೌಮರವರಿಗು ಸಹ ಇದೇ ರೀತಿಯಲ್ಲಿ ನೆಗಡಿಯಾಗಿ ಕ್ರಮೇಣ ಶ್ವಾಸಕೋಶಗಳು ಕೆಡುತ್ತಾಬಂದುವು. ಈ ಜಾಡ್ಯದ ಮೂಲಕಾರಣವನ್ನು ಪರಿಶೋಧಿಸುವುದಕ್ಕಾಗಿ ಅಮೇರಿಕೆಯ ಧರ್ಮಿಷ್ಟರಾದ ಶ್ರೀಮಂತರೊಬ್ಬರು ವಿಶ್ವವಿದ್ಯಾಲಯದಲ್ಲಿ ಒಂದು ನಿಧಿಯನ್ನೇರ್ಪಡಿಸಿ ಅದರ ಸಹಾಯದಿಂದ ವೈದ್ಯಶಾಸ್ತ್ರ ವಿಶಾರದರು ಪರಿಶೋಧನೆಯನ್ನು ನಡೆಸುವಂತೆ ಗೊತ್ತುಮಾಡಿರುತ್ತಾರೆ. ಅಮೇರಿಕೆಯಲ್ಲಿ ಜನೋಪಕಾರ ಸಂಸ್ಥೆಗಳು ಅನೇಕವಾಗಿರುವುವು. ಇದರಿಂದ ಅಮೇರಿಕೆಯು ಧರ್ಮರಾಜ್ಯವಲ್ಲವೋ?

ಅಮೇರಿಕೆಯು ಪೃಥ್ವಿಯಲ್ಲೆಲ್ಲ ಐಶ್ವರ್ಯದಲ್ಲಿಯೂ, ಔದಾರ್ಯದಲ್ಲಿಯೂ, ನವನಾಗರಿಕತೆಯಲ್ಲಿಯೂ, ಶಾಸ್ತ್ರಶೋಧನೆಯಲ್ಲಿಯೂ, ಇತರ ಆರ್ಥಿಕವಿಚಾರಗಳಲ್ಲಿಯೂ ಅಗ್ರಸ್ಥಾನವನ್ನು ಪಡೆದಿರುವುದು. ರಾಜ್ಯ ಸಂರಕ್ಷಣೆಗೂ ಯುದ್ಧಸನ್ನಾಹಕ್ಕೂ ಆವಶ್ಯಕವಾದ ಭೂಸೈನ್ಯ, ನೌಕಾಸೈನ್ಯ ಆಕಾಶನಾವೆ ಮೊದಲಾದ ಯುದ್ಧಸಾಮಗ್ರಿಗಳನ್ನು ವಿಶೇಷವಾಗಿ ತಯಾರುಮಾಡಿಕೊಂಡಿದ್ದುದರಿಂದ ಇದುವರೆಗೂ ಬ್ರಿಟಿಷರು ಮಾತ್ರ ಮುಂದಾಳುಗಳಾಗಿದ್ದರು. ಈಗ ಅಮೇರಿಕೆಯು ದೊಡ್ಡ ಯುದ್ಧದ ಆಕಾಶನಾವೆಯನ್ನು ಲಕ್ಷಾಂತರ ಪೌನುಗಳ ಖರ್ಚಿನಿಂದ ಕಟ್ಟಿಸಲು ಪ್ರಯತ್ನಮಾಡುತ್ತಿರುವರು. ಇವು ತಯಾರಾದ ಕೂಡಲೆ ಅಮೇರಿಕೆಯು ಸೈನ್ಯಬಲದಲ್ಲಿ ಇಂಗ್ಲೆಂಡಿಗಿಂತ ಪ್ರಬಲವಾಗುವುದು.

ಯುದ್ಧದಲ್ಲಿ ಸೋತುಹೋದ ಜರ್ಮನಿ ಮತ್ತು ತುರ್ಕಿ ದೇಶಗಳ [illegible]ಸಾಮ್ರಾಜ್ಯವು ಮಿತ್ರಮಂಡಲಿಗೆ ಸೇರಿದ ಬ್ರಿಟ[illegible] [illegible]ಗ ಆಯಾದೇಶಗಳ ಜನರನ್ನು ಸಂರಕ್ಷಿಸಿ [illegible] ಅಭಿವೃದ್ಧಿಯ ಕಾರ್ಯಗಳನ್ನು [illegible]ಟದವರಿಗೆ ಮಾತುಕೊಟ್ಟರು.

ಆದರೆ ಈರೀತಿಯಲ್ಲಿ ಪರದಾಸ್ಯಕ್ಕೆ ಒಳಗಾದ ಸಿರಿಯ ಮೊದಲಾದ ದೇಶಗಳಲ್ಲಿ ಆರ್ಥಿಕಸ್ಥಿತಿಯು ಶೋಚನೀಯವಾಗಿರುವುದು. ಫ್ರೆಂಚರ ಆಳ್ವಿಕೆಯಲ್ಲಿರುವ ಸಿರಿಯಾದೇಶದಲ್ಲಿ ರಾಜ್ಯವು ತುರ್ಕಿಗೆ ಸೇರಿದ್ದಾಗ ಗೋಧಿಯೇ ಮೊದಲಾದ ಧಾನ್ಯಗಳು ಸುತ್ತಮುತ್ತಲಿನ ಪ್ರದೇಶಕ್ಕೆಲ್ಲ ಸಾಕಾಗುವಷ್ಟು ಬೆಳೆಯುತ್ತಿದ್ದುದು ಈಗ ವಿದೇಶದಿಂದ ಆಹಾರಪದಾರ್ಥಗಳನ್ನು ತರಿಸಿಕೊಳ್ಳುವ ಸ್ಥಿತಿಗೆ ಬಂದಿರುವುದು. ಸಿರಿಯನರು ಸ್ವಾತಂತ್ರ್ಯಕ್ಕಾಗಿ ಹೊಡೆದಾಡಲು ಪ್ರಾಚೀನಕಾಲದಿಂದಲೂ ಸುಪ್ರಸಿದ್ಧವಾಗಿದ್ದ ಡಮಾಸ್ಕಸ್‌ನಗರವನ್ನು ಅದರ ರಕ್ಷಕರೆಂದು ಹೇಳಿಕೊಳ್ಳುವ ಫ್ರೆಂಚರು ಸಿಡಿಮದ್ದಿನಿಂದ ನಾಶಮಾಡಿದರು. ನಿರಾಪರಾಧಿಗಳಾದ ಪುರನಿವಾಸಿಗಳನ್ನು ಒಟ್ಟೊಟ್ಟಿಗೆ ಕೊಲೆಮಾಡಿದರು. ಜೀವನಕ್ಕೆ ಮಾರ್ಗವಿಲ್ಲದೆ ಪ್ರತಿವರ್ಷವೂ 20 ಸಾವಿರಮಂದಿ ಗಟ್ಟಿಮುಟ್ಟಿಯಾದ ಜನಗಳು ದೇಶವನ್ನುಬಿಟ್ಟು ಹೊರಟು ಹೋಗುತ್ತಿರುವರು. ತೆರಲಾಗದಿರುವ ಕಂದಾಯವನ್ನು ಹಾಕಿದುದೇ ಇದಕ್ಕೆ ಕಾರಣವೆಂದು ತಿಳಿಯಬರುತ್ತದೆ. ಸಾಮ್ರಾಜ್ಯದ ಆಸೆಯಿಲ್ಲದಿರುವ ಸ್ವಾತಂತ್ರ್ಯಪ್ರಿಯರಾದ ಫ್ರೆಂಚರ ಆಳಿಕೆಯು ಇಷ್ಟರಮಟ್ಟಿಗಿದೆ!

ಅಗ್ಗವಾದ ಮೋಟಾರ್ ಬಂಡಿಗಳನ್ನು ತಯಾರುಮಾಡುವ ಹೆನ್ರಿಫೋರ್ಡ್ ಎಂಬ ಅಮೇರಿಕಾ ದೇಶೀಯನು ಪ್ರಪಂಚದಲ್ಲೆಲ್ಲ ಶ್ರೀಮಂತಶ್ರೇಷ್ಠನಾಗಿರುವನು. ಈಗ ಈತನು ಹೊಸದಾಗಿ ಇಂಗ್ಲೆಂಡಿನಲ್ಲಿಯೂ, ತುರ್ಕಿಯಲ್ಲಿಯೂ ಮೋಟಾರ್ ಬಂಡಿಗಳ ಕಾರ್ಯಾಲಯವನ್ನು ಕಟ್ಟಿಸಿರುವನು. ಇಂಗ್ಲೆಂಡಿನ ಕಾರ್ಯಾಲಯದಲ್ಲಿ ವರ್ಷಕ್ಕೆ ಎರಡುಲಕ್ಷ ಗಾಡಿಗಳು ತಯಾರಾಗುವುವು. ಇದರಿಂದ ದೇಶದಲ್ಲಿರುವ ಇತರ ಕಾರ್ಯಾಲಯಗಳಿಗೆ ವಿಶೇಷ ನಷ್ಟವಾಗುವುದು. ಆದರೆ, ದೇಶಕ್ಕೆ ಒಟ್ಟಿನಲ್ಲಿ ನಷ್ಟವಾಗುವಂತಿಲ್ಲ. ಏಕೆಂದರೆ ಅಲ್ಲಿನ ಕಾರ್ಯಾಲಯಕ್ಕೆ ಬೇಕಾದ ಬಂಡವಾಳದಲ್ಲಿ ಶೇಕಡ 40 ರಷ್ಟು ಆ ದೇಶೀಯರಿಂದಲೇ ಶೇಖರಿಸಲ್ಪಟ್ಟಿರುವುದು. ಹಿಂದುಸ್ಥಾನದಲ್ಲಿ ವ್ಯಾಪಾರಕ್ಕಾಗಿ ಬರುವ ವಿದೇಶೀಯರೊಡನೆ ಇದೇರೀತಿಯಾದ ಒಪ್ಪಂದವನ್ನು ಮಾಡಿಕೊಳ್ಳುವುದಾದರೆ ಈ ದೇಶದಿಂದ ಹೊರಗೆ ಹರಿದುಹೋಗುವ ಹಣದ ಪ್ರವಾಹವು ಬಹುಮಟ್ಟಿಗೆ ಕಡಿಮೆಯಾಗಬಹುದು. ಈ ಮೋಟಾರ್ ದೊರೆಯು ಹಿಂದುಸ್ಥಾನದಲ್ಲಿ ಕಾರ್ಯಾಲಯವಿಡುವ ಯೋಚನೆಯನ್ನು ಇನ್ನೂ ನ[illegible]ಲ್ಲಿ [illegible]ರಾಷ್ಟ್ರೀಯ ಪ್ರಭುತ್ವದವರು ಮೋಟಾರ್ ಕಾರ್ಯಾಲಯವನ್ನು ಸ್ಥಾಪಿಸುವುದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವರು. ಕಾಲಕ್ರಮದಲ್ಲಿ ಪ್ರಪಂಚದ ದೊಡ್ಡ ದೊಡ್ಡ ದೇಶಗಳಲ್ಲೆಲ್ಲ ಫೋರ್ಡ್ ಕಾರ್ಯಾಲಯಗಳು ಹರಡಿಕೊಂಡು ಈ ಮೋಟಾರ್ ದೊರೆಗೆ ನಿವಿಷಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರಲು ಅವಕಾಶವಾಗುವುದರಲ್ಲಿ ಸಂಶಯವಿರುವುದಿಲ್ಲ.

ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳು.

ಕರ್ಣಾಟಕ ದೇಶಭಾಷಾಭಿಮಾನಿಗಳಲ್ಲಿ ವಿಜ್ಞಾಪನೆ.

ಮೈಸೂರು ಶ್ರೀಮನ್ಮಹಾರಾಜರವರ ಕಾಲೇಜಿನಲ್ಲಿ ಸುಮಾರು ಇಪ್ಪತ್ತೇಳು ವರ್ಷಗಳ ದೀರ್ಘಕಾಲ ಕನ್ನಡಪಂಡಿತರಾಗಿ ವಿದ್ಯಾದಾನವನ್ನೂ ಭಾಷಾಸೇವೆಯನ್ನೂ ಮಾಡಿ ನಿವೃತ್ತರಾಗಿರುವ ಮತ್ತು ತಮ್ಮ ಅಸಾಧಾರಣವಾದ ಪಾಂಡಿತ್ಯದಿಂದಲೂ ಕನ್ನಡನುಡಿಯ ಸೇವೆಯಿಂದಲೂ ವಿದ್ಯಾಪಕ್ಷಪಾತಿಗಳಾದ ಶ್ರೀಮನ್ಮಹಾರಾಜರವರ ದಿವ್ಯಕೃಪೆಗೆ ಪಾತ್ರರಾಗಿ **"ಕರ್ಣಾಟಕ ಭಾಷಾರತ್ನ"** ವೆಂಬ ಬಿರುದನ್ನೂ ಆಸ್ಥಾನದಲ್ಲಿ **"ಮಹಾವಿದ್ವಾಂಸ"** ಪದವಿಯನ್ನೂ ಪಡೆದು ಪ್ರಖ್ಯಾತರಾಗಿರುವ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳವರ ಪರಿಚಯವನ್ನು ಸಾಕ್ಷಾತ್ತಾಗಿಯಾಗಲಿ ಅವರ ಗ್ರಂಥಗಳ ಮೂಲಕವಾಗಿಯಾಗಲಿ, ಪಡೆಯದೆ ಇರತಕ್ಕ ವ್ಯಕ್ತಿಯು ಕನ್ನಡನಾಡಿನಲ್ಲಿ ಇಲ್ಲವೇಇಲ್ಲವೆಂದು ಹೇಳಬಹುದು. ಶಾಸ್ತ್ರಿಗಳವರ ಕನ್ನಡನುಡಿಯ ಸೇವೆಯೂ ಅನ್ಯಾದೃಶವಾದ ಭಾಷಾಪಾಂಡಿತ್ಯವೂ ಕರ್ಣಾಟಕ ಜನಾಂಗಕ್ಕೆ ಶಾಶ್ವತವಾದ ಉತ್ತೇಜಕವಾಗಿರುವಂತೆ, ಇವರ ಭಾವಚಿತ್ರವೊಂದನ್ನು ನಮ್ಮ ಕಾಲೇಜಿನಲ್ಲಿ ಸ್ಥಾಪಿಸಿ, ಅವರಿಗೆ ನಮ್ಮ ಸಂಘದ ಪರವಾಗಿ ಬಿನ್ನವತ್ತಳೆಯೊಂದನ್ನು ಸಮರ್ಪಿಸಬೇಕೆಂದು ಸಂಕಲ್ಪಿಸಿರುವುದರಿಂದ, ಶಾಸ್ತ್ರಿಗಳವರ ಶಿಷ್ಯರೂ, ಸ್ನೇಹಿತರೂ ಮತ್ತು ಅಭಿಮಾನಿಗಳೂ ಆದ ಮಹನೀಯರೆಲ್ಲರೂ ಉದಾರಮನಸ್ಸಿನಿಂದ ದ್ರವ್ಯಸಹಾಯ ಮಾಡಿ ಈ ಸತ್ಸಂಕಲ್ಪವು ಈಡೇರುವಂತೆ ಮಾಡುವರೆಂದು ನಂಬಿರುತ್ತೇನೆ. ಈ ಮಹೋತ್ಸವವನ್ನು ಬರುವ ಜನವರಿತಿಂಗಳ ಕೊನೆಯಲ್ಲಿ ನಡೆಯಿಸಬೇಕೆಂದಿರುವುದರಿಂದ ಸಹಾಯದ್ರವ್ಯವನ್ನು ಆ ಕಾಲದೊಳಗಾಗಿಯೇ ಮಹಾರಾಜರವರ ಕನ್ನಡ ಅಧ್ಯಾಪಕರ ಸಂಘದ ಉಪಾಧ್ಯಕ್ಷರಾದ ಶ್ರೀಮಾನ್ ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್., ಇವರಿಗೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕಸಂಘ.

ಬೆಂಗಳೂರು ಗಲಭೆ ವಿಚಾರದಲ್ಲಿ ವಿಶ್ವೇಶ್ವರಯ್ಯ ವಿಚಾರಣಾಸಮಿತಿಯ ವರದಿ.

ಪೋಲೀಸಿನವರ ಮತ್ತು ಮ್ಯಾಜಿಸ್ಟ್ರೇಟರ ಜವಾಬ್ದಾರಿ.

"ಗುಂಡು ಹಾರಿಸಲ್ಪಟ್ಟಿತು ಎಂದು ನಾವು ದೃಢವಾಗಿ ಹೇಳುತ್ತೇವೆ."

ಇಲಾಖಾಧಿಕಾರಿಗಳ ಅನುಮತಿ ಇಲ್ಲದೆ ಕಂಟ್ರಾಕ್ಟರ್ ನಂಜುಂಡಯ್ಯನೆಂಬುವನಿಗೆ ಸಿ.ಲ್ಯಾ[illegible]ಪೇಟೆ ಸ್ಕೂ[illegible] ಗಣಪತಿಗೆ ಒಂದು [illegible]ಲಯವನ್ನು ಕಟ್ಟುವುದಕ್ಕೆ ಅವಕಾಶ[illegible]ಂದೆ ಸಂಪೂರ್ಣ[illegible] ಗಲಭೆಗೆ ಮೂಲ[illegible]

[illegible]ವನ್ನು ಮಾಡಬೇಕೆಂದು [illegible]ತ್ಸ ಜೇ[illegible]

ಕಾರಣವು. ಗಣಪತಿಯ ಪ್ರತಿಮೆಯನ್ನು ಪುನಃ ಪ್ರತಿಷ್ಠಿಸಲು[illegible]ದಕ್ಕಾಗಿ ಹುಡುಗರು ಅಸಮಾಧಾನ ಪಟ್ಟುಕೊಂಡುದು ನ್ಯಾಯವಾಗಿದೆ. ಈ ಅಸಮಾಧಾನವು ಸ್ಥಳದ ಪತ್ರಿಕೆಗಳ ಮತ್ತು ಹಿಂದೂ[illegible] ಸಹಾಯದಿಂದ ಉತ್ತೇಜಿಸಲ್ಪಟ್ಟು ಮತ್ತಷ್ಟು ಪ್ರಬಲವಾಯಿತು. ಇಂ[illegible] ಮತವೈಷಮ್ಯವನ್ನು ಜನಿತವಾದ ಗಲಭೆಯ ತೀಕ್ಷ್ಣತೆಯನ್ನು ಸರ್ಕಾರದ[illegible] ಸಕಾಲದಲ್ಲಿ ತಿಳಿದವರಾಗಿದ್ದ ಪಕ್ಷದಲ್ಲಿ ಈ ಗಲಭೆಯನ್ನು ಪ್ರಥಮಾವ[illegible]ಯಲ್ಲಿಯೇ ಹತೋಟಿಗೆ ತರಬಹುದಾಗಿದ್ದಿತು. ವಿದ್ಯಾ ಇಲಾಖೆಯವರು [illegible]ಪತಿಯನ್ನು ಪುನಃ ಪ್ರತಿಷ್ಠೆ ಮಾಡುವುದರಲ್ಲಿ ತಡೆಮಾಡಿದರು. ಹೀಗೆ[illegible] ಸರ್ಕಾರದವರು ಹೆಜ್ಜೆ ಹೆಜ್ಜೆಗೂ ಮಾಡಿದ ತಪ್ಪಿನಿಂದ ಕಡೆಗೆ ಫಲ[illegible] ಇಷ್ಟು ಪ್ರಗಾಢವಾಗಿ ಪರಿಣಮಿಸಿತು. ಮೆ|| ಅಬ್ಬಾಸ್‌ಖಾನರ[illegible]ವಂತೆ, ಹಿಂದುಗಳ ರಾಜದ್ರೋಹದ ಗುಪ್ತ ಸಂಸ್ಥೆಗಳಿವೆ[illegible] ನಂಬತಕ್ಕದ್ದಲ್ಲ. ಈ ಆಪಾದನೆಯನ್ನು ಮೆ|| ಖಾನರವರು ದೊ[illegible]ನೆರೆದ ಜನಗಳ ಮೇಲೆ ಆರೋಪಿಸಿದರು. ಆದರೆ ಅಲ್ಲಲ್ಲೇ ಕೆಲವು[illegible]ಗಳು ಮಾತ್ರ ಇಂತಹ ಚಳವಳಿಯನ್ನು ನಡೆಸಿರಬಹುದು. ಜನ[illegible]ದಿಂದ ಅವರಿಗೆ ಸಹಾಯ ಒದಗಿತೆಂಬುದು ನಂಬತಕ್ಕದ್ದಲ್ಲ. ಸ[illegible]ರಿಗೆ ತಿಳಿದಮಟ್ಟಿಗೆ ದಿವಾನರವರು ಮುಸಲ್ಮಾನರಾದುದರಿಂದಲೇ [illegible] ಪ್ರತಿಬಂಧಕವು ಬಂದೊದಗಿತೆಂದು ಹೇಳಲಾಗುವುದಿಲ್ಲ. ಗಣ[illegible] ಅವರಿಗೆ ವಾಪಸು ಕೊಡದೆ ಇದ್ದುದರಿಂದ ಹುಡುಗರಿಗೆ ಅಸಮಾಧಾ[illegible]ರಬಹುದು. ಆದರೆ ಪ್ರಜಾ ಮುಖಂಡರ ದುರ್ಬೋಧನೆಗೆ ಒಳಗಾಗಿ[illegible] ಶಾಲೆಗಳನ್ನೂ, ಜೈಲನ್ನೂ, ಕಾರಲ್‌ಟನ್ ಬಂಗಲೆಯನ್ನೂ ಮುತ್ತಿ[illegible]ಗಳನ್ನು ಎಸೆಯುತ್ತ ಅನಾಹುತ ನಡೆಸಿದುದಕ್ಕಾಗಿ ಮುಖಂಡರೇ ಜವಾ[illegible]ರರು ಮತ್ತು ಶಿಕ್ಷಾರ್ಹರು.

ಗುಂಡುಹಾರಿಸಿದುದು ನಿಜ.

ಹುಡುಗರು ನಡೆಸಿದ ಅನೇಕ ಕೃತ್ಯಗಳು ಯುವಕರ ಸಹಜ[illegible] ಗುಣದಿಂದಲು ಮತ್ತು ಮಂದಮತಿಯಿಂದಲು ನಡೆಸಿದುದಾದುದರಿಂದ ಅಲ್ಪವಿಷಯವನ್ನು ಇಷ್ಟು ಅಗಾಧವಾಗಿ ಎಣಿಸಬಾರದಾಗಿದ್ದಿತು. ಪತ್ರಿ[illegible] ವಿಷಯದಲ್ಲಿ ಸ್ವಲ್ಪ ಮೇಲ್ವಿಚಾರಣೆ ಇರುವುದು ಆತ್ಯಾವಶ್ಯಕ. ಇದ[illegible] ಖಾಸಗೀ ಮೆಂಬರುಗಳನ್ನೊಳಗೊಂಡ ಒಂದು ಸಮಿತಿಯನ್ನು ಏರ್ಪ[illegible]ಬೇಕು. ಸಂಸ್ಥಾನದ ಪ್ರಕೃತಸ್ಥಿತಿಯಲ್ಲಿ ಕೆಲವು ಪತ್ರಿಕೆಗಳು ಹದ್ದು[illegible] ಹೋಗಿ ಜನಗಳ ಮನಸ್ಸನ್ನು ಉಲ್ಲೋಲ ಕಲ್ಲೋಲ ಮಾಡಲವಕಾಶ[illegible]ವುದು. ನಮ್ಮೆಲ್ಲರಿಗೂ, ಅದಿನ ಗುಂಡು ಹಾರಿಸಲ್ಪಟ್ಟಿತೆಂಬುದು ನಿಧ[illegible]ವಾಗಿರುವುದು. ನಮ್ಮಲ್ಲಿ ಬಹು ಮಂದಿ, ಮೂರು ಗುಂಡುಗಳು ಇತ[illegible]ಗಳಿಂದಲೂ ಹಾರಿಸಲ್ಪಟ್ಟವೆಂದು ಅಭಿಪ್ರಾಯ ಪಡುವರು. ಅಬ್ಬಾ[illegible] ಖಾನರ ಮನೆಯಿಂದ ಅನೇಕ ಜನ ಮಹಮ್ಮದೀಯರು ಲಾಠಿಗಳನ್ನು [illegible]ದುಕೊಂಡು ಹೊರ ಬಿದ್ದು ನಿರಾಯುಧರಾದ ಹಿಂದುಗಳನ್ನು ಪ್ರಹರಿ[illegible]ರೆಂಬುದೂ ನಮಗೆ ನಿಜವಾದುದೆಂದು ತೋರಿ ಬಂದಿರುವುದು. ಈ ವ[illegible]

[illegible]ಜತೆಯಲ್ಲಿ ಅಕ್ಕಪಕ್ಕ ಗ[illegible] ಸ್ವೀಕರಿಸಿದರು. ಇದಕ್ಕಾಗಿ
ಆದರೆ ಅಬ್ಬಾಸ್‌ಖಾನರ [illegible]ವರಿಗೆ ವಿಶ್ಯಕವಾದ ಅಧಿಕಾರವು ಕೊಡ
ಅವರನ್ನು ಕೊಲೆಮಾಡಿದರೆ[illegible]
ನ್ಯಾಯವೇನೆಂದರೆ —ಯಾ[illegible] ಸ್ವಾತಂತ್ರ್ಯಸಾಧನೆಯಲ್ಲಿ ಜರ್ಮನರು ತಮ್ಮ
ತಪ್ಪಿಸಿಕೊಂಡಿರುವುದೂ ಇಲ್ಲ[illegible] ಸೂಚಿಸಿರುವರು. ಕಳೆದವಾರ ಆ ದೇಶ
ಗಳು, ವಿಚಾರಣೆಯ ಸಾವಕ[illegible] ಸಮ್ಮೇಳನದಲ್ಲಿ ನಮ್ಮ ಸ್ವಾತಂತ್ರ್ಯ
ಈ ವಿಷಯವನ್ನು ಕೂಲಂಕಷವ[illegible]
ನಂಬಿಕೆಯನ್ನು ಹೋಗಲಾಡಿಸಲು[illegible]ಸಹಾನುಭೂತಿಯನ್ನು ತೋರಿಸುವ ನಿರ್ಣಯ
ಸರಿಯಾಗಿ ಹತೋಟಿ[illegible]ನುಮೋದಿಸಿದರು. ಹಿಂದುಸ್ಥಾನದ
ನಗರದ ಶಾಂತಿರಕ್ಷಕರಾದ ಪೋ[illegible] ಜರ್ಮನ್ ಯುವಕ ಸಂಘದವರು
ಖಿನಲ್ಲಿ ಸಂಭವಿಸಿದ ಸನ್ನಿವೇಶವನ್ನು ತ[illegible]ಮನ್ನು ಸೂಚಿಸಿರುವರು. ಲೋಕ
ಹತೋಟಿಯಲ್ಲಿಟ್ಟುಕೊಳ್ಳಲಿಲ್ಲ. ಗುಂಡ[illegible]ನೆಲೆಗೊಳ್ಳಬೇಕಾದರೆ ಎಲ್ಲ ದೇಶ
60 ಹಿಂದುಗಳೂ ಹಿಂದು ಅಧಿಕಾರಿಗಳೂ[illegible]ಮ್ಯವನ್ನೂ, ಜಾತಿಭೇದವನ್ನೂ
ಳಿಂದ ಘಾಯಪಡಿಸಲ್ಪಟ್ಟರೂ ಸಂಯಾವ[illegible] ಜನಾಂಗ ಸ್ವಾತಂ
ಯಾರನ್ನೂ ದಸ್ತಗಿರಿ ಮಾಡಲಿಲ್ಲ ಮತ್ತು ಯ[illegible] ಮೊದಲು ಆರ್ಥಿಕ ಸ್ವಾತಂ
ಲ್ಲ. ಮಾರನೆ ದಿನ ಬೆಳಿಗ್ಗೆ ಸರ್ಕಾರದವರು[illegible]ಜ್ಯತ್ವವು ನಿರ್ಮೂಲವಾಗಿ
ನವರ ಕೈಯಿಂದ ತಪ್ಪಿಸಿ ತಾವೇ ವಹಿಸಿಕೊಂಡ[illegible]ಬೇಕು.
ಡಿಸಿದರು. ಇದರಿಂದ ಪೋಲೀಸಿನವರಿಗೆ ಈ ವಿಚಾರ[illegible]
ಕಡಿಮೆಯಾಗಲು ಅವಕಾಶವಾಯಿತು. ಈ ವಿಚಾರ[illegible] ತಮಗಿರುವ ಆರ್ಥಿಕ
ಸಾಮಾನ್ಯ ಕೆಲಸಗಳನ್ನು ತಪ್ಪಿಸಿ ಈ ಗಲಭೆಯ ವಿಚ[illegible] ಬಿಟ್ಟುಹೋಗಲು
ವಂತೆ ಏರ್ಪಡಿಸಲಿಲ್ಲ. ಮತ್ತು ಈತನ ಬದಲಿ ವ[illegible]ರಾದ ಸಾಮಾನುಗ
ಅವರ ಪೌರಕಾರ್ಯ ನಡವಳಿಕೆಯಲ್ಲಿ ಸಹಾಯಕರ[illegible]ವನ್ನು ಸಂಪಾದಿಸುತ್ತಿ
ಯನ್ನು ಸರ್ಕಾರದವರು ನೇಮಿಸಿದರು. ಈ ಬದ[illegible]ಹೋದ ಹತ್ತಿ ಕಣಬು
ಯುಕ್ತವಾದ ಸಿಜಾಂಶಗಳು ಹೊರಬೀಳದೆ ಅಲ್ಲ[illegible]ಸಾಮಾನುಗಳಿಗೆ ಪರಿವರ್ತ
ವಾಯಿತು. ಸರ್ಕಾರೀ ಪ್ರಕಟನೆಗಳು ಸಹ ಕ್ರಾ[illegible]
ವಾಗಿದ್ದವು. ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟ[illegible] ನಮ್ಮಿಂದಲೇ ಸಂ
ಅಜಮಾಯಿಷಿ ಮಾಡಿದರೆಂಬುದೂ, ಗುಂ[illegible]ದರೆ ಹಿಂದುಸ್ಥಾನದ
ಶುದ್ಧ ಸುಳ್ಳು. ವಿದ್ಯಾಖಾತೆಯವರು ಈ ವಿ[illegible]ತ್ತಮವಾಗುವುದಲ್ಲದೆ
ಕೊಟ್ಟು ಸಕಾಲದಲ್ಲಿ ಗಲಭೆಯನ್ನು ನಿಲ್ಲಿಸ[illegible]ರಾಜ್ಯಗಳಿಂದ ತಮಗಿ
ಸ್ಸಡಗಿಸಲು ತರಲ್ಪಟ್ಟ ಸೇನೆಯು ಹೆಚ್ಚು[illegible]ಸಮಾನರಂತೆ ಗಣಿ
ಅಧೀನದಲ್ಲಿದ್ದಿತು. ಇವರಿಗೆ ನ್ಯಾಯ[illegible] ಮಾಡಬಹುದು. ಇದ
ಸವಾರರು ಹುಡುಗರನ್ನು ಬಹಳ ಕ್ರೂ[illegible]ಸಾನುಗಳಿಗೆ ಭಾರತೀ
ಕೂಡ ಇದಕ್ಕೆ ತಕ್ಕಹಾಗೆ ರೌದ್ರಾವೇಶ[illegible]ದೇಶದ ಪ್ರತಿನಿಧಿಗ
ಚದರಿಸುವುದಕ್ಕಾಗಿ ತರಲ್ಪಟ್ಟ ಸೇನೆಯು[illegible]ಯನ್ನು ತಂದರು.
ಲ್ಲ. ಆದರೆ ಸವಾರರು ಬಹು ಸಮಾಧಾ[illegible]
ಅವಕಾಶವಿಲ್ಲದಂತೆ ಸಹಾಯಮಾಡಿರುತ್ತಾ[illegible]

ಅಸಮರ್ಪಕವಾದ ವಿ[illegible]

[illegible]ಪರಿಶೀಲಿಸಿದರೆ ಎಲ್ಲೆ
ಜುಲೈ 30ನೇ ತಾರೀಖಿನಲ್ಲಿ ನಡೆದ ಗ[illegible]ರುವುದು. ಹಿಂದು
ಮ್ಯಾಜಿಸ್ಟ್ರೇಟರೇ ಮುಖ್ಯವಾಗಿ ಜವಾಬ್ದಾ[illegible] ಇದುವರೆಗೂ ನಡೆ
ಹತೋಟಿಗೆ ತರಲು ಇವರು ಮಾಡಿಕೊಂಡಿದ್ದ[illegible]ನದ ಜನಧನಗಳನ್ನು
ಕವಾದುವು. ಈ ಗಲಭೆಯಲ್ಲಿ ಹೀಗೆಯೇ[illegible]ಗಿಸಿಕೊಂಡಿರುವರು.
ಯಾವ ಕಾರ್ಯಕ್ರಮವನ್ನು ಮೊದಲೇ ನಿರ್ಧರಿ[illegible]ರುವ ಜನಾಂಗಗಳ
ಗಳು ಸ್ಥಳ ವಿದ್ಯಮಾನದ ವಿಚಾರದಲ್ಲಿ ಜಾಗ್ರತೆ[illegible] ಮಾಡಿ ನಿರಪರಾಧಿ
ಹೊಂದಲು ಯಾವ ಏರ್ಪಾಡನ್ನೂ ಮಾಡಿಕೊಂ[illegible] ನೀಗಿದುದಾಗಿತ್ತು.
ಸ್ಟ್ರೇಟರಿಗೆ ಸೇನೆಯ ತಹಬಂದಿಗೂ ಮತ್ತು[illegible]
ವಿಷಯದಲ್ಲಿ ತಕ್ಕ ಅಧಿಕಾರವನ್ನು ವಹಿಸಿರಲಿಲ್ಲ[illegible] ಬ್ರಿಟಿಷರು
ಲ್ಲಾಗಲೀ, ದಸ್ತಗಿರಿ ಮಾಡುವುದರಲ್ಲಾಗಲೀ, ಮ[illegible]ದರೆ ಅದಕ್ಕೆ
ದರಲ್ಲಾಗಲೀ ತಕ್ಷಣ ಯಾವ ಪ್ರಯತ್ನಗಳನ್ನೂ[illegible]ಸರು ಸಾಕಿಕೆ
ನಡೆದನಂತರ ಆಸ್ಪತ್ರೆಗೆ ಸುಮಾರು 45 ಮಂದಿ ಜ[illegible]ತ್ತಿರುವುದು ನ್ಯಾ
ಲಾದರೂ ಇವರಲ್ಲೊಬ್ಬರನ್ನೂ ಗುರುತಿಸಲಾರದೆ[illegible]ಣೆಗೆಂದು ಹೇ
ಸ್‌ಖಾನರ ದೊಡ್ಡಸ್ತಿಕೆಗೆ ಕುಂದುಕವುಂಟಾಗಬಾ[illegible]ದುದರಿಂದ ಬ್ರಿಟ
[illegible]ದ್ಧಗಳಲ್ಲಿ ಭಾರತೀಯ

ಪೋಲೀಸಿನವರು ತಮ್ಮ ಕರ್ತವ್ಯದಲ್ಲಿ ನಿರತರಾಗಲಿಲ್ಲ. ಮೆ|| ಅಬ್ಬಾಸ್ ಖಾನರ ಮನೆಮುಂದೆ ನಡೆದ ಗಲಭೆಯೇ ಇದಕ್ಕೆ ನಿದರ್ಶನವಾಗಿರುತ್ತದೆ. ದೊಂಬಿ ನಡೆದ ಕೂಡಲೇ ಸ್ಥಳೀಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ, ಪೋಲೀಸು ಮುಖ್ಯಾಧಿಕಾರಿಗಳಾದ ಎ. ಜಿ. ಸಾಹೇಬರೂ ಸ್ಥಳದಲ್ಲಿ ಹಾಜರಿದ್ದು ವಿದ್ಯಮಾನಗಳೆಲ್ಲವನ್ನು ತಿಳಿದುಕೊಂಡು ಸಹ ಯಾವ ಕಾರ್ಯವನ್ನೂ ಮಾಡಿರುವುದಿಲ್ಲ. ಅವರು ಕೂಡ ಇಂತಹ ಹೆಸರುವಾಸಿಯಾದವರ ವಿಷಯದಲ್ಲಿ ಪ್ರವರ್ತಿಸಲು ಹೆದರಿ ಸುಮ್ಮನಿದ್ದರೋ ಮತ್ತಾವ ಕಾರಣದಿಂದಲಾದರೂ ಮೌನರಾಗಿದ್ದರೋ ಎಂಬುದನ್ನು ವಿಶದಪಡಿಸಿರುವುದಿಲ್ಲ. ಸರ್ಕಾರೀ ಹುಕುಂ ಅನುಸರಿಸಿ ಪೋಲೀಸಿನವರು ಮೌನರಾಗಿದ್ದರೆಂಬುದಕ್ಕೆ ಯಾವ ರುಜುವಾತೂ ಬಂದಿರುವುದಿಲ್ಲ. ಸರ್ಕಾರದವರು ಇಂತಹ ಸಂದರ್ಭಗಳಲ್ಲಿ ಸ್ಥಳೀಯ ವ[illegible]ಮಾನದ ರಿಪೋರ್ಟನ್ನು ತರಿಸಿಕೊಳ್ಳದಿರುವುದು ಬಹಳ ಶೋಚನೀಯವಾದ ವಿಷಯವಾಗಿದೆ. ನೂರಾರು ಪ್ರಜೆಗಳು ಗುಂಡಿನ ಶಬ್ದವನ್ನು ಕೇಳಿರುವಾಗ ಸರ್ಕಾರದವರು ಮಾತ್ರ ಗುಂಡು ಹಾರಿಸಲ್ಪಡಲಿಲ್ಲವೆಂದು ಹೇಳುವುದು ಆಶ್ಚರ್ಯವೇ ಸರಿ. ಪೋಲೀಸಿನವರು ತಮ್ಮ ಕರ್ತವ್ಯವಾದ ದಸ್ತಗಿರಿ ಮಾಡುವುದು, ಮನೆಗಳನ್ನು ಜಪ್ತಿಮಾಡುವುದು ಮುಂತಾದ ನಡವಳಿಕೆಗಳನ್ನು ಕಾನೂನನುಸರಿಸಿ ನಡೆಸದೆ ಇದ್ದುದರಿಂದಲು ಮತ್ತು ಇವರು ತೋರಿಸಿದ ಅನಾದರಣೆಯಿಂದಲು ಪ್ರಜೆಗಳ ಖಂಡನೆಯನ್ನು ಹೆಚ್ಚಿಸಿ ಅವರಲ್ಲಿ ಅನುಮಾನವನ್ನುಂಟುಮಾಡುವುದಕ್ಕೆ ಕಾರಣವಾಯಿತು,

ಪೋಲೀಸಿನವರು ಕರ್ತವ್ಯ ಪರಾಂಗ್ಮುಖರಾದರು.

ನಮ್ಮ ಮುಖ್ಯ ಅಭಿಪ್ರಾಯದಲ್ಲಿ 30ನೇ ಜುಲೈ ತಿಂಗಳಲ್ಲಿ ನಡೆದ ಗಲಭೆಕಾಲದಲ್ಲಿ ಸ್ಥಳೀಯಾಧಿಕಾರಿಗಳೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ಬುದ್ಧಿವಂತಿಕೆಯಿಂದ ಮಾಡಿರುವುದಿಲ್ಲ. ಎ.ಜಿ. ಸಾಹೇಬರೇ ಮುಸಲ್ಮಾನರ ಗುಂಪಿನಲ್ಲಿ ಅಕಸ್ಮಾತ್ ಸಿಕ್ಕಿಕೊಂಡು, ಅನಂತರ ಹಿಂದುವೆಂದು ಕಂಡು ಹಿಡಿಯಲ್ಪಟ್ಟು ಲಟ್ಟದ ಏಟುಗಳನ್ನು ತಿಂದರು. ಇವರು ಅಂತಹ ಕಾಲದಲ್ಲಿ ತಮ್ಮ ಸರ್ಕಾರೀ ಡ್ರೆಸ್ಸಿನಲ್ಲಿರದೆ ಖಾಸಗಿ ಡ್ರೆಸ್ಸಿನಲ್ಲಿದ್ದುದೇ ಇವರ ತಪ್ಪು. ಮುಖ್ಯವಾಗಿ ಇನ್ನೂ ಪತ್ತೆಯಾಗದಿರುವ ತಪ್ಪಿತಸ್ಥರನ್ನು ಕಂಡು ಹಿಡಿದು ತಕ್ಕ ಶಿಕ್ಷೆಗೆ ಗುರಿಪಡಿಸಬೇಕೆಂಬುದೂ ಈಗ ನಡೆಯುತ್ತಿರುವ ಮೊಕದ್ದಮೆಗಳನ್ನು ಇನ್ನು ಎರಡು ಮೂರು ತಿಂಗಳಲ್ಲಿಯೇ ಮುಗಿಸಿಬಿಡಬೇಕೆಂಬುದೂ ಈ ಸಮಿತಿಯ ಅಭಿಪ್ರಾಯ.

ಮುಖ್ಯ ತಪ್ಪಿತಸ್ಥರು.

ದೊಂಬಿಯಮೇಲೆ ಗುಂಡು ಹಾರಿಸಿದವರೇ ಮುಖ್ಯ ಅಪರಾಧಿಗಳು. ಇವರು ಮೆ|| ಅಬ್ಬಾಸ್‌ಖಾನರ ಮನೆಯ ಕಾಂಪೌಂಡಿನಿಂದಲೂ ಮಸೀದಿ[illegible]ಲೂ ಹೊರಬಿದ್ದು ಹಿಂದೂಗಳನ್ನು ಪ್ರಹರಿಸಿದರು. ಅಬ್ಬಾಸ್‌ಖಾನರ ಮನೆಯೊಳಕ್ಕೆ ಎಳೆಯಲ್ಪಟ್ಟು ಮೊಖನಡಿಯಾಗಿ ಮಲಗಿದ್ದ ನಾಲ್ಕು ಹುಡುಗರ ವಿಷಯವಾಗಿ ಇನ್ನೂ ಹೆಚ್ಚು ತನಿಖೆ ನಡೆಯತಕ್ಕದ್ದಾಗಿರುತ್ತದೆ. ಜನಸಮಾಧಾನಕ್ಕಾಗಿ ನಿಷ್ಪಕ್ಷಪಾತಿಯರಾದ ಹುದ್ದೇದಾರರಿಂದ ಕೂಲಂಕಷ ವಿಚಾರಣೆಯು ಆತ್ಯಾವಶ್ಯಕವು. ಪೋಲೀಸ್ ಶಿಬ್ಬಂದಿಯು ಇನ್ನೂ ಹೆಚ್ಚಿಸಲ್ಪಟ್ಟು, ದಕ್ಷರಾದ ಜನರನ್ನೊಳಗೊಂಡು ಹೆಚ್ಚು ವೇತನಗಳನ್ನು ಕೊಟ್ಟು ಪ್ರೋತ್ಸಾಹಿಸಲ್ಪಡತಕ್ಕದ್ದಾಗಿರುತ್ತದೆ. ಪೋಲೀಸು ಗುಪ್ತಚಾರರಲ್ಲಿ ಚೆನ್ನಾಗಿ ತಯಾರಾದ ಜನಗಳನ್ನು ಸೇರಿಸತಕ್ಕದ್ದು. ಮತ್ತು ಪೋಲೀಸು ಅಧಿಕಾರಿಗಳೆಲ್ಲರಿಗೂ ಕೋವಿ ಉಪಯೋಗಿಸುವಂತೆ ಶಿಕ್ಷಣ ಕೊಡಬೇಕು. ಪ್ರತಿಯೊಬ್ಬ ಸಬ್ ಇನ್ಸ್‌ಪೆಕ್ಟರನಿಗೂ ಒಂದೊಂದು ರಿವಾಲ್ವರ್ ಕೊಡಬೇಕು. ಪೋಲೀಸ್ ಇಲಾಖೆಯಲ್ಲಿ ಎಲ್ಲಾ ಪಂಗಡದವರಿಗೂ ಅವಕಾಶ ಕೊಡತಕ್ಕದ್ದು. ಸರ್ಕಾರಿ ಹುದ್ದೆಯಲ್ಲಿ ಪ್ರತಿಯೊಬ್ಬನಿಗೂ ತನ್ನ ಅರ್ಹತೆಗೆ ತಕ್ಕಂತೆ ಸ್ಥಾನ ದೊರೆಯುವಂತೆ ಮಾಡತಕ್ಕದ್ದು, ಮತ್ತು ಹೀಗೆ ಸರ್ಕಾರೀಹುದ್ದೆಗೆ ಜನರನ್ನು ಚುನಾಯಿಸುವಾಗ ಬುದ್ಧಿವಂತರನ್ನೇ ಚುನಾಯಿಸತಕ್ಕದ್ದು. ದೇಶದಲ್ಲಿ ಜಾತಿ ವೈಷಮ್ಯವಿಲ್ಲದಿರುವುದರಿಂದ ಇದಕ್ಕಾಗಿ ಸರ್ಕಾರದವರು ಯಾವ ಏರ್ಪಾಡನ್ನೂ ಮಾಡುವುದು ಅನಾವಶ್ಯಕವು. ಈಗ ದೇಶದ ಪತ್ರಿಕೆಗಳಿಗು ಮತ್ತು ಪ್ರಜೆಗಳಿಗು ಕೊಟ್ಟಿರುವ ಸ್ವಾತಂತ್ರ್ಯವು ಬ್ರಿಟಿಷ್ ಸರ್ಕಾರದಲ್ಲಿರುವಂತೆಯೇ ಇರುವುದು. ಈ ಸ್ವಾತಂತ್ರ್ಯವನ್ನು ತಪ್ಪಿಸಿ ಕಡಿಮೆ ಮಾಡುವುದು ಉಚಿತವಾಗಿ ತೋರುವುದಿಲ್ಲ.

ಆಚ್ಛಾದನಾಶೀರ್ವಾದ.

ಪ್ರಜೆಗಳಿಗೆ ತಕ್ಕ ಸೌಲಭ್ಯಗಳನ್ನುಂಟುಮಾಡಿಕೊಟ್ಟು ತಮ್ಮ ರಾಜ್ಯಭಾರವನ್ನು ತಾವೇ ನಡೆಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಬೇಕು. ನಾವು ಈಗ ಕೊಟ್ಟಿರುವ ಸಲಹೆಗಳನ್ನೆಲ್ಲ ಅನುಸರಿಸಿದರೂ ಮೈಸೂರು ದೇಶವು ಈಗೆ 100 ವರ್ಷಕ್ಕೆ ಹಿಂದೆ ಇದ್ದ ಆಂಗ್ಲ ದೇಶಕ್ಕೂ, ಈಗ 50 ವರ್ಷಕ್ಕೆ ಹಿಂದೆ ಇದ್ದ ಜಪಾನ್ ದೇಶಕ್ಕೂ ಸಾಟಿಯಾಗಬಹುದು. ಬಹುಶಃ ನಮ್ಮ ದೇಶಕ್ಕೆ ಪೂರ್ಣವೇ ಆಫ್ಘಾನಿಸ್ಥಾನವು ಆ ಸ್ಥಿತಿಗೆ ಬರಬಹುದು. ಪ್ರಜೆಗಳಿಗೆ ರಾಜ್ಯಭಾರದಲ್ಲಿ ಸ್ವಲ್ಪ ಜವಾಬ್ದಾರಿಯನ್ನು ವಹಿಸದಿದ್ದರೆ ನಮ್ಮ ಜನಾಂಗವು ಮುಂದುವರಿಯಲಾರದು ಮತ್ತು ಇದರಿಂದ ಯಾರಿಗೂ ಯಾವ ಪ್ರಯೋಜನವೂ ಆಗಲಾರದು. ಜನಾಂಗವು ಜವಾಬ್ದಾರಿಯನ್ನು ವಹಿಸುವುದೇ ದೇಶದ ಕ್ಷೇಮದ ಸುಖವಾಗಿರುವುದು. ಈ ಗಲಭೆಯಿಂದ ಸರ್ಕಾರದವರು ಎಚ್ಚತ್ತು ನಾವು ಕೊಟ್ಟಿರುವ ಸಲಹೆಗಳನ್ನು ಆಚರಿಸುದುದಾದರೆ ದೇಶವು ಪುನರುಜ್ಜೀವನವಾಯಿತೆಂದು ಹೇಳಬಹುದು.

ಈ ವಿಚಾರದಲ್ಲಿ ಟೈಂಸ್ ಆಫ್ ಇಂಡ್ಯಾ ಪತ್ರಿಕೆಯ ಅಭಿಪ್ರಾಯ.

ಮೆ|| ಖಾನರ ಖಂಡನೆ.

ಬೆಂಗಳೂರಿನಲ್ಲಿ ಗಲಭೆಗಳು ನಡೆದ ನಾಲ್ಕುತಿಂಗಳ ಅನಂತರ ವಿಶ್ವೇಶ್ವರಯ್ಯ ಕಮಿಟಿಯ ವರದಿಯು ಪ್ರಕಟವಾಗಿದೆ. ಕಮಿಟಿಯು ಬಹಿರಂಗವಾಗಿ ವಿಚಾರಣೆ ನಡೆಸಿ, ಮ್ಯಾಜಿಸ್ಟ್ರೇಟರ ಮತ್ತು ಪೋಲೀಸ್ ಇಲಾಖೆಯ ದೌರ್ಬಲ್ಯವನ್ನು ಬಯಲಿಗೆ ತಂದಿರುತ್ತೆ. ಸರ್ಕಾರದವರು ಹೊರಡಿಸಿದ ಕೆಲವು ಪ್ರಕಟನೆಗಳು ಅಪಾರ್ಥವನ್ನು ಕಲ್ಪಿಸಿ, ಜನರಿಗೆ ತಪ್ಪು ಅಭಿಪ್ರಾಯಗಳನ್ನುಂಟುಮಾಡಿದವೆಂದು ಕಾಣಿಸಲ್ಪಟ್ಟಿದೆ. ಅದೂ ಅಲ್ಲದೆ ಒಬ್ಬ ಸದೋಷಿಯು ತನ್ನ ದೊಡ್ಡ ಅಂತಸ್ತಿನ ಮರೆಯಲ್ಲಿ ತಪ್ಪಿಸಿಕೊಂಡನೆಂದು ಸ್ಪಷ್ಟಪಡಿಸಿದೆ. ಈ ತೀರ್ಮಾನಗಳನ್ನು ವಿಶ್ವೇಶ್ವರಯ್ಯ ಕಮಿಟಿಯವರು ಮರೆಮಾಚಲಾಗಲಿಲ್ಲ. ಮ್ಯಾಜಿಸ್ಟ್ರೇಟರನ್ನಾಗಲಿ, ಅಥವಾ ಪೋಲೀಸ್ ಇಲಾಖೆಯ ಅಧಿಕಾರಿಗಳನ್ನಾಗಲೀ, ನಿರ್ದಾಕ್ಷಿಣ್ಯವಾಗಿ ಖಂಡಿಸಿರುವುದು ವಿಶ್ವೇಶ್ವರಯ್ಯ ಕಮಿಟಿಯ ಸದಸ್ಯರಿಗೆ ಕೀರ್ತಿದಾಯಕವೇ ಸರಿ! ಕಮಿಟಿಯ ವಿಚಾರಣೆಯಲ್ಲಿ ಮೆ|| ಖಾನರು ತೋರಿಸಿದ ಅಸಭ್ಯ ನಡತೆಯಿಂದ ಸಭಿಕರ ಮನಸ್ಸಿನಲ್ಲಿ ಮೆ|| ಖಾನರ ಗೌರವಕ್ಕೆ ಕಳಂಕವುಂಟಾಗಿ, ಮೆ|| ಖಾನರನ್ನೂ ಅವರು [illegible]ಕಾಲಿಯಿಂದಿಸದೆ ಬಿಟ್ಟಿಲ್ಲ. ಒಂದು ಸರ್ಕಾರದ ಪ್ರಕಟನೆಯಲ್ಲಿ ಗುಂಡುಹಾರಿಸ[illegible] ವಿಚಾರವು ಅಲ್ಲಗಳೆಯಲ್ಪಟ್ಟಿದೆ. ದಿವಾನರು ಲಂಡನ್ನಿನ ಡೈಲಿಮೈಲ್ [illegible]ಪತ್ರಿಕೆಗೆ ಕಳುಹಿಸಿದ ತಂತೀ ವರ್ತಮಾನದಲ್ಲಿ "ಪೋಲೀಸಿನವರಾಗಲೀ ಅಥವಾ ಸೈನ್ಯದ ಇಲಾಖೆಯವರಾಗಲೀ ಜನರ ಗುಂಪಿನಮೇಲೆ ಗುಂಡು ಹಾರಿಸ[illegible]ವೆಂದು ಸರ್ಕಾರದವರು ಬಲ್ಲರು. ಗುಂಡಿನೇಟು ಬಿದ್ದು ಒಬ್ಬರಾದರೂ [illegible]ಲ್ಲವಾದ್ದರಿಂದ ಖಾಸಗೀ ಜನರ್‍ಯಾರೂ ಗುಂಡು ಹಾರಿಸಿದರೆಂದು ಸರ್ಕಾರದವರು ನಂಬುವುದಿಲ್ಲ." ಎಂದು ಹೇಳಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ವಿಶ್ವೇಶ್ವರಯ್ಯ ಕಮಿಟಿಯ ವರದಿಯಲ್ಲಿ "ಗುಂಡು ಹಾರಿದ್ದನ್ನು ನೂರಾರು ಜನರು ಕೇಳಿದ್ದರೂ, ಸರ್ಕಾರದವರು ಗುಂಡು ಹಾರಲಿಲ್ಲವೆಂದು ತಮಗೆ ಹೇಳಿದವರ ಮಾತನ್ನೇ ನಂಬಿದರು" ಎಂದು ಹೇಳಿರುತ್ತಾರೆ. ಈ ಸುದ್ದಿಯನ್ನು ತಿಳಿಸಿದವರು ಯಾರು? ಮೆ|| ಖಾನರು ಬೆಂಗಳೂರು ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರೆಂದೋ ಅಥವಾ ದಿವಾನರ ಆಪ್ತಸ್ನೇಹಿತರೆಂದೋ ಅವರಮೇಲೆ (ಮೆ|| ಖಾನರ) ಪೋಲೀಸಿನವರು ಕ್ರಮವನ್ನು ನಡೆಸುವುದಕ್ಕೇ ಆಗಲಿ ಅಥವ ಅವರ ಹೆಸರಿಗೆ ಕಳಂಕವುಂಟಾಗತಕ್ಕ ಯಾವ ನಡವಳಿಕೆಯನ್ನೂ ನಡೆಸಬೇಕೆಂಬ ಇಷ್ಟವುಳ್ಳವರಾಗಲಿಲ್ಲವೆಂದು ಕಮಿಟಿಯ ವರದಿಯಲ್ಲಿ ತಿಳಿಸಲ್ಪಟ್ಟಿದೆ. ಅವರ ಈ ಅಸನ್ಮತಿಯ ಫಲವಾಗಿ ದುಷ್ಪರಿಣಾಮಗಳು ಪ್ರಾಪ್ತವಾದವು. ಗಲಭೆಗಳಾದನಂತರ ದೀರ್ಘಕಾಲದ ಪರಂತರ ಪೋಲೀಸಿನವರು ಇದನ್ನು ಅಂಟಿಸಿಕೊಳ್ಳದೇಲು ಮತ್ತು ಪತ್ತೇ ತರದೂದನ್ನು ನಡಿಸದೇಲು ತಟಸ್ಥರಾಗಿದ್ದರು. ಆದುದರಿಂದ ಈಗ ಪೋಲೀಸಿನವರು ಅಪರಾಧಿಗಳ ಗುರ್ತು ಹಿಡಿಯಲಾರದವರಾಗಿರುತ್ತಾರೆ. ದೊಂಬಿಯಲ್ಲಿ 45 ಜನರು ಏಟುತಿಂದು, ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆಗಳು ನಡೆದಮೇಲೂ ಪೋಲೀಸಿನವರು ಅಪರಾಧಿಗಳ ಪತ್ತೆಯನ್ನೇ ಮಾಡುವ ಕುತೂಹಲವನ್ನಾದರೂ ತೋರ್ಪಡಿಸಲಿಲ್ಲ!

ಮೆ|| ಖಾನರ ಜವಾಬ್ದಾರಿ.

ವರದಿಯಲ್ಲಿ ಮಿ|| ಖಾನರಿಗೆ ಕೇಂದ್ರಸ್ಥಾನವನ್ನು ಕೊಟ್ಟಿದ್ದರೂ, ಈ ದೊಂಬಿಯಲ್ಲಿ ಮಿ|| ಖಾನರು ಯಾವ ಭಾಗವನ್ನು ತೆಗೆದುಕೊಂಡರೆಂದು ಇನ್ನೂ ಸ್ಪಷ್ಟವಾಗಿ ಗೋಚರವಾಗಿಲ್ಲ. "ಆದರೆ ಮಿ|| ಖಾನರ ಮನೆಯ ಅಂಗಳದಿಂದ ಹಲವರು ದೊಣ್ಣೆಗಳನ್ನು ಹಿಡಿದು, ಹೊರಗೆ ಬಂದು, ನಿರಾಯುಧರಾಗಿದ್ದ ಹಿಂದುಗಳನ್ನು ಆಕ್ರಮಣ ಮಾಡಿದರೆಂಬ ಭರವಸೆಯು ನಮಗೆ ಉಂಟೆಂದು" ವರದಿಯಲ್ಲಿ ಸಮರ್ಥಿಸಲ್ಪಟ್ಟಿದೆ. ಮಿ|| ಖಾನರಿಗೆ ವಿರೋಧವಾಗಿ ಪ್ರಬಲವಾದ ಒಳಸಂಚು ಇರುವುದೆಂದು ನಂಬಲಾಗದೆಂದು ಕಮಿಟಿಯು ನಿರ್ಧರಿಸಿರುತ್ತೆ. ಪೋಲೀಸ್ ವಿಚಾರಣೆಯಲ್ಲಿ ಅವಿವೇಕವು ನಡೆದುದಕ್ಕೆ ಮ್ಯುನಿಸಿಪಲ್ ಆಡಳಿತಗಳಲ್ಲಿ ಮಿ|| ಖಾನರ ಸಹೋದ್ಯೋಗಿಯಾಗಿದ್ದ ಅನುಭವಸ್ಥನಾದ ಅಧಿಕಾರಿಯನ್ನು ವಿಚಾರಣೆ ನಡೆಸಲು ಸರ್ಕಾರದವರು ನೇಮಿಸಿದ್ದೇ ಕಾರಣವೆಂದು ವಿಶ್ವೇಶ್ವರಯ್ಯ ಕಮಿಟಿಯವರು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲಿಂದ ಮುಂದಕ್ಕೆ ಕಮಿಟಿಯು ಹೋಗಲು ನಿಶ್ಚಯಿಸಿಲ್ಲ. ಮಿ|| ಖಾನರ ಮನೆಯೊಳಕ್ಕೆ ಹುಡುಗರು ಸೆಳೆದುಕೊಂಡು ಹೋಗಲ್ಪಟ್ಟಿದು ನಿಜವೇ? ಅಥವಾ ಸುಳ್ಳೇ? ಎಂಬುದನ್ನು ಕಮಿಟಿಯು ನಿರ್ಧರಿಸಿಲ್ಲ. ಅನುಮಾನಾಸ್ಪದವಾದ ರೀತಿಯಲ್ಲಿ ಆ ಹುಡುಗರಲ್ಲಿ ನಾಲ್ಕು ಹುಡುಗರು ಮುಖವನ್ನು ಕೆಳಗೆ ಮಾಡಿಕೊಂಡು ನೆಲದಮೇಲೆ ಎಲ್ಲಿ ಬಿದ್ದರೆಂಬುದನ್ನೂ ಕಮಿಟಿಯು ನಿರ್ಧರಿಸಲಿಲ್ಲ. ಈ ಆಪಾದನೆಯನ್ನು ಮುಂದಕ್ಕೂ ಪರೀಕ್ಷಿಸಬೇಕೆಂದು ಕಮಿಟಿಯು ನಮಗೆ ತಿಳಿಸುತ್ತದೆ. ಯಾರಿಗೂ ಪ್ರಾಣಾಪಾಯವಾಗಿಲ್ಲವೆಂದು ಕಮಿಟಿಯು ಘಂಟಾಘೋಷವಾಗಿ ಹೇಳದೇ ಇರುವುದು ಸಾಮಾನ್ಯವಿಚಾರವಲ್ಲ. ಹುಡುಗರು ಕೊಲೆಮಾಡಲ್ಪಟ್ಟರೆಂಬ ಸುದ್ದಿಗೆ ಆಧಾರವಿಲ್ಲ. ಆದುದರಿಂದ ಕಮಿಟಿಯು ಯಾರೂ ಸಾಯಲಿಲ್ಲವೆಂದೂ, ಅಥವಾ ತಪ್ಪಿಸಿಕೊಂಡು ಹೋಗಿಲ್ಲವೆಂದೂ ಊಹಿಸಿದೆ. ವಿಚಾರಣೆಗೆ ಸಾವಕಾಶವಾದ್ದರಿಂದ ಆ ಕೃತ್ಯಗಳ ಗುರುತುಗಳು ಮಾಯವಾಗಿರಬಹುದಾದ್ದರಿಂದ, ಈ ವಿಚಾರದಲ್ಲಿ ಉತ್ಪನ್ನವಾಗಿರುವ ಸಂದೇಹಗಳನ್ನು ನಿವೃತ್ತಿ ಮಾಡುವುದಕ್ಕಾಗಿ ಪುನಃ ಅಸಾಧಾರಣವಾದ ವಿಚಾರಣೆಯು ನಡೆಸಲ್ಪಡಬೇಕೆಂದು ಕಮಿಟಿಯು ಸರ್ಕಾರಕ್ಕೆ ಶಿಫಾರ್ಸು ಮಾಡಿದೆ. ಅದರ ಅರ್ಥವನ್ನು ನೋಡಿದರೆ, ಕಮಿಟಿಯ ಕೆಲಸವು ಇನ್ನೂ ಪೂರ್ತಿಯಾದಂತೆ ಕಾಣುವುದಿಲ್ಲ. ಈ ಗಲಭೆಗು ಮತ್ತು ಮಿ|| ಅಬ್ಬಾಸ್‌ಖಾನರಿಗು ಪರಸ್ಪರ ಸಂಬಂಧವೇನು? ಯಾರಾದರೂ ಕೊಲೆ ಮಾಡಲ್ಪಟ್ಟು, ಅವರ ಮೃತದೇಹಗಳೇನಾದರೂ ಅಡ್ಡಾದಿಸಲ್ಪಟ್ಟವೇ? ಎಂಬ ವಿಚಾರಗಳು ನಮಗೆ ಇನ್ನೂ ತಿಳಿಸಲ್ಪಡಬೇಕಾಗಿವೆ.

ಕೋಮುವಾರು ದ್ವೇಷವುಂಟೆ?

ಒಂದೆರಡು ವಿಚಾರಗಳಲ್ಲಿ ವರದಿಯು ತೃಪ್ತಿಯನ್ನುಂಟುಮಾಡುವ ಹಾಗಿಲ್ಲ. ಗಲಭೆಗಳು ನಡೆದನಂತರ ಮ್ಯಾಜಿಸ್ಟ್ರೇಟರ ಮತ್ತು ಪೋಲೀಸಿನವರ ದೌರ್ಬಲ್ಯವು ಕಮಿಟಿಯವರಿಂದ ದೃಢಪಡಿಸಲ್ಪಟ್ಟಿದೆ. ಆದರೆ ಮೈಸೂರು ದೇಶದ ಹೊರಪ್ರಾಂತ್ಯದವರು ಕೇಳುವ ಪ್ರಶ್ನೆಯು:—ಸವಾರರು ಯುದ್ಧಪ್ರಿಯರಲ್ಲದ ತುಂಟರಾದ ಹುಡುಗರನ್ನು ಭರ್ಜಿಗಳಿಂದ ತಿವಿದರೇ ಇಲ್ಲವೆ? ಎಂಬುದೆ. ಸಿವಿಲ್ ಅಧಿಕಾರಿಗಳು ಯಾವ ಸಹಾಯವನ್ನು ಮಾಡದೆ ಇದ್ದಾಗ್ಯೂ ಸಿಪಾಯಿಗಳು ಅತ್ಯಂತ ತಾಳ್ಮೆಯುಳ್ಳವರಾಗಿಯೂ ಸ್ಥೈರ್ಯವುಳ್ಳವರಾಗಿಯೂ ಇದ್ದುಕೊಂಡು ಗಲಭೆಯ ಕಾಲದಲ್ಲಿ ಸಂರಕ್ಷಿಸಿದರೆಂದು ವರದಿಯು ನಮಗೆ ಹೇಳುತ್ತದೆ. ಮತ್ತು ಈ ಸೈನ್ಯದ ಆಡಳಿತವನ್ನು ಕಾಯಿದೆ, ಕಾನೂನುಗಳನ್ನರಿಯದ ತರುಣ ಅಧಿಕಾರಿಗಳಿಗೆ ಒಪ್ಪಿಸಲಾಯಿತೆಂದು ವರದಿಯು ಹೇಳುತ್ತದೆ. ಹಾಗಾದರೆ, ಯಾವ ಕಾನೂನಿಗೆ ಭಂಗವುಂಟುಮಾಡಿದರು? ಈ ಕಾನೂನಿನ ಭಂಗವು ಸಾಮಾನ್ಯವಾದದ್ದೇ ಅಥವ ಪ್ರಮಾದಕರವಾದದ್ದೇ? ಈ ವಿಚಾರದಲ್ಲಿ ಕಮಿಟಿಯವರು ನಮಗೆ ವಿಶದವಾಗಿ ತಿಳಿಸುವರೆಂದು ನಾವು ನಿರೀಕ್ಷಿಸಿದ್ದೆವು. ಪುನಃ ಇಲ್ಲಿ ಕೋಮುವಾರು ವಿರೋಧಗಳು ಇಲ್ಲದೆ ಇರುವುದರಿಂದ ಜಾತಿಗಳ ಏಕೀಕರಣವನ್ನುಂಟುಮಾಡಲು ಯಾವ ಏರ್ಪಾಟನ್ನೂ ಮಾಡಬೇಕಾಗಿಲ್ಲವೆಂದು ಕಮಿಟಿಯು ದೃಢಪಡಿಸುತ್ತದೆ. ಆದುದರಿಂದ ಕೋಮುವಾರು ದ್ವೇಷವೆಂಬ ಪಿಶಾಚಗ್ರಸ್ತರಾದವರಿಂದ ಈ ಗಲಭೆಗಳು ಉಂಟಾದವೆಂಬುದನ್ನು ಕಮಿಟಿಯು ನಿರಾಕರಿಸಿ ಬಿಟ್ಟಿದೆ. ಹಾಗಾದರೆ, ಹಿಂದು ಎ. ಜಿ. ಪಿ. ಯವರು ಮುಸಲ್ಮಾನರ ಗುಂಪಿನಲ್ಲಿ ಹೋದದ್ದರಿಂದ ಅವರಿಗೆ ಗಾಯವಾಗಿರುವುದಕ್ಕೆ ಕಾರಣವೇನು? ಮತ್ತು ಪೋಲೀಸ್ ಇಲಾಖೆಯಲ್ಲಿ ಎಲ್ಲಾ ಕೋಮುಗಳಿಗೂ ಸರಿಯಾದ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕಮಿಟಿಯು ಕಂಠೋಕ್ತವಾಗಿ ಹೇಳಿರುವುದಕ್ಕೆ ಕಾರಣವೇನು? ಮತ್ತು ಎಲ್ಲಾ ಪಂಗಡಗಳಿಗೂ ಸರ್ಕಾರಿ ನೌಕರಿಯಲ್ಲಿ ಸರಿಯಾದ ಪ್ರಾತಿನಿಧ್ಯವನ್ನ ಕೊಡಬೇಕೆಂದು ಹೇಳಿರುವುದಕ್ಕೆ ಕಾರಣವೇನು? ವಿಶ್ವೇಶ್ವರಯ್ಯ ಕಮಿಟಿಯ ವರದಿಯನ್ನು ಪುರಸ್ಕರಿಸಬೇಕೇ ಅಥವ ತಿರಸ್ಕರಿಸಬೇಕೇ ಎಂಬುದು ಮೈಸೂರು ದೇಶೀಯರು ನಿಶ್ಚಯಿಸಬೇಕಾಗಿದೆ. ಸರ್ಕಾರದವರು ಎರಡು ದಿನಚರಿ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ಸಲಹೆಗೆ ಕಾರಣವಿದ್ದರೂ ಇರಬಹುದು. ಇಲ್ಲದಿದ್ದರೂ ಇರಬಹುದು. ಸರ್ಕಾರದ ಪ್ರಸಿದ್ಧ ಪತ್ರಿಕೆಗಳಲ್ಲಿಯಾದರೂ ಸುಳ್ಳಿಲ್ಲದೆ, ಸತ್ಯವನ್ನೇ ತಿಳಿಸಬೇಕೆಂಬುದೇ ನಮ್ಮ ಸೂಚನೆ.

"ಟೈಮ್ಸ್ ಆಫ್ ಇಂಡಿಯಾ" (ಲೊ. ಹಿ.)

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ನೈಜಾಂ ಇಲಾಖಾ ಉದಗಿರ ತಾಲೂಕಿಗೆ ಸೇರಿದ ಮುಧೋಳ ಗ್ರಾಮದಲ್ಲಿ ನಡೆದ ಶಿವದೀಕ್ಷಾ ಸಮಾರಂಭವು.

ಈ ಗ್ರಾಮದ ಹಿರೇಮಠದಲ್ಲಿ ಈಗ ಆರುತಿಂಗಳಿಂದಲೂ ಒಳ್ಳೇ ವಿಜೃಂಭಣೆಯಿಂದ ನಡೆಯುತ್ತ ಬಂದ ಶ್ರೀ ಬಸವೇಶ್ವರ ಪುರಾಣದ ಸಮಯದಲ್ಲಿ ಭಕ್ತಸಮುದಾಯಕ್ಕೆ ಧರ್ಮಾರ್ಥ ದೀಕ್ಷೆಯಂ ನೆರವೇರಿಸಬೇಕೆಂದು ಕರಾವಾದಂತೆ ಇದೇ ಶಕೆ 1850 ನೇ ವಿಭವನಾಮ ಸಂವತ್ಸರದ ಮಾರ್ಗಶಿರ ಶುಕ್ಲ 9 ಶುಕ್ರವಾರದ ಸುಮುಹೂರ್ತದಲ್ಲಿ ಮೂರುನೂರು ಜನ ಭಕ್ತಮಾಹೇಶ್ವರರಿಗೆ ವಿಧ್ಯುಕ್ತಪ್ರಕಾರವಾಗಿ ದೀಕ್ಷಾಕರ್ಮವನ್ನು ಜರುಗಿಸಲಾಯಿತು. ದೀಕ್ಷೆಗೆ ಬೇಕಾಗುವ ಪೂಜಾಸಾಹಿತ್ಯ, ವಸ್ತ್ರ, ಪಾತ್ರೆ, ದಕ್ಷಿಣಾದಿಗಳಂ ಪೂರೈಸಿಕೊಡಲು ಧರ್ಮದ ಕಟ್ಟಾಭಿಮಾನಿಗಳಾದು ಬಿಚಕುಂದಿ ಗುಂಡಪ್ಪನವರೂ, ಬಸನಳ್ಳಿ ಗುರುಬಸಪ್ಪನವರೂ ಒಪ್ಪಿ, ಅದರಂತೆ ಲೇಶವೂ ನ್ಯೂನತೆ ಬಾರದಂತೆ ಒದಗಿಸಿಕೊಟ್ಟರು. ದೀಕ್ಷೆಯ ದಿವಸದ ಮಹಾಗಣಾರಾಧನೆಯನ್ನು ಮಠಾಧ್ಯಕ್ಷರಾದ ಚರವರ್ಯ ಮಹಾಂತ ಸ್ವಾಮಿಗಳವರು ಸಂತೋಷ ಪುರಸ್ಸರವಾಗಿ ನೆರವೇರಿಸಿದರು. ಈ ಸಮಾರಂಭಕ್ಕೆ ಹೆಡಗಾಪುರ, ಹಾಲಹಳ್ಳಿ, ರಟಗಲ್ಲು ಈ ಗ್ರಾಮಗಳ ಪಟ್ಟಾಧಿಕಾರಿಗಳೂ, ಆವರಾದಿ, ಹಣೇಗಾಂವ್ ಮುಂತಾದ ಗ್ರಾಮಗಳ ದೇಶೀಕವರ್ಯರೂ ಆಗಮಿಸಿದ್ದರು. ಇಂತಹ ಮಹತ್ಕಾರ್ಯದಲ್ಲಿ ವೀರಶೈವ ಮತಪತ್ರಿಕೆಗಳ ಪೋಷಣಕ್ಕಾಗಿ ಸಹಾಯವನ್ನೀಯಬೇಕೆಂದು ದೀಕ್ಷೆಯಲ್ಲಿ ಪೌರೋಹಿತ್ಯವೃತ್ತಿಯನ್ನು ಕೈಕೊಂಡ ಮಹಾಗಾಂವ ಶಾಸ್ತ್ರಿಗಳು ಕೇಳಿದ್ದಕ್ಕಾಗಿ ಶ್ರೀಗಳವರು ಸ್ಟಾರ್ ಹಾಗೂ ಪಂಚಾಚಾರ್ಯಪ್ರಭಾಪತ್ರಿಕೆಗಳಿಗಾಗಿ ಒಂದೊಂದು ರೂಪಾಯಿಯಂತೆ ಒಟ್ಟಿಗೆ ಎರಡು ರೂಪಾಯಿಗಳನ್ನು ಸದರಿ ಶಾಸ್ತ್ರಿಗಳ ಕೈಯಲ್ಲಿ ಕೊಟ್ಟರು. ವೀರಶೈವರಲ್ಲಿ ಬಹುಜನರು ದೀಕ್ಷೆಯಿಲ್ಲದೆಯೇ ಇರುವರು. ಇದು ವೀರಶೈವರೆನ್ನಿಸುವವರಿಗೆ ಲಾಂಛನಾಸ್ಪದವು. ಅದರಲ್ಲೂ ದೀಕ್ಷಾಬಳಕೆಯವರೆಂದು ಹೇಳಿಸಿಕೊಳ್ಳುವ ವೀರಶೈವರಿಗಂತೂ ಅತ್ಯಂತಗರ್ಹಣೀಯವಾದುದು. ಈ ವಿಷಯವನ್ನು ಶ್ರೀಗಳವರು ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ತಿಳಿಯಪಡಿಸಿದ್ದರಿಂದಲೇ ಇಷ್ಟು ಜನರು ಒಮ್ಮೆಲೇ ದೀಕ್ಷಾಸಂಸ್ಕಾರವಂ ಹೊಂದಿದರು. ಇದರಂತೆ ಎಲ್ಲಾ ಶ್ರೀಗಳವರೂ ಪ್ರಯತ್ನಿಸಬೇಕಲ್ಲದೆ ಪ್ರತಿಯೊಬ್ಬ ಭಕ್ತನೂ ದೀಕ್ಷೆಯನ್ನು ಮಾಡಿಕೊಂಡೇ ತೀರುವೆನೆಂದು ಸಂಕಲ್ಪಿಸಬೇಕು, ಅಂದರೆ ನಮ್ಮ ಮತದಲ್ಲಿ ಬೇರುಬಿಟ್ಟ ಈ ಕೆಟ್ಟಚಾಳಿಯು ನಿಶ್ಚಯವಾಗಿ ಇಲ್ಲದಂತಾಗುವದು. ಗುರುವರ್ಗದವರು ಮತಾಚಾರಗಳ ಕಡೆಗೆ ಹೆಚ್ಚು ಲಕ್ಷಿಸುವಂತಾಗಲೆಂದು ಜಗದೀಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುವ,

ಶಂಕರಯ್ಯ ಪುರಾಣಿಕ, ಶಿವಣಗಿ.

ಚಿಕ್ಕಮಗಳೂರು ಉಪಾಧ್ಯಾಯರ ಸಂಘ.

ಈ ಸಂಘದ ಮೀಟಿಂಗು ತಾ|| 8-12-28 ನೇ ಶನಿವಾರ 1 ಘಂಟೆಗೆ ಡಿ|| ಎಜುಕೇಷನಲ್ ಆಫೀಸರವರ ಪರ್ಸನಲ್ ಅಸಿಸ್ಟೆಂಟ್ ಮ|| ಟಿ. ರಂಗಸ್ವಾಮಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಸೇರಿದ್ದು ಸದರಿ ಸಂಘದ 7 ನೇ ರೆಜಲ್ಯೂಷನ್ನನ್ನು ಸಂಘದ ನಿಯಮದಂತೆ ತಮ್ಮ ಘನವಾದ ಸ್ಟಾರ್ ಪತ್ರದಲ್ಲಿ ಪ್ರಕಟಣೆಬಗ್ಗೆ ಕಳುಹಿಸಿಕೊಟ್ಟಿದೆ. ತಾ|| 22-11-28 ನೇ ಮೈಸೂರು ಸ್ಟಾರಿನಲ್ಲಿ ಈ ರೇಂಜಿನ ಅನೇಕ ಮಾಸ್ಟರುಗಳಿಗೆ ಈ ರೇಂಜಿನ ಅ|| ಇ|| ಮ|| ಜಿ. ಯಸ್. ಸುಬ್ಬರಾಯರು ಬಿ.ಎ., ಯವರು ಕಿರುಕುಳವನ್ನು ಕೊಡುತ್ತಾರೆ ವಗೈರೆಯಾಗಿ ಪ್ರಕಟಿಸಲ್ಪಟ್ಟ ಆಕ್ಷೇಪಕರವಾದ ವಾರ್ತೆ ವಿಚಾರದಲ್ಲಿ ಈ ಸಂಘದ ಸೆಕ್ರೆಟರಿಯವರು ಅದರ ವಿಮರ್ಶೆ ಬಗ್ಗೆ ಇಟ್ಟಿದ್ದ ಮೇರೆಗೆ ಮ|| ಮಾಸ್ಟರ್ ಸಿ. ಚೆನ್ನಬಸಪ್ಪನವರು ಈ ವಿಚಾರವಾಗಿ, ನಮ್ಮ ಮಾತೃಭೂಮಿಯ ಮುಂದಿನ ಶ್ರೇಯಸ್ಸಿಗೆ ಈಗಿನ ಮಕ್ಕಳುಗಳೇ ಕಾರಣರಾಗಿದ್ದು, ಅಂತಹ ಮಕ್ಕಳನ್ನು ಮುಂದಕ್ಕೆ ತರುವುದರಲ್ಲಿ ಮಾಸ್ಟರುಗಳು ಮಾಡಬೇಕಾದ ಕರ್ತವ್ಯವನ್ನು ಕುರಿತು ಅ|| ಇ|| ಮ|| ಜಿ. ಯಸ್. ಸುಬ್ಬರಾಯರು ಪ್ರತಿಯೊಂದು ಸ್ಕೂಲನ್ನೂ ಅನೇಕವೇಳೆ ಸಂಧಿಸಿ ಸರಿಯಾದ ಸಲಹೆಕೊಡುತ್ತ, ಸಂಚಾರಕಾಲದಲ್ಲಿ ತಮ್ಮ ತಿಳುವಳಿಕೆಗೆ ಬಂದ ಲೋಪದೋಷಗಳನ್ನು ಸಂಘ ಸಮ್ಮೇಳನದಲ್ಲಿ ಕಾಲೋಚಿತವಾದ ಹಿತಬೋಧೆಯಿಂದ ಪ್ರತಿಯೊಬ್ಬ ಮಾಸ್ಟರನ್ನೂ ಶ್ರೇಯಸ್ಸಿಗೆ ತರಲು ಪ್ರಯತ್ನಶೀಲರಾಗಿರುವ ಇವರ ವಿಚಾರದಲ್ಲಿ ಸಂಕುಚಿತ ಸಲಹೆಯು ಘನವಾದ ಸ್ಟಾರ್ ಪತ್ರಿಕೆಗೆ ಕಳುಹಲ್ಪಟ್ಟಿರುವುದು ಸಂತಾಪಕರವಾದ್ದೆಂದೂ, ಅಂತಹ ಅನಾನುಕೂಲಗಳೇನಾದರೂ ಇದ್ದಲ್ಲಿ ಈ ಡಿ|| ನ ಸಿಸ್ಸೃಹರಾದ ಡಿ|| ಎ|| ಅ|| ರವರಲ್ಲಿ ಮನವರಿಕೆಮಾಡಿ ಕ್ರಮಪಡಿಸಿಕೊಳ್ಳಲು ಅವಕಾಶವಿತ್ತೆಂದೂ ಪ್ರತಿಪಾದಿಸಿದರು. ಅನಂತರ ಸಭಿಕರು (80 ಮಂದಿ ಮೆಂಬರುಗಳು) ಇವರ ಪ್ರತಿಪಾದನೆಯನ್ನು ಸಂತೋಷಪೂರ್ವಕವಾಗಿ ಅನುಮೋದಿಸಲು ಮ|| ಹೇ. ಮಾ|| ಲಿಂಗಣ್ಣಯ್ಯನವರು, ಮ|| ಹೆ|| ಮಾ|| ಆರ್. ಸುಬ್ರಾಯರವರೂ ಇದನ್ನು ಅನುಮೋದಿಸಿ ಮಾತನಾಡಿದರು. ತರುವಾಯ ಅಧ್ಯಕ್ಷರು ಮಾಸ್ಟರುಗಳು ಮೇಲ್ಪಟ್ಟವರ ವಿಷಯದಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು ಮಾತೃಭೂಮಿಯ ಮುಂದಿನ ಶ್ರೇಯಸ್ಸಿಗೆ ಮಾಡಬೇಕಾದ ಕರ್ತವ್ಯವನ್ನು ಹೃದಯಂಗಮವಾಗುವಂತೆ ಭಾಷಣಮಾಡಿದರು. ಇದರ ಕಾಪಿಯೊಂದೊಂದನ್ನು ಸ್ಟಾರ್ ಸಂಪಾದಕರವರಿಗೂ, ಡಿ|| ಎ|| ಅ|| ರವರಿಗೂ, ಚಿಕ್ಕಮಗಳೂರು ರೇಂಜ್ ಅ|| ಇ|| ರವರಿಗೂ ಮುಂಡಿಗೆರೆ ರೇಂಜ್ ಉಪಾಧ್ಯಾಯ ಸಂಘಕ್ಕೂ ಕ್ರಮವಾಗಿ ಕಳುಹಿಸಿಕೊಡತಕ್ಕದೆಂದು ತೀರ್ಮಾನವಾಯಿತು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಮುಕ್ತಾಯಮಾಡಲಾಯಿತು.

ಎಸ್. ಲಿಂಗಣ್ಣಯ್ಯ, ಸೆಕ್ರೆಟರಿ.

ವೀರಶೈವರು ಹಿಂದುಗಳಲ್ಲವೆ?

(ಲೇಖಕ—ವೀರಭದ್ರಪ್ಪ ದುಂಡಪ್ಪ ಆರುಬೆರಳಿನ ಬಾಗೇವಾಡಿ, ಡಿ|| ಬೆಳಗಾಂವ.)

ತಾ|| 15-12-1928 ನೇ ಮೈಸೂರು ಸ್ಟಾರ್ ಪತ್ರಿಕೆಯ 50 ನೇ ಸಂಚಿಕೆಯಲ್ಲಿ ಜೀರಿಗೆ ಬಸವಲಿಂಗಪ್ಪ ಎಂಬವರು ಸನ್ 1930ನೇ ವರ್ಷದ ಸೆನ್‌ಸಸ್ಸೂ ವೀರಶೈವರೂ ಎಂಬ ಒಂದು ಲೇಖವನ್ನು ಪ್ರಕಟಿಸಿರುತ್ತಾರೆ. ಅದರಲ್ಲಿ ನಮ್ಮ ವೀರಶೈವರು ಮುಂದಿನ ಸೆನ್‌ಸಸ್ಸಿನ ಕಾಲಕ್ಕೆ (ಜನಪರಿಗಣತಿಯಲ್ಲಿ-ಖಾನೇಸುಮಾರಿಯಲ್ಲಿ) ಹಿಂದುಮತದಿಂದ ಭಿನ್ನವಾದ ಜೈನ, ಬೌದ್ಧ, ಶೀಕ, ಪಾರ್ಶಿ ಮುಂತಾದ ಮತಗಳಂತೆ ನಮ್ಮ ಮತವನ್ನು ಬೇರೆಯಾಗಿ ಬರೆಸಬೇಕಲ್ಲದೆ ಹಿಂದು ಮತದೊಳಗಿನ ಒಂದು ಜಾತಿ ಎಂದು ಬರೆಸಬಾ[illegible]ದೆಂದು ಸೂಚಿಸಿರುವರು. ಇವರ ಈ ಸೂಚನೆಯು ಸಂಪೂರ್ಣ ಅಗ್ರಾ[illegible]ವಾಗಿರುವದೆಂಬಲೇ ನಮ್ಮ ಅಭಿಪ್ರಾಯವು. ಯಾಕೆಂದರೆ, ಜೈನ, ಶೀಕ, ಪಾರ್ಶಿ ಮುಂತಾದ ಮತದವರು ವೇದಗಳನ್ನು ಮನ್ನಿ[illegible] ತಮ್ಮ ನಿತ್ಯನೈಮಿತ್ತಿಕಾದಿಕರ್ಮಗಳಲ್ಲಿ ವೇದಮಂತ್ರೋಚ್ಚಾ[illegible]ದಿಲ್ಲ. ತಮ್ಮ ಧರ್ಮವು ವೇದಧರ್ಮದಿಂದ ಭಿನ್ನವಾಗಿರುವ[illegible] ಧರ್ಮಗ್ರಂಥಗಳು ವೇದಗಳಲ್ಲವೆಂದೂ ಸ್ಪಷ್ಟವಾಗಿ [illegible]—0 ರಂತೆ ನಾವಲ್ಲ. ನಮ್ಮ ನಿತ್ಯನೈಮಿತ್ತಿಕಾದಿ ಕರ್ಮ[illegible]—6 ಗಳಿಂದಲೇ ಜರಗುತ್ತವೆ. ನಮ್ಮ ಮತದ ತತ್ವಗಳ[illegible]14—0 ಮಗಳೂ ಪುರಾಣಗಳೂ ನೀಲಕಂಠಭಾಷ್ಯ, [illegible] ಎಷ್ಟೋ ಗ್ರಂಥಗಳೂ ಸಂಪೂರ್ಣವಾಗಿ ವೇದ[illegible]ಸುವವು. [illegible]ಗಳೆಂದರೆ, ಹಿಂದು ಧರ್ಮದ ಆದ್ಯಗ್ರಂಥ[illegible] ಸಲ್ಲಿರುವ ಎಲ್ಲ ಧರ್ಮಗಳಲ್ಲಿ ಮುಂಚಿ[illegible] ಲೋಕಣ್ಣ, ಧರ್ಮವೆನ್ನುವರು. ಈ ಸನಾತನವಾ[illegible] ಸಾವಿರಾರು ಪಾರಂಭಿಗಳು [illegible]ಪಾರಿಗಳು, [illegible]ಮ್ಮರು, ಚಿತ್ರದುರ್ಗ ಡಿ||

ಗಳೂ ಉಂಟಾಗಿರುವವು. ಉಪಾಸನಾದಿ ಭೇದಗಳಿಂದ ಈ ಧರ್ಮದಲ್ಲಿ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಸೌರ, ಕಾಪಾಲಿಕ ಎಂಬ ಆರುಮತಗಳುಂಟಾಗಿದ್ದರೂ ಈ ಎಲ್ಲ ಮತಗಳಿಗೂ ವೇದಧರ್ಮವೇ (ಹಿಂದು ಧರ್ಮವೇ) ಮಾತೆಯಾಗಿರುವದು. ನಾವು ಈ ಮತಗಳೊಳಗಿನ ಶೈವ ಎಂಬ ಮತದೊಳಗಿನವರು. ಈ ಶೈವಮತದಲ್ಲಿ (1) ಸಾಮಾನ್ಯ ಶೈವ (2) ಮಿಶ್ರ ಶೈವ (3) ಶುದ್ಧ ಶೈವ (4) ವೀರಶೈವ ಎಂಬ ನಾಲ್ಕು ಒಳಭೇದಗಳು (ಕೆಲವು ಗ್ರಂಥಗಳಲ್ಲಿ 7 ಒಳಭೇದಗಳು) ಉಂಟೆಂಬುದನ್ನು ನಮ್ಮ ಗ್ರಂಥಗಳೇ ಒಪ್ಪಿಕೊಳ್ಳುವವು. ಅಂದ ಬಳಿಕ ನಾವು ಹಿಂದುಗಳೋ ಭಿನ್ನಧರ್ಮಿಗಳೋ ಎಂಬುದನ್ನು ವಾಚಕರೇ ಊಹಿಸಬೇಕು. ಉಪಾಸನೆ ಹಾಗು ಆಚಾರಾದಿ ಭೇದಗಳಿಂದ ಹಿಂದು ಧರ್ಮದ ಜನಾಂಗದಲ್ಲಿ ಮತಭೇದಗಳಾದಂತೆ ಪಾರಮಾರ್ಥಿಕಜ್ಞಾನ ವಿಷಯದಲ್ಲಿಯೂ ಮತಭೇದವಾಗಿರುವದು. ಅದು ಹೇಗೆಂದರೆ— ವೇದಗಳಲ್ಲಿ ಹೇಳಲ್ಪಟ್ಟ ಜ್ಞಾನಭಾಗವು ಅದ್ವೈತಪರವಾಗಿರುವದೆಂದು ಸ್ಮಾರ್ತರೂ, ದ್ವೈತಪರವಾಗಿರುವದೆಂದು ಮಾಧ್ವರೂ, ವಿಶಿಷ್ಟಾದ್ವೈತಪರವಾಗಿರುವದೆಂದು ಶ್ರೀವೈಷ್ಣವರೂ, ಶಕ್ತಿವಿಶಿಷ್ಟಾದ್ವೈತಪರವಾಗಿರುವದೆಂದು ವೀರಶೈವರೂ ಪ್ರತಿಪಾದಿಸುತ್ತಿರುವರಾದರೂ ಎಲ್ಲರೂ ವೇದಗಳೇ ತಮ್ಮ ಮುಖ್ಯಾಧಾರ ಗ್ರಂಥಗಳೆಂದು ನಂಬಿರುವರು. ಶಂಕರಾಚಾರ್ಯರ ಅದ್ವೈತಮತ ವಿಚಾರಕ್ಕೂ ಮಧ್ವಾಚಾರ್ಯರ ದ್ವೈತಮತ ವಿಚಾರಕ್ಕೂ ಮಹದಂತರವಿದ್ದರೂ ಈ ಉಭಯರಲ್ಲಿ ಒಬ್ಬರಾದರೂ ತಾವು ಹಿಂದು ಧರ್ಮದಿಂದ ಭಿನ್ನರಾದವರೆಂದು ಹೇಳುವರೋ? ಅದರಂತೆ ನಮ್ಮ ಮತಸ್ಥಾಪನಾಚಾರ್ಯರ ವಿಚಾರಕ್ಕೂ ಉಳಿದವರ ವಿಚಾರಕ್ಕೂ ಅಂತರವಿದ್ದರೇನಾಯಿತು? ಇಷ್ಟು ಮಾತ್ರಕ್ಕೇನೇ ನಾವು ಸಿಟ್ಟುಗೊಂಡು ಹಿಂದು ಧರ್ಮದೊಳಗಿನವರಲ್ಲವೆಂದು ಹೇಳಬಹುದೇ ಹ್ಯಾಗೆ? ಹಿಂದು ಧರ್ಮದಲ್ಲಿ ಹುಟ್ಟಿ ಹಿಂದು ಧರ್ಮದಲ್ಲಿ ಬೆಳೆದು ಹಿಂದು ಧರ್ಮದ ಆಚಾರಗಳಲ್ಲಿ ನಿರತರಾಗಿ ಹಿಂದು ಧರ್ಮಿಗಳೆಂದು ಈವರೆಗೂ ಹೇಳಿಕೊಳ್ಳುತ್ತ ಬಂದಿರುವ ನಾವು ಇನ್ನು ಮೇಲೆ ಹಿಂದು ಧರ್ಮದೊಳಗಿನವರಲ್ಲವೆಂದು ಹೇಳುವದೆಂದರೆ ಸಂಪೂರ್ಣ ತಪ್ಪೇ ಸರಿ. ಆದುದರಿಂದ ಈ ಹೊಸ ಸಂಕುಚಿತವಿಚಾರಕ್ಕೆ ಯಾರೂ ಗಮನ ಕೊಡದೆ ನಮ್ಮ ಮತವು ಹಿಂದು ಧರ್ಮದೊಳಗಿನ ಒಂದು ಒಳಮತವೆಂದು ಬರೆಸಬೇಕೆಂಬುದೇ ನಮ್ಮ ಸೂಚನೆಯು. ಇನ್ನು ಸದರಿ ಲೇಖಕರ ಇನ್ನೊಂದು ಸೂಚನೆಯೇನೆಂದರೆ, ವೀರಶೈವರೊಳಗಿನ ಒಳಪಂಗಡಗಳನ್ನು ಬೇರೆ ಬೇರೆಯಾಗಿ ಬರೆಸದೆ ಭಕ್ತ ಮಾಹೇಶ್ವರ ಎಂಬ ಎರಡೇ ಭೇದಗಳನ್ನು ಬರೆಸಬೇಕೆಂದೂ ನಮ್ಮಂತೆ ಒಳಪಂಗಡಗಳಿಂದ ಕೂಡಿರುವ ಜೈನರು ಅವುಗಳನ್ನು ಬೇರೆ ಬೇರೆಯಾಗಿ ಬರೆಸದೆ ಮುಖ್ಯವಾಗಿ ದಿಗಂಬರ, ಶ್ವೇತಾಂಬರ ಎಂಬ ಎರಡೇ ಭೇದಗಳನ್ನು ಬರೆಸುವರೆಂದೂ ತಿಳಿಸಿರುತ್ತಾರೆ. ಜೈನರಲ್ಲಿಯ ದಿಗಂಬರ, ಶ್ವೇತಾಂಬರ ಭೇದಗಳಂತೆ ನಮ್ಮ ಭಕ್ತ ಮಾಹೇಶ್ವರ ಭೇದಗಳಲ್ಲ. ದಿಗಂಬರರಿಗೂ ಶ್ವೇತಾಂಬರರಿಗೂ ಅನ್ಯೋನ್ಯ ವ್ಯವಹಾರವಿಲ್ಲ. ಆಚಾರಗಳಲ್ಲಿ ಸಹ ಪರಸ್ಪರ ಅಂತರವಿರುವದು. ನಮ್ಮಲ್ಲಿಯ ಭಕ್ತ ಮಾಹೇಶ್ವರ ಎಂಬ ಭೇದಗಳು ಬ್ರಾಹ್ಮಣರಲ್ಲಿಯ ಲೌಕಿಕ ವೈದಿಕರೆಂಬ ಭೇದಗಳಿದ್ದಂತೆ ಅವೆ. ಬ್ರಾಹ್ಮಣರಲ್ಲಿ ವೈದಿಕವೃತ್ತಿಯಲ್ಲಿದ್ದವರಿಗೆ ಆಚಾರ್ಯ ಅಥವಾ ಉಪಾಧ್ಯಾಯರೆನ್ನುವಂತೆ ನಮ್ಮಲ್ಲಿಯ ವೈದಿಕರಿಗೆ ಮಹೇಶ್ವರ ಅಥವಾ ಜಂಗಮರೆನ್ನುವರು. ಈ ಭೇದಗಳು ಹೇಳಿಕೊಳ್ಳುವಷ್ಟು ಪ್ರಾಮುಖ್ಯಗಳಲ್ಲ. ಕಾರಣ ನಾವು ಭಕ್ತ ಮಾಹೇಶ್ವರ ಎಂದು ಎರಡು ಭೇದಗಳನ್ನು ತೋರಿಸುವದಕ್ಕಿಂತಲೂ ಎಲ್ಲರೂ ವೀರಶೈವರೆಂದು ಬರೆಸಿದರೆ ಸಾಕೆಂಬುವದೇ ನಮ್ಮ ಅಭಿಪ್ರಾಯವು.

ಕರ್ನಾಟಕ ಕುರುಬರ ಕೌನ್ಸಿಲ್ 4ನೇ ಅಧಿವೇಶನ, ಧಾರವಾಡ.

ಮೊದಲು ಪ್ರಸಿದ್ಧಪಡಿಸಿದಪ್ರಕಾರ ತಾ|| 29-10-1928 ರಲ್ಲಿ ಕರ್ನಾಟಕ ಕುರುಬರ ಕೌನ್ಸಿಲ್ 4 ನೇ ಅಧಿವೇಶನವು ಧಾರವಾಡ ರಡ್ಡಿ ಬ್ಯಾಂಕಿನ ಸಭಾಮಂದಿರದಲ್ಲಿ ಡಾ|| ಆರ್. ನಾಗನಗೌಡ, ಎಂ. ಎಲ್. ಸಿ. ಬಳ್ಳಾರಿ ಇವರ ಅಧ್ಯಕ್ಷತೆಯಕೆಳಗೆ ಬಹುವಿಜೃಂಭಣೆಯಿಂದ ನೆರವೇರಿತು. ಈ ಅಧಿವೇಶನಕ್ಕೆ ಕರ್ನಾಟಕದ (ದೇಶೀಸಂಸ್ಥಾನಸಹಿತ) ಯಾವತ್ತು ಭಾಗಗಳ ಕುರುಬರ ಪ್ರಮುಖಜನರು ಆಗಮಿಸಿದ್ದರು. ಸದರಿ ಸಂಘದ 50 ಜನ ಮೆಂಬರರು ಹಾಜರಿದ್ದರು. ಈ ಅಧಿವೇಶನದ ಅಧ್ಯಕ್ಷರಾದ ಡಾ|| ನಾಗನಗೌಡರು ಪಂಚಮಿನ ದಿವಸ ಮುಂಜಾನೆಯ ಗಾಡಿಯಲ್ಲಿ ಬಳ್ಳಾರಿಯಿಂದ ಬಂದಬಳಿಕ ಸ್ಟೇಷನ್ನಿನಲ್ಲಿ ಸಮಾಜದ ಪ್ರಮುಖರು ಇವರಿಗೆ ಹೂಮಾಲೆ ಹಾಕಿ ಸ್ವಾಗತಿಸಿ ಮೋಟಾರುಬಂಡಿಯಲ್ಲಿ ಉತ್ಸವದಿಂದ ಸಭಾಮಂದಿರಕ್ಕೆ ಕರೆದುಕೊಂಡುಬಂದರು. ಮಧ್ಯಾಹ್ನ 3 ಗಂಟೆಗೆ ಈ ಅಧಿವೇಶನವು ಪ್ರಾರಂಭವಾಯಿತು. ಇದಕ್ಕೆ ರಡ್ಡಿ, ಲಿಂಗಾಯತ, ಬ್ರಾಹ್ಮಣ, ಅಸ್ಪೃಶ್ಯ ಮೊದಲಾದ ಸಮಾಜಗಳ ಪ್ರಮುಖಜನರು ಆಗಮಿಸಿದ್ದರು. ಪ್ರಾರಂಭದಲ್ಲಿ ಸಂಘದ ಜನರಲ್ ಸೆಕ್ರೆಟರಿ ಮ|| ಬಿ. ಎಫ್. ಕಲ್ಲಣ್ಣನವರ ಇವರು ಯಾವತ್ತರ ಸ್ವಾಗತಮಾಡಿ ಸಂಘದ ವರದಿಯನ್ನು ಓದಿಹೇಳಿದ ಬಳಿಕ ಅಧ್ಯಕ್ಷರು ವಿರಾಜಮಾನರಾದಮೇಲೆ ಮ|| ಎಸ್. ಎಸ್. ಪಾಟೀಲ ಬ್ಯಾಕೊಡ, ಶ್ರೀ. ದೇವನಗೌಡ ಪಾಟೀಲ ವಕೀಲ, ಶ್ರೀ. ಎಚ್. ಟಿ. ಕಾಲವಾಡ ಬಿ.ಎ., ಶ್ರೀ. ಎಂ. ಬಿ. ಖನ್ನೂರ, ಬಿ.ಎ., ಶ್ರೀ. ಬಸವಪ್ಪ ದೇಸಾಯಿ ಇವರೇ ಮೊದಲಾದವರು ಸಮಾಜಾಭಿವೃದ್ಧಿಯಬಗ್ಗೆ ಭಾಷಣಮಾಡಿದ ಬಳಿಕ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು—

1. ಸಬ್‌ಕಮಿಟಿಯವರಿಂದ ತಯಾರಾದ ರೂಲ್ಸುಗಳನ್ನು ಓದಿ ಸರ್ವಾನುಮತದಿಂದ ಪಾಸುಮಾಡಲಾಯಿತು.

2. ಸಂಘದ ಕಾರ್ಯಕಾರಿ ಕಮಿಟಿಗೆ ಮುಂದಿನ ಜನರು ಇರತಕ್ಕದ್ದು. (1) ಪಾವಾಡಿಗೌಡ ಪಾಟೀಲ ಹರ್ಲಾಪೂರ. (2) ಭೀಮಪ್ಪ ಚಂದ್ರಣ್ಣನವರ ನಾಗವಳ್ಳಿ. (3) ಎಸ್. ಎಸ್. ಪಾಟೀಲ ಬ್ಯಾಕೊಡ (ಕೊಲ್ಹಾಪೂರಸ್ಟೇಟ್) (4) ಲಚ್ಚಪ್ಪ ಭಂಡಿಗಾರ ಗೋಕಾಕ. (5) ಹುಚ್ಚಪ್ಪ ಏಗ್ಗಣ್ಣನವರ ಹುಲಿಗೇರಿ. (6) ಭೀಮಪ್ಪ ಮಣ್ಣೂರ ಅಗಡಿ. (7) ಟೋಪಣ್ಣಾ ಬೆಂಕಿ ದರಗಾ (ವಿಜಾಪೂರ.) (8) ಬಸನಗೌಡ ಚಿಕ್ಕೊಪ್ಪ ಗದಗ. (9) ಎಂ. ಬಿ. ಖನ್ನೂರ ಬಿ.ಎ. (10) ದೇವನಗೌಡ ಪಾಟೀಲ ಬಿ. ., ಎಲ್‌ಎಲ್.ಬಿ., ಧಾರವಾಡ. (11) ಬಸಪ್ಪ ಕಲ್ಲಣ್ಣನವರ.

3. ಮ|| ಕಲ್ಲಣ್ಣನವರ ಇವರು ಸಂಘದ ಜನರಲ್ ಸೆಕ್ರೆಟರಿಯಾಗ ಮತ್ತು ಇವರಿಗೆ ಪ್ರವಾಸದ ಖರ್ಚು ಮತ್ತು ಆನರರೀಯಮ್ ಮ ದ್ದು.

ಯು ಷವನ್ನು ತೀವ್ರ ರಿಜಿಸ್ಟರ ಮಾಡಿಸತಕ್ಕದ್ದು.

ನಿಂದ ಕು ಬರ ಮಹಾಸಭೆಯನ್ನು ಕೊಲ್ಹಾಪೂರ ಸಂಸ್ಥಾನ ಮತ್ತು ರಾದ ಕೋ ಮಧ್ಯದಲ್ಲಿ ಬ್ರಿಟಿಷರ ಸರಹದ್ದಿನಲ್ಲಿ ಕೂಡಿಸತಕ್ಕದ್ದು.

ಪ್ರಬಲವಾಗು ವರ್ಧಕಫಂಡ ಕೂಡಿಸುವದು.

ಯುದ್ಧದಲ್ಲಿ ನಮ್ಮ ಸಮಾಜದ ವಿದ್ಯಾವಂತರಾದ ಯೋಗ್ಯ ಕೇಶಗಳ ದಲಿಗೆ ಸೇರಿಸಿಕೊಳ್ಳಬೇಕೆಂದು ಈ ಕೌನ್ಸಿಲ್ ಮಾಡಿಕೊಳ್ಳುತ್ತದೆ.

ಕಲ್ ಬೋರ್ಡು ಮ್ಯುನಿಸಿಪಾಲಿಟಿ ಜನಿಕ ಸಂಸ್ಥೆಗಳಲ್ಲಿ ಸರಕಾರದವರು ಮಾಡಬೇಕೆಂದು ಈ ಕೌನ್ಸಿಲು

9. ಮ|| ಎಂ. ಬಿ. ಖನ್ನೂರ ಇವರಿಗೆ ಮುಂಬೈ ಕರ್ನಾಟಕದ ಕುರುಬರಲ್ಲಿ ಮೊದಲನೇ ಬಿ.ಎ., ಪದವಿದೊರಕಿದ್ದಕ್ಕಾಗಿ ಇವರನ್ನು ಈ ಕೌನ್ಸಿಲು ಅಭಿನಂದಿಸುವದು. ಹಾಗು ಮುಂದಿನ ಮಹಾಸಭೆಯಲ್ಲಿ ಇವರಿಗೆ ಬಹುಮಾನವಾಗಿ ಬಂಗಾರದ ಪದಕವನ್ನು ಕೊಡಬೇಕೆಂದು ಈ ಕೌನ್ಸಿಲು ಆಶಿಸುತ್ತದೆ.

10. ಮ|| ಎಂ. ಬಿ. ಖನ್ನೂರ, ಬಿ.ಎ., ಇವರು ಪ್ರೊಬೇಷನರಿ ಮಾಮಲೇದಾರ ಜಾಗೆಯಬಗ್ಗೆ ಮಾಡಿದ ಅರ್ಜಿಯನ್ನು ಸರಕಾರದವರು ತೀವ್ರವಿಚಾರಿಸಿ ಸದರಿಯವರಿಗೆ ಈ ಜಾಗೆಯನ್ನು ಅವಶ್ಯವಾಗಿ ಕೊಡಬೇಕೆಂದು ಈ ಕೌನ್ಸಿಲು ಮುಂಬೈ ಸರಕಾರಕ್ಕೆ ಅಗ್ರಹದ ವಿನಂತಿ ಮಾಡಿಕೊಳ್ಳುತ್ತದೆ.

11. ಮ|| ಬಿ. ಎಫ್. ಕಲ್ಲಣ್ಣನವರ ಇವರು ಹುಬ್ಬಳ್ಳಿ ಬಂಕಾಪೂರ ತಾಲೂಕುಗಳ ಕೋ-ಆಪರೇಟಿವ್ ಸೊಸೈಟಿ ಆರ್ಗನಾಯಝರ ಕೆಲಸವನ್ನು ಒಳ್ಳೇ ಕಳಕಳಿ ಹಾಗು ನಿಸ್ಪೃಹತೆಯಿಂದ ಭಿಡೆಭೀತಿಗೆ ಒಳಗಾಗದೆ ಮಾಡುತ್ತಿದ್ದು ಹಣದ ಅಡಚಣೆಸಲುವಾಗಿ ಈ ಜಾಗೆ ಕಡಿಮೆಮಾಡಿರುವೆವು ಎಂದು ತಿಳಿಸಿ ಆವೇಳೆ ಈ ಜಾಗೆಗೆ ಮತ್ತೊಬ್ಬ ಗೃಹಸ್ಥರನ್ನು ಕೋ-ಆ-ಡಿಪಾರ್ಟಮೆಂಟಿನವರು ನೇಮಣೂಕಮಾಡಿದಕ್ಕೆ ಈ ಕೌನ್ಸಿಲು ವಿಷಾದಪಡುತ್ತದೆ.

12. ಈ ಕೌನ್ಸಿಲಿನ ಅಧ್ಯಕ್ಷರವರು ಚಿಕ್ಕವಯಸ್ಸಿನಲ್ಲಿಯೇ ಅಮೇರಿಕೆಗೆ ಹೋಗಿ ಅಲ್ಲಿ ಎಂ. ಎಸ್. ಸಿ. ಪಿ. ಎಚ್. ಡಿ. ಪದವಿಪಡೆದು ನಮ್ಮ ದೇಶಕ್ಕೆಬಂದು ಮದ್ರಾಸ ಕೌನ್ಸಿಲಿಗೆ ಮೆಂಬರು ಆದದ್ದು ನಮ್ಮ ಸಮಾಜಕ್ಕೆ ಭೂಷಣವೇಸರಿ. ಇವರನ್ನು ಈ ಕೌನ್ಸಿಲು ಅಭಿನಂದಿಸುವದು.

13. ಸದರಿ ಠರಾವುಗಳನ್ನು ಸರಕಾರದ ಎಲ್ಲ ಖಾತೆಗಳ ಅಧಿಕಾರಿಗಳ ಕಡೆಗೂ, ಕೌನ್ಸಿಲ್, ಡಿ. ಎಲ್. ಬಿ. ಮೆಂಬರ ಹಾಗು ಪ್ರೆಸಿಡೆಂಟರಿಗೂ ಕಳಿಸಲಿಕ್ಕೆ ಅಧ್ಯಕ್ಷರಿಗೆ ಅಧಿಕಾರಕೊಟ್ಟಿದೆ.

ಬಳಿಕ ಅಧ್ಯಕ್ಷರವರು ಸಂಘದ ಅಭಿವೃದ್ಧಿಯಬಗ್ಗೆ ಒಳ್ಳೇ ಕಳಕಳಿಯುಕ್ತವಾದ ಭಾಷಣಮಾಡಿದ ಬಳಿಕ ಶ್ರೀ. ಹುಚ್ಚಪ್ಪ ವಗ್ಗಣ್ಣನವರ ಇವರು ಅಧ್ಯಕ್ಷರ ಹಾಗು ಸಭಿಕರ ಅಭಾರಮನ್ನಿಸಿದ ಬಳಿಕ ಹಾಲುಮತದ ಜಯಘೋಷದೊಡನೆ ಈ ಅಧಿವೇಶನವು ಸಮಾಪ್ತಿಯಾಯಿತು.

ತಮ್ಮ

ಭೀಮಪ್ಪಾ ಫಕೀರಪ್ಪಾ ಚಂದ್ರಣ್ಣನವರ ಮೆಂಬರ.

ಶ್ರೀ ಶಿವಾನುಭವ ಷಟಸ್ಥಲ ಚರಾಧಿಕಾರಮಹೋತ್ಸವ, ಬಾಣಾವರ.

ಅರಸೀಕೆರೆ ತಾಲ್ಲೂಕು ಬಾಣಾವರದಲ್ಲಿ ಶ್ರೀ ಕೋಡಿಮಠಕ್ಕೆ ಉತ್ತರಾಧಿಕಾರಮಾಡಲು ಈ ಗ್ರಾಮದ ಪೇಟೆ ಸ್ಥಳದ ಮಠಸ್ಥರು ಶೆಟ್ಟರು ಯಜಮಾನರು ಗೌಡರು ಬುದ್ಧಿವಂತರು ಇನ್ನೂ ಮುಂತಾದ ಸಮಸ್ತ ದೈವದವರು ಈ ಮೊದಲೇ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನ ಇವರ ದಿವ್ಯಸನ್ನಿಧಿಗೆ ಮೇಲ್ಕಂಡ ಸರ್ವರೂ ಬಿನ್ನಹಪತ್ರಿಕಾಮುಖೇನ ರೂಪು ರೂಪು ಹಾಜರಾಗಿ ಸಾಷ್ಟಾಂಗಪ್ರಣಾಮಪೂರ್ವಕ ಪ್ರಾರ್ಥಿಸಿಕೊಂಡಮೇರೆಗೆ ಶ್ರೀ ಸನ್ನಿಧಿಯವರು ಕೃಪಾವಲಂಬನವನ್ನಿತ್ತು ಸದಾಶಿವಸ್ವಾಮಿಗಳೆಂಬವರನ್ನು ಸಂಸ್ಥಾನದ ಏಜಂಟರ ಮೂಲಕ ಕಳುಹಿಸುವುದರೊಳಗಾಗಿ ಊರಿನ ಸದ್ಭಕ್ತದೈವದ ಮಹಾಜನಗಳು ಇದೇ ವಿಭವ ನಾಮಸಂವತ್ಸರದ ಕಾರ್ತಿಕ ಬ|| ೧೦ (ತಾ|| 6-12-28) ನೇ ಗುರುವಾರ ಶುಭಸಮಯದಲ್ಲಿ ಈ ಗ್ರಾಮದ ವಿರಕ್ತಮಠಕ್ಕೆ ಅಂದರೆ, ಕೋಡೀಮಠಕ್ಕೆ ಅಧಿಕಾರಮಾಡಲು ಆಹ್ವಾನಪತ್ರಿಕೆಯನ್ನು ಸುತ್ತಮುತ್ತಲಿನ ಅನೇಕ ಗ್ರಾಮಗಳಿಗೆ ತತ್ಪೂರ್ವವೇ ಕಳುಹಿಸಿರಲಾಗಿ ಸಕಾಲಕ್ಕೆ ಸರಿಯಾಗಿ 3.4 ಸಾವಿರ ಜನಗಳು ದಯಮಾಡಿಸಿದ್ದರು. ದೈವಜ್ಞರಿಂದ ನಿಶ್ಚಯಿಸಲ್ಪಟ್ಟ ಮೇರಿಗೆ ಸರಿಯಾಗಿ ಶ್ರೀ ಜಗದ್ಗುರುಗಳವರ ಅಪ್ಪಣೆಪ್ರಕಾರ ಸದಾಶಿವಸ್ವಾಮಿಗಳೆಂಬ ವಟುವಿಗೆ ಶ್ರೀ ಷಟಸ್ಥಲ ಶಿವಾನುಭವಚರಾಧಿಕಾರವು ವಿಧ್ಯುಕ್ತವಾಗಿ ಪೂಜ್ಯರಿಂದ ಅನುಗ್ರಹಿಸಿ ಮಹೇಶ್ವರಾರಾಧನೆ ಮತ್ತು 3.4 ಸಾವಿರ ಜನಗಳಿಗೆ ಅನ್ನಸಂತರ್ಪಣೆ ನಡೆಯಿಸಿ ಅನಂತರ ಕೋಡೀಮಠದ ಶ್ರೀ ಸ್ವಾಮಿಗಳವರನ್ನು ಅಜಬಾಬುಸಮೇತ ಅಲಂಕರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಮುಹೂರ್ತಗೊಳಿಸಿ ಅಲಂಕರಿಸಲ್ಪಟ್ಟ ಪಟ್ಟಣದ ವೀದಿಗಳಲ್ಲೆಲ್ಲಾ ಮಂಗಳವಾದ್ಯ ಶಿವಭಜನಾಸಮೇತ ಅತ್ಯಂತ ವಿಜೃಂಭಣೆಯಿಂದ ಉತ್ಸವವನ್ನು ನೆರವೇರಿಸಿ ಯಥಾಸ್ಥಾನಕ್ಕೆ ಬಿಜಮಾಡಲು ಸರ್ವರೂ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿ ಮಹಾರಾಜ್ಕೀಜೈ ಎಂಬ ಸ್ಮರಣಪೂರ್ವಕ ಉತ್ಸವ ಕಾರ್ಯವನ್ನು ಸಾಂಗಗೊಳಿಸಿ ವೇಳೆಯಾದ್ದರಿಂದ ಶ್ರೀಗಳವರು ಅನುಷ್ಠಾನಕ್ಕೆ ದಯಮಾಡಿಸಿದರು. ಬಂದ ಮಹಾಜನಗಳಿಗೆ ಯಥೋಚಿತವಾಗಿ ಸತ್ಕಾರನಡೆದು ಆ ದಿನದ ಕಾರ್ಯ ಸಮಾಪ್ತಿಗೊಳಿಸಲ್ಪಟ್ಟಿತು. ಮರುದಿನ ಸಭೆಯನ್ನೇರ್ಪಡಿಸಲು ಬಂದ ಜನಗಳು ಸ್ವಕೀಯ ಕೆಲಸಕಾರ್ಯಗಳು ತುರ್ತು ಇದ್ದದ್ದರಿಂದ ಮುಂದೆ ಒಂದುವಾರ ಕಳೆದು ಶ್ರೀ ಸನ್ನಿಧಿಯ ಅಧ್ಯಕ್ಷತೆಯಲ್ಲಿ ಸಭೆಯು ನಡೆಯುವುದಾಗಿ ಸರ್ವರೂ ಪ್ರಾರ್ಥಿಸಿದಪ್ರಕಾರ ತಾ|| 24-12-28 ನೇ ಸೋಮವಾರ ಶ್ರೀ ವಿರಕ್ತಮಠದಲ್ಲಿ ಶ್ರೀಮನ್ನಿರಂಜನ ಸದಾಶಿವಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಏರ್ಪಾಟಾಗಿ ಸುತ್ತಮುತ್ತಲಿನ ಅನೇಕ ಜನಗಳು ದಯಮಾಡಿಸಿದ್ದರು. ಈ ಕೆಳಗೆ ಕಾಣಿಸಲ್ಪಟ್ಟ ಪ್ರಕಾರ ಸಭಾಕಾರ್ಯಗಳು ನಡೆದವು. ಶ್ರೀಮಠದ ಕಾರ್ಯಭಾಗಗಳು ಶ್ರೀಜಗದ್ಗುರುಗಳವರ ಸನ್ನಿಧಿಯಿಂದ ದಯಪಾಲಿಸಲ್ಪಟ್ಟ ನಿರೂಪವನ್ನು ಓದಿ ಸಭೆಯ ಉದ್ದೇಶಗಳನ್ನು ತಿಳಿಸಿದರು. ಬೇರೂರಿಂದ ದಯಮಾಡಿಸಿದ್ದ ವೇ|| ಪಂ|| ಹೆಚ್. ಹೆಚ್. ಜಿ. ನಂಜುಂಡಾರಾಧ್ಯರವರು ತಮ್ಮ ಸರಸವಾಣಿಯಿಂದ ಯಾವತ್ತು ಜನಗಳಲ್ಲಿ ಗುರು, ಲಿಂಗ, ಜಂಗಮ ಮೊದಲಾದ ಅಷ್ಟಾವರಣಗಳ ವಿಷಯದಲ್ಲಿ ಶ್ರದ್ಧೆ ಹುಟ್ಟುವಂತೆ ಶಿವಕೀರ್ತನಮಾಡಿದರು. ತರುವಾಯ ಮ|| ಸಾಹುಕಾರ್ ವೈ. ರುದ್ರಪ್ಪನವರು ಶ್ರೀಜಗದ್ಗುರುಗಳವರ ಮಹತ್ವವನ್ನೂ ಅವರು ಸಮಾಜಕ್ಕೆ ಮಾಡಿರುವ ಚಿರಸ್ಮರಣೀಯವಾದ ಉಪಕಾರಗಳನ್ನು ವರ್ಣಿಸಿದ್ದಲ್ಲದೆ ಈ ಗ್ರಾಮದ ದೈವದವರ ಪ್ರಾರ್ಥನೆಮೇರಿಗೆ ಶ್ರೀ ವಿರಕ್ತಮಠಕ್ಕೆ ಉತ್ತರಾಧಿಕಾರ ವಹಿಸಲು ಸುಶಿಕ್ಷಿತರಾದ ಮರಿದೇವರನ್ನು ಜಗದ್ಗುರುಗಳವರು ಮಹಾಸಂಸ್ಥಾನದಿಂದ ಕಳುಹಿಸಿ ಈ ಮಹಾಕಾರ್ಯವು ನಿರ್ವಿಘ್ನವಾಗಿ ನಡೆಯುವಂತೆ ಪೂರ್ಣಾಶೀರ್ವಾದವನ್ನಿತ್ತದ್ದರಿಂದ ಈ ಸಭಾಪರವಾದ ವಂದನೆಗಳನ್ನು ಮಹಾಪಾದಕ್ಕೆ ಸಮರ್ಪಿಸುವುದಲ್ಲದೆ ಈ ವಿಷಯದಲ್ಲಿ ಮುಂದಿನ ಎಲ್ಲಾ ಕಾರ್ಯಕ್ರಮಗಳನ್ನು ಬಿನ್ನಹಪತ್ರಿಕಾಮುಖೇನ ಮತ್ತೊಮ್ಮೆ ಪರಾಂಬರಿಕೆಬಗ್ಗೆ ಬಿನ್ನೈಸಿಕೊಳ್ಳತಕ್ಕದ್ದೆಂದು ತಮ್ಮ ಭಾಷಣದಲ್ಲಿ ತಿಳಿಸಿದರು. ಅನಂತರ ಇದೇ ಬಾಣಾವರದ ದಲ್ಲಾಳಿ ಮಂಡಿ ಅಣ್ಣೇನಹಳ್ಳಿ ಮ|| ಚಿಕ್ಕಣ್ಣಶೆಟ್ಟರು ಅಧ್ಯಕ್ಷರಾದ ಶ್ರೀ ಸ್ವಾಮಿಗಳವರ ಗುಣಕಥನಮಾಡಿ ಬಾಣಾವರದ ಕೋಡೀಮಠಕ್ಕೆ ಅಧಿಕಾರಿಗಳು ಇಲ್ಲದಿರುವ ಚಿಂತೆಯು ಈ ಪ್ರಾಂತದ ಅನೇಕ ವೀರಶೈವರಿಗಿತ್ತು. ಅಂಥಾದ್ದು ಶ್ರೀಜಗದ್ಗುರುಗಳವರ ಕಟಾಕ್ಷದಿಂದ ಪರಿಹಾರವಾಯಿತೆಂದು ಹೇಳಲು ಯಾವ ಅಭ್ಯಂತರವೂ ಇರುವುದಿಲ್ಲ. ಈ ಸಮಯದಲ್ಲಿ ಬಾಣಾವರದ ವೈ. ರುದ್ರಪ್ಪಶೆಟ್ಟರು, ಬಿ. ಪುಟ್ಟಸಾಮಯ್ಯಶೆಟ್ಟರು, ಪೇಟೆ ರಾಚಪ್ಪಶೆಟ್ಟರು, ನಂಜಪ್ಪಶೆಟ್ಟರು ಸಮಸ್ತ ದೈವದವರೊಡನೆ ಮುಂದೆನಿಂತು ಮೊದಲಿಂದಮೇಲೆ ಬರುತ್ತಿದ್ದ ಕಷ್ಟನಷ್ಟಗಳನ್ನು ಸಹಿಸಿಕೊಂಡು ಈ ಮಹತ್ಕಾರ್ಯವನ್ನು ನಿರ್ವಹಿಸಿ ಕೀರ್ತಿಯನ್ನು ಸಂಪಾದಿಸಿಕೊಂಡು ಸಮಾಜಕ್ಕೂ ಗ್ರಾಮಕ್ಕೂ ಗೌರವವನ್ನುಂಟುಮಾಡಿರುವರು. ಇವರಿಗೆ ಗುರುಕೃಪೆಯಿಂದ ಆಯುರಾರೋಗ್ಯಗಳು ಉಂಟಾಗಲೆಂದೂ ಅಧ್ಯಕ್ಷರಿಂದ ಶ್ರೀ ಕೋಡೀಮಠದ ಶ್ರೀಮನ್ನಿರಂಜನ ಸದಾಶಿವಸ್ವಾಮಿಗಳವರ ಸದುದ್ದೇಶವು ವೀರಶೈವಸಮಾಜದಮೇಲೆ ಬೇಗನೆ ಪ್ರಚಾರವಾಗಿ ಸಿದ್ಧಿ ಹೊಂದುವಂತಾಗಲೆಂದು ಪ್ರಾರ್ಥಿಸುವೆನೆಂದು ಹೇಳಿದರು. ಅನಂತರ ಅಧ್ಯಕ್ಷಮಹಾಸ್ವಾಮಿಗಳವರು ಗುರು, ಲಿಂಗ, ಜಂಗಮ ಸೇವಾನಿರತರಾದ ಭಕ್ತಮಾಹೇಶ್ವರರನ್ನು ಕುರಿತು ಊರಿನ ಶ್ರೀ ವಿರಕ್ತಮಠಕ್ಕೆ ಅಧಿಕಾರ ಮಾಡಲು ಬಾಣಾವರದ ಸಮಸ್ತ ದೈವದವರು ಶ್ರೀ ಜಗದ್ಗುರುಗಳವರನ್ನು ಪ್ರಾರ್ಥಿಸಿ ನಮ್ಮನ್ನು ಬರಮಾಡಿಕೊಂಡು ಸರ್ವಸನ್ನಾಹಪೂರ್ವಕ ಈ ಮಠದ ಉತ್ತರಾಧಿಕಾರವನ್ನು ನಮಗೆ ವಹಿಸಿದ್ದು ನೋಡಿದರೆ ಈ ನಿಮ್ಮ ಜಂಗಮಭಕ್ತಿಯು ಅಸಾಧಾರಣವಾದುದಾಗಿ ಕಂಡುಬರುತ್ತದಲ್ಲದೆ ಕೊಂದರೆಗಳನ್ನು ಗಣನೆಗೆತಾರದೆ ಸಭೆಯನ್ನೇರ್ಪಡಿಸಿ ಈ ಮುಖೇನ ಶುಭಕಾರ್ಯವು ಅಶೇಷ ವೀರಶೈವಮಹನೀಯರ ಅವಗಾಹನೆಗೆ ಬರುವಂತೆ ಮಾಡಿದ ನಿಮ್ಮ ಯಥಾರ್ಥ ಭಕ್ತಿಗೌರವಗಳು ಅನುಕರಣೀಯವಾಗಿರುತ್ತವೆ. ಈ ಸಮಯದಲ್ಲಿ ವೇ|| ಆರಾಧ್ಯರವರು ಸುಶ್ರಾವ್ಯವಾಗಿ ಅಸ್ಖಲಿತವಾಣಿಯಿಂದ ಶಿವಕೀರ್ತನ ಮಾಡಿದ್ದು ಸಭೆಗೆ ಮತ್ತಷ್ಟು ಭೂಷಣವಾಗಿರುತ್ತದೆ. ಇವರಿಗೂ ಗ್ರಾಮದವರಿಗೂ ಬಂದಮಹಾಜನಗಳಿಗೂ ಜಗದೀಶನು ಆಯುರಾರೋಗ್ಯಭಾಗಗಳನ್ನನುಗ್ರಹಿಸಲೆಂದು ಹೇಳಿ ಮಹಾಜನಗಳಲ್ಲಿ ಜ್ಞಾನೋದಯವಾಗುವಂತೆ ಭಾಷಣಮಾಡಿದರು. ಅನಂತರ ಸರ್ವರೂ ಸಂತೋಷಪೂರ್ವಕ ಶ್ರೀಗಳವರ ವಿದ್ವತ್ತನ್ನು ಕೊಂಡಾಡಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನುಕೋರಿ ಶ್ರೀ ಜಗದ್ಗುರುಗಳವರ ಪಾದಸ್ಮರಣೆಯಿಂದ ಗಂಧಪುಷ್ಪ ಫಲತಾಂಬೂಲಗಳನ್ನುಹಂಚಿ ಸಭೆಯು ಜಯಘೋಷದೊಡನೆ ವಿರಮಿಸಲ್ಪಟ್ಟಿತು.

ಶ್ರೀಗುರುಪಾದಸೇವಕ,

ಮುದ್ದಪ್ಪಶೆಟ್ಟಿ, ಬಾಣಾವರ.



5

ಪ್ರಕಟನೆ.

“ಜ್ಯೋತಿಶ್ಶಾಸ್ತ್ರಪಯೋನಿಧಿಃ”

ಫಲಕಾಂಡ, ಶ್ಲೋಕತಾತ್ಪರ್ಯಗಳಿಂದಲೂ ಶ್ರೀಮನ್ಮಹಾರಾಜರವರ ಜಾತಕೋದಾಹರಣೆಯಿಂದಲೂ ಕೂಡಿರುತ್ತದೆ. ಬೆಲೆ 4-0-0. ಟ. ಖ. 0-8-0.

“ಮುಹೂರ್ತರಾಜಚಂದ್ರಿಕೆ”

ಮುಹೂರ್ತಭಾಗ, ಶ್ಲೋಕ ತಾತ್ಪರ್ಯಗಳಿಂದ ಕೂಡಿರುತ್ತದೆ. ಬೆಲೆ 0-10-0. ಟ. ಖ. 0-4-0.

ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ಮೇಲ್ಕಂಡ ಎರಡು ಪ್ರತಿಗಳನ್ನು ಒಟ್ಟಿಗೆ ತರಿಸತಕ್ಕವರಿಗೆ ಮಾತ್ರ ಟಪಾಲು ಖರ್ಚು ಮಾಫಿ ಇಂದ 0-8-0 ಬೆಲೆಯುಳ್ಳ ಧ್ಯಾನಶ್ಲೋಕಗಳಿಂದ ಕೂಡಿದ ಸುಂದರವಾದ 32 ಗಣಪತಿಗಳ ಚಿತ್ರಪುಸ್ತಕ ಒಂದು ಉಚಿತವಾಗಿ ಕೊಡಲ್ಪಡುತ್ತದೆ. ವಿಳಾಸವನ್ನು ಸ್ಪಷ್ಟ ಬರೆಯಬೇಕಾಗಿ ವಿನಂತಿ.

ನಮ್ಮ ವಿಳಾಸ— 10

ಎ. ಸಚ್ಚಿದಾನಂದ ಜೋಯಿಸರು ಸಿದ್ಧಾಂತಿ, ಮೈಸೂರು.

೧೯೨೯ ನೆಯ ಇಸವಿ ಜನವರಿ ತಾ|| ೫ ರಿಂದ ೧೯೨೯ ನೆಯ ಇಸವಿ ಜನವರಿ ತಾ|| ೧೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಮಾರ್ಗಶಿರ ಬಹುಳ ದಶಮಿಯಿಂದ ಪುಷ್ಯ ಶುದ್ಧ ಪಾಡ್ಯಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನುರ್ಮಾಸ
5	ಶನಿ	ದಶ	29-32	ಸ್ವಾತಿ	21-3	22
6	ಭಾನು	ಏಕಾ	34-6	ವಿಶಾ	26-34	23
7	(1)ಸೋಮ	ದ್ವಾದ	39-8	ಅನೂ	32-40	24
8	ಮಂಗಳ	ತ್ರಯೋ	44-44	ಜ್ಯೇಷ್ಠ	39-14	25
9	ಬುಧ	ಚತು	50-11	ಮೂಲ	45-48	26
10	(2)ಗುರು	ಅಮಾ	55-7	ಪೂಷಾ	51-53	27
11	(3)ಶುಕ್ರ	ಪಾಡ್ಯ	60	ಉಷಾ	57-14	28

(1) ಮಳೆನಕ್ಷತ್ರ-ಪೂರ್ವಾಷಾಢ ೪ ನೆಯಪಾದ. (2) ಮಳೆನಕ್ಷತ್ರ-ಉತ್ತರಾಷಾಢ ೧ ನೆಯಪಾದ, ಸರ್ವತ್ರಾಮಾವಾಸ್ಯ, ಮಾರ್ಗಶಿರ ಲಕ್ಷ್ಮೀವ್ರತಂ, ಎಳ್ಳಮಾವಾಸ್ಯೆ ಪ್ರಯುಕ್ತ ತೀರ್ಥಹಳ್ಳಿಯಲ್ಲಿ ತುಂಗಾನದೀ ಸ್ನಾನ. (3) ತೀರ್ಥಹಳ್ಳಿಯಲ್ಲಿ ರಾಮೇಶ್ವರಸ್ವಾಮಿ ರಥಃ

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಸಾರಾ ಪರಮಾಧಿಕರಾಜಮಂಡಲಹಿತೈಷಾ | ಘನಪಥಕೃಶಾವತಾರಾ ಪಶ್ಯಜ್ಜನಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋತ್ರಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೇತ್ತಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಜನವರಿ ತಾರೀಖು ೧೨ ನೆಯ ಶನಿವಾರ [ಸಂಚಿಕೆ ೨

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
...ಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
...೮ ಲವಿದ್ಯಾ	೦—೪—೦	೦—೯—೦
...ರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ 1/4 ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರು ಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮದ್ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮದ್ಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಂಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಸ್. ಚೆನ್ನಪ್ಪ,

ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

14

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½" × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5" × 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್‌ಗಟ್ಟಲೆ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0. 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಚ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಹದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಮಣಿಯಾರ್ಡರ್ ರವಾನಿಸುವ ವಿಳಾಸ—

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[50—9]

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ” ಆಯುರ್ವೇದೀಯ ಸಿದ್ಧೌಷಧಗಳು.

ಬಂದ ಬಳಿಕ ಪೇಚಾಡುವುದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸರ್ವೋತ್ತಮವಾದ ಉಪಾಯವು ಲೋಕಾಮಯಹರ ಕಸ್ತೂರಿಮಾತ್ರೆಗಳೆಂಬುದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲದೊಡನಾಗಲಿ, ಹಾಗೇ ಆಗಲಿ ೧-೨ ನ್ನು ಸೇವಿಸುತ್ತಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ನೀರುಗಳ ಕೆಡತನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವು, ನೆಗಡಿ, ಕೆಮ್ಮಲು, ಸೀತವಾತ, ಜ್ವರ, ಚಳಿಜ್ವರ, ಅಜೀರ್ಣದ ಭೇದಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ, ಮಲಬದ್ಧ, ಪ್ಲೇಗು ಜ್ವರ, ಇನ್‌ಫ್ಲೂಯಂಜ, ರಕ್ತಹೀನತೆ, ದುರ್ಬಲ ಇವುಗಳನ್ನೂ, ದೊಡ್ಡವರ ಜ್ವರ, ಚಳಿಜ್ವರ, ಕೆಮ್ಮಲು, ಗೂರಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದಗಳು ಹಿಡಿತ ಮಲಬದ್ಧ, ಹಸಿವಿಲ್ಲದಿರುವಿಕೆ, ಬಲಹೀನತೆ ಇನ್ನೂ ಅನೇಕ ರೋಗಗಳನ್ನೂ ಗುಣಪಡಿಸುತ್ತವೆ.

ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ. ವ್ಯಾಯಾಮವನ್ನು ಮಾಡಲವಕಾಶವಿಲ್ಲದವರಿಗೂ ಗೋಷಾಸ್ತ್ರೀಯರಿಗೂ ಆರೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರಿವಿಗಿರುವ ಸೀಸೆ 1 ಕ್ಕೆ 0—4—0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ 8 ಆಣೆ, 6 ಕ್ಕೆ 1—8—0 ರೂಪಾಯಿ. 12 ಕ್ಕೆ 2—13—0 ರೂಪಾಯಿ 25 ಕ್ಕೆ 5—3—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

“ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ”,
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡ್ಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50—12] ಪೋ. ಬಾ. ೨೧೦, ಮದರಾಸು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆ ಜವುಳಿ.

ರೇಶ್ಮೆವಸ್ತ್ರ—1 ನೇ ನಂ.	ತೊಲ 1ಕ್ಕೆ 0—8—0
ರೇಶ್ಮೆಮೊಗುಟ—1 ನೇ ನಂ.	ತೊಲ 1ಕ್ಕೆ 0—9—6
ರೇಶ್ಮೆ ಕೈವಸ್ತ್ರ—1 ಕ್ಕೆ 0—11—0	ಡಜನ್ 1ಕ್ಕೆ 7—14—0

ಒಂದುಸಲ ತರಿಸಿ ನೋಡಿರಿ. ಮಾಲಿನಲ್ಲಿ ಮಿಷ್ಟೀಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಚಾರ್ಜು ಹಣ ವಾಪಸು ಕೊಡುವೆವು.

ನಮ್ಮ ಅಡ್ರಸ್—

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ,

ರೇಶ್ಮೆ ಜವುಳಿ, ವ್ಯಾಪಾರಿಗಳು,

ಮೊಳಕಾಲ್ಮೂರು, ಚಿತ್ರದುರ್ಗ ಡಿ||

[50—33]

AUCTION SALE.

Under Power of Attorney executed by Mr. T. P. Kumaraswamy (the mortgagor) appointing the Bank of Mysore Ltd., Mysore (Mortgagees) as his Attorney to sell the under-mentioned properties on his behalf the Bank of Mysore Ltd., Mysore will sell the said properties by Public Auction on Sunday the 27th Jan. 1929 from 8 A. M. to 11 A. M. and 3 P. M. to 5. P. M. on the spot subject to the following conditions :—

1. The sale is subject to confirmation by Head Office of the Bank at Bangalore.
2. One-tenth of the final bid amount to be paid by the person whose bid is accepted immediately and the balance within a fortnight of the date of sale.
3. The conveyance and registration charges to be borne by the purchaser.
4. The Bank reserves to itself the right to accept or reject any offers without assigning any reasons therefor.
5. The Bank takes no responsibility in regard to defects if any in the description of the properties or in the good title of Mr. T. P. Kumaraswamy to the properties sold by the Bank on his behalf.

V. L. Naranaiya

Manager, Bank of Mysore Ltd.,
Mysore.

Description of the Properties.

1. **Bungalow:** Situated in Chamaraja Mohalla, Prince of Wales Road Mysore, measuring East to West 120 feet and South to North 80 feet including backyard, and bounded on the East by conservancy lane, West by High Road, South by No 6 Cottage Site, and North by No 4 Cottage Site.

2. **Site:** Situated in Prince of Wales Road, Chamaraja Mohalla Mysore, measuring East to West 120 feet and North to South 84 feet and bounded on the East by conservancy lane, West by Prince of Wales Road, South by No 3 Cottage site and North by No 1 Cottage site.

3. Pieces and Parcel of land with compound wall and other hereditaments thereon known as and bearing Municipal No 1, Vanivilas Road, Mysore or as No 1 in the No V drainage area block No 87 Mysore City, bounded on the North by conservancy lane, on the South by Vanivilas Road, on the East by Banjamanicalet's land and trust property and on the West by Mission Bungalow, measuring from the North to South 245 plus 233/2 plus 245 plus 262½ East to West 64 plus 82/2.

(2) 64 plus 84½ feet and being 4045 1/3 sq. yds in extent of which 1000 sq. yds has been sold by the purchaser.

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಜನವರಿ ತಾ|| ೧೨ ನೆಯ ಶನಿವಾರ.

ಮೈಸೂರು ಸರ್ಕಾರವೂ ವೃತ್ತ ಪತ್ರಿಕೆಗಳೂ.

ಲೇಖನ ಸ್ವಾತಂತ್ರ್ಯವು ಸ್ವಾತಂತ್ರ್ಯಪ್ರಿಯರಾದ ಜನರಿಗೆ ಅತಿಪ್ರಿಯವಾದ ಹಕ್ಕಾಗಿರುವುದು. ಲೇಖನ ಪ್ರಯೋಗವು ಖಡ್ಗ ಪ್ರಯೋಗಕ್ಕಿಂತಲೂ ಅತಿಶಯವಾದುದು. ಪೃಥ್ವಿಯಲ್ಲಿ ಹುಟ್ಟುವ ಕಲಹಗಳೂ, ಘೋರವಾದ ಯುದ್ಧಗಳೂ, ಶಾಂತಿ ಸಂಧಾನಗಳೂ, ರಾಜ್ಯಸ್ಥಾಪನೆಯೂ, ಸಾಮ್ರಾಜ್ಯಪತನವೂ ಎಲ್ಲವೂ ಲೇಖನದ ಮಹಾತ್ಮೆಯಿಂದ ಜನಿಸುವುವು. ಆದರೆ ಲೇಖಕರು ಮಾತ್ರ ತಮ್ಮ ಪರಮ ಪವಿತ್ರವಾದ ಕರ್ತವ್ಯವನ್ನರಿತು ದೇಶದ ಹಿತಕ್ಕಾಗಿಯೂ ಪ್ರಜಾನೆಮ್ಮದಿಗಾಗಿಯೂ, ಕೃಷಿಮಾಡುವುದಾದರೆ ದೇಶೋನ್ನತಿಯ ಕಾರ್ಯಗಳು ಸುಲಲಿತವಾಗಿ ನಡೆಯುವುವು. ಹಾಗಲ್ಲದೆ ಲೇಖಣಿಯು ತಮ್ಮ ಹಸ್ತಗತವಾಗಿರುವುದರಿಂದ ಲೇಖಕರು ಸ್ವೇಚ್ಛಾನುಸಾರ ಪ್ರಲಪಿಸುವರಾದರೆ ದೇಶಕ್ಕೆ ಎಂದಿಗೂ ಹಿತವಾಗಲಾರದು. ಇಂತಹ ಲೇಖಕರನ್ನು ಹದ್ದುಬಸ್ತಿನಲ್ಲಿ ಇಡುವುದು ಪ್ರಜಾಹಿತೈಷಿಗಳಾದ ಸರ್ಕಾರದವರ ಬದ್ಧ ಕರ್ತವ್ಯವಾಗಿರುವುದು.

ನವೀನ ಕಾಲದ ನಾಗರಿಕ ದೇಶಗಳಲ್ಲಿ ಪ್ರಜಾಸಮ್ಮತಿಯ ಸರ್ಕಾರಗಳಿರುವುವು. ಪ್ರಭುತ್ವದ ಆಡಳಿತವು ಪ್ರಜಾಪ್ರತಿನಿಧಿಗಳಿಂದ ನಡೆಯುವುದು. ಈ ಪ್ರತಿನಿಧಿವರ್ಗದಲ್ಲಿ ಅನೇಕ ಕಕ್ಷಿಗಳಿರುವುವು. ಯಾವ ಕಕ್ಷಿಯವರು ಅಧಿಕಾರಕ್ಕೆ ಬಂದರೂ ಅವರು ತಮ್ಮ ಪಕ್ಷದ ಪತ್ರಿಕೆಗಳನ್ನು ಸ್ಥಾಪಿಸಿಕೊಂಡು ತಮ್ಮೊಳಗೆ ತಮ್ಮ ಆಳ್ವಿಕೆಯ ಧ್ಯೇಯವನ್ನು ಪುಷ್ಟೀಕರಿಸಿ ಪ್ರತಿ ಕಕ್ಷಿಯವರ ಪ್ರತಿಭಟನೆಯನ್ನು ಖಂಡಿಸುವರು. ಹಾಗಿಲ್ಲದೆ ದೇಶದಲ್ಲಿರುವ ಪತ್ರಿಕೆಗಳೆಲ್ಲವೂ ಸರ್ಕಾರದ ಮೇಲೆ ಕತ್ತಿ ಕಟ್ಟಿ ನಿಂತರೆ ಪ್ರಭುತ್ವದ ಕೆಲಸಗಳು ಕ್ಷಣಮಾತ್ರವೂ ನಡೆಯಲಾರವು. ಈ ಮರ್ಮವನ್ನು ಅರಿಯದ ಅಧಿಕಾರ ವರ್ಗದವರು ಪ್ರಳಯಾಂತಕರಾದ ಪ್ರಜಾ ವರ್ಗದ ನ್ಯಾಯವಾದಿಗಳಿಗೆ ಸುಲಭವಾಗಿ ತುತ್ತಾಗುವರು.

ಹಿಂದುಸ್ಥಾನದಲ್ಲಿ ರಾಜ್ಯಭಾರವು ಬಹುತರವಾಗಿ ವಿದೇಶೀಯರ ಹಸ್ತಗತವಾಗಿರುವುದು. ದೇಶದ ಉತ್ಪತ್ತಿಯೂ ಭೂಮ್ಯುತ್ಪನ್ನಗಳೂ, ಪ್ರಜಾಸಂಪತ್ತೂ, ಜನಗಳ ಆರ್ಥಿಕ ಸೌಖ್ಯವೂ ಪ್ರಭುತ್ವದವರ ಅಧೀನವಾಗಿರುವುವು. ಜನಗಳು ತಾವು ದುಡಿದು ಸರ್ಕಾರಕ್ಕೆ ಒಪ್ಪಿಸಿದ ಕಂದಾಯ, ಕಾಣಿಕೆಗಳಿಗೆ ಪ್ರತಿಫಲವಾಗಿ ದೇಶದಲ್ಲಿ ಶಾಂತಿಯನ್ನೂ, ಪ್ರಜಾಸೌಕರ್ಯಕ್ಕೆ ಸಾಧಕವಾದ ಸೌಲಭ್ಯಗಳನ್ನೂ ಅಪೇಕ್ಷಿಸುವರು. ಸರ್ಕಾರದವರು ತಮ್ಮ ಕರ್ತವ್ಯದಲ್ಲಿ ವಿಮುಖರಾದರೆ ಅವರನ್ನು ಎಚ್ಚರಿಸಿ ಜ್ಞಾನೋದಯವಾಗುವಂತೆ ಮಾಡುವುದು ಪ್ರಜೆಗಳ ಕರ್ತವ್ಯವು. ಇದಕ್ಕಾಗಿ ಪ್ರಜೆಗಳು ಪತ್ರಿಕೆಗಳನ್ನು ನಡೆಸುವರು. ಈ ಕಾರಣದಿಂದ ಪ್ರಜೆಗಳಿಗೆ ಲೇಖನ ಸ್ವಾತಂತ್ರ್ಯವು ಅತ್ಯಾವಶ್ಯಕವಾಗಿರುವುದು. ಈ ಸ್ವಾತಂತ್ರ್ಯವನ್ನು ಪ್ರಭುತ್ವದವರು ಕಿತ್ತುಕೊಳ್ಳುವುದಾದರೆ ಅಧಿಕಾರ ವರ್ಗದವರು ಲಂಗು ಲಗಾಮು ಇಲ್ಲದೆ ಸ್ವೇಚ್ಛಾಪ್ರವರ್ತಕರಾದರೂ ಅವರನ್ನು ದಂಡಿಸುವವರೊಬ್ಬರಿರುವುದಿಲ್ಲ. ಪ್ರಜಾಪರಿಪಾಲನೆಯು ಸಮರ್ಪಕವಾಗಿ ನಡೆಯಲು ಅವಕಾಶವಿರುವುದಿಲ್ಲ. ಜನಗಳಲ್ಲಿ ಅಸಂತುಷ್ಟಿಯೂ ಅಸಮಾಧಾನವೂ ಜನಿಸಿ ಪ್ರಜಾ ವರ್ಗದವರು ಗುಣಗುಟ್ಟುವ ಶೋಚನೀಯ ಸ್ಥಿತಿಯು ಪ್ರಾಪ್ತವಾಗುವುದು. ಒಟ್ಟಿನಲ್ಲಿ ಜನಾಂಗಾಭ್ಯುದಯವೂ, ದೇಶದ ಏಳ್ಗೆಯೂ ಮೂಲೆಗೊತ್ತರಿಸಲ್ಪಟ್ಟು ಐಕ್ಯಮತ್ಯದಿಂದಲೂ ಸೌಹಾರ್ದದಿಂದಲೂ ಮುಂಬರಿದ ಜನಾಂಗಗಳಿಗೆ ಅಡಿಯಾಳುಗಳಾಗಿ ಪರದಾಸ್ಯದ ಕಿರುಕುಳವನ್ನು ಅನುಭವಿಸುವ ದುಃಸ್ಥಿತಿಯು ಪ್ರಾಪ್ತವಾಗುವುದು. ಅಂದಬಳಿಕ ಲೇಖನ ಸ್ವಾತಂತ್ರ್ಯವು ಪ್ರಜೆಗಳಿಗೆ ಪ್ರಾಣಕ್ಕಿಂತಲೂ ಅತಿಶಯವಾದ ಪ್ರಿಯವಸ್ತುವೆಂದು ಹೇಳಲವಶ್ಯವಿರುವುದಿಲ್ಲ.

ಹಿಂದುಸ್ಥಾನದ ಸಾಮ್ರಾಜ್ಯ ಸರ್ಕಾರದವರು ವಿದೇಶೀಯರಾದುದರಿಂದ ಭಾರತೀಯರ ಸ್ವಾತಂತ್ರ್ಯದ ಮೇಲೆ ನಾನಾ ವಿಧವಾದ ನಿರ್ಬಂಧಗಳನ್ನೂ, ನಿಬಂಧನೆಗಳನ್ನೂ ವಿಧಿಸಿರುವರು. ಇವುಗಳಲ್ಲಿ ವಾಕ್‌ಸ್ವಾತಂತ್ರ್ಯವೂ, ಲೇಖನ ಸ್ವಾತಂತ್ರ್ಯವೂ ಬಹುಮಟ್ಟಿಗೆ ಪೆಟ್ಟು ತಿಂದಿರುವುವು. ಆದರೆ ದೇಶೀಯ ಸಂಸ್ಥಾನಗಳಲ್ಲಿ ಪ್ರಭುತ್ವವು ದೇಶೀಯ ರಾಜರುಗಳಿಂದ ದೇಶೀಯರ ಹಿತಕ್ಕಾಗಿಯೇ ನಡೆಯಬೇಕಾದುದು ಸಹಜವಾಗಿರುವುದರಿಂದ ಪ್ರಭುತ್ವದವರು ಪ್ರಜಾಹಿತೈಷಿಗಳಾಗಿ ಪ್ರಜಾಸಮ್ಮತಿಯಿಂದ ಪ್ರಭುತ್ವವನ್ನು ನಡೆಸಿದರೆ ಪ್ರಭುತ್ವದವರಲ್ಲಿಯೂ, ಪ್ರಜೆಗಳಲ್ಲಿಯೂ ಪರಸ್ಪರ ಪ್ರೀತಿ ಅನುರಾಗವೂ, ಸೌಹಾರ್ದವೂ ನೆಲೆಗೊಳ್ಳುವುವು. ಹಾಗಿಲ್ಲದಿದ್ದರೆ ಪ್ರಜೆಗಳಲ್ಲಿ ವೈಮನಸ್ಯವುಂಟಾಗಿ ನಾನಾ ವಿಧವಾದ ಕ್ಲೇಶಗಳು ಪ್ರಾಪ್ತವಾಗುವುವು.

ಮೈಸೂರು ಸರ್ಕಾರದವರು ಕಳೆದ ಅರ್ಧ ಶತಮಾನದಿಂದ ನವೀನ ಕಾಲದ ನಾಗರಿಕ ಪ್ರಭುತ್ವ ಪದ್ಧತಿಗಳನ್ನನುಸರಿಸಿ ರಾಜ್ಯಭಾರವನ್ನು ನಿರ್ವಹಿಸುತ್ತಿರುವರು. ಪ್ರಜೆಗಳ ಹಿತವನ್ನೇ ಸದಾ ಧ್ಯಾನದಲ್ಲಿಟ್ಟು ಪ್ರಜಾಸಮ್ಮತಿಯಿಂದ ಕಾಯಿದೆ ಕಟ್ಟಲೆಗಳನ್ನು ವಿಧಾಯಕ ಮಾಡುವರು. ಪ್ರಜೆಗಳ ಅಹವಾಲುಗಳನ್ನು ಕಿವಿಗೊಟ್ಟು ಕೇಳಿ ನಿವಾರಣೋಪಾಯಗಳನ್ನು ತ್ವರಿತದಿಂದ ನಡೆಸುವರು. ಈ ಕಾರಣದಿಂದ ಮೈಸೂರು ಮಾದರಿ ಸಂಸ್ಥಾನವೆಂಬದಾಗಿಯೂ ಇಲ್ಲಿನ ಪ್ರಭುತ್ವವು ಮಾದರಿಯ ಪ್ರಭುತ್ವವೆಂಬದಾಗಿಯೂ ಪ್ರಖ್ಯಾತಿಗೊಂಡಿರುವುದು. ಸಂಸ್ಥಾನದಲ್ಲಿರುವ ವೃತ್ತಪತ್ರಿಕೆಗಳು ಆದಿಯಿಂದಲೂ ದೇಶದ ಹಿತವನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಳ್ಳದೆ ಆಯಾ ಕೋಮುಗಳ ಪುರೋಭಿವೃದ್ಧಿಯನ್ನೇ ಬಯಸಿ ತದನುಸಾರವಾಗಿ ಲೇಖಗಳನ್ನು ಬರೆಯುತ್ತಿರುವುದು ಶೋಚನೀಯವೇ ಸರಿ. ಹೀಗಿರುವಲ್ಲಿ ಇಂತಹ ಪತ್ರಿಕೆಗಳ ಮೇಲೆ ಸರ್ಕಾರದವರು ಕೆಲನಿಬಂಧನೆಗಳನ್ನು ವಿಧಿಸುವುದು ಆವಶ್ಯಕವಾಯಿತು. ತಮ್ಮ ಉತ್ತರವಾದಿತ್ವವನ್ನೂ ಪವಿತ್ರ ಧ್ಯೇಯವನ್ನೂ ಅರಿತ ಲೇಖಕರಿಗೆ ಸ್ವಾತಂತ್ರ್ಯವೆಂಬುದು ಅಮೂಲ್ಯವಾದುದು. ಮಹತ್ವವುಳ್ಳ ಈ ಸ್ವಾತಂತ್ರ್ಯವನ್ನು ಅವರು ದೇಶೋನ್ನತಿಗಾಗಿಯೂ, ಜನಾಂಗಾಭ್ಯುದಯಕ್ಕಾಗಿಯೂ ವಿನಿಯೋಗಿಸುವರು. ಹಾಗಿಲ್ಲದೆ ಲೇಖಕರು ತಮ್ಮ ಕೋಮಿನವರು ಮಾತ್ರ ಮುಂದುರಿಯಬೇಕೆಂದೂ ಸಕಲ ಸಂಪತ್ತೂ, ಸೌಲಭ್ಯಗಳೂ ತಮಗೇ ಲಭಿಸಬೇಕೆಂಬದಾಗಿಯೂ, ಇತರ ಕೋಮಿನವರು ಚಿರಕಾಲವೂ ದಾಸ್ಯದಲ್ಲಿರಬೇಕೆಂಬದಾಗಿಯೂ ಅಭಿಮತವುಳ್ಳವರಾಗಿ ತದನುಸಾರ ಲೇಖಗಳನ್ನು ಬರೆಯುವುದಾದರೆ ಸರ್ಕಾರದವರು ಲೇಖನ ಸ್ವಾತಂತ್ರ್ಯವನ್ನು ಕಸುಕೊಳ್ಳುವುದು ಅವಶ್ಯವಾಗುವುದು. ಅದರಲ್ಲಿಯೂ ಪತ್ರಿಕಾ ಸಂಪಾದಕರು ಸರ್ಕಾರದವರ ಮೇಲೆಯೂ, ಪ್ರಭುಗಳ ಮೇಲೆಯೂ ಅಲ್ಲದ ಸಲ್ಲದ ದೋಷಗಳನ್ನು ಆರೋಪಿಸಿ ಅಹರ್ನಿಶಿಯೂ ಜನಗಳಲ್ಲಿ ಪ್ರಭುತ್ವದವರ ಮೇಲೆ ದ್ವೇಷಾಸೂಯೆಗಳು ಹುಟ್ಟುವಂತೆ ಮಾಡುವುದಾದರೆ ರಾಜ್ಯಕ್ಕೆ ಹಾನಿಯುಂಟಾಗುವುದು. ಇಂತಹ ಸಂದರ್ಭಗಳಲ್ಲಿ ಪ್ರಭುತ್ವದವರು ಇಂತಹ ಸಂಪಾದಕರನ್ನು ಹದ್ದುಬಸ್ತಿನಲ್ಲಿಡಬೇಕಾಗುವುದು.

ಕಳೆದವಾರ ಮೈಸೂರು ಸರ್ಕಾರದವರು ಕೆಲವು ವೃತ್ತಪತ್ರಿಕೆಗಳನ್ನು ನಡೆಸಕೂಡದೆಂದು ಅಪ್ಪಣೆಮಾಡಿ ನಿಲ್ಲಿಸಿಬಿಟ್ಟರು. ಈ ಪತ್ರಿಕೆಗಳಲ್ಲಿ ಬಹುಕಾಲದಿಂದಲೂ ಸರ್ಕಾರದಮೇಲೆ ಜನಗಳಲ್ಲಿ ವೈಮನಸ್ಯ ಹುಟ್ಟುವಂತಹ ಲೇಖಗಳು ಬರೆಯಲ್ಪಡುತ್ತಿದ್ದುವು. ಸರ್ ಕಾಂತರಾಜೆ ಅರಸಿನವರ ದಿವಾನ್‌ಗಿರಿಯಲ್ಲಿ ಅವರು ರಾಜವಂಶದಲ್ಲಿ ಜನಿಸಿದವರಾದಾಗ್ಯೂ ಅವರನ್ನು ಎಡೆಬಿಡದೆ ಮನಸ್ವಿ ಹೀಯಾಳಿಸಿ ನಾನಾವಿಧವಾಗಿ ದೂಷಿಸಿದುದಲ್ಲದೆ ಅವರ ವಂಶದವರನ್ನೂ ಕೂಡ ಯಾವ ಪವಿತ್ರತೆಯೂ ಇಲ್ಲದೆ ತುಚ್ಛೀಕರಿಸಿದರು. ಆ ತಪ್ಪಿತಕ್ಕಾಗಿ ಈ ಪತ್ರಿಕಾಕರ್ತರು ನಮ್ಮನ್ನಾಳುವ ಮಹಾಸ್ವಾಮಿಗಳು ರಾಜಋಷಿಗಳಲ್ಲದೆ ಕೋಪಿಷ್ಠರಾಗಿದ್ದಪಕ್ಷದಲ್ಲಿ ಶಿರಚ್ಛೇದನೆಯನ್ನು ಮಾಡಿಸದಿದ್ದರೂ ಗಡೀಪಾರಿನ ಶಿಕ್ಷೆಯನ್ನಾದರೂ ಮಾಡುತ್ತಿದ್ದರು. ಆದರೆ ಮಹಾಸ್ವಾಮಿಗಳು ದಯಾಳುಗಳಾದುದರಿಂದ ಇದುವರೆಗೂ ಈ ಪತ್ರಿಕೆಗಳಮೇಲೆ ದಂಡಪ್ರಯೋಗಮಾಡದೆ ತಟಸ್ಥರಾಗಿದ್ದರು. ಈ ವಿಧವಾದ ಕೃಪೆಯನ್ನು ಸರ್ಕಾರದ ದೌರ್ಬಲ್ಯವೆಂದು ತಿಳಿದುಕೊಂಡು ಪತ್ರಿಕಾಸಂಪಾದಕರು ಸ್ವೇಚ್ಛಾನುಸಾರ ಲೇಖನಗಳನ್ನು ಬರೆಯಲಾರಂಭಿಸಿದರು. ಇದನ್ನು ನೋಡಿ ಸರ್ಕಾರದವರು ಈ ಪತ್ರಿಕೆಗಳಿಗೆ ಎಷ್ಟೋಸಾರಿ ಇವರಿಗೆ ಎಚ್ಚರಿಕೆಯನ್ನು ಕೊಟ್ಟಾಗ್ಯೂ ಜ್ಞಾನೋದಯವಾಗದಿರಲು ಸರ್ಕಾರದವರು ಬಾಯಿಬೀಗ ಹಾಕುವುದೊಂದೇ ನಿವಾರಣೋಪಾಯವೆಂದು ಕಂಡುಬಂದುದರಿಂದ ಈ ಪತ್ರಿಕೆಗಳನ್ನು ಇನ್ನುಮುಂದೆ ನಡೆಸಲಾಗದೆಂದು ಅಪ್ಪಣೆಮಾಡಿರುವರು. ಇದರಿಂದ ದೇಶಕ್ಕೆಹಿತವಾಗುವುದೆಂಬ ಕಾಂಕ್ಷೆಯಿಂದ ಸರ್ಕಾರದವರು ಈರೀತಿ ಅಪ್ಪಣೆಕೊಟ್ಟಿರುವರಾದುದರಿಂದ ಪ್ರಭುತ್ವದವರ ವರ್ತನೆಯು ಶ್ಲಾಘನೀಯವಾಗಿರುವುದು. ಇಂತಹ ಅಪರಾಧವು ನಮ್ಮಲ್ಲಿ ತೋರಿಬರುವುದಾದರೆ ನಮಗೂ ಇದೇವಿಧವಾದ ನಿಬಂಧನೆಯು ಅನ್ವಯಿಸುವುದರಿಂದ ನಮ್ಮ ಸಹೋದ್ಯೋಗಿಗಳಿಗಾ ಶಿಕ್ಷೆಗಾಗಿ ನಾವು ಸಂತೃಪ್ತವಾದೆವೆಂದು ತಿಳಿಯಲಾಗದು.

ಇದು ಶಾಂತಿಸಂಧಾನವೋ ?

ಕೆಲ ವಿಘ್ನಸಂತೋಷಿಗಳಿಂದ ಹುಡುಗಾಟಿಕೆಯು ಮಹಾನರ್ಥಕರವಾಗಿ ಮಾಡಲ್ಪಟ್ಟುದರಿಂದ ದೇಶದಲ್ಲುಂಟಾಗಿರುವ ಅಶಾಂತಿಯನ್ನು ಹೋಗಲಾಡಿಸಿ ಜನರಲ್ಲಿ ಪರಸ್ಪರ ಸೌಹಾರ್ದವನ್ನುಂಟುಮಾಡಬೇಕೆಂಬ ಸಂಕಲ್ಪದಿಂದ ನಮ್ಮ ಪ್ರಭುತ್ವದವರು ಗೊಂದಲದಲ್ಲಿ ಭಾಗಿಗಳಾಗಿದ್ದ ಅಪರಾಧಕ್ಕಾಗಿ ಹಿಂದುಗಳಮೇಲೆ ಹೂಡಿದ್ದ ವಿವಾದಗಳನ್ನು ಹಿಂದಕ್ಕೆ ತೆಗೆದುಕೊಂಡುಬಿಟ್ಟರು. ಆದರೆ ಮುಸಲ್ಮಾನರ ಮೇಲಿನ ಮೊಕದ್ದಮೆಗಳು ಮಾತ್ರ ಎಂದಿನಂತೆಯೇ ನಡೆಯುತ್ತಿರುವುವು. ಖಾಸಗಿ ಜನಗಳು ಹೂಡಿದ ಮೊಕದ್ದಮೆಗಳು ಸಹ ನಡೆಯುತ್ತಲಿರುವುವು. ಇದರಿಂದ ಸರ್ಕಾರದವರು ಯೋಚಿಸಿದಂತೆ ಶಾಂತಿಸ್ಥಾಪನೆಯಾಗುವ ಸಂಭವತೋರುವುದಿಲ್ಲ.

ವಿಶ್ವೇಶ್ವರಯ್ಯ ವಿಚಾರಣಾ ಸಮಿತಿಯು ಬೆಂಗಳೂರು ಗಲಭೆಗೆ ಮೂಲಕಾರಣವನ್ನು ಕಂಡುಹಿಡಿಯುವುದಕ್ಕಾಗಿ ವಿಚಾರಣೆಯನ್ನು ಪ್ರಾರಂಭಿಸಿದಾಗ ದೇಶ ಹಿತೈಷಿಗಳಾದವರು ತಮಗೆ ತಿಳಿದ ವಿಚಾರವನ್ನು ಸಮಿತಿಯವರಿಗೆ ಬಹಿರಂಗವಾಗಿ ತಿಳಿಸುವುದರಿಂದ ಜನಗಳಲ್ಲಿ ವೈಮನಸ್ಯವೂ, ದ್ವೇಷಾಸೂಯೆಗಳೂ ಹುಟ್ಟಬಹುದಾದುದರಿಂದ ತಮ್ಮ ಸಾಕ್ಷ್ಯವನ್ನು ಗೋಪ್ಯದಲ್ಲಿ ಮಾತ್ರ ಹೇಳುವುದಾಗಿ ತಿಳಿಸಿದರು. ನಿಜಾಂಶವನ್ನು ತಿಳಿಯಬೇಕೆಂಬ ಕಾಂಕ್ಷೆಯಿಂದ ಸಮಿತಿಯವರು ಇದಕ್ಕೊಪ್ಪಿ ಕೆಲ ಸಾಕ್ಷಿಗಳ ಹೇಳಿಕೆಯನ್ನು ಗೋಪ್ಯದಲ್ಲಿ ತೆಗೆದುಕೊಂಡರು. ಈರೀತಿ ಹೇಳಿದ ವಿಚಾರಗಳು ಬಹಿರಂಗವಾಗದಂತೆ ಗೋಪ್ಯದಲ್ಲಿಡಬೇಕಾದುದು ಸರ್ಕಾರದವರ ಮತ್ತು ಸಮಿತಿಯವರ ಬದ್ಧ ಕರ್ತವ್ಯವಾಗಿದ್ದಿತು. ಆದಾಗ್ಯೂ ಸಾಕ್ಷಿಹೇಳಿದ ಕೊಂಚಕಾಲದಲ್ಲಿಯೇ ಈ ಗೋಪ್ಯವಿಚಾರಗಳು ಹೊರಬಿದ್ದು ಅದಕ್ಕೆ ಸಂಬಂಧಪಟ್ಟ ಜನಗಳು ಗೋಪ್ಯದಲ್ಲಿ ಸಾಕ್ಷಿಹೇಳಿದವರಮೇಲೆ ಮಾನನಷ್ಟದ ಮೊಕದ್ದಮೆಗಳನ್ನು ಹೂಡಿದರು, ಮತ್ತು ನಾನಾವಿಧವಾದ ತೊಂದರೆಗಳನ್ನು ಕೊಡಲುಪಕ್ರಮಿಸಿರುವರು. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ದೇಶಹಿತಕ್ಕಾಗಿ ಸರ್ಕಾರದವರಿಗೆ ಸಹಾಯಮಾಡಲು ಮುಂದೆಬಂದ ಸಾಕ್ಷಿಗಳಿಗೆ ಸರ್ಕಾರದವರು ಯಾವ ರಕ್ಷಣೆಯನ್ನೂ ಕೊಡದೆ ಪ್ರತಿಪಕ್ಷಿಗಳಕೈಗೆ ಅವರನ್ನು ಹಿಡಿದುಕೊಟ್ಟಂತೆ ಮಾಡಿಬಿಟ್ಟರು.

ಈಗ ಮಹತ್ತರವಾದ ಒಂದು ಅಚಾತುರ್ಯ ನಡೆದಿರುತ್ತದೆ. ವಿಶ್ವೇಶ್ವರಯ್ಯ ಸಮಿತಿಯವರು ಮಾಡಿರುವ ವರದಿಯನ್ನು ಸರ್ಕಾರದವರು ಪರಿಶೀಲಿಸಿ ಅದರಮೇಲೆ ತಮ್ಮ ಅಪ್ಪಣೆಯನ್ನು ಕೊಡುವುದರೊಳಗಾಗಿ ವರದಿಯು ಕೆಲ ಪತ್ರಿಕೆಗಳಿಗೆ ತಿಳಿದು ಅವುಗಳಲ್ಲಿ ವಿಶದವಾಗಿ ಪ್ರಕಟವಾಗುತ್ತಿರುವುದು. ನ್ಯಾಯವಿಧಾಯಕಸಭೆಯಲ್ಲಿ ಪ್ರಜಾಪ್ರತಿನಿಧಿಗಳು ಸದರಿ ವರದಿಯನ್ನು ಮಹಾಜನಗಳ ಅವಗಾಹನೆಗಾಗಿ ದೊರಕುವಂತೆ ಮಾಡಬೇಕೆಂಬುದಾಗಿಯೂ, ಹಾಗಿಲ್ಲದಪಕ್ಷದಲ್ಲಿ ಪ್ರಜಾಪ್ರತಿನಿಧಿಸಭೆಯ ಸದಸ್ಯರಿಗೂ ನ್ಯಾಯವಿಧಾಯಕಸಭೆಯ ಸದಸ್ಯರಿಗೂ ವರದಿಯ ಪ್ರತಿಗಳು ಕೊಡಲ್ಪಡುವಂತೆಯಾದರೂ ಮಾಡಬೇಕೆಂಬುದಾಗಿಯೂ ಕೇಳಿಕೊಂಡಾಗ ವರದಿಯು ಸರ್ಕಾರದವರ ಉಪಯೋಗಕ್ಕಾಗಿಮಾತ್ರ ಬರೆಯಲ್ಪಟ್ಟಿರುವುದೆಂಬುದಾಗಿಯೂ ಅದರಲ್ಲಿರುವ ವಿಚಾರಗಳು ಪ್ರಕಟಿಸಲ್ಪಡಲು ಯೋಗ್ಯವೇ ಅಲ್ಲವೇ ಎಂಬುದನ್ನು ಪರಿಶೀಲಿಸುವವರೆಗೂ ಯಾವ ಅಪ್ಪಣೆಯನ್ನೂ ಮಾಡಲಾಗುವುದಿಲ್ಲವೆಂಬದಾಗಿಯೂ ಅಪ್ಪಣೆ ಕೊಡಿಸಿದರು. ಈಗ ನಡೆದಿರುವ ಅಚಾತುರ್ಯದಿಂದ ಗುಟ್ಟು ರಟ್ಟಾಗಿ ನಿಜಾಂಶವು ಹೇಗಿರುವುದೆಂಬುದನ್ನು ಅರಿಯದ ಮಹಾಜನಗಳು ಪತ್ರಿಕೆಗಳಲ್ಲಿ ಬರುವ ವರದಿಯ ಸುದ್ದಿಯನ್ನು ಆತುರದಿಂದ ಅವಲೋಕಿಸುತ್ತಿರುವರು.

ಪ್ರಭುತ್ವದವರು ಗೋಪ್ಯದಲ್ಲಿಡಬೇಕೆಂಬ ವಿಚಾರವು ಹೊರಬಿದ್ದುದರಿಂದ ಪ್ರಭುತ್ವಕ್ಕಾಗುವ ಕಷ್ಟನಷ್ಟಗಳಿಗೂ, ರಾಜ್ಯಕ್ಕಾಗುವ ಹಾನಿಗೂ ಪರಿಮಿತಿಯಿಲ್ಲದಿರುವುದು. ಇಂತಹ ವಿಚಾರಗಳಲ್ಲಿ ಅಧಿಕಾರಿಗಳು ಶ್ರದ್ಧೆಯನ್ನು ವಹಿಸಿ ಗೋಪ್ಯವಿಚಾರವು ಹೊರಬೀಳಲು ಕಾರಣಕರ್ತರಾರೆಂಬುದನ್ನು ಕಂಡುಹಿಡಿದು ಅವರಲ್ಲಿಟ್ಟಿದ್ದ ನಂಬಿಕೆಗೆ ದ್ರೋಹಮಾಡಿದುದಕ್ಕಾಗಿ ಅವರನ್ನು ತಕ್ಕರೀತಿಯಲ್ಲಿ ಶಿಕ್ಷಿಸುವುದು ಅತ್ಯಾವಶ್ಯಕವು. ಹಾಗೆ ಮಾಡದಿದ್ದಪಕ್ಷದಲ್ಲಿ ಸರ್ಕಾರದ ದರ್ಪಕ್ಕೂ ಗೌರವಕ್ಕೂ ಕುಂದಕಬರುವುದು; ಜನಗಳಲ್ಲಿ ಅಸಮಾಧಾನವುಂಟಾಗಿ ಹೆಚ್ಚು ಅನರ್ಥಕ್ಕೆ ಕಾರಣವಾಗುವುದು. ಇಷ್ಟಕ್ಕೆ ಪ್ರಭುತ್ವದವರು ಅವಕಾಶಕೊಡದೆ ಈ ವಿಚಾರವನ್ನು ಆಮೂಲಾಗ್ರವಾಗಿ ಕಂಡುಹಿಡಿದು ತಕ್ಕಬಂದೋಬಸ್ತನ್ನು ಮಾಡುವರೆಂದು ಮಹಾಜನಗಳು ನಿರೀಕ್ಷಿಸುತ್ತಿರುವರು.

ದೇಶದಲ್ಲಿ ಶಾಂತಿಯು ಚಿರಸ್ಥಾಯಿಯಾಗಬೇಕಾದರೆ ಜನಗಳಲ್ಲಿ ಉಂಟಾಗಿರುವ ವೈಮನಸ್ಯವು ನಿವಾರಣೆಯಾಗಬೇಕು ; ವರ್ಣವೈಷಮ್ಯಗಳು ನಿರ್ಮೂಲವಾಗಬೇಕು ; ತಪ್ಪಿತಸ್ಥರಾದವರನ್ನು ನ್ಯಾಯಸ್ಥಾನಗಳಲ್ಲಿ ವಿಚಾರಣೆಗೆ ಗುರಿಮಾಡಿ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕು. ದೇಶಹಿತಕ್ಕಾಗಿ ಸಾಕ್ಷ್ಯವನ್ನು ಕೊಟ್ಟ ದೊಡ್ಡಮನುಷ್ಯರುಗಳನ್ನು ನ್ಯಾಯಸ್ಥಾನಕ್ಕೆ ಎಳೆಯಲು ಅವಕಾಶವಿಲ್ಲದಂತೆ ಮಾಡಬೇಕು. ಹಾಗಿಲ್ಲದಿದ್ದರೆ ಜನಗಳಲ್ಲಿ ಸೌಹಾರ್ದವು ಎಂದಿಗೂ ಉಂಟಾಗಲಾರದು. ಸರ್ಕಾರದವರು ಇದುವರೆಗೂ ಮಾಡುತ್ತಲಿರುವ ಕಾರ್ಯಕಲಾಪಗಳು ಶಾಂತಿಸ್ಥಾಪನೆಗಾಗಿಯೇ ಎಂದು ಹೇಳಲ್ಪಡುತ್ತಿರುವುದಾದರೂ ವಸ್ತುತಃ ಪರಿಶೀಲಿಸಿದರೆ ದೇಶದಲ್ಲಿ ದ್ವೇಷಾಸೂಯೆಗಳು ವೃದ್ಧಿಯಾಗುತ್ತಿರುವುವು. ಶೋಚನೀಯವಾದ ಈ ಸ್ಥಿತಿಗೆ ಕಾರಣವೇನೆಂಬುದನ್ನು ಪ್ರಭುತ್ವದವರೇ ಕಂಡುಹಿಡಿದು ಆವಶ್ಯಕವಾದ ಪ್ರಯತ್ನವನ್ನು ಮಾಡಿ ಜನಗಳಿಗೆ ಪ್ರಾಪ್ತವಾಗಬಹುದಾದ ಕಷ್ಟನಷ್ಟಗಳನ್ನು ತಪ್ಪಿಸುವುದು ಅತ್ಯಾವಶ್ಯಕವು. ಮುಖ್ಯವಾಗಿ ಗೋಪ್ಯದಲ್ಲಿ ಸಾಕ್ಷ್ಯವನ್ನು ಕೊಟ್ಟವರು ಸರ್ಕಾರಕ್ಕೆ ಸಹಾಯಮಾಡುವ ಅಭಿಲಾಷೆಯಿಂದ ಸಾಕ್ಷಿ ಹೇಳಲು ಒಪ್ಪಿದರೇ ವಿನಾ ಮತ್ತಾವ ಲಾಭಕ್ಕಾಗಲಿ ಪರರಮೇಲಿನ ಹಗೆಯಿಂದಾಗಲಿ ಹೇಳಿದವರಲ್ಲವಾದುದರಿಂದ, ಅಂತಹ ಸಾಕ್ಷಿಗಳಿಗೆ ಯಾವ ವಿಧವಾದ ಪ್ರತಿಫಲವನ್ನು ಕೊಡದಿದ್ದಾಗ್ಯೂ ಅವರ ಮಾನಮರ್ಯಾದೆಗಳಿಗೆ ಕುಂದುಂಟಾಗದಂತೆಯೂ, ನಿಷ್ಕಾರಣವಾಗಿ ಅವರಿಗೆ ಕಷ್ಟನಷ್ಟಗಳು ಸಂಭವಿಸದಂತೆಯೂ ಅವರನ್ನು ಸಂರಕ್ಷಿಸುವುದು ಸರ್ಕಾರದವರ ಬದ್ಧ ಕರ್ತವ್ಯವಾಗಿರುವುದು. ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದರ ಮೊದಲು ಪ್ರಭುತ್ವದವರು ಖಾಸಗಿ ಜನಗಳು ಮಾಡಿರುವ ಮೊಕದ್ದಮೆಗಳನ್ನೂ, ಮುಸಲ್ಮಾನರ ಮೇಲಿನ ಮೊಕದ್ದಮೆಗಳನ್ನೂ ಹಿಂದಕ್ಕೆ ತೆಗೆದುಕೊಳ್ಳುವ ಏರ್ಪಾಡನ್ನು ಮಾಡಿದ್ದಪಕ್ಷದಲ್ಲಿ ಜನರೊಳಗೆ ಬೆಂಗಳೂರು ಗಲಭೆಯಿಂದ ಉಂಟಾದ ವೈಮನಸ್ಯವು ಸಂಪೂರ್ಣವಾಗಿ ನಿರ್ಮೂಲವಾಗುತ್ತಿದ್ದಿತು. ಹೀಗೆ ಮಾಡದೆ ಇರುವುದರಿಂದ ಸರ್ಕಾರದವರ ಸ್ತುತ್ಯವಾದ ಶಾಂತಿಸಮಾಧಾನಪ್ರಯತ್ನವು ಹೇಗೆ ಫಲಕಾರಿಯಾಗುವುದೊ ನಮಗಂತು ತಿಳಿಯದುದಾಗಿದೆ.

ಮೊಗಲಾಯರ ಕಾಲದಲ್ಲಿ ಗೋರಕ್ಷಣೆ

ಮೊಗಲರ ಮೊದಲನೇ ದೊರೆಯಾದ ಬಾಬರನು ಸಾಯುವಾಗ್ಗೆ ಮರಣ ಶಾಸನವನ್ನು ಬರೆದು ಮಗನಾದ ಹುಮಾಯುನನಿಗೆ ಕೊಟ್ಟನು. ಈ ಶಾಸನದ ಎರಡು ಪ್ರತಿಗಳು ಈಗ ಭೂಪಾಲ್ ಸಂಸ್ಥಾನದ ಪುಸ್ತಕಭಂಡಾರದಲ್ಲಿ ಒಂದೂ, ಕೊಲ್ಲಾಪುರದ ರಾಜಾರಾಂ ಕಾಲೇಜಿನ ಅಧ್ಯಕ್ಷರಾದ ಬಾಲಕೃಷ್ಣರವರಲ್ಲೊಂದೂ ಇರುವುವು. ಇದರಿಂದ ತಿಳಿಯಬರುವುದೇನೆಂದರೆ—ಎಲೈ ಪುತ್ರನೇ ಭರತಖಂಡವು ಅನೇಕ ಮತಾವಲಂಬಿಗಳಿಂದ ತುಂಬಿರುವುದು. ದೇವರು, ಇಂತಹ ರಾಜ್ಯವನ್ನಾಳುವುದಕ್ಕೆ ನಿನಗೆ ಅನುಗ್ರಹಿಸಿದುದು ನಿನ್ನ ಪುಣ್ಯ ಪರಿಪಾಕವು. ಜಾತಿಮತ್ಸರವನ್ನು ನಿನ್ನ ಹೃದಯದಿಂದ ಹೊರದೂಡುವುದು ನಿನ್ನ ಪರಮಧ್ಯೇಯವಾಗಿರಬೇಕು. ನ್ಯಾಯ ವಿಮರ್ಶೆಯಲ್ಲಿ ಪ್ರತಿಯೊಬ್ಬನ ಮತಧರ್ಮಾನುಸಾರವಾಗಿಯೇ ತೀರ್ಮಾನವನ್ನು ಕೊಡಬೇಕು. ಗೋವಧೆಯನ್ನು ನಿಷೇಧಿಸುವುದರಿಂದ ಭಾರತೀಯರ ಹೃದಯವನ್ನು ಆಕರ್ಷಿಸಲು ಅತಿ ಸುಲಭೋಪಾಯವು. ಈ ವಿಧವಾದ ಮನೋಭಾವ ಪ್ರದರ್ಶನದಿಂದ ನಿನ್ನ ಪ್ರಜೆಗಳು ರಾಜಭಕ್ತಿವಿಶ್ವಾಸಗಳಿಂದ ನಿನ್ನನ್ನು ಮನಃಪೂರ್ವಕವಾಗಿ ಪ್ರೀತಿಸುವರು. ದೇವಾಲಯಗಳನ್ನೂ ಮಠಗಳನ್ನೂ ಆಶ್ರಮಗಳನ್ನೂ ನಾಶಮಾಡಬೇಡ. ನ್ಯಾಯ ವಿಮರ್ಶೆಯಲ್ಲಿ ಪ್ರಜೆಗಳಿಗೆ ಸಮ್ಮತಿಯಾಗುವ ರೀತಿಯಲ್ಲಿ ತೀರ್ಪನ್ನು ಕೊಡುವುದಾವಶ್ಯಕವು. ಇಸ್ಲಾಂ ಮತದ ಮಹತ್ವವು ಪ್ರಜೆಗಳ ಅನುರಾಗದಿಂದ ವೃದ್ಧಿಯಾಗುವಂತೆ ಖಡ್ಗಪ್ರಯೋಗದಿಂದ ಎಂದಿಗೂ ಆಗಲಾರದು. ಮುಸಲ್ಮಾನ ಮತಾವಲಂಬಿಗಳಲ್ಲಿರುವ ಷಿಯಾ ಮತ್ತು ಸುನ್ನಿ ಎಂಬ ಅಂತರ್ಭೇದವನ್ನು ಪುಷ್ಟೀಕರಿಸಬೇಡ. ಹಾಗಲ್ಲದಿದ್ದರೆ ಇಸ್ಲಾಂ ಮತವು ಬಲಗುಂದುವುದು. ಶರೀರದಲ್ಲಿರುವ ಚತುರ್ಭೂತಗಳಿಗನುಗುಣವಾಗಿ ನಿನ್ನ ಪ್ರಜೆಗಳನ್ನು ಚತುರ್ವಂಗಡಗಳಾಗಿ ವಿಭಜಿಸು. ರಾಜತಂತ್ರದಲ್ಲಿ ಅನುಭವ ಮಾಡಿಕೊಂಡು ಪ್ರಜಾಸಮ್ಮತಿಯಿಂದ ಪ್ರಭುತ್ವವನ್ನು ನಡೆಸಿದರೆ ನಿನ್ನ ಆಳ್ವಿಕೆಯು ನಿರಾತಂಕವಾಗಿ ನಡೆಯುವುದು.

ಒಳದೇಶದ ವೃತ್ತಾಂತಗಳು.

ಅರಮನೆ ಖಜಾನೆಯಲ್ಲಿ ಹಣವನ್ನು ದುರುಪಯೋಗಪಡಿಸಿದ ಅಪರಾಧಕ್ಕಾಗಿ ಶೆಷನ್ಸ್ ಜಡ್ಜಿಯವರಿಂದ ಕಾರಾಗೃಹವಾಸ ಶಿಕ್ಷೆಗೆ ಗುರಿಮಾಡಲ್ಪಟ್ಟ ಮೂವರಲ್ಲಿ ಮನ್ನಾರು ಲಕ್ಷ್ಮೀನಾರಾಯಣಶೆಟ್ಟರು ಚೀಫ್ ಕೋರ್ಟಿಗೆ ಅಪೀಲು ಮಾಡಿಕೊಂಡಿರುವಲ್ಲಿ ಅವರ ಶಿಕ್ಷೆಯು ಸ್ಥಿರಗೊಳಿಸಲ್ಪಟ್ಟಿತು.

ಪ್ರಸಿದ್ಧ ವರ್ತಕರೂ ಕಮಿಷನ್ ಏಜೆಂಟರೂ ಆದ ಮ|| ಬ್ರಹ್ಮಪ್ಪ ತವನಪ್ಪನವರ ಇವರು ಪ್ರಕಟಿಸಿರುವ ಬಹು ಸುಂದರವಾದ ಷೀಟ್ ಕ್ಯಾಲೆಂಡರನ್ನೂ, ರಾಜಧಾನಿಯ ಅಕ್ಕಿ ವ್ಯಾಪಾರಿಗಳಾದ ಮ|| ಎಂ. ಲಿಂಗಪ್ಪ ಅಂಡ್ ಸನ್ಸ್‌ರವರು ಮತ್ತು ರಾಜಧಾನಿಯ ಮಾಡರ್ನ್ ಕಮರ್ಷಿಯಲ್ ಏಜನ್ಸಿಯವರು ಪ್ರಕಟಿಸಿರುವ ಷೀಟ್ ಕ್ಯಾಲೆಂಡರುಗಳನ್ನು ಸಂತೋಷದಿಂದ ಸ್ವೀಕರಿಸಿರುತ್ತೇವೆ.

ಬೆಂಗಳೂರು ಅಡ್ವೊಕೇಟ್ ಮ|| ಎಲ್. ಎಸ್. ರಾಜುಯವರು ಬ್ಯಾರಿಸ್ಟರ್ ಮ|| ಬಿ. ನಾಗಪ್ಪನವರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ಹೂಡಿರುವ ವಿವಾದದ ವಿಚಾರಣೆಯು ಕಳೆದ ಸೋಮವಾರ ನಡೆದಿತು. ಮ|| ನಾಗಪ್ಪನವರು ಕೋರ್ಟಿಗೆ ಬಂದಿದ್ದರು. ಫಿರ್ಯಾದಿಪರ ಸಾಕ್ಷಿಗಾರರಾದ ವಿಶ್ವೇಶ್ವರಯ್ಯ ಕಮಿಟಿಯ ಸೆಕ್ರೆಟರಿ ಮಿ|| ನರೋನ್ಹಾಯವರು ಕಮಿಟಿಯ ಸಂಬಂಧವಾದ ವಿಚಾರವನ್ನು ಎವಿಡೆನ್ಸ್ ಆಕ್ಟ್ 123 ಮತ್ತು 124 ನೇ ಸೆಕ್ಷನ್ನುಗಳ ಪ್ರಕಾರ ಬಹಿರಂಗಪಡಿಸುವುದಿಲ್ಲವೆಂದು ಹೇಳಿದರು.

ಪ್ರಸಿದ್ಧ ಹಾರ್ಮೋನಿಯಂ ವ್ಯಾಪಾರಿಗಳಾದ ರಾಜಧಾನಿಯ ಮ|| ಎಂ. ಎಸ್. ಸಿದ್ದಪ್ಪ ಬ್ರದರ್ಸ್‌ರವರು ಪದ್ಧತಿ ಪ್ರಕಾರ ಪ್ರಕಟಿಸಿರುವ ೧೯೨೯ ರ ಷೀಟ್ ಕ್ಯಾಲೆಂಡರು ಈ ಪತ್ರಿಕೆಯ ಚಂದಾದಾರರಿಗೆಲ್ಲ ಉಚಿತವಾಗಿ ಹಂಚಿರುವುದಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ. ಅಲ್ಲದೆ ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿತವಾಗಿರುವ ಪ್ರಕಟನೆಯಲ್ಲಿ ಕನ್ನಡ ಡೈರಿ ಬೆಲೆಯಲ್ಲಿ 1 ಆಣೆ ಕಡಿಮೆ ಮಾಡಿ, ಈ ಪತ್ರಿಕಾ ಚಂದಾದಾರರಿಗೆ ವಿಕ್ರಯಿಸುವುದಾಗಿ ಏರ್ಪಡಿಸಿರುವುದರಿಂದ ನಮ್ಮ ಚಂದಾದಾರರು ಈ ಸೌಲಭ್ಯವನ್ನು ಹೊಂದುವರಾಗಿ ನಿರೀಕ್ಷಿಸುತ್ತೇವೆ.

ಬೆಂಗಳೂರಿನಲ್ಲಿ ಕಳೆದ ಮಂಗಳವಾರ ಪ್ರಾತಃಕಾಲ ಚೌಡೇಶ್ವರಿಗುಡಿ ಬೀದಿಯಲ್ಲಿ ಒಂದು ವಿದ್ಯುಚ್ಛಕ್ತಿಯ ದೀಪದ ಕಂಬದ ಸಮೀಪದಲ್ಲಿ ಒಂದು ಕಾಗೆಯು ವಿದ್ಯುಲ್ಲತೆಯು ಹರಿಯುತ್ತಿದ್ದ ತಂತಿಯಮೇಲೆ ಕುಳಿತುಕೊಂಡಿತು. ಕೂಡಲೆ ಅದು ಜ್ಞಾನತಪ್ಪಿ ರೆಕ್ಕೆಯು ಬಿಚ್ಚಿಕೊಂಡಿತು. ಇದರಿಂದ ಕಂಬಕ್ಕೆ ಅದರ ರೆಕ್ಕೆಯು ಸಂಪರ್ಕವಾಗಲು ವಿದ್ಯುಲ್ಲತೆಯು ಕಂಬದ ಮೂಲಕ ಭೂಮಿಗೆ ವ್ಯಾಪಿಸಿತು. ಸಮೀಪದಲ್ಲಿ ನಿಂತಿದ್ದ ಒಂದು ಜಟ್ಕಾಗಾಡಿಯ ಕುದುರೆಯೂ, ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಗ್ರಾಮವಾಸಿಯೂ ಕೂಡಲೆ ಮೃತಪಟ್ಟರು. ಗಾಡಿಯಲ್ಲಿದ್ದವರಿಗೂ, ಗಾಡಿಯವನಿಗೂ ಯಾವ ಅಪಾಯವೂ ಸಂಭವಿಸಲಿಲ್ಲ. ಇಷ್ಟರಲ್ಲಿಯೇ ಕಾಗೆಯು ಸತ್ತು ಭೂಮಿಗೆ ಬೀಳಲು ತಂತಿಯಿಂದ ಕಂಬಕ್ಕೆ ಕಾಗೆಯ ಸಂಪರ್ಕದಿಂದ ಹರಿಯುತ್ತಿದ್ದ ವಿದ್ಯುಲ್ಲತೆಯು ನಿಂತುಹೋಗಲು ಸಂಭವಿಸಿದ್ದ ಅಪಾಯವು ಪಾರಾಯಿತು.

ಮೈಸೂರಿನಿಂದ ಈರೋಡಿಗೂ ಮಡಕೇರಿಗೂ ರೈಲ್ವೆಮಾರ್ಗವನ್ನು ನಿರ್ಮಿಸುವ ಆಲೋಚನೆಯು ಬಹುಕಾಲದಿಂದಲೂ ಸರ್ಕಾರದವರ ಗಮನದಲ್ಲಿರುವುದು. ಈಗ ಈ ಕೆಲಸವು ಶೀಘ್ರದಲ್ಲಿಯೇ ಕೈಕೊಳ್ಳಲ್ಪಡುವುದಕ್ಕೆ ಸಮಯಬಂದಿರುವಂತೆ ತೋರುತ್ತದೆ. ಸಾರ್ವಭೌಮ ಸರ್ಕಾರದ ರೈಲ್ವೆ ಇಲಾಖೆಯ ಮುಖ್ಯಾಧಿಕಾರಿಗಳೂ ಮದರಾಸ್ ಮತ್ತು ದಕ್ಷಿಣಮಹರಾಷ್ಟ್ರ ರೈಲ್ವೆಯ ಅಧಿಕಾರಿಗಳೂ ಮೊನ್ನೆತಾನೆ ಮೈಸೂರಿಗೆ ಬಂದಿದ್ದರು. ಮೈಸೂರು ರೈಲ್ವೆಯ ಅಧಿಕಾರಿಗಳೊಡನೆ ಈ ಸಂಬಂಧದಲ್ಲಿ ಮಾತುಕಥೆಗಳು ನಡೆದುವು. ಇದರ ಫಲಿತಾಂಶವು ಮೈಸೂರಿನವರಿಗೆ ಅನುಕೂಲವಾಗುವ ಪಕ್ಷದಲ್ಲಿ ಇದುವರೆಗೆ ನಷ್ಟಹೊಂದುತ್ತಿರುವ ಮೈಸೂರು-ಅರಸೀಕೆರೆ ರೈಲ್ವೆಯ ಆದಾಯವು ಹೆಚ್ಚುವುದು. ಬೊಂಬಾಯಿಂದ ದಕ್ಷಿಣ ಹಿಂದುಸ್ಥಾನಕ್ಕೆ ಹೋಗಿಬರುವ ಪ್ರಯಾಣಿಕರ ಸಂಖ್ಯೆಯೂ ಸಾಮಾನುಗಳು ಸಾಗುವಿಕೆಯೂ ಮೈಸೂರು ರೈಲ್ವೆಯ ಮೂಲಕ ವಿಶೇಷವಾಗಿ ನಡೆಯುವುದರಿಂದ ಮೈಸೂರಿನ ವ್ಯಾಪಾರವೂ, ಆರ್ಥಿಕಸ್ಥಿತಿಯೂ ಉತ್ತಮವಾಗುವುವು.

(ಚಿತ್ರಗುಪ್ತದಿಂದ)

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯ ವರದಿ.

ಬೆಂಗಳೂರು ಗಲಭೆಯ ವಿಚಾರಣಾಸಮಿತಿಯ ವರದಿಯ ಸಂಬಂಧವಾಗಿ ಕೆಲವು ಹೊರಗಿನ ಮತ್ತು ಸ್ಥಳದ ಪತ್ರಿಕೆಗಳಲ್ಲಿ ಅನೇಕವಿಧವಾದ ಸುಳ್ಳು ಮತ್ತು ಉತ್ಪ್ರೇಕ್ಷಿತವಾದ ವಿಷಯಗಳು ಪ್ರಕಟಿಸಲ್ಪಟ್ಟು ಜನರಲ್ಲಿ ಬಗೆಬಗೆಯ ದುರಭಿಪ್ರಾಯಗಳನ್ನು ಹುಟ್ಟಿಸುತ್ತಿರುವುದರಿಂದ ಈ ದಿನದಿಂದ ನಮ್ಮ ಪತ್ರಿಕೆಯಲ್ಲಿ ವರದಿಯನ್ನು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಮಹಾಜನರ ತಿಳುವಳಿಕೆಗಾಗಿ ಪ್ರಕಟಿಸುತ್ತ ಬರುವೆವು. ಅದರಿಂದ ನಮ್ಮ ವಾಚಕ ಮಹನೀಯರಿಗೆ ಸಂತೋಷವಾಗುವುದೆಂದು ನಂಬುತ್ತೇವೆ.

1928ನೇ ಇಸವಿ ಜುಲೈ 30ನೇ ತಾರೀಖಿನದಿನ ಬೆಂಗಳೂರು ನಗರದಲ್ಲಿ ಕೆಲವು ಗಲಭೆಗಳು ನಡೆದುವು. ಇವುಗಳಲ್ಲಿ ಸ್ಕೂಲು ವಿದ್ಯಾರ್ಥಿಗಳು ಪ್ರಾಮುಖ್ಯತೆಯನ್ನು ವಹಿಸಿದ್ದರು. ಅವರು ಪಬ್ಲಿಕ್ ಆಫೀಸು, ಸೆಂಟ್ರಲ್ ಜೈಲು, ನಗರದ ಮುಖ್ಯದ್ವಾರ ಮುಂತಾದ ಅನೇಕ ಕಡೆಗಳಲ್ಲಿ ಗಲಭೆಯನ್ನುಂಟುಮಾಡಿದರು. ಅವಿನ ಸ್ವಲ್ಪ ಹೊತ್ತಿನಮೇಲೆ ದೊಡ್ಡವರೂ ಸಹ ವಿದ್ಯಾರ್ಥಿಗಳ ಗುಂಪನ್ನು ಸೇರಿಕೊಂಡು, ಗಲಭೆಯು ದೊಡ್ಡದಾಗಿ ಬೆಳೆದು ರಾತ್ರಿವೇಳೆಗೆ ಹಿಂದು-ಮುಸಲ್ಮಾನರ ದೊಡ್ಡ ಮಾರಾಮಾರಿಯಲ್ಲಿ ಪರಿಣಮಿಸಿತು. ಮಾರಾಮಾರಿಯು ಸ್ವಲ್ಪ ಕಾಲವೇ ನಡೆಯಿತು. ಮಧ್ಯರಾತ್ರಿಯೊಳಗಾಗಿ ಮಿಲಿಟರಿಯವರ ಸಹಾಯದಿಂದ ಗಲಭೆಯು ಅಡಗಿಸಲ್ಪಟ್ಟಿತು ; ಆದರೂ ಆ ರಾತ್ರಿಯೂ ಅದರ ಮಾರನೆದಿನವೂ ಪಟ್ಟಣದ ಜನರಲ್ಲೆಲ್ಲ ಒಂದುವಿಧವಾದ ಭೀತಿಯುಂಟಾಗುತ್ತಿತ್ತು. ಗಲಭೆ ಸಮಾಚಾರವು ಕೂಡಲೆ ಎಲ್ಲೆಲ್ಲೂ ಹರಡಿ, ಗಲಭೆಗೆ ಸಂಬಂಧಪಟ್ಟಂತೆ ಅನೇಕ ವಿಧವಾದ ಸಮಾಚಾರಗಳೂ ಉತ್ಪ್ರೇಕ್ಷೆಗಳೂ ಸಂಸ್ಥಾನದಲ್ಲೂ ಹೊರಗಡೆಯಲ್ಲೂ ಹಬ್ಬಿದವು. ಇದಾದನಂತರ ಸಂಸ್ಥಾನದಲ್ಲಿ ಸಣ್ಣ ಪುಟ್ಟ ಹಿಂದು-ಮುಸಲ್ಮಾನರ ಜಗಳಗಳು ನಡೆದು, ಬ್ರಿಟಿಷ್ ಹಿಂದುಸ್ಥಾನದಲ್ಲಿ ಹಿಂದು-ಮುಸಲ್ಮಾನರ ಜಗಳವು ಅತ್ಯುತ್ಕಟಾವಸ್ಥೆಯಲ್ಲಿದ್ದಾಗಲೂ ಕೂಡ, ಅದರ ವಾಸನೆಯೇ ಇಲ್ಲದಿದ್ದಂತಹ ಮೈಸೂರು ಸಂಸ್ಥಾನದಲ್ಲಿ ಹಿಂದು-ಮುಸಲ್ಮಾನರ ವೈಷಮ್ಯವು ಪ್ರಾರಂಭವಾಗಿದೆಯೆಂಬ ಬಣ್ಣವು ಕೊಡಲ್ಪಟ್ಟಿತು.

2. ಸರ್ಕಾರದವರು ಜನರಲ್ಲುಂಟಾಗಿದ್ದ ಅಸಮಾಧಾನವನ್ನು ಹೋಗಲಾಡಿಸಿ ಎರಡು ಜಾತಿಯವರಲ್ಲೂ ಪರಸ್ಪರ ಸಹನೆಯುಂಟಾಗುವಂತೆ ಮಾಡುವುದಕ್ಕಾಗಿ, ಆಗಸ್ಟ್ 3 ನೇ ತಾರೀಖಿನಲ್ಲೂ 20 ನೇ ತಾರೀಖಿನಲ್ಲೂ ಸರ್ಕಾರಿ ಅಧಿಕಾರಿಗಳು ಮತ್ತು ಮುಖಂಡಪ್ರಜೆಗಳನ್ನು ಎರಡು ಸಭೆಗಳನ್ನು ಸೇರಿಸಿ ನಡೆಸಿದರು. ಅದೇ ಉದ್ದೇಶದಿಂದ ಸರ್ಕಾರದವರು ತಮ್ಮ ಕಡೆಯವರಿಂದ ತಮಗೆ ಬಂದ ವರ್ತಮಾನಗಳ ಆಧಾರದಮೇಲೆ ಗಲಭೆಗೆ ಸಂಬಂಧಪಟ್ಟ ಸಮಾಚಾರಗಳನ್ನು ಆಗಿಂದಾಗ್ಗೆ ಪ್ರಸಿದ್ಧ ಪತ್ರಿಕೆಗಳ ಮೂಲಕ ಪ್ರಕಟಿಸುತ್ತ ಬಂದರು. ಜುಲೈ 31 ನೇ ತಾರೀಖಿನ ದಿನ ಸರ್ಕಾರದವರು ಒಂದು ಪ್ರಸಿದ್ಧ ಪತ್ರಿಕೆಯಲ್ಲಿ, ಹಿಂದಿನ ದಿನದ ಗಲಭೆಯ ವಿಚಾರದಲ್ಲಿ ತನಿಖೆಕ್ರಮ ಜರುಗಿಸುವುದಕ್ಕಾಗಿ ಒಬ್ಬರು ಮಾಜಿಸ್ಟ್ರೇಟರನ್ನು ನೇಮಿಸಿರುವುದಾಗಿ ತಿಳಿಸಿದರು. ಪುನಃ ಆಗಸ್ಟ್ 3 ನೇ ತಾರೀಖಿನ ದಿನ ಸರ್ಕಾರದವರು ಇನ್ನೊಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿ ಅದರಲ್ಲಿ, ಮಹಾಜನರು ಗಲಭೆಯ ವಿಚಾರವಾಗಿ ತಮಗೆ ಗೊತ್ತಿರುವ ಸಂಗತಿಯನ್ನು ಮ್ಯಾಜಿಸ್ಟ್ರೇಟರಲ್ಲಿ ತಿಳಿಸಬಹುದೆಂದು ತಿಳಿಸಿದರು.

ಆದರೂ ಈ ಪ್ರಯತ್ನಗಳ ಉದ್ದೇಶವು ಸಾರ್ಥಕವಾಗಲಿಲ್ಲ. ಮೊದಲನೆ ಸಭೆಯಲ್ಲಿ ಮಾಡಿದ ಭಾಷಣಗಳಿಂದಲೂ ನಡೆದ ಚರ್ಚೆಯಿಂದಲೂ, ಶಾಂತಿಯೂ, ಪರಸ್ಪರ ಸಹನೆಯೂ ಉಂಟಾಗುವುದಕ್ಕೆ ಪ್ರತಿಯಾಗಿ, ಅಪನಂಬಿಕೆಯೂ ಅನುಮಾನವೂ ಹೆಚ್ಚಿದುವು. ಪತ್ರಿಕೆಗಳಲ್ಲಿ ಬಹಳ ಬಿರುಸಾದ ಆಕ್ಷೇಪಣೆಗಳು ಬರಲು ಪ್ರಾರಂಭವಾದುವು. ಈ ಎಲ್ಲ ಕಾರಣಗಳಿಂದ ಜನರ ಮನಸ್ಸಿನಲ್ಲಿ ಕಳವಳವು ಕಡಿಮೆಯಾಗುವುದಕ್ಕೆ ಬದಲಾಗಿ ಹೆಚ್ಚಾಗಿ, ಸರ್ಕಾರದವರಿಂದ ನೇಮಿಸಲ್ಪಟ್ಟ ಒಂದು ಸಮಿತಿಯವರು ಬಹಿರಂಗವಾಗಿ ವಿಚಾರಣೆ ನಡಿಸಬೇಕೆಂಬ ಅಭಿಪ್ರಾಯವು ಜನರ ಮನಸ್ಸಿನಲ್ಲಿ ಗಟ್ಟಿಯಾಯಿತು.

1928 ನೇ ಇಸವಿ ಆಗಸ್ಟ್ 6 ನೇ ತಾರೀಖಿನಲ್ಲಿ ಸರ್ಕಾರದವರು ತಾವು ಹೊರಡಿಸಿದ್ದ ಪ್ರಸಿದ್ಧ ಪತ್ರಿಕೆಯಲ್ಲಿ ತಿಳಿಸಿದ ಪ್ರಕಾರ, 1928 ನೇ ಇಸವಿ ಆಗಸ್ಟ್ 28 ನೇ ತಾರೀಖಿನ 1042-1192 C.B. 38-28-114 ನೇ ಆರ್ಡರ್‌ನಲ್ಲಿ ಈ ಕೆಳಗೆ ಕಂಡವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿದರು—

ಅಧ್ಯಕ್ಷರು.

ಸರ್. ಎಂ. ವಿಶ್ವೇಶ್ವರಯ್ಯ ಕೆ.ಸಿ.ಐ.ಎಸ್.

ಸದಸ್ಯರು.

ಮಿ|| ಜಸ್ಟಿಸ್ ಡಿ. ಕೆ. ರಾಮರಾವ್ ಬಿ.ಎ., ಬಿ.ಎಲ್., ಜಡ್ಜ್, ಮೈಸೂರು ಚೀಫ್‌ಕೋರ್ಟ್, ಮ|| ಎಚ್. ಜಿ. ಬಸಪ್ಪ ಮೆಂಬರ್, ಲೆಜಿಸ್ಲೇಟೀವ್ ಕೌನ್ಸಿಲ್, ಮಿ|| ಗುಲಾಮ್ ಅಹಮದ್ ಕಲಾಮಿ, ಮಿ|| ವಿ. ಮಾಣಿಕ್ಕವೇಲು ಮೊದಲಿಯಾರ್ ಮ|| ಬಿ. ನಾಗಪ್ಪ, ಬಾರ್-ಅಟ್-ಲಾ ಲೀಗಲ್ ರಿಮೆಂಬ್ರನ್ಸರ್ ಮತ್ತು ಸೆಕ್ರೆಟರಿ, ಲಾ ಡಿಪಾರ್ಟ್‌ಮೆಂಟ್, ಮಿ|| ರಾಲ್ಫ್ ನೈ. ಮೆಂಬರ್, ಲೆಜಿಸ್ಲೇಟಿವ್ ಕೌನ್ಸಿಲ್ ಸಮಿತಿಯವರು ಆಲೋಚಿಸಬೇಕಾಗಿದ್ದ ವಿಷಯಗಳು :—

1. ಗಲಭೆ ನಡೆಯಲು ಹೇತುವಾದ ಮೂಲಕಾರಣಗಳು ಮತ್ತು ಆಗ ಸಂಭವಿಸಿದ ಕಾರ್ಯಗಳನ್ನು ಗೊತ್ತುಮಾಡುವುದು.

2. ಇಂತಹ ಅಸಾಧಾರಣವಾದ ಗಲಭೆ ನಡೆಯುವುದಕ್ಕೆ ವಿಶೇಷ ಕಾರಣಗಳಾಗಲೀ ಪ್ರಯತ್ನಗಳಾಗಲೀ ಇದ್ದರೆ ಅವುಗಳನ್ನು ಕಂಡುಹಿಡಿಯುವುದು.

3. ಆ ಸಮಯದಲ್ಲಿ ಸ್ಥಳೀಯ ಅಧಿಕಾರಿಗಳು ತಕ್ಕ ಕಾರ್ಯಗಳನ್ನು ಕೈಗೊಂಡರೊ ಇಲ್ಲವೊ ಎಂಬುದನ್ನು ನಿರ್ಧರಿಸುವುದು. ಮತ್ತು

4. ಸಂಬಂಧಪಟ್ಟ ಪಂಗಡಗಳವರಲ್ಲಿ ಉಂಟಾಗಿರುವ ಅಸಮಾಧಾನಗಳನ್ನು ಹೋಗಲಾಡಿಸಿ, ಪರಸ್ಪರ ಸಹನೆಯುಂಟಾಗಲು ತಕ್ಕ ಸಲಹೆಗಳನ್ನು ಸೂಚಿಸುವುದು.

ವಿಚಾರಣೆಯ ಕಾಲದಲ್ಲಿ ಯಾವ ಕ್ರಮವನ್ನನುಸರಿಸಬೇಕೆಂಬುದನ್ನೂ ಅಗತ್ಯವಾದ ಇತರ ವಿಚಾರಗಳನ್ನು ಆಲೋಚಿಸುವುದಕ್ಕೂ ಸಮಿತಿಯವರು 1928 ನೇ ಇಸವಿ ಸೆಪ್ಟಂಬರ್ 4 ನೇ ತಾರೀಖಿನ ದಿನ ತಮ್ಮ ಮೊದಲನೆಯ ಮೀಟಿಂಗನ್ನು ನಡೆಸಿದರು. 1928 ನೇ ಇಸವಿ ಸೆಪ್ಟಂಬರ್ 12 ನೇ ತಾರೀಖಿನಿಂದ ವಿಚಾರಣಾ ಕಾರ್ಯವು ಡ್ಯಾಲಿ ಮೆಮೋರಿಯಲ್ ಹಾಲ್‌ನಲ್ಲಿ ಪ್ರಾರಂಭವಾಯಿತು. ಈ ಹಾಲ್‌ನಲ್ಲಿ ಮಿಥಿಕ್ ಸೊಸೈಟಿಯ ಅಧಿಕಾರಿಗಳು ದಯೆಮಾಡಿ ಸಮಿತಿಯವರು ವಿಚಾರಣೆ ನಡೆಸಲು ಅವಕಾಶಕೊಟ್ಟರು. ವಿಚಾರಣೆಗೆ ಉಪಕ್ರಮವಾದ ತಾರೀಖು ಲಾಗಾಯಿತು ದಸರ ಕಾಲದಲ್ಲಿ ಹನ್ನೊಂದುದಿನಗಳು ವಿನಹ, ನವಂಬರ್ 12 ನೇ ತಾರೀಖಿನ ವರೆಗೂ ಸಮಿತಿಯವರು ಕ್ರಮವಾಗಿ ವಿಚಾರಣಾಕಾರ್ಯವನ್ನು ನಡೆಸಿ, ನವಂಬರ್ 12 ನೇ ತಾರೀಖಿನ ದಿನ ತಮ್ಮ ಕೆಲಸವನ್ನು ಮುಕ್ತಾಯಗೊಳಿಸಿದರು.

ಒಟ್ಟು 30 ದಿನಗಳು ವಿಚಾರಣೆ ನಡೆಸಲಾಯಿತು. 156 ಸಾಕ್ಷಿಗಳ ಹೇಳಿಕೆ ತೆಗೆದುಕೊಳ್ಳಲ್ಪಟ್ಟಿತು. ಈ ಪೈಕಿ 125 ಸಾಕ್ಷಿಗಳ ಹೇಳಿಕೆಯನ್ನು ಬಹಿರಂಗವಾಗಿಯೂ 8 ಮಂದಿ ಸಾಕ್ಷಿಗಳ ಹೇಳಿಕೆಯನ್ನು ಗೋಪ್ಯವಾಗಿಯೂ 28 ಮಂದಿ ಸಾಕ್ಷಿಗಳ ಹೇಳಿಕೆಯನ್ನು ಅರ್ಧ ಬಹಿರಂಗವಾಗಿಯೂ ಅರ್ಧ ಗುಪ್ತವಾಗಿಯೂ, ತೆಗೆದುಕೊಳ್ಳಲಾಯಿತು.

ಸಾಕ್ಷಿಗಳ ಸಾಕ್ಷ್ಯದ ಸ್ವಭಾವವನ್ನು ಚೆನ್ನಾಗಿ ಅರಿತುಕೊಳ್ಳುವುದಕ್ಕಾಗಿ ಅವರು ಸಮಿತಿಯ ಮುಂದೆ ಹಾಜರಾಗುವುದಕ್ಕೆ ಮೊದಲು ತಮ್ಮ ಹೇಳಿಕೆಯನ್ನು ಬರವಣಿಗೆ ಮೂಲಕ ಕೊಡಬೇಕೆಂದು ಕೇಳಿಕೊಳ್ಳಲಾಯಿತು. ಈ ಬರವಣಿಗೆಯ ಹೇಳಿಕೆಗಳನ್ನು [illegible] ಕೆಲವು ಸಂದರ್ಭಗಳಲ್ಲಿ ಸಮಿತಿಯವರು ತಮ್ಮ [illegible]

ಯೋಗಿಸಿ, ಈ ಹೇಳಿಕೆಗಳ ಕೆಲವು ಭಾಗಗಳನ್ನು ಬಾಯಿಮಾತಿನ ಹೇಳಿಕೆಗಳ ಸಮಯದಲ್ಲಿ ರುಜುವಾತುಗಳಂತೆ ಅಂಗೀಕರಿಸಿರುವರು.

ಸಂಬಂಧಪಟ್ಟ ಎಲ್ಲಾ ಜಾತಿಗಳು ಅಥವ ಪಂಗಡಗಳವರು ತಮ್ಮ ಸಮಾಧಾನಕ್ಕೆ ತಕ್ಕಂತೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅನುಕೂಲವಾಗುವಂತೆ ಈ ಕೆಳಗೆ ಕಂಡ ಪಂಗಡಗಳ ಪ್ರತಿನಿಧಿಗಳಿಗೆ, ಸಾಕ್ಷಿಗಳ ವಿಚಾರಣೆ ಕಾಲದಲ್ಲಿ, ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶ ಕೊಡಲ್ಪಟ್ಟಿತು :—

(1) ಹಿಂದುಗಳ ಪರ
(2) ಮಹಮ್ಮದೀಯರ ಪರ
(3) ವಿದ್ಯಾರ್ಥಿಗಳ ಪರ
(4) ಪತ್ರಿಕೆಗಳ ಪರ

ಈ ಪಂಗಡಗಳ ಪ್ರತಿನಿಧಿಗಳಿಗಾಗಿ ಸಹಾಯ ಮಾಡಿದ ದೊಡ್ಡ ಮನುಷ್ಯರುಗಳು : ಶ್ರೀಗಳಾದ, ಎಸ್. ವೆಂಕಟಪತಯ್ಯನವರು, ಮಿರ್ಲೆ ಎನ್. ಲಕ್ಷ್ಮಿನಾರಣಪ್ಪನವರು, ಎ. ಜೆ. ಕಲೀಲ್‌ರವರು, ಕೆ. ಶಾಮಣ್ಣನವರು ಮತ್ತು ವಿ. ಎಸ್. ಸಂಜೀವರಾಯರು. ಸರ್ಕಾರಿ ಇಲಾಖೆಗಳ ಪ್ರತಿನಿಧಿಗಳೂ ಕೆಲವು ದಿನಗಳ ವಿಚಾರಣೆ ಕಾಲದಲ್ಲಿ ಹಾಜರಿದ್ದರು.

ಅಗತ್ಯವಾದ ಎಲ್ಲಾ ಸಂಗತಿಗಳನ್ನೂ ಹೊರಪಡಿಸುವ ಉದ್ದೇಶದಿಂದ, ಬೇರೆ ಬೇರೆ ಪಂಗಡಗಳ ಈ ಪ್ರತಿನಿಧಿಗಳು, ಸಾಕ್ಷಿಯ ಹೇಳಿಕೆಯು ಮುಗಿದ ಮೇಲೆ ತಾವು ಕೇಳಬೇಕೆಂದಿದ್ದ ಪ್ರಶ್ನೆಗಳನ್ನೊಳಗೊಂಡ ಪಟ್ಟಿಯನ್ನು ಸಮಿತಿಯವರ ವಶಕ್ಕೆ ಕೊಟ್ಟು, ಆ ಪೈಕಿ ಅಧ್ಯಕ್ಷರಿಗೆ ಉಚಿತ ತೋರಿದ ಪ್ರಶ್ನೆಗಳನ್ನು ಸಾಕ್ಷಿಗೆ ಹಾಕಲು ಅವಕಾಶಕೊಡಲ್ಪಟ್ಟಿತು. ಅಲ್ಲದೆ, ಬಹಿರಂಗ ವಿಚಾರಣೆಯು ಮುಗಿದಮೇಲೆ ಈ ಪ್ರತಿನಿಧಿಗಳು, ಸಮಿತಿಯವರ ಗಮನಕ್ಕೆ ತರಬೇಕೆಂದು ಅಪೇಕ್ಷೆಪಟ್ಟ ವಾದಗಳ ಸಾರಾಂಶವನ್ನು ಬಾಯಿಮಾತಿನಲ್ಲಿ ಗೋಪ್ಯವಾಗಿ ಸಮಿತಿಯವರಿಗೆ ತಿಳಿಸಬೇಕೆಂದೂ ಕೇಳಿಕೊಳ್ಳಲಾಗಿತ್ತು.

5. ಸರ್ಕಾರಿ ಅಧಿಕಾರಿಗಳು, ಗಲಭೆ ವಿಚಾರದಲ್ಲಿ ತಮಗೆ ಗೊತ್ತಿರುವ ಎಲ್ಲಾ ಸಂಗತಿಗಳನ್ನೂ ಮರೆಮಾಚದೆ ಸಮಿತಿಯ ಮುಂದೆ ಹೇಳಬೇಕೆಂದು ಸರ್ಕಾರದವರು ಹುಕ್ಕುಂ ಮಾಡಿದ್ದರಲ್ಲದೆ, ಆರೀತಿ ಸಾಕ್ಷ್ಯ ಕೊಟ್ಟುದಕ್ಕಾಗಿ ಸಾಕ್ಷಿಗಳು ಸರ್ಕಾರದವರ ಕೋಪಕ್ಕೆ ಪಾತ್ರರಾಗುವುದಿಲ್ಲವೆಂದೂ, ಗೋಪ್ಯವಾಗಿ ತಮಗೇ ವ್ಯತಿರಿಕ್ತವಾದಂತಹ ಹೇಳಿಕೆಯನ್ನು ಕೊಡುವ ಸಾಕ್ಷಿಗಳನ್ನು ಅವರ ಹೇಳಿಕೆಯ ಆಧಾರದಿಂದ ಶಿಕ್ಷೆಗೆ ಗುರಿಮಾಡುವುದಿಲ್ಲವೆಂದೂ ಸರ್ಕಾರದವರು ಭರವಸೆ ಕೊಟ್ಟಿದ್ದರು.

ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ರಿಕಾರ್ಡುಗಳನ್ನು ಸಮಿತಿಯವರ ವಶಪಡಿಸಿದ್ದರು. ಅವುಗಳನ್ನೆಲ್ಲಾ ಸಾಕ್ಷಿಗಳ ಚುನಾವಣೆ ಮತ್ತು ವಿಚಾರಣೆ ಕಾಲದಲ್ಲಿ ಉಪಯೋಗಿಸಿಕೊಳ್ಳಲಾಯಿತು.

ವರದಿಯ ರಚನಾಕ್ರಮ.

6. ಗಲಭೆಯ ಸಂಬಂಧವಾದ ಅನೇಕ ವಿಷಯಗಳನ್ನು ಪರಿಷ್ಕಾರವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ವರದಿಯ ರಚನಾಕ್ರಮವನ್ನು ಮಾಡಲಾಗಿದೆ. ಒಂದನೆ ಅಧ್ಯಾಯವು ಪೀಠಿಕೆ. ಎರಡು ಮತ್ತು ಮೂರನೆ ಅಧ್ಯಾಯಗಳಲ್ಲಿ ಪರಸ್ಪರ ವಿರುದ್ಧವಾದ ಸಂಗತಿಗಳನ್ನೆಲ್ಲಾ ಬಿಟ್ಟು ಬಿಟ್ಟು ನಡೆದ ಸಂಗತಿಗಳನ್ನು ಹಾಗೆಯೇ ವಿವರಿಸಿದೆ. ನಾಲ್ಕು ಮತ್ತು ಐದನೆ ಅಧ್ಯಾಯಗಳಲ್ಲಿ ಹಿಂದು ಮತ್ತು ಮುಸಲ್ಮಾನ ಪಂಗಡಗಳವರ ಅಭಿಪ್ರಾಯಗಳನ್ನು ವಿವರಿಸಿದೆ. ಆದರೆ ಈ ಅಧ್ಯಾಯಗಳಲ್ಲಿ ನಮೂದಾಗಿರುವ ಅಭಿಪ್ರಾಯಗಳು ಸಮಿತಿಯವರ ಅಭಿಪ್ರಾಯಗಳಲ್ಲ. ಉಳಿದ ಏಳು ಅಧ್ಯಾಯಗಳಲ್ಲಿ, ವಿಚಾರಣೆಯ ಕಾಲದಲ್ಲಿ ಸಮಿತಿಯವರ ಅವಗಾಹನೆಗೆ ಬಂದ ನಾನಾ ವಿಧವಾದ ಅಭಿಪ್ರಾಯಗಳ ಮೇಲೆ ಸಮಿತಿಯವರು ಪಟ್ಟಿರುವ ಅಭಿಪ್ರಾಯಗಳು ವಿವರಿಸಲ್ಪಟ್ಟಿವೆ.

ಕೃತಜ್ಞತೆ.

7. ವಿಚಾರಣಾ ಕಾರ್ಯವನ್ನು ಪೂರ್ತಿಮಾಡಲು ಅಗತ್ಯವಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟುದಕ್ಕಾಗಿ ಸರ್ಕಾರದವರಿಗೆ ನಾವು ಋಣಿಗಳಾಗಿದ್ದೇವೆ. ಸಾಕ್ಷ್ಯಕೊಡುವುದಕ್ಕಾಗಿ ಮುಂದೆ ಬಂದ ಅಧಿಕಾರಿಗಳಿಗೂ ಖಾಸಗಿ ದೊಡ್ಡಮನುಷ್ಯರಿಗೂ, ತಮಗೆ ಸ್ವಲ್ಪ ತೊಂದರೆಯಾದರೂ ಲೆಕ್ಕಿಸದೆ ವಿಚಾರಣಾಕಾರ್ಯದಲ್ಲಿ ಸಹಾಯ ಮಾಡಿದ ಮೇಲೆ ನಮೂದಿಸಿರುವ ಬೇರೆ ಬೇರೆ ಪಂಗಡಗಳ ಪ್ರತಿನಿಧಿಗಳಿಗೂ, ನಮ್ಮ ವಂದನೆಗಳನ್ನು ಸಲ್ಲಿಸುತ್ತೇವೆ.

ಸಮಿತಿಯ ಕಾರ್ಯದರ್ಶಿಯವರಾದ ಮಿ॥ ಡಿ. ಇ. ನರೋನ್ಹಯವರ ಮತ್ತು ಸ್ಪೆಷಲ್ ಡ್ಯೂಟಿ ಆಫೀಸರುಗಳಾದ ಮಿ॥ ಟಿ. ಅಬ್ದುಲ್ ಖಾದರ್ ಮತ್ತು ಮಿ॥ ಸಿ. ಕೆ. ವೆಂಕಟರಮಣಯ್ಯನವರ ಸಹಾಯಕ್ಕಾಗಿ ನಮ್ಮ ಮೆಚ್ಚಿಗೆಯನ್ನು ಇಲ್ಲಿ ನಮೂದಿಸುತ್ತೇವೆ. ನಮ್ಮ ಆಫೀಸಿನ ಸಿಬ್ಬಂದಿಯೂ ಕೂಡ ನಮಗೆ ಸಮಾಧಾನವಾಗುವಂತೆ ಕೆಲಸಮಾಡಿದೆ.

ಎರಡನೆ ಅಧ್ಯಾಯ.

ಜುಲೈ 29ನೆ ತಾ॥ ನಲ್ಲಿ ನಡೆದ ಕಾರ್ಯಗಳು.

1928 ನೆ ಇಸವಿ ಜುಲೈ 30 ಮತ್ತು 31 ನೆ ತಾರೀಖುಗಳಲ್ಲಿ ನಡೆದ ಕಾರ್ಯಗಳನ್ನೂ, ಅವುಗಳು ನಡೆಯಲು ಸಹಾಯಕವಾದ ಅಚಾತುರ್ಯಗಳನ್ನೂ ವಿಮರ್ಶಿಸಬೇಕೆಂದು ಈ ಸಮಿತಿಯನ್ನು ನೇಮಿಸಿದ ಸರ್ಕಾರಿ ಹುಕ್ಕುಂನಲ್ಲಿ ಒತ್ತಿ ಹೇಳಿದೆ. ವಾಸ್ತವವಾಗಿ ಗಲಭೆಯ ಪರಿಣಾಮಗಳು 1928 ನೇ ಇಸವಿ ಆಗಸ್ಟ್ ಅಂತ್ಯದವರೆಗೂ ಕಾಣುತ್ತಿದ್ದುವು. ಆದುದರಿಂದ ಜುಲೈ 30 ನೇ ತಾರೀಖಿಗೆ ಮೊದಲೂ, ಜುಲೈ 31 ನೇ ತಾರೀಖಿನ ಮೇಲೂ ನಡೆದ ಕಾರ್ಯಗಳನ್ನು ಕುರಿತು ಪ್ರಸ್ತಾಪಿಸುವುದು ಅಗತ್ಯವಾಗಿದೆ. ಆದುದರಿಂದ ಜುಲೈ 29 ನೇ ತಾರೀಖಿನವರೆಗೆ ನಡೆದ ನಿರ್ವಿವಾದಾಸ್ಪದವಾದ ನಿಜಸಂಗತಿಗಳನ್ನು ಈ ಅಧ್ಯಾಯದಲ್ಲಿ ಪ್ರಾರಂಭಿಸುವೆವು. ಗಲಭೆಯ ಸಂಬಂಧವಾಗಿ ಜುಲೈ 30 ನೇ ತಾರೀಖು ಬಹಳ ಪ್ರಾಮುಖ್ಯವಾಗಿದೆ. ಆ ದಿನದ ಕಾರ್ಯಗಳನ್ನೂ, ಆಮೇಲಿನ ಕಾರ್ಯಗಳನ್ನೂ ಮುಂದಿನ ಅಧ್ಯಾಯದಲ್ಲಿ ವಿವರಿಸುವೆವು.

ಗಣಪತಿವಿಗ್ರಹವು ಪ್ರಾಮುಖ್ಯತೆಗೆ ಬಂದುದು ಹೇಗೆ.

9. ಮೊದಲು ಸಿಟಿ ಮ್ಯುನಿಸಿಪಲ್ ಸ್ಕೂಲ್ ಎಂಬುದಾಗಿ ಕರೆಯಲ್ಪಡುತ್ತಿದ್ದ, ಈಗ ಸ್ಕೂಲು ನಡೆಯುತ್ತಿರುವ ಕಟ್ಟಡದ ಮಧ್ಯಭಾಗದ ಹಾಲ್‌ನಲ್ಲಿ ಸುಮಾರು 20 ವರ್ಷಗಳಿಂದಲೂ, ಗಣಪತಿ ವಿಗ್ರಹವೊಂದಿದ್ದಿತೆಂದು ತಿಳಿಯಬರುತ್ತದೆ. ಕೆಲವು ಕಾಲದಮೇಲೆ ಈ ಕಟ್ಟಡವನ್ನು ಬದಲಾಗಿ ಕಟ್ಟಿದಮೇಲೆ ಇದು ಎಸ್. ಆರ್. ನಂಜುಂಡಯ್ಯನವರ ಹಿಂದು ಎ. ವಿ. ಸ್ಕೂಲ್ ಎಂದು ಕರೆಯಲ್ಪಡುತಿತ್ತು. ಕೆಲವು ಕಾಲದವರೆಗೆ—ಎಷ್ಟು ಕಾಲವೆಂಬುದು ಗೊತ್ತಿಲ್ಲ—ಈ ಕಟ್ಟಡವು ಆಕ್ಟ್ರಾಯಿ ಗಡಂಗ್ ಆಗಿ ಉಪಯೋಗಿಸಲ್ಪಡುತ್ತಿತ್ತು. 1921 ನೆ ಇಸವಿಯಲ್ಲಿ ಆಗ ಸ್ಕೂಲಿನ ಹೆಡ್ಮಾಸ್ಟರಾಗಿದ್ದ ಶ್ರೀ॥ ಎಚ್. ಪಿ. ಕೃಷ್ಣರಾಯರು, ವಿದ್ಯಾರ್ಥಿಗಳಿಗೆ ತೋಟದ ಕೆಲಸದಲ್ಲಿ ಶಿಕ್ಷಣಕೊಟ್ಟು ಅವರಲ್ಲಿ ಸೌಂದರ್ಯ ಪ್ರೀತಿಯ ಗುಣವನ್ನು ಹೆಚ್ಚಿಸಬೇಕೆಂದು ಆಲೋಚಿಸಿದರು. ಆದುದರಿಂದ ಸ್ಕೂಲು ಕಾಂಪೌಂಡಿನಲ್ಲಿ ಒಣಗಿ ಬಂಜರಾಗಿದ್ದ ಸ್ಥಳವನ್ನು ಒಂದು ಸೊಗಸಾದ ತೋಟವನ್ನಾಗಿ ಮಾರ್ಪಡಿಸಿದರು. ಅಲ್ಲಿ ಅನೇಕ ಕುಂಡಗಳನ್ನಿಟ್ಟು ಅವುಗಳಲ್ಲಿ ಹುಡುಗರು ಹೂಗಳನ್ನೂ ಲಕ್ಷಣವಾದ ಗಿಡಗಳನ್ನೂ ಬೆಳೆಸುತ್ತಿದ್ದರು. ಅಲ್ಲದೆ ಆ ಸ್ಥಳದಲ್ಲಿ ಬಿದ್ದಿದ್ದ ಹಿಂದೂ ದೇವತೆಗಳ ವಿಗ್ರಹಗಳನ್ನು ಪ್ರತಿಯೊಂದು ಕುಂಡದಲ್ಲೂ ರಕ್ಷಣಾ ದೇವತೆಯಂತೆ ಇಟ್ಟಿದ್ದರು. ಕಾಂಪೌಂಡಿನ ಮಧ್ಯಸ್ಥಳದಲ್ಲಿ ಒಂದು ಗಣೇಶನ ವಿಗ್ರಹ—ಬಹುಶಃ ಈಗಿರುವ ವಿಗ್ರಹ—ವನ್ನು ಒಂದು ದಿಣ್ಣೆಯಮೇಲಿಟ್ಟು ಅದರ ಹಿಂಭಾಗದಲ್ಲಿ ಬಂದು ಬಾದಾಮಿ ಮರವನ್ನು ನೆಟ್ಟಿದ್ದರು. ಆಗಲೇ ಈ ವಿಗ್ರಹಕ್ಕೆ ಒಂದು ಗೂಡನ್ನು ಕಟ್ಟಬೇಕೆಂದು ಆಲೋಚಿಸಿತ್ತೆಂದೂ, ಆದರೆ ಆರೀತಿ ಮಾಡಲಿಲ್ಲವೆಂದೂ ಶ್ರೀ ಕೃಷ್ಣರಾಯರು ಹೇಳುತ್ತಾರೆ.

ಸ್ಕೂಲಿನ ವಿದ್ಯಾರ್ಥಿಗಳು ಈ ವಿಗ್ರಹದ ವಿಚಾರದಲ್ಲಿ ವಿಶೇಷ ಶ್ರದ್ಧಾಭಕ್ತಿಗಳನ್ನು ತೋರಿಸುತ್ತಿದ್ದಂತೆ ಕಾಣುತ್ತದೆ. ತೋಟದಲ್ಲಿಟ್ಟಿದ್ದ ಕುಂಡಗಳು ಹಾಳಾದ ಮೇಲೆ ಅವುಗಳಲ್ಲಿದ್ದ ಸಣ್ಣ ವಿಗ್ರಹಗಳನ್ನೂ ಉದಾಸೀನ ಮಾಡಿದರು. ಆದರೆ ಗಣೇಶನ ವಿಗ್ರಹಕ್ಕೆ ಮಾತ್ರ ಮರ್ಯಾದೆ ನಡೆಯುತ್ತಿತ್ತು. ಪರೀಕ್ಷೆಯ ಕಾಲದಲ್ಲಿ ಜಯವನ್ನುಂಟುಮಾಡುವಂತೆ ಹುಡುಗರು ಹರಸಿಕೊಳ್ಳುತ್ತಿದ್ದರು. ಪರೀಕ್ಷೆ ಮುಗಿದಮೇಲೆ ವಿದ್ಯಾರ್ಥಿಗಳು ಗಣೇಶನನ್ನು ತೃಪ್ತಿಗೊಳಿಸುವುದಕ್ಕಾಗಿ ತಮ್ಮ ಮಸಿ ಬುಡ್ಡಿಗಳಲ್ಲಿದ್ದ ಮಸಿಯನ್ನೆಲ್ಲಾ ಗಣೇಶನ ತಲೆಯಮೇಲೆ ಸುರಿಯುತ್ತಿದ್ದರಂತೆ.

ವಿಗ್ರಹಕ್ಕೆ ಗೂಡು ಕಟ್ಟಿದುದು.

10. ಮೇಲೆ ನಮೂದಿಸಿರುವ ದಿಣ್ಣೆಯು ಈಚೆಗೆ ಬಿದ್ದು ಹೋಗಲು ವಿಗ್ರಹವು ಅಡ್ಡವಾಗಿ ಬಿದ್ದುಹೋಯಿತು. ಸ್ಕೂಲು ಕಟ್ಟಡದ ರಿಪೇರಿ ಕೆಲಸ ನಡೆಯುತ್ತಿದ್ದಾಗ, ಹುಡುಗರು, ಕಂಟ್ರಾಕ್ಟರ್ ಶ್ರೀ॥ ನಂಜುಂಡಯ್ಯನವರನ್ನು, ದಿಣ್ಣೆಯನ್ನು ಸರಿಪಡಿಸಿ ವಿಗ್ರಹಕ್ಕೆ ಒಂದು ಗೂಡನ್ನು ಕಟ್ಟಿಕೊಡುವಂತೆ ಕೇಳಿಕೊಂಡರು. ಹುಡುಗರ ಇಷ್ಟಪ್ರಕಾರ ಕಂಟ್ರಾಕ್ಟರು 1928 ನೇ ಇಸವಿ ಜೂನ್ 2 ನೆ ತಾರೀಖಿನಿಂದ 5 ನೇ ತಾರೀಖಿನೊಳಗಾಗಿ, ಗೂಡನ್ನು ಕಟ್ಟಿ ಪೂರೈಸಿದಂತೆ ಕಾಣುತ್ತದೆ. ಇದರ ವೆಚ್ಚ ಸುಮಾರು 6-7 ರೂಪಾಯಿಗಳನ್ನು ಕಂಟ್ರಾಕ್ಟರು ದೇವರಲ್ಲಿನ ಭಕ್ತಿಯಿಂದಲೋ ಹುಡುಗರನ್ನು ಮೆಚ್ಚಿಸುವುದಕ್ಕಾಗಿಯೋ ತಾವೇ ವಹಿಸಿಕೊಂಡರು. ಸ್ಕೂಲು ರಿಪೇರಿ ಮಾಡಿದ ಬಿಲ್‌ನಲ್ಲಿ ಇದಕ್ಕಾಗಿ ಬೇರೆ ಚಾರ್ಜುಮಾಡಲಿಲ್ಲ.

ಈ ಗೂಡನ್ನು ಕಟ್ಟುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಅಪ್ಪಣೆ ಪಡೆಯಲಿಲ್ಲ. ಮೊದಲೇ ಅಲ್ಲೊಂದು ದಿಣ್ಣೆಯಿದ್ದುದರಿಂದ ಅದನ್ನು ರಿಪೇರಿಮಾಡಿದರೆ ಆಕ್ಷೇಪಣೆಯಿರಲಾರದೆಂದು ಕಂಟ್ರಾಕ್ಟರು ಭಾವಿಸಿದಂತೆ ಕಾಣುವುದು. ಈ ಕಟ್ಟಡವು ಹೆಡ್ಮಾಸ್ಟರು ರಜದಮೇಲಿದ್ದ ಕಾಲದಲ್ಲಿ ಕಟ್ಟಲ್ಪಟ್ಟಿತು. ಅವರು ಜೂನ್ 5 ನೇ ತಾರೀಖಿನ ದಿನ ರಜದಿಂದ ವಾಪಸು ಬಂದಾಗ ಗೂಡುಕಟ್ಟಿ ಪೂರೈಸಿದ್ದುದು ಅವರಿಗೆ ಗೊತ್ತಾಯಿತು. ಅದಕ್ಕೆ ಮೊದಲು ಕೆಲವು ದಿನಗಳಲ್ಲಿ ಅಂದರೆ ಮೇ 29 ನೇ ತಾರೀಖಿನ ಸುಮಾರಿನಲ್ಲಿ ಹೆಡ್ಮಾಸ್ಟರ ಅಪ್ಪಣೆಪಡೆದು ಹುಡುಗರು ವಿಗ್ರಹವನ್ನು ಸ್ಕೂಲಿನಲ್ಲಿದ್ದ ಸ್ಕೌಟ್ ಕ್ಲಬ್ ರೂಮಿನೊಳಕ್ಕೆ ಸಾಗಿಸಿದ್ದರು.

ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರ ಕಾರ್ಯ.

11. 1928 ನೇ ಇಸವಿ ಜೂನ್ 12 ನೇ ತಾರೀಖಿನ ದಿನ ದಿವಾನರ ಪ್ರೈವೇಟ್ ಸೆಕ್ರಿಟರಿಯವರು, ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರಾದ ಶ್ರೀ॥ ಎನ್. ಎಸ್. ಸುಬ್ಬರಾಯರಿಗೆ ಒಂದು ಡಿ. ಓ. ಬರೆದು, ಅದರಲ್ಲಿ ಮುಂದೆ ದೊಡ್ಡದಾಗಬಹುದಾದ ಒಂದು ಸಣ್ಣ ದೇವಸ್ಥಾನವನ್ನು ಸ್ಕೂಲಿನ ಅಂಗಳದಲ್ಲಿ ಕಟ್ಟಿರುವುದು ದಿವಾನರ ಗಮನಕ್ಕೆ ಬಂದಿದೆಯೆಂದೂ, ಈ ವಿಚಾರಕ್ಕೆ ಡೈರೆಕ್ಟರ ಗಮನಕೊಟ್ಟು, ಅದರ ಕಟ್ಟಡವನ್ನು ನಿಲ್ಲಿಸಬೇಕೆಂದೂ, ಅದರ ಹತ್ತಿರದಲ್ಲೇ ಮಸೀದಿಯಿರುವುದರಿಂದ, ಇಂತಹ ಕಟ್ಟಡವನ್ನು ಕಟ್ಟುವುದು ಅನುಚಿತವೆಂದೂ, ಇದರಿಂದ ಮತವೈರಕ್ಕವಕಾಶವಾಗಬಹುದೆಂದೂ ತಿಳಿಸಿದರು. ಅದೇಪ್ರಕಾರ ಡೈರೆಕ್ಟರು ಜೂನ್ 15 ನೇ ತಾರೀಖಿನ ದಿನ ಬೆಳಿಗ್ಗೆ 10½ ಗಂಟೆ ಸುಮಾರಿನಲ್ಲಿ ಸ್ಕೂಲಿಗೆ ಅನಿರೀಕ್ಷಿತವಾಗಿ ಭೇಟಿಕೊಟ್ಟು, ಸ್ಕೂಲಿನ ಆವರಣವನ್ನೆಲ್ಲಾ ಪರೀಕ್ಷಿಸಿ, ಗೂಡನ್ನು ನೋಡಿ, ಅದರ ವಿಚಾರವಾಗಿ ಪ್ರಸ್ತಾಪಿಸಿದರು. ಹೆಡ್ಮಾಸ್ಟರು ಅವರಿಗೆ ಎಲ್ಲಾ ಸಮಾಚಾರಗಳನ್ನೂ ತಿಳಿಸಿದರಲ್ಲದೆ, ಹುಡುಗರು ಆ ಗೂಡಿಗೆ ಒಂದು ಮೆಟ್ಟಲನ್ನೂ, ಒಂದು ಕಬ್ಬಿಣದ ಕವಾಟವನ್ನೂ ಇಡಿಸಿ, ಪೂಜೆ ಸಮಯದಲ್ಲಿ ಕಾಯಿ ಒಡೆಯುವುದಕ್ಕೆ ಗೂಡಿನ ಮುಂಭಾಗದಲ್ಲಿ ಒಂದು ಕಲ್ಲುಚಪ್ಪಡಿಯನ್ನು ಹಾಕಿಸಲು ಆಲೋಚಿಸಿರುವರೆಂದೂ ಹೇಳಿದರು. ವಿಗ್ರಹವನ್ನು ಗೂಡಿನಲ್ಲಿ ತಂದಿರಿಸುವುದಾದರೆ ಮುಂದೆ ಅದನ್ನು ಅಲ್ಲಿಂದ ತೆಗೆಸುವುದು ಅಸಾಧ್ಯವಾಗಬಹುದೆಂದು ಯೋಚಿಸಿ, ಈ ವಿಚಾರದಲ್ಲಿ ಮುಂದೆ ತೊಂದರೆಯಾಗಿ ಪರಿಣಮಿಸಬಹುದಾದ ಯಾವ ಕಾರ್ಯವನ್ನೂ ಮಾಡಕೂಡದೆಂದು ಹುಕ್ಕುಂ ಮಾಡಿದರು. ಅಲ್ಲದೆ, ಅನೇಕ ಜಾತಿಗಳ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿರುವ ಪಬ್ಲಿಕ್ ಸ್ಕೂಲ್ ಇರುವ ಸರ್ಕಾರಿ ಕಟ್ಟಡದಲ್ಲಿ ಒಂದು ಜಾತಿಯವರಿಗೆ ಸೇರಿದ ದೇವರ ವಿಗ್ರಹವನ್ನು ಒಂದುಕಡೆ ಖಾಯಂ ಆಗಿ ಇಡುವುದರ ಉಚಿತಾನುಚಿತಗಳ ವಿಚಾರವಾಗಿ ವಿಷಯಗಳನ್ನು ಸಂಗ್ರಹಿಸಿ, ಸರ್ಕಾರದವರೊಡನೆ ಆಲೋಚಿಸುವುದು ಅವಶ್ಯಕವೆಂದು ಡೈರೆಕ್ಟರಿಗೆ ಕಂಡುಬಂದಿತು. ಕಾಂಪೌಂಡಿನಲ್ಲಿ ಪ್ರತಿಷ್ಠಿತವಾಗದೆ ಬಿದ್ದಿದ್ದ ವಿಗ್ರಹದ ಚರಿತ್ರೆಯನ್ನು ತಿಳಿಸಿ ರಿಪೋರ್ಟು ಮಾಡಬೇಕೆಂದು ಅವರು ಹೆಡ್ಮಾಸ್ಟರನ್ನು ಕೇಳಿದರಲ್ಲದೆ, ತಮ್ಮಿಂದ ಹುಕ್ಕುಂ ಆದ ಹೊರತು ವಿಗ್ರಹವನ್ನು ಮೊದಲಿನ ಸ್ಥಳದಲ್ಲಿ ಇಡುವುದಕ್ಕಾಗಲಿ, ಇನ್ನಾವ ವಿಶೇಷಗಳು ನಡೆಯುವುದಕ್ಕಾಗಲೀ ಅವಕಾಶ ಕೊಡಕೂಡದೆಂದು ತಿಳಿಸಿದರು. ಅದೇ ಪ್ರಕಾರ, ಆ ದಿನವೇ ಹೆಡ್ಮಾಸ್ಟರು ಒಂದು ನೋಟೀಸನ್ನು ಬರೆದು ತಮ್ಮ ಅಸಿಸ್ಟೆಂಟ್ ಮಾಸ್ಟರುಗಳಿಗೆಲ್ಲಾ ಕಳುಹಿಸಿ, ಅವರು ನಿಜಾಂಶಗಳನ್ನು ಹುಡುಗರಿಗೆ ವಿವರಿಸಿ, ಮುಂದಿನ ಏರ್ಪಾಡುಗಳನ್ನು ಸದ್ಯಕ್ಕೆ ನಿಲ್ಲಿಸುವಂತೆ ಮಾಡಬೇಕೆಂದು ಕೇಳಿದರು.

ಆ ದಿನವೇ ಡೈರೆಕ್ಟರು ದಿವಾನರ ಪ್ರೈವೇಟ್ ಸೆಕ್ರಟರಿಗೆ ಉತ್ತರ ಬರೆದು, ಅದರಲ್ಲಿ ಮೇಲೆ ನಮೂದಿಸಿರುವ ಅಂಶಗಳನ್ನೆಲ್ಲಾ ವಿವರಿಸಿ, ಎ. ವಿ. ಸ್ಕೂಲಿನ ಹಿಂಭಾಗದಲ್ಲಿರುವ ಉರ್ದು ಸ್ಕೂಲಿಗೆ ಆ ಸ್ಕೂಲಿನ ಬಾಲಕರು, ಎ. ವಿ. ಸ್ಕೂಲು ಕಾಂಪೌಂಡಿನಲ್ಲೇ ಹೋಗಬೇಕಾಗಿರುವುದರಿಂದ, ಸ್ಕೂಲು ಕಾಂಪೌಂಡಿನಲ್ಲಿರುವ ಗೂಡಿನಲ್ಲಿ ವಿಗ್ರಹವನ್ನಿಡುವುದು ಅನುಚಿತವೆಂದು ತಾವು ಭಾವಿಸುವುದಾಗಿ ತಿಳಿಸಿದರು. ಮತ್ತು ಮುಂದೆ ಗಣೇಶನ ಸಂಬಂಧವಾಗಿ ಮತ್ತಾವ ವಿಶೇಷಗಳನ್ನೂ ನಡೆಸಕೂಡದೆಂದು ತಾವು ಹುಕುಂ ಮಾಡಿರುವುದು ಮಾತ್ರವೇ ಅಲ್ಲದೆ, ಕಾಂಪೌಂಡಿನಲ್ಲಿ ಬಿದ್ದಿದ್ದ ಇತರ ವಿಗ್ರಹಗಳನ್ನೂ ಸ್ಕೂಲು ಕಟ್ಟಡದೊಳಗಿಡುವಂತೆ ಹುಕುಂ ಮಾಡಿರುವುದಾಗಿಯೂ ಆ ಕಾಗದದಲ್ಲಿ ಬರೆದು ತಿಳಿಸಿದರು. ಅಲ್ಲದೆ, ಈ ವಿಚಾರವಾಗಿ ಇನ್ನೂ ಕ್ರಮವಾದ ತನಿಖೆ ನಡೆಸಿ, ಪಾಠಶಾಲೆಯ ಆವರಣದಲ್ಲಿ ಪೂಜೆ ನಡೆಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡದಂತೆಯೂ ಈ ವಿಗ್ರಹಕ್ಕೆ ಪೂಜೆಮಾಡುವ ವಿಚಾರದಲ್ಲಿ ಬಹಳ ಉತ್ಸಾಹಶಾಲಿಗಳಾಗಿರುವ ಹುಡುಗರ ಮನಸ್ಸಿಗೆ ವ್ಯಥೆಯುಂಟಾಗದಂತೆಯೂ ತಾವು ತಕ್ಕ ಎಚ್ಚರದಿಂದ ನೋಡಿಕೊಳ್ಳುವುದಾಗಿಯೂ ಭರವಸೆಕೊಟ್ಟಿದ್ದರು.

ಜೂನ್ 21 ನೇ ತಾರೀಖಿನ ದಿನ ಡೈರೆಕ್ಟರು, ಆಗ ಬೆಂಗಳೂರು ಪೌರಸಭಾಧ್ಯಕ್ಷರಾಗಿದ್ದ ಮೆ॥ ಅಬ್ಬಾಸ್‌ಖಾನರು ಮತ್ತು ಇತರ ಮ್ಯುನಿಸಿಪಲ್ ಅಧಿಕಾರಿಗಳೊಡನೆ ಆ ಸ್ಥಳಕ್ಕೆ ಹೋಗಬೇಕಾಯಿತು. ಆಗ ವಿದ್ಯಾಭ್ಯಾಸದ ಇಲಾಖೆಗೆ ಸೇರಿದ ಓವರ್‌ಸೀಯರನ್ನು ಕುರಿತು, ಅಪ್ಪಣೆಯಿಲ್ಲದೆ ಅಲ್ಲಿ ಗೂಡುಕಟ್ಟುವುದಕ್ಕೆ ಅವಕಾಶಕೊಟ್ಟುದಕ್ಕಾಗಿ ಮೆ॥ ಅಬ್ಬಾಸ್ ಖಾನರು ತರಾಟಿಗೆ ತೆಗೆದುಕೊಂಡರೆಂದು ಡೈರೆಕ್ಟರ ಹೇಳಿಕೆಯಿಂದ ತಿಳಿಯಬರುತ್ತದೆ.

ಅಸಮಧಾನ ಸೂಚನೆಗಳು.

12 ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರು ಹುಕ್ಕುಂ ಮಾಡಿದಮೇಲೆ ಸುಮಾರು ಎರಡುವಾರಗಳ ವರೆಗೆ ಹುಡುಗರಾಗಲಿ, ಅವರ ಸಹಾನುಭೂತಿಗಳಾಗಲಿ ಸ್ಕೂಲು ಅಧಿಕಾರಿಗಳಿಗೆ ಯಾವ ದೂರನ್ನೂ ಹೇಳಲಿಲ್ಲ ; ಅಲ್ಲದೆ ತಮ್ಮ ಅಸಮಧಾನವನ್ನು ಯಾವ ವಿಧದಲ್ಲೂ ತೋರ್ಪಡಿಸಲಿಲ್ಲ. ಈತನ್ಮಧ್ಯೆ, ಮೆ॥ ಅಬ್ಬಾಸ್‌ಖಾನರ ಪ್ರೇರಣೆಯಿಂದ ಗಣೇಶನ ವಿಗ್ರಹಕ್ಕೆ ಸ್ಥಳಪಲ್ಲಟವುಂಟಾಗಿದೆಯೆಂಬ ಸಮಾಚಾರವು ನಗರದಲ್ಲೆಲ್ಲಾ ಹಬ್ಬಿತು. ಮೆ॥ ಅಬ್ಬಾಸ್‌ಖಾನರ ಮನೆಯು ಸ್ಕೂಲಿಗೆ ಎದುರಾಗಿರುವುದರಿಂದಲೂ, ಅದರ ಹಿಂದೆ ಒಂದು ಮಸೀದಿಯಿರುವುದರಿಂದಲೂ ಅವರು ಮತಸಂಬಂಧವಾದ ಅಭಿಪ್ರಾಯದಿಂದ ಈ ರೀತಿ ಅಡಚಣೆಪಡಿಸಿರಬಹುದೆಂದು ಜನರು ಭಾವಿಸಿದರು. ಮೊದಲು ಈ ಅಭಿಪ್ರಾಯವು "ವೀರಕೇಸರಿ" ಎಂಬ ಕನ್ನಡ ದಿನಪತ್ರಿಕೆಯಲ್ಲಿ 1928 ನೇ ಇಸವಿ ಜೂನ್ 27 ನೇ ತಾರೀಖಿನ ದಿನ ಪ್ರಕಟಿಸಲ್ಪಟ್ಟಿತು. ಆದರೆ ಆ ಮಾರನೆದಿನ ಮೆ॥ ಅಬ್ಬಾಸ್‌ಖಾನರು ಆ ಪತ್ರಿಕೆಯ ಸಂಪಾದಕರ ಭೇಟಿಮಾಡಿ, ವಿಗ್ರಹವು ಅಲ್ಲಿರುವುದಕ್ಕೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ಹೇಳಿದಮೇಲೆ ಅದನ್ನೂ ಸಹ ಆದಿನದ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಗಣೇಶನ ವಿಷಯದಲ್ಲಿ "ಪ್ರಜಾಮಿತ್ರ," "ನವಜೀವನ," "ಮೈಸೂರು ಸ್ಟಾರ್" ಈ ಪತ್ರಿಕೆಗಳೂ ಲೇಖನಗಳನ್ನು ಪ್ರಕಟಿಸಿದುವು ; ಬಳೇಪೇಟೆ ಬೋರ್ಡಿನಲ್ಲೂ ಟೀಕೆಮಾಡಲ್ಪಟ್ಟಿತು.

ಅನಂತರ, ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸಲು ಕೆಲವರು ಸ್ವತಃ ಪ್ರಯತ್ನಿಸಿದರು. ಜೂನ್ 29 ನೇ ತಾರೀಖಿನಲ್ಲಿ "ವಿಶ್ವಕರ್ಣಾಟಕ"ದ ಸಂಪಾದಕರಾದ ಶ್ರೀ॥ ಟಿ. ಟಿ. ಶರ್ಮರವರು ಈ ವಿಚಾರದಲ್ಲಿ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇಲಾಖೆಯ ಡೈರೆಕ್ಟರವರಿಗೆ ಒಂದು ಕಾಗದ ಬರೆದರು. ಅವರು ಸರ್ಕಾರದ ಪಬ್ಲಿಸಿಟಿ ಆಫೀಸರಿಗೆ ಆ ಕಾಗದವನ್ನು ರವಾನಿಸಿರುವುದಾಗಿ ಮ॥ ಶರ್ಮರವರಿಗೆ ಉತ್ತರಕೊಟ್ಟರು ; ಪಬ್ಲಿಸಿಟಿ ಆಫೀಸರಿಂದ ಯಾವ ಉತ್ತರವೂ ಇವರಿಗೆ ದೊರೆಯಲಿಲ್ಲ. ಜೂನ್ 27 ನೇ ತಾರೀಖಿನ ದಿನ "ವೀರಕೇಸರಿ"ಯ ಪ್ರತಿನಿಧಿಯು ಡೈರೆಕ್ಟರನ್ನು ಭೇಟಿಮಾಡಿ ಈ ವಿಚಾರವಾಗಿ ಪ್ರಶ್ನಿಸಿದರು. ಆದರೆ ಅವರಿಂದ ಸಮರ್ಪಕವಾದ ಉತ್ತರ ಬಾರದಿದ್ದ ಕಾರಣ, 28 ನೇ ತಾರೀಖಿನ ಆ ಪತ್ರಿಕೆಯಲ್ಲಿ ಭೇಟಿ ಸಮಾಚಾರವನ್ನು ಟೀಕಿಸಿ ಒಂದು ಲೇಖನವನ್ನು ಬರೆದು ಪ್ರಕಟಿಸಿದರು. ಈ ವಿಚಾರವು ಜೂನ್ 27 ನೇ ತಾರೀಖಿನ "ಪ್ರಜಾಮಿತ್ರ" ಪತ್ರಿಕೆಯಲ್ಲೂ ಪ್ರಸ್ತಾಪಿಸಲ್ಪಟ್ಟಿತ್ತು. ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರು ಜುಲೈ 24 ನೇ ತಾರೀಖಿನಲ್ಲಿ ಪಾವಗಡದಲ್ಲಿದ್ದಾಗ, ಸರ್ಕಾರದ ಅಭಿವೃದ್ಧಿ ಇಲಾಖೆಯ ಸೆಕ್ರಿಟರಿಯವರು ಅವರಿಗೊಂದು ಕಾಗದವನ್ನು ಬರೆದು ಅದರ ಜತೆಯಲ್ಲಿ, "ವಿಶ್ವಕರ್ಣಾಟಕ" ಪತ್ರಿಕೆಯ ಸಂಪಾದಕರು ಈ ವಿಚಾರದಲ್ಲಿ ನಿಜಾಂಶಗಳನ್ನು ತಿಳಿಸಬೇಕೆಂದು ಕೇಳಿದ್ದ ಕಾಗದವನ್ನು ಕಳುಹಿಸಿಕೊಟ್ಟರು. ಜುಲೈ 27 ನೇ ತಾರೀಖಿನ ದಿನ ಡೈರೆಕ್ಟರು ಸಿರಾದಿಂದ ಕಾಗದ ಬರೆದು ಎಲ್ಲಾ ಸಮಾಚಾರವನ್ನೂ ತಿಳಿಸಿದರು.

ವಿದ್ಯಾರ್ಥಿಗಳ ಮತ್ತು ಇತರ ಮುಂದಾಳುಗಳ ಚಳುವಳಿ.

13. ಜುಲೈ 23 ನೇ ತಾ॥ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇಲಾಖೆಯ ಡೈರೆಕ್ಟರು ಹುಕ್ಕುಂ ಮಾಡಿದ ಐದು ವಾರಗಳು ಕಳೆದಮೇಲೆ, ಜುಲೈ 23 ನೇ ತಾ॥ ನಲ್ಲಿ ಕ್ರಮವಾದ ಚಳುವಳಿಯು ಕಣ್ಗೊಂಡಿತು. ಆದಿನ ಸಾಯಂಕಾಲ ಮಲ್ಲೇಶ್ವರದ ಶ್ರೀ ಎಚ್. ವಿ. ಸುಬ್ರಹ್ಮಣ್ಯಂ ಎಂಬುವರು ಚಳವಳಿಯಲ್ಲಿ ಸೇರಿ ಹುಡುಗರ ಮುಂದಾಳಾಗಲು ಬಂದರು. ಆಮೇಲೆ ಹುಡುಗರು, ಹೊಸದಾಗಿ ಕಟ್ಟಿರುವ ಗೂಡಿನಲ್ಲಿ ಗಣೇಶನ ವಿಗ್ರಹವನ್ನು ಇಟ್ಟೇ ತೀರಬೇಕೆಂದು ಹೆಡ್ಮಾಸ್ಟರನ್ನು ಬಲಾತ್ಕರಿಸಿದರು.

14. ಜುಲೈ 24ನೇ ತಾ॥—ಈ ದಿನ ಬೆಳಿಗ್ಗೆ ಸುಮಾರು 10 ಗಂಟೆ 50 ನಿಮಿಷದ ಹೊತ್ತಿನಲ್ಲಿ ಹೆಡ್ಮಾಸ್ಟರು ಎಂದಿನಂತೆ ಸ್ಕೂಲಿಗೆ ಬರುತ್ತಿರುವಾಗ, ತಮ್ಮ ಮತ್ತು ಇತರ ಸ್ಕೂಲುಗಳ ಹುಡುಗರು, ಶ್ರೀ॥ ಸುಬ್ರಹ್ಮಣ್ಯಂರವರ ಮುಂದಾಳುತನದಲ್ಲಿ ಗುಂಪುಕಟ್ಟಿಕೊಂಡು, ಸ್ಕೂಲು ಎದುರುಗಡೆ ರಸ್ತೆಯಲ್ಲಿ ಗಲಾಟೆಮಾಡುತ್ತಲೂ, ಇತರ ಹುಡುಗರನ್ನೂ ತಮ್ಮೊಡನೆ ಸೇರಬೇಕೆಂದು ಕರೆಯುತ್ತಲೂ ಇದ್ದುದನ್ನು ನೋಡಿದರು. ಕಾರಣವೇನೆಂದು ಹೆಡ್ಮಾಸ್ಟರು ಕೇಳಲಾಗಿ, ಗಣೇಶನನ್ನು ಸ್ವಸ್ಥಾನದಲ್ಲಿಡುವವರೆಗೆ ತಾವು ತಂತಮ್ಮ ತರಗತಿಗಳಿಗೆ ಹೋಗುವುದಿಲ್ಲವೆಂದು ಹುಡುಗರು ತಿಳಿಸಿದರು. ತಾವು ಹೇಳಿದ ಬುದ್ಧಿವಾದವನ್ನು ಹುಡುಗರು ಲೆಕ್ಕಿಸದಿರಲು, ಮುಂದೆ ಶಾಂತಿಭಂಗವಾಗಬಹುದೆಂದು ಹೆದರಿ, ಹೆಡ್ಮಾಸ್ಟರು ಹೊಸಮಾರ್ಕೆಟ್ ಪೋಲೀಸ್ ಸ್ಟೇಷನ್‌ಗೆ ಹೋಗಿ ನಡೆದ ಸಮಾಚಾರವನ್ನು ಪೋಲೀಸ್ ಇನ್‌ಸ್ಪೆಕ್ಟರಿಗೆ ತಿಳಿಸಿದರು. ಇನ್‌ಸ್ಪೆಕ್ಟರು ಕೂಡಲೆ ಸ್ಕೂಲುಹತ್ತಿರ ಹೋಗಿ ಅಲ್ಲಿ ಮುಂದೆ ಹೆಚ್ಚು ಗಲಾಟೆ ನಡೆಯದಂತೆ ನೋಡಿಕೊಳ್ಳಲು ಕೆಲವು ಕಾನ್‌ಸ್ಟೇಬಲರನ್ನು ನೇಮಿಸಿ, ಅಷ್ಟರೊಳಗೆ ಶ್ರೀ॥ ಸುಬ್ರಹ್ಮಣ್ಯಂರವರೊಡನೆ ಚಿಕ್ಕಪೇಟೆ ಮಾರ್ಗವಾಗಿ ಮೆರವಣಿಗೆ ಹೊರಟಿದ್ದ ಹುಡುಗರನ್ನು ಹಿಂಬಾಲಿಸಲು ಹೊರಟರು. ಬಳೇಪೇಟೆ ಚೌಕದ ಹತ್ತಿರ ಸುಮಾರು ನೂರು ಹುಡುಗರ ಗುಂಪನ್ನು ಅವರು ಕಂಡರು. ಆದಿನ ಮಧ್ಯಾಹ್ನ ಒಂದೂಕಾಲು ಗಂಟೆ ಸಮಯದಲ್ಲಿ ಮೈಸೂರು ಬ್ಯಾಂಕಿನ ಹತ್ತಿರ ಸುಬ್ರಹ್ಮಣ್ಯಂರವರ ಮುಂದಾಳುತನದಲ್ಲಿ ಕೆಲವು ಹುಡುಗರು ಗುಂಪು ಕಟ್ಟಿಕೊಂಡು ಡಿಸ್ಟ್ರಿಕ್ಟ್ ಆಫೀಸಿನ ಕಡೆಗೆ ಹೋಗುತ್ತಿದ್ದುದನ್ನು ನೋಡಿದರು. ಈ ಸಮಾಚಾರವನ್ನು ನಗರದ ಪೋಲೀಸು ಮುಖ್ಯಾಧಿಕಾರಿಯಾದ ಅ॥ ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಸಲು, ಅವರು ಆದಿನ ಸಾಯಂಕಾಲ 5 ಗಂಟೆ ಸಮಯದಲ್ಲಿ ಒಬ್ಬರು ಸಬ್ ಇನ್‌ಸ್ಪೆಕ್ಟರಿಗೆ, 25ನೇ ತಾರೀಖಿನ ಲಾಗಾಯ್ತು ಮುಷ್ಕರಿಗಳ ನಡವಳಿಕೆಗಳನ್ನು ನೋಡುತ್ತಿರಬೇಕೆಂದು ಹುಕ್ಕುಂ ಮಾಡಿದರು. 24ನೇ ತಾರೀಖಿನ ದಿನವೇ ಸುಲ್ತಾನ್‌ಪೇಟೆ ಸ್ಕೂಲಿನ 344 ವಿದ್ಯಾರ್ಥಿಗಳ ಪೈಕಿ 49 ಮಂದಿ ಮಾತ್ರ ಹಾಜರಾಗಿದ್ದರು.

15. ಜುಲೈ 25ನೇ ತಾ॥—ಈ ದಿನ ಬೆಳಿಗ್ಗೆ ಸುಮಾರು 10½ ಗಂಟೆ ಸಮಯದಲ್ಲಿ ಕೆಲವು ಹುಡುಗರು ಗುಂಪುಕಟ್ಟಿಕೊಂಡು ಸ್ಕೂಲಿನ ಹೊರಗಡೆ ನಿಂತಿದ್ದರು : ತರಗತಿಗಳಲ್ಲಿ ಹಾಜರಿದ್ದವರು 97 ಮಂದಿ ಮಾತ್ರ. ಸುಮಾರು 11 ರಿಂದ 14 ವರ್ಷ ವಯಸ್ಸಿನ ಹುಡುಗರೇ ಈ ಮುಷ್ಕರದಲ್ಲಿ ಸೇರಿದ್ದರು. ಇವರು ಶ್ರೀಗಳಾದ ಸುಬ್ರಹ್ಮಣ್ಯಂ ಮತ್ತು ರಾಮಲಾಲ್ ತಿವಾರಿ ಇವರ ಮುಂದಾಳುತನದಲ್ಲಿ ಸ್ಕೂಲಿನ ಮುಂದೆ ಗಲಾಟೆಮಾಡುತ್ತಿದ್ದರು. ಅವರು ರಸ್ತೆಯನು ಅಡ್ಡಕಟ್ಟಿ, ಇತರ ಹುಡುಗರೂ ತಮ್ಮೊಡನೆ ಸೇರುವಂತೆ ಕರೆಯುತ್ತಿದ್ದರು. ಪೋಲೀಸಿನವರು ಶ್ರೀ॥ ಸುಬ್ರಹ್ಮಣ್ಯಂರವರಿಗೆ ಎಚ್ಚರಿಕೆ ಕೊಡಲು ಅವರದನ್ನು ಲೆಕ್ಕಿಸಲಿಲ್ಲ. ಅಲ್ಲದೆ, ಸ್ವಲ್ಪಹೊತ್ತಿನ ಮೇಲೆ ಇಬ್ಬರು ಮುಂದಾಳುಗಳೂ, ಗಲಾಟೆಮಾಡುತ್ತಿದ್ದ ಹುಡುಗರ ಗುಂಪನ್ನು ಕರೆದುಕೊಂಡು ಮಾಮೂಲುಪೇಟೆಸ್ಕೂಲು, ಸುಲ್ತಾನ್‌ಪೇಟೆ ಸ್ಕೂಲಿನ ಶಾಖೆ, ಈ ಸ್ಥಳಗಳಿಗೆ ಹೋಗಿ ಅಲ್ಲೆಲ್ಲಾ ಗಲಾಟೆಮಾಡಿ, ಅಲ್ಲಿ

ಗಳನ್ನಿಸಿದು, ಆ ಪಾಠಶಾಲೆಗಳ ಕೆಲವು ಹುಡುಗರು ತಮ್ಮ ಗುಂಪನ್ನು ಸೇರುವಂತೆ ಮಾಡಿದರು. ಅಲ್ಲಿಂದ ಅವರು ಚಿಕ್ಕಪೇಟೆ, ಬಳೇಪೇಟೆಗಳ ಮಾರ್ಗವಾಗಿ ಹೊರಟು ಆಸ್ಪತ್ರೆ ಗಲ್ಲಿಯಲ್ಲಿರುವ ಆರ್ಯವಿದ್ಯಾ ಪಾಠಶಾಲೆಯ ಹತ್ತಿರ ಹೋಗಿ ಅಲ್ಲಿಯೂ ಗಲಾಟೆ ಮಾಡಿದರು, ಆದರೆ, ಆ ಸ್ಕೂಲಿನ ಹೆಡ್ಮಾಸ್ಟರು ಇವರ ನಡತೆಯನ್ನು ಖಂಡಿಸಿ ಮಾತಾಡಲು, ಮ॥ ಸುಬ್ರಹ್ಮಣ್ಯಂರವರಿಗೂ ಅವರಿಗೂ ಸ್ವಲ್ಪ ಮಾತು ನಡೆಯಿತು ; ಆ ಮೇಲೆ ಸುಬ್ರಹ್ಮಣ್ಯಂರವರು ತಮ್ಮ ಗುಂಪನ್ನು ಕರೆದುಕೊಂಡು ಧರ್ಮಾಂಬುಧಿ ಕೆರೆ ಹತ್ತಿರವಿರುವ ಮ್ಯುನಿಸಿಪಲ್ ತೋಟಕ್ಕೆ ಹೋದರು. ಅಲ್ಲಿ ಅವರೂ ಮ॥ ತಿವಾರಿಯವರೂ ಸುಮಾರು ಅರ್ಧಗಂಟೆ ಹೊತ್ತು ಭಾಷಣಗಳನ್ನು ಮಾಡಿ ಗಣೇಶನ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವವರೆಗೆ ವಿದ್ಯಾರ್ಥಿಗಳು ಏನೇ ಆದರೂ ಪಾಠಶಾಲೆಗಳಿಗೆ ಹೋಗಕೂಡದೆಂದು ಬೋಧಿಸಿದರು.

ಭಾಷಣಗಳಾದಮೇಲೆ, ಅವರು ಹುಡುಗರನ್ನು ಕರೆದುಕೊಂಡು ಅಕ್ಕಿಪೇಟೆ ಮತ್ತು ಅರಳೇಪೇಟೆಗಳ ಮಾರ್ಗವಾಗಿ ಚಾಮರಾಜಪೇಟೆ ಮಿಡ್ಲ್‌ಸ್ಕೂಲಿನ ಹತ್ತಿರಕ್ಕೆ ಮಧ್ಯಾಹ್ನ 12½ ಗಂಟೆ ಸುಮಾರಿಗೆ ಹೋದರು. ಅಲ್ಲಿ ಕಾಲುಗಂಟೆ ಹೊತ್ತು ಗಲಾಟೆಮಾಡಿ, ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಕೋಟೆ ಎ. ವಿ. ಸ್ಕೂಲಿನ ಹತ್ತಿರಕ್ಕೆ ಹೋದರು. ಅಲ್ಲಿ ಅವರು ಆ ಸ್ಕೂಲಿನ ಹೆಡ್ಮಾಸ್ಟರೊಡನೆ, ಗಣೇಶನ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವ ಕಾರ್ಯದಲ್ಲಿ ಆ ಸ್ಕೂಲು ಹುಡುಗರ ಸಹಾನುಭೂತಿಯನ್ನು ಪಡೆಯುವುದಕ್ಕಾಗಿ ತಾವಲ್ಲಿಗೆ ಬಂದಿರುವುದಾಗಿ ಹೇಳಿದರು. ತಮ್ಮ ಪಾಠಶಾಲೆಯ ಹುಡುಗರಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಆ ಹೆಡ್ಮಾಸ್ಟರು ತಿಳಿಸಲು, ದೊಂಬಿಯವರು, ಹೆಚ್ಚಾಗಿ ಗಲಾಟೆ ಮಾಡಿ ಕೊಠಡಿಗಳೊಳಕ್ಕೆ ಕಲ್ಲುಗಳನ್ನೆಸೆಯತೊಡಗಿದರು. ಆ ಸ್ಥಿತಿಯಲ್ಲಿ ಸ್ಕೂಲನ್ನು ಮುಚ್ಚಿ ಬಿಡುವುದು ಸೂಕ್ತವೆಂದು ಹೆಡ್ಮಾಸ್ಟರು ಭಾವಿಸಿ, ಹುಡುಗರೆಲ್ಲರೂ ಮನೆಗೆ ಹೋಗಬಹುದೆಂದು ಹೇಳಿ, ನಡೆದ ಸಮಾಚಾರವನ್ನು ಅ॥ ಪೋಲೀಸ್ ಸೂಪರಿಂಟೆಂಡೆಂಟರಿಗೆ ರಿಪೋರ್ಟು ಮಾಡಿದರು.

ಅನಂತರ ಮ॥ ಸುಬ್ರಹ್ಮಣ್ಯಂರವರು ಹುಡುಗರನ್ನೆಲ್ಲಾ ಕೋಟೆ ಎ. ವಿ. ಸ್ಕೂಲು ಎದುರುಗಡೆ ಇರುವ ಮರದ ಕೆಳಗೆ ಸೇರಿಸಿಕೊಂಡು, ಗಣೇಶನ ವಿಗ್ರಹದ ವಿಚಾರವನ್ನೆಲ್ಲಾ ವಿವರಿಸಿ, ವಿಗ್ರಹವನ್ನು ಅದರ ಸ್ಥಾನದಿಂದ ಬೇರ್ಪಡಿಸಿರುವುದು ಹಿಂದೂ ಮತಕ್ಕೆ ಎಷ್ಟು ಅವಮಾನಕರವಾದುದೆಂದು ಹೇಳಿ ವಿಗ್ರಹವನ್ನು ಸ್ವಸ್ಥಾನದಲ್ಲಿಡುವವರೆಗೆ ಏನೇ ಆದರೂ ವಿದ್ಯಾರ್ಥಿಗಳು ಸ್ಕೂಲುಗಳಿಗೆ ಹೋಗಕೂಡದೆಂದು ತಿಳಿಸಿದರು. ಆ ಮೇಲೆ ಹುಡುಗರೆಲ್ಲರೂ ತಂತಮ್ಮ ಮನೆಗಳಿಗೆ ಹೋಗಿ ಸಾಯಂಕಾಲ ಮ್ಯುನಿಸಿಪಲ್ ತೋಟದಲ್ಲಿ ಪುನಃ ಸೇರಬೇಕೆಂದು ತಿಳಿಸಿ ಕಳುಹಿಸಿಬಿಟ್ಟರು. ಆ ದಿನ ಸಾಯಂಕಾಲ ಸುಮಾರು ಆರುವರೆ ಗಂಟೆ ಸಮಯದಲ್ಲಿ ಶ್ರೀ॥ ಗಳಾದ ಸುಬ್ರಹ್ಮಣ್ಯಂ, ರಾಮಲಾಲ್ ತಿವಾರಿ, ಜೆ. ಭೀಮರಾವ್ ಈ ಮೂರು ಮಂದಿ ಮುಂದಾಳುಗಳೂ ಹೊಸ ಮಾರ್ಕೆಟ್ ಮುಂಭಾಗದಲ್ಲಿ ಮೀಟಿಂಗ್ ನಡೆಸಿ ಭಾಷಣಗಳನ್ನು ಮಾಡಿದರು. ಅಲ್ಲಿ ಸುಮಾರು 200-300 ಮಂದಿ ವಿದ್ಯಾರ್ಥಿಗಳು ಸೇರಿದ್ದರು.

16. ಜುಲೈ 26 ನೇ ತಾ॥—ಮುಷ್ಕರವು 26 ನೇ ತಾರೀಖಿನ ದಿನವೂ ಮುಂದುವರಿಯಿತು. ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಆ ದಿನ 58 ಮಂದಿ ವಿದ್ಯಾರ್ಥಿಗಳು ಮಾತ್ರ ಹಾಜರಾಗಿದ್ದರು. ಹಿಂದಿನ ದಿನಗಳಂತೆಯೇ ಶ್ರೀ॥ ಸುಬ್ರಹ್ಮಣ್ಯಂರವರ ಮುಂದಾಳುತನಕ್ಕೊಳಪಟ್ಟಿದ್ದ ಹುಡುಗರು, ಸ್ಕೂಲು ಪ್ರಾರಂಭವಾಗುವ ಸಮಯದಲ್ಲಿ ಸ್ಕೂಲಿನ ಮುಂಭಾಗದಲ್ಲಿ ಸೇರಿ, ಬಾಯಿಮಾತಿನಿಂದಲೂ ಬಲಾತ್ಕಾರದಿಂದಲೂ ಇತರ ಹುಡುಗರು ತಮ್ಮೊಡನೆ ಸೇರುವಂತೆ ಪ್ರಯತ್ನಿಸಿದರು. ಆಮೇಲೆ ಎಂದಿನಂತೆ, ಮಾಮೂಲುಪೇಟೆ ಸ್ಕೂಲು, ಆರ್ಯವಿದ್ಯಾಪಾಠಶಾಲೆ ಇವುಗಳ ಹತ್ತಿರ ಹೋಗಿ ಆ ಪಾಠಶಾಲೆಗಳ ಹುಡುಗರನ್ನು ಸೇರಿಸಿಕೊಂಡು, ಮ್ಯುನಿಸಿಪಲ್ ತೋಟದಲ್ಲಿ ಮೀಟಿಂಗ್ ನಡೆಸಿದರು. ಶ್ರೀ॥ ಸುಬ್ರಹ್ಮಣ್ಯಂರವರು ಅಲ್ಲಿ ಪುನಃ ಭಾಷಣಮಾಡಿದರು. ಅವರು ಅಲ್ಲಿಂದ ಮಲ್ಲೇಶ್ವರಕ್ಕೆ ಹೋದರು. ಅಲ್ಲಿ ಮ॥ ಸುಬ್ರಹ್ಮಣ್ಯಂ ರವರು, ರೀಡಿಂಗ್ ರೂಮಿನ ಹತ್ತಿರದ ಮೈದಾನದಲ್ಲಿ ಇನ್ನೊಂದು ಭಾಷಣಮಾಡಿದರು. ರಸ್ತೆಗೆ ಅಡ್ಡ ಕಟ್ಟಬೇಡಿರೆಂದು ಹೇಳಿದ ಪೋಲೀಸ್ ಇನ್‌ಸ್ಪೆಕ್ಟರು ಮ॥ ಸುಬ್ರಹ್ಮಣ್ಯರಿಂದ ತಿರಸ್ಕರಿಸಲ್ಪಟ್ಟು ಕಲ್ಲಿನಿಂದ ಹೊಡೆಯಲ್ಪಟ್ಟರು. ಆಮೇಲೆ ಮಧ್ಯಾಹ್ನ ಒಂದೂಕಾಲುಗಂಟೆ ಸಮಯದಲ್ಲಿ ದೊಂಬಿ ಹುಡುಗರು, ಶ್ರೀ॥ ಗಳಾದ ಸುಬ್ರಹ್ಮಣ್ಯಂ ಮತ್ತು ತಿವಾರಿ ಇವರ ಮುಂದಾಳುತನದಲ್ಲಿ, ಕೈಯಲ್ಲಿ ಕೋಲುಗಳನ್ನೂ ಕಲ್ಲುಗಳನ್ನೂ ಹಿಡಿದುಕೊಂಡು, ಗಟ್ಟಿಯಾಗಿ ಕೂಗಿಕೊಳ್ಳುತ್ತ ಮಲ್ಲೇಶ್ವರಂ ಮಿಡ್ಲ್‌ಸ್ಕೂಲು ಕಾಂಪೌಂಡಿನೊಳಕ್ಕೆ ನುಗ್ಗಿದರು. ಅಲ್ಲಿ ಕೆಲವು ಕಿಟಕಿಗಳನ್ನು ಒಡೆದು ಹಾಕಿ, ಆ ಪಾಠಶಾಲೆಯ ಹುಡುಗರು ತಮ್ಮೊಡನೆ ಸೇರಲು ಅವಕಾಶವಾಗುವಂತೆ ಸ್ಕೂಲು ಮುಚ್ಚಿಬಿಡಬೇಕೆಂದು ಹೆಡ್ಮಾಸ್ಟರನ್ನು ಒತ್ತಾಯಪಡಿಸಿದರು. ಹೆಡ್ಮಾಸ್ಟರು ಅವರನ್ನು ಸಮಾಧಾನಪಡಿಸುತ್ತಿರುವಾಗ ದೊಂಬಿಯವರು ಕಲ್ಲಿನಿಂದ ಅವರ ಕಾಲಿನ ಮೇಲೆ ಹೊಡೆದರು. ಒಂದೂವರೆಗಂಟೆಗೆ ವಿರಾಮ ಕಾಲದಲ್ಲಿ, ಆ ಸ್ಕೂಲು ಹುಡುಗರೆಲ್ಲರೂ ಹೊರಗಡೆ ಬರಲು ದೊಂಬಿಯವರು ಅಲ್ಲಿಂದ ಹೊರಟು, ಅಲ್ಲಿದ್ದ ಹೈಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳಿಗೆ ಹೋಗಿ ಅಲ್ಲಿಯೂ ಕೂಡ ಗಲಾಟೆ ಮಾಡಿದರು. ಅನಂತರ ಮ್ಯುನಿಸಿಪಲ್ ತೋಟಕ್ಕೆ ಹೋಗಿ ಪುನಃ ಮತ್ತೊಂದು ಮೀಟಿಂಗ್ ನಡೆಸಿದರು. ಸಾಯಂಕಾಲ ಸುಮಾರು 5 ಗಂಟೆಗೆ ಸುಲ್ತಾನ್‌ಪೇಟೆ ಸ್ಕೂಲಿಗೆ ಬಂದು ಒಂದು ಗಣಪತಿ ಚಿತ್ರಪಟವನ್ನು ಗೂಡಿನಲ್ಲಿಟ್ಟು ಪೂಜಿಸಿ, ಆ ಮೇಲೆ ಹೊರಟು ಹೋದರು.

17. ಜುಲೈ ತಾ॥ 27 ನೇ ಸತ್ಯಾಗ್ರಹ ಪ್ರಾರಂಭ.

ಜುಲೈ 27 ನೇ ತಾರೀಖಿನ ದಿನ 41 ಹುಡುಗರು ಮಾತ್ರ ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಹಾಜರಾಗಿದ್ದರು. ಮ॥ ಸುಬ್ರಹ್ಮಣ್ಯಂರವರ ಮುಂದಾಳುತನಕ್ಕೊಳಪಟ್ಟಿದ್ದ ಮುಷ್ಕರಿಗಳು, ಗಣೇಶನ ಚಿತ್ರಪಟವನ್ನು ಒಂದು ಗಳುವಿಗೆ ಕಟ್ಟಿಕೊಂಡು, ಮಧ್ಯಾಹ್ನದವರೆಗೂ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿದರು. ಸಾಯಂಕಾಲ 4½ ಗಂಟೆ ಮೇಲೆ ಈ ಚಳವಳಿಯು 'ಸತ್ಯಾಗ್ರಹ' ವೆಂಬ ಬೇರೆ ರೂಪವನ್ನು ತಾಳಿತು. ಆಮೇಲೆ ಬೀದಿಗಳಲ್ಲಿ ಮೆರವಣಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟು, ಆರಾರು ಮಂದಿಯು ಪ್ರಕಾರ ಸುಲ್ತಾನ್‌ಪೇಟೆ ಸ್ಕೂಲು ಮುಂಭಾಗದ ರಸ್ತೆಯಲ್ಲಿ ಕುಳಿತುಕೊಂಡು ಭಜನೆ ಮಾಡುವುದಕ್ಕೆ ಪ್ರಾರಂಭಿಸಿದರು. ಅವರ ಸುತ್ತಲೂ ಅನೇಕ ಜನರು ಸೇರಿ ಗುಂಪು ದೊಡ್ಡದಾಗಿ ಆ ರಸ್ತೆಯಲ್ಲಾ ಕಟ್ಟಿಹೋಯಿತು. ಮ॥ ಸುಬ್ರಹ್ಮಣ್ಯಂರವರಿಗೆ ಪೋಲೀಸ್‌ನವರು ಎಚ್ಚರಿಕೆ ಕೊಟ್ಟರೂ ಲೆಕ್ಕಿಸದೆ ಮುಸಲ್ಮಾನರಿಗೆ ಕೋಪವನ್ನುಂಟುಮಾಡಬಹುದಾದಂತಹ ಭಾಷಣಗಳನ್ನು ಮಾಡಿದರು. ಆ ದಿನ ಸಾಯಂಕಾಲ, ಶಾಂತಿಯನ್ನು ರಕ್ಷಿಸುವುದಕ್ಕೋಸ್ಕರ, ಮೂರುಮಂದಿ ಮುಂದಾಳುಗಳನ್ನು ಜಾಮೀನ್ ಕೊಡಬೇಕೆಂದು ಡೆಪ್ಯುಟಿ ಕಮೀಷನರು ಹುಕ್ಕುಂ ಮಾಡಿದರು. ಆ ರಾತ್ರಿಯಲ್ಲಾ ಸತ್ಯಾಗ್ರಹವು ಮುಂದುವರಿಯಿತು. ಸತ್ಯಾಗ್ರಹವನ್ನಾಚರಿಸುತ್ತಿದ್ದ ಹುಡುಗರು ಕೆಲವು ಮಂದಿಗಳು ಮಾತ್ರವೇ ಇದ್ದುದರಿಂದ ಅವರ ಹಿತೈಷಿಗಳು ಅವರಿಗೆ ಅಲ್ಲೇ ಊಟ ತಿಂಡಿಗಳನ್ನು ತಂದು ಕೊಟ್ಟರು,

18. ಜುಲೈ 28 ನೇ ತಾ॥ ಸತ್ಯಾಗ್ರಹವು ಮುಂದುವರಿದುದು.

ಜುಲೈ 28 ನೇ ತಾರೀಖಿನದಿನ 8 ಮಂದಿ ವಿದ್ಯಾರ್ಥಿಗಳು ಮಾತ್ರ ಸುಲ್ತಾನ್‌ಪೇಟೆ ಸ್ಕೂಲಿನಲ್ಲಿ ಹಾಜರಿದ್ದರು. ಸತ್ಯಾಗ್ರಹವು ಮುಂದುವರಿಸಲ್ಪಟ್ಟಿತು. ಗುಂಡೋಪಂತರ ಬೀದಿಯ ತಿರುಗುಮುರಿಯಿಂದ ಮೈಸೂರು ರಸ್ತೆಯವರೆಗೂ ರಸ್ತೆತುಂಬ ಜನರ ದೊಡ್ಡ ಗುಂಪು ಸೇರಿತ್ತು. ಆದಿನದ ಬೆಳಿಗ್ಗೆ ಡೆಪ್ಯುಟಿ ಕಮಿಷನರು ಆ ಸ್ಥಳಕ್ಕೆ ಬರಲು ಪ್ರಯತ್ನಿಸಿದಾಗ ನಾಲ್ಬಂದ್ವಾಡಿ ಚೌಕದ ಹತ್ತಿರ ಅವರನ್ನು ಬಿಡದೆ ಹೋದುದರಿಂದ ಅವರು ವಾಪಸು ಹೊರಟು ಹೋದರೆಂದು ಹೇಳಲ್ಪಟ್ಟಿದೆ. ಮೆ॥ ಅಬ್ಬಾಸ್‌ಖಾನರ ಮನೆಹತ್ತಿರವಿರುವ ಉರ್ದು ಗರ್ಲ್ಸ್ ಸ್ಕೂಲಿಗೆ ಹೋಗುತ್ತಿದ್ದ ಗೋಷಾಗಾಡಿಗಳು ತಡೆಯಲ್ಪಟ್ಟವು. ಇದು ಅಲ್ಲಿದ್ದ ಮುಸಲ್ಮಾನರಿಗೆ ಕೋಪವನ್ನುಂಟುಮಾಡಿದರೂ, ಸಕಾಲದಲ್ಲಿ ಪೋಲೀಸರ ಸಹಾಯದಿಂದ ಯಾವ ಅಚಾತುರ್ಯವೂ ನಡೆಯಲಿಲ್ಲ. ಅ॥ ಪೋಲೀಸ್ ಸೂಪರಿಂಟೆಂಡೆಂಟರಲ್ಲಿ ಫಿರ್ಯಾದು ಮಾಡಲ್ಪಟ್ಟಿತು. ಆ ದಿನ ಪಟ್ಟಣದ ಕೆಲವು ಪ್ರಮುಖರು ಕೂಡಲೇ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವಂತೆ ಏರ್ಪಡಿಸಿರುವುದಾಗಿ ಭರವಸೆಕೊಟ್ಟು ಸತ್ಯಾಗ್ರಹವನ್ನು ನಿಲ್ಲಿಸುವಂತೆ ಮುಂದಾಳುಗಳನ್ನು ಕೇಳಿಕೊಂಡರು. ತಮ್ಮ ಭರವಸೆಯಲ್ಲಿ ನಂಬಿಕೆ ಹುಟ್ಟಿಸುವುದಕ್ಕಾಗಿ, ಅವರು ಎಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳಿಂದಲೂ, ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮೆ॥ ಮಹಮುದ್ ಅಬ್ಬಾಸ್ ಖಾನರಿಂದಲೂ ಇನ್ನು ಹತ್ತುದಿನಗಳೊಳಗಾಗಿ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವುದಾಗಿ ಅವರ ರುಜುವನ್ನೊಳಗೊಂಡ ಕಾಗದವನ್ನು ಬರಸಿಕೊಂಡು ಬಂದರು. ಆದರೆ, ಮುಂದಾಳುಗಳ ಪೈಕಿ ಇಬ್ಬರು ಅಂದರೆ ಮ॥ ಗಳಾದ ರಾಮಲಾಲ್ ತಿವಾರಿ ಮತ್ತು ಭೀಮರಾವ್ ಇವರು ಇದಕ್ಕೆ ಒಪ್ಪಿದರು. ಮ॥ ಸುಬ್ರಹ್ಮಣ್ಯಂರವರು ಒಪ್ಪಲಿಲ್ಲ. ಅವರು ಹುಡುಗರನ್ನು ಕುರಿತು, ನನ್ನನ್ನು ದಸ್ತಗಿರಿ ಮಾಡುತ್ತಾರೆ, ಆದರೂ ವಿಗ್ರಹವನ್ನು ಸ್ವಸ್ಥಾನದಲ್ಲಿಡುವವರೆಗೆ ಸತ್ಯಾಗ್ರಹವನ್ನು ನಿಲ್ಲಿಸಕೂಡದು ಎಂದು ಹೇಳಿದರು. ಆದಿನ ಸಾಯಂಕಾಲ ದೊಡ್ಡ ಮಳೆ ಸುರಿಯುತ್ತಿದ್ದರೂ ಸತ್ಯಾಗ್ರಹಿಗಳು, ಸ್ಕೂಲು ಹೊರಗಡೆ ಕುಳಿತೇ ಇದ್ದರು ; ಸಾಯಂಕಾಲ 6 ಗಂಟೆ ಸುಮಾರಿನಲ್ಲಿ ವಿಗ್ರಹವನ್ನಿಟ್ಟಿದ್ದ ಕೊಠಡಿಯ ಹತ್ತಿರ ಕುಳಿತುಕೊಂಡರು.

ಪಬ್ಲಿಕ್ ಸ್ಕೂಲಿನಲ್ಲಿ ಒಂದು ದೊಡ್ಡ ದೇವಸ್ಥಾನವನ್ನು ಕಟ್ಟದಂತೆ ಮಾಡಬೇಕೆಂದು ಮಿ॥ ಅಬ್ಬಾಸ್‌ಖಾನರು ಸರ್ಕಾರದವರಿಗೆ ತಿಳಿಸಿದುದೂ, ಆ ವಿಚಾರಕ್ಕೆ ತಕ್ಕ ಗಮನಕೊಡಬೇಕೆಂದು ಸರ್ಕಾರದವರು ಡೈರೆಕ್ಟರಿಗೆ ತಿಳಿಸಿದುದೂ, ವಿಗ್ರಹವನ್ನು ಗೂಡಿನಲ್ಲಿಡಕೂಡದೆಂದು ಡೈರೆಕ್ಟರು ಹುಕ್ಕುಂ ಮಾಡಿದುದೂ ಎಲ್ಲವೂ ಸರಿ. ಆದರೆ, ವಿಗ್ರಹದ ಸ್ಥಳಪಲ್ಲಟಕ್ಕೆ ನಿಜಕಾರಣವಾದ ಈ ಸಮಾಚಾರವು ಜನರಿಗೆ ಹೇಗೂ ಚೆನ್ನಾಗಿ ಗೊತ್ತಾಗಿದ್ದರೂ, ಡೈರೆಕ್ಟರೂ, ಮಿ॥ ಅಬ್ಬಾಸ್‌ಖಾನರೂ ಅದನ್ನು ಮುಚ್ಚಿಕೊಂಡುದರಿಂದ ಇಷ್ಟು ಗಲಭೆಗೆ ಕಾರಣವಾಯಿತು.

ಸವಾರರು ಹುಡುಗರ ಮೇಲೆ ಬಿದ್ದರೂ ಮನಃಪೂರ್ವಕವಾಗಿ ಅವರನ್ನು ಹಿಂಸಿಸಲಿಲ್ಲ. ಹಾಗೆ ಮಾಡಿದ್ದರೆ ಬಹಳ ಅನಾಹುತಗಳು ನಡೆದು ಹೋಗುತ್ತಿದ್ದುವು.

ಕಾರಣ ಸಿಕ್ಕಲಿ ಸಿಕ್ಕದಿರಲಿ ಜಗಳ ಮಾಡಬೇಕೆಂದು ಮುಸಲ್ಮಾನರು ಸಿದ್ಧರಾಗಿಯೇ ಬಂದಿದ್ದರು. ಹಾಗೂ ಅವರೇ ಮೊದಲು ಹಿಂದುಗಳ ಮೇಲೆ ಬಿದ್ದರು. ಹುಡುಗರ ಆಸೆಯು ಕೈಗೂಡಿದ್ದುದರಿಂದ, ಅವರು ಮಿ॥ ಅಬ್ಬಾಸ್‌ಖಾನರ ಮನೆ ಮೇಲೆ ಕಲ್ಲೆಸೆಯುವುದಕ್ಕೆ ಕಾರಣವಿಲ್ಲ. ಆದಿನ ದಿವಾನರನ್ನು ಹೊಡೆದರೆಂದೂ, ಮಿ॥ ಅಬ್ಬಾಸ್‌ಖಾನರ ಮನೆ ಮತ್ತು ಅದರ ಹಿಂದಿರುವ ಮಸೀದಿಯನ್ನು ಹಿಂದುಗಳು ಮುತ್ತುವರೆಂದೂ ಹೇಗೋ ಮುಸಲ್ಮಾನರಿಗೆ ವರ್ತಮಾನ ಹೋಯಿತು. ಮಂಗಳಾರತಿ ನಡೆಯುವದೆಂಬುದು ಎಲ್ಲರಿಗೂ ತಿಳಿದಿತ್ತು. ಅವರು ಸಿದ್ಧವಾಗಿ ಬಂದಿದ್ದರು. ಬಿಡುಗಡೆ ಹೊಂದಿದ ಮುಖಂಡರ ಮೆರವಣಿಗೆ, ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸಿದುದು ಇವೆಲ್ಲಾ ಮುಸಲ್ಮಾನರಿಗೆ ಸಹಿಸಲಸದಳವಾದಷ್ಟಾಯಿತು.

ಸ್ಕೂಲು ಗೇಟಿಗೂ ಮಿ॥ ಅಬ್ಬಾಸ್‌ಖಾನರವರ ಮನೆಗೂ ಮಧ್ಯೆಯಿರುವ ಬೀದಿಯಲ್ಲಿ ಹುಡುಗರೂ ಜನರೂ ಆಗಿಂದಾಗ್ಗೆ ತುಂಬಿಕೊಂಡು, ರಸ್ತೆಯನ್ನು ಅಡ್ಡಕಟ್ಟುತ್ತಿದ್ದರು. ಭಜನೆ ಮಾಡುವಾಗ ಹುಡುಗರು ದೇವರ ನಾಮಗಳನ್ನು ಹಾಡುತ್ತಿದ್ದುದು, ಮಸೀದಿಗೆ ಹೋಗುತ್ತಿದ್ದ ಮುಸಲ್ಮಾನರಿಗೆ ಸಹಿಸಲಿಲ್ಲ. ಹುಡುಗಿಯರಿದ್ದ ಗೋಷಾಗಾಡಿಯು ನಿಲ್ಲಿಸಲ್ಪಟ್ಟಿದ್ದು ಮುಸಲ್ಮಾನರಿಗೆ ಕೋಪವನ್ನುಂಟು ಮಾಡಿತು. ಮೆರವಣಿಗೆ ಕಾಲದಲ್ಲಿ ಹುಡುಗರು ಬೀದಿಗಳಲ್ಲಿ ಮಿ॥ ಖಾನರು ಸತ್ತರೆಂದು ಕೂಗಿಕೊಂಡುದು ನಿಜವೆಂದು ನಾವು ನಂಬುತ್ತೇವೆ. ಮ್ಯುನಿಸಿಪಲ್ ತೋಟದಲ್ಲೂ, ಮಾರ್ಕೆಟ್ ಚೌಕದ ಹತ್ತಿರವೂ ಮಿ॥ ಸುಬ್ರಹ್ಮಣ್ಯಂರವರು ಮಾಡಿದ ಭಾಷಣಗಳು ಕೋಪವನ್ನುಂಟುಮಾಡತಕ್ಕವಾಗಿದ್ದುವು. ಜುಲೈ 28 ನೆ ತಾರೀಖಿನ ದಿನ ಹುಡುಗರು ಮಲ್ಲೇಶ್ವರದ ಸ್ಕೂಲುಗಳಿಗೆ ಹೋಗಿ ಗಲಾಟೆ ಮಾಡಿದಾಗ, ಪ್ರೈಮರಿ ಸ್ಕೂಲು ಹೆಡ್ಮಾಸ್ಟರನ್ನು ಅವರು ಹೊಡೆದರು.

ಜುಲೈ 29 ನೆ ತಾರೀಖಿನವರೆಗೆ ನಡೆದ ಅಂಶಗಳನ್ನೆಲ್ಲಾ ಆಲೋಚಿಸಿ ನೋಡಿದರೆ, ತಮ್ಮ ಮನೆ ಎದುರುಗಡೆ, ಮತ್ತು ತಮ್ಮ ಮನೆ ಹಿಂಭಾಗದಲ್ಲಿರುವ ಮಸೀದಿಯ ಗೋಪುರಕ್ಕೆ ಎದುರಾಗಿ ಸ್ಕೂಲು ಕಾಂಪೌಂಡಿನಲ್ಲಿ ಒಂದು ದೇವಸ್ಥಾನವು ಬೆಳೆಯದಂತೆ ಮಾಡಬೇಕೆಂದು ಮೆ॥ ಅಬ್ಬಾಸ್‌ಖಾನರವರು ಸರ್ಕಾರದಲ್ಲಿ ಅರಿಕೆ ಮಾಡಿಕೊಂಡುದು ನ್ಯಾಯವಾಗಿದೆ. ಈ ವಿಚಾರಕ್ಕೆ ಗಮನಕೊಟ್ಟು ಅಲ್ಲೊಂದು ದೇವಸ್ಥಾನವನ್ನು ಕಟ್ಟದಂತೆ ನೋಡಿಕೊಳ್ಳಬೇಕೆಂದು ಡೈರೆಕ್ಟರಿಗೆ ಸರ್ಕಾರದವರು ತಿಳಿಸಿದುದೂ ಸರಿಯಾಗಿದೆ. ಆಗ ಆ ಗೂಡೇ ದೇವಸ್ಥಾನವೆಂದು ಭಾವಿಸಲ್ಪಟ್ಟಿತೆಂಬುದರಲ್ಲಿ ಸಂದೇಹವಿಲ್ಲ. ಅಲ್ಲೊಂದು ದೊಡ್ಡ ಕಟ್ಟಡವನ್ನು ಕಟ್ಟಬೇಕೆಂಬ ಆಲೋಚನೆ ಇದ್ದಿತೆಂಬುದಕ್ಕೆ ಯಾವ ರುಜುವಾತು ಇಲ್ಲ ; ಅಲ್ಲದೆ ಅಂತಹ ಅಭಿಪ್ರಾಯವು ಉಂಟಾಗಬಹುದಾದ ಸಂಭವವೂ ಇರಲಿಲ್ಲ. ಎಲ್ಲ ವಿಚಾರವೂ ಸರಿಯಾಗಿ ನಿರ್ಧರಿಸಲ್ಪಡುವವರೆಗೆ ವಿಗ್ರಹವನ್ನು ಗೂಡಿನಲ್ಲಿಡಕೂಡದೆಂದು ಡೈರೆಕ್ಟರು ತಮ್ಮ ಆಲೋಚನಾ ಶಕ್ತಿಯನ್ನು ಉಪಯೋಗಿಸಿ, ಹುಕ್ಕುಂ ಮಾಡಿದುದರಲ್ಲಿ ತಪ್ಪೇನೂ ಇಲ್ಲ.

ಇಷ್ಟರವರೆಗೆ ಯಾರನ್ನು ಆಕ್ಷೇಪಿಸುವುದಕ್ಕೂ ಯಾವ ಕಾರಣವೂ ಇಲ್ಲ. ನಾವು ಈ ಅಭಿಪ್ರಾಯಪಡುವಾಗ, ದಿವಾನರೂ ಮುನಿಸಿಪಲ್ ಪ್ರೆಸಿಡೆಂಟರೂ ಒಂದೇ ಮತಸ್ಥರಾಗಿದ್ದರೆಂಬ ಭಾವನೆಯು ನಮ್ಮ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ.

ಈ ವಿಚಾರದಲ್ಲಿ ತಪ್ಪು ಎಲ್ಲಿ ನಡೆಯಿತೆಂದರೆ, ಪ್ರತಿಯೊಬ್ಬರೂ (ಸರ್ಕಾರದವರು, ಮಿ॥ ಅಬ್ಬಾಸ್‌ಖಾನರು, ಡೈರೆಕ್ಟರು) ಗಣಪತಿ ಸ್ಥಾನಪಲ್ಲಟದ ನಿಜಕಾರಣವನ್ನು ತಂತಮ್ಮಲ್ಲಿ ಮುಚ್ಚಿಟ್ಟುಕೊಂಡು, ತಮ್ಮ ನಡತೆಯಿಂದ ಜನರಲ್ಲಿ ಸಂದೇಹವುಂಟಾಗುವಂತೆ ಮಾಡಿದರು. ಆದರೆ ಜನರಿಗೆ ಮಾತ್ರ ನಿಜಾಂಶವು ಹೇಗೋ ಗೊತ್ತಾಗಿಹೋಯಿತು. ಉದಾಹರಣೆಗೆ, ಮಿ॥ ಅಬ್ಬಾಸ್‌ಖಾನರು ಈ ವಿಚಾರದಲ್ಲಿ ತಾವು ಕೈಹಾಕಲೇ ಇಲ್ಲವೆಂದು ವೀರಕೇಸರಿಯ ಸಂಪಾದಕರಿಗೆ ತಿಳಿಸಿದ್ದಾರೆ ಮತ್ತು ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವುದಕ್ಕಾಗಿ ಮ್ಯುನಿಸಿಪಲ್ ಕೌನ್ಸಿಲರುಗಳೆಲ್ಲರೂ ಸೇರಿ ಬರೆದ ಕಾಗದಕ್ಕೆ ಮಿ॥ ಅಬ್ಬಾಸ್‌ಖಾನರೂ ತಮ್ಮ ಸಮ್ಮತಿಯನ್ನು ಸೂಚಿಸಿ ರುಜುಹಾಕಿದ್ದಾರೆ. ಡೈರೆಕ್ಟರ ನಡತೆ, ಸರ್ಕಾರದ ಮೊದಲನೆ ಪ್ರಸಿದ್ಧಪತ್ರಿಕೆ, ಆಗಸ್ಟ್ 3 ನೇ ತಾರೀಖಿನಲ್ಲಿ ನಡೆದ ಶಾಂತಿಸಭೆಯಲ್ಲಿ ನಡೆದ ಚರ್ಚೆ ಇವುಗಳೆಲ್ಲದರಿಂದಲೂ, ಡೈರೆಕ್ಟರೇ ಜವಾಬ್ದಾರರಾಗಿದ್ದರೆಂದೂ, ವಿಗ್ರಹವನ್ನು ಸ್ವಸ್ಥಾನದಲ್ಲಿಡದಂತೆ ಅವರು ಹುಕ್ಕುಂಮಾಡಿದುದಕ್ಕೆ ಇನ್ನಾರೂ ಕಾರಣರಲ್ಲವೆಂದೆಯೂ, ತೋರ್ಪಡಿಸಿದರು. ನಿಜ ಸಂಗತಿಗಳನ್ನು ಬಹಿರಂಗವಾಗಿ ತಿಳಿಸಿದ್ದರೆ, ಅನುಮಾನಕ್ಕಾಗಲಿ, ಅಸಮಾಧಾನಕ್ಕಾಗಲಿ ಅವಕಾಶವಿಲ್ಲದಂತೆ, ಎಲ್ಲರಿಗೂ ಸಮರ್ಪಕವಾದ ರೀತಿಯಲ್ಲಿ ಸರ್ಕಾರದವರು ತಕ್ಕ ಹುಕ್ಕುಂ ಸಾದರು ಮಾಡುತ್ತಿದ್ದರು. ಗೂಡನ್ನು ಒಡೆದುಹಾಕಿ, ವಿಗ್ರಹವನ್ನು ಎಂದಿನಂತೆ ಆ ಸ್ಥಳದಲ್ಲೇ ಇಡಬಹುದೆಂದಾಗಲಿ, ಸಂಬಂಧಪಟ್ಟವರೊಡನೆಲ್ಲಾ ಆಲೋಚಿಸಿ, ಯಾವ ಆಕ್ಷೇಪಕ್ಕೂ ಅವಕಾಶವಿಲ್ಲದಂತಹ ಬೇರೆ ಸ್ಥಳದಲ್ಲಿ ಇಡಬಹುದೆಂದಾಗಲೀ ಹುಕ್ಕುಂ ಮಾಡಬಹುದಾಗಿತ್ತು. ಈ ರೀತಿ ಮಾಡಿದ್ದರೆ ಯಾವ ದೂರಿಗೂ ಅವಕಾಶವಿರಲಿಲ್ಲ.

ಜುಲೈ 30 ನೇ ತಾರೀಖಿನ ದಿನ ಏನು ನಡೆಯಿತು.

ಸೆಂಟ್ರಲ್ ಜೈಲಿನ ಹತ್ತಿರ ಸವಾರರ ಮೇಲೆ ಕಲ್ಲುಗಳ ಸುರಿ ಮಳೆ ಬಿದ್ದಿತು. ಸವಾರರು, ಹುಡುಗರನ್ನು ಮತ್ತು ಅವರಿಗೆ ಸಹಾಯಕರಾಗಿದ್ದ ದೊಡ್ಡವರನ್ನು ಮಾತ್ರವೇ ಅಲ್ಲದೆ, ದಾರಿಯಲ್ಲಿ ಹೋಗುತ್ತಿದ್ದ ಇತರರನ್ನು ಅವರೂ ಕೂಡ ಪುಸಲಾಯಿಸುತ್ತಾರೆಂದು ತಿಳಿದು, ಓಡಿಸಿಕೊಂಡು ಹೋದರೆಂಬುದು ನಮಗೆ ನಿರ್ಧರಪಟ್ಟಿದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಸವಾರರು ಹುಡುಗರನ್ನು ಮತ್ತು ಇತರರನ್ನು ಭಯಪಡಿಸುವುದಕ್ಕಾಗಿ ಅವರ ಕಡೆಗೆ ತಮ್ಮ ಭರ್ಜಿಗಳನ್ನು ತೋರಿಸಿದುದೂ ನಿಜ; ಆದರೆ ಯಾರೊಬ್ಬರಿಗೇ ಆದರೂ ನೋವನ್ನುಂಟುಮಾಡಬೇಕೆಂದು ಅವರು ಆ ರೀತಿ ಮಾಡಲಿಲ್ಲ. ಹಾಗೆ ಮನಃಪೂರ್ವಕವಾಗಿ ಅವುಗಳನ್ನು ಉಪಯೋಗಿಸಿದ್ದರೆ ಅನೇಕ ಅನಾಹುತಗಳು ನಡೆದು ಹೋಗುತ್ತಿದ್ದುವು. ಚೊಕ್ಕಣ್ಣನೆಂಬ ಹುಡುಗನಿಗೆ ಏಟುಬಿದ್ದಿದೆಯೆಂಬುದು ನಮ್ಮ ಗಮನಕ್ಕೆ ತರಲ್ಪಟ್ಟಿದೆ ; ಇದು, ಬಹುಶಃ ಅಕಸ್ಮಾತ್ ತಗುಲಿದ ಭರ್ಜಿ ಏಟಾಗಿರಬೇಕು. ಕಾರ್ಲ್‌ಟನ್ ಭವನದ ಹತ್ತಿರ ಹುಡುಗರನ್ನು ಹತೋಟಿಗೆ ತರುವುದು ಅಸಾಧ್ಯವಾಗಿತ್ತು ; ಪಬ್ಲಿಕ್ ಆಫೀಸುಗಳ ಹತ್ತಿರ ಅವರ ನಡತೆಯು ಕೋಪವನ್ನುಂಟುಮಾಡತಕ್ಕದ್ದಾಗಿತ್ತು. ಜುಲೈ 29 ನೇ ತಾರೀಖಿನ ರಾತ್ರಿ ಅವರು ಸೆಂಟ್ರಲ್ ಜೈಲಿನೊಳಕ್ಕೆ ತಮ್ಮನ್ನು ಬಿಡಬೇಕೆಂದು ಗಲಾಟೆಮಾಡಿದರು. ಅದರ ಮಾರನೆ ದಿನ ಎರಡಾವರ್ತಿ ಅವರು ಅಲ್ಲಿಗೆ ದೊಡ್ಡ ದೊಡ್ಡ ಗುಂಪಾಗಿ ಹೋಗಿದ್ದರು. ಹುಡುಗರು ತೋರಿಸಿದ ಈ ವಿಧವಾದ ಅತಿಯಾದ ನಡತೆಯು ಸರಿಯಾದುದಲ್ಲ. ಗುಂಪಿನಲ್ಲಿ ಅನೇಕ ದೊಡ್ಡವರೂ ಸೇರಿದ್ದುದರಿಂದ ಗುಂಪನ್ನು ಚದುರಿಸುವುದಾವಶ್ಯಕವಾಗಿತ್ತು ; ಇಲ್ಲದಿದ್ದರೆ ಅದು ಅನಾಹುತಕ್ಕೆ ಎಡೆಗೊಡುತ್ತಿತ್ತು. ಇದ್ದ ಪೋಲೀಸಿನವರನ್ನೆಲ್ಲಾ ಪಟ್ಟಣದ ಬೇರೆ ಬೇರೆ ಭಾಗಗಳಿಗೆ ಕಳುಹಿಸಿದ್ದುದರಿಂದಲೂ, ಪೋಲೀಸ್ ಸಿಬ್ಬಂದಿಯು ಹೆಚ್ಚಾಗಿಲದಿದ್ದುದರಿಂದಲೂ, ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಮಿಲಿಟರಿಯವರ ಸಹಾಯವನ್ನಪೇಕ್ಷಿಸಿದುದು ಅವಶ್ಯವಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ. ಸರ್ಕಾರಿ ಅಧಿಕಾರಿಗಳು ಮಿಲಿಟರಿಯವರನ್ನು ಕರೆಸಿದುದು ಬುದ್ಧಿವಂತಿಕೆಯ ಕೆಲಸಮಾಡಿದಂತೆಯೇ ಆಯಿತು.

ಗಲಭೆ.

ಹುಡುಗರನ್ನು ಮಿ॥ ಅಬ್ಬಾಸ್‌ಖಾನರ ಮನೆಯೊಳಕ್ಕೆ ಎಳೆದುಕೊಂಡರೆಂದು ಕೆಲವು ಸಾಕ್ಷಿಗಳು ಹೇಳಿದ್ದಾರೆ. ನಾಲ್ಕು ಹುಡುಗರು ಮಿ॥ ಅಬ್ಬಾಸ್‌ಖಾನರ ಮನೆಯ ಮಹಡಿಮೇಲೆ, ಮುಖ ಕೆಳಗೆ ಮಾಡಿಕೊಂಡು, ಬಿದ್ದಿದ್ದರೆಂದು ಒಬ್ಬ ಸಾಕ್ಷಿಯು ಹೇಳಿದ್ದಾರೆ. ಮಿ॥ ಅಬ್ಬಾಸ್‌ಖಾನರ ಮನೆಯಲ್ಲಿ ಒಂದು ಕೊಠಡಿಯನ್ನು ತೊಳೆಯುತ್ತಿದ್ದರೆಂದೂ ಆ ಕೆಲಸವನ್ನು ರಕ್ತಕಲೆಯು ಕಾಣದಂತೆ ಮಾಡುವುದಕ್ಕಾಗಿ ಮಾಡಿರಬಹುದೆಂದೂ, ಒಬ್ಬರು ಸಾಕ್ಷಿಯು ಹೇಳಿದ್ದಾರೆ. ಅಲ್ಲದೆ, ಒಂದು ಮೋಟಾರುಗಾಡಿಯಲ್ಲಿ ಎರಡಾವರ್ತಿ ಜನರನ್ನು ಮಿ॥ ಅಬ್ಬಾಸ್‌ಖಾನರ ಮನೆಯಿಂದ ಸಾಗಿಸಿದರೆಂದೂ, ಗೋಷಹಾಕಿದ್ದ ಒಂದು ಎತ್ತಿನ ಗಾಡಿಯಲ್ಲಿ ಏನನ್ನೋ ಸಾಗಿಸಿದರೆಂದೂ, ಇವುಗಳಲ್ಲಿ ಹೆಣಗಳನ್ನು ಸಾಗಿಸಿರಬಹುದೆಂದೂ ಅನೇಕ ಸಾಕ್ಷಿಗಳು ಸೂಕ್ಷ್ಮವಾಗಿ ಸಲಹೆ ಕೊಟ್ಟಿದ್ದಾರೆ. ಆ ಮನೆ ಹತ್ತಿರ ಪೋಲೀಸಿನವರು ಇದ್ದರೂ ಆ ಗಾಡಿಗಳಲ್ಲಿ ಏನಿತ್ತೆಂಬುದನ್ನು ಗೊತ್ತುಮಾಡಲಿಲ್ಲ.

ನಮಗೆ ದೊರೆತಿರುವ ರುಜುವಾತುಗಳನ್ನು ವಿಮರ್ಶಿಸಿದುದರಲ್ಲಿ, ಎತ್ತಿನ ಗಾಡಿಯು ಹೋಯಿತೆಂಬುದು ನಿರ್ಧರಪಡುವುದಿಲ್ಲ. ಹುಡುಗರಾಗಲೀ ದೊಡ್ಡವರಾಗಲಿ ಕೊಲ್ಲಲ್ಪಟ್ಟರೆಂಬುದನ್ನು ನಾವು ನಂಬಲಾರೆವು. ಯಾರಾದರೂ ಕೊಲ್ಲಲ್ಪಟ್ಟಿದ್ದರೆ ಹುಡುಗರು ಪತ್ತೆಯಾಗಲಿಲ್ಲವೆಂದು ರುಜುವಾತು ಸಿಕ್ಕುತ್ತಿತ್ತು. ತಂದೆತಾಯಿಗಳೂ ಅಕ್ಕಪಕ್ಕದ ಮನೆಗಳವರೂ ಸುಮ್ಮನಿರುತ್ತಿರಲಿಲ್ಲ. ನಾವು ಬಹಳ ಎಚ್ಚರಿಕೆಯಿಂದ ತನಿಖೆ ನಡೆಸಿದೆವು. ಈ ವಿಚಾರದಲ್ಲಿ ಸಿಕ್ಕಬಹುದಾದ ರುಜುವಾತುಗಳು ನಮಗೆ ಸಿಕ್ಕುವಂತೆ ಅವಕಾಶ ಕಲ್ಪಿಸಿದ್ದೆವು. ಆದರೂ, ಕೊನೆ ದಿನದ ವಿಚಾರಣೆವರೆಗೂ, ಯಾರು ತಪ್ಪಿಸಿಕೊಂಡಿರುವುದಕ್ಕೂ ಯಾವ ರುಜುವಾತೂ ಬರಲಿಲ್ಲ. ಹುಡುಗರನ್ನು ಒಳಕ್ಕೆ ಎಳೆದುಕೊಂಡರೆಂಬ ಕೂಗನ್ನು ಕೇಳಿ ಸಾಕ್ಷಿಗಳು ಈ ರೀತಿ ಅಭಿಪ್ರಾಯಪಟ್ಟು ಹೇಳಿಕೆ ಕೊಟ್ಟಿರಬಹುದು. ಅಲ್ಲದೆ ಗಲಭೆಯಾದ ರಾತ್ರಿ ಜನರು ಮೆ॥ ಅಬ್ಬಾಸ್‌ಖಾನರ ಮನೆಗೆ ಹೋಗಿ ಬರುತ್ತಲೇ ಇದ್ದರೆಂದು ವ್ಯಕ್ತಪಟ್ಟಿದೆ. ಒಳಗಡೆ ಏನಾದರೂ ಅಚಾತುರ್ಯ ನಡೆದಿದ್ದರೆ, ಒಳಗಿನವರು ಜನರು ಆರೀತಿ ಒಳಕ್ಕೆ ಬರುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಮೋಟಾರ್ ಡ್ರೈವರ್ ಚಿನ್ನಸಾಮಿಯ ಹೇಳಿಕೆಯು ಸಂಭವನೀಯವಾದುದಲ್ಲ.

ಬೈಸಿಕಲ್ ಷಾಪಿನಿಂದ ಗುಂಡು ಹಾರಿಸಿದರೆಂಬುದಕ್ಕೆ ಬೇಕಾದಷ್ಟು ರುಜುವಾತು ಬಂದಿದೆ. ಆ ಗುಂಡುಗಳನ್ನು ಆಕಾಶಕ್ಕೆ ಹಾರಿಸಿರಬಹುದು. ಎರಡು ಮೂರು ಗುಂಡುಗಳು ಸ್ಕೂಲಿನ ಎದುರುಗಡೆಯಿಂದಲೂ ಹಾರಿಸಲ್ಪಟ್ಟವು. ದೊಡ್ಡವರು, ಚಿಕ್ಕವರು, ಯುವಕರು, ಮುದುಕರು, ಮೊದಲಾದ ಅನೇಕ ಸಾಕ್ಷಿಗಳ ಹೇಳಿಕೆಯಿಂದಲೂ, ಆಸ್ಪತ್ರೆಯಲ್ಲಿ ದೊರೆತಿರುವ ರುಜುವಾತಿನಿಂದಲೂ ನಾವು ಈರೀತಿ ನಿರ್ಧರಮಾಡಿದ್ದೇವೆ. ಸ್ಕೂಲಿನ ಎದುರುಗಡೆಯಿಂದ ಗುಂಡುಗಳು ಬಂದುದನ್ನು ತಾವು ನೋಡಲಿಲ್ಲವೆಂದು ಗೌರವಸ್ಥರಾದ ಅನೇಕ ಸಾಕ್ಷಿಗಳು ಹೇಳಿರುವುದು ನಮಗೆ ಗೊತ್ತಿದೆ. ಬೈಸಿಕಲ್ ಷಾಪಿನಿಂದ ಮೊದಲನೆ ಗುಂಡು ಹಾರಿಸಿದ ಶಬ್ದವನ್ನು ಕೇಳುತ್ತಲೆ ಉಂಟಾದ ಗಲಭೆಯಿಂದಲೂ, ಪ್ರತಿಯೊಬ್ಬರೂ ತಮ್ಮ ಪ್ರಾಣರಕ್ಷಣೆಗಾಗಿ ಓಡುತ್ತಿದ್ದ ಆತುರದಲ್ಲಿಯೂ, ಈ ಸಾಕ್ಷಿಗಳು ಸ್ಕೂಲಿನ ಎದುರುಗಡೆಯಿಂದ ಗುಂಡುಗಳು ಬಂದುದನ್ನು ನೋಡಿರಬಹುದು. ಬಹುಶಃ ಇಬ್ಬರಿಗೆ ಏಟು ಬಿದ್ದಿರಬಹುದು. ಒಬ್ಬನಿಗಂತೂ ಏಟುಬಿದ್ದಿದೆ. ಸ್ಕೂಲು ಎದುರುಗಡೆಯಿಂದ ಗುಂಡಿನ ಏಟು ತಗುಲಿದವರ ಪೈಕಿ ದರ್ಜಿ ಹುಡುಗ ಚಂದ್ರರಾಜನು ಒಬ್ಬನಾಗಿದ್ದಾನೆ. ಬೈಸಿಕಲ್ ಷಾಪಿನಿಂದ ಆಕಾಶಕ್ಕೆ ಗುಂಡು ಹೊಡೆದುದನ್ನು ಸಂಜ್ಞೆಯಾಗಿ ತೆಗೆದುಕೊಂಡು, ಸ್ಕೂಲು ಎದುರುಗಡೆಯಿಂದ ಗುಂಡು ಹಾರಿಸಿದವನು ಗುಂಪಿನಮೇಲೆ ಹಾರಿಸಿರಬಹುದೆಂದು ತೋರುತ್ತದೆ.

ಬೈಸಿಕಲ್ ಷಾಪಿನಿಂದಲೂ, ಸ್ಕೂಲು ಎದುರುಗಡೆಯಿಂದಲೂ ಗುಂಡುಗಳು ಹಾರಿಸಲ್ಪಟ್ಟದು ನಿಜವೆಂದು ಸಮಿತಿಯ ಹೆಚ್ಚುಮಂದಿ ಸದಸ್ಯರು ಅಭಿಪ್ರಾಯ ಪಡುತ್ತಾರೆ. ಸ್ಕೂಲಿನ ಎದುರುಗಡೆಯಿಂದ ಬಂದ ಗುಂಡುಗಳು, ಮಿ॥ ಅಬ್ಬಾಸ್‌ಖಾನರ ಮನೆಯಿಂದಲೋ, ಅವರ ಮನೆಯ ಅಂಗಳದಿಂದಲೋ, ಅಥವ ಸ್ಕೂಲು ಕಾಂಪೌಂಡುಗೋಡೆಯ ಮುಂದಿನ ರಸ್ತೆಯಿಂದಲೋ ಹಾರಿಸಲ್ಪಟ್ಟಿರಬೇಕು.

ನಮ್ಮ ಸಹೋದ್ಯೋಗಿಗಳಾದ ಮಿ॥ ಜೆ. ಎ. [illegible] ಗುಂಡು ಹಾರಿಸಲ್ಪಟ್ಟಿತೆಂಬುದನ್ನು ನಂಬುವುದೇ ಇಲ್ಲ.

ಈ ಅಧ್ಯಾಯದಲ್ಲಿ ನಮೂದಾಗಿರುವ ಅಭಿಪ್ರಾಯಗಳ ವಿಚಾರದಲ್ಲಿ ನಾವು ಯಾವ ಅಭಿಪ್ರಾಯವನ್ನೂ ಕೊಡುವುದಿಲ್ಲವೆಂದು ಶ್ರೀ ಬಿ. ನಾಗಪ್ಪನವರು ಹೇಳಿರುತ್ತಾರೆ ; ಏಕೆಂದರೆ ಜುಲೈ 30 ನೇ ತಾರೀಖಿನ ರಾತ್ರಿ ಏನು ನಡೆಯಿತೆಂಬುದನ್ನು ವಿಮರ್ಶಿಸಿ ಅಭಿಪ್ರಾಯ ಕೊಡುವುದಕ್ಕಾಗಿ ನಾವು ನೇಮಿಸಲ್ಪಟ್ಟಿಲ್ಲವೆಂದು ಅವರು ಭಾವಿಸುತ್ತಾರೆ.

ಲಾಠಿ ಹಿಡಿದಿದ್ದವರು ತಾವಾಗಿ ಮೆ॥ ಅಬ್ಬಾಸ್‌ಖಾನರ ರಕ್ಷಣೆಗಾಗಿ ಅವರ ಮನೆಯ ಅಂಗಳದಲ್ಲಿ ಸೇರಿರಬಹುದು ; ಆದುದರಿಂದ ಅವರು ಅಲ್ಲಿ ಸೇರಿದ್ದರೆಂಬುದು ಮೆ॥ ಅಬ್ಬಾಸ್‌ಖಾನರಿಗೆ ಗೊತ್ತಿದ್ದಿರಬೇಕು. ಮುಸಲ್ಮಾನರು ವಿಗ್ರಹದ ಕಡೆಗೆ ಕಲ್ಲುಗಳನ್ನೂ ಜೋಡುಗಳನ್ನೂ ಎಸೆದುದರಿಂದ ಗಲಭೆಯು ಪ್ರಾರಂಭವಾಯಿತು. ಗುಂಪಿನವರ ಉತ್ಸಾಹವು ಮುಸಲ್ಮಾನರನ್ನು ರೇಗಿಗೆ ಹಚ್ಚಿರಬಹುದು ; ಆದರೆ ಅಷ್ಟುಮಾತ್ರಕ್ಕೆ ಅವರು, ಜನರ ಮೇಲೆ ಬಿದ್ದು ಹೊಡೆದು ಅನಾಹುತಗಳನ್ನು ನಡೆಸಿದುದು ಸರಿಯಾದುದಲ್ಲ. ಮೆ॥ ಅಬ್ಬಾಸ್‌ಖಾನರ ಮನೆಯಲ್ಲಿ ಸೇರಿದ್ದ ಮತ್ತು ಸುತ್ತಮುತ್ತಿನ ಗಲ್ಲಿಗಳಿಂದ ಬಂದ ಮುಸಲ್ಮಾನರು, ಕಾರಣವಿರಲಿ, ಇಲ್ಲದಿರಲಿ, ಜಗಳ ನಡೆಸಬೇಕೆಂದು ನಿರ್ಧರಿಸಿಕೊಂಡು ಅದಕ್ಕಾಗಿ ಬಂದಿದ್ದರೆಂದೇ ನಾವು ಅಭಿಪ್ರಾಯಪಡುತ್ತೇವೆ. ಆದಿನದ ಮತ್ತು ಅದರ ಹಿಂದಿನ ದಿನಗಳ ಕಾರ್ಯಕಲಾಪಗಳಿಂದ ಅನೇಕ ಮುಸಲ್ಮಾನರು ರೇಗಿದವರಾಗಿದ್ದರು.

ಗಲಭೆ ಪ್ರಾರಂಭಿಸುವುದಕ್ಕೆ ಹುಡುಗರಿಗೆ ಯಾವ ಉದ್ದೇಶವೂ ಇರಲಿಲ್ಲ. ಆದರೆ ಅವರು ಮೆ॥ ಅಬ್ಬಾಸ್‌ಖಾನರ ಮನೆಮೇಲೆ ಕಲ್ಲು ಹಾಕಿರುವುದು ನಿಜ ; ಆದರೆ, ಅವರ ಮನೆಯಿಂದ ಮುಸಲ್ಮಾನರು ವಿಗ್ರಹದ ಮೇಲೆ ಕಲ್ಲೆಸೆದರು. ಸ್ಕೂಲಿನ ಹತ್ತಿರ ದೊಂಬಿ ಮಾಡಬೇಕೆಂದು ಮುಸಲ್ಮಾನರು ಬಹಳ ದಿನಗಳಿಂದಲೂ ಸಿದ್ಧಪಡಿಸಿಕೊಂಡಿದ್ದರೆಂಬುದಕ್ಕೆ ನಮಗೆ ರುಜುವಾತು ಬಂದಿಲ್ಲ. ಆದರೆ, ಸ್ಕೂಲಿನಹತ್ತಿರ ಮೆರವಣಿಗೆ ಬರುತ್ತದೆಂಬುದು ತಮಗೆ ಗೊತ್ತಿರಲಿಲ್ಲವೆಂದು ಮುಸಲ್ಮಾನರು ಹೇಳುವುದನ್ನು ನಾವು ಒಪ್ಪುವುದಿಲ್ಲ. ಆದಿನ ದಿವಾಣರಿಗೆ ಏಟು ಬಿದ್ದಿದೆಯೆಂದೂ, ಮೆ॥ ಅಬ್ಬಾಸ್‌ಖಾನರ ಮನೆ ಮತ್ತು ಅದರ ಹಿಂದುಗಡೆಯಿರುವ ಮಸೀದಿಯನ್ನು ಮುತ್ತುವ ಸಂಭವವಿದೆಯೆಂದೂ ಆದಿನ ನಗರದಲ್ಲೂ ದಂಡಿನಲ್ಲೂ ಸಮಾಚಾರವು ಹರಡಿಹೋಗಿತ್ತು. ಮುಖಂಡರನ್ನು ಬಿಡುಗಡೆ ಮಾಡಿದಮೇಲೆ ಮಂಗಳರಾತಿ ನಡೆಯುವುದೆಂದು ಎಲ್ಲರಿಗೂ ತಿಳಿದಿತ್ತು. ಸೆಂಟ್ರಲ್ ಜೈಲಿನಿಂದ ಮೆರವಣಿಗೆ ಹೊರಟಮೇಲೆ, ಅದರ ಸಮಾಚಾರವು ಮುಸಲ್ಮಾನರಲ್ಲಿ ಹರಡುವುದಕ್ಕೆ ಬೇಕಾದಷ್ಟು ಕಾಲವ್ಯವಧಾನವಿತ್ತು. ಮುಸಲ್ಮಾನರು ಆಗಲೇ ರೇಗಿದ್ದರು ; ವಿಗ್ರಹ ಸ್ವಸ್ಥಾನದಲ್ಲಿಟ್ಟುದೂ, ಮುಖಂಡರನ್ನು ಬಿಟ್ಟುದೂ, ಅವರನ್ನು ಮತ್ತಷ್ಟು ರೇಗಿಸಿ, ದೊಂಬಿನಡಿಸುವಷ್ಟರ ಮಟ್ಟಿಗೆ ಮಾಡಿದುವು. ಜಯಶಾಲಿಗಳಾಗಿ ಬಂದೆವೆಂಬ ಗುಂಪಿನ ಜನರ ಉತ್ಸಾಹವು ಮುಸಲ್ಮಾನರನ್ನು ಇನ್ನೂ ರೇಗಿಸಿತು. (ಸಶೇಷ.)

ಸ್ವೀಕಾರ.

ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಚಿತ್ರದುರ್ಗ ಡಿ॥ ಬಿಳಚೋಡದಲ್ಲಿರುವ ಮ॥ ಗುಂಡಾಭಕ್ತ ಭೀಮಪ್ಪನವರಿಗೂ ಕಮುಟಗಲ್ಲು ಮ॥ ಗುಂ. ಏಕಾಂತಪ್ಪನವರ ಪುತ್ರಿ ಸೌ॥ ಲಿಂಗಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ೧ ರೂ. ಬಿಳಚೋಡು ಮ॥ ಗುಂಡಾಭಕ್ತ ಚಿಕ್ಕಪ್ಪನವರಿಗೂ ಜಾನುಕೊಂಡದ ಸೌ॥ ಗುಂ. ಶಾಂತಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ೧ ರೂ. ಬಿಳಚೋಡು ಮ॥ ಗುಂ. ಬಸವಲಿಂಗಪ್ಪನಿಗೂ ಕಮುಟಗಲ್ಲು ಸೌ॥ ಗುಂ. ಸಣ್ಣಗೌರಮ್ಮಗೂ ನಡೆದ ವಿವಾಹದಲ್ಲಿ ೧ ರೂ. ಮೇಲ್ಕಂಡ ೩ ರೂಪಾಯಿಗಳು ಬಿಳಚೋಡು ಚರಂತಿಮಠದ ವೇ॥ ರುದ್ರಾರಾಧ್ಯರ ಮೂಲಕ ಬಂದಿದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಜಾತ್ರೆಯ ಜಾಹೀರಾತ್.

ಧಾರವಾಡ ಜಿಲ್ಲಾ ಕರ್ಜಗಿ ತಾಲ್ಲೂಕು ಹೊಸರಿತ್ತಿಯಲ್ಲಿ ಶ್ರೀ ಗುದ್ದಿಸ್ವಾಮಿಗಳವರ ಜಾತ್ರೆಯು ದರವರ್ಷದಂತೆ ಇದೇ ಪುಷ್ಯ ಶು॥ ೧೫ ಶುಕ್ರವಾರ ತಾರೀಖು 25-1-29 ದಿವಸ ರಥೋತ್ಸವವೂ, ಬಹುಳ ೧ ತಾ॥ 29-1-29 ದಿವಸ ಕಡಬಿನ ಕಾಳಗವೂ, ಬಹುಳ ೨ ಯಿಂದ ಬಹುಳ ೭ ರ ವರೆಗೆ ಅಂದರೆ ತಾ॥ 27-1-29 ರಿಂದ 2-2-29 ರ ವರೆಗೆ ಕುಸ್ತಿ ಸಂಗೀತ ಮುಂತಾದ ನೇತ್ರಾನಂದ ಕರ್ಣಾನಂದ ಉತ್ಸವಗಳೂ ವೀರಶೈವ ಸಮಾಜೋತ್ಕರ್ಷ ಸಭೆಗಳೂ ಒಕ್ಕಲತನದ ಪ್ರದರ್ಶನಗಳೂ ನಡಿಯುತ್ತವೆ. ಈ ಜಾತ್ರೆಯಲ್ಲಿ ಹತ್ತುಸಾವಿರಗಳವರೆಗೆ ಹೋರಿಗಳು ಮಾರಾಟಕ್ಕೆ ಬರುತ್ತವೆ. ಈ ಊರಿನಲ್ಲೂ ಇದರ ನೆರೆಯಲ್ಲೂ ಮನುಷ್ಯರ ಮತ್ತು ದನಕರುಗಳ ಯಾವ ತರದ ರೋಗಾದಿಗಳಿಲ್ಲ. ಈ ಊರಿನಿಂದ ಹಾವೇರಿ ಸ್ಟೇಷನ್ನಿಗೆ ಮೋಟಾರ್‌ಸರ್ವಿಸ್ ಇದೆ. ಕಾರಣ ಜಾತ್ರೆಗೆ ಬರತಕ್ಕವರು ಮತ್ತು ದನಗಳನ್ನು ಮಾರುವವರೂ ಕೊಳ್ಳುವವರೂ ಏನೂ ಕಾಳಜಿಮಾಡದೆ ಬರಬೇಕು.

ವಿ. ಸ. ಕಲ್ಮೈಟಿ, ವ್ಯವಸ್ಥಾಪಕ.

ಸಮಾರಾಧನೆ ಮಹೋತ್ಸವ.

ಚಾಮರಾಜನಗರದ ತಾಲ್ಲೂಕು ಮರಿಯಾಲಮಠದ ಶ್ರೀಮದ್ರಂಭಾಪುರೀ ವೀರಸಿಂಹಾಸನ ಸೂತ್ರಾನುವರ್ತಿಗಳಾದ ಬ್ರಂ॥ ವೇ॥ ಮಹಂತಸ್ವಾಮಿಯವರು ತಮ್ಮ ಶ್ರೀಗಳವರ ಹನ್ನೆರಡನೇವರುಷದ ಆರಾಧನೆಯನ್ನು ತಾ॥ 3-1-29 ಗುರುವಾರ ಸುಮಾರು ಮೂರುನಾಲ್ಕು ಸಾವಿರ ಭಕ್ತಮಾಹೇಶ್ವರರೊಡನೆ ಬಹಳ ವಿಜೃಂಭಣೆಯಿಂದ ಸಾಂಗವಾಗಿ ನೆರವೇರಿಸಿದರು. ಈ ಸಂದರ್ಭದಲ್ಲಿ ಉತ್ಕಲಗೆರೆ ಬೆಟ್ಟದಮಠದ ಬ್ರಂ॥ಶ್ರೀ॥ವೇ॥ ವಿರಕ್ತಸ್ವಾಮಿಯವರ ಪಾದಪೂಜೆಯು ವೇದಘೋಷದೊಡನೆ ನೆರವೇರಿದಮೇಲೆ ಸದರಿ ಸ್ವಾಮಿಯವರ ಹೂವಿನಪಾಲಕಿಯುತ್ಸವವು ಪುರವೀಧಿಗಳಲ್ಲಿ ವಾದ್ಯವೈಭವದಿಂದ ಸಾಂಗವಾಗಿ ನೆರವೇರಿತು. ತಾ॥ 4-1-29 ನೇ ಶುಕ್ರವಾರ ಬೆಳಗ್ಗೆ ಮೇಲ್ಕಂಡ ಮಹಾಂತಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವರಕೂಡು ವೇ॥ ಎಂ. ಮಹದೇವಶಾಸ್ತ್ರಿಗಳವರು ಗುರುಮಹಾತ್ಮೆಯ ವಿಷಯದಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಕುರುಬೂರು ವೇ॥ ಶಿವಬಸವಶಾಸ್ತ್ರಿಗಳವರು ಗುರುಭಕ್ತಿವಿಷಯದಲ್ಲಿ ಶಿವಕಥೆಯನ್ನು ಮಾಡಿದ ಮೇಲೆ ಶ್ರೀ ಮಹಾಂತಸ್ವಾಮಿಯವರಿಂದ ಮಹಾಜನಗಳಿಗೆ ಆಶೀರ್ವಾದ ಪಡೆದು ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ ಇವರ ಕುಟುಂಬವರ್ಗಕ್ಕೂ ಶ್ರೇಯಃಪ್ರಾರ್ಥನೆಯಿಂದ ಸಭೆಯು ಭರಖಾಸ್ತಾಯಿತು.

ಗುರುಭಕ್ತ ಬಿ. ಭದ್ರಪ್ಪ,
ಜ್ಯುವೆಲ್ಲರ್, ಮೈಸೂರು.

ಬೆಳಗಾಮ್ ಜಿಲ್ಲೆ ಯೊಾದವಾಡ ವೀರಶೈವ ಪ್ರಾಂತಿಕಸಭೆಯವರು ಪಿ. ಎಂ. ನಂಜುಂಡಯ್ಯ ಎ. ಎಫ್. ಡಾಕ್ಟರ್ ಇವರಿಗೆ ಅರ್ಪಿಸಿದ ಸನ್ಮಾನಪತ್ರಿಕೆ.

ಈ ಸಭೆಯು ತಾ॥ 31-12-28 ನೇ ಸೋಮವಾರ ಚಿಕ್ಕೋಡಿ ತಾ॥ ಶಿರಸ್ತೆದಾರ್, ರಾವ್‌ಸಾಹೇಬ್ ಬಸೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಗೆ ಕೆಲವು ಚರಪಟ್ಟಮಹಾಸ್ವಾಮಿಗಳೂ, ಅನೇಕಜನ ವೀರಶೈವರು ವೀರಶೈವೇತರರೂ ಸೇರಿದ್ದರು. ಈ ಸಭೆಯಲ್ಲಿ ವೀರಶೈವ ಧರ್ಮಸಂಬಂಧಿ ಅನೇಕ ಉಪನ್ಯಾಸಗಳೂ, ಠರಾವುಗಳೂ ನಡೆದನಂತರ ಈ ಮೇಲ್ಕಂಡ ಎ. ಎಫ್. ಡಾಕ್ಟರ್‌ರವರ ಅಮೃತವಾಣಿಯಿಂದ ಉಪನ್ಯಾಸವು ನಡೆಯಿತು. ಇವರ ಉಪನ್ಯಾಸವನ್ನೂ, ಇವರ ದೇಶಕಲ್ಯಾಣದೃಷ್ಟಿಯನ್ನೂ ನೋಡಿ, ಇವರು ಈ ಚಿಕ್ಕವಯಸ್ಸಿನಲ್ಲಿಯೇ ತಮ್ಮ ಬುದ್ಧಿಬಲದಿಂದ ಅನೇಕ ದೇಶಸಂಚಾರಮಾಡಿ, ವಿದ್ಯಾಬುದ್ಧಿಗಳನ್ನು ಗ್ರಹಿಸಿ, ಇವರು ನಮ್ಮ ದೇಶಕ್ಕೂ ಸಹ ದಯೆಮಾಡಿಸಿ, ಮಾಡುತ್ತಿರುವ ಅಸಾಧಾರಣವಾದ ಡಾಕ್ಟರ್ ಉದ್ಯೋಗವೂ, ದೇಶಸೇವೆ, ಸಮಾಜಸೇವೆ, ರಾಷ್ಟ್ರಸೇವೆ ಇತ್ಯಾದಿ ಕಾರ್ಯಗಳನ್ನು ಈ ಸಭೆಯವರು ನೋಡಿ, ಬಹಳವಾಗಿ ಸಂತೋಷಿಸಿ, ಸಮಸ್ತ ಸಭೆಯವರ ಇಷ್ಟಾನುಸಾರವಾಗಿ ಈ ಸನ್ಮಾನಪತ್ರಿಕೆಯನ್ನು ಇವರಿಗೆ ಅರ್ಪಿಸಿ ಭಗವಂತನು ಇವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ದಯೆಪಾಲಿಸಿ ಸದಾ ಇವರ ಕಾರ್ಯಗಳಿಗೆ ನಿರ್ವಿಘ್ನವನ್ನೀಯಲೆಂದು ಪ್ರಾರ್ಥಿಸಿದರು.

ಅಧ್ಯಕ್ಷರು

ಶ್ರೀ ಚರಮೂರ್ತಿಮಹಾಸ್ವಾಮಿಗಳು ಮಳೆಮಠ ಯಾದವಾಡ.
ರಾವ್‌ಸಾಹೇಬ್ ಬಸೆಟ್ಟಪ್ಪ ಚೆಟ್ಟಿ, ಶಿರಸ್ತೆದಾರ್ ಚಿಕ್ಕೋಡಿ.

ಶ್ರೀ ಶಿವದೀಕ್ಷಾ ಸಂಸ್ಕಾರಸಮಾರಂಭ, ಯೊಾದವಾಡ.

ಈ ಮೇಲ್ಕಂಡ ದೀಕ್ಷಾಸಮಾರಂಭವು ಶ್ರೀ ಚರಮೂರ್ತಿಸ್ವಾಮಿಗಳು ಮಳೆಮಠ ಇವರ ದಿವ್ಯಮಠದಲ್ಲಿ ತಾ॥ 31-12-28 ರಲ್ಲಿ ಬಹಳ ವಿಜೃಂಭಣೆಯಿಂದನಡೆಯಿತು. ಈ ದೀಕ್ಷಾಸಂಸ್ಕಾರದಲ್ಲಿ ಶ್ರೀ ಚರಮೂರ್ತಿ ಮಹಾಸ್ವಾಮಿಗಳು ತಮ್ಮ ಮೊಮ್ಮಗನಾದ ಚಿ॥ ಮುರಿಘಯ್ಯನ ಜತೆಯಲ್ಲಿ ಅನೇಕಜನ ವೀರಶೈವಬಡವಟುಗಳಿಗೆ ಸಹ ದೀಕ್ಷಾಸಂಸ್ಕಾರವನ್ನು ಧರ್ಮಾರ್ಥವಾಗಿ ನೆರವೇರಿಸಿ, ಮೂರುದಿನಗಳು ಯಥೇಚ್ಛವಾಗಿ ಅನ್ನಸಂತರ್ಪಣೆಯನ್ನು ಮಾಡಿದರು. ಈ ಸಮಾರಂಭಕ್ಕೆ ಕೆಲವು ಪಟ್ಟಚರಸ್ವಾಮಿಗಳು, ಅನೇಕಜನ ವೀರಶೈವರು ಮತ್ತು ಅವರ ಸಮಸ್ತ ಶಿಷ್ಯಮಂಡಲಿಯವರು ದೂರ ದೂರ ಪ್ರಾಂತ್ಯಗಳಿಂದ ಬಂದಿದ್ದರು. ಶ್ರೀ ಸ್ವಾಮಿಗಳು ಈ ದೀಕ್ಷಾಸಂಸ್ಕಾರಸಮಾರಂಭದ ಜ್ಞಾಪಕಾರ್ಥವಾಗಿ ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕೆಗೂ, ಕೈ॥ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಸ್ಟಾರ್ ಪತ್ರಿಕೆಗೂ ಎರಡೆರಡು ರೂಪಾಯಿಗಳನ್ನು ಪೋಷಣ ದ್ರವ್ಯವಾಗಿ ಸಹಾಯ ಮಾಡಿದರು. ಈ ಸಮಾರಂಭದ ದಿವಸ ಶ್ರೀ ಚರಮೂರ್ತಿಸ್ವಾಮಿಗಳ ಅಧ್ಯಕ್ಷತೆಯಲ್ಲಿ, ಚಿಕ್ಕೋಡಿ ತಾಲ್ಲೂಕು ಶಿರಸ್ತೆದಾರ್ ರಾವ್‌ಸಾಹೇಬ್ ಬಸೆಟ್ಟಪ್ಪಚೆಟ್ಟಿಯವರೇ ಮೊದಲಾದ ಪ್ರಮುಖರಿಂದ ಕೂಡಿದ ಪ್ರಚಂಡಸಭೆಯು ನಡೆಯಿತು. ಈ ಸಭೆಯಲ್ಲಿ ಶ್ರೀಚರಮೂರ್ತಿಸ್ವಾಮಿಗಳು ಮದರಖಂಡಿ ಹಿರೇಮಠ ಇವರು “ವೀರಶೈವ ಅನಾದಿಬ್ರಾಹ್ಮಣ್ಯ ಮತ್ತು ಅಷ್ಟಾವರ್ಣ” ವಿಚಾರದಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಪಿ. ಎಂ. ನಂಜುಂಡಯ್ಯ ಎ. ಎಫ್. ಡಾಕ್ಟರವರು “ವಿದ್ಯೆಯ ಶ್ರೇಷ್ಠತ್ವವೀರಶೈವ ಸಮಾಜದ ವಿದ್ಯಾವಿಹೀನತೆ, ಸ್ತ್ರೀವಿದ್ಯಾಭ್ಯಾಸ ಮತ್ತು ವೀರಶೈವಸಮಾಜದ ಮೂಲಗುರುಗಳ ಮತಸ್ಥಾಪನಾಕ್ರಮ” ಇವೇ ಮೊದಲಾದವುಗಳ ಮೇಲೆ ಬಹಳ ಗಂಭೀರವಾಗಿ ಅನೇಕ ದೃಷ್ಟಾಂತರಗಳಿಂದ ಉಪನ್ಯಾಸ ಮಾಡಿದರು, ಆಮೇಲೆ ಮ॥ ಬಸವಲಿಂಗಪ್ಪಣ್ಣ ಪಟ್ಟಾಪುರ ಇವರು “ಅಷ್ಟಾವರ್ಣವು ಆರೋಗ್ಯಕ್ಕೂ, ವೀರಶೈವಧರ್ಮಕ್ಕೂ ಮುಖ್ಯ ಸಹಕಾರಿಯಾಗಿದೆ” ಎಂಬುದನ್ನು ಅನೇಕ ಲೌಕಿಕ ಉದಾಹರಣೆಗಳಿಂದ ಉಪನ್ಯಾಸ ಮಾಡಿದರು ಮತ್ತು ರಾವ್‌ಸಾಹೇಬ್‌ಚೆಟ್ಟಿ ಶಿರಸ್ತೆದಾರ್‌ರವರು “ಅಷ್ಟಾವರ್ಣದಲ್ಲಿ ಭಸ್ಮ, ಲಿಂಗ ಇವುಗಳ ವಿಚಾರವನ್ನು ಮತ್ತು ವೀರಶೈವರು ಧರ್ಮಾವಲಂಬಿಗಳಾಗಿ ಮುಂದಕ್ಕೆ ಬರಬೇಕಾದರೆ ಮಾಡಬೇಕಾದ ಉಪಾಯಗಳನ್ನು ಕುರಿತು ಬಹಳ ಚೆನ್ನಾಗಿ ಉಪನ್ಯಾಸ ಮಾಡಿದರು. ಹೀಗೆಲ್ಲಾ ಇನ್ನೂ ಅನೇಕ ಉಪನ್ಯಾಸಗಳು ನಡೆದನಂತರ ಸಭೆಯು ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಮುಕ್ತಾಯವಾಯಿತು.

ಸಮಾಜ ಹಿತೈಷಿ.

ವೀರಶೈವ ಮತೋದ್ಧಾರಕರಮೇಲೆ ಆಕ್ಷೇಪಣೆ.

1929 ನೆಯ ಜನವರಿ 7ನೇ ತಾರೀಖಿನ “ಪಂಚಾಚಾರ್ಯ” ಪತ್ರಿಕೆಯಲ್ಲಿ ಗುರುಭಕ್ತಕೇಸರಿ ಎಂಬ ನಾಮಧೇಯದ ಒಬ್ಬ ಲೇಖಕರು “ಮೈಸೂರು ಸ್ಟಾರ್” ಪತ್ರಿಕೆಯು ಬಹುಕಾಲದಿಂದ ಮಠದ ಮೂಲಗುರುಗಳನ್ನೂ ಬ್ರಾಹ್ಮಣರನ್ನೂ ನಿಂದಿಸುತ್ತಾ ಬಂದಿರುವರೆಂದು ಬರದಿರುವದನ್ನು ನೋಡಿ ನನಗೆ ಬಹಳ ವ್ಯಸನವೂ ಆಶ್ಚರ್ಯವೂ ಆಯಿತು. ಮೈಸೂರ್ ಸ್ಟಾರ್ ಪತ್ರಿಕೆಯು 1881 ನೇ ವರ್ಷದ ಲಾಗಾಯಿತು ಈವರೆಗೂ ಅಂದರೆ ಸುಮಾರು ಐವತ್ತು ವರ್ಷಗಳಕಾಲ ವೀರಶೈವಮತ ಹಿತಕ್ಕಾಗಿಯೇ ಕೆಲಸಮಾಡಿರುತ್ತದೆ. ಕೈ॥ ವೀರಸಂಗಪ್ಪನವರು ವೀರಶೈವ ಧರ್ಮ ರಕ್ಷಣೆಗಾಗಿ ಇಪ್ಪತ್ತು ವರ್ಷಗಳ ಕಾಲ ಹೋರಾಡಿದರು. ಅದರಿಂದೀಚೆಗೆ ಮ॥ ವಿರುಪಾಕ್ಷಯ್ಯನವರು ರಾಜಕೀಯ ವಿಷಯದಲ್ಲಿ ವೀರಶೈವಮತಕ್ಕೂ ಹಿಂದುಳಿದವರಿಗೂ ಹೊಡೆದಾಡಿದರು. ಮನುಷ್ಯ ಜನ್ಮವನ್ನು ಎತ್ತಿದಮೇಲೆ ಮತಕ್ಕಾಗಿಯೂ ದೇಶಕ್ಕಾಗಿಯೂ ಹೋರಾಡಬೇಕಾದದ್ದು ಪ್ರತಿಯೊಬ್ಬ ಸತ್ಪುರುಷನ ಕರ್ತವ್ಯವಾಗಿರುತ್ತದೆ. “ಮೈಸೂರು ಸ್ಟಾರ್” ಪತ್ರಿಕೆಯು ವೀರಶೈವ ಮತಕ್ಕಾಗಿ ದೇಹವನ್ನು ಅರೆಯುತ್ತ ಬಂದಿದ್ದಾಗ್ಗೂ ಗುರುಭಕ್ತಕೇಸರಿ ಎಂಬ ಹೆಸರಿನವರು ಗುರು ನಿಂದೆಯನ್ನೂ ಬ್ರಾಹ್ಮಣ ನಿಂದೆಯನ್ನೂ ಮಾಡಿದರೆಂದು ಬರದಿರುವದು ನಿಷ್ಕಳಂಕವಾದ ಶಿವಶರಣರಲ್ಲಿ ದೋಷವನ್ನಾರೋಪಿಸಿದಂತಿರುತ್ತದೆ. ಏತಕ್ಕೆಂದರೆ—ಶಿವಾನುಭವ ಪತ್ರಿಕೆಯನ್ನು ಬರೆಯುವ ಮ॥ ಹಳಕಟ್ಟಿ ಬಿ.ಎ., ಎಲ್‌ಎಲ್.ಬಿ., ಯವರೂ ಬಸವರಾಜಪತ್ರಿಕೆಯನ್ನು ಬರೆಯುವ ಮ॥ ಚನ್ನಬಸಪ್ಪ ಮುರುಘೇಂದ್ರಪ್ಪ ಹಾಲಪ್ಪನವರೂ, ಮೈಸೂರು ಸ್ಟಾರ್ ಪತ್ರಿಕೆಯನ್ನು ಬರೆಯುವ ಮ॥ ವಿರುಪಾಕ್ಷಯ್ಯನವರೂ ವೀರಶೈವಮತೋದ್ಧಾರಕ್ಕಾಗಿ ತಮ್ಮ ಕಾಯಗಳನ್ನು ಸವೆಸುತ್ತಿರುವರಾಗಿ ಇವರನ್ನು ನಾನು ಶರಣರೆಂದು ಭಾವಿಸುತ್ತೇನೆ. ಇಂತಹವರ ವಿಷಯದಲ್ಲಿ ನಿರುದ್ಯೋಗ ಲಕ್ಷಣವೋ ಎಂಬಂತೆ ದೋಷಾರೋಪಣೆ ಮಾಡುವದು ಒಳ್ಳೆಯ ಕೆಲಸವಲ್ಲ. ಸ್ಟಾರ್ ಪತ್ರಿಕೆಯು ಯಾವಾಗಲೂ ಗುರುನಿಂದೆಯನ್ನೂ ಬ್ರಾಹ್ಮಣನಿಂದೆಯನ್ನೂ ಮಾಡಿರುವುದಿಲ್ಲ. ಕೈ॥ ವೀರಸಂಗಪ್ಪನವರು ವೀರಶೈವರ ಗೌರವ ರಕ್ಷಣೆಗಾಗಿ ತ್ರಿಮತಸ್ಥ ಬ್ರಾಹ್ಮಣರಲ್ಲಿ ಹೋರಾಡಿದರು. ಅದು ಬ್ರಾಹ್ಮಣದೂಷಣೆಯೇನು ? ನಮ್ಮ ಮನೆಯನ್ನು ನಾವು ಚೊಕ್ಕಟಮಾಡಿಕೊಂಡರೆ ಪರರ ಮನೆಗೆ ಕಲ್ಲೆಸೆದಂತಾಯಿತೆ ? ಗುರುನಿಂದೆ-ಗುರುಭಕ್ತಕೇಸರಿ-ಗುರುಮಾರ್ಗ ಎಂದು ಬರೆಯುತ್ತಲೇ ಇರುತ್ತಾರೆ. ನಮ್ಮ ಹಿಂದಣ ಕಾಲದಲ್ಲಿ ಗುರು, ಲಿಂಗ, ಜಂಗಮ ಎಂಬ ವಾದಿಗಳಿದ್ದವೇ.ಹೊರತು, ಗುರುಮಾರ್ಗವೆಂಬ ಸಂಕೇತವನ್ನು ನಾವು ಕೇಳಿಲ್ಲ. ಅದು ಹಾಗಿರಲಿ. ವೀರಶೈವರಿಗೆ ಅಷ್ಟಾವರಣಗಳು ಮುಖ್ಯವಾಗಿರುತ್ತವಾಗಿ ಅವುಗಳನ್ನು ಯಾರೂ ನಿಂದೆಮಾಡುವದಿಲ್ಲ. ಮ॥ ವಿರುಪಾಕ್ಷಯ್ಯನವರು ಗುರುನಿಂದೆಯನ್ನು ಮಾಡಿರುವದಿಲ್ಲ. ವೀರಶೈವರ ಹಿತಕ್ಕಾಗಿ ಕೆಲಸಮಾಡುವವರನ್ನು ದೂಷಿಸುವದು ಶಿವಭಕ್ತ ಬಾಧಾಕರವಾಗಿರುತ್ತದೆ. ಶಿವನು—“ಮದ್ಭಕ್ತೋಹಿ ಮಮಾಧಿಕಾ” ಎಂದು ಹೇಳಿರುವದರಿಂದ ಶಿವನಿಗಿಂತಲೂ ಶಿವಭಕ್ತನು ಅಧಿಕನಾಗಿರುತ್ತಾನಾಗಿ ಶಿವಭಕ್ತರನ್ನು ಎಷ್ಟು ಮಾತ್ರಕ್ಕೂ ನೋಯಿಸಬಾರದು. ಅದು ಶಿವನನ್ನು ನೋಯಿಸಿದಂತಾಗುವದು. ಗುರುಭಕ್ತಕೇಸರಿ ಎಂಬ ಹೆಸರಿನವರು ಬಸವನು ಯಾವ ಸಿದ್ಧಾಂತವನ್ನೂ ಸ್ಥಾಪಿಸಿಲ್ಲ. ಮತಕ್ಕೆ ಗುರುವಾಗಿಲ್ಲ ಎಂದು ಬರೆಯುತ್ತಾರೆ. ಬಸವನು ದೊಡ್ಡವನಲ್ಲದಿದ್ದರೆ ಈಗ ಸುಮಾರು ಒಂಬೈನೂರುವರ್ಷಗಳ ಕಾಲದಿಂದಲೂ ಸಕಲ ವಿದ್ವಾಂಸರೂ ಶರಣರೂ ಬಸವೇಶ್ವರನ ಸ್ತುತಿರೂಪವಾದ ಗ್ರಂಥಗಳನ್ನು ಬರೆಯುತ್ತಿದ್ದರೆ ? ಅವರುಗಳ ಹೆಸರುಗಳನ್ನೆಲ್ಲಾ ಬರೆಯಬೇಕಾದರೆ ಪತ್ರಿಕೆಯ ಜಾಗವನ್ನೆಲ್ಲಾ ನಾನೇ ಆಕ್ರಮಿಸಬೇಕಾಗುತ್ತದೆ. ಅಂದಿನಿಂದಲೂ ಇಂದಿನವರೆಗೂ ಸಮಸ್ತ ವೀರಶೈವರು ಮತ್ತು ವಿಶ್ವದ ಎಲ್ಲ ಜನರು ಬಸವೇಶ್ವರನನ್ನು ಸ್ತುತಿಸಿರುವರೆಂದು ಒಂದುಮಾತಿನಲ್ಲಿ ಹೇಳಿದರೆ ಸಾಕಾಗಿರುತ್ತದೆ. ಗುರುವೆಂದರೆ ಗುರುಭಕ್ತಕೇಸರಿಯು ಏನೆಂದು ತಿಳಿದುಕೊಂಡಿದ್ದಾರೆಯೊ ಕಾಣೆ. ಯಾವನು ತನ್ನ ಮಹತ್ಕೃತಿಯಿಂದ ಸರ್ವರಿಂದಲೂ ಸ್ತುತ್ಯನಾಗಿರುತ್ತಾನೊ ಅವನೇ ಗುರುವು. ದ್ವಿತೀಯಶಂಭುವಾದ ಬಸವೇಶನು ಅಂತಹವನಾಗಿರುತ್ತಾನಾದ್ದರಿಂದ ಅವನೇ ಜಗದ್ಗುರುವು. ಸುಮ್ಮನೆ “ನಾನು ಗುರು ನಾನು ಗುರು” ಎಂದು ಕೂಗಿದ ಮಾತ್ರಕ್ಕೆ ಗುರುತ್ವ ಬರುತ್ತದೆಯೆ ? ಸದ್ವಾಕ್ಯ ಕುಸುಮಾವಳಿಯಲ್ಲಿ ಹೀಗೆ ಬರದಿರುತ್ತದೆ :—

ಕೆಲವರ್ಗುರು ಗುರುನಾಂಗುರುವೆನ್ನುತೆ ।
ನೆಲದೊಳ್ಗಲೆ ಗುರುಗುಟ್ಟುತ್ತಿರ್ಪರ್ ॥೧॥
ಹೆಗ್ಗಣಗಳ್ಕಾಚಾಲವ ಕಂಡೊಡೆ ।
ಸುಗ್ಗಿತೆ ಗುರುಗುರು ಎಂಬವು ಗುರುವೇಂ ॥೨॥
ಪಂದಿಗಳ್ಗಲೆಪುರೀಷವ ಕಂಡೊಡೆ ।
ಚಂದದಿಗುರುಗುರು ಎಂಬವು ಗುರುವೇಂ ॥೩॥
ಉರುರಂಧ್ರದ ಘಟಜಲಮಂ ಕೀಳ್ಗದೆ ।
ಸುರಿಸುತೆ ಗುರುಗುರು ಎಂಬುದು ಗುರುವೇಂ ॥೪॥
ಗುರುವಿನಲಕ್ಷಣವಿದೋರ್ವಡೆ ತಾಂ ಗುರು ।
ಉರುದುರ್ಗುಣಗಣವಿರೆ ಪೊರುವಡೆಗುರು ॥೫॥

ಗುರುಭಕ್ತಕೇಸರಿಯು ತ್ರಿಮತಸ್ಥಾಚಾರ್ಯರನ್ನು ಹೊಗಳಿ ಬಸವೇಶನನ್ನು ಆಕ್ಷೇಪಣೆಮಾಡಿ ಪಂಚಾಚಾರ್ಯರ ಹೆಸರನ್ನು ಎತ್ತದಿರುವದು ಆಶ್ಚರ್ಯವಾಗಿದೆ. ಪಂಚಾಚಾರ್ಯರ ಚರಿತ್ರೆಯನ್ನು ಗುರುಭಕ್ತಕೇಸರಿಯು ಓದಿರುತ್ತಾರೊ ? ಆ ಚರಿತ್ರೆಗಳನ್ನು ಯಾರು ಯಾರು ಬರದಿರುತ್ತಾರೊ ಗೊತ್ತುಂಟೊ ? ಅವರುಗಳು ಮಾಡಿರುವ ಕಾರ್ಯಗಳೇನು ? ಗೊತ್ತುಂಟೊ ? ಗುರುಭಕ್ತಕೇಸರಿಯು ಇವುಗಳನ್ನೆಲ್ಲಾ ತಿಳಿದುಕೊಂಡು ಮುಂದಕ್ಕೆ ಗುರುವಿಚಾರವನ್ನು ಎತ್ತಬೇಕು.

ತಾ॥ 9—1—1929
ಜೇರಗೆ ಬಸವಲಿಂಗಪ್ಪ.

ಯಜಮಾನ್ ಅಂಡ್ ಸನ್ಸ್
ಫೋಟೋ, ಬ್ಲ್ಯೂ ಯಲ್ಲೋ
ಲೆಡ್‌ಬ್ಲಾಕುಗಳು, ಅರಗಿನಶೀಲು
ದವಾಲಿಬಿಲ್ಲೆಗಳು ಮತ್ತು
ರಬ್ಬರ್ ಮೊಹರುಗಳನ್ನೂ
ತಯಾರಿಸುತ್ತೇವೆ.
ಚಿಕ್ಕಪೇಟೆ 63
ಬೆಂಗಳೂರು ಸಿಟಿ

6

೧೯೨೯ ನೆಯ ಇಸವಿ ಜನವರಿ ತಾ॥ ೧೨ ರಿಂದ ೧೯೨೯ ನೆಯ ಇಸವಿ ಜನವರಿ ತಾ॥ ೧೮ ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೫೧ ನೆಯ ವಿಭವನಾಮಸಂವತ್ಸರದ ಪುಷ್ಯ ಶುದ್ಧ ಬಿದಿಗೆಯಿಂದ ಪುಷ್ಯ ಶುದ್ಧ ಅಷ್ಟಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು ಮಕ
12	ಶನಿ	ಬಿದಿ	60	ಶ್ರವ	60	29
13	1 ಭಾನು	ಬಿದಿ	1-37	ಶ್ರವ	0-57	30
14	2 ಸೋಮ	ತದಿ	3-10	ಧನಿ	3-50	1
15	3 ಮಂಗಳ	ಚೌತಿ	3-27	ಶತ	5-31	2
16	4 ಬುಧ	ಪಂಚ	2-27	ಪುಭಾ	5-53	3
17	5 ಗುರು	ಷ-ಉ	0-13-57-29	ಉಭಾ	5-13	4
18	ಶುಕ್ರ	ಅಷ್ಟ	53-5	ರೇವ	3-25	5

(1) ಮಳೆನಕ್ಷತ್ರ-ಉತ್ತರಾಷಾಢ ೨ ನೆಯಪಾದ, ವಾಕ್ಯರೀತ್ಯಾ ಉತ್ತರಾಯಣ ಪುಣ್ಯಕಾಲಃ, ಶಿವಗಂಗಾಗಂಗೋತ್ಪತ್ತಿಃ. (2) ಉತ್ತರಾಯಣಪುಣ್ಯಕಾಲಃ, ದೂರ್ವಾಗಣಪತಿವ್ರತಂ. (3) ಚುಂಚನಕಟ್ಟೆ ರಾಮಸ್ವಾಮಿ ರಥಃ. (4) ಮಳೆನಕ್ಷತ್ರ-ಉತ್ತರಾಷಾಢ ೩ ನೆಯಪಾದ. (5) ಮಾರ್ಗಶಿರ ಲಕ್ಷ್ಮೀವ್ರತಂ, ಕುಳಷಷ್ಠಿ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಯಾಪ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಭುವನಪಥಕೃತಾವತಾರಾ ಪಶ್ಯತ್ವ ಸಹೃತ್ಕ ತೋಷರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತ್ತಿಳಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧—೧೦—೦] [ಪರಸ್ಥಳದವರಿಗೆ ೨—೮—೦] [ಲೈಬ್ರೆರಿಗೆ ೩—೮—೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಜನವರಿ ತಾರೀಖು ೧೯ ನೆಯ ಶನಿವಾರ [ಸಂಚಿಕೆ ೩

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೫—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨—೮—೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩—೮—೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪರ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ $\frac{1}{4}$ ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮದ್ಯುವರಾಜರವರಿಂದ ಕಳೆಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮದ್ಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ॥ ಸಿರಸಿಂಗಿ ದೇಶಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ. ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಫ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

15

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು $6\frac{1}{2}" \times 4"$ 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ $6\frac{1}{2}" \times 4"$ 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು $5" \times 2\frac{1}{4}"$ 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ $5" \times 3\frac{1}{4}"$ 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಬಿಟ್ಟಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಬೇಕಾದವರು ಡಜನ್ 1 ಕ್ಕೆ 3 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, $3" \times 4\frac{1}{2}"$ ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0, 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ $10" + 14"$ ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಹದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

ಮಣಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[50—10]

“ ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ ”

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮುಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವುಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

“ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ”,
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50 — 13]

ಬೆಲೆ ಸುಲಭ ! ಶ್ರೀ ಬಣ್ಣ ಗ್ಯಾರಂಟಿ !!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶೆ ಜವುಳಿ.

ರೇಶ್ಮೆವಸ್ತ್ರ—1 ನೇ ನಂ. ತೊಲ 1ಕ್ಕೆ 0— 8—0
ರೇಶ್ಮೆಮೊಗಟು—1 ನೇ ನಂ. ತೊಲ 1ಕ್ಕೆ 0— 9—6
ರೇಶ್ಮೆ ಕೈವಸ್ತ್ರ—1 ಕ್ಕೆ 0—11—0 ಡಜನ್ 1ಕ್ಕೆ 7—14—0

ಒಂದುಸಲ ತರಿಸಿ ನೋಡಿರಿ. ಮಾಲಿನಲ್ಲಿ ಮಿಷ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಖರ್ಚು ಸಹ ವಾಪಸು ಕೊಡುವೆವು.

ನಮ್ಮ ಅಡ್ರಸ್—
ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ,
ರೇಶ್ಮೆ ಜವುಳಿ, ವ್ಯಾಪಾರಿಗಳು,
ಮೊಳಕಾಲ್ಮೂರು, ಚಿತ್ರದುರ್ಗ ಡಿ॥

[illegible]

AUCTION SALE.

Under Power of Attorney executed by Mr. T. P. Kumaraswamy (the mortgagor) appointing the Bank of Mysore Ltd., Mysore (Mortgagees) as his Attorney to sellth e under-mentioned properties on his behalf the Bank of Mysore Ltd., Mysore will sell the said properties by Public Auction on Sunday the 27th Jan. 1929 from 8 A. M. to 11 A. M. and 3 P. M. to 5. P. M. on the spot subject to the following conditions:—

1. The sale is subject to confirmation by Head Office of the Bank at Bangalore.
2. One-tenth of the final bid amount to be paid by the person whose bid is accepted immediately and the balance within a fortnight of the date of sale.
3. The conveyance and registration charges to be borne by the purchaser.
4. The Bank reserves to itself the right to accept or reject any offers without assigning any reasons therefor.
5. The Bank takes no responsibility in regard to defects if any in the description of the properties or in the good title of Mr. T. P. Kumaraswamy to the properties sold by the Bank on his behalf.

V. L. Naranaiya
Manager, Bank of Mysore Ltd.,
Mysore.

Description of the Properties.

1. **Bungalow:** Situated in Chamaraja Mohalla, Prince of Wales Road Mysore, measuring East to West 120 feet and South to North 80 feet including backyard, and bounded on the East by conservancy lane, West by High Road, South by No 6 Cottage Site, and North by No 4 Cottage Site.

2. **Site:** Situated in Prince of Wales Road, Chamaraja Mohalla Mysore, measuring East to West 120 feet and North to South 84 feet and bounded on the East by conservancy lane, West by Prince of Wales Road, South by No 3 Cottage site and North by No 1 Cottage site.

3. Pieces and Parcel of land with compound wall and other hereditaments thereon known as and bearing Municipal No 1, Vanivilas Road, Mysore or as No 1 in the No V drainage area block No 87 Mysore City, bounded on the North by conservancy lane, on the South by Vanivilas Road, on the East by Banjamanicalet's land and trust property and on the West by Mission Bungalow, measuring from the North to South 245 plus 233/2 plus 245 plus 262½ East to West 64 plus 82/2.

(2) 64 plus 84½ feet and being 4045 1/3 sq. yds in extent of which 1000 sq. yds has been sold by the purchaser. [2—2]

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಜನವರಿ ತಾ॥ ೧೯ ನೆಯ ಶನಿವಾರ.

ಗುಲ್ಲು, ಟೊಳ್ಳು ಮತ್ತು ಕ್ರೋಧ.

ಮ॥ ವೆಂಕಟಕೃಷ್ಣಯ್ಯನವರಿಗೆ ನಾಲ್ಕು ಪತ್ರಿಕೆಗಳನ್ನು ಪ್ರಕಟಿಸಲು ಕೊಡಲ್ಪಟ್ಟಿದ್ದ ಅಪ್ಪಣೆಯನ್ನು ಕಾಲಾತೀತವಾಗಿಯಾದರೂ ಪ್ರಭುತ್ವದವರು ಧೈರ್ಯಮಾಡಿ ಹಿಂದಕ್ಕೆ ತೆಗೆದುಕೊಂಡುಬಿಟ್ಟುದರಿಂದ, ಕಸಬುದಾರರಾದ ಬ್ರಾಹ್ಮಣ ಚಳವಳಿಕೋರರ ಬುದ್ಧಿ ಪಲ್ಲಟವಾಗಿದೆ. ಈ ಗುಲ್ಲುಗಾರರು ಕ್ರೋಧಾವಿಷ್ಟರಾಗಿ ಬಹಳ ಪಟಾಟೋಪದಿಂದ ತಮ್ಮ ರೌದ್ರವನ್ನು ತೋರಿಸುತ್ತಿರುವುದು ನೋಡಲಿಕ್ಕೆ ಬಹಳ ವಿನೋದಕರವಾಗಿದೆ. ಪ್ರಭುತ್ವದವರ ಈ ಅಪ್ಪಣೆಯನ್ನು ನಿರೋಧಿಸುವುದಕ್ಕಾಗಿ ಬೆಂಗಳೂರಿನಲ್ಲಿ ನೆರೆಯಿಸಿದ ಸಭಾಧ್ಯಕ್ಷತೆಗೆ ಮಾವಳ್ಳಿಯ ಮ॥ ಎಸ್. ಬಯ್ಯಣ್ಣನವರನ್ನು ನಿಯೋಜಿಸಿದುದೂ, ಮೈಸೂರಿನಲ್ಲಿ ತಮ್ಮ ನಿರೋಧ ಕಾರ್ಯಕ್ಕೆ ಮ॥ ಗಳಾದ ತಗಡೂರು ರಾಮಚಂದ್ರರಾಯರ ಮತ್ತು ತಿಮ್ಮರಾಯಪ್ಪನವರ ಸಹಾಯವನ್ನು ಹೊಂದಿದುದೂ ಅವರಿಗೆ ಭೂಷಣಪ್ರದವಾಗಿವೆ. ಬೆಂಗಳೂರಲ್ಲಿ ನಡೆದ ಗೊಂದಲದಿಂದೀಚೆಗೆ ಹಣಬೆಯಂತೆ ಬಹಿರಂಗದಲ್ಲಿ ತಲೆಹಾಕಿರುವ ಹುಡುಗ ರಾಜಕೀಯ ಚಳವಳಿಗಾರರಾದ ಮ॥ ವಿರ್ಲೆ ಲಕ್ಷ್ಮೀನಾರಣಪ್ಪನವರು ಮತ್ತು ಮ॥ ಎಸ್. ವೆಂಕಟಪತಯ್ಯನವರು ಎಲ್ಲ ಆಧುನಿಕ ಸುಧಾರಣೆಗೆ ಕುಠಾರಪ್ರಾಯವಾದ ಧಾರ್ಮಿಕ ಅಡಚಣೆಗಳನ್ನು ತಂದೊಡ್ಡುವ ಆ ಮುದಕಯ್ಯನವರ ಪಕ್ಷವನ್ನು ಹಿಡಿದು ಹೋರಾಡುತ್ತಿರುವರು. ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳಲ್ಲಿ ಅಸಹ್ಯಕರವಾಗಿಯೂ ಉತ್ತರವಾದಿತ್ವವಿಲ್ಲವಾಗಿಯೂ ಪ್ರಕಟವಾಗುತ್ತಿದ್ದ ಲೇಖನಗಳನ್ನು ನೋಡಿ ಯೋಗ್ಯರಾದ ಅನೇಕ ಬ್ರಾಹ್ಮಣರು ಬೇಸರಿಸಿಕೊಂಡು ಖಂಡಿಸುತ್ತಿದ್ದುದನ್ನು ನಾವು ಚೆನ್ನಾಗಿ ಬಲ್ಲೆವು. ಆದರೆ, ಜಗಳಗಂಟರಿಗೆ ಮಾತ್ರ ವಿವೇಕವೂ ತಾಳ್ಮೆಯೂ ಶೂನ್ಯವಾಗಿ ಮಾನಮರ್ಯಾದೆಯಿಲ್ಲದೆ ವಾಚಾಮಗೋಚರವಾಗಿ ನಿಂದಿಸುವುದು ಸ್ವಭಾವವಾಗಿದೆ. ಮುದಕಯ್ಯನವರ ಚೇಲಾಗಳಲ್ಲೊಬ್ಬರು ಅವರ (ಮುದಕಯ್ಯನವರ) ಮಹಿಮೆಯನ್ನೂ ಮತ್ತೊಬ್ಬರು ಅವರ ಸತ್ಯಸಂಧತೆಯನ್ನೂ ಪ್ರಶಂಸಿಸುತ್ತಿರುವರು. ಒಂದೇ ವರ್ಗದವರು ಗುತ್ತಿಗೆ ಹಿಡಿದು ಅನುಭವಿಸುತ್ತಿದ್ದ ಸರ್ಕಾರಿ ಉದ್ಯೋಗಗಳಲ್ಲಿ ಎಲ್ಲ ವರ್ಗದವರ ಪ್ರಾತಿನಿಧ್ಯವಿರುವುದಕ್ಕಾಗೇರ್ಪಟ್ಟಿರುವ ಮಿಲ್ಲರ್ ಕಮಿಟಿಯ ವರದಿಯಮೇಲೆ ಹುಟ್ಟಿರುವ ಸರ್ಕಾರದಪ್ಪಣೆಯನ್ನೂ, ಸರ್ಕಾರಿ ಮತ್ತು ಸ್ವಂತ ಪಾಠಶಾಲೆಗಳಿಗೆ ಆದಿಕರ್ನಾಟಕರ ಪ್ರವೇಶಕ್ಕಿದ್ದ ನಿರ್ಬಂಧವು ತಪ್ಪಿ ಸಮಸ್ತ ವರ್ಗದವರೂ ವಿದ್ಯಾವಂತರಾಗಲೇರ್ಪಟ್ಟಿರುವ ವಿದ್ಯಾಭ್ಯಾಸದ ಮೆಮೊರಾಂಡಮ್ಮನ್ನೂ ನಾಶಪಡಿಸಲು ಅಸನು ಸಾಹಸಮಾಡಿದ ಮನುಷ್ಯರಲ್ಲಿ ಎಂತಹ ಮಹತ್ವವಿರುವುದೋ ದೇವರೊಬ್ಬನಿಗೇ ವೇದ್ಯವು! ಮ॥ ವೆಂಕಟಕೃಷ್ಣಯ್ಯನವರು "ವೃದ್ಧಪಿತಾಮಹ" ರೆಂದು ಕರೆಯಲ್ಪಡಬೇಕಾಗಿ ಮಹಾತ್ಮ ಗಾಂಧಿಯವರು ಸೂಚಿಸಿರುವುದರಿಂದ, ಈ ವೃದ್ಧ ಸಂಪಾದಕರ ಯೋಗ್ಯತೆಯು ಎಂತಹದೆಂಬುದು ವ್ಯಕ್ತವಾಗುತ್ತದೆಂದು ಮ॥ ವೆಂಕಟಪತಯ್ಯನವರು ಹೇಳಿರುವರು. ಇಂತಹ ಹೊಗಳಿಕೆಗೂ ಉತ್ಪ್ರೇಕ್ಷೆಗೂ ಮಹಾತ್ಮರ ನಿಘಂಟಿನಲ್ಲಿ ಇಂಬಿಲ್ಲವು. ಮ॥ ವೆಂಕಟಕೃಷ್ಣಯ್ಯನವರು "ಗ್ರಾಂಡ್ ಓಲ್ಡ್ ಮ್ಯಾನ್" ಎಂದು ಸಂಬೋಧಿಸಲ್ಪಟ್ಟಾಗ ಇದು ಅನ್ಯಭಾಷೆಯಾದುದರಿಂದ ಸರಿಯಲ್ಲವೆಂದೂ, ಇದರ ಬದಲು ವೃದ್ಧಪಿತಾಮಹನೆಂದು ಕರೆಯುವುದುತ್ತಮವೆಂದೂ ಮಹಾತ್ಮರು ಹೇಳಿದುದು ಸ್ಮೃತಿಪಥದಲ್ಲಿದೆ. ಮಹಾತ್ಮರು ರಾಜಧಾನಿಗೆ ಬಂದ ಒಂದೆರಡು ಗಂಟೆಗಳ ಕಾಲದಲ್ಲಿಯೇ ಈರೀತಿ ಮುದಕಯ್ಯನವರನ್ನು ಸಂಬೋಧಿಸುವುದುತ್ತಮವೆಂದು ಸೂಚಿಸಿದುದರಿಂದ, ಮಹಾತ್ಮರು ಮುದಕಯ್ಯನವರ ಯೋಗ್ಯತೆಯನ್ನು ಅರಿತು ಆರೀತಿ ಹೇಳಿದರೆಂಬುದು ಆಶ್ಚರ್ಯವೇ ಸರಿ. ಮುದಕಯ್ಯನವರು ಈಚೆಗೆ ಬುದ್ಧಿಭ್ರಾಂತರಾಗಿರುವುದೂ, ಯೂರೋಪಿಯನ್ ದಿವಾನರನ್ನು ಕೋರಿರುವುದೂ, ಸಾಮ್ರಾಜ್ಯಪ್ರಭುತ್ವದವರಲ್ಲಿ ಮೊರೆಯಿಟ್ಟುಕೊಂಡಿರುವುದೂ ಮಹಾತ್ಮರಿಗೆ ಗೊತ್ತಾದರೆ ಹಿಮವತ್ಪರ್ವತದಷ್ಟು ಅಗಾಧವಾದ ಮತ್ತೊಂದು ಅಪರಾಧವನ್ನು ಮಾಡಿದೆನೆಂದು ಭಾವಿಸದೆ ಇರಲಾರರು. ಬಡಪಾಯಿ ಮ॥ ವೆಂಕಟಕೃಷ್ಣಯ್ಯನವರು ತಮ್ಮ ಲೋಪದೋಷಗಳನ್ನು ಚೆನ್ನಾಗಿ ಅರಿತಿರುವರು. ಆದರೆ ಮಹಾತ್ಮರು ನಿಜಸ್ಥಿತಿಯನ್ನು ಅರಿಯದೆ ಔಪಚಾರಿಕವಾಗಿ ಹೇಳಿದ ವಿಷಯವನ್ನು ಮುದಕಯ್ಯನವರ ಹೊಗಳಭಟ್ಟರಾದ ಮ॥ ವೆಂಕಟಪತಯ್ಯನವರು ಮಹತ್ವವನ್ನಾಗಿ ಮಾಡಿರುವುದಕ್ಕೋಸ್ಕರ ಅವರನ್ನು ಶ್ಲಾಘಿಸಬೇಕಾಗಿದೆ. ಮೈಸೂರಿನಲ್ಲಿ ನಡೆದಿರತಕ್ಕ ಒಳ್ಳೆಯ ಕೆಲಸವೆಲ್ಲವೂ ಈ ಮುದಕಯ್ಯನವರ ಸಾಹಸದಿಂದಲೇ ಆಗಿರುವುದೆಂದೂ, ಔದ್ಯೋಗಿಕಾನೌದ್ಯೋಗಿಕ ಸಂಸ್ಥೆಗಳೆಲ್ಲ ಇವರಿಂದ ಉಪಕೃತಿಯನ್ನು ಯಾವ ರೀತಿಯಿಂದಲಾದರೂ ಹೊಂದಿರುತ್ತವೆಂದೂ ಹೇಳಲ್ಪಟ್ಟಿದೆ. ಹಾಗೆ ಉಪಕೃತಿಯನ್ನು ಹೊಂದಿದ ಸಂಸ್ಥೆಗಳಾವುವೆಂದು ಎಷ್ಟು ಯೋಚಿಸಿದರೂ ಒಂದೂ ಗೋಚರವಾಗುವುದಿಲ್ಲ. ಕಳೆದ 36 ವರ್ಷಗಳಿಂದಲೂ ಈ ಮುದಕಯ್ಯನವರು ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿರುವರೆಂದೂ, ಅದನ್ನು ರೂಪುಗೊಳಿಸಿ ಅದರ ಹಕ್ಕುಭಾಧ್ಯತೆಗಳನ್ನು ಹೊಂದುವುದರಲ್ಲಿ ಬಹುಮಟ್ಟಿಗೆ ಇವರೇ ಕಾರಣಭೂತರೆಂದೂ, ಈ ಕಾರಣದಿಂದ ಭಾರತ ರಾಜಕೀಯ ಸುಧಾರಣಾ ವಿಚಾರದಲ್ಲಿ ಕೂಡ ಸಾಹಾಯ್ಯಾಕರಿಸಿರುವರೆಂದೂ ಪ್ರಶಂಸಿಸಲ್ಪಟ್ಟಿದೆ. ಎಂತಹ ಲೋಕೋತ್ತರವಾದ ಸಹಾಯ! ಪ್ರಜಾಪ್ರತಿನಿಧಿಸಭೆಯನ್ನು ರೂಪುಗೊಳಿಸುವಷ್ಟು ಸಾಮರ್ಥ್ಯವು ಈ ಮುದಕಯ್ಯನವರಿಗಿದ್ದುದನ್ನು ನಾವೆಂದೂ ಕಾಣೆವು. ಆದರೆ ಇವರು ಈಗ ಅಲ್ಲಿ ಅಲಂಕಾರಪ್ರಾಯವಾಗಿದ್ದು ಏನಾದರೊಂದು ಮಾತನಾಡಿದರೆ ಸಭಿಕರು ನಗಾಡುವರೆಂಬುದನ್ನು ಮಾತ್ರ ನಾವು ಬಲ್ಲೆವು. "ಇವರ ಸ್ವಾರ್ಥತ್ಯಾಗ, ಧೈರ್ಯ, ಉದಾತ್ತ ಧ್ಯೇಯ ಕಾರ್ಯಸಾಧನ ಪ್ರಯತ್ನ ಈ ಗುಣವಿಶೇಷಣಗಳಿಂದ ಭಾರತ ಮಹಾಪುರುಷರ ಶ್ರೇಣಿಯಲ್ಲಿ ಅನುರೂಪವಾದ ಸ್ಥಾನವು ಪ್ರಾಪ್ತವಾಗಿರುವುದು" ಎಂದು ಹೊಗಳಲ್ಪಟ್ಟಿದೆ. ಮ॥ ವೆಂಕಟಕೃಷ್ಣಯ್ಯನವರಿಗೆ ಅಂತಹ ಉದಾತ್ತ ಧ್ಯೇಯವೂ, ಕಾರ್ಯಸಾಧನ ಶಕ್ತಿಯೂ ಇರುವುವೆ? ಇವರು ಪ್ರಪಂಚವನ್ನು ವಂಚಿಸಲೆಷ್ಟು ಪ್ರಯತ್ನಪಟ್ಟಾಗ್ಗ್ಯೂ, ಇವರಿಗೆ ಅಂತಹ ಉದಾತ್ತಧ್ಯೇಯವಿಲ್ಲವೆಂದೂ, ಪ್ರಜೋಪಯುಕ್ತಕಾರ್ಯ ವಿಘಾತಕರ ಗುಂಪನ್ನು ಸೇರಿಸಿಕೊಂಡು ಪ್ರಭುತ್ವದವರನ್ನು ಪ್ರತಿಭಟಿಸುವುದೇ ಅವರ ಮುಖ್ಯಧ್ಯೇಯವೆಂದೂ, ಕ್ಷುಲ್ಲಕಚಮತ್ಕಾರ, ಸುಳ್ಳುಪ್ರಕಟನೆ, ದುರ್ಭಾಷೆ ಇವುಗಳೇ ಅವರ ಪರಮ ಕಾರ್ಯಕಲಾಪಗಳೆಂದೂ ಮೈಸೂರಿನವರು ಚೆನ್ನಾಗಿ ಬಲ್ಲರು. ಪತ್ರಿಕಾಸಂಪಾದನವು ಮುದುಕಯ್ಯನವರ ಪುರುಷಾರ್ಥವೆಂದೂ, ಅದೇ ಅವರ ಪ್ರಾಣಾಧಾರವೆಂದೂ ವಾದಿಸಲ್ಪಡುತ್ತಿದೆ. ಈ ಮುದಕರ ಪ್ರಾಣವು ಇದರಿಂದಲೇ ಸಮಾಪ್ತಿಯಾಗುವುದೆಂದು ಹೇಳಿರುವುದೂ ಒಂದು ಚಮತ್ಕಾರವೇ ಸರಿ. ಮ॥ ವೆಂಕಟಕೃಷ್ಣಯ್ಯನವರು ಕೆಲ ಕಾಲದವರೆಗೆ ಇಂಗ್ಲಿಷ್ ಪತ್ರಿಕೆ ಸಮೇತವಾಗಿ ಎಲ್ಲ ಪತ್ರಿಕೆಗಳ ಸಂಪಾದಕತ್ವವನ್ನು ಇಂಗ್ಲಿಷ್ ಅರಿಯದ ತಮ್ಮಾಪ್ತ ಆಶ್ರಿತನಿಗೆ ವಹಿಸಿದ್ದರು. ಆತನ ದುರದೃಷ್ಟದಿಂದ ಒಂದು ಮಾನನಷ್ಟದ ವಿವಾದದಲ್ಲಿ ಆತನಿಗೆ ಅರ್ಥದಂಡ ಸಹ ವಿಧಿಸಲ್ಪಟ್ಟಿತು. ಮ॥ ವೆಂಕಟಪತಯ್ಯನವರು ಕೋರುವುದಕ್ಕಿಂತಲೂ ಹೆಚ್ಚಾಗಿ ನಾವು ಮ॥ ವೆಂಕಟಕೃಷ್ಣಯ್ಯನವರ ಶ್ರೇಯಸ್ಸನ್ನು ಕೋರುವವರಾಗಿರುತ್ತೇವೆ. ವಿರಾಮವಿಲ್ಲದೆ ದುಡಿಯುವ ಮುದಕಯ್ಯನವರು ತಮ್ಮ ವೃದ್ಧಾಪ್ಯದ ಪರಮಾವಧಿಯಲ್ಲಿ ವಿಶ್ರಾಂತಿಯಿಂದಿದ್ದು ಮತಪದ್ಧತಿಯನ್ನನುಸರಿಸಿ ದೇವರ ಧ್ಯಾನದಲ್ಲಿ ಕಾಲಕಳೆಯುವವರಾಗಲಿ. ತಾಳ್ಮೆಯೂ, ವಾಕ್‌ಸ್ವಾತಂತ್ರ್ಯವೂ ಇರಬೇಕೆಂಬುದೇ ನಮ್ಮ ಪ್ರಭುತ್ವದವರ ಮುಖ್ಯ ಧ್ಯೇಯವಾಗಿರುತ್ತದೆಂದು ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವರು. ಅದು ಅವರ ಸ್ವಂತ ಅಭಿಪ್ರಾಯವಾಗಿರುವುದಾದರೂ ಅದಕ್ಕೆ ವಿರುದ್ಧವಾಗಿ ನಡಿಸಲ್ಪಟ್ಟಾಗಲು ಕೂಡ ಕೆಲ ಅನಿವಾರ್ಯಸಂದರ್ಭವಿನಾ ದೂರು ಹೇಳಿಕೊಳ್ಳಲಿಕ್ಕಿಲ್ಲವೆಂದು ಮ॥ ಲಕ್ಷ್ಮೀನಾರಣಪ್ಪನವರು ಹೇಳುತ್ತಾರೆ. ಈ ರಾಜಕೀಯ ವಿಚಾರದಲ್ಲಿ ನಾವು ಹೆಚ್ಚಾಗಿ ತರ್ಕಿಸುವುದಿಲ್ಲ. ಆದರೂ ಇಲ್ಲಿಯಷ್ಟು ವಾಕ್‌ಸ್ವಾತಂತ್ರ್ಯವು ಮತ್ತಾವಲ್ಲಾದರೂ ಉಂಟೆ ಮತ್ತು ನ್ಯಾಯವಾದ ಪತ್ರಲೇಖನವು ಅಭ್ಯಂತರಪಡಿಸಲ್ಪಟ್ಟಿರುವುದೆ ಎಂದು ಕೇಳಬೇಕಾಗಿದೆ. ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳು ಅನೇಕವೇಳೆ ಪ್ರಭುತ್ವದವರಿಂದೆಚ್ಚರಿಸಲ್ಪಟ್ಟಾಗ್ಗ್ಯೂ ರಾಜದ್ರೋಹಕಾರಕ ಲೇಖನಗಳನ್ನು ಬರೆದು ವಿಜೃಂಭಿಸುತ್ತಿದ್ದುದು ಮತ್ತಾವ ದೇಶದಲ್ಲೂ ಸಹಿಸಲ್ಪಡುತ್ತಿದ್ದಿತೆಂಬುದನ್ನು ನಾವು ಬೇರೆ ಅರಿಯೆವು. ಮ॥ ವೆಂಕಟಕೃಷ್ಣಯ್ಯನವರ ದೇಶಾಭಿಮಾನವು ಶುದ್ಧ ಬೂಟಾಟಿಕೆಯು. ಸಾಸಿವೆಯಷ್ಟು ಸ್ವದೇಶಾಭಿಮಾನವನ್ನೂ, ಪ್ರಪಂಚದಲ್ಲೆಲ್ಲ ಅತ್ಯಂತ ಪ್ರಜಾನುರಾಗಿ ಪ್ರಭುಗಳೆಂದು ಹೆಸರ್ವಡೆದವರಲ್ಲೊಬ್ಬರಾದ ಪ್ರಭುವಿನಲ್ಲಿ ನಿಜವಾದ ಭಕ್ತಿಯನ್ನೂ ಉಳ್ಳ ಯಾವ ರಾಜಕಾರ್ಯ ನಿರತನೂ ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳ ಸಂಪಾದಕರಂತೆ ವರ್ತಿಸುತ್ತಿರಲಿಲ್ಲ. ಪ್ರಭುತ್ವದ ಪ್ರತಿಯೊಂದು ಕಾರ್ಯವನ್ನು ವ್ಯಂಗ್ಯವಾಗಿ ಭಾವಿಸುವುದನ್ನೂ, ಭರತಖಂಡದಲ್ಲೆಲ್ಲ ನ್ಯಾಯಬದ್ಧರಾಗಿ ರಾಜ್ಯಭಾರಮಾಡುವವರೆಂದು ಪ್ರಖ್ಯಾತರಾಗಿರುವ ಪ್ರಭುಗಳಿಗೆ ಅನಾದರಣೆ ಅವಮರ್ಯಾದೆ ಮಾಡುವುದನ್ನೂ ನಿಮಿಷಮಾತ್ರ ಸಹಿಸತಕ್ಕುದಾಗಿಲ್ಲವು. ಅಂತಹ ಲೇಖಕನು ರಾಜದ್ರೋಹಿಯಾಗಿ ಪರಿಗಣಿಸಲ್ಪಡಬೇಕು. ಇಂತಹ ಲೇಖಕರನ್ನು ನಿಜವಾದ ದೇಶಸೇವಕರು ದೂರೀಕರಿಸದಿದ್ದಲ್ಲಿ ನಮ್ಮ ಮೈಸೂರುಸಂಸ್ಥಾನಕ್ಕೆ ದ್ರೋಹ ಮಾಡಿದಂತಾಗುವುದು. ಇಲ್ಲಿಯ ಪತ್ರಿಕಾಸಂಪಾದಕರು ತಮ್ಮ ಕರ್ತವ್ಯವನ್ನೂ ರಾಜಭಕ್ತಿಯನ್ನೂ ದೇಶಾಭಿಮಾನವನ್ನೂ ಅರಿಯದಿರುವಾಗ್ಗೆ ನಮ್ಮ ಸಂಸ್ಥೆಗಳ ಮತ್ತು ಸಂಸ್ಥಾನದ ಕ್ಷೇಮ ಗೌರವ, ದೊಡ್ಡಸ್ತಿಕೆಗಳನ್ನು ಮುಂಬರಿದ ಕೆಲ ಪಾಶ್ಚಾತ್ಯ ದೇಶಗಳ ಕಲ್ಪನಾನುಸಾರವಾಗಿ ಮಾಡಲೆತ್ನಿಸಿ ಗಂಡಾಂತರಕ್ಕೆ ಈಡುಮಾಡಲಾಗದು. ಎಷ್ಟೋ ಎಚ್ಚರಿಕೆಗಳನ್ನು ಕೊಟ್ಟಾಗ್ಗ್ಯೂ ಪತ್ರಿಕೆಗಳ ಪ್ರಕಟನೆಗೆ ಕೊಟ್ಟಿರುವ ಅಪ್ಪಣೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾಗ್ಗ್ಯೂ ಈ ದೇಶಾಭಿಮಾನಿ ವಿಜೃಂಭಿತರು ಮಾಡಿರುವುದಾದರೂ ಏನು? ಈ ಮುದಕಯ್ಯನವರು ಅತ್ಯಂತ ಹೇಯವೂ ಜಘನ್ಯವೂ ಆದ ಕಾಗದವನ್ನು ಬ್ರಿಟಿಷ್ ರೆಸಿಡೆಂಟರಿಗೆ ಬರೆದಿರುವುದು ಸಾಲದೆ, ಈಗ ನಿಲ್ಲಿಸಲ್ಪಟ್ಟಿರುವ ಪತ್ರಿಕೆಗಳ ಬದಲಾಗಿ ಇವರ ಆಶೀರ್ವಾದಾನುಗ್ರಹದಿಂದಲೇ ನಡಿಸಲ್ಪಡುತ್ತಿರುವ ಮೈಸೂರಿಯನ್ ಎಂಬ ಪತ್ರಿಕೆಯಲ್ಲಿಸಹ ಪ್ರಕಟಿಸಿರುವರು. ಈ ಪತ್ರದಲ್ಲಿ ಕಂಡ ನಿರಾಧಾರವಾದ ವಿಷಯಗಳನ್ನು ಕುರಿತು ಮತ್ತೊಂದು ವೇಳೆ ಪ್ರಸ್ತಾವಿಸುವೆವು. ಆದರೆ ಈ ಮಾರ್ಗವು ಸಾಧುವೇ ಅಸಾಧುವೇ ಎಂಬುದನ್ನು ಮಾತ್ರ ಈಗ ಪರ್ಯಾಲೋಚಿಸತಕ್ಕುದಾಗಿದೆ. ಹಿಂದೆ ಪೂರ್ಣಯ್ಯನವರು ಆಚರಿಸಿದ್ದ ಮಾರ್ಗವನ್ನು ಇವರೂ ಅನುಸರಿಸಿರುವರಲ್ಲವೇ? ನಮ್ಮ ಸಂಸ್ಥಾನದಲ್ಲಿ ನ್ಯಾಯವು ದೊರಕುವುದಿಲ್ಲವೆಂದು ಬ್ರಿಟಿಷರಲ್ಲಿ ಹೇಳಿಕೊಳ್ಳುವುದು ಶುದ್ಧ ಹೇಡಿತನವಲ್ಲವೆ? ಮಿ॥ ಮಿರ್ಜಾಯವರು ಹಿಂದುದ್ವೇಷಿಗಳೆಂದು ಹೇಳುವುದು ದ್ವೇಷಾಸೂಯೆ ಇಂದಲ್ಲವೆ? ಇವರೀ ಪ್ರಯತ್ನವು ಹೇಡಿತನವೆಂದು ಹೇಳುತ್ತೇವೆ. ಏಕೆಂದರೆ, ಇವರ ಪ್ರಯತ್ನವು ನ್ಯಾಯವಾಗಿದ್ದಲ್ಲಿ ನ್ಯಾಯವಿಧಾಯಕ ಸಭೆಯು ಅಥವಾ ಪ್ರಜೆಗಳಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರತಿನಿಧಿ ಸಭೆಯು ತನ್ನ ಪಕ್ಷವನ್ನು ವಹಿಸಿ ತೀರ್ಮಾನಿಸುವಂತೆ ಮಾಡಿದಲ್ಲಿ ಈ ತೀರ್ಮಾನದಂತೆ ಪ್ರಭುತ್ವದವರು ನಡೆದುಕೊಳ್ಳುವರೆಂದು ನಾವು ದೃಢವಾಗಿ ಹೇಳುತ್ತೇವೆ. ಆದರೆ ಈ ಪ್ರಜಾಪ್ರತಿನಿಧಿಗಳ ಅಭಿಪ್ರಾಯವು ತಮಗೆಂದಿಗೂ ಅನುಕೂಲವಾಗಿರುವುದಿಲ್ಲವೆಂಬುದನ್ನು ಮುದಕಯ್ಯನವರು ಚೆನ್ನಾಗಿ ಬಲ್ಲವರಾಗಿರುವುದರಿಂದಲೇ ಆರೀತಿ ಪ್ರಯತ್ನಿಸಲೆತ್ನಿಸುವುದಿಲ್ಲ. ಇವರು ಸ್ವತಃ ವಿಜೃಂಭಿಸಿಕೊಳ್ಳುತ್ತಿರುವಂತೆ ದೊಡ್ಡವರಾಗಿಯೇ ಆಗಲಿ ಜನಾನುರಾಗಿಗಳಾಗಿಯೇ ಆಗಲಿ ಇರುವುದಿಲ್ಲವಾದುದರಿಂದಲೇ ತಮ್ಮ ಪ್ರಯತ್ನವಿಶೇಷದಿಂದ ನಡಿಯುವ ಸಭೆಗಳ ಮತ್ತು ವರ್ತಮಾನಪತ್ರಿಕೆಗಳ ಮೂಲಕ ಚಳವಳಿಯನ್ನು ನಡಿಸುತ್ತಿರುವರು. ಸಂಸ್ಥಾನದ ಜನಾಭಿಪ್ರಾಯವನ್ನು ನಿಜವಾಗಿ ತಿಳಿಯುವುದಾದರೆ ಈ ವೃದ್ಧಪಿತಾಮಹರು ಯಾರಿಗೂ ಬೇಡವಾದ ವ್ಯಕ್ತಿಯೆಂಬುದು ಗೋಚರವಾಗುತ್ತದೆ. ನಾವು ಯಾರನ್ನೂ ನಿಷ್ಕಾರಣವಾಗಿ ದೂಷಿಸತಕ್ಕವರಲ್ಲ. ಈ ಮುದಕಯ್ಯನವರು ಇಷ್ಟಪಟ್ಟಿದ್ದಲ್ಲಿ ಸುಲಭ ಜೀವನೋಪಾಯವನ್ನು ಕಲ್ಪಿಸಿಕೊಳ್ಳಬಹುದಾಗಿದ್ದಿತು. ಇವರು ಬಹುಕಾಲದಿಂದ ದೇಶಸೇವಾಕಾರ್ಯ ನಿರತರಾಗಿರುವರಾದರೂ ತಮ್ಮ ಆಯುಃಪರಮಾವಧಿಯಲ್ಲಿ ಮಾಡುವ ಕೆಲಸವು ನೀಚತಮವಾಗಿ ಪರಿಣಮಿಸಿರುವುದು. ಇವರ ವಕ್ರಸ್ವಭಾವ, ಹಿಂದುಳಿದ ವರ್ಗದವರ ಏಳ್ಗೆಯ ವಿಚಾರದಲ್ಲಿ ಇವರಿಗಿರುವ ಗಾಢವಾದ ಅಸೂಯೆ, ಆಜನ್ಮಸಿದ್ಧವಾದ ಸ್ವಜನ ಪಕ್ಷಪಾತ ಈ ಗುಣಗಳೆಲ್ಲವೂ ನಿಜಸ್ವರೂಪದಿಂದ ಸಂದರ್ಭಾನುಸಾರ ಕಾಣಿಸಿಕೊಳ್ಳುತ್ತಿದ್ದು ಈಗ ವೃದ್ಧಾಪ್ಯದ ಅರುಳುಮರುಳತನದಿಂದ ಪದೇ ಪದೇ ಪ್ರದರ್ಶನವಾಗುತ್ತಿವೆ. ಬೆಂಗಳೂರು ಗಲಭೆಯಾದಂದೀಚೆಗಂತೂ ವೈಮನಸ್ಯವನ್ನೂ ಅಸ್ಪೃಶ್ಯವನ್ನೂ ಉಂಟುಮಾಡುವವರ ಕೈವಶವಾಗಿ ಬೇಕಾದಷ್ಟು ಕೆಡಕನ್ನುಂಟುಮಾಡಿರುವರು. ಕಳೆದ ಪ್ರಜಾಪ್ರತಿನಿಧಿ ಸಭಾಧಿವೇಶನದಲ್ಲಿ ದುರ್ಮಾರ್ಗಾವಲಂಬಿಗಳಾದ ವೃತ್ತಪತ್ರಿಕೆಗಳಿಗೆ ತಕ್ಕ ಶಾಸ್ತಿಯನ್ನು ಮಾಡಬೇಕೆಂದು ಪ್ರಾರ್ಥಿಸಲ್ಪಟ್ಟಿತು. ಆ ಕ್ರಿಯೆಯನ್ನು ಪ್ರಭುತ್ವದವರು ಅಗ ಮಾಡದೆ ಈಗಲಾದರೂ ಮಾಡಿರುವುದು ಸರ್ವಸಮ್ಮತವಾಗಿರುತ್ತದೆ. ವೃತ್ತಪತ್ರಿಕೆಗಳು ತಮ್ಮ ಕುಚೇಷ್ಟೆಗೂ ದುಷ್ಕಾರ್ಯಕ್ಕೂ ಪರಿಮಿತಿಯುಂಟೆಂಬುದನ್ನು ಮರೆಯಬಾರದು.

ಒಳದೇಶದ ವೃತ್ತಾಂತಗಳು.

ಮಹಾಮಾತ್ಯಶ್ರೀಯವರು ಪರಿವಾರದೊಡನೆ ಮೊನ್ನೆಯ ಮಧ್ಯಾಹ್ನ ಬೊಂಬಾಯಿಗೆ ಪ್ರಯಾಣ ಬೆಳಸಿದರು.

ಸರ್ ವಿಶ್ವೇಶ್ವರಯ್ಯ ವಿಚಾರಣಾಸಮಿತಿಯ ವರದಿಯ ಮೇಲೆ ಪ್ರಭುತ್ವದವರ ಅಪ್ಪಣೆಯು ಮುಂದಿನವಾರ ಪ್ರಕಟವಾಗುವುದೆಂದು ಕೇಳುತ್ತೇವೆ.

ನಮ್ಮ ಪೊಲೀಸ್ ಶಾಖೆಯನ್ನು ನವೀನಕಾಲದ ಪರಿಸ್ಥಿತಿಗನುಸಾರವಾಗಿ ಸಂಸ್ಕರಿಸಲು ಮದರಾಸಿನ ಪೊಲೀಸ್ ಕಮಿಷನರಾದ ಮಿ॥ ಕನ್ನಿಂಗ್ಹಾಂ ರವರು ತಿಂಗಳಿಗೆ 3000 ರೂ. ಸಂಬಳದಮೇಲೆ ನಿಯಮಿಸಲ್ಪಡುವರೆಂದು ತಿಳಿದು ಬಂದಿದೆ.

ಕಳೆದ ತಾ॥ 11 ನೇ ಶುಕ್ರವಾರ ಕೈ॥ ಚಾಮರಾಜೇಂದ್ರಒಡೆಯರ್ ಬಹದ್ದೂರ್‌ರವರ ಪುಣ್ಯತಿಥಿಯು ಶ್ರೀಮನ್ಮಹಾರಾಜ ಸಹೋದರರಿಂದ ವಿಧ್ಯುಕ್ತವಾಗಿ ಆಚರಿಸಲ್ಪಟ್ಟು ಅರಮನೆ ಮುಜರಾಯಿ ಶಾಖಾ ದೇವಾಲಯಗಳಲ್ಲಿ ದೇವತಾರ್ಚನೆಯೂ ಬಡಬಗ್ಗರಿಗೆ ಅನ್ನದಾನವೂ ಮಾಡಲ್ಪಟ್ಟವು.

ವಿಶ್ವೇಶ್ವರಯ್ಯ ಸಮಿತಿಯ ವರದಿಯಮೇಲೆ ಸರ್ಕಾರದವರ ಅಪ್ಪಣೆಯು ಇನ್ನೂ ಮಾಡಲ್ಪಡಲಿಲ್ಲವೆಂದು ಜನಗಳು ಕುತೂಹಲವುಳ್ಳವರಾಗಿರುವರು. ಮಿ॥ ನವಾಬ್ ಕಲಾಮಿಯವರು ತಮ್ಮ ಅಸಮ್ಮತ ಟಿಪ್ಪಣಿಯನ್ನು ಸರ್ಕಾರಕ್ಕೆ ತಿಳಿಸುವುದು ಸಾವಕಾಶವಾದುದರಿಂದ ಸರ್ಕಾರದವರು ತಮ್ಮ ಅಭಿಮತವನ್ನು ಪ್ರಕಟಿಸಲು ತಡವಾಗಿರುವುದೆಂದು ತಿಳಿಯುತ್ತೇವೆ.

ವಿಚಾರಣಾ ಸಮಿತಿಯ ವರದಿಯನ್ನು ಬರೆಯುವಾಗ ಮ॥ ನೀಲಗಿರಿ ಸಂಜೀವಯ್ಯನವರನ್ನು ಕುರಿತು ಸರ್ ವಿಶ್ವೇಶ್ವರಯ್ಯನವರು ಅಪಮಾನಕರವಾದ ಮಾತುಗಳಾಡಿದರೆಂಬ ಆಪಾದನೆಯಮೇಲೆ ಮ॥ ಸಂಜೀವಯ್ಯನವರು ಸರ್ ವಿಶ್ವೇಶ್ವರಯ್ಯನವರಮೇಲೆ ಮಾನನಷ್ಟದ ಮೊಕದ್ದಮೆಯನ್ನು ನಡೆಸುವರೆಂದೂ ಇದಕ್ಕಾಗಿ ಒಬ್ಬ ಐರೋಪ್ಯ ವಕೀಲರನ್ನು ನಿಯಮಿಸಿರುವರೆಂದೂ ವರ್ತಮಾನವಿದೆ.

ಕಳೆದ ಭಾನುವಾರ ಬೆಂಗಳೂರು ತಾರಾಮಂಡಲ ಮಾರ್ಕೆಟ್ಟಿನ ಬಳಿ ವಾಸಿಸುತ್ತಿದ್ದ ಒಬ್ಬ ಯಜಮಾನಿಯು ನಾಗರಪೂಜೆಗಾಗಿ ಹುತ್ತವಿರುವೆಡೆಗೆ ಹೋಗಿದ್ದು ಬರುವಷ್ಟರೊಳಗೆ ಅಡಿಗೆ ಮಾಡಿಟ್ಟು ಹೋಗುವಾಗ್ಗೆ ಬೆಂಕಿಯಾರಿಸುವುದು ಮರೆತಿದ್ದುದರಿಂದ ಹೇಗೋ ಸಮೀಪದಲ್ಲಿದ್ದ ಕಟ್ಟಿಗೆಗೆ ಬೆಂಕಿ ಬಿದ್ದು ಮನೆಯ ಒಂದು ಭಾಗ ಉರಿದುಹೋಯಿತು. ಪ್ರಾಣಾಪಾಯವೇನೂ ಸಂಭವಿಸಲಿಲ್ಲ.

ಮೈಸೂರು ವಿದ್ಯಾಭ್ಯಾಸದ ಡೈರೆಕ್ಟರವರಾದ ಮ॥ ಎನ್. ಎಸ್. ಸುಬ್ಬರಾಯರು ದೀರ್ಘಕಾಲ ರಜದಮೇಲೆ ಹೋಗುವುದರಿಂದಲೋ ಮತ್ತಾವ ಕಾರಣದಿಂದಲೋ ಮಹಾರಾಜರ ಕಾಲೇಜಿನ ಪ್ರೊಫೆಸರಾದ ಮಿ॥ ವಾಡಿಯರವರು ಡೈರೆಕ್ಟರಾಗಿ ನಿಯಮಿಸಲ್ಪಡುವ ವದಂತಿಯಿದೆ ಎಂದೂ, ಇದು ನಿಜವಾಗಿದ್ದಲ್ಲಿ ಅನುಚಿತ ಏರ್ಪಾಟೆಂದೂ ಬೆಂಗಳೂರು ಲೋಕಹಿತೈಷಿಯು ಉಲ್ಲೇಖಿಸಿರುತ್ತದೆ!

ಸರ್ ವಿಶ್ವೇಶ್ವರಯ್ಯ ವಿಚಾರಣಾಸಮಿತಿಯ ವರದಿಯು ಸರ್ಕಾರದವರಿಂದ ಬಹಿರಂಗಪಡಿಸಲ್ಪಡುವುದಕ್ಕೆ ಪೂರ್ವಭಾವಿಯಾಗಿ ಕೆಲ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟುದರಮೇಲೆ ಖಂಡನೆಗಳು ನಡೆಯುತ್ತಿರುವುವಷ್ಟೆ. ಈ ವರದಿಯ ಒಂದೊಂದು ಪ್ರತಿಯು ಬೊಂಬಾಯಿ ಟೈಂಸ್ ಪತ್ರಿಕೆಯ, ಬೆಂಗಳೂರಿನ ಚಿತ್ರಗುಪ್ತ ಪತ್ರಿಕೆಯ ಮತ್ತೆ ಕೆಲ ಪತ್ರಿಕೆಗಳ ಪ್ರತಿನಿಧಿಗಳಿಗೆ ಸಮಿತಿಯ ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರಿಂದಲೇ ಕೊಡಲ್ಪಟ್ಟುದಾಗಿ ಹಾಲೆಹಕ್ಕಿಯು ನುಡಿದುದಂತೆ.

ಮೈಸೂರು ಪ್ರಜಾಪ್ರತಿನಿಧಿಸಭೆಗೆ ಜನರಿಂದಾರಿಸಲ್ಪಟ್ಟಾಗಲಿ ಪ್ರಭುತ್ವದವರಿಂದ ನಿಯಮಿಸಲ್ಪಟ್ಟಾಗಲಿ ಮೆಂಬರಾಗತಕ್ಕವರು ಶ್ರೀಮನ್ಮಹಾರಾಜರವರಲ್ಲಿ ಪೂರ್ಣ ರಾಜಭಕ್ತಿಯಿಟ್ಟು ನಡೆದುಕೊಳ್ಳುತ್ತೇನೆಂದು ವಿಧಾಯಕವಾದ ರೀತಿಯಲ್ಲಿ ಪ್ರಮಾಣ ಮಾಡಬೇಕೆಂದೂ, ಹಾಗೆ ಮಾಡಲು ತಪ್ಪಿದಲ್ಲಿ ಅವರು ಮೆಂಬರುತನದಿಂದ ತಪ್ಪಿಸಲ್ಪಟ್ಟು ಅವರ ಬದಲು ಬೇರೊಬ್ಬರು ನಿಯಮಿಸಲ್ಪಡುವರು ಅಥವಾ ಪ್ರಜೆಗಳಿಂದ ಆರಿಸಲ್ಪಡುವರೆಂದೂ. ನ್ಯಾಯವಿಧಾಯಕಸಭೆಯ ಮೆಂಬರುಗಳೂ ಇದೇ ರೀತಿಯಲ್ಲಿ ಪ್ರಮಾಣ ಮಾಡಬೇಕಾಗಿರುತ್ತದೆಂದೂ ಸರ್ಕಾರದಪ್ಪಣೆಯಾಗಿರುತ್ತದೆ.

ಬೆಂಗಳೂರು ಸಿಟಿ ರೈಲ್ವೆಸ್ಟೇಷನ್ ಬಳಿಯಿರುವ ಧರ್ಮಾಂಬುಧಿ ಕೆರೆಯಲ್ಲಿ ಕಳೆದ 12-13 ವರ್ಷಗಳಿಂದಲೂ ನೀರು ಇಲ್ಲದಿದ್ದುದರಿಂದ ಪ್ರತಿ ವರ್ಷವೂ ನಡೆಯುತ್ತಿದ್ದ ದೇವರುಗಳ ತೆಪ್ಪೋತ್ಸವವು ನಿಲ್ಲಿಸಲ್ಪಟ್ಟಿದ್ದುದು ಈ ವರ್ಷ ಕೆರೆಯಲ್ಲಿ ಸಾಕಾದಷ್ಟು ನೀರಿರುವುದರಿಂದ ಕಳೆದ 15-20 ದಿವಸಗಳಿಂದಲೂ ವಿಶಾಲವಾಗಿಯೂ ಸುಂದರವಾಗಿಯೂ ಕಟ್ಟಲ್ಪಡುತ್ತಿದ್ದ ತೆಪ್ಪದಮೇಲೆ ಕಳೆದ ಸೋಮವಾರ ರಾತ್ರಿ ಶ್ರೀ ಕಾಶೀವಿಶ್ವೇಶ್ವರಸ್ವಾಮಿಯ ವಿಗ್ರಹವು ಕುಳ್ಳಿರಿಸಲ್ಪಟ್ಟು ವಾದ್ಯ ವೈಭವದಿಂದಲೂ ದೀಪಾವಳಿಯಿಂದಲೂ ಉತ್ಸವವು ಬಹು ವಿಜೃಂಭಣೆಯಿಂದ ಮಾಡಲ್ಪಟ್ಟಿತು. ಕೆರೆಯೇರಿಯಮೇಲೆ ಸಾವಿರಾರು ಸ್ತ್ರೀ ಪುರುಷರುಗಳು ನೆರೆದಿದ್ದು ಉತ್ಸವ ವೈಭವಾನಂದ ಮಗ್ನರಾಗಿದ್ದರು. ಈ ಗದ್ದಲದಲ್ಲಿ ಎರಡು ಹುಡುಗರು ಕಾಲುಜಾರಿ ನೀರಿನೊಳಕ್ಕೆ ಬಿದ್ದುವಾದರೂ ನೀರು ಆಳವಾಗಿರಲಿಲ್ಲವಾಗಿ ಬದುಕಿಕೊಂಡುವು. ಅಂದಿನಿಂದ ಪ್ರತಿ ದಿನ ರಾತ್ರಿಯಲ್ಲಿ ಬೇರೆ ಬೇರೆ ದೇವರ ಗಳ ಉತ್ಸವವು ನಡೆಯಲೇರ್ಪಟ್ಟಿರುತ್ತದೆ.

ಮೈಸೂರು ಸರ್ಕಾರದವರು ಇದುವರೆಗೂ ಆದಿಕರ್ನಾಟಕ ಬಾಲಕರಿಗೆ ವಿದ್ಯಾಭ್ಯಾಸದ ವಸತಿಗಳನ್ನು ಕಲ್ಪಿಸಿಕೊಟ್ಟು ಅವರ ಪುರೋಭಿವೃದ್ಧಿಗೆ ಸಾಧಕವಾದ ಏರ್ಪಾಡುಗಳನ್ನು ಮಾಡಿರುವರಷ್ಟೆ. ಈಗ ಆದಿಕರ್ನಾಟಕ ಬಾಲಕೀಯರಿಗು ಸಹ ಇದೇ ವಿಧವಾದ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ. ಸದ್ಯಕ್ಕೆ ಬೆಂಗಳೂರಿನಲ್ಲಿ ಮುಂದಿನ ಮೇ ತಿಂಗಳು 22 ನೇ ತಾರೀಖಿನಿಂದ 20 ಹುಡುಗಿಯರ ಅಶನವಸನಗಳಿಗೆ ಅವಕಾಶವುಳ್ಳ ಒಂದು ಶಾಲೆಯನ್ನು ಸ್ಥಾಪಿಸಲು ಏರ್ಪಾಡಾಗಿರುವುದು. ಈ ಶಾಲೆಯಲ್ಲಿ ವಿದ್ಯಾಭ್ಯಾಸದೊಡನೆ ಕಸಬು, ಕೈಗಾರಿಕೆಯು ಕೂಡ ಕಲಿಸಲ್ಪಡುವುವು. ಶಾಲೆಗೆ ಸೇರಿಸಲಿಷ್ಟವುಳ್ಳವರ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ ಮೇಲೆ ಅವರು ವಿದ್ಯಾಭ್ಯಾಸವನ್ನು ಪೂರೈಸುವವರೆಗೂ ಮಧ್ಯೆ ಬಿಡಿಸಿಕೊಂಡು ಹೋಗುವುದಿಲ್ಲವೆಂದು ಬರೆದುಕೊಡಬೇಕು. ಎಲ್ಲಾ ಖರ್ಚು ಸರ್ಕಾರದವರಿಂದ ವಹಿಸಲ್ಪಡುವುದು.

ವಿಶ್ವೇಶ್ವರಯ್ಯ ಸಮಿತಿಯ ಆರುಜನ ಸದಸ್ಯರಲ್ಲಿ ಒಬ್ಬರಾದ ಮಿ॥ ಕಲಾಮಿಯವರು ವರದಿಗೆ ರುಜುಹಾಕುವಾಗ, ವರದಿಯಲ್ಲಿ ಕಂಡ ವಿಷಯಗಳೆಲ್ಲವನ್ನೂ ತಾವು ಒಪ್ಪುವುದಿಲ್ಲವೆಂದೂ, ತಾವು ಯಾವ ಯಾವ ವಿಚಾರವಾಗಿ ಭಿನ್ನಾಭಿಪ್ರಾಯಪಡುತ್ತೇವೆಂಬುದನ್ನು ಒಂದು ಟಿಪ್ಪಣಿಯ ಮೂಲಕ ತಿಳಿಸುತ್ತೇವೆಂದೂ ಹೇಳಿದ್ದಪ್ರಕಾರ, ಕಳೆದ ಶನಿವಾರ ಮಿ॥ ಕಲಾಮಿಯವರು ತಮ್ಮ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ಸಮಿತಿಯ ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಕಳುಹಿಸಿದರೆಂದೂ, ಇವರು ತಮ್ಮ ಷರಾಸಹಿ, ಸರ್ಕಾರಕ್ಕೆ ಕಳುಹಿಸಿರುವರೆಂದೂ ತಿಳಿಯಬರುತ್ತದೆ. ಮಿ॥ ಕಲಾಮಿಯವರು ತಮ್ಮ ಟಿಪ್ಪಣಿಯಲ್ಲಿ, ಆ ರಾತ್ರಿ ಗುಂಡುಹಾರಿಸಲ್ಪಡಲಿಲ್ಲವೆಂದು, ಗುಂಡು ಹಾರಿಸಿದಂತೆ ಶಬ್ದ ಕೇಳಿದುದು ಪಟಾಕಿ ಹಾರಿಸಿದ ಶಬ್ದವೆಂದು, ಮೈಸೂರುಸಂಸ್ಥಾನದಲ್ಲಿ ಗುಪ್ತಸಂಸ್ಥೆಯು ಇದ್ದೇ ಇರುವುದೆಂದು, ವಿಗ್ರಹದ ಸ್ಥಾನಪಲ್ಲಟದಲ್ಲಿ ಮಿ॥ ಅಬ್ಬಾಸ್ ಖಾನರ ಪ್ರಯತ್ನವೇನೂ ಇಲ್ಲವೆಂದು, ದೊಂಬಿನಡಿಸಲು ಮಹಮ್ಮದೀಯರು ಸಿದ್ಧರಾಗಿ ಬಂದಿದ್ದರೆಂಬುದನ್ನು ನಂಬುವುದಕ್ಕೆ ಸಾಕಾದಷ್ಟು ನಿದರ್ಶನಗಳು ತಮಗೆ ತೋರಲಿಲ್ಲವೆಂದು, ಗಲಭೆಯ ಮೂಲವು ಪತ್ರಿಕೆಗಳ ಚಳವಳಿಯಿಂದ ಪ್ರಾರಂಭವಾಯಿತೆಂದು ಮುಂತಾಗಿ ಅಭಿಪ್ರಾಯಪಟ್ಟಿರುವರೆಂದು ವದಂತಿ.

ಮೊನ್ನೆ ಬೆಂಗಳೂರಿನ ಉತ್ತರಭಾಗದಲ್ಲಿ ಒಂದು ವಿಚಿತ್ರ ವಿವಾಹದ ಕತೆ ನಡೆಯಿತು. ವರನು ಬಿ.ಎ., 30 ವರ್ಷ. ಮೊದಲನೆಯ ಹೆಂಡತಿಯ ವಯಸ್ಸು ಈಗತಾನೆ 12 ತುಂಬಿದೆ. ಆ ಹುಡುಗಿಯು ಇನ್ನೂ ಮೈನೆರೆಯದಿರುವುದರಿಂದ, ವರನ ಎರಡನೆಯ ಲಗ್ನಕ್ಕೆ ತಯಾರಾಗಿದೆ. ಕಡಿಮೆ ವರದಕ್ಷಿಣೆಗೆ ಒಪ್ಪಿ, ವಿವಾಹಕ್ಕೆ ಎಲ್ಲವೂ ಸಿದ್ಧವಾಯಿತು. ದೇವರ ಸಮಾರಾಧನೆಯಾಯಿತು. ಅಷ್ಟರಲ್ಲಿ ಈ ಸಮಾಚಾರವು ಕನ್ಯಾಪಿತನ ಬಂಧುಗಳೊಬ್ಬರಿಗೆ ತಿಳಿಯಿತು. ಅವರು ಹಾಳಾದ ಈಗಿನ ಸಂಪ್ರದಾಯದವರು! ಕೂಡಲೆ ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಹೋಗಿ ಕನ್ಯಾಪಿತನನ್ನು ಚೆನ್ನಾಗಿ ಬೈದು "ನಿನ್ನ ಮಗಳೆಂದರೆ ವೇಶ್ಯೆಯೆಂದುತಿಳಿದುಕೊಂಡೆಯೊ? ಅವನಿಗೆ ಮದುವೆಯಾದ ಮೊದಲನೆಯ ಹೆಂಡತಿಯು, ಪಾಪ ಮೈನೆರೆಯದಿದ್ದರೆ ಅದು ಅವಳ ದೋಷವೇ? ನಾಳೆ ನಿನ್ನಮಗಳು ಮೈನೆರೆಯದಿದ್ದರೆ, ಅವನು ಮತ್ತೊಂದು ಮದುವೆಯಾದರೆ ನಿನ್ನಮಗಳ ಗತಿಯೇನಾಗಬೇಕು?" ಎಂದು ಬುದ್ಧಿಹೇಳಿದರು. ಕನ್ಯಾಪಿತನು ಲಗ್ನವನ್ನು ನಿಲ್ಲಿಸಿದ್ದೇನೆಂದು ಹೇಳಿಬಿಟ್ಟನು! ಆದರೆ ವರನಿಗೆ ಬೆಲೆಯಾಗಿ ಮುಂಗಡ ಕೊಟ್ಟಿದ್ದ 300 ರೂಪಾಯಿ ಮಾತ್ರ ನಷ್ಟವಾಯಿತು! ನಿರುದ್ಯೋಗದಕಾಲ! ಇದರ ಮೇಲೆ ಮರುದಿನ ವರನ ಸೋದರನೊಬ್ಬನು ಬಂದು ವರನಪಿತನನ್ನು ಕುರಿತು 'ನಿಮ್ಮ ಮೇಲೆ ಕೇಸುಮಾಡುತ್ತೇನೆ! ನಮ್ಮ ಸಹೋದರನು ಗ್ರ್ಯಾಜುಏಟ್! ಇಬ್ಬರು ಹೆಂಡರನ್ನು ಸಾಕಬಲ್ಲನು' ಎಂದು ಜಗಳ ಕಾದನು. ಗ್ರ್ಯಾಜುಏಟ್ ಪದವಿಯನ್ನು ಪಡೆಯುವಾಗ ಇಬ್ಬರು ಹೆಂಡರನ್ನು ಸಾಕುವ ಶಕ್ತಿಯನ್ನೂ ಅವರಿಗೆ ಕೊಡುವರೆ? ಈ ಬಗೆಯ ವಿವಾಹವನ್ನು ನಿಶ್ಚಯಿಸಿದ ಪುರೋಹಿತ, ಕನ್ಯಾಪಿತ, ವರ, ವರನ ಮಾತಾಪಿತೃಗಳನ್ನು ಶಿಕ್ಷಿಸಲು ಯಾವುದಾದರೂ ಕಾನೂನು ಇಲ್ಲವೆ ಎಂದೂ ಇದು ಬ್ರಾಹ್ಮಣಸಮಾಜದ ವಿವಾಹವಾದ್ದರಿಂದ ಯಾವುದಾದರು ಸ್ಮೃತಿ ಗ್ರಂಥದಲ್ಲಿ ಈ ಪೈಶಾಚಿಕ ವರ್ತನಕ್ಕೆ ಒಪ್ಪಿಗೆ ಸಿಕ್ಕುವುದೇ ಹುಡುಕಿನೋಡಿ ಹೇಳುವರೆ ಎಂದೂ ಒಬ್ಬರು ಬಾತ್ಮಿದಾರರು ಬರೆಯುತ್ತಾರೆ.—ಚಿ. ಗು.

ಭರತಖಂಡದ ವೃತ್ತಾಂತಗಳು.

ವೈಸ್ರಾಯ್ ಲಾರ್ಡ್ ಅರ್ವಿನ್‌ರವರು ಮುಂದಿನ ಜೂನ್ ತಿಂಗಳಲ್ಲಿ ವಿಲಾಯತಿಗೆ ರಜಾದಮೇಲೆ ಹೋಗುವರೆಂದೂ ಅವರ ಸ್ಥಾನದಲ್ಲಿ ಮದರಾಸ್ ಗೌರ್ನರಾದ ಲಾರ್ಡ್ ಗೋಷನ್‌ರವರು ವೈಸ್‌ರಾಯರಾಗಿ ಬದಲಿ ನೋಡುವರೆಂದೂ ವರ್ತಮಾನವಿದೆ.

ಆಳ್ವಾರ್ ಸಂಸ್ಥಾನದ ಮಹಾರಾಜರ ರಜತೋತ್ಸವವು 13ನೇ ತಾರೀಖಿನ ದಿನ ಪ್ರಾರಂಭವಾಗಿ ೨೩ನೇತಾರೀಖಿನವರೆಗೂ ಆ ಸಂಸ್ಥಾನದಲ್ಲಿ ಜರುಗುವುದು. ಈ ಉತ್ಸವಕ್ಕೆ ಗೋವರ್ಧನ ಮಠದ ಶ್ರೀ॥ ಶಂಕರಾಚಾರ್ಯರವರು ದಯಮಾಡಿಸಿದ್ದಾರೆ.

ಭಾರತ ಸಂಸ್ಥಾನ ವಿಚಾರಣ ಸಂಘ ಕಾರ್ಯದರ್ಶಿ ಕರ್ನಲ್ ಅಗಿಲ್ವೀಯವರು ಕಾಶ್ಮೀರು ಸಂಸ್ಥಾನದ ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ಇಂಡ್ಯಾಕ್ಕೆ ಫೆಬ್ರವರಿ ತಿಂಗಳಿನಲ್ಲಿ ಬರುವರು. ವಿಚಾರಣ ಸಂಘ ನಿವೇದಿಕೆಯು ಕೂಡ ಫೆಬ್ರವರಿಯಲ್ಲೇ ಸಿದ್ಧವಾಗುವುದಂತೆ.

ಕಲ್ಕತ್ತಾಕ್ಕೆ ಸೇರಿದ ಹೌರಾದಲ್ಲಿ ಬಡ್ಡಿವ್ಯಾಪಾರ ಮಾಡುತ್ತಿದ್ದ ಓರ್ವ ಹಿಂದುಸ್ತ್ರೀ ಶವವು ಒಂದು ಟ್ರಂಕುಪೆಟ್ಟಿಗೆಯೊಳಗಿದ್ದುದು ಪೊಲೀಸಿನವರಿಗೆ ಸಿಕ್ಕಿದೆ. ಹಂತಕರು ಆಕೆಯ ವಶದಲ್ಲಿದ್ದ ಆಭರಣಗಳನ್ನು ಅಪಹರಿಸಲು ಆಕೆಯ ಶರೀರವನ್ನು ಕತ್ತಿಯಿಂದ ಕತ್ತರಿಸಿ ಪೆಟ್ಟಿಗೆಯಲ್ಲಿ ಹಾಕಿ ಕೆರೆಯಲ್ಲಿ ಬಿಸಾಡಿದ್ದುದಾಗಿ ಭಾವಿಸಿ ಪೊಲೀಸರು 5 ಜನರನ್ನು ಅನುಮಾನದ ಮೇಲೆ ಸೆರೆಹಿಡಿದಿರುವರು.

ಹೈದರಾಬಾದು ನೈಜಾಂ ರವರು ಕಲಕತ್ತಾಕ್ಕೆ ಹೋಗಿದ್ದು ಸ್ವಸ್ಥಳಕ್ಕೆ ಹಿಂದಿರುಗುವಾಗ್ಗೆ ತಮ್ಮ ಆಗಮನದ ಜ್ಞಾಪಕಾರ್ಥವಾಗಿ 1 ಲಕ್ಷ ರೂಪಾಯಿಗಳ ದಾನಮಾಡಿ ಅದನ್ನು ಬಂಗಾಳಾದ ಧರ್ಮಸಂಸ್ಥೆಗಳಿಗೆ ಯಾವಜಾತಿ ಮತಭೇದವಿಲ್ಲದೆ ಅವುಗಳ ಯೋಗ್ಯತಾನುಸಾರ ಹಂಚಬೇಕೆಂದು ಬಂಗಾಳ ಗೌರ್ನರನ್ನು ಪ್ರಾರ್ಥಿಸಿ ಆ ಮೊತ್ತವನ್ನು ಅವರ ವಶಕ್ಕೆ ಕೊಟ್ಟಿರುವರು.

ಮಧುರೆಯಲ್ಲಿ ಶಕುಂತಲಾಬಾಯಿ ಎಂಬ ಓರ್ವ ಬ್ರಾಹ್ಮಣ ವಿದ್ಯಾವತಿಯು ಸಿಡುಬಿನಿಂದ ತನ್ನ ಮಗನ ಒಂದು ಕಣ್ಣು ಹೋಗಲು, ಆತನಿಗೆ ಪುನಃ ದೃಷ್ಟಿಯನ್ನು ಕೊಡುವಂತೆ ತನ್ನ ಮನೆದೇವರನ್ನು ಪ್ರತಿನಿತ್ಯವೂ ಪ್ರಾರ್ಥಿಸಿಕೊಳ್ಳುತ್ತಿದ್ದಳು. ಎಷ್ಟು ದಿನವಾದರೂ ದೇವರು ಪ್ರಸನ್ನನಾಗದೆ ತನ್ನ ಇಷ್ಟವು ನೆರವೇರಲಿಲ್ಲವೆಂದು ಆಕೆಯು ಒಂದು ಕಾಗದ ಬರೆದಿಟ್ಟು ಮೊನ್ನೆ ದಿನ ಆತ್ಮಹತ್ಯ ಮಾಡಿಕೊಂಡಳು.

ವಿದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದ ಮಾಜಿ ರಾಜರಾದ ಅಮಾನುಲ್ಲಾಖಾನರವರು ಎಲ್ಲಿರುವರೋ ತಿಳಿಯದಾಗಿರುವುದು. ದೇಶೀಯರ ಹಿತಚಿಂತನೆಯಿಂದ ಸುಧಾರಣೆಗಳನ್ನು ನಡೆಸಬೇಕೆಂದಿದ್ದ ರಾಜರು ಈ ಸುಧಾರಣೆಗಳು ಬೇಕಿಲ್ಲವೆಂದು ಜನರು ಪ್ರತಿಭಟಿಸಿದುದರಿಂದ ತಾವು ಸಿಂಹಾಸನವನ್ನು ಪರಿತ್ಯಾಗಮಾಡಿರುವುದಾಗಿ ಪ್ರಕಟನೆಮಾಡಿರುವರು. ಈಗಿನ ರಾಜರಾದ ಇನಾಯತುಲ್ಲಾ ಖಾನರು ಬ್ರಿಟಿಷರೊಡನೆ ಸ್ನೇಹಭಾವದಿಂದಿರುವರೆಂದು ತಿಳಿದು ಬಂದಿದೆ.

ಅಮಾನುಲ್ಲಾಖಾನರು ಸಿಂಹಾಸನ ಪರಿತ್ಯಾಗ ಮಾಡಿ ಸುಧಾರಣೆಗಳನ್ನು ನಿಲ್ಲಿಸಿರುವರಾದರೂ ದಂಗೆಯು ಮಾತ್ರ ಶಮನವಾಗಿರುವುದಿಲ್ಲ. ಹೊಸ ರಾಜರಾದ ಇನಾಯತುಲ್ಲಾ ಖಾನರು ಶಾಂತಿಸ್ಥಾಪನೆ ಮಾಡುವ ತರದೂದಿನಲ್ಲಿರುವರಾದಾಗ್ಗ್ಯೂ ದಂಗೆಕೋರರು ಪ್ರಬಲಿಸುತ್ತಿರುವರು. ದಂಗೆಯು ಕೇವಲ ರಾಜಕೀಯ ಸಂಬಂಧವಾದುದಲ್ಲವೆಂಬುದಾಗಿಯೂ ದರೋಡೆಕಾರರು ದಂಗೆಕೋರರೊಡನೆ ಸೇರಿ ಪಟ್ಟಣಗಳನ್ನು ಲೂಟಿ ಮಾಡುತ್ತಿರುವರೆಂದೂ ತಿಳಿದುಬಂದಿದೆ.

ಜಾರ್ಜ್‌ಸಾರ್ವಭೌಮರವರ ವೆಚ್ಚಕ್ಕಾಗಿ ವರ್ಷವೊಂದಕ್ಕೆ 14,30,000 ರೂಪಾಯಿಗಳು ಸಲ್ಲುತ್ತವೆ. ಬ್ರಿಟಿಷ್ ರಾಜ್ಯದ ಉತ್ಪತ್ತಿಯಲ್ಲಿ ಇದು ಶೇಕಡ 9 ರಷ್ಟಾಗುವುದು. ಹಿಂದುಸ್ಥಾನದಲ್ಲಿಯಾದರೆ ದೇಶೀಯ ರಾಜರಲ್ಲನೇಕರು ರಾಜ್ಯದ ಒಟ್ಟು ಹುಟ್ಟುವಳಿಯಲ್ಲಿ ಶೇಕಡ 50 ರಷ್ಟು ಪಾಲನ್ನು ತಮ್ಮ ಸ್ವಂತ ಖರ್ಚಿಗಾಗಿ ವಿನಿಯೋಗಿಸಿಕೊಳ್ಳುವರು. ಈ ಹಣವನ್ನು ಸಾಧಾರಣವಾಗಿ ಈ ರಾಜರುಗಳು ವಿದೇಶದಲ್ಲಿ ಖರ್ಚುಮಾಡುವರು. ಬರೋಡಾ ಮಹಾರಾಜರವರು ಯಾವಾಗಲೂ ವಿದೇಶವಾಸಿಗಳಾಗಿಯೇ ಇರುವುದರಿಂದ, ತಮ್ಮ ಅರಮನೆಯ ಖರ್ಚಲ್ಲದೆ ಸ್ವಂತ ಖರ್ಚಿಗಾಗಿಯೇ 20 ಲಕ್ಷ ರೂಪಾಯಿ ವರ್ಷಾಶನ ತೆಗೆದುಕೊಳ್ಳುವರು. ಇದರಿಂದ ಆ ದೇಶಗಳ ಪ್ರಜೆಗಳಲ್ಲಿ ಅತೃಪ್ತಿಯುಂಟಾಗುವುದೇನಾಶ್ಚರ್ಯವೇನು?

ಬರ್ಲಿನ್ನಿನಲ್ಲಿ ಸಂಗೀತಗಾರಳ ಗಂಡನು ತನ್ನ ಹೆಂಡಿತಿಗೆ ಬಹಳ ಹಣ ದೊರಕಬೇಕೆಂಬ ಉದ್ದೇಶದಿಂದ, ಸುಂದರಾಂಗಿಯಾದ ಓರ್ವ ವಿಯನ್ನಾ ಯುವತಿಗೆ ದಯಾರ್ದ್ರಹೃದಯನಾದ ಪತಿಯು ಬೇಕಾಗಿರುವುದೆಂದು, ಈ ದಿವಸ ನಡೆಯುವ ಸಂಗೀತಕೂಟದಲ್ಲಿ ಆಕೆಯು ಒಂದು ಬಿಳೀ ಗುಲಾಬಿ ಹೂಗುಚ್ಛವನ್ನು ಹಿಡಿದುಕೊಂಡು ವರಾನ್ವೇಷಣಕ್ಕೆ ಸಿದ್ಧಳಾಗಿರುವಳೆಂದೂ ಪ್ರಕಟಿಸಿದನು. ಆ ಪ್ರಕಟನೆಯ ಪ್ರಕಾರ ಸಾವಿರಾರು ಯುವಕರು ಸಂಗೀತಕೂಟಕ್ಕೆ ಬಂದುಸೇರಿದರು. ಆದರೆ ಆ ಸುಂದರಿಯು ಕೂಟದಲ್ಲಿ ಕಾಣಿಸಲಿಲ್ಲವಾಗಿ ಆಶಾಭಂಗರಾದ ಯುವಕರು ಕೋಪಗೊಂಡು ಗೊಂದಲವನ್ನೆಬ್ಬಿಸಿದರು. ಇದರಿಂದ ಸಂಗೀತಗಾರ್ತಿಗೆ ಪೆಟ್ಟುಬಿದ್ದಿತು. ಪೊಲೀಸಿನವರು ಬಂದು ಗೊಂದಲಕಾರರಲ್ಲಿ ಅನೇಕರನ್ನು ಸೆರೆಹಿಡಿದರು. ಕಡೆಯಲ್ಲಿ ಸಂಗೀತಗಾರಳ ಗಂಡನು ಆ ಪ್ರಕಟನೆಗೆ ತಾನು ಉತ್ತರವಾದಿಯೆಂದೂ, ಆ ದಿನದುತ್ಪನ್ನವನ್ನು ವಾಪಸ್ಸು ಕೊಡುತ್ತೇನೆಂದೂ ಹೇಳಿದನು.

(ಚಿತ್ರಗುಪ್ತದಿಂದ)

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯ ವರದಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ದೊಂಬಿ ನಡೆದು ಗುಂಡು ಹಾರಿಸಲ್ಪಟ್ಟರೂ ಪೋಲೀಸಿನವರು ಯಾರನ್ನೂ ದಸ್ತಗಿರಿ ಮಾಡಲಿಲ್ಲ.

ಗುಂಡುಗಳು ಬಂದ ಮನೆಗಳ ಸುತ್ತ ಕೂಡಲೆ ಕಾವಲಿಡಬೇಕಾಗಿತ್ತು.

ಲಾಠಿ ಹಿಡಿದ ಮುಸಲ್ಮಾನರು ನಿರಾಯುಧರಾಗಿದ್ದ ಹಿಂದುಗಳ ಮೇಲೆ ಬಿದ್ದರೂ, ಗುಂಡುಗಳು ಹಾರಿಸಲ್ಪಟ್ಟರೂ ನಾಲ್ಕು ದಿನಗಳವರೆಗೆ ರುಜುವಾತು ಪತ್ತೆಮಾಡಲಿಲ್ಲ. ತಪ್ಪಿತಸ್ಥರನ್ನು ಕಂಡುಹಿಡಿಯಲಿಲ್ಲ. ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು ಸಿಟಿ ಪೋಲೀಸ್ ಆಡಳಿತವು ತಮಗೆ ಸೇರಿದ್ದಲ್ಲವೆಂಬುದನ್ನು ನಾವು ಒಪ್ಪುವುದಿಲ್ಲ. ಗುಂಡುಗಳು ಹಾರಿಸಲ್ಪಟ್ಟ ಮನೆಗಳ ಸುತ್ತಲೂ, ಪಹರೆ ಇಟ್ಟು ಒಬ್ಬಿಬ್ಬರನ್ನಾದರೂ ದಸ್ತಗಿರಿ ಮಾಡಿದ್ದರೆ, ಅವರಿಂದ ಉಳಿದುವೆಲ್ಲವೂ ಪತ್ತೆಯಾಗುತ್ತಿತ್ತು. 31 ನೇ ತಾರೀಖಿನ ದಿನ ಸಾಕಾದಷ್ಟು ಸಿಬ್ಬಂದಿಯಿತ್ತಾದುದರಿಂದ ಮನೆ ಹುಡುಕುವ ಕೆಲಸವನ್ನು ಆ ದಿನವೇ ಮಾಡಬೇಕಾಗಿತ್ತು.

ಪತ್ರಿಕೆಗಳನ್ನು ನಿಲ್ಲಿಸುದುದು ಸರಿಯಾಗಿದ್ದರೂ ಉದ್ದೇಶ ಮಾತ್ರ ನೆರವೇರಲಿಲ್ಲ. ಏಕೆಂದರೆ, ಹೊರಗಿನ ಪತ್ರಿಕೆಗಳಲ್ಲಿ ಲೇಖನಗಳು ಬರಲಾರಂಭಿಸಿದುವು.

ಮುಖಂಡರನ್ನು ಬಿಡುಗಡೆ ಮಾಡಿದಾಗ ಪೋಲೀಸಿನವರು ಎಚ್ಚೆತ್ತುಕೊಂಡು ತಕ್ಕ ಸಿಬ್ಬಂದಿಯೊಡನೆ ಸ್ಕೂಲುಹತ್ತಿರ ಇರಬೇಕಾಗಿತ್ತು.

ಪಿತೂರಿ ನಡೆಸುತ್ತಿದೆಯೆಂಬ ಗುಪ್ತಸಂಸ್ಥೆಯ ಸಂಬಂಧವಾಗಿ ಕೆಲವು ಸಾಕ್ಷಿಗಳು ತಮ್ಮಲ್ಲಿ ಆಧಾರಗಳುಂಟೆಂದು ಹೇಳಿದರು; ಅವುಗಳನ್ನು ತರುವಂತೆ ಸಾಕಾದಷ್ಟು ಕಾಲ ಅವಧಿಕೊಟ್ಟರೂ ಯಾರೂ ಯಾವ ಆಧಾರವನ್ನೂ ತಂದು ತೋರಿಸಿಲಿಲ್ಲ.

ದೊಂಬಿಯನ್ನು ನಿಲ್ಲಿಸಿದ್ದು.

ಹಿಂದೆ ವಿವರಿಸಲ್ಪಟ್ಟ ದೊಂಬಿಯು ಜುಲೈ 30 ನೇ ತಾರೀಖಿನ ದಿನ ಸಾಯಂಕಾಲ ೭| ಗಂಟೆಯಿಂದ ೭||| ಗಂಟೆಯೊಳಗಾಗಿ ನಡೆಯಿತು. ದೊಂಬಿಯಲ್ಲಿ ಮುಸಲ್ಮಾನರು ಲಾಠಿಗಳು ಮತ್ತು ಚೂರಿಗಳನ್ನು ಹಿಡಿದು ಹಿಂದುಗಳಮೇಲೆ ಬಿದ್ದು ಹೊಡೆದರು; ಗುಂಡುಗಳೂ ಹಾರಿಸಲ್ಪಟ್ಟುವು. ಆದರೂ, ಗುಂಡುಗಳು ಹಾರಿಸಲ್ಪಟ್ಟ ಅಥವ ಆಯುಧಗಳನ್ನು ಹಿಡಿದುಕೊಂಡು ನುಗ್ಗಿದವರು ಬಂದ ಮನೆಗಳ ಸುತ್ತಲೂ ಕಾವಲಿಡುವುದಕ್ಕಾಗಲಿ, ತಪ್ಪಿತಸ್ಥರನ್ನು ಪತ್ತೆಮಾಡುವುದಕ್ಕಾಗಲಿ ಯಾವ ಪ್ರಯತ್ನವನ್ನೂ ಮಾಡಲಿಲ್ಲ.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಏಟುಬಿದ್ದುದ್ದರಿಂದ ಅವರು ಸ್ವತಃ ಅಶಕ್ತರಾಗಿ ಹೋದರು. ಇಂತಹ ವಿಷಮಾವಸ್ಥೆಯಲ್ಲಿ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದು ಅವಶ್ಯಕವಾಗಿದ್ದರೂ, ಅವರು ಆರೀತಿ ಮಾಡಲಿಲ್ಲ. ಬೆಂಗಳೂರು ಸಿಟಿ ಪೋಲೀಸ್ ಆಡಳಿತವು ತಮಗೆ ಸೇರಿದ್ದಲ್ಲವೆಂಬುದನ್ನು ಇವರು ಅತಿಯಾಗಿ ಮಾಡಿದರು. ಸಿಟಿಯ ಪೋಲೀಸ್ ಆಡಳಿತವು ಅ|| ಸೂಪರಿಂಟೆಂಡೆಂಟರಿಗೆ ಸೇರಿದ್ದಾಗಿತ್ತು; ಆದರೂ ಅವರು ತಮ್ಮಿಂದ ಯಾವ ಕಾರ್ಯವೂ ನಿರೀಕ್ಷಿಸಲ್ಪಡದಿದ್ದಂತೆ ನಡೆದುಕೊಂಡರು. ದೊಂಬಿಯಾದ ಅರ್ಧ ಗಂಟೆಯೊಳಗಾಗಿ ಈ ಇಬ್ಬರು ಅಧಿಕಾರಿಗಳೂ ದೊಂಬಿ ನಡೆದ ಸ್ಥಳಕ್ಕೆ ಬಂದರು. ಅಷ್ಟರೊಳಗಾಗಿ ಸ್ಕೂಲಿನ ಹತ್ತಿರ ಸೇರಿದ್ದ ಗುಂಪು ಚದುರಿ ಹೋಗಿತ್ತು; ಏಕೆಂದರೆ, ಗುಂಡಿನ ಶಬ್ದವನ್ನು ಕೇಳುತ್ತಲೇ ಎಲ್ಲರೂ ಭಯಪಟ್ಟು ಓಡಿಹೋಗಿದ್ದರು. ಆದರೂ ಕೆಲವು ತಂಟೆಕೋರರು ಅಲ್ಲಲ್ಲೇ ಅಲೆದಾಡುತ್ತಿದ್ದರು. ಸ್ಕೂಲಿನ ಎದುರುಗಡೆ ರಸ್ತೆಯಲ್ಲಿ ಹಿಂದು ಮುಸಲ್ಮಾನರು ಎರಡು ಭಾಗಗಳಾಗಿ ಒಂದುಕಡೆ ಒಂದು ಜಾತಿಯವರೂ ಇನ್ನೊಂದುಕಡೆ ಇನ್ನೊಂದು ಜಾತಿಯವರೂ ಜಗಳಕ್ಕೆ ಸಿದ್ಧರಾಗಿ ನಿಂತಿದ್ದರು. ಡಿ|| ಸೂಪರಿಂಟೆಂಡೆಂಟರು ಗಲಾಟೆ ನಡೆಯದಂತೆ ನೋಡಿಕೊಳ್ಳುವ ಉದ್ದೇಶದಿಂದ ಮುಸಲ್ಮಾನರ ಗುಂಪಿನಕಡೆ ನಿಂತುಕೊಂಡರು; ಅ|| ಸೂಪರಿಂಟೆಂಡೆಂಟರು ಅದೇ ಉದ್ದೇಶದಿಂದ ಹಿಂದುಗಳ ಗುಂಪಿನಕಡೆ ನಿಂತುಕೊಂಡರು.

ಗುಂಡುಗಳು ಬಂದ ಮನೆಗಳ ಸುತ್ತಲೂ ಪೋಲೀಸ್‌ನವರನ್ನು ಕಾವಲಿಡಬೇಕಾಗಿದ್ದುದು ಅತ್ಯವಶ್ಯಕವಾಗಿತ್ತು. ಗುಂಡು ಹಾರಿಸಲ್ಪಟ್ಟುದು ಡಿ|| ಮ್ಯಾಜಿಸ್ಟ್ರೇಟರಿಗೂ ಪೋಲೀಸಿನವರಿಗೂ ತಿಳಿದರೂ ಎಲ್ಲರೂ ಆ ವಿಚಾರವನ್ನು ಗಮನಕ್ಕೇ ತಂದುಕೊಳ್ಳಲಿಲ್ಲ. ಆರೀತಿ ಕಾವಲಿಡುವುದಕ್ಕೆ ಆದಿನ ತಮ್ಮಲ್ಲಿ ಸಾಕಾದಷ್ಟು ಸಿಬ್ಬಂದಿಯಿರಲಿಲ್ಲವೆಂದೂ, ಮಾರನೆ ದಿನವೂ ಸಹ ಜನರೆಲ್ಲರೂ ಕ್ರೋಧಾವೇಶದಿಂದ್ದುದರಿಂದ ಶಾಂತಿ ಸಮಾಧಾನಗಳು ನೆಲೆಸುವಂತೆ ಏರ್ಪಾಡು ಮಾಡುವುದರಲ್ಲಿ ತಾವು ನಿಯುಕ್ತರಾಗಿದ್ದುದರಿಂದ, ಮನೆ ಹುಡುಕುವ ಅಥವ ದಸ್ತಗಿರಿ ಮಾಡುವ ವಿಚಾರವನ್ನು ಯೋಚಿಸುವುದಕ್ಕೂ ತಮಗೆ ಅವಕಾಶವಾಗಲಿಲ್ಲವೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಇನ್ಸ್‌ಪೆಕ್ಟರ್ ಜನರಲ್‌ರವರೂ ಹೇಳಿದ್ದಾರೆ. ಆದರೂ ಕುದುರೆ ಸವಾರರೂ, ರಿಸರ್ವ್ ಪೋಲೀಸ್‌ನವರೂ ಬಂದ ಒಡನೆ ಮನೆಗಳ ಸುತ್ತ ಪಹರೆಯಿಡಬಹುದಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ. ಅಲ್ಲದೆ ಯಾರಾದರೂ ಕೆಲವರು ತುಂಟರನ್ನು ದಸ್ತಗಿರಿ ಮಾಡಿದ್ದರೆ ಅವರಿಂದ ಉಳಿದ ವಿಚಾರಗಳನ್ನು ಪತ್ತೆಮಾಡಿಕೊಳ್ಳಬಹುದಾಗಿತ್ತು.

ಜುಲೈ ೩೧ನೆ ತಾರೀಖಿನ ದಿನ ಪಟ್ಟಣದ ಜನರು ವಿಶೇಷ ಗಾಬರಿಯಾಗಿದ್ದರು. ಶಾಂತಿಸಮಾಧಾನಗಳು ನೆಲೆಸುವಂತೆ ಸರ್ಕಾರದವರು ತಕ್ಕ ಏರ್ಪಾಡನ್ನೂ ಮಾಡಿದ್ದರು. ಮಿಲಿಟರಿ ಕುದುರೆ ಸವಾರರನ್ನು ಕರೆಸಿದುದು ಮಾತ್ರವೇ ಅಲ್ಲದೆ ಕಂಟೋನ್ಮೆಂಟಿನಿಂದ ಫಿರಂಗಿ ಮೋಟಾರುಗಳನ್ನು ತರಿಸಿದರು. ಮಾಡದೆ ಹೋದ ಒಂದು ಕಾರ್ಯವ್ಯಾವುದೆಂದರೆ, ಹಿಂದಿನ ರಾತ್ರಿ ನಡೆದ ಅಚಾತುರ್ಯದ ವಿಚಾರವಾಗಿ ೩೧ನೇ ತಾರೀಖಿನ ದಿನವಾದರೂ ತಪಾಸಿ ಕ್ರಮ ಜರುಗಿಸುವುದರ ಅವಶ್ಯಕತೆಯು ಒಬ್ಬರಿಗೂ ಹೊಳೆಯದೆ ಹೋದುದೆ. ೩೧ನೇ ತಾರೀಖಿನ ದಿನ ಎಲ್ಲಾ ಕೆಲಸಕ್ಕು ಸಾಕಾದಷ್ಟು ಸಿಬ್ಬಂದಿಯಿತ್ತು. ಆ ದಿನ ಕೆಲವು ಮಂದಿ ಪೋಲೀಸ್‌ನವರನ್ನು ಒಬ್ಬರು ಮ್ಯಾಜಿಸ್ಟ್ರೇಟರ ವಶಕ್ಕೆ ಕೊಟ್ಟು ಅವರು ತಪಾಸಿ ಕ್ರಮ ನಡೆಸುವಂತೆ ಏರ್ಪಡಿಸುವುದು ಸುಲಭವಾಗಿತ್ತು.

ಪೋಲೀಸ್‌ನವರು ಮೊದಲುಗೊಂಡು ಏಟುತಿಂದಿರುವ ಇಂತಹ ದೊಂಬಿಗಳು ನಡೆದಾಗ, ಎಲ್ಲವೂ ಶಾಂತಸ್ಥಿತಿಗೆ ಬರುವವರೆಗೆ ತಪಾಸಿ ನಡೆಸುವುದಕ್ಕಾಗಲೀ, ದಸ್ತಗಿರಿ ಮಾಡುವುದಕ್ಕಾಗಲಿ, ಪ್ರಯತ್ನಿಸುವುದು ಸರಿಯಲ್ಲವೆಂಬುದನ್ನು ನಾವು ಒಪ್ಪುವುದಿಲ್ಲ.

ಪತ್ರಿಕೆಗಳನ್ನು ನಿಲ್ಲಿಸಿದುದು.

ಪತ್ರಿಕೆಗಳನ್ನು ನಿಲ್ಲಿಸಿದುದರ ಉದ್ದೇಶವು ಸಂಪೂರ್ಣವಾಗಿ ನೆರವೇರಲಿಲ್ಲ. ಏಕೆಂದರೆ ಅವುಗಳು ನಿಲ್ಲಿಸಲ್ಪಡದೆ ಇದ್ದರೆ ಅವುಗಳಲ್ಲಿ ಪ್ರಕಟವಾಗಬಹುದಾಗಿದ್ದ ಕೆಲವು ಲೇಖನಗಳು ಹೊರಗಡೆ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟುವು. ಪತ್ರಿಕೆಗಳನ್ನು ನಿಲ್ಲಿಸತಕ್ಕದು ವಿಶೇಷ ಸ್ವಭಾವದ ಶಾಸನವು; ಈ ಶಾಸನವನ್ನು ಅತ್ಯಂತ ವಿಷಮಾವಸ್ಥೆಯಲ್ಲಿ ಮಾತ್ರ ಜಾರಿಗೆ ತರಬೇಕು.

ಗಲಭೆಗೆ ಮೂಲಕಾರಣಗಳು.

ಬಿಡುಗಡೆ ಹೊಂದಿದ ಮುಖಂಡರನ್ನು ಸುಮ್ಮನೆ ಅವರ ಮನೆಗಳಿಗೆ ಕರೆದುಕೊಂಡು ಹೋಗಿದ್ದರೆ, ಅಥವ ಪೋಲೀಸಿನವರು (ಅಗತ್ಯವಾಗಿದ್ದರೆ ಮಿಲಿಟರಿಯವರು) ಮೆರವಣಿಗೆಯನ್ನು ಹಿಂಬಾಲಿಸಿದ್ದರೆ, ಅಥವ ಸೆಂಟ್ರಲ್ ಜೈಲಿನಿಂದ ಮುಖಂಡರ ಬಿಡುಗಡೆಯಾದ ಸಮಾಚಾರವನ್ನು ತತ್‌ಕ್ಷಣವೆ ಪೋಲೀಸಿನವರಿಗೆ ತಿಳಿಸಿ ಅವರು ಸಾಯಂಕಾಲದ ಪೂಜೆ ಸಮಯದಲ್ಲಿ ಸಾಕಾದಷ್ಟು ಸಿಬ್ಬಂದಿಯೊಡನೆ ಸುಲ್ತಾನ್‌ಪೇಟೆ ಸ್ಕೂಲಿನ ಹತ್ತಿರ ಕಾದಿದ್ದರೆ, ದೊಂಬಿ ನಡೆಯುತ್ತಿರಲಿಲ್ಲ. ಆದರೆ ಈ ಎಚ್ಚರಿಕೆಗಳೊಂದೂ ತೆಗೆದುಕೊಳ್ಳಲ್ಪಡಲಿಲ್ಲ.

ಪಿತೂರಿ ವಿಚಾರ.

ದಿವಾನ್‌ರವರು, ಸರ್ಕಾರ ಮತ್ತು ಮಿ|| ಅಬ್ಬಾಸ್‌ಖಾನರ ಮೇಲೆ ಒಂದು ಗುಪ್ತಸಂಸ್ಥೆಯು ಪಿತೂರಿ ನಡೆಸುತ್ತಿದೆಯೆಂದೂ ಆ ಸಂಸ್ಥೆಯವರು ಈಗಿರುವ ಸರ್ಕಾರವನ್ನು ತೆಗೆಸಿಹಾಕಿ ಸಾಧ್ಯವಾದರೆ ಈಗಿರುವ ರಾಜ್ಯಾಡಳಿತ ಕ್ರಮವನ್ನು ಬದಲಾಯಿಸಬೇಕೆಂದು ಸನ್ನಾಹ ನಡೆಸುತ್ತಿದ್ದಾರೆಂದೂ ಹೇಳಲ್ಪಟ್ಟಿದೆ. ಈ ಹೇಳಿಕೆಗಳನ್ನು ಗುಪ್ತವಾಗಿ ತೆಗೆದುಕೊಳ್ಳಲಾಯಿತು. ಈ ವಿಚಾರವಾಗಿ ಸಾಕ್ಷಿ ಹೇಳಿದವರಲ್ಲಿ ಅನೇಕರು ರುಜುವಾತು ಕೊಡುವುದಾಗಿ ಹೇಳಿದರು. ಇವರಿಗೆ ಆರೀತಿ ರುಜುವಾತು ಕೊಡಲು ಸಾಕಾದಷ್ಟು ಕಾಲ ವ್ಯವಧಾನವನ್ನು ಕೊಟ್ಟಿದ್ದರೂ ಯಾರೂ ಯಾವ ಆಧಾರವನ್ನೂ ತಂದು ತೋರಿಸಲಿಲ್ಲ. ಈಗಿರುವ ದಿವಾನ್‌ರನ್ನು ತೆಗೆಸುವುದಕ್ಕಾಗಿ ಅಗಾಧ ಪ್ರಯತ್ನವು ನಡೆಯಿತೆಂದು ನಾವು ನಂಬಲಾರೆವು. ಹಾಗೂ ಸರ್ಕಾರವನ್ನು ತಲೆಕೆಳಗು ಮಾಡುವುದಕ್ಕಾಗಿ ಯಾವ ಪ್ರಯತ್ನವೂ ನಡೆಯಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಈಬಗೆಯ ಸಾಹಸವು ಸಾಧ್ಯವಾದುದೆಂದು ಯಾವ ಪಂಗಡದವರೂ ಭಾವಿಸಲಾರರು.

ಸಂಬಂಧಪಟ್ಟ ಅಧಿಕಾರಿಗಳ ವರ್ತನೆ.

ವಿಗ್ರಹದ ಸ್ಥಾನಪಲ್ಲಟದ ವಿಷಯವಾಗಿ ಪತ್ರಿಕೆಗಳಲ್ಲಿ ಅಷ್ಟೊಂದು ಗಲಾಟೆ ನಡೆದಿದ್ದರೂ ವಿದ್ಯಾಭ್ಯಾಸದ ಡೈರೆಕ್ಟರು ಉದಾಸೀನಮಾಡಿದರು. ಮಿಲಿಟರಿಯವರನ್ನು ಕರೆಸಿದುದು ಸರಿ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಇದ್ದಾಗ ತಾವು ಏನನ್ನೂ ಮಾಡಲಾಗುವುದಿಲ್ಲವೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೇಳುವುದನ್ನು ನಾವು ಒಪ್ಪುವುದಿಲ್ಲ. ಆ ದಿನ ನಡೆದ ಕೃತ್ಯಗಳ ವಿಚಾರವಾಗಿ ತಮಗೆ ಬಂದ ವರ್ತಮಾನಗಳ ಸತ್ಯಾಸತ್ಯಗಳನ್ನು ಆಗಲೇ ಗೊತ್ತುಮಾಡುವುದಕ್ಕಾಗಿ ಮನೆಗಳನ್ನು ಹುಡುಕಬೇಕಾಗಿತ್ತು.

ಸಿಟಿ ಮ್ಯಾಜಿಸ್ಟ್ರೇಟರು ಮುಖಂಡರ ಬಿಡುಗಡೆಗೆ ಸರ್ಕಾರಿ ಹುಕ್ಕುಂ ಆಗಿದೆಯೆಂದು ಖಾಸಗಿ ದೊಡ್ಡ ಮನುಷ್ಯರೊಬ್ಬರ ಮಾತನ್ನು ನಂಬಿ, ಮುಖಂಡರನ್ನು ಬಿಡುಗಡೆ ಮಾಡಿದುದು ತಪ್ಪು.

ಜೈಲು ಸೂಪರಿಂಟೆಂಡೆಂಟರು ಏನು ತಪ್ಪನ್ನೂ ಮಾಡಲಿಲ್ಲ.

ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು.

ಗಣೇಶನ ಸ್ಥಾನಪಲ್ಲಟದ ವಿಚಾರವಾಗಿ ಪತ್ರಿಕೆಗಳಲ್ಲಿ ಅಷ್ಟೊಂದು ಗಲಾಟೆ ನಡೆಯುತ್ತಿದ್ದಾಗ, ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು ಕೂಡ ಈ ವಿಚಾಲಿ ಯಾವುದಾದರೊಂದು ನಿರ್ಧಾರಕ್ಕೆ ಬರದೆ, ಆಲಸ್ಯಮಾಡಿದರು. ಈ ವಿಚಾರದಲ್ಲಿ ದಿನ ದಿನಕ್ಕೆ ಹೆಚ್ಚಾಗಿ ನಡೆಯುತ್ತಿದ್ದ ಚಳುವಳಿಯ ವಿಷಯವನ್ನು ಇವರು ಆಯಾ ದಿನ ಸರಿಯಾಗಿ ತಿಳಿದುಕೊಳ್ಳಲು ಏರ್ಪಡಿಸದಿದ್ದುದು ಅಥವಾ ಈ ವಿಚಾರವನ್ನು ಉದಾಸೀನ ಮಾಡಿ ಇದರಿಂದ ಮುಂದೆ ಅನಾಹುತಗಳು ನಡೆಯುತ್ತವೆಂದು ಭಾವಿಸದಿದ್ದುದು, ಇವರ ಆಲಸ್ಯಕ್ಕೆ ಕಾರಣವಾಗಿರಬಹುದು.

ಮಿಲಿಟರಿ ಇಲಾಖೆ.

ಮಿಲಿಟರಿಯವರನ್ನು ಕರೆಸುವುದಕ್ಕೆ ಏನು ಅಗತ್ಯವಿತ್ತೆಂಬ ಪ್ರಶ್ನೆ ಹುಟ್ಟಿದೆ. ಪೋಲೀಸ್ ಸಿಬ್ಬಂದಿಯು ಕಡಿಮೆಯಾಗಿದ್ದುದರಿಂದಲೂ ಒಂದು ಸಾರಿ 5 ಸಾವಿರದಿಂದ 10 ಸಾವಿರದವರೆಗೆ ಜನರು ಗುಂಪು ಸೇರಿದ್ದರೆಂದು ತಿಳಿಯಬರುವುದರಿಂದಲೂ, ಮಿಲಿಟರಿಯವರನ್ನು ಕರೆಸಿದುದು ಅಗತ್ಯವಾಗಿತ್ತೆಂದು ನಾವು ಅಭಿಪ್ರಾಯ ಪಡುತ್ತೇವೆ.

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು.

ಇಂತಹ ವಿಷಮಾವಸ್ಥೆಗಳಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಹಾಜರಿದ್ದಾಗ ತಾವು ಏನನ್ನೂ ಮಾಡಲಾಗುವುದಿಲ್ಲವೆಂದು ಡಿ|| ಮ್ಯಾಜಿಸ್ಟ್ರೇಟರು ಹೇಳುವುದು ಅಷ್ಟು ತೃಪ್ತಿಕರವಾಗಿಲ್ಲ.

30 ನೇ ತಾರೀಖಿನ ರಾತ್ರಿ, ಮನೆಗಳನ್ನು ಹುಡುಕಬೇಕೆಂದು ಜನರೆಲ್ಲರೂ ಕೂಗಿಕೊಂಡರೂ, ಕೆಲವು ಮುಖ್ಯಸ್ಥರು ಆ ರೀತಿ ಮಾಡಬೇಕೆಂದು ಬೇಡಿಕೊಂಡರೂ, ಮನೆಗಳನ್ನು ಹುಡುಕುವುದಾಗಲಿ, ದಸ್ತಗಿರಿ ಮಾಡುವುದಾಗಲಿ, ಉಚಿತವೆಂದು ಡಿ|| ಮ್ಯಾಜಿಸ್ಟ್ರೇಟರು ಭಾವಿಸಲಿಲ್ಲ. ಆ ರೀತಿ ತಾವೇಕೆ ಮಾಡಲಿಲ್ಲವೆಂಬುದಕ್ಕೆ, ಆಗ ನಾನಾ ವಿಧವಾದ ಸಮಾಚಾರಗಳು ಹಬ್ಬಿದ್ದುದರಿಂದ ಅವುಗಳಲ್ಲಿ ಯಾವುದು ನಿಜವೆಂದು ನಂಬಿ ಕಾರ್ಯಮಾಡಲು ಮನಸ್ಸು ಮಾಡುವುದು ತಮಗೆ ಅಸಾಧ್ಯವಾಯಿತೆಂದು ಇವರು ಹೇಳುತ್ತಾರೆ. ಮನೆ ಹುಡುಕುವಾಗ ಅಥವ ದಸ್ತಗಿರಿ ಮಾಡುವಾಗ ಏನಾದರೂ ತೊಂದರೆಗಳು ಸಂಭವಿಸಬಹುದೆಂದು ಇವರು ತಿಳಿದಿದ್ದರೆ, ಸವಾರರು ಬಂದಮೇಲಾದರೂ, ಅವರ ಸಹಾಯದಿಂದ ಏನು ಮಾಡುವುದಕ್ಕೂ ಸಾಧ್ಯವಿತ್ತು; ಆದುದರಿಂದ ಇವರಿಗೆ ಮನಸ್ಸಿರಲಿಲ್ಲವೆಂದೇ ಕಾಣುತ್ತದೆ. ಆಗ ನಡೆದ ಕೃತ್ಯಗಳ ಸಂಬಂಧವಾಗಿ ಇವರಿಗೆ ತಿಳಿದು ಬಂದ ಸಮಾಚಾರಗಳನ್ನೆಲ್ಲಾ ಇವರು ನಂಬಲಿ, ನಂಬದಿರಲಿ, ಆ ಸಮಾಚಾರಗಳ ಸತ್ಯಾಸತ್ಯಗಳನ್ನು ಪರಿಶೀಲಿಸುವುದಕ್ಕಾಗಿ ಆ ಕೂಡಲೆ ಪ್ರಯತ್ನಿಸಬೇಕಾಗಿತ್ತು.

ಸಿಟಿ ಮ್ಯಾಜಿಸ್ಟ್ರೇಟರು.

ದೊಂಬಿ ನಡೆದ ಸರಹದ್ದು ನ್ಯಾಯವಾಗಿ ಸಿಟಿ ಮ್ಯಾಜಿಸ್ಟ್ರೇಟರಿಗೆ ಸೇರಿದ್ದರೂ ಅವರು ಯಾವ ಪ್ರಾಮುಖ್ಯತೆಯನ್ನೂ ವಹಿಸಲಿಲ್ಲ. ಅನೇಕ ಕಡೆಗಳಲ್ಲಿ ಗಲಭೆ ನಡೆದು ಜನರು ಗಾಬರಿಗೊಂಡಿದ್ದಾರೆಂದು ತಿಳಿದ ಒಡನೆ ಇವರು ಸ್ವಲ್ಪ ಚುರುಕಾಗಿ ಓಡಾಡುತ್ತ ಗಲಭೆ ನಡೆದ ಸ್ಥಳಗಳಿಗೆಲ್ಲಾ ಹೋಗಿ ನೋಡಬೇಕಾಗಿತ್ತು. ಮುಖಂಡರನ್ನು ಬಿಡುಗಡೆಮಾಡಬಹುದೆಂದು ಸರ್ಕಾರದವರ ಆರ್ಡರು ಮಾಡಿದ್ದಾರೆಂದು ಖಾಸಗಿ ದೊಡ್ಡ ಮನುಷ್ಯರೊಬ್ಬರು ಹೇಳಿದುದನ್ನು ನಂಬಿ ಮುಖಂಡರನ್ನು ಬಿಡುಗಡೆ ಮಾಡಿಬಿಟ್ಟರು. ಈ ಆರ್ಡರು ತಮ್ಮ ಸ್ವಂತ ಆರ್ಡರಲ್ಲವಾದುದರಿಂದ, ಆ ಸಮಾಚಾರವನ್ನು ಹೇಳಿದವರು ಎಷ್ಟೇ ದೊಡ್ಡ ಮನುಷ್ಯರಾಗಿದ್ದರೂ ಅವರ ಬಾಯಿಮಾತಿನ ಆಧಾರದಮೇಲೆ ಇವರು ಕಾರ್ಯಮಾಡಬಾರದಾಗಿತ್ತು. ಅಂತು ಜನರ ಗುಂಪನ್ನು ಚದುರಿಸಿ ಆಮೇಲೆ ಮುಖಂಡರನ್ನು ಬಿಡುಗಡೆ ಮಾಡಬೇಕಾಗಿತ್ತು. ಅಥವ ಇವರ ಬಿಡುಗಡೆಯ ವಿಚಾರವಾಗಿ ಟೆಲಿಫೋನಿನಲ್ಲಾಗಲೀ ಮತ್ತಾವ ವಿಧದಿಂದಾಗಲಿ, ಮೊದಲು ಪೋಲೀಸ್‌ನವರಿಗೆ ತಿಳಿಸಿ, ಅವರು ಮೆರವಣಿಗೆಯವರನ್ನು ಹಿಂಬಾಲಿಸಲು ಅನುಕೂಲಪಡಿಸಬೇಕಾಗಿತ್ತು.

ಜೈಲು ಸೂಪರಿಂಟೆಂಡೆಂಟರು.

ಸೆಂಟ್ರಲ್ ಜೈಲು ಸೂಪರಿಂಟೆಂಡೆಂಟರ ವಿಚಾರದಲ್ಲಿ ಯಾವ ದೋಷವನ್ನೂ ಆರೋಪಿಸಲಾರೆವು. ಅವರ ಕಾರ್ಯವೂ ವರ್ತನೆಯೂ ಸ್ತುತ್ಯಾರ್ಹವಾಗಿದ್ದುವು; ಗುಂಪನ್ನು ಅವರು ಸರಿಯಾದ ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದರು.

“ಆ ರಾತ್ರಿ ದಸ್ತಗಿರಿ ಮಾಡಿದ್ದರೆ ರಕ್ತದಕೋಡಿ ಹರಿಯುತ್ತಿತ್ತು.”

ಜಾತಿಪಂಗಡಗಳನ್ನು ಬಿಟ್ಟು ರಾಜಕೀಯಪಂಗಡಗಳನ್ನು ಮಾಡಿ.

ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಿಗೂ ಅ|| ಪೋಲೀಸ್ ಸೂಪರಿಂಟೆಂಡೆಂಟರಿಗೂ ಮನಸ್ತಾಪವಿದ್ದುದರಿಂದ ಒಬ್ಬರಿಗೊಬ್ಬರು ಸಹಕರಿಸಿ ಕೆಲಸಮಾಡಲಿಲ್ಲ.

ಆದಿನ ಯಾರನ್ನಾದರೂ ದಸ್ತಗಿರಿಮಾಡಿದ್ದರೆ ಹೆಚ್ಚು ಅನಾಹುತಗಳು ನಡೆದುಹೋಗುತ್ತಿದ್ದುವೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಅಂದಿನ ಸ್ಥಿತಿಯು ವಿಷಮಾವಸ್ಥೆಯಲ್ಲಿದ್ದುದೇನೋ ನಿಜ. ಆದರೆ, ಸಂಬಂಧಪಟ್ಟ ಅಧಿಕಾರಿಯು ತನ್ನ ಕರ್ತವ್ಯವನ್ನು ನೆರವೇರಿಸಲು ಹಿಂಜರಿದಿರುವರು. ಈ ವಿಚಾರದಲ್ಲಿ ಸರ್ಕಾರದವರು ತಕ್ಕ ನಿಗಕೊಡಬೇಕಾಗಿದೆ.

ಬ್ರಾಹ್ಮಣರು, ಬ್ರಾಹ್ಮಣೇತರರು ಎಂದು ಕರೆಯುವುದಕ್ಕೆ ಬದಲಾಗಿ ಇನ್ನುಮುಂದೆ ರಾಜಕೀಯ ವ್ಯವಹಾರದಾರರನ್ನು ಎರಡು ಭಾಗಮಾಡಿ ಪ್ರಾಚೀನವಾದಿಗಳು (ಕನ್ಸರ್‌ವೇಟಿವ್ಸ್) ಧಾರಾಳವಾದಿಗಳು (ಪ್ರೊಗ್ರೆಸಿವ್ಸ್) ಎಂದು ಕರೆಯಬೇಕು.

ಜನರಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಬೇಕು. ದಿವಾನರನ್ನು ಮುಖ್ಯಮಂತ್ರಿ (ಚೀಫ್‌ಮುನಿಸ್ಟರ್) ಯನ್ನಾಗಿಟ್ಟುಕೊಂಡು, ಖಾಸಗಿ ಮಂತ್ರಿಗಳಿಗೆ ಸರ್ಕಾರದ ಆಡಳಿತದಲ್ಲಿ ಕೆಲವು ಭಾಗಗಳನ್ನು ವಹಿಸಬೇಕು.

ಪೋಲೀಸ್ ಇಲಾಖೆ.

ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರೂ ಅ|| ಪೋಲೀಸ್ ಸೂಪರಿಂಟೆಂಡೆಂಟರೂ ಒಬ್ಬರೊಡನೊಬ್ಬರು ಸಹಕರಿಸಿ ಕೆಲಸಮಾಡಲಿಲ್ಲ. ಅವರಲ್ಲಿ ಒಬ್ಬರಲ್ಲೊಬ್ಬರಿಗೆ ಮನಸ್ತಾಪವಿದ್ದಿತು. ಸಿಟಿಯಲ್ಲಿ ಶಾಂತಿ ಸಮಾಧಾನಗಳು ನೆಲೆಸುವಂತೆ ಏರ್ಪಡಿಸುವುದು ತಮ್ಮ ಕರ್ತವ್ಯವಲ್ಲವೆಂದೂ ಸಿಟಿಯು ಅ|| ಸೂಪರಿಂಟೆಂಡೆಂಟರಿಗೆ ಸೇರಿದ್ದರಿಂದ ಅದು ಅವರ ಕರ್ತವ್ಯವೆಂದೂ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರು ಭಾವಿಸಿದರು. ಮೇಲಿನ ಅಧಿಕಾರಿಗಳಿಂದ ಆರ್ಡರು ಬರುವವರೆಗೂ ತಾವು ಏನು ಮಾಡುವುದಕ್ಕೂ ಇವರಿಬ್ಬರು ಅಧಿಕಾರಿಗಳಿಗೂ ಮನಸ್ಸಿರಲಿಲ್ಲ.

ಆದಿನ ರಾತ್ರಿ ಶಾಂತಿಯು ನೆಲೆಸುವಂತೆ ಮಾಡುವುದಕ್ಕಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಪೋಲೀಸ್ ಅಧಿಕಾರಿಗಳೂ ಸಾಹಸಪಡಬೇಕಾಗಿದ್ದುದರಿಂದಲೂ, ಯಾರನ್ನಾದರೂ ದಸ್ತಗಿರಿ ಮಾಡಿದ್ದರೆ, ಅದರಿಂದ ರಕ್ತದಕೋಡಿ ಹರಿಯುವ ಸಂಭವವಿದ್ದುದರಿಂದಲೂ, ತಾವು ಆರೀತಿ ಕಾರ್ಯಮಾಡಿದ್ದರೆ ಹುಚ್ಚುತನವಾಗುತ್ತಿತ್ತೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುತ್ತಾರೆ. ಇವರಿಗೆ ಏಟುಬಿದ್ದು ಇವರು ಕೃತ್ಯನಡೆದ ಸ್ಥಳದಲ್ಲಿ ಹಾಜರಿರಲಿಲ್ಲವಾದುದರಿಂದ ಆರಾತ್ರಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡದಿದ್ದುದಕ್ಕೆ ಇವರು ಹೇಳುವ ಸಮಾಧಾನವು ಸಕಾರಣವಾದುದಾಗಿಲ್ಲ. ಗಲಭೆನಡೆದ ಬಹಳ ಹೊತ್ತಿನವರೆಗೂ ಸ್ಥಳದಲ್ಲಿ ಹಾಜರಿದ್ದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಡಿ|| ಸೂಪರಿಂಟೆಂಡೆಂಟರೂ, ಅ|| ಸೂಪರಿಂಟೆಂಡೆಂಟರೂ ಅಂತಹ ಭಯಕ್ಕೆ ಕಾರಣವಿತ್ತೆಂದು ಹೇಳುವುದಿಲ್ಲ.

ಜುಲೈ 30 ನೇ ತಾರೀಖಿನ ರಾತ್ರಿ ಡಿ|| ಸೂಪರಿಂಟೆಂಡೆಂಟರೂ ಅ|| ಸೂಪರಿಂಟೆಂಡೆಂಟರೂ ಜವಾಬ್ದಾರಿ ವಹಿಸಿ ಕೆಲಸಮಾಡಲು ಮನಸ್ಸುಳ್ಳವರಾಗಿರಲಿಲ್ಲವೆಂದು ನಾವು ಭಾವಿಸುತ್ತೇವೆ. ಪೋಲೀಸ್ ಇಲಾಖೆಯಲ್ಲಿ ಬಹಳ ಮಂದಿ ಮುಸಲ್ಮಾನರಿದ್ದರೆಂಬುದೂ ಇವರ ಈ ಬಗೆಯ ಆಲಸ್ಯಕ್ಕೆ ಕಾರಣವಾಗಿರಬಹುದು. ಇನ್ಸ್‌ಪೆಕ್ಟರ್ ಜನರಲ್‌ರವರೂ, ಡೆ|| ಕಮಿಷನರೂ ಜತೆಯಲ್ಲೇ ಇದ್ದರೂ, ಇವರಿಬ್ಬರೂ ಸರ್ಕಾರದ ಮೆಂಬರುಗಳಲ್ಲಿಗೆ ಹೋಗಬಹುದಾಗಿದ್ದರೂ, ಅಂದಿನ ಸ್ಥಿತಿಯ ಮೇಲ್ವಿಚಾರಣೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲಿಲ್ಲ. ತಮ್ಮ ಕೆಳಗಿನ ಅಧಿಕಾರಿಗಳು ಯಾವ ಕಾರ್ಯವನ್ನು ಕೈಗೊಂಡು, ಮನೆಗಳನ್ನು ಹುಡುಕಿ, ತಪ್ಪಿತಸ್ಥರನ್ನು ದಸ್ತಗಿರಿ ಮಾಡಬೇಕೆಂಬ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಅವರಿಗೆ ಕೊಡಲಿಲ್ಲ. ಇಂತಹ ವಿಷಮಸ್ಥಿತಿಯಲ್ಲಿ ಇನ್ಸ್‌ಪೆಕ್ಟರ್ ಜನರಲ್‌ರವರು ಅಂದಿನ ವ್ಯಾಪಾರವನ್ನು ತಮ್ಮ ಹತೋಟಿಗೆ ತೆಗೆದುಕೊಂಡು ಕೇವಲ ಎಚ್ಚರಿಕೆಯಿಂದ ಕಾರ್ಯಮಾಡಬೇಕಾಗಿತ್ತು. ಅಗತ್ಯವಾದರೆ, ಯಾವ ದಾರಿಯನ್ನು ಅನುಸರಿಸಬೇಕೆಂಬ ಬಗ್ಗೆ ಸರ್ಕಾರದಿಂದ ತಕ್ಕ ತಿಳುವಳಿಕೆ ಪಡೆಯಬೇಕಾಗಿದ್ದಿತು.

ಇಂತಹ ವಿಷಮಾವಸ್ಥೆಯಲ್ಲಿ ತಕ್ಕ ಕಾರ್ಯಮಾಡಬೇಕಾಗಿದ್ದ ಎಲ್ಲಾ ಅಧಿಕಾರಿಗಳು ತಟಸ್ಥರಾಗಿದ್ದರೆಂದು ಧಾರಾಳವಾಗಿ ಹೇಳಬಹುದು. ಬೆಂಗಳೂರು ಮಿಲ್ಲಿನ ದೊಂಬಿಯಲ್ಲಿ ಧೈರ್ಯದಿಂದ ಗುಂಡುಹಾರಿಸಿದ ಅಧಿಕಾರಿಯು, ದುಡುಕಿ ಕೆಲಸ ಮಾಡಿದನೆಂಬ ಆಕ್ಷೇಪಣೆಗೆ ಗುರಿಯಾದುದರಿಂದ ಅಧಿಕಾರಿಗಳು ಈ ಗಲಭೆಯಲ್ಲಿ ಧೈರ್ಯವಾಗಿ ಯಾವ ಕೆಲಸವನ್ನು ಮಾಡುವುದಕ್ಕೂ ಹಿಂಜರಿದಿರಬಹುದೆಂದು ಇನ್ಸ್‌ಪೆಕ್ಟರ್ ಜನರಲ್‌ರವರೂ, ಡಿ|| ಮ್ಯಾಜಿಸ್ಟ್ರೇಟರೂ ಹೇಳುತ್ತಾರೆ. ಒಟ್ಟಿನಲ್ಲಿ ಆ ದಿನರಾತ್ರಿ ಡ್ಯೂಟಿ ಮೇಲಿದ್ದ ಪೋಲೀಸ್‌ನವರೂ ಮ್ಯಾಜಿಸ್ಟ್ರೇಟರೂ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸಿದರೆಂದು ನಾವು ಒಪ್ಪಲಾರೆವು. ಅಂದಿನ ಸ್ಥಿತಿಯು ಅತ್ಯಂತ ಕಠಿಣತರವಾದುದೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೂ ನಿಜಾಂಶವನ್ನು ಆಕೂಡಲೆ ಆ ಸ್ಥಳದಲ್ಲೇ ಕಂಡುಹಿಡಿಯುವುದಕ್ಕೆ ಅವರು ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿತ್ತು; ಹಾಗೂ ಮಿಲಿಟರಿಯವರು ಬಂದಮೇಲೆ ದೊಂಬಿಯು ಪುನಃ ನಡೆಯುತ್ತದೆಂಬ ಭಯವೇನೂ ಇರಲಿಲ್ಲವಾದುದರಿಂದ, ಅನಂತರವಾದರೂ ಅವರು ಈ ಕಾರ್ಯಮಾಡಬೇಕಾಗಿತ್ತು. ತಪ್ಪಿತಸ್ಥರಮೇಲೆ ಆ ದಿನವಲ್ಲದಿದ್ದರೆ ಸಾಧ್ಯವಾದ ಕೂಡಲೆ ಕ್ರಮಜರಗಿಸಲು ಸಹಾಯವಾಗಬಹುದಾಗಿದ್ದ ಎಲ್ಲಾ ಸಂಗತಿಗಳನ್ನೂ ಅವರು ತಿಳಿದುಕೊಳ್ಳುವುದು ಅವರ ಕರ್ತವ್ಯವಾಗಿತ್ತು. ಆದರೆ ಯಾವ ಅಧಿಕಾರಿಯೂ ಕಾರ್ಯ ಮಾಡುವುದಕ್ಕೆ ಆತುರರಾಗಿದ್ದಂತೆ ತೋರಿಬರುವುದಿಲ್ಲ. ಸಿಬ್ಬಂದಿಯೆಲ್ಲಾ ದಿಗ್ಭ್ರಾಂತರಾಗಿ ತೆಪ್ಪಗಿದ್ದರು. ಇವರ ಈ ನಡತೆಯ ವಿಚಾರವಾಗಿ ಸರ್ಕಾರದವರು ತಕ್ಕ ಗಮನ ಕೊಡಬೇಕಾಗಿದೆ. ಹಾಗೂ ಈ ಅಧಿಕಾರಿಗಳು ಆಗಿಂದಾಗ್ಗೆ ಗೌರ್ನಮೆಂಟ್ ಮೆಂಬರುಗಳನ್ನು ನೋಡುತ್ತಿದ್ದರು. ಆ ರಾತ್ರಿಯಾಗಲಿ, ಅದರ ಮಾರನೆ ದಿನವಾಗಲಿ, ಇವರ ನಡತೆ ವಿಚಾರವಾಗಿ ಸರ್ಕಾರದವರು ಯಾವ ಆಕ್ಷೇಪವನ್ನೂ ಮಾಡಲಿಲ್ಲ; ಅಥವ ಅದಕ್ಕಾಗಿ ಅವರ ಸಮಜಾಯಿಷಿಯನ್ನೂ ಕೇಳಲಿಲ್ಲ.

ರಾಜಕೀಯ ಅಸಮಾಧಾನಗಳನ್ನು ತಪ್ಪಿಸುವುದು ಹೇಗೆ?

ಈಗಿರುವ ಬ್ರಾಹ್ಮಣರು, ಬ್ರಾಹ್ಮಣೇತರರು ಎಂಬ ಪಂಗಡಗಳಿಗೆ ಬದಲಾಗಿ, ಪ್ರಾಚೀನವಾದಿಗಳು (ಕನ್ಸರ್ವೆಟಿವ್ಸ್) ಮತ್ತು ಧಾರಾಳವಾದಿಗಳು (ಪ್ರೊಗ್ರೆಸಿವ್ಸ್) ಎಂದು ಎರಡು ರಾಜಕೀಯ ಪಂಗಡಗಳನ್ನು ಮಾಡಿ. ಜವಾಬ್ದಾರಿ ಸರ್ಕಾರವನ್ನು ಜನರಿಗೆ ಕೊಡುವುದು ಸೂಕ್ತವಾಗಿದೆ. ಈ ಎರಡು ಪಂಗಡಗಳಲ್ಲೂ, ಸಾಧ್ಯವಾದಮಟ್ಟಿಗೂ ಅನುಭವಶಾಲಿಗಳೂ [illegible] ಇರುವಂತೆ ನೋಡಿಕೊಳ್ಳಬೇಕು. ಈರೀತಿ ಜವಾಬ್ದಾರಿ ಸರ್ಕಾರವು ಜಾರಿಗೆ ಬಂದಮೇಲೆ ಅಗತ್ಯವಾದರೆ ಕೆಲವು ವರ್ಷಗಳವರೆಗೆ ದಿವಾನರನ್ನು ಮುಖ್ಯ ಮಂತ್ರಿಯನ್ನಾಗಿ ಇಟ್ಟುಕೊಳ್ಳಬಹುದು. ಈರೀತಿ [illegible] ಒಂದೇರೀತಿಯಾಗಿ [illegible].

ದೊಂಬಿಗೆ ಮೊದಲು ನಡೆದ ವಿದ್ಯಮಾನಗಳು.

ವಿಗ್ರಹವನ್ನು ಸ್ವಸ್ಥಾನದಲ್ಲಿಟ್ಟುದು

ದಸ್ತಗಿರಿಯಾದವರನ್ನು ಬಿಡುಗಡೆ ಮಾಡುವ ಪ್ರಯತ್ನ.

ಬೇರೆ ಬೇರೆ ಸ್ಕೂಲುಗಳ ಹತ್ತಿರ ಮುಷ್ಕರಗಳ ಗಲಾಟೆ

ಜುಲೈ 29 ನೇ ತಾರೀಖಿನ ದಿನ ಸತ್ಯಾಗ್ರಹದ ಮುಖಂಡರು ದಸ್ತಗಿರಿ ಮಾಡಲ್ಪಟ್ಟರು.

ಶ್ರೀ ಶಂಕರನಾರಾಯಣರಾಯರು ದಿವಾನ್‌ರನ್ನು ನೋಡಿ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವಂತೆ ಕೇಳಿಕೊಂಡರು. ದಿವಾನ್‌ರವರು ಮಿ|| ಮಾತ್ತನ್‌ರಿಗೆ ತಿಳಿಸಲು, ಅದೇ ಪ್ರಕಾರ ಮಿ|| ಮಾತ್ತನ್‌ರವರು ಸ್ಕೂಲನ್ನು ಭೇಟಿ ಮಾಡಿ, ಅನಂತರ ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸಿದರು.

ಮುಖಂಡರನ್ನು ದಸ್ತಗಿರಿ ಮಾಡಿದ್ದರಿಂದ ಹುಡುಗರಿಗೆ ಸಮಾಧಾನವಾಗಲಿಲ್ಲ. ತಮ್ಮ ಮುಖಂಡರನ್ನು ಬಿಡಿಸಿಕೊಳ್ಳುವುದಕ್ಕಾಗಿ ಏಳು ವರುಷದ ಮಕ್ಕಳು ಮೊದಲುಗೊಂಡು ಸೆಂಟ್ರಲ್ ಜೈಲಿನ ಬಳಿ ರಾತ್ರಿಯಲ್ಲಿ ಮೆರವಣಿಗೆಹೊರಟರು.

ಮುಷ್ಕರಗಳು ಬೇರೆ ಬೇರೆ ಸ್ಕೂಲು ಮತ್ತು ಕಾಲೇಜುಗಳ ಹತ್ತಿರ ಹೋಗಿ ಗಲಾಟೆಮಾಡಿ, ಆ ಹುಡುಗರೆಲ್ಲರೂ ತಮ್ಮೊಡನೆ ಸೇರುವಂತೆ ಮಾಡುವುದರಲ್ಲಿ ಜಯಶೀಲರಾದರು.

ಜುಲೈ 29 ನೇ ತಾರೀಖಿನ ದಿನ 107 ನೇ ಸೆಕ್ಷನ್ ಪ್ರಕಾರ ಶ್ರೀ|| ಗಳಾದ ಸುಬ್ರಹ್ಮಣ್ಯಂ, ಭೀಮರಾವ್ ಇವರನ್ನು ದಸ್ತಗಿರಿ ಮಾಡಿದರು. ಸತ್ಯಾಗ್ರಹವು ಮುಂದುವರಿಯಿತು. ಸುಲ್ತಾನ್‌ಪೇಟೆ ಸ್ಕೂಲು ಕಾಂಪೌಂಡಿನಲ್ಲಿ ಒಂದು ದೊಡ್ಡ ಗುಂಪು ಸೇರಿತ್ತು. ವಿಶ್ವಕರ್ಣಾಟಕದ ಸಂಪಾದಕರಾದ ಶ್ರೀ|| ಟಿ. ಟಿ. ಶರ್ಮರವರು ಗಣೇಶನ ವಿಷಯವಾಗಿ ಏನೇನು ನಡೆಯಿತೆಂಬುದನ್ನೂ ಸ್ಥಿತಿಯು ಅಷ್ಟು ವಿಷಮಾವಸ್ಥೆಗೆ ಬಾರದಂತೆ ನೋಡಿಕೊಳ್ಳುವುದಕ್ಕಾಗಿ ತಾವು ಮಾಡಿದ ಪ್ರಯತ್ನಗಳನ್ನೂ ವಿವರಿಸಿದರು. ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸುವುದಕ್ಕಾಗಿ ಶ್ರೀ|| ಶಂಕರನಾರಾಯಣರಾಯರು ದಿವಾನ್‌ರಲ್ಲಿ ಹೋದರು. ಜುಲೈ 18 ನೇ ತಾರೀಖಿನಿಂದ 26 ನೇ ತಾರೀಖಿನವರೆಗೆ ದಿವಾನ್‌ರವರು ಬೆಂಗಳೂರಲ್ಲಿರಲಿಲ್ಲವಾದುದರಿಂದ ತಾವೇ ಸ್ಥಳಕ್ಕೆ ಹೋಗಿ ವಿಚಾರಿಸುವುದಾಗಿ ಹೇಳಿದರು. ಅಷ್ಟರಲ್ಲಿ ವಿದ್ಯಾಭ್ಯಾಸದ ಇಲಾಖೆಯ ಆಡಳಿತವು ಸೇರಿದ್ದ ಮೂರನೇ ಕೌನ್ಸಿಲರ್, ಮಿ|| ಮಾತ್ತನ್‌ರವರು ಅಲ್ಲಿಗೆ ಬರಲು, ಅವರನ್ನು ಕುರಿತು, ಸ್ಕೂಲಿಗೆ ಹೋಗಿ ಏನು ಮಾಡಬೇಕೋ ಅದನ್ನು ಮಾಡುವಂತೆ ದಿವಾನ್‌ರು ಅವರಿಗೆ ತಿಳಿಸಿದರು. ಅದೇ ಪ್ರಕಾರ ಮಿ|| ಮಾತ್ತನ್‌ರವರು ಆ ದಿನ ಮಧ್ಯಾಹ್ನ ಸ್ಕೂಲಿಗೆ ಹೋದರು. ಆಗ್ಗೆ ಮಿ|| ಶರ್ಮಯವರು ಭಾಷಣ ಮಾಡುತ್ತಿದ್ದರು. ಅಲ್ಲಿ ಸೇರಿದ್ದ ಜನರ ಕೋರಿಕೆಯ ಪ್ರಕಾರ ವಿಗ್ರಹವನ್ನು ಕೂಡಲೆ ಸ್ವಸ್ಥಾನದಲ್ಲಿಡಿಸುವುದಾಗಿ ಮಿ|| ಮಾತ್ತನ್‌ರವರು ಭರವಸೆ ಕೊಟ್ಟರು.

ವಿಗ್ರಹವನ್ನು ಸ್ವಸ್ಥಾನದಲ್ಲಿಡಿಸಿದುದು.

ಜುಲೈ 29 ನೇ ತಾರೀಖು ಮಧ್ಯಾಹ್ನದ ಮೇಲೆ, ಆನೇಕಲ್ ತಾಲ್ಲೂಕಿಗೆ ಸೇರಿದ, ಸತ್ಯಾಗ್ರಹದ ಶಕ್ತಿಯಲ್ಲಿ ನಂಬಿಕೆಯುಳ್ಳ ಶ್ರೀ|| ಸರ್ವಾಭಟ್ಟರೆಂಬುವರು, ದಸ್ತಗಿರಿ ಮಾಡಲ್ಪಟ್ಟ ಮುಖಂಡರ ಸ್ಥಾನವನ್ನು ತಾವು ವಹಿಸಿ, ಹುಡುಗರು ಸತ್ಯಾಗ್ರಹವನ್ನು ಮುಂದುವರಿಸುವಂತೆ ಪ್ರೋತ್ಸಾಹಿಸಿದರು. ದಸ್ತಗಿರಿ ಮಾಡಲ್ಪಟ್ಟಿರುವ ಮುಖಂಡರು ಅ|| ಪೋಲೀಸ್ ಸೂಪರಿಂಟೆಂಡೆಂಟರ ಆಫೀಸಿನಲ್ಲಿದ್ದಾರೆಂದು ತಿಳಿದು ಹುಡುಗರ ದೊಡ್ಡ ಗುಂಪೊಂದು ಆ ಆಫೀಸಿನೊಳಗೆ ನುಗ್ಗಲು ಪ್ರಯತ್ನಿಸಿತು; ಆದರೆ, ಮುಖಂಡರು ಅಲ್ಲಿಲ್ಲವೆಂದೂ ಸೆಂಟ್ರಲ್ ಜೈಲಿನಲ್ಲಿರುವರೆಂದೂ ತಿಳಿದು, ಹೊರಟುಹೋದರು. ಸಾಯಂಕಾಲ 3 ಘಂಟೆ ಸುಮಾರಿಗೆ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ|| ಸುದರ್ಶನಯ್ಯಂಗಾರ್ಯರು ಸುಲ್ತಾನ್‌ಪೇಟೆ ಸ್ಕೂಲಿಗೆ ಬಂದು ಗಣೇಶನ ವಿಗ್ರಹವನ್ನು ಅದರ ಸ್ವಸ್ಥಾನದಲ್ಲಿಡಿಸಿದರು. ಆದರೆ, ತಮ್ಮ ಮುಖಂಡರನ್ನು ದಸ್ತಗಿರಿ ಮಾಡಿದ್ದುದರಿಂದ ಹುಡುಗರಿಗೇನೂ ಸಮಾಧಾನವಾಗದೆ, ಸತ್ಯಾಗ್ರಹವನ್ನು ಮುಂದುವರಿಸಿದರು. ಈ ಸತ್ಯಾಗ್ರಹವನ್ನಾಚರಿಸುತ್ತ ತಮ್ಮ ಮನೆಗಳಿಗೆ ಹೋಗದೆ ಇದ್ದ ಹುಡುಗರಿಗೆ ಹಿಂದಿನ ದಿನಗಳಂತೆ, ಅವರ ಹಿತೈಷಿಗಳು ಊಟ ತಿಂಡಿಗಳನ್ನು ತರಿಸಿಕೊಟ್ಟರು.

ಮುಖಂಡರು ಜೈಲಿನಲ್ಲಿರುವುದು

ಮಧ್ಯಾಹ್ನ 2 ಘಂಟೆ ಸುಮಾರಿನಲ್ಲಿ ಶ್ರೀಗಳಾದ ಸುಬ್ರಹ್ಮಣ್ಯಂ ಮತ್ತು ಭೀಮರಾಯರನ್ನು ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು. ಆ ಮೇಲೆ ದಸ್ತಗಿರಿ ಮಾಡಲ್ಪಟ್ಟ ಶ್ರೀ ರಾಮಲಾಲ್ ತಿವಾರಿಯನ್ನು ಸಾಯಂಕಾಲ 6 ಘಂಟೆಗೆ ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು. ಜನರಲ್ಲುಂಟಾಗಿರುವ ಅಸಮಾಧಾನವು ನಿಂತು, ಮುಂದೆ ಹೆಚ್ಚು ಅನಾಹುತವು ನಡೆಯದಂತೆ ನೋಡಿಕೊಳ್ಳುವುದಕ್ಕಾಗಿ ಅನೇಕ ಪುರಪ್ರಮುಖರು ದಸ್ತಗಿರಿ ಮಾಡಲ್ಪಟ್ಟಿದ್ದ ಮುಖಂಡರನ್ನು ಕುರಿತು, ಜಾಮೀನು ಕೊಡುವುದರ ಮೂಲಕ ಅಥವ ಸರ್ಕಾರದವರು ಕೇಳುವಂತೆ ಕ್ಷಮಾಪಣೆ ಬರೆದು ಕೊಡುವುದರ ಮೂಲಕ ಬಿಡುಗಡೆ ಹೊಂದಬೇಕೆಂದು ಬಹಳವಾಗಿ ಕೇಳಿಕೊಂಡರು. ಬಹಳ ಹೊತ್ತು ಪ್ರಯತ್ನಿಸಿದ ಮೇಲೆ ದಸ್ತಗಿರಿಯಾಗಿದ್ದ ಮುಖಂಡರು ಒಂದು ಕ್ಷಮಾಪಣಾ ಪತ್ರಕ್ಕೆ ರುಜು ಹಾಕಿದರು. ಆದರೆ ಅದು ಸರ್ಕಾರಿ ಅಧಿಕಾರಿಗಳು ಸರಿಯಾದ ಕ್ಷಮಾಪಣೆಯಲ್ಲವೆಂದು ತಿಳಿದು, ಅದನ್ನು ಒಪ್ಪಲಿಲ್ಲ.

ಆ ದಿನ ಸಾಯಂಕಾಲ ಸುಮಾರು 8½ ಘಂಟೆಗೆ ಸುಮಾರು 250 ಮಂದಿ ಹುಡುಗರು—ಅವರಲ್ಲಿ 7 ವರ್ಷದ ಮಕ್ಕಳೂ ಸೇರಿದ್ದರು.—ಕಿಟ್ಸನ್‌ಲಾಂದ್ರಗಳನ್ನು ಹಿಡಿದುಕೊಂಡು, ಒಂದು ಗಣೇಶನ ಪಟವನ್ನು ಮೆರವಣಿಗೆ ಮಾಡಿಕೊಂಡು ಸೆಂಟ್ರಲ್ ಜೈಲಿನ ಹತ್ತಿರ ಹೋದರು. ಅವರ ಜತೆಯಲ್ಲಿ ಕೆಲವು ಮಂದಿ ದೊಡ್ಡವರೂ ಇದ್ದರು. ಅವರೆಲ್ಲರೂ ದಸ್ತಗಿರಿ ಮಾಡಲ್ಪಟ್ಟಿರುವ ಮುಖಂಡರನ್ನು ತಾವು ನೋಡಬೇಕೆಂದೂ, ಅವರ ಬಿಡುಗಡೆ ಮಾಡಬೇಕೆಂದೂ ಆಗ್ರಹಮಾಡಿದರು. ಜೈಲು ಸೂಪರಿಂಟೆಂಡೆಂಟರವರಾದ ಶ್ರೀ|| ಕೆ. ಸಿದ್ದರಾಮಪ್ಪನವರು ತಮ್ಮ ಸಹಾಯಕ್ಕೆ ಪೋಲೀಸು ಸಿಬ್ಬಂದಿ ಕಳುಹಿಸಬೇಕೆಂದು ಟೆಲಿಫೋನ್ ಮಾಡಿ, ಈ ಮಧ್ಯೆ, ಗುಂಪಿನವರೊಡನೆ ಸರಸವಾಗಿ ಮಾತಾಡುತ್ತ [illegible] ಅವರು ವರ್ತಿಸುವುದರ [illegible] ಸಮಯ ಕಳೆಯುತ್ತಿದ್ದರು. ಹುಡುಗರಲ್ಲಿ ಕೆಲವರನ್ನು ಮಾರನೆ ಬೆಳಿಗ್ಗೆ ಸೆಂಟ್ರಲ್ ಜೈಲಿನೊಳಕ್ಕೆ ಬಿಟ್ಟು ಅವರು ತಮ್ಮ ಮುಖಂಡರನ್ನು ನೋಡುವುದಕ್ಕೆ ಅನುಕೂಲಪಡಿಸಿಕೊಡುವುದಾಗಿ ಭರವಸೆ ಕೊಟ್ಟ ಮೇಲೆ ಅವರೆಲ್ಲರೂ ವಾಪಸು ಹೊರಟುಹೋದರು.

ಜುಲೈ 30 ನೇ ತಾರೀಖು ರಾತ್ರಿ ದೊಂಬಿ-ಆಮೇಲೆ ನಡೆದ ಕಾರ್ಯಗಳು.

ಸತ್ಯಾಗ್ರಹವು ಮುಂದುವರಿದುದು

ಜುಲೈ 30 ನೇ ತಾರೀಖಿನ ದಿನ ನಡೆದ ವಿದ್ಯಮಾನಗಳೆಲ್ಲವೂ ಬಹು ಮುಖ್ಯವಾದುವು. ಆದಿನ ಸ್ಕೂಲುಗಳಿಗೆ ಯಾವ ರಜವೂ ಇರಲಿಲ್ಲವಾದುದರಿಂದ ಸಾಧಾರಣವಾಗಿ ಸ್ಕೂಲುಗಳೆಲ್ಲವೂ ಮಧ್ಯಾಹ್ನ 11 ಗಂಟೆಗೆ ಪ್ರಾರಂಭಿಸಲ್ಪಡಬೇಕಾಗಿದ್ದುವು. ಸುಲ್ತಾನ್‌ಪೇಟೆ ಸ್ಕೂಲಿನ ಹುಡುಗರು, ಹಿಂದಿನ ದಿನಗಳಂತೆ ಶ್ರೀ|| ಸರ್ವಾಭಟ್ಟರ ಮುಂದಾಳುತನದಲ್ಲಿ ಒಂದೊಂದು ಸಾರಿ ಆರಾರು ಹುಡುಗರಂತೆ, ಸ್ಕೂಲು ಕಾಂಪೌಂಡಿನಲ್ಲಿದ್ದ ವಿಗ್ರಹದ ಗೂಡಿನ ಬಳಿ ಕುಳಿತುಕೊಂಡು ಸತ್ಯಾಗ್ರಹವನ್ನು ಮುಂದುವರಿಸುತ್ತಿದ್ದರು. ಸ್ವಯಿಚ್ಛೆಯಿಂದ ಮುಂದಾಳುತನವನ್ನು ಕೈಗೊಂಡ ಶ್ರೀ|| ಸರ್ವಾಭಟ್ಟರ ಕಾರ್ಯದಲ್ಲಿ ವಿಶ್ವಕರ್ಣಾಟಕದ ಸಂಪಾದಕರಾದ ಶ್ರೀ|| ಟಿ. ಟಿ. ಶರ್ಮರು ಸ್ವಲ್ಪಮಟ್ಟಿಗೆ ಸಹಾಯಕರಾಗಿದ್ದರು. ಸ್ಕೂಲು ಕಾಂಪೌಂಡಿನೊಳಗೆ ಸತ್ಯಾಗ್ರಹವು ಮುಂದುವರಿಯಲು ಅವಕಾಶಕೊಟ್ಟು, ಅಲ್ಲಿ ಅದಕ್ಕಾಗಿ ಕೆಲವು ಹುಡುಗರನ್ನು ಬಿಟ್ಟು, ವಿಗ್ರಹದ ಚಳುವಳಿಯ ಸಂಬಂಧವಾಗಿ ಉಳಿದ ವಿಷಯಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಕಾಂಪೌಂಡಿ ಹೊರಗಡೆ ಎಲ್ಲಿಯಾದರೂ ಸೇರುವುದು ಅನುಕೂಲವೆಂದು ಶ್ರೀ|| ಸರ್ವಾಭಟ್ಟರು ಯೋಚಿಸಿದರು.

ವಿದ್ಯಾರ್ಥಿಗಳ ಮುಷ್ಕರ.

ಆದಿನ ಬೆಳಿಗ್ಗೆ ಕಲ್ಲೆಸೆಯುವುದು, ರಸ್ತೆಗಳನ್ನು ಅಡ್ಡಕಟ್ಟುವುದು ಮುಂತಾದ ಕಾರ್ಯಗಳೇನೂ ನಡೆಯದಿದ್ದರೂ, ಆದಿನ ಸ್ಥಿತಿಯು ಅತ್ಯಂತ ವಿಷಮಾವಸ್ಥೆಗೆ ಬರುವುದೆಂಬ ಸೂಚನೆಯು ಕಂಡುಬಂದಿತು. ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳೂ ಮುಷ್ಕರ ಹಿಡಿಯಬೇಕೆಂದು ಹಸ್ತಪತ್ರಿಕೆಗಳು ಧಾರಾಳವಾಗಿ ಹಂಚಲ್ಪಟ್ಟುವು. ಮೈಸೂರಿಂದ ಇಬ್ಬರು ಮೂರುಮಂದಿ ಹುಡುಗರು ಬೈಸಿಕಲ್ ಮೇಲೆ ಬಂದು ಆದಿನ ಸಾಯಂಕಾಲದೊಳಗಾಗಿ ಇನ್ನೂ ಅನೇಕ ವಿದ್ಯಾರ್ಥಿಗಳು ಬರುವುದಾಗಿ ತಿಳಿಸಿದರೆಂದು, ಶ್ರೀ|| ವಾಜಪೇಯಂ ವೆಂಕಟೇಶಯ್ಯನವರ ಹೇಳಿಕೆಯಿಂದ ಗೊತ್ತಾಗುತ್ತದೆ. ಗಾಂಧಿಮೈದಾನದಲ್ಲಿ ಆ ದಿನ ಸಾಯಂಕಾಲ ಒಂದು ಸಭೆ ನಡೆಯುವುದಾಗಿ ಗೋಡೆಗಳ ಮೇಲೆ ನೋಟೀಸುಗಳನ್ನು ಅಂಟಿಸಿದ್ದರು. ಈಮಧ್ಯೆ, ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಈ ಗೊಂದಲವನ್ನು ಪೂರೈಸಬೇಕೆಂಬ ಪ್ರಯತ್ನವೂ ನಡೆಯುತ್ತಿತ್ತು. ಇದಕ್ಕಾಗಿ ಹಿಂದಿನ ದಿನದಂತೆಯೇ ಆ ದಿನವೂ ಶ್ರೀ|| ಶಂಕರನಾರಾಯಣರಾಯರು ತಮ್ಮ ಪ್ರಯತ್ನ ಮುಂದುವರಿಸಿದರು. ಡೆಪ್ಯುಟಿ ಕಮಿಷನರನ್ನೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರನ್ನೂ ಕಂಡು ಈ ವಿಚಾರವನ್ನು ಪ್ರಸ್ತಾಪಿಸಿ ತಾವು ತಯಾರಿಸಿದ್ದ ಕ್ಷಮಾಪಣಾಪತ್ರದ ನಕಲೊಂದನ್ನು ಅವರಿಗೆ ತೋರಿಸಿದರು. ಅದರಲ್ಲಿ ಮುಖಂಡರು ತಾವು ಹಿಂದೆ ಮಾಡಿದ ಕಾರ್ಯಗಳಿಗಾಗಿ ತಮ್ಮ ವಿಷಾದವನ್ನು ಸೂಚಿಸಿದ್ದುದರಿಂದ ಈ ಅಧಿಕಾರಿಗಳು ಅದನ್ನು ಅಂಗೀಕರಿಸಲಿಲ್ಲ.

ಸುಲ್ತಾನ್‌ಪೇಟೆ ಸ್ಕೂಲಿನ ಮುಷ್ಕರಿಗಳು ಮಧ್ಯಾಹ್ನ 11 ಘಂಟೆಗೆ ಕೋಟೆ ಹೈಸ್ಕೂಲಿನ ಹತ್ತಿರ ಹೋಗಿ ಆ ಸ್ಕೂಲಿನ ಹುಡುಗರು ಮುಷ್ಕರ ಮಾಡಬೇಕೆಂದು ಗಲಾಟೆ ಮಾಡಿದ ಸಮಾಚಾರವು ಜನರಿಗೆ ತಿಳಿದ ಕೂಡಲೆ, ಎಲ್ಲರಿಗೂ ಗಾಬರಿಯುಂಟಾಯಿತು. ಕೋಟೆ ಹೈಸ್ಕೂಲು ಹುಡುಗರು ಮುಷ್ಕರಹಿಡಿದು ಹೊರಗೆ ಬಂದು, ಮುಷ್ಕರಿಗಳ ಗುಂಪನ್ನು ಸೇರಿದರು. ಕೋಟೆ ಹೈಸ್ಕೂಲಿನ ಹೆಡ್ಮಾಸ್ಟರ ಕೋರಿಕೆ ಪ್ರಕಾರ, ಅಸಿಸ್ಟೆಂಟು ಪೋಲೀಸ್ ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿ, ಹುಡುಗರು ಹೊರಟುಹೋಗುವಂತೆ ಮಾಡಿದರು. ಸ್ವಲ್ಪಹೊತ್ತಿನೊಳಗಾಗಿ ಲಂಡನ್ ಮಿಷನ್ ಸ್ಕೂಲಿನ ಹತ್ತಿರವೂ ವೆಸ್ಲಿಯನ್ ಮಿಷನ್ ಸ್ಕೂಲಿನ ಹತ್ತಿರವೂ ಇಂತಹ ಗಲಾಟೆಗಳು ನಡೆದುವೆಂದೂ ಆ ಸ್ಕೂಲುಗಳ ಹೆಡ್ಮಾಸ್ಟರುಗಳು ಮುಂದೆ ಹೆಚ್ಚು ಅನಾಹುತಗಳು ನಡೆಯುವುದಕ್ಕೆ ಅವಕಾಶ ಕೊಡಬಾರದೆಂದು ಸ್ಕೂಲುಗಳನ್ನು ಮುಚ್ಚಿಬಿಟ್ಟರೆಂದೂ ವರ್ತಮಾನಬಂತು. ಮುಷ್ಕರಿಗಳು ಕೆಲವು ದೊಡ್ಡ ಹುಡುಗರೊಡನೆ ಆ ದಿನ ಮಧ್ಯಾಹ್ನ ಸೆಂಟ್ರಲ್ ಕಾಲೇಜಿನ ಬಳಿಗೆ ಹೋಗಿ ಗಲಾಟೆ ಮಾಡಿದರು. ಕಾಲೇಜಿನ ಪ್ರಿನ್ಸಿಪಾಲರೂ ಪ್ರೊಫೆಸರುಗಳೂ ಎಷ್ಟೇ ಹೇಳಿದರೂ ಮುಷ್ಕರಿಗಳು ಕೇಳದೆ ಹೋದುದರಿಂದ ಕಾಲೇಜಿನಲ್ಲಿ ಪಾಠಗಳು ನಡೆಯುವುದು ಅಸಾಧ್ಯವಾಯಿತು. ಹುಡುಗರ ಗುಂಪು ಮಧ್ಯಾಹ್ನ 1½ ಗಂಟೆವರೆಗೆ ಕಾಲೇಜಿನ ಹತ್ತಿರವೇ ಇದ್ದಿತು. ಸ್ಥಿತಿಯು ಗಳಿಗೆ ಗಳಿಗೆಗೆ ವಿಷಮಾವಸ್ಥೆಗೆ ಬರುತ್ತಿದ್ದುದರಿಂದ ಯಾವ ಯಾವ ಕಡೆ ಏನೇನು ನಡೆಯಿತೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯೂ ರಿಸರ್ವ್ ಪೋಲೀಸ್ ಸಿಬ್ಬಂದಿಯನ್ನು ಒಟ್ಟುಗೂಡಿಸುವುದಕ್ಕಾಗಿಯೂ ಅ|| ಸೂಪರಿಂಟೆಂಡೆಂಟರು ಕೋಟೆಯಲ್ಲಿರುವ ತಮ್ಮ ಆಫೀಸಿಗೆ ಹೋದರು. ಮುಷ್ಕರಿಗಳು ತಮ್ಮ ಪ್ರಯತ್ನದಿಂದ ಸ್ಕೂಲುಗಳನ್ನೂ ಕಾಲೇಜುಗಳನ್ನೂ ಮುಚ್ಚಿಸಿ, ಅಲ್ಲಿಂದ ತಮ್ಮ ಮುಖಂಡರನ್ನು ಇಟ್ಟಿದ್ದ ಸೆಂಟ್ರಲ್ ಜೈಲಿನಕಡೆ ತಿರುಗಿದರು.

ದೊಂಬಿಗೆ ಮೊದಲು ಏನೇನು ನಡೆಯಿತು.

ಹುಡುಗರು ಬುಡುಬುಡುಕೆ ಅಲ್ಲಾಡಿಸಿದರು.

ಹುಡುಗರಿಗೆ ಬುದ್ಧಿವಾದ ಹೇಳಲು ಜೈಲಿನಲ್ಲಿದ್ದ ಮುಖಂಡರು ಒಪ್ಪಲಿಲ್ಲ.

ಜುಲೈ 30 ನೇ ತಾರೀಖಿನ ದಿನ ಹುಡುಗರು ಜೈಲಿನ ಹತ್ತಿರ ಹೋಗಿ ಒಳಗೆ ನುಗ್ಗುವುದಕ್ಕೆ ಪ್ರಯತ್ನಿಸಲು, ಬಂದೂಕಗಳನ್ನು ಹಿಡಿದ ಸಿಪಾಯಿಗಳನ್ನು ಕರೆಸಿಕೊಂಡು, ಗುಂಪಿನಮೇಲೆ ಗುಂಡುಹಾರಿಸಲು ತಮಗೆ ಅಧಿಕಾರವಿದೆಯೆಂದು ಜೈಲು ಸೂಪರಿಂಟೆಂಡೆಂಟರು ಹೆದರಿಸಿದರು.

ಹುಡುಗರು ದಿವಾನ್‌ರ ಬಂಗ್ಲೆಗೆ ಹೋಗಿ ಅವರನ್ನು ಮುತ್ತಿಕೊಂಡು ಗಿಡಗಳನ್ನು ಕಿತ್ತುಹಾಕಿ ಕಲ್ಲುಗಳನ್ನೆಸೆದು, ಸಿಕ್ಕಿದಹಾಗೆ ಕೂಗಿಕೊಂಡು ಬಂಗಲೆಯೊಳಕ್ಕೆ ನುಗ್ಗುವುದಕ್ಕೂ ಪ್ರಯತ್ನಿಸಿ ಪುಂಡಾಟಮಾಡಿದರು. ಒಬ್ಬ ಹುಡುಗನು ಬುಡುಬುಡುಕೆ ಅಲ್ಲಾಡಿಸುತ್ತ “ಗಣಪತಿ ಸತ್ಯಾಗ್ರಹಕ್ಕೆ ದುಡ್ಡುಕೊಡಿ ಎಂದು ಕೇಳುತ್ತಿದ್ದನು.

ದಿವಾನರೂ ಅಧಿಕಾರಿಗಳೂ ಎಷ್ಟೇ ಸಮಾಧಾನ ಹೇಳಿದರೂ ಹುಡುಗರು ಕೇಳದೆ, ದಿವಾನರ ಮೋಟಾರಿಗೆ ಅಡ್ಡವಾಗಿ ಮಲಗಿಕೊಂಡು, ಅದರ ಮೇಲೆ ಕಲ್ಲೆಸೆದು ಅದರ ಕಿಟಕಿ ಗಾಜುಗಳನ್ನು ಒಡೆದು ಗಲಾಟೆ ಮಾಡಿದರು. ಸವಾರರು ಬಂದು ಅವರನ್ನು ಚದುರಿಸಬೇಕಾಯಿತು.

ಪುನಃ ಹುಡುಗರು ಸೆಂಟ್ರಲ್‌ಜೈಲಿನ ಬಳಿ ಹೋಗಿ ಕಲ್ಲೆಸೆದು ಸೂಪರಿಂಟೆಂಡೆಂಟರೇ ಮೊದಲಾದವರಿಗೆ ಪೆಟ್ಟನ್ನುಂಟುಮಾಡಿದರು. ಹುಡುಗರು ಗಲಾಟೆ ಮಾಡಬಾರದೆಂದು ಬುದ್ಧಿಹೇಳಿ ಒಂದು ಕಾಗದ ಬರೆಯಿರಿ ಎಂದು ಜೈಲಿನಲ್ಲಿದ್ದ ಮುಖಂಡರನ್ನು ಕೇಳಿಕೊಳ್ಳಲು ಅವರು ಅದಕ್ಕೆ ಒಪ್ಪಲಿಲ್ಲ.

ಸಾಯಂಕಾಲದೊಳಗಾಗಿ 4-5 ಸಾವಿರ ಹುಡುಗರೂ ದೊಡ್ಡವರೂ ಗುಂಪುಸೇರಿದರು.

ಸೆಂಟ್ರಲ್ ಜೈಲಿನ ಹತ್ತಿರ.

ಜುಲೈ 30 ನೇ ತಾರೀಖಿನ ದಿನ ಮುಷ್ಕರಿಗಳು ಮಧ್ಯಾಹ್ನ 12¼ ಗಂಟೆಗೆ ಸೆಂಟ್ರಲ್‌ಜೈಲಿನ ಹತ್ತಿರ ಹೋದರು. ಅವರು ಸುಮಾರು 600 ಜನರಿದ್ದರು. ಇವರಪೈಕಿ ಕೆಲವರು 18-20 ವರ್ಷದ ಪ್ರಾಯಸ್ಥರೂ ಇದ್ದರಲ್ಲದೆ ತಮ್ಮ ಕೈಯಲ್ಲಿ ಮರದ ಕೊಂಬೆಗಳನ್ನು ಹಿಡಿದುಕೊಂಡಿದ್ದರು. ಗುಂಪಿನವರು ಮೊದಲು ಕಲ್ಲೆಸೆಯುವುದಕ್ಕೆ ಪ್ರಾರಂಭಿಸಿದರು. ಈ ಕಲ್ಲುಗಳು ಜೈಲಿನ ಹೆಬ್ಬಾಗಿಲಿಗೂ, ಹೆಬ್ಬಾಗಿಲಿನ ಮಹಡಿ ಮೇಲಿರುವ ಚೀಫ್ ಜೈಲರ್‌ರವರ ಮನೆ ಕಿಟಕಿಗಳಿಗೂ ಜೈಲು ಕಟ್ಟಡದ ಇತರ ಕಡೆಗಳಿಗೂ ತಗುಲಿದುವು. ಹುಡುಗರು ಅಲ್ಲಿದ್ದ ಗಿಡಗಳನ್ನೂ ಸಹ ಕಿತ್ತುಹಾಕಿದರು. ಜೈಲಿನ ಒಳಕ್ಕೆ ಬೇರೆ ಬೇರೆ ಕಡೆಗಳಿಂದ ನುಗ್ಗುವುದಕ್ಕೆ ಹುಡುಗರು ಅನೇಕಸಾರಿ ಪ್ರಯತ್ನಿಸಿದರೆಂದೂ, ಬಂದೂಕಗಳನ್ನು ಹಿಡಿದ ಸಿಪಾಯಿಗಳು ಬಂದು, ಗುಂಪಿನಮೇಲೆ ಗುಂಡುಹಾರಿಸಲು ತಮಗೆ ಅಧಿಕಾರವುಂಟೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿ ಎಂದು ಜೈಲು ಸೂಪರಿಂಟೆಂಡೆಂಟರು ಹುಡುಗರಿಗೆ ಹೇಳುವವರೆಗೂ, ಹುಡುಗರ ಪುಂಡಾಟವನ್ನು ನಿಲ್ಲಿಸುವುದಕ್ಕಾಗಲಿಲ್ಲವೆಂದೂ ಜೈಲು ಸೂಪರಿಂಟೆಂಡೆಂಟರ ಹೇಳಿಕೆಯಿಂದ ಗೊತ್ತಾಗುತ್ತದೆ. ಕಲ್ಲೆಸೆದುದರಿಂದ 6 ಜನ ವಾರ್ಡರುಗಳಿಗೆ ಏಟು ತಗಲಿತು. ಡಿ|| ಮ್ಯಾಜಿಸ್ಟ್ರೇಟರಿಂದಾಗಲಿ, ಸಿಟಿ ಮ್ಯಾಜಿಸ್ಟ್ರೇಟರಿಂದಾಗಲೀ ಹುಕ್ಕುಂಬರುವವರೆಗೂ ಮುಖಂಡರನ್ನು ಬಿಡುಗಡೆ ಮಾಡುವ ಅಧಿಕಾರವು ತಮಗಿಲ್ಲವೆಂದು ಜೈಲು ಸೂಪರಿಂಟೆಂಡೆಂಟರು ಹುಡುಗರಿಗೆ ಹೇಳಿದರು. ಇದರಿಂದ ಜೈಲಿನ ಹತ್ತಿರ ಸ್ವಲ್ಪ ಸಮಾಧಾನವಾಗಿ, ಹುಡುಗರಲ್ಲಿ ಕೆಲವರು ಹೊರಟುಹೋದರು. ಅವರಲ್ಲಿ ಹೆಚ್ಚುಮಂದಿ ದಿವಾನ್‌ರವರ ನಿವಾಸವಾದ ಕಾರ್ಲ್ಟನ್ ಹೌಸ್ ಕಡೆಗೆ ಮಧ್ಯಾಹ್ನ ಸುಮಾರು 12¾ ಗಂಟೆಯಲ್ಲಿ ಹೋದರು.

ದಿವಾನ್‌ರ ಬಂಗಲೆಯಹತ್ತಿರ ಮಿಲಿಟೇರಿಯನ್ನು ಕರೆಸಿದುದು.

ಹುಡುಗರು ಆ ಕಡೆ ಹೊರಟುದನ್ನು ಜೈಲು ಸೂಪರಿಂಟೆಂಡೆಂಟರು ನೋಡಿ, ದಿವಾನ್‌ರ ಬಂಗ್ಲೆಗೆ ಐದಾರು ಮಂದಿ ವಾರ್ಡರುಗಳನ್ನು ಮುಂದಾಗಿ ಕಳುಹಿಸಿ ತಾವೂ ಸಹ ತಮ್ಮ ಬೈಸಿಕಲ್ ಮೇಲೆ ಹೊರಟರು. ಹುಡುಗರು ದಿವಾನ್‌ರ ಮನೆ ಮುಂದೆ ದಿವಾನ್‌ರು, ಅವರ ಮಗ ಮತ್ತು ಭಾವಮೈದುನ ಇವರುಗಳನ್ನು ಸುತ್ತಿಕೊಂಡಿದ್ದರು. ಇವರ ಪೈಕಿ ಹೆಚ್ಚುಮಂದಿ 12 ವರ್ಷದಿಂದ 14 ವರ್ಷದ ವಯಸ್ಸಿನವರು; 18 ಮತ್ತು ಅದಕ್ಕೆ ಮೇಲ್ಪಟ್ಟವರು ಕೆಲವರಿದ್ದರು. ಹುಡುಗರು ಪುಂಡಾಟಮಾಡುತ್ತಿದ್ದುದರಿಂದಲೂ ಕೆಲವರು ಮೆಟ್ಟಲು ಹತ್ತಿ ಬಾಗಿಲ ಕಡೆ ಹೋಗುವುದಕ್ಕೆ ಪ್ರಯತ್ನಿಸಿದುದರಿಂದಲೂ ದಿವಾನ್‌ರವರು ಪೋಲೀಸ್ ಸಹಾಯ ಬೇಕೆಂದು ಟೆಲಿಫೋನ್ ಮಾಡಿದರು. ಹುಡುಗರ ಪೈಕಿ ಕೆಲವರು ಗಿಡಗಳನ್ನು ಕಿತ್ತುಹಾಕಿದರು; ಕೆಲವರು ಕಿಟಕಿಗಳನ್ನು ಒಡೆದರು; ಮೆಟ್ಟಲುಗಳನ್ನು ಹತ್ತಿದ್ದ ಕೆಲವರು ಕೂಗಿಕೊಳ್ಳುತ್ತಿದ್ದರು; ಒಬ್ಬ ಹುಡುಗನು “ಗಣಪತಿ ಸತ್ಯಾಗ್ರಹ” ಎಂದು ಬರೆದಿದ್ದ ಒಂದು ಡಬ್ಬವನ್ನು ಹಿಡಿದುಕೊಂಡು ದುಡ್ಡು ಹಾಕಿ ಎಂದು ಕೇಳುತ್ತ ಅದನ್ನು ಬುಡುಬುಡಿಕೆಯಂತೆ ಅಲ್ಲಾಡಿಸುತ್ತಿದ್ದನು. ಅಷ್ಟು ಹೊತ್ತಿಗೆ ಕೌನ್ಸಿಲ್ ಮೂರನೆ ಮೆಂಬರು, ಚೀಫ್ ಸೆಕ್ರಟರಿ, ಡೆಪ್ಯುಟಿ ಕಮಿಷನರು, ಅ|| ಪೋಲೀಸ್ ಸೂಪರಿಂಟೆಂಡೆಂಟರು, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರು ಇವರೆಲ್ಲರೂ ಬಂದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಲ್ಲಿನ ವಿದ್ಯಮಾನಗಳನ್ನೆಲ್ಲಾ ನೋಡಿ ಸಹಾಯಕ್ಕೆ ಮಿಲಿಟರಿಯವರನ್ನು ಕಳುಹಿಸಬೇಕೆಂದು ಚೀಫ್ ಕಮ್ಯಾಂಡೆಂಟರಿಗೆ ಟೆಲಿಫೋನ್ ಮಾಡಿದರು. ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರು ಸ್ವಲ್ಪ ಹೊತ್ತಾಗಿ ಅಂದರೆ ಮಧ್ಯಾಹ್ನ 2 ಘಂಟೆಗೆ ಬಂದರು. ದಿವಾನ್‌ರು ಎಷ್ಟು ಸಮಾಧಾನ ಹೇಳಿದರೂ ಹುಡುಗರು ಕೂಡಲೆ ತಮ್ಮ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಹಟ ಮಾಡತೊಡಗಿದರು. ಡೆಪ್ಯುಟಿ ಕಮಿಷನರು ಮತ್ತು ಇತರ ಅಧಿಕಾರಿಗಳು ಎಷ್ಟೇ ಕೇಳಿಕೊಂಡರೂ ಹುಡುಗರು ಶಾಂತಿಯುಕ್ತರಾಗಲಿಲ್ಲ. ತಮ್ಮ ಮನೆ ಹತ್ತಿರ ಯಾರನ್ನೂ ದಸ್ತಗಿರಿ ಮಾಡಲು ಅವಕಾಶ ಕೊಡಕೂಡದೆಂದು ದಿವಾನ್‌ರವರು ಬಹಳ ಕುತೂಹಲವುಳ್ಳವರಾಗಿದ್ದರು. ಕಡೆಗೆ ಅವರು ಕಾರ್ಲ್ಟನ್ ಭವನವನ್ನು ಬಿಟ್ಟು ಪಬ್ಲಿಕ್ ಆಫೀಸಿಗೆ ಹೊರಡಲು ಹುಡುಗರು ಅವರ ಮೋಟಾರಿಗೆ ಅಡ್ಡವಾಗಿ ಮಲಗಿಕೊಂಡರು. ಅಂತಹವರನ್ನು ದಾರಿಯಿಂದ ಬೇರೆ ಕಡೆಗೆ ಎತ್ತಿ ಸಾಗಿಸಬೇಕಾಯಿತು. ಗುಂಪಿನಲ್ಲಿದ್ದ ಕೆಲವರು ಕಲ್ಲುಗಳನ್ನೆಸೆಯಲು ಮೋಟಾರಿನ ಕಿಟಕಿಯ ಗಾಜು ಒಡೆದುಹೋಯಿತು. ಆ ಸಮಯದಲ್ಲಿ ಹುಡುಗರು ಮುಚ್ಚಿಬಿಟ್ಟಿದ್ದ ಹೆಬ್ಬಾಗಿಲನ್ನು ತೆರೆಯುತ್ತಿದ್ದುದರಿಂದ ಮೋಟಾರು ಒಂದೆರಡು ಕ್ಷಣ ನಿಲ್ಲಬೇಕಾಯಿತು. ಆ ಗುಂಪಿನಲ್ಲಿ ಸುಮಾರು ಸಾವಿರ ಮಂದಿಯವರೆಗೆ ಹುಡುಗರಿದ್ದರೆಂದೂ ದಿವಾನ್‌ರು ಹೊರಟುಹೋದ ಮೇಲೂ ಹುಡುಗರು ಹೊರಟುಹೋಗಲು ಮನಸ್ಸುಳ್ಳವರಾಗಿರಲಿಲ್ಲವೆಂದೂ ಡೆಪ್ಯುಟಿ ಕಮಿಷನರು ಹೇಳುತ್ತಾರೆ. ತಮ್ಮ ಮುಖಂಡರನ್ನು ಬಿಡುಗಡೆ ಮಾಡಿದೆಯೆಂದು ಹುಕ್ಕುಂ ಕೊಡುವವರೆಗೂ ತಾವು ಹೋಗುವುದಿಲ್ಲವೆಂದು ಅವರು ಹಟ ಮಾಡಿದರು. ಹೆಚ್ಚಿಗೆ ರಿಸರ್ವ್ ಪೋಲೀಸಿನವರು ಬಂದ ಮೇಲೂ ಶಾಂತರೀತಿಯಿಂದ ಹುಡುಗರ ಗುಂಪನ್ನು ಚದರಿಸುವುದು ಅಸಾಧ್ಯವಾಯಿತೆಂದೂ, ಆದುದರಿಂದ ಆ ಕೆಲಸಕ್ಕೆ ಮಿಲಿಟರಿಯವರನ್ನು ನೇಮಿಸಬೇಕಾಯಿತೆಂದೂ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಳುತ್ತಾರೆ. ತಮ್ಮ ಕುದುರೆಗಳನ್ನು ಆ ಕಡೆಯಿಂದ ಈ ಕಡೆಗೂ ಈ ಕಡೆಯಿಂದ ಆ ಕಡೆಗೂ ತಿರುಗಾಡಿಸುತ್ತ ಸವಾರರು ಹುಡುಗರನ್ನು ಕಾಂಪೌಂಡಿನಿಂದ ಹೊರಗಡೆ ಕಳುಹಿಸಲು ಶಕ್ತರಾದರು. ಗಲಾಟೆಯಲ್ಲಿ ಕೆಳಕ್ಕೆ ಬಿದ್ದು ಅಕಸ್ಮಾತ್ ಏಟು ತಗುಲಿದ ಒಬ್ಬ ಹುಡುಗನ ವಿನಹ ಉಳಿದವರೊಬ್ಬರಿಗೂ ಪೆಟ್ಟು ತಗುಲಲಿಲ್ಲವೆಂದು ಹೇಳಲ್ಪಟ್ಟಿದೆ.

ಜೈಲಿಗೆ ಎರಡನೆ ಸಾರಿ ಹೋದುದು.

ದಿವಾನ್‌ರ ಬಂಗ್ಲೆಯಿಂದ ಹೊರಟ ಕೆಲವು ಹುಡುಗರು ಮಧ್ಯಾಹ್ನ 2¾ ಘಂಟೆಗೆ ಎರಡನೆ ಸಾರಿ ಜೈಲಿನ ಕಡೆಗೆ ಹೊರಟರು. ಅಲ್ಲಿನ ಸ್ಥಿತಿಯು ವಿಷಮಾವಸ್ಥೆಯಲ್ಲಿದೆಯೆಂದು ತಮಗೆ ವರ್ತಮಾನ ಬಂದುದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಕುದುರೆ ದಳದ ಮುಖ್ಯಸ್ಥರಾಗಿ ಬಂದಿದ್ದ ಲೆಫ್ಟಿನೆಂಟ್ ಮಿರ್ ತುರಾಬ್ ಅಲಿಯವರನ್ನು ಕುರಿತು, ಜೈಲಿಗೆ ಹೋಗುವ ರಸ್ತೆಗಳನ್ನು ಕಾಯುವಂತೆಯೂ ಜೈಲಿನ ಹತ್ತಿರ ಹುಡುಗರ ಗುಂಪು ಸೇರದಂತೆಯೂ ನೋಡಿಕೊಳ್ಳುವುದಕ್ಕಾಗಿ ಸವಾರರನ್ನು ಕಳುಹಿಸಬೇಕೆಂದು ಹೇಳಿದರು. ಅದೇ ಪ್ರಕಾರ ಯಲಹಂಕ ಗೇಟ್ ಚೌಕದ ಹತ್ತಿರ ಒಂದು ದಳವೂ, ಕಾಂತರಾಜೆ ಅರಸ್ ಸರ್ಕಲ್ ಹತ್ತಿರ ಒಂದು ದಳವೂ, ರೈಲ್ವೆಸ್ಟೇಷನ್ ರಸ್ತೆಯಲ್ಲಿರುವ ಹಿಂದು ಹಾಸ್ಟೆಲ್ ಹತ್ತಿರ ಒಂದು ದಳವೂ ಇರುವಂತೆ ನೇಮಿಸಲ್ಪಟ್ಟರು. ಎರಡನೆ ಸಾರಿಯೂ ಹುಡುಗರು ಕಲ್ಲುಗಳನ್ನೆಸಯುವುದೇ ಮುಂತಾದ ಪುಂಡಾಟಗಳನ್ನು ಮಾಡಿದರು. ಬಂದಿಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರವರು, ಜೈಲು ಸೂಪರಿಂಟೆಂಡೆಂಟರು ಮತ್ತು ಅವರ ಸ್ನೇಹಿತರ ಪೈಕಿ ಒಬ್ಬರು ಇವರೆಲ್ಲರಿಗೂ ಪೆಟ್ಟುಗಳು ತಗಲಿದವು. ಬಂದಿಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರವರು ಒಳಗಡೆಯಿದ್ದ ಮುಖಂಡರನ್ನು ಕಂಡು, ಹುಡುಗರು ಪುಂಡಾಟಮಾಡಕೂಡದೆಂದು ಅವರಿಗೆ ಕಾಗದ ಬರೆದು ಕಳುಹಿಸಿ ಎಂದು ಕೇಳಿಕೊಂಡರೂ, ಮುಖಂಡರು ಅದಕ್ಕೆ ಒಪ್ಪಲಿಲ್ಲ.

ಒಟ್ಟಿನಲ್ಲಿ ಜೈಲ್ ಸಿಬ್ಬಂದಿಯ ಪೈಕಿ 11 ಜನರಿಗೆ ಪೆಟ್ಟು ಬಿದ್ದಿತು. ಈ ಪೈಕಿ ಇಬ್ಬರು ಮೇಲ್ತರಗತಿಯ ಅಧಿಕಾರಿಗಳು. ಸಾಯಂಕಾಲ 5 ಘಂಟೆ ಹೊತ್ತಿಗೆ ಜೈಲಿನ ಹತ್ತಿರ 4-5 ಸಾವಿರ ಮಂದಿ ಹುಡುಗರು ಗುಂಪು ಸೇರಿದ್ದರು. ಇವರಲ್ಲಿ ದೊಡ್ಡವರೂ ಕೆಲವರಿದ್ದರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ರಜತಮಹೋತ್ಸವ.

ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜನಜಗದ್ಗುರು ರುಜಯದೇವ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಗಿ 25 ವರ್ಷ ತುಂಬಿತು. ಈ ಕಾಲುಶತಮಾನೋತ್ಸವವನ್ನಾಚರಿಸಲು ರಜತಮಹೋತ್ಸವವೆಂಬ ನಾಮಾಂಕಿತದಿಂದ ಭಕ್ತಾದಿಗಳೆಲ್ಲರೂ ಬೃಹನ್ಮಠದಲ್ಲಿ ಸೇರಿ ಮಹಾಸ್ವಾಮಿಗಳನ್ನು ಕೃತಜ್ಞತಾ ಪೂರ್ವಕ ಶ್ರದ್ಧೆಯಿಂದ ಪೂಜಿಸಿ ಹಬ್ಬದಂತೆ ವರ್ತಿಸತಕ್ಕದ್ದು ಸಾಂಪ್ರದಾಯವಾಗಿದ್ದರೂ, ಕೆಲವುದಿನಗಳಹಿಂದೆ ನಡೆದ ಉತ್ಸವದ ಕಾರ್ಯಾಲೋಚನಾ ವಿವಾದಂಗಳಲ್ಲಿ ಈ ನಮ್ಮ ಗುರುವರ್ಯರ ರಜತ ಮಹೋತ್ಸವವು, ಬೃಹನ್ಮಠವಿರುವ ಚಿತ್ರದುರ್ಗದಲ್ಲಿ ನಡೆಸತಕ್ಕದ್ದೇ? ಭಕ್ತಾದಿಗಳು ಹೆಚ್ಚಾಗಿರುವ ದಾವಣಗೆರೆಯಲ್ಲಿ ನಡೆಸತಕ್ಕದ್ದೇ? ಎಂಬ ಪ್ರಶ್ನೆಹುಟ್ಟಿತು. ಚರ್ಚಾಸ್ಪದವಾಗಿ ಈ ಮಹೋತ್ಸವವು ಎಲ್ಲಿ? ಯಾವಾಗ? ಎಂಬುದು ನಿರ್ಧರವಾದಂತೆ ಇದುವರೆಗೂ ಪ್ರಚುರಪಡಿಸದೇ ಇರುವುದರಿಂದ ಶಿಷ್ಯಕೋಟಿಯ ಉತ್ಸಾಹಭಂಗಕ್ಕೆ ಕಾರಣವಾಗಿದೆ. ಮಹಾಸ್ವಾಮಿಗಳವರಿಗೆ ಬೃಹನ್ಮಠದಲ್ಲಿ, ಪಟ್ಟಾಭಿಷೇಕ ಮಹೋತ್ಸವವಾಗಿರುವುದರಿಂದ ಇವರ ರಜತಮಹೋತ್ಸವವೂ, ಬೃಹನ್ಮಠದಲ್ಲಿಯೇ ಜರಿಗಿಸತಕ್ಕದ್ದು ಶಾಸ್ತ್ರ ಸಮ್ಮತವೂ, ಸಾಂಪ್ರದಾಯವೂ ಆಗಿರುವುದಲ್ಲದೆ ಶಿಷ್ಯಕೋಟಿಯ ಸದಭಿಪ್ರಾಯವಾಗಿರುವುದರಿಂದ ಮಹಾಸ್ವಾಮಿಯವರ ಘನತರವಾದ ಈ ಮಹೋತ್ಸವವು ಚಿತ್ರದುರ್ಗದಲ್ಲಿ (ಬೃಹನ್ಮಠದಲ್ಲಿ) ಇಂತಹ ದಿವಸ ಜರಿಗುತ್ತದೆಂಬಬಗ್ಗೆ ಕೂಡ್ಲೆ ಮಹಾಸಂಸ್ಥಾನದ ಕಡೆಯಿಂದ ಪ್ರಚುರಪತ್ರಿಕೆಯನ್ನು ಪ್ರಕಾಶಗೊಳಿಸುವಂತೆ ಮಾಡಿ ಶಿಷ್ಯಕೋಟಿಯ ಉತ್ಸಾಹಕ್ಕೆ ಪ್ರೋತ್ಸಾಹವನ್ನು ಕಲ್ಪಿಸಬೇಕಾಗಿ ಪ್ರಾರ್ಥಿಸುವ,

ಒಬ್ಬ ಭಕ್ತ.

ಬ್ಯಾಡಗಿ.

ಕಳೆದ ಗುರುವಾರ ತಾ|| 10-1-29 ನೇ ದಿವಸ ಪ್ರತಿವರ್ಷದ ಪದ್ಧತಿಯಂತೆ ಕೈ. ಶ್ರೀಮಂತ ಲಿಂಗಪ್ಪ ಚಾಯಪ್ಪ ಸರದೇಸಾಯಿ ಶಿರಸಂಗಿ ಈ ಮಹಾತ್ಮರ ಜನ್ಮದಿವಸ ಮಹೋತ್ಸವವು ನಮ್ಮ ಲೈಬ್ರರಿಯ ವತಿಯಿಂದ ಅತಿ ವಿಜೃಂಭಣೆಯಿಂದ ನೆರವೇರಿತು. ಅಂದು ಸಾಯಂಕಾಲ 5 ಘಂಟೆಗೆ ಕೈ. ಮಹಾತ್ಮ ದೇಸಾಯಿಯವರ ಭಾವಚಿತ್ರದ ಮೆರವಣಿಗೆಯು ಭಜನಾ ಬ್ಯಾಂಡ್‌ವಾದ್ಯಗಳೊಡನೆ ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು 6½ ಗಂಟೆಗೆ ಶ್ರೀ ಗಳವರ ಮಠವನ್ನು ಸೇರಿತು. ಸ್ಕೌಟ್‌ದ್ರೆಸ್ಸಿನಿಂದ ವ್ಯವಸ್ಥೆಯಿಂದ ಸಾಗಿದ್ದ ಇಂಗ್ಲಿಷ್ ಹಾಗು ಕನ್ನಡ ವಿದ್ಯಾರ್ಥಿಗಳಿಂದ ಉತ್ಸವಕ್ಕೆ ಹೆಚ್ಚಿಗೆ ಕಳೆಯೇರಿತ್ತು. ಮೆರವಣಿಗೆಯು ಮುಗಿದೊಡನೆಯೇ ಸಭೆಯ ಕೆಲಸವು ಪ್ರಾರಂಭವಾಯಿತು ಶಿಕಾರಿಪುರದ ವಿರಕ್ತಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಸದಾಶಿವಸ್ವಾಮಿಗಳವರು ಅಧ್ಯಕ್ಷಸ್ಥಾನಾಲಂಕೃತರಾಗಿದ್ದರು. ವೇ|| ಇಂಡೀಮಠ ಮಿ|| ಕೊಲ್ಹಾಪುರ ಮಿ|| ಕ್ಯಾತಾರಿ ಇವರ ಸ್ಫೂರ್ತಿದಾಯಕ ಭಾಷಣಗಳಾದವು. ತರುವಾಯ ಅಧ್ಯಕ್ಷ ಪೂಜ್ಯಪಾದರವರು ಮನುಷ್ಯ ಜನ್ಮದ ಶ್ರೇಷ್ಠತೆ ಹಾಗೂ ಸಾರ್ಥಕತೆಯ ಬಗ್ಗೆಯೂ ಮಹತ್ಮ ದೇಸಾಯಿಯವರ ದಯಾದಾಕ್ಷಿಣ್ಯ ಮೊದಲಾದ ಸದ್ಗುಣಗಳಬಗ್ಗೆಯೂ ಅನೇಕ ಉದಾಹರಣೆಗಳನ್ನು ಕೊಟ್ಟು ಭಾಷಣಮಾಡಿ ಸಭೆಯ ಜನಗಳನ್ನು ಆನಂದ ಗೊಳಿಸಿದರು. ಬಳಿಕ ಪಂಚಕಜ್ಜಾಯ ಹಾರ ತಾಂಬೂಲ ಮಂಗಲಗಳೊಡನೆ ಸಭಾ ವಿಸರ್ಜನೆಯಾಯಿತು.

ಬ್ಯಾಡಗಿ
ತಾ|| 14-1-29

M. H. Kalkatti
ಸೆಕ್ರೆಟರಿ,
ಶ್ರೀ ಲಿಂಗರಾಜ ಲೈಬ್ರರಿ.

ಹಾಲುಮತಸ್ಥರ ಲಿಂಗಧಾರಣಮಹೋತ್ಸವ.

ಕಳೆದ ಅಶ್ವೀಜ ಬ|| ೮ ಚಂದ್ರವಾರ ನೈಜಾಮು ಇಲಾಖಾ ಕೊಪ್ಪಳ ಜಿಲ್ಲಾ ದಾ॥ ಂಪುರದಲ್ಲಿ ಕೊಪ್ಪಳದ ಶ್ರೀಮನ್ನಿರಂಜನ ಶಾಂತವೀರಮಹಾಸ್ವಾಮಿಗಳ ನೇತೃತ್ವದಲ್ಲಿ ಪಾಲಕೆರೆಯ ಹತ್ತರ ಹಿರೇಮಠದ ಪಟ್ಟದಸ್ವಾಮಿಗಳಿಂದಲೂ ಕೊಪ್ಪಳದ ಅಳವಂಡಿ ಹಿರೇಮಠದ ಪಟ್ಟದಸ್ವಾಮಿಗಳಿಂದಲೂ 181 ಜನ ಹಾಲುಮತಸ್ಥರಿಗೆ (ಕುರುಬರಿಗೆ) ಲಿಂಗಧಾರಣವು ಮಾಡಲ್ಪಟ್ಟಿತು. ಜಗದ್ಗುರುಗಳು ಕೂಡಿದ ಜನಸ್ತೋಮಕ್ಕೆ 'ಲಿಂಗಧಾರಣೆಯ ಮಹತ್ವ' 'ವೀರಶೈವಧರ್ಮದ ಶ್ರೇಷ್ಠತ್ವ' 'ಹಾಲುಮತದ ಪೂರ್ವೇತಿಹಾಸ' 'ಹಾಲುಮತಕ್ಕೂ ವೀರಶೈವಧರ್ಮಕ್ಕೂ ಇರತಕ್ಕ ಸಂಬಂಧ, ಇವುಗಳ ವಿಷಯವಾಗಿ ತಮ್ಮ ಪವಿತ್ರವಾಣಿಯಿಂದ ಬಹುಸರಸಾಗಿ ಬೋಧಿಸಿದರು. ಈ ಮಹಕಾರ್ಯದಲ್ಲಿ ಇಲ್ಲಿಯ ಹಾಲುಮತದ ಮುಂದಾಳುಗಳಾದ ಶ್ರೀ ಜೋಡಬಸವಪ್ಪನವರು ಮರಡಿ ಮತ್ತು ಶ್ರೀ ಸಣ್ಣಬಸವಪ್ಪನವರು ನೋಟಗಾರ ಇವರು ಬಹು ಶ್ರಮವಹಿಸಿ ಕೆಲಸಮಾಡಿದರು. ಇತರ ಗ್ರಾಮಗಳ ಹಾಲುಮತಸ್ಥರೂ ಮೇಲ್ಕಂಡ ಮಹಾಶಯರ ಮೇಲ್ಪಂಕ್ತಿಯನ್ನೇ ಅನುಸರಿಸಲೆಂದು ಕೋರುತ್ತೇನೆ.

ಅದೇ ಸಮಯಕ್ಕೆ ಅಂದರೆ ಅಶ್ವೀಜ ಬ|| ೧೧ ಗುರುವಾರ ನಮ್ಮೂರಲ್ಲಿ "ಶ್ರೀಮನ್ನಿರಂಜನ ಜಗದ್ಗುರು ಗವಿಸಿದ್ಧೇಶ್ವರ ವಾಚನಾಲಯ" ವು ಕೊಪ್ಪಳದ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಮಹಾಸ್ವಾಮಿಗಳು ವಾಚನಾಲಯಕ್ಕೆ "ನವಕರ್ನಾಟಕ" ಮತ್ತು "ಶಿವಾನುಭವ" ಪತ್ರಿಕೆಗಳನ್ನು ತರಿಸಲಿಕ್ಕೆ 8 ರೂ. ಗಳನ್ನೂ "ವಚನಶಾಸ್ತ್ರಸಾರ" ಎಂಬ ಉದ್ಗ್ರಂಥವನ್ನೂ ಅಶೀರ್ವದಿಸಿದರು. 97 ರೂ. ಗಳು ವರ್ಗಣಿಯಿಂದ ಕೂಡಿದವು. ಮೇಲ್ಕಂಡ ಎರಡು ಮಹತ್ಕಾರ್ಯಗಳು ನಮ್ಮೂರ ಪುರಾಣದಮಹೋತ್ಸವದಲ್ಲಿ ಜರುಗಿದವು. ಆ ಸಮಯದಲ್ಲಿ ಅನೇಕ ಮಾಹೇಶ್ವರ ವಟುಗಳಿಗೂ ಸ್ತ್ರೀಯರಿಗೂ ಪುರುಷರಿಗೂ ಶಿವದೀಕ್ಷೆಯು ಮಾಡಲ್ಪಟ್ಟಿತು.

ತಮ್ಮ ವಿಧೇಯ,

ಮುಕ್ಕಾಂ ಗದಗ,
ತಾ|| 11—1—1929.

ಕಲ್ಲಿನಾಥ ವೀರೇಶ್ವರಸ್ವಾಮಿ ಹಿರೇಮಠ,
ದ್ಯಾಂಪುರ.

ಶ್ರೀ ಮದ್ಭೂಕ್ಕುಲತಾಪುರೀ (ಹುಬ್ಬಳ್ಳಿ) ಬೃಹನ್ಮಠ ತ್ರಿ ಸಹಸ್ರಚರಾಧ್ಯಕ್ಷ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು ಇವರ ಅಡ್ಡ ಪಾಲಕಿ ಮಹೋತ್ಸವ ಗದಹಿಂಗ್ಲಜ.

ಈ ಮೊದಲು ಗಡಹಿಂಗ್ಲಜ ಮತ್ತು ಪೇಠಾದ ಯಾವತ್ತು ಪ್ರಮುಖ ಜನರು ಹುಬ್ಬಳ್ಳಿಗೆ ಬಂದು ಬಿನ್ನಪೂರ್ವಕ ಪ್ರಾರ್ಥಿಸಿಕೊಂಡಮೇರೆಗೆ ಶ್ರೀ ಮಹಾ ಸನ್ನಿಧಿಯು ಸರ್ವ ಲವಾಜಮಸಹಿತ ದಯಮಾಡಿಸುವದು ನಿಶ್ಚಿತವಾಯಿತು. ಅದರಂತೆ ಸರ್ವಜನರೂ ಮತಭೇದವನ್ನೆಣಿಸದೆ, ಶ್ರೀ ಸನ್ನಿಧಾನದ ಆಗಮನಸೇವಾಸತ್ಕಾರಕ್ಕೆ ತನುಮನಧನಗಳಿಂದ ಕಾರ್ಯವನ್ನು ಕೈಕೊಂಡು ಸರ್ವಪ್ರಕಾರದಿಂದಲೂ ಉತ್ತಮ ವ್ಯವಸ್ಥೆಯನ್ನಿಟ್ಟಿದ್ದರು. ಮೊದಲೇ ಹಸ್ತಪತ್ರಿಕೆಗಳ ದ್ವಾರಪ್ರಸಿದ್ಧ ಮಾಡಿರುವಂತೆ ಜನವರಿ ತಾ|| 7 ನೇ ಸೋಮವಾರ ಮಧ್ಯಾಹ್ನಕ್ಕೆ ಶ್ರೀಮಹಾಸನ್ನಿಧಾನವು ಹುಬ್ಬಳ್ಳಿ, ಧಾರವಾಡ, ಗೋಕಾಕ, ಕೊಣ್ಣೂರ, ಹುಕ್ಕೇರಿ, ಸಂಕೇಶ್ವರ, ನಿಪ್ಪಾಣಿ, ಕೊಲ್ಹಾಪುರ ಮುಂತಾದ ಸ್ಥಲಗಳ ಭಕ್ತವೃಂದದೊಡನೆ ದಾರಿಯಲ್ಲಿಯ ಹುಕ್ಕೇರಿ, ನೇರಲಿ, ಸಂಕೇಶ್ವರ, ಮುತ್ನಾಳ, ಹೆಬ್ಬಾಳ ಮುಂತಾದ ಗ್ರಾಮಗಳ ಭಕ್ತಸಮೂಹವು ಪ್ರೇಮದಿಂದ ಮಾಡಿದ ಸ್ವಾಗತವನ್ನು ಸ್ವೀಕರಿಸುತ್ತ ಮೋಟಾರಿನಲ್ಲಿ ದುಂಡಗಿ ಗ್ರಾಮಕ್ಕೆ ದಯಮಾಡಿಸಿದ್ದಾಯಿತು. ಅಲ್ಲಿಯ ಭಕ್ತರ ಪ್ರಾರ್ಥನೆಯ ಮೇರಿಗೆ 1-2 ಗಂಟೆಗಳಕಾಲ ವಿಶ್ರಾಂತಿಯನ್ನೈದಿದ ಬಳಿಕ ಗಡಹಿಂಗ್ಲಜದ ಪುರೋಭಾಗದಲ್ಲಿ ರಚಿಸಿದ್ದ ಭವ್ಯಮಂಟಪಕ್ಕೆ ದಯಮಾಡಿಸಿದ ಕೂಡಲೆ 8-10 ಸಾವಿರಜನರು ಮಾಡಿದ ಜಯಘೋಷದೊಡನೆ ಶ್ರೀ ಸನ್ನಿಧಿಯ ಸ್ವಾಗತವಾಯಿತು. ಅನಂತರ ಸರ್ವಜನರ ಬಿನ್ನಪದ ಮೇರಿಗೆ ಅಲಂಕೃತವಾದ ಅಡ್ಡಪಲ್ಲಕ್ಕಿಯಲ್ಲಿ ಶ್ರೀ ಮಹಾಸನ್ನಿಧಿಯು ಮಂಡಿಸಿದ ಬಳಿಕ ಸೂರ್ಯವಾದ್ಯ ಚಂದ್ರವಾದ್ಯ ಮುಂತಾದ ಸಕಲ ಬಿರುದಾವಳಿ ಸಹಿತ ಉತ್ಸವಕ್ಕೆ ಪ್ರಾರಂಭವಾಯಿತು. ಪಲ್ಲಕ್ಕಿಯ ಮುಂಭಾಗದಲ್ಲಿ ಸಾಗಿದ್ದ ದಿವ್ಯರಥದಲ್ಲಿ ರಾಜರ್ಷಿ ಶ್ರೀ ಮಛತ್ರಪತಿ ಶಾಹುಮಹಾರಾಜರವರ ಭಾವಪಟಗಳು ವಿರಾಜಮಾನವಾಗಿದ್ದವು. ಸಂಸ್ಥಾನದ ಖಾಸಗಿ ಸರಂಜಾಮು ಅಲ್ಲದೆ ಮರ್ಯಾದಾರ್ಥವಾಗಿ ಒಂಟಮುರಿ ಸಂಸ್ಥಾನದಿಂದಲೂ ನಿಡಸೋಸಿ ಶ್ರೀಗಳು ಮತ್ತು ಕರವೀರ ಶ್ರೀ ಶಂಕರಾಚಾರ್ಯಸ್ವಾಮಿಗಳಿಂದಲೂ ಕುದುರೆ ಸವಾರ ಮುಂತಾದ ಲವಾಜಮ ಕಳಿಸಲ್ಪಟ್ಟಿತ್ತು. ಇಲ್ಲಿಯ ಪ್ರಾಯ್ವೆಟ ಸ್ಕೂಲಿನ ಸ್ಕೌಟ್‌ಸಂಘದವರೂ ಪೋಲೀಸ ಅಧಿಕಾರಿಗಳೂ ಜನಸಮುದಾಯದಲ್ಲಿ ಗದ್ದಲವಾಗದಂತೆ ವ್ಯವಸ್ಥೆಯನ್ನಿಟ್ಟಿದ್ದರು. ಪಾಲಕಿಯ ಸುತ್ತಮುತ್ತಲೂ ವೈದಿಕ ವರ್ಗವು, ಪ್ರಾಂತಾಧಿಕಾರಿಗಳೂ ಮಾಮಲೇದಾರ ಸಾಹೇಬರು, ವಕೀಲರು, ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡ ಕೌನ್ಸಿಲರು ಮುಂತಾದವರು ಭಕ್ತಿಭಾವದಿಂದ ಸಾಗುತ್ತಿದ್ದರು. ಈ ಪ್ರಕಾರ ಪ್ರೇಕ್ಷಕರಿಗೆ ಭಕ್ತಿಯನ್ನೂ ಆನಂದವನ್ನೂ ಉಂಟುಮಾಡುತ್ತಿದ್ದಂಥ ಉತ್ಸವವು ತಳಿರು ತೋರಣಗಳಿಂದಲಂಕೃತವಾದ ಮುಖ್ಯಬೀದಿಗಳಲ್ಲಿ ಹಾಯ್ದು ಭಕ್ತವೃಂದವು ಭಕ್ತಿಭಾವದಿಂದ ಶ್ರೀಗಳ ಪಾದಾರವಿಂದಗಳಿಗೆ ಹೂವಾಳಿಗೆ ಅನ್ನರ್ಪಿಸುತ್ತಿರಲು ಸಾಯಂಕಾಲ 7 ಘಂಟೆಗೆ ಇಲ್ಲಿಯ ಹಿರೇಮಠಕ್ಕೆ ತಲ್ಪಿತು. ಅಲ್ಲಿ ರಚಿಸಲ್ಪಟ್ಟಿದ್ದ ಶ್ರೀ ಶೂನ್ಯಪೀಠದಲ್ಲಿ ಶ್ರೀ ಸನ್ನಿಧಿಯು ಮಂಡಿಸಿದ ಬಳಿಕ ದರಬಾರಶೋಭೆಯಲ್ಲಿ ರಾ|| ಸಾ|| ಡಿ. ಬಿ. ಮಾಳಿ, ಡಿ. ಡಿ. ಕಲೆಕ್ಟರ್ ಇವರು ಸುಖಾಗಮನವನ್ನು ಬಯಸಿ ಮರಾಠಿಯಲ್ಲಿ ಮಾತನಾಡಿದರು. ಅದನ್ನೇ ಮಿ|| ಜ. ಡಿ. ಮಜತಿ ಇವರು ಕನ್ನಡದಲ್ಲಿ ಅನುವಾದಮಾಡಿದ ಬಳಿಕ ಶ್ರೀ ನವಲಗುಂದಸ್ವಾಮಿಗಳು "ಶಿಕ್ಷಣ ಸಂಸ್ಥೆಗಳ ಅವಶ್ಯಕತೆ" ಎಂಬ ವಿಷಯದಮೇಲೆ ಒಳ್ಳೇ ಪರಿಣಾಮಕಾರಕ ಭಾಷಣ ಮಾಡಿ ಇದೇ ಉದ್ದೇಶವನ್ನಿಟ್ಟುಕೊಂಡ ಭಕ್ತರ ಬಿನ್ನಪದ ಮೇರಿಗೆ ದಯಮಾಡಿಸಿರುವ ಮಹಾಸನ್ನಿಧಾನದ ಮನೋಗತವನ್ನು ಸಭಿಕರಿಗೆ ತಿಳಿಸಿದರು. ಅನಂತರ ಮಹಾಸನ್ನಿಧಿಯಿಂದ ಸರ್ವವಿಷಯಗಳನ್ನೊಳಗೊಂಡ ಸಮಯೋಚಿತ ಆಶೀರ್ವಾದಾತ್ಮಕ ಭಾಷಣವು ಒಳ್ಳೇ ಪರಿಣಾಮಕಾರಕವಾಗಿ ಜರುಗಿತು. ಬಳಿಕ ಪರಸ್ಥಲದಿಂದ ಬಂದಿದ್ದ ಮಹಾಜನರ ಆಭಾರವನ್ನು ನೆಯಾಗಿ, ಮಂಗಲಪೂರ್ವಕ ಸಭಾವಿಸರ್ಜನೆಯಾಯಿತು.

ಗಡಹಿಂಗ್ಲಜ
8-1-1929

ಓರ್ವ ಉತ್ಸವಭಾಗಿ.

ಬಳ್ಳಿಸೂಳಿಂಗೆ ಶಾಂತಿ.

ಕ್ರಿಸ್ತತರುಣರ ಸಭೆಯಲ್ಲಿ ಶ್ರೀಮನ್ಮಹಿಸೂರ ಮಹಾರಾಜರವರು ದಯೆಪಾಲಿಸಿದ ಭಾಷಣದಲ್ಲಿ ತಮ್ಮ ಸಂಸ್ಥಾನದ ಪ್ರಮುಖ ಧರ್ಮಗಳಲ್ಲೊಂದಾದ ವೀರಶೈವಮತೋದ್ಧಾರಕನಾದ ಶ್ರೀ ಬಸವೇಶನ ಹೆಸರುತೆಗೆದುಕೊಳ್ಳದಿದ್ದುದನ್ನು ಚರ್ಚಿಸಿ ಬಸವರಾಜಪತ್ರಿಕೆಯು ಬರೆದ ಲೇಖವನ್ನು ಸ್ಟಾರ್ ಪತ್ರಿಕೆಯು ಅವತರಿಸಿ ಪ್ರಕಟಿಸಿತು. ಶ್ರೀಮನ್ಮಹಾರಾಜರವರ ದಿವ್ಯಚಿತ್ತಕ್ಕೆ ತಮ್ಮ ಭಾಷಣದಿಂದ ವೀರಶೈವಸಮಾಜಕ್ಕಾದ ಮನದಳಲು ಅರಿಕೆಯಾಗಬೇಕೆಂದು ತಾವದನ್ನು ಎತ್ತಿಕೊಂಡುದು ಯೋಗ್ಯವೆ. ವೀರಶೈವಸಮಾಜದ ಮಂದಭಾಗ್ಯದಿಂದ ಇತ್ತೀಚೆಗೆ ಕೆಲವರಿಂದ ಹೊರಟ ಬಸವನಿಂದಾ ಸಂಪ್ರದಾಯದ ನಾಲಿಗೆ ಎನಿಸಿದ "ಪಂಚಾಚಾರ್ಯಪ್ರಭೆಗೆ" ಎಂದಿನಿಂದಲೂ ನಡೆದುಬಂದ ದ್ವಿತೀಯ ಶಂಭು ಬಸವನ ಗೌರವವು ಸಹನವಾಗದೆ, ಗುರುಭಕ್ತಕೇಸರಿ ಎಂಬ ಹೆಸರಿನ ಒಂದು ಅಮಂಗಲವಾದ ನರಿಯ ಕೂಗು ಹೊರಟಿತು. ವೀರಶೈವರಲ್ಲಿಯ ಒಳಜಗಳಕ್ಕೆ ಹಿಗ್ಗಿ ಹಿಗ್ಗುತ್ತಿರುವ ಧಾರವಾಡದ ವಿಜಯವೆಂಬ ಒಂದು ಬ್ರಾಹ್ಮಣಿಕೆಯ ಪತ್ರದಲ್ಲಿ ಅದೇ ಕೂಗು ಪ್ರಭೆಯನ್ನು ಅನುವಾದಿಸಿ ತಾ|| 12-1-1929 ಕ್ಕೆ ಎದ್ದಿತು. ಆ ಕೂಗುನನ್ನ ಕಿವಿಗೆಬಿದ್ದು ಆಲಿಸುತ್ತಿರಲು ಈ ಘೋರವಾಶಿತವು ಮೈಸೂರ ಪ್ರಭೆಯಿಂದ ಹೊರಟುದುದೆಂದು ತಿಳಿಯಿತು.

ನರಿಗಳು ಒಂದು ಊರನ್ನು ಮತ್ತೊಂದು ಕೂಡಿತೆಂಬುದು ಸಾಜವು. ಇರುಳಲ್ಲಿ ಬಳ್ಳಗಳು ಊಳಿದರೆ ಅದಕ್ಕಾರೂ ಅಮಂಗಲವೆನ್ನುವುದಿಲ್ಲ. ಆದರೆ ಬಲ್ಲವರು ಹಗಲು ನರಿಯ ಊಳು ಅಶುಭಸೂಚಕವೆನ್ನುವರು. ಇದುವರೆಗಿನ ಜಾತಿಪಕ್ಷಪಾತ ಧರ್ಮಪಕ್ಷಪಾತಗಳಡಗಿ ಆಯಾ ಮಹಾಪುರುಷರನ್ನು ಅವರವರ ಕೃತಿಗಳಿಂದಲೂ, ಆಕೃತಿಗಳಿಂದ ಒಡೆದು ಮೂಡಿದ ಸನಾತನ ತತ್ವಗಳಿಂದಲೂ ಕಂಡುಹಿಡಿದು ಒರೆಗೆ ಹಚ್ಚುವ ಇಪ್ಪತ್ತನೆಯ ಶತಕವೆಂಬ ದಿನೋದಯದ ಎರಡು ಜಾವಗಳು ಜಾರಿದ ಬಳಿಕ ಕೇಳಿದ ಈ ಜಂಬೂಕವಾಶಿತವು ಖಂಡಿತವಾಗಿಯೂ ಬಸವನ ಕೀರ್ತಿಗಲ್ಲದಿದ್ದರು ವೀರಶೈವಸಮಾಜಕ್ಕೆ ಅಶುಭಸೂಚಕವೆಂದರಿತು ಅದರ ಶಾಂತಿಯನ್ನು ಮಾಡುವುದು ನನ್ನ ಕರ್ತವ್ಯವು.

ಬಸವನು ಶಂಕರ ಮಧ್ವ ರಾಮಾನುಜರಂತೆ ಅವ ಸಿದ್ಧಾಂತವನ್ನು ಸ್ಥಾಪಿಸಲಿಲ್ಲ; ಅವ ಮತಕ್ಕೂ ಗುರುವಲ್ಲವೆಂದು ಪ್ರಭೆಯು ಅನ್ನುವುದು. ಪ್ರಭೆಯ ಧ್ವನಿಗೆ ತಕೂರಿಯಂತಿರುವ ವಿಜಯವು ಅದನ್ನೇ ಅರಿಚಿ ಬಸವನ ವಚನಗಳನ್ನು ವೈಷ್ಣವಸಂಪ್ರದಾಯದ ದಾಸಕೂಟದ ಹಾಡುಗಳಿಗೆ ಹೋಲಿಸಿದೆ. ಹಾಗೂ ಸಿದ್ಧಾಂತಸ್ಥಾಪನದ ಯಶಸ್ಸು ಶ್ರೀ ರೇಣುಕಾಚಾರ್ಯರಿಗೆಂಬಭಿಪ್ರಾಯದಲ್ಲಿ ಸೂಚಿಸಿದಂತೆ ಮಾಡಿ ಬಸವನ ನಿಂದೆಯೆಂದು ತೋರುವ ಒಂದು ಮಾತಿನಿಂದ ಅದನ್ನು ಅಳಿಸಿಬಿಟ್ಟದೆ.

ವೈಷ್ಣವ ಸಂಪ್ರದಾಯದ ಆಚಾರ್ಯರು ದಾಸಕೂಟದವರಿಗೆ ತಮ್ಮ ಧರ್ಮಪುರುಷರುಗಳಲ್ಲಿ ಅವ ಮೆಟ್ಟನ್ನು ಕೊಡುವರೆಂಬುದನ್ನು ನಾನರಿಯೆನು. ಆದರೆ ವೀರಶೈವಧರ್ಮದ ಆಚಾರ್ಯರೂ, ಯೋಗಿಗಳೂ, ಗ್ರಂಥಕಾರರೂ ಬಸವನು ವೀರಶೈವಸಿದ್ಧಾಂತ ಸ್ಥಾಪನಾಚಾರ್ಯನೆಂದು ನುತಿಸಿರುವರು. ವೀರಶೈವಸಮಾಜವು ಎಂದಿನಿಂದಲೂ ಬಸವನಲ್ಲಿ ಅಸಾಧಾರಣ ಭಕ್ತಿಯನ್ನುಳ್ಳುದಾಗಿದೆ. ಅವನು ವಿರಕ್ತೈವ ತ್ರಿಮೂರ್ತಿಯಾದ ಗುರುಲಿಂಗ ಜಂಗಮಸ್ವರೂಪನೆಂದು ಭಾವಿಸುತ್ತದೆ. ಇದಕ್ಕೆ ಅವನಿಗೆ ಗುರುಬಸವ, ಬಸವಲಿಂಗ, ಬಸವಪ್ರಭು ಎನ್ನುವ ನಾಮಗಳು ರೂಢವಾಗಿ ಲಿಂಗವಂತರು ತಮ್ಮ ಮಕ್ಕಳಿಗಿಡುವ ವಾಡಿಕೆಯ ಹೆಸರುಗಳಾಗಿರುವುದು ಸಾಕ್ಷಿಯು.

ಇನ್ನು ವೀರಶೈವ ಸಂಸ್ಕೃತ ಕರ್ನಾಟಕ ವಾಙ್ಮಯದಲ್ಲಿ ಬಸವನನೇನೆನ್ನುವರೆಂಬುದನ್ನು ನೋಡುವ—

ಮೈಸೂರುಸಂಸ್ಥಾನದ ಕೆಲವು ಭಾಗವನ್ನೊಳಕೊಂಡ ಕರ್ನಾಟಕದ ರಾಜಸಿಂಹಾಸನದಲ್ಲಿ ಶೋಭಮಾನವಾದ ಕೆಳದಿಯ ರಾಜವಂಶದಲ್ಲಿ ಪ್ರಸಿದ್ಧನಾದ ಬಸವರಾಜನು ಶಿವತತ್ವರತ್ನಾಕರವೆಂಬ ಕೋಶವನ್ನು ರಚಿಸಿರುವನು. ಈ ಗ್ರಂಥವು ಮ|| ಬಿ. ರಾಮರಾವು ಎಂ. ಎ., ಎಲ್‌ಎಲ್.ಬಿ., ವಿದ್ವಾಂಸರ ಆದರಕ್ಕೆ ಪಾತ್ರವಾಗಿ ಅಚ್ಚಾಗಿದೆ. ಅದರ ನಾಲ್ಕನೆಯ ಕಲ್ಲೋಲದ 8 ನೆಯ ತರಂಗದ 11-12 ನೆಯ ಶ್ಲೋಕಗಳು "ಧರ್ಮಪ್ರವೃತ್ತಿಂ ಶಿಥಿಲಾಂ ವಿಲೋಕ್ಯ ಸಮಂತತಃ | ಅಂತರ್ಯದಯಾವಿಷ್ಟೋ ಭಗವಾನ್ಪರಮೇಶ್ವರಃ ||೧೧|| ಧರ್ಮಂ ಸಂಸ್ಥಾಪಯಾಮಾಸ ಸರ್ವವೇದಧರಾತಲೇ | ವೀರಶೈವಮತಂ ಸ್ಥಾಪ್ಯ ಪ್ರಕಾಶನಮಕಾರಯತ್ ||೧೨||" "ಭೂಮಿಯಲ್ಲಿ ನಿಜವಾದ ಧರ್ಮಪ್ರವೃತ್ತಿಯು ಸಡಿಲಾಗಿತ್ತು. ಧರ್ಮವಿಲ್ಲದ ಜನವು ಹಾಳಾಗುವುದೆಂದು ದಯಾವಶನಾಗಿ ಜ್ಞಾನಾದಿ ಷಡ್ಗುಣೈಶ್ವರ್ಯಸಂಪನ್ನನಾದ ಬಸವೇಶ್ವರನು ಸಮಗ್ರಧರ್ಮವನ್ನು ನೆಲದಮೇಲೆ ನಿಲ್ಲಿಸಿದನು. ಧರ್ಮದ ಪರಿಪೂರ್ಣತೆಯೇ ತಾನಾದ ವೀರಶೈವವನ್ನು ನೆಲೆಗೊಳಿಸಿ ಪ್ರಕಟಗೈದನು" ಎಂದು ಹೇಳುವುವು.

ಅದೇ ಬಸವಭೂಪಾಲನ ಸಭಾಸ್ಥಿತನಾದ ಷಡಕ್ಷರಮಂತ್ರಿಯು ವೀರಶೈವಧರ್ಮಶಿರೋಮಣಿಯೆಂಬ ಸಿದ್ಧಾಂತಗ್ರಂಥವನ್ನು ಬರೆದಿರುವನು. ಆತನು "ಪೂರ್ವಂ ಶಿವೈಕಶರಣೈರ್ಗರಳಂ ನಿವೇದ್ಯ ಶ್ರೀ ಶಂಭವೇ ತದಮೃತಮೇವ ಪೀತಂ" ಎಂಬ ಶ್ರೀ ಬಸವೇಶನ ವಿಷಾಭ್ಯವ ಹಾರಲೀಲೆಯನ್ನು ಕೊಂಡಾಡಿರುವನು.

ಉಭಯ ಕವಿತಾವಿಶಾರದನಾದ ಶ್ರೀ ಷಡಕ್ಷರನು ವೃಷಭೇಂದ್ರ ವಿಜಯವೆಂಬ ಗ್ರಂಥದಲ್ಲಿ ಸಾಕ್ಷಾತ್ಪರಶಿವಸ್ವರೂಪನೆಂದೂ ಧರ್ಮಾವತಾರನೆಂದೂ ಕೊಂಡಾಡಿ ಅಲ್ಲಲ್ಲಿ ವೀರಶೈವಸಮಯ ಜಗದ್ಗುರುವೆಂದು ಹೊಗಳಿರುವನು.

ವಪುರುದ್ಯತ್ಪ್ರಭೆಯಿಂದೆ ಬಿಂದು ವಿಲಸನ್ನಾದಂ ಕಳಾತ್ಕಾರದಿಂ | ಲಸನಪ್ರದ್ಯುತಿಸಾರದಿಂ ಕಳೆ ಚಲನ್ನೇತ್ರತ್ರಿಭಾಗಂಗಳಿಂ | ದುಸಮಾತೀತ ಗುಣತ್ರಯಂ ಬಸವನಿಂದರಿದಾದವೆಂದ್ಯೆದವೇಳ್ | ದಪರಾರ್ಯರ್ಪರತೇನೊತಾನೆ ಪರಬೊಮ್ಮಂದಲ್ಪ್ಯಪಾಧೀಶ್ವರಂ || ನೀನೆ ಗುರು ನೀನೆ ಲಿಂಗಂ | ನೀನೆ ಚರಂ.... || ೪೨-೬೪ ೧-೩೩ "ಜಿತ ಬೌದ್ಧ ಮುಖವಾದ" ೩೧-೭೦ "ಲಸನ್ನಿಗಮಸಾರಾಸನ್ನಮತಿ" ೩೪-೧೩೯ ವೀರಶೈವಾಬ್ಧಿಚಂದ್ರ ೩೫-೬೮ ನಿಗಮಾಗಮನಿಕಾಯಸರಳೋಕ | ನ್ಯಾಯಜಿತವಾದಿ ೪೦-೧೧೫ ಶಿವಾಪರಾವತಾರ ಧೀರಸಾರನುತ್ಯವೈಭವ || ೪೦-೧೧೫ ಪರವಾದಿಗಳಂ ಸೋಲಿಸಿದಂ ಹರಸಮಯಮನಿಂತುಗೆಲಿಸಿಪಾಲಿಸಿದಂ|ಮದ್ವರಬಸವನೆಂದು ಶರಣರ್ಪಿರಿದುಂ ಸಂಭ್ರಮದೆ ಕೀರ್ತಿಸುತ್ತೆ ನೆವಿದರ್ || ೪೦-೧೧೭ ನಿರ್ಜಿತವರಾಕಪರವಾದಾನೀಕ | ೧-೧೦೮ ಕಲಂಕಮತದೂರಹರ || ೨-೩೯ ಜಿತಭೂಖಿಲ ೩-೭೯ ಎಂದು ಮೊದಲಾಗಿ ಕೊಂಡಾಡಿರುವರು.

ಆಂಧ್ರ ಕವಿಪುಂಗವನೂ ವೀರಶೈವ ಗುರುವರ್ಯನೂ ಆದ ಸೋಮನು ವೀರಶೈವಸಿದ್ಧಾಂತ ಪ್ರತಿಪಾದಕವಾದ ಬಸವರಾಜೀಯವೆಂಬ ಸಂಸ್ಕೃತಪ್ರಬಂಧದಲ್ಲಿ "ಕೋ ಬಸವ ಇತಿ. ಇದಾನೀಂ ಕಲಿಯುಗೇ ಶಿವಭಕ್ತಿಮುದ್ಧರ್ತುಂ ಬಸವಾಭಿಧಾನೇನ ವೃಷಭಃ ಪಜಾತಃ" ಎಂದು ಹೇಳಿರುವನು.

ಮುಗ್ಗೆ ಮಾಯಿದೇವನು "ವೀರಶೈವನಿರ್ಣಯ ಪರಮಾವತಾರ" "ಜಗದಾದಿದೇಶಿಕ" ಎಂದಂದಿರುವನು. ಇರಲಿ ಬಸವನವತಾರದಿಂದ ಇಂದಿನ ತನಕ ಆದ ಕವಿಗಳ ಒಂದೊಂದು ನುಡಿಯನ್ನುದಾಹರಿಸುವುದರಿಂದ ಈ ಪತ್ರಿಕೆಯಂತಹ ನೂರಾರು ಪತ್ರಿಕೆಗಳು ತುಂಬುವುವು.

(ಸಶೇಷ.)



ಫೋಟೊ, ಲೈನ್, ಯಲಕ್ಟ್ರೊ ಬ್ಲಾಕುಗಳು, ಅರಗಿನಶೀಲು ದವಾಲಿಬಿಲ್ಲೆಗಳು ಮತ್ತು ರಬ್ಬರ್ ಮೋಹರುಗಳನ್ನೊ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

7

೧೯೨೯ ನೆಯ ಇಸವಿ ಜನವರಿ ತಾ|| ೧೯ ರಿಂದ ೧೯೨೯ ನೆಯ ಇಸವಿ ಜನವರಿ ತಾ|| ೨೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ವಿಭವನಾಮಸಂವತ್ಸರದ ಪುಷ್ಯ ಶುದ್ಧ ನವಮಿಯಿಂದ ಪುಷ್ಯ ಶುದ್ಧ ಪೌರ್ಣಿಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ
19	ಶನಿ	ನವ	48-19	ಅಶ್ವಿ	0-50	6
20	¹ಭಾನು	ದಶ	42-37	ಕೃತ್ತಿ	53-55	7
21	ಸೋಮ	ಏಕಾ	36-52	ರೋಹಿ	49-49	8
22	ಮಂಗಳ	ದ್ವಾದ	30-53	ಮೃಗ	45-31	9
23	²ಬುಧ	ತ್ರಯೋ	25-0	ಆರ್ದ್ರಾ	41-20	10
24	³ಗುರು	ಚತು	19-27	ಪುನ	37-39	11
25	ಶುಕ್ರ	ಪೌರ್ಣ	14-22	ಪುಷ್ಯ	34-24	12

(1) ಮಳೆನಕ್ಷತ್ರ-ಉತ್ತರಾಷಾಢ ೪ ನೆಯಪಾದ. (2)ಮಳೆನಕ್ಷತ್ರ-ಶ್ರವಣ ೧ ನೆಯಪಾದ, ಶಾಕಂಬರೀವ್ರತ. (3) ಬನಶಂಕರೀವ್ರತ, ಮೂಗೂರು ಬಂಡಿ ಉತ್ಸವ.

ಮೈಸೂರು: ಶ್ರೀ. ಐರೋಡಾಳ್ವಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾರಾ ಪರಮಾರ್ಗಿತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯತ್ವ ನಕ್ಷತ್ರ ಮೋಹರಾಪೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ೯ ೧೯೨೯ ನೆಯ ಇಸವಿ ಜನವರಿ ತಾರೀಖು ೨೬ ನೆಯ ಶನಿವಾರ [ಸಂಚಿಕೆ ೪

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೭—೦
ಚಾರುಶೀಲಚರಿತ್ರ	೦—೫—೦	೦—೧೦—೦
ಹರಿದಾಸಿ	೦—೪—೦	೦—೭—೦
ವ್ರತಪಂಚಕ	೦—೪—೦	೦—೭—೦
ಗುರುಶಂಕರೇಶ್ವರಶತಕ	೦—೧—೦	೦—೩—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮನಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮನಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಯ ¼ ಸೈಜಿನ 200 ದೊಡ್ಡ ಗ್ಗೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಶ್ರೀಮದ್ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮದ್ಯುವರಾಜರವರ ಭಾವಚಿತ್ರ. ಶ್ರೀ ನುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಿಂಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಸ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

16

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½" × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5" × 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್‌ಗಟ್ಟಲೆ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0. 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-3-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಮೊಬಲಗನ್ನು ಮನಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮನಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

[50—11]

ಮನಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ"
ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಉಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ",
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡಾಫೀಸು ಮೈಸೂರು.

ಡಾಕ್ಟರ್ ಜೇ. ಬೀ. ಯವರ
ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[50—14] ಪೋ. ಬಾ. ೫೧೦, ಮದರಾಸು.

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ ಪ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಿಶ್ಶನ್, ಆರ್ಕ್‌ಲ್ಯಾಂಪು, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere.

[12—1]

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ರಜತಮಹೋತ್ಸವ.

ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜನಜಗದ್ಗುರು ಜಯದೇವ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಗಿ 25 ವರ್ಷ ತುಂಬಿತು. ಈ ಕಾಲುಶತಮಾನೋತ್ಸವವನ್ನಾಚರಿಸಲು ರಜತಮಹೋತ್ಸವವೆಂಬ ನಾಮಾಂಕಿತದಿಂದ ಭಕ್ತಾದಿಗಳೆಲ್ಲರೂ ಬೃಹನ್ಮಠದಲ್ಲಿ ಸೇರಿ ಮಹಾಸ್ವಾಮಿಗಳನ್ನು ಕೃತಜ್ಞತಾ ಪೂರ್ವಕ ಶ್ರದ್ಧೆಯಿಂದ ಪೂಜಿಸಿ ಹಬ್ಬದಂತೆ ವರ್ತಿಸತಕ್ಕದ್ದು ಸಾಂಪ್ರದಾಯವಾಗಿದ್ದರೂ, ಕೆಲವುದಿನಗಳಹಿಂದೆ ನಡೆದ ಉತ್ಸವದ ಕಾರ್ಯಾಲೋಚನಾ ಪ್ರಸಂಗದಲ್ಲಿ ಈ ನಮ್ಮ ಗುರುವರ್ಯರ ರಜತಮಹೋತ್ಸವವು, ಬೃಹನ್ಮಠವಿರುವ ಚಿತ್ರದುರ್ಗದಲ್ಲಿ ನಡೆಸತಕ್ಕದ್ದೇ? ಭಕ್ತಾದಿಗಳು ಹೆಚ್ಚಾಗಿರುವ ದಾವಣಗೆರೆಯಲ್ಲಿ ನಡೆಸತಕ್ಕದ್ದೇ? ಎಂಬ ಪ್ರಶ್ನೆಹುಟ್ಟಿತು. ಚರ್ಚಾಸ್ಪದವಾಗಿ ಈ ಮಹೋತ್ಸವವು ಎಲ್ಲಿ? ಯಾವಾಗ? ಎಂಬುದು ನಿರ್ಧಾರವಾದಂತೆ ಇದುವರೆಗೂ ಪ್ರಚುರಪಡಿಸದೇ ಇರುವುದರಿಂದ ಶಿಷ್ಯಕೋಟಿಯ ಉತ್ಸಾಹಭಂಗಕ್ಕೆ ಕಾರಣವಾಗಿದೆ. ಮಹಾಸ್ವಾಮಿಗಳವರಿಗೆ ಬೃಹನ್ಮಠದಲ್ಲಿ, ಪಟ್ಟಾಭಿಷೇಕ ಮಹೋತ್ಸವವಾಗಿರುವುದರಿಂದ ಇವರ ರಜತಮಹೋತ್ಸವವೂ, ಬೃಹನ್ಮಠದಲ್ಲಿಯೇ ಜರಿಗಿಸತಕ್ಕದ್ದು ಶಾಸ್ತ್ರಸಮ್ಮತವೂ, ಸಾಂಪ್ರದಾಯವೂ ಆಗಿರುವುದಲ್ಲದೆ ಶಿಷ್ಯಕೋಟಿಯ ಸದಭಿಪ್ರಾಯವಾಗಿರುವುದರಿಂದ ಮಹಾಸ್ವಾಮಿಯವರ ಘನತರವಾದ ಈ ಮಹೋತ್ಸವವು ಚಿತ್ರದುರ್ಗದಲ್ಲಿ (ಬೃಹನ್ಮಠದಲ್ಲಿ) ಇಂತಹ ದಿವಸ ಜರಿಗಿಸುತ್ತದೆಂಬಬಗ್ಗೆ ಕೂಡ್ಲೆ ಮಹಾಸಂಸ್ಥಾನದ ಕಡೆಯಿಂದ ಪ್ರಚುರಪತ್ರಿಕೆಯನ್ನು ಪ್ರಕಾಶಗೊಳಿಸುವಂತೆ ಮಾಡಿ ಶಿಷ್ಯಕೋಟಿಯ ಉತ್ಸಾಹಕ್ಕೆ ಪ್ರೋತ್ಸಾಹವನ್ನು ಕಲ್ಪಿಸಬೇಕಾಗಿ ಪ್ರಾರ್ಥಿಸುವ,

ಒಬ್ಬ ಭಕ್ತ.

ಬ್ಯಾಡಿಗಿ.

ಕಳೆದ ಗುರುವಾರ ತಾ|| 10-1-29 ನೇ ದಿವಸ ಪ್ರತಿವರ್ಷದ ಪದ್ಧತಿಯಂತೆ ಕೈ. ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿ ಈ ಮಹಾತ್ಮರ ಜನ್ಮದಿವಸ ಮಹೋತ್ಸವವು ನಮ್ಮ ಲೈಬ್ರರಿಯ ವತಿಯಿಂದ ಅತಿ ವಿಜೃಂಭಣೆಯಿಂದ ನೆರವೇರಿತು. ಅಂದು ಸಾಯಂಕಾಲ 5 ಘಂಟೆಗೆ ಕೈ. ಮಹಾತ್ಮ ದೇಸಾಯಿಯವರ ಭಾವಚಿತ್ರದ ಮೆರವಣಿಗೆಯು ಭಜನಾ ಬ್ಯಾಂಡ್‌ವಾದ್ಯಗಳೊಡನೆ ಹೊರಟು ಪುರಪ್ರದಕ್ಷಿಣೆ ಮಾಡಿಕೊಂಡು 6½ ಗಂಟೆಗೆ ಶ್ರೀ ಗಳವರ ಮಠವನ್ನು ಸೇರಿತು. ಸ್ಕೌಟ್‌ಡ್ರೆಸ್ಸಿನಿಂದ ವ್ಯವಸ್ಥೆಯಿಂದ ಸಾಗಿದ್ದ ಇಂಗ್ಲಿಷ್ ಹಾಗು ಕನ್ನಡ ವಿದ್ಯಾರ್ಥಿಗಳಿಂದ ಉತ್ಸವಕ್ಕೆ ಹೆಚ್ಚಿಗೆ ಕಳೆಯೇರಿತ್ತು. ಮೆರವಣಿಗೆಯು ಮುಗಿದೊಡನೆಯೇ ಸಭೆಯ ಕೆಲಸವು ಪ್ರಾರಂಭವಾಯಿತು ಶಿಕಾರಿಪುರದ ವಿರಕ್ತಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಸದಾಶಿವಸ್ವಾಮಿಗಳವರು ಅಧ್ಯಕ್ಷಸ್ಥಾನಾಲಂಕೃತರಾಗಿದ್ದರು. ವೇ|| ಇಂಡೀಮಠ ಮಿ|| ಕೊಲ್ಹಾಪುರ ಮಿ|| ಕ್ಯಾತಾರಿ ಇವರ ಸ್ಫೂರ್ತಿದಾಯಕ ಭಾಷಣಗಳಾದವು. ತರುವಾಯ ಅಧ್ಯಕ್ಷ ಪೂಜ್ಯಪಾದರವರು ಮನುಷ್ಯ ಜನ್ಮದ ಶ್ರೇಷ್ಠತೆ ಹಾಗೂ ಸಾರ್ಥಕತೆಯ ಬಗ್ಗೆಯೂ ಮಹಾತ್ಮ ದೇಸಾಯಿಯವರ ದಯಾದಾತೃತ್ವ ಮೊದಲಾದ ಸದ್ಗುಣಗಳಬಗ್ಗೆಯೂ ಅನೇಕ ಉದಾಹರಣೆಗಳನ್ನು ಕೊಟ್ಟು ಭಾಷಣಮಾಡಿ ಸಭೆಯ ಜನಗಳನ್ನು ಆನಂದಗೊಳಿಸಿದರು. ಬಳಿಕ ಪಂಚಕಜ್ಜಾಯ ಹಾರ ತಾಂಬೂಲ ಮಂಗಲಗಳೊಡನೆ ಸಭಾ ವಿಸರ್ಜನೆಯಾಯಿತು.

ಬ್ಯಾಡಗಿ
ತಾ|| 14-1-29 }

M. H. Kalkatti
ಸೆಕ್ರೆಟರಿ,
ಶ್ರೀ ಲಿಂಗರಾಜ ಲೈಬ್ರರಿ.

ಹಾಲುಮತಸ್ಥರ ಲಿಂಗಧಾರಣಮಹೋತ್ಸವ.

ಕಳೆದ ಆಶ್ವೀಜ ಬ|| ೮ ಚಂದ್ರವಾರ ನೈಜಾಮ ಇಲಾಖಾ ಕೊಪ್ಪಳ ಜಿಲ್ಲಾ ದ್ಯಾಂಪುರದಲ್ಲಿ ಕೊಪ್ಪಳದ ಶ್ರೀಮನ್ನಿರಂಜನ ಶಾಂತವೀರಮಹಾಸ್ವಾಮಿಗಳ ನೇತೃತ್ವದಲ್ಲಿ ಹಾಲಕೆರೆಯ ಹತ್ತರ ಹಿರೇಮಠದ ಪಟ್ಟದಸ್ವಾಮಿಗಳಿಂದಲೂ ಕೊಪ್ಪಳದ ಅಳವಂಡಿ ಹಿರೇಮಠದ ಪಟ್ಟದಸ್ವಾಮಿಗಳಿಂದಲೂ 181 ಜನ ಹಾಲುಮತಸ್ಥರಿಗೆ (ಕುರುಬರಿಗೆ) ಲಿಂಗಧಾರಣವು ಮಾಡಲ್ಪಟ್ಟಿತು. ಜಗದ್ಗುರುಗಳು ಕೂಡಿದ ಜನಸ್ತೋಮಕ್ಕೆ 'ಲಿಂಗಧಾರಣೆಯ ಮಹತ್ವ' 'ವೀರಶೈವಧರ್ಮದ ಶ್ರೇಷ್ಠತ್ವ' 'ಹಾಲುಮತದ ಪೂರ್ವೇತಿಹಾಸ' 'ಹಾಲುಮತಕ್ಕೂ ವೀರಶೈವಧರ್ಮಕ್ಕೂ ಇರತಕ್ಕ ಸಂಬಂಧ, ಇವುಗಳ ವಿಷಯವಾಗಿ ತಮ್ಮ ಪವಿತ್ರವಾಣಿಯಿಂದ ಬಹುಸರಸಾಗಿ ಬೋಧಿಸಿದರು. ಈ ಮಹಕಾರ್ಯದಲ್ಲಿ ಇಲ್ಲಿಯ ಹಾಲುಮತದ ಮುಂದಾಳುಗಳಾದ ಶ್ರೀ ಜೋಡಬಸವಪ್ಪನವರು ಮರಡಿ ಮತ್ತು ಶ್ರೀ ಸಣ್ಣಬಸವಪ್ಪನವರು ನೋಟಗಾರ ಇವರು ಬಹು ಶ್ರಮವಹಿಸಿ ಕೆಲಸಮಾಡಿದರು. ಇತರ ಗ್ರಾಮಗಳ ಹಾಲುಮತಸ್ಥರೂ ಮೇಲ್ಕಂಡ ಮಹಾಶಯರ ಮೇಲ್ಪಂಕ್ತಿಯನ್ನೇ ಅನುಸರಿಸಲೆಂದು ಕೋರುತ್ತೇನೆ.

ಅದೇ ಸಮಯಕ್ಕೆ ಅಂದರೆ ಆಶ್ವೀಜ ಬ|| ೧೧ ಗುರುವಾರ ನಮ್ಮ ಊರಲ್ಲಿ "ಶ್ರೀಮನ್ನಿರಂಜನ ಜಗದ್ಗುರು ಗವಿಸಿದ್ಧೇಶ್ವರ ವಾಚನಾಲಯ" ವು ಕೊಪ್ಪಳದ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಮಹಾಸ್ವಾಮಿಗಳು ವಾಚನಾಲಯಕ್ಕೆ "ನವಕರ್ನಾಟಕ" ಮತ್ತು "ಶಿವಾನುಭವ" ಪತ್ರಿಕೆಗಳನ್ನು ತರಿಸಲಿಕ್ಕೆ 8 ರೂ. ಗಳನ್ನೂ "ವಚನಶಾಸ್ತ್ರಸಾರ" ಎಂಬ ಉದ್ಗ್ರಂಥವನ್ನೂ ಆಶೀರ್ವದಿಸಿದರು. 97 ರೂ. ಗಳು ವರ್ಗಣಿಯಿಂದ ಕೂಡಿದವು. ಮೇಲ್ಕಂಡ ಎರಡು ಮಹತ್ಕಾರ್ಯಗಳು ನಮ್ಮೂರ ಪುರಾಣದಮಹೋತ್ಸವದಲ್ಲಿ ಜರುಗಿದವು. ಆ ಸಮಯದಲ್ಲಿ ಅನೇಕ ಮಾಹೇಶ್ವರ ವಟುಗಳಿಗೂ ಸ್ತ್ರೀಯರಿಗೂ ಪುರುಷರಿಗೂ ಶಿವದೀಕ್ಷೆಯು ಮಾಡಲ್ಪಟ್ಟಿತು.

ತಮ್ಮ ವಿಧೇಯ,
ಮುಕ್ಕಾಂ ಗದಗ,
ತಾ|| 11—1—1929. } ಕಲ್ಲಿನಾಥ ವೀರೇಶ್ವರಸ್ವಾಮಿ ಹಿರೇಮಠ,
ದ್ಯಾಂಪುರ.

ಶ್ರೀ ಮದ್ಘೃಲತಾಪುರೀ (ಹುಬ್ಬಳ್ಳಿ) ಬೃಹನ್ಮಠ ತ್ರಿ ಸಹಸ್ರ ಚರಾಧ್ಯಕ್ಷ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು ಇವರ ಅಡ್ಡಪಾಲಕಿ ಮಹೋತ್ಸವ ಗಡಹಿಂಗ್ಲಜ.

ಈ ಮೊದಲು ಗಡಹಿಂಗ್ಲಜ ಮತ್ತು ಪೇಠಾದ ಯಾವತ್ತೂ ಪ್ರಮುಖ ಜನರು ಹುಬ್ಬಳ್ಳಿಗೆ ಬಂದು ವಿನಂತಿಪೂರ್ವಕ ಪ್ರಾರ್ಥಿಸಿಕೊಂಡಮೇರಿಗೆ ಶ್ರೀ ಮಹಾ ಸನ್ನಿಧಿಯು ಸರ್ವ ಲವಾಜಮಸಹಿತ ದಯಮಾಡಿಸುವದು ನಿಶ್ಚಿತವಾಯಿತು. ಅದರಂತೆ ಸರ್ವಜನರೂ ಮತಭೇದವನ್ನೆಣಿಸದೆ, ಶ್ರೀ ಸನ್ನಿಧಾನದ ಆಗಮನೋತ್ಸವಕ್ಕಾಗಿ ತನುಮನಧನಗಳಿಂದ ಕಾರ್ಯವನ್ನು ಕೈಕೊಂಡು ಸರ್ವಪ್ರಕಾರದಿಂದಲೂ ಉತ್ತಮ ವ್ಯವಸ್ಥೆ ಮಾಡಿದ್ದರು. ಮೊದಲೇ ಹಸ್ತಪತ್ರಿಕೆಗಳ ದ್ವಾರಪ್ರಸಿದ್ಧಪಡಿಸಿದಂತೆ ಜನವರಿ ತಾ|| 7 ನೇ ಸೋಮವಾರ ಮಧ್ಯಾಹ್ನಕ್ಕೆ ಶ್ರೀಮಹಾಸನ್ನಿಧಾನವು ಹುಬ್ಬಳ್ಳಿ, ಧಾರವಾಡ, ಗೋಕಾಕ, ಕೊಣ್ಣೂರ, ಹುಕ್ಕೇರಿ, ಸಂಕೇಶ್ವರ, ನಿಪ್ಪಾಣಿ, ಕೊಲ್ಹಾಪುರ ಮುಂತಾದ ಸ್ಥಲಗಳ ಭಕ್ತವೃಂದದೊಡನೆ ದಾರಿಯಲ್ಲಿಯ ಹುಕ್ಕೇರಿ, ನೇರಲಿ, ಸಂಕೇಶ್ವರ, ಮುತ್ನಾಳ, ಹೆಬ್ಬಾಳ ಮುಂತಾದ ಗ್ರಾಮಗಳ ಭಕ್ತಸಮೂಹವು ಪ್ರೇಮದಿಂದ ಮಾಡಿದ ಸ್ವಾಗತವನ್ನು ಸ್ವೀಕರಿಸುತ್ತ ಮೋಟಾರಿನಲ್ಲಿ ದುಂಡಗಿ ಗ್ರಾಮಕ್ಕೆ ದಯಮಾಡಿಸಿದ್ದಾಯಿತು. ಅಲ್ಲಿಯ ಭಕ್ತರ ಪ್ರಾರ್ಥನೆಯ ಮೇರಿಗೆ 1-2 ಗಂಟೆಗಳಕಾಲ ವಿಶ್ರಾಂತಿಯನ್ನೈದಿದ ಬಳಿಕ ಗಡಹಿಂಗ್ಲಜದ ಪುರೋಭಾಗದಲ್ಲಿ ರಚಿಸಿದ್ದ ಭವ್ಯಮಂಟಪಕ್ಕೆ ದಯಮಾಡಿಸಿದ ಕೂಡಲೆ 8-10 ಸಾವಿರಜನರು ಮಾಡಿದ ಜಯಘೋಷದೊಡನೆ ಶ್ರೀ ಸನ್ನಿಧಿಯ ಸ್ವಾಗತವಾಯಿತು. ಅನಂತರ ಸರ್ವಜನರ ಬಿನ್ನಹದ ಮೇರಿಗೆ ಅಲಂಕೃತವಾದ ಅಡ್ಡಪಲ್ಲಕ್ಕಿಯಲ್ಲಿ ಶ್ರೀ ಮಹಾಸನ್ನಿಧಿಯು ಮಂಡಿಸಿದ ಬಳಿಕ ಸೂರ್ಯವಾದ್ಯ ಚಂದ್ರವಾದ್ಯ ಮುಂತಾದ ಸಕಲ ಬಿರುದಾವಳಿ ಸಹಿತ ಉತ್ಸವಕ್ಕೆ ಪ್ರಾರಂಭವಾಯಿತು. ಪಲ್ಲಕ್ಕಿಯ ಮುಂಭಾಗದಲ್ಲಿ ಸಾಗಿದ್ದ ದಿವ್ಯರಥದಲ್ಲಿ ರಾಜರ್ಷಿ ಶ್ರೀ ಮಚ್ಛತ್ರಪತಿ ಶಾಹುಮಹಾರಾಜರವರ ಭಾವಪಟಗಳು ವಿರಾಜಮಾನವಾಗಿದ್ದವು. ಸಂಸ್ಥಾನದ ಖಾಸಗಿ ಸರಂಜಾಮು ಅಲ್ಲದೆ ಮರ್ಯಾದಾರ್ಥವಾಗಿ ಒಂಟಿಮುರಿ ಸಂಸ್ಥಾನದಿಂದಲೂ ನಿಡಸೂಸಿ ಶ್ರೀಗಳು ಮತ್ತು ಕರವೀರ ಶ್ರೀ ಶಂಕರಾಚಾರ್ಯಸ್ವಾಮಿಗಳಿಂದಲೂ ಕುದುರೆ ಸವಾರ ಮುಂತಾದ ಲವಾಜಮ ಕಳಿಸಲ್ಪಟ್ಟಿತ್ತು. ಇಲ್ಲಿಯ ಪ್ರಾವ್ಹೆಟ ಸ್ಕೂಲಿನ ಸ್ಕೌಟ್‌ಸಂಘದವರೂ ಪೋಲೀಸ ಅಧಿಕಾರಿಗಳೂ ಜನಸಮುದಾಯದಲ್ಲಿ ಗದ್ದಲವಾಗದಂತೆ ವ್ಯವಸ್ಥೆಯನ್ನಿಟ್ಟಿದ್ದರು. ಪಾಲಕಿಯ ಸುತ್ತಮುತ್ತಲೂ ವೈದಿಕ ವರ್ಗವು, ಪ್ರಾಂತಾಧಿಕಾರಿಗಳೂ ಮಾಮಲೇದಾರ ಸಾಹೇಬರು, ವಕೀಲರು, ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡ ಕೌನ್ಸಿಲರು ಮುಂತಾದವರು ಭಕ್ತಿಭಾವದಿಂದ ಸಾಗುತ್ತಿದ್ದರು. ಈ ಪ್ರಕಾರ ಪ್ರೇಕ್ಷಕರಿಗೆ ಭಕ್ತಿಯನ್ನೂ ಆನಂದವನ್ನೂ ಉಂಟುಮಾಡುತ್ತಿದ್ದಂಥ ಉತ್ಸವವು ತಳಿರು ತೋರಣಗಳಿಂದಲಂಕೃತವಾದ ಮುಖ್ಯಬೀದಿಗಳಲ್ಲಿ ಹಾಯ್ದು ಭಕ್ತವೃಂದವು ಭಕ್ತಿಭಾವದಿಂದ ಶ್ರೀಗಳ ಪಾದಾರವಿಂದಗಳಿಗೆ ಹೂವಾರಿಗೆ ಅರ್ಪಿಸುತ್ತಿರಲು ಸಾಯಂಕಾಲ 7 ಘಂಟೆಗೆ ಇಲ್ಲಿಯ ಹಿರೇಮಠಕ್ಕೆ ತಲ್ಪಿತು. ಅಲ್ಲಿ ರಚಿಸಲ್ಪಟ್ಟಿದ್ದ ಶ್ರೀ ಶೂನ್ಯಪೀಠದಲ್ಲಿ ಶ್ರೀ ಸನ್ನಿಧಿಯು ಮಂಡಿಸಿದ ಬಳಿಕ ದರಬಾರಶೋಭೆಯಲ್ಲಿ ರಾ|| ಸಾ|| ಡಿ. ಬಿ. ಮಾಳಿ, ಡಿ. ಡಿ. ಕಲೆಕ್ಟರ್ ಇವರು ಸುಖಾಗಮನವನ್ನು ಬಯಸಿ ಮರಾಠಿಯಲ್ಲಿ ಮಾತನಾಡಿದರು. ಅದನ್ನೇ ಮಿ|| ಜಿ. ಡಿ. ಮಜತಿ ಇವರು ಕನ್ನಡದಲ್ಲಿ ಅನುವಾದಮಾಡಿದ ಬಳಿಕ ಶ್ರೀ ನವಲಗುಂದಸ್ವಾಮಿಗಳು "ಶಿಕ್ಷಣ ಸಂಸ್ಥೆಗಳ ಆವಶ್ಯಕತೆ" ಎಂಬ ವಿಷಯದಮೇಲೆ ಒಳ್ಳೇ ಪರಿಣಾಮಕಾರಕ ಭಾಷಣಮಾಡಿ ಇದೇ ಉದ್ದೇಶವನ್ನಿಟ್ಟುಕೊಂಡ ಭಕ್ತರ ಬಿನ್ನಹದ ಮೇರಿಗೆ ದಯಮಾಡಿಸಿರುವ ಮಹಾಸನ್ನಿಧಾನದ ಮನೋಗತವನ್ನು ಸಭಿಕರಿಗೆ ತಿಳಿಸಿದರು. ಅನಂತರ ಮಹಾಸನ್ನಿಧಿಯಿಂದ ಸರ್ವವಿಷಯಗಳನ್ನೊಳಗೊಂಡ ಸಮಯೋಚಿತ ಆಶೀರ್ವಾದಾತ್ಮಕ ಭಾಷಣವು ಒಳ್ಳೇ ಪರಿಣಾಮಕಾರಕವಾಗಿ ಜರುಗಿತು. ಬಳಿಕ ಪರಸ್ಥಲದಿಂದ ಬಂದಿದ್ದ ಮಹಾಜನರ ಅಭಾರಮನ್ನಣೆಯಾಗಿ, ಮಂಗಲಪೂರ್ವಕ ಸಭಾವಿಸರ್ಜನೆಯಾಯಿತು.

ಗಡಹಿಂಗ್ಲಜ
8-1-1929 } ಓರ್ವ ಉತ್ಸವಭಾಗಿ.

ಬಳ್ಳಿನೂಳಿಂಗೆ ಶಾಂತಿ.

ಕ್ರಿಸ್ತತರುಣರ ಸಭೆಯಲ್ಲಿ ಶ್ರೀಮನ್ಮಹಿಸೂರ ಮಹಾರಾಜರವರು ದಯೆಪಾಲಿಸಿದ ಭಾಷಣದಲ್ಲಿ ತಮ್ಮ ಸಂಸ್ಥಾನದ ಪ್ರಮುಖ ಧರ್ಮಗಳಲ್ಲೊಂದಾದ ವೀರಶೈವಮತೋದ್ಧಾರಕನಾದ ಶ್ರೀ ಬಸವೇಶನ ಹೆಸರುತೆಗೆದುಕೊಳ್ಳದಿದ್ದುದನ್ನು ಚರ್ಚಿಸಿ ಬಸವರಾಜಪತ್ರಿಕೆಯು ಬರೆದ ಲೇಖನವನ್ನು ಸ್ಟಾರ್ ಪತ್ರಿಕೆಯು ಅವತರಿಸಿ ಪ್ರಕಟಿಸಿತು. ಶ್ರೀಮನ್ಮಹಾರಾಜರವರ ದಿವ್ಯಚಿತ್ತಕ್ಕೆ ತಮ್ಮ ಭಾಷಣದಿಂದ ವೀರಶೈವಸಮಾಜಕ್ಕಾದ ಮನದಳಲು ಅರಿಕೆಯಾಗಬೇಕೆಂದು ತಾವದನ್ನು ಎತ್ತಿಕೊಂಡುದು ಯೋಗ್ಯವೆ. ವೀರಶೈವಸಮಾಜದ ಮುಂದಭಾಗ್ಯದಿಂದ ಇತ್ತೀಚೆಗೆ ಕೆಲವರಿಂದ ಹೊರಟ ಬಸವನಿಂದಾ ಸಂಪ್ರದಾಯದ ನಾಲಿಗೆ ಎನಿಸಿದ "ಪಂಚಾಚಾರ್ಯಪ್ರಭೆಗೆ" ಎಂದಿನಿಂದಲೂ ನಡೆದುಬಂದ ದ್ವಿತೀಯ ಶಂಭು ಬಸವನ ಗೌರವವು ಸಹನವಾಗದೆ, ಗುರುಭಕ್ತಕೇಸರಿ ಎಂಬ ಹೆಸರಿನ ಒಂದು ಅಮಂಗಲವಾದ ನರಿಯ ಕೂಗು ಹೊರಟಿತು. ವೀರಶೈವರಲ್ಲಿಯ ಒಳಜಗಳಕ್ಕೆ ಹಿಗ್ಗಿ ಹಿಗ್ಗುತ್ತಿರುವ ಧಾರವಾಡದ ವಿಜಯವೆಂಬ ಒಂದು ಬ್ರಾಹ್ಮಣಿಕೆಯ ಪತ್ರದಲ್ಲಿ ಅದೇ ಕೂಗು ಪ್ರಭೆಯನ್ನು ಅನುವಾದಿಸಿ ತಾ|| 12-1-1929 ಕ್ಕೆ ಎದ್ದಿತು. ಆ ಕೂಗು ನನ್ನ ಕಿವಿಗೆಬಿದ್ದು ಆಲಿಸುತ್ತಿರಲು ಈ ಘೋರವಾಶಿತವು ಮೈಸೂರ ಪ್ರಭೆಯಿಂದ ಹೊರಟುದುದೆಂದು ತಿಳಿಯಿತು.

ನರಿಗಳು ಒಂದು ಊರನ್ನು ಮತ್ತೊಂದು ಕೂಡಿತೆಂಬುದು ಸಾಜವು. ಇರುಳಲ್ಲಿ ಬಳ್ಳಗಳು ಊಳಿದರೆ ಅದಕ್ಕಾರೂ ಅಮಂಗಲವೆನ್ನುವುದಿಲ್ಲ. ಆದರೆ ಬಲ್ಲವರು ಹಗಲು ನರಿಯು ಊಳು ಅಶುಭಸೂಚಕವೆನ್ನುವರು. ಇದುವರೆಗಿನ ಜಾತಿಪಕ್ಷಪಾತ ಧರ್ಮಪಕ್ಷಪಾತಗಳಡಗಿ ಆಯಾ ಮಹಾಪುರುಷರನ್ನು ಅವರವರ ಕೃತಿಗಳಿಂದಲೂ, ಆಕೃತಿಗಳಿಂದ ಒಡೆದು ಮೂಡಿದ ಸನಾತನ ತತ್ವಗಳಿಂದಲೂ ಕಂಡುಹಿಡಿದು ಒರೆಗೆ ಹಚ್ಚುವ ಇಪ್ಪತ್ತನೆಯ ಶತಕವೆಂಬ ದಿನೋದಯದ ಎರಡು ಜಾವಗಳು ಜಾರಿದ ಬಳಿಕ ಕೇಳಿದ ಈ ಜಂಬೂಕವಾಶಿತವು ಖಂಡಿತವಾಗಿಯೂ ಬಸವನ ಕೀರ್ತಿಗಲ್ಲದಿದ್ದರು ವೀರಶೈವಸಮಾಜಕ್ಕೆ ಅಶುಭಸೂಚಕವೆಂದರಿತು ಅದರ ಶಾಂತಿಯನ್ನು ಮಾಡುವುದು ನನ್ನ ಕರ್ತವ್ಯವು.

ಬಸವನು ಶಂಕರ ಮಧ್ವ ರಾಮಾನುಜರಂತೆ ಆವ ಸಿದ್ಧಾಂತವನ್ನು ಸ್ಥಾಪಿಸಲಿಲ್ಲ; ಆವ ಮತಕ್ಕೂ ಗುರುವಲ್ಲವೆಂದು ಪ್ರಭೆಯು ಅನ್ನುವುದು. ಪ್ರಭೆಯ ಧ್ವನಿಗೆ ಕಸ್ತೂರಿಯಂತಿರುವ ವಿಜಯವು ಅದನ್ನೇ ಅರಿಚಿ ಬಸವನ ವಚನಗಳನ್ನು ವೈಷ್ಣವಸಂಪ್ರದಾಯದ ದಾಸಕೂಟದ ಹಾಡುಗಳಿಗೆ ಹೋಲಿಸಿದೆ. ಹಾಗೂ ಸಿದ್ಧಾಂತಸ್ಥಾಪನದ ಯಶಸ್ಸು ಶ್ರೀ ರೇಣುಕಾಚಾರ್ಯರಿಗೆಂಬಭಿಪ್ರಾಯದಲ್ಲಿ ಸೂಚಿಸಿದಂತೆ ಮಾಡಿ ಬಸವನ ನಿಂದೆಯೆಂದು ತೋರುವ ಒಂದು ಮಾತಿನಿಂದ ಅದನ್ನು ಆಳಿಸಿಬಿಟ್ಟಿದೆ.

ವೈಷ್ಣವ ಸಂಪ್ರದಾಯದ ಆಚಾರ್ಯರು ದಾಸಕೂಟದವರಿಗೆ ತಮ್ಮ ಧರ್ಮಪುರುಷರುಗಳಲ್ಲಿ ಆವ ಮೆಟ್ಟನ್ನು ಕೊಡುವರೆಂಬುದನ್ನು ನಾನರಿಯೆನು. ಆದರೆ ವೀರಶೈವಧರ್ಮದ ಆಚಾರ್ಯರೂ, ಯೋಗಿಗಳೂ, ಗ್ರಂಥಕಾರರೂ ಬಸವನು ವೀರಶೈವಸಿದ್ಧಾಂತ ಸ್ಥಾಪನಾಚಾರ್ಯನೆಂದು ನುತಿಸಿರುವರು. ವೀರಶೈವಸಮಾಜವು ಎಂದಿನಿಂದಲೂ ಬಸವನಲ್ಲಿ ಅಸಾಧಾರಣ ಭಕ್ತಿಯನ್ನುಳ್ಳುದಾಗಿದೆ. ಅವನು ವಿರಕ್ತೈವ ತ್ರಿಮೂರ್ತಿಯಾದ ಗುರುಲಿಂಗ ಜಂಗಮಸ್ವರೂಪನೆಂದು ಭಾವಿಸುತ್ತಿದೆ. ಇದಕ್ಕೆ ಅವನಿಗೆ ಗುರುಬಸವ, ಬಸವಲಿಂಗ, ಬಸವಪ್ರಭು ಎನ್ನುವ ನಾಮಗಳು ರೂಢವಾಗಿ ಲಿಂಗವಂತರು ತಮ್ಮ ಮಕ್ಕಳಿಗಿಡುವ ವಾಡಿಕೆಯು ಹೆಸರುಗಳಾಗಿರುವುದು ಸಾಕ್ಷಿಯು.

ಇನ್ನು ವೀರಶೈವ ಸಂಸ್ಕೃತ ಕರ್ನಾಟಕ ವಾಙ್ಮಯದಲ್ಲಿ ಬಸವನ ನೇನೆನ್ನುವರೆಂಬುದನ್ನು ನೋಡುವ—

ಮೈಸೂರುಸಂಸ್ಥಾನದ ಕೆಲವು ಭಾಗವನ್ನೊಳಕೊಂಡ ಕರ್ನಾಟಕದ ರಾಜಸಿಂಹಾಸನದಲ್ಲಿ ವಿರಾಜಮಾನವಾದ ಕೆಳದಿಯ ರಾಜವಂಶದಲ್ಲಿ ಪ್ರಸಿದ್ಧನಾದ ಬಸವರಾಜನು ಶಿವತತ್ವರತ್ನಾಕರವೆಂಬ ಕೋಶವನ್ನು ರಚಿಸಿರುವನು. ಈ ಗ್ರಂಥವು ಮ|| ಬಿ. ರಾಮರಾವು ಎಂ. ಎ., ಎಲ್‌ಎಲ್.ಬಿ., ವಿದ್ವಾಂಸರ ಆದರಕ್ಕೆ ಪಾತ್ರವಾಗಿ ಅಚ್ಚಾಗಿದೆ. ಅದರ ನಾಲ್ಕನೆಯ ಕಲ್ಲೋಲದ 8 ನೆಯ ತರಂಗದ 11-12 ನೆಯ ಶ್ಲೋಕಗಳು "ಧರ್ಮಪ್ರವೃತ್ತಿಂ ಶಿಥಿಲಾಂ ವಿಲೋಕ್ಯ ಸಮಂತತಃ | ಅವತೀರ್ಯ ದಯಾವಶ್ಯೋ ಭಗವಾನ್ಪರಮೇಶ್ವರಃ ||೧೧|| ಧರ್ಮಂ ಸಂಸ್ಥಾಪಯಾಮಾಸ ಸರ್ವವೇದಧರಾತಲೇ | ವೀರಶೈವಮತಂ ಸ್ವಸ್ಯ ಪ್ರಕಾಶನಮಕಾರಯತ್ ||೧೨||" "ಭೂಮಿಯಲ್ಲಿ ನಿಜವಾದ ಧರ್ಮಪ್ರವೃತ್ತಿಯು ಸಡಿಲಾಗಿತ್ತು. ಧರ್ಮವಳಿದ ಜನವು ಹಾಳಾಗುವುದೆಂದು ದಯಾವಶನಾಗಿ ಜ್ಞಾನಾದಿ ಷಡ್ಗುಣೈಶ್ವರ್ಯಸಂಪನ್ನನಾದ ಬಸವೇಶ್ವರನು ಸಮಗ್ರಧರ್ಮವನ್ನು ನೆಲದಮೇಲೆ ನಿಲ್ಲಿಸಿದನು. ಧರ್ಮದ ಪರಿಪೂರ್ಣತೆಯೇ ತಾನಾದ ವೀರಶೈವವನ್ನು ನೆರೆಗೊಳಿಸಿ ಪ್ರಕಟಂಗೈದನು" ಎಂದು ಹೇಳುವುವು.

ಅದೇ ಬಸವಭೂಪಾಲನ ಸಭಾಸ್ಥಿತನಾದ ಷಡಕ್ಷರಮಂತ್ರಿಯು ವೀರಶೈವಧರ್ಮಶಿರೋಮಣಿಯೆಂಬ ಸಿದ್ಧಾಂತಗ್ರಂಥವನ್ನು ಬರೆದಿರುವನು. ಆತನು "ಪೂರ್ವಂ ಶಿವೈಕಶರಣೈರ್ಗಣೈಃ ನಿವೇದ್ಯ ಶ್ರೀ ಶಂಭವೇ ಶದನ್ಮತಮೇವ ಪೀಠಂ" ಎಂಬ ಶ್ರೀ ಬಸವೇಶನ ವಿಷಾಭ್ಯವ ಹಾರಲೀಲೆಯನ್ನು ಕೊಂಡಾಡಿರುವನು.

ಉಭಯ ಕವಿತಾವಿಶಾರದನಾದ ಶ್ರೀ ಷಡಕ್ಷರನು ವೃಷಭೇಂದ್ರ ವಿಜಯವೆಂಬ ಗ್ರಂಥದಲ್ಲಿ ಸಾಕ್ಷಾತ್ಪರಶಿವಸ್ವರೂಪನೆಂದೂ ಧರ್ಮಾವತಾರನೆಂದೂ ಕೊಂಡಾಡಿ ಅಲ್ಲಲ್ಲಿ ವೀರಶೈವಸಮಯ ಜಗದ್ಗುರುವೆಂದು ಹೊಗಳಿರುವನು.

ವಪುರುದ್ಯತ್ಪ್ರಭೆಯಿಂದೆ ಬಿಂದು ವಿಲಸನ್ನಾದಂ ರಣತ್ಕಾರದಿಂ | ಲಸನ ಪ್ರದ್ಯುತಿಸಾರದಿಂ ಕಳೆ ಚಲನ್ನೇತ್ರತ್ರಿಭಾಗಂಗಳಿಂ | ದುಮಮಾತೀತ ಗುಣತ್ರಯಂ ಬಸವನಿಂದರಿದಾದವೆಂದ್ಯೆದೆವೇಲ್ | ದಪರಾರ್ಯರ್ಪರಶೇನೊತಾನೆ ಪರಬೊಮ್ಮಂದಲ್ಪ್ಯಸಾಧೀಶ್ವರಂ || ನೀನೆ ಗುರು ನೀನೆ ಲಿಂಗಂ | ನೀನೆ ಚರಂ....|| ೪೨-೬೪ ೧-೩೩ "ಜಿತ ಬೌದ್ಧ ಮುಖವಾದ" ೩೧-೭೦ "ಲಸನ್ನಿಗಮಸಾರಾಸನ್ನಮತಿ" ೩೪-೧೩೪ ವೀರಶೈವಾಬ್ಧಿಚಂದ್ರ ೩೫-೬೮ ನಿಗಮಾಗಮನಿಕಾಯಸರಲೋಕ | ನ್ಯಾಯಜಿತವಾದಿ ೪೦-೧೧೫ ಶಿವಾಪರಾವತಾರ ಧೀರಸಾರನುತ್ಯವೈಭವ || ೪೦-೧೧೫ ಪರವಾದಿಗಳಂ ಸೋಲಿಸಿದಂ ಹರಸಮಯಮನಿಂತುಗೆಲಿಸಿಪಾಲಿಸಿದಂ|ಮದ್ವರಬಸವನೆಂದು ಶರಣರ್ ಪಿರಿದುಂ ಸಂಭ್ರಮದೆ ಕೀರ್ತಿಸುತ್ತೆ ಸೆದಿರ್ದರ್ || ೪೦-೧೧೨ ನಿರ್ಜಿತವರಾಕಪರವಾದಾನೀಕ | ೧-೧೦೮ ಕಲಂಕಮತದೂರಹರ || ೨-೩೯ ಜಿತಭೂಖಿಲ ೩-೭೯ ಎಂದು ಮೊದಲಾಗಿ ಕೊಂಡಾಡಿರುವರು.

ಆಂಧ್ರಕವಿಪುಂಗವನೂ ವೀರಶೈವ ಗುರುವರ್ಯನೂ ಆದ ಸೋಮನು ವೀರಶೈವಸಿದ್ಧಾಂತ ಪ್ರತಿಪಾದಕವಾದ ಬಸವರಾಜೀಯವೆಂಬ ಸಂಸ್ಕೃತ ಪ್ರಬಂಧದಲ್ಲಿ "ಕೋ ಬಸವ ಇತಿ. ಇದಾನೀಂ ಕಲಿಯುಗೇ ಶಿವಭಕ್ತಿ ಮುದ್ಧರ್ತುಂ ಬಸವಾಭಿಧಾನೇನ ವೃಷಭಏವಜಾತಃ" ಎಂದು ಹೇಳಿರುವನು.

ಮಗ್ಗೆ ಮಾಯಿದೇವನು "ವೀರಶೈವನಿರ್ಣಯ ಪರಮಾವತಾರ" "ಜಗದಾದಿದೇಶಿಕ" ಎಂದಂತಿರುವನು. ಇರಲಿ ಬಸವನವತಾರದಿಂದ ಇಂದಿನ ತನಕ ಆದ ಕವಿಗಳ ಒಂದೊಂದು ನುಡಿಯನ್ನುದಾಹರಿಸುವುದರಿಂದ ಈ ಪತ್ರಿಕೆಯಂತಹ ನೂರಾರು ಪತ್ರಿಕೆಗಳು ತುಂಬುವುವು.

(ಸಶೇಷ.)


ಫೋಟೊ, ಲೈನ್, ಯಲಕ್ಟ್ರೊ ಲೆಡ್‌ಬ್ಲಾಕುಗಳು, ಅರಗಿನಶೀಲು ದವಾಲಿಬಿಲ್ಲೆಗಳು ಮತ್ತು ರಬ್ಬರ್ ಮೋಹರುಗಳನ್ನೂ ತಯಾರಿಸುತ್ತೇವೆ.
ಬಿ ಕ್ರ ಪೇ: ೬೩
ಬೆಂಗಳೂರು ಸಿಟಿ
7

೧೯೨೯ ನೆಯ ಇಸವಿ ಜನವರಿ ತಾ|| ೧೯ ರಿಂದ ೧೯೨೯ ನೆಯ ಇಸವಿ ಜನವರಿ ತಾ|| ೨೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಪುಷ್ಯ ಶುದ್ಧ ನವಮಿಯಿಂದ ಪುಷ್ಯ ಶುದ್ಧ ಪೌರ್ಣಿಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ
19	ಶನಿ	ನವ	48-19	ಅಶ್ವಿ	0-50	6
20	(1) ಭಾನು	ದಶ	42-37	ಕೃತ್ತಿ	53-55	7
21	ಸೋಮ	ಏಕಾ	36-52	ರೋಹಿ	49-49	8
22	ಮಂಗಳ	ದ್ವಾದ	30-53	ಮೃಗ	45-31	9
23	(2) ಬುಧ	ತ್ರಯೋ	25-0	ಆರ್ದ್ರಾ	41-20	10
24	(3) ಗುರು	ಚತು	19-27	ಪುನ	37-39	11
25	ಶುಕ್ರ	ಪೌರ್ಣಿ	14-22	ಪುಷ್ಯ	34-24	12

(1) ಮಳೆನಕ್ಷತ್ರ-ಉತ್ತರಾಷಾಢ ೪ ನೆಯಪಾದ. (2) ಮಳೆನಕ್ಷತ್ರ-ಶ್ರವಣ ೧ ನೆಯಪಾದ, ಶಾಕಂಬರೀವ್ರತ. (3) ಬನಶಂಕರೀವ್ರತ, ಮೂಗೂರು ಬಂಡಿ ಉತ್ಸವ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀತಾರಾ ಪರಮಾಗತರಾಜಮಂಡಲಹಿತೈಷಾ | ಭುವನಪಥಕೃತಾವತಾರಾ ಪಶ್ಯತ್ವನ್ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಪ್ಸಿತಶೀಲ ನಾಕಲಿತ ಸಾಧುಜ್ಞಾನಪಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ಭಕ್ತಮಾಲಾಕುಲಂ | ಪ್ರೇಮಂಚೆತ್ತಿಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಜನವರಿ ತಾರೀಖು ೨೬ ನೆಯ ಶನಿವಾರ [ಸಂಚಿಕೆ ೪

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೭—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ.

ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ¼ ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮನ್ಮಹಾರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಿಂಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನು ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡತಕ್ಕ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಸ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

16

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½"×4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 5"×2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5"×2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರ್ತಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ತಪ್ಪಿಸದೆ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3"×4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0, 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"+14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರ್ತಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರಾಹಿದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟು ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

[50—11]

ಮಣಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

"ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ"
ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.



ಈ ಮಾತ್ರೆಗಳನ್ನು ಪ್ರತಿನಿತ್ಯವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಉಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ",
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡ್ಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ.

(Registered Trade Mark)

ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೬—೦. ವಿ. ಪಿ. ೦—೬—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50 14]

ಪ್ರಕಟನೆ.

ನಮ್ಮಲ್ಲಿ ಸಿನೇಮಕ್ಕೆ ಸಂಬಂಧಪಟ್ಟ ಪ್ಯಾಥೆ ಕಂಪೆನಿಯ ಪ್ರೊಜೆಕ್ಟರ್ ಮಿಶನ್, ಆರ್ಕ್‌ಲ್ಯಾಂಪು, ಡೈನೇಮೊ, ಎಲೆಕ್ಟ್ರಿಕಲ್ ಫಿಟಿಂಗ್ಸು ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೇಮನಡಿಸಲಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12—1]

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಜನವರಿ ತಾ|| ೨೬ ನೆಯ ಶನಿವಾರ.

ಮೈಸೂರು ಪತ್ರಿಕೆಗಳೂ ಸರ್ಕಾರವೂ.

ಲೇಖ ಸ್ವಾತಂತ್ರ್ಯವು ದೇಶಸೇವೆಯಲ್ಲಿ ಉಪಯೋಗಿಸಲ್ಪಡುವುದಾದರೆ ದೇಶಕ್ಕೂ ಹಿತವಾಗುವುದು, ಪ್ರಜೆಗಳ ಹಕ್ಕುಬಾಧ್ಯತೆಗಳೂ ರಕ್ಷಿಸಲ್ಪಡುವುವು. ಹಾಗಲ್ಲದೆ ಈ ಅಮೂಲ್ಯವಾದ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಜಾತಿದ್ವೇಷ ವರ್ಣವೈಷಮ್ಯಗಳನ್ನು ವೃದ್ಧಿಗೊಳಿಸುವ ಹೀನವೃತ್ತಿಯಲ್ಲಿ ತೊಡಗುವುದಾದರೆ, ಪ್ರಜಾವರ್ಗಕ್ಕೆ ಎಂದಿಗೂ ಹಿತವಾಗಲಾರದಲ್ಲದೆ ಸರ್ಕಾರಕ್ಕೂ ಗೌರವ ಬರಲಾರದು. ಇಂತಹ ದುಷ್ಕಾರ್ಯ ಪ್ರವರ್ತಕರಾದ ಪತ್ರಿಕಾಕರ್ತರನ್ನು ಹತೋಟಿಯಲ್ಲಿಡುವುದು ಪ್ರಭುತ್ವದವರಿಗೆ ಆವಶ್ಯಕವಾಗಿರುವುದು. ಮೈಸೂರಿನಲ್ಲಿ ಈ ರೀತಿಯಾದ ಸ್ವೇಚ್ಛಾಪ್ರವರ್ತಕರು ಪತ್ರಿಕಾಪ್ರಸಾರಕರಾಗಿ ದೇಶದಲ್ಲಿ ಹಾವಳಿಮಾಡುತ್ತಿರುವರು. ಅಂಥವರಮೇಲೆ ಸರ್ಕಾರದವರು ಕಾರ್ಯಭಾಗ ನಡೆಸಿ ಅವರಿಗೆ ಜ್ಞಾನೋದಯವಾಗುವಂತೆ ಮಾಡುವುದು ಅತ್ಯಾವಶ್ಯಕವು. ಎಷ್ಟೋವೇಳೆ ಎಚ್ಚರಿಸಿದಾಗ್ಯೂ ಜಾಗ್ರುತರಾಗದೆ ಎಂದಿನಂತೆಯೇ ಸ್ವೇಚ್ಛಾನುಸಾರ ಪ್ರಜಾನೆಮ್ಮದಿಗೆ ಭಂಗಕರವಾದ ಲೇಖಗಳನ್ನು ಬರೆಯುತ್ತಿದ್ದ ಕೆಲ ಪತ್ರಿಕೆಗಳನ್ನು ಮುಂದೆ ನಡೆಸಲಾಗದೆಂದು ಸರ್ಕಾರದವರು ಅಪ್ಪಣೆಮಾಡಿರುವರು. ಪ್ರಜಾಶಾಂತಿಗೆ ಆವಶ್ಯಕವಾದ ಈ ಅಪ್ಪಣೆಯನ್ನು ಒಂದುವರ್ಗದ ಕೆಲಜನರು ಖಂಡಿಸಿ ಪತ್ರಿಕೆಗಳಲ್ಲಿ ಅಸಾಧಾರಣವಾದ ಬೊಬ್ಬೆ ಎಬ್ಬಿಸಿರುವರು. ಇದೇ ಸಮಯದಲ್ಲಿ ಕೆಲಕಾಲದ ಹಿಂದೆ ನಮ್ಮ ದೇಶದಲ್ಲಿ ಪ್ರಾದುರ್ಭವಿಸಿದ ಅಸಾಧಾರಣವಾದ ಅರಾಜಕ ಚಳವಳಿಯು ಪ್ರಬಲಿಸುತ್ತಿರಲು ಅಂತಹ ಚಳವಳಿಗೆ ಕಾರಣರಾದವರನ್ನು ಬಹಿರಂಗಪಡಿಸುವುದಕ್ಕಾಗಿ ನಾವು ಈ ಸ್ಟಾರ್‌ಪತ್ರಿಕೆಯಲ್ಲಿ ಬರೆಯುತ್ತಿದ್ದ ಕೆಲ ಲೇಖಗಳು ಮತದ್ವೇಷಜನಕವಾದುವುಗಳೆಂದೂ, ಅಂತಹ ಬರವಣಿಗೆಯನ್ನು ಪ್ರಕಟಿಸುವ ನಮ್ಮ ಪತ್ರಿಕೆಯನ್ನು ನಿಲ್ಲಿಸಿ ನಮಗೆ ಶಿಕ್ಷೆಯನ್ನು ವಿಧಿಸಬೇಕೆಂದೂ ಬ್ರಾಹ್ಮಣ ಮಹಾಸಭೆಯ ಪರವಾಗಿ ರಾವ್‌ಬಹದ್ದೂರ್ ಶಾಮರಾಯರವರು ಪ್ರಭುತ್ವದವರಲ್ಲಿ ಅರಿಕೆ ಮಾಡಿಕೊಂಡಿದ್ದರು. ಅದಕ್ಕೆ ಉತ್ತರವಾಗಿ ಸರ್ಕಾರದವರು ಮೊನ್ನೆತಾನೆ ನಮಗೆ ಎಚ್ಚರಿಕೆಯನ್ನು ಕೊಟ್ಟಿರುವುದಾಗಿಯೂ, ಅಂದಿನಿಂದೀಚೆಗೆ ನಾವು ಅಂತಹ ಲೇಖಗಳನ್ನು ಬರೆಯುತ್ತಿಲ್ಲವೆಂಬುದಾಗಿಯೂ, ಇನ್ನುಮುಂದೆ ಅಂತಹ ಬರವಣಿಗೆಯು ಕಂಡುಬಂದಲ್ಲಿ ತಕ್ಕ ಕಾರ್ಯಭಾಗ ನಡೆಸಲು ಅಪ್ಪಣೆ ಕೊಡುವ ಯೋಚನೆ ಮಾಡುವುದಾಗಿಯೂ ಪ್ರಭುತ್ವದವರು ಪ್ರತಿಪಾದಿಸಿ ಬರೆದಿರುವರಂತೆ! ನಾವು ಸರ್ವದಾ ದೇಶಹಿತಕ್ಕಾಗಿ ದುಡಿಯುತ್ತ ದೇಶಕಂಟಕರೂ ರಾಜದ್ರೋಹಿಗಳೂ ಆದವರ ದುಷ್ಟಪ್ರಯತ್ನವನ್ನು ಖಂಡಿಸಿ ಅವರಿಗೆ ಜ್ಞಾನೋದಯವಾಗುವಂತೆಯೂ ಅಂತಹವರ ದುಷ್ಟ ಪ್ರವರ್ತನೆಯು ಪ್ರಭುತ್ವದವರಿಗೆ ತಿಳಿಯುವಂತೆಯೂ ಮಾಡುವ ಸದುದ್ದೇಶದಿಂದ ಸಂದರ್ಭಾನುಸಾರ ಲೇಖಗಳನ್ನು ಬರೆದಿರುವುವೇ ವಿನಾ ಕೇವಲ ಕೆಲ ವ್ಯಕ್ತಿಗಳನ್ನಾಗಲಿ, ಯಾವುದಾದರೊಂದು ಮತವನ್ನಾಗಲಿ, ಆ ಮತದವರನ್ನಾಗಲಿ ದ್ವೇಷಿಸುವುದಕ್ಕೋಸ್ಕರ ಅಥವ ಅವರಮೇಲೆ ಇತರರಲ್ಲಿ ದುರಭಿಪ್ರಾಯವು ಹುಟ್ಟಿಸುವುದಕ್ಕೋಸ್ಕರ ನಮ್ಮ ಲೇಖನಿಯನ್ನು ಎಂದಿಗೂ ಪ್ರಯೋಗಿಸಿದವರಲ್ಲ ಮತ್ತು ಪ್ರಯೋಗಿಸುವವರಲ್ಲ.

ಸರ್ಕಾರದವರಾದರೂ ನಮ್ಮ ಪತ್ರಿಕೆಯಲ್ಲಿ ಅಂತಹ ಬರವಣಿಗೆಯನ್ನು ಕಂಡುಹಿಡಿದು ಅವನ್ನು ನಮಗೆ ತೋರಿಸಿಕೊಟ್ಟು, ಅಂತಹ ಲೇಖಗಳು ಆಕ್ಷೇಪಣೀಯವಾದುವೆಂಬದಾಗಿಯೂ, ಅಂತಹ ಬರವಣಿಗೆಯನ್ನು ಬರೆಯುವುದು ದೇಶದ ಹಿತಕ್ಕೆ ಕುಂದಕವಾದುದರಿಂದ ಇನ್ನುಮುಂದೆ ಆರೀತಿಯಲ್ಲಿ ಬರೆಯಲಾಗದೆಂದೂ, ಹಾಗೆ ಉಲ್ಲಂಘಿಸಿದರೆ ನಮ್ಮ ಮೇಲೆ ಕಾರ್ಯಭಾಗ ನಡಿಸುವುದಾಗಿ ನಮ್ಮನ್ನು ಈವರೆಗೆ ಎಚ್ಚರಿಸಿರುವುದಿಲ್ಲ. ಸ್ಪಷ್ಟವಾಗಿ ತಮ್ಮ ಅಭಿಮತವನ್ನು ಸರ್ಕಾರದವರು ನಮಗೂ ತಿಳಿಸಿರುವುದಿಲ್ಲ; ಮಹಾಜನಗಳಿಗೂ ತಿಳಿಯಪಡಿಸಿರುವುದಿಲ್ಲ. ಸುಮ್ಮನೆ "ಆಕ್ಷೇಪಣೀಯವಾದ ಬರವಣಿಗೆ" ಎಂದು ಸರ್ಕಾರದವರು ಬರೆದಮಾತ್ರದಿಂದಲೇ ಅದು ಯಾವ ಲೇಖದಲ್ಲಿ ಯಾವ ಮಾತುಗಳು ಆಕ್ಷೇಪಣೀಯವಾದುವೆಂಬುದನ್ನೂ, ಆ ಮಾತುಗಳು ಯಾರಿಗೆ ಅನ್ವಯಿಸಿ ಯಾವ ವಿಧವಾದ ಅನರ್ಥಕ್ಕೆ ಕಾರಣವಾಗಿರುವುದೆಂಬುದನ್ನೂ ತಿಳಿಸಿರುವುದಿಲ್ಲ. ಇದರಿಂದ ಜನಗಳಲ್ಲಿ ನಮ್ಮ ಮೇಲೆ ದುರಭಿಪ್ರಾಯವು ಹುಟ್ಟುವಂತೆ ಮಾಡಲೋಸುಗ ಕೆಲ ಪತ್ರಿಕೆಗಳು, ಸರ್ಕಾರದವರು ಮ|| ಶಾಮರಾಯರಿಗೆ ಕೊಟ್ಟಿರುವ ಉತ್ತರವನ್ನೂ ಮಹಾಮೇರುಪರ್ವತವನ್ನಾಗಿ ಮಾಡಿ ನಮಗೆ ಸರ್ಕಾರದಿಂದ ಬೆದರಿಕೆಯು ಬಂದಿರುವುದೆಂದೂ, ಅದಕ್ಕಾಗಿಯೇ ನಮ್ಮ ಪತ್ರಿಕೆಯಲ್ಲಿ ಉಗ್ರಲೇಖವು ಪ್ರಕಟವಾಗುತ್ತಿಲ್ಲವೆಂದೂ ಮನಬಂದಂತೆ ಬರೆಯುತ್ತಿರುವುವು.

ದುರ್ಜನರಂತೆ ಸಜ್ಜನರೂ ಎಲ್ಲಾ ಕೋಮಿನಲ್ಲಿಯೂ ಎಲ್ಲಾ ದೇಶಗಳಲ್ಲಿಯೂ ಎಲ್ಲಾ ವರ್ಗಗಳಲ್ಲಿಯೂ ಇದ್ದೇ ಇರುವರು. ಸಜ್ಜನರು ಸದಾಚಾರಿಗಳಾಗಿ ಸದ್ವರ್ತನೆಯನ್ನು ತೋರಿಸುವುದಾದರೆ ಅವರು ಯಾರೇ ಆಗಿರಲಿ ಅವರನ್ನು ನಾವು ನಿಷ್ಪಕ್ಷಪಾತದಿಂದ ಸನ್ಮಾನಿಸುವೆವು. ಹಾಗಲ್ಲದೆ ದುರ್ಜನರು ದುರ್ವರ್ತನೆಯನ್ನು ತೋರ್ಪಡಿಸಿ ದೇಶಕಂಟಕರಾದರೆ, ಅವರನ್ನು ನಿರ್ದಾಕ್ಷಿಣ್ಯದಿಂದಲೂ, ನಿರ್ಭೀತಿಯಿಂದಲೂ, ನಿಷ್ಪಕ್ಷಪಾತದಿಂದಲೂ ಖಂಡಿಸಿ ಅವರ ದುರ್ನಡತೆಯಿಂದ ದೇಶಕ್ಕೆ ಹಾನಿಯುಂಟಾಗದಂತೆ ಮಾಡಲು ನಮ್ಮ ಶಕ್ತಿಸಾಮರ್ಥ್ಯವನ್ನುಪಯೋಗಿಸಿ ಸಾಹಸಪಡುವೆವು.

ಕೆಲ ಕಾಲದ ಹಿಂದೆ ಬ್ರಾಹ್ಮಣ ವರ್ಗದ ಕೆಲ ಜನರು ದೇಶದಲ್ಲಿ ಗುಲ್ಲೆಬ್ಬಿಸಿ ಪುಂಡು ಜನರನ್ನು ಕಟ್ಟಿಕೊಂಡು ಸ್ವೇಚ್ಛಾನುಸಾರ ಹಾರಾಡಿದರು; ಸುಳ್ಳುಸುದ್ದಿಗಳನ್ನು ಪ್ರಕಟಿಸಿ, ನಮ್ಮ ದೇಶಕ್ಕೂ ನಮ್ಮ ಪ್ರಭುಗಳಿಗೂ ಅಪಯಶಸ್ಸು ಪ್ರಾಪ್ತವಾಗುವಂತೆ ಮಾಡಿದರು. ಆ ಕಾಲದಲ್ಲಿ ಕೆಲ ದುಷ್ಟ ಬ್ರಾಹ್ಮಣರು ಮಾಡುತ್ತಿದ್ದ ದುಷ್ಟ ಚಳವಳಿಯನ್ನು ಖಂಡಿಸಿ ನಾವು ಲೇಖಗಳನ್ನು ಬರೆದಿರುತ್ತೇವೆಯಲ್ಲದೆ ಬ್ರಾಹ್ಮಣ ಮತದವರೆಲ್ಲರೂ ದುಷ್ಟರೆಂದೂ, ಆ ಕಾರಣದಿಂದ ಆ ಮತದವರನ್ನು ಸಕಲರೂ ದ್ವೇಷಿಸಬೇಕೆಂದೂ ನಾವು ಬರೆದಿರುವುದಿಲ್ಲ. ರಾವ್‌ಬಹದ್ದೂರ್ ಎನ್. ಎಸ್. ನಂಜುಂಡಯ್ಯನವರಂತಹ ಸದ್ಗುಣಶೀಲರೂ, ರಾಜಭಕ್ತರೂ ಆದ ಬ್ರಾಹ್ಮಣರನೇಕರಿರುವರು. ಅಂತಹ ಬ್ರಾಹ್ಮಣರನ್ನು ನಾವು ಯಾವಾಗಲೂ ಸನ್ಮಾನಿಸುವೆವು. ಅಂತಹ ಸತ್ಪ್ರವರ್ತಕರಾದ ಬ್ರಾಹ್ಮಣರನ್ನು ದೂಷಿಸುವುದಕ್ಕಿಂತಲೂ ಹೇಯವಾದ ಕಾರ್ಯವು ಬೇರೊಂದಿರುವುದಿಲ್ಲ. ಹೀಗಿದ್ದರೂ ದೇಶಸೇವಾ ರಾಜಸೇವಾತತ್ಪರವಾದ ನಮ್ಮ ಧ್ಯೇಯದ ವಿಚಾರವಾಗಿ ಮಹಾಜನಗಳಲ್ಲಿ ತಪ್ಪುತಿಳವಳಿಕೆಯುಂಟಾಗುವಂತೆ ಕೆಲ ಪತ್ರಿಕೆಗಳು ನಮ್ಮಮೇಲೆ ಕತ್ತಿಕಟ್ಟಿ ನಿಷ್ಕಾರಣವಾಗಿಯೂ ನಿರಾಧಾರವಾಗಿಯೂ ನಮ್ಮನ್ನು ಅಲ್ಲಗಳೆಯಲು ಪ್ರಾರಂಭಿಸಿರುವುದು ಪವಿತ್ರವಾದ ಪತ್ರಿಕಾ ಸಂಪಾದಕರ ಲೇಖನಿಗೆ ಗೌರವವಲ್ಲವೆಂದೂ ಇಂತಹ ನೀಚತಮವಾದ ಗೊಡ್ಡುಬೆದರಿಕೆಗಳಿಗೆ ನಾವು ಅಂಜಿ ನಮ್ಮ ಪವಿತ್ರತಮವಾದ ರಾಜಸೇವಾ ದೇಶಸೇವಾ ಕಾರ್ಯಗಳನ್ನು ನಮ್ಮ ಶಕ್ತಿಸಾಮರ್ಥ್ಯವಿರುವವರೆಗೂ ಮಾಡದೆ ಬಿಡುವವರಲ್ಲವೆಂದೂ ಒತ್ತಿಹೇಳುತ್ತೇವೆ.

ಶ್ರೀಮನ್ಮಹಾರಾಜರವರ ಸಂಚಾರ.

ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರ ಮತ್ತು ದಿವಾನರ ಸಮೇತ ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳ ಕೆಲ ಭಾಗಗಳಲ್ಲಿ ಸಂಚರಿಸಿಕೊಂಡು ಬರಲು ನೆನ್ನೆಯ ರಾತ್ರಿ 9 ಗಂಟೆಗೆ ಹೆಚ್ಚುಕಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣ ಬೆಳಸಿದರು ಮತ್ತು ಈ ದಿನ ಬೆಳಗಿನಜಾವದಲ್ಲಿ ಕಡೂರನ್ನು ತಲುಪಿ ಅಲ್ಲಿಂದ ಮೋಟಾರು ಬಂಡಿಯಲ್ಲಿ ಹೊರಟು 10 ಗಂಟೆಗೆ ಚಿಕ್ಕಮಗಳೂರನ್ನು ಸೇರುವರು. ಅಲ್ಲಿ ಮಹಾಸ್ವಾಮಿಯವರು ಮ್ಯುನಿಸಿಪಲ್ ಕೌನ್ಸಿಲಿನವರಿಂದೊಪ್ಪಿಸಲ್ಪಡುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ತಕ್ಕುತ್ತರವನ್ನು ದಯೆಪಾಲಿಸಿ, ಧರ್ಮಪ್ರಕಾಶ ಅರಳಗುಪ್ಪೆ ಚಂದ್ರೇಗೌಡರು ಧರ್ಮಮಾಡಿರುವ 1 ಲಕ್ಷ ರೂ. ಗಳಿಂದ ಕಟ್ಟಿಸಲ್ಪಡುವ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಿ ಧರ್ಮಪ್ರಕಾಶರು ಸುಂದರವಾದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟೊಪ್ಪಿಸುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ಸಮಯೋಚಿತವಾದ ಮತ್ತು ಧರ್ಮಕರ್ತರ ಪ್ರಶಂಸಾತ್ಮಕವಾದ ಉತ್ತರವನ್ನು ದಯೆಪಾಲಿಸಿ ಬಿಡಾರಕ್ಕೆ ತೆರಳಿ ಮಾರನೆಯ ದಿನವೆಲ್ಲ ಅಲ್ಲಿದ್ದು ಸೋಮವಾರ ಚಿಕ್ಕಮಗಳೂರನ್ನು ಬಿಟ್ಟು ಮೋಟಾರುಬಂಡಿಯಲ್ಲಿ 38 ಮೈಲುದೂರದಲ್ಲಿರುವ ಹಾಸನವನ್ನು ಬೆಳಗಿನ 11 ಗಂಟೆಗೆ ತಲುಪುವರು. ಆದಿವಸ ಸಾಯಂಕಾಲ 5 ಗಂಟೆಯಲ್ಲಿ ಹಾಸನದ ಟವರ್ ಮ್ಯುನಿಸಿಪಾಲಿಟಿಯವರೂ ಡಿಸ್ಟ್ರಿಕ್ಟ್ ಬೋರ್ಡಿನವರೂ ಒಪ್ಪಿಸುವ ವಿಜ್ಞಾಪನಾಪತ್ರಿಕೆಗಳನ್ನು ಸ್ವೀಕರಿಸಿ ತಕ್ಕುತ್ತರವನ್ನಿತ್ತು ಅನಂತರ ಡಿಸ್ಟ್ರಿಕ್ಟ್ ಬೋರ್ಡಿನವರು, ಶ್ರೀ ಚಾಮರಾಜೇಂದ್ರ ಒಡೆಯರ ಹೆಸರಿನ ಮೇಲೆ ಕಟ್ಟಿಸುವ ಆಸ್ಪತ್ರೆಯ ಶಂಕು ಸ್ಥಾಪನೆಯನ್ನು ಮಾಡಿ ಆ ರಾತ್ರಿ ಹಾಸನದಲ್ಲೇ ಇದ್ದು ಮಾರನೆಯ ದಿನ ಮಧ್ಯಾಹ್ನ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡಿ ಹೊಳೇ ನರಸೀಪುರವನ್ನು 3-30 ಗಂಟೆಗೆ ತಲುಪಿ, ಅಲ್ಲಿ ಬೊಂಬಾಯಿನ ಇಂಜನೀಯರು ಶಾಖೆಯುದ್ಯೋಗದಲ್ಲಿರುವ ರಾವ್‌ಸಾಹೇಬ್ ಕೆ. ರಾಮಸ್ವಾಮಿಯವರು 50,000 ಸಾವಿರ ರೂ. ಗಳನ್ನು ವೆಚ್ಚಮಾಡಿ ತಮ್ಮ ಮಾತೃಶ್ರೀಯವರ ಹೆಸರಿನ ಮೇಲೆ ಸುಂದರವಾಗಿ ಕಟ್ಟಿಸಿರುವ ಹೆಂಗಿಯಾಸ್ಪತ್ರೆಯ ಆರಂಭೋತ್ಸವವನ್ನು ಜರುಗಿಸಿ ಅನಂತರ ರೈಲು ಬಂಡಿಯಲ್ಲಿ ಪ್ರಯಾಣಮಾಡಿ ರಾತ್ರಿ 8 ಗಂಟೆಗೆ ರಾಜಧಾನಿಯನ್ನು ತಲುಪುವರು. ಮಹಾಸ್ವಾಮಿಯವರ ಆಗಮನಾರ್ಥವಾಗಿ ಚಿಕ್ಕಮಗಳೂರಿನಲ್ಲಿ ಧರ್ಮಪ್ರಕಾಶ ಚಂದ್ರೇಗೌಡರು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ವಿಶಾಲವೂ, ಸುಂದರವೂ ಆದ ಚಪ್ಪರವನ್ನು ಹಾಕಿಸಿ ಮಹಾಪ್ರಭು ಸಹೋದರರ ಸ್ವಾಗತಕ್ಕೆ ತಕ್ಕ ಏರ್ಪಾಟನ್ನು ಮಾಡುತ್ತಿರುವರು. ಇದರಂತೆಯೇ ಹಾಸನದಲ್ಲೂ ಹೊಳೆನರಸೀಪುರದಲ್ಲೂ ಸ್ವಾಗತದೇರ್ಪಾಡು ಬಹಳ ಸಡಗರದಿಂದ ನಡೆಯುತ್ತಿರುವುವು.

ಅಲ್ವಾರು ಮಹಾರಾಜರ ಜೂಬಲಿಯುತ್ಸವ.

ಅಲ್ವಾರು ಸಂಸ್ಥಾನದ ಮಹಾರಾಜರವರ ಜ್ಯುಬಿಲಿಯುತ್ಸವವು ಅತಿ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ತತ್ಸಂಬಂಧವಾಗಿ ಬಂದಿದ್ದ ಯೂರೋಪ್ಯ ಮತ್ತು ಭಾರತೀಯ ಅತಿಥಿಗಳಿಗೆ ಕಳೆದ ಶನಿವಾರ ರಾತ್ರಿ ಒಂದು ದಿವ್ಯವಾದ ಅರಶೌಣವು ನಡೆದಿತು. 170 ಅತಿಥಿಗಳು ಬಂದಿದ್ದರು. ಆ ಕಾಲದಲ್ಲಿ ರಾಜರು ಭಾರತ ಸರ್ವಸೇನಾಧಿಪತಿಗಳೇ ಮೊದಲಾದ ಅತಿಥಿಗಳ ಮತ್ತು ಸಂಸ್ಥಾನಾಧಿಪತಿಗಳ ಶ್ರೇಯಸ್ಸನ್ನು ಕೋರಿ ಉಪನ್ಯಾಸ ಮಾಡಿದರು. ಅಲ್ವಾರ್ ಮಹಾರಾಜರ ಔದಾರ್ಯವನ್ನೂ, ಪ್ರಜಾಪ್ರೇಮವನ್ನೂ ಕುರಿತು ಲಾರ್ಡ್‌ಬರ್ಡ್‌ವುಡ್‌ರವರು ಮಾತನಾಡಿದರು. ಅಲ್ವಾರು ಮಹಾರಾಜರನ್ನು ನೋಡಿ ಭಾರತ ಸಂಸ್ಥಾನಾಧಿಪತಿಗಳು ಗರ್ವಪಡುತ್ತಾರೆಂದೂ, ನರೇಂದ್ರಮಂಡಲದಲ್ಲಿ ಈ ಮಹಾರಾಜರು ಅಮೂಲ್ಯರತ್ನವೆಂದೂ, ಭೂಪಾಲ ಸಂಸ್ಥಾನಾಧೀಶರಾದ ನವಾಬರೂ, ಅಲ್ವಾರ್ ಮಹಾರಾಜರು ಅತ್ಯುತ್ತಮ ಮೇಧಾವಿ ಸಂಪನ್ನರೆಂದು ಕೀರ್ತಿಶೇಷರಾದ ಮಾಂಟಿಗುರವರು ಹೇಳಿದ್ದ ವಾಕ್ಯವನ್ನು ತಮ್ಮ ಸ್ಮೃತಿಪಥಕ್ಕೆ ತರುತ್ತೇನೆಂದು ನವನಗರ್ ಸಂಸ್ಥಾನಾಧಿಪತಿಗಳಾದ ಜಾಂಸಾಹೇಬರವರು, ಇತರ ರಾಜರುಗಳೂ ಅಲ್ವಾರ್ ರಾಜರ ಪದವಿಯೌನ್ನತ್ಯವನ್ನೂ ಔದಾರ್ಯವನ್ನೂ ಕುರಿತು ಪ್ರಸ್ತಾಪಿಸಿದರು. ಭಾರತ ಅತಿಥಿಗಳ ಪರವಾಗಿ ಪ್ರಶಂಸಿಸುವಾಗ್ಗೆ ಭಾರತ ಸಂಸ್ಥಾನಗಳಿಗೂ, ಬ್ರಿಟಿಷ್ ಇಂಡ್ಯಾಕ್ಕೂ ವೈರುದ್ಧ್ಯವಿಲ್ಲವೆಂದು ಡಾಕ್ಟರ್ ಅನ್ಸಾರಿಯವರು ಹೇಳಿದರು. ಅತಿಥಿಗಳು ಪ್ರೇಮಪೂರ್ವಕವಾಗಿ ಮಾಡಿದ ಪ್ರಶಂಸೆಗೆ ಪ್ರತ್ಯುತ್ತರವನ್ನು ಕೊಡುವಾಗ್ಗೆ "ಪ್ರೇಮಕ್ಕಿಂತಲೂ ಅತಿಶಯವಾದ ವಸ್ತುವು ಬೇರೊಂದುಂಟೇ ಇಂತಹ ಪ್ರೇಮವನ್ನು ನನ್ನ ಮೇಲೆ ನೀವು ವರ್ಷಿಸುತ್ತಿರುವಿರಿ. ಬ್ರಿಟಿಷ್ ಇಂಡ್ಯಾಕ್ಕೂ, ಭಾರತ ಸಂಸ್ಥಾನಗಳಿಗೂ ನಿಜವಾದ ವೈರುದ್ಧ್ಯವೇನೂ ಇಲ್ಲವೆಂಬುದನ್ನು ನಾನು ಅಂಗೀಕರಿಸುತ್ತೇನೆ. ಆದರೆ ಭಾರತ ಸಂಸ್ಥಾನಗಳಲ್ಲಿ ವಾಸಿಸುವ ಭಾರತೀಯರೂ, ಬ್ರಿಟಿಷ್ ಇಂಡ್ಯಾ ಪ್ರಜೆಗಳಂತೆ ಸ್ನೇಹವಾತ್ಸಲ್ಯಾದಿ ಗುಣಗಳನ್ನು ಕಲಿತಿದ್ದಾರೆಂಬುದಕ್ಕೆ ನಿದರ್ಶನಗಳು ಬೇಕಾಗಿರುತ್ತವೆ. ಸಂಸ್ಥಾನಗಳಲ್ಲಿರುವವರ ಮತ್ತು ಬ್ರಿಟಿಷ್ ಇಂಡ್ಯಾದಲ್ಲಿರುವವರ ರಕ್ತವು ಒಂದೇ ಅಲ್ಲವೆ! ಆಂಗ್ಲ ಸಾರ್ವಭೌಮರವರ ಆಳ್ವಿಕೆಯಲ್ಲಿ ಈ ಮಹಾಸಾಮ್ರಾಜ್ಯವನ್ನು ಮಹೋನ್ನತವಾಗಿ ಮಾಡಲು ಪ್ರತಿಯೊಬ್ಬನೂ ಪಾಟುಪಡಬೇಕು. ಬ್ರಿಟಿಷ್ ಇಂಡ್ಯಾ ಪ್ರಜೆಗಳ ಅಭಿವೃದ್ಧಿಯನ್ನು ಅತ್ಯಧಿಕವಾಗಿ ಕೋರುತ್ತೇನೆ. ಭಾರತ ದೇಶದಲ್ಲಿ ಐಕಮತ್ಯವನ್ನು ಕೊಡದಿರುವ ದೇಶೀಯ ಸಂಸ್ಥಾನವಾವುದೂ ಇಲ್ಲವು. ನಾವೆಲ್ಲಿದ್ದರೂ ಅಂದರೆ ದೇಶೀಯ ಸಂಸ್ಥಾನದಲ್ಲಿದ್ದರೂ, ಬ್ರಿಟಿಷ್ ಇಂಡ್ಯಾದಲ್ಲಿದ್ದರೂ ನಮ್ಮ ವಿಧ್ಯುಕ್ತ ಕರ್ಮವನ್ನು ಚೆನ್ನಾಗಿ ಮಾಡಬೇಕಾದುದು ಧರ್ಮವು." ಎಂದು ಹೇಳಿದರು.

ಒಳದೇಶದ ವೃತ್ತಾಂತಗಳು.

ಮೈಸೂರಿನ ಚಿನ್ನದಗಣಿಗಳಿಂದ ತೆಗೆದ ಚಿನ್ನದ ಒಟ್ಟು ಹುಟ್ಟುವಳಿಯು 1926-27 ವರ್ಷದಲ್ಲಿ 216 ಲಕ್ಷ ರೂಪಾಯಿ. ಇದರಲ್ಲಿ ಮೈಸೂರು ಸರ್ಕಾರಕ್ಕೆ ಕೊಟ್ಟ ರಾಜಾದಾಯವು 12 ಲಕ್ಷ ರೂಪಾಯಿ.

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದ್ದ ಮ|| ಬಿ ನಾಗಪ್ಪನವರ ಮೇಲೆ ಮ|| ರಾಜುರವರು ಹೂಡಿದ್ದ ಮಾನನಷ್ಟದ ಮೊಕದ್ದಮೆಯು ರದ್ದಾಯಿತು. ಮ|| ನಾಗಪ್ಪನವರು ರಾಜುರವರಿಗೂ ಅವರ ತಂದೆಯವರಿಗೂ ಕ್ಷಮಾಪಣೆಯನ್ನು ಬರೆದುಕೊಟ್ಟರು.

ತಾ|| 17-1-1927 ರಲ್ಲಿ ವಿನೋದರತ್ನಾಕರ ಶ್ರೀಯುತ ಜಿ. ಎಚ್. ವೀರಣ್ಣನವರು ತಮ್ಮ ಸ್ವಗ್ರಾಮವಾದ ಗುಬ್ಬಿಯಲ್ಲಿ ಇತ್ತೀಚಿಗೆ ಸ್ಥಾಪಿಸಲ್ಪಟ್ಟಿರುವ 'ವೀರಶೈವ ತರುಣಸಂಘ'ದ ಫಂಡಿನ ಶ್ರೇಯೋಭಿವೃದ್ಧಿಗಾಗಿ ಒಂದುನೂರು ರೂಪಾಯಿ ಸಾಹಾಯಮಾಡಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಇದೇ ಜನವರಿ ತಾ|| 31 ನೇ ಗುರುವಾರ ಚಾಮರಾಜನಗರ ತಾಲ್ಲೂಕು ಮರಿಯಾಲಮಠದಲ್ಲಿ ವೀರಶೈವಪ್ರಮುಖರ ಸಭೆಯು ಸೇರಿ ನಂಜನಗೂಡು ಸಬ್‌ಡಿವಿಜನ್ನಿನ ವೀರಶೈವಸಭೆಯು ಇತಃಪರ ಪ್ರತಿವರ್ಷದಲ್ಲೂ ಯಾವುದಾದರೊಂದು ಸ್ಥಳದಲ್ಲಿ ನಿರುಪಾಧಿಕವಾಗಿ ನಡೆಯುವಬಗೆಗೆ ತಕ್ಕ ವ್ಯವಸ್ಥೆ ಮಾಡುವವರಾಗಿರುವರೆಂದು ತಿಳಿಯುತ್ತೇವೆ.

ದೊಡ್ಡಬಳ್ಳಾಪುರದ ಸಮೀಪದಲ್ಲಿರುವ ಘಾಟಿ ಸುಬ್ರಹ್ಮಣ್ಯದಲ್ಲಿ ಪ್ರತಿ ವರ್ಷವೂ ದೊಡ್ಡ ಜಾತ್ರೆಯು ನಡೆಯುವುದು. ಈ ಜಾತ್ರೆಯಲ್ಲಿ ದನಗಳ ಪ್ರದರ್ಶನವೂ ಮಾರಾಟವೂ ನಡೆಯುವುವು. ಈ ಪ್ರದರ್ಶನವು ಈ ವರ್ಷ ದಿವಾನ್‌ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯಿತು. ದನಗಳಲ್ಲಿ ಜೋಡಿ ಒಂದಕ್ಕೆ 50 ರೂ. ನಿಂದ 1,000 ರೂ. ವರೆಗೂ ಬೆಲೆಬಾಳುವ ರಾಸುಗಳು 80,000 ವರೆಗೂ ಬಂದಿದ್ದು ಹತ್ತು ಲಕ್ಷ ರೂಪಾಯಿನ ವ್ಯಾಪಾರವು ನಡೆಯಿತು.

ಬೆಂಗಳೂರು ನಾರ್ಮಲ್ ಸ್ಕೂಲಿನ ಉಪಾಧ್ಯಾಯರ ಪೈಕಿ ಕೆಲವರು ಶ್ರೀಮನ್ ಮಹಾರಾಜರವರಿಗೆ ಬೆಂಗಳೂರು ಗಲಭೆ ವಿಚಾರದಲ್ಲಿ ಒಪ್ಪಿಸಿದ ಬಿನ್ನವತ್ತಳಿಗೆಗೆ ರುಜುಹಾಕಿದ ತಪ್ಪಿಗಾಗಿ ಕೆಲಸದಿಂದ ನಿವೃತ್ತಿಮಾಡಲ್ಪಟ್ಟಿದ್ದರಷ್ಟೆ. ಅವರಲ್ಲಿ ಮ್ಯುನಸಿಪಲ್ ಸ್ಕೂಲಿನ ಉಪಾಧ್ಯಾಯನೊಬ್ಬನು ಸರ್ಕಾರದವರನ್ನು ಕ್ಷಮಾಪಣೆ ಬೇಡಿಕೊಂಡುದರಿಂದ ಆತನಿಗೆ ಅವನ ಕೆಲಸವು ಹಿಂತಿರುಗಿ ಕೊಡುಲ್ಪಟ್ಟಿರುವುದೆಂದು ಸುದ್ದಿಬಂದಿದೆ.

ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕೆಲಸ ಕಾರ್ಯಗಳನ್ನು ಇದುವರೆಗೂ ಸರ್ ವಿಶ್ವೇಶ್ವರಯ್ಯನವರು ನೋಡಿಕೊಳ್ಳುತ್ತಿದ್ದರು. ಇನ್ನು ಮುಂದೆ ಸರ್ಕಾರದ ಅಧಿಕಾರಿಗಳು ಈ ಕೆಲಸವನ್ನು ನೋಡಿಕೊಳ್ಳಬೇಕೆಂದು ತೀರ್ಮಾನವಾಗಿ ಸರ್ಕಾರದ ಮುಖ್ಯಕಾರ್ಯದರ್ಶಿಗಳಾದ ಮ|| ಎ. ಮಾಧವರಾಯರು ಸದರಿ ಕಾರ್ಖಾನೆಯ ಡೈರೆಕ್ಟರಾಗಿ ನಿಯಮಿಸಲ್ಪಡುವರೆಂದೂ ಸರ್ ವಿಶ್ವೇಶ್ವರಯ್ಯನವರು ಇತಃಪರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರೆಂದೂ ತಿಳಿದುಬಂದಿದೆ.

ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ರಾಜರಾಜೇಶ್ವರಿಹಾಲಿನವರು, ಸಂತೇಪೇಟೆಯಲ್ಲಿರುವ ಮ|| ಬಿ. ಎಸ್. ಸುಬ್ಬಣ್ಣನವರು. ಮದ್ರಾಸಿನ ಟೈಪ್ ಫೌಂಡರಿ ಮ|| ನಾರ್ಟನ್ ಅಂಡ್ ಕಂಪೆನಿಯವರು, ಮತ್ತು ಮದ್ರಾಸಿನ ಪೇಪರ್ ವ್ಯಾಪಾರಿಗಳಾದ ಮ|| ಸಿ. ಎ. ಡಿ. ಸ್ವಾಮಿ ಅಂಡ್‌ಕೊ ಯವರು ಸಚಿತ್ರವಾಗಿಯೂ ಅಂದವಾಗಿಯೂ ಮುದ್ರಣಮಾಡಿಸಿರುವ 1929 ನೆಯ ವರ್ಷದ ಕ್ಯಾಲಂಡರುಗಳನ್ನು ಸಂತೋಷದಿಂದ ಸ್ವೀಕರಿಸಿರುತ್ತೇವೆ.

ಕೃಷ್ಣರಾಜಪೇಟೆ ತಾ|| ಹೇಮಗಿರಿ ಟಿ. ನರಸೀಪುರ ತಾ|| ಮುಡುಕುತೊರೆ ಮತ್ತು ಮೂಗೂರು ಗ್ರಾಮಗಳ ಅಕ್ಕಪಕ್ಕ ಗ್ರಾಮಗಳಲ್ಲಿ ಕಾಲರ ಉಪದ್ರವವಿರುವುದರಿಂದ ಈ ಸ್ಥಳಗಳಲ್ಲಿ ನಡೆಯತಕ್ಕ ಜಾತ್ರೆಗಳನ್ನು ನಿಲ್ಲಿಸಿರುವುದಾಗಿ ಇದೇ ಜನವರಿ ತಾ|| 8 ರಲ್ಲಿ ಅಪ್ಪಣೆಮಾಡಲ್ಪಟ್ಟಿದ್ದಿತು. ಆದರೆ ಈಗ ಮೇಲ್ಕಂಡ ಸ್ಥಳಗಳಲ್ಲಿ ಜಾತ್ರೆ ನಡೆಯಬಹುದೆಂದೂ ಸಾಂಕ್ರಾಮಿಕ ಜಾಡ್ಯಗಳಿರತಕ್ಕ ಸ್ಥಳಗಳಿಂದ ಬರುವ ಜನರನ್ನು ಮಾತ್ರ ಸೇರಿಸಕೂಡದೆಂದೂ ಪ್ರಭುತ್ವದವರ ಅಪ್ಪಣೆಯಾಗಿರುತ್ತದೆಂದು ಮೈಸೂರು ಡಿ|| ಮ್ಯಾಜಿಸ್ಟ್ರೇಟರು ಮತ್ತು ಡೆ|| ಕಮೀಷನರು ತಿಳಿಸಿರುತ್ತಾರೆ.

1928-29 ನೆಯ ವರ್ಷದಲ್ಲಿ ಅಸೆಸರುಗಳಾಗಿಯೂ ಜ್ಯೂರಿಗಳಾಗಿಯೂ ಇರಲು ಸೂಚಿಸಲ್ಪಟ್ಟಿರುವ ದೊಡ್ಡಮನುಷ್ಯರುಗಳ ಹೆಸರುಗಳು 1928 ನೇ ನವಂಬರ್ ತಾ|| 8 ಮತ್ತು 29 ರ ಸರ್ಕಾರಿ ಗೆಜೆಟ್ಟಿನ 1325 ರಿಂದ 1331 ನೆಯ ಮತ್ತು 1273 ರಿಂದ 1277 ನೆಯ ಪುಟಗಳ ವರೆಗೂ ಪ್ರಕಟಿಸಲ್ಪಟ್ಟಿರುತ್ತವೆ. ಈ ವಿಚಾರದಲ್ಲಿ ಆಕ್ಷೇಪಗಳೇನಾದರೂ ಇದ್ದಲ್ಲಿ ಅವನ್ನು ಇದೇ ಜನವರಿ ತಾ|| 31 ರ ಮಧ್ಯಾಹ್ನ ರಾಜಧಾನಿಯ ಶೆಷನ್ಸು ಕೋರ್ಟಿನಲ್ಲಿ ಶೆಷನ್ಸ್ ಜಡ್ಜಿಯವರೂ ಡೆಪ್ಯುಟಿ ಕಮೀಷನರೂ ಕೇಳುವರು. ಆದುದರಿಂದ ಆ ದಿವಸ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಹೆಸರಿನವರು ಬಂದು ಹೇಳಿಕೊಳ್ಳಬಹುದಾಗಿ ಅಪೇಕ್ಷಿಸಲ್ಪಟ್ಟಿರುತ್ತಾರೆ.

ನವಾಬ್ ಕಲಾಮಿಯವರು ತಮ್ಮ ಭಿನ್ನಾಭಿಪ್ರಾಯವನ್ನು ವಿಶ್ವೇಶ್ವರಯ್ಯ ಸಮಿತಿಯವರಿಗೆ ತಿಳಿಸಿರುವರಷ್ಟೆ. ಇದನ್ನು ವಿಮರ್ಶೆಮಾಡಿ ಸರ್ಕಾರಕ್ಕೆ ತಿಳಿಸಲೋಸುಗ ಬೆಂಗಳೂರಿನಲ್ಲಿ ಮೊನ್ನೆ ಮಂಗಳವಾರ ಸದಸ್ಯರೆಲ್ಲರೂ ಸಭೆಸೇರಿ ಚರ್ಚೆಮಾಡಿದರು. ಮ|| ಕಲಾಮಿಯವರಿಗೆ ವರದಿಯನ್ನು ಪರಿಶೀಲಿಸಲು ಸಾಕಾದಷ್ಟು ಅವಕಾಶವನ್ನು ಕೊಡಲಿಲ್ಲವೆಂದೂ, ಮುಸಲ್ಮಾನರು ಮೊದಲು ಹಿಂದುಗಳಮೇಲೆ ಬೀಳಲಿಲ್ಲವೆಂದೂ ನವಾಬರವರು ಅಭಿಪ್ರಾಯಪಟ್ಟಿರುವರಂತೆ, ಗೋಪ್ಯದಲ್ಲಿ ಸಾಕ್ಷ್ಯವನ್ನು ಕೊಟ್ಟವರ ಹೇಳಿಕೆಗೆ ಸಂರಕ್ಷಣೆಯನ್ನು ಕೊಡುವ ಕಾಯಿದೆಯನ್ನು ಸರ್ಕಾರದವರು ಕೈಕೊಳ್ಳಬೇಕೆಂದು ಸಮಿತಿಯವರು ತಮ್ಮ ಅಭಿಮತವನ್ನು ತಿಳಿಸಿರುವರಂತೆ. ನವಾಬ್ ಕಲಾಮಿಯವರ ಟಿಪ್ಪಣಿಯ ಸಲುವಾಗಿ ವರದಿಯನ್ನು ಬದಲಾಯಿಸಬೇಕೆಂದು ಕೆಲ ಸದಸ್ಯರು ಸೂಚಿಸಲು ಪುನಃ ವರದಿಯ ತಂಟೆಗೆ ಹೋಗುವುದು ಯುಕ್ತವಲ್ಲವೆಂದು ಬಹುಮತದಿಂದ ವ್ಯವಸ್ಥೆಯಾಯಿತಂತೆ. ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಕಲಾಪಗಳು ಇಲ್ಲಿಗೆ ಮುಕ್ತಾಯವಾದುವು.

ಭರತಖಂಡದ ವೃತ್ತಾಂತಗಳು.

ಡಾ|| ಅಭಯಂಕರ್ರವರ ಕುಮಾರ್ತಿಯು ಸೂರತ್ತಿನ ಯುವಜನ ಸಭೆಯಲ್ಲಿ ಬೈಸಿಕಲ್‌ಸ್ವಾರಿಯಲ್ಲೂ, ಗಾನದಲ್ಲೂ ವ್ಯಾಸರಚನೆಯಲ್ಲೂ ಪ್ರಥಮ ಬಹುಮಾನವನ್ನು ಹೊಂದಿದುದಲ್ಲದೆ ಪಾಂಡಿತ್ಯದ ಪದಕವನ್ನು ಪಡೆದರು.

ಈಗ ವೈಸ್‌ರಾಯರಾಗಿರುವ ಇರ್ವಿನ್‌ರವರು 6 ತಿಂಗಳ ರಜದಮೇಲೆ ಇಂಗ್ಲೆಂಡಿಗೆ ಬರುವ ಜೂನ್ ತಿಂಗಳ ಕಡೆಯಲ್ಲಾಗಲಿ ಜುಲೈ ತಿಂಗಳ ಪ್ರಾರಂಭದಲ್ಲಾಗಲಿ ಹೋಗುತ್ತಾರೆಂದೂ ಆಗ ಮದರಾಸಿನ ಗೌರ್ನರವರಾದ ಲಾರ್ಡ್ ಗೋಷೆನ್‌ರವರು ವೈಸ್‌ರಾಯರಾಗಿ ನಿಯಮಿಸಲ್ಪಡುವರೆಂದೂ ತಿಳಿಯಬರುತ್ತದೆ.

ಅಲಹಾಬಾದಿನ ವಾಸಿಯಾದ ಗಂಗೇಂದ್ರನಾಥಶರ್ಮನೆಂಬ ವೈದ್ಯನು ತನ್ನ ಸೇವಕನನ್ನು ಕೊಲೆಮಾಡಿ ಅವನನ್ನು ಚೂರು ಚೂರಾಗಿ ಕತ್ತರಿಸಿ ಹಾಸಿಗೆಯಲ್ಲಿ ಸುತ್ತಿ ದೂರದೇಶಕ್ಕೆ ಸಾಗಿಸುವ ಪ್ರಯತ್ನವನ್ನು ಮಾಡಿ ರೈಲ್ವೆಗಾಡಿಯಲ್ಲಿ ಸಿಕ್ಕಿಬಿದ್ದನಾದುದರಿಂದ ನ್ಯಾಯಸ್ಥಾನದಲ್ಲಿ ವಿಚಾರಣೆನಡೆದು ಮರಣದಂಡನೆಗೆ ಗುರಿಮಾಡಲ್ಪಟ್ಟಿರುವನು.

ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆಯ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ 25 ವರ್ಷ ವಯಸ್ಸಿನ ಎಡ್ವಿನ್ ಡಿಸಿಲ್ವಾ ಎಂಬವನು 17 ವರ್ಷ ವಯಸ್ಸಿನ ಎಪ್ಪಿಡಿಸಿಲ್ವ ಎಂಬ ಕನ್ಯೆಯ ಪ್ರೇಮಾಸ್ಪದನಾಗಿದ್ದನು. ಆದರೆ ಆಕೆಯ ತಾಯಿಯು ಅವರಿಬ್ಬರ ವಿವಾಹಕ್ಕೊಡಂಬಡಲಿಲ್ಲವಾಗಿ ಎಡ್ವಿನ್ ಯುವಕನು ಆಗ್ರಹಪರವಶನಾಗಿ ಕನ್ಯೆಯನ್ನು ಕತ್ತಿಯಿಂದ ಹೊಡೆದು ಸಾಯಿಸಿ ತಾನು ವಿಷಪಾನಮಾಡಿ ಸತ್ತನು.

ಅರ್ಘನ್‌ರಾಜ ವಂಶಕ್ಕೆ ಸೇರಿದವರನೇಕರು ಹಿಂದುಸ್ಥಾನದಲ್ಲಿ ವಾಸಿಸುತ್ತಿರುವರು. ಇವರ ಪೈಕಿ ರಾಜಕುವರರು ಒಂಭತ್ತುಮಂದಿ ಸೆರೆಹಿಡಿಯಲ್ಪಟ್ಟು ಬರ್ಮಾದೇಶಕ್ಕೆ ಕಳುಹಲ್ಪಟ್ಟಿರುವರು. ಅಫ್ಘಾನಿಸ್ಥಾನದ ರಾಜಕೀಯ ಪರಿಸ್ಥಿತಿಯು ಚೆನ್ನಾಗಿರುವುದಿಲ್ಲವೆಂದು ತಿಳಿದು ಬ್ರಿಟಿಷ್ ಸರ್ಕಾರದವರು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುವರು. ಹಿಂದುಸ್ಥಾನದಿಂದ ಯಾರೂ ಅಫ್ಘಾನಿಸ್ಥಾನಕ್ಕೆ ಹೋಗಲಾಗದೆಂದು ಸರ್ಕಾರದವರು ಅಪ್ಪಣೆ ಮಾಡಿರುವರು.

ತಮ್ಮ ಕೂಡ ಮಾಡಿಕೊಂಡಿರುವ ಒಡಂಬಡಿಕೆಯ ಪ್ರಕಾರ ಬ್ರಿಟಿಷ್ ಪ್ರಭುತ್ವದವರು ನಡೆದುಕೊಳ್ಳಬೇಕೆಂದೂ ಸಂಸ್ಥಾನಾಧೀಶ್ವರರುಗಳು ಕೋರುತ್ತಾರೆಂದು, ಅದನ್ನು ಬ್ರಿಟಿಷ್ ಪ್ರಭುತ್ವದವರೂ ಪ್ರಜೆಗಳು ಅನುಮೋದಿಸಬೇಕೆಂದೂ "ಮಾರ್ನಿಂಗ್ ಪೋಸ್ಟ್" ಪತ್ರಿಕೆಯ ಸುದ್ದಿಗಾರನು ಬರೆದಿರುವುದರಮೇಲೆ ಆ ಪತ್ರಿಕೆಯು ಅದನ್ನು ಸಮರ್ಥಿಸಿ ಅಗ್ರಲೇಖನವನ್ನು ಬರೆದಿರುತ್ತದೆ. ಸಂಸ್ಥಾನಾಧೀಶ್ವರರು ಎಷ್ಟೋ ಸ್ನೇಹದಿಂದ ವರ್ತಿಸುತ್ತಿದ್ದಾರೆಂದೂ, ಇಂಡ್ಯಾದಲ್ಲಿರುವ ಬ್ರಿಟಿಷ್ ಪ್ರಭುತ್ವಕ್ಕಿಂತ ಇವರೇ ಹೆಚ್ಚು ಸ್ನೇಹದಿಂದಿರುತ್ತಾರೆಂದೂ ಬರೆದಿರುತ್ತದೆ.

ಪೂನಾ ಪಟ್ಟಣದಲ್ಲಿ ರಾಧಾಬಾಯಿ ಎಂಬಾಕೆಗೆ ಇಬ್ಬರು ಮಕ್ಕಳು. ಇವರು ತಾಯಿಯನ್ನು ಬಿಟ್ಟು ವಾಸಿಸುತ್ತಿದ್ದರು. ಇದರಿಂದ ದುಃಖಿತಳಾಗಿ ರಾಧೆಯು ತನ್ನ ಜೊತೆಗಾತಿಯೊದ ಸಿಂಗಳಿಗೆ ಹೇಳಿಕೊಂಡಳು. ಈಕೆಯು ತನಗೆ ಪರಿಚಿತನಾದ ಋಷಿಯಲ್ಲಿಗೆ ಕರೆದೊಯ್ದಳು. ಆತನು ರಾಧೆಯ ಆಭರಣಗಳನ್ನೆಲ್ಲಾ ಉಪಾಯಾಂತರದಿಂದ ಕಸುಕೊಂಡುದಲ್ಲದೆ ಆಕೆಗೆ ವ್ಯಾಮೋಹದ ಒಂದುಗುಳಿಗೆಯನ್ನು ಕೊಟ್ಟು ಪ್ರಜ್ಞೆತಪ್ಪಿಸಿ ಅತ್ಯಾಚಾರ ನಡೆಸಿದನೆಂದು ಪೋಲೀಸಿಗೆ ತಿಳಿಸಿರುವಳು. ಈ ಸನ್ಯಾಸಿಯು ಸ್ಫುರದ್ರೂಪಿಯಾಗಿರುವನೆಂದೂ ಇದೇ ರೀತಿಯಲ್ಲಿ ಅನೇಕ ಸ್ತ್ರೀಯರನ್ನು ಮೋಸಗೊಳಿಸಿರುವನೆಂದೂ ತಿಳಿದುಬಂದಿದೆ.

ಅಮೇರಿಕೆಯ ಸ್ತ್ರೀಯೊಬ್ಬಳು ಹಿಂದುಗಳ ನಾಟ್ಯಶಾಸ್ತ್ರಾನುಸಾರ ನಾಟ್ಯವನ್ನು ಕಲಿಯಲೋಸುಗ ತಲಚೇರಿಗೆ ಬಂದಿರುವಳಂತೆ. ಪಾಶ್ಚಾತ್ಯ ಸ್ತ್ರೀಯರಿಗೆ ನಾಟ್ಯದಲ್ಲಿ ತುಂಬ ಅಭಿರುಚಿಯುಂಟೆಂಬುದಕ್ಕೆ ಇದೊಂದು ನಿದರ್ಶನವಾಗಿರುವುದು. ಅವರಲ್ಲಿ ಸದ್ಗೃಹಿಣಿಯರಿಗು ಸಹ ನಾಟ್ಯವೊಂದೇ ಅಲ್ಲದೆ ಇತರ ಅಂಗಸಾಧನೆಗಳಲ್ಲಿಯೂ ಅಭಿರುಚಿಯಿರುವುದು. ಇದರಿಂದ ಅವರು ವಯಸ್ಕರಾದಾಗ್ಯೂ ತಮ್ಮ ಯೌವನವನ್ನು ಕಾಪಾಡಿಕೊಂಡಿರುವರು. ಪ್ರದರ್ಶನಕ್ಕಲ್ಲದಿದ್ದರೂ ಆರೋಗ್ಯಲಾಭಕ್ಕಾಗಿಯೂ, ದೇಹಧಾರಾಢ್ಯಕ್ಕಾಗಿಯೂ ಹಿಂದು ಸ್ತ್ರೀಯರು ನಾಟ್ಯವೇ ಮೊದಲಾದ ಅಂಗಸಾಧನೆಗಳನ್ನು ಅಭ್ಯಾಸಮಾಡುವುದು ಉತ್ತಮವೆಂದು ಕುಚ್‌ಬಿಹಾರಿನ ಮಹಾರಾಣಿಯವರು ಹೇಳಿರುತ್ತಾರೆ.

ಸೈಮನ್ ಸಮಿತಿಯವರು ಕಳೆದ 20 ನೇ ತಾರೀಖು ಕಲ್ಕತ್ತೆಗೆ ಹೋದಾಗ ರಾಷ್ಟ್ರೀಯ ಭಕ್ತರು 20,000 ಜನರನ್ನು ಸೇರಿಸಿ ಬಹಿಷ್ಕಾರ ಪ್ರದರ್ಶನವನ್ನು ಮಾಡಿದರೆ "ಬ್ರಿಟಿಷ್ ಸಾಮ್ರಾಜ್ಯತ್ವವು ನಾಶವಾಗಲಿ," "ಕ್ರಾಂತಿಯು ಹೊತ್ತಿಬೇಯಲಿ," ಎಂಬ ಆಕ್ಷೇಪಣೀಯ ವಿಚಾರಗಳನ್ನು ಬಾವುಟಗಳ ಮೇಲೆ ಬರೆದು ಪ್ರದರ್ಶಿಸುತ್ತಿದ್ದವರನ್ನು ಪೋಲೀಸು ಅಧಿಕಾರಿಗಳು ಎಚ್ಚರಿಸಿ ಆ ಬಾವುಟಗಳನ್ನು ಪ್ರದರ್ಶಿಸಕೂಡದೆಂದು ಹೇಳಿದಾಗ್ಯೂ ಅವರು ಅದಕ್ಕೆ ಕಿವಿಗೊಡದಿರಲು ಅವರನ್ನು ಸೆರೆಹಿಡಿದರು. ಮತ್ತೆ ಕೆಲವು ಬಾವುಟಗಳಲ್ಲಿ "ಬಂಡವಾಳಸ್ಥರಿಗೆ ವಿನಾಶವಾಗಲಿ," "ರಷ್ಯಾದೇಶದ ಪ್ರಜಾಪ್ರಭುತ್ವವು ದೀರ್ಘಾಯುವಾಗಲಿ," "ಸ್ವೇಚ್ಛಾಪ್ರಭುತ್ವವು ಕೊನೆಗಾಣಲಿ," ಎಂದು ಬರೆಯಲ್ಪಟ್ಟಿತ್ತು. ಬಹಿಷ್ಕಾರಿಗಳು ಶೋಕಸೂಚಕವಾದ ಕರೀಬಾವುಟಗಳನ್ನು ಹಿಡಿದಿದ್ದರು.

ದೇಶಾಟನೆಗಾಗಿ ಪೃಥ್ವಿಯನ್ನೆಲ್ಲ ಸುತ್ತಿಕೊಂಡುಹೋಗಲು ಹಿಂದುಸ್ಥಾನಕ್ಕೆ ಬಂದಿದ್ದ ಬ್ರಿಟಿಷ್ ಸ್ತ್ರೀಯೊಬ್ಬಳು ಮಹಾತ್ಮ ಗಾಂಧಿಯವರನ್ನು ಸಂದರ್ಶಿಸಿ ಅವರ ಸತ್ಯಸಂಧತೆಯನ್ನೂ, ನಿಷ್ಪೃಹತೆಯನ್ನೂ ಕೊಂಡಾಡಿ ಅವರಂತಹ ಮಹಾಪುರುಷರು ಪೃಥ್ವಿಯಲ್ಲಿನ್ನಿಲ್ಲವೆಂದು ಹೇಳಿರುವಳು. ದೇಹ ಬಲಗುಂದಿದಾಗ್ಗೂ ಅವರು ಎಂದಿಗೂ ಎದೆಗುಂದಿದವರಲ್ಲವೆಂದೂ, ಅವರಷ್ಟು ಧೈರ್ಯ ಸಾಹಸವುಳ್ಳವರು ಬೇರೊಬ್ಬರಿಲ್ಲವೆಂದೂ ರಾಜಕೀಯ ವಿಚಾರದಲ್ಲಿ ನಿರ್ಮಲಹೃದಯರೆಂದೂ, ಪೂರ್ಣ ದೇಶಾಭಿಮಾನಿಗಳೆಂದೂ ಅಭಿಪ್ರಾಯಪಟ್ಟಿರುವಳು. ಗಾಂಧಿಜಿಯವರು 1930 ರಲ್ಲಿ ಇಂಗ್ಲೆಂಡಿಗೆ ಹೋಗುವರಂತೆ. ಅಲ್ಲಿ ಭಾಷಣಗಳನ್ನು ಮಾಡಲು ಚೈತನ್ಯವಿಲ್ಲದವರಾದಾಗ್ಯೂ ಬ್ರಿಟಿಷ್ ಮುಂದಾಳುಗಳನೇಕರೊಡನೆ ಸಂಭಾಷಣೆಮಾಡಿ ಹಿಂದುಸ್ಥಾನದ ಭವಿಷ್ಯತ್ ಸ್ಥಿತಿಯ ವಿಚಾರವನ್ನು ಚರ್ಚಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

ವಿದೇಶದ ವೃತ್ತಾಂತಗಳು.

ಹಾಂಕಾಂಗಿನಲ್ಲಿ ಚೀನಾ ಹೊಗೆ ಹಡಗೊಂದು ಬಂಡೆಗೆ ತಗಲಿ ಅದರೊಳಗಿದ್ದವರಲ್ಲಿ 350 ಜನರು ಜಲಸಮಾಧಿಯನ್ನು ಹೊಂದಿ 26 ಜನರು ಮಾತ್ರ ಉಳಿದುಕೊಂಡಿರುವರು.

ತುರ್ಕಿಸ್ಥಾನದಲ್ಲಿ ದಂಗೆಯು ಪ್ರಬಲವಾಗುತ್ತಿರುವುದು. ಸರ್ಕಾರದ ಸೈನಕ್ಕೂ ದಂಗೆಕೋರರಿಗೂ ವಿಶೇಷ ನಷ್ಟವಾಗಿರುವುದಾದರೂ ಶಾಂತಿಯಾಗುವ ಸಂಭವವು ಇನ್ನೂ ತೋರುತ್ತಿರುವುದಿಲ್ಲ.

ಕಳೆದ ಡಿಶಂಬರು ಕಡೆಯ ವಾರದ ವರೆಗೆ 2,49,500 ಮಂದಿ ಕೆಲಸವಿಲ್ಲದಿದ್ದರು. ಜನವರಿ ತಾ|| 7 ರಲ್ಲಿ 68,130 ಮಂದಿ ಕಡಮೆಯಾಯಿತು. ಒಟ್ಟು ಜನರ ಸಂಖ್ಯೆ 14,52,600 ಇದರಲ್ಲಿ 2,20,531 ಕಳೆದವರ್ಷಕ್ಕಿಂತ ಹೆಚ್ಚು.

ಜಪಾನ್ ಸಮುದ್ರದಲ್ಲಿ ಒಂದು ಸಣ್ಣ ದ್ವೀಪವಿರುವುದು. ಇದರ ಹೆಸರು "ಮಿಯಾಜಿಮಾ" ಎಂದು. ಈ ದ್ವೀಪದಲ್ಲಿ ಯಾರೂ ಹುಟ್ಟಲೂ ಬಾರದು, ಸಾಯಲೂಬಾರದೆಂದು ಕಾಯಿದೆ ಇರುವುದು. ಈ ದ್ವೀಪವನ್ನು ದೇವತೆಗಳ ವಾಸಕ್ಕಾಗಿ ಬಿಟ್ಟಿರುವರಂತೆ.

ಎಲ್ಯೂಮಿನಮ್ ಪಾತ್ರೆಯಲ್ಲಿ ಅಡಿಗೆ ಮಾಡಿದರೆ ಆಹಾರ ಪದಾರ್ಥಗಳಲ್ಲಿ ಎಲ್ಯೂಮಿನಮ್ ಲೋಹವು ಸೇರುತ್ತದೆ. ಈ ಸತ್ವವು ವಿಷವು; ಆದ್ದರಿಂದ ಈ ಪಾತ್ರೆಗಳನ್ನು ಪಯೋಗಿಸಲಾಗದೆಂದು 'ಹೆಲ್ತ್‌ಮೆಸೇಜೆಸ್' ಎಂಬ ಆರೋಗ್ಯಪತ್ರಿಕೆಯಲ್ಲಿ ಸಪ್ರಮಾಣ ಪ್ರತಿಪಾದಿಸೋಣಾಗಿದೆ.

ಪ್ಯಾರಿಸ್‌ಪಟ್ಟಣದ ನಾಟಕ ಶಾಲೆಯ ಬಳಿ ಪೋಲೀಸಿನವರೂ ರಾಜಪಾಲನವಾಗಬೇಕೆಂದು ಕೋರುವವರಿಗೂ ಬಡಿದಾಟವಾಗಿ ಪೋಲೀಸಿನವರಲ್ಲಿ 5 ಮಂದಿಗಳಿಗೇಟುಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು ರಾಜಪಾಲನಾಪೇಕ್ಷಿಗಳಲ್ಲಿ 6 ಮಂದಿ ಸೆರೆ ಹಿಡಿಯಲ್ಪಟ್ಟಿರುವರು.

ಕೆಲವರಿಗೆ ಕಾರಣಾಂತರಗಳಿಂದ ಸುಖವಾದ ನಿದ್ರೆಯು ಲಭಿಸುವುದಿಲ್ಲ. ಇಂಥವರು ಕಪ್ಪು ಬಟ್ಟೆಯನ್ನು ಹಾಸಿ, ಕಪ್ಪು ಬಟ್ಟೆಯನ್ನು ಹೊದೆದು, ಕಪ್ಪು ಬಟ್ಟೆಯ ಪರದೆಯನ್ನು ಕಟ್ಟಿಕೊಂಡು ಮಲಗಿದರೆ ಸುಖನಿದ್ರೆಯು ಪ್ರಾಪ್ತವಾಗುವುದೆಂದು ಇಟಲಿ ದೇಶದ ವೈದ್ಯಶಾಸ್ತ್ರಜ್ಞರೊಬ್ಬರು ಪ್ರಕಟಿಸಿರುತ್ತಾರೆ.

ಬಂದೀಖಾನೆಗಳಲ್ಲಿರುವ ಸ್ತ್ರೀ ಖೈದಿಗಳ ರಕ್ಷಣೆಗೂ, ನಿರ್ಗತಿಕರಾದ ಹೆಂಗಸರು ಹೆಣ್ಣುಮಕ್ಕಳ ರಕ್ಷಣೆಗೂ ಪೋಲೀಸ್ ಸ್ತ್ರೀ ಸೈನ್ಯವು ಆವಶ್ಯಕವೆಂದು ಕಲ್ಕತ್ತೆಯ ಪೋಲೀಸ್ ಇಲಾಖೆಯವರಿಗೆ ಲಂಡನ್ ನಗರದ ಸ್ತ್ರೀ ಪೋಲೀಸ್ ಸೈನ್ಯಾಧಿಕಾರಿಯಾದ ಮಿಸೆಸ್ ಸ್ಟಾನ್ಲೆ ಎಂಬಾಕೆಯು ತಿಳಿಸಿರುತ್ತಾರೆ.

ಸರ್ ಕೆ. ವಿ. ರೆಡ್ಡಿನಾಯಿಡುಯವರು ದಕ್ಷಿಣಾಫ್ರಿಕೆಯನ್ನು ತಲುಪಿದರು. ಆಕ್ಟಿಂಗ್ ಬ್ರಿಟಿಷ್ ಕೌನ್ಸಲರೂ ಭಾರತ ಸಂಘದವರೂ ರೆಡ್ಡಿಯವರನ್ನು ಸುಸ್ವಾಗತಿಸಿದರು. ಶಾಸ್ತ್ರಿಗಳ ಕಾರ್ಯವನ್ನು ಪ್ರಶಂಸಿಸಿದುದು ಮಾತ್ರವಲ್ಲದೆ ದಕ್ಷಿಣಾಫ್ರಿಕೆಯ ಕಮಿಷನರವರ ತೀರ್ಮಾನವನ್ನೂ ಕೊಂಡಾಡಿದರು. ಇಂಡೋಯೂನಿಯನ್ ಸಂಬಂಧವು ಮುಂದೆ ಇನ್ನೂ ಅಭಿವೃದ್ಧಿಯಾಗುವುದಾಗಿ ಆಶಿಸುತ್ತೇನೆಂದು ಹೇಳಿದರು.

ಕಾಂದಹಾರಿಗಳ ಸಹಾಯದಿಂದ ಅಮಾನುಲ್ಲಾಖಾನ್‌ರವರು ಯುದ್ಧಸನ್ನದ್ಧರಾಗಿ ಕಾಬೂಲಿನಮೇಲೆ ದಂಡೆತ್ತಿ ಹೊರಟಿರುವರು. ತಾವು ರಾಜ್ಯಪರಿತ್ಯಾಗಮಾಡಿದ್ದುದನ್ನು ಹಿಂದಕ್ಕೆ ತೆಗೆಕೊಂಡು ಪುನಃ ರಾಜಪದವಿಯನ್ನು ಸ್ವೀಕರಿಸುವರು. ಘಜನಿ ಮತ್ತು ಕಾಂದಹಾರ ಪ್ರಾಂತಗಳ ಜನರೆಲ್ಲರೂ ಅಮಾನುಲ್ಲಾರವರ ಪರವಾಗಿ ಕಾದಾಡಲು ಸಿದ್ಧರಾಗಿರುತ್ತಾರೆ. ತಮ್ಮ ಸಹೋದರರಾದ ಇನಾಯತುಲ್ಲಾಖಾನರಿಗೆ ರಾಜ್ಯವನ್ನೊಪ್ಪಿಸಿ ಕಾಂದಹಾರಿಗೆ ಬಂದ ಅಮಾನುಲ್ಲರವರು, ಕಾಬೂಲು ದಂಗೆಕೋರರವಶವಾದುದನ್ನೂ, ಇನಾಯತುಲ್ಲಾರವರ ಉಚ್ಚಾಟನೆಯನ್ನೂ ತಿಳಿದು ಆಗ್ರಹಗೊಂಡು ಕಾಬೂಲನ್ನು ಪುನಃ ವಶಪಡಿಸಿಕೊಳ್ಳಲುಜ್ಜುಗಿಸಿರುವರು. ಅಫ್ಘಾನಿಸ್ಥಾನದಲ್ಲಿ ಮುಂದೆ ಶಾಂತಿಸ್ಥಾಪನೆಯಾಗಿ ರಾಜ್ಯಭಾರವು ಕ್ರಮದಿಂದ ನಿರ್ವಹಿಸಲ್ಪಡಬೇಕಾಗಿದ್ದರೆ ದಕ್ಷರಾದ ಅಮಾನುಲ್ಲರವರೇ ರಾಜರಾಗಬೇಕು. ಹಾಗಿಲ್ಲದಿದ್ದರೆ ರಾಜ್ಯದಲ್ಲಿ ಅನಾಯಕತ್ವವು ತಪ್ಪಲಾರದು.

ಈಗ ನಡೆಯುತ್ತಿರುವ ಪಾರ್ಲಿಮೆಂಟಿನ ಕಡೇ ಅಧಿವೇಶನವು ಕಳೆದ ಮಂಗಳವಾರ ಪ್ರಾರಂಭವಾಯಿತು. ಕ್ರಿಸ್‌ಮಸ್ ಹಬ್ಬವಾದ ಮೇಲೆ ಸಭೆಯು ಕೂಡಿದುದು ಇದೇ ಮೊದಲು. ಬರುವ ಮೇ ತಿಂಗಳ ಮಧ್ಯದಲ್ಲಿ ಪಾರ್ಲಿಮೆಂಟ್ ಸಭೆಯು ಪೂರ್ತಿಯಾಗುವುದರೊಳಗಾಗಿ ಇನ್ನೊಂದು ಅಧಿವೇಶನವು ಜರುಗುವುದು. ಸ್ಥಾನಿಕ ಪ್ರಭುತ್ವ ಸಂಸ್ಕರಣದಲ್ಲಿ ಮುಖ್ಯವಾಗಿ ಈ ಪಾರ್ಲಿಮೆಂಟು ಮುಳುಗಿ ತೇಲುತ್ತಿರುವುದು. ಮುಂದೆ ಬರುವ ಎಣಿಕೆಗಾಗೇರ್ಪಡುವ ನಿಯೋಜಕ ಕೂಟದಿಂದ ರಾಜಕೀಯ ಪ್ರಬೋಧವು ಸಾಗುತ್ತಿರುವುದು. ಒಂದು ಮೈಲು ದೂರದಲ್ಲಿರುವ ಪ್ರಜೆಗಳಿಗೂ ಕೂಡ ಕೇಳುವ ಹಾಗೆ ಉಪನ್ಯಾಸಗಳು ನಡೆಯಲೇರ್ಪಾಟಾಗುವುದು. ಇಷ್ಟರಲ್ಲೇ ಪ್ರಕಟವಾಗಿರುವ ಓಟುದಾರರ ಪಟ್ಟಿಯಲ್ಲಿ 21 ವರ್ಷಕ್ಕೆ ಮೇಲ್ಪಟ್ಟ ಸ್ತ್ರೀಯರ ಹೆಸರೂ, ಪುರುಷರಂತೆಯೇ ಸ್ತ್ರೀಯರಿಗು ಕೂಡ ನಿಯೋಜಕಾಧಿಕಾರ ಕೊಟ್ಟ ಸ್ತ್ರೀಯರ ಹೆಸರೂ ಸೇರಿಸಲ್ಪಡುವುವು.

ಈ ವರ್ಷ ಯೂರೋಪಿನಲ್ಲಿ ಎಲ್ಲೆಲ್ಲಿಯೂ ಚಳಿಯು ಹೆಚ್ಚಾಗಿ ಜನಗಳಿಗೆ ನಾನಾವಿಧವಾದ ತೊಂದರೆಗಳು ಪ್ರಾಪ್ತವಾಗಿರುವುವು. ಜರ್ಮನಿಯಲ್ಲಿ ರೈಲ್ವೆಗಾಡಿಗಳ ಸಂಚಾರವೂ, ಮೋಟಾರ್ ಗಾಡಿಗಳ ಸಂಚಾರವೂ ನಿಂತುಹೋಗಿವೆ. ಇಟಲಿಯಲ್ಲಿ ಆಲ್ಪ್‌ಪರ್ವತದಿಂದ ಸಿಸಿಲಿ ದ್ವೀಪದವರೆಗೆ ಮಂಜಿನಹಾಸಿಗೆಯು ಹಾಸಿದಂತಿರುವುದು, ಇಂಗ್ಲೆಂಡಿನಲ್ಲಿ ಹಿಮದ ಗಾಳಿಯು ಎದ್ದು ವಿಶೇಷ ನಷ್ಟವಾಯಿತು. ಅನೇಕರು ಚಳಿಯನ್ನು ತಡೆಯಲಾರದೆ ಬೀದಿಯಲ್ಲಿಯೇ ಬಿದ್ದುಹೋಗುವರು. ಇಂತಹವರನ್ನು ವೈದ್ಯಶಾಲೆಗೆ ಸಾಗಿಸುವರು. ಅನೇಕ ಗ್ರಾಮಗಳಲ್ಲಿ ನೂರಾರುಮಂದಿ ಮೃತಪಟ್ಟಿರುವರು.

ಅನೇಕರು ಹೊಟ್ಟೆಯೊಳಗಿನ ಹುಣ್ಣು ಮೊದಲಾದ ಜೀರ್ಣಕೋಶದ ಕಾಯಿಲೆಯಿಂದ ನರಳುವರು. ಇವರ ಕಾಯಿಲೆಗೆ ಕಾರಣವೇನೆಂಬುದನ್ನೂ, ಹೊಟ್ಟೆಯೊಳಗೆ ಏನಾಗಿರುವುದೆಂಬುದನ್ನೂ ತಿಳಿದರೆ ಅದನ್ನು ಸುಲಭವಾಗಿ ಗುಣಪಡಿಸಬಹುದು. ಇದಕ್ಕಾಗಿ ಈಗ ಆಸ್ಟ್ರಿಯಾದಲ್ಲಿ ಒಬ್ಬ ವೈದ್ಯನು ಹೊಟ್ಟೆಯೊಳಗಿನ ಚಿತ್ರವನ್ನು ತೆಗೆದುಕೊಳ್ಳುವ "ಫೋಟೊ ಕ್ಯಾಮರಾ"ವನ್ನು ರಚಿಸಿರುವರು. ಇದು ಅರ್ಧ ಅಂಗುಲ ಅಗಲ ಎರಡು ಅಂಗುಲ ಉದ್ದವಿರುವುದು. ಇದನ್ನು ರೋಗಿಯು ಹೊಟ್ಟೆಯೊಳಕ್ಕೆ ನುಂಗಿದರೆ ಅದು ಒಳಗೆ ಹೋಗಿ ಅಲ್ಲಿನ ಚಿತ್ರವನ್ನು ತೆಗೆಯುವುದು. ಅನಂತರ ಒಂದು ರಬ್ಬರಿನ ಕೊಳವೆಯ ಸಹಾಯದಿಂದ ಅದನ್ನು ಹೊರಗೆ ತೆಗೆದು ಹೊಟ್ಟೆಯಲ್ಲಿ ಏನಾಗಿರುವುದೆಂಬುದನ್ನು ತಿಳಿದುಕೊಳ್ಳುವರು. ಇದರ ಸಹಾಯದಿಂದ ಅನುಪಾನವನ್ನು ಮಾಡಲು ಸುಲಭವಾಗುವುದು.

(ಚಿತ್ರಗುಪ್ತದಿಂದ)

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯ ವರದಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಪಬ್ಲಿಕ್ ಆಫೀಸಿನ ಹತ್ತಿರ ನಡೆದ ಗಲಭೆ.

ಈ ಮಧ್ಯೆ ಇತರ ಹುಡುಗರು ಮಧ್ಯಾಹ್ನ ಎರಡುಘಂಟೆಯಿಂದ ಪಬ್ಲಿಕ್ ಆಫೀಸಿನ ಹತ್ತಿರ ಸೇರಲು ಆರಂಭಿಸಿದರು. ದಿವಾನರ ಬಂಗಲೆಯಿಂದ ಚದರಿಸಲ್ಪಟ್ಟವರು ಮತ್ತು ದಿವಾನರ ಮೋಟಾರಿನ ಹಿಂದೆ ಬಂದವರು ಎಲ್ಲ ಇಲ್ಲಿ ಸೇರಿದರು. ಅವರು ಗುಂಪು ಗುಂಪಾಗಿ ಮಧ್ಯದ ಮೆಟ್ಟಲಿನ ಹತ್ತಿರದಲ್ಲೂ, ಹುಲ್ಲುಗಾವಲಿನಮೇಲೂ ಜಮಾಯಿಸಿದರು. ಅವರು ಅಲ್ಲಿಂದ ಚದರದೆ ಇದ್ದುದರಿಂದಲೂ, ಚೇಷ್ಟೆ ಮಾಡುವಹಾಗೆ ಕಂಡುಬಂದುದರಿಂದಲೂ ಪೊ|| ಅ|| ಸೂಪರಿಂಟೆಂಡೆಂಟರು 6 ಜನ ಸವಾರರನ್ನು ದಿವಾನರ ಬಂಗಲೆಯಿಂದ ಕರೆದುಕೊಂಡು ಬಂದರು. ಎರಡು ಕಡೆಯವರಿಗೂ ಗಾಯಗಳಾದವು. ಪೊಲೀಸಿನವರ ಮತ್ತು ಸೈನಿಕರ ಬಲವು ಸಾಲದೆಂದು ಕಂಡುಬಂದುದರಿಂದ ಇನ್ನೂ ಹೆಚ್ಚು ಸೈನಿಕರು ಸಹಾಯಕ್ಕೆ ಬರಬೇಕೆಂದು ಪ್ರಾರ್ಥಿಸಿಕೊಂಡ ಮೇರಿಗೆ ಲೆಫ್ಟಿನೆಂಟ್ ಕರ್ನಲ್ ಲ್ಯಾಂಡನ್‌ರವರ ಅಧೀನದಲ್ಲಿ, 110 ಮಂದಿ ಲ್ಯಾನ್ಸರುಗಳು ಬಂದರು. ಹುಡುಗರು ಹುಲ್ಲಿನಮೇಲೂ ಇತರ ಕಡೆಗಳಲ್ಲೂ ರಸ್ತೆಯಲ್ಲೂ, ಮರಗಳ ಕೆಳಗೂ, ಇದ್ದುದರಿಂದ ಅವರನ್ನು ಚದುರಿಸಲು ಆಗಲಿಲ್ಲ. ಅವರು ಈ ಕಡೆಯಿಂದ ಆ ಕಡೆಗೂ ಅಲ್ಲಿಂದ ಇಲ್ಲಿಗೂ ಓಡಾಡುತ್ತಿದ್ದುದರಿಂದ ರಸ್ತೆಯಲ್ಲಿ ಜಮಾಯಿಸಿದ್ದ ಕಲ್ಲುಗಳನ್ನು ತೆಗೆದು ಸೈನಿಕರಮೇಲೆ ಎಸೆಯಲು ಆರಂಭಿಸಿದರು. ಸವಾರರ ವರ್ತನೆಯೂ, ಹುಡುಗರ ಕಲ್ಲೆಸೆಯುವಿಕೆಯೂ ಗಾಯಗಳನ್ನು ಇಬ್ಬರಿಗೂ ಮಾಡಿತು. ಮೈಲಾರಯ್ಯ ಎಂಬ ಹುಡುಗನು ಸವಾರನಿಗೆ ಅಡ್ಡವಾಗಿ ಬಿದ್ದುಬಿಟ್ಟನು. ಆಗ ಕುದುರೆಯು ಅವನನ್ನು ತುಳಿಯಿತು. ಆದ್ದರಿಂದ ಅವನಿಗೆ ಏಟುಬಿದ್ದು ಕೊನೆಗೆ ಕಾಲು ಕತ್ತರಿಸಬೇಕಾಯಿತು. ಕೊನೆಗೆ ಗಲಾಟೆ ಇನ್ನೂ ಹೆಚ್ಚಾಗಲು ಮತ್ತೆ 80 ಮಂದಿ ಸವಾರರನ್ನು ಕರೆಸಿಕೊಳ್ಳಬೇಕಾಯಿತು. ಆದರೆ ಇವರಿಂದ ಕೆಲಸ ಮಾಡಿಸಲಿಲ್ಲ. ಪಬ್ಲಿಕ್ ಆಫೀಸಿನ ಕಾವಲಿಗಾಗಿ 61 ಮಂದಿ ಕಾಲಾಳುಗಳನ್ನೂ 4 ಮಂದಿ ಆಫೀಸರುಗಳನ್ನೂ ಕರೆಸಿಕೊಳ್ಳಲಾಯಿತು.

ಎಲಹಂಕಗೇಟ್, ಕಾಂತರಾಜ ಅರಸ್ ಸರ್ಕಲ್, ಜೈಲಿನ ಹತ್ತಿರ ನಡೆದ ಗಲಭೆ.

ಮಧ್ಯಾಹ್ನ ಮೂರು ಘಂಟೆ ಸಮಯದಲ್ಲಿ ಎಲಹಂಕ ಗೇಟಿನ ಬಳಿ ಹೋದ ಸವಾರರೂ, ಮೊದಲೇ ಅಲ್ಲಿ ನೇಮಿಸಲ್ಪಟ್ಟಿದ್ದ ಸವಾರರೂ, ಡಿಸ್ಟ್ರಿಕ್ಟ್ ಆಫೀಸಿನ ಕಾಂಪೌಂಡಿನಲ್ಲೂ, ಅದಿನ್ನೂ ರೋಡಿನಲ್ಲೂ ಇದ್ದ ಹುಡುಗರೊಂದಿಗೆ ಸೇರಿಕೊಂಡ ಇತರ ಜನಗಳ ಸಮೇತ ಚದರಿಸಲು ಸಾಹಸ ಮಾಡಿದರೂ ಅದು ಸಾರ್ಥಕವಾಗಲಿಲ್ಲ. ಗಲಾಟೆ ಹೆಚ್ಚುವ ಸಂಭವ ಕಂಡುಬಂದುದರಿಂದ ಒಬ್ಬ ಪೊಲೀಸು ಅಧಿಕಾರಿಯು ಹುಡುಗರ ಮೆಚ್ಚಿಗೆಗೆ ಪಾತ್ರರಾದ ಮತ್ತು ಮುಖ್ಯ ಸ್ಕೌಟ್ ಕಮಿಷನರಾದ ಮ|| ಶಂಕರನಾರಾಯಣರಾಯರಿಗೆ, ಅವರು ಬಂದು ಹುಡುಗರಿಗೆ ಬುದ್ಧಿ ಹೇಳಬೇಕೆಂದು ಟೆಲಿಫೋನ್ ಮೂಲಕ ತಿಳಿಸಿದರು. ದಿವಾನರು ಮ|| ಶಂಕರನಾರಾಯಣರಾಯರ ಸಂಗಡ ಡೆಪ್ಯುಟಿ ಕಮಿಷನರನ್ನು ಕಳುಹಿಸಿದರು. ಇಷ್ಟು ಹೊತ್ತಿಗೆ ಹುಡುಗರೊಂದಿಗೆ ದೊಡ್ಡವರೂ ಸೇರಿಕೊಂಡಿದ್ದರು. ಮ|| ಬಿ. ಕೆ. ಗರುಡಾಚಾರ್ಯರೇ ಮೊದಲಾದ ಇತರ ಪುರಮಹನೀಯರ ಕೋರಿಕೆಯಂತೆ ಸವಾರರನ್ನು ಡೆಪ್ಯುಟಿ ಕಮಿಷನರು ಹಿಂದಕ್ಕೆ ಕರೆದುಕೊಂಡರು. ಸ್ವಲ್ಪಕಾಲ ಗಲಭೆ ಶಾಂತವಾಗಿದ್ದು, ಮತ್ತೆ ಪ್ರಾರಂಭವಾಯಿತು. ಜೈಲಿನ ಕಡೆ ಹೋಗುತ್ತಿದ್ದ ಸವಾರರಿಗೆ ಹುಡುಗರು ಕಲ್ಲುಗಳನ್ನು ಎಸೆಯಲು ಅನೇಕ ಸವಾರರಿಗೆ ಗಾಯಗಳಾದುವು. ಕಾಂತರಾಜ ಅರ್ಸ್ ಸರ್ಕಲ್ ಹತ್ತಿರದಲ್ಲಿದ್ದವರಿಗೂ ಸವಾರರಿಗೂ ಮತ್ತೆ ಜಗಳಕ್ಕೆ ಆರಂಭವಾಯಿತು. ಕೆಲವು ಸವಾರರು ಮಿಟ್ರಿಯೋಲಾಜಿಕಲ್ ಅಬ್ಸರ್ವೇಟರಿಯ ಕಾಂಪೌಂಡಿನೊಳಕ್ಕೆ ನುಗ್ಗಿದರು. ಹಾಗೆ ನುಗ್ಗುವ ರಭಸದಲ್ಲಿ ಆಕಸ್ಮಾತ್ತಾಗಿ ಮ|| ಶಂಕರನಾರಾಯಣರಾಯರಿಗೆ ಭರ್ಜಿಯ ಏಟು ಬಿತ್ತು. ಅಲ್ಲದೆ, ತನ್ನ ಭರ್ಜಿಯನ್ನು ಮ|| ಶಂಕರನಾರಾಯಣರಾಯರ ಕಡೆ ಒಬ್ಬ ಸವಾರನು ಬಹಳ ಕೋಪದಿಂದ ತೋರಿಸುತ್ತಿದ್ದನೆಂದು ಮ|| ಶಂಕರನಾರಾಯಣರಾಯರ ಹೇಳಿಕೆಯಿಂದ ತಿಳಿದುಬಂತು. ಅಲ್ಲೇ ಹತ್ತಿರದಲ್ಲಿ ವಾಸವಾಗಿರುವ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಮೆಟ್‌ಕಾಫ್‌ರವರು ಮಧ್ಯಾಹ್ನ ಸುಮಾರು $4\frac{3}{4}$ ಗಂಟೆ ಸಮಯದಲ್ಲಿ ಹುಡುಗರು ಸವಾರರ ಮೇಲೆ ಕಲ್ಲುಗಳ ಮಳೆಗರೆಯುತ್ತಿದ್ದುದನ್ನು ನೋಡಿದರು. ಕಾಂತರಾಜ ಅರ್ಸ್ ಸರ್ಕಲಿನಲ್ಲಿ ಬಹಳ ಹೆಚ್ಚು ಜನಗಳು ಇದ್ದುದರಿಂದ ಸಹಾಯಕ್ಕೆ ಇನ್ನೂ ಜನರು ಬೇಕೆಂದು ಮಿಲಿಟರಿ ಅಧಿಕಾರಿಯು ಹೇಳಿಕಳುಹಿಸಿದರು. ತಕ್ಕಷ್ಟು ಸವಾರರು ಒದಗಿದರು. ಆದರೆ ಸಾಯಂಕಾಲ $5\frac{1}{2}$ ಗಂಟೆಗೆ ಮೇಜರ್ ಕೃಷ್ಣ ಅರಸ್‌ನವರು ಅಲ್ಲಿಗೆ ಬರುವ ವರೆಗೆ ಗಲಾಟೆ ಹಾಗೇ ಇತ್ತು. ಅನಂತರ ಕೆಲವರ ಸಲಹೆ ಮೇರೆ ಸವಾರರು ದಿವಾನರ ಕಾಲರ್ಟನ್ ಹೌಸಿನ ಕಡೆಗೆ ಕಳುಹಿಸಲ್ಪಟ್ಟರು.

ಮುಷ್ಕರದ ಮುಖಂಡರ ಬಿಡುಗಡೆ.

ದೊಂಬಿಯವರೂ ಸವಾರರೂ ಹಿಂದೆ ನಮೂದಿಸಿದ ಅನೇಕ ಸ್ಥಳಗಳಲ್ಲಿ ಇದ್ದಾಗ ಕೆಲವು ಮುಖ್ಯ ಗೃಹಸ್ಥರೂ ಲಾಯರುಗಳೂ ಸೇರಿ ದಿವಾನರನ್ನೂ ಇತರ ಸರಕಾರಿ ಅಧಿಕಾರಿಗಳನ್ನೂ ಕಂಡು ಹುಡುಗರ ಪ್ರತಿನಿಧಿಗಳ ಮಾತಿಗೆ ಗಮನ ಕೊಡಬೇಕೆಂದೂ, ಮುಖಂಡರನ್ನು ಬಿಡುಗಡೆ ಮಾಡಬೇಕೆಂದೂ ಕೇಳಿದರು. ದಿವಾನರು ಹುಡುಗರ ಪರವಾಗಿ ಆರುಮಂದಿ ಮುಖಂಡರನ್ನು ನೋಡುವುದಾಗಿ ಹೇಳಿದರು. ಸರಕಾರದವರು ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಜಾಮೀನು ಪತ್ರಬರೆದುಕೊಟ್ಟರೆ ಮುಖಂಡರನ್ನು ಬಿಡುಗಡೆ ಮಾಡುವುದಾಗಿಯೂ ಹೇಳಿದರು. ಹುಡುಗರ ಹಿತಕ್ಕಾಗಿ ಮುಖಂಡರು ಇದಕ್ಕೆ ಒಪ್ಪುವಹಾಗೆ ಮಾಡಲ್ಪಟ್ಟಿತು. ಅದರಂತೆಯೇ ಸಾಯಂಕಾಲ ೬|| ಘಂಟೆ ಹೊತ್ತಿಗೆ ಸಿಟಿ ಮ್ಯಾಜಿಸ್ಟ್ರೇಟರು ಮುಖಂಡರನ್ನು ಬಿಡುಗಡೆ ಮಾಡಿದರು. ಇವರ ಬಿಡುಗಡೆಗೆ ಪ್ರಯತ್ನಮಾಡಿದ ಗೃಹಸ್ಥರು ಈ ಮುಖಂಡರಿಂದಲೂ ಜೈಲಿನ ಗೇಟಿನಲ್ಲಿದ್ದ ಹುಡುಗರಿಂದಲೂ ಸುಲ್ತಾನ್ ಪೇಟೆ ಸ್ಕೂಲಿಗೆ ಹೋಗುವುದಿಲ್ಲವೆಂಬುದಾಗಿಯೂ ಧರ್ಮಾಂಬುಧಿ ಕೆರೆಯ ಸಮೀಪದಲ್ಲಿ ಸೇರಿ ಅನಂತರ ಸುಮ್ಮನೆ ಮನೆಗಳಿಗೆ ಹೋಗುವುದಾಗಿಯೂ ಭರವಸೆ ತೆಗೆದುಕೊಂಡಿದ್ದರು.

ದಿವಾನರ ಬಂಗ್ಲೆಗೆ ಮುಸಲ್ಮಾನರ ಭೇಟಿ.

ಮುಖಂಡರ ಬಿಡುಗಡೆಯಾದನಂತರ ಡೆ|| ಕಮಿಷನರವರು ಡಿ|| ಪೊ|| ಸೂಪರಿಂಟೆಂಡೆಂಟರನ್ನು, ಅ|| ಪೊ|| ಸೂ|| ರವರ ಆಫೀಸಿಗೆ ಕರೆದುಕೊಂಡುಹೋಗಿ ರಾತ್ರಿಯ ನಿಸ್ತಿಗಾಗಿ ತಕ್ಕ ಏರ್ಪಾಡು ಮಾಡಲು, ದಿವಾನರ ಬಂಗ್ಲೆಗೆ ಹೋದರು. ಆಗ ಅಲ್ಲಿ ಸುಮಾರು 50 ರಿಂದ 100 ಮಂದಿಯವರೆಗೆ ಸಿಟಿ ಮತ್ತು ದಂಡಿನ ಮಹಮ್ಮದೀಯರು ಬಂದಿದ್ದರೆಂದೂ ದಿವಾನರ ಸಮಾಚಾರ ಕೇಳಿದರೆಂದೂ, ದಿವಾನರಿಗೆ ಅಪಾಯ ಸಂಭವಿಸಿಲ್ಲವೆಂದು ಭರವಸೆ ಹೇಳಿದ ನಂತರ ಅವರು ಹೋದರೆಂದೂ ಡೆಪ್ಯುಟಿ ಕಮಿಷನರ್ ಹೇಳಿಕೆಯಿಂದ ತಿಳಿದುಬರುತ್ತೆ.

ಬಿಡುಗಡೆ ಹೊಂದಿದ ಮುಖಂಡರ ಮೆರವಣಿಗೆ.

ಧರ್ಮಾಂಬುಧಿಕೆರೆಯ ಹತ್ತಿರ ಮೀಟಿಂಗ್‌ಮಾಡಿ ಸುಮ್ಮನೆ ಮನೆಗೆ ಹೋಗುವುದಾಗಿ ಹೇಳಿದ್ದ ಹುಡುಗರೂ, ಮುಖಂಡರೂ ಹಾಗೆ ಮಾಡಲಿಲ್ಲ. ಮ|| ಗಳಾದ ಸುಬ್ರಹ್ಮಣ್ಯಂ ಮತ್ತು ತಿವಾರಿಯವರುಗಳನ್ನು ಕೆಲವರು ತಮ್ಮ ಹೆಗಲುಗಳಮೇಲೆ ಕೂರಿಸಿಕೊಂಡು ದೊಡ್ಡಪೇಟೆ ಮಾರ್ಕೆಟ್ ಚೌಕದ ಮಾರ್ಗವಾಗಿ ಸಾಯಂಕಾಲ ಸುಮಾರು 7 ಗಂಟೆ ಹೊತ್ತಿಗೆ ಸುಲ್ತಾನ್ ಪೇಟೆ ಸ್ಕೂಲಿಗೆ ಬಂದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಹುಡುಗರನ್ನು ನೋಡಬೇಕೆಂದು ದಾರಿಯಲ್ಲಿ ಈ ಮುಖಂಡರುಗಳು ಇಷ್ಟಪಟ್ಟರು. ಆದರೆ ಅಲ್ಲಿಗೆ ಹೋದರೆ ಗಾಯಪಟ್ಟವರಿಗೆ ತೊಂದರೆ ಕೊಟ್ಟ ಹಾಗಾಗುತ್ತದೆಂದು ಹೇಳಿ ಸಮಾಧಾನ ಪಡಿಸಿದ್ದರಿಂದ ಅಲ್ಲಿಗೆ ಹೋಗಲಿಲ್ಲ. ಮ|| ಭೀಮರಾಯರು ಅಸ್ವಸ್ಥರಾಗಿದ್ದುದರಿಂದ ಡಾ|| ಗೋಪಾಲಕೃಷ್ಣರಾಯರ ಮೋಟಾರಿನಲ್ಲಿ ಕುಳಿತು, ಬೇಲೂರು ಶ್ರೀನಿವಾಸಯ್ಯಂಗಾರ್ಯರ ಸಂಗಡ ಮೀಟಿಂಗ್ ಮಾಡಬೇಕೆಂದು ಗೊತ್ತುಮಾಡಿದ್ದ ಧರ್ಮಾಂಬುಧಿಕೆರೆ ಮಾರ್ಗವಾಗಿ ಬಂದರು. ಆದರೆ ಅಲ್ಲಿ ಅವರು ಇರಲಿಲ್ಲವಾದುದರಿಂದ ಬಳೇಪೇಟೆ ಮಾರ್ಗವಾಗಿ ಸುಲ್ತಾನ್‌ಪೇಟೆ ಸ್ಕೂಲಿಗೆ ಹೋಗುತ್ತ ಮ|| ಬೇಲೂರು ಶ್ರೀನಿವಾಸಯ್ಯಂಗಾರ್ಯರು ದಾರಿಯಲ್ಲಿ 5 ಕಡೆ ಚಿಕ್ಕಚಿಕ್ಕ ಭಾಷಣಗಳನ್ನು ಮಾಡಿದರು. ಉಳಿದ ಇಬ್ಬರು ಮುಖಂಡರು ಬಂದು ಮುಟ್ಟಿದ ಕೆಲವು ನಿಮಿಷಗಳನಂತರ ಇವರೂ ಸ್ಕೂಲಿಗೆ ಹೋದರು. ಅಲ್ಲಿಗೆ ಹೋದಮೇಲೆ ಮ|| ಬೇಲೂರು ಶ್ರೀನಿವಾಸಯ್ಯಂಗಾರ್ಯರು ಮೋಟಾರಿನಮೇಲೆ ನಿಂತು ಭಾಷಣಮಾಡಿದರು. ಈ ಭಾಷಣದ ಸಂಬಂಧವಾಗಿ ನಾವು 4 ಮತ್ತು 5 ನೇ ಪ್ರಕರಣಗಳಲ್ಲಿ ವಿಮರ್ಶಿಸುತ್ತೇವೆ.

ದೊಂಬಿ ನಡೆದಾಗ ಪೊಲೀಸು ಉಸ್ತುವಾರಿ ಹೇಗಿತ್ತು ?

ಸಂಬಂಧಪಟ್ಟ ಅಧಿಕಾರಿಗಳು ಅಂದಾಜು ಹಾಕುವುದರಲ್ಲೇ ಇದ್ದರು.

ಮೂರುಸಾವಿರದಿಂದ ಐದುಸಾವಿರದವರೆಗಿದ್ದ ಜನರ ಗುಂಪಿನ ಉಸ್ತುವಾರಿ ನೋಡುಕೊಳ್ಳುವುದಕ್ಕೆ ಆರುಜನ ಮಾತ್ರ ಪೊಲೀಸಿನವರಿದ್ದರು.

ದೊಂಬಿ ನಡೆದು ಗುಂಡು ಹಾರಿಸಲ್ಪಟ್ಟಾಗ, ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರೂ, ಡೆ|| ಕಮಿಷನರೂ, ಡಿ|| ಪೊಲೀಸ್ ಸೂಪರಿಂಟೆಂಡೆಂಟರೂ, ಅ|| ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಆ ರಾತ್ರಿ ಉಸ್ತುವಾರಿಯನ್ನು ಯಾವರೀತಿ ಏರ್ಪಡಿಸಬೇಕೆಂಬ ಅಂದಾಜಿನಲ್ಲೇ ಕುಳಿತಿದ್ದರು.

ದೊಂಬಿ ನಡೆದು ಗುಂಡುಹಾರಿಸಲ್ಪಟ್ಟಿತೆಂದು ವರ್ತಮಾನ ತಿಳಿದಕೂಡಲೇ ದಿವಾನರು ಕುದುರೆ ಸವಾರರನ್ನು ಕಳುಹಿಸಿದರು.

ಮೆ|| ಅಬ್ಬಾಸ್‌ಖಾನರೂ ಅವರ ಮನೆಯವರೂ ಮೋಟಾರಿನಲ್ಲಿ ತಮ್ಮ ಮನೆಯಿಂದ ಆ ರಾತ್ರಿ ಹೊರಟರು. ದೊಂಬಿ ಸಮಾಚಾರವು ದಂಡಿನಲ್ಲಿ ಹರಡಲು ಮಹಮ್ಮದೀಯರು ಗುಂಪುಗುಂಪಾಗಿ ಬಂದರು. ಅದರಿಂದ ಪಟ್ಟಣದ ಜನರೆಲ್ಲಾ ಭೀತಿಗೊಂಡಿದ್ದರು.

ದೊಂಬಿ.

ಇಷ್ಟು ಹೊತ್ತಿಗೆ ಪೊಲೀಸ್ ರೋಡ್ ಮತ್ತು ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಗಳು ಸಂಧಿಸುವ ಸ್ಥಳದಲ್ಲಿರುವ ಬೈಸಿಕಲ್ ಷಾಪಿನ ಮಹಡಿ ಮೇಲೂ ಕೆಳಭಾಗದಲ್ಲೂ ಮಹಮ್ಮದೀಯರ ಗುಂಪು ಸೇರಿತ್ತು. ಮೆರವಣಿಗೆಯು ಸ್ಕೂಲಿನಹತ್ತಿರ ಬರುವ ಸಮಯದಲ್ಲಿ ಸಬ್ ಇನ್ಸ್‌ಪೆಕ್ಟರ್ ಮಿ|| ಶೇಷಾದ್ರಿ ಅಯ್ಯರು ಸ್ಕೂಲು ಕಾಂಪೌಂಡಿನಲ್ಲಿ ತಿರುಗಾಡುತ್ತ ಗುಂಪನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇವರ ಕೈಕೆಳಗೆ ಸಾರ್ಜೆಂಟ್ ವೆಂಕಟೇಶಯ್ಯ, ಕಾನ್‌ಸ್ಟೇಬಲ್‌ಗಳಾದ ನರಸಿಂಹಯ್ಯ ಮತ್ತು ಮರಿಯಪ್ಪ ಇವರು, ಸ್ಕೂಲುಗೇಟಿನ ಬಳಿ ಉಸ್ತುವಾರಿ ನೋಡುಕೊಳ್ಳುತ್ತಿದ್ದರು. ಇನ್ನಿಬ್ಬರು ಕಾನ್‌ಸ್ಟೇಬಲ್‌ಗಳು ನಾಲ್ಬಂದ್ವಾಡಿ ಚೌಕದ ಹತ್ತಿರ ಎಲ್ಲೋ ಇದ್ದರು. ಮೆರವಣಿಗೆಯುಸ್ಕೂಲಿನ ಹತ್ತಿರ ಬಂದಾಗ ಉಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಏರ್ಪಟ್ಟಿದ್ದ ಪೊಲೀಸು ಆದಳಿತವು ತೃಪ್ತಿಕರವಾಗಿರಲಿಲ್ಲ. ಗುಂಪಿನ ಜನರು 3 ಸಾವಿರದಿಂದ 5 ಸಾವಿರದ ವರೆಗೂ ಇದ್ದರೆಂದು ಹೇಳಲ್ಪಟ್ಟಿದೆ ; ಇಷ್ಟು ದೊಡ್ಡ ಗುಂಪನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಒಬ್ಬ ಸಬ್ ಇನ್ಸ್‌ಪೆಕ್ಟರು ಒಬ್ಬ ಸಾರ್ಜೆಂಟು ಮತ್ತು ನಾಲ್ಕು ಜನ ಕಾನ್‌ಸ್ಟೇಬಲುಗಳು ಮಾತ್ರ ಇದ್ದರು. ಬಿಡುಗಡೆ ಹೊಂದಿದ ಮುಖಂಡರು ಸ್ಕೂಲಿನ ಹತ್ತಿರ ಬಂದಮೇಲೆ ಕಾಂಪೌಂಡಿನೊಳಕ್ಕೆ ಹೋಗಿ ಮಂಗಳಾರತಿ ಮಾಡಿಸಿಕೊಂಡು ಹೊರಟುಹೋದರು. ಮಂಗಳಾರತಿಯು ಸುಮಾರು ಐದು ನಿಮಿಷಗಳಲ್ಲಿ ಮುಗಿದುಹೋಯಿತು. ಸ್ವಲ್ಪ ಹೊತ್ತಿನೊಳಗಾಗಿಯೇ ಗದ್ದಲವು ಪ್ರಾರಂಭವಾಗಿ ಕೂಡಲೆ ಅದು ಮಾರಾಮಾರಿಯಾಗಿ ಪರಿಣಮಿಸಿತು. ಮಾರಾಮಾರಿಯ ವಿಚಾರದಲ್ಲಿ ಬೇರೆಬೇರೆ ವಿಧವಾದ ಹೇಳಿಕೆಗಳು 4 ಮತ್ತು 5 ನೆ ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ. ಈ ಮಾರಾಮಾರಿಯಲ್ಲಿ ಗಾಯಪಟ್ಟವರ ಪೈಕಿ 74 ಜನ ಹಿಂದುಗಳೂ ಇಬ್ಬರು ಮಹಮ್ಮದೀಯರೂ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ದೊಂಬಿನಡೆಯುತ್ತಿದ್ದಾಗ, ಆ ಸಮಾಚಾರವನ್ನು ತಿಳಿಸಿ ಸಹಾಯವನ್ನು ತರುವುದಕ್ಕಾಗಿ ಕೆಲವರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಆಫೀಸಿಗೂ ಮಾರ್ಕೆಟ್ ಪೊಲೀಸ್ ಸ್ಟೇಷನ್‌ಗೂ ಓಡಿಹೋದರು. ಅ|| ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಆ ರಾತ್ರಿ ಯಾವವಿಧವಾದ ಉಸ್ತುವಾರಿ ಏರ್ಪಾಡನ್ನು ಮಾಡಬೇಕೆಂದು ಆಲೋಚನೆಮಾಡುತ್ತ ಕುಳಿತಿದ್ದ ಪೊ|| ಇನ್ಸ್‌ಪೆಕ್ಟರ್ ಜನರಲ್‌ರವರೂ, ಡೆ|| ಕಮಿಷನರೂ ಡಿ|| ಪೊಲೀಸ್ ಸೂಪರಿಂಟೆಂಡೆಂಟರೂ, ಮಾರಾಮಾರಿ ನಡೆದು ಗುಂಡುಹಾರಿಸಲ್ಪಟ್ಟಿತೆಂದು ಕೇಳಿದ ಒಡನೆ ಮೇಜರ್ ಕೃಷ್ಣಅರಸಿನವರೊಡನೆ ಕೃತ್ಯನಡೆದ ಸ್ಥಳಕ್ಕೆ ಹೋದರು. ಡಿ|| ಪೊ|| ಸೂಪರಿಂಟೆಂಡೆಂಟರು ಮತ್ತು ಅ|| ಸೂಪರಿಂಟೆಂಡೆಂಟರು ಮೊದಲು ಅಂದರೆ ಸುಮಾರು 8 ಗಂಟೆ ರಾತ್ರಿಗೆ ಆ ಸ್ಥಳಕ್ಕೆ ಬಂದರು. ಆಗ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ ದಕ್ಷಿಣಭಾಗದಲ್ಲಿ 200-300 ಮಂದಿ ಮಹಮ್ಮದೀಯರ ಗುಂಪೂ ಅದೇ ಬೀದಿಯ ಉತ್ತರಭಾಗದಲ್ಲಿ ಬಹುಮಂದಿ ಹಿಂದುಗಳ ದೊಡ್ಡ ಗುಂಪೂ ಇದ್ದುದನ್ನು ಅವರು ನೋಡಿದರು. ಮುಸಲ್ಮಾನರು ಲಾಠಿಗಳನ್ನು ಹಿಡಿದುಕೊಂಡಿದ್ದರು. ಹಿಂದುಗಳು ಮಸೀದಿಕಡೆಗಿರುವ ಕುದುರೆ ಲಾಯದ ಕಟಕಟೆ ಬಾಗಿಲಿನ ಕಡೆಗೆ ಕಲ್ಲುಗಳನ್ನು ಹೊಡೆಯುತ್ತಿದ್ದರು. ಅಕ್ಕಪಕ್ಕದಲ್ಲಿದ್ದ ಮಹಮ್ಮದೀಯರನ್ನು ಹೆದರಿಸುವುದಕ್ಕಾಗಿ ಈ ರೀತಿ ಹೊಡೆಯುತ್ತಿದ್ದರೆಂದು ಕಾಣುವುದು. ನಾಲ್ಬಂದ್ವಾಡಿ ಚೌಕದ ಹತ್ತಿರದಲ್ಲಿ ಗುಂಪುಸೇರಿದ್ದ ಮಹಮ್ಮದೀಯರು ದಿವಾನ್‌ಸಾಹೇಬರಿಗೆ ಏಟುಬಿದ್ದಿದೆ ಎಂದು ತಮ್ಮನ್ನು ಕೇಳಿದರೆಂದೂ, ದಿವಾನ್‌ಸಾಹೇಬರಿಗೆ ಏಟುಬೀಳಲಿಲ್ಲವೆಂದು ತಾವು ಅವರಿಗೆ ಭರವಸೆ ಕೊಟ್ಟವೆಂದೂ ಡಿ|| ಪೊಲೀಸ್ ಸೂಪರಿಂಟೆಂಡೆಂಟರು ಹೇಳುತ್ತಾರೆ.

ಮಿ|| ಅಬ್ಬಾಸ್ ಖಾನರ ಮನೆಯ ಎರಡು ಪಕ್ಕಗಳಲ್ಲೂ ಇದ್ದ ಗುಂಪನ್ನು ಚದುರಿಸಲು ಡಿ|| ಪೊ|| ಸೂಪರಿಂಟೆಂಡೆಂಟರೂ, ಅ|| ಪೊ|| ಸೂಪರಿಂಟೆಂಡೆಂಟರೂ ಪ್ರಯತ್ನಿಸುತ್ತಿದ್ದರು. ಆಗ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರೂ, ಡೆಪ್ಯುಟಿ ಕಮಿಷನರೂ ಅಲ್ಲಿಗೆ ಬಂದರು. ಈತನ್ಮಧ್ಯೆ, ಧರ್ಮಪ್ರಕಾಶ ಚಂದ್ರೇಗೌಡರು ದೊಂಬಿ ವರ್ತಮಾನವನ್ನು ಕಾರಲ್‌ಟನ್ ಭವನದಲ್ಲಿ ತಿಳಿಸಿದ ಫಲಿತಾಂಶವಾಗಿ ಕುದುರೆ ಸವಾರರ ಒಂದು ದಳವು ಕಳುಹಿಸಲ್ಪಟ್ಟಿತು. ಮಿಲಿಟರಿಯವರನ್ನು ನೋಡಿದ ಒಡನೆ ಆಯುಧಪಾಣಿಗಳಾಗಿದ್ದ ಗುಂಪಿನವರು ಚದುರಿಹೋದರು. ಸ್ವಲ್ಪ ಹೊತ್ತಾದ ಮೇಲೆ ಅಂದರೆ, ಸುಮಾರು $8\frac{1}{2}$ ಗಂಟೆಗೆ ಸ್ಪೆಷಲ್ ರಿಜರ್ವ್ ಪೊಲೀಸ್ ದಳವೊಂದು ಬಂದಿತು. ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯ ಮುಖ್ಯ ಚೌಕಗಳಲ್ಲೆಲ್ಲಾ ಸವಾರರು ನಿಲ್ಲಿಸಲ್ಪಟ್ಟರು. ಸ್ಕೂಲು ಕಾಂಪೌಂಡಿನ ಹತ್ತಿರ ಕೆಲವು ಕಾನ್‌ಸ್ಟೇಬಲ್‌ಗಳನ್ನು ನೇಮಿಸಿದರು.

ನಗರದ ಇತರ ಕಡೆಗಳಲ್ಲಿ ಆಯುಧಪಾಣಿಗಳಾದ ಜನರ ಗುಂಪುಗಳು.

ಕೃತ್ಯನಡೆದ ಸ್ಥಳದಲ್ಲಿ ಕೂಡಲೆ ಶಾಂತಿಯು ನೆಲೆಗೊಳಿಸಲ್ಪಟ್ಟಿತು. ಆದರೆ, ಕೆಲವು ಹಿಂದುಗಳೂ ಮಹಮ್ಮದೀಯರೂ ಪಕ್ಕದಲ್ಲಿದ್ದ ಸೌದೆ ಅಂಗಡಿಗಳಿಂದ ಕಟ್ಟಿಗೆಗಳನ್ನು ಎಳೆದುಕೊಂಡು, ಅರಳೇಪೇಟೆಯಲ್ಲಿ ಸ್ಕೂಲಿನ ಪಶ್ಚಿಮಭಾಗದಲ್ಲೂ ಇತರ ಬೀದಿಗಳು ಮತ್ತು ಗಲ್ಲಿಗಳಲ್ಲೂ ಸುತ್ತುತ್ತಿದ್ದರು. ಮನೆಗಳನ್ನು ಮುತ್ತಿದರೆಂದೂ ಹೆಂಗಸರನ್ನು ಮಾನಭಂಗಪಡಿಸಿದರೆಂದೂ ವರ್ತಮಾನಗಳು ಹರಡಿದುದರಿಂದ 31 ನೇ ತಾರೀಖಿನ ದಿನದಲ್ಲೂ ಆಮೇಲೆ ಕೆಲವು ದಿನಗಳಲ್ಲೂ ಜನರು ಬಹಳ ಭೀತಿಗೊಂಡಿದ್ದರು.

ದಂಡಿನ ಮಹಮ್ಮದೀಯರು.

ದಂಗೆ ಸಮಾಚಾರವು ದಂಡಿನಲ್ಲಿ ಗೊತ್ತಾದ ಕೂಡಲೆ, ಅನೇಕ ಮುಸಲ್ಮಾನರು ನಗರಕ್ಕೆ ಬಂದರು. ಒಂದು ಗುಂಪಿನವರು ರಾತ್ರಿ 11 ಗಂಟೆ ಸುಮಾರಿಗೆ ಸುಲ್ತಾನ್‌ಪೇಟೆಗೆ ಬಂದು ನಾಲ್ಬಂದ್ವಾಡಿ ಮಸೀದಿಯು ಸುರಕ್ಷಿತವಾಗಿರುವುದೆ ಎಂದು ಲೆಫ್ಟಿನೆಂಟ್ ಬಸವರಾಜೆ ಅರಸಿನವರನ್ನು ಕೇಳಲು ಅವರನ್ನು ಮಿಲಿಟರಿಯವರ ಉಸ್ತುವಾರಿಯಲ್ಲಿ ಮಸೀದಿ ಹತ್ತಿರ ಕರೆದುಕೊಂಡುಹೋಗಿ ತೋರಿಸಿ, ಆಮೇಲೆ ಮಾರ್ಕೆಟ್ ಚೌಕಕ್ಕೆ ಕರೆದುಕೊಂಡು ಹೋದರು. ದಂಡಿನಿಂದ ಬಂದ ಮುಸಲ್ಮಾನರ ಗುಂಪಿನವರು ಅರಳೇಪೇಟೆಯಲ್ಲಿ ತಿರುಗುತ್ತಿದ್ದಾರೆಂದು ಅ|| ಪೊ|| ಸೂಪರಿಂಟೆಂಡೆಂಟರವರಿಗೆ ವರ್ತಮಾನಬಂದ ಕೂಡಲೆ ಅವರು ಅಲ್ಲಿಗೆ ಹೋಗಿ ನೋಡಲಾಗಿ ಅಲ್ಲಿ ಯಾರೂ ಇರಲಿಲ್ಲ. ಸುಮಾರು ಮಧ್ಯರಾತ್ರಿ ಸಮಯದಲ್ಲಿ 300 ರಿಂದ 500 ಜನ ಮಹಮ್ಮದೀಯರ ಗುಂಪೊಂದು ದಂಡಿನ ಕಡೆಯಿಂದ ನಗರಕ್ಕೆ ಬರುತ್ತಿರುವುದಾಗಿಯೂ ತಾವು ಆ ಗುಂಪಿನವರನ್ನು ಉಸ್ಮಾನಿಯಾ ಥಿಯೇಟರಿನಬಳಿ ನೋಡಿದುದಾಗಿಯೂ ಅಲಸೂರು ಗೇಟ್ ಪೊಲೀಸ್ ಸ್ಟೇಷನ್‌ನಿಂದ ಅ|| ಪೊ|| ಸೂಪರಿಂಟೆಂಡೆಂಟರಿಗೆ ವರ್ತಮಾನಬಂತು. ಮಿ|| ಅಬ್ಬಾಸ್ ಖಾನರು ಸುರಕ್ಷಿತವಾಗಿದ್ದಾರೆಂದೂ ಮಾರ್ಕೆಟ್ ಚೌಕದಬಳಿ ಇರುವ ಗೋರಿಗೆ ಯಾವ ಅಪಾಯವೂ ಆಗಲಿಲ್ಲವೆಂದೂ ತಿಳಿದು ಆ ಗುಂಪಿನವರು ಹೊರಟುಹೋದರು. ದಂಡಿನಿಂದ ಬಂದಿದ್ದ ಈ ಮಹಮ್ಮದೀಯ ಗುಂಪುಗಳವರು ಬೀದಿಗಳಲ್ಲಿ ತಿರುಗುತ್ತಿದ್ದುದನ್ನು ನೋಡಿ ಪಟ್ಟಣದ ಜನರು ಬಹಳ ಭೀತಿಗೊಂಡಿದ್ದರು.

ಮಿ|| ಅಬ್ಬಾಸ್ ಖಾನರು ಮನೆಯಿಂದ ಹೊರಟುದು.

ಈ ತನ್ಮಧ್ಯೆ, ಒಬ್ಬರು ಸವಾರರ ಅಧಿಕಾರಿಯ ಸೂಚನೆಯಂತೆ ಮಿ|| ಅಬ್ಬಾಸ್ ಖಾನರು ರಾತ್ರಿ $11\frac{1}{2}$ ಗಂಟೆ ಸುಮಾರಿಗೆ ತಮ್ಮ ಮನೆ ಜನರೊಡನೆ ಗೋಷಾಹಾಕಿದ್ದ ಮೋಟಾರಿನಲ್ಲಿ ತಮ್ಮ ಮನೆಬಿಟ್ಟು ಹೊರಟರು. ಮೋಟಾರು ಹೆಬ್ಬಾಳಿನಲ್ಲಿ ಸವಾರರ ವಠಾರದಲ್ಲಿದ್ದ ಮಿ|| ಅಬ್ಬಾಸ್ ಖಾನರ ಸಂಬಂಧಿಯ ಮನೆಗೆ ಎರಡಾವರ್ತಿ ಹೋಗಿಬಂತು.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

‘ ಪ್ರಾಣಿದಯೆ ’ ಗೆ ತಿರಸ್ಕಾರ.

ಉದಾರಬುದ್ಧಿಯುಳ್ಳ ಬೆಂಗಳೂರು ಶ್ರೀ ಗೋರಕ್ಷಕ ಮಂಡಲಿಯವರು ಈ ರಾಷ್ಟ್ರದ ವಿದ್ಯಾರ್ಥಿಗಳಲ್ಲಿ ‘ ದಯೆ ’ ಯು ಹಬ್ಬಬೇಕೆಂದುಚಿತವಾಗಿ ಹಂಚುವ ಏರ್ಪಾಡು ಮಾಡಿರಲು ಕೆಲವು ಹೆಡ್ಮಾಸ್ಟರುಗಳು ಪತ್ರಿಕೆಗಳನ್ನು ತೆಗೆದುಕೊಂಡರೆ ಚಂದಾಹಣ ಕಟ್ಟಬೇಕಾಗುತ್ತದೇನೋ ಎಂಬ ಭಯದಿಂದ ವಾಪಸುಮಾಡಿ ನಮ್ಮಗಳನ್ನು ನಷ್ಟಕ್ಕೆ ಗುರಿಮಾಡಿರುವರು. ಇನ್ನುಮುಂದೆ ಹೀಗೆಮಾಡದೆ ಆದರದಿಂದ ಸ್ವೀಕರಿಸಿ ಅದರಲ್ಲಿರುವ ತತ್ವಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಿ ಮಂಡಲಿಯವರ ಮತ್ತು ಸಂಪಾದಕರ ಮನ್ನಣೆಗಳಿಗೆ ಪಾತ್ರರಾಗಬೇಕೆಂದು ಸವಿನಯಪ್ರಾರ್ಥನೆ.

ಗುಂಡೂರಾವ್ ಖಾದ್ರಿ,
ಸಂಪಾದಕ.

ಕುರುಹಿನಶೆಟ್ಟಿಗಳ ಮಹಾಸಭೆ.

ಕಳೆದ ಡಿಸೆಂಬರ್ ತಾ|| 12 ನೇ ಶುಕ್ರವಾರ ಶ್ರೀರಂಗಪಟ್ಟಣ ತಾ|| ಮೇಲ್ಕೋಟೆಯಲ್ಲಿ ಮೊಲ್ಕಂಡ ಮಹಾಸಭೆಯು ಮೇಲ್ಕೋಟೆಯ ಕುರುಹಿನಶೆಟ್ಟಿಗಳ ಸಂಘದವರ ಪ್ರೋತ್ಸಾಹದಿಂದ ಸೋಮವಾರಪೇಟೆ ಮ|| ಕೆ. ಎಚ್. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸೋಮವಾರಪೇಟೆಯ ಕಾಫಿಪ್ಲಾಂಟರ್ ಡಿ. ಚಿಕ್ಕಬಸಪ್ಪನವರ ಪತ್ನಿ ಶ್ರೀಮತಿ ಸಾಕಮ್ಮನವರು, ಮ|| ಎಚ್. ಕೆ. ರಂಗಯ್ಯನವರು ಮೊದಲಾದ ಕುಲಾಭಿಮಾನಿಗಳು ದಯೆಮಾಡಿಸಿದ್ದರು. ಸಮಾಜದವರ ವಿದ್ಯಾಬುದ್ಧಿ ಕಸಬು ವ್ಯಾಪಾರ ಮೊದಲಾದುದರ ಅಭಿವೃದ್ಧಿಯ ವಿಚಾರವಾಗಿ ಅನೇಕ ಉಪನ್ಯಾಸಗಳು ನಡೆದು ಕೆಲ ರಿಜಲ್ಯೂಷನ್ನುಗಳು ಮಾಡಲ್ಪಟ್ಟುವು. ಅನಂತರ ಶ್ರೀಮತಿ ಸಾಕಮ್ಮನವರು ಮತೋದ್ಧಾರಕ್ಕಾಗಿ ಕುಲದೇವತಾಸ್ವರೂಪದಿಂದ ಮಹಾಸಭೆಗೆ ದಯೆಮಾಡಿಸಿರುತ್ತಾರೆಂದು ಅವರ ಗುಣಪ್ರಶಂಸೆ ಮಾಡಲ್ಪಟ್ಟು ಸಭಾಕಾರ್ಯವು ವಿಸರ್ಜಿಸಲ್ಪಟ್ಟಿತು. ಬಂದಿದ್ದ ಕುಲಾಭಿಮಾನಿಗಳಿಗೆ ಸ್ಥಳದವರಿಂದ ದಿವ್ಯವಾದ ಔತಣವು ಮಾಡಿಸಲ್ಪಟ್ಟಿತು. ಎಲ್ಲರೂ ವಾದ್ಯವೈಭವದಿಂದ ರಾಜಬೀದಿ ಮೊದಲಾಗಿ ಸಕಲ ಬೀದಿಗಳಲ್ಲೂ ಉತ್ಸವಗೊಂಡು ಕುರುಹಿನಶೆಟ್ಟಿಗಳ ಸಂಘಕ್ಕೆ ಬಂದರು. ಪರೋತ್ಕರ್ಷವನ್ನು ಸಹಿಸದ ಈ ಊರಿನ ಒಂದು ಪಂಗಡದವರು ಈ ಉತ್ಸವವನ್ನೂ, ಮಹಾಸಭಾಕಾರ್ಯವನ್ನೂ ನೋಡಿ ಸಹಿಸಲಾರದೆ ತಮ್ಮ ಕೈಗಳನ್ನು ಹಾಕೇ ಹಿಸಿಕೊಳ್ಳುತ್ತಿದ್ದರು. ಅವರ ಪ್ರತಿಕ್ರಿಯೆಯನ್ನು ಮಾಡಲು ಅವರಿಗೆ ಅವಕಾಶವಾಗಲಿಲ್ಲ.

ಪ್ರತ್ಯಕ್ಷಜ್ಞ.

ಒಂದು ಸಂತೋಷಕೂಟ.

ಕಡೂರು ತಾಲ್ಲೂಕು ಕುಂಕನಾಡುಗ್ರಾಮಕ್ಕೆ 1-2 ತಿಂಗಳ ಹಿಂದೆ ಪೊಲೀಸು ದಫೇದಾರರಾಗಿ ಬಂದಿದ್ದ ಮಿ|| ಮಹಮ್ಮದ್ ಇಮಾಂಸಾಹೇಬರು ಬೇರೆಕಡೆಗೆ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಈ ಗ್ರಾಮಕ್ಕೆ ಬಂದಾರಭ್ಯ ಜನರಲ್ಲಿ ಮಿಳಿತರಾಗಿ ಅವರುಗಳಿಗೆ ಕಾಲೋಚಿತವಾದ ತಿಳುವಳಿಕೆಯನ್ನು ಕೊಟ್ಟು ಎಲ್ಲರ ಅನುರಾಗಕ್ಕೆ ಪಾತ್ರರಾಗಿದ್ದರು ಮತ್ತು ಪೊಲೀಸು ಉಸ್ತುವಾರಿಯು ಬಹಳ ಚೆನ್ನಾಗಿ ನಡೆಯುತ್ತಿರುವುದು. ಈ ಪುಣ್ಯಾತ್ಮರ ಪೊಲೀಸಿನವರ ವಾಸಕ್ಕೆ ಅನುಕೂಲವಾಗಿ ಒಂದು ಕಟ್ಟಡವನ್ನು ಸ್ವಂತ ಖರ್ಚಿನಿಂದ ಕಟ್ಟಿಸಿಕೊಡಲು ವಾಗ್ದಾನಮಾಡಿದ್ದರು. ಜನಾನುರಾಗಿಗಳಾದ ಈ ದಫೇದಾರರನ್ನು ಗ್ರಾಮಸ್ಥರು ಒಂದು ಸಂತೋಷಕೂಟದಿಂದ ಸತ್ಕರಿಸಿ ಅವರ ಗುಣವರ್ಣನೆ ಮಾಡಿದ್ದಲ್ಲದೆ ಅವರ ಅಗಲಿಕೆಯಿಂದ ತಮಗುಂಟಾದ ವ್ಯಸನವನ್ನು ಪ್ರದರ್ಶಿಸಿದರು.

ಗ್ರಾಮಸ್ಥ.

ಕಡೂರು ತಾಲ್ಲೂಕು ಯುಳ್ಳಂಬಳಸೆ.

ಈ ಗ್ರಾಮಕ್ಕೆ ಮೆಹರ್‌ಬಾನ್ ಸರ್ಕಾರದವರು ಸೊಸೈಟಿಯನ್ನು ಪ್ರಜೆಗಳ ಉಪಯೋಗಕ್ಕಾಗಿ ಮುಂಜೂರು ಮಾಡಿದ್ದರಮೇಲೆ ಆನರರಿ ಆರ್ಗನೈಜರ್ ಸೂಪರ್‌ವೈಜರಾದ ಮ|| ಕೆ. ಪರಮೇಶ್ವರಯ್ಯನವರು ತಾ|| 19-1-29 ರಲ್ಲಿ ಈ ಗ್ರಾಮಕ್ಕೆ ದಯಮಾಡಿಸಿ ಸೊಸೈಟಿಯಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಸರ್ವರಿಗೂ ವಿಶದವಾಗಿ ತಿಳಿಯಪಡಿಸಿ ತಾ|| 20 ರಲ್ಲಿ ಸೊಸೈಟಿಯನ್ನು ಅದರ ಪುರೋಭಿವೃದ್ಧಿಗಾಗಿ ಕೆಲಸಮಾಡತಕ್ಕ ಪ್ರೆಸಿಡೆಂಟರನ್ನೂ ವೈಸ್‌ಪ್ರೆಸಿಡೆಂಟರನ್ನೂ ಟ್ರಜರರ್ ಸೆಕ್ರೆಟರಿಯವರನ್ನೂ ಮೆಂಬರುಗಳನ್ನೂ ಸಹ ಚುನಾಯಿಸಿದರು. ಅನಂತರ ಸೇರಿದ್ದ ಸಭಿಕರೆಲ್ಲರೂ ಅವರವರ ಯೋಗ್ಯತಾನುಸಾರವಾಗಿ ಒಟ್ಟು 217 ಷೇರುಗಳನ್ನ ಪಡೆದುಕೊಂಡು ಆಗತಾನೇ ರೂ. 106-3-0 ಸಹ ವಸೂಲು ಬಂದದ್ದು ಈ ಸೊಸೈಟಿಯ ಮುಂದಿನ ಪುರೋಭಿವೃದ್ಧಿ ಹೊಂದತಕ್ಕ ಶುಭಸೂಚನೆಯಾಗಿರುತ್ತೆ. ಪ್ರತಿಯೊಬ್ಬರೂ ಆರಂಭದ ಶೂರತ್ವವನ್ನು ಬಿಟ್ಟು ಸೊಸೈಟಿಯನ್ನ ಪುರೋಭಿವೃದ್ಧಿಗೆ ತಂದುಕೊಂಡು ತಮ್ಮತಮ್ಮಗಳ ಕಷ್ಟಗಳನ್ನು ದೂರಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುವುದಕ್ಕೆ ಸಿದ್ಧರಾಗಬೇಕಲ್ಲದೆ ಅವಿಚ್ಛಿನ್ನವಾಗಿ ದೇಹಶ್ರಮವನ್ನು ವಹಿಸಿ ಕೆಲಸಮಾಡಿದಲ್ಲಿ ಶಾಶ್ವತವಾದ ಕೀರ್ತಿಯು ಉಂಟಾಗಬಹುದಾಗಿ ಪೂರ್ಣವಾಗಿ ನಂಬುತ್ತೇನೆ. ಮಂಗಳಾರತಿ ಆದನಂತರ ನೆರೆದಿದ್ದ ಸಭಿಕರಿಗೆಲ್ಲಾ ಫಲ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಸೊಸೈಟಿಯು ಪುರೋಭಿವೃದ್ಧಿಗೆ ಬರಬೇಕೆಂದು ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು.

ಓರ್ವಪ್ರೇಕ್ಷಕ.

ಕೈಲಾಸ ಸಮಾರಾಧನೆಯು.

ಚಿಕ್ಕಮಗಳೂರಿನಲ್ಲಿ ಸುಪ್ರಸಿದ್ಧರೂ, ಗುರುಲಿಂಗಜಂಗಮ ಸೇವಾನಿರತರೂ, ಜನಾನುರಾಗಿಗಳೂ ಆಗಿದ್ದ ಕಾಫಿಪ್ಲಾಂಟರ್ ಯಜಮಾನ್ ಚೆನ್ನಬಸಪ್ಪಶೆಟ್ಟರವರು ಪರಂಧಾಮವನ್ನೈದಿ ಇದೇ ಸಂವತ್ಸರ ಮಾರ್ಗಶಿರ ಬಹುಳ 12 ಸೋಮವಾರಕ್ಕೆ ಒಂದು ವರ್ಷವಾದ್ದರಿಂದ ಇವರ ಪುಣ್ಯತಿಥಿಯನ್ನು ಸಾಂಗವಾಗಿ ನೆರವೇರಿಸಬೇಕೆಂಬ ಸಂಕಲ್ಪಪೂರ್ವಕ ಕೈಲಾಸವಾಸಿಗಳವರ ಧರ್ಮಪತ್ನಿ ಶ್ರೀಮತಿ. ರುದ್ರಮ್ಮನವರ ಅಪ್ಪಣೆಯ ಮೇರೆಗೆ ಇವರ ಅಳಿಯಂದಿರಾದ ಕಾಫಿಪ್ಲಾಂಟರೂ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರೂ ಆಗಿರುವ ಮ|| ಸಿ. ಪಿ. ಬಸವೇಗೌಡರವರು ಈ ಮೊದಲೇ ತತ್ಸಂಬಂಧವಾದ ಸಮಾರಾಧನಾಹ್ವಾನಪತ್ರಿಕೆಗಳನ್ನು ಅನೇಕಕಡೆ ಕಳುಹಿಸಿದ್ದರಲ್ಲದೆ ಪ್ರತ್ಯಕ್ಷ ಬಿನ್ನಹಪೂರ್ವಕ ಶ್ರೀ ಪೂಜ್ಯಪಾದರಾದ ಸ್ವಾಮಿಗಳವರನ್ನು ಬಿಜಮಾಡಿಸಿಕೊಂಡುಬಂದು ಕೈಲಾಸವಾಸಿಗಳವರ ಬಂಗಲೆಯಲ್ಲಿ ಶ್ರೀಪಾದಪೂಜಾಸಮಾರಾಧನ ಕಾರ್ಯವನ್ನು ಕೈ|| ಚೆನ್ನಬಸಪ್ಪಶೆಟ್ಟರವರ ಕುಮಾರ ಮಂಜುನಾಥನ ಮುಖೇನ ವಿಧ್ಯುಕ್ತವಾಗಿ ನಡೆಸಲ್ಪಟ್ಟಿತು ಈ ಸಮಾರಾಧನೆಗೆ ಸುತ್ತಮುತ್ತಲಿನ ಗ್ರಾಮದಿಂದ ಬಂದಿದ್ದ ಸಾವಿರಾರುಜನ ಭಕ್ತಮಾಹೇಶ್ವರರು ವಿಶೇಷ ಭಕ್ಷ್ಯಭೋಜ್ಯಗಳಿಂದಲೂ ದಕ್ಷಿಣೆ ವಸ್ತ್ರದಾನ ಮೊದಲಾದವುಗಳಿಂದಲೂ ತೃಪ್ತಿಪಡಿಸಲ್ಪಟ್ಟರು. ಈ ಸಮಯದಲ್ಲಿ ಮ|| ಸಿ. ಪಿ. ಬಸವೇಗೌಡರವರು ತಮ್ಮ ಮಾವನವರು ಜೀವಂತರಾಗಿರುವರೆಂಬ ಪವಿತ್ರಭಾವದಿಂದ ಪೂರ್ವದಂತೆ ಈಗಲೂ ಮುಂದೆನಿಂತು ಕೈಲಾಸವಾಸಿಗಳವರ ಸದ್ಗತಿ ಪ್ರಾಪ್ತಿಗೋಸ್ಕರ ವರ್ಷಾಂತ್ಯದ ಪುಣ್ಯತಿಥಿಯನ್ನು ಕ್ರಮವಾಗಿ ನೆರವೇರಿಸಿ ಮಹಾಜನಗಳನ್ನು ಸತ್ಕರಿಸಿ ಶ್ರೀಗಳವರಿಂದ ಆಶೀರ್ವಾದವಂಪಡೆದು ಧನ್ಯವಾದಗಳನ್ನು ಸಮರ್ಪಿಸಿದ ಇವರಲ್ಲವೆ ನಿಜವಾದ ಗುರುಭಕ್ತರು ಮತ್ತು ಪಿತೃಭಕ್ತರು ! ಜೀವಮಾನ ಪರ್ಯಂತರ ತಮ್ಮ ತನುಮನಧನಗಳನ್ನು ಗುರುಲಿಂಗಜಂಗಮರ ಅಡಿದಾವರೆಗಳಲ್ಲಿ ಸಮರ್ಪಿಸಿ ಜನಾನುರಾಗಿಗಳಾಗಿಯೂ ರಾಜಭಕ್ತಿಯುತರಾಗಿಯೂ ಸಕಲವರ್ಣದವರ ಪ್ರೇಮಾಸ್ಪದರಾಗಿಯೂ ಇದ್ದು ಯಶಃಕಾಯರಾಗಿರುವ ಚೆನ್ನಬಸಪ್ಪಶೆಟ್ಟರ ಗುಣಕಥನವನ್ನು ಅನೇಕರು ಈಗಲೂ ಮಾಡುತ್ತಿರುವರು. ಈ ಪ್ರಸಿದ್ಧಪುರುಷರಿಗೆ ಜಗದೀಶ್ವರನು ಸಾಮಿಪ್ಯಪದವಿಯನ್ನು ಕೊಟ್ಟು ಇವರ ಕುಟುಂಬದವರ್ಯಾವತ್ತರಿಗೂ ಮನಶ್ಯಾಂತಿಯನ್ನು ಆಯುರಾರೋಗ್ಯಭಾಗ್ಯಗಳನ್ನನುಗ್ರಹಿಸಲೆಂದು ಪ್ರಾರ್ಥಿಸುವ

ವೀರಮಾಹೇಶ್ವರ ಜನವಿಧೇಯ,
ಹೆಚ್. ಹೆಚ್. ಜಿ. ನಂಜುಂಡಾರಾಧ್ಯ.

ಹಾಲುಮತದವರು (ಕುರುಬರು) ಲಿಂಗದೀಕ್ಷೆಯನ್ನು ಹೊಂದಿ ಶಿವಾಚಾರಸಂಪನ್ನರಾಗುವದೇ ಮೇಲಾದ ಸದ್ಧರ್ಮವು.

ನಮ್ಮ ಹಾಲುಮತಬಂಧುಗಳೇ, ಈ ಸಣ್ಣ ಬರವಣಿಗೆಯು ಸ್ವಂತ ಅನುಭವದಿಂದಲೂ ಶಿವಜ್ಞಾನಿಗಳಿಂದಲೂ ಸಿದ್ಧಾಂತವಾದ ವಿಷಯಗಳನ್ನೇ ಒಳಗೊಂಡಿರುವದು. ಮನುಷ್ಯಮಾತ್ರದವರೆಲ್ಲರೂ ಕ್ರಮೇಣ ಸುಧಾರಿಸುತ್ತ ಬಂದು ಆಚಾರವಂತರಾಗಿ ಮೇಲ್ಪಂಕ್ತಿಯನ್ನು ಹೊಂದಿರುವರೆಂಬುವದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಅದರಂತೆ ಪುರಾತನ ಗ್ರಂಥಕಾರರು ಅಂದಿರುವದೇನೆಂದರೆ—

“ ಮೊದಲು ಮನುಜರು ಸದನವಿಲ್ಲದೆ | ಹದನವನರಿಯದೆ ಮೃಗಗಳಂತೆ || ಪೊದರು ಪೊಕ್ಕರು | ಬಳಿಕ ಪರ್ಣದ ಶಾಲೆ ರಚಿಸಿದರು || ತದನು ಬುದ್ಧಿಯ ಕಲಿತು | ಚರ್ಮದ ಹೊದಿಕೆಯಿಂದಲು ಬಿದುರು || ಗಳಗಳ ಮುಚ್ಚಿ ಲಘುವ ಹಂದರಹಾಕಿದರು ” ಎಂಬುವ ಪದದಂತೆ ಸುಧಾರಿಸುತ್ತ ಬಂದಹಾಗೆಲ್ಲಾ ಶಿವಜ್ಞಾನಿಗಳಾದ ಮಹಾತ್ಮರು ಶಿವಾನುಭವವನ್ನು ತಿಳಿದು ಶಿವಸಿದ್ಧಾಂತವಾದ ಇಷ್ಟಲಿಂಗದ ಮಹಿಮೆಯನ್ನು ರೇಣುಕಾಚಾರ್ಯರೂ ಅಗಸ್ತ್ಯರೂ ಗೌತಮರೂ ಜನಾಂಗಕ್ಕೆಲ್ಲಾ ಶಿವಜ್ಞಾನಬೋಧೆಮಾಡಿ ಸರ್ವರಿಗೂ ಮೋಕ್ಷದ ಹಾದಿಯನ್ನು ತೋರಿಸಿರುವರೆಂಬಬಗ್ಗೆ ಎಷ್ಟೋ ಆಧಾರಗಳಿವೆ. ನಮ್ಮ ಕುಲಗುರುಗಳಲ್ಲಿರುವ ಅಷ್ಟಾವರ್ಣಗಳೇ ನಮಗೆ ಲಿಂಗಧಾರಣವಾಗಿ ನಾವು ಆಚಾರವಂತರಾಗಲಿಕ್ಕೆ ಮಹತ್ತರವಾದ ಸಾಕ್ಷಿಗಳಾಗಿರುತ್ತವೆ. ಈ ಅಷ್ಟಾವರ್ಣಗಳು ಲೌಕಿಕಕ್ಕೆ ಸರಿಯಾಗಿ ಆರೋಗ್ಯವನ್ನುಂಟುಮಾಡುವಂಥವುಗಳಾಗಿಯೂ ಪಾರಮಾರ್ಥದ ಹಾದಿಯನ್ನು ತೋರಿಸುವ ಶಾಸ್ತ್ರೋಕ್ತವಾದ ಮಹಿಮರ ಆಧಾರಗಳಾಗಿಯೂ ಇರುವವು. ಮನುಷ್ಯನು ಅಹಿಂಸಾಪರವಾದ ಆಚಾರವನ್ನು ಕೈಕೊಳ್ಳದವಿನಹ ಹೃದಯದಲ್ಲಿ ಅಂತಃಕರಣ ಶುದ್ಧಿಯಾಗಲಾರದು. ಸದಂತಃಕರಣವೃತ್ತಿಯೇ ಶಿವಜ್ಞಾನವನ್ನು ತಿಳಕೊಳ್ಳುವ ಯೋಗ್ಯತೆಯುಳ್ಳದ್ದಾಗಿದೆ. ಬಹಿರಂಗ ಆಚರಣೆಯನ್ನು ಮಾಡುತ್ತ ಮನಶ್ಶುದ್ಧಿಯಾಗಿ ಅಂತರಂಗದಲ್ಲಿ ಶಿವಜ್ಞಾನದ ಅರುವು ಆಗುವದು. ಸಮಸ್ತ ಜೀವರಾಶಿಯಲ್ಲಿ ಮನುಷ್ಯನ ಜನ್ಮವು ಶ್ರೇಷ್ಠವಾದುದು. ಇಂತಹ ಉತ್ಕೃಷ್ಟ ಜನ್ಮಕ್ಕೂ ಶಿವಲಿಂಗದ ಸತ್ಯಾಚರಣೆಯನ್ನು ಹೊಂದದ ಹೊರತು ಗತ್ಯಂತರವಿಲ್ಲವೆಂದು ಹೇಳಲು ಸಂದೇಹವಿಲ್ಲ. ನಮ್ಮ ಕುಲಗುರುಗಳಿಂದಲೇ ಲಿಂಗಧಾರಣೆಯನ್ನು ಹೊಂದಿ ಸತ್ಯಾಚಾರದಿಂದ ನಡೆದರೆ ಇಹಲೋಕದಲ್ಲಿ ನಿತ್ಯಾನಂದತೃಪ್ತರೂ ಮುಕ್ತಿಮಾರ್ಗಕಂಡುಹಿಡಿಯುವ ಮಹಿಮರೂ ಆಗುವರು. ನಾವು ಪುರಾತನಕಾಲದಿಂದ ಶಿವಜ್ಞಾನಪಥದವರೇ ಇರುವದರಿಂದ ನಮಗೆ ಅಷ್ಟಾವರ್ಣಗಳು ನಮ್ಮ ಕುಲಗುರುಗಳಿಂದಲೇ ಲಭಿಸುತ್ತವೆ. ಈಬಗ್ಗೆ 1910 ನೇ ಇಸವಿಯಲ್ಲಿ ಹಾಲುಮತಧರ್ಮೋತ್ತೇಜಕಮಹಾಸಭೆಯನ್ನು ಲಕ್ಷ್ಮೇಶ್ವರದಲ್ಲಿ ಕೂಡಿಸಿದಾಗ್ಗೆ ಕರ್ನಾಟಕದ ಯಾವತ್ತು ಗುರುವರ್ಗದವರೂ ನಾಲ್ಕುಸಾವಿರ ಮೇಲ್ಪಟ್ಟು ಶಿಷ್ಯವರ್ಗದ ಜನರೂ ಕೂಡಿ ಅಹಿಂಸಾಪರವಾದ ನೀತಿಯಿಂದ ನಡೆದವರಿಗೆಲ್ಲರಿಗೂ ಗುರುಗಳು ಲಿಂಗಧಾರಣೆಮಾಡಿ ಆಚಾರವಂತರನ್ನಾಗಿ ಮಾಡಬೇಕೆಂದು ಬಹುಮತದಿಂದ ಠರಾವುಗಳನ್ನು ಪಾಸುಮಾಡಿದರು. ಅದರಂತೆ ಕೆಲವು ಗುರುವರ್ಗದವರು ತಮ್ಮ ಆ ಶಿಷ್ಯಮಂಡಲಿಗೆ ಸದುಪದೇಶಮಾಡಿ ಲಿಂಗಧಾರಣಮಾಡುತ್ತ ಆಚಾರವಂತರನ್ನಾಗಿ ಮಾಡಿದರು. ಅದನ್ನು ಕಂಡು ನಮ್ಮ ಶ್ರೀ ರಾಯಪ್ಪಯ್ಯಸ್ವಾಮಿ ಅಮೋಗಿಮಠ ಹುಲ್ಲೂರ ಇವರು ಈಗ ಒಂದುವರ್ಷದಲ್ಲಿ ನಾಲ್ಕುಸಾವಿರಜನರನ್ನು ಸದುಪದೇಶಕ್ಕೆ ಒಳಪಡಿಸಿ ಲಿಂಗಧಾರಣ ಮಾಡಿರುವರೆಂಬುದನ್ನು ತಿಳಿಸಲು ಆನಂದವಾಗುತ್ತದೆ. ನಮ್ಮ ಕುಲಗುರುಗಳಿಂದಲೇ ಆಚಾರವಂತರಾಗತಕ್ಕದ್ದು ಮಾನ್ಯವು. ಹಿಂದಕ್ಕೆ ಬಹುವಿಸ್ತಾರವಾಗಿ ರಾಜ್ಯವಾಳಿದ ನಮ್ಮ ಕದಂಬರು ಶ್ರೀ ಮಧುಕೇಶ್ವರನ ಕೃಪೆಗೆ ಪಾತ್ರರಾಗಿಯೂ ವಿಜಯನಗರದ ಬಲಾಢ್ಯರಾಜರು ಶ್ರೀ ವಿರುಪಾಕ್ಷೇಶ್ವರನ ಕೃಪೆಗೆ ಪಾತ್ರರಾಗಿಯೂ ಯಾವಾಗಲೂ ಶಿವಪಥವನ್ನೇ ಹಿಡಿದು ನಡೆದದ್ದಾದರೂ ಇತಿಹಾಸಪ್ರಸಿದ್ಧವದೆ. ಅಂತು ಶಿವೋಪಾಸಕರೇ ಇದ್ದರು. ಆದ್ದರಿಂದ ನಮ್ಮ ಕುಲಬಾಂಧವರು ಆಚಾರವಂತರಾಗಬೇಕೆಂಬುವ ಕಳಕಳಿಯಿಂದ ಶ್ರೀ ಗುರುವರ್ಗದವರೆಲ್ಲರೂ ತಮ್ಮ ಶಿಷ್ಯರನ್ನು ಉಪದೇಶಿಸಿ ಸನ್ಮಾರ್ಗಕ್ಕೆ ತರಬೇಕೆಂದು ಸವಿನಯಪ್ರಾರ್ಥನೆಯಿಂದ ಬೇಡಿಕೊಳ್ಳುವೆನು. ಮತ್ತು ಇದೇ ಕಾರ್ತಿಕ ಶು|| ೯ ರಲ್ಲಿ ರಾಮಗೇರಿಗ್ರಾಮಕ್ಕೆ ನಮ್ಮ ಶ್ರೀ ಹುಲ್ಲೂರ ರಾಯಪ್ಪಯ್ಯ ಸ್ವಾಮಿಗಳು ಬಂದು 300 ಜನ ಶಿಷ್ಯರಿಗೆ ಲಿಂಗದೀಕ್ಷೆಯನ್ನುಕೊಟ್ಟು ಸನ್ಮಾರ್ಗಕ್ಕೆ ಹಚ್ಚಿದರು. ನಾವೆಲ್ಲರೂ ಗುರುಕೃಪೆಗೆ ಪಾತ್ರರಾಗಿ ಉದ್ಧಾರ ಆದೆವು. ಕಾರಣ ನನ್ನ ಸರ್ವಕುಲಬಾಂಧವರೇ, ಆಚಾರವಂತರಾಗಿ ಮೇಲ್ಪಂಕ್ತಿಯನ್ನು ಹೊಂದಿ ಈಶ್ವರನ ಪಾದಾರವಿಂದವನ್ನು ಕಾಣುವರೆಂದು ಹಾರೈಸುತ್ತೇನೆ.

ತಮ್ಮಗಳ ಬಂಧು,
ಕರಿಸಿದ್ದಪ್ಪಾ ಬೀರಪ್ಪಾ ಬಿಟಿಗೇರಿ ಸಾ|| ರಾಮಗೇರಿ ತಾ|| ಲಕ್ಷ್ಮೇಶ್ವರ.

ಶ್ರೀ ಜಗದಾಚಾರ್ಯ ಸ್ವಾಮಿ ವಿರೂಪಾಕ್ಷ ಒಡೆಯರವರ ಉದಯಪುರರಾಜಧಾನಿ ಪ್ರವಾಸ.

ಶ್ರೀ ನಿಜಸಿಂಹಾಸನಾಧೀಶ ಜಗದಾಚಾರ್ಯ ಜಗದ್ಗುರು ಚವುಡಯ್ಯದಾನಪುರಸಂಸ್ಥಾನದ ಶ್ರೀ ಸ್ವಾಮಿ ವಿರೂಪಾಕ್ಷ ಒಡೆಯರವರನ್ನು ಉದಯಪುರಸ್ಟೇಟಿನ ಕೆಲವು ಸರದಾರರು ಆಮಂತ್ರಣಕೊಟ್ಟು ಇದೇ ತಿಂಗಳ ಪ್ರಾರಂಭದಲ್ಲಿ ಉದಯಪುರ ರಾಜಧಾನಿಗೆ ಕರಸಿಕೊಂಡಿದ್ದರು. ಅಲ್ಲಿ ಜಗದಾಚಾರ್ಯ ಒಡೆಯರವರ ಮುಕ್ಕಾಂ 4-6 ದಿವಸವಿದ್ದು ಅಲ್ಲಿಯ ಕೆಲವು ಅಧಿಕಾರಿಗಳೊಡನೆ ಹಾಗೂ ಸರದಾರಜನರೊಡನೆ ಅನೇಕ ಧಾರ್ಮಿಕವಿಷಯದಲ್ಲಿ ಚರ್ಚಿಸಿ ಮುಂದೆ ಉದಯಪುರಸಂಸ್ಥಾನದಲ್ಲಿ ಅಥವಾ ಮೇವಾಡಪ್ರಾಂತದಲ್ಲಿ ಲಿಂಗಧಾರಣಾದಿವಿಷಯ ಹ್ಯಾಗೆ ಪ್ರಚಾರಮಾಡಬೇಕು ಮೊದಲಾದ ವಿಷಯವನ್ನು ಪರಿಶೀಲಿಸಿಕೊಂಡು ಬಂದಿದ್ದು ಮುಂದ ಕಾರ್ಯಾರಂಭವಿಚಾರದಲ್ಲಿರುವರು. ಉದಯಪುರಸಂಸ್ಥಾನದ ಸದ್ಯದ ಮಹಾರಾಣಾ ಫತ್ತೆಸಿಂಹರೆಂಬವರು 75 ವರ್ಷದ ವೃದ್ಧರಿದ್ದು ಒಳ್ಳೇ ಶಿವಭಕ್ತರೂ ಧಾರ್ಮಿಕರೂ ಇರುತ್ತಾರೆ. ಇವರ ಮಕ್ಕಳಾದ ಭೂಪಾಲಸಿಂಹರೆಂಬುವರು 40-45 ವರ್ಷದವರಿದ್ದು ಸ್ವಲ್ಪ ನವೀನವಿಚಾರದವರಿರುತ್ತಾರೆ. ಜಗದಾಚಾರ್ಯ ಒಡೆಯರವರು ದಯಮಾಡಿಸಿದ್ದಾಗ್ಗೆ ಮಹಾರಾಜರವರು ಉದಯಪುರದಲ್ಲಿರದೆ 50-60 ಮೈಲು ದೂರದಲ್ಲಿರುವ ಜಯಸಮುದ್ರವೆಂಬ ಕೆರೆಯ ದಂಡೆಯಮೇಲೆ ಶಿಕಾರಿಗಾಗಿ ಹೋಗಿದ್ದು ಒಂದೆರಡು ತಿಂಗಳಿಂದ ಅಲ್ಲಿಯೇ ಇರುವರು. ಆದರೆ ಮಹಾರಾಜರ ಮಕ್ಕಳಾದ ಭೂಪಾಲಸಿಂಹರೇ ಸದ್ಯಕ್ಕೆ ರಾಜ್ಯಕಾರಭಾರನಡಿಸುತ್ತಿದ್ದು ಶ್ರೀ ಜಗದಾಚಾರ್ಯರನ್ನು ಚೆನ್ನಾಗಿ ಆದರಿಸಿ ಶ್ರೀಗಳವರ ಅನೇಕ ವಿಷಯಗಳಿಗೆ ಸಹಾನುಭೂತಿಯನ್ನು ತೋರಿಸಿರುವರು.

ಈಗಿನ ಉದಯಪುರಸಂಸ್ಥಾನಾಧೀಶ್ವರರಿಗೆ ಮೊದಲು ಮೇವಾಡರಾಜ್ಯಾಧಿಪತ್ಯವು ಹ್ಯಾಗೆ ದೊರಕಿತೆಂಬುವಬಗ್ಗೆ ಒಂದು ಮಹತ್ವವಾದ ಕಥೆಯನ್ನು ಉದಯಪುರಸಂಸ್ಥಾನದಲ್ಲಿರುವ ಆಬಾಲವೃದ್ಧರು ಹೇಳುವರು. ಏನೆಂದರೆ—ಜಗತಸಿಂಹರೆಂಬ ಓರ್ವ ಮಹಾಪುರುಷನು ಒಳ್ಳೇ ಶಿವಭಕ್ತನಾಗಿದ್ದು ನಿತ್ಯಲಿಂಗಾರ್ಚನಾದಿಕ್ರಿಯೆಗಳಲ್ಲಿ ಧುರೀಣನಾಗಿ ಅದರಿಂದ ಶಿವನನ್ನು ಒಲಿಸಿಕೊಂಡು ಆ ಶಿವಾನುಗ್ರಹದಿಂದ ಮೇವಾಡರಾಜ್ಯಾಧಿಪತಿಯಾದನೆಂತಲೂ, ಆ ಜಗತ್‌ಸಿಂಹರು ಪೂಜೆಮಾಡುತ್ತಿದ್ದ ಲಿಂಗವೇ ಈಗ್ಗೆ “ ಏಕಲಿಂಗಜೀ ” ಎಂಬ ನಾಮದಿಂದ ಉದಯಪುರಕ್ಕೆ 12 ಮೈಲು ದೂರದಲ್ಲಿ ಪ್ರಖ್ಯಾತವಿದ್ದು ಈ ಮಹಾದೇವಲಿಂಗವೇ ಈಗ್ಗೆ ಈ ರಾಜವಂಶದವರಿಗೆ ಮುಖ್ಯ ಕುಲದೇವರಾಗಿರುವದು. ಮತ್ತು ಉದಯಪುರ ರಾಜವಾಡೆಯಲ್ಲಿ ಎಲ್ಲಿ ನೋಡಿದರು ಏಕಲಿಂಗನೆಂಬ ಶಿವಲಿಂಗದ ಫೋಟೋ ಹಾಗೂ ಗೋಡಿಗಳಲ್ಲೆಲ್ಲಾ ಏಕಲಿಂಗದ ದೇವಸ್ಥಾನ ಹಾಗೂ ಮೂರ್ತಿಯ ಚಿತ್ರವೇ ಚಿತ್ರ. ಇಷ್ಟೇ ಅಲ್ಲದೆ ಆ ಏಕಲಿಂಗವನ್ನು ಪೂಜೆಮಾಡುತ್ತ ಕುಳಿತಿರುವಂತೆ ಈ ರಾಜವಂಶದ ಒಬ್ಬ ರಾಜರ ಲಿಂಗಪೂಜೆಯ ಫೋಟೋಗಳು ರಾಜವಾಡೆಯ ತುಂಬೆಲ್ಲಾ ಇರುವವು. ಇದು ಅಲ್ಲದೇ ಈ ರಾಜವಂಶದ ರಾಜರು ಯಾವ ಹುಕುಮಿನಲ್ಲಿಯೂ ತಮ್ಮ ಹೆಸರಿನ ಸಹಿಮಾಡುವದಿಲ್ಲ, ಆದರೆ “ ಶ್ರೀ ಏಕಲಿಂಗಜಿ ” ಎಂದು ಸಹಿಮಾಡುವರು. ಇದು ಏಕಲಿಂಗನ ರಾಜ್ಯವೆಂದು ಹೇಳುವರು. ರಾಜರು ಕೊಟ್ಟ ಯಾವ ಸನದುಗಳನ್ನು ಯಾವ ಹುಕುಮನ್ನು ನೋಡಿದರೂ ಅದರಲ್ಲಿ ಪ್ರಾರಂಭಕ್ಕೆ ಮೇಲೆ ಆದಿಯಲ್ಲಿ “ ಶ್ರೀ ಏಕಲಿಂಗಜಿ ” ಎಂದು ಬರೆಯುವರು. ಆದರೆ ಇತ್ತೀಚೆಗೆ ಉದಯಪುರಕ್ಕೆ 30 ಮೈಲು ದೂರದಲ್ಲಿ ಒಂದು ವೈಷ್ಣವ ದೇವಾಲಯವು ಸ್ಥಾಪಿತವಾಗಿ ಅದಕ್ಕೆ ನಾಥದ್ವಾರವೆಂಬ ಹೆಸರನ್ನಿಟ್ಟುಕೊಂಡು ರಾಜಾಶ್ರಯದಿಂದ ಒಳ್ಳೇ ಪ್ರಸಿದ್ಧಿಯಲ್ಲಿ ತಂದಿರುವರಲ್ಲದೆ ಸನದುಗಳ ಹಾಗೂ ಹುಕುಮುಗಳ ಕಾಗದದಮೇಲೆ ಆದಿಯಲ್ಲಿ ಬರೆಯುವ “ ಶ್ರೀ ಲಿಂಗಜಿ ” ಎಂಬುವ ಪವಿತ್ರ ನಾಮದೊಡನೆ ಉಪದ್ವ್ಯಾಪಿಗಳಾದ ವೈಷ್ಣವರ ಪ್ರಾಬಲ್ಯದಿಂದ “ ಶ್ರೀರಾಮಜಿ ” ಎಂಬ ಹೆಸರು ಬರೆಯಲ್ಪಡುವದು. ಎಲ್ಲಿ ನೋಡಿದರೂ ಮತ್ಸರಿಗಳಾದ ವೈಷ್ಣವರ ಕಾಟ ತಪ್ಪದು.

ಆದರೆ ಇದೆಲ್ಲಾ ಇತಿಹಾಸದಿಂದ ಹಾಗೂ ಈಗ್ಗೆ ರಾಜವಂಶದಲ್ಲಿ ನಡೆದಿರುವ ಲಿಂಗಭಕ್ತಿಯ ವಿಷಯವನ್ನು ವಿಚಾರಮಾಡಿ ನೋಡಿದರೆ, ಪೂರ್ವದಲ್ಲಿ ಈ ರಾಜವಂಶದವರು ಕೇವಲ ಲಿಂಗಧಾರಿಗಳಾದ ವೀರಶೈವರಾಜರಿರಬಹುದೆಂದು ಸ್ಪಷ್ಟವಾಗುತ್ತದೆ, ಆದರೆ ಕೆಲವು ಕಾಲದನಂತರ ಅಲ್ಲಿಗೆ ಬ್ರಾಹ್ಮಣರ ಪ್ರಾಬಲ್ಯವು ಹೆಚ್ಚಾಗಿ ಲಿಂಗವನ್ನು ದೇಹದಿಂದ ತಗಿಸಿರಬಹುದೆಂತಲೂ, ಕೇವಲ ಸ್ಥಾವರಲಿಂಗಪೂಜೆಗೆ ಹಚ್ಚಿರಬಹುದೆಂತಲೂ ತೋರುತ್ತದೆ. ಯಾಕೆಂದರೆ, ಇಲ್ಲೀತನಕ ಅಲ್ಲಿಗೆ ವೀರಶೈವಧರ್ಮಬೋಧಕರಾದ ಅಂಥಾ ಪಂಡಿತರು ಈ ದೇಶಕ್ಕೆ ಬಾರದ್ದರಿಂದ ವೀರಶೈವಧರ್ಮವು ನಿರ್ನಾಮವಾಗಿರುವದು ಸಹಜವಾಗಿರುತ್ತದೆ. ಆದರೆ ಸದ್ಯದ ಮೇವಾಡಪ್ರಾಂತದ ಹಾಗೂ ರಾಜರ ಪರಿಸ್ಥಿತಿಯನ್ನು ನೋಡಲಾಗಿ ಲಿಂಗಧಾರಣಾದಿ ವೀರಶೈವಧರ್ಮಪ್ರಚಾರಮಾಡಲಿಕ್ಕೆ ಇದಕ್ಕಿಂತಲೂ ಉತ್ತಮವಾದ ಸ್ಥಾನವು ಹಿಂದುಸ್ಥಾನದಲ್ಲಿ ಮತ್ತೊಂದು ಸಿಗಲಾರದೆಂದು ನಿಃಸಂದೇಹವಾಗಿ ಹೇಳಬಹುದು. ಆದ್ದರಿಂದ ಎಲೈ ವೀರಶೈವಮಹಾನೀಯರೇ, ವಿದ್ಯಾಪ್ರೋತ್ಸಾಹನಮಾಡಿದ ಶಿರಸಂಗಿ ದೇಸಾಯರಂಥಾ ಪುಣ್ಯಾತ್ಮ ಧರ್ಮಪ್ರೋತ್ಸಾಹಕ ದಾನಶೂರರೊಬ್ಬರು ವೀರಶೈವಧರ್ಮದಲ್ಲಿ ಶೀಘ್ರವೇ ಮುಂದಕ್ಕೆಬಂದು ತಮ್ಮ ಉದಾರಹೃದಯದಿಂದ ಧರ್ಮಪ್ರಸಾರಮಾಡಿಸಿದ ಸುದಿನವನ್ನು ಪರಶಿವನು ಎಂದಿಗೆ ಕಾಣಿಸುವನೋ ತಿಳಿಯದುದಾಗಿದೆ. ಓರ್ವ ವೀರಶೈವ.

ಬಳ್ಳಿನೂಳಿಂಗೆ ಶಾಂತಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಪಂಚಾಚಾರ್ಯಪ್ರಭೆಯ ಜೀವನವಾದ ಒಬ್ಬಾನೊಬ್ಬ ಶಾಸ್ತ್ರಿಯು ಶ್ರೀನಿವಾಸಾಚಾರ್ಯನೆಂಬ ಹೆಸರಿನಿಂದಬರೆದ ಲೇಖನದಲ್ಲಿ ವೀರಶೈವರು ತಮ್ಮ ಗ್ರಂಥಗಳನ್ನು ಶ್ರೀ ಗುರುಬಸವಲಿಂಗಾಯನಮಃ ಎಂದು ಪ್ರಾರಂಭಿಸುವರೆಂದು ಹಾಸ್ಯಮಾಡಿರುವನು. ಅದರಿಂದಲೂ ವೀರಶೈವರು ಬಸವನನ್ನು ಗುರುವೆಂದು ಭಾವಿಸುವರೆಂಬುದು ತಿಳಿದುಬರುವುದು ಮತ್ತು ಅದೇ ವ್ಯಕ್ತಿಯು ಆರಪಾಪದಿಂದಲೊ ಬಸವನಿಂದೆಯ ಕುಮಾರ್ಗಾವಲಂಬನವನ್ನು ಮಾಡುವ ಮತ್ತು ಜನಕ್ಕದನ್ನು ದುರ್ಬೋಧಿಸುವ ಮೊದಲು ಶ್ರೀ ಬಸವನು ನಿಜವಾಗಿಯೂ ವೀರಶೈವಮತೋದ್ಧಾರಕನೆಂದು ಬರೆದಿರುವನು. ವೀರಶೈವರ ಗುರುಗಳೂ ವಿರಕ್ತರೂ ಬಸವನಾಮವನ್ನು ಶಿವನಾಮದೊಡನೆ ಜಪಿಸುತ್ತಲೂ ಶಿಷ್ಯರಿಗದನ್ನು ಬೋಧಿಸುತ್ತಲೂ ಬಂದಿರುವರು. ಈ ವಿಷಯದಲ್ಲಿ ವೀರಶೈವರ ಪೂಜಾವಿಧಿ ಗ್ರಂಥಗಳೂ ಸಂಪ್ರದಾಯವೂ ಸಾಕ್ಷಿಯಾಗಿವೆ ಮತ್ತು ಆ ಮಂತ್ರಗಳನ್ನು ಶ್ರೀನಿವಾಸಾಚಾರ್ಯನು ನಿಂದಿಸಿರುವುದು ವಿರೋಧಿಪಕ್ಷದಿಂದ ಬಂದ ಬಲವತ್ತರವಾದ ಒಪ್ಪಿತವು.

ಇನ್ನು ಬಸವನು ನಿಜವಾಗಿಯೂ ವಾದಿಗಳ ಕಂಠ ಕಾಡಾದಿ ಶಿವಸಮಯವನ್ನು ಗೆಲ್ಲಬೇಕಾಗುತ್ತಿದ್ದಿತೆಂಬಲ್ಲಿ ಅವನ ಜೀವನದ ಅನೇಕ ಸಂಗತಿಗಳು ಪ್ರಮಾಣವಾಗಿವೆ. ಶಿವನಾಗಾರ್ಯನ ಕಥೆಯು ಬ್ರಾಹ್ಮಣರು ವಿವಾದಿಸಿ ಸೋತುದಕ್ಕೂ ಮಾಚಿದೇವ ಚರಿತ್ರವು ಜೈನರ ಸೋಲಿಗೂ ಉದಾಹರಣವಾಗಿವೆ. ಈ ಕಥೆಗಳನ್ನು ನಾನಿಲ್ಲಿ ಆಯಾಯ ಮತಗಳ ಅವಹೇಳನದಿಂದ ಉದಾಹರಿಸಿಲ್ಲ. ಮಾತು ಒದಗಿದುದರಿಂದ ಅರಿಸುವೆನು.

ಬಸವನು ಯಾವ ಸೂತ್ರಕ್ಕೂ ಭಾಷ್ಯವನ್ನು ಬರೆಯದೆ ಮತಸ್ಥಾಪಕನು ಹೇಗೆ ಎಂಬ ಶಂಕೆಯು ಬರಹುದು. ಸೂತ್ರಕ್ಕೆ ಭಾಷ್ಯವನ್ನು ಬರಿಸಿದವನೇ ಮತಾಚಾರ್ಯನೆಂಬುದು ಇತ್ತೀಚಿನ ಕಲ್ಪನೆ. ವ್ಯಾಸಮುನಿಯು ಅವುದೊಂದು ಸಿದ್ಧಾಂತವನ್ನು ಕುರಿತು ಸೂತ್ರವನ್ನು [illegible]. ಅದೇ ಸೂತ್ರಗಳಿಗೆ ದ್ವೈತ ಅದ್ವೈತ [illegible] ಭಾಷ್ಯ

ಗಳಲ್ಲಿ ಒಂದು ಅವುದಾದರು ಸತ್ಯವೇದವೆರಡು ಭ್ರಾಮಕವು. ಇಂತಹ ಕ್ರಮಳಭಾಷ್ಯವನ್ನು ಬರೆದು ತಮ್ಮ ವಾಕ್ಚಾತುರಿಯನ್ನು ತೋರಿಸಿದವರು ಎಂದಿಗೂ ಮತಸ್ಥಾಪಕರಾಗಲಾರರು. ತಮ್ಮ ಮತವು ಸೂತ್ರಗಳಿಗೆ ವಿರೋಧವಾಗಿದ್ದರೆ ಅದನ್ನುಳಿದು ಹೇಳುವ ಧೈರ್ಯವಿಲ್ಲದೆ ಆ ನಿರ್ಜೀವ ಸೂತ್ರಗಳನ್ನು ಜಗ್ಗಿ ಎಳೆದು ಅವುಗಳೊಳಗಿಂದ ತಮ್ಮ ಸಿದ್ಧಾಂತವನ್ನು ಸೆಳೆಯುವುದು ನಿಜವಾದ ಆಚಾರ್ಯತನವಲ್ಲ.

ಸತ್ಯವಾದ ಧರ್ಮವು ಸತ್ಪುರುಷರ ಆತ್ಮನಲ್ಲಿ ಹುದುಗಿರುವುದು. ಆತ್ಮವಿಕಾಸವೇ ಧರ್ಮವಿಕಾಸವು. ಅದರಿಂದಲೇ "ನಾಯಮಾತ್ಮಾ ಪ್ರವಚನೇನ ಲಭ್ಯ ಯತೋವಾಚೋನಿವರ್ತಂತೇ" ಎಂಬ ಮೊದಲಾದ ಶ್ರುತಿಗಳುಂಟು. ಹಿಂದಿನ ಸತ್ಪುರುಷರು ವೇದಾಗಮಗಳಲ್ಲಿ ಬಚ್ಚಿದ ಹೃದಯವನ್ನು ತನ್ನ ಆತ್ಮಶಕ್ತಿಯಿಂದ ಗುರುತಿಸಿ ಆಯಾ ಕಾಲದ ಮಹಾಪುರುಷರು ತಮ್ಮ ದೇಶಕಾಲಪರಿಸ್ಥಿತಿಯನ್ನು ವಿಾರುವ ಸಾಮರ್ಥ್ಯವನ್ನುಳ್ಳವರಲ್ಲದರಿಂದ ಅಷ್ಟು ವಿಶದವಾಗಿ ಆಚರಿಸದ ಧರ್ಮತತ್ವಗಳನ್ನು ತನ್ನಲ್ಲಿರುವ ಪ್ರಬಲ ಆತ್ಮವೀರ್ಯದಿಂದ ಮುಂದುವರಿಸುವ ಮಹಾತ್ಮರು ಧರ್ಮಸ್ಥಾಪಕರು. ಅನಾದಿಕಾಲದಿಂದಲೂ ಈ ತತ್ವಕ್ಕನುಸರಿಸಿ ಧರ್ಮಸಂಸ್ಥಾಪಕರು ಆಗಿರುವರು. ಅವರು ಆತ್ಮನು ಶಿವನೆಂಬ ಉದಾತ್ತತತ್ವವನ್ನು ಬೀರಿಯೂ ಶೂದ್ರನು ವೇದಾಧಿಕಾರಿಯಲ್ಲವೆಂಬ ಸಿದ್ಧಾಂತವನ್ನು ಸಾರುವ ಬ್ರಹ್ಮವು ಜೀವನಿಂದ ಭಿನ್ನವು ಎಂದು ಬ್ರಹ್ಮಕ್ಕೂ ಜೀವನಿಗೂ ಇರುವ ಮಹಾಂತರವನ್ನು ಸಾರಿ ಅಂತಹ ಪರಿಪೂರ್ಣ ಬ್ರಹ್ಮವನ್ನರಿಯಲು ವೇದಾಧ್ಯಯನವು ಜನ್ಮದಿಂದ ಕೆಲವರಿಗೆ ಮಾತ್ರ ಉಂಟು ಇನ್ನುಳಿದವರಿಗಿಲ್ಲ ಎಂಬ ಮತವನ್ನು ಹಂಮುವ ಭಾಷ್ಯಕಾರರಿಗಿಂತಲು ಎಷ್ಟೋ ಮಿಗಿಲು. ಅವರಲ್ಲಿ ನಮ್ಮ ಬಸವನು.

ದೇವರನ್ನು ತಿಳಿವುದು ವೇದಾಗಮಗಳಿಂದ ಆದರೆ ಆ ವೇದಾಗಮಗಳು ಬರಿಯ ಪುಸ್ತಕಗಳಲ್ಲಿ ಈಶನುಡಿಯೆನಿಸಿದ ನಿಗಮಾಗಮಗಳಂತೆ ಈಶನ ಸೃಷ್ಟಿಯೆನಿಸಿದ ಜಗತ್ತೂ ಶರೀರವೂ ವೇದವಾಗಿವೆ. ಇದನ್ನು ಗುರುತಿಸಿ ಬಸವನು ಶುದ್ಧ ಚರಣಕ್ಕೆ ಮುಖ್ಯತ್ವವನ್ನು ಕೊಟ್ಟಿರುವನು. ಸಂಸಾರ ತಾಪವನ್ನಾರಿಸುವ ಧರ್ಮಕ್ಕೆ ಮತ್ತು ಆ ಧರ್ಮದ ಉಚ್ಚತತ್ವಗಳಿಗೆ ಮುಮುಕ್ಷುಗಳಾದ ಆತ್ಮರುಗಳಲ್ಲಿ ಅಧಿಕಾರಿಗಳು ಎಂಬ ಉಚ್ಚತತ್ವವನ್ನು ವೀರಶೈವ ದೀಕ್ಷಾಪ್ರಾಪ್ತವಾದ ವೇದಾಗಮಗಳ ಸದಧ್ಯಯನದಿಂದಲೂ ಆತ್ಮಬಲದಿಂದಲೂ ಗುರುತಿಸಿ ಅಧ್ಯಯನ ಆತ್ಮಬಲಗಳನ್ನು ಮೇಳಯಿಸಿ ವೇದಾಗಮತತ್ವಗಳನ್ನು ತಿಳಿದು ತಿಳಿದಂತಾಚರಿಸಿದ ಸಿದ್ಧಾಂತಸ್ಥಾಪನಾಚಾರ್ಯರು ಪಂಚಾಧಿಕ ವೀರಶೈವಾಚಾರ್ಯರಲ್ಲದೆ ಬೇರೆಯವರಿಲ್ಲ. ಅಂತಹ ಆಚಾರ್ಯರಲ್ಲಿ ಬಸವನು. ಹೀಗಿದ್ದರೂ ಬಸವನನ್ನೆ ವೀರಶೈವರು ಪ್ರಥಮ ಆಚಾರ್ಯನೆನ್ನುವರು. ಇದಕ್ಕೆ ಕಾರಣವುಂಟು. ಉಳಿದ ಆಚಾರ್ಯರು ತಮ್ಮ ಜೀವಿತವನ್ನು ಭಕ್ತಿಮಾರ್ಗದಲ್ಲಿಸವಿಸಿ ದಾಸೋಹಂಭಾವದಿಂದಾಚರಿಸಿಲ್ಲ. ನುಡಿದಂತೆ ನಡೆವುದು, ಹಿಡಿದ ಶಿವವ್ರತವನ್ನು ಛಲದಿಂದ ಪಾಲಿಸುವುದು, ತಾನು ಗುರುಲಿಂಗಜಂಗಮದ ದಾಸೋಹಕ್ಕಾಗಿಯೇ ಶರೀರವನ್ನು ಸವೆಯಿಸುವುದು ಭಕ್ತಿಮಾರ್ಗದಲ್ಲಿ ಶ್ರಮಸಾಧ್ಯವಾದಹಾಗೆ ಉಳಿದ ಮಾರ್ಗದಲ್ಲಿಲ್ಲ. ಪರಿಪೂರ್ಣಾವಸ್ಥೆಯನ್ನು ಹೊಂದುವುದು ಭಕ್ತಿಮಾರ್ಗದಂತೆ ಉಳಿದ ಹೊಲಬಿನಲ್ಲಿಲ್ಲ. ಇದರಿಂದ ಉಳಿದ ಆಚಾರ್ಯರಿಂದ ಅಥವಾ ಶರಣರಿಂದ ಬಸವನು ಬೇರೆ ಎಂಬುದಲ್ಲ. ಬಸವನು ಶರಣರಲ್ಲೂ ಶರಣನು ಬಸವನಲ್ಲೂ ಅಡಗುವುದರಿಂದ ಬಸವನ ಪರಿಪೂರ್ಣತೆಯೇ ಅವರ ಪರಿಪೂರ್ಣತೆಯು. ಅವರ ಲೋಕೋತ್ತರತ್ವವೆ ಬಸವನ ಲೋಕೋತ್ತರತ್ವವು.

ಗುಣಿಬಸವಚರಿತಮಣಿದ | ಪ್ರಣದೊಳ್ಕಾರ್ಪೊಳೆದುದತ್ತ ಗಣನಿವಹದಸವ್ || ಗುಣಗಣಚರಿತ್ರಮಹಿಮೊ | ಕ್ಷಣನೆಸಕದಿನೆಸಗೆ ವಿಶ್ವವಿಶ್ವಂಭರೆಯೊಳ್ || ವೃಷಭೇಂದ್ರವಿಜಯ ೪೨—೫೦.

ಬಸವನನ್ನು ಹಳಿವಾಗ ವಿಜಯಕಾರರು ಬಸವನು ಉಪನಯನವನ್ನು ಧಿಕ್ಕರಿಸಿದರಿಂದ ವೇದಾಧ್ಯಯನಕ್ಕೆ ಮಾರ್ಗವಿದ್ದಿಲ್ಲವಾದ್ದರಿಂದ ಅವನು ಅದರ ರಹಸ್ಯವನ್ನು ತಿಳಿಯಲಾರನೆಂದು ಬರೆದಿರುವರು. ಇದು ನಮ್ಮ ಪ್ರಭೆಗೆ ಹೇಗೆ ರುಚಿಸುವುದೋ ತಿಳಿಯದು. ಪ್ರಭೆಯ ಸಂಪಾದಕರಾಗಲಿ ಅದರ ಪೋಷಕರಾಗಲಿ ವಿಜಯಕಾರರ ಉಪನಯನವನ್ನು ಹೊಂದಿಲ್ಲ. ಶ್ರೀ ರೇಣುಕಾದಿಗಳು ಆ ಉಪನಯನವನ್ನು ಹೊಂದಿ ಅದನ್ನು ಬೋಧಿಸುತ್ತಿರುವ ಮಾರ್ಗದಿಂದ ತಾವು ಚ್ಯುತರಾಗಿರುವೆವು. ಇನ್ನು ಮುಂದೆ ಸುಸಂಸ್ಕೃತರಾಗುವೆವೆಂದರೆ ಅದೊಂದು ಮಾತು. ಹಾಗಲ್ಲದಿದ್ದರೆ ಶ್ರೀ ರೇಣುಕಾದಿಗಳಿಗೂ ವೇದಾರ್ಥವು ತಿಳಿದಿದ್ದಿಲ್ಲ. ಅವರು ಮತಸ್ಥಾಪನಾಚಾರ್ಯರಲ್ಲ. ಈ ವಿಷಯವನ್ನು ವಿಜಯಕಾರ ಪ್ರಭಾಕಾರರು ಎಂತು ಬಗೆಹರಿಸಿಕೊಳ್ಳುವರೊ !

ಪಾವಟೆ ಸಿದ್ಧರಾಮಪ್ಪ.

ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ರಜತೋತ್ಸವ.

ಮೈಸೂರು ಸಂಸ್ಥಾನವನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ರವರ ಸಿಂಹಾಸನಾರೋಹಣದ "ಸಿಲ್ವರ್‌ಜ್ಯೂಬಿಲಿ" ಮಹೋತ್ಸವದಲ್ಲಿ ಭಾಗಿಗಳಾಗಿದ್ದ ಹಲವರಿಗೆ ಅದರಲ್ಲಿಯೂ ಮುಖ್ಯವಾಗಿ ವೀರಶೈವರಿಗೆ ತತ್ಸಮಾನವಾದ ಇನ್ನೊಂದು ಮಹೋತ್ಸವವನ್ನು ಧಾರ್ಮಿಕ ಸಾಮ್ರಾಜ್ಯದಲ್ಲಿ ನೆರವೇರಿಸುವ ಸುಯೋಗವು ಶೀಘ್ರವಾಗಿಯೇ ಲಭಿಸಿರುತ್ತದೆ. ಗುರುಶ್ರೇಷ್ಠರೂ ಲೋಕಪೂಜ್ಯರೂ ಆಗಿರುವ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರೇ ಈ ಅಭೂತಪೂರ್ವವಾದ ಸುಸಂಧಿಗೆ ಕರ್ತರಾಗಿರುತ್ತಾರೆ. ಈ ಮಹನೀಯರು ಪ್ರಾಚೀನವೂ, ಸರ್ವವೀರಶೈವ ಪೂಜ್ಯಸ್ಥಾನವೂ ಆದ ಚಿತ್ರದುರ್ಗ ಸಂಸ್ಥಾನಮಠಕ್ಕೆ ಅಧಿಕಾರವನ್ನು ವಹಿಸಿ ಇಂದಿಗೆ ಇಪ್ಪತ್ತೈದುವರ್ಷಗಳು ಪೂರ್ತಿಯಾದವು. ಆಸೇತು ಹಿಮಾಚಲಾಂತವಾದ ಭರತಖಂಡದ ಎಲ್ಲಾ ಭಾಗಗಳಲ್ಲೂ ಶಾಖಾಮಠಗಳುಳ್ಳದಾಗಿಯೂ ವೀರಶೈವಸಮಾಜಕ್ಕೆ ಮುಖ್ಯ ಜಗದ್ಗುರು ಪೀಠವಾಗಿಯೂ ಇರುವ ಈ ಸಂಸ್ಥಾನ ಮಠದ ಘನತೆಗೆ ಅನುಗುಣವಾಗಿ ಈ ಮಹಾಪುರುಷರು ದೊರೆತಿರುವುದು ನಮ್ಮೆಲ್ಲರ ಭಾಗ್ಯೋದಯವೆನ್ನುವುದರಲ್ಲಿ ಸಂದೇಹವಿಲ್ಲ. ಇವರು ವಿದ್ಯಾವಂತರೂ ಆಚಾರಶೀಲರೂ ತಪೋನಿಷ್ಠರೂ ಪರಮವೈರಾಗ್ಯಶಾಲಿಗಳೂ ಅಸಾಧಾರಣವಾದ ಮೇಧಾವಿಗಳೂ ಲೋಕಸೇವಾಧುರೀಣರೂ ಆಗಿರುವರೆಂಬುದು ಜನಜನಿತವಾಗಿದೆ. ಈ ಪೂಜ್ಯಪಾದರು ಧಾರ್ಮಿಕ ನಿಜತತ್ವಗಳನ್ನು ಅರಿತು ಲೋಕಕಲ್ಯಾಣಕ್ಕಾಗಿ ಅವುಗಳನ್ನು ತ್ರಿಕರಣಪೂರ್ವಕವಾಗಿ ಆಚರಿಸಿ ತೋರಿಸಿರುವರೆಂಬುದನ್ನು ಅವರ ಈವರೆಗಿನ ಜೀವನಕ್ರಮದಿಂದಲೇ ನಿರ್ವಿವಾದವಾಗಿ ದೃಢಪಡಿಸಿಕೊಳ್ಳಬಹುದಾಗಿದೆ. ಇವರು ಅಧಿಕಾರಾರೂಢರಾದಾಗಿಂದಲೂ ವೀರಶೈವ ಜನಾಂಗದ ಪುರೋಭಿವೃದ್ಧಿಗಾಗಿ ವಿಶೇಷಪ್ರಕಾರ ಪಾಟುಪಾಡುತ್ತಿರುವುದನ್ನು ಲಕ್ಷಿಸಿದರೆ ಜಗದ್ವಿಖ್ಯಾತರಾದ ಶ್ರೀ ವಿವೇಕಾನಂದ ಮಹಾಸ್ವಾಮಿಗಳವರು ಕೊಂಡಾಡಿರುವ ಸನ್ಯಾಸಧರ್ಮವೇ ಈ ಮಹಾಗುರುಗಳ ಜೀವನಸತ್ವವಾಗಿದೆ ಎಂಬುದು ವ್ಯಕ್ತಪಡುತ್ತದೆ. ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಈ ವೀರಶೈವ ಸಮಾಜವು ಸರ್ವತೋಮುಖವಾಗಿ ಹೊಂದಿರುವ ಅಭಿವೃದ್ಧಿಯಲ್ಲಿ ಈ ಮಹನೀಯರು ತೋರಿಸಿರುವ ಕಾರ್ಯಶಕ್ತಿಯು ಬಹುಮಹತ್ತರವಾಗಿದ್ದು ಇವರೇ ವೀರಶೈವ ಜನಜೀವನದ ಕೇಂದ್ರ ಸ್ವರೂಪರೂ ಸತ್ಪ್ರೇರಕರೂ ಆಗಿ ಪರಿಣಮಿಸಿರುತ್ತಾರೆಂಬುದರಲ್ಲಿ ಲೇಶವೂ ಅತಿಶಯೋಕ್ತಿಯಿಲ್ಲ. ವಿದ್ಯಾಭಿವೃದ್ಧಿಗೂ ಧರ್ಮಸುಧಾರಣೆಗೂ ಸಮಾಜೋನ್ನತಿಗೂ ರಾಷ್ಟ್ರೋದ್ಧಾರಕ್ಕೂ ಈ ಯೋಗಿವರ್ಯರು ನಿರ್ವಹಿಸಿರುವ ಕಾರ್ಯಕಲಾಪಗಳು ಮೂವತ್ತೈದುಲಕ್ಷ ಪ್ರಜಾಸಂಖ್ಯೆಯುಳ್ಳ ಅಖಿಲವೀರಶೈವ ಸಮಾಜವೃತ್ತಿ ಕೃತಜ್ಞತಾರ್ಣವದಲ್ಲಿ ಮುಳುಗಿಸಿರುವುದರಿಂದ ಇವುಗಳನ್ನೆಲ್ಲಾ ವಿವರಿಸುವುದು ಪ್ರಕೃತಲೇಖನದ ಉದ್ದೇಶವಲ್ಲ. ಅಲ್ಲದೆ ಇವುಗಳೇನೆಂಬುದು ಸರ್ವವಿದಿತವೂ ಆಗಿರುತ್ತೆ. ಆದಾಗ್ಯೂ ಈಗ ಒದಗಿರುವ ಸಂದರ್ಭದ ಘನತೆಯನ್ನರಿತು ಅದಕ್ಕನುಗುಣವಾಗಿ ವರ್ತಿಸುವ ತೀವ್ರಾಭಿಲಾಷೆಯು ಸರ್ವರಲ್ಲಿಯೂ ಉಂಟಾಗಲೆಂಬ ಉದ್ದೇಶದಿಂದ ಕೆಲವಂಶಗಳನ್ನು ಮಾತ್ರ ಸೂಚಿಸುವುದು ಅತ್ಯಗತ್ಯವೆಂದು ಭಾವಿಸುತ್ತೇನೆ.

ವಿದ್ಯೆಯೇ ಸರ್ವಶ್ರೇಯಸ್ಸಿಗೂ ಮೂಲಕಾರಣವಾಗಿರುವುದರಿಂದ ವಿದ್ಯಾಭಿವೃದ್ಧಿಗೂ ಧಾರ್ಮಿಕ ಸುಧಾರಣೆಗೂ ಅವಶ್ಯಕವಾದ ಪ್ರೋತ್ಸಾಹಗಳನ್ನು ಕಲ್ಪಿಸುವುದೇ ತಮ್ಮ ಮುಖ್ಯ ಕರ್ತವ್ಯವೆಂಬ ಭಾವನೆಯಿಂದ ಈ ಮಹಾಪುರುಷರು ಕೊಟ್ಟಿರುವ ಉದಾರಾಶ್ರಯದಿಂದ ಮೈಸೂರು ಕೊಲ್ಹಾಪುರ ಹೈದರಾಬಾದು ಮುಂತಾದ ದೇಶೀಯ ಸಂಸ್ಥಾನಗಳಲ್ಲೂ ಧಾರ್ವಾಡ ಮುಂತಾದ ಬ್ರಿಟಿಷ್ ಸೀಮೆಯಲ್ಲೂ ವಿದ್ಯಾರ್ಥಿ ನಿಲಯಗಳೂ ವೀರಶೈವ ಆಶ್ರಮಗಳೂ ಪಾಠಶಾಲೆಗಳೂ ಸಹ ಲಕ್ಷಾಂತರ ಹಣವ್ಯಯದಿಂದ ಸ್ಥಾಪಿಸಲ್ಪಟ್ಟು ಸುವ್ಯವಸ್ಥಿತವಾಗಿ ನಡೆಯುತ್ತಾ ಇವೆ. ಅಲ್ಲದೆ ಸ್ವದೇಶಪರದೇಶಗಳಲ್ಲಿ ವಿದ್ಯಾವ್ಯಾಸಂಗ ಮಾಡುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೂ ಕೆಲ ಪರಮತ ವಿದ್ಯಾರ್ಥಿಗಳಿಗೂ ಸಹ ವೇತನಗಳು ಕೊಡಲ್ಪಡುತ್ತಾ ಇವೆ. ಈ ಏರ್ಪಾಡುಗಳ ಉಪಯೋಗವನ್ನು ಹೊಂದಿದ ನೂರಾರು ಜನರು ಈಗಾಗಲೇ ವೀರಶೈವಸಮಾಜದಲ್ಲಿ ಪ್ರೌಢರಾಗಿಯೂ ಪ್ರಮುಖರಾಗಿಯೂ ವಿರಾಜಿಸುತ್ತಿದ್ದಾರೆ.

ಅಜ್ಞಾನಾಂಧಕಾರದಲ್ಲಿ ತೊಳಲುತ್ತಿದ್ದ ಈ ಸಮಾಜವನ್ನು ಎಚ್ಚರಿಸಲು ಈ ಮಹಾಶಯರು ಅತಿಶಯ ಕಷ್ಟವನ್ನು ಸಹಿಸಿರುತ್ತಾರೆ. ಇವರು ಮಠದಲ್ಲಿದ್ದುಕೊಂಡು ಭೋಗೋಪಚಾರಗಳಿಂದ ವ್ಯರ್ಥಕಾಲಹರಣಮಾಡದೆ ಈ ಇಪ್ಪತ್ತೈದುವರ್ಷ ಕಾಲದಲ್ಲಿ ಬಹುಭಾಗವನ್ನೆಲ್ಲಾ ಭರತಖಂಡದ ನಾನಾ ಭಾಗಗಳಲ್ಲಿ ಸಂಚರಿಸುವುದರಲ್ಲಿಯೇ ವಿನಿಯೋಗಿಸಿರುತ್ತಾರೆ. ತಾವು ಹೋದೆಡೆಗಳಲ್ಲೆಲ್ಲಾ ಭಕ್ತಸಮೂಹವನ್ನಾಕರ್ಷಿಸಿ ಅವರ ಕಷ್ಟನಿಷ್ಠುರಗಳಲ್ಲಿ ಭಾಗಿಗಳಾಗಿ ಸಮಯೋಚಿತ ಆಚಾರನೀತಿಗಳನ್ನು ಅವರಿಗೆ ಬೋಧಿಸುತ್ತ ಅಸಾಧಾರಣವಾದ ಜನ ಜಾಗ್ರತೆಯನ್ನುಂಟುಮಾಡಿರುವ ವೀರಶೈವ ಗುರುಗಳಲ್ಲಿ ಅದ್ವಿತೀಯರಾಗಿರುತ್ತಾರೆ. ಈ ದಿವ್ಯಮೂರ್ತಿಯ ಅಡಿದಾವರೆಗಳಲ್ಲೆರಗದ ಯಾವೊಬ್ಬ ಮಾನವನ ಆನಂದಕ್ಕೆ ಪಾರವೇ ಇಲ್ಲವು. ಅಜ್ಞಾನಜನ್ಯವಾದ ಸಹಸ್ರಾರು ತೊಡಕುಗಳನ್ನು ಬಗೆಹರಿಸಿ ಸಮಾಜಪುರುಷನು ದೃಢಕಾಯನಾಗಿ ಬಾಳುವುದಕ್ಕೆ ಅವಶ್ಯಕವಾದ ಏಕಮತ್ಯವೂ ಸೋದರಭಾವವೂ ನೆಲೆಗೊಳ್ಳಲು ಈ ಪೂಜ್ಯಪಾದರು ಮಾಡಿರುವ ಏರ್ಪಾಡುಗಳು ಪ್ರಸಂಶನೀಯವಾಗಿವೆ. ಸಮಾಜಕ್ಕೆ ಕಲ್ಪತರುವೆಂತಿರುವ ಅಖಿಲಭಾರತವೀರಶೈವಮಹಾಸಭೆಯು ಕಾರಣಾಂತರಗಳಿಂದ ನಾಮಮಾತ್ರಶೇಷವಾಗಿದ್ದುದನ್ನು ಕಂಡು ತಮ್ಮ ಅತದ್ಭುತವಾದ ಶಕ್ತಿಯಿಂದ ಪುನರ್ಜೀವನಗೊಳಿಸಲು ಶ್ರಮಪಟ್ಟ ಮಹಾಮಹಿಮರು ಇವರಲ್ಲವೆ ? ಇವರ ಉದಾರ ಪ್ರೋತ್ಸಾಹದಿಂದಲೇ ಈ ಮಹಾಸಭೆಯು ಶಾಶ್ವತವಾಗಿ ನಿಲ್ಲುವ ಏರ್ಪಾಡಿಗಾಗಿ ವೀರಶೈವ ಶ್ರೀಮಂತರಿಂದ ಒಂದೆರಡುದಿವಸಗಳಲ್ಲಿಯೇ ಅರವತ್ತುಮೂರುಸಾಹಸ್ರರೂಪಾಯಿಗಳವರೆಗೂ ವಾಗ್ದಾನವಾಗಿ ಆಗಲೇ ಮೂವತ್ತೈದುಸಹಸ್ರರೂಪಾಯಿಗಳು ಶೇಖರವಾದುದು ಯಾರಿಗೆತಾನೆ ಗೊತ್ತಿಲ್ಲ ?

ಈ ಗುರುವರೇಣ್ಯರ ಧಾರ್ಮಿಕಭಾವನೆಯು ಬಹು ಉದಾತ್ತವಾದುದು. ರಾಗದ್ವೇಷವೂ ಡಾಂಭಿಕಾಚಾರವೂ ಇವರಿಗೆಂದೂ ಸಲ್ಲವು. ವೀರಶೈವ ಧರ್ಮತತ್ವಗಳು ಮತ್ತು ಆಚಾರನೀತಿಗಳೂ ವೇದವೇದಾಂಗಸಮ್ಮತವಾಗಿಯೂ ಇಹಪರಲೋಕಸಾಧನವಾಗಿಯೂ ಇರುವವೆಂಬದು ಲೋಕಪ್ರಖ್ಯಾತವಾಗಿದೆ. ಇಂತಹ ಧರ್ಮವು ಯಾವೊಬ್ಬ ವ್ಯಕ್ತಿಯ ಸ್ವತ್ತಲ್ಲವಾದುದರಿಂದ ಇದು ಪ್ರಸಾರವಾಗಿ ಸಮಸ್ತಮಾನವಕೋಟಿಯೂ ಉದ್ಧಾರವಾಗಲೆಂಬ ಕಾರುಣ್ಯಭಾವವೂ ನಮ್ಮ ಶ್ರೀಗಳವರಲ್ಲಿ ಯಾವಾಗಲೂ ತುಂಬಿತುಳುಕುತ್ತದೆ. ಹಿಂದುಧರ್ಮ ಪ್ರಪಂಚದಲ್ಲಿ ಇಂಥ ಗುರೋತ್ತಮರ ದರ್ಶನವು ಬಹುದುರ್ಲಭವವೆ ?

ಅನಂತಜಾತಿಗಳಿಗೂ ಧರ್ಮಗಳಿಗೂ ನೆಲೆಯಾಗಿರುವ ಈ ಭರತಖಂಡದಲ್ಲಿ ವೀರಶೈವಸಮಾಜದ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದರಲ್ಲಿ ಮಹಾಸ್ವಾಮಿಗಳವರು ಅಪ್ರತಿಹತವಾದ ಶಕ್ತಿಸಾಹಸಗಳನ್ನು ತೋರಿಸಿರುತ್ತಾರೆ. ಈ ಮಹನೀಯರ ಅಸಾಧವಾದ ಪ್ರಯತ್ನವಿಶೇಷದಿಂದಲೇ ಆಗಿಂದಾಗ್ಗೆ ಸಮಾಜಕ್ಕೊದಗಿದ ಹಲವು ಪ್ರಘಾತಗಳು ಪಾರಾಗಿ ಸಮಾಜವೇ ತಲೆಯೆತ್ತಿಕೊಂಡು ತಿರುಗುವಂತಾಗಿರುತ್ತೆ. ಇವರು ವೀರಶೈವರಾಗಿದ್ದಾಗ್ಯೂ ಇವರಲ್ಲಿ ಮೂರ್ತಿಗೊಂಡಿರುವ ನಿಸ್ವಾರ್ಥಬುದ್ಧಿಯನ್ನೂ ಭಕ್ತವಾತ್ಸಲ್ಯವನ್ನೂ ಗ್ರಹಿಸಿದ ಪರಧರ್ಮೀಯರೂ ಸಹ ಇವರಿಗೆ ತಲೆಬಾಗಿ ಸ್ತುತಿಸಗ್ಗೆಯುತ್ತಿದ್ದಾರೆ. ಇವರು ಸ್ವಧರ್ಮಪರಿಪಾಲಕರಾಗಿದ್ದಾಗ್ಯೂ ಇತರರಿಗೆ ಶ್ರದ್ಧಾಸ್ಪದವಾಗಿರುವ ನಾನಾ ಮತಗಳಲ್ಲಿಯು ಸಹ ಗೌರವಗಳನ್ನಿಟ್ಟುಕೊಂಡು ಸರ್ವಸಮದೃಷ್ಟಿಯಿಂದ ವರ್ತಿಸುತ್ತಾರೆ. ಈ ವಿಧವಾದ ಉದಾರತತ್ವವೇತ್ತರಾದ ಧರ್ಮಬೋಧಕರು ಹೆಚ್ಚು ಹೆಚ್ಚಾಗಿ ದೊರೆಯುವವರೆಗೂ ನಮ್ಮ ಹಿಂದುದೇಶಕ್ಕೆ ಗತ್ಯಂತರವಿಲ್ಲವೆಂದೇ ಹೇಳಬಹುದು.

ಮುಖ್ಯವಾಗಿ ಈ ಮಹಾಸ್ವಾಮಿಗಳವರ ದಿವ್ಯತೇಜಸ್ಸಿನ ಪ್ರಭಾವವು ಕಳೆದ ಕಾಲುಶತಮಾನದಲ್ಲಿ ವೀರಶೈವಜನಾಂಗದಲ್ಲೆಲ್ಲಾ ಪ್ರಸರಿಸಿ ಮಹದುಪಕಾರವನ್ನುಂಟು ಮಾಡಿರುವುದನ್ನು ಎಲ್ಲರೂ ಕಂಡುಕೇಳಿರುತ್ತಾರೆ. ಈ ಮಹಾನುಭಾವರ ಜೀವನವನ್ನೂ ಕಾರ್ಯಕಲಾಪಗಳನ್ನೂ ಪರಿಶೀಲಿಸುವುದಾದರೆ ಈ ಕಾಲದ ಅನೇಕ ಧರ್ಮಗುರುಗಳಿಗೆ ಅನುಕರಣೀಯವಾದ ಮೇಲ್ಪಂಕ್ತಿಯಾಗಿದ್ದಾರೆಂಬುದು ಮನಗಾಣುತ್ತದೆ. ಪ್ರಪಂಚದ ಮಧ್ಯದಲ್ಲಿಯೇ ದಗಲಿರುಳೂ ಕಾಲಕಳೆಯುತ್ತಿದ್ದಾಗ್ಯೂ ನಿಶ್ಚಲವಾದ ಜ್ಞಾನವೈರಾಗ್ಯಸಂಪನ್ನರಾಗಿ ಪರಿಶೋಭಿಸುತ್ತಿದ್ದಾರೆ. ಇಂತಹ ಮಹಾ ತಪಸ್ವಿಗಳಲ್ಲಿ ನಮಗಿರುವ ಭಕ್ತಿಯನ್ನು ಕಾರ್ಯತಃ ತೋರ್ಪಡಿಸುವ ಅಪೂರ್ವ ಸಮಯವು ನಮಗೊದಗಿರುವುದಿಲ್ಲವೆ? ಈ ಇಪ್ಪತ್ತೈದು ವರ್ಷದಲ್ಲಿ ಈ ಮಹನೀಯರು ಕರ್ತವ್ಯನಿಷ್ಠಾಪರರಾಗಿ ನಮ್ಮೆಲ್ಲರ ಪುರೋಭಿವೃದ್ಧಿಗಾಗಿ ಮಾಡಿರುವ ಅನಂತ ಮಹಾಕಾರ್ಯಗಳ ಸಲುವಾಗಿ ನಮಗುಂಟಾಗಿರುವ ಆನಂದಾತಿಶಯಗಳನ್ನು ಅವರ ಚರಣಕಮಲದಲ್ಲಿ ಈ ರಜತೋತ್ಸವದ ಮೂಲಕ ಸಮರ್ಪಿಸಿ ಕೃತಕೃತ್ಯರಾಗಬೇಕಲ್ಲವೆ? ಅಲ್ಲದೆ ಈಗಿನ ಸೂಕ್ಷ್ಮಕಾಲದಲ್ಲಿ ಸಮಾಜಹಿತಚಿಂತಕರಾದ ಇಂತಹ ಧರ್ಮಪ್ರಭುಗಳು ಚಿರಕಾಲ ಪ್ರಸನ್ನರಾಗಿರುವಂತೆ ಶ್ರೀ ಪರಮಾತ್ಮನ ಅನುಗ್ರಹವನ್ನು ಪಡೆಯಬೇಕಾದುದು ನಮ್ಮೆಲ್ಲರ ಪವಿತ್ರವಾದ ಕರ್ತವ್ಯವಲ್ಲವೆ? ಆದಕಾರಣ ಈ ಅತ್ಯಾನಂದವೂ ಫಲದಾಯಕವೂ ಆದ ಮಹೋತ್ಸವವನ್ನು ಅಚಿರಕಾಲದಿಂದ ಆಚರಿಸುವ ವೃತಸಂಕಲ್ಪವನ್ನು ಮತ್ತು ಮಹಾ ಶ್ರೀಗಳವರ ದಿವ್ಯ ಕೃಪಾಶೀರ್ವಾದಗಳಿಗೆ ಪಾತ್ರರಾಗುವ ಲವಲವಿಕೆಯನ್ನು ಸಮಾಜಬಾಂಧವರೆಲ್ಲರೂ ಅತಿಶೀಘ್ರದಲ್ಲಿಯೇ ತೋರಿಸದಿರಲಾರರೆಂದು ಹಾರೈಸುತ್ತೇನೆ.

ತಮ್ಮ ವಿಧೇಯ,

ದಾವಣಗೆರೆ
ತಾ|| 10-1-29 } ಡಿ. ಎಚ್. ಚಂದ್ರಶೇಖರಯ್ಯ ಬಿ.ಎ., ಎಲ್‌ಎಲ್.ಬಿ.,
ಅಡ್ವೊಕೇಟ್ ಮತ್ತು ನ್ಯಾಯವಿಧಾಯಕ ಸಭೆಯ ಮೆಂಬರು.

ಹೊರಡುವುದು ! ಶೀಘ್ರ ಹೊರಡುವದು !!

ವಾರಪತ್ರಿಕೆ.

ಶಿವಪ್ರತಾಪ.

ಸಂಪಾದಕರು—ಕಾವ್ಯತೀರ್ಥ, ಗುರುಮೂರ್ತಿಶಾಸ್ತ್ರಿ, ಕಜ್ಜರಿ.

ರಾಜಕೀಯ, ಸಾಮಾಜಿಕ, ಧಾರ್ಮಿಕ, ಔದ್ಯೋಗಿಕ, ನಾಡಿನ ಏಕೀಕರಣ, ಗ್ರಾಮಸಂಘಟನೆ, ಮುಂತಾದ ವಿಷಯಗಳನ್ನೊಳಗೊಂಡು ಅನೇಕ ಸ್ವತಂತ್ರ ಮತ್ತು ಸ್ಫೂರ್ತಿದಾಯಕ ಲೇಖನಗಳಿಂದ ಇದೇ ಮಾಘಮಾಸದಿಂದ ಹೊರಡಲುದ್ಯುಕ್ತವಾಗಿದ್ದು ಈಗಾಗಲೇ ಮಾದರಿ ಸಂಚಿಕೆಯು ಪ್ರಕಟವಾಗಿದೆ ಪತ್ರಬರೆದವರಿಗೆ ಅದನ್ನು ಪುಕ್ಸಟೆಯಾಗಿ ಕಳಿಸುತ್ತಿರುವೆವು. ವಾರ್ಷಿಕ ವರ್ಗಣಿ ಟಪಾಲು ಖರ್ಚುಸೇರಿ ಕೇವಲ ಮೂರೇ ರೂಪಾಯಿಗಳನ್ನು ಇಟ್ಟಿರುತ್ತದೆ ಅಪೇಕ್ಷೆ ಇದ್ದವರು ಕೂಡಲೇ ವರ್ಗಣೀದಾರರಾಗತಕ್ಕದ್ದು.

ಹಾವೇರಿ. } ವ್ಯವಸ್ಥಾಪಕ
ಶಿವಪ್ರತಾಪ ಕಾರ್ಯಾಲಯ.

ಫೋಟೋ, ಲೈನ್, ಯಲಕ್ಟ್ರೋ
ಬ್ಲಾಕುಗಳು, ಅರಗಿನಶೀಲು
ದವಾಲಿಬಿಲ್ಲೆಗಳು ಮತ್ತು
ರಬ್ಬರ್ ಮೋಹರುಗಳನ್ನೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

8

ಪ್ರಕಟನೆ.

" ಜ್ಯೋತಿಶ್ಶಾಸ್ತ್ರಪಯೋನಿಧಿ "

ಫಲಕಾಂಡ,ಶ್ಲೋಕತಾತ್ಪರ್ಯಗಳಿಂದಲೂ ಶ್ರೀಮನ್ಮಹಾರಾಜರವರ ಜಾತಕೋದಾಹರಣೆಯಿಂದಲೂ ಕೂಡಿರುತ್ತದೆ. ಬೆಲೆ 4-0-0. ಟ. ಖ. 0-8-0.

" ಮುಹೂರ್ತರಾಜಚಂದ್ರಿಕೆ "

ಮುಹೂರ್ತಭಾಗ, ಶ್ಲೋಕ ತಾತ್ಪರ್ಯಗಳಿಂದ ಕೂಡಿರುತ್ತದೆ. ಬೆಲೆ 0-10-0. ಟ. ಖ. 0-4-0.

ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ಮೇಲ್ಕಂಡ ಎರಡು ಪ್ರತಿಗಳನ್ನು ಒಟ್ಟಿಗೆ ತರಿಸತಕ್ಕವರಿಗೆ ಮಾತ್ರ ಟಪಾಲು ಖರ್ಚು ಮಾಫಿ ಇಂದ 0-8-0 ಬೆಲೆಯುಳ್ಳ ಧ್ಯಾನಶ್ಲೋಕಗಳಿಂದ ಕೂಡಿದ ಸುಂದರವಾದ 32 ಗಣಪತಿಗಳ ಚಿತ್ರಪುಸ್ತಕ ಒಂದು ಉಚಿತವಾಗಿ ಕೊಡಲ್ಪಡುತ್ತದೆ. ವಿಳಾಸವನ್ನು ಸ್ಪಷ್ಟ ಬರಿಸಬೇಕಾಗಿ ವಿನಂತಿ.

ನಮ್ಮ ವಿಳಾಸ— 11

ಎ. ಸಚ್ಚಿದಾನಂದ ಜೋಯಿಸರು ಸಿದ್ಧಾಂತಿ, ಮೈಸೂರು.

೧೯೨೯ ನೆಯ ಇಸವಿ ಜನವರಿ ತಾ|| ೨೬ ರಿಂದ ೧೯೨೯ ನೆಯ ಇಸವಿ ಫೆಬ್ರವರಿ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಪುಷ್ಯ ಬಹುಳ ಪಾಡ್ಯಮಿಯಿಂದ ಪುಷ್ಯ ಬಹುಳ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಳ ಮಾಸ
26	(1) ಶನಿ	ಪಾಡ್ಯ	9-56	ಆಶ್ಲೇ	31-56	13
27	ಭಾನು	ಬಿದಿ	6-19	ಮಖ	30-16	14
28	ಸೋಮ	ತದಿ	3-48	ಪುಬ್ಬ	29-42	15
29	(2) ಮಂಗಳ	ಚೌತಿ	2-14	ಉತ್ತ	30-16	16
30	ಬುಧ	ಪಂಚ	1-58	ಹಸ್ತ	32-6	17
31	ಗುರು	ಷಷ್ಠಿ	3-1	ಚಿತ್ತ	35-6	18
1	ಶುಕ್ರ	ಸಪ್ತ	5-17	ಸ್ವಾತಿ	39-20	19

(1) ಮಳೆನಕ್ಷತ್ರ-ಶ್ರವಣ ೨ ನೆಯಪಾದ. (2) ಮಳೆನಕ್ಷತ್ರ-ಶ್ರವಣ ೪ ನೆಯಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಕರಾಜಮಂಡಲಹಿತೈಷಾ | ಘನಪಕ್ಷಕೃಪಾವತಾರಾ ಸಕ್ಕಜ್ಞನಹೃತ್ಕ ವೋಣರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೨ ನೆಯ ಶನಿವಾರ [ಸಂಚಿಕೆ ೫

(ಚಿತ್ರಗುಪ್ತದಿಂದ)

ವಿಚಾರಣ ಸಮಿತಿಯ ವರದಿಯಮೇಲೆ ಸರ್ಕಾರಿ ಆರ್ಡರು.

ವರದಿ ಮತ್ತು ಅದರ ಪ್ರಯೋಜನ.

ಈ ವಿಧವಾದ ವಿಚಾರಣಾಕಾರ್ಯವು ಕಷ್ಟವಾದುದು. ಜನರಲ್ಲಿ ಗಾಬರಿಯೂ, ಜಾತಿ ದ್ವೇಷವೂ ಉಂಟಾಗಿದ್ದುದರಿಂದ ಅನೇಕ ವಿಧವಾದ ಅಭಿಪ್ರಾಯಗಳೂ ಊಹೆಗಳೂ, ಜನರ ಮನಸ್ಸಿನಲ್ಲಿ ತಲೆದೋರಿ ವಿಚಾರಣಾಕಾಲದಲ್ಲಿ ಸಾಕ್ಷಿಗಳು ತಂತಮ್ಮ ಮನಸ್ಸಿಗೆ ತೋರಿದಂತೆ ಹೇಳಿಕೆ ಕೊಟ್ಟಿರುವಕಾರಣ ರಾಜ್ಯಾಡಳಿತ ಧ್ಯೇಯ, ಕಾರ್ಯತಃ ಆಚರಣೆ, ಮುಂತಾದ ವಿಷಯಗಳಲ್ಲಿ ಸಮಿತಿಯವರು ಪರಸ್ಪರ ಅಸಂಬದ್ಧಾಭಿಪ್ರಾಯಪಟ್ಟಿರುವುದು ಸ್ವಾಭಾವಿಕವಾಗಿಯೇ ಇದೆ. ಆದರೂ ಒಟ್ಟಿನಲ್ಲಿ ಅನೇಕ ಅನುಮಾನಗಳು ಪರಿಹಾರವಾಗಲು ವರದಿಯು ಸಹಾಯಕವಾಗಿದೆ.

ವಿಚಾರಣೆಯಿಂದ ಜನರ ಮನಸ್ಸಿನಲ್ಲಿ ನೆಮ್ಮದಿಯುಂಟಾಯಿತು. ಸಮಿತಿಯವರು ಹೇಳುವಂತೆ ಗಲಭೆಯು ಅಲ್ಪವಾದುದಾದರೂ ಆ ವಿಚಾರವಾಗಿ ಅನೇಕ ಉತ್ಪ್ರೇಕ್ಷೆಗಳು ಹೊರಬಿದ್ದುದಲ್ಲವೂ ವಿಚಾರಣಾ ಸಮಿತಿಯನ್ನು ನೇಮಿಸಿದುದರಿಂದ ಬಹುಮಟ್ಟಿಗೆ ನಿವಾರಣೆಯಾಯಿತು.

ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು.

ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು ಸ್ವಲ್ಪ ಮುಂದಾಲೋಚನೆ ಮಾಡಿ ಕಾರ್ಯ ನಡೆಸಿದ್ದರೆ ಈ ಗಲಭೆಯನ್ನು ತಪ್ಪಿಸಬಹುದಾಗಿತ್ತೆಂದು ಸಮಿತಿಯವರು ಅಭಿಪ್ರಾಯ ಪಡುತ್ತಾರೆ. ಆದರೆ, ದುರದೃಷ್ಟವಶಾತ್ ಡೈರೆಕ್ಟರು ಸಂಚಾರದಲ್ಲಿದ್ದುದರಿಂದ ವಿಗ್ರಹಪಲ್ಲಟದ ವಿಷಯವಾಗಿ ನಡೆಯುತ್ತಿದ್ದ ಬದಲಾವಣೆಗಳನ್ನೂ ಚಳವಳಿಯನ್ನೂ ಅವರು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಇವರು "ಹುಡುಗರ ಮನಸ್ಸಿಗೆ ನೋವುಂಟಾಗದಂತೆ ನೋಡಿಕೊಳುತ್ತೇನೆ" ಎಂದು ಸರ್ಕಾರದವರಿಗೆ ಭರವಸೆ ಕೊಟ್ಟಿದ್ದರೂ, ತಮ್ಮ ಸಂಚಾರದಿಂದ ಕೂಡಲೆ ವಾಪಸು ಬರದಿದ್ದುದು ದುರದೃಷ್ಟವೇಸರಿ.

ವಿಗ್ರಹದ ಸ್ಥಾನಪಲ್ಲಟಕ್ಕೆ ಡೈರೆಕ್ಟರೇ ಸ್ವಂತ ಜವಾಬ್ದಾರರೆಂದು ಕಾಣುವಂತೆ ಸರ್ಕಾರದವರು ನಡೆದುಕೊಂಡರು ಎಂದು ಸಮಿತಿಯವರು ಹೇಳುವ ವಿಚಾರದಲ್ಲಿ, ವಾಸ್ತವವಾಗಿ ನಡೆದುದೂ ಹಾಗೆಯೇ ಸರಿ. ಈ ವಿಚಾರಕ್ಕೆ ಗಮನಕೊಟ್ಟು "ದೇವಸ್ಥಾನ" ಕಟ್ಟದಂತೆ ನೋಡಿಕೊಳ್ಳಿ ಎಂದು ಮಾತ್ರ ಸರ್ಕಾರದವರು ಡೈರೆಕ್ಟರಿಗೆ ತಿಳಿಸಿದ್ದರು. ಸರ್ಕಾರದವರು ಹೀಗೆ ಮಾಡಿದುದು ಸರಿಯೆಂದು ಸಮಿತಿಯವರೂ ಒಪ್ಪಿಕೊಂಡಿದ್ದಾರೆ. ಆದುದರಿಂದ ಜುಲೈ 29 ನೇ ತಾರೀಖಿನ ದಿನ ವಿಗ್ರಹವನ್ನು ಸ್ವಸ್ಥಾನದಲ್ಲಿಡುವಂತೆ ಸರ್ಕಾರದವರು ಹುಕುಂ ಮಾಡುವ ವರೆಗೆ ಪ್ರತಿಯೊಂದೂ ಡೈರೆಕ್ಟರ ಅಧೀನವಾಗಿಯೇ ಇತ್ತು.

ಪೋಲೀಸಿನವರು.

ಪೋಲೀಸಿನವರು ಹುಡುಗರ ವಿಚಾರದಲ್ಲಿ ಬಹಳ ತಾಳ್ಮೆಯನ್ನು ತೋರಿಸಿದರೆಂದು ಸಮಿತಿಯವರು ಅಭಿಪ್ರಾಯಪಟ್ಟು ಆಮೇಲೆ "ಇಂತಹ ತಾಳ್ಮೆಗೂ ಒಂದು ಮಿತಿ ಇರಬೇಕು, ಮುಂದೆ ಈ ಬಗೆಯಾದ ಗಲಭೆಗಳು ನಡೆಯುವುದಾದರೆ, "ಲಾ" ವಿಾರಿ ಸ್ವಲ್ಪವಾದರೂ ನಡೆದುಕೊಳ್ಳುತ್ತಾರೆಂದು ತಿಳಿದುಬಂದಕೂಡಲೆ, ತಕ್ಕ ಗಮನಕೊಟ್ಟು ಅದನ್ನು ನಿಗ್ರಹಿಸಬೇಕು" ಎಂದು ಸೂಚಿಸಿರುವರು. ಕೆಲವು ಪೋಲೀಸ್ ಅಧಿಕಾರಿಗಳು 1921 ನೇ ಇಸವಿ ಆಗಸ್ಟು 7 ನೇ ತಾರೀಖಿನ ಸರ್ಕಾರಿ ಆರ್ಡರು, ತಾವು ಇಂತಹ ಸಂದರ್ಭಗಳಲ್ಲಿ ಸುಮ್ಮನಿರಬೇಕೆಂದು ಹೇಳುವುದೆಂದು ಭಾವಿಸಿರುವಂತೆ ಕಾಣುತ್ತದೆ ಸಮಿತಿಯವರು ಅಭಿಪ್ರಾಯಪಡುವಂತೆ ಆರ್ಡರು, ಇಂತಹ ಎಲ್ಲಾ ಸಂದರ್ಭಗಳಿಗೂ ಅನ್ವಯಿಸತಕ್ಕದ್ದಲ್ಲ; ವಿದ್ಯಾರ್ಥಿಗಳು 'ಲಾ' ವಿಾರಿ ವರ್ತಿಸಿದ ವಿಚಾರದಲ್ಲಿ ಪೋಲೀಸಿನವರು ತಕ್ಷಣ ನಿಗ ಕೊಡಬಾರದಿತ್ತೆಂಬುದು ಸರ್ಕಾರದವರ ಅಭಿಪ್ರಾಯವಲ್ಲವೇ ಅಲ್ಲ.

ಸಮಿತಿಯವರ ಮುಖ್ಯ ಆಕ್ಷೇಪಣೆಗಳು.

ಸಮಿತಿಯವರು ಮುಖ್ಯವಾಗಿ, ಜುಲೈ 30 ನೇ ತಾರೀಖಿನ ದಿನ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ತಂತಮ್ಮ ಕರ್ತವ್ಯವನ್ನು ನೆರವೇರಿಸಲಿಲ್ಲವೆಂದು ಆಕ್ಷೇಪಿಸುತ್ತಾರೆ. ಅವುಗಳು ಯಾವುವೆಂದರೆ :—

1. ಯಾವಕಾರ್ಯ ಮಾಡಬೇಕೆಂಬ ಬಗ್ಗೆ ಸರಿಯಾದ ಅಂದಾಜುಮಾಡಿಕೊಳ್ಳಲಿಲ್ಲ ಮತ್ತು ಪೋಲೀಸ್ ಸ್ಟೇಷನ್ನುಗಳಿಗೂ ಗಲಭೆಗಳು ನಡೆದ ಸ್ಥಳಗಳಿಗೂ ವರ್ತಮಾನ ಕಳುಹಿಸುವ ಏರ್ಪಾಡುಗಳಿರಲಿಲ್ಲ.
2. ಕೈದುಮಾಡಲ್ಪಟ್ಟಿದ್ದವರನ್ನು ಬಿಡುಗಡೆ ಮಾಡಿದ ಒಡನೆ ಜನರ ಗುಂಪನ್ನು ಚದರಿಸಲು ತಕ್ಕ ಏರ್ಪಾಡು ಮಾಡಲಿಲ್ಲ.
3. ಜುಲೈ 30 ನೇ ತಾರೀಖಿನ ರಾತ್ರಿ ದೊಂಬಿ ನಡೆಯುತ್ತಿದ್ದಾಗಲೂ ಬೇರೆ ಒಡನೆಯೂ ತಪ್ಪಿತಸ್ಥರನ್ನು ದಸ್ತಗಿರಿ ಮಾಡಲಿಲ್ಲ.
4. ಗುಂಡುಗಳು ಹಾರಿಸಲ್ಪಟ್ಟುವೆಂದು ಹೇಳುವ ಮನೆಗಳನ್ನು ಹುಡುಕಲಿಲ್ಲ.
5. ತನಿಖೆಕ್ರಮ ಜರುಗಿಸುವುದನ್ನು ನಿಧಾನಮಾಡಿದರು.

ಮೊದಲನೆ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹೇಳುವುದೇನೆಂದರೆ :—ಯಾವರೀತಿ ಕಾರ್ಯ ಮಾಡಬೇಕೆಂಬ ಬಗ್ಗೆ ಮೊದಲೇ ಯೋಚನೆ ಮಾಡಲಾಗಿತ್ತು. ಅನೇಕ ರಾತ್ರಿ ಡ್ಯೂಟಿಯವರನ್ನೂ 50 ಜನ ರಿಸರ್ವ್ ಪೋಲೀಸಿನವರನ್ನೂ ಸಿದ್ಧವಾಗಿಟ್ಟುಕೊಂಡು, ಅಗತ್ಯವಾದ ಕಡೆಗೆ ಕೂಡಲೆ ಕಳುಹಿಸಲು ಏರ್ಪಡಿಸಿದ್ದು; ಸ್ಥಳದಿಂದ ಸ್ಥಳಕ್ಕೆ ಸಮಾಚಾರ ಕಳುಹಿಸಿ, ತರಿಸಿಕೊಳ್ಳಲು ಟೆಲಿಫೋನ್ ಮತ್ತು ಇತರ ಏರ್ಪಾಡುಗಳನ್ನು ಮಾಡಿತ್ತು. ಆದರೂ ಈ ಏರ್ಪಾಡುಗಳು ಸಾಕಾಗಿರಲಿಲ್ಲವೆಂದು ಸಮಿತಿಯವರು ಅಭಿಪ್ರಾಯಪಡುತ್ತಾರೆ.

ಸಿಟಿ ಮ್ಯಾಜಿಸ್ಟ್ರೇಟರು.

ಎರಡನೆ ವಿಚಾರದಲ್ಲಿ :—ತಕ್ಕ ಎಚ್ಚರಿಕೆ ತೆಗೆದುಕೊಳ್ಳದೆ ಮುಖಂಡರನ್ನು ಬಿಡುಗಡೆಮಾಡಿದ ಜವಾಬ್ದಾರಿಯು ಸಿಟಿ ಮ್ಯಾಜಿಸ್ಟ್ರೇಟರನ್ನು ಹೊಂದಿದ್ದಾಗಿದೆ. ಸಮಿತಿಯವರು ಹೇಳುವಂತೆ ಇವರು, "ಸರ್ಕಾರಿ ಆರ್ಡರ್ ಆಗಿದೆ"ಯೆಂದು ಖಾಸಗಿ ದೊಡ್ಡಮನುಷ್ಯರೊಬ್ಬರು ಬಾಯಿಮಾತಿನಲ್ಲಿ ಹೇಳಿದ ಆಧಾರದಮೇಲೆ ಬಂಧನದಲ್ಲಿದ್ದವರನ್ನು ಬಿಡುಗಡೆ ಮಾಡಿದರು. ಆರ್ಡರು ತಮ್ಮ ಸ್ವಂತದ್ದಲ್ಲವಾದುದರಿಂದ, ಖಾಸಗಿ ದೊಡ್ಡಮನುಷ್ಯರು ಎಷ್ಟೇ ಮಾತುಭಾರಿಯವರಾಗಿದ್ದರೂ ಅವರ ಬಾಯಿಮಾತಿನ ಆಧಾರದಮೇಲೆ ಮುಖಂಡರನ್ನು ಬಿಡುಗಡೆ ಮಾಡಬಾರದಾಗಿತ್ತು. ಅಲ್ಲದೆ, ಮುಖಂಡರನ್ನು ಬಿಡುಗಡೆಮಾಡಿದಮೇಲೆ, ಜನರ ಗುಂಪನ್ನು ಚದರಿಸಲು ತಕ್ಕ ಏರ್ಪಾಡು ಮಾಡಬೇಕಾಗಿತ್ತಲ್ಲದೆ, ಮೆರವಣಿಗೆಯನ್ನು ಪೋಲೀಸಿನವರು ಹಿಂಬಾಲಿಸಲು ಅನುಕೂಲವಾಗುವಂತೆ ಅವರಿಗೆ ಟೆಲಿಫೋನ್ ಮೂಲಕ ತಿಳಿಸಬೇಕಾಗಿತ್ತು.

ಸಮಿತಿಯವರ ಈ ಅಭಿಪ್ರಾಯಗಳನ್ನು ಸರ್ಕಾರದವರು ಅನುಮೋದಿಸುತ್ತಾರೆ. ಸರ್ಕಾರಿ ಆರ್ಡರನ್ನು ಒಬ್ಬರು ಖಾಸಗಿ ದೊಡ್ಡಮನುಷ್ಯರ ಮೂಲಕ ಕಳುಹಿಸಿದರೆಂದು ಸೂಚಿಸಿರುವ ಅಭಿಪ್ರಾಯವು ನಿರಾಧಾರವಾದುದೆಂದು ಬೇರೆ ಹೇಳಬೇಕಾಗಿಲ್ಲ.

ಮೆರವಣಿಗೆಯು ಎಲಹಂಕಗೇಟ್ ಹತ್ತಿರ ಹೋದುದನ್ನು ನೋಡಿದ ಕೂಡಲೆ ಪೋಲೀಸ್‌ನವರು ತಮ್ಮ ಅಧಿಕಾರಿಗಳಿಗೆ ತಿಳಿಸಿ ಅವರು ತಕ್ಕ ಎಚ್ಚರಿಕೆ ತೆಗೆದುಕೊಳ್ಳುವಂತೆ ಸೂಚಿಸಬೇಕಾಗಿತ್ತೆಂದು ಸಮಿತಿಯವರು ಪಡುವ ಅಭಿಪ್ರಾಯದ ವಿಚಾರದಲ್ಲಿ, ಮೆರವಣಿಗೆಯವರ ಅಭಿಪ್ರಾಯವು ಗಳಿಗೆ ಗಳಿಗೆಗೂ ಬದಲಾವಣೆಯಾಗುತ್ತಿದ್ದುದರಿಂದ ಅವರು ಏನುಮಾಡುವರೆಂಬುದನ್ನು ತಿಳಿದುಕೊಳ್ಳಲು ಅಸಾಧ್ಯವಾಗಿದ್ದುದರಿಂದಲೂ, ಪೋಲೀಸಿನವರನ್ನು ಪಟ್ಟಣದ ನಾನಾಭಾಗಗಳಿಗೆ ಕಳುಹಿಸಿಬಿಟ್ಟಿದ್ದುದರಿಂದಲೂ, ಆ ಕಾಲದಲ್ಲಿ ಗಲಭೆಯನ್ನು ತಪ್ಪಿಸುವುದಕ್ಕೆ ತಕ್ಕಷ್ಟು ಸಿಬ್ಬಂದಿಯನ್ನು ಒಟ್ಟುಗೂಡಿಸುವುದು ಸಾಧ್ಯವಾಗುತ್ತಿತ್ತೆ ಎಂಬ ವಿಚಾರದಲ್ಲಿ ಸಂಶಯಪಡಬೇಕಾಗಿದೆ.

ದಸ್ತಗಿರಿ ಮಾಡದಿದ್ದ ವಿಚಾರ.

ಜುಲೈ 30 ನೇ ತಾರೀಖಿನ ರಾತ್ರಿ ದಸ್ತಗಿರಿಯನ್ನೇಕೆ ಮಾಡಲಿಲ್ಲವೆಂಬ ವಿಚಾರದಲ್ಲಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರೂ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರೂ ಈ ಕೆಳಗೆ ಕಂಡ ಸಮಜಾಯಿಷಿ ಕೊಟ್ಟಿದ್ದಾರೆ :—

ದೊಂಬಿ ನಡೆದ ಸ್ಥಳಕ್ಕೆ ಮುಖ್ಯಾಧಿಕಾರಿಗಳು ಬರುವಷ್ಟರಲ್ಲಿ ದೊಂಬಿಯು ಮುಗಿದುಹೋಗಿತ್ತು. ಕೆಲವು ಪೋಲೀಸ್‌ನವರಿಗೆ ಏಟು ಬಿದ್ದಿದ್ದುದರಿಂದಲೂ ಉಳಿದ ಕೆಲವರು ಗಾಯಗೊಂಡ ಪೋಲೀಸ್ ಅಧಿಕಾರಿಗಳೊಡನೆ ಆಸ್ಪತ್ರೆಗೆ ಹೋಗಿದ್ದುದರಿಂದಲೂ, ಆಗ ಅಲ್ಲಿ ಒಬ್ಬ ಪೋಲೀಸ್‌ನವನೂ ಇರಲಿಲ್ಲ. ಹಿಂದುಗಳೂ ಮುಸಲ್ಮಾನರೂ ಸ್ಕೂಲಿನ ಎರಡು ಕಡೆಗಳಲ್ಲೂ ಗುಂಪುಕಟ್ಟಿಕೊಂಡು ಹೊಡೆದಾಟಕ್ಕೆ ಸಿದ್ಧವಾಗಿದ್ದುದರಿಂದ, ಅವರನ್ನು ಚದರಿಸುವುದು ಅವಶ್ಯಕವಾಗಿತ್ತು. ಯಾರನ್ನಾದರೂ ದಸ್ತಗಿರಿ ಮಾಡುವ ಆಲೋಚನೆಯನ್ನು ಮೊದಲನೆ ಸವಾರರ ದಳವು ಬಂದಾಗ ಮಾತ್ರ ಮಾಡಬಹುದಾಗಿತ್ತೇ ವಿನಹ ಅದಕ್ಕೆ ಮೊದಲು ಅಂತಹ ಯೋಚನೆಮಾಡುವುದಕ್ಕೂ ವ್ಯವಧಾನವಿರಲಿಲ್ಲ. ಆದರೆ ಮಿಲಿಟರಿಯವರು ಬಂದ ಕೂಡಲೆ ಗುಂಪಿನ ಜನರು ಅಕ್ಕಪಕ್ಕದ ಸಂದುಗೊಂದುಗಳಲ್ಲಿ ಓಡಿಹೋದರು. ಆದುದರಿಂದ ದೊಂಬಿ ನಡೆಸಿದವರನ್ನು ಆ ಕೂಡಲೆ ದಸ್ತಗಿರಿ ಮಾಡುವ ಸಂಭವವು ಅಸಾಧ್ಯವಾದುದು ; ಅಲ್ಲದೆ ಆಗ ಯಾರನ್ನಾದರೂ ದಸ್ತಗಿರಿ ಮಾಡಿದ್ದರೆ, ಅವರನ್ನು ಬಿಡಿಸಿಕೊಳ್ಳುವುದಕ್ಕೆ ಜನರು ಪ್ರಯತ್ನಮಾಡಿ ಇನ್ನಷ್ಟು ಗಲಭೆಗೆ ಅವಕಾಶವಾಗುತ್ತಿತ್ತು. ಅಲ್ಲದೆ ಈ ತನ್ಮಧ್ಯೆ ಪಟ್ಟಣದ ಬೇರೆ ಬೇರೆ ಕಡೆಗಳಲ್ಲಿ ಪುಂಡರು ಸೇರಿ ಗಲಾಟೆಮಾಡಲು ಪ್ರಯತ್ನಿಸುತ್ತಿದ್ದಾರೆಂದು ವರ್ತಮಾನ ಬಂದುದರಿಂದ ಅವರನ್ನು ಚದರಿಸುವ ಏರ್ಪಾಡು ಮಾಡುವುದು ಅವಶ್ಯಕವಾಗಿತ್ತು. ಆಮೇಲೆ ದಂಡಿನಿಂದ ಮಹಮ್ಮದೀಯರು ಗುಂಪುಗುಂಪಾಗಿ ಬರುತ್ತಿದ್ದಾರೆಂದು ವರ್ತಮಾನಬಂತು ಮಧ್ಯರಾತ್ರಿ ಕಳೆಯುವವರೆಗೂ ಅಧಿಕಾರಿಗಳು ಮುಂದೆ ಅನಾಹುತಗಳು ಸಂಭವಿಸದಂತೆ ನೋಡಿಕೊಳ್ಳುವುದರಲ್ಲೇ ತೊಡಗಿದ್ದರು. ಡಿ|| ಮ್ಯಾಜಿಸ್ಟ್ರೇಟರು ಎರಡರಲ್ಲಿ ಒಂದು ದಾರಿಯನ್ನು ಆರಿಸಿಕೊಳ್ಳಬೇಕಾಯಿತು. ದಸ್ತಗಿರಿ ಮಾಡಿ ತನಿಖೆ ಕ್ರಮ ನಡೆಸಲು ಪ್ರಯತ್ನಿಸುವುದು ; ಅಥವ, ಇದ್ದ ಸಿಬ್ಬಂದಿಯನ್ನು ಪಟ್ಟಣದಲ್ಲೆಲ್ಲಾ ಹಂಚಿ, ಮುಂದೆ ನಗರದ ಹಿಂದುಗಳಿಗೂ ಮುಸಲ್ಮಾನರಿಗೂ ಹೊಡೆದಾಟಗಳು ನಡೆಯದಂತೆಯೂ ದಂಡಿನ ಮುಸಲ್ಮಾನರು ಪಟ್ಟಣದ ಮುಸಲ್ಮಾನರೊಡನೆ ಸೇರದಂತೆಯೂ ತಡೆದು, ಶಾಂತಿಯು ನೆಲೆಗೊಳ್ಳುವಂತೆ ಮಾಡುವುದು. ಈ ಎರಡರ ಪೈಕಿ ಕಡೆಯ ಮಾರ್ಗವನ್ನು ಅನುಸರಿಸುವುದೇ ಸೂಕ್ತವೆಂದು ಡಿ|| ಮ್ಯಾಜಿಸ್ಟ್ರೇಟರು ನಿರ್ಧರಿಸಿದರು.

ಈ ಅಧಿಕಾರಿಗಳು ಹೇಳುವ ಅಂಶಗಳನ್ನು ಬಹುಮಟ್ಟಿಗೆ ಸಮಿತಿಯ ವರದಿಯು ಪುಷ್ಟೀಕರಿಸುತ್ತದೆ. ಜನರೆಲ್ಲರೂ ಉದ್ವೇಗಗೊಂಡಿರುವಾಗ, ದಸ್ತಗಿರಿ ಮಾಡುವುದರಿಂದ ಶಾಂತಿಯು ನೆಲೆಗೊಳ್ಳುವುದ, ಹೆಚ್ಚು ಗಲಾಟೆಯು ನಡೆಯುವುದೇ ಎಂಬುದನ್ನು ನಿರ್ಧರಿಸುವುದು ಕಷ್ಟ. ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗೆ ಸೂಕ್ತತೋರಿದಂತೆ ನಿರ್ಧರಿಸಿ ಕೆಲಸ ಮಾಡುವುದೇ ಸರಿಯಾದುದು. ಈ ಸಂದರ್ಭದಲ್ಲಿ ಈ ಅಧಿಕಾರಿಗಳ ಉದ್ದೇಶದಲ್ಲಿ ಅನುಮಾನಿಸಬೇಕಾದುದೇನೂ ಇಲ್ಲ. ಆದುದರಿಂದ ಅಂತಹ ವಿಷಮಾವಸ್ಥೆಯಲ್ಲಿ ಅವರು ದಸ್ತಗಿರಿ ಮಾಡದೆ ಹೋದರೆಂದು ಆಮೇಲೆ ಹೇಳುವುದು ಪ್ರಯೋಜನಕಾರಿಯಾದುದಲ್ಲವೆಂದು ಸರ್ಕಾರದವರು ಭಾವಿಸುತ್ತಾರೆ.

ಮನೆ ಹುಡುಕಬೇಕಾಗಿತ್ತು.

ಹೀಗೆ ಹೋದ ಮಾತ್ರಕ್ಕೆ ಪೋಲೀಸಿನವರೂ, ಮ್ಯಾಜಿಸ್ಟ್ರೇಟರೂ ಮನೆ ಹುಡುಕುವುದನ್ನಾಗಲೀ ಸ್ಕೂಲಿನ ಎದುರುಗಡೆಯಲ್ಲಿರುವ ಮನೆಗಳ ಸುತ್ತಲೂ ಕಾವಲಿಡದೆ ಹೋದುದಾಗಲೀ ಸರಿಯೆಂದು ಹೇಳಿದಂತಾಗಲಿಲ್ಲ. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ತಾವು ಕೇಳಿದ ಗಾಬರಿಯನ್ನುಂಟುಮಾಡುವ ವರ್ತಮಾನಗಳನ್ನೆಲ್ಲಾ ತಾವು ನಂಬಲಿಲ್ಲವೆಂದೂ, ಆ ವರ್ತಮಾನದ ಆಧಾರದಮೇಲೆ ಮನೆ ಹುಡುಕುವ ಪ್ರಯತ್ನಮಾಡುವುದು ಸರಿಯೆಂದು ತೋರಲಿಲ್ಲವಾದುದರಿಂದಲೂ, ತಾವು ಆ ಸ್ಥಳಗಳಿಗೆ ಹೋಗಿ ನೋಡಿದಾಗ ಅನುಮಾನಾಸ್ಪದವಾದ ವಿಷಯಗಳೇನೂ ಕಾಣಲಿಲ್ಲವಾದುದರಿಂದ ಮನೆ ಹುಡುಕುವ ಪ್ರಯತ್ನ ಮಾಡಲಿಲ್ಲವೆಂದು ಹೇಳುತ್ತಾರೆ. ಆದರೂ ಸ್ಕೂಲಿನ ಹತ್ತಿರವೂ ಖಾನ್ ಬಹದ್ದೂರ್ ಅಬ್ಬಾಸ್‌ಖಾನರವರ ಮನೆ ಹತ್ತಿರವೂ ಕೆಲವು ಕಾನ್ಸ್‌ಟೇಬಲರನ್ನು ಕಾವಲಿಟ್ಟು ಸೈಕಲ್ ಅಂಗಡಿಯ ಕೈಸಾಲೆಯ ಮೇಲೂ ಕಾವಲಿಟ್ಟಿತ್ತೆಂತಲೂ ಈ ಏರ್ಪಾಡು ಒಂದು ವಾರದಮೇಲೆ ಅಡಿಷನಲ್ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಸ್ಥಳ ಮಹಜರು ಮಾಡುವವರೆಗೂ ನಡೆದುಕೊಂಡು ಬಂದಿತೆಂತಲೂ ಹೇಳುತ್ತಾರೆ. ಆದರೆ ಈ ಏರ್ಪಾಡುಗಳು ಸಾಕಾಗಿರಲಿಲ್ಲ. ಇನ್ನೂ ಹೆಚ್ಚಾದ ನಿಗ ಕೊಟ್ಟು ಸಮಿತಿಯವರು ಹೇಳುವಂತೆ 31 ನೇ ತಾರೀಖಿನ ಬೆಳಿಗ್ಗೆ ಯಾದರೂ ಮನೆ ಹುಡುಕುವ ಕಾರ್ಯವನ್ನು ಮಾಡಬೇಕಾಗಿತ್ತೆಂದು ಸರ್ಕಾರದವರು ಭಾವಿಸುತ್ತಾರೆ. ಈ ರೀತಿ ಮಾಡಿದ್ದರೆ ಯಾವ ಪ್ರಯೋಜನವಾದರೂ ಲಭಿಸುತ್ತಿತ್ತೊ ಇಲ್ಲವೊ ಅದು ಬೇರೆ ಮಾತು ; ಆದರೆ ಆರೀತಿ ಮಾಡಿದ್ದರೆ ಈಗ ಆರೀತಿ ಮಾಡಲಿಲ್ಲವೆಂದು ಪೋಲೀಸ್ ಮತ್ತು ಮ್ಯಾಜಿಸ್ಟ್ರೇಟರ ಮೇಲೆ ಸ್ವಭಾವಿಕವಾಗಿ ಬಂದಿರುವ ಆಕ್ಷೇಪಣೆಯನ್ನಾದರೂ ತಪ್ಪಿಸಿಕೊಳ್ಳಲು ಅವಕಾಶವಾಗುತ್ತಿತ್ತು.

ಸರ್ಕಾರಿ ಮೆಂಬರುಗಳು.

ಕಮಿಟಿಯವರು ಆಲೋಚಿಸುವಂತೆ ಪೋಲೀಸಿನವರಾಗಲಿ, ಮ್ಯಾಜಿಸ್ಟ್ರೇಟರಾಗಲೀ ಸರ್ಕಾರದವರು ಹುಕುಂ ಮಾಡಿದ್ದರಿಂದ ಕಾರ್ಯ ನಡೆಸಲಿಲ್ಲ ಅಥವಾ ಬಿಡಲಿಲ್ಲ. ಈ ಆಫೀಸರುಗಳು ಪ್ರತಿ ನಿಮಿಷದಲ್ಲಿಯೂ ಸರ್ಕಾರಿ ಮೆಂಬರುಗಳ ಸಂಬಂಧದಲ್ಲಿಯೇ ಇದ್ದರೆಂದು ಕಮಿಟಿಯವರು ಹೇಳುವುದರಿಂದ ಅಧೀನರಾದ ಆಫೀಸರುಗಳು ತಮಗಿಂತಲೂ ದೊಡ್ಡವರಾದ ಅಧಿಕಾರಿಗಳ ಅಪ್ಪಣೆಯನ್ನೇ ಗಮನಿಸಿ ತಮ್ಮ ವಿವೇಚನೆಯನ್ನುಪಯೋಗಿಸುತ್ತಿದ್ದರೆಂದು ಅರ್ಥವಾಗುವುದು. ಈ ಅಭಿಪ್ರಾಯವನ್ನು ಸರ್ಕಾರದವರು ತಮ್ಮ ಪರವಾಗಿಯೂ, ತಮ್ಮ ಅಧಿಕಾರಿಗಳ ಪರವಾಗಿಯೂ ಬಹುವಾಗಿ ಖಂಡಿಸುತ್ತಾರೆ. ನಡೆಯುತ್ತಲಿದ್ದ ಸಂಗತಿಗಳೆಲ್ಲವೂ ಸರ್ಕಾರಿ ಮೆಂಬರುಗಳಿಗೆ ತಿಳಿದುಬರುತ್ತಲಿದ್ದವೆಂಬುದು ನಿಜ. ಆದರೆ ತಮಗೆ ತಿಳಿದುಬಂದ ವಿಷಯಗಳ ಮೇಲೆ ಸ್ಥೂಲವಾಗಿ ತಮ್ಮ ಸೂಚನೆಗಳನ್ನು ಕೊಡತಕ್ಕದ್ದು ಹೊರತು ಹೆಚ್ಚು ವಿಷಯಗಳನ್ನು ಅವರಿಂದ ನಿರೀಕ್ಷಿಸಲಾಗುವುದಿಲ್ಲ. ಅವರುಗಳು ಆಗ ಸಂಬಂಧಪಟ್ಟ ಆಫೀಸರು ನಡೆಸಿದ ಚಿಕ್ಕಪುಟ್ಟ ಕಾರ್ಯಗಳ ವಿಷಯಗಳಲ್ಲೆಲ್ಲಾ ತಲೆ ಹಾಕುವುದು ಅಗತ್ಯವಾಗಿರಲಿಲ್ಲ. ಏಕೆಂದರೆ ಆಫೀಸರುಗಳಿಗೆ ಲಾ ಪ್ರಕಾರ ಬೇಕಾದಷ್ಟು "ಅಧಿಕಾರ" ಇರುತ್ತದೆ. ಇದಲ್ಲದೆ, ಆ ಸಂದರ್ಭದಲ್ಲಿ ಆಫೀಸರುಗಳು ಮಾಡಿದ ಕೆಲಸಗಳಿಗೋಸ್ಕರ ಅವರುಗಳಿಂದ ಸಮಜಾಯಿಷಿಗಳನ್ನು ಕೇಳುವಂಥ ಅಥವಾ ಅವರ ತಪ್ಪುಗಳನ್ನು ಕಂಡುಹಿಡಿಯುವಂಥ ಅಗತ್ಯವಿರಲಿಲ್ಲ. ಹಾಗೆ ಮಾಡಿದ್ದರೆ ಕಮಿಟಿಯವರ ಕೆಲಸಕ್ಕೆ ಬಹಳ ತೊಂದರೆಯಾಗುತ್ತಿದ್ದಿತು,

ಸರ್ಕಾರದವರು ಮಾಡಿದ ಏರ್ಪಾಡುಗಳು.

ಜುಲೈ ತಾ|| 30 ರ ದಿವಸ ಅರೆಸ್ಟುಗಳನ್ನೂ ಜಪ್ತಿಗಳನ್ನೂ ಮಾಡದೆ ಪೋಲೀಸಿನವರು ಕರ್ತವ್ಯಭ್ರಷ್ಟರಾದರೆಂದು ಹೇಳಿರುವುದು ನ್ಯಾಯವಾಗಿ ತೋರುವುದಿಲ್ಲ. ಗಲಭೆಯು ಅನೇಕ ಕಡೆಗಳಲ್ಲಿ ವ್ಯಾಪಿಸಿದ್ದಿತು. ಕಾಲೇಜು ಜೈಲ್, ದಿವಾನರ ಬಂಗಲ, ಅಠಾರಾಕಚೇರಿ ಈ ಕಡೆಗಳಲ್ಲಿದ್ದ ಗಲಭೆಗಳು ಹತೋಟಿಗೆ ತೆಗೆದುಕೊಳ್ಳಲ್ಪಟ್ಟವು. ಈ ಸ್ಥಳಗಳಲ್ಲೆಲ್ಲಾ ಪೋಲೀಸಿನವರೂ, ಮ್ಯಾಜಿಸ್ಟ್ರೇಟರೂ ಕೆಲಸಮಾಡುತ್ತಿದ್ದರು ಮತ್ತು ಸುಲ್ತಾನ್‌ಪೇಟೆ ಪಾಠಶಾಲೆಯಬಳಿ ಗಲಭೆಯಾಗುತ್ತದೆಂದು ಊಹಿಸಲು ಕಾರಣವಿರಲಿಲ್ಲ. ಆರುಮಂದಿ ಕಾನ್ಸ್‌ಟೇಬಲರೂ, ಒಬ್ಬ ಸಬ್ ಇನ್ಸ್‌ಪೆಕ್ಟರೂ ಅಲ್ಲಿ ಇದ್ದರು. ಅಲ್ಲಿ ಏಟುಗಳು ಪ್ರಾರಂಭವಾದಕೂಡಲೆ ಸವಾರರುಗಳನ್ನೂ ಕರೆಸಿದ್ದಾಯಿತು. ಮತ್ತು ಸಾಧ್ಯವಾದಷ್ಟುಮಂದಿ ಪೋಲೀಸಿನವರನ್ನೂ ಒಟ್ಟುಗೂಡಿಸಿದ್ದಾಯಿತು. ತಾ|| 31 ರ ದಿವಸ ಈ ಬಗ್ಗೆ ತನಿಖೆ ನಡೆಸಿ, ಅಪರಾಧಿಗಳನ್ನು ಬೈಲಿಗೆ ತರುವ ಬಗ್ಗೆ ಒಬ್ಬರು ಮ್ಯಾಜಿಸ್ಟ್ರೇಟರನ್ನು ನಿಯಮಿಸಲಾಯಿತು. ಈ ೩ನೇ ತಾರೀಖಿನ ದಿನ ದೊಂಬಿಗಳು ನಡೆದಾವೆಂಬ ಭಯ ತೋರಿ ಮದ್ದು ಗುಂಡುಗಳ ಮೋಟಾರನ್ನು ತರಿಸಲಾಯಿತು. ಪಟ್ಟಣದ ಎಲ್ಲ ಭಾಗಗಳಲ್ಲಿಯೂ ಪೋಲೀಸಿನವರು ಮತ್ತು ಮಿಲಿಟರಿಯವರು ಕೆಲ ದಿನಗಳವರೆಗೆ ಗಸ್ತು ತಿರುಗುತ್ತಲಿದ್ದುದರಿಂದ ಶಾಂತತೆಯು ನೆಲೆಗೊಂಡಿತು. ಆ ಸಂದರ್ಭದಲ್ಲಿದ್ದ ದೊಂಬಿಯನ್ನು ಹತೋಟಿಗೆ ತೆಗೆದುಕೊಂಡುದೇ ಹೆಚ್ಚಿನ ವಿಷಯವಾಗಿದೆ. ಅದೂ ಒಂದು ಗುಂಡನ್ನಾದರೂ ಹಾರಿಸದೆ, ಒಂದು ಪ್ರಾಣವನ್ನಾದರೂ ಹತಮಾಡದೆ, ಹತೋಟಿಗೆ ತಂದುಕೊಂಡದ್ದೆಂದರೆ ಮತ್ತು ಹೆಚ್ಚಿನ ವಿಷಯವೇ.

ತನಿಖೆ ಕ್ರಮವನ್ನು ನಡೆಯಿಸುವುದರಲ್ಲಿ ನಿಧಾನವಾಯಿತೆಂದು ಹೇಳುವಾಗ ಗಲಭೆಯಾದ ಮಾರನೆ ದಿವಸವೇ ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ನಿಯಮಿಸಲಾಯಿತೆಂಬ ವಿಷಯವನ್ನು ಗಮನಿಸಬೇಕಾಗುತ್ತದೆ. ಆಮೇಲೆ ಜನರ ಅಪೇಕ್ಷೆಯೆಂದು ತೋರಿಬಂದುದರಿಂದ, ಆ ಆಫೀಸರನ್ನು ಬದಲಾಯಿಸಿ, ಆಗಸ್ಟು ತಾ|| ೬ರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ರ್ಯಾಂಕಿನ ಬೇರೆ ಒಬ್ಬ ಆಫೀಸರನ್ನು ನಿಯಮಿಸಲಾಯಿತು. ಈ ಬದಲಾವಣೆಗಾಗಿ ಸ್ವಲ್ಪ ನಿಧಾನವಾದುದು ನಿಜ. ಆದರೆ ಆಗ ಬರುತ್ತಿದ್ದ ಪರಸ್ಪರ ವಿರೋಧವಾದ ಸಾಕ್ಷ್ಯಗಳನ್ನೂ, ಈ ತನಿಖೆ ನಡೆಸಲು ವಾಸ್ತವವಾಗಿ ತೆಗೆದುಕೊಂಡ ಕಾಲವನ್ನೂ ಆಲೋಚನೆಗೆ ತೆಗೆದುಕೊಂಡರೆ ಈ ಕ್ರಮದಿಂದ ಎಂದರೆ ಕೇಸುಗಳಿಗೆ ದೊರೆಯಬೇಕಾಗಿದ್ದ ನ್ಯಾಯವನ್ನು ಕಂಡು ನ್ಯಾಯದ ಫಲವನ್ನು ಹೊಂದಿ.

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಫೆಬ್ರವರಿ ತಾ|| ೨ ನೆಯ ಶನಿವಾರ.

ವಿಶ್ವೇಶ್ವರಯ್ಯ ಸಮಿತಿಯ ಕಾರ್ಯಾಸಮರ್ಪಕತೆ.

ವಿಚಾರಣ ಸಮಿತಿಯ ಕಾರ್ಯಕಲಾಪಗಳು ಸಮರ್ಪಕವಾಗಿ ನಡೆಯುತ್ತಿರಲಿಲ್ಲವೆಂದು ಮಹಾಜನಗಳಿಗಿದ್ದ ಸಂಶಯವು ಈಗ ನಿರ್ಧಾರವಾಯಿತು. ಸಮಿತಿಯ ಅಧ್ಯಕ್ಷರು ಸದಸ್ಯರ ಸ್ವಾತಂತ್ರ್ಯವನ್ನೂ ಅವರ ಬಾಧ್ಯತೆಯನ್ನೂ ಗೌರವಿಸದೆ ಅವರು ಸಾಕ್ಷಿಗಳನ್ನು ಧಾರಾಳವಾಗಿ ಪ್ರಶ್ನಿಸಿ ಮುಖ್ಯ ವಿಚಾರಗಳಲ್ಲಿ ತಮಗಿರುವ ಸಂಶಯವನ್ನು ಪರಿಹಾರಮಾಡಿಕೊಳ್ಳಲು ಅವರಿಗೆ ಅವಕಾಶವನ್ನು ಕೊಡದೆ ಹೋದುದು ವಿಷಾದಕರವಾಗಿದೆ. ಸರ್ಕಾರದವರು ಸಮಿತಿಯನ್ನು ನಿಯಮಿಸಿದಾಗ ಗಲಭೆಯ ವಿಚಾರದಲ್ಲಿ ಸಾಕಾದಷ್ಟು ಸಂಗತಿಗಳನ್ನು ಸಮರ್ಪಕವಾಗಿ ಸಂಗ್ರಹಿಸಲು ಆವಶ್ಯಕವಾದಷ್ಟು ಅಧಿಕಾರವನ್ನು ಪ್ರತಿಯೊಬ್ಬ ಸದಸ್ಯರಿಗೂ ಕೊಟ್ಟಿದ್ದರಾದರೂ, ಸಮಿತಿಯ ಅಧ್ಯಕ್ಷರು ಆಗಿಂದಾಗ್ಗೆ ಸಾಕ್ಷಿಗಳ ವಿಚಾರಣೆಯ ಕಾಲದಲ್ಲಿ ಸದಸ್ಯರು ಕೇಳಬೇಕೆಂದಿದ್ದ ಪ್ರಶ್ನೆಗಳಿಗೆ ಅವಕಾಶಕೊಡದೆ ಮತ್ತು ತಮ್ಮ ಸ್ಥಾನಗೌರವವನ್ನು ಕಾಪಾಡಿಕೊಳ್ಳದೆ ವಿಜೃಂಭಿಸುತ್ತಿದ್ದರು. ಅಧ್ಯಕ್ಷರ ಈ ವರ್ತನೆಯನ್ನು ವಿಚಾರಣೆ ನಡೆಯುತ್ತಿರುವಾಗಲೇ ನಾವು ಸಂದರ್ಭಾನುಸಾರ ಖಂಡಿಸಿ ಬರೆದುದು ಯುಕ್ತವಾಗಿದ್ದಿತೆಂಬುದು ಸಮಿತಿಯ ಸದಸ್ಯರಾದ ಮ|| ಎಚ್. ಜಿ. ಬಸವಪ್ಪನವರು ಅಧ್ಯಕ್ಷರಿಗೆ ಮೊನ್ನೆ ತಾನೆ ಬರೆದಕಾಗದದಿಂದ ಸಿದ್ಧಗೊಳ್ಳುತ್ತದೆ. ಸರ್ ವಿಶ್ವೇಶ್ವರಯ್ಯನವರ ಅಸಾಧಾರಣವಾದ ವರ್ತನೆಯನ್ನು ನಾವು ಖಂಡಿಸಿದುದು ಮಹಾ ಅಪರಾಧವೆಂದು ಕೆಲ ಪತ್ರಿಕೆಗಳು ಕೂಗಿದುವು. ಸದಸ್ಯರುಗಳಿಗೆ ಅಧ್ಯಕ್ಷರು ತೋರಿಸಿದ ಮಾನಮನ್ನಣೆಗಳ ರೀತಿನೀತಿಗಳನ್ನು ನಿದರ್ಶನಪೂರ್ವಕವಾಗಿ ಈಗ ನಾವು ವ್ಯಕ್ತಗೊಳಿಸಿರುವುದರ ಮೇಲೆ ಈ ಪತ್ರಿಕೆಗಳು ಏನು ಹೇಳುವುವೊ ನೋಡಬೇಕಾಗಿದೆ. ಅಧ್ಯಕ್ಷರು ತಾವುಬರೆದ ವರದಿಯನ್ನು ಚೆನ್ನಾಗಿ ಪರಿಶೀಲಿಸಿ ಮುಖ್ಯಾಂಶಗಳನ್ನು ಪರ್ಯಾಲೋಚಿಸುವುದಕ್ಕೂ ಸಹ ಸದಸ್ಯರಿಗೆ ಅವಕಾಶವನ್ನು ಕೊಡಲಿಲ್ಲವೆಂಬುದು ವ್ಯಕ್ತವಾಗುತ್ತದೆ. ವರದಿಯನ್ನೆಲ್ಲ ಮೇಧಾವಿಗಳಾದ ಇಬ್ಬರು ಸದಸ್ಯರುಗಳು ಮಾತ್ರ ಬರೆದು ಉಳಿದ ಐದುಮಂದಿಗೆ (ಇವರೆಲ್ಲ ಹಿಂದುಳಿದವರು) ಅವಲೋಕಿಸುವುದಕ್ಕೂ ಸಹ ಸಾಕಾದಷ್ಟು ಅವಕಾಶವನ್ನು ಕೊಡಲಿಲ್ಲವೆಂದ ಬಳಿಕ ವರದಿಯು ಮಹಾಜನಗಳ ಗೌರವಕ್ಕೂ, ಸರ್ಕಾರದವರ ಆದರಕ್ಕೂ ಎಷ್ಟರಮಟ್ಟಿಗೆ ಪಾತ್ರವಾಗಬಹುದೆಂದು ಊಹಿಸಬಹುದಾಗಿದೆ.

ವಿಚಾರಣೆಯು ನಡೆಯುತ್ತಿರುವ ಕಾಲದಲ್ಲಿ ಮ|| ಗಳಾದ ನಾಗಪ್ಪನವರೂ ಬಸವಪ್ಪನವರೂ ಸಾಕ್ಷಿಗಳನ್ನು ಪ್ರಶ್ನಿಸಲು ಪ್ರಯತ್ನಪಟ್ಟಾಗ ಅಧ್ಯಕ್ಷರು ಅವರನ್ನು ಗದರಿಸಿ ಆತಂಕಪಡಿಸಿದರು. ಅಧ್ಯಕ್ಷರ ಈ ವಿಧವಾದ ವರ್ತನೆಯಿಂದ ವಿಚಾರಣೆಯು ಸಮರ್ಪಕವಾಗಿ ನಡೆಯಲು ಅವಕಾಶವಿಲ್ಲದೆ ಹೋಯಿತು. ಸರ್ ವಿಶ್ವೇಶ್ವರಯ್ಯನವರನ್ನು ಸರ್ಕಾರದವರು ಅಧ್ಯಕ್ಷರನ್ನಾಗಿ ನಿಯಮಿಸಿದಾಗ ನಾವು ಇವರನ್ನು ಆದರದಿಂದಲೂ ವಿಶ್ವಾಸದಿಂದಲೂ ಸ್ವಾಗತಿಸಿದೆವು. ಶಿಲ್ಪಶಾಸ್ತ್ರ ವಿಶಾರದರಾಗಿ ಲೋಕವಿಖ್ಯಾತಿಯನ್ನು ಪಡೆದು ಗುಣಾಢ್ಯರೆನಿಸಿದ ಸರ್ ವಿಶ್ವೇಶ್ವರಯ್ಯನವರು ಮೂಢಜನರ ಸ್ವಭಾವಗುಣವಾದ ಜಾತಿದ್ವೇಷವರ್ಣವೈಷಮ್ಯಗಳನ್ನು ಮರೆತು ಸರ್ವಸಮ್ಮತವಾಗಿ ನಡೆದುಕೊಳ್ಳುವರೆಂದು ನಾವು ನಿರೀಕ್ಷಿಸಿದ್ದೆವು. ಆದರೆ, ಈಗ ತಿಳಿದುಬಂದಿರುವ ವಿಷಯವನ್ನು ಪರಿಶೀಲಿಸಿದುದರಮೇಲೆ ನಮ್ಮ ನಿರೀಕ್ಷಣೆಯು ವ್ಯರ್ಥವಾಯಿತು. ಈಗ ಸರ್ಕಾರಕ್ಕೆ ಒಪ್ಪಿಸಿರುವ ವರದಿಯು ಸದಸ್ಯರೆಲ್ಲರಿಗೂ ಒಪ್ಪಿತವಾದುದಲ್ಲದಿದ್ದರೂ ಸಮಿತಿಯ ಬಹುಮತದಿಂದಲಾದರೂ ಅನುಮೋದಿತವಾಗದಿರುವುದು ಶೋಚನೀಯವೇ ಸರಿ. ಸಮಿತಿಯಲ್ಲಿದ್ದವರು ಒಟ್ಟು ಏಳುಮಂದಿ. ಅವರಲ್ಲಿ ಐದುಮಂದಿಗೆ ವರದಿಯನ್ನು ಅನುಮೋದಿಸುವುದರಲ್ಲಿ ಯಾವ ಭಾಗವೂ ದೊರೆಯದೇ ಇದ್ದುದು ಮಾತ್ರವಲ್ಲದೆ ವರದಿಯು ಕೇವಲ ಇಬ್ಬರಿಂದ ಮಾತ್ರ ಬರೆಯಲ್ಪಟ್ಟನಂತರವಾದರೂ ಉಳಿದ ಸದಸ್ಯರ ಪರಿಶೀಲನೆಗೂ ಚರ್ಚೆಗೂ ಅವಕಾಶ ಕೊಟ್ಟಿದ್ದರೆ ಅವರು ವರದಿಯಲ್ಲಿ ತಮಗೆ ಅಸಮ್ಮತವಾದ ಅಂಶಗಳನ್ನು ಬದಲಾಯಿಸುವಂತೆ ಮಾಡುತ್ತಿದ್ದರು. ಆದರೆ, ಅಧ್ಯಕ್ಷರು ಆರೀತಿ ಮಾಡದೆ ಹೋದುದರಿಂದ ವರದಿಯು ಬಹುಮತದಿಂದ ಬರೆಯಲ್ಪಟ್ಟುದಲ್ಲವೆಂದು ವ್ಯಕ್ತವಾಗುವುದು. ಈ ಕಾರಣದಿಂದ ವರದಿಯ ವಿಚಾರದಲ್ಲಿ ಸರ್ಕಾರಕ್ಕೂ ಮಹಾಜನಗಳಿಗೂ ಗೌರವವು ಇಲ್ಲದಂತಾಗಿರುತ್ತದೆ. ವರದಿಯು ಬರೆಯಲ್ಪಟ್ಟಮೇಲೆ ಅಧ್ಯಕ್ಷರು ಉಳಿದ ಸದಸ್ಯರನ್ನು ಕುರಿತು ಕೆಲವು ಪ್ರಶ್ನೆಗಳಿಗೆ ಮಾತ್ರ "ಹೌದೊ, ಅಲ್ಲವೊ" ಎಂಬ ಉತ್ತರವನ್ನು ಹೇಳಿರೆಂದು ಕೇಳಿದರಂತೆ! ಇಂತಹ ವರ್ತನೆಯ ಕಾರಣವನ್ನು ಅರಿಯದೆ ಸದಸ್ಯರು ಬೇರೆಮಾರ್ಗ ಕಾಣದೆ ತತ್ಕಾಲದಲ್ಲಿ ತಮಗೆ ತೋರಿದಂತೆ ಉತ್ತರಕೊಟ್ಟು ಸುಮ್ಮನಾದರು. ತಾವು ಯಾವ ಯಾವ ವಿಚಾರಗಳಿಗೆ ಸಮ್ಮತಿಯನ್ನಿತ್ತರೊ ಅಷ್ಟುಮಾತ್ರವಲ್ಲದೆ ವರದಿಯಲ್ಲಿ ತಮಗೆ ಒಪ್ಪದಿದ್ದ ಅನೇಕ ವಿಚಾರಗಳು ಗರ್ಭಿತವಾಗಿರುವುದನ್ನು ಈಗ ನೋಡಿದ ಸದಸ್ಯರು ಚಕಿತರಾಗಿ ತಾವು ಇಂತಹ ವರದಿಗೆ ರುಜುಮಾಡಿ ಮೋಸಹೋದೆವೆಂದು ಎಚ್ಚರಗೊಂಡು ಸಮಿತಿಯ ಅಧ್ಯಕ್ಷರಿಗೆ ಮ|| ಬಸವಪ್ಪನವರು ತಮ್ಮ ಅಸಮಾಧಾನವನ್ನು ಲಿಖಿತಮೂಲಕವಾಗಿ ತಿಳಿಸಿರುವರು. ವರದಿಯು ಹೇಗೆ ಯಾರಿಂದ ಬರೆಯಲ್ಪಟ್ಟಿತೆಂಬುದು ಈಗ ಬಯಲಿಗೆ ಬಂದಿತು. ಮಿಲ್ಲರ್ ಸಮಿತಿಯ ಸಲಹೆಗಳನ್ನನುಸರಿಸಿ ಸರ್ಕಾರದವರು ಶ್ರೀಮನ್ಮಹಾರಾಜರವರ ಲಕ್ಷಾಂತರ ಪ್ರಜೆಗಳ ಏಳ್ಗೆಗೆ ಯಾವ ಅಭ್ಯಂತರವೂ ತಾರತಮ್ಯವೂ ಇಲ್ಲದೆ ಸರಿಸಮವಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವ ವಿಚಾರದಲ್ಲಿ ವಿಶ್ವೇಶ್ವರಯ್ಯ ಸಮಿತಿಯವರು ತಮ್ಮ ಅಸಮಾಧಾನವನ್ನು ತಿಳಿಸಿ ಮುಂದೆ ದೇಶದಲ್ಲಿ ನೆಮ್ಮದಿಯುಂಟಾಗಬೇಕಾದರೆ, ಮಿಲ್ಲರ್ ಸಮಿತಿಯ ಸಲಹೆಗಳನ್ನು ಪುರಸ್ಕರಿಸಲಾಗದೆಂದು ವರದಿಯಲ್ಲಿ ಬರೆದಿರುವುದರ ಕಾರಣವು ಈಗ ವ್ಯಕ್ತವಾಗುವುದು. ಮುಂಬರಿದ ವರ್ಗದವರಿಗೆ ಬಹುಕಾಲದಿಂದಲೂ ನಡೆದುಬಂದಿರುವ ಆದರ ಪುರಸ್ಕಾರಗಳು ಸಾರೋದ್ಧಾರವಾಗಿ ನಡೆಯಬೇಕೆಂಬುದೇ ವರದಿಯ ಆಶಯವು. ಆದರೆ ಇದಕ್ಕೆ ಕುಂದುಕೊರತೆಯು ಬಂದಿರುವುದೇ ಮುಂಬರಿದವರ ಅಸಂತುಷ್ಟಿಗೆ ಕಾರಣವಾಗಿ ಗಲಭೆ, ಗದ್ದಲ, ಗೊಂದಲಗಳುತ್ಪನ್ನವಾಗುವುವೆಂಬುದು ವರದಿಯ ಅಭಿಪ್ರಾಯವಾಗಿರುವಂತೆ ತೋರುತ್ತದೆ. ಈ ವಿಚಾರದಲ್ಲಿ ಸಲಹೆಗಳನ್ನು ಕೊಡಬೇಕೆಂದು ಈ ಸಮಿತಿಯವರನ್ನು ಯಾರೂ ಕೇಳಲಿಲ್ಲವಾದರೂ ಅಸಂಬದ್ಧವಿಚಾರಗಳಲ್ಲಿ ಪ್ರವರ್ತಿಸಿ ತಮ್ಮ ಧ್ಯೇಯವನ್ನು ಸಮಿತಿಯ ಕೆಲ ಸದಸ್ಯರು ವ್ಯಕ್ತಪಡಿಸಿಕೊಂಡುದಕ್ಕಾಗಿ ನಾವು ವಿಷಾದಿಸುತ್ತೇವೆ. ಆದರೆ ಸರ್ಕಾರದವರು ವಿಚಕ್ಷಣೆಯಿಂದ ವರದಿಯನ್ನು ಪರಿಶೀಲಿಸಿ ಸೂಕ್ತತೋರಿದಂತೆ ಅಪ್ಪಣೆಮಾಡಿರುವುದು ಸಂತೋಷಪ್ರದವಾಗಿದೆ. ಮಿಲ್ಲರ್ ಸಮಿತಿಯ ಸಲಹೆಗಳ ವಿಚಾರದಲ್ಲಿ ಮಾಡಿರುವ ಅಸಂಬದ್ಧ ಪ್ರಲಾಪಕ್ಕೆ ತಕ್ಕ ಮರ್ಯಾದೆಯನ್ನು ಪ್ರಭುತ್ವದವರು ಕೊಡುವರೆಂದು ಮಹಾಜನಗಳು ನಿರೀಕ್ಷಿಸುತ್ತಾರೆ. ವರದಿಯು ಪ್ರಕಟಿಸಲ್ಪಡುವವರೆಗೂ ಹೊರಗಿನ ಜನಗಳಿಗೆ ಹೇಗೋ ಸದಸ್ಯರಿಗೂ ಹಾಗೆ ಅದರಲ್ಲಿ ಗರ್ಭಿತವಾದ ವಿಚಾರಗಳು ತಿಳಿಯದೇ ಇದ್ದು ಪ್ರಕಟಿಸಲ್ಪಟ್ಟಮೇಲೆ ತಾವು ರುಜುಮಾಡಿದ ವರದಿಯಲ್ಲಿ ತಮಗೆ ತಿಳಿಯದೆಯೂ ತಮಗೆ ಸಮ್ಮತವಿಲ್ಲದೆಯೂ ಇರುವ ವಿಚಾರಗಳನ್ನು ಕಂಡು ಮ|| ಬಸವಪ್ಪನವರು ಅಸಮಾಧಾನಗೊಂಡು ಸಮಿತಿಯಲ್ಲಿ ನಡೆದ ಒಳಸಂಚನ್ನು ಹೊರಪಡಿಸಿದುದಕ್ಕೋಸ್ಕರ ನಾವು ಅವರನ್ನು ಅಭಿನಂದಿಸುತ್ತೇವೆ. ಹೀಗೆಯೇ ಇತರ ಸದಸ್ಯರೂ ವರದಿಯನ್ನು ಸಾವಧಾನದಿಂದ ಪರಿಶೀಲಿಸಿ ತಮ್ಮ ಅಸಮಾಧಾನವನ್ನು ನಿರ್ಭಯವಾಗಿ ಪ್ರಕಟಿಸುವುದಾದರೆ, ಸಮಿತಿಯ ಸದಸ್ಯರು ತಮ್ಮ ಉತ್ತರವಾದಿತ್ವವುಳ್ಳ ಪವಿತ್ರ ಕರ್ತವ್ಯವನ್ನು ನಿರ್ದಾಕ್ಷಿಣ್ಯದಿಂದ ಮಾಡಿದಂತಾಗುವುದು. ಹಾಗೆ ಮಾಡುವರೇ ನೋಡುವ!

ಮ|| ವೆಂಕಟಕೃಷ್ಣಯ್ಯನವರ ವಿಜ್ಞಾಪನಾಪತ್ರಿಕೆಗೆ ಸರ್ಕಾರದ ಉತ್ತರ.

ಮೈಸೂರು ಪೇಟ್ರಿಯಟ್, ಸಾಧ್ವಿ ಮತ್ತು ಸಂಪದಭ್ಯುದಯಪತ್ರಿಕೆಗಳನ್ನು ಹೊರಡಿಸಕೂಡದೆಂದು ಸರ್ಕಾರದವರು ಮಾಡಿರುವ ಅಪ್ಪಣೆಯನ್ನು ತಪ್ಪಿಸಿಬಿಡಬೇಕೆಂದು ಪ್ರಾರ್ಥಿಸಿಕೊಂಡು ಮ|| ಎಂ. ವೆಂಕಟಕೃಷ್ಣಯ್ಯನವರು ಶ್ರೀಮನ್ಮಹಾರಾಜರವರಿಗೆ ಬಿನ್ನೈಸಿಕೊಂಡಿದ್ದ ಬಿನ್ನವತ್ತಲೆಗೆ ಸರ್ಕಾರದಿಂದ ದೊರೆತಿರುವ ಉತ್ತರ—

ಬಿನ್ನವತ್ತಲೆಯಲ್ಲಿ ಕಂಡ ವರ್ತಮಾನಪತ್ರಿಕೆಗಳ ನಡತೆಯು ಬಹುಕಾಲದಿಂದಲೂ ಪ್ರಭುತ್ವದವರ ಲಕ್ಷ್ಯದಲ್ಲಿರುವುದು. ಈ ಪತ್ರಿಕೆಗಳು ಪ್ರಭುತ್ವದವರ ಮೇಲೆ ಅಸಮರ್ಥತೆ, ಪಕ್ಷಪಾತತೆ ಇತ್ಯಾದಿ ದೋಷಾರೋಪಣೆಗಳನ್ನು ಮಾಡಿರುತ್ತವಲ್ಲದೆ ಜಾತಿದ್ವೇಷ ಮತದ್ವೇಷಗಳನ್ನು ಹುಟ್ಟಿಸುವಂತಹ ಪತ್ರವ್ಯವಹಾರಗಳನ್ನೂ ಲೇಖನಗಳನ್ನೂ ಪದೇ ಪದೇ ಪ್ರಕಟಿಸಿರುತ್ತವೆ. ಈ ವಿಧವಾದ ನಡವಳಿಕೆಗಳು 1928 ನೆಯ ಜುಲೈ ತಾ|| 30 ರಲ್ಲಿ ಗಲಭೆಯು ನಡೆದಂದೀಚೆಗಂತೂ ವಿಶೇಷವಾಗಿ ಗಮನಿಸತಕ್ಕುವಾಗಿರುತ್ತವೆ. ಅನುತ್ತರವಾದಿತ್ವವೂ ಅಸಭ್ಯಕರವೂ ಆದ ಲೇಖನಗಳೂ ಪತ್ರವ್ಯವಹಾರಗಳೂ ಪ್ರತಿಯೊಂದು ಸಂಚಿಕೆಯಲ್ಲೂ ಇದ್ದೇ ಇರುತ್ತಿದ್ದುವು. ಈ ಪತ್ರಿಕೆಗಳು ಸರ್ಕಾರಿಯಧಿಕಾರಿಗಳ ಮೇಲೆ ನಿರಾಧಾರವಾದ ದೋಷಾರೋಪಣೆಮಾಡಿ ಅವರ ವ್ಯಕ್ತಿದೂಷಣೆಯಲ್ಲಿ ಮಗ್ನವಾಗಿದ್ದುವು. ಜನರು ಜಾತಿದ್ವೇಷಪ್ರೇರಿತರಾಗಿ ಪ್ರಭುತ್ವವನ್ನು ತಿರಸ್ಕರಿಸುವಂತೆಯೂ, ಸಂಸ್ಥಾನದ ಗೌರವಕ್ಕೆ ಕುಂದುಂಟಾಗುವಂತೆಯೂ ಅನೇಕ ಲೇಖನಗಳು ಬರೆಯಲ್ಪಟ್ಟಿರುತ್ತವೆ.

ಈ ಪತ್ರಿಕೆಗಳನ್ನು ನಿಲ್ಲಿಸುವ ವಿಚಾರದಲ್ಲಿ ಪ್ರಭುತ್ವದವರು ಕೈಕೊಂಡ ನಡವಳಿಕೆಯು ವಿಜ್ಞಾಪನಾಪತ್ರಿಕೆಯಲ್ಲಿ ಹೇಳಲ್ಪಟ್ಟಿರುವಂತೆ ಆಕಸ್ಮಿಕವೂ ಅನಿರೀಕ್ಷಿತವೂ ಆದುದಲ್ಲ. ಈ ವಿಚಾರದ ಪೂರ್ವೋತ್ತರವು ಬಹಳವಾಗಿರುತ್ತದೆಂಬುದು ಅರ್ಜಿದಾರರಿಗೆ ಚೆನ್ನಾಗಿ ಗೊತ್ತಿರುತ್ತದೆ. 1922 ನೆಯ ವರ್ಷದಲ್ಲಿ ಇವರ ವಿಚಾರಣೆಯು ನಡಿಸಲ್ಪಟ್ಟಿದ್ದಿತು. ಆಗ್ಗೆ ಇವರ ಮೇಲೆ ತಕ್ಕ ಕ್ರಮವನ್ನು ಜರುಗಿಸಲು ಸಾಕಾದಷ್ಟು ಅವಕಾಶವಿದ್ದಿತಾದರೂ, ಅವರ ವಯಸ್ಸನ್ನೂ, ಅವರ ಬಹುಕಾಲದ ಪತ್ರಲೇಖೋದ್ಯಮವನ್ನೂ ಪರಿಗಣಿಸಿ ಅವರಿಗೆ ಎಚ್ಚರಿಕೆಯನ್ನು ಕೊಟ್ಟರೆ ಸಾಕೆಂಬುದಾಗಿ ಭಾವಿಸಲ್ಪಟ್ಟಿತು. ಅವರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಆಕ್ಷೇಪಕರವಾದ ವಿಚಾರಗಳು ಪದೇಪದೇ ಅವರ ಗಮನಕ್ಕೆ ತರಲ್ಪಟ್ಟು, ಮುಂದೆ ಸುಧಾರಿಸಲ್ಪಡುವುವೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಅಂತಹ ಲೇಖನಗಳಿಗೆ ಅವಕಾಶಕೊಡಲ್ಪಡುವುದಿಲ್ಲವೆಂದು ಅರ್ಜಿದಾರರು ಅನೇಕವೇಳೆ ವಾಗ್ದಾನಮಾಡಿದ್ದರು. ಅಲ್ಲದೆ ಪ್ರಭುತ್ವದವರಿಂದ ಎಚ್ಚರಿಕೆಗಳೂ ಕೊಡಲ್ಪಟ್ಟಿರುವುವು. ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಸ್ಥಳೀಯ ಪತ್ರಿಕೆಗಳ ಆಕ್ಷೇಪಕರವಾದ ಬರವಣಿಗೆಯ ವಿಚಾರವು ಚರ್ಚೆಗೆ ಬಂದಾಗ್ಗಿ, ಅರ್ಜಿದಾರರ ಪತ್ರಿಕೆಗಳ ವರ್ತನವು ಬಹಳವಾಗಿ ಖಂಡಿಸಲ್ಪಟ್ಟಿತು. ಮೈತ್ರಿಭಾವದಿಂದ ಕೊಡಲ್ಪಟ್ಟ ಸಲಹೆಗಳಿಂದಾಗಲಿ ಪ್ರಭುತ್ವದವರ ಎಚ್ಚರಿಕೆಗಳಿಂದಾಗಲಿ, ಅರ್ಜಿದಾರರ ವಾಗ್ದಾನಗಳಿಂದಾಗಲಿ ಪತ್ರಿಕೆಗಳಧ್ಯೇಯವು ಸುಧಾರಣೆಗೊಳ್ಳಲಿಲ್ಲವು. ಅದುಕಾರಣ ಪ್ರಭುತ್ವದವರು ಈ ಪತ್ರಿಕೆಗಳಿಂದಾಗತಕ್ಕ ಕೆಡಕನ್ನು ನಿಲ್ಲಿಸಲು ಪತ್ರಿಕೆಗಳು ಹೊರಡದಂತೆ ತಡೆದುಬಿಡುವುದೊಂದೇ ಉಪಾಯವೆಂದು ವಿಷಾದದಿಂದ ನಿರ್ಧರಿಸಿರುತ್ತಾರೆ. ಈ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಆಕ್ಷೇಪಕರವಾದ ಲೇಖನಗಳಿಂದ ಪ್ರಜೆಗಳ ಮನಸ್ಸಿನಮೇಲೆ ಆಗುತ್ತಿದ್ದ ದುಷ್ಟಪರಿಣಾಮವನ್ನು ಪರಿಗಣಿಸಿ ಈ ಪತ್ರಿಕೆಗಳನ್ನು ನ್ಯಾಯಸ್ಥಾನದ ವಿಚಾರಣೆಗೆ ಗುರಿಮಾಡದೆ, ಇವುಗಳಂತೆಯೇ ವರ್ತಿಸುತ್ತಿದ್ದವುಗಳನ್ನು ಕೋರ್ಟಿನ ತೀರ್ಪಿಗೆ ಗುರಿಮಾಡುವುದು ಅನಾವಶ್ಯಕವೆಂದು ನಿರ್ಧರಿಸಿದಪ್ರಕಾರ ಅರ್ಜಿಯಲ್ಲಿ ಕಂಡ ಪತ್ರಿಕೆಗಳನ್ನು ವಿಚಾರಣೆಗೆ ಗುರಿಮಾಡುವುದು ಅನಾವಶ್ಯಕವಾಗಿರುತ್ತದೆ. ಚೀಫ್ ಸೆಕ್ರೆಟರಿ.

ಚಿಕ್ಕಮಗಳೂರಲ್ಲಾದ ಶಂಕುಸ್ಥಾಪನೋತ್ಸವ.

ಶ್ರೀಮನ್ಮಹಾರಾಜ ಸಹೋದರರ ಸ್ವಾರಿಯು ಪ್ರೈವೇಟ್ ಸೆಕ್ರೆಟರಿ ಸರ್ ಚಾರ್ಲೆಸ್ ಟಾಡ್‌ಹಂಟರ್‌ರವರು, ಹುಜೂರು ಸೆಕ್ರೆಟರಿ ರಾಜಸಭಾಭೂಷಣ ಟಿ. ತಂಬೂಶೆಟ್ಟರು, ಅಸಿಸ್ಟೆಂಟ್ ಸೆಕ್ರೆಟರಿ ಮಿ|| ಸಡಗ್ ಜಡ್‌ಪಾರವರು, ಲೆಫ್ಟಿನೆಂಟ್ ಕರ್ನಲ್ ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು, ಸರದಾರ್ ಗೋಪಾಲಕೃಷ್ಣ ಅರಸಿನವರು, ರಿಟೈರ್ಡ್ ಮುಜರಾಯಿಬಕ್ಷಿ ರಾಜಕವಿ ಮ|| ಎಚ್. ಲಿಂಗರಾಜ ಅರಸಿನವರು, ಕ್ಯಾಪ್ಟನ್ ಡಿ. ಸಿ. ನಂಜರಾಜ ಬಹದ್ದೂರ್‌ರವರು, ಸರದಾರ್ ಗೋಪಾಲರಾವ್ ಯವರು, ಸರದಾರ್ ನಬಿಖಾನ್‌ರವರು, ರಿಟೈರ್ಡ್ ಕನ್ಸರ್ವೇಟರ್ ಮ|| ಪಿ. ಎಸ್. ಗೋವಿಂದರಾಯರು ಮತ್ತೆ ಕೆಲವರೊಡನೆಯೂ ಗಿರ್ಲುಮೀಸೆಯ ಬಿಚ್ಚುಕತ್ತಿ ಪಹರೆಯವರು, ಕಟಿಕೆಯವರು, ಊಳಿಗದವರು, ವಾದ್ಯದವರು ಮೊದಲಾದ ಪರಿವಾರದೊಡನೆ ಕಳೆದ ಶುಕ್ರವಾರ ರಾತ್ರಿ 9 ಗಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಅರಶೀಕೆರೆ ಮಾರ್ಗವಾಗಿ ಕಡೂರಿಗೆ ಪ್ರಯಾಣಬೆಳೆಸಿತು. ಅತ್ತಲಾಗಿ ದಿವಾನ್ ಸಾಹೇಬರು ತಮ್ಮ ಪ್ರೈವೇಟ್ ಸೆಕ್ರೆಟರಿ ಮೊದಲಾದ ಪರಿವಾರದೊಡನೆ ಬೆಂಗಳೂರಿನಿಂದ ಅದೇರಾತ್ರಿ ಪೂನಾಮೇಲು ಟ್ರೇನಿನಲ್ಲಿ ಹೊರಟು ಕಡೂರು ಸ್ಟೇಷನ್ ಸಮೀಪದಲ್ಲಿ ಇಲಿ ಸತ್ತಿದ್ದಿತೆಂಬುದನ್ನು ತಿಳಿದು ಕಡೂರು ಸ್ಟೇಷನ್ ಹಿಂದಿರುವ ದೇವನೂರು ಸ್ಟೇಷನ್ನಿನಲ್ಲೇ ತಮ್ಮ ಸೆಲೂನ್ ಬಂಡಿಯನ್ನು ನಿಲ್ಲಿಸಿಕೊಂಡಿದ್ದು ಮಹಾಸ್ವಾಮಿಗಳ ಟ್ರೇನು ಬರುತ್ತಲೆ ಅದನ್ನೂ ಅಲ್ಲೇ ಬೆಳಕುಹರಿಯುವವರೆಗೆ ನಿಲ್ಲಿಸಿಕೊಂಡಿದ್ದು ಶನಿವಾರ ಬೆಳಗಿನ 7½ ಗಂಟೆಗೆ ಸಮಸ್ತರೂ ಅರಮನೆಯ ಮೋಟಾರು ಬಂಡಿಗಳಲ್ಲಿ ಚಿಕ್ಕಮಗಳೂರಿಗೆ ಪ್ರಯಾಣಬೆಳೆಸಿದರು. ಕಡೂರು ರೈಲ್ವೆಸ್ಟೇಷನ್ನಿನಿಂದ ಚಿಕ್ಕಮಗಳೂರಿನ ವರೆಗೆ ದಾರಿಯುದ್ದಕ್ಕೂ ಸಾಲುಮರಗಳಿಗೆ ಸುಣ್ಣ ಮತ್ತು ಕೆಮ್ಮಣ್ಣುಪಟ್ಟೆಗಳು ಬಳಿಯಲ್ಪಟ್ಟಿದ್ದುವಲ್ಲದೆ ತಳಿರುತೋರಣಗಳು ಕಟ್ಟಲ್ಪಟ್ಟಿದ್ದುವು. ಪ್ರತಿಯೊಂದು ಗ್ರಾಮದ ಸಮೀಪದಲ್ಲಿಯು ಗ್ರಾಮಸ್ತರೂ ನೆರೆಯ ಜನರೂ ಮನೋಹರವಾದ ಚಪ್ಪರಗಳನ್ನು ಹಾಕಿ ವಸ್ತ್ರಾಭರಣಗಳನ್ನು ಧರಿಸಿಕೊಂಡು ಫಲಪುಷ್ಪಗಳ ತಟ್ಟೆಗಳ ಸಮೇತ ನಿರೀಕ್ಷಿಸಿಕೊಂಡಿದ್ದು ಮಹಾಸ್ವಾಮಿಗಳವರ ಸ್ವಾರಿಯು ಚಿತ್ತೈಸುತ್ತಲೆ ಕೋಲಾಹಲಧ್ವನಿಯನ್ನು ಮಾಡುತ್ತ ಮುಖಂಡರ ಮೂಲಕ ಫಲಪುಷ್ಪಗಳನ್ನೊಪ್ಪಿಸಿ ತಮ್ಮ ಅಕುಟಿಲವಾದ ರಾಜಭಕ್ತಿಯನ್ನರ್ಪಿಸಿದರು. ಮಹಾಸ್ವಾಮಿಗಳು ಮಂದಹಾಸದಿಂದ ಸ್ವೀಕರಿಸಿ ನೆರೆದಿದ್ದ ಜನರನ್ನೆಲ್ಲ ಕರುಣಕಟಾಕ್ಷದಿಂದ ಈಕ್ಷಿಸುತ್ತ ಸುಮಾರು 9½ ಗಂಟೆ ಸಮಯಕ್ಕೆ ಚಿಕ್ಕಮಗಳೂರನ್ನು ತಲುಪಿ ಬಿಡಾರವಾಗಿ ಮಾಡಲ್ಪಟ್ಟಿದ್ದ ಡೆಪ್ಯುಟಿ ಕಮಿಷನರ ಬಂಗಲೆಯಲ್ಲಿಳಿದು ಕೊಂಚ ವಿಶ್ರಮಿಸಿಕೊಂಡು ಮನೋಹರವಾದ ಉಡುಪನ್ನೂ ಮುತ್ತಿನ ಕಂಠಾಭರಣವನ್ನೂ ಧರಿಸಿ ತಮ್ಮಂತೆಯೇ ಉಡುಪಿನಿಂದಲೂ ವಜ್ರಮಣಿಗಳ ಕಂಠಾಭರಣದಿಂದಲೂ ಅಲಂಕೃತರಾದ ಶ್ರೀಮದ್ಯುವರಾಜರೊಡನೆಯೂ ದಿವಾನರೊಡನೆಯೂ ಮೋಟಾರು ಬಂಡಿಯಲ್ಲಿ ಕುಳಿತು ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ನೀರಿನ ಚಳೇವಿನಿಂದಲೂ ಅಲಂಕೃತವಾಗಿದ್ದ ಊರಿನ ದೊಡ್ಡಪೇಟೆಯ ಮಾರ್ಗವಾಗಿ ಹೊರಟು ಆದಿಕರ್ನಾಟಕರು, ಮಹಮ್ಮದೀಯರು ವೈಶ್ಯರು ವೀರಶೈವರು ಮೊದಲಾದ ಮತಸ್ಥರು ರಚಿಸಿದ್ದ ಚಪ್ಪರಗಳನ್ನೂ ಪರಾಮರ್ಶಿಸಿಕೊಂಡು ಸುಮಾರು 10½ ಗಂಟೆಗೆ ಧರ್ಮಪ್ರಕಾಶ ಚಂದ್ರೇಗೌಡರ ವಿಶಾಲವಾಗಿಯೂ ಮನೋಹರವಾಗಿಯೂ ಹಾಕಿಸಲ್ಪಟ್ಟಿದ್ದ ಚಪ್ಪರದ ಬಳಿಗೆ ಚಿತ್ತೈಸಿದರು. ಕೂಡಲೆ ಧರ್ಮಪ್ರ ಬೆಂಗಳೂರಿನಿಂದ ಕರೆಸಿದ್ದ ವಾದ್ಯದವರು ಮಹಾಸ್ವಾಮಿ ಸುಖಾಗಮನವನ್ನು ಬಯಸಿ ವಾದ್ಯವನ್ನು ಮಾಡಿದರು. ಮಗಳೂರಿನ ಮ್ಯುನಿಸಿಪಲ್ ಕೌನ್ಸಿಲಿನವರೂ ಧರ್ಮಪ್ರ ಮಹಾಪ್ರಭು ಸಹೋದರರನ್ನು ಸುಸ್ವಾಗತಿಸಿ ಮರ್ಯಾ ಮಹಾಸ್ವಾಮಿಗಳು ಅವರೆಲ್ಲರನ್ನೂ ವಂದಿಸಿ ಮಂಟ ಪ್ರವೇಶಿಸಿ ಪೀಠದಮೇಲೆ ಸಜ್ಜುಗೊಳಿಸಿದ್ದ ರಜತಾಸನ ಸಾವಿರಾರು ಸ್ತ್ರೀಪುರುಷರ ಕೋಲಾಹಲಧ್ವನಿಯ ಮಂಡಿಸಿದರು. ಬಾಲಿಕೆಯರು ಮಂಗಳವನ್ನು ತಿಪಟೂರಿನಿಂದ ಬಂದಿದ್ದ ವೀರಶೈವ ವೈದಿಕರು ಮಂತ್ರಾಕ್ಷತೆಯೊಡನೆ ಮಂಟಪದ್ವಾರದಿಂದ ಪೀಠದವ ಮಹಾಸ್ವಾಮಿಗಳವರ ಮುಂಗಡೆ ವೇದಘೋಷವನ್ನು ಕೊಂಡುಬಂದರು. ಮಹಾಸ್ವಾಮಿಯವರಪ್ಪಣೆ ಪಡೆದು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರು ವಿಜ್ಞಾಪನಾಪತ್ರಿಕೆ

ಯನ್ನೋದಿ ಒಂದು ಕ್ಯಾಸ್ಕೆಟಿನಲ್ಲಿಟ್ಟೊಪ್ಪಿಸಿದರು. ತರುವಾಯ ಸೀನಿಯರ್ ಸರ್ಜನ್ನರವರು ನೂತನವಾಗಿ ಕಟ್ಟಲ್ಪಡುವ ಆಸ್ಪತ್ರೆ ವಿಷಯಕವಾದ ಚರಿತ್ರೆಯನ್ನೋದಿದನಂತರ ಮ|| ಚಂದ್ರೇಗೌಡರ ಪರವಾಗಿ ಅವರ ದ್ವಿತೀಯ ಕುಮಾರ ಮ|| ದೇವೇಗೌಡ ಬಿ.ಎ., ಯವರು ವಿಜ್ಞಾಪನಾಪತ್ರಿಕೆಯನ್ನೋದಿದಮೇಲೆ ಅದನ್ನು ಮ|| ಚಂದ್ರೇಗೌಡರು ಬಹು ಸುಂದರವಾದ ಬೆಳ್ಳಿಯ ಕ್ಯಾಸ್ಕೆಟ್ಟಿನಲ್ಲಿಟ್ಟು ಮಹಾಸ್ವಾಮಿಯವರಿಗೊಪ್ಪಿಸಿದರು. ಆ ಮೇಲೆ ಮಹಾಪ್ರಭುಗಳು ವಿಜ್ಞಾಪನಾಪತ್ರಿಕೆಗಳಿಗೆ ಉತ್ತರವನ್ನು ಮೃದುಮಧುರವಾಣಿಯಲ್ಲಿ ದಯೆಪಾಲಿಸಿದಮೇಲೆ ಮ|| ಚಂದ್ರೇಗೌಡರು ಪುಷ್ಪಹಾರ ಗುಚ್ಛಗಳನ್ನು ಪ್ರಭು ಸಹೋದರರಿಗೊಪ್ಪಿಸಿದರು. ತರುವಾಯ ಪ್ರಭುಗಳು ಬೆಳ್ಳಿಯ ಕರಣೆಯಿಂದ ಕೊಂಚ ಗಾರೆಯನ್ನು ತೆಗೆದುಕೊಂಡು ಅಸ್ತಿವಾರದ ಕಲ್ಲಿನ ಕೆಳಗೆ ಹಾಕಿದಕೂಡಲೆ ಚೀಫ್ ಇಂಜನಿಯರು ಸರಪಳಿಯನ್ನೆಳದು ಸುವರ್ಣಾಕ್ಷರಗಳಿಂದ ಕೆತ್ತಲ್ಪಟ್ಟಿದ್ದ ಕಲ್ಲನ್ನು ಕೆಳಗಿಳಿಸಿ ಖಚಿತವಾಗಿ ಕುಳ್ಳಿರಿಸಿದರು. ಮಹಾಪ್ರಭು ಸಹೋದರರು ಸಭಿಕರ ಜಯಧ್ವಾನವಾಗುತ್ತಿರುವಾಗ್ಗೆ ಮಂಟಪವನ್ನು ಬಿಟ್ಟು ಹೊರಟು ಮೋಟಾರುಬಂಡಿಯಲ್ಲಿ ಕುಳಿತು ಬಿಡಾರಕ್ಕೆ ಚಿತ್ತೈಸಿದರು. ಈ ಮಹೋತ್ಸವಕ್ಕೆ ಸ್ಥಳೀಯ ಅಧಿಕಾರಿಗಳೂ ಯೂರೋಪಿಯನ್ ಮತ್ತು ಹಿಂದು ಕಾಫಿಪ್ಲಾಂಟರುಗಳೂ, ಲಾ ಸೆಕ್ರೆಟರಿ ಮ|| ಪಿ. ಮಹಾದೇವಯ್ಯನವರು, ಶಿವಮೊಗ್ಗ ಸಬ್‌ಜಡ್ಜ್ ಮ|| ಜಿ ಪರಮಶಿವಯ್ಯನವರು, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರುಗಳಾದ ಮ|| ಡಿ. ಎಸ್. ಮಲ್ಲಪ್ಪನವರು ಮ|| ಡಿ. ಎಚ್. ಚಂದ್ರಶೇಖರಯ್ಯನವರು, ಮ|| ಎಚ್. ಜಿ. ಬಸವಪ್ಪನವರು ಕೋಲಾರದಿಂದ ಸಾಹುಕಾರ್ ಚಿಕ್ಕಚನ್ನಂಜಪ್ಪಶೆಟ್ಟರು, ಬೆಂಗಳೂರಿನಿಂದ ಕ್ಯಾಪ್ಟನ್ ವೈ. ವಿ. ಅಯ್ಯನವರು, ಎಂ. ಎಲ್. ಇ. ಫಂಡ್ ಸೆಕ್ರೆಟರಿ ಮ|| ಎಂ. ನಾಗಪ್ಪನವರು ಮೈಸೂರಿನಿಂದ ಧರ್ಮಪ್ರಕಾಶ ಡಿ. ಬನುಮಯ್ಯನವರು ಮೊದಲಾದ ದೊಡ್ಡ ಮನುಷ್ಯರುಗಳೂ ಬಂದಿದ್ದರು. ಮಹಾಪ್ರಭುಗಳು ಮಾರನೆಯ ಬೆಳಿಗ್ಗೆ ಪರಿವಾರದೊಡನೆ ಬಾಬಾಬುಡನ್‌ಗಿರಿಗೆ ಮೋಟಾರು ಬಂಡಿಗಳಲ್ಲಿ ಚಿತ್ತೈಸಿ ದತ್ತಾತ್ರೇಯ ಪೀಠ ಮೊದಲಾದುದನ್ನು ಪರಾಮರ್ಶಿಸಿಕೊಂಡು ಸಾಯಂಕಾಲ ಹಿಂದಿರುಗಿ ಮಾರನೆಯ ಬೆಳಿಗ್ಗೆ ಹಾಸನಕ್ಕೆ ದಯೆಮಾಡಿಸಿದರು. ಧರ್ಮಪ್ರಕಾಶ ಚಂದ್ರೇಗೌಡರು ಮಹಾಪ್ರಭುಗಳ ಸುಖಾಗಮನಕ್ಕಾಗಿ ಅತ್ಯುತ್ಕೃಷ್ಟವಾದ ಏರ್ಪಾಡನ್ನು ಮಾಡಿ ಮಹಾಸ್ವಾಮಿಯವರ ಮೆಚ್ಚುಗೆಗೆ ಪಾತ್ರರಾದರು. ಧರ್ಮಪ್ರಕಾಶರ ವಿಜ್ಞಾಪನಾಪತ್ರಿಕೆಯೂ ಮಹಾಪ್ರಭುಗಳ ಉತ್ತರವೂ ಬೇರೆಕಡೆ ಮುದ್ರಿಸಲ್ಪಟ್ಟಿವೆ.

ಅಫ್ಘನ್‌ರಾಜ್ಯದ ಪರಿಸ್ಥಿತಿ.

ಕಾಬೂಲಿನಲ್ಲಿ ದಂಗೆಕೋರ ರಾಜನು ಜನಗಳಿಗೆ ಚಿತ್ರಹಿಂಸೆಕೊಡುತ್ತಿರುವನು. ಹಿಂದು ನಿವಾಸಿಗಳಮೇಲೆ ತಲೆಗಂದಾಯವನ್ನು ಹಾಕಿರುವನಲ್ಲದೆ ನಾನಾವಿಧವಾದ ತೊಂದರೆಗಳಿಗೆ ಗುರಿಮಾಡುತ್ತಿರುವನು. ಅಮಾನುಲ್ಲರವರ ರಾಜ್ಯಭಾರದಲ್ಲಿ ಖಜಾನೆ ಮಂತ್ರಿಯಾಗಿದ್ದ ಬ್ರಿಗೇಡಿಯರ್ ಜನರಲ್ ದಿವಾನ್‌ನರಂಜನ್ ದಾಸ್ ರವರನ್ನು ದಂಗೆಕೋರರಾಜನು ತನಗೆ ಮಂತ್ರಿಯಾಗಿರಬೇಕೆಂದು ಕೇಳಿದನೆಂದೂ, ಅದಕ್ಕೆ ಒಪ್ಪದಿರಲು ಅವನನ್ನು ಕೊಲೆಮಾಡಿಸಿದನೆಂದೂ ವರ್ತಮಾನ ಬಂದಿತ್ತು. ಆದರೆ ಈ ಸುದ್ದಿಯು ನಿರಾಧಾರವಾದುದೆಂದು ಈಗ ತಿಳಿದುಬಂದಿದೆ. ಸಾಕೌ ದೊರೆಯು ಹೊಸ ಮಂತ್ರಿಗಳನ್ನು ನಿಯಮಿಸಿಕೊಂಡು ರಾಜ್ಯಭಾರ ನಡೆಸುವ ಯತ್ನವನ್ನು ಮಾಡುತ್ತಲಿರುವನಾದರೂ ಜನಗಳ ಸಹಾನುಭೂತಿಯಿಲ್ಲದೆ ಪೇಚಾಡುತ್ತಿರುವನು. ವಿದೇಶೀಯ ರಾಯಭಾರಿಗಳ ಸಂರಕ್ಷಣೆಯು ಸಮರ್ಪಕವಾಗಿಲ್ಲವಾದುದರಿಂದ ಅವರು ಕಾಬೂಲನ್ನು ಬಿಟ್ಟು ಹೊರಟುಹೋಗಬೇಕೆಂದೂ ದೇಶದಲ್ಲಿ ಶಾಂತಿಸ್ಥಾಪನೆಯಾಗಿ ಕ್ರಮವಾದ ರಾಜ್ಯಭಾರವು ಏರ್ಪಾಡಾಗುವವರೆಗೂ ಹಿಂತಿರುಗುವುದಿಲ್ಲವೆಂದೂ ತಿಳಿಯಬರುತ್ತದೆ. ಬ್ರಿಟಿಷ್ ರಾಯಭಾರಿಗಳು ಅಂತ್ಯದವರೆಗೂ ಅಲ್ಲಿಯೇ ಇದ್ದು ಸಮಯೋಚಿತ ನಡೆದುಕೊಳ್ಳುವರಂತೆ. ಇವರಿಗೆ ಪ್ರಾಣಭಯವಿರುವುದೆಂದೂ, ಅಮಾನುಲ್ಲರವರ ಪಕ್ಷದವರು ದಂಗೆಕೋರ ರಾಜನನ್ನೂ, ಬ್ರಿಟಿಷ್ ರಾಯಭಾರಿಯನ್ನೂ ದ್ವೇಷಿಸುತ್ತಿರುವರೆಂದೂ ಅವರಿಂದ ಇವರಿಗೆ ಅಪಾಯಸಂಭವಿಸಬಹುದೆಂದೂ ಕೆಲ ಬ್ರಿಟಿಷ್ ಪತ್ರಿಕೆಗಳು ಹೇಳುತ್ತಿವೆ. ಅತ್ತ ಕಾಂದಹಾರಿನಲ್ಲಿ ಅಮಾನುಲ್ಲರವರು ಪುನಃ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡು ಸೈನ್ಯ ಸನ್ನದ್ಧರಾಗುತ್ತಿರುವರೆಂದೂ, ಚಳಿಗಾಲ ಕಳೆದು ವಸಂತಕಾಲ ಬಂದೊಡನೆಯೇ ಕಾಬೂಲಿನಮೇಲೆ ನುಗ್ಗುವರೆಂದೂ ಸುದ್ದಿಬಂದಿರುವುದು. ಜಲಾಲಾಬಾದಿನಲ್ಲಿದ್ದ ಅಮಾನುಲ್ಲರವರ ಸೈನ್ಯಾಧಿಕಾರಿಯು ಸುತ್ತುಮುತ್ತಿನ ಪ್ರಾಂತ್ಯವನ್ನು ಹತೋಟಿಯಲ್ಲಿಟ್ಟುಕೊಂಡಿರುವನು. ಸಮಯವೊದಗಿದರೆ ಅಮಾನುಲ್ಲರವರಿಗೆ ಸಹಾಯಕನಾಗುವನು. ಇನಾಯತುಲ್ಲರವರು ಅಮಾನುಲ್ಲರವರೊಡನೆ ಸಹಾಯೀಕರಿಸುತ್ತಿರುವರು. ಅಮಾನುಲ್ಲರವರಿಗೆ ಸಹಾಯಕರಾಗಿದ್ದ ರಷ್ಯಾದೇಶೀಯರಾದ ಆಕಾಶನಾವೆಯ ಯಂತ್ರಗಾರರನ್ನು ದಂಗೆಕೋರ ದೊರೆಯು ಕೆಲಸದಿಂದ ನಿವೃತ್ತಿಮಾಡಿ ಅವರು ತಮ್ಮ ದೇಶಕ್ಕೆ ಕಾಲ್ನಡಗೆಯಲ್ಲಿಯೇ ಹೋಗಬೇಕೆಂದು ಕಠಿಣವಾದ ಆಜ್ಞೆಯಿತ್ತಿರುವನಂತೆ. ಬ್ರಿಟಿಷರ ಸ್ನೇಹವನ್ನು ಬಯಸಿರುವ ಸಾಕೌವಿಗೆ ಇದು ಸಹಜವೆಂದು ನಂಬಬೇಕಾಗಿದೆ. ಈ ದಂಗೆಕೋರ ದೊರೆಯು ಬಹುಕಾಲ ರಾಜನಾಗಿರಲಾರನೆಂದು ತೋರುತ್ತಿದೆ. ಕಾಂದಹಾರಿನಲ್ಲಿಯೂ ಇತರ ಕಡೆಗಳಲ್ಲಿಯೂ ಅಮಾನುಲ್ಲರವರಮೇಲೆ ಜನಗಳಿಗೆ ಭಕ್ತಿವಿಶ್ವಾಸಗಳು ಹೆಚ್ಚುತ್ತಲಿವೆ.

ಒಳದೇಶದ ವೃತ್ತಾಂತಗಳು.

ಮೈಸೂರು ನ್ಯಾಯವಿಧಾಯಕಸಭೆಯು ಬರುವ ಮಾರ್ಚಿ ತಾ|| 19 ರಲ್ಲಿ ನೆರೆಯುವುದಾಗಿರುವುದು.

ಶ್ರೀಮನ್ಮಹಾರಾಜರವರು ಮೈಸೂರು ಇನ್ಫೆಂಟ್ರಿ ಎರಡನೆ ಬೆಟಾಲಿಯನ್ ಜಮೂದಾರ್ ಮ|| ಸಿ. ಸುಬ್ರಹ್ಮಣ್ಯಂರವರನ್ನು ಸುಬೇದಾರ ತರಗತಿಗೆ ಹೆಚ್ಚಿಸಿರುತ್ತಾರೆ.

ಡೆಲ್ಲಿಯಲ್ಲಿ ನೆರೆಯುವ ನರೇಂದ್ರಮಂಡಲದ ಸಮಾವೇಶಕ್ಕೆ ನಮ್ಮ ದಿವಾನರು ಈ ತಾ|| 5 ರಲ್ಲಿ ಶ್ರೀಮನ್ಮಹಾರಾಜರವರ ಪ್ರತಿನಿಧಿಯಾಗಿ ದಯೆಮಾಡಿಸುವವರಾಗಿರುವರು.

ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಎಂ. ಶೇಷಾದ್ರಿ, ಎಂ.ಎ., ರವರು ರಜ ಪೂರೈಸಿದನಂತರ ಹಾಸನದ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವುದರಿಂದ ಮ|| ಎಸ್. ಎನ್. ಶ್ರೀನಿವಾಸರಾವ್ ಬಿ.ಎ., ಯವರು ಹಿಂದಿರುಗಿ ಅಮಲ್ದಾರರಾಗಿ ಹೋಗಬೇಕಾಗಿದೆ

ನರಸಿಂಹರಾಜಪುರದ ಮುನ್ಸೀಫರಾದ ಮ|| ಬಿ. ಲಕ್ಷ್ಮೀನಾರಾಯಣಜೋಯಿಸ್, ಬಿ.ಎ., ಎಲ್‌ಎಲ್‌ಬಿ., ಯವರು 20 ದಿನಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಶಿವಮೊಗ್ಗ ಡಿ|| ಆಕ್ಟಿಂಗ್ ಸಿರಸ್ತೆದಾರ್ ಮ|| ಎಂ. ಕೆ. ಶಿವಶಂಕರರಾವ್. ಬಿ.ಎ., ಬಿ.ಎಲ್. ರವರು ನರಸಿಂಹರಾಜ ಪುರದ ಆಕ್ಟಿಂಗ್ ಮುನ್ಸೀಫರಾಗಿ ನಿಯಮಿಸಲ್ಪಟ್ಟರುವರು.

ಮೆಡಿಕಲ್ ಗ್ರ್ಯಾಜ್ಯುಏಟರುಗಳಾದ ಮ|| ಎಂ. ರಾಮಚಂದ್ರರಾವ್, ಎಂ.ಬಿ., ಬಿ.ಎಸ್., ರವರು ತಾ|| 16-10-28 ರಿಂದ, ಮ|| ಬಿ. ಅನಂತಸ್ವಾಮಿರಾವ್, ಬಿ.ಎಸ್.ಸಿ., ಎಂ.ಬಿ. ಬಿ.ಎಸ್., ರವರು ತಾ|| 19-11-28 ರಿಂದ ಮತ್ತು ಮ|| ಟಿ. ಚಂದ್ರಶೇಖರಯ್ಯ, ಬಿ.ಎ., ಎಂ.ಬಿ.ಬಿ.ಎಸ್., ರವರು ತಾ|| 19-11-28 ರಿಂದ ಒಂದು ವರ್ಷದವರೆಗೆ ಪ್ರಬೇಷನರಿ ಹೆಲ್ತಾಫೀಸರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರು ಆಶ್ವಯುಜ ಮಾಸದಲ್ಲಿ ನವರಾತ್ರಿಯುತ್ಸವದ ಕಡೆಯದಿವಸ ಆನೆಯಮೇಲಿನ ಭಂಗಾರದ ಅಂಬಾರಿಯಲ್ಲಿ ಕುಳಿತು ಜಂಬೂಸ್ವಾರಿ ಹೊರಡುತ್ತಾರಷ್ಟೆ. ಈ ಭಂಗಾರದ ಅಂಬಾರಿಯು ಪುರಾತನವಾದುದರಿಂದ ಅದರಬದಲು 10 ಸಾವಿರ ತೊಲ ಭಂಗಾರದಲ್ಲಿ ಒಂದು ಅಂಬಾರಿಯನ್ನು ನವೀನ ರೀತಿಯಲ್ಲಿ ಮಾಡಲು ಶ್ರೀಮನ್ಮಹಾರಾಜರವರ ಅಪ್ಪಣೆಯಾಗಿ ತಕ್ಕ ಪ್ರಯತ್ನವು ನಡೆಯುತ್ತಿರುವುದಾಗಿ ಕೇಳುತ್ತೇವೆ.

ಬೆಂಗಳೂರು ಸ್ಪೆಷಲ್ ಸೆಕೆಂಡ್‌ಕ್ಲಾಸ್ ಮೆಜಿಸ್ಟ್ರೇಟರಾದ ಮ|| ಪಿ. ಸೂರ್ಯನಾರಾಯಣಶೆಟ್ಟಿ, ಬಿ.ಎ., ಎಲ್‌ಎಲ್.ಬಿ., ಯವರು 2 ತಿಂಗಳ ರಜವನ್ನು ತೆಗೆದುಕೊಂಡಿರುವುದರಿಂದ, ದಾವಣಗೆರೆ ಮುನ್ಸೀಫ[illegible] ಮ|| ಫೆರೂಜ್‌ಷಾ ಪುನೆಗರ್ ಬಿ.ಎ., ಎಲ್‌ಎಲ್ [illegible] ಬೆಂಗಳೂರು ಸ್ಪೆಷಲ್ ಸೆಕೆಂಡ್‌ಕ್ಲಾಸ್ [illegible]ಚಾರಶಾಲೆಗಳಿಗೆ[illegible], ಕ್ಲೋಸ್‌ಪೇಟೆ ಸ್ಪೆಷಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮ|| ಎಂ. ಆರ್. ಸುಂದರರಾವ್, ಬಿ.ಎ., ಎಲ್‌ಎಲ್.ಬಿ., ಯವರು ದಾವಣಗೆರೆಯ ಮ್ಯುನ್ಸೀಫರಾಗಿಯೂ ರಜದಮೇಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಪಿ. ಎಚ್. ಕೃಷ್ಣರಾವ್, ಎಂ.ಎ., ರವರು ಕ್ಲೋಸ್‌ಪೇಟೆಯ ಸ್ಪೆಷಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಳೆದ ಶಬರಾತ್ ಹಬ್ಬದ ದಿವಸ ಮದ್ದನ್ನು ಸುಡುವುದಕ್ಕಾಗಿ ಮೈಸೂರು ತಾ|| ಇಲ್ವಾಲದ ವಾಸಸ್ಥನಾದ ಒಬ್ಬ ಮಹಮ್ಮದೀಯನು ಮೈಸೂರಿನಿಂದ ಕೊಂಡುಕೊಂಡು ಬಂದಿದ್ದ ಗಂಧಕ ಮಣಿಶಿಲೆ ಪಟಾಸ್ ಇವುಗಳನ್ನು ಸೇರಿಸಿ ಪೊಟ್ಟಣಗಳನ್ನು ಕಟ್ಟಿ ಒಂದುಸೇರಿನಲ್ಲಿ ತುಂಬಿ ಉಳಿದ ಪುಡಿಯಿಂದ ಒಂದು ದೊಡ್ಡ ಪೊಟ್ಟಣವನ್ನು ಕಟ್ಟಿ ಅದನ್ನು ಸೇರಿನೊಳಕ್ಕೆ ಹಾಕಲು ಅದರ ಭಾರಕ್ಕೆ ಪೊಟ್ಟಣಗಳೆಲ್ಲ ಹೊತ್ತಿಕೊಂಡು ಸಿಡಿಮದ್ದಿನ ಶಬ್ದವಾಯಿತು. ಇದರ ಜ್ವಾಲೆಯು ಕಟ್ಟುತ್ತಿದ್ದವನಿಗೂ ಸಮೀಪದಲ್ಲಿದ್ದ ಎರಡು ಮಕ್ಕಳಿಗೂ ಮತ್ತು ಬಾಣಂತಿಯಾಗಿ ಮಲಗಿದ್ದ ಅವನ ಹೆಂಡತಿಗೂ ತಗುಲಿ ಎರಡು ಮಕ್ಕಳು ಕೂಡಲೆ ಮೃತವಾದುವೆಂದೂ ಉಳಿದವರೆಲ್ಲರೂ ಪೂರ್ಣಾಪಾಯವನ್ನು ಹೊಂದಿ ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವರೆಂದೂ ತಿಳಿಯಬರುತ್ತದೆ.

ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಚಿಕ್ಕಮಗಳೂರಲ್ಲಿ ಶಂಕುಸ್ಥಾಪನೋತ್ಸವವನ್ನೂ, ಹಾಸನದಲ್ಲೂ ಹೊಳೆ ನರಸೀಪುರದಲ್ಲೂ ಆಸ್ಪತ್ರೆಗಳ ಆರಂಭೋತ್ಸವವನ್ನೂ ನೆರವೇರಿಸಿ ಕಳೆದ ಮಂಗಳವಾರ ರಾತ್ರಿ 8 ಗಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಪರಿವಾರದೊಡನೆ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು. ಮಹಾಸ್ವಾಮಿಗಳ ಸ್ವಾರಿಯು ಬಾಬಾಬುಡನ್‌ಗಿರಿಯ ಮೇಲೆ ದಯೆಮಾಡಿಸಿದ್ದಾಗ್ಗೆ ಎಕ್ಸೈಸ್ ಕಮಿಷನರಾದ ಮಿ|| ತಾಜ ಪೀರ್‌ಖಾನ್‌ರವರು ದತ್ತಾತ್ರೇಯ ಪೀಠಾಧಿಕಾರಿಗಳಾದ ಅವರ ಭಾವನವರ ಸಮೇತ ಹಳದಿಯುಡುಪನ್ನು ಧರಿಸಿಕೊಂಡು ಗುಹೆಯೊಳಗಿರುವ ದತ್ತಾತ್ರೇಯ ಪೀಠ ಅನುಸೂಯಾ ದೇವಿಯ ಸಮಾಧಿ ಮೊದಲಾದುವನ್ನೂ, ಕಾಶಿವರಿಗೆ ಹೋಗಿರುತ್ತದೆಂದು ಹೇಳಲ್ಪಡುವ ಸುರಂಗವನ್ನೂ ಗಂಧದ ಬಾವಿಯನ್ನೂ ವಿದ್ಯುದ್ದೀಪಗಳ ಸಹಾಯದಿಂದ ಮಹಾಸ್ವಾಮಿಯವರಿಗೆ ತೋರಿಸಿದರು. ಮಹಾಸ್ವಾಮಿಯವರುಗಳು ಸಂತುಷ್ಟರಾಗಿ ದತ್ತಾತ್ರೇಯ ಪೀಠಕ್ಕೆ ಕಾಲುಚೀಲಯನ್ನೂ ಶಲ್ಯಗಳನ್ನೂ ಒಪ್ಪಿಸಿದರು. ಭಾನುವಾರರಾತ್ರಿ ಚಿಕ್ಕಮಗಳೂರಿನ ಯೂರೋಪಿಯನ್ ಕ್ಲಬ್ಬಿನವರು ಪ್ರಭುಸಹೋದರರ ಆಗಮನ ಸಂತೋಷಾರ್ಥವಾಗಿ ದಿವ್ಯವಾದ ಔತಣವನ್ನು ಮಾಡಿಸಿದರು. ಈ ಔತಣದಲ್ಲಿ ಶ್ರೀಮನ್ಮಹಾರಾಜರ ವಿನಾ ಇತರರೆಲ್ಲರೂ ಭಾಗಿಗಳಾಗಿದ್ದರು.

ವರ್ತಮಾನಸಂಗ್ರಹ

ಅಹಮದಾಬಾದಿನಲ್ಲಿ ಒಂದು ಕಳವಿನ ಮೊಕದ್ದಮೆಯ ವಿಚಾರಣೆಯು ನಡೆದು ಅಪರಾಧಿಗಳಾದ ನಾಲ್ಕುಮಂದಿ ಪಠಾನರಿಗೆ ಶಿಕ್ಷೆಯನ್ನು ವಿಧಿಸಿದ ನ್ಯಾಯಾಧೀಶನಮೇಲೆ ಆಗ್ರಹಗೊಂಡು ಒಬ್ಬ ಅಪರಾಧಿಯು ತನ್ನ ಕಾಲಿನಲ್ಲಿ ಮೆಟ್ಟಿದ್ದ ಜೋಡನ್ನು ತೆಗೆದು ಎಸೆದನು. ಪೊಲೀಸಿನವರು ಹಿಡಿಯುವುದಕ್ಕೆ ಪ್ರಯತ್ನಿಸಲು ಅವನು ಅವರನ್ನು ಸಹ ಹೊಡೆದು ಗಾಯಪಡಿಸಿದನು. ಇದರಲ್ಲಿ ಉಳಿದ ಅಪರಾಧಿಗಳೂ ಸೇರಿದರು. ಅಷ್ಟರಲ್ಲಿಯೇ ಹೆಚ್ಚಿಗೆ ಪೊಲೀಸ್ ಆಳುಗಳು ಬಂದು ನಾಲ್ಕುಮಂದಿ ಅಪರಾಧಿಗಳನ್ನು ಹಿಡಿದರು. ಈ ಹೊಸತಪ್ಪಿತಕ್ಕಾಗಿ ಬೇರೆ ವಿಚಾರಣೆಯು ನಡೆಯುತ್ತಿರುವುದು. ಈ ಅತ್ಯಾಚಾರಕ್ಕಾಗಿ ಹೆಚ್ಚಿನ ಶಿಕ್ಷೆಯು ವಿಧಿಸಲ್ಪಡುವುದು.

ಚೀಣೆಯಲ್ಲಿ ಕ್ಷಾಮನಿವಾರಣೆಯ ಸೈನಿಕರು ಕಷ್ಟಪಟ್ಟು ಕೆಲಸಮಾಡುತ್ತಿರುವರಾದರೂ ನಿವಾರಣೆಯು ಸಾಧ್ಯವಾಗದೆ ಲಕ್ಷಾಂತರಜನರು ಕ್ಷಾಮಪೀಡನೆಗೆ ಆಹುತಿಯಾಗುತ್ತಿರುವರು. ಸತ್ತವರು ರಾಶಿ ರಾಶಿಯಾಗಿ ಬಿದ್ದಿರುವರು. ಅವರನ್ನು ಹೂಳುವುದಕ್ಕೆ ಪಳ್ಳತೆಗೆಯಲು ಸಹ ಅವಕಾಶವಿರುವುದಿಲ್ಲ. ನಾಯಿಗಳಿಗೂ ತೋಳಗಳಿಗೂ ಹಬ್ಬವಾಗಿರುವುದು. ಸಾವಿರಾರುಮಂದಿ ಹೊಟ್ಟೆಗಿಲ್ಲದೆ ಗುಂಪುಗುಂಪಾಗಿ ದರೋಡೆ ಮಾಡಲಾರಂಭಿಸಿರುತ್ತಾರೆ. ಬೀದಿಗಳಲ್ಲಿಯೂ, ರಸ್ತೆಗಳಲ್ಲಿಯೂ ಜನರು ಬಿದ್ದು ಸಾಯುತ್ತಿರುವರು. ಗ್ರಾಮಾಂತರಗಳಲ್ಲಿ ಧಾನ್ಯದ ಕಣಜಗಳನ್ನು ತೋರಿಸಿರೆಂದು ರೈತರನ್ನು ಚಿತ್ರಹಿಂಸೆ ಪಡಿಸುತ್ತಿರುವರು. ಉತ್ತರಚೀನೆಯೆಲ್ಲವೂ ಭೀಕರವಾಗಿರುವುದು.

ಚಳಿಗಾಲದ ಹಿಮದ ಹಾವಳಿಯು ಯೂರೋಪಿನ ಅನೇಕ ದೇಶಗಳಲ್ಲಿ ಬಹುತರವಾದ ಅನಾಹುತಗಳಿಗೆ ಕಾರಣವಾಗಿರುವುದು ಆಸ್ಟ್ರಿಯಾ ದೇಶದಲ್ಲೆಲ್ಲಾ ಜನವರಿ ತಿಂಗಳೆಲ್ಲ ಹಿಮವು ಒಂದೇಸಮನಾಗಿ ಬಿದ್ದುದರಿಂದ ಜನಸಂಚಾರವೂ ರೈಲ್ವೆ ಮೊದಲಾದ ಗಾಡಿಗಳ ಪ್ರಯಾಣವೂ ನಿಂತುಹೋಗಿ ಬಹಳ ತೊಂದರೆಯಾಗಿರುವುದು. ರಸ್ತೆಯ ಹಿಮವನ್ನು ಗುಡಿಸುವುದಕ್ಕಾಗಿ ರಾಜಧಾನಿಯಾದ ವಿಯನ್ನಾಪಟ್ಟಣ ಒಂದರಲ್ಲೇ ಮ್ಯುನಿಸಿಪಾಲಿಟಿಯವರು ಒಂದುಲಕ್ಷ ಪೌನು ಖರ್ಚುಮಾಡಿರುವರು. ಇದಕ್ಕಾಗಿ ನಿರುದ್ಯೋಗಿಗಳಾಗಿದ್ದ 22,000 ಮಂದಿ ಕೂಲಿಗಳು ಹಗಲು ರಾತ್ರಿ ಕೆಲಸಮಾಡುತ್ತಿರುವರು. ಇಟಲಿಯಲ್ಲಿಯೂ ಯುಗೊಸ್ಲಾವಿಯಾದಲ್ಲಿಯೂ ಇದೇ ಪ್ರಕಾರ ಹಿಮವು ಬಿದ್ದಿರುವುದು.

ಕಳೆದ ಸೋಮವಾರ ಬೆಂಗಳೂರಿಂದ ಮದರಾಸಿಗೆಹೋಗುತ್ತಿದ್ದ ರೈಲ್‌ಗಾಡಿಯಲ್ಲಿ ಮೇಲುಕೋಟೆಯ ರಾಜಮ್ಮನೆಂಬ 25 ವರ್ಷ ವಯಸ್ಸಿನ ಶ್ರೀವೈಷ್ಣವ ಸ್ತ್ರೀಯು ಕೊಲೆಮಾಡಲ್ಪಟ್ಟಳು. ರಾಜಮ್ಮನು ಏಕಾಕಿನಿಯಾಗಿ ಇಂಟರ್ಮೀಡಿಯೆಟ್ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದಳು. ರೈಲ್‌ಗಾಡಿಯು ತಿರುವಲಂಗಾಡು ನಿಲ್ದಾಣವನ್ನು ಸಮೀಪಿಸುತ್ತಿದ್ದಾಗ ಯಾವನೋ ಒಬ್ಬನು ಆಕೆಯಗಾಡಿಗೆ ಹೋಗಿ ನಿದ್ರಿಸುತ್ತಿದ್ದವಳನ್ನು ಕೊಂದನು. ಈತನು ಆರ್ಕೋಣಂ ನಿಲ್ದಾಣದಲ್ಲಿ ಆಕೆಯ ಗಾಡಿಯನ್ನು ಪ್ರವೇಶಿಸಿದನು. ಗಾಡಿಯು ನಿಲ್ದಾಣವನ್ನು ಬಿಟ್ಟು ಹೊರಟಕೂಡಲೆ ಪಕ್ಕದ ಗಾಡಿಯಲ್ಲಿದ್ದವರಿಗೆ ಸ್ತ್ರೀ ರೋದನವು ಕೇಳಿಸಲು ಅನುಮಾನಗ್ರಸ್ತರಾಗಿ ಅವರು ಗಾಡಿಯನ್ನು ನಿಲ್ಲಿಸುವುದಕ್ಕಾಗಿ ಅಪಾಯ ಸೂಚನೆಯ ಸರಪಳಿಯನ್ನು ಎಳೆದರು. ಗಾಡಿಯು ನಿಲ್ಲುವಷ್ಟರಲ್ಲಿ ಕೊಲೆಪಾತಕನು ಶವವನ್ನು ಗಾಡಿಯಿಂದ ಹೊರಗೆ ಹಾಕಿ ತಾನೂ ಅದರೊಡನೆ ಕೆಳಗೆ ಧುಮಿಕಿ ಓಡಿಹೋದನು. ಗಾಡಿಯು ಕೊಂಚದೂರ ಹೋಗಿ ನಿಂತುಬಿಟ್ಟು ಕೂಡಲೆ ಶವ ಬಿದ್ದಿದ್ದೆಡೆಗೆ ಹಿಂದಕ್ಕೆ ಬಂದಿತು. ಘಾತಕನನ್ನು ಹುಡುಕುವಲ್ಲಿ ಸಿಕ್ಕಲಿಲ್ಲ. ಸ್ತ್ರೀಯಳಿದ್ದ ಗಾಡಿಯನ್ನು ಶೋಧಿಸಲಾಗಿ ಕೆಲ ಕಾಗದಪತ್ರಗಳೂ, ರಕ್ತಮಯವಾದ ವಸ್ತ್ರವೂ ಸಿಕ್ಕಿದುವು. ಕಾಗದದಲ್ಲಿ ಬರೆದಿದ್ದ ಪ್ರೇಮಭರಿತವಾದ ಭಾಷೆಯಿಂದ ರಾಜಮ್ಮನಿಗೂ ಕೊಲೆಪಾತಕನಿಗೂ ಇದ್ದ ಸಂಬಂಧವು ಸ್ಥಾಪನೆಯಾಗುತ್ತಿದೆ. ಗುಮಾನಿಯಮೇಲೆ ಕಾಗದದಲ್ಲಿ ಬರೆದಿದ್ದ ರಾಮಚಂದ್ರರಾವೆಂಬವನು ಮದರಾಸಿನಲ್ಲಿ ಸೆರೆಹಿಡಿಯಲ್ಪಟ್ಟಿದ್ದು ಹೊಣೆಯಮೇಲೆ ಬಿಡಲ್ಪಟ್ಟಿರುವನು. ಪಕ್ಕದ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದವನೊಬ್ಬನು ತಾನು ಕಂಡ ವಿಚಾರವನ್ನು ಪತ್ರಿಕೆಗೆ ತಿಳಿಸಿರುವನು. ಆರ್ಕೋಣಂ ನಿಲ್ದಾಣದಿಂದ ರೈಲ್‌ಗಾಡಿಯು ಹೊರಟ ಸಮಯದಲ್ಲಿ ಒಬ್ಬಮನುಷ್ಯನು ರಾಜಮ್ಮನ ಗಾಡಿಗೆ ಹತ್ತಿದನು. ಪಕ್ಕದ ಗಾಡಿಯಲ್ಲಿದ್ದವನೊಬ್ಬನು ಸಿಂಬಳವನ್ನು ಸೀನುವುದಕ್ಕಾಗಿ ಕಿಟಕಿಯಿಂದ ಹೊರಗೆ ಬಗ್ಗಿದಾಗ ರಾಜಮ್ಮನ ಗಾಡಿಯಲ್ಲಿ ದುರಾತ್ಮನು ಮಲಗಿದ್ದ ರಾಜಮ್ಮನನ್ನು ಕೊಲ್ಲಲು ಚೂರಿಯನ್ನೆತ್ತಿದ್ದುದನ್ನು ಕಂಡು ಅಚಾತುರ್ಯನಡೆವುದೆಂದು ತಿಳಿದು ಗಲಭೆಮಾಡಿ ರೈಲ್‌ಗಾಡಿಯನ್ನು ನಿಲ್ಲಿಸಲು ಯತ್ನಿಸಿದನು. ಪೊಲೀಸಿನವರು ನಿಜವಾದ ಅಪರಾಧಿಯನ್ನು ಪತ್ತೆ ಮಾಡುವುದರಲ್ಲಿರುವರು.

ಮೊದಲನೇ ಪುಟದಿಂದ ಮುಂದುವರಿದುದು.

ಹಿಡಿಯಬೇಕಾಗಿದ್ದ ಕ್ರಮಗಳಿಂದ ಬಹುಮಟ್ಟಿಗೆ ನಿಧಾನವಾಯಿತೆಂದು ಹೇಳಲಾಗುವುದಿಲ್ಲವು.

ಖಾನ್ ಬಹದ್ದೂರ್ ಮಿ|| ಅಬ್ಬಾಸ್‌ಖಾನರ ಜಾಗೆಯಲ್ಲಿ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುತ್ತಿದ್ದ ಆಫೀಸರೊಬ್ಬರನ್ನು ಅಡಿಷನಲ್ ಡಿ|| ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಬಾರದಿತ್ತೆಂದೂ, ಈ ರೀತಿ ನಿಯಮಿಸಿದುದು ಅಷ್ಟು ಸುಖದಾಯಕವೂ, ಆಗ ಪ್ರಜೆಗಳ ಮನಸ್ಸಿನ ಉತ್ಕಟ ಸ್ಥಿತಿಯನ್ನು ಶಾಂತಮಾಡತಕ್ಕದೂ ಆಗಿರಲಿಲ್ಲವೆಂದೂ ಕಮಿಟಿಯು ಅಭಿಪ್ರಾಯಪಡುತ್ತದೆ. ಮೇಲ್ಕಂಡ ಆಫೀಸರು ಮುನಿಸಿಪಲ್ ಕಮಿಷನರಾಗಿದ್ದ ಎರಡು ತಿಂಗಳವರೆಗೆ ಮಾತ್ರ ಖಾನ್ ಬಹದ್ದೂರ್ ಮಿ|| ಅಬ್ಬಾಸ್‌ಖಾನರು ಪ್ರೆಸಿಡೆಂಟರಾಗಿದ್ದರು. ಮುನಿಸಿಪಲ್ ಕಮಿಷನರು ಪ್ರೆಸಿಡೆಂಟರ ಅಧೀನರಲ್ಲ. ಪೂರ್ಣ ಸ್ವತಂತ್ರರು. ಇವರನ್ನು ಚುನಾಯಿಸುವ ವಿಷಯದಲ್ಲಿ ಸರ್ಕಾರದವರು ಇವರ ಸೀನಿಯಾರಿಟಿ, ಇವರು ಪೋಲೀಸು ಆಫೀಸರಾಗಿಯೂ, ಮ್ಯಾಜಿಸ್ಟ್ರೇಟರಾಗಿಯೂ ಇದ್ದು ಪಡೆದ ಅನುಭವ ಇವುಗಳನ್ನು ಗಮನದಲ್ಲಿಟ್ಟರು. ಮ್ಯಾಜಿಸ್ಟ್ರೇಟರ ನಿಷ್ಪಕ್ಷಪಾತತೆ ಮತ್ತು ಸ್ವತಂತ್ರತೆಗಳ ವಿಷಯದಲ್ಲಿ ನಂಬಿಕೆಯನ್ನು ಹುಟ್ಟಿಸುವುದಕ್ಕೋಸ್ಕರವೇ ಇವರನ್ನು ಚುನಾಯಿಸಲಾಯಿತು. ಮತ್ತು ಈ ಮ್ಯಾಜಿಸ್ಟ್ರೇಟರನ್ನು ನಿಯಮಿಸಲಾಯಿತೆಂಬ ಆರ್ಡರ್ ಹೊರಬಿದ್ದಾಗ ಜನರು ಆ ವಿಷಯದಲ್ಲಿ ಸಂತುಷ್ಟರಾದರೆಂದೇ ಸರ್ಕಾರದವರು ನಂಬುತ್ತಾರೆ.

ವಿಷಯಗಳು ಪ್ರಜೆಗಳ ತಿಳುವಳಿಕೆಗೆ ಬರತಕ್ಕ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಗಳ ವಿಷಯದಲ್ಲಿ ಕಮಿಟಿಯವರು—"ಪ್ರಜೆಗಳಲ್ಲಿ ಅದರಲ್ಲಿಯೂ ಕೇವಲ ಕನ್ನಡ ಪತ್ರಿಕೆಗಳನ್ನು ನೋಡಿ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದ್ದ ಪರಸ್ಥಳದವರಲ್ಲಿ ಉಂಟಾಗಿದ್ದ ಗಾಬರಿಯನ್ನು ಕಡಮೆ ಮಾಡಲು ಸಹಾಯಮಾಡಿದುವು" ಎಂದು ಹೇಳುವರಾದರೂ ಎರಡು ವಿಷಯಗಳಲ್ಲಿ ಮಾತ್ರ ಆಕ್ಷೇಪಿಸುವರು. ಒಂದನೆಯದು—ವಿದ್ಯಾಭ್ಯಾಸಾಧಿಕಾರಿಗಳು ಜುಲೈ ತಾ|| ೧೯ರಲ್ಲಿ ಅಕಸ್ಮಾತ್ ಸುಲ್ತಾನ್‌ಪೇಟೆ ಎ. ವಿ. ಸ್ಕೂಲಿಗೆ ಹೋದರು, ಅಲ್ಲಿ ಒಂದು ಗೂಡನ್ನು ಕಟ್ಟುತ್ತಿರುವುದು ಅವರ ಗಮನಕ್ಕೆ ಬಂದಿತು ಎಂಬುದೇ ಅವರು ಆಕ್ಷೇಪಿಸುವ ಒಂದನೇ ಅಂಶವು. ಜುಲೈ ತಾ|| 30 ರಲ್ಲಿ ಗುಂಡುಹಾರಿಸಲ್ಪಡಲಿಲ್ಲವೆಂದು ಪ್ರಸಿದ್ಧ ಪತ್ರಿಕೆಯಲ್ಲಿ ತಿಳಿಸಿತ್ತೆಂಬುದು ಎರಡನೆಯ ಅಂಶವು. ಮೊದಲನೆಯ ಅಂಶವು ಅಷ್ಟು ಮುಖ್ಯವಾದುದಾಗಿಲ್ಲ; ಎರಡನೆಯ ವಿಷಯದಲ್ಲಿ ಹೇಳಬೇಕಾದುದೇನಂದರೆ—ಆ ಸಂದರ್ಭದಲ್ಲಿ ಪೋಲೀಸಿನವರೂ ಮಿಲಿಟರಿಯವರೂ ಸೇರಿಕೊಂಡು ಬೇಕಾದಷ್ಟು ಕೊಲೆಯಾಗಿ ಹೋಯಿತೆಂದು ವರ್ತಮಾನ ಹುಟ್ಟಿಹೋಗಿದ್ದಿತು. ಈ ಗಾಬರಿಯನ್ನು ಶಾಂತಮಾಡುವುದಕ್ಕಾಗಿಯೇ ಪ್ರಸಿದ್ಧ ಪತ್ರಿಕೆಗಳು ಪ್ರಕಟಿಸಲ್ಪಟ್ಟಿದ್ದು. ಆದ್ದರಿಂದ ಬಹಳ ಅವಸರವಾಗಿ ಆಯಾ ಸಂದರ್ಭದಲ್ಲಿ ದೊರೆತಷ್ಟು ನಿಖರವಾದ ವರ್ತಮಾನಗಳನ್ನು ಬರೆದು ಆ ಪ್ರಕಟನೆಗಳನ್ನು ಪ್ರಸಿದ್ಧಿಸಬೇಕಾಯಿತು ಕಮಿಟಿಯವರು ಹೇಳಿರುವಂತೆ ಬಯಸಿದ ಪ್ರಕಾರ ಆ ಪ್ರಕಟನೆಗಳಿಂದ ಶಾಂತಿಯುಂಟಾಯಿತು. ಗುಂಡು ಹಾರಿದ ವಿಷಯದಬಗ್ಗೆ ಆಗಿನ ಪ್ರಸಿದ್ಧ ಪತ್ರಿಕೆಯನ್ನು ಸರಿಪಡಿಸಿಕೊಳ್ಳಲು, ಗುಂಡಿನೇಟಿನಿಂದಾದ ಗಾಯಪಡೆದಂತಹ ಒಂದು ಕೇಸು ದೊರೆತಿದೆಯೆಂದು ಸರ್ಕಾರದ ಗಮನಕ್ಕೆ ಬಂದಕೂಡಲೆ ಪ್ರಯತ್ನ ಮಾಡಲಾಗಿದೆ.

ಸಮಿತಿಯವರ ಸಲಹೆಗಳು.

ಈ ಮುಂದೆ ಕಮಿಟಿಯವರು ಸಂಸ್ಥಾನದಲ್ಲಿ ಹಿಂದಿನಂತೆ ಶಾಂತಿಸಮಾಧಾನಗಳು ನೆಲೆಗೊಳ್ಳಬೇಕಾದರೆ ಯಾವ ಯಾವ ಮಾರ್ಗಗಳನ್ನು ಅವಲಂಬಿಸಬೇಕೆಂದು ತಿಳಿಸಿರುತ್ತಾರೆ. ಇವರ ಸಲಹೆಯ ಪ್ರತಿಯೊಂದೊಂದರ ವಿಷಯದಲ್ಲಿಯೂ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

(a) ಗಲಭೆಯಲ್ಲಿ ಕಾಯಿದೆಯನ್ನು ಮೀರಿ ನಡೆದವರೆಲ್ಲರನ್ನೂ ಪತ್ತೆ ಮಾಡಿ ಶಿಕ್ಷೆಗೆ ಗುರಿಪಡಿಸಬೇಕೆಂಬ ವಿಚಾರ—ಅಡಿಷನಲ್ ಡಿ|| ಮೆಜಿಸ್ಟ್ರೇಟರು ನಾಲ್ಕು ತಿಂಗಳ ಮೇಲ್ಪಟ್ಟು ಕೇವಲ ಏಕೀವಾರಿಯಾಗಿ ತನಿಖೆ ನಡೆಯಿಸಿದ್ದಾರೆ, ಮತ್ತು 461 ಮಂದಿ ಸಾಕ್ಷಿಗಳ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ. ಇದರ ಫಲಿತಾಂಶವಾಗಿ ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ 24 ಮಂದಿ ಹಿಂದೂಗಳು ಮತ್ತು 14 ಮಂದಿ ಮಹಮ್ಮದೀಯರ ಮೇಲೆ ಕ್ರಮ ಜರುಗಿಸಲಾಯಿತು. ದೊಂಬಿಯ ಕಾಲದಲ್ಲಿ ಹೊಡೆದಾಟವಲ್ಲದೆ, ಗಲಭೆಯಾಗುವುದಕ್ಕೆ ಹಿಂದೆಯೂ ಮುಂದೆಯೂ ನಡೆದ ಎಲ್ಲಾ ವಿಧವಾದ ಅಪರಾಧಗಳನ್ನೂ ಒಳಗೊಂಡ ಕೇಸುಗಳು ಈ ತನಿಖೆಯಿಂದ ಹೊರಬಿದ್ದಿರುತ್ತವೆ. ಆಫೀಸರ ಸ್ಟೇಟಸ್ ಮತ್ತು ವಿಚಾರಣೆಯ ಸಂಪೂರ್ಣಾನುಭವಗಳನ್ನು ಕುರಿತು ಆಲೋಚಿಸಿದರೆ ನಂಬಲರ್ಹವಾದ ರುಜುವಾತುಗಳಿರುವ ಪ್ರತಿಯೊಂದು ಕೇಸನ್ನೂ ವಿಚಾರಣೆಗೆ ಇಟ್ಟುಕೊಂಡಿದೆ. ಹೀಗಿರುವಲ್ಲಿ ಈ ವಿಷಯವನ್ನು ಪುನಃ ಎತ್ತಿಟ್ಟುಕೊಳ್ಳುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಸರ್ಕಾರಕ್ಕೆ ತೋರಿಬರುತ್ತದೆ. ಇದಲ್ಲದೆ ಪರಸ್ಪರಾನುರಾಗವನ್ನು ಸಂಸ್ಥಾಪಿಸುವ ಅಭಿಪ್ರಾಯದಿಂದ ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಲಾಯಿತು. ಹಾಗೆ ವಾಪಸು ತೆಗೆದುಕೊಂಡದು ಅಪೇಕ್ಷಿತ ಫಲವನ್ನು ಕೊಟ್ಟಿತೆಂದು ಸರ್ಕಾರದವರು ನಂಬುತ್ತಾರೆ.

(b) ಮಿ|| ಅಬ್ಬಾಸ್‌ಖಾನರ ಮನೆಯೊಳಕ್ಕೆ ಹುಡುಗರು ಸೆಳೆಯಲ್ಪಟ್ಟು ಅವರಲ್ಲಿ ನಾಲ್ಕು ಮಂದಿ ಹುಡುಗರು ಕೊಲ್ಲಲ್ಪಟ್ಟರೆಂಬ ವಿಚಾರದಲ್ಲಿ ಇನ್ನೂ ತನಿಖೆ ನಡಿಸಬೇಕೆಂಬ ಸಲಹೆಯ ವಿಷಯ—ಈ ವಿಚಾರದಲ್ಲಿ ಪೋಲೀಸಿನವರಿಂದಲೂ ಮೆಜಿಸ್ಟ್ರೇಟರಿಂದಲೂ ಪೂರ್ಣ ತನಿಖೆಗಳು ನಡೆದಿರುತ್ತವೆ. ಈ ತನಿಖೆಗಳಿಂದ ಏನೂ ಹೊರಬೀಳಲಿಲ್ಲ. ಕಮಿಟಿಯಿಂದ ನಡೆದ ವಿಚಾರಣೆಯಿಂದಲೂ ಈ ಭಾಗದಲ್ಲಿ ನಂಬಲರ್ಹವಾದ ರುಜುವಾತು ದೊರೆಯಲಿಲ್ಲ. ಈ ಸಂದರ್ಭದಲ್ಲಿ ನಂಬಲರ್ಹವಾದ ಸಂಗತಿಗಳು ಗೊತ್ತಾಗುವುದಾದರೆ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಸಂತೋಷದಿಂದ ಸ್ವೀಕರಿಸುವರು. ಆದರೆ ಕಮಿಟಿಯವರೇ 68 ನೇ ಪೇಜಿನಲ್ಲಿ ಹೇಳುವಂತೆ ನಗೆಗೀಡಾಗಿರುವ ವಿಷಯಗಳ ಮೇಲೆ ಮತ್ತೆ ತನಿಖೆ ಕ್ರಮವನ್ನು ನಡೆಸುವುದು ಲಾಭದಾಯಕವಲ್ಲವಾಗಿದೆ.

(c) ಬೆಂಗಳೂರು ಗಲಭೆಗೆ ಸಂಬಂಧಪಟ್ಟ ಎಲ್ಲ ಮೊಕದ್ದಮೆಗಳನ್ನೂ ವಿಚಾರಣೆ ಮಾಡಿ ಫೈಸಲ್ ಮಾಡುವುದಕ್ಕಾಗಿ ಜುಡಿಷಿಯಲ್ ಶಾಖೆಯ ದೊಡ್ಡ ಅಧಿಕಾರಿಗಳ ಅಧಿಪತ್ಯದಲ್ಲಿ ಸ್ಪೆಷಲ್ ಕೋರ್ಟುಗಳನ್ನು ಸ್ಥಾಪಿಸಬೇಕೆಂಬ ಸಲಹೆಯ ವಿಷಯ—ಈಗಿನ ಸಂದರ್ಭದಲ್ಲಿ ಮತ್ತು ಪ್ರಕೃತ ಸ್ಥಿತಿಯಲ್ಲಿ ಈಗ ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿರುವ ಕೇವಲ ಕೆಲವು ಮೊಕದ್ದಮೆಗಳನ್ನು ತೀರ್ಮಾನಿಸಲು ಸ್ಪೆಷಲ್ ಕೋರ್ಟು ಬೇಕಾಗಿದೆಯೆಂದು ತೋರುವುದಿಲ್ಲ.

(d) ಪೋಲೀಸು ಖಾತೆಯನ್ನು ಉತ್ತಮಗೊಳಿಸಿ, ಪತ್ತೇದಾರಿ ಇಲಾಖೆಯನ್ನು ಬಲಪಡಿಸಬೇಕೆಂಬ ಸಲಹೆಯ ವಿಷಯ—ಈ ವಿಚಾರವು ಈಗ ಕೆಲ ಕಾಲದ ಹಿಂದೆಯೇ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹಣವೊದಗಿದಂತೆ ಈ ಕೆಲಸವು ಪ್ರಾರಂಭಿಸಲ್ಪಡುವುದು.

(e) ಇಂತಹ ಸಂದರ್ಭಗಳಲ್ಲಿ ದೊರೆಯವಷ್ಟು ಮಂದಿ ಮೆಜಿಸ್ಟ್ರೇಟರುಗಳನ್ನೂ ಒಟ್ಟುಗೂಡಿಸಿ, ಆ ಕಾಲದಲ್ಲಿ ಕೇವಲ ಕಾಯುಬಲವನ್ನು ಉಪಯೋಗಿಸದೆಯೇ ಶಾಂತಸ್ಥಿತಿಯಲ್ಲಿ ಕಾರ್ಯಗಳನ್ನು ನಡೆಸುವ ಬಗ್ಗೆ ಮಿಲಿಟರಿಯವರಿಗೂ, ಪೋಲೀಸಿನವರಿಗೂ ಮಾರ್ಗದರ್ಶಕರಾಗಿರುವುದಕ್ಕಾಗಿ ಆ ಮೆಜಿಸ್ಟ್ರೇಟರುಗಳು ಗಲಭೆಯ ಸ್ಥಳಗಳಲ್ಲಿ ನಿಯಮಿಸಬೇಕು. ಮಿಲಿಟರಿ ಅಧಿಕಾರಿಗಳು ಇಂತಹ ಸಂದರ್ಭಗಳ ಸಂಬಂಧವಾದ ಕ್ರಿ. ಪ್ರೊ. ಕೋಡಿನ ರೂಲುಗಳನ್ನು ತಿಳಿದವರಾಗಿರಬೇಕೆಂಬ ಸಲಹೆಯ ವಿಷಯ—ಈ ವಿಷಯಗಳನ್ನೆಲ್ಲ ಸರ್ಕಾರದವರು ಒಪ್ಪುತ್ತಾರೆ.

(f) ಈಗಿನಕಾಲದ ಪರಿಸ್ಥಿತಿಗೆ ಸರಿಯಾಗಿ ಮಿಲಿಟರಿ ಇಲಾಖೆಯು ಇದೆಯೇ ಎಂಬಬಗ್ಗೆ ತನಿಖೆಮಾಡಬೇಕು; ಮತ್ತು ಕೋಮುವಾರು ಗಲಭೆಗಳು ಬಂದಾಗ ಮಿಲಿಟರಿಯನ್ನು ನಿಯಮಿಸಲು ವಿಶೇಷತರದ ಎಚ್ಚರಿಕೆಯನ್ನು ಉಪಯೋಗಿಸಬೇಕೆಂಬ ಸಲಹೆ ವಿಷಯ:—ಮಿಲಿಟರಿ ಇಲಾಖೆಯ ಪುನರ್ವ್ಯವಸ್ಥೆಯನ್ನು ಕೋಮುವಾರು ಆಲೋಚನೆಗಳಮೇಲೆ ನಿರ್ಧರಿಸುವುದು ನ್ಯಾಯವೂ ಅಲ್ಲ ಮತ್ತು ಸಾಧ್ಯವೂ ಅಲ. ಮಿಲಿಟರಿ ಸೋಲ್ಜರಿಗೆ ಜಾತಿಮತಗಳಾಗಲೀ, ರಾಜಕೀಯ ಚಳವಳಿಯಾಗಲಿ ಒಂದೂ ಅವನಿಗೆ ತಿಳಿಯದೆಂಬುದೂ, ಅವನ ಕರ್ತವ್ಯವು ಅಧಿಕಾರಿಗೆ ವಿಧೇಯನಾಗಿ ನಡೆಯತಕ್ಕದು ಮಾತ್ರವೇ ಎಂಬುದೂ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಪ್ರಜಾಭಾಗದ ಯಾವುದಾದರೊಂದು ಜನಾಂಗಕ್ಕೆ ಪ್ರತ್ಯೇಕವಾದ ಅಭಿಮಾನವನ್ನಾಗಲೀ ವೈಷಮ್ಯವನ್ನಾಗಲೀ ತೋರ್ಪಡಿಸುವಂತೆ ಮಾಡುವ ಯಾವುದಾದರೊಂದು ಮಾರ್ಗವೇ ಆಗಲಿ, ಸೂಚನೆಯೇ ಆಗಲೀ ಆ ದಳದ ನೀತಿಯನ್ನೇ ಕೆಡಿಸಿಬಿಡುತ್ತದೆ. ಪೋಲೀಸ್ ಮತ್ತು ಮಿಲಿಟರಿಯ ಒಟ್ಟುಗೂಡಿದ ದಳದ ವಿಷಯವನ್ನು ಕೋಮುವಾರು ಗಲಭೆಗಳಲ್ಲಿ ನಂಬಲಾಗುವುದಿಲ್ಲವಾದುದರಿಂದ ಈ ಒಟ್ಟು ದಳವನ್ನು ಬಿಟ್ಟುಬಿಡಬೇಕು ಎಂದುಹೇಳುವ ಕಮಿಟಿಯ ಅಭಿಪ್ರಾಯವು ಏನೆಂಬುದೇ ಸರ್ಕಾರಕ್ಕೆ ತಿಳಿಯದಾಗಿದೆ. ಪೋಲೀಸ್ ಮತ್ತು ಮಿಲಿಟರಿಯಲ್ಲಿ ಮಿಶ್ರದಳವು ಕಮಿಟಿಯವರು ಹೇಳುವಂತೆ ನಂಬಲನರ್ಹವಾಗಿದೆ. ಅದಕ್ಕೆ ವ್ಯತಿರಿಕ್ತ ಫಲವನ್ನೇ ಕೊಡುತ್ತಲಿದೆಯೆಂದು ಈವರೆಗಿನ ಅನುಭವವಿರುತ್ತದೆ.

(g) ಸರ್ಕಾರಿ ಹುದ್ದೆಗಳಿಗೆ ಯೋಗ್ಯತೆಯೂ ಅರ್ಹತೆಯೂ ಕಾರಣಗಳಾಗಿರಬೇಕೇ ವಿನಾ ಯಾವನಾದರೊಬ್ಬನು ಯಾವುದೋ ಒಂದು ಮತಕ್ಕೆ ಅಥವಾ ಕೋಮಿಗೆ ಸೇರಿದ ಮಾತ್ರಕ್ಕೆ ಹುದೆಯನ್ನು ಕೊಡಲಾಗದು. ಮಿಲ್ಲರ್ ಕಮಿಟಿಯ ರಿಪೋರ್ಟಿನ ಮೇಲಿನ ಸರ್ಕಾರಿ ಅಪ್ಪಣೆಯಿಂದ ಅಸಮಾಧಾನ ಮತ್ತು ಅಸೂಯೆ ಹುಟ್ಟಿರುತ್ತದೆ. ಈ ಬಗ್ಗೆ ಒಂದು ರೌಂಡ್ ಟೇಬಲ್ ಕಾನ್‌ಫರೆನ್ಸ್ ಅಥವಾ ಬ್ರಾಹ್ಮಣ—ಬ್ರಾಹ್ಮಣೇತರ ಮುಖಂಡರ ಸಭೆಯಲ್ಲಿ ವಿಷಯವನ್ನು ಚೆನ್ನಾಗಿ ಚರ್ಚಿಸಿ ಬೇರೆ ದೇಶಗಳಲ್ಲಿರುವ ಪದ್ಧತಿಗೆ ಅನುಸಾರವಾಗಿಯೂ, ನ್ಯಾಯಸಮ್ಮತಿಯಾಗಿಯೂ ಇರುವಂತೆ ತೀರ್ಮಾನವನ್ನೂ ಮಾಡಬೇಕು ಎಂಬ ಸಲಹೆಯ ವಿಷಯ. ಈ ಭಾಗವು ಬಹು ಕಷ್ಟವಾದ ವಿಷಯವನ್ನು ತಂದೊಡ್ಡುತ್ತದೆ. ಎಲ್ಲ ಕೋಮುಗಳಿಗೂ ಸರ್ಕಾರಿ ಅಧಿಕಾರಗಳಲ್ಲಿ ತಕ್ಕಷ್ಟು ಪ್ರಾತಿನಿಧ್ಯವನ್ನು ಕೊಡಬೇಕೆಂಬುದೇ ಈ ವಿಷಯದಲ್ಲಿ ಸರ್ಕಾರದ ಧ್ಯೇಯ. ಈ ಬಗ್ಗೆ ಆಯಾ ಹುದ್ದೆಗಳಿಗೆ ಕಡಿಮೆಯಾಗದಂತೆ ಯೋಗ್ಯತೆ ಮತ್ತು ಅರ್ಹತೆಗಳನ್ನು ಜಾಗರೂಕತೆಯಿಂದ ನಿರ್ಣಯ ಮಾಡಿದೆ. ಈಗಿರುವ ಏರ್ಪಾಡನ್ನು ಉತ್ತಮಗೊಳಿಸುವ ಬಗ್ಗೆ ಕೋಮುವಾರು ಮುಖಂಡರ ಸೂಚನೆಗಳನ್ನು ಸರ್ಕಾರದವರು ಆದರದಿಂದ ಸ್ವೀಕರಿಸುವರು.

(h) ಖಾಸಗಿ ದೊಡ್ಡ ಮನುಷ್ಯರು ಮತ್ತು ಪತ್ರಿಕಾಸಂಪಾದಕರು ಇವರುಗಳಿಂದೊಡಗೂಡಿ ಸರ್ಕಾರದ ಸೆಕ್ರೆಟರಿಯನ್ನುಳ್ಳ ಒಂದು ಸಭೆ (ಬೋರ್ಡು) ಸ್ಥಾಪಿತವಾಗಬೇಕು. ವರ್ತಮಾನ ಪತ್ರಿಕೆಗಳಲ್ಲಿ ಬರವಣಿಗೆಗಳನ್ನು ಈ ಸಭೆಯು ಗಮನಿಸುತ್ತ ಹತೋಟಿಯಲ್ಲಿಟ್ಟುಕೊಳ್ಳಬೇಕು. ಈ ಲೇಖನಗಳನ್ನು ವಿಮರ್ಶೆಮಾಡಿ ಒಂದು ಮಾಸಿಕ ವಿಮರ್ಶೆಯನ್ನು ಹೊರಡಿಸಬೇಕು. ಮತ್ತು ಕಾಯಿದೆ ಪ್ರಕಾರ ಮೊಕದ್ದಮೆ ಮಾಡಬಹುದಾದ ಲೇಖನಗಳನ್ನು ಸರ್ಕಾರದ ಗಮನಕ್ಕೆ ತರಬಹುದು. ತಿಪ್ಪಸವು ಸಹಾಯವನ್ನು ಕೊಟ್ಟು ಒಂದೆರಡು ದಿನಪತ್ರಿಕೆಗಳನ್ನು ಹೊರಟಕೃಷ್ಣಯ್ಯ ಒಂದು ಅಗತ್ಯವೇಸರಿ ಎಂಬ ಸಲಹೆಯ ವಿಷಯ—[illegible] ವೃತ್ತಪತ್ರಿಕೆಗಳ ಹತೋಟಿಗಾಗಿ ಒಂದು ಬೋರ್ಡನ್ನು ಸ್ಥಾಪಿಸುವುದರಿಂದ ಪತ್ರಿಕೆಗಳಿಗೆ ತೊಂದರೆ ಮಾಡಿದಂತಾಗುತ್ತದೆ, ಮತ್ತು ಖಚಿತವಾಗಿ ಕೆಲಸ ನಡೆಸುವ ಸಂಸ್ಥೆಯನ್ನೇ ಏರ್ಪಡಿಸುವುದು ಸುಲಭಸಾಧ್ಯವೇನೂ ಅಲ್ಲ.

ಆದರೂ ಈ ವಿಷಯದಲ್ಲಿ ಇನ್ನುಮೇಲೆ ಪತ್ರಿಕೆಗಳಿಂದಲೂ ಪ್ರಜೆಗಳಿಂದಲೂ ಬರುವ ಸೂಚನೆಗಳನ್ನು ಸರ್ಕಾರದವರು ಆಲೋಚಿಸುವವರಾಗಿರುವರು. ಒಂದೆರಡು ದಿನ ಪತ್ರಿಕೆಗಳನ್ನು ಹೊರಡಿಸಬೇಕೆಂದರೆ, ಈಗಿನ ವರ್ತಮಾನ ಪತ್ರಗಳ ಸ್ವಂತ ವ್ಯವಸ್ಥೆಯಮೇಲೂ, ಅನುಕೂಲತೆಯಮೇಲೂ ನಿರ್ಧರವಾಗುತ್ತವೆಯೇ ವಿನಾ, ಸರ್ಕಾರದ ಸಹಾಯವನ್ನೇ ಕಾದಿರುವುದಿಲ್ಲ. ಈ ವಿಚಾರಗಳನ್ನೆಲ್ಲ ಖಾಸಗಿ ಜನರಿಗೇ ಬಿಡಬೇಕು ಮತ್ತು ಹಾಗೆ ಪತ್ರಿಕೆಗಳಿಗೆ ಸಹಾಯಮಾಡುವುದರಿಂದ ಅವುಗಳೊಡನೆ ಸಂಬಂಧವನ್ನು ಬೆಳೆಸಿರುವ ಭಾಗದಲ್ಲಿ ಸರ್ಕಾರವು ಹೇಗೆ ಆಕ್ಷೇಪಣೆಗೊಳಗಾಗುವುದಿಲ್ಲವೋ ತಿಳಿಯದಾಗಿದೆ.

ಗಲಭೆಗೆ ಪರೋಕ್ಷ ಕಾರಣಗಳ ವಿಚಾರವಾಗಿ ಪ್ರಸ್ತಾಪಿಸುತ್ತ ಸಮಿತಿಯವರು ಮುಖ್ಯವಾಗಿ ನಾಲ್ಕು ಕಾರಣಗಳನ್ನು ಸೂಚಿಸಿದ್ದಾರೆ.

1. ಗಲಭೆ ನಡೆದ ಕಾಲದಲ್ಲಿ ನಡೆಯುತ್ತಿದ್ದ ಬರಡೋಲಿ ಸತ್ಯಾಗ್ರಹ.
2. ಹಿಂದು-ಮುಸಲ್ಮಾನರ ವೈಷಮ್ಯಗಳು.
3. ಮದರಾಸಿನಲ್ಲಿ ಪ್ರಾರಂಭವಾದ ಬ್ರಾಹ್ಮಣ-ಬ್ರಾಹ್ಮಣೇತರ ಪ್ರಶ್ನೆ.
4. ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ.

ಹಿಂದು—ಮುಸಲ್ಮಾನರ ವೈರ.

ಈ ವಿಷಯವಾಗಿ ಸರ್ಕಾರದವರು ಹೇಳಬೇಕಾಗಿರುವುದು ಒಂದೇ ವಿಚಾರ. ಸಮಿತಿಯವರೇ ಒಪ್ಪಿಕೊಳ್ಳುವಂತೆ ಸಂಸ್ಥಾನದಲ್ಲಿ ಎಲ್ಲಿಯೂ ಹಿಂದು-ಮುಸಲ್ಮಾನರ ವೈಷಮ್ಯವಿದೆಯೆಂದು ಸರ್ಕಾರದವರು ಭಾವಿಸಲು ಯಾವ ರುಜುವಾತೂ ಬಂದಿಲ್ಲ. ಜಾತಿ ದ್ವೇಷವನ್ನು ಕಡಿಮೆಮಾಡುವುದು, ನಿರುದ್ಯೋಗವನ್ನು ತಪ್ಪಿಸುವುದು, ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸುವುದು ಈ ವಿಚಾರವಾಗಿ ಸಮಿತಿಯವರು ಸೂಚಿಸಿರುವ ಸಲಹೆಗಳನ್ನು ಸರ್ಕಾರದವರು ವಿಶೇಷಾಸಕ್ತಿಯಿಂದ ಅವಲೋಕಿಸಿದ್ದಾರೆ.

ಜನರ ನಡವಳಿಕೆ.

ಟರ್ಕಿ ಮತ್ತು ಆಫ್ಘಾನಿಸ್ಥಾನದಲ್ಲಿ ಆಚರಣೆಗೆ ತಂದಿರುವಂತೆ ಸುಧಾರಣೆಗಳನ್ನು ನಡೆಸಿ ಜನರ ಆಚಾರ ವ್ಯವಹಾರಗಳನ್ನು ಸಮಧಾತುವಿಗೆ ತರಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಎಷ್ಟು ಮಾಡಬಹುದೋ ಅಷ್ಟನ್ನು ಮಾಡಿಯೂ ಮಾಡುತ್ತಲೂ ಇದ್ದಾರೆ. ಉಳಿದುದು ಕಾಲಕ್ರಮದಲ್ಲಿ ಜನರ ಸ್ವೇಚ್ಛಾಪೂರ್ವಕವಾಗಿ ನಡೆಯಬೇಕಾಗಿದೆ.

ಆಚಾರ ವ್ಯವಹಾರಗಳು ಸಮಧಾತುವಿಗೆ ಬರಬೇಕಾದರೆ, ವಿದ್ಯಾಭ್ಯಾಸ, ಪ್ರಚಾರಕಾರ್ಯ ಮುಂತಾದುವುಗಳಿಂದ ನಡೆಯಬೇಕಾಗಿರುವುದರಿಂದ ಪಾಠಶಾಲೆಗಳಲ್ಲಿ ಸಾಮಾಜಿಕ ಭಾವನೆಯನ್ನುಂಟುಮಾಡುವ ಪಾಠಗಳನ್ನು ಕಲಿಸುವುದು, ಮತ್ತು ವಯಸ್ಸಾದವರ ಪ್ರಯೋಜನಾರ್ಥವಾಗಿ ಉಪನ್ಯಾಸಗಳು, ಪ್ರಚಾರಕಾರ್ಯ ಮುಂತಾದವುಗಳನ್ನು ಕೈಗೊಳ್ಳುವುದು ಇವುಗಳನ್ನು ಮಾಡಬೇಕೆಂದು ಸಮಿತಿಯವರು ಸೂಚಿಸಿರುವ ಸಲಹೆಗೆ ಸರ್ಕಾರದವರು ತಕ್ಕ ಗಮನ ಕೊಡುವರು.

ಸಮುದಾಯ ಭಾವನೆ.

ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಜನರ ಸಮುದಾಯ ಭಾವವನ್ನು ಹೆಚ್ಚಿಸಿಕೊಂಡು, ಬೇರೆಬೇರೆ ಪಂಗಡಗಳವರು ಒಟ್ಟಿಗೆ ಕಲೆತು, ಸರ್ವರ ಹಿತಸಾಧನೆಯ ಕೆಲಸಗಳನ್ನು ಕೈಗೊಂಡು ನಡೆಸುವುದಕ್ಕೆ ಸ್ಥಳೀಯ ಸಂಸ್ಥೆಗಳನ್ನು ಏರ್ಪಡಿಸಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಗ್ರಾಮಪಂಚಾಯಿತಿಗಳನ್ನು ಏರ್ಪಡಿಸಿರುವುದು ಇದೇ ಉದ್ದೇಶದಿಂದಲೇ. ಇವುಗಳ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದವರು ಕೆಲವು ವರ್ಷಗಳಿಂದೀಚೆಗೆ ಹೆಚ್ಚು ಗಮನಕೊಡುತ್ತಿದ್ದಾರೆ.

ನಿರುದ್ಯೋಗ.

ಜನರಲ್ಲಿ ನಿರುದ್ಯೋಗವನ್ನು ಕಡಿಮೆಮಾಡಿ, ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಸಮಿತಿಯವರು ಕೆಲವು ಸಲಹೆಗಳನ್ನು ಸೂಚಿಸಿರುವರು. ಇವುಗಳಪೈಕಿ ಮೈಸೂರು ಯೂನಿವರ್ಸಿಟಿಗೆ ಸಂಬಂಧಪಟ್ಟಂತೆ ವ್ಯವಸಾಯದ ಪರೀಕ್ಷೆ ನಡೆಸುವುದು ಮತ್ತು ವ್ಯಾಪಾರದ ಪರೀಕ್ಷೆಯನ್ನು ಪುನಃ ಪ್ರಾರಂಭಿಸುವುದು. ಈ ಎರಡು ವಿಷಯಗಳನ್ನೂ ಯೂನಿವರ್ಸಿಟಿಯವರ ಪರ್ಯಾಲೋಚನೆಗೆ ಕಳುಹಿಸಲಾಗುವುದು. ಸಿಲ್ವರ್‌ಜೂಬಿಲಿ ಟೆಕ್ನಿಕಲ್ ಕಾಲೇಜನ್ನು ಸ್ಥಾಪಿಸುವ ವಿಚಾರದಲ್ಲಿ ಸರ್ಕಾರದವರು ಇಷ್ಟರಲ್ಲೇ ಹುಕುಂ ಮಾಡುವವರಾಗಿದ್ದಾರೆ. ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಕೈಗಾರಿಕೆಗಳನ್ನು ಬೋಧಿಸುವುದು ಮತ್ತು ಹಳ್ಳಿಗಾಡಿನ ಪಾಠಶಾಲೆಗಳಲ್ಲಿ ವ್ಯವಸಾಯ ವಿದ್ಯೆಗೆ ಗಮನಕೊಡುವುದು, ಮತ್ತು ಅವಿದ್ಯೆಯನ್ನು ಹೋಗಲಾಡಿಸಲು ಪ್ರಯತ್ನಿಸುವುದು ಈ ವಿಚಾರಗಳಲ್ಲಿ 1914 ನೇ ವರ್ಷದಿಂದೀಚಿನ ವಿದ್ಯಾಭ್ಯಾಸದ ಇಲಾಖೆಯ ವಾರ್ಷಿಕ ವರದಿಗಳನ್ನು ನೋಡಿದರೆ ವಿದ್ಯಾ ಪ್ರಚಾರದಲ್ಲಿ ಸರ್ಕಾರದವರು ಮಾಡಿರುವ ಅಗಾಧ ಪ್ರಯತ್ನಗಳೂ ವಿದ್ಯಾಭ್ಯಾಸಕ್ಕಾಗಿ ಎಷ್ಟು ಹೆಚ್ಚಾಗಿ ವೆಚ್ಚ ಮಾಡುತ್ತಿದ್ದಾರೆಂಬುದೂ ವ್ಯಕ್ತವಾಗುತ್ತದೆ. ಮುಂದೆಯೂ ಇದೇರೀತಿ ಸರ್ಕಾರದವರು ಏರ್ಪಡಿಸುವರೆಂಬ ವಿಚಾರದಲ್ಲಿ ಭರವಸೆ ಕೊಡಬೇಕಾದ ಅಗತ್ಯವೇ ಇಲ್ಲ.

ಕೈಗಾರಿಕೆಯ ಅಭಿವೃದ್ಧಿ ವಿಚಾರದಲ್ಲಿ ಸಂಸ್ಥಾನದ ಒಟ್ಟು ಆದಾಯದಲ್ಲಿ ಶೇಕಡ 6 ರಿಂದ 8 ರಷ್ಟು ಮೊಬಲಗನ್ನು ಹತ್ತುವರ್ಷಗಳ ವರೆಗೆ ಕೈಗಾರಿಕೆ ಕಸಬುಗಳಿಗಾಗಿ ಕೊಡಬೇಕೆಂದು ಸಮಿತಿಯವರು ಸೂಚಿಸಿದ್ದಾರೆ. ಕಳೆದ 15 ವರ್ಷಗಳಿಂದಲೂ ಸರ್ಕಾರದವರು ಕೈಗಾರಿಕೆಯ ಅಭಿವೃದ್ಧಿಗಾಗಿ ಪ್ರಯತ್ನಮಾಡಿರುವರು. ಕೈಗಾರಿಕೆಗಳಿಗೆ ಸರ್ಕಾರಿ ಸಹಾಯವನ್ನು ವಿಮರ್ಶಿಸಿ ಸಲಹೆ ಕೊಡಲು ನೇಮಿಸಿದ್ದ ಸಮಿತಿಯ ವರದಿಯು ಸರ್ಕಾರಕ್ಕೆ ಬಂದಮೇಲೆ ಈ ವಿಚಾರವನ್ನು ಸರ್ಕಾರದವರು ಪರ್ಯಾಲೋಚಿಸುವರು.

ರಾಜಕೀಯ ಸುಧಾರಣೆಗಳು.

ಅಂತ್ಯದಲ್ಲಿ ರಾಜಕೀಯ ಅತೃಪ್ತಿಯನ್ನು ಹೋಗಲಾಡಿಸುವುದು ಹೇಗೆಂಬ ವಿಚಾರದಲ್ಲಿ ಸಮಿತಿಯವರು ಕೆಲವು ಸಲಹೆಗಳನ್ನು ಸೂಚಿಸಿರುವರು. ಇವುಗಳು ಶ್ರೀಮನ್ಮಹಾರಾಜ ಸರ್ಕಾರದವರಿಗೆ ತಿಳಿಯದೆ ಇಲ್ಲ. ಈ ವಿಚಾರದಲ್ಲಿ ನ್ಯಾಯವಾದ ಅರಿಕೆಗಳನ್ನೆಲ್ಲಾ ನಡೆಸಿಕೊಡಲು ಸರ್ಕಾರದವರು ಯಾವಾಗಲೂ ಸಿದ್ಧರಾಗಿದ್ದಾರೆ. 1923 ನೇ ಇಸವಿಯಲ್ಲಿ ಸುಧಾರಣೆಗಳನ್ನು ಕೊಟ್ಟಮೇಲೆ ಪ್ರಜಾಪ್ರತಿನಿಧಿ, ನ್ಯಾಯವಿಧಾಯಕ ಸಭೆಗಳ ನಿಬಂಧನೆಗಳಲ್ಲಿ ಏನೇನು ಬದಲಾವಣೆಗಳಾಗಬೇಕೆಂಬುದನ್ನು ಅದಕ್ಕಾಗಿ ನೇಮಿಸಿದ್ದ ಒಂದು ಕಮಿಟಿಯವರು ಸರ್ಕಾರಕ್ಕೆ ಸೂಚಿಸಿರುವರು. ಇದರಿಂದಲೇ ರಾಜಕೀಯ ಸುಧಾರಣೆಗಳ ವಿಚಾರದಲ್ಲಿ ಸರ್ಕಾರದವರು ತಟಸ್ಥರಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಈಗಿರುವ ರಾಜ್ಯಾಡಳಿತ ಕ್ರಮವನ್ನು ಸಂಪೂರ್ಣವಾಗಿ ಬದಲಾಯಿಸಿದರೂ ಅದರಿಂದ ದೊಂಬಿಗಳು ನಡೆಯದಂತೆ ತಪ್ಪಿಸುವುದಕ್ಕಾಗುವುದಿಲ್ಲವೆಂಬುದು ಇತರದೇಶದ ಉದಾಹರಣೆಗಳಿಂದ ಗೊತ್ತಾಗುತ್ತದೆ. ಅನೂಚಾನವಾಗಿ ದೇಶದಲ್ಲಿ ನೆಲೆಗೊಂಡಿರುವ ಸಾಮಾಜಿಕಪದ್ಧತಿಗನುಸಾರವಾಗಿ ರಾಜ್ಯಾಡಳಿತಕ್ರಮವು ಏರ್ಪಡಬೇಕು. ಬೇರೆಬೇರೆ ವಿಧವಾದ ನಾಗರೀಕತೆ, ಸಂಸ್ಕೃತಿ ಇವುಗಳಿರುವ ದೇಶದಲ್ಲಿ ದ್ವಿಮುಖ ಸರ್ಕಾರ ಅಥವ ಇತರ ಕಡೆಯಲ್ಲಿ ಆಚರಣೆಯಲ್ಲಿರುವ ಇನ್ನೊಂದುಬಗೆಯ ಸರ್ಕಾರವನ್ನು ಅನುಸರಿಸುವುದು ಕಷ್ಟ. ರಾಜ್ಯಾಡಳಿತಕ್ರಮದ ವಿಚಾರವನ್ನು "ಲಾ" ಮತ್ತು ಸರ್ಕಾರಕ್ಕೆ ಒತ್ತಾಸೆಕೊಟ್ಟು ಕಾರ್ಯತಃ ಆಚರಣೆಗೆ ತರಲು ಸಹಕಾರಿಯಾದ ಸಾಮಾಜಿಕ ಪದ್ಧತಿಗನುಗುಣವಾಗಿ ಪರ್ಯಾಲೋಚಿಸಬೇಕಾಗಿದೆಯೇ ಹೊರತು ಬರಿ ರಾಜ್ಯಾಡಳಿತಕ್ರಮವನ್ನೇ ಆಲೋಚಿಸುವುದರಿಂದ ಪ್ರಯೋಜನವಿಲ್ಲ. ಅಗತ್ಯವಾದ ಬದಲಾವಣೆಗಳಾಗಕೂಡದೆಂಬುದು ಸರ್ಕಾರದ ಇಷ್ಟವಲ್ಲ. ಆದರೆ ಅವುಗಳು ಸಾಮಾಜಿಕ ಪದ್ಧತಿಗೆ ಸರಿಹೋಗತಕ್ಕವುಗಳಾಗಿರಬೇಕು. ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳನ್ನು ಸರ್ಕಾರದಿಂದ ಬಲವಂತವಾಗಿ ಪಡೆದುಕೊಳ್ಳುವುದರ ಅವಶ್ಯಕತೆಯಿಲ್ಲ.

ಎನ್. ಮಾಧವರಾವ್, ಸರ್ಕಾರದ ಚೀಫ್ ಸೆಕ್ರಿಟರಿ.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಜಿ.ಬಿ.ಇ., ಮಹಾಸ್ವಾಮಿಯವರ ಸನ್ನಿಧಾನಂಗಳಲ್ಲಿ ಮಹಾಸ್ವಾಮಿಯವರ ಪಾದಸೇವಕ ಚಿಕ್ಕಮಗಳೂರು ತಾ|| ಅರಳಗುಪ್ಪೆ ಕಾಫಿ ಪ್ಲಾಂಟರು ಚಂದ್ರೇಗೌಡನು ಅತ್ಯಂತ ರಾಜಭಕ್ತಿಯುತನಾಗಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆ.

ಮಹಾಸ್ವಾಮಿ,

ಆಳುವ ಮಹಾಸ್ವಾಮಿಯವರ "ಸತ್ಯಮೇವೋದ್ಧರಾಮ್ಯಹಂ" ಎಂಬ ಸಂಕಲ್ಪವುಳ್ಳ ಸರ್ವಸಮದೃಷ್ಟಿಯುಕ್ತವಾದ ಛತ್ರಛಾಯೆಯಲ್ಲಿ ಈ ಸಂಸ್ಥಾನದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಸರ್ವತೋಮುಖವಾಗಿ ಸುಖಸಂಪತ್ತುಗಳ ಅಭಿವೃದ್ಧಿಯನ್ನು ಪಡೆಯುತ್ತ ಮಹಾಸ್ವಾಮಿಯವರ ಆಡಳಿತವು ಚಿರಸ್ಥಾಯಿಯಾಗಿರಲೆಂದು ಹಾಡಿ ಹರಸುತ್ತ ಸಂತೋಷಯುಕ್ತರಾಗಿರುವರೆಂದು ಕೃಪಾಮೂರ್ತಿಗಳಾದ ಮಹಾಸ್ವಾಮಿಯವರ ಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳಲು ಅವಕಾಶ ದೊರೆತದ್ದಕ್ಕಾಗಿ ಆನಂದಭರಿತನಾಗಿರುತ್ತೇನೆ, ಮಹಾಸ್ವಾಮಿ.

ಈ ಕಡೂರು ಡಿಸ್ಟ್ರಿಕ್ಟಿನ ಬಹುತರವಾಗಿ ಎಲ್ಲಾ ಪ್ರದೇಶವೂ ಮಲೆನಾಡಾಗಿಯೂ ನಾಗರಿಕತೆಯಿಂದ ಕೂಡಿರುವ ಮೈದಾನ ಡಿ|| ಗಳಿಗೆ ಬಹಳ ದೂರವಾಗಿಯೂ ಇರುವುದರಿಂದ ಈ ಪ್ರಾಂತ್ಯದ ಬಹು ಭಾಗದ ಜನಗಳು ಅವಿದ್ಯಾವಂತರಾಗಿರುವರಲ್ಲದೆ ಕೇವಲ ಅನಾರೋಗ್ಯ ಪ್ರದೇಶವಾದ ಈ ಭಾಗದಲ್ಲಿ ಆರೋಗ್ಯಭಾಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ವಿವೇಚನಾಶಕ್ತಿ ಇಲ್ಲದವರಾಗಿಯೂ ಇರುತ್ತಾರೆ. ಅಲ್ಲದೆ ಈ ಪ್ರಾಂತ್ಯದ ಬಹುಜನ ಅನೇಕರು ಪ್ರತಿವರ್ಷವೂ ನಾನಾವಿಧವಾದ ರೋಗಗಳಿಗೆ ಪದೇ ಪದೇ ಗುರಿಯಾಗುತ್ತ ಎಲ್ಲಾ ಸೌಕರ್ಯಗಳಿಗೂ ಅವಕಾಶವಿರುವ ಮತ್ತು ಬಹುದೂರ ಪ್ರದೇಶದಲ್ಲಿರುವ ಬೆಂಗಳೂರು ಅಥವ ಮೈಸೂರು ಪಟ್ಟಣಕ್ಕೆ ಹೋಗಿ ತನ್ಮೂಲಕ ಉತ್ತಮ ವೈದ್ಯಸಹಾಯಗಳನ್ನು ಪಡೆದು ತಮಗೆ ಉಂಟಾಗಿರುವ ರೋಗಗಳನ್ನು ಗುಣಪಡಿಸಿಕೊಂಡು ಬರಲು ದ್ರವ್ಯಾನುಕೂಲತೆಯುಳ್ಳ ಕೊರತೆಯಿಂದಲೂ ಅಪರಿಚಿತ ಭಯದಿಂದಲೂ ಹೊರಪ್ರದೇಶಕ್ಕೆ ಹೋಗಲು ಅವಶ್ಯಕಗಳಾದ ಧೈರ್ಯಸ್ಥೈರ್ಯಗಳಿಲ್ಲದಿರುವುದರಿಂದಲೂ ಸಹ ಆ ಪಟ್ಟಣಗಳಿಗೆ ಹೋಗಲು ಸಾಧ್ಯವಾಗದೆ ವರ್ಣಿಸಲಸದಳವಾದ ತೊಂದರೆಗಳನ್ನು ಅನುಭವಿಸುತ್ತಲಿರುವುದು ಈ ಸಂಸ್ಥಾನದ ಪ್ರಜೋನ್ನತಿಗೆ ಬಹಳ ಕುಂದಕವಾಗಿರುತ್ತದೆ. ಅಲ್ಲದೆ ಪ್ರಪಂಚದಲ್ಲಿ ಜನ್ಮಧಾರಣ ಮಾಡುವ ಪ್ರತಿಯೊಂದು ಪ್ರಾಣಿಯೂ ಆರೋಗ್ಯಭಾಗ್ಯದಿಂದಿದ್ದರೆ ಎಷ್ಟೋ ಸಂತೋಷದಿಂದ ಜೀವಿಸಬಲ್ಲದಾದಕಾರಣ ಬುದ್ಧಿ ಮತ್ತು ವಿವೇಚನಾಶಕ್ತಿಯುಳ್ಳ ಮಾನವ ವರ್ಗಕ್ಕೆ ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳಲು ತಕ್ಕ ಸೌಕರ್ಯವನ್ನು ಕಲ್ಪಿಸಿಕೊಟ್ಟದ್ದೇ ಆದರೆ ಮಹಾಸ್ವಾಮಿಯವರ ಪ್ರಜಾಕೋಟಿಯಲ್ಲಿ ಅನೇಕ ಜನಗಳು ನೆಮ್ಮದಿಯಾಗಿ ಬಾಳುವೆಮಾಡಿಕೊಂಡು ಹೋಗಲವಕಾಶವಾಗಿ ತನ್ಮೂಲಕ ನಮ್ಮ ದೇಶದ ಸಾಮಾಜಿಕ ಮತ್ತು ಆರ್ಥಿಕ ಸಂಪತ್ತುಗಳು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲು ಅವಕಾಶವಾಗುತ್ತೆಂಬ ಕಾಂಕ್ಷೆಯು ಅನೇಕ ವರ್ಷಗಳಿಂದಲೂ ಮಹಾಸ್ವಾಮಿಯವರ ಪಾದಸೇವಕನ ಮನಸ್ಸಿನಲ್ಲಿ ವ್ಯಾಪಿಸಿತ್ತೆಂದು ಅರಿಕೆಮಾಡಲು ಅವಕಾಶ ಬೇಡುತ್ತೇನೆ, ಮಹಾಸ್ವಾಮಿ.

ಈ ಮಲೆನಾಡು ಪ್ರಾಂತ್ಯದ ಸ್ತ್ರೀಯರ ಹೆರಿಗೆಗೆ ತಕ್ಕ ವೈದ್ಯಸಹಾಯ ಸಂಪತ್ತುಗಳಿಲ್ಲದೆ ಅವಿದ್ಯಾವಂತರಾದ ಮತ್ತು ಅನುಭವಿಗಳಾದ ಹೆಂಗಸರು ಹೆರಿಗೆ ಕಾರ್ಯಗಳನ್ನು ನಡೆಸುತ್ತಿರುವುದರಿಂದ ಉಂಟಾಗುತ್ತಿರುವ ಅನಾಹುತಗಳು ಅಷ್ಟಿಷ್ಟೆಂದು ವರ್ಣಿಸಲು ಅಸಾಧ್ಯವಾಗಿವೆ. ಈ ವಿಧವಾದ ಕೊರತೆಯನ್ನು ಹೋಗಲಾಡಿಸಲು ಹೆರಿಗೆಯ ವಿಷಯವನ್ನು ಬೋಧಿಸುವ ಒಂದು ಪಾಠಶಾಲೆಯನ್ನು ಈ ಊರಿನಲ್ಲಿ ಸ್ಥಾಪಿಸಬೇಕಾದ್ದು ಅಗತ್ಯವೆಂಬ ಸಂಗತಿಯೂ ಕೂಡ ಮಹಾಸ್ವಾಮಿಯವರ ಪಾದಸೇವಕನ ಯೋಚನೆಯಲ್ಲಿದ್ದಿತು, ಮಹಾಸ್ವಾಮಿ.

ಮೇಲ್ಕಂಡ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಸರ್ವಶಕ್ತನಾದ ಈಶನ ಪ್ರೇರಣೆಯಿಂದ ಈ ಸೇವಕನು ಕುತೂಹಲ ಯುಕ್ತನಾಗಿರುವಾಗ್ಗೆ ದೇಶಹಿತವೇ ಸ್ವಾಮಿಯ ಹಿತವೆಂದೂ, ಸ್ವಾಮಿಯ ಹಿತವೇ ಜೀವಿತದ ಪರಮ ಧ್ಯೇಯವೆಂದೂ ತಿಳಿದು, ಅಹೋರಾತ್ರಿಯಲ್ಲಿಯೂ ಶ್ರಮಪಡುತ್ತಿರುವ ನಮ್ಮ ಘನಹೊಂದಿದ ದಿವಾನ್ ಸಾಹೇಬರವರು ಸನ್ 1927 ನೇ ಇಸವಿ ಮಾರ್ಚಿ ತಿಂಗಳಲ್ಲಿ ಈ ಪ್ರಾಂತ್ಯ ಸಂಚಾರ ಬಂದ ವೇಳೆಯಲ್ಲಿ ಮೇಲ್ಕಂಡ ಕುಂದುಕೊರತೆಗಳನ್ನು ಅವರ ಗಮನಕ್ಕೆ ತಂದು ನನ್ನ ತಂದೆ ಮಲ್ಲೇಗೌಡರ ಜ್ಞಾಪಕಾರ್ಥವಾಗಿ ಎಲ್ಲಾ ಸೌಕರ್ಯಗಳಿಂದ ಕೂಡಿರತಕ್ಕ ಒಂದು ಜನರಲ್ ಆಸ್ಪತ್ರೆ ಮತ್ತು ಅದಕ್ಕೆ ಲಗತ್ತಾದ ಕಟ್ಟಡಗಳೆಲ್ಲವನ್ನೂ ಮತ್ತು ನನ್ನ ತಾಯಿ ಸಿದ್ದಮ್ಮ ಹೆಗ್ಗಡತಿಯವರ ಜ್ಞಾಪಕಾರ್ಥವಾಗಿ ಒಂದು ಮೆಟರ್ನಿಟಿ ಸ್ಕೂಲು ಕಟ್ಟಡವನ್ನೂ ಸಹ ಕಟ್ಟಿಸಲು ಆಗಬಹುದಾದ ಒಂದು ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಡುವುದಾಗಿ ಅತ್ಯಂತ ಸಂತೋಷದಿಂದ ನಮ್ಮ ದಿವಾನ್ ಸಾಹೇಬರವರಲ್ಲಿ ಅರಿಕೆಮಾಡಿಕೊಂಡದ್ದಲ್ಲದೆ ಮೆಟರ್ನಿಟಿ ಸ್ಕೂಲಿಗಾಗಿ ಹಾಲಿ ಗೌರ್ನಮೆಂಟ್ ಮಿಡಲ್ ಸ್ಕೂಲಿರುವ ಕಟ್ಟಡವನ್ನು ಉಪಯೋಗಿಸಿಕೊಳ್ಳಬೇಕಾಗಿ ಬಂದದ್ದರಿಂದ ಪ್ರತ್ಯೇಕವಾಗಿ ಸದರಿ ಮಿಡಲ್ ಸ್ಕೂಲನ್ನು ಮಹಾಸ್ವಾಮಿಯವರ ಪಾದಸೇವಕನ ಹೆಸರಿನಲ್ಲಿ ಕಟ್ಟಿಸಲು ಹತ್ತುಸಾವಿರ ರೂಪಾಯಿಗಳನ್ನು ಸಹಾ ಉಚಿತವಾಗಿ ಕೊಡುವುದಾಗಿ ಅತ್ಯಂತ ಉತ್ಸಾಹದಿಂದ ಅರಿಕೆಮಾಡಿಕೊಂಡೆನು, ಮಹಾಸ್ವಾಮಿ.

ಮಹಾಸ್ವಾಮಿಯವರ ಅಮಾತ್ಯವರ್ಯರು ಈ ಸೇವಕನ ಇಷ್ಟದಂತೆ ಕಾರ್ಯವನ್ನು ನೆರವೇರಿಸಬಹುದೆಂದು ಅಪ್ಪಣೆಮಾಡಿದ್ದಲ್ಲದೆ, ಅವರೂ ಮಹಾಸ್ವಾಮಿಯವರ ಸರ್ಕಾರದವರೂ ಸಹ ಈ ಕಟ್ಟಡಗಳನ್ನು ಕಟ್ಟಲು ನಡೆಯಬೇಕಾದ ಕಾರ್ಯಕ್ರಮಗಳನ್ನೆಲ್ಲಾ ಬಹಳ ಜಾಗ್ರತೆಯಾಗಿಯೂ ತೃಪ್ತಿಕರವಾಗಿಯೂ ಏರ್ಪಡಿಸಿ ಈ ಕಟ್ಟಡಕ್ಕಾಗಿ ಅತ್ಯಮೌಲ್ಯವಾದ ಸುಂದರ ನಿವೇಶನವನ್ನು ಒದಗಿಸಿಕೊಟ್ಟು ಈ ಕಟ್ಟಡದ ಶಂಕುಸ್ಥಾಪನಾ ಮಹೋತ್ಸವವು ಈ ದಿವಸ ಮಹಾಸ್ವಾಮಿಯವರ ಅಮೃತಹಸ್ತದಿಂದ ನೆರವೇರಲು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ನಮ್ಮ ಘನಹೊಂದಿದ ದಿವಾನ್ ಸಾಹೇಬರವರಿಗೂ ಮತ್ತು ಮಹಾಸ್ವಾಮಿಯವರ ಸರ್ಕಾರದವರಿಗೂ ಈ ಪಾದಸೇವಕನು ಕೃತಜ್ಞತೆಯನ್ನು ಅರ್ಪಿಸುತ್ತಾನೆಂದು ಮಹಾಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳಲು ಬಹಳ ಸಂತೋಷಪೂರ್ವಕನಾಗಿದ್ದಾನೆ, ಮಹಾಸ್ವಾಮಿ.

ಮಹಾಸ್ವಾಮಿಯವರು ಈ ಸೇವಕನ ಮೇಲೆ ಸಂಪೂರ್ಣ ಅನುಗ್ರಹವಿಟ್ಟು ರಾಜ್ಯಭಾರದ ಗುರುತರವಾದ ಕಾರ್ಯಭಾಗಗಳು ಅನೇಕವಿದ್ದಾಗಲೂ ಇದಕ್ಕಾಗಿ ಅವಕಾಶವನ್ನು ತೆಗೆದುಕೊಂಡು ದೇಹಶ್ರಮವನ್ನು ಎಣಿಸದೆ ಇಲ್ಲಿಯವರೆಗೆ ಚಿತ್ತೈಸಿ ಆಸ್ಪತ್ರೆಯ ಶಂಕುಸ್ಥಾಪನಾ ಕಾರ್ಯವನ್ನು ಮಹಾಸ್ವಾಮಿಯವರ ಅಮೃತಹಸ್ತದಿಂದ ನೆರವೇರಿಸಲು ಅಭಿಮತವನ್ನಿತ್ತು ಪಾದಸೇವಕನನ್ನು ಕೃತಾರ್ಥನನ್ನಾಗಿ ಮಾಡಿದ್ದಕ್ಕಾಗಿ ಮಹಾಸ್ವಾಮಿಯವರಿಗೂ, ಮಲೆನಾಡು ಪ್ರಜೆಗಳ ಶ್ರೇಯೋಭಿವೃದ್ಧಿಯನ್ನೇ ಧ್ಯೇಯವಾಗಿಟ್ಟುಕೊಂಡು, ಪ್ರಕೃತ ಇಲ್ಲಿಗೆ ಚಿತ್ತೈಸಿರುವ ಶ್ರೀಮನ್ ಯುವರಾಜರವರಿಗೂ ಅತ್ಯಂತ ಭಕ್ತಿಪೂರ್ವಕವಾದ ನಮನೆಗಳನ್ನು ಸಮರ್ಪಿಸುತ್ತೇನೆ, ಮಹಾಸ್ವಾಮಿ.

ಈ ದಿವಸವು ಈ ಡಿಸ್ಟ್ರಿಕ್ಟಿನ ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿರುವುದಲ್ಲದೆ ಪ್ರಜಾಕೋಟಿಯ ಸುಖ ಸಂಪತ್ತುಗಳಲ್ಲಿ ಮಹಾಸ್ವಾಮಿಯವರಿಗೆ ಇರುವ ಅನನ್ಯಾಸಕ್ತಿಯನ್ನೂ ಸಹ ವ್ಯಕ್ತಪಡಿಸುತ್ತದೆ. ಮಹಾಸ್ವಾಮಿ.

ಈ ಕಟ್ಟಡಗಳ ಕಾರ್ಯವೆಲ್ಲವೂ ಸಂಪೂರ್ಣವಾದನಂತರ ಈ ಆಸ್ಪತ್ರೆಯ ಮತ್ತು ಮೆಟರ್ನಿಟಿ ಸ್ಕೂಲುಗಳ ಪ್ರಾರಂಭ ಮಹೋತ್ಸವವನ್ನು ಮಹಾಸ್ವಾಮಿಯವರ ಅಮೃತಹಸ್ತದಿಂದಲೇ ನೆರವೇರಿಸಬೇಕಾಗಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ, ಮಹಾಸ್ವಾಮಿ.

ಮಹಾಸ್ವಾಮಿಯವರು ದಯವಿಟ್ಟು ಈ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ಮಹಾಸ್ವಾಮಿಯವರ ದಿವ್ಯ ಹಸ್ತದಿಂದ ಆಗಮಾಡಿಸಬೇಕಾಗಿ ಪ್ರಾರ್ಥಿಸಿ ಈ ವಿಜ್ಞಾಪನೆಯನ್ನು ವಿರಮಿಸುತ್ತೇನೆ, ಮಹಾಸ್ವಾಮಿ.

ಅರಳಗುಪ್ಪೆ,
ಚಿಕ್ಕಮಗಳೂರು ತಾ||
ತಾ|| 26-1-1929.

ಇಂತು,
ಮಹಾಸ್ವಾಮಿಯವರ ಪ್ರಜಾವರ್ಗಕ್ಕೆ ಸೇರಿದ
ಅತ್ಯಂತ ವಿಧೇಯ ಸೇವಕ,
ಅರಳಗುಪ್ಪೆ ಚಂದ್ರೇಗೌಡ.

ಇದಕ್ಕುತ್ತರವಾಗಿ

ಶ್ರೀಮನ್ಮಹಾರಾಜರವರ ಭಾಷಣ.

ಚಂದ್ರೇಗೌಡರೆ, ಮಹಿಳೆಯರೆ ಮತ್ತು ಮಹನೀಯರೆ!

ನಮ್ಮ ಸಂಸ್ಥಾನದಲ್ಲಿ ವ್ಯಾಧಿಪರಿಹಾರದ ಏರ್ಪಾಟಿನಲ್ಲಿ ಉತ್ಕೃಷ್ಟವಾದ ಒಂದು ನೂತನ ವಿಧಾನದ ಸಮಾರಂಭಮಹೋತ್ಸವವನ್ನು ನೆರವೇರಿಸುವುದಕ್ಕಾಗಿ ನಾವೆಲ್ಲರೂ ನೆರೆದಿರುವೆವು. ಈ ಹೊಸವಿಧಾನವು ದಿನೇ ದಿನೇ ಅತಿಶಯವಾಗಿ ಅಭಿವೃದ್ಧಿ ಹೊಂದುವುದಕ್ಕೆ ಇದೇ ಮೊದಲನೆಯ ಸೂಚನೆ ಎಂದು ಭಾವಿಸಬಹುದಾಗಿದೆ.

ಇಲ್ಲಿನ ವೈದ್ಯಶಾಲೆಗಳಿಗೂ ಇಂಗ್ಲೆಂಡಿನ ವೈದ್ಯಶಾಲೆಗಳಿಗೂ ಇರುವ ಮುಖ್ಯ ವ್ಯತ್ಯಾಸವನ್ನು ನೀವುಗಳು ಅರಿತವರಾಗಿಯೇ ಇರುವಿರಿ. ಇಲ್ಲಿನ ವೈದ್ಯಶಾಲೆಗಳು ಸರಕಾರದವರಿಂದ ನಡೆಯಿಸಲ್ಪಡುತ್ತಲಿರುವುವು; ಅಲ್ಲಿನ ಶಾಲೆಗಳೋ ಜನಸಾಮಾನ್ಯದಿಂದಲೇ ನಡೆಯುತ್ತಿರುವುವು.

ಅದರಂತೆ ಇಲ್ಲಿಯೂ ಖಾಸಗಿ ಜನರಲ್ಲೊಬ್ಬರು ಧಾರಾಳವಾದ ಧರ್ಮಬುದ್ಧಿಯಿಂದ ಕೈಕೊಂಡಿರುವ ಕಾರ್ಯಸಮಾರಂಭೋತ್ಸವವನ್ನು ನೆರವೇರಿಸುವುದರಲ್ಲಿ ನಮಗೆ ವಿಶೇಷವಾದ ಆದರವಿರುವುದು. ನಮ್ಮ ಈ ದೇಶದ ಸ್ಥಿತಿಯಲ್ಲಿ ಪ್ರಜೆಗಳಿಗೆ ಬೇಕಾಗುವಷ್ಟು ವೈದ್ಯಶಾಲೆಗಳನ್ನು ಸರಕಾರದ ಹಣದಿಂದಲೇ ಒದಗಿಸುವುದು ನಮ್ಮಿಂದ ಸಾಧ್ಯವಲ್ಲ. ಆದುದರಿಂದಲೇ ಚಂದ್ರೇಗೌಡರಂತಹ ಧರ್ಮಬುದ್ಧಿಯುಳ್ಳವರಿಗೆ ತಮ್ಮ ಡಿಸ್ಟ್ರಿಕ್ಟಿನ ಜನರಿಗೆ ಚಿಕಿತ್ಸೋಪಚಾರಾನುಕೂಲ್ಯಗಳನ್ನು ಹೆಚ್ಚಿಸುವುದಕ್ಕಿಂತ ಮೇಲಾದ ಧರ್ಮವಿನ್ನಾವುದೂ ಇರುವುದಿಲ್ಲ. ಅದರಲ್ಲೂ ಅವರ ಡಿಸ್ಟ್ರಿಕ್ಟು ದೈವಾನುಗ್ರಹದಿಂದ ಎಷ್ಟು ರಮಣೀಯವಾಗಿದೆಯೋ ಕೆಲವು ರೋಗಗಳಿಗೂ ಅಷ್ಟು ಆಕರವಾಗಿದೆ. ಚಂದ್ರೇಗೌಡರು ಮಾಡಿರುವ ಯಥೇಷ್ಟವಾದ ದ್ರವ್ಯಪ್ರದಾನದಿಂದ ಈ ವಿಧವಾದ ವ್ಯಾಧಿಗಳಿಂದ ಪೀಡಿತರಾದವರ ಉಪಚಾರಕ್ಕಾಗಿ ಉತ್ಕೃಷ್ಟವಾದ ನೂತನರೀತಿಯ ಚಿಕಿತ್ಸಾಶಾಲೆಯನ್ನು ತೆರೆಯಲು ಅನುಕೂಲವಾಯಿತು. ಈ ಶಾಲೆಗೆ ಮುಂದೆ ಬರಬಹುದಾದ ಸಹಸ್ರಾರು ರೋಗಿಗಳಿಗೆ ಇದರಿಂದ ಮಹೋಪಕಾರವಾಗುವುದೆಂದು ನಂಬಿದ್ದೇವೆ.

ಇವರು ಮಾಡಿರುವ ಧರ್ಮವಿಷ್ಟೇ ಅಲ್ಲ. ಎಲ್ಲ ವೇದನೆಗಿಂತಲೂ ಸ್ತ್ರೀಯರ ಪ್ರಸವಕಾಲದ ವೇದನೆಯು ಅತಿ ಕಷ್ಟಕರವಾದುದು. ಅದರಲ್ಲೂ ಇವರು ಹೇಳಿದಂತೆ ಆ ಕಾಲದಲ್ಲಿ ಅವರನ್ನು ನೋಡಿಕೊಳ್ಳುವವರ ಅವಿಜ್ಞತೆಯ ದೆಸೆಯಿಂದ ಈ ಕಷ್ಟವು ಇಮ್ಮಡಿಯಾಗುವುದು. ಎಳೆಯವಯಸ್ಸಿನ ತಾಯಂದಿರ ಮರಣದಿಂದಲೂ, ಮಕ್ಕಳಿಗೆ ಹುಟ್ಟಿದ ಒಂದುವರ್ಷದೊಳಗಾಗಿಯೋ ಸಂಭವಿಸುವ ಮರಣದಿಂದಲೂ, ಮತ್ತು ಇತರರಲ್ಲಿ ಪೂರ್ವವಯಸ್ಸಿನಿಂದಲೇ ಅನುಸರಿಸಿ ಆ ಮರಣಾನ್ತವೂ ಇರತಕ್ಕ ಶಾರೀರಕ ದೋಷಗಳಿಂದಲೂ ಆಗುವ ನಷ್ಟಕ್ಕಿಂತ ಘೋರವಾದ ನಷ್ಟವಾವುದೂ ಇಲ್ಲ. ನಮ್ಮ ಮುಂದಿನ ಪೀಳಿಗೆಯು ಸೌಖ್ಯದಿಂದರಬೇಕಾದರೆ ಗರ್ಭಿಣಿಯರ ಸಂರಕ್ಷಣೆಯೂ ಮತ್ತು ಶಿಶುಗಳ ಪಾಲನಪೋಷಣೆಗಳೂ ಪ್ರಥಮದಲ್ಲಿ ಮಾಡಬೇಕಾದ ಮುಖ್ಯ ಕರ್ತವ್ಯಗಳೆಂಬುದನ್ನು ಭಾರತೀಯರೆಲ್ಲರೂ ಒಪ್ಪುವರು. ಈ ಡಿಸ್ಟ್ರಿಕ್ಟಿನ ಮುಖ್ಯ ಪಟ್ಟಣದಲ್ಲಿ ಗರ್ಭಿಣೀ ಶಿಶುಸಂರಕ್ಷಣೆಯ ಕ್ರಮದಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಸಂಸ್ಥೆಯೊಂದನ್ನು ಏರ್ಪಡಿಸಲು ದ್ರವ್ಯಪ್ರದಾನ ಮಾಡುವುದರ ಮೂಲಕ ಚಂದ್ರೇಗೌಡರು ಮೇಲ್ಕಂಡ ಸದುದ್ದೇಶಗಳನ್ನು ತಮಗೆ ಸಾಧ್ಯವಾದಮಟ್ಟಿಗೂ ಸಾಧಿಸಿ ಕೃತಾರ್ಥರಾಗಿರುವರು.

ಇಂಗ್ಲೆಂಡಿನಲ್ಲಿ ಪ್ರಜೆಗಳೇ ಮುಂದಾಳುಗಳಾಗಿ ನಿಂತು ತಮ್ಮ ಸ್ವಂತ ಖರ್ಚಿನಿಂದಲೇ ವೈದ್ಯಶಾಲೆಗಳನ್ನು ನಡೆಯಿಸುತ್ತಿರುವ ಪದ್ಧತಿಯಿಂದ ಒಂದು ಫಲವುಂಟು. ತಾವು ವಿನಿಯೋಗಿಸುವ ದ್ರವ್ಯವನ್ನು ವೈದ್ಯಶಾಲೆಯ ತಮಗಿಷ್ಟವಾದ ಚಿಕಿತ್ಸಾಭಾಗಕ್ಕೆ ಮಾತ್ರ ಅವರು ಉಪಯೋಗಿಸುವರು. ನಾಗಪ್ಪಶೆಟ್ಟರೂ, ಕೃಷ್ಣಯ್ಯಶೆಟ್ಟರೂ, ಮತ್ತು ಬಸವೇಗೌಡರೂ ಈ ಕ್ರಮವನ್ನೇ ಅನುಸರಿಸಿರುವರು. ಇವರಲ್ಲಿ ಮೊದಲನೆಯವರು ತಮ್ಮ ಧರ್ಮವನ್ನು ಈಗ ನಾವು ಹೇಳಿದ ಅತಿ ಕಷ್ಟಕ್ಕೆ ಗುರಿಯಾಗಿರುವ ತಾಯಂದಿರಿಗೆ ಮಾತ್ರವೆಂದು ನಿರ್ಧರಿಸಿರುವರು. ಇದಕ್ಕಿಂತಲೂ ಮೇಲಾದ ಧರ್ಮವಿನ್ನಿಲ್ಲ. ಎರಡನೆಯವರು ರೋಗಿಗಳ ಪೈಕಿ ನೇತ್ರರೋಗಗಳ ಚಿಕಿತ್ಸೆಗಾಗಿ ಮಾತ್ರ ದ್ರವ್ಯವನ್ನು ಕೊಟ್ಟಿರುವರು. ಮೂರನೆಯವರು ತಮ್ಮ ಜಾತಿಯವರಿಗೆ ಮಾತ್ರ ವೈದ್ಯಶಾಲೆಯಲ್ಲಿ ತಕ್ಕ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ದ್ರವ್ಯಪ್ರದಾನ ಮಾಡಿರುವರು. ಮಹಾಶಯರೆ, ಇವುಗಳೂ ಅತಿಘನವಾದ ಉದ್ದೇಶಗಳೇ. ಇವರೂ ಮತ್ತು ಇತರ ಧರ್ಮಾತ್ಮರಾದ ಪುರಜನರೂ ಲೋಕಸೇವಾಕಾರ್ಯದಲ್ಲಿ ಬದ್ಧಾದರರಾಗಿ ಮುಂದುವರಿದು ರಾಜ್ಯಭಾರದಲ್ಲಿ ಭರವಸೆ ಇಟ್ಟು ಈ ಪರಿಯ ಧರ್ಮಗಳಿಗಾಗಿ ನಮ್ಮ ಸರಕಾರಕ್ಕೆ ಬಹು ದ್ರವ್ಯಪ್ರದಾನ ಮಾಡಿದ ವಿಷಯವನ್ನು ಕೇಳಿ ನಮಗೆ ಅಪರಿಮಿತವಾದ ಆನಂದವು ಉಂಟಾಗಿರುವುದು.

ಈ ಧರ್ಮಕಾರ್ಯಗಳ ಸಂಬಂಧವಾಗಿ ಒಂದಂಶವು ಮಾತ್ರ ನೀವು ನೆನಪಿನಲ್ಲಿಡತಕ್ಕುದಾಗಿದೆ. ಧರ್ಮಕ್ಕೆ ಪಾತ್ರರಾದವರು ದರಿದ್ರರು. ಇಂಗ್ಲೆಂಡಿನಲ್ಲಿ ವೈದ್ಯಶಾಲೆಗಳು ಬಡವರ ಸೌಕರ್ಯಕ್ಕಾಗಿ ಮಾತ್ರ ಇವೆ. ಭಾಗ್ಯವಂತರು ರೋಗೋಪಚಾರಶಾಲೆಗಳಿಗೆ (Nursing Homes) ಹೋಗುತ್ತಾರೆ. ಮಧ್ಯವರ್ಗದವರಾದರೋ ಬಡವರ ವೈದ್ಯಶಾಲೆಗಳಲ್ಲಿ ಪ್ರವೇಶ ದೊರಕದೆಯೂ, ಭಾಗ್ಯವಂತರ ಉಪಚಾರಶಾಲೆಗಳಿಗೆ ಹೋಗಲು ದ್ರವ್ಯಸಂಪತ್ತಿ ಇಲ್ಲದೆಯೂ ಇರುವುದರಿಂದ ಅವರಿಗೆ ಸೌಕರ್ಯ ಕಲ್ಪನೆಯನ್ನು ಮಾಡುವುದಕ್ಕಾಗಿ ಇಂಗ್ಲೆಂಡಿನಲ್ಲಿ ಬಹು ಬುದ್ಧಿಯನ್ನೂ ಧನವನ್ನೂ ಈಗ ವ್ಯಯಮಾಡುತ್ತಿರುವರು. ಇದೇ ರೀತಿಯಾಗಿ ಮಧ್ಯಮವರ್ಗದವರ ವಿಷಯಕವಾದ ಈ ತೊಡಕು ನಮ್ಮಲ್ಲಿಯೂ ವಿಶೇಷವಾಗಿದೆ. ಈ ವರ್ಗದವರು ವ್ಯಾಧಿಬಂದಾಗ ಹೊಂದಿದ ಔಷಧೋಪಚಾರಗಳ ಖರ್ಚಿನಲ್ಲಿ ಎಷ್ಟು ಭಾಗವನ್ನು ವಹಿಸಬಹುದೆಂಬುದು ನೀವು ಚೆನ್ನಾಗಿ ಯೋಚಿಸಸಕ್ಕ ಅಂಶವಾಗಿದೆ.

ನೀವು ಹೀಗೆ ಮಾಡಬೇಕಾದುದಕ್ಕೆ ಬೇರೊಂದು ಕಾರಣವೂ ಉಂಟು. ವೃತ್ತಿಗಳೆಲ್ಲಿಲ್ಲಾ ವ್ಯಾಧಿಗ್ರಸ್ತರ ಸಂಕಟವನ್ನು ಪರಿಹಾರಮಾಡತಕ್ಕ ವೃತ್ತಿಯೇ ಸರ್ವೋತ್ತಮವಾದುದೆಂದು ಹೇಳಬಹುದು. ಆದರೆ ಇತರ ವೃತ್ತಿಗಳಲ್ಲಿ ದೊರಕುವಷ್ಟು ಲಾಭವು ಈ ವೃತ್ತಿಯಲ್ಲಿ ದೊರಕುವುದಿಲ್ಲವಾದುದರಿಂದ ಜನರಿಗೆ ಇದರಲ್ಲಿ ಆದರವು ಕಡಿಮೆ. ಈ ಪರಿಸ್ಥಿತಿಗೆ ಒಳ್ಳೆಯ ಸರಕಾರಿ ವೈದ್ಯಶಾಲೆಗಳಿರುವುದೇ ಕಾರಣವು. ಅನುಕೂಲವಾದ ಸರಕಾರಿ ವೈದ್ಯಶಾಲೆಗಳಿರುವುದರಿಂದಲೂ, ಅವುಗಳಲ್ಲಿ ಔಷಧೋಪಚಾರಗಳು ಧರ್ಮಾರ್ಥವಾಗಿ ನಡೆಯುವುದರಿಂದಲೂ ಹೆಚ್ಚುಮಂದಿ ಸ್ವತಂತ್ರರೂ ಗೌರವಸ್ಥರೂ ಆದ ಜನರು ಈ ಘನತರವಾದ ವೃತ್ತಿಯನ್ನು ಅವಲಂಬಿಸುವ ಸಂಭವವು ಕಡಿಮೆಯಾಗಿದೆ. ಇದನ್ನೂ ಜ್ಞಾಪಕದಲ್ಲಿಟ್ಟು, ಉತ್ತಮವಾದ ಸರಕಾರಿ ವೈದ್ಯಶಾಲೆಗಳಿದ್ದರೂ ಖಾಸಗಿ ವೈದ್ಯರಿಗೂ ಸಂಪೂರ್ಣ ಪ್ರೋತ್ಸಾಹವು ಲಭಿಸುವಂತಹ ಒಂದು ಮಾರ್ಗವನ್ನು ನೀವು ಕಂಡುಹಿಡಿಯುವ ಏರ್ಪಾಡಿದುವಿರೆಂದು ನಂಬಿದ್ದೇವೆ.

ಮಹಾಶಯರೆ! ಡಾಕ್ಟರ್ ಮಹಮ್ಮದ್ ಉಸ್ಮಾನರವರು ತಮ್ಮ ಸ್ವಾರಸ್ಯವಾದ ಭಾಷಣದಲ್ಲಿ ಚಿಕ್ಕಮಗಳೂರಿನ ಈ ಚಿಕಿತ್ಸಾಶಾಲೆಯು ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರುವ ಚಿಕಿತ್ಸಾಶಾಲೆಗಳಿಗೆ ಎಂದು ಪ್ರತಿಸ್ಪರ್ಧಿಯಾಗುವುದೋ ಆ ಸುದಿನವನ್ನು ಎದುರುನೋಡುತ್ತಿರುವುದಾಗಿ ಹೇಳಿದರು. ಇದು ಅನುಕೂಲವಾದಿಗಳ ಕಾಲಜ್ಞಾನದ ಮಾತಾಗಿ ತೋರಬಹುದು. ಆದರೆ ಡಾಕ್ಟರ್ ಉಸ್ಮಾನರವರು ಮುಂದಾಗಬಹುದಾದುದನ್ನು ಸೂಚಿಸುವುದಕ್ಕೆ ಮುಂಚೆ, ತಮ್ಮ ಹಿಂದಿನ ಅನುಭವವನ್ನೂ ಕೊಂಚ ತೋರಿಸಿ, ಈಗ ನಾವು ಅಸ್ತಿಭಾರಸ್ಥಾಪನೆಮಾಡುವ ಕಟ್ಟಡಗಳಿಗೂ 34 ವರ್ಷಗಳ ಹಿಂದೆ ಅವರು ಕೆಲಸಕ್ಕೆ ಸೇರಿದಾಗ ಸಾಮಾನ್ಯವಾಗಿ ಇದ್ದ ಕಟ್ಟಡಗಳಿಗೂ ಹೋಲಿಸಿದ್ದಲ್ಲಿ ಅವರ ಮಾತು ಬರಿಯ ಕಾಲಜ್ಞಾನದ ಮಾತಲ್ಲವೆಂದೂ ಕೇವಲ ಯಥಾರ್ಥವಾದುದೆಂದೂ ಕಂಡುಬರುತ್ತಿದ್ದಿತು. ಆ ಕಾಲದಿಂದಲೂ ಈವರೆಗೆ ಚಿಕಿತ್ಸಾಶಾಲೆಗಳಲ್ಲಿ ಆಗಿರುವ ಉತ್ತಮವಾದ ಬದಲಾವಣೆಗಳಿಗಾಗಿ ಡಾಕ್ಟರ್ ಉಸ್ಮಾನರವರು ಸಹ ಪಟ್ಟಿರುವ ಶ್ರಮವು ಅಲ್ಪವಾದುದಲ್ಲ. ಸದ್ಯದಲ್ಲೇ ಕೆಲಸದಿಂದ ವಿಶ್ರಾಂತಿಹೊಂದುವ ಇವರು ಮಾಡಿರುವ ಕೆಲಸವು ಬಹುಸಮರ್ಪಕವಾದುದೆಂದು ಈ ಸಮಯದಲ್ಲಿ ಸಂತೋಷದಿಂದ ಹೇಳುವೆವು.

ಮಹಿಳೆಯರೆ ಮತ್ತು ಮಹನೀಯರೆ! ಕಡೂರು ಡಿಸ್ಟ್ರಿಕ್ಟಿನ ಹೊಸ ಜನರಲ್ ಆಸ್ಪತ್ರೆಯ ಅಸ್ತಿಭಾರ ಸ್ಥಾಪನೆಯನ್ನು ಈಗ ಸಂತೋಷದಿಂದ ನೆರವೇರಿಸುವೆವು. ಭಗವಂತನು ಎಲ್ಲರಿಗೂ ಮಂಗಳವನ್ನುಂಟುಮಾಡಲಿ.

ಪತ್ರವ್ಯವಹಾರ.

☛ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಚಿಕ್ಕಮಗಳೂರಲ್ಲಿ ಶ್ರೀಮನ್ಮಹಾರಾಜರವರ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟ ಅರಳಗುಪ್ಪೆ ಮಲ್ಲೇಗೌಡರ ಜನರಲ್ ಆಸ್ಪತ್ರೆಯ ಶಂಕುಸ್ಥಾಪನಾ ಮಹೋತ್ಸವ ಸಮಾರಂಭ.

ಮಲನಾಡು ಪ್ರಾಂತವಾಗಿ ಕೇವಲ ಅನಾರೋಗ್ಯಕರವಾಗಿರುವ ಕಡೂರು ಡಿಸ್ಟ್ರಿಕ್ಟಿನ ಲಕ್ಷಾಂತರ ಬಡಜನಗಳ ಉಪಯೋಗಾರ್ಥವಾಗಿ, ಎಲ್ಲಾ ಸೌಕರ್ಯಗಳಿಂದ ಕೂಡಿದ ಜನರಲ್ ಆಸ್ಪತ್ರೆಯೊಂದನ್ನು ತಮ್ಮ ತಂದೆ ಮಲ್ಲೇಗೌಡರ ಸ್ಮಾರಕಾರ್ಥವಾಗಿ ಕಟ್ಟಿಸುವುದಕ್ಕೂ, ಮತ್ತು ಹೆರಿಗೆ ವಿಷಯವನ್ನು ಈ ಅನಾರೋಗ್ಯ ಪ್ರಾಂತದ ಮೂಢ ಹೆಂಗಸರುಗಳಿಗೆ ಬೋಧಿಸುವುದಕ್ಕಾಗಿ ಒಂದು ಮೆಟರ್ನಿಟಿ ಸ್ಕೂಲನ್ನು ತಮ್ಮ ತಾಯಿ ಸಿದ್ದಮ್ಮ ಹೆಗ್ಗಡತಿಯವರ ಜ್ಞಾಪಕಾರ್ಥವಾಗಿ, ಸ್ಥಾಪಿಸುವುದಕ್ಕು ಸಹ ಒಂದು ಲಕ್ಷ ರೂಪಾಯಿಗಳನ್ನೂ, ತಮ್ಮ ಹೆಸರಿನಿಂದ ಚಿಕ್ಕಮಗಳೂರಿನಲ್ಲಿ ಒಂದು ಮಿಡ್ಲ್‌ಸ್ಕೂಲ್ ಕಟ್ಟಡವನ್ನು ಕಟ್ಟಿಸಲು ಹತ್ತು ಸಹಸ್ರ ರೂಪಾಯಿಗಳನ್ನೂ ಶ್ರೀಮಂತ. ಅರಳಗುಪ್ಪೆ ಕಾಫಿಪ್ಲಾಂಟರು ಧರ್ಮಪ್ರಕಾಶ ಚಂದ್ರೇಗೌಡರವರು ದಾನಮಾಡಿರುವ ವಿಷಯ ಸರ್ವವಿಧಿತವಾಗಿಯೇ ಇರುತ್ತದಷ್ಟೆ. ಈ ರೀತಿ ತಾವು ಸಮದೃಷ್ಟಿಯಿಂದ ಮಾಡಿರತಕ್ಕ ಮಹತ್ತರವಾದ ಧರ್ಮಕಾರ್ಯವು ಚಿರಕಾಲ ನಡಿಯಬೇಕಾದರೆ, ಅರಳಗುಪ್ಪೆ ಮಲ್ಲೇಗೌಡರ ಜನರಲ್ ಆಸ್ಪತ್ರೆಯ ಶಂಕುಸ್ಥಾಪನಾ ಮಹೋತ್ಸವವು ನಮ್ಮ ರಾಜರ್ಷಿಗಳಾದ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಅಮೃತಹಸ್ತದಿಂದಲೇ ನೆರವೇರಿಸಲ್ಪಡಬೇಕೆಂಬುವ ತಮ್ಮ ಸಂಕಲ್ಪವನ್ನು ದಾತೃಗಳಾದ ಧರ್ಮಪ್ರಕಾಶರವರು ಪ್ರಜೆಗಳ ಕಾಂಕ್ಷೆಯನ್ನು ಸಾಧ್ಯವಾದಮಟ್ಟಿಗೂ ನೆರವೇರಿಸುವುದರಲ್ಲಿ ಬದ್ಧಾದರರಾದ ದಿವಾನ್ ಸಾಹೇಬರವರಲ್ಲಿ ಅರಿಕೆಮಾಡಿಕೊಂಡಿದ್ದಲ್ಲದೆ ಶ್ರೀಮದ್ಯುವರಾಜರವರ ಸವಾರಿಯು ಸಹ ಮಹಾಪ್ರಭುಗಳವರ ಜೊತೆಯಲ್ಲಿ ದಯಮಾಡಿಸಿ ರತ್ನಕ್ಕೆ ಕುಂದಣವನ್ನು ಕೆತ್ತಿದಂತೆ ಈ ಮಹೋತ್ಸವವನ್ನು ಉಭಯ ಮಹಾಸ್ವಾಮಿಗಳೂ ತಮ್ಮ ಆಗಮನದಿಂದ ಪವಿತ್ರತಮವಾದದ್ದನ್ನಾಗಿ ಮಾಡುವಂತೆ ಆಳುವ ಮಹಾಸ್ವಾಮಿಯವರಲ್ಲಿ ಬಿನ್ನಯಿಸಿ ಆರೀತಿ ನಡೆಯಿಸಿಕೊಡಬೇಕಾಗಿಯು ಸಹ ಅರಿಕೆಮಾಡಿಕೊಂಡ ಪ್ರಕಾರ ದಿವಾನ್ ಸಾಹೇಬರವರು ಧರ್ಮಪ್ರಕಾಶ ಚಂದ್ರೇಗೌಡರವರ ರಾಜಭಕ್ತಿಯುಕ್ತವಾದೀ ಪ್ರಾರ್ಥನೆಯನ್ನು ಮಹಾಸ್ವಾಮಿಯವರಿಗೆ ನಿವೇದಿಸಲು, ಆಳುವ ಮಹಾಸ್ವಾಮಿಯವರು ಪ್ರಜಾಸೌಕರ್ಯವೇ ತಮ್ಮ ಜೀವಿತದ ಪರಮ ಧ್ಯೇಯವೆಂಬ ಸ್ವಾಭಾವಿಕವಾದ ಸದ್ಗುಣಯುಕ್ತರಾಗಿ 1929 ನೇ ಜನವರಿ ತಾ|| 26ರಲ್ಲಿ ಈ ಮಹೋತ್ಸವ ಕಾರ್ಯವನ್ನು ಆಗಮಾಡಿಸುವುದಾಗಿ ಅಭಯವನ್ನು ದಯಪಾಲಿಸಿದರು. ಮಹಾಸ್ವಾಮಿಗಳವರು ಶ್ರೀಮದ್ಯುವರಾಜರೊಡನೆ ಚಿಕ್ಕಮಗಳೂರಿಗೆ ದಯಮಾಡಿಸುವರೆಂಬ ಆನಂದವಾರ್ತೆಯು ಧರ್ಮಪ್ರಕಾಶರಿಗೆ ತಿಳಿದ ಕೂಡಲೆ ದ್ವಿಗುಣವಾದ ಉತ್ಸಾಹಭರಿತರಾಗಿ ಮಹಾಸ್ವಾಮಿಗಳವರ ಆಗಮನಾರ್ಥವಾಗಿ ನಡೆಯಬೇಕಾದ ಏರ್ಪಾಡುಗಳನ್ನೆಲ್ಲ ಹಗಲು ರಾತ್ರಿ ಎನ್ನದೆ ತೃಪ್ತಿಕರವಾಗಿ ನೆರವೇರಿಸಿ ಮನೋಹರವಾಗಿಯೂ, ವಿಶಾಲವಾಗಿಯೂ ಇರುವ ದಿವ್ಯ ಮಂಟಪವನ್ನು ಮಹಾಸ್ವಾಮಿಯವರ ದರ್ಬಾರಿಗಾಗಿ ಜನರಲ್ ಆಸ್ಪತ್ರೆಯ ಆವರಣದಲ್ಲಿ ರಚಿಸಿ ಸಿದ್ಧಗೊಳಿಸಿದರು. ಈ ಮಂಟಪದ ರಚನೆಯ ಕಾರ್ಯದಲ್ಲಿಯೂ, ಮಹೋತ್ಸವದ ದಿವಸ ಸದರಿ ಸಭಾಮಂಟಪದಲ್ಲಿ ಮಾಡಿದ್ದ ತೃಪ್ತಿಕರವಾದ ಏರ್ಪಾಡುಗಳಲ್ಲಿಯೂ ಸಹ ಚಿಕ್ಕಮಗಳೂರು ಟವನ್ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಗೋಪಾಲಕೃಷ್ಣನಾಯ್ಕರು, ಕಾಫಿಪ್ಲಾಂಟರು ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ್ ಮ|| ಸಿ. ಪಿ. ಬಸವೇಗೌಡರವರು ಮತ್ತು ಆರ್. ಎ. ಮೆಂಬರ್ ಕೋಲಾರದ ಮ|| ವಿ. ಆರ್. ಚಿಕ್ಕಚೆನ್ನಪ್ಪಸೆಟ್ಟರು ಮತ್ತು ಬೆಂಗಳೂರು ಮಲ್ಲೇಶ್ವರದ ವೇ|| ಎಚ್. ಗುರುನಂಜಒಡೆಯರವರು ಧರ್ಮಪ್ರಕಾಶರವರಿಗೆ ತುಂಬಾ. ಸಹಾಯಕರಾಗಿದ್ದರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ.

ಚಿಕ್ಕಮಗಳೂರಿನ ಪುರನಿವಾಸಿಗಳೂ, ಮ್ಯುನಿಸಿಪಾಲಿಟಿಯವರು ಸಹ ತಮ್ಮ ಅನೋಘವಾದ ರಾಜಭಕ್ತಿಯನ್ನು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಸಮರ್ಪಿಸಲು ತಕ್ಕ ಏರ್ಪಾಡುಗಳನ್ನು ಮಾಡಿದರು. ಪ್ರಭುವರ್ಯರ ಆಗಮನದ ಪ್ರೋಗ್ರಾಂ ತಲುಪಿದ ನಂತರ ಇದ್ದ ಒಂದೇ ಒಂದು ವಾರದ ಅತ್ಯಲ್ಪ ಅವಧಿಯಲ್ಲಿ ಚಿಕ್ಕಮಗಳೂರು ಪಟ್ಟಣವು ಸಾಕ್ಷಾತ್ ಮಹೇಂದ್ರನ ನಗರದಂತೆ ದೇದೀಪ್ಯಮಾನವಾಗಿ ಕಂಗೊಳಿಸುವ ಹಾಗಾಯಿತೆಂದರೆ ಇಲ್ಲಿನ ಪ್ರಜೆಗಳ ರಾಜಭಕ್ತಿಯ ಮಹತ್ವವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಪ್ರಜೆಗಳೆಲ್ಲರೂ ಮಹಾಸ್ವಾಮಿಗಳವರ ಆಗಮನದ ಶುಭದಿವಸವನ್ನು ಚಕೋರವು ಚಂದ್ರನನ್ನು ನಿರೀಕ್ಷಿಸುತ್ತಿರುವಂತೆ ಆತ್ಯಾತುರದಿಂದ ನಿರೀಕ್ಷಿಸುತ್ತಿದ್ದರು. ಈ ಮಹೋತ್ಸವಕ್ಕೆ ಹಜರತ್ ದಿವಾನ್‌ಸಾಹೇಬರವರು, ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಸರ್ ಚಾರಲ್ಸ್ ಟಾಡ್ ಹಂಟರು ಸಾಹೇಬರು, ಹುಜೂರು ಸೆಕ್ರೆಟರಿಯವರಾದ ಮ|| ತಂಬುಚೆಟ್ಟಿರವರೂ, ರೆವಿನ್ಯೂ ಕಮಿಷನರ್ ಮ|| ಡಿಸೌಜಾ ಸಾಹೇಬರವರು, ಎಕ್ಸೈಜ್ ಕಮಿಷನರ್ ಮ|| ಸೈಯದ್ ತಾಜ್‌ಪೀರನ್ ಸಾಹೇಬರವರು, ಸೀನಿಯರ್ ಸರ್ಜನ್ ಡಾಕ್ಟರ್ ಉಸ್ಮಾನ್ ಸಾಹೇಬರವರು ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರಾದ ಮ|| ಕೆ. ಹೆಚ್. ರಾಮಯ್ಯನವರು, ಸರ್ಕಾರದ ಲಾ. ಸೆಕ್ರೆಟರಿಯವರಾದ ಮ|| ಪಿ. ಮಹದೇವಯ್ಯನವರು ಶಿವಮೊಗ್ಗ ಸಬ್‌ಜಡ್ಜರಾದ ಮ|| ಜಿ. ಪರಮಶಿವಯ್ಯನವರೇ ಮೊದಲಾದ ಅನೇಕ ದೊಡ್ಡದೊಡ್ಡ ಆಫೀಸರುಗಳೂ ಅರಮನೆಯ ರಿಟೈರ್ಡ್ ಮುಜರಾಯಿ ಭಕ್ಷಿಯವರಾದ ಮ|| ರಾಜಕವಿ ಲಿಂಗರಾಜೇ ಅರಸಿನವರು, ಮ|| ಸುಬ್ರಹ್ಮಣ್ಯರಾಜೇ ಅರಸಿನವರು ಮ|| ಸರ್ದಾರ್ ಎಂ. ಗೋಪಾಲಕೃಷ್ಣೇ ಅರಸಿನವರು, ಮ|| ಶ್ರೀಕಂಠ ಲಕ್ಷ್ಮೀಕಾಂತರಾಜೇ ಅರಸಿನವರು ಶ್ರೀಮದ್ಯುವರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಮ|| ಎಸ್. ಪಿ. ದೇವರಾಜೇ ಅರಸಿನವರು ದಿವಾನರವರ ಪರ್ಸನಲ್ ಅಸಿಸ್ಟೆಂಟ್ ಮ|| ಮದನಗೋಪಾಲರಾಜೇ ಅರಸಿನವರು ಮೊದಲಾದ ರಾಜಬಂಧುವರ್ಗದ ದೊಡ್ಡಮನುಷ್ಯರುಗಳೂ ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಅನೇಕ ಯೂರೋಪಿಯನ್ ಮತ್ತು ನೇಟಿವ್ ಕಾಫಿಪ್ಲಾಂಟರುಗಳೂ ಮೈಸೂರು ದೇಶದ ಎಲ್ಲಾ ಡಿಸ್ಟ್ರಿಕ್ಟುಗಳಿಂದ ಆಹ್ವಾನಿಸಲ್ಪಟ್ಟಿದ್ದ ವೀರಶೈವ ಮತ್ತು ಇತರ ಎಲ್ಲಾ ಜನಾಂಗಗಳ ದೊಡ್ಡಮನುಷ್ಯರುಗಳೂ ಧರ್ಮಪ್ರಕಾಶ ಚಂದ್ರೇಗೌಡರವರ ಬಂಧು ಮಿತ್ರರುಗಳೂ ಚಿಕ್ಕಮಗಳೂರಿಗೆ ದಯಮಾಡಿ ಮ|| ಚಂದ್ರೇಗೌಡರವರ ರಾಜಭಕ್ತಿ ಪ್ರದರ್ಶನಕ್ಕೆ ಸಂಪೂರ್ಣವಾಗಿ ನೆರವಾಗಿದ್ದರೆಂದು ತಿಳಿಸಲು ತುಂಬಾ ಆನಂದಪಡುತ್ತೇನೆ.

ಈ ಮಹೋತ್ಸವ ದಿನವಾದ ಜನವರಿ ತಾ|| 26ನೇ ಶನಿವಾರ ಬೆಳಗಿನ ಜಾವದಿಂದಲೂ ಡಿಸ್ಟ್ರಿಕ್ಟಿನ ನಾನಾಭಾಗಗಳಿಂದ ಪ್ರಜೆಗಳು ಮಹಾಸ್ವಾಮಿಗಳ ದರ್ಶನ ಕುತೂಹಲವುಳ್ಳವರಾಗಿ ಸಾವಿರಾರು ಗಟ್ಟಲೆ ಒಂದು ಪಟ್ಟಣದ ಎಲ್ಲಾ ಭಾಗಗಳಲ್ಲಿಯೂ ತುಂಬಿಬಿಟ್ಟರು. ಪುರಪ್ರಮುಖರು ರಾಜಬೀದಿಯುದ್ದಕ್ಕೂ ತಂತಮ್ಮ ಮನೆಗಳ ಮುಂದೆ ದಿವ್ಯಮಂಟಪಗಳನ್ನು ರಚಿಸಿಕೊಂಡು ಫಲಪುಷ್ಪಸಹಿತವಾಗಿ ಮಹಾಪ್ರಭುಗಳವರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದರು. ಮೊದಲೇ ಗೊತ್ತಾಗಿದ್ದ ಪ್ರಕಾರ ಶ್ರೀಮನ್ಮಹಾರಾಜರವರೂ ಅವರ ಎಡ ಪಾರ್ಶ್ವದಲ್ಲಿ ಶ್ರೀಮದ್ಯುವರಾಜರವರೂ ಮುಂಭಾಗದಲ್ಲಿ ದಿವಾನ್ ಸಾಹೇಬರವರು ಸಹ ದಿವ್ಯವಾದ ಮೋಟಾರುಕಾರಿನಲ್ಲಿ ಮಂಡಿಸಿ ಪ್ರಾತಃಕಾಲ 9 ಘಂಟೆಗೆ ಪುರಪ್ರವೇಶಮಾಡಿದರು. ಮಹಾಸ್ವಾಮಿಗಳವರ ಆಗಮನವಾದ ಕೂಡಲೆ ಎಲ್ಲಾ ಕಡೆಗಳಲ್ಲಿಯೂ ಮಂಗಲವಾದ್ಯಗಳು ಭೋರ್ಗರೆಯ ತೊಡಗಿದವು. ಸುವಾಸಿನಿಯರು ಆರತಿಗಳನ್ನು ಹಿಡಿದೆತ್ತಿದರು. ಪ್ರಜೆಗಳೆಲ್ಲರೂ ನಾನಾ ಕಡೆಗಳಿಂದ ಜಯಜಯನಿನಾದ ಮಾಡುತ್ತಿದ್ದರು. ಹೆಜ್ಜೆ ಹೆಜ್ಜೆಗೂ ರಚಿಸಲ್ಪಟ್ಟಿದ್ದ ದಿವ್ಯಮಂಟಪಗಳಲ್ಲಿ ಪುರಪ್ರಮುಖರು ಮಹಾಸ್ವಾಮಿಗಳವರಿಗೆ ಫಲಪುಷ್ಪಗಳನ್ನು ಭಕ್ತಿಪುರಸ್ಸರವಾಗಿ ಅರ್ಪಿಸುತ್ತಿದ್ದರು. ಪ್ರಭುವರ್ಯರಾದರೋ, ತಮ್ಮ ಸ್ವಾಭಾವಿಕವಾದ ಹಸನ್ಮುಖಗಳಿಂದ ಮಂದಹಾಸವನ್ನು ಎಲ್ಲಾ ಪ್ರಜೆಗಳಮೇಲೂ ಬೀರುತ್ತಾ ನಿಧಾನವಾಗಿ ಉತ್ಸವದಿಂದ ಬಿಜಯಂಗೈಯುತ್ತಾ ಇದ್ದರು. ಮಹಾಸ್ವಾಮಿಗಳವರ ದರ್ಶನವಾದ ಕೂಡಲೆ ಪ್ರಜೆಗಳು ಮಾಡುತ್ತಿದ್ದ ಕರತಾಡನೆಗಳಿಗೆ ಕೊನೆ ಮೊದಲೇ ಇರಲಿಲ್ಲವೆಂದಮೇಲೆ ಆ ಮಹೋತ್ಸವದ ಆನಂದವನ್ನು ಹೆಚ್ಚು ವರ್ಣಿಸಬೇಕಾದ ಅಗತ್ಯವಿಲ್ಲ.

ಈ ಉತ್ಸವವು ಸುಮಾರು 10½ ಘಂಟೆಗೆ ಧರ್ಮಪ್ರಕಾಶ ಚಂದ್ರೇಗೌಡರವರ ದಿವ್ಯ ಮಂಟಪದ ಬಳಿಗೆ ಚಿತ್ತೈಸಿತು. ಮಹಾಸ್ವಾಮಿಗಳವರ ಸವಾರಿಯು ಕಾರಿನಿಂದ ಕೆಳಕ್ಕೆ ಬಿಜಯಂಗೈಸಿದ ಕೂಡಲೆ ಅಲ್ಲಿ ನೆರೆದಿದ್ದ ವೀರಶೈವ ವೈದಿಕ ವರ್ಗದವರು ಮಹಾಸ್ವಾಮಿಗಳವರಿಗೆ ಸುಸ್ವಾಗತವನ್ನು ಬಯಸಿ, ಫಲಮಂತ್ರಾಕ್ಷತೆಗಳನ್ನು ಅರ್ಪಿಸಿದರು. ಅನಂತರ ಪ್ರೋಗ್ರಾಂ ಪ್ರಕಾರ ಡೆಪ್ಯುಟಿ ಕಮಿಷನರ್ ಸಾಹೇಬರವರು ಮೊದಲು ಧರ್ಮಪ್ರಕಾಶ ಚಂದ್ರೇಗೌಡರನ್ನೂ, ತರುವಾಯ ಮ್ಯುನಿಸಿಪಲ್ ಕೌನ್ಸಿಲರುಗಳನ್ನೂ ಮಹಾಸ್ವಾಮಿಯವರಿಗೆ ಪರಿಚಯಮಾಡಿಸಿದರು. ಬಳಿಕ ಆ ಮಂಟಪದ ತುಂಬ ತಿಕ್ಕಿರಿದಿದ್ದ ಸಹಸ್ರಾರು ಪ್ರಜೆಗಳ ಜಯಘೋಷಕರತಾಡನಗಳ ಮತ್ತು ವೀರಶೈವ ವೈದಿಕರ ವೇದಘೋಷಗಳ ಮಧ್ಯೆ ಉಭಯ ಮಹಾಸ್ವಾಮಿಗಳವರೂ ಮಂಟಪದೊಳಕ್ಕೆ ಚಿತ್ತೈಸಿ ಪೀಠಗಳನ್ನಲಂಕರಿಸಿದರು. ಕೂಡಲೆ ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರು ವಿಜ್ಞಾಪನಾಪತ್ರಿಕೆಯನ್ನು ಓದಿ ಅಂದವಾದ ಕ್ಯಾಸ್ಕೆಟ್ಟಿನಲ್ಲಿಟ್ಟು ಒಪ್ಪಿಸಿದರು ಮತ್ತು ವೈಸ್ ಪ್ರೆಸಿಡೆಂಟರು ಮ|| ಗೋಪಾಲಕೃಷ್ಣನಾಯಕರು, ಉಭಯ ಮಹಾಸ್ವಾಮಿಗಳವರಿಗೂ ಹಾರ ತುರಾಯಿಗಳನ್ನರ್ಪಿಸಿದರು. ತದನಂತರ ಸೀನಿಯರ್ ಸರ್ಜನ್ನರವರು ಅರಳಗುಪ್ಪೆ ಮಲ್ಲೇಗೌಡರ ಜನರಲ್ ಅಸ್ಪತ್ರೆಯ ಆವಶ್ಯಕತೆಯ ವಿಷಯಕವಾದ ರಿಪೋರ್ಟನ್ನೋದಿ ಒಪ್ಪಿಸಿದರು. ತರುವಾಯ ಧರ್ಮಪ್ರಕಾಶ ಚಂದ್ರೇಗೌಡರ 3 ನೆಯ ಮಗ ಮ|| ಎ.ಸಿ. ದೇವೇಗೌಡ, ಬಿ.ಎ., ಯವರು ಮಹಾಸ್ವಾಮಿಗಳವರಿಗೆ ವಂದಿಸಿ ತಮ್ಮ ತಂದೆಯವರ ಪರವಾಗಿ ಭಕ್ತಿಪೂರ್ವಕವಾದ ಬಿನ್ನವತ್ತಲೆಯನ್ನು ಓದಿದ ಮೇಲೆ ಧರ್ಮಪ್ರಕಾಶ ಚಂದ್ರೇಗೌಡರವರು ಅತ್ಯಂತ ಅಂದವಾಗಿ ತಯಾರಿಸಿದ್ದ ಮನೋಹರವಾದ ಹೊಸಮಾದರಿಯ ಕ್ಯಾಸ್ಕೆಟ್‌ನಲ್ಲಿ ಬಿನ್ನವತ್ತಲೆಯನ್ನಿಟ್ಟು ಮಹಾಸ್ವಾಮಿಯವರಿಗೆ ಒಪ್ಪಿಸಿ ಹಾರ ತುರಾಯಿಗಳನ್ನು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಸಮರ್ಪಿಸಿದರು. ಮಹಾಸ್ವಾಮಿಯವರು ಮೇಲ್ಕಂಡ 2 ಬಿನ್ನವತ್ತಲೆಗಳಿಗೂ ಉತ್ತರವನ್ನು ದಯಪಾಲಿಸಿ ಫೌಂಡೇಷನ್ ಸ್ಟೋನ್ ಬಳಿಗೆ ಬಿಜಯಮಾಡಿಸಿದರು. ಆಗ ಮಂಗಳವಾದ್ಯದಿಂದಲೂ, ವೇದಘೋಷದಿಂದಲೂ ಸಭೆಯೆಲ್ಲವೂ ತುಂಬಿತುಳುಕುತ್ತಿರಲು ಮಹಾಪ್ರಭುಗಳವರು ತಮ್ಮ ಅಮೃತ ಹಸ್ತದಿಂದ ಶಂಕುಸ್ಥಾಪನಾ ಮಹೋತ್ಸವವನ್ನು ಅತ್ಯಂತ ಆನಂದದಿಂದ ಆಗಮಾಡಿಸಿ, ಬೀದಿಯುದ್ದಕ್ಕೂ ದರ್ಶನಾರ್ಥವಾಗಿ ಕಿಕ್ಕಿರಿದು ನಿಂತಿದ್ದ ಪ್ರಜೆಗಳಿಗೆ ದರ್ಶನವೀಯುತ್ತಾ ಬಿಡಾರಕ್ಕೆ ಚಿತ್ತೈಸಿದರು.

ಅದೇ ದಿನ ಸಾಯಂಕಾಲ 7 ಗಂಟೆ ಸಮಯದಲ್ಲಿ ಮ|| ಚಂದ್ರೇಗೌಡರು ತಮ್ಮ ಮೂರು ಜನ ಮಕ್ಕಳು ಮ|| ರಾ|| ಗಳಾದ ಎ. ಸಿ. ಮಲ್ಲೇಗೌಡರು, ಎ. ಸಿ. ನಿರ್ವಾಣಿಗೌಡರು, ಬಿ. ಎ., ಮತ್ತು ಎ. ಸಿ. ದೇವೇಗೌಡರು, ಬಿ. ಎ., ಇವರುಗಳೊಂದಿಗೆ ಮಹಾಪ್ರಭುಗಳವರ ಬಿಡಾರಕ್ಕೆ ಹೋಗಿ ಶ್ರೀಮದ್ಯುವರಾಜರವರ ಮತ್ತು ದಿವಾನ್ ಸಾಹೇಬರವರ ಸಮಕ್ಷಮ ಶ್ರೀಮನ್ಮಹಾರಾಜರವರ ದರ್ಶನವನ್ನು ಪಡೆದರು. ಆಗ ಕೃಪಾಮೂರ್ತಿಗಳಾದ ಮಹಾಸ್ವಾಮಿಯವರು ಶ್ರೀಮಂತರ ಗೃಹಕೃತ್ಯದ ಯೋಗಕ್ಷೇಮವನ್ನೂ, ಮಕ್ಕಳ ವಿದ್ಯಾಭಿವೃದ್ಧಿಯ ವಿಷಯವನ್ನೂ, ಆಸ್ತಿಗಳ ಕಾರ್ಯಭಾರಕ್ರಮವನ್ನೂ ಲಾಲಿಸಿದ್ದಲ್ಲದೆ, ಸ್ಥಳದ ಕುಂದುಕೊರತೆಗಳನ್ನೂ ಅವುಗಳ ನಿವಾರಣೆಗೆ ಬೇಕಾದ ಸಲಹೆಗಳನ್ನೂ ಸಹ ಕೇವಲ ಕೃಪೆಯಿಂದ ವಿಚಾರಿಸಿ ಚಿತ್ತಕ್ಕೆ ತಂದುಕೊಂಡರು ಎಂದೂ, ಅನೇಕ ಜನ ಮಕ್ಕಳುಗಳುಳ್ಳ ಭಾರಿ ಸಂಸಾರಿಗಳಾದಾಗ್ಯೂ ಸಾರ್ವಜನಿಕವಾದ ಮತ್ತು ಅತ್ಯಾವಶ್ಯಕವಾದ ಈ ಧರ್ಮಕಾರ್ಯಕ್ಕೆ ಬಹಳ ಉದಾರವಾಗಿ ಸಹಾಯಮಾಡಿ ಇಹಪರ ಸುಖಗಳೆರಡಕ್ಕೂ ಮಾರ್ಗವನ್ನುಂಟುಮಾಡಿಕೊಂಡಿರೆಂದು ಮಹಾಸ್ವಾಮಿಯವರು ಅಪ್ಪಣೆ ಕೊಡಿಸಿದರೆಂದೂ ಕೇಳುತ್ತೇನೆ. ಇದಲ್ಲವೇ ನಿಜವಾದ ಪ್ರಭುಗಳಸಹೃದಯ ಇಂತಹ ಪ್ರಭುಗಳನ್ನು ಹೊಂದಿರುವ ಮೈಸೂರುಮಾತೆಯೇ ಧನ್ಯಳು! ಈ ಪ್ರಭುವರ್ಯರು ಚಿರಕಾಲ ಬಂಧುಬಾಂಧವರೊಂದಿಗೆ ಆಯುರಾರೋಗ್ಯದಿಂದ ಕೂಡಿ ನಮ್ಮನ್ನಾಳುತ್ತ ದೇಶಾಭ್ಯುದಯವನ್ನುಂಟುಮಾಡಿ ಬಾಳಲಿ! ಇಂತಹ ಸತ್ಪ್ರಭುಗಳ ಸೇವೆಯನ್ನು ತಮ್ಮ ಸ್ವಸ್ಥಳದಲ್ಲಿಯೇ ನೆರವೇರಿಸಿ ತನ್ಮೂಲಕ ಈ ಮಲೆನಾಡಿನ ಬಹುಭಾಗದ ಪ್ರಜೆಗಳಿಗೆ ಮಹಾಸ್ವಾಮಿಯವರ ದರ್ಶನ ಸೌಲಭ್ಯವನ್ನುಂಟುಮಾಡಿಕೊಟ್ಟ ಶ್ರೀಮಂತ ಧರ್ಮಪ್ರಕಾಶ ಚಂದ್ರೇಗೌಡರೇ ನಿಜವಾದ ರಾಜಭಕ್ತರು. ಸತ್ಪ್ರಭುಗಳಿಗೆ ತಕ್ಕ ಸತ್ಪ್ರಜೆಯೆಂದರೆ ಇತಂಹ ಮಹನೀಯರೇ ಅಲ್ಲವೆ! ಈ ನಮ್ಮ ಧರ್ಮಪ್ರಕಾಶರು ಸರ್ವರೊಂದಿಗೆ ಚಿರಕಾಲ ಆಯುರಾರೋಗ್ಯ ಐಶ್ವರ್ಯದಿಂದ ಕೂಡಿಬಾಳುತ್ತ ನಮ್ಮ ಶ್ರೀಮನ್ಮಹಾರಾಜರವರ ಸೇವೆಯನ್ನು ಯಥಾಶಕ್ತಿಯಿಂದ ಮಾಡುತ್ತಾ ಇತೋಪ್ಯತಿಶಯವಾದ ದೇಶಾಭ್ಯುದಯ ಕಾರ್ಯಗಳನ್ನು ಮಾಡುವ ಶಕ್ತಿಯನ್ನು ಅನುಗ್ರಹಿಸಬೇಕೆಂದು ಅಚಿನ್ತ್ಯನಾದ ಪರಶಿವನನ್ನು ಅತ್ಯಂತ ಭಕ್ತಿಯಿಂದ ಬೇಡುವೆನು.

ಈ ಮಹೋತ್ಸವಕಾರ್ಯವು ಸಾಂಗವಾಗಿ ನೆರವೇರುವಂತೆ ಸಮರ್ಪಕವಾದ ಏರ್ಪಾಡುಗಳನ್ನು ಮಾಡಿಸಿದ್ದ ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರೂ, ಈ ಕಾರ್ಯದಲ್ಲಿ ಮೊದಲಿಂದ ಕೊನೆಯವರೆಗೂ ಧರ್ಮಪ್ರಕಾಶ ಚಂದ್ರೇಗೌಡರಿಗೆ ನೆರವಾಗಿ ಶ್ರಮವಹಿಸಿ ಮೆಹನತ್ತು ಮಾಡಿದ ಮ|| ಗಳಾದ ಸಿ. ಪಿ. ಬಸವೇಗೌಡರು ಮತ್ತು ವೈಸ್‌ಪ್ರೆಸಿಡೆಂಟರು ಗೋಪಾಲಕೃಷ್ಣನಾಯ್ಕರವರು ಸಹ ಕೇವಲ ವಂದನೀಯರಾಗಿದ್ದಾರೆ. ನಮ್ಮ ಧರ್ಮಪ್ರಕಾಶ ಚಂದ್ರೇಗೌಡರಿಗೂ ಮಲೆನಾಡಿನ ಪ್ರಜೆಗಳಿಗೂ ಶ್ರೀ ಸೀತಾಳ ಮಲ್ಲಿಕಾರ್ಜುನಸ್ವಾಮಿಯವರು ನಿಷ್ಕಲ್ಮಷವಾದ . ರಾಜಭಕ್ತಿಯನ್ನು ಸರ್ವದಾ ದಯಪಾಲಿಸಿ ಚಿರಕಾಲ ಕಾಪಾಡಲೆಂದು ಆ ಚಿನ್ಮಯನನ್ನು ಬೇಡುವ

ಓರ್ವ ಪ್ರತ್ಯಕ್ಷದರ್ಶಿ.

ಪ್ರಕಟನ್.

ನಮ್ಮಲ್ಲಿ **ಸಿನೋಮಕ್ಕೆ** ಸಂಬಂಧಪಟ್ಟ ಖ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಿಷನ್, ಆರ್ಕ್‌ಲ್ಯಾಂಪು, ಡೈನೋಮು, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12—2]



9

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ”

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವುಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಿತ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ, ಬ್ರಾಂಚಾಫೀಸು ಚಿಕ್ಕಪೇಟೆ, ಬೆಂಗಳೂರು ಸಿಟಿ.	“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ”, ಶ್ರೀ ಸೀತಾರಾಘವವೈದ್ಯಶಾಲಾ, ಹೆಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ


(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50—15]

೧೯೨೯ ನೆಯ ಇಸವಿ ಫೆಬ್ರವರಿ ತಾ|| ೨ ರಿಂದ ೧೯೨೯ ನೆಯ ಇಸವಿ ಫೆಬ್ರವರಿ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಪುಷ್ಯ ಬಹುಳ ಅಷ್ಟಮಿಯಿಂದ ಪುಷ್ಯ ಬಹುಳ ಚತುರ್ದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ
2	[1]ಶನಿ	ಅಷ್ಟ	8-50	ವಿಶಾ	44-36	20
3	ಭಾನು	ನವ	13-18	ಅನೂ	50-39	21
4	ಸೋಮ	ದಶ	18-25	ಜ್ಯೇಷ್ಠ	57-12	22
5	[2]ಮಂಗಳ	ಏಕಾ	23-54	ಮೂಲ	60	23
6	ಬುಧ	ದ್ವಾದ	29-12	ಮೂಲ	3-50	24
7	ಗುರು	ತ್ರಯೋ	33-58	ಪೂಷಾ	9-57	25
8	[3]ಶುಕ್ರ	ಚತು	37-49	ಉಷಾ	15-20	26

(1) ಮಳೆನಕ್ಷತ್ರ-ಶ್ರವಣ ೪ ನೆಯಪಾದ. (2) ಮಳೆನಕ್ಷತ್ರ-ಧನಿಷ್ಠ ೧ ನೆಯಪಾದ. ಮಳೆನಕ್ಷತ್ರ ಧನಿಷ್ಠ ೨ ನೆಯಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½" × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5" × 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್‌ಗಟ್ಟಲೆ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಚ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

[50—12]

ಮಣಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ವಲನ್ನೆತ್ತ ತೇಜರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟಪ್ರದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಯಿಂಸದಾಪೊರೆಗೆ ಗೌರೀಕಾಮುಕಂಪ್ರೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೯ ನೆಯ ಶನಿವಾರ [ಸಂಚಿಕೆ ೬

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೩—೦
ಸಟೀಕ ವೀರಶೈವ ವಿವಾಹವಿಧಿ	೦—೯—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ¼ ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮದ್ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತದೆ. ಶ್ರೀಮದ್ಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಿಂಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧುರ್ಯರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡತಕ್ಕ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎನ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

17

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ”

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ವುಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಿತ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ, ಬ್ರಾಂಚಾಫೀಸು ಚಿಕ್ಕಪೇಟೆ, ಬೆಂಗಳೂರು ಸಿಟಿ.	“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ”, ಶ್ರೀ ಸೀತಾರಾಘವವೈದ್ಯಶಾಲಾ, ಹೆಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50—16]

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½" × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5" × 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಡಜನ್‌ಗಟ್ಟಲೆ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಚ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

[50—13]

ಮಣಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಫೆಬ್ರವರಿ ತಾ|| ೯ ನೆಯ ಶನಿವಾರ.

ನವೀನಾಸ್ತ್ರ ನಿರ್ಮಾಣವೂ, ಯುದ್ಧ ಸನ್ನಾಹವೂ.

ಪ್ರಾಚೀನಕಾಲದ ರಾಮಾಯಣ ಭಾರತ ಯುದ್ಧಗಳಲ್ಲಿ ಶತ್ರುಗಳನ್ನು ನಿಗ್ರಹಿಸಲು ಆಗ್ನೇಯಾಸ್ತ್ರ, ವಾಯವ್ಯಾಸ್ತ್ರ, ಸರ್ಪಾಸ್ತ್ರ ಮೊದಲಾದ ವಿಚಿತ್ರ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿರುವುದಷ್ಟೆ. ಈಗ ಅಂತಹ ಅಸ್ತ್ರಗಳ ವೈಚಿತ್ರ್ಯವನ್ನು ಮರೆಸುವಂತಹ ನವೀನ ಅಸ್ತ್ರಗಳು ನಿರ್ಮಿಸಲ್ಪಡುತ್ತಿರುವುವು. ಪಾಶ್ಚಾತ್ಯ ಜನಾಂಗಗಳಲ್ಲಿ ದ್ವೇಷಾಸೂಯೆಗಳು ಹೆಚ್ಚಿ ಒಬ್ಬರನ್ನೊಬ್ಬರು ನಿಗ್ರಹಿಸಲು ಅಸಾಧಾರಣವಾದ ಸನ್ನಾಹಗಳನ್ನು ಮಾಡುತ್ತಿರುವರು. ಆಯಾ ಜನಾಂಗಗಳ ವಿಜ್ಞಾನಶಾಸ್ತ್ರವೇತ್ತರು ತಮ್ಮ ಮೇಧಾಶಕ್ತಿಯಿಂದ ಮಾನವರ ಜೀವನ ಸೌಖ್ಯಕ್ಕೆ ಸಾಧಕವಾದ ಸೌಲಭ್ಯ ಸೌಕರ್ಯಗಳನ್ನು ನಿರ್ಮಿಸುವುದರ ಬದಲು ಬಿಡುವಿಲ್ಲದೆ ಪರಿಶೋಧನೆಗಳನ್ನು ಮಾಡಿ ಪ್ರಾಣನಾಶಕ್ಕೆ ಅತಿ ಸುಲಭೋಪಾಯಗಳನ್ನು ಕಂಡುಹಿಡಿಯುತ್ತಿರುವರು. ಈ ವಿಧವಾದ ಪರಿಶೋಧನೆಗಳ ಮೇಲ್ಮೆಗಾಗಿ ಪಾಶ್ಚಾತ್ಯರಲ್ಲಿ ಸ್ಪರ್ಧೆಯು ನಡೆಯುತ್ತಿರುವುದು.

ಅತ್ತ ಜರ್ಮನರು ಕಳೆದ ಯುದ್ಧದಲ್ಲಿ ಬಲಿಷ್ಠರಾದ ಜನಾಂಗಗಳನ್ನು ಮೇಲೆ ಹಾಕಿಕೊಂಡು ರಣಾಂಗದಲ್ಲಿ ಪರಾಜಿತರಾಗಿ ತಮ್ಮ ಶತ್ರುಗಳಿಗಾದ ನಷ್ಟವನ್ನೆಲ್ಲಾ ನಾಲ್ಮಡಿಯಾಗಿ ಕಟ್ಟಿಕೊಡಬೇಕಾಯಿತು. ಜರ್ಮನರು ತಮ್ಮ ದೇಶದಲ್ಲಿ ವಸತಿಯು ಸಾಲದೆ ಜನಾಂಗಾಭಿವೃದ್ಧಿಯ ದೆಶೆಯಿಂದ ಜೀವನವು ಕಷ್ಟವಾಗಲು ಹೊಸ ವಸತಿಗಳನ್ನು ಸಂಪಾದಿಸುವುದಕ್ಕಾಗಿ ಯುದ್ಧಕ್ಕೆ ಹೊರಟರು. ಆದರೆ ಪರಾಜಿತರಾದುದರಿಂದ ತಮಗೆ ಮೊದಲಿದ್ದ ವಸತಿಗಳನ್ನು ಸಹ ಶತ್ರುಗಳಿಗೆ ಒಪ್ಪಿಸಿಬಿಡಬೇಕಾಯಿತು. ಸಾಲದುದಕ್ಕೆ ಧನರೂಪವಾಗಿ ಶತ್ರುಗಳಿಗೆ ನಷ್ಟವನ್ನು ಕಟ್ಟಿಕೊಡಬೇಕಾಗಿಯೂ ಬಂದಿತು. ಬೇರೆ ಯಾವ ಜನಾಂಗದವರಾದರು ಇಂತಹ ಕ್ಲೇಶಕ್ಕೆ ಈಡಾಗಿದ್ದರೆ ಅವರು ಅದನ್ನು ಸಹಿಸಲಾರದೆ ಭೂಗತವಾಗುತ್ತಿದ್ದರು. ಸಾಹಸಿಗಳಾದ ಜರ್ಮನರಾದರೊ ಎದೆಗುಂದದೆ ಇಮ್ಮಡಿಯಾದ ಉತ್ಸಾಹದಿಂದ ಕಾರ್ಯಾಸಕ್ತರಾಗಿ ದುಡಿಯಲಾರಂಭಿಸಿದರು. ಯುದ್ಧದಕಾಲದಲ್ಲಿ ಅಸ್ತ್ರೋಪಕರಣಗಳನ್ನು ನಿರ್ಮಿಸಲು ಉಪಯೋಗಿಸುತ್ತಿದ್ದ ಯಂತ್ರಾಗಾರಗಳನ್ನು ಅರ್ಥಸಾಧಕ ಸಾಮಗ್ರಿಗಳನ್ನು ನಿರ್ಮಿಸಲು ಮಾರ್ಪಡಿಸಿದರು. ಇರುವೆಗಳಂತೆ ವಿರಾಮರಹಿತರಾಗಿ ದುಡಿಯಲಾರಂಭಿಸಿದರು. ತೆರಲಾರದಷ್ಟು ನಷ್ಟದ್ರವ್ಯವನ್ನು ಕೊಡಬೇಕೆಂದು ಜರ್ಮನರಮೇಲೆ ಭಾರವನ್ನು ಹೊರಿಸೋಣದರಿಂದ ಅವರನ್ನು ಭೂಗತಮಾಡಬೇಕೆಂದು ಯತ್ನಿಸಿದ ಅವರ ಶತ್ರುಗಳು ಈಗ ಜರ್ಮನರಿಗೆ ಮಹದುಪಕಾರ ಮಾಡಿದಂತಾಯಿತು. ಮೇಧಾವಿಗಳೂ, ಕಾರ್ಯಸಾಹಸಿಗಳೂ, ದೃಢಾಂಗಿಗಳೂ ಆದ ಜರ್ಮನರು ತಮಗೆ ಸಂಭವಿಸಿದ ಕಷ್ಟನಿವಾರಣೆಗಾಗಿ ಹಗಲೂ ಇರುಳೂ ದುಡಿದು ಶತ್ರುಗಳಿಗೆ ನಷ್ಟದ್ರವ್ಯವನ್ನು ಕಟ್ಟಿಕೊಟ್ಟರು. ಇದರಿಂದ ಅವರ ಆರ್ಥಿಕ ಸಂಪತ್ತು ಹೆಚ್ಚಿತು; ಕೈಗಾರಿಕೆಗಳು ಅಸಾಧಾರಣವಾಗಿ ವೃದ್ಧಿಗೊಂಡವು. ಇತರ ಯಾವ ಜನಾಂಗಗಳಿಗೂ ಸಾಧ್ಯವಾಗದಷ್ಟು ಅಗ್ಗವಾಗಿ ತಮ್ಮ ಸಾಮಾನುಗಳನ್ನು ತಯಾರುಮಾಡುವ ಕೈಗಾರಿಕೆಗಳು ಜರ್ಮನಿಯಲ್ಲಿ ಉದ್ಭವಿಸಿರುವುವು. ಇತರ ಜನಾಂಗಗಳು ತಂತಮ್ಮ ಕೈಗಾರಿಕೆಗಳ ಸಂರಕ್ಷಣೆಗಾಗಿ ವಿದೇಶೀಯ ಸರಕುಗಳ ಮೇಲೆ ಎಷ್ಟು ಹೆಚ್ಚು ತೆರಿಗೆಯನ್ನು ಹಾಕಿದಾಗ್ಗೂ ಜರ್ಮನರು ತಮ್ಮ ಸರಕುಗಳನ್ನು ಸ್ವದೇಶದಲ್ಲಿ ತಯಾರಾದ ಸಾಮಾನುಗಳಿಗಿಂತಲೂ ಅಗ್ಗವಾಗಿ ಮಾರುವಷ್ಟು ಸುಲಭರೀತಿತಿಯಿಂದ ತಯಾರುಮಾಡಲು ಶಕ್ತರಾಗಿರುವರು. ಈ ಕಾರಣಗಳಿಂದ ಜರ್ಮನರ ಆರ್ಥಿಕಸ್ಥಿತಿಯು ಉತ್ತಮವಾದುದಲ್ಲದೆ ಅವರು ಕಷ್ಟವನ್ನು ಸಹಿಸಲು ಹೆಚ್ಚು ಪರಿಶ್ರಮ ಉಳ್ಳವರಾದರು. ಇಷ್ಟೇ ಅಲ್ಲದೆ ಜರ್ಮನಿಯ ವಿಜ್ಞಾನಶಾಸ್ತ್ರ ಪರಿಶೋಧಕರು ಯುದ್ಧಕಾಲದಲ್ಲಿ ಶತ್ರುಗಳನ್ನು ಉಪಾಯಾಂತರಗಳಿಂದ ನಿಗ್ರಹಿಸುವ ಸುಲಭರೀತಿಗಳನ್ನು ಹೊಸದಾಗಿ ಕಂಡುಹಿಡಿದಿರುವರು. ನೋಡಿದರೆ ಕಾಣದೆಯೂ, ಮೂಸಿದರೆ ವಾಸನೆಯಿಲ್ಲದೆಯೂ ಇರುವ ಒಂದು ವಿಧವಾದ ಅನಿಲವನ್ನು ಕಂಡುಹಿಡಿದಿರುವರು. ಈ ಅನಿಲವನ್ನು ಹುಟ್ಟಿಸುವ ಒಂದು ಸಿಡಿಮದ್ದಿನ ಗುಂಡನ್ನು ಲಕ್ಷಾಂತರ ಮಂದಿಯಿರುವ ರಣಾಂಗಣದಲ್ಲಿ ಆಕಾಶಯಾನದಿಂದ ಎಸೆದರೆ ಕ್ಷಣಮಾತ್ರದಲ್ಲಿ ಈ ವಿಷದ ಹಬೆಯು ಆ ಪ್ರಾಂತದ ವಾಯುಮಂಡಲದಲ್ಲೆಲ್ಲಾ ಪ್ರಸರಿಸಿ ಶತ್ರುಗಳನ್ನು ಒಂದು ಕ್ಷಣದಲ್ಲಿ ನಿರ್ಮೂಲಮಾಡುವುದು. ಇಂತಹ ಅನೇಕ ಯುದ್ಧ ಸಲಕರಣಗಳು ಜರ್ಮನರಿಂದ ವಿಶೇಷವಾಗಿ ಕಂಡುಹಿಡಿಯಲ್ಪಟ್ಟಿರುವುವು. ಕಣ್ಣಿಗೆ ಗೋಚರವಾಗದಂತಹ ಲೋಹದಿಂದ ಆಕಾಶಯಾನಗಳನ್ನು ನಿರ್ಮಿಸಿ ಅದರಲ್ಲಿ ವಿದ್ಯುಲ್ಲತೆಯ ಅದ್ಭುತ ದೀಪವೊಂದನ್ನಿಟ್ಟು ಅದರಿಂದ ಹೊರಡುವ ಬೆಳಕಿನಿಂದ ಭೂಸೈನ್ಯವನ್ನೆಲ್ಲ ಕ್ಷಣಮಾತ್ರದಲ್ಲಿ ನಾಶಮಾಡುವ ವಿಧಾನವನ್ನು ಅಮೆರಿಕನರು ಕಂಡುಹಿಡಿದಿರುವರು.

ಅಮೆರಿಕೆಯಲ್ಲಿ ಸ್ವಭಾವಸಿದ್ಧವಾದ ಭೂಗರ್ಭಸಂಪತ್ತೂ, ಜನಗಳ ಉತ್ಸಾಹಶಕ್ತಿಯೂ ಆ ಜನಾಂಗವನ್ನು ಆರ್ಥಿಕ ಸಂಪದಭಿವೃದ್ಧಿಯಲ್ಲಿ ಗಗನಕ್ಕೇರಿಸುತ್ತಿರುವುದು. ಕಳೆದ ಯೂರೋಪಿನ ಯುದ್ಧದಲ್ಲಿ ನಾಗರಿಕ ಜನರು ಒಬ್ಬರಮೇಲೊಬ್ಬರು ಬಿದ್ದು ಕೊರಳು ಕೊಯ್ಯುತ್ತಿರಲು ಅಮೆರಿಕೆಯು ತಟಸ್ಥವಾಗಿ ನಿಂತು ಕಾದಾಡುವ ಜನಗಳಿಗೆ ಅವಶ್ಯಕವಾದ ಸಾಮಗ್ರಿಗಳನ್ನೊದಗಿಸಿಕೊಟ್ಟು ಧನಾರ್ಜನೆಮಾಡಿ ಅವರಿಂದ ಗಳಿಸಿದ ಹಣವನ್ನು ಅವರಿಗೇ ಸಾಲಕೊಟ್ಟು ಯುದ್ಧವು ಪರಿಸಮಾಪ್ತಿಯಾದಮೇಲೆ ಯೂರೋಪಿನ ಜನಾಂಗಗಳಿಂದ ಅಸಲು ಬಡ್ಡಿ ಸಹ ಇಮ್ಮಡಿಯಾಗಿ ವಸೂಲು ಮಾಡಿದ ಅಮೆರಿಕೆಯು ಯೂರೋಪಿನವರಲ್ಲಿ ದ್ವೇಷಾಸೂಯೆಗಳನ್ನು ಹುಟ್ಟಿಸಿತು. ಅಮೆರಿಕೆಯು ಈಗ ಪೃಥ್ವಿಯಲ್ಲೆಲ್ಲ ಆರ್ಥಿಕ ಸ್ಥಿತಿಯಲ್ಲಿ ಅತಿ ಉನ್ನತಸ್ಥಿತಿಯಲ್ಲಿರುವುದು. ಜನಾಂಗದೈಶ್ವರ್ಯವು ಕಳೆದ ಅರ್ಧ ಶತಮಾನದಿಂದೀಚೆಗೆ ಒಂದಕ್ಕೆ ಹತ್ತರಷ್ಟು ಹೆಚ್ಚಿರುವುದು. ಜನಸಂಖ್ಯೆಯು ಇಮ್ಮಡಿಯಾಗಿರುವುದು. ವ್ಯಾಪಾರ ಕೈಗಾರಿಕೆಗಳು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿರುವುವು. ಅಮೆರಿಕನರಲ್ಲಿ ಪ್ರತಿ ನಾಲ್ಕು ಜನರಿಗೆ ಒಂದರಂತೆ ಮೋಟಾರು ಗಾಡಿಗಳಿರುವುವು. ಇನ್ನು ಕೊಂಚ ಕಾಲದಲ್ಲಿಯೆ ಪ್ರತಿಯೊಬ್ಬನಿಗೂ ಒಂದರಂತೆ ಮೋಟಾರು ಗಾಡಿಯನ್ನು ಇಟ್ಟುಕೊಳ್ಳುವ ಆರ್ಥಿಕ ಶಕ್ತಿಯು ಬರುವುದೆಂದರೆ ಅಮೆರಿಕನರ ಸಂಪತ್ತು ಹೇಗಿರುವುದೆಂಬುದು ತಿಳಿಯಬಹುದಾಗಿದೆ. ಇದನ್ನು ನೋಡಿ ಯೂರೋಪಿನ ಜನಾಂಗಗಳು ಕರುಬಿ ಅಮೆರಿಕನರ ಮೇಲೆ ನಾನಾವಿಧದಲ್ಲಿ ಪೈಪೋಟಿಗೆ ನಿಂತಿರುವರು. ಅವರಮೇಲೆ ಯುದ್ಧಕ್ಕೆ ಹೋಗಲು ಸನ್ನದ್ಧರಾಗುತ್ತಿರುವರು.

ಇಟಲಿಯು ಮುಸೊಲಿನಿಯ ಪ್ರಭುತ್ವದಲ್ಲಿ ಮುಂಬರಿಯುತ್ತಿರುವುದು. ಯೌವನಸ್ಥನಾದ ಪ್ರತಿಯೊಬ್ಬ ಪ್ರಜೆಯೂ ರಣಾಂಗಕ್ಕೆ ಹೋಗಲು ಸಿದ್ಧನಾಗುವುದಕ್ಕಾಗಿ ಶಿಕ್ಷಣವನ್ನು ಹೊಂದುತ್ತಿರುವನು. ನೌಕಾಬಲವೂ, ಆಕಾಶನಾವೆಯೂ, ಭೂಸೈನ್ಯವೂ ಏಕಕಾಲದಲ್ಲಿ ಸಿದ್ಧಪಡಿಸಲ್ಪಡುತ್ತಿರುವುವು. ಬ್ರಿಟಿಷರು ಬಹುಕಾಲದಿಂದಲೂ ಸಾಗರದ ರಾಣಿಯೆಂಬ ಬಿರುದನ್ನು ತಮ್ಮ ದೇಶಕ್ಕೆ ಉಳಿಸಿಕೊಳ್ಳಬೇಕೆಂದು ಅಸಮಸಾಹಸಮಾಡುತ್ತಿರುವರು. ಇದಕ್ಕಾಗಿ ಬಲವಾದ ನಾವೆಯನ್ನು ಕಟ್ಟಿಯೂ, ಕಟ್ಟುತ್ತಲೂ ಇರುವರು. ಅಮೆರಿಕನರು ಯೂರೋಪಿಯನರ ಈ ಸನ್ನಾಹವನ್ನು ನೋಡಿ ತಾವು ತಟಸ್ಥರಾಗಿದ್ದರೆ ತಮಗೆ ಅಪಾಯ ಸಂಭವಿಸುವುದೆಂದು ತಿಳಿದು ತಾವು ಸಹ ಆತ್ಮರಕ್ಷಣೆಗಾಗಿ ಸೈನ್ಯಬಲವನ್ನು ಹೆಚ್ಚಿಸುತ್ತಿರುವರು. ಜಪಾನರು ತಮ್ಮ ನೆರೆಯಲ್ಲಿರುವ ಅಮೆರಿಕನರು ಮಾಡುತ್ತಿರುವ ಸೈನ್ಯಸನ್ನಾಹಗಳನ್ನು ನೋಡಿ ತಮಗೇನು ಕೇಡು ಸಂಭವಿಸುವುದೊ ಎಂದು ತಾವೂ ಯುದ್ಧಸನ್ನಾಹವನ್ನು ಮಾಡಿಕೊಳ್ಳುತ್ತಿರುವರು. ಈ ಪ್ರಕಾರ ಪೃಥ್ವಿಯ ನಾಗರಿಕ ಜನರು ಯುದ್ಧ ಸನ್ನಾಹವನ್ನು ಬಹು ತೀವ್ರತರವಾಗಿ ಮಾಡುತ್ತಿದ್ದಾರೆ. ಎಲ್ಲಿ ಯಾರು ಯಾವ ಕಾರಣಕ್ಕಾಗಿಯಾದರೂ ಕೊಂಚ ಆಲಸ್ಯವನ್ನು ತೋರಿಸಿ ಮೈಮರೆತು ಅಚಾತುರ್ಯದಿಂದ ದುಡುಕುವವರಾದರೆ ಅದೇ ನೆಪವೆಂದು ಯುದ್ಧಸನ್ನದ್ಧರಾಗಿರುವಜನಾಂಗಗಳು ಪ್ರತಿಕಕ್ಷಿಗಳಾಗಿನಿಂತು ಜಗಳವನ್ನು ಪ್ರಾರಂಭಿಸಲು ಸಮಯ ನೋಡುತ್ತಿರುವರು. ಪರದಾಸ್ಯದಲ್ಲಿರುವ ಜನಾಂಗಗಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾನುಭೂತಿಯಿಂದ ಸಹಾಯಕರಾಗಿರಲು ಕಾದಿರುವ ರಷ್ಯನರು ನಾಗರಿಕ ಜನಾಂಗಗಳೊಡನೆ ವೈರವನ್ನು ಸಂಪಾದಿಸಿರುವರು. ಈ ಜನಾಂಗಗಳು ರಷ್ಯನರಮೇಲೆ ಬಿದ್ದು ಅವರನ್ನು ನಿಗ್ರಹಿಸಲು ಸಮಯನೋಡುತ್ತಿರುವರು. ಇದಕ್ಕೆ ಚೀನಾ ಜನಗಳ ಅಂತಃಕಲಹದಲ್ಲಿ ಸಮಯವೊದಗಿತ್ತು. ಆದರೆ ಕಾರಣಾಂತರಗಳಿಂದ ರಷ್ಯನರು ತಪ್ಪಿಸಿಕೊಂಡರು.

ಈಗ ಅಫ್ಘಾನದ ಪರಿಸ್ಥಿತಿಯಲ್ಲಿ ರಷ್ಯನರಿಗೂ ಬ್ರಿಟಿಷರಿಗೂ ಜಗಳ ಹತ್ತುವ ಸಂಭವವು ತೋರುತ್ತಿರುವುದು. ಅಮಾನುಲ್ಲರವರು ಪ್ರಭುತ್ವಮಾಡುತ್ತಿದ್ದಾಗ್ಗೆ ಅವರ ರಾಜ್ಯದಲ್ಲಿ ರಷ್ಯನರ ಪ್ರಾಬಲ್ಯವು ಹೆಚ್ಚಿತ್ತು. ಸೈನ್ಯಸುಧಾರಣೆಯಲ್ಲಿಯೂ ರಾಜ್ಯಭಾರ ಕ್ರಮದಲ್ಲಿಯೂ ಅಮಾನುಲ್ಲರವರು ಬಹುಮಟ್ಟಿಗೆ ರಷ್ಯನರ ಮೇಲ್ಪಂಕ್ತಿಯನ್ನು ಅನುಸರಿಸಿದ್ದರು. ಅಫ್ಘಾನಿಸ್ಥಾನವು ಹಿಂದುಸ್ಥಾನದ ಹೆಬ್ಬಾಗಿಲಲ್ಲಿ ಇರುವುದರಿಂದ ಬ್ರಿಟಿಷರು ಬಹುಕಾಲದಿಂದಲೂ ಆಫ್ಘನ್ ಪ್ರಭುಗಳನ್ನು ತಮ್ಮ ವಶಪಡಿಸಿಕೊಂಡು ಅವರಿಗೆ ಪೊಗದಿಯನ್ನು ಕೊಟ್ಟು ಸ್ನೇಹಪರವನ್ನು ಕಾಪಾಡಿಕೊಂಡು ಬಂದರು. ಅಮಾನುಲ್ಲರವರು ಮಾತ್ರ ಇದಕ್ಕೊಪ್ಪದೆ ಬ್ರಿಟಿಷರಮೇಲೆ ಯುದ್ಧಮಾಡಿ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡರು. ಅಂದಿನಿಂದೀಚೆಗೆ ಅಫ್ಘಾನಿಸ್ಥಾನದಲ್ಲಿ ರಷ್ಯನರ ಕಾರ್ಯಕಲಾಪವು ತೀವ್ರತರವಾಗಿ ನಡೆಯುತ್ತಿದ್ದಿತು. ಈಗ ಆದೇಶದಲ್ಲಿ ನಡೆಯುತ್ತಿರುವ ರಾಜಕೀಯ ಚಳವಳಿಯು ರಷ್ಯನರಿಂದಲೇ ಅಂಕುರಿತವಾದುವೆಂದು ಕೆಲ ಬ್ರಿಟಿಷ್ ಪತ್ರಿಕೆಗಳು ಹೇಳುತ್ತಿರುವುವು. ಅದು ಹೇಗಾದರೂ ಇರಲಿ, ಬ್ರಿಟಿಷರಂತೂ ಆ ದೇಶದಲ್ಲಿ ಯಾವ ಕಾಲಕ್ಕೆ ಏನು ಅಚಾತುರ್ಯವು ನಡೆಯುವುದೊ ಎಂದು ಆತುರಪಟ್ಟು ತಮ್ಮ ರಾಯಭಾರಿಯನ್ನು ಪ್ರಾಣಾಪಾಯಕ್ಕೊಳಗಾಗುವ ಸಂಭವವಿದ್ದರೂ ಕಾಬೂಲಿನಲ್ಲಿಯೇ ಇಟ್ಟಿರುವರು. ಇದರಿಂದ ಅಲ್ಲಿನ ರಾಜಕೀಯ ಪರಿಸ್ಥಿತಿಯು ಹೇಗೆ ಮಾರ್ಪಡುವುದೊ ನೋಡಬೇಕಾಗಿದೆ. ಅಂತು ಪ್ರಪಂಚದಲ್ಲಿ ಶಾಂತಿಭಂಗವಾಗಿ ಘೋರವಾದ ಯುದ್ಧವು ಶೀಘ್ರದಲ್ಲಿಯೇ ಸಂಭವಿಸುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ರಾಜಕೀಯ ವಿಚಾರಧುರೀಣರು ಹೇಳುತ್ತಿರುವರು. ಪಾಶ್ಚಾತ್ಯ ಜನಾಂಗಗಳ ಯುದ್ಧ ಸನ್ನದ್ಧತೆಯನ್ನು ನೋಡಿದರೆ ಇದು ನಂಬಲರ್ಹವಾಗಿರುವುದು.

ವಿಚಾರಣ ಸಮಿತಿಯ ವರದಿ.

ಮೆ|| ಎಚ್. ಜಿ. ಬಸವಪ್ಪನವರ ಭಿನ್ನಮತ.

ಬೆಂಗಳೂರು ಗಲಭೆಯ ವಿಚಾರಣಸಮಿತಿಯ ಸದಸ್ಯರಾದ ಮ|| ಎಚ್. ಜಿ. ಬಸವಪ್ಪನವರು ತಮ್ಮ ಭಿನ್ನಾಭಿಪ್ರಾಯವನ್ನು ಕುರಿತು ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಈ ಪ್ರಕಾರವಾಗಿ ಬರೆದು ತಿಳಿಸಿರುತ್ತಾರೆ.—

ನಾನು ನೆನ್ನೆ ದಿನದ ಸಭೆಯಲ್ಲಿ ಸೂಚಿಸಿದ ವಿಚಾರವನ್ನು ಈ ದಿನ ಈ ಕಾಗದದಮೂಲಕ ತಿಳಿಸುವ ಅವಶ್ಯಕತೆ ಬಂದುದಕ್ಕಾಗಿ ನನ್ನ ಮನಸ್ಸಿಗೆ ಖೇದವಾಗುತ್ತದೆ. ಮೆ|| ಕಲಾಮಿಯವರು ಸಮಿತಿಗೆ ಬರೆದು ಕೊಟ್ಟ ಭಿನ್ನಮತದ ಟಿಪ್ಪಣಿಯ ವಿಚಾರದಲ್ಲಿ ನನ್ನ ಅಭಿಮತವನ್ನು ತಿಳಿಸಬೇಕೆಂಬುದೇ ನನ್ನ ಆಶಯವಾಗಿದ್ದಿತು. ಆದರೆ ಅದಕ್ಕೆ ತಾವು ನನಗೆ ಅವಕಾಶಕೊಡದೆ ಹಾಗೆ ಮಾಡುವುದು ವಾಡಿಕೆಯಿಲ್ಲವೆಂದು ಹೇಳಿಬಿಟ್ಟಿರಿ. ನಾನು ನನ್ನ ಭಿನ್ನಾಭಿಪ್ರಾಯವನ್ನು ಸೂಚಿಸುವ ಸಂಭವವು ತಮ್ಮ ಅಸಾಧಾರಣವಾದ ವರ್ತನೆಯಿಂದ ಉಂಟಾಯಿತು. ವರದಿಯನ್ನು ಬರೆಯುವುದರಲ್ಲಿಯೂ, ಚರ್ಚಿಸುವುದರಲ್ಲಿಯೂ, ಅನುಮೋದಿಸುವುದರಲ್ಲಿಯೂ ತಾವು ಲೋಕವಾಡಿಕೆಯನ್ನು ಬಿಟ್ಟು ನಡೆದುಕೊಂಡಿರಿ.

ವರದಿಯನ್ನು ನಾನು ಸಾವಧಾನದಿಂದ ಪರಿಶೀಲಿಸುವುದಕ್ಕಾಗಿ ಅದರ ನಕಲನ್ನು ನನಗೆ ಮುಂಚಿತವಾಗಿಯೇ ಕೊಡದೆ ಹೋದುದರಿಂದ, ಅದರಲ್ಲಿ ಗರ್ಭಿತವಾಗಿರುವ ಅನೇಕ ವಿಚಾರಗಳನ್ನು ನಾನು ಪರ್ಯಾಲೋಚಿಸಲು ಅವಕಾಶ ದೊರೆಯದೆ ವರದಿಯನ್ನು ಸಭೆಯಲ್ಲಿ ಚರ್ಚೆಗೆ ತಂದಾಗ ನನಗೆ ನನ್ನ ಅಭಿಪ್ರಾಯವನ್ನು ತಿಳಿಸಲು ಅಡಚಣೆಯಾಯಿತು. ಚರ್ಚೆಯು ನಡೆಯುತ್ತಿದ್ದ ದಿನಗಳಲ್ಲಿಯಾದರೂ ವರದಿಯನ್ನು ಮನೆಗೆ ತಗೆದುಕೊಂಡು ಹೋಗಿ ಅದನ್ನು ವಿಶದವಾಗಿ ಪರೀಕ್ಷಿಸಲು ಅವಕಾಶವನ್ನು ಸಹ ಕೊಡಲಿಲ್ಲ. ವಿಷಯಗಳನ್ನು ಸಂಗ್ರಹಿಸಲು ಮೂರುತಿಂಗಳುಕಾಲ ಕಳೆದಾಗ್ಗೂ ಅವನ್ನು ಸಾವಧಾನದಿಂದ ಸದಸ್ಯರೆಲ್ಲರೂ ಪರಿಶೀಲಿಸಲು ಸಾಕಾದಷ್ಟು ಅವಕಾಶವನ್ನು ಕೊಟ್ಟಿದ್ದರೆ, ಯಾವ ವಿಧವಾದ ನಷ್ಟವೂ ಸಂಭವಿಸುತ್ತಿರಲಿಲ್ಲ. ಪ್ರತಿಯೊಬ್ಬ ಸದಸ್ಯರೂ ಅವರವರ ಅಭಿಪ್ರಾಯವನ್ನು ಪ್ರತ್ಯೇಕವಾಗಿ ಬರೆಯುವಂತೆ ಮಾಡಿ ಅನಂತರ ಎಲ್ಲರೂ ಸೇರಿ ಅಭಿಪ್ರಾಯಗಳನ್ನು ಚರ್ಚಿಸಿದ್ದರೆ ಸರ್ವೋತ್ತಮವಾಗುತ್ತಿದ್ದಿತೆಂದು ನನಗೆ ತೋರುತ್ತದೆ. ಎಲ್ಲರಿಗೂ ಸಮ್ಮತವಾದ ವಿಚಾರಗಳನ್ನು ಒಟ್ಟಿಗೆ ಸಂಗ್ರಹಿಸಿ ಭಿನ್ನಮತದ ವಿಚಾರಗಳನ್ನು ಚರ್ಚೆಗಿಟ್ಟುಕೊಳ್ಳಬಹುದಾಗಿದ್ದಿತು. ಹಾಗೆ ಮಾಡದೆ ತಮಗೆ ತೋಚಿದ ಕೆಲ ಪ್ರಶ್ನೆಗಳನ್ನು ಸದಸ್ಯರಿಗೆ ಕೊಟ್ಟು ಅವುಗಳಿಗೆ ಉತ್ತರಗಳನ್ನು ಕೇಳಿದಿರಿ. ಇದರಿಂದ ಆ ಪ್ರಶ್ನೆಗಳಿಗೆ ಸಂಬಂಧಪಟ್ಟ ವಿಷಯಗಳು ಮಾತ್ರ ವರದಿಯಲ್ಲಿ ನಮೂದಿಸಲ್ಪಡುವುವೆಂದು ನಾನು ತಿಳಿಯಲು ಕಾರಣವಾಯಿತು. ಆದರೆ ವರದಿಯು ಪ್ರಕಟಿಸಲ್ಪಟ್ಟಾಗ ಸದಸ್ಯರಿಗೆ ತಾವು ಹಾಕಿದ ಪ್ರಶ್ನೆಗಳ ಆಧಾರದಮೇಲೆ ಆ ವರದಿಯು ಬರೆಯಲ್ಪಟ್ಟಿಲ್ಲವೆಂಬುದನ್ನು ನೋಡಿ ನನಗೆ ಪರಮಾಶ್ಚರ್ಯವಾಯಿತು.

ತಾವು ವರದಿಯನ್ನು ಬರೆಯುವುದರಲ್ಲಿ ಒಬ್ಬ ಸದಸ್ಯರನ್ನು ಮಾತ್ರ ತಮ್ಮ ಸಹಾಯಕ್ಕೆ ಕರೆದುಕೊಂಡು ನೀವಿಬ್ಬರೇ 20 ದಿವಸಗಳಲ್ಲಿ ವರದಿಯನ್ನು ರಚಿಸಿದಿರಿ. ಆದುದರಿಂದ ವರದಿಯು ಒಟ್ಟು ಸಮಿತಿಯವರಿಂದ ಬರೆಯಲ್ಪಟ್ಟಂತಾಗಲಿಲ್ಲ. ಇತರ ಸದಸ್ಯರಿಗೆ ನಿಮ್ಮಿಬ್ಬರಂತೆಯೇ ಸಾಕ್ಷ್ಯವನ್ನು ಪರಿಕಿಸಲು ಸಾಕಾದಷ್ಟು ಅವಧಿಯನ್ನು ಕೊಡದಿರಲು ಕಾರಣವೇನೆಂಬುದು ವ್ಯಕ್ತವಾಗಿರುವುದಿಲ್ಲ. ವರದಿಯು ಕೇವಲ ಇಬ್ಬರು ಸದಸ್ಯರ ಅಭಿಪ್ರಾಯವನ್ನು ಒಳಗೊಂಡಿರುವುದೇ ವಿನಾ ಎಲ್ಲ ಸದಸ್ಯರ ಅಭಿಮತವನ್ನು ಸೂಚಿಸಲಾರದು. ಸದಸ್ಯರು ಪುನಃ ಪುನಃ ಕೇಳಿಕೊಂಡಾಗ್ಗೂ ಏಕೆ ಅವರಿಗೆ ಅವಕಾಶಕೊಡಲಿಲ್ಲವೊ ತಿಳಿಯದುದಾಗಿದೆ. ವರದಿಯು ರಚಿಸಲ್ಪಟ್ಟಮೇಲೆ ಮೂರುದಿನಗಳ ವರೆಗೆ ನಡೆದ ಸಭೆಯಲ್ಲಿ ವಿಷಯಗಳನ್ನು ಓದಿ ಅದಕ್ಕೆ ಹೌದೊ, ಅಲ್ಲವೊ ?'' ಎಂಬ ಉತ್ತರವನ್ನು ಮಾತ್ರ ಹೇಳಿರೆಂದು ತಾವು ಕೇಳಿದ್ದು ನಿಜ. ಆದರೆ ಮುಂಚಿತವಾಗಿ ವರದಿಯನ್ನು ಸಾವಧಾನದಿಂದ ಪರಿಶೀಲಿಸದೇ ಇದ್ದುದರಿಂದ ಅನಿರೀಕ್ಷಿತವಾಗಿ ಕೇಳಿದ ಪ್ರಶ್ನೆಗಳಿಗೆ ತತ್‌ಕ್ಷಣವೇ ಉತ್ತರಹೇಳಲು ನನಗೆ ಸಾಧ್ಯವಾಗಲಿಲ್ಲ. ಏಕೆಂದರೆ, ಈ ವಿಧವಾದ ನಡೆವಳಿಕೆಯ ಪರಿಶ್ರಮವು ನನಗೆಂದೂ ಇರಲಿಲ್ಲ. ಆದುದರಿಂದ ಆ ಆತುರದಲ್ಲಿ ನನಗೆ ತೋರಿದುದನ್ನು ನಾನು ಹೇಳಬೇಕಾಯಿತು. ಮುಖ್ಯಾಂಶಗಳಿಗೆ ಮಾತ್ರ ಗಮನವನ್ನು ಕೊಟ್ಟು ಉಳಿದ ವಿಚಾರಗಳನ್ನು ತಮ್ಮ ವಿವೇಚನೆಗೆ ಬಿಡಬೇಕಾಯಿತು. ಕೆಲವು ವಿಷಯಗಳಲ್ಲಿ ನನ್ನ ಅಭಿಮತವನ್ನನುಸರಿಸಿ ವರದಿಯಲ್ಲಿ ಕೆಲ ತಿದ್ದುಪಡಿಗಳನ್ನು ಮಾಡಿರುವಿರಾದರೂ ನಾನು ತಿಳಿಸಬೇಕೆಂದಿದ್ದ ವಿಚಾರಗಳೆಲ್ಲಕ್ಕೂ ಅವಕಾಶ ದೊರೆಯದಿದ್ದುದು ವಿಷಾದಕರವಾಗಿದೆ. ಪ್ರಥಮದಲ್ಲಿಯೇ ‘‘ ಸರ್ಕಾರದ ಯಂತ್ರ ಮುರಿಯಿತು '' ಎಂಬ ವಿಚಾರವನ್ನು, ‘‘ ಪ್ರತಿ ಗಂಟೆಯಲ್ಲಿಯೂ ಅವರು (ಪೋಲೀಸ್ ಮತ್ತು ಮೆಜಿಸ್ಟ್ರೇಟ್ ಅಧಿಕಾರಿಗಳು) ಸರ್ಕಾರದವರೊಡನೆ ಪರ್ಯಾಲೋಚಿಸುತ್ತಿದ್ದರು'' ಎಂಬುದನ್ನು ಸ್ಪಷ್ಟವಾಗಿ ವಿವರಿಸಿ ಆ ಶಬ್ದಗಳ ಧ್ವನ್ಯಾರ್ಥಗಳನ್ನು ವಿಶದಪಡಿಸಿರೆಂದು ಕೇಳಿದೆನು. ನೆನ್ನೆ ದಿನದ ಸಭೆಯಲ್ಲಿ ಸದಸ್ಯರು ನನ್ನ ಸಂಶಯಗಳ ವಿಚಾರವನ್ನು ಅಲ್ಲವೆನ್ನಲಿಲ್ಲ. ವರದಿಯ ನಕಲನ್ನು ಮುಂಚಿತವಾಗಿ ನನಗೆ ಕೊಡದಿದ್ದುದರಿಂದಲೂ, ಪೂರ್ವಸಂದರ್ಭವು ತಿಳಿಯದೆ ಈ ಪದಗಳ ಅರ್ಥವು ವ್ಯಕ್ತವಾಗದಿದ್ದುದರಿಂದಲೂ ವರದಿಯಲ್ಲಿ ಅವಶ್ಯಕವಾದ ಬದಲಾವಣೆಗಳನ್ನು ಸೂಚಿಸಲು ನನಗೆ ಸಾಧ್ಯವಾಗಲಿಲ್ಲ. ವರದಿಯ ನಕಲು ಅಚ್ಚಾಗಿ ನನ್ನ ಹಸ್ತಗತವಾದಮೇಲೆ ನನಗೆ ಸಂಶಯವೆಂದು ತೋರಿದ ಅಂಶಗಳನ್ನು ಗುರುತುಮಾಡಿಕೊಂಡೆನು. ಆದರೆ ಕಾಲಮೀರಿ ಹೋದುದರಿಂದ ಸುಮ್ಮನಾದೆನು.

ಮೆ|| ಕಲಾಮಿಯವರ ಭಿನ್ನಮತ ಟಿಪ್ಪಣಿಯನ್ನು ಸಮಿತಿಯವರು ಚರ್ಚಿಸದೆ ಅಧ್ಯಕ್ಷರಾದ ತಾವು ತಮ್ಮ ಅಭಿಪ್ರಾಯದೊಡನೆ ಸರ್ಕಾರಕ್ಕೆ ಕಳಿಸಬಹುದಾಗಿದ್ದಿತು. ಒಬ್ಬ ಸದಸ್ಯರ ಭಿನ್ನಮತ ಟಿಪ್ಪಣಿಯನ್ನು ಇತರ ಸದಸ್ಯರು ಚರ್ಚಿಸಬಹುದೇ ಎಂಬುದು ಸಂಶಯಾಸ್ಪದವಾಗಿರುವುದು ಮೆ|| ಕಲಾಮಿಯವರನ್ನು ನೆನ್ನೆದಿನದ ಸಭೆಗೆ ಯಾವ ಕಾರಣಕ್ಕಾಗಿ ಕರೆಯಲಿಲ್ಲವೆಂಬುದು ನನಗೆ ತಿಳಿಯದು. ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಕೋರಿದ್ದರೆ ನಾನೆಂದಿಗೂ ಅವರನ್ನು ಬಿಟ್ಟು ಚರ್ಚೆಮಾಡಲು ಒಪ್ಪುತ್ತಿರಲಿಲ್ಲ. ಅಲ್ಲದೆ, ಭಿನ್ನಾಭಿಪ್ರಾಯಪಟ್ಟ ಸದಸ್ಯರನ್ನು ಬಿಟ್ಟು ಅವರ ಟಿಪ್ಪಣಿಯನ್ನು ಅವರ ಪರೋಕ್ಷದಲ್ಲಿ ಚರ್ಚೆಮಾಡಿದುದು ಅನುಚಿತವಲ್ಲದೆ ಕೇವಲ ಆಕ್ಷೇಪಣೀಯವೆಂದು ನನಗೆ ತೋರುತ್ತದೆ. ಹಾಗೆ ಮಾಡಿದುದರಿಂದ ತಾವು ಮೆ|| ಕಲಾಮಿಯವರಿಗೆ ವಂಚನೆ ಮಾಡಿರುವಿರೆಂಬುದು ನನ್ನ ಅಭಿಮತವು.

ನೆನ್ನೆ ದಿನದ ಸಭೆಯು ನೆರೆಯುವುದೆಂದು ನಾನು ನಿರೀಕ್ಷಿಸಿರಲಿಲ್ಲ. ಸಭೆಯು ಸೇರಿದ ಮೇಲೆ ಪ್ರಕಟಿಸಲ್ಪಟ್ಟ ವರದಿಯಲ್ಲಿ ನನಗೆ ಕಂಡುಬಂದ ದೋಷಗಳನ್ನೂ, ನ್ಯೂನಾತಿರಿಕ್ತಗಳನ್ನೂ ನಾನು ಧಾರಾಳವಾಗಿ ಹೇಳಲು ನನಗೆ ಹಕ್ಕಿದ್ದಿತೆಂದು ತಿಳಿದಿದ್ದೆನು. ಆದರೆ ನನ್ನ ಹೇಳಿಕೆಯನ್ನು ಕೇಳಲು ತಾವು ಅವಕಾಶವನ್ನೀಯದಿದ್ದುದಕ್ಕಾಗಿ ನಾನು ವಿಷಾದಿಸುತ್ತೇನೆ. ಕೊನೆಯಪಕ್ಷ ಕೆಲಮುಖ್ಯವಿಚಾರಗಳಲ್ಲಿ ನನ್ನ ವಿಮರ್ಶೆಯನ್ನಾದರೂ ಕಳಿಸಿಕೊಡಿರೆಂದು ಕೇಳಿದೆನು. ಅದಕ್ಕೂ ತಾವು ಒಪ್ಪಲಿಲ್ಲ. ಈ ರೀತಿಯ ತಮ್ಮ ನಡತೆಯಿಂದ ಸಮಿತಿಯ ಸದಸ್ಯನಾದ ನನ್ನ ಹಕ್ಕನ್ನು ತಾವು ಗೌರವಿಸಲಿಲ್ಲವೆಂದು ನನಗೆ ಬೋಧೆಯಾಗುತ್ತದೆ.

ನೆನ್ನೆ ದಿನದ ಸಭೆಯಲ್ಲಿ ನಾನು ಕೊಟ್ಟ ಸಲಹೆಯನ್ನು ನಮೂದಿಸಿ ತಮ್ಮ ಅಭಿಮತವನ್ನು ಬರೆಯಬೇಕೆಂದು ಕೇಳಿದುದು ತಮಗೆ ಜ್ಞಾಪಕವಿರಬಹುದು. ಅದಕ್ಕು ಸಹ ತಾವು ಒಪ್ಪಲಿಲ್ಲ. ತಾವು ಈ ರೀತಿಯಲ್ಲಿ ನಡೆಸಿದ ಕಾರ್ಯಕಲಾಪಗಳು ವಿಲಕ್ಷಣವಾದುವೆಂದು ನಾನು ಹೇಳಬೇಕಾಗಿರುವುದು. ತಾವು ನನ್ನನ್ನು ಈ ರೀತಿ ಕಾಣುತ್ತೀರೆಂದು ನನಗೆ ಮೊದಲೇ ಗೊತ್ತಿದ್ದರೆ ನನ್ನ ಆತ್ಮಗೌರವರಕ್ಷಣೆಗಾಗಿ ಸದಸ್ಯತ್ವಕ್ಕೆ ಕೂಡಲೆ ರಾಜಿನಾಮೆ ಕೊಡುತ್ತಿದ್ದೆನು. ನನಗೆ ತೋರಿದಮಟ್ಟಿಗೂ ವರದಿಯ ವಿಚಾರವು ನೆನ್ನೆ ದಿನದ ಸಭೆಯಲ್ಲಿ ಪುನಃ ಪ್ರಸ್ತಾಪಿಸಲ್ಪಟ್ಟುದರಿಂದ ಈ ಸಂಬಂಧದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಲು ನನಗೆ ಸಂಪೂರ್ಣವಾದ ಹಕ್ಕಿರುವುದೆಂದು ಹೇಳಬಲ್ಲೆನು. ಹಾಗೆ ನನ್ನ ಹೇಳಿಕೆಯನ್ನು ಕೇಳಲು ಅವಕಾಶ ಕೊಡಲಾಗದಿದ್ದಲ್ಲಿ ವರದಿಗೆ ನಾನು ಕೊಟ್ಟಿದ್ದ ಸಮ್ಮತಿಯನ್ನು ಹಿಂದಕ್ಕೆ ತೆಗೆದುಕೊಂಡಿರುವೆನಲ್ಲದೆ ವರದಿಯಲ್ಲಿ ನಮೂದಿಸಿರುವ ಅಭಿಪ್ರಾಯಗಳೆಲ್ಲವೂ ನನಗೆ ಸಮ್ಮತವಲ್ಲವೆಂಬುದನ್ನು ದಯೆಯಿಟ್ಟು ತಿಳಿಯಿರಿ.

ತಮಗೆ ರುಚಿಸದಿರುವ ಈ ಪತ್ರವನ್ನು ಬರೆದುದಕ್ಕಾಗಿ ಕ್ಷಮಿಸುವಿರೆಂದು ನಂಬುತ್ತೇನೆ.

(ರುಜು) ಎಚ್. ಜಿ. ಬಸವಪ್ಪ,
ಬೆಂಗಳೂರು ಗಲಭೆ
ವಿಚಾರಣಸಮಿತಿಯ ಸದಸ್ಯ.

ಬೆಂಗಳೂರು,
23-1-1929.

ಚಕ್ರವರ್ತಿಯವರ ಆರೋಗ್ಯ.

ಚಕ್ರವರ್ತಿಯವರ ದೇಹಾಸಕ್ತಿಯು ಕ್ರಮೇಣ ಹುಟ್ಟುತ್ತಿದೆ. ಕಳೆದ ಶನಿವಾರ ಮತ್ತು ಭಾನುವಾರ ಕೊಂಚಕಾಲದವರೆಗೆ ಕುರ್ಚಿಯಮೇಲೆ ಕುಳಿತುಕೊಳ್ಳಲು ಮತ್ತು ಎಕ್ಸ್‌ರೆ ಚಿಕಿತ್ಸೆ ಮಾಡಿಸಿಕೊಳ್ಳಲು ಸಾಧ್ಯವಾಗಿದ್ದಿತು ಎಂದು ಸೋಮವಾರದ ಪ್ರಕಟನೆಯಿಂದ ತಿಳಿಯಬರುತ್ತದೆ.

ಮಲಮೂತ್ರಬಾಧೆಯ ನಿಗ್ರಹ.

ಕೆಲ ಜನರು ಮಲಮೂತ್ರಬಾಧೆಯನ್ನು ನಿಗ್ರಹಿಸಿ ತಮ್ಮ ಕೆಲಸಕಾರ್ಯಗಳಲ್ಲಿ ಮಗ್ನರಾಗಿರುವರು. ಈ ಅಭ್ಯಾಸವು ತುಂಬ ಅಪಾಯಕರವಾದುದೆಂದು ವೈದ್ಯಶಾಸ್ತ್ರಜ್ಞರು ಒತ್ತಿ ಹೇಳಿರುತ್ತಾರೆ. ಒಂದುಸಭೆಯ ಅಧ್ಯಕ್ಷರು ಮಧ್ಯೆ ಜಲಬಾಧೆಯು ತೋರಿದಾಗ್ಗೂ ಸಂಕೋಚದಿಂದ ಸುಮ್ಮನಿದ್ದುಬಿಟ್ಟರು. ಅವರ ಭಾಷಣದ ಹೊತ್ತಿಗೆ ಸರಿಯಾಗಿ ಮೂತ್ರವು ಕಟ್ಟಿ ರಕ್ತವು ವಿಷಮಯವಾದುದರಿಂದ ಮೂರ್ಛಿತರಾದರು. ಪ್ರಜ್ಞೆತಪ್ಪಿದ ಕೂಡಲೆ ಮೂತ್ರವಿಸರ್ಜನೆಯಾಯಿತು. ಅನಂತರ ಪ್ರಜ್ಞೆಯು ಬಂದಿತು. ಇನ್ನೊಂದುಕಡೆ ಕಾಯಿಲೆಯಿದ್ದ ಹೆಂಗಸೊಬ್ಬಳು ತ್ರಾಣವಿಲ್ಲದಿದ್ದುದರಿಂದ ಮಲವಿಸರ್ಜನೆಗಾಗಿ ಹೊರಗೆ ಹೋಗಕೂಡದೆಂದು ವೈದ್ಯನು ಹೇಳಿದ್ದನು. ಇದ್ದೆಡೆಯಲ್ಲಿ ಮಲವಿಸರ್ಜನೆ ಮಾಡಲು ಮನವೊಪ್ಪದೆ ಆಕೆಯು ಮಲವನ್ನು ತಡೆದಳು. ರೋಗವು ಹೆಚ್ಚಿತು. ಜ್ವರವು ಪ್ರಬಲಿಸಿತು. ಇದನ್ನು ಕಂಡು ಬಂಧುಗಳು ಅವಳನ್ನು ಹೊರಗೆ ಕರೆದೊಯ್ದರು. ಮಲವಿಸರ್ಜನೆಯಾದಕೂಡಲೆ ಆಕೆಯು ಉಲ್ಲಾಸದಿಂದ ಹಿಂತಿರುಗಿದಳು ರೋಗವು ಗುಣಮುಖವಾಯಿತು. ಇದರಿಂದ ಜನಗಳು ತಿಳಿಯಬೇಕಾದ ನೀತಿಯು ವ್ಯಕ್ತವಾಗಿರುವುದು. ಉದಾಸೀನದಿಂದಲೂ ಅಲಕ್ಷ್ಯದಿಂದಲೂ ಜನಗಳು ಮಲಮೂತ್ರವನ್ನು ತಡೆಯುತ್ತಾರೆ. ಇದು ಕೇವಲ ಅನಾರೋಗ್ಯಕರವಾದ ದುರಭ್ಯಾಸ.

ಇರುವೆಗಳ ವಿಚಿತ್ರಜೀವನ.

ಇರುವೆಗಳು ಉದ್ಯೋಗಿಪ್ರಾಣಿಗಳು, ಬುದ್ಧಿಯುಳ್ಳವುಗಳು ಎಂದು ಅವುಗಳ ಬಗ್ಗೆ ಪ್ರಶಂಸನಾಪರವಾದ ಸಂಗತಿಗಳಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಜರ್ಮನಿಯ ವಿಜ್ಞಾನಶಾಸ್ತ್ರಪಂಡಿತನಾದ ಡಾ. ಹೈನ ಹಿಂಜಯೊಯರ್ಸನೆಂಬವನು ಇರುವೆಗಳ ದೈನಿಕಜೀವನವನ್ನು ಚೆನ್ನಾಗಿ ಅಭ್ಯಾಸಮಾಡಿ ತನ್ನ ‘‘ದಿ ಎಂಟಪೇಪಲ್'' ಎಂಬ ಪುಸ್ತಕದಲ್ಲಿ ಅವುಗಳ ಬಗ್ಗೆ ಪಲವು ಸೋಜಿಗದ ಸಂಗತಿಗಳನ್ನು ಬರೆದಿದ್ದಾನೆ. ಅವನು ಅನ್ನುವದೇನಂದರೆ, ಕೀಟಕಗಳಿಂದ ಇರುವೆಗಳ ಉತ್ಪತ್ತಿಯಾಗಿದೆ. ಇಂದಿನವರೆಗೆ 5-6 ಸಾವಿರ ಜಾತಿಯ ಇರುವೆಗಳು ಮನುಷ್ಯನಿಗೆ ಗೊತ್ತಾಗಿವೆ. ಅವುಗಳಲ್ಲಿ ಇಂಜನೀಯರ, ಒಕ್ಕಲಿಗ, ಯುದ್ಧ ಮಾಡುವ, ಮನೆ ಕಾಯುವ ಕೆಲಸಮಾಡುವ, ಕೂಲಿ ಕೆಲಸ ಮಾಡುವ, ಶಿಪಾಯಿಯಾಗಿ ಅಡ್ಡಾಡುವ, ಕುಣಿಯುವ ಮೊದಲಾದ ಪಲವು ತರದ ಇರುವೆಗಳಿವೆ.

ಆಫ್ರಿಕೆಯಲ್ಲಿ ಕೆಲವು ಜಾತಿಯ ಇರುವೆಗಳಿವೆ. ಇವುಗಳ ಜೀವನವು ಚಮತ್ಕಾರವುಳ್ಳದ್ದಾಗಿದೆ. ಇವು ಮಣ್ಣಿನಿಂದ ಗಟ್ಟಿಯಾದ ಮನೆಗಳನ್ನು ಕಟ್ಟಿಕೊಳ್ಳುವವು. ಮಳೆಗಾಳಿಗಳಿಂದ ಈ ಮನೆಗಳು ಬಿದ್ದುಹೋಗುವದಿಲ್ಲ. ಮನೆಗಳ ಸುತ್ತಲೂ ತೋಟಗಳನ್ನು ಮಾಡಿಕೊಳ್ಳುವುವು. ಅವುಗಳಲ್ಲಿ ಹೂಗಿಡಗಳು ಇರುವವು. ಕೆಲವು ಕಣೆಗೆ ತೂಗಾಡುವ ತೋಟಗಳನ್ನು ಮಾಡಿಕೊಂಡಿರುವುವು. ಹೂವಿನ ಬೀಜಗಳನ್ನು ಸಂಗ್ರಹಿಸಿಟ್ಟುಕೊಳ್ಳುವುವು. ಭಿನ್ನ ಭಿನ್ನ ಜಾತಿಯ ಇರುವೆಗಳು ಭಿನ್ನ ಭಿನ್ನ ಪುಷ್ಪಗಳನ್ನು ಸುತ್ತಲು ಮಣ್ಣುಹಾಕಿ ನೆಡುವುವು.

ಶಕ್ತಿಯುಳ್ಳ ಇರುವೆಗಳು ದುರ್ಬಲವಾದ ಇರುವೆಗಳನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುವುವು. ಅವುಗಳಿಂದ ತಮ್ಮ ಮನೆ ಕಟ್ಟು ಕೆಲಸವನ್ನು ಮಾಡಿಸಿಕೊಳ್ಳುವುವು. ಕೆಲವು ಸಾರಿ ಒಂದು ಇರುವೆಯು 15 ರ ವರೆಗೆ ಗುಲಾಮರಿಂದ ದುಡಿಸಿಕೊಳ್ಳುತ್ತಿರುವುದು. ಇರುವೆಗಳಲ್ಲಿ ಯುದ್ಧದ ಪ್ರಸಂಗ ಒದಗಿದಾಗ ಗುಲಾಮ (ಸೇವಕ) ಇರುವೆಗಳು ಒಳ್ಳೇ ಹುರುಪಿನಿಂದ ತನ್ನ ಒಡೆಯನ ಸಲುವಾಗಿ ಯುದ್ಧಮಾಡುವುವು. ಯುದ್ಧವು ಆರಂಭವಾಗುವ ಮೊದಲು ಇವು ತಮ್ಮ ಮೈಗಳಿಗೆ ಒಂದು ಪ್ರಕಾರದ ಗಿಲಿಟು ಮಾಡಿಕೊಳ್ಳುವುವು. ಇದರಿಂದ ಇವು ವೈರಿಗಳಿಗೆ ಹೆದರಿಕೆ ಬರುವಂಥವುಗಳಾಗಿ ತೋರುವುವು.

ಇರುವೆಗಳಲ್ಲಿ ಕೆಲವು ಮಧುವನ್ನು (ಜೇನತುಪ್ಪ) ಸಂಗ್ರಹಮಾಡುವಂಥವು ಇರುವುವು. ಇದು ಸ್ವಲ್ಪ ಸೋಜಿಗದ ಸಂಗತಿಯಾಗಿದೆ. ಹೇಗಂದರೆ-ಕೆಲವು ಇರುವೆಗಳು ಜೇನತುಪ್ಪವನ್ನು ತಂದು ಬೇರೆ ಇರುವೆಗಳ ಬಾಯಲ್ಲಿ ಹಾಕುವುವು. ಅವುಗಳಿಂದ ಈ ಇರುವೆಗಳ ಶರೀರದಲ್ಲಿ ಮಧುವಿನ ಚೀಲಗಳಾಗುವುವು. ಈ ಮಧುವನ್ನು ಅವಶ್ಯ ಕಂಡಾಗ ಬೇರೆ ಇರುವೆಗಳು ತೆಗೆದುಕೊಂಡು ಹೋಗುವುವು. ಮಧುಸಂಚಯಮಾಡುವ ಇರುವೆಗಳು ಮತ್ತೆ ಇವುಗಳ ಶರೀರಗಳಲ್ಲಿ ಜೇನುತುಪ್ಪವನ್ನು ಕೂಡಿಹಾಕುವುವು. ಮಧುವನ್ನು ಇಟ್ಟುಕೊಂಡಿರುವ ಇರುವೆಗಳ ಸ್ವಾರ್ಥತ್ಯಾಗವು ಹೊಗಳತಕ್ಕಂಥಾದ್ದು ಆಗಿದೆ.

ಜರ್ಮನಿಯಲ್ಲಿಯ ಇರುವೆಗಳು ಅಡವಿಗಳಲ್ಲಿ ಹಾನಿಯನ್ನು ಮಾಡುವ ಕೀಟಗಳನ್ನು ನಾಶಮಾಡುವ ಕೆಲಸವನ್ನು ಮಾಡುವುವು. ದಕ್ಷಿಣ ಚೀನದಲ್ಲಿ ಸಂತರೆ-ಕಿತ್ತಳೆ ಹಣ್ಣುಗಳಿಗೆ ಹತ್ತುವ ಹುಳಗಳನ್ನು ನಾಶಮಾಡಿ ತೋಟದವರಿಗೆ ಲಾಭವನ್ನು ಮಾಡಿಕೊಡುವುವು. ಇಟಲಿಯಲ್ಲಿ ಹಣ್ಣುಗಳನ್ನು ಕಾಯುವುವು.

ಒಳದೇಶದ ವೃತ್ತಾಂತಗಳು.

ಕಾಶಿ ಪಟ್ಟಣದ ಮ|| ಎಸ್. ಯು. ನಾರಾಯಣಾಚಾರ್ಯ ಕಂಪನಿಯವರು ಪ್ರಕಟಿಸಿರುವ 1929 ನೇ ವರ್ಷದ ಕ್ಯಾಲಂಡರು ಈ ಪತ್ರಿಕೆಯ ಕೂಡ ಹಂಚಲ್ಪಟ್ಟಿದೆ.

ರಾಜಧಾನಿಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾಗಿರುವ ಮ|| ಎಂ. ಶ್ರೀನಿವಾಸಯ್ಯಂಗಾರ್ಯರ ಉದ್ಯೋಗದ ಅವಧಿಯು ಬರುವ ಜೂನ್ ತಿಂಗಳ ಕಡೆಯವರೆಗೂ ಹೆಚ್ಚಿಸಲ್ಪಟ್ಟಿರುವುದಾಗಿ ಕೇಳುತ್ತೇವೆ.

ಮದ್ರಾಸಿನ ಪ್ರಸಿದ್ಧ ನಶ್ಯದ ವ್ಯಾಪಾರಿಗಳಾದ ಮ|| ಗುರುಬಸವ ಕಂಪನಿಯವರು ಪದ್ಧತಿಯ ಪ್ರಕಾರ ಮುದ್ರಣ ಮಾಡಿಸಿರುವ 1929 ನೇ ವರ್ಷದ ಮೂರುವಿಧ ಸಚಿತ್ರ ಕ್ಯಾಲಂಡರನ್ನೂ ಶೀಟುಕ್ಯಾಲೆಂಡರನ್ನೂ ಆದರದಿಂದ ಸ್ವೀಕರಿಸುತ್ತೇವೆ.

ಕಳೆದ ಸೋಮವಾರ ಶ್ರೀಮನ್ಮಹಾರಾಜರವರ ಸ್ವಾರಿಯು ಮಿತಪರಿವಾರದೊಡನೆ ಮೋಟಾರುಬಂಡಿಯಲ್ಲಿ ಭದ್ರಾವತಿಗೆ ಚಿತ್ತೈಸಿ ಅಲ್ಲಿಯ ಕಬ್ಬಿಣದ ಕಾರ್ಯಾಲಯವನ್ನು ಪರಾಮರ್ಶಿಸಿಕೊಂಡು ಶಿವಮೊಗ್ಗ ಡಿ|| ಕಾಡಿನಲ್ಲಿ ಮೃಗಯಾವಿಹಾರಕ್ಕೆ ಚಿತ್ತೈಸುವುದಾಗಿ ತಿಳಿಯಬರುತ್ತದೆ.

ಕಳೆದ ಭಾನುವಾರ ಬೆಂಗಳೂರಿನ ಮೊದಲಿಯಾರ ಜನರು ರಿಟೈರ್ಡ್ ಸೀನಿಯರ್ ಸರ್ಜನ್ ಡಾಕ್ಟರ್ ಟಿ. ವಿ. ಅರ್ಮುಗಂ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಬೆಂಗಳೂರು ದಂಡಿನಲ್ಲಿರುವ ರಾವ್ ಬಹದ್ದೂರ್ ಅಣ್ಣಾಸ್ವಾಮಿ ಮೊದಲಿಯಾರರ ಸ್ಕೂಲಿನಲ್ಲಿ ಸಭೆ ಸೇರಿದ್ದು ತಮ್ಮ ಜನರ ವಿದ್ಯಾಭಿವೃದ್ಧಿಗಾಗಿ ಒಂದು ಸಂಘವನ್ನೇರ್ಪಡಿಸಬೇಕಾಗಿ ನಿರ್ಧರಿಸಿದರು.

ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರಾದ ಮ|| ಎಸ್. ಹಿರಣ್ಣಯ್ಯನವರು ವಿಶ್ವೇಶ್ವರಯ್ಯ ಕಮಿಟಿಯ ರಹಸ್ಯ ವಿಚಾರಣೆಯಲ್ಲಿ ಅಪಮಾನಕರವಾದ ಮಾತುಗಳನ್ನು ಆಡಿದರೆಂದು ಬೆಂಗಳೂರಲ್ಲಿ ಹೊರಡುವ ವಿಶ್ವಕರ್ಣಾಟಕ ಪತ್ರಿಕಾ ಸಂಪಾದಕರು ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮ|| ಹಿರಣ್ಣಯ್ಯನವರಮೇಲೆ ಫಿರ್ಯಾದನ್ನು ಮಾಡಿರುವರು.

ಬೆಂಗಳೂರಿನಿಂದ ಮದರಾಸಿಗೆ ಹೋಗುತ್ತಿದ್ದ ರೈಲ್‌ಗಾಡಿಯಲ್ಲಿ ರಾಜಮ್ಮನೆಂಬಾಕೆಯು ಕೊಲೆಮಾಡಲ್ಪಟ್ಟಳೆಂದು ಹಿಂದೆ ತಿಳಿಸಿರುವೆವು. ಈಕೆಯು ಮೇಲುಕೋಟೆಯ ಶ್ರೀವೈಷ್ಣವಳೆಂದೂ, ಮದರಾಸಿನಲ್ಲಿದ್ದ ತನ್ನ ಅಕ್ಕನಮನೆಗೆ ಹೋಗುತ್ತಿದ್ದಳೆಂದೂ ತಿಳಿದುಬಂದಿದೆ. ಗುಮಾನಿಯಮೇಲೆ ಸೆರೆಹಿಡಿಯಲ್ಪಟ್ಟಿದ್ದ ರಾಮಚಂದ್ರರಾಯನು ಜಾಮೀನಿನಮೇಲೆ ಬಿಡಲ್ಪಟ್ಟಿರುವನು.

ಕಳೆದ ತಾ|| 31ರಲ್ಲಿ ಡಾಕ್ಟರ್ ಉಸ್ಮಾನ್‌ರವರು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರುದ್ಯೋಗಗಳಿಂದ ನಿವೃತ್ತರಾದರು ಮತ್ತು ಡಾಕ್ಟರ್ ಎಸ್. ಸುಬ್ಬರಾಯರು ಸೀನಿಯರ್ ಸರ್ಜನ್ನುದ್ಯೋಗವನ್ನೂ, ಡಾಕ್ಟರ್ ಜೆ. ವಿ. ಕರ್ವೆಯವರು ಸ್ಯಾನಿಟರಿ ಕಮಿಷನರುದ್ಯೋಗವನ್ನೂ ವಹಿಸಿಕೊಂಡರು ಮೇಲ್ಕಂಡ ಆಫೀಸುಗಳ ಉದ್ಯೋಗಸ್ಥರುಗಳು ಡಾ|| ಉಸ್ಮಾನರವರ ಗುಣಕಥನವನ್ನು ಮಾಡಿ ಅವರ ಮೇಲೆ ತಮಗಿದ್ದ ಪ್ರೀತಿವಿಶ್ವಾಸಗಳನ್ನು ಪ್ರದರ್ಶಿಸಿ ಮರ್ಯಾದೆಯಿಂದ ಬೀಳ್ಕೊಟ್ಟರು.

ಬೆಂಗಳೂರಿನ ಕೆಲ ಹಿಂದುಗಳು ಗಲಭೆಯ ಸಂಬಂಧದಲ್ಲಿ ವಿಚಾರಣೆ ನಡೆದು ಸರ್ಕಾರಕ್ಕೊಪ್ಪಿಸಿದ ವರದಿಯ ಮೇಲೆ ಸರ್ಕಾರದವರು ಕೊಟ್ಟಿರುವ ಅಪ್ಪಣೆಯು ತಮಗೆ ಸಮರ್ಪಕವಾಗಿಲ್ಲವೆಂದು ಸೂಚಿಸುವುದಕ್ಕಾಗಿ ಕಳೆದ ಸೋಮವಾರ ಬೆಂಗಳೂರಿನಲ್ಲಿ ಸಭೆ ನಡೆಸಿ ಕೆಲ ನಿರ್ಧಾರಗಳನ್ನು ಮಾಡಿ ಸರ್ಕಾರದವರಿಗೆ ಕಳಿಸಿದರಲ್ಲದೆ ಈ ಸಂಬಂಧದಲ್ಲಿ ನಡೆದ ವಿಚಾರಗಳನ್ನು ಜನಗಳಿಗೆ ವಿಶದಪಡಿಸಿ ಉತ್ತರವಾದಿ ಸರ್ಕಾರವನ್ನು ಸ್ಥಾಪಿಸಲು ಅವಶ್ಯಕವಾದ ಕಾರ್ಯಕಲಾಪಗಳನ್ನು ನಡೆಸಲು ಒಂದು ಸಮಿತಿಯು ಏರ್ಪಾಡಾಯಿತು.

ಮೈಸೂರು ಸ್ಟಾರ್ ಪತ್ರಿಕಾ ಸಂಪಾದಕರು ಬೆಂಗಳೂರು ವೀರಕೇಸರಿ ಪತ್ರಿಕಾ ಸಂಪಾದಕರಾದ ಮ|| ಎಂ. ಸೀತಾರಾಮಶಾಸ್ತ್ರಿಗಳ ಮೇಲೂ ಅವರ ಪತ್ರವ್ಯವಹಾರಕರಾದ ದಾವಣಗೆರೆಯ ವಿಶ್ವನಾಥಶರ್ಮ ಎಂಬವರಮೇಲೂ ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ದಾವೆಯು ಕಳೆದ ಸೋಮವಾರ ವಿಚಾರಣೆಗಿಡಲ್ಪಟ್ಟಿದ್ದು ಒಂದನೇ ಅಪರಾಧಿಯಾಗಲಿ ಅವರವರ ಲಾಯರಾಗಲಿ ಕೋರ್ಟಿಗೆ ಬರಲಿಲ್ಲವಾಗಿ ಇದೇ ತಾ||18 ಕ್ಕೆ ಅಡ್ಜರ್ನ್ ಮಾಡಲ್ಪಟ್ಟು ಒಂದನೇ ಅಪರಾಧಿಗೆ ವಾರಂಟು ಕೊಡಬೇಕಾಗಿ ಅಪ್ಪಣೆಮಾಡಲ್ಪಟ್ಟಿತು. ಎರಡನೆಯಪರಾಧಿ ಹೆಸರಿನವರು ದಾವಣಗೆರೆಯಲ್ಲಾರೂ ಇಲ್ಲವೆಂದು ಸಮನ್ನು ವಾಪಸುಬಂದಿತು.

ಮುಸಲ್ಮಾನರ ಮೇಲೆ ನಡೆಯುತ್ತಿರುವ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುವುದಕ್ಕಾಗಿ ಬೆಂಗಳೂರಿನ ಮುಸಲ್ಮಾನರು ಬಹಿರಂಗ ಸಭೆಯನ್ನು ಮಾಡಿ ಸರ್ಕಾರಕ್ಕೆ ತಮ್ಮ ನಿರ್ಧಾರಗಳನ್ನು ಕಳಿಸಿರುವರು. ತಮ್ಮ ಕೋರಿಕೆಯನ್ನು ನೆರವೇರಿಸುವವರೆಗೂ ಮುಸಲ್ಮಾನರು ಇದೇರೀತಿ ಸಭೆಗಳನ್ನು ಮಾಡಿ ಸರ್ಕಾರದವರಿಗೆ ತಮ್ಮ ವಿಜ್ಞಾಪನೆಯನ್ನು ಕಳಿಸುತ್ತಿರುವುದಾಗಿ ನಿಷ್ಕರ್ಷೆಮಾಡಿಕೊಂಡಿರುವಂತೆ ಹಿಂದುಗಳ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಂಡ ಬಳಿಕ ಮುಸಲ್ಮಾನರ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಂಡು ಜನಗಳಲ್ಲಿ ನಿಜವಾಗಿಯೂ ಶಾಂತಿಸೌಹಾರ್ದವು ನೆಲೆಯಾಗುವಂತೆ ಮಾಡುವುದು ಸರ್ಕಾರದವರಿಗೆ ಉಚಿತವಾದುದೆಂದು ನಮಗೆ ತೋರುತ್ತದೆ. ಹಾಗೆ ಮಾಡದಿದ್ದರೆ ಮುಸಲ್ಮಾನರ ಮನನೊಂದು ಅವರು ಸರ್ಕಾರವು ಹಿಂದು ಪಕ್ಷಪಾತವುಳ್ಳದ್ದೆಂದು ದೂಷಿಸಲು ಅವಕಾಶವಾಗುವುದು.

ಹುಣಸೂರು ಸಮೀಪದ ಒಂದು ಗ್ರಾಮದಲ್ಲಿ ಒಬ್ಬ ಹಾವಾಡಿಗನು ತನ್ನ ಗಾರುಡಿಗ ವಿದ್ಯೆಯನ್ನು ನೆರೆದಿದ್ದ ಜನರಿಗೆ ತೋರಿಸುತ್ತಿದ್ದಾಗ ಒಂದು ನಾಗರಹಾವನ್ನು ಬುಟ್ಟಿಯಿಂದ ಹೊರಕ್ಕೆ ತೆಗೆದು ‘‘ ಇದು ವಿಷತೆಗೆಯಲ್ಪಟ್ಟ ಹಾವಲ್ಲ. ಇದರ ಹಲ್ಲಿನಲ್ಲಿ ವಿಷವಿದೆ. ಯಾರುಬೇಕಾದರೂ ಕಚ್ಚಿಸಿಕೊಂಡು ನೋಡಬಹುದು. ಇದರ ವಿಷವು ಶರೀರಕ್ಕೆ ವ್ಯಾಪಿಸದಂತೆ ಮಾಡುವ ಮೂಲಿಕೆಯು ನನ್ನಲ್ಲಿದೆ'' ಎಂದು ಹೇಳಿದನು. ಆದರೆ ನೋಟಕರಲ್ಲಿ ಯಾರೂ ಸರ್ಪದಿಂದ ಕಡಿಸಿಕೊಳ್ಳಲು ಧೈರ್ಯಮಾಡಲಿಲ್ಲವಾಗಿ, ಹಾವಾಡಿಗನು ತಾನೇ ಕಡಿಸಿಕೊಂಡು ತನ್ನಲ್ಲಿದ್ದ ಮೂಲಿಕಾಪ್ರಯೋಗಮಾಡಿಕೊಂಡನಾದರೂ ಪ್ರಯೋಜನವಾಗದೆ ವಿಷವೇರಿ ಮೃತಪಟ್ಟನು. ಆದುದರಿಂದ ವಿಷಪರಿಹಾರ ಮೂಲಿಕೆಗಳೆಂದು ಹೇಳಿ ಅವನ್ನು ಮಾರಲಿಕ್ಕೆ ತರುವವರ ಮಾತಿಗೆ ಮರುಳಾಗಿ ಚೇಳಿನಿಂದಲೊ ಸರ್ಪದಿಂದಲೊ ಕಡಿಸಿಕೊಂಡು ಪರೀಕ್ಷಿಸಲೆತ್ನಿಸುವವರು ಮೇಲ್ಕಂಡ ಅಂಶವನ್ನು ಸ್ಮರಿಸಿಕೊಂಡು ಜಾಗ್ರತರಾಗಿರುವುದುತ್ತಮ.

ಭರತಖಂಡದ ವೃತ್ತಾಂತಗಳು.

ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿ ಚಳಿಯು ಅಶಕ್ಯವಾಗಿರುವುದಲ್ಲದೆ ವಿಪರೀತವಾದ ಮಂಜಿನ ಮಳೆಯು ಸುರಿಯುತ್ತಿರುವುದು. ಅಫ್ಘಾನಿಸ್ಥಾನ, ಬೆಲೂಚಿಸ್ಥಾನ, ಸಿಂಧು ಮೊದಲಾದ ಪ್ರಾಂತಗಳಲ್ಲಿ ಚಳಿಯ ಹಾವಳಿಯನ್ನು ವಿವರಿಸಲು ಸಾಧ್ಯವಿಲ್ಲದಂತಿರುವುದು.

ಪಾಲೂರಿನ ಸೀತಾಪತಿರಾವ್ ಎಂಬ ವೈದ್ಯವಿದ್ಯಾರ್ಥಿಯು ತನ್ನ ಹೆಂಡತಿಗೆ ವಿಷಪ್ರಯೋಗ ಮಾಡಿದುದರಿಂದ ಆಕೆಯು ಸತ್ತಲ್ಲದೆ ಒಂದು ಮೇಕೆಯೂ, ಒಂದು ಹಂದಿಯೂ ಆ ವಿಷಪದಾರ್ಥವನ್ನು ತಿಂದು ಮೃತವಾದುವು. ಈ ಕೊಲೆಪಾತಕನು ಪೊಲೀಸರಿಂದ ಹಿಡಿಯಲ್ಪಟ್ಟಿರುತ್ತಾನೆ. ಇವನು ವಿಜಯನಗರದ ಯುವಜನ ಸಭೆಯ ಮೆಂಬರಾಗಿದ್ದನಲ್ಲದೆ ಆ ಸಂಘದಿಂದ ಹೊರಡುವ ಪತ್ರಿಕೆಗೆ ಕೆಲ ಸಂಪಾದಕನಾಗಿದ್ದನು.

ವಿದ್ಯಾಖಾತೆಯ ಮುಖ್ಯಾಧಿಕಾರಿಗಳೂ ಮಂತ್ರಿಗಳೂ ಗುಜರಾತ್ ಕಾಲೇಜಿನ ಅಧಿಕಾರಿಗಳೊಡನೆ ಸಂಭಾಷಣೆ ನಡೆಸಿ ಮುಷ್ಕರವನ್ನು ಕೊನೆಗಾಣಿಸುವ ಯೋಚನೆ ಮಾಡುತ್ತಿರುವರು. ಆದಾಗ್ಗೂ ವಿದ್ಯಾರ್ಥಿಗಳು ಇನ್ನೂ ಸತ್ಯಾಗ್ರಹವನ್ನಾಚರಿಸುತ್ತಿರುವರು. ಕಾಲೇಜಿಗೆ ಹೋಗುತ್ತಿರುವ 10-15 ಮಂದಿ ವಿದ್ಯಾರ್ಥಿಗಳು ಮುಷ್ಕರಿಗಳ ಕಾಟದಿಂದ ತಪ್ಪಿಸಿಕೊಳ್ಳಲು ಬೆಳಗಿನ ಝಾವದ 4½ ಗಂಟೆಗೆದ್ದು ಕಾಲೇಜಿಗೆ ಹೋಗಿ ಸೇರಿಕೊಂಡರಂತೆ! ವಿದ್ಯಾತುರವೆಂದರೆ ಹೀಗಿರಬೇಕಲ್ಲವೆ?

ಕಳೆದ ನಾಲ್ಕು ದಿವಸಗಳಿಂದಲೂ ಬೊಂಬಾಯಿ ನಗರದಲ್ಲಿ ಮಂಜು ವಿಪರೀತವಾಗಿ ಸುರಿಯುತ್ತ ಚಳಿಯು ಸಹಿಸಲಶಕ್ಯವಾಗಿದೆ ಮತ್ತು ವಾತಾವರಣದಲ್ಲಿ ಉಷ್ಣಾಂಶವು ನಿತ್ಯಗಟ್ಟಿಗಿಂತ 12·7 ಡಿಗ್ರಿ ಕಡಿಮೆಯಾಗಿದೆ, ಅಂದರೆ 53·7 ಡಿಗ್ರಿಯಿದೆ. 1847 ನೆಯ ಇಸವಿಯಲ್ಲಿ ಮಾತ್ರ 53.3 ಡಿಗ್ರಿ ಉಷ್ಣವಿದ್ದಿತು. ಆಧಿಪತ್ಯದ ಅನೇಕ ಕಡೆಗಳಲ್ಲಿ ಮಂಜು ವಿಪರೀತವಾಗಿ ಸುರಿಯುತ್ತಿರುವುದರಿಂದ ನಿಂತಿರುವ ಬೆಳೆಯು ನಾಶವಾಗುತ್ತಿರುವುದಲ್ಲದೆ ಮನುಷ್ಯರು ಮಡಿಯುತ್ತಿರುವುದಾಗಿ ತಿಳಿಯಬಂದಿದೆ.

ಸಿಂಧು, ಪಂಜಾಬ್ ಮೊದಲಾದ ಪ್ರಾಂತ್ಯಗಳಲ್ಲಿ ಶೈತ್ಯಾಧಿಕ್ಯದಿಂದ ಅನೇಕ ಜನರು ರೈಲ್‌ಗಾಡಿಗಳಲ್ಲಿ ಪ್ರಯಾಣಮಾಡುತ್ತಿದ್ದಾಗ ಮೃತಪಟ್ಟರು. ಸೂರತ್ತಿನ ಪ್ರಾಂತ್ಯದಲ್ಲಿ ಬೆಳೆಗಳೆಲ್ಲ ನಾಶವಾಗಿರುವುವು. ಅನೇಕ ಕೂಲಿಗಾರರು ಸತ್ತುಹೋದರು. ಇನ್ನು ಒಂದೆರಡು ವಾರ ಚಳಿಯು ಕಡಿಮೆಯಾಗುವಂತೆ ತೋರುವುದಿಲ್ಲ. ಚಳಿಯ ಹಾವಳಿಯು ಪಾಶ್ಚಾತ್ಯ ದೇಶಗಳಲ್ಲಿ ಸರ್ವಸಾಧಾರಣವಾಗಿರುವುದು. ಆದರೆ ಹಿಂದುಸ್ಥಾನದಲ್ಲಿ ಇದು ಅಪೂರ್ವ. ಈ ವರ್ಷಮಾತ್ರ ಚಳಿಯ ಆರ್ಭಟವು ಹೆಚ್ಚಾಗಿ ಅನರ್ಥಗಳು ಸಂಭವಿಸಿರುವುವು.

ಪಾಟಿಯಾಲಾ ಸಂಸ್ಥಾನದಲ್ಲಿ ಪ್ರಜೆಗಳು ಅಸಂತುಷ್ಟರಾಗಿ ಮಹಾರಾಜರಲ್ಲಿ ಅವಿಶ್ವಾಸಿಗಳಾಗಿರುವರು. ತಮಗೆ ಈಗಿನ ಮಹಾರಾಜರು ಬೇಡವೆಂದು ಸಾರ್ವಭೌಮ ಸರ್ಕಾರಕ್ಕೆ ಅರ್ಜಿಹಾಕಿಕೊಂಡಿದ್ದರು. ಇಂತಹ ಅರ್ಜಿದಾರರಲ್ಲಿ ಅಕಾಲಿ ಸಿಕ್‌ಜನಗಳೇ ಬಹುಮಂದಿಯಿರುವರು. ಅಂದಿನಿಂದೀಚೆಗೆ ಅಕಾಲಿಜನಗಳಿಗೆ ಚಿತ್ರಹಿಂಸೆ ನಡೆಯುತ್ತಿರುವುದು. 250 ಮಂದಿ ಅಕಾಲಿಗಳು ಸೆರೆಹಿಡಿಯಲ್ಪಟ್ಟಿರುವರು. ಮುಖಂಡರನ್ನು ಏಕಾಂತವಾಸದಲ್ಲಿಟ್ಟಿರುವರು. ಸೆರೆಯಲ್ಲಿರುವವರನ್ನು ಪ್ರತಿರಾತ್ರಿಯೂ ಕಠಿಣವಾಗಿಯೂ ಕ್ರೂರವಾಗಿಯೂ ಶಿಕ್ಷಿಸುತ್ತಿರುವರಂತೆ!

ಕಳೆದ ರಾಷ್ಟ್ರೀಯ ಸಭೆಯ ಕಾಲದಲ್ಲಿ ಅಮೆರಿಕೆಯಿಂದ ಭಾರತೀಯರಿಗೆ ಕಳಿಸಲ್ಪಟ್ಟ ಸಹಾನುಭೂತಿಯ ಅನುತಾಪ ಸಂದೇಶಗಳು ನಮ್ಮ ದೇಶಕ್ಕೆ ತಲಪದಂತೆ ಬ್ರಿಟಿಷ್ ಸರ್ಕಾರದವರಿಂದ ತಡೆಮಾಡಲ್ಪಟ್ಟುವು. ಆಕಾಶವಾಣಿಯ ಮೂಲಕ ಕಳಿಸಲು ಮಾಡಿದ ಯತ್ನವೂ ಸರ್ಕಾರದವರಿಂದ ತಡೆಯಲ್ಪಟ್ಟಿತಂತೆ! ಅಂಚೆಯ ಮೂಲಕ ಕಳಿಸಿದ ಕಾಗದಪತ್ರಗಳೂ ಮಧ್ಯೆ ನಾಶಪಡಿಸಲ್ಪಟ್ಟುವಂತೆ! ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಮೆರಿಕನರೇ ಮೊದಲಾದ ಜನಾಂಗಗಳಿಗಿರುವ ಸಹಾನುಭೂತಿಯು ನಮಗೆ ತಿಳಿಯದಂತೆ ಮಾಡುವುದೇ ಸರ್ಕಾರದವರ ವರ್ತನೆಗೆ ಕಾರಣವಂತೆ!

ಪೂನಾನಗರದ ಫರ್ಗುಸನ್ ಕಾಲೇಜಿನ ವಿದ್ಯಾರ್ಥಿಗಳು ವಾರ್ಷಿಕೋತ್ಸವವನ್ನು ನಡೆಸುವ ವಾಡಿಕೆಯಿರುವುದು. ಈವರ್ಷ ಉತ್ಸವವನ್ನು ನಡೆಸುವ ವಿಚಾರವಾಗಿ ವಿದ್ಯಾರ್ಥಿಗಳಲ್ಲಿ ಎರಡು ಕಕ್ಷಿಗಳಾದುವು. ಕಾಲೇಜಿನ ಮುಖ್ಯೋಪಾಧ್ಯಾಯರೂ ಒಂದುಪಕ್ಷದ ವಿದ್ಯಾರ್ಥಿಗಳೂ, ಕಾಲೇಜಿನ ಇತರ ಅಧ್ಯಾಪಕರೂ ಸೇರಿ ಉತ್ಸವವನ್ನು ಜರುಗಿಸುತ್ತಿರಲು ಇನ್ನೊಂದು ಪಕ್ಷದವರು ಮುಖವಾಡಗಳನ್ನು ಹಾಕಿಕೊಂಡು, ಸಭೆಗೆನುಗ್ಗಿ ಕಲ್ಲುಗಳನ್ನೆಸೆದು ಕಿಟಕಿಗಳನ್ನು ಒಡೆದು ಗಲಭೆಮಾಡಿ ರಾತ್ರಿ 10 ಗಂಟೆಯಿಂದ ಬೆಳಗಿನ 3 ಗಂಟೆಯವರೆಗೂ ಹೋರಾಡುತ್ತಿದ್ದು ತರುವಾಯ ತಂತಮ್ಮ ಮನೆಗಳಿಗೆ ತೆರಳಿದರು.

ಬರೋಡಾ ಸಮೀಪದಲ್ಲಿ ಕಟ್ಟುತ್ತಲಿರುವ ಸೇತುವೆಯ ಸ್ಥಿರಸ್ಥಾಪನಾರ್ಥವಾಗಿ ನರಬಲಿ ಕೊಡಲೋಸುಗ ಹಿಂದು ಮಕ್ಕಳನ್ನು ಪಠಾಣರು ಹಿಡಿದೊಯ್ವರೆಂಬ ಸುಳ್ಳು ಪ್ರತೀತಿ ಹುಟ್ಟಿ ಬೊಂಬಾಯಿನಗರದ ಕೂಲಿಕಾರ ಜನರು ಉದ್ರೇಕಿತರಾಗಿ ಕಂಡೆಡೆಯಲ್ಲೆಲ್ಲಾ ಪಠಾಣರಮೇಲೆ ಬಿದ್ದು ಅವರನ್ನು ಪ್ರಹರಿಸುತ್ತಲಿರುವರು. ಈ ರೀತಿಯಲ್ಲಿ ಈಗಾಗಲೆ 25 ಮಂದಿ ಪಠಾಣರು ಕೊಲ್ಲಲ್ಪಟ್ಟಿರುವರು. ಅನೇಕಮಂದಿ ಘಾತಪಡೆದು ವೈದ್ಯಚಿಕಿತ್ಸೆಯಲ್ಲಿರುವರು. ಈ ದೊಂಬಿಯನ್ನು ಹತೋಟಿಯಲ್ಲಿಡಲು ಪೊಲೀಸಿನವರು ಪೂರ್ಣಸಾಹಸ ಮಾಡುತ್ತಿರುವರಾದರೂ ಗಲಭೆಯು ಇನ್ನೂ ಶಮನವಾಗಿರುವುದಿಲ್ಲ. ಗೊಂದಲವಾದ ಸ್ಥಳಗಳಿಗೆ ಪತ್ರಿಕೆಗಳ ಸುದ್ದಿಗಾರರು ಹೋದರೆ ಅವರನ್ನು ಸಹ ಪುಂಡುಜನಗಳು ಹೊಡೆದು ಓಡಿಸಿಬಿಟ್ಟರಂತೆ.

ಡಾ|| ಬೆಸೆಂಟಮ್ಮನವರು ಮದರಾಸಿನ ವಿದ್ಯಾರ್ಥಿಗಳಿಗೆ ಬುದ್ಧಿವಾದವನ್ನು ಹೀಗೆ ಹೇಳಿರುವರು. ಯುವಕರ ಮತ್ತು ವಿದ್ಯಾರ್ಥಿಗಳ ಸಭೆಗಳಲ್ಲಿ ಭಾರತೀಯ ಸ್ವಾತಂತ್ರ್ಯದ ವಿಚಾರವಾಗಿ ನಿರ್ಣಯಗಳನ್ನು ತರಬೇಕೆಂದು ನಿಮಗೆ ಅನೇಕ ದೇಶೀಯ ಮುಂದಾಳುಗಳು ಹೇಳಿರುವರು. ಈ ದೊಡ್ಡ ವಿಚಾರವನ್ನು ಸ್ವಾವಲಂಬಿಗಳೂ ಪ್ರಾಪ್ತವಯಸ್ಕರೂ ಆದ ನಿಮ್ಮ ತಂದೆತಾಯಿಗಳ ಪರ್ಯಾಲೋಚನೆಗೆ ಬಿಡುವುದು ಉತ್ತಮ. ಇಂತಹ ವಿಷಯಗಳ ಪರಿಶೀಲನೆಗೆ ವಯೋವೃದ್ಧರೂ ಜ್ಞಾನವೃದ್ಧರೂ ಆದ ಮುಂದಾಳುಗಳು ಮಾತ್ರ ಯೋಗ್ಯರು. ದೇಶಬಂಧು ಚಿತ್ತರಂಜನದಾಸ್ ರವರೇ ಮೊದಲಾದ ದೇಶಭಕ್ತರು ಸಮಭಾವವುಳ್ಳ ಜನಾಂಗಗಳನ್ನೊಳಗೊಂಡ ಸಾಮ್ರಾಜ್ಯಕ್ಕೊಳಪಟ್ಟಿರುವುದು ಪ್ರತ್ಯೇಕವಾಗಿರುವುದಕ್ಕಿಂತಲೂ ಉತ್ತಮವೆಂದು ಹೇಳಿರುವರು. ನೀವು ಈ ವಿಚಾರವನ್ನು ಪರ್ಯಾಲೋಚಿಸಲು ಸಾಕಾದಷ್ಟು ಕಾಲವಿರುವುದು. ನೀವು ಇನ್ನೂ ತಂದೆತಾಯಿಗಳ ಪೋಷಣೆಯಲ್ಲಿರುವಿರಿ. ಅವರು ನಿಮ್ಮ ಪೋಷಣೆಗಾಗಿಯೂ ವಿದ್ಯಾಭ್ಯಾಸಕ್ಕಾಗಿಯೂ ತಮ್ಮ ಸರ್ವಸ್ವವನ್ನೂ ಒಪ್ಪಿಸಿರುತ್ತಾರೆ. ಅನೇಕರು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿಯೂ, ಗಿರವಿ ಇಟ್ಟೂ ನಿಮ್ಮನ್ನು ಪೋಷಿಸುತ್ತಿರುವರು. ಬಡವರಾದವರು ತಮ್ಮ ದೇಹವನ್ನು ನಿಮಗಾಗಿ ಧಾರೆಯೆರೆದು ತಮಗಿಲ್ಲದಿದ್ದರೂ ನಿಮ್ಮ ಸೌಕರ್ಯಗಳಿಗಾಗಿ ದುಡಿಯುತ್ತಿರುವರು. ಅಂಥವರ ವೃದ್ಧಾಪ್ಯದಲ್ಲಿ ನೀವು ಅವರನ್ನು ಸಲಹಲು ಹಿಂತೆಗೆಯವರಾಗಬಾರದು. ಹೀಗಿರಲು ನೀವು ಹೇಗೆತಾನೆ ನಿಮ್ಮ ಭವಿಷ್ಯದ ಜೀವನವನ್ನು ಸಹ ಲಕ್ಷಿಸದೆ ದುಡುಕಿ ನಡೆಯಲಾದೀತು? ನೀವು ಮಾಡಿದ ಅತ್ಯಾಚಾರಕ್ಕಾಗಿ ನಿಮ್ಮ ಪೋಷಕರಿಂದ ಜುಲ್ಮಾನೆ ಮೊದಲಾದ ದಂಡಗಳನ್ನು ತೆರಿಸುವುದು ಸರ್ವಥಾ ಯೋಗ್ಯವಾದುದಲ್ಲ. ನಿಮಗೆ ಮುಷ್ಕರದ ಬುದ್ಧಿವಾದವನ್ನು ಹೇಳುವವರು ಸಹಾಯಕ್ಕೆಬರುವುದಿಲ್ಲ. ಒಂದುದಿನ ಕೆಲ ವಿದ್ಯಾರ್ಥಿಗಳು ಮಹಾತ್ಮ ಗಾಂಧಿಯವರ ಮಾತುಕೇಳಿ ಜೀವನಕ್ಕೆ ಕಷ್ಟಬರಲು ಅವರ ಬಳಿಗೆ ಹೋಗಿ ಸಹಾಯ ಕೇಳಲಾಗಿ ಅವರು ಯಾವ ಸಹಾಯವನ್ನೂ ಮಾಡದೆ ಅವರ ಸ್ವಾರ್ಥತ್ಯಾಗವನ್ನು ಹೊಗಳಿದರಂತೆ! ಇನ್ನೇನು ಮಾಡಲಾದೀತು? ನೂರಾರು ಮಂದಿ ಗಾಂಧಿಯವರಲ್ಲಿಗೆ ಹೋದರೆ ಅವರು ಅವರಿಗೆಲ್ಲಾ ಏನುತಾನೆ ಸಹಾಯಮಾಡಿಯಾರು? ಆದುದರಿಂದ ನೀವು ವಿದ್ಯಾರ್ಥಿದೆಶೆಯಲ್ಲಿರುವಾಗ್ಗೆ ಚೆನ್ನಾಗಿ ವ್ಯಾಸಂಗಮಾಡಿ ಮುಂದೆ ದೇಶಸೇವಕರಾಗಲು ಅರ್ಹತೆಯನ್ನು ಸಂಪಾದಿಸಿರಿ. ಆದರೆ ನಿಮ್ಮಿಂದ ಸಾಧ್ಯವಿಲ್ಲದ ಕೆಲಸಕ್ಕೆ ಪ್ರಕೃತ ಸ್ಥಿತಿಯಲ್ಲಿ ಕೈಹಾಕಿ ಕ್ಲೇಶಪರಂಪರೆಗಳಿಗೆ ಗುರಿಯಾಗಬೇಡಿರಿ.

ವಿದೇಶದ ವೃತ್ತಾಂತಗಳು.

ಲಂಡನ್ ನಗರದ ಅಂಚೆಯಕಚೇರಿಯಲ್ಲಿ ಸುಮಾರು 10,000 ಪೌನು ಬೆಲೆಬಾಳುವ ವಜ್ರದ ಕಟ್ಟುಗಳುಳ್ಳ ಒಂದು ಚೀಲವು ಕಳವಾಗಿರುವುದು. ಪೊಲೀಸರು ಪತ್ತೆಯ ತರದೂದನ್ನು ನಡೆಸುತ್ತಿರುವರು.

ದೇಶದಲ್ಲಿ ಅರಾಜಕತ್ವವನ್ನೆಬ್ಬಿಸಿ ದಂಗೆಮಾಡಿದ ಕರ್ನಲ್ ಪಾಜ್ ಮತ್ತು ಬ್ರಿಸ್ ಎಂಬವರನ್ನು ಸರ್ಕಾರದವರು ವಿಚಾರಣೆ ಮಾಡಿ ಅವರಿಗೆ ಮರಣದಂಡನೆಯನ್ನು ವಿಧಿಸಿರುವರು. ಮಾಜಿ ಮುಖ್ಯಮಂತ್ರಿಯನ್ನು ಸಹ ಸೆರೆಹಿಡಿದಿರುವರು. ಇದಕ್ಕಾಗಿ ಜನಗಳಲ್ಲಿ ಅಸಮಾಧಾನ ಹುಟ್ಟಿರುವುದು. ಅವರಿಗೆ ಕಠಿನಶಿಕ್ಷೆ ಮಾಡಲಾಗದೆಂದು ರಾಜರಲ್ಲಿ ವಿಜ್ಞಾಪಿಸಿಕೊಂಡಿರುತ್ತಾರೆ.

ಕಾಬೂಲನ್ನು ಬಾಚಾಯಿಸಾಕುವಿನ ದಂಗೆಕೋರ ಸೈನಿಕರು ಮುತ್ತಿದಾಗ ಅಪಾಯದಲ್ಲಿದ್ದ ಜರ್ಮನಿಯ ಪ್ರಜೆಗಳನ್ನು ಬ್ರಿಟಿಷರು ಸುರಕ್ಷಿತವಾಗಿ ತಮ್ಮ ಆಕಾಶಾಯನಗಳಲ್ಲಿ ಪೆಷಾವರಿಗೆ ಸಾಗಿಸಿದರು. ಇದಕ್ಕಾಗಿ ಜರ್ಮನ್ ಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿರುವರು.

ರಷ್ಯಾದೇಶದ ರಾಜಕೀಯ ಪ್ರಗತಿಗೆ ಕಾರಣವಾದ ಟ್ರೊಟ್ಸ್ಕಿಯವರನ್ನು ಅಲ್ಲಿಯ ಸರ್ಕಾರದವರು ಬಂಧನದಲ್ಲಿಟ್ಟಿದ್ದರು. ಅವರ ಪಕ್ಷದವರು ಗಲಭೆ ಮಾಡುತ್ತಿದ್ದರಾದುದರಿಂದ ಟ್ರೊಟ್ಸ್ಕಿಯವರು ದೇಶದಿಂದ ಹೊರಟು ಹೋಗಬೇಕೆಂದು ಅಪ್ಪಣೆಯಾಗಿರುವುದು. ತುರ್ಕಿಯ ಸರ್ಕಾರದವರು ಟ್ರೊಟ್ಸ್ಕಿಯವರಿಗೆ ಇಷ್ಟವಾದರೆ ತಮ್ಮದೇಶದಲ್ಲಿರಲು ಅವಕಾಶ ಕೊಡುವುದಾಗಿ ತಿಳಿಸಿರುತ್ತಾರೆ.

ಅಮೆರಿಕೆಯ ಸಂಯುಕ್ತಸಂಸ್ಥಾನದ ಆರ್ಥಿಕಸ್ಥಿತಿಯು ಕಳೆದ ಅರ್ಧಶತಮಾನದಲ್ಲಿ ಅಸಾಧಾರಣವಾಗಿ ಔನ್ನತ್ಯವನ್ನು ಪಡೆದಿರುವುದು. ಜನಾಂಗದ ಐಶ್ವರ್ಯವು ಒಂದಕ್ಕೆ ಏಳರಷ್ಟು ಹೆಚ್ಚಿರುವುದು. ಜನಸಂಖ್ಯೆಯು ಇಮ್ಮಡಿಯಾಗಿರುವುದು. ವ್ಯಾಪಾರ ಕೈಗಾರಿಕೆಗಳು ಮಿತಿಮೀರಿ ಪ್ರಬಲಿಸುತ್ತಿರುವುವು. ಇದನ್ನು ನೋಡಿ ಸಹಿಸಲಾರದೆ ಜಪಾನಿನವರೂ, ಯೂರೋಪಿನವರೂ ಅಮೆರಿಕನ್ನರ ಪ್ರಾಬಲ್ಯವನ್ನು ಮುರಿಯುವ ಉದ್ದೇಶದಿಂದ ತಂತಮ್ಮ ನೌಕಾಬಲವನ್ನು ಹೆಚ್ಚಿಸುತ್ತಿರುವರು. ಆದಕಾರಣ ಅಮೆರಿಕೆಯು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾದರೆ ನೌಕಾಬಲವನ್ನು ಹೆಚ್ಚಿಸಬೇಕು. ಕಳೆದ ಯೂರೋಪಿನ ಯುದ್ಧವು ಪರಿಸಮಾಪ್ತಿಯಾದಮೇಲೆ ಬ್ರಿಟಿಷರು ತಮ್ಮ ನಾವೆಯನ್ನು ಹೆಚ್ಚಿಸಿಕೊಂಡು "ಸಾಗರದ ರಾಣಿ" ಎಂಬ ಬಿರುದನ್ನು ಬ್ರಿಟನ್ನಿಗೆ ಉಳಿಸಿಕೊಂಡಿರುವರು—ಎಂಬುದಾಗಿ ಅಮೆರಿಕೆಯ ಯುದ್ಧದ ಮಂತ್ರಿಗಳು ಭಾಷಣಮಾಡಿರುವರು. ಶೀಘ್ರದಲ್ಲಿಯೇ ಶಾಂತಿಸಾಗರದಲ್ಲಿ ಮಹಾಯುದ್ಧವು ನಡೆಯುವುದೆಂದೂ, ಇದಕ್ಕಾಗಿ ಜಪಾನರು ಸನ್ನದ್ಧರಾಗುತ್ತಿರುವರೆಂದೂ ತಿಳಿಸಿರುವರು. ಶಾಂತಿಸಾಗರದಲ್ಲಿ ಮೂರು ದೊಡ್ಡ ಜನಾಂಗಗಳ ರಾಜ್ಯಗಳಿರುವುವು. ಜಪಾನರು, ಅಮೆರಿಕನರು, ಬ್ರಿಟಿಷರು ಪಂದ್ಯಕಟ್ಟಿದಂತೆ ನೌಕಾಬಲವನ್ನು ಬೆಳೆಸಿರುವರು. ಬ್ರಿಟಿಷರು ಸಿಂಗಪುರದಲ್ಲಿ ದೊಡ್ಡ ನೌಕಾಬಲದ ಕೇಂದ್ರಸ್ಥಾನವನ್ನು ಸ್ಥಾಪಿಸಿರುವರು. ಜಪಾನರು ಈ ನೆಪದಿಂದ ತಮ್ಮ ನಾವೆಯನ್ನು ಹೆಚ್ಚಿಸಿಕೊಂಡರು. ಅಮೆರಿಕನರು ಇವೆರಡು ಜನಾಂಗಗಳ ಪೈಪೋಟಿಯನ್ನು ನೋಡಿ ತಮ್ಮ ಆತ್ಮರಕ್ಷಣೆಗಾಗಿ ತಮ್ಮ ನೌಕಾಬಲವನ್ನು ಹೆಚ್ಚಿಸುವ ಪ್ರಯತ್ನದಲ್ಲಿರುವರು. ಇದನ್ನೆಲ್ಲ ಪರಿಶೀಲಿಸಿದರೆ ಮತ್ತೊಂದು ಘೋರಯುದ್ಧವು ಶೀಘ್ರದಲ್ಲಿಯೇ ಸಂಭವಿಸುವುದೆಂದು ಧಾರಾಳವಾಗಿ ಹೇಳಬಹುದಾಗಿದೆ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ವಿನೋದವಾರ್ತೆ.

ಮೊನ್ನೆ ತಾನೆ ನಡೆದ ಹಾಸನ ಡಿಸ್ಟ್ರಿಕ್ಟು ಎಗ್ಜಿಬಿಷನ್ನಿನಲ್ಲಿ ಬಂಗಾರದ ಪದಕವನ್ನೂ, ಸರ್ಟಿಫಿಕೆಟನ್ನೂ ಸಂಪಾದಿಸಿದ ಮ|| ಸೂರ್ಯವಾದ್ಯದ ಕೃಷ್ಣಪ್ಪನವರ ಕೊಳಲ ಸಂಗೀತವು ತಾ|| 25-1-29 ರಲ್ಲಿ ಶಿವಮೊಗ್ಗ ಟವನ್ ದೊಡ್ಡಪೇಟೆಯಲ್ಲಿರುವ ಶ್ರೀ ಕಾಳಿಕಾಮ್ಮನವರ ದೇವಾಲಯದಲ್ಲಿ ಮ|| ಕುಂಸಿದುರ್ಗಪ್ಪನವರ ಮಕ್ಕಳು ರಾಮಣ್ಣನವರ ಆಶ್ರಯದಿಂದ ಇಂಪಾಗಿಯೂ ಮನೋಹರವಾಗಿಯೂ ನಡೆದು ನೆರೆದಿದ್ದ ವರ್ತಕಮಂಡಲಿಯವರ ಮನಸ್ಸನ್ನು ಆನಂದಗೊಳಿಸಿತು. ಶಿವಮೊಗ್ಗಾವಾಸಿಗಳು ಪ್ರೋತ್ಸಾಹಿಸಿ ಮಲೆನಾಡಿನಲ್ಲಿಯೂ ಇಂಥಾ ಸಂಗೀತವಿದ್ವಾಂಸರಿರುವರೆಂಬುದನ್ನು ಬಹಿರಂಗವಾಗಲು ಶಿವಮೊಗ್ಗವಾಸಿಗಳು ಅವಕಾಶಕೊಟ್ಟದ್ದು ಶ್ಲಾಘ್ಯವಾಗಿದೆ.

ಪ್ರೇಕ್ಷಕ.

ಶ್ರೀಮದಾರಾಧನಾ ಮಹೋತ್ಸವಾಹ್ವಾನಪತ್ರಿಕಾ.

ಶ್ರೀಮನ್ ಮಹಿಶೂರು ದೇಶಾಧಿಪತಿ ನಾಲ್ವಡಿ ಶ್ರೀಮನ್ ಕೃಷ್ಣರಾಜೇಂದ್ರ ಭೂಪಪಾಲಿತ ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೋಕು ಮುರಗಮಲ್ಲಾ ಹೋಬಳಿ ಚಲಮಕೋಟೆ ಮುಕ್ತಗಿರಿ ಮಠದಬಳಿ ಶ್ರೀಮದ್ಭಾರದ್ವಾಜಾಶ್ರಮವೆಂದು ಸುಪ್ರಸಿದ್ಧವಾಗಿರುವ ದೇವಗಂಗಾತೀರದಲ್ಲಿ ನಿಜಮೋಕ್ಷ ಸಿದ್ಧಿಯಂ ಪಡೆದ ಶ್ರೀಮನ್ನಿರಂಜನ ನಿರಾಭಾರಿ ಗುರುಕುಲತಿಲಕ ಶ್ರೀ ಶಿವಯೋಗಿ ಸಿದ್ಧಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳವರ ಆರಾಧನಾಭಿಷೇಕಂಗಳು ರಾತ್ರಿಮಹೋತ್ಸವ ಮಹಾಜನರ ಸತ್ಕಾಲಕ್ಷೇಪಂಗಳು ಸಹಾ ಪ್ರತಿಸಂವತ್ಸರ ನಡೆಯುವಂತೆ ಈ ಸಂವತ್ಸರದ ಮಾಘ ಶುದ್ಧ ಅಷ್ಟಮಿ ತಾ|| 17-2-29 ನೇ ಭಾನುವಾರ ಸ್ವಸ್ಥಾನದಲ್ಲಿ ನಡೆಯಬೇಕಾಗಿರೋಣದ್ದರಿಂದ ಭಕ್ತಮಾಹೇಶ್ವರಾದಿಯಾಗಿ ಸರ್ವರೂ ದಯೆಮಾಡಿಸಿ ಈ ಮಹಾ ಗುರುಕಾರ್ಯವನ್ನು ಸಾಂಗಗೊಳಿಸಿ ತತ್ಫಲಕ್ಕೂ ಕೀರ್ತಿಗೂ ಭಾಗಿಗಳಾಗಿ ತೆರಳುವಿರೆಂದು ನಂಬಿ ಪ್ರೀತಿಯಿಂದ ಕೃತಪಡಿಸಿಕೊಂಡಿರುವ ಕಾರ್ಯಭಾಗಿಯಾದ,

ತಮ್ಮ ಶ್ರೇಯೋಭಿಲಾಷಿ ಶ್ರೀ ಶಿವಯೋಗಿ, ಬಸವರಾಜ
ಮುಂದೇಶಿಕೇಂದ್ರ ಸ್ವಾಮಿಗಳು, ಮುಕ್ತಗಿರಿಮಠ.

ಮಹಾತ್ಮ ವೇಮಣ್ಣಯೋಗಿಗಳ ಜಯಂತ್ಯುತ್ಸವವು.

ಮೊದಲು ಪ್ರಸಿದ್ಧಪಡಿಸಿದ ಪ್ರಕಾರ ಗದಗ ಶಹರದಲ್ಲಿ ಶ್ರೀ ವೇಮರಡ್ಡಿ ಕಂಪೆನಿ ದಲಾಲ ಅಂಗಡಿಯಲ್ಲಿ ಶ್ರೀ ಯೋಗಿಗಳ ಜಯಂತ್ಯುತ್ಸವವು ತಾ|| 19-1-1929 ನೇ ದಿವಸ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಅಂಗಡಿಯನ್ನು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿದ್ದು ಕಾರ್ಯಕ್ರಮದ ಪ್ರಕಾರ ಮುಂಜಾನೆ ಉತ್ಸವ, ಪೂಜೆಗಳು ನೆರವೇರಿಸಲ್ಪಟ್ಟವು. ಸಾಯಂಕಾಲದಲ್ಲಿ ಈ ಉತ್ಸವದ ನಿಮಿತ್ತವಾಗಿ ನಲವಡಿಯಿಂದ ಆಹ್ವಾನಿಸಲ್ಪಟ್ಟಿದ್ದ ಶ್ರೀ ಕರ್ಣಾಟಕ ಕವಿಚಂದ್ರ ಪಂಡಿತ ಶ್ರೀಕಂಠಶಾಸ್ತ್ರಿಯವರು ಶ್ರೀ ಯೋಗಿಗಳ ಕೀರ್ತನವನ್ನು ಬಹು ಸುಶ್ರಾವ್ಯವಾಗಿ ಮಾಡಿದರು. ಈ ಕೀರ್ತನಸಮಾರಂಭಕ್ಕೆ ಊರೊಳಗಿನ ಹಾಗು ಸುತ್ತುಮುತ್ತಲಿನ ಯಾವತ್ತು ಸಮಾಜಗಳ ಜನರು ಕೂಡಿದ್ದರು. ಶಾಸ್ತ್ರಿಗಳ ಕೀರ್ತನವು ಸಮಾಪ್ತಿಯಾದ ಬಳಿಕ ಶ್ರೀ ನಾರಾಯಣರಾವ ಲೋಖಂಡೆ ಬಿ.ಎ., ಎಲ್.ಎಲ್.ಬಿ., ಹೈಕೋರ್ಟ ವಕೀಲ ಶ್ರೀ ರಂಗನಗೌಡ ಪಾಟೀಲ ಶ್ರೀ ಶಂಕರಪ್ಪ ಹಲರ್ಗಾಪೂರ ಮೊದಲಾದವರು ಶ್ರೀ ಯೋಗಿವರ್ಯರ ಚರಿತ್ರೆಯನ್ನೂ ಅವರ ಅಗಾಧವಾದ ತತ್ವಜ್ಞಾನವನ್ನೂ ವಿವರಿಸಿ ಹೇಳಿ ಅದರಂತೆ ಯಾವತ್ತರೂ ನಡೆಯಬೇಕೆಂದು ಭಾಷಣಮಾಡಿದ ಬಳಿಕ ಮಂಗಳಾರತಿಯಾಗಿ ಸಭಿಕರಿಗೆ ಪ್ರಸಾದವು ಹಂಚಲ್ಪಟ್ಟಿತು.

ತಮ್ಮ
ರಂಗನಗೌಡ ಪಾಟಿಲ್
ಕಾರ್ಯದರ್ಶಿ.

ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಬನಹಟ್ಟಿಗೆ ಆಗಮಿಸಿದ್ದುದು.

ಶ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಗಳು ಮತ್ತು ಮಹಾದೇವ ಪಂಡಿತರು ಬನಹಟ್ಟಿ ಗ್ರಾಮಕ್ಕೆ ಆಗಮಿಸಿ ಸಣಪೇಟೆಯ ಕೋಟದ ಪರ್ಣಕುಟೀರದಲ್ಲಿ ವಾಸಮಾಡಿದ್ದರು. ಮಹಾಸ್ವಾಮಿಯವರ ನೇತೃತ್ವದಲ್ಲಿ 8-10 ದಿನಗಳವರೆಗೆ ದಿನಾಲು ವೀರಶೈವರ ಮಹತತ್ವಗಳೂ, ನೀತಿಪರವಾದ ಕಥೆಗಳೂ, ವಿದ್ಯಾರ್ಥಿಗಳ ಮತ್ತು ತರುಣರ ಸ್ಪರ್ಧೆಯ ಭಾಷಣಗಳೂ ಉತ್ತಮ ರೀತಿಯಿಂದ ಜರುಗಿದವು. ಈ ಶಿವಸಮೂಹಕ್ಕೆ 300-400 ಭಕ್ತಜನರು ಸಂಜೆಯಲ್ಲಿ ನೆರೆಯುತ್ತಿದ್ದರು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಮೊದಲನೇ ಎರಡನೇ ದಿವಸ ಶಿವಮೂರ್ತಿ ಮಹಾದೇವ ಪಂಡಿತರೂ, ಆಮೇಲೆ ರಬಕವಿಯ ಮುರುಗಯ್ಯಾ ಬಾಗೋಜಿಯವರೂ, ಚಿಕ್ಕೋಡಿಯವರೂ ತರುಣ ಸಂಘದವರೂ ಭಾಗವಹಿಸಿಕೊಂಡಿದ್ದರು. ಕಡೆಯ ದಿವಸ ಬಾಲಕರಲ್ಲಿ ನಂಬರ ಪಡೆದುಕೊಂಡಂಥ ವಿದ್ಯಾರ್ಥಿಗಳಿಗೆ ಇನಾಮುಗಳು ಕೊಡಲ್ಪಟ್ಟುವು. ಶ್ರೀಗಳವರು ಬನಹಟ್ಟಿ ಗ್ರಾಮಕ್ಕೆ ಆಗಮಿಸಿ ತಮ್ಮ ಆಶೀರ್ವಾದದಿಂದ ನಮ್ಮನ್ನು ಪುನೀತರನ್ನಾಗಿ ಮಾಡಿದ್ದರಿಂದ ನಾವು ಧನ್ಯರಾದೆವೆಂದು ತಿಳಿಸಲಿಕ್ಕೆ ಬಹಳ ಆನಂದವಾಗುತ್ತದೆ.

ಬನಹಟ್ಟಿ ತರುಣ ಸಂಘ,
ಜಿ. ಜಿ. ಡಿ.

ವೀರಶೈವರಲ್ಲಿ ಜಾತಿಭೇದಗಳಿಲ್ಲ.

ವೀರಶೈವರಲ್ಲಿ ಎಂದು ಶ್ರೀಯುತ ವೀರಪ್ಪ ಬಸಪ್ಪ ಬೆಲ್ಲಂಗಡಿ ಹುಬ್ಬಳ್ಳಿ ಇವರು ಬರೆದು ಪ್ರಕಟಿಸಿರುತ್ತಾರೆ ಇದರಿಂದ ಈಗ ಇರತಕ್ಕ ನಮ್ಮ ಸಮಾಜದ ಕಲಹಾಗ್ನಿಯನ್ನು ಆರಿಸಲು ಸಾಕಾದಷ್ಟು ಫಲಪ್ರದವಾಗಿದೆ. ವೀರಶೈವರಲ್ಲಿ ಪೂಜಕನೂ ಪೂಜ್ಯನೂ ಒಂದೇ ವಸ್ತುವು. ಇವರ ತಂದೆತಾಯಿಗಳೂ ಪಾರ್ವತಿ ಪರಮೇಶ್ವರರೇ ಇರುತ್ತಾರೆ. ಇಂತಹ ಪರಮೇಶ್ವರ ನನ್ನ ದೇಹದಲ್ಲಿ ಧರಿಸಿ ಒಂದೇ ಆಚಾರ ವಿಚಾರಗಳಲ್ಲಿರುವವರಲ್ಲಿ ಕೀಳಾರು, ಮೇಲಾರು? ಶಿವಲಿಂಗವನ್ನು ಧರಿಸಿದವರೆಲ್ಲರೂ ಪೂಜ್ಯರೇ ಎಂದು ಯುಕ್ತಿಯುಕ್ತವಾಗಿಯೂ ಶಾಸ್ತ್ರಾಧಾರಗಳಿಂದಿಗೆ ಬರೆದಿರುತ್ತಾರೆ. ಇದನ್ನು ಎಲ್ಲಾ ವೀರಶೈವ ಮಹನೀಯರು ಓದಿನೋಡಿಕೊಂಡು ಹಿಂದುಳಿದ ಪಂಗಡದವರು ಮುಂದುವರಿಯಲಿಕ್ಕೂ, ಮುಂದುವರಿದ ಪಂಗಡದವರು ನಾನು ಎಂಬ ಹೆಮ್ಮೆಯನ್ನು ಬಿಟ್ಟು ಸರಿಯಾದ ಸಮಾಜಸೇವೆ ಮಾಡಲಿಕ್ಕೂ ಅನುಕೂಲವಾಗಿದೆ. ಇಂತಹ ವಿಷಮ ಸಂದರ್ಭಗಳಲ್ಲಿ ಶ್ರೀಯುತ ಬೆಲ್ಲಂಗಡಿಯವರು ಅಸಮ ಸಾಹಸಪಟ್ಟು ಸಮಾಜದ ಐಕ್ಯೋನ್ನತ್ಯಕ್ಕಾಗಿ ಕೆಲಸಮಾಡುತ್ತಲಿದ್ದಾರೆ. ಇಂಥವರ ಮೇಲ್ಪಂಕ್ತಿಯನ್ನು ಎಲ್ಲಾ ವೀರಶೈವರು ಅನುಸರಿಸಿದರೆ, ನಮ್ಮ ಸಮಾಜವು ಶೀಘ್ರದಲ್ಲೇ ಉನ್ನತಸ್ಥಿತಿಗೆ ಬರುತ್ತೆಂಬುದಕ್ಕೇನು ಸಂದೇಹವೇ ಇಲ್ಲ, ಓ, ವೀರಶೈವಬಾಂಧವರೇ ವೀರಶೈವರಲ್ಲಿ ಜಾತಿಭೇದಗಳಿಲ್ಲವೆಂಬ ಪ್ರತಿಗಳನ್ನು ಓದಿನೋಡಿರಿ, ಇದು ಈಗ ಹಾಲಿ ಇರತಕ್ಕ ಸ್ಥಿತಿಗಳಿಗೆ ವೀರಶೈವತರದರ್ಪಣಕ್ಕೆ ಸರಿ ಸಮಾನವಾಗಿ ಎಲ್ಲಾ ವೀರಶೈವರು ನೋಡಬೇಕಾದ್ದಿರುತ್ತೆ. ಶ್ರೀಯುತ ಬೆಲ್ಲಂಗಡಿಯವರನ್ನೂ, ಶ್ರೀಯುತ. ಸಿದ್ಧರಾಮಪ್ಪ, ಪಾವಟೆ ವಕೀಲ್ ಹುಬ್ಬಳ್ಳಿ ಇವರನ್ನೂ ನಾವು ಎಷ್ಟು ವಂದಿಸಿದರೂ ಸಾಲದುದಾಗಿದೆ, ಇಂತಹ ನಮ್ಮ ಮಹಸೇವಕರಿಗೆ, ಹೆಚ್ಚು ಆಯುರಾರೋಗ್ಯ ಐಶ್ವರ್ಯ ಸಂಪತ್ತುಗಳನ್ನೂ ಸಮಾಜಸೇವೆ, ದೇಶಸೇವೆಗಳನ್ನು ದೀರ್ಘಕಾಲ ಮಾಡಲು ಶಕ್ತಿಯನ್ನೂ ಶ್ರೀ, ನೀಲಕಂಠನು ಸಲಹಲೆಂದು ನಾನು ತ್ರಿಕಾಲದಲ್ಲೂ ಪ್ರಾರ್ಥಿಸುತ್ತೇನೆ.

ಎಂ. ಆರ್. ವೀರಭದ್ರಯ್ಯ, ಮಾಗಡಿ.

ಕಡೂರು ತಾ|| ಹುಲೀಕೆರೆ.

ಈ ಗ್ರಾಮವು ಸುಮಾರು 320 ಮನೆಗಳುಳ್ಳದ್ದಾಗಿಯೂ ಸುಮಾರು 1400 ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ. ಇಷ್ಟು ದೊಡ್ಡ ಗ್ರಾಮದಲ್ಲಿ 5-6 ಮಾತ್ರ ಉಪ್ಪುನೀರಿನ ಬಾವಿಗಳೂ ಮಳೆಯನೀರನ್ನೇ ನಂಬಿರುವ ಒಂದು ಸಿಹಿನೀರಿನ ಕಟ್ಟೆಯೂ ಇವೆ. ಮೇಲೆ ಮೇಲೆ ಮಳೆಬರುತ್ತಿದ್ದರೆ ಯುಗಾದಿ ಹಬ್ಬದವರೆಗೂ ಎಲ್ಲಾ ಭಾವಿಗಳಲ್ಲೂ, ಕಟ್ಟೆಯಲ್ಲಿಯೂ ನೀರು ಇರುವುದು. ಈ ವರ್ಷದಹಾಗೆ ಮಳೆಯಾದರಂತೂ "ದುರ್ಭಿಕ್ಷದಲ್ಲಿ ಅಧಿಕಮಾಸ" ಎಂಬ ಗಾದೆಯಂತಿರುತ್ತದೆ. ಈ ಗ್ರಾಮವು ಇಷ್ಟು ದೊಡ್ಡದಾದರೂ, ನೀರಿಗೆ ಮಾತ್ರ ಕುಗ್ರಾಮವಾಗಿದೆ. ಗ್ರಾಮಪಂಚಾಯಿತಿಯವರು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಬಹಳ ಶ್ರಮವಹಿಸಿರುತ್ತಾರೆ. ಬೀದಿಗಳನ್ನು ನೀಟಾಗಿಯೂ ಶುಚಿಯಾಗಿಯೂ ಇಟ್ಟು ರಾತ್ರಿ ತಿರುಗಾಡತಕ್ಕವರಿಗೆ ತುಂಬಾ ಸೌಕರ್ಯವನ್ನು ಕಲ್ಪಿಸಿರುತ್ತಾರೆ. ಇಲ್ಲಿ ಕ|| ಪ್ರೈ|| ಬಾಯ್ಸ್ ಮತ್ತು ಗರ್ಲ್ಸ್ ಸ್ಕೂಲುಗಳೂ, ಒಂದು ಉರ್ದು ಸ್ಕೂಲೂ ಇವೆ. ಒಂದಕ್ಕೂ ಸರಿಯಾದ ಕಟ್ಟಡ ಇಲ್ಲವು. ಗ್ರಾಮಸ್ಥರು ಸ್ಕೂಲ್ ವಿಚಾರದಲ್ಲಿ ಸ್ವಲ್ಪವೂ ನಿಗಾವಹಿಸುವುದಿಲ್ಲವಾದವಾಗಿ ಇಲಾಖಾ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಈಗೀಗ ಕೆಲವರು ಬಹಳ ಮುತವರ್ಜಿಯಿಂದ ತಮ್ಮ ಗ್ರಾಮದಲ್ಲಿ ವಿದ್ಯಾಭಿವೃದ್ಧಿಗೋಸ್ಕರ ಹೆಚ್ಚಾಗಿ ಸಹಾಯಮಾಡಲು ಮುಂದುವರಿದಿದ್ದಾರೆ. ಮ|| ಕಂಬಸಪ್ಪನವರು ಸ್ಕೂಲ್ ಬಿಲ್ಡಿಂಗಿಗೋಸ್ಕರವಾಗಿ ಸುಮಾರು 3 ಎಕರೆ ಜಮೀನನ್ನು ಸರ್ಕಾರಕ್ಕೆ ವಹಿಸಿರುತ್ತಾರೆ. ಈಗಿರುವ ಕಟ್ಟಡವನ್ನೇ ಬಡಾವಣೆಮಾಡತಕ್ಕಬಗ್ಗೆ ಮ|| ಸಾಹುಕಾರ್ ಕರಿಸಿದ್ದಯ್ಯನವರು 100 ರೂ. ಮ|| ಸಾ|| ಬುಡನ್ ಸಾಹೇಬರು 25 ರೂ. ಮ|| ಸಾ|| ತುಕ್ಕಪ್ಪನವರು 25 ರೂ. ಗಳನ್ನು ಕೊಡುವುದಾಗಿಯೂ, ಈ ಕಟ್ಟಡದ ಪೂರ್ವಭಾಗಕ್ಕೆ ಒಂದಂಕಣ ಕಟ್ಟಡವನ್ನು ಮ|| ಸಾ|| ಶರಣಯ್ಯನವರು ಸ್ವಂತಖರ್ಚಿನಿಂದ ಕಟ್ಟಿಸುವುದಾಗಿಯೂ, ಮ|| ದಾವಲ್ ಶೆಟ್ಟರು ಮತ್ತು ಮ|| ಹಯಾತ್ ಬೇಗ್ ಸಾಹೇಬರು ಈ ಜನವರಿ ಆಖೈರಿನೊಳಗಾಗಿ ಕನ್ನಡ ಬಾಯ್ಸ್ ಸ್ಕೂಲಿಗೆ 100 ವಿದ್ಯಾರ್ಥಿಗಳು ಸರಾಸರಿ ಬರುವಂತೆ ಪ್ರೋತ್ಸಾಹಿಸಿ ಸ್ಕೂಲನ್ನು ಅಭಿವೃದ್ಧಿಗೆ ತರುವುದಾಗಿಯೂ ವಾಗ್ದಾನಮಾಡಿರುತ್ತಾರೆ. ಮ|| ಸಾ|| ಚೆನ್ನಬಸಯ್ಯನವರು ಸ್ಕೂಲ್ ಕಟ್ಟಡಕ್ಕೋಸ್ಕರವಾಗಿ 50 ರೂ. ಗಳನ್ನು ಕೊಡುವುದಾಗಿ ವದಂತಿಯಿದೆ. ಈ ಮಹನೀಯರುಗಳು ತಮ್ಮ ವಾಗ್ದಾನವನ್ನು ಜಾಗ್ರತೆಯಾಗಿ ಪೂರ್ತಿಮಾಡಿದರೆ ಸರ್ಕಾರದವರು ಇಲ್ಲಿ ಒಂದು ಕನ್ನಡ ಮಿಡ್ಲ್ ಸ್ಕೂಲನ್ನು ಕೊಡುವುದಾಗಿ ಅಪ್ಪಣೆ ಮಾಡಿರುತ್ತಾರೆ. ಈ ಮೇಲ್ಕಂಡ ಮಹನೀಯರುಗಳಿಗೂ, ಅವರ ಕುಟುಂಬವರ್ಗದವರಿಗೂ ಭಗವಂತನು ಆಯುರಾರೋಗ್ಯೈಶ್ವರ್ಯಗಳನ್ನೀಯಲೆಂದು ಬೇಡುತ್ತೇನೆ.

ಓರ್ವ ಗ್ರಾಮಾಭಿಮಾನಿ.

ಶ್ರೀ ಭಗವಾನ್ ಬಸವೇಶ್ವರನನ್ನು ನಿಂದಿಸುವವರು ಇನ್ನಾದರು ನಾಚುವರೇನು?

ಸದಾ ಬಸವೇಶ್ವರ ನಿಂದಾಪರವಾದ ಲೇಖಗಳನ್ನು ಬರೆಯುವುದರಲ್ಲಿ ಮುಂದಾಳುಗಳಾದ ವಿದ್ವಾಂಸರುಗಳೂ ಗುರುಭಕ್ತರುಗಳೂ ಹಗಲಿರುಳು ಆಹಾರನಿದ್ರೆಯಿಲ್ಲದೆ ಸಾಹಸಪಡುತ್ತಿರುವುದು ಇಡಿ ಕರ್ನಾಟಕಕ್ಕೆ ಗೊತ್ತಿರುವುದಷ್ಟೆ. ಶ್ರೀ ಜಗದ್ಗುರು ಕೇದಾರ ಸಿಂಹಾಸನಾಧೀಶ ಶ್ರೀ 108 ನೀಲಕಂಠ ಶಿವಾಚಾರ್ಯ ಮಹಸ್ವಾಮಿಗಳವರು ನೈಜಾಂ ಇಲಾಖೆ ಜಿಲ್ಲಾ ರಾಯಚೂರು ತಾಲ್ಲೂಕ್ ದೇವರಸೂಗೂರಿಗೆ ಕೆಲದಿವಸಗಳ ಹಿಂದೆ ದಯಮಾಡಿಸಿದ ವಾರ್ತೆ ಕೇಳಿ ನಾನು ಶ್ರೀಗಳವರ ದರ್ಶನಕ್ಕೆ ಹೋಗಿರುವಕಾಲಕ್ಕೆ ಸದರಿಗ್ರಾಮದಲ್ಲಿ ತಾ|| 6-1-29 ನೇ ದಿವಸ ಶ್ರೀಗಳವರ ಕಡೆಯಿಂದ ರಾಯಚೂರು ಶ್ರೀಮತಿ ಸೂಗೂರು ಹಂಪಮ್ಮ ಮತ್ತು ಬಾಲ್ಕಿ ಶ್ರೀಮತಿ ತ್ರಿವೇಣೀಬಾಯಿ ಇವರ ದೀಕ್ಷಾ ಸಂಸ್ಕಾರದ ಸಮಾರಂಭವು ನಡೆದು ಮಾರನೇ ದಿವಸ ಸದ್ರಿ ತ್ರಿವೇಣೀಬಾಯಿ ಇವರು ನಾನು ಸಮಾಜಸೇವೆಮಾಡಲು ಅಪೇಕ್ಷಿಸುತ್ತೇನೆ. ತಮ್ಮ ಸನ್ನಿಧಿಯಿಂದ ದ್ರವ್ಯಸಹಾಯವಾಗಬೇಕೆಂದು ಶ್ರೀಗಳವರ ಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳಲು ಅದಕ್ಕೆ ಶ್ರೀಗಳವರು ಆದಿವಸ ನೀವು ಭಾಷಣಮಾಡಿತೋರಿಸಿದಲ್ಲಿ ಸಹಾಯಮಾಡೋಣದಲ್ಲಿ ಬರುತ್ತದೆಂದು ಅಪ್ಪಣೆ ಕೊಡಿಸಿದ್ದಲ್ಲದೆ ಅದೇ ದಿವಸ ಒಂದು ಚಿಕ್ಕ ಸಭೆ ನಡೆಯಲು ವ್ಯವಸ್ಥೆ ಮಾಡಿಸಿದರು. ಸದರಿ ಸಭೆಯಲ್ಲಿ (1) ಬಾಲ್ಕಿ ಪಟ್ಟದ್ದೇವರು ಸಮಾಜದಮೇಲೂ, (2) ರಾಯಚೂರು ವೀರಶೈವ ಧರ್ಮಾರ್ಥ ಸಂಸ್ಕೃತ ಪಾಠಶಾಲಾಧ್ಯಾಪಕ ಗಂಜಾಳ ಬೃಹನ್ಮಠ ಪಂಡಿತ ಬಸವಲಿಂಗಶಾಸ್ತ್ರಿಗಳು ವೀರಶೈವ ಧರ್ಮದ ಮೇಲೂ, (3) ರಾಯಚೂರು ವೀರಶೈವ ಧರ್ಮಾರ್ಥ [illegible] ಪಾಠಶಾಲಾಧ್ಯಾಪಕರ ವೇ|| ಬ್ರ|| ಶ್ರೀ [illegible] ಶಾಸ್ತ್ರಿಗಳು [illegible] ಮೇಲೂ, (4) ಬಾಲ್ಕಿ ಶ್ರೀಮತಿ ತ್ರಿವೇಣೀ ಬಾಯಿಯವರು ಶ್ರೀ [illegible] ಶಿಕ್ಷಣದಮೇಲೂ [illegible] ಭಾಷಣಮಾಡಿದಮೇಲೆ ಸದರಿ ಕೇದಾರದ ಶ್ರೀಗಳವರು ವೀರಶೈವ ಧರ್ಮ ಮೊದಲಾದ ಸಮಾಜೋನ್ನತಿಯ ಬಗ್ಗೆ 2 ಘಂಟೆಕಾಲ ಭಾಷಣದ ಮೂಲಕ ಅಪ್ಪಣೆ ಕೊಡಿಸುವಕಾಲಕ್ಕೆ ನಮ್ಮ ಸಮಾಜದಲ್ಲಿ ಶ್ರೀ ಬಸವೇಶ್ವರನು ಸಮಾಜೋದ್ಧಾರ ಮಾಡಿದ ಬಗ್ಗೆ ನಾವು ಎಷ್ಟು ಹೇಳಿದರೂ ಸ್ವಲ್ಪವಲ್ಲದೆ ಬಸವೇಶ್ವರರ ಋಣವನ್ನು ಯಾವಕಾಲಕ್ಕೆ ತೀರಿಸಲಾರೆವು. ಒಂದುವೇಳೆ ಬಸವೇಶ್ವರನು ನಮ್ಮ ಸಮಾಜದ ಉದ್ಧಾರಕ್ಕಾಗಿ ಅವತಾರಮಾಡಿದಿದ್ದಲ್ಲಿ ನಮ್ಮ ಸಮಾಜವು ನಾವು ಸಹ ಉಳಿಯುತ್ತಿದ್ದಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದೆಂಬ ಬಗ್ಗೆ ಒಳ್ಳೆ ಕಳಕಳಿಯಾದ ತಮ್ಮ ಅಮೃತವಾಣಿಯಿಂದ ಅಪ್ಪಣೆಕೊಡಿಸಿದ್ದಲ್ಲದೆ ಇನ್ನೂ ಅನೇಕ ವಿಷಯ ಅಪ್ಪಣೆ ಕೊಡಿಸಿದರು. ಅವುಗಳನ್ನೆಲ್ಲ ಸೂಚಿಸಿದಲ್ಲಿ ಪತ್ರಿಕೆಯಸ್ಥಳವೆಲ್ಲ ನಾನೆ ಆಕ್ರಮಿಸಿದಂತೆ ಆಗುವದೆಂಬ ಭಯದಿಂದ ಸಂಕ್ಷಿಪ್ತವಾಗಿ ಬರೆದಿರುತ್ತೇನೆ. ನೋಡಿದಿರಾ ವಾಚಕ ಮಹಾಶಯರೇ, ನಮ್ಮ ಮಠಾಚಾರ್ಯರೆ ಈರೀತಿ ಅಪ್ಪಣೆಕೊಡಿಸುವ ಕಾಲಕ್ಕೆ ಅಸೂಯಾಶಿರೋಮಣಿಗಳು ಬಸವೇಶ್ವರನ ವಿಷಯದಲ್ಲಿ ನಿಂದಾಲೇಖಗಳನ್ನು ಬರೆಯುವದನ್ನು ನೋಡಿದರೆ ನಮ್ಮ ಸಮಾಜದ ದುರ್ದೈವವೆಂದು ಹೇಳುವಲ್ಲಿ ಸಂದೇಹವಿಲ್ಲ. ಇನ್ನಾದರೂ ಸಮಾಜಘಾತಕರು ಲೇಖವನ್ನು ನೋಡಿ ಭಗವಾನ್ ಬಸವೇಶ್ವರನನ್ನು ನಿಂದಿಸುವುದನ್ನು ಬಿಟ್ಟು ಪಾಪದ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಧನ್ಯರಾಗಬೇಕೆಂಬುದೇ ಈ ಲೇಖದ ಉದ್ದೇಶವಾಗಿದೆ.

ಪ್ರತ್ಯಕ್ಷದರ್ಶಿಯಾದ, ಸಮಾಜದ ಹಿತಚಿಂತಕ.

ಪಾವಗಡ ತಾ|| ನಾಗಲ್ಮಡಿಕೆ ಜಾತ್ರೆ.

ಈ ನಾಗಲ್ಮಡಿಕೆ ಗ್ರಾಮದಲ್ಲಿ ಶ್ರೀ ಪಿನಾಕಿನಿ ನದಿಯ ದಡದಲ್ಲಿರುವ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿಯವರ ರಥೋತ್ಸವವು ಮತ್ತು ಇದರ ಅಂಗವಾಗಿ ದನಗಳ ಪರಿಷೆಯೂ ಎಂದಿನಂತೆ ಈ ಸಲವೂ ಕಳೆದ ಜನವರಿ ತಾ|| 14 ರಿಂದ 22ರ ವರೆಗೆ ಸಾಂಗವಾಗಿ ಅತಿ ವೈಭವದಿಂದ ನಡೆದಿರುತ್ತೆ. ಈ ವರುಷದ ಜಾತ್ರೆಯು ಇದುವರೆಗಿನ ಎಲ್ಲಾ ಸಾಲಿನ ಜಾತ್ರೆಯನ್ನೂ ಸಕಲ ವಿಧದಲ್ಲಿಯೂ ಮೀರಿಸಿದ್ದಿತೆಂದು ಹೇಳಬಹುದು. ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸುತ್ತಾರಾಗಿ ವದಂತಿ ಇದ್ದು, ಮಹಾಸ್ವಾಮಿಯವರ ದರ್ಶನಲಾಭವನ್ನು ಪಡೆಯಲು ತಾಲ್ಲೂಕಿನ ಎಲ್ಲಾ ಭಾಗಗಳಿಂದಲೂ, ಜನರು ಬಂದಿದ್ದರು. ಕಾರ್ಯ ಗೌರವದಿಂದ ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸದೆ ಹಿಂದೆ ಈ ತಾಲ್ಲೂಕಿನಲ್ಲಿ ಅಮಲ್ದಾರರಾಗಿದ್ದು ಹಾಲಿ ಇಲ್ಲಿನ ಸ. ಡಿ. ಆ. ರಾಗಿರುವ ಮ|| ಎಂ. ಶಂಕರಪ್ಪ ಬಿ.ಎ., ಯವರು ದಯಮಾಡಿಸಿ ದನಗಳ ಪರಿಷೆಯಲ್ಲಿ ಅಗ್ರಾಸನವನ್ನು ವಹಿಸಿ ಉತ್ತಮವಾದ ರಾಸುಗಳಿಗೆ ಬೆಳ್ಳಿಯ ಬಟ್ಟಲುಗಳು, ನಗದುಹಣ, ಮತ್ತು ಸರ್ಟಿಫಿಕೇಟ್ ಸಹ ದಯಪಾಲಿಸಿದುದು ಬಂದಿದ್ದ ಎಲ್ಲಾ ಪ್ರಜೆಗಳಿಗೂ ಮಹದಾನಂದವನ್ನುಂಟುಮಾಡಿತು.

ಈಸಲದ ಜಾತ್ರೆಗೆ ಹತ್ತುಸಾವಿರಕ್ಕೆ ಮೇಲ್ಪಟ್ಟ ದನಗಳೂ ಯಿಪ್ಪತ್ತಕ್ಕೆ ಕಮ್ಮಿಯಿಲ್ಲದಂತೆ ಪ್ರಜೆಗಳೂ ವಿಶೇಷವಾಗಿ ಅಂಗಡಿಗಳೂ, ಸಹ ಬಂದಿದ್ದು ಎಲ್ಲಾ ಬಾಬಿನಲ್ಲೂ ವ್ಯಾಪಾರವು ಬಹು ಬಿರುಸಾಗಿ ನಡೆದು ಕಂಟ್ರಾಕ್ಟರ್ ದಾರರಿಗೂ, ವ್ಯಾಪಾರಸ್ಥರಿಗೂ, ಮಹದಾನಂದವಾಗಿತ್ತು. ರಾಸು ಒಂದಕ್ಕೆ 500-600 ರೂಪಾಯಿನವರೆಗೂ ಬೆಲೆಯಾಗಿ ಸುಮಾರು 50-60 ಸಾವಿರ ರೂಪಾಯಿನ ವ್ಯಾಪಾರ ನಡೆಯಿತು. ಎರಡು ನಾಟಕ ಕಂಪನಿಗಳೂ, ರಾಟವಾಳ ವಗೈರೆ ಇತರ ಆಟಪಾಟಗಳೂ ಬಂದಿದ್ದು ಪರಿಷೆಯ ಜನರಿಗೆ ಬಹಳ ಆನಂದವನ್ನುಂಟು ಮಾಡುತ್ತಿದ್ದುವು. ಮುಖ್ಯವಾಗಿ ಪರಿಷೆಗೆ ಬಂದಿದ್ದ ಸರ್ಕಾರಿ ಅಧಿಕಾರಿಗಳು ವಗೈರೆ ಎಲ್ಲಾ ಜನರಿಗೂ ಅವಶ್ಯಕವಾದ ವಸತಿ ಒದಗಿಸಲ್ಪಟ್ಟಿತ್ತು. ಕುಡಿಯುವುದಕ್ಕೆ ನೀರಿನ ಸರಬರಾಯಿ ಮತ್ತು ನೈರ್ಮಲ್ಯವನ್ನು ಕಾಪಾಡುವುದರಲ್ಲೂ ಪಂಚಾಯಿತಿ ಮತ್ತು ರೇಂಜ್ ಸ್ಯಾನಿಟರಿ ಇನ್ಸ್‌ಪೆಕ್ಟರು ಬಹಳ ಶ್ರಮಪಟ್ಟು ನೋಡಿಕೊಳ್ಳುತ್ತಿದ್ದರು. ಮನುಷ್ಯರಿಗೂ ದನಗಳಿಗೂ ಯಾವರೋಗಾದಿ ಇತಿಬಾಧೆಗಳೂ ಯಿಲ್ಲದೆ ಬಹಳ ಸುರಕ್ಷಿತವಾಗಿತ್ತು, ಬಳ್ಳಾರಿ ಮತ್ತು ಪೆನುಗೊಂಡ ಸಾಹುಕಾರ್‌ಗಳೂ ಈ ತಾಲ್ಲೂಕಿನ ಆಂಜನೇಯ ಶೆಟ್ಟರಕಡೆಯವರೂ ಇತರ ಭಕ್ತಾದಿಗಳೊಂದಿಗೆ ಸೇರಿ ದೇವರ ಉತ್ಸವಾದಿಗಳನ್ನು ಮತ್ತು ಎಲ್ಲಾ ಕೋಮಿನವರಿಗೂ, ಸಕಾಲಕ್ಕೆ ಸಂತರ್ಪಣೆಗಳನ್ನು ಅತಿ ವೈಭವದಿಂದ ನೆರವೇರಿಸಿದರು. ಈದಫಾ ನಮ್ಮ ಅಮಲ್ದಾರರವರು ಮತ್ತು ಪೊಲೀಸ್ ಇನ್ಸ್‌ಪೆಕ್ಟರು ಸಹ ಜೂಜಾಟಗಳಿಗೆ ಅವಕಾಶಕೊಡದೆ ಅವರುಗಳೇ ಅವಿಚ್ಛಿನ್ನವಾಗಿ ಹಗಲೂ, ರಾತ್ರಿ ಉಕ್ಕಡಗಳ ಅಜಮಾಯಿಷಿಯಿಂದ ಉಸ್ತುವಾರಿಮಾಡಿದ್ದರಮೇಲೆ ಅನೇಕರಿಗೆ ಪ್ರಾಣಮಾನ ಹಾನಿಗಳಿಲ್ಲದೆ ಸಂರಕ್ಷಣೆ ಮಾಡಲ್ಪಟ್ಟಿತು. ಪ್ರಯಾಣಿಕರ ಸೌಕರ್ಯ ಸಲುವಾಗಿ ಮೋಟಾರ್ ಬಸ್ಸುಗಳು ಬಿಡಲ್ಪಟ್ಟು ಶ್ರಮಸಾಧ್ಯವಾದ ರಸ್ತೆಯನ್ನು ಸರಿಪಡಿಸಿ ಪ್ರತಿಯೊಂದು ದೇವತಾಕಾರ್ಯ ಉತ್ಸವಗಳು ಮತ್ತು ಸಂತರ್ಪಣೆಗಳು ಇವುಗಳನ್ನು ನಮ್ಮ ಅಮಲ್ದಾರರವರು ಖುದ್ದು ಹಾಜರಿದ್ದು ನಡಿಸುತ್ತಿದ್ದರಾಗಿ ಧರ್ಮದರ್ಶಿಗಳಿಗೆ ಪ್ರೋತ್ಸಾಹವೂ, ಬಂದಿದ್ದ ಜನರಲ್ಲಿ ಭಕ್ತಿಯೂ ಉಂಟಾಗಿ ಸರ್ವಕಾರ್ಯಗಳೂ ಅತಿ ವೈಭವದಿಂದ ನೆರವೇರಿದುವು. ಇದೆಲ್ಲಾ ನಮ್ಮ ಅಮಲ್ದಾರರು ರಾಜಭಕ್ತಿ, ದೈವಭಕ್ತಿಗಳಿಂದ ಸರ್ವರಲ್ಲಿಯೂ ಯಾವಭೇದಭಾವವಿಲ್ಲದೆ ಜನಾನುರಾಗಿಗಳಾಗಿ ವರ್ತಿಸುತ್ತಿರಾದ್ದರಿಂದ ಯಾವುದೊಂದು ಆತಂಕವೂ ಇಲ್ಲದೆ ಜಾತ್ರೆಯು ಸಾಂಗವಾಗಿ ನೆರವೇರಿತು.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರುಗಳವರ ರಜತೋತ್ಸವವನ್ನು ಏಕೆ ಮಾಡಬೇಕು?

ಒಂದಾನೊಂದು ಕಾಲದಲ್ಲಿ ಕೇವಲ ವೈಭವ ಸ್ಥಿತಿಯಲ್ಲಿದ್ದು, ಕಾಲಗತಿಯಿಂದ ಯಾವ ನಮ್ಮ ವೀರಶೈವ ಸಮಾಜವು ಕ್ಷೀಣಾವಸ್ಥೆಯನ್ನು ಹೊಂದಿ ವಿದ್ಯಾಭಿವೃದ್ಧಿ, ಸಮಾಜಾಭಿವೃದ್ಧಿ ವಗೈರೆಗಳಿಗೆ ಮಾರ್ಗವಿಲ್ಲದೆ ಹೀನಾವಸ್ಥೆಯಲ್ಲಿದ್ದಿತೋ ಆ ಸಮಯದಲ್ಲಿ ನಮ್ಮಗಳ ಸುದೈವದಿಂದ ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರಮಹಾಸ್ವಾಮಿಗಳವರು ನಮ್ಮ ಜನಾಂಗಾಭಿವೃದ್ಧಿಗೆ ಮಾರ್ಗವಿಲ್ಲದೆ ಸಮಾಜದವರೆಲ್ಲಾ ಅಜ್ಞಾನವಸ್ಥೆಯಲ್ಲಿರುವುದನ್ನು ತಿಳಿದು, ಸಮಾಜಾಭಿವೃದ್ಧಿಗಾಗಿ ಹಗಲಿರುಳೂ ಪ್ರಯತ್ನಿಸಿ, ವಿದ್ಯಾಭಿವೃದ್ಧಿ, ಸಮಾಜ ಸುಧಾರಣೆ ಮೊದಲಾದ ಕಾರ್ಯಗಳನ್ನು ಕೈಗೊಂಡು ಸಮಾಜವನ್ನು ಈಗಿನ ಉನ್ನತಸ್ಥಿತಿಗೆ ತಂದರು. ಇದಕ್ಕಾಗಿ ಸಮಾಜದವರು ಮಹಸ್ವಾಮಿಗಳವರಿಗೆಷ್ಟು ಕೃತಜ್ಞರಾಗಿದ್ದರೂ ತೀರದ್ದಾಗಿದೆ. ಮಹಸ್ವಾಮಿಯವರು ಕೇವಲ ವೈರಾಗ್ಯದಿಂದ ತಮ್ಮ ನಿತ್ಯಪೂಜಾದಿಕಾರ್ಯಗಳಲ್ಲಿ ತೊಡಗಿ ಭಕ್ತರ ಕಲ್ಯಾಣದ ಕಡೆಗೆ ಗಮನಿಸದಿದ್ದರೆ ಈ ನಮ್ಮ ಸಮಾಜವು ಯಾವ ಸ್ಥಿತಿಗೆ ಬರುತ್ತಿದ್ದಿತೆಂಬುದನ್ನು ಹೇಳುವ ಹಾಗಿಲ್ಲ. ಇದನ್ನರಿತೇ ಮಹಸ್ವಾಮಿಗಳವರು ತಮ್ಮ ದೇಹಶ್ರಮವನ್ನು ಲೆಕ್ಕಿಸದೆ ಸತತ ಪ್ರಯತ್ನಿಸಿ ಇತರ ಸಮಾಜಗಳಂತೆ ನಮ್ಮ ಸಮಾಜವನ್ನು ಅತ್ಯುನ್ನತ ಸ್ಥಿತಿಗೆ ತಂದರು. ಸಮಾಜಾಭಿವೃದ್ಧಿಗೆ ವಿದ್ಯೆಯೇ ಮೂಲವೆಂದು ತಿಳಿದು ಅದನ್ನು ಹರಡಲು ಲಕ್ಷಾಂತರ ರೂಪಾಯಿಗಳ ವ್ಯಯದಿಂದ ಅಲ್ಲಲ್ಲಿ ವಿದ್ಯಾರ್ಥಿಗಳ ಊಟಕ್ಕೂ, ಅಭ್ಯಾಸಕ್ಕೂ ಅನುಕೂಲವಾಗಿರುವಂತೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸಮಾಡುವಂತೆ ಪ್ರೋತ್ಸಾಹಿಸಿದರು. ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನೇಕ ರೀತಿಯಿಂದ ಉತ್ತೇಜನವನ್ನು ಕೊಟ್ಟು ಸಂಸ್ಕೃತಪಾಠಶಾಲೆಗಳನ್ನು ಸ್ಥಾಪಿಸಿದರು. ಪಾಶ್ಚಾತ್ಯ ವಿದ್ಯಾಭ್ಯಾಸ [illegible] ಮಾಡಲೆಂದು ಬಹು ಸಮಾಜದವರನ್ನು ಪ್ರೋತ್ಸಾಹಿಸಿದರು. ಧರ್ಮಗ್ರಂಥಗಳನ್ನು ಬರೆಯಲು ಪ್ರೋತ್ಸಾಹಿಸಿ ಆ ರೀತಿಯಾಗಿ ಬರೆದವರಿಗೆ ಬಹುಮಾನವನ್ನು ದಯಪಾಲಿಸಿದರು. ಜನಾಂಗದ ವಿದ್ಯಾಭಿವೃದ್ಧಿಗೆ ಕಾರಣವಾಗಿರುವ ವಿದ್ಯಾವರ್ಧಕ ಫಂಡ್‌ಗಳನ್ನು ಅಲ್ಲಲ್ಲಿಗೆ ಸ್ಥಾಪಿಸಿದರು. ಸಮಾಜ ಸುಧಾರಣೆಯ ಅನೇಕ ಮಾರ್ಗಗಳನ್ನು ಬೋಧಿಸಿದರು. ಮತ್ತು ಸಮಾಜಹಿತವನ್ನು ಸಾಧಿಸಲಿಕ್ಕೆ ವೀರಶೈವ ಮಹಾಸಭೆ, ವೀರಶೈವ ತರುಣಸಂಘ ಮೊದಲಾದುವುಗಳನ್ನು ಪುನರುದ್ಧಾರಮಾಡಿದರು. ನಮ್ಮ ಸಮಾಜದವರಂತೆ ಅನ್ಯ ಸಮಾಜದವರಿಗಾದರೂ ಅನೇಕ ರೀತಿಯಿಂದ ಸಹಾಯಮಾಡಿರುವರು. ಈಗಲೂ ಸಹ ಪರಮತದ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮೊದಲಾದುವುಗಳ ಮೂಲಕ ಸಹಾಯಮಾಡುತ್ತಿರುವರು. ಒಟ್ಟಿನಮೇಲೆ ಮಹಸ್ವಾಮಿಯವರಿಗೆ ಪರಮತದ ಬಗ್ಗೆ ಸಹಾನುಭೂತಿ ಇರುವುದಲ್ಲದೆ ಮೂಕಪ್ರಾಣಿಗಳ ರಕ್ಷಣೆಯಲ್ಲಿಯೂ ಒಳ್ಳೇ ಕುತೂಹಲಿಗಳಾಗಿ ತಾವು ದಯಮಾಡಿಸಿದ ಸ್ಥಳದ ಭಕ್ತರುಗಳಿಗೆಲ್ಲಾ ಅಹಿಂಸಾಧರ್ಮವನ್ನು ಬೋಧಿಸುತ್ತಿರುವರು. ಜೀವದಯಾಮಂಡಲಿಗಳಿಗಾದರೂ ಧನಸಹಾಯವನ್ನು ಮಾಡಿ ಪ್ರೋತ್ಸಾಹಿಸುತ್ತಿರುವರು. ಈ ರೀತಿಯಾಗಿ ಮಹಾಸ್ವಾಮಿಗಳವರು ಕೇವಲ ಭಕ್ತರ ಕಲ್ಯಾಣಕ್ಕಾಗಿಯೂ ದೇಶೋದ್ಧಾರಕ್ಕಾಗಿಯೂ ಅನೇಕರೀತಿಯಿಂದ ಸಹಾಯಮಾಡುತ್ತಿರುವರು. ಇಂತಹ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಗಿ ಇಲ್ಲಿಗೆ ಇಪ್ಪತ್ತೈದು ವರ್ಷಗಳಾದುವು. ಈ ಸಂತೋಷ ಸಮಯದಲ್ಲಿ ಆಸೇತುಹಿಮಾಚಲ ಪರ್ಯಂತರವಿರುವ ಯಾವತ್ತು ವೀರಶೈವರು ಮಹಾಸ್ವಾಮಿಗಳವರ ರಜತೋತ್ಸವವನ್ನು ನೆರವೇರಿಸಬೇಕೆಂಬುದಾಗಿ ಅತ್ಯಂತ ಕುತೂಹಲ ಶಾಲಿಗಳಾಗಿರುವರು.

ಯಾವ ಮಹಾನುಭಾವರಿಂದ ನಾವು ಜಾಗೃತಿಯನ್ನೈದಿದೆವೋ, ಯಾವ ಮಹಿಮರ ಸತತಪ್ರಯತ್ನದಿಂದ ನಮ್ಮ ಜನಾಂಗವು ಸುಧಾರಣೆಯ ಶಿಖರವನ್ನೇರಿರುವುದೋ, ಅಂತಹ ಮಹಸ್ವಾಮಿಗಳವರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರುಗಳವರ ರಜತಮಹೋತ್ಸವವನ್ನು ನೆರವೇರಿಸಿ ನಮ್ಮ ಭಕ್ತಿಯನ್ನು ತೋರ್ಪಡಿಸಲು ಇದೇ ಸುಸಮಯವಾಗಿದೆ. ಆದುದರಿಂದ ಸರ್ವಭಕ್ತರೂ ಈ ವಿಷಯದಲ್ಲಿ ಹೆಚ್ಚಾಗಿ ಮುತುವರ್ಜಿಯನ್ನು ವಹಿಸಿ ಶ್ರೀಗಳವರ ರಜತಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. ಮತ್ತು ಅವರ ರಜತೋತ್ಸವದ ಜ್ಞಾಪಕಾರ್ಥವಾಗಿ ಯಾವುದಾದರೂ ಶಾಶ್ವತವಾದ ಕೆಲಸವನ್ನು ಮಾಡಬೇಕು. ಆ ಶಾಶ್ವತವಾದ ಕೆಲಸವು ಯಾವುದೆಂಬುದನ್ನು ಸಮಾಜದವರು ನಿರ್ಧರಿಸಬೇಕು. ಈ ರಜತೋತ್ಸವವು ಯಾವ ದಿವಸ ನಡೆಯುವುದಾಗಿದೆಯೋ ಆ ದಿವಸ ವೀರಶೈವರಿರುವ ನಾಲ್ಕು ಮನೆ ಹಳ್ಳಿಯಲ್ಲಿಯೂ ಎಂದರೆ ಭರತಖಂಡದಲೆಲ್ಲಾ ಉತ್ಸವವು ನೆರವೇರಿ ಅನ್ನಸಂತರ್ಪಣೆ ಮೊದಲಾದುವುಗಳು ನಡೆಯಬೇಕು. ಮೆಮೋರಿಯಲ್ಲಿಗೆ ಧನವನ್ನು ಶೇಖರಿಸುವ ಮತ್ತು ನಿಶ್ಚಯಿಸಿದ ದಿವಸ ಉತ್ಸವ ವಗೈರೆಗಳನ್ನು ಮಾಡಿಸುವ ವ್ಯವಸ್ಥೆಯನ್ನು ಆಯಾ ಊರಿನ ಮುಖಂಡರು ನೆರವೇರಿಸಬೇಕು. ಈ ರೀತಿಯಾಗಿ ಸಮಾಜದ ಸರ್ವರೂ ಅನ್ಯೋನ್ಯ ಪ್ರೇಮದಿಂದ ಸಹಕರಿಸಿ ಮೇಲ್ಕಂಡ ರಜತೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ವೀರಶೈವರ ಗುರುಭಕ್ತಿ ಮೊದಲಾದುವುಗಳನ್ನು ಅನ್ಯ ಸಮಾಜದವರಿಗೆ ತೋರಿಸಿ ಹರ್ಷವನ್ನುಂಟುಮಾಡಬೇಕಾಗಿ ಕೋರಿಕೆ.

ಅನೆಕೊಂಡದ ಮುಪ್ಪಣ್ಣ, ದಾವಣಗೆರೆ.

ದೊಡ್ಡಬಳ್ಳಾಪುರದ ಶ್ರೀ ಘಾಟೀ ಸುಬ್ರಹ್ಮಣ್ಯಸ್ವಾಮಿ ಜಾತ್ರೆ.

ಕಳೆದ ಜನವರಿ ತಾ|| 16 ರಲ್ಲಿ ಬ್ರಹ್ಮರಥೋತ್ಸವವು ನಡೆಯಿತು. ಜನವರಿ 20 ನೇ ತಾರೀಖು ಭಾನುವಾರ ಉತ್ಕೃಷ್ಟವಾದ ರಾಸುಗಳಿಗೆ ಬಹುಮಾನಗಳನ್ನು ಕೊಡುವ ಮಹಾಸಭೆಯು ಘನವನ್ನು ಹೊಂದಿದ ನಮ್ಮ ದಿವಾನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ನೆರೆಯಿತು. ಈ ಮಹಾಸಭೆಗೆ ಕಾಡಾಇನ್ಸ್ಟಿಟ್ಯೂಟಿನ ಡೈರೆಕ್ಟರವರ ಕುಟುಂಬ ಮಿಸೆಸ್ ಪಾರಸ್ನಿಸರವರು, ಅವರ ಪುತ್ರಿಯರು, ಮ|| ಗಳಾದ ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರ್ ಕೆ.ಎಚ್. ರಾಮಯ್ಯನವರು, ಅವರ ಕುಟುಂಬ ಶ್ರೀಮತಿ ರೇವಮ್ಮನವರು ಡೆಪ್ಯುಟಿ ಕಮಿಷನರ್ ಜಿ. ಬಿ. ಹೆಬ್ಬಾರ್‌ರವರು, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಬಿ. ಅಬ್ದುಲ್‌ರಹಿಮಾನ್‌ರವರು, ವೈಸ್‌ಪ್ರೆಸಿಡೆಂಟ್ ಬಿ. ಮುನಿಶಾಮಪ್ಪನವರು, ದಿವಾನ್‌ರವರ ಪ್ರೈವೇಟ್ ಸೆಕ್ರೆಟರಿಯವರು, ಪರ್ಸನಲ್ ಅಸಿಸ್ಟೆಂಟರು, ಮತ್ತು ಸೂಪರಿಂಟೆಂಡೆಂಟರವರು, ರೆವಿನ್ಯೂ ಸಬ್‌ಡಿವಿಜನ್ ಆಫೀಸರ್ ಅಬ್ದುಲ್‌ಹಕ್‌ರವರು, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು, ಎಕನಾಮಿಕ್ ಸೂಪರಿಂಟೆಂಡೆಂಟರು, ದೊಡ್ಡಬಳ್ಳಾಪುರದ ಮುನ್ಸಿಫರವರು, ಅಮಲ್ದಾರರು, ರೇಂಜ್‌ಎಡ್ಯುಕೇಷನ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರು, ಅಡ್ವೊಕೇಟ್ ಸಿದ್ಧಲಿಂಗಯ್ಯನವರು, ಬಿ. ಕೆ. ನಾರಾಯಣ್ಯಂಗಾರ್ಯರು, ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ ಅಬ್ದುಲ್‌ಖಾದರ್‌ರವರು, ಗೌರಿಬಿದನೂರು ಪಿ ರಾಜಣ್ಣನವರು, ಚಿಕ್ಕಬಳ್ಳಾಪುರದ ವೆಂಕಟರಾಮಶೆಟ್ಟರು, ಯಲಹಂಕದ ಪಿಳ್ಳೆ ಮುನಿಯಪ್ಪನವರು, ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಸಿರಾಜುದ್ದೀನ್‌ಯವರು ದೇವಸ್ಥಾನದ ಧರ್ಮದರ್ಶಿಗಳಾದ ಕೊಂಗಾಡಿಯಪ್ಪನವರು, ಶ್ರೀಕಂಠಪ್ಪನವರು, ಸರಾಫ್ ಪುಟ್ಟಣ್ಣಶೆಟ್ಟರು ವೀರೇಗೌಡರು ಹನುಮೇಗೌಡರು, ಅಕ್ಕರಾಮಶೆಟ್ಟರು, ವೆಂಕಟಗಿರಿಯಪ್ಪನವರು, ಸರಾಫ್ ಚಿಕ್ಕವೀರಶೆಟ್ಟರು, ರಾಮಸ್ವಾಮಪ್ಪನವರು, ಲಕ್ಷ್ಮಿನಾರಣಪ್ಪನವರು ವೈ. ಸಿದ್ದಪ್ಪನವರು ಆಲಂಪಲ್ಲಿ ಲಕ್ಷ್ಮಿನಾರಾಯಣಶೆಟ್ಟರು, ರಾಮಯ್ಯಶೆಟ್ಟರು, ಎಸ್. ಜಿ. ಕರಪ್ಪನವರು, ಭೋಗನಂಜುಂಡಪ್ಪನವರು, ಟಿ. ತಮ್ಮಣ್ಣನವರು, ಸಿ. ಗೋಪಣ್ಣನವರು ಸಿ. ನಂಜುಂಡಪ್ಪನವರು ಮುಂತಾಗಿ 5-6 ಸಾವಿರಜನರು ದಯಮಾಡಿಸಿದ್ದರು.

ಈ ಜಾತ್ರೆಯಲ್ಲಿ ಜೋಡಿ ಒಂದಕ್ಕೆ 50 ರೂ. ಮೊದಲ್ಗೊಂಡು 1000 ರೂ. ವರೆಗೆ ಬೆಲೆಬಾಳುವ ಸುಮಾರು 80000 ದನಗಳು ಸೇರಿದ್ದುವು. ಹತ್ತು ಲಕ್ಷ ರೂಪಾಯಿಗಳವರಿವಿಗೂ ದನಗಳ ಮಾರಾಟವಾಯಿತು. ಸುಮಾರು 60000 ಜನರು 500 ಅಂಗಡಿಗಳೂ 30000 ಗಾಡಿಗಳೂ ಸೇರಿದ್ದು ದೇವಸ್ಥಾನದಿಂದ ಚತುರ್ ದಿಕ್ಕುಗಳಲ್ಲಿಯೂ 3-4 ಮೈಲುಗಳ ವ್ಯಾಸದವರೆಗೆ ಒಂದು ವಿಶಾಲವಾದ ನೂತನ ನಗರವು ನಿರ್ಮಿಸಲ್ಪಟ್ಟಂತೆ ಕಂಗೊಳಿಸುತ್ತಿತ್ತು. ಇಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮ|| ಎಂ. ಜಿ. ರಾಮರಾಯರು ದರ್ಪದಿಂದ ಕೆಲಸಮಾಡಿ ಜಾತ್ರೆಯಲ್ಲಿ ಗಲಾಟೆಗಳಿಗೆ ಅವಕಾಶವಿಲ್ಲದಂತೆ ಕೆಲಸಮಾಡಿ ಜನರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಅಗ್ರಿಕಲ್‌ಚರಲ್ ಇನ್ಸ್‌ಪೆಕ್ಟರ್ ಮ|| ಸುಬ್ಬಯ್ಯನವರು ವ್ಯವಸಾಯದ ವಿಷಯಗಳನ್ನೂ, ಬೆಲ್ಲಮಾಡುವ ಹೊಸವಿಧಾನಗಳನ್ನೂ ತೋರಿಸಿದರು.

ವೆಟರ್‌ನರಿ ಡಾಕ್ಟರವರೂ, ಪೋಸ್ಟ್‌ಮಾಸ್ಟರೂ ತಂತಮ್ಮ ಕೆಲಸಗಳನ್ನು ತೃಪ್ತಿಕರವಾಗಿ ಮಾಡಿದರು. ರೈಲ್ವೆ ಇಲಾಖೆಯವರು ಸ್ಪೆಷಲ್ ಟ್ರೈನ್‌ಗಳನ್ನು ಬಿಟ್ಟು ಜನರಿಗೆ ಅನುಕೂಲ ಪಡಿಸಿದರು. ಮೋಟಾರ್ ಬಸ್‌ನವರು ಜನರ ಹಿತಕ್ಕಾಗಿ ಅನೇಕವೇಳೆ ಬಸ್‌ಗಳನ್ನು ಬಿಟ್ಟು ಅನುಕೂಲ ಮಾಡಿಕೊಟ್ಟರು.

ನಮ್ಮ ದಿವಾನ್ ಸಾಹೇಬರವರು ಉತ್ಕೃಷ್ಟವಾಗಿದ್ದ [illegible] ಗೆ [illegible] ಈ ಜಾತ್ರೆಯಲ್ಲಿ ಸೇರಿದ್ದ ಮಹಾಜನರು [illegible] ರಾಜಯೋಗ್ಯವಾದ ಸತ್ಕಾರದಿಂದ ಬರಮಾಡಿಕೊಂಡರು. [illegible]

ಸ್ಟೀಶನಿ ಅಲ್ಲಿಂದ ವೈಶ್ಯಮಹಾಜನರ ಸತ್ರಕ್ಕೆ ದಯಮಾಡಿಸಿ ಮಿತ್ರಮಂಡಲಿಯೊಡನೆ ಫಲಾಹಾರವನ್ನು ಮಾಡಿದರು. ಈ ಫಲಾಹಾರದ ಮತ್ತು ಇತರ ಎಲ್ಲಾ ಏರ್ಪಾಡುಗಳನ್ನೂ ಸಬ್‌ಡಿವಿಜನ್ ಆಫೀಸರ್ ಮ|| ಅಬ್ದುಲ್ ಹಕ್‌ರವರೂ, ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರೂ, ಡಿಸ್ಟ್ರಿಕ್ಟ್ ಎಕ್ಸಿಕ್ಯೂಟಿವ್ ಸೂಪರಿಂಟೆಂಡೆಂಟರವರೂ ಹಿಂದಿನದಿನವೇ ದಯಮಾಡಿಸಿ ಧರ್ಮದರ್ಶಿಗಳ ಮತ್ತು ಮ್ಯುನಿಸಿಪಲ್ ಕೌನ್ಸಿಲರ್‌ಗಳ ಸಹಾಯದಿಂದಲೂ, ಅಮಲ್ದಾರ್ ಮ|| ಬಿ. ಕೆ. ಶ್ರೀನಿವಾಸಲುನಾಯಡು ರವರ ಸಹಾಯದಿಂದಲೂ ಅತ್ಯಂತ ವಿಶದಣೆಯಾಗಿಯೂ ತೃಪ್ತಿಕರವಾಗಿಯೂ ಏರ್ಪಡಿಸಿದ್ದರು. ಫಲಾಹಾರವಾದನಂತರ ದಿವಾನ್‌ರವರ ಮತ್ತು ಕೆಲವು ದೊಡ್ಡಮನುಷ್ಯರ ಭಾವಚಿತ್ರಗಳು ತೆಗೆಯಲ್ಪಟ್ಟುವು. ಅನಂತರ ದಿವಾನ್‌ಸಾಹೇಬರವರು ತಮ್ಮ ಪರಿವಾರದೊಂದಿಗೆ ಡೆಪ್ಯುಟಿ ಕಮಿಷನರ ಜೊತೆಯಲ್ಲಿ ದನಗಳಪರಿಶೆ ನಡೆಯುವ ಸ್ಥಳಕ್ಕೆ ಬಂದು ಬಹುಮಾನವನ್ನು ಹೊಂದಿದ್ದ ಅತ್ಯಂತ ಉತ್ಕೃಷ್ಟವಾದ ರಾಸುಗಳನ್ನು ಪರಾಮರಿಸಿ ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳ ಕಡೆಯಿಂದಲೂ ಬಂದಿದ್ದ ರಾಸುಗಳ ವಿಷಯವನ್ನು ಲಾಲಿಸಿ ಸಂತುಷ್ಟರಾದರು. ಮಹಾಸಭೆಯವರ ಜಯಜಯಧ್ವನಿಯ ಮಧ್ಯದಲ್ಲಿ ನಮ್ಮ ದಿವಾನ್‌ಸಾಹೇಬರವರು ಮಹಾಸಭೆಯಲ್ಲಿ ಅಗ್ರಾಸನವನ್ನು ವಹಿಸಿದರು. ದೇವರ ಪ್ರಾರ್ಥನೆಯು, ವಿದ್ಯಾರ್ಥಿಗಳ ಸ್ವಾಗತಗೀತಗಳಾದನಂತರ ಮ|| ಟಿ. ಕೊಂಗಾಡಿಯಪ್ಪನವರು ಜಾತ್ರೆಯ ಸಂಬಂಧವಾದ ಚಾರಿತ್ರ್ಯಯುಳ್ಳ ರಿಪೋರ್ಟನ್ನು ಓದಿ ಒಪ್ಪಿಸಿದರು. ಅದರಲ್ಲಿ

(1) ರಂಗಮಂಟಪವನ್ನು ಕಟ್ಟಿಸತಕ್ಕದ್ದು.

(2) ದೇವಸ್ಥಾನದ ಸುತ್ತಲೂ ಹೊರಗೂ ನೆಲಕ್ಕೆ ಕಲ್ಲುಚಪ್ಪಡಿಗಳನ್ನು ಹಾಕಿಸತಕ್ಕದ್ದು.

(3) ಮಹಾದ್ವಾರವನ್ನು ಅಂದವಾಗಿಯೂ, ದೊಡ್ಡದಾಗಿಯೂ ಕಟ್ಟಿಸತಕ್ಕದ್ದು.

(4) ರಥವನ್ನು ಕಟ್ಟಿಸತಕ್ಕದ್ದು.

(5) ಮುಸಾಫರ್‌ಖಾನೆಯನ್ನು ಬಡಾವಣೆಮಾಡತಕ್ಕದ್ದು.

(6) ರೈಲ್ವೆಸ್ಟೇಷನ್ನಿಂದ ರಸ್ತೆಯನ್ನು ಸರಿಪಡಿಸಿ ಮೋಟಾರ್ ಬಸ್‌ಗಳ ಸಂಚಾರಕ್ಕೆ ಅನುಕೂಲಪಡಿಸತಕ್ಕದ್ದು.

(7) ಬಂಡಿಹಳ್ಳವನ್ನು ಸರಿಪಡಿಸಿ ಗಾಡಿಗಳ ಸಂಚಾರಕ್ಕೆ ಅನುಕೂಲಪಡಿಸತಕ್ಕದ್ದು.

(8) ನೀರಿಗೆ ಅನುಕೂಲವಾಗುವಂತೆ 2 ಕೆರೆಗಳನ್ನೂ, ಕೆಲವು ಗೋಕಟ್ಟೆಗಳನ್ನೂ ಕಟ್ಟಿಸತಕ್ಕದ್ದು.

(9) ದೇವಸ್ಥಾನದ ಕೆಲಸ ಕಾರ್ಯಗಳನ್ನು ನಡಿಸಲು ಸ್ಕೀಲನ್ನು ಬದಲಾಯಿಸತಕ್ಕದ್ದು ಮುಂತಾದ ವಿಷಯಗಳು ಗರ್ಭಿತವಾಗಿದ್ದುವು. ದಿವಾನರು ಈ ವಿಷಯಗಳನ್ನು ಆಲೋಚಿಸಿ ಅನುಕೂಲಪಡಿಸುವುದಾಗುತ್ತೆಂದೂ ಈ ಮಹಾಕ್ಷೇತ್ರಕ್ಕೆ ವಿದ್ಯುದ್ದೀಪಗಳನ್ನು ಹಾಕಿಸಲು ಜನರು ಸಹಾಯಮಾಡುವುದಾದರೆ ಸರ್ಕಾರದವರೂ ತಮ್ಮ ಪಾಲಿನ ಸಹಾಯವನ್ನು ಮಾಡುತ್ತೇವೆಂದೂ ಅಪ್ಪಣೆ ಕೊಟ್ಟರು. ಆಗ ಸಭಿಕರು ಗಟ್ಟಿಯಾಗಿ ಜಯಧ್ವನಿ ಮಾಡಿ ಕರತಾಳಗಳ ಮೂಲಕ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಉತ್ಕೃಷ್ಟವಾದ ರಾಸುಗಳಿಗೆ ಸುವರ್ಣಪದಕಗಳನ್ನೂ, ಬೆಳ್ಳಿಪದಕಗಳನ್ನೂ ಸರ್ಟಿಫಿಕೇಟ್‌ಗಳ ಜೊತೆಯಲ್ಲಿ ತಮ್ಮ ಅಮೃತಹಸ್ತದಿಂದ ದಯಪಾಲಿಸಿದರು. ದನಗಳ ಪ್ರದರ್ಶನದಲ್ಲಿ ಈ ಪುಣ್ಯಕ್ಷೇತ್ರದಲ್ಲಿ ದಿವಾನ್‌ಪದವಿಯನ್ನು ಅಲಂಕರಿಸಿದವರೊಳಗೆ ನಮ್ಮ ದಿವಾನ್‌ಸಾಹೇಬರವರೇ ಬಹುಮಾನವನ್ನು ಹಂಚಿದವರಲ್ಲಿ ಮೊದಲನೆಯವರು. ಈ ಮಹನೀಯರ ಸಂದರ್ಶನದಿಂದ ಸರ್ವರೂ ಸಂತೋಷಪಟ್ಟು ತಮ್ಮ ವಂದನೆಗಳನ್ನು ಚಪ್ಪಾಳೆಯ ಮೂಲಕ ಅರ್ಪಿಸಿದರು. ಅಮಲ್ದಾರ್ ಮ|| ಬಿ. ಕೆ. ಶ್ರೀನಿವಾಸಲುನಾಯ್ಡು ಯವರು ತಮ್ಮ ತಂದೆ ಮ||ಬಿ. ಕುಪ್ಪಸ್ವಾಮಿನಾಯುಡುಯವರಿಂದ ಆರಂಭವಾದ ಈ ಎತ್ತಿನ ಪರಿಷೆಯನ್ನು ಇಷ್ಟು ಮಹೋನ್ನತವಾಗಿ ಮಾಡಿದುದನ್ನು ನಮ್ಮ ದಿವಾನ್‌ಸಾಹೇಬರವರು ಪರಾಮರಿಸಿ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಬಳಿಕ ಮಂಗಳವಾದ್ಯಗಳು ಆಗುತ್ತಿರುವಲ್ಲಿ ದಿವಾನ್‌ಸಾಹೇಬರವರಿಗೂ, ಸಭಿಕರಿಗೂ ಹಾರಾ ತುರಾಯಿಗಳನ್ನು ಸಮರ್ಪಿಸಿದರು. ನಮ್ಮ ದಿವಾನ್‌ಸಾಹೇಬರವರು ಇಂಗ್ಲೀಷಿನಲ್ಲಿ ದಯಪಾಲಿಸಿದ ಅಪ್ಪಣೆಯನ್ನು ಮ|| ಕೆ. ಎಚ್. ರಾಮಯ್ಯನವರು ಕನ್ನಡದಲ್ಲಿ ಸಭಿಕರಿಗೆ ತಿಳಿಯುವಂತೆ ತಮ್ಮ ಗಂಭೀರವಾಣಿಯಿಂದ ಅಪ್ಪಣೆಕೊಡಿಸಿದರು.

ಅಲ್ಲಿ ನೆರದಿದ್ದ ರೈತರಿಗೆಲ್ಲಾ ಕಾಲೋಚಿತವಾದ ಹಿತಬೋಧೆಯನ್ನು ಮಾಡಿ ರಾತ್ರಿ 8 ಗಂಟೆಗೆ ಘಾಟಿಯಿಂದ ಪ್ರಯಾಣಮಾಡಿ ಬೆಂಗಳೂರಿಗೆ ದಯಮಾಡಿಸಿದರು.

ಈ ದಿವ್ಯಕ್ಷೇತ್ರದಲ್ಲಿ ಸತ್ರಗಳನ್ನು ಕಟ್ಟಿಸಿರುವ ಧರ್ಮಕರ್ತರು.

1. ವೈಶ್ಯರ ಮ|| ಲಕ್ಕೂರು ರಾಮಯ್ಯಶೆಟ್ಟರು, ವೈಶ್ಯಮಂಡಲಿಯವರು ಒಂದು ಭಾರಿ ಸತ್ರವನ್ನು ಕಟ್ಟಿಸಿರುತ್ತಾರೆ.

2. ನಗರ್ತರ ಮ|| ಹಲಸೂರು ಮರಿರುದ್ರಪ್ಪನವರು ಮತ್ತು ಮ|| ಟಿ. ಶಿದ್ದಪ್ಪ ಮುಂತಾದವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ.

3. ಬೆಂಗಳೂರು ದೇವಾಂಗದ ಮ|| ಜಿ. ರಾಮಣ್ಣನವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ.

4. ಅರಸಮ್ಮ ಮತ್ತು ಜೌಡಪ್ಪ ಎಂಬವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ.

5. ಆಗಸರ ಲಕ್ಕಪ್ಪನವರು ಮತ್ತು ಬಿ. ರಾಮಯ್ಯನವರು ಒಂದು ಸತ್ರವನ್ನು ಕಟ್ಟಿಸಿದ್ದಾರೆ. ಇವರಲ್ಲದೆ

1. ಮ|| ಚಿಕ್ಕಣ್ಣ, ಲಕ್ಷ್ಮಯ್ಯನವರೂ,

2. ಬಸಲಹಳ್ಳಿ ಗಂಗಾಧರಪ್ಪನವರೂ,

3. ಮಂಚೇನಹಳ್ಳಿ ಅದಿಕರ್ನಾಟಕರ ಮುನಿಯಪ್ಪನವರೂ ಸಂತರ್ಪಣೆಯನ್ನು ಬಹಳ ವಿಶದಣೆಯಿಂದ ಮಾಡಿಸಿ ಜನರಿಗೂ ದನಗಳಿಗೂ ಸೌಕರ್ಯಗಳನ್ನು ಉಂಟುಮಾಡಿಕೊಟ್ಟಿದ್ದರು.

26—1—1929, ಕೆ. ಗುರುಮೂರ್ತಯ್ಯ,
ದೊಡ್ಡಬಳ್ಳಾಪುರ. ಮಾಸ್ಟರ್.

ದೇವೀಜಾತ್ರೆಗಳಲ್ಲಿ ದಯವಿಟ್ಟು ಪ್ರಾಣಿಬಲಿಯನ್ನು ಕೊಡಬೇಡಿರಿ!

ದೇವಿಯ ಆಜ್ಞೆಯನ್ನು ಪಾಲಿಸಿರಿ.

ಪ್ರಾಣಿಬಲಿಯು ಅಧೋಗತಿಗೆ ಕಾರಣವಾಗಿದೆ ಎಂಬುದಾಗಿ ಪದ್ಮೋತ್ತರಕಾಂಡ, ಅಧ್ಯಾಯ 104-105 ರಲ್ಲಿ ದೇವಿಯು ಈ ಪ್ರಕಾರ ಹೇಳಿರುವುದನ್ನು ಲಾಲಿಸಿ ಇನ್ನುಮೇಲಾದರೂ ಪ್ರಾಣಿವಧೆಯನ್ನು ನಿಲ್ಲಿಸಿ, ಸಾತ್ವಿಕ ರೀತಿಯಿಂದ ಜಾತ್ರೆಯನ್ನು ನೆರವೇರಿಸಿ ಪುಣ್ಯಭಾಗಿಗಳಾಗಿರಿ.

“ಯಾವ ಜನರು ನನ್ನ ಪೂಜೆಮಾಡಬೇಕೆಂಬ ನೆವದಿಂದ ಪ್ರಾಣಿಗಳ ಹಿಂಸೆಯನ್ನು ಮಾಡುತ್ತಾರೋ, ಆಪ್ರಾಣಿಹಿಂಸಾಮುಖೇನ ಮಾಡಿದ ಆ ಪೂಜೆಯು ಅಪವಿತ್ರವಾಗಿದೆ. ಆಹಿಂಸಾ ದೋಷದಿಂದ ಅವರ ಅಧೋಗತಿಯು ನಿಶ್ಚಯವಾಗಿಯೂ ಆಗುವುದು. ತಮೋಗುಣಿಗಳಾದ ಜನರು ನನಗಾಗಿ ಪಶುವಧೆಯನ್ನು ಮಾಡುತ್ತಾರೆ. ಇದರಿಂದ ನಿಶ್ಚಯವಾಗಿಯೂ ಅವರು ಕೋಟಿ ಕಲ್ಪಕಾಲದವರೆಗೆ ನರಕದಲ್ಲಿ ಯಾತನೆಪಡಬೇಕಾಗಿದೆ.”

ಅಜ್ಞಿಂದಿರಾ, ಮೇಲ್ಕಂಡ ದೇವಿಯ ಅಜ್ಞೆಯನ್ನು ಮನ್ನಿಸಿ ಪ್ರಾಣಿಹಿಂಸಾರೂಪವಾದ ಜಾತ್ರೆಗಳನ್ನು ನಿಲ್ಲಿಸಿ ಸಾತ್ವಿಕರೀತಿಯಿಂದ ಜಾತ್ರೆಯನ್ನು ನೆರವೇರಿಸಿರಿ. ಈಗ ನಡೆಯುತ್ತಿರುವ ದೇವೀ ಜಾತ್ರೆಗಳು ಹಿಂಸಾಮಯವಾಗಿಯೂ, ಅಶುಭವಾಗಿಯೂ, ಅಮಂಗಲವಾಗಿಯೂ, ಅಪಕಾರಿಯಾಗಿಯೂ, ಕ್ರೂರವಾದುದಾಗಿಯೂ, ಪಾಪಮಯವಾಗಿಯೂ, ಭಯಂಕರವಾಗಿಯೂ ಇರುವುವು. ಇಂತಹ ಸಂದರ್ಭದಲ್ಲಿ ಅನೇಕರು ಶೂರ, ಧೀರ, ಪರಾಕ್ರಮಿಗಳಂತೆ ಮೂಕಪ್ರಾಣಿಗಳನ್ನು ಬಲಿಕೊಡುವುದೂ, ಹಲ್ಲುಗಳಿಂದ ಜಗಿಯುವುದೂ ಮೊದಲಾದ ರಾಕ್ಷಸಕೃತ್ಯಗಳನ್ನು ಮಾಡುವರು. ಅಯ್ಯೋ! ಅಜ್ಞಾನದಿಂದ ಸಾಧು ಪ್ರಾಣಿಗಳನ್ನು ಕೊಂದು ಪಾಪಿಷ್ಠರಾಗಿ ನರಕದಲ್ಲಿ ಬೀಳುವುದು ಧರ್ಮವೇ? ನಮ್ಮ ಮಕ್ಕಳನ್ನು ಕೊಂದರೆ ನಮಗೆಷ್ಟು ಸಂಕಟವಾಗುವುದೋ ಅಷ್ಟೇ ಸಂಕಟವು ಆ ಮೂಕಪ್ರಾಣಿಗಳಿಗಾದರೂ ಆಗುವುದೆಂಬುದನ್ನು ಗಮನಿಸಿ ಪ್ರಾಣಿಹಿಂಸೆಯನ್ನು ನಿಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯವಲ್ಲವೆ? ನಮ್ಮ ದೇಶಕ್ಕೂ ಹಿಂದೂ ಧರ್ಮಕ್ಕೂ ಅಪಯಶಸ್ಸನ್ನು ತರುವ ಪ್ರಾಣಿಗಳ ಕೊಲೆಗೆ ಕಾರಣವಾಗಿರುವ ಈ ಪಾಪಮಯವಾದ ಕೃತ್ಯವನ್ನು ಆದಷ್ಟು ಜಾಗ್ರತೆಯಾಗಿ ತಪ್ಪಿಸಿ ಪ್ರಾಣಿಗಳನ್ನು ರಕ್ಷಿಸಿದ ಪುಣ್ಯಕ್ಕೂ, ದೇವಿಯ ಅಜ್ಞೆಯನ್ನು ಪಾಲಿಸಿದ ಶ್ರೇಯಸ್ಸಿಗೂ ಭಾಗಿಗಳಾಗುವುದು ಕರ್ತವ್ಯವಾದುದರಿಂದ ಪ್ರತಿಯೊಬ್ಬರೂ ತಂತಮ್ಮ ಸ್ಥಳದಲ್ಲಿ ನಡೆಯುವ ದೇವೀ ಜಾತ್ರೆಗಳಲ್ಲಿ ಪ್ರಾಣಿಬಲಿಯನ್ನು ತಪ್ಪಿಸಿ ಆಚಂದ್ರಾರ್ಕವಾದ ಕೀರ್ತಿಗೆ ಭಾಗಿಗಳಾಗಬೇಕಾಗಿ ಕೋರುತ್ತೇವೆ.

ತವನಪ್ಪನವರ ದೇವೇಂದ್ರಪ್ಪನವರು, ಅಧ್ಯಕ್ಷರು. } ಕಾರ್ಯದರ್ಶಿ, ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ, ದಾವಣಗೆರೆ

ಸೂಚನೆ:—ಸಾತ್ವಿಕ ರೀತಿಯಿಂದ ಜಾತ್ರೆಯನ್ನು ನೆರವೇರಿಸಿದ ಗ್ರಾಮದವರು ದಯವಿಟ್ಟು ನಮ್ಮ ಸಂಘಕ್ಕೆ ರಿಪೋರ್ಟು ಮಾಡಬೇಕಾಗಿ ವಿನಂತಿ. ಸದರಿ ವಿಷಯವು ನಮ್ಮ ವಾರ್ಷಿಕ ರಿಪೋರ್ಟಿನಲ್ಲಿಯೂ, ವೃತ್ತಪತ್ರಿಕೆಗಳಲ್ಲಿಯೂ ಪ್ರಸಿದ್ಧಿಸಲ್ಪಡುವುದು.

ಜಾಹೀರ ಪತ್ರಿಕೆ ನಂಬರು ೧

ಬಳ್ಳಾರಿ ಜಿಲ್ಲಾ ವೀರಶೈವ ಮಹಾಶಯರಲ್ಲಿ ವಿಜ್ಞಾಪನೆ.

ಮದರಾಸು ವೀರಶೈವ ವಿದ್ಯಾವರ್ಧಕಸಂಘವು ಇದುವರಿವಿಗೂ ವೀರಶೈವ ತರುಣರ ವಿದ್ಯಾಭಿವೃದ್ಧಿಗಾಗಿ ಕೆಲಸಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಈಸಂಘವು ವೀರಶೈವರಲ್ಲಿ ರಾಜಕೀಯ ಜಾಗ್ರತಿಯನ್ನುಂಟುಮಾಡಲು ಶಾಸನಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಪ್ರಯತ್ನವನ್ನು ಈವರೆಗೆ ಮಾಡಲಿಲ್ಲ. ಕಾರಣವೇನಂದರೆ ಈಸಂಘದ ಉದ್ದೇಶವು ಕೇವಲ ವಿದ್ಯಾಭಿವೃದ್ಧಿಗಾಗಿಯೇಯಿತ್ತು. ಪರಮೇಶ್ವರನ ಕೃಪೆಯಿಂದ ಈಸಂಘದ ವತಿಯಿಂದ ಅನೇಕರು ವಿದ್ಯಾವಂತರಾಗಿ ಎಂ.ಎ., ಬಿ.ಎಲ್., ಬಿ.ಎ., ಬಿ.ಎಲ್., ಮುಂತಾದ ದೊಡ್ಡ ಪರಿಕ್ಷೆಗಳನ್ನು ಕೊಟ್ಟು ಈಗ ಅನೇಕರು ವಕೀಲರಾಗಿರುತ್ತಾರೆ. ಹೀಗಿದ್ದು ಕೂಡ ಇದುವರಿವಿಗೂ ವೀರಶೈವರು ರಾಜಕೀಯಸಂಘವನ್ನು ಸ್ಥಾಪಿಸದೆ ಇರುವುದು ಶೋಚನೀಯವು. ಈಗಲಾದರು ವೀರಶೈವ ಮುಖಂಡರೂ ಪದವೀಧರರೂ ತಕ್ಷಣವೇ ಒಂದು ಸ್ಥಳದಲ್ಲಿ ಸೇರಿ ಶೀಘ್ರದಲ್ಲಿಯೇ ಒಂದು ಸಂಘವನ್ನು ಸ್ಥಾಪಿಸಿ ಅದರ ಉದ್ದೇಶಗಳನ್ನು ಪರಿಷ್ಕರಿಸಿ ಶಾಸನಸಭೆಗೂ ಮ್ಯುನಿಸಿಪಲ್ ಜಿಲ್ಲಾ ತಾಲೂಕ ಯೂನಿಯನ್ ಬೋರ್ಡುಗಳಿಗೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಹಿಂದುಳಿದ ವೀರಶೈವರ ಕುಂದು ಕೊರತೆಗಳನ್ನು ನಿವಾರಣೆ ಮಾಡಿಸುವ ಪ್ರಯತ್ನಗಳನ್ನು ಕೈಕೊಳ್ಳುವುದು ಅತ್ಯಾವಶ್ಯಕವಾಗಿರುವುದು.

2. ಮದರಾಸು ಶಾಸನನಿರ್ಮಾಣಸಭೆಯ ಕಾಲಾವಧಿಯು ಮುಗಿಯುತ್ತಾ ಬಂದಿರುವುದರಿಂದ ಬರುವ ಅಕ್ಟೋಬರು ತಿಂಗಳಲ್ಲಿ ನೂತನ ಸದಸ್ಯರುಗಳು ಚುನಾಯಿಸಲ್ಪಡಬಹುದು. ಸದ್ಯದ ಪರಿಸ್ಥಿತಿಯನ್ನು ಮತ್ತು ರಾಜಕೀಯಾಂದೋಳನವನ್ನು ಪರಿಶೀಲಿಸಿದಲ್ಲಿ ಮುಂದೆಬರುವ ಚುನಾವಣೆಯ ವಾತಾವರಣವು ಅತ್ಯಂತ ಪ್ರಕ್ಷುಬ್ಧವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಆದರೆ ಬಹುಸಂಖ್ಯಾಕರಾದ ನಮ್ಮ ವೀರಶೈವಬಾಂಧವರು ಇತ್ತಕಡೆಗೆ ಎಳ್ಳಷ್ಟು ಲಕ್ಷ್ಯಕೊಡದೆ ಸುಖನಿದ್ರೆಯಲ್ಲಿರುವುದು ಬಹುಶೋಚನೀಯವು. ವೀರಶೈವರ ಜನಸಂಖ್ಯೆಯನ್ನು ಮತ್ತು ಜಿಲ್ಲೆಯ ಜನಾಂಗಗಳಲ್ಲಿ ಅವರಿಗಿರುವ ಮುಖ್ಯಸ್ಥಳವನ್ನು ವಿವೇಚಿಸಿದಲ್ಲಿ ವೀರಶೈವರೆಲ್ಲರೂ ಮನಸ್ಸುಮಾಡಿದರೆ ಜಿಲ್ಲೆಯ ಇಬ್ಬರು ಪ್ರತಿನಿಧಿಗಳು ವೀರಶೈವ ಜನಾಂಗದಿಂದಲೇ ಆರಿಸಲ್ಪಡಬಹುದೆಂಬುದಕ್ಕೆ ಯಾವ ಸಂದೇಹವೂ ಇಲ್ಲ. ಆದರೆ ಈ ಸಮಾಜದ ದುರ್ದೈವವಶದಿಂದಲೋ ಮತ್ತಿನ್ನಾವ ಕಾರಣದಿಂದಲೊ ವೀರಶೈವರು ಇದುವರಿವಿಗೂ ಸರ್ವತೋಮುಖವಾದ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಮನೆಯಲ್ಲಿ ಬೇಕಾದಷ್ಟು ಹಿಂಡುವದನಗಳನ್ನಿಟ್ಟುಕೊಂಡು ಮಜ್ಜಿಗೆಗಾಗಿ ಮನೆಮನೆ ತಿರುಗಿದಂತೆ ತಮ್ಮ ಏಕಮುಖವಾದ ಪ್ರಯತ್ನದಿಂದ ಬೇಕಾದಷ್ಟು ಮಹತ್ಕಾರ್ಯಗಳಾಗುವಂತಿದ್ದು ಹಿಂದುಳಿದವರಿಗೊಂದು ಕಾದಿಡಲ್ಪಟ್ಟ ಒಂದು ನೊಮಿನೇಷನ್ ಸೀಟಿಗಾಗಿ ಸರ್ಕಾರದವರನ್ನು ಅಂಗಲಾಚಿಗೊಂಡು ಬೇಡಿದ್ದಾಯಿತು. ಅವರು ಒಂದುಬಾರಿ ಕೊಟ್ಟದ್ದಾಯಿತು. 1926 ನೇ ಚುನಾವಣೆಯಲ್ಲಿ ಹೇಗಾದರೂ ನಮಗಾಗಿ ಖಾಸಲಾಗಿ ತೆಗೆದಿಡಲ್ಪಟ್ಟ ನಾಮಿನೇಷನ್ ಸೀಟ್ ರಿಜರ್ವ್ ಆಗಿರುವುದೆಂದು ತಿಳಿದುಕೊಂಡು ವೀರಶೈವರು ತಮ್ಮಪೈಕಿ ಒಬ್ಬ ಪ್ರತಿನಿಧಿಯನ್ನಾದರೂ ಚುನಾಯಿಸಿ ಕಳುಹಿಸುವಬಗ್ಗೆ ಯಾವಪ್ರಯತ್ನವನ್ನೂ ಮಾಡಲಿಲ್ಲವಾಗಿ ಜಾಗೆಯು ಬೇರೆ ಹಿಂದುಳಿದ ಜನಾಂಗಕ್ಕೆಹೋಯಿತು. ಇದರಿಂದ ಸರ್ಕಾರದವರು ನಮ್ಮ ಜನಾಂಗಕ್ಕೆ ಒಳ್ಳೇಬುದ್ಧಿಯನ್ನು ಕಲಿಸಿದಂತಾಯಿತು. ಇನ್ನಾದರೂ ಇವರು ತಮ್ಮ ಕಾಲ್ಗಳಮೇಲೆ ತಾವು ನಿಂತುಕೊಳ್ಳುವದನ್ನು ಕಲಿತುಕೊಳ್ಳುವರೊ? ಬೊಂಬಾಯಿ ಮೈಸೂರು ಮುಂತಾದ ಪ್ರಾಂತಗಳಲ್ಲಿ ಅತಿಶೀಘ್ರದಿಂದ ಮುಂದುವರಿಯುತ್ತಿರುವ ನಮ್ಮಬಾಂಧವರು ಹಿಡಿದಿರುವ ಪ್ರಗತಿ ಮಾರ್ಗವನ್ನುಅನುಸರಿಸುವರೊ? ಕಳೆದ 1927 ನೇ ಡಿಸಂಬರಿನಲ್ಲಿ ಬೆಂಗಳೂರಲ್ಲಿ ಜರಗಿದ ಅಖಿಲ ಭಾರತೀಯ ವೀರಶೈವ ಮಹಾಸಭೆಯಲ್ಲಿ ಈಬಗ್ಗೆ ಒಂದು ನಿರ್ಣಯವು ಪಾಸಾಗಿರುವುದು ತಮ್ಮ ಸ್ಮೃತಿಪಥದಲ್ಲಿರುವದೊ? ಮಹಾಶಯರೆ! ಇನ್ನಾದರೂ ಎಚ್ಚತ್ತು ಮಹಾಸಭೆಯ ನಿರ್ಣಯದಂತೆ ನಮ್ಮಪೈಕಿ ಓರ್ವ ಪ್ರತಿನಿಧಿಯು ಈಸಾರಿಯಾದರು ಶಾಸನನಿರ್ಮಾಣ ಸಭಾಮಂದಿರವನ್ನು ಪ್ರವೇಶಿಸುವಂತೆ ಮಾಡಿರಿ. ಸಮಾಜಬಾಂಧವರೆಲ್ಲರೂ ಒಮ್ಮನಸ್ಸಿನಿಂದ ಪ್ರಯತ್ನಮಾಡಿದಲ್ಲಿ ಇದುಯೆಷ್ಟು ಮಾತ್ರದ ಕಾರ್ಯವು?

ಇದಕ್ಕಾಗಿ ಸಮಸ್ತ ವೀರಶೈವರಿಗೆ ನಾವು ವಿನಯದಿಂದ ವಿಜ್ಞಾಪನೆಮಾಡಿಕೊಳ್ಳುವದೇನೆಂದರೆ ಈ ರಾಜಕೀಯ ಸಂಘದ ಸ್ಥಾಪನೆಗಾಗಿ ಯಾವಸ್ಥಳದಲ್ಲಿ ಯಾವತೇದಿಯಲ್ಲಿ ಎಲ್ಲರೂ ಕೂಡಲು ಅನುಕೂಲವಾಗುವದೆಂಬುದರ ಬಗ್ಗೆ ತಂತಮ್ಮ ಅಭಿಪ್ರಾಯಗಳನ್ನು ತ್ವರಿತವಾಗಿ ಪತ್ರಿಕಾಮೂಲಕವಾಗಲಿ ಪತ್ರಮೂಲಕವಾಗಲಿ ತಿಳಿಸಬೇಕೆಂದು ಕೋರುತ್ತೇವೆ.

1. ತೊಗರಿ ವೀರಪ್ಪ. 2. ಹೀರದ ಕರಿಬಸಪ್ಪ,
3. ಶಿವಾ ಚನ್ನಬಸಪ್ಪ. 4. ಕೆ. ಮರಿಬಸವನಗೌಡು.
5. ಹೆಚ್. ರಂಗನಗೌಡು. 6. ಅರಗಿನಡೋಣಿ ದೊಡ್ಡನಗೌಡು.

ತಾ|| 30—1—1929

ತ್ರಿಳಿವಳಿಕೆ ನೋಟೀಸು

ದಾವಣಗೆರೆ ತಾಲ್ಲೋಕು ಆನಗೋಡು ಸಮ್ಮತು ಕೆರೆಯಾಗಳಹಳ್ಳಿವಾಸಿ ನೆಲಗನಳ್ಳಿ ಸಂಗಪ್ಪನ ಮಗ 25 ವರ್ಷ ವಯಸ್ಸಿನ ಕೆಂಚಪ್ಪನಾದ ಈಕೆಳಗೆ ರುಜುವು ಮಾಡಿರುವ ನಾನು ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

ನಮ್ಮ ತಂದೆಯಾದ ನೆಲಗನಳ್ಳಿ ಬಸಪ್ಪನ ಮಗ ಸಂಗಪ್ಪನು ನನ್ನ ಸಂಗಡ ಮನಸ್ತಾಪ ಮಾಡಿಕೊಂಡು ಸುಮಾರು ಒಂದು ವರ್ಷದಲಾಗಾಯ್ತು ಬೇರೆಕಡೆ ಇದ್ದುಕೊಂಡು ಜೀವನಮಾಡುತ್ತಾ ಇರುತ್ತಾನೆ. ನಾನು ಪ್ರಾಪ್ತವಯಸ್ಕನಾದಮೇಲೆ ನಮ್ಮ ತಂದೆ ಹೆಸರಿಗಿದ್ದ ಯಲ್ಲಾ ಚರಸ್ಥಿರ ಆಸ್ತಿಗಳು ಎಲ್ಲಾ ಏಕಪುತ್ರನಾದ ನನಗೆ ಸೇರಿದವು. ಈ ಮುಂಚೆಯೇ ನಮ್ಮ ತಂದೆಯು ಮಾಡಿದ್ದ ಸಾಲಗಳೆಲ್ಲವನ್ನು ನಾನೇ ವಹಿಸಿಕೊಂಡಿರುವೆನು. ಈತನು ಒಂದು ವರ್ಷದ ಲಾಗಾಯಿತು ಬೇರೆ ಸಂಸಾರಮಾಡಲುಪಕ್ರಮಿಸಿದ ಮೇಲೆ ಈತನ ಜೀವನಕ್ಕೂ ತಕ್ಕಷ್ಟು ಆದಾಯದ ಜಮೀನನ್ನು ಬಿಟ್ಟುಕೊಟ್ಟಿರುತ್ತೇನೆ. ಈಗ ಈತನಿಗೆ ಬುದ್ಧಿಭ್ರಮಣೆ ಆಗಿರುತ್ತದೆ. ಪ್ರಯುಕ್ತ ಈತನು ತನ್ನವಶದಲ್ಲಿರತಕ್ಕ ನನ್ನ ಚರಸ್ಥಿರ ಆಸ್ತಿಗಳನ್ನು ಪರಬಾರೆಮಾಡಲಿಕ್ಕೂ ವಿನಾ ಕಾರಣ ಸಾಲಮಾಡಲಿಕ್ಕೂ ಪ್ರಯತ್ನಪಡುತ್ತಾ ಇರುತ್ತಾನಾಗಿ ವರ್ತಮಾನ ಕೇಳುತ್ತಾ ಇರುತ್ತೇನೆ.

ಈತನಿಗೆ 60 ವರ್ಷ ವಯಸ್ಸಿಗಿಂತಲೂ ಜಾಸ್ತಿಯಾಗಿರುತ್ತದೆ, ಮತ್ತು ಬುದ್ಧಿಸ್ವಾಧೀನವಿರುವುದಿಲ್ಲ. ಇಂಥಾಕಾಲದಲ್ಲಿ ನನ್ನ ಅಭಿಪ್ರಾಯವಿಲ್ಲದೆ ಯಾರಾದರೂ ನನ್ನ ಬಾಬತು ಮತ್ತು ನನ್ನ ತಂದೆ ವಶದಲ್ಲಿರುವ ಯಾವ ಆಸ್ತಿಯನ್ನೇ ಆಗಲಿ ಕ್ರಯ ಭೋಗ್ಯ ವಗೈರೆ ಮಾಡಿಕೊಂಡರೇ ಆಗಲಿ ಅಥವ ಈತನಿಗೆ ಸಾಲವಾಗಿ ಕೊಟ್ಟರೇ ಆಗಲಿ ಅವರ ಹಕ್ಕು ನನ್ನ ಆಸ್ತಿಮೇಲೆ ಊರ್ಜಿತವಾಗಲಾರದಾದ್ದರಿಂದ ಈತನಿಗೆ ಯಾರೂ ಸಾಲವನ್ನು ಕೊಡಕೂಡದೆಂದು ಈ ಮೂಲಕ ತಿಳಿಯಪಡಿಸಿರುತ್ತೇನೆ,

ಕೆರೆಯಾಗಳಹಳ್ಳಿ ಸಂಗಪ್ಪನಮಗ ಕೆಂಚಪ್ಪನ ಖುದ್ದು ರುಜುವು.



ಮಜುಂದಾರ್ ಅಂಡ್ ಸನ್ಸ್
ರಬ್ಬರ್ ಸ್ಟ್ಯಾಂಪ್ ಮೇಕರ್ಸ್
ಫೋಟೋ, ಲೈನ್, ಯಲಕ್‌ಟ್ರೋ ಬ್ಲಾಕುಗಳು, ಅರಗಿನಶೀಲು ದವಾಲಿಬಿಲ್ಲೆಗಳು ಮತ್ತು ರಬ್ಬರ್ ಮೋಹರುಗಳನ್ನೂ ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

10

ಪ್ರಕಟನೆ.

ನಮ್ಮಲ್ಲಿ ಸಿನೇಮಕ್ಕೆ ಸಂಬಂಧಪಟ್ಟ ಪ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಿಶನ್, ಆರ್ಕ್‌ಲ್ಯಾಂಪು, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೇಮನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12—3]

೧೯೨೯ ನೆಯ ಇಸವಿ ಫೆಬ್ರವರಿ ತಾ|| ೯ ರಿಂದ ೧೯೨೯ ನೆಯ ಇಸವಿ ಫೆಬ್ರವರಿ ತಾ|| ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆಯಿಂದ ಮಾಘ ಶುದ್ಧ ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕ ಕುಂಭ
9	¹ಶನಿ	ಅಮಾ	40-34	ಶ್ರವ	19-43	27
10	ಭಾನು	ಪಾಡ್ಯ	40-58	ಧನಿ	22-55	28
11	²ಸೋಮ	ಬಿದಿ	42-10	ಶತ	24-55	29
12	³ಮಂಗಳ	ತದಿ	40-57	ಪೂಭಾ	25-35	1
13	ಬುಧ	ಚೌತಿ	38-41	ಉಭಾ	25-11	2
14	ಗುರು	ಪಂಚ	35-7	ರೇವ	23-34	3
15	⁴ಶುಕ್ರ	ಷಷ್ಠಿ	30-53	ಅಶ್ವಿ	21-11	4

(1) ಸರ್ವತ್ರಾಮಾವಾಸ್ಯ, ಮಹೋದಯ ಪುಣ್ಯಕಾಲು. (2) ಮಳೆನಕ್ಷತ್ರ-ಧನಿಷ್ಠ ೩ ನೆಯಪಾದ. (3) ಮೌನಗೌರಿವ್ರತಂ. (4) ಶಂಭುಕ ಷಷ್ಠಿ, ಮಳೆನಕ್ಷತ್ರ-ಧನಿಷ್ಠ ೪ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧೀಶರಾಜಮಂಡಲಹಿತೈಷಾ | ಭುವನಪಥಕ್ರಾಂತಕಾರಾ ಪಕ್ಕಜನಕ್ಷತ್ರ ಜೋಷರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕರಾರೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ತಿಳೆಯಂಸವಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೧೬ ನೆಯ ಶನಿವಾರ [ಸಂಚಿಕೆ ೭

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೩—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೭—೦
ಬಸವೇಶ್ವರಜನನ	೦—೮—೦	೦—೧೪—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೪—೦
ಸಟೀಕ ಶತಕತ್ರಯ	೧—೦—೦	೧—೭—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ¼ ಸೈಜಿನ 200 ದೊಡ್ಡ ಶ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮದ್ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮದ್ಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ|| ಸಿರಸಿಂಗಿ ದೇಶಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು. ಬೆಂಗಳೂರಿನ ಮಹಾಸಭಾ [illegible] ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಚ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

18

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಹಾಳೆಯು. 6½"×4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½"×4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚುವ ಹಾಳೆಯು 5"×3½" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5"×3½" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ಡೈರಿಗಳಲ್ಲಿ [illegible] 1 ಕ್ಕೆ ಗೆ [illegible] 12 [illegible]

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0. 3"×4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರಚಿತವಾದ [illegible] 10"×14" ಸೈಜಿನ ಶ್ರೀ ಮಹಾಲಕ್ಷ್ಮಿಯ ಸುಂದರ [illegible] ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

[illegible]

ಮನಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

[30—14]

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ” ಆಯುರ್ವೇದೀಯ ಸಿದ್ಧೌಷಧಗಳು.

ಲೋಕಮಾಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿನಿತ್ಯವೂ [illegible]

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

[illegible]

ವೈಶ್ವಾನರರಸ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

[illegible] ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

[illegible] ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸತೈಲ.

ಪ್ಲೇಗು ರೋಗಿಯ [illegible] ಸೀಸೆ 1ಕ್ಕೆ ರೂ. 0—8—0.

[illegible]

ಡಾಕ್ಟರ್ ಜೀ. ಬೀ. ಯವರ ಸುಗಂಧ ನಶ್ಯದ ಪುಡಿ

[illegible]

(Registered Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[30—17] [illegible] ಮದರಾಸು.

ಮೈಸೂರು ಸ್ಟಾರ್.

೧೯೨೨ ನೆಯ ಇಸವಿ ಫೆಬ್ರವರಿ ತಾ|| ೧೮ ನೆಯ ಶನಿವಾರ.

ಬ್ರಾಹ್ಮಣರ ದೂಷಣೆ.

ಬ್ರಾಹ್ಮಣರ ದೂಷಣೆಯು ಈಗೆಲ್ಲೆಲ್ಲೂ ಹೆಚ್ಚುತ್ತಿರುವುದರಿಂದ ಪರಸ್ಪರ ಜಾತಿದ್ವೇಷಾಸೂಯೆಗಳುಂಟಾಗಿ ದೇಶಕ್ಕೆ ಮಹಾನರ್ಥ ಸಂಭವಿಸುವುದಾದಪ್ರಯುಕ್ತ, ಅಂತಹ ದೂಷಕರನ್ನು ಪ್ರಭುತ್ವದವರು ಶಿಕ್ಷಿಸಿ ಬ್ರಾಹ್ಮಣ್ಯವನ್ನು ಕಾಪಾಡಬೇಕೆಂದೂ, ಹಾಗೆ ಮಾಡದಿದ್ದಲ್ಲಿ ಪ್ರಭುಗಳಿಗೆ ಶ್ರೇಯಸ್ಸಾಗುವುದಿಲ್ಲವೆಂದೂ ಬ್ರಾಹ್ಮಣಪತ್ರಿಕೆಗಳಲ್ಲಿ ಉಗ್ರಲೇಖಗಳು ಬರೆಯಲ್ಪಡುತ್ತಿವೆಯಷ್ಟೆ. ಈ ಬ್ರಾಹ್ಮಣರ ದೂಷಣೆ ನಿಂದೆಗಳಿಗೆ ಅವರ ಪ್ರಕೃತ ನಡವಳಿಕೆಯೇ ಕಾರಣವೆಂಬುದಕ್ಕೆ ಬ್ರಾಹ್ಮಣ ಮಹಾಪಂಡಿತರು ಅಪ್ಪಣೆಕೊಡಿಸಿದ ಒಂದು ವಿಷಯವನ್ನು ಈ ಪತ್ರಿಕಾವಾಚಕರ ತಿಳಿವಿಕೆಗಾಗಿ ಕೊಡುತ್ತೇವೆ.

ಪ್ರಸಿದ್ಧ ಉಪನ್ಯಾಸಕರಾದ ವಿದ್ವಾನ್ ಎಲ್ಲತ್ತೂರು ಕೃಷ್ಣಾಚಾರ್ಯರು ರಾಜಧಾನಿಯ ಟವನ್‌ಹಾಲಿನಲ್ಲಿ ಕೆಲವರ್ಷಗಳಹಿಂದೆ ಸದ್ಯಃಕಾಲಪ್ರಸಂಗಗಳೊಳಗೊಂಡಾಗಿರುವ ಪಂಗಡಗಳ ಪರಸ್ಪರ ದ್ವೇಷವನ್ನು ಕುರಿತು ಉಪನ್ಯಾಸಮಾಡುವಾಗ್ಗೆ—"ಬ್ರಾಹ್ಮಣರನ್ನು ಇತರರು ದ್ವೇಷಿಸಿ ದೂಷಿಸುವಂತಾಗಿರುವುದು ಇತರರ ತಪ್ಪಲ್ಲ; ಬ್ರಾಹ್ಮಣ ನಾಮಧಾರಿಗಳ ತಪ್ಪೇ ಆಗಿರುವುದು. ಇವರಲ್ಲಿ ತಮ್ಮ ಕರ್ತವ್ಯಕರ್ಮದಿಂದ ಭ್ರಷ್ಟರಾಗಿ ಹೋಗಿರುವವರೇ ಹೆಚ್ಚುತ್ತ ಬಂದುದರಿಂದ ಇವರ ವಿಷಯದಲ್ಲಿ ಇತರರಿಗಿದ್ದ ಗೌರವಬುದ್ಧಿಯು ಶೂನ್ಯವಾಯಿತು. 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬ ವಾಕ್ಯದಲ್ಲಿರುವ ಗುರುಶಬ್ದಕ್ಕೆ 'ಭಾರ'ವೆಂಬ ಅರ್ಥವನ್ನು ಮಾಡುವುದೇ ಯುಕ್ತವಾಗಿದೆ" ಎಂದು ಹೇಳಿದುದಲ್ಲದೆ ಮಹಾಜನರು ತಮ್ಮ ನಡೆನುಡಿಗಳಿಂದಲೇ ತಕ್ಕ ಸನ್ಮಾರ್ಗದರ್ಶನವನ್ನು ಮಾಡಿಕೊಡುತ್ತಲಿರಬೇಕಾದ ಆವಶ್ಯಕತೆಯನ್ನು ವಿವರಿಸುವಾಗ್ಗೆ, ನಮ್ಮನ್ನಾಳುವ ಶ್ರೀಮನ್ಮಹಾರಾಜ ಕೃಷ್ಣಭೂಪರವರ ಲೋಕೋತ್ತರವಾದ ಸಚ್ಚರಿತ್ರೆಯನ್ನೇ ಉದಾಹರಣೆಯಾಗಿ ನಿರೂಪಿಸಿ, "ಇದುವರೆಗೂ ಮಹಾಸ್ವಾಮಿಯವರು ಒಂದುಸಲವಾದರೂ ಒಂದು ಸೋಡಾ ಸೀಸೆಯನ್ನು ಕೈಯಲ್ಲಾದರೂ ಹಿಡಿದರೆಂದು ಯಾರಾದರೂ ಕೇಳಿರುವಿರಾ? ಅವರ ತುಟಿಯು ಸ್ವಪ್ನದಲ್ಲಾದರೂ ಚುಟ್ಟಾ ಸಿಗರೇಟುಗಳನ್ನು ಸೋಂಕಿರುವುದೆ? ಅಂತಹ ಮಹಾಪ್ರಭುಗಳ ಮುಂದೆಯೇ ಅಂತಹವರುಗಳಿಗೆಲ್ಲ ಧರ್ಮೋಪದೇಶಕರಾಗಿರಬೇಕಾದ ಬ್ರಾಹ್ಮಣರು ಚುಟ್ಟವನ್ನು ಸೇದುವಂತಾಗಿರುವುದೂ, ಸೋಡಾಬುಡ್ಡಿಗಳನ್ನು (ಇನ್ನೂ ವಿಶಾರಿರುವುದನ್ನು ನಾನು ವರ್ಣಿಸಲಾರೆ) ಪಾನಮಾಡುತ್ತಿರುವುದನ್ನೂ ಯಾರುತಾನೇ ಕಾಣರು? ಇಂತಹ ದುರವಸ್ಥೆಯು ಬ್ರಾಹ್ಮಣರಲ್ಲಿ ಪ್ರಬಲಿಸುತ್ತ ಬಂದುದರಿಂದಲೇ ಅವರಲ್ಲಿ ಇತರರಿಗಿದ್ದ ಗೌರವ ವಿಶ್ವಾಸಾದಿಗಳು ಕಡಮೆಯಾಗಲು ಅವಕಾಶವಾಯಿತು" ಎಂದು ಬಹಳ ಸ್ವಾರಸ್ಯವಾಗಿ ಅಪ್ಪಣೆ ಕೊಡಿಸಿದರು.

ಸಜಾತಿ ಬ್ರಾಹ್ಮಣಪಂಡಿತೋತ್ತಮರೇ ಬ್ರಾಹ್ಮಣರ ದೂಷಣೆಯ ಕಾರಣವನ್ನು ಅಪ್ಪಣೆಕೊಡಿಸಿರುವಾಗ್ಗೆ, ಪರಹಿಂಸೆ ಪರದೂಷಣೆ ಅಹಂಕಾರಾದಿ ದುರ್ಗುಣಗಳನ್ನು ಬಿಟ್ಟು ಅಧ್ಯಾಪನ ಅಧ್ಯಯನ ಯಜನಯಾಜನಾದಿ ಸತ್ಕರ್ಮ ನಿರತರಾಗಿ ಸರ್ವಜನರ ಸುಖವನ್ನು ಬಯಸುತ್ತ ಲೋಕವಂದ್ಯರಾಗಿರಿ ಎಂದು ಹೇಳಿದವರು ಬ್ರಾಹ್ಮಣರ ಹಿತರೋ ಅಹಿತರೋ ಮತ್ತು ಅವರುಗಳು ಬ್ರಹ್ಮದ್ವೇಷಿಗಳೆಂದೂ, ಪಾಷಂಡಿಗಳೆಂದೂ, ಅವರನ್ನು 153 ನೇ ಸೆಕ್ಷನ್ ಪ್ರಕಾರ ಶಿಕ್ಷೆಗೆ ಗುರಿಮಾಡಬೇಕೆಂದೂ ಪೇಪರುಗಳಲ್ಲಿ ಬರೆದು ಕೋಲಾಹಲ ಮಾಡುತ್ತಿರುವವರು ಭೂಸುರರೋ ಅಸುರರೋ ವಿವೇಕಿಗಳಾದವರೇ ಹೇಳಲಿ.

ಬ್ರಾಹ್ಮಣರೂ, ಮಿಲ್ಲರ್ ಕಮಿಟಿಯ ವರದಿಯೂ.

ವಿಶ್ವೇಶ್ವರಯ್ಯ ಸಮಿತಿಯವರು ಬೆಂಗಳೂರು ಗಲಭೆಗೆ ಮೂಲಕಾರಣಗಳನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಮಿಲ್ಲರ್ ಸಮಿತಿಯ ವರದಿಯು ಹುಟ್ಟಿ ಸರ್ಕಾರದವರು ಅದನ್ನು ಅಂಗೀಕರಿಸಿದಂದಿನಿಂದ ಮೈಸೂರಿನ ಜನಗಳಲ್ಲಿ ಮತದ್ವೇಷಾಸೂಯೆಗಳು ಪ್ರಬಲಿಸಿದುವೆಂದೂ, ಅದಕ್ಕೆ ಮುಂಚೆ ಸಕಲ ಕೋಮಿನವರೂ ಸೌಹಾರ್ದದಿಂದ ಬಾಳುತ್ತಿದ್ದರೆಂದೂ ಹೇಳಿರುತ್ತಾರೆ. ಇದರ ಮರ್ಮವನ್ನು ಪರೀಕ್ಷಿಸುವುದು ವಿನೋದಕರವಾಗಿರುವುದಲ್ಲದೆ ಲಾಭಕರವಾಗಿರುವುದು. ಮಿಲ್ಲರ್ ಸಮಿತಿಯು ಯಾರಿಂದ ಯಾವ ಕಾರಣಕ್ಕಾಗಿ ಯಾವ ಉದ್ದೇಶದಿಂದ ನಿಯಮಿಸಲ್ಪಟ್ಟಿತೆಂಬುದನ್ನು ಪರಿಶೀಲಿಸುವುದು ಆವಶ್ಯಕವಾಗಿದೆ.

ಮೈಸೂರು ಸರ್ಕಾರದ ಆದಾಯದಲ್ಲಿ ಮುಕ್ಕಾಲು ಮೂರುವೀಸಪಾಲು ಹಿಂದುಳಿದ ವರ್ಗದವರಿಂದ ಸಲ್ಲಿಸಲ್ಪಡುವ ಕಂದಾಯಕಾಣಿಕೆಗಳಿಂದ ಉತ್ಪನ್ನವಾಗುವುದಾದರೂ ನವೀನಕಾಲದ ನಾಗರಿಕತೆಗೆ ಆವಶ್ಯಕವಾದ ವಿದ್ಯಾಭ್ಯಾಸವನ್ನು ಮಾಡಿಸಲು ಇವರಿಗೆ ಸರ್ಕಾರದವರು ಯಾವ ಸೌಕರ್ಯಗಳನ್ನು ಕಲ್ಪಿಸಿಕೊಡದೆ ಇದ್ದುದರಿಂದ ಬಹುಕಾಲದಿಂದಲೂ ವಿದ್ಯಾತುರರಾಗಿ ಜ್ಞಾನಾರ್ಜನೆಯಿಂದ ಮುಂಬರಿದು ನವೀನವಿದ್ಯಾಭ್ಯಾಸದ ಲಾಭದಿಂದ ಐಶ್ವರ್ಯ, ಪದವಿ, ಅಧಿಕಾರಗಳನ್ನೆಲ್ಲಾ ತಾವೇ ತಾವಾಗಿ ಅನುಭವಿಸುತ್ತ ಬಂದ ಬ್ರಾಹ್ಮಣವರ್ಗದವರು ಸರ್ಕಾರದ ಉದ್ಯೋಗಗಳನ್ನೆಲ್ಲ ತಮ್ಮ ವರ್ಗದವರ ಜಹಗೀರನ್ನಾಗಿ ಮಾಡಿಕೊಂಡು ಇತರರಿಗೂ ಅವಕಾಶಕೊಡದೆ ಆತಂಕಪಡಿಸುತ್ತಿದ್ದರು. ಸ್ವಂತ ಸಾಹಸದಿಂದ ಯಾರಾದರೂ ಒಬ್ಬಿಬ್ಬರು ಹಿಂದುಳಿದವರು ವಿದ್ಯಾಭ್ಯಾಸಮಾಡಿ ಸರ್ಕಾರದ ಉದ್ಯೋಗಕ್ಕೆ ಸೇರಿದರೆ ಅಂಥವರಿಗೆ ನಾನಾಬಗೆಯ ಕಿರುಕುಳವನ್ನು ಕೊಟ್ಟು ಅವರು ಅಭಿವೃದ್ಧಿಹೊಂದದಂತೆ ಆತಂಕಪಡಿಸುತ್ತಿದ್ದರು. ಸರ್ಕಾರಿ ಶಾಲೆಗಳಲ್ಲಿರುವ ಮಾಸಾಶನಗಳೆಲ್ಲ ಮುಂಬರಿದವರಿಗೆ ಮಾತ್ರ ಕೊಡಲ್ಪಡುತ್ತಿದ್ದುವು. ಶೋಚನೀಯವಾದ ಈ ದುಃಸ್ಥಿತಿಯನ್ನು ನೋಡಿ ಹಿಂದುಳಿದವರ ಮುಂದಾಳುಗಳು ಆಳುವ ಮಹಾಪ್ರಭುಗಳಲ್ಲಿ ತಮ್ಮ ಕುಂದುಕೊರತೆಗಳನ್ನು ವಿನಯದಿಂದ ಅರಿಕೆ ಮಾಡಿಕೊಂಡರು. ಸಕಲ ಪ್ರಜೆಗಳನ್ನೂ ಪುತ್ರನಿರ್ವಿಶೇಷವಾತ್ಸಲ್ಯದಿಂದ ಪರಿಪಾಲಿಸುವ ಪ್ರಭುವರ್ಯರು ಇವರ ಅರಿಕೆಯು ನ್ಯಾಯವಾದುದೆಂದು ತಿಳಿದುದರಿಂದ ಮುಖ್ಯ ನ್ಯಾಯಸ್ಥಾನದ ಪ್ರಧಾನ ನ್ಯಾಯಾಧೀಶರೂ, ಮತಭೇದವಿಲ್ಲದ ನಿಷ್ಪಕ್ಷಪಾತಿಗಳೂ ವಿದೇಶೀಯರೂ ಆದ ಸರ್ ಲೆಸ್ಲಿ ಮಿಲ್ಲರ್ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಿಸಿದರು. ಈ ಸಮಿತಿಯಲ್ಲಿ ಎಲ್ಲ ಕೋಮಿನವರು ಸದಸ್ಯರಾಗಿದ್ದರು. ಇಂತಹ ಮಿಲ್ಲರ್ ಸಮಿತಿಯ ವರದಿಯು ಸರ್ವಸಮ್ಮತವಾಗಿರುವುದರಿಂದ ನಮ್ಮ ಪ್ರಭುವಂದರವರು ಕೃಪೆಯಿಂದ ಅಂಗೀಕರಿಸಿ ವರದಿಯಲ್ಲಿ ಸೂಚಿಸಲ್ಪಟ್ಟಿರುವ ಸಲಹೆಗಳನ್ನನುಸರಿಸಿ ತಮ್ಮ ಸಕಲ ಪ್ರಜೆಗಳ ವಿದ್ಯಾಭ್ಯಾಸಕ್ಕೂ, ಜ್ಞಾನಾರ್ಜನೆಗೂ, ಉದ್ಯೋಗಪ್ರಾಪ್ತಿಗೂ ಆವಶ್ಯಕವಾದ ಸಕಲ ಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಿಗೆ ಅಪ್ಪಣೆಮಾಡಿದರು. ಇದರಿಂದ ಹಿಂದುಳಿದ ಲಕ್ಷಾಂತರ ಪ್ರಜೆಗಳಿಗೆ ಸಂತೋಷವಾಗಿ ಅವರ ಮಕ್ಕಳ ಏಳ್ಗೆಗೆ ಸಾಧಕವಾಯಿತಾದರೂ ಅದುವರೆಗೂ ಸಂಸ್ಥಾನದ ಸಕಲ ಸೌಕರ್ಯಗಳನ್ನೂ ತಾವೇ ತಾವಾಗಿ ಅನುಭವಿಸುತ್ತಿದ್ದ ಬ್ರಾಹ್ಮಣವರ್ಗದವರಿಗೆ ಮಾತ್ರ ಅಸಂತುಷ್ಟಿಯೂ, ಅತೃಪ್ತಿಯೂ, ಅಸಮಾಧಾನವೂ ಅಂಕುರಿಸಲಾರಂಭವಾಯಿತು. ಬ್ರಾಹ್ಮಣರಿಗೆ ಶಾಸ್ತ್ರೋಕ್ತವಾದ ಬ್ರಾಹ್ಮಣ್ಯಕರ್ಮಾನುಷ್ಠಾನವೇ ಸಾಧುವಾದ ವೃತ್ತಿಯಾದಾಗ್ಗೂ ಅವರು ತಮ್ಮ ಪೂರ್ವಿಕರ ವೃತ್ತಿಯನ್ನು ಬಿಟ್ಟು ಲೌಕಿಕದಲ್ಲಿ ಮಗ್ನರಾಗಿ ಅಧಿಕಾರ, ಐಶ್ವರ್ಯ, ಪದವಿಗಳಿಗೆ ಆಶೆಪಟ್ಟು ಪಾಶ್ಚಾತ್ಯ ವಿದ್ಯಾಭ್ಯಾಸದಲ್ಲಿ ಮುಳುಗಿ ತೇಲುತ್ತ ತಮ್ಮ ಪೂರ್ವಾಚಾರಗಳಿಗೆ ತಿಲಾಂಜಲಿಯನಿತ್ತು ಸರ್ಕಾರದ ಉದ್ಯೋಗವೇ ತಮ್ಮ ಪವಿತ್ರಜೀವನವೃತ್ತಿಯೆಂದು ವಾದಮಾಡುತ್ತ ಹಿಂದುಳಿದವರೇಳ್ಗೆಗಾಗಿ ಸರ್ಕಾರದವರು ಮಾಡುವ ಏರ್ಪಾಡಿಗೆಲ್ಲ ಕಲ್ಲುಹಾಕಿ ಮಿಲ್ಲರ್ ವರದಿಯ ಸಲಹೆಗಳನ್ನು ವ್ಯವಹಾರದಲ್ಲಿ ತರದಂತೆ ಮಾಡಲು ನಾನಾವಿಧದಲ್ಲಿ ತೊಂದರೆ ತೊಡಕುಗಳನ್ನು ತಂದೊಡ್ಡಿದರು. ಒಬ್ಬಿಬ್ಬರು ಹಿಂದುಳಿದವರನ್ನು ಕೃಪಾಳುಗಳಾದ ಮಹಾಸ್ವಾಮಿಯವರು ಉಚ್ಚಸ್ಥಾನಗಳಿಗೆ ನಿಯಮಿಸಿದರೆ ಅವರಮೇಲೆ ತಮ್ಮ ಅಸೂಯೆಯನ್ನು ತೋರಿಸಿ ಅವರ ಪ್ರತಿ ನಡೆನುಡಿಯನ್ನು ಖಂಡಿಸಿ ತಮ್ಮ ಪತ್ರಿಕೆಗಳಲ್ಲಿ ಅವರನ್ನು ನಾನಾ ತೆರನಾಗಿ ಹೀಯಾಳಿಸತೊಡಗಿದರು. ಸರ್ಕಾರದವರ ಆಜ್ಞೆಯು ಕಾಗದದ ಮೇಲೆ ಅಚ್ಚುಹಾಕಿದ್ದಾಯಿತೇವಿನಾ ವಸ್ತುತಃ ಮಿಲ್ಲರ್ ವರದಿಯ ಸಲಹೆಗಳನ್ನು ಆಚರಣೆಯಲ್ಲಿ ತರಲು ಸರ್ಕಾರದ ದೊಡ್ಡ ಅಧಿಕಾರಿಗಳೆಲ್ಲ ಬ್ರಾಹ್ಮಣರೇ ಆಗಿರುವುದರಿಂದ ಎಲ್ಲಿಯಾದರೂ ಕೆಲಸಗಳು ಬಿಡುವಾದಲ್ಲಿ ಹೊರಗೆ ಯಾರಿಗೂ ತಿಳಿಯದಂತೆ ಅವುಗಳಿಗೆ ತಮ್ಮವರನ್ನೇ ತುಂಬುತ್ತ ಬಂದರು. ಹೀಗೆ ಗೋಪ್ಯದಲ್ಲಿ ಹಿಂದುಳಿದವರಿಗೆ ದ್ರೋಹಮಾಡುವುದನ್ನು ತಿಳಿದು ಹಿಂದುಳಿದವರ ಮುಂದಾಳುಗಳು ಖಂಡಿಸಿದರೆ ಅಂಥವರನ್ನು ಸರ್ವಪ್ರಯತ್ನದಿಂದಲೂ ಅಪಮಾನಗೊಳಿಸಿ ಅವರ ಸ್ಥಾನದಿಂದಿಳಿಸುವ ಪ್ರಯತ್ನಮಾಡುವರು. ಇದಕ್ಕೆ ಖಾನ್‌ಬಹದ್ದೂರ್ ಅಬ್ಬಾಸ್‌ಖಾನರವರ ಉದಾಹರಣೆಯು ಸಕಲರಿಗೂ ವೇದ್ಯವಿರುತ್ತದೆ. ಅಂತು ಮಿಲ್ಲರ್ ಸಮಿತಿಯ ವರದಿಯಿಂದ ಹಿಂದುಳಿದವರಿಗಾಗಬೇಕಾಗಿದ್ದಷ್ಟು ಲಾಭವು ಆಗಲು ಮುಂಬರಿದವರು ಅವಕಾಶಕೊಡುತ್ತಿಲ್ಲ. ಹಾಗಾದರೂ ಬ್ರಾಹ್ಮಣರು ಮತದ್ವೇಷಾಸೂಯೆಗಳನ್ನು ಹೆಚ್ಚಿಸಿ ಅಂತಃಕಲಹಗಳನ್ನು ಹುಟ್ಟಿಸಲಾರಂಭಿಸಿರುವರು. ಗಣಪತಿಯ ಸತ್ಯಾಗ್ರಹವೆಂಬ ಹೆಸರಿನಲ್ಲಿ ಇವರು ನಡೆಸಿದ ದುರಾಗ್ರಹ ಚಳವಳಿಯ ಸೋಂಕು ಇನ್ನೂ ಅಡಗಿರುವುದಿಲ್ಲ ದಿನೇ ದಿನೇ ಸಂಸ್ಥಾನದಲ್ಲಿ ಇವರ ದುರಾಗ್ರಹ ಚಳವಳಿಯು ವೃದ್ಧಿಯಾಗುತ್ತಿರುವುದು. ಇನ್ನು ಮುಂದೆ ಈ ಚಳವಳಿಯು ಸಂಸ್ಥಾನದಲ್ಲೆಲ್ಲ ಹಬ್ಬಿಕೊಳ್ಳುವ ಚಿಹ್ನೆಯು ತೋರುತ್ತಿರುವುದು. ಇದಕ್ಕಾಗಿ ಈ ಮುಖಂಡರು ಪ್ರಸಿದ್ಧ ಪತ್ರಿಕೆಗಳನ್ನು ಹಂಚಿ ಪ್ರಜೆಗಳಲ್ಲಿ ಸರ್ಕಾರದ ಮೇಲೂ, ಮಹಾಪ್ರಭುಗಳ ಮೇಲೂ ಅವಿಶ್ವಾಸವನ್ನು ಹುಟ್ಟಿಸುವ ಪ್ರಯತ್ನದಲ್ಲಿರುವರು. ಇದಕ್ಕಾಗಿ ಕೆಲ ಅಸಂತುಷ್ಟರು ಮುಂದಾಳುಗಳಾಗಿ ಹೊರಟಿರುವರು. ಇವರು ಸಂಸ್ಥಾನಾದ್ಯಂತ ಸಂಚಾರಮಾಡಿ ಮಹಾಜನಗಳ ಸಭೆಗಳನ್ನು ಕೂಡಿಸಿ ಸರ್ಕಾರದವರ ಧ್ಯೇಯವನ್ನೂ, ಈಗಿನ ರಾಜ್ಯಾಡಳಿತವನ್ನೂ ಖಂಡಿಸಿ ಜನಗಳಲ್ಲಿ ಅಸಮಾಧಾನವನ್ನು ಹುಟ್ಟಿಸುವ ಕಾರ್ಯವನ್ನು ಕೈಕೊಂಡಿರುವರು. ಇವರು ಆಯಾ ಸ್ಥಳಗಳಲ್ಲಿ ತಮ್ಮಂತೆಯೇ ಅಸಂತುಷ್ಟರಾದ ಹಲವು ಮಂದಿಯನ್ನು ಕಟ್ಟಿಕೊಂಡು ಮಹಾಜನಗಳ ಸಭೆಯನ್ನು ನಡೆಸುವುದಾಗಿ ವಿಜೃಂಭಿಸುತ್ತ ಹತ್ತಾರುಮಂದಿ ಅರಿಯದ ಬಾಲಕರನ್ನೂ, ಅರಿಯದ ನಾಲ್ಕಾರು ಮಂದಿ ಹಿಂದುಳಿದ ವರ್ಗದವರನ್ನೂ ಒಟ್ಟುಗೂಡಿಸಿ ದೊಂಬಿಮಾಡುತ್ತ ಮೈಸೂರು ದೇಶವೆಲ್ಲವೂ ಈಗಿನ ಸರ್ಕಾರದ ವರ್ತನೆಯನ್ನು ಒಪ್ಪುವುದಿಲ್ಲವೆಂದೂ ರಾಜ್ಯಾಡಳಿತವು ಸಮರ್ಪಕವಾಗಿರುವುದಿಲ್ಲವೆಂದೂ ಮಹಾಜನಗಳು ಅಭಿಪ್ರಾಯಪಟ್ಟಿರುವುದಾಗಿ ಸುಳ್ಳುಪ್ರತೀತಿಯನ್ನು ಹುಟ್ಟಿಸಲು ಉಜ್ಜುಗಿಸಿರುವರು. ಈ ಸಭೆಗಳಲ್ಲಿಯೂ, ಈ ಚಳವಳಿಯಲ್ಲಿಯೂ ಮುಂದಾಳುಗಳಾಗಿ ನಿಂತಿರುವವರು ಮುಂಬರಿದ ವರ್ಗದವರೇ ಆಗಿರುವುದು ಶೋಚನೀಯವಾಗಿರುತ್ತದೆ. ಇದನ್ನು ನಾವು ತೋರಿಸಿದರೆ ನಮ್ಮನ್ನು ಬ್ರಹ್ಮದ್ವೇಷಿಗಳೆಂದು ದೂಷಿಸುವರು. ನಾವು ಇಂತಹ ಕಷ್ಟಕಾಲದಲ್ಲಿ ಸರ್ಕಾರದವರನ್ನೂ, ಮಹಾಜನಗಳನ್ನೂ ಎಚ್ಚರುಗೊಳಿಸಿ ಮುಂದೆ ಪ್ರಾಪ್ತವಾಗುವ ಅಪಾಯವನ್ನು ತಿಳಿಸದಿದ್ದರೆ ನಮ್ಮ ಕರ್ತವ್ಯ ಶೂನ್ಯತೆಯನ್ನು ಪ್ರದರ್ಶಿಸಿದಂತಾಗುವುದು. ಯಾವ ಮತದವರ ಮೇಲೂ ನಮಗೆ ವೈರವೈಷಮ್ಯವಿರುವುದಿಲ್ಲ. ಆದರೆ ದೇಶ ಕಂಟಕರು ಯಾವ ವರ್ಗದವರಾದಾಗ್ಗೂ ದೇಶಸಂರಕ್ಷಣೆಗಾಗಿ ಅಂಥವರನ್ನು ನಾವು ಬಹಿರಂಗಪಡಿಸಿ ಅವರಿಗೆ ತಕ್ಕ ಪ್ರಾಯಶ್ಚಿತ್ತವನ್ನು ಸರ್ಕಾರದವರೂ, ಮಹಾಜನಗಳೂ ಮಾಡುವವರೆಗೂ ನಾವು ಬಿಡಲಾಗುವುದಿಲ್ಲ ಅಂತು ಈಗ ನಡೆಯುತ್ತಿರುವ ಮಹತ್ತರವಾದ ಚಳವಳಿಯ ಒಳಗುಟ್ಟನ್ನು ಮಹಾಜನಗಳೂ, ಪ್ರಭುತ್ವದವರೂ ಅರಿತುಕೊಂಡು ಸಕಾಲದಲ್ಲಿ ಇದರ ಪ್ರಾಬಲ್ಯವನ್ನು ಮುರಿದು ಮೂಲೆಗೆ ಹಾಕಬೇಕಾಗಿ ನಾವು ಬಯಸುತ್ತೇವೆ.

ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಲಾಯರ್ ನೋಟೀಸು

ಮದರಾಸಿನ ಮೆಸರ್ಸ್ ಪಾರ್ಟ್‌ಅಂಡ್ ಬ್ರೂಸ್ ವಕೀಲರು, ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಮ|| ನೀಲಗಿರಿ ಜಿ. ಸಂಜೀವಯ್ಯನವರ ಪರವಾಗಿ ಈ ಕೆಳಗೆ ಕಂಡಂತೆ ನೋಟೀಸು ಕೊಟ್ಟಿರುವರೆಂದು ತಿಳಿಯಬರುತ್ತದೆ.—

ಸ್ವಾಮಿ,

ಬೆಂಗಳೂರು ಸಿಟಿ ಮಿಲ್ ರೋಡಿನಲ್ಲಿ ವಾಸವಾಗಿರುವ, ಜಮೀನ್ದಾರರೂ, ವ್ಯಾಪಾರಸ್ಥರೂ, ಮೈಸೂರು ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳ ಸದಸ್ಯರೂ ಆದ ನಮ್ಮ ಕಕ್ಷಿಗಾರರು ಮ|| ನೀಲಗಿರಿ ಜಿ. ಸಂಜೀವಯ್ಯನವರು ತಮಗೆ ಈ ರೀತಿ ಬರೆಯುವಂತೆ ನಮಗೆ ತಿಳಿಸಿದ್ದಾರೆ:

ಬೆಂಗಳೂರು ಗಲಭೆಯ ವಿಚಾರಣಾ ಸಮಿತಿಯಲ್ಲಿ, ನಮ್ಮ ಕಕ್ಷಿಗಾರರ ಹೇಳಿಕೆಯನ್ನು ಚರ್ಚಿಸುತ್ತಿದ್ದಾಗ, ನೀವು ನಮ್ಮ ಕಕ್ಷಿಗಾರರು ಸುಳ್ಳು ಹೇಳುವರೆಂದೂ ಅವರ ಸಾಕ್ಷ್ಯವನ್ನು ನಂಬಲಾಗದೆಂದೂ ಹೇಳಿ, ಅವರಿಗೆ ಅಪಮಾನ ಮಾಡಿರುವುದಾಗಿ ಅವರಿಗೆ ನಂಬಲರ್ಹವಾದ ವರ್ತಮಾನ ಬಂದಿದೆ. ನಮ್ಮ ಕಕ್ಷಿಗಾರರ ಪಾರ್ಟಿಗೆ ಸೇರಿದ, ಮೇಲೆ ಹೇಳಿದ ಸಮಿತಿಯ ಸದಸ್ಯರಾಗಿದ್ದ ಒಬ್ಬ ಮೆಂಬರು 1916 ನೆ ಇಸವಿಯಿಂದೀಚೆಗೆ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಲೇಖನಗಳ ವಿಚಾರವಾಗಿ ನಮ್ಮ ಕಕ್ಷಿಗಾರರು ಕೊಟ್ಟಿದ್ದ ಹೇಳಿಕೆಯನ್ನು ನಿಮ್ಮ ಗಮನಕ್ಕೆ ತಂದಾಗ ತಾವು ಈ ಅಪಮಾನಕರವಾದ ಮಾತನ್ನಾಡಿದಿರಿ ಎಂದು ಗೊತ್ತಾಗಿದೆ. ಈವಿಚಾರವು ನಿಜವೆ ಎಂಬುದನ್ನು ತಿಳಿದುಕೊಳ್ಳಲು ನಮ್ಮ ಕಕ್ಷಿಗಾರರು ಅಪೇಕ್ಷಿಸುತ್ತಾರೆ. ಅದು ನಿಜವಾಗಿದ್ದ ಪಕ್ಷದಲ್ಲಿ ತಾವು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂದೂ, ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಅವಕಾಶ ಕೊಡಬೇಕೆಂದೂ, ನಮ್ಮ ಕಕ್ಷಿಗಾರರು ಕೇಳುತ್ತಾರೆ. ಈ ಕಾಗದ ತಲಪಿದ ಮೂರು ದಿನಗಳೊಳಗಾಗಿ ತಾವು ಈ ಕೋರಿಕೆಯನ್ನು ನೆರವೇರಿಸಿಕೊಡದಿದ್ದರೆ ನಿಮ್ಮ ಮೇಲೆ ಕ್ರಮ ಜರುಗಿಸುವುದಾಗಿ ನಿಮಗೆ ತಿಳಿಸಬೇಕೆಂದು ನಮ್ಮ ಕಕ್ಷಿಗಾರರು ನಮಗೆ ಹೇಳಿದ್ದಾರೆ. ನಿಮ್ಮ ಮೇಲೆ ಏಕೆ ಕ್ರಮ ಜರುಗಿಸಕೂಡದೆಂಬುದಕ್ಕೆ ನೀವು ನಮ್ಮ ಕಕ್ಷಿಗಾರರ ಮನಸ್ಸಿಗೆ ಸಮಾಧಾನವಾಗುವಂತಹ ಕಾರಣಗಳನ್ನು ತಿಳಿಸಬೇಕಾಗಿದೆ.

ಚಕ್ರವರ್ತಿಯವರ ಆರೋಗ್ಯ.

ತಾ|| 13 ರ ಬೆಳಿಗ್ಗೆ ಈ ಪ್ರಕಾರವಾಗಿ ಪ್ರಕಟಿಸಲ್ಪಟ್ಟಿತು.—ರಾತ್ರಿ ಸುಖವಾಗಿ ಕಳೆದರು. ಮಾಮೂಲು ಆಹಾರವನ್ನು ಬೇಕಾದಷ್ಟು ತೆಗೆದುಕೊಳ್ಳುತ್ತಿದ್ದಾರೆ. ಆಗಾಗ ವರ್ತಮಾನ ಪತ್ರಿಕೆಗಳನ್ನೋದುವರು. ಹಗಲಿನಲ್ಲೂ ಸುಖವಾಗಿ ಕಾಲಕಳೆದರು. ಆರೋಗ್ಯಪರಿಸ್ಥಿಯು ತೃಪ್ತಿಕರವಾಗಿದೆ. ಪುನಃ ಎಕ್ಸರೆ ಚಿಕಿತ್ಸೆಯನ್ನು ಡಾಕ್ಟರುಗಳು ಮಾಡಿದರು. ಬರುವ ವಾರ ಲಂಡನ್ ಪಟ್ಟಣದಲ್ಲಿ ನಡೆಯುವ ಬ್ರಿಟಿಷ್ ವಾಣಿಜ್ಯಮಿಕ ಅಂದರೆ ಕೈಗಾರಿಕೆ ವಸ್ತುಗಳ ಪ್ರದರ್ಶನವನ್ನು ನೋಡಲು ರಾಣಿಯವರು ಲಂಡನ್ನಿಗೆ ಹೋಗುವವರಾಗಿರುವರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ದೊಂಬಿಯ ಕಲಹದ ಸಂಬಂಧವಾಗಿ 14 ಮಂದಿ ಮಹಮ್ಮದೀಯರ ಮೇಲೆ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿದ್ದ ವಿವಾದವು ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರಿಂದ ವಾಪಸ್ ತೆಗೆದುಕೊಳ್ಳಲ್ಪಟ್ಟಿತು.

ಬೆಂಗಳೂರಿಂದ ಮದ್ರಾಸಿಗೆ ಹೊರಟ ರೈಲುಬಂಡಿಯ ಇಂಟರ್ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಮೇಲುಕೋಟೆಯ ಶ್ರೀವೈಷ್ಣವ ಯುವತಿ ರಾಜಮ್ಮನೆಂಬಾಕೆಯು ಯಾರಿಂದಲೋ ಕೊಲೆಮಾಡಲ್ಪಟ್ಟಳಷ್ಟೆ. ಈ ಕೊಲೆಯ ಸಂಬಂಧವಾಗಿ ರಾಜಮ್ಮನ ಅಕ್ಕ ಸುಂದರಮ್ಮನೆಂಬಾಕೆಯೂ ಪೋಲೀಸರಿಂದ ಸೆರೆಹಿಡಿಯಲ್ಪಟ್ಟಿರುವಳಲ್ಲದೆ ಈಕೆಯ ಪರಿಚಾರಕನಾದ ಒಬ್ಬ ತರುಣನೂ ಅವನ ಜತೆಗಾರನೂ ಸೆರೆಹಿಡಿಯಲ್ಪಟ್ಟು ಮದ್ರಾಸಿನ 3 ನೇ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಸಮಕ್ಷಮ ಮಾಡಲ್ಪಟ್ಟಿರುವಲ್ಲಿ ಕೊಲೆಮಾಡಲ್ಪಟ್ಟ ಬಂಡಿಯಲ್ಲಿ ಕಂಡುಬಂದ ಬೆರಳುಗಳ ಗುರುತನ್ನೂ ಈ ಇಬ್ಬರು ತರುಣರ ಬೆರಳುಗಳ ಗುರ್ತನ್ನೂ ಗುರ್ತನ್ನು ಪರೀಕ್ಷಿಸುವುದರಲ್ಲಿ ನಿಪುಣರಾದವರು ಹೋಲಿಸಿ ನೋಡಿ ಅದು ಅವರ ಗುರ್ತಲ್ಲವೆಂದು ಹೇಳಿದುದರಮೇಲೂ, ಕೊಲೆಪಾತಕನು ಬಂಡಿಯಿಂದ ದುಮುಕಿದುದನ್ನು ಕಂಡೆನೆಂದು ಹೇಳುವ ಅದೇ ಬಂಡಿಯಲ್ಲಿ ಪ್ರಯಾಣಮಾಡಿದ ಶ್ರೀನಿವಾಸಯ್ಯಂಗಾರ್ಯನು 30 ಜನರ ಸಮೂಹದಲ್ಲಿ ಸೇರಿಸಲ್ಪಟ್ಟಿದ್ದ ಆ ಇಬ್ಬರು ಯುವಕರನ್ನು ಗುರ್ತಿಸಲಾರದೆ ಹೋದುದರಮೇಲೂ ಅವರಿಬ್ಬರೂ ಬಿಡಲ್ಪಟ್ಟರು.

ಕಳೆದ ಮಂಗಳವಾರ ಬೆಳಗಿನ 8 ಗಂಟೆಯಲ್ಲಿ ಬೆಂಗಳೂರು ಸಿಟಿ ವಾಸಸ್ಥರಾದ ಮ|| ಟಿ. ಕೆ. ಕೃಷ್ಣಶೆಟ್ಟರ ಕುಮಾರ ಅನಂತಶೆಟ್ಟಿ ಎಂಬವರು 2-3 ದಿನಗಳ ಹಿಂದೆ ಹೊಸದಾಗಿ ಕೊಂಡುಕೊಂಡಿದ್ದ ಮೋಟಾರು ಬಂಡಿಯಲ್ಲಿ ರುಕ್ಮಾಸಾನಿ ಎಂಬ ನಾಟ್ಯಗಾತಿಯನ್ನೂ ಕೆಲ ಸ್ನೇಹಿತರುಗಳನ್ನೂ ಕುಳ್ಳಿರಿಸಿಕೊಂಡು ಬಂಡಿಯನ್ನು ಸ್ವತಃ ನಡಿಸಿಕೊಂಡು ಚಿಂತಾಮಣಿಗೆ ಹೋಗುತ್ತಿರುವಾಗ್ಗೆ ಹೊಸಕೋಟೆಯಾಚೆಗೆ 4 ಮೈಲು ದೂರದಲ್ಲಿ ಹಿಂದುಗಡೆ ಐರೋಪ್ಯರನ್ನು ಕುಳ್ಳಿರಿಸಿಕೊಂಡು ಬರುತ್ತಿದ್ದ ಮೋಟಾರು ಬಸ್ಸು ಶೆಟ್ಟರ ಬಂಡಿಗೆ ಡಿಕ್ಕಿ ಹೊಡೆದುದರಿಂದ ಅದು ಅಲುಗಾಡಲಾಗಿ ಒಳಗಿದ್ದವರು ಹೊರಕ್ಕೆಸಯಲ್ಪಟ್ಟು ರುಕ್ಮಾಸಾನಿಯು ಪ್ರಾಣಾಪಾಯವನ್ನು ಹೊಂದಿ ರಕ್ತವನ್ನು ಕಾರುತ್ತ ಮೂರ್ಛಿತಳಾದಳು, ಉಳಿದವರು ಕೊಂಚ ಪೆಟ್ಟು ತಿಂದರು ಚೇತರಿಸಿಕೊಂಡು ಆಕೆಯನ್ನು ಅದೇ ಬಂಡಿಯಲ್ಲಿ ಮಲಗಿಸಿಕೊಂಡು ಹೊಸಕೋಟೆಗೆ ಬರುತ್ತಿರುವಷ್ಟರಲ್ಲಿ ಆಕೆಯು ಮೃತಳಾದಳು ಎಂದೂ, ಸೆಟ್ಟರು ಮೋಟಾರು ಬಂಡಿ ನಡೆಸುವುದನ್ನು ಹೊಸದಾಗಿ ಕಲಿತಿದ್ದುದರಿಂದ ಆಯತಪ್ಪಿ ಬಂಡಿಯು ಒಂದು ಮರಕ್ಕೆ ತಗುಲಿ ಈ ದುರವಸ್ಥೆ ಪ್ರಾಪ್ತವಾಯಿತೆಂದೂ, ಆರ್ಮರ್ಡ್ ಕಾರ್ ಎಂದರೆ ಫಿರಂಗಿಯನ್ನಿಟ್ಟಿರುವ ಬಂಡಿಯು ಸೆಟ್ಟರ ಬಂಡಿಯ ಹಿಂದುಗಡೆಯಿಂದ ಬಂದು ಅದಕ್ಕೆ ಡಿಕ್ಕಿ ಹೊಡೆದುದರಿಂದ ಅನಾಹುತ ಸಂಭವಿಸಿತೆಂದೂ ನಾನಾವಿಧವಾಗಿ ವರ್ತಮಾನ ಹುಟ್ಟಿರುವುದು. ಹೇಗೋ ಅನಾಹುತವು ನಡೆದು ದುಡ್ಡಿನಾಸೆಯಿಂದ ವಿಟರ ಮನಸ್ಸಂತೋಷಪಡಿಸಲೆಳಸಿದ ರುಕ್ಮಾಸಾನಿಯು ಮಾತ್ರ ಪ್ರಾಣವನ್ನೀಗಿದಳು.

ಚನ್ನಪಟ್ಟಣದ ಫಾರೆಸ್ಟ್ ರೇಂಜರ್ ನಂಜುಂಡಮೂರ್ತಿ ಮೊದಲಿಯಾರ್ರವರು ಕಳೆದ ಸೆಪ್ಟಂಬರ್ ತಿಂಗಳಲ್ಲಿ ಖೂನಿ ಮಾಡಲ್ಪಟ್ಟರು. ಈ ಸಂಬಂಧದಲ್ಲಿ ಪೋಲೀಸ್ ಅಧಿಕಾರಿಗಳು ಪತ್ತೆಯ ತರದೂದನ್ನು ನಡೆಸಿ ಅರ್ಚಕರ ಹಳ್ಳಿಯ ವೀರ, ಭದ್ರ, ನಂಜ, ಸೋಮೇಗೌಡರೆಂಬ ನಾಲ್ಕುಮಂದಿಯಮೇಲೆ ಮೊಕದ್ದಮೆ ಹೂಡಿದ್ದರು. ಸೋಮೆಗೌಡನ ಸೊಸೆ (ವಿಧವೆ) ಯೊಡನೆಯೂ, ಭದ್ರನಹೆಂಡತಿಯಾದ ಸೋಮೇಗೌಡನ ಮಗಳೊಡನೆಯೂ ನಂಜುಂಡಮೊದಲಿಯಾರರು ವಿಷಯಾಸಕ್ತರಾಗಿದ್ದರೆಂದೂ, ಅದಕ್ಕಾಗಿ ಅವರು ಅರ್ಚಕರ ಹಳ್ಳಿಗೆ ವಿಶೇಷವಾಗಿ ಹೋಗುತ್ತಿದ್ದರೆಂದೂ, ಅವರು ಚನ್ನಪಟ್ಟಣಕ್ಕೆ ವರ್ಗವಾಗಿ ಬಂದ 9 ತಿಂಗಳ ಕಾಲದಲ್ಲಿ ತಮಗೆ ಯಾವ ಕೆಲಸವೂ ಇಲ್ಲದಿದ್ದಾಗ್ಗೂ ಅರ್ಚಕರ ಹಳ್ಳಿಯಲ್ಲಿ 51 ರಾತ್ರಿಗಳನ್ನು ಕಳೆದರೆಂದು ಅವರ ದಿನಚರಿಯ ಪುಸ್ತಕದಲ್ಲಿ ಬರೆದಿರುವುದೆಂದೂ ಪೋಲೀಸಿನವರು ಸಾಕ್ಷಿ ಹೇಳಿಸಿದರು. ಇವರ ಜವಾನರಾದ ಚನ್ನ, ಲಕ್ಷ್ಮಣರಾವ್ ಎಂಬವರಿಬ್ಬರು ಸಾಕ್ಷಿ ನುಡಿಯುವಾಗ್ಗೆ ಸೋಮೆಗೌಡನ ಸೊಸೆಯು ರಾತ್ರಿವೇಳೆಯಲ್ಲಿ ತಮ್ಮ ಯಜಮಾನರನ್ನು ನೋಡುವುದಕ್ಕಾಗಿ ಬಂದಿದ್ದಳೆಂದೂ, ಅವರು ಮಲಗುವ ಮನೆಯೊಳಕ್ಕೆ ಹೋದುದನ್ನು ತಾವು ನೋಡಿದೆವೆಂದೂ ಹೇಳಿದರು. ಖೂನಿ ನಡೆಯುವುದಕ್ಕೆ ಒಂದು ತಿಂಗಳಿಗೆ ಮುಂಚೆ ಭದ್ರನು ಒಂದುದಿನ ರಾತ್ರಿ ತನ್ನ ಹೆಂಡತಿಯು ಮೊದಲಿಯಾರರೊಡನೆ ಮಾತನಾಡುತ್ತಿದ್ದುದಕ್ಕಾಗಿ ಅವಳನ್ನು ಹೊಡೆಯುತ್ತಿದ್ದನೆಂದೂ ಅಷ್ಟರಲ್ಲೇ ಆಕೆಯ ತಂದೆಯಾದ ಸೋಮೆಗೌಡನು ಬಂದು ಇದಕ್ಕಾಗಿ ಮೊದಲಿಯಾರರಿಗೆ ಬುದ್ಧಿಕಲಿಸುತ್ತೇನೆಂದು ಹೇಳಿ ಅವರನ್ನು ಸಮಾಧಾನಗೊಳಿಸಿದನೆಂದೂ ಪೌಳಿದೊಡ್ಡಿ ಲಿಂಗಮ್ಮನೆಂಬವಳು ಸಾಕ್ಷಿ ಹೇಳಿದಳು. ಆದಾಗ್ಗೂ ಸರಿಯಾದ ರುಜುವಾತು ಸಿಕ್ಕದಿದ್ದುದರಿಂದ ಇವರು ನಾಲ್ಕುಮಂದಿಯೂ ಕ್ಲೋಸ್‌ಪೇಟೆ ಮೆಜಿಸ್ಟ್ರೇಟರಿಂದ ಬಿಡುಗಡೆಮಾಡಲ್ಪಟ್ಟರು. ಖೂನಿಯಾದುದೇನೊ ನಿಜವಾದರೂ ತಪ್ಪಿತಸ್ಥರನ್ನು ಮಾತ್ರ ಪೋಲೀಸ್ ಅಧಿಕಾರಿಗಳು ಪತ್ತೆಮಾಡಲಾರದೆಹೋದರು.

ಭರತಖಂಡದ ವೃತ್ತಾಂತಗಳು.

ಒಬ್ಬ ಬೌದ್ಧ ಸನ್ಯಾಸಿಯು ಮನೋನಿಗ್ರಹದಿಂದ ಯಾವಾಗಲೂ ಪರಮಾತ್ಮನ ಧ್ಯಾನದಲ್ಲಿರುವ ಕಾರಣದಿಂದ ಅವನ ಹುಬ್ಬಿನ ಕೂದಲು ಒಂದು ಅಡಿಯಷ್ಟು ಉದ್ದ ಬೆಳೆದು ಆಲದ ಮರದ ಬೀಳಲಿನಂತೆ ಜೋಲುಬಿದ್ದಿರುವುವಂತೆ !

ಇಂದೂರು ಪದಚ್ಯುತರಾದ ತುಕೋಜಿರಾವ್ ಹೋಲ್ಕರಿಗೆ ಶರ್ಮಿಷ್ಠಾದೇವಿಯ ಗರ್ಭದಲ್ಲಿ ಜನಿಸಿರುವ ಪುತ್ರಿಯ ನಾಮಕರಣೋತ್ಸವವನ್ನು ಮಾಡಲು ಸಕಲ ಸನ್ನಾಹವು ನಡೆಯುತ್ತಿದ್ದು ಹೋಲ್ಕರವರಿಗೆ ಅಸ್ವಸ್ಥತೆಯುಂಟಾದುದರಿಂದ ಸದ್ಯದಲ್ಲಿ ನಿಲ್ಲಿಸಲ್ಪಟ್ಟಿತು.

ಪೃಥ್ವಿಯಲ್ಲಿರುವ ಹಿಂದು ಸಂಸ್ಥಾನಗಳಲ್ಲಿ ಭೂತಾನವೂ, ನೈಯಾಂ ದೇಶವೂ ಮಾತ್ರ ಸರ್ವ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವುವು. ಸ್ವಯಾಮಿನ ರಾಜಕುಮಾರನು ರಾಜಪದವಿಯು ತನಗೆ ಬೇಕಿಲ್ಲವೆಂದು ತಿರಸ್ಕರಿಸಿ ಬೌದ್ಧ ಸನ್ಯಾಸವನ್ನು ಅವಲಂಬಿಸಿರುವನೆಂದು ಸುದ್ದಿ ಬಂದಿರುತ್ತದೆ.

ತಿಬೆತ್ತಿನಲ್ಲಿ ಬೌದ್ಧ ಸನ್ಯಾಸಿಗಳ ಪ್ರಾಬಲ್ಯವು ಹೆಚ್ಚಾಗಿರುವುದು. ಆ ದೇಶದ ರಾಜಧಾನಿಗೆ ಸಾಧಾರಣವಾಗಿ ಪರಮತೀಯರಿಗೆ ಪ್ರವೇಶವೇ ದೊರೆಯುವುದಿಲ್ಲ. ಆ ಊರೆಲ್ಲವೂ ಸನ್ಯಾಸಿಗಳ ತೌರುಮನೆಯಾಗಿರುತ್ತದೆ. ಈಗ ಅಲ್ಲಿ ಒಂದು ಶಿಶುವು ಹುಟ್ಟಿದ ಕ್ಷಣದಲ್ಲಿಯೇ ಅದರ ತಂದೆಯು ಮರಣ ಹೊಂದಿದ ಕಾರಣದಿಂದ ಆ ಮಗುವು ಅವತಾರಪುರುಷನೆಂದು ಭಾವಿಸಲ್ಪಟ್ಟಿರುವುದು. ಅದನ್ನು ಬೌದ್ಧರು ತಮ್ಮ ಪರಮಗುರುವೆಂದು ಸ್ವೀಕರಿಸಿ ಆದರಿಸುತ್ತಿರುವರು. ಈ ಗುರುವಿಗೆ ಈಗ ಎರಡು ವರ್ಷ ವಯಸ್ಸು.

ನಮ್ಮ ಭಾರತನೃತ್ಯವು ಭರತಶಾಸ್ತ್ರ ಸಮ್ಮತವೂ ಲೋಕತ್ರಯವೂ ಆದುದಾಗಿರುವುದಾದರೂ ದೇವದಾಸಿಯರ ಮತ್ತು ವೇಶ್ಯರ ಸಾಮಾನ್ಯ ನರ್ತನ ವಿಧಾನದಿಂದ ಅದರ ಪ್ರಾಶಸ್ತ್ಯವೇ ಹೋಗಿರುತ್ತದಲ್ಲದೆ ಅದು ವ್ಯಂಗ್ಯವಾಗುತ್ತಲಿದೆ. ಮೇನಕಾ (ಲೀಲಾಸುಖಿ) ಎಂಬ ವಿದ್ಯಾವತಿಯಾದ ಭಾರತ ಯುವತಿಯು ನಾಟ್ಯದಲ್ಲಿ ನೈಪುಣ್ಯವನ್ನು ಸಂಪಾದಿಸಿ ಈಗ ಪಾಶ್ಚಾತ್ಯ ದೇಶಗಳಿಗೆ ಹೋಗಿ ಉಷಾನೃತ್ಯ, ನಾಗಕನ್ಯನೃತ್ಯ ಭಕ್ತಿಭಾವನೃತ್ಯ ಈ ನವೀನ ನೃತ್ಯಗಳನ್ನು ಪ್ರದರ್ಶಿಸಿ ಅಲ್ಲಿಯವರಿಗೆ ವಿಸ್ಮಯವನ್ನುಂಟುಮಾಡುತ್ತಿರುವಳು.

ಲಾಹೋರಿನಲ್ಲಿ 5 ಜನ ಖೈದಿಗಳು ಸೆರೆಮನೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಒಬ್ಬನು ಗೋಡೆಯಿಂದ ಕೆಳಗೆಬಿದ್ದು ಸತ್ತನು. ಕಳೆದ 7 ನೇ ತಾರೀಖು ಪ್ರಾತಃಕಾಲ ತಮ್ಮ ಸೆರೆಮನೆಯ ಬಾಗಿಲ ಕಂಬಿಯನ್ನು ಕಿತ್ತುಹಾಕಿ 5 ಮಂದಿ ಖೈದಿಗಳು ತಪ್ಪಿಸಿಕೊಂಡು ಹೊರಗಿನ ಆವರಣಕ್ಕೆ ಬಂದು ಅಲ್ಲಿ ಬಿದ್ದಿದ್ದ ಒಂದು ಕಬ್ಬಿಣದ ಕಂಬಿಯನ್ನು ಗೋಡೆಗೆ ಒರಗಿಸಿ ಅದನ್ನೇ ಏಣಿಯಾಗಿ ಮಾಡಿಕೊಂಡು ಗೋಡೆಯಮೇಲೆ ಹತ್ತಿ ಹೊರಕ್ಕೆ ಇಳಿದು 4 ಮಂದಿ ತಪ್ಪಿಸಿಕೊಂಡರು. 5 ನೇ ಯವನು ಹತ್ತುತ್ತಿದ್ದಾಗ ಕಾಲುಜಾರಿ ಕೆಳಗೆ ಬಿದ್ದು ಪ್ರಾಣಬಿಟ್ಟನು.

ಹಿಂದೆ 1918 ನೇ ಇಸವಿಯಲ್ಲಿ ಈ ರೋಗವು ಭರತಖಂಡದಲ್ಲೆಲ್ಲಾ ಹರಡಿ ಹಾವಳಿಮಾಡಿತು. ಮೊದಲು ಈ ಬಾಧ್ಯವು ಯೂರೋಪಿನಲ್ಲಿ ಹುಟ್ಟಿ ಅಲ್ಲಿಂದ ಈ ದೇಶಕ್ಕೆ ವ್ಯಾಪಿಸಿತು. ಈಗ ಈ ಉಪದ್ರವವು ಅಮೆರಿಕೆಯಲ್ಲಿ ಹುಟ್ಟಿ ಯೂರೋಪಿಗೆ ಹಬ್ಬಿರುವುದು. ಹಿಂದಿನಸಾರಿ ಈ ಸಂಕ್ರಾಮಿಕ ಬಾಧ್ಯವು ಈದೇಶದಲ್ಲಿ ವಿಶೇಷ ಹಾನಿ ಮಾಡಿತಾದುದರಿಂದ ಈಸಾರಿ ತಲೆದೋರಿದ ಕೂಡಲೆ ಸರ್ಕಾರದವರು ನಿವಾರಣೋಪಾಯವನ್ನು ಕೈಕೊಳ್ಳುವುದಲ್ಲದೆ ಅದು ಅಂಕುರಿಸದಂತೆ ಸಾಧ್ಯವಾದಮಟ್ಟಿಗೂ ಜನಗಳಿಗೆ ತಿಳುವಳಿಕೆಗಳನ್ನು ಕೊಡುವುದು ಉತ್ತಮ.

ದಕ್ಷಿಣ ಆಫ್ರಿಕದಲ್ಲಿರುವ ಇಂಡಿಯಾ ದೇಶೀಯರ ಕಷ್ಟನಷ್ಟಗಳ ನಿವಾರಣೆಗಾಗಿ ಇಂಡಿಯಾದ ಏಜಂಟರಾಗಿ ಕೆಲಸಮಾಡುತ್ತಿದ್ದ ಘನಹೊಂದಿದ ಮ|| ಶ್ರೀನಿವಾಸ ಶಾಸ್ತ್ರಿಯವರು ಆ ದೇಶದಲ್ಲಿ ಪ್ರಜೆಗಳ ವಿಶ್ವಾಸ ಪಾತ್ರರಾಗಿದ್ದರೆಂಬುದನ್ನು ತೋರಿಸಲಿಕ್ಕೆ, ಅಲ್ಲಿನ ಜನರು ಜಾತಿಮತ ಭೇದಗಳಿಲ್ಲದೆ ಚಂದಾದ್ರವ್ಯವನ್ನು ಕೂಡಿಸಿ, ಅದರಿಂದ ಅವರ ಪ್ರತಿಮೆಯೊಂದನ್ನು ಮಾಡಿಸುವವರಾಗಿರುವರು. ಮ|| ಶಾಸ್ತ್ರಿಯವರು ಅಲ್ಲಿನ ಡರ್ಬನ್ ನಗರದಲ್ಲಿ ಹಿಂದೂದೇಶದ ಉಪಾಧ್ಯಾಯರಿಗಾಗಿ ಸ್ಥಾಪಿಸಿರುವ "ಶಾಸ್ತ್ರಿಯವರ ಕಾಲೇಜು" ನಲ್ಲಿ ಈ ಪ್ರತಿಮೆಯನ್ನು ಪ್ರತಿಷ್ಠೆ ಮಾಡಬೇಕೆಂದಿರುವರು.

ಕೋಕಿನಾಡದ ಇನ್ಕಂಟ್ಯಾಕ್ಸ್ ಆಫೀಸರಾದ ಮ|| ವಿ. ವೆಂಕಟರಮಣಶೆಟ್ಟರು ಇದೇ ತಾ|| 8 ರ ರಾತ್ರಿ ಕ್ಲಬ್ಬಿನಿಂದ ಮನೆಗೆ ಬಂದಮೇಲೆ ಗೃಹಕೃತ್ಯದ ತೊಂದರೆಯಿಂದ ಬೇಸತ್ತು ಆತ್ಮಹತ್ಯಮಾಡಿಕೊಳ್ಳಲು ನಿರ್ಧರಿಸಿರುವೆನೆಂದು ತನ್ನ ಸ್ನೇಹಿತನಿಗೊಂದು ಕಾಗದವನ್ನು ಬರೆದಿಟ್ಟು ಅದೇ ರಾತ್ರಿ 11 ಗಂಟೆಯ ಸಮಯದಲ್ಲಿ ಮನೆಯನ್ನು ಬಿಟ್ಟು ಸಮುಲ್ಕೋಟ್ ನಾಲೆಯ ನೀರಿನಲ್ಲಿ ಮುಳಿಗಿ ಪ್ರಾಣಬಿಟ್ಟರು. ಮಾರನೆಯ ದಿವಸ ಇವರು ಮನೆಯಲ್ಲಿಲ್ಲದಿರುವ ಸುದ್ದಿಯು ಪೋಲೀಸರಿಗೆ ತಿಳಿದು ತಡಕುವಲ್ಲಿ ಅವರ ಶವವು ನೀರಿನಮೇಲೆ ತೇಲುತ್ತಿದ್ದುದು ಕಂಡುಬಂದಿತು. ಆಗ ಶವವು ಹೊರಗೆ ತರಲ್ಪಟ್ಟು ದಹನ ಮಾಡಲ್ಪಟ್ಟಿತು. ಇವರು ಸದ್ಗುಣಿಗಳಾಗಿದ್ದುದರಿಂದ ಪ್ರಜಾನುರಾಗಿಗಳಾಗಿದ್ದರು.

ತಮಿಳುನಾಡಿನ "ಆತ್ಮಾಭಿಮಾನಿ" ಸಂಘದವರು ವಿವಾಹ ಪದ್ಧತಿಯಲ್ಲಿ ದೊಡ್ಡದೊಂದು ಪರಿವರ್ತನೆಯನ್ನು ಉಂಟುಮಾಡಿದ್ದಾರೆ. ಮದುವೆಗಾಗಿ ಅವರು ಸಾವಿರಗಟ್ಟಲೆ ವೆಚ್ಚಮಾಡುವುದಿಲ್ಲ. ಪುರೋಹಿತರ ಪಾದಕ್ಕೆ ಅಡ್ಡಬಿದ್ದು ಅವರನ್ನು ಕರೆತರುವುದಿಲ್ಲ. ಯಾವುದಾದರೂ ಒಂದು ದಿನ ಗ್ರಾಮಚಾವಡಿಯಲ್ಲಿ "ಸಾರ್ವಜನಿಕ ಸಭೆ" ಎಂದು ಡಂಗುರ ಹೊಡೆಯಲ್ಪಡುತ್ತದೆ. ಜನರು ಕೂಡಿ ಬರುತ್ತಾರೆ. ಒಬ್ಬರು ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಡುತ್ತಾರೆ. ಅಧ್ಯಕ್ಷರು, ತಾವು ಮಾಡುವ ಭಾಷಣದಲ್ಲಿ ವಧೂವರರ ಪರಿಚಯವನ್ನಷ್ಟು ಸಭಿಕರಿಗೆ ಹೇಳುತ್ತಾರೆ. ಇನ್ನು ಮುಂದೆ "ಇವರು ಗಂಡಹೆಂಡಿರು" ಎಂಬ ಮಾತು ಅಧ್ಯಕ್ಷರ ಬಾಯಿಯಿಂದ ಬಿದ್ದೊಡನೆ ಸಭಾ ವಿಸರ್ಜನೆಯಾಗುತ್ತದೆ. ಅತಿಥಿಗಳಿಗೆ ಔತಣವಿಲ್ಲ. ತಾಂಬೂಲವಿಲ್ಲ; ಒಂದು ಕಾಸೂ ವೆಚ್ಚವಿಲ್ಲ. ಡಂಗುರ ಸಾರಿದವನಿಗೆ ಮಾತ್ರ ನಾಲ್ಕಾಣೆ ದಕ್ಷಿಣೆ. ಅಂತೂ ನಾಲ್ಕಾಣೆ ವೆಚ್ಚದಿಂದ ಆತ್ಮಾಭಿಮಾನಿಗಳ ಮದುವೆ ಆಗುತ್ತಿದೆ!

ವಿದೇಶದ ವೃತ್ತಾಂತಗಳು.

ಐರ್ಲೆಂಡಿನ ಸ್ವಾತಂತ್ರ್ಯವಾದಿಗಳಾದ ಡಿವೇಲರಾರವರು ಬ್ರಿಟಿಷರ ಅಧೀನದಲ್ಲಿರುವ ಉತ್ತರ ಐರ್ಲೆಂಡಿಗೆ ಪ್ರವೇಶಿಸಿದ ಅಪರಾಧಕ್ಕಾಗಿ ಅವರಿಗೆ ಒಂದು ತಿಂಗಳ ಸಾದಾ ಸಜ ವಿಧಿಸಲ್ಪಟ್ಟಿರುವುದು.

ದೇಶ ಸಂರಕ್ಷಣೆಗಾಗಿ ಹೆಚ್ಚಿನ ನೌಕಾಬಲವು ಬೇಕೆಂದು ಯುದ್ಧದ ಮಂತ್ರಿಯು ಕೇಳಿದ ಪ್ರಕಾರ ಹೊಸ ಯುದ್ಧದ ಹಡಗುಗಳನ್ನು ಕಟ್ಟಲು ಸರ್ಕಾರದವರು ಒಪ್ಪಿರುತ್ತಾರೆ. ಇದಕ್ಕಾಗಿ 100 ಕೋಟಿ ರೂಪಾಯಿ ಮುಂಜೂರಾಗಿರುತ್ತದೆ.

ಐದನೇ ಗಡುವಿನ ಮೊತ್ತವನ್ನು 1,10,600,0000 ಬಂಗಾರ ಮಾರ್ಕುಗಳನ್ನು ಜರ್ಮನಿಯು ಸಲ್ಲಿಸಿರುವುದು. ಇದರಲ್ಲಿ ಫ್ರಾನ್ಸಿಗೆ 4,56,000,000, ಬ್ರಿಟಿಷ್ ಸಾಮ್ರಾಜ್ಯಕ್ಕೆ 2,04,000,000, ಜಪಾನಿಗೆ 5,000,000 ಮಾರ್ಕುಗಳು ಸಂದಿರುವುವು.

ಅಫ್ಘಾನಿನ ಚೋರರಾಜನು ರಷ್ಯಾ ದೇಶೀಯ ವೈಮಾನಿಕರನ್ನು ಕೆಲಸದಿಂದ ನಿವೃತ್ತಿಮಾಡಿ ಅವರಿಗೆ ಹಿಂಸೆಕೊಡುತ್ತಿರುವುದಕ್ಕಾಯೂ, ರಷ್ಯಾದಿಂದ ಕಾಬೂಲಿಗೆ ಕಳಿಸಿದ್ದ ಮದ್ದುಗುಂಡಿನ ಕ್ರಯವನ್ನು ಕೊಡಬೇಕೆಂದೂ ರಷ್ಯಾ ಸರ್ಕಾರದವರು ಕೇಳಿರುವರಂತೆ.

ಇನ್‌ಫ್ಲುಯೆಂಜಾರೋಗವು ಫ್ರಾನ್ಸ್‌ದೇಶದಲ್ಲಿ ವಿಪರೀತವಾಗಿ ಪ್ರಬಲಿಸುತ್ತಿರುವುದು. ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆಯು ಹೆಚ್ಚಾಗಿ ಮಲಗಿಸಲು ಹಾಸಿಗೆ, ಮಂಚಗಳಿಲ್ಲದೆ ಕಾಯಿಲೆಯವರನ್ನು ಸಾಗಿಸುವುದಕ್ಕುಪಯೋಗಿಸುವ ಡೋಲಿಗಳಲ್ಲಿಯು ಸಹ ರೋಗಿಗಳು ತುಂಬಿರುವರಂತೆ.

ಮೆಕ್ಸಿಕೋ ಅಧ್ಯಕ್ಷರು ರೈಲು ಬಂಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗ್ಗೆ ಕಾರ್ಮನ್ ಪೋರ್ಟು ನಿನ್ಕಾನ್‌ಸಿಲೋ ಮಧ್ಯೆ ಸಿಡಿಮದ್ದು ಹಾಕಲ್ಪಟ್ಟಿತು. ಇದರಿಂದ ರೈಲು ಇಂಜನ್ನೂ, ಎರಡು ಬಂಡಿಗಳೂ ತಲೆಕೆಳಗಾಗುರುಳಿದುವು ಮತ್ತು ಇಂಜನ್ನಿನಲ್ಲಿ ಕಲ್ಲಿದ್ದಲನ್ನು ಹಾಕುವನು ಸತ್ತುಹೋದನು. ಆದರೆ ಅಧ್ಯಕ್ಷರಿಗೆ ಮಾತ್ರ ಯಾವ ಅಪಾಯವೂ ಆಗಲಿಲ್ಲ.

ತುರ್ಕಿಯಲ್ಲಿ ಕಳೆದ 25 ವರ್ಷಗಳಿಂದಲೂ ಕಾಣದಷ್ಟು ಚಳಿಯು ಈ ವರ್ಷ ತಲೆದೋರಿರುವುದು. ಪ್ರಯಾಣಿಕರ ನಾಲ್ಕು ರೈಲ್‌ಗಾಡಿಗಳು ಮಾರ್ಗದಲ್ಲಿ ಹಿಮದಗಡ್ಡೆಗಳು ಕಟ್ಟಿಕೊಂಡು ಅಡ್ಡಿಯಾದುದರಿಂದ ಒಂದುವಾರದಿಂದಲೂ ಅವು ನಡುದಾರಿಯಲ್ಲಿ ನಿಂತಿರುವುವು. ಗಾಡಿಯಲ್ಲಿದ್ದ ಪ್ರಯಾಣಿಕರಿಗೆ ಅಲ್ಲಿಯೇ ಆಹಾರ ನೀರು ಕೊಡಲ್ಪಡುತ್ತಿರುವುವು

ಸ್ವತಂತ್ರರಾಜ್ಯವಾದ ಅಫ್ಘಾನಿಸ್ಥಾನದಮೇಲೆ ಬ್ರಿಟಿಷ್ ವಿಮಾನಗಳು ಒಂದಿಲ್ಲೊಂದು ನೆಪದಿಂದ ಹಾರಾಡುತ್ತಾ ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಳ್ಳುತ್ತಿರುವುವೆಂದೂ ಇದು ಜನಾಂಗಗಳ ಪರಸ್ಪರ ಪದ್ಧತಿಗಳಿಗೆ ವಿರೋಧವಾದುದೆಂದೂ, ಇದಕ್ಕಾಗಿ ಹಿಂದುಸ್ಥಾನದ ಸರ್ಕಾರದ ವರ್ತನೆಯನ್ನು ಖಂಡಿಸುವ ಯೋಚನೆಯನ್ನು ಮಾಡಲಾಗುವುದು ಎಂದೂ, ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಬ್ಬ ಆಂಗ್ಲ ಸದಸ್ಯರು ಪ್ರಶ್ನೆಕೇಳಿರುತ್ತಾರೆ.

ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಟ್ಟರೆ ದೇಶೀಯ ಕೈಗಾರಿಕೆಗಳನ್ನು ವಿದೇಶವ್ಯಾಪಾರದನುಕೂಲಕ್ಕಾಗಿ ಹಡಗಿನ ಸೌಕರ್ಯವನ್ನು ವೃದ್ಧಿಗೊಳಿಸಲೋಸುಗ ವಿದೇಶೀಯ ಸರಕುಗಳಮೇಲೂ, ಹಡಗುಗಳಮೇಲೂ ಸುಂಕ ಹಾಕುವ ಏರ್ಪಾಡು ಮಾಡುವರೆಂದೂ, ಇದರಿಂದ ಬ್ರಿಟಿಷ್ ಬಂಡವಾಳಸ್ಥರಿಗೆ ನಾನಾರೀತಿಯಲ್ಲಿ ನಷ್ಟಸಂಭವಿಸುವುದೆಂದೂ ಈಗಾಗಲೇ ಭಯಪಡುತ್ತಿರುವರಲ್ಲದೆ ಭಾರತೀಯರಿಗೆ ತಮ್ಮ ದೇಶದಲ್ಲಿ ಕೊಟ್ಟಿರುವ ಸೌಕರ್ಯಗಳನ್ನು ಕಿತ್ತುಕೊಳ್ಳುವ ಯೋಚನೆಯಲ್ಲಿರುವರಂತೆ.

ಹೊಸ ರೀತಿಯಾದ ವ್ಯವಸಾಯ ಕ್ರಮಗಳಿಗೆ ತೌರುಮನೆಯಂತಿರುವ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕೈಗಾರಿಕೆಗಳು ಹೆಚ್ಚಾಗಿಯೇ ಪ್ರಬಲಿಸಿರುವುದರಿಂದ, ಆ ದೇಶದ ಆಮದು ರಫ್ತುಗಳು ಇತರ ದೇಶದವುಗಳನ್ನು ಮೀರಿಸಿವೆ. 1920 ನೇ ಇಸವಿಯಲ್ಲಿ ಆ ದೇಶದವರು 51,290 ಲಕ್ಷ ಡಾಲರುಗಳು ಬಾಳುವ ಸಾಮಾನುಗಳನ್ನು ಪರದೇಶಗಳಿಗೆ ಕಳುಹಿಸಿ, 40,900 ಲಕ್ಷ ಡಾಲರುಗಳ ಸಾಮಾನುಗಳನ್ನು ತಮ್ಮ ದೇಶಕ್ಕೆ ತರಿಸಿಕೊಂಡಿರುತ್ತಾರೆ. ಡಾಲರು ಒಂದಕ್ಕೆ ಮೂರು ರೂಪಾಯಿಗಳು.

ಮುದ್ರಣದಲ್ಲಿ ಹೊಸದೊಂದು ವೈಚಿತ್ರ್ಯವು ನಡೆವ ಸಂಭವವಿದೆ. ವಿಜ್ಞಾನಶಾಸ್ತ್ರದ ಎಲ್ಲಾ ಸೋಜಿಗಗಳಿಗೆ ಅಮೇರಿಕವೆ ತವರೂರು. ಈ ವಿಚಿತ್ರ ಮುದ್ರಣ ಕ್ರಮವಾದರೋ ಅಮೇರಿಕದಲ್ಲೆ ಪ್ರಯೋಗಕ್ಕೆ ಬರುವುದು. ಇದಕ್ಕೆ ಮೂಲವಾದ ಉಪಕರಣವೆಂದರೆ ಒಂದು "ಟೈಪ್‌ರೈಟಿಂಗ್" ಯಂತ್ರ. ಇದು ವಿದ್ಯುಚ್ಛಕ್ತಿಯಿಂದ ಕೆಲಸ ಮಾಡುವುದು. ಇತರ ಮುಖಾಂತರ ಕಾಗದಗಳ ಮೇಲೆ ಅಕ್ಷರ ಸಂಜ್ಞೆಯ ತೂತುಗಳು ಮಾಡಲ್ಪಡುವುವು. ತಂತಿಯ ಮೂಲಕ, ಈ ಸಂಜ್ಞೆಗಳು ಪರಸ್ಥಳಕ್ಕೆ ಕಳುಹಿಸಲ್ಪಡುವುವು. ಆಯಾ ಸಂಜ್ಞೆಗಳುಳ್ಳ ತೂತುಗಳು ಕಾಗದಗಳ ಮೇಲೆ ಅಲ್ಲಿ ಅಂಕಿಸಲ್ಪಡುವುವು. ಅವುಗಳಿಂದ ಮೊಳೆಗಳ ಜೋಡಿಕೆಯನ್ನು ಸುಲಭವಾಗಿ ಮಾಡುವ ಯಂತ್ರವಿದೆ. ಇದರ ಮೂಲಕ ಮುದ್ರಣಗಳು ಬೇಗನೆ ಆಗುತ್ತಿವೆ. ಯಾವುದಾದರೊಂದು ಕೇಂದ್ರ ಸ್ಥಳದಲ್ಲಿರುವ ಈ ಯಂತ್ರದ ಮೂಲಕ ಒಂದೇ ವೇಳೆ ಅನೇಕ ನಗರಗಳಲ್ಲಿ ಮುದ್ರಿಸಬಹುದಂತೆ.

ಬೊಂಬಾಯಿಯಲ್ಲಿ ಹಿಂದು-ಮುಸಲ್ಮಾನರ ಕಲಹ.

ಪಠಾಣರು ನರಬಲಿಗಾಗಿ ಮಕ್ಕಳನ್ನು ಕದ್ದೊಯ್ಯುವರೆಂಬ ಸುಳ್ಳು ಸುದ್ದಿಯು ಹುಟ್ಟಿ ಬೊಂಬಾಯಿ ನಗರದಲ್ಲೆಲ್ಲಾ ಹರಡಿಕೊಂಡು ಮೊದಲು ಗಿರಣಿಗಳ ಕೂಲಿಕಾರರು ಮಾತ್ರ ಪಠಾಣರ ಮೇಲೆ ಬಿದ್ದು ಕಂಡೆಡೆಯಲ್ಲೆಲ್ಲಾ ಅವರನ್ನು ಪ್ರಹರಿಸಿ ಗಲಭೆಗಾರಂಭಿಸಿದರು. ಈಚೆಗೆ ಈ ಕಲಹವು ಹಿಂದು-ಮುಸಲ್ಮಾನರ ಮತೀಯ ಕಲಹವಾಗಿ ಪರಿಣಮಿಸಿರುತ್ತದೆ. ಪಠಾಣರು ಸಂಖ್ಯೆಯಲ್ಲಿ ಕಡಿಮೆಯಾಗಿರುವುದರಿಂದ ದೇಶೀಯ ಮುಸಲ್ಮಾನರು ಅವರಲ್ಲಿ ಸಹಾನುಭೂತಿಯುಳ್ಳವರಾಗಿ ಅವರನ್ನು ರಕ್ಷಿಸುವುದಕ್ಕಾಗಿ ಅವರಿಗೆ ಬೆಂಬಲವಾಗಿ ನಿಂತಿರುವರು. ಈಗ ಬೊಂಬಾಯಿ ನಗರದ ಎಲ್ಲಾ ಭಾಗಗಳಲ್ಲೂ ಹಿಂದು-ಮುಸಲ್ಮಾನರ ಹೊಡೆದಾಟವು ಪ್ರಾರಂಭವಾಗಿರುವುದು. ಭೆಂಡಿಬಜಾರ್ ಎಂಬ ಮುಸಲ್ಮಾನರ ಬೀದಿಯಲ್ಲಿ ಮೊನ್ನೆ 6 ನೇ ತಾರೀಖಿನ ದಿನ ವಿಶೇಷವಾಗಿ ಗಲಭೆಯಾಗಲು ಬ್ರಿಟಿಷ್ ಸೈನಿಕರು ದಂಗೆಕೋರರ ಮೇಲೆ ಗುಂಡು ಹಾರಿಸಿದರು. ಮೂರುಮಂದಿ ಕೊಲ್ಲಲ್ಪಟ್ಟರು, 5 ಜನಗಳಿಗೆ ಅಪಾಯಕರವಾದ ಘಾಯವಾಯಿತು. ಸುಮಾರು 70 ಮಂದಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಲ್ಪಟ್ಟರು. ತಲೆಯೆಲ್ಲಾ ಒಡೆದು ಅಪಾಯಸ್ಥಿತಿಯಲ್ಲಿದ್ದ ಒಬ್ಬ ಹಿಂದುವನ್ನು ಗಾಡಿಯಲ್ಲಿ ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಭೆಂಡಿಬಜಾರಿನ ಮುಸಲ್ಮಾನರು ಗಾಡಿಯನ್ನು ಮುತ್ತಿದರು. ಸೈನಿಕರೂ ಪೊಲೀಸಿನವರೂ ಅವರನ್ನು ಚದರಿಸಲು ಎಷ್ಟು ಪ್ರಯತ್ನಪಟ್ಟಾಗ್ಯೂ ಸಾಧ್ಯವಾಗದಿರಲು ಗುಂಡು ಹೊಡೆಯಬೇಕಾಯಿತು.

ಗಲಭೆಯು ದಿನೇದಿನೇ ಪ್ರಬಲಿಸುತ್ತಿರುವುದು. ಪೊಲೀಸಾಳುಗಳೂ ಯೂರೋಪಿಯನ್ ಸೈನಿಕರೂ ಪಟ್ಟಣದ ಎಲ್ಲಾ ಭಾಗಗಳಲ್ಲಿಯೂ ಕಾವಲಿದ್ದಾಗ್ಯೂ ಅವರ ಬೆನ್ನು ತಿರುಗಿದಕೂಡಲೆ ಸಣ್ಣ ಪುಟ್ಟ ಗಲ್ಲಿಗಳಲ್ಲಿ ತುಂಡಾಂಡಿಗಪಠಾಣರು ನುಗ್ಗಿ ಹಿಂದುಗಳನ್ನು ಕೊಲ್ಲುತ್ತಲೂ ಗಾಯಪಡಿಸುತ್ತಲೂ ಇರುವರು. ಆಸ್ಪತ್ರೆಗಳಲ್ಲೆಲ್ಲಾ ಈ ಗಲಭೆಯಲ್ಲಿ ಏಟುತಿಂದ ಜನಗಳು ಕಿಕ್ಕಿರಿದು ತುಂಬಿರುವರು. ಇವರಲ್ಲಿ ಬಹುಮಟ್ಟಿಗೆ ಹಿಂದುಗಳೇ ಇರುವರು. ಗಲಭೆಯು ಮುಸಲ್ಮಾನರ ಬೀದಿಗಳಲ್ಲಿ ವಿಶೇಷವಾಗಿರುವುದು. ಕಳೆದ ಶುಕ್ರವಾರ ಭೆಂಡಿಬಜಾರಿನಲ್ಲಿ 4 ಮಂದಿ ಹಿಂದುಗಳು ಕೊಲ್ಲಲ್ಪಟ್ಟರು. ಲಾಠಿಗಳನ್ನು ಹಿಡಿದುಕೊಂಡು ಹೋದರೆ ಸಿಕ್ಕಿಬೀಳುವುವೆಂದು ಪಠಾಣರು ಈಗ ಚೂರಿಗಳನ್ನು ಪ್ರಯೋಗಿಸಿ ಜನರನ್ನು ಕೊಲ್ಲುತ್ತಿರುವರು. ಹಿಂದುಗಳ ಅಂಗಡಿಗೆ ನುಗ್ಗಿ ಅವರನ್ನು ಹೊರಕ್ಕೆ ಎಳೆದು ಕೊಂದುಹಾಕುತ್ತಿರುವರು. ಮೊದಲು ಗಿರಣಿಗಳ ಹಿಂದು ಕೂಲಿಗಳು ಗಲಭೆಯನ್ನು ಪ್ರಾರಂಭಿಸಿದರಾದಾಗ್ಯೂ ಹಿಂದುಗಳಮೇಲೆ ಹಗೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಮುಸಲ್ಮಾನರು ಈಗ ಕಂಡೆಡೆಯಲ್ಲೆಲ್ಲಾ ಹಿಂದುಗಳಮೇಲೆ ಬೀಳುತ್ತಿರುವರು. ಪಟ್ಟಣದ ಬೀದಿಗಳಲ್ಲೆಲ್ಲಾ ಝಾಡುಕಂಗಳು ಕಸವನ್ನು ಗುಡಿಸಲಿಲ್ಲವೊ ಎಂಬಂತೆ ಎಲ್ಲೆಲ್ಲಿಯೂ ಕಚರವು ರಾಶಿಯಾಗಿ ಬಿದ್ದಿರುವುದು. ಜನಗಳು ಪ್ರಾಣಭಯದಿಂದ ಹೊರಗೆ ಹೋಗದೆ ಮನೆಗಳಲ್ಲಿಯೇ ಇರುವರು. ಹೆಂಗಸರು ಮನೆ ಕಿಟಕಿಗಳನ್ನು ಮುಚ್ಚಿಕೊಂಡು ಮಹಡಿಗಳ ಮೇಲಿನಿಂದ ಕಿಟಕಿಯ ಕಂಡಿಗಳಲ್ಲಿ ಬೀದಿಯಲ್ಲಿ ನಡೆಯುವ ಗಲಭೆಯನ್ನು ನೋಡುತ್ತಿರುವರು. ಜನಗಳಿಗೆ ಸಮಾಧಾನಪಡಿಸುವುದಕ್ಕೋಸ್ಕರ ಸರ್ಕಾರದವರು ಪೂನಾದಿಂದ ಹೆಚ್ಚಿಗೆ ಯೂರೋಪಿಯನ್ ಸೈನ್ಯವನ್ನು ಕರೆಸಿರುವರು. ಮೋಟಾರ್ ಫಿರಂಗಿಗಳೂ ಯಂತ್ರದ ಬಂದೂಕಗಳೂ ಎಲ್ಲೆಲ್ಲಿಯೂ ಕಾಣುತ್ತಿರುವುವು. ಆಯಾ ಮತೀಯರ ಮುಖಂಡರುಗಳೂ ಸರ್ಕಾರದವರೂ ಸಾಹಸಪಟ್ಟು ಶಾಂತಿಸ್ಥಾಪನೆ ಮಾಡಲು ಪೂರ್ಣ ಪ್ರಯತ್ನ ಮಾಡುತ್ತಿರುವರು. ಮುಂದಾಳುಗಳು ಅವರವರ ಬೀದಿಗಳಿಗೆ ಹೋಗಿ ಜನಗಳಿಗೆ ಬುದ್ಧಿವಾದವನ್ನು ಹೇಳುತ್ತಿರುವರು. ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟು ಜನಸಂಚಾರವಿಲ್ಲದೆ ರಸ್ತೆಗಳಲ್ಲೆಲ್ಲಾ ದನ ನಾಯಿ ಮೊದಲಾದ ಪ್ರಾಣಿಗಳು ನಿರಾಂತಕವಾಗಿ ಮಲಗಿರುವುವು. ನಿತ್ಯವೂ ಒಂದೆರಡುವೇಳೆ ಗಲಭೆಯು ವಿಪರೀತವಾಗಿ ಸೈನಿಕರು ಗುಂಡು ಹೊಡೆದು ಗುಂಪನ್ನು ಚದರಿಸುವ ಆವಶ್ಯಕತೆಯು ಒದಗಿರುವುದು. 6 ನೇ ತಾರೀಖಿನವರೆಗೂ ಹಿಂದುಗಳ ಗುಂಪಿನವರು ಪಠಾಣರಮೇಲೆ ಬಿದ್ದು ಪ್ರಹರಿಸುತ್ತಲೂ ಇದಕ್ಕೆ ಪ್ರತೀಕಾರವಾಗಿ ಪಠಾಣರು ಗುಂಪುಸೇರಿಕೊಂಡು ಹಿಂದುಗಳಮೇಲೆ ಬೀಳುತ್ತಿದ್ದರು. ಅಂದಿನಿಂದೀಚೆಗೆ ಎಲ್ಲೆಲ್ಲಿಯೂ ಪುಂಡುಜನಗಳ ಗುಂಪುಗಳು ರಸ್ತೆಯಲ್ಲಿ ತುಂಬಿಕೊಂಡು ಸೈನಿಕರಿಂದ ಚದರಿಸಲು ಸಾಧ್ಯವಿಲ್ಲದಂತೆ ಮಾಡುತ್ತಿರುವರು. ತಿರುಗಾಡುವ ಜನಗಳನ್ನು ಸೈನಿಕರನ್ನೂ ಪೊಲೀಸಿನವರನ್ನೂ ಪ್ರಹರಿಸುತ್ತ ದೊಂಬಿಮಾಡುತ್ತಿರುವರು. 6 ನೇ ತಾರೀಖಿನ ದಿನ ಇಂತಹ ದೊಂಬಿಕಾರರು 3 ಕಡೆಗಳಲ್ಲಿ ದೊಂಬಿ ಮಾಡಿ ಸೈನಿಕರು ತುಂಬಿದ ಮೋಟಾರುಗಾಡಿಗಳ ಮೇಲೆ ನುಗ್ಗಿ ಕಲ್ಲು ಹೊಡೆದುದರಿಂದ ಆ ದಿನ ಸೈನಿಕರು ನಾಲ್ಕುಸಾರಿ ಗುಂಡಿನ ಮೇಲೆ ಗುಂಡುಗಳನ್ನು ಹೊಡೆದು ಚದರಿಸಬೇಕಾಯಿತು. ಪುರಾಧ್ಯಕ್ಷರು ನಾನಾಮತದ ಜನಗಳ ಮುಖಂಡರನ್ನು ಸಭೆಸೇರಿಸಿ ಶಾಂತಿಸ್ಥಾಪನೆಗಾಗಿ ಅವರ ಜನಗಳಿಗೆ ಸಮಾಧಾನವನ್ನು ಹೇಳುವಂತೆ ಪ್ರಾರ್ಥನೆಮಾಡಿಕೊಂಡಿರುವರು. ಈ ಗಲಭೆಗೆ ಕಾರಣವೇನೆಂಬುದನ್ನು ಗೊತ್ತುಮಾಡುವುದಕ್ಕಾಗಿ ವಿಚಾರಣೆಯನ್ನು ನಡೆಸುವುದಕ್ಕಾಗಿ ಖಾಸಗಿ ಜನಗಳ ಸಮಿತಿಯನ್ನು ನೇಮಿಸಬೇಕೆಂದು ಪತ್ರಿಕೆಗಳವರು ಸೂಚಿಸಿದರು. ಆಂಗ್ಲಪತ್ರಿಕೆಗಳಲ್ಲಿ ಬೊಂಬಾಯಿ ಗಲಭೆಗೆ ಕೂಲಿಕಾರರ ಮುಂದಾಳುಗಳು ಅವರಲ್ಲಿ ಅನಾಯಕಪ್ರವರ್ತನೆಯನ್ನು ಹುಟ್ಟಿಸಿದುದೇ ಕಾರಣವೆಂದೂ, ಸರ್ಕಾರದವರು ಕೂಲಿಕಾರರ ಮುಂದಾಳುಗಳನ್ನು ಹತೋಟಿಯಲ್ಲಿಡದಿದ್ದರೆ ಶಾಂತಿರಕ್ಷಣೆಯು ಸರ್ಕಾರದವರಿಂದ ಸಮರ್ಪಕವಾಗಿ ಮಾಡಲಾಗುವುದಿಲ್ಲವೆಂದೂ ಹೇಳುತ್ತಿರುವರು. ಸಾರ್ವಭೌಮ ಸರ್ಕಾರದವರು ಇದಕ್ಕಾಗಿ ಪ್ರತ್ಯೇಕವಾದ ಕಾಯಿದೆಯನ್ನು ಮಾಡಬೇಕೆಂದು ಸಾರ್ವಭೌಮ ನ್ಯಾಯವಿಧಾಯಕಸಭೆಯಲ್ಲಿ ಮೊನ್ನೆತಾನೆ ಒಂದು ಮಸೂದೆಯನ್ನು ತಂದಿದ್ದರು. ದೇಶೀಯ ಮುಂದಾಳುಗಳು ಇದನ್ನು ಪ್ರತಿಭಟಿಸಿ ಸರ್ಕಾರದವರ ಉದ್ದೇಶವು ದೇಶೀಯರ ಸ್ವಾತಂತ್ರ್ಯಸಾಧನೆಗೆ ಅಡ್ಡಿಮಾಡುವುದಕ್ಕಾಗಿ ಈ ಮಸೂದೆಯನ್ನು ತಂದಿರುವರೆಂದು ಸಂಶಯಗ್ರಸ್ತರಾಗಿ ಈ ಕಾಯಿದೆಯನ್ನು ಮಾಡಲಾಗದೆಂದು ಅಡ್ಡಿಮಾಡಿರುವರು. ಈ ಸಂದರ್ಭದಲ್ಲಿ ಬೊಂಬಾಯಿಯಲ್ಲಿ ನಡೆದ ಗಲಭೆಯು ಸರ್ಕಾರದವರ ಉದ್ದೇಶಕ್ಕೆ ಸಹಾಯಕವಾಗಿ ಬಂದುದು ಅವರ ಕಾರ್ಯಸಾಧನೆಗೆ ಅನುಕೂಲವಾದಂತೆ ಕಾಣುತ್ತದೆ.

ಕಲಹದ ಉಗ್ರಸ್ವರೂಪ.

ಕಳೆದ ತಾ|| 9 ಕಾಮಾಟಿಪುರದಲ್ಲಿ ಬಡಿದಾಟವು ಜರುಗಿತು. ತಂಡೋಪತಂಡವಾಗಿ ಸೇರಿ ಪೊಲೀಸರ ಉತ್ತರವನ್ನು ಉಲ್ಲಂಘಿಸಿದ ದೊಂಬಿಕೋರರಮೇಲೆ ಪೊಲೀಸರು ಗುಂಡನ್ನು ಹಾರಿಸಬೇಕಾಗಿ ಬಂದಿತು. ಇಲ್ಲಿ 80 ಮಂದಿ ಸೆರೆಹಿಡಿಯಲ್ಪಟ್ಟರು. ಇವರಲ್ಲಿ ಬಹುಮಂದಿ ಮಹಮ್ಮದಿಯ ಮೌಲ್ವಿಗಳು. ಗುಂಡಿನೇಟಿನಿಂದ ಎಷ್ಟು ಜನರು ಸತ್ತರೆಂಬುದು ಇನ್ನೂ ಗೊತ್ತಿಲ್ಲ. ಭಾನುವಾರದಿಂದ ಈವರೆಗೆ 77 ಮಂದಿ ಸತ್ತಿರುವರು.

ದಂಗೆಯವರು ಬೆಂಕಿಯನ್ನು ಹಾರಿಸುವ ಯಂತ್ರದಮೇಲೆ ಬಿದ್ದುದು.

ಪರೇಲು ಮಿಲ್ಲು ಪ್ರದೇಶದಲ್ಲಿ ಜನರು ಕ್ರೋಧಾವಿಷ್ಟರಾಗಿರುತ್ತಾರೆ. ಗುಂಡೇಟಿನಿಂದ 14 ಜನರು ಎಡ್ವರ್ಡ್ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ರಾತ್ರಿ ಹಿಂದುಗಳಿಗೂ ಮಹಮ್ಮದೀಯರಿಗೂ ಲಾಲ್‌ಬಾಗ್ ಮಸೀದಿಯ ಹತ್ತಿರ ಬಡಿದಾಟವಾಯಿತು. ಬೀದಿಯಲ್ಲಿ ಸೀಸೆಗಳೂ, ಕಲ್ಲುಗಳೂ ರಾಶಿರಾಶಿಯಾಗಿ ಬಿದ್ದಿದ್ದುವು. ಸೈನಿಕರು ಬಂದು ಸಮಾಧಾನ ಮಾಡಿದರು. ಫೈದೋಣಿಯಲ್ಲಿ ಬೆಂಕಿಯಿಂದ ಹೊತ್ತಿಕೊಂಡ ಮನೆಗಳನ್ನು ಆರಿಸಲು ತೆಗೆದುಕೊಂಡು ಹೋಗಲ್ಪಟ್ಟ ಯಂತ್ರದ ಮೇಲೆ ಜನರು ಬಿದ್ದು ಅದನ್ನು ನಾಶಪಡಿಸಲೆತ್ನಿಸುವಷ್ಟರಲ್ಲಿ ಸೈನಿಕರು ಬಂದು ಗುಂಡನ್ನು ಹಾರಿಸಲು ದೊಂಬಿಯು ಚದರಿತು. ಮಧ್ಯಾಹ್ನ 3 ಗಂಟೆವರೆಗೂ ಸ್ಥಿತಿಗತಿ ಮಾರ್ಪಡಲಿಲ್ಲವು. ಈ ಪ್ರಾತಃಕಾಲ 33 ಮಿಲ್ಲುಗಳಲ್ಲಿ ಕೆಲಸ ನಡೆಯುತ್ತಿರುವುದಾಗಿ ಸರ್ಕಾರದವರು ಪ್ರಕಟಿಸಿದರು. ಆದರೆ ಕೆಲಸಮಾತ್ರ ಸರಿಯಾಗಿ ನಡೆಯುತ್ತಿರಲಿಲ್ಲ. ಬಂಡಿಯವರೂ, ಮೋಟಾರು ಕಾರುಗಳೂ ಬಾಡಿಗೆಗೆ ಬರುತ್ತಿರಲಿಲ್ಲ. ಅನೇಕ ಅಂಗಡಿಗಳು ಮುಚಲ್ಪಟ್ಟಿದ್ದುವು. ನೆನ್ನೆ ಮಧ್ಯಾಹ್ನದಿಂದ ಈ ದಿನಸ ಮಧ್ಯಾಹ್ನದವರೆಗೆ 35 ಜನರು ಮಡಿದು, 193 ಜನರು ಗಾಯಪಡೆದರು.

ಮೆಜಿಸ್ಟ್ರೇಟರ ಅಪ್ಪಣೆ.

ಐವರಿಗಿಂತ ಹೆಚ್ಚಾಗಿ ಕೋಟೆ ವಿನಾ ಇತರ ಕಡೆಗಳಲ್ಲಿ ಸೇರಕೂಡದೆಂದು ಬೊಂಬಾಯಿ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುವರು. ಇದೂ ಅಲ್ಲದೆ ಬೆಳಗಿನ 6 ಗಂಟೆಯಿಂದ ಸಾಯಂಕಾಲ 7 ಗಂಟೆವರೆಗೆ ಅಂಗಡಿಬೀದಿಗಳಲ್ಲಿ ಸೋಮಾರಿಗಳಾಗಿ ತಿರುಗಾಡಗೊಡಬಾರದೆಂದು ಅಪ್ಪಣೆಯಾಗಿರುವುದು. ಹಿಂದುಗಳೂ ಮಹಮ್ಮದೀಯರೂ ಒಂದುಕಡೆ ಹೊಡೆದಾಡುತ್ತಿದ್ದುದರಿಂದ ಸೈನಿಕರು ಗುಂಡನ್ನು ಹಾರಿಸಬೇಕಾಗಿ ಬಂದಿತು. ಇದರಿಂದ ನಾಲ್ವರು ಸತ್ತು ಅನೇಕರು ಗಾಯಪಡೆದರು ಮತ್ತು 13 ಹಿಂದುಗಳು ಸೆರೆಹಿಡಿಯಲ್ಪಟ್ಟರು. ತನ್ನ ಕರ್ತವ್ಯವನ್ನು ನೆರವೇರಿಸುವಲ್ಲಿ ಸತ್ತುಹೋದ ಸಬ್‌ಇನ್‌ಸ್ಪೆಕ್ಟರ್ ಪ್ರಿಸ್ಟ್ಲಿಯವರ ತಾಯಿಗೆ ಬೊಂಬಾಯಿ ಗೌರ್ನರು ಸಾನುಭೂತಿ ಲೇಖವನ್ನು ಬರೆದರು.

ದೊಂಬಿಯಲ್ಲಿ ಹೊಸಪದ್ಧತಿಯು.

ಈ ದಿವಸ ದಂಗೆಕೋರರು ರೌದ್ರವನ್ನು ತೋರಿಸುವಲ್ಲಿ ಹೊಸಪದ್ಧತಿಯನ್ನು ಅನುಸರಿಸಿದರು. ಮನೆಗಳಿಗೆ ನುಗ್ಗಿ ಸಾಮಾನುಗಳನ್ನು ಹೊರಕ್ಕೆ ತಂದು ರಾಶಿಹಾಕಿ ಬೆಂಕಿಯಿಂದ ಹೊತ್ತಿಸಿ ಸುಟ್ಟುಬಿಟ್ಟರು, ಬೆಂಕಿಯನ್ನು ಆರಿಸಲು ಯಂತ್ರವು 5 ವೇಳೆ ಬರಬೇಕಾಯಿತು.

ದೌರ್ಜನ್ಯವು ಇನ್ನೂ ನಡೆಯುತ್ತಿದೆ.

ಈ ಭೀಭತ್ಸಕಾರ್ಯಗಳಿಂದ ಜನರು ಪ್ರಾಣಭೀತರಾಗಿ ಕಾಲಕಳೆಯುತ್ತಿರುವರು, ಬೀದಿಗಳಲ್ಲಿ ಮನುಷ್ಯ ಕಣ್ಣಿಗೆ ಬಿದ್ದರೇನು ಅಪಾಯ ಸಂಭವಿಸುತ್ತದೋ ಎಂದು ಪ್ರಜೆಗಳು ಚಿಂತಾಕ್ರಾಂತರಾಗಿರುತ್ತಾರೆ. ಈದಿನ ಬೆಳಗ್ಗೆ ಕಾಲ್ಬಾದೇವಿಯಲ್ಲಿ ಹಿಂದುಗಳು ಮಹಮ್ಮದೀಯರನ್ನು ಹೊಡೆದು ಇಬ್ಬರನ್ನು ಕೊಂದರು. ಅಷ್ಟರಲ್ಲಿ ಸೈನಿಕರು ಬಂದು ಗುಂಡನ್ನು ಹಾರಿಸಿದರು. ಆ ನೆರೆಪ್ರದೇಶದಲ್ಲಿ ಕೆಲ ಮಹಮ್ಮದೀಯ ತುಂಟರು ಹಿಂದುಗಳ ಅಂಗಡಿಯೊಂದನ್ನು ಮುತ್ತಲಾಗಿ ಸೈನಿಕರು ಬಂದು ಬಡಿದಾಟವನ್ನು ನಿಲ್ಲಿಸಿದರು. ಇದರಲ್ಲಿ ನಾಲ್ವರು ಸತ್ತು 11 ಜನರು ಗಾಯಪಡೆದರು. ಅಬ್ದುಲ್ ರಹಿಮಾನ್ ಬೀದಿಯಲ್ಲಿ ಒಬ್ಬ ಪಾರಸಿ ಹೊಡೆಯಲ್ಪಟ್ಟನು. ಈ ದಿವಸ ಮಧ್ಯಾಹ್ನ ಜೇಜಿಬಾಯಿ ಆಸ್ಪತ್ರೆಗೆ 40 ಜನ ಏಟುತಿಂದವರು ಸೇರಿಸಲ್ಪಟ್ಟರು.

ಶಾಂತಿಸಂಧಾನ.

ಪ್ರಭುತ್ವದವರ ಆಹ್ವಾನದ ಮೇಲೆ ಅನೇಕ ಆಫೀಸುಗಳೂ, ಕಂಪೆನಿಗಳೂ ತಮ್ಮಲ್ಲಿ ಕೆಲಸಮಾಡುವ ದೊಡ್ಡ ಮನುಷ್ಯರುಗಳನ್ನೂ ಆನರರಿ ಮೆಜಿಸ್ಟ್ರೇಟರುಗಳಾಗಿ ನಿಯೋಜಿಸುಕೊಳ್ಳಲು ಸಮ್ಮತಿಸಿದರು. ಪಾರ್ಸೀ ಮತ್ತು ಸೆಂಟ್‌ಜಾನ್ ಆಂಬ್ಯುಲೆನ್ಸ್ ರವರು ಪೆಟ್ಟನ್ನು ತಿಂದ ಜನರಿಗೆ ಪ್ರಥಮಚಿಕಿತ್ಸೆ ಮಾಡಿ ಆಸ್ಪತ್ರೆಗೆ ಸಾಗಿಸುತ್ತಿರುವರು. ದಂಗೆ ನಡೆಯುವ ಸ್ಥಳಗಳಲ್ಲಿ ಹೆಂಡ ಸಾರಾಯಿ ಅಂಗಡಿಗಳು ಮುಚ್ಚಲ್ಪಡಬೇಕಾಗಿ ಸರ್ಕಾರದಪ್ಪಣೆಯಾಗಿರುತ್ತದೆ. ದೊಣ್ಣೆ ಹಿಡಿಯಕೂಡದೆಂದೂ ಐವರಿಗಿಂತ ಹೆಚ್ಚಾಗಿ ಜನರು ಒಂದುಕಡೆ ಸೇರಕೂಡದೆಂದೂ ಸರ್ಕಾರದವರು ಕಟ್ಟಪ್ಪಣೆಮಾಡಿರುವರು.

ಕೇಂದ್ರಶಾಂತಿ ಸಂಘ.

ಕಲಹ ನಡೆಯುತ್ತಿರುವ ಸ್ಥಳಗಳಿಗೆ ಹೋಗಿ ಶಾಂತಿಬೋಧೆ ಮಾಡಲು ಶಾಂತಿಸೈನಿಕರು ಬೇಕಾಗಿವೆಯೆಂದು ಕೇಂದ್ರ ಶಾಂತಿಸಂಘದವರು ಅಪೇಕ್ಷಿಸಿರುತ್ತಾರೆ. ಈ ದಿವಸ ನಾಗದೇವಿ ಬೀದಿ ಮಹಮ್ಮದೀಯ ಶ್ರೇಣಿಯಲ್ಲಿರುವ ಹಿಂದುಗಳೆಲ್ಲರನ್ನು ಬೇರೊಂದು ಸ್ಥಳಕ್ಕೆ ಸಾಗಿಸುತ್ತಿದ್ದರು.

ತಾ|| 10—ನಾಗದೇವಿ ಬೀದಿಯಲ್ಲಿ ಒಂದು ಟ್ರಾಂ ಬಂಡಿಯು ನಿಲ್ಲಿಸಲ್ಪಡುತ್ತಲೆ ಕತ್ತಿಗಳನ್ನೂ, ದೊಣ್ಣೆಗಳನ್ನು ಧರಿಸಿ 200 ಮಹಮ್ಮದೀಯರು ಬಂಡಿಯನ್ನು ಮುತ್ತಿಕೊಂಡು ಒಳಗಿದ್ದ ಪ್ರಯಾಣಿಕರಲ್ಲಿ ಒಬ್ಬ ಕ್ರೈಸ್ತನೂ, ಇನ್ನೊಬ್ಬ ಪಾರ್ಸಿಯೂ ಕೆಳಗಿಳಿದು ಹೊರಟು ಹೋದ ನಂತರ ಉಳಿದ ಹಿಂದುಗಳ ಮೇಲೆ ಬಿದ್ದು ಚಿತ್ರವಧೆಯನ್ನು ಮಾಡಿದರು. ಬೊಂಬಾಯಿನಲ್ಲಿ ಈ ಗೊಂದಲವಾರಂಭವಾದಂದಿನಿಂದ ಈವರೆಗೆ ಇಂತಹ ದುರಾಗ್ರಹವು ನಡೆದಿರಲಿಲ್ಲ. ಟ್ರಾಂ ಬಂಡಿಯೆಲ್ಲವೂ ರಕ್ತಮಯವಾಗಿದ್ದು ಕಟುಕರ ಅಂಗಡಿಯಂತೆ ತೋರುತ್ತಿದ್ದಿತು. ಸೈನಿಕರು ಬರುವಷ್ಟರಲ್ಲಿ ದಂಗೆಕೋರರು ನೆರೆಸಂದಿಗಳಲ್ಲಿ ನುಗ್ಗಿ ತಲೆತಪ್ಪಿಸಿಕೊಂಡರು. ಏಟು ತಿಂದವರನೇಕರು ಪ್ರಾಣಾಪಾಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಈವರೆಗೆ ಯಾರೂ ಸೆರೆ ಹಿಡಿಯಲ್ಪಟ್ಟಿಲ್ಲ.

ಬೊಂಬಾಯಿನಲ್ಲಿ ಶಾಂತಿಸ್ಥಾಪನೆಗಾಗಿ ಶಾಂತಿ ಸೈನಿಕರು ಸರ್ಕಾರದವರಿಗೆ ಸಹಾಯಕರಾಗಬೇಕೆಂದು ಮೇಯರ್‌ರವರು ಅಪೇಕ್ಷಿಸಿದುದರ ಮೇಲೆ 300 ಯುವಕರು ಸನ್ನದ್ಧರಾಗಿ ಬಂದರು. ಇವರ ಸಹಾಯವನ್ನು ತೆಗೆದುಕೊಳ್ಳಬೇಕೆಂದು ಪೊಲೀಸ್ ಕಮಿಷನರು ತಮ್ಮ ಜನರಿಗೆ ತಿಳಿಸಿರುತ್ತಾರೆ.

ದೇಶಮುಖರ ರಾಯಭಾರವು.

ತಾ|| 10 ರ 12 ಗಂಟೆಯಲ್ಲಿ ಬೊಂಬಾಯಿ ಕಾರ್ಪೊರೇಷನ್ ಅಧ್ಯಕ್ಷರಾದ ದೇಶಮುಖರವರೂ 8 ಮಂದಿ ಇತರ ದೊಡ್ಡ ಮನುಷ್ಯರೂ ಗೌರ್ನರಲ್ಲಿ ರಾಯಭಾರ ಹೋಗಿದ್ದು ಈ ಮುಂದೆ ಹೇಳುವ ಸೂಚನೆಯನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದರು.—(1) ಹೆಂಡದಂಗಡಿಗಳೆಲ್ಲವೂ ಮುಚ್ಚಲ್ಪಡಬೇಕು, (2) ಪೋಕ್ರಿಗಳೆಂದು ಪ್ರಸಿದ್ಧರಾದವರೆಲ್ಲರೂ ಸೆರೆ ಹಿಡಿಯಲ್ಪಡಬೇಕು, (3) ಐವರಿಗಿಂತ ಹೆಚ್ಚಾಗಿ ಜನರು ಒಂದು ಕಡೆ ಸೇರಗೊಡಬಾರದು, (4) ಈಗ್ಗಿಂತಲೂ ಹೆಚ್ಚಾಗಿ ಸೈನಿಕರನ್ನುಪಯೋಗಿಸಿಕೊಳ್ಳಬೇಕು, (5) ಮಸೀದಿಗಳೂ, ದೇವಾಲಯಗಳೂ ಆಯುಧಶಾಲೆಗಳಾದ ಸೈನಿಕರಿಂದ ಸಂರಕ್ಷಿಸಲ್ಪಡಬೇಕು. ಈ ಕೆಲಸ ಒಂದನ್ನು ನೆರವೇರಿಸಲು ಸೈನಿಕರ ಸಹಾಯವು ಸಾಲದೆ ಹೋಗಬಹುದಾದರೂ ಉಳಿದವುಗಳನ್ನೆಲ್ಲ ನೆರವೇರಿಸಲು ಆಲೋಚಿಸುವುವೆಂದು ಗೌರ್ನರು ಉತ್ತರವನ್ನಿತ್ತರು. ತರುವಾಯ ದೇಶಮುಖರು ಗೌರ್ನರನ್ನು ವಂದಿಸಿ, ಈ ಗೊಂದಲವನ್ನು ಅಡಗಿಸುವಲ್ಲಿ ಪುರಜನರೆಲ್ಲರೂ ಪ್ರಭುತ್ವದವರಿಗೆ ನೆರವಾಗುವರೆಂದರು.

ಹಿಂದುಗಳು ಸ್ಮಶಾನಕ್ಕೆ ಹೋಗುವಾಗ್ಗೆ ಮಹಮ್ಮದೀಯರ ಮೇಲೆ ಬಿದ್ದುದು.

ತಾ|| 10 ರ ಬೆಳಗ್ಗೆ ನಗರವು ಶಾಂತವಾಗಿದ್ದಿತು. ಅದರೂ ಅಲ್ಲಲ್ಲಿ ಸಣ್ಣಪುಟ್ಟ ಬಡಿದಾಟವಾಗುತ್ತಲೇ ಇದ್ದಿತು. ಕಾಲ್ಬಾದೇವಿಯ ಪ್ರದೇಶದಲ್ಲಿ ಮಹಮ್ಮದೀಯರು ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಿರುವಾಗ್ಗೆ ಹಿಂದುಗಳು ಅವರಮೇಲೆ ಬಿದ್ದು ಅವರನ್ನು ಹೊಡೆದರು. ಇದರಿಂದ 5 ಮಹಮ್ಮದೀಯರಿಗೆ ಪೂರಾ ಪೆಟ್ಟು ಬಿದ್ದಿತು. ಇನ್ನೂ ಪ್ರಜೆಗಳಲ್ಲಿ ವಿಶ್ವಾಸ ಹುಟ್ಟಿಲ್ಲ. ಒಬ್ಬ ಪಠಾಣನೂ ಒಬ್ಬ ಹಿಂದುವೂ ರಾತ್ರಿಯೇ ಒಂದುಕಡೆ ಕೆಲಸ ಮಾಡುತ್ತಿದ್ದು ಬೆಳಗ್ಗೆ ಹೊರಕ್ಕೆ ಬರುತ್ತಲೆ ಪಠಾಣನು ಹಿಂದುವನ್ನು ಕೊಂದುಬಿಟ್ಟನು.

ಶಾಂತಿ ಸೈನಿಕರಿಗೆ ಬಲವಾದೇಟುಬಿದ್ದಿತು.

ತಾ|| 11 ರಲ್ಲಿ ಹಿಂದುಗಳು ಹಿಂದುಗಳಿರತಕ್ಕ ಸ್ಥಳಗಳಿಗೂ, ಮಹಮ್ಮದೀಯರು ಮಹಮ್ಮದೀಯರ ಸ್ಥಳಗಳಿಗೂ ಹೋಗಬೇಕೆಂದು ಆಜ್ಞೆಯಾಯಿತು. ಅದರಂತೆ ಅತ್ಯುತ್ಸಾಹದಿಂದ ಶಾಂತಿ ಸೈನಿಕರು ಹೊರಟರು. ಕೆಲ ಹಿಂದುಗಳು, ಕೆಲ ಮಹಮ್ಮದೀಯ ಶಾಂತಿ ಸೈನಿಕರ ಸಂಗಡ ಹೋಗುತ್ತಿರುವಾಗ್ಗೆ ಹಿಂದು ದಂಗೆಕೋರರು ಮಹಮ್ಮದೀಯ ಶಾಂತಿಸೈನಿಕರಮೇಲೆ ಬಿದ್ದು ಹೊಡೆದರು. ಅವರಲ್ಲೊಬ್ಬರಿಗೆ ಪ್ರಾಣಾಪಾಯವಾಗಿ ಒಬ್ಬನು ಸತ್ತನು. ಇವರ ಸಹಾಯಾರ್ಥವಾಗಿ ಕಳುಹಲ್ಪಟ್ಟ ಹಿಂದು ಶಾಂತಿಸೈನಿಕರು ಕೂಡ ಚೆನ್ನಾಗಿ ಮರ್ದಿಸಲ್ಪಟ್ಟರು. ಅವರೆಲ್ಲರನ್ನೂ ಹಿಂದಿರುಗಿ ಕರೆಸಿಕೊಂಡು ಬೇರೆ ವಿಧವಾಗಿ ವಿನಿಯೋಗಿಸಲು ಸಂಘದವರು ನಿಶ್ಚಯಿಸಿದರು.

ಜವಾಹಿರಿ ಬೀದಿಯಲ್ಲಿ ಚಿನ್ನದ ಅಂಗಡಿಗಳನ್ನು ಸೂರೆಮಾಡಲು ಹೋಗುತ್ತಿದ್ದ 150 ಜನರನ್ನು ಪೊಲೀಸರು ತಡೆದು ಸೆರೆಹಿಡಿದರು. ಅವರಲ್ಲಿ ಸೂರೆಮಾಡಲ್ಪಟ್ಟ ಪದಾರ್ಥಗಳು ದೊರಕಿದುವು, 5 ಮಂದಿ ಒಂದುಕಡೆ ಸೇರಕೂಡದೆಂದು ಮೆಜಿಸ್ಟ್ರೇಟರು ಮಾಡಿದ ಅಪ್ಪಣೆಯಿಂದ ಬಹಳ ಪ್ರಯೋಜನವಾಯಿತು. ಬೀದಿಗಳಲ್ಲಿ ಮನುಷ್ಯರೇ ಕಾಣಬರುವುದಿಲ್ಲ. ಸೈನಿಕರು ಬೀದಿಗಳಲ್ಲಿ ಕಾವಲಿರುವರು. ಬೀದಿಯಲ್ಲಿ ಮುಲ್ತಾನ್ ದೇಶದವನೊಬ್ಬನು ತುಪಾಕಿಯನ್ನೂ 25 ಗುಂಡುಗಳನ್ನೂ ಹಿಡಿದುಕೊಂಡು ಹೋಗುತ್ತಿರುವಾಗ್ಗೆ ಅವನನ್ನು ಪೊಲೀಸರು ಹಿಡಿದುಕೊಂಡರು. ನೆನ್ನೆಯದಿವಸ 100 ಜನರು ಆಸ್ಪತ್ರೆಗೆ ಸೇರಿಸಲ್ಪಟ್ಟರು. ಈ ದಿವಸ 15 ಮಂದಿ ಮಾತ್ರ ಸೇರಿಸಲ್ಪಟ್ಟಿರುವರು. ಇವರಲ್ಲಿ ಬೊಂಬಾಯಿ ಯುವಜನ ಶಾಂತಿಸಂಘದ ಸೈನಿಕರು ಮೂವರಿರುವರು.

ತಪ್ಪೆಲ್ಲವೂ ಪ್ರಭುತ್ವದವರದೇ.

ಈ ದಿವಸ ಮಧ್ಯಾಹ್ನ 2 ಗಂಟೆಯಲ್ಲಿ ಪ್ರಕಟಿಸಲ್ಪಟ್ಟ ಕೇಂದ್ರಶಾಂತಿ ಸಂಘದವರ ಪ್ರಸಿದ್ಧ ಪತ್ರಿಕೆಯು ಬಡಿದಾಟವು ಪುನಃ ಪ್ರಾರಂಭವಾಗಲು ಅಧಿಕಾರಿಗಳ ಅಪ್ರಯೋಜಕತೆಯೇ ಕಾರಣವೆಂದು ತಿಳಿಸುತ್ತದೆ. ಕೇಂದ್ರ ಶಾಂತಿ ಸಂಘದವರ ಸೂಚನೆಯನ್ನು ಅಂಗೀಕರಿಸಿ ದೊಣ್ಣೆ ಕತ್ತಿ ಮೊದಲಾದ ಆಯುಧಗಳನ್ನು ಧರಿಸಿದವರನ್ನು ಸೆರೆ ಹಿಡಿದಿದ್ದರೆ, ಹೆಂಡದಂಗಡಿಗಳನ್ನು ಮುಚ್ಚಿಸಿದ್ದರೆ, ಬೀದಿಗಳಲ್ಲೂ ಸಂದಿಗಳಲ್ಲೂ ಸೈನಿಕರನ್ನು ಕಾವಲಿಟ್ಟಿದ್ದರೆ ಬಡಿದಾಟವು ಪುನಃ ನಡೆಯುತ್ತಿರಲಿಲ್ಲ, ಪ್ರಭುತ್ವದವರ ವಶದಲ್ಲಿ ಸಾಕಾದಷ್ಟು ಸೇನೆಯಿದ್ದಿತಾದರೂ ಅವೆಲ್ಲವನ್ನೂ ಕ್ರಮವಾಗಿ ವಿನಿಯೋಗಿಸದಿದ್ದುದು ಅವರ ಲೋಪವೆಂದು ಶಾಂತಿ ಸಂಘದ ಪ್ರಕಟನೆಯಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

ತಾ|| 11 ರ ಮಧ್ಯಾಹ್ನದವರೆಗೆ 113 ಮಂದಿ ಸತ್ತರು; 759 ಮಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲ್ಪಟ್ಟಿತು ಎಂದು ಈ ಸಾಯಂಕಾಲ ಬೊಂಬಾಯಿ ಸರ್ಕಾರದವರು ಪ್ರಕಟಿಸಿದರು. ಮೌಲಾನಾ ಮಹಮ್ಮದಾಲಿಯವರು ತಾ|| 10 ರಲ್ಲಿ ಬೊಂಬಾಯಿನಿಂದ ದಿಲ್ಲಿಗೆ ಪ್ರಯಾಣಮಾಡಿದರು.

104 ಜನಗಳಿಗೆ ರಿಮಾಂಡು.

ಕಳೆದ ಶನಿವಾರ ಭಾನುವಾರಗಳಲ್ಲಿ ನಡೆದ ಕಲಹ ಸಂದರ್ಭದಲ್ಲಿ ಪೊಲೀಸರಿಂದ ಸೆರೆಹಿಡಿಯಲ್ಪಟ್ಟ 104 ಜನರು ತಾ|| 11 ರ ಮಧ್ಯಾಹ್ನ 2-25 ಗಂಟೆಯಲ್ಲಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ ಬರಮಾಡಲ್ಪಟ್ಟು ರಿಮಾಂಡು ಮಾಡಲ್ಪಟ್ಟರು.

ಕೂಲಿಕಾರರು ಬೊಂಬಾಯಿ ಬಿಟ್ಟು ಹೊರಟರು.

ತಾ|| 11 ರ ಮಧ್ಯಾಹ್ನ 1 ಗಂಟೆ ವರೆಗೆ ಮೂರು ಸ್ಪೆಷಲ್ ಟ್ರೇನುಗಳಲ್ಲಿ 8000 ಮಂದಿ ಕೂಲಿಕಾರರು ಬೊಂಬಾಯಿಯನ್ನು ಬಿಟ್ಟು ಹೊರಟುಹೋದರು. ನಿತ್ಯಕಟ್ಟಳೆ ಟ್ರೇನುಗಳಲ್ಲೂ ಕೂಲಿಕಾರರು ಹೋಗುತ್ತಿರುವರು. ರೈಲ್ವೆಯವರು ಮತ್ತೆರಡು ಸ್ಪೆಷಲ್ ಟ್ರೇನುಗಳನ್ನು ಬಿಡಲೇರ್ಪಡಿಸಿದರು.

ಗವರ್ನರವರು ನಗರದಲ್ಲಿ ಸಂಚರಿಸಿದುದು.

ತಾ|| 11 ರ ಬೆಳಗ್ಗೆ ಅಧಿಕಾರಿಗಳೊಡನೆ ಕಲಹನಡೆದ ಬೀದಿಗಳಲ್ಲಿ ಸಂಚರಿಸಿಕೊಂಡು ಬಂದರು.

ಹೊಸ ಕಾರಾಗೃಹ.

ಮಾಮೂಲು ಕಾರಾಗೃಹವು ಸಾಲದೆ ಹೋದುದರಿಂದ ವಾರ್ಲಿಯಲ್ಲಿ ನಗರಾಭಿವೃದ್ಧಿ ಸಂಘದವರು ಕಟ್ಟಿಸಿರುವ ಕಟ್ಟಡವು ತಾತ್ಕಾಲಿಕ ಕಾರಾಗೃಹವಾಗಿ ಮಾಡಲ್ಪಟ್ಟಿರುತ್ತದೆ.

ಹೈಕೋರ್ಟು ಮೊದಲಾದವುಗಳು ಮುಚ್ಚಲ್ಪಟ್ಟಿರುವುವು.

ಹೈಕೋರ್ಟನ್ನು ಮಧ್ಯಾಹ್ನದಮೇಲೆ ಮುಚ್ಚಬೇಕೆಂದು ಲಾಯರುಗಳು ಚೀಫ್ ಜಡ್ಜಿಯವರನ್ನು ಕೋರಿದರು. ಷೇರುಬಜಾರು 2 ದಿವಸಗಳವರೆಗೆ ಮುಚ್ಚಲ್ಪಟ್ಟಿತು. ಸರಾಫ್ ಸಂಘದವರು ಹುಂಡಿ ಅಂಗಡಿಗಳನ್ನು ಮುಚ್ಚಿಸಿಬಿಟ್ಟರು. ಧಾನ್ಯದ ಮಾರ್ಕೆಟ್ಟು ಸಹ ಮುಚ್ಚಲ್ಪಟ್ಟಿತು. ಕೂಲಿಗಾರರಿಲ್ಲದಿರುವುದರಿಂದ ರೈಲ್ವೆ ಸ್ಟೇಷನ್ನುಗಳಲ್ಲಿಯೂ ಸಮುದ್ರ ರೇವೆಯಲ್ಲೂ ಸರಕುಗಳು ಏರಳಿತವಿಲ್ಲದೆ ನಿಂತುಹೋಗಿವೆ. ಪಾಠಶಾಲೆಗಳು ಮುಚ್ಚಲ್ಪಟ್ಟಿವೆ. ಅನೇಕ ಉದ್ಯೋಗಸ್ಥರುಗಳು ಕಚೇರಿಗಳಿಗೆ ಹೋಗುತ್ತಿಲ್ಲ.

ಬಡದಾಟದಿಂದಾಗಿರುವ ನಷ್ಟ.

ಬೀದಿ ಗುಡಿಸುವವರು ಪ್ರಾಣಭೀತಿಯಿಂದ ಮನೆಬಿಟ್ಟು ಹೊರಗೆ ಬರುತ್ತಿಲ್ಲವಾದುದರಿಂದ, ಬೀದಿಗಳಲ್ಲಿ ಕಸಕಡ್ಡಿಗಳು ರಾಶಿರಾಶಿಯಾಗಿ ಬಿದ್ದಿರುವುವು. ಧಾನ್ಯ ಕಾಯಿಪಲ್ಯ ಮೊದಲಾದ ಪದಾರ್ಥಗಳ ಬೆಲೆಯೇರಿಹೋಗಿದೆ. ನಗರದ ದೊಡ್ಡ ಮಾರ್ಕೆಟ್ಟು ಬೈಕಲ್ಲಾದಲ್ಲೇ ಇರುವುದು. ಅಲ್ಲೇ ಮೊದಲಿನಿಂದಲೂ ಕಲಹ ನಡೆಯುತ್ತಿರುವುದು. ಪ್ರತಿದಿನವೂ ಎರಡು ಟ್ರೇನುಗಳು ಹೋಗುತ್ತಿದ್ದುವು. ಶುಕ್ರವಾರ ಒಂದು ಟ್ರೇನು ಮಾತ್ರ ಹೊರಟಿತು. ಶನಿವಾರ ಒಂದೂ ಹೊರಡಲಿಲ್ಲ. ತಾ|| 10 ರಿಂದ ಬೊಂಬಾಯಿಗೆ ಆಹಾರಪದಾರ್ಥಗಳು ಬರುತ್ತಿಲ್ಲ.

ಸ್ಪೆಷಲು ಸ್ಟೀಮರು.

ಊರನ್ನು ಬಿಟ್ಟು ಹೋಗುವವರ ಸಂಖ್ಯೆಯು ಬಹಳ ಹೆಚ್ಚಿದುದರಿಂದ ರೈಲುಬಂಡಿಗಳು ಸಾಕಾಗದೆ ಸ್ಪೆಷಲ್ ಸ್ಟೀಮರುಗಳನ್ನು ಬಿಡಲು ತಾ|| 12 ರಿಂದ ಏರ್ಪಾಟಾಗಿರುವುದು.

ಸೆರೆಹಿಡಿಯಲ್ಪಟ್ಟಿರುವರು.

ತಾ|| 12 ರಲ್ಲಿ 144 ಜನರು ಸೆರೆಹಿಡಿಯಲ್ಪಟ್ಟರು. ಅಪಾಯಕರವಾದ ಆಯುಧವನ್ನು ಹಿಡಿದಿದ್ದ 50 ಮಂದಿ ಕರ್ಮಗಾರರು ಕಾಲಾಚೌಕಿ ಪ್ರದೇಶದಲ್ಲಿ ತಾ|| 11 ರಲ್ಲಿ ಪೊಲೀಸಿನವರಿಂದ ಸೆರೆಹಿಡಿಯಲ್ಪಟ್ಟರು. ಅಲ್ಲಿ ಪೊಲೀಸಿನವರು ಜನರನ್ನು ಪರೀಕ್ಷಿಸುತ್ತಿರುವಾಗ್ಗೆ ಮನೆಯ ಮಾಳಿಗೆಯಿಂದ ಯಾರೋ ಕಲ್ಲುಸಹಿತ ಹಾಳೆಯನ್ನು ಬಿಸಾಡಲು ಅದು ಒಬ್ಬ ಸೋಲ್ಜರಿಗೆ ತಗಲಿ ಗಾಯಮಾಡಿತು.

ವಾಲಂಟೀರನ್ನು ಹೊಡೆದುದು.

ತಾ|| 10 ರಲ್ಲಿ ಶಾಂತಿಸಂಘದವರಿಂದ ಹಾಜೀ ಅಲಿಯವರ ನಾಯಕತ್ವದಲ್ಲಿ ಕಳುಹಲ್ಪಟ್ಟ ಮ್ಯುನಿಸಿಪಲ್ ವಾಲಂಟಿಯರುಗಳಾದ ಹಿಂದು ಮಹಮ್ಮದೀಯ ಯುವಕರುಗಳು ಫ್ರಾನ್ಸ್‌ವಾಡಿಗೆ ಬಂದಕೂಡಲೆ ಅಲ್ಲಿದ್ದ ಒಂದು ಹಿಂದು ಗುಂಪಿನವರು ವಾಲಂಟೀರನ್ನು ಗುರ್ತಿಸಲಾಗದೆ ಅವರನ್ನು ಹೊಡೆದರು. ಮಹಮ್ಮದ್ ಹಾಜಿ (ವಿದ್ಯಾರ್ಥಿ) ಅಬ್ದುಲ್ ರಹಮಾನ್ ಹಾಜೀಬುದಾ, ಅಲೀ ಮಹಮದ್ ಈ ಮೂವರ ತಲೆಯೊಡೆದುಹೋಗಿ ಅವರು ಆಸ್ಪತ್ರೆಯಲ್ಲಿ ಸತ್ತುಹೋದರು. ಅದಕ್ಕಾಗಿ ಶಾಂತಿಸಂಘದವರು ವಾಲಂಟೀರು ಸಂಘದವರೂ ತಾ|| 14 ರಲ್ಲಿ ಸಭೆಸೇರಿ ಸಾನುಭೂತಿಯನ್ನು ಪ್ರದರ್ಶಿಸಿದರು. ಮರಣವಿಚಾರಣೆಯು ತಾ|| 11 ರಲ್ಲಿ ನಡೆಯಿತು.

ಪರಸ್ಪರ ಸಹಾಯ.

ಈ ಸ್ಥಿತಿಯಲ್ಲು ಕೂಡ ಹಿಂದುಗಳು ಮಹಮ್ಮದೀಯರನ್ನೂ ಮಹಮ್ಮದೀಯರು ಹಿಂದುಗಳನ್ನೂ ರಕ್ಷಿಸುತ್ತಿದ್ದುದು ಆನಂದದಾಯಕವಾಗಿದೆ. ಮಹಮ್ಮದೀಯರ ಪೇಟೆಗಳಲ್ಲಿದ್ದ ಹಿಂದುಗಳನ್ನು ಸುರಕ್ಷಿತಸ್ಥಾನಗಳಿಗೆ ಕಳುಹಿಸಲು ಪೊಲೀಸಿನವರು ತಾ|| 11 ರಲ್ಲಿ ಪ್ರಯತ್ನಿಸುತ್ತಿರುವಾಗ್ಗೆ ಪಠಾಣರು ವಾಸಿಸುತ್ತಿರುವ ಒಂದು ಬೀದಿಯಲ್ಲಿ 5 ಮಂದಿ ಹಿಂದು ಮೋಚಿಯವರು ಗೋಚರಿಸಿದರು. ಬಡಿದಾಟವಾರಂಭವಾದಾರಭ್ಯ ಅವರುಗಳು ಒಬ್ಬ ಪಠಾಣನ ಮನೆಯ ಮಹಡಿಯಮೇಲಿದ್ದರು. ಅವರ ಹೆಂಗುಸರು ಪ್ರತಿದಿನ ಬೆಳಗ್ಗೆ ಬಂದು ಆ ಮನೆ ಯಜಮಾನನಾದ ಪಠಾಣನಿಗೆ ರೂಪಾಯಿ ಕೊಟ್ಟು ಅವನಮೂಲಕ ಆಹಾರಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದುದು ಪೊಲೀಸಿನವರಿಗೆ ತಿಳಿಯಬಂದಿತು.

ದೌರ್ಜನ್ಯವು.

ಈಗಲೂ ಹೊಡದಾಟವೂ ಕೊಲೆಯೂ ಸುಲಿಗೆಯೂ ನಡೆಯುತ್ತಲೇ ಇವೆ. ತಾ|| 11 ರ ಸಾಯಂಕಾಲ 4 ಗಂಟೆಗೆ ಒಂದು ಹಿಂದುಗಳ ಗುಂಪು ಪರೇಲಿನ ವೆಲಸ್ಲಿ ರೋಡಿನಲ್ಲಿರುವ ಮಸೀದಿಯ ಮೇಲೆ ಕಲ್ಲುಗಳನ್ನೆಸೆಯುತ್ತಿರುವಾಗ್ಗೆ ಸೈನಿಕರು ಬಂದು ಅವರನ್ನು ಚದರಿಸಿ ಓಡಿಸಿದರು. ಡೋಗ್ರಿ ಹತ್ತಿರ ಒಂದು ಸಂದಿನಲ್ಲಿ ಒಬ್ಬ ಪಠಾಣನು ಕತ್ತಿಹಿಡಿದುಕೊಂಡು ಹಿಂದುಗಳ ಮೇಲೆ ಬಿದ್ದು ಸೈನಿಕರು ಬರಲಾಗಿ ಓಡಿಹೋದನು. ಭಾನುವಾರ 11 ಮಂದಿ ಸತ್ತರೆಂದೂ, 47 ಮಂದಿ ಗಾಯಪಡೆದರೆಂದೂ, ತಾ|| 4 ರಿಂದ ತಾ|| 11 ರ ಮಧ್ಯಾಹ್ನದವರೆಗೆ ಒಟ್ಟು 123 ಮಂದಿ ಸತ್ತರೆಂದೂ 759 ಮಂದಿ ಪೆಟ್ಟು ತಿಂದರೆಂದೂ ಸರ್ಕಾರದವರು ಪ್ರಕಟಿಸಿರುತ್ತಾರೆ. ತಾ|| 11 ರಲ್ಲಿ 40 ಅನಾಥ ಪ್ರೇತಗಳು ಧರ್ಮಿಷ್ಠರ ಸಹಾಯದಿಂದ ದಹನ ಮಾಡಲ್ಪಟ್ಟುವು.

ತಾ|| 11 ನೇ ಸೋಮವಾರ 5 ಮಂದಿ ಸತ್ತರು ಮತ್ತು 30 ಜನರು ಗಾಯಪಡೆದರು. ರೇಸ್‌ಕೋರ್ಸಿನಲ್ಲಿ ಬಹಳ ಜನರು ಮೂವರು ಪಠಾಣರನ್ನು ಪ್ರಹರಿಸಲಾಗಿ ಒಬ್ಬನು ಸತ್ತುಹೋದನು. ತಾ|| 11 ರಲ್ಲಿ ಆಸ್ಪತ್ರೆಗೆ ಸೇರಿಸಲ್ಪಟ್ಟವರಲ್ಲಿ ಬಹಳಮಂದಿ ಹಿಂದುಗಳೂ ಮೂವರು ಮಾತ್ರ ಮಹಮ್ಮದೀಯರೂ ಇದ್ದರು. ಅವರ ತಲೆಗೆ ಕತ್ತಿಯೇಟು ಬಿದ್ದಿದ್ದಿತು. ಒಬ್ಬ ಹಿಂದು ಕೂಲಿಯು ಯಾವುದೋ ಕೆಲಸದ ಮೇಲೆ ಜೆ. ಜೆ. ಆಸ್ಪತ್ರೆಗೆ ಹೋದನು. ಕೊಂಚಹೊತ್ತಿನಲ್ಲಿ ಅವನ ಶವವು ರಕ್ತಮಯವಾಗಿ ಬಿದ್ದಿದ್ದಿತು. ಅದನ್ನು ನೋಡಿ ಕಾವಲಿದ್ದ ಸೋಲ್ಜರನು ಮೂರ್ಛಿತನಾಗಿ ಆಸ್ಪತ್ರೆಯುಪಚಾರದಲ್ಲಿರುವನು. ಯಾರು ಕೊಂದರೋ ತಿಳಿಯಲಿಲ್ಲ. ಗಿರ್ಗಾಮಿನ ಅನೇಕಕಡೆ ತಾ|| 11 ರಲ್ಲಿ ಕಲ್ಲುಗಳೆಸೆಯಲ್ಪಟ್ಟುವಾಗಿ ತಿಳಿಯಬಂದಿದೆ.

ಸೈನಿಕಶಾಸನ.

“ಸೇನೆಯೂ ಪೊಲೀಸುದಳವೂ ಇಷ್ಟು ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾಗ್ಯೂ ಶಾಂತಿಯುಂಟಾಗಲಿಲ್ಲವಾಗಿ ಸೈನಿಕಶಾಸನವನ್ನು ಕೂಡಲೆ ಆಚರಣೆಗೆ ತರುವುದರವಿನಾ ಬೇರೊಂದುಪಾಯವಿಲ್ಲವು. ಇನ್ನು ಆಲಸ್ಯಮಾಡಿದಲ್ಲಿ ಪ್ರಮಾದವು ಹೆಚ್ಚಾಗುವುದೆಂದು ನಗರವಾಸಿಗಳು ಭಯಪಡುತ್ತಿದ್ದಾರೆ. ಸರ್ಕಾರದವರು ಪ್ರಜೆಗಳ ಪ್ರಾಣರಕ್ಷಣೆ ಮಾಡಲಾರರಾದುದರಿಂದ ಸೈನಿಕ ಶಾಸನವನ್ನು ಜಾರಿಗೆ ತರುವುದು ಅತ್ಯವಸರವು” ಎಂದು ಬೊಂಬಾಯಿನ ಟೈಂಸ್ ಪತ್ರಿಕೆಯು ಬರೆದಿರುತ್ತದೆ.

ಪ್ರಭುತ್ವ ಪ್ರಚುರಣ ಶಾಖಾಧಿಕಾರಿ ಪ್ರಕಟನೆ.

ತಾ|| 12 ನೆಯ ಮಂಗಳವಾರ ನಗರದ ಪರಿಸ್ಥಿತಿಯು ಬಹಳ ಅನುಕೂಲವಾಗಿ ಕಂಡುಬರುತ್ತದೆ. ಈವರೆಗೆ ಬಡಿದಾಟವು ಹೆಚ್ಚಾಗಿ ನಡೆಯುತ್ತಿದ್ದ ನಲ್‌ಬಜಾರ್, ಬೆಂಡಿಬಜಾರ್ ಮೊದಲಾದ ಸ್ಥಳಗಳಲ್ಲಿ ಅನೇಕ ಅಂಗಡಿಗಳು ತೆರೆಯಲ್ಪಟ್ಟಿರುವುವು. ಜನರು ಮೊದಲಿನಂತೆ ವಿಶೇಷವಾಗಿ ಬೀದಿಗಳಲ್ಲಿ ತಿರುಗಾಡಲಾರಂಭಿಸಿರುವರು. ಈ ದಿವಸ ಬೊಂಬಾಯಿಯಲ್ಲಿರತಕ್ಕ ಮಿಲ್ಲುಗಳಲ್ಲಿ ಸುಮಾರು 58 ಮಿಲ್ಲುಗಳೂ ರೈಲ್ವೆ ವರ್ಕ್‌ಷಾಪೂ ತೆರೆಯಲ್ಪಟ್ಟು ಕೆಲಸ ನಡೆಸುತ್ತಿರುವುವು. ತುಂಟರು ಇನ್ನೂ ಸೆರೆಹಿಡಿಯಲ್ಪಡುತ್ತಲೇ ಇರುವರು. ಈ ದಿವಸ ಕಂದರುವಾಡಾ, ನಲ್‌ಬಜಾರ್ ನಾರ್ತ್‌ಬ್ರೂಕು ಮೊದಲಾದ ಸ್ಥಳಗಳಲ್ಲಿ 48 ಮಂದಿ ಸೆರೆಹಿಡಿಯಲ್ಪಟ್ಟರು. ಈ ಹೊತ್ತಿನವರೆಗೆ ಒಟ್ಟು 495 ಮಂದಿ ಸೆರೆಹಿಡಿಯಲ್ಪಟ್ಟು ತಾತ್ಕಾಲಿಕವಾಗೇರ್ಪಡಿಸಲ್ಪಟ್ಟಿರುವ ಕಾರಾಗೃಹದಲ್ಲಿಡಲ್ಪಟ್ಟಿರುತ್ತಾರೆ. ತಾ|| 11 ರ ಮಧ್ಯಾಹ್ನ 12 ಗಂಟೆಯಿಂದ ತಾ|| 12 ರ ಮಧ್ಯಾಹ್ನ 1 ಗಂಟೆಯವರೆಗೆ ಮೂವರು ಸತ್ತರು; 24 ಮಂದಿ ಪೆಟ್ಟು ತಿಂದರು. ಈ ಫೆಬ್ರವರಿ ತಾ|| 4 ರಿಂದ ತಾ|| 12 ರ ಮಧ್ಯಾಹ್ನದವರೆಗೆ 137 ಜನರು ಹತರಾದರು ಮತ್ತು 783 ಜನರಿಗೆ ಗಾಯಗಳಾಗಿರುವುದು” ಎಂದು ಬೊಂಬಾಯಿನ ಪ್ರಚುರಣ ಶಾಖಾಧಿಕಾರಿಗಳು ಪ್ರಕಟಿಸಿರುವರು.

ಮರಣ ವಿಚಾರಣೆ.

ಕಳೆದ ತಾ|| 12 ರಲ್ಲಿ 6 ಶವಗಳನ್ನು ಕುರಿತು ಮಾತ್ರ ವಿಚಾರಣೆ ನಡೆದಿತು. ಆ ಶವಗಳಲ್ಲಿ ಮೂರು ಪಠಾಣರ ಶವಗಳೂ, ಒಂದು ಮಹಮ್ಮದೀಯನ ಶವವೂ ಮತ್ತೊಂದು ಹಿಂದು ಶವವೂ ಆಗಿದ್ದುವು.

ರಂಜಾನ್ ತಿಂಗಳು.

ಮಹಮ್ಮದೀಯರಿಗೆ ರಂಜಾನ್ ತಿಂಗಳು ತಾ|| 12 ರಲ್ಲೇ ಪ್ರಾರಂಭವಾದುದರಿಂದ ಅವರು ಮಸೀದಿಗಳಲ್ಲಿ ಪ್ರಾರ್ಥನೆಯನ್ನು ಮಾಡಲು ಸರ್ಕಾರದವರು ಪ್ರತ್ಯೇಕವಾಗಿ ಅನುಮತಿಯನ್ನು ಕೊಟ್ಟಿರುವರು. ರಾತ್ರಿಯಾದಮೇಲೆ ಯಾರೂ ಬೀದಿಗೆ ಬರಕೂಡದೆಂದು ಮಾಡಲ್ಪಟ್ಟಿರುವ ಆಜ್ಞೆಯು ನಿಜವಾಗಿ ಪ್ರಾರ್ಥನೆಗೆ ಹೋಗತಕ್ಕ ಮಹಮ್ಮದೀಯರಿಗೆ ಅನ್ವಯಿಸುವುದಿಲ್ಲವೆಂದು ಸರ್ಕಾರದ ಪ್ರಕಟನೆಯಾಗಿದೆ. ಮಹಮ್ಮದೀಯರು ಮಸೀದಿಗಳಲ್ಲಿ ಪ್ರಾರ್ಥನೆಮಾಡುವಾಗ್ಗೆ ಅವರಿಗೆ ಯಾವ ಅಪಾಯವೂ ಸಂಭವಿಸದಿರಲು ಎಲ್ಲಾ ಮಸೀದಿಗಳ ಬಳಿ ಸೈನಿಕರ ಕಾವಲಿಡಲ್ಪಟ್ಟಿರುವುದು.

ಪ್ರಜಾ ಸೇವಕರಿಗೆ ರಕ್ಷಣೆ.

“ನಿರಾಧಾರವಾಗಿರುವವರಿಗೆ ಆಹಾರಪದಾರ್ಥಗಳನ್ನು ಮೋಟಾರು ಲಾರಿಗಳಮೇಲೆ ಕಳುಹಿಸಿಕೊಡುತ್ತೇವೆ. ಆ ಲಾರಿ ನಡೆಸುವವರನ್ನು ದಂಗೆಯವರು ಬಾಧೆಪಡಿಸದಂತೆ ಸೈನಿಕರ ಸಹಾಯ ಕೊಡಲ್ಪಡಬೇಕು” ಎಂದು [illegible]ಯವರೇ ಮೊದಲಾಗಿ ಮಹಿಳೆಯರು ಬೊಂಬಾಯಿನ ಮುಖ್ಯ ಸೇನಾಧಿಪತಿಯವರಲ್ಲಿಗೆ ಹೋಗಿ ವಿನಂತಿ ಮಾಡಿಕೊಂಡರು. ಸೇನಾಧಿಪತಿಯವರು ಅದಕ್ಕೆ ಏರ್ಪಾಟನ್ನು ಮಾಡಿದರು. ತಾ|| 14 ನೇ ಬೃಹಸ್ಪತಿವಾರದಿಂದ ಯಾರಿಗೂ ಯಾವ ವಿಧವಾದ ಪ್ರಮಾದವುಂಟಾಗಿಲ್ಲವೆಂದು ಸೇನಾನಿಯು ಆ ಮಹಿಳೆಯರಿಗೆ ತಿಳಿಸಿದರು.

ಊರನ್ನು ಬಿಟ್ಟು ಹೋಗುವುದು.

ಕೂಲಿಗಾರರೂ ಭಯವಿಹ್ವಲರಾದ ಇತರರೂ ಸಾವಿರಾರುಗಟ್ಟಲೆ ಊರನ್ನು ಬಿಟ್ಟು ಹೋಗುತ್ತಿರುವರು. ಹೆಚ್ಚುಕಟ್ಟಲೆಯ ರೈಲುಗಳೂ, ಸ್ಟೀಮರುಗಳೂ ಬಿಡಲ್ಪಡುತ್ತಿದ್ದಾಗ್ಯೂ ಸಾಕಾಗದೆ ಇದೆ. ದಂಗೆಯಾರಂಭವಾದಾಗಿನಿಂದ ತಾ|| 12 ರ ವರೆಗೆ 20000 ಮಂದಿ ಕೂಲಿಕಾರರು ಮೊದಲಾದವರು ಬೊಂಬಾಯಿಯನ್ನು ಬಿಟ್ಟು ಹೊರಕ್ಕೆ ಹೋಗಿರುವರು. ಇನ್ನೂ ಸಾವಿರಾರುಮಂದಿ ಹೋಗಲು ರೈಲಿನಲ್ಲೂ ಸ್ಟೀಮರಿನಲ್ಲೂ ಜಾಗ ಸಿಕ್ಕದೆ ಕಾದುಕೊಂಡಿರುತ್ತಾರೆ. ತಾ|| 12 ರಲ್ಲಿ 3 ಹೆಚ್ಚುಕಟ್ಟಲೆಯ ಟ್ರೇನುಗಳಲ್ಲಿ 8000 ಜನರು ಹೊರಟುಹೋದರು.

ಶಾಂತಿಸಂಘದವರೂ-ವಾಲಂಟೀರುಗಳೂ.

ತಾ|| 12 ರಲ್ಲಿ ಶಾಂತಿಸಂಘದವರೂ ವಾಲಂಟೀರುಗಳೂ ಬೆಳಗ್ಗೆ ಸಾಯಂಕಾಲ ಕಲಹನಡೆಯುತ್ತಿರುವ ಸ್ಥಳಗಳಿಗೆ ಹೋಗಿ ಶಾಂತಿಯಿಂದ ಪ್ರಜೆಗಳಿಗೆ ಬೋಧಿಸಿ ಹೊಡೆದಾಟ ಮೊದಲಾದ ದೌರ್ಜನ್ಯಗಳು ಜರುಗದಂತೆ ಮಾಡುತ್ತಿರುವರು. ಎಲ್ಲಿಯಾದರೂ ದೊಂಬಿನಡೆಯುತ್ತಿದೆಯೆಂದು ಅವರಿಗೆ ತಿಳಿದುಬಂದ ಕೂಡಲೇ ಅವರು ಅಲ್ಲಿಗೆ ಹೋಗಿ ಬೋಧಿಸುತ್ತಿರುವರು. ಈ ವರೆಗೆ 1789 ಮಂದಿ ವಾಲಂಟೀರುಗಳಾಗಿ ಸೇರಿರುತ್ತಾರೆ. ಫ್ರಾನ್ಸ್‌ವಾಡಿಯಲ್ಲಿ ಯಾರೋ ಹಿಂದುಗಳು ವಾಲಂಟಿಯರನ್ನು ಹೊಡೆದುದಕ್ಕಾಗಿ ಬಹಳ ಚಿಂತಿಸುತ್ತೇವೆಂದು ಹಿಂದು ಪ್ರಮುಖರು ಪ್ರಧಾನಶಾಂತಿಸಂಘದವರಿಗೆ ಲೇಖವನ್ನು ಬರೆದು ತಿಳಿಸಿರುವರು. ಧಾನ್ಯ ಮತ್ತು ಕಾಯಿಪಲ್ಯಗಳ ಬೆಲೆಯನ್ನು ಹೆಚ್ಚಿಸಕೂಡದೆಂದು ಶಾಂತಿಸಂಘದವರು ವರ್ತಕರನ್ನು ಕೋರಿರುತ್ತಾರೆ. ಕೂಲಿಕಾರರು ಮೊದಲಾದವರು ಯಾವಾಗ ಶಾಂತಿಯು ಸಂಪೂರ್ಣವಾಗಿ ನೆಲಸುವುದೋ ಎಂದು ಕಾತುರಪಡುತ್ತಿರುವರು. ಎಲ್ಲಾ ಸಂಘದವರೂ ತಮಗೆ ಸಹಾಯಕರಾಗಬೇಕೆಂದು ಶಾಂತಿಸಂಘದವರು ಪ್ರಕಟಿಸಿರುತ್ತಾರೆ. ಗಾಯಪಡೆದವರಿಗೆ ವೈದ್ಯಸಹಾಯ ಮಾಡುವುದೇ ಅಲ್ಲದೆ ಅವರಿಗೆ ಉಪಚಾರ ಮಾಡಲು ಸಹ ಸಿದ್ಧರಾಗಿದ್ದೇವೆಂದು ವೈದ್ಯವಿದ್ಯಾರ್ಥಿಗಳು ಶಾಂತಿಸಂಘದವರಿಗೆ ತಿಳಿಸಿರುವರು.

ನೆನ್ನೆ ನಡೆದ ದೌರ್ಜನ್ಯವು.

ರಾತ್ರಿಯಲ್ಲಿ ಬೀದಿಗೆ ಬರಕೂಡದೆಂದು ಅಪ್ಪಣೆಮಾಡಲ್ಪಟ್ಟಿದ್ದರೂ ಕಾರ್ತೇಡಿ ಪ್ರದೇಶದಲ್ಲಿ ತಾ|| 11 ರ ರಾತ್ರಿ ಮೂವರು ಪಠಾಣರು ಹೊಡೆಯಲ್ಪಟ್ಟರು. ಅವರಲ್ಲೊಬ್ಬನು ತಾ|| 12 ರಲ್ಲಿ ಮೃತನಾದನು. ಪರೇಲಿನಲ್ಲಿ ಕೆಲ ಮಹಮ್ಮದೀಯರಿಗೆ ಪೆಟ್ಟುಬಿದ್ದುದರಿಂದ ಅವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಹಿಂದುಗಳು ವಿಶೇಷವಾಗಿ ವಾಸಿಸುವ ಕಾಂಬೇವಾಡಿಗೆ ಇಬ್ಬರು ಮಹಮ್ಮದೀಯರು ತಾ|| 11 ರಲ್ಲಿ ಬಂದು ಮನಸ್ವೀ ಅಲೆಯುತ್ತಿದ್ದರು. ಹಿಂದುಗಳಿಂದ ತಮಗೆ ಅಪಾಯವಾಗದಂತೆ ಅವರು ತಮ್ಮ ಮೈಗೆ ವೈರ್‌ನೆಟ್ಟನ್ನು ಬಿಗಿದುಕೊಂಡು ಅದರಿಂದ ತಮಗಾವ ಭಯವೂ ಇಲ್ಲವೆಂದು ತಿಳಿದು ಹಿಂದುಗಳನ್ನು ಹೊಡೆಯಲು ಆ ಪ್ರದೇಶದಲ್ಲಿ ಸುಳಿದಾಡುತ್ತಿದ್ದರು. ಹಾಗಿದ್ದರೂ ತಾ|| 11 ರ ರಾತ್ರಿ ಅವರಲೊಬ್ಬನ ಶವವು ಅಲ್ಲಿ ಬಿದ್ದಿದ್ದುದು ಗೋಚರಿಸಿತು. ಅವನು ವೈರ್‌ನೆಟ್ಟನ್ನು ಕಟ್ಟಿಕೊಂಡಿದ್ದನೆಂದು ಹಂತಕರು ತಿಳಿದಿದ್ದರೋ ಇಲ್ಲವೋ ಅಂತು ಅವನ ತಲೆಯನ್ನೊಡೆದು ಕೊಂದುಹಾಕಿದರು.

ಶಾಂತಿ ಸೂಚನೆ.

ಟ್ರಾಂ ಬಂಡಿಗಳು ಕಳೆದ ತಾ|| 12 ರಿಂದ ಮಾಮೂಲಾಗಿ ನಡೆಯುತ್ತಿರುವುವು. ಈವರೆಗೆ ಬೇರೆಕಡೆಗೆ ಹೋಗಬೇಕೆಂದು ಇದ್ದವರು ಆ ಪ್ರಯತ್ನವನ್ನು ಈಗ ಮಾನಸಿಕ ಮಾಡುತ್ತಿರುವರು. ಆದರೂ ಪ್ರಜೆಗಳಿಗೆ ಇನ್ನೂ ಪೂರ್ತಿಯಾಗಿ ಧೈರ್ಯವುಂಟಾಗಿಲ್ಲ. ತಾ|| 13ರ ವರೆಗೆ ಒಟ್ಟು 800 ಮಂದಿ ತುಂಟರು ಸೆರೆಹಿಡಿಯಲ್ಪಟ್ಟರು. ಅನೇಕ ಜನರ ವಶದಿಂದ ದೊಣ್ಣೆ, ಕತ್ತಿ, ಬಾಕು, ಈಟಿ, ಗಂಡುಕೊಡಲಿ, ಸನೀನು ಮೊದಲಾದ ಪ್ರಾಣಾಪಾಯಕರ ಆಯುಧಗಳು ವಶಪಡಿಸಿಕೊಳ್ಳಲ್ಪಟ್ಟು ಸೈನಿಕರ ಕಾವಲಿರುವ ವಿಕ್ಟೋರಿಯಾ ತೋಟದಲ್ಲಿ ಶೇಖರಿಸಲ್ಪಟ್ಟಿವೆ.

ಸಹೋದರಭಾವ.

ಬಡಿದಾಟವು ಹೀಗೆ ನಡೆಯುತ್ತಿರುವುದಾದರೂ ಸುಜನರು ಮತಾಂತರದವರನ್ನು ಕೂಡ ಕಾಪಾಡುತ್ತಿರುವರು. ಬಾಬುಲ್ಲ ಟಾಕೂರು ರೋಡಿನಲ್ಲಿ ವಾಸಿಸುತ್ತಿರುವ 34 ಹಿಂದು ಪ್ರಮುಖರು ಪೊಲೀಸ್ ಕಮಿಷನರಿಗೊಂದು ಲೇಖನವನ್ನು ಬರೆದಿರುವರು.

ಇಲ್ಲಿ ಬಹಳಮಂದಿ ಹಿಂದುಗಳೂ ಮಹಮ್ಮದೀಯರೂ ವಾಸಿಸುತ್ತಿರುವರು. ಇಲ್ಲಿರುವ ಮಹಮ್ಮದೀಯರು ಹಿಂದುಗಳನ್ನು ಬಾಧಿಸುವವರಿಗೆ ಅವಕಾಶಕೊಡದಿರುವುದಲ್ಲದೆ ಹಿಂದುಗಳ ಅರ್ಥಪ್ರಾಣಗಳನ್ನು ಭದ್ರವಾಗಿ ಕಾಪಾಡುತ್ತಿರುವರು. ಹಿಂದುಗಳು ಪೇಟೆಗೆ ಹೋಗಲು ಭಯಪಟ್ಟುಕೊಂಡಿರುವುದರಮೇಲೆ ಮಹಮ್ಮದೀಯರೇ ಪೇಟೆಗೆ ಹೋಗಿ ಅವರಿಗೆ ಬೇಕಾದ ಪದಾರ್ಥಗಳನ್ನು ತಂದುಕೊಡುತ್ತಿರುವರು. ಈ ವೇಳೆಗೆ ಅವರು ಮಹಮ್ಮದೀಯ ಮತಧರ್ಮವನ್ನು ಸರಿಯಾಗಿ ನೆರವೇರಿಸುತ್ತಿರುವುದಕ್ಕಾಗಿ ಅವರಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ” ಎಂದು ಆ ಕಾಗದದಲ್ಲಿ ಬರೆಯಲ್ಪಟ್ಟಿದೆ.

ತಾ|| 13 ರಲ್ಲಿ ಶಾಂತಿಯು ಬಹಳಮಟ್ಟಿಗೇರ್ಪಟ್ಟಿತು.

ತಾ|| 13 ರಲ್ಲಿ ಅನೇಕ ಅಂಗಡಿಗಳು ಮಾರ್ಕೆಟ್ಟುಗಳೂ ತೆರೆಯಲ್ಪಟ್ಟುವು. ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯ ಹತ್ತಿರದಲ್ಲಿ ಒಂದು ಮನೆಯನ್ನು ಪೊಲೀಸಿನವರು ಶೋಧನಮಾಡಲು ಅನೇಕ ವಿಧದ 100 ಆಯುಧಗಳು ದೊರಕಿದುವು. ಇನ್ನೊಂದು ಮನೆಯನ್ನು ಶೋಧಿಸುವಲ್ಲಿ ಆಯುಧಗಳು ಸಿಕ್ಕಿದುವು. ಆ ಎರಡು ಮನೆಗಳಲ್ಲೂ ಇದ್ದ 30 ಮಂದಿ ಕೂಲಿಗಾರರು ಸೆರೆಹಿಡಿಯಲ್ಪಟ್ಟರು. ಒಟ್ಟು 138 ಮಂದಿ ಸತ್ತು 789 ಮಂದಿ ಪೆಟ್ಟುತಿಂದಿರುವರು. ಗೌರ್ನರೂ ಸೇನಾನಿಯೂ ಪಟ್ಟಣದ ನಾನಾಭಾಗಗಳಲ್ಲಿ ಸಂಚರಿಸಿ ಅಲ್ಲಲ್ಲಿ ಪೊಲೀಸು ಠಾಣಗಳ ಹತ್ತಿರ ನಿಂತು ಅಲ್ಲಿದ್ದ ಪೊಲೀಸು ಅಧಿಕಾರಿಗಳೊಡನೆಯೂ ಆನರರಿ ಸೈನಿಕಾಧಿಕಾರಿಗಳೊಡನೆಯೂ ಮೆಜಿಸ್ಟ್ರೇಟರೊಡನೆಯೂ ಸಂಭಾಷಿಸಿ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡು ಬಂದರು.

ಸರ್ಕಾರೀ ಪ್ರಕಟಣೆ.

ತಾ|| 13 ರಲ್ಲಿ ಬಹಳ ಮಟ್ಟಿಗೆ ಶಾಂತಿಯುಂಟಾಗಿದೆ. ಅಂಗಡಿಗಳೂ ಮಾರ್ಕೆಟ್ಟುಗಳೂ ತೆರೆಯಲ್ಪಟ್ಟಿವೆ, ಪದಾರ್ಥಗಳ ಮಾರಾಟಕೊಳ್ಳಾಟ ನಡೆಯುತ್ತಿವೆ. ಎರಡು ಮನೆಗಳಲ್ಲಿದ್ದ ಕೆಲ ಆಯುಧಗಳು ದೊರಕಿರುವುವು. ಆ ಮನೆಯಲ್ಲಿದ್ದ 38 ಮಂದಿ ಕೂಲಿಕಾರರು ಸೆರೆ ಹಿಡಿಯಲ್ಪಟ್ಟರು. ಸೆರೆಹಿಡಿಯಲ್ಪಟ್ಟವರಲ್ಲಿ 632 ಮಂದಿ ಈಗಲೂ ವಾರ್ಲಿಯಲ್ಲಿರುವ ತಾತ್ಕಾಲಿಕ ಕಾರಾಗೃಹದಲ್ಲಿರುತ್ತಾರೆ. ತಾ|| 13 ರ ಬೆಳಗ್ಗೆ 70 ಮಿಲುಗಳೂ ರೈಲ್ವೆ ವರ್ಕ್‌ಷಾಪುಗಳೂ ತೆರೆಯಲ್ಪಟ್ಟುವು. ಸೋಮವಾರ ಪೆಟ್ಟನ್ನು ತಿಂದವನೊಬ್ಬನು ಮಂಗಳವಾರ ಆಸ್ಪತ್ರೆಯಲ್ಲಿ ಸತ್ತನು. ಒಟ್ಟು 138 ಮಂದಿ ಸತ್ತಿರುವರು ಮತ್ತು 789 ಮಂದಿ ಗಾಯಪಡೆದಿರುವರು.

ಶಾಂತಿ ಸಂಘದವರ ಪ್ರಕಟನೆ.

ಹೊಡದಾಟದಲ್ಲಿ ನಷ್ಟವನ್ನು ಹೊಂದಿ ನಿರಾಧಾರ ಸ್ಥಿತಿಯಲ್ಲಿರುವವರು ಮ್ಯುನಿಸಿಪಲ್ ಆಫೀಸಿನಲ್ಲಿರುವ ಶಾಂತಿ ಸಂಘದವರಿಗೆ ತಿಳಿಸಿದಲ್ಲಿ ಸಾಧ್ಯವಾದ ಮಟ್ಟಿಗೆ ಸಹಾಯಮಾಡಲ್ಪಡುವುದು. ಹೀಗೆ ಅಸಹಾಯ ಸ್ಥಿತಿಯಲ್ಲಿರುವವರ ವಿಚಾರವನ್ನರಿತಿರುವ ನಾಯಕರುಗಳೂ, ಸಂಸ್ಥೆಗಳೂ ಶಾಂತಿ ಸಂಘದವರಿಗೆ ತಿಳಿಸಬೇಕಾಗಿ ಕೋರಿದೆ. ದೊಂಬಿಯ ಕಲಹದ ದೆಸೆಯಿಂದ ಪಾಠಶಾಲೆಗಳಿಗೂ ಕಾಲೇಜುಗಳಿಗೂ ಬರಲು ಹೆದರಿಕೊಂಡಿರುವ ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಆಗದಂತೆ ವಿದ್ಯಾಶಾಲಾಧಿಕಾರಿಗಳು ತಕ್ಕೇರ್ಪಾಟುಮಾಡಬೇಕಾಗಿಯೂ ವಿಶ್ವವಿದ್ಯಾನಿಲಯಾಧಿಕಾರಿಗಳು ಪರೀಕ್ಷೆಗಳನ್ನು 15 ದಿನಗಳ ಮಟ್ಟಿಗಾದರೂ ನಿಲ್ಲಿಸಬೇಕಾಗಿಯೂ ಕೋರುತ್ತೇವೆ.

ಸ್ವೀಕಾರ.

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಶಿವಮೊಗ್ಗ ತಾ|| ಮಳಲಗದ್ದೆ ಮ|| ಯಜಮಾನ್ ಕೆಂಡಪ್ಪಗೌಡರಿಗೆ ಆದ ದೀಕ್ಷಾ ಕಾರ್ಯದಲ್ಲಿ ಶಿವಮೊಗ್ಗ ಮ|| ಎಸ್. ಪಿ. ಡಿಸೋಜಾಯವರ ಮೂಲಕ 2 ರೂ. ಬೆಳಗಾಂ ಜಿ|| ಯಾದವಾಡದ ಶ್ರೀಚರಮೂರ್ತಿ ಸ್ವಾಮಿಗಳು ಮಳೆಮಠ ಇವರ ಮಠದಲ್ಲಿ ನಡೆದ ಮುರಿಗೆಯ್ಯನವರ ದೀಕ್ಷಾ ಕಾರ್ಯದಲ್ಲಿ ಮ|| ಪಿ. ಎಂ. ನಂಜುಂಡಯ್ಯನವರು ಎ. ಎಲ್. ಡಾಕ್ಟರ್ ಇವರ ಮೂಲಕ 2 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಬೇಲೂರು ತಾಲ್ಲೂಕು ಹೆಬ್ಬಾಳುಗ್ರಾಮದಲ್ಲಿ ನಡೆದ ಉಪಾಧ್ಯಾಯರ ಸಂಘದ ಮೀಟಿಂಗು.

ಕಳೆದ ಜನವರಿ ತಾ|| 26 ನೇ ಶನಿವಾರ ಹೆಬ್ಬಾಳು ಪ್ರೈಮರಿ ಸ್ಕೂಲಿನಲ್ಲಿ ಹಾಸನದ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್ ಮ|| ಬಿ.ಎ., ತಿರುಮಲಾಚಾರ್ಯರ ಅಧ್ಯಕ್ಷತೆಯಲ್ಲಿ, ಸಕಲೇಶಪುರದ ರೇಂಜ್ ಇನ್ಸ್‌ಪೆಕ್ಟರ್ ಮ|| ಎಂ. ಎ. ಲಿಂಗಪ್ಪಯ್ಯನವರು, ಬೇಲೂರು ಮಿಡ್ಲ್‌ಸ್ಕೂಲ್ ಹೆಡ್ಮಾಸ್ಟರ್ ಮ|| ಹಿರಣಯ್ಯನವರು, ಬೇಲೂರು ಪ್ರೆಸಿಡೆಂಟ್ ಸೂರಪ್ಪನವರು ಇನ್ನು ಮುಂತಾದ ದೊಡ್ಡಮನುಷ್ಯರು ಮತ್ತು ತಾಲ್ಲೂಕು ಮಾಸ್ತರು ಗ್ರಾಮಮುಖಂಡರು ಇನ್ನು ಮುಂತಾದವರು ಸೇರಿ ಮೀಟಿಂಗ್ ನಡಿಸಲಾಯಿತು ಅದರಲ್ಲಿ ಹೆಬ್ಬಾಳು ಸ್ಕೂಲ್ ಹೆಡ್ಮಾಸ್ಟರ್ ಮ|| ಕೆ. ವಿ. ದೇವಪ್ಪಶಾಸ್ತ್ರಿಗಳು 4 ನೇ ವರ್ಷದ ತರಗತಿಗೆ ಮಾದರಿಯಾಗಿ ಪದ ಪಾಠಮಾಡಿದರು. ಈ ವಿಷಯದಲ್ಲಿ ಸಹೋಪಾಧ್ಯಾಯರು ಚರ್ಚಿಸಿದನಂತರ ಬೇಲೂರು ಪ್ರೈಮರಿ ಸ್ಕೂಲು ಹೆ. ಮಾ. ಎಲ್. ರಾಮಾವಧಾನಿಗಳು ಗ್ರಾಮಸ್ಥರು ಮತ್ತು ಉಪಾಧ್ಯಾಯರು ಏಕೀಭವಿಸಿ ಕೆಲಸಮಾಡಬೇಕೆಂಬದಾಗಿ ಉಪನ್ಯಾಸಮಾಡಿದರು. ಅನಂತರ ಸ್ಕೂಲು ಕರಸ್ಪಾಂಡೆನ್ಸ್ ಮೆಂಬರು ಮಠದ ಪುಟ್ಟಪ್ಪಶಾಸ್ತ್ರಿಗಳು ಸ್ಕೂಲಿನ ಪೂರ್ವದ ಚರಿತ್ರೆ ವಿಚಾರವಾಗಿ ಉಪನ್ಯಾಸಮಾಡಿದನಂತರ ಸದರಿ ಗ್ರಾಮಸ್ಥರೂ ಉಪಾಧ್ಯಾಯರೂ ಸಮ್ಮಿಳಿತರಾಗಿ ಕೆಲಸಮಾಡಬೇಕು. ಮಕ್ಕಳ ವಿಚಾರದಲ್ಲಿ ಹೆಚ್ಚು ಮುತವರ್ಜಿವಹಿಸಿ ಅವರನ್ನ ವಿದ್ಯಾವಂತರನ್ನಾಗಿ ಮಾಡಬೇಕು ಎಂಬದಾಗಿ ಡಿ. ಎ. ಆಫೀಸರು ಉಪನ್ಯಾಸವನ್ನು ಸ್ವಾರಸ್ಯವಾಗಿ ಮಾಡಿದನಂತರ ಕೊಂಚಹೊತ್ತು ಸಂಗೀತ ನಡೆದಮೇಲೆ ಶ್ರೀಮನ್ಮಹಾರಾಜರವರ ಮತ್ತು ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯಿಂದ ಮಂಗಳವಾಗಿ ಬಂದಿದ್ದ ಆಫೀಸರು ದೊಡ್ಡಮನುಷ್ಯರಾದಿಯಾಗಿ ಸರ್ವರಿಗೂ ಗ್ರಾಮಸ್ಥರು ಹೆ. ಮೆ. ರವರ ಮುತವರ್ಜಿಯಿಂದ ಊಟ ಉಪಚಾರವನ್ನೂ ಮಧ್ಯಾಹ್ನ ಟೀಪನ್ನೂ ಮಾಡಿಸಿ ಕಳುಹಿಸಿಕೊಟ್ಟರು. ಈ ವಿಷಯದಲ್ಲಿ ಕಮಿಟಿ ಮೆಂಬರುಗಳು ಹೆಚ್ಚು ಮುತವರ್ಜಿವಹಿಸಿ ಕೆಲಸವಡಿದರೆಂದು ತಿಳಿಸಲು ಸಂತೋಷವಾಗುತ್ತದೆ.

ಸಭಿಕ.

ನಾಗಮಂಗಲ ತಾಲ್ಲೂಕಿನ ವರ್ತಮಾನ.

ಈ ತಾಲ್ಲೂಕಿನ ಎಲ್ಲಾ ಕಡೆಗಳಲ್ಲಿಯೂ ಮಳೆ ಬೆಳೆಗಳು ಈ ವರ್ಷ ಚೆನ್ನಾಗಿ ಆಗಿ ಜನಗಳು ಹಸನ್ಮುಖಿಗಳಾಗಿದ್ದಾರೆ. ಜಾನ್ವಾರುಗಳ ನೀರಿಗೂ ಮೇವಿಗೂ ಅನುಕೂಲವಿದೆ. ರೋಗಾದಿ ಉಪದ್ರವಗಳೇನೂ ಇಲ್ಲ. ದೀರ್ಘಕಾಲದಿಂದಲೂ ರಿಸ್ಟೋರ್ ಆಗದೆ ಇದ್ದ ಈ ತಾಲ್ಲೂಕಿನ ಕೆಲವು ದೊಡ್ಡ ಕೆರೆಗಳು ಅಂದರೆ, ಅಂಚೆ ಚಿಟ್ಟನಹಳ್ಳಿ ಹಿದುವ ಬೊಮ್ಮನಹಳ್ಳಿ ಕೆರೆಗಳು ಮುಂಜೂರಾಗಿ ಕಾಂಗಾರಿ ಶುರುವಾಗಿರುತ್ತೆ. ಈ ತಾಲೂಕಿಗೆ ಈಗ್ಗೆ ಒಂದೂವರೆವರ್ಷದಲ್ಲಿ ವರ್ಗವಾಗಿ ಬಂದಿದ್ದ ನಮ್ಮ ಅಮಲ್ದಾರ್ ಮ|| ಎ. ಚಿನ್ನಪ್ಪನವರನ್ನು ಕ್ಷಿಪ್ರಕಾಲದಲ್ಲಿಯೇ ಬೌರಿಂಗ್‌ಪೇಟೆಗೆ ವರ್ಗಮಾಡಿರುವುದನ್ನು ನೋಡಿದರೆ ಈ ತಾಲ್ಲೂಕಿನ ಬಡಪ್ರಜೆಗಳ ದುರಾದೃಷ್ಟವೆಂದು ತೋರುತ್ತದೆ. ಇವರು ಈ ತಾಲ್ಲೂಕಿಗೆ ದಯೆಮಾಡಿಸಿದ ತರುಣದಲ್ಲಿಯೇ ಈ ತಾಲ್ಲೂಕಿಗೆ ಯಾವ ಯಾವ ಭಾಗದಲ್ಲಿ ಕುಂದುಕೊರತೆಗಳಿರುತ್ತೆ ಎಂಬುದನ್ನು ತಿಳಿದುಕೊಂಡು ನೂರಾರು ಗ್ರಾಮಗಳಲ್ಲಿ ಜನ ಜಾನ್ವಾರುಗಳ ಉಪಯೋಗಕ್ಕೆ ಬಾವಿಗಳನ್ನು ತೆಗೆಸಿದರು. ಅನೇಕ ಕಡೆಗಳಲ್ಲಿ ಹೊಸರಸ್ತೆಗಳನ್ನು ಏರ್ಪಡಿಸಿದರು. ಹೊಸದಾಗಿ ಒಂದು ಸಂತೆ ಏರ್ಪಡಿಸಿದರು. ಹಿಂದುಳಿದ ಜನರಿಗೆ ಆಯಾ ಕಡೆಗೇ ಜಮೀನುಗಳನ್ನು ಕೊಡಿಸಿದರು. ಅನೇಕ ಕಡೆಗಳಲ್ಲಿ ತೋಪುಗಳನ್ನು ಏರ್ಪಡಿಸಿದರು. ಮ್ಯುನಿಸಿಪಾಲಿಟಿ ಮತ್ತು ಪಂಚಾಯಿತಿ ಕೆಲಸಗಳನ್ನು ಬಹುಸಮರ್ಪಕವಾಗಿ ನಡೆಸುತ್ತಿದ್ದರು. ಇದೂ ಅಲ್ಲದೆ ಮಹಾ ಚುಂಚನಗಿರಿ ಕ್ಷೇತ್ರದಲ್ಲಿ ಹೊಸ ಗುರುಗಳ ಪಟ್ಟಾಭಿಷೇಕಕಾಲದಲ್ಲಿಯೂ ಹು|| ದಿವಾನ್ ಸಾಹೇಬರು ಈ ತಾಲ್ಲೂಕಿಗೆ ದಯೆಮಾಡಿದ್ದ ಕಾಲದಲ್ಲಿಯೂ ಶ್ರೀ ಶೃಂಗೇರಿ ಜಗದ್ಗುರುಗಳು ದಯೆಮಾಡಿದ್ದ ವೇಳೆಯಲ್ಲಿಯೂ ಕೇವಲ ಸಮರ್ಪಕವಾದ ಏರ್ಪಾಡುಗಳನ್ನು ಮಾಡಿ ಸುಖಾಂತವಾಗಿ ಕಾರ್ಯಕ್ರಮ ನಡೆಸಿರುತ್ತಾರೆ. ಅನೇಕ ವಿಷಯಗಳಲ್ಲಿ ಈ ತಾಲ್ಲೂಕಿ

ನ ಬಹಿಷ್ಕೃತರುಗಳಿಗೆ ಸರ್ವಸಮಷ್ಟಿಯಿಂದ ಹಿತವನ್ನೇ ಕೋರುತ್ತಿದ್ದ ನಮ್ಮ ಅಮಲ್ದಾರ್‌ರವರು ಕೊಂಚಕಾಲದಲ್ಲಿಯೇ ವರ್ಗಪಟ್ಟಿರುವುದು ನಮ್ಮಗಳಿಗೆ ತುಂಬಾ ವಿಷಾದವನ್ನುಂಟುಮಾಡಿರುತ್ತೆ. ಬಡಜನಗಳ ಉಪಕಾರಿಗಳಾದ ಇವರಿಗೆ ದೇವರು ಎಲ್ಲಾ ಭಾಗದಲ್ಲೂ ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇನೆ.

ಕೆ. ಬೇಲೂರಯ್ಯ, ನಾಗಮಂಗಲ

ದಾವಣಗೆರೆ ತಾ|| ಹೆಬ್ಬಾಳುಮಠದ ರುದ್ರಸ್ವಾಮಿಗಳ ಸಂಚಾರ.

ಈ ಮಠವು ಶ್ರೀ ಜಗದ್ಗುರು ಮಹಾಸಂಸ್ಥಾನದ ಶಾಖಾಮಠವಾಗಿ ಇಲ್ಲಿನ ಆಸುಪಾಸು ಪ್ರಾಂತ್ಯಕ್ಕೆ ಮಹಾಕ್ಷೇತ್ರವಾಗಿರುವುದು. ಸರ್ವಜನ ವರ್ಗದವರು ಈ ಮಠಕ್ಕೆ ನಡೆದುಕೊಳ್ಳುತ್ತಿರುವರು. ವರ್ಷಕ್ಕೊಮ್ಮೆ ಮಾರ್ಗಶಿರ ಬಹುಳದ ಕಡೆ ಗುರುವಾರ ಘನವಾದ ಜಾತ್ರೆನಡೆದು ಸ್ವಾಮಿಗಳ ಉತ್ಸವವೂ ಮಠದಲ್ಲಿ ದಾಸೋಹವೂ ಪುರಾಣಪುಣ್ಯಕಥೆಗಳೂ ನಡೆಯುವವು. ಈಗ ಕಳೆದೆರಡುವರ್ಷಗಳಿಂದ ಶ್ರೀಮದಥಿಣಿ ಗಚ್ಚಿನಮಠದ ಚರಮೂರ್ತಿಗಳಾದ ಚೆನ್ನಬಸವದೇವರು ಈ ಮಠದ ಮೂರ್ತಿಗಳಾಗಿ ನೇಮಕ ಮಾಡಲ್ಪಟ್ಟಿರುವರು. ಸದರಿ ಮೂರ್ತಿಗಳು ಪದ್ಧತಿಯಂತೆ ವರ್ಷದ ಜಾತ್ರಾ ಸಮಾರಂಭವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಭಕ್ತರ ಪ್ರಾರ್ಥನೆ ಮೇರೆಗೆ ಕಬ್ಬೂರುಗ್ರಾಮಕ್ಕೆ ಮಾಹೇಶ್ವರ ಜಾತ್ರೆಗಾಗಿ ಪಲ್ಲಕ್ಕಿಯಲ್ಲಿ ದಯಮಾಡಿಸಿದರು. ಜೀರ್ಣವಾಗಿರುವ ಮಠವನ್ನು ಜಾತ್ರೆಕಾಲದಲ್ಲಿ ಭಕ್ತಾದಿಗಳು ಕಂಡು ಅದರ ಜೀರ್ಣೋದ್ಧಾರಕ್ಕಾಗಿ ಸಂಚಾರಹೊರಡಬೇಕೆಂಬ ಆಲೋಚನೆ ಪ್ರಕಾರ ಹೊರಟಿರುವುದರಿಂದ ಕಬ್ಬೂರಿನ ಮುಖಂಡರುಗಳು ತಮ್ಮೂರಿನಲ್ಲಿ ಶಕ್ತ್ಯಾನುಸಾರ ಕಾಣಿಕೆ ಕೊಟ್ಟು ಪರಸ್ಥಳಗಳಿಗೆ ಸ್ವಾಮಿಗಳನ್ನು ವಿಜಯಮಾಡಿಸುವುದರಲ್ಲಿ ತೊಡಗಿ ಸೇವಾನಡೆಸುತ್ತಿರುವರು. ಈಗಾಗಲೇ ರಾಮಗೊಂಡನಹಳ್ಳಿ ಅತ್ತಿಗೇರಿ ಕೊಡಗನೂರು ಮಲೆನಹಳ್ಳಿ ಕಾಶಿಪುರ ಬಾಡದಮಲ್ಲಿಕೆರೆ ಮೊದಲಾದ ಗ್ರಾಮಗಳಲ್ಲಿ ಸಂಚಾರನಡೆದು ನಾಲ್ಕಾರುಸಹಸ್ರ ರೂಪಾಯಿಗಳು ವಾಗ್ದಾನವಾಗಿರುತ್ತವೆ. ಇನ್ನೂ ಇದ ಕಡೆ ಇಷ್ಟರಲ್ಲೇ ಸಂಚಾರ ಹೊರಡುವುದರಲ್ಲಿದೆ. ಭಕ್ತಾದಿಗಳು ಎಂದಿನಂತೆ ಭಕ್ತಿ ವಿಶ್ವಾಸದಿಂದ ಮಹಾಸ್ವಾಮಿಗಳನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಕಪ್ಪ ಕಾಣಿಕೆಯನ್ನಿತ್ತು ಕೃತಾರ್ಥರಾಗುವರೆಂದು ನಿರೀಕ್ಷಿಸಲ್ಪಟ್ಟಿದೆ. ಕಬ್ಬೂರಿನ ಮ|| ಗೌಸ್‌ಸಾಬರು ತಮ್ಮ ಸಹಾಯ ಸಹಾನುಭೂತಿಯನ್ನಿತ್ತು ಸೇವೆಗೆ ತೊಡಗಿರುವುದು ಸ್ತುತ್ಯವಾಗಿದೆ. ಅಲ್ಲದೆ ದಾವಣಗೆರೆ ಶ್ರೀಮಂತ ಮ|| ಗೌಡರ ಸಣ್ಣಮಹಲಿಂಗಪ್ಪನವರ ಗುರುಶಾಂತಪ್ಪನವರು ಸ್ವಾಮಿಗಳ ಸಂಚಾರದಲ್ಲಿ ಸರ್ವದಾ ಇದ್ದು ಸೇವೆಯಲ್ಲಿ ತೊಡಗಿರುವುದು ತುಂಬಾ ಅನುಕರಣೀಯವಾಗಿದೆ. ಇವರಿಗೆ ಶ್ರೀ ರುದ್ರೇಶನು ಸಕಲ ಮಂಗಳವನ್ನುಂಟುಮಾಡಲಿ.

ಓರ್ವ ಭಕ್ತ.

ಪಂಚಾಚಾರ್ಯರು ಸುಳ್ಳೋ ಪಂಚಾಚಾರ್ಯರ ಪತ್ರಿಕೆ ಸುಳ್ಳೋ?

ಹೋದವರ್ಷದ ಫೆಬ್ರವರಿ ತಿಂಗಳಿನಲ್ಲಿ ಜಗಲೂರು ಸಾಹುಕಾರ ಮ|| ಸಣ್ಣತಮ್ಮಣ್ಣನವರು ಶ್ರೀಮದುಜ್ಜಯಿನಿ ಸ್ವಾಮಿಗಳ ಉತ್ಸವವನ್ನು ಅದೇ ತಾ|| ಕಲ್ಲೇದೇವರಪುರದಲ್ಲಿ ಜರುಗಿಸಿದರು. ನಾನಾಕಡೆಯಿಂದ ಪಟ್ಟಾಧ್ಯಕ್ಷರೂ ಇನ್ನೂ ಇದ ಭಕ್ತಾದಿಗಳೂ ಆಹ್ವಾನಿಸಲ್ಪಟ್ಟು ಹೋಗಿದ್ದರು. ಉತ್ಸವ ಪೂರೈಸಿದ ಮೇಲೆ ಅದರ ಯಾವತ್ತು ವೃತ್ತಾಂತವು ಪಂಚಾಚಾರ್ಯಪ್ರಭೆಯಲ್ಲಿ ವಿಶದವಾಗಿ ಪ್ರಕಟವಾಗಿತ್ತು. ಅದರಲ್ಲಿ ವಿಶೇಷವೇನೆಂದರೆ—ಶ್ರೀ ಸ್ವಾಮಿಗಳು ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯಲ್ಲಿ ಮಂಡಿಸಿ ಉತ್ಸವ ಮಾಡಿಸಿಕೊಂಡರೆಂಬುದಾಗಿ ಬರೆಯಲ್ಪಟ್ಟಿತ್ತು. ಅಲ್ಲದೆ ಮರುವಾರ ಸ್ಟಾರ್ ಪತ್ರಿಕೆಯಲ್ಲಿ ಶ್ರೀಮದುಜ್ಜಯಿನಿ ಸ್ವಾಮಿಗಳ ತಪಃಪ್ರಭಾವದಿಂದ ಶೃಂಗೇರಿಯವರ ಹೊರತು ಅನ್ಯರು ಉಪಯೋಗಿಸಿಕೊಳ್ಳದಿದ್ದ ಬಿರುದುಗಳು ಉಪಯೋಗವಾಗುವಂತಾದುದು ವೀರಶೈವರ ಪುಣ್ಯೋದಯವೇ ಎಂಬಭಿಪ್ರಾಯವುಳ್ಳ ಇನ್ನೊಂದು ಲೇಖವು ಪ್ರಕಟವಾಗಿತ್ತು. ಮೈಸೂರುಸೀಮೆಯಲ್ಲಿ ಬ್ರಾಹ್ಮಣರ ಪರಿಕಿತ್ಪರ್ಶಾಸೂಯೆಯಿಂದ ವೀರಶೈವ ಗುರುಗಳ ಮಾನಮರ್ಯಾದೆಗಳಿಗೆ ಕುಂದುಂಟಾಗಿರಲು ಇದು ಆಕಸ್ಮಾತ್ತಾಗಿ ನೀಗಿ ವೀರಶೈವರು ಸಂತೋಷಪಡುವ ಸ್ಥಿತಿಯುಂಟಾದಪರಿಯನ್ನು ತಿಳಿಯುವ ಕುತೂಹಲದಿಂದ ಶ್ರೀ ಸ್ವಾಮಿಗಳ ತಪಃಪ್ರಭಾವದಿಂದ ಸರ್ಕಾರದವರು ಮೇಲ್ಕಂಡ ಬಿರುದುಗಳನ್ನು ದಯಪಾಲಿಸಿದರೋ ಹೇಗೆಂಬುದನ್ನು ಅಧಿಕಾರಿಗಳಲ್ಲಿ ವಿಚಾರಿಸಲು ಜನರು ಆತುರರಾದರು. ಈ ಬಗ್ಗೆ ಜಗಲೂರು ತಾ|| ಅಮಲ್ದಾರರು ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯ ಉತ್ಸವ ನಡೆದಿಲ್ಲವೆಂದು ಸ್ಥಳೀಯ ಜನರ ಹೇಳಿಕೆಯಿಂದ ನಿರ್ಧರಿಸಿದರು. ಆಮೇಲೆ ಸ್ವಾಮಿಗಳ ಖುದ್ದು ಹೇಳಿಕೆಯಾಗಬೇಕೆಂದು ಕೇಳಿದ್ದರ ಮೇಲೆ ನಾವು ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯಲ್ಲಿ ಉತ್ಸವಮಾಡಿಸಿಕೊಂಡಿಲ್ಲವೆಂದೂ ತಮ್ಮ ಮೇಲೆ ಮನಸ್ತಾಪಗೊಂಡಿರುವ ದುರ್ಗದ ಮುರಿಗೆಮಠದ ವಿರಕ್ತಸ್ವಾಮಿಗಳು ಪ್ರೋತ್ಸಾಹಿಸಿ ಇದನ್ನೆಬ್ಬಿಸಿದ್ದಾರೆಂದೂ ಶ್ರೀಮದುಜ್ಜಯಿನಿ ಸಿದ್ಧಲಿಂಗಸ್ವಾಮಿಗಳು ಖುದ್ದಾಗಿ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ ಪಂಚಾಚಾರ್ಯರು ಸುಳ್ಳೋ ಪಂಚಾಚಾರ್ಯರ ಪತ್ರಿಕೆ ಸುಳ್ಳೋ? ಇದನ್ನು ಯಾರಾದರೂ ನಿರ್ಧರಮಾಡಿಕೊಡುವರಾಗಲಿ.

ಸತ್ಯಾಪೇಕ್ಷಿ.

ಆದವಾನಿ.

ಆದವಾನಿ ಪೇಟೆ ವೀರಾಸಾನಿ ಯಂಬಾಕೆಯು 10-12 ಸಂವತ್ಸರಗಳ ಹಿಂದೆ ದೈವಾಚಾರ ಮತ್ತು ತತ್ಸಂಬಂಧ ಧರ್ಮಸೂತ್ರಗಳಿಗೆ ಪ್ರತಿಕೂಲಳಾಗಿ ನಡೆದಳೆಂದು ಕೆಲವರು ದೈವಾಚಾರದವರು ಆಕ್ಷೇಪಣೆ ಮಾಡುತ್ತಲಿದ್ದಾರೆಂದು ಶ್ರೀಮದ್ವೀರಶೈವ ಮಹಾಮಠ ಸಂಸ್ಥಾಪನಾಚಾರ್ಯ ಜಗದ್ಗುರು ಇತ್ಯಾದಿ ಬಿರುದಾಂಕಿತರಾದ ಶಿವಾಚಾರ್ಯ ಮಹಾಸ್ವಾಮಿಗಳು ಮುಖ್ಯಾಂಗುತಕಲ್ಲು ಇವರಿಗೆ ವಿನಂತಿ ಪತ್ರವನ್ನು ಸಮರ್ಪಿಸಿಕೊಂಡರು. ಸ್ವಾಮಿಗಳು ಸಧ್ಯದ ದೇಶದಲ್ಲಿಯ ಶುದ್ಧಿಪರಿಸ್ಥಿತಿಗಳನ್ನರಿತವರಾದ ಕಾರಣ ಶಿವಮತವಾತ್ಸಲ್ಯಳಾದ ಸದಂಪೇಟೆ ವೀರಾಸಾನಿಯನ್ನು ಪ್ರಾಯಶ್ಚಿತ್ತ ದೀಕ್ಷಾಪರಿಶುದ್ಧಿ ಮಾಡಿದಂತೆ ಜಿ. ನಂ. ೧೪೦-೧೯೨೯ ಉತ್ತರವನ್ನು ಆದವಾನಿ ವೀರಶೈವ ಮಹಾನಾಡು ದೈವಚಾರದವರಿಗೆ ಕಳುಹಿಸಿರುವುದನ್ನು ನೋಡಿದರೆ, ಗುರುಪೀಠಾಧಿಕಾರಿಗಳಾದ ಇತರ ಸ್ವಾಮಿಗಳು ಸಹಿತ, ದೋಷಿಗಳೆಂದು ಗಣನೆಗೆ ತರಲ್ಪಟ್ಟ ತಮ್ಮ ಶಿಷ್ಯ ಜನರನ್ನು ಪ್ರಾಯಶ್ಚಿತ್ತ ಪೂರ್ವಕವಾಗಿ ಶುದ್ಧಿ ಮಾಡೋಣದರಿಂದ ಸಮಾಜದ ಬಲವನ್ನು ವೃದ್ಧಿಮಾಡಿದವರಾಗುವರಲ್ಲದೆ ತಮಗಿರುವ ಶುದ್ಧಿ ಸಂಸ್ಕಾರಾಧಿಕಾರವನ್ನು ನಡಿಸಿದವರಾಗುವರೆಂದು ವಿಜ್ಞಾಪನೆ ಮಾಡಿಕೊಳ್ಳಬೇಕಾಯಿತು.

ಹಿಂದು-ಮುಸಲರ ರಾಜಿ ಪ್ರಯತ್ನ.

ಬಳ್ಳಾರಿ ಜಿಲ್ಲಾ ಮೆಜಿಸ್ಟ್ರೇಟ್ ಇ. ಬೆನ್ನೆಟ್, ಐ. ಸಿ. ಎಸ್. ದೊರೆಯವರು ತಮ್ಮ ಸಮಕ್ಷಮ ಆದವಾನಿಯಲ್ಲಿ ಕಳೆದ ಜನವರಿ ತಾ|| 15 ರಲ್ಲಿ [illegible] ಮೇರೆಗೆ ಹಿಂದುಗಳ ಪರವಾಗಿ ಮ್ಯುನಿಸಿಪಲ್ [illegible]ಗರರಾಯ ಚೋಟಪ್ಪನವರೂ, ಮುಸಲ್ಮಾನರ ಪರವಾಗಿ ಜೆ. ಎಂ. ಡಿ. ಕರ್ನೂಲ್ ಅಬ್ದುಲ್ ರಹಿಮಾನ್ ಸಾಹೇಬರವರೂ ರಾಜೀ ಸಂಧಾನಗಳಿಗೆ ಮಹಮ್ಮದೀಯರ ಕಡೆಯಿಂದ (1) ಗಾಯಿಕಸಾಬು ಇಸ್ಮಾಯಿಲ್ ಸಾಹೇಬು (2) ಮೌಲಾನಾ ಬಶೀರ ಅಹಮದ್ ಸಾಹೇಬು, (3) ಹಕೀಂ ಅಬ್ದುಲ್ ಸತಾರಾ ಸಾಹೇಬು (4) ಆಲೂರು ಅಬ್ದುಲ್ ರಜಾಕು ಸಾಹೇಬು (5) ಮೇಸ್ತ್ರಿ ಗೌಸ್ಸಾಹೇಬು (6) ದರ್ಜಿ ಹುಸೇನ್ ಸಾಹೇಬು (7) ಖಾಜಿ ಖಾದರ್ ಮೊಹದೀನ್ ಸಾಹೇಬು (8) ಕರ್ನೂಲ್ ಅಬ್ದುಲ್ ರಹೀಂ ಸಾಹೇಬು (9) ಗುಂಟಿ ಹಸನಂಮ್ಮದ್ ಸಾಹೇಬು ಮತ್ತು ಹಿಂದುಗಳ ಪರವಾಗಿ ಶ್ರೀ ಜಿ. ಕೆ. ರಾಯಚೋಟಪ್ಪ (2) ರಾಚೋಟಿ ವೀರಣ್ಣ, (3) ಎಲೀ ಮಲ್ಲೇಶಪ್ಪ, (4) ಪುಜಾರೀ ಬಿನ್ನ ವೆಂಕೋಬರಾವ (5) ಕುಂಬಳದ ಲಕ್ಷ್ಮಯ್ಯ, (6) ಕೊಲ್ಲಾಪುರಂ ಜಯಸಿಂಗು (7) ಕಾನಾಜಿ ವೆಂಕೋಬರಾವ, (8) ವಿಠಲ್ ದಾಸು ದಾಮೊದರಶೆಟ್ಟಿ (9) ಗೊಲ್ಲರ ವೆಂಕಪ್ಪ (10) ಕುಂಬಾರ ನರ್ಸಪ್ಪ (11) ಆದಿರಾಜು ಭೀಮರಾಯರು ಆಯಾ ಪಂಗಡಗಳಿಂದ ಚುನಾಯಿಸಲ್ಪಟ್ಟಂಥಾ ಈ ಉಭಯ ಪಕ್ಷಗಳ ಪ್ರತಿನಿಧಿಗಳ ಸಮೇತ ಆದವಾನಿ ಮ್ಯುನಿಸಿಪಲ್ ಆಫೀಸಿನಲ್ಲಿ ಕಳೆದ ಜನವರಿ ತಾ|| 22 ರಲ್ಲಿ ಜಾಯಿಂಟು ಕಾನ್ಫರೆನ್ಸು ಜರಿಗಿಸಿ ಆದವಾನಿ ಸಬ್‌ಡಿವಿಜನಲ್ ಮೇಜಿಸ್ಟ್ರೇಟು ರವರಿಗೆ ರಿಪೋರ್ಟುಗಳನ್ನು ಅಲಾಯಿದಾ ರವಾನಿಸಿಕೊಂಡಂತೆ ತಿಳಿಯಬರುತ್ತದೆ. ಆದವಾನಿ ಗ್ರಾಮದ ಹಿಂದು-ಮುಸಲ್ಮಾನರ ರಾಜಿ ಕುದರಿಸುವ ಫಲಿತಾಂಶವು ಇನ್ನೂ ಬಯಲು ಬೀಳಲಿಲ್ಲ.

ಓರ್ವ ಸ್ಥಳಿಕ.

ಉಪಾಧ್ಯಾಯರ ಸಂಘ.

ಸೊರಬ ತಾಲ್ಲೂಕು ಶಕುನವಳ್ಳಿ ಜಡೇಹೋಬಳಿಯ ಉಪಾಧ್ಯಾಯರ ಸಂಘವು ಇದೇ ತಾ|| 2 ನೇ ಶನಿವಾರ ಶಕುನವಳ್ಳಿ ಗೌ|| ಪ್ರೈ|| ಬಾಯ್ಸ ಸ್ಕೂಲಿನಲ್ಲಿ ಮ|| ಎಸ್. ಬಿ. ನಾಡಗೀರ ಕೆರೆಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸ್ಕೂಲಿನ ಮುಂಭಾಗದಲ್ಲಿ ಸ್ವಾಗತಮಂಟಪವು ಕಟ್ಟಲ್ಪಟ್ಟು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಸ್ಥಳೀಯ ಸ್ಕೂಲ್ ಕಮಿಟಿ ಮೆಂಬರುಗಳಿಗೂ ಗ್ರಾಮಸ್ಥರಿಗೂ ಪೂರ್ವಭಾವಿಯಾಗಿ ಆಮಂತ್ರಣ ಪತ್ರಿಕೆಯು ಕಳಿಸಲ್ಪಟ್ಟಿತ್ತು. ಆದರೆ ಗ್ರಾಮದ ಮುಖಂಡರೂ ಕೆಲವು ಕಮಿಟಿ ಮೆಂಬರುಗಳೂ ಸಂಘಕ್ಕೆ ದಯಮಾಡಿಸದೆ ಇದ್ದದ್ದನ್ನು ನೋಡಿ ಸಭಿಕರು ತುಂಬಾ ವ್ಯಸನಪಟ್ಟುಕೊಂಡರು. ಈಸಲ 9 ಜನ ಉಪಾಧ್ಯಾಯರು ಮಾತ್ರ ಹಾಜರಿದ್ದರು. ಇದನ್ನು ನೋಡಿದರೆ ಉಪಾಧ್ಯಾಯವರ್ಗದ ದುರ್ದೈವವೇ ಎಂದು ಹೇಳಬೇಕಾಗುತ್ತದೆ. ಇನ್ನುಮೇಲಾದರೂ ಉಪಾಧ್ಯಾಯವರ್ಗದವರು ಮತ್ತು ಗ್ರಾಮಸ್ಥರು ಸಹ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಮ್ಮ ಜವಾಬ್ದಾರಿಯನ್ನು ತಿಳಿದುಕೊಂಡು ಮುಂದಿನ ಜನಾಂಗದ ಏಳಿಗೋಸ್ಕರ ಇಂತಹ ಸಂಘಗಳಿಗೆ ಹೋಗಿ ಸಹಕಾರಿಗಳಾಗಿ ಕೆಲಸ ಮಾಡುವರೆಂದು ನಂಬಿದ್ದೇನೆ. ಪರಸ್ಥಳಗಳಿಂದ ಉಪಾಧ್ಯಾಯರೂ ಶ್ರೋತೃಗಳೂ ಬರಲು ತಡವಾದ್ದರಿಂದ ಸಂಘದ ನಡವಳಿಕೆಗಳು ಮಧ್ಯಾಹ್ನ ಸುಮಾರು 1 ಘಂಟೆಗೆ ಪ್ರಾರಂಭವಾದವು. ಮೊದಲು ಬಾಯ್ಸ ಸ್ಕೂಲ್ ವಿದ್ಯಾರ್ಥಿಗಳು ದೇವತಾಪ್ರಾರ್ಥನೆಯನ್ನು ಮಾಡಿದರು. ಅನಂತರ ಅಧ್ಯಕ್ಷರು ಸ್ವಸ್ಥಾನವನ್ನು ಅಲಂಕರಿಸಿದರು. ಪ್ರೋಗ್ರಾಮ್ ಪ್ರಕಾರಾ ಬಸೂರು ಸ್ಕೂಲ್ ಮಾಸ್ತರು ಧರ್ಮರಾಯಶೆಟ್ಟರು ಮಾದರೀಪಾಠವನ್ನು ಮಾಡಿದರು. ಇವರು 3 ನೇ ತರಗತಿಗೆ ವ್ಯವಸಾಯಪಾಠದಲ್ಲಿ ಸಸಿಗೊಬ್ಬರ ಮಾಡುವ ಕ್ರಮವನ್ನು ಬೋಧಿಸಿದರು. ಟ್ರೇನಿಂಗ್ ಆದ ಉಪಾಧ್ಯಾಯರು ಇದನ್ನು ವಿಮರ್ಶೆಮಾಡಿದರು. ಸೆಕ್ರೆಟರಿಯವರ ರಿಪೋರ್ಟು ಓದಲ್ಪಟ್ಟಿತು. ವೃತ್ತಾಂತ ಪತ್ರಿಕೆಯಲ್ಲಿ ಭಾವಿಸಿಬಂದ ಕಳೆದ ತಿಂಗಳಲ್ಲಿ ನಡೆದ ಸಂಘದ ವರದಿಯನ್ನು ಗ. ಸ್ಕೂ. ಮಾ. ಗುರುನಾಥರಾಯರು ಓದಿದರು. ಅನಂತರ ಕಾತವಳ್ಳಿ ಸ್ಕೂ. ಮಾ. ಬಸಪ್ಪನವರು “ಉಪಾಧ್ಯಾಯರ ಕರ್ತವ್ಯ” ಎಂಬ ವಿಷಯವನ್ನು ಕುರಿತು ಉಪನ್ಯಾಸಮಾಡಿದರು. ಜಡೇಪೇಟೆ ಸ್ಕೂ. ಅ. ಮಾ. ಸಿದ್ಧಲಿಂಗಾರ್ಯರು ವಿಕಮತವೆಂಬ ವಿಷಯವನ್ನೂ, ಶಕುನವಳ್ಳಿ ಸ್ಕೂಲು ಅ ಮಾ. ರಂಗಪ್ಪನವರು “ಭೂಗೋಳ” ದ ವಿಚಾರವನ್ನೂ ಕುರಿತು ಉತ್ತಮವಾದ ಉಪನ್ಯಾಸಗಳನ್ನು ಓದಿದರು. ಶಕುನವಳ್ಳಿ ಗ|| ಸ್ಕೂ. ಹೆ. ಮಾ. ಗುರುನಾಥರಾಯರು “ವಿದ್ಯಾಭಿವೃದ್ಧಿಯ ವಿಚಾರದಲ್ಲಿ ಗ್ರಾಮಸ್ಥರ ಕರ್ತವ್ಯ” ಎಂಬ ವಿಷಯವನ್ನು ಕುರಿತು ಸರಸವಾದ ಭಾಷಣಮಾಡಿ ಗ್ರಾಮಸ್ಥರಲ್ಲಿ ಜಾಗ್ರತೆಯನ್ನುಂಟುಮಾಡಿದರು. ಜಡೇಪೇಟೆ ಸ್ಕೂ. ಹೆ. ಮಾ. ಎಸ್. ಬಿ. ರಾಮಚಂದ್ರಯ್ಯನವರು “ತಿದ್ದುವಿಕೆ” ಎಂಬ ವಿಷಯದಮೇಲೆ ಸ್ಫೂರ್ತಿಯಿಂದ ಭಾಷಣಮಾಡಿದರು. ಆಮೇಲೆ 15 ನಿಮಿಷಗಳವರೆಗೆ ವಿರಮಿಸಲ್ಪಟ್ಟಿತು. ವಿರಾಮಕಾಲವಾದಮೇಲೆ ಚರ್ಚೆಗಳು ಪ್ರಾರಂಭವಾದವು. ಅ. ಮಾ. ಸಿದ್ಧಲಿಂಗಾರ್ಯರು ಸ್ಕೂಲಿನಲ್ಲಿ ಕೈಕೆಲಸದ ಪಾಠವು ನಡೆಯುವಾಗ ಬಾಲಕ-ಬಾಲಿಕೆಯರಿಗೆ ಚರಕದಮೇಲೆ ನೂಲು ತೆಗೆಯುವುದನ್ನು ಕಲಿಸಲು ಅ|| ಇನ್ಸ್‌ಪೆಕ್ಟರ್ ಸಾ|| ರವರ ಮೂಲಕ ವಿದ್ಯಾಖಾತೆಯ ಡೈರೆಕ್ಟರ್ ಸಾ|| ರವರಿಂದ ಅಪ್ಪಣೆ ಪಡೆಯಬೇಕೆಂದು ಠರಾವು ತಂದರು. ಇದು ಸರ್ವಾನುಮತದಿಂದ ಪಾಸಾಯಿತು. ಶಕುನವಳ್ಳಿ ಗ. ಸ್ಕೂ. ಮಾ. ಗುರುನಾಥರಾಯರು ‘ಬಾಲಿಕೆಯರಿಗೋಸ್ಕರ ಒಂದು ಪ್ರೈಮರಿ ಪರೀಕ್ಷೆಯನ್ನು ಏರ್ಪಡಿಸುವಂತೆ ಕೇಳಿಕೊಳ್ಳಬೇಕಾಗಿ ಸೂಚಿಸಿದರು. ಚರ್ಚೆಯಲ್ಲಿ ಇದು ಅನಾವಶ್ಯಕವೆಂದು ಭಾವಿಸಲ್ಪಟ್ಟಿತು. ಸಂಘದ ಆಡಿಟರಾಗಿ ನೇಮಿಸಲ್ಪಟ್ಟಿದ್ದ ಎಸ್. ಬಿ. ರಾಮಚಂದ್ರಯ್ಯನವರು ಬದನಾಳದ ನೇಯಿಗೆ ಟ್ರೇನಿಂಗ್ ಕ್ಲಾಸಿಗೆ ಹೋಗಬೇಕಾದ್ದರಿಂದ ಅವರ ಜಾಗದಲ್ಲಿ ಬೇರೆ ಉಪಾಧ್ಯಾಯರು ಬರುವವರೆಗೂ ಅ. ಮಾ. ಸಿದ್ಧಲಿಂಗಾರ್ಯರವರೇ ಸದರಿ ಆಡಿಟರ್ ಕೆಲಸವನ್ನು ನೋಡಿಕೊಳ್ಳತಕ್ಕದೆಂದು ಒಮ್ಮತದಿಂದ ತೀರ್ಮಾನಿಸಲಾಯಿತು. ಕಾತವಳ್ಳಿ ಸ್ಕೂ. ಮಾ. ಬಸಪ್ಪನವರು ಈ ಸಂಘವು ಮುಂದಿನ ತಿಂಗಳಲ್ಲಿ (ತಾ|| 2-3-1929 ನೇ ಶನಿವಾರದಿವಸ) ಕಾತವಳ್ಳಿಯಲ್ಲಿ ನಡೆಯಬೇಕಾಗಿ ಸೂಚಿಸಿದರು. ಇದಕ್ಕೆ ಎಲ್ಲರೂ ಒಪ್ಪಿದರು. ಆ ದಿವಸ ಕೆಲಗುಂದದ ಸ್ಕೂ. ಮಾ. ಶಂಕರಪ್ಪನವರು ಮಾದರಿ ಪಾಠವನ್ನು ಮಾಡಲು ಒಪ್ಪಿದರು. ಎಸ್. ಬಿ. ರಾಮಚಂದ್ರಯ್ಯನವರು ತಾವು ಆ ಕಾಲಕ್ಕೆ ಬದನಾಳದಲ್ಲಿದ್ದರೂ ಅಧ್ಯಾತ್ಮಿಕ ವಿಚಾರವನ್ನೊಳಗೊಂಡ “ಉಪಾಧ್ಯಾಯರ ಕರ್ತವ್ಯ” ಎಂಬ ಲೇಖವನ್ನು ಬರೆದು ಕಳಿಸುವುದಾಗಿಯೂ, ಅದನ್ನು ಸೆಕ್ರೆಟರಿಯವರು ಓದಬಹುದಾಗಿಯೂ ಅಭಿಪ್ರಾಯಪಟ್ಟರು. ಶಕುನವಳ್ಳಿ ಗ|| ಸ್ಕೂ. ಮಾ. ಗುರುನಾಥರಾಯರು “ಉಪಾಧ್ಯಾಯರ ಹಿತಚಿಂತನೆ” ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಲು ಒಪ್ಪಿದರು. ಸ್ಕೂಲ್ ಕಮಿಟಿ ಮೆಂಬರುಗಳೂ, ಗ್ರಾಮಸ್ಥರೂ, ಉಪಾಧ್ಯಾಯರೂ ಸಹಕಾರಿಗಳಾಗಿ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡಿಕೊಂಡು ಹೋಗಬೇಕಾಗಿ ತಿಳಿಸಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು. ಇಲ್ಲಿಗೆ ಸಭೆಯ ಕಾರ್ಯಕಲಾಪಗಳು ಸಮಾಪ್ತಿಯಾದವು. ಆಮೇಲೆ ಸಭಿಕರೆಲ್ಲರೂ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಿದರು. ಶ|| ಸ್ಕೂ. ಮಾ. ಗುರುನಾಥರಾಯರು ಕೆಲವು ಹಾರ್ಮೋನಿಯಂಗಳ ಜತೆಗೆ ಭಾರತಮಾತೆಯ ಪ್ರಾರ್ಥನೆಮಾಡಿದರು. ಕಳುನವಳ್ಳಿ ಬಾ. ಸ್ಕೂ. ಹೆ. ಮಾ. ಯಲ್ಲಪ್ಪನವರು ಸೂಚಿಸಿದ ಮೇರಿಗೆ ಮ|| ಸಿದ್ಧಲಿಂಗಾರ್ಯರು ಸಾಯಂಕಾಲದಲ್ಲಿ “ಶ್ರೀಕೃಷ್ಣಲೀಲಾ” ಎಂಬ ಆಖ್ಯಾನವನ್ನಿಟ್ಟುಕೊಂಡು ಬಹು ಸ್ವಾರಸ್ಯವಾಗಿ ಹರಿಕೀರ್ತನೆಯನ್ನು ಮಾಡಿ ಶ್ರೋತೃಸಮುದಾಯವನ್ನು ಸಂತೋಷಗೊಳಿಸಿದರು.

ಗುರುನಾಥರಾವ್, ಕಾರ್ಯದರ್ಶಿ.

ಶ್ರೀ ಸಿದ್ಧಲಿಂಗೇಶ್ವರ ರಥೋತ್ಸವಾಹ್ವಾನ ಪತ್ರಿಕಾ.

ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣಾವಿರಳ ಪರಂಜ್ಯೋತಿ ಪರಬ್ರಹ್ಮ ಪರಶಿವ ಲೀಲಾವತಾರ ಶ್ರೀ ಸಿದ್ಧಗಂಗಾ ಮಹಾಕ್ಷೇತ್ರಾಧ್ಯಕ್ಷ ಶ್ರೀಮನ್ನಿರಂಜನ ಉದ್ಧಾನಸ್ವಾಮಿನಾಂ ಸನ್ನಿಧಾನದಿಂದ—

ತಾ|| 8-3-29 ನೇ ಶುಕ್ರವಾರ ಸ್ವಸ್ತಿವಾಚನಾದಿ ಕಾರ್ಯಗಳು, ತಾ|| 9-3-29 ನೇ ಶನಿವಾರ ಧ್ವಜಾರೋಹಣಾದಿ ಕಾರ್ಯಗಳು, ತಾ|| 10-3-29 ನೇ ಭಾನುವಾರ ರಥಾಂಗಹೋಮ ರಥೋತ್ಸವವೂ, ತಾ|| 11-3-29 ನೇ ಸೋಮವಾರ ಹುಲಿವಾಹನವೂ, ನವರಂಗಪಾಲಕಿಯ ಉತ್ಸವವೂ, ತಾ|| 12-3-29 ನೇ ಮಂಗಳವಾರ ಬೆಳ್ಳಿಪಾಲಕಿ ಉತ್ಸವವೂ, ತಾ|| 13-3-29 ನೇ ಬುಧವಾರ ಬಿಲ್ವವೃಕ್ಷವಾಹನವೂ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ರವರ ಅಧ್ಯಕ್ಷತೆಯಲ್ಲಿ ದನಗಳ ಪ್ರದರ್ಶನವೂ, 14-3-29 ನೇ ಗುರುವಾರ ಗಜೇಂದ್ರವಾಹನವೂ, ಅಶ್ವವಾಹನವೂ, ತಾ|| 15-3-29 ನೇ ಶುಕ್ರವಾರ ತೆಪ್ಪೋತ್ಸವವೂ, 16-3-29 ನೇ ಶನಿವಾರ ಪಂಚಬ್ರಹ್ಮೋತ್ಸವವೂ ನಡೆಯುತ್ತವೆ.

ಆದುದರಿಂದ ಸರ್ವರೂ ಆಕಾಲಕ್ಕೆ ಬಂದು ಈ ಮಹಾಕಾರ್ಯವನ್ನು ನೆರವೇರಿಸಿ ದರ್ಶನಾಶೀರ್ವಾದಕ್ಕೆ ಪಾತ್ರರಾಗಿ ನಮ್ಮ ಮನಸ್ಸಂತೋಷಪಡಿಸದೆ ಇರಲಾರರೆಂದು ನಂಬಿರುತ್ತೇವೆ. ಆಗ್ಗೆ ವಾಡಿಕೆಯಂತೆ ಎತ್ತುಗಳ ಪರಿಷೆಯೂ ಪ್ರದರ್ಶನವೂ ಸಹ ನಡೆಯುತ್ತದೆ.



ಫೋಟೋ, ಲೈನ್, ಯಲಕ್ಟ್ರೋ
ಲೆಡ್‌ಬ್ಲಾಕುಗಳು, ಅರಗಿನಸೀಲು:
ದವಾಲಿಬಿಲ್ಲೆಗಳು ಮತ್ತು
ರಬ್ಬರ್ ಮೋಹರುಗಳನ್ನೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

11

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ ಪ್ಯಾಥಿ ಕಂಪೆನಿಯ ಪ್ರೊಜೆಕ್ಟರ್ ಮಿಶ್ಯನ್, ಆರ್ಕ್‌ಲ್ಯಾಂಪು, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12—4]

೧೯೨೯ ನೆಯ ಇಸವಿ ಫೆಬ್ರವರಿ ತಾ|| ೧೬ ರಿಂದ ೧೯೨೯ ನೆಯ ಇಸವಿ ಫೆಬ್ರವರಿ ತಾ|| ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ವಿಭವನಾಮಸಂವತ್ಸರದ ಮಾಘ ಶುದ್ಧ ಸಪ್ತಮಿಯಿಂದ ಮಾಘ ಶುದ್ಧ ಚತುರ್ದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭ ಮಾಸ
16	1 ಶನಿ	ಸಪ್ತ	25-50	ಭರ	18-0	5
17	2 ಭಾನು	ಅಷ್ಟ	20-22	ಕೃತ್ತಿ	14-19	6
18	3 ಸೋಮ	ನವ	14-32	ರೋಹಿ	10-18	7
19	4 ಮಂಗಳ	ದಶ	8-55	ಮೃಗ	6-8	8
20	ಬುಧ	ಏ-ಉ	2-43-54-15	ಆರ್ದ್ರಾ	2-1	9
21	5 ಗುರು	ತ್ರಯೋ	51-49	ಪುಷ್ಯ	54-37	10
22	ಶುಕ್ರ	ಚತು	47-20	ಆಶ್ಲೇ	51-53	11

(1) ರಥಸಪ್ತಮಿ, ಸೂರ್ಯಚಂದ್ರವೃಷಂ, ಹೇಮಗಿರಿ ರಂಗಸ್ವಾಮಿ ರಥಃ, (2) ಮುಡುಕುತೊರೆಯಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿ ರಥಃ. (3) ಮಧ್ವನವಮಿ, ಮಳೆನಕ್ಷತ್ರ-ಶತಭಿಷ ೧ ನೆಯಪಾದ. (4) ಸ್ಮಾರ್ತಾನಾಂ ಭೀಷ್ಮೈಕಾದಶಿ, ತುಲಕಪದ್ಮವೃಷಂ. (5) ಮಳೆನಕ್ಷತ್ರ-ಶತಭಿಷ ೨ ನೆಯಪಾದ.

ಮೈಸೂರು : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮುದಿಗತರಾಜಮಂಡಲಹಿತೈಷಾ | ಭುವನಪಟಲ ಕೃತಾವಕಾಶಾ ಪಕ್ಷಜ ನಕ್ಷತ್ರ ಶೋಭರಾಜೀಯಾ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾತಲಿತ ಸಾದುಗ್ಧಾಲವಾಲಂವಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತನಾಲಾಕುಲಂ | ಪ್ರೇಮಂಚೆತ್ತಿಳಿಯಂಸವಾಪುರಿಗೆ ಗೌರೀಶಾಮುಕಂ[illegible] ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸನ್ ೧೯೨೯ ನೆಯ ಇಸವಿ ಫೆಬ್ರವರಿ ತಾರೀಖು ೨೩ ನೆಯ ಶನಿವಾರ [ಸಂಚಿಕೆ ೮

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೩—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೫—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್.

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ 1/4 ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮದ್ಯುವರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತಿದೆ. ಶ್ರೀಮದ್ಯುವರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರು ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನೂ ಇದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಶ್ರೀ|| ಸಿರಸಿಂಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ, ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡಿಡುವ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ್ಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಸ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

19

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 6½" × 4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½" × 4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಲ್ ಇಟ್ಟು ಮುಚ್ಚಳ ಹಾಕಿದ್ದು 5" × 2¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5" × 2¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಪೂರಾ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಹೆಚ್ಚಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ಪಾರ್ಸಲ್ ತರಿಸಿಕೊಳ್ಳುವವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಷೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3" × 4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0. 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10" + 14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಪೂರಾ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು ಹೋದವರುಷದಂತೆ ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

[50—15]

ಮಣಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ” ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನನ್ನ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಘಂಟಾಗಳೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

“ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ”
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೀಗೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೧, ಮದ್ರಾಸು.

[50—18]

ಮೈಸೂರು ಸ್ಟಾರ್.

೧೯೩೦ ನೆಯ ಇಸವಿ ಫೆಬ್ರವರಿ ತಾ|| ೨೨ ನೆಯ ಶನಿವಾರ.

ಪ್ರಜೆಗಳೂ, ಪ್ರಜಾಸೇವೆಯೂ.

ದೈವ ನಿರ್ಮಾಣದಲ್ಲಿ ಯಾವನೊಬ್ಬನೂ ಆಜನ್ಮಸಿದ್ಧವಾಗಿ ವಿಧಿತವಾದ ಕಸಬಿಗೆ ಅರ್ಹತೆಯುಳ್ಳವನಾಗಿರುವುದಿಲ್ಲ. ಜನ್ಮತಃ ಪೂರ್ವ ಪುಣ್ಯಪರಿಪಾಕದಿಂದ ಬುದ್ಧಿಶಕ್ತಿಯನ್ನು ಪಡೆಯುವನಾದರೂ ಬಾಲ್ಯದಿಂದಲೂ ಬುದ್ಧಿಯನ್ನು ರುಜುಮಾರ್ಗದಲ್ಲಿರಿಸಿ ಸುಶಿಕ್ಷೆಯಿಂದ ವೃದ್ಧಿಗೊಳಿಸಬೇಕು. ಶಿಕ್ಷಣವೂ ಅಭ್ಯಾಸವೂ ಇಲ್ಲದಿದ್ದರೆ ಯಾವ ಮತೀಯನಾದರೂ ಒಂದೇ ದರ್ಜೆಯವನಾಗುವನು. ಬ್ರಾಹ್ಮಣರು ಬಹುಕಾಲದಿಂದಲೂ ವಿದ್ಯಾಭ್ಯಾಸಮಾಡಿ ಲೌಕೀಕ ಸಂಪತ್ತಿನಲ್ಲಿ ಮುಂಬರಿದ ಮಾತ್ರದಿಂದಲೇ ಕಾಲಾಂತರಕ್ಕೂ ಆ ವರ್ಗದವರು ಮಾತ್ರ ಪದವಿ ಅಧಿಕಾರ, ಐಶ್ವರ್ಯವನ್ನನುಭವಿಸಬೇಕೆಂದೂ, ಇತರರು ಅವರಂತೆಯೇ ವಿದ್ಯಾವಂತರಾಗಿ ಅವರಿಗೆ ಸರಿಸಮಾನರಾಗಿ ಮುಂಬರಿಯಲಾಗದೆಂದು ಹೇಳುವುದು ಉತ್ತಮಕುಲಪ್ರಸೂತರಿಗೆ ಯೋಗ್ಯವಾದುದಲ್ಲ. ಹಾಗೆನ್ನುವುದು ಅವರ ಮತದ ಪರಮ ಪವಿತ್ರವಾದ ಧರ್ಮಕ್ಕೆ ವಿರೋಧವಾದುದು.

ಈ ಕೆಳಗೆ ಮುದ್ರಿಸಿರುವ ವಿವರದಿಂದ ಸಂಸ್ಥಾನದಲ್ಲಿ ಬ್ರಾಹ್ಮಣರಿಗಿರುವ ಅಧಿಕಾರ, ಪದವಿ, ಐಶ್ವರ್ಯವು ವ್ಯಕ್ತವಾಗುವುದು. ಸಂಸ್ಥಾನದ ಒಟ್ಟು ಪ್ರಜಾಬಲವು 60 ಲಕ್ಷ; ಅದರಲ್ಲಿ ಬ್ರಾಹ್ಮಣರಿರುವುದು ಎರಡು ಲಕ್ಷ; ಉಳಿದವರು 58 ಲಕ್ಷ. ಬ್ರಾಹ್ಮಣರ ಸಂಖ್ಯೆಯ ಪ್ರಕಾರ ಅವರಿಗೆ ಸರ್ಕಾರಿಯುದ್ಯೋಗಗಳನ್ನು ಹಂಚುವುದಾದರೆ ಈಗ ಅವರು ಅನುಭವಿಸುತ್ತಿರುವುದರಲ್ಲಿ ಶೇಕಡ ಎರಡರಷ್ಟು ಸಹ ಅವರಿಗೆ ನ್ಯಾಯವಾಗಿ ಸಲ್ಲುವುದಿಲ್ಲ. ಹೀಗಿದ್ದರೂ ಬ್ರಾಹ್ಮಣ ಗುಲ್ಲುಗಾರರು ಬ್ರಾಹ್ಮಣರಿಗೆ ಇನ್ನು ಹೆಚ್ಚು ಸೌಲಭ್ಯಗಳು ಬೇಕೆಂದೂ, ಉದ್ಯೋಗಗಳು ಇನ್ನು ಹೆಚ್ಚಾಗಿ ತಮಗೆ ಸಲ್ಲಬೇಕೆಂದೂ ದುರಾಶೆಪಟ್ಟು ಗುಲ್ಲೆಬ್ಬಿಸುತ್ತಿರುವುದು ಸರ್ವಥಾ ಅನುಚಿತವಲ್ಲದೆ ಅಯೋಗ್ಯವಾದುದೆಂದು ಹೆಚ್ಚಾಗಿ ಒತ್ತಿ ಹೇಳಬೇಕಾದ ಅವಶ್ಯವಿಲ್ಲ.

ಮಿಲ್ಲರ್ ಸಮಿತಿಯ ವರದಿಯಿಂದ ಬ್ರಾಹ್ಮಣರಿಗಾದ ನಷ್ಟವುತಾನೆ ಏನೆಂಬುದು ವ್ಯಕ್ತವಾಗುವುದಿಲ್ಲ. ನಾವು ಈ ಕೆಳಗೆ ಪ್ರಕಟಿಸಿರುವ ಪಟ್ಟಿಯನ್ನು ಪರಿಶೀಲಿಸಿದರೆ ಮಿಲ್ಲರ್ ವರದಿಗೆ ಮುಂಚೆ, ಅಂದರೆ 1918 ರಲ್ಲಿ ಸರ್ಕಾರಿ ಉದ್ಯೋಗಗಳಲ್ಲಿದ್ದ ಬ್ರಾಹ್ಮಣರ ಸಂಖ್ಯೆಯೂ ಮಿಲ್ಲರ್ ಸಮಿತಿಯ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿದ ಹತ್ತು ವರ್ಷಗಳ ಮೇಲೆ, ಅಂದರೆ 1928 ರಲ್ಲಿ ಮತ್ತಷ್ಟು ಬ್ರಾಹ್ಮಣ ಅಧಿಕಾರಿಗಳ ಸಂಖ್ಯೆಯು ಹೆಚ್ಚಿರುವುದೇ ವಿನಾ ಕಡಿಮೆಯಾಗಿರುವುದಿಲ್ಲ. ಹಾಗಾದರೆ ಬ್ರಾಹ್ಮಣರ ವಿವಾದವೇನು? ಹಿಂದುಳಿದವರಿಗೆ ನಾಲ್ಕಾರು ಉದ್ಯೋಗಗಳು ಮಿಲ್ಲರ್ ವರದಿಯ ಆಶ್ರಯದಲ್ಲಿ ದೊರೆತುವು. ಬ್ರಾಹ್ಮಣರು ಆ ಉದ್ಯೋಗಗಳನ್ನು ಸಹ ತಮ್ಮವರಿಗೇ ಏಕೆ ಕೊಡಲಿಲ್ಲವೆಂಬ ಆಕ್ರೋಶದಿಂದ ಗುಲ್ಲೆಬ್ಬಿಸುತ್ತಿರುವರು. ಬ್ರಾಹ್ಮಣರು ಆಜನ್ಮಸಿದ್ಧವಾಗಿ ಕಾರ್ಯದಕ್ಷತೆಯುಳ್ಳವರಂತೆ! ಆ ಕಾರಣದಿಂದ ಅವರಿಗೆ ಎಲ್ಲರೂ, ಎಲ್ಲೆಲ್ಲಿಯೂ ಪೂಜ್ಯತೆಯನ್ನು ಕೊಟ್ಟು ಉಚ್ಚಸ್ಥಾನದಲ್ಲಿ ಕೂರಿಸಬೇಕಂತೆ! ಹಾಗಿಲ್ಲದಿದ್ದರೆ ಅವರು ಗುಲ್ಲೆಬ್ಬಿಸಿ ಗಲಭೆ ಮಾಡುವುದೇ ಸಿದ್ಧವಂತೆ! ಇದು ಯಾವ ನ್ಯಾಯ? ಧರ್ಮವೋ ಕರ್ಮವೋ ಅದೊಂದೂ ಅವರಿಗೆ ಬೇಕಿಲ್ಲ. ಬಹು ಕಾಲದಿಂದಲೂ ಸರ್ಕಾರಿ ಅಧಿಕಾರಗಳನ್ನು ಅನುಭವಿಸುತ್ತಿರುವರಂತೆ. ಆದ್ದರಿಂದ ಸರ್ಕಾರಿ ಉದ್ಯೋಗವೆಲ್ಲಾ ಅವರಿಗೆ ಜಹಗೀರಾಯಿತಂತೆ. ಅದನ್ನು ಇತರರಾರೂ ವಿವಾದಿಸಕೂಡದಂತೆ. ಸರ್ ವಿಶ್ವೇಶ್ವರಯ್ಯನವರೂ ಇದೇ ಅಭಿಪ್ರಾಯವನ್ನು ತಮ್ಮ ವರದಿಯಲ್ಲಿ ಬರೆದಿರುವುದಿಲ್ಲನೆ? ವರದಿಯನ್ನು ಬರೆದವರಬ್ಬರೂ ಸೇರುಗಾರ ವರ್ಗದವರೆಂದ ಬಳಿಕ ಹಾಗೆ ಅಭಿಪ್ರಾಯಪಟ್ಟಿರುವುದೇನಚ್ಚರಿಯಲ್ಲವೆಂಬುದು ವ್ಯಕ್ತವಾಗುತ್ತದೆ.

ಬ್ರಾಹ್ಮಣರಿಗೆ ಸರ್ಕಾರದವರು ಅನ್ಯಾಯ ಮಾಡಿರುವರೆಂದೂ, ಈ ಅನ್ಯಾಯಕ್ಕೆ ಮಿಲ್ಲರ್ ವರದಿಯೇ ಕಾರಣವೆಂದೂ ಹೇಳುತ್ತಿರುವರಷ್ಟೆ. ಮಿಲ್ಲರ್ ವರದಿಯಲ್ಲಿ ಹೇಳಿರುವುದೇನು?— ಸರ್ಕಾರಕ್ಕೆ ಸಲ್ಲುವ ಕಂದಾಯ ಕೌಳಿಗೆಯ ಆದಾಯದ ಮುಕ್ಕಾಲುಮೂರುವೀಸೆ ಪಾಲು ಹಿಂದುಳಿದವರಿಂದ ವಸೂಲಾಗುವುದಾದರೂ ಅವರಿಗೆ ಸರ್ಕಾರಿಯುದ್ಯೋಗಗಳಲ್ಲಿ ಉಚಿತವಾದ ಭಾಗವು ಅವರಿಗೆ ದೊರೆಯದಂತೆ ಕೇವಲ ಒಂದುವರ್ಗದವರೇ ಅನುಭವಿಸುತ್ತಿರುವುದರಿಂದ ನ್ಯಾಯವಾಗಿ ಹಿಂದುಳಿದವರಿಗೆ ಸಲ್ಲಬೇಕಾದಷ್ಟು ಉದ್ಯೋಗಗಳು ಇನ್ನುಮುಂದೆ ಅವರಿಗೆ ಕೊಡಬೇಕೆಂದೂ, ಬ್ರಾಹ್ಮಣವರ್ಗದವರು ಸಹಾನುಭೂತಿಯಿಂದ ಹಿಂದುಳಿದವರಿಗೆ ಉತ್ತೇಜನ ಕೊಟ್ಟು ಅವರನ್ನು ಮುಂಬರಿಸಬೇಕೆಂದೂ, ದೇಶಸೇವೆಯಲ್ಲಿ ಹಿಂದುಳಿದವರು ಭಾಗಿಗಳಾಗಲು ಅವರಿಗೆ ಅವಕಾಶಕೊಡಬೇಕೆಂದೂ ಹೇಳಿರುವರು. ನಮ್ಮ ಘನಸರ್ಕಾರದವರೂ, ಕೃಪಾಳುಗಳಾದ ನಮ್ಮ ಮಹಾಪ್ರಭುಗಳೂ ಮಿಲ್ಲರ್ ಸಲಹೆಗಳನ್ನು ಅನುಮೋದಿಸಿ ತದನುಸಾರ ಹಿಂದುಳಿದವರಿಗೆ ಉತ್ತೇಜನಕೊಡಬೇಕೆಂದು ಅಪ್ಪಣೆಯಿತ್ತರು. ಆದರೆ ವಾಸ್ತವವಾಗಿ ಅಪ್ಪಣೆಯು ಅನುಚರಣೆಯಲ್ಲಿ ತರಲು ಬ್ರಾಹ್ಮಣಾಧಿಕಾರಿಗಳು ಅವಕಾಶ ಕೊಡದೆ ನಾನಾತೆರನಾದ ತೊಂದರೆ ತೊಡಕುಗಳನ್ನು ತಂದೊಡ್ಡಿದರು. ಹೆಸರಿಗೆಮಾತ್ರ ಮೈಸೂರು ಸರ್ಕಾರದಲ್ಲಿ ಹಿಂದುಳಿದವರಿಗೆ ಸರ್ಕಾರದ ಉದ್ಯೋಗಗಳು ಹೆಚ್ಚುಹೆಚ್ಚಾಗಿ ಕೊಡಲ್ಪಡುತ್ತಿವೆಯೆಂದೂ ಬ್ರಾಹ್ಮಣರಿಗೆ ಉದ್ಯೋಗ ದೊರೆಯದೆ ಪೇಚಾಡುತ್ತಿರುವರೆಂದೂ ಪ್ರಸಿದ್ಧವಾಗಿ ಹೋಯಿತು. ಅಂತರ್ಯದಲ್ಲಿ ಉದ್ಯೋಗಗಳೆಲ್ಲವೂ ಮುಂಬರಿದವರಿಗೇ ದಕ್ಕಿಹೋದುವು. ಕೋತಿಯು ಬುತ್ತಿಯನ್ನು ತಿಂದೇಬಿಟ್ಟಿತು. ಬಡಪಾಯಿ ಮೇಕೆಯಮೂತಿಗೇನೋ ಕೋತಿಯ ಕೈಗೆ ಹತ್ತಿದ್ದ ಎಂಜಲು ಹತ್ತಿಕೊಂಡು ಲೋಕಕ್ಕೆಲ್ಲಾ ಮೇಕೆಯೇ ಬುತ್ತಿಯನ್ನು ತಿಂದಿತೆಂಬ ಪ್ರತೀತಿಯು ಪ್ರಕಟವಾಗಿ ಹೋಯಿತು!

ವರ್ಗಗಳ ಕಸಬನ್ನು ಅನುಸರಿಸಿ ಜೀವನವನ್ನು ಹೊರೆದುಕೊಳ್ಳಬೇಕೆಂಬುವ ಗುಲ್ಲುಗಾರರು ಮೊದಲು ತಮ್ಮ ಜನಗಳಿಗೆ ಬುದ್ಧಿಹೇಳಿ ತಮ್ಮ ಪೂರ್ವಜರಂತೆ ಪಂಚಾಂಗ ದರ್ಭೆಯನ್ನು ತೆಗೆದುಕೊಂಡು ನಿರ್ಮಲಾತ್ಮರಾಗಿ ಜನಗಳಿಗೆ ಆತ್ಮತತ್ವವನ್ನು ಬೋಧಿಸಿ ಜೀವನವನ್ನು ಸಾರ್ಥಕಗೊಳಿಸಿರೆಂದು ಹೇಳುವವರಾದರೆ ಇತರರೂ ಅವರವರ ಪೂರ್ವಿಕರ ಕಸಬನ್ನು ಕೈಕೊಳ್ಳುವರು. ಅದನ್ನುಬಿಟ್ಟು ತಾವುಮಾತ್ರ ಪುರುಷೋತ್ತಮರೆಂದೂ, ಇತರರೆಲ್ಲರೂ ಅಧಮರೆಂದೂ ವಿಜೃಂಭಿಸುತ್ತಾ ಹೋದರೆ ಮತವೈರವೈಷಮ್ಯಗಳೆಂದಿಗೂ ಕಡಿಮೆಯಾಗಲಾರವು. ಬ್ರಾಹ್ಮಣ ಸಹೋದರರೆ! ಸಮಾಜದಲ್ಲಿ ಜೀವನೋಪಾಯವನ್ನು ಅವರವರ ಬುದ್ಧಿಶಕ್ತಿ ಜ್ಞಾನಶಕ್ತಿಗನುಸಾರವಾಗಿ ಹಂಚಿಕೊಂಡು ಸೌಹಾರ್ದದಿಂದಲೂ ಪರಸ್ಪರ ಸಹಾಯದಿಂದಲೂ ಸಂಪಾದಿಸಿಕೊಳ್ಳುವುದೇ ಸರ್ವಥಾ ನ್ಯಾಯವಾದ ಮಾರ್ಗವು. ಇತರರ ಏಳ್ಗೆಯನ್ನು ಕಂಡು ಕರುಬುವುದನ್ನು ಇನ್ನಾದರೂ ಬಿಟ್ಟುಬಿಡಿರಿ. "ಸರ್ವೇಜನಾಸ್ಸುಖಿನೋಭವಂತು" ಎಂಬ ನಿಮ್ಮ ಪೂರ್ವಜರ ಸಂಕಲ್ಪವನ್ನು ಸ್ಮರಣೆಯಲ್ಲಿಟ್ಟು ಅದನ್ನು ಅನುಚರಣೆಯಲ್ಲಿ ತನ್ನಿರಿ. ಹಾಗಲ್ಲದೆ ಸಕಲ ಸೌಲಭ್ಯಗಳೂ ನಿಮಗೇ ಇರಬೇಕೆಂದರೂ ಸಾಧ್ಯವಾಗಲಾರದು. ಇತರರು ನಿಮಗೆ ನ್ಯಾಯವಾಗಿ ಸಲ್ಲಬೇಕಾದುದನ್ನು ನಿಮ್ಮಿಂದ ಕಿತ್ತುಕೊಳ್ಳಲೂ ಸಾಧ್ಯವಾಗಲಾರದು. ಅವರವರ ಹಕ್ಕುಬಾಧ್ಯತೆಗಳು ಅವರವರಿಗೆ ಸಲ್ಲಲೇಬೇಕು.

ಸರ್ಕಾರಿಯುದ್ಯೋಗದಲ್ಲಿರುವ ಬ್ರಾಹ್ಮಣರಸಂಖ್ಯೆ

ಕಳೆದವರ್ಷ (1929) ಜುಲೈ ತಿಂಗಳಲ್ಲಿ ಸಂಸ್ಥಾನದ ಉದ್ಯೋಗದಲ್ಲಿ ತಿಂಗಳಿಗೆ 30 ರಿಂದ 130 ರ ವರೆಗೆ ಸಂಬಳ ತೆಗೆಯುವ ಬ್ರಾಹ್ಮಣರ ಸಂಖ್ಯೆ :—

ಕಚೇರಿ.	ಒಟ್ಟು ಸ್ಥಳಗಳು.	ಬ್ರಾಹ್ಮಣರು.
ರೆ. ಕಮಿಷನರ್	27	16
ಫಾರೆಸ್ಟ್ ಕನ್ಸರ್ವೇಟರ್	17	11
ಎಕ್ಸೈಜ್ ಕಮಿಷನರ್	21	13
ರೆಜಿಸ್ಟ್ರೇಷನ್ ಇ. ಜ.	12	7
ಜ|| ಮತ್ತು ರೆ|| ಸೆಕ್ರೆಟೇರಿಯಟ್	144	97
ಕಂಟ್ರೋಲರ್	313	228
ಚೀಫ್‌ಕೋರ್ಟ್ ರೆಜಿಸ್ಟ್ರಾರ್	41	21
ಲಾಡಿಪಾರ್ಟ್‌ಮೆಂಟ್	11	8
ಪೋಲೀಸ್ ಇ. ಜ.	14	7
ವಿದ್ಯಾಖಾತೆ ಡೈರೆಕ್ಟರ್	61	41
ವ್ಯವಸಾಯದ ಇಲಾಖೆ	22	13
ರೇಷ್ಮೆ ವ್ಯವಸಾಯ	39	26
ಕೈಗಾರಿಕೆ ವ್ಯಾಪಾರ	17	13
ಪರಸ್ಪರ ಸಹಾಯಸಂಘ	10	7
ವಿದ್ಯುಚ್ಛಕ್ತಿ	236	134

ಸರ್ಕಾರಿಯುದ್ಯೋಗಗಳಲ್ಲಿ ಒಟ್ಟು 1,036 ಸ್ಥಳಗಳ ಪೈಕಿ ಬ್ರಾಹ್ಮಣರು 679 ಸ್ಥಳಗಳನ್ನು ಆಕ್ರಮಿಸಿಕೊಂಡು ಅನುಭವಿಸುತ್ತಿರುವರು. ಇತರ ವರ್ಗಗಳೆಲ್ಲ ಸೇರಿ 384 ಸ್ಥಳಗಳನ್ನು ಪಡೆದಿರುವರು. ಈ ಉದ್ಯೋಗಗಳೆಲ್ಲಾ ಕೆಳದರ್ಜೆಗೆ ಸೇರಿದ ಗುಮಾಸ್ತವರ್ಗದವು. ಉತ್ತಮವರ್ಗದವರಲ್ಲಿ 1928 ನೇ ಇಸವಿಯಲ್ಲಿದ್ದ ಸಂಖ್ಯೆ :—

ಸಂಬಳ	ಬ್ರಾಹ್ಮಣರು	ಇತರರು
250	446	124
250–500	230	54
500–800	77	12
800–1,200	22	4
1,200 ಮೇಲ್ಪಟ್ಟವು	10	2

ಇದೇ ಸಂಖ್ಯೆಗಳು 1918 ರಲ್ಲಿ ಹೇಗಿದ್ದುವೆಂದರೆ :—

ಸಂಬಳ	ಬ್ರಾಹ್ಮಣರು	ಇತರರು
100–250	362	54
250–450	150	28
450–800	49	17
800 ಮೇಲ್ಪಟ್ಟವು	41	8

ಒಟ್ಟು ಸ್ಥಳಗಳ ಪೈಕಿ ಉತ್ತಮವರ್ಗದಲ್ಲಿ 1918 ನೇ ಇಸವಿಯಲ್ಲಿ 602 ಮಂದಿ ಬ್ರಾಹ್ಮಣರೂ, 167 ಮಂದಿ ಇತರರೂ ಒಟ್ಟು ಸ್ಥಳಗಳ ಪೈಕಿ ಉತ್ತಮವರ್ಗದಲ್ಲಿ 1918ನೇ ಇಸವಿಯಲ್ಲಿ 602 ಮಂದಿ ಬ್ರಾಹ್ಮಣರೂ, 167 ಮಂದಿ ಇತರರೂ ಇದ್ದರು. 1928 ರಲ್ಲಿ 788 ಮಂದಿ ಬ್ರಾಹ್ಮಣರೂ 331 ಮಂದಿ ಇತರರೂ ಇದ್ದರು. ಈ ಸಂಖ್ಯೆಯನ್ನು ಪರಿಶೀಲಿಸಿದರೆ ಬ್ರಾಹ್ಮಣ ಉದ್ಯೋಗಸ್ಥರ ಸಂಖ್ಯೆಯು ಮಿಲ್ಲರ್ ವರದಿಯು ಹುಟ್ಟಿದಾಗಿನಿಂದ ಹೆಚ್ಚಿತೇ ವಿನಾ ಕಡಿಮೆಯಾಗಿರುವುದಿಲ್ಲವೆಂಬುದು ಮಹಾಜನಗಳಿಗೆ ವ್ಯಕ್ತವಾಗುವುದು. ಹೀಗಿದ್ದಾಗ್ಗ್ಯೂ ಬ್ರಾಹ್ಮಣರು ತಮಗೆ ಮೈಸೂರು ಸರ್ಕಾರದವರು ಅನ್ಯಾಯಮಾಡಿದರೆಂದೂ ತಮಗೆ ಈ ರಾಜ್ಯದಲ್ಲಿ ಉಳಿಗಾಲವಿಲ್ಲವೆಂದೂ ಗುಲ್ಲೆಬ್ಬಿಸುತ್ತಿರುವುದು ಯಾವ ನ್ಯಾಯ ಯಾವ ಧರ್ಮವೆಂಬುದನ್ನು ವಾಚಕಮಹಾಶಯರೇ ತಿಳಿದುಕೊಳ್ಳಬೇಕು. ಈ ವಿಧವಾದ ದುರಾಶೆಗಾಗಿಯೇ ಅಲ್ಲವೇ ನಾವು ಇವರನ್ನು ಮನುವಿನ ಮಕ್ಕಳೆಂದೂ ಸೇರುಗಾರರೆಂದೂ ಜಹಗೀರುವಾದಿಗಳೆಂದೂ ಕರೆಯುವುದು?

ಬೆಂಗಳೂರಿನಲ್ಲಿ ನಡೆದ ನೀಚಕೃತ್ಯ.

ಈಗ್ಗೆ ಕೆಲವು ದಿನಗಳಿಂದ ಮಕ್ಕಳನ್ನು ಹಿಡಿದುಕೊಂಡು ಹೋಗುತ್ತಾರೆಂಬ ಸುಳ್ಳು ವರ್ತಮಾನವನ್ನು ಬೆಂಗಳೂರು ಪಟ್ಟಣದಲ್ಲೆಲ್ಲಾ ಹರಡಿ ಕೇರಿಕೇರಿಗಳಲ್ಲೂ ಹಬ್ಬಿಸಿ ಜನರನ್ನು ಮರಳುಮಾಡಿರುತ್ತೆ. ಮೊನ್ನೆದಿನ ರಾಣಾಸಿಂಗನ ಪೇಟೆಯಲ್ಲಿ ಒಬ್ಬ ವಯಸ್ಸಾದ ರಿಟೈರ್ಡ್ ನೌಕರನನ್ನು, ಇವನೇ ಮಕ್ಕಳನ್ನು ಹಿಡಿದುಕೊಂಡು ಹೋಗುವನೆಂದು, ಅನ್ಯಾಯವಾಗಿ ಜನಗಳು ಹೊಡೆದು ಗತಪ್ರಾಣನನ್ನಾಗಿ ಮಾಡಿಬಿಟ್ಟರು. ಬಹಳ ವರ್ಷಗಳಿಂದಲೂ ನಮ್ಮ ಪಟ್ಟಣಕ್ಕೆ ಆಗಾಗ್ಗೆ ಬರುತ್ತಿದ್ದ ಪಂಜಾಬ್ ದೇಶಸ್ಥರಾದ ವಜೀರ್‌ಸಿಂಗ್ ಮತ್ತು ಈತನ ತಮ್ಮ ಮಕಾನ್‌ಸಿಂಗ್ ಎಂಬ ಇಬ್ಬರು ಅಣ್ಣತಮ್ಮಂದಿರು ಮೊನ್ನೆ ಬೆಂಗಳೂರು ಪಟ್ಟಣದಲ್ಲೆಲ್ಲಾ ಜೋತಿಷ್ಯ, ಸಾಮುದ್ರಿಕಗಳನ್ನು ಜನಗಳಿಗೆ ಹೇಳುತ್ತಾ, ತುಲಸೀತೋಟದ ಪೂರ್ಣಯ್ಯನವರ ಛತ್ರದಲ್ಲಿ ಇಳಿದುಕೊಂಡಿದ್ದರು. ವಜೀರ್ ಸಿಂಗ್ ಎಂಬುವನಿಗೆ ಇಬ್ಬರು ಮಕ್ಕಳು ಸಹ ಇರುತ್ತಾರೆ. ಮೇಲ್ಕಂಡ ಅಣ್ಣತಮ್ಮಂದಿರು ಅವೆನ್ಯೂರೋಡ್ ಸಿಂಗರ್ ಸೂಯಿಂಗ್ ಕಂಪೆನಿಕಡೆ ತಮ್ಮ ಭಿಕ್ಷಾವೃತ್ತಿಗೆ ಹೋಗುತ್ತಿರಲಾಗಿ, ಹಿಂದಿನಿಂದ 4–5 ಜನಗಳು ಬಂದು, ಇವರೇ ಮಕ್ಕಳನ್ನು ಹಿಡಿದುಕೊಂಡು ಹೋಗುವವರು ಎಂದು ಹಿಂದುಮುಂದು ನೋಡದೆ ಇವರನ್ನು ವಿಪರೀತವಾಗಿ ಹೊಡೆದುಬಿಟ್ಟರು. ಪೆಟ್ಟುತಿಂದ ತಮ್ಮನಾದ ಮಕಾನ್‌ಸಿಂಗನು ಭಯಭರಿತನಾಗಿ ಓಡಿಹೋದನು. ಜನಗಳೆಲ್ಲಾ ಸೇರಿಕೊಂಡು ಅಣ್ಣನಾದ ವಜೀರ್‌ಸಿಂಗನ ತಲೆ ಹೊಡೆದುಹಾಕಿ ಛಿದ್ರ ಛಿದ್ರವಾಗಿ ಮಾಡಿ ಅವನ ಬೆನ್ನು ಸೀಳಿಹೋಗುವಂತೆ ಹೊಡೆದು ಅವನ ಶರೀರ ಯಾವದ್ವಿಶಿಷ್ಟ ಅಂಗಗಳ ಮೇಲೂ ವಿಪರೀತ ಪ್ರಹಾರ ಮಾಡಿ ಅವನನ್ನು ಗತಪ್ರಾಣನನ್ನಾಗಿ ಮಾಡಿದರು. ತಕ್ಷಣವೆ ಪೋಲೀಸಿನವರು ಬಾರದಿದ್ದಲ್ಲಿ ಏನೇನು ಅನಾಹುತಗಳು ನಡೆಯುತ್ತಿದ್ದವೋ? ಇಷ್ಟರಲ್ಲೇ ಜನಗಳು ಈ ಇಬ್ಬರು ಅಣ್ಣತಮ್ಮಂದಿರ ಹತ್ತಿರವಿದ್ದ ಸರ್ಟಿಫಿಕೇಟುಗಳನ್ನೂ ದೋಚಿಕೊಂಡು ಹೋಗಿರುತ್ತಾರೆ. ಪೆಟ್ಟುತಿಂದವನು ಈಗ ಪೋಲೀಸಿನವರ ವಶದಲ್ಲಿ ಆಸ್ಪತ್ರೆಯಲ್ಲಿರುತ್ತಾನೆ ಇದಲ್ಲವೆ ನಮ್ಮ ಜನಗಳ ಬುದ್ಧಿ ಕುಶಲತೆ!

ದಿವಾನ್ ಸಾಹೇಬರ ದೆಹಲಿಪ್ರವಾಸ.

ನಮ್ಮ ದಿವಾನ್ ಸಾಹೇಬರವರು ದೆಹಲಿಯಲ್ಲಿ ನಡೆದ ನರೇಂದ್ರಮಂಡಲದ ಸಭೆಗೆ ಮೈಸೂರಿನ ಪ್ರತಿನಿಧಿಗಳಾಗಿ ಹೋಗಿರುವರಷ್ಟೆ. ಈ ಸಂಬಂಧದಲ್ಲಿ ಅವರ ಪ್ರತಿಕಕ್ಷಿಗಳು ನಾನಾತೆರನಾದ ದುರಭಿಪ್ರಾಯಗಳನ್ನು ಪ್ರಚುರಗೊಳಿಸುತ್ತಿರುವರು. ಅವರ ದಿವಾನ್‌ಗಿರಿಯ ಮೂರುವರ್ಷಗಳ ಅವಧಿಯು ಇನ್ನು ಕೊಂಚಕಾಲದಲ್ಲಿಯೇ ಪೂರೈಸುವುದೆಂದೂ, ಇನ್ನು ಮೂರು ವರ್ಷಗಳವರೆಗೆ ಅವರು ದಿವಾನ್‌ಗಿರಿಯಲ್ಲಿರಬೇಕಾದರೆ ವೈಸ್ರಾಯರ ಅನುಮತಿಯನ್ನು ಪಡೆಯಬೇಕಾಗಿರುವುದರಿಂದ ಅದಕ್ಕಾಗಿ ದೆಹಲಿಗೆ ತೆರಳಿರುವರೆಂದೂ ಕೆಲವರು ಹೇಳುತ್ತಾರೆ. ಇದು ಶುದ್ಧ ನಿರಾಧಾರವಾದುದು. ಮೆ|| ಮಿರ್ಜಾ ಇಸ್ಮಾಯಿಲ್‌ರವರಿಗೆ ಇನ್ನು ಚಿಕ್ಕವಯಸ್ಸಾದುದರಿಂದ ಅವರು ನಿವೃತ್ತರಾಗಬೇಕಾದರೆ ಸುಮಾರು ಹತ್ತುವರ್ಷವಾದರೂ ಆಗಬೇಕು. ಅದೂ ಅಲ್ಲದೆ ತಮ್ಮ ದಿವಾನರನ್ನು ನಿಯಮಿಸಿಕೊಳ್ಳುವ ಮತ್ತು ನಿವೃತ್ತಿಮಾಡುವ ಅಧಿಕಾರವನ್ನು ನಮ್ಮ ಮಹಾ ಪ್ರಭುಗಳವರ ಪಿತೃವರ್ಯರಿಗೆ ಬ್ರಿಟಿಷ್ ಸರ್ಕಾರದವರು ಕೊಟ್ಟಿರುವರಾದ ಕಾರಣ ಮೆ|| ಇಸ್ಮಾಯಿಲ್‌ರವರು ಇದಕ್ಕಾಗಿ ದೆಹಲಿಗೆ ಹೋಗಬೇಕಾದ ಪ್ರಮೆಯವೇನೂ ಇರುವುದಿಲ್ಲ. ಮೈಸೂರಿನಲ್ಲಿ ಗುಲ್ಲುಗಾರರ ಅರಾಜಕಚಳವಳಿಯು ದಿನೇ ದಿನೇ ಪ್ರಬಲಿಸುತ್ತಿರುವುದರಿಂದ ಅವರನ್ನು ಸೆರೆಹಿಡಿದು ಬಂಧನದಲ್ಲಿಟ್ಟು ಶಾಂತಿ ಸಂರಕ್ಷಣೆಮಾಡಲು ಹೆಚ್ಚಿಗೆಯ ಕಾನೂನನ್ನು ಮಾಡಲು ವೈಸ್ರಾಯರ ಅನುಮತಿಯನ್ನು ಕೇಳಲೋಸುಗ ದಿವಾನ್ ಸಾಹೇಬರು ದೆಹಲಿಗೆ ಹೋದರೆಂದು ಹೇಳುವವರೂ ಇರುವರು. ನಮ್ಮ ಮಹಾಪ್ರಭುಗಳು ಪ್ರಜಾಸಂರಕ್ಷಣೆಗಾಗಿ ಅವಶ್ಯಕವಾದ ಯಾವ ಕಾನೂನನ್ನು ಬೇಕಾದರೂ ಮಾಡಿಕೊಳ್ಳುವ ಅಧಿಕಾರವುಳ್ಳವರಾಗಿರುವರಾದಕಾರಣ ದಿವಾನ್‌ಸಾಹೇಬರು ಇದಕ್ಕಾಗಿ ದೆಹಲಿಗೆ ಹೋಗಬೇಕಾದ ಅಗತ್ಯವಿಲ್ಲವೆಂಬುದು ವ್ಯಕ್ತವಾಗುವುದು. ಅಂತು ದಿವಾನ್‌ಸಾಹೇಬರ ಪ್ರತಿಕಕ್ಷಿಗಳು ಅವರನ್ನು ಒಂದಿಲ್ಲೊಂದುರೀತಿ ದೂಷಿಸಿ ಅವರನ್ನು ಅವಹೇಳನಗೊಳಿಸಲು ಸದಾ ಕಾದಿರುವರಾದಕಾರಣ ಅವರು ಯಾವ ಕೆಲಸಮಾಡಿದರೂ ಅದರಲ್ಲಿ ಇಲ್ಲದ ಸಲ್ಲದ ತಪ್ಪನ್ನು ಕಲ್ಪಿಸಿ ಅವರನ್ನು ದೂರುವುದಕ್ಕಾರಂಭಿಸಿರುವರೆಂಬುದಕ್ಕೆ ಈಗಿನ ನಿರಾಧಾರವಾದ ಸುದ್ದಿಗಳೇ ತಕ್ಕ ನಿದರ್ಶನಗಳಾಗಿರುತ್ತವೆ.

ಬೆಂಗಳೂರಿನಲ್ಲಿ ಮಕ್ಕಳ ಕಳುವಿನ ಭಯ

ಕಳೆದ ಮಂಗಳವಾರ ರಾತ್ರಿ ಅರಳೆಪೇಟೆಯಲ್ಲಿ 7 ವರ್ಷದ ಒಂದು ಹುಡುಗಿಯು ಒಬ್ಬ ಮುಸಲ್ಮಾನನನ್ನು ಕಂಡು ಹೆದರಿಕೊಂಡು ಕಿರುಚುತ್ತಾ ಮನೆಯೊಳಗೆ ಹೋಯಿತು. ಮನೆಯವರು ಹೊರಗೆ ಬಂದು ನೋಡಿ ದಾರಿಯಲ್ಲಿ ಹೋಗುತ್ತಿದ್ದ ಮುಸಲ್ಮಾನನನ್ನು ಹಿಡಿದರು. ಅಷ್ಟರಲ್ಲಿಯೇ ನೂರಾರು ಜನರು ಸೇರಿದರು. ಮುಸಲ್ಮಾನನನ್ನು ಹೊಡೆದು ಕೆಂಗೇರಿ ಗೇಟ್ ಪೋಲೀಸ್ ಸ್ಟೇಷನ್ನಿಗೆ ಕರೆದೊಯ್ದರು. ಅಲ್ಲಿ ವಿಚಾರ ಮಾಡಿದುದರ ಮೇಲೆ ಮುಸಲ್ಮಾನನು ನಿವೃತ್ತನಾದ ಸಿಪಾಯಿಯೆಂದೂ, ಬೆಂಗಳೂರುವಾಸಿಯೆಂದೂ ಮಗುವು ರಾತ್ರಿವೇಳೆಯಲ್ಲಿ ಅವನನ್ನು ಕಂಡು ಬೆದರಿ ಕಿರುಚಿಕೊಂಡಳೆಂದೂ ತಿಳಿಯಬಂದುದರ ಮೇಲೆ ಅವನನ್ನು ಸ್ಟೇಷನ್ನಿನಲ್ಲಿ ಕೊಂಚ ಹೊತ್ತು ಇರಿಸಿಕೊಂಡಿದ್ದು ಜನಗಳ ಗುಂಪು ಚದರಿದ ಮೇಲೆ ಅವನ ಮನೆಗೆ ಕಳಿಸಿಕೊಟ್ಟರಂತೆ. ಎಷ್ಟು ಸಮಾಧಾನ ಹೇಳಿದರೂ ಜನಗಳು ಸಂಜೆದೆ ಸ್ಟೇಷನ್ ಬಳಿಯಲ್ಲಿ ಗುಂಪುಕಟ್ಟಿಕೊಂಡು ನಿಂತಿದ್ದರು. ಪೋಲೀಸ್ ಅಧಿಕಾರಿಗಳು ಕೂಡಲೇ ಬಂದು ಗುಂಪನ್ನು ಚದರಿಸಿದರು. ಬುಧವಾರ ಪ್ರಾತಃಕಾಲ ತರಗುಪೇಟೆಯ ಬಳಿಯಲ್ಲಿ ಮತ್ತೊಂದು ಗೊಂದಲವಾಯಿತು. ಒಬ್ಬ ದಾರಿಹೋಕ ಮುಸಲ್ಮಾನನನ್ನು 500 ಜನಗಳು ಮುತ್ತಿ ಹಿಂಸಿಸುತ್ತಿದ್ದರು. ವಿಚಾರಣೆ ಮಾಡಲು ಆತನು ನಿರಪರಾಧಿಯಾದ ಹಾದಿಹೋಕನೆಂದು ತಿಳಿಯಿತು. ಪೋಲೀಸಿನವರು ಬಿಡುಗಡೆ ಮಾಡಿದರು. ಅದೇ ದಿನ ಮಧ್ಯಾಹ್ನ ಯಲಹಂಕದ ಸ್ಟೇಷನ್ ಬಳಿಯಲ್ಲಿ ಮತ್ತೊಂದು ಗೊಂದಲವಾಯಿತು. ಓರ್ವ ಮುಸಲ್ಮಾನ್ ವೃದ್ಧನೂ, ಬಾಲಕನೂ ಸೇಲಂ ಕಡೆಯಿಂದ ಬೆಂಗಳೂರಿನಲ್ಲಿ ಕೂಲಿಗಾಗಿ ಬಂದವರು ಸರಿಯಾದ ಉದ್ಯೋಗ ದೊರೆಯದಿರಲು ಭಿಕ್ಷೆ ಬೇಡುತ್ತಿದ್ದರಂತೆ. ಅವರು ಮಕ್ಕಳನ್ನು ಹಿಡಿಯುವವರೆಂದು ಯಾರೊ ಸುಳ್ಳು ಸುದ್ದಿ ಹುಟ್ಟಿಸಿ ಗಲಭೆ ಮಾಡಿದರು. ಅಷ್ಟರಲ್ಲೇ ಪೋಲೀಸ್ ಅಧಿಕಾರಿಗಳೂ, ನ್ಯಾಯಾಧಿಕಾರಿಗಳೂ ಬಂದು ನಿಜಾಂಶವನ್ನು ತಿಳಿದು ಮುಸಲ್ಮಾನರನ್ನುಬಿಡುಗಡೆ ಮಾಡಿಸಿದರು. ಬೊಂಬಾಯಿಯಲ್ಲಿಯೂ ಹೀಗೆಯೇ ನಿರಾಧಾರವಾದ ಸುಳ್ಳು ಸುದ್ದಿಯ ಪ್ರಚಾರದಿಂದ ನಡೆದ ದಂಗೆಯು ಮೊನ್ನೆತಾನೆ ಶವನವಾಯಿತು. ಬೆಂಗಳೂರಿನಲ್ಲಿಯೂ ಇಂತಹ ಗಲಭೆಯು ನಡೆಯುವ ಸಂಭವವಿರುವುದು. ಇದಕ್ಕೆ ಯಾರೊ ಗುಲ್ಲುಗಾರರು ಕಾರಣವಾಗಿರಬಹುದೆಂದು ತೋರುತ್ತದೆ. ಸುಳ್ಳು ಸುದ್ದಿಯನ್ನು ಪ್ರಕಟಿಸುವುದರಿಂದ ಜನಗಳಲ್ಲಿ ಮತವೈರವನ್ನೂ, ವರ್ಣವೈಷಮ್ಯವನ್ನೂ ಹುಟ್ಟಿಸಿ ಕಲಹವನ್ನು ತಂದುಹಾಕಿ ದಂಗೆಯೆಬ್ಬಿಸುವ ಯತ್ನದಲ್ಲಿರುವರೆಂದು ತೋರುತ್ತದೆ. ಗಣಪತಿಯ ಸಲುವಾಗಿ ಮಾಡಿದ ಅಸಾಧಾರಣವಾದ ಚಳವಳಿಯೂ, ಅದರಿಂದಾದ ದುಷ್ಪರಿಣಾಮವೂ ಇನ್ನು ಮರೆತಿರುವುದಿಲ್ಲ. ಈಗಾಗಲೇ ಮತ್ತೊಂದು ಗಲಭೆಯು ಅಂಕುರಿಸುವಂತೆ ತೋರುತ್ತದೆ. ಈಗಲಾದರೂ ಶಾಂತಿರಕ್ಷಣಾಧಿಕಾರಿಗಳು ಎಚ್ಚರಿಕೆಯಿಂದ ತಕ್ಕ ಏರ್ಪಾಡನ್ನು ಮಾಡಿ ಅಚಾತುರ್ಯ ನಡೆಯದಂತೆ ಮಾಡುವರೆಂದು ನಾವು ಯೋಚಿಸುತ್ತೇವೆ. ಮಕ್ಕಳನ್ನು ಹಿಡಿಯುವರೆಂಬ ಸುದ್ದಿಯನ್ನು ಕೇಳಿ ಬಾಲಿಕಾ ಪಾಠಶಾಲೆಗಳೆಲ್ಲಾ ಬರಿದಾಗಿರುವುವಂತೆ. ಪೋಲೀಸ್ ಅಧಿಕಾರಿಗಳು ಜಾಗ್ರತರಾಗಿ ಶಾಲೆಗಳ ಬಳಿಯಲ್ಲಿ ಕಾವಲಿಟ್ಟಿರುವರಂತೆ.

ಒಳದೇಶದ ವೃತ್ತಾಂತಗಳು.

ಸೈಮನ್ ಸಮಿತಿಯವರೂ, ಹೈದರಾಬಾದಿನ ನೈಜಾಮರವರೂ ಮುಂದಿನ ತಿಂಗಳಲ್ಲಿ ರಾಜಧಾನಿಗೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ದಯಮಾಡುತ್ತಾರೆಂಬ ವರ್ತಮಾನವಿದೆ.

ಈಸಲ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಸುಮಾರು ಮೂರು ಲಕ್ಷ ರೂಪಾಯಿ ತನಕ ಖರ್ಚು ಕಳೆದು ಮಿಗತೆ ಆಗುವುದೆಂದೂ, ಅಲ್ಲಿ ಉಕ್ಕನ್ನು ತಯಾರ್ಮಾಡುವ ಪ್ರಯತ್ನವು ಸಾರ್ಥಕವಾಗಿರುವುದೆಂದೂ ಪ್ರಕಟವಾಗಿದೆ.

ಮೈಸೂರು ಕೃಷ್ಣರಾಜ ಆಸ್ಪತ್ರೆಯಲ್ಲಿರುವ ಮಿಸೆಸ್ ಪೆರ್ರಿಂಗ್‌ರವರು ವಾಣಿವಿಳಾಸ ಆಸ್ಪತ್ರೆಗೂ, ಶ್ರೀಮತಿ ಮಧುರಾಬಾಯಿ ಉಚ್ಚಾವಕರ್‌ರವರು ವಾಣಿವಿಳಾಸ ಆಸ್ಪತ್ರೆಯಿಂದ ಕೃಷ್ಣರಾಜ ಆಸ್ಪತ್ರೆಗೂ ವರ್ಗಮಾಡಲ್ಪಟ್ಟಿರುವರು.

ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ ಶ್ರೀ ಎನ್. ಎಸ್. ಸುಬ್ಬರಾಯರಿಗೆ 10 ದಿನಗಳ ರಜಕೊಡಲ್ಪಟ್ಟಿರುವುದರಿಂದ ಅವರ ಸಹಾಯಾಧಿಕಾರಿಗಳಾಗಿದ್ದ ಮೆ|| ಸುಲ್ತಾನ್ ಮೊಹಿಯುದ್ದೀನ್ ರವರು ಮುಖ್ಯಾಧಿಕಾರಿಗಳ ಕೆಲಸವನ್ನು ಬದಲಿ ನೋಡುವರು.

ಸರ್ಕಾರದವರು ಮಂಡ್ಯದಲ್ಲೂ ಮದ್ದೂರಿನಲ್ಲೂ ಬೇರೆ ಬೇರೆ ಸಬ್‌ರೆಜಿಸ್ಟ್ರಾರ್ ಆಫೀಸುಗಳನ್ನು ಮಾರ್ಚಿ ತಾ|| 1 ರಿಂದ ಏರ್ಪಾಡು ಮಾಡುವುದಾಗಿಯೂ, ಮಂಡ್ಯದ ಆಫೀಸಿಗೆ ಮಂಡ್ಯ, ಬಸರಾಳು, ದುದ್ದ ಹೋಬಳಿಗಳನ್ನೂ; ಮದ್ದೂರಿನ ಆಫೀಸಿಗೆ ಮದ್ದೂರು, ಕೊಪ್ಪ, ಆತ್ತಗೂರು ಹೋಬಳಿಗಳನ್ನೂ ಸೇರಿಸಿರುತ್ತಾರೆ. ಇದಲ್ಲದೆ ಡಿಸ್ಟ್ರಿಕ್ಟು ಎಕ್ಸೈಸ್ ಆಫೀಸರು ಆಯಾ ಡಿಸ್ಟ್ರಿಕ್ಟಿನ ಸಬ್-ರೆಜಿಸ್ಟ್ರಾರ್ ಆಫೀಸರುಗಳ ಮೇಲೆ ಇನ್‌ಸ್ಪೆಕ್ಟರಾಗಿರತಕ್ಕದ್ದೆಂದೂ ಹುಕುಂ ಮಾಡಿದಾರೆ.

ತಿಂಗಳಿಗೆ 40 ರೂ. ಗಿಂತಲೂ ಕಡಿಮೆ ಸಂಬಳವುಳ್ಳವರಿಗೆ ಮೋಟಾರ್ ಬಸ್ಸಿನ ಕೊನೇತರಗತಿಯ ಬಾಡಿಗೆಯನ್ನೂ, 5 ಮೈಲಿಗಿಂತಲೂ ಹೆಚ್ಚಾದ ಪ್ರಯಾಣಕ್ಕೆ ದಿನ ಭತ್ಯವನ್ನು ಕೊಡಬೇಕೆಂದೂ, ಬಸ್‌ಗಳು ನಡೆಯುವ ಸ್ಥಳಗಳಿಗೆಲ್ಲಾ ಈ ಸಂಬಳದ ಉದ್ಯೋಗಸ್ಥರು ಬಸ್‌ನಲ್ಲಿಯೇ ಪ್ರಯಾಣಮಾಡಬೇಕೆಂದೂ ಸರ್ಕಾರದವರ ಅಪ್ಪಣೆಯಾಗಿರುತ್ತದೆ. ಹೆಚ್ಚಿಗೆ ಸಂಬಳ ತೆಗೆಯುವವರು ಬಸ್‌ನಲ್ಲಿ ಪ್ರಯಾಣಮಾಡುವುದಾದರೆ ಅವರಿಗೆ ಯಾವರೀತಿ ಬಾಡಿಗೆಯನ್ನೂ ಭತ್ಯವನ್ನೂ ಕೊಡಬೇಕೆಂಬುದನ್ನು 1930 ನೇ ಮಾರ್ಚಿ ತಿಂಗಳಲ್ಲಿ ನಿರ್ಧರಿಸಲಾಗುವುದಂತೆ.

ಮೈಸೂರು ಸ್ಟಾರ್ ಎಡಿಟರು ವೀರಕೇಸರಿ ಎಡಿಟರಮೇಲೆ ಮಾಡಿರುವ ವಿವಾದವು ತಾ|| 18–2–29 ರಲ್ಲಿ ಮೈಸೂರುಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಬಂದಿತು. ಅಪರಾಧಿ ಮ|| ಎಂ. ಸೀತಾರಾಮಶಾಸ್ತ್ರಿಗಳು ಬಂದಿದ್ದರು. ಎರಡನೇ ಅಪರಾಧಿ ದಾವಣಗೆರೆಯ ವಿಶ್ವನಾಥಶರ್ಮನೆಂಬ ಹೆಸರಿನವನು ದಾವಣಗೆರೆಯಲ್ಲಿ ಯಾರೂ ಇಲ್ಲವೆಂದು ಪೋಲೀಸರು ಸಮನ್ಸಿನ ಮೇಲೆ ಷರಾಬರೆದು ಕಳುಹಿಸಿರುವುದರಿಂದ ಅವನನ್ನು ಬಿಟ್ಟು ಒಂದನೇ ಅಪರಾಧಿಯಮೇಲೆ ವಿವಾದವನ್ನು ನಡೆಸಬಹುದೆಂದು ಫಿರ್ಯಾದಿಯು ತಿಳಿಸಲಾಗಿ ಫಿರ್ಯಾದಿಪರ ಸಾಕ್ಷಿ ಪಟ್ಟಿಯನ್ನು 3 ದಿನಗಳಲ್ಲಿ ಕೊಡಬೇಕೆಂದು ಗೊತ್ತಾಗಿ ಫಿರ್ಯಾದಿಯ ವಿಚಾರಣೆ ನಡೆಯಲು ಬರುವ ಮಾರ್ಚಿ ತಾ|| 5 ಕ್ಕೆ ಹಿಯರಿಂಗಿಡಲ್ಪಟ್ಟಿತು.

ತೃತೀಯ ಸಚಿವರಾದ ಮೆ|| ಮೆತ್ತಾನ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಪ್ರವಾಸಮಾಡುತ್ತಿರುವರಷ್ಟೆ. ಮೊನ್ನೆತಾನೆ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಯವರ ದರ್ಶನಕ್ಕಾಗಿ ಬೃಹನ್ಮಠಕ್ಕೆ ದಯಮಾಡಿದ್ದರೆಂದೂ, ಶ್ರೀಗಳವರಿಂದ ಸತ್ಕರಿಸಲ್ಪಟ್ಟು ಆಶೀರ್ವಾದವನ್ನು ಪಡೆದು ತೆರಳಿದರೆಂದೂ, ಶ್ರೀಗಳವರು ವೀರಶೈವ ಸಮಾಜಕ್ಕೂ, ವೀರಶೈವ ತರುಣರ ವಿದ್ಯಾಭಿವೃದ್ಧಿಗೂ ಮಾಡಿರುವ ಘನಸಹಾಯವು ಶ್ಲಾಘನೀಯವಾದುದೆಂದೂ, ಈಗಿನ ಮಠಾಧಿಪತಿಗಳಲ್ಲೆಲ್ಲಾ ಶ್ರೀಗಳವರು ಮಠೋದ್ಧಾರಕ ಕಾರ್ಯಗಳನ್ನು ಹೃತ್ಪೂರ್ವಕವಾಗಿ ಮಾಡಿ ಈಶ್ವರನ ಪ್ರೀತಿಯನ್ನು ಸಂಪಾದಿಸಿರುವರೆಂದೂ ಸಚಿವರವರು ಅಭಿಪ್ರಾಯಪಟ್ಟರೆಂದು ತಿಳಿದುಬಂದಿದೆ.

ಮೇಲುಕೋಟೆ ರಾಜಮ್ಮನನ್ನು ರೈಲ್‌ಗಾಡಿಯಲ್ಲಿ ಕೊಲೆ ಮಾಡಿದ ಘಾತುಕನು ಇನ್ನೂ ಪತ್ತೆಯಾಗಿರುವುದಿಲ್ಲ. ಗುಮಾನಿಯಮೇಲೆ ಸೆರೆಹಿಡಿಯಲ್ಪಟ್ಟಿದ್ದ ಈರ್ವ ಯುವಕರನ್ನು ಮದರಾಸಿನಲ್ಲಿ ವಿಚಾರಣೆಗೆ ತರುವುದಕ್ಕೆ ಮೊದಲು ಆದಿನ ಅದೇ ರೈಲ್‌ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದ ಕೊಲೆಪಾತಕನು ತಾನು ಕೊಂದುಹಾಕಿದವಳ ಶರೀರವನ್ನು ಗಾಡಿಯಿಂದ ಹೊರಗೆ ಹಾಕಿ ಅದರೊಡನೆ ಧುಮಿಕಿದಾಗ ಅವನನ್ನು ನೋಡಿದ್ದ ಮ|| ಕೆ. ಆರ್. ಶ್ರೀನಿವಾಸೈಯೆಂಗಾರ್ಯರನ್ನು ಕರೆದುಕೊಂಡು ಹೋಗಿ ಸೆರೆಯಲ್ಲಿದ್ದವರೊಡನೆ ಸುಮಾರು 30 ಮಂದಿ ಬೇರೆ ಜನಗಳನ್ನು ಮಿಶ್ರಮಾಡಿ ತಪ್ಪಿತಸ್ಥನನ್ನು ಗುರ್ತಿಸಿರೆಂದು ಕೇಳಿದಾಗ ಅವರು ಯಾರನ್ನೂ ಗುರ್ತಿಸದಿದ್ದುದರಿಂದ ಸೆರೆಯಲ್ಲಿದ್ದವರಿಬ್ಬರು ಯುವಕರನ್ನೂ ಬಿಡುಗಡೆಮಾಡಿದರಂತೆ.

ಸರ್ಕಾರದವರು ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಎಂಬ ಹುದ್ದೆಯನ್ನು ವಜಾ ಮಾಡಿ ಡಾ|| ಕರ್ವಿಯವರನ್ನು ಇದೇ ಫೆಬ್ರುವರಿಯಿಂದ ಸ್ಯಾನಿಟರಿ ಕಮಿಷನರ್‌ರಾಗಿ 800–50–1,000 ರೂಪಾಯಿ ತಲಬಿನ ಮೇಲೆ ನೇಮಕಮಾಡಿರುತ್ತಾರೆ. ಸಂಸ್ಥಾನಾಂತರ ಪ್ರಜೆಗಳ ಆರೋಗ್ಯ ಭಾಗ್ಯವನ್ನು ಕಾಪಾಡಿ ಅಭಿವೃದ್ಧಿ ಮಾಡುವುದರಲ್ಲಿ ಈ ಸ್ಯಾನಿಟರಿ ಇಲಾಖೆಯು ಮೂಲಕಾರಣವಾಗಿದ್ದು ಇದುವರೆಗೆ ಸೀನಿಯರ್ ಸರ್ಜನ್‌ರವರ ಅಧಿಕಾರದೊಳಗೆ ಐಕ್ಯವಾಗಿದ್ದಿತು. ಸರ್ಕಾರದವರು ಅದನ್ನೀಗ ಪ್ರತ್ಯೇಕಮಾಡಿರುವುದು ಹಿತಕರವೂ ಸಂತೋಷಪ್ರದವೂ ಆಗಿದೆ. ಆರೋಗ್ಯಾಭಿವರ್ಧಕ ಕಾರ್ಯಗಳನ್ನು ನಡಿಸಲು ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯವನ್ನೂ ಅದಕ್ಕೆ ಅವಶ್ಯವಾದಷ್ಟು ದ್ರವ್ಯವನ್ನೂ ಸರ್ಕಾರದವರು ಒದಗಿಸಿದಾರೆಂದು ನಂಬಿ ನಿರೀಕ್ಷಿಸುವೆವು.

ಬೆಂಗಳೂರು ಉಕ್ಕಡಪಾಳ್ಯದ ಸಮೀಪದಲ್ಲಿ ಆದಿಕರ್ನಾಟಕರ ಹೆಂಗುಸೊಬ್ಬಳು ಬುಟ್ಟಿಯನ್ನು ಹೊತ್ತುಕೊಂಡು ಹೋಗುತ್ತಿದ್ದ ಭಿಕ್ಷುಕನೊಬ್ಬನನ್ನು ಕಂಡು ಬುಟ್ಟಿಯಲ್ಲಿರುವುದೇನೆಂದು ಕೇಳಲು ಅವನು ಮಗುವಿರುವುದೆಂದೂ ಅದನ್ನು ತಿನ್ನುವೆನೆಂದೂ ಹೇಳಿದನಂತೆ. ಇದನ್ನು ಕೇಳಿದಕೂಡಲೆ ಭಯದಿಂದ ಆ ಹೆಂಗುಸು ಕಿರಿಚಿಕೊಂಡು ಗಲಭೆಮಾಡಿದಳು. ಜನಗಳು ಸೇರಿ ಭಿಕ್ಷುಕನನ್ನು ಪೋಲೀಸ್ ಸ್ಟೇಷನ್ನಿಗೆ ಕರದುಕೊಂಡುಹೋದರು. ಅಲ್ಲಿ ವಿಚಾರಣೆ ಮಾಡಿದುದರಲ್ಲಿ, ಮಗುವು ಯಾವುದೋ ಆಸ್ಪತ್ರೆಯಲ್ಲಿ ಜನಿಸಿತೆಂದೂ, ಹುಟ್ಟುವಾಗಲೇ ಸತ್ತಿದ್ದುದರಿಂದ ಆಸ್ಪತ್ರೆಯ ಕಲಾಸಿಯು ಅದನ್ನು ಎಲ್ಲಿಯಾದರೂ ತೆಗೆದುಕೊಂಡುಹೋಗಿ ಹೂಳಬೇಕೆಂದು ಹೇಳಿ ಇದಕ್ಕಾಗಿ ಅವನಿಗೆ ದುಡ್ಡನ್ನು ಕೊಟ್ಟನೆಂದೂ ತಿಳಿಯಬಂದಿತು. ಇಷ್ಟಕ್ಕಾಗಿ ಅಷ್ಟರೊಳಗೆ ವಿಪರೀತ ಗಲಭೆಯುಂಟಾಯಿತಂತೆ!

ದರ್ಬಾರ್ ಸರ್ಜನ್ನರೂ ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರೂ ಆದ ಡಾಕ್ಟರ್ ಜೆ. ಎಫ್. ರಾಬರ್ಟ್‌ಸನ್, ಬಿ.ಎ., ಎಂ.ಡಿ.ಎಫ್., ಎ.ಸಿ.ಎಸ್. ರವರು ಈ ತಾ|| 15 ರಿಂದ 6 ತಿಂಗಳ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಇದೇ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾದ ಡಾ|| ಟಿ. ಬಾಲಕೃಷ್ಣಮೊದಲಿಯಾರ್, ಎಲ್. ಎಂ. ಎಸ್., ರವರು ಮೆಡಿಕಲ್ ಆಫೀಸರಾಗಿಯೂ, ಮೆಡಿಕಲ್ ಸ್ಟೋರ್ಸಿನ ಸೂಪರಿಂಟೆಂಡೆಂಟರಾದ ಡಾ|| ಎಸ್. ನಾರಾಯಣಪ್ರಸಾದ್, ಎಲ್. ಎಂ. ಎಸ್. ರವರು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ; ತೀರ್ಥಹಳ್ಳಿ ಲೋಕಲ್‌ಫಂಡ್ ಡಿಸ್ಪೆನ್ಸರಿಯ ಡಾ|| ಪಿ. ಶ್ಯಾಮರಾವ್ ಬಿ.ಎ, ಎಲ್. ಎಂ. ಎಸ್., ರವರು ಸ್ಟೋರ್ಸಿನ ಸೂಪರಿಂಟೆಂಡೆಂಟರಾಗಿಯೂ, ಡಾ|| ಎಂ. ಎನ್. ಶ್ರೀನಿವಾಸರಾಯರು ಶಿವಮೊಗ್ಗ ಡಿ|| ಆಸ್ಪತ್ರೆಯಿಂದ ತೀರ್ಥಹಳ್ಳಿ ಡಿಸ್ಪೆನ್ಸರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಜಾಮೇಲಿರುವ ಅ. ಪೋಲೀಸ್ ಸೂಪರಿಂಟೆಂಡೆಂಟ್ ಮ|| ಪಿ. ಎನ್. ಕೃಷ್ಣಮೂರ್ತಿನಾಯಿಡುರವರು ಬೆಂಗಳೂರು ಪೋಲೀಸ್ ಟ್ರೈನಿಂಗ್ ಸ್ಕೂಲಿಗೂ, ಮ|| ಎಸ್. ರಾಜಾರಾಯರು ಪೋಲೀಸ್ ಟ್ರೈನಿಂಗ್ ಸ್ಕೂಲಿನಿಂದ ರೈಲ್ವೆ ಮತ್ತು ಸಿ.ಐ.ಡಿ. ಚಾರ್ಜಿನಿಂದ ದಾವಣಗೆರೆ ಸಬ್‌ಡಿವಿಜನ್‌ಗೂ, ಮ|| ಎಂ. ಎ. ವೆಂಕಟಾಚಾರ್ಯರು ದಾವಣಗೆರೆ ಸಬ್‌ಡಿವಿಜನ್ನಿಗೂ, ಮತ್ತು ಮ|| ಎಸ್. ಕೇಶವರಾಯರು ಚನ್ನಪಟ್ಟಣ ಸಬ್ ಡಿವಿಜನ್ನಿನಿಂದ ಕಡೂರು ಮತ್ತು ಶಿವಮೊಗ್ಗ ಡಿ|| ಗಳಲ್ಲಿ ಶ್ರೀಗಂಧದ ಮರವನ್ನು ಚೋರಿಮಾಡದಂತೆ ಉಸ್ತುವಾರಿ ನೋಡಿಕೊಳ್ಳುವ ಕೆಲಸಕ್ಕೂ, ಮ|| ಬಿ. ಲಕ್ಷ್ಮಣರಾಯರು ಶ್ರೀಗಂಧದ ಮರದ ಡ್ಯೂಟಿಯಿಂದ ಚನ್ನಪಟ್ಟಣ ಸಬ್ ಡಿವಿಜನ್ನಿನಿಂದ ಕೋಲಾರದ ಚಿನ್ನದಗಣಿಯಲ್ಲಿ ಡಿಟೆಕ್ಟೀವ್ ಡಿಪಾರ್ಟುಮೆಂಟಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ. ಈಗ ಕೋಲಾರದ ಚಿನ್ನದಗಣಿಯಲ್ಲಿ ಅ|| ಪೋಲೀಸ್ ಸೂಪರಿನ್‌ಟೆಂಡೆಂಟ್ ಕೆಲಸವನ್ನು ಬದಲಿನೋಡುತ್ತಿರುವ ಮ|| ಹೆಚ್. ವಿ. ಕೃಷ್ಣರಾಯರು ಪೋಲೀಸು ಇನ್‌ಸ್ಪೆಕ್ಟರ್ ಕೆಲಸಕ್ಕೆ ವಾಪ್ಸು ಕಳುಹಿಸಲ್ಪಟ್ಟಿರುವರು.

ಭರತಖಂಡದ ವೃತ್ತಾಂತಗಳು.

ರೋಮ್‌ನಗರದ ಪ್ರಾಂತ್ಯದಲ್ಲಿ ಹಿಮದಮಳೆಯು ಸುರಿದು ರೈಲುಗಾಡಿಗಳೂ ಮೋಟಾರುಗಾಡಿಗಳೂ ಹಿಮದಲ್ಲಿಯೇ ಹೂತುಹೋಗಿರುವುವು. ಅಂಕೋವಸಂಸ್ಥಾನದಲ್ಲಿ ಮಂಜಿನ ಪ್ರವಾಹಗಳು ಬಂದು, ಹೋಗುತ್ತಿದ್ದ ರೈಲುಗಾಡಿಗಳನ್ನು 21 ಅಡಿ ಎತ್ತರ ಹಿಮದೊಳಗೆ ಹೂತುಬಿಟ್ಟಿರುವುವು.

ಕ್ಷಾಮನಿವಾರಣೆಗಾಗಿ ಸರ್ಕಾರಿಯಾಗಿಯೂ ಇತರ ಮೂಲಕವಾಗಿಯೂ ಶೇಖರವಾಗಿರುವ ಹಣವನ್ನು ದನಗಳ ಮೇವನ್ನು ಶೇಖರಿಸುವುದಕ್ಕಾಗಲ್ಲದೆ ಗ್ರಾಮಾಂತರಗಳಲ್ಲಿ ಬೇಸಾಯಕ್ಕೂ ಕುಡಿಯುವುದಕ್ಕೂ ನೀರನ್ನೊದಗಿಸುವುದಕ್ಕಾಗಿ ಉಪಯೋಗಿಸಬೇಕೆಂದು ಬೊಂಬಾಯಿ ಪ್ರಭುತ್ವದವರು ನಿರ್ಧರಿಸಿರುವರು.

ಸೈಮನ್ ಸಮಿತಿಯವರು ಕಳೆದ ಸೋಮವಾರ ಮದರಾಸಿಗೆ ಹೋದರು. ಆದಿನ ಊರಿನಲ್ಲೆಲ್ಲಾ ಜನಗಳು ಹರತಾಳವನ್ನಾಚರಿಸಿ ಸೈಮನ್ ಸಮಿತಿಗೆ ತಮ್ಮ ಬಹಿಷ್ಕಾರವನ್ನು ತಿಳಿಯಪಡಿಸಿದರು. ಯಾವ ಅಚಾತುರ್ಯವೂ ನಡೆಯದೆ ಬಹಿಷ್ಕಾರದ ಪ್ರದರ್ಶನವು ಊರಲ್ಲೆಲ್ಲಾ ಕಡೆಯಲ್ಲಿಯೂ ಆಚರಿಸಲ್ಪಟ್ಟಿತು.

ಜರ್ಮನಿಯ ಕೆಲವು ಭಾಗಗಳಲ್ಲಿ ಮಿತ್ರಮಂಡಲಿಯವರು ಆಕ್ರಮಿಸಿಕೊಂಡಿರುವರಷ್ಟೆ. ಆ ಪ್ರಾಂತ್ಯದಲ್ಲಿ ಕಾವಲು ನಿಂತಿದ್ದ ಸಿಪಾಯಿಗಳನೇಕರು ಶೈತ್ಯದಿಂದ ನಿಂತಲ್ಲಿಯೇ ಮೃತಪಟ್ಟಿರುವರು. ಜರ್ಮನಿಯ ಪಶ್ಚಿಮಭಾಗದಲ್ಲಿ ನೂರಾರುಮಂದಿ ಸತ್ತಿರುವರು. ರೈನ್‌ಪ್ರಾಂತ್ಯದಲ್ಲಿರುವ ಬ್ರಿಟಿಷ್ ಸೈನಿಕರಿಗೆ ಹಾಸಿಗೆಯಷ್ಟು ದಪ್ಪನಾಗಿರುವ ನಿಲುವಂಗಿಗಳನ್ನೂ, ಚರ್ಮದ ಅಂಗಿಗಳನ್ನೂ ಹಂಚುತ್ತಿರುವರು.

ಜಿ.ಐ.ಪಿ. ರೈಲ್ವೆ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರಾದ ಜೇಮ್ಸ್ ಬರ್ನ್‌ಸೈಡ್ ಪಿಯರ್ಸ್ ಎಂಬವರು ಮೋಟಾರು ಬಂಡಿಯನ್ನು ಅಜಾಗರೂಕತೆಯಿಂದ ನಡೆಯಿಸಿ ಒಬ್ಬ ಪಾರ್ಸಿಯವನಿಗೆ ಸಾವನ್ನುಂಟುಮಾಡಿದ ಅಪರಾಧಕ್ಕಾಗಿ 1,000 ರೂ. ದಂಡವನ್ನು ವಿಧಿಸಿ ಅದರಲ್ಲಿ ಅರ್ಧಹಣವು ಸತ್ತವನ ಸಂಬಂಧಿಗಳಿಗೆ ಕೊಡಲ್ಪಡತಕ್ಕದೆಂದು ವಿಧಿಸಿ, ಅಪರಾಧಿಯು ಸತ್ತವನ ಸಂಬಂಧಿಗೆ 17,500 ರೂ. ಯನ್ನು ಪರಿಹಾರದ್ರವ್ಯವಾಗಿ ಕೊಟ್ಟಿರುತ್ತೇನೆಂದು ತಿಳಿಸಿದಮೇಲೆ ಪುನಃ ಶಿಕ್ಷೆ ವಿಧಿಸಬೇಕಾದ ಅಗತ್ಯವಿಲ್ಲವೆಂದು ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟರು.

ಕಳೆದ ಶುಕ್ರವಾರ ಮಧ್ಯರಾತ್ರಿಯಲ್ಲಿ ಕೂಚ್‌ಬಿಹಾರ್ ಮಹಾರಾಣಿಯವರು ಕಲಕತ್ತಾದಿಂದ ಹೊಸದಿಲ್ಲಿಗೆ ಬಂದು ಸರ್ ಎಡ್ವಿನ್‌ಲ್ಯೂ ಉನ್ಸ್‌ರವರ ಮನೆಯಲ್ಲಿಳಿದುಕೊಂಡರು. ಇವರು ಬಂದ 1 ಗಂಟೆಯಮೇಲೆ ಇವರ ಸಾಮಾನು ರೈಲ್ವೆ ಸ್ಟೇಷನ್ನಿನಿಂದ ಬಂದುವು. ಮಹಾರಾಣಿಯವರು ಮಲಗಿಕೊಂಡು ನಿದ್ರಿಸುತ್ತಿದ್ದಾಗ, ಕೆಲ ಕಳ್ಳರು ಅವರು ಮಲಗಿದ್ದ ಕೊಠಡಿಯೊಳಕ್ಕೆ ನುಗ್ಗಿ ಆಭರಣಗಳ ಪೆಟ್ಟಿಗೆಗಳನ್ನು ಅಪಹರಿಸಿದರು. ಇವರಲ್ಲೊಬ್ಬ ಕಳ್ಳನು ರಾತ್ರಿ 3½ ಗಂಟೆಯಲ್ಲಿ ಮಹಾರಾಣಿಯವರ ಮೈಮೇಲಿರುವ ಆಭರಣವನ್ನು ಅಪಹರಿಸಲು ಪ್ರಯತ್ನಿಸುತ್ತಿದ್ದಾಗ ಮಹಾರಾಣಿಯವರೆಚ್ಚತ್ತು ಕೂಗಿಕೊಂಡರು. ಸೇವಾಳಿಗಳು ಬರುವುದರೊಳಗಾಗಿ ಕಳ್ಳನು ಮಾಯವಾದನು. ಪೋಲೀಸಿನವರು ಕಳ್ಳರನ್ನು ತಡಕಲು ಬಹಳ ಸಾಹಸಪಡುತ್ತಿದ್ದಾರೆ.

ಬೆಳಗಾಂ ಡಿ|| ನಿಪ್ಪಾಣಿ ರಾಷ್ಟ್ರೀಯ ಶಾಲೆಯ ಶ್ರೀ ಜೋಷಿಯವರೂ, ಪೂನಾಪಟ್ಟಣದ ಶ್ರೀ ಮರಾಠೆಯವರೂ ಅತಿ ಸುಲಭ ರೀತಿಯಲ್ಲಿ ಗಡಿಯಾರಗಳನ್ನು ರಚಿಸುವ ವಿಧಾನವನ್ನು ಕಂಡುಹಿಡಿದಿರುತ್ತಾರೆ. ಇದುವರೆಗೂ ಗಡಿಯಾರಗಳನ್ನು ರಚಿಸುತ್ತಿದ್ದುದಕ್ಕಿಂತಲೂ ಈ ನವೀನ ರೀತಿಯು ಅತಿ ಲಾಭಕರವಾದುದಾಗಿರುವುದು. ಈ ಮಹಾರಾಷ್ಟ್ರೀಯ ಯುವಕರು ರಚಿಸಿದ ಗಡಿಯಾರವೊಂದು ಕಳೆದ ಕಲ್ಕತ್ತೆಯ ರಾಷ್ಟ್ರೀಯ

ಸಭೆಯಲ್ಲಿ ಪ್ರದರ್ಶಿಸಲ್ಪಟ್ಟಿದ್ದಿತು. ಈ ಗಡಿಯಾರಗಳು ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯುತ್ತವೆ. ಒಳಗಿನ ಯಂತ್ರವಾದರೊ ಅತಿ ಸಾಧಾರಣವಾಗಿರುವುದು. ಬೆಲೆಯಲ್ಲಿಯೂ ಈ ಗಡಿಯಾರಗಳು ವಿದೇಶೀಯ ಗಡಿಯಾರಕ್ಕಿಂತಲೂ ಕಡಿಮೆಯಾಗಿರುವುದರಿಂದ ದೇಶಾಭಿಮಾನಿಗಳಾದವರು ಈ ಗಡಿಯಾರಗಳನ್ನೇ ಕೊಳ್ಳುವುದರ ಮೂಲಕ ಸಾಹಸಿಗಳಾದ ದೇಶೀಯ ತರುಣರಿಗೆ ಉತ್ತೇಜನ ಕೊಡುವರೆಂದು ನಿರೀಕ್ಷಿಸಲ್ಪಟ್ಟಿರುವುದು. ಈ ಗಡಿಯಾರಗಳನ್ನು ವ್ಯಾಪಾರಕ್ಕಾಗಿ ರಚಿಸಲು ಮೊನ್ನೆ ತಾನೆ ಬೊಂಬಾಯಿನಗರದಲ್ಲಿ ಒಂದು ಕಾರ್ಯಾಲಯವು ಸಾಂಗ್ಲಿ ಸಂಸ್ಥಾನದ ರಾಜರವರಿಂದ ಸ್ಥಾಪಿಸಲ್ಪಟ್ಟಿತು.

ಅಹಮ್ಮದಾಬಾದಿನ ಮಾಂಡವಿಬೀದಿಯಲ್ಲಿ ವಾಸವಾಗಿರುವ ಮೂವರು ಅಕ್ಕಸಾಲಿಗ ಸಹೋದರರು ಕೃತ್ರಿಮನಾಣ್ಯಗಳನ್ನು ಮಾಡಲು ತಮ್ಮ ಮನೆಯಲ್ಲಿ ಒಂದು ನೆಲಮಾಳಿಗೆಯನ್ನು ಮಾಡಿ ಕ್ರಮವಾದ ಒಂದು ಕಾರ್ಯಾಲಯವನ್ನೇ ಇಟ್ಟುಕೊಂಡಿದ್ದರಲ್ಲದೆ ಈ ನಾಣ್ಯಗಳನ್ನು ಪ್ರಚಾರಮಾಡಲು ಭರತಖಂಡದ ಅನೇಕ ಸ್ಥಳಗಳಲ್ಲಿ ಶಾಖೆಗಳನ್ನೇರ್ಪಡಿಸಿಕೊಂಡಿದ್ದರು. ಪೊಲೀಸಿನವರು ಇದನ್ನು ತಿಳಿದು ಮೂವರು ಸಹೋದರರನ್ನೂ ಸೆಶನ್ಸು ವಿಚಾರಣೆಗೆ ಗುರಿಮಾಡಿರುವಲ್ಲಿ ಇಬ್ಬರು ಸಹೋದರರಿಗೆ 4 ವರ್ಷ ಕಠಿನ ಕಾರಾಗೃಹವಾಸಶಿಕ್ಷೆಯೂ 2000 ರೂ. ದಂಡವೂ ಹಣಕೊಡದಪಕ್ಷದಲ್ಲಿ ಇನ್ನೂ 18 ತಿಂಗಳು ಕಾರಾಗೃಹವಾಸಶಿಕ್ಷೆಯೂ ಅಲ್ಲದೆ 6 ವರ್ಷ ಕಠಿನ ಕಾರಾಗೃಹವಾಸಶಿಕ್ಷೆಯೂ 2000 ರೂ. ದಂಡವೂ ಇದುತಪ್ಪಿದಲ್ಲಿ 18 ತಿಂಗಳ ಕಠಿನಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿತು. ಮೂರನೆಯವನಿಗೆ 2 ವರ್ಷ ಕಠಿನಕಾರಾಗೃಹವಾಸಶಿಕ್ಷೆಯೂ 2000 ರೂ. ಅರ್ಥದಂಡವೂ ತಪ್ಪಿದಲ್ಲಿ ಇನ್ನು 18 ತಿಂಗಳ ಕಾರಾಗೃಹವಾಸಶಿಕ್ಷೆಯು ಹೆಚ್ಚಾಗಿಯೂ ವಿಧಿಸಲ್ಪಟ್ಟಿತು.

ಮಹಾತ್ಮಗಾಂಧಿಯವರು ಸಿಂಧುದೇಶದಿಂದ ದೆಹಲಿಗೆ ಪ್ರಯಾಣಮಾಡಿ ಕಳೆದ ಭಾನುವಾರ ಅಲ್ಲಿಗೆ ತಲಪಿದರು. ರೈಲ್ವೆ ನಿಲ್ದಾಣದಲ್ಲಿ ಪಂಡಿತ ಮೋತಿಲಾಲನೆಹರು ಮಾಳವಿಯ, ಜವಾಹರಲಾಲ್ ಮೊದಲಾದ ಮುಂದಾಳುಗಳು ಇದಿರ್ಗೊಂಡು ಸಾರ್ವಭೌಮ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ವಿಠಲಭಾಯಿ ಪಟೇಲರ ಗೃಹಕ್ಕೆ ಕರೆದೊಯ್ದರು. ಆ ದಿನ ಸಾಯಂಕಾಲ ಹಿಂದು ಮುಸಲ್ಮಾನ ಮುಂದಾಳುಗಳು ಸೇರಿ ಗಾಂಧಿಜಿಯವರೊಡನೆ ಮತೀಯ ಸಮಸ್ಯೆಯನ್ನೂ, ರಾಜಕೀಯ ಸಮಸ್ಯೆಗಳನ್ನೂ ವಿಮರ್ಶಿಸಿದರು. ಅಧ್ಯಕ್ಷ ಪಟೇಲರು ಗಾಂಧಿಜಿಯವರ ಸಲುವಾಗಿ ಏರ್ಪಡಿಸಿದ ಔತಣಕ್ಕೆ ವೈಸ್ರಾಯ್ ಲಾರ್ಡ್ ಅರ್ವಿನರವರನ್ನೂ, ಮುಖ್ಯ ಸೇನಾಧಿಪತಿ ಲಾರ್ಡ್ ಬರ್ಡ್‌ವುಡ್‌ರವರನ್ನೂ ಇನ್ನೂ ಇತರ ಮುಖ್ಯಾಧಿಕಾರಿಗಳನ್ನೂ ಆಹ್ವಾನಿಸಿರುವರು. ಇವರೆಲ್ಲರೂ ಮಹಾತ್ಮರವರನ್ನು ಸಂದರ್ಶಿಸುವುದರಿಂದ ರಾಜಕೀಯ ವಿಚಾರವಾಗಿ ಮಾತುಗಳು ನಡೆಯಬಹುದೆಂದು ನಿರೀಕ್ಷಿಸಲಾಗಿರುವುದು. ಇದಕ್ಕೆ ಕಾರಣವೂ ಇರುವುದು. ವೈಸ್ರಾಯ ಅರ್ವಿನರವರು ಇಷ್ಟರಲ್ಲೇ ಇಂಗ್ಲೆಂಡಿಗೆ ತೆರಳುವರಾಗಿರುವರು. ಅಲ್ಲಿ ಬ್ರಿಟಿಷ್ ಮಂತ್ರಿಮಂಡಲದವರಿಗೆ ಹಿಂದುಸ್ಥಾನದ ಪರಿಸ್ಥಿತಿಯನ್ನು ರಾಷ್ಟ್ರೀಯ ಮುಂದಾಳುಗಳ ಅಭಿಮತವನ್ನೂ ತಿಳಿಸಲೋಸುಗ ಇಲ್ಲಿನ ಪ್ರಮುಖರನ್ನು ಸಂದರ್ಶಿಸಲು ಈ ಔತಣವು ಉಪಾಯವಾಗಿರುವುದೆಂದು ಊಹಿಸಬಹುದಾಗಿದೆ. ಇದರ ಪರಿಣಾಮವೆಂತಾಗುವುದೊ ನೋಡಬೇಕಾಗಿರುವುದು.

ದಿನ ದಿನಕ್ಕೆ ಯೂರೋಪಿನಲ್ಲಿ ಚಳಿಯು ಹೆಚ್ಚುತ್ತಿರುವುದು ಅದರ ಹಾವಳಿಯು ವರ್ಣಿಸಲಸದಳವಾಗಿರುವುದು. ಬಾಲ್ಕನ್ ಪ್ರಾಂತ್ಯದಲ್ಲಿ 50 ಜನರೂ, ಜರ್ಮನಿಯಲ್ಲಿ 37 ಜನರು ಶೈತ್ಯದಿಂದ ಮಡಿದರು. ಫ್ರಾನ್ಸ್ ದೇಶವೆಲ್ಲಾ ಹಿಮಮಯವಾಗಿರುವುದು. ಡಿಯಪ್ ಎಂಬ ಬಂದರು ಮಂಜುಗಡ್ಡೆಯಿಂದ ಮುಚ್ಚಲ್ಪಟ್ಟಿರುವುದು. ಯೂರೋಪಿನಲ್ಲೆಲ್ಲಾ ಚಳಿಗಾಲವಾಗಿದ್ದಾಗ ಜನಗಳು ವಿಹಾರಕ್ಕಾಗಿ ಹೋಗಿದ್ದಾಗ್ಗೆ ಜನಗಳು ವಿಹಾರಕ್ಕಾಗಿ ಹೋಗುತ್ತಿದ್ದ ಬಿಸಿಲಾಗಿರುವ ರಿವಿಯೆರ ಎಂಬ ಪ್ರಾಂತ್ಯದಲ್ಲಿ ಸಹ ಈಗ ಏಳು ಅಂಗುಲ ಮಂಜುಗಡ್ಡೆ ಕಟ್ಟಿರುವುದು ಬಿರುಸಾಗಿ ಹರಿಯುತ್ತಿದ್ದ ರ್ಹೋನ್ ನದಿಯೂ ವೆನಿಸ್ ನಗರದ ಸರೋವರಗಳೂ ಮಂಜುಗಡ್ಡೆಯಾಗಿರುವುವು. ಪ್ರೇಗೆ ಪಟ್ಟಣದಲ್ಲಿ ಸ್ಮಶಾನವು ಶವಗಳಿಂದ ಕಿಕ್ಕಿರಿದು ತುಂಬಿರುವುದು. ಸಮಾಧಿಗಳಲ್ಲಿ ಗುದ್ದಲಿಗಳಿಂದ ತೋಡುವುದು ಸಾಲದೇ ಇದ್ದುದರಿಂದ ಸುರಂಗದ ಮದ್ದಿನ ಸಹಾಯದಿಂದ ಹಳ್ಳ ತೋಡಿ ಶವಗಳನ್ನು ಒಟ್ಟೊಟ್ಟಿಗೆ ತುಂಬಿ ಮೇಲೆ ಮಣ್ಣುಮುಚ್ಚುತ್ತಿರುವರು. ಪೋಲೆಂಡಿನಲ್ಲಿಯೂ ಬಾಲ್ಟಿಕಸಾಗರದ ಸುತ್ತಿನ ದೇಶಗಳಲ್ಲಿಯೂ ಆಸ್ಪತ್ರೆಗಳಲ್ಲಿ ಚಳಿಯ ಹೊಡೆತದಿಂದ ರೋಗಪೀಡಿತರಾದವರು ಕಿಕ್ಕಿರಿದು ತುಂಬಿರುವರು. ಸಮುದ್ರದಲ್ಲಿ ಪ್ರಯಾಣಮಾಡುತ್ತಿದ್ದ ಹಡಗುಗಳು ಅಲ್ಲಲ್ಲಿಯೇ ನಿಂತುಹೋಗಿರುವುವು. ಅವುಗಳ ನಿವಾರಣೆಗಾಗಿ ನಾನಾ ದೇಶಗಳ ಮಂಜುಗಡ್ಡೆಯನ್ನು ಬೇದಿಸುವ ಯಂತ್ರಗಳು ಹೊರಟಿರುವುವು. ರಷ್ಯಾದೇಶದಿಂದ ಈ ವಿಧವಾದ ಯಂತ್ರಗಳು ವಿಶೇಷವಾಗಿ ಸಹಾಯಮಾಡುತ್ತಿರುವುವು.

ಸ್ಟೇಟ್ ಕೌನ್ಸಿಲಿನಲ್ಲಿ ಸಭ್ಯರಾಗಿದ್ದ ಸರ್ ಫಿರೋಜ್‌ಸೇತ್ನರವರ ಸಹೋದರ ಹೋಮಿಸೇತ್ನರವರು ಬೊಂಬಾಯಿಯ ಹಾರ್ನಬಿರೋಡಿನಲ್ಲಿ ಕೆನಡಾ ಕಟ್ಟಡದಲ್ಲಿ ವಾಸಿಸುತ್ತಿರುವರು. ಹೋಮಿಯವರೂ ಫಿರೋಜಿಯವರೂ ಕಲೆತು ವ್ಯಾಪಾರ ಮಾಡುತ್ತಿದ್ದಾರೆ. ಇದರಲ್ಲಿ ಹೋಮಿಯವರು ಹತ್ತಿ ಶಾಖೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿರುವರಲ್ಲದೆ, ಭಾರತದೇಶದ ಸನ್‌ಲೈಫ್ ಅಶೂರೆನ್ಸ್ ಕಂಪೆನಿಗೆ ಮುಖ್ಯಾಧಿಕಾರಿಗಳಾಗಿರುತ್ತಾರೆ. ಕಳೆದ ತಾ|| 13 ನೇ ಬುಧವಾರ ರಾತ್ರಿ ಹೋಮಿಯವರು ಮನೆಯ ಮಹಡಿಯಮೇಲಿರುವಾಗ್ಗೆ ಒಬ್ಬ ಕಳ್ಳನು ಅವರ ಕೊಠಡಿಯೊಳಕ್ಕೆ ಪ್ರವೇಶಿಸಿದನು. ಯಾರೆಂದು ಕೇಳಲು ಅವನು ನಗಲಾಗಿ ಹೋಮಿಯವರಿಗೆ ಅನುಮಾನವಾಯಿತು. ಅದರ ಮೇಲೆ ಕಳ್ಳನಿಗೂ ಹೋಮಿಯವರಿಗೂ ಸ್ವಲ್ಪ ಕಾಲ ಹೋರಾಟನಡೆದಿತು. ಆ ಹೋರಾಟದಲ್ಲಿ ಕಳ್ಳನು ಹೋಮಿಯವರ ಎದೆಯ ಎಡಪಕ್ಕವನ್ನು ಕತ್ತಿಯಿಂದ 4 ಸಾರಿ ಹೊಡೆದನು. ಚರ್ಮವನ್ನು ಕತ್ತಿಯು ಸೀಳಿಕೊಂಡು ಹೋಗಿದೆ ಕಳ್ಳನು ಅಲ್ಲಿಂದೋಡಿ ಮೂರನೇ ಅಂತಸ್ತಿನಿಂದ 35 ಅಡಿ ಕೆಳಗಿರುವ ರಸ್ತೆಯಮೇಲೆ ದುಮಿಕಿದನು. ಆದರೆ ಅವನು ತಲೆಕೆಳಗಾಗಿಬಿದ್ದು ಸತ್ತುಹೋದನು. ತಾ|| 14 ರ ಬೆಳಿಗ್ಗೆ ಪೊಲೀಸರು ಬಂದು ಕಳ್ಳನ ಶವವನ್ನು ವಶಪಡಿಸಿಕೊಂಡು ವಿಚಾರಿಸುವಲ್ಲಿ ಅವನು ಮಹಮ್ಮದೀಯನೆಂದೂ, ಅವನ ಹೆಸರು ಮುರ್ತುಜಾ ಮುಖರುಜಯರಾಂ ಎಂದೂ ವಾಸಸ್ಥಲವು ಆಗ್ರಾಪಟ್ಟಣವೆಂದೂ, ಅವನಿಗೆ 6 ಸಲ ಶಿಕ್ಷೆಯಾಗಿದ್ದಿತೆಂದೂ ತಿಳಿಯಬಂದಿತು. ಹೋಮಿಸೇತ್ನಾಯವರು ಆಸ್ಪತ್ರೆಯೊಳಗೆ ಅಪಾಯಸ್ಥಿತಿಯಲ್ಲಿರುವರು.

ವಿದೇಶದ ವೃತ್ತಾಂತಗಳು.

ಬ್ಯೂಡಾಪೆಸ್ಟ ನಗರದಲ್ಲಿ ಸಂಚಾರವೆಲ್ಲ ನಿಂತುಹೋಗಿರುವುದು. ಇದ್ದಲು, ಆಹಾರಸಾಮಗ್ರಿಗಳೂ ಮುಗಿದುಹೋಗುತ್ತಿರುವುವು. ತೋಳಗಳು ಊರಿನಲ್ಲಿ ನುಗ್ಗಿ ದನಗಳನ್ನು ನುಂಗುತ್ತ ಜನಗಳಿಗೆ ತೊಂದರೆ ಪಡಿಸುತ್ತಿರುವುವು.

ಲಂಡನ ನಗರದಲ್ಲಿ ಶ್ರೀಮಂತೆಯೊಬ್ಬಳು 75,000 ರೂ. ಬೆಲೆ ಬಾಳುವ ಕಂಠಹಾರವನ್ನು ಕಳೆದುಕೊಂಡಳು. ಅದನ್ನು ವಿಮೆ ಮಾಡಿದ್ದ ಕಂಪೆನಿಯವರು, ಯಾರಾದರೂ ಸಿಕ್ಕಿದವರು ತಂದುಕೊಟ್ಟರೆ 7,500 ರೂ. ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದರು. ಲಂಡನ ನಗರದ ಪಶ್ಚಿಮಭಾಗದಲ್ಲಿ ಒಬ್ಬ ಬಾಲಕನಿಗೆ ಹಾರವು ಸಿಕ್ಕಿತು. ಅದನ್ನು ತೆಗೆದುಕೊಂಡ ಶ್ರೀಮಂತೆಯೇ ಆ ಬಾಲಕನಿಗೆ ಬಹುಮಾನವನ್ನು ಕೊಟ್ಟಳೆಂದು ತಿಳಿದು ಬಂದಿದೆ.

ರಾಜಮನೆತನದಲ್ಲಿ ಹುಟ್ಟಿದರೂ ದುರ್ಮಾರ್ಗ ಪ್ರವರ್ತಕನಾಗಿ ಬೆಳೆದ ಅಲೆಕ್ಸಾಂಡರ್ ಎಂಬ ಜರ್ಮನ ರಾಜಪುತ್ರನೊಬ್ಬನು, ತನ್ನ ತಾಯಿತಂದೆಗಳಿಂದ 1895 ರಲ್ಲಿ ಪದಚ್ಯುತನಾಗಿ, ದುಸ್ಸಹವಾಸದಲ್ಲಿಯೇ ಕಾಲವನ್ನು ಕಳೆಯುತ್ತ, ಎಲ್ಲಾ ಬಗೆಯ ಹೇಯಕೃತ್ಯಗಳನ್ನು ಮಾಡಿದರೂ ಜೀವನ ಮಾಡಲಾರದೆ, ಕಡೆಗೆ ಒಂದು ಹೋಟಲಿನಲ್ಲಿ ಸೇವಾವೃತ್ತಿಗೆ ಸೇರಿಕೊಂಡಿದ್ದು, ಕಡೆಯಲ್ಲಿ ಬುದ್ಧಿ ಕೆಟ್ಟು, ವೈದ್ಯಾಲಯಕ್ಕೆ ಸಾಗಿಸಲ್ಪಡುತ್ತಿರುವಾಗ ದಾರಿಯಲ್ಲಿ ಮೃತನಾದನು.

ಮೆಕ್ಸಿಕೊ ದೇಶದಲ್ಲಿ ರಾಜ್ಯಭಾರಮಾಡುವ ಸ್ಪೇನ ದೇಶೀಯರು ಕ್ರೈಸ್ತ ಮತಾವಲಂಬಿಗಳೇ ಆದಾಗ್ಗೂ ಅವರಲ್ಲಿಯೇ ಒಳಭೇದಗಳಿರುವುದರಿಂದ ಆಗಾಗ್ಗೆ ದೇಶದಲ್ಲಿ ಕಕ್ಷಿಗಳಾಗಿ ಅಂತಃಕಲಹವು ಹೊತ್ತಿಬೇಯುತ್ತಿರುವುದು. ಅಲ್ಲಿನ ಕ್ಯಾಥೊಲಿಕ್ ಮತಾಧಿಪತಿಗಳು ಜನಗಳಲ್ಲಿ ವೈಮನಸ್ಯವನ್ನು ಹುಟ್ಟಿಸುತ್ತಿರುವರೆಂದು ತಿಳಿದುಬಂದುದರಿಂದ ಅವರ ಸ್ವತ್ತನ್ನೆಲ್ಲಾ ತೆಗೆದು ಸರ್ಕಾರದವರು ದಂಗೆಯೇಳಬೇಕೆಂದು ಅಸ್ತ್ರಸಂಗ್ರಹ ಮಾಡಿಕೊಳ್ಳುತ್ತಿದ್ದ ರೈತರುಗಳಿಗೆ ಹಂಚಿಕೊಡಬೇಕೆಂದು ಯೋಚಿಸಿರುವರಂತೆ.

ಜರ್ಮನಿಯ ರಾಜಧಾನಿಯೊದ ಬರ್ಲಿನ ನಗರದಲ್ಲಿ ಒಂದು ಬ್ಯಾಂಕಿನವರು ನೆಲದಲ್ಲಿ ಆಳವಾಗಿ ಕಟ್ಟಿಸಿರುವ ಕಬ್ಬಿಣದ ಕೋಶಾಗಾರದ ತಳಕ್ಕೆ ಕಳ್ಳರು ಅನೇಕ ದಿನಗಳಿಂದ ಸುರಂಗವನ್ನು ಕೊರೆದು, ಕೋಶಗಾರಕ್ಕೆ ತೂತನ್ನು ಹಾಕಿ ಶೇಖರಿಸಿದ್ದ ಅನೇಕ ಲಕ್ಷ ಮಾರ್ಕುಗಳು ಬಾಳುವ ಆಭರಣಗಳನ್ನು ತೆಗೆದುಕೊಂಡು ಹೋಗಿರುವರು. ಪಾಶ್ಚಾತ್ಯದೇಶಗಳ ಕಳ್ಳರು ಅತಿಬುದ್ಧಿವಂತರೆಂಬುದನ್ನು ಇದರಿಂದ ತಿಳಿಯಬಹುದು. ಈ ಕಾರಣದಿಂದಲೇ ಅಲ್ಲಿನ ಜನರು ಆಭರಣಗಳ ಮೇಲೆ ವಿಶೇಷ ಧನವ್ಯಯ ಮಾಡದೆ, ತಮ್ಮ ಸಂಪಾದನೆಯನ್ನೆಲ್ಲಾ ಬ್ಯಾಂಕುಗಳಲ್ಲಿಟ್ಟು, ಲೇವಾದೇವಿ ನಡೆಸುವರು.

ಸಾಕೌವಿನ ಬಾಲ್ಯದಲ್ಲಿ ಅವನ ಜೊತೆಗಾರನೊಬ್ಬನು ಆಟವಾಡುತ್ತಿರುವಾಗ್ಗೆ ತನಗೆ ರಾಜಪದವಿ ದೊರೆತರೆ ನಿನಗೇನು ಬೇಕೆಂದು ಕೇಳಿದ್ದನಂತೆ. ಅದಕ್ಕವನು ತನಗೆ ಸೇನಾಧಿಪತಿಯ ಪದವಿ ಬೇಕೆಂದು ಕೇಳಿದ್ದನಂತೆ. ಈಗ ಸಾಕೌ ನಿಜವಾಗಿಯೂ ದೊರೆತನಕ್ಕೆ ಬಂದುದನ್ನು ನೋಡಿ ಬಾಲ್ಯದ ಸ್ನೇಹಿತನಾದ ಅವನು ಸಾಕೌವಿನ ಬಳಿಗೆ ಹೋಗಿ ತನಗೆ ಬಾಲ್ಯದಲ್ಲಿ ಕೊಟ್ಟಿದ್ದ ಭಾಷೆಯನ್ನು ನೆರವೇರಿಸಬೇಕೆಂದನಂತೆ. ಆಗ ದೊರೆಯು ಆತನ ಕೋರಿಕೆಯನ್ನು ನಡೆಸಬೇಕೆಂದು ತನ್ನ ಮಂತ್ರಿಗೆ ಹೇಳಲು ಅವನು ಅದಕ್ಕೊಪ್ಪದೆ ಆತನಲ್ಲಿ ಸೇನಾನಾಯಕನಾಗುವ ಅರ್ಹತೆ ಕಾಣಲಿಲ್ಲವೆಂದನಂತೆ. ಈ ಸಂದರ್ಭದಲ್ಲಿ ದೊರೆಗೂ ಮಂತ್ರಿಗೂ ವೈಮನಸ್ಯ ಹುಟ್ಟಿರುವುದಂತೆ.

ಪರ್ಷಿಯನ್ ಕೊಲ್ಲಿಯಲ್ಲಿರುವ ಬಹರಿನ ದ್ವೀಪಗಳು ಆ ದೇಶಕ್ಕೆ ಸೇರಿದುವಾದರೂ ಕೆಲಕಾಲದಿಂದ ಬ್ರಿಟಿಷರು ಅಲ್ಲಿ ತಮ್ಮ ಅಧಿಕಾರವನ್ನು ನಡೆಸುತ್ತಿರುವರು. ಪರ್ಷಿಯನರು ಅಲ್ಲಿಗೆ ಹೋಗಬೇಕಾದರೆ ಬ್ರಿಟಿಷ್ ಪ್ರತಿನಿಧಿಯ ಅನುಮತಿಯನ್ನು ಪಡೆಯಬೇಕಾಗಿರುವುದು. ಇದು ಅಪಮಾನಕರವೆಂದೂ, ತಮಗೆ ಸೇರಿದ ದ್ವೀಪಗಳಲ್ಲಿ ಬೇರೆ ಸರ್ಕಾರದವರು ಅಧಿಕಾರ ನಡೆಸಲಾಗದೆಂದೂ ಪರ್ಷಿಯಾಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿರುವುದಲ್ಲದೆ ಸರ್ವ ರಾಷ್ಟ್ರೀಯ ಸಭೆಯ ಸದಸ್ಯರಿಗು ಸಹ ತಿಳಿಯಪಡಿಸಿರುವರು. ಈ ವ್ಯಾಜ್ಯವು ಕೆಲ ವರ್ಷಗಳಿಂದಲೂ ನಡೆಯುತ್ತಿರುವುದು. ಯಾವ ರೀತಿ ತೀರ್ಮಾನವಾಗುವುದೊ ನೋಡಬೇಕಾಗಿರುವುದು.

ಇಂಗ್ಲೆಂಡಿನಲ್ಲೆಲ್ಲಾ ಹಿಮವು ಸುರಿದು ಗಡ್ಡೆಕಟ್ಟಿಕೊಂಡಿರುವುದರಿಂದ ಶೀತವಲಯದ ಜನರು ಚಳಿಗಾಲದಲ್ಲಿ ವಿನೋದಕ್ಕಾಗಿ ಕಾಲಿಗೆ ಹಲಗೆಗಳನ್ನು ಕಟ್ಟಿಕೊಂಡು ವಿಹರಿಸುವಂತೆ ಆಂಗ್ಲೇಯರು ಜಾರುಗುಪ್ಪೆಗಳ ಮೇಲೆ ಜಾರುಬಂಡಿಗಳನ್ನು ಹಾಕಿಕೊಂಡು ವಿನೋದಪಡುತ್ತಿರುವರು. ಹಿಂದೆ ಎಂದೂ ಇಲ್ಲದಷ್ಟು ಶೈತ್ಯವು ಇಂಗ್ಲೆಂಡಿನಲ್ಲಿ ಈ ವರ್ಷ ಪ್ರಾಪ್ತವಾಗಿರುವುದು. ಚಳಿಯಿಂದ ನೂರಾರುಜನರು ಸತ್ತಿರುವರು. ಒಂದು ಮನೆಗೆ ಬೆಂಕಿಬಿದ್ದು ಉರಿಯುತ್ತಿರಲು ಅದನ್ನು ಆರಿಸುವುದಕ್ಕಾಗಿ ನೀರಿನ ಕೊಳವೆಗಳಿಂದ ನೀರನ್ನು ಎರಚುವುದಕ್ಕೆ ಪ್ರಯತ್ನಿಸಲು ಶೈತ್ಯದಿಂದ ನೀರು ಕೊಳವೆಯೊಳಗೆ ಗಟ್ಟಿಯಾಗಿ ಕಟ್ಟಡವೆಲ್ಲಾ ಉರಿದೇಹೋಯಿತು. ಯೂರೋಪೆಲ್ಲವೂ ಏಕಕಾಲದಲ್ಲಿ ಹಿಮಾಲಯವಾಗಿರುವುದು.

ಶೈತ್ಯಾಧಿಕ್ಯದಿಂದ ಆಸ್ಟ್ರೇಲಿಯಾದೇಶದಲ್ಲೆಲ್ಲಾ ಬಡಜನಗಳು ಕ್ಷಾಮಪೀಡಿತರಾಗಿರುವರು. ಇವರ ಪೈಕಿ 2 ಲಕ್ಷ ಜನಗಳು ನಿರುದ್ಯೋಗಿಗಳಾದುದರಿಂದ ಅನ್ನೋದಕವಿಲ್ಲದೆ ಕೃತಾವಸ್ಥೆಯಲ್ಲಿರುವರು. ಇದರ ನಿವಾರಣೆಗಾಗಿ ಸರ್ಕಾರದವರು ಸೈನಿಕರ ಸಹಾಯದಿಂದ ಸರ್ಕಾರಿ ಅಡಿಗೆಮನೆಗಳನ್ನು ವಿಯನ್ನ ಪಟ್ಟಣದ ಅನೇಕ ಭಾಗಗಳಲ್ಲಿ ಏರ್ಪಡಿಸಿ ದಿನಕ್ಕೆರಡುಸಾರಿ ಈ ಬಡಪಾಯಿಗಳಿಗೆ ಆಹಾರವನ್ನು ಹಂಚುತ್ತಿರುವರು. ಹಣಗಾರರಾದ ರೊಟ್ಟಿವ್ಯಾಪಾರಿಗಳು ಸಾವಿರಾರು ಜನಗಳಿಗೆ ರೊಟ್ಟಿಯನ್ನು ದಾನಮಾಡುತ್ತಿರುವರು. ಸರ್ಕಾರದವರು ನಿರ್ಗತಿಕರಾದವರಿಗೆ ನಿವಾಸವನ್ನೂ, ಬಡಜನರಿಗೆ ಬೆಂಕಿಕಾಯಿಸಿಕೊಳ್ಳುವುದಕ್ಕೋಸ್ಕರ ಸೌದೆಯನ್ನೂ ಇದ್ದಲನ್ನೂ ಹಂಚುತ್ತಿರುವರು. ಚಳಿಯದೆಸೆಯಿಂದ ನೀರಿನ ಕೊಳವೆಗಳು ಒಡೆದು ಕುಡಿಯುವ ನೀರಿಗೂ ಅಭಾವಬಂದಿರುವುದು.

ಲೂಯಿ ವೀಬರ್ ಎಂಬ ಫ್ರೆಂಚ್ ಸ್ತ್ರೀಯು ಬಟ್ಟೆ ಚಲುವೆ ಮಾಡುವವರ ಮನೆತನದಲ್ಲಿ ಹುಟ್ಟಿದರೂ, ಅತಿ ಸುಂದರಿಯಾಗಿದ್ದುದರಿಂದ ತನ್ನ ಹದಿನೇಳನೆಯ ವಯಸ್ಸಿನಲ್ಲಿ ಪ್ರಖ್ಯಾತಳಾದ ನಾಟ್ಯಗಾರ್ತಿ ಎಂಬ ಹೆಸರನ್ನು ಪಡೆದು, ಪ್ಯಾರಿಸ್ ರಾಜಧಾನಿಯಲ್ಲೆಲ್ಲ ಸುಪ್ರಸಿದ್ಧಳಾಗಿದ್ದಳು. ರಾಜಮನೆತನದವರಲ್ಲಿಯೂ ಸಖ್ಯತ್ವವನ್ನು ಬೆಳೆಸಿದಳು. ಬೇಕಾದಷ್ಟು ದ್ರವ್ಯಾರ್ಜನೆ ಮಾಡಿ ಕೆಟ್ಟ ಸಹವಾಸಕ್ಕೆ ಬಿದ್ದುದರಿಂದ, ಕ್ರಮೇಣ ದೊಡ್ಡವರ ಸ್ನೇಹವನ್ನು ಕಳೆದುಕೊಂಡು, ಒಂದು ಸರ್ಕಸ್ ಕಂಪನಿಯಲ್ಲಿ ಸಂಬಳಕ್ಕೆ ಸೇರಿಕೊಂಡಳು. ಕೆಲವು ಕಾಲದ ಮೇಲೆ ಅಲ್ಲಿಂದ ಸ್ಥಾನಭ್ರಷ್ಟಳಾಗಿ ಬೀದಿಗಳಲ್ಲಿ ಮಿಠಾಯಿ ಮಾರುತ್ತ ಜೀವನಮಾಡಿ, ತನ್ನ ಎಪ್ಪತ್ತನೆಯ ವಯಸ್ಸಿ ನಿರ್ಗತಿಕಳಾಗಿ ಮೃತಳಾಗಿರುತ್ತಾಳೆ. ಯೌವನವೂ ಐಶ್ವರ್ಯ ನಶ್ವರವಾದುವುಗಳೆಂದು ಈಕೆಯು ತನ್ನ ಜೀವನದಿಂದ ತೋರ್ಪಡಿಸಿರುತ್ತಾಳೆ.

ಇಂಗ್ಲೆಂಡಿನಲ್ಲಿ ಶ್ರೀಮಂತೆಯೊಬ್ಬಳು 30 ಸಾವಿರ ರೂಪಾಯನ್ನು ಪಕ್ಷಿಗಳ ರಕ್ಷಣಾಲಯವನ್ನು ಕಲ್ಪಿಸಿ ನಡೆಸುವುದಕ್ಕಾಗಿ ದಾನಮಾಡಿದಳು. ಶಾಸ್ತ್ರಜ್ಞರ ಪರಿಶೋಧನೆಗಾಗಿ ಪಕ್ಷಿಗಳನ್ನೂ ಪ್ರಾಣಿಗಳನ್ನೂ ಕೊಲ್ಲುವ ಪದ್ಧತಿಯನ್ನು ತಪ್ಪಿಸಿ ಅಂತಹ ಪ್ರಾಣಿಗಳನ್ನು ರಕ್ಷಿಸುವುದೇ ಈ ಮಹಾತ್ಮಳಾದ ಧರ್ಮಿಷ್ಟೆಯ ಉದ್ದೇಶವಾಗಿದ್ದಿತು. ಆದರೆ ಆಕೆಯ ಮರಣಾನಂತರ ಆಕೆಯ ಸಂಬಂಧಿಗಳು ನ್ಯಾಯಸ್ಥಾನದಲ್ಲಿ ವ್ಯಾಜ್ಯ ಹೂಡಿದರು. ಈದಾನದಿಂದ ಮನುಷ್ಯರಿಗೆ ಯಾವರೀತಿಯಲ್ಲಿಯೂ ಉಪಕಾರವಾಗುವ ಸಂಭವವು ತೋರದಿದ್ದುದ್ದರಿಂದ ಅಂತಹ ದಾನವು ಸ್ಥಿರವಾಗಲಾರದೆಂದು ನ್ಯಾಯಾಧೀಶರು ತೀರ್ಮಾನ ಮಾಡಿದರಂತೆ. ದೈವನಿರ್ಮಾಣದಲ್ಲಿ ನಿರ್ಜೀವವಾದ ಸರ್ವಸ್ವವೂ ಸ್ವಾರ್ಥಪರನಾದ ಮನುಷ್ಯನ ಉಪಯೋಗಕ್ಕಾಗಿಯೇ ಇರುವುದೆಂದೂ ಜೀವವುಳ್ಳ ಪಶುಪ್ರಾಣಿಗಳಿಗು ಸಹ ಯಾವ ಸೌಕರ್ಯವೂ ದೊರೆಯಲಾಗದೆಂದೂ ಅಭಿಪ್ರಾಯಪಡುವ ಮಾನವನ ಜನ್ಮವು ಎಷ್ಟು ಪವಿತ್ರವಾದುದಾಗಿರುವುದು. ಪಾಪಪುಣ್ಯಭೀತಿಯಿಲ್ಲದೆ ಮತಾಚಾರಗಳನ್ನೂ ಮರೆತಿರುವ ಪಾಶ್ಚಾತ್ಯರು ಈರೀತಿ ಅಭಿಪ್ರಾಯಪಡುವುದೇನಾಶ್ಚರ್ಯವಲ್ಲ.

ಗೃಹಕೃತ್ಯದ ನೋಟೀಸು.

ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಾಡ್ನೂರು ಹೋಬಳಿ ನಗರನಹಳ್ಳಿಯಲ್ಲಿರುವ ವೀರಶೈವಮತದ ಕಂಬಸವೇಗೌಡನ ಮಗ ದ್ಯಾವಪ್ಪ ಉರ್ಫ್ ಅಪ್ಪಾಜಿಯು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ನಾನು ಮತ್ತು ನನ್ನ ಅಣ್ಣ ಪವತಿ ಬಸಪ್ಪ ಸಹ ಕಂಬಸವೇಗೌಡನ ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತೆಲ್ಲವೂ ಅವಿಭಕ್ತ ಕುಟುಂಬಕ್ಕೆ ಸೇರಿರುತ್ತದೆ. ನನ್ನ ಅಣ್ಣನಿಗೆ 4 ವರ್ಷದ ಬಸಪ್ಪನೆಂಬ ಒಬ್ಬ ಮಗನು ಮಾತ್ರ ಇರುವನು. ನಾನೂ ನನ್ನ ಪವತಿ ಅಣ್ಣ ಬಸಪ್ಪ ಸಹ ಇದೇ ಗ್ರಾಮದ ಸಾಹುಕಾರ್ ಶ್ರವಣಗೌಡರಲ್ಲಿ ಮಾಡಿರುವ ಸಾಲವನ್ನು ಸ್ವತ್ತನ್ನು ಮಾರದೆ ವ ಮಾನದಿಂದ ತೀರಿಸಿ ನನ್ನ ಲಗ್ನವಾದನಂತರ ವಿಭಾಗಮಾಡಿಕೊಡುತ್ತೇನೆಂದು ಹೇಳಿದರೂ ನನ್ನ ಅಣ್ಣನ ಹೆಂಡತಿ ಬಸಮ್ಮನು ಕೇಳದೆ ಜನರ ದುರ್ಬೋಧೆಯಿಂದ ನನ್ನ ಅನುಮತಿಯಿಲ್ಲದೆ ಅವಿಭಕ್ತ ಆಸ್ತಿಯನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿರುತ್ತಾಳೆಂದು ಕೇಳುತ್ತೇನೆ ಉಳಿರುವ ಸಾಲವನ್ನು ತೀರಿಸಲು ನಾನು ಸಿದ್ಧನಾಗಿರುವುದರಿಂದಲೂ ನನ್ನ ಅನುಮತಿಯಿಲ್ಲದೆ ಸ್ವತ್ತನ್ನು ಮಾರಲು ನನ್ನ ಅತ್ತಿಗೆ ಬಸಮ್ಮನಿಗೆ ಅಧಿಕಾರವಿಲ್ಲದ್ದರಿಂದಲೂ ಯಾರಾದರೂ ಅಳಿಯಿಂದ ಕ್ರಯ, ಭೋಗ್ಯ, ಆಧಾರ ಮಾಡಿಕೊಂಡರೆ ನಾನಾಗಲಿ ಕುಟುಂಬದ ಸ್ವತ್ತಾಗಲಿ ಬದ್ಧರಾಗುವುದಿಲ್ಲವೆಂದು ಎಚ್ಚರಿಸುತ್ತೇನೆ.

[illegible]

ಟ್ರೊಟ್ಸ್ಕಿಯವರ ದೇಶತ್ಯಾಗ.

ರಷ್ಯಾದೇಶದ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಕಾರಣರಾದ ಟ್ರೊಟ್ಸ್ಕಿಯವರನ್ನು ಅಲ್ಲಿನ ಸರ್ಕಾರದವರು ಕಾರಣಾಂತರದಿಂದ ದೇಶಭ್ರಷ್ಟರನ್ನಾಗಿ ಮಾಡಿದರು. ಟ್ರೊಟ್ಸ್ಕಿಯವರು ತುರ್ಕಿಗೆ ಹೋಗಿರುವರು. ಈಗ ಕಾನ್‌ಸ್ಟಾಂಟಿನೋಪಲಿನಲ್ಲಿರುವರು. ಅಲ್ಲಿಂದ ಜರ್ಮನಿಗೆ ಹೋಗಲಿಚ್ಛಿಸಿ ಜರ್ಮನ ಸರ್ಕಾರದವರ ಅನುಮತಿಯನ್ನು ಕೇಳಿರುವರು. ಅಲ್ಲಿನ ಮಂತ್ರಿಮಂಡಲದವರು ಅನುಮತಿಯನ್ನು ಕೊಡಬಹುದೆಂದು ಒಪ್ಪಿರುತ್ತಾರೆ.

ಅಮಾನುಲ್ಲರ ರಾಜ್ಯಪರಿತ್ಯಾಗದ ಕಥೆ

ಅಮಾನುಲ್ಲ ರಾಜರು ರಾಜ್ಯಪರಿತ್ಯಾಗಮಾಡಿ ಕಾಬೂಲನ್ನು ಬಿಟ್ಟು ಹೊರಡಲು ಕಾರಣವೇನೆಂಬುದನ್ನು ಸ್ಪಷ್ಟವಾಗಿ ತಿಳಿಯಬೇಕೆಂದು ಅನೇಕರಿಗೆ ಕುತೂಹಲವಿರಬಹುದು. ಕಾಬೂಲಿನ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಷೇಕ್‌ಬಷೀರ್ ಅಹಮದ್‌ರವರು ಮೊನ್ನೆ ತಾನೆ ಲಾಹೋರಿಗೆ ಬಂದು ತಲುಪಿದರು. ಚೋರ ಮುಖಂಡನು ಕಾಬೂಲನ್ನು ವಶಪಡಿಸಿಕೊಂಡಾಗ್ಗೆ ಅಹಮದ್ ರವರು ಕಾಬೂಲಿನಲ್ಲಿದ್ದರಾದುದರಿಂದ ಅವರನ್ನು ಪತ್ರಿಕಾಪ್ರತಿನಿಧಿಯೊಬ್ಬನು ಭೇಟಿಮಾಡಿ ಅಮಾನುಲ್ಲರವರ ರಾಜ್ಯಪರಿತ್ಯಾಗದ ಕಥೆಯನ್ನು ಕೇಳಿದನು. ಅಮಾನುಲ್ಲರವರ ವಶದಲ್ಲಿ ಬೇಕಾದಷ್ಟು ಮದ್ದು, ಗುಂಡು, ಆಹಾರ ಸಾಮಾಗ್ರಿಗಳೆಲ್ಲವೂ ಇದ್ದುವಾದಾಗ್ಯೂ ಸಾಕೌ ಕಾಬೂಲನ್ನು ಸಮೀಪಿಸುತ್ತಿದ್ದ ಹಾಗೆಯೇ ಮೌಲ್ವಿಯೊಬ್ಬನು ಬಂದು ದಂಗೆಕೋರರ ದಂಡು 15,000 ಬಲವಿರುವುದೆಂದು ಹೇಳಿ ಅಮಾನುಲ್ಲರವರ ಸೈನಿಕರಿಗೆ ಗಾಬರಿ ಹಿಡಿಸಿದನು. ಇದಕ್ಕೊಂದು ತಿಂಗಳಹಿಂದೆ ಸಾಕೌವಿನ ಸೈನ್ಯವು ಕಾಬೂಲನ್ನು ಮುತ್ತಿದಾಗ ಅಮಾನುಲ್ಲರ ಸೇನೆಯು ಅವರನ್ನು ಹೊಡೆದೋಡಿಸಿಬಿಟ್ಟಿದ್ದರು. ಪುನಃ ಸಾಕೌ ಹೆಚ್ಚು ಸೈನ್ಯವನ್ನು ತಂದಿರುವನೆಂದೂ ಅವರನ್ನಿದಿರಿಸಿ ಕಾದಾಡುವುದು ನಿರರ್ಥಕವಾದುದೆಂದೂ ಕಪಟಿಯಾದ ಮೌಲ್ವಿಯು ಅಮಾನುಲ್ಲರ ಸೈನಿಕರಿಗೆಲ್ಲ ಬೋಧಿಸಿದನು. ಅವರು ಈ ಮಾತು ನಿಜವೆಂದು ನಂಬಿ ದಂಗೆಕೋರರಮೇಲೆ ಬೀಳಲೊಲ್ಲದೆ ಹೋದರು. ವಾಸ್ತವವಾಗಿ ನೋಡಿದರೆ ಸಾಕೌವಿನೊಡನೆ 50 ಮಂದಿಯು ಸಹ ಸೈನಿಕರಿರಲಿಲ್ಲ. ಆದಾಗ್ಗೂ ಉಪಾಯಾಂತರದಿಂದ ದಂಗೆಕೋರ ಮುಖಂಡನು ಕೋಟೆಯೊಳಗೆ ನುಗ್ಗಿ ಮದ್ದುಗುಂಡಿನ ಉಗ್ರಾಣವನ್ನು ಮೊದಲು ವಶಪಡಿಸಿಕೊಂಡನು. ಅನಂತರ ಅಮಾನುಲ್ಲರವರು ನಡೆದ ಅಚಾತುರ್ಯದಿಂದ ಬೇರೆ ಮಾರ್ಗತೋಚದೆ ವೃಥಾ ತಮ್ಮ ಪ್ರಜೆಗಳ ರಕ್ತಪಾತವಾಗುವುದಲ್ಲ ಎಂದು ಮರುಗಿ ರಾಜ್ಯವನ್ನು ಪರಿತ್ಯಾಗಮಾಡಿ ತಮ್ಮ ಸಹೋದರನಿಗೆ ಪಟ್ಟವನ್ನೊಪ್ಪಿಸಿದರು. ಕೂಡಲೆ ಕಾಬೂಲನ್ನು ಬಿಟ್ಟು ತೆರಳುವುದು ಕ್ಷೇಮವೆಂದು ಅವರಿಗೆ ತೋರಿತು. ಇದಕ್ಕಾಗಿ ತಮ್ಮ ಆಕಾಶನಾವೆಯ ರಷ್ಯನ ವೈಮಾನಿಕರು ಸಮೀಪದಲ್ಲಿರಲಿಲ್ಲವಾದುದರಿಂದ ಮೋಟಾರ ಗಾಡಿಗಳಲ್ಲಿ ಕುಳಿತು ಸುರಕ್ಷಿತವಾಗಿ ಕಾಂದಹಾರನ್ನು ತಲಪಿದರು. ಇನಾಯತುಲ್ಲರವರು ತಮಗೆ ಪಟ್ಟ ಪ್ರಾಪ್ತವಾದ ರೀತಿಯನ್ನು ಪರಿಶೀಲಿಸುವುದರೊಳಗಾಗಿಯೇ ಬಾಚಾಯಿ ಸಾಕೌ ಆಗಲೇ ಕಾಬೂಲನ್ನು ಮುತ್ತಿ ಕೋಟೆಯೊಳಗೆ ಪ್ರವೇಶಿಸಿದ್ದನೆಂದು ಗೊತ್ತಾಯಿತು. ಆದಿನ ಶುಕ್ರವಾರವಾದುದರಿಂದ ಮಸೀದಿಗಳಲ್ಲಿ ನಮಾಜಿಗಾಗಿ ಸೇರಿದ್ದ ಸಾಕೌವಿನ ಹಿಂಬಾಲಕರು ಜಯಘೋಷವನ್ನು ಮಾಡುತ್ತ ತಮ್ಮ ಹೊಸದೊರೆಗೆ ಮರ್ಯಾದೆಯನ್ನು ಸಲ್ಲಿಸುತ್ತಿದ್ದ ಕೋಲಾಹಲವು ಕೇಳಿಸಿತು. ದಂಗೆಕೋರ ಸೈನಿಕರು ತಮ್ಮ ಸಂತೋಷದಲ್ಲಿ ತುಪಾಕಿಗಳನ್ನು ಸಿಕ್ಕಿದಹಾಗೆ ಹಾರಿಸುತ್ತ ಅನೇಕರನ್ನು ಕೊಂದುಹಾಕಿದರು. ಈ ರೀತಿಯಲ್ಲಿ ಚೋರರಾಜನು ಉಪಾಯಾಂತರದಿಂದ ರಾಜಧಾನಿಯನ್ನು ವಶಪಡಿಸಿಕೊಂಡು ಅನೇಕ ತಿಂಗಳುಕಾಲ ಸಾಕಾಗುವಷ್ಟು ಹಣವನ್ನೂ, ಮದ್ದುಗುಂಡು ಸಾಮಗ್ರಿಗಳನ್ನೂ ಸುಲಭವಾಗಿ ಸಂಪಾದಿಸಿಕೊಂಡನು. ಇನಾಯತುಲ್ಲರವರು ತಮಗೆ ಅಪ್ರಾರ್ಥಿತವಾಗಿ ದೊರೆತ ರಾಜಪದವಿಯು ಸ್ಥಿರವಾದುದಲ್ಲವೆಂದೂ ತಮಗೆ ಮೋಸವಾಯಿತೆಂದೂ ತಿಳಿಯಲು ಬಹುಕಾಲ ಹಿಡಿಯಲಿಲ್ಲ. ಶೀಘ್ರದಲ್ಲಿಯೇ ಸಾಕೌ ಅರಮನೆಗೆ ನುಗ್ಗಿ ವಶಪಡಿಸಿಕೊಂಡನು. ಇನಾಯತುಲ್ಲರವರನ್ನು ಕಾಂದಹಾರಿಗೆ ಸುರಕ್ಷಿತವಾಗಿ ತಲಪಿಸಲು ಒಪ್ಪಿಕೊಂಡನು. ಈ ಕಥೆಯನ್ನು ಕೇಳಿದವರೆಲ್ಲ ಈಗ ವಿಸ್ಮಯಗೊಂಡಿರುವರು.

(ಆರೋಗ್ಯ ಚಂದ್ರಿಕೆಯಿಂದ.)

ಮನುಷ್ಯವರ್ಗಕ್ಕೆ ಸರಿಯಾದ ಆಹಾರವಾವುದು ?

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು “ಮನುಷ್ಯರ ಸ್ವಭಾವ ಗುಣಗಳು ಅವರು ಸೇವಿಸುವ ಆಹಾರವನ್ನು ಅನುಸರಿಸುವುದೆಂದು” ಹೇಳಿರುವನು. ಯಾವ ಪದಾರ್ಥವು ಶರೀರದೊಳಕ್ಕೆ ಪ್ರವೇಶಿಸಿದಾಗ, ದೇಹನಿರ್ಮಾಣದ ಪದಾರ್ಥಗಳನ್ನು ಸೃಷ್ಟಿಸಿ, ಶಕ್ತ್ಯುತ್ಸಾಹಗಳನ್ನುಂಟುಮಾಡುವುದೋ, ಅಥವಾ ದೇಹಕಾರ್ಯಗಳು ಕ್ರಮವಾಗಿ ನಡೆಯುವಂತೆ ಏರ್ಪಡಿಸುವುದೋ ಅದೇ “ಆಹಾರ” ವೆನಿಸುವುದು. ಶರೀರದ ಬೆಳವಣಿಗೆಗಾಗಿ ಆಹಾರಗಳನ್ನು ಸೇವಿಸತಕ್ಕ ಪ್ರಾಣಿಗಳಲ್ಲಿ, ಪರ್ಣಾಹಾರಿಗಳೆಂದೂ, ಫಲಾಹಾರಿಗಳೆಂದೂ, ಮಾಂಸಹಾರಿಗಳೆಂದೂ ಮೂರು ವಿಧವುಂಟು. ಮನುಷ್ಯರು ಸಾಮಾನ್ಯವಾಗಿ ಫಲಾಹಾರಿಗಳು. ಏಕೆಂದರೆ ? ಅವರ ದೇಹದೊಳಗಿನ ಅವಯವಗಳಾಗಲಿ, ಅವರ ಹಲ್ಲುಗಳಾಗಲಿ, ಅವರ ಹೊರಗಿನ ಅವಯವಗಳಾಗಲಿ ಮಾಂಸಹಾರಿಗಳಿಗೆ ತಕ್ಕಂತೆ ಏರ್ಪಟ್ಟಿಲ್ಲ. ನಮ್ಮ ಹಿಂದೂ ಧರ್ಮಶಾಸ್ತ್ರದ ಪ್ರಕಾರವಾಗಿ, ಪ್ರತಿ ಜೀವಿ ಶರೀರವೂ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳಿಂದ ಆಗಿವೆ. ಈಗಿನ ರಸಾಯನಶಾಸ್ತ್ರಜ್ಞರೂ ಕೂಡ ಮನುಷ್ಯ ಶರೀರದ ಕೆಲವು ನಿರ್ಮಾಣ ಸಾಮಗ್ರಿಗಳೇ ಆಹಾರದಲ್ಲಿಯೂ ಇರುವುವೆಂದು ನಿರ್ಣಯಿಸಿರುವರು.

ಆಹಾರ ವಸ್ತುಗಳಲ್ಲಿರುವ ಮುಖ್ಯ ಪದಾರ್ಥಗಳು ಯಾವುವೆಂದರೆ, (1) ನೀರು, (2) ಕೊಬ್ಬು, (3) ಕಾರ್ಬೋ ಹೈಡ್ರೇಟುಗಳು, (4) ಪ್ರೊಟೀನ ಗಳು, (5) ಖನಿಜ ವಸ್ತುಗಳು, (6) ವಿಟಮಿನ ಗಳೆಂಬ ಜೀವಸತ್ವಗಳು.

ಈ ಕೆಳಗಿನ ಮೂರು ಕಾರಣಗಳಿಗಾಗಿ ಪ್ರಾಣಿಗಳಿಗೆ ಆಹಾರ ಸೇವನೆಯು ಅವಶ್ಯವಾಗಿದೆ—

(1) ದೇಹಕ್ಕೆ ಶಕ್ತಿಯನ್ನು ಕೊಡುವುದು. (2) ದೇಹಪುಷ್ಟಿಗೂ, ದೇಹದಲ್ಲಿ ಸವೆದುಹೋದ ಭಾಗಗಳನ್ನು ಸರಿಪಡಿಸುವುದಕ್ಕೂ ಬೇಕಾದ ಪದಾರ್ಥಗಳನ್ನು ಒದಗಿಸುವುದು. (3) ದೇಹವು ಚೆನ್ನಾಗಿ ಬೆಳೆದು ದೇಹಕಾರ್ಯಗಳು ಕ್ರಮವಾಗಿ ನಡೆಯುವಂತೆ ಮಾಡಲು ಬೇಕಾದ ಪದಾರ್ಥಗಳನ್ನೊದಗಿಸಿಕೊಳ್ಳುವುದು.

ಆಹಾರವು ದೇಹಕ್ಕೆ ಪ್ರಯೋಜನಕಾರಿಯಾಗಿ ಪರಿಣಮಿಸುವುದಕ್ಕೆ ಮುಂಚೆ, ಪ್ರಕೃತಿಸಿದ್ಧವಾದ ಮತ್ತು ರಸಾಯನಸಂಬಂಧವಾದ ಕೆಲವು ಮಾರ್ಪಾಡುಗಳನ್ನು ಹೊಂದಬೇಕಾಗಿದೆ. ಪಾಕಮಾಡುವುದು, ಜೀರ್ಣಿಸುವುದು, ದೇಹದೊಳಕ್ಕೆ ಪ್ರವೇಶಿಸಿ ರಕ್ತಗತವಾಗುವುದು ಇವೇ ಮುಂತಾದ ಕಾರ್ಯಗಳಿಂದ ಆಹಾರಕ್ಕೆ ಈ ಬದಲಾವಣೆಗಳಾಗುವುವು. ಶಾಸ್ತ್ರಗಳ ದೃಷ್ಟಿಯಿಂದ ನೋಡಿದರೂ ಮನುಷ್ಯವರ್ಗಕ್ಕೆ ಮಾಂಸಹಾರಕ್ಕಿಂತ ಸಸ್ಯಾಹಾರವೇ ಉತ್ತಮವೆನಿಸಿದೆ. ಮಾಂಸಾಹಾರದಲ್ಲಿ ನಮ್ಮ ಶರೀರದ ಬೆಳವಣಿಗೆಗೆ ಬೇಕಾದ ಪದಾರ್ಥವೆಲ್ಲವೂ ಇರುವುದಿಲ್ಲ. ಅವುಗಳಲ್ಲಿ ಸಕ್ಕರೆಯೂ, ಪಿಷ್ಟಪದಾರ್ಥವೂ, ಸುಣ್ಣ ಮುಂತಾದ ಖನಿಜ ಲವಣಗಳೂ ತಕ್ಕಷ್ಟು ಪ್ರಮಾಣದಲ್ಲಿಲ್ಲ.

ಮನುಷ್ಯವರ್ಗದ ಬಾಹ್ಯಾಂಗಗಳೂ, ಶರೀರದೊಳಗಿನ ಅವಯವಗಳೂ, ಮನುಷ್ಯರ ಸ್ವಭಾವಗಳೂ ಮತ್ತು ಪ್ರಪಂಚದ ಪ್ರಾಚೀನ ಮತ್ತು ನವೀನಕಾಲದ ಜನರ ಅಭ್ಯಾಸಗಳೂ, ಇವೆಲ್ಲಾ, ಶೀಘ್ರದಲ್ಲಿ ಜೀರ್ಣಿಸಿ ರಕ್ತಗತವಾಗುವ ಹಣ್ಣುಗಳು ಮತ್ತು ಬೀಜಗಳಲ್ಲಿರುವ ಪದಾರ್ಥಗಳನ್ನೇ ಅಪೇಕ್ಷಿಸುತ್ತಿವೆ. ಇವು ಬಹಳ ಬಲಕಾರಿಗಳು ಮತ್ತು ದೇಹಕ್ಕೆ ಅನುಕೂಲವಾದುವು.

ಸಸ್ಯಾಹಾರದಿಂದ ದೇಹಕ್ಕೆ ಹೆಚ್ಚುಬಗೆಯ ಪದಾರ್ಥಗಳು ಒದಗುವುವೆಂದೂ, ಅವು ಹೆಚ್ಚು ಪ್ರಯೋಜನಕಾರಿಯೆಂದೂ, ಅದರಲ್ಲಿ ಶಕ್ತಿವರ್ಧಕ ಗುಣವೂ, ಜಾಗ್ರತೆಯಾಗಿ ಮಾರ್ಪಾಡುಗಳನ್ನು ಮಾಡುವ ಶಕ್ತಿಯೂ ಅಧಿಕವಾಗಿದ್ದು, ಮನುಷ್ಯಜಾತಿಗೆ ಮಾಂಸಹಾರಕ್ಕಿಂತ ಹೆಚ್ಚು ಉಪಯೋಗಕಾರಿಯಾದುದೆಂದೂ ನಿದರ್ಶನಪೂರ್ವಕವಾಗಿ ತೋರಿಸಬಹುದು. ಮತ್ತು ಅದರ ಉತ್ತಮಗುಣವು ಬಹಳ ಹಿಂದಿನ ಕಾಲದಿಂದಲೂ ತಿಳಿದುಬಂದಿದೆ.

ಅನೇಕ ರೋಗಗಳನ್ನು ಗುಣಪಡಿಸಿಕೊಳ್ಳುವುದಕ್ಕಾಗಿ ಸಸ್ಯಾಹಾರವನ್ನೇ ಚಿಕಿತ್ಸಾರೂಪವಾಗಿ ಉಪಯೋಗಕ್ಕೆ ತರುವುದೂ ಉಂಟು. ರೊಟ್ಟಿ ಮತ್ತು ಹಾಲು, ಅನ್ನ ಮತ್ತು ಹಾಲು, ಕೆಲವು ಗಿಡಗಳ ಹೂ ಮತ್ತು ಹಾಲು, ಇವನ್ನು ಸೇವಿಸುವುದರಿಂದ ಕೆಲಕೆಲವು ಕ್ರೂರವ್ಯಾಧಿಗಳು ಬಾರದಂತೆ ತಡೆಯಬಹುದು. ಶುದ್ಧವಾದ ದೇವತ್ವವನ್ನು ಹೊಂದುವುದು ಮನುಷ್ಯರ ಉದ್ದೇಶವೇ ಹೊರತು, ಕಾಡುಮೃಗಗಳಂತೆ ಮಾಂಸಾಹಾರಿಗಳಾಗಿ ಅಧೋಗತಿಗೆ ಹೋಗುವುದು ಧ್ಯೇಯವಲ್ಲ. ತನ್ನ ಪುರೋಭಿವೃದ್ಧಿಯಲ್ಲಿ ಮನುಷ್ಯನು ತೋಟಗಾರನಂತಿರಬೇಕೇ ಹೊರತು, ಬೇಟೆಗಾರನಂತೆ ಪ್ರಾಣಿಗಳನ್ನು ಕೊಂದು, ಅವುಗಳ ಮಾಂಸವನ್ನು ತಿನ್ನತಕ್ಕ ಸ್ಥಿತಿಯಲ್ಲಿಲ್ಲ. ತೋಟದ ಕೆಲಸವೂ, ಬೇಟೆಯೂ ಪರಸ್ಪರ ವಿರುದ್ಧಗಳು. ನೀತಿ, ಸದಾಚಾರ, ಸದಾಲೋಚನೆಗಳ ದೃಷ್ಟಿಯಿಂದ ಮನುಷ್ಯನ ಅಂತಿಮೋದ್ದೇಶವೇನೆಂದರೆ, ಪ್ರಾಣಿಗಳನ್ನು ಕೊಲ್ಲುವ ಅಥವಾ ಹಿಂಸಿಸುವ ಅಭಿಲಾಷೆಯನ್ನು ನಾಶಪಡಿಸುವುದೇ ! ಪ್ರಾಣವನ್ನು ಯಾರುಬೇಕಾದರೂ ಕಳೆಯಬಹುದೇ ಹೊರತು, ಅದನ್ನು ಯಾರೂ ಕೊಡಲಾರರು. ಪ್ರಾಣದಮೇಲೆ ಎಲ್ಲರಿಗೂ ಆಶೆಯೇ ! ಅದರ ರಕ್ಷಣೆಗಾಗಿ ಎಂತಹ ಕೆಲಸವನ್ನಾದರೂ ಮಾಡುವರು. ಅಧಮಾಧಮರಿಗಾದರೂ ಆಶ್ಚರ್ಯಕರವೂ, ಪ್ರೀತಿದಾಯಕವೂ, ಸಂತೋಷಪ್ರದವೂ ಆದ ವಸ್ತುವು ಪ್ರಾಣವೇ ! ಅಂತಹ ಅಮೋಘವಾದ ಒಂದು ಪ್ರಾಣವನ್ನು ಬೇಟೆಯ ನೆವದಿಂದ ಬರೀ ವಿನೋದಕ್ಕಾಗಿ ಕಳೆಯುವುದು ನಾಗರಿಕವಾದ ಯಾವ ಜನಾಂಗಕ್ಕೂ ಸಂತೋಷಪ್ರದವಾಗಿರಲಾರದು. ಆದರೆ ಮಾಂಸಾಹಾರಿಗಳಾದ ಕ್ರೂರಜಂತುಗಳಿಂದಲೂ, ವಿಷಜಂತುಗಳಿಂದಲೂ ಕೂಡಿದ ದಟ್ಟವಾದ ಅರಣ್ಯಪ್ರದೇಶಗಳನ್ನು ವಾಸಯೋಗ್ಯವಾಗಿ ಮಾಡಲು, ಆ ಪ್ರಾಣಿಗಳನ್ನು ಕೊಲ್ಲಬೇಕಾಗಿರುವಾಗ, ಆ ನಾಶಕಾರ್ಯವನ್ನು ಒಬ್ಬ ಸಾಹಸಿಯು ಒಂದು ಧರ್ಮಯುದ್ಧವನ್ನು ಕೈಕೊಳ್ಳುವಂತೆ ಅವಶ್ಯಕರ್ತವ್ಯವಾಗಿ ಭಾವಿಸಿ ಮಾಡಬೇಕೇ ಹೊರತು, ಅದನ್ನೂ ಒಂದು ಆಟವಾಗಿ ಭಾವಿಸಕೂಡದು. ಪ್ರಪಂಚದ ಕಷ್ಟಗಳನ್ನು ಬಿಡಿಸುವುದು ಮನುಷ್ಯ ಧರ್ಮವೇ ಹೊರತು, ಪ್ರಪಂಚಕ್ಕೇ ಶತ್ರುಗಳಾಗುವುದು ಮನುಷ್ಯತ್ವವಲ್ಲ.

ಶ್ರೀ ಭಗವದ್ಗೀತೆಯಲ್ಲಿ ಹೇಳಿರುವಂತೆ ಮನುಷ್ಯನು ಚಿರಾಯುಷ್ಯ, ಬಲ, ಮತ್ತು ಶಕ್ತಿಗಳಿಗೆ ಸಹಕಾರಿಗಳಾಗಿ ರೋಗಗಳನ್ನು ನಿವಾರಣೆಮಾಡಿ, ಮನಸ್ಸಿಗೆ ಸಂತೋಷ ಮತ್ತು ತೃಪ್ತಿಯನ್ನು ಉಂಟುಮಾಡುವ ಸಾತ್ವಿಕಾಹಾರವನ್ನೇ ಸೇವಿಸಬೇಕು.

ಮಾಂಸ ರಕ್ತಾದಿಗಳ ಸಂಯೋಗವಿಲ್ಲದಿರುವ ಆಹಾರವೇ ಅತ್ಯುತ್ತಮವಾದ ಆಹಾರವು. ತನ್ನ ದೈಹಿಕ, ಮಾನಸಿಕ, ನೈತಿಕ ಮತ್ತು ಆತ್ಮಿಕಶಕ್ತಿಗಳನ್ನು ಸಂಪೂರ್ಣಾಭಿವೃದ್ಧಿಸ್ಥಿತಿಗೆ ತರಬೇಕೆಂಬ ಅಪೇಕ್ಷೆಯುಳ್ಳವರು ಪ್ರಕೃತಿಯಲ್ಲಿ ದೊರೆಯುವ ಸಸ್ಯಾಹಾರಗಳನ್ನೇ ಸೇವಿಸಬೇಕು.

ಅಲ್ಲದೆ, ಭಾರತಜನಾಂಗದವರೆಲ್ಲರೂ ಸಂಪೂರ್ಣವಾಗಿ ಸಸ್ಯಾಹಾರಗಳನ್ನೇ ಸೇವಿಸಲು ಪ್ರಾರಂಭಿಸಿದರೆ, ಭಾರತದೇಶದಲ್ಲಿ ದನಕರುಗಳು ಚೆನ್ನಾಗಿ ಬಾಳಿ, ಒಳ್ಳೆಯ ಹಾಲು ಸಮೃದ್ಧವಾಗಿ ಮತ್ತು ಸುಲಭವಾಗಿ ಸಿಕ್ಕುವಂತಾಗುವುದು. ಮತ್ತು ದೇಶಾಭಿವೃದ್ಧಿಗೆ ಅತ್ಯವಶ್ಯವಾದ ವ್ಯವಸಾಯ ಮತ್ತು ಕೈಗಾರಿಕೆಗಳೂ ವೃದ್ಧಿಹೊಂದಲು ಸಹಕಾರಿಯಾದಂತಾಗುವುದು.

ಮನುಷ್ಯನ ಸೃಷ್ಟಿಗೂ, ಆತನ ನೈತಿಕಜ್ಞಾನಕ್ಕೂ ಅನುಗುಣವಾದ ಸಸ್ಯಾಹಾರವನ್ನು ಆಚರಣೆಗೆ ತಂದರೆ, ಭೂಮಿಯು ಒಳ್ಳೇ ಫಲವತ್ತಾಗುವುದಕ್ಕೆ ಅನುಕೂಲವನ್ನು ಕಲ್ಪಿಸಿದಂತಾಗುವುದು. ಖರ್ಚು ಕಡಿಮೆಯಾಗುವುದು. ಇವುಗಳಿಂದ ಪ್ರತಿ ಮನುಷ್ಯರ ಮತ್ತು ಒಟ್ಟಿನಲ್ಲಿ ದೇಶದ ಸಂಪದಭಿವೃದ್ಧಿಯೂ ಬಹಳಮಟ್ಟಿಗೆ ಹೆಚ್ಚುವುದು.

ಬೆಂಗಳೂರಿನಲ್ಲಿ ಬೀದಿಮಾರಮ್ಮನ ಜಾತ್ರೆ.

(ಪ್ರಾಣಿದಯೆಯಿಂದ.)

ಈ ಊರಿನಲ್ಲಿ ಪ್ಲೇಗ್‌ರೋಗವು ಪ್ರಾರಂಭವಾಯಿತೆಂದು ಕೆಲವರು ಇದರ ನಿವಾರಣೆಗಾಗಿ ಮಾರಮ್ಮನ ಪೂಜೆಗೆ ಆರಂಭಿಸಿದರು. ಈ ತಿಂಗಳ 1ನೇ ತಾರೀಕು ಮಂಗಳವಾರ - ಹುಪ್ಪ ದಾಂಜನೇಯಸ್ವಾಮಿದೇವಾಲಯ" ದ ಹಿಂಭಾಗದಲ್ಲಿರುವ ಮಾರಮ್ಮನ ಗುಡಿಯಲ್ಲಿ ಈ ಪೂಜೆಯು ನೂರಾರು ಕುರಿ ಕೋಳಿಗಳ ಬಲಿಯಿಂದ ನಡೆಯುವುದೆಂದು ಈ ಊರಿನ ಪ್ರಾಣಿದಯಾ ಪ್ರಚಾರಕಸಂಘದವರು ತಿಳಿದು ಧರ್ಮದರ್ಶಿಗಳಾದ ಶ್ರೀ|| ದ್ಯಾವಣ್ಣನವರ ಬಳಿಗೆ ಹೋಗಿ ಸಾತ್ವಿಕ ಪೂಜೆಯಿಂದಲೂ ಅನ್ನದಾನದಿಂದಲೂ ದೇವಿಯನ್ನಾರಾಧಿಸಿರೆಂದು ಹೇಳಿದರೆ ಅವರು ಅದರಂತೆ ನಡೆಸಬಹುದೆಂಬ ಭರವಸೆಯಿಂದ ಶ್ರೀ ಸಾವಂದಿಶೆಟ್ಟರೂ, ಪಂಡಿತ ಎಲ್ಲಪ್ಪನವರೂ, ಹಣ್ಣುಖಪ್ಪನವರೂ ಅವರ ಮನೆಗೆ ಹೋದರು. ಮನೆಯವರು ಕುರಿಗಳನ್ನು ಕೊಂಡು ಬರಲು ಕುರಿಯ ಮಂಡಿಗೆ ಹೋಗಿರುವರೆಂಬ ವಿಷಯವನ್ನು ತಿಳಿದು 3 ಜನರೂ ಗಾಡಿಮಾಡಿಕೊಂಡು ಅಲ್ಲಿಗೆ ಹೋಗಿ ಶ್ರೀ|| ದ್ಯಾವಣ್ಣನವರನ್ನು ಪ್ರಾಣಿಗಳಲ್ಲಿ ದಯೆಯನ್ನು ತೋರಿರಿ ಎಂದು ಪ್ರಾರ್ಥಿಸಲು ಅವರು ಯೋಚಿಸಿ - ಪ್ರಾಣಿಗಳು ಬದುಕಿಕೊಂಡವು, ದಯಾಧರ್ಮವು ನನ್ನನ್ನುದ್ಧರಿಸಿತು, ಅಮ್ಮನನ್ನು ಸಾತ್ವಿಕ ರೀತಿಯಿಂದ ನೀವೂ ನಾವೂ ಸೇರಿ ಪೂಜಿಸೋಣ" ವೆಂದು ಹೇಳಿ ಅದೇ ಗಾಡಿಯಲ್ಲೇ ವಾಪಸ್ ಬಂದು ಅನ್ನದಾನಕ್ಕೆ ಏರ್ಪಾಡುಮಾಡಿದರು. ಇದೇ ದಿವಸ ಪಕ್ಕದ ಬೀದಿಯಲ್ಲೂ ಜಾತ್ರೆ ನೆರೆಯುವುದೆಂದು ತಿಳಿದು ಅಲ್ಲಿಗೂ ಇವರು ಹೋಗಿ ಆ ಜಾತ್ರೆಗೆ ಮುಂದಾಳುಗಳಾದ ಆಸ್ಪತ್ರೆಗೆ ಹಾಲುಸಪ್ಲೈಮಾಡುವ ಮುನಿಯಪ್ಪ ಮತ್ತು ವೆಂಕಟಪ್ಪ ಎಂಬಿಬ್ಬರನ್ನೂ ಪ್ರಾಣಿವಧೆ ಮಾಡದೆ ಅಮ್ಮನ ಪೂಜೆಮಾಡಿರೆಂದು ಕೇಳಲು ಅವರು - ನೀವು ಹೇಳುವುದೇನೋ ನ್ಯಾಯ. ಆದರೆ ಕ್ರಯಕ್ಕೆ ತಂದಿರುವವು ಈ ವರುಷ ಹಾಗೆ ನಿಲ್ಲಿಸಲಾಗುವುದಿಲ್ಲ. ಅಮ್ಮನ ಮುಂದೆ ಬಲಿಯಾದ ಕುರಿಯ ಮಾಂಸವನ್ನು ಹಂಚಿಕೊಳ್ಳಲು ಮನೆಗೆ ಒಂದುರೂಪಾಯಿನಂತೆ ಕೊಡುವುದಾಗಿ ಸರಿಗೆಯವರೂ ಇತರರೂ ಹೇಳಿರುವರು. ಬಲಿ ಇಲ್ಲವಾದರೆ ಅದು ದೊರೆಯುವುದಿಲ್ಲ ಇನ್ನು ಎಷ್ಟೋ ಅನಾನುಕೂಲಗಳು ನಮಗಿವೆ. ದೇವಿಗೆ ಬೇಡವಾದರೂ ಮಾಂಸಹಾರಿಗಳಾದವರಿಗೆ ಅಗತ್ಯ ಬೇಕೇ ಬೇಕು" ಎಂದು ವಾದಿಸಿದರು. ಆಗ ಶ್ರೀ|| ಪಂಡಿತ ಎಲ್ಲಪ್ಪನವರೂ ಸಾವಂದಿ ಶೆಟ್ಟರೂ ಕುರಿಗಳ ಕ್ರಯವನ್ನೂ ಪೂಜಾ ಖರ್ಚನ್ನೂ ಅನ್ನದಾನದ ಖರ್ಚನ್ನೂ ಸಂಘದವರು ವಹಿಸಿಕೊಳ್ಳುವಂತೆ ಮಾಡುವೆವು ಆ ಕುರಿಗಳನ್ನು ನಮ್ಮ ವಶಪಡಿಸಿರಿ. ಎಂದು ಹೇಳಿದರು. ಆಗ ಅವರುಗಳು ಯತ್ನವಿಲ್ಲದೆ ಒಪ್ಪಿದರು. ಬಳಿಕ ಪೂಜೆಯ ಎಲ್ಲಾ ಖರ್ಚುಗಳನ್ನು ಪ್ರಾಣಿದಯಾಸಂಘದವರು ವಹಿಸಿಕೊಂಡು ಬಹುವಿಜೃಂಭಣೆಯಿಂದ ಅಮ್ಮನ ಆರಾಧನೆಯನ್ನು ನಡೆಸಿದರು.

ವಾಂತಿಭೇದಿಗೆ ಶಾಂತಿ.

ದುಷ್ಕಾಲದಲ್ಲಿ ಊರೊಳಗೆ ವಾಂತಿಭೇದಿರೋಗವು ಶುರುವಾದಾಗ ಮಾರಮ್ಮನವರಿಗೆ ಕೋಳಿ, ಹಂದಿ, ಕುರಿ ಇವುಗಳನ್ನು ಹಂಚಿ ಕೊಟ್ಟಲ್ಲಿಯೇ ರೋಗವು ಶಾಂತಿಯಾಗುವುದು ಎಂಬ ಭ್ರಾಂತಿಯಿಂದ ಅಮ್ಮನವರನ್ನು ತೃಪ್ತಿ ಪಡಿಸುವ ಉದ್ದೇಶದಿಂದ ಜನಾಂಗದ ಒಂದಂಗವು ಈ ವ್ರತವನ್ನು ಆಚರಿಸಿಕೊಂಡುಬರುವುದು ಕಂಡುಬರುತ್ತದೆ. ಇದು ಹಳೆ ಸುದ್ಧಿಯಲ್ಲ. ಇದು ಈಗೀಗಲೇ ಮಂಗಳೂರಿನಲ್ಲಿ ಆಯಾಯ ಕಡೆಗಳಿಂದ ಜನರು ಮದುವೆ ಮೆರವಣಿಗೆಯಂತೆ ಸಹಸ್ರಗಟ್ಟಲೆ ಜನರು ಕೂಡಿಕೊಂಡು ವಾಲಗದಿಂದ ಕುರಿಗಳ ಹಿಂಡು ಹಿಂದಿಗೆ ಹೂಮಾಲೆಹಾಕಿಕೊಂಡು ಮಾರೀಗುಡಿಗೆ ಕೊಂಡುಹೋಗುವುದನ್ನು ಕಂಡು ಬೆರಗಾಗುತ್ತಿರುವ ಸೋಜಿಗದ ಸುದ್ದಿ.

ಇದು ಪಾರಂಪರ್ಯವಾಗಿ ನಡೆದುಬಂದಿರುವ ಸಂಪ್ರದಾಯವಾಗಿರುತ್ತ, ಭ್ರಾಂತಿ ಎಂದರೇನು ಎಂದು ಯಾರಾದರೂ ಕೇಳಬಹುದು. ಇದು ಭ್ರಾಂತಿ ಮಾತ್ರವಲ್ಲ. ಕೇವಲ ಮೂರ್ಖತನದ ವರ್ತನೆ ಎಂದರೂ ತಪ್ಪೇನು ?

ಏನೂ ತಿಳಿಯದ ಮೂಢನನ್ನು ಸಾಧಾರಣ ತಿಳುವಳಿಕೆವುಳ್ಳವನನ್ನಾಗಿ ಮಾಡಬಹುದು. ಬುದ್ಧಿವಂತನನ್ನು ಬಹುಸುಲಭವಾಗಿ ಪಂಡಿತನನ್ನಾಗಿ ಮಾಡಬಹುದು. ತಿಳಿದೂ ತಿಳಿಯದ ಅವಿವೇಕಿಯನ್ನು ಸೃಷ್ಟಿಕರ್ತನಾದ ಬ್ರಹ್ಮನಿಂದಲೂ ಸರಿಪಡಿಸುವುದು ಅಸಾಧ್ಯವೆಂಬುದಾಗಿ ಭರ್ತೃಹರಿಯ ಸುಭಾಷಿತ ವಚನವಿರುತ್ತದೆ.

ಹಾಗಾದರೆ ಇದು ಮೂರ್ಖತನದಿಂದ ಉದ್ಭವಿಸುವ ಭ್ರಾಂತಿಯೆಂದಾಯಿತು. ಹಾಗಲ್ಲದೆ ಇದಕ್ಕೆ ಮತ್ತೇನೆಂದೆನ್ನಬೇಕು ? ಮನುಷ್ಯನು ತನ್ನನ್ನು ತಾನು ಉದ್ಧರಿಸಿಕೊಳ್ಳತಕ್ಕದ್ದು. ತನ್ನನ್ನು ತಾನು ಕೆಡಿಸಿಕೊಳ್ಳಬಾರದು. ತನಗೆ ತಾನೇ ಶತ್ರು, ತನಗೆ ತಾನೇ ಮಿತ್ರ, ಎಂಬಿರುವ— ಗೀತಾಶಾಸ್ತ್ರವಚನವೂ ಯಾವ ಪ್ರಾಣಿಯನ್ನು ಹಿಂಸೆಮಾಡಬಾರದು, ಪಶುಗಳನ್ನು ಕೊಂದು ಮಾಡುವ ಯಜ್ಞವು ಯಜ್ಞವಲ್ಲ. [illegible] ಎಂಬ ಅದೇ ವಿಶ್ವಕ್ಕೇನೇ ಆಧಾರಭೂತವಾದ ಬುದ್ಧದೇವನ ತತ್ವವೂ ಈ ಸಮುದಾಯದ ಗೋಚರಕ್ಕೆ ಬರುವಂತಿಲ್ಲವೇ ? ಹಾ ! ದೈವವೇ ಹಾ ಅಜ್ಞಾನಿಯೆ ! [illegible] !

ಎಲ್ಲೆಲ್ಲಿಯೂ ಸುಧಾರಣೆಯ ತತ್ವವೇ ತುರಿದುಂಬಿಕೊಂಡಿರುವ ಈ ಕಾಲದಲ್ಲಿ ಪ್ರತ್ಯಕ್ಷವಾಗಿ ಕಣ್ಣಿಗೆ ಕುಕ್ಕುತ್ತಿರುವಂತಿರುವ ಈ ಪಾಪಕರ್ಮಾಚರಣೆಯ ಕಡೆಗೆ ಪ್ರಾಜ್ಞರ ದೃಷ್ಟಿಯಾದರೂ ಯಾಕೆ ಬೀಳದಿರುವುದು ?

ಕಾಲದ ಅವಸ್ಥೆಯಾದರೋ ಭರ್ತೃಹರಿಯ ಈ ಕೆಳಗಿನ ಉಕ್ತಿಯಂತಿರುತ್ತದೆ. ಬೋದ್ಧಾರೋ ಮತ್ಸರ ಗ್ರಸ್ತಾಃ ಪ್ರಭವಃ ಸ್ಮಯದೂಷಿತಾಃ । ಅಬೋಧೋಪಹತಾಶ್ಚಾನ್ಯೇ ಜೀರ್ಣಮಂಗೇಸುಭಾಷಿತಂ ॥ ಬೋಧಿಸಲು ಶಕ್ತಿಯುಳ್ಳ ಪ್ರಾಜ್ಞರು ಅನ್ಯರಿಗೆ ಹೇಳಬಾರದು ಎಂಬ ತಮ್ಮ ಪ್ರತಿಜ್ಞೆಗೆ ಭಂಗಬರುವುದು ಎಂಬ ಹಾಗೆ ಇದ್ದಾರೆ. ರಾಜನಾದರೋ ಅಹಂಭಾವ (ಸ್ವಾರ್ಥಬುದ್ಧಿ) ದಿಂದ ಕೂಡಿರುವುದರಿಂದ ಪ್ರಜೆಗಳ ಹಿತಚಿಂತನೆಯ ಕಡೆಗೆ ಆತನ ಲಕ್ಷ್ಯವೇ ಇಲ್ಲ. ಅಂತೂ ಇಂತೂ ಸುಭಾಷಿತವು ಅಂತರಂಗದಲ್ಲಿಯೇ ಅಡಗಿ ಹೋಯಿತು ಎಂದು ಕಾಲಗತಿಯು ಹೀಗಿದ್ದರೂ ವಿಚಾರ ಮಾಡುವ ಶಕ್ತಿಯು ಪ್ರತಿ ಒಬ್ಬನಲ್ಲಿಯೂ ಇದೆ. ಈ ಸಮುದಾಯದ ವ್ಯಕ್ತಿ ಯಾರಾದರೂ ವಿಚಾರಮಾಡುವಂತಿದ್ದರೆ ಈ ಆಚರಣೆಗೆ ವೈಷ್ಣವರು ಹೀಗೆಂದು ಹೇಳುತ್ತಾರೆ.

ಹಾಗಾದರೆ ಈ ದೇವರಿಗೆ ಹೀಗೆ ದುರ್ಬಲಘಾತಕ ದೇವರು ಎಂಬ ಹೆಸರನ್ನಾದರೂ ಬರಿಸಿದವರು ಯಾರು ? ಈ ಪಾಪದ ಪ್ರಾಣಿಗಳನ್ನು ಬಲಿ ಕೊಡುವವರೇ ಅಲ್ಲವೆ ? ಹಾಗಲ್ಲವಿದ್ದರೆ ಮೇಲೆ ಹೇಳಿದ ಇತರ ಪ್ರಾಣಿಗಳನ್ನು ಯಾಕೆ ಬಲಿಕೊಡಬಾರದು ? ಹಾ ವಿಚಿತ್ರ, ವಿಚಿತ್ರ. ಆದ್ದರಿಂದ ವಾಂತಿಭೇದಿಗೆ ಶಾಂತಿ ಇವಲ್ಲ. ಇದು ಕೇವಲ ಭ್ರಾಂತಿ.

ಪತ್ರ ವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಚಿಕ್ಕಮಗಳೂರು ವೀರಶೈವ ಹಾಸ್ಟಲ್.

ಈ ಹಾಸ್ಟಲ್ ಪ್ರೆಸಿಡೆಂಟರು ಶ್ರೀ ಚೆನ್ನವೃಷಭದೇಶಿಕೇಂದ್ರಮಹಾಸ್ವಾಮಿಗಳವರ ಸನ್ನಿಧಾನಲ್ಲು ಮತ್ತು ಕಮಿಟಿಮೆಂಬರುಗಳಲ್ಲು ವಿಜ್ಞಾಪಿಸಿಕೊಳ್ಳುವುದೇನೆಂದರೆ—ಈ ಹಿಂದೆ ಈ ಹಾಸ್ಟಲಿನಲ್ಲಿ ನಡೆದ ಜನರಲ್ ಮೀಟಿಂಗಿನಲ್ಲಿ ಈ ಹಾಸ್ಟಲಿಗೆ ಒಂದು ಮೈಲು ಫಾಸಲೆ ದೂರದಲ್ಲಿರುವ ಶ್ರೀ ಜಾಬಾಲಪುರಿ ಮಠದಲ್ಲಿ ಒಂದು ವೈದಿಕಪಾಠಶಾಲೆಯನ್ನು ಜಾಗ್ರತೆ ಏರ್ಪಡಿಸಬೇಕೆಂದು ರೆಜ್ಯುಲೇಷನ್ ಆದ್ದು ಸರಿಯಷ್ಟೆ. ಕಾರ್ಯತಃ ಈವರಿವಿಗೆ ಈ ವಿಚಾರದಲ್ಲಿ ಪ್ರೆಸಿಡೆಂಟರಾಗಲಿ, ಹಾಸ್ಟಲ್ ಕಮಿಟಿಮೆಂಬರುಗಳಾಗಲಿ ಯಾವ ಏರ್ಪಾಟನ್ನು ಮಾಡದೆ ಇರುವುದು ತುಂಬಾ ವ್ಯಸನಕರವಾದ ಸಂಗತಿಯಾಗಿದೆ. ಈ ನವನಾಗರೀಕಕಾಲದಲ್ಲಿ ಪ್ರತಿಯೊಂದು ಮತದವರೂ ತಂತಮ್ಮ ಮತಾಭಿವೃದ್ಧಿಗೆ ಹಗಲೂ ಇರುಳೂ ತನುಮನಧನಗಳನ್ನೆಲ್ಲ ವಿನಿಯೋಗಿಸಿ ಕೆಲಸಮಾಡುತ್ತಿರುವುದನ್ನು ನಾವುಗಳೆಲ್ಲರೂ ಕಣ್ಣಾರೆ ನೋಡುತ್ತಿದ್ದಾಗ್ಯೂ ಇನ್ನೂ ನಾವುಗಳು ಗಾಢನಿದ್ರೆಯಲ್ಲಿರುವುದನ್ನೋಡಿದರೆ ಮನಸ್ಸಿಗೆ ತುಂಬಾ ವ್ಯಸನವಾಗುತ್ತದೆ. ಈಗಲೂ ಈ ವಿಚಾರವಾದ ಸಬ್ಜೆಕ್ಟು ಒಂದನ್ನು ಈ ಹಾಸ್ಟಲ್ ಸೆಕ್ರೆಟರಿಯವರು ಮುಂದಿನ ಮೀಟಿಂಗಿನಲ್ಲಿ ಚರ್ಚೆಗೆ ಇಟ್ಟು ತೀರ್ಮಾನದ ವಿಚಾರ ಈ ಸಂಘದ ಜನರಲ್‌ಬಾಡಿಯವರ ತಿಳುವಳಿಕೆಬಗ್ಗೆ ಇದೇ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸುವರಾಗಿ ನಂಬಿರುತ್ತೇನೆ. ಅಲ್ಲದೆ ಸಂಘದ ಅಭಿವೃದ್ಧಿಗೆ ಮುಖ್ಯವಾದ ಈ ವಿಚಾರದಲ್ಲಿ ಪ್ರತಿಯೊಬ್ಬ ಮೆಂಬರೂ ಮುಂದಾಳುಗಳಾಗಿನಿಂತು ಜಾಗ್ರತೆ ವೈದಿಕಪಾಠಶಾಲೆ ಇಡುವ ಏರ್ಪಾಡು ಮಾಡುವಂತೆ ತಮ್ಮಗಳೆಲ್ಲರ ಮನಸ್ಸಿನಲ್ಲಿಯೂ ಸರ್ವಶಕ್ತನಾದ ಪರಶಿವನು ಪ್ರೇರಿಸಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಜನರಲ್ ಕಮಿಟಿ ಮೆಂಬರು.

ವಿವಾಹಮಹೋತ್ಸವಸಮಾರಂಭ.

ಕಳೆದ ಕಾರ್ತಿಕಮಾಸದಲ್ಲಿ ತರೀಕೆರೆ ಪಟೇಲ್ ಹಂ॥ ಕೈ॥ ಶಿವಪ್ಪಗೌಡರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ಚಿಕ್ಕಮಗಳೂರು ಟವನ್ನಿನಲ್ಲಿರುವ ಅಡ್ಡಗದ್ದೆ ಮ॥ ರುದ್ರಶೆಟ್ಟರ ಮಕ್ಕಳು ಬಸವಪ್ಪಶೆಟ್ಟರು ದುರ್ಗಾಂಬಾ ಪ್ರೆಸ್ ಪ್ರೊಪ್ರೈಟರ್ ಇವರಿಗೆ ವಿಧ್ಯುಕ್ತವಾಗಿ ನಡೆದ ಪಾಣಿಗ್ರಹಣಮಹೋತ್ಸವಕ್ಕೆ ಬೀರೂರಿನಿಂದ ಬರಮಾಡಲ್ಪಟ್ಟಿದ್ದ ಶಿವಕಥಾಭೂಷಣ ವೇ॥ ಪಂ॥ ಜಿ॥ ನಂಜುಂಡಾರಾಧ್ಯರು ಹುಣಸೀಗಟ್ಟದ ಬೃಹನ್ಮಠ ಇವರು ವಿವಾಹಮಂಟಪದಲ್ಲಿ ಊರಿನ ಪ್ರಮುಖಮಹಾಶಯರು ಸರ್ಕಾರಿ ಎಲ್ಲ ಆಫೀಸರುಗಳು ಮಹಿಳೆಯರು ಬಾಲಕರೇ ಮೊದಲಾದವರು ನೆರೆದಿರುವಾಗ್ಗೆ ಪ್ರಕೃತಸಮಯಕ್ಕೆ ಅನುಗುಣವಾಗಿ ಗಿರಿಜಾಕಲ್ಯಾಣವೆಂಬ ಸತ್ಕಥೆಯನ್ನು ಯುಕ್ತಿಯುಕ್ತವಾಗಿ ಮಾಡಿ ಬಾಲ್ಯವಿವಾಹ-ಅನಿಷ್ಟವಿವಾಹ-ಸಂಪ್ರದಾಯಗಳನ್ನು ನಿರೋಧಿಸಿ ಅಖಿಲಭಾರತ 10 ನೆಯ ವೀರಶೈವಮಹಾಸಭೆಯಲ್ಲಿ ನಿರ್ಣಯಿಸಿದಪ್ರಕಾರ ಪ್ರೌಢವಿವಾಹಗಳನ್ನೂ ಪುನರ್ವಿವಾಹಗಳನ್ನೂ ಆದಷ್ಟು ರೂಢಿಯಲ್ಲಿ ಬರುವುದುತ್ತಮವೆಂದು ಐತಿಹಾಸಿಕ ಉದಾಹರಣೆಗಳಿಂದ ಹೃದಯಂಗಮವಾಗುವಂತೆ ಅನುವಾದನಮಾಡಿದರು. ಅಲ್ಲಿ ನೆರೆದಿದ್ದ ಸನಾತನಧರ್ಮಿಗಳೂ, ಮಹಮ್ಮದೀಯರೂ ಕೀರ್ತನಕಾರರ ವಾಕ್ಚಾತುರ್ಯವನ್ನು ನೋಡಿ ಮಧ್ಯೆ ಮಧ್ಯೆ ಕರತಾಡನಮೂಲಕ ಆನಂದವನ್ನು ಸೂಚಿಸಿ ಇನ್ನೂ ಕೇಳಬೇಕೆಂಬ ಕುತೂಹಲವನ್ನು ವ್ಯಕ್ತಗೊಳಿಸುತ್ತಿದ್ದರು. ಸರ್ವರಿಗೂ ಫಲತಾಂಬೂಲ ಗಂಧಪುಷ್ಪಾದಿಗಳನ್ನು ಹಂಚಿ ಸಭೆಯಲ್ಲಿ ಕಾಫಿಪ್ಲಾಂಟರ್ ಮ॥ ಪುಟ್ಟಣ್ಣಶೆಟ್ಟರವರು ಸೂಚಿಸಿದಪ್ರಕಾರ ವಧೂವರರ ಸ್ಮರಣಾರ್ಥವಾಗಿ ಕೈ॥ ವೀರಸಂಗಪ್ಪನವರ ಹೆಸರಿನಮೇಲೆ ಒಂದುರೂಪಾಯನ್ನು, ಚಿಕ್ಕಮಗಳೂರು ವೀರಶೈವ ಹಾಸ್ಟಲಿಗೆ 5 ರೂಪಾಯಿಗಳನ್ನು ತೆಗೆಯಿಸಿ ವಧೂವರರಿಗೆ ಉಮಾಮಹೇಶ್ವರನು ಸತ್ಸಂತಾನಾಭಿವೃದ್ಧಿಯನ್ನು ದಯಪಾಲಿಸಲೆಂದು ಕೊಂಡಾಡಿದರು.

ಎಲ್. ಸಿ. ಶಿವಲಿಂಗಪ್ಪ ಮಾಸ್ಟರ್, ಬೀರೂರು.

[ಮೇಲ್ಕಂಡ 1 ರೂಪಾಯಿ ಬಂದಿದೆ.]

ಮಳವಳ್ಳಿ ಮ್ಯುನಿಸಿಪಾಲಿಟಿಯ ಅವ್ಯವಸ್ಥೆ.

ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ಟವನ್ ಮ್ಯುನಿಸಿಪಾಲಿಟಿ ವಿದ್ಯಮಾನಗಳು ತಮ್ಮ ಘನವಾದ ಪೇಪರಿನಲ್ಲಿ ಪ್ರಚುರವಾಗುವುದರ ಮೂಲಕವಾದರೂ, ಇಲ್ಲಿನ ರೇಟ್‌ಪೇಯರ್‌ಗಳಿಗೆ ಅನುಕೂಲವಾಗುವುದೆಂದು ಯೋಚಿಸಿ ತಮ್ಮ ಸನ್ನಿಧಿಗೆ ಅರಿಕೆಮಾಡಿಕೊಂಡಿರುತ್ತೇನಾಗಿ ದಯಿಯಿಟ್ಟು ಇದನ್ನು ಪ್ರಚುರಪಡಿಸಬೇಕಾಗಿ ಪ್ರಾರ್ಥನೆ. ಇದು ಟವನ್ ಮ್ಯುನಿಸಿಪಾಲಿಟಿಯಾಗಿ ಸುಮಾರು ಹತ್ತುವರ್ಷಗಳಾಗಿರುತ್ತಲ್ಲದೆ, ಅದಕ್ಕೆ ಬೇಕಾದ ಬಿಲ್ ಕಲೆಕ್ಟರ್ ಮೊದಲಾದ ಏಳೆಂಟು ನೌಕರರು ಇರುತ್ತಾರೆ. ಒಬ್ಬ ಎಕ್ಸಿಕ್ಯುಟಿವ್ ಆಫೀಸರನ್ನು ನೇಮಿಸಿಕೊಳ್ಳಲು ಗೌರ್ನಮೆಂಟ್ ಆರ್ಡರಾಗಿ ಅದರಂತೆ ಒಬ್ಬರನ್ನು ನೇಮಿಸಿದ್ದರು. ಅವರು ಇದ್ದಾಗ್ಗೆ ಈ ಟವನ್ ಕೆಲಸಗಳು ಕೊಂಚ ಸಮರ್ಪಕವಾಗಿತ್ತು. ಇದರಿಂದ ಈ ಟವನ್ ಮ್ಯುನಿಸಿಪಾಲಿಟಿಯ ಕಂಟ್ರಾಕ್ಟರಾಗಿ ಕೆಲಸಮಾಡುತ್ತಿದ್ದ ಛಾಯದೇಗೆ ಕೊಂಚ ಅನಾನುಕೂಲವುಂಟಾದಂತೆ ತೋರಿದ್ದರಿಂದ ಈ ಕಂಟ್ರಾಕ್ಟರುಗಳ ಸಂಬಂಧಿಗಳಾದ ಮ್ಯುನಿಸಿಪಲ್ ಕೌನ್ಸಿಲರ್‌ಗಳು ಓವರ್ ಏಜ್ ಎಂದು ಅವರನ್ನು ವಜಾಮಾಡಿಸಿ ಪುನಃ ಆ ಕೆಲಸವನ್ನೇ ಖಾಲಿಮಾಡಿರುತ್ತಾರೆ. ಇದರಿಂದ ಇಲ್ಲಿನ ಕೆಲಸಗಳು ಎಷ್ಟು ಸಮರ್ಪಕವಾಗಿ ನಡೆಯುತ್ತೆ ಮತ್ತು ರೇಟ್ ಪೇಯರ್‌ಗಳ ದುಡ್ಡು ಯಾವರೀತಿ ವಿನಿಯೋಗವಾಗುತ್ತೆಂಬುದು ದೇವರೊಬ್ಬನಿಗೆ ಮಾತ್ರ ಗೊತ್ತಾಗಬೇಕಾಗಿದೆ. ಈ ಟವನ್ನಿಗೆ ಬಿಲ್‌ಕಲೆಕ್ಟರಿದ್ದಾಗ್ಯೂ ಬಿಲ್ ಸಿಸ್ಟಂ ಇಟ್ಟು ವಸೂಲಿಕ್ರಮ ನಡೆಸದೇನೆ ರೇಟ್‌ಪೇಯರ್‌ಗಳಮೇಲೆ 4-5 ವರ್ಷಗಳವರೆಗೆ ಬಾಕಿಬಿಟ್ಟು ಈಗ ಒಟ್ಟಿಗೆ ಜಫ್ತಿ ಆರ್ಡರ್ ವಗೈರೆ ನಡೆಸಿ ಬಡವರನ್ನು ಹಿಂಸಿಸುತ್ತಿದ್ದಾರೆ. ತಮಗೆ ಬೇಕಾದವರು 10 ವರ್ಷದ ಬಾಕಿಯಿಟ್ಟುಕೊಂಡಿದ್ದರೂ ಅದಕ್ಕೆ ಮಾತ್ರ ಯಾವ ಕ್ರಮವು ನಡಿಸಿದಂತೆ ಕಾಣುವುದಿಲ್ಲ. ಈ ವಿಚಾರಗಳನ್ನು ಮತ್ತು ಇನ್ನು ಕೆಲವು ವಿಚಾರಗಳ ಅವ್ಯವಸ್ಥೆಯನ್ನು ಕುರಿತು ಗೌರ್ನಮೆಂಟಿಗೂ, ಡೆಪ್ಯುಟಿಕಮಿಷನರ್ ಸಾಹೇಬರವರಿಗೂ ಸಹ ಅರ್ಜಿ ಗುಜರಾಯಿಸಿಕೊಂಡದ್ದರಮೇಲೆ ಮಂಡ್ಯದ ಸಬ್‌ಡಿವಿಜನ್ ಸಾಹೇಬರವರು ವಿಚಾರಣೆಮಾಡಿ ವರ್ಷದಮೇಲಾದಾಗ್ಯೂ ಅದರ ಫಲಿತಾಂಶವೇನಾಗಿರುತ್ತೆಂಬುದು ತಹಲ್‌ವರಿವಿಗೂ ಗೊತ್ತಿಲ್ಲ. ಅಲ್ಲದೆ ಈಚೆಗೆ ಆಕ್ಟ್ರಾಯಿಬಾಬಿನಲ್ಲಿ ಡೀಫಾಲ್‌ಕೇಷನ್ ಆಗಿರುತ್ತೆಂದೂ ವರ್ತಮಾನವಿದೆ. ಇದರ ನಿಜಾಂಶಗೊತ್ತಾಗಬೇಕಾಗಿದೆ. ಈ ವಿಚಾರಗಳನ್ನೆಲ್ಲ ಹಾಲಿ ಬಂದಿರತಕ್ಕ ನಮ್ಮ ಹೊಸಡೆಪ್ಯುಟಿಕಮಿಷನರ್ ಸಾಹೇಬರವರಾದರೂ ಕ್ರಮಪಡಿಸುತ್ತಾರೆಂದು ನಿರೀಕ್ಷಿಸುವ,

ರೇಟ್‌ಪೇಯರು.

ಶ್ರೀ ಜಗದ್ಗುರುಗಳಿಗೆ 3 ನೇ ಕೌನ್ಸಿಲರ ಭೇಟಿ.

3 ನೇ ಕೌನ್ಸಿಲರ್ ಮ॥ ನ್ಯಾಥನ್‌ರವರು ಇದೇ 15 ನೇ ತಾರೀಖು ಶುಕ್ರವಾರ ರಾತ್ರಿ 9 ಗಂಟೆಗೆ ಬೃಹನ್ಮಠದಲ್ಲಿ ಶ್ರೀ ಜಗದ್ಗುರುಗಳ ದರ್ಶನಕ್ಕೆ ಬಂದಿದ್ದರು. ದಾವಣಗೆರೆಯಿಂದ ಆಗತಾನೆ ವೇ॥ ತಿರುಕಪ್ಪನವರ ಮಠದ ಷಡಾಕ್ಷರಪ್ಪನವರು ಮೈಸೂರು ಮಠದ ವೀರಭದ್ರಪ್ಪನವರೂ ಮ॥ ಯಜಮಾನ ಮೋತಿ ದೊಡ್ಡಪ್ಪನವರು ಮುದೇಗೌಡರ ಮುರಿಗೆಪ್ಪನವರು ಮಾಗಾನಹಳ್ಳಿ ಗುರುಸಿದ್ದಪ್ಪನವರು ಹೊನ್ನಾಳಿ ಚೆನ್ನಪ್ಪನವರು ಅಂದನೂರು ಮುಪ್ಪಣ್ಣನವರು ಬೆಳ್ಳುಳ್ಳಿ ಮುಪ್ಪಣ್ಣನವರು ಬೇತೂರು ಗುರುಶಾಂತಪ್ಪನವರು ಇವರೇ ಮೊದಲಾದ ದೊಡ್ಡಮನುಷ್ಯರು ಶ್ರೀ ಜಗದ್ಗುರುಗಳ ಅಪ್ಪಣೆಮೇರೆಗೆ ಬಂದಿದ್ದರು. 9 ಗಂಟೆಗೆ ಸರಿಯಾಗಿ ಬಂದೊಡನೆ ಕೌನ್ಸಿಲರು ದರ್ಬಾರುಹಾಲಿಗೆ ದಯಮಾಡಿಸಿ ಅಲ್ಲಿ ಮುಹೂರ್ತಗೊಂಡಿದ್ದ ಮಹಾಸ್ವಾಮಿಗಳಿಗೆ ಅಭಿವಂದಿಸಿ ಉಚಿತಸ್ಥಾನದಲ್ಲಿ ಮಂಡಿಸಿದರು, ದಿವಾನ್ ಆನಂದರಾಯರೊಡನೆ ಬಂದಾಗ್ಗೆ ಒಮ್ಮೆ, ಬೆಂಗಳೂರಿನಲ್ಲಿ ಮತ್ತೊಮ್ಮೆ ಶ್ರೀಗಳವರ ದರ್ಶನಸಂಭಾಷಣೆನಡೆದಿರುವುದಾಗಿಹೇಳಿ ಮಹಾಸ್ವಾಮಿಗಳ ಕಾರ್ಯಕಲಾಪಗಳನ್ನು ಕುರಿತು ಪ್ರಸ್ತಾಪಿಸಿದರು. ಮಹಾಸಂಸ್ಥಾನದ ಮುಖ್ಯಾಧಿಕಾರಿಗಳಾದ ಮ॥ ಹೊನ್ನಯ್ಯನವರು ಸಂಸ್ಥಾನದ ಆಶ್ರಯದಿಂದ ಸ್ಥಾಪಿತವಾದ ಹೆಂಚಿನಕಾರ್ಖಾನೆ ಪೋರ್ಸಿಲೇನುಗಳನ್ನು ತೋರಿಸಿ ಅದರ ಆಯವ್ಯಯಗಳನ್ನು ತಿಳಿಸಿದರು. ಕೌನ್ಸಿಲರು ಇದರಿಂದ ಸಂತುಷ್ಟರಾಗಿ ಚೀಫ್ ಇಂಜನಿಯರು ಒಪ್ಪಿದಲ್ಲಿ ಚಿತ್ರದುರ್ಗದಲ್ಲಿ ಸರ್ಕಾರಿ ಕಟ್ಟಡಗಳಿಗೆ ಈ ಹೆಂಚುಗಳನ್ನು ಉಪಯೋಗಿಸಲಾಗುವುದೆಂಬ ಅಭಿಪ್ರಾಯವನ್ನು ಸೂಚಿಸಿದರು. ಕಡೆಯಲ್ಲಿ ಶ್ರೀ ಜಗದ್ಗುರುಗಳನ್ನು ಕುರಿತು ಹೇಳಿದ್ದೇನೆಂದರೆ—ಅನೇಕ ಮಠಗಳು ಉಂಟು. ಅನೇಕ ಸ್ವಾಮಿಗಳೂ ಉಂಟು. ಆದರೆ ಇದಕ್ಕೆ ಮಠವೆನ್ನಬೇಕು. ಇವರಿಗೆ ಸ್ವಾಮಿಗಳೆನ್ನಬೇಕು. ಇಂತಹ ಮಹಾಸ್ವಾಮಿಗಳನ್ನುಳ್ಳ ವೀರಶೈವಸಮಾಜದ ಪುಣ್ಯಕ್ಕೆ ಎಣೆಯಿಲ್ಲ. ವೀರಶೈವಮಂಡಲಿಯು ಈ ಸ್ವಾಮಿಗಳಿಗೆ ಎಷ್ಟು ಕೃತಜ್ಞರಾಗಿದ್ದರೂ ತೀರದು. ಈ ಮಧ್ಯೆ ಮ॥ ಯಜಮಾನ ಮೋತಿ ದೊಡ್ಡಪ್ಪನವರು ಶ್ರೀ ಜಗದ್ಗುರುಗಳ ರಜತೋತ್ಸವವನ್ನು ದಾವಣಗೆರೆಯಲ್ಲಿ ನೆರವೇರಿಸುವುದಕ್ಕಿರುವ ವಿಚಾರವನ್ನು ಇವರಂತಹ ದೊಡ್ಡ ಅಧಿಕಾರಿಗಳ ಸಹಾಯಸಾನುಭೂತಿಗಳ ವಿಚಾರವನ್ನು ತಿಳಿಸಿದರು. ಕೌನ್ಸಿಲರು ಬಹುಸಂತೋಷಪಟ್ಟು ಇಂತಹ ಕಾರ್ಯಗಳಲ್ಲಿನ ತಮ್ಮ ಸಾನುಭೂತಿ ಸಂತೋಷಗಳನ್ನು ವ್ಯಕ್ತಪಡಿಸಿದರು. ಕಡೆಯಲ್ಲಿ ಶ್ರೀ ಜಗದ್ಗುರುಗಳು ಮ॥ ನ್ಯಾಥನ್ ಸಾಹೇಬರ ವಿಶಾಲದೃಷ್ಟಿಯನ್ನು ಸರ್ವವರ್ಗದವರ ಅಭಿವೃದ್ಧಿಯಲ್ಲಿ ಇವರು ತೋರಿಸುತ್ತಿರುವ ಶ್ರದ್ಧಾ ಸಾನುಭೂತಿಗಳನ್ನು ಕುರಿತು ಕೊಂಡಾಡಿ ಈಗಿರುವುದಕ್ಕಿಂತ ಹೆಚ್ಚಿನ ಪದವಿ ಸಿಕ್ಕಿ ಜನಸಾಮಾನ್ಯಕ್ಕೆ ಹೆಚ್ಚು ಪ್ರಯೋಜನವಾಗಲೆಂದು ಹರಸಿ, ಹಾರತುರಾಯಿಗಳಿಂದ ಮರ್ಯಾದಿಸಿ ಕಳುಹಿಸಿಕೊಟ್ಟರು. ಈ ಸಮಾರಂಭದ ಏರ್ಪಾಡಿಗಾಗಿ ಶ್ರೀ ಜಗದ್ಗುರು ಅಪ್ಪಣೆಯಿಂದ ಚಿತ್ರದುರ್ಗದಿಂದ ದಾವಣಗೆರೆಗೆ ಓಡಾಡಿ ಮಹಾಜನರನ್ನು ಕರೆದುಕೊಂಡುಬಂದ ಮ॥ ನಾಡಿಗ ಮಲ್ಲಪ್ಪನವರನ್ನು ಎಷ್ಟು ಕೊಂಡಾಡಿದರೂ ತೀರದು. ಇವರ ಸ್ವಾಮಿಭಕ್ತಿಯೂ ಹಗಲಿರುಳೆನ್ನದೆ ಅವಿಶ್ರಾಂತಶ್ರಮಪಡುವ ಶ್ರದ್ಧಾ ಸಾಹಸವು ಅನುಕರಣೀಯವೂ ಸ್ತೋತ್ರಾರ್ಹವೂ ಆಗಿರುವುವು. ಇವರು ಶ್ರೀ ಜಗದ್ಗುರು ಸೇವೆಗೆ ತಮ್ಮ ತನುಮನಧನಗಳನ್ನು ಧಾರೆಯೆರೆದಿರುವರು. ಇವರಿಗೆ ಶ್ರೀ ಮುರುಘೇಶನು ಆಯುರಾರೋಗ್ಯೈಶ್ವರ್ಯಾದಿಗಳನ್ನಿತ್ತು ಇದಕ್ಕಿಂತ ಹೆಚ್ಚಿನ ಸೇವೆಯನ್ನು ಮಾಡಿಸಿಕೊಳ್ಳಲಿ. ಶ್ರೀ ಜಗದ್ಗುರು ಅಪ್ಪಣೆಯಾದ 2-3 ಗಂಟೆಯಲ್ಲಿ ದಾವಣಗೆರೆ ಮಹಾಜನರು ಅಪ್ಪಣೆಯನ್ನು ಶಿರಸಾವಹಿಸಿ ಹೋಗಿ ಸಮಾರಂಭವನ್ನು ಮಹಾಸ್ವಾಮಿ ಚಿತ್ತಕ್ಕೊಪ್ಪುವಂತೆ ವ್ಯವಸ್ಥೆಮಾಡಿದ್ದು ಇವರ ಅಕುಟಿಲವಾದ ಶ್ರದ್ಧಾಭಕ್ತಿಗಳನ್ನು ಗುರುಸೇವಾತತ್ಪರತೆಯನ್ನು ವ್ಯಕ್ತಪಡಿಸುತ್ತದೆ. ಶ್ರೀ ಜಗದ್ಗುರುವು ಇವರಿಗೆ ನಿರತವೂ ಸಕಲ ಸನ್ಮಂಗಳವನ್ನಿತ್ತು ಕಾಪಾಡಲಿ.

ಓರ್ವ ಭಕ್ತ.

11 ನೆಯ ಅಖಿಲಭಾರತ ವೀರಶೈವಮಹಾಸಭೆ.

ಬೆಂಗಳೂರಿನಲ್ಲಿ ವೀರಶೈವಮಹಾಸಭೆಯು ನೆರೆದಿಂದೀಚೆಗೆ ವೀರಶೈವಮಹಾಸಭೆಯನ್ನು ಮತ್ತೆಲ್ಲಿಯಾದರೂ ನೆರೆಯಿಸುವ ಆಲೋಚನೆಯೇ ಸಮಾಜದಲ್ಲಿ ನಡೆದಂತೆ ತೋರುತ್ತಿರುವುದು ಶೋಚನೀಯವಾಗಿದೆ. ಒಟ್ಟಿಗೆ 8-10 ವರ್ಷಗಳತನಕ ನಿಂತುಹೋಗಿದ್ದ ಮಹಾಸಭೆಯನ್ನು ಬೆಂಗಳೂರಿನ ವೀರಶೈವಮಹಾಜನರು ಪ್ರಯತ್ನವಿಶೇಷದಿಂದ ಮುಂದುವರಿಸಿದರು. ಆಗ್ಗೆ ಮಹಾಸಭೆಯು ಇನ್ನು ಮುಂದೆ ನಿರಾತಂಕವಾಗಿ ವರ್ಷಂಪ್ರತಿ ನೆರೆಯದೆ ಇರುವುದಿಲ್ಲವೆನಿಸಿತು. ಆದರೆ ಅದು ಕಾರ್ಯತಃ ಫಲಕಾರಿಯಾಗಲಿಲ್ಲ. ಈ ಕಳೆದ ಡಿಸೆಂಬರು ತಿಂಗಳಿನಲ್ಲಿ ಮಹಾಸಭೆಯು ಎಲ್ಲಾದರೊಂದೆಡೆಯಲ್ಲಿ ನೆರೆಯಲೆಂಬ ಬಗ್ಗೆ ಸಮಾಜಬಾಂಧವರಿಗೆ ಸಕಾಲದಲ್ಲಿ ಪತ್ರಿಕಾಕರ್ತರು ಎಚ್ಚರಿಕೆಯನ್ನು ಕೊಟ್ಟರು. ಆದರೆ ಅದು ಅರಣ್ಯರೋದನವಾಯಿತು. ಆದರೆ ಈ ವರ್ಷವು ಶುಭಸೂಚಕವಾಗಿದೆ. ಏಕೆಂದರೆ, ನೈಜಾಂಪ್ರಾಂತದ ರಾಯಚೂರಿನ ವೀರಶೈವಬಂಧುಗಳು ತಮ್ಮಲ್ಲಿ ಈ ವರ್ಷ ಮಹಾಸಭೆಯನ್ನು ನೆರೆಯಿಸುವಬಗ್ಗೆ ಉತ್ಸಾಹಶಾಲಿಗಳಾಗಿರುತ್ತಾರೆಂಬ ಖಚಿತವಾದ ವರ್ತಮಾನವನ್ನು ತಿಳಿಸಲು ಬಹಳ ಸಂತೋಷವಾಗುತ್ತದೆ. ವೀರಶೈವ ಮಹಾಸಭೆಯು ನೆರೆಯಲಿಕ್ಕೆ ಅಖಿಲಭರತಖಂಡದಲ್ಲಿ ನೈಜಾಂಪ್ರಾಂತವು ಈಗ್ಗೆ ಅತ್ಯರ್ಹವಾದುದಾಗಿದೆ. ವೀರಶೈವಮಹಾಸಭೆಯು ಜನ್ಮವಡೆದಂದಿನಿಂದಲೂ ಈ ಪ್ರಾಂತದಲ್ಲಿ ಮಹಾಸಭೆಯು ನೆರೆದಿರುವುದಿಲ್ಲ. ಅಲ್ಲದೆ ಆ ಪ್ರಾಂತದ ಮತಬಾಂಧವರಾದರೂ ಇತರಕಡೆಗಳಲ್ಲಿ ನೆರೆದ ಮಹಾಸಭೆಗಳಿಗೆ ಸಹ ಹೆಚ್ಚುಮಂದಿ ಹೋಗಿ, ಮಹಾಸಭೆಗಳ ಪ್ರಯೋಜನಗಳನ್ನು ಅಷ್ಟಾಗಿ ಪಡೆದಂತೆ ತೋರುವುದಿಲ್ಲ. ಈ ಪ್ರಾಂತವು ಬಹುಮಂದಿ ವೀರಶೈವರಿಂದ ನಿಬಿಡೀಕೃತವಾಗಿದೆ, ಅಲ್ಲಿಯ ಪ್ರಾಮುಖ್ಯಜನಾಂಗವೇ ಇದೆಂದರೂ ಅಡ್ಡಿಯಿಲ್ಲ. ಆದರೂ ಸಮಾಜವು ಬಹುಮಟ್ಟಿಗೆ ಹಿಂದುಳಿದಿದೆ. ಸಮಾಜದ ಆರ್ಥಿಕಸ್ಥಿತಿಯು ಮೇಲೆನಿಸಿಕೊಂಡಿದ್ದರೂ ನಕ್ಷತ್ರಗಳಂತೆ ಎಲ್ಲೋ ಒಬ್ಬರು ಶಾಸ್ತ್ರಕೋವಿದರಾದ ಒಬ್ಬಿಬ್ಬರು ಪಂಡಿತರೂ ಕವಿಗಳೂ ವಿರಾಜಿಸುತ್ತಿದ್ದರೂ, ಒಟ್ಟು ಸಮಾಜವನ್ನು ಕುರಿತು ಆಲೋಚಿಸಿದರೆ, ಅದು ವಿದ್ಯೆಯಲ್ಲಿ ಇತರ ಪ್ರಾಂತಗಳಿಗಿಂತಲೂ ಬಹುಮಟ್ಟಿಗೆ ಹಿಂದುಳಿದಿದೆಯೆಂದೇ ಹೇಳಬೇಕಾಗುವುದು. ಆದುದರಿಂದಲೇ ಈ ಪ್ರಾಂತದಲ್ಲಿ ಮಹಾಸಭೆಯನ್ನು ನೆರೆಯಿಸಬೇಕೆಂಬುದಾಗಿ ಸಮಾಜದ ಹಿತಕಾಂಕ್ಷಿಗಳು ಅನೇಕ ವರ್ಷಗಳಿಂದ ಆಶಿಸುತ್ತಿರುವರು. ಅವರುಗಳ ಆಶೆಯು ಈಸಾರಿ ಸಫಲಗೊಂಡಿತು. ನೈಜಾಂಪ್ರಾಂತದ ಪ್ರಧಾನಾಂಗದಂತಿರುವ ರಾಯಚೂರಿನ ಸಮಾಜಬಂಧುಗಳು ಈ ಭಾಗದಲ್ಲಿ ಆದಷ್ಟು ಸಾಹಸಮಾಡಿ, ಕಾರ್ಯವನ್ನು ನೆರವೇರಿಸಿ, ತಮ್ಮ ಪ್ರಾಂತದ ಮತ್ತು ಇಡೀ ಭರತಖಂಡದ ವೀರಶೈವಸಮಾಜದ ಕೃತಜ್ಞತೆಗೆ ಪಾತ್ರರಾಗುವುದರಲ್ಲಿ ಯಾವ ಸಂದೇಹವೂ ತೋರುವುದಿಲ್ಲ. ಈ ಸಂದರ್ಭದಲ್ಲಿ ರಾಯಚೂರಿನ ವೀರಶೈವಮತಬಾಂಧವರಿಗೆ ನಾವು ಅಭಿನಂದನಗಳನ್ನರ್ಪಿಸದಿರಲಾರೆವು. ಮಹಾಸಭೆಯನ್ನು ಅಲ್ಲಿ ನೆರೆಯಿಸುವ ಮೂಲಪ್ರಯತ್ನವು ಬೆಂಗಳೂರಿನ ಮಾಡಲ್ ಮುದ್ರಾಕ್ಷರಶಾಲೆಯ ಮ॥ ಟಿ. ಎಸ್. ಚೆನ್ನಪ್ಪನವರಿಂದ ನಡೆಯಿತೆಂದು ತಿಳಿಸಲು ನಾವು ತುಂಬ ಸಂತೋಷಿಸುತ್ತೇವೆ. ಮ॥ ಚೆನ್ನಪ್ಪನವರು ಕಳೆದವಾರ ರಾಯಚೂರಿಗೆ ಹೋಗಿ ಮೊದಲು ಅಲ್ಲಿನ ಪ್ರಮುಖವೀರಶೈವ ದೊಡ್ಡಮನುಷ್ಯರೊಡನೆ ಮಹಾಸಭಾವಿಷಯವಾಗಿ ಪ್ರಸ್ತಾಪಮಾಡಿ, ಪ್ರೋತ್ಸಾಹಿಸಿ, ಅಲ್ಲಿನ ವೀರಶೈವಮಹಾಜನರ ಒಂದು ಸಭೆಯನ್ನೇ ಸೇರಿಸುವಬಗ್ಗೆ ಪ್ರಯತ್ನಮಾಡಿ, ಮಹಾಸಭೆಯನ್ನು ಮುಂದಿನ ಡಿಸೆಂಬರು ತಿಂಗಳಿನಲ್ಲಿ ನೆರೆಯಿಸುವುದಕ್ಕಾಗಿ ಬೇಕಾದ ಸನ್ನಾಹಗಳನ್ನು ಮಾಡಲು ಒಂದು ಸ್ಥಳೀಯ ಹಂಗಾಮಿ ಕಮಿಟಿಯನ್ನು ಏರ್ಪಡಿಸಿದರು. ಇವರ ಈ ಸಮಾಜಾಭಿವೃದ್ಧಿ ಪ್ರಯತ್ನವು ಸಾರ್ಥಕಗೊಂಡುದಕ್ಕಾಗಿ ಮ॥ ಚೆನ್ನಪ್ಪನವರನ್ನು ಸಹ ನಾನು ಅಭಿನಂದಿಸುತ್ತೇನೆ. ಇದಕ್ಕಾಗಿ ಬೇಕಾದ ಸ್ಥಿರಸಂಕಲ್ಪ, ಮನೋದಾರ್ಢ್ಯ, ಸಹನಶೀಲತೆ, ಪರಸ್ಪರಾನುರಾಗ ಮತ್ತು ಏಕಮತ್ಯಗಳನ್ನು ರಾಯಚೂರಿನ ವೀರಶೈವಮಹಾಜನರಿಗೆ ಭಗವಂತನು ದಯಪಾಲಿಸಿ ಇವರ ಈ ಸತ್ಪ್ರಯತ್ನವು ಕಾರ್ಯರೂಪಿಯಾಗುವಂತೆಯೂ ಫಲದಾಯಕವಾಗುವಂತೆಯೂ ಮಾಡಲೆಂದು ನಾವು ಪ್ರಾರ್ಥಿಸುವ,

ಮಹಾಸಭಾಭಿಮಾನಿ.

ಫೋಟೋ, ಲೈನ್, ಯಲಕ್ಟ್ರೋ
ಲೆಡ್‌ಬ್ಲಾಕುಗಳು, ಅರಗಿನಶೀಲು
ದವಾಲಿಬಿಲ್ಲೆಗಳು ಮತ್ತು
ರಬ್ಬರ್ ಮೋಹರುಗಳನ್ನೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

12

ಪ್ರಕಟನೆ.

ನಮ್ಮಲ್ಲಿ ಸಿನೇಮಕ್ಕೆ ಸಂಬಂಧಪಟ್ಟ ಪ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಿಶನ್, ಆರ್ಕಲ್ಯಾಂಪು, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸ್ ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೇಮನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12—5]

೧೯೨೯ ನೆಯ ಇಸವಿ ಫೆಬ್ರವರಿ ತಾ॥ ೨೩ ರಿಂದ ೧೯೨೯ ನೆಯ ಇಸವಿ ಮಾರ್ಚಿ ತಾ॥ ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಮಾಘ ಶುದ್ಧ ಪೌರ್ಣಿಮೆಯಿಂದ ಮಾಘ ಬಹುಳ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭ ಮಾಸ
23	ಶನಿ	ಪೌರ್ಣ	43-30	ಮಖ	49-49	12
24	ಭಾನು	ಪಾಡ್ಯ	41-21	ಪುಬ್ಬ	49-24	13
25	[1] ಸೋಮ	ಬಿದಿ	39-40	ಉತ್ತ	49-24	14
26	ಮಂಗಳ	ತದಿ	39-35	ಹಸ್ತ	51-3	15
27	ಬುಧ	ಚೌತಿ	40-34	ಚಿತ್ತ	58-40	16
28	[2] ಗುರು	ಪಂಚ	43 7	ಸ್ವಾತಿ	57-49	17
1	ಶುಕ್ರ	ಷಷ್ಠಿ	46-21	ವಿಶಾ	60	18

(1) ಮಳೆನಕ್ಷತ್ರ-ಶತಭಿಷ ೩ ನೆಯಪಾದ, ಕರೀಘಟ್ಟದ ಶ್ರೀನಿವಾಸಸ್ವಾಮಿರಥ. (2) ಮಳೆನಕ್ಷತ್ರ-ಶತಭಿಷ ೪ ನೆಯಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಕರಾಜಮಂಡಲಹಿತೈಷಾ । ಭುವನಭಕ್ತ್ಯಾವತಾರಾ ಪಕ್ಷಜ್ಞ ಸಪ್ತರ್ಷಿ ಶೋಭರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾರೋಲಂಬುಧೀಪುಂಗವ । ಸ್ತೋಮಾಭೀಷ್ಟದಶೀಲ ಶಾರದಾ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತಳೆಯುಂಸದಾಪೊರೆಗೆ ಗೌರೀಕಾಮುಕಂಪ್ರೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೆ ೧೯೨೯ ನೆಯ ಇಸವಿ ಮಾರ್ಚಿ ತಾರೀಖು ೨ ನೆಯ ಶನಿವಾರ [ಸಂಚಿಕೆ ೯

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವೃತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

ಹತ್ತನೆಯ ವೀರಶೈವ ಮಹಾಸಭಾಕಾಲದಲ್ಲಿ ಪ್ರಸಿದ್ಧಿಸಲ್ಪಟ್ಟ

ವೀರಶೈವ ಕರದರ್ಪಣ.

ಡೆಮ್ಮಿ ¼ ಸೈಜಿನ 200 ದೊಡ್ಡ ಗ್ಲೇಜುಪುಟಗಳು.] ಬೆಲೆ ಒಂದೇ ಒಂದು ರೂಪಾಯಿ. [300 ಭಾವಚಿತ್ರಗಳಿರುವುವು.

ವೀರಶೈವರ ಸಂಬಂಧವಾದ ಎಲ್ಲ ವಿಷಯಗಳನ್ನೂ ಒಳಗೊಂಡಿರುವ ಏಕಮಾತ್ರ ಪುಸ್ತಕ.

ವೀರಶೈವಮತಸಂಬಂಧವಾದ ಮಹತ್ವವಿಷಯಗಳಮೇಲೆ ಎಂದರೆ, ವೀರಶೈವಮತತತ್ವನಿರೂಪಣೆ, ವಿಶಾಲತ್ವ, ಬ್ರಾಹ್ಮಣಸಿದ್ಧಾಂತ, ಜಗದ್ಗುರುಪೀಠಗಳು, ಶ್ರೀ ಬಸವೇಶ್ವರ ಮೊದಲಾದ ವಿಷಯಗಳ ಮೇಲೆ ಸುಪ್ರಸಿದ್ಧ ಲೇಖಕರ ಲೇಖನಗಳು; ಜಗದ್ಗುರುಪೀಠಗಳ ಮತ್ತು ಜಗದ್ಗುರು ಮಹಾಸ್ವಾಮಿಗಳವರ ಸಚಿತ್ರ ಚರಿತ್ರೆಗಳು; ಇಡೀ ಭರತಖಂಡದೊಳಗಿನ ವೀರಶೈವ ಸಂಸ್ಥೆಗಳ ಮತ್ತು ಅವುಗಳ ಸಮಗ್ರ ಇತಿಹಾಸಗಳು; ಅಖಿಲಭರತಖಂಡದಲ್ಲಿ ಗತಿಸಿದ ವೀರಶೈವ ಮಹನೀಯರುಗಳ ಸಚಿತ್ರ ಜೀವಿತಚರಿತ್ರೆಗಳು; ಅ. ಭಾ. ವೀರಶೈವ ಮಹಾಸಭೆಯು ಮೊದಲು ಹೇಗೆ ಪ್ರಾರಂಭವಾಯಿತೆಂಬ ವಿಷಯ; ಚಿರಸ್ಥಾಯಿಫಂಡಿನ ವಿಷಯ ಮತ್ತು ಅದಕ್ಕೆ ಸಹಾಯಮಾಡಿದವರ ಭಾವಚಿತ್ರಗಳು; ಮೊನ್ನೆ ನಡೆದ 10 ನೇ ವೀರಶೈವ ಮಹಾಸಭೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ಕಳಿಸಲ್ಪಟ್ಟ ಸಂದೇಶ—ಈ ಎಲ್ಲ ವಿಷಯಗಳಿಂದೊಡಗೂಡಿದ ಉತ್ತಮ ಗ್ರಂಥ.

ಇಡೀ ಪುಸ್ತಕವು ಭಾವಚಿತ್ರಗಳಿಂದ ತುಂಬಿತುಳುಕುತ್ತದೆ. ಶ್ರೀಮನ್ಮಹಾರಾಜರವರ ಭಾವಚಿತ್ರ, ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರ ಶಿವಪೂಜೆಮಾಡುತ್ತಿರುವುದು, ಶ್ರೀಜಗದ್ಗುರು ಮಹಾಸ್ವಾಮಿಗಳ ಅಡ್ಡಪಾಲಕಿಉತ್ಸವ, 10 ನೇ ಅ. ಭಾ. ವೀರಶೈವ ಮಹಾಸಭೆಯ ಅಧ್ಯಕ್ಷ ಮತ್ತು ಸ್ವಾಗತಸಂಘಾಧ್ಯಕ್ಷರ ಭಾವಚಿತ್ರಗಳು, ಪಂಚಪೀಠಗಳ ದೃಶ್ಯಗಳು ಮತ್ತು ಪಂಚಜಗದ್ಗುರುಗಳ ಭಾವಚಿತ್ರಗಳು, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ದೊಡ್ಡ ಭಾವಚಿತ್ರ ಮತ್ತು ಜಗದಾಚಾರ್ಯ ವಿರೂಪಾಕ್ಷಒಡೆಯರವರು ಹುಬ್ಬಳ್ಳಿ ಮತ್ತು ಗದಗಿನ ಜಗದ್ಗುರು ಮಹಾಸ್ವಾಮಿಗಳವರ ಭಾವಚಿತ್ರ, ಇನ್ನುಳಿದ ಎಲ್ಲ ಪ್ರಸಿದ್ಧ ಮಹಾಸ್ವಾಮಿಗಳವರ ಮತ್ತು ವೈದಿಕವರ್ಗದ ಭಾವಚಿತ್ರಗಳು ಇದರಲ್ಲಡಗಿವೆ. ಇದಲ್ಲದೆ ಕೈ॥ ಸಿರಸಿಂಗಿ ದೇಸಾಯರು, ಮೈಸೂರು ವೀರಸಂಗಪ್ಪನವರಾದಿಯಾಗಿ ಗತಿಸಿದ ಎಲ್ಲ ವೀರಶೈವರುಗಳನ್ನೂ, ಈಗಿನ ವೀರಶೈವ ಲೌಕಿಕ ವೈದಿಕ ಧರ್ಮಾತ್ಮರನ್ನೂ ಪ್ರಸಿದ್ಧ ಸ್ತ್ರೀಪುರುಷರನ್ನೂ, ದೊಡ್ಡ ಹುದ್ದೇದಾರರು, ವರ್ತಕರು, ಗಾಯಕರು, ನಟರು ಮೊದಲಾದವರನ್ನೂ ಇದರಲ್ಲಿ ಕಾಣಬಹುದು.

ಈವರೆಗೆ ಈ ಮಾದರಿಯ ಪುಸ್ತಕವು ಇದೊಂದೇ. ಪ್ರತಿಯೊಬ್ಬ ವೀರಶೈವನೂ ಸಂಗ್ರಹ ಮಾಡುವ ಗ್ರಂಥವು. ಬೆಂಗಳೂರಿನ ಮಹಾಸಭಾಕಾಲದಲ್ಲಿ ಮಾರಿ ಮಿಕ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

ಬೇಕಾದವರು ಒಡನೆ ಬರೆಯಿರಿ. ಬೆಲೆ 1 ರೂಪಾಯಿ. ಟಪಾಲ್‌ಹಾಸಲು ಪ್ರತ್ಯೇಕ.

ವಿಳಾಸ—ಟಿ. ಎಸ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

20

೧೯೨೯ ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು ಮತ್ತು ಕ್ಯಾಲೆಂಡರುಗಳು.

1929 ನೇ ಇಸವಿಯ ಶಿದ್ದಪ್ಪಾಸ್ ಮಾಡಲ್ ಪಾಕೆಟ್ ಡೈರಿಗಳು.

1ನೇ ನಂ. ದೊಡ್ಡಸೈಜು ಪಾಕೆಟ್‌ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 6½"×4" 1ಕ್ಕೆ 0-12-0 ಪರಸ್ಥಳಕ್ಕೆ ಪೋಸ್ಟೇಜು 0-3-0.

2ನೇ ನಂ. ದೊಡ್ಡಸೈಜು ಮುಚ್ಚಳವಿಲ್ಲದ ಸಾದಾ ಪಾಕೆಟ್‌ಡೈರಿ 6½"×4" 1ಕ್ಕೆ 0-10-0 ಪರಸ್ಥಳಕ್ಕೆ ಪೋಸ್ಟೇಜು 0-3-0.

1ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿದ್ದು 5"×3¼" 1ಕ್ಕೆ 0-7-0 ಪರಸ್ಥಳಕ್ಕೆ ಪೋಸ್ಟೇಜು 0-2-0.

2ನೇ ನಂ. ಚಿಕ್ಕಸೈಜು ಪಾಕೆಟ್‌ಡೈರಿ ಮುಚ್ಚಳವಿಲ್ಲದ ಸಾದಾ 5"×3¼" 1ಕ್ಕೆ 0-5-0 ಪರಸ್ಥಳಕ್ಕೆ ಪೋಸ್ಟೇಜು 0-2-0.

ಮೇಲ್ಕಂಡ ದರದಂತೆ ನಿಮಗೆ ಬೇಕಾದಷ್ಟು ಡೈರಿಗಳ ಫಾರಮ್ ಮೊಬಲಗು ರವಾನಿಸಿದಲ್ಲಿ ಪೋಸ್ಟಲ್ ಪಾರ್ಸಲ್ ಮೂಲಕ ರವಾನಿಸಲಾಗುತ್ತೆ. ಮೇಲ್ಕಂಡ ಡೈರಿಗಳನ್ನು ಒಟ್ಟಿಗೆ 12 ತರಿಸಿಕೊಳ್ಳುವವರಿಗೆ 1 ಡೈರಿ ಜಾಸ್ತಿಗೆ ಕೊಡಲಾಗುತ್ತೆ. ವಿ. ಪಿ. ಮೂಲಕ ತರ್ಸಬೇಕಾದವರು ಡಜನ್ 1 ಕ್ಕೆ 2 ರೂಪಾಯಿ ಮೇರೆ ಅಡ್ವಾನ್ಸ್ ರವಾನಿಸಬೇಕು.

1929 ನೇ ಇಸವಿಯ ಸಚಿತ್ರಕ್ಯಾಲೆಂಡರ್.

ಶೀಟ್ ಕ್ಯಾಲೆಂಡರ್ 50 ಕ್ಕೆ 1-2-0. 100 ಕ್ಕೆ 2-0-0, 3"×4½" ಪಾಕೆಟ್ ಕ್ಯಾಲೆಂಡರ್ 12 ಕ್ಕೆ 0-9-0, 50 ಕ್ಕೆ 2-4-0. 100 ಕ್ಕೆ 4-6-0.

ಅನೇಕ ಬಣ್ಣಗಳಿಂದ ರವಿವರ್ಮ ಪ್ರೆಸ್ಸಿನಲ್ಲಿ ತಯಾರಾದ 10"+14" ಸೈಜಿನ ಶ್ರೀ ಮಹಾವಿಷ್ಣುವಿಗೆ ಸುದರ್ಶನಪ್ರದಾನ ಮಾಡುವ ಪರಮೇಶ್ವರನ ಪಿಕ್ಚರ್ ಕ್ಯಾಲೆಂಡರ್ 3 ಕ್ಕೆ 0-8-0, 6 ಕ್ಕೆ 0-14-0, 12 ಕ್ಕೆ 1-6-0.

ನಿಮಗೆ ಬೇಕಾದಷ್ಟು ಕ್ಯಾಲೆಂಡರುಗಳ ಫಾರಮ್ ಮೊಬಲಗನ್ನು ಮಣಿಯಾರ್ಡರ್ ಮಾಡಿದಲ್ಲಿ ಪ್ಯಾಕಿಂಗ್ ಪೋಸ್ಟೇಜು ಇಲ್ಲದೆ ಫ್ರೀಯಾಗಿ ರವಾನಿಸಲಾಗುತ್ತೆ. ವಿ. ಪಿ. ಮೂಲಕ ಖಂಡಿತವಾಗಿ ರವಾನಿಸುವದಿಲ್ಲ.

ಕ್ಯಾಲೆಂಡರುಗಳು ಮುಗಿದನಂತರ ಬರತಕ್ಕ ಮಣಿಯಾರ್ಡರನ್ನು [illegible] ವಾಪಸ್ ಮಾಡುತ್ತೆ.

ಮಾದರಿ ಕ್ಯಾಲೆಂಡರ್ ಅಪೇಕ್ಷಿಸುವವರು 0-5-0 ರವಾನಿಸಿದಲ್ಲಿ ಮೇಲ್ಕಂಡ 3 ನಮೂನೆ ಕ್ಯಾಲೆಂಡರುಗಳನ್ನು ಪೋಸ್ಟ್ ಮೂಲಕ ಫ್ರೀಯಾಗಿ ರವಾನಿಸಲಾಗುತ್ತೆ.

[20—16]

ಮಣಿಯಾರ್ಡರ್ ರವಾನಿಸುವ ವಿಳಾಸ—
ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ” ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಪುಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

• ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡ್ಡಾಫೀಸು ಮೈಸೂರು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೧೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಜಾಸ್ತಿ ಮಾಡುತ್ತದೆ. ಮೂರು ಚೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಫ್ರೀಯಾಗಿ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೩—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೧, ಮದ್ರಾಸು.

[20—10]

ಸೂಚನೆ.

ಬರುವ ಶನಿವಾರ ಮಹಾ ಶಿವರಾತ್ರಿ ಹಬ್ಬವಾದ ಪ್ರಯುಕ್ತ ತಾ|| 9-3-29 ರ ಸ್ಟಾರ್ ಪತ್ರಿಕೆಯು ಪ್ರಕಟವಾಗುವುದಿಲ್ಲ. ಸಂ.

NOTICE.

KARNATAKA COMMERCIAL BANK LTD., MYSORE.

The District & Sessions Judge Mysore, passed orders on 22-2-29, appointing Mr. P. Ramaswamy, Mysore as *Interrum Liquidator of* the above Bank.

P. RAMASWAMY,
Lansdowne Bazaar, Mysore

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಮಾರ್ಚಿ ತಾ|| ೨ ನೆಯ ಶನಿವಾರ.

ಅಫ್ಘಾನಿಸ್ಥಾನದ ಪರಿಸ್ಥಿತಿ.

ಕಾಬೂಲಿನಲ್ಲಿದ್ದ ವಿದೇಶೀಯ ರಾಯಭಾರಿಗಳೆಲ್ಲರೂ ತಂತಮ್ಮ ದೇಶಗಳಿಗೆ ತೆರಳಿದರೆಂದು ಕೇಳಲು ಸಂತೋಷವಾಗುತ್ತದೆ. ಏಕೆಂದರೆ, ಅಫ್ಘಾನಿಸ್ಥಾನದಲ್ಲಿ ಅಮಾನುಲ್ಲಾಖಾನರು ರಾಜರಾಗಿರುವವರೆಗೂ ದೇಶದಲ್ಲಿ ಶಾಂತಿ ಸಮಾಧಾನವು ನೆಲೆಯಾಗಿದ್ದಿತು. ಎಲ್ಲರೂ ಯಾವ ಭಯವೂ ಇಲ್ಲದೆ ನೆಮ್ಮದಿಯಿಂದಿರುತ್ತಿದ್ದರು. ಆದರೆ ದರೋಡೆಯವರ ಮುಖಂಡನಾದ ಸಾಕೌ ಧೊರೆಯಾದಾಗಿನಿಂದ ಜನಗಳು ಹಠೋಟಿಯಿಲ್ಲದೆ ಸ್ವೇಚ್ಛಾಪ್ರವರ್ತಕರಾದರು. ಚೋರ ರಾಜನು ತನಗೆ ಲಭಿಸಿದ ಹೊಸ ಪದವಿಯನ್ನು ನಿರ್ವಹಿಸಲಾರದೆ ಜನಗಳ ಮೇಲೆ ಬಿದ್ದು ಹಿಂಸಿಸಲಾರಂಭಿಸಿದನು. ಬಲಾತ್ಕಾರದಿಂದ ಜನಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿರುವನು. ಜನಗಳ ಆಸ್ತಿಪಾಸ್ತಿಗಳನ್ನೆಲ್ಲಾ ಸುಲಿಗೆ ಮಾಡುತ್ತಿರುವನು. ತನಗೆ ಬೇಕಾದ ಕನ್ಯೆಯರನ್ನು ಹಿಡಿದು ತರಿಸಿ ಬಲಾತ್ಕಾರದಿಂದ ವಿವಾಹ ಮಾಡಿಕೊಳ್ಳುತ್ತಿರುವನು. ರಾಜ್ಯದಲ್ಲೆಲ್ಲ ಜನಗಳು ಅನ್ನೋದಕವಿಲ್ಲದೆ ಹಾಹಾಕಾರಪಡುತ್ತಿರುವರು. ಈ ಮಧ್ಯೆ ಅಮಾನುಲ್ಲರವರು ರಂಜಾನ್ ಹಬ್ಬವಾದ ಕೂಡಲೆ ತಾವು ಕಾಬೂಲನ್ನು ಮುತ್ತುವುದಾಗಿಯೂ, ಕಾಬೂಲಿನಲ್ಲಿರುವ ಜನರು ಮೊದಲು ತಮಗೆ ಮಾಡಿದ ಅಪರಾಧವನ್ನು ಮನ್ನಿಸುವುದಾಗಿಯೂ, ತಮಗೆ ದ್ರೋಹಮಾಡಿದ ಜನರನ್ನು ಮಾತ್ರ ಹಿಡಿದು ಕಠಿಣವಾಗಿ ಶಿಕ್ಷಿಸುವುದಾಗಿಯೂ ಪ್ರಕಟನೆಗಳನ್ನು ಆಕಾಶಯಾನಗಳ ಮೂಲಕ ಜನಗಳಿಗೆಲ್ಲಾ ತಿಳಿಯುವಂತೆ ಹಂಚಿರುವರು. ಈ ಪ್ರಕಟನೆಯನ್ನು ನೋಡಿದ ಜನರು ಕಾಬೂಲನ್ನು ಮುತ್ತಿದಾಗ ತಮಗೆ ಪ್ರಾಣಾಪಾಯ ಸಂಭವಿಸದೇಬಿಡದೆಂದು ಯೋಚಿಸಿ ಊರನ್ನು ಬಿಟ್ಟು ಹೊರಡಲು ಯತ್ನಿಸಿದಾಗ ಸಾಕೌ ದೊರೆಯು ಅವರನ್ನು ತಡೆದು ನಿರ್ಬಂಧದಲ್ಲಿಟ್ಟಿರುವನು. ಅವರಲ್ಲನೇಕರನ್ನು ಕಠಿಣ ಶಿಕ್ಷೆಗೆ ಗುರಿಮಾಡಿರುವನು. ಇಂತಹ ವಿಷಮಕಾಲದಲ್ಲಿ ವಿದೇಶೀಯ ರಾಯಭಾರಿಗಳು ಕಾಬೂಲಿನಲ್ಲಿರುವುದಾದರೆ ಜನಗಳ ಅಂತಃಕಲಹದಲ್ಲಿ ಅವರನ್ನು ಕಾಪಾಡುವವರಾರು? ಅವರಿಗೆ ಪ್ರಾಣಸಂರಕ್ಷಣೆಯಾಗದೆ ಯಾರಿಗಾದರೂ ಅಪಾಯ ಸಂಭವಿಸುವುದಾಗಿದ್ದಲ್ಲಿ ಅವರ ಸರ್ಕಾರದವರು ಅಫ್ಘಾನಿಸ್ಥಾನದ ಅಂತಃಕಲಹದಲ್ಲಿ ಕೈಹಾಕಬೇಕಾಗುತ್ತಿದ್ದಿತು. ಹಾಗೆ ವಿದೇಶೀಯರೊಬ್ಬರು ಜಗಳಕ್ಕೆ ಬಂದಿದ್ದರೆ ಇತರರೂ ಬರಬೇಕಾದ ಸಂಭವವೊದಗಿ ಪರಿಣಾಮದಲ್ಲಿ ದೊಡ್ಡ ಯುದ್ಧವು ಸಂಘಟಿಸುತ್ತಿದ್ದಿತು. ಆದುದರಿಂದ ವಿದೇಶೀಯ ರಾಯಭಾರಿಗಳು ಸಕಾಲದಲ್ಲಿಯೇ ಕಾಬೂಲನ್ನು ಬಿಟ್ಟು ತೆರಳಿದುದು ಅಫ್ಘಾನಿನ ಕಲಹವು ತೀವ್ರವಾಗಿ ಪರಿಸಮಾಪ್ತಿಯಾಗಲು ಅವಕಾಶವಾಯಿತು.

ಹಿಂದೆ ಸೈನ್ಯಾಧಿಪತಿಯಾಗಿದ್ದ ನಾದಿರ್ ಖಾನರು ತಮ್ಮ ದೇಶದಲ್ಲಿ ನಡೆಯುತ್ತಿರುವ ಅಂತಃಕಲಹನನ್ನೂ, ಅದರಿಂದ ದೇಶಕ್ಕಾಗಿರುವ ಅನರ್ಥವನ್ನೂ ನೋಡಿ ಸಹಿಸಲಾರದೆ ತಮಗೆ ದೇಹಾಲಸ್ಯವಾಗಿದ್ದರೂ ಲಕ್ಷಿಸದೆ ಸ್ವದೇಶಕ್ಕೆ ಬಂದಿರುವರು. ಇವರಲ್ಲಿ ಅಫ್ಘನ್ನಿನ ಜನರೆಲ್ಲರಿಗೂ ಪೂರ್ಣ ವಿಶ್ವಾಸವೂ, ಗೌರವವೂ ಇರುವುದರಿಂದ ಇವರೇ ಪ್ರಭು ಪದವಿಗೆ ಆಶೆಪಟ್ಟು ಬಂದಿರುವರೆಂದು ಕೆಲವರು ತಿಳಿದಿದ್ದರು. ಆದರೆ ನಾದಿರ್ ಖಾನರು ಈ ಸಂಬಂಧದಲ್ಲಿ ತಮ್ಮ ಅಭಿಮತವನ್ನು ನಿಸ್ಪೃಹವಾಗಿ ತಿಳಿಸಿರುವರು. ತಾವು ಸ್ವದೇಶಕ್ಕೆ ಹಿಂತಿರುಗಿದುದು ದೇಶಾಭಿಮಾನದಿಂದಲೇ ವಿನಾ ರಾಜ್ಯಾಭಿಲಾಷೆಯಿಂದಲ್ಲವೆಂದೂ, ಅಂತಃಕಲಹವನ್ನು ಕೊನೆಗಾಣಿಸುವುದೇ ತಮ್ಮ ಧ್ಯೇಯವೆಂದೂ ಹೇಳಿರುವರು. ನಾದಿರ್ ಖಾನರಲ್ಲಿ ಸಾಕೌ ಧೊರೆಗು ಕೂಡ ಗೌರವವಿರುವುದಂತೆ. ಆದುದರಿಂದ ಇವರು ಕಾಬೂಲಿಗೆ ಹೋಗುವುದಾದರೆ ಯಾವ ಕಲಹವೂ ಇಲ್ಲದೆ ಚೋರ ರಾಜನು ನಾದಿರ್ ಖಾನರಿಗೆ ತನ್ನ ಪದವಿಯನ್ನು ಒಪ್ಪಿಸಿಬಿಡುವನೆಂದೂ ಅದನ್ನು ಖಾನರು ತಮ್ಮ ಪೂರ್ವದ ಸ್ವಾಮಿಯಾದ ಅಮಾನುಲ್ಲರವರಿಗೆ ಒಪ್ಪಿಸುವರೆಂಬುದಾಗಿಯೂ ಯೋಚಿಸಬಹುದಾಗಿರುವುದು. ನಾದಿರ್ ಖಾನರು ಬೊಂಬಾಯಿಯಿಂದ ದೆಹಲಿಗೆ ಪ್ರಯಾಣ ಮಾಡಿ ಅಲ್ಲಿಂದ ಪೆಷಾವರಿಗೆ ತೆರಳಿದರು. ಅಲ್ಲಿ ಅಫ್ಘಾನಿಸ್ಥಾನದ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಕಾಂದಹಾರಿಗೆ ಹೋಗಿ ಅಮಾನುಲ್ಲರವರೊಡನೆ ಆಲೋಚನೆ ಮಾಡಿ ಮುಂದಿನ ಕಾರ್ಯಕ್ರಮವನ್ನು ಗೊತ್ತುಮಾಡುವುದಾಗಿ ತಿಳಿಯಬರುತ್ತದೆ.

ಅಮಾನುಲ್ಲಖಾನರಾದರೋ ಭರದಿಂದ ಯುದ್ಧಸನ್ನಾಹ ಮಾಡಿಕೊಂಡು ಕಾಂದಹಾರಿನಿಂದ ಪರಿವಾರಸಮೇತ ಹೀರತ್ತಿಗೆ ಆಕಾಶಯಾನಗಳಲ್ಲಿ ಪ್ರಯಾಣಬೆಳಸಿರುವರೆಂದು ತಿಳಿದುಬಂದಿದೆ. ಇವರ ಸಹಾಯಕ್ಕಾಗಿ ರಷ್ಯಾದೇಶದ ಆಕಾಶಯಾನಗಳೂ, ವೈಮಾನಿಕರೂ, ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳೂ ಕಳಿಸಲ್ಪಟ್ಟಿರುತ್ತವೆ. ಅಂತು ರಂಜಾನ್ ಹಬ್ಬವಾದ ಕೂಡಲೆ ಕಾಬೂಲನ್ನು ಮುತ್ತುವ ತರದೂದು ನಡೆಯುತ್ತಿದೆ. ಈ ಸುದ್ದಿಯನ್ನು ಕೇಳಿದ ಕಾಬೂಲ್ ನಿವಾಸಿಗಳು ಪ್ರಾಣಭೀತಿಯಿಂದ ಆ ಪಟ್ಟಣವನ್ನುಬಿಟ್ಟು ಹೊರಡಲೆತ್ನಿಸಿದರು. ಸಾಕೌದೊರೆಯಾದರೊ ತನ್ನ ರಾಜಧಾನಿಯು ಬರಿದಾಗುವುದೆಂಬ ಭಯದಿಂದ ಹಾಗೆ ಯಾರೂ ಪಟ್ಟಣವನ್ನು ಬಿಟ್ಟು ಹೋಗಲಾಗದೆಂದೂ, ಒಂದು ವೇಳೆ ಹೋದವರಿಗೆ ಕಠಿಣಶಿಕ್ಷೆಯು ವಿಧಿಸಲ್ಪಡುವುದೆಂದೂ ಪ್ರಕಟಿಸಿರುತ್ತಾನೆ. ಕೆಲವರು ಈ ನಿಯಮವನ್ನು ಉಲ್ಲಂಘಿಸಲು ಯತ್ನಿಸಿದಾಗ ಅವರನ್ನು ಹಿಡಿದು ಕಠಿಣಶಿಕ್ಷೆಗೆ ಗುರಿಮಾಡಿಸಿದನು. ಈ ಮಧ್ಯೆ ತನ್ನ ಹಿಂಬಾಲಕರಾದ ಜನಗಳನ್ನೆಲ್ಲ ಸೇರಿಸಿ ದೊಡ್ಡದೊಂದು ಸಭೆಯನ್ನು ನೆರೆಯಿಸಬೇಕೆಂದು ತರದೂದು ಮಾಡುತ್ತಿರುವನು. ಅಮಾನುಲ್ಲಖಾನರು ಮೊದಲು ತಾವು ರಾಜ್ಯಪರಿತ್ಯಾಗಮಾಡುವ ಕಾಲದಲ್ಲಿ, ಯಾರೂ ತಮಗೆ ಮೋಸಮಾಡುವ ಉದ್ದೇಶದಿಂದ ತಮ್ಮನ್ನು ಪದವಿತ್ಯಾಗ ಮಾಡಿರೆಂದು ಕೇಳಿದುದಾಗಿ ತಿಳಿದಿರಲಿಲ್ಲ. ಆದರೆ ಈಚೆಗೆ ಈ ದ್ರೋಹವು ತಿಳಿದುಬಂದುದರಿಂದ ಅಂತಹ ಪರಮ ದ್ರೋಹಿಗಳನ್ನು ಹಿಡಿದು ತಕ್ಕ ಶಿಕ್ಷೆ ಮಾಡಬೇಕೆಂದಿರುವರು. ನಾದಿರ್ ಖಾನರೊಬ್ಬರು ಮಾತ್ರ ಅಫ್ಘನ್ ಜನರ ಎಲ್ಲಾ ಪಕ್ಷದವರಿಗೂ ಬೇಕಾದವರಾದುದರಿಂದ ರಕ್ತಪಾತವಿಲ್ಲದೆ ಎಲ್ಲ ಕಾರ್ಯಕಲಾಪಗಳೂ ಸುಲಲಿತವಾಗಿ ನಡೆದು ಅಮಾನುಲ್ಲರವರು ಪುನಃ ಪ್ರಭುತ್ವವನ್ನು ವಹಿಸುವರೆಂದು ಹೇಳಬಹುದಾಗಿದೆ. ಅಂತು ಈ ಸಮಯದಲ್ಲಿ ನಾಗರಿಕ ಪ್ರಪಂಚವೆಲ್ಲವೂ ಅಫ್ಘಾನಿಸ್ಥಾನದ ಮೇಲೆ ದೃಷ್ಟಿಯಿಟ್ಟು ಅಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಕುತೂಹಲದಿಂದ ನೋಡುತ್ತಿರುವುದು.

ಮ|| ಎಂ. ವೆಂಕಟಕೃಷ್ಣಯ್ಯನವರು ಗಡೀಪಾರಾಗುವರೆ?

ಮೈಸೂರು ಮ|| ಎಂ. ವೆಂಕಟಕೃಷ್ಣಯ್ಯನವರನ್ನು ಗಡೀಪಾರ್ ಮಾಡುವರೆಂದು ವದಂತಿ. ಅದನ್ನು ನಿರ್ಭಯವಾಗಿ ಎದುರುಗೊಳ್ಳಲು ಸಿದ್ಧರಾಗಿರುವಂತೆ. ಈಗ ಅವರು ಸರಕಾರದ ಅನುಮತಿಯಿಲ್ಲದೆ, "ಸಿವಿಕ್ ಅಂಡ್ ಸೋಷಿಯಲ್ ರಿವ್ಯೂ" ಎಂಬುದನ್ನು ಹೊರಡಿಸುತ್ತಿದ್ದಾರೆ. ಇದು ರಾಜಕೀಯ ವಿಚಾರದಿಂದ ಕೂಡಿಲ್ಲವಾಗಿದ್ದರೂ ಅದರ ಮೊನ್ನಿನ ಸಂಚಿಕೆಯಲ್ಲಿ ಅವರು ಈರೀತಿ ಬರೆದಿರುವರು—"ಯಾವ ವಿಷಯದ ಮೇಲೆಯೇ ಆಗಲಿ ಸರಕಾರಕ್ಕೆ ಒಂದು ಬರೆ ಎಳೆಯದೇ ನಮಗೆ ಬರೆಯಲಿಕ್ಕೆ ಸಾಧ್ಯವೇ ಇಲ್ಲ. ಅದು ನಮ್ಮ ಮೇಲೆ ಹಾರಿಬಿದ್ದು ನಮಗೆ ರೂ 5000 ದಂಡವನ್ನೂ ಗಡಿಪಾರು ಮೊದಲಾದ ಶಿಕ್ಷೆ ವಿಧಿಸುವುದನ್ನೂ ತಪ್ಪಿಸಲು ನಮಗೆ ಸಾಧ್ಯವೇ ಇಲ್ಲ. ನಾವು ಅಂತಹ ಶಿಕ್ಷೆಗೆ ತಲೆಬಾಗಿ ನಮ್ಮ ಕರ್ತವ್ಯವನ್ನು ಮಾಡತಕ್ಕದ್ದು ಅಥವಾ ಪತ್ರಿಕಾ ಪ್ರಪಂಚವನ್ನು ಬಿಟ್ಟುಬಿಡತಕ್ಕದ್ದು. ನಾವು ಸರ್ಕಾರದ ಯಜ್ಞಕ್ಕೆ ಬಲಿಯಾಗಲು ನಿರ್ಧರಿಸಿದ್ದೇವೆ. ರಾಜಸತ್ತೆಯ ಖಡ್ಗವು ನಮ್ಮ ಕೊರಳಿನಮೇಲೆ ತೂಗಾಡುತ್ತಿರುವುದು. ನಾವು ಗಲ್ಲಿಗೆ ನಮ್ಮ ಕತ್ತನ್ನಿಕ್ಕಿದ್ದೇವೆ. ಆದ್ದರಿಂದ ನಾವು ನಮ್ಮ ಶಿರಸ್ಸನ್ನು ಶರೀರದಿಂದ ಭಿನ್ನಗೊಳಿಸಲು ಸಿದ್ಧರಾಗದೆ ಉಪಾಯವಿಲ್ಲ."

ಈ ಸಮಾಚಾರವನ್ನು ಫ್ರೀಪ್ರೆಸ್‌ನವರು ಮದ್ರಾಸಿನ ಪತ್ರಿಕೆಯೊಂದಕ್ಕೆ ಕಳುಹಿಸಿರುವರು.

ಒಳದೇಶದ ವೃತ್ತಾಂತಗಳು.

ಉದಕಮಂಡಲಕ್ಕೆ ಚಿತ್ತೈಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ನೆನ್ನೆಯದಿವಸ ರಾಜಧಾನಿಗೆ ಚಿತ್ತೈಸಿತು.

ಬೊಂಬಾಯಿಗೆ ದಯಮಾಡಿಸಿರುವ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ, ಸಿ. ಐ,. ಯವರ ಸ್ವಾರಿಯು ನಾಳೆಯ ದಿವಸ ರಾಜಧಾನಿಗೆ ಚಿತ್ತೈಸುವುದು.

ಮೊನ್ನೆ ಕೋಲಾರದ ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದ ವಿಚಾರದಲ್ಲಿ ಡಾ|| ಪಾಲ್ ಚಿನ್ನಪ್ಪನವರು ಜಾಗೃತಿಯಿಂದ ಕೋಲಾರಕ್ಕೆ ಹೋಗಿ ವಿದ್ಯಮಾನಗಳನ್ನು ತಿಳಿದುಕೊಂಡು ಸಮಾಧಾನಗೊಳಿಸಿದುದು ಶ್ಲಾಘನೀಯವಾಗಿರುತ್ತದೆ.

ಈ ತಿಂಗಳು 9 ನೇ ತಾ|| ಗೆ ಅಂತ್ಯವಾದ ಒಂದು ವಾರದಲ್ಲಿ ನಮ್ಮ ಸರ್ಕಾರಕ್ಕೆ ಮೈಸೂರು ರೈಲ್ವೆ ಇಲಾಖೆಯಿಂದ 69,900 ರೂ. ಗಳು ಉತ್ಪತ್ತಿಯಾಗಿರುತ್ತವೆ. ಈ ವರ್ಷ ಮೇಲ್ಕಂಡ ತಾರೀಖಿನ ವರೆಗೆ ಒಟ್ಟು 21,54,600 ರೂ. ಗಳು ಹುಟ್ಟುವಳಿಯಾಗಿವೆ.

ಬೆಂಗಳೂರು ದಂಡಿಗೆ ಸೇರಿದ ಅಲ್ಸೂರಿನ ಸಬ್ ಅಸಿಸ್ಟೆಂಟ್ ಸರ್ಜನ್ನರಾದ ತಿರುಮಲರಾಯರು ತಮ್ಮಲ್ಲಿಗೆ ವೈದ್ಯಚಿಕಿತ್ಸೆಗಾಗಿ ಬಂದಿದ್ದ ಮಿಲ್ಟರಿ ಅಕೌಂಟ್ಸ್ ಕಂಟ್ರೋಲರಾಫೀಸಿನ ಕ್ಲಾರ್ಕಾದ ಮ|| ಗೋಪಾಲಾಚಾರ್ಯರವರ ಮಗಳು 18 ವರ್ಷ ವಯಸ್ಸಿನ ಚಂಪಕಾ ಎಂಬಾಕೆಯ ಭಂಗಾರದ ಸರಪಳಿಯನ್ನು ಅಪಹರಿಸಿದುದಕ್ಕಾಗಿ ದಂಡಿನ ಮುನ್ಸೀಫ್ ಮೆಜಿಸ್ಟ್ರೇಟರು ಗೋಪಾಲರಾಯರಿಗೆ 6 ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಕಳೆದ ಆಗಸ್ಟ್ ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿನ ದೇವಾಲಯಗಳನ್ನು ಅಪವಿತ್ರಮಾಡಿದ ಪುಂಡುಜನರನ್ನು ಪತ್ತೇಮಾಡಿ ಕೊಟ್ಟವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುವೆಂದು ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮ|| ಎ. ವಿ. ರಾಮನಾಥನ್‌ರವರು ಪ್ರಕಟಿಸಿರುತ್ತಾರೆ. ಈ ಸಂಬಂಧವಾದ ಸಮಾಚಾರವನ್ನು ಕೋಲಾರ ಡಿಸ್ಟ್ರಿಕ್ಟು ಪೋಲೀಸು ಸೂಪರಿಂಟೆಂಡೆಂಟರಿಗೆ ತಿಳಿಸಬೇಕೆಂದು ಕೋರಲ್ಪಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಡೆ|| ಕ|| ಮ|| ಜಿ.ಬಿ. ಹೆಬ್ಬಿಕರ್ರವರು ತುಮಕೂರಿಗೆ ವರ್ಗಮಾಡಲ್ಪಟ್ಟಿರುವರು. ಎಕ್ಸೈಜ್ ಕಮಿಷನರಾಗಿ ಬದಲಿ ನೋಡುತ್ತಿದ್ದ ಮೆ|| ಸಯ್ಯದ್ ಟಾಜ್ ಪೀರಾನ್ ಸಾಹೇಬರು ಬೆಂಗಳೂರು ಡಿಸ್ಟ್ರಿಕ್ಟಿನ ಡೆ|| ಕ|| ರಾಗಿ ನಿಯಮಿಸಲ್ಪಟ್ಟಿರುವರು. ಮ|| ಹೆಬ್ಬಿಕರ್ರವರ ವರ್ಗವು ಬೆಂಗಳೂರು ಗಲಭೆಗೆ ಸಂಬಂಧಪಟ್ಟಿಲ್ಲವೆಂದೂ ಅವರು ಕಳೆದ ಮೂರು ವರ್ಷಗಳಿಂದಲೂ ಬೆಂಗಳೂರಿನಲ್ಲಿದ್ದುದರಿಂದ ಈಗ ಸ್ಥಳ ಬದಲಾಯಿಸಬೇಕಾಯಿತೆಂದೂ ತಿಳಿಯಬರುತ್ತದೆ.

ನಂಜನಗೂಡು ಕಪಿಲಾನದಿಯಲ್ಲಿ ಸ್ನಾನಮಾಡುತ್ತಿದ್ದ ಅಜ್ಞಣ್ಣನವರು ಮೆಟ್ಟಲಿನ ಮೇಲೆ ಇಟ್ಟಿದ್ದ 200 ರೂಪಾಯಿಗಳನ್ನು ಕಳುವುಮಾಡಿದ್ದ ಒಬ್ಬ ಹುಡುಗನಿಂದ ನಂಜನಗೂಡಿನ ಪೋಲೀಸು ಸಬ್ ಇನ್ಸ್‌ಪೆಕ್ಟರ್ ಎ. ಜಿ. ಲಿಂಗಯ್ಯನು ಅಪಹರಿಸಿ, ನಂಬಿಕೆಗೆ ದ್ರೋಹಮಾಡಿದನೆಂಬ ಅಪರಾಧಕ್ಕಾಗಿ ನಂಜನಗೂಡಿನ ಸ್ಪೆಷಲ್ ಮೇಜಿಸ್ಟ್ರೇಟರಿಂದ ವಿಚಾರಣೆಗೊಂಡು 3 ತಿಂಗಳು ಕಾರಾಗೃಹವಾಸವನ್ನೂ 300 ರೂಪಾಯಿಗಳ ದಂಡವನ್ನೂ ವಿಧಿಸಲ್ಪಟ್ಟನು.

ಕೋಲಾರ ಚಿನ್ನದ ಗಣಿಗಳ ಪೈಕಿ ಮೈಸೂರ್ ಮೈನ್ ಗಣಿಯ ಎಡ್ಗರ್ ಷಾಫ್ಟ್ ಎಂಬ ಶಾಖೆಯಲ್ಲಿ ಕಳೆದ ಶನಿವಾರ ಸಾಯಂಕಾಲ ಕೆಲಸ ಮಾಡುತ್ತಿದ್ದ 15 ಮಂದಿ ಕೂಲಿ ಆಳುಗಳ ಮೇಲೆ ಕಲ್ಲು ಸಿಡಿತವೆಂಬ ಕಂಪನವುಂಟಾಗಿ ಕಲ್ಲುಮಣ್ಣು ಅಪಾರವಾಗಿ ಕಳಚಿ ಬಿದ್ದು ಆ ಪೈಕಿ ಒಂಭತ್ತು ಮಂದಿ ಕೆಳಗೆ ಸಿಕ್ಕಿ ಆಕಸ್ಮಿಕ ಮರಣ ಹೊಂದಿದರೆಂದು ಕೇಳಿ ವಿಷಾದಿಸುತ್ತೇವೆ. ಈ ಕಲ್ಲು ಸಿಡಿತವೆಂಬುವುದು ಗಣಿಯೊಳಗೆ ಹುಟ್ಟಲು ಕಾರಣವೇನೆಂಬುದು ಇದುವರೆಗೆ ಯಾರಿಗೂ [illegible]ಯದೆ ಹೋಗಿದೆ. ಅದು ಸಿಡಿದಾಗ ಮಹಾಶಬ್ದವಾಗುವು[illegible] ಭೂಮಿಯೂ ನಡುಗಿ ಹೋಗುತ್ತದೆ.

ಹೈದರಾಬಾದು ಸಂಸ್ಥಾನಾಧೀಶ್ವರರಾದ ನೈಜಾಮರವರು ನಮ್ಮ ಶ್ರೀಮನ್ಮಹಾರಾಜರವರಿಂದಾಹ್ವಾನಿಸಲ್ಪಟ್ಟು ಈ ತಿಂಗಳ ಮೂರನೆಯ ವಾರದಲ್ಲಿ ರಾಜಧಾನಿಗೆ ಬರುವರೆಂದು ಕೆಲವರೂ ಮುಂದೆ ಬರುವ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ಬರುವರೆಂದು ಮತ್ತೆ ಕೆಲವರೂ ಹೇಳುತ್ತಿರುವರು. ನೈಜಾಂರವರು ನಮ್ಮ ಸಂಸ್ಥಾನಕ್ಕೆ ಬರುವುದು ಇದೇ ಮೊದಲಾದುದರಿಂದ ಅವರ ಅಂತಸ್ತಿಗೆ ತಕ್ಕ ಸ್ವಾಗತದೇರ್ಪಾಟು ನಡೆಯಬೇಕಾಗಿರುತ್ತದೆ. ಅಂತಹ ಏರ್ಪಾಟೇನೂ ಈವರೆಗೆ ನಡೆಯದಿರುವುದರಿಂದ ಅವರು ಸದ್ಯದಲ್ಲಿ ಬರುವುದು ಸಂಶಯವೆಂದೇ ಹೇಳಬಹುದಾಗಿದೆ.

ಮುಂದಿನ ಜೂನ್ ತಿಂಗಳು 10 ನೇ ತಾ|| ಸುಮಾರಿಗೆ ನಡೆಸಲ್ಪಡುವ ಪ್ರಜಾಪ್ರತಿನಿಧಿಸಭೆಯ ಆಯವ್ಯಯದ ಅಧಿವೇಶನಕ್ಕೆ ಸದಸ್ಯರು ನಿರ್ಧಾರಗಳನ್ನೂ ಅರಿಕೆಗಳನ್ನೂ ಪ್ರಶ್ನೆಗಳನ್ನೂ ಏಪ್ರಿಲ್ ತಿಂಗಳು 8 ನೇ ತಾ|| ಒಳಗಾಗಿ ಡೆಪ್ಯುಟಿಕಮಿಷನರಿಗೆ ಕಳುಹಿಸಬೇಕೆಂದೂ ಈ ವಿಷಯಗಳನ್ನು ಚುನಾಯಿಸುವ ಬಗ್ಗೆ ಡಿಸ್ಟ್ರಿಕ್ಟ್ ಪ್ರತಿನಿಧಿಗಳ ಮೀಟಿಂಗನ್ನು ಡೆಪ್ಯುಟಿ ಕಮಿಷನರುಗಳು ಏಪ್ರಿಲ್ ತಿಂಗಳು 19 ನೇ ತಾ|| ಒಳಗಾಗಿ ನಡಿಸಿ, ಚುನಾಯಿಸಲ್ಪಟ್ಟ ವಿಷಯಗಳನ್ನು ಏಪ್ರಿಲ್ 27 ನೇ ತಾ|| ಒಳಗಾಗಿ ಪ್ರಜಾಪ್ರತಿನಿಧಿಸಭೆಯ ಸೆಕ್ರೆಟರಿ ಸಾಹೇಬರಿಗೆ ತಲಪುವಂತೆ ರವಾನಿಸಬೇಕೆಂದೂ ಸರ್ಕಾರದವರು ಪ್ರಕಟಿಸಿರುತ್ತಾರೆ.

ಮೈಸೂರು ಸ್ಟಾರ್ ಪತ್ರಿಕಾ ಸಂಪಾದಕರ ಮೇಲೆ ಮ|| ಆರ್. ಗೋಪಾಲಸ್ವಾಮಯ್ಯರ್‌ರವರು ಬೆಂಗಳೂರು ಸಿಟಿ ಫಸ್ಟ್‌ಕ್ಲಾಸ್ ಬೆಂಚ್ ಮೆಜಿಸ್ಟ್ರೇಟರುಗಳ ಕೋರ್ಟಿನಲ್ಲಿ ಮಾಡಿರುವ ಮಾನನಷ್ಟದ ವಿವಾದವು ಕಳೆದ ತಾ|| 27 ನೇ ಶುಕ್ರವಾರ ವಿಚಾರಣೆಗೆ ಬಂದು ಫಿರ್ಯಾದಿಪರ ಒಂದನೇ ಸಾಕ್ಷಿಯ ಪಾಟಿಸವಾಲು ನಡೆದು ಆ ದಿವಸ ಮುಗಿಯದಿದ್ದುದರಿಂದ ಈ ತಾ|| 13 ಕ್ಕೆ ಮುಂದುವರಿಸಲ್ಪಟ್ಟಿತು. ಮ|| ಎನ್. ವೈ. ಪಿಸ್ಸೆಯವರೂ, ಉದ್ಯೋಗದಿಂದ ನಿವೃತ್ತನಾದ ಓರ್ವ ಉಪಾಧ್ಯಾಯನೂ ಮಾಡಿರುವ ವಿವಾದಗಳು, ಉಭಯ ಫಿರ್ಯಾದಿಗಳು ತಾ|| 27 ರಲ್ಲಿ ಕೋರ್ಟಿಗೆ ಬರಲಿಲ್ಲವಾಗಿ ಇದೇ ತಾ|| 13 ಕ್ಕೆ ವಿಚಾರಣೆಗಿಡಲ್ಪಟ್ಟುವು.

ಬೆಂಗಳೂರು ದಂಡಿನಲ್ಲಿ ಮಕ್ಕಳುಗಳನ್ನು ಕೆಲ ಭಿಕ್ಷುಕರುಗಳು ಹಿಡಿದುಕೊಂಡು ಹೋಗುತ್ತಾರೆಂಬ ಸುದ್ದಿಯು ಜನ

ಜನರು ಭಯಭ್ರಾಂತರಾಗಿದ್ದರಾದರೂ ಅದರಿಂದ ಯಾವ ವಿಧವಾದ ಅನಾಹುತವು ನಡೆಯಲಿಲ್ಲ. ಆದರೆ ಬೆಂಗಳೂರು ಸಿಟಿಯಲ್ಲೂ ಈ ಸುದ್ದಿಯು ಜನಜನಿತವಾಗಿ ಹರಡಿ ನಿಲುವಂಗಿಯನ್ನು ತೊಟ್ಟು ಜೋಳಿಗೆ ದಂಡಗಳನ್ನು ಹಿಡಿದಿರುವ ಭಿಕ್ಷುಕರನ್ನು ಅನುಮಾನಿಸಿ ಅವರಮೇಲೆ ಬಿದ್ದು ಅತ್ಯಾಚಾರವನ್ನು ನಡೆಯಿಸಿದರಲ್ಲದೆ ಅವರುಗಳನ್ನು ಬಿಡಿಸಿ ಗದ್ದಲವನ್ನು ಸಮಾಧಾನ ಪಡಿಸಲು ಬಂದ ಪೋಲೀಸಿನವರನ್ನೂ ಪ್ರಹರಿಸಿದರು. ಈ ರೀತಿಯಾಗಿ ಅತ್ಯಾಚಾರ ನಡೆಯಿಸಿದ ಕೆಲ ಜನರು ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಕಳೆದ ಜುಲೈ ತಾ|| 30 ರಲ್ಲಿ ಅಥವಾ ಅದರಿಂದೀಚೆಗೆ ಸತ್ಯನಾರಾಯಣನೆಂಬವನು ಅನುಮಾನಾಸ್ಪದವಾದ ಪರಿಸ್ಥಿತಿಯಲ್ಲಿ ಮರಣ ಹೊಂದಿದನೆಂದು 1928ನೇ ಡಿಸೆಂಬರ್ ತಾರೀಖು 11 ರ ಮೈಸೂರು ಪೇಟ್ರಿಯಟ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಈ ಸಂಬಂಧವಾಗಿ ಪೋಲೀಸಿನವರು ವಿಚಾರ ಮಾಡಿದುದರಲ್ಲಿ, ಆದಿದ್ರಾವಿಡನಾದ ನಟೇಶನ್ ಎಂಬವನ ಕೂಡ ವಾಸಮಾಡುತ್ತಿದ್ದ ಸತ್ಯನಾರಾಯಣನೆಂಬ ಹುಡುಗನು 1928 ನೇ ಏಪ್ರಿಲ್ ತಿಂಗಳಲ್ಲಿ ನಡೆದ ಕರಗದ ಹಬ್ಬಕ್ಕೆ ಕೊಂಚ ದಿವಸಗಳ ಹಿಂದೆ ರಕ್ತಾತಿಸಾರದಿಂದ ಸತ್ತನೆಂದೂ, ಅವನ ಶವಸಂಸ್ಕಾರದಲ್ಲಿ ಗಂಗಮ್ಮಚೆರ್‍ರಿಯ ವಾಸಸ್ಥರಾದ ಅನೇಕ ಜನರು ಭಾಗಿಗಳಾಗಿದ್ದರೆಂದೂ ವ್ಯಕ್ತಪಟ್ಟಿರುತ್ತದೆ. ಆ ಹುಡುಗನು 1928 ನೇ ಜುಲೈ ತಾ|| 30 ರ ಬಹಳ ದಿನಗಳ ಹಿಂದೆಯೇ ಸ್ವಭಾವಕಾರಣದಿಂದ ಮಡಿದನು ಎಂದು ಪಬ್ಲಿಸಿಟಿ ಆಫೀಸರು ತಿಳಿಸಿರುತ್ತಾರೆ.

ತಲಕಾಡಿನ ಬಳಿ ಮುಡುಕತೊರೆಯಲ್ಲಿ ಪದ್ಧತಿಯಂತೆ ಕಳೆದ ತಾ|| 15 ರಿಂದ ರಥೋತ್ಸವವೂ ದನಗಳ ಜಾತ್ರೆಯೂ ನೆರವೇರಿದುವು. ಆ ಮಧ್ಯೆ ಅಂದರೆ ತಾ|| 23 ನೇ ಶನಿವಾರ ಸುಮಾರು 1 ಘಂಟೆ ರಾತ್ರಿ ಹೊತ್ತಿನಲ್ಲಿ ಸುಬ್ಬರಾಯರ ಹೋಟಲಿನ ಚಪ್ಪರದಲ್ಲಿ ಬೆಂಕಿ ಕಾಣಿಸಿಕೊಂಡು ಬಹುಬೇಗನೆ ಸುತ್ತಮುತ್ತಲಿದ್ದ ವರ್ತಕರ ಅಂಗಡಿಗಳಿಗೆ ವ್ಯಾಪನೆಯಾಗಿ ಸುಮಾರು 35 ಅಂಗಡಿಗಳು ವ್ಯಾಪಾರ ಪದಾರ್ಥಗಳ ಸಮೇತ ಉರಿದುಹೋದವು. ಇದರಿಂದ ಸುಮಾರು 70 ಸಾವಿರ ರೂಪಾಯಿ ತನಕ ನಷ್ಟವಾಯಿತೆಂದು ಕೇಳುತ್ತೇವೆ. ಡೆಪ್ಯುಟಿ ಕಮಿಷನರು, ಪೋಲೀಸ್ ಸೂಪರಿಂಟೆಂಡೆಂಟರು, ಸಬ್‌-ಡಿವಿಜನ್ ಆಫೀಸರು, ಅಮಲ್ದಾರರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ಖಾಸಗಿ ಪ್ರಜೆಗಳೂ ಏಕವಾಗಿ ಸಾಹಸಪಟ್ಟು ಬೆಂಕಿಯನ್ನು ಶಮನಮಾಡಿದರೆಂದು ತಿಳಿಯಬರುವುದು. ಇದರಲ್ಲಿ ಪ್ರಾಣನಷ್ಟವೇನೂ ಆಗಲಿಲ್ಲವೆಂದು ಕೇಳಿ ಸಂತೋಷಪಡುತ್ತೇವೆ.

ಬೆಂಗಳೂರು ಸಿಟಿಯಲ್ಲಿ ಫಲಸರ್ಕು ವ್ಯಾಪಾರಿಗಳಾದವ ಪಾಪಣ್ಣನವರ ದ್ವಿತೀಯ ಕುಮಾರರು ಮ|| ಪಿ. ಎ. ಕೈರಪ್ಪನವರು ತಮ್ಮ ಜ್ಯೇಷ್ಠ ಪುತ್ರಿ ಚಿ|| ಸೌ|| ಶಾರದಾಂಬೆಯನ್ನು ಕೋಲಾರದ ಮ|| ಡಿ. ನಂಜುಂಡಪ್ಪನವರ ಕುಮಾರ ಮ|| ಚೆನ್ನಬಸಪ್ಪನವರಿಗೆ ಕೊಟ್ಟು ಕಳೆದ ತಾ|| 22 ರಲ್ಲಿ ಬಹಳ ವಿಜೃಂಭಣೆಯಿಂದಲೂ, ವಿಚಕ್ಷಣೆಯಿಂದಲೂ ವಿವಾಹಮಹೋತ್ಸವವನ್ನು ನಡಿಸಿದರು. ಪರಸ್ಥಳಗಳಿಂದ ನೂರಾರು ಮಂದಿ ಬಂಧುಮಿತ್ರರುಗಳು ಬಂದಿದ್ದರಲ್ಲದೆ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಚೀಫ್ ಜಡ್ಜಿಯವರಾಗಿದ್ದ ದಿವಾನ್ ಬಹದ್ದೂರ್ ಕೆ. ಎಸ್. ಚಂದ್ರಶೇಖರಯ್ಯರ್‌ರವರು, ಲಾ ಸೆಕ್ರೆಟರಿ ಮ|| ಪಿ. ಮಹದೇವಯ್ಯನವರು, ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ. ಎಚ್. ರಾಮಯ್ಯನವರು ಮೊದಲಾದ ಸರ್ಕಾರಿಯಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಲಾಯರುಗಳೂ, ವರ್ತಕರುಗಳೂ ಆಹ್ವಾನಿಸಲ್ಪಟ್ಟಿದ್ದು ಸಂಗೀತಶ್ರವಣದಿಂದಲೂ, ಗಂಧಪುಷ್ಪ ಫಲತಾಂಬೂಲ ವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು.

ಅ|| ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಎಂ. ಸಿ. ಮರಿಯಪ್ಪನವರು ಮ|| ವಿ. ಎಸ್. ಸಂಜೀವರಾಯರ ಮೇಲೆ ಮಾಡಿರುವ ಮೊಕದ್ದಮೆಯು 26 ನೇ ತಾರೀಖಿನ ದಿನ ವಿಚಾರಣೆಗೆ ಬಂದು ಫಿರ್ಯಾದಿಪರ ಐದು ಜನರ ಸಾಕ್ಷಿ ವಿಚಾರಣೆ ನಡೆಯಿತು. ಮ|| ಮರಿಯಪ್ಪನವರು ತಾ|| 17-7-28ಕ್ಕೆ ಸುಲ್ತಾನಪೇಟೆಯ ಶಾಲೆಯಲ್ಲಿ ಜರುಗಿದ ಗಣಪತಿ ಪೂಜೆಗೆ ಪ್ರವೇಶವು ಟೀಕೀಟ್ ಮೂಲಕ ಇತ್ತೆಂದೂ, ಮ|| ಸಂಜೀವರಾಯರು ಟಿಕೀಟಿಲ್ಲದೆ ಒಳಗೆ ಬಂದಾಗ ತಾವು ಅವರನ್ನು ಹೊರಗೆ ಕರತಂದು ಸಬ್ ಇನ್‌ಸ್ಪೆಕ್ಟರ್ ಬಸಪ್ಪನವರ ವಶಪಡಿಸಿದೆನೆಂದೂ, ಅವರು ಪುನಃ ಬಾಗಿಲಬಳಿ ಬಂದರೆಂದೂ, ಆಗ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸರು ಒಳಗೆ ಬಿಟ್ಟರೆಂದೂ ಮ|| ಸಂಜೀವರಾಯರು ಗೇಟನ್ನು ನೂಕಿಕೊಂಡು ಒಳಗೆ ಬಂದರಾದುದರಿಂದ ಸೆಕ್ಷನ್ 353, 186 ಮತ್ತು 188 ಸಿ. ಪಿ. ಸಿ. ಪ್ರಕಾರ ಮೊಖದ್ದಮೆನಡಿಸಲು ಕಾರಣವಾಯಿತೆಂದೂ ತಿಳಿಸಿದರು. ಅನಂತರ ಅವರು 3 ರಿಕಾರ್ಡುಗಳನ್ನು ತೋರಿಸಿದರು. ಅವುಗಳಲ್ಲಿ ಒಂದು ತಾ|| 16-9-28 ರಲ್ಲು ಡಿಸ್ಟ್ರಿಕ್ಟ್ ವಿದ್ಯಾಇಲಾ[illegible]ಯ ಆಫೀಸರು ಡಿ. ಎಸ್. ಪಿ. ಯವರಿಗೆ ಬರದ ಕಾಗದವು. [illegible]ದರಲ್ಲಿ ಹೀಗಿತ್ತು—"ನಾನು ಈ ಮೂಲಕ 500 ಟಿಕೀಟುಗ[illegible] ಕಳುಹಿಸಿದ್ದೇನೆ. ಅವನ್ನು ಪತ್ರಿಕಾ ಪ್ರತಿನಿಧಿಗಳಿಗೂ [illegible]ಜಕ ಗೃಹಸ್ಥರಿಗೂ ಕೊಡಿರಿ. ಅಲ್ಲದೆ ಮ|| ಟಿ. ಬಿ. ಕೃಷ್ಣರಾವ್, ಕಂಟ್ರಾಕ್ಟರ್ ಇವರಿಗೆ 36 ಟಿಕೀಟುಗಳು ಬೇಕಂತೆ. ಅವನ್ನು ಕೊಡುವುದು ಅಥವಾ ಕೊಡದಿರುವುದು ನಿಮ್ಮ ಇಷ್ಟ." ಫಿರ್ಯಾದಿಪರ ಇನ್ನೂ ನಾಲ್ಕು ಸಾಕ್ಷಿಗಳ ವಿಚಾರಣೆಯಾದಮೇಲೆ ಮೊಕದ್ದಮೆಯು ಮಾರ್ಚಿ 19 ಕ್ಕೆ ಮುಂದುವರಿಸಲ್ಪಟ್ಟಿತು.

ಭರತಖಂಡದ ವೃತ್ತಾಂತಗಳು

ಕಳೆದ ಜನವರಿ ತಿಂಗಳು ಬೆಂಗಳೂರು ಮೆಯಿಲ್ ಗಾಡಿಯಲ್ಲಿ ರಾಜಮ್ಮಾಳ್ ಎಂಬ ಮೇಲುಕೋಟೆಯ ಅಯ್ಯಂಗಾರ್ ಸ್ತ್ರೀಯನ್ನು ಕೊಂದು ಹಾಕಿದ ಕೊಲೆಪಾತಕನನ್ನು ಪತ್ತೇಮಾಡಿಕೊಟ್ಟವರಿಗೆ 500 ರೂ. ಗಳು ಬಹುಮಾನವಾಗಿ ಕೊಡಲ್ಪಡುವುದೆಂದು ಮದ್ರಾಸ್ ಸರ್ಕಾರದ ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟರು ಪ್ರಕಟಿಸಿರುತ್ತಾರೆ.

ಸಿಂಧು ಪ್ರಾಂತದಲ್ಲಿ ಸಂಚಾರಮಾಡಲು ಬರಬೇಕೆಂದು ಆ ದೇಶದವರು ಮಹಾತ್ಮ ಗಾಂಧಿಯವರನ್ನು ಪ್ರಾರ್ಥಿಸಿದಾಗ ಲಾಲ ಲಜಪತರಾಯರ ಸ್ಮಾರಕ ನಿಧಿಗಾಗಿ ತಮಗೆ ದಿನ ಒಂದಕ್ಕೆ 5000 ರೂ. ಫ ಯನ್ನು ಕೊಡಲೊಪ್ಪಿದರೆ ಬರುತ್ತೇವೆಂದು ಹೇಳಿ ಅವರುಗಳು ಅದಕ್ಕೊಪ್ಪಿಕೊಂಡುದರ ಮೇಲೆ ಕಳೆದ ಫೆಬ್ರವರಿ ತಾ|| 2 ರಿಂದ ತಾ|| 15 ರ ವರೆಗೆ ಆ ಪ್ರಾಂತದಲ್ಲಿ ಸಂಚರಿಸಲಾಗಿ ಮಹಾತ್ಮರು ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿ ಅಂದರೆ 76,662-9-11 ಪೈ ಫ ಶೇಖರವಾಯಿತಂತೆ.

ಬಂಗಾಳದಲ್ಲಿ ಮಂತ್ರಿಗಳಾಗಿದ್ದ ನವಾಬ್ ಮುಷರಾಫ್ ಹುಸೇನ್‌ರವರು ಲಂಚ ರುಷುವತ್ತನ್ನು ತೆಗೆದುಕೊಂಡರೆಂಬ ಅಪವಾದನೆಯ ಮೇಲೆ ಬಂಗಾಳದ ಕಾಯಿದೆ ಸಭೆಯವರು ಮೊನ್ನೆ ಸಭೆಯಲ್ಲಿ ತಮಗೆ ಮಂತ್ರಿಗಳಲ್ಲಿ ವಿಶ್ವಾಸವಿಲ್ಲವೆಂದು ಬಹುಮತದಿಂದ ನಿರ್ಧಾರ ಮಾಡಿದರು. ನವಾಬರೊಡನೆ ಮಂತ್ರಿಗಳಾಗಿ ಕೆಲಸ ಮಾಡಿದ ನಾಶಿಪುರದ ರಾಜರವರು ಸಹ ನಿಂದೆಗೆ ಗುರಿಯಾದರು. ಅವರೀರ್ವರೂ ಪದವಿ ತ್ಯಾಗಮಾಡಬೇಕಾಯಿತು. ಈ ಸಂಬಂಧದಲ್ಲಿ ಸಭೆಯ ಮುಂದಾಳುಗಳು ಅತಿ ಉಗ್ರಭಾಷಣಗಳನ್ನು ಮಾಡಿ ದ್ವಂದ್ವ ಸರ್ಕಾರದಿಂದಾಗುವ ದುಷ್ಪರಿಣಾಮವನ್ನು ವಿಶದಪಡಿಸಿದರು.

ಬೊಂಬಾಯಿ ನಗರದಲ್ಲಿ ಗತಿಸಿದ ಮೆ|| ಮಹಮದಾಲಿ ಜಿನ್ನರವರ ಪತ್ನಿಯ ಉತ್ತರಕ್ರಿಯೆಯು ಮುಸಲ್ಮಾನ ಸ್ಮಶಾನದಲ್ಲಿ ನಡೆಯಿತು. ರತಿಬಾಯಿ ಜಿನ್ನಾರವರು ಜನ್ಮತಃ ಪಾರ್ಸಿಗಳಾದಾಗ್ಯೂ ವಿವಾಹಿತರಾದ ಮೇಲೆ ಮಹಮ್ಮದೀಯ ಮತವನ್ನವಲಂಬಿಸಿದರು. ಆದಕಾರಣ ಶವವು ಹೂಳಲ್ಪಟ್ಟಿತು. ಪಾರ್ಸಿಗಳಾಗಿದ್ದ ಪಕ್ಷದಲ್ಲಿ ಅವರ ಮತಾನುಸಾರ ಶವವನ್ನು ಎತ್ತರವಾದ ಗೋಪುರಗಳ ಮೇಲೆ ಇಟ್ಟು ಪಕ್ಷಿಗಳಿಗೆ ಆಹಾರವಾಗಿ ಕೊಡಬೇಕಾಗಿದ್ದಿತು. ರತಿಬಾಯಿ ಜಿನ್ನಾರವರು ಬೊಂಬಾಯಿಯ ಸ್ತ್ರೀಸಮಾಜದಲ್ಲಿ ಮುಂದಾಳಾಗಿದ್ದುದರಿಂದ ಸಕಲ ಕೋಮಿನ ಸ್ತ್ರೀಯರೂ ಕಳೇಬರದೊಡನೆ ಶ್ಮಶಾನಕ್ಕೆ ಹೋಗಿ ತಮಗೆ ಮೃತಳಲ್ಲಿದ್ದ ಗೌರವವನ್ನೂ, ವಿಶ್ವಾಸವನ್ನೂ ಪ್ರದರ್ಶಿಸಿದರು. ಮೆ|| ಜಿನ್ನಾರವರು ಸುಪ್ರಸಿದ್ಧ (ಬ್ಯಾರಿಸ್ಟರ್) ವಕೀಲರಾದುದರಿಂದ ಬೊಂಬಾಯಿನ ವಕೀಲರುಗಳೆಲ್ಲರೂ ತಮ್ಮ ಅನುತಾಪವನ್ನು ಸೂಚಿಸುವುದಕ್ಕಾಗಿ ನೆರೆದಿದ್ದರು.

ಮದರಾಸಿಗೆ ಸೈಮನ್ ಸಮಿತಿಯವರು ಬಂದ ದಿನ ಅಲ್ಲಿನ ರಾಷ್ಟ್ರೀಯ ಮುಂದಾಳುಗಳು ಊರಿನಲ್ಲೆಲ್ಲಾ ಹರತಾಳವನ್ನಾಚರಿಸಿ ಸೈಮನರಿಗೆ ಬಹಿಷ್ಕಾರ ಹಾಕಿದರು. ಆ ದಿನ ಅಲ್ಲಿನ ಶಾಲೆಗಳ ವಿದ್ಯಾರ್ಥಿಗಳೂ ಶಾಲೆಗೆ ಹೋಗದೆ ರಾಷ್ಟ್ರೀಯ ಅಭಿಮತದಲ್ಲಿ ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಿದರು. ನ್ಯಾಯಶಾಲೆಯ ಮುಖ್ಯೋಪಾಧ್ಯಾಯರಾದ ರತ್ನಸ್ವಾಮಿಯವರು ಆದಿನ ಶಾಲೆಗೆ ಹೋಗದಿದ್ದ ವಿದ್ಯಾರ್ಥಿಗಳನ್ನು ಹೊರೆಹಾಕಿರುವರು. ಇದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳೆಲ್ಲರೂ ಮುಷ್ಕರಹಿಡಿಯುವ ಯೋಚನೆ ಮಾಡುತ್ತಿರುವರು. ಹಾಗೆ ಮಾಡಿದರೆ ಅಂತಹ ವಿದ್ಯಾರ್ಥಿಗಳೆಲ್ಲರನ್ನೂ ಹೊರದೂಡುವುದಾಗಿ ಮುಖ್ಯೋಪಾಧ್ಯಾಯರು ಪ್ರಕಟಿಸಿರುತ್ತಾರೆ. ಇವರ ವರ್ತನೆಯನ್ನು ಸರ್ಕಾರದ ವಿದ್ಯಾಶಾಖೆಯ ಅಧಿಕಾರಿಗಳು ಅನುಮೋದಿಸಿರುವರು. ಗುಜರಾತ್ ಕಾಲೇಜಿನ ಮುಷ್ಕರದ ಸಂಬಂಧದಲ್ಲಿಯೂ ಬೊಂಬಾಯಿ ಸರ್ಕಾರದವರು ಮೊದಲು ಹೀಗೆಯೇ ವರ್ತಿಸಿ ವಿದ್ಯಾರ್ಥಿಗಳು ಏಕಮತ್ಯದಿಂದ ಸತ್ಯಾಗ್ರಹವನ್ನಾಚರಿಸಲು ಅಂತ್ಯದಲ್ಲಿ ಸರ್ಕಾರದವರು ತಮ್ಮ ಆಜ್ಞೆಯನ್ನು ಬದಲಾಯಿಸಬೇಕಾಗಿ ಬಂದಿತು. ಈಗಲೂ ಮದರಾಸಿನಲ್ಲಿ ವಿದ್ಯಾರ್ಥಿಗಳು ಹೇಗೆ ವರ್ತಿಸುವರೊ ನೋಡಬೇಕು.

ವಿದೇಶದ ವೃತ್ತಾಂತಗಳು.

ಗ್ರೇಟ್ ಬ್ರಿಟನ್ನಿನಲ್ಲಿ ತಾ|| 18 ರ ವರೆಗೆ 1,45,000 ಮಂದಿ ಉದ್ಯೋಗವಿಲ್ಲದಿದ್ದರು. ಇದರ ಹಿಂದಿನ ವಾರಕ್ಕಿಂತ ಈ ವಾರದಲ್ಲಿ 1,15,495 ಜನರು ಹೆಚ್ಚು. ಈ ವಾರದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಲು ಮಂಜಿನಾಧಿಕ್ಯವೇ ಕಾರಣವು.

1924 ರಲ್ಲಿ ಪಾರ್ಲಮೆಂಟು ಸಭೆಯಾರಂಭವಾದಂದಿನಿಂದೀವರೆಗೆ 28 ಮಂದಿ ಸಭ್ಯರು ಸತ್ತುಹೋಗಿರುವರು. ಕನ್‌ಸರ್ವೆಟಿವ್ ಪಕ್ಷದ ಮೆಂಬರಾದ ಜ್ಯಾಕುಬರವರು ಗತಿಸಿದರು. ಕಳೆದ ತಿಂಗಳೊಂದರಲ್ಲಿ ಐವರು ಸಭ್ಯರು ಮೃತಿಹೊಂದಿರುತ್ತಾರೆ.

ಚಕ್ರವರ್ತಿಯವರು ವರ್ತಮಾನ ಪತ್ರಿಕೆಗಳನ್ನು ಸ್ವತಃ ಓದುತ್ತಾರೆ. ಉಡುಪುಗಳನ್ನು ಸ್ವತಃ ಧರಿಸಿಕೊಳ್ಳುತ್ತಾರೆ. ಯಥಾಪ್ರಕಾರ ಆಹಾರವನ್ನು ತೆಗೆದುಕೊಳ್ಳುತ್ತಾರೆ. ದೇಶೀಯ ಅಂತರ್ಜಾತೀಯ ವ್ಯವಹಾರಗಳನ್ನು ಆಲೋಚಿಸಲು ಪುನಃ ಆರಂಭಿಸಿರುವರು.

ತುರ್ಕಿ ದೇಶದ ನಾವಿಕಾಧಿಕಾರಿಯಾಗಿದ್ದ ಎಬೂಲ್ ಖಾಸೀಂ ಎಂಬಾತನು ಕೆಲವು ನಾವಿಕ ಗುಟ್ಟುಗಳನ್ನು ಬಯಲಿಗೆ ಹಾಕಿದನೆಂಬ ಅಪರಾಧಕ್ಕಾಗಿ ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟಿರುತ್ತಾನೆ. ಅವನಲ್ಲಿದ್ದ ಕೆಲವು ಗೂಢವಾದ ಸರ್ಕಾರಿ ಕಾಗದ ಪತ್ರಗಳು ಸಿಕ್ಕಿವೆ.

ಯುದ್ಧ ಕಾರ್ಯಾಲಯವೆಂಬ ಹೆಸರನ್ನು ತೆಗೆದು ಸೈನಿಕ ರಕ್ಷಣ ಕಾರ್ಯಾಲಯವೆಂದೂ, ಯುದ್ಧ ಮಂತ್ರಿ ಎಂಬ ಹೆಸರನ್ನು ತೆಗೆದು ಸೈನಿಕ ರಕ್ಷಕ ಮಂತ್ರಿ ಎಂದೂ ಕರೆಯಬೇಕೆಂದು ಒಂದು ನಿರ್ಧಾರವನ್ನು ಐವರು ಕನ್ಸರ್ವೆಟಿವ್ ಸಭ್ಯರುಗಳು ಪಾರ್ಲಮೆಂಟ್ ಸಭೆಯಲ್ಲಿ ಪ್ರವೇಶಗೊಳಿಸಿರುವರು.

ಪೋಲೆಂಡಿನಲ್ಲಿ ಶೈತ್ಯಾಧಿಕ್ಯದಿಂದ ರೈಲ್ವೇ ಇಲಾಖೆಯವರಿಗೂ ಮತ್ತು ಕಲ್ಲಿದ್ದಲಿನ ಗಣಿಗಳಿಗೂ ಹತ್ತು ಲಕ್ಷ ಪೌಂಡುಗಳ ನಷ್ಟವುಂಟಾಗಿದೆ. ಕಪ್ಪುಸಮುದ್ರವು ಹೆಪ್ಪುಗಟ್ಟಿಕೊಂಡಿರುವುದರಿಂದ ಅಲ್ಲಿ ಹಡಗುಗಳ ಸಂಚಾರವು ನಿಲ್ಲಿಸಲ್ಪಟ್ಟಿರುತ್ತೆ. ಡ್ಯಾನ್ಯೂಬ್ ನದಿಯಲ್ಲಿ 9 ಅಡಿಗಳೆತ್ತರಕ್ಕೆ ಮಂಜಿನಗಡ್ಡೆಗಳು ಕವಿದುಕೊಂಡಿವೆ. ಒಟ್ಟಿನಲ್ಲಿ ಶೈತ್ಯಾಧಿಕ್ಯದಿಂದ ಅಪಾರವಾದ ನಷ್ಟ ಕಷ್ಟಗಳು ಸಂಭವಿಸಿವೆ.

ಕಾಬೂಲಿನಲ್ಲಿದ್ದ ಬ್ರಿಟಿಷ್ ರಾಯಭಾರಿಯು ಕಾಬೂಲನ್ನು ಸಂಪೂರ್ಣವಾಗಿ ಬಿಟ್ಟು ಸ್ವದೇಶಾಭಿಮುಖವಾಗಿ ಹೊರಟರು. ಬಾಚ-ಇ-ಸಾಕೋವು ಪೆಷಾವರಿನಲ್ಲಿರುವ ಅಫ್ಘನ್ ವರ್ತಕ ಸಂಸ್ಥೆಯ ಏಜಂಟರ ಬಳಿ ಇರುವ 30 ಲಕ್ಷ ರೂ. ಗಳನ್ನು ತನಗೆ ಕೊಟ್ಟು ಬಿಡಬೇಕೆಂದು ನೋಟೀಸ್ ಕೊಟ್ಟಿರುತ್ತಾನೆ. ಅಮಾನುಲ್ಲಾ ರಾಜರು ರಂಜಾನ್ ಪೂರೈಸಿದನಂತರ ಕಾಬೂಲಿಗೆ ಮುತ್ತಿಗೆ ಹಾಕಲು ತಕ್ಕ ಸನ್ನಾಹಗಳನ್ನು ಮಾಡುತ್ತಿರುವರು. ಕಾಬೂಲಿನಲ್ಲಿ ಜೀರ್ಗಾ ಸಭೆಯನ್ನು ನಡಿಸಲು ಚುರುಕಾಗಿ ಪ್ರಯತ್ನಗಳು ನಡಿಸಲ್ಪಡುತ್ತವೆ.

ಶ್ರೀ|| ಸಂಜೀವಯ್ಯನವರ ವಿಚಾರದಲ್ಲಿ ಸರ್ ವಿಶ್ವೇಶ್ವರಯ್ಯನವರ ಅಭಿಪ್ರಾಯ.

ಶ್ರೀ|| ನೀಲಗಿರಿ ಜಿ. ಸಂಜೀವಯ್ಯನವರ ಪರ ವಕೀಲರು ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಕೊಟ್ಟಿದ್ದ ನೋಟೀಸಿಗೆ ಸರ್. ಎಂ. ವಿಶ್ವೇಶ್ವರಯ್ಯನವರು ಈ ಕೆಳಗೆ ಕಂಡಂತೆ ಉತ್ತರವನ್ನು ಶ್ರೀ|| ಸಂಜೀವಯ್ಯನವರ ವಕೀಲರಿಗೆ ಕಳುಹಿಸಿರುವರು.

"ನೀವು 1929 ನೆ ಫೆಬ್ರವರಿ 8 ನೇ ತಾರೀಖಿನ ದಿನ ಬೆಂಗಳೂರು ವಿಳಾಸಕ್ಕೆ ನನಗೆ ಬರೆದಿದ್ದ ಕಾಗದವು ನಿನ್ನೆದಿನ ಬೊಂಬಾಯಿಯಲ್ಲಿ ನನ್ನ ಕೈಸೇರಿತು.

ನಿಮ್ಮ ಕಾಗದದಲ್ಲಿ ನಮೂದಾಗಿರುವ, ನಿಮ್ಮ ಕಕ್ಷಿ ಮ|| ನೀಲಗಿರಿ ಸಂಜೀವಯ್ಯನವರ ವಿಚಾರದಲ್ಲಿ ನಾನು ಅಪಮಾನಕರವಾದ ಮಾತುಗಳನ್ನಾಡಿದೆನೆಂಬುದು ನನಗೆ ತಿಳಿದಿರುವ ಮಟ್ಟಿಗೂ ತೀರಾ ಸುಳ್ಳಾದುದು. ನಿಮ್ಮ ಕಕ್ಷಿಗೂ ನನಗೂ ಯಾವ ವೈಯಕ್ತಿಕ ಸಂಬಂಧವೂ ಇಲ್ಲ. ಹೀಗಿರುವಲ್ಲಿ ನಾನು ಅವರನ್ನು ದೂಷಿಸಬೇಕಾದ ಕಾರಣವೇ ಇಲ್ಲ. "ಸುಳ್ಳುಗಾರ" ಎಂಬ ಶಬ್ದವನ್ನು ನಾನು ಉಪಯೋಗಿಸುವ ಯೋಚನೆಯನ್ನೂ ಮಾಡಿದವನಲ್ಲ; ನಿಮ್ಮ ಕಕ್ಷಿಯ ವಿಚಾರದಲ್ಲಿ ಯಾವ ದೊಡ್ಡ ಮನುಷ್ಯನೂ ಆ ರೀತಿ ಹೇಳುವುದಿಲ್ಲ.

ನಿಮ್ಮ ಕಕ್ಷಿಯ ವಿಚಾರದಲ್ಲಿ ಅಪಮಾನಕರವಾದ ಅಥವಾ ದೋಷಾರೋಪಣೆಯಾದ ಮಾತನ್ನು ನಾನೆಂದಿಗೂ ಯಾವ ಸಂದರ್ಭದಲ್ಲೂ ಉಪಯೋಗಿಸಿದೆನೆಂದು ನನಗೆ ಜ್ಞಾಪಕವಿಲ್ಲ. ಏನಾದರೂ ನಡೆದಿದ್ದರೆ, ಸಮಿತಿಯ ಮುಂದೆ ನಿಮ್ಮ ಕಕ್ಷಿಯು ಕೊಟ್ಟ ಹೇಳಿಕೆಯು ಚಾತುರ್ಯಯುಕ್ತವೂ ಸರ್ವಸಾಂಗ್ರಾಹಿಕವಾದುದೂ ಆಗಿತ್ತೆಂದು ನನಗೆ ಜ್ಞಾಪಕವಿದೆ.

ನನಗೆ ಜ್ಞಾಪಕವಿರುವಮಟ್ಟಿಗೆ, ನಾನು ನಿಮ್ಮ ಕಕ್ಷಿಯ ವಿಚಾರವಾಗಿ ಆಡಿದ ಮಾತುಗಳನ್ನಾಗಲೀ ನೀವು ಕಾಗದದಲ್ಲಿ ನಮೂದಿಸಿರುವಂತಹ ವಿಷಯಗಳನ್ನಾಗಲಿ ಸಮಿತಿಯ ಯಾವ ಸದಸ್ಯರೂ ನನ್ನ ಗಮನಕ್ಕೆ ತರಲಿಲ್ಲ.

ನಿಮ್ಮ ಕಕ್ಷಿಗೆ ಈ ವಿಷಯವನ್ನು ತಿಳಿಸಿದವರ ಹೆಸರು, ತಿಳಿಸಿದ ಕಾಲ, ಸಂದರ್ಭ, ನಾನು ಏನು ಹೇಳಿದೆನೆಂಬ ವಿಚಾರ ಇವೇ ಮೊದಲಾದ ವಿವರಗಳನ್ನು ತಿಳಿಸುವುದಾದರೆ ನಾನು ಬೆಂಗಳೂರಿಗೆ ಬರೆದು ವಿಚಾರಿಸುತ್ತೇನೆ.

(ರುಜು) ಎಂ. ವಿಶ್ವೇಶ್ವರಯ್ಯ.

ಹುಲಿಯೊ, ಇಲಿಯೊ?

ಬೆಂಗಳೂರಿನಲ್ಲಿ ಮಂಕುಬೂದಿ ಹಾಕುವವರ ಸಂಬಂಧವಾದ ಸಂಭಾಷಣೆ.

ಬಾರೂದ್ ಖಾನ್ :—ಸಲಾಂ, ಸಾಮಿ. ತೆಪ್ಪಲ್ ಚನ್ನಾಗಿದೆ. ನಿಮ್ಮವರ ಭಕ್ತಿ ಶ್ರೇಷ್ಠವಾಗ್ದೇ ಹೌದು.

ಹರಟೆಮಲ್ಲ :—ಅಲೆಕುಂಮದ್ ಸಲಾಂ! ಏನು ಸಾಬರೆ, ಎಲ್ಲಿಂದ ಬರುತ್ತಿರುವಿರಿ?

ಬಾ :—ಅದೂ ಕೇಳಬೇಕೆ! ನಾನು ಬಂದ ಮಾರ್ಗವೆ ಹೇಳುತ್ತೇ. ಇನ್ನೆಲ್ಲಿಂದ, ಎಲಹಂಕಾ ದರ್ವಾಜ ಪೊಲೀಸ್ ಸ್ಟೇಷನ್ನಿಂದ ಬಂದೆ.

ಹ :—ಅಲ್ಲೇನು ವಿಶೇಷ, ಸಾಹೇಬು. ಬೆಪ್ಪುನಾಥನು, ಬಾರೂದ್ ಖಾನ್ ಪಕ್ಕದಲ್ಲಿ ನಿಂತು, ಏನು ವಿಶೇಷವೆ! ಮಂಕುಬೂದಿ ಚಲ್ಲುವನೊಬ್ಬನನ್ನು ಹಿಡಿದರು. ನಿಮಿಷಮಾತ್ರದಲ್ಲಿ ನೂರಾರು ಜನ ಸೇರಿ ಅವನನ್ನು ಚೆನ್ನಾಗಿ ಪ್ರಹರಿಸಿದರು. ಪಾಪ, ಮುದುಕ. ಪೆಟ್ಟುತಿನ್ನಲಾರದೆ, ಅತ್ತುಕೊಂಡು, "ಮೈನವೇಜಿ, ಮೈನವೆ" ಅಂದರೂ ಬಿಡಲಿಲ್ಲ. ಇವನ ಜೊತೆಯಲ್ಲಿ ಒಬ್ಬ ಹುಡುಗ. ಅವನನ್ನು ಮಂಕುಮಾಡಿದ್ದ ಅವನು "ಏ, ಹಮಾರನಾನಾ" ಎನ್ನುತ್ತಿದ್ದ.

ಹ :—ಮಂಕುಬೂದಿಯು ಅಲ್ಲಾ, ಮಣ್ಣೂ ಅಲ್ಲ. ಎಲ್ಲಾ ಸುಳ್ಳು. ಯಾರೋ ಒಬ್ಬ ಬೇಗೆಹಚ್ಚಿದ, ಅದು ಉರಿಯುತ್ತಿದೆ. ಇಷ್ಟೇ ಅಲ್ಲದೆ ಒಬ್ಬರಿಗಿಂತೊಬ್ಬರು ವರ್ತಮಾನಗಳನ್ನು ಹೆಚ್ಚಿಸುತ್ತಲೂ ಇರುವರು. "ನರಿ, ಹುಲಿ." ಎಂಬಂತೆ ಆಗುತ್ತಿದೆ!

ಬಾ :—ಅರೆ, ಇಲ್ಲಿ ಕೇಳು. ಅಲ್ಲೆಲ್ಲೊ—ಅದೆಲ್ಲಪ್ಪ, ಉ, ಹೂ, ಬಂತುಕಾಣಪ್ಪ, ಬರೋಡೆ—ಒಂದು ದೊಡ್ಡ ಸೇತುವೆ ಕಟ್ಟುತ್ತಿರುವರಂತೆ, ಅದಕ್ಕೆ ಬೇಕಂತೆ, ನರಬಲಿ! ಇವರಿಗೆ ಸರಕಾರದವರು "ರಾದಾರಿ" ಕೊಟ್ಟಿರುವರಯ್ಯ!

ಹ :—ಬಾಯಿಮುಚ್ಚಪ್ಪ! ಬಿಲ್ಲೆಗಾರ್ರು ನೋಡಿದರೆ ಲಾಕಪ್ ಮಾಡ್ಯಾರು. ಹುಡುಗ ಹುಡುಗಿಯರನ್ನು ಬಲಿಕೊಡಲು ನಮ್ಮ ಸಮ್ಮತಿಯುಂಟು ಎಂದು ಯಾವ ಸರ್ಕಾರವು ಹೇಳೀತು? ಮೊನ್ನೆ ಕೆಂಗೇರಿ ಗೇಟ್ ಪೊಲೀಸ್ ಸ್ಟೇಷನ್ನಿನ ಬಳಿ ಹೀಗೆ ಅಂದರು. "ಹೇಳುವವನಿಗೆ ವಿವೇಕವಿಲ್ಲದಿದ್ದರೆ ಕೇಳುವವನೂ ಹಾಗೆಯೇ," ಅನ್ನಬೇಕೆ? ನೀವು ಹೇಳಿ, ಸೆಟ್ಟರೆ.

ಅದಕ್ಕೆ ಸೆಟ್ರು :—(ನಸುನಗುತ್ತ) ನಮ್ಮ ಹುಡುಗ ನ್ಯೂಸ್ ಪೇಪರ್ ಓದುತ್ತಾನೆ. ಬೊಂಬಾಯಿಯಲ್ಲಿ ಮೊನ್ನೆ ನಡೆದ ದಂಗೆಯು ಮಕ್ಕಳನ್ನು ಪಠಾಣರು ಕದಿಯುವುದರಿಂದುಂಟಾದುದೆಂದು ಹೇಳಿದ. ಈಗ ನಾನು ನಮ್ಮ ಎಳೆಕೂಸು ದಂತವಕ್ರನನ್ನು ಮಠಕ್ಕೆ ಕಳುಹಿಸುವುದಿಲ್ಲ. ನಾಲ್ಕಾರು ದಿನಗಳ ಪಾಠಗಳು ಹೋದರೆ ಹೋಗಲಿ, ಮಗುವನ್ನು ಕಳಕೊಂಬುವದಕ್ಕಾದೀತೆ?

ಹ :—ಬೊಂಬಾಯಿ ಸಮಾಚಾರ, ಮಿಲ್ಲಿನ ಕಾರೆಗಾರ್ರ ಮುಷ್ಕರ (ಸ್ಟ್ರೈಕ್) ದಿಂದಾದದ್ದು. ಈಗ ಎಲ್ಲೆಲ್ಲೂ ಸ್ಟ್ರೈಕ್ ಯೆಂಬೀ ಮುಷ್ಕರವು ಪ್ರಬಲವಾಯಿತು. ಮಾತೆತ್ತಿದರೆ ಸ್ಟ್ರೈಕ್. ಇದನ್ನು ನೋಡಿ ಬೊಂಬಾಯಿನ ಮಿಲ್ಲುಗಳ ಯಜಮಾನರು ಪಂಜಾಬಿನಿಂದ ಪಠಾಣರನ್ನು ಕೆಲಸಗಳಿಗೆ ಕರೆತಂದು ಅವರನ್ನು ತರಬೇತು ಮಾಡಿರುವರು. ಆದಕಾರಣ ಅವರನ್ನು ನೋಡಿದರೆ ಇವರಿಗೆ ಆಗದು. ಇದು ಹೀಗೇ ಮಸುಕುತ್ತಿದ್ದು ಕಳೆದ ದಂಗೆಯಲ್ಲಿ ಪರಿಣಮಿಸಿತು. ಬರೋಡ ಅಂದರೇನು, ಸೇತುವೆ ಅಂದರೇನು, ನರಬಲಿ ಅಂದರೇನು ಇದ್ಯಾವ ತಾತಮ್ಮನ ಕಥೆ?

ಬಾ :—ಇದು ಠೀಕ್, ನಿಜ. ಜನರನ್ನು ಅಂದರೆ ಮಿಲ್ ಗಳಲ್ಲಿ ಕೆಲಸ ಮಾಡುವವರನ್ನು, ಉರಿದುಂಬಲು (ಸುಲ್ತಾನ್ ಪೇಟೆ ಗಲಭೆ ನಡೆದ ಮೇಲೆ ನಾವೂ ಕನ್ನಡವನ್ನು ಕಲಿತುಕೊಂಡೆವೈಯ) ವಿಲಾಯಿತಿಯಿಂದ ಹಜರತ್ ಥಾಮಸ್ ಷಾ ಎಂಬ ಫರಂಗಿಯು ಅವರ ಸ್ನೇಹಿತರೂ ಬಂದಿದ್ದರು. ಇವರು ಟೆಕ್ಸ್ಟೈಲ್ ಕಾರೆಗಾರರ ಮಜಮಾದವರಂತೆ. ಇವರ ಪ್ರಯತ್ನ ಬಹು ದೊಡ್ಡದು. ಅದು ಸಾಧ್ಯವೊ ಅಸಾಧ್ಯವೊ ನನಗೆ ತಿಳಿಯದು. ವಿಲಾಯತಿಯಲ್ಲಿ ಸ್ಟ್ರೈಕ್ ಆದರೆ ಇಲ್ಲೂ ಸ್ಟ್ರೈಕ್ ಆಗುವಂತೆ ಮಾಡಿ, ಲೇಬರ್ ಪಾರ್ಟಿಯೆಂದು ಪಾರ್ಲಿಮೆಂಟಿನಲ್ಲಿರುವುದರ ಮಹಿಮೆಯನ್ನು ತೋರಿಸಲು ಮಾಡಿದ ಉಪಾಯ.

ಹ—ಇದೀಗ ವಾಸ್ತವ. ಬೊಂಬಾಯಿಯಲ್ಲಿ ಹಿಂದೂ ಕಾರೆಗಾರರಿಗೂ, ಪಠಾಣರಿಗೂ ಪರಸ್ಪರ ವಿರೋಧ. ಈ ಕಾರಣದಿಂದ ಹುಟ್ಟಿ 150 ಜನರು ಸಾಯುವುದರಲ್ಲೂ 700 ಜನರಿಗೆ ನೋಲ್ಪಟ್ಟ ಪೆಟ್ಟು ತಿಂದು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದುವುದರಲ್ಲೂ ಪರಿಣಮಿಸಿತು. ನಮ್ಮಲ್ಲಿ ಇಂಥಾ ಅನಾಹುತಗಳು ನಡೆಯಲಿಲ್ಲ. ಈಗ ಎಲ್ಲರೂ ಎಚ್ಚತ್ತುಕೊಂಡಿರುವರು. ರಾಶಾಸಿಂಗನಪೇಟೆಯಲ್ಲಿ ಮೊನ್ನೆ ಹಿಂದೂ ಮುಸಲ್ಮಾನರು ಒಂದಾಗಿ ಸೇರಿ ಆ ಗಲಾಟೆ ನಡೆಸಿದರು. ಕಳೆದ ಜುಲೈ 30 ನೇ ತಾರೀಖು ಸ್ಮೃತಿಗೆ ಬಂದು ಪೊಲೀಸಿನವರು ತಕ್ಷಣ ಹುಷಾರಾದರು. ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಮತ್ತು ರಿಜರ್ವ್ ಪೊಲೀಸಿನವರು ಎಲ್ಲರೂ ಸೇರಿ, ಜನರನ್ನು ಸಮಾಧಾನಪಡಿಸಿದರು.

ಹ :—ಸಿಟಿ ಮ್ಯಾಜಿಸ್ಟ್ರೇಟರೂ ಇದ್ದರಪ್ಪ ಇವರೈಯ್ಯ ನ್ಯಾಯಸ್ತರು. ಇವರಿಗೆ ಎಲ್ಲಾ ಜಾತಿಗಳವರೂ ಒಂದೆ, ಏನು ತಾಳ್ಮೆ, ಎಷ್ಟು ಶಾಂತಿ, ಕೇಸಿನ ನಿಜಸ್ಥಿತಿ ಅರಿತುಕೊಂಬಲು ಎಷ್ಟು ಶ್ರದ್ಧೆ! ಬೇಷ್, ಬೇಷ್.

ಬಾ :—ಅಭ್ಭಾ! ಚಿಕ್ಕಸೆಟ್ಟಿ! ನೀನುಹೇಳಿದ್ದು ಸಾಚಾ ಮಾತು. ನಾನೇ ಅನ್ನಬೇಕೆಂದಿದ್ದೆ.

ಹ.—ಅದು ತಿನ್ನುವ ಕೋಳೀಕಾಲು ಮುರೀತೆನ್ನುವಂತೆ, ಕೈಕಾಲುಮುರಿದ, ತಲೆಬುರುಡೆ ಹೊಡೆದ ಮುಸಲ್ಮಾನರನ್ನು ಬಿಟ್ಟಿದ್ದಕ್ಕೊ?

ಬಾ :—ಇದೇನು, ಇಬ್ಲೀಸ್ ನ್ಯಾಯ, ಅವರು ಬಿಟ್ಟರೆ! ಫಿರ್ಯಾಧಿ (ಪೊಲೀಸಿನವರು) ಕೇಸು ವಾಪಸು ತೆಗೆದುಕೊಳ್ಳಲು ಹುಕುಂಕೊಡಿ ಅಂದ, "ನಿಮ್ಮಪುರಾಣೆ ಮಾಡಿಕೊ" ಎಂದು ವಜಾಕಿಯಾ. ಈ ಕೇಸುಗಳು ವಿಚಾರಣೆಯಾಗುವಾಗ್ಗೆ ಕೆಲವು ಸಾಕ್ಷಿಗಳನ್ನು ದಬಾಯಿಸುತ್ತಿದ್ದುದು (ಸಿಟ್ಟುಮಾಡದೆ) ನೋಡಿದೆಯ. ಹಾಗಿರಬೇಕೈಯ್ಯ ಜಡ್ಜಿ ನ್ಯಾಯವನ್ನು ಬಿಡದೆ, ಬಿಡಬೇಕೆಂಬ ಸೂಚನೆಬಂದಾಗ "ಡೋಂಟ್ ಕೇರ್" ಎಂದು ಧಿಕ್ಕರಿಸುತ್ತಾ ಕಕ್ಷಿಗಾರ್ರ ದುಸ್ಥಿತಿಗಾಗಿ ನೋಯುವದು, ಇನ್ಸಾಲಾ, ಎಷ್ಟೋ ದೊಡ್ಡ ಗುಣ.

ಹ :—ಉಪನ್ಯಾಸ ಸಾಕು, ಸಾಬಿ. ನಾನೂ ಅವರ ಸುಗುಣವನ್ನು ಬಲ್ಲವನೆ. ಜುಲೈ 30 ನೇ ರಾತ್ರಿ ಇವರಿದ್ದಿದ್ದರೆ ಆ ಮೊಗಲಾಯಿತನಕ್ಕೆ ಬರುತಿತ್ತು ದೊಡ್ಡ ಹಾವಳಿ. ಮೊನ್ನೆ ನೋಡು, ಸ್ವಲ್ಪ ಗಲಾಟೆ ಆರಂಭವಾಗಲು ತಕ್ಷಣ ಅಲ್ಲಿಗೆ ಬಂದು ಸಮಾಧಾನಗಳಿಂದ ಗದ್ದಲವನ್ನು ಹತೋಟೀಗೆ ತಂದರು. ಇದಲ್ಲವೆ ಕ್ಷತ್ರಿಯ ಸ್ವಭಾವ. ಇದಿರಲಿ, "ಹುಲಿಗಿಲಿ" ಎಂಬೀಭ್ರಾಂತು ಶಮನವಾಗುವುದು ಹೇಗೆ? ನಿನ್ನೆ ಒಂದು, ಮೊನ್ನೆ ಒಂದು ದಿನಕೊಂದೊಂದು ಕೇಸುನಡೆಯುತ್ತಲೇ ಇರುವುವು. ಇದೆಲ್ಲವು ಸುಳ್ಳೆಂದು ಸರ್ಕಾರಿಯವರು ಹುಕುಂ ಹೊರಡಿಸಿರುವರು. ಹಾಗೂ ಜನರ ಚಪಲ ಅಳಿಯಲಿಲ್ಲ. ಅದೊ, ತಾರಾಮಂಡಲ ಹಾರಿತು ಬನ್ನಿ ದೇವರನ್ನು ನೋಡೋಣ. ಎಲ್ಲರು ಚದರಿದರು.

ತಪಸ್ಸು ಮತ್ತು ಬ್ರಹ್ಮಚರ್ಯೆ.

(ಸಾಧು ವಾಸ್ವಾನಿ ಇವರಿಂದ)

"ನಾನು ಒಂದು ಹೂವನ್ನು ನೋಡಿ ನೀನು ಅಷ್ಟು ಸುಂದರವಾದ ರೂಪವನ್ನು ತಾಳಿದುದು ಹೇಗೆ?" ಎಂದು ಕೇಳಿದೆನು. ಆ ಪುಷ್ಪವು "ನಾನು ಯಾವಾಗಲೂ ಸೂರ್ಯರಶ್ಮಿಯನ್ನು ಮುದ್ದಿಟ್ಟುಕೊಂಡು ಸಂತೋಷಪೂರ್ವಕವಾಗಿ ಆಕರ್ಷಿಸಿದುದರಿಂದ, ನನಗೆ ಈ ಸುಂದರರೂಪವು ಬಂದಿತು" ಎಂದು ಉತ್ತರ ಕೊಟ್ಟಿತು. ಸೂರ್ಯರಶ್ಮಿಯು ಆ ಪುಷ್ಪಗಳಲ್ಲಿ ಚೆನ್ನಾಗಿ ವ್ಯಾಪಿಸುವುದು. ಮತ್ತು ಪುಷ್ಪವು ಸೂರ್ಯನಿಗಿದಿರಾಗಿ ಮಾಡುವ ತಪಸ್ಸಿನಿಂದ ಅದಕ್ಕೆ ಅಷ್ಟು ಕಳೆಯೇರುವುದು. ನಮ್ಮ ಜೀವನದ ಸೌಂದರ್ಯಕ್ಕೂ ಇಂತಹ ತಪಸ್ಸೇ ಆಧಾರವು. ಈ ತಪಸ್ಸೇ ನಿಜವಾದ ಜ್ಞಾನಕ್ಕೂ ಕಾರಣವು. ಆಗಿನ ಮನಸ್ಥೈರ್ಯವೇ ನಿಜವಾದ ಶಕ್ತಿಯೆನಿಸುವುದು.

ಕೆಲವು ದಿನಗಳ ಹಿಂದೆ ಒಬ್ಬಾನೊಬ್ಬ ಶಾಸ್ತ್ರಜ್ಞನು, ಕಟ್ಟಡಗಳನ್ನೂ, ಮನುಷ್ಯರನ್ನೂ ಕ್ಷಣಮಾತ್ರದಲ್ಲಿ ಕೊಲ್ಲುವ ಮರಣರಶ್ಮಿಯೊಂದನ್ನೂ ತಾನು ಕಂಡುಹಿಡಿದಿರುವುದಾಗಿ ಪ್ರಚುರಪಡಿಸಿದ್ದನು. ಆ ಮರಣರಶ್ಮಿಯು ಇನ್ನು ಮುಂದಿನ ಯುದ್ಧಗಳಲ್ಲಿ ಉಪಯೋಗಿಸಲ್ಪಡಬಹುದೆಂದೂ ಕೆಲವರು ಹೇಳುವರು. ನಮ್ಮ ಪುರಾತನ ಋಷಿಗಳಾದರೋ ಜೀವರಶ್ಮಿಯೊಂದನ್ನು ಕಂಡುಹಿಡಿದು, ಅದಕ್ಕೆ "ಬ್ರಹ್ಮಚರ್ಯೆ" ಎಂಬ ಹೆಸರನ್ನು ಕೊಟ್ಟರು. ಅದೇ ಮನುಷ್ಯನಲ್ಲಿರುವ ಜೀವೋದ್ಧಾರಶಕ್ತಿ! ಬ್ರಹ್ಮಚರ್ಯವೇ ಜೀವರಶ್ಮಿ! ಭೋಗವೇ ಮರಣರಶ್ಮಿ. ಈಗಿನಕಾಲದ ಜನರಲ್ಲಿ ನಾಗರಿಕತೆಯು ಅಪಾರವಾಗಿ, ಅವರಿಗೆ ಭೋಗೇಚ್ಛೆಯೇ ಅಧಿಕವಾಗಿರುವುದರಿಂದ, ಅವರು ಯಾವಾಗಲೂ ಕಾಮಾದಿಸಂತೃಪ್ತಿಗಳಿಗೆ ಅಪೇಕ್ಷಿಸಿ ಮರಣರಶ್ಮಿಗಿದಿರಾಗಿಯೇ ನಿಂತಿರುವರು.

ಮೊದಲು ನಮ್ಮ ಭರತಖಂಡದಲ್ಲಿ ಬ್ರಹ್ಮಚರ್ಯವೇ ವಿದ್ಯಾಭ್ಯಾಸಕ್ಕೆ ತಳಹದಿಯಾಗಿದ್ದಿತು. ಗುರುಕುಲಾಶ್ರಮಗಳಲ್ಲಿ ವಾಸಮಾಡತಕ್ಕವರಿಗೆಲ್ಲ ಈ ಬ್ರಹ್ಮಚರ್ಯನಿಯಮವಿದ್ದಿತು.

ಬ್ರಹ್ಮಚರ್ಯೆಯ ಐದು ಅಂಗಗಳು.

ಕೈಗಳಲ್ಲಿ ಐದು ಬೆರಳುಗಳಿರುವಂತೆ ಬ್ರಹ್ಮಚರ್ಯದಲ್ಲಿ ೫ ಅಂಗಗಳುಂಟು. ಆಹಾರನಿಯಮವೇ ಅವುಗಳಲ್ಲಿ ಮೊದಲನೆಯದು. ವಿಶೇಷವಾಗಿ ಉಪ್ಪು, ಖಾರ ಮುಂತಾದುವುಗಳನ್ನು ಸೇರಿಸಿ ಉಷ್ಣಕಾರಿಗಳಾದ ಆಹಾರಗಳನ್ನು ಸೇವಿಸಬಾರದು. ನಮ್ಮ ಶಾಸ್ತ್ರಗಳಲ್ಲಿ ಸಾತ್ವಿಕಾಹಾರಕ್ಕೆ ಪ್ರಾಮುಖ್ಯವುಂಟು. ನೀರೇ ಎರಡನೆಯದು. ನೀರನ್ನು ಧಾರಾಳವಾಗಿ ಕುಡಿಯಬೇಕು. ಒಟ್ಟಿಗೆ ಒಂದೇಸಲ ಕುಡಿಯದೆ, ಸ್ವಲ್ಪ ಸ್ವಲ್ಪವಾಗಿ ಕುಡಿಯಬೇಕು. ದಿನಕ್ಕೆ 10 ಲೋಟಾ ನೀರನ್ನಾದರೂ ಕುಡಿಯಬೇಕು. ಆಟಪಾಟಗಳು ಮೂರನೆಯ ಅಂಗವು. ಆಟಗಳು ಅನೇಕರೊಡನೆ ಕಲೆಯುವ ಅಭ್ಯಾಸವನ್ನೂ, ಪರಸ್ಪರ ಸಹಕಾರ ಬುದ್ಧಿಯನ್ನೂ ಹುಟ್ಟಿಸುವುವು. ಈಗ ಇಂಡಿಯಾದೇಶಕ್ಕೆ ಇದು ಅವಶ್ಯವಾಗಿ ಬೇಕು. ಪರಸ್ಪರ ವೈಷಮ್ಯದಿಂದಲೇ ನಾವು ಅಧೋಗತಿಗೆ ಬಂದಿರುವೆವು. ಆಟಗಳು ನಮ್ಮ ದೇಹಶಕ್ತಿಯನ್ನು ಹೆಚ್ಚಿಸುವುವು. ಸ್ಥೈರ್ಯಧೈರ್ಯೋತ್ಸಾಹಗಳಿಂದಲೂ, ಶಕ್ತಿಯಿಂದಲೂ ಕೂಡಿರುವ ಮನುಷ್ಯರೇ ದೇಶಾಭಿವೃದ್ಧಿಗೆ ಸಹಾಯಕರಾಗುವರು.

ನಾಲ್ಕನೆಯದು ಇಂದ್ರಿಯ ಜಯವು. ಬಾಲ್ಯವಿವಾಹವೆಂಬ ದುಷ್ಟಪದ್ಧತಿಯನ್ನು ಒಡನೆ ನಿಲ್ಲಿಸಬೇಕು. ವಿದ್ಯಾರ್ಥಿಗಳೂ, ಯುವಕರೂ ಕೆಟ್ಟ ನಾವೆಲುಗಳನ್ನು ಓದಬಾರದು. ಪುರಾತನ ಮಹನೀಯರ ಮತ್ತು ವೀರರ ಚರಿತ್ರೆಗಳನ್ನು ಓದುವುದೊಳ್ಳೆಯದು. ಶ್ರೀರಾಮ, ಶ್ರೀಕೃಷ್ಣ, ಭೀಷ್ಮ, ಯುಧಿಷ್ಠಿರ ಮುಂತಾದ ಪುರಾಣಪುರುಷರ ಚರಿತ್ರೆಗಳನ್ನೂ, ನವೀನ ಇತಿಹಾಸದಲ್ಲಿ ಪ್ರಖ್ಯಾತರಾದ ಅಬ್ರಹಾಮ್ ಲಿಂಕನ್ ಮತ್ತು ವಾಷಿಂಗ್ಟನ್ ಮುಂತಾದವರ ಜೀವನ ಚರಿತ್ರೆಗಳನ್ನೂ ಓದಬೇಕು. ದೇವಪ್ರಾರ್ಥನೆಯೇ ಐದನೆಯ ಅಂಗವು. ಪ್ರಾರ್ಥನೆಯಲ್ಲಿ ವ್ಯಾಧಿನಿವಾರಕಶಕ್ತಿಯಿರುವುದು. ಮತ್ತು ಪ್ರತಿದಿನವೂ ಪ್ರಾರ್ಥನೆಮಾಡುವುದರಿಂದ ನಿಮ್ಮ ದೇಹಾರೋಗ್ಯವೂ ಹೆಚ್ಚುವುದು. ಪ್ರಾರ್ಥನೆಮಾಡುವುದರಿಂದ ಲೋಕಕ್ಕೆ ಕ್ಷೇಮವನ್ನುಂಟುಮಾಡಬಹುದು. ಇನ್ನೂ ಯುವಕರಾದ ನೀವು ನಿಮ್ಮ ಸಮಾಜ, ನಗರ, ಸಂಸ್ಥಾನ ಮತ್ತು ಒಟ್ಟು ದೇಶದ ಮೇಲ್ಮೆಗಾಗಿ ದೇವರನ್ನು ಪ್ರಾರ್ಥಿಸುತ್ತಿರಿ. 'ಸರ್ವೇಜನಾಸ್ಸುಖಿನೋಭವಂತು' ಎಂಬಂತೆ ಲೋಕಕ್ಷೇಮಕ್ಕಾಗಿಯೇ ಪ್ರಾರ್ಥಿಸಿರಿ. ಭರತಖಂಡದ ಸೇವೆಗಾಗಿಯೂ, ಅದಕ್ಕಾಗಿ ಕಷ್ಟಗಳನ್ನನುಭವಿಸುವುದಕ್ಕಾಗಿಯೂ, ಮತ್ತು ಭರತಖಂಡದ ಪುನರುಜ್ಜೀವನಕ್ಕಾಗಿಯೂ ಭಗವಂತನು ನಿಮಗೆ ಶಕ್ತಿಸಾಮರ್ಥ್ಯಗಳನ್ನು ಕೊಡುವಂತೆ ಆತನನ್ನು ಪ್ರತಿದಿನವೂ ಪ್ರಾರ್ಥಿಸಿರಿ—ಅ. ಜ.

ಕುಂಚಿಟಿಗರ ವಿದ್ಯಾಭಿವೃದ್ಧಿ ನಿಧಿ.

ಶ್ರೀಮತಿ ಆಲಮ್ಮನವರು ತಮ್ಮ ಯಜಮಾನರಾದ ಮ|| ಜೆ. ಕೆ.
ನರಸಿಂಹಯ್ಯನವರ ಹೆಸರಿನಲ್ಲಿ ಮಾಡಿದ
ಉದಾರವಾದ ಸಹಾಯ.

ಕುಂಚಿಟಿಗರು ಹಿಂದೂಸ್ಥಾನದಿಂದ ದಕ್ಷಿಣಕ್ಕೆ ತೆರಳಿಬಂದವರು. ಇವರಲ್ಲಿ ಅನೇಕರು ಧೀರರಾಗಿ ಶತ್ರುಗಳೊಡನೆ ಕಾದಾಡಿ ರಾಜ್ಯ ಕಟ್ಟಿ, ಯಶೋವಂತರಾಗಿದ್ದರು. ಮಿಕ್ಕವರು ಕೃಷಿ, ಕೈಗಾರಿಕೆ, ವ್ಯಾಪಾರಗಳಲ್ಲಿ ಅಗ್ರಗಣ್ಯರೆನಿಸಿದರು ಇವರ ಪರಾಕ್ರಮ, ಔದಾರ್ಯಗಳನ್ನು ತಿಳಿಸತಕ್ಕ ಅನೇಕ ಕುರುಹುಗಳಿವೆ. ಹೀಗಿದ್ದಾಗ್ಯೂ ಈ ಸಮಾಜವು ಧೈರ್ಯ ಪರಾಕ್ರಮಗಳನ್ನು ತೊರೆದು ಕೃಷಿ, ಕೈಗಾರಿಕೆ, ವ್ಯಾಪಾರಗಳಲ್ಲಿ ಬಹಳ ಹಿಂದುಳಿದಿದೆ. ಇದಕ್ಕೆ ಕಾಲದೇಶಕ್ಕನುಸಾರವಾದ ಅಭಿವೃದ್ಧಿಯನ್ನವಲಂಬಿಸದಿರುವುದೇ ಕಾರಣ. ಇವರಲ್ಲಿ ಶೇಕಡ ೫ ರಂತೆಯು ಕೂಡ ಅಕ್ಷರ ಬಲ್ಲವರಿಲ್ಲ. ಪೂರ್ವದ ಬುಡಕಟ್ಟಿನ ಐಕಮತ್ಯವೆಲ್ಲಾ ಹೋಗಿದೆ. ಇಂಥಾ ದುಸ್ಥಿತಿಯನ್ನು ನೋಡಿ ವಿದ್ಯಾಪ್ರಚಾರಕ್ಕೂ, ಐಕಮತ್ಯಸಾಧನಕ್ಕೂ ಅನುಕೂಲವಾಗುವಂತೆ ಮೂರು ತಿಂಗಳ ಹಿಂದೆ ಒಂದು ಸಂಘವು ಏರ್ಪಾಡಾಯಿತು. ಎಲ್ಲಾ ಹಿರಿಯರೂ ಇದರಲ್ಲಿ ಸಾನುಭೂತಿಯುಳ್ಳವರಾಗಿ, ಅದರ ಕೆಲಸದಲ್ಲಿ ಆಸಕ್ತಿಯನ್ನು ವಹಿಸಿ ನಿಂತರು. ವಿದ್ಯಾಭಿವೃದ್ಧಿ ನಿಧಿಗೆ ಮೈಸೂರು ಜನರಿಂದಲೇ ಒಂದು ಲಕ್ಷ ರೂಪಾಯಿ ವಾಗ್ದಾನವಾಯಿತು. ಇದರಲ್ಲಿ ಲೇಟ್ ಸಾಹುಕಾರ್ ಜೆ. ಕೆ. ನರಸಿಂಹಯ್ಯನವರ ಧರ್ಮಪತ್ನಿ ಶ್ರೀಮತಿ ಆಲಮ್ಮನವರು ಅವರ ಜ್ಞಾತಿಗಳಾದ ಮ|| ರಾ|| ನರಸಿಂಹಯ್ಯನವರು ಸಹ ತಮ್ಮ ಹಿರಿಯರಾದ ಲೇಟ್ ಸಾಹುಕಾರ್ ಜೆ. ಕೆ. ನರಸಿಂಹಯ್ಯನವರ ಹೆಸರಿನಲ್ಲಿ 40,000 ರೂಪಾಯಿಗಳಷ್ಟು ದಾನ ಮಾಡಿರುವುದು ತುಂಬಾ ಸ್ತುತ್ಯವಾಗಿರುತ್ತದೆ. ಇಷ್ಟು ಅಪಾರವಾದ ಪ್ರಥಮ ಸಹಾಯವು ಇತರ ಮಹನೀಯರಿಗೂ ಮಾರ್ಗದರ್ಶಕವಾಗಿ ಪರಿಣಮಿಸಿದೆ. ಇದಕ್ಕಾಗಿ ಇಡೀ ಕುಂಚಿಟಿಗರ ಜನಾಂಗವೇ ಅವರಿಗೆ ಚಿರಮಣಿಯಾಗಿರುವುದು. ಭಗವಂತ [illegible] ಅವರಿಗೂ, ಮೃತರಾದ ಜೆ. ಕೆ. ನರಸಿಂಹಯ್ಯನವರ ಆ[illegible] ಶಾಂತಿಯನ್ನೀಯಲಿ. ಸಮಾಜದ[illegible]

ಗೃಹಕೃತ್ಯದ ನೋಟೀಸು.

ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಾಡ್ನೂರು ಹೋಬಳಿ [illegible]ಗರ್ಚ ಹಳ್ಳಿಯಲ್ಲಿರುವ ವೀರಶೈವಮಠದ ಕರಿಬಸವೇಗೌಡನ ಮಗ ದ್ಯಾವಪ್ಪ ಉರಫ್ ಅಪ್ಪಾಜಿಯು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—

ನಾನು ಮತ್ತು ನನ್ನ ಅಣ್ಣ ಸವತಿ ಬಸಪ್ಪ ಸಹ ಕರಿಬಸವೇಗೌಡನ ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತೆಲ್ಲವೂ ಅವಿಭಕ್ತಕುಟುಂಬಕ್ಕೆ ಸೇರಿರುತ್ತದೆ. ನನ್ನ ಅಣ್ಣನಿಗೆ ೩ ವರ್ಷದ ಬಸಪ್ಪನೆಂಬ ಒಬ್ಬ ಮಗನು ಮಾತ್ರ ಇರುವನು. ನಾನೂ ನನ್ನ ಸವತಿ ಅಣ್ಣ ಬಸಪ್ಪ ಸಹ ಇದೇ ಗ್ರಾಮದ ಸಾಹುಕಾರ್ ಶ್ರವಣಗೌಡರಲ್ಲಿ ಮಾಡಿರುವ ಸಾಲವನ್ನು ಸ್ವತ್ತನ್ನು ಮಾರದೆ ವರಮಾನದಿಂದ ತೀರಿಸಿ ನನ್ನ ಲಗ್ನವಾದನಂತರ ವಿಭಾಗಮಾಡಿಕೊಡುತ್ತೇನೆಂದು ಹೇಳಿದರೂ ನನ್ನ ಅಣ್ಣನ ಹೆಂಡತಿ ಬಸಮ್ಮನು ಕೇಳದೆ ಜನರ ದುರ್ಬೋಧೆಯಿಂದ ನನ್ನ ಅನುಮತಿಯಿಲ್ಲದೆ ಅವಿಭಕ್ತ ಆಸ್ತಿಯನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿರುತ್ತಾಳೆಂದು ಕೇಳುತ್ತೇನೆ. ಈಗಿರುವ ಸಾಲವನ್ನು ತೀರಿಸಲು ನಾನು ಸಿದ್ಧನಾಗಿರುವುದರಿಂದಲೂ ನನ್ನ ಅನುಮತಿಯಿಲ್ಲದೆ ಸ್ವತ್ತನ್ನು ಮಾರಲು ನನ್ನ ಅತ್ತಿಗೆ ಬಸಮ್ಮನಿಗೆ ಅಧಿಕಾರವಿಲ್ಲದ್ದರಿಂದಲೂ ಯಾರಾದರೂ ಅಳಿಯಿಂದ ಕ್ರಯ, ಭೋಗ್ಯ, ಆಧಾರ ಮಾಡಿಕೊಂಡರೆ ನಾನಾಗಲಿ ಕುಟುಂಬದ ಸ್ವತ್ತಾಗಲಿ ಬದ್ಧರಾಗುವುದಿಲ್ಲವೆಂದು ಎಚ್ಚರಿಸಿರುತ್ತೇನೆ. [3—2]

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಬೆಂಗಳೂರು ಫಲಸರಕು ಮಳಿಗೆ ಆರ್. ಪಾವಣ್ಣನವರ ಮಕ್ಕಳು ಮ|| ಪಿ. ವಿ. ಭದ್ರಪ್ಪನವರ ಜ್ಯೇಷ್ಠಪುತ್ರಿ ಚಿ|| ಸೌ|| ತಾರದಾಂಬನನ್ನು ಕೋಲಾರದ ಮ|| ಧರಣಿಶೆಟ್ಟರ ನಂಜುಡಪ್ಪನವರ ಪುತ್ರ ಚಿ|| ಚನ್ನಬಸಪ್ಪನವರಿಗೆ ಕೊಟ್ಟು ನಡಿಸಿದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ ಬಂದದ್ದು 5 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಚಾಮರಾಜನಗರದ ಚಾಮಸಾಗರದ ನಾಲಾ[illegible]ವಸ್ಥೆ.

ಚಾಮರಾಜನಗರದ ಕೆರೆಗೆ ನೀರು ಬರಲು ಏರ್ಪಡಿಸಿ[illegible]ವ ನಾಲೆ[illegible] ಕೆಲಸವಿನ್ನೂ ಮುಗಿದಿಲ್ಲ. ಅದಕ್ಕಾಗಿ ತೆಗೆದುಕೊಂಡಿರು[illegible] ಕಾಂಪೆನ್ಸೇಷನ್ ಸಹ ಇನ್ನೂ ಪಾವತಿಯಾಗಿಲ್ಲ. [illegible] ಅಧಾವಮಾಡುತ್ತಿರುವಾಗ ಪಿ. ಪಿ. [illegible]

ಮಾಡುತ್ತಿರುವರೋ ತಿಳಿಯದು. ನಾಲಾ ಆಗಿಬಿಟ್ಟದ್ದರೆ ನೀರಿನ ಕ್ಷಾಮವು ಆಗುತ್ತಿರಲಿಲ್ಲ. ಹಿಂದಿನಿಂದ ನಿಧಾನವಾಗಿರುವುದನ್ನು ನೋಡಿದರೆ ಮುಂದೆಯೂ ಜಾಗ್ರತೆಯಾಗುತ್ತದೆಂಬುದು ಅನುಮಾನವಾಗಿದೆ. ಮಳೆ ಇಲ್ಲದೆ, ಬೆಳೆ ಆಗದ ಕಾಲದಲ್ಲಿ ರೈತರ ಜಮೀನುಗಳಿಗೂ ಕಾಂಪೆನ್ಸೇಷನ್ ಕೊಡದೆ ಹೋದರೆ ಅನ್ಯಾಯವಲ್ಲವೆ? ದಯವಿಟ್ಟು ಬೇಗ ಮಾಡಿದರೆ ಉಪಕಾರವಾಗುವುದು. ಸ್ಥಳವಂದಿಗ.

ಶ್ರಿಂಗೇರಿಯಲ್ಲಿ ನಡೆದ ಪ್ರಾಣಿವಧೆಯ ಮಾರಿ ಪೂಜೆ

ಈ ದೇವಿ ಜಾತ್ರೆಯು ಕಳೆದ ಫೆಬ್ರವರಿ ತಾ|| 19 ಮತ್ತು 20 ರಲ್ಲಿ ನಡೆದು ಅನೇಕ ಕೋಣ ಮುಂತಾದ ಪ್ರಾಣಿಬಲಿ ಕೊಡಲ್ಪಟ್ಟಿತು. ಇಂಥ ಬಲಿಯನ್ನು ನಿಲ್ಲಿಸಬೇಕಾಗಿ ಪ್ರಾಣಿದಯಾಸಂಘದವರೂ ಇತರರೂ ಇಲ್ಲಿಯ ಮಠದವರನ್ನು, ಹಾಲಿ ಮೈಸೂರಲ್ಲಿರುವ ಈ ಮಠದ ಸರ್ವಾಧಿಕಾರಿಗಳನ್ನು ತಂತಿಮೂಲಕವಾಗಿಯೂ, ಇತರ ವಿಧವಾಗಿಯೂ ಪ್ರಾರ್ಥಿಸಿಕೊಂಡಾಗ್ಯೂ ಫಲಕಾರಿಯಾಗಲಿಲ್ಲ. ಇಂಥ ಪ್ರಾಣಿಬಲಿಯನ್ನು ನಡೆಯಿಸಕೊಡದೆಂತಲು ಮುಂಚಾಗಿ ಅನೇಕ ಧರ್ಮಮಾರ್ಗಗಳನ್ನು ಬೋಧಿಸುವುದರಲ್ಲಿ ಲೋಕಪ್ರಖ್ಯಾತಿಯನ್ನು ಹೊಂದಿಯೂ ಹೊಂದುತ್ತಲೂ ಇರುವ ಸದ್ಧರ್ಮಪ್ರಭಾವವುಳ್ಳ ಈ ಗುರುಗಳವರ ಸ್ಥಳದಲ್ಲಿಯೇ ಈ ವಧೆಗಳು ನಡೆದಿರುವದು ಬಹು ವಿಸ್ಮಯಕರವೂ ದುಃಖಕರವೂ ಆಗಿವೆ. ಇನ್ನು ಮುಂದಾದರೂ ಈ ಸಂಸ್ಥಾನದಲ್ಲಿ ಇಂಥ ಪ್ರಾಣಿಬಲಿಯನ್ನು ಶಾಶ್ವತವಾಗಿ ನಿಲ್ಲಿಸಿ ಕೀರ್ತಿಯನ್ನು ಪಡೆಯಬೇಕಾಗಿ ಪ್ರಾರ್ಥಿಸುತ್ತೇನೆ.

ತಮ್ಮ ಚಂದಾದಾರ.

ಕಮಲದಳ, ಹಿರಿಯೂರ್.

ದೇಶಸಂಚಾರಾರ್ಥವಾಗಿ ಮೈಸೂರಿನಿಂದ ಹೊರಟಿದ್ದ 5 ಜನ ರೋವರ್ ಸ್ಕೌಟುಗಳು, ಸಂಚಾರಕ್ರಮದಲ್ಲಿ ನಮ್ಮ ಗ್ರಾಮಕ್ಕೆ ತಾ|| 11-2-29 ರಲ್ಲಿ ಬಂದರು. ಇಲ್ಲಿನ ಕಮಲದಳದ ಸ್ಕೌಟ್ ಬಾಲಕರೆಲ್ಲರೂ ಅವರಿಗೆ ಸುಸ್ವಾಗತವನ್ನು ಅತ್ಯಾದರದಿಂದ ಬಯಸಿದರು. ಈ ರೋವರ್ ಸ್ಕೌಟುಗಳು, ತಮ್ಮ ಜೊತೆಯಲ್ಲಿ ತಂದಿದ್ದ ಸಂದೇಶಗಳನ್ನು ಎಲ್ಲರಿಗೂ ಓದಿ ಹೇಳಿದ ತರುವಾಯ, ಚರಿತ್ರಾರ್ಹವಾದ ವಾಣಿವಿಲಾಸ ಸಾಗರವನ್ನು ನೋಡಿಕೊಂಡು ರಾತ್ರಿ ವಾಪಸುಬಂದರು. ಮರುದಿವಸ ಬೆಳಿಗ್ಗೆ ನಮ್ಮ ಸ್ಕೌಟು ಮಾಸ್ಟರಾದ, ಎನ್. ಎಸ್. ವೆಂಕಟರಾಮರಾಯರು ಇವರುಗಳಿಗೆ ಮದ್ದೇರ ಹಳ್ಳವನ್ನು ತೋರಿಸಿಕೊಂಡು ಬಂದರು. ತಾ|| 12-2-20 ರಲ್ಲಿ ಇಲ್ಲಿನ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಹಾಲಿನಲ್ಲಿ ತಾ|| ಅಮಲ್ದಾರ್, ಮ|| ಕೆ. ಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ಪುರಪ್ರಮುಖರಾದಿಯಾಗಿ ನೂರಾರು ಜನಗಳ ಸಭೆಸೇರಿತು. ರೋವರ್ ಸ್ಕೌಟುಗಳು ತಮ್ಮ ಪ್ರಯಾಣದ ಮುಖ್ಯ ಉದ್ದೇಶಗಳನ್ನು ವಿವರಿಸಿ ವಿನೋದಯ ವಿವಿಧ ಗಾನಗಳೊಡನೆ ಸಭಿಕರನ್ನು ಆತ್ಮಾನಂದಗೊಳಿಸಿದರು. ಅದೇ ರಾತ್ರಿ 9 ಗಂಟೆಗೆ ಶಿಬಿರಾಗ್ನಿಯಲ್ಲಿ ಚಮತ್ಕಾರಯುಕ್ತಗಳಾದ ನೋಟಗಳನ್ನು ಪ್ರದರ್ಶಿಸಿ ತಮ್ಮ ಉಜ್ವಲವಾದ ದೇಶಭಕ್ತಿಯನ್ನು ವಿವರಿಸಿ ಎಲ್ಲರಿಗೂ ಕರ್ಣಾನಂದ, ನೇತ್ರಾನಂದವನ್ನುಂಟುಮಾಡಿ ಮರುದಿವಸ ಚಿತ್ರದುರ್ಗಕ್ಕೆ ಪ್ರಯಾಣ ಬೆಳೆಸಿದರು. ಇವರಿಗೆ ದೇವರು ಆಯುರಾರೋಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ಜಿ. ಹೆಚ್. ತಿಪ್ಪೆರುದ್ರಯ್ಯ, ಸ್ಕೌಟು, ಹಿರಿಯೂರ್.

ಮಾಗಡಿ ವೈಶ್ಯ ಶ್ರೀ ಕನ್ನಿಕಾಪರಮೇಶ್ವರಿ ವೇದವಿದ್ಯಾಲಯ.

ಮಾಗಡಿಗ್ರಾಮದ ಬ್ರಾಹ್ಮಣ ಪುರೋಹಿತರುಗಳು ವೈಶ್ಯರ ಮನೆಗಳಿಗೆ ಹೋಗಿ ವೇದೋಕ್ತರೀತಿ ಕರ್ಮಗಳನ್ನು ನಡೆಯಿಸಬಾರದೆಂದು ಪ್ರಬಲವಾದ ಕಟ್ಟುಪಾಟುಗಳನ್ನು ಮಾಡಿಕೊಂಡು ವೈಶ್ಯರ ಮನೆಗಳಿಗೆ 4 ತಿಂಗಳಿಂದಲೂ ಬರದೆಹೋದರು. ವೈಶ್ಯಮುಖಂಡರುಗಳು ಸಭೆಸೇರಿ ತಮ್ಮ ಬಾಲಕರುಗಳಿಗೆ ವೇದವಿದ್ಯಾಭ್ಯಾಸವನ್ನು ಮಾಡಿಸಲು ನಿಶ್ಚಯಿಸಿ ಶೃಂಗೇರಿಯಿಂದ ಬಂದಿದ್ದ ವೇ|| ಬ್ರ|| ಲಿಂಗಪ್ಪಶೆಟ್ಟರದ್ವಾರ ಸಭೆ ಸೇರಿ ಹರಿದಾಸ್ ನಂಜುಂಡಗುಪ್ತರವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಸದರಿ ಅಧ್ಯಕ್ಷರು ಬ್ರಾಹ್ಮಣ ಪುರೋಹಿತರುಗಳಿಂದ ತಮ್ಮಗಳಿಗೆ ಉಂಟಾದ ಕಷ್ಟಪರಂಪರೆಗಳನ್ನು ಕುರಿತು ಹೃದಯಂಗಮವಾಗಿ ಭಾಷಣಮಾಡಿದರು. ನಮ್ಮ ಬಾಲಕರುಗಳು ವೇದವಿದ್ಯಾಭ್ಯಾಸಮಾಡಲು ಒಂದು ವೇದವಿದ್ಯಾಮಂದಿರವನ್ನು ಸ್ಥಾಪಿಸಲು ಕೆ. ಶ್ಯಾಮಯ್ಯಶೆಟ್ಟರ ಸೂಚನೆಯಂತೆ ಸರ್ವಾನುಮತದಿಂದ ವೈಶ್ಯ ಶ್ರೀ ಕನ್ನಿಕಾಪರಮೇಶ್ವರಿ ವೇದವಿದ್ಯಾಲಯವು ತಾ|| 4-2-29 ರಲ್ಲಿ ಸ್ಥಾಪಿಸಲ್ಪಟ್ಟು ಕೆಲಸಗಳು ನಡೆಯುತ್ತ ಇವೆ. ಕಾರ್ಕನಹಳ್ಳಿ ವೇ|| ಶ್ರೀಕಂಠಶಾಸ್ತ್ರಿಗಳು ಉಪಾಧ್ಯಕ್ಷರಾಗಿರಲು ಒಪ್ಪಿರುವುದು ಅತ್ಯಂತ ಸಂತೋಷಪ್ರದವಾಗಿದೆ. ಈ ಮೂಲಕ ಇನ್ನೂ ಹೆಚ್ಚು ಹೆಚ್ಚಾಗಿ ವೇದವಿದ್ಯಾಪ್ರಸಾರಕಾರ್ಯವನ್ನು ಮುಂದರಿಸುವರೆಂದು ನಂಬಲ್ಪಟ್ಟಿದೆ. ವೈಶ್ಯಮಹಾಜನಗಳು ಎಚ್ಚತ್ತು ಅನ್ಯಾಯವಾಗಿ ಕೊಡುತ್ತಿದ್ದ ಅಪಾರದಾನಗಳನ್ನು ನಿಲ್ಲಿಸಿ ವೇದಮಂದಿರಕ್ಕೆ ಉದಾರವಾದ ದ್ರವ್ಯಸಹಾಯವನ್ನು ಮಾಡಬೇಕಾಗಿ ಕೋರಿದೆ. ಮೈಸೂರು ಪ್ರಾಂತದ ವೈಶ್ಯಮುಖಂಡರುಗಳು ನಿದ್ರೆಯಿಂದ ಎಚ್ಚತ್ತು ತಮ್ಮ ಗ್ರಾಮಗಳಲ್ಲಿ ವೇದಮಂದಿರಗಳನ್ನು ಸ್ಥಾಪಿಸಿ ತನ್ಮೂಲಕ ತಮ್ಮ ಬಾಲಕರುಗಳಿಗೆ ವೇದವಿದ್ಯೆಯನ್ನು ಕಲಿಸಿ ಬ್ರಾಹ್ಮಣ ಪುರೋಹಿತರುಗಳಿಂದ ತಮಗುಂಟಾಗಿರುವ ತೊಂದರೆಯನ್ನು ಕಳೆದುಕೊಳ್ಳುವರೆಂದು ನಿರೀಕ್ಷಿಸುತ್ತೇನೆ. ವೈಶ್ಯ.

ಚಾಮರಾಜನಗರದಲ್ಲಿ ಒಂದು ಸನ್ಮಾನಕೂಟ.

ಕಳೆದ 24-2-29 ರಲ್ಲು ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳಲ್ಲಿ ಕೆಲವರೂ, ಬೆಂಚುಮ್ಯಾಜಿಸ್ಟ್ರೇಟರುಗಳೂ, ಮಿತ್ರಮಂಡಲಿಯವರೂ ಸೇರಿ ವೈಸ್ ಪ್ರೆಸಿಡೆಂಟ್ ಮ|| ಸಂಗನಬಸಪ್ಪನವರಿಗೆ, ಅವರು ಕಳೆದ ಮೂರು ವರುಷಗಳಿಂದಲೂ ಆ ಅಧಿಕಾರವನ್ನು ನಿರ್ವಹಿಸಿ ಮುಂದೆಯೂ ಏಕಮತದಿಂದ ಚುನಾಯಿಸಲ್ಪಟ್ಟಿರುವ ವಿಚಾರದಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಊರಿಗೆ 8 ಮೈಲುಯಲ್ಲಿರುವ ಅರಮನೆಯಸ್ಟೇಟಿನಲ್ಲಿ ಕುಂಭೇಶ್ವರನ ದೇವಸ್ಥಾನದ ಬಳಿ ಎಲ್ಲರೂ ಸೇರಿದ್ದರು. ವನಭೋಜನ, ಫಲಾಹಾರಾದಿಗಳನ್ನು ಅವರವರ ಜಾತಿಗನುಸಾರವಾಗಿ ಮಾಡಿಸಿದ್ದರು. ದೇವರ ಅಭಿಷೇಕ ಪೂಜೆಪುನಸ್ಕಾರಾದಿಗಳನಂತರ ಸಮಸ್ತರೂ ಅನ್ಯೋನ್ಯಭಾವದಿಂದ ಕಲೆತು ದೇವಸ್ಥಾನದ ಅಂಗಳದಲ್ಲಿ ಸಭೆಸೇರಿದರು. ಮನೋಹರವಾದ ಮಾತುಗಳು, ಗ್ರಾಮೋಫೋನ್ ಹಾಡುಗಾರಿಕೆ, ವಿನೋದಗಳು ಜರುಗಿದುವು. ಮಿತ್ರಮಂಡಲಿಯವರ ಪರವಾಗಿ ಮಿತ್ರರೊಬ್ಬರು ವೈಸ್ ಪ್ರೆಸಿಡೆಂಟರ ಗುಣಕಥನವನ್ನು ಮಾಡಿ, ಕಳೆದ ಮೂರು ವರುಷಗಳಿಂದಲೂ ಅವರು ನಿರ್ವಹಿಸಿದ ಕಾರ್ಯಗೌರವಗಳನ್ನು ಕೊಂಡಾಡಿ, ವೈಸ್ ಪ್ರೆಸಿಡೆಂಟರಾಗಿ ನಿಲ್ಲಲು ಇತರರಲ್ಲಿ ಇವರೇ ಮೊದಲೆಂಬುದನ್ನು ಸೂಚಿಸಿ, ಮುಂದೆಯೂ ಇವರು ದೇಶಸೇವಾಕಾರ್ಯದಲ್ಲಿ ತತ್ಪರರಾಗಿರಲೆಂದು ಹಾರೈಸಿದರು. ಬೆಂಚ್ ಮೆ|| ಮ|| ಚೌಡಶೆಟ್ಟರೂ, ಮುನಿಸಿಪಲ್ ಮೆಂಬರೂ ಭಾರಿ ಜವಳಿ ವ್ಯಾಪಾರಿಗಳೂ ಆದ ಮ|| ಬಿ. ಎಸ್. ವೆಂಕಟನಾಗಪ್ಪಶೆಟ್ಟರೂ ಸಮಯೋಚಿತವಾದ ಮಾತುಗಳನ್ನಾಡಿ, ವೈಸ್ ಪ್ರೆಸಿಡೆಂಟರ ಕಾರ್ಯನಿರ್ವಾಹಕ ಶಕ್ತಿಯನ್ನು ಕೊಂಡಾಡಿದರು. ಮಿತ್ರರೊಬ್ಬರು ಈ ಸಮಯಕ್ಕೆ ಸರಿಯಾಗಿ ತಾವು ರಚಿಸಿದ್ದ ಕಂದಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಮಂಗಳಸುಮನೋಹರ ಶಿವ |
ಸಂಗನಬಸವಂಚಿರಾಯುಷ್ಯಮಂ ಕೊಡಲೀ |
ಸಂಗಡಿಗಂ ಬಹುಮಾನ್ಯಂ |
ಸಂಗನಬಸವಾಖ್ಯಗೆಂದು ಹರಕೆಯಮಾಡಲ್ ||
ಹರನಂದಾಕ್ರೋಶದಿ ಸಿರಿ |
ಹರಿನಂದನನಂ ಕಿಡಿಗಂಗಳಿಂದೆ ಸುಟ್ಟೋಲ್ ||
ಹರನಿಂದೆನೊಡನಾಡಿಯ |
ಕರಗಳ ಪಿಡಿದವನಘಂಗಳಂ ಸುಡಲನಿಶಂ ||
ಅರಿಗಳನಿದುರಿಸೆಬಲಮಂ |
ಸರಿಯನರಿಂ ಮನ್ನಣೆ ವಿವೇಕಮುಪಕಾರಂ ||
ಪರಿಪರಿಸುಖಸಾಮ್ರಾಜ್ಯಂ |
ಚಿರಕಾಲಂ ಸಿರಿ ಕುಡುಗೆ ನಮ್ಮ ಕುಂಭೇಶಂ ||
ಹರಿಹರಭೇದವಮಾಳ್ಪರು |
ನರಕದಕಡೆಗಾಗಿ ನಡೆದುಹೋಗುವ ತೆರದೋಲ್ ||
ಸರಿಯೊಡನಾಡಿಗಳೊಳುಮಿತ |
ಪರಿಭವನಂ ಮಾಳ್ಪವರ್ಗೆ ತಪ್ಪದು ನರಕಂ ||

ಇದಾದನಂತರ ಜಯಘೋಷದಿಂದ ಸಭೆಯು ಬರಕಾಸ್ತಾಯಿತು.

ಪ್ರತ್ಯಕ್ಷದರ್ಶಿ.

ತುಮ್ಕೂರಿನ ಡೆಪ್ಯುಟಿ ಕಮಿಷನರು.

ಇವರು ಆಳುವ ಮಹಾಸ್ವಾಮಿಯವರಿಗೆ ಸಮೀಪ ಬಂಧುಗಳಾಗಿರುವದರಿಂದ ಪ್ರಭುವೆಂದರವರ ಮುಖ್ಯ ಉದ್ದೇಶಗಳನ್ನು ನೆರವೇರಿಸುವುದರಲ್ಲಿ ಬದ್ಧಕಂಕಣರಾಗಿರುತ್ತಾರೆ. ಇವರು ಈ ಡಿಸ್ಟ್ರಿಕ್ಟಿಗೆ ದಯಮಾಡಿಸಿ ಸ್ವಲ್ಪ ದಿವಸವಾದಾಗ್ಯೂ ಪ್ರಜೆಗಳ ಅಹವಾಲುಗಳನ್ನು ಬೇಜಾರುಗೊಳ್ಳದೆ ಕೇಳುತ್ತ ಮುಖ್ಯ ಮುಖ್ಯ ವಿಷಯಗಳನ್ನೆಲ್ಲಾ ಮನನ ಮಾಡಿಕೊಂಡು ರೈತರಿಗಿರುವ ತೊಡಕುಗಳನ್ನು ಬಗೆಹರಿಸುತ್ತಲಿರುವರು. ಸರ್ಕೀಟ್ ಕಾಲದಲ್ಲಿ ಆಯಾ ಪ್ರಾಂತದ ಹಳ್ಳಿಹಳ್ಳಿಗೂ ಭೇಟಿಕೊಟ್ಟು ರೈತರ ಸ್ಥಿತಿಗತಿಗಳನ್ನು ವಿಚಾರ ಮಾಡುತ್ತ ಆಯಾ ಕಡೆಗಳಲ್ಲಿರುವ ಜಲಾಶಯಗಳನ್ನೆಲ್ಲ ಪರಾಂಬರಿಸಿರುವರು. ವ್ಯವಸಾಯಗಾರರು ರಾಜ್ಯದ ಬೆನ್ನೆಲುಬೆಂಬದಾಗಿ ನಮ್ಮ ಶ್ರೀಮನ್ಮಹಾರಾಜರವರು ಒಂದು ವೇಳೆ ಅಪ್ಪಣೆ ಕೊಡಿಸಿರುವರಾದಕಾರಣ, ಇವರು ತಮ್ಮ ಧ್ಯೇಯವನ್ನು ರೈತರ ಕಡೆ ಇಟ್ಟಿರುವುದು ಸ್ತೋತ್ರಾರ್ಹವಾದ್ದೇ ಸರಿ. ಸರ್ಕಾರದ ಉತ್ಪತ್ತಿಯಕಡೆ ಲಕ್ಷ್ಯವಿಟ್ಟು ಬಡರೈತರ ಕ್ಷೇಮವನ್ನು ಅಷ್ಟಾಗಿ ಭಾವಿಸುವುದು ಹೆಚ್ಚು ಕೆಲಸವಾಗುತ್ತೆಂಬ ಭಾವನೆಯಿಂದ ಉಪೇಕ್ಷೆಮಾಡಿ ಗಲಾಟೆಗೆ ಅವಕಾಶವಾಗದ ರೀತಿ, ಬಾಹ್ಯಾಡಂಬರದ ಮುಖಂಡರ ಸ್ವಪ್ರಯೋಜನದ ಕಡೆ ಸಹಾಯಮಾಡುತ್ತಾ ಸರ್ಕಾರದಲ್ಲಿ ಹೆಸರುಳಿಸಿಕೊಳ್ಳುವ ಕಪಟ ಯುಕ್ತಿಯು ಇವರಲ್ಲಿರುವದಿಲ್ಲ. ಬಡರೈತರ ಕ್ಷೇಮವೇ ಸರ್ಕಾರದ ಉತ್ಪತ್ತಿಗೆ ತಳಹದಿಯಾಗಿರುತ್ತದೆಂಬುದಾಗಿ ಭಾವಿಸಿ ಈ ಸಂದರ್ಭದಲ್ಲಿ ಉಂಟಾಗುವ ಹೆಚ್ಚು ಕೆಲಸವನ್ನು ತಮಗಿರುವ ವಿಶೇಷ ಶಕ್ತಿಯಿಂದ ನಿರ್ವಹಿಸುತ್ತಲಿರುವರು. ಅಕೃತ್ರಿಮಪ್ರಜಾಸೇವಕರನ್ನು ಮನ್ನಿಸುತ್ತ ಬಡಪ್ರಜೆಗಳಲ್ಲಿ ನಿಷ್ಕಪಟವಾದ ಪ್ರೀತಿವಿಶ್ವಾಸಗಳನ್ನು ತೋರಿಸುತ್ತ, ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಿರುವದನ್ನ ನೋಡಿದರೆ ಬಡ ವ್ಯವಸಾಯಗಾರರ ಅದೃಷ್ಟ ದೇವತೆಯೇ ಈ ರೂಪ ಹೊಂದಿರಬೇಕೆಂಬ ಭಾವನೆಯು ಒಡದು ತೋರುತ್ತದೆ. ಇವರನ್ನು ಇಷ್ಟು ಕ್ಷಿಪ್ರವಾಗಿ ವರ್ಗಮಾಡಿದುದಕ್ಕಾಗಿ ಪ್ರಜೆಗಳು ಆಗ್ರಹಪೂರ್ವಕ ವ್ಯಸನಕ್ಕೀಡಾಗಿದ್ದಾರೆ. ಆದ್ದರಿಂದ ನಮ್ಮ ಸಂಸ್ಥಾನದ ದಿವಾನ್ ಸಾಹೇಬರವರು ಪ್ರಜೆಗಳ ಇಷ್ಟವನ್ನು ನೆರವೇರಿಸಲೆಂದು ಕುತೂಹಲ ಪಡುತ್ತೇನೆ. ವ್ಯವಸಾಯಗಾರರ ಹಿತೈಷಿ.

ವೀರಶೈವ ಸ್ತ್ರೀಯ ವಿದೇಶ ವೈದ್ಯವಿದ್ಯಾಲಾಭ.

ನಮ್ಮ ವೀರಶೈವಸಮಾಜದಲ್ಲಿ ವೈದ್ಯಕೀ ವಿದ್ಯೆಯಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಮೊದಲನೇ ಗ್ರ್ಯಾಜುಯೇಟರಾದ (ಎಂ.ಬಿ., ಬಿ.ಎಸ್.) ಶ್ರೀಮತಿ ಕೃಷ್ಣಾಬಾಯಿ ರುದ್ರಗೌಡ ಪಾಟೀಲ ಭೋಗಾವಿ ಜಿಲ್ಲಾ ಧಾರವಾಡ ಇವರು ಹೋದ ಜನವರಿ ತಿಂಗಳ ಕಡೆಯವಾರದಲ್ಲಿ ಜರುಗಿದ ಗ್ಲಾಸ್ಗೋ ವಿಶ್ವವಿದ್ಯಾಲಯದ ಸಿವಿಲ್ ಸರ್ಜನ್ ಪರೀಕ್ಷೆ (ಎಫ್. ಆರ್. ಎಫ್. ಪಿ. ಎಸ್.) ಯಲ್ಲಿ ಉತ್ತಮರೀತಿಯಿಂದ ಉತ್ತೀರ್ಣರಾಗಿರುವರೆಂಬುವುದನ್ನು ತಿಳಿಸಲು ಅತಿಶಯ ಆನಂದವಾಗುತ್ತದೆ. ಶ್ರೀ|| ಕೃಷ್ಣಾಬಾಯಿಯವರು ಕೊಲ್ಲಾಪುರದ [illegible]ರಾವ ಕೋರೆ ಇವರ ಜ್ಯೇಷ್ಠಪುತ್ರಿಯವರು. ಇವರು 1924 ನೇ ಇಸವಿಯಲ್ಲಿ ಮುಂಬೈ ಯೂನಿವರ್ಸಿಟಿಯ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಉತ್ತಮರೀತಿ ಉತ್ತೀರ್ಣರಾಗಲು ಬೆಳಗಾವಿಯ ಶಿರಸಂಗಿ ಟ್ರಸ್ಟಿಫಂಡಿನ ಮೂಲಸ್ಥಾಪಕರಾದ ರಾ|| ಬಾ|| ಅರ್ಟಾಳ ಮೊದಲಾದ ಟ್ರಸ್ಟಿ ಜನರು ವೈದ್ಯಕೀ ವಿದ್ಯೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸಮಾಡುವಸಲುವಾಗಿ ಇವರನ್ನು ವಿಲಾಯತಿಗೆ ಕಳಿಸಲು ಸದರಿ ಫಂಡಿನಿಂದ ಹದಿಮೂರುವರೆಸಾವಿರ ರೂಪಾಯಿಯ ಸ್ಕಾಲರಶಿಪ್ ಮಂಜೂರಮಾಡಿದರು. ತರುವಾಯ ಕೃಷ್ಣಾಬಾಯಿಯವರು 1925 ನೇ ಇಸವಿ ಎಪ್ರಿಲ್ ತಿಂಗಳಲ್ಲಿ ವಿಲಾಯತಿಗೆ ಪ್ರಯಾಣಬೆಳಸಿದರು. ಈ ಅವಧಿಯೊಳಗಾಗಿ ಇವರು ಇಂಗ್ಲೆಂಡಿನಲ್ಲಿ ದೊರಕಿಸಿರುವ ಪದವಿಗಳೆಂದರೆ—ಎಲ್. ಎಂ. (ರೊಟಂಡಾ) (ಹೆಂಗೆಯಶಾಸ್ತ್ರ) ಡಿ. ಜಿ. ಓ. (ಡಬ್ಲಿನ್) (ಗರ್ಭಶಾಸ್ತ್ರ, ಶಿಶುಪಾಲನ) ಎಂ. ಆರ್. ಸಿ. ಪಿ. (ಐರ್ಲೆಂಡ್) ಎಫ್. ಆರ್. ಎಫ್. ಪಿ. ಎಸ್. (ಗ್ಲಾಸ್ಗೊ) ಈ ಪದವಿಗಳ ಮೇಲಿಂದ ಕಂಡುಬರುವದೇನೆಂದರೆ, ಶ್ರೀಮತಿ ಕೃಷ್ಣಾಬಾಯಿಯವರಿಗೆ ಸಹಾಯ ಮಂಜೂರಮಾಡಿದ ಟ್ರಸ್ಟೀ ಜನರಿಗೆ ಎಷ್ಟೋ ಧನ್ಯವಾದಗಳನ್ನು ಅರ್ಪಿಸಿದರೂ ಕಡಿಮೆಯೇ ಸರಿ. ವೈದ್ಯಕೀ ವಿದ್ಯೆಯಲ್ಲಿ ಇವರಷ್ಟು ಪದವಿಗಳನ್ನು ದೊರಕಿಸಿರುವವರು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಹಿಂದುಸ್ಥಾನದ ಹಿಂದುಸಮಾಜದಲ್ಲಿ ಕಾಣುವದು ಅಪರೂಪ. ಈ ವಿದ್ವನ್ಮಣಿಯು ಕರ್ನಾಟಕದ ಸ್ತ್ರೀ ಸಮಾಜದ ಕಡುಗಲಿಯಲ್ಲವೆ! ಇವರ ಕೀರ್ತಿಯನ್ನು ಕರ್ನಾಟಕದ ಸ್ತ್ರೀ ಸಮಾಜವು ತೀವ್ರ ತಿಳಿವದೇನು? ಓರ್ವ ಮಹಿಳಾ ವಿದ್ಯಾಭಿಲಾಷಿ.

ಚೆನ್ನಪಟ್ಟಣದ ಟವನ್ ಮ್ಯುನಿಸಿಪಾಲಿಟಿಯ ವಿಚಾರಗಳು.

ಕಳೆದ ಆರುವರ್ಷಗಳಿಂದಲೂ ಈ ಊರಿನಲ್ಲಿ ಮ್ಯುನಿಸಿಪಾಲಿಟಿಯು ತುಂಬಾ ಕ್ಷೀಣದೆಸೆಗೆ ಬಂದಿದ್ದ ವಿಷಯವನ್ನು ಹೆಚ್ಚಾಗಿ ಹೇಳಬೇಕಾದದ್ದಿಲ್ಲ. ಆಗ ಇದ್ದ ಯುವಕ ವೈಸ್ ಪ್ರೆಸಿಡೆಂಟರು (ಸಿ. ಎಚ್. ರಾಮಚಂದ್ರರಾಯರು) ಮತ್ತು ಅವರನ್ನು ಹಿಂಬಾಲಿಸಿದ ಕೌನ್ಸಿಲರುಗಳೇ ಇದಕ್ಕೆ ಕಾರಣಕರ್ತರೆಂಬುದನ್ನು ಯಾರೂ ಮರೆಯಲಾರರು. ಹೇಗೆಂದರೆ, (ಯುವಕನಿಗೆ ಗೌಡಾಳಿಕೆ ಕೊಟ್ಟದ್ದಕ್ಕೆ ಮಡೆಗೆದ್ದೆ ಕುಯಿಸಿದನೆಂಬ ಗಾದೆಗನುಸಾರವಾಗಿ) ಇವರ ಆಡಳಿತದಲ್ಲಿ ಡಿಪಾಜಿಟ್ ಇದ್ದ ಹಣವೆಲ್ಲಾ ಮುಗಿದು ಹೋಗಿ ಕಡೆಗೆ ಸಾಲವಾಗಿ ಮ್ಯುನಿಸಿಪಲ್ ಪೇಮೆಂಟ್ಸು ತಿಂಗಳು ತಿಂಗಳು ಆಗುವುದು ಹೋಗಿ ಎರಡೆರಡು ತಿಂಗಳಿಗೊಂದಾವರ್ತಿ ಶುರುವಾಗಿ, ಬಡ ನೌಕರರು ಮತ್ತು ಜಾಡಮಾಲಿಗಳು ತುಂಬ ತೊಂದರೆ ಅನುಭವಿಸುತ್ತಿದ್ದರು. ಅಲ್ಲದೆ ಇವರಂತೆಯೇ ಟವನ್ ಸಭ್ಯಪ್ರಜೆಗಳು ತುಂಬಾ ಬೇಸತ್ತು ಇವರನ್ನು ಈ ಕೆಲಸದಿಂದ ತಪ್ಪಿಸಿ ಬೇರೆಯವರನ್ನು ಚುನಾಯಿಸಬೇಕೆಂದು ದಿವಾನ್ ಸಾಹೇಬರ ತನಕವೂ ಅರ್ಜಿಗಳನ್ನು ಬರೆದೂ ಬರೆದೂ ನಿಷ್ಫಲವಾಯಿತು. ಇದನ್ನೆಲ್ಲಾ ನೋಡಿ ಪ್ರಜೆಗಳ ಕಷ್ಟವನ್ನು ತಪ್ಪಿಸಬೇಕೆಂಬ ಸದುದ್ದೇಶದಿಂದ ಈ ಊರಿನ ದೊಡ್ಡಮನುಷ್ಯರೂ, ಆನರರಿ ಮ್ಯಾಜಿಸ್ಟ್ರೇಟರೂ ಮತ್ತು ಸಾಹುಕಾರರೂ ಅಲ್ಲದೆ ಪುರೋಭಿವೃದ್ಧಿಗಾಗಿ 30-40 ಸಾವಿರ ರೂಪಾಯಿಗಳ ವರಿವಿಗೆ ಧರ್ಮಕಾರ್ಯಗಳನ್ನು ಮಾಡಿ ಮೈಸೂರು ಮಹಾರಾಜರವರಿಂದ ಓಪನ್ ದರ್ಬಾರಿನಲ್ಲಿ ಖಿಲ್ಲತ್ತುಗಳ ಸಮೇತ ಪಬ್ಲಿಕ್ ಸರ್ವಿಸ್ ಮೆಡಲ್ ಪಡೆದಿರುವ ಮ|| ಡಿ. ವಿ. ರಾಮಸಂಜೀವರೆಡ್ಡಿಯವರು ಕಳೆದ ಎಲೆಕ್ಷನ್ನಲ್ಲಿ ನಿಂತು ಹೆಚ್ಚಿಗೆ ಓಟುಗಳನ್ನು ಪಡೆದು ಕೌನ್ಸಿಲರೂ ಮತ್ತು ಈ ಊರಿನ ವೈಸ್ ಪ್ರೆಸಿಡೆಂಟರು ಆಗಿ ಚುನಾವಣೆಯಾಗಿರುವುದು ಈ ಊರಿನ ಭಾಗ್ಯೋದಯವೇ ಸರಿ. ಇವರು ವೈಸ್ ಪ್ರೆಸಿಡೆಂಟರಾಗಿ ಚುನಾವಣೆಯಾದರೆಂಬ ವರ್ತಮಾನ ಕೇಳುತ್ತಲೆ ತುಂಬ ಹರ್ಷಿತರಾಗಿ ಈ ಊರಿನ ಸಭ್ಯಪ್ರಜೆಗಳು ಇವರನ್ನು ತಮ್ಮ ತಮ್ಮ ಮನೆಗಳಿಗೆ ಮಂಗಳವಾದ್ಯಗಳೊಡನೆ ಕರೆದುಕೊಂಡು ಹೋಗಿ ಹಾರ ತುರಾಯಿಗಳಿಂದ ಸತ್ಕರಿಸಿರುವುದನ್ನು ನೋಡಿದರೆ ಇವರಲ್ಲಿ ಟವನ್ ಪ್ರಜೆಗಳಿಗಿರತಕ್ಕ ಪ್ರೀತಿವಿಶ್ವಾಸಗಳು ಎಷ್ಟರಮಟ್ಟಿನವೆಂಬುದನ್ನು ಹೆಚ್ಚಾಗಿ ಬರೆಯಬೇಕಾದದ್ದಿಲ್ಲ. ಅಲ್ಲದೆ ಇವರು ತುಂಬ ಕ್ಷೀಣದೆಸೆಗೆ ಬಂದಿದ್ದ ಈ ಊರಿಗೆ ಒಂದಾದ ಕೋ-ಆಪರೇಟೀವ್ ಸೊಸೈಟಿಗೆ 3 ವರ್ಷಗಳಿಂದಲೂ ಪ್ರೆಸಿಡೆಂಟರಾಗಿ ತುಂಬ ಶ್ರಮವಹಿಸಿ ಇದ್ದ ನ್ಯೂನತೆಗಳನ್ನೆಲ್ಲಾ ಸರಿಪಡಿಸಿ ಬಹಳ ಉತ್ತಮಸ್ಥಿತಿಗೆ ತರುತ್ತಿರುವ ವಿಷಯ ಎಲ್ಲರಿಗೂ ಗೊತ್ತಾದದ್ದೇ ಆಗಿರುತ್ತದೆ. ಇವರು ಬಂದಮೇಲೆ ಅಂದರೆ ಈಗ 2-3 ತಿಂಗಳುಗಳಿಂದಲೂ ಮ್ಯುನಿಸಿಪಲ್ಲು ಕೆಲಸಗಳು ತುಂಬ ಚುರುಕಾಗಿ ನಡೆಯುವಂತೆಯೂ ಹಿಂದೆ ಇದ್ದ ನ್ಯೂನತೆಗಳನ್ನು ಸರಿಪಡಿಸುತ್ತ ಪೇಮೆಂಟ್ಸು ತಿಂಗಳು ತಿಂಗಳಿಗೆ ಸರಿಯಾಗಿ ಆಗುವಂತೆಯೂ ಏರ್ಪಾಡುಮಾಡಿ ಯಾವ ಕೆಲಸವನ್ನೂ ಖುದ್ದಾಗಿ ನೋಡಿ ನ್ಯಾಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಇತ್ಯರ್ಥಮಾಡುತ್ತಿರುತ್ತಾರೆ. ಇವರ ಕಾಲದಲ್ಲಿ 10-13 ವರ್ಷಗಳಿಂದಲೂ ಕಟ್ಟದವಾಗದೆ ನಿಂತಿದ್ದ ಈ ಊರಿನ ಟವನ್ ಹಾಲ್ ಕಟ್ಟಡದ ಕೆಲಸವು ಪ್ರಾರಂಭವಾಗಿರುತ್ತದೆ. ಇನ್ನು ಮುಂದೆ ಈ ಮ್ಯುನಿಸಿಪಾಲಿಟಿಯು ತುಂಬ ಉತ್ತಮಸ್ಥಿತಿಗೆ ಬರುತ್ತೆಂಬುದಕ್ಕೆ ಸಂಶಯವಿಲ್ಲ. ಇವರಿಗೆ ದೇವರು ಒಳ್ಳೇ ಆಯುರಾರೋಗ್ಯ ಭಾಗ್ಯವನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಟವನ್ ಹಿತಚಿಂತಕ.

ವೀರಶೈವಮತದ ಕಷ್ಟಗಳು.

ವೀರಶೈವಮತಕ್ಕೆ ಅನೇಕ ವಿಧವಾದ ತೊಂದರೆಗಳುಂಟಾಗುತ್ತಲಿವೆ. ವೀರಶೈವರು ಒಬ್ಬರ ತಂಟೆಗೆ ಹೋಗದೆ ತಮ್ಮ ಮತ ಪದ್ಧತಿಗಳನ್ನು ತಾವು ನಡೆಯಿಸಿಕೊಂಡು ಬರುವದಕ್ಕೆ ಉಪಹತಿಗಳುಂಟಾಗುತ್ತಲಿವೆ. ವೀರಶೈವರು ಭೋಜ್ಯವಸ್ತುಗಳನ್ನು ಅಲಿಂಗಿಗಳಿಂದ ಅಂಗೀಕರಿಸಕೂಡದೆಂಬುದು ಅನೇಕ ಕಟ್ಟುಗಳಲ್ಲಿ ಒಂದು ಕಟ್ಟಷ್ಟೆ. ಈ ವಿಚಾರದಲ್ಲಿ ಬಹುವಿಧವಾದ ಪೀಡನೆಗಳು ಸಂಭವಿಸುತ್ತಲಿವೆ. ಪ್ರಕೃತಕಾಲದಲ್ಲಿ ಎಲ್ಲಿನೋಡಿದರೂ ಅಧಿಕಾರಿಗಳು ಯಾವ ಸಭೆಯನ್ನು ಮಾಡಲಿ ಅಲ್ಪಾಹಾರದ ಏರ್ಪಾಟನ್ನು ಬಹಳವಾಗಿ ಮಾಡಿಕೆಗೆ ತರುತ್ತಲಿದ್ದಾರೆ. ಇವುಗಳಲ್ಲಿ ವೀರಶೈವರು ಪ್ರವರ್ತಿಸಬೇಕಾದರೆ ಬಹಳ ಕಷ್ಟಗಳು ಬರುತ್ತಲಿವೆ. ಎಲ್ಲ ವಿಷಯಗಳಲ್ಲಿ ಅನುಕೂಲವಿರುವಂತೆ ಈ ವಿಷಯದಲ್ಲೂ ಬ್ರಾಹ್ಮಣರಿಗೆ ತಮ್ಮ ಜನಬಾಹುಳ್ಯದಿಂದ ಅನುಕೂಲವಿರುತ್ತದೆ. ವೀರಶೈವರು ತಮಗೆ ಅಲ್ಪಾಹಾರಕ್ಕೆ ತಮ್ಮವರಿಂದ ಬೇರೆ ಏರ್ಪಾಟನ್ನು ಮಾಡಿಸಿಕೊಡಬೇಕೆಂದು ಅವರನ್ನು ಕೇಳಬೇಕಾಗಿರುತ್ತದೆ. ಆಗ ಅವರು ನಡಿಸಿಕೊಟ್ಟರೆ ಕೊಟ್ಟರು, ಇಲ್ಲವಾದರೆ ಇಲ್ಲ. ಈಗ್ಗೆ ಕೆಲ ವರ್ಷಗಳ ಹಿಂದೆ ಬೆಂಗಳೂರು ಗೌರ್ನಮೆಂಟು ಹೈಸ್ಕೂಲಿನಲ್ಲಿ ಸ್ಕೂಲ್ಡೇ ಎಂಬ ಸಮಾರಂಭವು ನಡೆವಾಗ್ಗೆ ಅಲ್ಪಾಹಾರದ ವಿಚಾರದಲ್ಲಿ ವೀರಶೈವ ವಿದ್ಯಾರ್ಥಿಗಳು ತಮಗೆ ತಮ್ಮವರಿಂದಲೇ ಬೇರೆ ಅಲ್ಪಾಹಾರದ ಏರ್ಪಾಟನ್ನು ನಡಿಸಿಕೊಡಬೇಕೆಂದು ಅತ್ಯಂತವಾಗಿ ಹೋರಾಡಬೇಕಾಗಿ ಬಂತು. ಆಮೇಲೆ ಬಹಳ ಕಷ್ಟದಿಂದ ತಮಗೆ ಬೇರೆ ಅಲ್ಪಾಹಾರದ ಏರ್ಪಾಟನ್ನು ಮಾಡಿಸಿಕೊಂಡರು. ಇದರಂತೆಯೇ ಬೇರೆ ಬೇರೆ ಸ್ಕೂಲುಗಳಲ್ಲಿಯೂ ನಡೆದದ್ದು ಸರ್ವರಿಗೂ ಗೊತ್ತೇಯಿದೆ. ಇಂಥ ಉಪಹತಿಗಳು ಆಗಿಂದಾಗ್ಗೆ ನಡೆಯುತ್ತಲೇ ಇವೆ. ಮೊನ್ನೆ ಶಿವಮೊಗ್ಗಾ ಇಂಟರ್ಮೀಡಿಯೆಟ್ ಹೈಸ್ಕೂಲಿನಲ್ಲಿ ಸ್ಕೂಲ್ಡೇ ಉತ್ಸವವು ನಡೆಯುವಾಗ್ಗೆ ವೀರಶೈವ ವಿದ್ಯಾರ್ಥಿಗಳು ತಮಗೆ ತಮ್ಮ ಜನರಿಂದ ಬೇರೆ ಅಲ್ಪಾಹಾರದ ಏರ್ಪಾಟನ್ನು ನಡಿಸಿಕೊಡಬೇಕೆಂದು ಕೇಳಿದ್ದಕ್ಕೆ ಹೆಡ್ ಮಾಸ್ಟರವರು—"ಲಿಂಗಾಯತರು ಸ್ಕಾಲರ್ಷಿಪ್ಪು ಫ್ರೀಶಿಪ್ಪು ಬೇಕಾದಾಗ ತಾವು ಕುಂಬಾರರೆಂದು ಹೇಳುವದಕ್ಕೆ ಹಿಂದೆಗೆಯುವುದಿಲ್ಲ. ಮತವಿಚಾರ ಬಂದಾಗ ಮಾತ್ರ ತಾವು ಶ್ರೇಷ್ಠರೆಂದು ಹೋರಾಡುತ್ತಾರೆ" ಎಂದು ಹೇಳಿದರಂತೆ. ಆಮೇಲೆ ಲಿಂಗಾಯತ ವಿದ್ಯಾರ್ಥಿಗಳು ಆ ಅಲ್ಪಾಹಾರಸಮಾರಂಭಕ್ಕೆ ಹೋಗದೆ ವಿಮುಖರಾದರಂತೆ.

ಬ್ರಾಹ್ಮಣರು ತಮ್ಮಂತೆ ಇತರ ಮತಸ್ಥರ ಗೌರವಗಳನ್ನು ಕಾಪಾಡುವುದು ನ್ಯಾಯವಲ್ಲವೆ? ಮೊನ್ನೆ ಬೆಂಗಳೂರು ಕೋಟೆದಪ್ಪನವರ ಛತ್ರದಲ್ಲಿ ಶ್ರೀ|| ಕೋಟೆದಪ್ಪನವರ ಜ್ಞಾಪಕಾರ್ಥವಾದ ಸಮಾರಂಭವು ನಡೆದಾಗ್ಗೆ ಮೆ|| ಭಾಷ್ಯಮ್ ಅಯ್ಯಂಗಾರ್ ರವರು ಕೆಲವು ಸದ್ಬೋಧೆಗಳನ್ನು ಹೇಳಿದ್ದರಲ್ಲಿ ಪ್ರಕೃತಕಾಲದ ತರುಣರು ಬರೀ ದೊಡ್ಡ ದೊಡ್ಡ ಪರೀಕ್ಷೆಗಳಿಗೆ ಹೋಗಿ ಅವರಲ್ಲಿ ತೇರ್ಗಡೆ ಹೊಂದುವದನ್ನು ನೋಡಕೂಡದು. ಚಿತ್ರಬರೆಯುವುದು ಮೊದಲಾದ ಕುಶಲೋದ್ಯೋಗಗಳ ಕಡೆಗೆ ಮನಸ್ಸನ್ನು ತಿರುಗಿಸಬೇಕೆಂತಲೂ ಭೇದವಿಲ್ಲದೆ ಒಬ್ಬರಲ್ಲೊಬ್ಬರು ಸಮಾಜ ಸಮ್ಮಿಳಿತ ಮಾಡಬೇಕೆಂತಲೂ, ಹಿಂದಿನ ಕೆಲಮಾರ್ಗಗಳಿಗೆ ಈಗಿನ ತರುಣರು ವಿರುದ್ಧಭಾವವನ್ನು ತೋರಿಸಬೇಕೆಂತಲೂ ಮುಂತಾಗಿ ಹೇಳಿದರು. ಇವರು ಸರ್ವಜನರ ಸಮಾಗಮಕ್ಕಾಗಿ ಹೀಗೆ ಹೇಳಿರಬಹುದು. ಆದರೆ ಲಿಂಗಾಯತ ವಿದ್ಯಾರ್ಥಿಗಳು ಇದನ್ನು ಬೇರೆ ಅರ್ಥಮಾಡಿಕೊಂಡು ತಮ್ಮ ಮತದ ಗೌರವಚ್ಯುತಿ ಕಾರ್ಯಗಳನ್ನು ಮಾಡದೆ ಎಚ್ಚರವುಳ್ಳವರಾಗಿರಬೇಕು. ವೀರಶೈವವೃದ್ಧರೇ ಆಗಲಿ ವೀರಶೈವತರುಣರೇ ಆಗಲಿ ಸಾಮಾಜಿಕ ಸಭೆಗಳಲ್ಲಿ ಅಲ್ಪಾಹಾರದ ಏರ್ಪಾಟುಗಳು ನಡೆಸಲ್ಪಟ್ಟಾಗ ತಮ್ಮವರಿಂದ ಬೇರೆ ಏರ್ಪಾಟು ಮಾಡಿಸಿಕೊಡುವಂತೆ ಮಾಡಿಕೊಳ್ಳಬೇಕು. ಅದು ನಡೆಯದಿದ್ದರೆ, ಅಲ್ಪಾಹಾರದ ಪೂರ್ತಿಗೆ ನಿರಾಕಾರವನ್ನು ತೋರಿಸಿಬಿಡಬೇಕು. ದೊಡ್ಡ ದೊಡ್ಡ ಪರೀಕ್ಷೆಗಳಿಗೆ ಹೋಗಿ ತೇರ್ಗಡೆಯನ್ನು ಹೊಂದುವ ವಿಚಾರದಲ್ಲಿ ವಿಮುಖತೆಯನ್ನು ತೋರಿಸಕೂಡದು. ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ದೊಡ್ಡ ಪದವಿಗಳನ್ನು ಪಡೆಯುವುದಕ್ಕೆ ಶ್ರಮಪಡಬೇಕು.

ಅನೂಚಾನವಾಗಿ ಬಂದಿರುವ ವೀರಶೈವರ ಆಹಾರ ಶುಚಿತ್ವತೆಯ ವಿಷಯವಾಗಿ ಮಿ|| E. P. Rice ಸಾಹೇಬರು ತಮ್ಮ "Kanarese Literature" ಎಂಬ ಗ್ರಂಥದಲ್ಲಿ—"The Lingayets are strict vegetarians. On this account, all other castes except Brahmins take meals in their house" ಎಂದು ಬರೆದಿರುತ್ತಾರೆ. ವೀರಶೈವರು ಬ್ರಾಹ್ಮಣರ ಪಾಕವನ್ನು ಸ್ವೀಕರಿಸುವುದಿಲ್ಲವೆಂಬುದರಿಂದಲೇ ಕೈಲು

ಗೆಳಲ್ಲೂ ಆಸ್ಪತ್ರೆಗಳಲ್ಲೂ ಲಿಂಗಾಯತರಿಗೆ ಬೇರೆ ಭೋಜನದ ಏರ್ಪಾಟು ಮಾಡಿರುತ್ತಾರೆ. ಇವುಗಳೆಲ್ಲವನ್ನೂ ಆಲೋಚಿಸಿ ವೀರಶೈವರು ತಮ್ಮ ತರು ಅರು ವೀರಶೈವತಮತ ಗೌರವಕ್ಕೆ ಚ್ಯುತಿಯಿಲ್ಲದಂತೆ ನಡೆಯುವದರಲ್ಲಿ ಎಚ್ಚರಿಕೆ ತೆಗೆದುಕೊಳ್ಳಬೇಕು. - ಗುರುವರ್ಗದವರು - ಅನುಚಾನರೂ— - ಭಕ್ತವರ್ಗದವರು - ಆಗಂತುಕರು ಎಂದು ವಿಭ್ರಾಂತಿಯ ಹೊಡೆದಾಟವನ್ನು ಮಾಡುವುದರಲ್ಲಿ ತಮ್ಮ ಒಟ್ಟು ಮತದ ಮೂಲಕ್ಕೇ ಕುಠಾರ ಬೀಳುತ್ತಿರುವದನ್ನು ಮರೆಯುವದರಿಂದ ಹಾನಿಯುಂಟು. ಎಲ್ಲರೂ ಒಟ್ಟು ವೀರಶೈವ ಮತೋದ್ಧಾರದ ಕಡೆಗೆ ಗಮನಕೊಡಬೇಕು.

ಜೀರಿಗೆ ಬಸವಲಿಂಗಪ್ಪ.

ಮುಕ್ತಿಗಿರಿ ಮಹಾಕ್ಷೇತ್ರದ ವೈಭವ.

ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕು ಮುರಗಮಲ್ಲಾ ಹೋಬಳಿ ಚಲಿಮಕೋಟೆ ಮುಕ್ತಿಗಿರಿ ಮಠವು ಶ್ರೀಮದ್ಭಾರದ್ವಾಜಾಶ್ರಮವೆಂಬ ದೇವಗಂಗಾಪ್ರವಾಹದೊಡನೆ ಗಿರಿಗುಹೆ ತರುಗುಲ್ಮಲತಾದಿಗಳಿಂದ ಕೂಡಿರುವ ಈ ಕ್ಷೇತ್ರಕ್ಕೆ ಪರಶಿವಲೀಲಾವತಾರಮೂರ್ತಿಗಳೆನಿಸಿಕೊಂಡ ಶ್ರೀ ಶಿವಯೋಗಿ ಸಿದ್ಧಲಿಂಗ ದೇಶಿಕವರೇಣ್ಯರವರು ಈಗ ಸುಮಾರು 30-35 ವರುಷದ ಕೆಳಗೆ ಅನೇಕ ಕ್ಷೇತ್ರಗಳನ್ನು ಸಂಚರಿಸಿ ಬಂದು ನೋಡಲಾಗಿ ಇದು ತಪಸ್ಸಿಗೆ ಯೋಗ್ಯವಾದ ಸ್ಥಳವೆಂದು ತಿಳಿದು ಸಂಕೋಚಿಸಿ ಯಾವ ಕಟ್ಟಡದ ಆಶ್ರಯವಿಲ್ಲದೆ ಪರ್ಣಶಾಲೆ ಗುಹಾದಿಗಳಲ್ಲಿ ವಾಸಮಾಡುತ್ತ ಬಂದಂಥ ಮುಮುಕ್ಷುಗಳನ್ನುದ್ಧಾರಮಾಡುತ್ತ ಜ್ಞಾನವೈರಾಗ್ಯೋಪರತಿಗಳೊಡನೆ ಬ್ರಹ್ಮಸಾಕ್ಷಾತ್ಕಾರದಿಂದ ತಪಸ್ಸನ್ನಾಚರಿಸಿ ಮಠವನ್ನು ಸ್ಥಾಪಿಸಿ ವಿಚಾರಪರರೂ ಸದುಣಶೀಲರೂ ಆದ ಈಗಿರುವ ಶ್ರೀಗಳವರಿಗೆ ಉತ್ತರಾಧಿಕಾರವನ್ನು ಕೊಟ್ಟು ಸುಮಾರು 8-9 ವರುಷದ ಕೆಳಗೆ ಶಿವಸಾಯುಜ್ಯವನ್ನೈದಿದರು. ಅಂದಿನಿಂದಲೂ ಇವರ ಸಾಹಸದಿಂದ ಮಠವು ಸಾಲಾದ ಕಟ್ಟಡಗಳಿಂದ ದಿನೇ ದಿನೇ ಅಭಿವೃದ್ಧಿಸ್ಥಿಗೆ ಬರುತ್ತಿರುವುದು. ಸರ್ವ ಕೋಮಿನವರೂ ಈ ಮಠಕ್ಕೆ ಅನನ್ಯಭಕ್ತಿಯಿಂದ ನಡೆದುಕೊಳ್ಳುತ್ತಿರುವರು. ಈ ಪ್ರಾಂತ್ಯ ವೀರಶೈವಜನಸಾಮಾನ್ಯವು ಕಮ್ಮಿಯುರುವದರಿಂದ ಈ ಡಿಸ್ಟ್ರಿಕ್ಟಿಗೆ ನೇತ್ರಪ್ರಾಯವಾಗಿರುವ ಈ ಮಠದ ಮೂರ್ತಿಗಳ ತಪೋಫಲವೂ ದಯಾಳುತ್ವವೂ ವರ್ಣಿಸಲಸದಳವಾಗಿರುವುವು. ಇರಲಿ. ಪ್ರತಿಸಂವತ್ಸರವೂ ನಡೆಯುವಂತೆ ಈ ಸಂವತ್ಸರವೂ ತಾ|| 16-2-29 ನೇ ಶನಿವಾರ ಅಂಕುರಾರ್ಪಣ ಮೊದಲಾದ ಕಾರ್ಯಗಳು ತಾ|| 17-2-29 ನೇ ಭಾನುವಾರ ಪ್ರಾತಃಕಾಲ ಶ್ರೀ ಶಿವಯೋಗಿಸಿದ್ಧಲಿಂಗ ದೇಶಿಕೇಂದ್ರಸ್ವಾಮಿಗಳ ಗದ್ದುಗೆಗೆ ಬೆಂಗಳೂರು ವೇ|| ಶಿವಯ್ಯಶಾಸ್ತ್ರಿಗಳವರ ಪೌರೋಹಿತ್ಯದಿಂದ ವೇದಘೋಷದೊಡನೆ ನಮಕ ಚಮಕ ಸೂಕ್ತಗಳಿಂದ ಮಹಾರುದ್ರಾಭಿಷೇಕವೂ, ಸಹಸ್ರನಾಮ ಪೂಜೆಯೂ ನಡದು ತದನಂತರ ಮಠಾಧ್ಯಕ್ಷರಾದ ಶ್ರೀ ಶಿವಯೋಗಿ ಬಸವರಾಜ ಮರಿದೇಶಿಕೇಂದ್ರ ಮಹಾಸ್ವಾಮಿಗಳವರ ಪಾದವನ್ನು ವೇದಪಠನದಿಂದಲೂ ಕ್ರಮವಾಗಿ ಅಷ್ಟೋತ್ತರ ಸಹಸ್ರಬಿಲ್ವಾರ್ಚನೆ ಮೊದಲಾದವುಗಳಿಂದಲೂ ಭಕ್ತಮಾಹೇಶ್ವರರಾದಿಯಾಗಿ ಸರ್ವರೂ ಪೂಜಿಸಿ ಮನದಣಿಯುವಂತೆ ಆನಂದಪರವಶರಾದರು. ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟ ಅಲ್ಲಲ್ಲೇ ಚಪ್ಪರ ಜಾಂಡ್ಯ ಭಜನಾ ಶಿವನಾಮಸಂಕೀರ್ತನಾದಿಗಳಿಂದ ಮಹಾಕ್ಷೇತ್ರವು ಕೈಲಾಸದಂತೆ ಭಾಸಮಾನವಾಗುತ್ತಿತ್ತು. ಆಶ್ರಮದಲ್ಲಿರುವ ಮುಕ್ತೇಶ್ವರ, ಸಪ್ತಮಾತೃಕಾ, ವೇಣುಗೋಪಾಲ, ವಿಶ್ವೇಶ್ವರ, ಬಸವೇಶ್ವರ, ಆಂಜನೇಯ ಮೊದಲಾದ ದೇವಸ್ಥಾನಗಳಲ್ಲಿ ದೇವರುಗಳಿಗೆ ವಾದ್ಯವೈಭವದೊಡನೆ ಪೂಜೆಯೂ ಮಹಾಮಂಗಳಾರತಿಯೂ ನಡದು ಸರ್ವರೂ ಶ್ರೀಗಳವರಿಂದ ತೀರ್ಥಪ್ರಸಾದ ಸ್ವೀಕರಿಸಿದನಂತರ ಸಾಧುಸತ್ಪುರುಷರೂ, ಸರಕಾರಿ ತಾಲ್ಲೂಕು ಆಫೀಸರುಗಳಿಗೂ ಬಡಬಗ್ಗರಾದಿಯಾಗಿ 4-5 ಸಾವಿರ ಜನಗಳೂ ಅನ್ನಸಂತರ್ಪಣೆಯಿಂದ ತೃಪ್ತಿಪಡಿಸಲ್ಪಟ್ಟರು. ತರುವಾಯ ಸಾಯಂಕಾಲ ಮಗ್ಗುಗಳಿಂದ ಶೃಂಗರಿಸಲ್ಪಟ್ಟದ್ದ ಮಂದಾಸನದಲ್ಲಿ ಶ್ರೀಗಳವರ ದೊಡ್ಡ ಫೋಟೋವನ್ನು ಬಿಜಯಂಗೈಸಿ ಕೆಲವು ಬಿರುದುಗಳಿಂದಲೂ ಬಾಣಬಿರುಸುಗಳಿಂದಲೂ ವಾದ್ಯ ವೇದಘೋಷಗಳಿಂದಲೂ ಉತ್ಸವವು ಬಹಳವಿಜೃಂಭಣೆಯಾಗಿ ನಡೆಯಿತು. ಮಹಿಳೆಯರು ಆರತಿಯೆತ್ತಿ ಮಂಗಲಗಳನ್ನು ಪಾಡುತ್ತ ಅಲ್ಲಲ್ಲಿ ಮಾರ್ಗಗಳಲ್ಲಿ ಪೂಜಿಸುತ್ತ ಮಠಕ್ಕೆ ಉತ್ಸವವು ಬಿಜಯಮಾಡಿಸಿದನಂತರ ಮ|| ಪಟ್ಟಾಭಿರಾಮದಾಸರವರಿಂದ ಉಪನ್ಯಾಸ ಶಿವಕಥಾ ಕೀರ್ತನೆಗಳು ಬೆಳಗಿನವರೆಗೂ ನಡೆಸಲ್ಪಟ್ಟವು. ಅಭಿಮಾನಶಾಲಿಗಳಾದ ಮ|| ಬೆಂಗಳೂರು ಯಜಮಾನ್ ಗರಡಿ ಚಿಕ್ಕವೀರಪ್ಪನವರು, ಮ|| ಮ್ಯುನಿಸಿಪಲ್ ಕೌನ್ಸಿಲರ್ ಮೆಂಬರು ಡಿ. ಸಿದ್ಧವೀರಪ್ಪನವರು ಮೈಸೂರು ಬಾಡೀಗಾರ್ಡ್ ಕೃಷ್ಣಾಜಿರಾವ್ ಮಾನೆಯವರು, ಸಿದ್ಲಗಟ್ಟದ ಮ|| ವಿರೂಪಾಕ್ಷಪ್ಪನವರು, ಮ|| ತೋಟಪ್ಪನವರು, ವಡಿಗೇನಹಳ್ಳಿ ಆನೆಕಲ್ ನಂಜುಂಡಪ್ಪನವರು, ಬೆಂಗಳೂರು ಮೈಸೂರು ಲಾನ್ಸರ್ಸ್ ರಿಸಾಲ್‌ದಾರ್ ಲಿಂಬಾಜಿರಾವ್ ಮನ್ನಾಜಿ ಭೋಜಗಡೆಯವರು, ಚಿಂತಾಮಣಿ ಮ|| ಸಿದ್ಧಬಸವಾರಾಧ್ಯರು, ಶ್ರೀನಿವಾಸಪುರದ ಮ|| ವೀರಪ್ಪನವರು, ಮ|| ಸೋಮಪ್ಪನವರು, ದೊಡ್ಡಬಳ್ಳಾಪುರದ ಸರಾಫ್ ಪುಟ್ಟಣ್ಣನವರು, ಟಿ. ಸಿದ್ಧಪ್ಪನವರು ಇನ್ನು ಕೆಲವು ಉದಾರಮತಿಗಳಿಂದ ಕಾರ್ಯಕಲಾಪಗಳು ಬಹಳ ವಿಶರಣೆಯಿಂದಲೂ ವಿಜೃಂಭಣೆಯಿಂದಲೂ ಸಾಂಗವಾಗಿ ನಡೆದವು. ಗೌರ್ನಮೆಂಟಿನ ಉಸ್ತುವಾರಿ ಬಹಳ ಸಮರ್ಪಕವಾಗಿದ್ದಿತು. ಇಲ್ಲಿ ನೀರಿಗೆ ಸ್ವಲ್ಪ ತೊಂದರೆ ಇದ್ದದ್ದರಿಂದ ಗೌರ್ನಮೆಂಟಿನವರು ಒಂದು ಭಾವಿಯನ್ನು ಕಟ್ಟಿಸಕ್ಕಾರೆಂದು ಕೇಳಿ ಬಹಳ ಸಂತೋಷಿಸುತ್ತೇವೆ. ತಾ|| 18-2-29 ನೇ ಸೋಮವಾರ ಮೇಲ್ಕಂಡ ದೊಡ್ಡಮನುಷ್ಯರು ಮಠದ ಊರ್ಜಿತಸ್ಥಿತಿಯನ್ನು ಕುರಿತು ಮಿಟಿಂಗು ನಡಿಸಿ ಚರ್ಚಾಸ್ಪದವಾದ ಕೆಲವು ವಿಷಯಗಳಮೇಲೆ ಠರಾವಾಗಿ ಪಾಸಾದವು. ಮುಂದೆ ಏಪ್ರಿಲ್ ತಾ|| 16-4-29 ಕ್ಕೆ ಒಂದು ಮಿಟಿಂಗು ನಡೆಸಲು ಸರ್ವಸಮ್ಮತದಿಂದ ನಿಶ್ಚಯವಾಯಿತು. ಬಂದಿದ್ದ ಭಕ್ತ ಮಾಹೇಶ್ವರರಾದಿಯಾಗಿ ಸರ್ವರೂ ಶ್ರೀಗಳವರಿಂದ ಆಶೀರ್ವಾದವನ್ನು ಪಡೆದು ಜಯ ಜಯಾಕಾರ ಮಾಡುತ್ತ ಕ್ಷೇತ್ರವನ್ನೂ ಮೂರ್ತಿಗಳನ್ನೂ ಸ್ತೋತ್ರಮಾಡುತ್ತ ತೆರಳಿದರು. ಈ ಕಾರ್ಯಗಳಲ್ಲಿ ಭಾಗಿಗಳಾಗಿದ್ದ ಸಕಲರಿಗೂ ದಯಾಮಯನಾದ ಭಗವಂತನು ಆಯುರಾರೋಗ್ಯ ಮಂಗಲವನ್ನೀಯಲಿ.

ಓರ್ವ ಮಠಾಭಿಮಾನಿ.

ಶ್ರೀ ಶಿವಯೋಗಮಂದಿರ ಯಾತ್ರಾ ಮಹೋತ್ಸವವು.

ಅಯ್ಯಾ ವೀರಶೈವಬಾಂಧವರೇ, ಬಹುಕಾಲದಿಂದ ನಡೆದು ಬಂದ ಮಹಾ ಶಿವರಾತ್ರಿಯ ಮಹತ್ವವನ್ನೂ ಅದನ್ನು ಪರಿಪಾಲಿಸುವ ಬಗೆಯನ್ನೂ ತಾವೆಲ್ಲರೂ ಅರಿತವರಾಗಿದ್ದೀರಿ. ಈ ಯೋಗದಲ್ಲಿಯೇ ಪಾರಮಾರ್ಥಿಕ ಲೌಕಿಕ ಲಾಭವು ತಮ್ಮೆಲ್ಲರಿಗೆ ದೊರೆಯಬೇಕೆಂಬ ಸದುದ್ದೇಶದಿಂದಲೇ ಎಂದಿನಂತೆ ಈ ವರ್ಷವಾದರೂ ಜಾತ್ರೆಯು ಜರಗಿಸಲ್ಪಡುವುದು. ಕರ್ನಾಟಕ ಮತ್ತು ಬೇರೆ ಬೇರೆ ಪ್ರಾಂತಗಳಿಂದ ಧರ್ಮಪರಾಯಣರೂ ಶಾಸ್ತ್ರಜ್ಞರೂ ಪ್ರಸಿದ್ಧ ವ್ಯಾಖ್ಯಾತರೂ ಮತ್ತು ಕೀರ್ತನಕಾರರೂ ಬರುವರು. ಹಾನಗಲ್ಲ ಹಾವೇರಿ ಶ್ರೀಗಳವರ ಸನ್ನಿಧಿಯು ಇಲ್ಲಿಯೇ ಇರುವದು, ಈ ಸುಸಂಧಿಯನ್ನು ವ್ಯರ್ಥವಾಗಿ ಕಳೆಯದೆ ಆಸ್ತಿಕ ಮಹಾಶಯರೆಲ್ಲರೂ ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆಯುವರೆಂದು ನಂಬಿ ನಿಯಮಿತ ಕಾರ್ಯಕ್ರಮವನ್ನು ವಿವರಿಸುವೆವು. ಮಹಾ ಶಿವರಾತ್ರಿಯಲ್ಲಿ ಅಂದರೆ ಇದೇ ಮಾರ್ಚಿ ತಾ|| 9ನೇ ಶನಿವಾರ ಶಿವಭಜನೆ ಶಿವಾನುಭವ ರಾತ್ರಿ ಪಾಲಖೀ ಶಿವಕೀರ್ತನೆಗಳೂ ಉತ್ಸವವೂ ಜರಗುವುವು. ತಾ|| 10ನೇ ರವಿವಾರ ಮುಂಜಾನೆ ಸುಪ್ರಸಿದ್ಧ ವೇ|| ಗಾಯನಕಲಾನಿಧಿ ಪಂಚಾಕ್ಷರಿ ಗವಾಯಿಗಳವರ ಹಾಗು ಸಂಗೀತಪಾಠಶಾಲೆಯ ವಿದ್ಯಾರ್ಥಿಗಳ ಗಾಯನವೂ ಶಿವಯೋಗ ಸಾಧಕರ ಮತ್ತು ಬೇರೆ ಬೇರೆ ಸ್ಥಳಗಳಿಂದ ಬಂದ ಪ್ರಸಿದ್ಧ ವ್ಯಾಖ್ಯಾತರ ಉಪನ್ಯಾಸಗಳೂ ಸಾಯಂಕಾಲ ರಥೋತ್ಸವವೂ ಶ್ರೀಮಂತ ಇಟಗಿ ದೇಸಾಯರವರ ಇವನಾರತಿಯಲ್ಲಿ ಮಹಿಳಾ ಪರಿಷತ್ತೂ ರಾತ್ರಿ ಶಿವಭಜನೆ ಶಿವಕೀರ್ತನೆಗಳೂ ನಡೆಯುವವು. ತಾ|| 11 ಸೋಮವಾರ ಮುಂಜಾನೆ ಶಿವಭಜನೆ ವ ವ್ಯಾಖ್ಯಾನಗಳು ನಡೆಯುವವು. ಮಧ್ಯಾಹ್ನ ಪ್ರದರ್ಶನಕ್ಕಾಗಿ ಬಂದ ಎತ್ತು ಹೋರಿಗಳ ಪರೀಕ್ಷೆಯು ಸೆಲೆಕ್ಟ ಕಮಿಟಿಯವರಿಂದ ಮಾಡಲ್ಪಟ್ಟು ಯೋಗ್ಯವೆಂದು ಕಂಡುಬಂದವುಗಳಿಗೆ ತಕ್ಕ ಸಂಭಾವನೆಯು ಕೊಡಲ್ಪಡುವುದು. ಕಾರಣ ತಾವು ತಮ್ಮ ಗ್ರಾಮದ ಅಭಿಮಾನಿಗಳೊಡನೆ ಅವಶ್ಯವಾಗಿ ಬಂದು ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕೆಂದು ಕೋರುವ,

ತಮ್ಮ ವಿಧೇಯ,
ವ್ಯವಸ್ಥಾಪಕ ಶಿವಯೋಗಮಂದಿರ.

ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡ್ ಸಂಘದಲ್ಲಿ 1-7-27 ರ ಲಾಗಾಯ್ತು 31-6-28 ರ ವರಿವಿಗೆ ನಡೆದ ಜಮಾ ಖರ್ಚು ಲೆಕ್ಕದ ತಖ್ತೀಲ್.

ಜಮ.

1-7-27 ರ ವರೆಗೆ ಬ್ಯಾಲೆನ್ಸ್‌ಷೀಟಿನಲ್ಲಿ ನಮೂದಿರುವ

ಮೂಲಧನ	63178-11-0
ಪಕ್ಕೆಫಂಡಿನ ವಸೂಲಿಯಿಂದ ನಗದಾಗಿ	3410-15-9
ಮಾಲು ಮಾರಾಟ ಮಾಡಿದ್ದು	361-14-0
ಲಗ್ನ ಮುಂತಾದ ಶುಭಕಾರ್ಯಗಳಿಂದ	123- 8-0
ಮೈಸೂರು ಬ್ಯಾಂಕ್ ಷೇರು, ಡಿವಿಡೆಂಡ್, ಸ್ಟೇಟ್ ಲೋನ್ ಮತ್ತು ಫಿಕ್ಸೆಡ್ ಡಿಪಾಜಿಟ್ ವಗ್ಯೆರೆಯಿಂದ ಬಂದ ಬಡ್ಡಿ	4586-15-0
ಶ್ರೀ ಪ್ರಭುದೇವರ ಗದ್ದುಗೆ ರಿಪೇರಿಗಾಗಿ ಬಂದದ್ದು	200- 0-0
ಬಿಗಟೇರಿ ಸಣ್ಣರಾಚಪ್ಪನವರ ಫಂಡ್	1825-14-9
ಗದಗಿನ ತುಪ್ಪದ ಅಡಿವಪ್ಪನವರಿಂದ	101- 0-0
ಪಂಚವಣಿಗೆ ಮಠದ ಹುಚ್ಚೀರಪ್ಪನವರ ಫಂಡ್	14- 4-0
ಶ್ರೀ ಬಸವೇಶ್ವರ ಜಯಂತಿ ಫಂಡ್	5- 0-0
ಶ್ರೀ ಶಿವಯೋಗಾಶ್ರಮದ ಬಾಬತು	6- 6-0
ಶ್ರೀ ವಿರಕ್ತಮಠದ ಮನೆ ಬಾಡಿಗೆ	78- 0-0
ಮೈಸೂರು ಮಠದ ಚೆನ್ನವೀರಯ್ಯನವರಿಂದ	735- 0-0
ಜುಮ್ಲ	74627- 8-6

ಖರ್ಚು

ಮೈಸೂರು ಬ್ಯಾಂಕ್ ಷೇರು 100 ಕ್ಕೆ		10000- 0-0
ಮೈಸೂರು ಸ್ಟೇಟ್ ಲೋನ್ ಬಾಂಡು ಶೇ 7	ರಂತೆ	5000- 0-0
ಡಿಟೋ	ಶೇ 6½ ,,	21100- 0-0
ಡಿಟೋ	ಶೇ 6¼ ,,	1725- 0-0
ತಾಲ್ಲೂಕು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್		1883-13-0
ಮೈಸೂರು ಬ್ಯಾಂಕ್ ಫಿಕ್ಸೆಡ್ ಡಿಪಾಜಿಟ್		27537- 9-0
ಭಾಂಡೆ ಸಾಮಾನು		107-15-0
ಪರ್ನಿಚರ್		106- 0-0
ನಾಲುಕೊಟ್ಟ ಬಾಬತು ರಾಜನಹಳ್ಳಿ ರಂಗಪ್ಪನವರಿಂದ		74- 0-9
ನಗದು ಶಿಲ್ಕು		769- 4-9
ಬೋರ್ಡಿಂಗ್ ಖರ್ಚು		1578- 0-9
ಫಂಡಿನ ಎಸ್ಟಾಬ್ಲಿಷ್‌ಮೆಂಟ್ ಖರ್ಚು		1018- 8-0
ಶ್ರೀಗಳವರ ಮತ್ತು ಮಠದ ಖರ್ಚು		585-12-6
ಲೋವರ್‌ಸೆಕೆಂಡರಿ ಬೋರ್ಡಿಂಗ್ ಖರ್ಚು		183. 1-3
ಸ್ಕಾಲರ್‌ಷಿಪ್ ಲಾ ಕಾಲೇಜ್ ಬಿ.ಎ., ಇಂಟರ್‌ಮಿಡಿಯಟ್ ಟೆಕ್ನಿಕಲ್ ಸಂಸ್ಕೃತ ಹೈಸ್ಕೂಲ್ ಮಿಡಲ್ ಸ್ಕೂಲು ವಿದ್ಯಾರ್ಥಿಗಳಿಗೆ		2834- 0-0
ಬಿಗಟೇರಿ ಸಣ್ಣರಾಚಪ್ಪನವರ ಫಂಡ್ ಸ್ಕಾಲರ್‌ಷಿಪ್		106- 0-0
ಸಾದಿಲ್ವಾರ್ ಪೋಸ್ಟೇಜ್ ಸೇರಿ		16- 7-0
ಜುಮ್ಲ		74627- 8-6

ದಾವಣಗೆರೆ ವೀರಶೈವವಿದ್ಯಾವರ್ಧಕಫಂಡ್ ಸಂಘದ ಮಾನೇಜಿಂಗ್ ಕಮಿಟಿಗೆ 1928-29, 1929-30 ನೇ ಸಾಲಿಗೆ ಚುನಾಯಿಸಲ್ಪಟ್ಟ ಮೆಂಬರುಗಳು.

(1) ತಿರುಕಪ್ಪನವರ ಮಠದ ಹಡಾಕ್ಷರಪ್ಪನವರು ಬ್ಯಾಂಕರ್ಸ್ ಮತ್ತು ಜಮೀನ್‌ದಾರ್ (ಪ್ರೆಸಿಡೆಂಟ್) (2) ಯಜಮಾನ್ ಮೋತಿ ದೊಡ್ಡಪ್ಪನವರು ಜಮೀನ್‌ದಾರ್ ಮತ್ತು ಕಮಿಷನ್ ಏಜಂಟ್ (ವೈಸ್‌ಪ್ರೆಸಿಡೆಂಟ್) (3) ಹೆಬ್ಬಾಳು ಮಠದ ಸಿದ್ಧರಾಮಯ್ಯನವರು ಬಿ.ಎ., ಎಲ್‌ಎಲ್.ಬಿ., ಅಡ್ವೊಕೇಟ್ (ಸೆಕ್ರೆಟರಿ) (4) ಮೈಸೂರುಮಠದ ಚೆನ್ನವೀರಯ್ಯನವರು ಜಮೀನ್‌ದಾರ್ ಕಮಿಷನ್ ಏಜಂಟ್ ಡಿಸ್ಟ್ರಿಕ್ಟು ಬೋರ್ಡು ಮೆಂಬರು (ಅಸಿಸ್ಟೆಂಟ್ ಸೆಕ್ರೆಟರಿ ಮತ್ತು ಟ್ರಜರರ್) (5) ಕುಂದೂರುಮಠದ ನಾಗಯ್ಯನವರು ಬಿ.ಎ., ಬಿ.ಎಲ್., ಅಡ್ವೊಕೇಟ್ (ಆಡಿಟರ್) (6) ಉರೆಕೊಂಡಿ ಚೆನ್ನಬಸಪ್ಪನವರು ಜಮೀನ್‌ದಾರ್, ಕಾಟನ್‌ಮರ್ಚೆಂಟ್ ಮತ್ತು ರೆಪ್ರೆಸೆಂಟೇಟಿವ್ ಅಸೆಂಬ್ಲಿ ಮೆಂಬರು (7) ಪಲ್ಲಾಗಟ್ಟೆ ಗುರುಸಿದ್ಧಪ್ಪನವರು ಜಮೀನ್‌ದಾರ್, ಮತ್ತು ಕಮಿಷನ್ ಏಜಂಟ್ (8) ಬೇತೂರು ಸಣ್ಣತಿಪ್ಪಣ್ಣನವರು ಜಮೀನ್‌ದಾರ್, ಮತ್ತು ಕಮಿಷನ್ ಏಜಂಟ್ (9) ಮಾಗಾನಹಳ್ಳಿ ಗುರುಬಸಪ್ಪನವರು ಜಮೀನ್‌ದಾರ್ ಮತ್ತು ಕಾಟನ್‌ಮರ್ಚೆಂಟ್ (10) ಹಂಜಿಗೆಮಠದ ಪ್ರಭಯ್ಯನವರು ಜಮೀನ್‌ದಾರ್ ಮತ್ತು ಕಮಿಷನ್ ಏಜಂಟ್ (11) ಬೆಳ್ಳೂಳ್ಳಿ ಚೆನ್ನವೀರಪ್ಪನವರು ಜಮೀನ್‌ದಾರ್ (12) ಅಂದನೂರು ಮಲಶೆಟ್ಟಿಪ್ಪನವರು ಜಮೀನ್‌ದಾರ್ ಮತ್ತು ಕಮಿಷನ್ ಏಜಂಟ್ (13) ಅಂದನೂರು ಕೊಟ್ರಬಸಪ್ಪನವರು ಜಮೀನ್‌ದಾರ್ ಮತ್ತು ಕಮಿಷನ್ ಏಜಂಟ್ (41) ಐನಳ್ಳಿ ವೀರಭದ್ರಪ್ಪನವರು ಜಮೀನ್‌ದಾರ್ ಮತ್ತು ಮರ್ಚೆಂಟ್ (51) ರಾಣಿಬೆನ್ನೂರು ಗುಂಡಪ್ಪನವರು ಕಮಿಷನ್ ಏಜಂಟ್ ಮತ್ತು ಮ್ಯುನಿಸಿಪಲ್ ಮೆಂಬರು.

ಪ್ರತಿವರ್ಷವು ಸ್ಕಾಲರ್‌ಷಿಪ್ ಅಪೇಕ್ಷಿಸತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತ ಇದೆ. ಪಕ್ಕೆಫಂಡಿನ ವರಮಾನವು ವರ್ಷೇವರ್ಷೇ ಬಹಳ ಕಡಮೆಯಾಗುತ್ತಬರುತ್ತೆ. ವಿದ್ಯಾಭಿಮಾನಿಗಳು ಆದ ಈ ಸಂಘದ ಮೆಂಬರುಗಳು ಹಿಂದಿನ ಬಾಬತು ಪಕ್ಕೆ ಮೊಬಲಗು ಕೊಡತಕ್ಕದ್ದಿದ್ದರೆ ಮುಂದೆ ಗಮನಕೊಟ್ಟು ವ್ಯವಸ್ಥೆಪಡಿಸಿ ಮುಂದೆಯು ಕ್ರಮವಾಗಿ ಪಾವತಿಮಾಡಿ ಕೀರ್ತಿಗೆ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇನೆ.

(Sd) ಎಚ್. ಎಂ. ಸಿದ್ಧರಾಮಯ್ಯ, ಬಿ.ಎ., ಎಲ್‌ಎಲ್.ಬಿ.
ಅಡ್ವೊಕೇಟ್
ಆನರರಿ ಸೆಕ್ರೆಟರಿ ವಿ. ವಿ. ಫಂಡ್ ಸಂಘ, ದಾವಣಗೆರೆ

ಶ್ರೀಮನ್ನಿರಂಜನ ಜಗದ್ಗುರು ಷಟ್‌ಸ್ಥಲ ಪರಿವ್ರಾಜಕಾಚಾರ್ಯ ಶ್ರೀ ನಾರಗಡ್ಡೆ ಮಹಾಕ್ಷೇತ್ರ-ಚನ್ನಬಸವ ಮಹಾಸ್ವಾಮಿಗಳವರ ರಥೋತ್ಸವದ ಆಹ್ವಾನ ಪತ್ರಿಕೆ.

ಸನಾತನ ಧರ್ಮಾವಲಂಬಿಗಳಾದ ವೀರಶೈವ ಸಮಾಜಕ್ಕೂ ಇತರ ಧರ್ಮಾವಲಂಬಿಗಳಿಗೂ ಶ್ರುತಪಡಿಸುವದೇನಂದರೆ—ಪುರಾಣೇತಿಹಾಸಪ್ರಸಿದ್ಧವಾಗಿಯೂ ಕೃಷ್ಣಾ-ಭಾಗೀರಥಿಯ ತರಂಗಗಳಿಂದ ಪವಿತ್ರವಾದ ಸ್ಥಾನವಾಗಿಯೂ ತಮ್ಮಯ ಶಿವಯೋಗಾನಂದ ನಿದ್ರೆಯಲ್ಲಿ ಜೀವನ್ಮುಕ್ತರಾಗಿ ಸದಾ ನಿತ್ಯಾನಂದದಲ್ಲಿ ಮಗ್ನರಾಗಿ ವಾಸಿಸುವ ಮಹಾಸ್ವಾಮಿಗಳ ಸದರಿ ಕ್ಷೇತ್ರದಲ್ಲಿ ಪ್ರತಿವರುಷದಂತೆ ಈ ವರುಷದಲ್ಲಿ ಫಾಲ್ಗುಣ ಶುದ್ಧ ಪ್ರತಿಪದ ಮಂಗಳವಾರ ಕಂಕಣಧಾರಣವು, ದ್ವಿತೀಯ ತೃತೀಯದಿನಗಳಲ್ಲಿ ವಾಹನಗಳಮೇಲೆ ಸ್ವಾಮಿಯ ಉತ್ಸವವು, ಪಂಚಮಿ ಶುಕ್ರವಾರ ಮಹಾಸ್ವಾಮಿಯ ರಥೋತ್ಸವವು, ಶನಿವಾರ ವಿದ್ವಜ್ಜನಾದಿಗಳ ಮತಸಂಬಂಧವಾದ ಉಪನ್ಯಾಸ ಕೀರ್ತನ ಮುಂತಾದವುಗಳು ಸದರಿಯ ದಿವಸದಲ್ಲಿ ಮಹಾಸ್ವಾಮಿಯ ಸಿಂಹಾಸನಾರೋಹಣದ ಉತ್ಸವವು ಭಾನುವಾರ ಲಂಕಾದಹನವು ಈ ಪ್ರಕಾರವಾಗಿ ಜರುಗುತ್ತವೆ. ಇದೇ ಸಮಯದಲ್ಲಿ ಪ್ರತಿವರುಷದಂತೆ ಈ ವರುಷದಲ್ಲು ಶ್ರೀಮಂತ ರಸ್ತಾಪುರದ ಮುನಿಯಪ್ಪನವರು ಮಹೋತ್ಸವಕ್ಕೆ ಬರುವ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯಿಂದ ಸ್ವಾಮಿಯಲ್ಲಿ ಇರುವ ಭಕ್ತಿಪ್ರೇಮೋದ್ರೇಕವನ್ನು ಇತರ ಭಕ್ತಾದಿಗಳಿಗೆ ತೋರ್ಪಡಿಸುವ ಮಾರ್ಗದರ್ಶಕರಾಗಿ ಇರುತ್ತಾರೆ. ಆದಪ್ರಯುಕ್ತ ತಾವುಗಳು ಸಕಾಲಕ್ಕೆ ಬಂದು ಇಲ್ಲಿ ನಡೆಯತಕ್ಕ ಮಹೋತ್ಸವವನ್ನು ನೋಡಿ ನೇತ್ರಾನಂದ ಮನಾನಂದ ಹೊಂದಿ ಭೌತಿಕದಿಂದ ಕೂಡಿದ ಶರೀರವನ್ನು ಇಹ ಪರ ಸುಖಗಳಲ್ಲಿ ಕೃತಕೃತ್ಯವನ್ನಾಗಿ ಮಾಡಿಕೊಳ್ಳಬೇಕೆಂದು ಇಚ್ಛಿಸುತ್ತೇನೆ.

ತಮ್ಮಗಳ ಹಿತಚಿಂತಕ,
ರಸ್ತಾಪುರದ ಮುನಿಯಪ್ಪ ರಾಯಚೂರು.

ಯಜಮಾನ್ ಅಂಡ್ ಸನ್ಸ್

ಪೋಟೋ, ಲೈನ್, ಯಲಕ್ಟ್ರೊ ಲೆಡ್‌ಬ್ಲಾಕುಗಳು, ಅರಗಿನಶೀಲು ದವಾಲಿಬಿಲ್ಲೆಗಳು ಮತ್ತು ರಬ್ಬರ್ ಮೋಹರುಗಳನ್ನೂ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

13

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ ಖ್ಯಾತಿ ಕಂಪೆನಿಯ ಪ್ರೊಜೆಕ್ಟರ್ ಮಿಶನ್, ಆರ್ಕಲ್ಯಾಂಪು, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸ ವಗ್ಯೆರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12- –6]

೧೯೨೯ ನೆಯ ಇಸವಿ ಮಾರ್ಚಿ ತಾ|| ೨ ರಿಂದ ೧೯೨೯ ನೆಯ ಇಸವಿ ಮಾರ್ಚಿ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೧ ನೆಯ ವಿಭವನಾಮಸಂವತ್ಸರದ ಮಾಘ ಬಹುಳ ಸಪ್ತಮಿಯಿಂದ ಮಾಘ ಬಹುಳ ದ್ವಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭಮಾಸ
2	ಶನಿ	ಸಪ್ತ	50-58	ವಿಶಾ	3-12	19
3	[1]ಭಾನು	ಅಷ್ಟ	56-5	ಅನೂ	9-6	20
4	ಸೋಮ	ನವ	60	ಜ್ಯೇಷ್ಠ	15-31	21
5	ಮಂಗಳ	ನವ	1-39	ಮೂಲ	22-5	22
6	ಬುಧ	ದಶ	6-52	ಪೂಷಾ	28-23	23
7	[2]ಗುರು	ಏಕಾ	11-24	ಉಷಾ	33-58	24
8	ಶುಕ್ರ	ದ್ವಾದ	15-6	ಶ್ರವ	38-45	25

(1) ಮಳೆನಕ್ಷತ್ರ-ಪೂರ್ವಭಾದ್ರ ೧ ನೆಯಪಾದ. (2) ಮಳೆನಕ್ಷತ್ರ-ಪೂರ್ವಭಾದ್ರ ೨ ನೆಯಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಶನಿವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರ ಜೋತಿರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾರೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸ್ ೧೯೨೯ ನೆಯ ಇಸವಿ ಮಾರ್ಚಿ ತಾರೀಖು ೧೬ ನೆಯ ಶನಿವಾರ [ಸಂಚಿಕೆ ೧೧

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಶಬ್ದಾಟೀಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ಸಿಗಾಕೊಟ್ಟು ಉತ್ತರಕೊಡಲಾಗುವುದಿಲ್ಲ. ಮ್ಯಾನೇಜರ್

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಿಜ) ವಜ್ರಾಂಗಸುಂದರಪಾಕ. (ಸ್ಟರ

ಧೀಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತಿಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ ಮೂಲವ್ಯಾಧಿ, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದಮಲೇ ಆದ ಕ್ಷೀಣತೆ, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಸೆರಗು, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವ್ಯಾಧಿ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ರೌಚಕ್ಕೆ ಸಾಫವಾಗಿ ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಕಾಯಮ ಧಾತುಪೌಷ್ಟಿಕತ್ವಾತ್ರಿಯ ಮತ್ತು ಜದ್ದಿನ ಪಾಕವನ್ನು ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿ ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಪರೂಪ ೫೨ ವನಸ್ಪತಿ—ಶತಪುಷ್ಪ, ಸಾಲಿಮಕಂದ, ಮಧು, ಕಂದ, ಜಪಾಕಂದ ಶಾಲೀಮಲೀಕಂದ, ಗಂಧ, ಅಶ್ವಶ್ರೇಷ್ಠಕಂದ, ಮಧುಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ ಚಿಕಣಿದಪಂಚಾಗ, ಅಡವೀ ಎಳ್ಳಿನಪಂಚಾಂಗ, ಜವಿನಾಪತ್ರಿ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜ ಹರಣಖೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕ್ಕರೀಮಗಜ, ಆಲದಹಾಲು, ನಾಕೇರಿಭಾತಾ, ಗೋಖರು, ಅಡವೀಭೆಂಡಿಬೇರು, ಬಂದು, ಅಮ್ರತಸತ್ವ, ಇಸಬಗೋಳ ಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲ ಹೂತ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ, ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಗೆ ೫| ರೂ. ೩ ಡಬ್ಬಿಗೆ ೧೪| ರೂ. ೬ ಡಬ್ಬಿಗೆ ೨೬ ರೂ. ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವುದು.

[50—41]

ಪತ್ತೆ :—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟೆನ್ ಪೆನ್‌ಗಳು.

ವರ್ಲ್ಡ್ಸ್ ವಂಡರ್ ಫೌಂಟೆನ್ ಪೆನ್ 1 ಕ್ಕೆ	3	0	0
,, ಬಿಗ್ ಬ್ಯಾರಲ್ ಪೆನ್ 1 ಕ್ಕೆ	3	2	0
,, ಸ್ಕ್ರೂ ಕ್ಯಾಪ್ ಪೆನ್ 1 ಕ್ಕೆ	3	8	0
,, ಮಾಟಲ್ ಕಲರ್ ಪೆನ್ 1 ಕ್ಕೆ	3	14	0
,, ಮಾಟಲ್ ಸ್ಕ್ರೂ ಕ್ಯಾಪ್ ಪೆನ್	4	4	0
,, ಬ್ಲ್ಯಾಕ್ ಕಲರ್ ಸೆಲ್ಫ್ ಫಿಲಿಂಗ್ ಪೆನ್	5	8	0
,, ಸೇಫ್ಟಿ ಪೆನ್ 1 ಕ್ಕೆ	6	0	0
,, ಲೇಡಿಸ್ ಸೈಜಿನ ಮಾಟಲ್ ಕಲರ್ ಪೆನ್ 1 ಕ್ಕೆ	4	8	0
ಬ್ಲಾಕ್ ಬರ್ಡ್ ಪೆನ್ 1 ಕ್ಕೆ 3 8 0 ಮತ್ತು	3	12	0
ಸ್ವಾನ್ ಫೌಂಟೆನ್ ಪೆನ್ 1 ಕ್ಕೆ 6 8 0 ಮತ್ತು	7	0	0
ವಾಟರ್ ಮೆನ್ ಐಡಿಯಲ್ ಪೆನ್ 1 ಕ್ಕೆ 8 0 0 ಮತ್ತು	8	8	0
ವಾಟರ್ ಮೆನ್ ಸೇಫ್ಟಿ ಪೆನ್ 1 ಕ್ಕೆ	12	0	0

ಮಣಿಯಾರ್ಡರ್ ರವಾನಿಸುವ ವಿಳಾಸ—

ಖಾತ್ರಿಯೂ ಬಂದೋಬಸ್ತು ಆದ ಟೈಂಪೀಸ್‌ಗಳು

ಸಣ್ಣ ಸೈಜಿನ ಜರ್ಮನ್ ಟೈಂಪೀಸ್ 1 ಕ್ಕೆ	2	2	0
ಜರ್ಮನ್ ಗುಂಡಾಕೃತಿಯ ಅ|| ಟೈಂ ಪೀ. 1 ಕ್ಕೆ	3	12	0
ಅನ್ಸೋನಿಯ - ಬಿ - ಟೈಂಪೀಸ್ 1 ಕ್ಕೆ	5	13	0
ಅನ್ಸೋನಿಯ ಅಲಾರಂ ಟೈಂಪೀಸ್ 1 ಕ್ಕೆ	5	6	0
ಬಿಗ್ ಬೆನ್ ಅಲಾರಂ ಟೈಂಪೀಸ್ 1 ಕ್ಕೆ	9	6	0
ಬಿಗ್ ಬೆನ್ ಡಿಲ್ಯೂಕ್ಸ್ ಸ್ಟಾಂಡಿರುವ ಅಲಾರಂ ಟೈಂ ಪೀಸ್ 1 ಕ್ಕೆ	13	5	0
ಗಂ|| ತೋರಿಸಿ ಅ|| ಬಾರಿಸುವ ಕ್ಯಾರೇಜ್ ಕ್ಲಾ|| 1 ಕ್ಕೆ	7	2	0
ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1 ಕ್ಕೆ	8	10	0
ಘಂಟೆ ಅರ್ಧ ಘಂಟೆ ಹೊಡೆದು ಅಲಾರಂಸಹ ಬಾರಿಸುವ ಕ್ಯಾರೇಜ್ ಕ್ಲಾಕ್ 1 ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ನಾ ಸರಿದರಾಗುವಂತೆ ಗಾಣಮಾಡುವ ಕ್ಯಾರೇಜ್ ಕ್ಲಾಕ್ 1 ಕ್ಕೆ	12	0	0
ಇಟಲಿಯನ್ ಮೇಕ್ ಅ|| ಟೈಂಪೀಸ್ 1 ಕ್ಕೆ	6	9	0

[50—17]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

“ಭಿಷಗ್‌ರತ್ನ ಪಾಳ್ಯದ ವೆಂಕಟಾಚಲಪಂಡಿತರ”
ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣಾ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ತಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನೆಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

• ಭಿಷಗ್‌ರತ್ನ
ಪಾಳ್ಯದ ವೆಂಕಟಾಚಲಪಂಡಿತರ•
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡಾಫೀಸು ಮೈಸೂರು.

ಪ್ರಸಿದ್ಧಪತ್ರಿಕೆ.

ಹೊಳೇನರಸೀಪುರದ ದನಗಳ ಪ್ರದರ್ಶನ.

23-3-29 ರ ಲಾಗಾಯಿತು 27-3-29 ರ ವರೆಗೆ.

ಹೊಳೇನರಸೀಪುರದಲ್ಲಿ 1929 ನೇ ಮಾರ್ಚಿ ಮಾಹೆ 24 ನೇ ತಾ|| ದಿವಸ ನಡೆಯುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ರಥೋತ್ಸವದ ಕಾಲದಲ್ಲಿ ದನಗಳ ಪ್ರದರ್ಶನವನ್ನು 23-3-29 ನೇ ಶನಿವಾರದ ಲಾಗಾಯ್ತು 27-3-29 ನೇ ಬುಧವಾರ ಪೂರ್ತಾ ಉಭಯ ದಿನಗಳು ಸೇರಿ 5 ದಿನಗಳು ನಡೆಯಿಸಲು ಏರ್ಪಡಿಸಿರುತ್ತೆ.

(2) ಉತ್ತಮವಾದ ರಾಸುಗಳಿಗೆ ಬಹುಮಾನ ದೊರೆಯುತ್ತೆ.

(3) ಹುಲ್ಲು ನೀರಿನ ವಸತಿ ಧಾರಾಳವಾಗಿರುತ್ತೆ.

(4) ದನಗಳ ಮಾರಾಟ ಹೇರಳವಾಗಿ ನಡೆಯುತ್ತೆ.

(5) ದನಗಳ ಮಾಲೀಕರು ಮತ್ತು ವ್ಯಾಪಾರಸ್ತರು ಈ ಪ್ರದರ್ಶನವು ವಿಜೃಂಭಣೆಯಿಂದ ನಡೆಯಲು ಉತ್ತೇಜನ ಕೊಡಬೇಕಲ್ಲದೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ಕೃಪಾಕಟಾಕ್ಷಕ್ಕೆ ಪಾತ್ರರಾಗುತ್ತಾರೆಂತ ಕೋರಿದೆ.

Hole-Narsipur,
Date 3-3-1929.

B. Subba Rao,
President,
Hole Narsipur Municipality

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಮಾರ್ಚಿ ತಾ|| ೧೬ ನೆಯ ಶನಿವಾರ.

A RETROSPECT.

It looks as though the time has arrived for those interested in the progress of the State to make a dispassionate examination of the events that have transpired since the Bangalore disturbances. It would be worth while doing so because we can no longer feel that we are still in the current of forces let loose as an aftermath of the disturbances and because there is ample constructive work before us. It has been our usual experience that those politicians who are least inclined to turn out some positive, practical, constructive work are the persons who are most prone to create sensation and divert the attention of the public mind. In fact, it is a deliberate plan with them. These political charlatans are not by any means keen on the progress of the masses but are only eager to thwart the even course of the administration. The more an administration is inclined towards real uplift of the people, the more loud and disturbing become the professional agitators. It will thus not be difficult to understand the part played by the professional agitators in Mysore before and after the Bangalore disturbances. It pays them to keep up the agitation as long as it could be done. We are glad to find that the original bluster and bravado has all but disappeared and in the case of many of these professional politicians there has been a wholesome return to sanity. In Mysore City, for instance, Mr. M. Venkatkrishnayya who wanted to become a martyr by seeking deportation, has thought evidently that discretion is the better part of valour and sought peace in retirement. His own peace doubtless will mean peace around also. He probably knew that if he wagged his tail any more the arm of law would reach him in a manner he had not originally anticipated, namely the confisication of the press. There is only the redoubtable *Tai Naidu* which acts as a relief to decent journalism and which makes vain efforts to create ripples in the otherwise placid waters of the City. It is Bangalore that has become the storm centre since the disturbances. Though there seems to be a little improvement, yet it cannot be said that the mischeavous elements are at an end. Those agitators must have been under the happy delusion that they have only to croak and bellow and the Government of His Highness the Maharaja would go topsy turvy. Many of these will have seen the folly and futility of their past actions and started stewing in their own juice. We would not wonder if some of them would even try to get back into the good graces of Government by offering explantions for their conduct. The more irresponsible of the agitators are still out for creating trouble and we are glad that Government is becoming alive to the danger ahead. Evidently Government gave a very long rope to these mischief-makers. It cannot be denied that the arrest of the two Editors of defunct *Veerakesari* and *Navajeevan* will have a wholesome effect on our politics. If the authorities concerned were a little more vigilant and vigourous they could have nipped this sort of agitation very much earlier. There are still some foreign journals like the *Indian States Journal* and the *Swarajya* which are trading on the goodness of our Government and which ought to be taught proper lesson by way of being proscribed or otherwise dealt with. One good however, the agitation has done. It has shown who is who! Who could have expected Mr. Hosakoppa Krishna Rao becoming so disrespectful as to talk of our beloved sovereign lightly or Mr. D. V. Gundappa, a nominated member of the Legislative Council, to write all sorts of things and finally to advocate boycott of Sir John Simon and his colleagues who were out here as guests of His Highness? May we hope that a retrospect will not be profitless and that with lessons gained from the past there will be yet better days in store for the masses of Mysore whose loyalty to His Highness and His Highess' Government is the one thing that has shone resplendant during all the troublous days and above all the din and dust that followed in the wake of the disturbances·

ಗತಕಾರ್ಯವಿಮರ್ಶನ.

ಬೆಂಗಳೂರು ಗಲಭೆಯಾದನಂತರ ನಡೆದ ವಿದ್ಯಮಾನಗಳನ್ನು ನಿರ್ಮತ್ಸರಬುದ್ಧಿಯಿಂದ ವಿಮರ್ಶಿಸುವುದು ಸಂಸ್ಥಾನದ ಪುರೋವೃದ್ಧಿ ಕಾಂಕ್ಷಿಗಳಿಗೆ ಇದು ತಕ್ಕ ಸಮಯವಾಗಿದೆ. ಏಕೆಂದರೆ, ಗಲಭೆಯ ಪರಿಣಾಮವಾಗಿ ನಡೆಸಲ್ಪಟ್ಟ ದೌರ್ಜನ್ಯದ ಭಯವು ಈಗ ತಪ್ಪಿಹೋಗಿರುತ್ತದಲ್ಲದೆ ನಾವು ಮಾಡಬೇಕಾದ ಫಲಪ್ರದ ಕಾರ್ಯವು ವಿಶೇಷವಾಗಿರುತ್ತದೆ. ನಿಜವಾಗಿ ಸಾಧ್ಯವೂ, ಪ್ರಯೋಜಕವೂ ಆದ ಕಾರ್ಯಗಳನ್ನು ಮಾಡಬೇಕೆಂಬ ಈಷದಪಿ ಕಾಂಕ್ಷೆಯಿಲ್ಲದಿರುವವರೇ ಗುಲ್ಲೆಬ್ಬಿಸಿ ಜನರ ಮನಸ್ಸನ್ನು ರೇಗಿಸತಕ್ಕವರೆಂಬುದು ಅನುಭವಸಿದ್ಧವಾಗಿದೆ. ಈ ಮಹಾಪುರುಷರು ಜನತೆಯ ಪುರೋವೃದ್ಧಿಯ ವಿಚಾರದಲ್ಲಿ ಲೇಶಮಾತ್ರ ಗಮನವಿಡದೆ ಸುಲಲಿತವಾಗಿ ನಡೆಯುವ ರಾಜ್ಯಾಡಳಿತಕ್ಕೆ ಪ್ರತಿಬಂಧಕಪಡಿಸಲು ಕಾತುರಪಡುತ್ತಿರುವರು. ಪ್ರಭುತ್ವದವರು ಪ್ರಜಾಭಿವೃದ್ಧಿ ಕಾರ್ಯವನ್ನು ಮಾಡಲೆಷ್ಟು ಕುತೂಹಲವಿಷ್ಟರಾಗಿರುವರೋ ಆಂದೋಳನಕಾರರು ಅಷ್ಟು ಗೊಂದಲವನ್ನೆಬ್ಬಿಸಿ ಪ್ರತಿಬಂಧಕವನ್ನು ತಂದೊಡ್ಡುವರು. ಬೆಂಗಳೂರಿನಲ್ಲಿ ಗಲಭೆಯು ನಡೆಯುವುದಕ್ಕೆ ಮೊದಲೂ, ನಡೆದ ಮೇಲೂ ಈ ಕಸಬುದಾರ ಚಳವಳಿಕಾರರು ಮಾಡಿದ ಸಂಧಾನ ಕಾರ್ಯವನ್ನರಿತುಕೊಳ್ಳುವುದೇನೂ ಕಷ್ಟವಲ್ಲವು. ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಚಳವಳವನ್ನು ನಡೆಯಿಸಿಕೊಂಡುಬರುವಲ್ಲಿ ಅವರಿಗೆ ಪ್ರಯೋಜನವುಂಟು. ಈ ಕಸಬುದಾರ ಆಂದೋಳಕರ ಮೊದಲಿನ ಆರ್ಭಟವು ಈಗ ಅಡಗಿ, ಅವರಲ್ಲನೇಕರಿಗೆ ಜ್ಞಾನೋದಯವಾಗಿರುವುದು ಸಂತೋಷಪ್ರದವಾಗಿದೆ. ಇದಕ್ಕೆ ಉದಾಹರಣೆಯಾಗಿ ರಾಜಧಾನಿಯಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರು ಗಡೀಪಾರು ಶಿಕ್ಷೆಗಾದರೂ ಗುರಿಯಾಗಿ ದೇಶಹಿತಕ್ಕೋಸ್ಕರ ಶಿಕ್ಷೆಯನ್ನನುಭವಿಸಿದವನೆಂಬ ಖ್ಯಾತಿಯನ್ನು ಪಡೆಯಬೇಕೆಂದು ಸಂಕಲ್ಪಿಸಿದ್ದವರು ಈಗ 'ತಾಳುವವನು ಬಾಳುವನು' ಎಂಬ ಗಾದೆಯನ್ನು ಸ್ಮರಿಸಿಕೊಂಡು ಮೌನವ್ರತವನ್ನು ತಾಳಿರುತ್ತಾರೆ. ಇವರ ಈ ಶಾಂತಬುದ್ಧಿಯಿಂದ ವಾತಾವರಣವೇ ಶಾಂತವಾಯಿತೆಂದು ಹೇಳುವುದರಲ್ಲಿ ಸಂಶಯವಿಲ್ಲ. ಇನ್ನು ಹೆಚ್ಚು ಬಾಲವನ್ನಾಡಿಸಿದರೆ ಪ್ರಥಮತಃ ತಾವು ನಿರೀಕ್ಷಿಸಿರಲಿಲ್ಲವಾದ ಕಠಿನ ಶಾಸನವು ಅಂದರೆ ಮುದ್ರಣ ಯಂತ್ರಸಾಮಗ್ರಿಗಳ ಮುಟ್ಟುಗೋಲು ಈಗ ಪ್ರಾಪ್ತವಾಗುತ್ತದೆಂಬ ಅರಿವೆಯು ಇವರಿಗುಂಟಾಯಿತೆಂದು ತೋರುತ್ತದೆ. ರಾಜಧಾನಿಯಲ್ಲಿ ಶಾಂತಿಯ ವಾತಾವರಣವನ್ನು ಕಲುಷಿತವನ್ನಾಗಿ ಮಾಡಲು ವೃಥಾ ಘರ್ಜಿಸುತ್ತಿರುವ "ತಾಯಿನಾಡು" ಪತ್ರಿಕೆಯೊಂದು ಮಾತ್ರ ಹೋರಾಡುತ್ತಿದೆ. ಗಲಭೆಯಾದಾರಭ್ಯ ಬೆಂಗಳೂರು ಪಟ್ಟಣವು ಉಲ್ಲೋಲಕಲ್ಲೋಲ ಚಳವಳಿಗಳಿಗೆ ಮಾತೃಸ್ಥಾನವಾಗಿ ಪರಿಣಮಿಸಿದೆ. ಅಲ್ಲಿ ಈಗ ಕೊಂಚ ಶಾಂತವಾಗಿರುವಂತೆ ತೋರುತ್ತಿದ್ದರೂ, ಇನ್ನೂ ಆ ಗುಲ್ಲುಗಾರರ ಸೊಲ್ಲು ಅಡಗಿಲ್ಲವು. ಶ್ರೀಮನ್ಮಹಾರಾಜರವರ ಪ್ರಭುತ್ವವು ತಲೆಕೆಳಗಾದಾಗಲೇ ತಮ್ಮ ಆಂದೋಳನವು ಶಾಂತವಾಗುವುದೆಂದು ಈ ಚಳವಳಿಗಾರರು ಭ್ರಮಿಸಿರುವಂತೆ ತೋರುತ್ತದೆ. ಇವರಲ್ಲನೇಕರು ಈವರೆಗೆ ತಾವು ನಡೆಸಿರುವ ಅತ್ಯಾಚಾರದ ತಪ್ಪನ್ನೂ, ಅಸ್ವಾರಸ್ಯವನ್ನೂ ಅರಿತುಕೊಂಡು ಅದರ ಫಲವನ್ನು ಉಣ್ಣಲುಪಕ್ರಮಿಸಿರುವರು. ಇವರಲ್ಲಿ ಕೆಲರು ತಮ್ಮ ನಡವಳಿಕೆಯ ವಿಚಾರದಲ್ಲಿ ತಕ್ಕ ಸಮಾಧಾನವನ್ನು ಹೇಳಿ ಪ್ರಭುತ್ವದವರ ಕ್ಷಮೆಯನ್ನು ಈಗಲಾದರೂ ಬೇಡುವುದು ಶ್ರೇಯಸ್ಕರವು. ಆದರೆ ಲಂಗ್‌ಲಗಾಂ ಕಿತ್ತ ಕೆಲ ಚಳವಳಿಕಾರರು ಈಗಲೂ ಮಾಡುತ್ತಿರುವ ಗಲಭೆಯಿಂದಾಗಬಹುದಾದ ಕೆಡಕು ಪ್ರಭುತ್ವದವರ ದೃಷ್ಟಿಪಥಕ್ಕೆ ಈಗಲಾದರೂ ಬಿದ್ದಿರುವುದು ಸಂತೋಷಪ್ರದವಾಗಿದೆ. ಗುಲ್ಲುಗಾರರ ಹಾವಳಿಯನ್ನು ಪ್ರಭುತ್ವದವರು ಈವರೆಗೆ ಅಣಗಿಸದೆ ಬಿಟ್ಟುಕೊಂಡು ಬಂದಿರುವರಾದರೂ, ಈಗ ನಿಂತುಹೋಗಿರುವ ವೀರಕೇಸರಿ ಮತ್ತು ನಡೆಯುತ್ತಿರುವ ನವಜೀವನ ಪತ್ರಿಕೆಗಳ ಸಂಪಾದಕರುಗಳನ್ನು ರಾಜದ್ರೋಹಾಪರಾಧಕ್ಕಾಗಿ ಸೆರೆಹಿಡಿಸಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಿರುವುದದರಿಂದ ಅವರ ಸಹೋದ್ಯೋಗಿ ಚಳವಳಿಕಾರರು ಎದೆಮುಟ್ಟಿ ನೋಡಿಕೊಳ್ಳುವಂತಾಗಿದೆ. ಈ ಹಾವಳಿಯನ್ನು ನಿಲ್ಲಿಸಬಲ್ಲವರಾದ ಅಧಿಕಾರಿಗಳು ಕೆಲ ಕಾಲಕ್ಕೆ ಮುಂಚೆಯೇ ಜಾಗೃತರಾಗಿ ಆಂದೋಳನವನ್ನು ಮೊಳಕೆಯಲ್ಲೇ ಚಿವುಟಿದ್ದರೆ ಇಷ್ಟೊಂದು ಪ್ರಯಾಸವೇ ಇರುತ್ತಿರಲಿಲ್ಲ. ನಮ್ಮ ಪ್ರಭುತ್ವದವರ ಈ ಸೌಮ್ಯಪ್ರಕೃತಿಯನ್ನು ಅರಿತುಕೊಂಡು ಕೋಪೋದ್ರೇಕ ಲೇಖಗಳನ್ನು ಪ್ರಕಟಿಸುತ್ತಿರುವ ಪರದೇಶದ "ಇಂಡಿಯನ್ ಸ್ಟೇಟ್ ಜರ್ನಲ್ ಮತ್ತು ಸ್ವರಾಜ್ಯ" ಎಂಬ ಆಂಗ್ಲಭಾಷಾ ಪತ್ರಿಕೆಗಳು ನಮ್ಮ ಸೀಮೆಗೆ ಬರದಂತೆ ಮಾಡಿ ಅವುಗಳಿಗೆ ವಿವೇಕವನ್ನು ಕಲಿಸತಕ್ಕುದು ಆವಶ್ಯಕವಾಗಿದೆ. ಈವರೆಗೆ ನಡೆದಿರುವ ಆಂದೋಳನದಿಂದ ಒಂದುಪಕಾರವಾಗಿರುತ್ತದೆ. ಇದರಿಂದ ಯಾರ್‍ಯಾರ ಮನೋಭಾವವು ಎಂತಹುದೆಂಬುದು ಗೋಚರವಾಯಿತು. ಮ|| ಹೊಸಕೊಪ್ಪ ಕೃಷ್ಣರಾಯರು ಶ್ರೀಮನ್ಮಹಾರಾಜರವರ ವಿಚಾರದಲ್ಲಿ ಬಹಳ ಅವಮರ್ಯಾದೆಯಿಂದ ಮಾತನಾಡುವರೆಂದೂ, ಪ್ರಭುತ್ವದವರಿಂದ ನ್ಯಾಯವಿಧಾಯಕ ಸಭಾ ಸಭ್ಯರಾಗಿ ನಿಯಮಿಸಲ್ಪಟ್ಟಿರುವ ಮ|| ಡಿ. ವಿ. ಗುಂಡಪ್ಪನವರು ವೃತ್ತಪತ್ರಿಕೆಗಳಲ್ಲಿ ಮನಸ್ವೀ ಬರೆಯುತ್ತಿರುವುದಲ್ಲದೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಬಂದಿದ್ದ ಸೈಮನ್ ಕಮಿಷನ್ನಿನವರನ್ನು ಬಹಿಷ್ಕರಿಸಬೇಕೆಂದು ಬೋಧಿಸುವರೆಂದೂ ಯಾರುತಾನೆ ನೆನಸಿದ್ದರು? ಈ ವಿಮರ್ಶನದಿಂದ ಕಾಲ ವ್ಯರ್ಥವಾಗದೆ ಜ್ಞಾನೋದಯವಾಗಿ, ತೊಂದರೆಯ ಕಾಲಗಳಲ್ಲಿ ಪ್ರಭುತ್ವ ಪಕ್ಷವನ್ನು ವಹಿಸಿ ಹೋರಾಡಿ ಶ್ರೀಮನ್ಮಹಾರಾಜರವರಲ್ಲೂ ಅವರ ಪ್ರಭುತ್ವದವರಲ್ಲೂ ತಮಗಿರುವ ಅಕುಟಿಲವೂ ಅಚಲವೂ ಆದ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸಿರುವ ಸಂಸ್ಥಾನದ ಸಭ್ಯ ಪ್ರಜೆಗಳಿಗೆ ಶುಭವಾಗುವುದೆಂದು ನಿರೀಕ್ಷಿಸುತ್ತೇವೆ.

ವೀರಶೈವ ಮಹಾಸಭೆ.

ಈ ಸಭೆಯ ಹತ್ತನೇ ಅಧಿವೇಶನವು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಯಾಜಮಾನ್ಯದಲ್ಲಿ ಬೆಂಗಳೂರು ವೀರಶೈವ ಸಮಾಜಬಾಂಧವರಿಂದ ವೀರಶೈವ ಪ್ರಪಂಚವೇ ತಲೆದೂಗುವ ಹಾಗೆ ಅಭೂತಪೂರ್ವವಾದ ಉತ್ಸಾಹದಿಂದಲೂ, ವಿಜೃಂಭಣೆಯಿಂದಲೂ ನಡೆಯಿಸಲ್ಪಟ್ಟು, ಮುಂದೆ ಪ್ರತಿವರ್ಷದಲ್ಲೂ ಮಹಾಸಭೆಯು ತಪ್ಪದೆ ನಡೆಯುವಂತೆ ಕೋರಲ್ಪಟ್ಟಿದ್ದಿತು. ಆದರೆ, ಯಾವ ಕಾರಣದಿಂದಲೇ ಭರತಖಂಡದ ಯಾವ ಪ್ರಾಂತದವರೂ ಹನ್ನೊಂದನೆಯ ಅಧಿವೇಶನವನ್ನು ನೆರವೇರಿಸಲು ಪ್ರಯತ್ನಶೀಲರಾಗಲಿಲ್ಲವೆಂದು ಬರೆಯಲು ವಿಷಾದವಾಗುತ್ತದೆ. ಈ ಕಾರಣದಿಂದ ಮುಂದಾದರೂ ಯಾವ ಸ್ಥಳದಲ್ಲಾಗಲಿ ನಡೆಯುವ ಸಂಭವ ಉಂಟೋ ಇಲ್ಲವೋ ಎಂಬ ಅನುಮಾನವುಂಟಾಗಿದ್ದಿತು. ಆದರೆ ಈಚೆಗೆ ಬೆಂಗಳೂರಿನ ಮಾಡಲ್ ಮುದ್ರಾಕ್ಷರಶಾಲೆಯ ಯಜಮಾನರಾದ ಮ|| ಟಿ. ಎನ್. ಚೆನ್ನಪ್ಪನವರು ಕಾರ್ಯಾರ್ಥವಾಗಿ ನೈಜಾಂ ಸಂಸ್ಥಾನಕ್ಕೆ ಸೇರಿದ ರಾಯಚೂರಿಗೆ ಹೋಗಿರುವಾಗ್ಗೆ, ಅಲ್ಲಿಯ ವೀರಶೈವಸಮಾಜ ಪ್ರಮುಖರೊಡನೆ ಮಹಾಸಭಾ ವಿಚಾರವಾಗಿ ಪ್ರಸ್ತಾಪಿಸಿ ಒಂದು ಸಭೆಯನ್ನು ಕೂಡಿಸಿ ಮಹಾಸಭೆಯೆಂದರೇನು, ಅದರ ಉದ್ದೇಶ ಪ್ರಯೋಜನಗಳೇನು? ಎಂಬುದನ್ನು ತಿಳಿಯ ಹೇಳಿ ಈ ವರ್ಷದ ಡಿಶಂಬರ್ ತಿಂಗಳಲ್ಲಿ ಹನ್ನೊಂದನೆಯ ಅಧಿವೇಶನವನ್ನು ರಾಯಚೂರಿನಲ್ಲಿ ನಡೆಸುವಂತೆ ನಿರ್ಧರಿಸಿ ಮುಂದಲ ಕಾರ್ಯಕ್ರಮಗಳನ್ನು ಪರ್ಯಾಲೋಚಿಸುವ ಬಗೆಗೆ ಒಂದು ತಾತ್ಕಾಲಿಕ ಆಲೋಚನಾಸಂಘವನ್ನೇರ್ಪಡಿಸಿದ ವಿಚಾರವು ಈ ಸ್ಟಾರ್ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿದ್ದುದನ್ನು ನೋಡಿ ಸಮಾಜಬಾಂಧವರು ಪರಮಾನಂದಗೊಂಡು ಮುಂದಿನ ಕಾರ್ಯಭಾಗವನ್ನು ಬಹು ಕುತೂಹಲದಿಂದ ನಿರೀಕ್ಷಿಸುತ್ತಿರುವರಷ್ಟೆ. ಈಗ ಈ ಪತ್ರಿಕೆಯ ಬೇರೊಂದುಕಡೆ "ವೀರಶೈವ ಮಹಾಸಭೆಯ ವಿಚಾರ" ಎಂಬ ಶೀರ್ಷಕದಿಂದ ಪ್ರಕಟವಾಗಿರುವ ಪತ್ರವ್ಯವಹಾರದಲ್ಲಿ, ಬೆಳಗಾಂ ಡಿ|| ಗೋಕಾಕ ತಾ|| ಸಾವಳಗಿಯಲ್ಲಿರುವ ಶ್ರೀಮನ್ನಿರಂಜನ ಶಿವಯೋಗಿ ಶ್ರೀ ಶಿವಲಿಂಗಸ್ವಾಮಿಯವರು ಹನ್ನೊಂದನೆಯ ಅಖಿಲಭಾರತ ವೀರಶೈವ ಮಹಾಸಭೆಯನ್ನು ಇದೇ ಮೇ ತಿಂಗಳ 1, 2 ಮತ್ತು 3 ನೇ ತಾರೀಕುಗಳಲ್ಲಿ ಘಟಪ್ರಭಾ ನದೀದಡದ ಮೇಲಿರುವ ತಮ್ಮ ಮಠದ ಪವಿತ್ರಕ್ಷೇತ್ರಸ್ಥಳದಲ್ಲಿ ನಡೆಯಿಸಲು ಸಂಕಲ್ಪಿಸಿರುವುದಾಗಿಯೂ, ಮಹಾಸಭೆಯು ಸೇರಲು ಈ ಕ್ಷೇತ್ರವು ಪ್ರಶಸ್ತವಾಗಿರುವುದರಿಂದ ವೀರಶೈವ ಸಮಾಜಬಂಧುಗಳು ತಮ್ಮನುಮತಿಯನ್ನು 15 ದಿವಸಗಳೊಳಗೆ ತಿಳಿಸಬೇಕಾಗಿಯೂ ಕೋರಿರುತ್ತಾರೆ.

ವೀರಶೈವ ಸಮಾಜವು ಮಹಾಸಭೆಯ ಗಂಧವನ್ನೇ ಅರಿಯದಿದ್ದ ಕಾಲದಲ್ಲಿ ಅಂದರೆ 1904 ರಲ್ಲಿ ವೀರಶೈವರ ನೈತಿಕ, ಸಾಮಾಜಿಕ, ಧಾರ್ಮಿಕ ವಿದ್ಯಾಭಿವೃದ್ಧಿಗಳಿಗೆ ಕಲ್ಪತರುವಂತಿರುವ ವೀರಶೈವ ಮಹಾಸಭೆಯನ್ನು ಆರಂಭಿಸಿ ಕೆಲ ಕಾಲದವರೆಗೆ ನಡೆಯಿಸಿಕೊಂಡು ಬಂದ ಶ್ರೀ ಹಾನಗಲ್ಲು ಕುಮಾರ ಮಹಾಸ್ವಾಮಿಗಳೂ, ಅವರ ಸಹಾಯಕರಾದ ಶ್ರೀ ಬೀಳೂರು ಮಹಾಸ್ವಾಮಿಗಳೂ ನಿರಂಜನಮೂರ್ತಿಗಳೇ; ಈ ಮಹಾಸಭೆಯು ಕೆಲ ಕಾಲ ನಡೆಯದೆ ನಿಂತುಹೋಗಿದ್ದುದರ ಮೇಲೆ ಸಮಾಜಾಭಿವೃದ್ಧಿ ಕಾಂಕ್ಷಿಗಳಾದ ದಾವಣಗೆರೆಯ ವೀರಶೈವ ಬಂಧುಗಳು ಎಂಟನೆಯ ಮಹಾಸಭೆಯನ್ನು ಪ್ರಯತ್ನಪುರಸ್ಸರವಾಗಿ ನೆರೆಯಿಸಿದ್ದ ವೇಳೆಯಲ್ಲಿ ಮಹಾಸಭೆಯು ನಿರಾತಂಕವಾಗಿ ನಡೆದುಕೊಂಡುಹೋಗುವ ಬಗೆಗೆ ಚಿರಸ್ಥಾಯಿ ಫಂಡುಕೊಡಲು ಅನುಗ್ರಹಿಸದ ಶ್ರೀಮಜ್ಜಗದ್ಗುರು ಜಯದೇವ ಮಹಾಸ್ವಾಮಿಗಳೂ ನಿರಂಜನಮೂರ್ತಿಗಳೇ; ಈಗ ಹನ್ನೆರಡನೆಯ ಸಭೆಯನ್ನು ನೆರೆಯಿಸಲು ಸಂಕಲ್ಪಿಸಿ ಸಮಾಜದವರ ಸಹಾಯ ಸಹಾನುಭೂತಿಯನ್ನು ಕೋರಿರುವ ಸಾವಳಗಿ ಮಠಾಧ್ಯಕ್ಷರಾದ ಶ್ರೀ ಶಿವಲಿಂಗ ಮಹಾಸ್ವಾಮಿಗಳೂ ನಿರಂಜನಮೂರ್ತಿಗಳೇ ಆಗಿರುತ್ತಾರೆ. ಅಲ್ಲದೆ ನಮ್ಮ ಸಮಾಜಾಭಿವೃದ್ಧಿ ಕಾರ್ಯಗಳೆಲ್ಲ ಈವರೆಗೆ ಶ್ರೀಮನ್ನಿರಂಜನಮೂರ್ತಿಗಳಿಂದಲೇ ಆಗಿರುತ್ತವೆ ಮತ್ತು ಮುಂದೆಯೂ ಅವರಿಂದಲೇ ಆಗಬೇಕಾಗಿರುತ್ತವೆಂದು ಈವರೆಗಿನ ಅನುಭವದಿಂದ ಸಮಾಜದವರಿಗೆ ಮನದಟ್ಟಾಗಿರುತ್ತದೆ. ಅದುಕಾರಣ ಹನ್ನೊಂದನೆಯ ಮಹಾಸಭೆಯನ್ನು ನೆರೆಯಿಸಲು ಸಂಕಲ್ಪಿಸಿರುವ ಶ್ರೀಮನ್ನಿರಂಜನ ಶಿವಲಿಂಗ ಮಹಾಸ್ವಾಮಿಗಳು ಈ ಮಹಾಕಾರ್ಯವನ್ನು ನಿರ್ವಹಿಸುತ್ತಾರೆಂಬುದರಲ್ಲಿ ಸಂದೇಹ ತೋರುವುದಿಲ್ಲ. ಇದಕ್ಕಾಗಿ ನಾವು ಅವರನ್ನು ಸಮಾಜದಪರವಾಗಿ ವಂದಿಸಿ ಅವರ ಅಭೀಷ್ಟವನ್ನು ಸಮಾಜದ ಮುಖಂಡರೂ ಚಿರಸ್ಥಾಯಿ ಫಂಡಿನವರೂ ನೆರವೇರಿಸಿಕೊಡುತ್ತಾರೆಂದು ನಿರೀಕ್ಷಿಸುತ್ತೇವೆ. ಆದರೆ ಮೇ ತಿಂಗಳು ಎಲ್ಲ ಪ್ರಾಂತದ ಸರ್ಕಾರಿಯಧಿಕಾರಿಗಳಿಗೂ, ಇತರರಿಗೂ ಅನುಕೂಲಿಸುತ್ತದೆಯೇ ಎಂಬುದು ಮಾತ್ರ ಪರ್ಯಾಲೋಚಿಸಲ್ಪಡತಕ್ಕುದಾಗಿದೆ. ಈ ಹನ್ನೊಂದನೆಯ ಸಭೆಯು ದೈವಾನುಗ್ರಹದಿಂದಲೂ, ಚಿರಸ್ಥಾಯಿಫಂಡಿನವರ ಪ್ರೋತ್ಸಾಹದಿಂದಲೂ ಸಾವಳಗಿಯಲ್ಲಿ ನೆರೆಯುವುದಾದರೆ, ಇದನ್ನು ಬರುವ ಡಿಶಂಬರ್ ತಿಂಗಳಲ್ಲಿ ಕೂಡಿಸಬೇಕೆಂಬ ಪ್ರಯತ್ನಶೀಲರಾಗಿರುವ ರಾಯಚೂರಿನ ವೀರಶೈವಬಂಧುಗಳು ನಿರುತ್ಸಾಹಿಗಳಾಗದೆ ಹನ್ನೆರಡನೆಯ ಸಭೆಯನ್ನು ತಮ್ಮಲ್ಲಿ ನೆರೆಯಿಸಲು ವಿಶೇಷೋತ್ಸಾಹಶೀಲರಾಗಿರಬೇಕಾಗಿ ಅಪೇಕ್ಷಿಸುತ್ತೇವೆ.

ಸಂಪಾದಕದ್ವಯರು ಸೆರೆಹಿಡಿಯಲ್ಪಟ್ಟರು.

ಬೆಂಗಳೂರಲ್ಲಿ ನಿತ್ಯದಲ್ಲೂ ಪ್ರಕಟವಾಗುತ್ತಿದ್ದು ಈಗ ನಿಂತುಹೋಗಿರುವ ವೀರಕೇಸರಿ ಪತ್ರಿಕಾಸಂಪಾದಕರಾದ ಮ|| ಎಂ. ಸೀತಾರಾಮಶಾಸ್ತ್ರಿಗಳು "ಮೈಸೂರು ಸರ್ಕಾರವು ಸಿದ್ಧವಾಗಿರಲಿ! 50 ಜನರು ಪ್ರೆಸ್ ಕಾನೂನನ್ನು ಮುರಿಯಲು ಸಿದ್ಧಮಾಡಿದ್ದೇನೆ. ಜೈಲುಗಳಿಗೆ ಸಿದ್ಧರಾಗಿದ್ದೇವೆ. ಗಡೀಪಾರು ಹುಡುಗಾಟ! ಮಿರ್ಜಾಸಾಹೇಬರ ದಿವಾನಗಿರಿಯು ಕೊನೆ ಮುಟ್ಟಬೇಕು. ಜವಾಬ್ದಾರೀ ಸರ್ಕಾರವು ಸ್ಥಾಪಿಸಲ್ಪಡಬೇಕು. ಸರ್ಕಾರದವರು ಸಿದ್ಧವಾಗಿರಲಿ!" ಎಂದು ಬೆಂಗಳೂರಲ್ಲಿ ನಿತ್ಯದಲ್ಲೂ ಹೊರಡುವ ನವಜೀವನ ಪತ್ರಿಕೆಯ 20-2-1929 ರ ಸಂಚಿಕೆಯಲ್ಲಿ ಪ್ರಕಟಿಸಿದ್ದರು. ಅದು ರಾಜದ್ರೋಹಕರವೆಂದು ಪೊಲೀಸಿನವರು ಮ|| ಸೀತಾರಾಮಶಾಸ್ತ್ರಿಗಳನ್ನೂ, ನವಜೀವನದ ಸಂಪಾದಕರಾದ ಮ|| ಅಶ್ವತ್ಥನಾರಾಯಣರಾಯರನ್ನೂ ಸೆರೆಹಿಡಿದು ಬೆಂಗಳೂರು ಡಿ|| ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವಾಗ್ಗೆ, ಅಪಾದಿತರನ್ನು ಹೊಣೆಯಮೇಲೆ ಬಿಡಬೇಕೆಂದು ಅವರಪರ ವಕೀಲರುಗಳು ವಾದಿಸಿದರಾದರೂ ಮೆಜಿಸ್ಟ್ರೇಟರು ಬಿಡಲಿಲ್ಲ. ಇದರಮೇಲೆ ಚೀಫ್ ಕೋರ್ಟಿಗೆ ಅಪೀಲು ಮಾಡಿಕೊಳ್ಳಲಾಗಿ, 2 ನೇ ಜಡ್ಜಿಯರಾದ ಮ|| ಶ್ರೀನಿವಾಸಯ್ಯರ್‌ರವರು ಅಪರಾಧಿಗಳ ಮತ್ತು ಫಿರ್ಯಾದಿ ಪೊಲೀಸಿನವರ ವಕೀಲರುಗಳ ವಾದವಿವಾದಗಳನ್ನು ಲಾಲಿಸಿ ಹೊಣೆಯಮೇಲೆ ಬಿಡಲಾಗುವುದಿಲ್ಲವೆಂದು ಅಪ್ಪಣೆ ಮಾಡಿದರು. ಉಭಯ ಅಪಾದಿತರು ಈಗ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರಿಸಲ್ಪಟ್ಟಿರುತ್ತಾರೆ. ಅವರ ವಿಚಾರಣೆಯು ಇಂದಿನಿಂದ ಡಿ|| ಮೆಜಿಸ್ಟ್ರೇಟರಲ್ಲಿ ಆರಂಭವಾಗತಕ್ಕುದಾಗಿದೆ. ಪ್ರಭುತ್ವದವರನ್ನು ಪ್ರತಿಭಟಿಸಿ ಕಾರಾಗೃಹಕ್ಕೆ ಹೋಗಲು 50 ಜನರೊಡನೆ ಸಿದ್ಧನಾಗಿದ್ದೇನೆಂದು ವಿಜೃಂಭಿಸುವ ದೇಶೋದ್ಧಾರಕ ಸೀತಾರಾಮಶಾಸ್ತ್ರಿಗಳು ವಕೀಲರನ್ನಿಟ್ಟು ವಾದಿಸುವುದೇಕೆ? ಈ ವರ್ತನವು ಸಾತ್ವಿಕನಿರೋಧವೆನಿಸಿಕೊಳ್ಳುವುದೆ?

ಒಳದೇಶದ ವೃತ್ತಾಂತಗಳು.

ನೆನ್ನೆಯದಿವಸ ದಿವಾನರ ಅಧ್ಯಕ್ಷತೆಯಲ್ಲಿ ಆರಂಭಗೊಂಡ ಮೈಸೂರು ಎಕನಾಮಿಕ್ ಕಾನ್ಫರೆನ್ಸು ಈ ದಿವಸ ಮುಕ್ತಾಯವಾಗುವುದು.

ಈ ಪತ್ರಿಕೆಯಲ್ಲಿ ಗರ್ಭಿತವಾಗಿರುವ ಬೆಂಗಳೂರು ರಾಮ್‌ಮೋಹನ ಕಂಪನಿಯವರ ಸಂತಾನ ವಿಜ್ಞಾನ ಪುಸ್ತಕ ಪ್ರಕಟನೆಯನ್ನು ವಾಚಕಮಹಾಶಯರು ಅವಲೋಕಿಸಬೇಕಾಗಿ ಕೋರುತ್ತೇವೆ.

ಬರುವ ತಾ|| 7 ಮತ್ತು 8 ರಲ್ಲಿ ಮೈಸೂರು ಸೀಮೆಯ ಲಾಯರುಗಳ ಕಾನ್ಫರೆನ್ಸು ಕೋಲಾರದಲ್ಲಿ ರಾಜಧಾನಿಯ ಅಡ್ವೋಕೇಟ್ ಮ|| ಸಿ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ಪ್ರಕಟವಾಗಿದೆ.

ರೆವಿನ್ಯೂ ಕಮಿಷನರಾದ ಮ|| ಪಿ. ಜಿ. ಡಿಸೌಜಾಯವರ ಉದ್ಯೋಗದವಧಿಯು ಇದೇ ವರ್ಷದ ಸೆಪ್ಟಂಬರ್ ತಿಂಗಳಲ್ಲಿ ಮುಗಿಯುವುದರಿಂದ ಇನ್ನೊಂದು ವರ್ಷದ ವರೆಗೆ ಹೆಚ್ಚಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ.

ನೆನ್ನೆಯ ದಿವಸ ಬೆಳಿಗ್ಗೆ ಶ್ರೀಮದ್ಯುವರಾಜರವರು ಹೂಲಿಕೆರೆಗೆ ದಯಮಾಡಿಸಿ ಅಲ್ಲಿ ಇರ್ರಿಗೇಷನ್ ನಾಲೆಯ ಇಂಜನಿಯರುಗಳ ಸಮಾವೇಶವನ್ನು ಆರಂಭಿಸಿ ಸಾಯಂಕಾಲದಲ್ಲಿ ಅಲ್ಪಾಹಾರ ಸತ್ಕಾರವನ್ನು ಹೊಂದಿ ಚಿತ್ತೈಸಿದರು.

ಮೈಸೂರು ಸೀಮೆಯ ರೆಸಿಡೆಂಟರಾದ ಮಿ|| ಪಿಯರ್ಸ್‌ರವರು ರಜದ ಮೇಲೆ ಹೋಗಿದ್ದಾಗ್ಗೆ ಬದಲು ನೋಡುತ್ತಿದ್ದ ಮಿ|| ಲೆಸ್ಲಿ ಕ್ರಂಪ್‌ರವರು ಲಂಡನ್ ನಗರದಲ್ಲಿ ಕಳೆದ ಮಂಗಳವಾರ ವಿಧಿವಶರಾದರೆಂದು ತಿಳಿಯಲು ವ್ಯಸನವಾಗುತ್ತದೆ.

ಚೀಫ್‌ಕೋರ್ಟಿನ ಜಡ್ಜಿಯವರಾದ ಮ|| ಡಿ. ಕೆ. ರಾಮರಾವ್, ಬಿ.ಎ., ಬಿ.ಎಲ್., ರವರು ಪಡೆದುಕೊಂಡಿರುವ 2½ ತಿಂಗಳ ರಜವು ಈ ತಾ|| 27 ರ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ. ಇವರು ಸಕುಟುಂಬರಾಗಿ ಕಾಶಿ ಮೊದಲಾದ ಪುಣ್ಯಕ್ಷೇತ್ರ ಸಂಚಾರದಲ್ಲಿರುವರು.

ಶ್ರೀಮನ್ಮಹಾರಾಜರವರ ಸವಾರಿಯು ಮಂಗಳವಾರ ಬೆಂಗಳೂರಿಗೆ ಮೋಟಾರುಬಂಡಿಯಲ್ಲಿ ಚಿತ್ತೈಸಿದ್ದು ಬುಧವಾರ ರಾಜಧಾನಿಗೆ ಹಿಂದಿರುಗಿತು ಮತ್ತು ನಾಳೆಯ ದಿವಸ ಉದಕಮಂಡಲಕ್ಕೆ ಪ್ರೈವೇಟ್ ಸೆಕ್ರೆಟರಿ ಏಡಿಕಾಂಗ್ ಮೊದಲಾದ ಪರಿವಾರದೊಡನೆ ಚಿತ್ತೈಸುವುದಾಗಿರುವುದು.

ಕಳೆದ ಭಾನುವಾರ ರಾತ್ರಿ ಬೆಂಗಳೂರು ದಂಡಿನ ಸೆಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದ ಮುನಿಸಾಮಿ ಎಂಬವನು ರೋಗಬಾಧೆಯನ್ನು ತಡೆಯಲಾರದೆ, ಆಸ್ಪತ್ರೆಗೆ ಸಂಬಂಧಿಸಿದಂತೆ ಕಟ್ಟಲ್ಪಟ್ಟ ಮುತ್ತಿದ್ದಲ್ಲಿಗೆ ಹೋಗಿ ಕೊರಳಿಗೆ ನೇಣುಹಾಕಿಕೊಂಡು ಪ್ರಾಣಹತ್ಯ ಮಾಡಿಕೊಂಡನು.

ರಾಜಧಾನಿಯ ಒಂದನೇ ಮುನ್ಸೀಫರಾದ ಮ|| ಸಿ. ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು ಕನ್ನಂಬಾಡಿ ಜಲಾಶಯದ ಕಮಿಟಿಯ ಸೆಕ್ರೆಟರಿಯವರಾಗಿ ನಿಯಮಿಸಲ್ಪಟ್ಟಿರುವುದರಿಂದ ಅವರು ಬರುವವರೆಗೆ ಬೆಂಗಳೂರಿನ ಮ|| ಪಿ. ಲಿಂಗಯ್ಯ, ಬಿ. ಎ., ಎಲ್ ಎಲ್. ಬಿ., ಯವರು ಅಫಿಸಿಯೇಟಿಂಗ್ ಒಂದನೇ ಮುನ್ಸೀಫರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಮ|| ಕೆಗನೂರು ರಾಮಚಂದ್ರರಾಯರ ಮೇಲೆ ಇಲ್ಲಿಯ ಪೊಲೀಸಿನವರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ವಿವಾದದಲ್ಲಿ 10 ರೂ. ದಂಡವು ಇದನ್ನು ಕೊಡಲು ತಪ್ಪಿದಲ್ಲಿ 1 ವಾರ ಸಾಮಾನ್ಯ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಡಲಾಗಿ ಮ|| ಅಗರಂ ರಂಗಯ್ಯನವರು ದಂಡದ ಮೊಬಲಗನ್ನು ಕೊಟ್ಟು ರಾಯರನ್ನು ಬಿಡಿಸಿಕೊಂಡುಬಂದರು.

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಧಾರ್ವಾಡದಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಪೌರ ಸಭಾಮಂದಿರದ ಆರಂಭೋತ್ಸವಕ್ಕಾಗಿ ಅಲ್ಲಿಯ ಸಭಿಕರಿಂದ ಆಹ್ವಾನಿಸಲ್ಪಟ್ಟಿದ್ದು ಕಳೆದ ಮಂಗಳವಾರ ಪತ್ನೀಸಮೇತರಾಗಿ ಪ್ರಯಾಣಮಾಡಿ ಗುರುವಾರ ಆರಂಭೋತ್ಸವವನ್ನು ಜರುಗಿಸಿ ಕಾಲೋಚಿತವಾದ ಭಾಷಣ ಮಾಡಿ ಸಮಸ್ತರಿಂದಲೂ ವಿಶೇಷ ಮರ್ಯಾದೆಯನ್ನು ಹೊಂದಿ ಬಂದರು.

ಗೌರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಅ|| ಕಮಿಷನರ್ ಮ|| ಎಂ. ವೀರರಾಜ ಅರಸ್, ಬಿ. ಎ., ಬಿ. ಎಲ್., ರವರು ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕಾರ್ಯನಿರ್ವಾಹಕ ಬೋರ್ಡಿನ ಸೆಕ್ರೆಟರಿಯವರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಅವರ ಬದಲು ಡೆಪ್ಯುಟಿ ಕಂಟ್ರೋಲರ್ ಮ|| ಎ. ಎನ್. ರಾಘವಾಚಾರ್, ಎಂ. ಎ., ರವರು ಅರ್ಥಶಾಖೆಯ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ವರ್ಗಾಯಿಸಲ್ಪಟ್ಟಿರುವರು.

ಕಳೆದ ಮಂಗಳವಾರ ರಾತ್ರಿ ಬೆಂಗಳೂರು ಸಿಟಿಯಲ್ಲಿ ಪುಟ್ಟಾಪಟಿ ವೆಂಕಟರಮಣಶೆಟ್ಟರ ತಂಗಿ ಲಕ್ಷ್ಮೀದೇವಮ್ಮನ ಮನೆಗೆ ಕಳ್ಳರು ನುಗ್ಗಿ 1,500 ರೂಪಾಯಿ ಬೆಲೆ ಬಾಳುವ ಬಟ್ಟೆಬರೆ ನಗನಾಣ್ಯಗಳನ್ನು ಅಪಹರಿಸಿ ಗಂಟುಗಳಲ್ಲಿ ಕಟ್ಟಿ ಹೊತ್ತುಕೊಂಡು ದೊಡ್ಡಪೇಟೆ ಮಾರ್ಗವಾಗಿ ಹೋಗುತ್ತ ಮಾರ್ಕೆಟ್ಟಿನಬಳಿ ಗಸ್ತುತಿರುಗುತ್ತಿದ್ದ ಪೊಲೀಸಿನವರನ್ನು ಕಂಡು ಎರಡು ಮೂಟೆಗಳನ್ನು ದಾರಿಯಲ್ಲಿ ಬಿಸಾಡಿ ಪಲಾಯನವಾದರು. ಆ ಗಂಟುಗಳಲ್ಲಿ 800 ರೂಪಾಯಿ ಪದಾರ್ಥಗಳಿದ್ದುವಂತೆ.

ಕ್ಲೋಸ್‌ಪೇಟೆ ಸಬ್‌ಡಿವಿಜನ್ ಆಫೀಸರಾದ ಮ|| ಜೆ. ಅಪ್ಪಾಜಿಗೌಡ, ಬಿ.ಎ., ಯವರಿಗೆ ಕಳೆದ ಫೆಬ್ರುವರಿ ತಾ|| 17 ರಿಂದ 3 ತಿಂಗಳ ಪ್ರಿವಿಲೇಜ್ ರಜ ಕೊಡಲ್ಪಟ್ಟಿರುತ್ತದೆ. ಈ ಅವಧಿಯಲ್ಲಿ ಮಧುಗಿರಿ ತಾ|| ಅಮಲ್ದಾರರಾದ ಮ|| ಎಂ. ಶಂಕರಪ್ಪ, ಬಿ.ಎ., ಯವರು ಕ್ಲೋಸ್‌ಪೇಟೆ ಆಕ್ಟಿಂಗ್ ಸಬ್‌ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು. ಮ|| ಗೌಡರು ಟೈಫಾಯ್ಡ್‌ಜ್ವರಪೀಡಿತರಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿ ಗುಣಹೊಂದಿರುತ್ತಾರೆಂದು ತಿಳಿಯಲು ಸಂತೋಷವಾಗುತ್ತದೆ.

ಮೈಸೂರು ಸಂಸ್ಥಾನೋದ್ಧಾರಕ್ಕಾಗಿಯೇ ಅವತರಿಸಿ ವರ್ತಮಾನ ಪತ್ರಿಕೆಗಳಿಗೆ ಸಮಾಚಾರಗಳನ್ನು ಬರೆದು ಜೀವಿಸುತ್ತಿರುವ ಮ|| ವಿ. ಎಸ್. ಸಂಜೀವರಾಯರು ವಿಶ್ವೇಶ್ವರಯ್ಯ ಕಮಿಟಿಯವರ ವಿಚಾರಣೆಯು ನಡೆಯುತ್ತಿರುವಾಗ್ಗೆ ಡ್ಯಾಲಿ ಮೆಮೋರಿಯಲ್ ಹಾಲಿನ ದ್ವಾರದಬಳಿ ಕಾವಲಿದ್ದ ಪೊಲೀಸಿನವನು ತೋರಿಸಿದ ಮಾರ್ಗವನ್ನು ಬಿಟ್ಟು ಅವನನ್ನು ಧಿಕ್ಕರಿಸಿ ಬೈದು ಅವಮಾನಪಡಿಸಿದರೆಂದು ಸಿಟಿ ಪೊಲೀಸಿನವರು ರಾಯರ ಮೇಲೆ ಇಂಡಿಯನ್ ಪೀನಲ್ ಕೋಡು 353 ನೇ ಸೆಕ್ಷನ್ ಪ್ರಕಾರ ಮಾಡಿರುವ ವಿವಾದದಲ್ಲಿ ಆ ದಿವಸ ಕಾವಲಿದ್ದ ಪೊಲೀಸ್ ಕಾನಸ್ಟೆಬಲು, ಸಬ್ ಇನ್ಸ್ಪೆಕ್ಟರ್ ಮ|| ಜಂಗಂನಾಯಕ್, ಸಾರ್ಜೆಂಟ್ ವೆಂಕಟಸುಬ್ಬಯ್ಯ, ವಿಶ್ವೇಶ್ವರಯ್ಯ ಕಮಿಟಿಯ ಕ್ಲಾರ್ಕ್ ಮ|| ರಾಜಾರಾವ್ ಮತ್ತು ಎನ್. ಸಿ. ಕೃಷ್ಣಯ್ಯಂಗಾರ್ ಇವರುಗಳು ಫಿರ್ಯಾದು ಅರ್ಜಿಯಲ್ಲಿ ಕಂಡ ವಿಷಯವು ನಡೆದುದುಂಟೆಂದು ಸಾಕ್ಷಿ ನುಡಿದಿರುವರು. ಮ|| ಎನ್. ಕೇಶವಯ್ಯಂಗಾರ್ ಎಂಬವರ ಸಾಕ್ಷ್ಯವು ಆಗಬೇಕಾಗಿರುತ್ತದೆ, ಮತ್ತು ಈ ತಿಂಗಳ ಕಡೆಗೆ ಅಡ್ಜರ್ನ್ ಮಾಡಲ್ಪಟ್ಟಿರುತ್ತದೆ.

ಮಮತಾಜ್ ಬೇಗಮಳು ಸಂಗೀತಗಾರ್ತಿಯಾದುದು

ಬೊಂಬಾಯಿನಗರದಲ್ಲಿ ಶ್ರೀಮಂತನಾಗಿದ್ದ ಬಾವಲಾಸೇಟಿನ ಕೊಲೆಯಲ್ಲಿ ಪ್ರಖ್ಯಾತಳಾದ ಮತ್ತು ಪದಚ್ಯುತರಾದ ಇಂದೂರಿನ ಮಹಾರಾಜ ಸರ್ ತುಕೋಜಿರಾಯರ ಪ್ರಾಣಪ್ರೇಯಸಿಯಾಗಿದ್ದ ಮಮತಾಜ್ ಬೇಗಮ್ಮಳು ಗಾಯನವೃತ್ತಿಯನ್ನು ಕೈಕೊಂಡು ಕಳೆದ ಫೆಬ್ರುವರಿ ತಾ|| 16 ಮತ್ತು 17 ರ ರಾತ್ರಿ ಬೊಂಬಾಯಿ ರಾಯಲ್ ಆಪರಾಹೌಸ್ ಎಂಬ ನಾಟಕಮಂದಿರದಲ್ಲಿ ಸಂಗೀತವನ್ನು ಮಾಡಿದಳು.

25 ವರ್ಷವಯಸ್ಕಳು ಮಾತ್ರವಾಗಿರುವ ಮಮತಾಜ್ ಬೇಗಮ್ಮಳು ಹಾಡುಗಾರಿಕೆಯಲ್ಲಿ ಪೂರ್ಣಾಸಕ್ತಿಯುಳ್ಳವಳಾಗಿರುವಳು. "ಈಗ ನಾನು ಸಂಸಾರ ಮತ್ತು ಇತರ ತೊಂದರೆಗಳಿಂದ ವಿಮುಕ್ತಳಾಗಿರುವೆನು. ನಾನು ತುಕೋಜಿರಾಯರ ರಾಣೀವಾಸವನ್ನು ಸೇರುವುದಕ್ಕೆ ಒಂದುವರ್ಷ ಮುಂಚೆವಿನಾ ಈವರೆಗೂ ನನ್ನ ಕುಲಕಸಬಾದ ಹಾಡುಗಾರಿಕೆಯನ್ನು ಕೈಕೊಳ್ಳಲು ಅವಕಾಶವಿರಲಿಲ್ಲ. ಈಗ ಅದನ್ನು ಅನುಸರಿಸಲಿಚ್ಛೆಯುಳ್ಳವಳಾಗಿರುವೆನು" ಎಂದು ಒಬ್ಬ ಪತ್ರಿಕಾಪ್ರತಿನಿಧಿಯೊಡನೆ ಹೇಳಿದಳು.

ಚಲನಚಿತ್ರಗಳ ಪ್ರದರ್ಶನಕ್ಕಾಗಿ ಅಭಿನಯಿಸುವೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಇದು ನಿಜವೆ ಎಂದು ಪ್ರಶ್ನಿಸಲು, "3 ವರ್ಷಕಾಲ ತಮ್ಮ ಕಂಪೆನಿಯಲ್ಲಿ ಅಭಿನಯಿಸುವುದಾದರೆ 3 ಲಕ್ಷರೂಪಾಯಿಗಳನ್ನು ಕೊಡುತ್ತೇವೆಂದು ಅಮೇರಿಕೆಯ ಒಂದು ಕಂಪೆನಿಯವರು ಕೇಳಿರುತ್ತಾರೆ. ಅದನ್ನು ನಾನು ಅಂಗೀಕರಿಸಲಿಲ್ಲ. ನನಗೆ ಪೂರ್ಣಾಸಕ್ತಿಯಿರುವ ಹಾಡುಗಾರಿಕೆಯ ವೃತ್ತಿಯನ್ನು ಕೈಕೊಳ್ಳುವೆನಲ್ಲದೆ ಮತ್ತಾವುದನ್ನೂ ಅಂಗೀಕರಿಸತಕ್ಕವಳಲ್ಲ" ಎಂದುತ್ತರವನ್ನಿತ್ತಳು.

ಮುಂದೆ ನೀನು ವಿದೇಶಗಳಿಗೆ ಹೋಗುವಿಯೋ ಇಲ್ಲೇ ಇರುವಿಯೋ ಎಂದು ಪ್ರಶ್ನಿಸಿದುದಕ್ಕೆ "ಇಂಗ್ಲೆಂಡಿನಲ್ಲಿಗಾಯನ ಮಾಡುವ ವಿಚಾರವಾಗಿ ಒಂದು ಆಂಗ್ಲ ಕಂಪೆನಿಯವರು ಪತ್ರವ್ಯವಹಾರವನ್ನು ನಡೆಸುತ್ತಿರುವರು. ಪರಸ್ಪರ ಒಡಂಬಡಿಕೆಯು ಸರಿಬಿದ್ದಲ್ಲಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಕೆಲ ದಿನಗಳಿದ್ದು ಅನಂತರ ಪ್ರಪಂಚ ಪರ್ಯಟನ ಮಾಡುವೆನು" ಎಂದು ಉತ್ತರವನ್ನಿತ್ತಳು.

ನೀನು ಪುನಃ ಲಗ್ನವಾಗುವ ಸಂಭವವುಂಟೆ ಎಂದು ಪ್ರಶ್ನಿಸಲು "ದೇವರೊಬ್ಬನೇ ಬಲ್ಲ. ದುರದೃಷ್ಟದಿಂದ ಬಾವಲಸೇಟನು ಕೊಲ್ಲಲ್ಪಡದಿದ್ದಲ್ಲಿ ಅವನೊಡನೆ ನಾನು ಸುಖವಾಗಿ ಬಾಳುತ್ತಿದ್ದೆನು." ಎಂದುತ್ತರವನ್ನು ಕೊಟ್ಟು ಭರತಖಂಡದ ನಾಟಕಾಭಿನಯಗಳಲ್ಲಿ ಹಾಡುವುದು ಶಾಸ್ತ್ರೀಯವಾಗಿಯೂ ರಮಣೀಯವಾಗಿಯೂ ಇರದೆ ಬರೇ ವಿನೋದಕರವಾಗಿದೆ ಎಂದು ತಿಳಿಸಿದಳು.

ಇವಳು ಬಾಲ್ಯದಲ್ಲೇ ತನ್ನ ತಾಯಿ ವಜೀರ್‌ಬೇಗಮ್ಮಳಿಂದ ಸಂಗೀತಾಭ್ಯಾಸಕ್ಕುಪಕ್ರಮಿಸಲ್ಪಟ್ಟು ತದಾರಭ್ಯ ಈ ವಿದ್ಯೆಯಲ್ಲಿ ಪೂರ್ಣಾಸಕ್ತಿಯುಳ್ಳವಳಾಗಿರುತ್ತಾಳೆ. ಈಕೆಯ 6 ನೇ ವರ್ಷ ವಯಸ್ಸಿನಲ್ಲಿ ತಾಯಿಯು ಸಂಗೀತವಿದ್ಯಾಭ್ಯಾಸಕ್ಕಾಗಿ ಹೈದರಾಬಾದಿನಲ್ಲಿ ಪ್ರಸಿದ್ಧ ಸಂಗೀತಗಾರನಾದ ಉಮ್ಮರ್‌ಖಾನ್ ಎಂಬವನ ಬಳಿಗೆ ಈಕೆಯನ್ನು ಕರೆದುಕೊಂಡುಹೋಗಿ ಬಿಟ್ಟಳು. ಆತನು 6 ವರ್ಷಕಾಲ ಈಕೆಗೆ ಸಂಗೀತ ವಿದ್ಯೆಯನ್ನು ಕಲಿಸಿದನು. ಸ್ತ್ರೀಯರಲ್ಲಿ ಈಕೆಯೊಬ್ಬಳಿಗೇ ಆತನು ವಿದ್ಯೆ ಹೇಳಿದುದು. ಅಲ್ಲಿಂದ ಅವಳ ತಾಯಿಯು ಮಗಳನ್ನು ಇಂದೂರಿಗೆ ಕರೆದುಕೊಂಡುಹೋದಳು. ಅಲ್ಲಿ ಹೋಳಿ ಹಬ್ಬದ ದಿವಸ ಭರತಖಂಡದ ನಾನಾ ಭಾಗದಿಂದ ಬಂದಿದ್ದ ಸಂಗೀತಗಾರರ ಮತ್ತು ಸಂಗೀತಗಾರ್ತಿಯರ ಸಭೆಯಲ್ಲಿ ಮಮತಾಜಳು ತನ್ನ ಅಪೂರ್ವವಾದ ಗಾನವಿದ್ಯೆಯನ್ನು ಪ್ರದರ್ಶಿಸಿದಳು. ಆಗ್ಗೆ 12 ವರ್ಷ ವಯಸ್ಸು ಮಾತ್ರವಾಗಿದ್ದಾಗ್ಗೂ ಆಕೆಯ ಗಾನವಿದ್ಯಾನೈಪುಣ್ಯವನ್ನು ನೆರೆದಿದ್ದವರೆಲ್ಲರೂ ಬಹಳವಾಗಿ ಕೊಂಡಾಡಿದರು. ಆಗಲೇ ತುಕೋಜಿರಾಯರು ಆಕೆಯನ್ನು ತಮ್ಮ ಆಸ್ಥಾನದ ಗಾಯಕಳನ್ನಾಗಿ ತಿಂಗಳಿಗೆ 1600 ರೂ. ಸಂಬಳದ ಮೇಲೆ ನಿಯಮಿಸಿಕೊಂಡರು. ಇದಲ್ಲದೆ ಅವಳ ಸೇವಕರಿಗೂ, ಇತರ ವೆಚ್ಚಕ್ಕೂ 1000 ರೂ. ಕೊಡಲು ಗೊತ್ತುಮಾಡಲ್ಪಟ್ಟಿತು. ಇದಾದ ಒಂದು ವರ್ಷದ ಮೇಲೆ ಪದಚ್ಯುತರಾದ ಮಹಾರಾಜರು ಆಕೆಯಲ್ಲಿ ವ್ಯಾಮೋಹಿತರಾಗಿ ಆಕೆಯನ್ನು ತಮ್ಮ ರಾಣೀವಾಸದಲ್ಲಿ ಸೇರಿಸಿಕೊಂಡರು. ಇಂದೂರಿನಲ್ಲಿ ಆಕೆಯು ವಾಸವಾಗಿದ್ದು ಕಾಲ ಕಳೆದುದೂ, ಅಲ್ಲಿಂದ ತಪ್ಪಿಸಿಕೊಂಡುಬಂದ ಮೇಲೆ ನಡೆದ ವಿದ್ಯಮಾನವೂ ಒಂದು ಚರಿತ್ರೆಯಾಗಿ ಪರಿಣಮಿಸಿವೆ.

"NO SILENCE."

Silence has done considerable damage to the interests of the State and to the people of Mysore. This fact has become marked in recent events. People who have given in the past their attention entirely to their business of income-trade or agriculture-have miscalculated in thinking that their interests are safe, if in broader questions of State, they keep silent. India in general and Mysore in particular have suffered as a whole, a small section of the people having utilised their position and knowledge to selfish ends. Madras was the first Province to feel awakened and to set to work to make amends for the past negligence. The Justice Party in Madras will live in the History of South India as a remarkable organisation for its work of regeneration and liberation in Political life of the Non-Brahman Community which ages ago had built up kingdoms and literatures all over India. With the advent of the British into India, a small community came into power and influence and its zenith is over-reached to-day. The Britisher used this community for his own purposes. He sees to-day, the folly of his short-sighted policy. It has done him no good. Nor has it done good to India. The Justice Party was quick in awakening and quicker in its work. Fortunately for it, good leaders were available. Three of such able leaders have gone and still there are many more, foremost amongst them being Mr. A. Ramaswamy Modaliar. The Government of India itself is aware of the soundness and justice of the policy of the Justice Party, as it could be ascertained from their publications. Mr. J. Coteman, Director of Public Information, says in the book "India in 1927–28" "What is now one of the strongest and most solidly organized bodies of political opinion in all India" is Justice Party. While speaking of the attitude of the Political Parties towards Simon Commission, he speaks of it as folfows:—"The Non-Brahman or Justice Party in Madras, which has a companion in the Bombay Non-Brahman organization, is one of the most important and powerful of all Political organization in India." This is no small compliment. It is a fact. The organization is very sound and truthful.

Now that we hear that in Mysore steps are being taken to hold a Non-Brahman Conference, it is a move in the right direction and it ought to meet before it is late. Just as the Justice Party broke the silence of Madras and did justice to the masses. So the leading Non-Brahmans of Mysore should unite and start an organisation on the lines the Justice Party has done. The leading men of the Justice Party may be invited to help us to build up the organisation. It's need is urgent. The people are tired of the spirit of rebelliousnes against Peace and Order on the part of a few misguided discontents. Mr. Nilgiri Sanjeevayya will be doing a great service to the country by collecting together all the forces of unity and friendliness while were being gathered by the late Mr. M. Basavayya. Before his mission was given a sound foundation he was unfortunately snatched away from us by the hands of Death. But the cause being righteous, hundred like him should come to fill the breach caused by his death. The Non-Brahman Conference is sure to bring into existence an organisation for which Mysore is longing. Nilgiri Sanjeevayya is destined to leave a name in Mysore like the one of Dr. Nair, Sir P. T. Thyagaraja Chetty, Raja Panagal and last but not least M. Basavayya. Nilgiri Sanjeevayya ki-Jai.

Free Thinker.

ಗೃಹಕೃತ್ಯದ ನೋಟೀಸು.

ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಾಡನೂರು ಹೋಬಳೀ ನಗರ್ನಹಳ್ಳಿಯಲ್ಲಿರುವ ವೀರಶೈವಮತದ ಕಂಬಸವೇಗೌಡನ ಮಗ ದ್ಯಾವಪ್ಪ ಉರುಫ್ ಅಪ್ಪಾಜಿಯು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ನಾನು ಮತ್ತು ನನ್ನ ಅಣ್ಣ ಪವತಿ ಬಸಪ್ಪ ಸಹ ಕಂಬಸವೇಗೌಡನ ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತೆಲ್ಲವೂ ಅವಿಭಕ್ತ ಕುಟುಂಬಕ್ಕೆ ಸೇರಿರುತ್ತದೆ. ನನ್ನ ಅಣ್ಣನಿಗೆ 4 ವರ್ಷದ ಬಸಪ್ಪನೆಂಬ ಒಬ್ಬ ಮಗನು ಮಾತ್ರ ಇರುವನು. ನಾನೂ ನನ್ನ ಪವತಿ ಅಣ್ಣ ಬಸಪ್ಪ ಸಹ ಇದೇ ಗ್ರಾಮದ ಸಾಹುಕಾರ್ ಕೃಷ್ಣೇಗೌಡರಲ್ಲಿ ಮಾಡಿರುವ ಸಾಲವನ್ನು ಸ್ವತ್ತನ್ನು ಮಾರದೆ ವರಮಾನದಿಂದ ತೀರಿಸಿ ನನ್ನ ಲಗ್ನವಾದನಂತರ ವಿಭಾಗಮಾಡಿಕೊಡುತ್ತೇನೆಂದು ಹೇಳಿದರೂ ನನ್ನ ಅಣ್ಣನ ಹೆಂಡತಿ ಬಸಮ್ಮನು ಕೇಳದೆ ಜನರ ದುರ್ಬೋಧೆಯಿಂದ ನನ್ನ ಅನುಮತಿಯಿಲ್ಲದೆ ಅವಿಭಕ್ತ ಆಸ್ತಿಯನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿರುತ್ತಾಳೆಂದು ಕೇಳುತ್ತೇನೆ. ಈಗಿರುವ ಸಾಲವನ್ನು ತೀರಿಸಲು ನಾನು ಸಿದ್ಧನಾಗಿರುವುದರಿಂದಲೂ ನನ್ನ ಅನುಮತಿಯಿಲ್ಲದೆ ಸ್ವತ್ತನ್ನು ಮಾರಲು ನನ್ನ ಅತ್ತಿಗೆ ಬಸಮ್ಮನಿಗೆ ಅಧಿಕಾರವಿಲ್ಲದ್ದರಿಂದಲೂ ಯಾರಾದರೂ ಆಕೆಯಿಂದ ಕ್ರಯ, ಭೋಗ್ಯ, ಆಧಾರ ಮಾಡಿಕೊಂಡರೆ ನಾನಾಗಲಿ ಕುಟುಂಬದ ಸ್ವತ್ತಾಗಲಿ ಬದ್ಧರಾಗುವುದಿಲ್ಲವೆಂದು ಎಚ್ಚರಿಸಿರುತ್ತೇನೆ. [3—3]

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಮಾಗಡಿ ತಾ|| ಚಕ್ರಭಾವಿಮಠದ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ನಡೆಯಿಸಿದ ಶ್ರೀಮರುಳಸಿದ್ಧೇಶ್ವರಸ್ವಾಮಿ ಸಂಸ್ಕಾರ ಮಹೋತ್ಸವದಲ್ಲಿ ಮೈಸೂರು ದಿನಸಿ ಅಂಗಡಿ ಮ|| ಕೆಂಪಣ್ಣನವರ ಮೂಲಕ 1 ರೂ.

ಮೈಸೂರು ಹಳೆ ಅಗ್ರಹಾರದಲ್ಲಿರುವ ದಿನಸಿ ಅಂಗಡಿ ಮ|| ಕೆಂಪಣ್ಣನವರ ಕುಮಾರ ವೀರಭದ್ರಪ್ಪನವರ ಶಿವದೀಕ್ಷಾ ಮಹೋತ್ಸವದಲ್ಲಿ 1 ರೂ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಅನಂಗೀಕೃತ ಲೇಖಗಳು.

(1) ಕಷ್ಟಕ್ಕೆ ಒಳಗಾಗಿರುವವರು—ವೀರಶೈವಪ್ರಮುಖರಲ್ಲಿ ಇಂತಹ ಸತ್ಪ್ರಯತ್ನಗಳುಂಟೆಂಬ ನಿಮ್ಮ ಲೇಖವು ಸ್ಪಷ್ಟವಾಗಿರುವುದಿಲ್ಲವಲ್ಲದೆ ಸ್ವವಿಷಯವಾಗಿರುವುದರಿಂದ ಪ್ರಕಟಿಸಲ್ಪಡಲಾಗುವುದಿಲ್ಲ. ಸಂ.

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವ.

ಬೆಂಗಳೂರು ಡಿ|| ಕಾಂಕಾನ್ ಹಳ್ಳಿ ತಾಲ್ಲೂಕ್ ಹಾರೋಹಳ್ಳಿಯಲ್ಲಿ ಪದ್ಧತಿಯಂತೆ ಇದೇ ವಿಭವನಾಮ ಸಂ|| ಫಾಲ್ಗುಣ ಶುದ್ಧ ತ್ರಯೋದಶಿಯಿಂದ ಬಹುಳ ಬಿದಿಗೆ ಪರ್ಯಂತ (ಮಾರ್ಚಿ ತಾ. 23 ರ ಲಾಗಾಯ್ತು 27ರ ವರೆಗೆ) 5 ದಿವಸ ಜಾತ್ರೆಯೂ ದನಗಳ ಪರಿಷೆಯೂ ಈ ಮಧ್ಯೆ ಪೌರ್ಣಮಿ ರಥೋತ್ಸವವೂ ನಡೆಯುತ್ತವೆ. ತಿಂಡಿಗೂ, ನೀರಿಗೂ, ನೆರಳಿಗೂ ಅನುಕೂಲವಾಗಿದೆ. ಬೆಂಗಳೂರಿಂದಲೂ ಕಾಂಕಾನ್ ಹಳ್ಳಿಯಿಂದಲೂ ಬರತಕ್ಕವರಿಗೆ ಬಾಡಿಗೆ ಮೋಟಾರ್ ಬಸ್ಸುಗಳ ಸೌಕರ್ಯವಿದೆ. ಪ್ರಸಿದ್ಧಿಯನ್ನು ಪಡೆದ ಕಾಂಕಾನ್ ಹಳ್ಳಿ ತಾಲ್ಲೂಕಿನ ದನಗಳು ಬಹಳವಾಗಿ ಸೇರುತ್ತವೆ. ಇಲ್ಲಿನ ಮಿಡ್ಲಿಸ್ಕೂಲ್‌ನಲ್ಲಿ ವ್ಯವಸಾಯದ ಪ್ರದರ್ಶನವು ಸಹಾ ನಡೆಯುತ್ತದೆ. ಭಕ್ತಾದಿಗಳೂ, ವ್ಯವಸಾಯಗಾರರೂ, ವರ್ತಕರೂ ದನಗಳ ವ್ಯಾಪಾರಿಗಳೂ ದಯಮಾಡಿ ಇಹಪರ ಪ್ರಯೋಜನವನ್ನು ಹೊಂದಿ ಶ್ರೀ ಜಗನ್ಮಾತೆಯ ಅನುಗ್ರಹಕ್ಕೆ ಪಾತ್ರರಾಗುವರೆಂದು ನಂಬಿರುವ,

ಚಿಲ್ರೆ ಅಂಗಡಿ ರಾಮೈಯ್ಯ, ಧರ್ಮದರ್ಶಿ ಮತ್ತು ಕನ್ವೀನರ್,
ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ, ಹಾರೋಹಳ್ಳಿ.

ಏಳನೇ ವಾರ್ಷಿಕೋತ್ಸವ.

ಮೈಸೂರು ರಾಜಧಾನಿಯಲ್ಲಿರುವ “ಭಾರತವಿಜ್ಞಾನ ಕಲಾಸಂಘ ”ದ 7 ನೇ ವಾರ್ಷಿಕಮಹೋತ್ಸವವು ತಾ|| 24-2-29 ನೇ ಭಾನುವಾರ ಅತಿ ವಿಜೃಂಭಣೆಯಿಂದ ನಡೆಯಿತು. ಮ|| ಎಂ. ಪುಟ್ಟಯ್ಯ, ಬಿ.ಎ., ಬಿ.ಎಲ್. ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಮಹೋತ್ಸವಕ್ಕಾಗಿ ಸಂಘದ ಮೆಂಬರುಗಳೂ, ಸಿಂಪತೈಜರುಗಳೂ ಅಲ್ಲದೆ ಸಂಘದಿಂದ ಆಹ್ವಾನಿಸಲ್ಪಟ್ಟ ಇತರ ಮಹನೀಯರುಗಳಾದ ಮ|| ಕೆ. ಎಸ್. ಧರಣೇಂದ್ರಯ್ಯ, ಬಿ.ಎ., ರವರು, ಮ|| ಜಿನದಾಸ ಪೊನ್ನಯ್ಯನವರು, ಮ|| ಎಂ. ಸಿ. ಮಲ್ಲಯ್ಯನವರು ಮೊದಲುಗೊಂಡು ಇನ್ನೂ ಅನೇಕ ಮಹನೀಯರು ಸುಮಾರು ನೂರು ಜನರಿಗೆ ಮೇಲ್ಪಟ್ಟು ಸಭೆ ಸೇರಿದ್ದರು. ಕಾರ್ಯಕ್ರಮದಂತೆ ಸಂಘದ ವಾರ್ಷಿಕ ವರದಿಯು ಓದಲ್ಪಟ್ಟನಂತರ ಮೇಲ್ಕಂಡ ಮಹನೀಯರಲ್ಲಿ ಕೆಲವರು ವಿದ್ಯಾಭಿವೃದ್ಧಿ, ಪರಸ್ಪರ ಸಹಾಯ ಮತ್ತು ಕಲಾಕೌಶಲಾಭಿವೃದ್ಧಿ ಇವುಗಳ ಮೇಲೆ ಅಮೋಘವಾದ ಉಪನ್ಯಾಸಗಳನ್ನು ಮಾಡಿದರು. ಅಧ್ಯಕ್ಷರ ಭಾಷಣಾನಂತರ ಎಲ್ಲರಿಗೂ ಗಂಧಪುಷ್ಪಾದಿ ಗೌರವ ವಸ್ತುಗಳ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಮುಕ್ತಾಯಗೊಂಡಿತು. ಪ್ರೇಕ್ಷಕ.

ಮರುಳಸಿದ್ಧೇಶ್ವರ ವಿಗ್ರಹಮೂರ್ತಿ ಸಂಸ್ಕಾರಮಹೋತ್ಸವವು.

ಮಾಗಡಿ ತಾಲ್ಲೂಕು ಚಕ್ರಭಾವಿಯಲ್ಲಿರುವ ಶ್ರೀಮದುಜ್ಜಯಿನೀಪೀಠದ ಸೂತ್ರಾನುವರ್ತಿಗಳಾದ ಮಠದ ಪಟ್ಟಾಧ್ಯಕ್ಷ ಮಹಾದೇವಸ್ವಾಮಿಗಳು ತಾ|| 25-2-29 ನೇ ಸೋಮವಾರ ಶ್ರೀಮರುಳಸಿದ್ಧೇಶ್ವರ ವಿಗ್ರಹಮೂರ್ತಿ ಸಂಸ್ಕಾರ ಕಾರ್ಯದೊಡನೆ 50 ವಟುಗಳಿಗೆ ಬ್ರಹ್ಮೋಪದೇಶ ಪೂರ್ವಕವಾದ ಶಿವದೀಕ್ಷಾಮಹೋತ್ಸವವನ್ನು ವರಕೋಡು ಬ್ರ|| ಶ್ರೀ|| ವೇ|| ಮಹಾದೇವಶಾಸ್ತ್ರಿಗಳವರಿಂದ ವೇದೋಕ್ತವಾಗಿ ನಡೆಸಲ್ಪಟ್ಟಿತು. ಸಾಯಂಕಾಲ ಶ್ರೀಮರುಳಸಿದ್ಧೇಶ್ವರಸ್ವಾಮಿಯ ಉತ್ಸವವು ಪುರವೀಧಿಗಳಲ್ಲಿ ವಾದ್ಯವೈಭವದೊಡನೆ ವಿಜೃಂಭಣೆಯಿಂದ ನಡೆಯಿತು. ಮೂರನೆ ಮಂಗಳವಾರ ಸಾಯಂಕಾಲ ಸಾವಿರಾರು ಭಕ್ತಮಾಹೇಶ್ವರರೊಡನೆ ಸಭೆ ಸೇರಿ ಮೇಲ್ಕಂಡ ವೇ|| ಮಹಾದೇವಶಾಸ್ತ್ರಿಗಳು ವೀರಶೈವ ಮತದ ಉತ್ಕೃಷ್ಟತೆಯ ಮೇಲೆ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಅನಂತರ ಸದರಿ ಶಾಸ್ತ್ರಿಗಳಿಗೆ ಗುರುವರ್ಗದವರಿಂದ ಬಹುಮಾನಪೂರ್ವಕವಾದ ಆಶೀರ್ವಾದವು ನಡೆಯಿತು. ಸಭೆಯವರಿಂದ ಶ್ರೀಮರುಳಸಿದ್ಧೇಶ್ವರಸ್ವಾಮಿಯ ಜಯಜಯಕಾರವು ನಡೆದು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಮತ್ತು ಅವರ ಕುಟುಂಬ ವರ್ಗದವರ ಶ್ರೇಯಃಪ್ರಾರ್ಥನೆಯು ನಡೆದು ಸಭೆಯು ಭರಕಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಸಾಗರದ ವೃತ್ತಾಂತ.

ಬಿಸಲಿನ ತಾಪವು ಹೆಚ್ಚಾಗಿದೆ. ಪ್ರಜೆಗಳ ಆರೋಗ್ಯ ಚೆನ್ನಾಗಿದೆ. ನೀರಿಗೆ ಅಭಾವವಿಲ್ಲ. ನಮ್ಮ ಡಿಸ್ಟ್ರಿಕ್ಟ್ ಹಜರತ್ ಡೆಪ್ಯುಟಿಕಮಿಷನರ್ ಸಾಹೇಬರವರು ಈ ತಿಂಗಳಲ್ಲಿಯೇ ಹುಜೂರು ಜವಾಬಂದಿಗೆ ದಯಮಾಡಿಸುವ ವರ್ತಮಾನವಿದೆ. ನಮ್ಮ ತಾ|| ಸಬ್‌ಡಿವಿಜನ್ ಸಾಹೇಬರವರು ಸೊರಬದ ತಾ|| ಜಮಾಬಂದಿಗೆ ದಯಮಾಡಿಸಿರುತ್ತಾರೆ. ನಮ್ಮ ತಾಲೂಕಿನ ಪ್ರಜೆಗಳ ಪ್ರೇಮಕ್ಕೆ ಪಾತ್ರರಾಗಿರುವ ಅಮಲ್‌ದಾರ್ ಮ|| ಬಿ. ಪಿ. ಸರಾಫ್ ರವರಿಗೆ ಕುಣಿಗಲ್ಲಿಗೆ ವರ್ಗವಾಗಿದೆಯೆಂಬ ಸಮಾಚಾರವನ್ನು ಕೇಳಿ ಎಲ್ಲರಿಗೂ ತುಂಬಾ ವಿಷಾದಕರವಾಗಿದೆ. ಇವರು ಇನ್ನೂ ಚಿಕ್ಕವಯಸ್ಸಿನವರಾಗಿದ್ದು, ದೊಡ್ಡವರು ಚಿಕ್ಕವರು ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲಿಯೂ ಏಕೀಭಾವದಿಂದ ವರ್ತಿಸಿ ಶ್ರದ್ಧೆಯಿಂದ ಸುಮಾರು ಎರಡುವರೆ ವರ್ಷಗಳಿಂದಲೂ ಪ್ರಜೆಗಳ ಅಭಿವೃದ್ಧಿಗಾಗಿಯೇ ಕೆಲಸಮಾಡಿ ಎಲ್ಲರ ಕೃತಜ್ಞತೆಗೆ ಪಾತ್ರರಾಗಿರುವರು. ಇಂಥವರು ಈ ತಾಲ್ಲೂಕಿನಿಂದ ಹೋಗುವುದು ಜನಗಳ ದುರಾದೃಷ್ಟವೇ ಸರಿ. ಈಗ ಮೂರು ನಾಲ್ಕು ದಿನಗಳಿಂದಲೂ ಇವರಿಗೆ ಇವರ ಆಪ್ತಮಿತ್ರ ಮುಂತಾದವರಿಂದ ಸತ್ಕಾರಗಳು ನಡೆಯುತ್ತಿವೆ. ಈ ಸತ್ಕಾರ ಕೂಟಗಳೇ ಮ|| ಸರಾಫರ ಪ್ರಜಾನುರಾಗವನ್ನು ಪ್ರದರ್ಶಿಸುತ್ತವೆ. ಇವರಿಗೆ ದೇವರು ಉನ್ನತಾಧಿಕಾರವನ್ನೂ ಸಕಲಸಂಪತ್ತುಗಳನ್ನೂ ಕೊಡಲೆಂತ ಹಾರೈಸುತ್ತೇವೆ.

Shivalingayya Gowda, Kagodu,
Dist· Board member·

ದಾವಣಗೇರಿ ಸಮಾಚಾರದಲ್ಲಿ ತಪ್ಪುತಿಳುವಳಿಕೆ.

ಈಚೆಗೆ ವಿಶ್ವಕರ್ನಾಟಕ, ವೃತ್ತಾಂತ ಪತ್ರಿಕೆ ಮೊದಲಾದ ವೃತ್ತಪತ್ರಿಕೆಗಳಲ್ಲಿ ಈ ಊರಿನ ವಿಷಯವಾಗಿಯೂ, ಮ್ಯುನಿಸಿಪಾಲಿಟಿಯ ವಿಷಯವಾಗಿಯೂ ಕೆಲವು ಲೇಖನಗಳು ಬಂದಿರುವುದು ಸರಿಯಷ್ಟೇ? ಸದರಿ ಲೇಖನಗಳನ್ನು ಸಂಘದವರು ಬರೆದಿರುವರೆಂದು ಊರಿನ ಕೆಲವರು ಮಾತನಾಡಿಕೊಳ್ಳುತ್ತಿರುವುದಾಗಿ ಕೇಳಿದೆವು. ಈ ರೀತಿಯಾಗಿ ಮಾತನಾಡಿಕೊಳ್ಳಲಿಕ್ಕೆ ಯಾವ ಕಾರಣವೂ ಇಲ್ಲ. ಈ ಲೇಖನಗಳಿಗೂ ನಮಗೂ ಯಾವ ಸಂಬಂಧವೂ ಇಲ್ಲ. ನಾವು ಬರೆಯತಕ್ಕ ಲೇಖನಗಳು ಪ್ರಾಣಿದಯಾ ವಿಷಯಕವಾದವುಗಳು. ನಾವು ಬರೆದ ಎಲ್ಲಾ ಲೇಖನಗಳನ್ನು ನಮ್ಮ ಹೆಸರಿನೊಂದಿಗೆ ಪ್ರಕಟಿಸುತ್ತೇವೆ. ಹೆಸರಿಲ್ಲದ ಲೇಖನಗಳನ್ನು ನಾವು ಬರೆದಿಲ್ಲ ಮತ್ತು ಬರೆಯುವುದೂ ಇಲ್ಲ. ಹೀಗಿದ್ದಾಗ್ಗೂ ನಮ್ಮ ವಿಷಯದಲ್ಲಿ ಕೆಲವರು ಊಹಾಪೋಹ ಮಾಡುತ್ತಿರುವದನ್ನು ದೃಢವಾಗಿ ಖಂಡಿಸುವೆವಲ್ಲದೆ ಸದರೀ ಲೇಖನಗಳಿಗೂ ನಮಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಈ ಲೇಖನ ಮೂಲಕ ಒತ್ತಾಯದಿಂದ ತಿಳುಹಿಸುವೆವು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯದಲ್ಲಿ ಇಲ್ಲಿಯ ಮ್ಯುನಿಸಿಪಾಲಿಟೀ ಪ್ರೆಸಿಡೆಂಟರಾದ ಮ|| ರಾ|| ಅಬ್ದುಲ್ ಖಾಲಕ್ ಇವರು ತುಂಬಾ ಮುತವರ್ಜಿ ವಹಿಸಿ ಮ್ಯುನಿಸೀಪಾಲಟಿಯ ಕಾರ್ಯಗಳನ್ನು ನೆರವೇರಿಸುತ್ತಿರುವರು. ಸಂಘದವರು ಊರಿನ ಹಿತಸಾಧನೆಗಾಗಿ ಪ್ರಯತ್ನಿಸುತ್ತಿದ್ದು ಏನಾದರೂ ಕುಂದುಕೊರತೆಗಳು ಕಂಡುಬಂದಲ್ಲಿ ಪ್ರೆಸಿಡೆಂಟರನ್ನು ಕಂಡು ಮಾತನಾಡಿ ಬೇಕಾದ ಅನುಕೂಲತೆಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವೆವು. ಹೀಗಿದ್ದಾಗ್ಗೂ ವೃಥಾ ಸಂಘದವರ ಮೇಲೆ ಇಲ್ಲದ ಆಕ್ಷೇಪಣೆಗಳನ್ನು ಹೊರಿಸಲು ಪ್ರಯತ್ನಿಸುತ್ತಿರುವುದಕ್ಕಾಗಿ ವಿಷಾದಿಸುವೆವು.

ತಾ|| 7-3-29, ಕಾರ್ಯದರ್ಶಿ,
ದಾವಣಗೇರಿ. ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ.

ಉರವಕೊಂಡ ಗವಿಮಠದ ಶ್ರೀ ಕರಿಬಸವಸ್ವಾಮಿಗಳವರ ಮಹಾರಥೋತ್ಸವ.

ಉರವಕೊಂಡ ಗವಿಮಠ ಸಂಸ್ಥಾನದ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಚಂದ್ರಮೌಳಿ ಸಿದ್ಧಲಿಂಗೇಶ್ವರಸ್ವಾಮಿ ಮಹಾರಥೋತ್ಸವವು ಇದೇ ಫಾಲ್ಗುಣ ಶು|| 10 ಬುಧವಾರ ನಡೆಯುತ್ತದೆ. ಐರ್ಕ ಮಹೋತ್ಸವ ಸಮಾರಂಭವು ಫಾಲ್ಗುಣ ಶು|| 5 ಭೃಗುವಾರ ನಾಂದೀಪೂಜ ಅಂಕುರಾರ್ಪಣ ಕಂಕಣಧಾರಣೆ, ಶು|| 6 ಶನಿವಾರ ಮಹಾಸ್ವಾಮಿಯ ಶೇಷವಾಹನೋತ್ಸವ, ಶು|| 7 ಭಾನುವಾರ ಮಯೂರವಾಹನೋತ್ಸವ, ಶು|| 8 ಸೋಮವಾರ ಗಜವಾಹನೋತ್ಸವ, ಶು|| 9 ಮಂಗಳವಾರ ಶ್ರೀ ಮಹಾಗಣಾರಾಧನೆ, ವೃಷಭವಾಹನೋತ್ಸವ, ಶು|| 10 ಬುಧವಾರ ಶ್ರೀ ಮಹಾಸ್ವಾಮಿಯ ಮಹಾರಥೋತ್ಸವ, ಶು|| 11 ಗುರುವಾರ ಹನುಮಾನ್ ಲಂಕಾದಾಹನೋತ್ಸವ, ಶು|| 12 ಶುಕ್ರವಾರ ವಸಂತೋತ್ಸವ ಈ ಪ್ರಕಾರವಾಗಿ ಮಾಮೂಲು ಪದ್ಧತಿಯಂತೆ ಪ್ರತಿದಿನವೂ ಅತಿ ವೈಭವದಿಂದ ನಡೆಯುತ್ತಿರುವುವು.

ಐರ್ಕಮಹೋತ್ಸವ ಸಮಾರಂಭಕ್ಕಾಗಿ ದಯಮಾಡಿಸುವ ವೀರಶೈವ ಶ್ರೀಮದ್ಗುರುವರ್ಯ ಪಟ್ಟಾಧಿಕಾರಿಗಳವರಿಗೂ ಶ್ರೀಮನ್ನಿರಂಜನ ಚರವರ್ಯ ಮಹಾಮೂರ್ತಿಗಳವರಿಗೂ ವಿಧ್ಯುಕ್ತವಾಗಿ ಪೂಜಾರಾಧನೆಯೂ, ಬಂದ ಭಕ್ತಮಾಹೇಶ್ವರ ವೃಂದಕ್ಕೆ ತ್ರಿಕಾಲ ಲಿಂಗಪೂಜಾಭೋಜನಾದ್ಯುಪಚಾರಂಗಳೂ ಈ ಮಠದ ಶೂನ್ಯಪೀಠಾಧ್ಯಕ್ಷ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಚೆನ್ನಬಸವ ಮಹಾಸ್ವಾಮಿಗಳವರ ಸನ್ನಿಧಿಯಿಂದ ನಡಿಸಲ್ಪಡುತ್ತವೆ. ಅದ್ದರಿಂದ, ಬುಧಜನಸ್ತರಾದಿಯಾಗಿ ವಿಶಿಷ್ಟ ಭಕ್ತಮಹೇಶ್ವರ ಸಮಾಜದವರು ಆಗಮಿಸಿ, ಇಲ್ಲಿ ನಡೆಯುವ ವಿಶಿಷ್ಟ ವೈಭವಂಗಳಂ ನೋಡಿ ಪರಿತೃಪ್ತರಾಗಿ ದೇವತಾ ದರುಶನಾದಿಗಳಂ ಮಾಡಿಕೊಂಡು ಪೂಜ್ಯಪಾದರ ದರುಶನಾಶೀರ್ವಾದಮುಂಪಡೆದು ಜನ್ಮಸಾಫಲ್ಯಕ್ಕೆ ಪ್ರಾಪ್ತರಾಗಬೇಕೆಂದು ಸೂಚಿಸೋಣವಾಗಿದೆ.

ಉರುಗಾದ್ರಿ ಗವಿಮಠ ಸಂಸ್ಥಾನ ಪಾ|| ಚಂ|| ಸಿದ್ದಿಂಗಪ್ಪ.

ವೀರಶೈವ ಮಹಾಸಭೆಯ ವಿಚಾರ.

ಈ ಸಾರಿ ಸನ್ 1929 ನೇ ಇಸ್ವಿ ಮೇ ತಿಂಗಳ 1-2-3 ತಾರೀಖುಗಳಲ್ಲಿ ಹನ್ನೊಂದನೆಯ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಶ್ರೀಮನ್ನಿರಂಜನ ಶಿವಯೋಗಿ ಶ್ರೀ ಶಿವಲಿಂಗಸ್ವಾಮಿ ಸಂಸ್ಥಾನ ಸಾವಳಗಿ ಮಠ ತಾ|| ಗೋಕಾಕ ಜಿಲ್ಲಾ ಬೆಳಗಾಂವ ಈ ಪವಿತ್ರ ಕ್ಷೇತ್ರದಲ್ಲಿ ಕರೆಯಬೇಕೆಂದು ವಿಚಾರಮಾಡಿದ್ದೇವೆ. ಸಾವಳಗಿ ಮಠವು ಪವಿತ್ರ ಶಿವಯೋಗಿಗಳ ಕ್ಷೇತ್ರಸ್ಥಳವದೆ. ಘಟಪ್ರಭಾನದೀ ದಂಡೆಯಮೇಲೆ ಇರುವದರಿಂದ ನೀರು ವಿಪುಲವಾಗಿರುತ್ತದೆ. ಮಠವು ವಿಶಾಲವಾಗಿರುವದಲ್ಲದೆ ಮಠದ ಸುತ್ತಲಿನ ಬೈಲು ಗಿಡಗಳಿಂದ ತುಂಬಿ ಪ್ರಶಸ್ತವಾಗಿದೆ. ಈಗ್ಗೆ ಸದ್ಯಕ್ಕೆ ಐದು ಸಾವಿರ ಜನರು ಕೂಡ್ರುವಷ್ಟು ಮಂಟಪವು ತಯಾರವದೆ. ಸದರೀ ಮಠವು ಗೋಕಾಕ ಸ್ಟೇಷನ್‌ದಿಂದ ಮೂರು ಮೈಲು ಮೇಲಿರುತ್ತದೆ. ಗಾಡಿ ಮೋಟಾರುಗಳು ಹೋಗಿ ಬರುವಂತೆ ತಕ್ಕ ಮಟ್ಟಿಗೆ ರಸ್ತೆ ಇರುತ್ತದೆ. ಮತ್ತು ಗೋಕಾಕ ಸ್ಟೇಷನ್‌ದಿಂದ ಮೂರು ಮೈಲು ಮೇಲೆ ರಮಣೀಯವಾದ ಘಟಪ್ರಭೆಯ ಧಬಧಬೆಯೂ, ನೂಲಿನ ವಿಶಾಲವಾದ ಗಿರಣಿಯೂ ಇರುತ್ತದೆ. ಸದರೀ ಮಹಾಸಭೆಗೆ ಬೇಕಾಗುವ ಸಾಮಾನುಗಳ ಪೂರೈಕೆ ಆಗುವಂತಿದೆ. ಮಹಾಸಭೆಗೆ ಬರಹೋಗುವ ಜನರುಗಳು ಇಳಿದುಕೊಳ್ಳುವ ವ್ಯವಸ್ಥೆಯೂ ಊಟದ ವ್ಯವಸ್ಥೆಯೂ ಚೆನ್ನಾಗಿ ಆಗುವಂತೆ ಅದೆ. ಅದ್ದರಿಂದ ಯಾವತ್ತು ವೀರಶೈವ ಸಮಾಜದವರು ಮತ್ತು ಮುಖಂಡರು ಈ ಪ್ರಕಟಣೆಯನ್ನು ಓದಿಕೊಂಡು ಯೋಗ್ಯವಿಚಾರ ಮಾಡಿ ತಮ್ಮ ಸದಭಿಪ್ರಾಯವನ್ನು ನಮಗೆ ತಿಳಿಸಿದಲ್ಲಿ ಮುಂದಿನ ಕಾರ್ಯಕ್ರಮವನ್ನೂ ಮುಖಂಡರು ಮಾಡತಕ್ಕ ಕರ್ತವ್ಯವನ್ನೂ ಹಿಂದಿನಿಂದ ತಿಳಿಸುವೆವು. ಅವಧಿಯು ಸ್ವಲ್ಪವಿರುವದರಿಂದಲೂ, ಮಾಡತಕ್ಕ ಕಾರ್ಯವು ದೊಡ್ಡದೂ ಬಹಳ ಮಹತ್ವದ್ದೂ ಇರುವದರಿಂದಲೂ ಯಾವತ್ತು ವೀರಶೈವ ಮುಖಂಡರು ತಮ್ಮ ಅಭಿಪ್ರಾಯವನ್ನು ಈ ಪ್ರಕಟಣೆಯ ತಾ|| ನಿಂದ 15 ದಿವಸದೊಳಗಾಗಿ ದಯಿಯಿಟ್ಟು ತಿಳಿಸುವವರಾಗಬೇಕು.

ಶ್ರೀ ಶಿವಲಿಂಗಸ್ವಾಮಿ, ಸಾವಳಗಿ ಮಠ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ.

ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಪದ್ಧತಿಯ ಪ್ರಕಾರ ಇದೇ ವಿಭವ ಸಂ|| ಫಾಲ್ಗುಣ ಶುದ್ಧ 13, ಶನಿವಾರ (23-3-29) ದಿವಸದಲ್ಲಿ ಈ ಕೆಳಗೆ ನಮೂದಿಸಿರುವ ಪ್ರೋಗ್ರಾಂ ಪ್ರಕಾರ ಬೆಂಗಳೂರು ಪಟ್ಟಣದಲ್ಲಿ ನಡೆಯಲು ನಿರ್ಧರಿಸಿದೆ. ತಾ|| 23-3-1929 ರ ಶನಿವಾರ ಪ್ರಾತಃಕಾಲ 6 ಘಂಟೆಯಿಂದ 12 ರ ವರಿವಿಗೆ ಮಹಂತಿನ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಲಿಂಗೋದ್ಭವ ವಿಗ್ರಹ ಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ. (2) ಮಧ್ಯಾಹ್ನ 12 ಘಂಟೆಗೆ ಮಹಂತಿನಮಠದಲ್ಲಿ ಭಕ್ತಮಾಹೇಶ್ವರರ ಸಮಾರಾಧನೆ. (3) ಮಧ್ಯಾಹ್ನ 1 ಘಂಟೆಯಿಂದ 5 ಘಂಟೆವರಿವಿಗೆ, ಜಗದಾಚಾರ್ಯರು ಪ್ರಪಂಚದಲ್ಲಿ ಮಾಡಿರುವ ಲೀಲೆಗಳ ವಿಷಯಕವಾದ ಭಾಷಣಗಳು. (4) ಸಾಯಂಕಾಲ 5|| ಘಂಟೆಗೆ ಶ್ರೀಮಾನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಚೆಟ್ಟರು, ಕೆ.ಟಿ. ಸಿ.ಐ.ಇ. ಇವರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆ ಸೇರುವುದು.

ಸಭಾಕಾರ್ಯ.

(1) ಸ್ತೋತ್ರ. (2) ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಫಂಡ್ ವಾರ್ಷಿಕ ರಿಪೋರ್ಟು. (3) ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವಧರ್ಮ ಗ್ರಂಥಭಾಂಡಾರ ವಾರ್ಷಿಕ ರಿಪೋರ್ಟು. (4) ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಧರ್ಮಪಾಠಶಾಲಾ ಫ್ರೀ ಬೋರ್ಡಿಂಗ್ ರಿಪೋರ್ಟು. (5) ಮೇಲ್ಕಂಡ ಭಗವತ್ಪಾದರವರಲೀಲೆಯ ವಿಷಯವಾಗಿ ಶಿವಕೀರ್ತನ ಕವಿಕೇಸರಿ ಇತ್ಯಾದಿ ಬಿರುದಾಂಕಿತರಾದ ಬ್ರಂ|| ಶ್ರೀ|| ವೇ|| ದೊಡ್ಡಬಳ್ಳಾಪುರದ ಶಿವದೇವಶಾಸ್ತ್ರಿಗಳಿಂದ ರಚಿಸಲ್ಪಟ್ಟಿರುವ ಪಂಚಶ್ಲೋಕೀ ಶ್ರವಣ. (6) ಅಧ್ಯಕ್ಷರ ಭಾಷಣ.

(1) ಸಾಯಂಕಾಲ 7 ಘಂಟೆಯಿಂದ 11 ಘಂಟೆವರಿವಿಗೆ ಮಹಂತಿನ ಮಠದಿಂದ ರಾಜಬೀದಿಗಳಲ್ಲಿ ನಂದೀಧ್ವಜಸಹಿತ ಪೂಜ್ಯಪಾದ ಜಗದಾಚಾರ್ಯರ ವಿಗ್ರಹ ಮೂರ್ತಿಯ ಪುಷ್ಪಕವಿಮಾನೋತ್ಸವ. (2) ಆಚಾರ್ಯರ ವಿಗ್ರಹಮೂರ್ತಿಯು ಮಠಕ್ಕೆ ಬಿಜಯಂಗೈಸಿದನಂತರ ಷೋಡಶೋಪಚಾರ ರಾಜೋಪಚಾರ ಪೂರ್ವಕ ಪ್ರಸಾದ ಹಂಚುವುದು. (3) ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ.

ದೇಶದ ಶೆಟ್ಟರು ಯಜಮಾನರು.

ಶ್ರೀಮದ್ವೀರಶೈವ ವಿದ್ಯಾವರ್ಧಕ ಸಂಸ್ಕೃತ ಪಾಠಶಾಲಾ, ಚಾಮರಾಜನಗರ.

ಮೇಲೆ ಕಂಡ ಪಾಠಶಾಲೆಯು ಈ ಊರು ಶ್ರೀ ವರ್ತಕವರ್ಧಿನಿ ಧರ್ಮಸತ್ರದಲ್ಲಿ ಕಳೆದ 4-3-29 ರಲ್ಲು ಸ್ಥಾಪಿಸಲ್ಪಟ್ಟಿತು. ವರ್ತಕವರ್ಧಿನಿ ಬ್ಯಾಂಕಿನ ಜನರಲ್ ಮೀಟಿಂಗಿನಲ್ಲಿ ಪಾಠಶಾಲೆಯನ್ನು ಸ್ಥಾಪಿಸುವದು ಅವಶ್ಯಕವೆಂದು ತೀರ್ಮಾನವಾದಮೇಲೆ, ಆ ದಿವಸ ಮಾಂಬಳ್ಳಿ ಸಾಹುಕಾರ್ರು ಮ|| ಬಸವಣ್ಣದೇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಜರುಗಿಸಲ್ಪಟ್ಟಿತು. ಸ್ಥಳದ ವೀರಶೈವ ದೊಡ್ಡಮನುಷ್ಯರೂ, ವರ್ತಕರೂ. ಬ್ಯಾಂಕು ಡೈರೆಕ್ಟರುಗಳೂ, ಮಿತ್ರರೂ ಸಭೆ ಸೇರಿದರು. ದೇವತಾ ಪ್ರಾರ್ಥನೆ, ಗ್ರಾಮೋಫೋನು ಸಂಗೀತಗಳು ನಡೆದಮೇಲೆ ಮ|| ರಾಮಕೃಷ್ಣ ಜಟ್ಟಿಯವರು ವೀರಶೈವರ ಉನ್ನತಿ, ಸಂಸ್ಕೃತ ವಿದ್ಯಾಭ್ಯಾಸದ ಅವಶ್ಯಕತೆ ಮತ್ತು ಮಹಿಮೆ, ಸ್ಕೂಲಿನ ಪುರೋಭಿವೃದ್ಧಿ ಈ ವಿಚಾರಗಳ ಮೇಲೆ ಉಪನ್ಯಾಸಮಾಡಿದರು. ಅದಾದನಂತರ ಮಂಗಳಾರತಿಯಾಗಿ, ಸುಮುಹೂರ್ತದಲ್ಲಿ ಸ್ಕೂಲಿನ ಕೆಲಸವು ಪ್ರಾರಂಭಿಸಲ್ಪಟ್ಟಿತು. ಸಮಸ್ತರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಇಲ್ಲಿನ ವೈಸ್ ಪ್ರೆಸಿಡೆಂಟ್ ಮ|| ಸಂಗನಬಸಪ್ಪನವರು ವೀರಶೈವರ ಪರವಾಗಿ ಸಾಹುಕಾರರನ್ನೂ, ಬ್ಯಾಂಕು ಷೇರುದಾರರು, ಮತ್ತು ಡೈರೆಕ್ಟರುಗಳನ್ನೂ, ಏಜಂಟರು ಮ|| ಪುಟ್ಟವೀರಣ್ಣನವರನ್ನೂ ಈ ಪ್ರಾಮಾಣಿಕ ವಿಚಾರವಾಗಿ ಹೊಗಳಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು. ಸಾಹುಕಾರ್ ಮ|| ಬಸವಣ್ಣದೇವರು ಕಾಲೋಚಿತವಾದ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿ, ಪಾಠಶಾಲೆಯು [illegible] ಡೈರೆಕ್ಟರುಗಳ

ಬೋನಸ್ಸನ್ನು ಕೊಡಲು ಎಲ್ಲರೂ ಒಪ್ಪಿರುವ ಸಂಗತಿಯನ್ನು ತಿಳುಹಿಸಿ, ಪಾಠಶಾಲೆಯ ಶ್ರೇಯಸ್ಸನ್ನು ಹಾರೈಸಿದರು. ಅಲ್ಲಿಂದ ಸಭೆಯು ಭರಕಾಸ್ತಾಯಿತು.

ಈ ಊರಲ್ಲಿ ಇಂತಹ ಪಾಠಶಾಲೆಯು ಸ್ಥಾಪಿಸಲ್ಪಟ್ಟದ್ದು ಶುಭಪ್ರದವಾಗಿದೆ. ಈ ಪ್ರಯತ್ನಕ್ಕೆ ಮ|| ಪುಟ್ಟವೀರಣ್ಣನವರು ಅತ್ಯಂತ ಶ್ರಮವನ್ನು ವಹಿಸಿರುವರು. ಪಾಠಶಾಲೆಯಲ್ಲಿ ಸಂಸ್ಕೃತ, ತಮಿಳು, ಹಿಂದಿಗಳನ್ನು ತಿಳಿದ ಒಬ್ಬರು ಉಪಾಧ್ಯಾಯರು ನಿಯಮಿಸಲ್ಪಟ್ಟಿರುತ್ತಾರೆ. ಈಗಾಗಲೆ ಹತ್ತಾರು ವಿದ್ಯಾರ್ಥಿಗಳು ಸೇರಿರುವರು. ಈ ಪಾಠಶಾಲೆಯಲ್ಲಿ ವೀರಶೈವ ವಿದ್ಯಾರ್ಥಿಗಳು ಸ್ಪೆಷಲ್ಲಾಗಿಯೂ, ಇತರ ವಿದ್ಯಾರ್ಥಿಗಳು ಜನರಲ್ಲಾಗಿಯೂ ವಿದ್ಯಾಭ್ಯಾಸಮಾಡಲು ಅನುಕೂಲಮಾಡಲ್ಪಟ್ಟಿದೆ. ಈ ಪಾಠಶಾಲೆಯನ್ನು ದೇವರು ಅಭಿವೃದ್ಧಿಗೆ ತರಲೆಂದೂ, ಇದನ್ನು ಸ್ಥಾಪಿಸಲು ಮೆಹನತ್ತು ಮಾಡಿದ ಪುಟ್ಟವೀರಣ್ಣನವರ ಹೆಸರು ಚಿರಕಾಲ ಬೆಳಗಲೆಂದೂ, ನಾನಾರೀತಿ ಸಹಾಯ ಪ್ರೋತ್ಸಾಹಗಳನ್ನು ಮಾಡಿದ ನಮ್ಮ ಸಾಹುಕಾರ್ ಮ|| ಬಸವಣ್ಣ ದೇವರ ಮೆಹನತ್ತು ಸಾರ್ಥಕಹೊಂದಲೆಂದೂ ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ.

ನೂತನ ದೇವಾಲಯ ಪ್ರವೇಶಮಹೋತ್ಸವ.

ಅರಸೀಕೆರೆ ತಾ|| ಅಗ್ಗುಂದ ಗ್ರಾಮದಲ್ಲಿ ಕಳೆದ ಮಾಘ ಶುದ್ಧ ೧೩ನೇ ಗುರುವಾರ ಶ್ರೀ ಬಸವೇಶ್ವರಸ್ವಾಮಿಯ ನೂತನ ದೇವಾಲಯ ಪ್ರವೇಶ ಮಹೋತ್ಸವದೊಂದಿಗೆ ಯಳಹಂಕದ ಶ್ರೀ ಚರಪಟ್ಟಾಧ್ಯಕ್ಷಸ್ವಾಮಿಗಳವರ ಮತ್ತು ಸಾಣೆಹಳ್ಳಿ ಶ್ರೀ ಚರಮೂರ್ತಿಸ್ವಾಮಿಗಳವರ ನೇತೃತ್ವದಲ್ಲಿ ಪಂಚಕಲಶಸ್ಥಾಪನಾಪೂರ್ವಕ ವೇ|| ಸೊಲ್ಲಾಪುರದ ಯೋಗಪ್ಪಶಾಸ್ತ್ರಿಗಳು ಮತ್ತು ಮಾದಿಹಳ್ಳಿ ವೇ|| ಮರಿದೇವರು, ವೇ|| ಬಸಪ್ಪಶಾಸ್ತ್ರಿಗಳು ಮುಂತಾದ ಶಾಸ್ತ್ರಿವರ್ಗದವರಿಂದ ವಿಧಿಪ್ರಕಾರವಾಗಿ ವಟುಗಳಿಗೆ ದೀಕ್ಷೋಪನಯನ ಮಹೋತ್ಸವವೂ ನಡೆದು ಆ ದಿನವೂ, ಮರುದಿನವೂ ನಾಲ್ಕಾರು ಸಾವಿರ ಭಕ್ತಮಾಹೇಶ್ವರರಿಗೆ ವಿಜೃಂಭಣೆಯಿಂದ ಸಂತರ್ಪಣೆಯು ನಡೆಯಿತು. ತಾ|| 23-2-1929 ನೇ ಶನಿವಾರ ಸಾಯಂಕಾಲ ಶ್ರೀ ತಿಡ್ಲಹಳ್ಳಿ ಕಲ್ಕತ್ತಾ ಯೂನಿವರ್ಸಿಟಿ ಮತ್ತು ಕಾಶಿಯಲ್ಲಿ ತರ್ಕಶಾಸ್ತ್ರವಿಶಾರದ, ಕಾವ್ಯತೀರ್ಥ ಮುಂತಾದ ಬಿರುದನ್ನು ಪಡೆದಿರುವ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಹಾಜನಗಳ ಸಭೆಸೇರಿ ಶ್ರೀಯಳನಡುಸಂಸ್ಥಾನದ ಪಟ್ಟಾಧ್ಯಕ್ಷರು ಸಮಾಜದೌನ್ನತ್ಯ, ಸ್ತ್ರೀ ಸುಧಾರಣಾ, ಬಾಲ್ಯವಿವಾಹನಿಷೇಧ ಇವುಗಳ ವಿಚಾರದಲ್ಲಿ ಸರ್ವರ ಹೃದಯಂಗಮವಾಗುವಂತೆಯೂ ಮ|| ದೊಡ್ಡಮೇಟೀಕುಂಕೆ ಸ್ಕೂಲ್ ಹೆಡ್ಮಾಸ್ಟರ್ ಎ. ಪಿ. ಶಂಕರಲಿಂಗಪ್ಪನವರು ಐಕಮತ್ಯವಿಚಾರದಲ್ಲಿ ಬಹು ಸ್ವಾರಸ್ಯವಾಗಿಯೂ, ಮ|| ಬೊಮ್ಮೆನಹಳ್ಳಿ ಸ್ಕೂಲ್ ಮಾಸ್ಟರು ಬಸಯ್ಯನವರು ಮತ್ತು ಮಲ್ಲೇದೇವನಹಳ್ಳಿ ಸ್ಕೂಲ್‌ಮಾಸ್ಟರು ಮ|| ರುದ್ರಯ್ಯನವರು ವಿದ್ಯಾಭ್ಯಾಸದ ವಿಚಾರದಲ್ಲಿಯೂ ಮ|| ಪಿ. ವೀರಪ್ಪಯ್ಯನವರು ಜಂಗಮಾಧಿಕಾರ ವಿಚಾರವಾಗಿಯೂ, ಮಾಡಾಳುಮಠದ ಶ್ರೀ ವಿರಕ್ತಸ್ವಾಮಿಗಳು ಮತ್ತು ತಮ್ಮಡಿಹಳ್ಳಿ ಶ್ರೀವಿರಕ್ತಸ್ವಾಮಿಗಳವರು ವೈದಿಕವಿದ್ಯಾಭ್ಯಾಸವಿಚಾರವಾಗಿಯೂ, ವೇ|| ಯೋಗಪ್ಪಶಾಸ್ತ್ರಿಗಳು ಮತ್ತು ವೇ|| ಸಿದ್ಧಣ್ಣಯ್ಯನವರು ಸಂಸ್ಕೃತವಿದ್ಯಾಭ್ಯಾಸದ ಆವಶ್ಯಕತೆವಿಚಾರವಾಗಿಯೂ ಭಾಷಣಮಾಡಿದರು. ಅನಂತರ ಅಧ್ಯಕ್ಷರು ಸಭಾಚಾಲಕರಿಗೆ ಅನೇಕ ಸಲಹೆಗಳನ್ನು ಕೊಟ್ಟರು. ಸಭೆಯಲ್ಲಿ ಶ್ರೀಯುತ ಹಂಕದಸ್ವಾಮಿಗಳು, ಶ್ರೀ ತಿಡ್ಲಹಳ್ಳಿ ಸ್ವಾಮಿಗಳು, ಮತ್ತು ಯಳನಡು ಶ್ರೀಸ್ವಾಮಿಗಳವರ ಆಡಳಿತಕ್ಕೊಳಪಟ್ಟ ಸದ್ಯದಲ್ಲಿ ತಿಪ್ಟೂರು ಶ್ರೀ ವೀರಶೈವರ ಸ್ಟೂಡೆಂಟ್ಸ್ ಹೋಂನಲ್ಲಿ ವೈದಿಕ ಪಾಠಶಾಲೆಯನ್ನು ಪ್ರಾರಂಭಮಾಡಬೇಕೆಂದು ರೆಜಲ್ಯೂಷನ್ ಪಾಸಾಯಿತು. ಗ್ರಾಮದವರಿಂದ ಚಿಕ್ಕಮಗಳೂರು ವೀರಶೈವ ಸ್ಟೂಡೆಂಟ್ಸ್ ಹೋಂ ಅಭಿವೃದ್ಧಿಗಾಗಿ ಐದು ರೂಪಾಯಿಗಳನ್ನೂ ತಿಪ್ಟೂರು ಶ್ರೀ ವೀರಶೈವ ಸ್ಟೂಡೆಂಟ್ಸ್ ಹೋಂ ಅಭಿವೃದ್ಧಿಗಾಗಿ ಐದು ರೂಪಾಯಿಗಳನ್ನೂ ಹಾಜರಿದ್ದ ಆಯಾ ಹೋಮಿನ ಪ್ರೆಸಿಡೆಂಟರವರ ಹಸ್ತಪಾವತಿ ಮಾಡಲ್ಪಟ್ಟು ಅನಂತರ ಸಭಿಕರಿಗೆ ಗಂಧ, ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಭರ್ಕಾಸ್ತಾಯಿತು. ಓರ್ವ ಉತ್ಸವಭಾಗಿ.

ಅಂತರಗಟ್ಟೆಯಲ್ಲಿ ಲಂಬಾಣಿಯವರ ಸಭೆ.

ತಾ|| 23-2-1929 ರಲ್ಲಿ ಕಡೂರು ತಾ|| ಅಂತರಗಟ್ಟೆ ಜಾತ್ರೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರು ಮ|| ಹೆಚ್. ವಿ. ಕೋದಂಡರಾಮಯ್ಯನವರ ಅಧ್ಯಕ್ಷತೆಯಲ್ಲಿ ಲಂಬಾಣಿಯವರ ಒಂದು ಸಭೆಯು ನೆರೆಯಿತು. ಈ ಜಾತ್ರೆಗೆ ಲಂಬಾಣಿಯವರ ಒಟ್ಟು 7000 ಪ್ರಜೆ ಸೇರಿತ್ತು. ರೆ|| ಅ|| ಮೆಂಬರು ಮ|| ಜಾತರನಾಯ್ಕರು ಲಂಬಾಣಿಯವರ ಸ್ವಭಾಷೆಯಲ್ಲಿ ಆರ್ಥಿಕ ಮತ್ತು ನೈತಿಕ ವಿಷಯವಾಗಿ ಉಪನ್ಯಾಸಮಾಡಿದರು. ಅಧ್ಯಕ್ಷರು ಲಂಬಾಣಿಯವರ ಅಭಿವೃದ್ಧಿಯ ವಿಷಯವನ್ನು ಕುರಿತು ಸಲಹೆಗಳನ್ನು ಕೊಟ್ಟು ಮಾತನಾಡಿದರು. ಅನಂತರ ಈ ಕೆಳಗಿನ ನಿರ್ಣಯಗಳು ತೀರ್ಮಾನಿಸಲ್ಪಟ್ಟು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ಠರಾವು ಆದುವು.

(1) ಈಗ ಜಾರಿಯಲ್ಲಿರುವ 5 ಎಕರೆಗೆ ಬದಲಾಗಿ 15 ಎಕರೆಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವುದು.

(2) ಜಮೀನುಗಳನ್ನು ರಿಯಾಯತಿಯಿಂದ ಕೊಡುವ ಅಧಿಕಾರವನ್ನು ಸಬ್-ಡಿವಿಜನ್ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕೊಡುವುದು.

(3) ನಿಮ್ಮ ವರ್ಗದವರ ದರಖಾಸ್ತು ಬಂದಕೂಡಲೆ ಜಮೀನು ಬಿಲ್ಸಿಗೆ ಸೇರಿದ್ದಾಗ್ಗೂ ಏಲಂ ಹರಾಜಿಗಿಡದೆ ತಾ|| ಅಧಿಕಾರಿಗಳು ಮೇಲಕ್ಕೆ ಶಿಫಾರ್ಸು ಮಾಡುವುದು.

(4) ಲಂಬಾಣಿಯವರಿಗಾಗಿ ಒಬ್ಬ ಪೇಡ್ ಲೆಕ್ಚರರನ್ನು ನೇಮಿಸುವುದು.

(5) ಬೆಂಗಳೂರಿನಲ್ಲಿ ಒಂದು ಫ್ರೀ ಬೋರ್ಡಿಂಗ್ ಸ್ಥಾಪಿಸುವುದು.

(6) ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ದೇವರಗುಡ್ಡ ಫಾರೆಸ್ಟಿನಲ್ಲಿ ಒಂದು ಲಂಬಾಣಿಗ್ರಾಮ ಕಟ್ಟುವದಕ್ಕೋಸ್ಕರ 300 ಎಕರೆ ಜಮೀನು ಕೇಳುವುದು.

(7) ಅಂತರಗಟ್ಟೆಯಲ್ಲಿ ಪ್ರತಿವರ್ಷವೂ ಜಾತ್ರೆಕಾಲದಲ್ಲಿ ಲಂಬಾಣಿಯವರ ಸಭೆಸೇರಬೇಕು.

(8) ಅಂತರಗಟ್ಟೆಯಲ್ಲಿ ಒಂದು ಜಮೀನು ಪಡೆದು ಅಲ್ಲಿ ಕೋವು ಬೆಳೆಸುವುದು.

(9) ನಿಮ್ಮ ಸಂಘದವರಿಗೊಂದು ಒಟ್ಟುಗೂಡ್ಲಿ ಕೊಡುವ ವೇತನದ ಮೊಬಲಗಿನಲ್ಲಿ ಒಂದು ಗೊತ್ತಾದ ಮೊತ್ತವನ್ನು ಲಂಬಾಣಿಯವರಿಗೆ ಎಂದು ಪ್ರತ್ಯೇಕಿಸುವುದು.

ಇದಕ್ಕಾಗಿ 50,000 ರೂ. ಯನ್ನು ಸರ್ಕಾರದವರು ಮುಂಜೂರು ಮಾಡುವುದು.

(10) ಲಂಬಾಣಿಯವರ ಅಭಿವೃದ್ಧಿಗಾಗಿ ಸರ್ಕಾರದವರು ಪರಸ್ಪರ ಸಹಾಯ ಸಂಘಗಳ ಮೂಲಕ 50,000 ರೂ. ಯನ್ನು ಬಡ್ಡಿ ಇಲ್ಲದ ಸಾಲವಾಗಿ ಕೊಡುವುದು.

(11) ಲಂಬಾಣಿಯವರು ಮದ್ಯಪಾನಮಾಡಕೂಡದೆಂದು, [illegible]

[illegible] ಸೆಕ್ರೆಟರಿ. ಲಂಬಾಣಿಸಂಘ.

ಗುಲುಬುರ್ಗಾ ಗದ್ದಿಗಿಮಠ ಶ್ರೀ ರೇವಣಸಿದ್ಧೇಶ್ವರ ಸಂಸ್ಕೃತ ಪಾಠಶಾಲೆಯ ವಾರ್ಷಿಕ ಪರೀಕ್ಷೆಯು.

ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀಮದನ್ನದಾನ ಮಹಾಸ್ವಾಮಿಗಳು ಹಾಲಕೆರೆ, ಶ್ರೀ ಮಹಾಂತಸ್ವಾಮಿಗಳು ಶಿವಯೋಗಮಂದಿರ, ಶ್ರೀಗುರು ಮಹಾಂತ ಸ್ವಾಮಿಗಳು ಇಲಕಲ್ಲ, ಶ್ರೀ ಸಿದ್ಧಲಿಂಗಸ್ವಾಮಿಗಳು ರಾಪೂರ ಈ ಪೂಜ್ಯಪಾದರುಗಳನ್ನು ಇಲ್ಲಿಯ ಪ್ರಮುಖ ಸದ್ಭಕ್ತರು ಪ್ರಾರ್ಥಿಸಿಕೊಂಡ ಮೇರೆಗೆ ಸದರಿ ಪೂಜ್ಯಪಾದರುಗಳು ತಾ|| 10-2-1929 ರವಿವಾರ ಇಲ್ಲಿಗೆ ದಯಮಾಡಿಸಿದರು. ಮರುದಿನ ತಾ|| 11-2-29 ಸೋಮವಾರ ಹಸ್ತಪತ್ರಿಕೆಯ ಮೂಲಕ ಪ್ರಸಿದ್ಧಪಡಿಸಿದಂತೆ ಸಭೆಯು ಕೂಡಿ ಇಲ್ಲಿಯ ಗುರುಬಸವಪ್ಪನವರ ಮಠಾಧ್ಯಕ್ಷರಾದ ನಿರಾಭಾರಿ ರೇವಣಸಿದ್ಧಸ್ವಾಮಿಗಳು, ಘನಲಿಂಗಚಕ್ರವರ್ತಿಗಳಾದ ಚಿತಾಪುರ ಹಿರೇಮಠದ ಪಟ್ಟಾಧ್ಯಕ್ಷರು, ಚನ್ನವೀರದೇಶಿಕೇಂದ್ರರು, ಶ್ರೀ ಶರಣಬಸವೇಶ್ವರರ ಮನೆಯ ಈಗಿನ ಯಜಮಾನರಾದ ಶಿವಶರಣರು, ಮತ್ತು ರಾ|| ಗಳಾದ ಮಡಿಯಪ್ಪನವರು ಚೌದರಿ, ಲಕ್ಷ್ಮಯ್ಯ ಚಾಜಿ, ಶಾಂತಮಲ್ಲಪ್ಪ ಖುಬಾ, ಸೂಗಪ್ಪ ನನ್ನಾ, ಸಿದ್ಧಲಿಂಗಪ್ಪ ನಂದ್ಯಾಳ, ಗುರಪ್ಪ ನಂದ್ಯಾಳ, ಶಿವಶರಣಪ್ಪ ಅಡಿಕೆ, ಶರಣಪ್ಪ ಚಿತಾಪುರ, ವೀರಪ್ಪ ಕೊಂಡದ ಇವರೆ ಮೊದಲಾದ ಅನೇಕ ಪಟ್ಟಣಿಗರಿಂದ ಅಲಂಕೃತವಾಗಿತ್ತು. ಈ ಮೊದಲೇ ನಿಶ್ಚೈಸಿದ ಪ್ರಕಾರ ಶ್ರೀ ಮಹಾಂತಸ್ವಾಮಿಗಳು ಶಿವಯೋಗಮಂದಿರ ಇವರಿಂದ ವಿದ್ಯಾರ್ಥಿಗಳ ಪರೀಕ್ಷೆಯು ತೆಗೆದುಕೊಳ್ಳಲ್ಪಟ್ಟಿತು. ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸಮಂಜಸ ಉತ್ತರಗಳನ್ನು ಕೊಟ್ಟದ್ದರಿಂದ ಆನಂದ ಭರಿತರಾದ ಇಲಕಲ್ಲ ಶ್ರೀ ಸ್ವಾಮಿಗಳವರು ಪಾಸಾದ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುಸಾರವಾಗಿ ಪುಸ್ತಕಗಳನ್ನು ಆಶೀರ್ವಾದ ಮಾಡಿದರು. ಈ ಶ್ರೀಗಳಂತೆ ಸಂತುಷ್ಟರಾದ ಶ್ರೀ ಶರಣಬಸವೇಶ್ವರರ ಮನೆಯ ಯಜಮಾನರಾದ ಶಿವಶರಣರು ಸಹ ಕೆಲವು ರೂಪಾಯಿಗಳನ್ನು ಇನಾಮಾಗಿ ಕೊಟ್ಟರು. ಆ ಬಳಿಕ ಸಚ್ಛ್ರವಣೇಚ್ಛುಗಳಾದ ಭಕ್ತಜನರ ಕೋರಿಕೆಯಂತೆ ಭಾಷಣಗಳು ಪ್ರಾರಂಭವಾದವು. ಮೊದಲು ಇಲಕಲ್ಲ ಶ್ರೀಗಳವರ ಭಾಷಣವು ವಿದ್ಯಾವಿಷಯವಾಗಿ ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಬಹುರಮ್ಯವಾಗಿ ಸಾಗಿತು. ತದನಂತರ ಶಿವಯೋಗಮಂದಿರದ ಶ್ರೀಗಳವರ ಭಾಷಣವು ಪ್ರಾರಂಭವಾಯಿತು. ವೇದೋಪನಿಷದಾದಿ ಪ್ರಮಾಣಪೂರ್ವಕ ಈ ಮಹಿಮರ ದಿವ್ಯಾಮೃತ ಸಮಾನವಾದ ಭಾಷಣವನ್ನು ಕೇಳಿ ಜನರು ಹರ್ಷಿತರಾಗಿ ಚಿತ್ರದೊಳಗಿನ ಗೊಂಬೆಗಳಂತೆ ಸ್ತಬ್ಧರಾಗಿದ್ದರು. ಈ ಮಹಿಮರ ಸರಸವಾಣಿಯು ಚಿಕ್ಕಮಕ್ಕಳಲ್ಲಿಯು ಸಹ ತನ್ನ ಮಾಧುರ್ಯವನ್ನು ವ್ಯಕ್ತಗೊಳಿಸುತ್ತಿತ್ತು. ಆ ಬಳಿಕ ಈ ಶಾಲಾಧ್ಯಾಪಕರಾದ ಶಾಸ್ತ್ರಿಗಳಿಗೆ ತಿಂಗಳೊಂದಕ್ಕೆ ಮೂವತ್ತು ರೂಪಾಯಿಗಳಂತೆ ವೇತನವನ್ನು ಉದಾರಾಂತಃಕರಣದಿಂದ ಸರ್ವದಾ ಕೊಡಲೊಪ್ಪಿದ ರಾ|| ಗುರಪ್ಪನವರು ಖುಬಾ ಈ ಉಭಯತರು ತಮ್ಮ ತಂದೆಯ ಸತ್ಯವಚನವು ಅಳಿಯದೆ ಸ್ಥಿರವಾಗಿ ಉಳಿಯಲೆಂದು ಅವರ ವಾಗ್ದಾನದಂತೆ ಮೇಲ್ಕಾಣಿಸಿದ ಶಾಸ್ತ್ರಿಗಳ ವೇತನವನ್ನು ಈಗಲೂ ಕೊಡುತ್ತಿರುವರಲ್ಲದೆ ಮುಂದಾದರೂ ನಿರಂತರ ಕೊಡಲೊಪ್ಪಿ ತಮ್ಮ ತಂದೆಯ ಕೀರ್ತಿಪ್ರಭೆಯನ್ನು ಹಬ್ಬಿಸುತ್ತಿರುವುದು ಆತ್ಮಾನಂದದ ಸಂಗತಿಯಲ್ಲವೇ? ಈ ಸತ್ಪುತ್ರರಿಗು ಮತ್ತು ಈ ಶಾಲೆಯು ಸುವ್ಯವಸ್ಥೆಯಿಂದ ಸಾಗುವವದರ ಸಲುವಾಗಿ ಸದಾ ಯತ್ನಿಸುತ್ತಿರುವ ಶ್ರೀಮಂತ ಲಕ್ಷ್ಮಯ್ಯ ಚಾಜಿ, ರಾ|| ಸಿದ್ದಪ್ಪ ಭೀಮಳ್ಳಿ, ರಾ|| ಸೂಗಪ್ಪ ನನ್ನಾ ಮುಂತಾದ ಸದ್ಭಕ್ತರಿಗು ಸದಾ ಇಂಥ ಉತ್ತಮ ಬುದ್ಧಿಯನ್ನೇ ಜಗದೀಶನು ಅನುಗ್ರಹಿಸಲೆಂದು ಆಶೀರ್ವಾದಿಸಿ ಶ್ರೀಗಳು ತಮ್ಮ ಭಾಷಣವನ್ನು ಪೂರೈಸಿದರು. ತದನಂತರ ಈ ಶಾಲಾಧ್ಯಾಪಕರಾದ ಕಾರ್ತಿಕೇಯ ಶಾಸ್ತ್ರಿಗಳವರ ಭಾಷಣವಾದರೂ ಸರಸವಾಗಿ ಕೆಲವುವೇಳೆ ಜರಗಿತು. ವೇದಾಂತ ಶಾಸ್ತ್ರ ನಿಪುಣರಾದ ವೀರಪ್ಪನವರು ಕೊಂಡೇದ ಇವರು ಸ್ವಲ್ಪಕಾಲ ಉಪಸಂಹಾರರೂಪವಾದ ಭಾಷಣವನ್ನು ಮಾಡಿ ಯಾವತ್ತು ಶ್ರೀಗಳವರ ಆಭಾರವನ್ನು ಎಲ್ಲ ಸಭಿಕರವತಿಯಿಂದ ಮನ್ನಿಸಿದರು. ಬಳಿಕ ಮಂಗಲರವದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ಯಾವತ್ತು ಜನರು ಶ್ರೀಗಳಿಂದ ಆಶೀರ್ವಾದಗಳನ್ನು ಹೊಂದಿ ತಮ್ಮ ಸ್ಥಳಗಳಿಗೆ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಭೋಗಮಲ್ಲೇಶ್ವರ ದೇವಸ್ಥಾನದ ಕಟ್ಟಡ ಶ್ರೀ ಬಸವೇಶ್ವರ ಗಣಪತಿ ಮತ್ತು ಅಮ್ಮನವರ ಪ್ರತಿಷ್ಠಾ, ಶ್ರೀ ವೀರಭದ್ರ ದೇವರ ದೇವಸ್ಥಾನದಲ್ಲಿ ನವಗ್ರಹ ಶಿಲಾಮೂರ್ತಿಗಳ ಸ್ಥಾಪನಾ ಸಮಾರಂಭ.

ಬೀರೂರಲ್ಲಿ ಜಮೀನದಾರರೂ ಪ್ರಸಿದ್ಧ ವರ್ತಕರೂ ಬೀರೂರು ಮ್ಯು|| ಆನರರಿ ವೈಸ್‌ಪ್ರೆಸಿಡೆಂಟರೂ ಆದ ದೊಡ್ಡಮನೆ ಹಾಲಪ್ಪನವರು ಕೆಲವು ದಿವಸಗಳಿಂದಲೂ ಸಂಕಲ್ಪಿಸಿಕೊಂಡ ಪ್ರಕಾರ ಮೇಲ್ಕಂಡ ದೇವಾಲಯನಿರ್ಮಾಣ ಶಿಲಾಮೂರ್ತಿಗಳ ಸ್ಥಾಪನಸಮಾರಂಭವು, ತಾ|| 28-2-29 ನೆಯ ಗುರುವಾರ ದಿವಸ ವಿಶೇಷ ಉತ್ಸಾಹದಿಂದ ನಡೆಯಿಸಲ್ಪಟ್ಟಿತು. ಬುಧವಾರ ಸಾಯಂಕಾಲ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಸ್ಥಳದ ಶ್ರೀ ವೀರಭದ್ರಸ್ವಾಮಿಯೊಂದಿಗೆ ಮುಖ್ಯಬೀದಿಗಳಲ್ಲಿ ಮಂಗಲವಾದ್ಯ ಸಮೇತ ವಿಜೃಂಭಣೆಯಿಂದ ದೇವಸ್ಥಾನಗಳಿಗೆ ತರಲ್ಪಟ್ಟು ತತ್ಪೂರ್ವವೇ ಈ ಕಾರ್ಯಕ್ಕೆ ಅಂಗಭೂತವಾದ ಪುಣ್ಯಾಹ ವಾಚನಾ ಮೊದಲಾದ ಕಾರ್ಯಗಳು ಬೆಂಗಳೂರಿನಿಂದ ಪುರೋಹಿತರಾಗಿ ಬಂದಿದ್ದ ಶ್ರೀ. ವೇ. ಗುರುಲಿಂಗಶಾಸ್ತ್ರಿಗಳವರು, ವೇ|| ಕಂಬಸವಶಾಸ್ತ್ರಿಗಳವರು, ವಿದ್ಯಾರ್ಥಿ ಚರಮೂರ್ತಿಗಳು ಇವರಿಂದ ನಡೆಯಿಸಿ ಗುರುವಾರ ಶುಭಲಗ್ನಕ್ಕೆ ಸರಿಯಾಗಿ ಕಾರ್ಯಕರ್ತೃಗಳಾದ ಮ|| ಹಾಲಪ್ಪನವರ ಸತ್ಸಂಕಲ್ಪದಂತೆ ಕರ್ಮಠರಿಂದ ವಿಧ್ಯುಕ್ತವಾಗಿ ನವಗ್ರಹಗಳು, ಶ್ರೀ ಬಸವೇಶ್ವರ ಗಣಪತಿ ಮತ್ತು ಅಮ್ಮನವರ ಪ್ರತಿಷ್ಠಾಪನೆಯು ಸಾಂಗವಾಗಿ ನಡೆಯಿತು. ಇದೇ ಸಮಯಕ್ಕೆ ತರೀಕೆರೆಯ ಎಣ್ಣೆಹೊಳೆ ಮಠದ ಶ್ರೀಮನ್ನಿರಂಜನ ಶಿವಾನುಭವಚರವರ್ಯಮಹಾಸ್ವಾಮಿಗಳವರೂ ಬೃಹತ್ಸಮುದ್ರದ ಬೃಹನ್ಮಠಾಧೀಶ ಶ್ರೀ ಚನ್ನಬಸವ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಕಂಸಾಗರದ ಎಸ್ಟೇಟ್ ಶಿವಾನಂದಾಶ್ರಮ ಇವರುಗಳು ದಯಮಾಡಿಸಿದ್ದರಿಂದ ಜನಗಳಲ್ಲಿ ವಿಶೇಷ ಆನಂದವುಂಟಾಗಿದ್ದಿತು. ತಾ|| 1-3-29 ನೆ ಶುಕ್ರವಾರ ಶ್ರೀ ಸ್ವಾಮಿಗಳವರ ಪಾದಪೂಜಾ ಸ್ಥಾಪನಾಮೂರ್ತಿಗಳಿಗೆ ರುದ್ರಾಭಿಷೇಕ ಬಿಲ್ವಾರ್ಚನೆ ಮಂಗಲಾನಂತರ ಮಾಹೇಶ್ವರಾರಾಧನೆಯು ದಕ್ಷಿಣೆ, ಗೋದಾನ ಹಿರಣ್ಯದಾನ, ಅನ್ನದಾನ ಶಾಸ್ತ್ರಕಾರ್ಯಗಳು ಸಂತೋಷಪೂರ್ವಕ ನಡೆದವು. ಈ ವಿಷಯದಲ್ಲಿ ಮ|| ನರಸಿಂಹರಾಜಪುರದ ಯ|| ಶಾಂತಪ್ಪಸೆಟ್ಟರವರು ಇಂಥಾ ಮಹತ್ಕಾರ್ಯಗಳನ್ನು ಅನೇಕವಾಗಿಮಾಡಿಸಿ ಅನುಭವಶಾಲಿಗಳಾದ್ದರಿಂದ ಮ|| ಹಾಲಪ್ಪನವರ ಅಪೇಕ್ಷೆಯಂತೆ ಬೆಂಗಳೂರಿನಿಂದ ಶಾಸ್ತ್ರಿಗಳವರನ್ನು ಕರೆಸಿಕೊಟ್ಟು ಕೆಲಸಗಳು ಸಾಂಗಗೊಳ್ಳುವ ಪರ್ಯಂತರ ಪ್ರತ್ಯಕ್ಷ ಸಹಾಯಕರಾಗಿದ್ದುದು ಸ್ತುತ್ಯವಾದ ಸಂಗತಿಯಾಗಿದೆ. ಈ ಮಹತ್ಕಾರ್ಯದಲ್ಲಿ ಊರಿನ ಕೆಲದೊಡ್ಡಮನುಷ್ಯರುಗಳು ಬಂಧು ಬಾಂಧವರು ಸೇರಿ ಮುಂದೆ ನಿಂತು ಕಾರ್ಯನೆರವೇರಿಸಿದ್ದಕ್ಕೋಸ್ಕರ ಮ|| ಹಾಲಪ್ಪನವರು ತುಂಬಾ ಕೃತಜ್ಞರಾಗಿರುವರು. ಈ ಶುಭಕಾರ್ಯದ ಜ್ಞಾಪಕಾರ್ಥವಾಗಿ ಶ್ರೀ|| ವೀರಸಂಗಪ್ಪನವರ ಹೆಸರಿನಲ್ಲಿ ಒಂದು ರೂಪಾಯನ್ನೂ ಪಂಚಾಚಾರ್ಯಪ್ರಭಾ ಪೋಷಣಾರ್ಥವಾಗಿ, ಎರಡು ರೂಪಾಯಿಗಳನ್ನೂ ಶ್ರೀ ಕ್ಷೇತ್ರ ಕಾಶಿಯಲ್ಲಿ ಶಾಸ್ತ್ರಾಭ್ಯಾಸಮಾಡುತ್ತಲಿರುವ ಮುದೇನೂರು ಬೃಹನ್ಮಠದ ವಾಗೀಶ ಶಿವಾಚಾರ್ಯ ಪಟ್ಟದ ಸ್ವಾಮಿಗಳ ವಿದ್ಯಾಭ್ಯಾಸಕ್ಕೋಸ್ಕರ 5 ರೂ. ಗಳೂ ತೆಗೆಯಲ್ಪಟ್ಟು ಕಳುಹಲ್ಪಟ್ಟುವು. ಮ|| ಹಾಲಪ್ಪನವರು ತುಂಬಾ ಕುಟುಂಬಿಗಳಾಗಿದ್ದು ತಮ್ಮ ಶ್ರೇಯೋಭಿವೃದ್ಧಿಗೋಸ್ಕರ ಸಕುಟುಂಬರಾಗಿ ಈ ಶುಭಕಾರ್ಯವನ್ನು ಪೂಜ್ಯಗುರುಗಳವರ ಸಾಕ್ಷೀಭೂತವಾಗಿ ನಡೆಯಿಸಿ ವಿಶೇಷದ್ರವ್ಯ ವೆಚ್ಚಮಾಡಿ ಭೋಗಮಲ್ಲೇಶ್ವರ ದೇವಸ್ಥಾನವನ್ನು ಕಟ್ಟಿಸಿ ಗುರುಗಳವರಿಗೆ ಯಥೋಚಿತ ಪಾದಕಾಣಿಕೆಗಳನ್ನರ್ಪಿಸಿ ಫಲಾಶೀರ್ವಾದಗಳನ್ನು ಪಡೆದುಕೊಂಡು ಧನ್ಯರಾಗಿ ವೇ|| ಶಾಸ್ತ್ರಿಗಳವರಿಗೆ ವಿಶೇಷ ಸಂಭಾವನೆಗಳಿಂದಸತ್ಕರಿಸಿ ಬಂದ ಮಹಾಜನಗಳ ಸಂತೋಷಕ್ಕೆ ಪಾತ್ರರಾಗಿ ಊರಿನ ಜನಗಳಿಗೆ ಅನುಕರಣೀಯರಾಗಿರುವರು. ಈ ಮಹಾಶಯರು ಸದ್ಯಃಬೀರೂರಿನ ಮುನಿಸಿಪಲ್ ಆನರರಿ ವೈಸ್ ಪ್ರೆಸಿಡೆಂಟರಾಗಿ ನಿಸ್ಪೃಹತೆಯಿಂದ ಕೆಲಸಮಾಡುತ್ತ ಜನಾನುರಾಗಿಗಳಾಗಿ ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಕಾರ್ಯನಿರ್ವಹಿಸುತ್ತಿರುವ ಇವರಿಗೂ ಇವರ ಪತ್ನಿ ಪುತ್ರಾದಿಗಳಿಗೂ ಜಗದೀಶ್ವರನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಹಾರೈಸುವ

ಶಿವಕಥಾಪಂಡಿತ. ಹೆಚ್. ಜಿ. ನಂಜುಂಡಾರಾಧ್ಯ ಹಿರೇಮಠ, ಬೀರೂರು.

[ಮೇಲ್ಕಂಡ ೧ ರೂ. ಬಂದಿದೆ.]

ಪಟ್ಟಾಧಿಕಾರ ಮಹೋತ್ಸವ.

ಈಗ್ಗೆ ಸುಮಾರು 4 ವರ್ಷಗಳಲ್ಲಿ ಶ್ರೀರಂಗಪಟ್ಟಣದ ತಾ|| ಕೆಸಬಾ ಕ್ಯಾತನಹಳ್ಳಿ ಮ|| ಸಾಹುಕಾರ್ ಸಿದ್ಧಲಿಂಗಯ್ಯನವರು ಮತ್ತು ಇತರ ಅಜುಬಾಜು ಗ್ರಾಮಗಳ ವೀರಶೈವ ದೊಡ್ಡಮನುಷ್ಯರು ಸೇರಿ ತಮ್ಮ ಪ್ರಾಂತ್ಯದಲ್ಲಿ ಆಚಾರವಿಚಾರಣೆಗೂ, ಹವ್ಯಕವ್ಯ ಮುಂತಾದ ಶುಭಕಾರ್ಯಗಳಿಗೂ ಒಂದು ಗುರುಸ್ಥಳದ ಪಟ್ಟದ ಮಠವು ತಮ್ಮ ಪ್ರಾಂತ್ಯದಲ್ಲಿ ಇಲ್ಲದೆ ಇರೋಣದರಿಂದ ತುಂಬಾ ತೊಂದರೆಯಾದ ಪ್ರಯುಕ್ತ ಸದರಿ ಕ್ಯಾತನಹಳ್ಳಿ ಮ|| ಸಿದ್ಧಲಿಂಗಯ್ಯನವರು ತಮ್ಮ ಗ್ರಾಮದಲ್ಲಿ ಒಂದು ಮಠವನ್ನು ಕಟ್ಟಿಸಿ ವೇ|| ಪ್ರಭುಸ್ವಾಮಿ ಎಂಬವರಿಗೆ ನಂಜನಗೂಡು ತಾ|| ಸುತ್ತೂರು ವೀರಸಿಂಹಾಸನ ಮಠದ ಪಟ್ಟಾಧ್ಯಕ್ಷರಾದ ಶ್ರೀ|| ವೇ|| ಶಿವರಾತ್ರಿ ಸ್ವಾಮಿಗಳವರಿಂದ ಆಶ್ರಮಾಧಿಕಾರವನ್ನು ಕೊಡಿಸಿ 4-5 ಸಹಸ್ರ ರೂಪಾಯಿಗಳವರೆಗೂ ಪ್ರಯಮಾಡಿ ಬಹಳ ವಿಜೃಂಭಣೆಯಿಂದ ನೆರವೇರಿಸಿದ್ದರು. ಸದರಿ ಸ್ವಾಮಿಗಳನ್ನು ವಿದ್ಯಾಭ್ಯಾಸಕ್ಕಾಗಿ ಸಿದ್ಧಗಂಗಾಮಠದಲ್ಲಿ ಬಿಟ್ಟದ್ದರು. ಇವರು ಸರಿಯಾಗಿ ವಿದ್ಯಾಭ್ಯಾಸ ಮಾಡದೆ ದುರ್ಮಾರ್ಗಕ್ಕೆ ಬಿದ್ದು ಲಿಂಗಲೋಪಮಾಡಿಕೊಂಡು ಮಠಕ್ಕೂ, ಆಶ್ರಮ ಧರ್ಮಕ್ಕೂ ವಿರುದ್ಧ ಕಾರ್ಯಗಳನ್ನು ಆಚರಿಸಿ ಗುರುತ್ವವನ್ನು ಕಳೆದುಕೊಂಡದ್ದರಿಂದ ಸದರಿ ಕ್ಯಾತನಹಳ್ಳಿ ಮಠದ ಧರ್ಮದರ್ಶಿಗಳು ಸದರಿ ಮಠದಲ್ಲಿ ಮೀಟಿಂಗು ಸೇರಿ ಸ್ವಾಮಿಗಳು ಆಚರಿಸಿದ ಅತ್ಯಾಚಾರಗಳನ್ನು ಕುರಿತು ಚರ್ಚಿಸಲಾಗಿ ಸದರಿ ಮೀಟಿಂಗಿನಲ್ಲಿ ಧರ್ಮದರ್ಶಿಗಳು ಮಠಾಚರಣೆಗೂ, ಆಶ್ರಮ ಧರ್ಮಕ್ಕೂ ವಿರುದ್ಧವಾಗಿ ನಡೆದ ಪ್ರಭುಸ್ವಾಮಿ ಎಂಬವರನ್ನು ಆಶ್ರಮಾಧಿಕಾರದಿಂದ ನಿವೃತ್ತಿಮಾಡಿ ಮಠಾಧಿಕಾರಕ್ಕೆ ಅರ್ಹರಾದ ಒಬ್ಬರನ್ನು ಚುನಾಯಿಸಬೇಕೆಂದು ನಿರ್ಧರಿಸಿ ಇದೇ ವಿಭವನಾಮಸಂವತ್ಸರದ ಮಾಘ ಬಹುಳ ೨ ಸೋಮವಾರ ತಾ|| 25-2-1929 ರಲ್ಲಿ ಧರ್ಮದರ್ಶಿಗಳು ಮೇಲ್ಕಂಡ ಕ್ಯಾತನಹಳ್ಳಿ ಮಠಕ್ಕೆ ಸುತ್ತೂರು ವೀರಸಿಂಹಾಸನ ಮಠದ ಪಟ್ಟಾಧ್ಯಕ್ಷರಾದ ಶ್ರೀ|| ವೇ|| ಶಿವರಾತ್ರಿ ಸ್ವಾಮಿಗಳವರಿಂದ ವೇ|| ಶಿವಪ್ರಭುಸ್ವಾಮಿ ಎಂಬವರಿಗೆ ಪಂಚಬ್ರಹ್ಮ ಕಲಶಾರಾಧನಪೂರ್ವಕವಾಗಿ ಆಶ್ರಮಾಧಿಕಾರವನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಕೆಲವು ವಟುಗಳಿಗೆ ಧರ್ಮಾರ್ಥವಾಗಿ ಶಿವದೀಕ್ಷಾಸಂಸ್ಕಾರವು ಸಹ ಜರುಗಿಸಲ್ಪಟ್ಟಿತು. ಪಂಚಮಿ ಗುರುವಾರ ಮ|| ಸಾಹುಕಾರ್ ಸಿದ್ಧಲಿಂಗಯ್ಯನವರು ತಮ್ಮ ತಾಯಿಯವರ ಜನ್ಮಸ್ಥಳವಾದ ಚಾಕ್‌ಶೆಟ್ಟಹಳ್ಳಿಯಲ್ಲಿ ಈಶ್ವರ ವಿಗ್ರಹ ಪ್ರತಿಷ್ಠೆಯನ್ನೂ, 15-20 ವಟುಗಳ ದೀಕ್ಷೆಯನ್ನೂ ವಿಧ್ಯುಕ್ತವಾಗಿ ಮಾಡಿಸಿದರು. ಈ ಮಹೋತ್ಸವ ಕಾಲದಲ್ಲಿ ಅನೇಕ ವಿರಕ್ತ ವರ್ಗದ ಸ್ವಾಮಿಗಳೂ, ಪಟ್ಟಾಧಿಕಾರಿಗಳೂ, ವೀರಶೈವ ಮಹಾಜನಗಳು ಸಹ ಸೇರಿದ್ದರು. ಸುತ್ತೂರು ವೀರಸಿಂಹಾಸನ ಮಠದ ಪಟ್ಟಾಧ್ಯಕ್ಷರಾದ ಶ್ರೀ|| ವೇ|| ಶಿವರಾತ್ರಿ ಸ್ವಾಮಿಗಳವರ ಕರಕಂಜಾತರಾದ ವೇ|| ಶ್ರೀ|| ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ಅಷ್ಟಾವರಣ ವಿಚಾರವಾಗಿಯೂ, ಕ್ಯಾತನಹಳ್ಳಿ ಮಠದ ಪಟ್ಟದ ವೇ|| ಶಿವಪ್ರಭುಸ್ವಾಮಿಗಳವರು ಧರ್ಮದ ವಿಚಾರವಾಗಿಯೂ, ಶಂಕರವಿಲಾಸ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿ ಗೂಳೂರಿನ ವೇ|| ಬಿ. ಮಹಂತಸ್ವಾಮಿ ಎಂಬವರು ಭಕ್ತಿ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡಿ ಸಭಿಕರನ್ನು ಆನಂದತುಂದಿಲರನ್ನಾಗಿ ಮಾಡಿದರು. ಅನಂತರ ಶಿವಕಥಾಪಂಡಿತ ಸಿಂಹಶಿರೋಮಣಿ ಬ್ರಂ|| ಶ್ರೀ|| ವೇ|| ಶಿವಯ್ಯಶಾಸ್ತ್ರಿಗಳು ವಿದ್ಯಾಭ್ಯಾಸ ವಿಷಯವಾಗಿಯೂ, ಮಠವಿಷಯವಾಗಿಯೂ ಬಹು ಸ್ವಾರಸ್ಯವಾಗಿ ಭಾಷಣಮಾಡಿದರು. ಆ ಮೇಲೆ ವಿರಕ್ತಸ್ವಾಮಿಗಳ ಪಾದಪೂಜಾ ಸಮಾರಂಭವು ನಡೆದು ನೆರೆದಿದ್ದ ಭಕ್ತಮಾಹೇಶ್ವರರಿಗೆ ತೀರ್ಥಪ್ರಸಾದ ವಿನಿಯೋಗವಾಗಿ ಮಹಾ ಸಂತರ್ಪಣೆಯು ನಡೆಯಿತು. ಸಾಯಂಕಾಲ ಸ್ವಾಮಿಗಳ ಉತ್ಸವವು ವಿಜೃಂಭಣೆಯಿಂದ ಜರುಗಿದನಂತರ ಮೈಸೂರು ಶಿವಕಥಾಪಂಡಿತ ಸಿಂಹಶಿರೋಮಣಿ ಬ್ರಂ|| ಶ್ರೀ|| ವೇ|| ಶಿವಯ್ಯಶಾಸ್ತ್ರಿಗಳವರ ಶಿವಕಥಾಶ್ರವಣವು ನಡೆದು ತರುವಾಯ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಜಯಘೋಷದೊಡನೆ ಮಾಡಲ್ಪಟ್ಟಿತು. ಈ ಮಠದ ಧರ್ಮದರ್ಶಿಗಳು ತುಂಬಾ ಶ್ರಮ ವಹಿಸಿ ಕಾರ್ಯವನ್ನು ನೆರವೇರಿಸಿದರು. ಈ ಮಹೋತ್ಸವ ಕಾಲದಲ್ಲಿ ಸುತ್ತೂರು ಶ್ರೀಗಳವರ ಅಪ್ಪಣೆ ಮೇರಿಗೆ ಮೈಸೂರು ವೀರಶೈವ ಅನಾಥಾಲಯಕ್ಕೆ 4 ರೂಪಾಯಿಗಳೂ, ಸ್ಟಾರ್ ಪತ್ರಿಕಾ ಪೋಷಣೆಗಾಗಿ 2 ರೂಪಾಯಿಗಳೂ ಧರ್ಮದರ್ಶಿಗಳಿಂದ ಕಳುಹಿಸಲ್ಪಟ್ಟುವು. ಮೇಲ್ಕಂಡ ಮಠದ ಧರ್ಮದರ್ಶಿಗಳಿಗೂ, ಮ|| ಸಾಹುಕಾರ್ ಸಿದ್ಧಲಿಂಗಯ್ಯನವರಿಗೂ ಭಗವಂತನು ಮಂಗಳವನ್ನು ಉಂಟುಮಾಡಲಿ ಎಂದು ಕೋರುವ

ಪ್ರತ್ಯಕ್ಷದರ್ಶಿ.

[ಮೇಲ್ಕಂಡ 2 ರೂ. ಗಳು ಮ|| ಜಹಗೀರ್‌ದಾರ್ ವೀರಭದ್ರಪ್ಪನವರ ಮೂಲಕ ಸಂದಿದೆ.]

ಕಲ್ಯಾಣಪ್ರಾಂತದ ವೀರಶೈವ ಧರ್ಮಸುಧಾರಣೆಯ ಸಭೆಯು ಹುಮನಾಬಾದ.

ನೈಜಾಂ ಪ್ರಾಂತದ ವೀರಶೈವರ ಭಾಗ್ಯೋದಯದಿಂದ ಅವತರಿಸಿದ ಶ್ರೀಮನ್ನಿರಂಜನ ಜಂಗಮವರೇಣ್ಯರಾದ ಶಾಂತವೀರ ಶಿವಯೋಗಿಗಳ ಆಶೀರ್ವಾದಬಲದಿಂದ ಅಥಾಶ್ ಮಹಾಸ್ವಾಮಿಗಳವರ ಪ್ರಯತ್ನದಿಂದ ಈ ಕಲ್ಯಾಣಪ್ರಾಂತದ ವೀರಶೈವರ ಸಭೆಯು ಮಾಘ-ಶು-೫-೬ ಈ ಎರಡು ದಿವಸ ಹುಮನಾಬಾದಿನಲ್ಲಿ ಕೂಡಿತ್ತು. ಸಭೆಗೆ 2,000 ಜನರು ಬಂದಿದ್ದರು. ಅಧ್ಯಕ್ಷಸ್ಥಾನವನ್ನು ಯಾದಗಿರಿಯ ಪ್ರಸಿದ್ಧ ಶ್ರೀಮಂತರೂ ಸಮಾಜ ಪ್ರೇಮಿಗಳೂ ಆದ ಎಸ್. ರುದ್ರಪ್ಪ ಹೈಕೋರ್ಟ ವಕೀಲ ಇವರು ಸ್ವೀಕರಿಸಿದ್ದರು. ಅನೇಕ ಗ್ರಾಮಗಳ ನಿರಂಜನಮೂರ್ತಿಗಳೂ ಪಟ್ಟದ ಚರಮೂರ್ತಿಗಳೂ [illegible]

ಲರೂ ಈ ಪ್ರಾಂತದ ಶ್ರೀಮಂತಜನರೂ ಬಂದಿದ್ದರು. ಸ್ವಾಗತಸಂಘಾಧ್ಯಕ್ಷರಾದ ಮಾಣಿಕಪ್ಪ ದೇವಶೆಟ್ಟಿ ಇವರು ಉತ್ತಮರೀತಿಯಿಂದ ಭಾಷಣ ಮಾಡಿದರು. ಈ ಗೃಹಸ್ಥರು ವೈಶ್ಯಕುಲದವರೂ ದೊಡ್ಡ ಶ್ರೀಮಂತರೂ ಇರುತ್ತಾರೆ. ಇವರು ವೀರಶೈವ ಸಮಾಜದಮೇಲೆ ಪ್ರೇಮವನ್ನಿಟ್ಟು ವೀರಶೈವರ ಸಭೆಯ ಸ್ವಾಗತಸಂಘದ ಪ್ರೆಸಿಡೆಂಟರಾದುದನ್ನು ನೋಡಿದರೆ ಯಾವ ವೀರಶೈವನಿಗೆತಾನೇ ಸಂತೋಷವಾಗಲಿಕ್ಕಿಲ್ಲ ? ಸಭೆಯು ಎರಡು ದಿವಸಗಳವರೆಗೆ ಈ ಗ್ರಾಮದ ಧನ್ಯವಾದ ಶ್ರೀ ವೀರಭದ್ರದೇವಸ್ಥಾನದಲ್ಲಿ ಕೂಡಿತ್ತು. ಕೆಳಗೆ ಬರೆದ ಠರಾವುಗಳು ಪಾಸು ಮಾಡಲ್ಪಟ್ಟಿರುತ್ತವೆ. ಸಭೆಯಲ್ಲಿ ಅನೇಕ ವಿದ್ವಜ್ಜನರ ಭಾಷಣಗಳಾಗಿರುತ್ತವೆ.

ಪಾಸಾದ ವಿಷಯಗಳು.

1. ನಮ್ಮ ಕಲ್ಯಾಣ ಪ್ರಾಂತದಲ್ಲಿ ವೀರಶೈವರು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವದರಿಂದ ವಿದ್ಯಾಪ್ರಸಾರ ಮಾಡಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

2. ನಮ್ಮ ಪ್ರಾಂತದ ವೀರಶೈವರು ವಿರಕ್ತ ಮತ್ತು ಗುರುಸ್ಥಲ ಮಠಗಳಿಗೆ ಧರ್ಮದ ಮರ್ಮವನ್ನು ತಿಳಿದ ಮತ್ತು ಅದರಂತೆ ಆಚರಣೆಯುಳ್ಳ ವಟುಗಳನ್ನು ಚುನಾಯಿಸಬೇಕೆಂದು ಈ ಸಭೆಯು ನಿರ್ಧರಿಸುತ್ತದೆ.

3. ವೀರಶೈವರಲ್ಲಿ ಒಳಭೇದಗಳನ್ನು ಮುರಿಯುವದಕ್ಕಾಗಿ ಅಷ್ಟಾವರ್ಣವನ್ನು ಪಾಲಿಸುವ ಮತ್ತು ಆಚರಣೆಯುಳ್ಳವರು ಪರಸ್ಪರ ಒಳಸಂಗಡಗಳ ಕಾರಣಮನ್ನಿಸದೆ ಊಟೋಪಚಾರಮಾಡಲು ಅಭ್ಯಂತರವಿಲ್ಲ. ಯಾರಾದರೂ ಈ ಠರಾವಿನ ವಿರುದ್ಧವರ್ತಿಸಿದರೆ ಈ ಸಭೆಯು ಅಂಥವರ ವರ್ತನೆಯನ್ನು ನಿಷೇಧಿಸುತ್ತದೆ.

4. ಈ ಪ್ರಾಂತದ ವೀರಶೈವರ ಮಾತೃಭಾಷೆಯು ಕರ್ನಾಟಕವಾದ ಕಾರಣ ಪ್ರತಿಯೊಬ್ಬನೂ ಈ ಭಾಷಾಪ್ರಚಾರಕ್ಕಾಗಿ ಪ್ರಯತ್ನಿಸತಕ್ಕದ್ದು ಮತ್ತು ತಮ್ಮ ಎಲ್ಲ ವ್ಯವಹಾರಗಳ ಲೆಖ್ಖವನ್ನು ಕನ್ನಡದಲ್ಲಿಯೇ ಇಡತಕ್ಕದ್ದು.

5. ಈ ಪ್ರಾಂತದಲ್ಲಿ ವೀರಶೈವತರುಣ ಸಂಘಗಳನ್ನು ಸ್ಥಾಪಿಸತಕ್ಕದ್ದು. ಆ ಸಂಘಗಳು ಧರ್ಮಸುಧಾರಣಾಸಭೆಯ ಅಧೀನದಲ್ಲಿರತಕ್ಕದ್ದು.

6. ಪ್ರತಿಯೊಬ್ಬ ವೀರಶೈವನೂ ಅಹಿಂಸಾತತ್ವವನ್ನು ಬಹುಶ್ರದ್ಧೆಯಿಂದ ವಹಿಸಿ ರೂಢಿಗೆ ತರಲಿಕ್ಕೆ ಪ್ರಯತ್ನಿಸತಕ್ಕದ್ದು.

7. ನೈಜಾಂಪ್ರಾಂತದ ವೀರಶೈವ ವಿದ್ಯಾರ್ಥಿಗಳಿಗೆ ಶಿರಸಂಗಿಫಂಡಿನಿಂದ ಸಹಾಯದೊರೆಯಲು ಫಂಡಿನ ಮೆಂಬರರಿಗೆ ತಿಳಿಸತಕ್ಕದ್ದು. ಹಾಗೆ ವ್ಯವಸ್ಥೆ ಆಗದಿದ್ದರೆ ಕಾಯಿದೆರೀತಿಯಿಂದ ಪ್ರಯತ್ನಿಸತಕ್ಕದ್ದೆಂದು ಈ ಸಭೆಯು ನಿರ್ಣಯಿಸುತ್ತದೆ.

8. ಸಭೆಯು ವೀರಶೈವರ ವಿದ್ಯಾಶಿಕ್ಷಣಕ್ಕಾಗಿ ಕಲ್ಯಾಣದ ಹತ್ತಿರ ಒಂದು ದೊಡ್ಡ ಶಾಲೆಯನ್ನು ಸ್ಥಾಪಿಸುವದು ಅಗತ್ಯವಾದ್ದರಿಂದ ಅದಕ್ಕಾಗಿ ಸರ್ವವೀರಶೈವರೂ ಸಹಾಯಮಾಡತಕ್ಕದ್ದು.

ಹೀಗೆ ಎಂಟು ವಿಷಯಗಳು ಪಾಸಾಗಿರುತ್ತವೆ. ಈ ಸಭೆಯನ್ನು ಮಾಡಲಿಕ್ಕೆ ಹುಮನಾಬಾದ ಗ್ರಾಮದ ಪಾಟೀಲ ಭೀಮರಾವ ವಕೀಲರು ಮತ್ತು ಮಡಿವಾಳಪ್ಪ ವಕೀಲರು, ಶೆಟ್ಟರು ಉಳಿದ ಎಲ್ಲ ವೀರಶೈವರು ಬಹಳ ಶ್ರಮವಹಿಸಿ ವ್ಯವಸ್ಥೆಯನ್ನಿಟ್ಟಿದ್ದರು. ಸ್ವಯಂಸೇವಕರು ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಅಂತು ಕಲ್ಯಾಣ ಪ್ರಾಂತದಲ್ಲಿ ಈ ವರೆಗೂ ಇಂತಹ ಸಭೆಯು ಆಗಿರಲಿಲ್ಲ. ಈ ಸಭೆಯು ನೆರವೇರಲಿಕ್ಕೆ ಮೂಲಕಾರಣರಾದ ಶಾಂತವೀರಸ್ವಾಮಿಗಳನ್ನು ಎಷ್ಟು ಪ್ರಶಂಸೆಮಾಡಿದರೂ ಅಲ್ಪವೇ ಸರಿ. ಯಾಕೆಂದರೆ, ಈ ಮಹಸ್ವಾಮಿಗಳು ತಾವು ಎಲ್ಲೆಲ್ಲಿ ಸಂಚಾರಮಾಡುತ್ತಾರೆಯೋ ಆಯಾಯ ಸ್ಥಳದಲ್ಲಿ ವೀರಶೈವರ ಅನೇಕ ಧರ್ಮಸಭೆಗಳನ್ನು ಮಾಡಿಸುತ್ತ ಜನರಲ್ಲಿ ಜಾಗ್ರತೆಯನ್ನು ಹುಟ್ಟಿಸುತ್ತಿರುವರು ಮತ್ತು ಪ್ರತಿಯೊಂದು ಗ್ರಾಮಗಳ ದೇವತೆಗಳ ಜಾತ್ರೆಗಳಲ್ಲಿ ಕೋಣ ಕುರಿಗಳನ್ನು ಕಡಿಯತಕ್ಕ ಕ್ರೂರಪದ್ಧತಿಗಳನ್ನು ಜನರಿಂದ ಬಿಡಿಸುತ್ತಿರುವರು. ಹೀಗೆಯೇ 200-300 ಗ್ರಾಮಗಳಲ್ಲಿ ಬಿಡಿಸಿರುವರು. ಕರ್ನಾಟಕ ಭಾಷಾಪ್ರಚಾರವೂ ಸ್ವಾಮಿಗಳ ಕಾರ್ಯಗಳಲ್ಲಿ ಒಂದಾಗಿದೆ. ತಮ್ಮ ಸಂಚಾರದ ಕಾಲದಲ್ಲಿ ಅನೇಕ ಲೈಬ್ರರಿಗಳನ್ನು ಸ್ಥಾಪಿಸುತ್ತ ಪರದೇಶಿಯ ಸಕ್ಕರೆ ಚುಟ್ಟ ಮೊದಲಾದವುಗಳಿಗೆ ಬಹಿಷ್ಕಾರವನ್ನು ಹಾಕಿಸುತ್ತ ಸಂಚರಿಸುತ್ತಲಿರುವರು. ಇಂತಹ ಸ್ವಾಮಿಗಳವರು ಉದಯಿಸಿದ ವೀರಶೈವಸಮಾಜವೇ ಧನ್ಯವಾದದ್ದು. ಆಲಸ್ಯದಿಂದ ಕೂಡಿರುವ ಈ ಪ್ರಾಂತದ ವೀರಶೈವರಲ್ಲಿ ಜಾಗ್ರತೆಯನ್ನು ಹುಟ್ಟಿಸಿದ್ದಕ್ಕೆ ಈ ಪ್ರಾಂತದ ವೀರಶೈವರು ಶ್ರೀಗಳಿಗೆ ಋಣಿಯಾಗಿರುತ್ತಾರೆ. ಒಟ್ಟಿನಮೇಲೆ ಈ ಸಭೆಯು ಬಹಳ ಉತ್ತಮರೀತಿಯಾಯಿತೆಂದು ಹೇಳಲಿಕ್ಕೆ ಅಭ್ಯಂತರವಿಲ್ಲ.

ಓರ್ವ ಹುಮನಾಬಾದ ನಿವಾಸಿ.

ಪಟ್ಟಣದ ಸಂಪತ್ತೂ ಹಳ್ಳಿಯ ವಿಪತ್ತೂ.

ಹೊನ್ನಾಳಿ ತಾ॥ ಸೋಗಿಲು ಗ್ರಾಮವು ಒಂದು ದ್ವೀಪವೆಂಬದಾಗಿ ಅರಿಕೆಯನ್ನು ಮಾಡಿಕೊಂಡರು ಸಹ ಅತಿಶಯೋಕ್ತಿಯಾಗಲಾರದು. ಏಕೆಂದರೆ, ಈ ನಮ್ಮ ಗ್ರಾಮಕ್ಕೆ ಸವಳಂಗವು ಸುಮಾರು 1½ ಮೈಲು ಆಗಬಹುದು. ಅಲ್ಲಿ ಆಯನೂರು, ಶಿವಮೊಗ್ಗ ಮತ್ತು ಶಿಕಾರಿಪುರ, ಹೊನ್ನಾಳಿ ತಡೆಯಿದ ಬಂದಿರತಕ್ಕಂಥ ಸರ್ಕಾರಿ ರಸ್ತೆಗಳು ಜಂಕ್ಷನ್ನಾಗಿರುತ್ತವೆ. ಸೋಗಿಲು ಗ್ರಾಮದಿಂದ ಆಯನೂರು ಸಂತೆಗೆ ಹೋಗಬೇಕಾದರೆ ಸವಳಂಗಕ್ಕೆ ಸೇರಿಯೇ ಹೋಗಬೇಕಾಗುತ್ತದೆ. ಆದರೆ ಅಲ್ಲಿಯವರೆಗೂ ಗಾಡಿಯು ಹೋಗಬೇಕಾದರೆ ಸವಳಂಗದ ಹೊಸ ಕೆರೆಯಿಂದ ಬಂದಿರುವ ನಾಲೆ ನೀರಿನಿಂದ ನಮ್ಮ ಗ್ರಾಮದಿಂದ ಸವಳಂಗಕ್ಕೆ ಹೋಗುವ ಗಾಡಿಯ ದಾರಿಯು ವಿಶೇಷ ಕೆಸರಾಗಿ ಗಾಡಿ 1 ಕ್ಕೆ 4 ಅಥವಾ 6 ಎತ್ತುಗಳನ್ನು ಕಟ್ಟಿದರು ಸಹ ಸವಳಂಗದ ರಸ್ತೆಯನ್ನು ಸೇರಿಕೊಳ್ಳುವುದು ತುಂಬಾ ದುಸ್ತರ. ಈ ನಮ್ಮ ಗ್ರಾಮದ ಸಮೀಪವಿರುವ ಚಟ್ನಹಳ್ಳಿ ಮುಂತಾದ ಗ್ರಾಮಗಳವರು ಸಹ ಇದೇ ದಾರಿಯಲ್ಲಿ ಆಯನೂರಿಗೆ ಹೋಗುತ್ತಾರೆ. ಒಂದೊಂದು ವೇಳೆ ಚಟ್ನಹಳ್ಳೀ ಗ್ರಾಮದವರ ಗಾಡಿಗಳು ಈ ಕೆಸರಿನಲ್ಲಿ ಸಿಕ್ಕಿಕೊಂಡು ಎಷ್ಟು ಕಷ್ಟಪಟ್ಟರೂ ಹೊರಕ್ಕೆ ಬಾರದಿದ್ದರಿಂದ ಗಾಡಿಗಳನ್ನು ಅಲ್ಲಿಯೇ ಬಿಟ್ಟು ಅವರು ಗಾಡಿಗಳಲ್ಲಿ ತೆಗೆದುಕೊಂಡುಬಂದ ಎಲೆ ಅಡಿಕೆ ಮುಂತಾದ ಬೆಳೆದ ಪದಾರ್ಥವನ್ನು ತಲೆಯೊರೆಯಲ್ಲಿಯೇ ಹೊತ್ತುಕೊಂಡು ಆಯನೂರು ಸಂತೆಗೆ ಹೋಗಿ ಮಾರಾಟ ಮಾಡಿಕೊಂಡು ಬರಬೇಕಾಗಿರುತ್ತದೆ. ಸರಿಯಾದ ರಸ್ತೆಯನ್ನು ಸವಳಂಗದವರೆಗೆ ಸರ್ಕಾರಿಯಿಂದಲೇ ತಯಾರ್ಮಾಡಿಸಿಕೊಟ್ಟು ನಮ್ಮ ಹಳ್ಳಿಗಾಡಿನವರ ಕಷ್ಟವನ್ನು ನಿವಾರಿಸಲು ತಾ॥ 21-11-28 ರಲ್ಲಿ ಚಟ್ನಹಳ್ಳಿಯಲ್ಲಿಯೇ ತಾಲ್ಲೂಕ್ ಜಮಾಬಂದಿ ಆದ ಕಾಲದಲ್ಲಿ ಅರ್ಜಿ ಮೂಲಕ ಬಿನ್ನೈಸಿಕೊಳ್ಳುವ ಕಾಲಕ್ಕೆ ಅವರು ಸಹ ತಮ್ಮ ಗ್ರಾಮದವರಿಗಾಗುವ ತೊಂದರೆಯನ್ನು ಬಿನ್ನೈಸಿಕೊಂಡರು. ಆ ಕಾಲಕ್ಕೆ ತಾಲ್ಲೂಕು ಅಮಲ್ದಾರ್ ಸಾಹೇಬರವರು ನಮ್ಮ ಗ್ರಾಮದವರಿಗೂ, ಅವರಿಗೂ ಸಹ ನಿಮ್ಮ ನಿಮ್ಮ ಗ್ರಾಮದ ಪಂಚಾಯತೀ ಹಣದಿಂದ ಮಾಡಿಸಿಕೊಳ್ಳಬೇಕಾದ್ದಲ್ಲದೆ ಸರ್ಕಾರೀ ಹಣದಿಂದ ತಯಾರ್ಮಾಡಿಸಿಕೊಡಲು ಸಾಧ್ಯವಿಲ್ಲವೆಂಬದಾಗಿ ಅಪ್ಪಣೆ ಕೊಡಿಸಿದರು. ಹಳ್ಳಿಗಾಡಿನ ಬಡ ರೈತರುಗಳಾದ ನಾವುಗಳು ನಮ್ಮ ಧರ್ಮಸರ್ಕಾರಕ್ಕೆ ನಮ್ಮ ನಮ್ಮ ಜಮೀನುಗಳಲ್ಲಿ ನಮ್ಮ ಹೊಟ್ಟೆಗಾಗುವಷ್ಟು ಧಾನ್ಯವನ್ನು ಬೆಳೆದುಕೊಳ್ಳಲಿ ದುರದೃಷ್ಟವಶಾತ್ ಮಳೆ ಕಮ್ಮಿಯಾಗಿ ಬೆಳೆದುಕೊಳ್ಳದೆಹೋಗಲಿ ಜಮೀನುಗಳ ಕಂದಾಯ ಮತ್ತು ಲೋಕಲ್ ಬೋರ್ಡ್ ಸೆಸ್ಸು ಮುಂತಾದ್ದನ್ನು ಪಾವತೀ ಮಾಡುತ್ತಾ ಬಂದಿರುವೆವಾದರೂ, ಹಳ್ಳಿಗಾಡಿನವರಾದ ಬಡ ರೈತರುಗಳ ಕಷ್ಟನಿವಾರಣೆಗಾಗಿ ಸದರಿ ಹಣವು ಖರ್ಚಾಗದೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಖರ್ಚಾಗುವುದು ಯಾವ ನ್ಯಾಯ ? ಶಿವಮೊಗ್ಗ ಮುಂತಾದ ಕಡೆ ನಾಲ್ಕು ರಸ್ತೆ ಕೂಡಿದ ಕಡೆ ರವಂಡಾಕಾರವಾಗಿಯೂ, ರಸ್ತೆಯಿಲ್ಲದಕಡೆ ಹೊಸದಾಗಿಯೂ ತಯಾರ್ಮಾಡಿಸುವದನ್ನು ನೋಡಿದರೆ ಹಳ್ಳಿಗಾಡಿನವರಾದ ನಮ್ಮ ಮನಸ್ಸಿನಲ್ಲಿ ತಡೆಯಲಾರದಷ್ಟು ದುಃಖವುಂಟಾಗುತ್ತದೆ. ಆದುದರಿಂದ ನಮ್ಮ ದಯಾಳು ಸರ್ಕಾರದವರು ಹಳ್ಳಿಗಾಡಿನವರಾದ ನಮ್ಮಗಳ ಕಷ್ಟನಿವಾರಣೆಗೆ ಮುಂಚೆ ಸರ್ಕಾರಿಯಿಂದಲೇ ರಸ್ತೆಯನ್ನು ತಯಾರ್ಮಾಡಿಸಿಕೊಟ್ಟು ಆ ಬಳಿಕ ಪಂಚಾಯತಿ ಹಣವನ್ನು ದುರಸ್ತಿಗಾಗಿ ಉಪಯೋಗಿಸುತ್ತಾ ಬಂದಲ್ಲಿ ನಮ್ಮ ಕಷ್ಟವು ನಿವಾರಣೆಯಾಗುವದರಲ್ಲಿ ಬರಬಹುದು. ಏಕೆಂದರೆ, ಈಗ ನಮ್ಮ ಗ್ರಾಮದಿಂದ ಸವಳಂಗಕ್ಕೆ ರಸ್ತೆಯಾಗಬೇಕಾದರೆ ಸುಮಾರು 3-4 ಸಾವಿರ ರೂಪಾಯಿ ಬೇಕಾಗುವದಾಗಿ ಪ್ರೊಸೀಡಿಂಗ್ಸ್ ಸಹ ಆಗಿರುತ್ತದೆ. ಇಷ್ಟು ಹಣ ಬೇಕಾದರೆ ನಮ್ಮ ಗ್ರಾಮಕ್ಕೆ ವರ್ಷಕ್ಕೆ 145 ಚಿಲ್ಲರೆ ರೂಪಾಯಿಗಳು ಮೇಲ್ಕಂಡ ಅಂದಾಜ ಮೊತ್ತಕ್ಕೆ ಸೇರಬೇಕಾದರೆ ಎಷ್ಟು ವರ್ಷಗಳು ಗತಿಸಬೇಕೆಂಬ ವಿಷಯು ನಮ್ಮ ಧರ್ಮ ಸರ್ಕಾರಕ್ಕೆ ವೇದ್ಯವೇ ಆಗುತ್ತೆ. ಅಲ್ಲದೆ ಗ್ರಾಮದಲ್ಲಿಯೇ ಸರ್ಕಾರಿ ಕಟ್ಟಡ ಮತ್ತು ರಸ್ತೆಗಳು ಸಹ ಆಗಬೇಕಾಗಿವೆ. ಆದ್ದರಿಂದ ಇವುಗಳನ್ನೆಲ್ಲ ತಯಾರ್ಮಾಡಿಸಿಕೊಂಡು ಆಯನೂರು ಸಂತೆಗೆ ನಾವು ರಸ್ತೆಯನ್ನು ಮಾಡಿಸಿಕೊಳ್ಳಬೇಕಾದರೆ ಯಾವ ಕಾಲಕ್ಕೆ ಆಗಬೇಕೆಂಬ ವಿಷಯವನ್ನು ನಮ್ಮ ಧರ್ಮ ಸರ್ಕಾರವು ದಿವ್ಯಚಿತ್ತಕ್ಕೆ ತೆಗೆದುಕೊಳ್ಳಬೇಕು. ಮತ್ತು ಈಗ ಇರುವ ಬಾಡುದಾರಿಯಿಂದ ವಿಶೇಷ ಕಷ್ಟಪಟ್ಟು ಸವಳಂಗಕ್ಕೆ ಹೋದರೆ ತೀರಿತು ಅಲ್ಲಿ ಗಾಡಿ 1 ಕ್ಕೆ 4 ಆಣೆ ಟೋಲ್‌ಗೇಟ್ ಖರ್ಚನ್ನು ಕೊಟ್ಟೇತೀರಬೇಕು. ನಮ್ಮ ಕಷ್ಟವನ್ನು ಅವರಲ್ಲಿ ವ್ಯಕ್ತಪಡಿಸಿಕೊಂಡಲ್ಲಿ ಬಿಡುತ್ತಾರೆಯೇ? ಪಾಪ ಅವರುತಾನೇ ಏನು ಮಾಡಿಯಾರು ! ಗುತ್ತಿಗೆ ಕಂಟ್ರಾಕ್ಟ್ ಮಾಡಿಕೊಂಡಿರುತ್ತಾರೆ. ಈ ಟೋಲ್‌ಗೇಟನ್ನು ನೋಡಿ ದುಃಖವು ಉಕ್ಕಿ ಉಕ್ಕಿ ಬರುತ್ತಿದೆ. ಅಲ್ಲದೆ ರೈತರಿಗೇ ಪೂರಾ ತೊಂದರೆ. ಸೌದೆ, ಹುಲ್ಲು ಮುಂತಾದವು ಬರಬೇಕಾದರೆ ಇದೇ ಸ್ಥಳದಲ್ಲಿ ಬರಬೇಕಾಗುತ್ತದೆ. ಬಡ ರೈತರುಗಳಾದ ನಾವು ಇತರೇ ಸೆಸ್ಸು ಮುಂತಾದ್ದನ್ನು ಕೊಟ್ಟುದಲ್ಲದೆ ಅಲ್ಲಿ ಗೇಟ್ ಖರ್ಚನ್ನೂ ಕೊಟ್ಟು ಸೌದೆ, ಹುಲ್ಲು, ಗೊಬ್ಬರಗಳನ್ನು ತೆಗೆದುಕೊಂಡುಬಂದು ನಾವುಗಳು ಜೀವನ ಮಾಡುವದೇ ತುಂಬಾ ದುಸ್ತರ ಅಲ್ಲದೆ ಇಲ್ಲಿ ಯಾವ ಹೊಳೆಯೂ ಇಲ್ಲ; ಸೇತುವೆ ಮುಂತಾದ್ದನ್ನು ಕಟ್ಟಿಲ್ಲ ಮತ್ತು ಟರ್ನ ಸ್ಥಳವೂ ಅಲ್ಲ. ಹೀಗಿದ್ದೂ ಅಲ್ಲಿ ಟೋಲ್‌ಗೇಟ್ ಇಟ್ಟಿರುವದು ಬಡ ರೈತರುಗಳಾದ ನಮ್ಮಗಳಿಗೆ ತುಂಬಾ ವಿಷಾದಕರವೆಂಬುದು ವೇದ್ಯವಾಗಬೇಕು. ಅಲ್ಲದೆ 25 ಮೈಲುಯೊಳಗೆ ಟೋಲ್‌ಗೇಟು ಇಡಲಾಗುವುದಿಲ್ಲವೆಂಬದಾಗಿ ಕೆಲವರು ಹೇಳುತ್ತಾರೆ. ಇದು ನಿಜವಾಗಿದ್ದಲ್ಲಿ ಶಿವಮೊಗ್ಗಕ್ಕೂ, ಸವಳಂಗಕ್ಕೂ 14 ಮೈಲು, ಹೊನ್ನಾಳಿಗೂ ಸವಳಂಗಕ್ಕೂ 14 ಮೈಲು, ಶಿಕಾರಿಪುರಕ್ಕೂ ಸವಳಂಗಕ್ಕೂ 18 ಮೈಲು, ಈ ಮಧ್ಯೆ ಇರುವ ಸ್ಥಳದಲ್ಲಿ ಟೋಲ್‌ಗೇಟ್ ಇರುವುದು ಬಡ ರೈತರಿಗೆ ತುಂಬಾ ತೊಂದರೆ ಎಂಬ ವಿಷಯವನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸರ್ಕಾರದ ಅವಗಾಹನೆಗೆ ತಂದುಕೊಟ್ಟು ಇದನ್ನು ಹೋಗಲಾಡಿಸಿ ಆಚಂದ್ರಾರ್ಕ ಪರಿಯಂತರ ಕೀರ್ತಿಭಾಜನರಾಗಬೇಕಾಗಿ ಸೂಚಿಸಿ ನಮ್ಮ ದಯಾಳು ಸರ್ಕಾರದವರು ನಮ್ಮ ಗ್ರಾಮದಿಂದ ಸವಳಂಗಕ್ಕೆ ರಸ್ತೆಯನ್ನು ಮಾಡಿಸಿಕೊಡಲು ಅಪ್ಪಣೆಯನ್ನು ದಯಪಾಲಿಸಬೇಕಾಗಿ ಅತಿ ದೈನ್ಯದಿಂದ ಪ್ರಾರ್ಥಿಸುತ್ತೇನೆ ಸ್ವಾಮಿ.

ಎಚ್. ಗುರುಶಾಂತಪ್ಪ,
ವಿಲೇಜ್ ಪಂಚಾಯತಿ ಮೆಂಬರು, ಸೋಗಿಲು.

ಪರೀಕ್ಷಾ ವಿದ್ಯಾರ್ಥಿಗಳಿಗೆ ಸೂಚನೆ.

1929 ನೇ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಮಿಡಲ್ ಸ್ಕೂಲ್ ಮತ್ತು ಕನ್ನಡ ಲೋವರ್ ಸೆಕಂಡರಿ ಪರೀಕ್ಷೆಗೆ ಮೊಳಕಾಲ್ಮುರು ಸೆಂಟರಿಗೆ ಬರುವ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ ಉಚಿತ ಭೋಜನ ಸೌಕರ್ಯವು ಏರ್ಪಡಿಸಲಾಗಿದೆ. ಬ್ರಾಹ್ಮಣರಿಗೆ ಶ್ರೀ ಜೋಡಿದಾರ್ ರಾಘಣ್ಣನವರ ಮನೆಯಲ್ಲಿಯೂ, ಬ್ರಾಹ್ಮಣೇತರರಿಗೆ ಈ ಕೆಳಗೆ ಕಾಣಿಸಿರುವವರ ಮನೆಯಲ್ಲಿಯೂ ಅನುಕೂಲವು ಕಲ್ಪಿಸಲ್ಪಡುವುದು. ಸದರಿ ವಿದ್ಯಾರ್ಥಿಗಳೂ, ಉಪಾಧ್ಯಾಯರುಗಳೂ ಮೂರು ದಿವಸ ಮುಂಚೆಯೇ ತಿಳಿಸಲು ಕೋರಿದೆ.

ನೇರ್ಲಹಳ್ಳಿ ಚನ್ನಬಸಪ್ಪ, ಮೊಳಕಾಲ್ಮುರು.

ಮುಂಬೈ ವಿಶ್ವವಿದ್ಯಾಲಯದ ಚುನಾವಣೆ.

ತಾ॥ 19-3-1929 ಕ್ಕೆ ಹೊಸದಾಗಿ ಆಗುವ ಮುಂಬೈ ವಿಶ್ವವಿದ್ಯಾಲಯದ ಚುನಾವಣೆಯಲ್ಲಿ ಮ್ಯುನಸಿಪಾಲ್ಟಿಗಳ (ಕರ್ನಾಟಕದ) ಪರವಾಗಿ ಇರುವ ಒಂದು ಸ್ಥಳಕ್ಕೆ ನಾನೊಬ್ಬ ಉಮೇದುವಾರನಾಗಿದ್ದೇನೆ. ನಾನು ಆರಿಸಿಬಂದಲ್ಲಿ ಮುಖ್ಯವಾಗಿ ಕರ್ನಾಟಕದ ಶಿಕ್ಷಣಪ್ರಸಾರಕ್ಕೂ, ಕನ್ನಡ ಸಾಹಿತ್ಯ ಪ್ರೋತ್ಸಾಹಕ್ಕೂ ಪ್ರಯತ್ನಿಸುವೆನು. ಆದುದರಿಂದ ಕರ್ನಾಟಕದ ಮ್ಯುನಸೀಪಾಲ್ಟಿಗಳೆಲ್ಲವೂ (೧ ಹುಬ್ಬಳ್ಳಿ, ೨ ಗದಗ, ೩ ಗುಳೇದಗುಡ್ಡ, ೪ ಬಾಗಲಕೋಟೆ, ೫ ವಿಜಾಪುರ, ೬ ಬೆಳಗಾಂವ, ೭ ಧಾರವಾಡ) ನನಗೇ ಮತಗಳನ್ನು ಕೊಟ್ಟು ಸಹಾಯಮಾಡಬೇಕೆಂದು ವಿನಂತಿ.

ಗುರುಸಿದ್ದಪ್ಪ ಮಹಾಲಿಂಗಪ್ಪ ಮಿರ್ಜಿ.
ಬಿ.ಎ., ಎಲ್‌ಎಲ್.ಬಿ., ಹೈಕೋರ್ಟು ವಕೀಲ,
ಮ್ಯುನಸಿಪಲ್ ಕೌನ್ಸಿಲರ, ಹುಬ್ಬಳ್ಳಿ ಮ್ಯುನಸಿಪಾಲ್ಟಿ.
ತಾ॥ 5-3-1929.

1929 ನೇ ಸಾಲಿನಲ್ಲಿ ನಡೆಯುವ ಲೋವರ್ ಸೆಕಂಡರಿ ಪರೀಕ್ಷೆಗೆ ಬರುವ ವಿಶ್ವಕರ್ಮಬ್ರಾಹ್ಮಣರಿಗೆ ಮಾತ್ರ.

1929 ನೇ ಏಪ್ರಿಲ್ ಮಾಹೆಯಲ್ಲಿ ನಡೆಯತಕ್ಕ ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕಂಡರಿ ಪರೀಕ್ಷೆಗೆ ಚಿತ್ರದುರ್ಗ ಸೆಂಟರಿಗೆ ಬರತಕ್ಕ ವಿಶ್ವಕರ್ಮಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿನಿಯರುಗಳಿಗೆ ಪರೀಕ್ಷೆ ಪೂರೈಸುವವರೆಗೂ ಚಳ್ಳಕೆರೆ ತಾಲ್ಲೂಕು ತಳುಕುವಾಸಿಗಳಾದ ನೀಲಪ್ಪಾಚಾರ್ಯರ ಮಕ್ಕಳು ಮಲ್ಲಪ್ಪಾಚಾರ್ಯ ಮತ್ತು ಇವರ ಮಕ್ಕಳುಗಳು ಕಂಬಳಿಯವರ ಮನೆ ಹತ್ತಿರದಲ್ಲಿ ಇರತಕ್ಕ ಮನೆಯಲ್ಲಿ ಧರ್ಮಾರ್ಥವಾಗಿ ಭೋಜನಕ್ಕೆ ಏರ್ಪಡಿಸಿರುತ್ತಾರೆ. ಆದುದರಿಂದ ಅಲ್ಲಿಗೆ ಬರತಕ್ಕ ಮೇಲ್ಕಂಡ ಪಂಗಡದ ವಿದ್ಯಾರ್ಥಿಗಳು ಈ ಕೆಳಗಿನ ಅಡ್ರಸ್ಸಿಗೆ ತಮ್ಮ ಹೆಸರು ಮತ್ತು ಬರತಕ್ಕವರ ಸಂಖ್ಯೆಯನ್ನು ಸಹ ಮಾರ್ಚಿ 25 ನೇ ತಾರೀಖಿನೊಳಗಾಗಿ ತಿಳಿಸಿದಲ್ಲಿ ಅವರ ವಾಸಕ್ಕನುಕೂಲಪಡಿಸಲಾಗುತ್ತೆ. ಇನ್ನೂ ಹೆಚ್ಚಿನ ವಿಷಯಗಳನ್ನು ಕೆಳಗಿನ ಅಡ್ರಸ್ಸಿನವರಿಂದ ತಿಳಿಯತಕ್ಕದ್ದು.

(ಅಡ್ರಸ್)
ಬಿ. ಎಂ. ಲಿಂಗಪ್ಪಾಚಾರ್ಯ,
ಡಿ॥ ನಾರ್ಮಲ್ ಸ್ಕೂಲ್,
ಚಿತ್ರದುರ್ಗ.

ಕಾರ್ಯದರ್ಶಿಗಳು—
ಎಚ್. ಬಿ. ಮಲ್ಲಪ್ಪಾಚಾರ್ಯ ಅಂಡ್ ಸನ್ಸ್,
ಚಳ್ಳಕೆರೆ ತಾಲ್ಲೂಕು,
ತಳುಕು.

ಪ್ರಕಟನೆ.

ನಮ್ಮಲ್ಲಿ ಸಿನೋಮಕ್ಕೆ ಸಂಬಂಧಪಟ್ಟ ಪ್ಯಾಥಿ ಕಂಪೆನಿಯ ಪ್ರೊಜೆಕ್ಟರ್ ಮಿಶ್ನನ್, ಆರ್ಕ್‌ಲ್ಯಾಂಪು, ಡೈನೋಮ, ಎಲೆಕ್ಟ್ರಿಕಲ್ ಫಿಟಿಂಗ್ಸು ವಗೈರೆ ಎಲ್ಲಾ ಸಾಮಾನುಗಳೂ, ಕೆಲವು ಕಾಮಿಕ್ ಫಿಲಂಗಳೂ ಸಹ ಖರೀದಿಗೆ ದೊರೆಯುತ್ತವೆ. ಎಲ್ಲಾ ಸಾಮಾನುಗಳ ಸೆಟ್ಟು ತಯಾರು ಇರುವುದರಿಂದ ಈ ದಿವಸವೇ ಸಿನೋಮ ನಡಿಸಬಹುದು. ಈ ಸಾಮಾನುಗಳು ಸೋವಿ ಕಿಮ್ಮತ್ತಿನಲ್ಲಿ ಸಿಗುತ್ತವೆಯಾದ್ದರಿಂದ ಈ ಸಮಯವನ್ನು ಕಳೆದುಕೊಳ್ಳಬಾರದಾಗಿ ಕೋರಿಕೆ.

Siddaradhya
Tirukappanavra mutt
Davangere·

[12—7]

ಫೋಟೋ, ಲೈನ್, ಯಲಕ್ಟ್ರೋ ಲೆಡ್‌ಬ್ಲಾಕುಗಳು, ಅರಗಿನಶೀಲು ದವಾಲಿಬಿಲ್ಲೆಗಳು ಮತ್ತು ರಬ್ಬರ್ ಮೋಹರುಗಳನ್ನೂ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

14

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ಗಂಟಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50—20]

೧೯೨೯ ನೆಯ ಇಸವಿ ಮಾರ್ಚಿ ತಾ॥ ೧೬ ರಿಂದ ೧೯೨೯ ನೆಯ ಇಸವಿ ಮಾರ್ಚಿ ತಾ॥ ೨೨ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೦ ನೆಯ ವಿಭವನಾಮಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿಯಿಂದ ಫಾಲ್ಗುಣ ಶುದ್ಧ ದ್ವಾದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೀನ ಮಾಸ
16	ಶನಿ	ಪ-ಉ	2-14-54-43	ಕೃತ್ತಿ	35-5	3
17	¹ಭಾನು	ಸಪ್ತ	50-53	ರೋಹಿ	31-2	4
18	ಸೋಮ	ಅಷ್ಟ	44-49	ಮೃಗ	26-52	5
19	ಮಂಗಳ	ನವ	38-51	ಆರ್ದ್ರಾ	18-48	6
20	²ಬುಧ	ದಶ	33-8	ಪುನ	28-23	7
21	³ಗುರು	ಏಕಾ	28-6	ಪುಷ್ಯ	15-22	8
22	ಶುಕ್ರ	ದ್ವಾದ	23-36	ಆಶ್ಲೇ	12-31	9

(1) ಮಳೆನಕ್ಷತ್ರ-ಉತ್ತರಾಭಾದ್ರ ೧ ನೆಯಪಾದ. (2) ಮಳೆನಕ್ಷತ್ರ ಉತ್ತರಾಭಾದ್ರ ೨ ನೆಯಪಾದ, ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವ (3) ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿಶನಿವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಾಧಿಕರಾಜಮಂಡಲಹಿತೈಷಾ | ಘನಪಕ್ಷಕ್ಷತಾವತಾರಾ ಪಕ್ಷಜ್ಞ ನಕ್ಷತ್ರ ತೋಷರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿಕ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೨] ಮೈಸೂರು ಸ್ಟಾರ್ ಸೇ ೧೯೨೯ ನೆಯ ಇಸವಿ ಮಾರ್ಚಿ ತಾರೀಖು ೨೩ ನೆಯ ಶನಿವಾರ [ಸಂಚಿಕೆ ೧೨

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ)
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೩—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಸಂಚಿಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರಜನನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮೈಸೂರು ಸ್ಟಾರ್ ಚಂದಾನಿರ್ಣಯ.

ಸ್ಟಾರ್ ಪತ್ರಿಕೆಯ ವಾರ್ಷಿಕ ಚಂದಾ ಪರಸ್ಥಳದವರಿಗೆ ರೂ. ೨-೮-೦ ; ಲೈಬ್ರೆರಿ, ವಾಚನಾಲಯ, ಸೊಸೈಟಿ ಮೊದಲಾದ ಸಂಸ್ಥೆಗಳಿಗೆ ವಾರ್ಷಿಕ ಚಂದಾ ರೂ. ೩-೮-೦ ; ವಿ.ಪಿ. ಮೂಲಕವಾದರೆ ಇನ್ನೂ ೪ ಆಣೆ ಜಾಸ್ತಿ ಬೀಳುತ್ತದೆ. ಹಳೆ ಚಂದಾದಾರರುಗಳು ಮಣಿಯಾರ್ಡರ್ ಮಾಡುವಾಗ್ಯೆ ಕೂಪನ್ನಲ್ಲಿಯೂ, ಕಾಗದ ಬರೆಯುವಾಗಲೂ ತಮಗೆ ಬರುತ್ತಿರುವ ಸ್ಟಾರ್ ಪತ್ರಿಕೆಯ ಕವರ್ ಮೇಲಣ ತಮ್ಮ ವಿಳಾಸದ ಪಕ್ಕದಲ್ಲಿರುವ ನಂಬರನ್ನು ಮರೆಯದೆ ಬರೆಯತಕ್ಕದ್ದು. ಹಾಗೆ ಬರೆಯದೆ ಬಂದ ಕಾಗದ ಕಾರ್ಡು ಮಣಿಯಾರ್ಡರುಗಳಿಗೆ ನಿಗಾಕೊಟ್ಟು ಉತ್ತರ ಕೊಡಲಾಗುವುದಿಲ್ಲ. ಮ್ಯಾನೇಜರ್.

“ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರ” ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲೀ ಉಪಯೋಗಿಸುತ್ತಿದ್ದರೆ ಆಹಾರ, ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ. ಮಕ್ಕಳ ಮೊದಲು ಯೆಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮಲು, ಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ. ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರೀ ಮಾತ್ರೆ ಎಂಬ ಹೆಸರನ್ನೂ ನೋಡಿ ಕೊಂಡುಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ, ಪಂಟಾಗದೆ ಕೊಟ್ಟ ಮೊದಲನೇವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಂಬುವುದಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ. ಸೀಸೆಯ ಬೆಲೆ 1ಕ್ಕೆ ರೂ. 1—0—0

ಶ್ರೀನಿವಾಸತೈಲ.

ಪ್ಲೇಗು ರೋಗಿಯ ಪ್ರತಿ ಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

ಶ್ರೀ ಸೀತಾರಾಘವವೈದ್ಯಶಾಲಾ,
ಬ್ರಾಂಚಾಫೀಸು
ಚಿಕ್ಕಪೇಟೆ, ಬೆಂಗಳೂರು ಸಿಟಿ.

“ಭಿಷಗ್ರತ್ನ
ಪಾಳ್ಯದ ವೆಂಕಟಾಚಲಪಂಡಿತರ”
ಶ್ರೀ ಸೀತಾರಾಘವವೈದ್ಯಶಾಲಾ,
ಹೆಡಾಫೀಸು ಮೈಸೂರು.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೆ, ಇವರ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಿಜ) ವಜ್ರಾಂಗ ಸುಂದರಪಾಕ (ಸ್ಟರ

ಧೀಕಳಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಈ ಪಾಕಸೇವನೆಯಿಂದ ಎಲ್ಲ ಧಾತುಜನ್ಯ ವಿಕಾರಗಳು, ಧಾತುಕೋಶದಲ್ಲಿಯ ಉಷ್ಣತೆ, ಮುಷ್ಟಿ ಮೈಥುನದಿಂದುಂಟಾದ ಇಂದ್ರಿಯ ಶೈಥಿಲ್ಯ, ನಪುಂಸಕತ್ವ, ಸ್ವಪ್ನಾವಸ್ಥೆ ಮೂತ್ರದೊಂದಿಗೆ ಧಾತುಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ನಡನೋವು, ಸಂದುನೋವು, ಎದೆನೋವು ಹಾರ್ಟ (ಡಿಸೀಜ), ಜೀರ್ಣಜ್ವರ ಮುಂತಾದವು, ಮುಖರೋಗ, ಹಳೇಪರ್ಮಾ ಮತ್ತು ಗರ್ಮಿ, ರಸಾಯನ ಸೇವನೆಯಿಂದಾದ ದುಷ್ಟವಿಕಾರಗಳು, ಯಾವದೇ ತರದ ಜ್ವರದಿಂದ ಎದ್ದಮೇಲೇ ಆದ ಕ್ಷೀಣತೆ, ಮೆಂದುವಿನ ಅಶಕ್ತತೆ, ಉರಿಮೂತ್ರ, ಕೈಕಾಲು ಉರಿಯೋಣ, ಎಲ್ಲ ಪಿತ್ತವಿಕಾರಗಳು, ನಿದ್ರೆಯು ಬಾರದೆ ಇರೋಣ, ಸ್ತ್ರೀಯರಿಗೆ ಸಂತತಿ ನಷ್ಟವಾಗೋಣ, ಮೇಲಿಂದಮೇಲೆ ಗರ್ಭಪಾತವು, ಎಲ್ಲ ಬಣ್ಣದ ಶೆರಗು, ಗರ್ಭಾಶಯ ವಿಕಾರದಿಂದ ಸಂತತಿ ಆಗದೆ ಇರೋಣ, ಮುಂತಾದ ವೃದ್ಧ ಸ್ತ್ರೀಪುರುಷರ ಸರ್ವರೋಗಗಳು ಹೋಗಿ ವಿಶೇಷ ಹಸಿವೆಯು ಆಗುತ್ತದೆ. ರೌಚಕ್ಕೆ ಸಾಫವಾಗಿ ಧಾತುವೃದ್ಧಿಯಾಗಿ ವೀರ್ಯ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕ ಆಗುತ್ತದೆ. ಈ ಪ್ರಕಾರ ಕಾಯಮ ಧಾತುಪೌಷ್ಟಿಕತ್ರಿಯ ಮತ್ತು ಜಬ್ಬಿನ ಪಾಕವನ್ನು ಈ ಹೊತ್ತಿನವರೆಗೆ ಯಾರೂ ಮಾಡಿಲ್ಲ. ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿ ಈ ಪಾಕದಲ್ಲಿ ಬಹುಪ್ರಯಾಸದಿಂದ ಸಂಪಾದಿಸಿದ ಅಪರೂಪ ೫೨ ವನಸ್ಪತಿ—ಶತಪುಷ್ಪ, ಶಾಲಿಮಕಂದ, ಮಧು, ಕಂದ, ಜಪಾಕಂದ ಶಾಲೀಮುಲೀಕಂದ, ಗಂಧ, ಅಶ್ವಶ್ರೇಷ್ಠಕಂದ, ಮಧುಕಂದ, ಮುಸಲೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನವಳೀಬೀಜ ಚಿಕಣದಪಂಚಾಗ, ಅಡವೀ ಎಳ್ಳಿನಪಂಚಾಂಗ, ಶವಿಪತ್ರಿ, ಜಾಯಪತ್ರಿ, ಸಿರಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಚಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಶಾಲೀಮುಖಾನಾ, ಬೀಜ ಹರಣಬೋರಿ, ಮುಂಗಲೀಬೇದಾಣೆ, ಮುರ್ದಾಸೀಕಟ್ಟಿಗೆ, ಶತಾವರಿ, ಸಕೀರೀಮುಗಜ, ಆಲದಹಾಲು, ನಾರೀಕೇರಿಭಾತಾ, ಗೋಖುರು, ಅಡವೀಭೆಂಡಿಬೇರು, ಬಂದು, ಅಮೃತಸತ್ವ, ಇಸಬಗೋಲ ಭುಸ್ಸಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲಸಕ್ಕರಿ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು ೫೨ ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ ೧೦೦೦ ರೂಪಾಯಿ ಇನಾಮು ಕೊಡುವೆವು. ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ ೨೦ ತೊಲ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ, ಸ್ತ್ರೀವರ್ಜ್ಯವಿಲ್ಲ, ೨೧ ದಿವಸ ಸಾಕಾಗುವಷ್ಟು ಈ ಪಾಕದ ೮೪ ತೊಲಿ ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ. ೬ ಡಬ್ಬಿಗೆ ೨೭ ರೂ. ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವುದು.

[50—42]

ಪತ್ತೆ :—ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು. ಮೈಸೂರು.

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್‌ಪೆನ್‌ಗಳು.

ವರ್ಲ್ಡ್ಸ್ ವಂಡರ್ ಫೌಂಟನ್ ಪೆನ್ 1ಕ್ಕೆ	3	0	0
,, ಬಿಗ್ ಬ್ಯಾರಲ್ ಪೆನ್ 1ಕ್ಕೆ	3	2	0
,, ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
,, ಮಾಟಲ್ ಕಲರ್ ಪೆನ್ 1ಕ್ಕೆ	3	14	0
,, ಮಾಟಲ್ ಸ್ಕ್ರೂ ಕ್ಯಾಪ್ ಪೆನ್	4	4	0
,, ಬ್ಲ್ಯಾಕ್ ಕಲರ್ ಸೆಲ್ಫ್ ಫಿಲಿಂಗ್ ಪೆನ್	5	8	0
,, ಸೇಫ್ಟಿ ಪೆನ್ 1ಕ್ಕೆ	6	0	0
,, ಲೇಡೀಸ್ ಸೈಜಿನ ಮಾಟಲ್ ಕಲರ್ ಪೆನ್ 1ಕ್ಕೆ	4	8	0
ಬ್ಲಾಕ್ ಬರ್ಡ್ ಪೆನ್ 1ಕ್ಕೆ 3 8 0 ಮತ್ತು	3	12	0
ಸ್ವಾನ್ ಫೌಂಟನ್‌ಪೆನ್ 1ಕ್ಕೆ 6 8 0 ಮತ್ತು	7	0	0
ವಾಟರ್ ಮೆನ್ ಐಡಿಯಲ್ ಪೆನ್ 1ಕ್ಕೆ 8 0 0 ಮತ್ತು	8	8	0
ವಾಟರ್‌ಮನ್ ಸೇಫ್ಟಿ ಪೆನ್ 1ಕ್ಕೆ	12	0	0

ಮಣಿಯಾರ್ಡರ್ ರವಾನಿಸುವ ವಿಳಾಸ—

ಖಾತ್ರಿಯೂ ಬಂದೋಬಸ್ತು ಆದ ಟೈಂಪೀಸ್‌ಗಳು

ಸಣ್ಣ ಸೈಜಿನ ಜರ್ಮನ್ ಟೈಂಪೀಸ್ 1ಕ್ಕೆ	2	2	0
ಜರ್ಮನ್ ಗುಂಡಾಕೃತಿಯ ಅ॥ ಟೈಂ ಪೀ. 1ಕ್ಕೆ	3	12	0
ಅನ್‌ಸೋನಿಯ - ಬೀ ಟೈಂಪೀಸ್ 1ಕ್ಕೆ	5	13	0
ಅನ್‌ಸೋನಿಯ ಅಲಾರಂ ಟೈಂಪೀಸ್ 1ಕ್ಕೆ	5	6	0
ಬಿಗ್ ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್ ಬೆನ್ ಡಿಲ್ಯೂಕ್ಸ್ ಸ್ಟಾಂಡಿರುವ ಅಲಾರಂ ಟೈಂ ಪೀಸ್ 1ಕ್ಕೆ	13	5	0
ಗಂ॥ ತೋರಿಸಿ ಅ॥ ಬಾರಿಸುವ ಕ್ಯಾರೇಜ್ ಕ್ಲಾ॥ 1ಕ್ಕೆ	7	2	0
ಟೈಂ ತೋರಿಸಿ ಘಂಟೆ ಸಹ ಹೊಡೆಯುವ ಕ್ಯಾರೇಜ್ ಕ್ಲಾಕ್ 1ಕ್ಕೆ	8	10	0
ಘಂಟೆ ಅರ್ಧ ಘಂಟೆ ಹೊಡೆವ ಅಲಾರಂಸಹ ಬಾರಿಸುವ ಕ್ಯಾರೇಜ್ ಕ್ಲಾಕ್ 1ಕ್ಕೆ	9	12	0
ಘಂಟೆ ತೋರಿಸಿ ಇಷ್ಟಪಟ್ಟ ಟೈಮಿಗೆ ಕರ್ಣನರಿದರಾಗುವಂತೆ ಗಾನಮಾಡುವ ಕ್ಯಾರೇಜ್ ಕ್ಲಾಕ್ 1ಕ್ಕೆ	12	0	0
ಇಟಲಿಯನ್ ಮೇಕ್ ಅ॥ ಟೈಂಪೀಸ್ 1ಕ್ಕೆ	6	9	0

[50—18]

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50—21]

ಮೈಸೂರು ಸ್ಟಾರ್.

೧೯೨೯ ನೆಯ ಇಸವಿ ಮಾರ್ಚಿ ತಾ|| ೨೩ ನೆಯ ಶನಿವಾರ.

THE ECONOMIC CONFERENCE.

The Economic Conference has grown bigger in size and it was a full house when it met in the new Legislative Council Hall on the 15th instant. There was a big agenda which necessitated a sitting for two days. The reports of the Boards of Agriculture, Industries and Commerce and Education were presented by the Members of Council in charge of the respective departments. The colonisation scheme which the Board of Agriculture had recommended for adoption by the Conference evoked considerable discussion. It was stated that this scheme was to create a set of gentlemen farmers. The proposal is to help ten persons with 30 acres of wetland and 40 acres of dry land each free of cost under the Bhadra channel, advance with loans to the extent of Rs. 10,000 to bring the lands under cultivation and to recover the same in 16 instalments. It seemed to the non-official members a rather extravagant and over-liberal scheme. The object was to help the technically educated young men who had no means of utilising their talent unaided. One of the members even apprehended that it would be another way of granting Inams to a community which had enough of such gifts in the past. Some thought that there were more urgent demands on the funds available than for this charitable undertaking. Others thought that the acreage was too large for each individual. Finally assurances were taken with regard to the fact that the beneficiaries under the scheme need not be only students who have passed out of an agricultural school, but other men who have a real aptitude for and interest in farming and that there should be a committee for the purpose of selecting the candidates. We need only give a word of caution to Government in case they should adopt the scheme. They should see that every pie of their loan is sunk on the land that the debtors do not make use of the funds for other purposes. In selecting candidates they should see that men who possess a real aptitude for farming are chosen. The report of the Board of Education came in for some criticism from non-official members for it made no reference to the skeleton of the scheme of Elementary Education Act adopted by the Conference and there was no indication as to where the matter stood. A number of members complained severely that no honest effort was being made to introduce the scheme and there was no definite policy on the part of Government. Mr. Gulam Ahmed Kalami made a stirring appeal to Government to come forward with their policy, state what portion of the expenditure they were going to meet and then ask the people if they were going to contribute their share and that unless Government adopted a bold and liberal policy in this matter there would be no salvation for the country. The Third Member observed that the matter was referred to the Director of Public Instruction who had submitted his report recently and the matter would be gone into later on. When Mr. N. S. Subba Rao was requested by the members to to state what his recommendations were he had the courtesy to say that it was the concern of the Government and the latter should be asked about it. And when finally he was asked to state his views he did it in such a manner that any body would have thought he was against the scheme. He spoke of the situation in Madras where such a scheme was expected to involve increasing the grant from one crore to 12 crores of rupees and suggested that it would mean twelve times the present grant in Mysore. The members were surprised that it should be so as the estimate given at the previous session of the Conference was only 40 lakhs. One thing is certain that, as some of the members emphasised, all the development schemes would be a considerable waste if people are not educated enough to take advantage of them.

Another matter of interest was the report of a committee appointed under the chairmanship of Dr. Seel to consider the question of organising financial assistance to indnstries. Mr. N. S. Subba Rao a member of the Committee placed the scheme as adumberated in the report before the Committee. Mr. V. L. D'Souza, Professor of Economics, another member of the committee explained the scheme in a very clear way. The main recommendations are that the Government should annually set apart a sum of Rs. 5 lakhs for giving financial assistance to industries, which should along with annual accretions go to form an industrial development fund and to which should be added the realisations from some new sources of taxation such as amusement tax, cess on income-tax and so on, that the Government should guarantee to make up the losses in the case of cash credit loans which the Bank of Mysore would be induceed to give to certain industries for providing them with current finance, and there should be a Statutory Board composed of some officials and a couple of representatives of industry and commerce to administer the fund. The scheme met with a lot of criticism as it deserved. Mr. K. S. Iyer and Sir Alfred Chatterton attacked the report vigourously. Mr. V. L. D'Souza answered the same in a very combative speech. Mr. H. C. Dasappa said the report had mainly concerned itself with the aid to large scale industries whereas the original object was to help the smaller industries, that asking for a grant in perpetuity of Rs. 5 lakhs without setting any limits was an extra*ordinary idea and* a very easy way of organising financial aid and so was the proposal for new taxation and appropriation of realisations thereby, that the Statutory Board has no element of responsibility as a Board of Directors would possess and would be a very unbusiness-like body, that the assistance should only be rendered by a bank which may be started for the purpose and that an administrative machinery to take care of all the industries deriving help from the fund was a most unpractical sugeestion and that the one valuable suggestion in the report was the development of industrial co-operation. Some of the official members themselves differed from the report and Mr. P. G. D'Souza was of opinion that the present rules were quite good and if more money was required Government could think of enhancing the grant to industrial loans. We can only say that it would be a most risky and doubtful venture to embark upon any such aid to the industries. As Mr. Manikyavelu Moodaliar said that before any such scheme is brought forward there should be enough of industrial talent in the State and without developing an industrial talent by means of suitable education etc., it would be no use of doling out funds. We know that there has not yet developed in our country that integrity and business capacity which make for success in industrial countries and that many of the managing agencies are out to help themselves than to help the concerns. We are glad that there was a frank expression of opinions in the Conference about the scheme. The report of the Taxation Inquiry Committee was not taken up for discussion as it was not in the hands of the members early enough to permit them to give their considered opinions. We will have occasion to comment upon the proposals later.

OBITER DICTA.

(By Free Thinker.)

"If you wish to live as decent men in this country, settle the Hindu-Muslim question". So said Mr. M. A. Jinnab, on the 12th instant in the Legislative Assembly at Delhi when discussing the Dominion Status for India and with referrence to the Nehru Report. A similar question arises in Mysore. But it is not the settlement of the Hindu-Muslim question. It is the settlement of the Brahman-Non-Brahman question in Mysore and it is with reference to the Miller Report. What Nehru Report is in British India to-day as a question of vital importance, the Miller Report is in Mysore. To divert the Non-brahman attention from this main point, the Mysore agitators have raised the bogey of Hindu-Muslim question in connection with the smallest of small incidents of the 30th July last. They have made a mountain of a mole-hill. They have purposely, like great lawyers, confused the real issues. Their great leader and benefactor who presided over the Disturbance Committee has clearly traced the disturbance of the 30th July 28 to the Miller Report. If still the Non-brahmans of Mysore are in the belief that there is in Mysore a Hindu-Muslim dispute, they are deceived by the deep laid scheme of the Mysore agitators. They must in a body disabuse their mind of this delusion and concentrate their thought on the solution of the real question which has disturbed the tranquility in Mysore. The short sighted policy of crowding the Mysore administration with one class of men began over 90 years ago. The beginning was small. But from 1883 it accelerated and from 1913 it reached its maximum limit and by 1919 it became intolerable. In all public life and public services, the tyranny of one class exploiting the people for its own ends began to be felt. The tragedy of life in Mysore is the domination of one class of people in all public activity. In the Representative Assemply, in the Legislative Council, in the local bodies such as the District Boards and the Municipal Councils, the Non-brahman element must increase if self-respect of any class of people should be maintained. As the Hon'ble Mr. Srinivasa Sastry said the other day at Madras, *in all places* where self-respect is the ordinary mental attitude, there men live *in* some respect, be he a member of the depressed class or of any other so-called superior class. It is this curse of difference in treatment in public life that has retarded progress in Mysore. The Schools and Colleges, the Public Services, the recreation grounds are all crowded with one class of men who look down upon others as their inferiors. This is the problem in Mysore. If one wishes to live decently in Mysore, this one class monopoly in public life should go. It is a tormenting state of affairs. There can be no peace till this question is settled. If the Non-brahman Conference should meet in Mysore, it must earnestly take up this question and decide upon the Miller Report and it should say to the Brahmans "If yon wish to live as decent men in Mysore, settle the Brahman Non-brahman question," and "do not go to disturb the Miller Report, till it has functioned its purpose." This report is intended to bring Peace and Harmony.

ಸಂಪದಭಿವೃದ್ಧಿ ಸಮಾಜ.

ಕಳೆದ ತಾ|| 15 ನೆಯ ಶುಕ್ರವಾರ ಈ ಸಮಾಜವು ಬೆಂಗಳೂರು ನ್ಯಾಯವಿಧಾಯಕ ಸಭಾ ಮಂದಿರದಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು, ಪರ್ಯಾಲೋಚಿಸಲ್ಪಡತಕ್ಕ ವಿಷಯಗಳ ಸಂಖ್ಯೆಯು ವಿಶೇಷವಾಗಿದ್ದುದರಿಂದ, ಮಾರನೆಯ ದಿನವೂ ನಡೆದು ಮುಕ್ತಾಯಗೊಂಡಿತು. ಈ ಸಮಾಜದ ಸದಸ್ಯರ ಸಂಖ್ಯೆಯು ಹೆಚ್ಚಾಗಿರುವುದರಿಂದ ಸಭಾ ಮಂದಿರವು ತುಂಬಿ ಹೋಗಿದ್ದಿತು. ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮತ್ತು ವಿದ್ಯಾಭ್ಯಾಸ ಬೋರ್ಡುಗಳ ವರದಿಗಳು ಆಯಾ ಶಾಖೆಗಳ ಮೇಲ್ವಿಚಾರಕರಾದ ಕೌನ್ಸಿಲರುಗಳಿಂದ ನಿವೇದಿಸಲ್ಪಟ್ಟುವು. ವ್ಯವಸಾಯ ಶಾಖೆಯವರು ನಿವೇದಿಸಿರುವ ವಿಸ್ತಾರವಾದ ಭೂವ್ಯವಸಾಯ ಪ್ರೋತ್ಸಾಹ ವಿಧಾನವು ಸಭೆಯಲ್ಲಿ ಚರ್ಚೆಗೆ ಬಂದಾಗ ಬಹಳ ವಾದವು ನಡೆದಿತು. ಗೌರವಸ್ಥರಾದ ಕೆಲ ವಿದ್ಯಾವಂತ ಜನರನ್ನು ಬೇಸಾಯ ವೃತ್ತಿಯಲ್ಲಿ ನಿಯೋಜಿಸುವುದೇ ಈ ನೂತನ ವಿಧಾನದ ಆಶಯವೆಂದು ತಿಳುಹಲ್ಪಟ್ಟಿತು. ಈ ವಿಧಾನದಿಂದ ಬೇಸಾಯದಲ್ಲಿ ಆಸಕ್ತಿಯುಳ್ಳ 10 ಮಂದಿ ಗೌರವಸ್ಥರಿಗೆ ಭದ್ರಾವತಿನಾಲೆಯ ಕೆಳಗೆ 30 ಎಕರೆ ತರೀ ಭೂಮಿಯನ್ನೂ, 40 ಎಕರೆ ಖುಷ್ಕಿಭೂಮಿಯನ್ನೂ ಉಚಿತವಾಗಿ ಕೊಟ್ಟು ಈ ಭೂಮಿಯನ್ನು ರೂಪುಗೊಳಿಸಿ ವ್ಯವಸಾಯಮಾಡಲು 10,000 ರೂಪಾಯಿಗಳನ್ನು ಮುಂಗಡವಾಗಿ

ಸಹಾಯಮಾಡಿ, ಈ ಹಣವನ್ನು 16 ಕಿಸ್ತಿನಲ್ಲಿ ಜರ ಮಾಡಿಕೊಳ್ಳತಕ್ಕದಾಗಿದೆ. ಈ ನೂತನ ವಿಧಾನವು ಬಹಳ ದುಂದುಗಾರಿಕೆಯಾಗಿ ಅನೌದ್ಯೋಗಿಕ ಸಭ್ಯರುಗಳಿಗೆ ಕಂಡು ಬಂದಿತು. "ವ್ಯವಸಾಯ ಮೊದಲಾದ ಕೈಗಾರಿಕೆ ವಿದ್ಯೆಯನ್ನು ಕಲಿತು ತಮ್ಮ ಬುದ್ಧಿಶಕ್ತಿಯನ್ನು ಪರಸಹಾಯವಿನಾ ಪ್ರದರ್ಶಿಸಲು ಅವಕಾಶವಿಲ್ಲದಿರುವ ಯುವಕರುಗಳಿಗೆ ಒಂದು ವೃತ್ತಿಯನ್ನು ಕಲ್ಪಿಸಿಕೊಟ್ಟು ಸಹಾಯಮಾಡುವುದೇ ಈ ನವೀನ ವಿಧಾನದ ಆಶಯವಾಗಿರುವುದು. ಹಿಂದೆ ಅನೇಕ ಜಹಗೀರು ಮತ್ತು ಇನಾಂ ಭೂಮಿಗಳನ್ನು ಪಡೆದುಕೊಂಡಿದ್ದಂತೆ ಈಗಲೂ ಒಂದು ವರ್ಗದವರಿಗೆ ಇನಾಮನ್ನು ಕೊಡತಕ್ಕ ವಿಧಾನವಾಗಿದೆ" ಎಂದು ಶಂಕಿಸುವುದಾಗಿ ಒಬ್ಬ ಸದಸ್ಯರು ತಿಳಿಸಿದರು. ಈ ಧರ್ಮಕಾರ್ಯವನ್ನು ಕೈಕೊಳ್ಳುವುದಕ್ಕಿಂತ ಕೆಲ ಅತ್ಯಾವಶ್ಯಕವೂ, ಅತ್ಯವಸರವೂ ಆದ ಕೆಲಸಗಳಿಗೆ ದ್ರವ್ಯವಿನಿಯೋಗ ಮಾಡತಕ್ಕದು ಯುಕ್ತವಾಗಿದೆ ಎಂದು ಕೆಲರು ಅಭಿಪ್ರಾಯಪಟ್ಟರು. ಒಬ್ಬೊಬ್ಬರಿಗೇ ಇಷ್ಟು ವಿಶಾಲವಾದ ಭೂಮಿಯನ್ನು ಕೊಡತಕ್ಕದಲ್ಲವೆಂದು ಮತ್ತೆ ಕೆಲರು ಹೇಳಿದರು. ವ್ಯವಸಾಯಪಾಠಶಾಲೆಯಲ್ಲಿ ಓದಿ ತೇರ್ಗಡೆಹೊಂದಿರತಕ್ಕವರಿಗೆ ಮಾತ್ರ ಈ ಸೌಲಭ್ಯವನ್ನು ಕಲ್ಪಿಸಿಕೊಡದೆ ವ್ಯವಸಾಯದಲ್ಲಿ ಅಭಿರುಚಿಯುಳ್ಳ ಇತರರಿಗು ಸಹ ನವೀನ ವಿಧಾನದ ಪ್ರಯೋಜನವು ಕಲ್ಪಿಸಿಕೊಡಲ್ಪಡುತ್ತದೆಂದೂ, ಈ ಸೌಲಭ್ಯವನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳನ್ನು ಆರಿಸುವುದಕ್ಕಾಗಿ ಒಂದು ಕಮಿಟಿಯೇರ್ಪಡಿಸಲ್ಪಡುತ್ತದೆಂದೂ ಪ್ರಭುತ್ವದವರು ಭರವಸೆಯನ್ನು ಕೊಟ್ಟ ಮೇಲೆ ಸಭ್ಯರು ಸಮಾಧಾನಗೊಂಡರು. ಈ ನವೀನ ವಿಧಾನವನ್ನು ಅನುಷ್ಠಾನಕ್ಕೆ ತರುವುದಾದಲ್ಲಿ, ಸಾಲವನ್ನು ಪಡೆದುಕೊಳ್ಳತಕ್ಕವರು ಪ್ರತಿಯೊಂದು ಕಾಸನ್ನೂ ಭೂವ್ಯವಸಾಯಕ್ಕಲ್ಲದೆ ಮತ್ತಾವುದಕ್ಕೂ ಉಪಯೋಗಿಸದಂತೆ ಪ್ರಭುತ್ವದವರು ಕಟ್ಟುನಿಟ್ಟಾದ ಏರ್ಪಾಟನ್ನು ಮಾಡಬೇಕೆಂದೂ, ವ್ಯವಸಾಯದಲ್ಲಿ ನಿಜವಾದ ಆಸಕ್ತಿಯಿರುವವರನ್ನೇ ಜುನಾಯಿಸಬೇಕೆಂದೂ ನಾವು ಎಚ್ಚರಿಸದೆ ಇರಲಾರೆವು. ವಿದ್ಯಾಭ್ಯಾಸದ ಬೋರ್ಡಿನ ವರದಿಯು ಪರ್ಯಾಲೋಚನೆಗೆ ತೆಗೆದುಕೊಳ್ಳಲ್ಪಟ್ಟು ಸಂಪದಭಿವೃದ್ಧಿ ಸಮಾಜದವರಿಂದ ಅಂಗೀಕರಿಸಲ್ಪಟ್ಟಿರುವ ಬಾಲವಿದ್ಯಾಭ್ಯಾಸ ವಿಧಿಗನುಸಾರವಾಗಿ ಯಾವ ಪ್ರಯತ್ನವು ಎಷ್ಟರಮಟ್ಟಿಗೆ ನಡೆದಿರುತ್ತದೆಂಬ ಬಗೆಗೆ ವರದಿಯಲ್ಲಿ ಏನೂ ಹೇಳಲ್ಪಟ್ಟಿಲ್ಲನೆಂದು ಅನೌದ್ಯೋಗಿಕ ಸದಸ್ಯರುಗಳು ಆಕ್ಷೇಪಿಸಿದರು. ಈ ವಿಚಾರದಲ್ಲಿ ಮನಃಪೂರ್ವಕವಾದ ಪ್ರಯತ್ನವು ಮಾಡಲ್ಪಟ್ಟಿಲ್ಲವೆಂದೂ, ಪ್ರಭುತ್ವದವರು ನಿರ್ದಿಷ್ಟವಾದ ನೀತಿ ರೀತಿಗಳನ್ನು ಅನುಸರಿಸುತ್ತಿಲ್ಲನೆಂದೂ ಕೆಲ ಮೆಂಬರುಗಳು ಬಹು ಕಠಿಣವಾಗಿ ಖಂಡಿಸಿದರು. "ಪ್ರಭುತ್ವದವರು ತಮ್ಮ ನಿರ್ದಿಷ್ಟಕಾರ್ಯ ವಿಧಾನವನ್ನು ಸ್ಪಷ್ಟವಾಗಿ ತಿಳಿಸಿ, ಈ ಕಾರ್ಯಕ್ಕೆ ತಾವು ಇಂತಿಷ್ಟು ಹಣವನ್ನು ವ್ಯಯಮಾಡುತ್ತೇವೆಂದು ಹೇಳಿ ಅನಂತರ ಪ್ರಜೆಗಳಿಷ್ಟು ದ್ರವ್ಯಸಹಾಯ ಮಾಡುತ್ತಾರೆಂದು ಕೇಳುವುದು ಯುಕ್ತವಾಗಿರುತ್ತದೆ. ಅಲ್ಲದೆ ಪ್ರಭುತ್ವದವರು ಇಂತಹ ವಿಚಾರಗಳಲ್ಲಿ ಧೈರ್ಯದಿಂದಲೂ ಔದಾರ್ಯದಿಂದಲೂ ವರ್ತಿಸದ ವಿನಾ ದೇಶಕ್ಕೆ ಪ್ರಯೋಜನವಾಗುವುದಿಲ್ಲ" ಎಂದು ಮ|| ಗುಲಾಂ ಅಹಮದ್ ಕಲಾಮಿಯವರು ಬಹಳ ಆವೇಶಪೂರ್ವಕವಾಗಿ ಮಾತನಾಡಿದರು. ಈ ವಿಚಾರವು ವಿದ್ಯಾಭ್ಯಾಸದ ಡೈರೆಕ್ಟರವರ ಪರ್ಯಾಲೋಚನೆಗೆ ಕಳುಹಿಸಲ್ಪಟ್ಟಿದ್ದುದರ ಮೇಲೆ ಅವರು ತಮ್ಮ ವರದಿಯನ್ನು ಈಗತಾನೆ ಕಳುಹಿಸಿಕೊಟ್ಟಿರುವರು. ಅದನ್ನು ಇನ್ನು ಮೇಲೆ ಪರಿಶೀಲಿಸುವುದಾಗುತ್ತದೆ ಎಂದು ಮೂರನೆಯ ಸಚಿವರು ತಿಳಿಸಿದರು. ಈ ವಿಚಾರದಲ್ಲಿ ತಾವು ಕೊಟ್ಟಿರುವ ಸೂಚನೆಯೇನೆಂದು ಕೆಲ ಮೆಂಬರುಗಳು ಕೇಳಿದುದಕ್ಕೆ, ಇದು ಪ್ರಭುತ್ವಕ್ಕೆ ಸಂಬಂಧಪಟ್ಟ ವಿಚಾರವಾದುದರಿಂದ, ಇದನ್ನು ಕುರಿತು ಪ್ರಭುತ್ವದವರನ್ನೇ ಕೇಳತಕ್ಕದಾಗಿದೆ ಎಂದು ಮ|| ಎನ್. ಎಸ್. ಸುಬ್ಬರಾಯರು ಹೇಳಿದರು. ಅದರಮೇಲೆ ನಿಮ್ಮಭಿಪ್ರಾಯವನ್ನಾದರೂ ತಿಳಿಸಬೇಕೆಂದು ಕೇಳಲಾಗಿ, ಮ|| ಸುಬ್ಬರಾಯರು ಈ ನವೀನ ವಿದ್ಯಾಕ್ರಮಕ್ಕೆ ವಿರುದ್ಧರಾಗಿದ್ದಾರೆಂದು ಯಾರಾದರೂ ಭಾವಿಸುವ ರೀತಿಯಲ್ಲಿ ಅವರು ಉತ್ತರವನ್ನು ಕೊಟ್ಟರು. ಮದ್ರಾಸಿನಲ್ಲಿ ಈ ಕ್ರಮವನ್ನನುಸರಿಸುವುದರಿಂದ ವೆಚ್ಚವು 1 ಕೋಟಿಯಿಂದ 12 ಕೋಟಿಗೆ ಹೆಚ್ಚುವುದಾಗಿ ನಿರೀಕ್ಷಿಸಲ್ಪಟ್ಟದ್ದಿತೆಂದು ಉದಾಹರಣೆಯಾಗಿ ಹೇಳುವಾಗ್ಗೆ, ನಮ್ಮ ಸೀಮೆಯಲ್ಲಿ ಸರ್ಕಾರದಿಂದ ಕೊಡಲ್ಪಡುವ ಗ್ರಾಂಟು 1 ಕ್ಕೆ 12 ರಷ್ಟು ಹೆಚ್ಚುವುದೆಂದು ಮ|| ಸುಬ್ಬರಾಯರು ತಿಳಿಸಿದರು. ಹಿಂದಿನ ಅಧಿವೇಶನದಲ್ಲಿ 40 ಲಕ್ಷ ರೂಪಾಯಿ ಆಗುತ್ತದೆಂದು ಹೇಳಲ್ಪಟ್ಟಿದ್ದುದು ಈಗ ಇಷ್ಟು ಹೆಚ್ಚಾಗಿ ಆಗುವುದನ್ನು ಕೇಳಿ ಸಭ್ಯರುಗಳು ಆಶ್ಚರ್ಯಚಕಿತರಾದರು. ಯಾವ ಅಭಿವೃದ್ಧಿ ಕಾರ್ಯವನ್ನಾಗಲಿ ಜನರು ಅದರ ಪ್ರಯೋಜನವನ್ನು ಅರಿತುಕೊಳ್ಳುವಷ್ಟು ವಿದ್ಯಾವಂತರಾಗಿರದಿದ್ದಲ್ಲಿ ಆ ಕಾರ್ಯಗಳಿಗಾಗಿಮಾಡುವ ವೆಚ್ಚವೆಲ್ಲವೂ ವ್ಯರ್ಥವೆಂದು ಮೆಂಬರುಗಳು ಒತ್ತಿ ಹೇಳಿದರು.

ಕೈಗಾರಿಕೆಯ ಅಭಿವೃದ್ಧಿಗೆ ದ್ರವ್ಯಸಹಾಯ ಮಾಡುವ ವಿಚಾರವನ್ನು ಪರ್ಯಾಲೋಚಿಸುವುದಕ್ಕಾಗಿ ಡಾಕ್ಟರ್ ಸೀಲ್‌ರವರ ಅಧ್ಯಕ್ಷತೆಯಲ್ಲೇರ್ಪಟ್ಟಿರುವ ಕಮಿಟಿಯ ವರದಿಯ ವಿಮರ್ಶೆಯು ಸ್ವಾರಸ್ಯವಾಗಿದ್ದಿತು. ಈ ಕಮಿಟಿಯ ಮೆಂಬರಾದ ಮ|| ಎನ್. ಎಸ್. ಸುಬ್ಬರಾಯರು ವರದಿಯಲ್ಲಿ ವಿವರಿಸಲ್ಪಟ್ಟಿರುವ ಕಾರ್ಯವಿಧಾನವನ್ನು ಸಂಕ್ಷಿಪ್ತವಾಗಿ ಸಭಿಕರಿಗೆ ತಿಳಿಸಿದರು. ಅಲ್ಲದೆ ಈ ಕಮಿಟಿಯ ಇನ್ನೊಬ್ಬ ಮೆಂಬರಾದ ಎಕನಾಮಿಕ್ಸ್ ಪ್ರೊಫೆಸರ್ ಮ|| ವಿ. ಎಲ್. ಡಿಸೌಜಾಯವರು ನೂತನ ವಿಧಾನವನ್ನು ಕುರಿತು ಬಹಳ ಸ್ಪಷ್ಟವಾಗಿ ತಿಳಿಸಿಹೇಳಿದರು. ಕೈಗಾರಿಕೆಯ ಪ್ರೋತ್ಸಾಹಕ್ಕಾಗಿ ದ್ರವ್ಯಸಹಾಯಮಾಡಲು ಪ್ರತಿ ವರ್ಷವೂ 5 ಲಕ್ಷ ರೂಪಾಯಿ ಪ್ರಭುತ್ವದವರಿಂದ ಕೊಡಲ್ಪಡಬೇಕೆಂದೂ, ಇದರುತ್ಪನ್ನವು ಕೈಗಾರಿಕೆಯ ಸಹಾಯಕ ಫಂಡಾಗಿ ಮಾಡಲ್ಪಟ್ಟು ವಿನೋದದ ತೆರಿಗೆ, ಆದಾಯತೆರಿಗೆಯೇ ಮೇಲೆ ತೆರಿಗೆ ಇನ್ನೂ ಮುಂತಾದ ಹೊಸ ತೆರಿಗೆಗಳನ್ನು ವಿಧಿಸಿ ಅವುಗಳುತ್ಪನ್ನವನ್ನು ಮೇಲ್ಕಂಡ ಫಂಡಿಗೆ ಸೇರಿಸತಕ್ಕದೆಂದೂ, ಮೈಸೂರು ಬ್ಯಾಂಕಿನಿಂದ ಸಾಲ ಪಡೆದು ಕೈಗಾರಿಕೆಯನ್ನು ನಡಿಸುವಲ್ಲಿ ನಷ್ಟ ಸಂಭವಿಸಿದರೆ ಪ್ರಭುತ್ವದವರು ನಷ್ಟಪರಿಹಾರ ಮಾಡಲು ಹೊಣೆಯಾಗಿರಬೇಕೆಂದೂ, ಈ ಫಂಡನ್ನು ಕಾಪಾಡಲು ಸರ್ಕಾರಿಯುದ್ಯೋಗಸ್ಥರಿಂದಲೂ, ಕೈಗಾರಿಕೆ ಮತ್ತು ವಾಣಿಜ್ಯ ಪ್ರತಿನಿಧಿಗಳಾದ ಇಬ್ಬರು ಮೆಂಬರುಗಳಿಂದಲೂ ಕೂಡಿದ ಒಂದು ಬೋರ್ಡು ಇರತಕ್ಕದೆಂದೂ ಡಾ|| ಸೀಲ್ ಕಮಿಟಿಯವರು ತಮ್ಮ ವರದಿಯಲ್ಲಿ ಸೂಚಿಸಿರುತ್ತಾರೆ. ಈ ಸೂಚನೆಯ ಮೇಲೆ ಬಹಳ ಚರ್ಚೆ ನಡೆದಿತು. ಮ|| ಕೆ. ಎಸ್. ಅಯ್ಯರ್‌ರವರೂ, ಸರ್ ಆಲ್‌ಫ್ರೆಡ್ ಚಾಟರ್ಟನ್‌ರವರೂ ಈ ವರದಿಯನ್ನು ಅತಿ ತೀಕ್ಷ್ಣವಾಗಿ ಖಂಡಿಸಿದರು. ಮ|| ವಿ. ಎಲ್. ಡಿಸೌಜಾಯವರು ಈ ಖಂಡನೆಗಳಿಗೆಲ್ಲ ಸಮಾಧಾನವನ್ನು ಕೊಟ್ಟರು. "ಈ ವರದಿಯಲ್ಲಿ ದೊಡ್ಡ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ವಿಚಾರವಾಗಿ ಹೇಳಲ್ಪಟ್ಟಿದೆ. ಆದರೆ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ದ್ರವ್ಯಸಹಾಯ ಮಾಡಬೇಕೆಂದು ಮೊದಲು ಅಪೇಕ್ಷಿಸಲ್ಪಟ್ಟಿದ್ದಿತು. ಈಗ ಕಾಲ ಪರಿಮಿತಿಯಿಲ್ಲದೆ ಪ್ರತಿ ವರ್ಷದಲ್ಲೂ 50 ಲಕ್ಷ ರೂ ಕೊಡಬೇಕೆಂದು ಕೇಳಿರುವುದು ವಿಚಿತ್ರವಾಗಿರುತ್ತದೆ ಮತ್ತು ಹಣವನ್ನು ಶೇಖರಿಸಲು ಸುಲಭೋಪಾಯವಾಗಿದೆ. ಹೊಸ ಕಂದಾಯಗಳನ್ನು ವಿಧಿಸಿ ಅದನ್ನು ಉಪಯೋಗಿಸಿಕೊಳ್ಳುವುದೂ ವಿಚಿತ್ರವಾಗಿದೆ. ಸ್ಟಾಟ್ಯುಟರಿ ಬೋರ್ಡಿಗೆ ಡೈರೆಕ್ಟರುಗಳ ಬೋರ್ಡಿಗಿರುವಂತೆ ಉತ್ತರವಾದಿತ್ವವಿಲ್ಲದಿರುವುದರಿಂದ, ಅದು ಬರೇ ನಾಮಮಾತ್ರಕ್ಕಿರುವುದಾಗುವುದು. ದ್ರವ್ಯಸಹಾಯ ಮಾಡುವುದಕ್ಕಾಗಿ ಒಂದು ಬ್ಯಾಂಕು ಹೊಸದಾಗಿ ಸ್ಥಾಪಿಸಲ್ಪಟ್ಟು, ಇದರಿಂದ ದ್ರವ್ಯಸಹಾಯವನ್ನು ಹೊಂದುವ ಕೈಗಾರಿಕೆಗಳ ಮೇಲ್ವಿಚಾರಣೆಗಾಗಿ ಅಧಿಕಾರಿಗಳ ಸಂಘವೇರ್ಪಡಿಸಲ್ಪಡಬೇಕೆಂದು ಕೊಡಲ್ಪಟ್ಟಿರುವ ಸೂಚನೆಯು ಅಸಾಧ್ಯವಾಗಿರುತ್ತದೆ. ಆದರೆ ಸಹಕಾರದಿಂದ ಕೈಗಾರಿಕೆಯಭಿವೃದ್ಧಿಯನ್ನು ಮಾಡಬೇಕೆಂಬ ಸೂಚನೆಯು ಮಾತ್ರ ವರದಿಯಲ್ಲಿ ಪ್ರಾಮುಖ್ಯವಾಗಿರುತ್ತದೆ" ಎಂದು ಮ|| ಎಚ್. ಸಿ. ದಾಸಪ್ಪನವರು ವಾದಿಸಿದರು. ಕೆಲ ಅಧಿಕಾರಿಗಳು ಸಹ ವರದಿಯಲ್ಲಿ ಕೊಟ್ಟಿರುವ ಸೂಚನೆಯನ್ನು ಅನುಮೋದಿಸಲಿಲ್ಲ. "ಈಗ ಕೈಗಾರಿಕೆಯ ಪ್ರೋತ್ಸಾಹಕ್ಕಾಗಿರುವ ರೂಲು ಚೆನ್ನಾಗಿಯೇ ಇದೆ. ಇನ್ನೂ ಹೆಚ್ಚು ಹಣವು ಬೇಕಾದಲ್ಲಿ, ಪ್ರಭುತ್ವದವರು ಕೈಗಾರಿಕೆಗಾಗಿ ಸಾಲಕೊಡುವುದಕ್ಕೋಸ್ಕರ ತಾವು ಕೊಡುವ ಗ್ರಾಂಟನ್ನು ಹೆಚ್ಚಿಸಲು ಯೋಚಿಸತಕ್ಕದಾಗಿದೆ" ಎಂದು ರೆವಿನ್ಯು ಕಮಿಷನರ್ ಮ|| ಪಿ. ಜಿ. ಡಿಸೌಜರವರು ಹೇಳಿದರು. ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ಮೇಲ್ಕಂಡ ರೀತಿಯಲ್ಲಿ ಸಹಾಯಮಾಡಲು ಪ್ರಯತ್ನಿಸುವುದು ಬಹಳ ನಷ್ಟಕರವೂ ಅನುಮಾನಾಸ್ಪದವೂ ಆಗಿರುತ್ತದೆಂದು ನಾವು ಹೇಳಬಲ್ಲೆವು. ಮ|| ಮಾಣಿಕವೇಲು ಮೊದಲಿಯಾರರು ಹೇಳಿರುವ ಪ್ರಕಾರ ಇಂತಹ ನೂತನ ವಿಧಾನವು ಅನುಷ್ಠಾನಕ್ಕೆ ತರಲ್ಪಡುವುದಕ್ಕೆ ಮೊದಲು, ಸಂಸ್ಥಾನದಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಸಾಕಾದಷ್ಟು ಅಭಿರುಚಿಯೂ, ಸಾಮರ್ಥ್ಯವೂ ಇರುವ ಜನರು ಬೇಕು. ಇದಕ್ಕಾಗಿ ತಕ್ಕ ವಿದ್ಯಾಭ್ಯಾಸದಿಂದ ಜನರಲ್ಲಿ ಕೈಗಾರಿಕೆಯ ಅಭಿರುಚಿಯು ಹುಟ್ಟಿಸಲ್ಪಟ್ಟ ವಿನಾ ಬರೇ ಧನರಾಶಿಯನ್ನು ಕೂಡಿಸುವುದರಿಂದ ಪ್ರಯೋಜನವಾಗುವುದಿಲ್ಲ. ಕೈಗಾರಿಕೆಯ ದೇಶಗಳು ಅಭಿವೃದ್ಧಿಗೆ ಬರಲು ಸಾಧಕವಾದ ಜಾಣ್ಮೆಯೂ ಕಾರ್ಯನಿರ್ವಾಹಶಕ್ತಿಯೂ ನಮ್ಮ ದೇಶದಲ್ಲಿ ಇನ್ನೂ ಕುದಿರಿಲ್ಲವೆಂಬುದನ್ನೂ ಕಾರ್ಯನಿರ್ವಾಹಕ ಸಂಘಗಳು ಕಾರ್ಯಾಲಯಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಬದಲು ತಮ್ಮಭಿವೃದ್ಧಿಯನ್ನು ಮಾಡಿಕೊಳ್ಳುವುವು ಎಂಬುದನ್ನೂ ಎಲ್ಲರೂ ಬಲ್ಲರು. ಈ ನೂತನ ಕಾರ್ಯಸಾಧನೆಯ ವಿಚಾರವಾಗಿ ಸಭೆಯಲ್ಲಿ ಪ್ರತಿಯೊಬ್ಬರೂ ತಂತಮ್ಮ ಅಭಿಪ್ರಾಯವನ್ನು ಧಾರಾಳವಾಗಿ ತಿಳಿಸಿದುದು ಸಂತೋಷಪ್ರದವಾಗಿದೆ. ಕಂದಾಯದ ವಿಚಾರಣೆ ಸಮಿತಿಯ ವರದಿಯನ್ನು ಮೆಂಬರುಗಳೋದಿ ತಮ್ಮಭಿಪ್ರಾಯವನ್ನು ತಿಳಿಸಲು ವರದಿಯ ಪ್ರತಿಗಳು ಮೆಂಬರುಗಳಿಗೆ ಸಕಾಲದಲ್ಲಿ ಕೊಡಲ್ಪಡಲಿಲ್ಲವಾದುದರಿಂದ ಆ ವಿಚಾರವಾಗಿ ಸಭೆಯಲ್ಲಿ ಚರ್ಚಿಸಲು ಅವಕಾಶವಿಲ್ಲದೆ ಹೋಯಿತು. ಅವರು ಕೊಟ್ಟಿರುವ ಸಲಹೆಯನ್ನು ಕುರಿತು ಮುಂದೆ ಪ್ರಸ್ತಾಪಿಸುವೆವು.

ನೈಜಾಂರವರ ಆಗಮನ.

ಭಾರತ ದೇಶೀಯ ಸಂಸ್ಥಾನಗಳಲ್ಲೆಲ್ಲ ವಿಸ್ತೀರ್ಣದಲ್ಲೂ, ಪ್ರಜಾಸಂಖ್ಯೆಯಲ್ಲೂ, ಉತ್ಪನ್ನದಲ್ಲೂ, ಗೌರವದಲ್ಲೂ ಪ್ರಥಮಸ್ಥಾನವನ್ನು ಹೊಂದಿರುವ ಹೈದರಾಬಾದು ಸಂಸ್ಥಾನಾಧೀಶ್ವರರಾದ ಹಿಸ್ ಎಕ್ಸಾಲ್ಟೆಡ್ ಹೈನೆಸ್ ನೈಜಾಂರವರು ನಮ್ಮ ಶ್ರೀಮನ್ಮಹಾರಾಜರವರ ಆಮಂತ್ರಣವನ್ನು ಅಂಗೀಕರಿಸಿ ಇದೇ ತಾ|| 30 ನೆಯ ಶನಿವಾರ ಬೆಂಗಳೂರಿಗೆ ದಯಮಾಡಿಸಿ ಅಲ್ಲಿ ತಾ|| 2 ರ ವರೆಗಿದ್ದು ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ಪರಾಮರ್ಶಿಸಿಕೊಂಡು ಪ್ರಜಾಪ್ರಮುಖರಿಂದ ನಡಿಸಲ್ಪಡುವ ವನವಿಹಾರೋತ್ಸವದಲ್ಲಿ ಭಾಗಿಗಳಾಗಿ ತಾ|| 3 ನೆಯ ಬುಧವಾರ ರಾಜಧಾನಿಗೆ ಚಿತ್ತೈಸುವರು. ಇಲ್ಲಿ ಶ್ರೀಮನ್ಮಹಾರಾಜರವರಿಂದ ಸನ್ಮಾನಪುರಸ್ಸರವಾಗಿ ಸುಸ್ವಾಗತಿಸಲ್ಪಟ್ಟು ಉತ್ಸವಪೂರ್ವಕವಾಗಿ ಗೌರ್ನಮೆಂಟ್ ಹೌಸಿಗೆ ಬಂದು ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದುಕೊಂಡು ಬೆಟ್ಟ, ಕನ್ನಂಬಾಡಿ ಶಿವನಸಮುದ್ರ, ಶ್ರೀರಂಗಪಟ್ಟಣ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಪರಾಮರ್ಶಿಸಿ ತಾ|| 4-5 ರಲ್ಲಿ ಹಿಂದಿರುಗಿ ಪ್ರಯಾಣಮಾಡುವವರಾಗಿರುವರು. ಇವರ ಸ್ವಾಗತಕ್ಕಾಗಿ ಬೆಂಗಳೂರಿನ ಪುರಪಾಲಕ ಸಂಘದವರು 2,000 ರೂ. ವೆಚ್ಚದಿಂದ ಚಪ್ಪರವನ್ನು ಹಾಕಿ ಮಾರ್ಗಗಳನ್ನು ಶೃಂಗರಿಸಲು ಗೊತ್ತುಮಾಡಿರುವರು ಮತ್ತು ಸರ್ ಕೆ. ಪುಟ್ಟಣ್ಣಶೆಟ್ಟರು, ಸರ್ ಹಾಜಿ ಇಸ್ಮಾಯಿಲ್‌ಸೇಟರು ಮೊದಲಾದ ಪ್ರಮುಖರುಗಳು ಬೆಂಗಳೂರು ಲಾಲ್‌ಬಾಗಿನಲ್ಲಿರುವ ಗಾಜಿನ ಮನೆಯಲ್ಲಿ ವನವಿಹಾರಸತ್ಕಾರವನ್ನು ನಡಿಸಲು ತಕ್ಕೇರ್ಪಾಟನ್ನಿಟ್ಟಿರುವರು. ರಾಜಧಾನಿಯ ರೈಲ್ವೆ ಸ್ಟೇಷನ್ನನ್ನು ಶೃಂಗರಿಸಿ ಕಮಾನನ್ನು ಹಾಕಲೂ, ಮಾರ್ಗಗಳನ್ನು ಧ್ವಜಪತಾಕೆಗಳಿಂದಲೂ ನೀರಿನ ಚಳೇವಿನಿಂದಲೂ ಶೃಂಗರಿಸಲೂ, ಟೌನ್‌ಹಾಲಿನ ಬಳಿ ಚಪ್ಪರವನ್ನು ಹಾಕಲೂ ಇಲ್ಲಿಯ ಪುರಪಾಲಕ ಸಂಘದವರು 2,500 ರೂಪಾಯಿಗಳನ್ನು ವ್ಯಯಮಾಡಲು ಗೊತ್ತುಮಾಡಿರುವರು.

ನೂತನ ವೈಸ್ರಾಯರು.

ವೈಸ್ರಾಯರೊಡನೆ ಪ್ರತ್ಯಕ್ಷವಾಗಿ ಮಾತನಾಡಲು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಇಂಗ್ಲೆಂಡಿಗೆ ಬರಬೇಕೆಂದು ಲಾರ್ಡ್ ಇರ್ವಿನ್‌ರವರನ್ನು ಆಹ್ವಾನಿಸಿರುವುದರಿಂದ, ನಾಲ್ಕು ತಿಂಗಳ ರಜವನ್ನು ಪಡೆದುಕೊಂಡು ಇರ್ವಿನ್‌ರವರು ಜೂನ್ ತಿಂಗಳಲ್ಲಿ ಸೀಮೆಗೆ ಪ್ರಯಾಣಮಾಡುವರು. ಆ ಕಾಲದಲ್ಲಿ ಮದ್ರಾಸ್ ಗೌರ್ನರಾದ ಲಾರ್ಡ್ ಗೋಷೆನ್‌ರವರು ವೈಸ್ರಾಯರುದ್ಯೋಗವನ್ನು ಬದಲು ನೋಡಲು ಸಾರ್ವಭೌಮರವರಿಂದ ಅಂಗೀಕೃತನಾಗಿರುವುದು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಭಾನುವಾರವೂ, ಮಹಾಮಾತೃಶ್ರೀವಾಣೀವಿಲಾಸಸನ್ನಿಧಿಯವರ ಮತ್ತು ಶ್ರೀಮದ್ಯುವರಾಜರವರ ಸ್ವಾರಿಗಳು ಕಳೆದ ಬುಧವಾರವೂ ಉದಕಮಂಡಲಕ್ಕೆ ಚಿತ್ತೈಸಿದ್ದುವು. ಎಂಬದಾಗಿ

ರವಾದ ಮತ್ತು ತಮ್ಮ ಸರ್ವ ಅಲ್ಯೂಮಿನಿಯಂ ವ್ಯಾಪಾರಿಗಳಾದ ಮ|| ... ಮಠದಿಂದಲೇ ... ಸನವರೂ ಚೆನ್ನಬಸಪ್ಪನವರೂ ಆಚೆವಾರ ಪಂಚದನ್ನು ಕೇಳ್ಯು ಧರ್ಮಾರ್ಥವಾಗಿ ಮಾಡಿ ತಮ್ಮ ಧರ್ಮಬುದ್ಧಿಯನ್ನು ಇದರಂತೆ ಅಲಿಸಿದರು. ಇದಕ್ಕಾಗಿ ಇವರಿಗೆ ಶ್ರೇಯೋಭಿವೃದ್ಧಿ ಭವಾನಿಗಳಿಗೆ ವರ್ಗವನ್ನು ಕೋರುತ್ತೇವೆ.

ಶ್ರೀಕೃಷ್ಣರಾಜೇಂದ್ರ ಮಿಲ್ಲಿನ ಮ್ಯಾನೇಜಿಂಗ್ ಡೈರೆಕ್ಟರುಗಳಲ್ಲೊಬ್ಬರಾಗಿದ್ದು ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮ|| ... ರಾಮಾಚಾರ್ಯರು ತಮ್ಮ ಡೈರೆಕ್ಟರುದ್ಯೋಗವನ್ನು ಬಿಟ್ಟುದರಿಂದ ಮಿಲ್ಲಿನ ಕಾರ್ಯಕ್ರಮವನ್ನು ಪರ್ಯಾಲೋಚಿಸುವ ಬಗೆಗೆ ಅದರ ಡೈರೆಕ್ಟರುಗಳು ಈ ದಿವಸ ಡೈರೆಕ್ಟರುಗಳ ಬೋರ್ಡಿನ ಅಧ್ಯಕ್ಷರಾದ ಸರ್ ಪುಟ್ಟಣ್ಣ ಶೆಟ್ಟರ ಬಂಗ್ಲೆಯಲ್ಲಿ ಸಭೆ ಸೇರತಕ್ಕವರಾಗಿರುವರು.

ಬೆಂಗಳೂರು ಸಿಟಿ ಪೊಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಮರಿಯಪ್ಪನವರು ಮ|| ಎ. ಎಸ್. ಸಂಜೀವರಾಯರಮೇಲೆ ಅತ್ಯಾಚಾರದ ಅಪರಾಧಕ್ಕಾಗಿ ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿರುವ ವಿವಾದದಲ್ಲಿ ಫಿರ್ಯಾದಿ ಪರ ಸಾಕ್ಷಿಗಳ ಹೇಳಿಕೆಯು ಮುಗಿದು ಅವರೆಲ್ಲರೂ ಆಪಾದನೆಯನ್ನು ಸಾಧಿಸಿ ಮಾತನಾಡಿದುದರಮೇಲೆ ಐ. ಪಿ. ಸಿ. 353 ನೇ ಸೆಕ್ಷನ್ ಪ್ರಕಾರ ಅಪರಾಧಿಯು ಛಾರ್ಜುಮಾಡಲ್ಪಟ್ಟರು. ಅಪರಾಧಿಯು ನಿರ್ದೋಷಿಯೆಂದು ಸಾಧಿಸಲಿಕ್ಕಾಗಿ ಈ 25 ಕ್ಕೆ ವಿವಾದವು ಮುಂದುವರಿಸಲ್ಪಟ್ಟಿತು.

ಇದೇ ತಾ|| 28 ನೇ ಗುರುವಾರ, ಮೈಸೂರು ಮಂಡಿಪೇಟೆ ಮಹಾರಾಷ್ಟ್ರ ಶ್ರೀ ರಾಮಸೇವಾ ಸಂಘದವರು, ಭಾರತಮಾತೆಯ ಪುತ್ರನೂ, ಹಿಂದುಧರ್ಮೋದ್ಧಾರಕನೂ, ಭವಾನೀಭಕ್ತನೂ, ಕ್ಷತ್ರಿಯ ಮರಾಠಾ ಕುಲತಿಲಕನೂ, ಭಾರತ ವೀರಮಕುಟಮಣಿಯೂ ಆದ ಛತ್ರಪತಿ ಶ್ರೀ ಶಿವಾಜೀ ಮಹಾರಾಜರವರ ಮುನ್ನೂರನೇ ವರ್ಷದ ಜನ್ಮಜಯಂತಿ ಸಮಾರಂಭವನ್ನು ನಮ್ಮ ಸಂಘದ ಶ್ರೀ ರಾಮಮಂದಿರದಲ್ಲಿ ನೆರವೇರಿಸುತ್ತಾರಾದ್ದರಿಂದ ದೇಶಭಕ್ತರೆಲ್ಲರೂ ಬಂದು ಈ ಕಾರ್ಯದಲ್ಲಿ ಭಾಗಿಗಳಾಗಿ ಪ್ರಸಾದ ಸ್ವೀಕರಿಸಬೇಕೆಂದು ಸಂಘದವರು ಕೋರುತ್ತಾರೆ.

ಕಳೆದ ಭಾನುವಾರ ರಾಜಧಾನಿಯಿಂದ ಉದಕಮಂಡಲಕ್ಕೆ ಹೊರಟ ಅಂಚೆಯ ಮೋಟಾರುಬಸ್ಸು ನಂಜನಗೂಡಿನಿಂದ ಕೊಂಚ ದೂರದಲ್ಲಿ ಅಪಾಯಕ್ಕೆ ಸಿಕ್ಕಿ ಒಳಗೆ ಕುಳಿತಿದ್ದ ಅರಮನೆಯ ಆಫೀಸರುಗಳಲ್ಲಿ ಮೂವರು ನಾಲ್ವರಿಗೆ ಪೆಟ್ಟುಬಿದ್ದಿತು. ಅವರಲ್ಲಿ

ಒಬ್ಬಳಿಗೆ ಬಹಳ ಪೆಟ್ಟು ಬಿದ್ದುದರಮೇಲೆ ಆಕೆಯು ಮೈಸೂರಿಗೆ ಕರೆತರಲ್ಪಟ್ಟು ಅರಮನೆಯ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವಳು. ಉಳಿದವರು ಉದಕಮಂಡಲಕ್ಕೆ ಪ್ರಯಾಣ ಮಾಡಿದರು.

ಹುಜೂರು ಸೆಕ್ರೆಟರಿಯವರಾದ ಮ|| ಟಿ. ತಂಬೂಶೆಟ್ಟರು ತಮ್ಮ ಎರಡನೇ ಕುಮಾರಿಯನ್ನು ನರ್ತನವಿದ್ಯಾಭ್ಯಾಸಕ್ಕಾಗಿ ಕಲಕತ್ತಾಪಟ್ಟಣದಲ್ಲಿ 1-2 ವರ್ಷಗಳಿಂದಲೂ ಬಿಟ್ಟಿದ್ದರು. ಈಗ ಆಕೆಯವರಿಗೆ ಪಾಶ್ಚಾತ್ಯನರ್ತನವನ್ನು ಕಲಿಸುವುದಕ್ಕಾಗಿ ಅವರನ್ನು ಲಂಡನ್ನು ಪಟ್ಟಣದಲ್ಲಿ ಬಿಟ್ಟು ತಾವು 3-4 ತಿಂಗಳು ಅವರೊಡನೆ ಇದ್ದು ಬರುವರೆಂದೂ, ಇದಕ್ಕಾಗಿ 3-4 ತಿಂಗಳ ರಜವನ್ನು ಪಡೆದುಕೊಂಡು ಬರುವ ತಿಂಗಳಲ್ಲಿ ಪ್ರಯಾಣಮಾಡುವರೆಂದೂ, ಅವರು ಬರುವವರೆಗೂ ಎಡಿಕಾಂಗ್ ಮ|| ಷಡನ್ ಜಸ್ ಷಾರವರು ತಪ್ಪಿದಲ್ಲಿ ರಾಜಧಾನಿಯ ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯರ್‌ರವರು ಹುಜೂರು ಸೆಕ್ರೆಟರಿಯವರಾಗಿ ಬದಲು ನೋಡುವರೆಂದೂ ವರ್ತಮಾನವಿದೆ.

ರಾಜಧಾನಿಯ ಶಾಂಕುಂತಲನಾಟಕಸಭೆಯವರು ಅಡ್ವೊಕೇಟ್ ಮ|| ಸಿ. ನರಸಿಂಹಯ್ಯನವರನ್ನು ಪ್ರೆಸಿಡೆಂಟರನ್ನಾಗಿಯೂ, ವೃತ್ತಾಂತ ಪತ್ರಿಕೆಯ ಮ|| ಟಿ. ಕೃಷ್ಣರಾಯರನ್ನು ಸೆಕ್ರೆಟರಿಯನ್ನಾಗಿಯೂ ಬಹಳ ವರ್ಷಗಳಿಂದ ನಿಯಮಿಸಿಕೊಂಡಿದ್ದು ಈಚೆಗೆ ಆಮಬ್ಬರನ್ನು ತೆಗೆದುಬಿಟ್ಟು ಬೇರೆಯವರನ್ನು ಪ್ರೆಸಿಡೆಂಟರನ್ನಾಗಿಯೂ ಸೆಕ್ರೆಟರಿಯನ್ನಾಗಿಯೂ ನಿಯಮಿಸಿಕೊಂಡರು. ಇದರಮೇಲೆ ಮ|| ಗಳಾದ ಸಿ. ನರಸಿಂಹಯ್ಯನವರೂ ಟಿ. ಕೃಷ್ಣರಾಯರೂ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಾಟಕಸಭೆಯವರು ನೆಮ್ಮದಿ ಭಂಗವನ್ನುಂಟುಮಾಡಿದರೆಂಬ ಅಪರಾಧಕ್ಕಾಗಿ ವಿವಾದ ಹೂಡಿದ್ದರು. ಈ ವಿವಾದದಲ್ಲಿ ಉಭಯಪಕ್ಷದ ವಕೀಲರುಗಳ ವಾದಾನುವಾದಗಳು ನಡೆದು ನಾಟಕಸಭೆಯ ಅಧಿನೇತೃಗಳು ನಿರ್ದೋಷಿಗಳೆಂದು ತೀರ್ಮಾನಿಸಲ್ಪಟ್ಟಿತು.

ಮ|| ವೆಂಕಟಕೃಷ್ಣಯ್ಯನವರ ಕೃಷ್ಣರಾಜವಾಣೀವಿಲಾಸ ಮುದ್ರಾಕ್ಷರಶಾಲೆಯನ್ನು ಮೈಸೂರು ಬ್ಯಾಂಕಿಗೆ ಆಧಾರಮಾಡಿ 8-10 ಸಾವಿರ ರೂಪಾಯಿ ಸಾಲವನ್ನು ತೆಗೆದುಕೊಂಡಿರುವರೆಂದೂ, ರಾಜದ್ರೋಹಾಪರಾಧಕ್ಕಾಗಿ ಇವರು ಗಡೀಪಾರ್ಮಾಡಲ್ಪಟ್ಟು ಇವರ ಮುದ್ರಾಕ್ಷರಶಾಲೆಯು ಸರ್ಕಾರದ ಸ್ವಾಧೀನಪಡಿಸಲ್ಪಡುತ್ತದೆಂದೂ ವದಂತಿಯಿದ್ದುದರಮೇಲೋ ಮತ್ತಾವ ಕಾರಣದಿಂದಲೋ ಬ್ಯಾಂಕಿನವರು ಮ|| ವೆಂಕಟಕೃಷ್ಣಯ್ಯನವರ ಪ್ರೆಸ್ಸನ್ನು ತಮ್ಮ ಸ್ವಾಧೀನಪಡಿಸಿಕೊಂಡು ಮೈಸೂರು ಬ್ಯಾಂಕಿನ ಗೋಡೌನ್ ಎಂ farming and that th ಕಡೆಯವರೊಬ್ಬರನ್ನು ಪ್ರೆಸ್ಸಿನ tee for the purpose ಕೆಲಸವನ್ನು ನಡಿಸುತ್ತಿರುವರೆಂದೂ ates. We nee ಕನವರು ಈ ರೀತಿ ವ್ಯಾಪಾರಮಾಡುವುದು ಧರ್ಮ to Gover ಎಂಬುದನ್ನು ತಿಳಿದವರು ಹೇಳಬೇಕು. ಇದೇ ic of the ರಾಜಧಾನಿಯ ಎಕ್ಸ್‌ಪ್ಲೋರ್ ಪ್ರಾಡಕ್ಟ್ಸ್ ಲಿ the debto ದ ಬರಬೇಕಾದ ಬಾಕಿ ಹಣಕ್ಕಾಗಿ ಅವರ ಕಾರ್ಯಾ other ವಹಿಸಿಕೊಂಡಿರುವುದಾಗಿ ತಿಳಿಯಬರುತ್ತದೆ.

should

de for

ರಾಜಧಾನಿಯ ಎಕ್ಸ್‌ಪ್ಲೋರ್ ಪ್ರಾಡ e P- ಲಿಮಿಟೆಡ್ಡಿನವರು ಮೈಸೂರು ಸರ್ಕಾರದವರಿಂದ ಇಳಿಸಲ್ಪಡುವ ಗಂಧದೆಣ್ಣೆಯ ಮಾರಾಟದ ಏಜನ್ಸಿಯನ್ನು ತೆಗೆದುಕೊಂಡಿದ್ದು ಸರ್ಕಾರಕ್ಕೆ ಸಲ್ಲಬೇಕಾದ 9 ಲಕ್ಷ ರೂಪಾಯಿವರೆಗೂ ದುರುಪಯೋಗಮಾಡಿ ಸರ್ಕಾರವನ್ನು ವಂಚಿಸಿದರೆಂಬ ಅಪರಾಧಕ್ಕಾಗಿ ಈ ಲಿಮಿಟೆಡ್ಡಿನ ಆಫೀಸನ್ನು ಮೊನ್ನೆಯ ದಿವಸ ಗಂಧದೆಣ್ಣೆ ಕಾರ್ಖಾನೆಯದ ಸೂಪರಿಂಟೆಂಡೆಂಟರಾದ ಮ|| ವೈ. ನರಸಿಂಗರಾಯರು ಡಿಸ್ಟ್ರಿಕ್ಟು ಮತ್ತು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರುಗಳಿಂದ ಪರಿಶೋಧಿಸಿ ಲೆಖ್ಖ ಪತ್ರಗಳನ್ನು ಪೋಲೀಸರ ಸ್ವಾಧೀನಪಡಿಸಿ, ಅಲ್ಲಿಂದ ಈ ಲಿಮಿಟೆಡ್ಡಿನ ಡೈರೆಕ್ಟರುಗಳಲ್ಲೊಬ್ಬರಾದ ಮ|| ಬಿ. ಸೀತಾರಾಮಾಚಾರ್ಯರ ಮನೆಯನ್ನು ಶೋಧಿಸಿ ಆಚಾರ್ಯರನ್ನು ಸೆರೆಹಿಡಿಸಿದರು. ಪೋಲೀಸಿನವರು ಅದೇ ರಾತ್ರಿ ಸಿಟಿ ಮೆಜಿಸ್ಟ್ರೇಟರ ಮನೆಗೆ ಆಚಾರ್ಯರನ್ನು ಕರೆದುಕೊಂಡು ಹೋಗಿ 7 ದಿವಸದವರೆಗೆ ರಿಮಾಂಡನ್ನು ಪಡೆದುಕೊಂಡು ಆಚಾರ್ಯರನ್ನು ಕಾರಾಗೃಹದಲ್ಲಿಟ್ಟಿರುವರು. ಈ ವಿಚಾರಮಥನದಲ್ಲಿ ಯಾವ್ಯಾವ ಮಹತ್ತರರಹಸ್ಯಗಳೂ, ಅಧಿಕಾರಿಗಳ ಮತ್ತು ದೊಡ್ಡಮನುಷ್ಯರ ಹೆಸರುಗಳೂ ಹೊರಬೀಳುತ್ತವೋ ನೋಡಬೇಕೆಂದು ಜನರು ಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಯುನೈಟೆಡ್ ಸ್ಟೇಟ್ಸಿನಲ್ಲಿ ಪ್ರವಾಹದ ಅನಾಹುತ.

ಅಮೇರಿಕೆಯ ಯುನೈಟೆಡ್ ಸ್ಟೇಟ್ಸಿಗೆ ಸೇರಿದ ಅಲಬಾಮಾ ಎಂಬಲ್ಲಿ ಪ್ರಚಂಡ ಮಳೆ ಸುರಿದುದರಿಂದ ನದಿ ಪ್ರವಾಹವು ಮಿತಿಮೀರಿ ಬಂದು ಜಾರ್ಜಿಯಾದಲ್ಲಿ ಎರಡು ರೈಲುಗಳು ಕೊಚ್ಚಿಹೋದುವು; ನಾಲ್ಕು ಗ್ರಾಮಗಳು ನೀರಿನಲ್ಲಿ ಮುಳುಗಿದುವು. ಇನ್ನೊಂದು ವೇಳೆ 24 ಗಂಟೆ ಒಂದೇ ಸಮನಾಗಿ ಮಳೆ ಸುರಿದಿತು. ಮಿಸಿಸುಪಿ ನದಿಯನ್ನು ಕಾಪಾಡಲು ಸಮರ್ಥರಾದ ಇಂಜನಿಯರುಗಳು ನಿಯಮಿಸಲ್ಪಟ್ಟಿರುವರು. ಅದರ ನೆರೆ ಭೂಮಿಯಲ್ಲಿ ಪ್ರತಿದಿನವೂ 30 ಅಡಿ ನೀರು ಹರಿಯುತ್ತಿದೆ. ಊರಿನಲ್ಲಿ ಅನೇಕ ಮಾರ್ಗಗಳು ನೀರಿನಲ್ಲಿ ಮುಳುಗಿ ಹೋಗಿವೆ. ಅಲಬಾಮಾ, ಜಾರ್ಜಿಯಾ, ನೆಬ್ರಾಸ್ಕ, ಏಮೆವಾ, ಇಲ್ಲಿನೋಯ ಗ್ರಾಮಗಳಲ್ಲಿ ಮಳೆಯು ವಿಪರೀತವಾಗಿ ಸುರಿದುದರಿಂದ ನದಿಗಳಲ್ಲಿ ವಿನಾಶಕರ ಪ್ರವಾಹ ಬಂದಿತು. ಅಲಬಾಮಾಕ್ಕೆ ಎಲ್ಲಕ್ಕಿಂತಲೂ ವಿಶೇಷ ನಷ್ಟವಾಗಿದೆ. ಪ್ರಾಯಶಃ ಪಟ್ಟಣಗಳು ನೀರಿನಲ್ಲಿ ಮುಳುಗಿ ಹೋಗಿರಬಹುದು. ಪ್ಲೊವೇಟ್ ಬ್ರಿಟನ್ನಿನಲ್ಲಿ 10,000 ಮಂದಿ ಆಹಾರವಿಲ್ಲದೆ ಪೇಚಾಡುತ್ತಿರುವರು. ಎಲ್ಬಾದಲ್ಲಿ ತಾ|| 16 ರ ದಿವಸ ಉತ್ತರ ಪ್ರತ್ಯುತ್ತರ ನಡೆಯಲವಕಾಶವಿಲ್ಲದಿದ್ದುದರಿಂದ 4000 ಜನರು ಅಸಹಾಯ ಸ್ಥಿತಿಯಲ್ಲಿದ್ದರು. ಸತ್ತುಹೋದವರನ್ನೂ, ಕ್ಷತಗಾತ್ರರಾಗಿದ್ದವರನ್ನೂ ಎಣಿಸಲಿಕ್ಕೆ ಅವಕಾಶವಿರಲಿಲ್ಲ. ಆಕಾಶಯಾನಗಳು ಆಹಾರ ಪದಾರ್ಥಗಳನ್ನು ಹೊರಗಿನಿಂದ ಸಾಗಿಸಿಕೊಂಡು ಬಂದು ಅಂತರಿಕ್ಷದಿಂದಲೇ ಕೆಳಕ್ಕೆಸೆಯುತ್ತಿರುವುವು. ಮತ್ತೆ ಕೆಲವರು ದೋಣಿಗಳಲ್ಲಿ ಜನರನ್ನು ಸಾಗಿಸುತ್ತಿರುವರು. ಎಲ್ಬಾದಲ್ಲಿ ಜನರೆಲ್ಲರೂ ಮನೆಯಮೇಲೆ ಹತ್ತಿದ್ದರಾದರೂ ಅವರಿಗೆ ಅಪಾಯವು ತಪ್ಪಲಿಲ್ಲ. ಕೆಲವರು ಮರಗಳಮೇಲೆ ಹತ್ತಿ ಪ್ರಾಣವನ್ನುಳಿಸಿಕೊಂಡರು. 150 ಮಂದಿ ನೀರಿನಲ್ಲಿ ಮುಳುಗಿಹೋದರು. ಪಾಠಶಾಲೆಯಲ್ಲಿ 350 ಮಕ್ಕಳು ಪ್ರವಾಹದಲ್ಲಿ ಸಿಕ್ಕಿಕೊಂಡುವು. ಹೋಗಿಬರಲು ಅವಕಾಶವಿಲ್ಲದಂತೆ ಪ್ರವಾಹವು ನುಗ್ಗಿಬರುತ್ತಿದೆ ಎಂದು ಒಬ್ಬ ಸ್ತ್ರೀಯು ಪ್ರವಾಹದಲ್ಲೇ ನಿಂತು ಟೆಲಿಫೋನ್ ಮೂಲಕ ಪ್ರಭುತ್ವದವರಿಗೆ ತಿಳಿಸಿದಳು. ನಗರವೆಲ್ಲವೂ ನೀರಿನಲ್ಲಿ ಮುಳುಗಿಹೋಗಿದೆ.

ವರ್ತಮಾನಸಂಗ್ರಹ

ಕಳೆದ ಮೂರು ತಿಂಗಳಲ್ಲಿ 10 ಮಂದಿ ಬ್ರಿಟಿಷ್ ಪಾರ್ಲಿಮೆಂಟು ಸಭ್ಯರು ಗತಿಸಿದರು.

ಬಲ್ಗೇರಿಯಾದ ಹಿಂದಿನ ರಾಜರು ಪ್ರಚ್ಛನ್ನವೇಷದಲ್ಲಿ ಸಂಚರಿಸುತ್ತ ಪೂರ್ವ ಆಫ್ರಿಕೆಯನ್ನು ನೋಡಿಕೊಂಡು ತಾ|| 15 ರಲ್ಲಿ ನೆಯರೋಬಿಯನ್ನು ತಲ್ಪಿದರು.

ಏಪ್ರಿಲ್ಲಿನಿಂದ ಬಾಗ್ದಾದಿಗೆ ಆಕಾಶವಿಮಾನದಲ್ಲಿ ಅಂಚೆಯನ್ನು ಸಾಗಿಸಲು ಪರ್ಷಿಯಾ ಪ್ರಭುತ್ವದವರು ಇರಾಕು ಪ್ರಭುತ್ವದವರೊಡನೆ ಒಡಂಬಡಿಕೆಯನ್ನು ಮಾಡಿಕೊಂಡಿರುವರು.

ಚೀನಾ ರಾಜ್ಯದಲ್ಲಿ ಮೂರು ರಾಷ್ಟ್ರದ 16000000 ಮಂದಿ ಕ್ಷಾಮದದೆಸೆಯಿಂದ ದೇಶಭ್ರಷ್ಟರಾಗಿ ಹೋಗಿರುತ್ತಾರೆಂದು ಪ್ರಜಾರೋಗ್ಯ ಮಂತ್ರಿಯು ತಿಳಿಸಿರುತ್ತಾರೆ.

ಅಖಿಲಭಾರತ ಒಂದು ಮಹಾಸಭಾ ಸಮಾವೇಶವು ಇದೇ ತಾ|| 20 ರಿಂದ 31 ರ ವರೆಗೆ ಸೂರತಿನಲ್ಲಿ ಜರುಗುವುರು. ಈ ಸಭೆಗೆ ರಾಮಾನಂದ ಚಟರ್ಜಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಸ್ವೀಡನ್ ರಾಜಕುಮಾರ್ತಿಯ ವಿವಾಹಕ್ಕೆ ಹೂವನ್ನು ತರಲು ಮಂಜಿನ ಅವಾಂತರದಿಂದ ಸಮುದ್ರದ ಮೇಲೆ ಪ್ರಯಾಣಮಾಡಲಿಕ್ಕೆ ಅವಕಾಶವಿಲ್ಲವಾಗಿ ಆಕಾಶಯಾನದ ಮೂಲಕ ತರಿಸಲ್ಪಟ್ಟಿತು.

ಭರತಖಂಡದ ಈಸ್ಟ್ ಇಂಡಿಯನ್ ಗ್ರೇಟ್ ಇಂಡಿಯನ್ ಪೆನಿನ್ಸುಲರ್ ರೈಲ್ವೆಗಳಿಗೆ ಬೇಕಾದ ಇಂಜನ್ನುಗಳನ್ನು ನಿರ್ಮಿಸಿ ಒದಗಿಸಲು ಲಂಡನ್ನಿನಲ್ಲಿರುವ ಸರ್ ಆರಂಸ್ಟ್ರಾಂಗ್ ವಿತ್ತರ್ತ್ ಕಂಪೆನಿಯವರಿಗೆ ಅಪ್ಪಣೆಮಾಡಲ್ಪಟ್ಟಿದೆ.

ರಾಜಾಪಾಪಿ ಕಾಲೇಜಿಗೆ ಸೇರಿದ ಹೈಸ್ಕೂಲಿನ ವಿದ್ಯಾರ್ಥಿಗಳು ಸ್ವರಾಜ್ಯಚಿಹ್ನೆಯಾದ ಗಾಂಧಿ ಟೋಪ್ಪಿಗೆಯನ್ನು ಧರಿಸಿಕೊಂಡು ಸ್ಕೂಲಿಗೆ ಬರಕೂಡದೆಂದು ಹೆಡ್ಮಾಸ್ಟರು ಆಜ್ಞಾಮಾಡಿದುದರ ಮೇಲೆ ವಿದ್ಯಾರ್ಥಿಗಳು ಸ್ಕೂಲಿನಿಂದ ಹೊರಗಡೆ ಬಂದು ಒಂದು ದೊಡ್ಡಸಭೆಯನ್ನು ಕೂಡಿಸಿ ಹೆಡ್ಮಾಸ್ಟರ ಆಜ್ಞೆಯನ್ನು ನಿಷೇಧಿಸಿ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು.

ಇದೇ ತಾ|| 17 ರಲ್ಲಿ ಪಾಟ್ನಾ, ಅಲಹಾಬಾದು, ಕರಾಚಿ, ಬೊಂಬಾಯಿ, ನಾಗಪುರ, ಲಕ್ನೋ, ಕಾನ್ಪೂರು, ಸಿಂಧು, ಹೈದರಾಬಾದು, ಧಾರವಾಡ ಮೊದಲಾದ ಸ್ಥಳಗಳಲ್ಲಿ ಬಹಿರಂಗ ಸಭೆಗಳು ಸೇರಿ ಖದ್ದರ್ ವಸ್ತ್ರ ಸ್ವೀಕಾರ ವಿದೇಶ ವಸ್ತ್ರ ಬಹಿಷ್ಕಾರ ವಿಚಾರವಾಗಿ ಆವೇಶಪೂರ್ವಕ ಭಾಷಣಗಳು ನಡೆದು ವಿದೇಶ ವಸ್ತ್ರಗಳು ರಾಸಿ ರಾಸಿಯಾಗಿ ಹಾಕಲ್ಪಟ್ಟು ಸುಡಲ್ಪಟ್ಟುವು. ವಾಲಂಟಿಯರುಗಳು ಮನೆ ಮನೆಗೂ ಖದ್ದರ್ ವಸ್ತ್ರಗಳನ್ನು ತೆಗೆದುಕೊಂಡು ಹೋಗಿ ವಿಕ್ರಯಿಸಿದರು.

ಕಾನ್ಸ್ಟಾಂಟಿನೋಪಲ್ಲಿನಲ್ಲಿರುವ ಸೆಂಟ್‌ಸೋಫಿಯಾ ಮಸೀದಿಯು ಎಲ್ಲ ಕಾಲದಲ್ಲೂ ಪುಣಗಿನಂತೆ ಘಮಘಮಿಸುತ್ತಿರುವುದು. ಈ ಮಸೀದಿಯು 9 ನೇ ಶತಮಾನದಲ್ಲಿ ಕಟ್ಟಲ್ಪಟ್ಟಿತು. ಈರೀತಿ ಘಮಘಮಿಸಲು ವಾಸನಾದ್ರವ್ಯವೇನೂ ಅದರಲ್ಲಿಡಲ್ಪಟ್ಟಿಲ್ಲವಾದುದರಿಂದ ಜನರಿಗೆ ಪರಮಾಶ್ಚರ್ಯವುಂಟಾಗಿ ಅದರ ಕಾರಣವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ, ಕಟ್ಟಡದ ಕಲ್ಲು ಇಟಿಗೆ ಗಾರೆ ಮೊದಲಾದ ಪದಾರ್ಥಗಳೆಲ್ಲ ಪುಣಗು ಮಿಶ್ರಮಾಡಲ್ಪಟ್ಟು ಕಟ್ಟಲ್ಪಟ್ಟಿರುವುದಾಗಿ ತಿಳಿಯಬಂದಿದೆ.

ಆಯವ್ಯಯ ಪತ್ರದಲ್ಲಿ ಆದಾಯವು ಕಡಿಮೆಯಾಗಿರುವುದರಿಂದ ಅದನ್ನು ಸರಿಪಡಿಸಲು ಹೊಸ ಕಂದಾಯವನ್ನು ವಿಧಿಸಬೇಕೆಂದು ರಿಚಿಸ್ಟಾಗಿನಲ್ಲಿ ಪ್ರಯತ್ನ ನಡೆಯುತ್ತಿದೆ. ಪ್ರತಿ ಕಕ್ಷಿಗಳು ಈ ಆರ್ಥಿಕ ಲೆಕ್ಕವನ್ನೊಪ್ಪಿಕೊಳ್ಳಬೇಕೆಂದೂ ಹಾಗೆ ಮಾಡದಿದ್ದರೆ ಪ್ರಕೃತದಲ್ಲಿ ಜರೂರಾಗಿ ಬೇಕಾಗಿರುವ ಹಣವನ್ನೊದಗಿಸಲು ಹೊಸ ಕಂದಾಯವನ್ನು ವಿಧಿಸಿದ ವಿನಾ ಬೇರೊಂದುಪಾಯವಿಲ್ಲದಿರುವ ಪ್ರಯುಕ್ತ ತಾವೆಲ್ಲರೂ ಕೆಲಸವನ್ನು ಬಿಟ್ಟುಬಿಡಬೇಕಾಗುತ್ತದೆಂದೂ ಆರ್ಥಿಕ ಮಂತ್ರಿಯು ತಿಳಿಸಿರುವರು.

ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ಸೆಂಟರು.

ಲೋವರ್‌ಸೆಂಡರಿ ಪರೀಕ್ಷೆಗಾಗಿ ರಾಜಧಾನಿಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಮಾಮೂಲ್ ಮೇರೆ ಕಿಲ್ಲೆಮೊಹಲ್ಲ ಗುರುಕಾರ್ ದೇವಣ್ಣನವರ ಬೀದಿಯಲ್ಲಿರುವ ಬಕ್ಷಿ ಸಿ. ಸೋಮಶೇಖರಯ್ಯನವರ ಮನೆಯಲ್ಲಿ ಊಟಕ್ಕೂ ವಾಸಕ್ಕೂ ಏರ್ಪಾಡು ಮಾಡಿರುತ್ತೆ.

ಬಕ್ಷಿ ಸಿ. ಸೋಮಶೇಖರಯ್ಯ.

ಮಾಗಡಿ ಸೆಂಟರು.

ಮಾಗಡಿ ಸೆಂಟರಿಗೆ ಬರುವ ವೀರಶೈವ ವಿದ್ಯಾರ್ಥಿಗಳ ಊಟಕ್ಕು ಮತ್ತು ವಾಸಕ್ಕು ಅತ್ತಿಬೆಲೆ ವೀರಪ್ಪನವರ ಮಕ್ಕಳು ಎ. ಆರ್. ರುದ್ರಪ್ಪನವರ ಮನೆಯಲ್ಲಿ ಸ್ಥಳಏರ್ಪಾಡು ಮಾಡಿರುತ್ತೆ. ಆದ್ದರಿಂದ ಬರತಕ್ಕ ವೀರಶೈವವಿದ್ಯಾರ್ಥಿಗಳು 2 ದಿವಸ ಮುಂಚಿತವಾಗಿ ಮಾಗಡಿಯಲ್ಲಿರುವ ಎ. ಆರ್. ರುದ್ರಪ್ಪನವರಿಗೆ ಬರೆದು ತಿಳಿಸತಕ್ಕದ್ದು. ಕಾರ್ಯದರ್ಶಿ

ಹೊನ್ನಸಿದ್ದಯ್ಯ, ಪಟೇಲ್, ಹರ್ತಿ, ಮಾಗಡಿ ತಾ||

ತುಮಕೂರು ಸೆಂಟರು.

ಈವರ್ಷ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ತುಮಕೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳ ವಾಸಕ್ಕೂ ಉಚಿತಭೋಜನಕ್ಕೂ ಶ್ರೀ ಜಗದ್ಗುರು ಜಯದೇವ ಹಾಸ್ಟಲಿನಲ್ಲಿ ಏರ್ಪಾಡು ಮಾಡಲಾಗಿದೆ. ಬರತಕ್ಕ ವಿದ್ಯಾರ್ಥಿಗಳು ಮುಂಚಿತವಾಗಿ ಹಾಸ್ಟೆಲ್ ಸೆಕ್ರೆಟರಿಯವರಿಗೆ ತಿಳಿಸಬೇಕಲ್ಲದೆ ಜತೆಯಲ್ಲಿ ಕಂಬಿಗೆ ಹಾಸಿಗೆಗಳನ್ನು ತರಬೇಕೆಂಬದಾಗಿ ಸೂಚಿಸಲಾಗಿದೆ. B. Nanjappa, President.

ದೊಡ್ಡಬಳ್ಳಾಪುರ ಸೆಂಟರು.

1929 ನೇ ಏಪ್ರಿಲ್ ಮಾಹೆಯಲ್ಲಿ ನಡೆಯತಕ್ಕ ಲೋವರ್‌ಸೆಕೆಂಡರಿ ಪರೀಕ್ಷೆಗಾಗಿ ದೊಡ್ಡಬಳ್ಳಾಪುರದ ಸೆಂಟರಿಗೆ ಬರತಕ್ಕ ವೀರಶೈವಬ್ರಾಹ್ಮಣ ವಿದ್ಯಾರ್ಥಿಗಳಿಗೂ ಅವರ ಸಂಗಡ ಬರತಕ್ಕ ಉಪಾಧ್ಯಾಯರುಗಳಿಗೂ ಪದ್ಧತಿಯಪ್ರಕಾರ ನಮ್ಮ ಮಹಂತಿನ ಮಠದಲ್ಲಿ ಊಟಕ್ಕೂ ವಾಸಕ್ಕೂ ಏರ್ಪಡಿಸುತ್ತೇವೆ. ಆದ್ದರಿಂದ ಬರತಕ್ಕ ವಿದ್ಯಾರ್ಥಿಗಳು 3 ದಿವಸ ಮುಂಚಿತವಾಗಿ ನಮಗೆ ಬರೆದು ತಿಳಿಸಬೇಕು. ಡಿ. ಎ ಬಸವರಾಧ್ಯ,

ಮಹಂತಪಾದರು, ದೊಡ್ಡಬಳ್ಳಾಪುರ.

ದಾವಣಗೆರೆ ಸೆಂಟರು.

ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ಎಲ್ಲ ವೀರಶೈವ ಮತ್ತು ಇತರ ವಿದ್ಯಾರ್ಥಿಗಳಿಗೆ ಯಥಾಪ್ರಕಾರ ಈ ವರ್ಷವೂ ಸಾಧುವೀರಶೈವ ಹಾಸ್ಟಲಿನಲ್ಲಿ ಭೋಜನ ಮತ್ತು ವಸತಿಗೆ ಏರ್ಪಡಿಸಲ್ಪಟ್ಟಿದೆ. ವೀರಶೈವರಲ್ಲಿ ಭೋಜನಮಾಡದೆ ಇರತಕ್ಕ ವಿದ್ಯಾರ್ಥಿಗಳಿಗೆ ಅಕ್ಕಿ ಪಡಿ ಸಹ ಕೊಡಲ್ಪಡುವುದು. ಬರತಕ್ಕವರು ಈ ಕೆಳಗಿನ ವಿಳಾಸಕ್ಕೆ ಒಂದು ದಿವಸ ಮುಂಚಿತವಾಗಿಯೇ ಬರೆಯತಕ್ಕದ್ದು. ಮಾನಿ ಉಜ್ಜಪ್ಪ,

ಸಾಧುವೀರಶೈವ ಹಾಸ್ಟಲ್, ದಾವಣಗೆರೆ.

ಧಾರವಾಡ ಸೆಂಟರು.

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಫ್ರೀ ಬೋರ್ಡಿಂಗು ಹಾವೇರಿಪೇಟೆ, ಧಾರವಾಡ. ಈ ಸಂಸ್ಥೆಯಿಂದ—ಈ ವರ್ಷ ಧಾರವಾಡ ಸೆಂಟರಿಗೆ ಮೆಟ್ರಿಕ್ ಹಾಗು ಮುಲ್ಕಿ ಪರೀಕ್ಷೆಗೆ ಬರತಕ್ಕ ಬಡವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ.....

ಪ್ರತಿ ವರ್ಷದಂತೆ ಈ ವರ್ಷವಾದರೂ ಬೋರ್ಡಿಂಗಿನಲ್ಲಿ ಊಟದ ಅನುಕೂಲ ಮಾಡಲ್ಪಡುತ್ತದೆ. ಆದ್ದರಿಂದ ಪರೀಕ್ಷೆಗೆ ಬರತಕ್ಕವರು ಮುಂಚಿತವಾಗಿ ಅರ್ಜಿ ಬರೆದುಕೊಳ್ಳತಕ್ಕದು ಮತ್ತು ಬರುವಾಗ್ಗೆ ಸಂಗಡ ಕಂಬಳಿ ಹಾಸಿಗೆ ವಗೈರೆ ತರತಕ್ಕದು.

ಚಿತ್ರದುರ್ಗ ಸೆಂಟರು.

ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಚಿತ್ರದುರ್ಗದ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ವೀರಶೈವರಲ್ಲಿ ಊಟಮಾಡತಕ್ಕ ಇತರ ಜಾತಿಯ ವಿದ್ಯಾರ್ಥಿಗಳಿಗೂ, ಶ್ರೀ ಜಗದ್ಗುರು ಜಯದೇವ ವೀರಶೈವ ಹಾಸ್ಟಲಿನಲ್ಲಿ ಪದ್ಧತಿಯಂತೆ ಶ್ರೀ ಮಹಾಸ್ವಾಮಿಗಳವರ ಆಶೀರ್ವಾದ ಬಲದಿಂದ ಭೋಜನದ ಏರ್ಪಾಟು ಮಾಡಲ್ಪಟ್ಟಿರುತ್ತೆ. ಬರತಕ್ಕ ವಿದ್ಯಾರ್ಥಿಗಳು ಅವಶ್ಯವಾಗಿ ಹಾಸಿಗೆ, ಕಂಬಳಿಗಳನ್ನು ತೆಗೆದುಕೊಂಡು ಬರಬೇಕಾಗಿ ಸೂಚಿಸಿದೆ.

Sati Halappa,

ಸೆಕ್ರಟರಿ,

ಶ್ರೀ ಜಗದ್ಗುರು ಜಯದೇವ ಹಾಸ್ಟಲ್.

ದಾವಣಗೆರೆ ಸೆಂಟರು.

1929 ನೇ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ದಾವಣಗೆರೆ ಸೆಂಟರಿಗೆ ಬರುವ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಮತ್ತು ಮಾಸ್ತರುಗಳ ಭೋಜನಕ್ಕೂ, ವಾಸಕ್ಕೂ ಪದ್ಧತಿ ಪ್ರಕಾರ ಶ್ರೀ ವಿರಕ್ತಮಠದಲ್ಲಿ ಏರ್ಪಡಿಸಿರುತ್ತೆ. ಬರತಕ್ಕವರು ಮೂರು ದಿವಸ ಮುಂಚಿತವಾಗಿ ತಿಳಿಸುವದಲ್ಲದೆ ಪ್ರತಿಯೊಬ್ಬರೂ ಹಾಸಿಗೆ, ಕಂಬಳಿಗಳನ್ನು ತಪ್ಪದೆ ತರಬೇಕಾಗಿ ಸೂಚಿಸಿದೆ.

ಎಚ್. ಎಂ. ಸಿದ್ಧರಾಮಯ್ಯ ಬಿ.ಎ. ಎಲ್‌ಎಲ್.ಬಿ.,

ಅಡ್ವೊಕೇಟ್, ಸೆಕ್ರೆಟರಿ,

ವೀರಶೈವ ವಿದ್ಯಾವರ್ಧಕ ಫಂಡ್ ಸಂಘ, ದಾವಣಗೆರೆ.

ಸ್ವೀಕಾರ.

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದ ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

(1) ನಂಜನಗೂಡು ತಾ|| ಇಗ್ಗಿಗುಡ್ಡದ ಮೇಲೆ ನೂತನವಾಗಿ ಕಟ್ಟಿರುವ ದೇವನೂರು ಶ್ರೀ ಗುರುಮಳ್ಳೇಶ್ವರಸ್ವಾಮಿಯವರ ಬ್ರಾಂಚ್ ಮಠದ ಲಿಂಗಮುದ್ರಾಸ್ಥಾಪನೆ ಶಿವದೀಕ್ಷಾಸಂಸ್ಕಾರಮಹೋತ್ಸವದಲ್ಲಿ ನಂಜನಗೂಡು ಮ|| ಹೆಚ್. ಜಿ. ಮಹದೇವಪ್ಪನವರ ಮೂಲಕ 2 ರೂ. (2) ಮಂಡ್ಯ ತಾ|| ಗುತ್ತಲು ಮಠದಲ್ಲಿ ಮೈಸೂರು ಮೆಡಿಕಲ್‌ಷಾಪ್ ಮ|| ಸಿದ್ಧಲಿಂಗಪ್ಪನವರ ತಮ್ಮಂದಿರು ಮ|| ಗುರುಸಿದ್ಧಪ್ಪನವರ ವಿವಾಹಮಹೋತ್ಸವದಲ್ಲಿ ಮೈಸೂರು ಕು|| ವೈ. ಶಿವಪ್ಪನವರ ಮೂಲಕ 1 ರೂಪಾಯಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ದೇವಸ್ಥಾನಜೀರ್ಣೋದ್ಧಾರ.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಉಕ್ಕಲಗೆರೆಯಲ್ಲಿರುವ ಮ|| ಯಜಮಾನ್ ಮಹಂತದೇವರ ಮರಿದೇವರ ಮಕ್ಕಳು ಮಹಂತಪ್ಪನವರು ಈ ಊರಿನ ಮಹಾದೇಶ್ವರ ದೇವಸ್ಥಾನವು ಜೀರ್ಣವಾಗಿದ್ದುದನ್ನು 5.6 ಸಾವಿರ ರೂಪಾಯಿಗಳನ್ನು ವ್ಯಯಿಸಿ ಕಲ್ಲುಕಟ್ಟಡದಿಂದ ಉದ್ಧಾರಮಾಡಿಸಿದ್ದಲ್ಲದೆ ಕಳೆದ ಫೆಬ್ರವರಿ ತಾ|| 28 ರಲ್ಲಿ ದೇವಸ್ಥಾನದ ಪ್ರವೇಶೋತ್ಸವವನ್ನೂ ಸ್ವಾಮಿಗೆ ಕುಂಭಾಭಿಷೇಕವನ್ನೂ ಮಹಾಗಣಾರಾಧನೆಯನ್ನೂ ರಾತ್ರಿ ದೇವರ ಉತ್ಸವವನ್ನೂ ಬಹಳ ಭಕ್ತಿಯಿಂದಲೂ ಔದಾರ್ಯದಿಂದಲೂ ಮಾಡಿಸಿ ಸ್ವಾಮಿಕೃಪೆಗೂ ಜನರ ಮೆಚ್ಚುಗೆಗೂ ಪಾತ್ರರಾದರೆಂದು ತಿಳಿಸಲು ಸಂತೋಷವಾಗುತ್ತದೆ. ಈ ದೈವಭಕ್ತರಿಗೆ ಮಹಾದೇಶ್ವರನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

ಮಧುಗಿರಿ ತಾಲ್ಲೂಕು ಚಿಕ್ಕೇನಹಳ್ಳಿಯ ಅವ್ಯವಸ್ಥೆ.

ಅಯ್ಯಾ ಈ ಗ್ರಾಮವು ಸುಮಾರು 120 ಮನೆಗಳುಳ್ಳದ್ದಾಗಿಯೂ 600 ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ. ಈ ಗ್ರಾಮದ ಗ್ರಾಮಪಂಚಾಯತಿ ವಿಚಾರವು, ಕಾರಣಾಂತರದಿಂದ ಈವರೆಗೂ ವಿಮರ್ಶೆಯಾಗದಿದ್ದು ಈಗ ವಿಮರ್ಶೆಯಾಗಿದೆ ಎಂದು ಕೇಳುತ್ತೇವೆ. ಈ ಗ್ರಾಮದ ಪಟೇಲ್ ಶಾನುಭೋಗರು ಪರಸ್ಥಳೀಕರಾದ ಪ್ರಯುಕ್ತ ಇವರಿಂದ ಗ್ರಾಮಾಭಿವೃದ್ಧಿಯೆಂದಿಗೂ ಆಗುವಹಾಗಿಲ್ಲ. ಸಚ್ಛೀಲರೂ ಜನಾನುರಾಗಿಗಳೂ ಆಗಿರುವ ಈ ಗ್ರಾಮದ ಮ|| ಎಸ್. ಬಸಪ್ಪನವರನ್ನು ಗ್ರಾಮಪಂಚಾಯತಿ ಛೇರ್ಮನ್ನರನ್ನಾಗಿ ಚುನಾಯಿಸುವ ವದಂತಿಯಿದೆ. ನಮ್ಮ ತಾಲ್ಲೂಕು ಅಮಲ್ದಾರ್ ಸಾಹೇಬರವರು ಸದರಿ ಎಸ್. ಬಸಪ್ಪನವರನ್ನೇ ಮೊಕರರ್ಮಾಡಿಸಿಕೊಟ್ಟು ಗ್ರಾಮಪಂಚಾಯತಿಯ ಆಡಳಿತವನ್ನು ಜಾರಿಗೆ ತಂದು ಗ್ರಾಮಾಭಿವೃದ್ಧಿಗೆ ಅನುಕೂಲಪಡಿಸಿಕೊಡುತ್ತಾರೆಂದು ಪೂರ್ಣ ನಂಬಿಕೆಯಿದೆ. ಹಾಲಿ ಪಟೇಲರಾಗಿ ನಿಯಮಿಸಲ್ಪಟ್ಟಿರುವ ದೊಡ್ಡ ಚಿಕ್ಕಣ್ಣನವರಾದರೂ ಗ್ರಾಮಾಭಿಮಾನ ವಹಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ. ಈ ಗ್ರಾಮದಲ್ಲಿ 10 ವರ್ಷಗಳಿಂದಲೂ ಒಂದು ಗ. ಪ್ರೈ. ಬಾಯ್ಸ್ ಸ್ಕೂಲ್ ಇದೆ. ಸ್ಕೂಲಿನಲ್ಲಿ ಇಬ್ಬರು ಮಾಸ್ತರುಗಳಿದ್ದಾರೆ. ತುಂಬಾ ಅಭಿವೃದ್ಧಿಯಲ್ಲಿದೆ. ಒಂದು ಸ್ಟೂಲು, ಒಂದು ಪೆಟ್ಟಿಗೆ, ಎರಡುಮಣೆಹೊರತಾಗಿ ಸ್ಕೂಲ್ ಉಪಯೋಗದ ಸಾಮಾನುಗಳಿಲ್ಲ. ಮಧುಗಿರಿ ರೇಂಜ್ ಅ|| ಇನ್ಸ್‌ಪೆಕ್ಟರ್ ಸಾಹೇಬರವರು ಹೆಚ್ಚು ನಿಗಾ ವಹಿಸಿ ಆದಷ್ಟು ಜಾಗ್ರತೆ ಸ್ಕೂಲ್ ಉಪಯೋಗದ ಸಾಮಾನುಗಳನ್ನು ಕೊಡಿಸಿಕೊಟ್ಟು ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವರೆಂದು ನಂಬಿದೆ. ಸುಮಾರು 20 ವರ್ಷಗಳಿಂದಲೂ ಒಂದೇ ಸಮನಾಗಿ ಒದಗುತ್ತಿರುವ ದುರ್ಭಿಕ್ಷ ಕಾಲದ ದೆಸೆಯಿಂದ ಬೆಳೆ ಸರಿಯಾಗಿ ರೈತರ ಕೈಗೆ ಸಿಕ್ಕದೆ ಜೀವನಕ್ಕಾಗಿ ಈ ಹಳ್ಳಿಯಲ್ಲಿರುವ ರೈತರಲ್ಲಿ ಮುಕ್ಕಾಲುಪಾಲು ಜನಗಳು ಈ ಗ್ರಾಮದಲ್ಲಿರುವ ನಿಷ್ಕರುಣಿಗಳಾದ ಸಾಹುಕಾರರಲ್ಲಿ ಸಾಲಮಾಡಿ ತಮ್ಮ ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಆಧಾರಮಾಡಿಯೂ ಕ್ರಯಮಾಡಿಯೂ ಇದ್ದಾರೆ. ಇವರು ವಿಧಿಸುವ ದುಬಾರಿ ಬಡ್ಡಿಯ ದೆಸೆಯಿಂದ ಈಗ್ಗೆ 10 ವರ್ಷಗಳ ಕೆಳಗೆ ಸುಮಾರು 500 ರೂಪಾಯಿ ಬಂಡವಾಳದಿಂದ ಆರಂಭವಾದ ಇವರ ಲೇವಾದೇವಿಯು ಈಗ ಇಪ್ಪತ್ತು ಸಾವಿರದವರೆಗೂ ಹೆಚ್ಚಿರುತ್ತದೆ.

ಬಡರೈತ.

ಅಥಣಿಯೆಲ್ಲಾದ ಶಿವರಾತ್ರಿ ಮಹೋತ್ಸವ.

ಪ್ರತಿ ವರ್ಷದಂತೆ ಮಾಘ 14 ರವಿವಾರ ಪ್ರಾತಃಕಾಲಕ್ಕೆ ಶ್ರೀ ಶಿವಯೋಗಿಗಳವರ ಸಮಾಧಿ ಕ್ಷೇತ್ರದಲ್ಲಿ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಯಾಗಿ 8 ಘಂಟೆಗೆ ಗಚ್ಚಿನಮಠದಿಂದ ಶ್ರೀ ತಪಸ್ವಿಗಳ ಭಾವಚಿತ್ರದ ಉತ್ಸವವು ಅಲಂಕೃತವಾದ ಅಡ್ಡಪಲ್ಲಕ್ಕಿಯಲ್ಲಿರಿಸಲ್ಪಟ್ಟು ವ್ಯಾಸಭುಜ ಸಮೇತವಾದ ನಂದಿಧ್ವಜ ಛತ್ರಚಾಮರ ಮೊದಲಾದ ಸಮಸ್ತ ಬಿರುದಾವಳಿಗಳಿಂದಲೂ, ಭಜನೆಗಳಿಂದಲೂ, ವಾದ್ಯವೈಭವಗಳಿಂದಲೂ ಶೃಂಗರಿಸಲ್ಪಟ್ಟು ಮುಖ್ಯ ಬೀದಿಗಳಲ್ಲಿ ಭಕ್ತರು ಭಕ್ತಿಯಿಂದ ಅರ್ಪಿಸುವ ಕಾಯಿ ಕರ್ಪೂರಾರತಿಗಳನ್ನು ಸ್ವೀಕರಿಸುತ್ತ 11 ಘಂಟೆಗೆ ಗಚ್ಚಿನಮಠವನ್ನು ಸೇರಿತು. ಅನಂತರ 12 ಘಂಟೆಯಿಂದ ಯಾವತ್ತು ಸ್ಥಳ ಪರಸ್ಥಳದ ಭಕ್ತಮಾಹೇಶ್ವರರಿಗೆ ವಿಧ್ಯುಕ್ತಷೋಡಶೋಪಚಾರ ಪೂಜೆಯಾಗಿ ಫಲಹಾರಾದಿ ಕಾರ್ಯವು ಸಾಯಂಕಾಲದವರೆಗೂ ನಡೆದು ಪುನಃ ರಾತ್ರಿ ಪೂಜಾ ಆದನಂತರ 9 ಘಂಟೆಗೆ ಅಸುಂಡಿ ಕೀರ್ತನಕಾರ ಚೆನ್ನಯ್ಯನವರು ಶಿವಭಕ್ತಿಯ ಮೇಲೆ 11 ಘಂಟೆಯವರೆಗೆ ಕೀರ್ತನಶ್ರವಣವನ್ನು ಮಾಡಿಸಿದನಂತರ ಇಲ್ಲಿಯ ಚಿಕ್ಕಬಾಲಕರೂ, ಪೇಟೆಯ ಎಲ್ಲಾ ಮತದ ತರುಣ ವೃದ್ಧ ಜನಗಳೂ ಕೂಡಿಕೊಂಡು ರಾತ್ರಿಯಲ್ಲಿ ಶಿವಭಜನೆಯಿಂದಲೂ, ಪುರಾತನರ ತತ್ವಪದಗಳಿಂದಲೂ ಜಾಗರಣೆಯನ್ನು ಮಾಡಿದರು. ಧಾರವಾಡ ಗೋಡಿಕಟ್ಟಿ ಗುರಪ್ಪನವರು 1 ಘಂಟೆವರೆಗೆ ಕೀರ್ತನ ಮಾಡಿದ ಮೇಲೆ ದಾವಣಗೇರಿ ಶ್ರೀ ಮೃತ್ಯುಂಜಯ ಸ್ವಾಮಿಗಳು ಮಧ್ಯ ಮಧ್ಯ ಪುರಾತನರ ಪದ್ಯಗಳನ್ನು ಮನೋಹರವಾಗಿ ಅಂದು ಜನಗಳನ್ನು ಭಕ್ತಿರಸದಲ್ಲಿ ಮುಳುಗಿಸುತ್ತಿದ್ದು ಬೆಳಗಿನ 7 ಘಂಟೆಗೆ ಶ್ರೀಗಳ ಭಾಷಣ ಹಾಗು ಇಲ್ಲಿಯ ಪಾಠಶಾಲಾಧ್ಯಕ್ಷ ಪಂಡಿತರಾದಂಥ ಬಸವಲಿಂಗಶಾಸ್ತ್ರಿಗಳವರು ಎಲ್ಲಾ ವಿಷಯಗಳ ಸಮಾರೋಪಣದೊಡನೆ ಶಿವರಾತ್ರಿ ವಿಷಯದ ಮೇಲೆ ಪ್ರತಿಪಾದಿಸಿ ಶ್ರೀಗಳ ಜಯಘೋಷದಿಂದ ಕಾರ್ಯಸಮಾಪ್ತಿ ಮಾಡಿದಮೇಲೆ 5 ದಿವಸದವರೆಗೂ ಮಠದಲ್ಲಿ ದಾಸೋಹ, ಸಾಯಂಕಾಲ 6 ಘಂಟೆಯಿಂದ 8 ಘಂಟೆವರೆಗೆ ಬಾಗಲಕೋಟೆ ಅನುಭವ ವಚನಕಾರರಾದ ಶಿಣಗಿ ಬಸವಲಿಂಗಪ್ಪನವರಿಂದ ಶೂನ್ಯಸಂಪಾದನ ವಚನಶ್ರವಣವು ನಡೆದು ಅನಂತರ ಭಜನಕೀರ್ತನೆ ಹೀಗೆ ಬಹು ಸಂಭ್ರಮದೊಡನೆ ಶ್ರೀ ತಪಸ್ವಿಗಳ ಮಹಿಮೆಯಿಂದ ಶಿವರಾತ್ರಿ ಮಹೋತ್ಸವವು ನಡೆಯಿತು. ಈ ಉತ್ಸವಕ್ಕೆ ದಾವಣಗೇರಿ, ಚಿತ್ರದುರ್ಗ, ಗದಗ, ವಿಜಾಪುರ, ಶಹಾಪುರ, ಚಿಕ್ಕೋಡಿ, ಮುಧೋಳ, ಕೊಲ್ಹಾಪುರ ಮೊದಲಾದ ಸ್ಥಳಗಳಿಂದ. ಅನಂತಭಕ್ತಮಾಹೇಶ್ವರರು ಬಂದಿದ್ದರಲ್ಲದೆ ಬೆಂಗಳೂರು, ತಿಪಟೂರು, ತುಮಕೂರು, ಹಾಗು ಹಾವೇರಿ, ಮಿರಜ್ ಮೊದಲಾದಲ್ಲಿಯ ಅನಂತ ಭಕ್ತರು ಭಕ್ತಿಯಿಂದ ಪ್ರತಿ ವರ್ಷ ಮಹಾಶಿವರಾತ್ರಿಗೆ ಕೊಡುವಂತೆ ಕೊಟ್ಟು ತತ್ಫಲಭಾಗಿಗಳಾದುದಲ್ಲದೆ ಯಾವತ್ತು ವ್ಯವಸ್ಥೆಯನ್ನೂ ಇಲ್ಲಿಯ ಜನರ ಉಪಚಾರವನ್ನೂ ದಕ್ಷತೆಯಿಂದ ಎಂದಿನಂತೆ ಸಾಗಿಸುತ್ತ ಅವರವರ ಮನೋರಥವನ್ನು ಪೂರ್ಣಮಾಡುತ್ತ ತಮ್ಮ ವಿರಕ್ತ ವೈರಾಗ್ಯಾದಿಗಳಿಂದ ಶ್ರೀ ಸಿದ್ಧಲಿಂಗ ಚರಮೂರ್ತಿಗಳು ಮಹಾಸ್ವಾಮಿಗಳು ದಾಸೋಹಂಭಾವದಿಂದ ತಪಸ್ವಿಗಳ ಸ್ಥಾನದಲ್ಲಿದ್ದದ್ದು ನೋಡಿ ಕೃತಾರ್ಥನಾದೆನು.

ಓರ್ವ ಪ್ರತ್ಯಕ್ಷದರ್ಶಿ.

ಕೊಟ್ಟೂರು ಗ್ರಾಮದ ವಿದ್ಯಾ ಪ್ರಾಬಲ್ಯವು.

ಕೊಟ್ಟೂರು ಗ್ರಾಮವು ಪೂರ್ವದಿಂದಲೂ ವ್ಯಾಪಾರ, ಕೈಗಾರಿಕೆ ಕಸಬುಗಳ ಸಂಪತ್ತಿನ ವಿಚಾರದಲ್ಲಿ ಮುಂದುವರಿಯುತ್ತಾ ಬಂದಿರುವುದಾದರೂ ವಿದ್ಯೆ ಅದರಲ್ಲೂ ರಾಜಕೀಯ ವಿದ್ಯೆಯಲ್ಲಿ ಪೂರ್ತಿ ಹೀನಾವಸ್ಥೆಯಲ್ಲಿರುವುದು ಸರ್ವರಿಗೂ ವಿದಿತವಷ್ಟೆ. ಈ ಗ್ರಾಮದಲ್ಲಿ ಆಂಗ್ಲಶಾಲೆಯ ಬೋರ್ಡು ಮಿಡಲ್ ಸ್ಕೂಲು ಬಹಳ ದಿವಸಗಳಿಂದ ಏರ್ಪಾಟು ಆಗಿದ್ದರೂ ಅನೇಕ ಕಾರಣಗಳಿಂದ ಇದಕ್ಕೆ ಉತ್ತೇಜನವಿಲ್ಲದೆ, ನೀರಿನಲ್ಲಿ ಬಿದ್ದು ಪ್ರಾಣರಕ್ಷಣೆಗಾಗಿ ಪೇಚಾಡುತ್ತಲಿರುವ ಒಬ್ಬ ವ್ಯಕ್ತಿಯೋಪಾದಿಯಲ್ಲಿ ಕಳೆಮರಗೊಳ್ಳುತ್ತಾ ಬಂದಿದ್ದಿತು. ಇಂತಹ ದುರ್ಧರವಾದ ಕಷ್ಟವನ್ನು ಪರಿಹರಿಸಲೋಸುಗ ಇಲ್ಲಿಯ ವರ್ತಕ ಮಂಡಳಿಯು ತಂತಮ್ಮ ಅಂಗಡಿಯಲ್ಲಿ ಬರುವ ಮಾಲಿಗೆ 100 ಕ್ಕೆ 1 ಆಣೆ ಧರ್ಮದಾಯವನ್ನು ತಮ್ಮ ಅಂಗಡಿಯಲ್ಲಿ ಏರ್ಪಾಟು ಮಾಡಿಕೊಂಡರು. ಕಾಲಕ್ರಮೇಣ ವಿದ್ಯಾಧರ್ಮದಾಯದ ಫಂಡು ಬಿದಿಗೆ ಚಂದ್ರನೋಪಾದಿಯಲ್ಲಿ ಬೆಳದು ವಿದ್ಯಾಪ್ರಸಾರಕ ಉದ್ದೇಶವನ್ನು ಕಾರ್ಯತಃ ಜರುಗಿಸಲು ಸರಿಯಾದ ಕಾರ್ಯನಿರ್ವಾಹಕ ಮಂಡಳಿಯು ಇದುವರಿವಿಗೂ ಏರ್ಪಾಟು ಆಗದೇ ಇರಲು, ಪ್ರತಿಯೊಬ್ಬರ ಅಂಗಡಿಯಲ್ಲಿ ಅನಾಮತ್ತಿನಲ್ಲಿಡಲ್ಪಡುತ್ತಾ ಬಂದಿತು. ಈ ಶೋಚನೀಯವಾದ ಸ್ಥಿತಿಯನ್ನರಿತು ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ ಪ್ರೆಸಿಡೆಂಟರಾದ ಮ|| ತೊಗರಿ ವೀರಪ್ಪನವರು ಕೊಟ್ಟೂರಿಗೆ ಈ ಕಾರ್ಯನಿಮಿತ್ತವಾಗಿ ಹೋಗಿ, ಸದರಿ ವರ್ತಕರ ವಿದ್ಯಾಧರ್ಮದಾಯದ ಫಂಡನ್ನು ತಮ್ಮ ಸಂಘದ ಇಲಾಖೆಗೆ, ಸದರಿ ವರ್ತಕಮಂಡಳಿಯ ಅನುಮತಿ ಮೇರಿಗೆ ಕೊಟ್ಟೂರು ಮಿಡಲ್ ಸ್ಕೂಲು ಮತ್ತು ಹಾಸ್ಟಲು ವೃದ್ಧಿಯ ವಿನಿಯೋಗಕ್ಕಾಗಿ ಸಂಯುಕ್ತಗೊಳಿಸಿಕೊಂಡರು. ಕಾಲಕ್ರಮೇಣ ಈ ವಿದ್ಯಾಕಾರ್ಯಗಳ ಸಲುವಾಗಿ ಈ ಗ್ರಾಮದಲ್ಲಿ ಕಾರ್ಯನಿರ್ವಾಹಕ ಕಮಿಟಿಯು ಏರ್ಪಟ್ಟೊಡನೆ ಕೂಡಲೇ ಈ ಧರ್ಮದಾಯದ ಫಂಡಿನ ಮೂಲಧನವನ್ನು ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದವರು ಪುನಃ ಹಿಂತಿರುಗಿ ಒಪ್ಪಿಸುವಂತೆ ಏರ್ಪಾಟು ಆಯಿತು. ಈ ವರ್ತಕರಿಂದ ವಸೂಲು ಮಾಡಲ್ಪಟ್ಟ ಧರ್ಮದಾಯದ ಮೊಬಲಗು ರೂ. 657-8-11 ಇರುತ್ತದಲ್ಲದೆ ಇನ್ನೂ ವಸೂಲು ಮಾಡುವದಿರುತ್ತದೆ. ಈ ಪ್ರಕಾರ ವರ್ಷಕ್ಕೆ ಎರಡುಸಾರಿ ಧರ್ಮದಾಯವನ್ನು ವಸೂಲು ಮಾಡಿ ಕೊಟ್ಟೂರು ವರ್ತಕ ಮಂಡಳಿಯ ಅನುಮತಿ ಮೇರಿಗೆ ಕೊಟ್ಟೂರು ವಿದ್ಯಾಭಿವೃದ್ಧಿಗಾಗಿ ಆ ಫಂಡಿನ ಹಣವನ್ನು ವಿನಿಯೋಗ ಮಾಡುವದು ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ ಮೊದಲನೇ ಕರ್ತವ್ಯವಿರುತ್ತದೆ. ಕೊಟ್ಟೂರು ಗ್ರಾಮದ ಸುದ್ದಿ ನಮ್ಮ ಕಿವಿಗೆ ಬಿದ್ದಿರುವದನ್ನು ವಂತೆ ಇನ್ನೊಂದು ಸಂತೋಷಕರವಾದ ಸಂಗತಿ ಏನಂದರೆ—ಶ್ರೀಮದ್ಉಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಜಗದ್ಗುರು ಮರುಳಸಿದ್ಧ ರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಸದರಿ ಮ|| ತೊಗರಿ ವೀರಪ್ಪನವರು ಬಳ್ಳಾರಿ ವಕೀಲರಾದ ವೇ|| ಟಿ. ಹೆಚ್. ಎಂ. ಚಂದ್ರಶೇಖರ ಶಾಸ್ತ್ರಿಗಳು, ಬಿ. ಎ., ಬಿ. ಎಲ್., ವೇ|| ಟಿ. ಹೆಚ್. ಎಂ. ಸದಾಶಿವಯ್ಯನವರು, ಎಂ. ಎ., ಬಿ. ಎಲ್., ಮತ್ತು ಕೊಟ್ಟೂರು ಭದ್ರಶೆಟ್ಟಿ ಅಜ್ಜಪ್ಪನವರು, ಈಶ್ವರಗೌಡರು ಮುಂತಾದ ದೊಡ್ಡಮನುಷ್ಯರ ಬಿನ್ನಹ ಪ್ರಕಾರ ಕೊಟ್ಟೂರಲ್ಲಿ ಊರು ಹೊರಗೆ ಹವಾವಗೈರೆ ವಿಷಯಗಳಿಗೆ ಅನುಕೂಲವಾಗಿರುವ ಬಯಲು ಪ್ರದೇಶದಲ್ಲಿ ತಮ್ಮ ಸ್ವಂತ ಖರ್ಚಿನಿಂದ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿ ಶೀಘ್ರದಲ್ಲಿ ಪ್ರಾರಂಭೋತ್ಸವವನ್ನು ನಡಿಸಲು ವಾಗ್ದಾನಮಾಡಿರುವದು ಸ್ತೋತ್ರಾರ್ಹವಾಗಿರುತ್ತದೆ. ಇದರಂತೆ ಇತರ ಶ್ರೀಗಳವರು ವಿದ್ಯಾವಿಷಯದಲ್ಲಿ ಪ್ರೋತ್ಸಾಹಿಸಿ ವಿದ್ಯಾರ್ಜನೆಗಾಗಿ ಯಾವ ವಿಧದಿಂದಲಾದರೂ ಸಹಾಯ ಮಾಡುವದು ಅವರ ಕರ್ತವ್ಯವಾಗಿರುತ್ತದೆ. ಈ ಪ್ರಕಾರ ಸಹಾಯ ಮಾಡಿದ ವರ್ತಕರಿಗೂ, ಶ್ರೀಗಳವರಿಗೂ ಶ್ರೀ ಪರಮಾತ್ಮನು ವಯೋ ಯಶೋವೃದ್ಧಿಯನ್ನು ಮಾಡಲೆಂದು ಪ್ರಾರ್ಥಿಸುವ,

ಓರ್ವ ವಿದ್ಯಾಭಿಮಾನಿ.

ಶಿವದೀಕ್ಷಾ ಸಂಸ್ಕಾರ.

ನಂಜನಗೂಡು ತಾಲ್ಲೂಕು ಬಿಲ್ಲಿಗೆರೆ ಹೋಬಳಿ ಇಗ್ಗಿಗುಡ್ಡದ ಮೇಲೆ ನೂತನವಾಗಿ ತಯಾರಾಗಿರುವ ದೇವನೂರು ಶ್ರೀ ಗುರುಮಳ್ಳೇಶ್ವರಸ್ವಾಮಿಯವರ ಬ್ರಾಂಚು ಮಠದ ಲಿಂಗಮುದ್ರಾಸ್ಥಾಪನೆಯು ಇದೇ ಫಾಲ್ಗುಣ ಶುದ್ಧ ಬಿದಿಗೆ ಬುಧವಾರ ಮೈಸೂರು ದೊಡ್ಡಪೇಟೆಯಲ್ಲಿರುವ ಸಾಹುಕಾರ್ ಗುರುಮಲ್ಲಪ್ಪನವರ ಮಕ್ಕಳು ಮ|| ಬಸಪ್ಪನವರ ಮತ್ತು ಗುರುಮಳ್ಳೇಶ್ವರಸ್ವಾಮಿಯವರ ಶಿಷ್ಯರ ಉದಾರಾಶ್ರಯದಿಂದ ವೇ|| ಭಕ್ಷದ ಸ್ವಾಮಿಯವರು ವೇದೋಕ್ತವಾಗಿ ನೆರವೇರಿಸಿ 3-4 ಸಹಸ್ರ ಭಕ್ತಮಾಹೇಶ್ವರರ ಗಣಾರಾಧನೆಯನ್ನು ನಡಿಸಿದರಲ್ಲದೆ ಮರುದಿನ ಗುರುವಾರ ಶ್ರೀ ಗುರುಮಳ್ಳೇಶ್ವರಸ್ವಾಮಿಯವರ ಪ್ರಪೌತ್ರರಾದ ಗುರುಮಲ್ಲಪ್ಪಸ್ವಾಮಿಗೂ ಒಂದು ನೂರು ವಟುಗಳಿಗೂ ವಿಧ್ಯುಕ್ತವಾಗಿ ನಿರಂಜನ ಕಲಶಸಮೇತವಾದ ಪಂಚಕಲಶಸ್ಥಾಪನೆಯಿಂದ ದೀಕ್ಷಾಸಂಸ್ಕಾರವೂ ಸೋಮಹಳ್ಳಿ ಮಠದ ಪಟ್ಟಾಧ್ಯಕ್ಷರಾದ ಸಿದ್ಧಮಲ್ಲಿಕಾರ್ಜುನಸ್ವಾಮಿಯವರಿಂದ ಬ್ರಹ್ಮೋಪದೇಶವೂ ನಂಜನಗೂಡು ಹೆಚ್. ಜಿ. ಮಹದೇವಪ್ಪನವರ ಪೌರೋಹಿತ್ಯದಿಂದ ಕ್ರಮವಾಗಿ ನಡಿಸಲ್ಪಟ್ಟಿತು. ಅನಂತರ ವಿರಕ್ತಮಹಾಸ್ವಾಮಿಯವರಾದ ಚಿಟ್ಟದಪುರದ ನಿರಂಜನ ಚೆನ್ನವೀರದೇಶಿಕೇಂದ್ರಮಹಾಸ್ವಾಮಿಯವರ ಪಾದಪೂಜೆಯೂ, ಎಲ್ಲ ವಟುಗಳಿಗೆ ತೀರ್ಥಪ್ರಸಾದವಿನಿಯೋಗವೂ, 3-4 ಸಹಸ್ರ ಭಕ್ತಮಾಹೇಶ್ವರರ ಗಣಾರಾಧನೆಯೂ ನಡೆದುವು. ಇದೇ ರಾತ್ರಿ ಚಿಟ್ಟದಪುರದ ಶ್ರೀಮನ್ನಿರಂಜನ ಚೆನ್ನವೀರದೇಶಿಕೇಂದ್ರಮಹಾಸ್ವಾಮಿಗಳು ನೂತನವಾಗಿ ರಚಿಸಲ್ಪಟ್ಟಿದ್ದ ಪಾಲಕಿಯಲ್ಲಿ ಮಂಡಿಸಿ ವೃಷಭಾರೂಢರಾದ ಶ್ರೀ ಪಟ್ಟದ ಸಿದ್ಧಮಲ್ಲಿಕಾರ್ಜುನಮಹಾಸ್ವಾಮಿಯವರ ಮತ್ತು ಅಶ್ವಾರೂಢರಾದ ಶ್ರೀ ಗುರುಮಲ್ಲಪ್ಪಸ್ವಾಮಿಯವರ ಸಮೇತ ಮಠದಿಂದ ವಾದ್ಯವೈಭವದೊಡನೆಯೂ ಭಕ್ತಮಾಹೇಶ್ವರರ ಜಯಘೋಷದೊಡನೆಯೂ ಮಠಕ್ಕೆ ಸಮೀಪವಾಗಿರುವ ತಾಯೂರಿಗೆ ಉತ್ಸವಪೂರ್ವಕವಾಗಿ ದಯೆಮಾಡಿಸಿ ಅಲ್ಲಿನ ವೀರಶೈವಮಹನೀಯರುಗಳಿಂದ ಪೂಜಾವಂದನೆಗಳನ್ನು ಅರ್ಪಿಸಿಕೊಂಡು ಮಠಕ್ಕೆ ದಯೆಮಾಡಿಸಿ ಸುಖಾಸೀನರಾಗಿ ನೆರೆದಿದ್ದ ಭಕ್ತಮಾಹೇಶ್ವರರನ್ನು ಆನಂದಗೊಳಿಸಿದ ತರುವಾಯ ನಂಜನಗೂಡು ಹೆಚ್. ಜಿ. ಮಹಾದೇವಪ್ಪನವರು ಅತ್ರಿಗಣೇಶ್ವರರು ಗೋವಿಂದಭಟ್ಟಾಚಾರ್ಯರೆಂಬ ಗುಪ್ತನಾಮವನ್ನು ತಾಳಿ ವೈಷ್ಣವರ ಸಭೆಗೆ ಹೋಗಿ ವಾದದಲ್ಲಿ ವೈಷ್ಣವರನ್ನು ಗೆದ್ದು ಆರಾಧ್ಯಬಾಡಬ (ಬ್ರಾಹ್ಮಣ) ರನ್ನಾಗಿ ಮಾಡಿದ ವಿಷಯವನ್ನು ಸರ್ವರಿಗೂ ತಿಳಿಯುವಂತೆ ಬಹುಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಈ ಮಹೋತ್ಸವಕ್ಕೆ ಅನೇಕಮಂದಿ ವಿರಕ್ತ ಮತ್ತು ಪಟ್ಟದಸ್ವಾಮಿಗಳವರು ದಯೆಮಾಡಿಸಿದ್ದರು. ವೇ|| ಭಕ್ಷದ ಮಹಾಸ್ವಾಮಿಯವರು ವಿರಕ್ತರಿಗೂ ಪಟ್ಟದವರಿಗೂ ನೆರೆದಿದ್ದ ಗಣಂಗಳಿಗೂ ಅವರವರ ಯೋಗ್ಯತಾನುಸಾರ ಕಾಣಿಕೆ ಮತ್ತು ದಕ್ಷಿಣೆಯಿಂದ ಸಂತೋಷಗೊಳಿಸಿ ವೀರಶೈವಮತೋದ್ಧಾರಕರಾದ ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ 2 ರೂಪಾಯಿ ದಕ್ಷಿಣೆಯನ್ನು ಆಶೀರ್ವಾದಪೂರ್ವಕವಾಗಿ ನಂಜನಗೂಡು ಹೆಚ್. ಜಿ. ಮಹಾದೇವಪ್ಪನವರ ವಶಕ್ಕೆ ದಯೆಪಾಲಿಸಿದರು. ನೆರೆದಿದ್ದ ಭಕ್ತಮಾಹೇಶ್ವರರ ಜಯಘೋಷದಿಂದ ನಮ್ಮನ್ನಾಳುವ ಮಹಾಪ್ರಭುವರ್ಯರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಶ್ರೀ ಗುರುಮಳ್ಳೇಶ್ವರಸ್ವಾಮಿಯವರ ಕೃಪಾಕಟಾಕ್ಷಕ್ಕೆ ಪಾತ್ರರಾದರು. ಮುಖ್ಯ ಈ ಮಹೋತ್ಸವದಲ್ಲಿ ತಾಯೂರು [illegible] ಪಟೇಲ್ ಮಲ್ಲಪ್ಪನವರು, ಸುಬ್ಬಣ್ಣನವರ ಮಲ್ಲಪ್ಪನವರು, ಗಿರಿಮಲ್ಲಪ್ಪನವರೇ ಮೊದಲಾದ ಮಹನೀಯರು ಭಾಗಿಗಳಾಗಿ ಶ್ರಮವನ್ನುವಹಿಸಿ ಗುರುಕಾರ್ಯವನ್ನು ನೆರವೇರಿಸಿದ್ದು ಆಶಯವಾಗಿರುತ್ತೆ. ಮೈಸೂರು ಸಾ|| ಬಸಪ್ಪನವರೂ, ತಾಯೂರಿನ ಸದ್ಭಕ್ತರೂ ಇದೇ ರೀತಿಯಾಗಿ ಸರ್ವದಾ ಗುರುಕಟಾಕ್ಷಕ್ಕೆ ಪಾತ್ರರಾಗಿ ಸೇವಾಸತ್ಕಾರ್ಯದಲ್ಲಿ ನಿರತರಾಗಿರುವಂತೆ ಗುರುಮಳ್ಳೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುವ ಶರಭಮೂರ್ತಿ.

ಶ್ರೀ ಶೃಂಗೇರಿ ಜಗದ್ಗುರುಗಳವರು ಹಿಂಸಾ ಪ್ರೋತ್ಸಾಹಕರೇ ?

ವೈರಾಗ್ಯಶಿಖಾಮಣಿಗಳೂ, ಅಹಿಂಸಾಭಿಮಾನಿಗಳೂ ಆದ ಶೃಂಗೇರಿಯ ಜಗದ್ಗುರುಗಳವರು ಯಾರೂ ಗೋವಧೆಯನ್ನು ಮಾಡಬಾರದೆಂಬದಾಗಿ ತಮ್ಮ ಭಕ್ತರಿಗೆ ಆಜ್ಞಾಪಿಸಿರುವ ನಿರೂಪವನ್ನು ನಮ್ಮ ಸಂಘಕ್ಕೆ ಈ ಹಿಂದೆ ದಯಪಾಲಿಸಿರುವ ವಿಷಯವು ಸರ್ವರಿಗೂ ಗೊತ್ತಿದ್ದ ಸಂಗತಿಯಷ್ಟೆ. ಆ ನಿರೂಪದ ಪ್ರಕಾರ ಅವರ ಭಕ್ತರು ಶ್ರೀಗಳವರ ಅಪ್ಪಣೆಯನ್ನು ಮಾನ್ಯಮಾಡಿ ಹಿಂಸಾಕಾರ್ಯಕ್ಕೆ ಪ್ರೋತ್ಸಾಹಿಸದೆ ಅಹಿಂಸಾ ಕಾರ್ಯದಲ್ಲಿ ತತ್ಪರರಾಗುವರೆಂದು ಭಾವಿಸಿದ್ದೆವು. ಆದರೆ ಈಗ ನಡೆದಿರುವ ಒಂದು ಭಯಂಕರ ಕೃತಿಯನ್ನು ಕಂಡು ಮನಮರುಗಿ ನಿಜ ಸಂಗತಿಯನ್ನು ತಿಳಿಯಬೇಕೆಂಬ ಉದ್ದೇಶದಿಂದ ಈ ಲೇಖನವನ್ನು ಪ್ರಕಟಿಸಬೇಕಾಯಿತು.

ಶೃಂಗೇರಿಯಲ್ಲಿ ತಾ|| 19-2-29 ನೇ ಮಂಗಳವಾರ ಹಿಂಸಾಯುಕ್ತವಾದ ದೇವೀ ಜಾತ್ರೆ ನಡೆದು ಸಾವಿರಾರು ಮೂಕಪ್ರಾಣಿಗಳು ಸಂಹರಿಲ್ಪಡುವವೆಂದೂ, ಶೃಂಗೇರಿಯು ಜಹಗೀರು ಗ್ರಾಮವಿದ್ದು ಅಲ್ಲಿಯ ಯಾವತ್ತು ಕೆಲಸಕಾರ್ಯಗಳು ಶ್ರೀ ಜಗದ್ಗುರು ಮಠಕ್ಕೆ ಸಂಬಂಧಿಸಿವೆಯೆಂದೂ, ಶ್ರೀಗಳವರ ಮಠದಿಂದ ಅಪ್ಪಣೆಯಾದರೆ ಒಂದು ಪ್ರಾಣಿಯೂ ಸಂಹರಿಸಲ್ಪಡಲು ಸಾಧ್ಯವಿಲ್ಲವೆಂದೂ ಈ ವಿಷಯವನ್ನು ಕುರಿತು ಶೃಂಗೇರಿಯಲ್ಲಿಯೇ ಮೊಕ್ಕಾಂ ಮಾಡಿರುವ ಶ್ರೀ ಜಗದ್ಗುರುಗಳವರಿಗು ಮತ್ತು ಈಗ ಹಾಲಿ ಮೈಸೂರಲ್ಲಿ ಮೊಕ್ಕಾಂ ಮಾಡಿರುವ ಸದರಿ ಮಠದ ಏಜಂಟರಾದ ಮ|| ಶ್ರೀಕಂಠಶಾಸ್ತ್ರಿಗಳವರಿಗೂ ಟೆಲಿಗ್ರಾಂ ಕೊಡಬೇಕೆಂದು ಅಲ್ಲಿಯ ಸನ್ಮಾನ್ಯಗೃಹಸ್ಥರೊಬ್ಬರು ನಮಗೆ ಕಾಗದವನ್ನು ಬರೆದರು. ಒಡನೆಯೇ ಮೈಸೂರಲ್ಲಿರುವ ಏಜಂಟರಿಗೂ ಶೃಂಗೇರಿಯಲ್ಲಿಯೇ ಇರುವ ಶ್ರೀಗಳವರಿಗೂ ತಾರು ಕೊಟ್ಟೆವು. ನಮ್ಮ ಪ್ರಾರ್ಥನೆಯ ಪ್ರಕಾರ ಅಲ್ಲಿಯ ಹಿಂಸೆಯು ನಿಂತು ಸಾತ್ವಿಕ ರೀತಿಯಿಂದ ಜಾತ್ರೆಯು ನಡೆದು ಸದರಿ ವರ್ತಮಾನವು ನಮಗೆ ಬರಬಹುದೆಂದು ನಿರೀಕ್ಷಿಸಿದ್ದೆವು. ಆದರೆ ಶ್ರೀಗಳವರಿಂದಾಗಲಿ, ಏಜಂಟರಿಂದಾಗಲಿ ಯಾವ ವರ್ತಮಾನವೂ ಬಾರದೆ ಮೊದಲು ನಮಗೆ ಕಾಗದವನ್ನು ಬರೆದಿದ್ದ ಸದ್ಗೃಹಸ್ಥರಿಂದಲೇ ಅತ್ಯಂತ ವಿಷಾದಕರವಾದ ಕಾಗದವು ಬಂದಿತು. ಅದರಲ್ಲಿ ಅವರು ಜಾತ್ರೆಯು ನಿರ್ವಿಘ್ನವಾಗಿ ಕೋಣ, ಕುರಿ, ಆಡು, ಹಂದಿ, ಕೋಳಿ ಮೊದಲಾದ ಸಾವಿರಾರು ಪ್ರಾಣಿಗಳ ವಧೆಯಿಂದ ನಡೆಯಿತೆಂದೂ ಶ್ರೀ ಮಠದವರು ಕೂಡ ಕೆಲವು ಪ್ರಾಣಿಗಳನ್ನು ವಧೆಗೋಸ್ಕರ ಕೊಡಿಸಿದ್ದರೆಂದೂ ಬರೆದಿದ್ದರು. ಇದನ್ನು ನೋಡಿ ನಮಗೆ ವಿಸ್ಮಯವೂ, ದುಃಖವೂ ಉಂಟಾಯಿತು. ಈ ವರ್ತಮಾನದಲ್ಲಿ ನಮಗೆ ನಂಬುಗೆ ಇಲ್ಲವಾದಾಗ್ಯೂ ಕಾಗದವನ್ನು ಬರೆದಿರುವವರು ಜವಾಬ್ದಾರರಾದ ದೊಡ್ಡ ಮನುಷ್ಯರಾದುದರಿಂದ ನಿರ್ವಾಹವಿಲ್ಲದೆ ಒಪ್ಪಲೇಬೇಕಾಗಿದೆ. ಈ ವಿಷಯವು ನಿಜವಿದ್ದ ಭಾಗದಲ್ಲಿ ಅತ್ಯಂತ ದುಃಖಿಸುವೆವಲ್ಲದೆ ಈ ವರ್ತನೆಯನ್ನು ತೀವ್ರವಾಗಿ ಖಂಡಿಸುವೆವು. ಯಾವ ಜಗದ್ಗುರು ಮಹಸ್ವಾಮಿಗಳು “ಅಹಿಂಸಾಪರಮೋಧರ್ಮಃ” ಎಂಬದಾಗಿ ಸಾರುತ್ತಿರುವರೋ ಅವರ ಜಹಗೀರಿ ಗ್ರಾಮವಾದ ಮತ್ತು ತಮ್ಮ ಸರ್ವ ಅಧಿಕಾರವೂ ನಡೆಯುವ ಶೃಂಗೇರಿಯಲ್ಲಿ ಪಶು ಬಲಿಗೆ ಅವಕಾಶ ಕೊಟ್ಟದುದು ಅತ್ಯಂತ ವಿಷಾದದ ಸಂಗತಿಯಾಗಿದೆಯಲ್ಲದೆ ಮಠದಿಂದಲೇ ಕೆಲವು ಪ್ರಾಣಿಗಳನ್ನು ವಧೆಗೋಸ್ಕರ ಕೊಡಿಸಿದ್ದರೆಂಬುದನ್ನು ಕೇಳಿಯಂತೂ ನಮಗುಂಟಾಗಿರುವ ವ್ಯಸನವನ್ನು ಹೇಳತೀರದ್ದಾಗಿದೆ. ಇದರಂತೆ ಆಸೇತು ಹಿಮಾಚಲ ಪರ್ಯಂತರವಿರುವ ಯಾವತ್ತು ಅಹಿಂಸಾಭಿಮಾನಿಗಳಿಗೆ ದುಃಖವಾಗಿರಲಿಕ್ಕೇಬೇಕು. ಇದರಿಂದ ಮೂಢ ಜನಗಳಿಗೆ ಮಾರ್ಗವನ್ನು ಹಾಕಿ ಅನೇಕ ನಷ್ಟಪರಂಪರೆಗಳಿಗೆ ಈಡಾಗುವಂತೆ ಮಾಡಿದ್ದಲ್ಲದೆ ಶ್ರೀ ಜಗದ್ಗುರುಗಳವರ ವಿಷಯದಲ್ಲಿ ಭಕ್ತರು ಭಿನ್ನಾಭಿಪ್ರಾಯಪಡಲು ಕಾರಣವಾಯಿತು. ಆದುದರಿಂದ ಈ ವಿಷಯದಲ್ಲಿ ತಕ್ಷಣವೇ ಮಠದ ಏಜಂಟರು ಒಂದು ಸವಿಸ್ತಾರವಾದ ಪ್ರಕಟನೆಯನ್ನು ಬರೆದು ಜನಗಳ ತಿಳುವಳಿಕೆಗಾಗಿ ಪ್ರಕಟಿಸಬೇಕಲ್ಲದೆ ಇನ್ನು ಮುಂದಾದರೂ ತಮ್ಮ ಅಧಿಕಾರಕ್ಕೊಳಪಟ್ಟಿರುವ ಸ್ಥಳಗಳಲ್ಲಿ ಇಂತಹ ಹೇಯವಾದ ಪಾಪಕೃತ್ಯಕ್ಕೆ ಅವಕಾಶ ಕೊಡಲಾರರೆಂದು ಪೂರ್ಣ ಭರವಸೆಯುಳ್ಳವರಾಗಿದ್ದೇವೆ. ಅಲ್ಲದೆ ಸದರಿ ವಿಷಯವನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುವೆವು.

ಸೆಕ್ರೆಟರಿ,

ಪ್ರಾಣಿದಯಾಜ್ಞಾನಪ್ರಸಾರಕ ಸಂಘ, ದಾವಣಗೆರೆ.

ಜಗದ್ಗುರು ಜೂಬಿಲಿಯ ವಿಚಾರವೇನು ?

ಶ್ರೀ ಶ್ರೀಮನ್ನಿರಂಜನ ಜಗದ್ಗುರು ಮಹಾಸ್ವಾಮಿಗಳ ಕಾಲು ಶತಮಾನದ ಧಾರ್ಮಿಕ ರಾಜ್ಯಭಾರದ (ಸಿಲ್ವರ್ ಜೂಬಿಲಿಯ) ಸ್ಮಾರಕೋತ್ಸವವನ್ನು ನಡೆಸುವ ವಿಚಾರವು, ಕಳೆದ ನಾಲ್ಕು ತಿಂಗಳಿಂದಲೂ ನಡೆದಿರುವುದಷ್ಟೆ. ಈ ಮಹೋತ್ಸವವನ್ನು ನೆರವೇರಿಸುವ ಆವಶ್ಯಕತೆ ಮತ್ತು ಪ್ರಯೋಜನಗಳನ್ನು ಕುರಿತು ಆಗಿಂದಾಗ್ಗೆ ಅನೇಕ ಲೇಖಗಳು ಪ್ರಕಟವಾಗಿ ಈ ವಿಚಾರದಲ್ಲಿ ಜನರ ಕುತೂಹಲ ಮತ್ತು ಉತ್ಸಾಹಗಳು ವ್ಯಕ್ತಪಟ್ಟಿರುತ್ತವೆ. ಆದರೆ ಈ ಜೂಬಿಲಿಯ ಉತ್ಸವವನ್ನು ಯಾವಾಗ ಮಾಡಬೇಕು? ಎಲ್ಲಿ ಮಾಡಬೇಕು? ಹೇಗೆ ಮಾಡಬೇಕು? ಎಂಬ ವಿಚಾರಗಳ ಬಗ್ಗೆ ನಾನಾ ಅಭಿಪ್ರಾಯಗಳುಂಟಾಗಿ, ಯಾವುದೊಂದೂ ನಿರ್ಧರವಾಗದೆ, ಚರ್ಚಾಸ್ಪದವಾಗಿ ನಿಂತಿರುತ್ತದೆಂದು ತಿಳಿಯಬರುತ್ತದೆ.

ಈ ಮಹೋತ್ಸವವನ್ನು ಶ್ರೀಮಹಾಶಕ್ತ್ಯಸ್ಥಾನವಾದ ಚಿತ್ರದುರ್ಗದಲ್ಲಿ ನೆರವೇರಿಸಬೇಕೆಂದು ಕೆಲವರೂ, ಮಹಾಸಂಸ್ಥಾನಕ್ಕೆ ಮುಖ್ಯಪಟ್ಟಣವಾದ ದಾವಣಗೆರೆಯಲ್ಲಿ ಜರುಗಿಸಬೇಕೆಂದು ಬೇರೆ ಕೆಲವರೂ, ಉತ್ತರ ದೇಶದಲ್ಲಿ ನಡೆಸಬೇಕೆಂದು ಮತ್ತೆ ಕೆಲವರೂ ಹೀಗೆ ಸ್ಥಳನಿರ್ದೇಶದ ಬಗ್ಗೆ ಒಂದು ಚರ್ಚೆ. ರಾಜಯೋಗವಿರುವ ಮಾಘಮಾಸದಲ್ಲಿ ನಡೆಸಬೇಕೆಂದು ನಿರ್ಧರವಾದ ವಿಚಾರವನ್ನು, ವಿದ್ಯಾರ್ಥಿ ಮತ್ತು ಅಧಿಕಾರಿವರ್ಗಗಳಿಗೆ ರಜ ಅನುಕೂಲವಿರುವ ಚೈತ್ರವೈಶಾಖದಲ್ಲಿ ಜರುಗಿಸಬೇಕೆಂಬ ಕಾಲ ನಿರ್ದೇಶದ ಬಗ್ಗೆ ಇನ್ನೊಂದು ಚರ್ಚೆ. ಈ ಜೂಬಿಲಿಯುತ್ಸವವನ್ನು, ವೀರಶೈವಜನಾಂಗವಿರುವ ಪ್ರತಿಯೊಂದು ಊರಿನಲ್ಲಿಯೂ, ಸಾಮಾನ್ಯವಾಗಿ ಉತ್ಸವ, ಗಣಾರಾಧನೆ, ಪುರಾಣ ಪುಣ್ಯಕಥೆ ಮೊದಲಾದುವುಗಳನ್ನು ನಡಿಸಿ, ಮೂಲಸ್ಥಾನವಾದ ಚಿತ್ರದುರ್ಗದಲ್ಲಾಗಲೀ, ನಿರ್ದೇಶವಾದ ಮತ್ತಾವ ಪಟ್ಟಣದಲ್ಲಾಗಲೀ ದೇಶಮಧ್ಯದ ಮಹಾಜನಗಳನ್ನೂ ವಿದ್ವನ್ ಮಂಡಳಿಯನ್ನೂ ಬರಮಾಡಿಕೊಂಡು ವಿಶೇಷ ಸಂಭ್ರಮದಿಂದ ಉತ್ಸವವನ್ನು ಜರುಗಿಸಿ, ಸಮಾಜದ ಶ್ರೇಯೋಭಿವೃದ್ಧಿಗೆ ಮಹತ್ಪ್ರಯೋಜನಕಾರಿಯಾದ ಸಭಾ-ಸಂಘಗಳನ್ನೇರ್ಪಡಿಸಿ, ಶ್ರೀ ಮಹಾಸ್ವಾಮಿಯ ಆಳ್ವಿಕೆಯು ಚಿರಸ್ಮರಣೀಯವಾಗಿರುವಂತೆ, ಸಮಾಜೋದ್ಧಾರಕಾರ್ಯವೊಂದನ್ನು ನೆರವೇರಿಸಲು ಸ್ಮಾರಕ ನಿಧಿಯನ್ನು ಶೇಖರಿಸಬೇಕೆಂಬುದು ಮತ್ತೊಂದು ಅಭಿಪ್ರಾಯ. ಮೂಲಸ್ಥಾನವಾದ ಚಿತ್ರದುರ್ಗದಲ್ಲಿಯೂ, ಇನ್ನುಳಿದ [illegible] ಉತ್ಸವವನ್ನು [illegible]